## ಅನ್ವಯಿಸಲ್ಪಟ್ಟಂತಃ

# ಹೊಸ ಒಡಂಬಡಿಕೆಯ ವ್ಯಾಖ್ಯಾನ


ಥಾಮಸ್ ಹೇಲ್

(ಸ್ಟೀಫನ್‌ತೂರ್ಸನ್‌ರವರ ಸಾಮಾನ್ಯ ಲೇಖನಗಳ - ಸಹಿತವಾಗಿ)

# ಅನ್ವಯಿಸಲ್ಪಟ್ಟಂತಃ ಹೊಸ ಒಡಂಬಡಿಕೆಯ ವ್ಯಾಖ್ಯಾನ

# The Applied New Testament Commentary

## Kannada Edition

Copyright 2015 Voice Media

info@VM1.global
Web home: www.VM1.global

All rights reserved. No part of the publication may be reproduced, distributed or transmitted in any form or by any means, including photocopying, recording, or other electronic, or mechanical methods, without the prior written permission of the publisher, except in the case of brief quotations embodied in critical reviews and certain other noncommercial uses permitted by copyright law. For permission requests, email the publisher, addressed "Attention: Permission Coordinator," at the address above.

This publication **may not be sold, and is for free distribution** only.

*Anvayisalpattintha Hosa Odampadikeya Vyakhyana*
(Kannada)

The Applied New Testament Commentary
by Tom Hale and Stephen Thorson
Copyright © 1996 by Tom Hale and Stephen Thorson

Originally published in English by Kingsway Publications, UK.
First Kannada edition 2003
ISBN 81-7362-544-1

This edition is issued by special arrangement with Kingsway Publications, Eastbourne, UK.

All rights reserved.
No part of this publication may be reproduced or transmitted in any form or by any means, electronic, or mechanical, including photocopying, recording, or any information storage and retrieval system, without permission in writing from the publisher.

This edition is specially published for the Pastor's Libarary Set scheme.

Published by
**OM Books**
P.O. Box 2014
Secunderabad 500003
Andhra Pradesh, India

# ಅನುಕ್ರಮಣಿಕೆ


ಕೃತಜ್ಞತೆಗಳು 7
ಪರಿಚಯ 9
ಪದಗಳ ಪಟ್ಟಿ 11
ಸಾಮಾನ್ಯ ಲೇಖನಗಳು 31
- ಸಾಮಾನ್ಯ ಲೇಖನಗಳ ಪರಿಚಯ 33
- ಯೇಸುಕ್ರಿಸ್ತನು 35
- ರಕ್ಷಣೆಯ ಮಾರ್ಗ 39
- ರಕ್ಷಣೆ - ದೇವರ ಆಯ್ಕೆಯೋ ಅಥವಾ ಮನುಷ್ಯನ ಆಯ್ಕೆಯೋ? 45
- ನಾವು ನಮ್ಮ ರಕ್ಷಣೆಯನ್ನು ಕಳೆದುಕೊಳ್ಳಬಹುದೇ? 49
- ಪವಿತ್ರಾತ್ಮನು 53
- ಪವಿತ್ರಾತ್ಮನ ದೀಕ್ಷಾಸ್ನಾನ 59
- ನೀರಿನ ದೀಕ್ಷಾಸ್ನಾನ 65
- ಕರ್ತನ ಭೋಜನ 71
- ಸಭಾ ಆಡಳಿತ 75
- ಸಭೆಯಲ್ಲಿ ಸ್ತ್ರೀಯರು 81
- ಮಕ್ಕಳು ಮತ್ತು ದೇವರ ರಾಜ್ಯ 85
- ಕ್ರೈಸ್ತ ವಿವಾಹ 89
- ಗುಣ ಪಡಿಸುವಿಕೆ ಮತ್ತು ಬಿಡುಗಡೆ 95
- ದುರಾತ್ಮನನ್ನು ಎದುರಿಸುವುದು - ನಾವು ಎಷ್ಟು ಶ್ರಮವಹಿಸಬೇಕು? 101
- ಕ್ರಿಸ್ತನ ಎರಡನೇ ಬರುವಿಕೆ 107
- ಸಭೆಯ ಉದ್ದೇಶ 115
- ಪುನರುಜ್ಜೀವನ 119
- ಹಳೆ ಒಡಂಬಡಿಕೆಯ ಸಾರಾಂಶ 123
- ನಮಗೆ ಹೇಗೆ ಸತ್ಯವೇದ ದೊರಕಿತು 133

ಹೊಸ ಒಡಂಬಡಿಕೆಯ ನಿರೂಪಣೆ 139
- ಮತ್ತಾಯ 141
- ಮಾರ್ಕ 231
- ಲೂಕ 317

| | |
|---|---|
| ಯೋಹಾನ | 375 |
| ಅಪೋಸ್ತಲರ ಕೃತ್ಯಗಳು | 491 |
| ರೋಮಾಪುರದವರಿಗೆ | 589 |
| 1ನೇ ಕೊರಿಂಥದವರಿಗೆ | 681 |
| 2ನೇ ಕೊರಿಂಥದವರಿಗೆ | 759 |
| ಗಲಾತ್ಯದವರಿಗೆ | 801 |
| ಎಫೆಸದವರಿಗೆ | 839 |
| ಫಿಲಿಪ್ಪಿಯರಿಗೆ | 873 |
| ಕೊಲಸ್ಸೆಯವರಿಗೆ | 893 |
| 1ನೇ ಥೆಸಲೋನಿಕದವರಿಗೆ | 915 |
| 2ನೇ ಥೆಸಲೋನಿಕದವರಿಗೆ | 929 |
| 1ನೇ ತಿಮೊಥೆಯನಿಗೆ | 937 |
| 2ನೇ ತಿಮೊಥೆಯನಿಗೆ | 957 |
| ತೀತನಿಗೆ | 969 |
| ಫಿಲೆಮೋನನಿಗೆ | 977 |
| ಹಿಬ್ರಿಯರಿಗೆ | 981 |
| ಯಾಕೋಬ | 1031 |
| 1ನೇ ಪೇತ್ರ | 1035 |
| 2ನೇ ಪೇತ್ರ | 1077 |
| 1ನೇ ಯೋಹಾನ | 1089 |
| 2ನೇ ಯೋಹಾನ | 1113 |
| 3ನೇ ಯೋಹಾನ | 1115 |
| ಯೂದ | 1119 |
| ಪ್ರಕಟಣೆ | 1123 |
| ವಿಷಯಸೂಚಿಕೆ | 1165 |

# ಕೃತಜ್ಞತೆಗಳು

ಯಾವುದೇ ಒಂದು ನಿರ್ದಿಷ್ಟ ಕ್ರೈಸ್ತ ಪಂಗಡದ ಬಗ್ಗೆ ಪಕ್ಷಪಾತ ಮಾಡಬೇಕೆಂಬ ಉದ್ದೇಶದಿಂದ ಈ ನಿರೂಪಣೆ ಬರೆಯಲ್ಪಟ್ಟಿಲ್ಲ. ಎಲ್ಲಾ ಕ್ರೈಸ್ತ ಪಂಗಡಗಳಿಗೆ ಸೇರಿದ ಜನರೆಲ್ಲಾ ಇದರ ಸದುಪಯೋಗ ಪಡೆಯುತ್ತಾರೆಂದು ಆಶಿಸಲಾಗಿದೆ. ನಿಜವಾದ ಕ್ರೈಸ್ತರಲ್ಲಿ ಕೆಲವು ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯಗಳಿದ್ದಾಗ್ಯೂ ಈ ವಿರೋಧಾಭಾಸಗಳನ್ನು ಯಾವುದೇ ಪಂಥಕ್ಕೂ ಜತೆಗೂಡಿಸುವುದನ್ನು ಹೊರತುಪಡಿಸಿ ಈ ನಿರೂಪಣೆಯನ್ನು ಸಿದ್ಧಪಡಿಸಲಾಗಿದೆ. ನಿರೂಪಣೆಯ ಉದ್ದಕ್ಕೂ ಈ ಕಾರ್ಯ ಮಾಡುತ್ತಿರುವುದಲ್ಲದೇ, ವಿಶೇಷವಾಗಿ ಸಾಮಾನ್ಯ ವಿಷಯಗಳ ಬಗ್ಗೆ ಇದನ್ನು ಊರ್ಜಿತಗೊಳಿಸಲಾಗಿದೆ.

ಈ ನಿರೂಪಣೆಯನ್ನು ಬರೆಯುವಾಗ ಬಹಳಷ್ಟು ಸಹಾಯವನ್ನು ನಾಲ್ಕು ಮುಖ್ಯ ಮೂಲಗಳಿಂದ ಪಡೆದುಕೊಳ್ಳಲಾಗಿದೆ (1) ಹೊಸ ಒಡಂಬಡಿಕೆಯ ಬಗ್ಗೆ ಹೊಸ ಅಂತರರಾಷ್ಟ್ರನಿರೂಪಣೆ. ಎರ್ಡ್ಸ್‌ಮನ್ 17 ಸಂಪುಟಗಳು (2) ಸ್ಪಷ್ಟೀಕರಣಿಕರ ಸತ್ಯವೇದ ನಿರೂಪಣೆ (ಹೊಸ ಒಡಂಬಡಿಕೆ) ಜೊಂಡರ್‌ವಾನ್ 5 ಸಂಪುಟಗಳು (3) ಹೊಸ ಸತ್ಯವೇದ ನಿರೂಪಣೆ ಪರಿಷ್ಕೃತ ಎರ್ಡ್ಸ್‌ಮನ್ಸ್ (4) ಮ್ಯಾಥೀವ್ ಹೆನ್ರಿಯವರ ನಿರೂಪಣೆ ಸಂಕ್ಷಿಪ್ತ, ಜೊಂಡರ್‌ವ್ಯಾನ್. ಈ ನಾಲ್ಕು ಮೂಲಗಳಿಂದಲ್ಲದೇ ಮಾರ್ಟಿನ್ ಲ್ಯಾಯಿಡ್ ಜೋನ್ಸ್ ಆಂಡ್ರ್ಯೂ ಮುರ್ರೇ, ಜಾನ್ ಸ್ಟೋಟ್ ಮತ್ತು ಇತರರಿಂದ ಬಹಳ ಉಪಯುಕ್ತತೆ ಪಡೆದುಕೊಳ್ಳಲಾಗಿದೆ. ವಿಷಯಗಳನ್ನು ಆರಿಸಿಕೊಂಡು ಮತ್ತು ಬರವಣಿಗೆಯನ್ನು ಮಾಡಿ, ನಿರೂಪಣೆ ಬರೆದಿರುವವರು ಶ್ರೀ ಥಾಮಸ್ ಹಾಲೇ, ಎಂ.ಡಿ.ಎಫ್.ಎ.ಸಿ.ಎಸ್.

ಕಡೆಯ ನಾಲ್ಕು ಸಾಮಾನ್ಯ ವಿಷಯಗಳನ್ನು ಹೊರತು ಪಡಿಸಿ, ಉಳಿದೆಲ್ಲದಕ್ಕೂ ಸ್ಟೀಫನ್ ಟಾರ್ರ‍್ಸನ್ ಎಂ.ಡಿ.ಎಫ್.ಎ.ಎ.ಪಿ., ಎಂ.ಎ (ದೈವೀಕ ಅಭ್ಯಾಸಗಳು). "ಹಳೇ ಒಡಂಬಡಿಕೆಯ ಸಾರಾಂಶ" ಎಂಬ ಸಾಮಾನ್ಯ ಬರಹವನ್ನು ರೆಬೆಕ್ಕಾ ತೊರ್ರ‍್ಸನ್ ಎಂಬುವರು ಬರೆದಿದ್ದಾರೆ. ಅನೇಕ ಮೂಲಗಳಿಂದ ಸಾಹಿತ್ಯವನ್ನು ಸಂಗ್ರಹಿಸುವುದಲ್ಲದೇ ಈ ಕೆಳಗೆ ಕಾಣಿಸಿರುವ ದೊಡ್ಡ ದೊಡ್ಡ ತತ್ತ್ವಗಳನ್ನೊಳಗೊಂಡ ಹಾಗೂ ಪಾಪನಿವೇದನೆಗಳಿಂದ ಕೂಡಿದಂತ, ಕ್ರೈಸ್ತ ಸಭೆಗಳಿಂದ ಪಡೆದುಕೊಳ್ಳಲಾಗಿದೆ. ಅವು ಹೀಗಿವೆ. ಅಪೋಸ್ತಲರ ವಿಶ್ವಾಸ ಸೂತ್ರ, ನೈಷಿಮಾ ವಿಶ್ವಾಸಸೂತ್ರ, ಆಗ್ಸ್‌ಬರ್ಗ್ ಪಾಪನಿವೇದನೆ ಕಾನ್‌ಕೋರ್ಡ್ ಸಿದ್ಧಾಂತ (ಲೂಥರನ್), ವೆಷ್ಟಮಿನಿಷ್ಟರ್ ಪಾಪನಿವೇದನೆ (ಕಾಲ್ವಿನಿಷ್ಟ್ ಸುಧಾರಿತ) ಮತ್ತು ಮೂವತ್ತೊಂಭತ್ತು ಲೇಖನಗಳು (ಆಂಗ್ಲಿಕನ್ ಮತ್ತು ಎಪಿಸ್ಕೋಪಿಯನ್). ಮಾರ್ಟಿನ್ ಲೂಥರ (ಲೂಥರನ್), ಜಾನ್ ಕ್ಯಾಲ್ವಿನ್ (ಸುಧಾರಿತ) ಜೇಕಬ್ ಆರ್ಮೇನಿಯುಸ್ (ಆರ್ಮೀಮೀನಿಯನ್) ಜಾನ್ ವೆಸ್ಲಿ (ಮೆಥೋಡಿಸ್ಟ) ಮತ್ತು ಹಲವು ಬ್ಯಾಪ್ಟಿಸ್ಟ್ ಅಲ್ಲದ ಮತ್ತು ಬ್ಯಾಪ್ಟಿಸ್ಟ್ ಬರೆಹಗಾರರ ಬರಹಗಳನ್ನು ಮತ್ತು ಇತರೇ ಮೂಲಗಳಿಂದ ಬಂದ ಬರಹಗಳನ್ನು ಉಪಯೋಗಿಸಿಕೊಳ್ಳಲಾಗಿದೆ.

ಎಲ್ಲಾ ವಚನಗಳನ್ನೂ ಹೊಸ ಅಂತಾರಾಷ್ಟ್ರೀಯ ಸತ್ಯವೇದ ಅವತರಣಿಕೆಯಿಂದ ಆಯ್ದುಕೊಂಡು, ದಪ್ಪ ಅಕ್ಷರಗಳಲ್ಲಿ ಅಚ್ಚು ಹಾಕಲಾಗಿದೆ. ಹೊಸ ಅಂತಾರಾಷ್ಟ್ರೀಯ ಸತ್ಯವೇದವನ್ನು ಭಾಷಾಂತರಗೊಳಿಸುವವರ ತೀರ್ಮಾನವನ್ನು ಚರ್ಚೆಯಿಲ್ಲದೇ ಒಪ್ಪಿಕೊಳ್ಳಲಾಗಿದೆ. ಅಲ್ಲಲ್ಲಿ ವಿವಾದಕ್ಕೆ ಆಸ್ಪದ ಕೊಡುವ ಪದ ಪುಂಜಗಳನ್ನು ಬದಲಾಯಿಸಿದ ಭಾಷಾಂತರಗಳನ್ನು ಟಿಪ್ಪಣಿಯಲ್ಲಿ ತೋರಿಸಲಾಗಿದೆ.

ಈ ನಿರೂಪಣೆಯಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಪುರುಷ ಲಿಂಗಕ್ಕೆ ಸೇರಿದ ಮನುಷ್ಯ, ಮನುಷ್ಯರು ಎಂಬ ಪದಗಳ ಬಳಕೆಯನ್ನು ಸಂಕುಚಿತಗೊಳಿಸಲಾಗಿದೆಯಾದರೂ, ಅವುಗಳನ್ನು ಸಂಪೂರ್ಣವಾಗಿ ಹೊರತುಪಡಿಸಲು ಸಾಧ್ಯವಾಗಲಿಲ್ಲ.

ಈ ನಿರೂಪಣೆಯಲ್ಲಿ ನವ ಅಂತಾರಾಷ್ಟ್ರೀಯ ಸತ್ಯವೇದದ ಅವತರಣಿಕೆ ಮತ್ತು ಅಲ್ಲಿನ ವಚನಗಳನ್ನು ಉಪಯೋಗಿಸಲಾಗಿದೆ. ಪ್ರತಿಯೊಂದು ವಿಷಯದಲ್ಲಿಯೂ ಒಳಗಿನ ಅರ್ಥವು ಸಂದರ್ಭಕ್ಕೆ ಅನುಗುಣವಾಗಿರುವಂತೆ ತಿಳಿದು ಬರುತ್ತದೆ. ಇಂಥಾ ಉಪಯೋಗವನ್ನು ಹೊಸ ಅಂತಾರಾಷ್ಟ್ರೀಯ ಸತ್ಯವೇದ ಅವತರಣಿಕೆಯ ವಿಷದೀಕರಣ ಮತ್ತು ಸ್ಪಷ್ಟೀಕರಣಕ್ಕೆ ಪೂರಕ ದೃಷ್ಟಿಯಿಂದ ಮಾಡಲಾಗಿದೆ. ಓದುಗರ ತಾಳ್ಮೆ ಮತ್ತು ವಿವೇಚನೆಯನ್ನು ಈ ಮೂಲಕ ಬಯಸುತ್ತೇವೆ.

# ಪರಿಚಯ

## ಈ ನಿರೂಪಣೆಯನ್ನು ಉಪಯೋಗಿಸುವುದು ಹೇಗೆ?

ಜನರಿಗೆ ಸತ್ಯವೇದವನ್ನು ಓದಲು ಉಪಯೋಗವಾಗುವಂತೆ ಈ ನಿರೂಪಣೆಯನ್ನು ಬರೆಯಲಾಗಿದೆ. ಇದನ್ನು ಸಾಧಾರಣವಾದ ಒಂದು ಪುಸ್ತಕವನ್ನು ಓದುವ ರೀತಿಯಲ್ಲಿ ಓದಬಾರದು. ಮೊದಲು ಇದನ್ನು ಓದುಗನು ಓದಿ ನಂತರ ನಿರೂಪಣೆಯ ಪ್ರತಿ ವಿಭಾಗದಲ್ಲಿ ಪ್ರಾರಂಭವಾಗುವ ಸತ್ಯವೇದದ ಭಾಗವನ್ನು ಪ್ರಾರ್ಥನಾಪೂರ್ವಕವಾಗಿ ಧ್ಯಾನಿಸಬೇಕು. ಇದನ್ನು ಮಾಡಿದ ನಂತರ, ಓದುಗನು ಪ್ರತಿಯೊಂದು ವಚನವನ್ನೂ ಅದರ ಜೊತೆಯಲ್ಲಿ ಸಂಬಂಧಿಸಿದ ವ್ಯಾಖ್ಯಾನವನ್ನು ಸೇರಿಸಿಕೊಂಡು ವಚನದಿಂದ ವಚನಕ್ಕೆ ಸೇರಿದಂತೆ ಅಭ್ಯಸಿಸಬೇಕು. ಸತ್ಯವೇದದಲ್ಲಿರುವ ಪ್ರತಿಯೊಂದು ವಚನದ ಸರಿಯಾದ ಅರ್ಥವನ್ನು ಎಷ್ಟು ಸಂಪೂರ್ಣ ಸಾಧ್ಯವೋ ಅಷ್ಟರವರೆಗೆ ತಿಳಿದುಕೊಳ್ಳುವುದು ಬಹಳ ಮುಖ್ಯವಾದ ವಿಷಯ ಈ ನಿರೂಪಣೆಯ ಈ ಕಾರ್ಯ ಮಾಡಲು ಸಹಾಯ ಮಾಡುವುದು. ಕಡೆಯದಾಗಿ, ಪ್ರತಿ ವಚನದ ಅರ್ಥವನ್ನು ಗ್ರಹಿಸಿಕೊಂಡು ನಂತರ ಮತ್ತೊಮ್ಮೆ ಆ ವಾಕ್ಯ ಭಾಗದ ಎಲ್ಲಾ ವಚನಗಳನ್ನು ಓದಬೇಕು. ಪ್ರತಿಯೊಂದು ವಚನದ ಅರ್ಥವನ್ನು ಗ್ರಹಿಸಿಕೊಳ್ಳುವುದಲ್ಲದೆ, ಇಡೀ ಆ ವಾಕ್ಯ ಭಾಗದ ವಚನಗಳ ಸಂದರ್ಭ ಮತ್ತು ಅರ್ಥವನ್ನು ಒಂದು ಸಂಘಟಿತ ಘಟಕದಂತೆ ತಿಳಿದುಕೊಳ್ಳುವುದು ಅವಶ್ಯಕ. ಸತ್ಯವೇದದಲ್ಲಿನ ವಚನಗಳ ಆತ್ಮೀಯ ಅರ್ಥವನ್ನು ತಿಳಿದುಕೊಳ್ಳಬೇಕಾದರೆ ಎಲ್ಲಕ್ಕಿಂತ ಮಿಗಿಲಾಗಿ ಪವಿತ್ರಾತ್ಮನ ಸಹಾಯವನ್ನು ಕೇಳುವುದು ಅವಶ್ಯಕವಾಗಿದೆ. ಸತ್ಯವೇದವು ದೇವರ ಜೀವಂತ ವಾಕ್ಯವಾಗಿದೆ. ನಾವು ಸತ್ಯವೇದವನ್ನು ಓದುವಾಗ ಯಾವಾಗಲೂ ಈ ಪ್ರಾರ್ಥನೆಯನ್ನು ಮಾಡಬೇಕು. "ಪ್ರಭುವೇ, ನನ್ನ ಮನಸ್ಸನ್ನು ತೆರೆ, ನಿನ್ನ ವಾಕ್ಯದ ಮೂಲಕ ನನ್ನ ಕೂಡ ಮಾತನಾಡು."

ಈ ಪ್ರಸ್ತಾವನೆಯ ನಂತರ, ಒಂದು ಪದಗಳ ಪಟ್ಟಿಯನ್ನು ಕೊಟ್ಟು, ಅದರಲ್ಲಿರುವ 51 ಮುಖ್ಯ ಪದಗಳ ಅರ್ಥವನ್ನು ಕೊಡಲಾಗಿದೆ. ಈ ಪದಗಳು ಅನೇಕ ಸಾರಿ, ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಲ್ಪಟ್ಟಿವೆ ಈ ನಿರೂಪಣೆಯಲ್ಲಿ ಯಾವುದೇ ಒಂದು ಅಧ್ಯಾಯದಲ್ಲಿ ಈ 51 ಪದಗಳಲ್ಲಿ ಒಂದನ್ನು ದಪ್ಪಾಕ್ಷರಗಳಲ್ಲಿ ಸಣ್ಣ ಅಚ್ಚಿನಲ್ಲಿ ಮುದ್ರಿಸಲಾಗಿದೆ. ಯಾವುದೇ ಒಂದು ವಚನದಲ್ಲಿ ಈ ಮುಖ್ಯ ಪದಗಳಲ್ಲಿ ಒಂದಾದರೂ ಕಂಡು ಬಂದಲ್ಲಿ ಅದನ್ನು ಅರ್ಥೈಸಿಕೊಳ್ಳುವ ಮೊದಲು, ಆ ಪದದ ಅರ್ಥವನ್ನು ಮೊದಲು ಗ್ರಹಿಸಿಕೊಳ್ಳುವುದು ಅವಶ್ಯವಾಗಿದೆ.

ಪದಗಳ ಪಟ್ಟಿಯ ನಂತರ ಅನುಕ್ರಮವಾಗಿ ಕೆಲವು ಸಾಮಾನ್ಯ ವಿಷಯಗಳನ್ನು ಕೊಡಲಾಗಿದೆ. ಕೆಲವು ಬಹು ಮುಖ್ಯ ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ಈ ಸಾಮಾನ್ಯ ವಿಷಯಗಳು ಸಹಾಯಕ್ಕೆ ಬರುತ್ತವೆ. ಆದುದರಿಂದ ಯಾವುದೇ ಒಂದು ವಚನದ ಬಗ್ಗೆ ವ್ಯಾಖ್ಯಾನವೂ, ಒಂದು ವಿಷಯದ ಬಗ್ಗೆ ಸಂಬಂಧವಿರುವುದಾದರೆ, ಸಾಧಾರಣವಾಗಿ ಆ ವ್ಯಾಖ್ಯಾನದ ಕೊನೆ ಭಾಗದಲ್ಲಿ 'ಸಾಮಾನ್ಯ ವಿಷಯಗಳ ಕಡೆಗೆ ನೋಡಿರಿ' ಎಂದು ಬರೆಯಲಾಗಿದೆ. ಓದುಗನು ಸಾಮಾನ್ಯ ವಿಷಯಗಳ ಬಗ್ಗೆ ಎಳೆಯುವುದರಿಂದ, ಈ ನಿರೂಪಣೆಯೂ ಅದೇ ವಿಷಯಗಳ ಬಗ್ಗೆ ಪುನಃ ಪ್ರಸ್ತಾಪಿಸುವುದನ್ನು ತಪ್ಪಿಸುವುದಕ್ಕಾಗಿ ಮತ್ತು ಹೆಚ್ಚಿನ ಸ್ಥಳದ ಅಭಾವವನ್ನು ಕಡಿಮೆ ಮಾಡಲಾಗಿದೆ. ಈ ನಿರೂಪಣೆಯ ಬಗ್ಗೆ ವ್ಯಾಖ್ಯಾನಿಸುವಾಗ, ಓದುಗನು ಬೇರೆ ಬೇರೆ, ವಚನ ಅಥವಾ ವಚನಗಳನ್ನು ಗಮನಿಸುವಂತೆ ಆದೇಶಿಸಲಾಗಿದೆ. ಕೆಲವು ವೇಳೆ ವಚನದ ಹೆಸರು ಹಾಗೂ ಅದರ ಸಂಖ್ಯೆಯನ್ನು ಕೊಡಲಾಗಿದೆ. ಉದಾಹರಣೆಯಾಗಿ "ಮತ್ತಾಯ 5:22". ಕೆಲವು ಸಾರಿ "ನೋಡು" ಎಂಬ ಪದವನ್ನು ಸೇರಿಸಲಾಗಿದೆ. ಉದಾಹರಣೆ "ನೋಡಿರಿ. ಮತ್ತಾಯ 5:22". ಈ ರೀತಿಯಾಗಿ "ನೋಡು" ಎಂಬ ಪದವನ್ನು ಸೇರಿಸಿದಾಗ ಆ ವಚನವನ್ನೂ ಸರಿಯಾಗಿ ನೋಡಿ, ಅದರ ಸಂಪೂರ್ಣ ಅರ್ಥವನ್ನು ಅಭ್ಯಸಿಸುವ ಪದಕ್ಕೆ ಹೊಂದಿಕೊಂಡಂತೆ ಮಾಡಿಕೊಳ್ಳಬೇಕು. ಕೆಲವು ಸಾರಿ ಪದಗಳು "ಮತ್ತು ವ್ಯಾಖ್ಯಾನಿಸಿರಿ" ವಚನದ ಸಂಖ್ಯೆಯ ನಂತರ ಸೇರಿಸಲ್ಪಟ್ಟಿವೆ. ಉದಾಹರಣೆಯಾಗಿ "ಮತ್ತಾಯ 5:22 ಮತ್ತು ವ್ಯಾಖ್ಯಾಸಿಸು" ಈ ರೀತಿಯಾಗಿ ಬರೆದಾಗ, ಅಭ್ಯಸಿಸುವ ಪದಕ್ಕೆ ಸಂಬಂಧಿಸಿದ ವಚನದ ಜೊತೆಯಲ್ಲೇ ಸಂಬಂಧಪಟ್ಟ ವ್ಯಾಖ್ಯಾನದ ಜೊತೆಯಾಗಿ ಬೇರೆ ವಚನವನ್ನು ನೋಡಬೇಕು- ಓದುಗನನ್ನು,

ಬೇರೆ ವ್ಯಾಖ್ಯಾನದ ಕಡೆ ಗಮನ ಸೆಳೆಯುವಾಗ, ಈ ನಿರೂಪಣೆಯಲ್ಲಿ ಪದೇ ಪದೇ ಅದೇ ವ್ಯಾಖ್ಯಾನಗಳನ್ನು ಹೇಳಿಕೊಂಡು ಅದನ್ನು ಇನ್ನಿತರ ಬೇರೆ ವಚನಗಳ ಬಗ್ಗೆ ಹೇಳದಿರುವುದರಿಂದ, ಬಹಳಷ್ಟು ಸ್ಥಳವನ್ನು ಉಳಿಸಬಹುದು.

ಕೆಲವು ಸಾರಿ, ಸತ್ಯವೇದದ ವಚನದ ಬಗ್ಗೆ ವ್ಯಾಖ್ಯಾನ ಕೊಡುವುದಿಲ್ಲ. ಬದಲಾಗಿ ಓದುಗನಿಗೆ ನೇರವಾಗಿ ಬೇರೊಂದು ವಚನ ಮತ್ತು ಅದರ ವ್ಯಾಖ್ಯಾನದ ಬಗ್ಗೆ ಅವನ ಗಮನ ಸೆಳೆಯಲಾಗುವುದು. ಇಂಥಾ ಸಂದರ್ಭ ಬಂದರೆ, ಬೇರೊಂದು ವಚನ ಮತ್ತು ಅಭ್ಯಸಿಸುವ ವಚನವೂ ಒಂದೇ ಆಗಿರುತ್ತದೆ. ಈ ನಿರೂಪಣೆಯಲ್ಲಿ ಎರಡು ಅಥವಾ ಮೂರು ಹೊಸಒಡಂಬಡಿಕೆಯ ವಚನಗಳು ಒಂದೇ ತರಹದವುಗಳಾಗಿದ್ದರೆ, ಒಂದರ ಬಗ್ಗೆ ಮಾತ್ರ ವ್ಯಾಖ್ಯಾಸಿಸಲಾಗುವುದು. ಸ್ಥಳಾವಕಾಶವನ್ನು ತಪ್ಪಿಸಲು ಮತ್ತು ಪುನರುಚ್ಚರಣೆ ತಪ್ಪಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಓದುಗನು ಇಂಥಾ ಸಂದರ್ಭವನ್ನು ಮತ್ತಾಯನ ಮತ್ತು ಲೂಕನ ಸುವಾರ್ತೆಯನ್ನು ಓದುವಾಗ ಇಂಥಾ ಪರಿಸ್ಥಿತಿಯನ್ನು ಎದುರಿಸುತ್ತಾನೆ. ಅದರಲ್ಲೂ ಮಾರ್ಕನ ಸುವಾರ್ತೆಯನ್ನು ಓದುವಾಗ. ಆದುದರಿಂದ ಈ ಎರಡು ಸುವಾರ್ತೆಗಳನ್ನು ಓದುವಾಗ, ಅದಕ್ಕೆ ಸಂಬಂಧಿಸಿದ ಮಾರ್ಕನ ಸುವಾರ್ತೆಯಲ್ಲಿರುವ ವಚನಗಳ ಬಗ್ಗೆಯೂ ಓದಬೇಕು ಮತ್ತು ವ್ಯಾಖ್ಯಾನಿಸಬೇಕು. ಅದೇ ರೀತಿಯಾಗಿ ಲೂಕನ ಸುವಾರ್ತೆಯಲ್ಲಿರುವ ಅನೇಕ ವಚನಗಳು ಅದಕ್ಕೆ ಸರಿಸಮಾನವಾಗಿ ಮತ್ತಾಯನ ಸುವಾರ್ತೆಯಲ್ಲಿ ನಾವು ನೋಡಬಹುದು.

ಈ ನಿರೂಪಣೆಯಲ್ಲಿ, ಕೆಲವು ಪುಸ್ತಕಗಳು ಮತ್ತು ಕೆಲವು ಹೊಸ ಒಡಂಬಡಿಕೆಯ ವಿಭಾಗಗಳಿಗೆ ಹೆಚ್ಚಿನ ಮತ್ತು ಸವಿವರವಾದ ವ್ಯಾಖ್ಯಾನಗಳನ್ನು ಇತರೇ ವಚನಗಳಿಗಿಂತ ಹೆಚ್ಚಾಗಿ ಕೊಡಲಾಗಿದೆ. ಆದುದರಿಂದ ಮೊಟ್ಟ ಮೊದಲನೆಯದಾಗಿ ಹೊಸ ಒಡಂಬಡಿಕೆಯನ್ನು ಅಭ್ಯಸಿಸುವವನು ಈ ಪುಸ್ತಕ ಮತ್ತು ವಿಭಾಗಗಳನ್ನು ಬಹಳ ಬೇಗನೆ ಅಭ್ಯಾಸ ಕ್ರಮದಲ್ಲಿ ಸೇರಿಸಿಕೊಳ್ಳುವುದು ಒಳ್ಳೆಯದು. ಉದಾಹರಣೆಗಾಗಿ, ಇಂತಹ ವಿಭಾಗ ಮತ್ತು ಪುಸ್ತಕಗಳು ಮತ್ತಾಯ ಅಧ್ಯಾಯ 5-7, ಮಾರ್ಕ, ಯೋಹಾನ, ರೋಮಾಯ, 1ನೇ ಕೊರಿಂಥ, ಗಲಾತ್ಯ ಮತ್ತು ಎಫೆಸ, ದಲ್ಲಿವೆ.

# ಪದಗಳ ಪಟ್ಟಿ

**ಅಬ್ರಹಾಮ** :- ಅಬ್ರಹಾಮನು ಮೊದಲನೆ ಯಹೂದ್ಯನಾಗಿದ್ದನು (ಪದಗಳ ಪಟ್ಟಿಯಲ್ಲಿ ಯಹೂದ್ಯ ಪದ ನೋಡಿರಿ). ಈಗಿರುವ ಆಧುನಿಕ ಇರಾಕ್ ದೇಶದ ವುರ್ ಎಂಬ ಪಟ್ಟಣದಲ್ಲಿ ಕ್ರಿಸ್ತನಿಗಿಂತ 2000ವರ್ಷಗಳ ಹಿಂದೆ ಹುಟ್ಟಿದನು. ದೇವರು ಅಬ್ರಹಾಮನಿಗೆ ಬೇರೊಂದು ದೇಶಕ್ಕೆ ಹೋಗಲು ಹೇಳಿದನು (ಆದಿಕಾಂಡ 12:1) ಆದೇಶವನ್ನು ದೇವರು ಅಬ್ರಹಾಮನ ಸಂತತಿಗೆ ಕೊಡಲು ವಾಗ್ದಾನ ಮಾಡಿದ್ದನು (ಆದಿಕಾಂಡ 12:7) ಆ ದೇಶವೇ ಇಸ್ರಾಯೇಲ್. ಅಬ್ರಹಾಮನ ಸಂತತಿಯು ಬೆಳೆದು ಬಂದು ಪ್ರಸಿದ್ಧ ಜನಾಂಗವೆಂದೆಣಿಸಿಕೊಂಡು, ಜಗತ್ತಿನ ಎಲ್ಲಾ ಜನರಿಗೂ ಆಶೀರ್ವಾದದಾಯಕವಾಗಿರುತ್ತದೆ ಎಂದು ದೇವರು ಅಬ್ರಹಾಮನಿಗೆ ಹೇಳಿದನು (ಆದಿಕಾಂಡ 12:2, 3) ಆ ಜನಾಂಗವೇ ಯೆಹೂದ್ಯಜನಾಂಗ. ಆ ಜನಾಂಗದ ಮೂಲಕ ಉಂಟಾದ ಮಹಾ ಆಶೀರ್ವಾದವೇನೆಂದರೆ, ಲೋಕ ರಕ್ಷಕನಾದ ಯೇಸುಕ್ರಿಸ್ತನು ಅಬ್ರಹಾಮನ ವಂಶಸ್ಥನಾಗಿ ಜನಿಸಿದನು (ಮತ್ತಾಯ 1:1). ಅಬ್ರಹಾಮನು ಅತ್ಯಂತ ನಂಬಿಕೆಯುಳ್ಳ ಮನುಷ್ಯನಾಗಿದ್ದನು (ಗಲಾತ್ಯ 3:6, ಹಿಬ್ರಿಯಾ 11:8-12 ಮತ್ತು ವ್ಯಾಖ್ಯಾನಗಳು). ಶಾರೀರಿಕವಾಗಿ, ಯೆಹೂದ್ಯರು ಅಬ್ರಹಾಮ ವಂಶಸ್ಥರೆಂದು ಹೇಳಿಕೊಳ್ಳಲು ಬಹಳ ಹೆಮ್ಮೆ ಪಟ್ಟುಕೊಂಡರು. ಆದಾಗ್ಯೂ, ಕ್ರಿಸ್ತನಲ್ಲಿ ವಿಶ್ವಾಸವಿಟ್ಟವರೇ ನಂಬಿಕೆಯ ಮೂಲಕ ನಿಜವಾದ ಅಬ್ರಹಾಮನ ಆತ್ಮೀಯ ವಂಶಸ್ಥರಾಗಿರುತ್ತಾರೆ. (ಗಲಾತ್ಯ 3:7-9 ನೋಡು ಮತ್ತು ವ್ಯಾಖ್ಯಾನಿಸು) ಅಬ್ರಹಾಮನ ಜೀವನ ಕುರಿತು ಸಂಪೂರ್ಣವಾಗಿ ಆದಿಕಾಂಡ, ಅಧ್ಯಾಯ 11-25ರಲ್ಲಿ ಕಂಡು ಬರುತ್ತದೆ.

**ದತ್ತು ಸ್ವೀಕಾರ** :- ಕ್ರಿಸ್ತನಲ್ಲಿ ನಂಬಿಕೆಯಿಡುವ ಮೂಲಕ, ನಾವು ದೇವರ ದತ್ತು ಮಕ್ಕಳಾಗುತ್ತೇವೆ. ಕ್ರಿಸ್ತನಲ್ಲಿ ನಾವು ರಕ್ಷಣೆ ಹೊಂದಲು ಇದು ಒಂದು ವಿಷಯಾಂಶ (ರಕ್ಷಣೆ ಎಂಬ ಪದವನ್ನು ನೋಡು). ಪ್ರಾರಂಭದಲ್ಲಿ ನಾವೆಲ್ಲರೂ ಪಾಪದ ಹಾಗೂ ಸೈತಾನನ ಗುಲಾಮರು (ಸೈತಾನ ಎಂಬ ಪದ ನೋಡು). ನಾವು ದೇವರ ಕುಟುಂಬದಲ್ಲಿ ಇರಲಿಲ್ಲ. ದೇವರು ಎಲ್ಲಾ ಮನುಷ್ಯರನ್ನು ಸೃಷ್ಟಿಸಿದನು. ಆದರೆ ಆತನು ಎಲ್ಲಾ ಮನುಷ್ಯರಿಗೂ ತಂದೆಯೆ. ಯಾರ್‍ಯಾರು ಕ್ರಿಸ್ತನಲ್ಲಿ ವಿಶ್ವಾಸಿವಿಡುತ್ತಾರೋ, ಅಂಥವರಿಗೆ ಆತನು ತಂದೆಯಾಗಿರುತ್ತಾನೆ. ನಾವು ಕ್ರಿಸ್ತನ ಪ್ರಾಮಾಣಿಕತೆಯನ್ನು ನಂಬಿಕೆಯ ಮೂಲಕ ಪಡೆದುಕೊಂಡರೆ ಮಾತ್ರ ದೇವರು ನಮ್ಮನ್ನು ಆತನ ಕುಟುಂಬಕ್ಕೆ ಸೇರಿಸಿಕೊಳ್ಳುತ್ತಾನೆ. ಯಾವುದೇ ದತ್ತು ಸ್ವೀಕಾರ ಹೊಂದಿದ ಮಗುವು, ಯಾರು ದತ್ತು ತೆಗೆದುಕೊಂಡರೋ, ಅವರ ಸಂಪೂರ್ಣ ಪಿತ್ರಾರ್ಜಿತ ಭಾದ್ಯತೆಯನ್ನು ಹೊಂದುತ್ತಾನೆ. ಒಂದು ವೇಳೆ, ಆತನು ಶಾರೀರಿಕವಾಗಿ ಒಬ್ಬನ ಮಗನಾಗಿ ಹುಟ್ಟದಿದ್ದರೂ, ಕಾನೂನು ಪ್ರಕಾರವಾಗಿ ಅವನು ಮಗನೆಂದೇ ಪರಿಗಣಿಸಲ್ಪಡುತ್ತಾನೆ ಮತ್ತು ಮಗನಿಗೆ ಸೇರಬೇಕಾದ ಎಲ್ಲಾ ಭಾದ್ಯತೆಯನ್ನು ಹೊಂದುತ್ತಾನೆ. ಅದೇ ರೀತಿಯಾಗಿ, ನಾವು ಸ್ವಾಭಾವಿಕವಾಗಿ ಒಂದು ಸಾರಿ ಪಾಪಿಗಳಾಗಿದ್ದು, ನಾವು ಕ್ರಿಸ್ತನ ಮೂಲಕ ದೇವರ ನಿಜವಾದ ಮಗನೂ, ಮಗಳೂ, ಆತ್ಮೀಯವಾಗಿ ಆಗುತ್ತೇವೆ ಮತ್ತು ನಾವು ಪರಲೋಕದಲ್ಲಿ ನಮಗೆ ಸಲ್ಲುವ ನಿತ್ಯ ಭಾದ್ಯತೆಯನ್ನು ಹೊಂದುವವರಾಗುತ್ತೇವೆ. (ರೋಮಾಯ 8:15-17 ನೋಡಿರಿ) ಗಲಾತ್ಯ 4:3-7, ಎಫೆಸ 1:4-5 ಮತ್ತು ವ್ಯಾಖ್ಯಾನಗಳು. ದೇವರ ಮಗುವಾಗುವುದು, ರಕ್ಷಣೆಯಿಂದ ದೊರಕುವ ಅತ್ಯಂತ ಮಹತ್ವವಾದ ಆಶೀರ್ವಾದವಾಗಿರುತ್ತದೆ. ಅಂದರೆ ದೇವರ ಸ್ವಭಾವವು, ಪರಿಶುದ್ಧಾತ್ಮನ ಮೂಲಕ ನಮ್ಮಲ್ಲಿ ಸೇರಿಸಲ್ಪಡುತ್ತದೆ. ಇಹಲೋಕದ ತಂದೆಯೊಡನೆ ಯಾವ ರೀತಿ ಅನ್ಯೋನ್ಯತೆಯನ್ನು ಮಗುವು ಹೊಂದುತ್ತದೋ, ಅದೇ ರೀತಿಯಲ್ಲಿ ನಾವು ದೇವರ ಅನ್ಯೋನ್ಯತೆಯನ್ನು ಹೊಂದುತ್ತೇವೆ. ಅದೂ ಅಲ್ಲದೆ ನಾವು ದೇವರ ಮಕ್ಕಳಂತೆ ಜೀವಿಸಬೇಕಾಗುತ್ತದೆ. ದೇವರ ಮಗುವಾಗುವುದು ಎಂಥ ಮಹತ್ವವಾದ ಭಾಗ್ಯ ಮತ್ತು ಆನಂದದಾಯಕವಾಗಿರುತ್ತದೆ. ಅದೂ ಬಹಳ ಜವಾಬ್ದಾರಿತನವನ್ನು ನಮ್ಮ ಮೇಲೆ ತರುತ್ತದೆ.

**ದೇವದೂತನು** :- ದೇವದೂತನು ಒಬ್ಬ ಪರಲೋಕದ ಅಥವಾ ಆತ್ಮ ಸ್ವರೂಪನಾದ ಸಂದೇಶಕನು. ದೇವದೂತರು ಆತ್ಮಸ್ವರೂಪಿಗಳಾಗಿದ್ದು ದೇವರಿಂದ ಸೃಷ್ಟಿಸಲ್ಪಟ್ಟವರು (ಕೀರ್ತನೆ 148:2-5; ಕೊಲೆಸ್ಸೆ 1:16, ಹಿಬ್ರೀಯ 1:14) ಇವರು ಮನುಷ್ಯರಿಗಿಂತಲು ಹೆಚ್ಚಿನವರಾಗಿದ್ದಾರೆ(ಹಿಬ್ರಿಯ 2:6 7) ಮನುಷ್ಯರು ಸೃಷ್ಟಿಸಲ್ಪಡುವುದಕ್ಕಿಂತ ಮುಂಚೆಯೇ ಇವರು ಸೃಷ್ಟಿಸಲ್ಪಟ್ಟರು (ಯೋಬ 38:7) ಮನುಷ್ಯರಿಗೆ ಇರುವ ಹಾಗೆ ಮಾಂಶದ ಶರೀರ ಇವರಿಗಿಲ್ಲದಿದ್ದರೂ, ಇವರು ಈಗಲೂ ಮನುಷ್ಯರಿಗೆ ಶರೀರಧಾರಿಗಳಾಗಿ ಕಾಣಿಸಿಕೊಳ್ಳುವರು (ಲೂಕ 1:11, 26-27, ಅ.ಕೃ. 12:6-7.) ದೇವದೂತರು ಮದುವೆ ಮಾಡಿಕೊಳ್ಳುವುದಿಲ್ಲ ಮತ್ತು ಸಾಯುವುದಿಲ್ಲ (ಲೂಕ 20:34-36).

ಎಲ್ಲಾ ದೇವದೂತರು ಪರಿಶುದ್ಧರಾಗಿ ಸೃಷ್ಟಿಸಲ್ಪಟ್ಟಿರು. ಆದಾಗ್ಯೂ ಕೆಲವು ದೇವದೂತರು ದೇವರಿಗೆ ಎದುರಾಗಿ ದಂಗೆ ಎದ್ದರು ಮತ್ತು ತಮ್ಮ ಪರಿಶುದ್ಧತ್ವದಿಂದ ಬಿದ್ದು ಹೋದರು. ಹೀಗೆ ಬಿದ್ದು ಹೋದಂತ ದೇವದೂತರು ದೆವ್ವ ಅಥವಾ ದುರಾತ್ಮರಾದರು (ಪದಪಟ್ಟಿಯಲ್ಲಿ ದೆವ್ವ ನೋಡಿರಿ). ದೆವ್ವಗಳ ಒಡೆಯನೇ ಸೈತಾನನು. (ಸೈತಾನ; ಪದಪಟ್ಟಿ ನೋಡಿರಿ) ದೇವರು ದೇವದೂತರಿಗೆ ವಿಧವಿಧವಾದ ಜವಾಬ್ದಾರಿ ಕೆಲಸಗಳನ್ನು ಸಾಧನೆ ಮಾಡಲು ಕೊಟ್ಟನು. ಕೆಲವು ದೇವದೂತರು ದೇವಸನ್ನಿಧಿಯಲ್ಲಿ ನಿಂತುಕೊಂಡಿರುತ್ತಾರೆ ಮತ್ತು ಆತನನ್ನು ಆರಾಧಿಸುತ್ತಾರೆ (ಇಬ್ರಿಯಾ 1:6 ಪ್ರಕಟಣೆ 5:11). ಇನ್ನು ಕೆಲವರು ದೇವ ಜನರಿಗೆ ಸಹಾಯ ಮಾಡುತ್ತಾರೆ ಮತ್ತು ಅವರನ್ನು ಕಾಪಾಡುತ್ತಾರೆ (ಆದಿಕಾಂಡ 19:11, ಕೀರ್ತನೆ 91:11, ದಾನೀಯೇಲ 3:28, 6.22 ಅ.ಕೃ. 5:19, 12:6-7) ಅಡವಿಯಲ್ಲಿ ಕ್ರಿಸ್ತನು ಶೋಧನೆಗೆ ಒಳಗಾದಾಗ ದೇವದೂತರು ಆತನನ್ನು ಉಪಚರಿಸಿದರು (ಮತ್ತಾಯ 4:11). ಒಬ್ಬ ದೇವದೂತನು ಆತನನ್ನು ಗೆತ್ಸೇ ಮನೆ ತೋಟದಲ್ಲಿ ಬಲಪಡಿಸಿದನು (ಲೂಕ 22:43). ಮತ್ತೊಬ್ಬ ದೇವದೂತನು ಆತನ ಸಮಾಧಿಗೆ ಮುಚ್ಚಲ್ಪಟ್ಟ ಬಂಡೆಯನ್ನು ಉರುಳಿಸಿದನು (ಮತ್ತಾಯ 28:2-7) ಕ್ರಿಸ್ತನಲ್ಲಿ ವಿಶ್ವಾಸವಿಟ್ಟಿರುವ ಪ್ರತಿಯೊಬ್ಬ ಕ್ರೈಸ್ತನಿಗೆ ಕಾವಲಾಗಿರಲಿಕ್ಕಾಗಿಯೇ ಒಬ್ಬ ವಿಶೇಷ ದೇವದೂತನು ದೇವರ ಸನ್ನಿಧಾನದಲ್ಲಿ ನಿಂತುಕೊಂಡಿರುತ್ತಾನೆ ಮತ್ತು ಆ ವಿಶ್ವಾಸಿಗೆ ಕಾವಲಾಗಿರುತ್ತಾನೆ (ಮತ್ತಾಯ 18:10)

**ಅಪೋಸ್ತಲನು** :- ಸುವಾರ್ತೆಯನ್ನು ಸಾರಲು ಪರಿಶುದ್ಧಾತ್ಮನಿಂದ ಪ್ರೇರೇಪಿಸಲ್ಪಟ್ಟು ಮತ್ತು ಕ್ರಿಸ್ತನ ಸಭೆಯನ್ನು ಕಟ್ಟಲು ಅಧಿಕಾರ ಹೊಂದಿ ಕಳಿಸಲ್ಪಡುವ ವ್ಯಕ್ತಿಯೇ ಅಪೋಸ್ತಲನು.

ಪ್ರಾರಂಭದಲ್ಲಿ ಯೇಸುಕ್ರಿಸ್ತನ 12 ಮಂದಿ ಮುಖ್ಯ ಶಿಷ್ಯರು. ಅಪೋಸ್ತಲರೆಂದು ಕರೆಸಿಕೊಂಡರು. ತದನಂತರ, ಬೇರೆಯವರು ಸಹಾ ಅಪೋಸ್ತಲರೆಂದು ಕರೆಯಲ್ಪಟ್ಟರು. ಅವರಲ್ಲಿ ಪೌಲನು ಮತ್ತು ಯಾಕೋಬನು (1ನೇ ಕೊರಿಂಥ 15:7) ಬಾರ್ನಬನು (ಅ.ಕೃ. 14:3-4) ಸೀಲನು ಮತ್ತು ತಿಮೋಥಿ (1ಥೆಸಲೋನಿಕ 2:6-7) ಮತ್ತು ಅಂಡ್ರೋನಿಕಸ್ ಮತ್ತು ಜುನ್ಯೈಯಾಸ್ (ರೋಮಾ. 16:7).

ಅಪೋಸ್ತಲರ ಮುಖ್ಯ ಕಾರ್ಯವೇನೆಂದರೆ, ಸ್ವಾಮಿನಿಷ್ಠೆಯಿಂದ ಕ್ರಿಸ್ತನ ಬೋಧನೆಯನ್ನು ಇತರರಿಗೆ ಸಾರುವುದು ಮತ್ತು ಆತನ ಸಭೆಯನ್ನು ಸ್ಥಾಪಿಸುವುದು ಎಫೆಸ 2:20ರಲ್ಲಿ ಬರೆದಿರುವಂತೆ ಅಪೋಸ್ತಲರು ಸಭೆಯ ಅಸ್ತಿವಾರವಾಗಿದ್ದಾರೆ.

**ಪ್ರಾಯಶ್ಚಿತ್ತ** :- ಪಾಪದ ನಿಮಿತದಿಂಟುಗುವ ದೇವರ ಕೋಪದಿಂದ ತಪ್ಪಿಸಿಕೊಳ್ಳುವುದು ಅಥವಾ ಪಾಪಕ್ಕೆ ಶಿಕ್ಷೆ ಬರುವುದನ್ನು ತಡೆಗಟ್ಟಲು ಮಾಡುವ ಒಂದು ವಿಶೇಷ ಕ್ರಿಯೆಗೆ ಪ್ರಾಯಶ್ಚಿತ್ತ ಎಂದು ಹೆಸರು. ಸತ್ಯವೇದದಲ್ಲಿ, ಈ ಕ್ರಿಯೆಯು ರಕ್ತದ ಬಲಿಯಾಗಿದ್ದು, ಇದನ್ನು ಪಾಪಪರಿಹಾರಕ ಯಜ್ಞ ಎಂದು ಕರೆಯುತ್ತಾರೆ.

ಎಲ್ಲಾ ಮನುಷ್ಯರು ಪಾಪ ಮಾಡಿದ್ದಾರೆ ಮತ್ತು ದೇವರ ನ್ಯಾಯ ತೀರ್ಪಿಗೆ ಬದ್ಧರಾಗಿರುತ್ತಾರೆ ಮತ್ತು ಶಿಕ್ಷಾರ್ಹರಾಗಿರುತ್ತಾರೆ (ಅರಣ್ಯಕಾಂಡ 14:18, ಕೀರ್ತನೆ 7:11, ರೋಮಾಯ 1:18, 3:10 ಮತ್ತು ವ್ಯಾಖ್ಯಾನಗಳು). ಆದರೆ ದೇವರು ದಯಾಪರನಾಗಿದ್ದು, ಮನುಷ್ಯರು ಪಾಪದ ಶಿಕ್ಷೆಗೆ ಗುರಿಯಾಗದಿರುವುದಕ್ಕಾಗಿ, ಒಂದು ಮಾರ್ಗವನ್ನು ಕೊಟ್ಟಿದ್ದಾನೆ. ಹಳೇ ಒಡಂಬಡಿಕೆಯಲ್ಲಿ ಯಹೂದ್ಯರು ದೇವರ ಕೋಪವನ್ನು ಶಮನಗೊಳಿಸಲು ಪ್ರಾಣಿಗಳನ್ನು ಬಲಿ ಕೊಡುತ್ತಿದ್ದರು. ದೇವರ ಕೋಪವು ಮನುಷ್ಯರ ಮೇಲೆ ಬೀಳದೇ, ಬಲಿ ಪ್ರಾಣಿಯ ಮೇಲೆ ಬಿದ್ದಿತು. (ಯಾಜಕ ಕಾಂಡ 4:27-31, 16:20-2) ಸಾಧಾರಣವಾದ ಯಜ್ಞಗಳನ್ನಲ್ಲದೇ, ದೇವರು ವರ್ಷದಲ್ಲಿ ಒಂದು ದಿನವನ್ನು "ಪ್ರಾಯಶ್ಚಿತ್ತದ ದಿನವೆಂದು ಸಹ ಗೊತ್ತು ಮಾಡಿದನು". ಆ ದಿನದಲ್ಲಿ ಯಹೂದ್ಯರ ಮಹಾಯಾಜಕನು ಒಂದು ವಿಶೇಷವಾದ ಪ್ರಾಯಶ್ಚಿತ್ತ ಯಜ್ಞವನ್ನು ಎಲ್ಲಾ ಜನರ ಪಾಪ ನಿವಾರಣೆಗಾಗಿ ಮಾಡುತ್ತಾನೆ (ಯಾಜಕಕಾಂಡ 16:1-34)

ಆದಾಗ್ಯೂ ಕ್ರಿಸ್ತಯೇಸುವು ಈ ಲೋಕಕ್ಕೆ ಬಂದ ಮೇಲೆ, ಈ ಹಳೇ ಒಡಂಬಡಿಕೆಗೆ ಸಂಬಂಧಿಸಿದ ಪ್ರಾಯಶ್ಚಿತ್ತ ಯಜ್ಞಗಳು ಪಾಪ ಪರಿಹಾರಕ್ಕಾಗಿ ಬೇಕಾಗಲಿಲ್ಲ. ಯಾಕೆಂದರೆ, ಕ್ರಿಸ್ತಯೇಸುವು ತಾನೇ ದೇವರ ಸ್ವಂತ ಮಗನೂ ಆಗಿದ್ದು, ನಮ್ಮ ಪಾಪಗಳಿಗಾಗಿ ಬಲಿಪಶುವಾದನು. ಆತನು ತಾನೇ ಪಾಪ ಪರಿಹಾರಕನಾದನು ಅಥವಾ ಪ್ರಾಯಶ್ಚಿತ್ತ ಬಲಿಪಶುವಾದನು (ನೋಡಿರಿ.ರೋಮಾ. 3:23-25 1ನೇ ಯೋಹಾನ 2:2, 4:10, ಮತ್ತು ವ್ಯಾಖ್ಯಾನಗಳು). ಆತನ ಪ್ರಾಯಶ್ಚಿತ್ತ ಯಜ್ಞ ಒಂದೇ ಸಾರಿ ಎಲ್ಲರಿಗಾಗಿ ಆಯಿತು. ನಾವು ಯೇಸುವಿನಲ್ಲಿ ವಿಶ್ವಾಸವಿಟ್ಟಾಗ ಮತ್ತು ಆತನ ತ್ಯಾಗದ (ಶಿಲುಬೆಯಲ್ಲಿ ಮರಣ), ನಂತರ ನಮಗೆ ಇನ್ನಾವ ಪಾಪಪರಿಹಾರಕಯಜ್ಞ ಬೇಕಿಲ್ಲ. ಹಿಬ್ರಿಯಾ 9:26-28, 10:10, 14, ಮತ್ತು ವ್ಯಾಖ್ಯಾನಗಳು ಕ್ರಿಸ್ತನು ತನ್ನ ಮೇಲೆ ನಮ್ಮೆಲ್ಲಾ ಶಿಕ್ಷೆಯನ್ನು ಹಾಕಿಕೊಂಡ ಪ್ರಯುಕ್ತ, ನಮ್ಮ ಎಲ್ಲಾ ಪಾಪಗಳು ಮನ್ನಿಸಲ್ಪಟ್ಟವು. ಆತನೇ ನಮ್ಮನ್ನು ದೈವಕೋಪದಿಂದ ತಪ್ಪಿಸಲು, ಪಾಪ ಪರಿಹಾರಕನಾದನು. ದೇವರ ಕೋಪವನ್ನು ಅಳಿಸಿಬಿಡಲು ಮತ್ತು ಪಾಪ ಮನ್ನಣೆ ಹೊಂದಲು, ಒಂದು ಜೀವಂತ ಬಲಿಯು ಅವಶ್ಯಕವಾಗಿದೆ. ರಕ್ತವು ಚೆಲ್ಲಲ್ಪಡಬೇಕು. ರಕ್ತಧಾರೆಯಿಲ್ಲದೇ, ಪಾಪ ಮನ್ನಣೆಯಿಲ್ಲ (ಹಿಬ್ರಿಯಾ 9:22). ಕ್ರಿಸ್ತನೇ ಆ ಜೀವಂತ ಬಲಿಪಶು. ಆತನು ತನ್ನ ರಕ್ತವನ್ನು ಶಿಲುಬೆಯಲ್ಲಿ ಸುರಿಸಿದನು. (ಪದಪಟ್ಟಿಯಲ್ಲಿ ಶಿಲುಬೆ) ನೋಡಿರಿ. ಆತನ ಕೈಗಳು ಮತ್ತು ಕಾಲುಗಳ ಮೂಲಕ ಮೊಳೆಯು ಜಡಿಯಲ್ಪಟ್ಟವು ಮತ್ತು ಆತನ ಪಕ್ಕೆಗೆ ಒಂದು ಈಟಿಯು ನಾಟಲ್ಪಟ್ಟಿತು. ಅದರಿಂದ ರಕ್ತ ಸುರಿಯಿತು (ಯೋಹಾನ 19:34, 20:24-27).

ಅಪೋಸ್ತಲನಾದ ಪೌಲನು, ಆತನ ರಕ್ತದಿಂದ ನಾವು ನೀತಿವಂತರಾದೆವೆಂದು ಬರೆದನು (ರೋಮಾಯ 5:9). ಹಾಗೆಂದರೆ, ನಾವು ಕ್ರಿಸ್ತನ ಮರಣದ ಮೂಲಕ, ನೀತಿವಂತರೆಂದು ನಿರ್ಣಯಿಸಲ್ಪಟ್ಟೆವು (ರೋಮಾಯ 5:10). ಯೇಸುವಿನ ರಕ್ತವು ಮಾತ್ರವೇ ನಮ್ಮನ್ನು ರಕ್ಷಿಸುವುದಿಲ್ಲ ; ಯೇಸುವಿನ ಮರಣವೇ. ಪಾಪಕ್ಕೆ ಶಿಕ್ಷೆ ಮರಣ. ರೋಮಾ. 6:23. ನಾವು ಬದುಕಬೇಕೆಂದೇ, ಯೇಸುವು ಸಾಯಬೇಕಾಯಿತು.

ದೀಕ್ಷಾಸ್ನಾನ :- ಹಳೇ ಒಡಂಬಡಿಕೆಯಲ್ಲಿ ದೀಕ್ಷಾಸ್ನಾನವೆಂದರೆ, ತೊಳೆಯುವುದು ಅಥವಾ ಶುದ್ಧಗೊಳಿಸುವುದು (ವಿಮೋಚನಾಕಾಂಡ 30:17-21, ಯಾಜಕಕಾಂಡ 11:25). ಸ್ತ್ರೀ ಪುರುಷರು, ಯೇಸುವನ್ನು ಸಂಧಿಸುವ ಸಿದ್ಧತೆಗೊಸ್ಕರವಾಗಿ ಪಶ್ಚಾತಪದ ದಿಕ್ಷಾಸ್ನಾದ ಬಗ್ಗೆಹೋಹಾನನು ಇವರಿಗೆ ಉಪದೇಸಿಸುತ್ತಾನೆ.(ಮಾರ್ಕ2:4 ಮತ್ತು ವ್ಯಾಖ್ಯಾನವನ್ನು ನೋಡಿರಿ.) ಯೇಸು ಕ್ರಿಸ್ತನು ವಿಶ್ವಾಸಿಗಳನ್ನು ಬೆಂಕಿಯಿಂದಲೂ ಮತ್ತು ಪವಿತ್ರಾತ್ಮನಿಂದಲೂ ದಿಕ್ಷಾಸ್ನಾವನ್ನು ಮಾಡಿಸಿದನು. (ಮತ್ತಾಯ 3:11 ಮಾರ್ಕ1:8 ಮತ್ತು ವ್ಯಾಖ್ಯಾನವನ್ನು ನೋಡಿರಿ.) ಹೊಸ ಒಡಂಬಡಿಕೆಯಲ್ಲಿ ದಿಕ್ಷಾಸ್ನಾವು, ತಂದೆ,ಮಗ ಮತ್ತು ಪವಿತ್ರಾತ್ಮನ ಹೇಸರಿನಲ್ಲಿ ನೀರಿನಿಂದ ಚಿಮೂಕಿಸು,ನೀರನ್ನು ಸುರಿ ಮತ್ತು ನೀರಿನಲ್ಲಿ ಮುಳುಗಿಸು ಎಂದಾಗುತ್ತದೆ ವಿಶ್ವಾಸಿಯು ಕ್ಷಮಿಸಲ್ಪಟ್ಟಂತ ತನ್ನ ಪಾಪಗಳಿಗಾಗಿ ಪಶ್ಚಾತಾಪ ಪಟ್ಟು ಅವುಗಳಿಗೆ ವಿಮುಕಗಾಗುವುದಕ್ಕೆ ಮತ್ತು ಪಾಪದ ಶುದ್ದಿಕರಣಕ್ಕೆ ದಿಕ್ಷಾಸ್ನಾವು ಗುರುತಾಗಿದೆ. (ಅ.ಕೃ.2:38)ವಿಶ್ವಾಸಿಗಳು ಐಕ್ಯತೆಯಿಂದ ಕ್ರಿಸ್ತನಲ್ಲಿ ಒಂದಾಗಿರುವುದಕ್ಕೂ ಸಹ ದಿಕ್ಷಾಸ್ನಾವು ಗುರುತಾಗಿದೆ. (ಗಲಾತ್ಯ.3:26) ವಿಶ್ವಾಸಿಯು ದಿಕ್ಷಾಸ್ನಾವನ್ನು ಹೊಂದಿದಾಗ, ಕ್ರಿಸ್ತನ ಮರಣದಲ್ಲಿ ಪಾಲುದಾರನಾಗುತ್ತಾನೆ. ಹಾಗೆಯೆ ಇದೆ ಸಮಯದಲ್ಲಿ ವಿಶ್ವಾಸಿಯು ಕ್ರಿಸ್ತನ ಪುನರುತ್ಥಾನದಲ್ಲಿ ಪಾಲಪದಾರನಾಗುತ್ತಾನೆ.ನಂಬಿಕೆಯ ಮೂಲಕವಾಗಿ ವಿಶ್ವಾಸಿಯು ಒಂದು ಹೊಸ ಆತ್ಮಿಕ ಜೀವವನ್ನು ಹೊಂದುತ್ತಾನೆ. (ರೋಮ.6:3-8 ಮತ್ತು ವ್ಯಾಖ್ಯಾನವನ್ನು ನೋಡಿರಿ) ಕಡೆಯದಾಗಿ ನಾವೆಲ್ಲರೂ ಕ್ರಿಸ್ತನ ದೇಹದ ಅಂಗಗಳಾಗಿದ್ದೇವೆಂಬುದರ ಗುರುತಾಗಿ ದೀಕ್ಷಾಸ್ನಾನವಿರುತ್ತದೆ (1ನೇ ಕೊರಿಂಥ 12:13 ಮತ್ತು ವ್ಯಾಖ್ಯಾನ). ಕ್ಲುಪ್ತವಾಗಿ ಹೇಳುವುದಾದರೆ, ನಾವು ರಕ್ಷಣೆ ಹೊಂದಿದ್ದೇವೆಂಬುದರ ಗುರುತಾಗಿ ದೀಕ್ಷಾಸ್ನಾನ ಸಂಸ್ಕಾರವಿರುತ್ತದೆ. ಕ್ರಿಸ್ತನಲ್ಲಿ ನಂಬಿಕೆ ಯಿಡುವುದರಿಂದ ನಾವು ದೀಕ್ಷಾಸ್ನಾನದ ಮೂಲಕ ಬರುವ ಆಶೀರ್ವಾದಗಳನ್ನು ಹೊಂದುತ್ತೇವೆ. ಆದಾಗ್ಯೂ ಅನೇಕ ಕ್ರೈಸ್ತರು ದೀಕ್ಷಾಸ್ನಾನವೆಂಬುದು ನಾವು ಪಡೆದುಕೊಳ್ಳುವ ಆತ್ಮೀಯ ಆಶೀರ್ವಾದಗಳಿಗಿಂತಲೂ ಮಿಗಿಲಾದುದೆಂದು ನಂಬುತ್ತಾರೆ.ವಿಶ್ವಾಸಿಗಳು ದೀಕ್ಷಾಸ್ನಾನವು ಆಶೀರ್ವಾದಗಳನ್ನು ಹೊಂದುವ ಮೂಲ ಸಾಧನವಾಗಿ'ವಿರುತ್ತದೆ ಎಂದು ವಿಶ್ವಾಸಿಸುತ್ತಾರೆ. ದೇವರು ನಮ್ಮಲ್ಲಿರುವ ಹಳೇ ಪಾಪದ ಸ್ವಭಾವವನ್ನುಮರಣಕ್ಕೆ ಒಪ್ಪಿಸಿ ಮತ್ತೆ ಹೊಸ ಆತ್ಮಿಕ ಸ್ವಬಾವನ್ನು ನಮ್ಮಲ್ಲಿ ಇರಿಸುತ್ತಾನೆ.

ಆದರೆ ಅನೇಕ ಕ್ರೈಸ್ತರು, ದೀಕ್ಷಾಸ್ನಾನ ಸಂಸ್ಕಾರವು ತನ್ನಷ್ಟಕ್ಕೆ ತಾನೇ ಏನು ಮಾಡಲಾರದು. ಕ್ರಿಸ್ತನಲ್ಲಿ ನಿಜವಾದ ನಂಬಿಕೆ ಇಡುವುದರ ಮೂಲಕವೇ ದೀಕ್ಷಾಸ್ನಾನದ ಆಶೀರ್ವಾದಗಳನ್ನು ಪಡೆದುಕೊಳ್ಳಬಹುದೆಂದು ಒಪ್ಪಿಕೊಳ್ಳುತ್ತಾರೆ. ಈ ವಿಷಯದ ಬಗ್ಗೆ ಇನ್ನೂ ಚರ್ಚಿಸಿಸಲು "ನೀರಿನಿಂದ ಸ್ನಾನ" ಎಂಬ ಸಾಮಾನ್ಯ ವಿಷಯದ ಕಡೆಗೆ ನೋಡಿರಿ. ರಕ್ಷಣೆ ಹೊಂದಬೇಕಾದರೆ ದೀಕ್ಷಾಸ್ನಾನವನ್ನು ಮಾಡಿಸಿಕೊಳ್ಳುವ ಅವಶ್ಯಕತೆ ಇಲ್ಲ (ಲೂಕ 23:39-43). ನಂಬಿಕೆಯ

ಮೂಲಕವೇ ರಕ್ಷಣೆ ದೊರಕುತ್ತದೆ. ಆದರೆ ಒಬ್ಬ ವ್ಯಕ್ತಿಯು ದೀಕ್ಷಾಸ್ನಾನ ಮಾಡಿಸಿಕೊಳ್ಳಲು ನಿರಾಕರಿಸಿದರೆ, ಅವನ ನಂಬಿಕೆ ನಿಜವಲ್ಲ ಎಂಬುದು ವ್ಯಕ್ತವಾಗುತ್ತದೆ. ಹೊಸ ಒಡಂಬಡಿಕೆಯು ವಿಶ್ವಾಸಿಗಳೆಲ್ಲರೂ ದೀಕ್ಷಾಸ್ನಾನ ಹೊಂದಲೇಬೇಕೆಂದು ಪ್ರಬೋಧಿಸುತ್ತದೆ. ನಾವು ಇದನ್ನು ನಿರಾಕರಿಸಿದರೆ ಕ್ರಿಸ್ತನಿಗೆ ಅವಿಧೇಯರಾಗುತ್ತೇವೆ. ಯಾರು ಬೇಕೆಂತಲೇ, ಕ್ರಿಸ್ತನಿಗೆ ವಿರೋಧವಾಗಿ ನಡೆದು ಕೊಳ್ಳುತ್ತಾರೋ ಅವರಲ್ಲಿ ನಿಜವಾದ ನಂಬಿಕೆ ಇಲ್ಲ. ಆದುದರಿಂದ, ಎಲ್ಲಾ ಕ್ರೈಸ್ತರು ಮೊದಲ ಅವಕಾಶ ದೊರೆತ ಕೂಡಲೇ ದೀಕ್ಷಾಸ್ನಾನ ಮಾಡಿಸಿಕೊಳ್ಳಲೇಬೇಕು. ಆತ್ಮೀ ಕ ದೀಕ್ಷಾಸ್ನಾನವೆಂಬ ಇನ್ನೊಂದು ವಿಶೇಷ ದೀಕ್ಷಾಸ್ನಾನವಿದೆ ಇದರ ಬಗ್ಗೆ ಹೆಚ್ಚಿನ ಚರ್ಚೆಗಾಗಿ "ಪವಿತ್ರಾತ್ಮನ ದೀಕ್ಷಾಸ್ನಾನ" ಎಂಬ ಸಾಮಾನ್ಯ ವಿಷಯದ ಬಗ್ಗೆ ನೋಡಿರಿ.

**ಸಭೆ** :- ಸರಳವಾಗಿ ಹೇಳುವುದಾದರೆ, ವಿಶ್ವಾಸಿಗಳ ಒಂದು ಗೂಡುವಿಕೆಯೇ, ಸಭೆಯಾಗಿರುತ್ತದೆ. ಸಭೆ ಎಂಬುದನ್ನು ಎರಡು ವಿಧವಾಗಿ ನಾವು ಮನಗಾಣಬಹುದು. ಮೊದಲನೆಯದಾಗಿ ಸ್ಥಳೀಯ ಸಭೆ ಅಂದರೆ ಒಂದು ನಿರ್ಧಿಷ್ಟವಾದ ಸ್ಥಳದಲ್ಲಿ ಕೂಡಿ ಬರುವ ವಿಶ್ವಾಸಿಗಳ ಗುಂಪು ಮತ್ತು ಎರಡನೆಯದಾಗಿ, ಸಾರ್ವತ್ರಿಕವಾಗಿರುವ ಸಭೆ ಅಂದರೆ, ಪ್ರಪಂಚದಾದ್ಯಂತ ಅನ್ಯೋನ್ಯತೆ ಹೊಂದಿದ ಆತ್ಮೀಯ ಸಭೆ, ಹೊಸ ಒಡಂಬಡಿಕೆಯಲ್ಲಿ ಸಭೆ ಎಂಬ ಪದವು, ಮೇಲೆ ತಿಳಿಸಿದ ಎರಡೂ ಅರ್ಥಗಳಲ್ಲೂ ಉಪಯೋಗಿಸಲ್ಪಡುತ್ತದೆ. ಈ ವಚನದ ಅರ್ಥವನ್ನು ಸಂದರ್ಭನುಸಾರವಾಗಿ ಗ್ರಹಿಸಿಕೊಳ್ಳಬೇಕಾಗುತ್ತದೆ.

ಯಾವುದೇ ಒಂದು ಸ್ಥಳದಲ್ಲಿರುವ ಸ್ಥಳಿಯ ಸಭೆಯು, ಸಾರ್ವತ್ರಿಕ ಸಭೆಯ ಒಂದು ಪ್ರತ್ಯಕ್ಷ ಪ್ರತಿರೂಪವಾಗಿರುತ್ತದೆ. ಕೆಲವು ಕ್ರೈಸ್ತರು ತಮ್ಮ ಸ್ಥಳೀಯ ಸಭೆಯೇ ವಿಶ್ವಾಸಿಗಳಿಗೆ ಅತಿ ಉನ್ನತ ಅಧಿಕಾರಯುಕ್ತ ಸಂಸ್ಥೆಯಾಗಿದೆ ಎಂದು ಭಾವಿಸುತ್ತಾರೆ. ಈ ಅಭಿಪ್ರಾಯದ ಪ್ರಕಾರ ಪ್ರತಿಯೊಂದು ಸ್ಥಳೀಯ ಸಭೆಯು ಸಂಪೂರ್ಣ ಸ್ವಾತಂತ್ರ್ಯವಾದ ಸ್ವಯಂ ಆಡಳಿತ ಸಂಸ್ಥೆಯಾಗಿರುತ್ತದೆ.

ಕೆಲವು ಇತರೇ ಕ್ರೈಸ್ತರಲ್ಲಿ ಬಿಷಪ್‌ರವರೇ ಅತ್ಯುನ್ನತ ಅಧಿಕಾರ ಹೊಂದಿದ್ದು ಇದು ಸ್ಥಳೀಯ ಸಭೆಗೆ ಇಲ್ಲವಾಗಿದೆ. ಸಭೆಯನ್ನು ಆಳುವ ಆಡಳಿತ ಮಂಡಳಿಯೆಂದು ಎಣಿಸಲ್ಪಡುವ ಈ ಪದ್ಧತಿಯಲ್ಲಿ ಒಬ್ಬನೇ ಅಧ್ಯಕ್ಷನು ಅಥವಾ ಬಿಷಪ್‌ನು ಅನೇಕ ಸ್ಥಳೀಯ ಸಭೆಗಳ ಮೇಲೆ ತನ್ನ ಅಧಿಕಾರ ಚಲಾಯಿಸುವನು (ಸಾಮಾನ್ಯ ವಿಷಯಗಳ ಸಭೆ ಸರಕಾರ ನೋಡಿರಿ).

ಸಭೆಯು (ಸ್ಥಳೀಯ ಮತ್ತು ಸಾರ್ವತ್ರಿಕ ಇವೆರಡು ಸೇರಿದಂತೆ) ಕ್ರಿಸ್ತನ ದೇಹದ ಅಂಗವಾಗಿದೆ (1ನೇ ಕೊರಿಂಥ 12:27-28; ಎಫೆಸ 4:11-12). ಸಭೆಯ ಸದಸ್ಯರೆಲ್ಲರೂ ಕ್ರಿಸ್ತನ ದೇಹದ ಅಂಗಗಳಾಗಿದ್ದಾರೆ (ಎಫೆಸ 5:30). ಸಭೆಯ ಮುಖ್ಯಸ್ಥನು ಕ್ರಿಸ್ತನು ತಾನೇ (ಎಫೆಸ 5:23 ಕೊಲಸ್ಸೆ 1:18). **ಸಭೆಯನ್ನು ದೇವರ' ಕುಟುಂಬ** ಎಂದು ವರ್ಣಿಸಬಹುದು (ಎಫೆಸ 2:19). ಇದು ವಿಶ್ವಾಸಿಗಳನ್ನು ಒಂದುಗೂಡಿಸಿ ಕಟ್ಟಲ್ಪಟ್ಟ ಒಂದು ಜೀವಂತ ಕಟ್ಟಡವಾಗಿದೆ ಮತ್ತು ಅದರ ಮುಖ್ಯವಾದ ಮೂಲೆಗಲ್ಲು ಕ್ರಿಸ್ತನೇ ಆಗಿದ್ದಾನೆ (ಎಫೆಸ 2:20-22 ಮತ್ತು ವ್ಯಾಖ್ಯಾನ, ನೋಡಿರಿ). ಪೇತ್ರನು ಸಭೆಯನ್ನು ಒಂದು **ಆತ್ಮೀಕ ವಾದ ಮನೆಯಾಗಿದ್ದು ಜೀವಂತ ಕಲ್ಲುಗಳಂತಿರುವ** ವಿಶ್ವಾಸಿಗಳಿಂದ ಕಟ್ಟಲ್ಪಟ್ಟಾಗಿದೆ (1 ಪೇತ್ರ 2:5)ಎಂದು ಚಿತ್ರಿಸುತ್ತಾನೆ. ಸಭೆಯ ಮುಖ್ಯ ಉದ್ದೇಶವೇನೆಂದರೆ ಕ್ರಿಸ್ತನಿಗೆ ಸಾಕ್ಷಿಯಾಗಿರುವುದಲ್ಲದೇ, ಜಗತ್ತಿಗೆ ಬೆಳಕಾಗಿರುವುದು.

ಸಭೆಯು ಆರಾಧನೆ ಅವಶ್ಯವಾಗಿ ಬೇಕಾಗಿರುವುದು. ಸಭೆಯು ಆರಾಧನೆ ಅವಶ್ಯಕವಾಗಿ ಬೇಕಾಗಿರುವ ಒಂದು ಅಂಗವಾಗಿದೆ. ಅಲ್ಲದೇ ಕ್ರೈಸ್ತರನ್ನು ಬೋಧಿಸಿ ಅವರನ್ನು ಪಾಲನೆ ಮಾಡುವಂತದ್ದಾಗಿದೆ. ಆದರೆ ಅದರ ಮುಖ್ಯ ಉದ್ದೇಶವು ಜಗತ್ತಿನಲ್ಲಿರುವ ಎಲ್ಲಾ ಸ್ತ್ರಿಪುರುಷರನ್ನು ಕ್ರಿಸ್ತನ ಕಡೆಗೆ ಎಳೆಯುವುದೇ ಆಗಿದೆ. ಇದು ಸಭೆಯ ಸುವಾರ್ತಾ ಪ್ರಚಾರದ ಸೇವೆಯಾಗಿರಬೇಕು (ಸಭೆಯ ಉದ್ದೇಶ ಎಂಬ ಸಾಮಾನ್ಯ ವಿಷಯದ ಕಡೆ ನೋಡಿರಿ)

ಈ ಲೋಕದಲ್ಲಿ ಕ್ರಿಸ್ತನ ಸಭೇಯೇ, ಅತೀ ಮುಖ್ಯವಾದ ವಿಷಯವಾಗಿದೆ. ಯಾಕೆಂದರೆ ದೇವರು ಸಭೆಯಲ್ಲಿ ವಾಸವಾಗಿದ್ದು ಈ ಲೋಕದಲ್ಲಿ ತನ್ನ ನಿತ್ಯವಾದ ಉದ್ದೇಶವನ್ನುಸಭೆಯ ಮುಲಕ ಸಾಧಿಸುತ್ತಾನೆ (ಎಫೆಸ 3:10-12 ಮತ್ತು ವ್ಯಾಖ್ಯಾನ).

**ಸುನ್ನತಿ** :- ಶಿಶ್ನದ ಮುಂಭಾಗದಲ್ಲಿರುವ ಚರ್ಮವನ್ನು ಕತ್ತರಿಸಿ ಹಾಕುವುದಕ್ಕೆ ಸುನ್ನತಿ ಎಂದು ಕರೆಯುತ್ತೇವೆ. ದೇವರು ಅಬ್ರಹಾಮನಿಗೂ ಮತ್ತು ಆತನ ಎಲ್ಲಾ ಸಂತತಿಯವರಿಗೂ, ಸುನ್ನತಿ ಮಾಡಿಸಿಕೊಳ್ಳಬೇಕೆಂದು ದೇವರು ಆಜ್ಞೆ ಮಾಡಿದನು. ದೇವರು ಯಹೂದ್ಯಜನಾಂಗದವರೊಂದಿಗೆ ಮಾಡಿಕೊಂಡ ಒಡಂಬಡಿಕೆಯ ಗುರುತಾಗಿ ಸುನ್ನತಿ ಇರುತ್ತದೆ.(ಆದಿಕಾಂಡ. 17:9-14). ಎಲ್ಲಾ ಯಹೂದ್ಯಕುಲದ ಗಂಡು ಮಕ್ಕಳಿಗೆ ಹುಟ್ಟಿದ 8ನೇ ದಿನದಲ್ಲಿ ಸುನ್ನತಿ ಯಾಗಲೇ ಬೇಕು. ಸುನ್ನತಿಯು ಯಹೂದ್ಯನಾಗಿರುವುದಕ್ಕೆ ಹೊರನೋಟದ ಗುರುತಾಗಿದೆ.

ಆದಾಗ್ಯೂ, ನಿತ್ಯ ಜೀವವನ್ನು ಪಡೆಯುವಲ್ಲಿ ಸುನ್ನತಿಯು ಹೆಚ್ಚಿನ ಸೌಲಭ್ಯವನ್ನು ನೀಡಲಾರದು (ಗಲಾತ್ಯ 5:6 ನೋಡಿರಿ ಮತ್ತು ವ್ಯಾಖ್ಯಾನಿಸಿರಿ). ನಿಜ ಹೇಳುವುದಾದರೆ ಶರೀರದ ಅಂಗ ಛೇದನೆಯು ನಿಜವಾದ ಯಹೂದ್ಯನಾಗಿರುವುದಕ್ಕೆ ಮೇಲ್ನೋಟದ ಗುರುತಾಗಿರುವುದಿಲ್ಲ (ನೋಡಿರಿ.ರೋಮಾ2:28-29 ಮತ್ತು ವ್ಯಾಖ್ಯಾನ). ಆದುದರಿಂದ, ಯಹೂದ್ಯರಲ್ಲದ ಅನ್ಯ ಜನರಿಗೆ ಸುನ್ನತಿ ಮಾಡಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ (ಅ.ಕೃ. 15:5-11).

**ಒಡಂಬಡಿಕೆ** :- ಒಡಂಬಡಿಕೆ ಎಂದರೆ ಇಬ್ಬರು ವ್ಯಕ್ತಿಗಳು ಅಥವಾ ಎರಡು ಪಕ್ಷಗಳು ಮಾಡಿಕೊಳ್ಳುವ ಒಪ್ಪಂದವಾಗಿದೆ. ಹಳೇ ಒಡಂಬಡಿಕೆಯಲ್ಲಿ ದೇವರು ಯಹೂದ್ಯರೊಂದಿಗೆ ಒಡಂಬಡಿಕೆ ಮಾಡಿಕೊಂಡನು. ಅವರನ್ನು ಆಶೀರ್ವದಿಸುತ್ತೇನೆಂದು ವಾಗ್ದಾನ ಮಾಡಿದನು (ಆದಿಕಾಂಡ 15:18; ವಿಮೋಚನಕಾಂಡ 19:5-6; 2ನೇ ಸಮುವೇಲ 23:5). ಆದರೆ ಇದಕ್ಕಾಗಿ ಯಹೂದ್ಯರು ದೇವರ ನೀತಿ ನಿಯಮಗಳನ್ನು ಪಾಲಿಸಬೇಕಾಗಿತ್ತು (ನೋಡಿರಿ. ಪದ ಪಟ್ಟಿಯಲ್ಲಿ, ನಿಯಮ).

ಹಳೇ ಒಡಂಬಡಿಕೆಯ ಕಾಲದ ಯಹೂದ್ಯರು ದೇವರ ನಿಯಮವನ್ನು ಸರಿಯಾಗಿ ಪಾಲಿಸಲಿಲ್ಲ. ಅವರು ಒಪ್ಪಂದದಂತೆ ತಮ್ಮ ಕರ್ತವ್ಯವನ್ನು ಸಂಪೂರ್ಣಗೊಳಿಸಲಿಲ್ಲ. ಆದುದರಿಂದ ದೇವರು ತಾನು ಅವರೊಡನೆ ಮಾಡಿಕೊಂಡ ವಾಗ್ದಾನವನ್ನು ಹಿಂತೆಗೆದುಕೊಂಡನು. ಅದರ ಬದಲಾಗಿ ಹೊಸದಾಗಿ ಮನುಷ್ಯರೊಡನೆ ಒಡಂಬಡಿಕೆ ಮಾಡಿಕೊಂಡನು. ಯಾರ್ಯಾರು ತನ್ನ ಮಗನಾದ ಯೇಸುವಿನಲ್ಲಿ ವಿಶ್ವಾಸವಿಡುತ್ತಾರೋ ಅವರಿಗೆ ನಿತ್ಯ ಜೀವ ಕೊಡಲು ವಾಗ್ದಾನ ಮಾಡಿದನು. ಹೊಸದಾದ ಈ ಒಡಂಬಡಿಕೆಯ ವಿವರವು ಯೆರೆಮೀಯಾ 31:31-34, ಮತ್ತು ಇಬ್ರಿಯಾ 8:6-13ರಲ್ಲಿ ಇದೆ.

ಹಳೇ ಒಡಂಬಡಿಕೆಯಲ್ಲಿ ಒಪ್ಪಂದವನ್ನು ರಕ್ತ ಸುರಿಸುವ ಮೂಲಕ ಸ್ಥಿರ ಪಡಿಸಲಾಯಿತು. ಒಂದು ಪ್ರಾಣಿಯನ್ನು ವಧಿಸಿ, ನಂತರ ಒಪ್ಪಂದ ಮಾಡಿಕೊಂಡ ಎರಡು ಪಕ್ಷಗಳು ಆ ಪ್ರಾಣಿಯ ತುಂಡುಗಳ ಮಧ್ಯದಲ್ಲಿ ಹಾದು ಹೋಗಬೇಕಾಗಿತ್ತು. ಹಾಗೆ ಮಾಡುವಾಗ ವಾಸ್ತವವಾಗಿ ಅವರು ಹೀಗೆ ಹೇಳಿಕೊಳ್ಳುವಂತಾಯಿತು. ಯಾರು ಈ ಒಪ್ಪಂದವನ್ನು ಮುರಿಯುತ್ತಾರೋ, ಅವರಿಗೂ ಈ ಪ್ರಾಣಿಗೆ ಉಂಟಾದ ಗತಿಯೇ ಆಗಲಿ, (ಆದಿಕಾಂಡ 15:17-18; ಯೆರೆಮೀಯಾ 34:18-20). ಸುರಿಸಿದ ಪ್ರಾಣಿಯ ರಕ್ತವನ್ನು, ಒಪ್ಪಂದದ ರಕ್ತಎಂದು ಕರೆಯಲಾಯಿತು (ವಿಮೋಚನ 24:5-8).

ಅದೇ ರೀತಿಯಾಗಿ ಯೇಸುವಿನಿಂದ ಸುರಿಸಲ್ಪಟ್ಟ ರಕ್ತವು ಮನುಷ್ಯ ಮತ್ತು ದೇವರಲ್ಲಿ ಉಂಟಾದ ಹೊಸ ಒಡಂಬಡಿಕೆಯ ಗುರುತಾಗಿದೆ. (ಮಾರ್ಕ 14:24, 1ನೇ ಕೊರಿಂಥ 11:25 ಸಾಮಾನ್ಯ ವಿಷಯಗಳು ಕರ್ತನ ರಾತ್ರಿ ಭೋಜನ). ನಮ್ಮ ಪಾಪಕ್ಕೆ ಉಂಟಾದ ದಂಡನೆಯನ್ನು ದೇವರು ತನ್ನ ಮಗನಾದ ಯೇಸುವಿನ ಮೇಲೆ ಹಾಕಲು ಒಪ್ಪಿಕೊಂಡನು. ಈ ಒಡಂಬಡಿಕೆಯ ಪ್ರಕಾರ ದೇವರ ಕಡೆಯಿಂದ ತನ್ನ ಮಗನನ್ನೇ ಬಲಿಕೊಡುವಂತಾಯಿತು. ನಮ್ಮ ಕಡೆಯಿಂದ ನಾವು ಕ್ರಿಸ್ತನಲ್ಲಿ ವಿಶ್ವಾಸವಿಟ್ಟು ಮತ್ತು ಆತನ ಕಟ್ಟಳೆಯನ್ನು ಪರಿಪಾಲಿಸುವುದೇ ಆಗಿದೆ ಮತ್ತು ಈ ಒಪ್ಪಂದವು ನಮಗೂ ದೇವರಿಗೂ ಮಧ್ಯೆ ಉಂಟಾಗಿದ್ದು ಅದು ಯೇಸುವಿನ ರಕ್ತದಿಂದ ಸ್ಥಿರಪಟ್ಟಿದೆ.

**ಶಿಲುಬೆ** :- ಹೊಸ ಒಡಂಬಡಿಕೆಯಲ್ಲಿ ಶಿಲುಬೆ ಎಂಬ ಪದದ ಅರ್ಥ ಒಂದು ಮರದ ಕಂಬಕ್ಕೆ ಅಡ್ಡಪಟ್ಟಿ ಕಟ್ಟಲ್ಪಟ್ಟಿರುವ ವಸ್ತು ಎಂದಾಗಿದೆ. ರೋಮ್ ಸಾಮ್ರಾಜ್ಯದ ಆಡಳಿತ ಕಾಲದಲ್ಲಿ, ರೋಮಾಯರು, ದಂಗೆಕೋರರನ್ನು ಕೊಲ್ಲಲು ಶಿಲುಬೆಯನ್ನು ಉಪಯೋಗಿಸುತ್ತಿದ್ದರು. ಶಿಲುಬೆಯ ಮೇಲೆ ದಂಗೆಕೋರನನ್ನು ಹಗ್ಗಗಳಿಂದ ಕಟ್ಟಿಯಾಗಲಿ ಅಥವಾ ಅವನ ಕೈಕಾಲುಗಳಿಗೆ ಮೊಳೆ ಬಡಿಯುವುದರ ಮೂಲಕ ಅವನನ್ನು ಸಾಯಿಸುತ್ತಿದ್ದರು. ಕೆಲವು ಸಾರಿ ದಂಗೆಕೋರನು ಸಾಯುವವರೆಗೆ 2 ಅಥವಾ 3 ದಿನಗಳಾಗುತ್ತಿತ್ತು.ಕೆಲವೊಮ್ಮೆ ಸಾವನ್ನು ಬೇಗನೆ ಬರಗೊಡಿಸಲು ಕೈಕಾಲುಗಳನ್ನು ಮುರಿದು ಬಿಡುತ್ತಿದ್ದರು.

ಯೇಸುವನ್ನು ರೋಮನ್ನರು ದಂಡಿಸಿ, ಶಿಲುಬೆಯಲ್ಲಿ ತೂಗು ಹಾಕಿ ಸಾಯುವಂತೆ ಮಾಡಿದರು. ಆದುದರಿಂದ, ಶಿಲುಬೆಯು ಎಲ್ಲಾ ಕ್ರೈಸ್ತರಿಗೂ ಮಾನವನ ಪಾಪದ ಪ್ರಾಯಶ್ಚಿತ್ತಕ್ಕಾಗಿ ಯೇಸುವಿನ ಮರಣ ಮತ್ತು ತ್ಯಾಗದ ಗುರುತಾಗಿರುತ್ತದೆ. ನಮ್ಮ ಸ್ಥಳದಲ್ಲಿ ನಮಗಾಗಿ ಯೇಸುವು ಶಿಲುಬೆಯಲ್ಲಿ ಸಾಯುವ ಮೂಲಕ, ಮರಣದ ದಂಡನೆಯನ್ನು ಅನುಭವಿಸಿದನು (ನೋಡಿರಿ . ಮಾರ್ಕ 10:45 ಮತ್ತು ವ್ಯಾಖ್ಯಾನ).

ಕ್ರಿಸ್ತನಿಗಾಗಿ ಪ್ರತಿಯೊಬ್ಬ ಕ್ರೈಸ್ತನು ಹಿಂಸೆಯನ್ನು ತಾಳಿಕೊಳ್ಳಲು ಸಿದ್ಧವಾಗಿರಬೇಕೆಂಬುದಕ್ಕೆ ಶಿಲುಬೆಯು ಸದಾ ಗುರುತಾಗಿ ರುತ್ತದೆ (ನೋಡಿರಿ.ಮಾರ್ಕ 8:34 ಮತ್ತು ವ್ಯಾಖ್ಯಾನ). ನಮ್ಮ ಹಳೇಯ ಪಾಪ ಸ್ವಭಾವದ ಸಾವನ್ನು ಸಹ ಶಿಲುಬೆಯು ಗುರುತಿಸುವುದು (ನೋಡಿರಿ.ರೋಮಾ 6:6; ಗಲಾತ್ಯ 2:20, 5:24, 6:14 ಮತ್ತು ವ್ಯಾಖ್ಯಾನ).

ಶಿಲುಬೆಯು ಕ್ರೈಸ್ತನ ಮಹಿಮೆಯ ಗುರುತಾಗಿದೆ. ಯಾಕೆಂದರೆ ನಾವು ಕ್ರಿಸ್ತನೊಂದಿಗೆ ಶ್ರಮ ಹೊಂದಿದರೆ, ಆತನೊಂದಿಗೆ ನಾವು ಸಹ ಮಹಿಮೆ ಹೊಂದುವೆವು (ರೋಮಾ 8:17).

**ದಾವೀದನು** :- ದಾವೀದನು ಯಹೂದ್ಯರ ಮಹಾರಾಜನಾಗಿದ್ದನು. ಆತನು ಕ್ರಿ.ಪೂ. 1040ರಲ್ಲಿ ಜನಿಸಿದನು ಮತ್ತು 40 ವರ್ಷಗಳು ಅಂದರೆ ಕ್ರಿ.ಪೂ. 1010 ರಿಂದ 970ರ ವರೆಗೆ ರಾಜ್ಯವಾಳಿದನು. ದಾವೀದನು ಯಹೂದ್ಯರಿಗೆ ಯೆರುಸಲೇಮನ್ನು ರಾಜಧಾನಿಯನ್ನಾಗಿ ಸ್ಥಾಪಿಸಿದನು. ಆತನ ಆಡಳಿತ ಕಾಲದಲ್ಲಿ ಯಹೂದ್ಯ ಜನಾಂಗವು ಮಹಾಬಲಶಾಲಿಯಾದ ರಾಜ್ಯವಾಗಿತ್ತು. ದಾವೀದನು ಹಳೇ ಒಡಂಬಡಿಕೆಯಲ್ಲಿ ನಮೂದಿಸಿರುವ ಕೀರ್ತನೆಗಳಲ್ಲಿ 73 ಕೀರ್ತನೆಗಳನ್ನು ಸ್ವತಃ ಬರೆದನು. ಯೇಸುಕ್ರಿಸ್ತನು ದಾವೀದನ ವಂಶದಲ್ಲಿ ಹುಟ್ಟಿದನು (ನೋಡಿರಿ. ಮತ್ತಾಯ 1:1-20, ಲೂಕ 1:26, 27, 32, 33 ಮತ್ತು ವ್ಯಾಖ್ಯಾನ).
ದಾವೀದನ ಜೀವನಚರಿತ್ರೆಯು 1ನೇ ಸಮುವೇಲ. ಅಧ್ಯಾಯ 16ರಿಂದ 1ನೇ ಅರಸು. 2ನೆ ಅಧ್ಯಾಯವರೆಗೂ ಮುಂದುವರೆದಿದೆ.

**ದೆವ್ವ** :- ಸತ್ಯವೇದದಲ್ಲಿ ದೆವ್ವಗಳನ್ನು ದುರಾತ್ಮ ಅಥವಾ ಅಶುದ್ಧ ಆತ್ಮಗಳು ಎಂದು ಕರೆಯಲ್ಪಟ್ಟಿವೆ. ಈ ದುರಾತ್ಮಗಳು ಸತ್ತವರ ಆತ್ಮಗಳಲ್ಲ. ದೇವರು ಸೃಷ್ಟಿಸಿದ ಆತ್ಮಗಳಾಗಿದ್ದು ತದನಂತರ ದಂಗೆಯೆದ್ದವುಗಳಾಗಿವೆ. ದೆವ್ವಗಳ ಮುಖ್ಯಸ್ಥನೇ ಸೈತಾನನು (ನೋಡಿರಿ.ಪದಪಟ್ಟಿಲ್ಲಿ, ಸೈತಾನ).
ಈ ದೆವ್ವಗಳಿಗೆ ಅಥವಾ ದುರಾತ್ಮಗಳಿಗೆ ಸ್ವಂತ ಶರೀರವಿಲ್ಲ. ಆದುದರಿಂದ ಅವುಗಳು ಬೇರೊಬ್ಬರ ಶರೀರದೊಳಗೆ ವಾಸಿಸಲು ಇಚ್ಛಿಸುತ್ತೇವೆ. ದೆವ್ವಗಳು ಬುದ್ಧಿವಂತವುಗಳು ಮತ್ತು ಶಕ್ತಿಶಾಲಿಗಳು. ಅವು ಮನುಷ್ಯರ ಮೇಲೆ ಹತೋಟಿ ಹೊಂದಿ ಅವರನ್ನು ಕುರುಡರನ್ನಾಗಿಯೂ (ಮತ್ತಾಯ 12:22) ಮೂಕರನ್ನಾಗಿ (ಮತ್ತಾಯ 9:32) ಮತ್ತು ಹುಚ್ಚರನ್ನಾಗಿ ಮಾಡುತ್ತವೆ (ಮಾರ್ಕ 25:1-5, 9:20-22).
ಈ ಲೋಕದಲ್ಲಿ ದೆವ್ವಗಳಿಗೆ ಬಹಳ ಶಕ್ತಿಯಿದೆ (ಎಫೆಸ 6:11-12). ಆದರೆ ಪರಿಶುದ್ಧಾತ್ಮನ ಶಕ್ತಿಯು ಅದಕ್ಕಿಂತಲೂ ಹೆಚ್ಚಿನದಾಗಿರುತ್ತದೆ.(1ಯೋಹಾನ 4:4). ಕ್ರೈಸ್ತರು ದೆವ್ವಗಳಿಗೆ ಸಂಬಂಧಪಟ್ಟ ಯಾವುದ ವಿಷಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಾರದು. ಅದರಲ್ಲೂ ವಿಶೇಷವಾಗಿ ವಿಗ್ರಹ ಆರಾಧನೆಯಲ್ಲಿ. ವಿಗ್ರಹವು ತಾನೇಏನೇನು ಅಲ್ಲ. ಆದರೆ ಜನರು ವಿಗ್ರಹಕ್ಕೆ ಪೂಜೆ ಮಾಡಿದರೆ ವಾಸ್ತವವಾಗಿ ಅವರು ದೆವ್ವವನ್ನು ಪೂಜಿಸಿದಂತೆಯೇ (ನೋಡಿರಿ.1ನೇ ಕೊರಿಂಥ 10:19-21 ಮತ್ತು ವ್ಯಾಖ್ಯಾನ).
ದೆವ್ವಗಳ ಬಗ್ಗೆ ಮತ್ತಷ್ಟು ಚರ್ಚಿಸಬೇಕಾದಲ್ಲಿ (ನೋಡಿರಿ.ಸಾಮಾನ್ಯ ವಿಷಯ. ವಾಸಿ ಮಾಡುವಿಕೆ ಮತ್ತು ಬಿಡುಗಡೆ).

**ಶಿಸ್ತು** :- ಶಿಸ್ತು ಎಂಬುದು ಒಂದು ವಿಧವಾದ ಸಂಕಟ ಅಥವಾ ನೋವು ಆಗಿದ್ದು, ನಮ್ಮನ್ನು ಸುಧಾರಣೆ ಅಥವಾ ಕ್ಷೇಮಾಭಿವೃದ್ಧಿಗೆ ಅಂತಿಮವಾಗಿ ನಡೆಸುವಂತ್ತಾಗಿದೆ.
ತಂದೆ ತಾಯಿಗಳು ಮಕ್ಕಳನ್ನು ಶಿಸ್ತಿಗೆ ಒಳಪಡಿಸಿ ಅವರನ್ನು ತರಬೇತಿಗೊಳಿಸುತ್ತಾರೆ ಮತ್ತು ಒಳ್ಳೇ ಜೀವನವನ್ನು ನಡೆಸಲು ಕಲಿಸುತ್ತಾರೆ. ಇದೇ ರೀತಿಯಲ್ಲಿ ದೇವರು ಕ್ರಿಸ್ತನಲ್ಲಿ ವಿಶ್ವಾಸಿಗಳನ್ನು ಶಿಸ್ತಿಗೆ ಒಳಪಡಿಸಿ ತರಬೇತಿಗೊಳಿಸುತ್ತಾನೆ. ನಮ್ಮಲ್ಲಿ ಅನೇಕರಿಗೆ ಬಲಹೀನತೆ ಮತ್ತು ದೋಷಗಳಿವೆ ಮತ್ತು ದೇವರು ನಮ್ಮನ್ನು ಸಂಪೂರ್ಣರನ್ನಾಗಿ ಮಾಡಲು ನಮ್ಮಲ್ಲಿರುವ ಬಲಹೀನತೆ ಮತ್ತು ದೋಷಗಳನ್ನು ತೆಗೆದುಹಾಕಲು ಇಚ್ಛಿಸುತ್ತಾನೆ. ಆದುದರಿಂದ ನಮ್ಮನ್ನು ಪರೀಶೋದಿಸುವುದಕ್ಕಾಗಿ ಆತನು ನಮ್ಮ ಮೇಲೆ ಹಿಂಸೆ ಮತ್ತು ಉಪದ್ರವಗಳನ್ನು ಬರಗೊಡಿಸುತ್ತಾನೆ ಮತ್ತು ನಮ್ಮ ನಂಬಿಕೆಯನ್ನು ಬಲಪಡಿಸುತ್ತಾನೆ ಮತ್ತು ನಮ್ಮ ತಪ್ಪುಗಳನ್ನು ತಿದ್ದುತ್ತಾನೆ. ದೇವರು ತಾನೇ ಕೇಡನ್ನಾಗಲೀ ಅಥವಾ ಶೋಧನೆಯನ್ನಾಗಲೀ ಬರಗೊಡಿಸುವುದಿಲ್ಲ. ಆದರೆ ಸೈತಾನನು ನಮ್ಮನ್ನು ಶೋಧಿಸಲು ಅನುಮತಿಸುತ್ತಾನೆ. ಇದರೊಂದಿಗೆ ನಮ್ಮ ಪಾಪಗಳೇ ನಮಗೆ ಕೇಡನ್ನು ತರುತ್ತವೆ.
ನಾವು ದೇವರಿಂದ ಶಿಸ್ತು ಪಾಲನೆಗೆ ಒಪ್ಪಿಸಲ್ಪಟ್ಟಾಗ ನಾವು ಸಂತಸಗೊಳ್ಳಬೇಕು. ಯಾಕೆಂದರೆ ನಾವು ನಿಜವಾಗಿ ದೇವರ ಮಕ್ಕಳಾಗಿದ್ದೇವೆಂಬುದಕ್ಕೆ ಶಿಸ್ತು ಸಾಕ್ಷಿಯಾಗಿರುತ್ತದೆ (ಇಬ್ರಿಯಾ 12:5-12, ಯಾಕೋಬ 1:2-4, 1ನೇ ಪೇತ್ರ 1:6-7ಮತ್ತು ವ್ಯಾಖ್ಯಾನ).

**ಐಗುಪ್ತದೇಶ** :- ಆಫ್ರಿಕಾ ಖಂಡದ ಉತ್ತರ ಭಾಗದಲ್ಲಿರುವ ನವೀನ ಐಗುಪ್ತದೇಶವು, ಸತ್ಯವೇದದಲ್ಲಿ ಕಂಡುಬರುವ ಪ್ರಾಚೀನ ಐಗುಪ್ತ ದೇಶವಾಗಿರುತ್ತದೆ. ಮೋಶೆಯು ಯಹೂದ್ಯರನ್ನು ಕ್ರಿಸ್ತ ಪೂರ್ವ 1400ರಲ್ಲಿ ಬಿಡಿಸುವ ತನಕ. ಅನೇಕ ಸಂತಾನಗಳವರೆಗೂ ಅವರು ಐಗುಪ್ತದೇಶದಲ್ಲಿ ಗುಲಾಮರಾಗಿ ಸೆರೆಯಿಡಲ್ಪಟ್ಟಿದ್ದರು.

**ನಿತ್ಯಜೀವ** :- ನಿತ್ಯ ಜೀವವಾದ ಆತ್ಮೀಕ ಜೀವಿತಕ್ಕೆ ಕೊನೆಯಿಲ್ಲ. ವ್ಯಕ್ತಿಯು ಯೇಸುವನ್ನು ನಂಬಿ ಹೊಸದಾಗಿ ಹುಟ್ಟುವುದರಿಂದ ನಿತ್ಯ ಜೀವವು ಪ್ರಾರಂಭಗೊಳ್ಳುತ್ತದೆ (ನೋಡಿರಿ. ಯೋಹಾನ 3:3-5 ಮತ್ತು ವ್ಯಾಖ್ಯಾನ). ನಿತ್ಯ ಜೀವವೆಂದರೆ ದೇವರೊಡನೆ ನಿತ್ಯವಾದ ಅನ್ಯೋನ್ಯತೆಯಾಗಿದೆ. ಈ ಅನ್ಯೋನ್ಯತೆಯು ಈ ಲೋಕದಲ್ಲಿ ನಮ್ಮ ವಿಶ್ವಾಸದೊಡನೆ ಪ್ರಾರಂಭಗೊಂಡು, ತದನಂತರ ನಮ್ಮ ಶರೀರವು ಸತ್ತ ಮೇಲೆ ಪರಲೋಕದಲ್ಲಿಯೂ ಮುಂದುವರಿಯುವುದು. ಆದುದರಿಂದ, ಯೇಸುವಿಲ್ಲಿ ವಿಶ್ವಾಸಿಗಳಿಗೆ ಸಾವಿನ ಭಯವಿಲ್ಲ. ಯಾಕೆಂದರೆ ವಿಶ್ವಾಸಿಗಳು ನಿಜವಾಗಿ ಸಾಯುವುದಿಲ್ಲ. ಅವರ ಆತ್ಮವು ಸದಾಕಾಲ ಜೀವಿಸುತ್ತದೆ. ಯೋಹಾನ 11:25-26. ಅದೂ ಅಲ್ಲದೇ ವಿಶ್ವಾಸಿಗಳಿಗೆ ಪರಲೋಕದಲ್ಲಿ ಒಂದು ಹೊಸ ಆತ್ಮೀಕ ಶರೀರ ಕೊಡಲ್ಪಡುತ್ತದೆ (ಪುನರುತ್ಥಾನ ಪದಪಟ್ಟಿಯಲ್ಲಿ ನೋಡಿರಿ). ನಿತ್ಯಜೀವವು ನಮ್ಮ ರಕ್ಷಣೆಯ ಮುಖ್ಯಭಾಗವಾಗಿದೆ (ರಕ್ಷಣೆ ಪದ ನೋಡಿರಿ). ರಕ್ಷಣೆಯ ಎಲ್ಲಾ ಹಂತಗಳು, ಕ್ಷಮೆ, ನೀತಿನಿರ್ಣಯ ಸ್ವೀಕಾರ - ಇವೆಲ್ಲಾ ನಿಜವಾದ ಕ್ರಿಸ್ತನಲ್ಲಿ ವಿಶ್ವಾಸವಿಟ್ಟು ಪ್ರತಿಯೊಬ್ಬರಲ್ಲಿಯೂ ಸಂತೋಷಭರಿತ ಮತ್ತು ವೈಭವಯುಕ್ತ ನಿತ್ಯ ಜೀವದಲ್ಲಿ ಮುಕ್ತಾಯಗೊಳ್ಳುತ್ತದೆ. ನಿತ್ಯ ಜೀವವೆಂದರೆ ಬರೀ ಯಾವಾಗಲೂ ಬದುಕಿರುವುದಲ್ಲ, ಅದು ದೇವರ ಸಮ್ಮುಖದಲ್ಲಿ ಸಂತೋಷಚಿತ್ತರಾಗಿ ಯಾವಾಗಲೂ ಬದುಕಿರುವುದೇ ಆಗಿದೆ. ಪರಲೋಕದಲ್ಲಿನ ನಿತ್ಯಜೀವಿತಕ್ಕೆ ಈ ಲೋಕದಲ್ಲಿನ ಜೀವಿತವನು ಹೋಲಿಸಿ ನೋಡಿದರೆ ಇದರಲ್ಲಿ ಯೋಗ್ಯತೆ ಇರುವುದಿಲ್ಲ. (ರೋಮ 8:18, 2ಕೊರಿ 4:17)

**ದುರಾತ್ಮ** :- ಪದಪಟ್ಟಿಯಲ್ಲಿ "ದೆವ್ವ" ನೋಡಿರಿ.

**ನಂಬಿಕೆ** :- ನಂಬಿಕೆಯೆಂಬ ಪದಕ್ಕೆ ಹೊಸ ಒಡಂಬಡಿಕೆಲ್ಲಿ ದೇವರಲ್ಲಿ ನಂಬಿಕೆ, ಕ್ರಿಸ್ತನಲ್ಲಿ ನಂಬಿಕೆ ಎಂದೇ ಅರ್ಥವಾಗುತ್ತದೆ. ಕ್ರಿಸ್ತನ ಬೋಧನೆಗಳು ನಿಜವಾಗಿವೆಯೆಂದು ಮತ್ತು ಆತನ ಮರಣದ ಮೂಲಕ ನಾವು ರಕ್ಷಣೆ ಹೊಂದಿದ್ದೇವೆ ಎಂಬ ದೃಢ ವಿಶ್ವಾಸವೇ ನಂಬಿಕೆಯಾಗಿದೆ.

ನಂಬಿಕೆ ಎಂಬುದು ಒಂದು ಬಲವಾದ ಕಲ್ಪನೆಯಲ್ಲ. ಅದು ಕ್ರಿಸ್ತನಲ್ಲಿ ಸಂಪೂರ್ಣ ಭರವಸೆ ಇಡುವುದೇ ಆಗಿದೆ. ಆತನಲ್ಲಿ ನಾವು ಆತುಕೊಂಡು ನಮ್ಮನ್ನು ಆತನಿಗೆ ಒಪ್ಪಿಸಿ ಕೊಡುವಂತದ್ದಾಗಿದೆ. ಉದಾಹರಣೆಗಾಗಿ, ನಾವು ಒಂದು ಸೇತುವೆಯ ಸಮೀಪಕ್ಕೆ ಬಂದಾಗ ಒಂದು ವೇಳೆ ಅದು ಭದ್ರವಾಗಿರಬಹುದೇ ಎಂದು ನೆನಸುತ್ತೇವೆ. ಆದರೆ ನಾವು ಅದನ್ನು ದಾಟುವುದಕ್ಕೆ ಭಯಪಟ್ಟರೆ ನಮ್ಮಲ್ಲಿ ನಂಬಿಕೆಯಿಲ್ಲ. ಸೇತುವೆಯನ್ನು ದಾಟುವುದೇ ನಂಬಿಕೆ.

ಹೊಸ ಒಡಂಬಡಿಕೆಯಲ್ಲಿ ನಂಬಿಕೆ ಎಂಬ ಪದವನ್ನು ಯೇಸುವಿನಲ್ಲಿ ಯಾವ ಮಟ್ಟದ ವಿಶ್ವಾಸವಿದೆ ಎಂಬುದನ್ನು ತಿಳಿಯಲು ಉಪಯೋಗಿಸಲ್ಪಡುತ್ತದೆ. ಕೆಲವರು ಯೇಸುವಿನಲ್ಲಿ ನಂಬಿಕೆ ಇಟ್ಟರು, ಗುಣಪಡಿಸಲು ಶಕ್ತಿ ಹೊಂದಿದರು (ಮತ್ತಾಯ 8:10). ಕೆಲವರು ಆತನು ಒಬ್ಬ ಪ್ರವಾದಿ ಎಂದು ನಂಬಿದರು (ಮಾರ್ಕ 8:27-28, ಯೋಹಾನ 9:17). ಆದರೆ ನಿಜವಾದ ನಂಬಿಕೆ, ರಕ್ಷಿಸುವ ನಂಬಿಕೆ, ದೇವರ ಮಗನು ನಮ್ಮ ರಕ್ಷಕನೂ ಆಗಿರುವವನೇ ಯೇಸು ಎಂದು ನಂಬುವುದು (ಮಾರ್ಕ 8:29, ಯೋಹಾನ 9:35-38). ಇದು ನಂಬಿಕೆ ಎಂಬ ಪದಕ್ಕೆ ಹೊಸ ಒಡಂಬಡಿಕೆಯಲ್ಲಿ ಸಾಮಾನ್ಯವಾದ ಅರ್ಥ ಇದಾಗಿದೆ.

ನಾವು ನಂಬಿಕೆಯ ಮೂಲಕ ರಕ್ಷಿಸಲ್ಪಟ್ಟಿದ್ದೆವೆ (ನೋಡಿರಿ. ಎಫೆಸ 2:8 ಮತ್ತು ವ್ಯಾಖ್ಯಾನ). ನಾವು ಎಲ್ಲಾ ಆತ್ಮೀಯ ಆಶೀರ್ವಾದಗಳನ್ನು ನಂಬಿಕೆಯ ಮೂಲಕವೇ ಪಡೆದುಕೊಳ್ಳುತ್ತೇವೆ. ನಂಬಿಕೆ ಇಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ (ಇಬ್ರಿಯಾ 11:6). ಎಲ್ಲಾ ವಿಷಯಗಳು ನಂಬಿಕೆಯಿಂದ ಬಾರದಿದ್ದರೆ ಅದು ಪಾಪವೇ ಸರಿ (ರೋಮಾಯ 14:23).

ನಂಬಿಕೆ ಎಂಬುದು ನಾವು ಮಾಡುವ ಒಂದು ವಿಧವಾದ ಕೆಲಸವಾಗಿರದೆ ಕ್ರಿಸ್ತನು ನಮಗಾಗಿ ಶಿಲುಬೆಯ ಮೇಲೆ ಮಾಡಿದ ಕೆಲಸವನ್ನು ಸ್ವೀಕಾರ ಮಾಡುವುದೇ ಆಗಿದೆ. ನಂಬಿಕೆ ಎಂಬುದು ದೇವರಿಂದ ಬರುವ ವರ ದಾನವಾಗಿದೆ (ರೋಮ. 12:3).

ಆದಾಗ್ಯೂ ನಾವು ವಿಶ್ವಾಸಕ್ಕೆ ಒಳಪಟ್ಟಾಗ, ಯಾವಾಗಲೂ, ನಮ್ಮ ಜೀವನದಲ್ಲಿ ನಮ್ಮ ನಡೆ ನುಡಿಗಳಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ನಾವು ನಂಬಿಕೆಯಟ್ಟಾಗ, ಪರಿಶುದ್ಧಾತ್ಮನು ನಮ್ಮ ಜೀವಿತದಲ್ಲಿ ಪ್ರವೇಶಿಸುತ್ತಾನೆ. ನಾವು ಒಳ್ಳೇ ಕಾರ್ಯಗಳನ್ನು ಮಾಡಲು ಪ್ರಾರಂಭ ಮಾಡುವೆವು (ಎಫೆಸ 2:10). ನಾವು ನಮ್ಮ ಕೆಲಸ ಕಾರ್ಯಗಳಿಂದ ರಕ್ಷಣೆ ಹೊಂದುವುದಿಲ್ಲ. ನಾವು ನಂಬಿಕೆಯಿಂದಲೇ ರಕ್ಷಣೆ ಹೊಂದುತ್ತೇವೆ.ಆದಾಗ್ಯೂ ನಮ್ಮ ಒಳ್ಳೇ ಕ್ರಿಯೆಗಳು ನಮ್ಮ ನಂಬಿಕೆಯು ನಿಜವುಳ್ಳದ್ದು ಎಂದು ತೋರಿಸಿಕೊಡುತ್ತವೆ ಒಂದು ವೇಳೆ, ನಮ್ಮ ನಂಬಿಕೆಯು ದೇವರನ್ನು

ಪ್ರೀತಿಸುವುದಕ್ಕೆ ಆತನಿಗೆ ವಿಧೇಯರಾಗಿರುವುದಕ್ಕೆ ಮತ್ತು ಪ್ರೀತಿಪೂರ್ವಕವಾದ ಕಾರ್ಯಗಳನ್ನು ಮಾಡುವುದಕ್ಕೆ ನಮ್ಮನ್ನು ತೊಡಗಿಸದಿದ್ದರೆ, ಆಗ ನಮ್ಮ ನಂಬಿಕೆ ಸುಳ್ಳಾಗಿರುತ್ತದೆ ಮತ್ತು ಸತ್ತಂತ್ತಾಗಿರುತ್ತದೆ. ಇಂತಹ ನಂಬಿಕೆ ನಮಗೆ ರಕ್ಷಣೆ ಕೊಡುವುದಿಲ್ಲ (ನೋಡಿರಿ. ಮತ್ತಾಯ 7:2, ಗಲಾತ್ಯ 5:6, ಯಾಕೋಬ 2:14-17 ಮತ್ತು ವ್ಯಾಖ್ಯಾನ).

**ಮಾಂಸ** :- ಹೊಸ ಒಡಂಬಡಿಕೆಯಲ್ಲಿ ಮಾಂಸ ಎಂಬ ಪದಕ್ಕೆ 2 ಅರ್ಥವಿದ್ದು ಭಾಷಾಂತರದ ಮೇಲೆ ಅವಲಂಬನಗೊಂಡಿವೆ. ಆಯಾ ವಚನದ ಅರ್ಥವನ್ನು ಸಂದರ್ಭಕ್ಕನುಸಾರವಾಗಿ ತೀರ್ಮಾನಿಸಬೇಕುಮೊದಲನೆಯದಾಗಿ, ಮಾಂಸವೆಂದರೆ, ಶರೀರವೆಂದು ಅರ್ಥ. ಉದಾಹರಣೆಗಾಗಿ ಶರೀರ ಎಂಬ ಮಾತನ್ನು ರೋಮಾ 8:10-11, 12:1-4ರಲ್ಲಿ ಉಪಯೋಗಿಸಲಾಗಿದೆ.

ಎರಡನೆಯದಾಗಿ, ಮಾಂಸ ಎಂಬುದು ಪಾಪ ಸ್ವಭಾವ ಎಂದು ಅರ್ಥ ಕೊಡುತ್ತದೆ. ನಮ್ಮ ಶರೀರವು ಪಾಪಮಯವಾದುದಲ್ಲ. ಆದರೆ ಪೌಲನು ನಮ್ಮ ಪಾಪ ಸ್ವಭಾವವನ್ನು "ಮಾಂಸ" ಎಂದು ಕರೆಯುತ್ತಾನೆ. ಆತನು ಉದಾಹರಣೆಗಾಗಿ, ರೋಮಾ 7:5, 18-25, 8:3-9, 12:1, 1ನೇ ಕೊರಿಂಥ 5:5 ಗಲಾತ್ಯ 5:13, 16-17, 19,24; 6:8ರಲ್ಲಿ ಉಪಯೋಗಿಸುತ್ತಾನೆ. (ಹೊಸ ಅಂತರರಾಷ್ಟ್ರೀಯ ಅವತರಣಿಕೆಯ ಸತ್ಯವೇದದಲ್ಲಿ ಕಂಡುಬರುವ ಪಾಪಸ್ವಭಾವ ಎಂಬ ಶಬ್ದಪ್ರಯೋಗವನ್ನು ಮಾಂಸ ಎಂಬ ಪದ ಎಲ್ಲೆಲ್ಲಿ ಬರುತ್ತದೋ, ಅಲ್ಲೆಲ್ಲಾ ಉಪಯೋಗಿಸಲಾಗಿದೆ.).

ಈ ಎರಡು ಮಾಂಸ ಎಂಬ ಪದದ ಅರ್ಥಗಳು ವ್ಯತ್ಯಾಸವುಳ್ಳವುಗಳಾಗಿವೆ. ಮಾಂಸವನ್ನು ಶರೀರವೆಂದು ಸಂಬೋಧಿಸುವಾಗ ಯಾವ ಕೆಟ್ಟದ್ದಾದ ಒಳ ಅರ್ಥವನ್ನು ಅದಕ್ಕೆ ಕೊಟ್ಟಿರುವುದಿಲ್ಲ. ನಮ್ಮ ಶರಿರವು ಯಾವುದೇ ಬಗೆಯ ಕೆಟ್ಟತನ ಅಥವಾ ಪಾಪಮಯವಾಗಿರುವುದಿಲ್ಲ. ನಾವು ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿದ್ದೇವೆ (ಆದಿಕಾಂಡ 1:27).

ಆದರೆ ಕೆಟ್ಟದ್ದಾಗಿರುವುದು ನಮ್ಮ ಪಾಪ ಸ್ವಭಾವ, ಪಾಪಮಯವಾದ ಆಶೆಗಳು. ಈ ಆಶೆಗಳು ನಮ್ಮನ್ನು ಪಾಪಕ್ಕೆ ಗುರಿಪಡಿಸುತ್ತವೆ (ಯಾಕೋಬ 1:14-15). ಆದುದರಿಂದ ಮಾಂಸ ಎಂಬ ಪದವನ್ನು ಪಾಪಮಯವಾದ ಸ್ವಭಾವಕ್ಕೆ ಅರ್ಥೈಸಿದರೆ, ಅದರ ಅರ್ಥ ಶರೀರಕ್ಕಿಂತ ವಿಭಿನ್ನವಾದದ್ದು. ನಮ್ಮ ಪಾಪ ಸ್ವಭಾವವೇ ಕೆಟ್ಟದ್ದು. ನಮ್ಮ ಶರೀರಗಳು ಕೆಟ್ಟವುಗಳಲ್ಲ.

ಪರಿಶುದ್ಧಾತ್ಮನು ನಮ್ಮ ಶರೀರಗಳ ಮೇಲೆ ನಿಯಂತ್ರಣ ಹೊಂದಿಕೊಂಡಾಗ, ನಾವು ಸರಿಯಾದ ಕ್ರಿಯೆಗಳನ್ನೇ ಮಾಡುತ್ತೇವೆ. ನಮ್ಮ ಪಾಪ ಸ್ವಭಾವವು ನಮ್ಮ ಶರೀರದ ಮೇಲೆ ನಿಯಂತ್ರಣ ಹೊಂದಿದರೆ, ನಾವು ಪಾಪದ ಕ್ರಿಯೆಗಳನ್ನು ಮಾಡುತ್ತೇವೆ (ರೋಮಾಯ 6:12-13 ನೋಡಿರಿ).

**ಅನ್ಯರು** :- ಯಾರ್ಯಾರು ಯಹೂದ್ಯರಲ್ಲವೋ ಅವರನ್ನು ಸತ್ಯವೇದದಲ್ಲಿ ಅನ್ಯಜನರೆಂದು ಕರೆಯುತ್ತಾರೆ. ಯಹೂದ್ಯರು ಅನ್ಯ ಜನರನ್ನು ದ್ವೇಷಿಸುತ್ತಿದ್ದರು.ಏಕೆಂದರೆ ಸತ್ಯವೇದ ಕಾಲದಲ್ಲಿ ಅನೇಕ ಅನ್ಯ ಜನರು, ನಿಜವಾದ ಒಬ್ಬನೇ ದೇವರನ್ನು ನಂಬುತ್ತಿರಲಿಲ್ಲ. ಅವರು ಅನೇಕ ಸುಳ್ಳು ದೇವರುಗಳನ್ನು ನಂಬುತ್ತಿದ್ದರು ಮತ್ತು ವಿಗ್ರಹಗಳನ್ನು ಆರಾಧಿಸುತ್ತಿದ್ದರು. ಯಹೂದ್ಯರು ಅನ್ಯಜನರನ್ನು ಅಶುದ್ಧರೆಂದು ಭಾವಿಸುತ್ತಿದ್ದರು.

ಯೇಸುಕ್ರಿಸ್ತನು ಯಹೂದ್ಯರನ್ನಲ್ಲದೇ, ಅನ್ಯ ಜನರನ್ನೂ ಹಾಗು ಲೋಕದ ಎಲ್ಲಾ ಜನರನ್ನೂ ಸಹ ರಕ್ಷಿಸಲು ಬಂದನು. ಅಪೋಸ್ತಲನಾದ ಪೇತ್ರನು ಅನ್ಯನಾಗಿದ್ದ ಕೊರ್ನೇಲ್ಯನಿಗೂ ಮತ್ತುಅವನ ಕುಟುಂಬದವರಿಗೂ ಸುವಾರ್ತೆಯನ್ನು ಸಾರಿದನು ಮತ್ತು ಅವರು ಕ್ರಿಸ್ತನಲ್ಲಿ ವಿಶ್ವಾಸವಿಟ್ಟ ಮತ್ತು ರಕ್ಷಿಸಲ್ಪಟ್ಟ ಮೊಟ್ಟ ಮೊದಲನೇಯ ಅನ್ಯರಾಗಿದ್ದರು (ಅ.ಕೃ. 10:44-48). ಅಪೋಸ್ತಲನಾದ ಪೌಲನು ಅನ್ಯಜನರಿಗೆ ಕ್ರಿಸ್ತನ ಸುವಾರ್ತೆಯನ್ನು ಸಾರಲು ವಿಶೇಷವಾಗಿ ನೇಮಿಸಲ್ಪಟ್ಟವನಾಗಿದ್ದನು (ಅ.ಕೃ. 9:15, 12:21, ಗಲಾತ್ಯ 2:9).

**ಸುವಾರ್ತೆ** :- ಸುವಾರ್ತೆ ಎಂಬ ಪದಕ್ಕೆ ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನ ಜೀವನ, ಮರಣ ಮತ್ತು ಪುನರುತ್ಥಾನದ ಬಗ್ಗೆ ಇರುವಂತ ಶುಭ ಸಮಾಚಾರ ಎಂದು ಅರ್ಥ. ಸುವಾರ್ತೆ ಎಂಬುದು ಯೇಸುವು ಲೋಕರಕ್ಷಕನು ಮತ್ತು ಆತನು ಪಾಪಿಗಳನ್ನು ರಕ್ಷಿಸುವುದಕ್ಕೋಸ್ಕರ ಈ ಲೋಕಕ್ಕೆ ಬಂದನು ಎಂಬುದೇ. ಯೇಸುಕ್ರಿಸ್ತನಲ್ಲಿ ದೇವರ ರಾಜ್ಯವು ಸಮೀಪಕ್ಕೆ ಬಂದಿದೆ ಎಂಬ ಒಳ್ಳೇ ಸಮಾಚಾರವೇ ಸುವಾರ್ತೆಯಾಗಿದೆ (ಮಾರ್ಕ 1:14-15 ನೋಡಿರಿ). ಒಬ್ಬ ಮನುಷ್ಯನು ರಕ್ಷಣೆ ಹೊಂದಬೇಕಾದರೆ, ಆತನು ಯೇಸುವಿನಲ್ಲಿ ವಿಶ್ವಾಸವಿಡಬೇಕೆಂದು ಹೇಳುವುದೆ ಶುಭ ಸಮಾಚಾರವೆ ಸುವಾರ್ತೆಯಾಗಿದೆ.

**ಕೃಪೆ** :- ಕೃಪೆ ಎಂಬುದು ದೇವರು ಮನುಷ್ಯನಿಗೆ ತೋರಿಸುವ ಪ್ರೀತಿ ಮತ್ತು ದಯೆ ಆಗಿದೆ. ದೇವರು ಮನುಷ್ಯರಿಗೆ ಕೃಪೆಯನ್ನು ಉಚಿತವಾಗಿ ಕೊಡುತ್ತಾನೆ. ಮನುಷ್ಯರು ಪಾಪದಿಂದ ತುಂಬಲ್ಪಟ್ಟಿರುವುದರಿಂದ ದೇವರ ಪ್ರೀತಿ ಮತ್ತು ದಯೆಯನ್ನು ಹೊಂದಲು ಯೋಗ್ಯರಲ್ಲ. ದೇವರ ಪ್ರೀತಿಗೆ ಮನುಷ್ಯನು ಅಯೋಗ್ಯನಾಗಿದ್ದರೂ ಸಹ ದೇವರು ಮಾನವನನ್ನು ಪ್ರೀತಿಸುತ್ತಾನೆ ನಾವು ದೇವರಿಗೆ ವೈರಿಗಳಾಗಿದ್ದು ಮತ್ತು ಪಾಪಿಗಳಾಗಿದ್ದಾಗಲೇ, ಆತನು ತನ್ನ ಒಬ್ಬನೇ ಮಗನನ್ನು ನಮ್ಮ ರಕ್ಷಣೆಗಾಗಿ ಕಳುಹಿಸಿದನು (ರೋಮಾ 5:8).

ಆದರೆ ದೇವರ ಕೃಪೆಯಿಂದ ಮಾತ್ರವೇ, ನಮಗೆ ರಕ್ಷಣೆ ದೊರಕುತ್ತದೆ (ಎಫೆಸ 2:8, ತೀತ 2:11). ದೇವರ ಕೃಪೆಯಿಂದ ನಾವು ನಮ್ಮ ಕ್ರೈಸ್ತ ಜೀವಿತವನ್ನು ನಡೆಸುತ್ತೇವೆ. ಮನುಷ್ಯನು ಈವರೆಗೆ ಪಡೆದುಕೊಂಡ, ಲೌಕಿಕ ಮತ್ತು ಆತ್ಮೀಕವಾದ ಆಶೀರ್ವಾದಗಳು, ದೇವರ ಕೃಪೆಯಿಂದ ಬಂದವುಗಳೇ. ದೇವರು ಕೃಪೆ ಮಾಡಿ, ತನ್ನ ಮಗನನ್ನು ನಮ್ಮ ರಕ್ಷಣೆಗೋಸ್ಕರ ಕಳುಹಿಸಿಕೊಟ್ಟನು. ದೇವರು ಕೃಪೆಯುಳ್ಳವನಾಗಿರುವುದರಿಂದ, ನಮ್ಮನ್ನು ಪರಿಶುದ್ಧರನ್ನಾಗಿ ಮಾಡಲು, ತನ್ನ ಪರಿಶುದ್ಧಾತ್ಮನನ್ನು ಕಳಿಸಿಕೊಟ್ಟನು. ಕೃಪೆಯಿಂದಲೇ ಕ್ರಿಸ್ತನಲ್ಲಿರುವ ವಿಶ್ವಾಸಿಗಳು, ದೇವರ ಸಂಗಡ ಸದಾ ಕಾಲ ಜೀವಿಸುವರು.

**ಪವಿತ್ರಾತ್ಮನು** :- ಪವಿತ್ರಾತ್ಮನು ಸಾಕ್ಷಾತ್ ದೇವರೇ ಆಗಿದ್ದಾನೆ. ದೇವರು ಆತ್ಮಸ್ವರೂಪನು (ಯೋಹಾನ 4:24). ದೇವರ ತ್ರಯೆಕತ್ವದಲ್ಲಿ ಪವಿತ್ರಾ ತ್ಮನೂ ಸಹ ಒಬ್ಬನು. ದೇವರು, ತಂದೆ, ಮಗ (ಯೇಸು) ಮತ್ತು ಪವಿತ್ರಾತ್ಮನಾಗಿದ್ದಾನೆ. ಒಬ್ಬನೇ ದೇವರು, ಮೂರು ವ್ಯಕ್ತಿಗಳು.

ಪವಿತ್ರಾತ್ಮನು ವಿಶ್ವಾಸಿಗಳಲ್ಲಿ ವಾಸಿಸುತ್ತಾನೆ (ಯೋಹಾನ 14:17, 1ನೇ ಕೊರಿಂಥ 3:16, 6:19, ಎಫೆಸ 2:22 ಮತ್ತು ವ್ಯಾಖ್ಯಾನ). ಪವಿತ್ರಾತ್ಮನು ವಿಶ್ವಾಸಿಗಳಿಗೆ ಬೋಧಿಸುವನು (ಯೋಹಾನ 14:26). ಆತನು ಕ್ರಿಸ್ತನಿಗೆ ಸಾಕ್ಷಿಯಾಗಿರುತ್ತಾನೆ (ಯೋಹಾನ 15:26). ಆತನು ಸತ್ಯವೇದವನ್ನು ಬರೆದಂತವರನ್ನು ಪ್ರೇರೇಪಿಸಿದನು ಮತ್ತು ಮಾರ್ಗದರ್ಶನ ನೀಡಿದನು (ಅ.ಕೃ. 1:16, 2ನೇ ಪೇತ್ರ 1:21). ಪವಿತ್ರಾತ್ಮನನ್ನು ಹೊಂದಿಕೊಳ್ಳುವುದೆಂದರೆ, ಅವಶ್ಯಕವಾಗಿ ಕ್ರಿಸ್ತನನ್ನೇ ಹೊಂದಿಕೊಂಡಂತೆ.ಏಕೆಂದರೆ ನಾವು ಕ್ರಿಸ್ತನನ್ನು ಅಂಗೀಕರಿಸಿಕೊಂಡಾಗ, ಪವಿತ್ರಾತ್ಮನನ್ನು ಬರಮಾಡಿಕೊಳ್ಳುತ್ತೇವೆ (ರೋಮಾ 8:9-12). ಯೇಸುವೂ ದೇವರು ಒಬ್ಬನೇ ಆಗಿರುವುದರಿಂದ (ಯೋಹಾನ 10:30) ಪವಿತ್ರಾತ್ಮನು ಕ್ರಿಸ್ತನ ಆತ್ಮವಾಗಿದ್ದಾನೆ.

ಪವಿತ್ರಾತ್ಮನು ವಿಶ್ವಾಸಿಗಳಿಗೆ ಬಹಳ ಶಕ್ತಿಯನ್ನು ಕೊಡುತ್ತಾನೆ (ಅ.ಕೃ. 1:8, 2:1-4 ಮತ್ತು ವ್ಯಾಖ್ಯಾನ). ಪವಿತ್ರಾತ್ಮನು ಸೇವೆ ಮಾಡುವುದಕ್ಕೆ ವಿಶೇಷ ವರಗಳನ್ನು ಕೊಡುತ್ತಾನೆ (1ನೇ ಕೊರಿಂಥ 12:7-11 ಮತ್ತು ವ್ಯಾಖ್ಯಾನ). ಆದರೆ ಎಲ್ಲಕ್ಕಿಂತ ಹೆಚ್ಚಾಗಿ ಪವಿತ್ರಾತ್ಮನು ನಾವು ಪವಿತ್ರ ಜೀವಿತದಿಂದ ಜೀವಿಸಲು ಸಹಾಯಿಸುತ್ತಾನೆ ಮತ್ತು ಆತ್ಮನ ಕುರಿತಾಗಿ ಉಂಟಾಗುವ 9 ಫಲಗಳನ್ನು ಉಂಟುಮಾಡುತ್ತಾನೆ (ನೋಡಿರಿ . ಗಲಾತ್ಯ 5:22-23 ಮತ್ತು ವ್ಯಾಖ್ಯಾನ). ನಾವು ಪವಿತ್ರಾತ್ಮಸಹಾಯವಿಲ್ಲದೆ ಒಂದು ನಿಮಿಷವಾದರೂ, ಕ್ರಿಸ್ತೀಯ ಜೀವಿತದಲ್ಲಿ ಜೀವಿಸಲಾರೆವು. ಪವಿತ್ರಾತ್ಮನ ವಿಷಯದಲ್ಲಿ ಹೆಚ್ಚು ತಿಳಿಯಲು (ಸಾಮಾನ್ಯ ವಿಷಯಗಳು, ಪವಿತ್ರಾತ್ಮ, ಪವಿತ್ರಾತ್ಮನ ದೀಕ್ಷಾಸ್ನಾನ. ನೋಡಿರಿ).

**ಕ್ರಿಸ್ತನಲ್ಲಿ** :- ಕ್ರಿಸ್ತನಲ್ಲಿರು ಎಂಬ ಪದವನ್ನು ಅಪೊಸ್ತಲನಾದ ಪೌಲನು ಉಪಯೋಗಿಸುತ್ತಾನೆ. ನಾವು ಕ್ರಿಸ್ತನಲ್ಲಿರಬೇಕಾದರೆ, ಮೊದಲು ನಾವು ಅವನನ್ನು ವಿಶ್ವಾಸಿಸಬೇಕು. ಆಗ ನಿಜವಾಗಿ ಕ್ರಿಸ್ತನಲ್ಲಿ ವಿಶ್ವಾಸವಿಟ್ಟವರಾಗಿ, ಆತನೊಂದಿಗೆ ನಾವು ಒಗ್ಗಟ್ಟಾಗಿರುತ್ತೇವೆ. ಅಂದರೆ ನಾವು ಆತನ ಅನ್ಯೋನ್ಯತಯಲ್ಲಿರುವೆವು. ಆತನನ್ನು ಅರಿತುಕೊಳ್ಳುವೆವು. ಆತನಿಗೆ ವಿಧೇಯರಾಗಿರುವೆವು ಮತ್ತು ಆತನಿಂದ ಆಶೀರ್ವಾದ ಹೊಂದುವೆವು. ನಮ್ಮ ಎಲ್ಲಾ ಆತ್ಮೀಯ ಆಶೀರ್ವಾದಗಳು ಕ್ರಿಸ್ತನಿಂದ ಬಂದವುಗಳೇ (ಎಫೆಸ 1:3 ಮತ್ತು ವ್ಯಾಖ್ಯಾನ). ನಾವು ಕ್ರಿಸ್ತನಲ್ಲಿದ್ದರೆ, ನಾವು ಹೊಸದಾಗಿ ಸೃಷ್ಟಿಸಲ್ಪಡುತ್ತೇವೆ ಮತ್ತು ಹೊಸ ಜೀವಿತವನ್ನು ಪಡೆದುಕೊಳ್ಳುತ್ತೇವೆ (2ನೇ ಕೊರಿಂಥ 5:17, ಮತ್ತು ವ್ಯಾಖ್ಯಾನ).

**ಇಸ್ರಾಯೇಲ್** :- ಹೊಸ ಒಡಂಬಡಿಕೆಯಲ್ಲಿ ಇಸ್ರಾಯೇಲ್ ಎಂಬ ಪದಕ್ಕೆ, ಯಹೂದ್ಯ ಜನಾಂಗವೆಂದು ಸಾಧಾರಣವಾಗಿ ಅರ್ಥ ಮಾಡಿಕೊಳ್ಳುತ್ತೇವೆ. ಹಾಗೆಂದರೆ ಅಬ್ರಹಾಮನ ವಂಶಸ್ಥರು. ಆದರೆ ಅಪೋಸ್ತಲನಾದ ಪೌಲನು ಕೆಲವು ಸಾರಿ ಇಸ್ರಾಯೇಲ್ ಎಂಬ ಪದವನ್ನು ಉಪಯೋಗಿಸುವಾಗ ನಂಬಿಕೆಯ ಮೂಲಕ ಅಬ್ರಹಾಮನ ನಿಜವಾದ ಆತ್ಮೀಯ ಮಕ್ಕಳು ಎಂದು ವರ್ಣಿಸುತ್ತಾನೆ (ಗಲಾತ್ಯ 6:16). ಹಳೇ ಒಡಂಬಡಿಕೆಯಲ್ಲಿ, ಅಬ್ರಹಾಮನ ಮೊಮ್ಮಗನಾದ ಯಾಕೋಬನಿಗೆ ದೇವರು ಇಸ್ರಾಯೇಲ್ ಎಂದು ಹೆಸರು ಕೊಟ್ಟನು (ಆದಿಕಾಂಡ 35:10).

ಯಾಕೋಬನಿಗೆ 12 ಮಕ್ಕಳಿದ್ದರು, ಅವರುಗಳ ಮೂಲಕ ಇಸ್ರಾಯೇಲರಲ್ಲಿ 12 ಕುಲಗಳು ಉಂಟಾದವು (ಆದಿಕಾಂಡ 35:23-26)ಈ ದಿನಗಳಲ್ಲಿ ಇಸ್ರಾಯೇಲ್ ಎಂಬ ದೇಶವು ಮಧ್ಯಪೂರ್ವದ ಭೂಮಧ್ಯೆ ಸಮುದ್ರದ ಪೂರ್ವ ಕರಾವಳಿಯಲ್ಲಿ ಸ್ಥಾಪಿತವಾಗಿದೆ. ಈ ನವೀನ ದೇಶವು ಯಹೂದ್ಯರಿಗಾಗಿಯೇ 1947ರಲ್ಲಿ ಸ್ಥಾಪಿತವಾಯಿತು. ದೇವರು ಅಬ್ರಹಾಮ ಸಂತತಿಗೆಂದೇ ..... ಮಾಡಿರುವ ಅದೇ ಸ್ಥಳದಲ್ಲಿ ಇದನ್ನು ಸ್ಥಾಪಿಸಲಾಯಿತು (ಆದಿಕಾಂಡ 12:4-7). ಇದರ ಮುಖ್ಯ ಪಟ್ಟಣ ಈಗಲೂ ಯೆರುಸಲೇಂ ಆಗಿದೆ. ಇದು ಹೊಸ ಒಡಂಬಡಿಕೆ ಕಾಲದಲ್ಲಿ ಯಹೂದ್ಯ ರಾಜ್ಯದ ರಾಜಧಾನಿಯಾಗಿದ್ದಿತು.

**ಇಸ್ರಾಯೇಲರು** :- (ನೋಡಿರಿ. ಪದಪಟ್ಟಿ .ಯಹೂದ್ಯಐ.

**ಯಹೂದ್ಯ** :- ಯಹೂದ್ಯ ಅಥವಾ ಇಸ್ರಾಯೇಲ್ಯನು ಅಬ್ರಹಾಮನ ಸಂತತಿಯವನು. ಯಹೂದ್ಯರ ತಂದೆಯಾದವನು (ಪದಪಟ್ಟಿಯಲ್ಲಿ "ಅಬ್ರಹಾಮ" ನೋಡಿರಿ).

ದೇವರು ಅಬ್ರಹಾಮನಿಗೆ, **ನಿನ್ನಿಂದ ಒಂದು ಮಹಾ ಜನಾಂಗವನ್ನುಂಟು ಮಾಡುವೆನು** ಎಂದು ವಾಗ್ದನ ಮಾಡಿದನು (ಆದಿಕಾಂಡ 12:2). ದೇವರು ಅಬ್ರಹಾಮನು ಮತ್ತು ಆತನ ಸಂತತಿಯೊಡನೆ ಒಂದು ಒಪ್ಪಂದ ಮಾಡಿಕೊಂಡನು ಮಾಡಿಕೊಂಡನು. (ಪದಪಟ್ಟಿಯಲ್ಲಿ "ಒಪ್ಪಂದ" ನೋಡಿರಿ). ದೇವರು ಅಬ್ರಹಾಮನಿಗೆ ಹೀಗೆ ಹೇಳಿದನು "**ನಾನು ನಿನ್ನೊಡನೆಯೂ ಮತ್ತು ನಿನ್ನಿಂದ ಉಂಟಾಗುವ ಸಂತತಿಯೊಡನೆ, ಯುಗ ಯುಗಾಂತರಗಳವರೆಗೂ, ಒಂದು ಶಾಶ್ವತವಾದ ಒಪ್ಪಂದವನ್ನು ಮಾಡಿಕೊಳ್ಳುವೆನು. ನಿನಗೂ ನಿನ್ನ ಸಂತತಿಯವರಿಗೂ ದೇವರಾಗಿರುವೆನು**" (ಆದಿಕಾಂಡ 17:7-8). ಈ ರೀತಿಯಾಗಿ ದೇವರು ಯಹೂದ್ಯರನ್ನು ತನ್ನ ಸ್ವಕೀಯ ಪ್ರತ್ಯೇಕ ಜನಾಂಗವನ್ನಾಗಿ ಮಾಡಿಕೊಂಡನು (ವಿ.ಮೋ.19:5-6). ಆದರೆ ದೇವರು ಯಹೂದ್ಯರು ತನಗೆ ವಿಧೇಯರಾಗಿ ನಡೆದುಕೊಳ್ಳುವಂತೆಯೂ, ತನ್ನನ್ನೇ ಆರಾಧಿಸುವಂತೆ ಅವರಿಗೆ ಅಪ್ಪಣೆ ಕೊಟ್ಟನು. ಇದೇ ಒಪ್ಪಂದಲ್ಲಿನ ಅವರ ಪಾತ್ರ.

ಹಳೇ ಒಡಂಬಡಿಕೆಯ ಕಾಲದಲ್ಲಿ ನಿಜವಾದ ದೇವರೊಬ್ಬರನ್ನೇ ಆರಾಧಿಸುವ ಜನಾಂಗವಾಗಿದ್ದರು. ಆದರೆ ಅನೇಕ ಸಾರಿ, ಅವರು ಬಿದ್ದು ಹೋದರು ಮತ್ತು ದೇವರಿಗೆ ವಿರೋಧವಾದರು ಮತ್ತು ದೇವರು ಪ್ರವಾದಿಗಳನ್ನು ಅವರಲ್ಲಿಗೆ ಕಳುಹಿಸಿ, ಅವರು ಪಶ್ಚಾತ್ತಾಪಪಟ್ಟು ಮತ್ತು ತಮ್ಮ ದುರ್ನಡತೆಯಿಂದ ಹೊರಬರಬೇಕೆಂದು ಎಚ್ಚರಿಸಿದನು.

ದೇವರು ಯಹೂದ್ಯರನ್ನು ಲೋಕದ ಎಲ್ಲಾ ಜನರಿಗೆ ಆಶೀರ್ವಾದಕರವಾಗಿರಬೇಕೆಂದು ಆರಿಸಿಕೊಂಡನು (ಆದಿಕಾಂಡ 12:3). ಅತಿಮುಖ್ಯವಾದದ್ದು ಯಹೂದ್ಯರಲ್ಲಿ ಬರಬೇಕಾದದ್ದು ಯೇಸುವಿನ ಆಗಮನ. ಲೋಕ ರಕ್ಷಕನೂ ಸ್ವತಃ ಯಹೂದ್ಯನಾ ಗಿದ್ದನು. ಅಬ್ರಹಾಮ ವಂಶಸ್ಥನಾಗಿದ್ದನು (ಮತ್ತಾಯ 1:1)., ಅಬ್ರಹಾಮನಿಗೆ ದೇವರು ಮಾಡಿದ ವಾಗ್ದತ್ತವೂ ಯೇಸುಕ್ರಿಸ್ತನ ಮೂಲಕ ನೆರವೇರಿತು.

ಅನ್ಯ ಜನರು(ಪದಪಟ್ಟಿ ನೋಡಿರಿ. ಅನ್ಯ ಜನರು) ಸುನ್ನತಿ ಮಾಡಿಸಿಕೊಂಡು ಯಹೂದ್ಯ ಮತಾವಲಂಬಿಗಳಾಗಲು ಸಾದ್ಯವಿತ್ತು(ಪದಪಟ್ಟಿ ನೋಡಿರಿ. ಸುನ್ನತಿಐ ಮತ್ತು ಬಹಳ ಜಾಗರೂಕತೆಯಿಂದ ಯಹೊದ್ಯರ ನಿಯಮಗಳನ್ನು ಪಾಲಿಸಬೇಕಾಗಿತ್ತು. ಯಹೂದ್ಯ ಮತವನ್ನು ಈ ರೀತಿಯಾಗಿ ಸ್ವೀಕಾರ ಮಾಡಿದವರು ಯಹೂದ್ಯ ಮತಾವಲಂಬಿಗಳು ಎಂದು ಅನ್ನಿಸಿಕೊಂಡರು.

**ನ್ಯಾಯ ತೀರ್ಪು** :- ಹೊಸ ಒಡಂಬಡಿಕೆಯಲ್ಲಿ ನ್ಯಾಯ ತೀರ್ಪು ಎಂಬ ಪದಕ್ಕೆ 3 ವಿಧವಾದ ಅಥಗಳಿವೆ. ಅಂದರೆ 3 ವಿಧವಾಗಿ ಉಪಯೋಗಿಸಲ್ಪಟ್ಟಿವೆ.

ಮೊದಲನೇ ಅರ್ಥವೇನೆಂದರೆ, ಮನುಷ್ಯ ಮನುಷ್ಯರೊಳಗಿನ ತೀರ್ಪು. ಯೇಸುವು ನಾವು ಒಬ್ಬರಿಗೊಬ್ಬರು ತೀರ್ಪು ಮಾಡಬಾರದೆಂದು ಹೇಳಿದ್ದಾನೆ (ನೋಡಿರಿ ಮತ್ತಾಯ 7:1 ಮತ್ತು ವ್ಯಾಖ್ಯಾನ). ಮನುಷ್ಯನ ತೀರ್ಪು ಪೂರ್ಣಸತ್ಯದಿಂದ ಇರುವುದಿಲ್ಲ.ಏಕೆಂದರೆ ಯಾವ ಮನುಷ್ಯನಿಗೂ ಇನ್ನೊಬ್ಬ ಮನುಷ್ಯನ ವಿಷಯವಾಗಿ ಪೂರ್ಣ ಸತ್ಯ ತಿಳಿದಿರುವುದಿಲ್ಲ.

ಪ್ರತಿಯೊಬ್ಬ ವ್ಯಕ್ತಿಯ ವಿಷಯವಾಗಿ ಎಲ್ಲವನ್ನು ದೇವರು ತಿಳಿದಿದ್ದಾನೆ. ಆದುದರಿಂದ ದೇವರೊಬ್ಬನೇ ನಿಜವಾಗಿ ಮತ್ತು ಪ್ರಾಮಾಣಿಕವಾಗಿ ತೀರ್ಪು ಮಾಡಬಲ್ಲನು.

ಹೊಸ ಒಡಂಬಡಿಕೆಯಲ್ಲಿ ತಿಳಿಸಿರುವ ಎರಡನೇ ವಿಧವಾದ ನ್ಯಾಯ ತೀರ್ಪು ಯಾವುದೆಂದರೆ, ದುಷ್ಟರಿಗೆ ದೇವರು ಕೊಡುವ ಶಿಕ್ಷೆ. ಈ ಶಿಕ್ಷೆಯು ವಿಶ್ವಾಸಿಗಳು ಹಾಗೂ ಅವಿಶ್ವಾಸಿಗಳ ಮೇಲೂ ಬರುತ್ತದೆ (1ನೇ ಕೊರಿಂಥ 11:29-34 ಮತ್ತು ವ್ಯಾಖ್ಯಾನ). ಈ ತರವಾದ ನ್ಯಾಯತೀರ್ಪು,ಪಾಪಿಗಳನ್ನುದೇವರ ಕಡೆಗೆ ತಿರುಗಿಸುವುದು ಮತ್ತು ಅವರನ್ನು ತಿದ್ದಿ ಜೀವಿತವನ್ನು ಶುದ್ಧಗೊಳಿಸುವುದೇ ಆಗಿದೆ.

ಮೂರನೇ ವಿಧವಾದ ನ್ಯಾಯ ತೀರ್ಪು, ಹೊಸ ಒಡಂಬಡಿಕೆಯಲ್ಲಿ ತಿಳಿಸಿರುವ ಪ್ರಕಾರ, ದೇವರ ಕಡೇಯ ನ್ಯಾಯ ತೀರ್ಪು ಲೋಕದ ಅಂತ್ಯದಲ್ಲಿ ಬರುವುದು. ದೇವರು ಮನುಷ್ಯರಿಗೆ ನ್ಯಾಯತೀರ್ಪು ಕೊಡುವ ಅಧಿಕಾರವನ್ನು ಯೇಸುಕ್ರಿಸ್ತನಿಗೆ .ಕೊಟ್ಟಿದ್ದಾನೆ (ಯೋಹಾನ 5:22). ಪ್ರತಿಯೊಬ್ಬ ಮನುಷ್ಯನು ಯೇಸುಕ್ರಿಸ್ತನ ನ್ಯಾಯಾಸನದ ಮುಂದೆ ನಿಂತುಕೊಳ್ಳಲೇಬೇಕು (ನೋಡಿರಿ .1ನೇ ಕೊರಿಂಥ 5:10 ಮತ್ತು ವ್ಯಾಖ್ಯಾನ). ಕ್ರಿಸ್ತನ ನ್ಯಾಯತೀರ್ಪು ಪಕ್ಷಪಾತವಾದುದ್ದಲ್ಲ. ಆತನ ನ್ಯಾಯತೀರ್ಪು ಈ ಲೋಕದಲ್ಲಿ ಮನುಷ್ಯರ ನ್ಯಾಯತೀರ್ಪಿನಂತಲ್ಲ. ಅದು ಸಂಪೂರ್ಣಸತ್ಯದಿಂದಲೂ ಮತ್ತು ನಿಷ್ಪಕ್ಷಪಾತವಾಗಿಯೂ ಇರುತ್ತದೆ. ಯಾರ್ಯಾರು ಈ ಲೋಕದಲ್ಲಿರುವಾಗ ಕ್ರಿಸ್ತನಲ್ಲಿನಂಬಿಕೆ ಇಟ್ಟಿದ್ದರೋ ಅವರು ರಕ್ಷಣೆ ಹೊಂದುವರು ಮತ್ತು ಪರಲೋಕಕ್ಕೆ ಹೋಗುವರು. ಯಾರ್ಯಾರು ಈ ಲೋಕದಲ್ಲಿರುವಾಗ ಕ್ರಿಸ್ತನಲ್ಲಿ ನಂಬಿಕೆ ಇಡಲಿಲ್ಲವೋ ಅವರು ಖಂಡಿಸಲ್ಪಡುವರು ಮತ್ತು ನರಕಕ್ಕೆ ಹೋಗುವರು (ಯೋಹಾನ 3:18, 36). ಅಂತಿಮ ತೀರ್ಪಿನಂತರ, ಮೊರೆಯಿಡಲು ಸಾಧ್ಯವಿಲ್ಲ. ಆದುದರಿಂದ ಒಬ್ಬ ವ್ಯಕ್ತಿಯು ರಕ್ಷಣೆಯನ್ನು ಪಡೆದುಕೊಳ್ಳುವುದಕ್ಕೋಸ್ಕರ ತನ್ನ ಜೀವಿತ ಕಾಲದಲ್ಲಿಯೆ ಯೇಸು ಕ್ರಿಸ್ತನಲ್ಲಿವಿಶ್ವಾಸವಿಡಲೇ ಬೇಕು, ಅನ್ಯಮಾರ್ಗವಿಲ್ಲ (ಅ.ಕೃ. 4:12).

**ದೇವರ ರಾಜ್ಯ** :- ದೇವರ ರಾಜ್ಯವೆಂಬುದು ಯಾವುದೇ ನಿರ್ದಿಷ್ಟವಾದ ಒಂದು ಸ್ಥಳವಲ್ಲ. ಅದು ಭೂಲೋಕದಲ್ಲಿರುವ ರಾಜ್ಯವಲ್ಲ. ದೇವರ ರಾಜ್ಯವು ಒಂದು ಆತ್ಮೀಕವಾದ ರಾಜ್ಯವಾಗಿದ್ದು ಅದರಲ್ಲಿ ದೇವರು ಸಂಪೂರ್ಣ ಅಧಿಕಾರದಿಂದ ಆಳ್ವಿಕೆ ಮಾಡುತ್ತಾನೆ. ಒಂದು ಅರ್ಥದಲ್ಲಿ ಹೇಳುವುದಾದರೆ, ದೇವರ ರಾಜ್ಯವು ಎಲ್ಲೆಲ್ಲಿಯೂ ಇದೆ. ಆದರೆ ಹೊಸ ಒಡಂಬಡಿಕೆಯ ಪ್ರಕಾರ ದೇವರ ರಾಜ್ಯವೆಂದರೆ, ಆತ್ಮೀಕ ರಾಜ್ಯವೆಂದು, ಅದರಲ್ಲಿರುವ ಮನುಷ್ಯರು ಮತ್ತು ದೇವದೂತರು ದೇವರಿಗೆ ವಿಧೇಯರಾಗಿರುತ್ತಾರೆ ಮತ್ತು ಆರಾಧಿಸುತ್ತಾರೆ. ಆದುದರಿಂದ, ಈ ಅರ್ಥದ ಪ್ರಕಾರ ಈ ಲೋಕವು ದೇವರ ರಾಜ್ಯದಲ್ಲಿರದೆ ಸೈತಾನ ರಾಜ್ಯದಲ್ಲಿದೆ. ಸೈತಾನನು ಈ ಲೋಕವನ್ನುಆಳುವ ಪ್ರಭು ಆಗಿದ್ದಾನೆ (ನೋಡಿರಿ .ಯೋಹಾನ 12:31, 16:11 ಮತ್ತು ವ್ಯಾಖ್ಯಾನ).

ಆದರೆ ಬೇರೊಂದು ಅರ್ಥದಲ್ಲಿ ದೇವರು ತನ್ನ ರಾಜ್ಯವನ್ನು ಈ ಲೋಕಕ್ಕೆ ವಿಸ್ತರಿಸಿದ್ದಾನೆ. ಯೇಸುವಿನಲ್ಲಿ ನಂಬಿಕೆಯಿಡುವ ಎಲ್ಲರನ್ನು ದೇವರು ಸೈತಾನನ ಕತ್ತಲೆಯ ರಾಜ್ಯದಿಂದ ತಕ್ಷಣವೆ ಬಿಡಿಸುತ್ತಾನೆ ಮತ್ತು ದೇವರ ರಾಜ್ಯಕ್ಕೆ ಸೇರಿಸುತ್ತಾನೆ. ಕ್ರೈಸ್ತರು ಈ ಲೋಕದಲ್ಲಿ ಜೀವಿಸುತ್ತಿರುವಾಗಲೇ ದೇವರ ರಾಜ್ಯದಲ್ಲಿರುತ್ತಾರೆ. ನಾವು ದೇವರ ರಾಜ್ಯದಲ್ಲಿನ' ಪ್ರಜೆಗಳು. ದೇವರು ನಮ್ಮ ದೊರೆಯಾಗಿದ್ದಾನೆ . ಆತನು ಪರಿಶುದ್ಧಾತ್ಮನ ಮೂಲಕ ನಾವು ಸೈತಾನನನ್ನು ಗೆಲ್ಲುವಂತೆ ಮಾಡುತ್ತಾನೆ. ನಮ್ಮ ಶರೀರವು ಮೃತಪಟ್ಟ ನಂತರ, ನಾವು ದೇವರ ರಾಜ್ಯದಲ್ಲಿ ಜೀವಿಸುತ್ತಾ ಮುಂದುವರೆಯುತ್ತೇವೆ.

ಆದುದರಿಂದ, ನಾವು ಕ್ರಿಸ್ತನ ನಂಬಿಕೆಯ ಮೂಲಕ ದೇವರ ರಾಜ್ಯಕ್ಕೆ ಪ್ರವೇಶ ಹೊಂದುತ್ತೇವೆ. ಒಂದರ್ಥದಲ್ಲಿ ದೇವರ ರಾಜ್ಯವು ನಮ್ಮೊಳಗೆ ಬರುತ್ತದೆ, ದೇವರ ರಾಜ್ಯಭಾರಕ್ಕೆನಾವು ಒಳಪಡುತ್ತೇವೆ (ನೋಡಿರಿ. ಲೂಕ 17:20-21 ಮತ್ತು ವ್ಯಾಖ್ಯಾನ). ಯೇಸುವು ಸಾರಿದ ಮುಖ್ಯವಾದ ಸಂದೇಶವೇನೆಂದರೆ **"ದೇವರ ರಾಜ್ಯ ಸಮೀಪಿಸಿದೆ. ಪಶ್ಚಾತ್ತಾಪ ಪಡಿರಿ ಮತ್ತು ಸುವಾರ್ತೆಯಲ್ಲಿ ನಂಬಿಕೆ ಇಡಿರಿ"** (ನೋಡಿರಿ. ಮಾರ್ಕ 1:14-15 ಮತ್ತು ವ್ಯಾಖ್ಯಾನ).

**ಪರಲೋಕರಾಜ್ಯ** :- ಪದಪಟ್ಟಿಯಲ್ಲಿ ದೇವರರಾಜ್ಯ ನೋಡಿರಿ.

**ಕಾನೂನು** :- ಸತ್ಯವೇದದಲ್ಲಿ ಕಾನೂನು ಎಂಬ ಪದವನ್ನು ಉಪಯೋಗಿಸುವಾಗ ಸಾಮಾನ್ಯವಾಗಿ ಅದು ಯಹೂದ್ಯರ ಧರ್ಮಶಾಸ್ತ್ರ ಎಂದೇ ತಿಳಿಯುತ್ತೇವೆ. ಅದರಲ್ಲಿ ಮುಖ್ಯಭಾಗ ಯಾವುದೆಂದರೆ ದೇವರು ಮೋಶೆಗೆ ಎರಡು ಕಲ್ಲಿನ ಮೇಲೆ ಯಹೂದ್ಯರಿಗೆ ಬರೆದುಕೊಟ್ಟ ದಶಾಜ್ಞೆಗಳೇ (ವಿಮೋ 20:3-17, 31:18). ಈ ಹತ್ತು ಆಜ್ಞೆಗಳನ್ನಲ್ಲದೆ ದೇವರು ಮೋಶೆಗೆ ಯಹೂದ್ಯರಿಗಾಗಿ ಇನ್ನು ಅನೇಕ ಕಟ್ಟಳೆಗಳನ್ನು ಕೊಟ್ಟನು. ಅವು ವಿಮೋಚನಾಕಾಂಡ, ಯಾಜಕಕಾಂಡ, ಅರಣ್ಯಕಾಂಡ ಮತ್ತು ಧರ್ಮಶಾಸ್ತ್ರಕಾಂಡದಲ್ಲಿ ಬರೆದಿರುವುಗಳಾಗಿವೆ. ಯಹೂದ್ಯರು ಪಾಲಿಸಲೇ ಬೇಕಾದ ಇನ್ನು ಆರುನೂರು ಕಟ್ಟಳೆಗಳನ್ನು ಕೊಟ್ಟನು. ಇವುಗಳೆಲ್ಲವೂ ಸೇರಿ ಧರ್ಮಶಾಸ್ತ್ರ ಎಂದು ತಿಳಿಸಲಾಯಿತು. ಹಳೆ ಒಡಂಬಡಿಕೆಯಲ್ಲಿರುವ ಮೊದಲನೇ ಐದು ಪುಸ್ತಕಗಳು ಧರ್ಮಶಾಸ್ತ್ರ ಅಥವಾ ಮೋಶೆಯ ಧರ್ಮಶಾಸ್ತ್ರವೆಂದೇ ಕರೆಯಲ್ಪಡುತ್ತದೆ.

ಯಹೂದ್ಯರು ದೇವರು ಕೊಟ್ಟ ಕಟ್ಟಳೆಗಳನ್ನು ಮತ್ತುಆಜ್ಞಾಪನೆಗಳನ್ನು ಸರಿಯಾಗಿ ಪಾಲಿಸಿಕೊಂಡು ಬಂದರೆ, ರಕ್ಷಣೆ ದೊರಕುತ್ತದೆ ಎಂಬು ನಂಬಿದ್ದರು. ಆದಾಗ್ಯೂ ಹೊಸ ಒಡಂಬಡಿಕೆಯು ಬೋಧನೆಯು ಮತ್ತು ಮಾನವನ

ಅನುಭವವು, ಯಾರೊಬ್ಬನು ಎಲ್ಲ ಕಾಲದಲ್ಲಿಯೂ ಸಂಪೂರ್ಣವಾಗಿ ಧರ್ಮಶಾಸ್ತ್ರವನ್ನು ಅನುಸರಿಸಿ ನಡೆದುಕೊಳ್ಳಲು ಸಾಧ್ಯವಿಲ್ಲ ಎಂದು ಸಾಬೀತುಪಡಿಸುತ್ತದೆ (ನೋಡಿರಿ. ಗಲಾತ್ಯ 3:10, ಯಾಕೋಬ 2:10, ಮತ್ತು ವ್ಯಾಖ್ಯಾನ). ಆದುದರಿಂದ ಯಾರೊಬ್ಬನೂ ಕಟ್ಟಳೆಯಿಂದ ನ್ಯಾಯ ದೊರಕಿಸಿಕೊಳ್ಳಲಾರನು ಮತ್ತು ರಕ್ಷಿಸಲ್ಪಡಲಾರನು (ಗಲಾತ್ಯ 2:15, 16 ಮತ್ತು ವ್ಯಾಖ್ಯಾನ). ಧರ್ಮಶಾಸ್ತ್ರವು ಮನುಷ್ಯರನ್ನು ರಕ್ಷಿಸುವುದಿಲ್ಲ. ಅದು ಖಂಡಿಸುತ್ತದೆ. ಕ್ರಿಸ್ತನು ನಿಜವಾಗಿ ಧರ್ಮಶಾಸ್ತ್ರದ ಬಂಧನದಿಂದ ಸ್ತ್ರೀಪುರುಷರನ್ನು ಬಿಡಿಸಲು ಮತ್ತು ರಕ್ಷಣೆಯ ಸತ್ಯವಾದ ಮಾರ್ಗವನ್ನು ತೋರಿಸಲು ಬಂದನು. ಅಂದರೆ ಕ್ರಿಸ್ತನು ತಾನೇ (ನೋಡಿರಿ. ರೋಮಾಯ 8:1-4 ಮತ್ತು ವ್ಯಾಖ್ಯಾನ).

ಕ್ರಿಸ್ತನು ಧರ್ಮಶಾಸ್ತ್ರವನ್ನು ನೆರವೇರಿಸಲು ಬಂದನು (ನೋಡಿರಿ. ಮತ್ತಾಯ 5:17 ಮತ್ತು ವ್ಯಾಖ್ಯಾನ). ಆತನು ತಾನೇ ಸಂಪೂರ್ಣವಾಗಿ ಧರ್ಮಶಾಸ್ತ್ರಕ್ಕೆ ವಿಧೇಯನಾದನು. ಕ್ರಿಸ್ತನು ಧರ್ಮಶಾಸ್ತ್ರವನ್ನು ವಿಧೇಯತೆಯಿಂದ ಮಾತ್ರ ಸಂಪೂರ್ಣಗೊಳಿಸದೆ ಆತನು ಬೇರೊಂದು ವಿಧದಲ್ಲಿ ಸಂಪೂರ್ಣಗೊಳಿಸಿದನು. ಧರ್ಮಶಾಸ್ತ್ರವು ಎಲ್ಲಾ ಮನುಷ್ಯರಿಗೆ ಮರಣದ ಶಿಕ್ಷೆ ಯನ್ನುವಿಧಿಸಿತ್ತು. (ರೋಮಾಯ 3:10-12). ಹಾಗೆಯೇ ಕ್ರಿಸ್ತನು ನಮ್ಮ ಪಾಪಗಳಿಗೋಸ್ಕರ ನಮಗೆ ಬದಲಾಗಿ,ತಾನು ಮರಣ ಹೊಂದಲು ಬಂದನು. ಈ ರೀತಿಯಾಗಿ ಆತನು ಧರ್ಮಶಾಸ್ತ್ರವು ವಿಧಿಸಿದ, ದಂಡವನ್ನು ತೆತ್ತನು. ಕ್ರಿಸ್ತನು ಸತ್ತದ್ದರಿಂದ, ಯಾರ್ಯಾರು ಆತನಲ್ಲಿ ನಂಬಿಕೆ ಇಡುತ್ತಾರೋ ಅವರನ್ನು ಇನ್ನು ಮೇಲೆ ಧರ್ಮಶಾಸ್ತ್ರವು ಖಂಡಿಸುವುದಿಲ್ಲ. ನಾವು ಧರ್ಮಶಾಸ್ತ್ರವು ವಿಧಿಸುವ (ನಿತ್ಯಮರಣದ) ಶಿಕ್ಷೆಯನ್ನು ಕ್ರಿಸ್ತನಲ್ಲಿ ನಂಬಿಕೆ ಇಡುವುದರ ಮೂಲಕ ತಪ್ಪಿಸಿಕೊಂಡೆವು.

**ಕರ್ತನ ಭೋಜನ** :-ಯೇಸು ಮರಣಕ್ಕೆ ಒಪ್ಪಿಸಲ್ಪಡುವ ಹಿಂದಿನ ದಿನವೇ ಆತನು ಮತ್ತು ಆತನ ಶಿಷ್ಯರುಗಳು ಮೊದಲನೇ ಕರ್ತನ ರಾತ್ರಿ ಭೋಜನವನ್ನು ಮಾಡಿದರು (ನೋಡಿರಿ. ಮಾರ್ಕ 14:22-24 ಮತ್ತು ವ್ಯಾಖ್ಯಾನ). ಆತನ ಮರಣವನ್ನು ನೆನಪು ಮಾಡಿಕೊಳ್ಳುವುದಕ್ಕೋಸ್ಕರವಾಗಿ ಯೇಸುವು ತಾನೇ ಕ್ರೈಸ್ತರೆಲ್ಲರು ಕರ್ತನ ಭೋಜನವನ್ನು ಆಚರಿಸಬೇಕೆಂದು ಅಪ್ಪಣೆಕೊಟ್ಟನು (1ನೇ ಕೊರಿಂಥ 11:23-26 ಮತ್ತು ವ್ಯಾಖ್ಯಾನ).

ಕರ್ತನ ಭೋಜನವನ್ನು ಆಚರಿಸುವಾಗ' ಕ್ರೈಸ್ತರು ರೊಟ್ಟಿಯನ್ನು ತಿನ್ನುತ್ತಾರೆ ಮತ್ತು ದ್ರಾಕ್ಷಾರಸವನ್ನು ಕುಡಿಯುತ್ತಾರೆ ಅಥವಾ ಬೇರೆ ಯಾವುದೋ ಹಣ್ಣಿನ ರಸವನ್ನು ತೆಗೆದುಕೊಳ್ಳುತ್ತಾರೆ. ವಿಶ್ವಾಸಿಗಳು ಕರ್ತನ ಭೋಜನ ಕ್ಕೆ ಕೂಡಿ ಬರುವಾಗ ರೊಟ್ಟಿ ಒಂದು ವಿಧವಾಗಿ ಕ್ರಿಸ್ತನ ಮುರಿದ ದೇಹವನ್ನು ಪ್ರತಿನಿಧಿಸುತ್ತದೆ ಮತ್ತು ದ್ರಾಕ್ಷಾರಸವು ಅಥವಾ ಬೇರೆ ಯಾವ ಪಾನೀಯವು ಕ್ರಿಸ್ತನು ಸುರಿಸಿದ ರಕ್ತವನ್ನು ಪ್ರತಿನಿಧಿಸುತ್ತದೆ. ರೊಟ್ಟಿಯನ್ನು ಕುರಿತಾಗಿ **ಇದು ನನ್ನ ದೇಹ, ನಿಮಗಾಗಿ ಕೊಡಲ್ಪಟ್ಟ ದೇಹ (ಮಾರ್ಕ 14:22). ದ್ರಾಕ್ಷಾರಸ ಕುರಿತಾಗಿ ಆತನು ಹೇಗೆ ಹೇಳಿದನು, ಇದು ನನ್ನ ಒಡಂಬಡಿಕೆಯು ರಕ್ತ, ಬಹುಜನರಿಗಾಗಿ ಸುರಿಸಿದ ರಕ್ತ** (ಮಾರ್ಕ 14:24). ಯೇಸುವಿನ ರಕ್ತದ ಮೂಲಕ ಒಂದು ಹೊಸ ಒಪ್ಪಂದವು ದೇವರ ಮತ್ತು ಮನುಷ್ಯರ ನಡುವೆ ಸ್ಥಿರತೆಯನ್ನುತಂದದಿತು.ಪದ ಪಟ್ಟಿಯಲ್ಲಿ ಒಪ್ಪಂದ ನೋಡಿರಿ).

ನಾವು ಕರ್ತನ ಭೋಜನದಲ್ಲಿ ಭಾಗವಹಿಸುವಾಗ ಒಂದು ವಿಧದಲ್ಲಿ ಆತನ ಮರಣ ಮತ್ತು ಪುನರುತ್ಥಾನದಲ್ಲಿ ಭಾಗವಹಿಸುತ್ತೇವೆ. ಒಂದು ವಿಶೇಷ ರೀತಿಯಲ್ಲಿ ನಾವು ರೊಟ್ಟಿಯನ್ನು ತಿಂದು, ದ್ರಾಕ್ಷಾರಸವನ್ನು ಕುಡಿಯುವಾಗ,' ನಂಬಿಕೆಯ ಮೂಲಕ ನಾವು ಕ್ರಿಸ್ತನಲ್ಲಿ ಒಂದಾಗುತ್ತೇವೆ. ಅನೇಕ ಕ್ರೈಸ್ತರು ತಾವು ಕ್ರಿಸ್ತನಲ್ಲಿ ರೊಟ್ಟಿ ಮತ್ತು ದ್ರಾಕ್ಷಾರಸವನ್ನು ತೆಗೆದುಕೊಳ್ಳುವಾಗ ತಾವು ಹೊಸದಾಗಿ ನಂಬಿಕೆಯ ಮೂಲಕ ಯೇಸುಕ್ರಿಸ್ತನ ಮರಣ ಮತ್ತು ಪುನರುತ್ಥಾನದ ದಯದಿಂದ ಬರುವ ಆಶೀರ್ವಾದ ಅಂದರೆ ಪಾಪದ ಮನ್ನಣೆ, ಶುದ್ಧಿಕರಿಸಲ್ಪಡುವಿಕೆ ಮತ್ತು ಹೊಸ ಜೀವಿತವನ್ನು ಪಡೆಯುತ್ತೇವೆ ಎಂದು ಭಾವಿಸುತ್ತಾರೆ.

ಬರೀ ವಿಶ್ವಾಸಿಗಳು ಮಾತ್ರ ಕರ್ತನ ಭೋಜನದಲ್ಲಿ ಪಾಲು ತೆಗೆದುಕೊಳ್ಳಬಹುದು. ರೊಟ್ಟಿಯನ್ನು ತಿನ್ನುವ ಮತ್ತು ದ್ರಾಕ್ಷಾರಸವನ್ನು ಕುಡಿಯುವ ಮೊದಲು ವಿಶ್ವಾಸಿಯು ತನಗೆ ತಿಳಿದಿರುವ ಎಲ್ಲಾ ಪಾಪಕ್ಕೆ ಪಶ್ಚಾತ್ತಾಪಪಟ್ಟು ಮತ್ತು ಯೇಸುವಿಗೆ ವಿಧೇಯನಾಗಿ ನಡೆದುಕೊಂಡಿರಬೇಕು. ಇದರಲ್ಲಿ ಪಾಲ್ಗೊಳ್ಳುವ ಮೊದಲು, ಪ್ರತಿಯೊಬ್ಬ ವಿಶ್ವಾಸಿಯು ಜಾಗ್ರತೆಯಾಗಿ ತನ್ನನ್ನು ತಾನೇ ಪರೀಕ್ಷಿಸಿಕೊಳ್ಳಬೇಕು (ನೋಡಿರಿ. 1ನೇ ಕೊರಿಂಥ 11:27-29 ಮತ್ತು ವ್ಯಾಖ್ಯಾನ). ಇನ್ನೂ ಹೆಚ್ಚಿನ ಚರ್ಚೆಗಾಗಿ, ನೋಡಿರಿ. ಸಾಮಾನ್ಯ ವಿಷಯಗಳು, ಕರ್ತನ ಭೋಜನ.

**ಮೋಶೆ.** :- ಮೋಶೆಯು ಯಹೂದ್ಯರ ಅತೀ ಶ್ರೇಷ್ಠ ನಾಯಕನಾಗಿದ್ದನು ಆತನು ಕ್ರಿ.ಪೂ. 1500ರಲ್ಲಿ ಜನಿಸಿದನು. ಆತನು ಯಹೂದ್ಯರನ್ನು ಐಗುಪ್ತದೇಶದ ಗುಲಾಮತ್ವದಿಂದ ಬಿಡಿಸಿದನು. ಆತನು ದೇವರಿಂದ ದಶಾಜ್ಞೆಗಳನ್ನು ಪಡೆದುಕೊಂಡನು ಮತ್ತು ಆತನು ಅವುಗಳನ್ನು ಯಹೂದ್ಯರಿಗೆ ದೇವರ ಮಾರ್ಗಾನುಸಾರವಾಗಿ ನಡೆದುಕೊಂಡು ಹೋಗುವುದಕ್ಕಾಗಿ ಕೊಟ್ಟನು.

ಯಹೂದ್ಯರನ್ನು ಸಿನಾಯ್‌ಪರ್ವತ ಪ್ರದೇಶದ ಮರಳುಗಾಡಿನಲ್ಲಿ ನಲವತ್ತು ವರ್ಷಗಳ ಕಾಲ ನಡೆಸಿದನು. ಆತನು ಹಳೇ ಒಡಂಬಡಿಕೆಯಲ್ಲಿನ ಮೊದಲನೇ ಐದು ಪುಸ್ತಕಗಳನ್ನು ಬರೆದನು. ಮೋಶೆಯ ಜೀವನದ ವಿಷಯವಾಗಿ ನಾವು ವಿಮೋಚನಾಕಾಂಡ ಮತ್ತು ಅರಣ್ಯಕಾಂಡದಲ್ಲಿ ತಿಳಿದುಕೊಳ್ಳಬಹುದು.

**ಸಮಾಧಾನ** :- ಸತ್ಯವೇದದಲ್ಲಿ ಸಮಾಧಾನ ಎಂಬ ಪದಕ್ಕೆ ಅನೇಕ ಅರ್ಥಗಳಿವೆ. ಹಳೇ ಒಡಂಬಡಿಕೆಯಲ್ಲಿ ಸಮಾಧಾನ ಎಂಬ ಪದವನ್ನು ಅನೇಕ ಸಾರಿ ಸ್ವಾಗತ ಮಾಡುವಾಗ ಉಪಯೋಗಿಸುತ್ತಾರೆ. ಸಮಾಧಾನವೆಂದರೆ ಯುದ್ಧವಿಲ್ಲದ ಕಾಲ ಎಂದು ಅರ್ಥ ಮಾಡಿಕೊಳ್ಳಬಹುದು. ಇದನ್ನು ಆಂತರಿಕ ಸಮಾಧಾನ ಎಂದು ಸಹ ತಿಳಿಯಬಹುದು.
ಹೊಸ ಒಡಂಬಡಿಕೆಯಲ್ಲಿ ಸಮಾಧಾನ ಎಂಬ ಪದಕ್ಕೆ ಸಾಧಾರಣವಾಗಿ ಶಾರೀರಿಕವಾಗಿಯೂ, ಮಾನಸಿಕವಾಗಿಯೂ, ಆತ್ಮೀಕವಾಗಿಯೂ ಸಂಪೂರ್ಣಚಿತ್ತದಿಂದ ಇರುವುದೆಂದು ತಿಳಿಯಬಹುದು. ಇದಕ್ಕಿಂತಲೂ ಮುಖ್ಯವಾಗಿ ದೇವರೊಂದಿಗೆ ಸಮಾಧಾನ ಎಂದು ಅರ್ಥ. ನಾವು ಪಶ್ಚಾತ್ತಾಪ ಪಡೆಯದೆ ಇರುವ ಪಾಪಿಗಳಾಗಿದ್ದಾಗ ದೇವರಿಗೆ ಶತ್ರುಗಳಾಗಿದ್ದೆವು. ಈಗ ಕ್ರಿಸ್ತನಲ್ಲಿ ನಂಬಿಕೆ ಇಡುವುದರ ಮೂಲಕ ದೇವರೊಂದಿಗೆ ಸಮಾಧಾನ ಹೊಂದಬಹುದು. ನಾವು ಇನ್ನು ಮುಂದೆ ಆತನ ಶತ್ರುಗಳಲ್ಲ ನಾವು ಆತನ ಮಕ್ಕಳು (ನೋಡಿರಿ. ರೋಮಾಯ 5:1, ಮತ್ತು ವ್ಯಾಖ್ಯಾನ).

**ಬಿಡುಗಡೆ** :- ಯಹೂದ್ಯರು ಐಗುಪ್ತ ದೇಶದ ಗುಲಾಮಗಿರಿಯಿಂದ ಬಿಡಿಸಲ್ಪಟ್ಟದ್ದಕ್ಕೆ ಪ್ರತಿ ವರ್ಷವೂ ಆಚರಿಸಲ್ಪಡುವ ಹಬ್ಬವಾಗಿದೆ. ಈ ಹಬ್ಬವು ಒಂದು ವಾರದವರೆಗೆ ಆಚರಿಸಲ್ಪಡುವಾಗ ಯಹೂದ್ಯರು ಹುಳಿಯಿಲ್ಲದ ರೊಟ್ಟಿಯನ್ನು ಮಾತ್ರ ತಿನ್ನಬೇಕಾಗಿತ್ತು. ಬಿಡುಗಡೆಯ ಹಬ್ಬವೆಂದರೆ, ಅದು ಹುಳಿಯಿಲ್ಲದ ರೊಟ್ಟಿಯನ್ನು ತಿನ್ನುವ ಹಬ್ಬವೆಂದೂ ಸಹ ಕರೆಯಲ್ಪಡುತ್ತಿತ್ತು. ಹಬ್ಬದ ಮೊದಲನೇಯ ದಿನ, ಬಿಡುಗಡೆಯ ಹಬ್ಬದೂಟ ತಿನ್ನಲಾಗುತ್ತಿತ್ತು ಮತ್ತು ಬಿಡುಗಡೆಯ ಕುರಿ ಮರಿಯನ್ನು ಬಲಿಕೊಡಲಾಗುತ್ತಿತ್ತು (ಯಾಜಕಕಾಂಡ 23:4-8, ಧರ್ಮೋಪದೇಶ ಕಾಂಡ.16:18).
ಬಿಡುಗಡೆ ಎಂಬ ಪದದ ಅರ್ಥ "ದಾಟಿ ಹೋಗು" ಎಂದು. ಐಗುಪ್ತದ ಅರಸನಾದ ಫರೋಹನು ಯಹೂದ್ಯರ ಬಿಡುಗಡೆಗೆ ಒಪ್ಪದಿದ್ದಾಗ ಐಗುಪ್ತ ದೇಶದಲ್ಲಿದ್ದ ಯಹೂದ್ಯರು ಬಿಡುಗಡೆ ಹೊಂದುವ ಹಿಂದಿನ ರಾತ್ರಿ ದೇವರು ಐಗುಪ್ತ ದೇಶದಲ್ಲಿರುವ ಎಲ್ಲಾ ಚೊಚ್ಚಲು ಗಂಡು ಮಕ್ಕಳನ್ನು ಸಂಹರಿಸಲು ನಿರ್ಧರಿಸಿದನು. ಮೊದಲು ದೇವರು ಯಹೂದ್ಯರಿಗೆ ಒಂದು ಕುರಿಮರಿಯನ್ನು ವಧಿಸಿ, ನಂತರ ಅದರ ರಕ್ತವನ್ನು ತಮ್ಮ ತಮ್ಮ ಮನೆಯ ಮುಂಭಾಗಕ್ಕೆ ಹಚ್ಚಬೇಕೆಂದು ಅಪ್ಪಣೆ ಮಾಡಿದನು. ಆಗ, ಸಂಹಾರಕನಾದ ದೇವದೂತನು ಬಂದಾಗ, ನಂತರ ಅಂತಹ ಮನೆಗಳಲ್ಲಿನ ಚೊಚ್ಚಲು ಮಕ್ಕಳನ್ನು ಸಂಹರಿಸದೇ ಹಾಗೆಯೇ ಹೋಗುವನು (ವಿಮೋ 12:1-14, 21-30, ಇಬ್ರಿಯಾ 11:28). ಅದೇ ರೀತಿಯಾಗಿ ಕ್ರಿಸ್ತನು ಪಸ್ಕದ ಒಂದು ಕುರಿಮರಿ ಇದ್ದ ಹಾಗೆ (1ನೇ ಕೊರಿಂಥ 5:7 ನೋಡಿರಿ). ಪಾಪ ಮತ್ತು ಮರಣದ ಸಂಕೋಲೆಯಿಂದ ನಾವು ಕ್ರಿಸ್ತನ ರಕ್ತದ (ಶಿಲುಬೆಯ ಮರಣ) ಮೂಲಕ ಬಿಡುಗಡೆ ಹೊಂದಿದೆವು. ಆದುದರಿಂದ ಪಸ್ಕ ಹಬ್ಬದ ಕಾಲದಲ್ಲಿ ಸರಿಯಾಗಿ ಕ್ರಿಸ್ತನು ತಾನೇ ಸಾಯಬೇಕಾಗಿ ಬಂದ ವಿಷಯವು ಸಂಪೂರ್ಣವೂ, ಸರ್ವಸಮ್ಮತವೂ ಆದದ್ದಾಗಿದೆ (ನೋಡಿರಿ. ಮಾರ್ಕ 14:1, 12 ಮತ್ತು ವ್ಯಾಖ್ಯಾನ).
ಆದುದರಿಂದ ಕ್ರೈಸ್ತರು ಯಹೂದ್ಯರ ಪಸ್ಕದ ಹಬ್ಬವನ್ನು ಆಚರಿಸುವುದಿಲ್ಲ. ಅದಕ್ಕೆ ಬದಲಾಗಿ ಕ್ರೈಸ್ತರೆಲ್ಲರೂ ಕ್ರಿಸ್ತನ ಮರಣ ಮತ್ತು ಪುನರುತ್ಥಾನವನ್ನು ಆಚರಿಸುತ್ತಾರೆ. ಆತನ ಮರಣದ ಆಚರಣೆಯನ್ನು ಶುಭ ಶುಕ್ರವಾರವೆಂದು ಮತ್ತು ಆತನ ಪುನರುತ್ಥಾನವು ಪುನರುತ್ಥಾನದ ಹಬ್ಬವೆಂದು ಕರೆಯಲ್ಪಡುತ್ತದೆ.

**ಪಂಚಾಶತ್ತಮ ಹಬ್ಬ** :- ಪೆಂತೇಕೋಸ್ಟ್‌ಅಥವಾ ಪಂಚಾಶತ್ತಮ ಎಂಬ ಪದವು ಗ್ರೀಕ್ ಭಾಷೆಯಿಂದ ಬಂದದ್ದಾಗಿದೆ ಮತ್ತು ಅದರ ಅರ್ಥ ಐವತ್ತನೇ ದಿನವೆಂದಾಗಿದೆ. ಪಸ್ಕ ಹಬ್ಬದ ನಂತರ ಐವತ್ತನೇ ದಿನದಂತು ಯಹೂದ್ಯರು ಪಂಚಾಶತ್ತಮ ದಿನವನ್ನು ವಾರಗಳಹಬ್ಬ ಎಂದು ಕರೆಯುತ್ತಾರೆ (ವಿಮೋ 34:22, ಧರ್ಮೋಪದೇಶಕಾಂಡ. 16:9-11). ಇದನ್ನು ಪ್ರಥಮ ಫಲಗಳ ದಿನ ಎಂದು ಸಹ ಕರೆಯುತ್ತಾರೆ. ಅರಣ್ಯಕಾಂಡ 28:26. ಯಾಕೆಂದರೆ ಆ ದಿನದಲ್ಲಿ ಯಹೂದ್ಯರು ತಾವು ಒಕ್ಕಣೆ ಮಾಡಿದ ಪ್ರಥಮ ಫಲಗಳನ್ನು ದೇವರಿಗೆ ಅರ್ಪಿಸುತ್ತಾರೆ.
ಕ್ರೈಸ್ತರಿಗೆ ಪಂಚಾಶತ್ತಮ ದಿನವು ಬಹಳ ಮಹತ್ವವವು, ವಿಶೇಷವು ಆದದ್ದು ಯಾಕೆಂದರೆ ಕ್ರಿಸ್ತನ ಮರಣದ ನಂತರ ಬಂದ ಮೊದಲನೇ ಪಂಚಾಶತ್ತಮ ದಿನದಂದು ಪರಿಶುದ್ಧಾತ್ಮನು ಮಹಾ ಶಕ್ತಿಶಾಲಿಯಾಗಿ ಶಿಷ್ಯರ ಮೇಲೆ ಇಳಿದು ಬಂದನು ಅಥವಾ ಪವಿತ್ರಾತ್ಮದಿಂದ ಸ್ನಾನ ಹೊಂದಿದರು (ಅ.ಕೃ. 2:1-4 ಮತ್ತು ವ್ಯಾಖ್ಯಾನ ಸಾಮಾನ್ಯ ವಿಷಯಗಳು. ಪವಿತ್ರಾತ್ಮನಿಂದ ದೀಕ್ಷಾಸ್ನಾನ).

**ಫರಿಸಾಯರು** :- ಫರಿಸಾಯರು ಯಹೂದ್ಯರಲ್ಲಿರುವ ಒಂದು ಪಂಗಡ. ಫರಿಸಾಯವೆಂದರೆ, ಪ್ರತ್ಯೇಕಿಸಲ್ಪಟ್ಟವರು ಎಂದು ಅರ್ಥ. ಕ್ರಿಸ್ತನ ಕಾಲದಲ್ಲಿ ಯಹೂದ್ಯರಲ್ಲಿ ಫರಿಸಾಯರ ಪ್ರಭಾವ ಬಹಳ ಹೆಚ್ಚಾಗಿತ್ತು. ಯಹೂದ್ಯರ ಧರ್ಮಶಾಸ್ತ್ರವನ್ನು ಚಾಚೂ ತಪ್ಪದೆ ಪರಿಪಾಲಿಸಿಕೊಂಡು ಬಂದ ಒಂದು ಶಿಸ್ತಿನ ಗುಂಪು ಅವರದಾಗಿತ್ತು (ನೋಡಿರಿ. ಪದಪಟ್ಟಿಯಲ್ಲಿ .ಧರ್ಮಶಾಸ್ತ್ರ.ಏ. ಅವರು ತಮ್ಮನ್ನು ನೀತಿವಂತರೆಂದು ಎಣಿಸಿಕೊಳ್ಳುತ್ತಿದ್ದರು. ಆದರೆ ನಿಜವಾಗಿ ಕ್ರಿಸ್ತನ ಕಾಲದಲ್ಲಿ ಅವರು ಹೊರಗಿನ ತೋರಿಕೆಗೆ ಮಾತ್ರ ನೀತಿವಂತರೆಂದು ಕಂಡುಬರುತ್ತಿದ್ದರು. ಅವರು ಅಂತರಂಗದಲ್ಲಿ ದುಷ್ಟರಾಗಿದ್ದು, ಕಪಟಿಗಳಾಗಿದ್ದರು. (ಮತ್ತಾಯ 23:13-32 ನೋಡಿರಿ).ಆದಾಗ್ಯೂ ಎಲ್ಲ ಫರಿಸಾಯರು ಕಪಟಿಗಳಾಗಿರಲಿಲ್ಲ. ನಿಕೋದೇಮ ಮತ್ತು ಗಮಲಿಯೇಲ ಎಂಬ ಇವರು ನೀತಿವಂತರಾಗಿದ್ದ ಫರಿಸಾಯರೇ (ಯೋಹಾನ 3:1, ಅ.ಕೃ. 5:34). ಅಪೋಸ್ತಲನಾದ ಪೌಲನು ತಾನೇ ಒಬ್ಬ ಫರಿಸಾಯನು (ಅ.ಕೃ. 26:5, ಫಿಲಿಪ್ಪಿ 3:5).

**ಪ್ರವಾದನೆ** :- ಪ್ರವಾದನೆಯೆಂಬುದು ಸತ್ಯವೇದದ ಭಾಷೆಗನುಗುಣವಾಗಿ ಮನುಷ್ಯರ ಮೂಲಕ ದೇವರಿಂದ ನೇರವಾಗಿ ಬಂದ ಮಾತುಗಳು.

ಈ ರೀತಿಯಾಗಿ ದೇವರ ಮಾತುಗಳನ್ನು ಯಾರು ತಿಳಿಸುತ್ತಾರೋ, ಅಂತಹವರು ಪ್ರವಾದಿಗಳೆಂದು ಕರೆಯಲ್ಪಡುತ್ತಾರೆ (ಪದಪಟ್ಟಿಯಲ್ಲಿ ಪ್ರವಾದಿ ಪದ ನೋಡಿರಿ).

ಪ್ರವಾದನೆ ಎಂಬುದು ಪ್ರವಾದಿಸುವಂತಹ ಒಂದು ವರವಾಗಿದೆ. ಅಂದರೆ ದೇವರ ಮಾತುಗಳನ್ನು ಹೇಳುವಂತಹವು (1ನೇ ಕೊರಿಂಥ 12:10).

ಪ್ರವಾದನೆಗಳಲ್ಲಿ ಅನೇಕ ವಿಧಗಳುಂಟು ಮುಂದೆ ಬರುವ ಕಾಲಗಳ ವಿಷಯವಾಗಿ ಭವಿಷ್ಯವಾಣಿ ಇರಬಹುದು. ದೇವರಿಂದ ಬರುವ ಎಚ್ಚರಿಕೆ ಇರಬಹುದು. ದೇವರಿಂದ ಬರುವ ಬಹು ಮುಖ್ಯವಾದ ಬೋಧನೆಗಳಿರಬಹುದು. ಆದಾಗ್ಯೂ ಎಲ್ಲಾ ವಿಷಯಗಳಲ್ಲೂ, ಪ್ರವಾದನೆ ಎಂಬುದು ಮನುಷ್ಯ ಮೂಲದಿಂದ ಬಂದದಲ್ಲ. ನಿಜ ಹೇಳುವುದಾದರೆ, ಸತ್ಯವಾದ ಪ್ರವಾದನೆಯು ದೇವರರಿಂದಲೇ ಉದ್ಭವಿಸುತ್ತದೆ.

ಆದರೂ ಕೆಲವು ಸುಳ್ಳು ಪ್ರವಾದನೆಗಳೂ ಉಂಟು. ಇವು ದೇವರಿಂದ ಬಂದಿರುವುದಿಲ್ಲ. ಇವುಗಳನ್ನು ಹೇಳುವ ಮನುಷ್ಯರು ಸುಳ್ಳು ಪ್ರವಾದಿಗಳು. ಇವರ ವಿಷಯವಾಗಿ ಎಚ್ಚರದಿಂದ ಇರಬೇಕೆಂದು ನಮಗೆ ತಿಳಿಸಲ್ಪಟ್ಟಿದೆ (ಮತ್ತಾಯ 7:15, 1ನೇ ಯೋಹಾನ 4:1).

ಯಹೂದ್ಯರನ್ನು ಅವರ ಅವಿಧೇಯತೆಗಾಗಿ ಖಂಡಿಸಲು ಮತ್ತು ದೇವರ ಇಷ್ಟಾನುಸಾರವನ್ನು ಅವರಿಗೆ ಜ್ಞಾಪಕಪಡಿಸಲು ದೇವರು ಹಳೇ ಒಡಂಬಡಿಕೆಯ ಪ್ರವಾದಿಗಳನ್ನು ಕಳುಹಿಸಿಕೊಟ್ಟನು. ಹಳೇ ಒಡಂಬಡಿಕೆಯ ಪ್ರವಾದಿಗಳು, ಕ್ರಿಸ್ತನು ರಕ್ಷಕನಾಗಿ ಬರುವುದರ ಕುರಿತಾಗಿ, ಅನೇಕ ಪ್ರವಾದನೆಗಳನ್ನು ಹೇಳಿದರು.

ಹೊಸ ಒಡಂಬಡಿಕೆಯಲ್ಲಿಯೂ, ಪ್ರವಾದಿಗಳಿದ್ದರೂ. ಹೊಸ ಒಡಂಬಡಿಕೆಯ ಪ್ರಕಾರ ಸಭೆಗಳಲ್ಲಿ ಪ್ರವಾದನಾ ವರವು ಬಹಳ ಮುಖ್ಯವಾಗಿತ್ತು (1ನೇ ಕೊರಿಂಥ 12:28, 14:1, ಎಫೆಸ 4:11). ಪ್ರಕಟಣಾ ಗ್ರಂಥದಲ್ಲಿರುವ ಹೊಸ ಒಡಂಬಡಿಕೆಯಲ್ಲಿರುವುದನ್ನೆಲ್ಲಾ ನಾವು ಭೂಲೋಕದ ಅಂತ್ಯಕಾಲದ ಪ್ರವಾದನೆಗಳೆಂದು ತಿಳಿದು ಪರಿಗಣಿಸಬಹುದು.

**ಪ್ರವಾದಿ** :- ಪ್ರವಾದನೆಗಳನ್ನು ಹೇಳುವವನೇ ಪ್ರವಾದಿಯಾಗಿದ್ದಾನೆ (ಪದಪಟ್ಟಿಯಲ್ಲಿ ಪ್ರವಾದನೆ ನೋಡಿರಿ).ಸತ್ಯವೇದದ ನಿಜವಾದ ಪ್ರವಾದಿಗಳು ದೇವರಿಂದ ಮಾತುಗಳನ್ನು ಪಡೆದುಕೊಂಡು ಮತ್ತು ಅದನ್ನೇ ಜನರಿಗೆ ತಿಳಿಸುತ್ತಿದ್ದರು. ಅವರು ದೇವರ ವಾರ್ತಾ ಸಂದೇಶಕರು. ಅವರು ಬರೀ ಮುಂದಿನ ಭವಿಷ್ಯವನ್ನು ಕುರಿತು ಹೇಳುವವರಲ್ಲ. ಸತ್ಯವೇದದಲ್ಲಿ ತಿಳಿಸಿರುವ ಅನೇಕ ಮಂದಿ ಪ್ರವಾದಿಗಳು, ಹಳೇ ಒಡಂಬಡಿಕೆ ಕಾಲದವರು. ಈ ಹಳೇ ಒಡಂಬಡಿಕೆಯ ಕಾಲದ ಪ್ರವಾದಿಗಳು ಎರಡು ವಿಶೇಷ ಕಾರ್ಯಗಳನ್ನು ಸಾಧಿಸಿದರು. ಮೊದಲನೆಯದಾಗಿ ಯಹೂದ್ಯರನ್ನು ಅವರು ಪದೇ ಪದೇ ಅವಿಧೇಯರಾಗಿ ನಡೆದುಕೊಳ್ಳುವ ವಿಷಯವಾಗಿ ಎಚ್ಚರಿಸುತ್ತಿದ್ದರು.ಮತ್ತು ಎರಡನೆಯದಾಗಿ ಅವರು ರಕ್ಷಕನಾದ ಕ್ರಿಸ್ತನ ಬರುವಿಕೆಯ ಕುರಿತಾಗಿ ಸಾರುತ್ತಿದ್ದರು.

**ಪಾಪ ಪರಿಮಾರ್ಜನ** :- (ಪದಪಟ್ಟಿಯಲ್ಲಿ ಪ್ರಾಯಶ್ಚಿತ್ತ ನೋಡಿರಿ).

**ವಿಮೋಚನೆ** :- ವಿಮೋಚನೆ ಎಂದರೆ ಯಾವುದೇ ಒಂದು ವಸ್ತುವನ್ನು ಕ್ರಯ ಕೊಟ್ಟು ಹಿಂದಕ್ಕೆ ಪಡೆದುಕೊಳ್ಳುವ ಕ್ರಿಯೆಯಾಗಿರುತ್ತದೆ. ಅದು ಮಾರಾಟ ಮಾಡಿ ಹೋದಂತಹ ಒಂದು ವಸ್ತುವನ್ನು ತಿರುಗಿ ಕ್ರಯ ಕೊಟ್ಟು,

ಕೊಂಡುಕೊಳ್ಳುವುದು ಅಥವಾ ಗುಲಾಮರ ವಿಷಯವಾಗಿ ಹೇಳುವುದಾದರೆ ಕಳೆದುಕೊಂಡ ಅವರ ಸ್ವಾತಂತ್ರವನ್ನು ತಿರುಗಿ ಪಡೆದುಕೊಳ್ಳುವುದು. ಆದರೆ ಹೊಸ ಒಡಂಬಡಿಕೆಯಲ್ಲಿ ವಿಮೋಚನೆ ಎಂದರೆ, ಪಾಪಕ್ಕೆ ದಂಡನೆ ಕೊಟ್ಟು ಅದಕ್ಕೆ ಈಡುಕೊಟ್ಟು ಅಥವಾ ಬಲಿಕೊಟ್ಟು ಅದರಿಂದ ಬಿಡುಗಡೆ ಪಡೆದುಕೊಳ್ಳುವ ಕ್ರಯಕ್ಕೆ ಖರೀದಿಸುವುದು ಎಂದು ತಿಳಿಯುತ್ತೇವೆ. ಕ್ರಿಸ್ತನು ತಾನೇ ನಮಗೋಸ್ಕರ ಈಡು ಅಥವಾ ಬಲಿಪಶುವಾದನು (ನೋಡಿರಿ. ಮಾರ್ಕ 10:45 ಮತ್ತು ವ್ಯಾಖ್ಯಾನ). ನಮ್ಮ ಬಿಡುಗಡೆಗಾಗಿ ಕೊಟ್ಟ ಕ್ರಯ ಕ್ರಿಸ್ತನ ಸ್ವಂತ ದೇಹದ ರಕ್ತ. ಪೌಲನು ಹೀಗೆ ಬರೆಯುತ್ತಾನೆ "ಆತನಲ್ಲಿ, ಆತನ (ಕ್ರಿಸ್ತನ) ರಕ್ತದ ಮೂಲಕ ನಮಗೆ ಬಿಡುಗಡೆ ಆಯಿತು" (ಎಫೆಸ 1:7). ವಿಮೋಚನೆಯು ರಕ್ಷಣಾಕಾರ್ಯದ ಒಂದು ನೋಟ. ಹೊಸ ಒಡಂಬಡಿಕೆಯಲ್ಲಿನ ಕೆಲವು ವಚನಗಳಲ್ಲಿ ವಿಮೋಚನೆ ಮತ್ತು ರಕ್ಷಣೆ ಈ ಮಾತುಗಳನ್ನು ಪರಸ್ಪರ ಪೂರಕವಾಗಿ ಬದಲಾವಣೆ ಮಾಡಿ ಉಪಯೋಗಿಸಲಾಗಿದೆ. (ಪದ ಪಟ್ಟಿ. ರಕ್ಷಣೆ).

ಪಶ್ಚಾತ್ತಾಪ :- ಪಶ್ಚಾತ್ತಾಪ ಎಂದರೆ ಒಬ್ಬನು ತಾನು ಮಾಡಿದ ಪಾಪಕ್ಕಾಗಿ ನಾಚಿಕೆಪಟ್ಟು ದುಃಖವನ್ನು ವ್ಯಕ್ತಪಡಿಸುವುದು. ಅದು ಪಾಪದಿಂದ ತಿರುಗಿಕೊಳ್ಳುವುದು ಎಂದು ಅರ್ಥ ಕೊಡುತ್ತದೆ. ಪಾಪ ನಿವೇದನೆ ಸಾಲದು, ಪಾಪವನ್ನು ನಾವು ಬಿಡಬೇಕು. ಒಬ್ಬ ಮನುಷ್ಯನು ನಿಜವಾಗಿ ಪಶ್ಚಾತ್ತಾಪ ಪಟ್ಟಿದ್ದಾದರೆ ಅವನ ನಡತೆಗಳು, ಆಲೋಚನೆಗಳು ಮತ್ತು ಆಶೆಗಳು ಬದಲಾವಣೆ ಹೊಂದುತ್ತವೆ. ಒಬ್ಬ ಮನುಷ್ಯನು ನಾನು ಪಶ್ಚಾತ್ತಾಪ ಪಟ್ಟೆನು ಎಂದು ಹೇಳಿದ್ದಾಗ್ಯೂ ಅವನ ಜೀವನದಲ್ಲಿ ಏನು ಸುಧಾರಣೆ ಕಾಣಬರದಿದ್ದರೆ ಆಗ ಅವನ ಪಶ್ಚಾತ್ತಾಪ ಸುಳ್ಳು ಎಂದಾಗುತ್ತದೆ..

ರಕ್ಷಣೆಯನ್ನು ಹೊಂದಲು ಪಶ್ಚಾತ್ತಾಪವು ಅವಶ್ಯಕವಾದಂತ ಒಂದು ಹೆಜ್ಜೆಯಾಗಿದೆ. ಪಶ್ಚಾತ್ತಾಪ ಪಡದೇ ರಕ್ಷಣೆ ಹೊಂದಲು ಸಾಧ್ಯವಿಲ್ಲ (ನೋಡಿರಿ. ಮತ್ತಾಯ 5:3-4, ಮಾರ್ಕ 1-4, 15. ಅ.ಕೃ. 2:37-38, 20:21, 2ನೇ ಪೇತ್ರ 3:9 ಮತ್ತು ವ್ಯಾಖ್ಯಾನ).

ಪುನರುತ್ಥಾನ :- ಪುನರುತ್ಥಾನ ಎಂಬುದು ಸತ್ತು ತಿರುಗಿ ಜೀವದಿಂದ ಎದ್ದು ಬರುವುದು ಯೇಸುಕ್ರಿಸ್ತನಿಗೆ ಸತ್ತವರನ್ನು ಜೀವದಿಂದ ಎಬ್ಬಿಸುವ ಅಧಿಕಾರವಿದೆ. (ಯೋಹಾನ 5:24-25). ಆತನು ನಾಯಿನೆಂಬ ಊರಿನ ಒಬ್ಬ ವಿಧವೆಯ ಮಗನನ್ನು ಸಾವಿನಿಂದ ಎಬ್ಬಿಸಿದನು (ಲೂಕ 7:11-17). ನಾಲ್ಕು ದಿನಗಳ ಹಿಂದೆ ಸತ್ತುಹೋಗಿದ್ದ ಲಾಜರನನ್ನು ಎಬ್ಬಿಸಿದನು (ಯೋಹಾನ 11:38-44). ಆತನು ತಾನೇ ಸ್ವತಃ ಮರಣವನ್ನು ಜಯಿಸಿದನು ಮತ್ತು ಜೀವದಿಂದಿದ್ದನು. ಆದುದರಿಂದ ಆತನ ಶಕ್ತಿಯಿಂದ ಇತರರೂ ಸಹ ಸಾವನ್ನು ಗೆಲ್ಲಬಲ್ಲರು (1ನೇ ಕೊರಿಂಥ 15:20-23 ಮತ್ತು ವ್ಯಾಖ್ಯಾನವನ್ನು ನೋಡಿರಿ). ಕ್ರಿಸ್ತನು ಮತ್ತೊಮ್ಮೆ ಭೂಲೋಕದ ಕಟ್ಟ ಕಡೆಯಲ್ಲಿ ಬರುವಾಗ ಈ ಲೋಕದಲ್ಲಿ ಜೀವಿಸುತ್ತಿರುವ ವಿಶ್ವಾಸಿಗಳನ್ನು ಎಬ್ಬಿಸುತ್ತಾನೆ (1ನೇ ಥೆಸಲೋನಿಕ 4:16-17). ಆದರೆ, ಒಳ್ಳೆಯವರೂ ಕೆಟ್ಟವರೂ ಸೇರಿ ಎಲ್ಲಾಮನುಷ್ಯರನ್ನು ಕಡೆಯಲ್ಲಿ ಎಬ್ಬಿಸುವನು. ಪರಲೋಕದಲ್ಲಿ ವಿಶ್ವಾಸಿಗಳ ಪುನರುತ್ಥಾನವಾಗುವುದು. ಅವಿಶ್ವಾಸಿಗಳ ಪುನರುತ್ಥಾನವು ನರಕದಲ್ಲಾಗುವುದು (ನೋಡಿರಿ. ಯೋಹಾನ 5:28-29, ಅ.ಕೃ. 24:15, ಪ್ರಕಟಣೆ 20:4-15 ಮತ್ತು ವ್ಯಾಖ್ಯಾನ).

ನಮ್ಮ ದೇಹವು ಸತ್ತ ನಂತರವು, ಆತ್ಮವು ಜೀವಂತವಾಗಿರುವುದು. ಆದರೆ ನಾವು ತಕ್ಷಣದಲ್ಲೇ ಹೊಸ ಶರೀರವನ್ನು ಪಡೆದುಕೊಳ್ಳುವುದಿಲ್ಲ. ಯೇಸುಕ್ರಿಸ್ತನು ಲೋಕದ ಕಟ್ಟಕಡೆಯಲ್ಲಿ ಮತ್ತೊಮ್ಮೆ ಬಂದಾಗ ನಾವು ಹೊಸ ಶರೀರವನ್ನು ಪಡೆದುಕೊಳ್ಳುವೆವು. ಪೌಲನು ಈ ಕ್ರಿಯೆಯನ್ನು ನಮ್ಮ **ಶರೀರದ ವಿಮೋಚನೆ** ಎಂದು ಕರೆಯುತ್ತಾನೆ (ರೋಮಾಯ 8:23). ಕ್ರಿಸ್ತನಲ್ಲಿರುವ ವಿಶ್ವಾಸಿಗಳು ಪರಲೋಕದಲ್ಲಿ ಹೊಸ ಶರಿರವನ್ನು ಪಡೆದುಕೊಳ್ಳುವರು. ಈ ಶರೀರಗಳು ಎಂದಿಗೂ ಸಾಯುವುದಿಲ್ಲ. ಇವುಗಳು ಮಹಿಮಾಭರಿತವಾದ ಶರೀರಗಳಾಗಿರುವುವು. ಇವುಗಳು ಕ್ರಿಸ್ತನ ಪುನರುತ್ಥಾನವಾದ ಶರೀರದಂತಿರುವುವು (ನೋಡಿರಿ. ಲೂಕ 24:36-43, ಫಿಲಿಪ್ಪಿ 3:21, 1ನೇ ಯೋಹಾನ 3:2 ಮತ್ತು ವ್ಯಾಖ್ಯಾನ).

ವಿಶ್ವದ ಚರಿತ್ರೆಯಲ್ಲೇ ನಡೆದ ಅತೀ ಮುಖ್ಯ ಘಟನೆ ಎಂದರೆ ಯೇಸುಕ್ರಿಸ್ತನ ಪುನರುತ್ಥಾನ (ನೋಡಿರಿ. ಮಾರ್ಕ 16:8 ಮತ್ತು ವ್ಯಾಖ್ಯಾನ). ಈ ವಿಷಯದಲ್ಲಿ ಯೇಸುಕ್ರಿಸ್ತನು ಸತ್ತವರೊಳಗಿಂದ ಪುನರುತ್ಥಾನನಾಗಿ ಎದ್ದುಬಂದು ತಾನೇ ಲೋಕರಕ್ಷಕನೂ, ದೇವರ ಮಗನೂ ಎಂದು ಸಾಬೀತು ಪಡಿಸಿದನು (ರೋಮಾಯ 1:4). ಏಕೆಂದರೆ ಆತನು ತನ್ನ ಪುನರುತ್ಥಾನದ ಮೂಲಕ, ನಮಗೂ ಸಹಾ ನಿತ್ಯ ಜೀವದ ನಿರೀಕ್ಷೆ ಉಂಟು (ಯೋಹಾನ 11:25-26) ಎಂದು ಹೇಳಿದನು. **"ನಾನು ಇರುವ ಹಾಗೆ ನೀನು ಸಹ ಇರುವಿರಿ"** (ಯೋಹಾನ 14:19). ಎಂದು ಯೇಸುವು ಹೇಳಿದನು.

**ಪ್ರಾಮಾಣಿಕತೆ** :- ಪ್ರಮಾಣಿಕರೆಂದು ನಿರ್ಣಯಿಸಬೇಕಾದರೆ (ಅಂದರೆ ..........ಏ ಬೇಕಾದ ವಿಷಯ ನಮ್ಮ ರಕ್ಷಣೆಯ ಮುಖ್ಯ ಭಾಗಗಳಲ್ಲಿ ಒಂದು (ರಕ್ಷಣೆ ಎಂಬುದನ್ನು ಪದಪಟ್ಟಿಯಲ್ಲಿ ನೋಡಿರಿ). ಅನೀತಿವಂತನಾದ ಯಾವ ವ್ಯಕ್ತಿಯೂ ದೇವರ ಸಮ್ಮುಖದಲ್ಲಿ ಬರಲಾರನು. ............ **ಪರಿಶುದ್ಧತೆಯಿಲ್ಲದೆ ಯಾವನೂ ದೇವರನ್ನು ನೋಡಲಾರನು** (ಇಬ್ರಿಯಾ 12:14).

ಹೀಗಿರುವಲ್ಲಿ ದೇವರ ದೃಷ್ಟಿಯಲ್ಲಿ ಯಾರೊಬ್ಬನೂ, ನೀತಿವಂತನಾಗಿರಲು ಸಾಧ್ಯ? ಒಬ್ಬನು ತನ್ನ ಪ್ರಯಾಸದಿಂದಾಗಲೀಒಳ್ಳೆಯ ಕ್ರಿಯೆಗಳಿಂದಾಗಲೀ, ನೀತಿವಂತನಾಗಲಾರನು. ಆತನು ತನ್ನ ಪಾಪಗಳಿಗೋಸ್ಕರ ಪಶ್ಚಾತ್ತಾಪ ಪಟ್ಟು ಮತ್ತು ಕ್ರಿಸ್ತನ ಕಡೆಗೆ ನಂಬಿಕೆಯಿಂದ ತಿರುಗಿಕೊಂಡರೆ ಮಾತ್ರ ನೀತಿವಂತನಾಗಲೂ ಸಾಧ್ಯವಿದೆ. ನಾವು ಕ್ರಿಸ್ತನಲ್ಲಿ ವಿಶ್ವಾಸ ಇಟ್ಟಾಗ, ಕ್ರಿಸ್ತನು ನಮ್ಮ ಕಳಂಕವನ್ನು ತೆಗೆದುಹಾಕಿ, ನಮ್ಮನ್ನು ಶಿಕ್ಷಿಸುವುದಿಲ್ಲ. ನಮ್ಮ ಕಳಂಕವು ನಿಷ್ಕಳಂಕನಾದ ಕ್ರಿಸ್ತನ ಮೇಲೆ ಹಾಕಲಾಗುವುದು ಮತ್ತು ಕ್ರಿಸ್ತನಿಂದಾಗಿ, ನೀತಿವಂತರಾಗುವೆವು. ನಂಬಿಕೆಯ ಮೂಲಕ ನಾವು ಕ್ರಿಸ್ತನ ನೀತಿಯನ್ನು ಪಡೆದುಕೊಳ್ಳುವೆವು. ವಾಸ್ತವವಾಗಿ ಕ್ರಿಸ್ತನು ನಮ್ಮನ್ನು ದೇವರ ಮುಂದೆ ನಿಲ್ಲಿಸಿ ನಂತರ ದೇವರಿಗೆ ನಾನು ಈ ಮನುಷ್ಯನ ಪಾಪಗಳಿಗೋಸ್ಕರ ಪ್ರಾಣಕೊಟ್ಟೆನು ಎಂದು ಹೇಳುವನು. ಆದುದರಿಂದ ಈತನಿಗೆ ಶಿಕ್ಷೆ ಕೊಡುವ ಅಗತ್ಯವಿಲ್ಲ. ಈಗ ನಿಷ್ಕಳಂಕನೆಂದು ನಾವು ಎಣಿಸಬಹುದು. ನಂತರ ದೇವರುದೃಷ್ಟಿಯಲ್ಲಿ ನಮ್ಮನ್ನು ನೀತಿವಂತರೆಂದು ಸಾರಿ, ಆತನ ಮತ್ತು ತನ್ನ ಪರಿವಾರಕ್ಕೆ ನಮ್ಮನ್ನು ಸೇರಿಸಿಕೊಳ್ಳುತ್ತಾನೆ (ನೋಡಿರಿ. ಮಾರ್ಕ 10:45, ರೋಮಾ 3:24-26 ಗಲಾತ್ಯ 2:15-16, ಮತ್ತು ವ್ಯಾಖ್ಯಾನ).

ಆದುದರಿಂದ ದೇವರು ನಮ್ಮನ್ನು ನೀತಿವಂತರೆಂದು ನಿರ್ಣಯಿಸಿ ಸಾರಿ, ನಮ್ಮನ್ನು ಪಾಪದ ಶಿಕ್ಷೆಯಿಂದ ಬಿಡುಗಡೆ ಮಾಡುತ್ತಾನೆ. ನಮ್ಮ ಪಾಪಗಳನ್ನು ಸಂಪೂರ್ಣವಾಗಿ ಕ್ಷಮಿಸಿಬಿಡುತ್ತಾನೆ. ದೇವರೊಂದಿಗೆ ನಮಗೆ ಸಮಾಧಾನವಾಗುತ್ತದೆ (ರೋಮಾ. 5:1 ನೋಡಿರಿ ಮತ್ತು ವ್ಯಾಖ್ಯಾನಿಸಿರಿ). ಇನ್ನು ಮೇಲೆ ನಾವು ಅಪರಾದದ ನಿರ್ಣಯಕ್ಕೆ ಒಳಗಾಗುವುದಿಲ್ಲ (ರೋಮಾ. 8:1 ನೋಡಿರಿ ಮತ್ತು ವ್ಯಾಖ್ಯಾನಿಸಿರಿ).

**ನೀತಿ** :- ನೀತಿ ಎಂದರೆ ಸತ್ಯವೇದದಲ್ಲಿ ದೇವರ ನೀತಿ ನಿರ್ಣಯವೆ ಆಗಿದೆ. ದೇವರ ಧರ್ಮಶಾಸ್ತ್ರ ವನ್ನುವಿಶೇಷವಾಗಿ ದಶಾಜ್ಞೆಗಳನ್ನು (ವಿಮೋ 20:3-17) ಮತ್ತು ದೇವರನ್ನು ಪ್ರೀತಿಸು ಮತ್ತು ನೆರೆಹೊರೆಯವರನ್ನು ಪ್ರೀತಿಸು (ಮಾರ್ಕ 12:30-31), ಎಂಬ ಈ ಎರಡು ಮಹಾ ಆಜ್ಞೆಗಳನ್ನು ಅಭ್ಯಾಸ ಮಾಡುವುದರಿಂದ ದೇವರ ನೀತಿಯುಏನೆಂಬುದನ್ನು ನಾವು ತಿಳಿದುಕೊಳ್ಳಬಹುದು. ದೇವರ ಧರ್ಮಶಾಸ್ತ್ರ ಮತ್ತು ಆಜ್ಞೆಗಳು ಎಲ್ಲಾ ಜನರಿಗೆ ಮಾದರಿಯಾಗಿರಬೇಕಾದ ಗುಣಗಳಾಗಿವೆ.

ಯಾರೊಬ್ಬರಲ್ಲಿಯೂ ನೀತಿಯು ಇರುವುದಿಲ್ಲ (ರೋಮಾ. 3:10). ದೇವರ ದೃಷ್ಟಿಯಲ್ಲಿ **ನಾವೆಲ್ಲರೂ ಅಶುದ್ಧರಾಗಿದ್ದೇವೆ ಮತ್ತು ನಮ್ಮ ಎಲ್ಲಾ ನೀತಿಕಾರ್ಯಗಳೆಲ್ಲಾ ನಾರುವ ಹೋಲಸು ಬಟ್ಟೆಯಂತಿವೆ** (ಯೆಶಾಯ 64:6). ಕ್ರಿಸ್ತನೊಬ್ಬನೇ ನೀತಿಯುಳ್ಳವನು. ನಾನು ಸಂಪೂರ್ಣವಾಗಿ ಆತನಲ್ಲಿ ನಂಬಿಕೆಯಿಟ್ಟಾಗ ನಾವು ಆತನ ನೀತಿಯನ್ನು ಪಡೆದುಕೊಳ್ಳುವೆವು ಮತ್ತು ದೇವರ ದೃಷ್ಟಿಯಲ್ಲಿ ಆತನ ಸ್ವೀಕಾರಕ್ಕೆ ಅರ್ಹರಾಗುತ್ತೇವೆ.

ಆದುದರಿಂದ ನಾವು ನೀತಿವಂತರಾಗಲು ಎರಡು ಹೆಜ್ಜೆಗಳಿವೆ. ಮೊದಲನೆಯದಾಗಿ ಕ್ರಿಸ್ತನ ನೀತಿಯನ್ನು ನಂಬಿಕೆ ಮೂಲಕ ಪಡೆದುಕೊಳ್ಳುತ್ತೇವೆ. ನಂತರ ದೇವರಿಂದ ನೀತಿವಂತರೆಂದು ನಿರ್ಣಯಿಸಲ್ಪಡುತ್ತೇವೆ (ಪದಪಟ್ಟಿಯಲ್ಲಿ ನೋಡಿರಿ. ನೀತಿವಿ. ಎರಡನೇಯದಾಗಿ ಪರಿಶುದ್ಧಾತ್ಮನ ಕ್ರಿಯೆಗಳಿಂದಾಗಿ ನಿರ್ಣಯಿಸಲ್ಪಡುತ್ತೇವೆ (ಪದಪಟ್ಟಿಯಲ್ಲಿ ಪರಿಶುದ್ಧಾತ್ಮ ನೋಡಿರಿ). ಕ್ರಿಸ್ತನ ನೀತಿಯು, ನಮ್ಮ ನಡೆ ನುಡಿಗಳಲ್ಲಿ ಹೆಚ್ಚು ಹೆಚ್ಚಾಗಿ ಪ್ರಭಾವಿತಗೊಳ್ಳುತ್ತದೆ. ನಾವು ಹೆಚ್ಚು ಹೆಚ್ಚಾಗಿ ಪರಿಶುದ್ಧರಾಗುತ್ತೇವೆ ಮತ್ತು ದೈನಿಕ ಜೀವನದಲ್ಲಿ ನೀತಿವಂತರಾಗುತ್ತೇವೆ.

**ರೋಮ್** :- ಇದು ಇಂದಿನ ಯೂರೋಪ್ ಖಂಡದ ಆಧುನಿಕ ಇಟಲಿ ದೇಶದ ರಾಜಧಾನಿಯಾಗಿದೆ. ಯೇಸುವಿನ ಕಾಲದಲ್ಲಿ ರೋಮ್ ಪಟ್ಟಣವು ರೋಮ್ ಸಾಮ್ರಾಜ್ಯದ ರಾಜಧಾನಿಯಾಗಿತ್ತು (ಪದಪಟ್ಟಿಯಲ್ಲಿ. ರೋಮ್ ಸಾಮ್ರಾಜ್ಯ).

**ರೋಮ್ ಸಾಮ್ರಾಜ್ಯ** :- ರೋಮ್ ಸಾಮ್ರಾಜ್ಯವು ಕ್ರಿ.ಪೂ.31ರಲ್ಲಿ ಸ್ಥಾಪಿತವಾಯಿತು ಮತ್ತು 400 ವರ್ಷಗಳಿಗಿಂತಲೂ ಹೆಚ್ಚುಕಾಲ ಆಡಳಿತ ಮಾಡಿತು. ಕ್ರಿಸ್ತನ ಕಾಲದಲ್ಲಿ ರೋಮನ್ನರು ಭೂಮಧ್ಯ ಸಮುದ್ರದ ಸುತ್ತಲೂ ಇರುವ ದೇಶಗಳನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಂಡಿದ್ದರೂ. ಅದರಲ್ಲಿ ಐಗುಪ್ತ, ಇಸ್ರಾಯೇಲ್, ಸಿರಿಯಾ, ತುರ್ಕಿ ಮತ್ತು ಗ್ರೀಸ್ ದೇಶಗಳು ಸೇರಿದ್ದವು. ಅವರು ಐರೋಪ್ಯ ಖಂಡದಲ್ಲಿನ ಉತ್ತರ ಭಾಗದಲ್ಲಿರುವ ಇಂಗ್ಲೆಂಡ್‌ವರೆಗೂ ಅಧಿಕಾರವನ್ನು ಚಲಾಯಿಸುತ್ತಿದ್ದರು.

ಹೊಸ ಒಡಂಬಡಿಕೆಯ ಕಾಲದಲ್ಲಿ ರೋಮ್ ಸಾಮ್ರಾಜ್ಯದಲ್ಲಿನ ದೇಶಗಳನ್ನು ಪ್ರಾಂತ್ಯಗಳನ್ನಾಗಿ ವಿಂಗಡಿಸಿ, ಒಂದೊಂದು ಪ್ರಾಂತ್ಯಕ್ಕೂ ರೋಮನ್ ಗವರ್ನರು(ರಾಜ್ಯಪಾಲರನ್ನು)ಗಳನ್ನು ಆಡಳಿತಗಾರರಾಗಿ ನೇಮಿಸಲಾಗಿತ್ತು. ರೋಮನ್ನರು ಪ್ರತಿ ಪ್ರಾಂತ್ಯದಲ್ಲಿನ ಸ್ಥಳೀಯ ನಾಗರೀಕರಿಗೆ, ಸ್ಥಳೀಯ ಸಮಸ್ಯೆಗಳ ಬಗ್ಗೆ ಖಚಿತವಾದ ಅಧಿಕಾರವನ್ನು ಕೊಟ್ಟಿದ್ದರು.ಪ್ರಾರಂಭದಲ್ಲಿ ಪ್ರತಿಯೊಂದು ಪ್ರಾಂತ್ಯದಲ್ಲಿನ ಜನರಿಗೆ ತಮ್ಮ ನೇಮ ನಿಷ್ಠೆಗಳನ್ನು ಪಾಲಿಸಲು ಮತ್ತು ತಮ್ಮ ಮತಗಳ ಬಗ್ಗೆ ಆಚರಣೆ ಮಾಡಲು ಅನುಮತಿಯನ್ನು ಕೊಟ್ಟಿದ್ದರು.

ಆದರೆ ಪೌಲ ಸಮಯದಲ್ಲಿ ರೋಮ್ ಉಪಚಕ್ರಾಧಿಪತಿಗಳು ರೋಮ್ ಸಾಮ್ರಾಜ್ಯದಲ್ಲಿರುವ ಎಲ್ಲ ಜನರು, ಚಕ್ರಾಧಿಪತಿಯನ್ನು ಆರಾಧಿಸಬೇಕೆಂದು ಒತ್ತಾಯಿಸಿದರು. ಯಹೂದ್ಯರು ಮತ್ತು ಕ್ರೈಸ್ತರು ಇದನ್ನು ಮಾಡಲು ಒಪ್ಪಲಿಲ್ಲ. ಆದುದರಿಂದ ರೋಮನ್ನರು ಅವರನ್ನು ಹಿಂಸೆಗೆ ಗುರಿಪಡಿಸಿದರು.ಅಪೊಸ್ತಲನಾದ ಪೌಲನು ಸಾಮ್ರಾಜ್ಯದ ರಾಜಧಾನಿಯಾದ ರೋಮ್ ನಗರದ ಸೆರೆಯಲ್ಲಿ ತನ್ನ ಕಡೆ ಜೀವಿತದವರೆಗೂ ಜೀವಿಸಿದನು (ಅ.ಕೃ. 28:16, 20) ಮತ್ತು ಕ್ರಿ.ಶ. 70ನೇ ವರ್ಷದಲ್ಲಿ ರೋಮನ್ನರ ಸೈನ್ಯಗಳು ಯಹೂದ್ಯರ ರಾಜಧಾನಿಯಾದ ಯೆರುಸಲೇಮನ್ನು ಸಂಪೂರ್ಣವಾಗಿ ನಾಶಗೊಳಿಸಿದವು ಮತ್ತು ಅಲ್ಲಿದ್ದ ಎಲ್ಲಾ ಯಹೂದ್ಯರನ್ನು ಸಂಹಾರ ಮಾಡಿದವು.

ಆದಾಗ್ಯೂಕ್ರಿಸ್ತ ಸಭೆಗಲು ಹಿಂಸೆಗೆ ಗುರಿಯಾಗಿದ್ದರೂ ಸಹ ಬೆಳೆದವು . ಸಾವಿರಾರು ಕ್ರೈಸ್ತರನ್ನು ರೋಮನ್ನರು ಕೊಂದು ಹಾಕಿದರು. ರೋಮನ್ನರು ಕ್ರೈಸ್ತರನ್ನು ಸಿಂಹಗಳ ಬಾಯಿಗೆ ತಳ್ಳಿದರು ಮತ್ತು ವಿನೋದಕ್ಕಾಗಿ ಸಿಂಹಗಳು ಅವರನ್ನು ತಿನ್ನುವುದನ್ನು ನೋಡುತ್ತಿದ್ದರು. ಒಂದೇ ಸಾರಿ ಕೊಲ್ಲಲಾಗದಿದ್ದ ಕ್ರೈಸ್ತರನ್ನು ಗುಲಾಮರನ್ನಾಗಿ ಮಾಡಿಕೊಂಡರು. ಆಗಿದ್ದರೂ, ಕ್ರೈಸ್ತರ ಸಂಖ್ಯೆ ಬೆಳೆಯಿತು. ಕಡೆಯಲ್ಲಿ ಕ್ರಿ.ಶ. 310ರಲ್ಲಿ ರೋಮ್ ಸಾಮ್ರಾಜ್ಯದ ಚಕ್ರವರ್ತಿಯಾದ ಕಾನ್ಸ್ಟಂಟೈನು ತಾನೇ ಕ್ರೈಸ್ತನಾದನು. ತದನಂತರ ಕ್ರೈಸ್ತ ಮತವು ರೋಮ್ ಸಾಮ್ರಾಜ್ಯದಲ್ಲಿ ಅಧಿಕೃತ ಮತವಾಯಿತು ಮತ್ತು ಅದು ಮಧ್ಯ ಪ್ರಾಚ್ಯ ಮತ್ತು ಯೂರೋಪ್ ಖಂಡದಲ್ಲಿ ಕ್ರಮೇಣ ಹರಡಿಕೊಂಡಿತು.

**ಸದ್ದುಕಾಯರು** :- ಕ್ರಿಸ್ತನ ಕಾಲದಲ್ಲಿ ಯಹೂದ್ಯ ಜನಾಂಗದ ಭಾಗವಾಗಿದ್ದದ್ದವರೆ ಸದ್ದುಕಾಯರು. ಯಹೂದ್ಯರ ಮುಖ್ಯ ಯಾಜಕರೆಲ್ಲರೂ, ಸದ್ದುಕಾಯರೇ ಆಗಿದ್ದರು. ಸದ್ದುಕಾಯರು ದೇಹದ ಪುನರುತ್ಥಾನವನ್ನಾಗಲೀ ಅಥವಾ ನಿತ್ಯ ಜೀವವನ್ನಾಗಲೀ ನಂಬದವರಾಗಿದ್ದರು. ಫರಿಸಾಯರಂತೆ ಅವರೂ ಸಹ ಕ್ರಿಸ್ತನನ್ನು ಆತನ ಶಿಷ್ಯರನ್ನು ವಿರೋಧಿಸಿದರು.

**ಸಂತರು** :- ಹೊಸ ಒಡಂಬಡಿಕೆಯಲ್ಲಿ, ಕ್ರಿಸ್ತನಲ್ಲಿ ವಿಶ್ವಾಸಿಗಳಾದವರು, ಸಂತರೆಂದು ಕರೆಯಲ್ಪಡುತ್ತಿದ್ದರು. ಸಂತ ಎಂಬ ಪದಕ್ಕೆ ಪರಿಶುದ್ಧ ಅಥವಾ ಪ್ರತ್ಯೇಕಿಸಲ್ಪಟ್ಟವ ಎಂದರ್ಥ. ಸತ್ಯವೇದದಲ್ಲಿ ಪರಿಶುದ್ಧರಾಗಿರುವುದು ಅಂದರೆ ನೀತಿವಂತರು ಮತ್ತು ದೇವರಿಗಾಗಿ ಮೀಸಲಾಗಿರುವರು ಎಂದು ಅರ್ಥ. ಕ್ರೈಸ್ತರಾದವರು ಅಂದರೆ ಅವರು ನಂಬಿಕೆಯ ಮೂಲಕ ಕ್ರಿಸ್ತನ ನೀತಿಯನ್ನು ಪಡೆದುಕೊಂಡು ಮತ್ತು ಪರಿಶುದ್ಧಾತ್ಮನ ಮೂಲಕ ಪರಿಶುದ್ಧ ಜೀವಿತವನ್ನು ಜೀವಿಸುವವರು. ಇಂತಹ ಜನರು ನಿಜವಾಗಿಯೂ ದೇವರಿಗಾಗಿ ಮೀಸಲಾಗಿಟ್ಟವರು. ಇವರು ಪಾಪದಿಂದ ಮತ್ತು ಪಾಪದ ಶಕ್ತಿಯಾದ ಸೈತಾನನಿಂದ ಪ್ರತ್ಯೇಕಿಸಲ್ಪಟ್ಟವರು.

**ರಕ್ಷಣೆ** :- ಹೊಸ ಒಡಂಬಡಿಕೆಯಲ್ಲಿ ರಕ್ಷಣೆಗೆ ಒಂದು ವಿಶಾಲವಾದ ಅರ್ಥವಿದೆ. ಕ್ಲುಪ್ತವಾಗಿ ಹೇಳುವುದಾದರೆ, ದೇವರ ನ್ಯಾಯನಿರ್ಣಯದಿಂದ ಪಾರಾಗುವುದು ಮತ್ತು ನಿತ್ಯ ಜೀವ ವನ್ನು ಹೊಂದುವುದು (ಪದಪಟ್ಟಿಯಲ್ಲಿ ನೋಡಿರಿ.ವಿಮೋಚನೆ).

ಎಲ್ಲಾ ಆತ್ಮೀಕ ಆಶೀರ್ವಾದಗಳು ರಕ್ಷಣಾ ಪದದಲ್ಲಿ ಸೇರ್ಪಡೆಯಾಗಿವೆ. ಮೊದಲನೆಯದಾಗಿ, ರಕ್ಷಣೆ ಎಂದರೆ ಪಾಪದಿಂದ, ಪಾಪದ ಶಕ್ತಿಯಿಂದಲೂ ಮತ್ತು ಪಾಪದ ಶಿಕ್ಷೆಯಿಂದಲೂ ಅಂದರೆ ನಿತ್ಯ ಮರಣದಿಂದ ಬಿಡುಗಡೆ ಹೊಂದುವುದು (ರೋಮಾ. 6:23).

ಒಬ್ಬ ವ್ಯಕ್ತಿಯು ರಕ್ಷಣೆ ಹೊಂದಿದಾಗ, ಆತನು ತನ್ನ ಪಾಪಗಳಿಗೆ ಕ್ಷಮಾಪಣೆ ಪಡೆಯುವನು ಮತ್ತು ಪಾಪಗಳಿಂದ ತೊಳೆಯಲ್ಪಟ್ಟವನು ಆಗಿರುವನು. ಹೀಗೆಯೇ, ಆತನು ನೀತಿವಂತನಾಗಿ ಲಥವಾ ನಿರ್ದೋಸಿಯಾಗಿ ದೇವರ ದೃಷ್ಟಿಯಲ್ಲಿ ಕಾಣಿಸಿಕೊಳ್ಳುವನು (ಪದಪಟ್ಟಿಯಲ್ಲಿನೋಡಿರಿ. ನೀತಿ.). ಆತನು ದೇವರ ಕುಟುಂಬದ ಒಬ್ಬ ಒಬ್ಬ ಸದಸ್ಯನಾಗುತ್ತಾನೆ (ಪದಪಟ್ಟಿಯಲ್ಲಿ ದತ್ತು ಸ್ವೀಕಾರ ನೋಡಿರಿ). ಆತನು ಪರಿಶುದ್ಧನಾಗುತ್ತಾನೆ ಮತ್ತು ಮಹಿಮೆ ಹೊಂದುತ್ತಾನೆ (.ನೋಡಿರಿ.ರೊಮ 8:30 ಮತ್ತು ವ್ಯಾಖ್ಯಾನ) .ಆದರೆ ನಿತ್ಯಜೀವಿತವನ್ನು ಹೊಂದಿ ಸ್ವರ್ಗದಲ್ಲಿ ದೇವರು ಮತ್ತು ಕ್ರಿಸ್ತನೊಂದಿಗೆ ಜೀವಿಸುವಂತದ್ದೆ ರಕ್ಷಣೆಯ ಆಶೀರ್ವಾದಗಳಲ್ಲೆಲ್ಲಾ ದೊಡ್ಡದಾದಂತಹ ಆಶೀರ್ವಾದವಾಗಿದೆ (ಪದಪಟ್ಟಿಯಲ್ಲಿ ನಿತ್ಯಜೀವ ನೋಡಿರಿ). ನಾವು ರಕ್ಷಣೆ ಹೊಂದಿದಾಗ, ಇವೆಲ್ಲಾ

ಆಶೀರ್ವಾದಗಳನ್ನು ಪಡೆದುಕೊಳ್ಳುತ್ತೇವೆ .(ಎಫೆಸ 1:3). ರಕ್ಷಣೆಯನ್ನು ಪಡೆದುಕೊಳ್ಳಬೇಕಾದರೆ ಒಂದೇ ಒಂದು ಮಾರ್ಗವಿದೆ ಅದೇನೆಂದರೆ ಕ್ರಿಸ್ತನ ಮೇಲೆ ನಂಬಿಕೆ ಇಡುವುದು, ಅನ್ಯಥಾ ಬೇರೆ ದಾರಿಯೇ ಇಲ್ಲ (ಸಾಮಾನ್ಯ ವಿಷಯಗಳು. ರಕ್ಷಣೆಯ ಮಾರ್ಗ. ನೋಡಿರಿ).

**ಯಹೂದ್ಯರ ಹಿರೀಸಭೆ** :- ಯಹೂದ್ಯದೇಶದ ಅತೀ ಉನ್ನತ ಆಡಳಿತ ಮಂಡಳಿಯು ಹಿರೀಸಭೆಯಾಗಿದ್ದಿತು. ಆ ಮಂಡಳಿಯ ನಾಯಕನು ಯಹೂದ್ಯರ ಮಹಾ ಯಾಜಕನಾಗಿದ್ದನು. ಹೊಸ ಒಡಂಬಡಿಕೆಯ ಕಾಲಜಲ್ಲಿ ಯಹೂದ್ಯರ ಎಲ್ಲ ಸ್ಥಳೀಯ ಹಾಗೂ ಮತ ಸಂಬಂಧವಾದ ವಿಷಯಗಳು, ಹಿರೀಸಭೆಯ ಅಧಿಕಾರಕ್ಕೆ ಒಳಪಟ್ಟಿದ್ದವು. ಆದಾಗ್ಯೂ, ಹಿರಿಸಭೆಯವರು, ರೋಮನ್ನರಿಗೆ ವಿರುದ್ಧವಾಗಿಏನು ಮಾಡುವ ಹಾಗಿರಲಿಲ್ಲ. ಯಾವ ಯಹೂದ್ಯ ನಾಯಕರಿಗಾಗಲೀ ಯಾವುದೇ ಅಪರಾಧಿಗೆ ಮರಣದಂಡನೆ ಕೊಡುವ ಅಧಿಕಾರವಿರಲಿಲ್ಲ. ಇದೇ ಕಾರಣಕ್ಕಾಗಿ ರೋಮನ್ನರ ರಾಜ್ಯಪಾಲರಾದಂತ ಪೊಂತಿ ಪಿಲಾತನ ಅಪ್ಪಣೆಯ ಮೇರೆಗೆ ಯೇಸುವನ್ನು ಮರಣಕ್ಕೆ ಒಪ್ಪಿಸಲಾಯಿತು.

ಹಿರೀಸಭೆಯಲ್ಲಿ ಮಹಾ ಯಾಜಕನೂ ಸೇರಿದಂತೆ ಎಪ್ಪತ್ತು ಜನ ಸದಸ್ಯರಿರುವರು. ಇವರು ಯಹೂದ್ಯ ಜನಾಂಗದಲ್ಲಿನ ನಾಯಕರೂ ಮತ್ತು ಹಿರಿಯರಾದಂತಹ ವ್ಯಕ್ತಿಗಳಿಂದ ಆರಿಸಲ್ಪಟ್ಟಂತಹ ಸದಸ್ಯರಾಗಿರುವರು.

**ಸೈತಾನ.**:- ಸೈತಾನನು ಎಲ್ಲಾ ದುರಾತ್ಮಗಳ ಅಥವಾ ದೆವ್ವಗಳ ಮುಖ್ಯಸ್ಥನು (ಪದಪಟ್ಟಿಯಲ್ಲಿ ದೆವ್ವ ನೋಡಿರಿ). ಆತನು ಮನುಷ್ಯರಿಗೂ ಮತ್ತು ದೇವರಿಗೂ ವಿರೋಧಿ. ಸೈತಾನನು ಬಿದ್ದು ಹೋದ ಒಬ್ಬ ದೇವದೂತನು. ಆತನ ಮುಖ್ಯ ಪಾಪವೇನಂದರೆ ಜಂಬ ಅಥವಾ ಗರ್ವ. ಆತನು ತನ್ನನ್ನೇ ದೇವರ ಸಮಾನನಂತೆ ಎಣಿಸಿಕೊಂಡನು. ಆದರೆ ದೇವರು ಅವನ್ನನು ಪರಲೋಕದಿಂದ ತಳ್ಳಿಬಿಟ್ಟನು (ಯೆಶಾಯ 14:11-15, 1ನೇ ತಿಮೋಥೆ 3:6).

ದೇವರಿಗೆ ಅವಿದೆಯರಾಗುವಂತೆ ಮಾಡಿ ಮನುಷ್ಯರನ್ನು ಪಾಪದಲ್ಲಿ ತೊಡಗಿಸುವುದೇ, ಸೈತಾನನ ಮುಖ್ಯವಾದ ಕೆಲಸ. ಇವನು ಮನುಷ್ಯರನ್ನು ಮೋಸಗೊಳಿಸಿ, ಆತನಲ್ಲಿ ದುಷ್ಟ ಆಶೆಗಳನ್ನು ಉಂಟುಮಾಡಿ ಮತ್ತು ಅವನ ನಂಬಿಕೆಯನ್ನು ಬಲಹೀನಗೊಳಿಸುವುದರ ಮೂಲಕ ಈ ಕಾರ್ಯವನ್ನುಮಾಡುತ್ತಾನೆ.

ಸೈತಾನನಿಗೆ ಹೊಸ ಒಡಂಬಡಿಕೆಯಲ್ಲಿ ಅನೇಕ ಹೆಸರುಗಳುಂಟು. ಆತನು **ದೆವ್ವ** ಎಂದು ಕರೆಯಲ್ಪಡುತ್ತಾನೆ (ಪ್ರಕಟಣೆ 12:9) ಮತ್ತು ನಮ್ಮ ಸಹೋದರರ ಮೇಲೆ **ಆರೋಪ ಹೊರಿಸುವವನು** (ಪ್ರಕಟಣೆ 12:10). ಆತನು ಒಬ್ಬ **ಶತ್ರು** ಮತ್ತು **ಗರ್ಜಿಸುವ ಸಿಂಹ** (1ನೇ ಪೇತ್ರ 5:8). ಅವನನ್ನು **ಬೆಲ್ಜೆಬೂಲ** ನೆಂದೂ, ಮಾರ್ಕ 3:22, **ಶೋಧಕನೆಂತಲೂ** ಮತ್ತಾಯ 4:3, **ಸುಳ್ಳಿನ ತಂದೆ** (ಯೋಹಾನ 8:44) ಮತ್ತು **ಈ ಲೋಕದ ಅಧಿಪತಿ** ಎಂತಲೂ (ಯೋಹಾನ 12:31) ಕರೆಯುವರು.

ಸೈತಾನನು ಎಷ್ಟೋ ಬಲಶಾಲಿಯಾಗಿದ್ದರೂ ಕೂಡ ಇನ್ನುಆತನು ದೇವರ ನಿಯಂತ್ರಣದಲ್ಲಿದ್ದಾನೆ. ದೇವರು ಎಷ್ಟರಮಟ್ಟಿಗೆ ಅವನಿಗೆ ಅನುಮತಿ ಕೊಟ್ಟಿದ್ದಾನೋ, ಅಷ್ಟರ ಮಟ್ಟಿಗೆ ಮಾತ್ರ ಸೈತಾನನು ಕಾರ್ಯಸಾಧನೆ ಮಾಡಬಹುದು (ಯೋಬ 1:12, 2:6, ಲೂಕ 22:31).

ಪವಿತ್ರಾತ್ಮನ ಸಹಾಯದಿಂದ ನಾವು ಸೈತಾನನ್ನು ಗೆಲ್ಲಬಹುದು. ಅವನನ್ನು ವಿರೋದಿಸಿದರೆ ಅವನು ಓಡಿ ಹೋಗುವನು (ಯಾಕೋಬ 4:7 ಮತ್ತು ವ್ಯಾಖ್ಯಾನ).

ಯೇಸು ಆತನನ್ನು ಈಗಾಗಲೇ ಶಿಲುಬೆಯ ಮೇಲೆ ಸೋಲಿಸಿದ್ದಾನೆ (ಇಬ್ರಿಯಾ 2:14-15). ಆದರೂ ಆತನಿಗೆ ಇನ್ನುಈ ಲೋಕದಲ್ಲಿ ಹೆಚ್ಚಿನ ಶಕ್ತಿ ಉಂಟು. ಆದಾಗ್ಯೂಕ್ರಿಸ್ತನು ಲೋಕದ ಅಂತ್ಯದಲ್ಲಿ ಮರಳಿ ಬರುವಾಗ, ಸೈತಾನನು ಬೆಂಕಿಯ ಸಮುದ್ರಕ್ಕೆ ಸದಾ ಕಾಲಕ್ಕೂ ತಳ್ಳಲ್ಪಡುವನು ಮತ್ತು ಸಂಪೂರ್ಣವಾಗಿ ನಾಶಹೊಂದುವನು(ಪ್ರಕಟಣೆ. 20:7-10)

**ಶೋಧನೆ** :- ಸತ್ಯವೇದದಲ್ಲಿ ಶೋಧನೆ ಎಂಬ ಪದಕ್ಕೆ (ಶೋಧನೆ ಅಥವಾ ಪರೀಕ್ಷೆ) ಎರಡು ಅರ್ಥ ಕೊಡಲ್ಪಟ್ಟಿದೆ. ಪ್ರತಿಯೊಂದು ವಚನದಲ್ಲಿ ಎಲ್ಲೆಲ್ಲಿ ಶೋಧನೆ (ಅಥವಾ ಪರೀಕ್ಷೆ) ಎಂದು ಬರೆದಿದೆಯೋ, ಅಲ್ಲಿ ಅದು ಸಂದರ್ಭಕ್ಕನುಸಾರವಾಗಿ ಯಾವ ಅರ್ಥ ಕೊಡುತ್ತದೆ ಎಂಬುದನ್ನು ತೀರ್ಮಾನಿಸುವುದು ಅಗತ್ಯವಾಗಿದೆ.

ಶೋಧನೆ ಎಂಬುದಕ್ಕೆ ಬರುವ ಮೊದಲನೇ ಅರ್ಥವು ಪರೀಕ್ಷೆ ಅಥವಾ ಪರಿಶೀಲನೆಯಾಗಿರುತ್ತದೆ. ದೇವರು ತನ್ನ ಜನರನ್ನು ವಿಚಾರಿಸಿ, ಪರೀಕ್ಷಿಸಿ ಅವರನ್ನು ಸುಧಾರಣೆಗೆ ಒಳಪಡಿಸಿ, ಬಲಪಡಿಸಿ ಅವರಲ್ಲಿ ಶಿಸ್ತನ್ನು ಬರಮಾಡುತ್ತಾನೆ. ಈ ಕಾರ್ಯಗಳನ್ನು ಮಾಡಲು ಅನೇಕ ಸಂಕಷ್ಟಗಳನ್ನುಅವರ ಮೇಲೆ ಬರಗೂಡಿಸುತ್ತಾನೆ ಅಥವಾ ಕಠಿಣಕರವಾದ ಸಮಸ್ಯೆಗಳಲ್ಲಿ ಅವರನ್ನು ಸಿಲುಕಿಸುತ್ತಾನೆ. ಹಳೇ ಒಡಂಬಡಿಕೆಯಲ್ಲಿ ದೇವರು ಅಬ್ರಹಾಮನನ್ನು ಆತನ ಒಬ್ಬನೇ

ಮಗನಾದ ಇಸಾಕನನ್ನು ಬಲಿಕೊಡಲು ತಿಳಿಸುವ ಮೂಲಕ ಪರೀಕ್ಷೆಗೆ ಒಡ್ಡಿದನು (ಆದಿಕಾಂಡ 22:1-9). ಯೋಬನ ಗ್ರಂಥದಲ್ಲಿ ಯೋಬನಿಗೆ ಬಂದ ಪರೀಕ್ಷೆಯ ವಿವರಗಳಿವೆ. ದೇವರ ವಿಷಯವಾಗಿ, ಯೋಬನು ಹೀಗೆ ಹೇಳಿದನು **"ಆತನು ನನ್ನನ್ನು ಶೋದಿಸಿದಾಗ, ನಾನು ಚಿನ್ನದಂತೆ ಹೊರಬಂದೆನು"** (ಯೋಬ 23:10). ಈ ರೀತಿಯಾಗಿ ದೇವರು ಎಲ್ಲಾ ಕ್ರೈಸ್ತರನ್ನು ಶೋದಿಸಿ ಶಿಸ್ತಿಗೆ ಒಳಪಡಿಸುತ್ತಾನೆ (1ನೇ ಕೊರಿಂಥ 11:32, ಇಬ್ರಿಯಾ 12:4-11, ಯಾಕೋಬ 1:2, 12, 1ನೇ ಪೇತ್ರ 1:6-7, ಮತ್ತು ವ್ಯಾಖ್ಯಾನ). ಈ ಎಲ್ಲಾ ಉದಾಹರಣೆಗಳಲ್ಲಿ ನಾವು ಹೆಚ್ಚು ಪರಿಶುದ್ಧರಾಗಿ ಬೇಕೆಂತಲೂ ಮತ್ತು ನಮ್ಮಲ್ಲಿ ಆತ್ಮೀಕತೆಯ ಒಳ್ಳೆಯತನ ಕ್ಕಾಗಿ ದೇವರು ಶೋದಿಸುತ್ತಾನೆ.ನಮ್ಮನ್ನು ಶೋದಿಸುವಾಗ, ದೇವರು ತಾನೇ ತನ್ನ ಮಕ್ಕಳ ಮೇಲೆ ಕೆಡುಕನ್ನು ಕಳುಹಿಸುವುದಿಲ್ಲ ಬದಲಾಗಿ, ಸೈತಾನನು ಹೀಗೆ ಮಾಡಲು ಅನುಮತಿಸುತ್ತಾನೆಸತ್ಯವೇದದಲ್ಲಿ ಕಂಡುಬರುವ ಶೋಧನೆಗೆ ಎರಡನೇ ಅರ್ಥವು ಕೆಡುಕು ಮಾಡುವ ಇಚ್ಛೆ, ಪಾಪ ಮಾಡುವ ಆಶೆಯಾಗಿದೆ. ಮನುಷ್ಯನು ಪಾಪ ಸ್ವಭಾವದವನಾದುದರಿಂದ ಅಥವಾ ಅವನ ಆತ್ಮದಲ್ಲಿ ದುಷ್ಟ ಆಸೆಗಳು ಉಂಟಾಗುತ್ತವೆ (ಯಾಕೋಬ 1:13-15 ನೋಡಿರಿ ಮತ್ತು ವ್ಯಾಖ್ಯಾನ). ದೇವರಿಗೆ ವಿಮುಖರಾಗಲೂ, ಪಾಪವನ್ನು ಮಾಡಲು ಸೈತಾನನು ಯಾವಾಗಲೂ, ನಮ್ಮ ಹೃದಯದಲ್ಲಿ ದುರಾಸೆಯನ್ನುಂಟು ಮಾಡುತ್ತಾನೆ. ಸೈತಾನನು ಶೋಧಕ ಎಂದು ಕರೆಯಲ್ಪಡುತ್ತಾನೆ. ಮತ್ತಾಯ 4:3 1ನೇ ಥೆಸಲೋನಿಕ 3:5, ಸೈತಾನನು ಹವ್ವಳನ್ನು ಶೋಧಿಸಿದನು. ಆದಿಕಾಂಡ 3:1-6. ಕ್ರಿಸ್ತನನ್ನು ಶೋಧಿಸಿದನು. ಮತ್ತಾಯ 4:1-11, ಆದರೆ ಕ್ರಿಸ್ತನನ್ನು ಪಾಪದ ಕಡೆಗೆ ನಡೆಸಲಾಗಲಿಲ್ಲ (ಇಬ್ರಿಯಾ 2:18, 4:15 ನೋಡಿರಿ). ಈ ಎರಡನೇ ತರಹವಾದ ಶೋಧನೆ (ದುಷ್ಟ ಸ್ವಭಾವ) ದೇವರಿಂದ ಎಂದಿಗೂ ಬರುವುದಿಲ್ಲ ಮತ್ತು ಅದು ನಮ್ಮ ಒಳ್ಳೆಯದಕ್ಕೂ ಅಲ್ಲ. ಕೆಟ್ಟದ್ದನ್ನು ಮಾಡ ಬಯಸುವ ಶೋಧನೆಗಳು, ಯಾವಾಗಲೂ ಸೈತಾನನಿಂದ ಬರುವಂತಹವು. ಈ ಶೋಧನೆಗಳಿಂದ ನಾವು ತಪ್ಪಿಸಿಕೊಳ್ಳುವಂತೆ, ಖಂಡಿತವಾಗಿ ಪ್ರಾರ್ಥಿಸಬೇಕು. **ಕರ್ತನೇ, ನಮ್ಮನ್ನು ಶೋಧನೆಗೆ ಒಳಪಡಿಸಬೇಡ** (ಮತ್ತಾಯ 6:13).

ಮೊದಲನೆಯ ಶೋಧನೆ, ಪರೀಕ್ಷೆ ಅಥವಾ ಪರಿಶೀಲನೆಯನ್ನು ನಾವು ತಾಳ್ಮೆಯಿಂದ ಸಹಿಸಬೇಕು. ಎರಡನೇ ಶೋಧನೆ, ಪಾಪದ ದುರಾಸೆಯನ್ನು ನಾವು ಖಂಡಿತವಾಗಿ ವಿರೋದಿಸ ಬೇಕು ಮತ್ತು ಜಯಿಸ ಬೇಕು.

# ಸಾಮಾನ್ಯ ಲೇಖನಗಳು

# ಸಾಮಾನ್ಯ ಲೇಖನಗಳ ಪರಿಚಯ

ಪ್ರತಿಯೊಬ್ಬ ಕ್ರೈಸ್ತನೂ ವಿಶ್ವಾಸಿಸಲೆ ಬೇಕಾದ ಕೆಲವು ವಿಷಯಗಳಿವೆ. ಇವುಗಳು ಮೂಲಭೂತತತ್ತ್ವಗಳು ಎಂದು ಕರೆಯಲ್ಪಡುತ್ತವೆ. ಅಂದರೆ ನಿಜವಾದ ಕ್ರೈಸ್ತನಾಗಿರಬೇಕಾದರೆ ಪ್ರತಿಯೊಬ್ಬನು ಈ ಪ್ರಮುಖ ತತ್ತ್ವಗಳನ್ನು ಅಂಗೀಕಾರ ಮಾಡಿಕೊಳ್ಳಲೇಬೇಕು. ಬೇರೆ ಬೇರೆ ವಿಧವಾದ ಮತಾಭಿಪ್ರಾಯಗಳಲ್ಲಿ ಪಟ್ಟಿ ಮಾಡಲಾಗಿದೆ. ಪ್ರತಿಯೊಬ್ಬ ಕ್ರೈಸ್ತನೂ ಈ ಕೆಳಗಿನವುಗಳನ್ನು ವಿಶ್ವಾಸಿಸುತ್ತಾನೆ.

(1) ಒಬ್ಬನೇ ದೇವರು - ತಂದೆ, ಮಗ ಮತ್ತು ಪವಿತ್ರಾತ್ಮ - ಮೂರು ವ್ಯಕ್ತಿಗಳು ಸೇರಿ ಒಬ್ಬನೇ ದೇವರು.

(2) ಪರಲೋಕ ಮತ್ತು ಭೂಲೋಕದ ಸೃಷ್ಟಿ ಕರ್ತನಾದ ಸರ್ವಶಕ್ತನಾಗಿರುವ ಒಬ್ಬನೇ ತಂದೆ .

(3) ನಮ್ಮ ಪ್ರಭುವಾದ ಯೇಸುಕ್ರಿಸ್ತನು, ತಂದೆಯ ಒಬ್ಬನೇ ಮಗನಾಗಿದ್ದು, ನಿತ್ಯವಾಗಿ ತಂದೆಯೊಡನೆ ವಾಸವಾಗಿದ್ದು, ನಮ್ಮ ರಕ್ಷಣಾರ್ಥವಾಗಿ ಸಂಪೂರ್ಣವಾಗಿ ಶರೀರಧಾರಿಯಾಗಿ ನರಾವತಾರ ತಳೆದಿದ್ದರೂ, ದೇವರೊಡನೆ ಸಂಪೂರ್ಣನಾಗಿಯೇ ಇರುವಾತನಾಗಿದ್ದಾನೆ.

(4) ಯೇಸುಕ್ರಿಸ್ತನು ಪರಿಶುದ್ಧಾತ್ಮನಿಂದ ಗರ್ಭಧರಿಸಲ್ಪಟ್ಟವನಾಗಿ, ಕನ್ನಿಕೆಯಾದ ಮರಿಯಳ ಉದರದಲ್ಲಿ ಜನಿಸಿದನು ಮತ್ತು ನಮ್ಮ ಪಾಪಗಳ ಸಲುವಾಗಿ, ಶಿಲುಬೆಯ ಮೇಲೆ ತನ್ನ ರಕ್ತವನ್ನು ಸುರಿಸಿ ಮೃತಪಟ್ಟನು.

(5) ಯೇಸುವು ಮರಣದಿಂದ ಶರೀರಧಾರಿಯಾಗಿ ಮತ್ತೆ ಎದ್ದು ಬಂದನು ಮತ್ತು ಪರಲೋಕಕ್ಕೆ ಏರಿ ಹೋದನು. ಆದರೆ, ಜೀವಿಸುವವರಿಗೂ, ಸತ್ತವರಿಗೂ ನ್ಯಾಯತೀರಿಸಲು ತಿರುಗಿ ಬರುವನು.

(6) ಭೂಲೋಕದಲ್ಲಿ ಕ್ರಿಸ್ತನ ದೇಹದಂತಿರುವ ಸಾರ್ವತ್ರಿಕ ಸಭೆಯನ್ನು ಬಲಪಡಿಸುತ್ತಾ ಲೋಕದ ಪಾಪವನ್ನು ಖಂಡಿಸುತ್ತಾ, ಪವಿತ್ರಾತ್ಮನು ಯಾವಾಗಲೂ ನಮ್ಮೊಡನೆ ಇರುತ್ತಾನೆ

(7) ಎಲ್ಲಾ ಸ್ತ್ರೀ ಮತ್ತು ಪುರುಷರು ಸ್ವಾಭಾವಿಕವಾಗಿ ಪಾಪಿಗಳಾಗಿದ್ದು ಮತ್ತು ಯೇಸುಕ್ರಿಸ್ತನ ಈಡು ಕೊಡುವಿಕೆಯಿಂದ ಕ್ಷಮಾಪಣೆ ಹೊಂದುವವರಾಗಿದ್ದಾರೆ ಮತ್ತು ಪವಿತ್ರಾತ್ಮನಿಂದ ಪುನರುಜ್ಜೀವನ ಹೊಂದುವವರಾಗಿದ್ದಾರೆ.ದೇವರ ಕೃಪೆಯಿಂದ ನಮಗೆ ಇವೆಲ್ಲವುಗಳು ಉಚಿತವಾಗಿ ನಂಬಿಕೆಯ ಮೂಲಕ ದೊರಕುತ್ತದೆ.

(8) ಸತ್ಯವೇದವು ದೈವ ಪ್ರೇರಣೆಯಿಂದ ಉಂಟಾದದ್ದು. ಅದರಲ್ಲಿ ನಮ್ಮ ರಕ್ಷಣೆಗೆ ಬೇಕಾದ ಎಲ್ಲ ವಿಷಯಗಳು ಇವೆ ಮತ್ತು ಅದು ನಮ್ಮ ಮೂಲ ನಂಬಿಕೆಗೆ ಆಧಾರವಾಗಿದೆ.

(9) ಎಲ್ಲಾ ವಿಶ್ವಾಸಿಗಳ ದೇಹಗಳು ಪುನರುತ್ಥಾನಗೊಂಡು ನಿತ್ಯಜೀವವನ್ನು ಹೊಂದಿ, ಸದಾಕಾಲ ದೇವರೊಡನೆ ಇರುವುವು.

ಆದಾಗ್ಯೂನಿಜವಾದ ಕ್ರೈಸ್ತರಲ್ಲಿ ಈ ಒಂಭತ್ತು ಮೂಲಭೂತತತ್ತ್ವಗಳ ಜೊತೆಗೆ, ಭಿನ್ನಾಭಿಪ್ರಾಯದಿಂದಿರುವ ಇನ್ನೂ ಕೆಲವು ಪ್ರಾಥಮಿಕವಲ್ಲದ ಅಥವಾ ದ್ವಿತಿಯ ತತ್ವಗಳಿದ್ದು ಇವು ಕ್ರಿಸ್ತನ ಮತ್ತು ಆತನ ಪುನರುತ್ಥಾನದ ವಿಷಯದಲ್ಲಿರುವ ನಮ್ಮ ಮೂಲ ವಿಶ್ವಾಸವನ್ನು ಬದಲಾಯಿಸುವುದಿಲ್ಲ (1ನೇ ಕೊರಿಂಥ 2:2). ಈ ಎರಡನೇ ಪ್ರಾಥಮಿಕವಲ್ಲದ ಬೋಧನೆಗಳಲ್ಲಿ ಸಂಸ್ಕಾರ ಮತ್ತು ಸಭಾ ಸಂಪ್ರದಾಯಗಳು ಇರುತ್ತವೆ ಮತ್ತು ಸತ್ಯವೇದದಲ್ಲಿನ ಕೆಲವು ವಾಕ್ಯವೃಂದಗಳ ಬಗ್ಗೆ ಕೆಲವು ವಿಬಿನ್ನ ಅರ್ಥಗಳಿಂದ ಕೂಡಿವೆ.

ನಿಜವಾದ ಕ್ರೈಸ್ತರು ಈ ಪ್ರಾಥಮಿಕವಲ್ಲದ ತತ್ವಗಳನ್ನು ವಿವಿಧ ದೃಷ್ಟಿಕೋನಗಳ ಅರ್ಥಳಿಂದ ವಿಶ್ವಾಸವಿಟ್ಟಿದ್ದಾರೆ.

ಕೆಲವರು ಹೇಳಬಹುದು. ನಾವು ಏಕೆ ಸುಮ್ಮನೆ ಸತ್ಯವೇದವನ್ನು ನೋಡುವುದಿಲ್ಲ? ಸತ್ಯವೇದ ಏನು ಹೇಳುತ್ತದೋ ಅದನ್ನು ಏಕೆ ಬರೆಯುವುದಿಲ್ಲ? ಆದರೆ ಇದೇ ನಿಜವಾದ ಸಮಸ್ಯೆಯಾಗಿದೆ. ಸತ್ಯವೇದ ಏನು ಹೇಳುತ್ತದೆ? ನಿಜವಾದ ಕ್ರೈಸ್ತರು ಒಂದೆ ವಚನಗಳಿಂದ ಬೇರೆ ಬೇರೆಯ ದೃಷ್ಟಿಕೋನಗಳಿಂದ ವಿವಿದ ಅರ್ಥಗಳನ್ನು ಮಾಡಿಕೊಂಡಿದ್ದಾರೆ. ಅಲ್ಲದೇ, ನಾವು ಕೇಳುವ ಎಲ್ಲಾ ಪ್ರಶ್ನೆಗಳಿಗೆ ಸತ್ಯವೇದದವು ಉತ್ತರಿಸುವುದಿಲ್ಲ. ಇಂತಹ ಅನೇಕ ವಿಷಯಗಳಲ್ಲಿ, ಸರಿಯಾದ

ದೃಷ್ಟಿಕೋನ ಯಾವುದು ಎಂದು ತಿಳಿಯುವುದು ಅಸಾಧ್ಯ. ಸತ್ಯವೇದವು ಈ ಪ್ರಾಥಮಿಕವಲ್ಲದ ವಿವಾದಾಂಶಗಳ ಬಗ್ಗೆಸಂಪೂರ್ಣವಾಗಿ ಸರಳವಾಗಿದ್ದ ಪಕ್ಷದಲ್ಲಿ ಇಷ್ಟೊಂದು ಭಿನ್ನಾಭಿಪ್ರಾಯಗಳು ಕ್ರೈಸ್ತರಲ್ಲಿ ಇರುತ್ತಿರಲಿಲ್ಲ. ಸತ್ಯವೇದದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಈ ಅಭಿಪ್ರಾಯದ ಅಜ್ಞಾನಗಳ' ಬಗ್ಗೆ ತಿಳಿಸದೇ ಇರುವುದು ಸತ್ಯವೂ ಅಲ್ಲ ಸಾಧುವೂ ಅಲ್ಲ ಯಾಕೆಂದರೆ ಅನೇಕ ಕ್ರೈಸ್ತರು ಇದೇ ಸರಿ ಎಂದು ನಂಬುತ್ತಾರೆ. ಈ ಸತ್ಯವೇದ ವ್ಯಾಖ್ಯಾನವೂ, ಸತ್ಯವೇದದ ಅಭ್ಯಾಸಕ್ಕೆ ಸಾಧನವೇ ಹೊರತು ಪ್ರಶ್ನೋತ್ತರ ರೂಪದ ಗ್ರಂಥವಲ್ಲ ಅಥವಾ ಯಾವುದೇ ಒಂದು ಸಭೆಯ ಅಥವಾ ಪಂಗಡದ ನಂಬಿಕೆಯ ಹೇಳಿಕೆಯಲ್ಲ.

ನಿಜವಾದ ಕ್ರೈಸ್ತರಲ್ಲಿ ವಿಬಿನ್ನವಾದ[1] ಅಭಿಪ್ರಾಯಗಳಿಗೆ ಎಡೆಕೊಟ್ಟಿವಂತ ಪ್ರಾಥಮಿಕವಲ್ಲದ ಅನೇಕ ದ್ವಿತಿಯ ತತ್ತ್ವಗಳಾದ ಸಾಮಾನ್ಯ ವಿಷಯಗಳ ಬಗ್ಗೆಇನ್ನು ಮುಂದೆ ನೋಡುತ್ತೇವೆ. ಸತ್ಯವೇದ ವಿದ್ಯಾರ್ಥಿಯು ಈ ಎಲ್ಲಾ ವಿಷಯಗಳಿಗಿಂತ ಹೆಚ್ಚಾಗಿ ಸತ್ಯವೇದದ ಮೇಲೆ ಕೇಂದ್ರೀಕರಿಸಬೇಕು. ಆದುದರಿಂದ ಪ್ರತಿಯೊಂದು ಭಿನ್ನಾಭಿಪ್ರಾಯದ ವಿಷಯಕ್ಕೆ ಬರುವ ಮೊದಲು ಈ ವಿಷಯಕ್ಕೆ ಸಂಬಂದ ಪಟ್ಟಂತ ಸತ್ಯವೇದದ ಮುಖ್ಯ ವಚನಗಳನ್ನು ಪ್ರಸ್ತಾಪಿಸಲಾಗಿದೆ. ತದನಂತರ ಆ ಸಮಸ್ಯೆಗೆ ವಿವರಣೆ ಕೊಡಲಾಗಿದ್ದು ವಿವಿಧ ಕ್ರೈಸ್ತರು ಇಟ್ಟುಕೊಂಡಿರುವ ಮುಖ್ಯ ಅಭಿಪ್ರಾಯಗಳ ಬಗ್ಗೆ ಸಂಕ್ಷಿಪ್ತವಾಗಿ ಹೇಳಲಾಗಿದೆ. ಪ್ರತಿಯೊಬ್ಬ ಸತ್ಯವೇದ ವಿದ್ಯಾರ್ಥಿಯು ಅವನ ಅಥವಾ ಅವರ ಬೋಧಕನನ್ನು ಅಥವಾ ಸಬಾಪಾಲಕರನ್ನು ಕಂಡು ತಮ್ಮ ಸಭೆಯಲ್ಲಿಯ ಸಂಪ್ರದಾಯ ಮತ್ತು ನಂಬಿಕೆಗಳ ಬಗ್ಗೆ ಹೆಚ್ಚಿನ ಸಲಹೆಗಳನ್ನು ಪಡೆದುಕೊಳ್ಳಬಹುದು.

ಅನೇಕ ಜನರು ಈ ಪ್ರಶ್ನೆಗಳ ಬಗ್ಗೆ ಚರ್ಚೆ ಮಾಡಿದರೆ, ತೊಡಕು ಉಂಟಾಗುತ್ತದೆ ಎಂದು ಭಾವಿಸುತ್ತಾರೆ. ಇದಕ್ಕೆ ವಿರುದ್ಧವಾಗಿ ಈ ವಿಷಯಗಳ ಬಗ್ಗೆ ಮೌನ ತಾಳಿದರೆ, ತೊಡಕುಗಳು ಇನ್ನು ಹೆಚ್ಚುತ್ತವೆ. ಬೇರೆ ಕ್ರೈಸ್ತರಲ್ಲಿ ಯಾವಾಗ ಅಭಿಪ್ರಾಯಗಳ ಬಗ್ಗೆ ಮೌನತೆ ಉಂಟಾಗುತ್ತದೋ, ತಪ್ಪು ತಿಳುವಳಿಕೆ ಮತ್ತು ಕಹಿ ಭಾವನೆಗಳು ಸುಲಭವಾಗಿ ಉದ್ಭವಿಸುತ್ತವೆ ಮತ್ತು ಭೇದಗಳು ಉಂಟಾಗುತ್ತದೆ. ಕ್ರೈಸ್ತ ಸಭೆಗಳ ಇಡೀ ಚರಿತ್ರೆಯಲ್ಲಿನ್ನು ನೋಡಿದಾಗ, ಬೇರೆಯವರ ಮೌನತೆ ಮತ್ತು ಅಭಿಪ್ರಾಯಗಳ ಬಗ್ಗೆ ಸಹನೆಯಿಲ್ಲದ ಕಾರಣದಿಂದಾಗಿಯೇ ಅನೇಕ ಸಭೆಗಳು ಮುರಿಯಲ್ಪಟ್ಟಿವೆ.

ಪ್ರಾಥಮಿಕವಲ್ಲದ ಈ ದ್ವಿತಿಯ ತತ್ತ್ವಗಳ ವಿಚಾರದ ಭಿನ್ನಾಭಿಪ್ರಾಯಗಳ ಮದ್ಯದಲ್ಲಿಯೂ ಸಹ ಒಬ್ಬ ವ್ಯಕ್ತಿಯು ನಿಜವಾದ ಕ್ರೈಸ್ತನಾಗಿ ಜೀವಿಸಲು ಸಾಧ್ಯ ಎಂಬ ಮುಖ್ಯಾಂಶವನ್ನು ತಿಳಿಸುವುದೇ ಈ ಸಾಮಾನ್ಯ ವಿಷಯಗಳ ಉದ್ದೇಶವಾಗಿದೆ. ಮುಖ್ಯಾಂಶವನ್ನು ಗ್ರಹಿಸಿಕೊಂಡಾಗ, ಕಹಿ ಭಾವನೆ ಮತ್ತು ದೋಷಾರೋಪಣೆಗಳು ನಿಂತು ಹೋಗುತ್ತವೆ. ಅನುಭವೀ ಕ್ರೈಸ್ತರು ಭಿನ್ನಾಭಿಪ್ರಾಯಗಳನ್ನು ಅಂಗೀಕರಿಸಿಕೊಂಡು ಹೋಗಲು ಕಲಿತುಕೊಂಡರು. ಬಹಳಷ್ಟು ವಿವಿಧ ತತ್ತ್ವಗಳನ್ನು ಹೊಂದಿಕೊಂಡಿರುವ ಅನೇಕ ಕ್ರೈಸ್ತರು ಒಗ್ಗೂಡಿ ನಡೆಯಲು ಮತ್ತು ಆರಾಧಿಸಲು, ಪ್ರಾರ್ಥಿಸಲು ಮತ್ತು ದೇವರ ಮಹಿಮೆಗಾಗಿ ಕೆಲಸ ಮಾಡಲು ಅನೇಕ ಸಭೆಗಳಲ್ಲಿ, ಸಂಸ್ಥೆಗಳಲ್ಲಿ ಒಪ್ಪಿಕೊಂಡಿದ್ದಾರೆ.

ನಾವು ಮಾಡುವ ಯಾವುದೇ ಕೆಲಸ ಅಥವಾ ಆಲೋಚನೆಯಲ್ಲಿ ಸಂಪೂರ್ಣರಲ್ಲ. ಆದರೆ ಸಂಪೂರ್ಣತೆಯನ್ನು ಗುರಿಯಾಗಿಟ್ಟುಕೊಂಡು ಮುಂದೆ ಸಾಗಬೇಕು. **ನಮ್ಮಲ್ಲಿರುವ ಅನುಭವಶಾಲಿಗಳು, ಎಲ್ಲಾ ವಿಷಯಗಳಲ್ಲೂ ಹಾಗೆಯೇ ಮಾಡಬೇಕು. ಒಂದು ವೇಳೆ ಯಾವುದೇ ವಿಷಯದಲ್ಲಿ ಬೇರೆಯಾಗಿ ಅಭಿಪ್ರಾಯಪಟ್ಟರೆ ದೇವರು ಅದನ್ನು ನಿನಗೆ ಮನದಟ್ಟು ಮಾಡುತ್ತಾನೆ. ನಾವು ಇದುವರೆಗೆ ಸಾಧಿಸಿದ್ದನ್ನು ಉಳಿಸಿಕೊಳ್ಳಲು ಜೀವಿಸೋಣ** (ಫಿಲಿಪ್ಪಿ 3:15-16)

---

[1]ಆದರೂ ಎಲ್ಲರು ಸಹಮತಿಸುವ ಏಕಾಬಿಪ್ರಾಯದ ವಿಷಯಗಳಾದ, ಯೇಸು ಕ್ರಿಸ್ತ,ರಕ್ಷಣೆಯ ಮಾರ್ಗ,ಮತ್ತು ಪವಿತ್ರಾತ್ಮ ಎಂಬಂತ ಇವುಗಳ ಬಗ್ಗೆ ವಿವರಿಸಲು ಈ ಸಾದಾರಣವಾದಂತಹ ಲೆಖನಗಳಲ್ಲಿ ಅಳವಡಿಸಲಾಗಿದೆ.

# ಯೇಸುಕ್ರಿಸ್ತನು

## ಯೇಸುಕ್ರಿಸ್ತನು - ಈತನು ಯಾರು?

ಯೇಸು ಕ್ರಿಸ್ತನಿಗೆ ಅನೇಕ ಹೆಸರುಗಳು ಅಥವಾ ಬಿರುದುಗಳು ಇವೆ. ಯೇಸು ಎಂಬ ಈ ಹೆಸರಿಗೆ ರಕ್ಷಿಸುವಾತನು ಎಂದು ಅರ್ಥ.ನಾವು ಸಾದಾರಣವಾಗಿ ಯೇಸು ಎಂಬ ಹೆಸರಿನ ಜೊತೆಗೆ ಕ್ರಿಸ್ತ ಎಂಬ ಪದವನ್ನುಸೇರಿಸುತ್ತವೆ.ಕ್ರಿಸ್ತ ಎಂಬ ಈ ಪದವು ಗ್ರೀಕ್ ಭಾಷೆಯ ಪದವಾಗಿದ್ದು ಇದರ ಹಾಗು ಇಬ್ರಿಯ ಭಾಷೆಯಲ್ಲಿರುವಂತ ಮೆಸ್ಸೀಯ ಎಂಬ ಹೆಸರಿನ ಅರ್ಥವು ಒಂದೆಯಾಗಿರುತ್ತದೆ. ಕ್ರಿಸ್ತ ಹಾಗು ಮೆಸ್ಸಿಯ ಎಂದರೆ'ಅಭಿಷೇಕಿಸಲ್ಪಟ್ಟವನು ಅಥವಾ ಸೇವೆಗಾಗಿ ದೇವರಿಂದ ಅಭೀಷೇಕ ಹೊಂದಿದವನು ಎಂದು ಅರ್ಥ.

ಯೇಸು ಕ್ರಿಸ್ತನು ಅಂತಿಮಾಗಿ ಈ ಲೋಕಕ್ಕೆ ಬಂದಾಗ,ನೂರಾರು ವರ್ಷಗಳಿಂದ ಯೆಹೂದ್ಯರು ಅಭಿಷಕ್ತನ ನಿರೀಕ್ಷೆಯಲ್ಲಿದ್ದರು.ಜನರ ಪಾಪಗಳನ್ನು ಮತ್ತು ದುಖಃಗಳನ್ನು ಹೊತ್ತುಕೊಳ್ಳುವಂತ ವಾಗ್ದನದ ಮೆಸ್ಸಿಯನ ಬಗ್ಗೆ ಪ್ರವಾದಿಯಾದ ಯೆಶಾಯನು ಬರೆದಿದ್ದಾನೆ..(ಯೆಶಾಯ 53:1-12) ಹಾಗೆಯೆ ಈತನು ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾದಾನದ ಪ್ರಭುವು ಎಂದು ಕರೆಯಲ್ಪಡುವನು ಎಂದು ಯೆಶಾಯನು ಹೀಗೂ ಹೇಳಿದನು. (ಯೆಶಾಯ 5:1(ರೋಮಾ. ನೋಡಿರಿ ಮತ್ತು ವ್ಯಾಖ್ಯಾನಿಸಿರಿ) ಆದಾಗ್ಯೂ ಯೆಹೂದ್ಯರು, ದೇವರು ತಾನೆ ಮನುಷ್ಯನಾಗಿ ಧರೇಗೆ ಬರುವನು ಅಥವಾ ತಮ್ಮ ಮೆಸ್ಸಿಯನು ಶಿಲುಬೇಯ ಮೇಲೆ ಸಾಯುವನು ಎಂದು ನಂಬದೆಯಿದ್ದು ತಮ್ಮನ್ನು ರೋಮ್ ಸಾಮ್ರಾಜ್ಯದ ರಾಜಕಿಯ ಬಂಧನದಿಂದ ಬಿಡುಗಡೆ ಮಾಡುವಂತ ಒಬ್ಬ ರಾಜನಿಗಾಗಿ ಎದುರು ನೋಡುತ್ತಿದ್ದರು.. ದೇವರ ಮಗನು ಮತ್ತು ಮನುಷ್ಯಕುಮಾರನು ಎಂಬಂತ ಇವುಗಳು ಕ್ರಿಸ್ತನಿಗಾಗಿಉಪಯೋಗಸಪ್ಪ ಡುವಅನ್ವರ್ಥನಾಮಗಳಾಗಿವೆ. (ಮಾರ್ಕ. 2:10, ಯೋಹನ 1:14,18, 34, 5:25-27 ಮತ್ತು ವ್ಯಾಖ್ಯಾನವನ್ನು ನೋಡಿರಿ). ದೇವರ ಮಗನು ಎಂಬದು ಸಾದಾರಣವಾಗಿ ಯೇಸುವಿನ ದೈವತ್ವವನ್ನು ಸೂಚಿಸುತ್ತದೆ.ಹಾಗೆಯೆ ಮನುಷ್ಯಕುಮಾರನು ಎಂಬುದು ಮೆಸ್ಸಿಯನ ಪಾತ್ರದ ಬಗ್ಗೆ ಒತ್ತಿ ಹೇಳುತ್ತದೆ.ಹಳೇ ಒಡಂಬಡಿಕೆಯಲ್ಲಿ, ಮೆಸ್ಸಿಯನು ಮನುಷ್ಯಕುಮಾರನು ಎಂದು ಕರೆಯಲ್ಪಟ್ಟಿದ್ದಾನೆ. (ದಾನಿಯೇಲ.7:13-14) ಈ ಮೆಸ್ಸಿಯನು ಪರಲೋಕದಿಂದ ಬಂದಂತ ಮನುಷ್ಯಕುಮಾರನಾಗಿದ್ದು, ದೈವಾರಾಧನೆಯನ್ನು ಹೊಂದುವಂತವನಾಗಿದ್ಯಾಗ್ಯೂ,ಯೇಸುವು ತನ್ನ ಮನುಷ್ಯತ್ವವನ್ನು ವ್ಯಕ್ತಪಡಿಸುವುದಕ್ಕಾಗಿ ಮನುಷ್ಯಕುಮಾರನ ಎಂಬಂತ ಮಾತನ್ನು ಪದೇ ಪದೇ ಒತ್ತಿ ಹೇಳುತ್ತಿದ್ದನು.(ಮತ್ತಾಯ..8:20, 11:19, 17:22-23)ಈ ಮಾತುಗಳನ್ನೆ (ಮತ್ತಾಯ.26:63-65)ರಲ್ಲಿ ಬದಲಾಯಿಸಿಕೊಂಡು ಬಳಸಲಾಗಿದೆ.

ನಾವು ಎರಡು ಸಂಗತಿಗಳನ್ನು ಕ್ರಿಸ್ತನ ಬಗ್ಗೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕ್ಟಃ ಮೋದಲನೆಯದಾಗಿ,ಕ್ರಿಸ್ತನು ಸಂಪೂರ್ಮವಾಗಿ ಮನುಷ್ಯನಾಗಿದ್ದನು ಮತ್ತು ಎರಡನೆಯದಾಗಿ, ಸಂಪೂರ್ಣವಾಗಿ ದೇವರು ಕೂಡ ಆಗಿದ್ದನು.ಕ್ರಿಸ್ತನು ಜೋತೆಯಾಗಿಯೆ ದೇವರು ಮತ್ತು ಮಾನವನು ಆಗಿದ್ದಾನೆ.(ರೋಮಾ.1:3-4)

## ಯೇಸು ಕ್ರಿಸ್ತನು ದೇವರಾಗಿದ್ದಾನೆ

ಯೇಸು ಕ್ರಿಸ್ತನಲ್ಲಿ ದೈವೀಕವಾದಂತ ಗುಣಗಳಿವೆ ಈತನು ನಿತ್ಯನೂ, ಯಾವಾಗಲೂ ದೇವರೊಂದಿಗೆ ಇದ್ದಂತವನು ಆಗಿದ್ದಾನೆ. (ಯೋಹಾನ.1:1-2,17:1-5) ವಿಶ್ವದ ಸೃಷ್ಟಿಯ ಕಾರ್ಯದಲ್ಲಿ ಯೇಸು ಕ್ರಿಸ್ತನು ತನ್ನನ್ನು ತೊಡರಿಸಿಕೊಂಡಿದ್ದನು. (ಯೋಹಾನ.1:3 ಕೊಲಸ್ಸೆ., 1:16-17 .ಇಬ್ರಿಯಾ1:2) ದೇವರು ಯೇಸು ಕ್ರಿಸ್ತನಲ್ಲಿದ್ದನು ಮತ್ತು ಯೇಸು ಕ್ರಿಸ್ತನು ದೇವರಲ್ಲಿದ್ದನು., (ಯೋಹಾನ.14:10,17:21, 23)

ಯೇಸುವು ದೇವರ ಒಬ್ಬನೆ ಒಬ್ಬ ಮಗನಾಗಿದ್ದನು ಅಥವಾ ಚೊಚ್ಚಲು ಮಗನು (ಯೋಹಾನ.3:16,18 ಕೊಲೊಸ್ಸೆ. 1:15,18ಇಬ್ರಿಯಾ 1:6).

ಹೆಚ್ಚುವಿಶೇಷವಾಗಿ ಸತ್ಯವೇದವು ಹೇಳುವುದೆಂದರೆ, ಯೇಸುವು ನಮಗೆ ತಂದೆಯನ್ನು ತೋರಿಸಿಕೊಟ್ಟಿದ್ದಾನೆ (ಯೋಹಾನ.1:18, 14: 9). ಮತ್ತು ಆತನು ಅದೃಶ್ಯನಾದ ತಂದೆಯ ಪ್ರತಿರೂಪವಾಗಿದ್ದಾನೆ(.ಕೊಲೊಸ್ಸೆ. 1:15).ಮತ್ತು ಆತನ ಇರುವಿಕೆಯ ನಿಜವಾದ ಪ್ರತಿನಿದಿಯಾಗಿದ್ದಾನೆ.(.ಇಬ್ರಿಯಾ. 1:3) ಯೇಸವು ದೇವರೊಡನೆ ಒಂದಾಗಿದ್ದನು ಎಂದು (ಯೋಹಾನ.10:30, 17: 11,22 ).ಅಥವಾ ದೇವರಿಗೆ ಸರಿಸಮಾನನಾಗಿದ್ದನು ಎಂದು ಸತ್ಯವೇದವು ಎಲ್ಲಾ ಕಡೆಯಲ್ಲಿ ಹೇಳುತ್ತದೆ (ಫಿಲಿಪ್ಪ 2:6). ನಿಜವಾಗಿಯು ಯೇಸುವನ್ನು ದೇವರೆಂದು ಪ್ರಕಟಪಡಿಸುತ್ತದೆ.(ಯೋಹಾನ.1:1, ರೋಮ 9:5, ಇಬ್ರಿಯಾ 1:8). ಯೇಸುವು ಭಾಗಶಃ ದೇವರಲ್ಲ ಆದರೆ ಯೇಸುವು ದೈವತ್ವದಲ್ಲಿ ಸಂಪೂರ್ಣನು ( ಕೊಲೊಸ್ಸೆ. 1:19,2 :9).ಯೇಸುವು ಸಂಪೂರ್ಣದೇವರು.

## ಯೇಸು ಕ್ರಿಸ್ತನು ಮನುಷ್ಯನು

ಆದರೆ ಯೇಸುವು ಸಂಪೂರ್ಣ ಮನುಷ್ಯನಾಗಿದ್ದಾನೆ. ಆತನು ಪರಿಶುದ್ಧಾತ್ಮನಿಂದ ಗರ್ಭ ದರಿಸಿದರು ಆತನಿಗೆ ಲೌಕಿಕವಾಗಿಒಬ್ಬ ತಾಯಿಯು ಇದ್ದು ಮತ್ತು ಆಕೆಯಲ್ಲಿ ಈ ಲೋಕಕ್ಕೆ ಮನುಷ್ಯನಾಗಿ ಜನ್ಮತಾಳಿದನು (ಮತ್ತಾಯ 1:20. ಲೂಕ. 1:34,35) ಯೇಸುವು ದೇವರಾಗಿದ್ದರೂ ಸಹ ಮನುಷ್ಯನಾಗಿ ಸದೃಶ್ಯನಾದನು (ಫಿಲಿಪ್ಪ 2:7).ಆತನನ್ನು ಮನುಷ್ಯರು ಮುಟ್ಟಿದ್ದಾರೆ (1ನೇ ಯೋಹಾನ 1:1-2). ಮತ್ತು ಆತನಿಗೆ ಆಯಾಸವಾಯಿತು,ಹಸಿವೆಯಾಯಿತು ಮತ್ತು ಇತರ ಮನುಷ್ಯರಂತೆ ಬಾಯಾರಿಕೆಯಾಯಿತು. ಮನುಷ್ಯರಂತೆ ಆತನು ಅತ್ತನು.ನಮ್ಮಂತೆಯೇ ಪ್ರತಿಯೊಂದು ವಿಷಯದಲ್ಲೂ ಶೋಧನೆಗೆ ಒಳಗಾದನು (ಇಬ್ರಿಯಾ 4:15). ದೇವರು ಆತನಿಗೆ ಮುಂದಿನ ಭವಿಷ್ಯವನ್ನು ತಿಳಿಸದೇ ಇದ್ದುದರಿಂದ ಯೇಸುವು ನಮ್ಮಂತೆಯೇ ಮೌನವನ್ನು ತೋರಿಸಿದನು.(ಮಾರ್ಕ.13:32).

ಯೇಸುವು ಸಂಪೂರ್ಣ ಮನುಷ್ಯನಾದನು ಎಂದು ವಿಶ್ವಾಸಿಸುವವುದು ಬಹಳ ಮುಖ್ಯ. ಯೋಹಾನನು ಹೇಳುವ ಪ್ರಕಾರ ಮೋಸಗಾರರೂ ಮತ್ತು ಸುಳ್ಳು ಪ್ರವಾದಿಗಳು ಯೇಸುವೂ ಶರೀರಧಾರಿಯಾಗಿ ಬರಲಿಲ್ಲವೆಂದು ನಿರಾಕರಿಸುವುದನ್ನು ಆತ್ಮನ ಪರೀಕ್ಷೆಯಾಗಿದೆ ಎಂದು ತಿಳಿಸುತ್ತಾನೆ (1ನೇ ಯೋಹಾನ 4:1-2).

## ಯೇಸುಕ್ರಿಸ್ತನ ಬಗ್ಗೆ ದುರ್ಬೋಧನೆ

ಯೇಸುವಿನ ಬಗ್ಗೆ ಸುಳ್ಳು ತತ್ವಗಳನ್ನು ಬೋಧಿಸುವವರಿಂದ, ಸಭೆಗೆ ಅನೇಕ ತೊಂದರೆಗಳು, ಮೊದಲಿನಿಂದಲೂ ಬಂದವುಗಳಾಗಿರುತ್ತದೆ. ಯೇಸುವಿನ ಬಗ್ಗೆ ತಪ್ಪು ತಿಳುವಳಿಕೆ ಹೊಂದಿ, ಸುಳ್ಳು ಬೋಧನೆಗಳ ನಿಮಿತ್ತದಿಂದ ದೂರ ಸರಿದಿರುವವರು ಈಗಲೂ ಇದ್ದಾರೆ. ಈ ಸುಳ್ಳು ಬೋಧನೆಗಳನ್ನು ಮೂರು ಮುಖ್ಯ ಅಭಿಪ್ರಾಯಗಳಾಗಿ ವಿಂಗಡಿಸಬಹುದು.

ಮೊದಲನೇ ಸುಳ್ಳು ಕಲ್ಪನೆ. ಯೇಸುವು ಬರೀ ಒಬ್ಬ ಮನುಷ್ಯ, ದೇವರಲ್ಲವೇ ಅಲ್ಲ. ಈ ತತ್ವವನ್ನು ನಂಬಿರುವವರು, ಯೇಸುವು ಒಬ್ಬ ಮಹಾನೀತಿ ಬೋಧಕನು ಮತ್ತು ಅವನನ್ನು ದೇವರು ಆಶೀರ್ವದಿಸಿದ್ದಾನೆ ಎಂದು ನಂಬುತ್ತಾರೆ. ಆದರೆ ಅತನು ದೇವರೆಂಬುದನ್ನು ನಿರಾಕರಿಸುತ್ತಾರೆ.

ಎರಡನೆಯ ಸುಳ್ಳು ಕಲ್ಪನೆ. ತದ್ವಿರುದ್ಧವಾಗಿದ್ದು, ಯೇಸುವು ದೇವರಾಗಿದ್ದಾನೆ. ಆದರೆ ಮನುಷ್ಯನಲ್ಲ. ಕೆಲವರು ಯೇಸುವು ಒಂದು ಆತ್ಮ ಮತ್ತು ಆತನಿಗೆ ಬೇರೆ ಮನುಷ್ಯರಂತೆ ಒಂದು ಶರೀರವಿರಲಿಲ್ಲವೆಂದು, ಇನ್ನೂಕೆಲವರು ಯೇಸುವಿನ ಆತ್ಮವು ಮನುಷ್ಯನ ಆತ್ಮವಾಗಿರದೆ ಮಾನವನ ಶರೀರದಲ್ಲಿದ್ದಂತ ದೇವರ ಆತ್ಮವಾಗಿತ್ತು ಎಂದು ಹೇಳುತ್ತಾರೆ. ಆದರೆ ಇದು ಸಹ ಸತ್ಯವಲ್ಲ. ಯಾಕೆಂದರೆ ಯೇಸುವು ಶರೀರಧಾರಿಯಾಗಿದ್ದು ಸಂಪೂರ್ಣ ಮನುಷ್ಯನಾಗಿದ್ದನು ಮತ್ತು ಮಾನವ ಆತ್ಮವು ಆತನಲ್ಲಿತ್ತು (ಇಬ್ರಿಯಾ 2:17-18).

ಮೂರನೇ ಸುಳ್ಳು ಕಲ್ಪನೆ. ಏನಂದರೆ. ಯೇಸುವು ದೇವರಾಗಿದ್ದಾನೆ ಆದರೆ ತಂದೆಯಾದ ದೇವರಿಗಿಂತ ಕಡಿಮೆಯುಳ್ಳವನು. ಈ ರೀತಿ ಹೇಳುವವರು ಶರೀರವು ಕಲ್ಮಶವಾಗಿದೆ ಮತ್ತು ಪಾಪಮಯವಾಗಿದೆ ಮತ್ತು ನಿಜವಾದ ದೇವರು ಎಂದಿಗೂ ಮಾನವರೂಪದಲ್ಲಿ ಕಾಣಿಸಿಕೊಳ್ಳುವುದಿಲ್ಲ. ಆದರೆ ಯೇಸುವು ತಂದೆ ದೇವರಿಂದ ಕಳಿಸಲ್ಪಟ್ಟ ಕಡಿಮೆ ದರ್ಜೆಯ ದೇವರು. ಆದರೆ ತಾನೇ ದೇವರಲ್ಲ ಎಂದು ಇವರು ಹೇಳುತ್ತಾರೆ.

ಹೀಗೆ ಹೇಳುವ ಈ ಜನರು ನಿಜವಾದ ಕ್ರೈಸ್ತರಲ್ಲ ಯೇಸು ಹೇಳಿದಂತ ಈ ವಚನದ ಕಡೆ ಬೆಟ್ಟುಮಾಡಿ, ನನಗಿಂತ ತಂದೆಯು ದೊಡ್ಡವನು ಎಂಬುದನ್ನು ತೋರಿಸುತ್ತಾರೆ (ಯೋಹಾನ 14:28).ಅಂದರೆ ಯೇಸುವು, ತಂದೆ ದೇವರು ನನಗಿಂತ ದೊಡ್ಡವನು ಎಂದು ಹೇಳಿದ್ದನ್ನು ಉಲ್ಲೇಖಿಸಿ, ತಾನು ಆತನಲ್ಲಿ ಅವತರಿಸಿದ ಮಗನಾಗಿರುವುದರ ಸಂಬಂಧವಾಗಿ

ಮಾತನಾಡಿದನು ಎಂದುಹೇಳುತ್ತಾರೆ.ಆದರೆ ಬೇರೊಂದು ಕಡೆ ಯೇಸುವು "ನಾನು ನನ್ನ ತಂದೆಯು ಒಂದೇ" (ಯೋಹಾನ 10:30). ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ (ಯೋಹಾನ 14:9) ಯೇಸುವು ಆದಿಯಿಂದಲೂ ತಂದೆಯೊಡನೆ ಇದ್ದನು ಮತ್ತು ಆತನು ದೇವರೇ ಆಗಿದ್ದನು (ಯೋಹಾನ 1:1)ಎಂದು ಯೋಹಾನನು ಈ ರೀತಿಯಾಗಿ ಸ್ಪಷ್ಟವಾಗಿ ಹೇಳುತ್ತಾನೆ.

ಆದುದರಿಂದ ಯೇಸುವು ಸಂಪೂರ್ಣ ದೇವರು ಮತ್ತು ಸಂಪೂರ್ಣ ಮಾನವನು ಆಗಿದ್ದನು ಎಂಬುದನ್ನು ನಾವು ಮೇಲೆ ತಿಳಿಸಿದ ಪ್ರಕಾರ ನೋಡಿದೆವು.

## ಯೇಸುಕ್ರಿಸ್ತನ ಕಾರ್ಯ

ಯೇಸುವು ಸೃಷ್ಟಿಕರ್ತನು ಮತ್ತು ಭೂಲೋಕವನ್ನು ಕಾಪಾಡುವವನಾಗಿದ್ದಾನೆ (ಯೋಹಾನ 1:3-10, ಕೊಲಸ್ಸೆ 1:16-17, ಇಬ್ರಿಯಾ 1:2, 3). ಯೇಸುವು ಪರಲೋಕದಲ್ಲಿ ಉಳಿದುಕೊಳ್ಳಲಿಲ್ಲ. ಆದರೆ ಅಲ್ಲಿದ್ದ ಆ ಮಹಿಮೆಯನ್ನು ತ್ಯಜಿಸಿದನು (ಯೋಹಾನ 17:1-5) ಮತ್ತು ಮಾನವರೂಪ ತಾಳಿದನು. ಯೇಸುವು ಮನುಷ್ಯನಾಗಿ ಅವತರಿಸಿದ್ದರ ಬಗ್ಗೆ ಎರಡು ಮುಖ್ಯ ಕಾರಣಗಳಿವೆ.

ಮೊದಲನೇ ಕಾರಣ, ನಾವು ಯೇಸುವನ್ನು ನೋಡುವಾಗ, ನಾವು ದೇವರ ಸ್ವರೂಪವನ್ನೇ ಕಾಣುತ್ತೇವೆ. ಯಾವುದೇ ಕಾಲದಲ್ಲಿ ಯಾರು ತಂದೆ ದೇವರನ್ನು ನೋಡಿರಲಿಲ್ಲ (ಯೋಹಾನ 6:46). ಆದರೆ ಯೇಸುವು ನಮಗೆ ತಂದೆಯನ್ನು ತೋರಿಸಿದನು (ಯೋಹಾನ 12:45, 14:7-9). ಉದಾಹರಣೆಗಾಗಿ ನಾವು ಯೇಸುವನ್ನು ನೋಡಿದಾಗ ಮತ್ತು ಆತನು ಏನು ಹೇಳಿದನು ಮತ್ತು ಮಾಡಿದನು ಎಂದು ನಾವು ತಿಳಿಯುವಾಗ ತಂದೆಯು ಒಳ್ಳೆಯವನು ಮತ್ತು ಪ್ರೀತಿದಾಯಕನು ಮತ್ತು ಆತನು ನಮ್ಮ ಪಾಪಗಳನ್ನು ಕ್ಷಮಿಸುವುದಲ್ಲದೇ ನಮ್ಮ ಎಲ್ಲಾ ಕೊರತೆಗಳ ಮತ್ತು ಸಮಸ್ಯೆಗಳ ಬಗ್ಗೆಯೂ ಕನಿಕರ ಉಳ್ಳವನಾಗಿದ್ದಾನೆ ಎಂದು ನಮಗೆ ಅನುಭವವಾಗುತ್ತದೆ.

ಯೇಸುವಿನ ಅವತಾರದ ಎರಡನೇ ಕಾರಣವೇನೆಂದರೆ, ನಮ್ಮ ರಕ್ಷಣೆಗಾಗಿ ಆತನು ಮರಣ ಹೊಂದಿ ಮತ್ತು ಪುನರುತ್ಥಾನವಾದದ್ದು.ಯೇಸುವು ನಮ್ಮ ರಕ್ಷಕನು ಅಂದರೆ ನಮ್ಮನ್ನು ಪಾಪದಿಂದಲೂ ಮತ್ತು ದರ್ಮಶಾಸ್ತ್ರದ ಶಾಪದಿಂದ ಬಿಡುಗಡೆ ಮಾಡುವುದು.(ಮಾರ್ಕ 10:45, ಗಲಾತ್ಯ 3:13 ಮತ್ತು ವ್ಯಾಖ್ಯಾನ). ದೇವರು ನಮ್ಮ ಬಿಡುಗಡೆಗಾಗಿ, ಬೆಳ್ಳಿಯನ್ನಾಗಲಿ ಚಿನ್ನವನ್ನಾಗಲಿ ಕೊಡಲಿಲ್ಲ. ಬದಲಾಗಿ ತನ್ನ ಸ್ವಂತ ಅಮೂಲ್ಯ ರಕ್ತವನ್ನೇ ಕೊಟ್ಟನು (1ನೇ ಪೇತ್ರ 1:18, 19). ಇಂತಹ ಈಡು ಕೊಡುವಿಕೆಯು ಕತ್ತಲೆಯ ಅಧಿಕಾರದಿಂದ ನಮ್ಮನ್ನು ಬಿಡಿಸಿತು ಮತ್ತು ನಮ್ಮನ್ನು ಮಗನ ರಾಜ್ಯಕ್ಕೆ ಕರೆದುತಂದಿತು (ಕೊಲಸ್ಸೆ 1:13-14) ಎಂದು ಸತ್ಯವೇದವು ತಿಳಿಸುತ್ತದೆ.

ಪರಿಶುದ್ಧನಾದ ದೇವರು ಪಾಪವನ್ನು ತಿರಸ್ಕರಿಸುವನು ಮತ್ತು ಶಿಕ್ಷಿಸುವನು. ಆದರೆ ಯೇಸುವು ತಾನು ಶಿಲುಬೆಯ ಮೇಲೆ ಪ್ರಾಣ ಕೊಡುವುದರ ಮೂಲಕ ನಮ್ಮ ಪಾಪಗಳನ್ನು ಮತ್ತು ಅದಕ್ಕೆ ತಕ್ಕ ಶಿಕ್ಷೆಯನ್ನು ತನ್ನ ಮೇಲೆ ತೆಗೆದುಕೊಂಡನು. ಆದುದರಿಂದ ಯೇಸು ನಮಗಾಗಿ ಯಜ್ಞಪಶುವಾದನು. ಅರ್ಥಾತ್ ನೀತಿಯುತವಾದ ಹಕ್ಕುಗಳ ಕೇಳಿಕೆಗಳಿಗಾಗಿ ಪರಿಶುದ್ಧನಾದ ತಂದೆಯನ್ನು ಸಂತೃಪ್ತಿಪಡಿಸಿದನು (ರೋಮಾಯ 3:25, 1ನೇ ಯೋಹಾನ 2:2). ಯೇಸುವಿನ ಯಜ್ಞವು ಪಾಪಿಗಳನ್ನು ಕ್ಷಮಿಸಿ ಮತ್ತು ಇನ್ನು ಪರಿಶುದ್ಧರನ್ನಾಗಿ ಮಾಡುತ್ತದೆ. ಯಾಕೆಂದರೆ, ಆತನು ಪಾಪವನ್ನು ಗಣನೆಗೆ ತೆಗೆದುಕೊಳ್ಳದೇ ಪಾಪವನ್ನು ಶಿಕ್ಷಿಸಿದನು. ನಮ್ಮ ಪಾಪಿಗಳ ದೆಸೆಯಿಂದ ದೇವರಿಂದ ಬೇರ್ಪಟ್ಟೆವು. ಆದರೆ ದೇವರು ಕ್ರಿಸ್ತನ ಮತ್ತು ಆತನ ರಕ್ತದ ಮೂಲಕ ನಮ್ಮೊಂದಿಗೆ ತನ್ನನ್ನು ರಾಜಿ ಮಾಡಿಕೊಂಡನು .(2ನೇ ಕೊರಿಂಥ 5:18, ರೋಮಾ 5:1, 9-11, ಕೊಲಸ್ಸೆ 1:20-22).

ಶಿಲುಬೆಯ ಮೇಲಿನ ಮರಣ ಮತ್ತು ರಕ್ತಸುರಿಸುವಿಕೆಯ ಮೂಲಕ ನಾವು ಪಾಪಕ್ಕೆ ಕ್ಷಮಾಪಣೆ ಹೊಂದುತ್ತೇವೆ. ಅಂದರೆ ದೇವರು ನಮ್ಮ ಪಾಪಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂದು ಅರ್ಥೈಸಬಾರದು.

ಆದರೆ ನಮ್ಮ ಪಾಪಗಳನ್ನು ದೇವರು ಅಳಿಸಿಬಿಡುತ್ತಾನೆ (ಕೊಲಸ್ಸೆ 2:13-14, ಇಬ್ರಿಯಾ 10:17) ಮತ್ತು ಸ್ವಚ್ಛಗೊಳಿಸುತ್ತಾನ'ಎಂದು ತಿಳಿಯಬೇಕು (ಇಬ್ರಿಯಾ 9:14, 22, 1ನೇ ಯೋಹಾನ 1:7-9). ಕ್ರಿಸ್ತನು ತನ್ನ ಶಿಲುಬೆಯ ಮರಣದಿಂದ ಸೈತಾನ ನ್ನು ಹೊರಹಾಕಿದನು ಮತ್ತು ನಾಶಪಡಿಸಿದನು (ಯೋಹಾನ 12:31, ಇಬ್ರಿಯಾ 2:14-15). ಯೇಸುವು ನಮ್ಮೆಲ್ಲಾ ರೋಗಗಳನ್ನು ಶಿಲುಬೆ ಮೇಲೆ ಹೊತ್ತುಕೊಂಡು, ನಮ್ಮ ಶರೀರಕ್ಕೆ ಆ ಮೂಲಕ ಸ್ವಸ್ಥತೆ ಕೊಟ್ಟು ಮತ್ತು ದುರಾತ್ಮಗಳಿಂದ ನಮಗೆ ಬಿಡುಗಡೆಕೊಟ್ಟನೆಂದು ಅನೇಕ ಕ್ರೈಸ್ತರು ನಂಬುತ್ತಾರೆ (ಯೆಶಾಯ 53:4-5, ಮತ್ತಾಯ 8:16, 17, ಮಾರ್ಕ 1:27,ಸಾಮಾನ್ಯ ವಿಷಯಗಳು ಸ್ವಸ್ಥತೆ ಮತ್ತು ಬಿಡುಗಡೆ).ಮತ್ತು ಯೇಸುವು ತನ್ನ ಪುನರುತ್ಥಾನದಿಂದ ನಮಗೆ ಶಾರೀರಿಕ ಪುನರುತ್ಥಾನ ಮತ್ತು ನಿತ್ಯ ಜೀವವನ್ನು ಕೊಡುತ್ತಾನೆ (ಯೋಹಾನ 6:54, 58, 11:25-26, 1ನೇ ಕೊರಿಂಥ 15:20-22).

ಯೇಸುವು ನಮಗಾಗಿ ಮೇಲೆ ತಿಳಿಸಿದ ಎಲ್ಲಾ ಆಶೀರ್ವಾದಗಳನ್ನು ಶಿಲುಬೆಯ ಮರಣದ ಮೂಲಕ ಗಳಿಸಿ ಕೊಟ್ಟನು ಮತ್ತು ಯೇಸುವಿಗೆ ಇನ್ನು ಮಾಡಿಕೊಂಡಿರಬೇಕಾದಂತ ಕೆಲಸಗಳಿವೆ. ಯೇಸುವು ಪಂಚಾಶತ್ತಮದ ಮೊದಲನೇ ದಿನ ಸಭೆಯನ್ನು ಬಲಪಡಿಸಲು ಪವಿತ್ರಾತ್ಮನನ್ನು ಕಳಿಸಿಕೊಟ್ಟನು (ಯೋಹಾನ 14:16-17, 15:26, 27, ಅ.ಕೃ. 2:1-4) ಮತ್ತು ಈಗಲೂ ಸಹ ಯೇಸು ಪವಿತ್ರಾತ್ಮನನ್ನು ಕಳುಹಿಸುತ್ತಲೇ ಇದ್ದಾನೆ (ಮಾರ್ಕ 1:7-8 ಸಾಮಾನ್ಯ ವಿಷಯಗಳು. ಪವಿತ್ರಾತ್ಮನಿಂದ ದೀಕ್ಷಾಸ್ನಾನ). ಪವಿತ್ರಾ ತ್ಮನ ಮೂಲಕ ನಮ್ಮೊ ಡನೆ ಯಾವಾಗಲೂ ಇರುತ್ತೇನೆಂದು ವಾಗ್ದನ ಮಾಡಿದ್ದಾನೆ (ಮತ್ತಾಯ 18:20, 28:20, ಯೋಹಾನ 14:16-18). ಯೇಸುವು ಪರಲೋಕದಲ್ಲಿ ನಮ್ಮ ಮಧ್ಯಸ್ಥಗಾರನು ಮತ್ತು ಸಹಾಯಕನು ಹಾಗು ನಮಗೋಸ್ಕರ ಪ್ರಾರ್ಥಿಸುವವನೂ ಆಗಿದ್ದಾನೆ (ರೋಮಾ 8:34, 1ನೇ ಯೋಹಾನ 2:1). ಯೇಸುವು ಸಭೆಯ ಶಿರಸ್ಸಾಗಿದ್ದಾನೆ (ಎಫೆಸ 5:23, ಕೊಲಸ್ಸೆ 1:18) ಮತು ಎಲ್ಲಾ ವಿಷಯಗಳಿಗೂ ಒಡೆಯನಾಗಿದ್ದಾನೆ (ಮತ್ತಾಯ 28:18, ಎಫೆಸ 1:20-22 ಫಿಲಿಪ್ಪಿ 2:9-11).

## ಕ್ರಿಸ್ತನ ಅದ್ವಿತೀಯತೆ

ಯೇಸುವು ಬೇರೆಯ ಧಾರ್ಮಿಕ ಮುಖಂಡರುಗಳು ಅಥವಾ ಸಂಸ್ಥಾಪಕರಂತಿಲ್ಲ. ಬೇರೆಲ್ಲಾ ಮತೀಯ ಮುಖಂಡರುಗಳನ್ನು ದೈವೀಕ ಶಕ್ತಿಯುಳ್ಳವರೆಂತಲೂ ಅಥವಾ ಮನುಷ್ಯರೆಂತಲೂ ತಿಳಿಯಬಹುದೇ ಹೊರತು ಎರಡನ್ನು ಅಲ್ಲ. ಇನ್ನಿತರ ಎಲ್ಲಾ ಧರ್ಮಗಳ ಮುಖಂಡರು ಮಾನವರಾಗಿದ್ದು ಸತ್ತು ಹೋದರು ಮತ್ತು ಮತ್ತೊಮ್ಮೆ ಎದ್ದು ಬಂದಿದ್ದಾರೆ ಎಂದು ಯಾರು ಸಾಧಿಸುವುದಿಲ್ಲ.ಯೇಸುವಿನದು ನಿಜವಾದ ದೇವರ ಅವತಾರವೇ ಸರಿ. ಕೆಲವರು ಯೇಸುವಿನದು ಅನೇಕ ಅವತಾರಗಳಲ್ಲಿ ಒಂದು ಅವತಾರವೆಂದು ಹೇಳುತ್ತಾರೆ. ಇದು ಸರಿಯಲ್ಲ . ನಿಜವಾಗಿ ಜೀವಿಸಿರುವ ದೇವರಿಗೆ ಒಂದೇ ಅವತಾರವಿದೆ. ಅದೇನೆಂದರೆ, ಯೇಸುಕ್ರಿಸ್ತನೇ. ನಿಜ ಅವತಾರ ಪುರುಷನೆಂದರೆ, ಆತನು ಸಂಪೂರ್ಣ ಮಾನವನಾಗಿದ್ದು ತನ್ನ ಜೀವನದಲ್ಲಿ ಸಂಪೂರ್ಣ ದೈವತ್ವ ಪಡೆದವನಾಗಿಬೇಕು (ರೋಮಾಯ 1:3-4). ನಿಜವಾದ ಅವತಾರ ಪುರುಷನು ಪಾಪರಹಿತ ಜೀವನವನ್ನು ಜೀವಿಸಬೇಕು. ಯೇಸುವು ಒಬ್ಬನೇ ಸಂಪೂರ್ಣ ಮಾನವನಾಗಿ ಜೀವಿಸಿದನು. ಆದರೂ ಪಾಪ ಮಾಡಲಿಲ್ಲ (ಇಬ್ರಿಯಾ 4:15, 1ನೇ ಪೇತ್ರ 2:22). ಬೇರೆಲ್ಲಾ ಅವತಾರಗಳು ಸಂಪೂರ್ಣವಾದ ದೇವರಲ್ಲ ಅಥವಾ ಸಂಪೂರ್ಣ ಮನುಷ್ಯರಲ್ಲ. ಆದರೆ ಪ್ರತಿಯೊಂದರಲ್ಲೂ ಸ್ವಲ್ಪ.

ಯೇಸುವು ದೇವರ ಮತ್ತು ಮನುಷ್ಯರ ಮಧ್ಯೆ ನಿಜವಾದ ಮಧ್ಯಸ್ಥಗಾರನಾಗಿದ್ದಾನೆ. ಯಾಕೆಂದರೆ ಆತನು ದೇವರು ಮತ್ತು ಮಾನವನೂ ಆಗಿದ್ದಾನೆ (ಇಬ್ರಿಯಾ 9:15). ಮನುಷ್ಯನಿಗಾಗಿ ಬಲಿದಾನ ಕೊಡುವ ನಿಮಿತ್ತವಾಗಿ, ಯೇಸುವು ನಿಜವಾದ ಮನುಷ್ಯನಾಗಬೇಕಾಯಿತು ಮತ್ತು ಆತನು ನಿಜವಾದ ದೇವರಾಗಬೇಕಾಗಿತ್ತು.(ಇಬ್ರಿಯಾ 4:14-15) ಕಾರಣ ದೇವರಿಗೆ ಇಷ್ಟವಾದ ಯಜ್ಞವಾಗಲು ಸಂಪೂರ್ಣ ಜೀವನ ಸಾಗಿಸಬೇಕಿತ್ತು (ಇಬ್ರಿಯಾ 9:14). ಯೇಸುವು ನಿಜವಾದ ಮನುಷ್ಯನಾಗಿ ದ್ದುಕೊಂಡು ಸೈತಾನನನ್ನು ಸೋಲಿಸಬೇಕಾಗಿತ್ತು (ಇಬ್ರಿಯಾ 2:14-17) ಮತ್ತು ಸೈತಾನನನ್ನು ಮತ್ತು ಆತನ ದುರಾತ್ಮಗಳನ್ನು ಗೆಲ್ಲಲು ಬಲಾಢ್ಯನಾಗಿರಬೇಕಾಗಿತ್ತು (ಕೊಲಸ್ಸೆ 2:15, ಪ್ರಕಟಣೆ 19:11-21).

ರಕ್ಷಣಾಮಾರ್ಗದಲ್ಲಿ ಯೇಸುವು ಮಾರ್ಗದರ್ಶಿಯಲ್ಲದೆ ಸ್ವತಃ ಆತನೇ ಮಾರ್ಗವಾಗಿದ್ದಾನೆ (ಯೋಹಾನ 14:6). ಯೇಸುವು ನಾವು ಸನ್ಮಾರ್ಗದಲ್ಲಿ ನಡೆಯಲು ಪ್ರೋತ್ಸಾಹಿಸುವ ಬೋಧಕನಾಗಿ ಮಾತ್ರರವಿರದೆ ನಾವು ಸನ್ಮಾರ್ಗದಲ್ಲಿ ಜೀವಿಸಲು ಶಕ್ತಿ ದಯಪಾಲಿಸಿದನು. ನೀತಿವಂತರಾಗಲು ನಮಗೆ ಆತನ ಬಲಕೊಟ್ಟನು.ನಮ್ಮನ್ನು ಪಾಪದ ಬಂಧನದಿಂದ ಬಿಡಿಸಿ,ಪರಿಶುದ್ಧಾತ್ಮನ ಮೂಲಕ ನಮಗೆ ಸ್ವಾತಂತ್ರತೆಯನ್ನು ಕೊಟ್ಟನು. ಯೇಸುವು ನಮಗೆ ಒಳ್ಳೇ ಬೋಧನೆಯನ್ನು ಕೊಟ್ಟದ್ದಲ್ಲದೇ ಎಲ್ಲಾ ವಿಶ್ವಾಸಿಗಳಿಗೂ ನಿತ್ಯ ಜೀವವನ್ನು ಕೊಟ್ಟನು.

ದೇವರ ಬಳಿಗೆ ಹೋಗಲು ಯೇಸುವೇ ನಿಜವಾದ ಮಾರ್ಗವಾಗಿದ್ದಾನೆ. ಯೇಸು ಹೀಗೆ ಹೇಳಿದನು. **ನಾನೇ ಮಾರ್ಗವೂ, ಜೀವವೂ, ಸತ್ಯವೂ ಆಗಿದ್ದೇನೆ. ನನ್ನ ಹೊರತು ಯಾರು ತಂದೆಯ ಬಳಿಗೆ ಬರಲಾರನು** (ಯೋಹಾನ 14:6). ಅಪೋಸ್ತಲನಾದ ಪೇತ್ರನು ಹೀಗೆ ಹೇಳಿದನು **ರಕ್ಷಣೆಯು ಯಾರಲ್ಲಿಯೂ ಸಿಗುವುದಿಲ್ಲ. ಯಾಕೆಂದರೆ ನಾವು ರಕ್ಷಣೆ ಹೊಂದಲು ಆಕಾಶದ ಕೆಳಗೆ ಯೇಸುವಿನ ಹೆಸರಿನಿಂದಲ್ಲದೇ, ಬೇರಾವ ಹೆಸರಿನಿಂದಲೂ ಸಾಧ್ಯವಾಗುವುದಿಲ್ಲ** (ಅ.ಕೃ. 4:12).

# ರಕ್ಷಣೆಯ ಮಾರ್ಗ

## ಮನುಷ್ಯನ ಪರಿಸ್ಥಿತಿ

ಸ್ವಾಭಾವಿಕವಾಗಿ ಎಲ್ಲಾ ಸ್ತ್ರೀ ಪುರುಷರೂ ಪಾಪಿಗಳೇ ಆಗಿದ್ದಾರೆ (ರೋಮಾಯ 3:10-12). ಮೊದಲನೇ ಪುರುಷ ಮತ್ತು ಸ್ತ್ರೀಯು ಪಾಪ ಮಾಡಿದರು (ಆದಿಕಾಂಡ 3:1-6). ಅಂದಿನಿಂದ ಎಲ್ಲಾ ಪುರುಷ್ಕರೂ, ಸ್ತ್ರೀಯರೂ ಮತ್ತು ಮಕ್ಕಳು ಪಾಪ ಮಾಡಿದರು (ರೋಮಾ 3:23). ಇದರ ಫಲಿತಾಂಶವೇ ದೈಹಿಕ ಮರಣ (ರೋಮಾ 5:12) ಮತ್ತು ಆತ್ಮೀಕವಾದ ಮರಣ (ರೋಮಾ 7:11, ಎಫೆಸ 2:1) ಇದು ಪ್ರತಿಯೊಬ್ಬರಿಗೂ ಬಂದಿತು. ರಕ್ಷಣೆ ಹೊಂದದಿರುವ ಜನರು ಪಾಪಕ್ಕೆ ಗುಲಾಮರಾಗಿದ್ದು ಕೆಡುಕನ್ನು ಮಾಡುವುದಕ್ಕೆ ವಿಧೇಯರಾಗಲು ಬಲತ್ಕಾರಕ್ಕೊಳಪಟ್ಟಿದ್ದಾರೆ (ರೋಮಾ 6:17-21) ಮತ್ತು ದೇವರಿಗೆ ಶತ್ರುಗಳಾಗಿದ್ದಾರೆ (ರೋಮಾ 8:7). ಬಹಳ ಜನರು ಒಳ್ಳೆಯ ಕೆಲಸಗಳನ್ನು ಮಾಡಿ ನೀತಿವಂತರಾಗಲು ಪ್ರಯತ್ನ ಮಾಡುತ್ತಾರೆ. ಆದರೆ ಯೆಶಾಯನು ಹೇಳುವ ಪ್ರಕಾರ ನಮ್ಮ ಸ್ವಂತ ನೀತಿಕಾರ್ಯಗಳೆಲ್ಲಾ ಹೊಲಸು ಬಟ್ಟೆಯಂತಿವೆ (ಯೆಶಾಯ 64:6).ಈ ಕಾರಣದಿಂದ ರಕ್ಷಣೆ ಹೊಂದಲು ಸಾಧ್ಯವೇ ಇಲ್ಲ. ಇನ್ನು ಕೆಲವರು ದೇವರು ಕಟ್ಟಳೆಯನ್ನು ಹಳೆ ಒಡಂಬಡಿಕೆಯಲ್ಲಿ ಕೊಟ್ಟಿರುವ ರೀತಿಯಲ್ಲಿ ನಡೆದುಕೊಂಡು ನೀತಿವಂತರಾಗಲೂ ಪ್ರಯತ್ನಿಸುತ್ತಾರೆ. ಆದರೆ ಇದೂ ಕೆಲಸಕ್ಕೆ ಬಾರದು (ಗಲಾತ್ಯ 2:15-16, 3:11, ನೋಡಿರಿ ಮತ್ತು ವ್ಯಾಖ್ಯಾನಿಸಿರಿ).

ಪುರುಷರೂ ಮತ್ತು ಸ್ತ್ರೀಯರು ತಮ್ಮ ಸ್ವಂತ ಇಚ್ಛೆಯಂತೆ ಅಥವಾ ಕಾರ್ಯಗಳ ಮೂಲಕ ರಕ್ಷಣೆ ಹೊಂದಲಾರರು (ರೋಮಾ 9:16). ಆದರೆ ಅವರು ದೇವರ ಕೃಪೆ ಮತ್ತು ಕರುಣೆಯಿಂದ ಮಾತ್ರ ರಕ್ಷಿಸಲ್ಪಡುವರು (ಎಫೆಸ 2:8-9, ತೀತ 3:4, ಮತ್ತು)

## ದೇವರ ಕಾರ್ಯ

ದೇವರು ನಮ್ಮ ರಕ್ಷಣೆಗಾಗಿ ಬೇಕಾದ ಎಲ್ಲಾ ಕಾರ್ಯವನ್ನೂ ಮಾಡಿದ್ದಾನೆ. ರೋಮಾ 8:29-30ರಲ್ಲಿ ಅಪೊಸ್ತಲನಾದ ಪೌಲನು ರಕ್ಷಣೆಗಾಗಿ ದೇವರು ಏನೆಲ್ಲಾ ನಮಗೆ ಮಾಡಿದನೆಂದು ಪಟ್ಟಿಗಳನ್ನು ಮಾಡಿದ್ದಾನೆ. ಈ ಭೂಲೋಕವು ಸೃಷ್ಟಿಸಲ್ಪಡುವುದಕ್ಕಿಂತ ಮುಂಚೆಯೇ ಆತನ ಮುಂದಾಲೋಚನೆಯ ಮೂಲಕ ನಮ್ಮ ಬಗ್ಗೆ ಪೂರ್ವನಿರ್ಣಯ ಮಾಡಿ ಆತನ ಮಗನ ರೂಪ ಕೊಟ್ಟಿದ್ದಾನೆ (ರೋಮಾ 8:29, 1ನೇ ಪೇತ್ರ 1:2). ಆತನು ನಮ್ಮನ್ನು ಕರೆದಿದ್ದಾನೆ. ನೀತಿವಂತರನ್ನಾಗಿ ಮಾಡಿದ್ದಾನೆ ಮತ್ತು ನಮ್ಮನ್ನು ಮಹಿಮೆಗೊಳಿಸಿದ್ದಾನೆ (ರೋಮಾ 8:30). ಈ ಎಲ್ಲಾ ಮಾತುಗಳೂ ಮತ್ತು ಕೆಲವುಗಳೂ, ದೇವರು ರಕ್ಷಣೆ ಎಂಬ ಪದದ ಅರ್ಥಾನುಸಾರ ಏನೆಲ್ಲಾ ಮಾಡಿದ್ದಾನೆ ಎಂಬುದನ್ನು ವರ್ಣಿಸುತ್ತವೆ.

ದೇವರು ನಮ್ಮನ್ನು ಕರೆದಿದ್ದಾನೆ. ತಂದೆಯು ಒಬ್ಬನನ್ನು ಎಳಕೊಳ್ಳದ ಹೊರತು ಯಾರೊಬ್ಬರು ಯೇಸುವಿನ ಬಳಿಗೆ ಬರಲಾರರು ಎಂದು ಸತ್ಯವೇದ ಹೇಳುತ್ತದೆ (ಯೋಹಾನ 6:44) ಮತ್ತು ಮಗನು ನಮಗೆ ತಂದೆಯನ್ನು ತೋರಿಸದ ಹೊರತು ನಾವು ಆತನನ್ನು ಕಾಣಲಾರೆವು (ಮತ್ತಾಯ 11:27). ಮನುಷ್ಯನು ತನ್ನ ಪಾಪಾಧೀನ ಅವಸ್ಥೆಯಲ್ಲಿ ದೇವರ ಆತ್ಮನಿಂದ ಬರುವಂತಹ ವಿಷಯಗಳನ್ನು ಅರ್ಥ ಮಾಡಿಕೊಳ್ಳಲಾರನು (1ನೇ ಕೊರಿಂಥ 2:14). ದೇವರ ಕರೆಯುವಿಕೆಯು ಅಥವಾ ಆತನ ಅವಶ್ಯಕತೆ ಇಲ್ಲದಿದ್ದರೆ ಯಾರು ಆತನ ಬಳಿಗೆ ತಿರುಗಿಕೊಳ್ಳಲಾರರು. (ಸಾಮಾನ್ಯ ವಿಷಯಗಳು ರಕ್ಷಣೆ ದೇವರ ಆಯ್ಕೆ ಅಥವಾ ಮನುಷ್ಯನ ಆಯ್ಕೆ)

ದೇವರು ನಮ್ಮನ್ನು ಸಮರ್ಥರನ್ನಾಗಿ ಮಾಡಿದ್ದಾನೆ. ಅರ್ಥವೇನೆಂದರೆ, ವಾಸ್ತವವಾಗಿ ನಮ್ಮನ್ನು ನೀತಿವಂತರಾಗಿ ಮಾಡುವುದಿಲ್ಲ. ಬದಲಾಗಿ ನಮ್ಮನ್ನು ನೀತಿವಂತರೆಂದು ನಿರ್ಣಯಿಸುತ್ತಾನೆ. ಇದು ದೇವರ ನ್ಯಾಯ ಸಮ್ಮತವಾದ ಕಾರ್ಯ. ಇದರಿಂದ ಆತನು ನಮ್ಮ ಪಾಪಗಳನ್ನು ತನ್ನ ಕೃಪೆಯಿಂದ ಉಚಿತವಾಗಿ ಮನ್ನಿಸುವನು. ಅಂದರೆ ಕ್ರಿಸ್ತನು ತನ್ನ ಶಿಲುಬೆಯ ಮರಣದ ಮೂಲಕ ಕೊಟ್ಟ ಬಿಡುಗಡೆಯಿಂದಲೇ (ರೋಮಾ. 3:24).

ದೇವರು ಪಾಪವನ್ನು ನಿರ್ಲಕ್ಷಿಸುವುದಿಲ್ಲ. ಆತನು ಅದಕ್ಕೆ ಶಿಕ್ಷೆ ಕೊಡಲೇ ಬೇಕು. ಮನುಷ್ಯರ ಪಾಪಗಳಿಗಾಗಿ, ದೇವರೇ ಕ್ರಿಸ್ತನ ಮೂಲಕ ಪ್ರಾಯಶ್ಚಿತ್ತವಾದನು. ಇದರಿಂದಾಗಿ ಆತನು ನಮ್ಮನ್ನು ಮನ್ನಿಸುತ್ತಾನೆ ಮತ್ತು ನೀತಿವಂತರೆಂದು ಸಾರುತ್ತಾನೆ (ರೋಮಾ 3:25-26 ಮತ್ತು ವ್ಯಾಖ್ಯಾನ. ಸಾಮಾನ್ಯ ವಿಷಯ. ಯೇಸುಕ್ರಿಸ್ತನು)

ದೇವರು ನಮ್ಮನ್ನು ನೀತಿವಂತರೆಂದು ಸಾರುವುದು ಮಾತ್ರವಲ್ಲದೇ ನಾವು ನೀತಿವಂತರಾಗಿ ಬಾಳಲು ಅಗತ್ಯವಾದ ನೂತನ ಸ್ವಭಾವವನ್ನುಆತನು ನಮಗೆ ಕೊಡುತ್ತಾನೆ. ಇದನ್ನು ಹೊಸದಾಗಿ ಹುಟ್ಟುವುದು ಎಂಬ ಪದದಲ್ಲಿ ಕಾಣ ಬರುವುದು. ನಾವು ಪಾಪದಲ್ಲಿ ಸತ್ತವರಾಗಿದ್ದೆವು. ಆದರೆ ಕ್ರಿಸ್ತನಲ್ಲಿ ಜೀವದಿಂದ ಎದ್ದೆವು (ರೋಮಾ 8:10-11, ಎಫೆಸ 2:1,5). **ನಾವು ತಿರುಗಿ ಹುಟ್ಟಬೇಕು** ಎಂದು ಯೇಸು ಹೇಳಿದನು (ನೋಡಿರಿ.ಯೋಹಾನ 3:3, 5-7 ಮತ್ತು ವ್ಯಾಖ್ಯಾನ). **ನಾವು ಜೀವಂತವಾಗಿಯೂ'ಯೋಗ್ಯವಾಗಿಯೂ ಇರುವ ದೇವರ ವಾಕ್ಯದ ಮೂಲಕ ತಿರುಗಿ ಹುಟ್ಟುತ್ತೇವೆ** (1ನೇ ಪೇತ್ರ 1:23).

ನಿಜವಾಗಿ ಹೇಳುವುದಾದರೆ ನಾವು ರಕ್ಷಣೆ ಹೊಂದಿದಾಗ ನಮ್ಮ ಹಳೇ ಸ್ವಭಾವವು ಬರೀ ಸುಧಾರಿಸಲ್ಪಡುವುದಿಲ್ಲ ಬದಲಾಗಿ ದೇವರಿಗೆ ವಿಧೇಯರಾಗಿ ನಡೆದುಕೊಳ್ಳುವಂತಹ ಹೊಸ ಆತ್ಮೀಯ ಸ್ವಭಾವವನ್ನು ಪಡೆದುಕೊಳ್ಳುತ್ತೇವೆ (ಎಫೆಸ 4:22-24) ಮತ್ತು **ನಾವು ನೂತನ ಸೃಷ್ಟಿಗಳಾಗುತ್ತೇವೆ** (2ನೇ ಕೊರಿಂಥ 5:17).ಈ ಹೊಸದಾಗಿ ಹುಟ್ಟುವುದು ನೀರಿನ ದೀಕ್ಷಾಸ್ನಾನಕ್ಕೆ ಸಂಬಂಧವಾಗಿಯೆಂದು ಕೆಲವು ಕ್ರೈಸ್ತರು ತಿಳಿಯುತ್ತಾರೆ (ನೋಡಿರಿ. ತೀತ 3:5, ಸಾಮಾನ್ಯ ವಿಷಯ. ನೀರಿನಿಂದ ಸ್ನಾನ).

ಆದಾಗ್ಯೂ ದೇವರು ನಮ್ಮನ್ನು ನೀತಿವಂತರೆಂದು ಸಾರುವುದು ಮಾತ್ರವಲ್ಲ ಮತ್ತು ನಾವು ನೀತಿವಂತರಾಗಲು ನಮಗೆ ಹೊಸ ಸ್ವಭಾವಕೊಡುತ್ತಾನೆ. ಇದಲ್ಲದೆ ನಿಜವಾಗಿಯೂ ನೀತಿವಂತರಾಗಲೂ ಸಹಾಯ ಮಾಡುತ್ತಾನೆ. ಆತನು ನಮ್ಮನ್ನು ಪವಿತ್ರಮಾಡುತ್ತಾನೆ ಅಥವಾ ಪರಿಶುದ್ಧರನ್ನಾಗಿ ಮಾಡುತ್ತಾನೆ. ಅಂದರೆ ಆತನ ಪರಿಶುದ್ಧತ್ವವನ್ನು ನಮಗೆ ದಯಪಾಲಿಸುತ್ತಾನೆ.

**ಯೇಸುವು ಆತನ ಜನರನ್ನು ಪಾಪದ ಶಿಕ್ಷೆಯಿಂದ ಬಿಡುಗಡೆ ಮಾಡುವುದು ಮಾತ್ರವಲ್ಲ, ಜನರ ಪಾಪಗಳನ್ನು ತೊಳೆದುಬಿಡುತ್ತಾನೆ** (ಮತ್ತಾಯ 1:21, ರೋಮಾ 6:22). ಒಂದು ಅರ್ಥದಲ್ಲಿ ಈಗಾಗಲೇ ಯೇಸುವಿನಿಂದ ಒಂದೇ ಸಾರಿ ನೆರವೇರಿಸಲ್ಪಟ್ಟ ಬಲಿದಾನದ ಮೂಲಕ ಈಗಾಗಲೇ ನಾವು ಪರಿಶುದ್ಧರಾಗಿದ್ದೆವೆ (ಇಬ್ರಿಯಾ 10:10). ಸಂತರು ಅಥವಾ ಪರಿಶುದ್ಧರು ಎಂದು ಈಗಾಗಲೇ ನಾವು ಕರೆಯಲ್ಪಟ್ಟಿದ್ದೆವೆ (ಎಫೆಸ 1:1, ಫಿಲಿಪ್ಪಿ 1:1).ಆದರೆ ಬೇರೊಂದು ಅರ್ಥದಲ್ಲಿ ನಾವು ನಮ್ಮ ದಿನನಿತ್ಯದ ಜೀವನದಲ್ಲಿ ಆಗಾಗ್ಗೆ ಪರಿಶುದ್ಧತೆಯನ್ನು ಅನುಭವಿಸುವುದಿಲ್ಲ. ಆದುದರಿಂದ ನಮ್ಮನ್ನು ಪರಿಶುದ್ಧರನ್ನಾಗಿ ಮಾಡುತ್ತಲೇ ಇರುವುದಕ್ಕೆ ಪರಿಶುದ್ಧಾತ್ಮನು ಕಾರ್ಯಮಾಡುತ್ತಲೇ ಇರುವನೆಂದು ಸತ್ಯವೇದವು ಹೇಳುತ್ತದೆ (ನೋಡಿರಿ . ರೋಮಾ. 7:24-25, 8:10-11, ಗಲಾತ್ಯ 3:3, ಸಾಮಾನ್ಯ ವಿಷಯಗಳಲ್ಲಿ . ಪರಿಶುದ್ಧಾತ್ಮ

ದೇವರು ಸಹ ನಮ್ಮನ್ನು **"ಮಹಿಮೆ"** ಪಡಿಸುತ್ತಾನೆ. (ರೋಮಾಯ 8:3)ಮಹಿಮೆ ಎಂಬ ಪದವು ಶಾರೀರಿಕ ಪುನರುತ್ಥಾನದ ಬಗ್ಗೆಯೂ ಮತ್ತು ನಿತ್ಯಜೀವದ ಬಗ್ಗೆಯೂ ಉಪಯೋಗಿಸಲ್ಪಟ್ಟಿದೆ. ಯೇಸುವು ತನ್ನ ತಂದೆಯ ಮಹಿಮೆಯಲ್ಲಿನಾವು ಪಾಲ್ಗೊಳ್ಳುವಂತೆ ನಮಗಾಗಿ ಪ್ರಾರ್ಥಿಸಿದನು (ಯೋಹಾನ 17:24) ಮತು ಆ ಮಹಿಮೆಯಲ್ಲಿ ಸಹಭಾಗಿಗಳಾಗಿರುತ್ತೇವೆಂದು ಪೌಲನು ಹೇಳಿದ್ದಾನೆ (ರೋಮಾ 8:17). ನಮ್ಮ ಈಗಿನ ನಮ್ಮ ಶರೀರವು ಮಹಿಮೆಯ ಶರೀರವಾಗಿ ಮಾರ್ಪಾಟುಗೊಳ್ಳುತ್ತದೆ (1ನೇ ಕೊರಿಂಥ 15:42-44) ಮತ್ತು ನಾವು ಸಾವನ್ನು ಗೆಲ್ಲುತ್ತೇವೆ (1ನೇ ಕೊರಿಂಥ 15:54-57). ನಮ್ಮ ರಕ್ಷಣೆಯು ನಮ್ಮ ಈಗಿನ ಜೀವಿತದಲ್ಲಿ ಮಾತ್ರವಲ್ಲ, ಮುಂದೆ ಬರುವ ಜೀವಿತದಲ್ಲೂ ಸಹ ಇದೆ ಎಂದು ಪೌಲನು ಹೇಳುತ್ತಾನೆ. ನಮ್ಮ ಶಾರೀರಿಕ ಪುನರುತ್ಥಾನವೇ ನಮ್ಮ ನಿರೀಕ್ಷೆಯ ಕೇಂದ್ರಬಿಂದು (1ನೇ ಕೊರಿಂಥ 15:12-20). ನಿತ್ಯ ಜೀವದ ವಾಗ್ದಾನ ನಮಗೆ ಕೊಡಲ್ಪಟ್ಟಿದೆ (ಯೋಹಾನ 3:16, 10:28 ನೋಡಿರಿ).

ನಮ್ಮ ರಕ್ಷಣೆಯ ಕುರಿತಾಗಿ, ಸತ್ಯವೇದದಲ್ಲಿ ಇನ್ನು ಅನೇಕ ಪದಗಳಿವೆ. ಉದಾಹರಣೆಗಾಗಿ ನಾವು ಕ್ರಿಸ್ತನಲ್ಲಿ ಪುನರುದ್ಧಾರಗೊಂಡಿದ್ದೇವೆ (ಎಫೆಸ 1:7). ಈಡು ಕೊಡುವಿಕೆ ಅಂದರೆ ಬೆಲೆ ತೆತ್ತು ಕೊಂಡುಕೊಳ್ಳುವುದು. ಯೇಸುಕ್ರಿಸ್ತನು ನಮ್ಮನ್ನು ಪಾಪದಿಂದ ಬಿಡುಗಡೆ ಮಾಡಿದನು (ತೀತ 2:14) ಮತ್ತು ಧರ್ಮಶಾಸ್ತ್ರದ ಶಾಪದಿಂದ, (ಗಲಾತ್ಯ 3:13,). ದೇವರಿಗಾಗಿ ನಮ್ಮನ್ನು ಕೊಂಡುಕೊಂಡನು. (ಅ.ಕೃ. 20:28, ಪ್ರಕಟಣೆ 5:9) ನಾವು ಒಂದು **ಬೆಲೆಗೆ ಕೊಂಡುಕೊಳ್ಳಲ್ಪಟ್ಟವರಾಗಿದ್ದೇವೆ** (1ನೇ ಕೊರಿಂಥ 6:20). ಕ್ರಿಸ್ತನ ಸ್ವಂತ ರಕ್ತದಿಂದ (1ನೇ ಪೇತ್ರ 1:18-19).

ರಕ್ಷಣೆ ಯ ಕುರಿತು ಬೇರೊಂದು ಶಬ್ದವನ್ನು ಉಪಯೋಗಿಸುವಾಗ, ನಾವು ದೇವರ ಮಕ್ಕಳಾಗಿ ದತ್ತು ತಕ್ಕೊಂಡವರಾಗಿದ್ದೇವೆ. ತಂದೆಯಾದ ದೇವರು ಪೂರ್ವನಿಯೋಜಿತ ನಿಶ್ಚಯದಂತೆ ಯೇಸುವಿನ ಕಾರ್ಯಗಳ ಮೂಲಕ, **ನಮ್ಮನ್ನು ಆತನ ಮಕ್ಕಳನ್ನಾಗಿ ದತ್ತು ತೆಗೆದುಕೊಂಡಿದ್ದಾನೆ** (ಎಫೆಸ 1:5) ಮತ್ತುನಾವು ಪವಿತ್ರಾತ್ಮನನ್ನು ಅಂಗೀಕರಿಸುವುದರ ಮೂಲಕವೂ ಆತನ ಮಕ್ಕಳೆನಿಸಿಕೊಂಡಿದ್ದೇವೆ (ರೋಮಾ 8:14-17, ಗಲಾತ್ಯ 4:5-7). ಪ್ರಸ್ತುತದಲ್ಲಿ ನಾವು ನಮ್ಮ ಹಕ್ಕು ಬಾಧ್ಯತೆಯ ಪರವಾಗಿ ಠೇವಣಿಯ ಪತ್ರವನ್ನು ಪಡೆದಿದ್ದೇವೆ. ಪೌಲನು ನಮ್ಮ ದೇಹಗಳು ಪುನರುತ್ಥಾನ ಹೊಂದಿ

ನಂತರ ನಮಗೆ ದೇವರ ಮಗನೂ, ಮಗಳೂ ಆಗುವ ಸಂಪೂರ್ಣ ಮಾನ್ಯತೆ ದೊರೆಯುವುದರ ಬಗ್ಗೆ ಮುಂದೆ ಸಂಪೂರ್ಣದತ್ತು ಸ್ವೀಕಾರವು ಹೇಗಿರುತ್ತದೆ ಎಂಬ ವಿಷಯವಾಗಿ ಬರೆಯುತ್ತಾನೆ (ರೋಮಾ. 8:18-25, ಎಫೆಸ 1:13-14).

ನಾವು ನೋಡುವ ಹಾಗೆ, ರಕ್ಷಣಾಕಾರ್ಯ ಎಂಬ ಪದವು ಮೂರು ಕ್ರಿಯಾರ್ಥಗಳಲ್ಲೂ ಬರೆದಿದೆ. ನಾವು ರಕ್ಷಿಸಲ್ಪಟ್ಟಿದ್ದೇವೆ (ಎಫೆಸ 2:5,8 2ನೇ ತಿಮೋಥ 1:9). ನಾವು ರಕ್ಷಿಸಲ್ಪಡುತ್ತಿದ್ದೇವೆ (1ನೇ ಕೊರಿಂಥ 1:18 2ನೇ ಕೊರಿಂಥ 2:15 ಫಿಲಿಪ್ಪಿ 2:12-13) ಮತ್ತು ನಾವು ರಕ್ಷಿಸಲ್ಪಡುತ್ತೇವೆ.( ರೋಮಾ 13:11, 1ನೇ ಥೆಸಲೋನಿಕಾ 5:9 1ನೇ ಪೇತ್ರ 1:5). ಮೇಲೆ ಹೇಳಿದ ಶಬ್ದಾರ್ಥಗಳಲ್ಲಿ ತಿಳಿಸುವುದಾದರೆ ಭೂತಕಾಲದಲ್ಲಿ ನಾವು ನೀತಿವಂತರೆಂದು ನಿರ್ಣಯಿಸಲ್ಪಟ್ಟು, ಪುನರುದ್ಧಾರಗೊಂಡೆವು ಮತ್ತು ನಮಗೆ ಹೊಸ ಸ್ವಭಾವ ಕೊಡಲ್ಪಟ್ಟಿತು. ವರ್ತಮಾನಕಾಲದಲ್ಲಿ ನಾವು ಪರಿಶುದ್ಧರಾಗುತ್ತಿದ್ದೇವೆ ಮತ್ತು ಭವಿಷ್ಯದಲ್ಲಿ ನಾವು ನಮ್ಮ ಸಂಪೂರ್ಣದತ್ತಕವನ್ನು ಪಡೆದುಕೊಳ್ಳುತ್ತೇವೆ ಮತ್ತು ನಮ್ಮ ಶರೀರಗಳು ಮಹಿಮೆ ಹೊಂದುತ್ತವೆ.

## ಮನುಷ್ಯನ ಪ್ರತಿಕ್ರಿಯೆ

ಪುರುಷರು ಮತ್ತು ಸ್ತ್ರೀಯರು ತಮ್ಮನ್ನು ತಾವೇ ರಕ್ಷಿಸಿಕೊಳ್ಳಲಾರರು. ದೇವರ ಕೃಪೆ ಮತ್ತು ಕರುಣೆಯಿಂದ ಮಾತ್ರವೇ ರಕ್ಷಣೆ ಹೊಂದಬಹುದು. ಹಾಗಾದ ಮಾತ್ರಕ್ಕೆ ಮನುಷ್ಯನಿಗೆ ರಕ್ಷಣಾ ಕಾರ್ಯದಲ್ಲಿ ಯಾವ ಪಾತ್ರವೂ ಇಲ್ಲವೆಂದಲ್ಲ. ಯೇಸುವು ಲೋಕದ ಎಲ್ಲಾ ಪಾಪವನ್ನು ಶಿಲುಬೆ ಮೇಲೆ ತೊಡೆದುಹಾಕಿದರೂ, (ಯೋಹಾನ 1:29) ಎಲ್ಲರೂ ರಕ್ಷಣೆ ಹೊಂದಲಿಲ್ಲ. ದೇವರು ನಮಗೆ ಕೊಡ ಮಡಿದ ರಕ್ಷಣೆಯನ್ನು ನಾವು ಪಡೆದುಕೊಳ್ಳಬೇಕಾದರೆ ಯೇಸುವಿನಲ್ಲಿ ನಂಬಿಕೆ ಇಡುವ ಒಂದೇ ಒಂದು ವಿಷಯ ಅವಶ್ಯಕವಾಗಿದೆ (ಯೋಹಾನ 3:16-18, ಅ.ಕೃ. 16:31).

ಕ್ರಿಸ್ತನಲ್ಲಿಡುವ ನಂಬಿಕೆ ಅಂದರೆ ಯೇಸುವೇ ಕ್ರಿಸ್ತನಾಗಿದ್ದು ದೇವರ ಮಗನೆನಿಸಿಕೊಂಡಿದ್ದಾನೆ ಎಂದು ಮಾತ್ರವಾಗಿರದೆ (ಯೋಹಾನ. 8:24). ನಾವು ಯೇಸುವನ್ನು ನಮ್ಮ ಹೃದಯ ಮತ್ತು ಜೀವಿತದಲ್ಲೂ ಸ್ವೀಕರಿಸಿಕೊಳ್ಳುವುದೂ ಎಂದೂ ಸಹ ಅರ್ಥವಾಗುತ್ತದೆ (ಮತ್ತಾಯ 10:40ಯೋಹಾನ 1:12 ಪ್ರಕಟಣೆ 3:20). ಮತ್ತು ನಾವು ಯೇಸುವಿನಲ್ಲಿ ಮಾತ್ರ ಸಂಪೂರ್ಣ ಭರವಸೆ ಇಡಬೇಕು (2ನೇ ತಿಮಾಥೆ 1:12). ನಂಬಿಕೆ ಎಂಬುದು ಬರಿ ಯೇಸುವನ್ನು ತಿಳಿದುಕೊಳ್ಳುವುದಲ್ಲ, ನಮ್ಮ ಹೃದಯಗಳನ್ನು ಆತನಿಗಾಗಿ ಮೀಸಲಿಡುವುದೇ ಆಗಿದೆ. ನಿಜವಾದ ನಂಬಿಕೆ ಅಂದರೆ ನಮ್ಮ ಪಾಪಗಳನ್ನು ಅರಿಕೆ ಮಾಡಿಕೊಳ್ಳುವುದು (1ನೇ ಯೋಹಾನ 1:9) ಮತ್ತು ಅದಕ್ಕಾಗಿ ಪಶ್ಚಾತ್ತಾಪ ಪಟ್ಟು, ಪಾಪದಿಂದ ವಿಮುಖರಾಗಬೇಕು (ಲೂಕ 13:3-5, ಅ.ಕೃ. 2:38). ನಮ್ಮಲ್ಲಿ ನಿಜವಾದ ನಂಬಿಕೆಯಿದ್ದರೆ, ನಾವು ಬಹಿರಂಗವಾಗಿ ನಮ್ಮ ಬಾಯಿಂದ ಪ್ರಭುವಾದ ಯೇಸುವನ್ನು ಮನುಷ್ಯರ ಮುಂದೆ ಪ್ರಕಟಿಸುತ್ತೆವೆ ಮತ್ತು ನಾವು ಕ್ರೈಸ್ತರೆಂಬ ವಿಷಯವನ್ನು ಮರೆಮಾಚುವುದಿಲ್ಲ. (ಮತ್ತಾಯ 10:32-33, ರೋಮಾ. 10:9-10. ನಾವು ಕ್ರಿಸ್ತನ ಆಜ್ಞೆಯ ಮೇರೆಗೆ ದೀಕ್ಷಾಸ್ನಾನ ಹೊಂದಲು ವಿಧೇಯರಾಗುತ್ತೇವೆ (ಮತ್ತಾಯ 28:19-20, ಮಾರ್ಕ 16:15-16, ಅ.ಕೃ. 2:38 ಸಾಮಾನ್ಯ ವಿಷಯಗಳು. ನೀರಿನಿಂದ ದೀಕ್ಷಾಸ್ನಾನ).

ಯೇಸುವು ಶಿಲುಬೆ ಯ ಮೇಲೆ ಮರಣ ಹೊಂದಿದ ಕಾರಣ, ರಕ್ಷಣಾಕಾರ್ಯ ದೇವರಿಂದ ಬಂದಿದೆಯಾದರೂ, ನಾವು ಆ ರಕ್ಷಣೆಯಲ್ಲಿ ನಂಬಿಕೆ ಇಡಲೇ ಬೇಕು ಮತ್ತು ಭರವಸೆ ಯುಳ್ಳವರಾಗಿರಬೇಕು. ಆದರೆ ನಾವು ರಕ್ಷಣಾ ಕಾರ್ಯಕ್ಕೆ ಉಗಮರಲ್ಲ. ದೇವರೇ ಅದರ ಉಗಮವಾಗಿದ್ದಾನೆ. ಮತ್ತು ಅದನ್ನು ನಮಗೆ ಉಚಿತವಾಗಿ ತನ್ನ ಕೃಪೆಯ ಮೂಲಕ ಕೊಟ್ಟಿದ್ದಾನೆ. ನಾವು ನಮ್ಮ ಸ್ವಂತ ಬಲ ಅಥವಾ ಸಿದ್ಧಿ, ಇಲ್ಲವೇ ನಮ್ಮ ಒಳ್ಳೇ ಕ್ರಿಯೆಗಳಿಂದ ರಕ್ಷಣೆ ದೊರಕುವುದಿಲ್ಲ (ರೋಮಾ 9:16.). ಆದರೆ ನಂಬಿಕೆಯಿಂದಲೂ ಅದನ್ನು ಗಳಿಸಲು ಸಾಧ್ಯವಿಲ್ಲ.

ನಂಬಿಕೆ ಎಂಬುದು ಒಂದು ಕೆಲಸವಲ್ಲ. ಅಥವಾ ಇದರ ಕೆಲಸದ ಮೂಲಕ ನಾವು ಸ್ವಂತ ರಕ್ಷಣೆ ಪಡೆಯಲಾಗುವುದಿಲ್ಲ. ಇದು ಬರೀ ದೇವರಲ್ಲಿಡುವ ಭರವಸೆ ಮತ್ತು ಆತನ ಕೃಪೆಯ ಬಹುಮಾನ (ರೋಮಾ. 4:5).

ಈ ಕಾರಣದಿಂದಲೇ ರಕ್ಷಣೆ ಮತ್ತು ಇದರಿಂದ ಬರುವ ಆಶೀರ್ವಾದಗಳು ನಮಗೆ ನಂಬಿಕೆಯ ಮೂಲಕ ಕೃಪೆಯಿಂದ ದೊರಕುತ್ತವೆ ಎಂದು ಪೌಲನು ಹೇಳುತ್ತಾನೆ. (ಎಫೆಸ 2:8). ಪೌಲನು ಇನ್ನು ಕೆಲವು ವಚನಗಳನ್ನು ಬರೆಯುವಾಗ "ನಂಬಿಕೆಯ ಮೂಲಕವಾಗಿ ಬರುವ ಕೃಪೆ" ಎನ್ನುವುದನ್ನು ಸಂಕ್ಷಿಪ್ತವಾಗಿ "ನಂಬಿಕೆಯ ಮೂಲಕವಾಗಿ" ಎಂದು ಬರೆಯುತ್ತಾನೆ. ನಂಬಿಕೆಯಿಂದ ಅಥವಾ ನಂಬಿಕೆಯ ಮೂಲಕ ನಾವು ನೀತಿವಂತರೆಂದು ನಿರ್ಣಯಿಸ್ಪಟ್ಟಿದ್ದೇವೆ (ರೋಮಾ. 3:27-28, ಗಲಾತ್ಯ 2:15-16). ನಂಬಿಕೆಯಿಂದ ನಾವು ಪರಿಶುದ್ಧರಾಗುತ್ತೇವೆ (ಅ.ಕೃ. 26:18, ಗಲಾತ್ಯ 3:1-5). ನಂಬಿಕೆಯಿಂದಲೇ ದೇವರ ಕುಟುಂಬದಲ್ಲಿ ಹುಟ್ಟುತ್ತೆವೆ (ಯೋಹಾನ 1:12-13). ಆದರೆ ನಂಬಿಕೆಯು ಸ್ವತಃ ದೇವರ ಒಂದು ವರವಾಗಿದೆ. ನಾವು ಇದರಲ್ಲಿ ಹೊಗಳಿಕೊಳ್ಳುವಂತಾದ್ದು ಏನು ಇಲ್ಲ.(ಅ.ಕೃ. 3:16, ಎಫೆಸ 2:9,

ಫಿಲಿಪ್ಪಿ 1:29, 2ನೇ ತಿಮೋಥೆ 2:25). ಯೇಸುವೇ ನಮ್ಮ ನಂಬಿಕೆಯ ಮೂಲ ಕರ್ತನು ಮತ್ತು ಆತನು ಇದನ್ನು ಸಂರಕ್ಷಿಸುವನು ಮತ್ತು ಸಂಪೂರ್ಣಗೊಳಿಸುವನು (ಇಬ್ರಿಯಾ 12:2).

ಕಿಟಕಿಯ ಒಂದು ಉಪಮಾನವನ್ನು ನಾವು ತಿಳಿದುಕೊಂಡರೆ, ಅದರಿಂದ ಕೃಪೆಗೂ, ನಂಬಿಕೆಗೂ ಇರುವ ಸಂಬಂಧವನ್ನು ತಿಳಿದುಕೊಳ್ಳಬಹುದು. ನಮ್ಮ ಕೋಣೆಗೆ ಸೂರ್ಯನಿಂದ ಬೆಳಕನ್ನು ಕಿಟಕಿಯ ಮೂಲಕ ಪಡೆಯುತ್ತೇವೆ. ಆದರೆ ಬರೇ ಕಿಟಕಿ ಇದ್ದರೆ ಸೂರ್ಯನ ಬೆಕು ಸಿಗುತ್ತದೆ ಎಂದು ತಿಳಿಯಬಾರದು. ಕೃಪೆ ಎಂಬುದು ಸೂರ್ಯನ ಬೆಳಕು ಮತ್ತು ನಂಬಿಕೆಯು ಕಿಟಕಿ ಇದ್ದಹಾಗೆ. ನಾವು ನಂಬಿಕೆಯ ಮೂಲಕ ದೇವರ ಕೃಪೆಯನ್ನು ಪಡೆಯುತ್ತೇವೆ. ಆದರೆ ನಾವು ನಂಬಿದ ಮಾತ್ರಕ್ಕೆ ನಾವು ಕೃಪೆಯನ್ನು ಸಾಧಿಸುವುದಿಲ್ಲ ಅಥವಾ ಪಡೆಯುವುದಿಲ್ಲ. ದೇವರ ಕೃಪೆ ಬಾರದಂತೆ ನಾವು ನಮ್ಮ ಅಪನಂಬಿಕೆಯ ಮೂಲಕ ಕಿಟಕಿಯನ್ನು ಮುಚ್ಚಿ ಬಿಡುತ್ತೇವೆ. ದೇವರಲ್ಲಿ ನಂಬಿಕೆ ಮತ್ತು ಭರವಸೆ ರಕ್ಷಣೆಗೆ ಅವಶ್ಯಕ. ಆದರೆ ಅದು ರಕ್ಷಣೆಗೆ ಮೂಲವಲ್ಲ.

## ನಂಬಿಕೆ ಮತ್ತು ಕ್ರಿಯೆಗಳು

ಬೇರೆ ಧರ್ಮಗಳು, ಮನುಷ್ಯನು ಒಳ್ಳೆಯ ಕ್ರಿಯೆಗಳನ್ನು ಮಾಡುವುದರಿಂದ ರಕ್ಷಣೆ ಪಡೆಯುತ್ತಾನೆ ಎಂಬುದಾಗಿ ಬೋಧಿಸುತ್ತವೆ. ಕ್ರೈಸ್ತರು ಸಹಾ ರಕ್ಷಣೆಯನ್ನು ಪಡೆಯುವುದಕ್ಕಾಗಿ ಒಳ್ಳೆಯ ಕೆಲಸವನ್ನು ಮಾಡುತ್ತಾರೆ ಎಂದುಇತರೇ ಧರ್ಮಾವಲಂಬಿಗಳು ನಂಬುತ್ತಾರೆ. ಯಾಕೆಂದರೆ ಅವರು ಅದನ್ನು ಅನೇಕ ಸಾರಿ ಮಾಡುವುದನ್ನು ಕಣ್ಣಾರೆ ನೋಡುತ್ತಾರೆ. ಆದುದರಿಂದ ಅವರಿಗೆ ರಕ್ಷಣೆ ದೊರೆಯುತ್ತದೆ ಎಂದು ಭಾವಿಸುತ್ತಾರೆ. ಆದುದರಿಂದ, ಅನೇಕರು ಕ್ರೈಸ್ತ ಧರ್ಮ ಕ್ಕೂ, ಇತರೇ ಧರ್ಮಗಳಿಗೂ ಏನು ವ್ಯತ್ಯಾಸವಿಲ್ಲವೆಂದು ಭಾವಿಸುತ್ತಾರೆ.

ಆದರೆ ಈ ರೀತಿ ಹೇಳುವವರು ತಪ್ಪು ಮಾಡುವವರಾಗಿರುತ್ತಾರೆ. ಕ್ರೈಸ್ತ ತ್ವಕ್ಕೂ ಮತ್ತು, ಇತರೇ ಧರ್ಮಗಳಿಗೂ ಇರುವ ಭಿನ್ನಾಭಿಪ್ರಾಯ ಅಜಗಜಾಂತರ. ಕ್ರೈಸ್ತರು ಮೊದಲು ರಕ್ಷಣೆ ಪಡೆಯುತ್ತಾರೆ ಮತ್ತು ಅದಾದ ನಂತರವೇ ಅವರಿಗೆ ಒಳ್ಳೇ ಕ್ರಿಯೆಗಳನ್ನು ಮಾಡಲು ಸಾಧ್ಯವಾಗುತ್ತದೆ. ರಕ್ಷಣೆಯನ್ನು ಪಡೆಯಲು ನಾವು ಒಳ್ಳೇ ಕ್ರಿಯೆಗಳನ್ನು ಮಾಡುವುದಿಲ್ಲ. ನಾವು ಈಗಾಗಲೇ ರಕ್ಷಣೆಯನ್ನು ಹೊಂದಿರುವುದರಿಂದ ಒಳ್ಳೇ ಕೆಲಸ ಮಾಡುತ್ತೇವೆ.

ಆದರೆ ಕೆಲವು ಕ್ರೈಸ್ತರೂ ದೊಡ್ಡ ತಪ್ಪುಗಳನ್ನು ಮಾಡುತ್ತಾರೆ. ಅವರು ರಕ್ಷಣೆ ಹೊಂದಿದ ನಂತರ, ರಕ್ಷಣೆಯನ್ನು ಭದ್ರಪಡಿಸಿಕೊಳ್ಳಲು ಒಳ್ಳೇ ಕೆಲಸಗಳನ್ನು ಮಾಡುತ್ತಲಿರುತ್ತಾರೆ. ಆದರೆ ಹೇಗೆ ತಮ್ಮ ಸ್ವಂತಕ್ರಿಯೆಗಳಿಂದ ಜನರು, ರಕ್ಷಣೆಯನ್ನು ಪಡೆಯಲಾರರೋ, ಹಾಗೆಯೇ ತಮ್ಮ ಸ್ವಂತ ಪ್ರಯತ್ನ ಅಥವಾ ಕೆಲಸಗಳಿಂದ ಆ ರಕ್ಷಣೆಯನ್ನು ಉಳಿಸಿಕೊಳ್ಳಲಾರರು (ಗಲಾತ್ಯ 3:3). ಆದಿಯಿಂದ ಅಂತ್ಯದವರೆಗೂ, ನಮ್ಮ ರಕ್ಷಣೆಯು ದೇವರ ಕೃಪೆಯಿಂದಲೇ ಮತ್ತು ಅದನ್ನು ನಂಬಿಕೆಯ ಮೂಲಕ ಪಡೆದುಕೊಳ್ಳುತ್ತೇವೆ.

ಆದಾಗ್ಯೂ ಇದು ನಿಜವೆನಿಸಿದರೂ, ಕ್ರೈಸ್ತರು ದೇವರಿಗೆ ವಿಧೇಯರಾಗಿದ್ದು ಮತ್ತು ಆತನಿಗೆ ಮೆಚ್ಚಿಕೆಯಾದ ಕೆಲಸಗಳನ್ನು ಮಾಡಬೇಕು. ನಮ್ಮ ಜೀವಿತವು ಯಾವ ಒಳ್ಳೆಯ ಕ್ರಿಯೆಗಳನ್ನಾಗಲೀ, ಅಥವಾ ಒಳ್ಳೆಯ ನಡತೆಯನ್ನಾಗಲಿ ತೋರಿಸದಿದ್ದರೆ, ನಮ್ಮ ನಂಬಿಕೆಯು ಸುಳ್ಳಾಗಿದೆ ಎಂದು ಅರ್ಥವಾಗುತ್ತದೆ. ಯಾವಾಗಲೂ ಒಳ್ಳೆ ಕ್ರಿಯೆಗಳು ನಂಬಿಕೆಯ ಜೊತೆಗೆ ಇರುತ್ತದೆ(ನೋಡಿರಿ.ಯಾಕೋಬ 2:17, ಮತ್ತು ವ್ಯಾಖ್ಯಾನ).

ಉದಾಹರಣೆಗಾಗಿ, ಒಂದು ಮರವನ್ನು ತೆಗೆದುಕೊಂಡರೆ ನಾವು ನಂಬಿಕೆ ಮತ್ತು ಕ್ರಿಯೆಗಳ ಸಂಬಂಧವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ಫಲವನ್ನು ಕೊಡಬೇಕಾದರೆ (ಅಂದರೆ ಒಳ್ಳೆಯ ಕ್ರಿಯೆಗಳು) ನಾವು ಮೊದಲು ಜೀವಂತವಾಗಿರಬೇಕು. ಆದರೆ ಯಾರಲ್ಲಿ ನಂಬಿಕೆ ಇಲ್ಲವೋ ಮತ್ತು ಯಾರು ರಕ್ಷಣೆಯನ್ನು ಹೊಂದಿಲ್ಲವೋ, ಅಂತಹವರು ಇನ್ನೂ ಸತ್ತ ಹಾಗೆ. ದೇವರಿಗೆ ಮೆಚ್ಚಿಕೆಯಾದ ಒಳ್ಳೇ ಕ್ರಿಯೆಗಳನ್ನು ಮಾಡಲು ಅವರಿಗೆ ಶಕ್ತಿ ಇರುವುದಿಲ್ಲ. ಹೇಗೆ ಸತ್ತು ಹೋದ ಮರವು ಫಲ ಕೊಡಲಾರದೋ ಹಾಗೆಯೇ ಯಾರು ಪಾಪದಲ್ಲಿ ಸತ್ತಿರುತ್ತಾರೋ, ಯಾರು ರಕ್ಷಣೆ ಹೊಂದಿಲ್ಲವೋ ಅವರು ಒಳ್ಳೆಯ ಕೆಲಸಗಳನ್ನು ಮಾಡಲಾರರು ಅಂದರೆ ಬೇರೆ ಮನುಷ್ಯರಿಗಾಗಿ ಮತ್ತು ದೇವರಿಗಾಗಿ ನಿಃಸ್ವಾರ್ಥ ಪ್ರೀತಿ ತೋರಿಸುತ್ತಾರೋ ಅವರು ದೇವರ ಕ್ರಿಯೆಗಳಲ್ಲಿ ಭರವಸೆಯಿಡದೆ ಅವರು ತಮ್ಮ ಸ್ವಂತ ಕ್ರಿಯೆಗಳ ಮೇಲೆ ಆತುಕೊಂಡು, ರಕ್ಷಣೆ ಪಡೆಯಲು ಯತ್ನಿಸುತ್ತಾರ(ರೋಮಾಃ 4:4-5). ನಿಜವಾದ ಒಳ್ಳೇ ಕ್ರಿಯೆಗಳು ನಮ್ಮ ಒಳ್ಳೆಯದಕ್ಕಲ್ಲ. ಬೇರೆಯವರ ಒಳಿತಿಗಾಗಿ ಮತ್ತು ಇವುಗಳಿಂದ ನಾವು ದೇವರಲ್ಲಿ ಇಟ್ಟಿರುವ ಪ್ರೀತಿ ತೋರಿಬರುತ್ತದೆ (ಯೋಹಾನ 14:21).

ಇನ್ನೊಂದು ರೀತಿ ನೋಡಿದರೆ, ಜೀವಂತವಾಗಿರುವ ಮರವು ಫಲವನ್ನು ಕೊಡಲೇಬೇಕು. ಯಾವುದೇ ಮರವು ಫಲ ಕೊಡದಿದ್ದರೆ ಅದು ಸತ್ತ ಮರವಾಗಿದೆ ಅಥವಾ ಸಾಯುವ ಮರವಾಗಿರುತ್ತದೆ ಎಂದೇ ನಾವು ತಿಳಿಯುತ್ತೇವೆ. ನಾವು ನಂಬುತ್ತೇವೆಂದು ಹೇಳಿಕೊಂಡು ನಾವು ಅದನ್ನು ನಮ್ಮ ಒಳ್ಳೇ ಕ್ರಿಯೆಗಳಿಂದ ತೋರಿಸದಿದ್ದರೆ ನಮ್ಮ ನಂಬಿಕೆಯು

ಸುಳ್ಳಾಗಿರುತ್ತದೆ (ಮತ್ತಾಯ 7:21, 1ನೇ ಯೋಹಾನ 2:4).ನಮ್ಮ ನಂಬಿಕೆಗೆ ಒಳ್ಳೆಯ ಕ್ರಿಯೆಗಳೆ ಸಾಕ್ಷಿಯಾಗಿವೆ.ನಿಜವಾದ ನಂಬಿಕೆಯು ಯಾವಾಗಲು ಒಳ್ಳೆಯ ಕ್ರಿಯೆಗಳನ್ನುಂಟು ಮಾಡುತ್ತದೆ.

ಬೇರೆ ಧರ್ಮಗಳ ಪ್ರಕಾರ ಜನರು ಸತ್ತಮರಗಳಿಂದ ಜೀವ ಕೊಡುವ ಒಳ್ಳೆಯ ಫಲಗಳನ್ನು ನಿರೀಕ್ಷಿಸುವ ಹಾಗೆ ಇರುತ್ತಾರೆ.ಆದರೆ ಕ್ರೈಸ್ತತ್ವದ ಪ್ರಕಾರ, ನಾವು ಮೊದಲು ಜೀವವನ್ನು ಪಡೆಯಬೇಕು. ಅದಾದ ನಂತರವೇ ನಾವು ಒಳ್ಳೆಯ ಫಲಗಳನ್ನು ಕೊಡಲು ಶಕ್ತರಾಗುತ್ತೇವೆ.

ಆದುದರಿಂದ ನಾವು ನಮ್ಮ ಪಾಪಗಳ ವರ್ಜನೆಗಳಿಗಾಗಿಯು ಮತ್ತು ದೇವರಿಗೆ ವಿಧೇಯರಾಗಿ ನಡೆದುಕೊಳ್ಳುವುದಕ್ಕೂ ನಂಬಿಕೆಯನ್ನು ಉಪಯೋಗಿಸಿಕೊಳ್ಳಬೇಕು. ನಮ್ಮಲ್ಲಿ ನಿಜವಾದ ನಂಬಿಕೆ ಇದ್ದರೆ ನಮ್ಮ ನಡತೆಯು ಸಂಪೂರ್ಣವಾಗಿ ಬದಲಾಗುತ್ತದೆ (ರೋಮಾ 8:13 , 1ನೇ ಕೊರಿಂಥ 6:9-11, ಗಲಾತ್ಯ 5:19-26). ದೇವರು ಈಗಾಗಲೇ ಈ ಕಾರ್ಯಗಳನ್ನು ಮಾಡಲು ಶಕ್ತಿಕೊಟ್ಟಿರುವುದರಿಂದ ಇವೆಲ್ಲವನ್ನು ಮಾಡಲು ಸಾಧ್ಯವಾಗುತ್ತದೆ. ಆತನು ನಮಗೆ ಹೊಸ ಜೀವವನ್ನು, ಹೊಸ ಮನಸ್ಸನ್ನು ಮತ್ತು ಹೊಸ ಸ್ವಭಾವವನ್ನು ಕೊಡುತ್ತಾನೆ, ಮತ್ತು ಇವುಗಳ ದೆಸೆಯಿಂದ ನಾವು ಆತನಿಗೆ ಮೆಚ್ಚಿಕೆಯಾದ ಜೀವಿತವನ್ನು ನಡೆಸಲು ಸಾಧ್ಯವಾಗುತ್ತದೆ .**ಹೀಗಿರುವಲ್ಲಿ ನನ್ನ ಪ್ರಿಯರೇ ನೀವು ನನ್ನ ಮಾತನ್ನು ಯಾವಾಗಲು ಕೇಳಿದಂತೆ ಈಗಲೂ ಕೇಳಿರಿ.ನಾನು ನಿಮ್ಮಲ್ಲಿರುವಾಗ ಮಾತ್ರವಲ್ಲದೆ ನಾನಿಲ್ಲದಿರುವಾಗಲು ಬಹು ಹೆಚ್ಚಾಗಿ ಮನೋಭೀತಿಯಿಂದ ನಡುಗುವವರಾಗಿ ನಿಮ್ಮ ನಿಮ್ಮರಕ್ಷಣೆಯನ್ನು ಸಾದಿಸಿಕೊಳ್ಳಿರಿ. ಯಾಕಂದರೆ ದೇವರೇ ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಉದ್ದೇಶವನ್ನು ಪ್ರಯತ್ನವನ್ನು ಉಂಟುಮಾಡುವವನಾಗಿದ್ದಾನೆ (ಫಿಲಿಪ್ಪಿ 2:12-13).**

# ರಕ್ಷಣೆ - ದೇವರ ಆಯ್ಕೆಯೋ ಅಥವಾ ಮನುಷ್ಯನ ಆಯ್ಕೆಯೋ?

**ಪ್ರಾಮುಖ್ಯವಾದ ವಚನಗಳು**

ಯೆಹೋಶುವ 24:15 :- ನೀವು ಯಾರನ್ನು ಸೇವಿಸಬೇಕೆಂದಿದ್ದೀರಿ. ಈ ಹೊತ್ತೇ ಆರಿಸಿಕೊಳ್ಳಿರಿ.

ಮತ್ತಾಯ 23:37 :- ನನಗೆ (ಕ್ರಿಸ್ತನಿಗೆ) ಎಷ್ಟೋ ಸಾರಿ ಮನಸ್ಸಿತ್ತು .... ಆದರೆ ನಿಮಗೆ ಮನಸ್ಸಿಲ್ಲದೇ ಹೋ ಯಿ ತು.

ಯೋಹಾನ 7:17 :- ಆತನ ಚಿತ್ತದಂತೆ ನಡೆಯುವುದಕ್ಕೆ ಯಾರಿಗೆ ಮನಸ್ಸಿದೆಯೋ ಅವರಿಗೆ ಈ ಬೋಧನೆಯು ದೇವರಿಂದ ಬಂದದ್ದೋ, ನಾನೇ ಕಲ್ಪಿಸಿಕೊಂಡು ಹೇಳಿದ್ದೋ ಎಂದು ಗೊತ್ತಾಗುವುದು.

ಯೋಹಾನ 15:16 :-ನೀವು ನನ್ನನ್ನು ಆರಿಸಿ ತೆಗೆದು ಕೊಂಡಿಲ್ಲ ಆದರೆ ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡೆನು

ಅ.ಕೃ. 7:51 :- ನೀವು ಯಾವಾಗಲೂ ಪವಿತ್ರಾತ್ಮನನ್ನು ಎದು ರಿಸು ವವರಾಗಿದ್ದೀರಿ.

ಅ.ಕೃ. 13:46 :- ನೀವು ಇದನ್ನು (ದೇವರ ವಾಕ್ಯವನ್ನು) ತಳ್ಳಿ ಬಿಟ್ಟದ್ದರಿಂದ ........ನಾವು ನಿಮ್ಮನ್ನು ಬಿಟ್ಟು ಅನ್ಯಜನರ ಕಡೆಗೆ ಹೋಗುತ್ತೇವೆ.

ರೋಮಾ 8:29-30 :- ತಾನು ಯಾರನ್ನು ತನ್ನವರೆಂದು ಮೊದಲು ತಿಳಿದು ಕೊಂಡನೋ ಅವರನ್ನು ತನ್ನ ಮಗನ ಸಾರೂಪ್ಯವುಳ್ಳವರಾಗುವುದಕ್ಕೆ ಮೊದಲೇ ನೇಮಿಸಿದನು. ಯಾರನ್ನು ಮೊದಲು ನೇಮಿಸಿದನೋ ಅವರನ್ನು ಕರೆದನು,ಯಾರನ್ನು ಕರೆದನೋ ಅವರನ್ನು ನೀತಿವಂತರೆಂದು ನಿರ್ಣಯಿಸಿದನು. ಯಾರನ್ನು ನೀತಿವಂತರೆಂದು ನಿರ್ಣಯಿಸಿದನೋ ಅವರನ್ನು ಮಹಿಮಾ ಪದವಿಗೆ ಸೇರಿಸಿದನು.

ರೋಮಾ. 9:10-24 :- ದೇವರು ಯಾರನ್ನು ಕರುಣಿಸಿದರೂ, ಯಾರನ್ನು ಕಠಿಣಪಡಿಸಿದರೂ ಅದೆಲ್ಲವು ಆತನ ಇಷ್ಟಾನು ಸಾರವಾಗಿಯೆ ೀ ಇದೆ ಎಂಬದು ಇದರಿಂದ ತೋರಿಬರುತ್ತದೆ.

ರೋಮಾ. 11:32 :- ದೇವರು ಎಲ್ಲರಿಗೂ ಕರುಣೆಯನ್ನು ತೋರಿಸಬೇಕೆಂಬ ಉದ್ದೇಶವುಳ್ಳವನಾಗಿದ್ದು ಎಲ್ಲರನ್ನು ಅವಿಧೇಯತೆ ಎಂಬ ದು ಃಸ್ಥಿ ತಿ ಯ ಲ್ಲಿ ಕಟ್ಟಿ ಹಾಕಿದ್ದಾ ನೆ.

ಎಫೆಸ 1:4-5 :- ನಾವು ಪ್ರೀತಿಯ ಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶು ದ್ಧ ರೂ, ದೋಷವಿಲ್ಲದವರೂ ಆಗಿರಬೇಕೆಂದು, ನಮ್ಮನ್ನು ಜಗದು ಪ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು....ಮೊದಲೇ ಸಂಕಲ್ಪ ಮಾಡಿದ್ದನು.

1ನೇ ತಿಮೊಥೆ 2:4 :- ಎಲ್ಲಾ ಮನುಷ್ಯರು ರಕ್ಷಣೆಯ ನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬುದು ಆತನ ಚಿತ್ತವಾಗಿದೆ.

1ನೇ ಪೇತ್ರ 1:2 :- ಕ್ರೈಸ್ತರು ಪವಿತ್ರಾತ್ಮನಿಂದ ಪ್ರತಿಷ್ಠಿಸಲ್ಪಟ್ಟವರಾಗಿ, ದೇವರಿಗೆ ವಿಧೇಯರಾಗುವುದಕ್ಕೂ ಯೇಸುಕ್ರಿಸ್ತನ ರಕ್ತದಿಂದ ಪ್ರೋಕ್ಷಿತರಾಗು ವುದಕ್ಕೂ ತಂದೆಯಾದ ದೇವರ ಭವಿಷ್ಯದ್ ಜ್ಞಾನಾನು ಸಾರವಾಗಿ ಆರಿಸಲ್ಪಟ್ಟಿದ್ದಾ ರೆ.

2ನೇ ಪೇತ್ರ 1:10 :- ಆದು ದರಿಂದ ಸಹೋದರರೇ, ದೇವರು ನಿಮ್ಮನ್ನು ಕರೆದದ್ದನ್ನೂ, ಆದುಕೊಂಡದ್ದನ್ನು ದೃಢಪಡಿಸಿಕೊಳ್ಳುವುದಕ್ಕೆ ಮತ್ತಷ್ಟು ಪ್ರಯಾಸಪಡಿರಿ.

**ಸಮಸ್ಯೆ**

ಅವಿಶ್ವಾಸಿಗಳು. ಪಾಪಕ್ಕೆ ಗುಲಾಮರಾಗಿದ್ದಾರೆಂದು ಯೋಹಾನ . **8:34** ರಲ್ಲಿ ಯೇಸು ವು ಮತ್ತು ರೋಮಾ. **6:14-18** ರಲ್ಲಿ ಪೌಲನು ಖಚಿತವಾಗಿ ಹೇಳಿದ್ದಾ ರೆ. ಅವಿಶ್ವಾಸಿಗಳು, ಯಾರ ಸಹಾಯವು ಇಲ್ಲದೆ, ದೇವರ ವಿಷಯವನ್ನು ಸಹ ಎಂದಿಗೂ ಗ್ರಹಿಸಲಾರರು (**1ನೇ ಕೊರಿಂಥ 2:14**). ಅವರು ತಮ್ಮ ಸ್ವಂತ ಬಲದಿಂದ, ನೀತಿಯನ್ನು ಆರಿಸಿಕೊಳ್ಳಲಾರರು .ತಂದೆಯು ಎಳೆಯ ಲ್ಪಡದ ಹೊರತು ಕ್ರಿಸ್ತನ ಬಳಿಗೆ ಯಾವನು ಬರಲಾರನು. (**ಯೋಹಾನ 6:44**). ಮ ತ್ತು ತಂದೆಯ ಹೊರತು ಇನ್ನಾವನೂ ಮಗನನ್ನು ತಿಳಿದವನಲ್ಲ ಮಗನೇ ಹೊರತು ಇನ್ನಾವನೂ, ತಂದೆಯನ್ನು ತಿಳಿದವನಲ್ಲ.(**ಮತ್ತಾಯ 11:27-28**).

ದೇವರು ಮನುಷ್ಯರ ಹೃದಯಗಳನ್ನು ತೆರೆದು ಅವರು ಗ್ರಹಿಸಿಕೊಳ್ಳುವ ಹಾಗೆ ಮಾಡಿರುವ ಉದಾಹರಣೆಗಳನ್ನು ಲೂಕನ ಸುವಾರ್ತೆ 24:25 ಮತ್ತು ಅ.ಕೃ. 16:14ರಲ್ಲಿ ನಾವು ನೋಡಬಹುದು.

ಅವಿಶ್ವಾಸಿಗಳನ್ನು ಅವರ ಪಾಪದ ಗುಲಾಮಗಿರಿಯಿಂದ ಬಿಡಿಸಲು ಸಾಧ್ಯ ಎಂದು ಯೇಸುಕ್ರಿಸ್ತನು ಮತ್ತು ಪೌಲನು ಹೇಳಿದ್ದಾರೆ. (ಯೋಹಾನ 8:36, ರೋಮಾಯ 6:17-18 ) ಮತ್ತು ಪೌಲನು ಹೇಳುವ ಹಾಗೆ, ವಿಶ್ವಾಸಿಗಳು ನೀತಿಗೆ ಅಡಿಯಾಳಾಗಿರುತ್ತಾರೆ. ಈ ರಕ್ಷಣೆಯು ಯಾವ ಮನುಷ್ಯನ ಕೆಲಸದ ಪಲಿತಾಂಶವಲ್ಲ. ಆದರೆ ಇದು ದೇವರ ಉಚಿತ ವರವೇ (ನೋಡಿರಿ . ರೋಮಾ. 6:23, ಎಫೆಸ 2:8-9 ಮತ್ತು ವ್ಯಾಖ್ಯಾನ ).

ಶಿಷ್ಯರು ನನ್ನನ್ನು ಆರಿಸಿಕೊಳ್ಳಲಿಲ್ಲ ಆದರೆ ನಾನು ಅವರನ್ನು ಆರಿಸಿಕೊಂಡೆನು .ಅವರು **ಹೋಗುವಂತೆಯೂ ಮತ್ತು ಬಹಳ ಫಲ ಕೊಡು ವವರಾಗಿರ ಬೇಕು** ಎಂದು ಯೇಸು ಹೇಳಿದನು (ಯೋಹಾನ 15:16). ದೇವರು ನಮ್ಮನ್ನು **ಲೋಕವು ಉಂಟಾಗುವುದಕ್ಕಿಂತ ಮುಂಚೆಯೇ ಆತನಲ್ಲಿ ಆರಿಸಿಕೊಂಡನು** ಎಂದು ಪೌಲನು ಹೇಳಿದನು (ಎಫೆಸ 1:4) ಮತ್ತು ನಮ್ಮನ್ನು **ಆತನಿಗೆ ಮಕ್ಕಳಾಗಿ ದತ್ತು ತೆಗೆದು ಕೊಳ್ಳಲು ಮೊದಲೇ ನಿರ್ಣಯಿಸಿದ್ದ**ನು (ಎಫೆಸ 1:5, 11). ನಮ್ಮ ಆರಿಸಿಕೊಳ್ಳುವಿಕೆಯು ದೇವರ ಮುಂಚಿನ ನಿರ್ಣಯವೇ ಆಗಿದೆ (ರೋಮಾ. 8:29-30, 1ನೇ ಪೇತ್ರ 1:2). ರೋಮಾ. 9:16ರಲ್ಲಿ ದೇವರ ಆರಿಸುವಿಕೆಯು ಮನುಷ್ಯನ ಪ್ರಯತ್ನ ಅಥವಾ ಆಶೋತ್ತರದ ಮೇಲೆ ಆತುಕೊಳ್ಳಲಿಲ್ಲ ಆದರೆ ಇದು ದೇವರ ಕರುಣೆಯೇ ಎಂದು ಪೌಲನು ಒತ್ತಿ ಹೇಳುತ್ತಾನೆ.

ರಕ್ಷಣೆಯು ದೇವರ ಕೃಪೆ ಮತ್ತು ಕರುಣೆಯಿಂದ ಮಾತ್ರ ಬರುತ್ತದೆ ಮತ್ತು ಅದನ್ನು ನಮ್ಮ ಕ್ರಿಯೆಗಳಿಂದ ಗಳಿಸಲು ಆಗದು ಎಂದು ಎಲ್ಲಾ ಕ್ರೈಸ್ತರು ನಂಬುತ್ತಾರೆ. ಆದರೆ ಒಂದು ಸಮಸ್ಯೆ ಎದ್ದೇಳುತ್ತದೆ. ಅಂದರೇ ನಮ್ಮ ರಕ್ಷಣೆಯಲ್ಲಿ ನಮಗೆ ಯಾವುದೇ ಆಯ್ಕೆಯೂ ಇಲ್ಲವೇ? . ಪಶ್ಚಾತ್ತಾಪ ಮತ್ತು ನಂಬಿಕೆ ಇವುಗಳು ನಾವು ಆಯ್ಕೆ ಮಾಡಿಕೊಂಡ ಕಾರ್ಯಗಳೇ ಅಥವಾ ದೇವರ ಆಯ್ಕೆಯಿಂದ ನಮ್ಮಲ್ಲಿ ಇವುಗಳು ಉದ್ಭವಿಸುವಂತಾಯಿತೆ?.ಮನುಷ್ಯನು ದೇವರ ಕೃಪೆಯನ್ನು ತಳ್ಳಿಹಾಕಲು ಮತ್ತು ಅವನು ದೇವರಿಗೆ ಬೇಡ ಎಂದು ಹೇಳಲು ಅದಿಕಾರವಿದೆಯೇ ? .

## ಮನು ಷ್ಯನಿಗೆ ತನ್ನ ರಕ್ಷಣೆಯಲ್ಲಿ ಆಯ್ಕೆ ಉಂಟೇ?

ವಿವಿದ ಕ್ರೈಸ್ತರು ಈ ಪ್ರಶ್ನೆಗಳಿಗೆ ಬೇರೆ ಬೇರೆ ರೀತಿಯಲ್ಲಿ ಉತ್ತರಿಸುತ್ತಾರೆ. ಮನುಷ್ಯನು ಆಯ್ಕೆ ಮಾಡಿಕೊಳ್ಳಲಾರ, ಯಾಕೆಂದರೆ ಅವನು ಪಾಪಕ್ಕೆ ಗುಲಾಮನಾಗಿದ್ದಾನೆ, ಯಾರು ರಕ್ಷಣೆ ಹೊಂದಬೇಕೋ ಅವರನ್ನು ದೇವರೇ ಆಯ್ಕೆ ಮಾಡುತ್ತಾನೆ ಎಂದು ಕೆಲವು ಕ್ರೈಸ್ತರು ವಿಶ್ವಾಸಿಸುತ್ತಾರೆ. ದೇವರು ಕೆಲವರನ್ನು ಮಾತ್ರ ರಕ್ಷಿಸುತ್ತಾನೆ, ಎಲ್ಲರನ್ನು ಅಲ್ಲ ಮತ್ತು ಉಳಿದವರನ್ನು ನಾಶನಕ್ಕೆ ಆಯ್ಕೆ ಮಾಡುತ್ತಾನೆಂದು ಇವರು ಎಂದು ವಿಶ್ವಾಸಿಸುತ್ತಾರೆ.ಈ ಅಂಶವನ್ನು ತೋರಿಸಲು, **ಬಹಳ ಜನರು ಕರೆಯಲ್ಪಟ್ಟರು. ಆದರೆ ಕೆಲವರು ಮಾತ್ರ ಆಯ್ಕೆಗೊಂಡರು** ಎಂಬಂತ ಯೇಸುವಿನ ಮಾತುಗಳನ್ನು (ಮತ್ತಾಯ 22:14) ಮತ್ತು ಕೆಲವು ಪಾತ್ರೆಗಳು ನಾಶನಕ್ಕೂ ಇನ್ನು ಕೆಲವು ಪಾತ್ರೆಗಳು, ಮಹಿಮೆಗೆ ತಯಾರು ಮಾಡಲಾಗಿದೆ ಎಂಬ ಪೌಲನ ಹೇಳಿಕೆ ಪ್ರಕಾರ ಈ ಕ್ರೈಸ್ತರು ಹೇಳುತ್ತಾರೆ (ರೋಮಾ. 9:22-23).ರೋಮಾ. 9:18ರಲ್ಲಿ ಪೌಲನು ಬರೆಯುತ್ತಾನೆ **"ದೇವರು ಯಾರನ್ನು ಕರುಣಿಸಿದರೂ, ಯಾರನ್ನು ಕಠಿಣ ಪಡಿಸಿದರೂ, ಅದೆಲ್ಲವೂ ಆತನ ಇಷ್ಟಾನುಸಾರವಾಗಿಯೇ ಇದೆ".** ಕೆಲವರು ನಿತ್ಯಜೀವಕ್ಕಾಗಿಯೇ ನೇಮಿಸಲ್ಪಟ್ಟಿದ್ದಾರೆ (ಅ.ಕೃ. 13:48) ಮತ್ತು ಇತರರು ಅವಿಧೇಯತೆಗೂ, ನಾಶನಕ್ಕೂ ನೇಮಕಗೊಂಡಿದ್ದಾರೆ (1ನೇ ಪೇತ್ರ 2:8)., ದೇವರು ಯಾರನ್ನು ರಕ್ಷಿಸಬೇಕೋ ಅವರನ್ನು ಆರಿಸಿಕೊಳ್ಳುತ್ತಾನೆ. ಮತ್ತೆ ಅವರಿಗೆ ಪಶ್ಚಾತ್ತಾಪ ಪಡುವ ಸಾಮರ್ಥ್ಯ ನೀಡುತ್ತಾನೆ (2ನೇ ತಿಮೋಥೆ 2:25). ಯಾರನ್ನು ದೇವರು ಆರಿಸಿಕೊಂಡಿದ್ದಾನೋ, ಅವರು ವಿಶ್ವಾಸವಿಡುತ್ತಾರೆ (ಫಿಲಿಪ್ಪಿ 1:29).ಯಾರ್ಯಾರು ಆರಿಸಲ್ಪಟ್ಟಿದ್ದಾರೋ, ಅವರಾಗಿಯೇ ಅವರು ರಕ್ಷಣೆ ಬೇಡವೆಂದು ಹೇಳಲಾರರು ಎಂದು ಈ ಕ್ರೈಸ್ತರು ನಂಬುತ್ತಾರೆ

ಇನ್ನು ಕೆಲವು ಕ್ರೈಸ್ತರು,ನಮ್ಮ ರಕ್ಷಣೆಯಲ್ಲಿ ದೇವರ ಆಯ್ಕೆಯೊಂದೇ ಪಾಲ್ಗೊಂಡಿಲ್ಲ. ಆದರೆ ಅದರಲ್ಲಿ ನಮ್ಮ ಪಾತ್ರವೂ ಇದೆ ಎಂದು ವಿಶ್ವಾಸಿಸುತ್ತಾರೆ. ಹಳೇ ಒಡಂಬಡಿಕೆಯಲ್ಲಿ ಯಹೂದ್ಯರಲ್ಲಿ ತೋರಿಕೆಗಾಗಿಯಾದರೂ ಯಾವುದೇ ಶ್ರೇಷ್ಟತೆ ಇಲ್ಲದಿದ್ದಾಗ್ಯೂ,ಅವರು ದೇವರಿಂದ ಆರಿಸಲ್ಪಟ್ಟಿದ್ದರೂ ಕೂಡ, ಅವರು ದೇವರನ್ನು ಹಿಂಬಾಲಿಸುವ ಅಥವಾ ಬಿಡುವ ಆಯ್ಕೆಯನ್ನು ದೇವರು ಅವರಿಗೆ ಕೊಟ್ಟನು (ಧರ್ಮೋಪದೇಶಕಾಂಡ 30:19, ಯೆಹೋಶುವ 24:15.). ಹೊಸ ಒಡಂಬಡಿಕೆಯಲ್ಲಿ,ದೇವರ ಚಿತ್ತವನ್ನು ಮಾಡುವುದಕ್ಕೆ ಯಾರಾದರೂ ತಮ್ಮನ್ನು ತಾವೇ ಆಯ್ಕೆ ಮಾಡಿಕೊಂಡರೆ ಅವರು ದೇವರ ಬೋಧನೆಯನ್ನು ಗ್ರಹಿಸುತ್ತಾರೆ ಎಂದು ಕ್ರಿಸ್ತನು ಹೇಳಿದನು (ಯೋಹಾನ 7:17).

ನಾವು ಪಶ್ಚಾತ್ತಾಪ ಪಡಬೇಕೆಂಬ ಆಜ್ಞೆಯನ್ನು ಹೊಂದಿದ್ದೇವೆ (ಅ.ಕೃ. 2:38) ಮತ್ತು ನಂಬಿ, ರಕ್ಷಣೆ ಹೊಂದಲು ಕರೆಯಲ್ಪಟ್ಟವರಾಗಿದ್ದೇವೆ (ರೋಮಾ.10:9-10).ದೇವರು ನಮ್ಮನ್ನು ಮೊದಲೇ ಕರೆದನು ಎಂದು, ಆದರೆ ದೇವರ ಕರೆಯನ್ನು ಮತ್ತು ರಕ್ಷಣೆಯನ್ನು ನಾವು ವಿರೊದಿಸ ಬಹುದು ಎಂದು ಈ ಕ್ರೈಸ್ತರು ವಿಶ್ವಾಸಿಸುತ್ತಾರೆ.

ಈ ಎರಡನೇ ಗುಂಪಿಗೆ ಸೇರಿದ ಕೆಲವು ಕ್ರೈಸ್ತರು,ದೇವರು ಪಾಪಕ್ಕೆ ಗುಲಾಮನಾಗಿರುವ ಅವಿಶ್ವಾಸಿಯನ್ನು ತೆಗೆದುಕೊಂಡು ಅವನನ್ನು ಬಿಡುಗಡೆ ಮಾಡುತ್ತಾನೆಂದು ಮತ್ತು ಅವನು ತಿರುಗಿ ಸ್ವಂತ ಇಚ್ಛೆಯಿಂದ ರಕ್ಷಣೆಯನ್ನು ಆಯ್ಕೆಮಾಡಿಕೊಳ್ಳಲು ಸ್ವತಂತ್ರವನ್ನು ಅವನಿಗೆ ಕೊಟ್ಟಿದ್ದಾನೆಂದು, ಬಿಡುಗಡೆ ಹೊಂದಿದ ವ್ಯಕ್ತಿಯು ದೇವರನ್ನು ಆರಿಸಿಕೊಂಡರೆ ಅವನು ರಕ್ಷಣೆ ಹೊಂದುತ್ತಾನೆ. ಒಂದು ವೇಳೆ ಸೈತಾನನನ್ನು ಆರಿಸಿಕೊಂಡರೆ ಮತ್ತೆ ಅವನು ಪಾಪದ ಗುಲಾಮತನಕ್ಕೆ ಬೀಳುತ್ತಾನೆ ಮತ್ತು ನಾಶ ಹೊಂದುತ್ತಾನೆ. ಎಂದು ವಿಶ್ವಾಸಿಸುತ್ತಾರೆ. ಆದಾಗ್ಯೂ ಇನ್ನು ಕೆಲವರು, ಸ್ತ್ರೀಪುರುಷರು ಪಾಪದಲ್ಲಿ ಕಟ್ಟಿಹಾಕಲ್ಪಟ್ಟವರಾಗಿದ್ದು, ಅವರು ಎಂದಿಗೂ ದೇವರನ್ನು ಆರಿಸಿಕೊಳ್ಳುವುದಿಲ್ಲ ಆದುದರಿಂದ ದೇವರು ನಮ್ಮೆಲ್ಲರನ್ನು ರಕ್ಷಣೆಗಾಗಿ ಆರಿಸಿಕೊಂಡಿದ್ದಾನೆ. ಆದರೆ ಮನುಷ್ಯನು ತನ್ನ ನಾಶನಕ್ಕಾಗಿ,ಎಲ್ಲವನ್ನು ಆರಿಸಿಕೊಳ್ಳುತ್ತಾನೆ. ಬೇರೊಂದು ಮಾತಿನಲ್ಲಿ ಹೇಳುವುದಾದರೆ, ದೇವರು ಒಬ್ಬನನ್ನು ರಕ್ಷಣೆಗಾಗಿ ಆರಿಸಿಕೊಂಡಾಗ, ಅವನು ದೇವರನ್ನು ವಿರೋದಿಸದೆ ಹೋದರೆ, ಅವನು ರಕ್ಷಿಸಲ್ಪಡುತ್ತಾನೆ. ಆದರೆ ಅವನು ದೇವರನ್ನು ವಿರೋದಿಸಿದರೆ ರಕ್ಷಣೆ ಹೊಂದುವಂತೆ ಅವನನ್ನು ದೇವರು ಒತ್ತಾಯಪಡಿಸುವುದಿಲ್ಲ ಮತ್ತು ಹೀಗೆ ಅವನು ತನ್ನ ಆಯ್ಕೆಯಿಂದ ನಾಶವಾಗುತ್ತಾನೆ.

ಆದರೆ ನಾವು ಈ ರೀತಿಯಾಗಿ ದೇವರನ್ನು ಎದುರಿಸಬಹುದೇ? ಅನೇಕ ಕ್ರೈಸ್ತರು ದೇವರು ಸರ್ವಶಕ್ತನು ಎಂಬುದಾಗಿ ಹೇಳುತ್ತಾರೆ. ಸೃಷ್ಟಿಕರ್ತನನ್ನು ಎದುರಿಸಲು ನಾವು ಯಾರು? (ರೋಮಾ. 9:19-21). ಆದರೆ ಇನ್ನು ಅನೇಕ ಕ್ರೈಸ್ತರು, ದೇವರು ನಮಗೆ, ಚುನಾಯಿಸಿಕೊಳ್ಳುವ ಸ್ವಾತಂತ್ರ್ಯವನ್ನು ಸಹ ಕೊಟ್ಟಿದ್ದಾನೆ ಎಂದು ನಂಬುತ್ತಾರೆ. ಜನರು ದೇವರ ಎಲ್ಲಾ ಇಚ್ಛೆಗಳಿಗೆ ವಿರೋದವಾಗಿದ್ದರು ಎಂಬ ವಿಷಯಗಳ ಬಗ್ಗೆ ಸೂಚಿಸುವ ವಚನಗಳನ್ನು ಆವರು ತೋರಿಸುತ್ತಾರೆ. (ಮತ್ತಾಯ 23:37 ಅ.ಕೃ. 7:51, 13:46). ಮತ್ತು ದೇವರನ್ನು ಎದುರಿಸ ಬೇಡ ಎಂಬಂತಹ ಇತರೇ ವಚನಗಳ ಕಡೆಗೆ ಬೆಟ್ಟು ಮಾಡಿ ತೋರಿಸುತ್ತಾರೆ (2ನೇ ಕೊರಿಂಥ 6:1, ಇಬ್ರಿಯಾ 3:8, 13, 12:25).

ಆದುದರಿಂದ ಕ್ರೈಸ್ತರು ಈ ಪ್ರಶ್ನೆಗೆ ಮೂರು ವಿವಿಧ ಉತ್ತರಗಳನ್ನು ಕೊಡುತ್ತಾರೆ.

(1) ಮನುಷ್ಯನಿಗೆ ಆತನ ರಕ್ಷಣೆಯಲ್ಲಿ ಅಥವಾ ನಾಶನದಲ್ಲಿ ಯಾವ ಆಯ್ಕೆಯೂ ಇರುವುದಿಲ್ಲ. (2) ಮನುಷ್ಯನಿಗೆ ಈ ಎರಡರಲ್ಲೂ ಆಯ್ಕೆ ಉಂಟು. (3) ಮನುಷ್ಯನು ರಕ್ಷಣೆಯನ್ನು ಆರಿಸಿಕೊಳ್ಳಲಾರನು. ಆದರೆ ದೇವರು ಆತನನ್ನು ಕರೆದ ನಂತರ, ಆಮೇಲೆ ಆತನು ದೇವರ ಕರೆಯನ್ನು ತಿರಸ್ಕರಿಸಿ ಮತ್ತೆ ನಾಶನವನ್ನು ಆಯ್ಕೆ ಮಾಡಿಕೊಳ್ಳಬಹುದು.

ನಾವು ರಕ್ಷಣೆಯನ್ನು ಆಯ್ಕೆ ಮಾಡಿಕೊಳ್ಳಬಹುದೇ ಎಂಬಈ ಮೂರು ಅಭಿಪ್ರಾಯಗಳ ಬಗ್ಗೆ ಈ ಕೆಳಗಿನ ದೃಷ್ಟಾಂತದ ಮೂಲಕ ವಿವರಿಸಬಹುದು. ಕಾಡಿನಲ್ಲಿ ಒಬ್ಬ ಹುಡುಗನನ್ನು ಯಾರೋ ಕಟ್ಟಿ ಹಾಕಿರುವ ದೃಶ್ಯವನ್ನು ಚಿತ್ರಿಸಿಕೊಳ್ಳಿರಿ. ಆತನು ಪಾಪಕ್ಕೆ ಕಟ್ಟಿ ಹಾಕಲ್ಪಟ್ಟಿರುವ ಗುಲಾಮನನ್ನು ಪ್ರತಿನಿಧಿಸುತ್ತಾನೆ. ಒಬ್ಬ ಮನುಷ್ಯನು ಆ ದಾರಿಯಲ್ಲಿ ಎತ್ತಿನ ಗಾಡಿಯಲ್ಲಿ ಬರುತ್ತಿದ್ದಾನೆ. ಇತನು ರಕ್ಷಣೆ ಕೊಡಬೇಕೆಂದಿರುವ ದೇವರನ್ನು ಪ್ರತಿನಿಧಿಸುತ್ತಾನೆ. ಎತ್ತಿನ ಗಾಡಿಯಲ್ಲಿ ಬರುತ್ತಿರುವ ವ್ಯಕ್ತಿಯು ಮೂರು ಕಾರ್ಯಗಳಲ್ಲಿ ಒಂದನ್ನು ಮಾಡಬಹುದು -

(1) ಕಟ್ಟಿಹಾಕಿರುವ ಹುಡುಗನನ್ನು ಹಾಗೆಯೇ ಗಾಡಿಯಲ್ಲಿ ಕೂಡಿಸಿಕೊಂಡು ಹೋಗಬಹುದು. ಯಾವ ವಿಶ್ವಾಸಿಗಳು, ರಕ್ಷಣೆಯಲ್ಲಿ ನಮಗೆ ಆಯ್ಕೆ ಇಲ್ಲ ಹಾಗೆಯೇ ದೇವರನ್ನು ವಿರೋದಿಸುವ ಶಕ್ತಿಯು ಸಹ ಇಲ್ಲ ಎಂದು ಹೇಳಿಕೊಳುವಂತಹ ವಿಶ್ವಾಸಿಗಳನ್ನು ಇದು ಪ್ರತಿನಿಧಿಸುತ್ತದೆ. (2) ಆ ಮನುಷ್ಯನು ಹುಡುಗನ ಕಟ್ಟನ್ನು ಬಿಚ್ಚಿ ಬಿಡುವುದಲ್ಲದೆ ಮತ್ತು ಅವನನ್ನು ಗಾಡಿಯಲ್ಲಿ ಕೂಡಿಸಿ ಕರೆದುಕೊಂಡು ಹೋಗಬಹುದೇ ಅಥವಾ ಇಲ್ಲವೇ ಎಂದು ಕೇಳಬಹುದು. ಆ ಹುಡುಗನನ್ನು ಕರೆದುಕೊಂಡು ಹೋಗಲು ಇಚ್ಛೆ ಪಟ್ಟರೆ, ಆ ಮನುಷ್ಯನು ಅವನನ್ನು ಗಾಡಿಯಲ್ಲಿ ಕೂಡಿಸಿಕೊಂಡು ಹೋಗಿಯೇ ಬಿಡುತ್ತಾನೆ. ನಾವು ನಮ್ಮ ರಕ್ಷಣೆಯನ್ನು ಪಡೆಯಬೇಕೋ ಅಥವಾ ನಾಶನಕ್ಕೆ ಹೋಗಬೇಕೋ ಎಂದು ನಾವು ತೀರ್ಮಾನಿಸಲು ದೇವರು ಮೊದಲು ನಮ್ಮನ್ನು ಬಂಧನದಿಂದ ಬಿಡಿಸುತ್ತಾನೆ ಎಂಬ ಈ ವಾದವನ್ನು ಕೆಲವರು ಪ್ರತಿಪಾದಿಸುತ್ತಾರೆ. (3) ಆ ಮನುಷ್ಯನು ಹುಡುಗನನ್ನು ಗಾಡಿಯಲ್ಲಿ ಕೂಡಿಸಿದ ನಂತರ, ಅವನ ಕಟ್ಟನ್ನು ಬಿಚ್ಚಬಹುದು. ಒಂದು ವೇಳೆ ಆ ಹುಡುಗನು ಇಷ್ಟ ಪಟ್ಟರೆ, ಗಾಡಿಯಿಂದ ಹಾರಿ ಹೋಗಬಹುದು. ಒಂದು ವೇಳೆ ಆ ಹುಡುಗನು ಏನನ್ನು ಮಾಡದೆ ಇದ್ದ ಪಕ್ಷದಲ್ಲಿ ಹಾಗೆಯೇ ಆ ಮನುಷ್ಯನಿಂದ ತೆಗೆದುಕೊಂಡು ಹೋಗಲ್ಪಡುತ್ತಾನೆ. ಹೀಗೆಯೇ ದೇವರು ನಮ್ಮನ್ನು ಆರಿಸಿಕೊಂಡ ನಂತರ ನಮ್ಮ ರಕ್ಷಣೆಗೆ ಬೇಕಾದ ಎಲ್ಲಾ ಕಾರ್ಯಗಳನ್ನು ಆತನೆ ಮಾಡುತ್ತಾನೆ. ಆದರೆ ದೇವರು ನಮಗಾಗಿ ಮಾಡಿದ ಆತನ ರಕ್ಷಣೆಯ ಕಾರ್ಯವನ್ನು ನಾವು ತಿರಸ್ಕರಿಸಬಹುದು ಮತ್ತು ವಿರೋದಿಸ ಬಹುದು ಎಂಬ ವಾದಕ್ಕೆ ಇದನ್ನು ಹೋಲಿಸುತ್ತಾರೆ

ಒಟ್ಟಾರೆ ಸಾರಾಂಶವೆನಂದರೆ ಮೊದಲನೆಯ ಅಭಿಪ್ರಾಯದಂತೆಯೆ, ದೇವರು ರಕ್ಷಣೆ ಮತ್ತು ನಾಶನಕ್ಕೆ ಆರಿಸಿಕೊಂಡವರಿಗಾಗಿ ಎಲ್ಲಾ ಕಾರ್ಯಗಳನ್ನು ಮಾಡುತ್ತಾನೆ. ಎರಡನೆಯ ಅಬಿಪ್ರಾಯದಂತೆ, ದೇವರು ನಮಗೆ ರಕ್ಷಣೆ ಹೊಂದಲು ಅಥವಾ ನಾಶನಕ್ಕೆ ಹೋಗಲು ಆಯ್ಕೆಯ ಸ್ವಾತಂತ್ರ್ಯವನ್ನು ಕೊಟ್ಟಿದ್ದಾನೆ. ಮೂರನೆಯ ಅಭಿಪ್ರಾಯದಂತೆ, ದೇವರು ರಕ್ಷಣೆಗಾಗಿ ಬೇಕಾದದ್ದೆಲ್ಲವನ್ನು ನಮಗಾಗಿ ಮಾಡುತ್ತಾನೆ. ಆದರೆ ಮನುಷ್ಯನು ಇದನ್ನು ವಿರೋದಿಸಬಹುದು ಮತ್ತು ತನ್ನ ನಾಶನವನ್ನು ತಾನೆ ಆರಿಸಿಕೊಳ್ಳಬಹುದು.

## ದೇವರು ಎಲ್ಲಾ ಮನುಷ್ಯರನ್ನು ಕರೆಯುತ್ತಾನೋ?

ದೇವರು ಪ್ರತಿಯೊಬ್ಬ ಮನುಷ್ಯನು ರಕ್ಷಣೆಯನ್ನು ಹೊಂದಬೇಕು ಅಥವಾ ಕೆಲವರೂ ಮಾತ್ರವೇ ಹೋಂದಬೇಕೆಂದು ಅಪೇಕ್ಷಿಸುತ್ತಾನೋ? **ಅನೇಕರು ಕರೆಯಲ್ಪಟ್ಟರು ಆದರೆ ಕೆಲವರೇ ಆಯ್ಕೆಗೊಂಡರು.** ಎಂಬುದಾಗಿ ಯೇಸುವು ಮತ್ತಾಯ 22:14 ರಲ್ಲಿಹೇಳಿದನು. ಯೇಸುವೇ ಲೋಕ ರಕ್ಷಕನೆನ್ನುವುದು ಬಹಳ ಸ್ಪಷ್ಟವಾಗಿದೆ.( ಯೋಹಾನ 4:42, 1ನೇ ಯೋಹಾನ 4:14). ಮತ್ತು ಆತನು ಲೋಕದ ಪಾಪವನ್ನು ಹೋಗಲಾಡಿಸುವುದಕ್ಕಾಗಿ ಮರಣ ಹೊಂದಿದನು (ಯೋಹಾನ 1:29, 1ನೇ ಯೋಹಾನ 2:2). ಇನ್ನು ಹೆಚ್ಚಾಗಿ ಹೇಳುವುದಾದರೆ, ಎಲ್ಲಾ ಮನುಷ್ಯರು ರಕ್ಷಣೆ ಹೊಂದಬೇಕೆಂದು ದೇವರು ಅಪೇಕ್ಷಿಸಿಸುತ್ತಾನೆ ಎಂದು ಪೌಲನು ಹೇಳುತ್ತಾನೆ (ರೋಮಾ 11:32, 1ನೇ ತಿಮೊಥೆ 2:4-6, 2ನೇ ಪೇತ್ರ 3:9) "ಎಲ್ಲಾ ಮನುಷ್ಯರು" ಎಂಬ ಈ ಪದದ ಅರ್ಥವೇನು?

ಎಲ್ಲಾ ಮನುಷ್ಯರು ಅಂದರೆ ಎಲ್ಲಾ ವಿಧವಾದ ಮನುಷ್ಯರು, ಅಂದರೆ ಎಲ್ಲಾ ಗುಂಪುಗಳಿಂದ ಆರಿಸಲ್ಪಟ್ಟ ಕೆಲವು ವ್ಯಕ್ತಿಗಳು ಎಂದು ಕೆಲವು ಕ್ರೈಸ್ತರು ಅರ್ಥೈಸಿಕೊಳ್ಳುತ್ತಾರೆ. ಕ್ರಿಸ್ತನ ಸುವಾರ್ತೆಯು ಲೋಕದ ಎಲ್ಲಾ ಕಡೆಗೂ ಹಬ್ಬಬೇಕೆಂದು ದೇವರು ಬಯಸುತ್ತಾನೆ ಆದರೆ ಪ್ರತಿಯೊಂದು ಗುಂಪಿನಲ್ಲಿ ಕೆಲವರಿಗೆ ಮಾತ್ರ ನಂಬಿಕೆಯ ವರವನ್ನು ದೇವರು ಕೊಡುತ್ತಾನೆಂದು ವಿಶ್ವಾಸಿಸುತ್ತಾರೆ.ಆದರೆ ಇನ್ನು ಕೆಲವು ಕ್ರೈಸ್ತರು, ಎಲ್ಲಾ ಮನುಷ್ಯರು ಅಂದರೆ, ಪ್ರತಿಯೊಬ್ಬ ಮನುಷ್ಯನೂ ಎಂದು ಅರ್ಥೈಸಿಕೊಳ್ಳುತ್ತಾರೆ.ಅಂದರೆ ದೇವರು ಎಲ್ಲಾ ಮನುಷ್ಯರನ್ನು ಕರೆಯುತ್ತಾನಾದರೂ, ಬರೀ ವಿಶ್ವಾಸಿಗಳನ್ನು ಮಾತ್ರ ಆಯ್ಕೆಗೊಂಡವರು ಎಂದು ಇವರನ್ನು ಕರೆಯಬಹುದು (ಇವೆರಡು ಅರ್ಥಗಳು [1].ಗ್ರೀಕ್ ಮೂಲ ಭಾಷೆಯಲ್ಲಿ ಇರಲು ಸಾಧ್ಯವಿದೆ).

ಇದುವರೆಗೂ ಕ್ರಿಸ್ತನ ವಿಷಯವಾಗಿ ಕೇಳದವರ ಬಗ್ಗೆ ಏನು ಹೇಳಬೇಕು? ಅವರು ರಕ್ಷಣೆ ಹೊಂದಬಹುದೇ? ಅಂತಹವರಿಗೆ ಇದು ಸಿಗುವುದಿಲ್ಲ ಎಂದು ಅನೇಕ ಕ್ರೈಸ್ತರು ಭಾವಿಸುತ್ತಾರೆ.ಎಲ್ಲಾ ಮನುಷ್ಯರು ಸ್ವಾಭಾವಿಕವಾಗಿ ಪಾಪಿಗಳೇ. ಎಲ್ಲರು ಮರಣ ದಂಡನೆಗೆ ಯೋಗ್ಯರೇ.( ರೋಮಾ. 3:10-12, 6:23). ಯೇಸುಕ್ರಿಸ್ತನಿಂದಲ್ಲದೇ ರಕ್ಷಣೆ ಪಡೆಯಲು ಅನ್ಯ ಮಾರ್ಗವಿಲ್ಲ (ಯೋಹಾನ 14:6). ಅ.ಕೃ. 4:12). **ಕರ್ತನ ನಾಮವನ್ನು ಹೇಳಿಕೊಳ್ಳುವವರೇಲ್ಲರಿಗೆ ರಕ್ಷಣೆಯಾಗುವದು.ಆದರೆ ತಾವು ಯಾವನನ್ನು ನಂಬಲಿಲ್ಲವೋ ಆತನ ನಾಮವನ್ನು ಹೇಳಿಕೋಳ್ಳುವುದು ಹೇಗೆ? ಮತ್ತು ಆತನ ಸುದ್ದಿ ಕೇಳದಿರುವಲ್ಲಿ ಆತನನ್ನು ನಂಬುವುದು ಹೇಗೆ? ಸಾರಿ ಹೇಳುವವನಿಲ್ಲದೆ ಕೇಳುವದು ಹೇಗೆ? ಎಂದು ರೋಮ. 10:13-14**ರಲ್ಲಿ ಪೌಲನು ಹೀಗೆ ಬರೆಯುತ್ತಾನೆ .ಯೇಸುಕ್ರಿಸ್ತನ ವಿಷಯವಾಗಿ ಎಂದೂ ಕೇಳದವರ ಮೇಲೆ ದೇವರು ಕರುಣೆಯನ್ನು ತೋರಿಸಲಿಕ್ಕೆ ಸಾದ್ಯವಿದೆ . (ಲೂಕ 12:47-48, ರೋಮಾ. 2:12.). ಆದರೆ ಇದು ದೇವರ ತೀರ್ಮಾನಕ್ಕೆ ಬಿಟ್ಟ ವಿಷಯ.ಸುವಾರ್ತೆಯನ್ನು ಎಂದಿಗೂ ಕೇಳದವರ ವಿಷಯವಾಗಿ ದೇವರು ಏನು ಮಾಡುತ್ತಾನೋ ಎಂಬುದು ಸತ್ಯವೇದದಲ್ಲಿ ಸ್ಪಷ್ಟವಾಗಿಲ್ಲವಾದರೂ, ನಾವು ಇತರರಿಗೆ ಕ್ರಿಸ್ತನ ವಿಷಯವಾಗಿ ಹೇಳುವಂತದ್ದು ನಮ್ಮ ಜವಾಬ್ದಾರಿಯಾಗಿದೆ.

## ಸಾರಾಂಶ

ಈ ಲೇಖನದಲ್ಲಿ ಕೇಳಿದ ಪ್ರಶ್ನೆಗಳು ಬಹಳ ಕಠಿಣವಾಗಿವೆ. ಸತ್ಯವೇದದಲ್ಲಿ ಈ ಪ್ರಶ್ನೆಗಳಿಗೆ ನಿಖರವಾದ ಉತ್ತರವಿಲ್ಲ. ದೇವರ ಚಿತ್ತವು ಬಹಳ ನಿಗೂಢವಾದ ವಿಷಯ. ಆತನ ಜ್ಞಾನ ಮತ್ತು ತಿಳುವಳಿಕೆಯು ಎಷ್ಟು ಆಳವಾಗಿದೆ? (ರೋಮಾಯ 11:33-36). ಒಂದು ವೇಳೆ ಈ ಎಲ್ಲಾ ಅಭಿಪ್ರಾಯಗಳು ಭಾಗಶಃ ನಿಜವಿರಬಹುದು.

ಯೋಹಾನನು ಹೀಗೆ ಬರೆಯುತ್ತಾನೆ. **ಆತನು ನಮ್ಮನ್ನು ಮೊದಲು ಪ್ರೀತಿಸಿದ್ದುದರಿಂದ, ನಾವು ಆತನನ್ನು ಪ್ರೀತಿ ಮಾಡುತ್ತೇವೆ** (1ನೇ ಯೋಹಾನ 4:19) ಇಲ್ಲವೆ ನಾವು ಹೀಗೂ ಹೇಳಬಹುದು. ಆತನು ನಮ್ಮನ್ನು ಮೊದಲು ಆರಿಸಿಕೊಂಡನು. ರಕ್ಷಣೆಯು ದೇವರ ಕಾರ್ಯ. ಆದರೆ ಅದರಲ್ಲಿ ನಮ್ಮ ಪಾತ್ರವೂ ಉಂಟೆಂದು ಭಾಸವಾಗುತ್ತದೆ. ಪೌಲನು ಈ ಎರಡು ಭಾವನೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಹೀಗೆ ಬರೆಯುತ್ತಾನೆ. **ಹೀಗಿರುವಲ್ಲಿ..... ಮನೋಭೀತಿಯಿಂದ ನಡುಗುವವರಾಗಿ,ನೀವು ನಿಮ್ಮ ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ. ಯಾಕೆಂದರೆ ದೇವರೇ ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಈ ಉದ್ದೇಶವನ್ನು, ಪ್ರಯತ್ನವನ್ನೂ ಉಂಟು ಮಾಡುವವನಾಗಿದ್ದಾನೆ. (ಫಿಲಿಪ್ಪಿ 2:12:13).**

---

[1]ಹೊಸ ಒಡಂಬಡಿಕೆಯು ಮೂಲತಃ ಗ್ರೀಕ್ ಬಾಷೆಯಲ್ಲಿ ಬರೆಯಲ್ಪಟ್ಟಿದೆ.

# ನಾವು ನಮ್ಮ ರಕ್ಷಣೆಯನ್ನು ಕಳೆದು ಕೊಳ್ಳುತ್ತೇವೆಯೇ?

ಮುಖ್ಯ ವಚನಗಳು

ಯೋಹಾನ 6:39 ಆತನು ನನಗೆ ಕೊಟ್ಟವರಲ್ಲಿ ಒಬ್ಬನನ್ನು ನಾನು ಕಳೆದುಕೊಳ್ಳುವುದಿಲ್ಲ .

ಯೋಹಾನ 10:28 :- ಅವುಗಳನ್ನು ಯಾರು ನನ್ನ ಕೈಯಿಂದ ಕಸಕೊಳ್ಳರು.

ರೋಮಾ. 8:38-39 :- ಮರಣವಾಗಲೀ, ಜೀವವಾಗಲಿ ..... ಈಗಿನ ಸಂಗತಿಗಳಾಗಲಿ, ಮುಂದಿನ ಸಂಗತಿಗಳಾಗಲಿ .......... ನಮ್ಮನ್ನು ನಮ್ಮ ಕರ್ತನಾದ ಯೇಸುಕ್ರಿಸ್ತನಲ್ಲಿ ತೋರಿ ಬಂದ ದೇವರ ಪ್ರೀತಿಯಿಂದ ಅಗಲಿಸಲಾರದು.

ಎಫೆಸ 1:13-14 :- ಸತ್ಯ ವಾಕ್ಯವನ್ನು ಕೇಳಿ ನಂಬಿಕೆ ಇಟ್ಟವರಾದ ನೀವು ಸಹಾ ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ. ದೇವರು ಸಂಪಾದಿಸಿಕೊಂಡ ಜನರಿಗೆ ವಿಮೋಚನೆಯಾಗುವುದಕ್ಕೆ ಪವಿತ್ರಾತ್ಮನು ನಮ್ಮ ಬಾಧ್ಯತೆಗೆ ಹೊಣೆಗಾರನಾಗಿದ್ದಾನೆ.

ಫಿಲಿಪ್ಪಿ 1:6 :- ಈ ಒಳ್ಳೇ ಕೆಲಸವನ್ನು ನಿಮ್ಮಲ್ಲಿ ಪ್ರಾರಂಭಿಸಿದಾತನು ಇದನ್ನು ನಡೆಸಿಕೊಂಡು ಯೇಸುಕ್ರಿಸ್ತನು ಬರುವ ದಿನದೊಳಗಾಗಿ ಸಿದ್ಧಿಗೆ ತರುವನೆಂದು ನನಗೆ ಭರವಸೆ ಉಂಟು.

2ನೇ ತಿಮಾಥೆ 1:12 :- ಆತನು ನನ್ನ ವಶದಲ್ಲಿಟ್ಟುವುದನ್ನು ಆತನು ಆ ದಿನಕ್ಕಾಗಿ ಕಾಪಾಡುವುದಕ್ಕೆ ಶಕ್ತನಾಗಿದ್ದಾನೆ.

1ನೇ ಯೋಹಾನ 2:19 :- ಅವರು ನಮ್ಮವರಾಗಿದ್ದರೆ, ನಮ್ಮ ಜೊತೆಯಲ್ಲೇ ಇರುತ್ತಿದ್ದರು.

ಲೂಕ 8:11-15 :- ಈ ಸಾಮ್ಯದ ಅರ್ಥವೇನಂದರೆ ..........ಇವರು ಸ್ವಲ್ಪಕಾಲ ಮಾತ್ರವೇ ನಂಬಿಕೊಂಡಿದ್ದು, ಶೋಧನೆಯ ಕಾಲದಲ್ಲಿ ಬಿದ್ದು ಹೋಗುತ್ತಾರೆ.

ಯೋಹಾನ 15:2 :- ನನ್ನಲ್ಲಿದ್ದು ಫಲ ಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದು ಹಾಕುವನು.

ರೋಮಾ 11:22 :- ಆದುದರಿಂದ ದೇವರ ದಯೆಯನ್ನು, ಕಾಠಿಣ್ಯವನ್ನು ನೋಡು ಬಿದ್ದವರ ಕಡೆಗೆ ಕಾಠಿಣ್ಯ. ನಿನ್ನ ಕಡೆಗೆ, ನೀನು ದೇವರ ದಯೆಯನ್ನು ಆಶ್ರಯಿಸಿಕೊಂಡೇ ಇದ್ದರೆ, ಆತನ ದಯೆ. ಇಲ್ಲವಾದರೆ, ನಿನ್ನನ್ನೂ ಕಡಿದುಹಾಕುವನು.

ಗಲಾತ್ಯ 5:1-4 :- ಕ್ರಿಸ್ತನು ನಮ್ಮನ್ನು ಸ್ವತಂತ್ರದಲ್ಲಿರಿಸಬೇಕೆಂದು ........ನಿಮ್ಮಲ್ಲಿ ಯಾರ್ಯಾರು ಕರ್ಮಗಳಿಂದ ನೀತಿವಂತರಾಗಬೇಕೆಂದಿರುತ್ತಾರೋ ಅವರು ಕ್ರಿಸ್ತನಿಂದ ಅಗಲಿ ಹೋದರು.

1ನೇ ತಿಮಾಥೆ 4:1 :- ಮುಂದಣ ದಿನಗಳಲ್ಲಿ ಕೆಲವರು ವಂಚಿಸುವ ಆತ್ಮಗಳ ನುಡಿಗೂ, ದೆವ್ವಗಳ ಬೋಧನೆಗಳಿಗೂ, ಲಕ್ಷ್ಯ ಕೊಟ್ಟು ಕ್ರಿಸ್ತ ನಂಬಿಕೆಯಿಂದ, ಭ್ರಷ್ಟರಾಗುವರೆಂದು ದೇವರಾತ್ಮನು ಸ್ಪಷ್ಟವಾಗಿ ಹೇಳುತ್ತಾನೆ.

ಇಬ್ರಿಯಾ 6:4-6 :- ಒಂದು ಸಾರಿ ಜ್ಞಾನಪ್ರಕಾಶದಲ್ಲಿ ಸೇರಿ ಪರಲೋಕದಿಂದಾದ ದಾನದ ಅನುಭವವನ್ನು ಹೊಂದಿ ಪವಿತ್ರಾತ್ಮವರದಲ್ಲಿ ಪಾಲುಗಾರರಾಗಿ, ದೇವರ ವಾಕ್ಯದ ಶ್ರೇಷ್ಠತೆಯನ್ನು ಮುಂದಣ ಯುಗದ ಮಹತ್ವವನ್ನು ಅನುಭವಿಸಿದವರು ಭ್ರಷ್ಟರಾದರೇ ಅವರಲ್ಲಿ ತಿರುಗಿ ಮಾನಸಾಂತರ ಹುಟ್ಟಿಸುವುದು ಅಸಾಧ್ಯ.

ಇಬ್ರಿಯಾ 10:26-27 :- ಸತ್ಯದ ಪರಿಜ್ಞಾನವನ್ನು ನಾವು ಹೊಂದಿದ ಮೇಲೆ, ಬೇಕೆಂದು ಪಾಪ ಮಾಡಿದರೆ, ............... ಇವೇ ನಮ್ಮ ಮುಂದೆ ಇರುವವು .

ಇಬ್ರಿಯಾ 10:29 :- ಯಾವನು ದೇವ ಕುಮಾರನನ್ನು ತುಳಿದು, ಒಡಂಬಡಿಕೆಯನ್ನು ಸ್ಥಿರಪಡಿಸಿದಂತಹ ತನ್ನನ್ನು ಪವಿತ್ರ ಮಾಡಿದಂತಹ ರಕ್ತವನ್ನು ಅಶುದ್ಧವೆಂದೆಣಿಸಿ, ದೇವರ ಕೃಪಾವರವಾಗಿರುವ ಆತ್ಮನನ್ನು ತಿರಸ್ಕಾರ ಮಾಡಿದ್ದಾನೋ, ಅವನು ಇನ್ನು ಎಷ್ಟೋ ಕ್ರೂರವಾದ ದಂಡನೆಗೆ ಪಾತ್ರನಾಗಬೇಕೆಂಬುದನ್ನು ಯೋಚಿಸಿರಿ.

1ನೇ ಯೋಹಾನ .2:24:- ನೀವಂತೂ ಯಾವ ಭೋದನೆಯನ್ನು ಮೊದಲಿನಿಂದ ....... ನೀವು ಸಹ ಮಗನಲ್ಲಿಯೂ, ತಂದೆಯಲ್ಲಿಯೂ, ನೆಲೆಗೊಂಡಿರುತ್ತೀರಿ.

**ಸಮಸ್ಯೆ**

ನಾವು ಯೇಸುವಿನಲ್ಲಿ ವಿಶ್ವಾಸವಿಡುವುದಕ್ಕಿಂತ ಮೊದಲು, ನಾವು ಪಾಪಕ್ಕೂ ಮತ್ತು ಸೈತಾನನಿಗೂ ಗುಲಾಮರಾಗಿದ್ದೆವು (ರೋಮಾ. 6:17). ನಾವು ವಿಶ್ವಾಸಿದ ನಂತರ, ನಾವು ನೀತಿಗೆ ಗುಲಾಮರಾದೆವು (ರೋಮಾ. 6:18). ಹಾಗಾದ ಮಾತ್ರಕ್ಕೆ ನಾವು ದೇವರ ಕೃಪೆಯನ್ನು ತ್ಯಜಿಸಿ ಮತ್ತು ರಕ್ಷಣೆಯನ್ನು ಕಳೆದುಕೊಳ್ಳಲು ಅಸಾಧ್ಯವೋ?

ಬಹಳ ಮಂದಿ ಕ್ರೈಸ್ತರು, ವಿಶ್ವಾಸಿಗಳು ತಮ್ಮ ರಕ್ಷಣೆಯನ್ನು ಕಳೆದುಕೊಳ್ಳುವುದಿಲ್ಲವೆಂದು ಯೋಚಿಸುತ್ತಾರೆ. ಈ ಕ್ರೈಸ್ತರು ವಿಶ್ವಾಸಿಗಳು ಪಾಪ ಮಾಡಬಹುದು ಮತ್ತು ಬಿದ್ದು ಹೋಗುವ ಸ್ಥಿತಿಗೆ ಬರಬಹುದಾದರೂ ದೇವರು ಅವರನ್ನು ಯಾವಾಗಲೂ ತನ್ನ ಕೃಪೆಯ ಕಡೆಗೆ ವಾಪಸ್ಸು ಕರೆಯುತ್ತಾನೆ ಎಂದು ಹೇಳುವರು. ಅವರು ಇದನ್ನು "ನಿತ್ಯವಾದ ಭದ್ರತೆ" ಎಂದು ಕರೆಯುತ್ತಾರೆ. ಒಂದು ಸಾರಿ ರಕ್ಷಿಸಿಲ್ಪಟ್ಟ ನಂತರ ಯಾವಾಗಲೂ ರಕ್ಷಿಸಲ್ಪಡುತ್ತಾರೆ ಎಂದು ಇವರು ಹೇಳುತ್ತಾರೆ.

ಇನ್ನು ಕೆಲವು ಕ್ರೈಸ್ತರು ಆದಾಗ್ಯೂ, ವಿಶ್ವಾಸಿಗಳು ದೇವರನ್ನು ತ್ಯಜಿಸಿದರೆ ಅವರು ರಕ್ಷಣೆಯನ್ನು ಕಳೆದುಕೊಳ್ಳುತ್ತಾರೆ ಎಂದು ಯೋಚಿಸುತ್ತಾರೆ. ದೇವರು ಅವರನ್ನು ವಾಪಸ್ಸು ಕರೆತರಲು ಪ್ರಯತ್ನಿಸುತ್ತಾನೆ. ಆದರೆ ಅವರು ತಿರಸ್ಕರಿಸುತ್ತಾ ಮುಂದುವರಿದರೆ, ರಕ್ಷಣೆ ಪಡೆಯಲು ದೇವರು ಅಂತಹವರನ್ನು ಬಲವಂತಪಡಿಸುವುದಿಲ್ಲ (ನೋಡಿರಿ. ಸಾಮಾನ್ಯ ವಿಷಯಗಳು, ರಕ್ಷಣೆ, ಮನುಷ್ಯನ ಆಯ್ಕೆಯೋ ಅಥವಾ ದೇವರ ಆಯ್ಕೆಯೋ).

**ಸತ್ಯವೇದದಲ್ಲಿನ ಭದ್ರತೆ**

ನಿತ್ಯತ್ವದ ಭದ್ರತೆಯ ಬಗ್ಗೆ, ವೇದವಾಕ್ಯಗಳಲ್ಲಿ ಸರಿಯಾದ ಉತ್ತರ ಕಂಡು ಬರುವುದಿಲ್ಲ. ಸತ್ಯವೇದದಲ್ಲಿನ ಕೆಲವು ವಾಕ್ಯಗಳು, ನಾವು ನಮ್ಮ ರಕ್ಷಣೆಯನ್ನು ಕಳೆದುಕೊಳ್ಳುವುದಲ್ಲವೆಂದು ಸೂಚಿಸಿದರೆ, ಇನ್ನು ಕೆಲವು ವಚನಗಳು ಕಳೆದುಕೊಳ್ಳಬಹುದು ಎಂದು ಹೇಳುವಂತಿದೆ.

ಯಾರ್‍ಯಾರು ವಿಶ್ವಾಸಿಗಳು ದೇವರನ್ನು ತಿರಸ್ಕಾರ ಮಾಡಲು ಸಾಧ್ಯವಿಲ್ಲ ಎಂದು ಅಥವಾ ರಕ್ಷಣೆಯನ್ನು ಕಳೆದುಕೊಳ್ಳುತ್ತಾರೆ ಎಂದು ಯೋಚಿಸುವ ಕ್ರೈಸ್ತರು, ದೇವರು ನಿತ್ಯವಾದ ಮತ್ತು ನಿರಂತರವಾದ ಜೀವವನ್ನು ಕೊಡುತ್ತಾನೆಂದು ಎತ್ತಿ ತೋರಿಸುವ ವಚನಗಳ ಕಡೆಗೆ ಗಮನ ಸೆಳೆಯುತ್ತಾರೆ (ಯೋಹಾನ 3:16, 6:54, 11:26). **ಆತನು ತನ್ನ ಕುರಿಗಳಿಗೆ ನಿತ್ಯ ಜೀವವನ್ನು ಕೊಡುತ್ತನೆ ಮತ್ತು ಅವುಗಳು ಎಂದಿಗೂ ನಾಶವಾಗುವುದಿಲ್ಲ.ಅವುಗಳನ್ನು ಯಾರು ನನ್ನ ಕೈಯಿಂದ ಕಸಕೊಳ್ಳುವುದಿಲ್ಲ ಎಂದು ಯೇಸು ಹೇಳಿದ್ದಾನೆ.** (ಯೋಹಾನ 10:28) . ನನ್ನ ಬಳಿಗೆ ಬರುವ ಯಾರೇ ಆಗಲಿ, ಅವರನ್ನು ತಳ್ಳಿ ಬಿಡುವುದಿಲ್ಲ. ತಂದೆಯು ಯಾರನ್ನು ನನ್ನ ವಶಕ್ಕೆ ಕೊಟ್ಟನೋ ಅವರನ್ನು ಕಳೆದುಕೊಳ್ಳುವುದಿಲ್ಲವೆಂದು ಯೇಸು ಹೇಳಿದ್ದಾನೆ. (ಯೋಹಾನ 6:37, 39)ನಮ್ಮನ್ನು ದೇವರ ಪ್ರೀತಿಯಿಂದ ಬೇರ್ಪಡಿಸುವ ಯಾವುದೇ ಸೃಷ್ಟಿಯಾಗಲಿ, ಅಗಲಿಸಲಾರದು ಎಂದು ಪೌಲನು ಹೇಳಿದನು ' (ರೋಮ. 8:38-39).ಮತ್ತು ನಾವು ಪರಿಶುದ್ಧಾತ್ಮನಿಂದ **ಮುದ್ರಿಸಲ್ಪಟ್ಟವರಾಗಿದ್ದು ಆತನು ನಮ್ಮ ಹಕ್ಕು ಬಾಧ್ಯತೆಗೆ ಜಾಮೀನಾಗಿರುತ್ತಾನೆ** (ಎಫೆಸ 1:14). ನಿಮ್ಮಲ್ಲಿ ಒಳ್ಳೆಯ **ಕಾರ್ಯವನ್ನು ಪ್ರಾರಂಭಿಸಿರುವ ದೇವರು, ಕ್ರಿಸ್ತನು ತಿರುಗಿ ಬರುವ ದಿನದವರೆಗೆ ಇದನ್ನು ಮುಂದುವರೆಸಿಕೊಂಡು ಹೋಗುತ್ತಾನೆ** (ಫಿಲಿಪ್ಪಿ 1:6).**ನಾವು ದೇವರಿಗೆ ಏನು ಕೊಟ್ಟೆವೋ ಅದನ್ನು ಆತನು ಭದ್ರ ಪಡಿಸುವನು** (2ನೇ ತಿಮಾಥೆ 1:12). **ಶೋಧನೆಯಿಂದ ತಪ್ಪಿಸುವನು** (2ನೇ ಪೇತ್ರ 2:9) ಮತ್ತು ನಾವು ಬಿದ್ದು ಹೋಗದಂತೆ ತಡೆಯಲು ಶಕ್ತನಾಗಿರುವನು (ಯೂದ 24). ಈ ವಚನಗಳನ್ನು ನೋಡುವಾಗ ವಿಶ್ವಾಸಿಯ ಭದ್ರತೆಯನ್ನು ಕಾಣಬಹುದು.

ಆಗರೆ ಯಾವ ಕ್ರೈಸ್ತರು, ವಿಶ್ವಾಸಿಗಳು ತಮ್ಮ ರಕ್ಷಣೆಯನ್ನು ಕಳೆದುಕೊಳ್ಳುತ್ತರೆ ಎಂದು ಯೋಚಿಸುತ್ತಾರೋ ಅವರು ಕೆಲವು ಎಚ್ಚರಿಕೆಯನನ್ನು ಸೂಚಿಸುವ ವಚನಗಳನ್ನು ತೋರಿಸುತ್ತಾರೆ. .ಆದರೂ ಕಡೆಯವರೆಗೂ, ತಾಳುವವನು ರಕ್ಷಣೆ ಹೊಂದುವವನು ಎಂಬಂತ ಈ ವಚನಗಳನ್ನು ತೋರಿಸುತ್ತಾರೆ. (ಮಾರ್ಕ 13:13).1ನೇ ಕೊರಿಂಥ, 15:1-2, ಕೊಲಸ್ಸೆ 1:21-23, ಇಬ್ರಿಯಾ 3:6, 12, 10:35-36)

ಅವರು ಯೇಸುವೇ ಹೇಳಿದ ಯೋಹಾನ 15:1-6ರಲ್ಲಿ ಕೊಟ್ಟಿರುವ ವಚನಗಳ ಕಡೆ ತೋರಿಸುತ್ತಾರೆ. ಅದು ಹೀಗಿದೆ. **ನನ್ನಲ್ಲಿದ್ದು ಫಲ ಕೊಡದ ಪ್ರತಿಯೊಂದು ಕೊಂಬೆಯನ್ನು ಕಡಿದು ಹಾಕುತ್ತಾನೆ. ಅಂತಹ ಕೊಂಬೆಗಳನ್ನು ಕೂಡಿಸಿ, ಬೆಂಕಿಯಲ್ಲಿ ಹಾಕುತ್ತಾನೆ. ರೋಮಾ.** 11:22ರಲ್ಲಿ ಅನ್ಯ ಜನರಲ್ಲಿ ಯಾರು ಕ್ರಿಸ್ತನ ಕೃಪೆಯಲ್ಲಿ, ಕರುಣೆಯಲ್ಲಿ ಮುಂದುವರಿಯುವುದಿಲ್ಲವೋ ಅಂತಹವರು ತೆಗೆಯಲ್ಪಡುವರು.

ಪೌಲನು ಗಲಾತ್ಯದವರಿಗೆ ಹೀಗೆ ಹೇಳುತ್ತಾನೆ. ಯಾವ ವಿಶ್ವಾಸಿಗಳು ಹಳೇ ಒಡಂಬಡಿಕೆಯ ಕಟ್ಟಳೆಯನ್ನು ಅನುಸರಿಸಲು ಹಿಂದೆ ಹೋದರೋ ಅಂತಹವರು **ಕೃಪೆಯಿ ಂದ ಬಿದ್ದು ಹೋಗಿದ್ದಾರೆ** (ಗಲಾತ್ಯ 5:1-4). ಯೇಸುವು ಬಿತ್ತುವವನ ಸಾಮ್ಯವನ್ನು ವಿವರಿಸಿ ಹೇಳುವಾಗ, **ಕೆಲವರು ಸ್ವಲ್ಪಕಾಲ ವಿಶ್ವಾಸದಲ್ಲಿರುತ್ತಾರೆ ಆದರೆ ಶೋದನೆಯ ಕಾಲದಲ್ಲಿ ಬಿದ್ದು**

ಹೋಗುವರು ಎಂದು ಹೇಳುತ್ತಾನೆ (ಲೂಕ 8:13). ಕೆಲವರು ನಂಬಿಕೆಯನ್ನು ತ್ಯಜಿಸುತ್ತಾರೆ ಎಂದು ಪೌಲನು ಸೂಚಿಸುತ್ತಾನೆ (1ನೇ ತಿಮೊಥೆ .4:1) ಇಬ್ರಿಯಾ ಗ್ರಂಥವನ್ನು ಬರೆದಿರುವಾತನು, ಯಾರು ಪರಿಶುದ್ಧಾತ್ಮನಲ್ಲಿ ಸಹಭಾಗಿಗಳಾಗಿದ್ದರೋ ಅಥವಾ ಯೇಸುವಿನ ರಕ್ತದಿಂದ, ಶುದ್ದಿಕರಣಗೊಂಡಿದ್ದಾರೋ ಅಂತಹವರು ಕೆಲವು ಕಾಲದ ನಂತರ ಕ್ರಿಸ್ತನನ್ನು ತ್ಯಜಿಸುವ, ಅಪಾಯಕರವಾದ ಸ್ಥಿತಿಯ ಬಗ್ಗೆ ತಿಳಿಸುತ್ತಾನೆ (ಇಬ್ರಿಯಾ 6:4-6, 10:28-29, 39).

ಹೊಸ ಒಡಂಬಡಿಕೆಯು ಸಹಾ ಕೆಲವು ಎಚ್ಚರಿಕೆಯ ಸೂಚನೆಗಳು ಕೊಡುತ್ತದೆ (2ನೇ ಪೇತ್ರ 2:20-21) ಪ್ರಕಟಣೆ. 3:5, 22:19. ಈ ಕ್ರೈಸ್ತರು, ನಾವು ರಕ್ಷಣೆಯನ್ನು ಕಳೆದುಕೊಳ್ಳುವುದಕ್ಕೆ ಸಾಧ್ಯ ವಿಲ್ಲದಿರುವಾಗ, ಯಾಕೆ ಈ ಎಚ್ಚರಿಕೆ ಎಂದು ಕೇಳುತ್ತಾರೆ.

ಈಗಲೂ ಕ್ರೈಸ್ತ ವಿರೋಧಿಗಳು ಬಹುಮಂದಿ ಎದ್ದಿದ್ದಾರೆ. ಅವರು ನಮ್ಮಿಂದ ಬಿಟ್ಟು, ಹೊರಟು ಹೋದರು. ಆದರೆ ಅವರು ನಮ್ಮವರಾಗಿರಲಿಲ್ಲ, ಅವರಲ್ಲಿ ಒಬ್ಬರೂ ಸಹ ನಮ್ಮ ಸಭೆಗೆ ಸೇರಿದವರಲ್ಲವೆಂದು ಯೋಹಾನನು ಬರೆಯುತ್ತಾನೆ (1ನೇ ಯೋಹಾನ 2:19).ಯಾರು ರಕ್ಷಣೆಯನ್ನು ಕಳೆದುಕೊಳ್ಳುವುದಿಲ್ಲವೆಂದು ಬಾವಿಸುಸುತ್ತಾರೋ, ಅಂತವರು ಕೆಲ ಕಾಲದ ನಂತರ ನಂಬಿಕೆಯಲ್ಲಿ ಬಿದ್ದು ಹೋಗುತ್ತಾರೆ, ಅಂತಹವರು ಪ್ರಾರಂಭದಲ್ಲಿಯೇ ನಿಜವಾದ ವಿಶ್ವಾಸಿಗಳಲ್ಲ. ಯಾವ, ವಿಶ್ವಾಸಿಗಳು ರಕ್ಷಣೆಯನ್ನು ಕಳೆದುಕೊಳ್ಳಬಹುದೆಂದು ನಂಬಿ, ಬಿದ್ದು ಹೋದವರಲ್ಲಿ, ಕೇಲವರು ನಿಜವಾದ ವಿಶ್ವಾಸಿಗಳಾಗಿದ್ದರು ಮತ್ತು ಕೆಲವರು ಇರಲಿಲ್ಲ. ಯಾರು ನಿಜವಾದ ವಿಶ್ವಾಸಿಗಳಾಗಿದ್ದು, ನಂತರ ಕ್ರಿಸ್ತನನ್ನು ತ್ಯಜಿಸಿದರೊ ಅವರು ನೀಜವಾಗಿಯು ನಮಗೆ ಸೇರಿದವರಲ್ಲ ಯಾರು ಸುಳ್ಳು ಕ್ರೈಸ್ತರು, ಯಾರು ನಿಜವಾದ ಕ್ರೈಸ್ತರು ಎಂದು ತೀರ್ಮಾನಿಸುವಲ್ಲಿ ನಾವು ಬಹಳ ಜಾಗರೂಕರಾಗಿರಬೇಕು. ಮತ್ತಾಯ 7:1-2. ಮತ್ತು ನಾವು ಅಹಂಕಾರಗಳಾಗಿದ್ದು ಎಂದಿಗೂ ನಾವು ಬಿದ್ದು ಹೋಗುವುದಿಲ್ಲ ಎಂದು ಹೇಳಬಾರದು . ಪೌಲನು ಹೀಗೆ ಹೇಳುತ್ತಾನೆ. ಆದಕಾರಣ ನಿಂತಿದ್ದೇವೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ (1ನೇ ಕೊರಿಂಥ 10:12).ಯೋಹಾನನು ಸಹಾ ಹೀಗೆಯೇ ಬರೆಯುತ್ತಾನೆ, ನೀವಂತೂ ಯಾವ ಬೋಧನೆಯನ್ನು ಮೊದಲಿನಿಂದ, ಕೇಳಿದ್ದೀರೋ, ಅದು ನಿಮ್ಮಲ್ಲಿ ನೆಲೆಗೊಂಡಿರಲಿ.ಹೀಗಿರುವದರಿಂದ ನೀವು ಸಹಾ ಮಗನಲ್ಲಿಯೂ, ತಂದೆಯಲ್ಲಿಯೂ ನೆಲೆಗೊಂಡಿರುವಿರಿ. (1ನೇ ಯೋಹಾನ 2:24).

ನಾವು ಹೊಸ ಒಡಂಬಡಿಕೆಯಲ್ಲಿನ ಕೆಲವು ವಚನಗಳನ್ನು ನೋಡುವಲ್ಲಿ, ವಿಶ್ವಾಸಿಯು ರಕ್ಷಣೆಯನ್ನು ಕಳೆದುಕೊಳ್ಳಲಾರನೆಂದೂ, ಇನ್ನು ಕೆಲವು ವಚನಗಳು ಆತನು ರಕ್ಷಣೆಯನ್ನು ಕಳೆದುಕೊಳ್ಳಬಹುದೆಂಬಂತಹ ಅಭಿಪ್ರಾಯ ವನ್ನು ನೀಡುತ್ತದೆ. ಇಲ್ಲಿ ನಾವು ಮಹತ್ತಾದ ಒಂದು ಸತ್ಯದ ಎರಡು ಮುಖಗಳನ್ನು ನೋಡುತ್ತಿದ್ದೇವೆ. ಇದು ನಮ್ಮ ಮಾನವ ಮನಸ್ಸಿನ ಸಂಪೂರ್ಣ ಹಿಡಿತದಲ್ಲಿಲ್ಲ. ದೇವರ ಜ್ಞಾನವು ನಮಗಿಂತಲೂ ಅಧಿಕಾವಾಗಿದೆ.

ವಿಶ್ವಾಸಿಗಳು ಈ ಎರಡು ಸತ್ಯಗಳನ್ನು ಸಮತೋಲನವಾಗಿಟ್ಟುಕೊಳ್ಳಬೇಕೆಂದು, ಯಾರೋ ಒಬ್ಬರು ಹೇಳಿದ್ದಾರೆ. ರಕ್ಷಣೆಯ ಬಗ್ಗೆ ಆತಂಕದಿಂದಿರುವ ವಿಶ್ವಾಸಿ ನಾವು ಆತನ ರಕ್ಷಣೆಯು ಸತ್ಯವಾದದ್ದು ಹಾಗೂ ಖಾತ್ರಿಯಾದದ್ದು ಎಂದು ಒತ್ತಿ ಹೇಳಬೇಕು. ಎಲ್ಲಿ ಒಬ್ಬ ವಿಶ್ವಾಸಿಯೂ ಬಹಳ ದೃಢವಾಗಿ ಎಂದಿಗೂ ಬಿದ್ದು ಹೋಗುವುದಿಲ್ಲ ಎಂದು ಹೇಳುತ್ತಾನೋ ಅವನಿಗೆ ನಾವು ನೀನು ನಿಜವಾಗಿ ಬಿದ್ದು ಹೋಗಲು ಸಾಧ್ಯವಿದೆ ಎಂದು ಒತ್ತಿ ಹೇಳಬೇಕು. ಇಲ್ಲಿ ಮತ್ತೊಮ್ಮೆ ಸತ್ಯವೇದದ ಆಳ ಮತ್ತು ಶ್ರೇಷ್ಠತೆಯನ್ನು ನಾವು ಕಾಣಬಹುದು. ಸತ್ಯವೇದವು ಪ್ರತಿಯೊಬ್ಬ ಪುರುಷ ನ ಹಾಗೂ ಸ್ತ್ರೀಯ ಅವಶ್ಯಕತೆಯನ್ನು ಪೂರೈಸುತ್ತದೆ.

## " ಮರಣಕ್ಕೆ ಮೂಲವಾದ ಪಾಪ" ಯಾವುದು?

1ನೇ ಯೋಹಾನ 5:16, 17ರಲ್ಲಿ ಯಾವ ಕ್ರೈಸ್ತ ಸಹೋದರನು ಸಾವಿಗೆ ಮೂಲವಾದ ಪಾಪದಲ್ಲಿ ಸಿಕ್ಕಿಬಿದ್ದಿದ್ದಾನೋ, ಅಂತಹವನಿಗಾಗಿ ನಾವು ಪ್ರಾರ್ಥಿಸಬಾರದೆಂದು ನಮಗೆ ಬೋಧಿಸಲಾಗಿದೆ. ಯೋಹಾನನು ಇಲ್ಲಿ ಆತ್ಮೀಕ ಮರಣದ ಬಗ್ಗೆ ಉಲ್ಲೇಖಿಸುತ್ತಾನೆ. ಆದಾಗ್ಯೂ ಆತನು ಆತ್ಮನನ್ನು ಕಳೆದುಕೊಳ್ಳದೇ ಸಾಧಾರಣ ದೈಹಿಕ ಸಾವನ್ನು ಅಪ್ಪುವಂತಹ ಪಾಪ ಮಾಡುವ ಕ್ರೈಸ್ತ ಸಹೋದರನ ಬಗ್ಗೆ ಉಲ್ಲೇಖಿಸುತ್ತಿರಬಹುದು (1ನೇ ಕೊರಿಂಥ 5:5 ನೋಡಿರಿ).ಒಂದು ವೇಳೆ ಯೋಹಾನನು ಆತ್ಮೀಕ ಮರಣದ ಬಗ್ಗೆ ಉಲ್ಲೇಖಿಸುತ್ತಿರುವುದಾದರೆ, ಈ ವಚನದ ಪ್ರಕಾರ ಒಬ್ಬ ವಿಶ್ವಾಸಿಯು ತನ್ನ ರಕ್ಷಣೆಯನ್ನು ಕಳೆದುಕೊಳ್ಳಬಹುದು. ಆದರೆ ಯೋಹಾನನು ಅದು ವಾಸ್ತವವಾಗಿ ಯಾವ ರೀತಿಯ ಪಾಪ ಎಂದು ಹೇಳಿಲ್ಲ.

ಒಂದು ವೇಳೆ ಸಾವಿಗೆ ಮೂಲವಾಗಿರುವ ಈ ಪಾಪವು ಪವಿತ್ರಾತ್ಮನಿಗೆ ವಿರೋದವಾಗಿ ದೇವದೂಷಣೆಯಾಗಿದ್ದರೆ ಅದಕ್ಕೆ ಕ್ಷಮಾಪಣೆ ಇಲ್ಲವೆಂದು ಯೇಸು ಹೇಳಿದ್ದಾನೆ (ಮಾರ್ಕ 3:28-29). ಯೇಸುವು ಒಬ್ಬ ಕ್ರೈಸ್ತನು ಈ ಪಾಪವನ್ನು ಮಾಡಬಹುದೇ ಅಥವಾ ಇಲ್ಲವೇ ಎಂಬುದಾಗಿ ಹೇಳಿಲ್ಲವೆಂಬುದನ್ನು ಇಲ್ಲಿ ಗಮನಿಸಬೇಕು. ಆದಾಗ್ಯೂ, ಇಬ್ರಿಯಾ ಪತ್ರಿಕೆ ಬರೆದ ಗ್ರಂಥಕರ್ತನು, ಇದರ ಸಾಧ್ಯತೆ ಬಗ್ಗೆ ಕನಿಷ್ಠವಾಗಿ ಒಬ್ಬಾನೊಬ್ಬ ಹಳೆಯ ನಿಜವಾದ ವಿಶ್ವಾಸಿಯು

(ಪವಿತ್ರಾತ್ಮನ ಸಹವಾಸದಲ್ಲಿದ್ದವನು) ದೇವರನ್ನು ತ್ಯಜಿಸಿ ಮತ್ತು ಸಾರ್ವಜನಿಕವಾಗಿ ಪ್ರಭುವನ್ನು ಅವಮಾನಿಸಬಹುದು. ಇಬ್ರಿಯಾ 6:4-6ರಲ್ಲಿ ಹೀಗೆ ಹೇಳಿದೆ "ಬಿದ್ದು ಹೋದವರನ್ನು ಮತ್ತೆ ಪಶ್ಚಾತ್ತಾಪಕ್ಕೆ ತರುವುದು ಅಸಾಧ್ಯ".

ನಂತರ ಅದೇ 10ನೇ ಅಧ್ಯಾಯದಲ್ಲಿ ಸತ್ಯದ ಪರಿಜ್ಞಾನವನ್ನು ನಾವೂ ಹೊಂದಿದ ಮೇಲೆ ಬೇಕೆಂದು ಪಾಪ ಮಾಡಿದರೆ ಪಾಪ ಪರಿಹಾರಕ್ಕಾಗ ಇನ್ಯಾವ ಯಜ್ಞವು ಇರುವುದಿಲ್ಲ (ಇಬ್ರಿಯಾ 10:26). ಆತನು ನಂತರ ಹಿಂದೆ ಯೇಸುವಿನ ರಕ್ತದಿಂದ ಪರಿಶುದ್ಧರಾದವರೂ ಮತ್ತು ದೇವರ ಕುಮಾರನನ್ನು ತುಳಿದುಹಾಕಿ, ಮತ್ತು ಕೃಪಾವರವಾಗಿರುವ ಆತ್ಮನನ್ನು ಅವಹೇಳನ ಮಾಡುವಂತಹ ವಿಶ್ವಾಸಿಯ ಬಗ್ಗೆ ತಿಳಿಸುತ್ತಾನೆ (ಇಬ್ರಿಯಾ 10:29).ಹಾಗಾದರೆ ನಮಗೆ ತೋರುವಂತೆ, ಯಾರು ದೇವರಾತ್ಮನನ್ನು ತಿರಸ್ಕರಿಸಿ ಪಾಪ ಮಾಡುತ್ತಲೇ ಇರುವವರು ಮತ್ತು ದೇವರ ಮಾತಿಗ ಕಿವಿಗೊಡದೆ ಇರುತ್ತಾರೋ, ಅವರು ಕಡೆಯಲ್ಲಿರಕ್ಷಣೆಯ ಅವಕಾಶವನ್ನು ನಿತ್ಯಕ್ಕೂ ಕಳೆದುಕೊಳ್ಳುವರು. ಮನುಷ್ಯರು, ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡ ನಂತರವೂ ಪಾಪ ಮಾಡುತ್ತಿದ್ದರೆ, ಅವರ ಹೃದಯಗಳು ಕಠಿಣಗೊಳ್ಳುತ್ತವೆ. ಅವರು ದೇವರ ಸ್ವರವನ್ನು ಕೇಳದೆ ಇರುವುದಲ್ಲದೆ, ದೇವರಿಂದ ಅವರು ಕರೆಯಲ್ಪಡುವುದೇ ಇಲ್ಲ.

ಒಬ್ಬ ವಿಶ್ವಾಸಿಯು ಬಿದ್ದು ಹೋಗಿದ್ದು ಮತ್ತೆ ಕ್ರಿಸ್ತನ ಕರೆಯನ್ನು ತಿರಸ್ಕರಿಸುತ್ತಾ ಅದರಲ್ಲೇ ಮುಂದುವರೆಯುತ್ತಾ ಇದ್ದರೆ, ಮತ್ತು (ಇಬ್ರಿಯಾ 6:4-6, 10:26-31) ರಲ್ಲಿ ಕೊಟ್ಟಿರುವ ಎಚ್ಚರಿಕೆಯ ಬಗ್ಗೆ ತಿಳಿದಿದ್ದರೂ ಹಾಗೆಯೇ ಇರಬಹುದೆಂದು ಅನೇಕ ಕ್ರೈಸ್ತರು ಬಾವಿಸುತ್ತಾರೆ. ಅಂತಹ ಬಿದ್ದು ಹೋಗಿರುವ ಕಠಿಣವಾದ ಸ್ಥಿತಿಯನ್ನು ತಲುಪಬಾರದು. ಆದರೆ ನಿಜವಾದ ವಿಶ್ವಾಸಿಗಳು ಯಾವಾಗಲೂ ಪಶ್ಚಾತ್ತಾಪ ಹೊಂದಿದವರಾಗಿ ಮತ್ತು ಸಂಪೂರ್ಣ ವಿಶ್ವಾಸಿಗಳಾಗಿ ಸಾಯುತ್ತಾರೆ ಎಂದು ಇನ್ನು ಕೆಲವು ಕ್ರೈಸ್ತ ವಿಶ್ವಾಸಿಗಳು ಬಾವಿಸುತ್ತಾರೆ.

**ಸಾರಾಂಶ**

ಯೇಸುಕ್ರಿಸ್ತನಲ್ಲಿಟ್ಟ ನಂಬಿಕೆಯ ಮೂಲಕವಾಗಿ ನಾವು ದೇವರ ಕೃಪೆ ಮತ್ತು ಕರುಣೆಯಿಂದ ರಕ್ಷಣೆ ಹೊಂದುತ್ತೇವೆಂದು ಎಲ್ಲಾ ಕ್ರೈಸ್ತರು ವಿಶ್ವಾಸಿಸುತ್ತಾರೆ (ಎಫೆಸ 2:8-9). ಎಲ್ಲಾ ಕ್ರೈಸ್ತರು, ಆ ನಂಬಿಕೆಯಲ್ಲೇ ಪವಿತ್ರಾತ್ಮನ ಸಹಾಯದಿಂದ ಮುಂದುವರಿಯುತ್ತೇವೆ ಎಂದು ವಿಶ್ವಾಸಿಸುತ್ತಾರೆ (ಗಲಾತ್ಯ 3:3).ಆದಾಗ್ಯೂ ಹೊಸ ಒಡಂಬಡಿಕೆಯ ಕಾಲದಿಂದ ಈವರೆಗೂ, ಕ್ರೈಸ್ತರಲ್ಲಿ ಒಬ್ಬನು ನಿಜವಾದ ವಿಶ್ವಾಸಿಯಾಗಿರಲಿ ಅಥವಾ ಇಲ್ಲದಿರಲಿ, ಅವನು ರಕ್ಷಣೆಯನ್ನು ಕಳೆದುಕೊಳ್ಳಬಹುದೇ ಎಂಬ ವಿಷಯಗಳಲ್ಲಿ ಭಿನ್ನಾಬಿಪ್ರಾಯಗಳಿವೆ. ಸತ್ಯವೇದದಲ್ಲಿ ಈ ವಿಷಯವಾಗಿ ಸ್ಪಷ್ಟ ಹಾಗೂ ಸಂಶಯವಿಲ್ಲದ ಬೋಧನೆ ಇರುವುದಿಲ್ಲ. ಆದುದರಿಂದ ನಾವು ಯಾವ ಅಭಿಪ್ರಾಯ ಹೊಂದಿದರೂ, ನಾವು ಬೇರೆ ಅಭಿಪ್ರಾಯ ಹೊಂದಿದ ಕ್ರೈಸ್ತ ಸಹೋದರ ಸಹೋದರಿಯರ ಬಗ್ಗೆ ಬೇರೆಯಾದ ಅಭಿಮತ ಹೊಂದಬಾರದು. ಯೂದನ ಗ್ರಂಥದಲ್ಲಿ ಈ ಎರಡು ಅಬಿಪ್ರಾಯ ಹೊಂದಿರುವವರಿಗೆ ರಕ್ಷಣೆಯನ್ನು ಕಳೆದುಕೊಳ್ಳುವ ವಿಷಯದಲ್ಲಿ ಜೊತೆ ಜೊತೆಯಾಗಿ ಬರೆದಿರುವುದನ್ನು ನಾವು ಕಾಣಬಹುದು. 21ನೇ ವಚನದಲ್ಲಿ, **ನಿತ್ಯಜೀವಕ್ಕಾಗಿ ನಮ್ಮ ಕರ್ತನಾದ ಯೇಸುಕ್ರಿಸ್ತನ ಕರುಣೆಯನ್ನು ಎದುರು ನೋಡುತ್ತಾ ನಿಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಿರಿ.** ಇದೇ 24ನೇ ವಚನದಲ್ಲಿ ಎಡವಿ ಬೀಳದಂತೆ ನಿಮ್ಮನ್ನು ಕಾಪಾಡುವುದಕ್ಕೂ ತನ್ನ ಪ್ರಭಾವದ ಸಮಕ್ಷಮದಲ್ಲಿ ನಿಮ್ಮನ್ನು ನಿರ್ದೋಷಿಗಳನ್ನಾಗಿ ಹರ್ಷದೊಡನೆ ನಿಲ್ಲಿಸುವುದಕ್ಕೂ ದೇವರು ಶಕ್ತನಾಗಿದ್ದಾನೆಂದು ತೋರಿ ಬರುತ್ತದ ಎಂದು ತಿಳಿಸುತ್ತದೆ.

# ಪವಿತ್ರಾತ್ಮನು

## ಪವಿತ್ರಾತ್ಮನು -ಈತನು ಯಾರು?

ಪವಿತ್ರಾತ್ಮನು ತಾನೇ ದೇವರು. ತ್ರಯೇಕ ದೇವರಲ್ಲಿ ಈತನು ಒಬ್ಬನು. ಎಲ್ಲಾ ಕ್ರೈಸ್ತರು, ದೇವರು ಒಬ್ಬನೆ ಆಗಿದ್ದಾನೆ. ಆದರೆ ಮೂರು ವ್ಯಕ್ತಿತ್ವ ಅಥವಾ ಮೂರು ರೀತಿಯಲ್ಲಿ ಜೀವಿಸುತ್ತಿದ್ದು, ಸಂಪೂರ್ಣವಾಗಿ ದೇವರಾಗಿದ್ದಾನೆ ಎಂದು ವಿಶ್ವಾಸಿಸುತ್ತಾರೆ. ಪರಲೋಕದಲ್ಲಿರುವ ನಮ್ಮ ತಂದೆ, ಈ ಲೋಕದಲ್ಲಿ ನರಾವತಾರ ಎತ್ತಿದ ಮಗನು ಮತ್ತು ವಿಶ್ವಾಸಿಗಳ ಹೃದಯದಲ್ಲಿ ವಾಸಮಾಡುವ ಪವಿತ್ರಾತ್ಮನು. ಯೇಸುಕ್ರಿಸ್ತನು ಮತ್ತು ಪರಿಶುದ್ಧಾತ್ಮನು, ದೇವರ ಒಂದು ಅಂಶವಲ್ಲ. ಅವರು ಸಂಪೂರ್ಣ ದೇವರೇ. ಇದನ್ನು ಗ್ರಹಿಸಿಕೊಳ್ಳುವುದು ಬಹಳ ಕಠಿಣವಾಗಿದೆ. ಆದರೆ ಇದು ಸತ್ಯವೇದದಲ್ಲಿ ನಮಗೆ ಬೋಧಿಸಲ್ಪಟ್ಟಿದೆ. ಉದಾಹರಣೆಗಾಗಿ, ಯೇಸುಕ್ರಿಸ್ತನು ನೀರಿನಿಂದ ಸ್ನಾನ ಹೊಂದಿದ ಕೂಡಲೇ ಪವಿತ್ರಾತ್ಮನು ಒಂದು ಪಾರಿವಾಳದ ರೂಪದಲ್ಲಿ ಆತನ ಮೇಲೆ ಇಳಿದು ಬಂದನು ಮತ್ತು ತಂದೆಯು ಪರಲೋಕದಿಂದ ನೀನೇ ನನ್ನ ಮಗನು ಎಂದು ಮಾತನಾಡಿದನು (ಮಾರ್ಕ 1:9-11). ತಂದೆ, ಮಗ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿರಿ ಎಂದು ಯೇಸು ನಮಗೆ ಹೇಳಿದ್ದಾನೆ (ಮತ್ತಾಯ 28:19). ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆಯೂ ಮತ್ತು ದೇವರ ಪ್ರೀತಿಯೂ ಮತ್ತು ಪವಿತ್ರಾತ್ಮನ ಅನ್ಯೋನ್ಯತೆಯು ನಿಮ್ಮೆಲ್ಲರ ಸಂಗಡ ಇರಲಿ ಎಂದು ಅಪೋಸ್ತಲನಾದ ಪೌಲನು ಈ ರೀತಿಯಾಗಿ ನಮಗೆ ಆಶೀರ್ವಾದ ಮಾಡಿದ್ದಾನೆ.(2ನೇ ಕೊರಿಂಥ 13:14). ತ್ರಯೇಕತ್ವದಲ್ಲಿನ ದೇವರುಗಳನ್ನು ಯಾವಾಗಲೂ ಒಟ್ಟಾಗಿಯೇ ಹೇಳಲಾಗಿದೆ (ಎಫೆಸ 2:18, 4:4-6, ಯೂದ 20-21).

ಈ ಮೂವರಲ್ಲಿ ತಂದೆ, ಮಗ ಮತ್ತು ಪವಿತ್ರಾತ್ಮನು ವಿಭಿನ್ನವಾಗಿದ್ದಾರೆ. ಯೋಹಾನ 14:16,17,26, 16:7-15, 1ನೇ ಕೊರಿಂಥ 12:4-6, 1ನೇ ಪೇತ್ರ 1:2). ಆದರೆ ಇವರೆಲ್ಲರು ಸರಿ ಸಮಾನರೇ.ಈ ಮೂವರು ದೇವರೆಂದೇ ಸಂಬೋಧಿಸಲ್ಪಡುತ್ತಾರೆ (ಯೋಹಾನ 6:27, ಇಬ್ರಿಯಾ 1:8, ಅ.ಕೃ. 5:3-4).ಈ ಮೂವರು ಜೀವದಾತರು (ಯೋಹಾನ 5:21, ರೋಮಾಯ 8:11).ಈ ಮೂವರು ದೈವಾರಾಧನೆಯನ್ನು ಸ್ವೀಕರಿಸುತ್ತಾರೆ. (ಯೋಹಾನ 5:23, 2ನೇ ಕೊರಿಂಥ 13:14). ಈ ಎಲ್ಲಾ ಮೂವರು ನಿತ್ಯರಾಗಿದ್ದಾರೆ (ಯೋಹಾನ 1:1, ಇಬ್ರಿಯಾ 9:14).

ಪವಿತ್ರಾತ್ಮನನ್ನು ನಂದಿಸಬಹುದು (1ನೇ ಥೆಸಲೋನಿಕಾ 5:19). ಆದಾಗ್ಯೂ, ಪವಿತ್ರಾತ್ಮನು ಬರೇ ಒಂದು ವಿಧವಾದ ಶಕ್ತಿ ಅಥವಾ ಸಾಮರ್ಥ್ಯವಲ್ಲ. ಈತನು ಒಬ್ಬ ವ್ಯಕ್ತಿಯಾಗಿದ್ದಾನೆ. ತ್ರಯೇಕತ್ವದಲ್ಲಿರುವ ಇತರೇ ಸದಸ್ಯರಲ್ಲಿ, ಪವಿತ್ರಾತ್ಮನು ನಮಗೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿಯಾಗಿ ಕಂಡುಬರುತ್ತಾನೆ. ಈತನು ಮಾತನಾಡುತ್ತಾನೆ (ಅ.ಕೃ. 13:2). ಈತನನ್ನು ದುಃಖ ಪಡಿಸಬಹುದು (ಯೆಶಾಯ 63:10, ಎಫೆಸ 4:30) ಮತ್ತು ಈತನನ್ನು ಹೀಯಾಳಿಸಬಹುದು (ಇಬ್ರಿಯಾ 10:29). ಪವಿತ್ರಾತ್ಮನಿಗೆ ಎದುರಾಗಿ ಮಾತನಾಡುವುದು ದೇವದೂಷಣೆ ಎಂದು ಪರಿಗಣಿಸಲಾಗುವುದು ಮತ್ತು ಇದು ಪಾಪವಾದದ್ದರಿಂದ ಇದಕ್ಕೆ ಕ್ಷಮಾಪಣೆ ಇಲ್ಲ (ಮಾರ್ಕ 3:28-29).

ಪವಿತ್ರಾತ್ಮನು ತಂದೆಯೊಡನೆಯೂ, ಮಗನೊಡನೆಯೂ ಒಂದಾಗಿದ್ದಾನೆ. ಇದನ್ನು ನಾವು ರೋಮಾ. 8:9-10ರಲ್ಲಿ ಕಾಣಬಹುದು. ಇಲ್ಲಿ ಪವಿತ್ರ ಆತ್ಮನು," ದೇವರ ಆತ್ಮನು," "ಕ್ರಿಸ್ತನ ಆತ್ಮನು " ಮತ್ತು ಕ್ರಿಸ್ತನು ಎಂಬಂತಹ ಈ ಪದಗಳನ್ನು ಅದಲು ಬದಲು ಮಾಡಬಹುದು ಮತ್ತು ಇವೆಲ್ಲವೂ ದೇವರೆಂದೇ ಅರ್ಥ ಕೊಡುತ್ತದೆ. ಈ ಹೊಂದಾಣಿಕೆ ಎಂದರೆ ತಂದೆ, ಮಗ ಮತ್ತು ಪವಿತ್ರಾತ್ಮನು ಒಂದೇ ತರಹ ಇದ್ದಾರೆಂದು ಅರ್ಥವಲ್ಲ. ಮಗನು ತಂದೆಯಲ್ಲ ಈತನನ್ನು ತಂದೆಯು ಪಡೆದನು (ಯೋಹಾನ 3:16) ಮತ್ತು ಪವಿತ್ರಾತ್ಮನು ತಂದೆಯೂ ಅಲ್ಲ ಅಥವಾ ಮಗನೂ ಅಲ್ಲ. ಆದರೆ ತಂದೆ ಮತ್ತು ಮಗನಿಂದ ಕಳುಹಿಸಲ್ಪಟ್ಟವನು (ಯೋಹಾನ 15:26). ಆದರೆ ಮೂವರಿಗೂ ಒಂದೇ ಮನಸ್ಸು, ಆಸೆ ಮತ್ತು ಗುರಿಯಿದೆ ಹಾಗೂ ಒಂದೇ ಸ್ವಭಾವವಿದೆ. ತ್ರಯೇಕ ದೇವರನ್ನು ಹೀಗೆ ಹೋಲಿಸಬಹುದು. ಒಂದು ಮೊಟ್ಟೆಯಲ್ಲಿ ಸಿಪ್ಪೆ, ಬಿಳೀಭಾಗ, ಹಳದೀಭಾಗ ಇದ್ದರೂ ಅಖಂಡವಾಗಿದೆ. ಆದರೆ ದೇವರಲ್ಲಿ ಮೂರು ಭಾಗವಿಲ್ಲ. ಇತನು ಅಖಂಡ

ವ್ಯಕ್ತಿಯಾಗಿದ್ದಾನೆ. ತ್ರಯೇಕ ದೇವರನ್ನು ಹೀಗೂ ಹೋಲಿಸುತ್ತಾರೆ. ನೀರಿನಲ್ಲಿ ಮೂರು ವಿಧದ ಬಗ್ಗೆ ಅಂದರೆ, ನೀರು, ಮಂಜುಗಡ್ಡೆ ಮತ್ತು ಆವಿ. ಇದು ಉತ್ತಮವಾದ ಹೋಲಿಕೆಯಾಗಿದೆ. ಅಂದರೆ, ಮೂರರಲ್ಲಿರುವ ಮೂಲ ವಸ್ತು ಒಂದೇ ಆಗಿದೆ. ಇದರಲ್ಲಿ ಸಮಸ್ಯೆ ಏನೆಂದರೆ, ನೀರು ಒಂದೇ ಸಮಯದಲ್ಲಿ ಮೂರು ರೂಪದಲ್ಲಿರಲು ಸಾಧ್ಯವಿಲ್ಲ. ಆದರೆ ದೇವರಲ್ಲಿ ಮೂರು ವ್ಯಕ್ತಿತ್ವಗಳು ಒಂದೇ ಕಾಲದಲ್ಲಿ ಒಬ್ಬರೇ ಆಗಿದ್ದಾರೆ (ಮಾರ್ಕ 1:10-11).

ಒಬ್ಬ ನಾಟಕವನ್ನು ಬರೆಯುವ ಬರಹಗಾರನಂತೆ ಎಂದು ತಂದೆಯಾದ ದೇವರನ್ನು ನಾವು ಬಾವಿಸಬಹುದು. ನಾವು ಜೀವಿಸುತ್ತಿರುವ ಲೋಕವೇ ಒಂದು ನಾಟಕ ರಂಗವಿದ್ದಂತೆ. ಬರಹಗಾರನು ಇಲ್ಲಿ ಬರುವ, ನಟನಂತೆ ತನ್ನನ್ನು ತಾನೇ ಗುರುತಿಸಿಕೊಂಡಿದ್ದಾನೆ. ಈ ನಟನು ಬರಹಗಾರನಂತಿರುವ ಯೇಸುವಿನಂತೆಯೇ ಇದ್ದಾನೆ. ಬರಹಗಾರನ ಆತ್ಮವು ನಾಟಕದಲ್ಲಿ ಹಾಸುಹೊಕ್ಕಾಗಿ ಅಲ್ಲಿ ಬರುವ ಎಲ್ಲಾ ವ್ಯಕ್ತಿಗಳ ಮೇಲೂ ತನ್ನ ಪ್ರಭಾವವನ್ನು ಬೀರುತ್ತಾ ಒಬ್ಬನಿಗೆ ತನ್ನ ಶಕ್ತಿಯನ್ನು ಕೊಟ್ಟು ಇನ್ನೊಬ್ಬನಿಂದ ಆ ಶಕ್ತಿಯನ್ನು ಪಡೆದುಕೊಳ್ಳುತ್ತದೆ. ಇದು ಪವಿತ್ರಾತ್ಮನು ಮಾಡುವ ಈ ಲೋಕದಲ್ಲಿನ ಕ್ರಿಯೆಗಳಂತಿವೆ.

ಪವಿತ್ರಾತ್ಮನು ಈ ಲೋಕದಲ್ಲಿ ದೇವರಾಗಿದ್ದಾನೆ. ಯೇಸುವು, ನಾನು ಈ ಲೋಕವನ್ನು ಬಿಟ್ಟು ಹೋಗುತ್ತನೆ (ಯೋಹಾನ 14:2-3). ಆದರೆ ಪವಿತ್ರಾತ್ಮನನ್ನು ನಿಮಗೆ ಕಳಿಸಿಕೊಡುತ್ತೇನೆ ಎಂದು ಹೇಳಿದನು. ಯೋಹಾನ 14:16-20,26. ಈ ಕಾರ್ಯ ಪ್ರವೃತ್ತಿಯಲ್ಲಿ ತೊಡಗಿಸಿಕೊಂಡಿರುವ ದೇವರು ತಾನೇ ಪವಿತ್ರಾತ್ಮನಾಗಿದ್ದಾನೆ. ಹಾಗಾದರೆ ಪವಿತ್ರಾತ್ಮನು ಏನು ಮಾಡುತ್ತಾನೆ?

## ಪವಿತ್ರಾತ್ಮನೂ - ಆತನ ಕೆಲಸವೂ

ಮೊದಲನೆಯದಾಗಿ, ಪವಿತ್ರಾತ್ಮನು ಭೂಲೋಕದ ಸೃಷ್ಟಿಕಾರ್ಯದಲ್ಲಿ ಸಕ್ರಿಯವಾಗಿ ಪಾತ್ರ ವಹಿಸಿದನು. ಆದಿ 1:1-2. ಮನುಷ್ಯನು ಜೀವಿಸುವ ಪ್ರಾಣಿಯಾಗುವುದಕ್ಕೆ ಉಸಿರು ಕೊಟ್ಟನು. ಆದಿ 2:7, ಯೋಬ 33:4. ಎರಡನೆಯದಾಗಿ, ದೇವರು ಏನೇನು ಹೇಳುತ್ತಾನೋ ಅವೆಲ್ಲವುಗಳನ್ನು ಸರಿಯಾಗಿ ಬರೆಯಲು, ಸತ್ಯವೇದರ ಬರಹಗಾರರಿಗೆ, ನಿದೇಶನ ಮಾಡಿದವನು ಪವಿತ್ರಾತ್ಮನೇ. ಅ.ಕೃ. 28:25, ಇಬ್ರಿಯಾ 9:8, 10:15, 2ನೇ ಪೇತ್ರ 1:21.

ಹಳೇ ಒಡಂಬಡಿಕೆಯಲ್ಲಿ ದೇವ ಜನರು ಬರುವುದಕ್ಕೂ, ಬೋಧಿಸುವುಕ್ಕೂ ಅವರಿಗೆ ಬಲ ಮತ್ತು ಶಕ್ತಿಯನ್ನು ಕೊಡುವುದರಲ್ಲಿ ಪವಿತ್ರಾತ್ಮನು ಸಕ್ರಿಯನಾಗಿದ್ದನು. ನೆಹಮೀಯ 9:20, 30 ಅರಣ್ಯಕಾಂಡ 11:17, 27:18, 1ನೇ ಸಮುವೇಲ 19:20-24, 2 ಅರಸುಗಳು 2:9-14 . ಆದಾಗ್ಯೂ ದೇವರು ತನ್ನಿಂದ ಎಲ್ಲಿ ಪವಿತ್ರಾತ್ಮನನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಾನೋ ಎಂದು ಅರಸನಾದ ದಾವೀದನು ಭಯಪಟ್ಟನು (ಕೀರ್ತನೆ 51:11). ಇದರಿಂದ ಹಳೇ ಒಡಂಬಡಿಕೆಯ ಕಾಲದಲ್ಲಿ, ಎಲ್ಲ ಜನರಲ್ಲಿಯೂ ವಾಸವಾಗಿರಲಿಲ್ಲ. ಆದರೆ, ಕೆಲವು ವಿಶೇಷ ವ್ಯಕ್ತಿಗಳಲ್ಲಿ, ವಿಶೇಷವಾದ ಸೇವೆಗಾಗಿ,ವಿಶೇಷವಾದ ಸಮಯದಲ್ಲಿ ಪವಿತ್ರಾತ್ಮನು ಬಂದಿದ್ದನ್ನು ನಾವು ಕಾಣುತ್ತೇವೆ.

ಪವಿತ್ರಾತ್ಮನಿಂದ ಯೇಸುವು ಗರ್ಭ ಧರಿಸಿದನು. (ಮತ್ತಾಯ 1:20) ಮತ್ತು ಪವಿತ್ರಾತ್ಮನಿಂದ ಅಭಿಷೇಕಿಸಲ್ಪಟ್ಟನು (ಮಾರ್ಕ 1:10, ಲೂಕ 4:18, ಅ.ಕೃ. 10:38). ನಮ್ಮ ಹಾಗೆಯೇ ಯೇಸು ಸಂಪೂರ್ಣ ಮನುಷ್ಯನಾಗಿದ್ದರಿಂದ, ಆತನಿಗೆ ಪವಿತ್ರಾತ್ಮನ ಶಕ್ತಿ ಮತ್ತು ಸಹಾಯ ಬೇಕಾಗಿತ್ತು. ಯೇಸುವು ಈ ಲೋಕದಲ್ಲಿ ಜೀವಿಸುವಾಗ ತನ್ನ ದೈವೀಕ ಶಕ್ತಿಯನ್ನು ಮತ್ತು ಮಹಿಮೆಯನ್ನು ಬದಿಗೊತ್ತಿದನಾದರೂ ಸ್ವಾಭಾವಿಕವಾಗಿ ಆತನು ದೇವರೇ ಆಗಿದ್ದನು.(ಯೋಹಾನ 17:5 ಫಿಲಿಪ್ಪಿ 2:7).

ಯೋಹಾನನ ಸುವಾರ್ತೆ, ಅಧ್ಯಾಯ 14-16ರಲ್ಲಿ ಆತ್ಮಭರಿತವಾದ ಒಂದು ಹೊಸ ಯುಗದ ಬಗ್ಗೆ ಹೇಳಿದ್ದಾನೆ. ಯಾಕೆಂದರೆ, ಆತನು ಇವರೊಂದಿಗೆ ಈಗಾಗಲೇ ಜೀವಿಸಿದ್ದನು (ಯೋಹಾನ 14:16-17). ಈಗ ಹೊಸದಾಗಿ ಆತ್ಮನನ್ನು ಕಳುಹಿಸುವುದು ಎಂದರೆ, ಆತ್ಮವು ಈ ಮೊದಲು ಲೋಕದಲ್ಲಿ ಇರಲಿಲ್ಲವೆಂದು ಅರ್ಥವಲ್ಲ. ಆದರೆ ಹೊಸ ಒಡಂಬಡಿಕೆಯಲ್ಲಿ ಪವಿತ್ರಾತ್ಮನು ಹೊಸ ಕಾರ್ಯಗಳನ್ನು ಮಾಡುವುದಕ್ಕೆ ವಿಶೇಷವಾದ ರೀತಿಯಲ್ಲಿ ಈ ಲೋಕಕ್ಕೆ ಬಂದನು

ಪವಿತ್ರಾತ್ಮನು ಕ್ರಿಸ್ತನ ದೇಹವಾದಂತ ಸಭೆಯನ್ನು ಸ್ಥಾಪಿಸಲು ವಿಶೇಷ ರೀತಿಯಲ್ಲಿ ಬಂದನು (ಎಫೆಸ 1:22-23, 5:29-30). ಪವಿತ್ರಾತ್ಮನು ನಮ್ಮ ಐಕ್ಯತೆ ಮತ್ತು ಅನ್ಯೋನ್ಯತೆಗೆ ಮೂಲ ಕರ್ತನು (1ನೇ ಕೊರಿಂಥ 12:13). ಎಫೆಸ 4:3, ಆತ್ಮನು ಸಭೆಯನ್ನು ಪಂಚಾಶತ್ತಮ ದಿನದಲ್ಲಿ ಬಲಪಡಿಸಿದನು. ಅ.ಕೃ. 2:1-4, ಈ ಕಾರ್ಯದ ಕುರಿತು ಹಳೇ ಒಡಂಬಡಿಕೆಯ ಯೋವೇಲ 2:28-29, ಅ.ಕೃ. 2:17-18ರಲ್ಲಿ ಪ್ರವಾದಿಸಲಾಗಿತ್ತು. ಸಭೆಗೆ ವಿಶೇಷವರ, ಸಹಾಯವನ್ನು ಪವಿತ್ರಾತ್ಮನು ಕೊಡುತ್ತಾನೆ (ರೋಮಾಯ 12:6-8, 1ನೇ ಕೊರಿಂಥ 12:8-10). ಯಾರನ್ನು ಸೇವಗೆ ನೇಮಿಸಬೇಕೆಂದು, ಸಭೆಗೆ ಪವಿತ್ರಾತ್ಮನು ಮಾರ್ಗದರ್ಶನ ನೀಡುತ್ತಾನೆ (ಅ.ಕೃ. 13:2) ಮತ್ತು ಸಭೆಗೆ ಆತನು ತನ್ನ

ಇಚ್ಛೆಯನ್ನು, ಪ್ರವಾದನೆ, ಕನಸು ಮತ್ತು ಪ್ರಕಟಣೆಗಳ ಮೂಲಕ ತಿಳಿಸುತ್ತಾನೆ. (ಅ.ಕೃ. 10:9-16, 16:9, 21:9-10, 1ನೇ ಕೊರಿಂಥ 14:26-32, 1ನೇ ತಿಮೊಥೆ 4:14, ಪ್ರಕಟಣೆ 1:1).

ಆದರೆ ಹೊಸ ಯುಗದಲ್ಲಿನ ಆತ್ಮನು ಬರೀ ಸಭೆಯ ಒಂದು ಗುಂಪಿಗಾಗಿ ಅಲ್ಲ. ಪವಿತ್ರಾತ್ಮನು ಪ್ರತಿಯೊಬ್ಬ ವಿಶ್ವಾಸಿಯ ಒಡನಾಟದಲ್ಲಿ ಸೇರಿಕೊಂಡಿದ್ದಾನೆ. ಮನುಷ್ಯನು ತಾನು ಪಾಪದ ದೆಸೆಯಿಂದ ಹೇಗೆ ತಪ್ಪಿತಸ್ಥನಾದನೆಂದು ತೋರಿಸಿಕೊಡುವವನೇ ಪವಿತ್ರಾತ್ಮನು (ಯೋಹಾನ 16:8-11). ಪ್ರವಾದಿಯಾದ ಯೆಹೆಜ್ಕೇಲನು, ನಮ್ಮಲ್ಲಿ ದೇವರು ತನ್ನ ಆತ್ಮನನ್ನು ಇರಿಸುತ್ತಾನೆಂದು ನುಡಿದಿದ್ದಾನೆ (ಯೆಹೆಜ್ಕೇಲನು. 36:25-28). ಪವಿತ್ರಾತ್ಮನು ಶಿಷ್ಯರೊಡನೆ ಜೀವಿಸುವುದಿಲ್ಲ ಆದರೆ ಕೂಡಲೇ ಅವರ ಅಂತರಂಗದಲ್ಲಿ ಜೀವಿಸುವನು ಎಂದು ಯೇಸುವು ವಾಗ್ದಾನ ಮಾಡಿದ್ದಾನೆ (ಯೋಹಾನ 14:17). ಯೇಸುವು ಆತನು ಪರಲೋಕಕ್ಕೆ ಏರಿ ಅಥವಾ ಆರೋಹಣವಾಗುವುದಕ್ಕಿಂತ ಮೊದಲು ಶಿಷ್ಯರ ಮೇಲೆ ಊದಿ "ಪವಿತ್ರಾತ್ಮನನ್ನು ಪಡೆದುಕೊಳ್ಳಿರಿ" ಎಂದು ಹೇಳಿದನು (ಯೋಹಾನ 20:22). ಪರಿಶುದ್ಧಾತ್ಮನು ಎಲ್ಲಾ ಕ್ರೈಸ್ತರಲ್ಲಿಯೂ ವಾಸಿಸುತ್ತಾನೆ (ರೋಮಾ. 8:9, 1ನೇ ಕೊರಿಂಥ 6:19, ಗಲಾತ್ಯ 4:6). ನಾವು ವಿಶ್ವಾಸಿಸುವಾಗ, ನಾವು ಆತ್ಮದಲ್ಲಿ ಹುಟ್ಟಿದವರಾಗುತ್ತೇವೆ. ಯೋಹಾನ 3:36, 1ನೇ ಯೋಹಾನ 5:1 ಮತ್ತು ನಾವು ದೇವರ ಮಕ್ಕಳಾಗಿದ್ದೇವೆಂಬುದಕ್ಕೆ ಪವಿತ್ರಾತ್ಮನೇ ಸಾಕ್ಷಿಯಾಗಿದ್ದಾನೆ (ರೋಮಾ. 8:16, 1ನೇ ಯೋಹಾನ 5:6-8). ದೇವರನ್ನು"ನಮ್ಮ ತಂದೆಯೇ" ಎಂದು ಸಂಬೋಧಿಸಲು ನಮಗೆ ಪವಿತ್ರಾತ್ಮನು ಹಕ್ಕನ್ನು ಕೊಡುತ್ತಾನೆ ರೋಮಾ. 8:15, ಗಲಾತ್ಯ 4:6 ಪವಿತ್ರಾತ್ಮನು ನಮಗೆ ಭೋದಿಸುತ್ತಾನೆ ಎಂಬುದಾಗಿ ಕ್ರಿಸ್ತನು ವಾಗ್ದಾನ ಮಾಡಿದ್ದಾನೆ (ಯೋಹಾನ. 14:26,15: 26,16:13-14). ಮತ್ತು ಮಾರ್ಗದರ್ಶನ ನೀಡುತ್ತಾನೆ (ಮಾರ್ಕ 13:11). ಇದರ ಬಗ್ಗೆ ಅ.ಕೃ. 15:28, 16:6-7ರಲ್ಲಿ ಉದಾಹರಣೆಗಳನ್ನು ನೋಡುತ್ತೇವೆ. ದೇವರ ಚಿತ್ತದಂತೆ ನಾವು ಪ್ರಾರ್ಥನೆ ಮಾಡಲು, ಆತ್ಮನು ನಮಗೆ ಸಹಾಯ ಮಾಡುತ್ತಾನೆ (ರೋಮಾ. 8:26-27).

ಪರಿಶುದ್ಧಾತ್ಮನು ಪ್ರತಿಯೊಬ್ಬ ಕ್ರೈಸ್ತನಲ್ಲಿಯೂ ಜೀವಿಸುತ್ತಾನೆ (ರೋಮಾಯ 8:9). ಆದಾಗ್ಯೂ ಬೇರೆ ಬೇರೆ ವಿಶ್ವಾಸಿಗಳಲ್ಲಿ, ವಿಧ ವಿಧವಾಗಿ ಆತನು ಕಾರ್ಯ ಮಾಡುತ್ತಾನೆ. ಕ್ರಿಸ್ತನಲ್ಲಿ ನಾವು ನಂಬಿಕೆ ಇಟ್ಟಾಗ ಪವಿತ್ರಾತ್ಮನ ಮುದ್ರೆಯನ್ನು ಹೊಂದಿದ್ದೇವೆ ಎಂದು ಪೌಲನು ಹೇಳುತ್ತಾನೆ (ಎಫೆಸ 1:13-14) ಆದರೆ ನಾವು ಪವಿತ್ರಾತ್ಮಭರಿತರಾಗಬೇಕೆಂದು ನಮಗೆ ತಿಳಿಸುತ್ತಾನೆ (ಎಫೆಸ 5:18). ಶಿಷ್ಯರು ಆತ್ಮನನ್ನು ಸ್ವೀಕಾರ ಮಾಡಿದರು ಯೋಹಾನ 20-22ರಲ್ಲಿ ಆದರೆ ಅವರು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟರು. ಅ.ಕೃ. 2:4ರಲ್ಲಿ ಮತ್ತು ತಿರುಗಿ ತುಂಬಿಸಲ್ಪಟ್ಟರು ಅ.ಕೃ. 4:31ರಲ್ಲಿ. ಆತ್ಮನು ವಿಶೇಷ ಸೇವೆಗಾಗಿ, ವಿಶೇಷ ರೀತಿಯಲ್ಲಿ ಬರಬಹುದಾಗಿದೆ ಅ.ಕೃ. 13:2-4, 1ನೇ ತಿಮಾಥೆ. 4:14 ಪೌಲನು ಪವಿತ್ರಾತ್ಮನನ್ನು ನಂದಿಸಬೇಡಿರೆಂದು ಹೇಳುತ್ತಾನೆ. (1ನೇ ಥೆಸಲೋನಿಕ 5:19). ಪೌಲನು ತಿಮಾಥೆಯ ಮೇಲೆ ಕೈ ಇಟ್ಟಾಗ, ಹೆಚ್ಚಾಗಿ ದೇವರ ಕೊಟ್ಟ ವರದಿಂದ ಪ್ರಜ್ವಲಿಸುವಂತೆ ಆತನಿಗೆ ತಿಳಿಸಲಾಯಿತು (2ನೇ ತಿಮಾಥಿ 1:6). ನಾವು ನಮ್ಮ ಜೀವಿತದಲ್ಲಿ ಆತ್ಮನು ಹೆಚ್ಚು ಹೆಚ್ಚಾಗಿ ಕೆಲಸ ಮಾಡುವುದನ್ನು ನೋಡಬಹುದು.

ಅಥವಾ ಆತ್ಮನು ಕೆಲಸ ಮಾಡದಂತೆ ತಡೆಯಲೂ ಬಹುದು. ನಾವು ಆತ್ಮನಿಂದ ತುಂಬಿಸಲ್ಪಟ್ಟವರಾಗಲೂ ಬಹುದು ಅಥವಾ ಆತ್ಮನ ಬೆಂಕಿಯನ್ನು ನಂದಿಸಲೂ ಬಹುದು.

ಆತ್ಮನ ತುಂಬಿಸುವಿಕೆ ಎಂದರೇನು ಅರ್ಥ? ಎಲ್ಲಾ ಕ್ರೈಸ್ತರಲ್ಲಿಯೂ ಆತ್ಮನ ಕೆಲಸವು ಸರಿಸಮವಾಗಿರುವುದಿಲ್ಲವೇಕೆ? ಇವುಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಪವಿತ್ರಾತ್ಮನ ವಿಶೇಷ ವರಗಳು, ಇದಕ್ಕಿರುವ ಉದಾಹರಣೆಯನ್ನು 1ನೇ ಕೊರಿಂಥ 12:8-10ರಲ್ಲಿ ಕೊಟ್ಟಿದೆ. ಪವಿತ್ರಾತ್ಮನ ಫಲಗಳನ್ನು ಗಲಾತ್ಯ 5:22-23ರಲ್ಲಿ ಪಟ್ಟಿ ಮಾಡಿ ಹೇಳಲಾಗಿದೆ. ಇನ್ನು ಪವಿತ್ರಾತ್ಮನ ವರ ಮತ್ತು ಆತನ ಶಕ್ತಿಯ ವಿಚಾರವಾಗಿ ತಿಳಿದುಕೊಳ್ಳಬೇಕಾದರೆ "ಪವಿತ್ರಾತ್ಮನಿಂದ ಸ್ನಾನ" ಎಂಬ ಸಾಮಾನ್ಯ ವಿಷಯ ನೋಡಿರಿ. ಪವಿತ್ರಾತ್ಮನ ಫಲಗಳು ಅಥವಾ ಪರಿಶುದ್ಧತೆಯ ಬಗ್ಗೆ ಈ ಕೆಳಗೆ ಚರ್ಚಿಸಲಾಗುವುದು.

## ಪರಿಶುದ್ಧತೆ ಅಥವಾ ಪವಿತ್ರೀಕರಣ

ಪರಿಶುದ್ಧತೆ ಅಥವಾ ಪವಿತ್ರೀಕರಣವೆಂದರೇನು? ಸೂಕ್ಷ್ಮವಾಗಿ ಹೇಳುವುದಾದರೆ ಅದು ಕ್ರಿಸ್ತನಂತಿರುವುದು.ಇದರ ಫಲಿತಾಂಶವು ಪ್ರೀತಿ ಮತ್ತು ಆತ್ಮನ ಇನ್ನಿತರ ಫಲಗಳಲ್ಲಿ ಕಂಡುಬರುತ್ತದೆ (1ನೇ ಕೊರಿಂಥ 13:1-13, ಗಲಾತ್ಯ 5:22-23). ಇದು ಲೌಕೀಕ ಮತ್ತು ಪಾಪದ ವಿಸರ್ಜನೆಯ ಕ್ರೀಯೆಯಲ್ಲಿ ಅಡಕಗೊಂಡಿದೆ.ಅಂದರೇ ನಮ್ಮ ಎಲ್ಲಾ ಸಾಮರ್ಥ್ಯಗಳೂ ಮತ್ತು ಎಲ್ಲಾ ಅವಕಾಶಗಳೂ ದೇವರಿಗಾಗಿ ಮೀಸಲು ಆಗಿರಬೇಕಾಗಿರುತ್ತದೆ.

ಈಗಾಗಲೇ ನಾವು ಪರಿಶುದ್ಧರಾಗಿದ್ದೇವೆಂದು ದೇವರು ಪರಿಗಣಿಸುತ್ತಾನೆ (ಇಬ್ರಿಯಾ 10:10). ಆದರೆ ನಮ್ಮ ಜೀವಿತದಲ್ಲಿ ನಾವು ಅಶುದ್ಧರಾಗಿರುವುದನ್ನು ಮನಗಾಣುತ್ತೇವೆ. ಇದನ್ನು ಹೇಗೆ ತಿಳಿದುಕೊಳ್ಳುವುದು? ಸತ್ಯವೇದದಲ್ಲಿ

ಹೇಳಿರುವ ಪ್ರಕಾರ ಎರಡು ವಿಧವಾದ ಪರಿಶುದ್ಧತೆಯಿದೆ ಎಂದು ಅರ್ಥೈಸಿಕೊಳ್ಳಬಹುದು. ಮೊದಲನೇ ಅರ್ಥದಲ್ಲಿ, ನ್ಯಾಯಮೂರ್ತಿಯಾದ ದೇವರು ನಮ್ಮನ್ನು ಪರಿಶುದ್ಧರು ಅಥವಾ ಕಳಂಕರಹಿತರೆಂದು ಪರಿಗಣಿಸುತ್ತಾನೆ. ಕ್ರಿಸ್ತನೇ ನಮ್ಮ ಪರಿಶುದ್ಧತ್ವ (1ನೇ ಕೊರಿಂಥ 1:30) ಮತ್ತು ನಾವು ಸಂತರೆಂದೂ ಅಥವಾ ಪರಿಶುದ್ಧರೆಂದು ಕರೆಯಲ್ಪಟ್ಟಿದ್ದೇವೆ (ಎಫೆಸ 1:1, ಫಿಲಿಪ್ಪಿ 1:1). ದೇವರ ಸೃಷ್ಟಿಯಲ್ಲಿ ಇದೇ ನಮಗೆ ಕ್ರಿಸ್ತನಲ್ಲಿರುವ ಸ್ಥಾನಮಾನ.

ಆದರೆ ಎರಡನೇಯ ಪರಿಶುದ್ಧತೆಯ ಅರ್ಥವು ಸತ್ಯವೇದದಲ್ಲಿ ಹೇಳಿರುವಂತೆ, ನಮ್ಮ ಜೀವಿತದ ಅನುಭವದಲ್ಲಿನ ಪ್ರತ್ಯಕ್ಷತೆಯೇ ಪರಿಶುದ್ಧತೆಯ ಮಾಪನವೆಂದು ತಿಳಿಯಬಹುದು. ನಾವು ನಮ್ಮ ಜೀವನವನ್ನು ಅವಲೋಕಿಸುವಾಗ, ನಾವು ಸಂಪೂರ್ಣ ಪರಿಶುದ್ಧರಾಗಿದ್ದೇವೆಯೋ? ಇಲ್ಲ, ಇಲ್ಲವೇ ಇಲ್ಲ. ರಕ್ಷಣೆ ಹೊಂದಿದ ನಂತರವೇ ಕ್ರೈಸ್ತರು ನೀತಿವಂತರೆಂದು ಪರಿಗಣಿಸಲ್ಪಡುತ್ತಾರೆ. ಆದರೂ ಪಾಪಿಗಳೇ ಆಗಿದ್ದು ಮತ್ತು ಅವರು ಪರಿಶುದ್ಧರಾಗುವ ಅವಶ್ಯಕತೆಗೊಳಗಾಗಿರುವರು. ಇದು ಸತತವಾಗಿ ಮುಂದುವರಿಯುವ ಪವಿತ್ರಾತ್ಮನ ಕಾರ್ಯವಾಗಿದ್ದು ಇದರಿಂದ ನಾವು ನಮ್ಮ ದಿನನಿತ್ಯದ ಜೀವಿತದಲ್ಲಿ ನಿಜವಾಗಿಯು ಪರಿಶುದ್ಧರಾಗಬಹುದಾಗಿದೆ (2ನೇ.ಥೆಸಲೋನಿಕ. 2:13, 1ನೇ ಪೇತ್ರ 1:2). ನಾವು ಪರಿಶುದ್ಧರಾಗಿ ಜೀವಿಸಬೇಕೆಂದು ದೇವರು ನಮ್ಮನ್ನು ಕರೆಯುತ್ತಾನೆ ಎಫೆಸ 1:4, 1ನೇ ಥೆಸಲೋನಿಕ. 4:3-7, 1ನೇ ಪೇತ್ರ 1:15-16. ಮತ್ತು ನಾವು ಪವಿತ್ರರಾಗಲೂ ಅಥವಾ **ಸಂಪೂರ್ಣರಾಗಲು** ಯೇಸುವು ನಮಗೆ ಅಪ್ಪಣೆ ಕೊಡುತ್ತಾನೆ. ( ಮತ್ತಾಯ 5:48). ಆದರೆ ಪವಿತ್ರಾತ್ಮನು ಮಾತ್ರವೇ ನಮ್ಮನ್ನು ಖಂಡಿತವಾಗಿಯೂ ಪರಿಶುದ್ಧರನ್ನಾಗಿ ಮಾಡುತ್ತಾನೆ ಅಥವಾ ಪವಿತ್ರಗೊಳಿಸುತ್ತಾನೆ..

ನಮ್ಮ ರಕ್ಷಣೆಯಲ್ಲಿ ಪವಿತ್ರೀಕರಣವೂ ಕೂಡ ಸೇರಿದೆ (2ನೇ ಥೆಸಲೋನಿಕ. 2:13). ಪರಿಶುದ್ಧತೆಯಿಲ್ಲದೆ ನಾವು ದೇವರನ್ನು ನೋಡಲಾರೆವು (ಇಬ್ರಿಯಾ 12:14). ನಾವು ರಕ್ಷಣೆಯನ್ನು ಹೊಂದಲು ಪರಿಶುದ್ಧರಾಗಿರಬೇಕಾಗಿರುವಂತದ್ದು ಕಡ್ಡಾಯವೇನಲ್ಲ. ಆದರೆ ಇದು ಸಾಧ್ಯವಾಗುವಂತ ದ್ದಾಗಿದೆ. ಯಾಕೆಂದರೆ, ನಾವು ಈಗಾಗಲೇ ರಕ್ಷಿಸಲ್ಪಟ್ಟಿದ್ದೇವೆ (ರೋಮಾ. 6:22). ನಾವು ನಮ್ಮ ಸ್ವಂತ ಪ್ರಯತ್ನಗಳಿಂದ ಮಾತ್ರವೇ ಪರಿಶುದ್ಧರಾಗಲಾರೆವು. ಪವಿತ್ರಾತ್ಮನು ನಮಗೆ ಸಹಾಯ ಮಾಡುತ್ತಾನೆ. ಆತ್ಮನ ನೆರವಿನಿಂದ ನಾವು ನಮ್ಮಪಾಪದ ಪಾಪಾಧೀನ ಸ್ವಭಾವವನ್ನು ಮರಣಕ್ಕೊಪ್ಪಿಸುತ್ತೇವೆ. ರೋಮಾ 8:13. ರಕ್ಷಣೆಯು ದೇವರ ಒಂದು ವರವೇ ಎಂದು ಪ್ರಾರಂಭದಲ್ಲಿ ಗಲಾತ್ಯದ ಸಭೆಯವರು ತಿಳಿದಿದ್ದರು ಆದರೆ, ನಂತರ, ಸಂಪೂರ್ಣರಾಗಲು ಅಥವಾ ಪವಿತ್ರರಾಗಲೂ ಇವರು ಹಿಂದಕ್ಕೆ ಬಿದ್ದು ಮಾನವ ಪ್ರಯಾಸಕ್ಕೆ ಗಂಟ್ಟು ಬಿದ್ದರು ಎಂಬುದರ ಬಗ್ಗೆ ಪೌಲನು ಚಿಂತಿತನಾದನು (ಗಲಾತ್ಯ 3:3 ನೋಡಿರಿ) (ಸಾಮಾನ್ಯ ವಿಷಯಗಳು-ರಕ್ಷಣಾ ಮಾರ್ಗ).

ನಾವು ಪವಿತ್ರಾತ್ಮನ ಮೂಕಾಂತರ ಮಾತ್ರವೇ ಪರಿಶುದ್ಧರಾಗಬಹುದು.ಆದರೆ ಹೀಗಾದ ಮಾತ್ರಕ್ಕೆ ಈ ಸಂಯೋಜನೆಯಲ್ಲಿ ನಮ್ಮ ಪಾತ್ರವೇನು ಇಲ್ಲವೆಂದಲ್ಲ. ನಾವು ದೇವರ ಶಿಸ್ತನ್ನು ಅಂಗೀಕರಿಸಲೇ ಬೇಕು (ಇಬ್ರಿಯಾ 12:9-11). ನಾವು ನಮ್ಮ ದೇಹವನ್ನು ಪರಿಶುದ್ಧತೆಯಲ್ಲಿ ತರಬೇತಿಗೊಳಿಸಬೇಕು (1ನೇ ಕೊರಿಂಥ 9:24-27, 1ನೇ ತಿಮೊಥೆ. 4:7).

ನಮ್ಮನ್ನು ಅಡ್ಡಿಪಡಿಸುವಂತಹ ನಮ್ಮ ಶರೀರದ ಅಥವಾ ಮನಸ್ಸಿನ ಯಾವುದೇ ಪಾಪವನ್ನು" ತೆಗೆದು ಹಾಕ"ಬೇಕು (2ನೇ ಕೊರಿಂಥ 7:1, ಇಬ್ರಿಯಾ 12:1-2) ಮತ್ತು ನಮ್ಮ ಶರೀರ ಮತ್ತು ಮನಸ್ಸನ್ನು ದೇವರಿಗೆ ಸಮರ್ಪಿಸ ಬೇಕು (ರೋಮಾ. 6:13, 19, 12:1-2). ನಾವು ಸತ್ಯವೇದವನ್ನು ಓದಲೇ ಬೇಕು (2ನೇ ತಿಮಾಥೆ 3:16) ವಚನಗಳನ್ನು ಕಂಠಪಾಠ ಮಾಡಬೇಕು (ಕೀರ್ತನೆ 119:11, 2ನೇ ಪೇತ್ರ 1:4) ಮತ್ತು ನಂತರ ನಮ್ಮ ನಡತೆಗಳನ್ನು ಮಾರ್ಪಡಿಸಲು ಸತ್ಯವಾಕ್ಯಗಳ ಮೇಲೆ ಆತುಕೊಳ್ಳಬೇಕು. ನಮ್ಮ ಮೇಲೆ ಇಟ್ಟಿರುವ ಮುಖಂಡರುಗಳ ಸಹಾಯ ಪಡೆದುಕೊಳ್ಳಬೇಕು ಎಫೆಸ 4:11-13. ಇವೆಲ್ಲವುಗಳ ಜೊತೆ, ನಾವು ದೇವರ ಸಹಾಯಕ್ಕಾಗಿ ಪ್ರಾರ್ಥನೆ ಮಾಡಲೇ ಬೇಕು (ಕೊಲಸ್ಸೆ 1:9-101ನೇ ಥೆಸಲೋನಿಕ 3:12-13, 5:23). ಇಲ್ಲದಿದ್ದರೆ ನಾವು ಬಿದ್ದುಹೋಗುತ್ತೇವೆ.

ಕೆಲವು ಕ್ರೈಸ್ತರು ಪ್ರತ್ಯೇಕವಾದ ವಿಶೇಷ ಅನುಭವಭರಿತ ಪವಿತ್ರೀಕರಣಕದ ಇನ್ನೊಂದು ಹೆಜ್ಜೆಯಿದೆ ಎಂದು ನಂಬುತ್ತಾರೆ. ನಾವು ಹೆಚ್ಚಾಗಿ ಪ್ರಾರ್ಥನೆ ಮಾಡಿದ ನಂತರ ವಿಶೇಷ ಅನುಭವದ ಮೂಲಕ, ದೇವರಿಂದ ಪವಿತ್ರೀಕರಣ ಹೊಂದಬಹುದೆಂದು ತಿಳಿಯುತ್ತಾ ನಂತರ ನಿಜವಾಗಿ ಅದು ದೊರಕಿದೆಯೇ ಎಂದು ಖಾತ್ರಿ ಮಾಡಿಕೊಳ್ಳುತ್ತಾರೆ. ಈ ಪವಿತ್ರೀಕರಣದ ಕಾರ್ಯವನ್ನು "ಎರಡನೇಯ ಕೃಪಾಭರಿತ ಕಾರ್ಯ" ಎಂದು ಇವರು ಕರೆಯುತ್ತಾರೆ.( ಮೊದಲನೇ ಕೃಪಾಯ ಕಾರ್ಯವು ನಮ್ಮ ರಕ್ಷಣೆಯೇ ಆಗಿದೆ). ಪ್ರಾರಂಭದಲ್ಲಿ ಉಂಟಾದ ರಕ್ಷಣೆಯು ನಾವು ಹೊಸದಾಗಿ ಹುಟ್ಟುವ ಫಲಿತಾಂಶವನ್ನು ಕೊಟ್ಟು . ಇದು ಲೋಕದಿಂದ ನಮ್ಮನ್ನು ಬೇರ್ಪಡಿಸುತ್ತದೆ ಎಂದು ಈ ಕ್ರೈಸ್ತರು ಭೋದಿಸುತ್ತಾರೆ. 1ನೇ ಯೋಹಾನ 5:4 ಮತ್ತು ಆತ್ಮವನ್ನು ಆವರಿಸಿಕೊಳ್ಳುತ್ತದೆ (ರೋಮಾ. 8:9). ನಾವು ಕ್ರಿಸ್ತನಲ್ಲಿ **ಹಸಿಗೂಸು ಗಳಾಗುತ್ತೇವೆ.** 1ನೇ ಕೊರಿಂಥ 3:1. ಆದರೆ ಎರಡನೇ ಕೃಪಾಕಾರ್ಯವು ಅನೇಕ ಸಾರಿ ಎರಡನೇ ಆಶೀರ್ವಾದ ಎಂದು ಕರೆಯಲ್ಪಟ್ಟು, ನಮ್ಮನ್ನು ಪವಿತ್ರೀಕರಿಸಿ,

ತನ್ನತನದಿಂದ ದೂರಮಾಡುತ್ತದೆ, (ಗಲಾತ್ಯ 2:20) ಮತ್ತು ಪವಿತ್ರಾತ್ಮನಿಂದ ತುಂಬಿಸುವ ಫಲಿತಾಂಶದೆಡೆಗೆ ನಡೆಸುತ್ತದೆ. ಎಫೆಸ 5:18. ಆಗ ನಾವು **ಪ್ರೌಢರಾಗುತ್ತೇವೆ** (ಎಫೆಸ 4:13) ಮತ್ತು ದೇವರ ಪ್ರೀತಿಯು ನಮ್ಮಲ್ಲಿ **ಸಂಪೂರ್ಣಗೊಳ್ಳುತ್ತದೆ** (1ನೇ ಯೋಹಾನ 4:12, 17). ಅನೇಕ ಕ್ರೈಸ್ತರು, ನಾವು ಇನ್ನು ಮುಂದೆ ಪಾಪದಲ್ಲಿ ತಿಳಿದೋ ಅಥವಾ ನಾವಾಗಿಯೇ ಬೀಳದೆ ನಾವು ಸಂಪೂರ್ಣವಾಗಿ ಪಾವಿತ್ರತೆ ಹೊಂದಬಹುದೆಂದು ತಿಳಿಯುತ್ತಾರೆ (1ನೇ ಯೋಹಾನ 3:9). ಅಪಕ್ವವಾದ ಕ್ರೈಸ್ತರ ಬಗ್ಗೆ ರೋಮಾ.7ನೇ.ಅಧ್ಯಾಯದ ಕಡೆಯ ಭಾಗದಲ್ಲಿ ಕೊಟ್ಟಿರುವಂತೆಯೂ, ನಂತರ ಅಧ್ಯಾಯ 8ರಲ್ಲಿ ಕೊಟ್ಟಿರುವ, ಎರಡನೇ ಆಶೀರ್ವಾದ ಹೊಂದಿಕೊಂಡ ವಿಷಯದಲ್ಲಿ ನಂಬಿಕೆ ಇಡುತ್ತಾರೆ. ಇವರು ಅ.ಕೃ. 2:4ರಲ್ಲಿ ಮತ್ತು 9:17ರಲ್ಲಿ ಬರೆದಿರುವ ಪವಿತ್ರತೆಯ ಅನುಭವಗಳ ಉದಾಹರಣೆಯ ಕಡೆಗೆ ಬೆರಳು ಮಾಡಿ ತೋರಿಸುತ್ತಾರೆ (ಸಾಮಾನ್ಯ ವಿಷಯಗಳು-ಪವಿತ್ರಾತ್ಮನಿಂದ ದೀಕ್ಷಾಸ್ನಾನ. ನೋಡಿರಿ).

ಪವಿತ್ರೀಕರಣವೆಂಬುವುದು ಬಹಳ ನಿಧಾನವಾದ ಕಾರ್ಯ ಮತ್ತು ನಾವು ಸಾಯುವಾಗಲೂ ಅದು ಸಂಪೂರ್ಣಗೊಂಡಿರುವುದಿಲ್ಲವೆಂದು ಅನೇಕ ಕ್ರೈಸ್ತರು ನಂಬುತ್ತಾರೆ. ಪರಿಶುದ್ಧತ್ವಕ್ಕೆ ಬೇರೊಂದು ತರವಾದ ಅನುಭವವಿದೆ ಎಂದು ಅವರು ನಂಬುವುದಿಲ್ಲ. ಇವರು ಗಲಾತ್ಯ 3:3, ಇಬ್ರಿಯಾ 10:14, 12:10-11 ವಚನಗಳನ್ನು ಎತ್ತಿ ತೋರಿಸುತ್ತಾರೆ ಅಥವಾ ಅಲ್ಲಿ ಹೀಗೆ ಹೇಳುತ್ತದೆಯಲ್ಲಾ, ನಮಗೆ ನೇಮಕವಾಗಿರುವ ಓಟವನ್ನು ಸ್ಥಿರಚಿತ್ತದಿಂದ "ಓಡೋಣ" ಮತ್ತು ಪಾಪಕ್ಕೆ ವರೋದವಾಗಿ "ಹೊರಾಟ" ವನ್ನು ಮುಂದುವರಿಸೋಣ (ಇಬ್ರಿಯಾ 12:1-4). ಹೊಸ ಒಡಂಬಡಿಕೆಯಲ್ಲಿ ಅನೇಕ ವಚನಗಳಲ್ಲಿ ನಾವು ನಮ್ಮ ಶರೀರವನ್ನು "ತರಬೇತಿ" ಗೊಳಿಸಬೇಕು. ನಮ್ಮನ್ನು ನಾವೇ "ಒಪ್ಪಿಸಿ" ಕೊಡಬೇಕು, ಓಟವನ್ನು ಓಡಬೇಕು ಅಥವಾ "ಹೋರಾಡ" ಬೇಕು ಎಂಬಂತಹ ಈ ತರಹದ ವಚನಗಳಿಂದ ನಾವು ಇನ್ನು ಪರಿಶುದ್ಧರಾಗಿಲ್ಲವೆಂದು ನಮಗೆ ವೇದ್ಯವಾಗಿರುತ್ತದೆ. ಆತನೂ ಇನ್ನೂ ಸಂಪೂರ್ಣವಾಗಿಲ್ಲ ಮತ್ತು ಸಂಪೂರ್ಣತೆ ಹೊಂದಲು ಇನ್ನು ಹೆಣಗಾಡುತ್ತಿದ್ದೇನೆಂದು ಪೌಲನು ತಾನೇ ಹೇಳಿಕೊಂಡಿದ್ದಾನೆ. ಫಿಲಿಪ್ಪಿ 3:12-14. ಇಷ್ಟಕ್ಕೂ ಆತನು ತನ್ನನ್ನು **ಪ್ರೌಡರ** ಪಟ್ಟಿಯಲ್ಲಿ ಸೇರಿಕೊಂಡಿದ್ದಾನೆ. ಫಿಲಿಪ್ಪಿ.3:15. ಕೆಲವರು 1ನೇ ಯೋಹಾನ 1:8ರಲ್ಲಿ ಬರೆದಿರುವ ಪ್ರಕಾರ, ನಾವು ಪಾಪದಿಂದ ಹೊರತಾಗಿದ್ದೇವೆಂದು ಹೇಳಿಕೊಂಡರೆ, ನಾವು ಸತ್ಯವನ್ನು ನುಡಿಯುವುದಿಲ್ಲ ಎಂದು ಇವರು ಹೇಳುತ್ತಾರೆ.ನಾವು ಕ್ರಿಸ್ತನಲ್ಲಿ "ಪ್ರೌಢ" ರಾಗುತ್ತಿದ್ದಂತೆಯೇ, ನಾವು ಹೆಚ್ಚಾಗಿ ನಮ್ಮ ಪಾಪ ಮತ್ತು ನ್ಯೂನತೆಗಳ ಬಗ್ಗೆ ಅರಿತುಕೊಳ್ಳುತ್ತೇವೆ. ಪೌಲನು ತನ್ನ ಜೀವಿತದ ಕಡೆಯ ಸಮಯದಲ್ಲಿ ತಾನು ಎಲ್ಲಾ ಪಾಪಿಗಳಲ್ಲಿಯೇ **ಕಡು ಪಾಪಿ** ಎಂದು ತಾನೇ ಹೇಳಿಕೊಂಡಿದ್ದಾನೆ (1ನೇ ತಿಮಾಥೆ 1:15). ಯಾವ ಕ್ರೈಸ್ತರು ಈ ಎರಡನೇ ಅಭಿಪ್ರಾಯ ಹೊಂದಿದ್ದಾರೋ, ಅವರು ರೋಮಾ. ಅಧ್ಯಾಯ 7ರಲ್ಲಿ ಬರೆದಿರುವಂತೆ, ನಾವು ಪ್ರತೀದಿನ ಪಾಪದೊಡನೆ ಹೋರಾಟವನ್ನು ಮಾಡುತ್ತಲೇ ಇರಬೇಕಾಗುತ್ತದೆ.ಯಾಕೆಂದರೆ ಅಧ್ಯಾಯ. 8ರಲ್ಲಿ ಬರೆದಿರುವಂತೆ, ಆತನು ಜಯಪ್ರದವಾದ ಜೀವಿತವನ್ನು ಹೆಚ್ಚು ಹೆಚ್ಚಾಗಿ ಅನುಭವಿಸುತ್ತಿರುವಾಗಲೇ, ಕ್ರಮೇಣವಾಗಿ ಜಯವನ್ನು ಹೊಂದುತ್ತಿರುತ್ತಾನೆ. ಈ ಲೋಕದಲ್ಲಿ ಒಬ್ಬ ಕ್ರೈಸ್ತನು ಯಾವಾಗಲೂ ಸಂಪೂರ್ಣವಾಗಿ ತನ್ನ ಪಾಪ ಸ್ವಭಾವದೊಡನೆ ಹೋರಾಡುವುದನ್ನು ನಿಲ್ಲಿಸಲಾರನು.

ಪ್ರತಿಯೊಬ್ಬ ಕ್ರೈಸ್ತನ ಅನುಭವ ಬೇರೆ ಬೇರೆಯಾಗಿರುತ್ತದೆ. ಅನೇಕ ಕ್ರೈಸ್ತರು, ತಮಗೆ ಎರಡನೇ ಆಶೀರ್ವಾದ ಸಿಕ್ಕಿದೆ ಅಥವಾ ಪವಿತ್ರಾತ್ಮನಿಂದ ತುಂಬಿಸಲ್ಪಟ್ಟಿದ್ದೇವೆಂದು ಹೇಳಿಕೊಳ್ಳುತ್ತಾರೆ. ಕೆಲವು ಕ್ರೈಸ್ತರು ಇದ್ದಕ್ಕಿದ್ದ ಹಾಗೆ ಹೆಚ್ಚು ಕಾಲ ಪರಿಶುದ್ಧತೆಯಲ್ಲಿದ್ದು, ಕ್ರಮೇಣವಾಗಿ ಪವಿತ್ರಿಕರಣದ ಹೇಚ್ಚಿನ ಅನುಭವವನ್ನು ಹೊಂದುತ್ತಲೇ ಇರುತ್ತಾರೆ. ಪ್ರತಿಯೊಬ್ಬನ ಜೀವಿತದಲ್ಲೂ ದೇವರು ವಿವಿಧ ರೀತಿಯಲ್ಲಿ ಕಾರ್ಯವೆಸಗುತ್ತಾನೆ. ನಾವು ನಮ್ಮ ಸಂಕುಚಿತವಾದ ಸ್ವಂತ ಅನುಭವಕ್ಕಷ್ಟೇ ಪವಿತ್ರಾತ್ಮನ ಕಾರ್ಯ ತತ್ಪರತೆಯನ್ನು ಸೀಮಿತಗೊಳಿಸಿಕೊಳ್ಳಬಾರದು.

ನಾವು ಪರಿಶುದ್ಧತೆಯ ಅನುಭವದ ವಿಷಯವಾಗಿ ಏನೇ ನಂಬಿಕೆ ಹೊಂದಿದ್ದರೂ ನಾವು ಜವಾಬ್ದಾರಿಯಲ್ಲಿ ಮುಕ್ತರಾಗಿರಬೇಕು. ನಾವು ಪರಿಶುದ್ಧರಾಗಲು ಅಪ್ಪಣೆ ಹೊಂದಿದ್ದೇವೆ. ನೀವು ಎಲ್ಲಾ **ಕಾರ್ಯದಲ್ಲಿಯೂ ಪರಿಶುದ್ಧರಾಗಿರಿ** ಎಂದು ಪೇತ್ರನು ಬರೆದಿದ್ದಾನೆ (1ನೇ ಪೇತ್ರ 1:15). **ಎಲ್ಲರ ಸಂಗಡ ಸಮಾಧಾನದಿಂದಿರುವುದಕ್ಕೂ, ಪರಿಶುದ್ಧತೆಯನ್ನು ಹೊಂದುವುದಕ್ಕೂ ಪ್ರಯತ್ನ ಮಾಡಿರಿ. ಪರಿಶುದ್ಧತೆಯಿಲ್ಲದೆ ಯಾವನೂ ಕರ್ತನನ್ನು ಕಾಣುವುದಿಲ್ಲ** (ಇಬ್ರಿಯಾ 12:14)

# ಪವಿತ್ರಾತ್ಮನ ದೀಕ್ಷಾಸ್ನಾನ

## ಪ್ರಾಮುಖ್ಯವಾದ ವಚನಗಳು

ಮಾರ್ಕ :1:8 ಆತನು ಅಂದರೆ ಯೇಸುಕ್ರಿಸ್ತನು ಪವಿತ್ರಾತ್ಮನ ಸ್ನಾನ ಮಾಡಿಸುವನು

ಲೂಕ.:24 :49 ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಕೋಡುವ ಅಥವಾ ಹೊದಿಸುವ ತನಕ ಈಪಟ್ಟಣದಲ್ಲೇ ಕಾದುಕೊಂಡಿರಿ ಎಂದು ಹೇಳಿದನು

ಯೋಹಾನ :14:16-17 ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು .

ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮೊಡನೆ ಇರುವುದಕ್ಕೆ ಕೊಡುವನು

ಯೋಹಾನ :20:22 ಆತನು (ಯೇಸುವು)ಅವರ ಮೇಲೆ ಊದಿ,ಪವಿತ್ರಾತ್ಮ ವರವನ್ನು ತಕ್ಕೊಳ್ಳಿರಿ ಎಂದು ಹೇಳಿದನು.

ಅ.ಕ. :1:5 ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ, ಪವಿತ್ರಾತ್ಮದಲ್ಲಿ ಸ್ನಾನವಾಗುವುದು.

ಅ.ಕೃ.:1:8 ಆದರೆ ಪವಿತ್ರಾತ್ಮನು ನಿಮ್ಮ ಮೇಲೆ ಬರಲು, ನೀವು ಬಲ ಹೊಂದುವಿರಿ

ಅ.ಕೃ.:2:1- 4 ಆಗ ಅವರೆಲ್ಲರು ಪವಿತ್ರತ್ಮ ಬರಿತರಾಗಿ, ಆತ್ಮನು ತಮಗೆ ನುಡಿಯು ಶಕ್ತಿಯನ್ನು ಕೊಟ್ಟ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತನಾಡುವುದಕ್ಕೆ ಪ್ರಾರಂಬಿಸಿದರು.

ಅ.ಕೃ.:2:38-39 ಪೇತ್ರನು.... ಆಗ ನೀವು ಪವತ್ರಾತ್ಮ ವರವನ್ನು ಹೊಂದುವಿರಿ ಎಂದು ಹೇಳಿದನು

ಅ.ಕೃ.:8:14-17 ಪೇತ್ರ, ಯೋಹಾನರು ಅವರ (ಸಮಾರ್ಯದವರ) ಮೇಲೆ ಕೈಗಳನ್ನಿಡಲು ಅವರು ಪವಿತ್ರಾತ್ಮ ವರವನ್ನು ಹೊಂದುದರು.

ಅ.ಕೃ.:10:44-48 ಅವನ ವಾಕ್ಯವನ್ನು ಕೇಳಿದವರೆಲ್ಲರ ಮೇಲೆ ಪವಿತ್ರಾತ್ಮ ವರವು ಇಳಿಯಿತು.

ಯೆಹೂದ್ಯರಾದ ವಿಶ್ವಾಸಿಗಳು ಇದನ್ನು ಕೇಳಿದಾಗ, ಅನ್ಯಜನಗಳಿಗೂ ಪವಿತ್ರಾತ್ಮ ದಾನ ಮಾಡಲ್ಪಟ್ಟಿದೆಯಲ್ಲಾ ಎಂದು ಅತ್ಯಾಶ್ಚರ್ಯಪಟ್ಟರು

ಅ.ಕೃ.:19:1-6 ಪೌಲನು ಅವರ (ಎಫೆಸದವರ ) ಮೇಲೆ ಕೈಗಳನ್ನಿಡಲು ಪವಿತ್ರಾತ್ಮ ವರವು ಅವರ ಮೇಲೆ ಬಂತು. ಅವರು ನಾನಾ ಭಾಷೆಗಳನ್ನಾಡಿದರು ಮತ್ತು ಪ್ರವಾದಿ ಸಿದರು.

1 ಕೊರಿಂಥ :12:7-11 ಆದರೆ ಪ್ರತಿಯೊಬ್ಬನಲ್ಲಿ ತೋರಿ ಬರುವ ದೇವರಾತ್ಮನ ವರಗಳು

ಸರ್ವರ ಪ್ರಯೋಜನಾರ್ಥ ವಾಗಿ ಕೊಡಲ್ಪಟ್ಟಿವೆ. ಒಬ್ಬನಿಗೆ ದೇವರಾತ್ಮನ ಮೂಲಕ, ಜ್ಞಾನ ವಾಕ್ಯವು, ಒಬ್ಬನಿಗೆ ಆತ್ಮನಿಗೆ ಅನುಗುಣವಾಗಿ ವಿದ್ಯಾವಾಕ್ಯವು, ಒಬ್ಬನಿಗೆ ಆತ್ಮನಿಂದಲೇ ನಂಬಿಕೆಯು, ಒಬ್ಬನಿಗೆ ಆ ಒಬ್ಬ ಆತ್ಮನಿಂದಲೇ ನಾನಾ ರೋಗಗಳನ್ನು ವಾಸಿ ಮಾಡುವ ವರವು, ಒಬ್ಬನಿಗೆ ಮಹತ್ತುಗಳನ್ನು ಮಾಡುವ ವರವು, ಒಬ್ಬನಿಗೆ .....ಒಬ್ಬನಿಗೆ ವಾಣಿಗಳ ಅರ್ಥವನ್ನು ಹೇಳುವ ವರವು ಕೊಡಲ್ಪಡುತ್ತದೆ

## ಪವಿತ್ರತ್ಮನ ಸ್ನಾನ ಎಂದರೇನು

ಪವಿತ್ರತ್ಮನ ದೀಕ್ಷಸ್ನಾನದ ಕುರಿತಾಗಿ ಮೊದಲು ಸ್ನಾನಿಕನಾದ ಯೋಹಾನನಿಂದ ತಿಳಿಸಲ್ಪಟ್ಟಿತು . (ಮತ್ತಾಯ 3:11, ಮಾರ್ಕ 1:8, ಲೂಕ 3:16.)

ಯೋಹಾನನು, ಈ ಸ್ನಾನವು ನೀರಿನಿಂದ' ಅಥವಾ ನೀರಿನಲ್ಲಿ ಆಗಿದೆ ಆದರೆ ಯೇಸುವು ವಿಶ್ವಾಸಿಗಳನ್ನು ಪವಿತ್ರಾತ್ಮದ ಬೆಂಕಿಯಿಂದ ಸ್ನಾನ ದೀಕ್ಷೆ ಕೊಡುವನು ಎಂದು ಹೇಳಿದನು. ನೀರಿನಿಂದ ಸ್ನಾನ ಮಾಡಿಸಲು ಬೋಧಕನು ವಿಶ್ವಾಸಿಯನ್ನು ನೀರಿನಲ್ಲಿ ಅಥವಾ ನೀರಿನಿಂದ ಸ್ನಾನ ದೀಕ್ಷೆ ಮಾಡುವನು. ಆದರೆ ಪವಿತ್ರಾತ್ಮನ ಸ್ನಾನಕ್ಕಾಗಿ ಯೇಸುವು ತಾನೇ ವಿಶ್ವಾಸಿಯನ್ನು

ಪವಿತ್ರಾತ್ಮನಿಂದ ಸ್ನಾನ ಮಾಡಿಸುವನು.ಯೇಸುವು, ಅ.ಕೃ. 1:5ರಲ್ಲಿರುವ ಯೋಹಾನನ ನೀರಿನ ದೀಕ್ಷಾಸ್ನಾನಕ್ಕೂ, ಶಿಷ್ಯರ ಮೇಲೆ ಇಳಿದು ಬಂದ ಪವಿತ್ರಾತ್ಮನ ಸ್ನಾನಕ್ಕೂ,ಇರುವ ವ್ಯತ್ಯಾಸವನ್ನು ತಿಳಿಸುತ್ತಾನೆ.ಪವಿತ್ರಾತ್ಮನು ಇಳಿದು ಬರುವ ಸಮಯವನ್ನು. ಮತ್ತು ಅವರ ಮೇಲೆ ಬಂದಾಗ ಅವರು ಮತ್ತೆ ಬಲಹೊಂದುವರು ಎಂದು ವಿವರಿಸಿ ಹೇಳಿದನು. ಮತ್ತು (ಅ.ಕೃ. 1:8). ಅ.ಕೃ. 1:4 ಮತ್ತು ಲೂಕ 24:49ರಲ್ಲಿ, ಯೇಸುವು ತನ್ನ ಶಿಷ್ಯರಿಗೆ ಕಾದುಕೊಂಡಿರಲು ಹೇಳಿದನು.

ಶಿಷ್ಯರು ಕಾದಿದ್ದರು ಮತ್ತು ಪಂಚಾಶತ್ತಮ ಹಬ್ಬದ ದಿನದಂದು ಪವಿತ್ರಾತ್ಮನ ಸ್ನಾನವನ್ನು ಪಡೆದುಕೊಂಡರು (ಅ.ಕೃ. 2:1-4).. ಅವರು ಆತ್ಮನ ಶಕ್ತಿಯ ಮೂಲಕವಾಗಿ, ವಿವಿಧ ಭಾಷೆಗಳನ್ನಾಡಲು ಪ್ರಾರಂಭಿಸಿದರು. ತದನಂತರ ಪವಿತ್ರಾತ್ಮನ ಶಕ್ತಿ ಮತ್ತು ಬಲವನ್ನು ಅಪೋಸ್ತಲರು ಮತ್ತು ಡೀಕನ್ನರು, ಆದಿಸಭೆಗಳನ್ನು ಕಟ್ಟಲು ಉಪಯೋಗಿಸಿಕೊಂಡರು (ಅ.ಕೃ. ಅಧ್ಯಾಯ 3-9). ಹೊಸ ಒಡಂಬಡಿಕೆಯುದ್ದಕ್ಕೂ ನಾವು ವಿಶೇಷ ವರವನ್ನು ಮತ್ತು ಬಲವನ್ನು ಪವಿತ್ರಾತ್ಮನಿಂದ ಪಡೆದುಕೊಂಡವರ ಬಗ್ಗೆ ಓದುತ್ತೇವೆ (1ನೇ ಕೊರಿಂಥ, ಅಧ್ಯಾಯಗಳ 12-14, 2ನೇ ಕೊರಿಂಥ 12:12, 1ನೇ ತಿಮಾಥೆ 4:14, 2ನೇ ತಿಮಾಥೆ 1:6).

ಪ್ರಶ್ನೆ ಏನೆಂದರೆ ಪವಿತ್ರಾತ್ಮನ ಶಕ್ತಿ ಮತ್ತು ವಿಶೇಷ ವರಗಳು ಈ ದಿನಗಳಲ್ಲೂ ನಮಗೆ ಲಭ್ಯವಾಗುವುದೇ? ಇವುಗಳು ಲಭಿಸುವುದಾದರೆ, ಯಾವಾಗ ಮತ್ತು ಹೇಗೆ ಇವುಗಳನ್ನು ಪಡೆದುಕೊಳ್ಳಬಹುದು?

## ಪವಿತ್ರಾತ್ಮನ ಶಕ್ತಿಯ ಅನುಭವಗಳು

ಪವಿತ್ರಾತ್ಮನು ಎಲ್ಲಾ ವಿಶ್ವಾಸಿಗಳಲ್ಲಿರುವನೆಂದು ಸತ್ಯವೇದವು ಸ್ಪಷ್ಟವಾಗಿ ಭೋದಿಸುತ್ತದೆ. ರೋಮಾ. 8:9, 1ನೇ ಕೊರಿಂಥ 6:19, ಗಲಾತ್ಯ 4:6. ಆದರೆ ಆತನು ಬೇರೆ ಬೇರೆ ವ್ಯಕ್ತಿಗಳಲ್ಲಿ, ಬೇರೆ ಬೇರೆ ರೀತಿಯಾಗಿ ಕಾರ್ಯ ಪ್ರವರ್ತನಾಗಿರಬಹುದು. ಸ್ನಾನಿಕನಾದ ಯೋಹಾನನು, ತನ್ನ ತಾಯಿಯ ಗರ್ಭದಿಂದಲೇ, ಪವಿತ್ರಾತ್ಮ ಭರಿತನಾದನು (ಲೂಕ 1:15, 41-44). ಯೇಸುವು ನೀರಿನಿಂದ ಸ್ನಾನ ಮಾಡಿಸಿಕೊಂಡ ಕೂಡಲೇ, ಪವಿತ್ರಾತ್ಮನು ಪಾರಿವಾಳದ ರೂಪದಲ್ಲಿ ಆತನ ಮೇಲೆ ಇಳಿದು ಬಂದನು. ಮಾರ್ಕ 1:10, ಯೋಹಾನ 1:32-33. ಯೇಸುವು ಈ ಲೋಕದಲ್ಲಿನ ತನ್ನ ಜೀವಿತಕಾಲದಲ್ಲಿ ತನ್ನ ಹನ್ನೆರಡು ಮಂದಿ ಆಪ್ತ ಶಿಷ್ಯರಿಗಲ್ಲದೆ, ಇನ್ನು ಎಪ್ಪತ್ತೆರಡು ಇತರೇ ಶಿಷ್ಯರಿಗೂ, ರೋಗಗಳನ್ನು ವಾಸಿ ಮಾಡುವುದಕ್ಕೂ, ದೆವ್ವಗಳನ್ನು ಓಡಿಸುವುದಕ್ಕೂ, ಬಲವನ್ನು ಮತ್ತು ಅಧಿಕಾರವನ್ನು ಕೊಟ್ಟನು. ಲೂಕ 9:1-2, 10:1, 9, 17-19. ಆಮೇಲೆ ಅವರಿಗೆ ಪವಿತ್ರಾತ್ಮನು ಅವರೊಡನೆ ಇರುವುದಲ್ಲದೇ, ಅವರೊಳಗೂ ಇರುವನು ಎಂದು ವಾಗ್ದಾನ ಮಾಡಿದನು (ಯೋಹಾನ 14:16-17). ಪಂಚಾಶತ್ತಮ ದಿನಕ್ಕೆ ಮೊದಲು ಯೇಸುವು ಆಗಲೇ ತನ್ನ ಶಿಷ್ಯರ ಮೇಲೆ ಊದಿ, ಪವಿತ್ರಾತ್ಮನನ್ನು ಸ್ವೀಕರಿಸಿರಿ ಎಂದು ಹೇಳಿದನು (ಯೋಹಾನ 20:22). ಆದರೆ ಅದೇ ಶಿಷ್ಯರಿಗೆ ಪವಿತ್ರಾತ್ಮ ವರವು ಬಲವಾಗಿ ದೊರೆಯುವಂತೆ ಪವಿತ್ರಾತ್ಮನ ದೀಕ್ಷಾಸ್ನಾನಕ್ಕಾಗಿ ಕಾದಿರುವಂತೆ ಹೇಳಿದನು (ಲೂಕ 24:49, ಅ.ಕೃ. 1:4).ಅ.ಕೃ. 2ನೇ ಅಧ್ಯಾಯದಲ್ಲಿ ತಿಳಿಸಿದಂತೆ,ಅವರು ಪವಿತ್ರಾತ್ಮ ವರವನ್ನು ಸ್ವೀಕರಿಸಿದ ದಿನದಿಂದ ಬಲ ಮತ್ತು ಶಕ್ತಿ ಬಂದು, ಹೊಸ ಸಭಾ ಯುಗವು ಪ್ರಾರಂಭಗೊಂಡಿತು. ಅವರು ಎಲ್ಲೆಲ್ಲಿಯೂ ಹೋಗಿ, ಬೋಧಿಸುತ್ತಾ ಅವರಿಗೆ ನೀರಿನಿಂದ ಸ್ನಾನ ಮಾಡಿಸಿದರು ಮತ್ತು ಅವರನ್ನು ಪವಿತ್ರಾತ್ಮನ ಶಕ್ತಿ ಮತ್ತು ವಿಶೇಷ ವರ ದೊರಕಿಸಿಕೊಳ್ಳುವಂತೆ, ಪ್ರೋತ್ಸಾಹಿಸುತ್ತಿದ್ದರು. ಅ.ಕೃ. 8:14-17, 9:17, 19:1-7, 1ನೇ ಕೊರಿಂಥ 12:8-10.

ಪರಿಶುದ್ಧಾತ್ಮನಿಂದ ಸ್ನಾನ ಹೊಂದುವುದರ ಅನುಭವಗಳನ್ನು ವರ್ಣಿಸಲು, ಅಪೋಸ್ತಲರ ಕೃತ್ಯಗಳಲ್ಲಿ[2] ಗ್ರೀಕ್ ಭಾಷೆಯ ಆವೃತ್ತಿಯಲ್ಲಿ ಅನೇಕ ಗ್ರೀಕ್ ಪದಗಳಿವೆ. ನಾವು ಈಗಾಗಲೇ "ಪರಿಶುದ್ಧಾತ್ಮನಿಂದ ದೀಕ್ಷಾಸ್ನಾನ" ಎಂಬ ಮಾತನ್ನು ಅ.ಕೃ. 1:5, 11:16 "ಪಡಕೊಳ್ಳುವ ಶಕ್ತಿ" ಅ.ಕೃ. 1:8 ಮತ್ತು "ಪವಿತ್ರಾತ್ಮನ ಬರುವಿಕೆ" ಅ.ಕೃ. 1:8, 8:16, 10:44, 11:15, 19:6. ಇನ್ನು ಕೆಲವು ಪದಪುಂಜಗಳಿದ್ದು "ಸುರಿಸಲ್ಪಡುವಿಕೆ" (ಅ.ಕೃ. 10:45) ಮತ್ತು ಪವಿತ್ರಾತ್ಮನನ್ನು ಪಡೆದುಕೊಳ್ಳುವಿಕೆ (ಅ.ಕೃ. 8:15, 10:47, 19:2).ಲೂಕನ ಸುವಾರ್ತೆ 9:1-2, 10:9, 17-19ರಲ್ಲಿ ಶಕ್ತಿಯನ್ನು ವರವನ್ನು ಪಡೆದುಕೊಂಡ ಶಿಷ್ಯರೇ ಮತ್ತು ಆತ್ಮನನ್ನು ಯೋಹಾನ 20:22 ಮತ್ತೆ ಅ.ಕೃ. 2ನೇ ಅಧ್ಯಾಯದಲ್ಲಿ ಹೇಳಿರುವ ಹಾಗೆ (ಅ.ಕೃ. 10:47)ರಲ್ಲಿ ಸಹ ಪಡೆದುಕೊಂಡರು. ಅ.ಕೃ. 2:4ರಲ್ಲಿ ಆತ್ಮನಿಂದ ತುಂಬಿಸಲ್ಪಟ್ಟ ಶಿಷ್ಯರೇ ಮತ್ತೊಂದು ಸಾರಿ ಅ.ಕೃ. 4:31ರಲ್ಲಿ ತುಂಬಿಸಿಕೊಂಡರು. ಹೀಗೆ ನಾವು ನೋಡುವಾಗ, ಬೇರೆ ಬೇರೆ ಅನುಭವಗಳಿಗೆ ಒಂದೇ ಹೆಸರಿಸಬಹುದು. ಒಂದು ಅನುಭವಕ್ಕೆ ಎರಡು ಅಥವಾ ಮೂರು ಬೇರೆ ಹೆಸರುಗಳನ್ನು ಕೊಡಬಹುದು.

ಇದಲ್ಲದೇ, ಇದೇ ಅನುಭವಗಳು, ಅ.ಕೃ.ದಲ್ಲಿ ಬೇರೆ ಕಾಲಗಳಲ್ಲಿ ಬೇರೆ ವಿಧವಾಗಿ ಉಂಟಾದವು. ಅನುಭವಗಳು ಕೆಲವು ಸಾರಿ, ಈ ರೀತಿ ಆದವು. (1) ಮಾನಸಾಂತರ ಹೊಂದಿದ ನಂತರ, ಮತ್ತು ಪವಿತ್ರಾತ್ಮನನ್ನು ಯಾವುದೇ ರೀತಿಯಲ್ಲಿ ಪಡೆದುಕೊಂಡ ನಂತರ (ಯೋಹಾನ 20:22, Acts 2:4, 4:31). (2) ಮಾನಸಾಂತರ ಹೊಂದಿದ ಮೇಲೆ ಮತ್ತು

ನೀರಿನಿಂದ ದೀಕ್ಷಾಸ್ನಾನ ಪಡೆದ ಕೆಲವು ದಿನಗಳ ನಂತರ ಅ.ಕೃ. 8:9-17. (3) ಮಾನಸಾಂತರವಾಗುವಾಗ ಮತ್ತು ನೀರಿನ ದೀಕ್ಷಾಸ್ನಾನಕ್ಕೆ ಮುಂಚಿತವಾಗಿ.(ಅ.ಕೃ. 10:44-48) (4) ಮಾನಸಾಂತರ ಆಗುವಾಗ ಮತ್ತು ನೀರಿನ ದೀಕ್ಷಾಸ್ನಾನ ತಕ್ಕೊಂಡ ಕೆಲವೇ ನಿಮಿಷಗಳಲ್ಲಿ (ಅ.ಕೃ. 19:1-6) ಕೆಲವು ಜನರಿಗೆ, ಅವರ ಮೇಲೆ ಕೈಗಳನ್ನಿಟ್ಟ ಕೂಡಲೇ, ಪವಿತ್ರಾತ್ಮ ಬಂದನು (ಅ.ಕೃ. 8:17, 9:17, 19:7, 2ನೇ ತಿಮಾಥೆ 1:6 ಮತ್ತು ಇನ್ನು ಕೆಲವರಿಗೆ ಯಾವುದೇ ವಿಶೇಷತೆಯಿಂದ ಕೂಡಿರದ ಸಂದರ್ಭದಲ್ಲಿ ಕೈಯಿಡದಿದ್ದರೂ, ಪವಿತ್ರಾತ್ಮನು ಬಂದನು. (ಅ.ಕೃ. 2:4, 4:31, 10:44).

ಆದುದರಿಂದ ವಿವಿದ ರೀತಿಯಲ್ಲಿ ಪವಿತ್ರಾತ್ಮನು ಬರುವನು ಮತ್ತು ಕಾರ್ಯವನ್ನು ಮಾಡುವನು ಎಂಬುದಾಗಿ ಈ ವಚನಗಳಿಂದ ನಾವು ನೋಡುತ್ತೇವೆ. ಪವಿತ್ರಾತ್ಮನು ಸ್ವತಂತ್ರನು.ನಾವು ಆತನಿಗಾಗಿ ನಮ್ಮ ಸ್ವಂತವಾದಂತ ಕಾನೂನುಗಳನ್ನು ಮಾಡಬಾರದು.ಪವಿತ್ರಾತ್ಮನ ಶಕ್ತಿಯು ನಮ್ಮ ಜೀವಿತದಲ್ಲಿ ಇದೇಯೇ ಎಂಬುವಂತದ್ದು ಮುಖ್ಯವಾದ ಸಂಗತಿಯಾಗಿದೆ..ಪವಿತ್ರಾತ್ಮನ ಶಕ್ತಿಯು ನಮ್ಮ ಜೀವಿತದಲ್ಲಿರುವುದಕ್ಕಾಗಿ ನಾವು ಪ್ರಾರ್ಥಿಸಲೇ ಬೇಕು (ಅ.ಕೃ. 8:14-17, 9:17. ಪವಿತ್ರಾತ್ಮನು, ಕ್ರೈಸ್ತರ ಜೀವಿತದಲ್ಲಿ ಯಾವ ರೀತಿಯಿಂದಾದರೂ ತನ್ನ ಕಾರ್ಯವನ್ನುಮಾಡಿದರು ಕೂಡ ಆ ಕಾರ್ಯಕ್ಕಾಗಿ ನಾವು ದೇವರನ್ನು ಕೊಂಡಾಡಬೇಕು ಮತ್ತು ಕೃತಜ್ಞತೆಯನ್ನು ಸಲ್ಲಿಸಬೇಕು.

## ಸಭೆಗಳಲ್ಲಿ ಪವಿತ್ರಾತ್ಮನ ಶಕ್ತಿ

ಯೇಸು ಕ್ರಿಸ್ತನನ್ನು ವಿಶ್ವಾಸಿಸುವ ಪ್ರತಿಯೊಬ್ಬನಲ್ಲಿಯೂ ಪವಿತ್ರಾತ್ಮನು ಇರುತ್ತಾನೆಂದು ಎಲ್ಲಾ ಕ್ರೈಸ್ತರು ನಂಬುತ್ತಾರೆ (ರೋಮಾ. 8:9, ಎಫೆಸ 4:30). ನೀರಿನಿಂದ ದೀಕ್ಷಾ ಸ್ನಾನ ತೆಗೆದುಕೊಳ್ಳುವಾಗ, ಮತ್ತು ರಾತ್ರಿ ಭೋಜನವನ್ನು ತೆಗೆದುಕೊಳ್ಳುವಾಗ, ವಿಶೇಷವಾದ ರೀತಿಯಲ್ಲಿ ಪವಿತ್ರಾತ್ಮನನ್ನು ಪಡೆದುಕೊಳ್ಳುತ್ತೇವೆಂದು ಅನೇಕ ಕ್ರೈಸ್ತರು ನಂಬುತ್ತಾರೆ (1ನೇ ಕೊರಿಂಥ 10:2- 4, 12:13, ತೀತ 3:5).

ಇನ್ನು ಕೆಲವರು ವಿಶೇಷ ಸೇವೆಗಾಗಿ, ವಿಶೇಷ ರೀತಿಯಲ್ಲಿ ಪವಿತ್ರಾತ್ಮನನ್ನು ಪಡೆದುಕೊಳ್ಳಬಹುದೆಂದು ಹೇಗೆಂದರೆ ಬೋಧಕರ, ಡೀಕನ್ನರ ಅಥವಾ ಧರ್ಮ ಬೋಧಕರ ನೇಮಕದಲ್ಲಿ ಎಂದು ನಂಬುತ್ತಾರೆ. ಅ.ಕೃ. 6:6, 13:2-3, 1ನೇ ತಿಮಾಥೆ 4:14, 2ನೇ ತಿಮಾಥೆ 1:6 ಅಥವಾ ಪದೇ ಪದೇ ಬೇಕಾಗುವ ಶಕ್ತಿ ಮತ್ತು ಪ್ರೋತ್ಸಾಹಕ್ಕಾಗಿಯೂ ಸಹ ಪಡೆದುಕೊಳ್ಳಬಹುದೆಂದು ನಂಬುತ್ತಾರೆ ಅ.ಕೃ. 4:31.

ಆದಿಸಭೆಯಲ್ಲಿ ಕ್ರೈಸ್ತ, ಸಭಾ ಹಿರಿಯರು ಕ್ರೈಸ್ತರ ಮೇಲೆ ತಮ್ಮ ಕೈಗಳನ್ನು ಇಟ್ಟಾಗ, ವಿಶೇಷ ರೀತಿಯಲ್ಲಿ ಪವಿತ್ರಾತ್ಮ ವರ ಬಂತು. ಇದು ಅ.ಕೃ. 8:14-17 ರಲ್ಲಿ ವಿವರಿಸಿರುವ ಸನ್ನಿವೇಶದಂತೆಯೇ ಎಂದು ನಂಬುತ್ತಾರೆ. ಆದಿಸಭೆಯ ಈ ಅನುಭವವು ಮಾನಸಾಂತರ ಪಡುವಿಕೆ ಮತ್ತು ನೀರಿನಿಂದ ಸ್ನಾನ ಇವುಗಳಿಂದ ಪ್ರತ್ಯೇಕವಾದದ್ದು ಎಂದು ನಂಬುತ್ತಾರೆ. ಸಭಾಚರಿತ್ರೆಯನ್ನು ನೋಡಿದಾಗ ಈ ನಂಬಿಕೆಯೇ, ಸುಮಾರು ಶತಮಾನಗಳವರೆಗೆ ಪ್ರಚಲಿತವಾಗಿತ್ತು ಎಂದು ಕಂಡುಬರುತ್ತದೆ.

ಆದಾಗ್ಯೂ ತದನಂತರದ ಸಭಾ ಚರಿತ್ರೆಯುದ್ದಕ್ಕೂ ಅನೇಕ ಕ್ರೈಸ್ತರು ತಮ್ಮಲ್ಲಿನ ಪವಿತ್ರಾತ್ಮನ ಯಾವ ವಿಶೇಷ ವರ ಅಥವಾ ಶಕ್ತಿಯನ್ನು ಪ್ರದರ್ಶಿಸಲಿಲ್ಲ. ಇದು 1ನೇ ಕೊರಿಂಥ 12:7-11ರಲ್ಲಿ ಕಾಣಬರುತ್ತದೆ. ಉದಾಹರಣೆಗಾಗಿ, ಅನೇಕ ಜನರು ಯಾರನ್ನಾದರೂ ದೈವೀಕ ಶಕ್ತಿ ಹೊಂದಿಕೊಂಡು ಸ್ವಸ್ಥಪಡಿಸಿದ್ದನ್ನು ನೋಡಿಲ್ಲ. ಆದಿಸಭೆಗೆ ದೇವರು ವಿಶೇಷವಾದ ವರ ಮತ್ತು ಶಕ್ತಿಯನ್ನು ಕೊಟ್ಟಿದ್ದಾನೆ ಎಂದು ಅನೇಕರು ತಿಳಿದುಕೊಂಡಿದ್ದರು. ಈ ದಿನಗಳಲ್ಲಿ ಅನೇಕ ಕ್ರೈಸ್ತರು ವಿಶೇಷ ವರಗಳು ಯಾರಿಗೂ ಲಭ್ಯವಿರುವುದಿಲ್ಲ ಎಂದು ನಂಬುತ್ತಾರೆ. ಪರಿಪೂರ್ಣತೆಯನ್ನು ಮುಟ್ಟಿದಾಗ, ಪ್ರವಾದನೆಗಳು ಹಾಗು ಅನ್ಯ ಭಾಷೆಗಳಲ್ಲಿ ಮಾತನಾಡುವುದು ಮತ್ತು ಜ್ಞಾನ, ಇವುಗಳು 1ನೇ ಕೊರಿಂಥ 13:8-10ರಲ್ಲಿ ತಿಳಿಸಿರುವ ಪ್ರಕಾರ, ನಿಂತು ಹೋಗುತ್ತವೆ ಎಂದು ಪೌಲನು ಹೇಳುತ್ತಾನೆ. ಈ ಕ್ರೈಸ್ತರು ಪರಿಪೂರ್ಣತೆ ಯ ಬಗ್ಗೆ ಕ್ರಿಸ್ತನು ಸತ್ತ ನೂರು ವರ್ಷದ ನಂತರ ಹೊಸ ಒಡಂಬಡಿಕೆಯಲ್ಲಿ ಬರೆಯಲಾಯಿತು ಎಂದು ಬಾವಿಸುತ್ತಾರೆ.

ಆದರೆ ಇನ್ನು ಕೆಲವು ಕ್ರೈಸ್ತರು, ಎಲ್ಲಾ ವರಗಳು ನಮಗೆ ಇನ್ನು ಲಭ್ಯವಿದೆ ಮತ್ತು ಇನ್ನೂ ಹೆಚ್ಚಾಗಿ, ಇದನ್ನು ಇವರು ಅನುಭವಿಸಿದ್ದಾರೆ ಎಂದು ಸಾಧಿಸುತ್ತಾರೆ. ಇವರು ನಂಬುವುದೇನೆಂದರೆ, 1ನೇ ಕೊರಿಂಥ 13:8-10ರಲ್ಲಿ ಪೌಲನು ಭವಿಷ್ಯತ್‌ಕಾಲದಲ್ಲಿ ಕ್ರಿಸ್ತನನ್ನು ನಾವು ಮು ಖಾ ಮು ಖಿ ಯಾಗಿ ಕಾಣುವ ಸಮಯವನ್ನು ಸೂಚಿಸಿದ್ದಾನೆ ಎಂದು ಹೇಳುತ್ತಾರೆ 1ನೇ ಕೊರಿಂಥ 13:12 . ಸಭೆಯ ಚರಿತ್ರೆಯುದ್ದಕ್ಕೂ ಪವಿತ್ರಾತ್ಮನ ಶಕ್ತಿ ಮತ್ತು ವರಗಳು, ಕಾಲ ಕಾಲಕ್ಕೆ ಮತ್ತು ವಿವಿಧ ಸ್ಥಳಗಳಲ್ಲಿ ಕಂಡು ಬಂದುದನ್ನು ಬೊಟ್ಟು ಮಾಡಿ ತೋರಿಸುತ್ತಾರೆ.ನಿಜವಾಗಿಯೂ 20ನೇ ಶತಮಾನದ ಪ್ರಾರಂಭದಿಂದಲೂ, ಆತ್ಮನ ಶಕ್ತಿ ಮತ್ತು ಬಲವು ಹೆಚ್ಚು ಹೆಚ್ಚಾಗಿ ಕಂಡು ಬರುತ್ತಿರುವುದನ್ನು ನೋಡಬಹುದು. ಈ ಕ್ರೈಸ್ತರು ಮಾರ್ಕ 16:17-18, ಯೋಹಾನ 14:12 ಅ.ಕೃ. 2:17-18ರಲ್ಲಿ[3] ವಾಗ್ದಾನ ಮಾಡಿರುವ ವಿಶೇಷ ಸೂಚಕ ಕಾರ್ಯಗಳು ಮತ್ತು ವರಗಳು ವಿಶ್ವಾಸಿಗಳಿಗೆ ಕೊಡಲ್ಪಟ್ಟಿರುವುದನ್ನು ಎತ್ತಿ ತೋರಿಸುತ್ತಾರೆ.

## ನಾವು ಹೇಗೆ ಮತ್ತು ಯಾವಾಗ ಈ ಶಕ್ತಿಯನ್ನು ಪಡೆಯ ಬಹುದು?

ಪವಿತ್ರಾತ್ಮನ ಶಕ್ತಿ ಮತ್ತು ವರಗಳು ಈ ದಿನಗಳಲ್ಲಿ ಸಭೆಗಳಿಗೆ ಲಭ್ಯವಾಗುತ್ತವೆ ಎಂದು ನಂಬುವವರಲ್ಲಿ ಶಕ್ತಿ ಮತ್ತು ವರಗಳು ಹೇಗೆ ಮತ್ತು ಯಾವಾಗ ಪಡೆಯಲಾಯಿತು ಎಂಬುದರ ಬಗ್ಗೆ ಬೇರೆ ಬೇರೆಯಾದ, ಅಭಿಪ್ರಾಯ ಹೊಂದಿರುವರು. ಅ.ಕೃ. 10:44ರ ಪ್ರಕಾರ ಎಲ್ಲಾ ವಿಶ್ವಾಸಿಗಳು ಮಾನಸಾಂತರಪಟ್ಟಾಗ ಪವಿತ್ರಾತ್ಮನ'ಅಭಿಷೇಕವನ್ನು ಹೊಂದಿದರಾದರೂ, ಪವಿತ್ರಾತ್ಮನ ವರಗಳು ಒಬ್ಬ ವಿಶ್ವಾಸಿಯ ಜೀವಿತದಲ್ಲಿಅನೇಕ ವರ್ಷಗಳ ನಂತರ ಕಾಣಿಸಿಕೊಳ್ಳಲು ಪ್ರಾರಂಬಿಸಬಹುದು ಎಂದು ಕಂಡುಬರುತ್ತದೆ ಎಂದು ಅನೇಕರು ವಿಶ್ವಾಸಿಸುತ್ತಾರೆ.ಎರಡನೇ ಗುಂಪಿನ ಕ್ರೈಸ್ತರು ಪವಿತ್ರಾತ್ಮನ ದೀಕ್ಷಾಸ್ನಾನವೂ, ನೀರಿನ ದೀಕ್ಷಾ ಸ್ನಾನದ ಸಮಯದಲ್ಲಿ ಬರುತ್ತದೆಂದೂ, ಮತ್ತಾಯ 3:16-17ರಲ್ಲಿ ಬರೆದಿರುವ ಯೇಸುಕ್ರಿಸ್ತನ ನೀರಿನ ಸ್ನಾನಕ್ಕೂ ಅ.ಕೃ. 19:5-6ದೀಕ್ಷಾ ಸ್ನಾನ ದ ಬಗ್ಗೆ ಬೆರಳು ತೋರಿಸುತ್ತಾರೆ ಯಾಕೆಂದರೆ, ಪವಿತ್ರಾತ್ಮವು ನೀರಿನಿಂದ ಸ್ನಾನ ಮಾಡಿದ ಕೂಡಲೇ ಯೇಸುವಿಗೆ ಬಂತು. ಆದರೆ ಸಾಧಾರಣವಾಗಿ ಈ ಎರಡೂ ಗುಂಪಿನವರೂ, ಮಾನಸಾಂತರಪಟ್ಟಾಗ ಅಥವಾ ನೀರಿನಿಂದ ದೀಕ್ಷ ಸ್ನಾನ ಹೊಂದುವಾಗ ಬರುವ ಪವಿತ್ರಾತ್ಮನ ಶಕ್ತಿಯನ್ನು ವಿಶ್ವಾಸಿಸುತ್ತಾ, ಅ.ಕೃ.ದಲ್ಲಿ ತೋರಿಸಿರುವ ಪವಿತ್ರಾತ್ಮನ ಇಳಿಯುವಿಕೆಯು ಒಂದು ಅಸಾಧಾರಣ ಕ್ರಿಯೆಯಾಗಿತ್ತು ಎಂದು ನಂಬುತ್ತಾರೆ.

ಬಲ ಮತ್ತು ಶಕ್ತಿಯು ಆದಿಕಾಲದಲ್ಲಿ ದೊರಕಿದ್ದು ಬಹಳ ಕಾಲದವರೆಗೂ ಕಾಣದೆ ಹೋಗುವ ಸಂದರ್ಭಗಳಲ್ಲಿ ನಾವು ದೇವರಿಗೆ ಮೊರೆಯಿಟ್ಟು ಅದನ್ನು ನಮ್ಮ ಜೀವಿತದಲ್ಲಿ ತೋರಿ ಬರುವಂತೆ ಮಾಡು ಎಂದು ಕೇಳಿ ಕೊಳ್ಳಬಹುದಾಗಿದೆ ಎಂದು ವಿಶ್ವಾಸಿಸುತ್ತಾರೆ. ಮೂರನೇ ಗುಂಪಿನವರು. ಅ.ಕೃ.ದಲ್ಲಿ ಹೇಳಿರುವ ವಚನಗಳಲ್ಲಿ ಶಕ್ತಿ ಮತ್ತು ಬಲವನ್ನು ಯಾವಾಗಲಾದರೂ ಪಡೆದುಕೊಳ್ಳಬಹುದು. ಆದರೆ ಸರ್ವೇ ಸಾಧಾರಣವಾಗಿ ಅವು ಮಾನಸಾಂತರ ಮತ್ತು ನೀರಿನಿಂದ ಸ್ನಾನದ ಸಮಯ ಬಿಟ್ಟು ಬೇರೆ ವೇಳೆಯಲ್ಲಿ ಬರಬಹುದೆಂದು ನಂಬುತ್ತಾರೆ ಅ.ಕೃ. 2:4, 8:17, 1ನೇ ತಿಮೊಥೆ. 4:14, 2ನೇ ತಿಮೊಥೆ 1:6. ಪ್ರಕಾರ ಇವರು ಪವಿತ್ರಾತ್ಮನ ಶಕ್ತಿಗಾಗಿ, ಯಾರಾದರೂ, ಪ್ರಾರ್ಥಿಸಿ ಕೇಳಿಕೊಂಡಾಗ ಇದು ಅವರಿಗೆ ಬರುತ್ತದೆಂದು ಇವರು ನಂಬುತ್ತಾರೆ. ಕೇಳಿಕೊಳ್ಳುವವರೆಲ್ಲರಿಗೂ ಇದು ದೊರಕುತ್ತದೆ ಎಂದು ಹೇಳುವರು.ಈ ಶಕ್ತಿಯನ್ನು ಪಡೆಯಬೇಕಾದರೆ, ಸಭೆಯ ಹಿರಿಯರನ್ನು ತಮ್ಮ ಮೇಲೆ ಹಸ್ತವಿಟ್ಟು ಪ್ರಾರ್ಥಿಸಿರಿ ಎಂದು ಕೇಳುವುದು ಸಹಾಯಕವಾಗಬಹುದುದೆಂದು ಕೂಡ ಇವರು ವಿಶ್ವಾಸಿಸುತ್ತಾರೆ (ಅ.ಕೃ. 8:17, 19:6).

ಇಲ್ಲಿ ಬೇರೊಂದು ಪ್ರಶ್ನೆ ಎದುರಾಗುತ್ತದೆ? ನಮ್ಮ ಜೀವನದಲ್ಲಿ ನಾನಾ ಭಾಷೆಗಳನ್ನಾಡುವ ವರವು ಎಷ್ಟು ಪ್ರಾಮುಖ್ಯವೆನ್ನುವುದು? ಮೇಲೆ ತಿಳಿಸಿದ ಮೂರು ಅಭಿಪ್ರಾಯಗಳನ್ನು ಹೊಂದಿರುವವರು ಅನೇಕ ಸೂಚಕಗಳಲ್ಲಿ ನಾನಾ ಭಾಷೆಗಳನ್ನಾಡುವ ವರವು, ಆತ್ಮನು ಕೊಡುವ ಒಂದು ವಿಶೇಷ ಭಾಷೆಯಾಗಿದ್ದು ಇದು ಇದುವರೆಗೆ ಕಲಿತ ಭಾಷೆಯಾಗಿಲ್ಲದಿರುವುದು. 1ನೇ ಕೊರಿಂಥ 12:10, 14:1-5. ಹೊಸ ಒಡಂಬಡಿಕೆಯಲ್ಲಿ ನೋಡುವುದಾದರೆ ಪವಿತ್ರಾತ್ಮನ ದೀಕ್ಷಾಸ್ನಾನ ಹೊಂದಿದವರೆಲ್ಲರೂ ವಾಸ್ತವವಾಗಿ ಬೇರೊಂದು ಭಾಷೆಯಲ್ಲಿ ದೇವರನ್ನು ಸ್ತುತಿಸಿರುವಂತದ್ದು ತಿಳಿದು ಬರುತ್ತದೆ. ಮಾರ್ಕ 16:17, ಅ,ಕೃ. 2:4, 10:46, 19:6, 1ನೇ ಕೊರಿಂಥ 14:18. ಆದರೆ ಈ ವರವು ಎಲ್ಲಾ ವಿಶ್ವಾಸಿಗಳಿಗೂ, ಅಥವಾ ಕೆಲವರಿಗೆ ಮಾತ್ರವೋ ಎಂಬುದರ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳಿವೆ.

ಕೆಲವರು ಮಾತ್ರ ವಿಶೇಷವಾದ ಭಾಷೆಯಲ್ಲಿ ಮಾತನಾಡಬೇಕೆಂದು ದೇವರು ಅಪೇಕ್ಷಿಸುತ್ತಾನೆ ಎಂದು ಕೆಲವು ಕ್ರೈಸ್ತರು ನಂಬುತ್ತಾರೆ. ವಾಸ್ತವವಾಗಿ ಅನೇಕ ಆತ್ಮೀಕ ಕ್ರೈಸ್ತರು ಈ ವರವನ್ನು ಪಡೆದುಕೊಳ್ಳಲಿಲ್ಲ. ಪೌಲನು ತಾನೇ ಹೇಳುವ ರೀತಿಯಲ್ಲಿ ಎಲ್ಲರೂ **ನಾನಾ ಭಾಷೆಗಳಲ್ಲಿ ಮಾತನಾಡುವರೇ?** (1ನೇ ಕೊರಿಂಥ 12:30). ಪೌಲನ ಅರ್ಥವೇನೆಂದರೆ, ಎಲ್ಲರೂ ನಾನಾ ಭಾಷೆಯಲ್ಲಿ ಮಾತನಾಡುವುದಿಲ್ಲ. ಈ ಅಭಿಪ್ರಾಯ ಹೊಂದಿರುವ ಕ್ರೈಸ್ತರು, ಈ ವರಗಳನ್ನು ಕೊಡುವಂತೆ ದೇವರನ್ನು ಕೇಳಿಕೊಳ್ಳುವುದು ಒಳ್ಳೇದು. ಯಾಕೆಂದರೆ, ಅನೇಕ ಆಶೀರ್ವಾದಗಳು ಈ ಮೂಲಕ ದೊರೆಯುತ್ತವೆ. ಸತ್ಯವೇದದಲ್ಲಿ ಎಲ್ಲರೂ ವಾಸ್ತವವಾಗಿ ನಾನಾ ಭಾಷೆಗಳಲ್ಲಿ ಮಾತನಾಡುವ ಅವಶ್ಯಕತೆಯಿದೆ ಎಂದು ಸ್ಪಷ್ಟವಾಗಿ ಬರೆದಿಲ್ಲ. ಆದರೆ ಪವಿತ್ರಾತ್ಮನಿಂದ ಸ್ನಾನ ಹೊಂದಿದವರು, ವಿಶೇಷ ಭಾಷೆಯಲ್ಲಿ ಮಾತಾ ನಾಡುವ ಅರ್ಹತೆಯೆ ಅದಕ್ಕೆ ಸಾಕ್ಷಿ ಎಂದು ತಿಳಿಯುತ್ತಾರೆ. ಕೊರಿಂಥದವರೆಲ್ಲರೂ, ಅನ್ಯ ಭಾಷೆಯಲ್ಲಿ ಮಾತನಾಡಬೇಕೆಂದು ಪೌಲನು ಅಪೇಕ್ಷಿಸಿ ಅವರಿಗೆ ಬರೆದನೆಂಬುದನ್ನು, ಇವರು ತೋರಿಸುತ್ತಾರೆ (1ನೇ ಕೊರಿಂಥ 14:5). ಆದುದರಿಂದ ಈ ಕ್ರೈಸ್ತರು ಎರಡು ರೀತಿಯಲ್ಲಿ ಮಾತನಾಡುವ ವರಗಳಿವೆಯೆಂದು ನಂಬುತ್ತಾರೆ. ಮೊದಲನೆಯದು, ದೇವರ ವಾಕ್ಯದ ಸಂದೇಶವನ್ನು ಇತರೇ ಸಾರ್ವಜನಿಕರಿಗೆ ತಿಳಿಸಿ ಮಾತನ್ನಾಡುವುದು. ಯಾಕೆಂದರೆ ಇದು ಕೆಲವೇ ಜನರಿಗೆ ಕೊಡಲ್ಪಟ್ಟಿದ್ದು. ಯಾವಾಗಲೂ ತರ್ಜುಮೆ ಮಾಡಿಯೆ ಹೇಳಲಾಗುವುದು 1ನೇ ಕೊರಿಂಥ 14:1-5, 13:26-27. ಮತ್ತು ಎರಡನೆಯದಾಗಿ ದೇವರನ್ನು ವೈಯಕ್ತಿಕವಾಗಿ ಆರಾಧಿಸಿ, ಕೊಂಡಾಡುತ್ತಾ ಪ್ರಾರ್ಥಿಸುವ ವರವು ಆಗಿದೆ. ಇದು ಎಲ್ಲಾ ವಿಶ್ವಾಸಿಗಳಿಗೂ ಕೊಡಲಾಗಿದೆ (1ನೇ ಕೊರಿಂಥ 14:2, 15-17). ಇವರ ಅಭಿಪ್ರಾಯದಂತೆ, 1ನೇ ಕೊರಿಂಥ 12:30ರಲ್ಲಿ ಹೇಳಿರುವಂತದ್ದು ಸಂದೇಶವನ್ನು ಹೇಳುವ

ಮತ್ತು ಮಾತನಾಡುವಂತದ್ದಕ್ಕೆ ಉಲ್ಲೇಖಿಸಲಾಗಿದೆ.ಬೇರೆ ಮಾತಿನಲ್ಲಿ ಹೇಳುವುದಾದರೆ, ಅನ್ಯಭಾಷೆಯನ್ನು ಮಾತನಾಡುವ ವರವಿದ್ದ ಕೆಲವರೇ ವಿಶೇಷ ಸಂದೇಶವನ್ನು ಸಭೆಯಲ್ಲಿ ಹೇಳಲು, ಕರೆಯಲ್ಪಟ್ಟವರಾಗಿದ್ದಾರೆ. ಆದಾಗ್ಯೂ ಈ ಕ್ರೈಸ್ತರು, ಯಾವುದೇ ತರ್ಜುಮೆ ಇಲ್ಲದೆಯೆ ಎಲ್ಲರೂ ದೇವರನ್ನು ಕೊಂಡಾಡಬಹುದು ಮತ್ತು ಪ್ರಾರ್ಥಿಸಬಹುದು (1ನೇ ಕೊರಿಂಥ 14:2, 28) ಹಾಗೂ ಈ ಸ್ವಂತ ವರದಾನದ ಮೂಲಕ ಆಶೀರ್ವಾದ ಪಡೆಯಬಹುದೆಂದು ಹೇಳುತ್ತಾರೆ.

ಇನ್ನಿತರ ಕ್ರೈಸ್ತರು ಮೂರನೇ ವಿಧವಾದ ಬೇರೊಂದು ಅಭಿಪ್ರಾಯ ಹೊಂದಿದವರಾಗಿದ್ದು, ಪವಿತ್ರಾತ್ಮನಿಂದ ಸ್ನಾನದೀಕ್ಷೆಯಾಗುವಾಗ ವೈಯಕ್ತಿಕವಾಗಿ ಈ ರೀತಿ ಮಾತನಾಡುವುದನ್ನು ದೇವರು ಕೊಟ್ಟಿದ್ದರೂ ಸಹ ಎಲ್ಲರೂ ಇದನ್ನು ಉಪಯೋಗಕ್ಕೆ ತರುವುದಿಲ್ಲ. ಕೆಲವರಿಗೆ, ಈ ವರದ ವಿಷಯವು ಗೊತ್ತೇ ಇಲ್ಲ. ಇನ್ನೂ ಕೆಲವರು ಬೇರೆ ಕಾರಣಗಳಿಂದ, ಉಪಯೋಗಿಸುವುದಿಲ್ಲ. ಈ ಕ್ರೈಸ್ತರು, ಅನ್ಯಬಾಷೆಯು ಪವಿತ್ರಾತ್ಮನ ದೀಕ್ಷಾಸ್ನಾನಕ್ಕೆ ಇದೊಂದೇ ಗುರುತೆನಲ್ಲ. ಪವಿತ್ರಾತ್ಮನ ಯಾವ ವರವಾದರೂ ಸರಿಯೇ ಇದು ಪವಿತ್ರಾತ್ಮನ ಶಕ್ತಿಯು ನಮ್ಮ ಜೀವನದಲ್ಲಿ ಬಂದಿದೆಯೆಂಬುದಕ್ಕೆ ಗುರುತಾಗಿರುತ್ತದೆ. ಈ ಮೂರನೆಯ ಅಬಿಪ್ರಾಯ ವು, ಮೊದಲನೇ ವಾದಕ್ಕೆ ಪೂರಕವಾಗಿದ್ದು ಎಲ್ಲರೂ, ವಿವಿಧ ಭಾಷೆಗಳಲ್ಲಿ ಮಾತನಾಡುವ ವರವನ್ನು ಉಪಯೋಗಿಸಲೇ ಬೇಕೆಂದೇನಿಲ್ಲ. ಆದರೆ ಎರಡನೇ ಅಬಿಪ್ರಾಯವು, ದೇವರು ಪ್ರತಿಯೊಬ್ಬರೂ ಆತನನ್ನು ಆರಾಧಿಸಿ ಕೊಂಡಾಡಲೂ ಹಾಗೂ ಪ್ರಾರ್ಥಿಸಲು ಮಾತನಾಡುವ ವರವನ್ನು ಉಪಯೋಗಿಸಬಹುದು ಎಂಬುದಕ್ಕೆ ಸಮ್ಮತಿಸುತ್ತದೆ.

## ಸಾರಾಂಶ

ಆದಾಗ್ಯು, ನಾವು ಪವಿತ್ರಾತ್ಮನ ಶಕ್ತಿ ಮತ್ತು ವರಗಳ ವಿಷಯವಾಗಿ ಆಲೋಚಿಸುವಾಗ ನಾವು ನೆನಪಿನಲ್ಲಿಡತಕ್ಕದ್ದು (1) ಸರ್ವರ ಒಳಿತಿಗಾಗಿ ಮತ್ತು ಬೇರೆಯವರಿಗೆ ಸಾಕ್ಷಿಯಾಗಿರಲು ಪವಿತ್ರಾತ್ಮನ ಶಕ್ತಿ ಮತ್ತು ವರಗಳು ಕೊಡಲ್ಪಟ್ಟಿವೆ. (1ನೇ ಕೊರಿಂಥ 12:7, 14:3, ಅ.ಕೃ. 1:8). (2) ಅವುಗಳನ್ನು ಮಿತವಾಗಿಯೂ ಮತ್ತು ಪ್ರೀತಿಯಿಂದಲೂ ಉಪಯೋಗಿಸಬೇಕು ಇಲ್ಲವಾದಲ್ಲಿ ಇವು ಪ್ರಯೋಜನಕ್ಕೆ ಬಾರದವುಗಳಾಗುತ್ತವೆ 1ನೇ ಕೊರಿಂಥ 13:1-3, 14-40. (3) ಇವುಗಳನ್ನು ಹೊಂದಲು ಅಪೇಕ್ಷಿಸಿರಿ ಮತ್ತು ಇವುಗಳನ್ನು ಯಾರು ಬೇಡವೆನ್ನಬಾರದು (1ನೇ ಕೊರಿಂಥ 12:31, 14:1, 39).(4) ಇವುಗಳು ನಮ್ಮನ್ನು ವಿಭಾಗಿಸಬಾರದು (1ನೇ ಕೊರಂಥ 12:4-6).

ಆತ್ಮನ ವರಗಳ ವಿಷಯವಾಗಿ ನಾವು ಬೇರೆ ಬೇರೆ ನಂಬಿಕಯನ್ನು ಹೊಂದಿಕೊಂಡಿದ್ದವರಾಗಿದ್ದರೂ ಸಹ ನಾವು ಕ್ರಿಸ್ತನಲ್ಲಿ ಸಹೋದರ, ಸಹೋದರಿಯರಾಗಿದ್ದೇವೆ. ನಾವು ಕ್ರಿಸ್ತನಲ್ಲಿ ಒಂದೇ ಆಗಿದ್ದೇವೆ 1ನೇ ಕೊರಿಂಥ 12:13, ಗಲಾತ್ಯ 3:28.

---

[1]ಮತ್ತಾಯ. 3:11 ಮತ್ತು ಲೂಕ. 3:16ರಲ್ಲಿರುವ ಗ್ರೀಕ್ ಪದವು ... ನಿಂದ ಅಥವಾ....ನಲ್ಲಿ ಎಂಬುದಕ್ಕೆ ಒಂದೇ ಅರ್ಥವನ್ನು ಕೊಡುತ್ತದೆ.

[2] ಹೊಸ ಒಡಂಬಡಿಕೆಯು ಮೂಲತಃ ಗ್ರೀಕ್ ಬಾಷೆಯ ಲ್ಲಿ ಬರೆಯ ಲ್ಪಟ್ಟಿದೆ..

[3] ವಿವಿದ ಬಾವಾರ್ಥವನ್ನು ಕೊಡುವ ಇನ್ನೊಂದು ವಚನವು 1ನೇ ಕೊರಿಂಥ 12:13 ರಲ್ಲಿ ಕಾಣ ಬರುತ್ತದೆ. ಈ ವಚನದ ಕುರಿತಾಗಿ ಎರಡು ದೃಷ್ಟಿಕೋನಗಳಿವೆ. ಕೆಲವರು ಈ ವಚನವನ್ನು ಈ ರೀತಿಯಾಗಿ ಓದಬಹುದಾಗಿತ್ತು ಎಂದು ತಿಳಿಯುತ್ತಾರೆ ನಾವೆಲ್ಲರೂ ಒಂದೇ ಆತ್ಮದಲ್ಲಿಯೂ, ಶರೀರದಲ್ಲಿಯೂ ದೀಕ್ಷಾಸ್ನಾನವನ್ನು ಹೊಂದಿದವರಾಗಿದ್ದವೆ. ಒಂದು ವೇಳೆ ಇದು ಸರಿಯಾದದ್ದಾಗಿದ್ದರೆ ಈ ವಚನವು ಪವಿತ್ರಾತ್ಮನಿಂದ ಹೊಂದುವ ದೀಕ್ಷಾಸ್ನಾನಕ್ಕೆ ಸೀಮಿತವಾಗಿದ್ದು ನೀರಿನಿಂದಾದ ದೀಕ್ಷಾಸ್ನಾನವಲ್ಲ. ಆದುದರಿಂದ ಕೆಲವು ಕ್ರೈಸ್ತರು ಎಲ್ಲಾ ವಿಶ್ವಾಸಿಗಳು ಪವಿತ್ರಾತ್ಮನಿಂದ ದೀಕ್ಷಾಸ್ನಾನವನ್ನು ಹೊಂದಿದ್ದಾರೆ ಎಂದು ಭೋದಿಸುತ್ತಾರೆ. ಆದರೆ ಇದು ಪವಿತ್ರಾತ್ಮನಿಂದ ಬಲ ಮತ್ತು ವರವನ್ನು ಪಡೆದಿರುವ ಅನುಬವವಲ್ಲ ಬದಲಾಗಿ ನಾವು ಕ್ರಿಸ್ತನಲ್ಲಿ ವಿಶ್ವಾಸವಿಡುವಾಗ ಆಗುವ' ಅತ್ಮಿಕವಾದ ಹುಟ್ಟುವಿಕೆಗೆ ಈ ಪದವ ಅನ್ವಯವಾಗುತ್ತದೆ.

ಆದಾಗ್ಯೂ ಅನೇಕ ತರ್ಜುಮೆದಾರರು ಈ ವಚನವನ್ನು ಈ ರೀತಿಯಾಗಿ ಓದಿಕೊಳ್ಳಬೇಕಾಗತ್ತೆಂದು ನಂಬುತ್ತಾರೆ. ನಾವೆಲ್ಲರು ಒಂದೇ ಶರೀರಕ್ಕೆ ಮತ್ತು ಒಂದೇ ಆತ್ಮಕ್ಕೆ ಸೇರಿದವರಾಗಿರುವಂತೆ ದೀಕ್ಷಾಸ್ನಾನವನ್ನು ಹೊಂದಿದವರಾಗಿದ್ದೆವೆ.

ಈ ಕಾರಣಕ್ಕಾಗಿಯೇ ಅನೇಕ ಕ್ರೈಸ್ತರು ಈ ವಚನವು ನೀರಿನಿಂದ ಮಾಡಿಸಿಕೊಳ್ಳುವ ದೀಕ್ಷಾಸ್ನಾನಕ್ಕೆ ಮುಖ್ಯವಾಗಿ ಅನ್ವಯವಾಗುತ್ತದೆ ಎಂದು ನಂಬುತ್ತಾರೆ. ಆದುದರಿಂದ ಅನೇಕ ಕ್ರೈಸ್ತರು ನಾವು ಪವಿತ್ರಾತ್ಮನಿಂದ ಹೊಂದುವ ದೀಕ್ಷಾಸ್ನಾನವು ಬರೀ ನಮ್ಮ ಅತ್ಮಿಕವಾದ ಹುಟ್ಟುವಿಕೆಗೆ ಸಂಬಂದ ಮಾತ್ರವಲ್ಲದೆ ಮುಖ್ಯವಾಗಿ ಪವಿತ್ರಾತ್ಮನಿಂದ ಬಲ ಮತ್ತು ವರಗಳನ್ನು ಪಡೆದುಕೊಳ್ಳುವ ಅನುಬವಕ್ಕೆ ಸಂಬಂದಿಸುತ್ತದೆ. ಹೀಗಾಗಿ ಈ ಕ್ರೈಸ್ತರು ಪವಿತ್ರಾತ್ಮನ ಬಲ ಮತ್ತು ವರಗಳು ಈ ದಿನಗಳಲ್ಲಿಯೂ ಕೂಡ ಸಭೆಗೆ ಲಬ್ಯವಾಗುತ್ತವೆ ಎಂದು ಹೇಳುತ್ತಾರೆ.

ಈ ಎರಡು ಅಬಿಪ್ರಾಯಗಳು ಗ್ರೀಕ್ ಬಾಷೆಯ (ಇಂದ ).ಎಂಬ ಈ ಪದವು ಆಂಗ್ಲ ಬಾಷೆಗೆ ತರ್ಜುಮೆಗೊಂಡದ್ದರಿಂದ ಇದಕ್ಕೆ ಎರಡು ಅರ್ಥಗಳು ಬರುವಂತಾಯಿತು.ಸತ್ಯವೇದದಲ್ಲಿ ಕೆಲವು ಬಾಗಗಳಲ್ಲಿ ಸ್ಪಷ್ಟವಾಗಿ ಒಳಗೆ ಎಂಬ ಆಂಗ್ಲ ಪದವು (ಮತ್ತಾಯ.3: 6, 1ನೇ ಕೊರಿಂಥ.10:2, 11:25, ಎಫೆಸ.1:11) ರಲ್ಲಿ ಕಂಡು ಬರುತ್ತದೆ. ಆದರೆಈ ಪದಗಳು, ( ಇಂದ ಅಥವಾ ಮೂಲಕ ). ಕೆಲವು ಕಾರ್ಯಗಳು ಎಂದು ಇನ್ನಿತರ ಬೇರ ಬಾಗಗಳಲ್ಲಿ ಅಂದರೆ (ರೋಮ. 5: 9 1ನೇ ಕೊರಿಂಥ.12:9 ಎಫೆಸ.2:13) ರಲ್ಲಿ ಸ್ಪಷ್ಟವಾಗಿ ಕಂಡು ಬರುತ್ತವೆ.

# ನೀರಿನ ದೀಕ್ಷಾಸ್ನಾನ

## ಪ್ರಾಮುಖ್ಯ ವಚನಗಳು

ಮತ್ತಾಯ 28:19-20 :- ಎಲ್ಲಾ ದೇಶದ ಜನರನ್ನು ಶಿಷ್ಯರನ್ನಾಗಿ ಮಾಡಿರಿ ಅವರಿಗೆ ತಂದೆಯ, ಮಗನ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ..........

ಮಾರ್ಕ 16:16 :- ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು, ರಕ್ಷಣೆ ಹೊಂದುವನು..

ಯೋಹಾನ 3:5 :- ಒಬ್ಬನು ನೀರಿನಿಂದಲೂ, ಆತ್ಮನಿಂದಲೂ ಹುಟ್ಟದೇ ಹೋದರೆ,ಅವನು ದೇವರ ರಾಜ್ಯಕ್ಕೆ ಸೇರಲಾರನು.

ಅ.ಕೃ. 2:38 :- ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು, ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ.

ಅ.ಕೃ. 22:16 :- ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು, ನಿನ್ನ ಪಾಪಗಳನ್ನು ತೊಳೆದುಕೋ.

ರೋಮಾ. 6:3-4 :- ಕ್ರಿಸ್ತ ಯೇಸುವಿನಲ್ಲಿ ಸೇರುವುದಕ್ಕೆ.............................ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ, ಆತನ ಮರಣದಲ್ಲಿ ಪಾಲುಗಾರರಾಗಿ, ಆತನೊಂದಿಗೆ ಹೂಣಲ್ಪಟ್ಟೆವು.

ಗಲಾತ್ಯ 3:27 :- ಕ್ರಿಸ್ತಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿ ಕೊಂಡಿರುವ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ.

ಎಫೆಸ 25:26 :- ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮ ನಿಮ್ಮ ಹೆಂಡತಿಯನ್ನು ಪ್ರೀತಿಸಿರಿ. ಅದನ್ನು ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ, ಜಲಸ್ನಾನವನ್ನು ಮಾಡಿಸಿ ಶುದ್ಧ ಮಾಡಿದನು.

ತೀತನು 3:5 :- ಆತನ ಕರುಣೆಯಲ್ಲಿಯೇ, ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ, ಪವಿತ್ರಾತ್ಮನು ನಮ್ಮಲ್ಲಿ ನೂತನ ಸ್ವಭಾವವನ್ನು ಉಂಟುಮಾಡುವುದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು.

ಇಬ್ರಿಯಾ 10:22 :- ಆದಕಾರಣ ನೀನು ಅಪರಾಧಿಯೆಂದು ನಮ್ಮ ಮನಸ್ಸು ನಮಗೆ ಸಾಕ್ಷಿ ಹೇಳಿದಂತೆ ನಾವು ಹೃದಯವನ್ನು ಪ್ರೋಕ್ಷಿಸಿಕೊಂಡು, ದೇಹವನ್ನು ತಿಳಿನೀರಿನಿಂದ ತೊಳೆದುಕೊಂಡು.......ದೇವರ ಬಳಿಗೆ ಬರೋಣ.

1ನೇ ಪೇತ್ರ 3: 20-21 :- ಈ ನೀರು (ಯೋಹಾನ ಕಾಲದಲ್ಲಿ ಪ್ರವಾಹದ ನೀರು) ಇದಕ್ಕೆ ಅನುರೂಪವಾಗಿ ದೀಕ್ಷಾಸ್ನಾನವು ಯೇಸುಕ್ರಿಸ್ತನ ಪುನರುತ್ಥಾನದ ಮೂಲಕ ನಮ್ಮನ್ನು ರಕ್ಷಿಸುತ್ತದೆ.

## ನೀರಿನ ದೀಕ್ಷಾ ಸ್ನಾನವೆಂದರೇನು?

ಮತ್ತಾಯನ ಸುವಾರ್ತೆ 28:19ರಲ್ಲಿ, ನಮ್ಮ ಪ್ರಭುವಾದ ಯೇಸುಕ್ರಿಸ್ತನು ಆಜ್ಞಾಪಿಸಿದ ಮೇರೆಗೆತಂದೆ, ಮಗ ಮತ್ತುಪವಿತ್ರಾತ್ಮ ಹೆಸರಿನಲ್ಲಿ ಒಬ್ಬನ ತಲೆಯ ಮೇಲೆ ನೀರು ಚಿಮುಕಿಸುವ ಅಥವಾ ಸುರಿಯುವ ಅಥವಾ ನೀರಿನಲ್ಲಿ ಮುಳುಗಿಸುವ ಕ್ರಿಯೆಯೂ ದೀಕ್ಷಾಸ್ನಾನವಾಗಿದೆ.

ಹಳೆ ಒಡಂಬಡಿಕೆಯ ಕಾಲದಲ್ಲಿ ಯಹೂದ್ಯರು ದೀಕ್ಷಾಸ್ನಾನವನ್ನು ಹೋಲುವ ಒಂದು ಸಂಸ್ಕಾರವನ್ನು ಮಾಡುತ್ತಿದ್ದರು. ಅದು ಗಂಡು ಮಗುವಿನ ಎಂಟನೇ ದಿನದಲ್ಲಿ ಆತನ ಶಿಶ್ನದ ಮುಂದೊಗಲನ್ನು ಕತ್ತರಿಸುವ ಕಾರ್ಯವಾಗಿತ್ತು. ಆದಿಕಾಂಡ 17:10-14. ಕ್ರಿಸ್ತನಲ್ಲಿ ನಂಬಿಕೆಯಿಟ್ಟಂತಹ ವಿಶ್ವಾಸಿಗಳು, ಈಗ ದೈಹಿಕವಾಗಿ ಸುನ್ನತಿ ಮಾಡಿಸಿಕೊಳ್ಳುವ ಅಗತ್ಯವಿಲ್ಲವೆಂದು ಪೌಲನು ಹೇಳುತ್ತಾನೆ. ಅ.ಕೃ. 15:1-29, ಗಲಾತ್ಯ 5:2.

ಕೊಲಸ್ಸೆ 2:11, 12ರಲ್ಲಿರುವಂತೆ, ಸುನ್ನತಿಗೆ ಬದಲಾಗಿ ನೀರಿನಿಂದ ದೀಕ್ಷಾಸ್ನಾನದ ಏರ್ಪಾಡಾಯಿತು ಮತ್ತು ಕ್ರಿಸ್ತನು ತಾನೇ ನಮಗೆ ಆತ್ಮೀಯ ಸುನ್ನತಿ ಮಾಡಿ, ಹಳೇ ಪಾಪದ ಸ್ವಭಾವವನ್ನು ತೆಗೆದು ಹಾಕುತ್ತಾನೆ ಮತ್ತು ಬಿಸಾಡುತ್ತಾನೆ ಎಂದು ಬಾಗಶಃ ಎಲ್ಲಾ ಸತ್ಯವೇದ ಪಂಡಿತರು ನಂಬುತ್ತಾರೆ.

ಸ್ನಾನಿಕನಾದ ಯೋಹಾನನು, **ಪಶ್ಚಾತ್ತಾಫ ದ, ಪಾಪಗಳ ಪರಿಹಾರಕ್ಕಾಗಿ**, ದೀಕ್ಷಾಸ್ನಾನವನ್ನು ಕಾರ್ಯಗತಗೊಳಿಸಿದನು (ಮಾರ್ಕ 1:4). ಆದರೆ ಇದು ಕ್ರೈಸ್ತದೀಕ್ಷಾಸ್ನಾನವಾಗಿರಲಿಲ್ಲ. ಕ್ರಿಸ್ತನ ಮರಣ ಮತ್ತು ಪುನರುತ್ಥಾನದ ನಂತರ ಯೋಹಾನನ ದೀಕ್ಷಾಸ್ನಾನವು ಕ್ರೈಸ್ತರಿಗೆ ಸಾಕಾಗಬಹುದೆಂದು ಎಣಿಸಲಾಗಲಿಲ್ಲ (ಅ.ಕೃ. 18:25) ಮತ್ತು ಎಫೆಸದವರು ಈ ಮೊದಲು ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದವರೂ ಸಹ ಮತ್ತೊಮ್ಮೆ ಪ್ರಭುವಾದ **ಯೇಸುವಿನ ಹೆಸರಿನಲ್ಲಿ** ದೀಕ್ಷಾಸ್ನಾನ ಮಾಡಿಸಿಕೊಂಡರು ಅ.ಕೃ. 19:1-7. ಆದಾಗ್ಯೂ ಒಂದೇ ಒಂದು ಕ್ರೈಸ್ತ ದೀಕ್ಷಾಸ್ನಾನವಿದೆ. (ಎಫೆಸ 4:5).

ಯೇಸುವು ತಾನೇ ಯೋರ್ದಾನ್ ಹೊಳೆಯಲ್ಲಿ ಸ್ನಾನಿಕನಾದ ಯೋಹಾನನಿಂದ ಸ್ನಾನದೀಕ್ಷೆ ಹೊಂದಿದನು. ಮತ್ತಾಯ 3:13-17. ಯಾವುದೇ ಪಾಪ ಮಾಡದಿದ್ದರೂ, ಅದಕ್ಕಾಗಿ ಯಾವ ಪಶ್ಚಾತ್ತಾಪ ಅಗತ್ಯ ಇಲ್ಲದಿದ್ದರೂ,ಎಲ್ಲಾ **ನೀತಿಯನ್ನು ನೇರವೇರಿಸುವುದಕ್ಕಾಗಿ** ಯೇಸುವು ದೀಕ್ಷಾ ಸ್ನಾನವನ್ನು ತೆಗೆದುಕೊಂಡನು, ಮತ್ತಾಯ 3:15. ಅಹುದು, ಆತನ ನೀರಿನಿಂದ ದೀಕ್ಷಾಸ್ನಾನ ನಂತರ ಆತನ ಮೇಲೆ ಪವಿತ್ರಾತ್ಮನು ಇಳಿದು ಬಂದನು. ಅದರಿಂದ ಆತನ ಸೇವೆಯು ಮತ್ತು ಪೌರೋಹಿತಕ್ಕೆ ಸಾಧಕವಾಯಿತು. (ಮಾರ್ಕ 1:10).

ಯೇಸುವು ತನ್ನ ಶಿಲುಬೆಯ ಮರಣವನ್ನು ಒಂದು ಸ್ನಾನದೀಕ್ಷೆಯೆಂದೇ ವರ್ಣಿಸುತ್ತಾನೆ (ಲೂಕ 12:50). ಯೇಸುವಿನ ಮರಣ ಮತ್ತು ಪುನರುತ್ಥಾನದ ದೀಕ್ಷಾಸ್ನಾನವೇ, ನಮ್ಮ ದೀಕ್ಷಾಸ್ನಾನಕ್ಕೆ ತಳಹದಿಯಾಗಿದ್ದು, ಆ ಕಾರಣದಿಂದಲೇ ನಾವು ದೀಕ್ಷಾಸ್ನಾನಕ್ಕೆ ಅರ್ಹರಾಗಿದ್ದೇವೆ. ರೋಮಾ. 6:3-4, ಕೊಲಸ್ಸೆ 2:12, 1ನೇ ಪೇತ್ರ 3:21.

ಪ್ರಾರಂಭದಿಂದಲೂ ಸಭೆಯು ಯೇಸುವಿನ ಆಜ್ಞೆಯನ್ನು ಪಾಲಿಸುತ್ತಿತ್ತು ಮತ್ತು ಹೊಸ ವಿಶ್ವಾಸಿಗಳಿಗೆ ದೀಕ್ಷಾಸ್ನಾನ ಕೊಟ್ಟಿತ್ತು. ಕ್ರೈಸ್ತ ದೀಕ್ಷಾಸ್ನಾನದ ವಿಷಯದಲ್ಲಿ ಗಮನಿಸತಕ್ಕ ಉದಾಹರಣೆಗಳು ನಮಗೆ ಹೊಸ ಒಡಂಬಡಿಕೆಯ, ಅ.ಕೃ. 2:41, 8:21, 8:38, 10:48, 16:15, 16:33, 19:1-5 ರಲ್ಲಿ ಕಾಣಸಿಗುತ್ತವೆ.ಯೇಸುಕ್ರಿಸ್ತನಲ್ಲಿ ನಂಬಿಕೆಯನ್ನು ವ್ಯಕ್ತಪಡಿಸಿದ ಕೂಡಲೇ, ನೀರಿನಿಂದ ದೀಕ್ಷಾಸ್ನಾನವಾದದ್ದನ್ನು ಈ ಅನೇಕ ವಚನಗಳಲ್ಲಿ ನಾವು ನೋಡಬಹುದು. ಅನೇಕರು ತಮ್ಮ ಮನೆಯವರೆಲ್ಲರ ಸಹಿತವಾಗಿ ದೀಕ್ಷಾಸ್ನಾನ ಹೊಂದಿದರು. (ಅ.ಕೃ. 10:48, 16:31-33).

ನೀರಿನ ದೀಕ್ಷಾಸ್ನಾನವು ಕ್ರೈಸ್ತರಿಗೆ ಮಾತ್ರ ಅನ್ವಯಿಸುತ್ತಿರಲಿಲ್ಲ. ಕ್ರಿಸ್ತನು ಬರುವುದಕ್ಕಿಂತ ಮೊದಲೇ ಯಹೂದ್ಯರಲ್ಲದವರು, ಯಹೂದ್ಯರಾಗಿ ಮತಾಂತರಗೊಂಡಾಗ ಅವರು ನೀರಿನಿಂದ ದೀಕ್ಷಾಸ್ನಾನ ಹೊಂದುತ್ತಿದ್ದರು ಮತ್ತುಕ್ರಿಸ್ತನ ಕಾಲದಲ್ಲಿ ಕೆಲವು ಗ್ರೀಕ್ ಮತಾವಲಂಬಿಗಳು ಧಾರ್ಮಿಕ ಕ್ರಿಯೆಯಂತೆ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕಾಗಿತ್ತು. ಕೆಲವು ಸಾರಿ ನೀರಿಗೆ ಬದಲಾಗಿ ತಲೆ ಮೇಲೆ ರಕ್ತವನ್ನು ಸುರಿಸುವುದರ ಮೂಲಕವೂ ಇದನ್ನು ಮಾಡಲಾಗುತ್ತಿತ್ತು.

## ನಾವು ಯಾಕೆ ನೀರಿನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು?

ಯೇಸುವು ಹೊಸ ವಿಶ್ವಾಸಿಗಳಿಗೆ ದೀಕ್ಷಾಸ್ನಾನ ಮಾಡಿಸಬೇಕೆಂದು ಮತ್ತಾಯ 28:19ರಲ್ಲಿ ಆಜ್ಞೆಯನ್ನು ಮಾಡಿದನು. ಎಲ್ಲಾ ಜನಾಂಗ ಮತ್ತು ಎಲ್ಲಾ ಸಂಸ್ಕೃತಿಗಳಲ್ಲೂ, ನೀರಿನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದು ಮಾನಸಾಂತರ ಹೊಂದಿದ್ದಕ್ಕೆ ಸಾಕ್ಷಿಯಾಗಿರುವ ಕ್ರಿಯೆಯಾಗಿದ್ದು ಆತನ ಹಳೇ ಯ ನಂಬಿಕೆಯಿಂದ, ಕ್ರೈಸ್ತ ನಂಬಿಕೆಗೆ ಸೇರುವ ಸೂಚಕವಾಗಿದೆ.

ಇದು ರಕ್ಷಣೆಗೆ ಅವಶ್ಯಕವಾದ ಪ್ರಾರಂಭದ ಹೆಜ್ಜೆಯಾಗಿದೆ (ಅ.ಕೃ. 2:38). ಯೇಸುವು ರಕ್ಷಣೆಯ ವಾಗ್ದಾನಕ್ಕೂ ನೀರಿನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದಕ್ಕೂ ಸಂಬಂಧ ಕಲ್ಪಿಸಿದ್ದಾನೆ. (ಮಾರ್ಕ 16:16) ಸಭಾ ಚರಿತ್ರೆಯಲ್ಲಿ ದೀಕ್ಷಾಸ್ನಾನಕ್ಕೂ ರಕ್ಷಣೆಗೂ ಇರುವ ಸಂಬಂಧದ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿವೆ.

ದೀಕ್ಷಾಸ್ನಾನವೆಂಬುದು ಕೃಪೆಯ ಸಾಧನವಾಗಿದ್ದು ದೇವರ ಕೃಪಾತೀಶಯವು ದೊರಕುವದಕ್ಕೆ ಇದೊಂದು ಮಾರ್ಗವಾಗಿದೆ. ದೇವರ ಕೃಪೆಯ ಸಾಧನಕ್ಕೆ, ದೇವರ ವಾಕ್ಯವೇ ಅತಿ ಮುಖ್ಯವಾದದ್ದು ಎಂದು ಅನೇಕ ಕ್ರೈಸ್ತರು ವಿಶ್ವಾಸಿಸುತ್ತಾರೆ. (ರೋಮಾ. 10:17, 1ನೇ ಪೇತ್ರ 1:23). ಈ ಕ್ರೈಸ್ತರು ದೇವರ ಕೃಪೆಯು ನಮಗೆ ನೀರಿನ ದೀಕ್ಷಾಸ್ನಾನದ ಮೂಲಕವು ಸಹ ಬರುತ್ತದೆಂದು ನಂಬುತ್ತಾರೆ. ನೀರಿನಿಂದ ದೀಕ್ಷಸ್ನಾನ ಮಾಡಿಸುವಲ್ಲಿ,ಬರೆದಿರುವಂತಹ ದೇವರ ವಾಕ್ಯವೇ ಮುಖ್ಯವಾಗಿರುವಂತದ್ದು. (ಎಫೆಸ 5:26).

ನೀರಿನ ದೀಕ್ಷಾಸ್ನಾನವು ಹೊರಗೆ ತೋರುವಂತಹ ಮತ್ತು ಕಾಣುವಂತಹ ಒಂದು ಕ್ರಿಯೆಯಾಗಿರುವಂತದ್ದಾಗಿದ್ದು ಇದು ಆಂತರಿಕವಾದ ಮತ್ತು ಆತ್ಮೀಯ ವರವಾಗಿದ್ದು ಇದು ಕ್ರಿಸ್ತನ ಮರಣ ಮತ್ತು ಪುನರುತ್ಥಾನ, ಪಾಪಗಳ ಪರಿಹಾರ ಮತ್ತು ಆತ್ಮೀಯ ರೀತಿಯಲ್ಲಿ ಸಭಾ ಸದಸ್ಯತ್ವವನ್ನು ಸೂಚಿಸುವಂತಾದ್ದಾಗಿದೆ ಎಂದು ಈ ಕ್ರೈಸ್ತರು ಮಾತನಾಡಿಕೊಳ್ಳುತ್ತಾರೆ.

ಈ ಕ್ರೈಸ್ತರು ಇನ್ನು ವಿಶ್ವಾಸಿಸುವುದೇನೆಂದರೆ, ನಂಬಿಕೆಯ ಮೂಲಕ ದೀಕ್ಷಾಸ್ನಾನ ಮಾಡಿಸಿಕೊಂಡಾಗ ನಮ್ಮ ಜೀವನವು ನಿಜವಾಗಿ ಹೂಣಿಟ್ಟದ್ದಾಗಿಯೂ ಮತ್ತು ಕ್ರಿಸ್ತನೊಡನೆ ಪುನರುತ್ಥಾನವಾದದ್ದು ಆಗುತ್ತದೆ. ರೋಮಾ. 6:3-4, ಕೊಲಸ್ಸೆ 2:12, ಮತ್ತು ಕ್ರಿಸ್ತನಿಂದ ಧರಿಸಲ್ಪಟ್ಟವರಾಗುತ್ತೇವೆ (ಗಲಾತ್ಯ 3:27). ಅ.ಕೃ. 2:38ರಲ್ಲಿ ಪೇತ್ರನು, ನಾವೆಲ್ಲರೂ

**ನಮ್ಮ ಪಾಪಗಳ ಕ್ಷಮೆಗಾಗಿ**, ನೀರಿನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಕರೆ ಕೊಟ್ಟ ಮೇರೆಗೆ, ನಾವು ಪಾಪಕ್ಕೆ ಒಂದು ವಿಶೇಷವಾದ ರೀತಿಯಲ್ಲಿ ಕ್ಷಮೆಯನ್ನು ಪಡೆಯುತ್ತೇವೆ. 1ನೇ ಪೇತ್ರ 3:21ರಲ್ಲಿ ಪೇತ್ರನು, ಈಗಲೂ, ನಿನ್ನನ್ನು ರಕ್ಷಿಸಲು ಮಾಡಿಸಿಕೊಳ್ಳಬೇಕಾದ ದೀಕ್ಷಾಸ್ನಾನದ ಬಗ್ಗೆ ಬರೆಯುತ್ತಾನೆ. ಇದು **ಕ್ರಿಸ್ತನ ಪುನರುತ್ಥಾನದ ಮೂಲಕ ರಕ್ಷಣೆ ಕೊಡುತ್ತದೆ.** ಪೇತ್ರನು ಹೇಳುವುದು, ನೀರಿನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದು, ಶರೀರದ ಕಲ್ಮಶಗಳನ್ನು ತೆಗೆದು ಹಾಕುವುದಕ್ಕಲ್ಲ. ಆದರೆ ಇದು ಪ್ರತ್ಯಕ್ಷವಾಗಿ ಆತ್ಮೀಕವಾಗಿ ಶುದ್ಧಿಕರಿಸಿಕೊಳ್ಳುವಂತದ್ದಾಗಿದ್ದು ಇದರ ಪರಿಣಾಮವೇ **ಒಳ್ಳೆಯ ಮನಸಾಕ್ಷಿ.**

ಆದುದರಿಂದ ನೀರಿನಿಂದ ದೀಕ್ಷಾ ಸ್ನಾನ ಹೊಂದಿದಾಗ, ನಮ್ಮ ಪಾಪಗಳು ನಿಜವಾಗಿಯೂ ತೊಳೆಯಲ್ಪಡುತ್ತವೆಯೆಂದು ಮತ್ತು ನಮ್ಮ ಚಿತ್ತವು ನಿಜವಾಗಿ ಸ್ವಚ್ಛಗೊಳ್ಳುತ್ತದೆ. ಅ.ಕೃ. 22:16, ಎಫೆಸ 5:26 ತೀತ 3:5, ಇಬ್ರಿಯಾ 10:22 ಎಂದು ಹೇಳುತ್ತಾರೆ. ಇವರ ಅಭಿಪ್ರಾಯದ ಪ್ರಕಾರ, ದೀಕ್ಷಾಸ್ನಾನ ಬಂದು ಆತ್ಮೀಕವಾದಂತ ಸುನ್ನತಿಯಾಗಿದ್ದು, **ಪಾಪಯವಾದ ನಮ್ಮ ಸ್ವಭಾವವನ್ನು ತೆಗೆದುಹಾಕುವುದೇ** ಆಗಿದೆ. (ಕೊಲೊಸ್ಸೆ 2:11-12). ಯೇಸು ಹೀಗೆ ಹೇಳಿದ್ದಾನೆ **ಒಬ್ಬನು ನೀರಿನಿಂದಲೂ ಆತ್ಮನಿಂದ ಹೊಸದಾಗಿ ಹುಟ್ಟದಿದ್ದರೆ, ಆತನು ಪರಲೋಕ ರಾಜ್ಯಕ್ಕೆ ಸೇರಲಾರನು** (ಯೋಹಾನ 3:5), ವಚನದಲ್ಲಿ ಕೊಟ್ಟಿರುವ ನೀರು, ದೀಕ್ಷಾಸ್ನಾನಕ್ಕೆ ಹೋಲಿಕೆಯಾಗಿದೆ ಎಂದು ಈ ಕ್ರೈಸ್ತರು ತಿಳಿಯುತ್ತಾರೆ. ಬರಿ ನೀರಿನಿಂದ ಯಾವ ಪರಿಣಾಮವಾಗುವುದಲ್ಲ ಆದರೆ ದೀಕ್ಷಾಸ್ನಾನದ ನೀರು, ದೇವರು ಆತನ ವಾಕ್ಯದ ಮೂಲಕ ಕೊಟ್ಟ ಆಜ್ಞೆಯನ್ನು, ವಾಗ್ದಾನವನ್ನು ಸೂಚಿಸಲು ಉಪಯೋಗಿಸಲಾಗಿದೆ ಮಾರ್ಕ. 16:16ಎಫೆಸ 5:13 ಮತ್ತು ಈ ಕಾರಣದಿಂದಲೇ ಇದು ಕಾರ್ಯಪ್ರವೃತ್ತವಾಗುತ್ತದೆ. ದೀಕ್ಷಾಸ್ನಾನದಲ್ಲಿ[1] ದೇವರು ತನ್ನ ಕೃಪೆಯನ್ನು ಕೊಡಲು ಮೂಂದಾಗುತ್ತಾನೆ. ಆದರೆ ಈ ಕೃಪೆಯನ್ನು ಹೊಂದಲು ನಂಬಿಕೆಯು ಬೇಕು. ದೇವರ ವಾಗ್ದಾನದ ವಾಕ್ಯದ ಮೇಲೆ ನಂಬಿಕೆಯಿಲ್ಲದಿದ್ದರೆ ನಮಗೆ ಯಾವ ಪ್ರಯೋಜನವಿಲ್ಲ. ನೀರಿನಿಂದಾದ ದೀಕ್ಷಾಸ್ನಾನವು ದೇವರ[2] ವಾಗ್ದಾನದ ವಾಕ್ಯಗಳ ಮೇಲೆ ನಾವು ಇಟ್ಟಿರುವ ನಮ್ಮ ನಂಬಿಕೆಯನ್ನು ಬಲಪಡಿಸುತ್ತದೆ.

ಕ್ರಿಸ್ತನಲ್ಲಿ (ಯೋಹಾನ.1:12, 3:16, ರೋಮ.10:9-10) ಅಥವಾ ದೇವರ ವಾಕ್ಯದಲ್ಲಿ (ರೋಮ.1:16, 10:17, 1 ಪೇತ್ರ1:23) ಇಡುವ ನಂಬಿಕಯ ಮೂಲಕವಾಗಿ ಮಾತ್ರ ದೇವರ ಆಶೀರ್ವಾದವನ್ನು ಹೊಂದಲು ಸಾದ್ಯಾ ಎಂದು ಸತ್ಯವೇದಲ್ಲಿ ಅನೇಕ ಕಡೆ ತಿಳಿಸಲ್ಪಟ್ಟಿರುವುದರಿಂದ ನೀರಿನ ದೀಕ್ಷಾಸ್ನನದಲ್ಲಿ ದೇವರ ಇಶೇಷವಾದ ಕೃಪೆಯುಂಟೆಂಬುದನ್ನು ಇನ್ನು ಅನೇಕ ಕ್ರೈಸ್ತರು ನಂಬುವುದಿಲ್ಲ. ದೇವರ ವಾಕ್ಯವನ್ನು ಕೇಳುವುದು ಮತ್ತು ಕ್ರಿಸ್ತನಲ್ಲಿ ನಂಬಿಕೆ ಇಡುವುದು,ಇವುಗಳೇ ರಕ್ಷಣೆಗೆ ಅಗತ್ಯವಾದವುಗಳಾಗಿದ್ದು, ನಾವು ನಂಬಿದಾಗ ನಮ್ಮಲ್ಲಿ ಏನೇಲ್ಲಾ ಆಗುತ್ತದೆ ಎಂಬುದಕ್ಕೆ ನೀರಿನ ದಿಕ್ಷಾಸ್ನಾವು ಬರೇ ಒಂದು ಗುರುತು ಅಥವಾ ತೋರಿಕೆಯಾಗಿದೆ ಎಂದು ಈ ಕ್ರೈಸ್ತರು ನಂಬುತ್ತಾರೆ.ಇವರ ಅಭಿಪ್ರಾಯದಂತೆ, ನೀರಿನ ದೀಕ್ಷಾಸ್ನಾನವು ನೀಜವಾಗಿ ನಮ್ಮನ್ನು ಶುದ್ದಗೋಳಿಸದು ಮತ್ತು ವಿಷೇಶ ರೀತಿಯಲ್ಲಿ ಪಾಪ ಪರಿಹಾರ ದೊರಕಿಸಿಕೊಡದು.ಇದು, ನಾವು ಕ್ರಿಸ್ತನೊಡನೆ ಸಾಯುವುದಕ್ಕಾಗಿ,ಆತನನ್ನು ಧರಿಸುವುದಕ್ಕಾಗಿ,ಮತ್ತು ಆತನಿಂದ ಸುನ್ನತಿಯ ಚಿನ್ನೆಃ ಆಗಿದೆ. ಇದು ನಮ್ಮ ನಂಬಿಕೆಯನ್ನು ತೋರಿಸುವ ಹೊರಗಿನ ಗುರುತಾಗಿದೆ (ರೋಮ. 6:3-5, ಗಲಾತ್ಯ. 3:27, 1 ಕೋಲೊಸ್ಸೆ.2:11-12).ಕೇಲವರು, ಯೋಹಾನ. 3:5ರಲ್ಲಿಉಲ್ಲೆಖಿಸಿರುವ ನೀರಿನಿಂದ ಹುಟ್ಟುವುದು ಎಂಬುವುದು ನಮ್ಮ ಶರೀರಿಕ ಜನನ, ಎಂದು ಅರ್ಥೈಸುತ್ತಾರೆ. ಮತ್ತುಇನ್ನಿತರರು ನೀರು ದೇವರ ವಾಕ್ಯವನ್ನು ಸೂಚಿಸುತ್ತದೆ ಎಂದು ನಂಬುತ್ತಾರೆ.

ಇನ್ನು ಕೆಲವರು, ನೀರು ದೇವರ ವಾಕ್ಯಕ್ಕೆ ಹೋಲಿಕೆಯಾಗಿದೆ ಎಂದು ನಂಬುತ್ತಾರೆ. ಈ ಕ್ರೈಸ್ತರಲ್ಲಿಯೂ ಕೆಲವರು, ಕ್ರಿಸ್ತನಲ್ಲಿ ಒಬ್ಬನು ಇಟ್ಟಿರುವ ನಂಬಿಕೆಗೆ ನೀರಿನ ದೀಕ್ಷಾಸ್ನಾನವು ಲೋಕಕ್ಕೆ ಸಾಕ್ಷಿಯಾಗಿದೆಯಾದ್ದರಿಂದ ಇದನ್ನು ಪ್ರತ್ಯೇಕವಾಗಿ ಮಾಡದೆ, ಸಾರ್ವಜನಿಕರ ಎದುರಿನಲ್ಲಿ ಬಹಿರಂಗವಾಗಿ ಮಾಡಬೇಕೆಂದು ಹೇಳುತ್ತಾರೆ. ದೇವರು ಮಾಡಿಕೊಂಡ ಈ ಒಡಂಬಡಿಕೆಗೇ ಹಳೇ ಒಡಂಬಡಿಕೆಯಲ್ಲಿನ ಯಹೂದ್ಯರ ಸುನ್ನತಿಯು ಹೇಗೆ ಗುರುತಾಗಿತ್ತೋ ಹಾಗೆಯೇ ದೀಕ್ಷಾಸ್ನಾನವು ಸಹ ದೇವರು ತನ್ನ ಜನರರೊಂದಿಗೆ ಮಾಡಿಕೊಂಡ ಒಡಂಬಡಿಕೆಗೆ ಗುರುತಾಗಿದೆ ಎಂದು ಈ ಕೆಲವು ಕ್ರೈಸ್ತರು ನಂಬುತ್ತಾರೆ. ಕೊಲೊಸ್ಸೆ 2:11-13 ರಲ್ಲಿನ ವಚನಗಳಿಂದ ಇವರು ತಮ್ಮ ಈ ದೃಷ್ಟಿಕೋನವನ್ನು ಸಮರ್ತಿಸಿಕೊಳ್ಳುತ್ತಾರೆ.

ದೀಕ್ಷಾಸ್ನಾನದ ಅರ್ಥದ ಬಗ್ಗೆ ಹೇಳುವುದಾದರೆ, ಕೆಲವು ನಿಜವಾದ ಆತ್ಮೀಕ ಕ್ರೈಸ್ತರು ಒಂದು ನಂಬಿಕೆಯನ್ನು ಇಟ್ಟುಕೊಂಡರೆ, ಇನ್ನು ಕೆಲವರು ಬೇರೆಯದಾಗಿ ತಿಳಿಯುತ್ತಾರೆ. ಎಲ್ಲರೂ, ನಾವು ಸತ್ಯವೇದದ ಉಪದೇಶವನ್ನು ಪಾಲಿಸುತ್ತಿದ್ದೇವೆಂದು ನಂಬುತ್ತಾರೆ. ನಾವು ಯಾವುದೇ ಸಿದ್ಧಾಂತವನ್ನು ಹಿಡಿದುಕೊಂಡಿದ್ದರೂ, ಬೇರೆಯವರನ್ನು ತೀರ್ಪು ಮಾಡಬಾರದು ಮತ್ತು ಅವಹೇಳನ ಮಾಡಬಾರದು.

ಇದಕ್ಕೆ ಸಂಬಂಧವಾಗಿ ದೀಕ್ಷಾಸ್ನಾನದ ಅಗತ್ಯತೆ ಮತ್ತು ಸ್ಥಿರತೆಯ ಬಗ್ಗೆ ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ. ಮೊದಲನೇ ಪ್ರಶ್ನೆ, ಒಬ್ಬನು ದೀಕ್ಷಾಸ್ನಾನ ತೆಗೆದುಕೊಳ್ಳದೇ ಸತ್ತರೆ ಏನಾಗುತ್ತದೆ? ಸತ್ಯವೇದದಲ್ಲಿ ಆದರ ಬಗ್ಗೆ ನಿಜವಾಗಿಯೂ

ಏನೂ ಹೇಳಿಲ್ಲ. ಮನುಷ್ಯನು ರಕ್ಷಣೆ ಹೊಂದಿದ್ದಾನೆಂದೇ ಎಲ್ಲಾ ಕ್ರೈಸ್ತರು ನಂಬುತ್ತಾರೆ. ಮಾರ್ಕ 16:16ರ ಪ್ರಕಾರ, ಅಪನಂಬಿಕೆಯೇ ಮನುಷ್ಯನನ್ನು ತಡೆಯುತ್ತದೇಯೇ ಹೊರತು ದೀಕ್ಷಾಸ್ನಾನವಲ್ಲ. ಮತ್ತು ಶಿಲುಬೆಯ ಮೇಲೆ ಸಾಯುತ್ತಿದ್ದ (ಲೂಕನ ಸುವಾರ್ತೆ 23:10-43ರ ಪ್ರಕಾರ) ಮನುಷ್ಯನಿಗೆ, ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಅವಕಾಶವಿರಲಿಲ್ಲವಾದರು ಅವನಿಗೆ ಪರಲೋಕ ವಾಸದ ವಾಗ್ದಾನವಾಯಿತು. ಆದಾಗ್ಯೂ ಒಬ್ಬ ಮನುಷ್ಯನು, ದೀಕ್ಷಾಸ್ನಾನ ತೆಗೆದುಕೊಳ್ಳಲು ನಿರಾಕರಿಸಿದರೆ, ಅವನು ಅಪಾಯಕರವಾದ ಸ್ಥಿತಿಯಲ್ಲಿರುತ್ತಾನೆಂದು ಸಭೆಯು ಯಾವಾಗಲೂ ವಿಶ್ವಾಸಿಸುತ್ತದೆ. ಆ ಮನುಷ್ಯನಿಗೆ ನಿಜವಾದ ನಂಬಿಕೆಯಿದೆಯೇ? ನಮಗೆ ಗೊತ್ತಿದ್ದೂ, ನಾವು ಕ್ರಿಸ್ತನ ಆಜ್ಞೆ ಯನ್ನು ಪಾಲಿಸದಿದ್ದರೆ, ನಾವು ಪರಲೋಕ ರಾಜ್ಯಕ್ಕೆ ಸೇರುವುದೇ ಇಲ್ಲ. ಮತ್ತಾಯ 7:21.ಆದುದರಿಂದ ಸಭಾ ಹಿರಿಯರು ಒಬ್ಬ ವ್ಯಕ್ತಿಯು ದೀಕ್ಷಾಸ್ನಾನ ಹೊಂದಬೇಕೆಂದು ತೀರ್ಮಾನಿಸಿದಾಗ, ಆತನ ಕೂಡಲೇ ದೊರಕುವ ಅವಕಾಶವನ್ನು ತೆಗೆದುಕೊಂಡು ತಡಮಾಡದೇ ದೀಕ್ಷಾಸ್ನಾನ ಹೊಂದಬೇಕು.

ಎರಡನೇ ಪ್ರಶ್ನೆ ಏನೆಂದರೆ, ದೀಕ್ಷಾಸ್ನಾನ ಹೊಂದಿದ ವಿಶ್ವಾಸಿಯು ದೇವರಿಗೆ ಎದುರು ಬಿದ್ದು,ಪಾಪದಲ್ಲಿಯೇ ತನ್ನ ಜೀವನವನ್ನು ಕಳೆದು, ತದನಂತರ ಪಶ್ಚಾತ್ತಾಪ ಪಟ್ಟು ನಂತರ ಕ್ರಿಸ್ತನ ಕಡೆಗೆ ತಿರುಗಿಕೊಂಡರೆ, ಆತನಿಗೆ ತಿರುಗಿ ದೀಕ್ಷಾಸ್ನಾನದ ಅವಶ್ಯಕತೆ ಇದೆಯೇ? ಇದಕ್ಕೆ ಸಭೆಯು ಯಾವಾಗಲೂ ಇಲ್ಲವೆಂದು ಹೇಳಿದೆ. ನಮಗೆ ಒಂದೇ ಒಂದು ದೀಕ್ಷಾಸ್ನಾನವಿದೆ (ಎಫೆಸ 4:5). ದೇವರು ನಮ್ಮನ್ನು ಆತನ ಮಕ್ಕಳಾಗಿ ಅಂಗೀಕರಿಸಿದ ಮೇಲೆ, ನಾವು ತಿರುಗಿ ಬೀಳಬಹುದು ಮತ್ತು ದೇವರ ಮಕ್ಕಳಿಗೆ ಒದಗುವ ಸಹಾಯದಿಂದ ವಂಚಿತರಾಗಬಹುದು. ಆದರೆ ನಾವು ತದನಂತರ ಪಶ್ಚಾತ್ತಾಪಪಟ್ಟರೆ, ನಾವು ತಿರುಗಿ ದೀಕ್ಷಾಸ್ನಾನ ಹೊಂದಬೇಕಾಗಿಲ್ಲ. ಬರೆ ಕ್ಷಮಿಸಲ್ಪಟ್ಟರೆ ಸಾಕು (ಲೂಕ 15:11-24). ನಾವು ಅಪನಂಬಿಗಸ್ತರಾಗಿದ್ದರೂ ಸಹಾ ದೇವರು ನಂಬಿಗಸ್ತನು,(ರೋಮಾ.3:3, 11:29, 2ನೇ ಕೊರಿಂಥ 1:20).

ಇದಕ್ಕೆ ಸಂಬಂಧಿಸಿದ ಇನ್ನೊಂದು ಪ್ರಶ್ನೆಯಿದೆ. ನಾವು ಒಂದು ಸಭೆಯಲ್ಲಿ ಸೇರಿ ದೀಕ್ಷಾಸ್ನಾನ ಮಾಡಿಸಿಕೊಂಡು ನಾವು ಇನ್ನೊಂದು ಸಭೆಗೆ ಸೇರಲು ಹೋಗುವಾಗ, ಮತ್ತೆ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೇ ? ಇದಕ್ಕೆ ಉತ್ತರ ಇಲ್ಲವೆಂದೇ ಹೇಳಬೇಕು. ಒಂದೇ ಒಂದು ಕ್ರೈಸ್ತ ದೀಕ್ಷಾಸ್ನಾನವಿದೆ (ಎಫೆಸ 4:5). ಒಬ್ಬನು **ವಿಶ್ವಾಸಿ ತಂದೆಯಾದ ದೇವರ, ಮಗನ ಮತ್ತುಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದಿದರೆ,** (ಮತ್ತಾಯ 28:19) ಅವನಿಗೆ ಮತ್ತೊಮ್ಮೆ ದೀಕ್ಷಾಸ್ನಾನದ ಅಗತ್ಯವಿಲ್ಲ.

## ಮಕ್ಕಳ ದೀಕ್ಷಾಸ್ನಾನ

ಮಕ್ಕಳ ದೀಕ್ಷಾಸ್ನಾನದ ಬಗ್ಗೆ ನಾವು ಬೇರೆ ಬೇರೆ ಪದ್ಧತಿಗಳನ್ನು ನಮ್ಮ ಸಭೆಗಳಲ್ಲಿ, ಆಚರಿಸುತ್ತಾ ಬಂದಿದ್ದೇವೆ. ಸಭಾ ಚರಿತ್ರೆಯಲ್ಲಿ ಶಿಶು ದೀಕ್ಷಾಸ್ನಾನದ ಬಗ್ಗೆ ಆದ ಚರ್ಚೆಯ ಪ್ರಥಮ ದಾಖಲೆಯನ್ನು ನೋಡಿದಾಗ,ಇದು ಸುಧಾರಣೆಯುಗ ಅಂದರೆ 1500ರಲ್ಲಿ ಆಗಿದ್ದು ಕಂಡುಬರುತ್ತದೆ. ಇದರಂತೆ ಪ್ರೊಟೆಸ್ಟಾಂಟ್ ಕ್ರೈಸ್ತರುದೊಡ್ಡವರಿಗೆ ಮತ್ತು ಬೆಳೆದ ಮಕ್ಕಳಿಗೆ ಮಾತ್ರ ದೀಕ್ಷಾಸ್ನಾನ ಕೊಡಬೇಕೆಂದು ನಂಬಿದರು. ಈಗಲೂ ಅನೇಕ ಸಭೆಗಳು ಈ ಪದ್ಧತಿಯನ್ನು ಅನುಸರಿಸಿಕೊಂಡು ಬರುತ್ತಿವೆ.. ಸತ್ಯವೇದದಲ್ಲಿ ನಿಖರವಾಗಿ ಮಕ್ಕಳ ದೀಕ್ಷಾಸ್ನಾನದ ಬಗ್ಗೆ ಏನು ಹೇಳಿಲ್ಲ ಎಂದು ಇವರು ಹೇಳುತ್ತಾರೆ. ಯಾರು ಕ್ರಿಸ್ತನ ಬೋಧನೆಯನ್ನು ಅರಿತುಕೊಂಡು ಅಭ್ಯಸಿಸಿದ್ದಾರೋ ಮತ್ತು **ಯೇಸುವು** ನಮ್ಮ ಪ್ರಭು ಎಂದು ಯಾರು ತಮ್ಮ ಬಾಯಿಂದ ಅರಿಕೆ ಮಾಡುತ್ತಾರೋ ಅವರಿಗೆ ಮಾತ್ರ ದೀಕ್ಷಾಸ್ನಾನವಿರುವುದು ಎಂದು ಈ ಕ್ರೈಸ್ತರು ಹೇಳುತ್ತಾರೆ. (ರೋಮಾ. 10:9-10). ಮೊದಲು ಪಶ್ಚಾತ್ತಾಪ, ನಂತರ ದೀಕ್ಷಾಸ್ನಾನ (ಅ.ಕೃ. 2:38). ಇದನ್ನು ವಿಶ್ವಾಸಿಗಳ ದೀಕ್ಷಾಸ್ನಾನವೆಂದು ಕರೆಯುತ್ತಾರೆ (ಅ.ಕೃ. 8:37). ಸಣ್ಣ ಮಕ್ಕಳು ಪಶ್ಚಾತ್ತಾಪ ಪಡುವುದೂ ಇಲ್ಲ. ಮತ್ತು ನಿಜವಾದ ನಂಬಿಕೆಯನ್ನು ಇಟ್ಟಿರುವುದಿಲ್ಲ ಎಂದು ನಂಬುತ್ತಾರೆ. ಆದುದರಿಂದ ಸಣ್ಣ ಮಕ್ಕಳು ದೀಕ್ಷಾಸ್ನಾನಕ್ಕೆ ಅರ್ಹರಲ್ಲ. ಬಹುತೇಕ ಸಭೆಗಳಲ್ಲಿ ದೀಕ್ಷಾಸ್ನಾನ ಹೊಂದುವ ವಿಶ್ವಾಸಿ ಮಕ್ಕಳಿಗೆ ಕನಿಷ್ಠಪಕ್ಷ 10 ಅಥವಾ 12 ವರ್ಷವಯಸ್ಸಾದರೂ ಆಗಿರಬೇಕು. ಕೆಲವು ಸಭೆಗಳಲ್ಲಿ 5 ಅಥವಾ 6 ವರ್ಷದ ಮಕ್ಕಳು ಸ್ಪಷ್ಟವಾಗಿ ತಮ್ಮ ನಂಬಿಕೆಯನ್ನು ಘೋಷಿಸುವುದಾದರೆ ಅಂತಹ ಮಕ್ಕಳಿಗೆ ದೀಕ್ಷಾಸ್ನಾನ ಕೊಟ್ಟಿರುವುದುಂಟು. ಯಾವ ಮಕ್ಕಳಿಗೆ ದೀಕ್ಷಾಸ್ನಾನ ಕೊಡಲು ಆಗುವಿದಲ್ಲವೋ ಅಂತಹ ಮಕ್ಕಳನ್ನು ದೇವರಿಗೆ ಒಪ್ಪಿಸಿಕೊಡುವ ಆಚಾರವನ್ನು ಇಟ್ಟುಕೊಂಡಿದ್ದಾರೆ.

ಆದರೆ ಇನ್ನು ಕೆಲವು ಪ್ರೊಟೆಸ್ಟಾಂಟ್‌ಸಭೆಗಳು ನಂಬಿಗಸ್ತ ತಂದೆ ತಾಯಿಯಂದಿರ ಮಕ್ಕಳಿಗೆ ಅವು ಹುಟ್ಟಿದ ಕೂಡಲೇ ದೀಕ್ಷಾಸ್ನಾನ ಕೊಡುತ್ತಿವೆ. ಈ ಕ್ರೈಸ್ತರು ಹೇಳುವುದೇನೆಂದರೆ ಆದಿ ಸಭೆಯಲ್ಲಿ ಸತ್ಯವೇದದಲ್ಲಿ ಮಕ್ಕಳನ್ನು ದೇವರಿಗೆ ಒಪ್ಪಿಸಿಕೊಡುವ ಆಚರಣೆಯ ಬಗ್ಗೆ ಎಲ್ಲೂ ಬರೆದಿಲ್ಲವೆಂದು ವಾದಿಸುತ್ತಾರೆ. ಕ್ರೈಸ್ತ ತಂದೆತಾಯಿಗಳು ಮಕ್ಕಳಿಗೆ' ದೀಕ್ಷಾಸ್ನಾನ ಕೊಟ್ಟ ಯಾವ ಉದಾಹರಣೆಗಳೂ ಇಲ್ಲವೆಂದೆ ಈ ಕ್ರೈಸ್ತರು ಹೇಳುತ್ತಾರೆ. ಇವರು ಗಮನಕ್ಕೆ ತರುವುದೇನೆಂದರೆ, ಇಡೀ

ಕುಟುಂಬಗಳೇ ದೀಕ್ಷಾಸ್ನಾನ ಹೊಂದಿದರು ಮತ್ತು ಅಂತಹ ಮನೆಗಳಲ್ಲಿ ಮಕ್ಕಳಿರಲಿಲ್ಲವೆಂಬುದು ಅಪರೂಪವಾದ ಸಂಗತಿ. ಅ.ಕೃ. 16:15, 16:33, 1ನೇ ಕೊರಿಂಥ 1:16. ಅವರು ಹಳೇ ಒಡಂಬಡಿಕೆಯಲ್ಲಿ, ಯಹೂದ್ಯರ ಎಲ್ಲಾ ಗಂಡು ಮಕ್ಕಳಿಗೂ ಮತ್ತು ಯಹೂದ್ಯ ಮತಕ್ಕೆ ಸೇರುವ ದೊಡ್ಡವರಿಗೂ, ನೇಮಕವಾದ ಸುನ್ನತಿಗೆ ಈ ದೀಕ್ಷಾಸ್ನಾನದ ಕಾರ್ಯವು ಹೋಲಿಕೆಯಾಗಿದೆ ಎಂದು ನಂಬುತ್ತಾರೆ.ತಂದೆ ತಾಯಿಗಳು ಯೇಸುವಿನ ಬಳಿಗೆ ಹೊಸದಾಗಿ ಹುಟ್ಟಿದ ಹಸುಗೂಸುಗಳನ್ನು ತಂದಾಗ, ಮಕ್ಕಳನ್ನು ನನ್ನ ಹತ್ತಿರಕ್ಕೆ ಬರಗೊಡಿಸಿರಿ, ಅವುಗಳಿಗೆ ಅಡ್ಡಿ ಮಾಡಬೇಡಿರಿ. ದೇವರ ರಾಜ್ಯವು ಇಂತಹವರದೇ ಎಂದು ಯೇಸುವು ಹೇಳಿದನು. ಮಾರ್ಕ 10:13-16, ಲೂಕ 18:16-17. ಆದುದರಿಂದ, ಹೋಗಿರಿ ತಂದೆ, ಮಗ ಮತ್ತು ಪರಿಶುದ್ಧಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿರಿ, ಶಿಷ್ಯರನ್ನಾಗಿ ಮಾಡಿರಿ ಎಂಬ ಕ್ರಿಸ್ತನ ಆಜ್ಞೆಯ ಉಲ್ಲೇಖವು ಮಾನಸಾಂತರಪಟ್ಟ ದೊಡ್ಡವರನ್ನೂ, ಹಸುಗೂಸುಗಳನ್ನು ಮತ್ತು ಮಕ್ಕಳನ್ನು ದೀಕ್ಷಾಸ್ನಾನ ಮಾಡಿಸಿರಿ ಎಂದು ಯೇಸುವು ಹೇಳಿದಂತಾಯಿತು ಎಂದು ಈ ಸಬೇಗಳು ನಂಬುತ್ತವೆ. (ಮತ್ತಾಯ 28:19, ಅ.ಕೃ. 2:39).

ದೀಕ್ಷಾಸ್ನಾನಕಷ್ಟೇ ಈ ಪ್ರಶ್ನೆ ಕೇಂದ್ರೀಕೃತವಾಗಿದೆ. ಹಸುಗೂಸುಗಳ ದೀಕ್ಷಾಸ್ನಾನವು ದೀಕ್ಷಾಸ್ನಾನದ ಅರ್ಥದ ಕಕ್ಷೆಯಲ್ಲಿ ಬರುತ್ತದೆಯೇ? ಯಾವ ಕ್ರೈಸ್ತರು, ದೇವರ ಕೃಪೆಯನ್ನು ಪಡೆಯುವುದಕ್ಕೆ ದೀಕ್ಷಾಸ್ನಾನವೆಂಬುದು ಒಂದು ಸಾದನವೆಂದು ನಂಬುತ್ತಾರೋ, ಅಂತಹವರು ಮಕ್ಕಳ ದೀಕ್ಷಾಸ್ನಾನವನ್ನು ಸಹ ಕಾರ್ಯಗತಗೊಳಿಸುತ್ತಾರೆ. ಕೆಲವವೂಂದು ಮಕ್ಕಳಿಗೂ ಸಹ ನಂಬಿಕೆಯಿರುತ್ತದೆ. ಸಾಮಾನ್ಯವಿಷಯ (ಮಕ್ಕಳು ಮತ್ತು ದೇವಿಕ ರಾಜ್ಯ ನೋಡಿರಿ). ಇನ್ನು ಕೆಲವರು ತಂದೆ ತಾಯಿಗಳ ನಂಬಿಕೆಯೇ ಸಾಕು. (ಯಹೂದ್ಯರು ಮಕ್ಕಳ ಸುನ್ನತಿ ಬಗ್ಗೆ ಹಳೇ ಒಡಂಬಡಿಕೆಯ ಪ್ರಕಾರ ಹೊಂದಿದ ನಂಬಿಕೆ) ಎಂದು ಹೇಳುತ್ತಾರೆ. ಆದಾಗ್ಯೂ,ದೀಕ್ಷಾಸ್ನಾನ ಹೊಂದಿ ಪ್ರೌಢಾವಸ್ಥೆ ತಲುಪಿದ ಯಾವುದೇ ವ್ಯಕ್ತಿಯು ರಕ್ಷಣೆಯನ್ನು ಹೊಂದುವುದಕ್ಕಾಗಿ ಯೇಸುವಿನಲ್ಲಿ ನಂಬಿಕೆಯನ್ನು ಹೊಂದಿರಬೇಕು . ಯಾವ ಸಭೆಗಳು ದೀಕ್ಷಾಸ್ನಾನವು ಒಂದು ಸೂಚಕ ಚಿಹ್ನೆ ಎಂದು ನಂಬಿರುವುವೋ ಅವುಗಳು ಶಿಶುಗಳ ದೀಕ್ಷಾಸ್ನಾನ ಮಾಡಬಹುದು ಅಥವಾ ಮಾಡದೇ ಇರಬಹುದು. ಅವರು ಹೊಸ ಒಡಂಬಡಿಕೆಯಲ್ಲಿನ ಸುನ್ನತಿಯನ್ನು ದೇವರು ಕೆಲವು ಗುಂಪಿನ ಜನರೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ನು ಬದಲಾಯಿಸಿರುದರಿಂದ, ಅವರು ಸಾಧಾರಣವಾಗಿ ಶಿಶುವಿನ ದೀಕ್ಷಾಸ್ನಾನವನ್ನು ಕಾರ್ಯಗತಗೊಳಿಸುತ್ತಾರೆ.

ಒಂದು ವೇಳೆ, ಒಬ್ಬ ವ್ಯಕ್ತಿಯ ವೈಯಕ್ತಿಕ ನಂಬಿಕೆಗೆ ದೀಕ್ಷಾಸ್ನಾನದ ಸಾಕ್ಷಿಯು ಸಾರ್ವಜನಿಕ ಪ್ರದರ್ಶನವಾಗಿದೆಯೆಂದು ಅಥವಾ ಕ್ರಿಸ್ತನಲ್ಲಿ ನಂಬಿಕೆಯಿದೆ ಎಂದು ತನ್ನ ಬಾಯಿಂದ ಅರಿಕೆ ಮಾಡಲು ಶಕ್ತನಾಗಬೇಕು ಎಂದು ನಂಬಿದರೆ ಆಗ ಆ ವ್ಯಕ್ತಿಯು ತನ್ನ ನಂಬಿಕೆಯನ್ನು ಪ್ರಕಟಪಡಿಸಲು ಪ್ರೌಢನಾಗುವವರೆಗೆ ಇವರು ಕಾಯಬೇಕಾಗುತ್ತದೆ.

## ಯಾವ ರೀತಿಯ ದೀಕ್ಷಾಸ್ನಾನವು ಸರಿ?

ದೀಕ್ಷಾಸ್ನಾನದಲ್ಲಿ ಮೂರು ಪದ್ಧತಿಗಳಿವೆ? ಮುಳುಗುವಿಕೆ, ಚಿಮುಕಿಸುವಿಕೆ ಮತ್ತು ಸುರಿಯುವಿಕೆ. ಅನೇಕ ಸಭೆಗಳಲ್ಲಿ ತಲೆಯ ಮೇಲೆ ಚಿಮುಕಿಸುವ ಅಥವಾ ಸುರಿಯುವ ದೀಕ್ಷಾಸ್ನಾನ ಪ್ರಚಲಿತವಿದೆ. ಶಿಶುಗಳಿಗೆ ದೀಕ್ಷಾಸ್ನಾನ ಕೊಡುವಾಗ,' ಮುಳುಗಿಸುವ ಸ್ನಾನಪದ್ಧತಿ ಹಿಂದೆ ಇದ್ದಿತ್ತಾದರೂ, ಚಿಮುಕಿಸುವ ಅಥವಾ ಸುರಿಯುವ ದೀಕ್ಷಾಸ್ನಾನಪದ್ಧತಿಯನ್ನು ಉಪಯೋಗಿಸುತ್ತಾರೆ. ವಯಸ್ಕರಿಗೆ ಮೂರು ವಿಧಾನಗಳನ್ನು ಉಪಯೋಗಿಸಬಹುದು. ಬಹಳ ಖಾಯಿಲೆಯಿಂದ ಬಳಲುತ್ತಿರುವ ಅಥವಾ ಹವಾಮಾನ ವೈಪರೀತ್ಯಕ್ಕೆ ಒಳಗಾಗಿರುವ ಪ್ರದೇಶ ಅಂದರೆ ಮರಳುಗಾಡು ಮತ್ತು ಹಿಮಾಚ್ಛಾದಿತ ಪ್ರದೇಶಗಳಲ್ಲಿ ವಾಸ ಮಾಡುವವರು, ಸಾಧಾರಣವಾಗಿ ಮುಳುಗಿ ದೀಕ್ಷಾಸ್ನಾನ ತೆಗೆದುಕೊಳ್ಳುವುದಿಲ್ಲ. ಆದಾಗ್ಯೂ ಆದಿಸಭೆಯ ದಿನಗಳಿಂದಲೂ, ಮೂರು ರೀತಿಯ ಪದ್ಧತಿಯಲ್ಲಿ ಒಂದಲ್ಲ ಒಂದು ರೀತಿಯ ದೀಕ್ಷಾಸ್ನಾನದ ಸಂಸ್ಕಾರವು ನಡೆಯುತ್ತಾ ಇದೆ.

ಸತ್ಯವೇದದಲ್ಲಿ ದೀಕ್ಷಾಸ್ನಾನವನ್ನು ಹೇಗೆ ಕೊಡುವುದು ಎಂಬ ವಿಷಯವಾಗಿ ಏನನ್ನು ನಿಖರವಾಗಿ ಹೇಳಿಲ್ಲ. ಹೊಸ ಒಡಂಬಡಿಕೆಯ ಕಾಲದಲ್ಲಿ,ದೀಕ್ಷಾಸ್ನಾನವು ಸಾಧಾರಣವಾಗಿ ಹೊಳೆಗಳಲ್ಲಿ (ಮಾರ್ಕ 1:5) ಅಥವಾ ಯಥೇಚ್ಛವಾಗಿ ನೀರು ಎಲ್ಲಿದೆಯೋ ಅಲ್ಲಿ ನಡೆಯುತ್ತಿತ್ತು (ಯೋಹಾನ 3:23). ಇಂತಹ ಸ್ಥಳಗಳಲ್ಲಿ ಮುಳುಗಿ ದೀಕ್ಷಾಸ್ನಾನ ಕೊಡುವುದು ಬಹಳ ಸುಲಭ ಮತ್ತು ಸಾಧಾರಣವಾಗಿ ಇದು ನಡೆದುಕೊಂಡು ಬಂದ ಪದ್ಧತಿಯಾಗಿತ್ತು. ಆದರೆ ಕೆಲವು ಸಮಯಗಳಲ್ಲಿ ಮುಳುಗಿ ಸ್ನಾನ ಮಾಡಿಸುವುದು ಕಠಿಣಕರವಾಗಿತ್ತು. ಉದಾಹರಣೆಯಾಗಿ, ಎಥಿಯೋಪಿಯಾದ ಮನುಷ್ಯನು ಮರುಭೂಮಿಯಲ್ಲಿ ದೀಕ್ಷಾಸ್ನಾನ ಹೊಂದಿದನು (ಅ.ಕೃ. 8:36-38).ಅ.ಕೃ. 16:33ರ ಪ್ರಕಾರ, ಫಿಲಿಪ್ಪಿಯಾದ ಸೆರೆಮನೆ ಅಧಿಕಾರಿಯು ಮತ್ತು ಆತನ ಕುಟುಂಬದವರು ಮಧ್ಯರಾತ್ರಿ ಸಮಯದಲ್ಲಿ ಪೌಲನ ಗಾಯಗಳನ್ನು ತೊಳೆಯುವ ಮತ್ತು ಆತನಿಗೆ ಊಟೋಪಚಾರ ಮಾಡುವ ಸಮಯದಲ್ಲಿ, ದೀಕ್ಷಾಸ್ನಾನ ಕೊಡಲಾಯಿತು. ಪಂಚಾಶತ್ತಮ ದಿನದಲ್ಲಿ, ಮೂರು

ಸಾವಿರ ಜನರು ಮಾನಸಾಂತರಪಟ್ಟು ಒಂದೇ ಸಾರಿಗೆ ದೀಕ್ಷಾಸ್ನಾನ ಹೊಂದಿದರು (ಅ.ಕೃ. 2:41). ಇದರಿಂದ ಉದ್ಭವಿಸಿದ ತಾಪತ್ರಯಗಳನ್ನು ಗಮನದಲ್ಲಿಟ್ಟುಕೊಂಡು, ಚಿಮುಕಿಸುವ ಅಥವಾ ಸುರಿಯುವ ಪದ್ಧತಿಯಿಂದ ಅವರೆಲ್ಲರಿಗೆ ದೀಕ್ಷಾಸ್ನಾನ ಕೊಡಲಾಗಿತ್ತು ಎಂದು ಸತ್ಯವೇದ ಪಂಡಿತರು ಅಭಿಪ್ರಾಯ ಪಡುತ್ತಾರೆ.

ಗ್ರೀಕ್[3] ಪದ (ದೀಕ್ಷಾಸ್ನಾನಕ್ಕೆ)ವೇ ಬಹಳ ಅರ್ಥಗಳನ್ನು ಕೊಡುತ್ತದೆ. ಬಹಳ ಬಳಕೆಯಲ್ಲಿರುವ ಅರ್ಥವೇ (ಮುಳುಗಿಸುವುದು). ನಾವು ಪಾಪದ ಪಾಲಿಗೆ ಸತ್ತು ಮತ್ತು ಕ್ರಿಸ್ತನೊಡನೆ ಹೂಣಲ್ಪಟ್ಟ ವಿಷಯವನ್ನು ಸಚಿತ್ರೀಕರಣವಾಗಿ (ಮುಳುಗಿ ಸ್ನಾನದಲ್ಲಿ) ನಾವು ಕಾಣಬಹುದು. ಆದುದರಿಂದ ಅನೇಕ ಸಭೆಗಳು, ಮುಳುಗಿ ದೀಕ್ಷಾ ಸ್ನಾನ ಕೊಡುತ್ತವೆ. ಆದಾಗ್ಯೂ (ಮುಳುಗಿಸುವಿಕೆ) ಎಂಬ ಅರ್ಥವು ದೀಕ್ಷಾಸ್ನಾನಕ್ಕೆ ಒಂದೇ ಆಗಿರುವುದಿಲ್ಲ ಮಾರ್ಕನ ಸುವಾರ್ತೆ 7:3-4ರಲ್ಲಿ ವರ್ಣಿಸಲಾಗಿರುವ "ಯಹೂದ್ಯರು ಕೈತೊಳೆದುಕೊಳ್ಳದೇ ಆಹಾರ ತೆಗೆದುಕೊಳ್ಳುವಂತಿಲ್ಲ" ಎಂಬುದು ಗ್ರೀಕ್ ಶಬ್ದವಾದ ದೀಕ್ಷಾಸ್ನಾನಕ್ಕೆ ಸಂಬಂಧಿಸಿದ ಪದವಾಗಿದ್ದು, ಅದು ಚಿಮುಕಿಸುವುದನ್ನು ಸಹಾ ಸೂಚಿಸುತ್ತದೆ (ಲೂಕ 11:38-39). ಪವಿತ್ರಾತ್ಮನಿಂದ ದೀಕ್ಷಾಸ್ನಾನ (ಅ.ಕೃ. 1:5) ಅನ್ಯ ಜನರು ಸ್ವೀಕರಿಸಿರುವುದನ್ನು ಆತ್ಮನ ಸುರಿಯುವಿಕೆ (ಅ.ಕೃ. 2:17-18, 10:44-45) ಎಂದು ವರ್ಣಿಸಲಾಗಿದೆ. ಸತ್ಯವೇದದಲ್ಲಿ **ನಾವು ಹೃದಯವನ್ನು ಪ್ರೋಕ್ಷಿಸಿಕೊಂಡು ದೇಹವನ್ನು ತಿಳಿನೀರಿನಿಂದ ತೊಳೆದು ಕೊಂಡು, ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ, ಯಥಾರ್ಥ ಹೃದಯವುಳ್ಳವರಾಗಿಯೂ ದೇವರ ಬಳಿಗೆ ಬರೋಣವೆಂದು ಹೇಳಿದೆ. (ಹೆಯೆಜ್ಕೇಲ 36:25, ಇಬ್ರಿಯಾ 10:22).** ಇದನ್ನು ಅನೇಕ ಕ್ರೈಸ್ತರು ನೀರಿನ ದೀಕ್ಷಾಸ್ನಾನವೆಂದೇ ಉಲ್ಲೇಖಿಸುತ್ತಾರೆ. ಆದುದರಿಂದ ಅನೇಕ ಸಭೆಗಳಲ್ಲಿ ಚಿಮುಕಿಸುವ ಅಥವಾ ಸುರಿಯುವ ಪದ್ಧತಿಯು ಆಚರಣೆಯಲ್ಲಿದೆ.

**ಸಾರಾಂಶ**

ಈ ಬರಹದಲ್ಲಿ ಮೂರು ಮುಖ್ಯವಾದ ಪ್ರಶ್ನೆಗಳ ಬಗ್ಗೆ ನಾವು ಚರ್ಚಿಸಿದೆವು.

(1) ದೀಕ್ಷಾಸ್ನಾನ ಎಂದರೇನು? ಅದು ಕೃಪಾಶೀರ್ವಾದ ಪಡೆಯುವ ಸಾಧನವೇ ಅಥವಾ ಬರೇ ಒಂದು ಗುರುತೇ?

(2) ದೀಕ್ಷಾಸ್ನಾನವೂ ಶಿಶುಗಳಿಗೂ ಸಹಾ ಉಂಟೇ ಅಥವಾ ದೊಡ್ಡ ಮಕ್ಕಳಿಗೂ ಮತ್ತು ಪ್ರೌಢರಿಗಾ?

(3) ಈ ಮೂರು ಪದ್ಧತಿಯಲ್ಲಿ ಯಾವುದು ಮಾನ್ಯತೆ ಹೊಂದಿದೆ, ನೀರನ್ನು ಹಾಕುವುದೇ ಅಥವಾ ಮುಳುಗಿ ಸ್ನಾನ ದೀಕ್ಷೆ ಕೊಡುವುದೇ?

ನಾವು ಸತ್ಯವೇದದ ವಚನಗಳನ್ನು ಅಭ್ಯಸಿಸಿದ ನಂತರವೇ ಈ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಕೊಡಬಹುದು. ನಾವು ಯಾವುದೇ ರೀತಿಯಲ್ಲಿ ತೀರ್ಮಾನಿಸಿದರೂ, ಬೇರೆ ಕ್ರೈಸ್ತರು ನಮ್ಮ ತೀರ್ಮಾನಕ್ಕೆ ವಿರುದ್ಧವಾಗಿ ಇರುವುದಾದರೆ, ಅವರನ್ನು ಹೀಯಾಳಿಸಬಾರದು ನಮಗಿರುವ ದೀಕ್ಷಾಸ್ನಾನದ ನಂಬಿಕೆಯು ನಾವು ಇತರೇ ಕ್ರೈಸ್ತ ಸಹೋದರ, ಸಹೋದರಿಯರಿಂದ ಬೇರ್ಪಡದಂತೆ ಇರಬೇಕಾದುದು ಅಗತ್ಯ. ಯಾಕೆಂದರೆ ಕ್ರಿಸ್ತನು ಅವರಿಗಾಗಿಯೂ ಸತ್ತನು.

**ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು. ಒಬ್ಬನೇ ಆತ್ಮನು. ಒಂದೇ ಪದವಿಯನ್ನು ನಿರೀಕ್ಷಿಸುವುದಕ್ಕೆ ಕರೆಯಲ್ಪಟ್ಟವರು. ನಿಮ್ಮೆಲ್ಲರಿಗೂ ಕರ್ತನು ಒಬ್ಬನೇ ಭರವಸೆಯೂ ಒಂದೇ. ಸ್ನಾನ ದೀಕ್ಷೆ ಒಂದೇ ಎಲ್ಲರಿಗೂ ತಂದೆಯಾಗಿರುವ ದೇವನು ಒಬ್ಬನೇ. ಎಫೆಸ 4:4-6.**

---

[1]ನಾಮಾನನ್ನು ಗುಣಪಡಿಸುವಂಥಹ ಯಾವ ಶಕ್ತಿಯನ್ನು ಯೋರ್ದನ್ ನದಿಯು ತನ್ನಲ್ಲಿ ಹೊಂದಿರಲಿಲ್ಲ, ಆದರೆ ದೇವರು ಮಾಡಿದ ಆಜ್ಞೆಯಂತೆ ವಿದೆಯನಾಗಿ ನೀರನ್ನು ಉಪಯೋಗಿಸಿದ್ದರಿಂದ, ನಾಮಾನನು ಗುಣ ಹೊಂದಿದನು.(2 ನೇ ಅರಸು. 5: 9-14).

[2]ಈ ಕೆಲವೊಂದು ಕ್ರೈಸ್ತರು,ನೀರಿನ ದೀಕ್ಷಾಸ್ನಾವು, ತಮ್ಮ ನಂಬಿಕೆಯನ್ನು ವಿಶೇಶವಾಗಿ ಹೆಚ್ಚಿಸುವುದರಿಂದ ಈ ದೀಕ್ಷಾಸ್ನಾವು **"ಕೃಪೆಯ ಸಾದನ"** ವಾಗಿದೆಯೆಂದು ನಂಬುತ್ತಾರೆ..

[3]ಹೊಸ ಒಡಂಬಡಿಕೆಯು ಮೂಲತಃ ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟಿದೆ

# ಕರ್ತನ ಭೋಜನ

## ಮುಖ್ಯ ವಚನಗಳು

ಮತ್ತಾಯ 26:26-29 :- ಯೇಸು ಕ್ರಿಸ್ತನ ಕಡೇಯ ಹಬ್ಬದೂಟವು ಮೊದಲನೇಯ ಕರ್ತನ ಭೋಜನ.
ಮಾರ್ಕ 14:22-25 :- ಯೇಸುವಿನ ಕಡೇ ಹಬ್ಬದೂಟವು ಮೊದಲನೇಯ ಕರ್ತನ ಭೋಜನ.
ಲೂಕ 22:17-20 :- ಯೇಸುವಿನ ಕಡೇ ಹಬ್ಬದೂಟ ಮತ್ತು ಕರ್ತನ ಭೋಜನ ಸಂಸ್ಕಾರವನ್ನು ಆಚರಿಸಬೇಕು ಎಂದು ಕ್ರಿಸ್ತನು ಕೊಟ್ಟ ಮೊದಲನೇಯ ಆಜ್ಞೆ.
ಯೋಹಾನ 6:48-49 :- ಯೇಸುವಿನ ಶರೀರ ಹಾಗು ರಕ್ತ. ನಮಗಾಗಿ ತಿನ್ನಲು ಮತ್ತು ಕುಡಿಯಲು .
1ನೇ ಕೊರಿಂಥ 10:16-17 :- ಯೇಸುವಿನ ದೇಹದಲ್ಲಿ ಮತ್ತು ರಕ್ತದಲ್ಲಿ ಪಾಲುಗಾರರಾಗುವುದು.
1ನೇ ಕೊರಿಂಥ 11:17-34 :- ಕರ್ತನ ಭೋಜನ ಸಂಸ್ಕಾರದಲ್ಲಿ ಯೋಗ್ಯರೀತಿಯಲ್ಲಿ ಭಾಗವಹಿಸುವುದು.

## ಕರ್ತನ ಭೋಜನ ಎಂದರೇನು?

ಕರ್ತನ ಭೋಜನ ಅಥವಾ ಕರ್ತನ ಅನ್ಯೋನ್ಯತೆ ಎಂಬುದು ನಮ್ಮ ಪ್ರಭುವು ಮರಣ ಹೊಂದುವ ಹಿಂದಿನ ದಿನ ಆತನು ನಡೆಸಿದ ಪ್ರಥಮ ಭೋಜನವಾಗಿದೆ. ಯೇಸುವಿನ ಜೀವಿತದ ಕಡೇ ವಾರದಲ್ಲಿನ ಪಸ್ಕ ಹಬ್ಬದ ಸಮಯದಲ್ಲಿ ನಡೆದ ಪಸ್ಕದ ಭೋಜನವಾಗಿತ್ತು. ದೇವರು, ಯಹೂದ್ಯರಿಗೆ, ತಾವು ಐಗುಪ್ತದೇಶದಿಂದ ಬಿಡುಗಡೆಯಾದುದನ್ನು ನೆನಪು ಮಾಡಿಕೊಳ್ಳುವುದಕ್ಕಾಗಿ, ಅದನ್ನು ಪ್ರತೀ ವರ್ಷ ಆಚರಿಸಬೇಕೆಂದು ಆಜ್ಞೆಯನ್ನು ಮಾಡಿದನು. (ವಿಮೋ. 12:1-20). ದೇವರು, ಪಸ್ಕದ ಹಬ್ಬದ ಸಮಯದಲ್ಲಿ ಬರೇ ಹುಳಿಯಿಲ್ಲದ ರೊಟ್ಟಿಯನ್ನು ಮಾತ್ರ ತಿನ್ನಬೇಕೆಂದು ಆಜ್ಞೆಯನ್ನು ಕೊಟ್ಟನು. 1ನೇ ಕೊರಿಂಥ 5:7ರಲ್ಲಿ ಹೇಳಿರುವ ಪ್ರಕಾರ, ಕ್ರಿಸ್ತನೇ ಪಸ್ಕ ಹಬ್ಬದ ಬಲಿಪಶುವಾದನು ಎಂದು ಪೌಲನು ಹೇಳುತ್ತಾನೆ. ಆದುದರಿಂದ ಕ್ರೈಸ್ತರು, ಪಸ್ಕ ಹಬ್ಬದ ಬದಲಾಗಿ ಕರ್ತನ ಭೋಜನ ಸಂಸ್ಕಾರವನ್ನು ಆಚರಿಸುತ್ತಾರೆ.

ಯೇಸುವು ನಮಗೆ ಕರ್ತನ ಭೋಜನ ಸಂಸ್ಕಾರವನ್ನು ಆಚರಿಸಲು ಆಕ್ಷೆಯನ್ನು ಕೊಟ್ಟಿದ್ದಾನೆ. ಸುವಾರ್ತೆಗಳಲ್ಲಿ ಅದರಲ್ಲೂ ಲೂಕನ ಸುವಾರ್ತೆಯಲ್ಲಿ ಇದನ್ನು ಲೂಕ 22:19ರಲ್ಲಿ ದಾಖಲಿಸಲಾಗಿದೆ. ಆದರೆ ಪೌಲನು, ಈ ಆಜ್ಞೆಯನ್ನು 1ನೇ ಕೊರಿಂಥ 11:23-25ರಲ್ಲಿ ಒತ್ತಿ ಹೇಳಿದ್ದಾನೆ. ಮೊದಲನೇಯ ಪ್ರಥಮ ಕ್ರೈಸ್ತರು ಕರ್ತನ ಭೋಜನವನ್ನು ಆಗಾಗ್ಗೆ ಆಚರೀಸುತ್ತಿದ್ದರು. (ಅ.ಕೃ. 2:42, 20:7).

ನಾವು ಸುವಾರ್ತೆಗಳಾದ ಮತ್ತಾಯ, ಮಾರ್ಕ, ಲೂಕ ಮತ್ತು 1ನೇ ಕೊರಿಂಥ ಪತ್ರಿಕೆಯ ಈ ನಾಲ್ಕು ಭಾಗಗಲ್ಲಿ ನೋಡುವಾಗ ಇವ್ಯಾವವುಗಳಲ್ಲಿಯೂ ಯೇಸುವಿನ ಎಲ್ಲಾ ಮಾತುಗಳು ದಾಖಲಾಗಿಲ್ಲ. ಆದರೆ ನಾವು ಮೇಲಿನ ಈ ಎಲ್ಲಾ ನಾಲ್ಕು ವರದಿಗಳನ್ನು ಸಂಯುಕ್ತವಾಗಿ ಕ್ರೋಢೀಕರಿಸಿದಾಗ ಈ ಕೆಳಗಿನಂತೆ ಆಗುತ್ತದೆ.

**ತೆಗೆದು ಕೊಳ್ಳಿರಿ, ತಿನ್ನಿರಿ, ಇದು ನನ್ನ ದೇಹ. ನಿಮಗಾಗಿ ಕೊಡಲ್ಪಟ್ಟಿದೆ.. ಇದನ್ನು ನನ್ನ ನೆನಪಿಗಾಗಿ ಮಾಡಿರಿ. ಈ ಪಾತ್ರೆಯಲ್ಲಿ ಹೊಸ ಒಡಂಬಡಿಕೆಯ ರಕ್ತವಿದೆ ಅಥವಾ ಇದು ನನ್ನ ಹೊಸ ಒಡಂಬಡಿಕೆಯ ರಕ್ತ,ಎಲ್ಲರ ಪಾಪ ಪರಿಹಾರಕ್ಕಾಗಿ ಸುರಿಸಲ್ಪಟ್ಟ ರಕ್ತ. ಇದರಿಂದ ಎಲ್ಲರೂ ಕುಡಿಯಿರಿ. .......... ಇದನ್ನು ಮಾಡಿರಿ. ಇದನ್ನು ಕುಡಿಯುವಾಗ ನನ್ನನ್ನು ನೆನಸಿಕೊಳ್ಳಿರಿ.** ಮತ್ತಾಯ 26:26-29, ಮಾರ್ಕ 14:22-25, ಲೂಕ 22:17-20, 1ನೇ ಕೊರಿಂಥ 11:23-25.

ಸಭಾ ಚರಿತ್ರೆಯನ್ನು ನೋಡುವಾಗ ಕರ್ತನ ಭೋಜನವನ್ನು ಅನೇಕ ವಿವಿಧ ರೀತಿಯಲ್ಲಿ ಆಚರಣೆ ಮಾಡಿದ್ದು ಕಂಡು ಬರುತ್ತದೆ. ಅನೇಕ ಸಭೆಗಳಲ್ಲಿ ಈಗ ಕರ್ತನ ಭೋಜನವನ್ನು ಪ್ರತೀವಾರ ಆಚರಿಸಲಾಗುತ್ತದೆ. ಇನ್ನೂ ಅನೇಕ ಸಭೆಗಳವರು ವರ್ಷಕ್ಕೆ ಮೂರು ಅಥವಾ ನಾಲ್ಕು ಸಲ ಮಾತ್ರ ಕರ್ತನ ಭೋಜನ ಸಂಸ್ಕಾರವನ್ನು ಆಚರಿಸುತ್ತಾರೆ.

ಅನೇಕ ಸಭೆಗಳಲ್ಲಿ ಹುಳಿಯಿಲ್ಲದ ರೊಟ್ಟಿಯನ್ನು ಮತ್ತು ನಿಜವಾದ ದ್ರಾಕ್ಷಾರಸವನ್ನು ಯೇಸುವಿನ ಕಾಲದಲ್ಲಿ ಪಸ್ಕ ಹಬ್ಬ ಯಹೂದ್ಯರು ಆಚರಿಸುತ್ತಾ ಇದ್ದಂತೆ ಈಗಲೂ ಆಚರಿಸುತ್ತಾರೆ. ಅನೇಕ ಸಭೆಗಳವರು ಈಗ, ಹುಳಿಯಿರುವ ರೊಟ್ಟಿಯನ್ನು ಮತ್ತು ನೊರೆ ಬಾರದ ದ್ರಾಕ್ಷಾರಸವನ್ನು ಇದಕ್ಕೆ ಬದಲಾಗಿ ಉಪಯೋಗಿಸುತ್ತಿದ್ದಾರೆ. ಇದಕ್ಕೆ ಮೊದಲು, ಸಾಮಾನ್ಯವಾಗಿ ಪಾಪ ಅರಿಕೆ ಮಾಡುವುದು ವಾಡಿಕೆಯಾಗಿದೆ. ಅನೇಕ ಸಭೆಗಳವರು, ಕರ್ತನ ರೊಟ್ಟಿ ಮತ್ತುದ್ರಾಕ್ಷಾರಸವನ್ನು ಸಭೆಯ ಪೀಠದಲ್ಲೇ ಹಂಚುತ್ತಾರೆ ಮತ್ತು ಇನ್ನು ಕೆಲವು ಸಭೆಗಳಲ್ಲಿ, ಸಭಾ ಜನರು ಕುಳಿತಿರುವಲ್ಲಿಯೇ ಹಂಚುತ್ತಾರೆ. ಅನೇಕ ದೊಡ್ಡ ಸಭೆಗಳವರು, ಪ್ರತ್ಯೇಕವಾದ ಸಣ್ಣ ಲೋಟಗಳನ್ನು ಉಪಯೋಗಿಸುತ್ತಾರೆ. ಆದರೆ ಇನ್ನು ಕೆಲವರು ಒಂದು ಅಥವಾ ಎರಡು ದೊಡ್ಡ ಲೋಟ ಅಥವಾ ಚೆಂಬನ್ನು ಮೊದಲನೇಯಕರ್ತನ ಭೋಜನದಲ್ಲಿ ಉಪಯೋಗಿಸಿದ ರೀತಿಯಲ್ಲೇಯೇ ಮಾಡುತ್ತಾರೆ. ಇನ್ನು ಕೆಲವು ಸಭೆಗಳವರು ಈಗಲು ಸಹ ಇದನ್ನು ಆಚರಿಸುವ ಮೊದಲು ಪಾದವನ್ನುತೊಳೆಯುವ ಕಾರ್ಯವನ್ನು ಪಾಲಿಸುತ್ತಿದ್ದಾರೆ (ಯೋಹಾನ 13:1-17).

## ಯೇಸುವಿನ ದೇಹ ಮತ್ತು ರಕ್ತ

ಯೇಸುವು ಹೇಳಿದನು "ಇದು ನನ್ನ ದೇಹ ............ಇದು ನನ್ನ ರಕ್ತ". ಕ್ರೈಸ್ತರಲ್ಲಿ ಇದರ ಅರ್ಥದ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳನ್ನು ತಿಳಿಸುತ್ತಾರೆ. ಅನೇಕ ಕ್ರೈಸ್ತರು, ರೊಟ್ಟಿ ಮತ್ತು ದ್ರಾಕ್ಷಾರಸದಲ್ಲಿ ಯೇಸುವಿನ ದೇಹ ಮತ್ತು ರಕ್ತವೇ ಅದ್ಭುತವಾದ ರೀತಿಯಲ್ಲಿ ಆತ್ಮೀಕವಾಗಿ ಮಾರ್ಪಾಡಾಗುತ್ತದೆ ಎಂದು ನಂಬುತ್ತಾರೆ. ಈ ಕ್ರೈಸ್ತರು 1ನೇ ಕೊರಿಂಥ 10:16ನ್ನು ತೋರಿಸುತ್ತಾ, ರೊಟ್ಟಿ ಮತ್ತು ದ್ರಾಕ್ಷಾರಸವೂ ಯೇಸುವಿನ ದೇಹ ಮತ್ತು ರಕ್ತಗಳ ಪಾಲುಗಾರಿಕೆ ಎಂದೇ ತೋರಿಸುತ್ತಾರೆ. ಇವರು 1ನೇ ಕೊರಿಂಥ 11:27-29ನ್ನು ತೋರಿಸುತ್ತಾ ಪೌಲನು ಹೇಳಿದಂತೆ ನಾವು ಅಯೋಗ್ಯ ರೀತಿಯಲ್ಲಿ **ಕರ್ತನ ಭೋಜನವನ್ನು ತೆಗೆದುಕೊಂಡರೆ, ನಾವು ಯೇಸುವಿನ ದೇಹ ಮತ್ತು ರಕ್ತಕ್ಕೆ ಎಸಗಿದ ದ್ರೋಹದ ಪಾಪಕ್ಕೆ** ಗುರಿಯಾಗುತ್ತೇವೆಂದು ತೋರಿಸುತ್ತಾರೆ. ಯಾಕೆಂದರೆ **ನನ್ನ ಮಾಂಸವೇ ನಿಜವಾದ ಆಹಾರ, ನನ್ನ ರಕ್ತವೇ ನಿಜವಾದ ಪಾನ, ನನ್ನ ಮಾಂಸವನ್ನು ತಿಂದು, ನನ್ನ ರಕ್ತವನ್ನು ಕುಡಿಯುವವನು ನನ್ನಲ್ಲಿ ಇರುತ್ತಾನೆ. ನಾನು ಅವನಲ್ಲಿ[1] ಇರುತ್ತೇನೆ** (ಯೋಹಾನ 6:55-56).

ಇನ್ನು ಅನೇಕ ಕ್ರೈಸ್ತರು, ಯೇಸುವಿನ ನಿಜವಾದ ದೇಹ ಮತ್ತು ರಕ್ತವು ಕರ್ತನ ಭೋಜನದಲ್ಲಿದೆಯೆಂದು ನಂಬುವುದಿಲ್ಲ. ಯೇಸುವು ಇನ್ನು ಶಿಲುಬೆಯಲ್ಲಿ ಮರಣ ಹೊಂದಿರದ ಕಾರಣ ಅದಕ್ಕೆ ಮೊದಲೇ ಈ ಸಂಸ್ಕಾರವನ್ನು ಸ್ಥಾಪಿಸಿದ್ದರಿಂದ, ಅವರು ಇದು ನನ್ನ ದೇಹವನ್ನು ಪ್ರತಿನಿಧಿಸುತ್ತದೆ. ಇದು ನನ್ನ ರಕ್ತವನ್ನು ಪ್ರತಿನಿಧಿಸುತ್ತದೆ ಎಂದು ಯೇಸು ಹೇಳಿರಬಹುದೆಂದು ತಿಳಿಯುತ್ತಾರೆ. ಈ ಕ್ರೈಸ್ತರು ಯೋಹಾನ 6:55-56ರಲ್ಲಿ ಹೇಳಿರುವಂತೆ, ಪ್ರತ್ಯಕ್ಷವಾಗಿ ಯೇಸುವಿನ ದೇಹವನ್ನು ತಿನ್ನುವುದು, ಆತನ' ರಕ್ತವನ್ನು ಕುಡಿಯುವುದು ಆಗಿರದೇ, ಯೇಸುವಿನಲ್ಲಿ ವಿಶ್ವಾಸ ವ್ಯಕ್ತ ಪಡಿಸುವುದೇ ಆಗಿದೆ ಎಂದು ನಂಬುತ್ತಾರೆ. ಯೋಹಾನ 6:35ರಲ್ಲಿ ಯೇಸು ಹೇಗೆ ಹೇಳುತ್ತಾನೆ. **ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವುದಿಲ್ಲ ನನ್ನನ್ನು ನಂಬಿದವನಿಗೆ ಎಂದಿಗೂ ನೀರಡಿಕೆಯಾಗುವುದಿಲ್ಲ.** ಈ ಕ್ರೈಸ್ತರು ಈಗ ಹೇಳುವುದೇನೆಂದರೆ, ಯೇಸುವಿನ ದೇಹ ರಕ್ತಗಳಲ್ಲಿ ಪಾಲು ತೆಗೆದುಕೊಳ್ಳುವಿಕೆಯು, ಯೇಸುವಿನಲ್ಲಿ **ನಂಬಿಕೆ ಇಡುವುದು** ಒಂದೇ ಆಗಿದೆ ಎಂದು ಹೇಳುತ್ತಾರೆ.

## ಕರ್ತನ ಭೋಜನವನ್ನು ನಾವು ಯಾಕೆ ಆಚರಿಸಬೇಕು?

ಕರ್ತನ ಭೋಜನವನ್ನು ನಾವೂಚರಿಸಬೇಕೆಂದು ಯೇಸುವು ಆಜ್ಞೆಯನ್ನು ಮಾಡಿದ್ದಾನೆ. ಆದರೆ ಒಬ್ಬ ವ್ಯಕ್ತಿಯು ಕೆಲವೊಂದು ಸಮಯ ಇದರಲ್ಲಿ ಬಾಗವಹಿಸಬಾರದು. 1ನೇ ಕೊರಿಂಥ 11:27, ಪೌಲನು, ನಾವು ಅಯೋಗ್ಯವಾದ ರೀತಿಯಲ್ಲಿ ಕರ್ತನ ಭೋಜನದಲ್ಲಿ ಪಾಲ್ಗೊಳ್ಳಬಾರದೆಂದು ಹೇಳುತ್ತಾನೆ. ನಮ್ಮಲ್ಲಿ ಯಾರಾದರೂ ಯೇಸುವಿನ ಮರಣ ಮತ್ತು ಕ್ಷಮೆಗೆ ಯೋಗ್ಯರಲ್ಲದ ಕಾರಣ,ಇದರಲ್ಲಿ ನಾವು ಯೋಗ್ಯ ರೀತಿಯಲ್ಲಿ ಪಾಲ್ಗೊಳ್ಳುವುದು ಹೇಗೆ? ಇದಕ್ಕೆ ಉತ್ತರವೇನೆಂದರೆ ನಾವು ಮೊದಲು ನಮ್ಮನ್ನು ಪರೀಕ್ಷಿಸಿಕೊಂಡವರಾಗಿ, ನಮ್ಮ ಪಾಪಗಳನ್ನು ಅರಿಕೆ ಮಾಡಿ, ಮತ್ತು ಪಶ್ಚಾತ್ತಾಪ ಪಡಬೇಕು. ಆಗ ಮಾತ್ರ ನಾವು ಕರ್ತನ ಭೋಜನದಲ್ಲಿ ಪಾಲ್ಗೊಳ್ಳಬಹುದು (1ನೇ ಕೊರಿಂಥ 11:28-31, 1ನೇ ಯೋಹಾನ 1:9).

ಆದುದರಿಂದ ಒಬ್ಬ ವ್ಯಕ್ತಿಯು ಪಾಪದ ಅರಿಕೆ ಮಾಡದಿರುವ ಪರಿಸ್ಥಿತಿಯಲ್ಲಿ ಕರ್ತನ ಭೋಜನದಲ್ಲಿ ಬಾಗವಹಿಸಬಾರದು. ಒಂದು ವೇಳೆ **ಪ್ರಭುವಿನ ದೇಹ ಮತ್ತು ರಕ್ತಕ್ಕೆ ವಿರುದ್ಧವಾಗಿ ಬಾಗವಹಿಸಿದರೆ,ಇತನು ಪಾಪಕ್ಕೆ ಗುರಿಯಾಗುತ್ತಾನೆ** (1ನೇ ಕೊರಿಂಥ 11:27). ಇಂತಹ ವ್ಯಕ್ತಿಯು **ತಿಂದು ಮತ್ತು ಕುಡಿದು ನ್ಯಾಯತೀರ್ಪನ್ನು ತನ್ನ ಮೇಲೆ ಬರಮಾಡಿಕೊಳ್ಳುತ್ತಾನೆ** ಮತ್ತು ಇದರಿಂದ ಬಲಹೀನತೆ, ಖಾಯಿಲೆ ಅಥವಾ ಮರಣದ ಪಲಿತಾಂಶವುಂಟಾಗುತ್ತದೆ

(1ನೇ ಕೊರಿಂಥ 11:29-30). ಇದು ಗಂಬಿರವಾಗಿ ಚಿಂತಿಸಬೇಕಾದ ವಿಷಯ. ಅನೇಕ ಸಭೆಗಳವರು, ಯಾವ ವ್ಯಕ್ತಿಯು ತನ್ನ ಪಾಪದ ಅರಕೆಯನ್ನು ಮಾಡಲು ಅಸಕ್ತನಾಗಿಗಿದ್ದಾನೋ ಅಂತಹವನನ್ನು ಕರ್ತನ ಭೋಜನಕ್ಕೆ ಸೇರಿಸಿಕೊಳ್ಳುವುದಿಲ್ಲ. ಯಾಕೆಂದರೆ ಇದು ಆತನ ಮೇಲೆ ನ್ಯಾಯತೀರ್ಪುನ್ನು ಬರಮಾಡುತ್ತದೆ. ಪಾಪಕ್ಕೆ ಪಶ್ಚಾತ್ತಾಪಡದೇ ಕರ್ತನ ಭೋಜನ ಸಂಸ್ಕಾರದಲ್ಲಿ ಪಾಲ್ಗೊಳ್ಳುವುದು ಭಯಂಕರವಾದ ಸಂಗತಿ ಅದರಲ್ಲೂ ಪಶ್ಚಾತ್ತಾಪ ಪಡಲು ತಿರಸ್ಕರಿಸುವುದು ಇನ್ನು ಅತೀ ಭಯಂಕರವಾದ ಸಂಗತಿಯಾಗಿದೆ. ನಾವು ಪಾಪ ಮಾಡಿದ್ದರೆ, ನಾವು ಅದಕ್ಕಾಗಿ ಪಾಪದ ಅರಿಕೆ ಮಾಡಿ, ಪಶ್ಚಾತ್ತಾಪ ಪಟ್ಟು ನಂತರ ಕರ್ತನ ಮೇಜಿನ ಬಳಿಗೆ ಬರಬೇಕು.

ಕ್ರಿಸ್ತನ ಮೇಜಿನ ಬಳಿ ಬಂದು ನಾವು ತಿನ್ನುವಾಗ ಮತ್ತು ಕುಡಿಯುವಾಗ, ಆತನ ಮರಣವನ್ನು ನಾವು ಜ್ಞಾಪಿಸಿಕೊಳ್ಳಬೇಕೆಂದು ಕ್ರಿಸ್ತನು ನಮ್ಮನ್ನು ಕೇಳಿಕೊಂಡಿರುವುದರಿಂದ ಕ್ರೈಸ್ತರಾದ ನಾವೆಲ್ಲರೂ ಕರ್ತನ ಭೋಜನದ ಸಮಯದಲ್ಲಿ ಪಾಪದ ಅರಿಕೆ ಮತ್ತು ಪಶ್ಚಾತ್ತಾಪದೊಂದಿಗೆ ಕ್ರಿಸ್ತನ ಮರಣವನ್ನು ನೆನಪಿಸಿಕೊಳ್ಳಬೇಕಾಗಿದೆ (1ನೇ ಕೊರಿಂಥ 11:24-25). ನಾವು ಕರ್ತನ ಭೋಜನವನ್ನು ಆಚರಿಸುವಾಗ ನಾವು ಕ್ರಿಸ್ತನ ಮರಣವನ್ನು ನೆನಸುವುದು ಮಾತ್ರವಲ್ಲ. ಆತನ ಮರಣದಿಂದ ಬರುವ ಕೃಪೆಯ ಬಗ್ಗೆ ಇತರರಿಗೆ ಸಾರಬೇಕು. **ನೀವು ಈ ರೊಟ್ಟಿಯನ್ನು ತಿಂದು ಮತ್ತು ಈ ಪಾತ್ರೆಯಲ್ಲಿ ಪಾನ ಮಾಡುವಷ್ಟು ಸಾರಿ ಕರ್ತನ ಮರಣವನ್ನು ಆತನು ಬರುವ ತನಕ ಪ್ರಸಿದ್ಧಿ ಪಡಿಸುತ್ತೀರಿ ಎಂದು ಪೌಲನು ಬರೆದಿದ್ದಾನೆ.** (1ನೇ ಕೊರಿಂಥ 11:26). ಯಾಕಂದರೇ ಕ್ರಿಸ್ತನ ಮರಣದಿಂದ ನಾವು ಕ್ಷಮಾಪಣೆಯನ್ನು ಪಡೆದುಕೊಂಡಿದ್ದವೆ ಮತ್ತು ನಿತ್ಯ ಜೀವವನ್ನು ಹೊಂದುತ್ತೇವೆ. ಕರ್ತನ ಭೋಜನದಲ್ಲಿ ಪಾಲ್ಗೊಳ್ಳುವುದರ ಮೂಲಕ ನಾವು ಈ ಆಶೀರ್ವಾದಗಳಿಗಾಗಿ, ಕೃತಜ್ಞತೆಯನ್ನು ತೋರಿಸುತ್ತವೆ. ಆದರೆ ಆತನು ತಿರುಗಿ ಬರುವ ತನಕ ನಾವು ಕರ್ತನ ಭೋಜನವನ್ನು ಆಚರಿಸುತ್ತಲೇ ಇರುವುದರಿಂದ, ಕ್ರಿಸ್ತನ ಎರಡನೇ ಬರೋಣವನ್ನು ನಿರೀಕ್ಷಿಸುತ್ತಲೇ ಇರುವೆವು. (1ನೇ ಕೊರಿಂಥ 11:26).

ಅನೇಕ ಕ್ರೈಸ್ತರು, ಕರ್ತನ ಭೋಜನವನ್ನು "ಪವಿತ್ರ ಅನ್ಯೋನ್ಯತೆ" ಎಂದು ಕರೆಯುತ್ತಾರೆ. ಇದು ನಮ್ಮ ಕ್ರಿಸ್ತನಲ್ಲಿ ಹೊಂದಿರುವ ಅನ್ಯೋನ್ಯತೆಯ ಅಂಗೀಕಾರವಾಗಿದೆ. **ಯಾವನು ನನ್ನ ಮಾಂಸವನ್ನು ತಿಂದು, ನನ್ನ ರಕ್ತವನ್ನು ಕುಡಿಯುತ್ತಾನೋ, ಅವನು ನನ್ನಲ್ಲಿ ಇರುತ್ತಾನೆ ಮತ್ತು ನಾನು ಅವನಲ್ಲಿ ಇರುತ್ತೇನೆ.** (ಯೋಹಾನ 6:56). ಆದರೆ ಈ ಅನ್ಯೋನ್ಯತೆಯು ಕ್ರಿಸ್ತನೊಂದಿಗೆ ಮಾತ್ರವಲ್ಲದೆ ನಮ್ಮ ಸಹವಿಶ್ವಾಸಿಗಳಲ್ಲಿಯೂ ಸಹ ಇರಬೇಕು. ನಾವು ಕ್ರಿಸ್ತನ ಶರೀರದಲ್ಲಿ ಪಾಲು ಹೊಂದುವುದರಿಂದ ನಾವು ಇತರರೊಡನೆಯೂ ಪಾಲು ಹೊಂದೇಕು.ಯಾಕೆಂದರೆ ಒಂದೇ ರೊಟ್ಟಿಯಿದೆ. ಇದು ಯೇಸುಕ್ರಿಸ್ತ ನು ತಾನೆ ಮತ್ತು ನಾವು ಅನೇಕರಿದ್ದರೂ ಕೂಡ **ನಾವು ಒಂದೇ ಶರೀರವಾಗಿದ್ದೇವೆ. ಒಂದೇ ರೊಟ್ಟಿಯಲ್ಲಿ ಪಾಲ್ಗೊಳ್ಳುತ್ತೇವೆ** (1ನೇ ಕೊರಿಂಥ 10:17). ಇದೂ ಅಲ್ಲದೆ, ಕರ್ತನ ಭೋಜನವು ಒಂದು ಕೃಪೆಯ ಸಾಧನವಾಗಿದ್ದು ತಮಗೆ ದೇವರು ಕೃಪೆಯನ್ನು ತೋರಿಸುವ ಒಂದು ಮಾರ್ಗವು ಇದಾಗಿದೆ ಎಂದು ಅನೇಕ ಕ್ರೈಸ್ತರು ನಂಬುತ್ತಾರೆ.

ಕರ್ತನ ಭೋಜನದ ಮೂಲಕ ನಾವು ಯಾವ ರೀತಿಯಲ್ಲಿ ನ್ಯಾಯತೀರ್ಪನ್ನು ಬರಮಾಡಿಕೊಳ್ಳುತ್ತೇವೋ ಅದೇ ರೀತಿಯಲ್ಲಿ ಆತನ ಕೃಪೆಯನ್ನು ನಾವು[1] ಹೊಂದಿಕೊಳ್ಳುತ್ತೇವೆ. (1ನೇ ಕೊರಿಂಥ 11:27-32)., ಕರ್ತನ ಭೋಜನ ಸಂಸ್ಕಾರದ ಮೂಲಕ ಒಂದು ವಿಶೇಷವಾದ ರೀತಿಯಲ್ಲಿ ಪಾಪ ಮನ್ನಣೆ ಪಡೆಯುತ್ತೇವೆಂದು ಈ ಕ್ರೈಸ್ತರು ನಂಬುತ್ತಾರೆ. ಯೇಸು ಹೀಗೆ ಹೇಳಿದ್ದಾನೆ. **ಇದು ನನ್ನ ರಕ್ತ ಇದು ಒಡಂಬಡಿಕೆಯ ರಕ್ತ. ಇದು ಪಾಪಗಳ ಕ್ಷಮೆಗಾಗಿ ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ** (ಮತ್ತಾಯ 26:28). ಯೇಸು ಮತ್ತೂ ಹೇಳಿದ್ದೇನೆಂದರೆ, **ಯಾರು ನನ್ನ ಮಾಂಸವನ್ನು ತಿಂದು ಮತ್ತು ನನ್ನ ರಕ್ತವನ್ನು ಕುಡಿಯುತ್ತಾನೋ ಅವನಿಗೆ ನಿತ್ಯ ಜೀವ ಉಂಟು ಮತ್ತು ಅವನು ನನ್ನಲ್ಲಿಯೂ ನಾನು ಅವನಲ್ಲಿಯೂ ಇರುವೆನು** (ಯೋಹಾನ 6:54-56). ಆದುದರಿಂದ ಕರ್ತನ ರಾತ್ರಿ ಭೋಜನದಲ್ಲಿ ವಿಶೇಷ ರೀತಿಯಲ್ಲಿ ತನ್ನ ಕೃಪಾಶೀರ್ವಾದವನ್ನು ಕೊಡುತ್ತಾನೆ. ಈ ಕೃಪೆಯು ಪಾಪವನ್ನು ಕ್ಷಮಿಸುವಂತಾದ್ದು, ಕ್ರಿಸ್ತನೊಡನೆ ಐಕ್ಯತೆ ಮತ್ತು ನಿತ್ಯ ಜೀವ ಕೊಡುತ್ತದೆ ಎಂದುಈ ಕ್ರೈಸ್ತರು ನಂಬುತ್ತಾರೆ. ಇವರು ಹೇಳುವ ಪ್ರಕಾರ, ರೊಟ್ಟಿ ಮತ್ತು ದ್ರಾಕ್ಷಾರಸವು ಹೊರಗೆ ತೋರುವ ವಸ್ತುಗಳಾದರೂ, ಇವುಗಳು ನಮ್ಮ ಆಂತ್ಯರ್ಯದ ಮತ್ತು ಆತ್ಮಿಕ ಕೃಪೆಗೆ ಗುರುತಾಗಿವೆ . ರೊಟ್ಟಿ ಮತ್ತು ದ್ರಾಕ್ಷಾರಸವನ್ನು ತೆಗೆದುಕೊಂಡ ಮಾತ್ರಕ್ಕೆ ಏನೂ ಆಗುವುದಿಲ್ಲ. ಇದನ್ನು ನಂಬಿಕೆಯ ಮೂಲಕ ಪಡೆದು ಇದರಲ್ಲಿ ಪಾಲ್ಗೊಂಡರೆ ಮಾತ್ರ ನಾವು ಕರ್ತನ ಭೋಜನದ ಆಂತರಿಕ ಕೃಪೆಯನ್ನು ಪಡೆದುಕೊಳ್ಳುತ್ತೇವೆ. ನಾವು ನಂಬಿಕೆ ಇಲ್ಲದೇ, ಅದರಲ್ಲಿ ಪಾಲ್ಗೊಂಡರೆ, ನಾವು ಕೃಪೆಯನ್ನು ಪಡಕೊಳ್ಳಲಾರೆವು. ಬದಲಾಗಿ, ನ್ಯಾಯತೀರ್ಪನ್ನು ಬರಮಾಡಿಕೊಳ್ಳುವೆವು (1ನೇ ಕೊರಿಂಥ 11:27-32).

ಇನ್ನು ಅನೇಕ ಕ್ರೈಸ್ತರು, ಕರ್ತನ ಭೋಜನದಲ್ಲಿ ವಿಶೇಷ ಕೃಪೆ ದೊರಕುತ್ತದೆ ಎಂದು ನಂಬುವುದಿಲ್ಲ. ಇವರು ದೇವರ ವಾಕ್ಯದ ಮೂಲಕ ಮಾತ್ರವೇ ದೇವರ ಕೃಪೆ ದೊರೆಯುತ್ತದೆಂದು ನಂಬುವವರಾಗಿದ್ದಾರೆ. ವಿಶೇಷವಾದಂತ ಆಚರಣೆಗಳಲ್ಲಿ ಅಥವಾ ವಿಶೇಷ ಸಾಧನಗಳ ಮೂಲಕ ದೇವರು ಕೃಪೆಯನ್ನು ನೀಡುತ್ತಾನೆಂದು ಇವರು ನಂಬುವುದಿಲ್ಲ.

ನಾವು ಯೇಸುವಿನಲ್ಲಿ ನಂಬಿಕೆ ಇಟ್ಟಾಗ, ಮಾತ್ರ, ಆತ್ಮೀಯ ರೀತಿಯಲ್ಲಿ ನಾವು ಆತನ ದೇಹವನ್ನು ತಿಂದು, ಆತನ ರಕ್ತವನ್ನು ಕುಡಿಯುತ್ತೇವೆ. ಆದರೆ ಭೌತಿಕವಾಗಿ ಅಲ್ಲ ಎಂದು ನಂಬುತ್ತಾರೆ. ಕರ್ತನ ಭೋಜನದ ವಿಶೇಷ ಅರ್ಥವೇನೆಂದರೆ ಸಭೆಯ ಸದಸ್ಯರೆಲ್ಲರೂ ಒಂದಾಗಿ ಕೂಡಿ ಬಂದು ಕ್ರಿಸ್ತನ ಮರಣವನ್ನು ಜ್ಞಾಪಕ ಮಾಡಿಕೊಳ್ಳುತ್ತೇವೆ. ಇದು ಸಾಮೂಹಿಕವಾಗಿ ನೆರವೇರುವ ಒಂದು ಆರಾಧನೆ ಮತ್ತು ಸಾಕ್ಷಿಯಾಗಿರುತ್ತದೆ.

**ಸಾರಾಂಶ**

ಕ್ರೈಸ್ತರು ಈ ಪ್ರಶ್ನೆಗಳಿಗೆ, ಸಂಬಂಧಿಸಿದ ವಚನಗಳನ್ನು ಓದಿ ಗ್ರಹಿಸಿದ ನಂತರವೇ ಆಲೋಚನೆಯನ್ನು ಸ್ಥಿರಪಡಿಸಿಕೊಳ್ಳಬೇಕು. ಇದರಲ್ಲಿ ಎರಡು ಮುಖ್ಯ ಪ್ರಶ್ನೆಗಳಿವೆ. ನಾವು ಕರ್ತನ ಭೋಜನ ಸಂಸ್ಕಾರದಲ್ಲಿ ಕ್ರಿಸ್ತನನ್ನು ಅಂದರೆ ಪ್ರತ್ಯಕ್ಷವಾಗಿ ಆತನ ದೇಹ ಮತ್ತು ರಕ್ತವನ್ನು ಪಡೆಯುತ್ತೇವೆಯೇ? ಅಥವಾ ಇಲ್ಲವೇ? ಎರಡನೇಯದಾಗಿ ಕರ್ತನ ಭೋಜನ ಸಂಸ್ಕಾರದಲ್ಲಿ ಪಾಲ್ಗೊಳ್ಳುವಾಗ ನಾವು ಆತನ ಮರಣವನ್ನು ಜ್ಞಾಪಿಸಿಕೊಳ್ಳುತ್ತೇವೆಯೇ ಮತ್ತು ಪಾಪವನ್ನು ಅರಿಕೆಮಾಡುತ್ತೇವೆಯೇ ಹಾಗೂ ದೇವರಿಂದ ಪಾಪ ಕ್ಷಮಾಪಣೆಯನ್ನು ವಿಶೇಷ ರೀತಿಯಲ್ಲಿ ಹೊಂದಿಕೊಳ್ಳುತ್ತೇವೆಯೇ? ನಾವು ಯಾವ ರೀತಿಯಲ್ಲಾದರೂ ಈ ಪ್ರಶ್ನೆಗಳ ಬಗ್ಗೆ ತೀರ್ಮಾನ ಹೊಂದಿದರೂ ಸಹ ಬೇರೆ' ಅಭಿಪ್ರಾಯ ಹೊಂದಿರುವ ನಮ್ಮ ಇತರೇ ಸಹೋದರ, ಸಹೋದರಿಯರನ್ನು ಹೀಯಾಳಿಸಬಾರದು. ನಾವೆಲ್ಲರೂ ಕರ್ತನ ಭೋಜನವನ್ನು ಆಚರಿಸುತ್ತೇವೆ. ಕ್ರಿಸ್ತನು ನಮ್ಮ ಸಹೋದರ, ಸಹೋದರಿಯರಿಗಾಗಿ ಸತ್ತಿರುವಾಗ,ನಾವು ನಮ್ಮ ಸ್ವನಂಬಿಕೆಯ ಅರ್ಥದ ನಿಮಿತ್ತವಾಗಿ, ಅವರಿಂದ ನಾವು ಬೇರ್ಪಡಕೂಡದು. ಅನೇಕರು 1ನೇ ಕೊರಿಂಥ 12:13ರಲ್ಲಿ ಪೌಲನು ನಾವೆಲ್ಲರು ಒಂದೇ ದೇಹವಾಗುವುದಕ್ಕಾಗಿ ಒಂದೇ ಆತ್ಮದಲ್ಲಿ ದೀಕ್ಷಾಸ್ನಾನವನ್ನು ಮಾಡಿಸಿಕೊಂಡೆವು ಒಂದೆ ಆತ್ಮ ನಮ್ಮೆಲ್ಲರಿಗೂ, ಪಾನವಾಗಿ ಕೊಡಲ್ಪಟ್ಟಿತು ಎಂದು ಹೇಳುವಾಗ ನೀರಿನ ದಿಕ್ಷಾಸ್ನಾನ ಮತ್ತು ಕರ್ತನ ಭೋಜನವನ್ನೆ ಕುರಿನು ಹೇಳುತ್ತಾನೆ ಎಂದು ನಂಬುತ್ತಾರೆ. ಕರ್ತನ ಭೋಜನವು ನಮ್ಮನ್ನು ಒಂದುಗೂಡಿಸ ಬೇಕೇ ಹೊರತು, ಬೇರ್ಪಡಿಸ ಕೂಡದು.

ಒಂದು ವೇಳೆ ಕರ್ತನ ಭೋಜನದಲ್ಲಿ ಕ್ರಿಸ್ತನ ರಕ್ತವು ಇದ್ದರೂ ಅಥವಾ ಇಲ್ಲದಿದ್ದರೂ ಸಹ ನಾವು ಆತನ ಮರಣವನ್ನು ಮತ್ತು ಆತನು ನಮಗೆ ಮಾಡಿದ ಎಲ್ಲವುಗಳನ್ನು ನೆನಪು ಮಾಡಿಕೊಳ್ಳಬೇಕೆಂದು ಯೇಸುವು ಹೇಳಿದ್ದಾನೆ. ನಾವು ಕ್ರಿಸ್ತನ' ರಕ್ತದಿಂದ ಮತ್ತು ಮರಣ,ಉಂಟಾದವುಗಳೆಲ್ಲವನ್ನು ನಾವು ಎಣಿಸಲಾಗುವುದಿಲ್ಲ. ದೋಷ ನಿವಾರಣೆ, (ರೋಮಾ. 5:9) ಪಾಪ ಪರಿಹಾರ ಮತ್ತು ಬಿಡುಗಡೆ (ಎಫೆಸ 2:13), ಕೊಲೊಸ್ಸೆ 1:20, ಮನಃಶುದ್ಧೀಕರಣ (ಇಬ್ರಿಯಾ 9:14) ಕೃಪೆಯ ಮಾರ್ಗ (ಇಬ್ರಿಯಾ 10:19). ಪಾಪದಿಂದ ಶುದ್ಧೀಕರಣ (1ನೇ ಯೋಹಾನ 1:7) ಮತ್ತು ಜಯದ ಗೆಲುವು (ಪ್ರಕಟಣೆ 12:11) ಕ್ರಿಸ್ತನ ರಕ್ತವು ಎಷ್ಟೊ ಅಮೂಲ್ಯವಾದದ್ದು!

ಕ್ರೈಸ್ತರೊಳಗೆ ಇನ್ನು ಕೆಲವರು, ಕ್ರಿಸ್ತನ ಭೌತಿಕ ಶರೀರ ಮತ್ತು ರಕ್ತವು, ರೊಟ್ಟಿ ಮತ್ತು ದ್ರಾಕ್ಷಾರಸದಲ್ಲಿ ವಾಸ್ತವವಾಗಿ ಅಡಕವಾಗಿದೆ ಎಂದು ನಂಬುತ್ತಾರೆ. ವಿಶ್ವಾಸಿಗಳು, ಕರ್ತನ ಬೋಜನ ಸಂಸ್ಕಾರದಲ್ಲಿ, ಬೌತಿಕ ಶರೀರ ಮತ್ತು ರಕ್ತವನ್ನು ಕ್ರಿಸ್ತನಿಗೆ ಪರಲೋಕದಲ್ಲಿ ಅರ್ಪಿಸುವಂತೆ ಪವಿತ್ರಾತ್ಮನು ಮಾ ಡುತ್ತಾನೆ ಎಂದು ಇನ್ನಿತರ ವಿಶ್ವಾಸಿಗಳು ನಂಬುತ್ತಾರೆ.

[1] ಈ ಕ್ರೈಸ್ತರು, ನೀರಿನಿಂದಾಗುವ ದೀಕ್ಷಾಸ್ನಾವು ಕೃಪೆಯ ಒಂದು ಸಾಧನವಾಗಿಯೆಂದು ನಂಬುತ್ತಾರೆ. ಆದರೆ ಇನ್ನಿತರ ಬೇರೆ ಕ್ರೈಸ್ತರು ಬೇರೆಯಾದಂತ ರೀತಿಯಾಗಿ ನಂಬುತ್ತಾರೆ. (ಸಾಮಾನ್ಯ ಲೇಖನ. ನೀರಿನ ದೀಕ್ಷಾಸ್ನಾದ ವಿಷಯವಾಗಿ. ನೋಡಿರಿ.)

# ಸಭಾ ಆಡಳಿತ

## ಪ್ರಾಮುಖ್ಯ ವಚನಗಳು

ಅ.ಕೃ. 6:1-6 :- ಅಪೋಸ್ತಲರು ಮತ್ತು ಪ್ರಥಮ ನಾಯಕರು ಅಥವಾ ಹಿರಿಯರು.

1ನೇ ಕೊರಿಂಥ 12:28 :- ಸಭೆಯಲ್ಲಿನ ಸೇವೆಗಳು. ದೇವರು ಮೊದಲು ಎಲ್ಲಾ ಅಪೋಸ್ತಲರನ್ನು ಎರಡನೇಯದಾಗಿ ಪ್ರವಾದಿಗಳನ್ನು, ಮೂರನೇಯದಾಗಿ ಭೋದಕರನ್ನು ಮತ್ತೆ ಇತರರಿಗೆ ಸಹಾಯ ಮಾಡಲು ಅರ್ಹರಾದಂತವರನ್ನು, ಯಾರಿಗೆ ಆಡಳಿತ ಮಾಡುವ ವರವಿದೆಯೋ ಅವರು .....

ಎಫೆಸ 2:20 :- ಅಪೋಸ್ತಲರು, ಪ್ರವಾದಿಗಳು ಎಂಬ ಅಸ್ತಿವಾರದ ಮೇಲೆ ನೀವು ಮ ಂದಿರದೋಪಾದಿಯಲ್ಲಿ ಕಟ್ಟಲ್ಪಟ್ಟಿದ್ದೀರಿ. ಯೇಸುಕ್ರಿಸ್ತನೇ ಮುಖ್ಯವಾದ ಮೂಲೆಗಲ್ಲು.

ಎಫೆಸ 4:11-13 :- ಕ್ರಿಸ್ತನು ಸಭೆಗೆ ಅಪೋಸ್ತಲರನ್ನು, ಪ್ರವಾದಿಗಳನ್ನು ಸುವಾರ್ತಿಕರನ್ನು, ಸಭಾ ಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು.

1ನೇ ತಿಮಾಥೆ 3:1-13 :- ಸಭಾಧ್ಯಕ್ಷನಿಗೆ ಮತ್ತು ಸಭಾ ನಾಯಕರುಗಳಿಗೆ ಇರಬೇಕಾದ ಅರ್ಹತೆಗಳು.

1ನೇ ತಿಮಾಥೆ 5:17-20 :- ಸಭಾ ಹಿರಿಯರ ಕೆಲಸ, ಸಂಬಳ ಮತ್ತು ಸಭಾ ಹಿರಿಯರಲ್ಲಿರಬೇಕಾದ ಶಿಸ್ತು.

ತೀತ 1:5-9 :- ಸಭಾ ಹಿರಿಯರಿಗೆ ಮತ್ತು ಸಭಾಧ್ಯಕ್ಷರಿಗೆ ಇರಬೇಕಾದ ಅರ್ಹತೆಗಳು.

## ಸಭೆ

ಚರ್ಚ್ ಎಂಬುದು ಗ್ರೀಕ್ ಶಬ್ದವಾಗಿದ್ದು, ಅದರ ಅರ್ಥ ಕೂಡಿ ಬರುವಿಕೆ ಅಥವಾ ಒಟ್ಟಾಗಿ ಜನರು ಸೇರುವುದು. ಒಂದು ವಿಶೇಷವಾದಂತ ಉದ್ದೇಶಕ್ಕೆ ಕರೆಯಲ್ಪಟ್ಟವರು. ನೀವಾದರೋ ದೇವರಿಗಾಗಿ ಆದುಕೊಂಡ' ಜನಾಂಗವಾಗಿದ್ದೀರಿ (1ನೇ ಪೇತ್ರ 2:9-10). ಒಂದು ನೇಮಿತವಾದ ಸ್ಥಳ ಅಥವಾ ಕ್ಷೇತ್ರದಲ್ಲಿ ಕೂಡಿ ಬರುವ ವಿಶ್ವಾಸಿಗಳ ಗುಂಪಿಗೆ ಹಾಗು ವಿಶ್ವದ ಎಲ್ಲ ವಿಶ್ವಾಸಿಗಳ ಸಮೂಹಕ್ಕೆ ಸಭೆ ಎಂದುಕರೆಯಲಾಗುವುದು. ಎಲ್ಲಿ ಮೂರು ಅಥವಾ ನಾಲ್ಕು ಜನ ವಿಶ್ವಾಸಿಗಳು ಕೂಡಿ ಬರುತ್ತಾರೊ ಅದೂ ಸ್ಥಳೀಯ ಸಭೆಯಾಗುತ್ತದೆ. ವಿಶ್ವದ ಎಲ್ಲಾ ವಿಶ್ವಾಸಿಗಳೂ ಸೇರಿ,ಆತ್ಮೀಯ ಸಭೆಯಾಗಿ ಮಾರ್ಪಾಡಾಗುತ್ತದೆ. ಯಾರು ಯೇಸುವಿನಲ್ಲಿ ನಂಬಿಕೆಯಿಟ್ಟು ಮತ್ತು ಆತನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದುತ್ತಾರೋ ಅವರು ಸಭೆಯ ಸದಸ್ಯರಾಗುತ್ತಾರೆ. (1ನೇ ಕೊರಿಂಥ 12:13) ಆದರೆ ನಿಜವಾದ ವಿಶ್ವಾಸಿಗಳು ಯಾರು ಎಂದು ದೇವರಿಗೆ ಮಾತ್ರ ತಿಳಿದಿದೆ (ಮತ್ತಾಯ 13:24-30, 36-43).

ಸಭೆಯು, ಇದರ ಮುಖ್ಯ ಮೂಲೆಗಲ್ಲಾಗಿರುವ ಯೇಸುವಿನ ಅಸ್ತಿವಾರದ ಮೇಲೆ ಅಪೋಸ್ತಲರೂ, ಮತ್ತು ಪ್ರವಾದಿಗಳಿಂದ ಕಟ್ಟಲ್ಪಟ್ಟಿತು. ಮತ್ತಾಯ 16:18, 1ನೇ ಕೊರಿಂಥ 3:11, ಎಫೆಸ 2:19-22, 1ನೇ ಪೇತ್ರ 2:4-8. ಇದು ಪವಿತ್ರಾತ್ಮನಿಂದ ಸ್ಥಾಪಿತವಾಯಿತು. ಅ.ಕೃ. 2:1-4, 36-41. ಪವಿತ್ರಾತ್ಮನು ಸಭೆಯೊಳಗೆ ವಾಸವಾಗಿದ್ದಾನೆ. ಸಭೆಯು ದೇವರ ಆಲಯವೇ. (1ನೇ ಕೊರಿಂಥ 3:16, ಎಫೆಸ 2:22). ಮತ್ತೊಂದು ಕಡೆ, ಸಭೆಯನ್ನು ಕ್ರಿಸ್ತನ ವಧು ಎಂದು ಕರೆಯಲಾಗಿದೆ (2ನೇ ಕೊರಿಂಥ 11:2). ಎಫೆಸ 5:22-32 ಪ್ರಕಟಣೆ. 19:7. ಸಭೆಯು ಕ್ರಿಸ್ತನ ದೇಹವೆಂದೂ ಕರೆಯಲ್ಪಟ್ಟಿದೆ (ರೋಮಾ. 12:4-5, 1ನೇ ಕೊರಿಂಥ 12:27). ಕ್ರಿಸ್ತನೇ ಇದಕ್ಕೆ ಶಿರಸ್ಸು (ಎಫೆಸ 4:15-16, 5:23, ಕೊಲೊಸ್ಸೆ 1:18).

ಯೇಸು ಕ್ರಿಸ್ತನು ತಾನೇ ಸಭೆಗೆ ನಾಯಕರನ್ನು ಒದಗಿಸಿದನು. ಅಪೋಸ್ತಲರೂ, ಪ್ರವಾದಿಗಳು, ಸೌವಾರ್ತಿಕರು,ಸಭಾಪಾಲಕರನ್ನು ಮತ್ತು ಉಪದೇಶಿಗಳನ್ನು ಕೊಟ್ಟನು. ಎಫೆಸ 4:11. ದೇವರು ಸಭೆಯಲ್ಲಿ ಅನೇಕ

ಸೇವೆಗಳನ್ನು ನೇಮಕ ಮಾಡಿದನು (1ನೇ ಕೊರಿಂಥ 12:28). ಮತ್ತುಸೇವಾಕಾರ್ಯಗಳು ನಡೆಯುವಂತಾಗಲು ಪವಿತ್ರಾತ್ಮನು ತನ್ನ ವಿಶೇಷವಾದ ವರಗಳನ್ನುಮತ್ತು ಶಕ್ತಿಯನ್ನು ಒದಗಿಸಿದನು (1ನೇ ಕೊರಿಂಥ 12:7-11).

ಆದಾಗ್ಯೂ ನಾವು ಸತ್ಯವೇದದಲ್ಲಿ ಸಭಾ ಸಹಾಯಕರು, ಸಭಾ ಹಿರಿಯರು, ಸಭಾಧ್ಯಕ್ಷರು, ಮತ್ತು ಸಭೇಯ ಸಲಹಾ ಮಂಡಳಿಯ ಬಗ್ಗೆ ಓದಿದ್ದೇವೆ. ಈ ಎಲ್ಲಾ ನಾಯಕರು, ಅಥವಾ ಗುಂಪಿನವರು ಹೇಗೆ ಒಟ್ಟಾಗಿ ಸೇರಿಕೊಂಡು ಕೆಲಸ ಮಾಡುತ್ತಾರೆ? ಸಭೆಯ ಆಡಳಿತ ಹೇಗೆ ನಡೆಯುತ್ತದೆ?

## ಸತ್ಯವೇದದಲ್ಲಿ ಸಭಾನಾಯ ಕತ್ವ

ಎಫೆಸ 4:11ರಲ್ಲಿ ಪೌಲನು ಅನೇಕ ವಿಧವಾದ ನಾಯಕರುಗಳ ಬಗ್ಗೆ ಬರೆಯುತ್ತಾನೆ. ಇವರಲ್ಲಿ ಮೊದಲಿಗರು ಅಪೋಸ್ತಲರು. ಗ್ರೀಕ್ ಭಾಷೆಯಲ್ಲಿ ಅಪೋಸ್ತಲ ಎಂದರೆ "ಕಳುಹಿಸಲ್ಪಟ್ಟಾತನು". ಮೊಟ್ಟ ಮೊದಲಿನ ಹನ್ನೆರಡು ಅಪೋಸ್ತಲರು ಯೇಸುವಿನಿಂದ ಆರಿಸಲ್ಪಟ್ಟವರು (ಮಾರ್ಕ 3:13-19). ಇವರಲ್ಲಿ ವಿಶೇಷತೆಯಿದೆ ಯಾಕೆಂದರೆ, ಇವರು ಕ್ರಿಸ್ತನ ಜೀವನ, ಸೇವೆ, ಮರಣ, ಪುನರುತ್ಥಾನ ಮತ್ತು ಸ್ವರ್ಗಾರೋಹಣವನ್ನು ಕಣ್ಣಾರೆ ಕಂಡಂತಹ ಸಾಕ್ಷಿಗಳಾಗಿದ್ದಾರೆ (ಅ.ಕೃ.1:21-22). ಪೌಲನು ತನ್ನ ಅಪೋಸ್ತಲತ್ವವನ್ನು, ಪುನರುತ್ಥಾನಗೊಂಡತಹ ಯೇಸುವನ್ನು ಕಣ್ಣಾರೆ ಕಂಡ ನಿಮಿತ್ತದಿಂದ ಪ್ರತಿಪಾದಿಸುತ್ತಾನೆ (1ನೇ ಕೊರಿಂಥ 9:1-2, 15:5-11). ಈ ಅಪೋಸ್ತಲರು ಆಗಾಗ ಸ್ಥಳದಿಂದ ಸ್ಥಳಕ್ಕೆ ಸಂಚಾರ ಮಾಡುತ್ತಾ ಅನೇಕ ನೂತನ ಸಭೆಗಳನ್ನು ಸ್ಥಾಪಿಸಿದರು. ಸಭೆಗಳಿಗೆ ಅಗತ್ಯವಾದ,ಸತ್ಯವೇದದ ಹೊಸ ಒಡಂಬಡಿಕೆಯನ್ನು ಒದಗಿಸಿದ್ದು ಮಾತ್ರವಲ್ಲದೇ ಸಭೆಯ ಮೇಲೆ ಅಂತಿಮವಾದ ಅಧಿಕಾರ ಪಡೆದವರಾಗಿದ್ದರು.ಆದಾಗ್ಯೂ, ಸತ್ಯವೇದವು, ಬಾರ್ನಬಸ್ (1ನೇ ಕೊರಿಂಥ 9:5-6), ಯೇಸುವಿನ ತಮ್ಮನಾದಂತ ಯಾಕೋಬ (ಗಲಾತ್ಯ 1:19), ಸಿಲ್ವನ್, ತಿಮೊಥೆ, 1ನೇ ಥೆಸಲೊನೀಕ 1:1, 2:6-7 ಮತ್ತು ಇನ್ನು ಅನೇಕರನ್ನು ಅಪೋಸ್ತಲರೆಂದು ಕರೆಯಿತು(ರೋಮಾ. 16:7, ಪ್ರಕಟಣೆ 2:2) .

ಪೌಲನ ದ್ವಿತಿಯ ನಾಯಕತ್ವದ' ಪಟ್ಟಿಯಲ್ಲಿರುವವರು ಪ್ರವಾದಿಗಳು (ಎಫೆಸ 4:11). ಹಳೇ ಒಡಂಬಡಿಕೆ ಕಾಲದ ಪ್ರವಾದಿಗಳಂತೆಯೇ ಇವರು ತಮಗೆ ದೇವರಿಂದ ಬಂದಂತಹ ದೇವರ ವಾಕ್ಯಗಳನ್ನು ನಮಗೆ ಕೊಟ್ಟರು. (1ನೇ ಕೊರಿಂಥ 14:30).ಇವುಗಳಲ್ಲಿ ಧೈರ್ಯವಾಗಿರಲು ಉತ್ತೇಜನದ, ಬಲಪಡಿಸುವಿಕೆಯ ಮತ್ತು ಸಂತೈಸುವಿಕೆಯ ವಿಷಯಗಳು ಸೇರಿವೆ (ಅ.ಕೃ. 15:32, 1ನೇ ಕೊರಿಂಥ 14:3, 31). ಹಾಗೆಯೇ ಭವಿಷ್ಯತ್ತಿನಲ್ಲಾಗುವಂತ ಸಂಗತಿಗಳು ಸಹಾ ಸೇರಿದೆ. ಅ.ಕೃ. 11:28, 21:10-11.ಪ್ರವಾದನೆ ಎಂಬುದು ಪವಿತ್ರಾತ್ಮನಿಂದ ಬಂದ ವರವಾಗಿದ್ದು ಇದನ್ನು 1ನೇ ಕೊರಿಂಥ 12:8-10ರಲ್ಲಿ ವಿವರಿಸಲಾಗಿದೆ. ಪೌಲನು ಹೇಳಿದ್ದೇನೆಂದರೆ ಇವರ ವಾಣಿಗಳು ಸಭೆಯಲ್ಲಿರುವಂತ ಇತರರ ತೀರ್ಮಾನಕ್ಕೆ ಒಳಪಟ್ಟಿರಬೇಕೆಂದು ಉಪದೇಶಿಸಿದ್ದಾನೆ1ನೇ ಕೊರಿಂಥ 14:29: 33, . ಆದಿಸಭೆಯಲ್ಲಿ ಇವರು ಸೇರಿದಂತೆ.ಅನೇಕ ಮಂದಿ ಸ್ತ್ರಿ, ಮತ್ತು ಪುರುಷ ಪ್ರವಾದಿಗಳಿದ್ದರು, ಅ.ಕೃ. 11:27-28, 13:1, 15:32, 21:9-10, 1ನೇ ಕೊರಿಂಥ 11:4-5, 1ನೇ ತಿಮೊಥೆ 4:14.

ಮೂರನೇಯದಾಗಿ ಪೌಲನ ಪಟ್ಟಿಯಲ್ಲಿರುವ **ಸು ವಾರ್ತಿಕರನ್ನು** ಎಫೆಸ 4:11ರಲ್ಲಿ ಗಮನಿಸುತ್ತೇವೆ. ಈ ಮಾತಿನ ಅರ್ಥವೇನೆಂದರೆ ಶುಭ ಸಮಾಚಾರ ಹೇಳುವವರು. ಫಿಲಿಪ್ಪನು ಮೊದಲ ಏಳು ಸಹಾಯಕರಲ್ಲಿ ಒಬ್ಬನಾಗಿದ್ದು, ಇವನು ಸೌವಾರ್ತಿಕನೆಂದು ಕರೆಯಲ್ಪಟ್ಟನು (ಅ.ಕೃ. 21:8). ಇತನು ವಿಶೇಷವಾಗಿ ಶುಭ ಸಂದೇಶ ಅಥವಾ ಸುವಾರ್ತೆಯನ್ನು ಹೊಸ ಕ್ಷೇತ್ರಗಳಿಗೂ ಮತ್ತು ಜನರಿಗೆ ಮುಟ್ಟಿಸಲು ಶಕ್ತನಾದನು (ಅ.ಕೃ. 8:5-8, 8:26-40). ತಿಮೊಥೆಯನು ಅಪೋಸ್ತಲನೆಂದು ಕರೆಸಿಕೊಂಡರೂ, **ಸು ವಾರ್ತಿಕನ ಕೆಲಸ ಮಾಡಲು ಕರೆಯಲ್ಪಟ್ಟನು** (2ನೇ ತಿಮಾಥೆ 4:5).

ಸಭೆಯಲ್ಲಿ ಸಬಾಪಾಲಕರನ್ನು ಮತ್ತು ಬೋಧಕರನ್ನು, ಕಾಯುವಂತ, ಬುದ್ಧಿ ಹೇಳುವಂತ, ಪ್ರಸಂಗಿಸುವಂತ ಮತ್ತು ಉಪದೇಶಿಸುವಂತ ನಾಯಕರು ಎಂದು ಕಡೆಯಲ್ಲಿ ಉಲ್ಲೇಖಿಸಲಾಗಿದೆ.

ಆದಿಯಿಂದಲೇ ಸಭೆಯು ಸುವಾರ್ತಾಪ್ರಚಾಕರನ್ನು ಕಳುಹಿಸುತ್ತಾ ಬಂದಿದೆ. ಅ.ಕೃ. 13:1-3, 15:22-32, 18:27. ಅಪೋಸ್ತಲ ಎಂಬ ಶಬ್ದಕ್ಕೆ ಕಳುಹಿಸಲ್ಪಟ್ಟವನು ಎಂದು ಅರ್ಥ ಇರುವ ಕಾರಣ ಎಲ್ಲಾ ಸುವಾರ್ತಾಪ್ರಚಾರಕರು ಅಪೋಸ್ತಲರೆಂದು ಅನೇಕ ಕ್ರೈಸ್ತರು ನಂಬಿದ್ದು ಅದರಲ್ಲೂಹೊಸದಾಗಿ ಸಭೆಯನ್ನು ಸ್ಥಾಪನೆ ಮಾಡಿದವರು ಅಪೋಸ್ತಲರೇ ಆಗಿದ್ದರು. ಆದರೆ ಇನ್ನಿತರೇ ಕಳುಹಿಸಲ್ಪಟ್ಟಂತ ಪ್ರಚಾರಕರು ಹೆಚ್ಚಾಗಿ ಸುವಾರ್ತಿಕರು ಅಥವಾ ಉಪದೇಶಿಗಳಾಗಿದ್ದರು. ಒಂದು ವೇಳೆ ಸುವಾರ್ತಿಕರು, ವಿವಿದ ಹುದ್ದೆಗಳನ್ನು ಮಾಡುವಂತ ಗುಂಪಿಗೆ ಸೇರಿದವರಾಗಿರಬಹುದು. (ಸಾಮಾನ್ಯ ವಿಷಯ, ಸಭೆಯ ಉದ್ದೇಶ ನೋಡಿರಿ).

ಮೊದಲನೆಯದಾಗಿ ಯೆರುಸಲೇಮಿನ ಸಭೆಯಲ್ಲಿ ಹಿರಿಯರು ಎಂಬ ಪದವನ್ನು ಸಭಾ ನಾಯಕರುಗಳಿಗೆ ಉಪಯೋಗಿಸಿದ್ದು ಇದೇ ಮೊದಲು (ಅ.ಕೃ. 11:30). ಇವರ ಜವಾಬ್ದಾರಿ ಏನೆಂದರೆ, ಪ್ರತೇಕವಾಗಿ ಒಂದು ಸ್ಥಳೀಯ ಸಭೆಯ ಆಡಳಿತ ಮಾಡುತ್ತಾ ಇದನ್ನು ಪರಿಪಾಲಿಸುವುದೇ ಆಗಿತ್ತು. ಪೌಲ ಮತ್ತು ಬಾರ್ನಬಸ್‌ರವರು, ತಮ್ಮ ಪ್ರಥಮ ಸುವಾರ್ತಾ ಪ್ರಚಾರದ ಯಾತ್ರೆಯ ಅಂತ್ಯದಲ್ಲಿ ತಾವು ಸ್ಥಾಪಿಸಿದ ಪ್ರತಿಯೊಂದು ಸಭೆಗಳಿಗೂ, ಹಿರಿಯರನ್ನು ನೇಮಕ ಮಾಡಿದರು. ಅ.ಕೃ 14:23. ಈ ಯೆರುಸಲೇಮ್‌ನಲ್ಲಿರುವ ಹಿರಿಯ ಅಪೋಸ್ತಲರಲ್ಲಿ ಪೇತ್ರ (1ನೇ ಪೇತ್ರ 5:1) ಮತ್ತು ಯೋಹಾನ (2ನೇ ಮತ್ತು 3ನೇ ಯೋಹಾನ) ಇವರುಗಳು ಸಹ ಹಿರಿಯ ನಾಯಕರೆಂದೇ ತಮ್ಮನ್ನು ಕರೆಸಿಕೊಳ್ಳುತ್ತಿದ್ದರು. ಆದುದರಿಂದ "ಹಿರಿಯರು" ಎನ್ನಿಸಿಕೊಳ್ಳುವವರು ಇತರೇ ಕೆಲಸ ಕಾರ್ಯಗಳನ್ನು ಮಾಡಲು ಹೊರತಾಗಿರಲಿಲ್ಲ. ಹಿರಿಯರು ಸಭೆಯ ಕಾರ್ಯಕಲಾಪಗಳಿಗೆ ಮಾರ್ಗದರ್ಶಿಗಳಾಗಿದ್ದು (1ನೇ ತಿಮೊಥೆ 5:17) ಇವರು ಸಭೆಯ ಕುರುಬರು ಮತ್ತು ಪಾಲಕರು ಆಗಿರುತ್ತಿದ್ದರು. ಅ.ಕೃ. 20:28-31, 1ನೇ ಪೇತ್ರ 5:1-4, ಇವರು ರೋಗಿಗಳಿಗೆ ಎಣ್ಣೆ ಹಚ್ಚಿ ಪ್ರಾರ್ಥಿಸುತ್ತಾ ಯಾಕೋಬ 5:14, ಮತ್ತು ಕೆಲವರು ಉಪದೇಶಿಸುತ್ತಾ ಮತ್ತು ಸುವಾರ್ತೆಸಾರುತ್ತಲೂ ಇದ್ದರು (1ನೇ ತಿಮೊಥೆ 5:17).

ಪೌಲನು ತನ್ನ ಕಡೇ ಪತ್ರಿಕೆಗಳಲ್ಲಿ ಬರೆಯುವಾಗ ಭಿಷಪ್ ಅಥವಾ ಸಭಾದ್ಯಕ್ಷ ಎಂಬ ಪದವನ್ನು ಉಪಯೋಗಿಸಿರುವುದು ಕಂಡುಬರುತ್ತದೆ. ಈ ಪದದ ಅರ್ಥವು ಮೇಲ್ವಿಚಾರಕನ ಕೆಲಸ ಮಾಡುವುದು ಎಂದು. ಪೌಲನು ಫಿಲಿಪ್ಪಿ ಸಭೆಗಳಿಗೆ ಬರೆಯುವಾಗ ಸಭಾದ್ಯಕ್ಷ ಎಂಬ ಪದವನ್ನು ಉಲ್ಲೇಖಿಸಿದ್ದಾನೆ (ಫಿಲಿಪ್ಪಿ 1:1). ಮತ್ತು ಸಭದ್ಯಕ್ಷರುಗಳಿಗೆ ಇರಬೇಕಾದ ಅರ್ಹತೆಗಳ ಪಟ್ಟಿಯನ್ನು 1ನೇ ತಿಮೊಥೆ. ಮೂರನೇ ಅಧ್ಯಾಯ ಮತ್ತು ತೀತ ಒಂದನೇ ಅಧ್ಯಾಯದಲ್ಲಿ ತೋರಿಸಲಾಗಿದೆ.

ಹಿರಿಯ ಮತ್ತು ಸಭಧ್ಯಕ್ಷ ಎಂಬುದು ಒಂದೇ ಅಧಿಕಾರವನ್ನು ಸೂಚಿಸುತ್ತದೆ ಎಂದು ಅನೇಕ ಕ್ರೈಸ್ತ ವಿದ್ವಾಂಸರು ನಂಬುತ್ತಾರೆ. ಇವರು ನಂಬುವ ಪ್ರಕಾರ, ಹಿರಿಯ ಎನ್ನುವುದು ಸ್ಥಾನಮಾನಕ್ಕೂ ಸಭಾದ್ಯಕ್ಷ ಎಂಬುದು ಸೇವೆಗೂ ಉಲ್ಲೇಖಿಗೊಳ್ಳುತ್ತದೆ ಅಥವಾ ಆ ಸ್ಥಾನದಲ್ಲಿದ್ದುಕೊಂಡು ಕೆಲಸ ಮಾಡುವ ಯಾವುದೇ ವ್ಯಕ್ತಿಗೆ ಹೊಂದಾಣಿಕೆಯಾಗುತ್ತದೆ. ಇವರು ಅ.ಕೃ. 20:17, 28ನ್ನು ತೋರಿಸುತ್ತಾ ಪೌಲನು ಹಿರಿಯರ ಗುಂಪನ್ನು ಉದ್ದೇಶಿಸಿ ಮಾತನಾಡುತ್ತಾ ಇರುವಾಗ, ಇವರನ್ನು ಸಭಾದ್ಯಕ್ಷರು ಎಂದು ಕರೆದನೆಂದು ಮತ್ತು 1ನೇ ಪೇತ್ರ 5:1-2ರಲ್ಲಿ ಹಿರಿಯರನ್ನು ಸಭಾದ್ಯಕ್ಷರಾಗಿ ಸೇವೆ ಸಲ್ಲಿಸಲು ಪೇತ್ರನು ಕೇಳಿದನು ಎಂದು ಹೇಳುವರು.

ಹಿರಿಯರು ಹಾಗೂ ಸಭಾದ್ಯಕ್ಷರಿಗೆ ಆದಿಸಭೆಯಲ್ಲಿ ಬೇರೆ ಬೇರೆ ಕಾರ್ಯಕಲಾಪಗಳು ಆಗಲೇ ಇದ್ದವು ಎಂದು ಇನ್ನು ಕೆಲವು ಕ್ರೈಸ್ತ ವಿದ್ವಾಂಸರುಗಳು ನಂಬುತ್ತಾರೆ. ಇವರು ತೀತನ ಪತ್ರಿಕೆಯ ಅಧ್ಯಾಯ ಒಂದರಲ್ಲಿರು ಅರ್ಹತೆಗಳ ಎರಡು ಪಟ್ಟಿಗಳನ್ನು ತೋರಿಸುತ್ತಾ, ಚಿಕ್ಕದಾದ ಪಟ್ಟಿಯು ಹಿರಿಯರಿಗೂ, ದೊಡ್ಡದಾದ ಪಟ್ಟಿಯು ಸಭಾದ್ಯಕ್ಷರಿಗೂ ಬರೆದಿದು, ಅವರೆಡರಲ್ಲೂ ಅರ್ಹನಾದ ವ್ಯಕ್ತಿಯು **ದೋಷ** ರಹಿತನಾಗಿರಬೇಕೆಂದು ಪ್ರಾರಂಭವಾಗುತ್ತದೆ (ತೀತ 1:5-9). ಇದೂ ಅಲ್ಲದೇ ಹಿರಿಯರು ಮತ್ತು ಸಭಾದ್ಯಕ್ಷರುಗಳೂ, ಪ್ರತ್ಯೇಕವಾಗಿ ಚರ್ಚೆ ನಡೆಸಿದುದನ್ನು 1ನೇ ತಿಮೊಥೆ. 3:1-7, ಮತ್ತು 5:17-20ರಲ್ಲಿ ತೋರಿಸುತ್ತಾರೆ.ಕೆಲವು ಹಿರಿಯರು ಮಾತ್ರ ಕಲಿಸುವಂತವರಾಗಿದ್ದರು 1ನೇ ತಿಮೊಥೆ. 5:17, ಆದರೆ ಎಲ್ಲಾ ಸಭಾದ್ಯಕ್ಷರು ಭೋದಿಸಲು ಶಕ್ತರಾಗಿದ್ದರು (1ನೇ ತಿಮೊಥೆ 3:2). ಈ ಕ್ರೈಸ್ತರೂ ಎಲ್ಲಾಸಭಾದ್ಯಕ್ಷರುಗಳು ಹಿರಿಯರೇ ಆಗಿದ್ದರೂ, ಎಲ್ಲಾ ಹಿರಿಯರೂ, ಸಭಾದ್ಯಕ್ಷರ ಬಗ್ಗೆ ಬೇರೆ ಮಾತಿನಲ್ಲಿ ಹೇಳುವುದುದರೆ, ಕೆಲವು ಹಿರಿಯರಿಗೆ ಸಭಾದ್ಯಕ್ಷರ ಹುದ್ದೆಯನ್ನು ಕೊಡಲಾಯಿತು ಮತ್ತು ಇನ್ನುಳಿದವರು ಸಭಾದ್ಯಕ್ಷರಿಗೆ ಸಹಾಯಕರಾದರು. ಸಭೆಯಲ್ಲಿ ಸಭಾಸೇವಕರು ಇದ್ದರು (1ನೇ ತಿಮೊಥೆ. 3:8). ಮೊದಲನೇ ಸಾರಿ ಸಭಾಸೇವಕರ ವಿಷಯವಾಗಿ ಅ.ಕೃ. 6:1-6ರಲ್ಲಿ ತಿಳಿಸಲಾಗಿದೆ. ಸಭಾಸೇವಕ ಎಂಬ ಪದಕ್ಕೆ ಸೇವೆ ಮಾಡುವವನು ಎಂಬ ಅರ್ಥವಿದೆ. ಸಭಾಸೇವಕರನ್ನು ಸಭೆಯ ಲೌಕಿಕ ವಿಷಯಗಳ ಆಡಳಿತ ನಡೆಸಲು ಮತ್ತು ಬಡವರನ್ನು, ರೋಗಿಗಳನ್ನು ನೋಡಿಕೊಳ್ಳಲು ಆರಿಸಲಾಗುತ್ತಿತ್ತು.

ಪೌಲನು ಸಭಾ ಸೇವಕರ ಅರ್ಹತೆಯನ್ನು 1ನೇ ತಿಮೋಥೆ 3:8-13ರಲ್ಲಿ ಪಟ್ಟಿ ಮಾಡಿದ್ದಾನೆ. ಇವರು ಪ್ರತೀದಿನ ಹೆಚ್ಚು ಕಾರ್ಯಗಳನ್ನು ಸಾಧಾರಣವಾಗಿ ಮಾಡುವುದಕ್ಕಿಂತ ಹೆಚ್ಚಾಗಿ ಮಾಡುತ್ತಿದ್ದರು ಮತ್ತು ಸಭಾ ಸೇವೆ ಮಾಡುತ್ತಿದ್ದರು. ಇವರನ್ನು ಅವರ ಜ್ಞಾನ ಮತ್ತು ಪವಿತ್ರಾತ್ಮನ ತುಂಬಿಸುವಿಕೆಯ ಪ್ರಕಾರ ಆರಿಸಲಾಗುತ್ತಿತ್ತು. ಅ.ಕೃ. 6:3, ಉದಾಹರಣೆಗಾಗಿ, ಸ್ತೆಫನ ಅ.ಕೃ. 6:5, 8-10 ಮತ್ತು ಫಿಲಿಪ್ಪ, ಅ.ಕೃ. 6:5, 8:4-8. ಇವರುಗಳು ಸಭಾಸೇವಕರಾಗಿ ಮತ್ತು ಆತ್ಮೀಕವಾಗಿ ದೊಡ್ಡ ಸೇವೆಗೈದಿದ್ದಾರೆ.

ಎಲ್ಲಾ ಸಭಾ ನಾಯಕರುಗಳಿಗೆ ವಿಶೇಷ ಅಧಿಕಾರ ಮತ್ತು ಜವಾಬ್ದಾರಿಗಳನ್ನು ಕೊಟ್ಟಿದ್ದರೂ ಸಹಾ ಕ್ರಿಸ್ತನಿಗಾಗಿ ಎಲ್ಲಾ ಸಭಾ ಸದಸ್ಯರು ಸಾಕ್ಷಿಗಳಾಗಿ ಬೇರೆಯವರೊಡನೆ ಮುಂದುವರಿಯುತ್ತಲೇ ಇರಬೇಕೆಂದೂ, ಸಮಯ ಬಂದಾಗ ದೇವರ ಕೆಲಸದಲ್ಲಿ ಸಹಾಯ ಮಾಡಬೇಕೆಂಬುದನ್ನು ನಾವು ಜ್ಞಾಪಕ ಮಾಡಿಕೊಳ್ಳಬೇಕು.

## ಸಭೆಯ ಆಡಳಿತ

ಸಭಾ ಚರಿತ್ರೆಯಲ್ಲಿ ನಾಲ್ಕು ವಿಧವಾದ ಆಡಳಿತವಿದ್ದುದನ್ನು ನಾವು ಕಂಡಿದ್ದೇವೆ. ಇದನ್ನು ವರ್ಣಿಸುವಾಗ, ವಾಸ್ತವವಾಗಿ ಯಾರು ಆಳುತ್ತಿದ್ದರು, ಯಾರ ಕೈಯಲ್ಲಿ ಆಡಳಿತವಿತ್ತು ಎಂಬುದನ್ನು ಗಮನಿಸಬೇಕು. ಅಂತಿಮವಾಗಿ ಅಧಿಕಾರವು (1) ಅನೇಕ ಸ್ಥಳೀಯ ಸಭೆಗಳ ಮೇಲ್ವಿಚಾರಣೆ ಮಾಡುವ ಒಬ್ಬ ಸಭಾಧ್ಯಕ್ಷ ಅಥವಾ (2) ಹಿರಿಯರ ಒಂದು ಗುಂಪು ಸೇರಿಕೊಂಡು ಒಂದು ಸಭೆಯನ್ನು ಕಾಯ್ದುಕೊಳ್ಳುವುದು ಅಥವಾ ಒಂದು ಗುಂಪು ಸಭೆಗಳನ್ನು ನೋಡಿಕೊಳ್ಳುವುದು ಅಥವಾ (3) ಒಬ್ಬನೇ ಸಭಾಪಾಲಕನು ತನ್ನದೇ ಆದ ಸಭೆಯನ್ನು ನೋಡಿಕೊಳ್ಳುವುದು ಅಥವಾ (4) ಎಲ್ಲಾ ಸದಸ್ಯರು ಒಟ್ಟಾಗಿ ಸೇರಿ ಸಭೆ ಆಡಳಿತ ಮಾಡುವುದು.ಈ ಎಲ್ಲಾ ನಾಲ್ಕು ವಿಧವಾದ ಸಭಾ ಆಡಳಿಗಳು ಹೊಸ ಒಡಂಬಡಿಕೆಯ ವಚನಗಳ ಮೇಲೆ ಆಧಾರಗೊಂಡಿವೆ ಮತ್ತು ಪ್ರತಿಯೊಂದನ್ನು, ಸತ್ಯವೇದದ ಅನುಕರಣೆಯಂತೆ ನಡೆಸಲಾಗುತ್ತದೆ ಎಂದು ಹೇಳಬಹುದು.

ಸಭಾಧ್ಯಕ್ಷರವರ ಅಧಿಕಾರಕ್ಕೆ ಒಳಪಟ್ಟ ಕ್ರೈಸ್ತ ಸಭೆಗಳು ಅಪೋಸ್ತಲರಿಂದ ಪ್ರಾರಂಭಗೊಂಡ ಸಭಾಡಳಿತವನ್ನು ನಡೆಸುತ್ತಿರುವುದಾಗಿ ಹೇಳಿಕೊಳ್ಳುತ್ತಾರೆ. ಅಪೋಸ್ತಲರು ಅನೇಕ ಸಭೆಗಳ ಮೇಲ್ವಿಚಾರಣೆ ಸಹಿತವಾಗಿ ಅ.ಕೃ. 8:14-17 ಸಭೆಯ ಹಿರಿಯರು ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ, ಆಜ್ಞೆ ಮಾಡುವುದಕ್ಕೆ ಅಧಿಕಾರವನ್ನು ಉಪಯೋಗಿ ಸಲು ಒಪ್ಪಿಕೊಂಡರು (1ನೇ ಕೊರಿಂಥ 5:3, 9:1-2, 2ನೇ ಕೊರಿಂಥ 10:1-11, 2ನೇ ಥೆಸಲೋನಿಕಾ 3:14, ತೀತ 1:5).ಈ ಕ್ರೈಸ್ತರು, ಎಫೆಸದಲ್ಲಿಯೂ ಮತ್ತು ಕ್ರೇತ ದ್ವೀಪದಲ್ಲಿರುವ ಸಭೆಗಳ ಮೇಲೆ ಅದಿಕಾರ ನಡೇಸಲು ಪೌಲನಿಂದ ಆರಿಸಲ್ಪಟ್ಟ ತಿಮಾಥೆ ಮತ್ತು ತೀತ, ಇವರು ಅದ್ಯಕ್ಷರಂತೆ ಪಾತ್ರ ವಹಿಸಿದ್ದುದನ್ನು ಎತ್ತಿತೋರಿಸುತ್ತಾರೆ (1ನೇ ತಿಮಾಥೆ 1:3, 5:19-22, ತೀತ 1:5, 3:10). ಇವರು, ಯೆರುಸಲೇಮ್‌ನಲ್ಲಿರುವ ಸಭಾ ಮಂಡಳಿಯ ಮಹತ್ವವನ್ನು, ಪೇತ್ರ ಮತ್ತು ಯಾಕೋಬ ಇವರು ಮುಂದಾಳುತನವನ್ನು ವಹಿಸಿಕೊಂಡಿಂದ್ದನ್ನು, ನ್ಯಾಯ ತೀರ್ಪನ್ನು ಕೊಡುತ್ತಾ ಇದ್ದುದನ್ನು ಗಮನಿಸುತ್ತಾರೆ (.ಅ.ಕೃ.11 ಮತ್ತು15 ಅದ್ಯಾಯಗಳು). ಸಭಾದ್ಯಕ್ಷರ ಅಧಿಕಾರದ ಕೆಳಗೆ ಸ್ಥಳೀಯ ಸಭೆಗಳ ಸಭಾಪಾಲಕರು, ಹಿರಿಯರು ಮತ್ತು ಸಭೆಯಸಹಾಯಕರು ಇರುತ್ತಾರಾದರೂ, ಮುಖ್ಯ ಅಧಿಕಾರವು ಸಭಾದ್ಯಕ್ಷರ ಕೈಯಲ್ಲೇ ಇರುತ್ತದೆ.

ಯಾವ ಸಭೆಗಳಲ್ಲಿ ಅಧಿಕಾರವನ್ನು ಕೆಲವು ಗುಂಪಿನ ಹಿರಿಯರು ನಡೆಸುತ್ತಾರೋ, ಎಂದು ವಿಶ್ವಾಸಿಸುವ ಕ್ರೈಸ್ತರು ಅಪೋಸ್ತಲರುಗಳನ್ನು ಸಭೆಗಳಿಗೆ ಮೊದಲನೇ ಶತಮಾನಕ್ಕೆ ಮಾತ್ರ ಕೊಡಲಾಯಿತೆಂದೂ, ಮತ್ತು ಹಿರಿಯರು ಆಡಳಿತ ನಡೆಸುವ ಈ ವಿದಾನವು ಸಭಾ ಆಡಳಿತವಾಗಿ ರೂಪ ತಳೆಯಿತು ಎಂದು ತಿಳಿಯುತ್ತಾರೆ (ಅ.ಕೃ. 14:23, ತೀತ 1:5). ಇವರ ಪ್ರಕಾರ ಹಿರಿಯರು ಮತ್ತು ಸಭಾದ್ಯಕ್ಷರು ಅಂದರೆ ಒಂದೇ ಸ್ಥಾನಮಾನ. ಈ ಸಭೆಗಳ, ಹಿರಿಯರಲ್ಲಿ ಆಡಳಿತ ಮಾಡುವಂತ ಹಿರಿಯರು ಇನ್ನು ಕೆಲವರು ಉಪದೇಶಿಸುವ ಹಿರಿಯರು ಆಗಿರುತ್ತಾರೆ (1ನೇ ತಿಮೊಥೆ 5:17). ಹಾಗೆಯೇ ಸಭಾಸಹಾಯಕರ ಒಂದು ಗುಂಪೂ ಸಹ ಇರಲು ಬಹುದು. ಇಂತಹ ಅನೇಕ ಸಭೆಗಳು, ಒಂದು ಸುಸಂಘಟಿತ ಸಂಸ್ಥೆಗೆ ಸೇರಿದ್ದೂ ಇದರಲ್ಲಿ ಹಿರಿಯರಾದಂತವರ ಹಿರಿಯರ ಒಂದು ಗುಂಪು, ಅನೇಕ ಸಭೆಗಳ ಮೇಲೆ ಅಧಿಕಾರವನ್ನು ಒಂದು ಅವದಿಗೆ ಹೊಂದಿರುವರು ಅಥವಾ ಅನೇಕ ಸಭೆಗಳ ಹಿರಿಯರು ಒಟ್ಟಾಗಿ ಸೇರಿ, ಇವರೆಲ್ಲರು, ಸಭೆಗಳ ಮೇಲೆ ಪರಿಣಾಮ ಬೀರುವಂತಹ ವಿಷಯಗಳ ಬಗ್ಗೆ ತೀರ್ಮಾನಿಸುವರು.

ಮೂರನೇ ವಿಧವಾದ ಸಭಾ ಆಡಳಿತದ ವಿದಾನದಲ್ಲಿ, ಅಧಿಕಾರವು ಒಬ್ಬ ಹಿರಿಯನ ಅಥವಾ ಸಭಾಪಾಲಕನ ಕೈಯಲ್ಲಿ ಇರುತ್ತದೆ. ಈ ಸಭೆಗಳು, ಸ್ಥಳೀಯ ಸಭೆಗಳ ಸ್ವಯಂ ಆಡಳಿತ ವ್ಯವಸ್ಥೆಯನ್ನು ಒತ್ತಿ ಹೇಳುತ್ತದೆ. ಬೇರೆ ಹೊರಗಿನ ಯಾರೂ, ಇವರ ಸಭೆಯ ಮೇಲೆ ಅಧಿಕಾರ ಮಾಡಬಾರದೆಂದು ಇವರು ನಂಬುತ್ತಾರೆ. ಈ ಸಭೆಗಳು, ತಮ್ಮಲ್ಲಿ ಹಿರಿಯರ ಅಥವಾ ಸಭಾಸಹಾಯಕರ ಗುಂಪು ಇದ್ದು ಇವರು ಸಭಾಪಾಲಕರಿಗೆ ಮಾರ್ಗದರ್ಶನ ನೀಡುತ್ತಿದ್ದಾಗ್ಯೂ, ಅಂತಿಮ ಅಧಿಕಾರ ಸಭಾಪಾಲಕರಲ್ಲೇ ಇರುತ್ತದೆ. ಈ ಸಭೆಗಳವರು, ಪೌಲನಿಗಿದ್ದ, ಅಧಿಕಾರವನ್ನು, ಆತನು ಸ್ಥಳೀಯ ಸಭಾ ಗುಂಪುಗಳ ಮೇಲೆ ಹೇಗೆ ಅದಿಕಾರವನ್ನು ಚಲಾಯಿಸುತ್ತಿದ್ದನು ಎಂಬುದನ್ನು ತೋರಿಸುವವರಾಗಿದ್ದು, ಆತನು ತನ್ನ, ಸುವಾರ್ತಾ ಪ್ರಚಾರ ಕಾರ್ಯದ ಪ್ರಯಾಣದ ಮಧ್ಯೆ ಉಳಿದುಕೊಂಡು ಮತ್ತು ಒಂದೇ ಸಭೆಯಲ್ಲಿ ಅನೇಕ ವರ್ಷಗಳ ವರೆಗೆ ಬೋಧನೆಯಲ್ಲೂ, ಉಪದೇಶದಲ್ಲೂ ಸಮಯ ಕಳೆದ ವಿಷಯದ ಕಡೆಗೆ, ನಮ್ಮ ಗಮನ ಸೆಳೆಯುತ್ತಾರೆ.ಪೌಲನು ಒಂದಕ್ಕಿಂತ ಹೆಚ್ಚು ಸಾರಿ ಹೀಗೆ ಮಾಡಿದನು (ಅ.ಕೃ. 8:11, 19:10, 20:31). ಒಂದು ವೇಳೆ ತಿಮೊಥೆಯನು ಎಫೆಸ ಸಭೆಯಲ್ಲಿ ಈ ರೀತಿಯಾದಂತ ಸಭಾಪಾಲಕನಾಗಿದ್ದಿರಬಹುದು (1ನೇ ತಿಮೊಥೆ. 1:3, 4:11-14).

ನಾಲ್ಕನೇ ವಿಧವಾದ ಸಭಾಆಡಳಿತದ ವಿದಾನವು, ಸಭೆಯ ಆಡಳಿತ ಅಧಿಕಾರವು ಎಲ್ಲಾ ಸದಸ್ಯರ ಕೈಯಲ್ಲಿ ಇಟ್ಟಿರುತ್ತದೆ. ಈ ಸಭೆಗಳವರು ಮೂರನೇ ಗುಂಪಿನ ಅಭಿಪ್ರಾಯದಲ್ಲಿ ಸಹಭಾಗಿಯಾಗಿದ್ದರೂ,ಸಹಾ ಇವರು, ಬೇರೊಂದು ಅಭಿಪ್ರಾಯ

ಹೊಂದಿದ್ದು, ಯಾವನೇ ಒಬ್ಬ ವ್ಯಕ್ತಿ ಬೇರೆ ವಿಶ್ವಾಸಿಗಳ ಮೇಲೆ ಅಧಿಕಾರ ಚಲಾಯಿರುವುದನ್ನು ಒಪ್ಪಲಾರರು. ಇಂತಹ ಅಭಿಪ್ರಾಯ ಹೊಂದಿರುವ ಕ್ರೈಸ್ತರು, ಕ್ರಿಸ್ತನೊಬ್ಬನೇ ಸಭೆಗೆ ತಲೆಯಾಗಿದ್ದಾನೆಂದು (ಕೊಲಸ್ಸೆ 1:18) ಮತ್ತು ಯೇಸುವು ನಾವು ಯಾರನ್ನು ಒಡೆಯ, ತಂದೆ ಅಥವಾ ಗುರು ಎಂದು ಕರೆಯಬಾರದು ಎಂದು ಆಜ್ಞೆ ಕೊಟ್ಟಿದ್ದಾನೆಂದು ತಿಳಿಸುತ್ತಾರೆ (ಮತ್ತಾಯ 23:8-10). ಎಲ್ಲಾ ವಿಶ್ವಾಸಿಗಳನ್ನು ಯಾಜಕರೆಂದೇ ಪರಿಗಣಿಸಬೇಕು (1ನೇ ಪೇತ್ರ 2:9, ಪ್ರಕಟಣೆ 5:10). ಈ ಕ್ರೈಸ್ತರು, ಸಭೆಯ ಎಲ್ಲಾ ಸದಸ್ಯರು ಸೇರಿ ತಮ್ಮ ನಾಯಕರನ್ನು ಆರಿಸಿಕೊಂಡಿದ್ದನ್ನು, (ಅ.ಕೃ. 6:3). ಉಪದೇಶಿಸುವುದು (1ನೇ ಕೊರಿಂಥ 14:26) ಮತ್ತು ಬಹುಮತದಿಂದ ಶಿಸ್ತು ಪಾಲನೆ ಮಾಡಿದ್ದನ್ನು ತೋರಿಸುವಂತ ವಚನಗಳ ಕಡೆಗೆ ತೋರಿಸುತ್ತಾರೆ ( ಮತ್ತಾಯ 18:17, 1ನೇ ಕೊರಿಂಥ 5:4-5, 2ನೇ ಕೊರಿಂಥ 2:6.).ಆದುದರಿಂದ ಈ ಸಭೆಗಳಲ್ಲಿ, ಸಾಮಾನ್ಯ ಕೂಟಗಳು ಸೇರಿ, ಅಲ್ಲಿ, ಎಲ್ಲಾ ಮುಖ್ಯ ವಿಷಯಗಳ ಬಗ್ಗೆ ಚುನಾವಣೆ ನಡೆಯುತ್ತದೆ. ಈ ಸಭೆಗಳು ಪ್ರಸಂಗಿಸುವ ಮತ್ತು ಉಪದೇಶಿಸುವಂತದ್ದಲ್ಲವನ್ನು ಮಾಡುವಂತ ಒಬ್ಬ ಸಭಾಪಾಲಕನನ್ನು ಹೊಂದಿರುತ್ತವೆ ಆದರೆ ಇಂತಹ ಸಭಾಪಾಲಕನಿಗೆ ಸಭೆಯ ಮೇಲೆ ಯಾವ ಅಧಿಕಾರವಿರುವುದಿಲ್ಲ.ಇಂತಹ ಕೆಲವರು ಸಭೆಗಳಲ್ಲಿ ವಿಶಿಷ್ಟವಾದ ನಾಯಕತ್ವ ಇರುವುದಿಲ್ಲ ಆದರೆ ತಮ್ಮ ಸಭೆಗಳಲ್ಲಿ ಪ್ರಸಂಗಿಸುವ ಮತ್ತು ಉಪದೇಶಿಸುವ ಜವಾಬ್ದಾರಿಕೆಯನ್ನು ಮಾಡ ಶಕ್ತರಾಗಿವ ಸದಸ್ಯರೆಲ್ಲ ಸೇರಿ ಕಾರ್ಯಕಲಾಪಗಳನ್ನು ತಮ್ಮಲ್ಲಿಯೇ ಹಂಚಿಕೊಂಡು ನಿರ್ವಹಿಸುತ್ತಾರೆ.

## ನಾಯ ಕರನ್ನು ಆಯ್ಕೆಮಾಡಿಕೊಳ್ಳುವುದು

ಸಭಾಧ್ಯಕ್ಷರಿಗೆ, ಹಿರಿಯರಿಗೆ ಮತ್ತು ಸಭಾಸಹಾಯಕರಿಗೆ ಇರಬೇಕಾದಂತಹ ಅರ್ಹತೆಗಳ ಪಟ್ಟಿಯನ್ನು 1ನೇ ತಿಮೊಥೆ 3:1-13, ತೀತ 1:5-9, ಅ.ಕೃ. 6:1-6ರಲ್ಲಿ ಕೊಡಲಾಗಿದೆ. ಇವುಗಳ ಬಗ್ಗೆ ಇಲ್ಲಿ ಚರ್ಚಿಸುವುದಿಲ್ಲ. ಈ ಅರ್ಹತೆಗಳ ಬಗ್ಗೆ ಚರ್ಚೆ ನಡೆಸುವುದಾದರೆ, ಆ ವಚನಗಳ ಬಗ್ಗೆ ಇರುವ ವ್ಯಾಖ್ಯಾನವನ್ನು ನೋಡಿರಿ. ಆದರೆ ಇಲ್ಲಿ ನಾಯಕರನ್ನುಹೇಗೆ ನೇಮಿಸಬೇಕು ಎಂಬುದರ ಬಗ್ಗೆ ಕೆಲವು ವಿಷಯಗಳನ್ನು ಹೇಳಲೆಬೇಕಾಗಿದೆ.

ಆದಿ ಅಪೋಸ್ತಲರ ಕಾಲದಲ್ಲಿ ಹೊಸ ಸಭೆಗಳಲ್ಲಿ ಹಿರಿಯರನ್ನು, ಅಪೋಸ್ತಲರನ್ನು ಸ್ವತಃ ಅಪೋಸ್ತಲರೆ ನೇಮಿಸುತ್ತಿದ್ದರು ಅ.ಕೃ. 14:23 ಅಥವಾ ಅವರ ಸಹ ಉದ್ಯೋಗಿಗಳಾಗದ್ದಂತಹ ತಿಮೊಥೆ ಮತ್ತು ತೀತ,ಎಂಬ ಇವರಿಂದ ನೇಮಿಸಲ್ಪಡುತ್ತಿದ್ದರು. ಅ.ಕೃ. 6:1-6ರಲ್ಲಿ ಕಾಣಿಸಿರುವಂತ ಸಭಾಸಹಾಯಕರು ಸಭಯಜನರಿಂದ ಆರಿಸಲ್ಪಟ್ಟರು ಮತ್ತು ಪೌಲ ಮತ್ತು ಬಾರ್ನಬ, ಇವರು ಪ್ರವಾದಿಗಳ ಮುಖಾಂತರ ಪವಿತ್ರಾತ್ಮನಿಂದ ಆಯ್ಕೆಯಾದರು. ಅ.ಕೃ. 13:1-3. ಒಂದು ಸಂದರ್ಭದಲ್ಲಿ ಸಭೆಯು, ದ್ರೋಹಿಯಾದಂತ ಯೂದನಿಗೆ ಬದಲಾಗಿ ಆತನ ಸ್ಥಾನವನ್ನು ತುಂಬುವುದಕ್ಕೆ ಚೀಟು ಹಾಕಲು ನಿರ್ಧರಿಸಿದರು (ಅ.ಕೃ. 1:23-26). ಆದಿಸಭೆಯವರು, ಬೇರೆ ಬೇರೆ ಕೆಲಸಗಳಿಗೆ ನೇಮಕ ಮಾಡಲು, ಉಪವಾಸವಿದ್ದು, ಪ್ರಾರ್ಥಿಸುತ್ತಿದ್ದರು ಮತ್ತು ಆರಿಸಲ್ಪಟ್ಟವರ ಮೇಲೆ ತಮ್ಮ ಕೈಗಳನ್ನಿಡುತ್ತಿದ್ದರು. ಅ.ಕೃ. 6:6, 13:1-3, 14:23, 1ನೇ ತಿಮೊಥೆ 4:14, 5:22. ಆಗಾಗ್ಗೆ, ಪ್ರವಾದನೆಯು ಮೊದಲು ಹೇಳಲ್ಪಡುತ್ತಿತ್ತು ಅಥವಾ ಇದಾದ ನಂತರ ಸೇವೆಗಾಗಿ ಇವರ ಮೇಲೆ ಕೈಗಳನ್ನು ಇಡಲಾಗುತ್ತಿತ್ತು. ಅ.ಕೃ. 13:1-3, 1ನೇ ತಿಮೊಥೆ 1:18, 4:14.

ಆದಿ ಅಪೋಸ್ತಲರು ಕಾಲವಾದ ನಂತರ, ಬೇರೆ ಬೇರೆ ಸಭೆಗಳು ಬೇರೆ ಬೇರೆ ಪದ್ಧತಿಯನ್ನು ಅನುಸರಿಸ ತೊಡಗಿದರು. ಯಾವ ಸಭೆಗಳು ಸಭಾಧ್ಯಕ್ಷರಿಂದ ಆಳಲ್ಪಡುತ್ತಿದ್ದವೊ ಅಂತಹ ಸಭೆಗಳಲ್ಲಿ ಸಭಾ ನಾಯಕರಾಗಲು ಒಂದು ವಿಶೇಷವಾದ ವಿದ್ಯಾರ್ಹತೆಯ ಅವಶ್ಯಕತೆಯಿತ್ತು. ಈ ಸಭೆಗಳಲ್ಲಿ ಸಭಾಧ್ಯಕ್ಷರು ಮಾತ್ರ ಹೊಸ ನಾಯಕರನ್ನು ಪ್ರತಿಷ್ಠಿಸುತ್ತಿದ್ದರು ಮತ್ತು ಇವರು ಪ್ರಾರ್ಥನೆ ಹಾಗೂ ಹಸ್ತಾರ್ಪಣೆಯನ್ನು ಮಾಡುವುದರ ಮೂಲಕ ಮಾಡುತ್ತಿದ್ದರು.

ಯಾವ ಸಭೆಯು, ಒಬ್ಬನೇ ಸಭಾಪಾಲಕನಿಂದ ನಡೆಸಲ್ಪಡುತ್ತಿತ್ತೋ ಆ ಸಭೆಯನ್ನು ಆಸಭಾಪಾಲಕನೆ ಸ್ಥಾಪಿಸಿರುತ್ತಿದ್ದನು. ಇಂತಹವನು ಬೇರೊಂದು ಕಡೆ ಅಭ್ಯಾಸ ಮಾಡಿ, ನಂತರ ಪ್ರತಿಷ್ಠಿಸಲ್ಪಟ್ಟವನಾಗಿರುತ್ತಿದ್ದನು. ಇಂತಹ ಸಭಾಪಾಲಕರು ತಮಗೆ ಸಹಾಯಕ ಸಭಾಪಾಲಕನ್ನಾಗಿ ಬೇರೊಬ್ಬನನ್ನು ತಾವೆ ಆರಿಸಿಕೊಳ್ಳುತ್ತಿದ್ದರು ಅಥವಾ ಇತನ ನಂತರದ ಉತ್ತರಾಧಿಕಾರಿಯನ್ನು ಇವರು ಆ ಸ್ಥಳ ಬಿಡುವಾಗ ಸಭಾ ಸದಸ್ಯರ ಸಲಹೆ ಮೇರೆಗೆ ಆರಿಸಿಕೊಳ್ಳುತ್ತಿದ್ದರು.

ಯಾವ ಸಭೆಗಳಲ್ಲಿ ಒಟ್ಟಾಗಿ ಎಲ್ಲಾ ಸದಸ್ಯರಿಂದ ಆಡಳಿತ ನಡೆಸಲಾಗುತ್ತಿತ್ತೋ, ಆ ಸಭೆಯಲ್ಲಿ ಒಬ್ಬನೇ ಸಭಾಪಾಲಕನು ಬೋಧನೆಗೂ, ಉಪದೇಶಕ್ಕೂ ನೇಮಕವಾಗುತ್ತಿದ್ದನು. ಆದರೆ ಅದು ಸಾಮಾನ್ಯ ಸಭೆಯಲ್ಲಿ ಎಲ್ಲಾ ಸದಸ್ಯರ ಮತದಾನದಿಂದ ನಡೆಸಲಾಗುತ್ತಿತ್ತು, ಒಂದು ವೇಳೆ ಕೆಲಸದಲ್ಲಿ ನ್ಯೂನ್ಯತೆಯು ಕಂಡು ಬಂದಲ್ಲಿ, ಸಭೆಯವರಿಂದ ತೆಗೆದುಹಾಕಲ್ಪಡುವನು. ಆದಾಗ್ಯೂ ಈ ಸಭೆಗಳಲ್ಲಿ ವಿಶೇಷ ನಾಯಕರು ಯಾರು ಇಲ್ಲದಿರಬಹುದು. ಆದರೆ ಸಾಧಾರಣ ಸದಸ್ಯರನ್ನೇ ಸಭೆಯು ಆರಿಸಿ ಸಭಾ ಕಾರ್ಯಗಳ ಮೇಲ್ವಿಚಾರಣೆಗೆ ನೇಮಕ ಮಾಡುತ್ತಿತ್ತು.

**ಸಾರಾಂಶ**

ಸತ್ಯವೇದವು ಯಾವ ವಿಧವಾದ ಸಭಾ ಆಡಳಿತವನ್ನೂ ಕೂಡ ಸರಿ ಎಂದು ಖಚಿತವಾಗಿ ಹೇಳುವುದಿಲ್ಲ. ಇದು ಖಚಿತವಾಗಿ ಹೇಳಿದ್ದರೆ, ಇಂತಹ ಬೇರೆ ಬೇರೆ ವಿಧವಾದ ಸಭಾ ಆಡಳಿತಗಳು ಇರುತ್ತಿರಲಿಲ್ಲ. ಒಂದು ವೇಳೆ ಮೇಲೆ ಹೇಳಿದ ನಾಲ್ಕು ವಿಧವಾದ ಸಭಾ ಆಡಳಿತಗಳು ಅಂಗೀಕಾರವಾಗಿರಲು ಸಾಕು ಮತ್ತು ಕ್ರೈಸ್ತರು ತಮಗೆ ಯಾವುದು ಸರಿ ಹೊಂದುತ್ತದೋ ಮತ್ತು ಉತ್ತಮವಾದ ವೈಯಕ್ತಿಕ ಸಂದರ್ಭಗಳಿಗನುಸಾರವಾಗಿದೆಯೋ, ಅದನ್ನೇ ಉಪಯೋಗಿಸಬೇಕು. ನಮ್ಮ ಅಭಿಪ್ರಾಯ ಸಭಾ ಆಡಳಿತಗಳ ಬಗ್ಗೆ ಏನೇ ಆಗಿದ್ದರೂ, ನಾವು ನಮಗಿಂತ ಭಿನ್ನ ಅಭಿಪ್ರಾಯ ಹೊಂದಿರುವ ಸಹೋದರ ಸಹೋದರಿಯರನ್ನು ನಾವು ಖಂಡಿಸಬಾರದು. ಎಲ್ಲಾ ಸಭೆಗಳು, ತಮ್ಮದೇ ಆದ ರೀತಿಯಲ್ಲಿ ಆಡಳಿತ ನಡೆಸಲಿ. ಆದರೆ ಸಹೋದರ ಭಾವ ಮತ್ತು ಸಹಕಾರ ಎಲ್ಲರ ಜೊತೆಯು ಇರಲಿ, ಅವರು ಯಾವುದೇ ರೀತಿಯ ಸಭಾ ಆಡಳಿತದ ಆಳ್ವಿಕೆಗೆ ಒಳಪಟ್ಟಿದ್ದರೂ ಸರಿಯೇ.

ಸತ್ಯವೇದದಲ್ಲಿ ಯಾವುದೇ ರೀತಿಯಾದಂತ ನಾಯಕತ್ವವಿದ್ದರೂ, ಆ ಸಭೆಯ ಸದಸ್ಯರು ತಮ್ಮ ನಾಯಕರಿಗೆ ಸನ್ಮಾನಿಸುವುದಕ್ಕೂ, ಅವರ ನಿಯಂತ್ರಣದಲ್ಲಿರಲು, ಮತ್ತು ವಿಧೇಯತೆಯನ್ನು ತೋರಿಸುವ ಜವಾಬ್ದಾರಿಯನ್ನು ಹೊಂದಿದ್ದಾರೆ. (1ನೇ ಥೆಸಲೋನೀಕ. 5:12, 1ನೇ ಪೇತ್ರ 5:5,ಇಬ್ರಿಯಾ 13:17).

ನಾಯಕರುಗಳ ಅಥವಾ ಹಿರಿಯರ ಉಪದೇಶವನ್ನು ನಾವು ಪರೀಕ್ಷಿಸಬಹುದು ಅಥವಾ ತೀರ್ಪುಮಾಡಬಹುದು. ಅ.ಕೃ. 17:11, 1ನೇ ಕೊರಿಂಥ .14:29, 1ನೇ ಯೋಹಾನ 4:1, ಪ್ರಕಟಣೆ 2:2. ಆದರೆ ಯಾವೊಬ್ಬ ನಾಯಕನ ಮೇಲೆ ದೋಶಾರೋಪಣೆ ಹೊರಿಸಬೇಕಾದಲ್ಲಿ ಅಥವಾ ತಳ್ಳಿ ಹಾಕಬೇಕಾದಲ್ಲಿ, ಇಬ್ಬರ ಅಥವಾ ಮೂವರ ಸಾಕ್ಷಿಗಳಿರಬೇಕು (1ನೇ ತಿಮೊಥೆ 5:19). ಕಡೆಯದಾಗಿ, ಒಂದು ವೇಳೆ ಅವಶ್ಯಕತೆಯಿದ್ದಲ್ಲಿ, ನಾವು ನಮ್ಮ ನಾಯಕರಿಗೆ ಹಣಕಾಸಿನ ಮೂಲಕ, ಸಹಾಯ ಕೊಡಬೇಕು (ಮತ್ತಾಯ 10:9-13, 1ನೇ ಕೊರಿಂಥ 9:3-11, 1ನೇ ತಿಮೊಥೆ. 5:17-18)

# ಸಭೆಯಲ್ಲಿ ಸ್ತ್ರೀಯರು

## ಪ್ರಾಮುಖ್ಯ ವಚನಗಳು

ನ್ಯಾಯಸ್ಥಾಪಕರು 4:4 :- ನಾಯಕಿ ಮತ್ತು ಇಸ್ರಾಯೇಲರ ನ್ಯಾಯಾಧಿಪತಿ ಹಾಗು ಪ್ರವಾದಿನಿಯಾದ ಡೆಬೋರಳು.
ಅ.ಕೃ. 1:14, 2:1-4, 16-18, 21:8-9. ಪವಿತ್ರಾತ್ಮನು ಮತ್ತು ಸ್ತ್ರೀಯರಿಗಾಗಿ ಪವಿತ್ರಾತ್ಮನ ವರಗಳು.
ರೋಮಾ. 16:1-7 :- ಸಹಾಯಕ ಸಭಾಪಾಲಕಳಾದ ಪೊಯಿಬೆ ? ಅಪೋಸ್ತಲಳಾದ ಜುನಿಯಾ ?.
1ನೇ ಕೊರಿಂಥ. 11:3-16 :- ವಿಶೇಷವಾಗಿ 5ನೇ ವಚನ. ಸ್ತ್ರೀಯರು ಪ್ರಾರ್ಥಿಸುವುದು ಮತ್ತು ಪ್ರವಾದಿಸುವುದು.
1ನೇ ಕೊರಿಂಥ. 14:26-40 :- ವಿಶೇಷವಾಗಿ, ( ವಚನ 26, 34-35) ಸ್ತ್ರೀಯರು ಆರಾದನೆಯನ್ನು ತೊಂದರೆಗೊಳಪಡಿಸುವುದು.
ಗಲಾತ್ಯ. 3:26-28 :-ದೇವರ ಮುಂದೆ ಪುರುಷರೂ ಮತ್ತು ಸ್ತ್ರೀಯರು ಸಮಾನರು.
1ನೇ ತಿಮೊಥೆ. 2:11-15 :- ಸ್ತ್ರೀಯರು ಉಪದೇಶಿಸಬಾರದು ಅಥವಾ ಪುರುಷರ ಮೇಲೆ ಅಧಿಕಾರ ಹೊಂದಿಲ್ಲ.
1ನೇ ತಿಮೊಥೆ. 3:11-13 :- ಸಭೆಯಲ್ಲಿ ಸ್ತ್ರೀಯರ ಪಾತ್ರ.

## ಸಭೆಯ ಲ್ಲಿ ಸ್ತ್ರೀಯ ರ ಕೆಲಸವೇನು?

ಸಭಾ ಚರಿತ್ರೆಯುದ್ದಕ್ಕೂ, ಸ್ತ್ರೀಯರು ಸಭಾನಾಯಕತ್ವವನ್ನು ವಹಿಸಲು ಅನುಮತಿಯನ್ನು ಕೊಟ್ಟಿಲ್ಲ.ಸಾಮಾನ್ಯವಾಗಿ ಸಭಾಪಾಲಕರು, ಉಪದೇಶಿಗಳು ಮತ್ತು ಬೋಧಕರುಗಳು ಪುರುಷರೇ ಆಗಿದ್ದರು. ಹೀಗಿದ್ದರೂ ಪ್ರಪಂಚದ ಕೆಲವು ಭಾಗಗಳಲ್ಲಿ ಸ್ತ್ರೀಯರು ಕೆಲವೊಮ್ಮೆ, ನಾಯಕತ್ವ ವಹಿಸಿ ಅಥವಾ ಸಭೆಯಲ್ಲಿ ಕಲಿಸಿದ್ದಾರೆ. ಕಳೆದ ಕೆಲವು ನೂರು ವರ್ಷಗಳಿಂದಲೂ, ಸ್ತ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ಸುವಾರ್ತಾ ಪ್ರಚಾರದಲ್ಲಿಯೂ, ಉಪದೇಶಿಸುವಲ್ಲಿಯೂ, ಸಭೆಯ ಪಾಲಕರಾಗಿಯೂ ಸಭೆ ನಡೆಸಿದ್ದಾರೆ. ಪ್ರಪಂಚದಲ್ಲಿನ ವಿವಿಧ ಸಮಾಜಗಳು, ಸ್ತ್ರೀಯರಿಗೆ ಹೆಚ್ಚು ಹೆಚ್ಚು ಸ್ವಾತಂತ್ರ ಕೊಟ್ಟಾಗ ಈ ಕಾರ್ಯಗಳು ತ್ವರಿತಗೊಂಡವು.

ಸ್ತ್ರೀಯರು ಸಭಾ ನಾಯಕತ್ವವಹಿಸುವುದರ ಬಗ್ಗೆ ಸತ್ಯವೇದ ಏನು ಹೇಳುತ್ತದೆ? ಇದು ಸ್ಪಷ್ಟವಾಗಿ ಹೇಳಲ್ಪಟ್ಟಿಲ್ಲ. ಅನೇಕ ಸಭೆಗಳಲ್ಲಿ ಬೋಧನೆ ಮಾಡುವುದಕ್ಕೂ,ಸಭಾಪಾಲಕರಾಗಿ ಸಭೆ ನಡೆಸುವುದಕ್ಕೆ ಸ್ತ್ರೀಯರಿಗೆ ಬಿಟ್ಟು ಕೊಟ್ಟಿಲ್ಲ ಆದರೂ ಸಹ ಇವರನ್ನು ಉಪದೇಶಿಗಳನ್ನಾಗಿಯೂ ಮತ್ತು ಸುವಾರ್ತಾಪ್ರಚಾರಕರನ್ನಾಗಿ ಮಾಡಲು ಒಪ್ಪಿಕೊಂಡಿದ್ದಾರೆ.ಆದರೆ ಇನ್ನೊಂದೆಡೆಯಲ್ಲಿ ಇನ್ನುಇತರ ಅನೇಕ ಸಭೆಗಳವರು, ಸ್ತ್ರೀಯರನ್ನು ಬೋಧನೆಗೂ, ಉಪದೇಶಕ್ಕೂ ಮತ್ತುಅವರು ಸಭಾ ಪಾಲಕರಾಗಿಯೂ, ಸಭಾದ್ಯಕ್ಷರಾಗಿಯೂ ಕೆಲಸ ಮಾಡಲು ಒಪ್ಪಿಕೊಂಡಿದ್ದಾರೆ.

## ಸ್ತ್ರೀಯರು ಪ್ರಾರ್ಥಿಸುವುದು ಮತ್ತು ಸಭೆಯಲ್ಲಿ ಪ್ರವಾದಿಸುವುದು

ಪುರುಷರೂ, ಸ್ತ್ರೀಯರು, ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿದ್ದಾರೆಂದು ಪೌಲನು ಗಲಾತ್ಯ 3:28ರಲ್ಲಿ ಸ್ಪಷ್ಟವಾಗಿ ಬರೆದಿದ್ದಾನೆ. ನಾವೆಲ್ಲರೂ ಪಾಪಿಗಳಾಗಿದ್ದು ದೇವರ ಕೃಪೆ ಹೊಂದುವ ಅವಶ್ಯಕತೆಗೆ ಒಳಗಾಗಿದ್ದೇವೆ. ನಿಜಕ್ಕೂ,, ಮುಖ್ಯವಾಗಿ ಪಾಶ್ಚಿಮಾತ್ಯ ದೇಶಗಳಲ್ಲಿ ಕ್ರೈಸ್ತರು ಗುಲಾಮಗಿರಿಯನ್ನು ಅನುಮೋದಿಸುವುದಕ್ಕೆ ಸತ್ಯವೇದವು ವಿರುದ್ಧವಾಗಿರುವುದನ್ನು ಗಲಾತ್ಯ 3:28 ನೆಯ ವಚನವೂ ತಿಳಿಸಿ ಹೇಳುತ್ತದೆ. ಸ್ತ್ರೀ ಪುರುಷರು,, ಕ್ರಿಸ್ತನಲ್ಲಿ ಒಂದಾಗಿದ್ದರೂ ಇವರು ಎಲ್ಲಾ ವಿಷಯಗಳಲ್ಲಿಯೂ ಸರಿಯಾಗಿ ಒಂದೆ ರೀತಿ ಯಂತಿದ್ದಾರೆ ಎಂದು ಅರ್ಥವಲ್ಲ, ಪುರುಷರೂ, ಸ್ತ್ರೀಯರು ದೇವರ ಸಮ್ಮುಖದಲ್ಲಿ ಸಮಾನರಾಗಿದ್ದಾರೆ ಆದರೆ ಸಭೆಯಲ್ಲಿ ಇವರ ಕಾರ್ಯಗಳು ಬೇರೆ ಬೇರೆಯಾಗಿರಬಹುದು. ಹಾಗೆಯೇ

ಗಂಡನೂ, ಹೆಂಡತಿಯೂ ಒಬ್ಬರನ್ನೊಬ್ಬರು ತಮ್ಮನ್ನು ಒಪ್ಪಿಸಿಕೊಡಬೇಕಾಗಿದ್ದರೂ, ವಿವಾಹ ಜೀವನದಲ್ಲಿ ಅವರ ಕಾರ್ಯಗಳು ಬೇರೆಯಾಗಿರಬಹುದು. ( ನೋಡಿರಿ. ಎಫೆಸ 5:21-23. ಸಾಮಾನ್ಯ ವಿಷಯಗಳು, ಕ್ರೈಸ್ತವಿವಾಹ ).

ಅ.ಕೃ. ಅಧ್ಯಾಯ ಒಂದು ಮತ್ತು ಎರಡರಲ್ಲಿ ಯೇಸುವಿನ ಶಿಷ್ಯರನ್ನು ಬಲಪಡಿಸಲು ಪಂಚಾಶತ್ತಮ ದಿನದಂದು, ಪವಿತ್ರಾತ್ಮನು ಅವರ ಮೇಲೆ ಇಳಿದು ಬಂದಾಗ, ಪುರುಷರು ಹಾಗು ಸ್ತ್ರೀಯರು ಹಾಜರಿದ್ದರು ಎಂದು ಸ್ಪಷ್ಟವಾಗಿ ಬರೆದಿದೆ. ಪೇತ್ರನು ಪ್ರವಾದಿಯಾದ ಯೋವೇಲನನ್ನು ಉದಾಹರಿಸಿ, ಆತನ ಮಾತುಗಳನ್ನು ಹೇಳುತ್ತಾ ಪುರುಷರು, ಸ್ತ್ರೀಯರು ಮತ್ತು ಗಂಡು ಮಕ್ಕಳಿಗೂ, ಹೆಣ್ಣು ಮಕ್ಕಳಿಗೂ ದೇವರಿಂದ ಪವಿತ್ರಾತ್ಮನ ವರವು ಸುರಿಸಲ್ಪಟ್ಟಿತು ಎಂದು ತಿಳಿಸುತ್ತಾನೆ (ಯೋವೇಲ 2:28-29, ಅ.ಕೃ. 2:16-18). ಹಳೇ ಒಡಂಬಡಿಕೆಯಲ್ಲಿ ಅನೇಕ ಸ್ತ್ರೀ ಪ್ರವಾದಿನಿಯರಿದ್ದರು. (ವಿಮೋ. 15:20, ನ್ಯಾಯಸ್ಥಾಪಕರು 4:4, 2ನೇ ಅರಸು 22:14ನೇ ನೆಹೆಮೀಯ 6:14, ಯೆಶಾಯ 8:3. ಹೊಸ ಒಡಂಬಡಿಕೆಯಲ್ಲಿ ಸುವಾರ್ತಿಕನಾಗಿದ್ದಂತ ಫಿಲಿಪ್ಪನ ನಾಲ್ಕು ಹೆಮ್ಮುಮಕ್ಕಳು ಪ್ರವಾದನೆ ನುಡಿಯುತ್ತಿದ್ದರು (ಅ.ಕೃ. 21:8-9).

1ನೇ ಕೊರಿಂಥ 12:11ರಲ್ಲಿ ಪವಿತ್ರಾತ್ಮನು ತನ್ನ ವರಗಳನ್ನು ಎಲ್ಲರಿಗೂ ಕೊಡುತ್ತಾನೆ, ಬರೆ ಪುರುಷರಿಗಲ್ಲವೆಂದು ಪೌಲನು ಒಪ್ಪಿಕೊಳ್ಳುತ್ತಾನೆ ಮತ್ತು 1ನೇ ಕೊರಿಂಥ 11:5ರಲ್ಲಿ ಪೌಲನು, ಕೊರಿಂಥ ಸಭೆಯಲ್ಲಿ ಸ್ತ್ರೀಯರು ಪ್ರಾರ್ಥಿಸುವುದು, ಪ್ರವಾದಿಸುವುದು, ಸಭಾ ಆರಾಧನೆಯಲ್ಲಿತು ಎಂಬುದಾಗಿ ಮಾತನಾಡುತ್ತಾನೆ. ಪೌಲನು, ಸ್ತ್ರೀಯರು ಸಭಾ ಆರಾಧನೆಯಲ್ಲಿ ಪ್ರಾರ್ಥಿಸುವಾಗ, ಅವರು ತಲೆ ಮೇಲೆ ಹೊದಿಕೆಯನ್ನುಅಥವಾ ಸೆರಗನ್ನು ಹಾಕಿಕೊಂಡೇ ಇರಬೇಕೆಂದು ತಿಳಿಸುವಲ್ಲಿ ಅರ್ಥಗರ್ಭಿತವಾಗಿ ಹೆಂಗಸರು ಪ್ರಾರ್ಥಿಸುವುದು, ಪ್ರವಾದಿಸುವುದು ಸರಿ ಎಂದ ಹಾಗಾಯಿತು. ಪೌಲನು ಎಲ್ಲರೂ, ಸಭೆಯಲ್ಲಿನ ಎಲ್ಲ ಕೂಟಗಳಲ್ಲಿಯೂ ಭಾಗವಹಿಸಬಹುದು ಎಂದು ಹೇಳುವಲ್ಲಿ ಅಲ್ಲಿ ಸ್ತ್ರೀಯರು ಇದ್ದರು ಎಂದು ಭಾಸವಾಗುತ್ತದೆ. (1ನೇ ಕೊರಿಂಥ 14:26).

## ಸ್ತ್ರೀಯರು ಸಭಾ ಸಹಾಕರಾಗಿಯೂ ಮತ್ತು ಜೊತೆ ಕೆಲಸಗಾರರೂ ಆಗಿರುವುದು

ಸಭೆಗಳಲ್ಲಿ ಸ್ತ್ರೀಯರು ಸಭಾಸಹಾಯಕರಾಗಿ ಕೆಲಸ ಮಾಡಬಹುದೆಂದು ಅನೇಕ ಜನರು ನಂಬುತ್ತಾರೆ. 1ನೇ. ತಿಮೊಥೆ 3:8-13. ಪೌಲನು,ಪುರುಷರ ಮತ್ತು ಗಂಡಂದಿರ ಬಗ್ಗೆ ಹೇಳಿದ್ದು, ವಚನ 11ರಲ್ಲಿ ಹೆಂಗಸರನ್ನು ಸೂಚಿಸಿದ್ದಾನೆ. ವಚನ 11ರಲ್ಲಿ ಸೂಚಿಸಿದ ಹಾಗೆ, ಎರಡು ವಿಧವಾದ ಸ್ತ್ರೀಯರ ಬಗ್ಗೆ ಹೇಳುತ್ತದೆ. ಹೆಂಡತಿಯರು ಅಥವಾ ಸ್ತ್ರೀಯರು ಸಭಾಸಹಾಯಕರಾಗಿದ್ದರಿಂದ, ಪೌಲನು ಯಾರ ಬಗ್ಗೆ ಹೇಳಿದ್ದಾನೆ ಎಂಬುದು ಖಚಿತವಾಗಿಲ್ಲ. ನಮಗೆ ತಿಳಿದ ಹಾಗೆ ರೋಮಾ 16:1ರಲ್ಲಿ ಪೌಲನು ಪೊಯಿಬೆ ಎಂಬ ಸ್ತ್ರೀಯನ್ನು ಹೊಗಳಿ, ಆಕೆಯು ಒಬ್ಬ ಸೇವಕಿ ಅಥವಾ ಸಭಾಸಹಾಯಕಳು ಎಂದು ತಿಳಿಸಿದ್ದಾನೆ (ಇಲ್ಲಿ ಸೇವಕಿ ಎಂಬ ಮಾತನ್ನು[1] ಗ್ರೀಕ್ ಭಾಷೆಯಲ್ಲಿ ಡೀಕನ್ನಳು ಎಂದು ಭಾಷಾಂತರಿಸಬಹುದು).

ರೋಮಾ 16:3, 6:12 ಮತ್ತು ಫಿಲಿಪ್ಪಿ. 4:2-3 ರಲ್ಲಿ, ಪೌಲನು, ಅನೇಕ ಇತರೇ ಕೆಲಸಗಾರರಿಗೆ ವಂದನೆ ತಿಳಿಸಿರುತ್ತಾನೆ. ಅವರೆಲ್ಲರೂ ಸ್ತ್ರೀಯರೇ ಆಗಿದರು. ಪ್ರಿಸ್ಕಿಲ್ಲಾ ಮತ್ತು ಆಕೆಯ ಗಂಡ ಅಕ್ವಿಲ್ಲಾ ಎಂಬುವರನ್ನು ಆತನು ಒಟ್ಟಾಗಿ ಸೇರಿಸಿ ಹೇಳುತ್ತಾನೆ. ಯಾಕೆಂದರೆ ಅವರು ಉಪದೇಶದ ಸೇವೆಯಲ್ಲಿ ಭಾಗಿಗಳಾಗಿದ್ದರು (ಅ.ಕೃ. 18:18, 26). ಇದಲ್ಲದೇ ರೋಮಾ 16:7ರ ಪ್ರಕಾರ ಅನೇಕ ವಿದ್ವಾಂಸರು ಹಾಗು ಜುನಿಯಾ ಎಂಬ ಸ್ತ್ರೀಯ ಬಗ್ಗೆ ಪೌಲನು ಹೇಳುತ್ತಾನೆಯೇ ಹೊರತು ಜೂನಿಯಸ್ ಎಂಬ ಪುರುಷನ ಬಗ್ಗೆ ಅಲ್ಲ (ಗ್ರೀಕ್ ಬಾಷೆಯ ಈ ಶಬ್ದವು ಸ್ತ್ರೀಲಿಂಗ ಅಥವಾ ಪುಲ್ಲಿಂಗವಾಗಿ ಇರಬಹುದು). ಒಂದು ವೇಳೆ ಆ ಶಬ್ದವು ಸ್ತ್ರೀಗೆ ಉಲ್ಲೇಖವಾದರೆ, ಆಗ ಪೌಲನು ಆ ಸ್ತ್ರೀಯನ್ನು ಅಪೋಸ್ತಲಳು ಎಂದು ಕರೆಯುತ್ತಾನೆ.

## ಸ್ತ್ರೀ ನಾಯ ಕರು

ಒಂದು ವೇಳೆ ಸ್ತ್ರೀಯರು ಸಭಾಸಹಾಕರಾದರೆ ಸಭಾಪಾಲಕರ ಪಾತ್ರವಹಿಸಿ, ಅವರು ಸಭೆಯನ್ನು ನಡೆಸಬಾರದೇಕೆ? ಎಂಬ ಪ್ರಶ್ನೆಯು ಹಾಗೆಯೇ ಉಳಿಯುತ್ತದೆ. ಸತ್ಯವೇದದಲ್ಲಿ ಈ ಪ್ರಶ್ನೆಗೆ ಸರಿಯಾದ ಉತ್ತರ ಕೊಟ್ಟಿಲ್ಲವಾದ್ದರಿಂದ, ಇದರ ಫಲಿತಾಂಶದಿಂದಾಗಿ, ವಿವಿಧ ಸಭೆಗಳವರು ಬೇರೆ ಬೇರೆ ಪದ್ಧತಿಗಳನ್ನು ಅನುಸರಿಸುತ್ತಾ ಬಂದಿದ್ದಾರೆ. ಅನೇಕ ಕ್ರೈಸ್ತರು 1ನೇ ಕೊರಿಂಥ 14:33-35 ಮತ್ತು 1ನೇ ತಿಮೊಥೆ 2:11-15ರ ಕಡೆಗೆ ಗಮನ ಸೆಳೆಯುತ್ತಾ ಸ್ತ್ರೀಯರು ಮೌನವಾಗಿರಬೇಕು ಮತ್ತು ಉಪದೇಶ ಮಾಡಬಾರದು ಅಥವಾ ಪುರುಷನ ಮೇಲೆ ಅಧಿಕಾರವನ್ನು ಹೊಂದಿರ ಬಾರದು ಎಂದು ಹೇಳುತ್ತಾರೆ. ಈ ವಚನಗಳು ಸ್ಪಷ್ಟವಾಗಿ ನಮಗೆ ಏನು ಹೇಳುತ್ತವೆಂದರೆ, ಸಭೆಗಳಲ್ಲಿ ಸ್ತ್ರೀಯರು ಮಕ್ಕಳಿಗೂ, ಇತರೇ ಸ್ತ್ರೀಯರಿಗೂ ಉಪದೇಶಿಸಬಹುದಾದರೂ, ಪುರುಷರಿಗಲ್ಲ. ಈ ಎಲ್ಲಾ ಸಭೆಗಳವರು ಸ್ತ್ರೀಯರನ್ನು ಪ್ರಾರ್ಥಿಸುವುದಕ್ಕೂ ಅಥವಾ ಸಾಕ್ಷಿ

ಕೊಡುವುದಕ್ಕೂ ಸಭಾ ಕೂಟಗಳಲ್ಲಿ ಒಪ್ಪುತ್ತಾರೆ. ಮತ್ತು ಭಾಗಶಃ ಎಲ್ಲಾ ನೂತನ ಸಭೆಗಳಲ್ಲಿ ಸ್ತ್ರಿಯರು ಸುವಾರ್ತಾ ಪ್ರಚಾರಕರಾಗಿ ಪುರುಷರಿಗೆ ಉಪದೇಶಿಸಬಹುದು ಮತ್ತು ಪ್ರಸಂಗಿಸಬಹುದು ಎಂದು ಒಪ್ಪಿಕೊಳ್ಳುತ್ತಾರೆ.

ಬೇರೆ ಕ್ರೈಸ್ತರು ಈ ವಚನಗಳನ್ನು ಬೇರೆ ರೀತಿಯಲ್ಲಿ ಪ್ರತಿಪಾದಿಸುತ್ತಾರೆ. ಇವರು ತೋರಿಸುವುದೇನೆಂದರೆ, ಪೌಲನು ಕೊರಿಂಥ ಸಭೆಯವರಿಗೆ ಈ ವಚನಗಳನ್ನು ಬರೆಯುವಾಗ, ಸ್ತ್ರೀಯರು ಮೌನವಾಗಿರಬೇಕೆಂತಲೂ ಮತ್ತು ಅದೇ ಪತ್ರದಲ್ಲಿ ಸ್ತ್ರೀಯರು, ಪ್ರಾರ್ಥಿಸುವಾಗ ಮತ್ತು ಪ್ರವಾದಿಸುವಾಗ ತಮ್ಮ ತಲೆ ಮೇಲೆ ಸೆರಗು ಹಾಕಿಕೊಳ್ಳಬೇಕೆಂದು ತಿಳಿಸಿದ್ದಾನೆ. 1ನೇ ಕೊರಿಂಥ 11:5. ಆದುದರಿಂದ ಈ ಕ್ರೈಸ್ತರು 1ನೇ ಕೊರಿಂಥ 14:34-35ರ ಅರ್ಥವು, ಸಂಪೂರ್ಣ ಮೌನವೆಂದಲ್ಲ, ನಿಜವಾಗಿ ಹೇಳುವುದಾದರೆ ಇದು ತೊಂದರೆಪಡಿಸುವುದು ಅಥವಾ ಗಟ್ಟಿಯಾಗಿ ಕೂಗಾಡುವುದು ಸಭಾ ಆರಾಧನೆಗಳಲ್ಲಿ ಇರಬಾರದು ಎಂದು ತಿಳಿಯಬೇಕಾಗುತ್ತದೆ.ಒಂದು ವೇಳೆ, ಪೌಲನ ಕಾಲದಲ್ಲಿ, ಸಭಾ[2] ಆರಾಧನೆ ನಡೆಯುತ್ತಿದ್ದಾಗ, ಅನೇಕ ಸ್ತ್ರೀಯರು ಪ್ರಶ್ನೆ ಕೇಳುವುದು ಮತ್ತು ತಮ್ಮ ಗಂಡಂದಿರನ್ನು ಕೂಗಿ ಕರೆಯುವ ವಾಡಿಕೆ ಇಟ್ಟುಕೊಂಡಿದ್ದರೇನೋ ಎಂದು ಕಂಡುಬರುತ್ತದೆ.

ಹಾಗೆಯೇ 1ನೇ ತಿಮೊಥೆ 2:11-15ರ ಪ್ರಕಾರ, ಎರಡನೇ ಗುಂಪಿನ ಈ ಕ್ರೈಸ್ತರು, ವಿದ್ಯೆ ಇಲ್ಲದ ಸ್ತ್ರೀಯರು ಪುರುಷರಿಂದ ಅಧಿಕಾರ ತೆಗೆದುಕೊಳ್ಳಕೂಡದು ಮತ್ತು ಅವರಿಗೆ ಅಧೀನರಾಗಿದ್ದು ಕಲಿತುಕೊಳ್ಳಬೇಕು ಎಂದು ಪೌಲನು ತಿಮೋಥೆಯನಿಗೆ ಹೇಳಿರಬಹುದೆಂದು, ನಂಬುತ್ತಾರೆ. ಸಭೆಯಲ್ಲಿ ಸ್ತ್ರೀಯು ವಿದ್ಯಾವಂತಳಾಗಿದ್ದು ಮತ್ತು ಉಪದೇಶಿಸಲು ಅರ್ಹತೆಯುಳ್ಳವಳಾಗಿದ್ದರೆ ಆಕೆಗೆ ಅಧಿಕಾರ ಕೊಡಬಹುದು ಎಂದು ಇವರು ನಂಬುತ್ತಾರೆ. ದೇವರ ಚಿತ್ತದಂತೆ ಹಳೆ ಒಡಂಬಡಿಕೆಯಲ್ಲಿ ಡೆಬೋರಾ ಎಂಬ ಪ್ರವಾದಿನಿಯು ಯಹೂದ್ಯರನ್ನು ನಡೆಸಿದ ಉದಾಹರಣೆಯಿದೆ (ನ್ಯಾಯಸ್ಥಾಪಕರು 4:4). ಈ ಮೂರನೇ ಗುಂಪಿನ ಕ್ರೈಸ್ತರು, ಪೌಲನ ಈ ಮಾತುಗಳು ತಿಮೊಥಿಯನಿಗೆ ಮಾತ್ರ ಹೇಳಿದ್ದಾಗಿಯೂ ಮತ್ತು ಮೊದಲನೇ ಶತಮಾನಕ್ಕೆ ಸೀಮಿತವಾಗಿದ್ದು ಅದರಲ್ಲೂ ಕೊರಿಂಥ ಮತ್ತು ಎಫೆಸ ಸಭೆಗಳಿಗೆ ಮಾತ್ರ ಅನ್ವಯಿಸಿತ್ತು ಎಂದು ನಂಬುತ್ತಾರೆ. ಪೌಲನು, ಈ ದಿನಗಳಲ್ಲಿರುವ ವಿವಿಧ ಸಂಸ್ಕೃತಿಗಳಿಗನುಸಾರವಾಗಿ, ಆತನು ಗುಣ ನಡತೆಯ ಸಾಧನಗಳನ್ನು ಸಭೆಗಳ ಮೇಲೆ ಹೇರುತ್ತಿರಲಿಲ್ಲ. ಇವರು, ಪೌಲನು ಒಬ್ಬ ಗುಲಾಮನನ್ನು ಆತನ ಒಡೆಯನ ಬಳಿಗೆ ವಾಪಸ್ಸು ಕಳಿಸಿದ್ದಾಗ್ಯೂ ಕೂಡ ಆತನು ಖಂಡಿತವಾಗಿಯೂ ಗುಲಾಮಗಿರಿಯನ್ನು ಒಪ್ಪಲಿಲ್ಲ. ಯಾಕೆಂದರೆ ಫಿಲೆಮೋನ ಎಂಬಾತನು ತನ್ನ ಗುಲಾಮನನ್ನು ಸೆರೆಯಿಂದ ಬಿಡಿಸಬೇಕಾಗಿತ್ತು (ಫಿಲೆಮೋನ. 17 -21). **ಕ್ರಿಸ್ತನ ಮಹಿಮೆಗಾಗಿ ಪ್ರತಿಯೊಬ್ಬರು ಒಬ್ಬರಿಗೊಬ್ಬರು ಅಧೀನರಾಗಬೇಕೆಂದು** ಪೌಲನು ಅಪ್ಪಣೆ ಕೊಟ್ಟನು. ಬರೇ ಸ್ತ್ರೀಯರು ಮಾತ್ರ ಹೀಗೆ ಮಾಡಬೇಕೆಂದಲ್ಲ (ಎಫೆಸ 5:21).

ಈ ಕ್ರೈಸ್ತರು, ಯೇಸುವು ಎಲ್ಲಾ ಸಾಂಸ್ಕೃತಿಕ ಬಂಧನಗಳಿಂದ ಬಿಡಿಸಿದನು ಮತ್ತು ಎಲ್ಲರಿಗೂ ಸ್ವಾತಂತ್ರ್ಯಕೊಟ್ಟನು ಎಂದು ತಿಳಿಸುತ್ತಾರೆ. ಅವಿಶ್ವಾಸಿಗಳು, ಸ್ತ್ರೀಯರ ನಾಯಕತ್ವದ ಬಗ್ಗೆ ತುಚ್ಛವಾಗಿ ನೆನಸುವುದಿಲ್ಲ ಕಾರಣ ಇವರು ಸಮಾಜದಲ್ಲಿ ಸ್ತ್ರೀಯರಿಗೆ ಹೆಚ್ಚಿನ ಸ್ವಾತಂತ್ರ್ಯ ಕೊಟ್ಟಿದ್ದಾರೆ. ಆದುದರಿಂದ, ಈ ಕ್ರೈಸ್ತರು, ಸಭೆಗಳು ಸ್ತ್ರೀಯರಿಗೆ ನಾಯಕತ್ವದ ಸ್ಥಾನಗಳನ್ನು ಕೊಡಬೇಕೆಂದು ನಂಬುತ್ತಾರೆ.

ಮೊದಲನೆಯದಾಗಿ ಎರಡನೇಯ ಅಥವಾ ಮೂರನೇಯ ವಚನಗಳನ್ನು ನೋಡುವಾಗ, ಈ ವಿಷಯವು ಸ್ಪಷ್ಟವಾಗಿ ಕಂಡು ಬರುವುದಿಲ್ಲ. ನಾವು ಏನೇ ತೀರ್ಮಾನಿಸಿದರೂ,ನಮ್ಮ ಸಂಸ್ಕೃತಿ ಅವರಿಗಿಂತ ವಿಭಿನ್ನವಾಗಿದ್ದರೂ, ನಾವು ಬೇರೊಂದು ಸಂಸ್ಕೃತಿಗೆ ಸೇರಿದ, ಸಹೋದರರನ್ನು, ಸಹೋದರಿಯರನ್ನು, ಬಿಟ್ಟು ಕೊಡಬಾರದು. **ನೀವೆಲ್ಲರೂ ಕ್ರಿಸ್ತನಲ್ಲಿ ಯೇಸುವಿನಲ್ಲಿ ಒಂದೇ ಆಗಿರುವುದರಿಂದ ಯಹೂದ್ಯನೂ ಗ್ರೀಕನೂ ಎಂದು ಆಳು, ಒಡೆಯ ಎಂದೂ, ಗಂಡು ಹೆಣ್ಣು ಎಂದು ಭೇದವಿಲ್ಲ.** (ಗಲಾತ್ಯ 3:28).

---

[1] ಹೊಸ ಒಡಂಬಡಿಕೆಯು ಮೂಲತಃ ಗ್ರೀಕ್ ಬಾಷೆಯ ಲ್ಲಿ ಬರೆಯ ಲ್ಪಟ್ಟಿತು .

[2] (1.ನೇ ಕೊರಿಂಥ . 14:34-35).ರ ವಚನದ ತರ್ಜುಮೆಯು, ಕೊರಿಂಥದವರಿಂದಲೇ ಬಂದದ್ದಾಗಿದೆ, ಅನೇಕ ಸ್ಥಳಗಳಲ್ಲಿ, 1.ನೇ. ಕೊರಿಂಥದಲ್ಲಿ ಅಪೋಸ್ತಲನಾದ ಪೌಲನು ಕೊರಿಂಥ ಜನರ ಭಾವನೆಗ ಳನ್ನು ಬರೆದು ಅದನ್ನೆ ಸ್ತಿರಪಡಿಸಿದ್ದಾನೆ.1.ನೇ. ಕೊರಿಂಥ (1.ನೇ ಕೊರಿಂಥ. 1:12, 3:4, 6:12-13, 7:1, 8:1, 10:23). ಈ ತರ್ಜುಮೇಯ ಪ್ರಕಾರ 1.ನೇ ಕೊರಿಂಥ. 14:34-35., ಕೊರಿಂಥದವರ ಹೇಳಿಕೆಯು ಯಹೂದ್ಯ ಸಭೆಯವರ ಸಾಮಾನ್ಯವಾದ ನಿಯಮಗಳಿಗನುಗುಣವಾಗಿಯೆ ಇರುತ್ತದೆ. ಒಂದು, ಈಗಿರುವಲ್ಲಿ **36**.ನೇಯ ವಚನವು ಅಲ್ಲಗಳೆದಿರುವಂತ ವಚನವಾಗಿದೆ. ವಾಸ್ತವವಾಗಿ ಗ್ರೀಕ್ ಭಾಷೆಯಲ್ಲಿ (ನೀನು) ಎಂಬ ಮಾತು, ವಚನ **36**.ರಲ್ಲಿ ಗಂಡಸರಿಗೆ ಸಂಬಂದವಾಗುತ್ತದೆ. ಆದುದರಿಂದ ಪೌಲನು ಗಂಡಸರನ್ನು ಉದ್ದೇಶಿಸಿ ಮಾತನಾಡುತ್ತಾ ದೇವರ ವಾಕ್ಯವು ಮೂಲತಃ ನಿಮ್ಮಿಂದ ಅಂದರೆ ಗಂಡಸರಿಂದ ಉಂಟಾಯಿತೇ? ಎಂದು ಕೇಳುತ್ತಾನೆ. ಅವು ನಿಮಗೆ,ಅಂದರೆ ಗಂಡಸರಿಗೆ ಮಾತ್ರ ಈ ವಾಕ್ಯಗಳು ತಲುಪಿದವೋ?. ಗ್ರೀಕ್ ಬಾಷೆಯಲ್ಲಿ ಈ ಪ್ರಶ್ನೆಗಳನ್ನು ಯಾವ ರಿತಿಯಲ್ಲಿ ಬರೆಯಲಾಗಿದೆ ಎಂದರೆ ಅದಕ್ಕೆ ವಿರೂದ್ದವಾದ ಉತ್ತರ ದೊರಕುತ್ತದೆ ಎಂದು ನೀರಿಕ್ಷಿಸ ಬಹುದು.

# ಮಕ್ಕಳು ಮತ್ತು ದೇವರ ರಾಜ್ಯ

## ಪ್ರಮುಖ್ಯ ವಚನಗಳು

ಆದಿಕಾಂಡ 17:10-14 :- ನಿಮ್ಮಲ್ಲಿರುವ ಪ್ರತಿಯೊಬ್ಬ ಗಂಡು ಮಗುವು ಎಂಟು ದಿನಗಳ ವಯಸ್ಸುಳ್ಳವನಾದಾಗ ಅವನಿಗೆ ಸುನ್ನತಿ ಮಾಡಿಸಬೇಕು.

ಕೀರ್ತನೆ 22:9-10 :- ತಾಯಿಯ ಗರ್ಭದೊಳಗಿನಿಂದ .... ತಾಯಿಯ ಎದೆಯಲ್ಲಿ ...... ...... ನೀನೇ ಅಲ್ಲವೇ?

ಕೀರ್ತನೆ 51:5 :- ಹುಟ್ಟಿದಂದಿನಿಂದ ನಾನು ಪಾಪಿಯೇ, ಮಾತೃಗರ್ಭವನ್ನು ಹೊಂದಿದ ದಿನದಿಂದ ದ್ರೋಹಿಯೇ.

ಮತ್ತಾಯ 18:2-6 :- ಆದರೆ ನನ್ನಲ್ಲಿ ನಂಬಿಕೆ ಇಡುವ ಒಂದು ಚಿಕ್ಕ ಮಗುವನ್ನು ಸೇರಿಸಿಕೊಂಡರೆ, ನನ್ನನ್ನು ಸೇರಿಸಿಕೊಂಡ ಹಾಗಾಯ್ತು..........

ಮತ್ತಾಯ 21:15-16 :- ಸಣ್ಣ ಮಕ್ಕಳ ಬಾಯಿಂದಲೂ, ಮೊಲೆ ಕೂಸುಗಳ ಬಾಯಿಂದಲೂ, ಸ್ತೋತ್ರವನ್ನು ಸಿದ್ಧಿಗೆ ತಂದಿ.

ಮಾರ್ಕ 10:14-16 :- ಯೇಸು ಅವರಿಗೆ ಹೇಳಿದ್ದೇನೆಂದರೆ ಮಕ್ಕಳನ್ನು ನನ್ನ ಹತ್ತಿರ ಬರಗೊಡಿಸಿರಿ. ಅವುಗಳಿಗೆ ಅಡ್ಡಿ ಮಾಡಬೇಡಿರಿ. ಯಾಕೆಂದರೆ ದೇವರ ರಾಜ್ಯವು ಅಂತಹವರದೇ.

ಲೂಕ 1:5 :- ಆತನು (ಯೋಹಾನನು) ಹುಟ್ಟಿದಂದಿನಿಂದಲೂ, ಪವಿತ್ರಾತ್ಮಭರಿತನಾಗಿರುವನು.

ಅ.ಕೃ. 2:38-39 :- ಆ ವಾಗ್ದಾನವೂ, ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತು ನಮ್ಮ ದೇವರಾಗಿರುವ ಕರ್ತನು ತನ್ನ ಕಡೆ ಕರೆಯುವರೆಲ್ಲರಿಗೆ ಮಾಡೋಣವಾಗಿದೆ.

## ಪ್ರಶ್ನೆಯು

ಸತ್ಯವೇದವು ಸ್ಪಷ್ಟವಾಗಿ ಹೇಳುತ್ತದೆ. ಏನೆಂದರೆ, ನಾವು ರಕ್ಷಣೆ ಹೊಂದಬೇಕಾದರೆ, ನಾವು ವಿಶ್ವಾಸಿಸಬೇಕು ಮತ್ತು ದೀಕ್ಷಾಸ್ನಾನ ಪಡೆದುಕೊಳ್ಳಬೇಕು (ಮಾರ್ಕ 16:16). ನಾವು ನಮ್ಮ ಪಾಪಗಳಿಗಾಗಿ ಪಶ್ಚಾತ್ತಾಪ ಪಟ್ಟು ಅನಂತರ ನಮ್ಮ ಪಾಪ ಪರಿಹಾರಕ್ಕಾಗಿ ದೀಕ್ಷಾಸ್ನಾನ ಹೊಂದಬೇಕೆಂದು ನಮಗೆ ಆಜ್ಞೆಯಾಗಿದೆ. ಅ.ಕೃ. 2:38. ನಮ್ಮ ಪಾಪಗಳನ್ನು ಬಾಯಿಂದ ಅರಿಕೆ ಮಾಡಿ ಮತ್ತು ಹೃದಯದಲ್ಲಿ ನಂಬಬೇಕು. ರೋಮಾ. 10:9-10. ಮತ್ತು ನಿಜವಾಗಿಯೂ, ಯೋಹಾನ 3:16ರಲ್ಲಿ ಹೇಳಿರುವಂತೆ, ಯಾರ್ಯಾರು ಯೇಸುವಿನಲ್ಲಿ ನಂಬಿಕೆ ಇಡುತ್ತಾರೋ ಅವರಿಗೆ ನಿತ್ಯ ಜೀವ ದೊರಕುವುದು.

## ಪ್ರಶ್ನೆ ಹೀಗೆ ಉದ್ಭವಿಸುತ್ತದೆ

ಎಳೆ ಕೂಸುಗಳು ಮತ್ತು ಮಕ್ಕಳು ಇನ್ನು ಮಾತನಾಡಲು ಆಗದಿರುವಲ್ಲಿ ಇದು ಹೇಗಾದೀತು? ಇವುಗಳು ನಿಜವಾಗಿಯೂ, ಪಶ್ಚಾತ್ತಾಪ ಪಡುವುದು, ನಂಬುವುದು ಮತ್ತು ತಮ್ಮ ಬಾಯಿಂದ ಪಾಪದ ಅರಿಕೆ, ಮಾಡಿಕೊಳ್ಳುವುದು ಹೇಗೆ? ಒಂದು ವೇಳೆ ಇಲ್ಲದಿದ್ದರೆ, ಇವರು ರಕ್ಷಣೆ ಹೊಂದುವುದು ಹೇಗೆ? ಇದಕ್ಕೆ ಸಂಬಂಧಿಸಿದಂತೆ ಮತ್ತೊಂದು ಪ್ರಶ್ನೆ ಏಳುತ್ತದೆ. ಚಿಕ್ಕ ಶಿಶುಗಳು ಸತ್ತರೆ, ಇದು ಎಲ್ಲಿಗೆ ಹೋಗುತ್ತೆ. ಪರಲೋಕಕ್ಕೋ ಅಥವಾ ನರಕಕ್ಕೋ? ಇವು ಬಹಳ ಕಠಿಣವಾದ ಪ್ರಶ್ನೆಗಳು ಯಾಕೆಂದರೆ ಸತ್ಯವೇದವು ಇವುಗಳಿಗೆ ಖಚಿತವಾದ ಉತ್ತರ ಕೊಡುವುದಿಲ್ಲ.

ಮಕ್ಕಳು ಮತ್ತು ದೇವರ ರಾಜ್ಯದ ಬಗ್ಗೆ ಸತ್ಯವೇದದಲ್ಲಿ ಕೆಲವೇ ವಚನಗಳಿವೆ. ಇದರಲ್ಲಿ ಅನೇಕ ವಚನಗಳು ನೇರವಾಗಿ ಸಂಬಂಧಿಸಿಲ್ಲ.

**ಸತ್ಯವೇದದಲ್ಲಿ ಮಕ್ಕಳು** :- ಸತ್ಯವೇದ ಹೇಳುವ ಪ್ರಕಾರ ಎಲ್ಲರೂ ಪಾಪ ಮಾಡಿದ್ದಾರೆ ರೋಮಾ. 3:23, 5:12. ಕೀರ್ತನೆಗಾರನು ಹೇಳುವ ಪ್ರಕಾರ ಆತನು ಹುಟ್ಟಿದಾಗಿನಿಂದ ಪಾಪಿಯೇ, ಇದೂ ಅಲ್ಲದೆ ತಾಯಿಯ ಗರ್ಭದಿಂದಲೇ

ಪಾಪಿಯಾಗಿದ್ದೇನೆಂದು ಹೇಳಿಕೊಂಡಿದ್ದಾನೆ (ಕೀರ್ತನೆ 51:5). ಯೋಬನು ಸಹ ಇದೇ ರೀತಿ ಹೇಳಿದ್ದಾನೆ (ಯೋಬ 25:4). ಆದ್ದರಿಂದ ಸತ್ಯವೇದ ಹೇಳುವ ಪ್ರಕಾರ, ಆಗ ತಾನೇ ಹುಟ್ಟಿದ ಶಿಶುಗಳೂ ಸಹ ಪಾಪ ಸ್ವಭಾವಕ್ಕೆ ಒಳಪಟ್ಟಿವೆ ಮತ್ತು ದೇವರಿಗೆ ವಿರೊದವಾಗಿವೆ. ಪ್ರತಿಯೊಬ್ಬ ವ್ಯಕ್ತಿಗೂ ರಕ್ಷಣೆ ಹೊಂದಲು ಮತ್ತು ನೀತಿವಂತನಾಗಲು ದೇವರ ಕೃಪೆ ಬೇಕು.

ಸತ್ಯವೇದ ಹೇಳುವ ರೀತಿಯಲ್ಲಿ, ದೇವರ ಕೃಪೆಯಿಂದ, ಆಗ ತಾನೇ ಹುಟ್ಟಿದ ಶಿಶುಗಳು ಸಹ ದೇವರಲ್ಲಿ ಭರವಸೆ ಇಡಬಹುದು (ಕೀರ್ತನೆ 22:9-10). ಯೇಸುವು ಒಂದು ಚಿಕ್ಕ ಮಗುವನ್ನು ಹತ್ತಿರಕ್ಕೆ ಕರೆದನು ಮತ್ತು **ಈ ಚಿಕ್ಕ ಮಕ್ಕಳು ಆತನಲ್ಲಿ ನಂಬಿಕೆ ಇಡುವುದರ** ಬಗ್ಗೆ ಮಾತನಾಡಿದನು (ಮತ್ತಾಯ 18:6). ಯೇಸುವು ಕೀರ್ತನೆ 8:2ರನ್ನು ತೋರಿಸಿ ಹೀಗೆ ಹೇಳುತ್ತಾನೆ, ಸಣ್ಣ ಮಕ್ಕಳ ಬಾಯಿಂದಲೂ, ಮೊಲೆ ಕೂಸುಗಳ ಬಾಯಿಂದಲೂ, ಸ್ತೋತ್ರವನ್ನು ಸಿದ್ಧಿಗೆ ತಂದಿ ಎಂಬುದನ್ನು ನೆನಪಿಗೆ ತರುತ್ತಾನೆ.(ಮತ್ತಾಯ 21:16). ಲೂಕ 1:15, 41-44 ನ್ನು ನೋಡುವಾಗ, ಸ್ನಾನಿಕನಾದ ಯೋಹಾನನು ತಾಯಿಯ ಗರ್ಭದಿಂದಲೇ ಪವಿತ್ರಾತ್ಮ ಭರಿತನಾಗಿದ್ದನು. ಆದುದರಿಂದ ಕೆಲವೊಂದು ಶಿಶುಗಳು ದೇವರಲ್ಲಿ ಒಂದು ವಿಧವಾದ ನಂಬಿಕೆ ಇಟ್ಟಿರುವುದನ್ನು ನಾವು ಇಲ್ಲಿ ನೋಡುತ್ತೇವೆ.

ಯೇಸುವು ಚಿಕ್ಕ ಮಕ್ಕಳನ್ನು ಆತನ ಹತ್ತಿರ ಬರಗೊಡಿಸುವಂತೆ ತನ್ನ ಶಿಷ್ಯರಿಗೆ ಅಪ್ಪಣೆ ಮಾಡಿದನು. ಮತ್ತು ಅವರಿಗಾಗಿ ಪ್ರಾರ್ಥಿಸಿ, ಅವರನ್ನು ಆಶೀರ್ವದಿಸಿದನು. ಮಾರ್ಕ 10:13-16. ಇವರಲ್ಲಿ ಚಿಕ್ಕ ಕೂಸುಗಳು ಸೇರಿವೆ (ಲೂಕ 18:15). ಆತನು ಹೇಳುತ್ತಾನೆ, ದೇವರ ರಾಜ್ಯವು ಇಂತಹವರದೇ ಎಂದು (ಮಾರ್ಕ 10:14). ದೇವರು ಮಕ್ಕಳನ್ನು ಕರುಣೆಯಿಂದ ನೋಡುತ್ತಾನೆ, ಇವುಗಳಿಗೆ ನೇಮಕವಾದ ದೂತರು ಯಾವಾಗಲೂ ದೇವರ ಬಳಿಯಲ್ಲಿ ನಿಂತಿದ್ದಾರೆ ಮತ್ತಾಯ 18:10. ಆದರೆ ಇಲ್ಲಿ ಈ ರೀತಿ ಬರೆದಿಲ್ಲ ಏನೆಂದರೆ ಎಲ್ಲಾ ಮಕ್ಕಳಿಗೂ ಪರಲೋಕದಲ್ಲಿ ದೂತರಿರುವರೇ ಅಥವಾ ಕ್ರಿಸ್ತನಲ್ಲಿ ನಂಬಿಕೆ ಇಟ್ಟಿರುವ ಕೆಲವು ಮಕ್ಕಳಿಗೆ ಮಾತ್ರವೇ? (ಮತ್ತಾಯ 18:2-6, ಮಾರ್ಕ 9:42).

ಹಳೇ ಒಡಂಬಡಿಕೆಯಲ್ಲಿ ದೇವರ ಕುಟುಂಬಕ್ಕೆ ಸೇರಿಸಿಕೊಳ್ಳುವುದಕ್ಕಾಗಿ ದೇವರು ಯಹೂದ್ಯರಿಗೆ ತಮ್ಮ ಎಲ್ಲಾ ಗಂಡು ಮಕ್ಕಳಿಗೆ ಸುನ್ನತಿ ಮಾಡಬೇಕೆಂದು ಆಜ್ಞೆ ಮಾಡಿದನು. ಈ ಸಂಸ್ಕಾರವು, ಹುಟ್ಟಿದ ಎಂಟನೇ ದಿನದಲ್ಲಿ ಮಾಡಬೇಕಾಗಿತ್ತು. ಮತ್ತು ಇದು, ದೇವರಿಗೂ ಮತ್ತು ಯಹೂದ್ಯರಿಗೂ ನಡುವೆ ಆದ ಒಪ್ಪಂದವನ್ನು ಸೂಚಿಸುವಂತಾದ್ದಾಗಿತ್ತು (ಆದಿಕಾಂಡ 17:10-13). ದೇವರು, ಹೀಗೂ ಪ್ರಕಟ ಮಾಡಿದನು ಏನೆಂದರೆ, ಗಂಡು ಮಗುವಿಗೆ ಸುನ್ನತಿ ಮಾಡಿಸದಿದ್ದರೆ, ಆ ಮಗುವು ದೇವ ಜನರಿಂದ ತೆಗೆದು ಹಾಕಲ್ಪಡುವುದು, ಯಾಕೆಂದರೆ ಇದು ಒಡಂಬಡಿಕೆಯನ್ನು ಮೀರಿದೆ (ಆದಿ 17:14). ಹೆಣ್ಣು ಕೂಸುಗಳು ಹಾಗೂ ಈ ಒಡಂಬಡಿಕೆಯ ಬಗ್ಗೆ ಏನೂ ಹೇಳಿಲ್ಲ.

ಆದರೆ ಹೊಸ ಒಡಂಬಡಿಕೆಯಲ್ಲಿ ಸ್ಪಷ್ಟವಾಗಿ ಹೇಳಿಯದೆ, ಏನೆಂದರೆ ಹಳೇ ಒಡಂಬಡಿಕೆಯ ಕಟ್ಟಳೆಯಿಂದ ನಾವು ಹೊರತಾಗಿದ್ದೇವೆ. ದೇವರ ಕುಟುಂಬಕ್ಕೆ ಸೇರಬೇಕಾದರೆ, ಈಗ, ಸುನ್ನತಿಯ ಅವಶ್ಯಕತೆಯಿಲ್ಲ. ನಾವು ನಂಬಿಕೆಯ ಮೂಲಕ ದೇವರ ಮಕ್ಕಳೆನಿಸಿಕೊಳ್ಳುತ್ತೇವೆ. ಯಹೂದ್ಯರ ಕಟ್ಟಳೆಯಂತಲ್ಲ. **ನೀವೆಲ್ಲರೂ ಯೇಸು ಕ್ರಿಸ್ತನಲ್ಲಿಟ್ಟಿರು ವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ (ಗಲಾತ್ಯ 3:26).**

## ಸಭೆಯ ಲ್ಲಿ ಮಕ್ಕಳು

ಚಿಕ್ಕ ಮಕ್ಕಳು ಮತ್ತು ನವಜಾತ[1] ಶಿಶುಗಳೂ ಕೂಡ ದೇವರ ಶಕ್ತಿ ಮತ್ತು ಕೃಪೆಯಲ್ಲಿ ಒಂದು ವಿಧವಾದ ನಂಬಿಕೆ ಇಟ್ಟಿರುವವರಾಗಿದ್ದಾರೆ ಮತ್ತು ಇವರು ದೇವರ ರಾಜ್ಯದಲ್ಲಿರುವುದಕ್ಕೆ ಯೋಗ್ಯರಾಗಿರುತ್ತಾರೆ(ಕೀರ್ತನೆ 22:9-10, ಲೂಕ 18:15-16). ಈ ಸತ್ಯವು ಎಲ್ಲಾ ಮಕ್ಕಳಿಗೂ ನಿಜವೆನಿಸುತ್ತದೆಯೇ ಅಥವಾ ಕೆಲವರಿಗೆ ಮಾತ್ರವೋ? ಮತ್ತು ಇದು ಹೇಗೆ ನಿಜವಾಗುತ್ತದೆ? ಸಭಾ ಚರಿತ್ರೆಯುದ್ದಕ್ಕೂ ವಿದ್ವಾಂಸರು ಈ ಪ್ರಶ್ನೆಗಳಿಗೆ ಬೇರೆ ಬೇರೆಯಾದ ಉತ್ತರಗಳನ್ನು[2] ಕೊಟ್ಟಿದ್ದಾರೆ.

ಅನೇಕ ಕ್ರೈಸ್ತರು, ಸುನ್ನತಿಗೆ ಬದಲಾಗಿ,ನೀರಿನಿಂದ ದೀಕ್ಷಾಸ್ನಾನ ತೆಗೆದುಕೊಳ್ಳುವುದರ ಮೂಲಕ ಮಕ್ಕಳನ್ನು ದೇವರ ಕುಟುಂಬಕ್ಕೆ ಸೇರಿಸಲಾಗುತ್ತದೆ ಎಂದು ನಂಬುತ್ತಾರೆ. ಇವರು ನೀರಿನಿಂದಾಗುವ ದೀಕ್ಷಾ ಸ್ನಾನವೇ ಕ್ರಿಸ್ತೀಯ ಸುನ್ನತಿಯಾಗಿದ್ದು(ಕೊಲೊಸ್ಸೆ. 2:11-13) ನಂಬಿಕೆಯ ಮೂಲಕ, ನಮ್ಮ ಪಾಪಾಧೀನ ಸ್ವಭಾವವು ಕತ್ತರಿಸಲ್ಪಟ್ಟು ಮತ್ತು ಇದು ಬಿಸಾಡಲ್ಪಡುತ್ತದೆ ಮತ್ತು ನಾವು ದೇವರ ಕುಟುಂಬಕ್ಕೆ ಸೇರುತ್ತೇವೆ. ಯೇಸುವು, ಚಿಕ್ಕ ಮಕ್ಕಳನ್ನು ತನ್ನ ಹತ್ತಿರ ಬರಗೊಡಿಸಬೇಕೆಂದು ಆಜ್ಞೆ ಮಾಡಿದನು (ಮಾರ್ಕ 10:14) ಮತ್ತು ಯಾರು ಆತನಲ್ಲಿ **ನಂಬಿಕೆ ಇಡುತ್ತಾರೋ ಮತ್ತು ದೀಕ್ಷಾಸ್ನಾನ ತೆಗೆದುಕೊಳ್ಳುತ್ತಾರೋ ಅವರಿಗೆ ರಕ್ಷಣೆಯಾಗುವುದೆಂದು** ವಾಗ್ದಾನ ಮಾಡಿದ್ದಾನೆ (ಮಾರ್ಕ 16:16, ನೋಡಿರಿ. ಸಾಮಾನ್ಯ ವಿಷಯಗಳು, ನೀರಿನಿಂದ ದೀಕ್ಷಾಸ್ನಾನ) ಇವರಲ್ಲಿ ಕೆಲವು ಕ್ರೈಸ್ತರು ಹಸುಗೂಸುಗಳು ಕ್ರಿಸ್ತನಲ್ಲಿ ನಂಬಿಕೆ

ಇಡಬಹುದೆಂದು ಬಾವಿಸುತ್ತಾರೆ. ಇನ್ನು ಕೆಲವರು, ಮಗುವಿಗಾಗಿ, ತಂದೆ, ತಾಯಿಗಳು ನಂಬಬ ಹುದು ಮತ್ತು ತಂದೆತಾಯಿಗಳ ನಂಬಿಕೆಯನ್ನು ದೇವರು ಅಂಗೀಕರಿಸುತ್ತಾನೆ ಎಂದು ಯೋಚಿಸುತ್ತಾರೆ (1ನೇ ಕೊರಿಂಥ 7:14). ಮಗುವು ಸಾಕಷ್ಟು ಬೆಳೆದ ನಂತರ ಕ್ರಿಸ್ತನನ್ನು ಅಂಗೀಕರಿಸಬೇಕು ಇಲ್ಲವೆ ತ್ಯಜಿಸಬೇಕು .

ಇನ್ನು ಕೆಲವು ಕ್ರೈಸ್ತರು, ಎರಡನೇ ದೃಷ್ಟಿಕೊನದ ನಂಬಿಕೆಯನ್ನು ವ್ಯಕ್ತಪಡಿಸುತ್ತಾರೆ. ಈ ಅಭಿಪ್ರಾಯದ ಪ್ರಕಾರ, ದೇವರು ಎಲ್ಲರನ್ನು ರಕ್ಷಣೆ ಪಡೆಯುವುದಕ್ಕೆ ಆರಿಸಿಕೊಳ್ಳುವುದಿಲ್ಲಅಂದರೆ ಕೆಲವರನ್ನು ಮಾತ್ರ (ಯೋಹಾನ 15:16, 19, ರೋಮಾ. 9:18, ಸಾಮಾನ್ಯ ವಿಷಯಗಳು, ರಕ್ಷಣೆಯು, ದೇವರ ಆಯ್ಕೆಯೋ ಅಥವಾ ಮನುಷ್ಯನ ಆಯ್ಕೆಯೋ). ದೇವರು ಕೆಲವು ಶಿಶುಗಳನ್ನು ರಕ್ಷಣೆಗಾಗಿ ಆರಿಸಿಕೊಳ್ಳುತ್ತಾನೆ ಮತ್ತು ಇತರರನ್ನು ಆರಿಸಿಕೊಳ್ಳುವುದಿಲ್ಲ. ಯಾರು ದೇವರಿಂದ ಆರಿಸಲ್ಪಟ್ಟಿದ್ದಾರೋ, ಅವರು ಒಂದು ವೇಳೆ ಸತ್ತರೆ ಪರಲೋಕಕ್ಕೆ ಹೋಗುವರು, ಬೇರೆಯವರು ಇಲ್ಲ.

ಇನ್ನು ಕೆಲವು ಕ್ರೈಸ್ತರು ಮೂರನೇಯ ಅಭಿಪ್ರಾಯ ಹೊಂದಿದ್ದಾರೆ. ದೇವರು ರಕ್ಷಣೆಯನ್ನು ಎಲ್ಲರಿಗೂ (ಚಿಕ್ಕವರಿಗೂ, ದೊಡ್ಡವರಿಗೂ) ಕೊಡುತ್ತಾನೆ. ಆದರೆ ಎಲ್ಲರೂ ಆತನ ರಕ್ಷಣೆಯನ್ನು ಅಂಗೀಕರಿಸುವುದಿಲ್ಲ. ಅನೇಕರು ದೇವರನ್ನು ತಳ್ಳಿಹಾಕುತ್ತಾರೆ. ಅವರು ಹೇಳುವ ಪ್ರಕಾರ, ಇದೂ ಮಕ್ಕಳಿಗೂ ಅನ್ವಯಿಸುತ್ತದೆ. ಈ ಕ್ರೈಸ್ತರು ವಿಶ್ವಾಸಿಸುವುದೇನೆಂದರೆ, ಶಿಶುಗಳು ಸಹ ತಮ್ಮ ಆತ್ಮನ ಮೂಲಕ, ಹೃದಯದಲ್ಲಿ ನಂಬಿಕೆ ವ್ಯಕ್ತಪಡಿಸಬಹುದು, ಇವರ ಮನಸ್ಸು ವಿಕಾಸಗೊಳ್ಳದಿದ್ದರೂ ಸಹ (ಕೀರ್ತನೆ 22:9-10) ಮತ್ತಾಯ 18:5-6, ಲೂಕ 1:15. ಆದರೆ ಇವರು ಎಲ್ಲಾ ಶಿಶುಗಳು ನಂಬುತ್ತವೆ ಎಂದು ಹೇಳುವುದಿಲ್ಲ. ದೊಡ್ಡವರಂತೆ ಕೆಲವು ಶಿಶುಗಳು ದೇವರನ್ನು ತಳ್ಳಿಹಾಕಬಹುದು. ಯಾವ ಶಿಶುಗಳು ವಾಸ್ತವವಾಗಿ ದೇವರಲ್ಲಿ ನಂಬಿಕೆ ಇಡುತ್ತವೋ ಅವು ಮಾತ್ರ ಸತ್ತಾಗ, ಪರಲೋಕಕ್ಕೆ ಹೋಗುವುವು.

ಇನ್ನೂ ಕೆಲವು ಕ್ರೈಸ್ತರು, ನಾಲ್ಕನೆಯ ಅಭಿಪ್ರಾಯ ಹೊಂದಿದ್ದಾರೆ. ಹೆಸರಿಸಲಾಗಿ, ದೇವರಶಕ್ತಿ ಮತ್ತು ಕೃಪೆಯಿಂದಾಗಿ ಎಲ್ಲಾ ಶಿಶುಗಳು (ಅಥವಾ ಕ್ರೈಸ್ತ ದಂಪತಿಗಳ ಎಲ್ಲಾ ಮಕ್ಕಳು)ಈಗಾಗಲೇ ದೇವರ ರಾಜ್ಯಕ್ಕೆ ಸೇರಿವೆ ಮತ್ತು ತಮ್ಮಷ್ಟಕ್ಕೆ ತಾವೇ ಯೇಸುವಿನಲ್ಲಿ ನಂಬಿಕೆ ಇಡುತ್ತವೆ. ಮತ್ತು, ಮಾರ್ಕ 10:14-15, 1ನೇ ಕೊರಿಂಥ 7-14. ಆದುದರಿಂದ ಇವರು ನಂಬುವುದೇನೆಂದರೆ, ಎಲ್ಲಾ ಮಕ್ಕಳು ಸತ್ತಾಗ ಪರಲೋಕಕ್ಕೆ ಹೋಗುತ್ತವೆ. ಅದರಲ್ಲೂ ಕ್ರೈಸ್ತ ತಂದೆತಾಯಿಗಳ ಎಲ್ಲ ಮಕ್ಕಳೂ.

ಕಡೆಯದಾಗಿ, ಕೆಲವು ಕ್ರೈಸ್ತರು 1ಶಿಶುಗಳಲ್ಲಿ ಪಾಪಾಧೀನ ಸ್ವಭಾವ ಇರುವುದಾದರೂ, ಅವುಗಳು ಪ್ರತ್ಯಕ್ಷವಾಗಿ ಪಾಪ ಮಾಡುವುದಿಲ್ಲ. ಇವರು ಹೇಳುವ ಪ್ರಕಾರ ಶಿಶುಗಳು ಮುಗ್ಧರಾಗಿವೆ. ಈ ಅಭಿಪ್ರಾಯದಿಂದಾಗಿ ಈ ಎಲ್ಲಾ ಶಿಶುಗಳು ಸತ್ತಾಗ ಯಥಾವತ್ತಾಗಿ ಪರಲೋಕಕ್ಕೆ ಹೋಗುತ್ತವೆ ಎಂದು ಈ ಕ್ರೈಸ್ತರು ಹೇಳುತ್ತಾರೆ.

**ಸಾರಾಂಶ**

ಈ ವಿಷಯದಲ್ಲಿ ನಾವು ಏನೇ ನಂಬಿಕೆ ಇಟ್ಟರೂ, ತಂದೆ ತಾಯಿಗಳಾದ ನಮ್ಮ ಜವಾಬ್ದಾರಿಯು ಸ್ಪಷ್ಟವಾಗಿದೆ. ಇದೇನೇ ಇರಲಿ, ದೀಕ್ಷಾಸ್ನಾನವು ಪ್ರತಿಯೊಬ್ಬರಿಗೂ ಮುಖ್ಯವಾಗಿದೆ. ನಾವು ದೀಕ್ಷಾಸ್ನಾನ ಕೊಟ್ಟರೂ, ಒಪ್ಪಿಸಿ ಕೊಟ್ಟರೂ, ನಾವು ನಮ್ಮ ಮಕ್ಕಳನ್ನು ದೇವರ ಕೈಯಲ್ಲಿಟ್ಟು ಮತ್ತು ಅವುಗಳ ರಕ್ಷಣೆಗಾಗಿ ಆತನಲ್ಲಿ ಭರವಸೆ ಇಡುತ್ತೇವೆ. ನಾವು ಇವರಿಗೆ ದೇವರ ಮತ್ತು ಆತನ ವಾಕ್ಯದ ವಿಷಯವಾಗಿ ಉಪದೇಶಿಸಬೇಕು (ಧರ್ಮೋಪದೇಶಕಾಂಡ 4:9-10, 6:6-7, ಕೀರ್ತನೆ 78:5-6) ಮತ್ತು ನಾವು ಪ್ರೀತಿಪೂರ್ವಕವಾಗಿ ಇವರಲ್ಲಿ ಶಿಸ್ತು ಮೂಡಿಸಬೇಕು. ಎಫೆಸ 6:4, ಕೊಲಸ್ಸೆ 3:21. **ಈ ವಾಗ್ದಾನವು, ನಿಮಗೂ ಮತ್ತು ನಿಮ್ಮ ಮಕ್ಕಳಿಗೂ, ದೂರದಲ್ಲಿರುವ ಎಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ** (ಅ.ಕೃ. 2:39).

[1] ಶಿಶುಗಳು ಎಂದು ಭಾಷಾಂತರ ಮಾಡಿರುವ ಲೂಕ. 18:15 ವಚನದ ಅರ್ಥ ಹೊಸದಾಗಿ ಹುಟ್ಟಿದವರು

# ಕ್ರೈಸ್ತ ವಿವಾಹ

## ಪ್ರಾಮುಖ್ಯ ವಚನಗಳು

ಆದಿಕಾಂಡ 1:26-28, 2:23-24 ಪಾಪದಲ್ಲಿ ಬೀಳುವುದಕ್ಕಿಂತ ಮೊದಲು ಪುರುಷ ಮತ್ತು ಸ್ತ್ರೀಯು.
ಪರಮಗೀತಗಳು :- ಅಧ್ಯಾಯ 1-8, ವಿವಾಹಿತರ ಪ್ರೀತಿಯ ಆದರ್ಶ.
ಮತ್ತಾಯ 5:31-32, 19:3-9 :- ಮದುವೆ ಮತ್ತು ವಿಚ್ಛೇದನ ವಿಷಯವಾಗಿ ಯೇಸುವಿನ ಉಪದೇಶ.
1ನೇ ಕೊರಿಂಥ 7:1-17 :- ಮದುವೆ ಮತ್ತು ವಿಚ್ಛೇದನ ವಿಷಯವಾಗಿ ಶ್ರೀ. ಪೌಲನ ಉಪದೇಶ.
ಎಫೆಸ 5:21-33 :- ವಿವಾಹದಲ್ಲಿ ಪರಸ್ಪರ ಅದೀನತೆ.
1ನೇ ಪೇತ್ರ 3:1-7 :- ವಿವಾಹದಲ್ಲಿ ಪರಸ್ಪರ ಗೌರವ ಮತ್ತು ಮರ್ಯಾದೆ.

## ಮದು ವೆಯ ವಿಷಯವಾಗಿ ದೇವರ ಯೋಜನೆ

ದೇವರು ನಮ್ಮನ್ನು ಗಂಡು, ಹೆಣ್ಣಾಗಿ ಉಂಟುಮಾಡಿದನು. ಗಂಡು ಮತ್ತು ಹೆಣ್ಣು ಇಬ್ಬರೂ, ದೇವರ ಹೋಲಿಕೆಯಂತೆ ಸೃಷ್ಟಿ ಮಾಡಲ್ಪಟ್ಟರು (ಆದಿಕಾಂಡ 1:26). ದೇವರು ತಾನೇ, ಮದುವೆ ಎಂಬ ಸಂಸ್ಕಾರವನ್ನು ಮೂರು ಕಾರಣಗಳಿಗಾಗಿ ಸ್ಥಾಪಿಸಿದನು. ಮೊದಲನೇಯ ಕಾರಣ, ಸಂಗಾತಿಗಾಗಿ. ಮನುಷ್ಯನು ಒಂಟಿಯಾಗಿರುವುದು ಒಳ್ಳೇದಲ್ಲ. ಅವನಿಗೆ ಸರಿಬೀಳುವ ಸಹಕಾರಿಯನ್ನು ಉಂಟುಮಾಡುವೆನು ಅಂದನು (ಆದಿಕಾಂಡ 2:18). ಎರಡನೇ ಕಾರಣವೇನೆಂದರೆ, ವಿವಾಹದ ಮೂಲಕ ಕುಟುಂಬಗಳು ಮಕ್ಕಳುಗಳಿಂದ ಕೂಡಿ ಸ್ಥಾಪನೆಯಾಗುವುದಕ್ಕೆ. ದೇವರು ಪುರುಷನೂ ಸ್ತ್ರೀಯು ಸೇರಿ, **ಸಮೃದ್ಧಿಯಾಗಿ, ಬಹು ಸಂತಾನ ಪಡೆಯ ಬೇಕೆಂದು,** ಅವರಿಗೆ ಹೇಳಿದನು (ಆದಿ 1:28). ಮೂರನೇಯ ಕಾರಣವೇನೆಂದರೆ, ಅವರು ತಮ್ಮ ಲೈಂಗಿಕ ತೃಷೆಯನ್ನು ತೀರಿಸಿಕೊಳ್ಳುವುದಕ್ಕೆ. **ಈ ಕಾರಣದಿಂದ ಪುರುಷನು ತಂದೆ ತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು. ಇವರಿಬ್ಬರೂ ಒಂದೇ ಶರೀರವಾಗಿರುವರು. ಆ ಸ್ತ್ರೀ ಪುರುಷರಿಬ್ಬರೂ, ಬೆತ್ತಲೆಯಾಗಿದ್ದರೂ ನಾಚಿಕೊಳ್ಳಲಿಲ್ಲ.** ಆದಿಕಾಂಡ 2:24-25. ಜ್ಞಾನೋಕ್ತಿ 5:15-21, ಪರಮಗೀತ .ಅಧ್ಯಾಯ 1-8, ಆದಾಮನು (ಮೊದಲನೇ ಪುರುಷನು) ಮತ್ತು ಹವ್ವಳು (ಮೊದಲನೇ ಸ್ತ್ರೀಯು) ಸೇರಿಕೊಂಡು ಭೂಮಿಯ ಮೇಲೆಲ್ಲಾ ಬಾಧ್ಯತೆಯನ್ನು ಪಡೆದರು.ಆದಿಕಾಂಡ 1:26-28.

ಆದರೆ ಪಾಪ ಮಾಡುವ ಮೂಲಕ ಆದಾಮನೂ, ಹವ್ವಳೂ ದೇವರು ಅವರಿಗಾಗಿ ಇಟ್ಟಿದ್ದ ಮೂಲಯೋಜನೆಯಿಂದ ಹೊರತಾದರು. ಅವರು ಪಾಪ ಮಾಡಿದ್ದರ ಫಲವಾಗಿ,ತಕ್ಷಣ ಅವರಲ್ಲಿ ನಾಚಿಕೆ ಉಂಟಾಗಿ, ಅವರು ಬೇರೆಯಾದರು (ಆದಿಕಾಂಡ 3:7). ನಿಂದನೆ (ಆದಿ 3:12) ಮತ್ತು ಗಂಡನು ಹೆಂಡತಿ ಮೇಲೆ ಅಧಿಕಾರ ಆದಿ 3:16 ಇವೆಲ್ಲಾ ಆಯಿತು. ಇದು ಅಲ್ಲದೆ ಪ್ರಕೃತಿಯು ಅವರ ಅಧೀನದಲ್ಲಿ ಇರದೇ ಇವರಿಗೆ ಶತ್ರುವಾಯಿತು. ಆದಿಕಾಂಡ 3:17-19. ಬಹಳಷ್ಟು ಕೆಟ್ಟವುಗಳು ಸಂಭವಿಸಲು ಹೆಚ್ಚು ಕಾಲ ಬೇಕಾಗಲಿಲ್ಲ. ಇವರಲ್ಲಿ ಕೊಲೆ, (ಆದಿಕಾಂಡ 4:8). ಬಹುಪತ್ನಿತ್ವ (ಆದಿ 4:19) ಮತ್ತು ಪ್ರತೀಕಾರದ ಭಾವನೆ (ಆದಿ 4:23). ಪತ್ನಿಯನ್ನು ತ್ಯಜಿಸುವುದು ಸರ್ವೇ ಸಾಮಾನ್ಯವಾಯಿತು. ಮೋಶೆಯ ಧರ್ಮಶಾಸ್ತ್ರದಲ್ಲಿರುವ ಅನೇಕ ಶಾಸನಗಳು, ಬಹು ಪತ್ನೀತ್ವವನ್ನು ತಡೆಗಟ್ಟುವ ಉದ್ದೇಶದಿಂದಲೇ ಬರೆಯಲ್ಪಟ್ಟವು. ವಿಮೋಚನಾಕಾಂಡ 21:10, ಧರ್ಮೋಪದೇಶಕಾಂಡ 21:15-17 ಮತ್ತು ಪತ್ನಿ ವಿಚ್ಛೇದನ (ಧರ್ಮೋಪದೇಶ 24:1-4). ಅಂದರೆ ದೇವರು ಬಹು ಪತ್ನೀತ್ವವನ್ನಾಗಲೀ ಅಥವಾ ಪತ್ನೀವಿಚ್ಛೇದನವನ್ನಾಗಲೀ ಇಷ್ಟಪಡಲಿಲ್ಲ.ಎಲ್ಲಾ ಪುರುಷರು ಮದುವೆಯಾದ ಪ್ರಾರಂಬದಿಂದ ಕಡೆಯವರೆಗೂ ಏಕ ಪತ್ನಿತ್ವವನ್ನೆ ಪಾಲಿಸಬೇಕು ಎಂಬುದೇ ದೇವರ ಯೋಜನೆಯಾಗಿತ್ತು ಮತ್ತಾಯ.19:4-9).

## ಕ್ರೈಸ್ತವಿವಾಹ

ಮದುವೆ ಎಂಬುದು ಕ್ರೈಸ್ತರಿಗೆ ಒಂದು ವಿಶೇಷವಾದ ಚಿಹ್ನೆಯಾಗಿದೆ. ಯಾಕೆಂದರೆ ಇದು ಕ್ರಿಸ್ತನು ಮತ್ತು ಆತನ ಸಭೆಯ ಆತ್ಮೀಕ ಅನ್ಯೋನ್ಯತೆಗೆ ಸಂಬಂಧಿಸಿದ ವಿಷಯವಾಗಿದೆ (ಎಫೆಸ 5:32). ಯೇಸುವು ಈ ಲೋಕದಲ್ಲಿ ಸಂಚಾರ ಮಾಡುತ್ತಿದ್ದ ಸಮಯದಲ್ಲಿ ಆತನು ತನ್ನ ಮೊದಲ ಅದ್ಭುತದಲ್ಲಿಯೇ ಮದುವೆಯನ್ನು ಆಶೀರ್ವದಿಸಿದನು. ಯೋಹಾನ 2:1-11. ಯೇಸುವು, ದೇವರ ರಾಜ್ಯ ಪ್ರಾರಂಭವಾಗುವುದನ್ನು ಸಹ ಪ್ರಕಟಿಸಿದನು. ಆದುದರಿಂದ ಗಂಡ ಹೆಂಡತಿಯರಲ್ಲಿ, ನಾವು ಒಂದು ಹೊಸ ಸಂಬಂಧವನ್ನು ಅಪೇಕ್ಷಿಸಬಹುದು. **ನೀವೆಲ್ಲರು ಕ್ರಿಸ್ತಯೇಸುವಿನಲ್ಲಿ ಒಂದೇ ಆಗಿರುವದರಿಂದ, ಯಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದು ಭೇದವಿಲ್ಲ.** (ಗಲಾತ್ಯ 3:28). ಹೀಗೆಂದರೆ, ವಿವಾಹದಲ್ಲಿ ಗಂಡ, ಹೆಂಡತಿಯರು ಸರಿಸಮಾನರು ಎಂದು ತಿಳಿಯಬಹುದೇ?

ಎಲ್ಲಾ ಕ್ರೈಸ್ತರು, ಗಂಡ ಹೆಂಡತಿಯರು ತಮ್ಮ ಶಾರೀರಿಕ ಸಂಬಂಧದಲ್ಲಿ ಸರಿಸಮಾನರೆಂದು ಒಪ್ಪಿಕೊಳ್ಳುತ್ತಾರೆ. ಪೌಲನು, ಅವರಿಬ್ಬರು ತಮ್ಮ ಮದುವೆಯ ಕರ್ತವ್ಯಗಳನ್ನು ಒಬ್ಬರಿಗೊಬ್ಬರು ನೆರವೇರಿಸ ಬೇಕು ಎಂದು ಹೇಳುತ್ತಾನೆ. (1ನೇ ಕೊರಿಂಥ 7:3). ಆತನು ಹೇಳಿದ್ದೇನೆಂದರೆ, **ಹೆಂಡತಿಗೆ ಸ್ವಂತ ದೇಹದ ಮೇಲೆ ಅಧಿಕಾರವಿಲ್ಲ. ಅದು ಗಂಡನಿಗುಂಟು.** (1ನೇ ಕೊರಿಂಥ 7:4). ಇದು ಪೌಲನ ಕಾಲದಲ್ಲಿದ್ದಂತ ಜನರಿಗೆ ಹೊಸದೇನಲ್ಲ. ಆದಾಮ ಮತ್ತು ಹವ್ವಳ ಕಾಲದಿಂದ ಪೌಲನ ಕಾಲದವರೆಗೂ, ಈ ಲೋಕದಲ್ಲಿ ಹೆಂಡತಿಯು ಗಂಡನ ಸ್ವತ್ತು ಎಂದೇ ಪರಿಗಣಿಸಲಾಗುತ್ತಿತ್ತು. ಆದರೆ ಪೌಲನು ಈ ಹೇಳಿಕೆಗಷ್ಟೇ ಸೀಮಿತಗೊಳ್ಳಲಿಲ್ಲ. ಇದೇ ವಚನದಲ್ಲಿ ಇತನು ಇನ್ನು ಹೇಳಿದ್ದೇನೆಂದರೆ,.**ಹಾಗೆಯೆ e ಪುರುಷನಿಗೆ ತನ್ನ ಸ್ವಂತ ದೇಹದ ಮೇಲೆ ಅಧಿಕಾರವಿಲ್ಲ, ಅದು ಹೆಂಡತಿಗುಂಟು** ಈ ಉಪದೇಶವು ಮೊದಲನೇ ಶತಮಾನದಲ್ಲಿ ಪೌಲನ ಕಾಲದ ಓದುಗರಿಗೆ ಸಂಪೂರ್ಣ ಹೊಸದಾಗಿ ತೋರಿತು.ಮುಂದೆ ಗಂಡಂದಿರು ಮತ್ತು ಹೆಂಡತಿಯರು, ತಮ್ಮ ಶಾರೀರಿಕ ಆಶೆಯನ್ನು ತೀರಿಸಿಕೊಳ್ಳಲು, ಒಬ್ಬರನ್ನೊಬ್ಬರು ಸಂತೋಷ ಪಡಿಸಲು, ಎಂದಿಗೂ ಒಪ್ಪದೇ ಇರಕೂಡದು. **ಪ್ರಾರ್ಥನೆಗೆ ಮನಸ್ಸು ಕೊಡುವುದಕ್ಕಾಗಿ ಪರಸ್ಪರ ಸಮ್ಮತಿಯಿಂದ ಸ್ವಲ್ಪ ಕಾಲ ದಂಪತಿ ಧರ್ಮವನ್ನು ಬಿಟ್ಟುಅಗಲಿರ ಬಹುದು** (1ನೇ ಕೊರಿಂಥ 7:5). ಕೆಲವು ಮತಗಳು, ಉಪದೇಶಿಸುವುದೇನೆಂದರೆ, ಸ್ತ್ರೀಯು ಒಂದು ತೋಟದಂತೆ ಎಂದು, ಪುರುಷನು ಅದರಲ್ಲಿ ಬೀಜವನ್ನು ಬಿತ್ತುವವನು ಎಂದು ವರ್ಣಿಸುತ್ತಾರೆ. ಆದರೆ ಕ್ರೈಸ್ತ ವಿವಾಹ ಸಂಬಂದದಲ್ಲಿ ಹೆಂಡತಿಯಾದವಳು, ಪುರುಷನ ಸಹಭಾಗಿಯಾಗಿದ್ದಾಳೆ. ಬರೇ ಅವಳು, ಆಸ್ತಿಯ ಒಂದುಬಾಗವಲ್ಲ. ಕ್ರೈಸ್ತ ವಿವಾಹವು ಪಾಲುಗಾರಿಕೆಯಿಂದ ಕೂಡಿದೆ. ಗಂಡಹೆಂಡತಿಯರು ಇತರೇ ಎಲ್ಲಾ ಸಂಬಂಧದಲ್ಲಿಯೂ ಸರಿಸಮಾನರೇ? ಕ್ರೈಸ್ತರು, ಈ ಪ್ರಶ್ನೆಗೆ ವಿವಿಧ ಉತ್ತರಗಳನ್ನು ಕೊಡುತ್ತಾರೆ. ಕ್ರೈಸ್ತವಿವಾಹದಲ್ಲಿ ಗಂಡನ ಹಾಗೂ ಹೆಂಡತಿಯ ಪಾತ್ರದ ಬಗ್ಗೆ ಎರಡು ಮುಖ್ಯ ಅಭಿಪ್ರಾಯಗಳಿವೆ. ಒಂದನೇ ಅಭಿಪ್ರಾಯ, ಅನೇಕ ಕ್ರೈಸ್ತರು ಪ್ರತಿಪಾದಿಸುವಂತಾದ್ದು. ಯಾವುದೆಂದರೆ, ಹೆಂಡತಿಯು ಗಂಡನ ಅಧಿಕಾರ ಮತ್ತು ನಾಯಕತ್ವಕ್ಕೆ ಒಳಪಟ್ಟಿರಬೇಕು ಮತ್ತು ವಿಧೇಯಳಾಗಿರಬೇಕು. ಇವರು,, **ಪ್ರತಿ ಪುರುಷನಿಗೂ ಕ್ರಿಸ್ತನೇ ತಲೆ, ಸ್ತ್ರೀಗೆ ಪುರುಷನೇ ತಲೆ, ಕ್ರಿಸ್ತನಿಗೆ ದೇವರು ತಲೆಯಾಗಿದ್ದಾನೆ** ಎಂಬ ಪೌಲನ ಹೇಳಿಕೆಯನ್ನು ಎತ್ತಿ ತೋರಿಸುತ್ತಾರೆ(1ನೇ ಕೊರಿಂಥ 11:3). ಪೌಲನೂ ಇನ್ನು ಮುಂದುವರಿದು ಹೇಳುವುದೇನೆಂದರೆ, ಸ್ತ್ರೀಯು ಪುರುಷನಿಂದ ಉತ್ಪತ್ತಿಯಾದಳು ಮತ್ತು ಪುರುಷನಿಗಾಗಿ ಸೃಷ್ಟಿಸಲ್ಪಟ್ಟಳು (1ನೇ ಕೊರಿಂಥ 11:8-9). ಆದಾಗ್ಯೂ, ಕರ್ತನಲ್ಲಿ ಇವರು ಒಬ್ಬರಿಗೊಬ್ಬರು ಬೇಕಾಗಿದ್ದಾರೆ. 1ನೇ ಕೊರಿಂಥ 11:11-12. ಈ ಕ್ರೈಸ್ತರು ತಲೆ ಎಂಬ ಶಬ್ದಕ್ಕೆ ಅರ್ಥ ಕೊಡುವುದೆನೆಂದರೆ, ಗಂಡನ ಅಧಿಕಾರ, ನಾಯಕತ್ವ ವಹಿಸು ಇಲ್ಲವೆ ಸಂರಕ್ಷಿಸು ಮತ್ತು ರಕ್ಷಿಸು ಎಂದು ಎಫೆಸ 5:25, ಉಣಿಸು ಮತ್ತು ಆದರಿಸು ಎಫೆಸ 5:29 ಮತ್ತು ಸಾಧಾರಣವಾಗಿ ಹೆಂಡತಿಯ ಜವಾಬ್ದಾರಿಕೆಯನ್ನು ಹೊರು. ಮಕ್ಕಳ ಮೇಲಿನ ಜವಾಬ್ದಾರಿಯನ್ನು ತಂದೆಯಾದವರಿಗೆ ಕೊಟ್ಟಿದೆ ಎಂದು ಇವರು ತೋರಿಸುತ್ತಾರೆ (ಎಫೆಸ 6:4, 1ನೇ ತಿಮೊಥೆ 3:4-5). ಈ ಕ್ರೈಸ್ತರು, **ಸ್ತ್ರೀಯರೇ ನೀವು ಕರ್ತನಿಗೆ ಹೇಗೋ ಹಾಗೆಯೇ ನಿಮ್ಮ ನಿಮ್ಮ ಗಂಡಂದಿರಿಗೆ ಅಧೀನರಾಗಿರಿ. ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ. ಕ್ರಿಸ್ತನೋ, ಸಭೆ ಎಂಬ ದೇಹಕ್ಕೆ ರಕ್ಷಕನಾಗಿದ್ದಾನೆ.** (ಎಫೆಸ 5:22-24) ಎಂಬ ಪೌಲನ ಮಾತಿನ ಕಡೆಗೆ ತೋರಿಸುತ್ತಾರೆ.ಆದೇ ಸಮಯದಲ್ಲಿ, **ಪುರುಷರೇ ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ. ಕ್ರಿಸ್ತನು ಅದನ್ನು ಪ್ರತಿಷ್ಠೆ ಪಡಿಸುವುದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು** (ಎಫೆಸ 5:25). ಅವರು ತಮ್ಮ ಸ್ವಂತ ದೇಹವನ್ನು ಪ್ರೀತಿಸುವಂತೆಯೇ, ತಮ್ಮ ಹೆಂಡತಿಯರನ್ನು ಪ್ರೀತಿಸಬೇಕು (ಎಫೆಸ 5:28). ಅಪೋಸ್ತಲನಾದ ಪೇತ್ರನು ಸಹಾ ಹೆಂಡತಿಯರು ತಮ್ಮ ತಮ್ಮ ಗಂಡಂದಿರಿಗೆ ಅಧೀನರಾಗಿರಬೇಕೆಂತಲೂ ಮತ್ತು ಸಾರಳು ಅಬ್ರಹಾಮನಿಗೆ ವಿಧೇಯ ಳಾಗಿದ್ದ ರೀತಿಯಂತೆ ಇರಬೇಕೆಂದು ಉದಾಹರಣೆಯಿಂದ ಆಜ್ಞೆಯನ್ನು ಕೊಡುತ್ತಾನೆ (1ನೇ ಪೇತ್ರ 3:1-6). ವಿವಾಹದಲ್ಲಿ ಅಧೀನತೆ ಎಂದರೆ ಏಕಮುಖಿಯಾದ ಮಾರ್ಗವಲ್ಲವೆಂದು ನಮಗೆ ತಿಳಿಯುತ್ತದೆ. ಎಫೆಸದಲ್ಲಿ ಬರೆದಿರುವ ಒಕ್ಕಣೆಯು ಎಲ್ಲಾ ನಂಬಿಗಸ್ತರಿಗೂ ಅಪ್ಪಣೆಯಾಗಿದೆ. **ಕ್ರಿಸ್ತನಿಗೆ ಭಯ ಪಡುವವರಾಗಿದ್ದು, ಒಬ್ಬರಿಗೊಬ್ಬರು ವಿನಯವುಳ್ಳವರಾಗಿರಿ** (ಎಫೆಸ 5:21).

ಕ್ರಿಸ್ತನು ದೇವರಿಗೆ ಸರಿಸಮಾನನಾಗಿದ್ದರೂ, ಆತನು ತಂದೆಗೆ ಅಧೀನನಾದನು. ಫಿಲಿಪ್ಪಿ 2:6-8. ತದ್‌ರೀತಿಯಲ್ಲಿಯೇ, ಈ ಕ್ರೈಸ್ತರು ಗಂಡನ ಹಿರಿತನವು ಸಮಾನರಲ್ಲಿನ ಹಿರಿತನವಾಗಿದೆ ಎಂದು ನಂಬುತ್ತಾರೆ. ಮಾನವರಾಗಿ ಗಂಡಂದಿರು ಮತ್ತು ಹೆಂಡತಿಯರು ಸ್ವಾಭಾವಿಕವಾಗಿ ಸರಿಸಮಾನರಾದರೂ, ಪ್ರತಿಯೊಬ್ಬರಿಗೂ ಬೇರೆ ಬೇರೆ ಕರ್ತವ್ಯವಿದೆ ಮತ್ತು ಅವರು ಒಬ್ಬರಿಗೊಬ್ಬರು ಬೇರೊಂದು ರೀತಿಯಲ್ಲಿ ಅಧೀನರಾಗುತ್ತಾರೆ. ಹೆಂಡತಿಯು ಗಂಡನಿಗೆ ಮನೆಗೆ ಯಜಮಾನ ಮತ್ತು ಆಡಳಿತಗಾರನೆಂದು ತಿಳಿದು ಅಧೀನಳಾಗುತ್ತಾಳೆ. ನಾವು ಹೇಗೆ ಕ್ರಿಸ್ತನಿಗೆ ಅಧೀನರಾಗುತ್ತೇವೆಯೋ ಹಾಗೆ. ಗಂಡನು ಹೆಂಡತಿಗೆ ತನ್ನನ್ನು ತಾನೇ ಬರಿದು ಮಾಡಿಕೊಂಡು ಮತ್ತು ಆಕೆಗೆ ತನ್ನನ್ನೇ ಕ್ರಿಸ್ತನು ಹೇಗೆ ತನ್ನನ್ನು ಸಭೆಗೆ ಒಪ್ಪಿಸಿಕೊಟ್ಟನೋ ಹಾಗೆಯೇ ಒಪ್ಪಿಸಿಕೊಡುತ್ತಾನೆ.

ಎರಡನೇಯ ಮುಖ್ಯವಾದ ಅಭಿಪ್ರಾಯವೇನೆಂದರೆ, ಕ್ರೈಸ್ತ ವಿವಾಹದಲ್ಲಿ ಗಂಡನ ಮತ್ತು ಹೆಂಡತಿಯ ಪಾತ್ರಗಳು ನಿಜವಾಗಿ ಬೇರೆ ಬೇರೆಯಾಗಿರುವುದಿಲ್ಲ. ಈ ಅಭಿಪ್ರಾಯ ಉಳ್ಳವರು ಹೇಳುವುದೇನೆಂದರೆ, ಮಕ್ಕಳು ಮತ್ತು ಗುಲಾಮರು ವಿಧೇಯರಾಗಿರಲು ಅಪ್ಪಣೆ ಕೊಡುವಂತೆ, ಹೆಂಡತಿಯರಿಗೆ ಆ ರೀತಿ ವಿಧೇಯರಾಗಿರಬೇಕೆಂದು ಎಂದು ಅಪ್ಪಣೆ ಕೊಟ್ಟಿಲ್ಲ (ಎಫೆಸ 6:1, 5). ಎಲ್ಲರಂತೆ ಒಬ್ಬರಿಗೊಬ್ಬರು ಅಧೀನರಾಗಬೇಕೆಂಬ ನಿಯಮದಂತೆ, ಹೆಂಡತಿಯರು ಗಂಡಂದಿರಿಗೆ ಅಧೀನರಾಗಬೇಕು (ಎಫೆಸ 5:21). ಆದುದರಿಂದ ಗಂಡಂದಿರು ಸಹ ಹೆಂಡತಿಯರಿಗೆ ಅಧೀನರಾಗಬೇಕು. ಪೇತ್ರನು ತಾನು ಬರೆಯುವಾಗ ಸಾಮಾನ್ಯವಾದ ಈ ಪದ್ಧತಿಯನ್ನು ತಿರುವುಮುರುವಾಗಿ ಮಾಡಿ, ಗಂಡಂದಿರಿಗೆ ಅವರು ತಮ್ಮ ಹೆಂಡತಿಯರನ್ನು ಮರ್ಯಾದೆಯಿಂದ ನೋಡಿಕೊಳ್ಳಬೇಕೆಂದೂ, ಅದು ವಿರುದ್ಧ ರೀತಿಯಲ್ಲಿ ಅಲ್ಲ ಎಂದು ಬೋಧಿಸಿದನು (1ನೇ ಪೇತ್ರ 3:7).ಅನೇಕ ವಿದ್ವಾಂಸರು ಗ್ರೀಕ್ ಶಬ್ದವಾದ ತಲೆ ಎಂಬುದು ಆಡಳಿತಗಾರ ಎಂದು ಭಾಷಾಂತರಿಸಲಿಲ್ಲ. ಅದು ಹೊಸ ಒಡಂಬಡಿಕೆಯಲ್ಲಿ ಎಲ್ಲೂ ಉಪಯೋಗವಾಗಿಲ್ಲ. ಆದರೆ ಅದರ ಅರ್ಥ, ಜೀವನದ ಮೂಲ ಅಥವಾ ಹುಟ್ಟುವಿಕೆಯಾಗಿದೆ ಎಂದು ನಂಬುತ್ತಾರೆ. ಎಫೆಸ 1:22, 4:15, ಕೊಲಸ್ಸೆ 1:18, 11-12, 2:10, 19.1ನೇ ಕೊರಿಂಥ 11:3ರಲ್ಲಿ ಹೇಳಿರುವ ಪ್ರಕಾರ ಈ ಕ್ರೈಸ್ತರ ಅಭಿಪ್ರಾಯದಂತೆ, ಎಲ್ಲಾ ಮನುಷ್ಯರಿಗೆ ಪುರುಷನಿಂದ ಬಂದ ಸ್ತ್ರೀಯಂತೆ ಮತ್ತು ದೇವರಿಂದ ಬಂದ ಕ್ರಿಸ್ತನಂತೆಯೆ, ಕ್ರಿಸ್ತನೇ ಜೀವದ ಆದಿಮೂಲನು ಆಗಿದ್ದಾನೆ ಎಂದು ಪೌಲನು ಅರ್ಥಯಿಸಿದನು ಎಂಬುದಾಗಿ ಇವರು ಹೇಳುತ್ತಾರೆ..ಈ ಅರ್ಥವು 1ನೇ ಕೊರಿಂಥ 11:8, 11:12ರಲ್ಲಿ ಕೊಟ್ಟಿರುವ ಅರ್ಥಕ್ಕೆ ಸರಿ ಹೊಂದುತ್ತದೆ. ಈ ಕ್ರೈಸ್ತರು ದೇವರು ಮೂಲತಃ ಗಂಡ ಹೆಂಡತಿಯರು ಸರಿಸಮಾನರಾಗಿರಬೇಕೆಂದೇ ಆಶಿಸಿದನು ಎಂದು ನಂಬುತ್ತಾರೆ. ಆದಾಮನ ಮತ್ತು ಹವ್ವಳು ಏದೇನ್ ತೋಟದಲ್ಲಿ ಮಾಡಿದ ಪಾಪದ ಫಲವಾಗಿ ಹೆಂಗಸಿಗೆ ಶಾಪ ತಗಲಿತಾದರೂ, ಆದಿಕಾಂಡ 3:1-6, 16. ಕ್ರಿಸ್ತನು ಆ ಸಾಪವನ್ನು ಮುರಿದು ಬಿಟ್ಟನು ಮತ್ತು ಇದರ ನಿಜಾಂಶವು ಕ್ರೈಸ್ತ ವಿವಾಹದಲ್ಲಿ ಪ್ರತಿಬಿಂಬಿತವಾಗುತ್ತದೆ.

ಪುರುಷನೂ, ಸ್ತ್ರೀಯು ವಿವಾಹದಲ್ಲಿ ಒಂದೇ ಶರೀರವಾಗಿರುವುದು ನಿಜವಾದರೆ, (ಆದಿಕಾಂಡ 2:24). ಅವರನ್ನು ಅಧಿಕಾರ ಚಲಾಯಿಸುವವನು ಮತ್ತು ಅಧಿಕಾರಕ್ಕೆ ವಿಧೇಯರಾಗುವವಳು ಎಂದು ವಿಭಾಗಿಸಕೂಡದು.

ಈ ಎರಡು ವಿಧವಾದ ಅಭಿಪ್ರಾಯಗಳಲ್ಲಿ ಯಾರೊಬ್ಬನು ನಂಬಿಕೆಯಿಟ್ಟಲ್ಲಿ, ಗಂಡನು ಹೆಂಡತಿಯು ಒಬ್ಬರಿಗೊಬ್ಬರು ಬದ್ಧರಾಗಿದ್ದಾರೆ ಎಂಬುದನ್ನು ಸತ್ಯವೇದವು ಸ್ಪಷ್ಟಗೊಳಿಸುತ್ತದೆ. ಹಳೇ ಒಡಂಬಡಿಕೆಯಲ್ಲಿ ಹೇಳಿರುವ ಸತ್ಯಾಂಶವು ಏನೆಂದರೆ, **ಪುರುಷನು ತನ್ನ ತಂದೆತಾಯಿಗಳನ್ನು ಬಿಟ್ಟು ಹೆಂಡತಿಯನ್ನು ಸೇರಿಕೊಳ್ಳುವನು** (ಮಾರ್ಕ 10:7). ಇದನ್ನು ಯೇಸುವು ಒಪ್ಪುತ್ತಾ ಹೇಳಿದ್ದಾನೆ. ಹಾಗೆಂದ ಮಾತ್ರಕ್ಕೆ ಒಬ್ಬ ಪುರುಷನು ತನ್ನ ತಂದೆ ತಾಯಿಗಳನ್ನು, ಮನೆಯನ್ನು ಬಿಟ್ಟು ಬಿಟ್ಟು ಹೋಗಬೇಕೆಂದು ಅರ್ಥವಲ್ಲ. ಆದರೆ ಆಂತರಿಕವಾದಂತ ರೀತಿಯಲ್ಲಿ ತಂದೆ ತಾಯಿಗಳನ್ನು ಬಿಡಬೇಕೆಂದು ತಿಳಿಯುತ್ತದೆ. ಒಬ್ಬ ಪುರುಷನು, ತನ್ನ ತಂದೆತಾಯಿಗಳ ಮೇಲಿನ ಜವಾಬ್ದಾರಿಗಿಂತಲೂ, ತನ್ನ ಹೆಂಡತಿಯ ಜವಾಬ್ದಾರಿಯನ್ನು ಹೆಚ್ಚಾಗಿ ನೋಡಿಕೊಳ್ಳಬೇಕು. ಇದು ತನ್ನ ಮಕ್ಕಳ ಜವಾಬ್ದಾರಿಗಿಂತಲೂ ಹೆಚ್ಚು! ಮದುವೆಯಲ್ಲಿ ಪುರುಷ ಮತ್ತು ಸ್ತ್ರೀಯು ಇನ್ನು ಮೇಲೆ ಎರಡು ಶರೀರವಾಗಿರದೆ ಇಬ್ಬರು **ಒಂದೇ ಶರೀರವಾಗುತ್ತಾರೆ** (ಮಾರ್ಕ 10:8). ಕೆಲವು ಸಂಸ್ಕೃತಿಗಳಲ್ಲಿ ಹೆಂಡತಿಯನ್ನು ನಿಜವಾಗಿ ಗಂಡನ ಅರ್ಧಾಂಗಿ ಎಂದು ಕರೆಯುತ್ತಾರೆ.

ಆದಾಗ್ಯೂ ದೇವರನ್ನು ಎಲ್ಲಾ ಮನುಷ್ಯರಿಗಿಂತ ಹೆಚ್ಚಾಗಿ ನಾವು ಸನ್ಮಾನಿಸಬೇಕು. ನಿಜವಾಗಿ ಹೇಳುವುದಾದರೆ, ದೇವರ ಹತ್ತಿರ ಬರುವ ಗಂಡ ಹೆಂಡತಿಯರು, ಅವರು ತಮ್ಮ ತಮ್ಮಲ್ಲೇ ಒಗ್ಗಟ್ಟಾಗಿ ಒಂದುಗೂಡಿ ಇರುತ್ತಾರೆ. ಪ್ರಸಂಗಿ. 4:9-12, ಒಬ್ಬರಿಗಿಂತ ಇಬ್ಬರು ಲೇಸು ಎಂದು ಹೇಳಿದ್ದಾನೆ. ಮತ್ತು **ಮೂರು ಹು ರಿ ಯುಳ್ಳ ಹಗ್ಗವು ಬೇಗನೆ ಕಿತ್ತುಹೋಗುವುದಿಲ್ಲ**. ಒಬ್ಬ ಕ್ರೈಸ್ತ ಗಂಡ ಮತ್ತು ಹೆಂಡತಿ, ದೇವರ ಜತೆಗೂಡಿ ಮಾಡಿಕೊಂಡ ಹಗ್ಗವು, ಬಲಶಾಲಿಯಾದ ಕೂಡಿಕೆಯಾಗಿರುತ್ತದೆ.

**ವಿಚ್ಛೇದನ ಮ ತ್ತು ಮ ರು ವಿವಾಹ :**

ಕ್ರೈಸ್ತ ಮದುವೆಯ ಸಮಾರಂಭದಲ್ಲಿ ದೇವರ ಸಮ್ಮುಖದಲ್ಲಿಯೂ, ಸಭೆಯಲ್ಲಿ ಕೂಡಿ ಬಂದ ಜನರ ಮುಂದೆಯೂ, ಪ್ರಮಾಣವಚನಗಳನ್ನು ಕೊಡಲಾಗುತ್ತದೆ. ಮದುವೆ ಎಂಬುದು ಜೀವನ ಪರ್ಯಂತ ಇರುವ ಬಂದನ. ದೇವರು ವಿಚ್ಛೇದನವನ್ನು ಹಗೆ ಮಾಡುತ್ತಾನೆ ಎಂದು ಸತ್ಯವೇದವು ಭೋದಿಸುತ್ತದೆ (ಮಲಾಕಿ. 2:14-16). ಹಳೇ ಒಡಂಬಡಿಕೆಯ ಕಾಲದಲ್ಲಿ ಪತ್ನಿ ವಿಚ್ಛೇದನವು ಬಹಳ ಸಾಮಾನ್ಯವಾಗಿತ್ತು. ಸರಿಯದ ಕಾರಣವಿಲ್ಲದೆ, ಬೇರೆ ಯಾವ ಕಾರಣಕ್ಕೂ, ದೇವರು ಪತ್ನಿಯ ವಿಚ್ಛೇದನಕ್ಕೆ ಒಪ್ಪುವುದಿಲ್ಲ.ದೇವರು, ಗಂಡನಿಂದ ತೊರೆಯಲ್ಪಟ್ಟ ಹೆಂಗಸಿಗೆ, ಕಾನೂನು ರೀತಿ ರಕ್ಷಣೆ ಒದಗಿಸಲು ಇಚ್ಛಿಸಿದನು. ಮೋಶೆಯ ಧರ್ಮಶಾಸ್ತ್ರದ ಪ್ರಕಾರ, ಪುರುಷನು ತನ್ನ ಹೆಂಡತಿಯನ್ನು ತ್ಯಜಿಸುವುದಕ್ಕೆ ಸರಿಯಾದ ಕಾರಣ ಇರಬೇಕು. ಅದೇನೆಂದರೆ, ಅಶುದ್ಧತೆ. ಮತ್ತು ಅವಳಿಗೆ ಗಂಡನು ಸರಿಯಾದ ಒಂದು ವಿಚ್ಛೇದನ ಪ್ರಮಾಣ ಪತ್ರವನ್ನು ಕೊಡಬೇಕು. (ಧರ್ಮೋಪದೇಶಕಾಂಡ 24:1-4). ಯೇಸುವಿನ ಕಾಲದಲ್ಲಿ, ಒಬ್ಬ ಪುರುಷನು ತನ್ನ ಹೆಂಡತಿಯನ್ನು ಯಾವ ಕಾರಣಕ್ಕಾದರೂ, ವಿಚ್ಛೇದಿಸ ಬಹುದೆಂದು ಫರಿಸಾಯರು ಉಪದೇಶಿಸುತ್ತಿದ್ದರು (ಮತ್ತಾಯ 19:3). ಯೇಸುವು ಅವರಿಗೆ ಉತ್ತರವಾಗಿ, ದೇವರು ಕೂಡಿಸಿದ ಮದುವೆ ಸಂಬಂಧವನ್ನು ಯಾರೇ ಮುರಿದರೂ ಸಹ ಇದು ತಪ್ಪು. ಆದುದರಿಂದ ಕ್ರಿಸ್ತನು, ಹೇಳಿದ್ದೇನೆಂದರೆ **ದೇವರು ಕೂಡಿಸಿದ್ದನ್ನು, ಮನುಷ್ಯನು ಅಗಲಿಸಬಾರದು** (ಮತ್ತಾಯ 19:6). ದಂಪತಿಗಳು ವಿಚ್ಛೇದ ಪಡೆಯುವುದು ದೇವರಿಗೆ ಇಷ್ಟವಿರಲೇ ಇಲ್ಲ ಆದರೇ ಮೋಶೆಯು ಜನರ ಹೃ ದಯದ ಮೊಂಡುತನವನ್ನು ನೋಡಿ ತಮ್ಮ ಹೆಂಡರನ್ನು ಬಿಟ್ಟುಬಿಡುವುದಕ್ಕೆ ಅಪ್ಪಣೆ ಕೊಟ್ಟನು ಎಂದು ಕ್ರಿಸ್ತನು ಹೇಳಿದನು. ಎಲ್ಲಾ ಕ್ರೈಸ್ತರು, ಮದುವೆಯನ್ನು ಮುರಿಯುವುದು ತಪ್ಪೆಂದು ಭಾವಿಸುತ್ತಾರೆ.

ಯೇಸು ಮತ್ತೂ ಹೇಳಿದ್ದೇನೆಂದರೆ, **ಹಾದರದ ಕಾರಣದಿಂದಲ್ಲದೆ, ತನ್ನ ಹೆಂಡತಿಯನ್ನು ಬಿಟ್ಟು ಮತ್ತೊಬ್ಬರ ಹೆಂಡತಿಯನ್ನು ಮದುವೆ ಮಾಡಿಕೊಳ್ಳುವವನು ವ್ಯಭಿಚಾರ ಮಾಡುವವನಾಗುತ್ತಾನೆ,** ಮತ್ತಾಯ 19:9. ಮತ್ತೊಂದು ಕಡೆ ಯೇಸು ಹೇಳಿದ್ದಾನೆ. **ಹಾದರದ ಕಾರಣದಿಂದಲ್ಲದೆ, ತನ್ನ ಹೆಂಡತಿಯನ್ನು ಬಿಟ್ಟು ಬಿಡುವವನು, ಅವಳು ವ್ಯಭಿಚಾರ ಮಾಡುವುದಕ್ಕೆ ಕಾರಣನಾಗುತ್ತಾನೆ. ಮತ್ತು ಗಂಡ ಬಿಟ್ಟವಳನ್ನು ಮದುವೆ ಮಾಡಿಕೊಳ್ಳುವವನು ವ್ಯಭಿಚಾರ ಮಾಡಿದವನಾಗುತ್ತಾನೆ.** ಮತ್ತಾಯ 5:32. ಈ ಎರಡು ಕಡೆಯ ಹೇಳಿಕೆಯನ್ನು ಯೇಸುವು, ಯಾವ ಅರ್ಥದಲ್ಲಿ ಹೇಳಿದ್ದಾನೆ? ಕ್ರೈಸ್ತರಲ್ಲಿ, ಮೂರು ಪ್ರಾಮುಖ್ಯವಾದಂತ ಅಭಿಪ್ರಾಯಗಳಿವೆ.

ಮೊದಲನೇಯದಾಗಿ, ಪತ್ನೀತ್ಯಾಗವು ಎಂದಿಗೂ ಸಮಂಜಸವಲ್ಲ ಮತ್ತು ಮರು ವಿವಾಹವಾಗುವುದು ಅದರಲ್ಲೂ ಮೊದಲನೇ ಹೆಂಡತಿ ಜೀವಂತವಿರುವಾಗ ಮದುವೆಯಾಗುವುದು, ಯಾವಾಗಲೂ ತಪ್ಪಾಗಿರುವಂತದ್ದಾಗಿರುತ್ತದೆ. (ರೋಮಾ. 7:2-3)., ಮಾರ್ಕನ ಸುವಾರ್ತೆ 10:11-12ರಲ್ಲಿನ **ದಾಂಪತ್ಯದಲ್ಲಿ ಅಪನಂಬಿಕೆಯು ಹೊರತಾಗಿ,** ಎಂಬ ಯೇಸುವಿನ ಮಾತುಗಳನ್ನು ನಾವು ಗಮನಿಸತಕ್ಕದ್ದು.

ಈ ಕ್ರೈಸ್ತರು ನಂಬುವುದೇನೆಂದರೆ, ಯಾರು ಮರು ಮದುವೆ ಮಾಡಿಕೊಳ್ಳುತ್ತಾರೋ ಅವರು ವ್ಯಭಿಚಾರವೆಸಗುತ್ತಾರೆ. ಕಾರಣ ಅವರು, ದೇವರ ದೃಷ್ಟಿಯಲ್ಲಿ ಆತನ ಮೊದಲನೇ ಹೆಂಡತಿಯನ್ನು ಮದುವೆಯಾಗಿರು ಸ್ಥಿತಿಯೇ ಆಗಿದೆ. ಅವರು ನಂಬುವುದೇನೆಂದರೆ ಒಬ್ಬ ಹೆಂಡತಿಯನ್ನು ತ್ಯಾಗ ಮಾಡುವುದರಿಂದ, ಅವಳನ್ನು ವ್ಯಭಿಚಾರಕ್ಕೆ ತಳ್ಳಿದ ಹಾಗಾಯಿತು ಅಥವಾ ತಿರುಗಿ ಮದುವೆ ಮಾಡಿಕೊಳ್ಳಲು ಅವಕಾಶ ಕೊಟ್ಟಂತೆಯೇ. ಕಾರಣ ಇದು ಇವರ ದೃಷ್ಟಿಯಲ್ಲಿ ವ್ಯಭಿಚಾರವೆಂದು ಕಾಣಿಸುತ್ತದೆ (ಮತ್ತಾಯ 5:32). ಈ ಕ್ರೈಸ್ತರು, ಪೌಲನು ರೋಮಾ. 7:3ರಲ್ಲಿ ಹೇಳಿರುವ ಮಾತುಗಳ ಕಡೆಗೆ ಗಮನ ಸೆಳೆಯುತ್ತಾ, ಒಬ್ಬ ಸ್ತ್ರೀಯು ತನ್ನ ಗಂಡ ಜೀವಂತವಿರುವಾಗಲೇ ಬೇರೊಬ್ಬ ಗಂಡನನ್ನು ಮದುವೆಯಾದರೆ ಅವಳು **ವ್ಯಭಿಚಾರಿಣಿಯೇ.** ಪೌಲನು, ಯಾರು ತನ್ನ ಹೆಂಡತಿಯನ್ನು ತ್ಯಾಗ ಮಾಡಿದ್ದಾನೋ **ಅವನು ಒಂಟಿಯಾಗಿಯೇ ಇರಬೇಕು ಇಲ್ಲವೇ ಆಕೆಯೊಡನೆ ಸಂಧಾನ ಮಾಡಿಕೊಳ್ಳಬೇಕು** ಎಂದು ಸಹಾ ಹೇಳಿದ್ದಾನೆ. (1ನೇ ಕೊರಿಂಥ 7:11). ಆದ್ದರಿಂದ ಈ ಅರ್ಥ ನೋಡುವುದಾದರೆ ಒಬ್ಬ ವ್ಯಕ್ತಿಯು ತ್ಯಾಗ ಪತ್ರ ಪಡೆದಿದ್ದರೂ ಸಹಾ ಅವನು ಮದುವೆಯಾಗದಂತೆ, ಅವನ ಹೆಂಡತಿಯು ಜೀವಂತವಿರುವವರೆಗೆ ತಡೆಯಬಹುದಾಗಿದೆ.

ಇನ್ನು ಕೆಲವು ಕ್ರೈಸ್ತರು ಎರಡನೇ ಅಭಿಪ್ರಾಯಕ್ಕೆ ಬರುತ್ತಾರೆ. ಅದೇನೆಂದರೆ, ಮದುವೆಯು ಮುರಿದು ಬಿದ್ದಿದ್ದರೆ, ಕೆಲವೊಂದು ಸಂದರ್ಭಗಳಲ್ಲಿ ವಿಚ್ಛೇದನವನ್ನು ಅನುಮೋದಿಸಬಹುದು.ಉದಾಹರಣೆಗಾಗಿ, ಒಬ್ಬನ ಹೆಂಡತಿಯು ಈಗಾಗಲೇ ಹಾದರ ಮಾಡಿದ್ದರೆ, ತ್ಯಾಗವು ವ್ಯಭಿಚಾರವನ್ನು ಮಾಡದಂತೆ ತಡೆಯಲಾರದು. ಕೆಲವು ಕ್ರೈಸ್ತರು, ತೊರೆದುಬಿಡುವಿಕೆ. ಉದಾಹರಣೆಗೆ ಒಬ್ಬನು ತನ್ನ ಹೆಂಡತಿಯನ್ನು ತ್ಯಾಗ ಪತ್ರ ಕೊಡದೇ ಬಿಟ್ಟು ಹೋದರೆ ಅಥವಾ ಅಸಾಧಾರಣ ಸಂದಿಗ್ಧ ಪರಿಸ್ಥಿತಿಯಲ್ಲಿ (ಅಂದರೆ ದೈಹಿಕವಾದ ಹಿಂಸೆ)ಯಾಗಿದ್ದರೆ ಅದು ವ್ಯಭಿಚಾರಕ್ಕೆ ಸಮನಾದ ಕಾರ್ಯವೇ.ಮತ್ತೂ ಇನ್ನು

ಕೆಲವು ಕ್ರೈಸ್ತರು, ನಂಬುವುದೇನೆಂದರೆ, ಒಬ್ಬ ಅವಿಶ್ವಾಸಿ ಗಂಡನು ಅಥವಾ ಹೆಂಡತಿಯು ಅವನ ಅಥವಾ ಅವಳ ಜೀವನ ಸಂಗಾತಿಯನ್ನು ತ್ಯಾಗ ಮಾಡಿದರೆ, ಕ್ರೈಸ್ತನಾದ ಗಂಡ ಹೆಂಡತಿಯು ಪೌಲನ ಉಪದೇಶದಂತೆ, ಅವಿಶ್ವಾಸಿ ಸಂಗಾತಿಯನ್ನು ಬಿಟ್ಟು ಹೋಗಲು ಬಿಡಬೇಕು (1ನೇ ಕೊರಿಂಥ 7:15). ಮರು ವಿವಾಹದ ಬಗ್ಗೆ ಕೆಲವು ಕ್ರೈಸ್ತರು ಆಲೋಚಿಸುವುದೇನೆಂದರೆ, ಯಾರು ತನ್ನ ಗಂಡ / ಹೆಂಡತಿಯನ್ನು ತ್ಯಾಗ ಮಾಡುತ್ತಾನೋ / ಮಾಡುತ್ತಾಳೋ ಅವನು / ಅವಳು ತಿರುಗಿ ಆತನ / ಆಕೆಯ ಸಂಗಾತಿ ಬದುಕಿರುವವರೆಗೆ ಯಾವದೇ ಕಾರಣದಿಂದ ಮರುವಿವಾಹವಾಗಕೂಡದು (1ನೇ ಕೊರಿಂಥ 7:11). ಇನ್ನು ಕೆಲವರು, ನಿರ್ದೋಷಿಯಾದ ವಿಶ್ವಾಸಿಯು ತಿರುಗಿ ಮತ್ತೆ ಮದುವೆ ಮಾಡಿಕೊಳ್ಳಲು ಸ್ವತಂತ್ರ ಎಂದು ನಂಬುತ್ತಾರೆ. ಈ ಕ್ರೈಸ್ತರು,' ಇಂತಹ ಸಂದರ್ಭದಲ್ಲಿ ಕ್ರೈಸ್ತ ಸಹೋದರನಾಗಲಿ, ಸಹೋದರಿಯಾಗಲಿ ಬದ್ಧರಾಗಬೇಕಾಗಿಲ್ಲ ಎಂಬ ಪೌಲನ ಮಾತುಗಳನ್ನು ತೋರಿಸುತ್ತಾರೆ. 1ನೇ ಕೊರಿಂಥ 7:15.

ಮತ್ತೆ ಇನ್ನು ಕೆಲವರು ಮೂರನೇ ಅಭಿಪ್ರಾಯ ಹೊಂದಿದ್ದಾರೆ. ಅದೇನೆಂದರೆ, ಮದುವೆಯನ್ನು ಮುರಿಯುವುದು ಯಾವಾಗಲೂ ತಪ್ಪೇ ಆದರೆ ಬೇರೊಬ್ಬ ಹೆಂಡತಿಯನ್ನು ಮರುವಿವಾಹ ಮಾಡಿಕೊಳ್ಳಲು ಮೊದಲನೇ ಹೆಂಡತಿಯ ತ್ಯಾಗಕ್ಕೆ ಯಾವುದೇ ಕಾರಣ ಇದ್ದರೂ ಸಹ ಒಪ್ಪಿಕೊಳ್ಳಬೇಕಾದದ್ದೆಂದು ಅವರು ನಂಬುವುದಾದರೆ ಯಾವನಾದರೂ ಸಕಾರಣವಿಲ್ಲದೆ ಮೊದಲನೇ ಹೆಂಡತಿಯನ್ನು ತ್ಯಾಗ ಮಾಡಿ, ಬೇರೊಬ್ಬಳನ್ನು ಮದುವೆಯಾದರೆ, ಅದು ವ್ಯಭಿಚಾರವೇ. ಒಂದು ವೇಳೆ ಇದು ಮೋಶೆಯ ಧರ್ಮಶಾಸ್ತ್ರಕ್ಕೆ ಅನುಗುಣವಾಗಿರಲಿ ಅಥವಾ ಇಲ್ಲದಿರಲಿ ಇದು ವ್ಯಭಿಚಾರವೇ ಸರಿ. ಮತ್ತಾಯ 19:9. ಆದರೆ ಈ ಕ್ರೈಸ್ತರು ತರ್ಕಿಸುವುದೇನೆಂದರೆ, **ಹಾದರದ ಕಾರಣದಿಂದಲ್ಲದೇ, ತನ್ನ ಹೆಂಡತಿಯನ್ನು ಬಿಟ್ಟು ಬಿಡುವವನು ಅವಳು ವ್ಯಭಿಚಾರ ಮಾಡುವುದಕ್ಕೆ ಕಾರಣನಾಗುತ್ತಾನೆ** ಮತ್ತಾಯ 5:32ದಲ್ಲಿ ಈ ಮಾತನ್ನು ಯೇಸು ಹೇಳಿದ್ದಾನೆ. ಇತನು ಇದನ್ನು ಹೇಳುವಾಗ, ಬರೀ ತ್ಯಾಗ ಮಾಡಿದ ಕೂಡಲೇ ಅವಳು ವ್ಯಭಿಚಾರಿಣಿಯಾಗುತ್ತಾಳೆ ಎಂದು ಅರ್ಥವಲ್ಲ. ಮತ್ತು ಪ್ರತಿಯೊಬ್ಬ ನಿರ್ದೋಷಿಯಾದ ಸ್ತ್ರೀಯು ತ್ಯಾಗ ಪತ್ರ ಪಡೆದಿರುವವಳಾಗಿದ್ದು ಒಂದು ವೇಳೆ ವ್ಯಭಿಚಾರ ಮಾಡದಿದ್ದರೆ ಅವಳು ತದನಂತರ ಮರು ವಿವಾಹವಾಗಬಹುದು ಅಥವಾ ಮರು ಮದುವೆಯಾಗದೇಯು ಇರಬಹುದು.

ಕೆಲವು ಸ್ತ್ರೀಯರು ಮರು ಮದುವೆಯಾಗುವುದೂ ಇಲ್ಲ ಅಥವಾ ವ್ಯಭಿಚಾರ ಮಾಡುವುದೂ ಇಲ್ಲ. ನಿಜ ಹೇಳುವುದಾದರೆ, ಒಂದು ವೇಳೆ ತನ್ನ ಹೆಂಡತಿಯು ವ್ಯಭಿಚಾರ ಮಾಡದಿದ್ದಾಗಲೂ ಯಾವ ಪುರುಷನು ಹೆಂಡತಿಯನ್ನು ತ್ಯಾಗ ಮಾಡುತ್ತಾನೋ ಅವನು ಆಕೆಯನ್ನು ವ್ಯಭಿಚಾರಿಣಿಯಾಗುವಂತೆ ಕಾಣಲು ಕಾರಣೀಭೂತನಾಗುತ್ತಾನೆ. ಇದರಿಂದ ಬೇರೆಯವರು, ಈಕೆಯು ಮದುವೆಯ ದಾಂಪತ್ಯದಲ್ಲಿ ಅಪನಂಬಿಗಸ್ತಳಾಗಿರಬಹುದೆಂದು, ಇದಕ್ಕಾಗಿ ತ್ಯಾಗ ಮಾಡಿದನೆಂದು ಇತರರು ನಂಬುತ್ತಾರೆ. ಈಕೆಯು ತಿರುಗಿ ಮದುವೆಯಾದರೆ, ಈಕೆಯ ಹೊಸ ಗಂಡನು, ಈಕೆಯನ್ನು ವ್ಯಭಿಚಾರಿಣಿಯಂತೆಯೇ ಕಾಣುತ್ತಾನೆ. ಈ ಅರ್ಥಾನುಸಾರವು ಪೌಲನು ರೋಮಾ. 7:3ರಲ್ಲಿ ಬರೆದಿರುವ ಪ್ರಕಾರವನ್ನು ಹೋಲುತ್ತದೆ. ಪೌಲನು ಅವಳು ವಾಸ್ತವವಾಗಿ ವ್ಯಭಿಚಾರಿಣಿಯಾಗಿದ್ದಾಳೆಂದು ಹೇಳುವುದಿಲ್ಲ ಬದಲಾಗಿ ಯಾವ ಸ್ತ್ರೀಯು, ತನ್ನ ಮೊದಲನೇ ಗಂಡನು ಬದುಕಿರುವಾಗಲೇ ಮದುವೆಯಾಗುತ್ತಾಳೋ ಅವಳು **ವ್ಯಭಿಚಾರಿಣಿಯೆಂದೆ ಕರೆಯಲ್ಪಡುತ್ತಾಳೆ.**

ಮೂರನೇ ಅಭಿಪ್ರಾಯ ಹೊಂದಿರುವ ಈ ಕ್ರೈಸ್ತರು ಹೇಳುವುದೇನೆಂದರೆ, ವಿಶ್ವಾಸಿಗಳು ತಮ್ಮ ಹೆಂಡತಿಯರನ್ನು ತ್ಯಜಿಸಲೇ ಕೂಡದೆಂದೂ, ಮತ್ತು ಅವಿಶ್ವಾಸಿಯಾದ ಹೆಂಡತಿಯು ವಿಚ್ಛೇದನ ಮಾಡಿಕೊಳ್ಳಲು ಬಯಸಿದರೆ ಇದಕ್ಕೆ ಅನುಮತಿಸಬಹುದು. ಆಕೆಯು ಅದಕ್ಕೆ ಒಪ್ಪಿದರೆ ಮತ್ತು 1ನೇ ಕೊರಿಂಥರಲ್ಲಿನ 7:10-16. "ಮದುವೆಯಾಗದ" ಎಂಬ ಪದವು 1ನೇ ಕೊರಿಂಥ 7:8-9ರಲ್ಲಿನ ಕನ್ನೆ, ಎಂಬ ಪದವು ಬೇರೆಯೇ ಆಗಿದೆ . ಈ ಕ್ರೈಸ್ತರು, 1ನೇ ಕೊರಿಂಥ 7:25ದಂತೆಯೇ ವಚನ 8-9ನ್ನು ನಂಬಿ, ಇದರಂತೆ ಪೌಲನು ಈಗಾಗಲೆ ಮದುವೆಯಾದವರ ಬಗ್ಗೆ ವಿಧವೆಯಾದವರ ಅಥವಾ ವಿಚ್ಛೇದನ ವಾದವರ ಬಗ್ಗೆಯೇ ಬರೆದಿದ್ದಾನೆಂದು ನಂಬುತ್ತಾರೆ. ಹೀಗಾಗಿ, ತಮ್ಮ ದೈಹಿಕ ಇಚ್ಛೆಯನ್ನು ಹತೋಟಿಯಲ್ಲಿಟ್ಟು ಕೊಳ್ಳಲಾರದವರು ಮರು ಮದುವೆಯನ್ನು ಮಾಡಿಕೊಳ್ಳ ಬಹುದೆಂಬುದಾಗಿ ಪೌಲನು ಅನುಮತಿಸಿದನು ಎಂಬ ಅರ್ಥವನ್ನು ಅನುಸರಿಸುವುದರಿಂದ ಈ ಗುಂಪಿನ ಕ್ರೈಸ್ತರು ತಪ್ಪಿನಿಂದ ಕೂಡಿದವರನ್ನು, ಈಗಾಗಲೇ ವಿಚ್ಛೇದನ ಹೊಂದಿದವರನ್ನು ಪರೀಕ್ಷಿಸಲು ಒಪ್ಪುವುದಿಲ್ಲ. ಕಾರಣ ತಾವು ಹಿಂದೆ ಮಾಡಿಕೊಂಡ ಮದುವೆ ಮುರಿದು ಹೋಗಿದ್ದರ ತಪ್ಪಿಗೆ ಪಶ್ಚಾತ್ತಾಪ ಪಟ್ಟಂತವರನ್ನು ಮಾತ್ರ ಮರುವಿವಾಹ ಮಾಡಿಕೊಳ್ಳಲು ಒಪ್ಪಿಗೆ ಕೊಡುವುದನ್ನು ಇವರು ಒಪ್ಪುತ್ತಾರೆ.

ವಿಚ್ಛೇದನವು ಮತ್ತು ಮರು ಮದುವೆಯು ಬಹಳ ಗಂಭೀರವಾದ ವಿಷಯ. ಒಬ್ಬನು ಈ ವಿಷಯಯಕ್ಕೆ ಸಂಬಂಧಪಟ್ಟ ಎಲ್ಲಾ ವಚನಗಳನ್ನು ಅಭ್ಯಸಿಸಿ, ಪ್ರಾರ್ಥಿಸಿ, ನಂತರ ತೀರ್ಮಾನಕ್ಕೆ ಬರಬಹುದು. ಮರುಮದುವೆಯಾಗಲು ಅಥವಾ ತ್ಯಾಗ ಮಾಡಲು, ಒಬ್ಬನು / ಒಬ್ಬಳು ಸಂಬಂಧಪಟ್ಟ ಸಭಾಪಾಲಕ ಅಥವಾ ಹಿರಿಯರೊಡನೆ ಸಮಾಲೋಚಿಸಿ ನಂತರ ಕಾರ್ಯಪ್ರವೃತ್ತರಾಗಬಹುದು. ವಿವಿಧ ಸಭೆಗಳು ವಿವಿಧ ರೀತಿಯ ಧೋರಣೆಗಳನ್ನು ಈ ವಿಷಯದಲ್ಲಿ ಹೊಂದಿಕೊಂಡಿವೆ.

## ಬಹು ಪತ್ನಿತ್ವ

ಹಳೇ ಒಡಂಬಡಿಕೆ ಕಾಲದ ಅನೇಕ ವ್ಯಕ್ತಿಗಳು ಬಹು ಪತ್ನಿಗಳನ್ನು ಹೊಂದಿದ್ದರು ಎಂದು ಕಂಡುಬಂದರೂ, ಇದು ಆದಾಮನು ಮತ್ತು ಹವ್ವಳೂ ಏದೇನ್ ತೋಟದಲ್ಲಿ ಮಾಡಿದ ಪಾಪದ ಫಲವಾಗಿದೆ. ಮದುವೆಯಾಗಿ ಇಬ್ಬರು ಒಂದೇ ಶರೀರವಾಗುತ್ತಾರೆ. ದೇವರ ಈ ಮೂಲ ಆದರ್ಶ ಧಾಂಪತ್ಯದ ಯೋಜನೆಯಲ್ಲಿ ಮೂರನೆಯ ವ್ಯಕ್ತಿಯು ಸೇರಿಕೊಳ್ಳುವುದಕ್ಕೆ ಆಸ್ಪದವೇ ಇಲ್ಲ. ಪೂರ್ವದಲ್ಲಿ ಅನುಮತಿಸಿದಂತವುಗಳೆಲ್ಲವು ತೆಗೆದು ಹಾಕಲ್ಪಟ್ಟಿವೆಯೆಂದು ಹೊಸ ಒಡಂಬಡಿಕೆಯು ಸ್ಪಷ್ಟವಾಗಿ ಹೇಳುತ್ತದೆ. ಅದೇನೆಂದರೆ ಕ್ರೈಸ್ತರಿಗೆ ಒಂದೇ ಸಮಯದಲ್ಲಿ ಒಬ್ಬರಿಗಿಂತ ಹೆಚ್ಚು ಹೆಂಡತಿಯರು ಇರಬಾರದು. (1ನೇ ಕೊರಿಂಥ 7:2). ಎಲ್ಲಾ ಕ್ರೈಸ್ತರು ಇದನ್ನು ಒಪ್ಪಿಕೊಳ್ಳುತ್ತಾರೆ. ಆದರೆ ವಿಶ್ವಾಸಿಯಾಗುವ ಮೊದಲು, ಒಬ್ಬನಿಗೆ ಎರಡು ಅಥವಾ ಮೂವರು ಹೆಂಡತಿಯರು ಇದ್ದರೆ, ಅವನು ಯಾರನ್ನು ಬಿಟ್ಟು ಬಿಡಬಾರದು ಮತ್ತು ಅವರನ್ನು ಸಂರಕ್ಷಿಸಬೇಕು. (ವಿಮೋ 21:10). ಆದಾಗ್ಯೂ, ಯಾವ ಪುರುಷನು ಎರಡು ಅಥವಾ ಮೂವರು ಪತ್ನಿಯುಳ್ಳವನಾಗಿದ್ದನೊ ಅಂತಹವನು ಸಭೆ[1] ಯಲ್ಲಿ ಹಿರಿಯನಾಗಿ ಆರಿಸಿ ಬರುವುದನ್ನು ಪೌಲನು ಇಷ್ಟಪಡಲಿಲ್ಲ. 1ನೇ ತಿಮೊಥೆ. 3:2, 12, ತೀತ 1:6.

ಎಲ್ಲಾ ಕ್ರೈಸ್ತರಿಗೂ, ತನ್ನ ಹೆಂಡತಿಯೊಡನೆ ಮಾತ್ರ ದೈಹಿಕ ಸಂಬಂಧ ಇರಬೇಕೆಂದು, ಬೇರೆಯವರೊಂದಿಗೆ ಇರಕೂಡದೆಂದು, ಒಬ್ಬನು ಮದುವೆಯಾಗಿದ್ದವರೊಂದಿಗೂ ಅಥವಾ ಮದುವೆಯಾಗದವರೊಂದಿಗೂ ಅಥವಾ ಬರೀ ಸೂಳೆಯವರೊಂದಿಗು ಕೂಡ ಸಲ್ಲದು ಎಂಬುದು ಸ್ಪಷ್ಟವಾಗಿದೆ 1ನೇ ಕೊರಿಂಥ.. 6:15. **ದಾಂಪತ್ಯವು ಮಾನ್ಯವಾದು ದೆಂದು ಎಲ್ಲರೂ ಎಣಿಸಬೇಕು. ಗಂಡ ಹೆಂಡತಿಯರ ಸಂಬಂಧವು ನಿಷ್ಕಲಂಕವಾಗಿರಬೇಕು. ಜಾರರಿಗೂ, ವ್ಯಭಿಚಾರಿಗಳಿಗೂ, ದೇವರು ನ್ಯಾಯ ತೀರಿಸುವನೆಂದು ತಿಳಿಯಿರಿ.** (ಇಬ್ರಿಯಾ 13:4).

---

[1]ಒಬ್ಬನು ಹೆಂಡತಿ ಸತ್ತನಂತರ ಮರು ಮದುವೆ ಮಾಡಿಕೊಂಡರೆ ಆತನು ಸಭಾನಾಯಕನಾಗಿಯೇ ಉಳಿದುಕೊಳ್ಳುತ್ತಾನೆ. ಸತ್ಯವೇದದ ಪ್ರಕಾರ ಪುರುಷರು ಮತ್ತು ಸ್ತ್ರೀಯರು ತಮ್ಮ ಸಂಗಾತಿಯು ಸತ್ತ ನಂತರ ಅವರು ತಿರುಗಿ ಮದುವೆ ಮಾಡಿಕೊಳ್ಳಲು ಸ್ವತಂತ್ರ ರು.

# ಗುಣ ಪಡಿಸುವಿಕೆ ಮತ್ತು ಬಿಡುಗಡೆ

## ಪ್ರಮುಖ ವಚನಗಳು

ಮತ್ತಾಯ :- 8:16-17 ಯೇಸು ಕ್ರಿಸ್ತನ ಸೇವೆಯಲ್ಲಿ, ಬಿಡುಗಡೆ ಮತ್ತು ಗುಣ ಪಡಿಸುವಿಕೆ.

ಮತ್ತಾಯ :- 12:43:45 ದುರಾತ್ಮಗಳ ಬಗ್ಗೆ ಬೋಧನೆ.

ಮಾರ್ಕ :- 4:1:17 ಯೇಸುವು ದುರಾತ್ಮ ಪೀಡಿತ ಮನುಷ್ಯನನ್ನು ಬಿಡುಗಡೆಗೊಳಿಸಿದನು.

ಮಾರ್ಕ :- 9:14:29 ಯೇಸುವು ಬಾಲಕನನ್ನು ಮೂಕದೆವ್ವದಿಂದ ಬಿಡುಗಡೆಗೊಳಿಸಿದನು.

ಮಾರ್ಕ :- 16:16:18 ಬಿಡುಗಡೆ ಮತ್ತು ಗುಣಪಡಿಸುವಿಕೆಗಳು ವಿಶ್ವಾಸಗಳ ಸೂಚಕ ಕಾರ್ಯಗಳಾಗಿವೆ.

1 ಕೊರಿಂಥ :- 12:9:10 ವಾಸಿ ಮಾಡುವ, ಅದ್ಭುತಗಳನ್ನು ಮಾಡುವ ಮತ್ತು ಸತ್ಯಾಸತ್ಯ ಆತಗಳನ್ನು ವಿವೇಚಿಸುವ ವರಗಳು.

ಯಾಕೋಬ :- 5:14-16 ಸಭೆಯ ಹಿರಿಯರು ರೋಗಿಗೆ ಎಣ್ಣೆ ಹಚ್ಚುವುದು ಮತ್ತು ಪ್ರಾರ್ಥಿಸುವುದು.

## ರೋಗಿಗಳಿಗೆ ದೈವಿಕ ಸ್ವಸ್ಥತೆ

ಸತ್ಯವೇದದಲ್ಲಿ ರೋಗಗಳ ಸ್ವಸ್ಥತೆಗಾಗಿ ಅನೇಕ ವಾಗ್ದಾನಗಳು ಇವೆ. ಯಹೂದ್ಯರಿಗೆ ಸ್ವಸ್ಥತೆಯ ವಾಗ್ದಾನಗಳು ಹಳೇ ಒಡಂಬಡಿಕೆಯಲ್ಲಿ ಕೊಡಲ್ಪಟ್ಟಿದ್ದವು (ಕೀರ್ತನೆ 103:1:5) ಮಾತ್ರವಲ್ಲ ರೋಗಗಳಿಂದ ರಕ್ಷಣೆಯು ಸಹ. (ವಿಮೋಚನಕಾಂಡ 15:26) ಸೈತಾನನೂ ಅಸ್ವಸ್ಥತೆಗಳಿಗೆ ಮೂಲ ವ್ಯಕ್ತಿ ಎಂದು ಗುರುತಿಸುತ್ತದೆ. (ಲೂಕ 13:16) (ಅ.ಕೃ. 10:38). ಸ್ವಸ್ಥತೆಯನ್ನು ಮಾಡುವ ಈ ಒಂದು ಕಾರಣಕ್ಕಾಗಿ, ಪವಿತ್ರಾತ್ಮದಿಂದಲೂ, ಬಲದಿಂದಲೂ ಅಭಿಷೇಕಿಸಲ್ಪಟ್ಟಿದ್ದೇನೆ ಎಂದು ಯೇಸುಕ್ರಿಸ್ತನು ಹೇಳಿದನು (ಲೂಕ 4:17-18, 5-17). ಯೇಸುಕ್ರಿಸ್ತನು ಎಲ್ಲಾ ರೋಗಿಯನ್ನು ಗುಣಪಡಿಸಿದನೆಂದು (ಮತ್ತಾಯ 8:16) ಮತ್ತು ಎಲ್ಲಾ ತರದ ರೋಗ ಮತ್ತು ಬೇನೆಗಳನ್ನು ವಾಸಿ ಮಾಡಿದನು ಎಂದು ಸತ್ಯವೇದವು ಹೇಳುತ್ತದೆ (ಮತ್ತಾಯ 4:23). ಯೇಸುಕ್ರಿಸ್ತನ ಶಿಷ್ಯರಿಗೂ ಸಹ ಗುಣಪಡಿಸುವಂತಹ ಈ ಅಧಿಕಾರವು ಕೊಡಲ್ಪಟ್ಟಿತು (ಮತ್ತಾಯ 10:1,8; ಮಾರ್ಕ 6:7,13; ಲೂಕ 10:9). ನಂಬುವವರಿಗೆ ಗುಣ ಪಡಿಸುವಿಕೆಯು ಒಂದು ಗುರುತಾಗಿದೆ ಎಂದು ಯೇಸುಕ್ರಿಸ್ತನು ಪರಿಗಣಿಸಿದನು (ಮಾರ್ಕ 16:18). ಅ.ಕೃತ್ಯದ ಎಲ್ಲಾ ಭಾಗದಲ್ಲಿಯೂ ಇದನ್ನು ನೋಡುತ್ತೇವೆ. ಸಭೆಯು ರೋಗಿಗೆ ಎಣ್ಣೆ ಹಚ್ಚಿ ಪ್ರಾರ್ಥಿಸಬೇಕು ಮತ್ತು ರೋಗಿಯು ಗುಣ ಹೊಂದಬೇಕು ಎಂದು ಯಾಕೋಬನು ಬಯಸಿದನು (ಯಾಕೋ 5:14-16). ಪವಿತ್ರಾತ್ಮವರಗಳಲ್ಲಿ ಗುಣಪಡಿಸುವ ಹಾಗೂ ಅದ್ಭುತ ಕಾರ್ಯಗಳನ್ನು ಮಾಡುವ ವರಗಳು ಸಹ ಇವೆ. (1 ಕೊರಿಂಥ 12:9-10, 28) ಅಪೊಸ್ತಲರು ಇದ್ದಂತ ಸಮಯದಿಂದ ಹಿಡಿದು ನಂತರದ ಅನೇಕ ಶತಮಾನಗಳಲ್ಲಿಯೂ ಆದಿ ಸಭೆಯಲ್ಲಿ ಅನೇಕ ಸ್ವಸ್ಥತೆಯ ಅದ್ಭುತಗಳು ನಡೆಯುತ್ತಿದ್ದವು. ದೇವರು ಪೂರ್ವಕಾಲದಲ್ಲಿ ಮಾಡಿದಂತೆಯೇ ಈ ದಿನಗಳಲ್ಲಿಯೂ ಸ್ವಸ್ಥತೆಯನ್ನು ಮಾಡುವನು ಎಂದು ಅನೇಕ ಕ್ರೈಸ್ತರು ನಂಬುತ್ತಾರೆ. ಗ್ರಂಥಕರ್ತನು ಹಿಬ್ರಿಯ 13:8 ರಲ್ಲಿ ಬರೆದಂತೆ **ಯೇಸು ಕ್ರಿಸ್ತನು ನಿನ್ನೆ ಇದ್ದಂತೆಯೇ ಈ ಹೊತ್ತು ಮತ್ತು ಸದಾಕಾಲವು ಇರುತ್ತಾನೆ** ಎಂಬಂತಹ ಮತ್ತು ಮಾರ್ಕ 1:40-41 ವಚನಗಳಂತೆ ಯೇಸು ಕ್ರಿಸ್ತನು ಯಾವಾಗಲೂ ಗುಣ ಪಡಿಸಲು ಬಯಸುತ್ತಾನೆ ಎಂಬುದಕ್ಕೆ ಈ ವಾಕ್ಯಗಳನ್ನು ಸೂಚಿಸುತ್ತಾರೆ. ವಿಶ್ವದಲ್ಲಿ ಅನೇಕ ಜನರು ದೇವರಿಂದ ಗುಣ ಹೊಂದಿದ್ದೇವೆ ಎಂದೂ ಮತ್ತು ಅನೇಕರು ಸ್ವಸ್ಥತೆಯ ಇಂತಹ ಅದ್ಭುತ ಕಾರ್ಯಗಳನ್ನು ನೋಡಿದ್ದೇವೆ ಎಂದು ಸಾಧಿಸುತ್ತಾರೆ.

ಯೆಶಾಯ 53ನೆ ಅಧ್ಯಾಯದ ಒಂದು ಭಾಗದಲ್ಲಿ ಹೇಳಿರುವ ಹಾಗೆ,ಮತ್ತು ಹಳೇ ಒಡಂಬಡಿಕೆಯಲ್ಲಿರುವ ಪ್ರವಾದನೆಗಳಂತೆ ರಕ್ಷಕನು ಶಿಲುಬೆಯ ಮೇಲೆ ನಮ್ಮ ಪಾಪಗಳನ್ನು ಹೊತ್ತುಕೊಂಡದ್ದು ಮಾತ್ರವಲ್ಲದೆ, ನಮ್ಮ

ಬೇನೆಗಳನ್ನೂ ಸಹ ಹೊತ್ತುಕೊಳ್ಳುವನು, ಎಂಬ ಹಳೆ ಒಡಂಬಡಿಕೆಯಲ್ಲಿರುವ ಪ್ರವಾದನೆಗಳನ್ನು ಬೊಟ್ಟು ಮಾಡಿ ತೋರಿಸುತ್ತಾರೆ (ನ್ಯಾಯ. 21:8.9, ಯೆಶಾಯ 53:4-5). ಯೆಶಾಯನು 53ನೇ ಅಧ್ಯಾಯದಲ್ಲಿವ ಈ ಬಾಗವು ಹಿಬ್ರಿಯ 1ಭಾಷೆ ಯಲ್ಲಿ - **ಆತನು ತಾನೇ ನಮ್ಮ ಬೇನೆಗಳನ್ನು ಮತ್ತು ರೋಗಗಳನ್ನು ಹೊತ್ತುಕೊಂಡನು** ಎಂದು ಹೇಳಲ್ಪಟ್ಟಿದೆ.ಇದನ್ನು ಇದೆ ರಿತಿಯಾಗಿ ಮತ್ತಾಯನ ಸುವಾರ್ತಯಲ್ಲಿಉಲ್ಲೇಕಿಸಲಾಗಿದೆ. **(ಮತ್ತಾಯ 8:17)**. ಒಂದು ವೇಳೆ ಕ್ರಿಸ್ತನು ನಮ್ಮ ಪಾಪ ಮತ್ತು ರೋಗಗಳನ್ನು ಜೊತೆಯಾಗಿಯೇ ತೆಗೆದುಕೊಂಡಿರುವುದಾದರೆ ನಮ್ಮ ಪಾಪಗಳ ಕ್ಷಮಾಪಣೆ ನಡೆಯುತ್ತಿರುವ ಹಾಗೆಯೆ ರೋಗಗಳ ಗುಣ ಪಡಿಸುವಿಕೆಯು ಈ ದಿನದಲ್ಲಿಯೂ ಮುಂದುವರಿಯುವುದನ್ನು ನೋಡಬೇಕಾಗಿತ್ತು. ಪೌಲನ **ದೇಹದಲ್ಲಿದ್ದಂತಹ ಮುಳ್ಳು** ಶಾರೀರಿಕವಾದಂತೆ ಬಾಧೆಯಾಗಿರಲಿಲ್ಲ ಎಂದು ಇವರು ನಂಬುತ್ತಾರೆ. ಆದರೆ ಅದು ಸೈತಾನನ ದೂತನಿಂದಾಯಿತು. (2 ಕೊರಿಂಥ 12:7). **ರೋಗಗಳನ್ನು ಗುಣಪಡಿಸುವ ಮತ್ತು ಅದ್ಭುತಗಳನ್ನು ಮಾಡುವಂತಹ ಶಕ್ತಿಯ ವರಗಳ ಸಹಿತವಾಗಿ,** ಪವಿತ್ರಾತ್ಮನ ಎಲ್ಲಾ ವರಗಳು ಕ್ರೈಸ್ತರಿಗೆ ಈಗಲೂ ಲಬ್ಯವೆಂದು ಅನೇಕರು ನಂಬುತ್ತಾರೆ (1 ಕೊರಿಂಥ 12:9-10) ದೇವರಿಂದಲೇ ಎಲ್ಲಾ ಆರೋಗ್ಯದ ನಷ್ಟವಾಗುವುದು ಮತ್ತು ರೋಗಗಳ ನಿವಾರಣೆಯಾಗಲು ದೇವರನ್ನೆ ನಿರೀಕ್ಷಿಸಬೇಕು ಎಂದು ಕೆಲವು ಕ್ರೈಸ್ತರು ನಂಬುತ್ತಾರೆ. ಭಾಗಶಃ ಎಲ್ಲ ರೋಗಗಳ ಗುಣಪಡಿಸುವಿಕೆಯ ಸಾಧ್ಯತೆಯಿದೆ. ಆದರೆ ಎಲ್ಲರು ಗುಣಹೊಂದುವರೆಂದು ನಿರೀಕ್ಷಿಸುವಂತಿಲ್ಲ ಎಂದು ಇತರರು ನಂಬುತ್ತಾರೆ.

ದೇವರು ಅಲೌಕಿಕವಾದ ರೀತಿಯಿಂದ ವಾಸಿ ಮಾಡುವುದೇ ಇಲ್ಲ. ಆದರೆ ವೈದ್ಯರನ್ನು ಉಪಯೋಗಿಸುವನು ಮತ್ತು ಔಷಧಿಗಳಿಂದ ವಾಸಿ ಮಾಡುವನು ಎಂದು ಇನ್ನಿತರ ಕ್ರೈಸ್ತರು ನಂಬುತ್ತಾರೆ. ನಿಜವಾಗಿ ಚರಿತ್ರೆಯಿದ್ದರೂ, ಅಲೌಕಿಕವಾಗಿ ವಾಸಿಯಾಗಿರುವಂತದ್ದನ್ನು ಹೆಚ್ಚಿನ ಕ್ರೈಸ್ತರು ನೋಡಿಲ್ಲ ಎಂದು ಇವರು ಅರ್ಥೈಸುತ್ತಾರೆ. ಈ ಕಾರಣಕ್ಕಾಗಿಯೇ ಮೊದಲನೆಯ ಶತಮಾನದ ಆದಿ ಕ್ರೈಸ್ತರಿಗೆ ಮಾತ್ರ ಗುಣಪಡಿಸುವ ಶಕ್ತಿಯು, ದೇವರಿಂದ ವರವಾಗಿ ಕೊಡಲ್ಪಟ್ಟಿತ್ತು ಎಂದು ನಂಬುತ್ತಾರೆ. ಪೌಲನು ಸ್ವತಃ ತನ್ನ ಅಸ್ವಸ್ಥ ಸ್ನೇಹಿತನನ್ನು ಅಲ್ಲಿಯೇ ಇರಲು ಬಿಟ್ಟದ್ದನ್ನು ತೋರಿಸುತ್ತಾರೆ (2 ತಿಮೋಥೆ 4:20) ಮತ್ತು ಪೌಲನ **ದೇಹದಲ್ಲಿದ್ದಂತಹ ಮುಳ್ಳು** ಶರೀರದ ಅಸ್ವಸ್ಥತೆಯೆಂದು ಅರ್ಥೈಸುತ್ತಾರೆ (2 ಕೊರಿಂಥ 12:7), ಬಹುಶಃ ಕಣ್ಣಿನ ಕಾಯಿಲೆಯಿಂದ (ಗಲಾತ್ಯ 4:15) ಬಳಲುತ್ತಿದ್ದನು. ಕ್ರಿಸ್ತನು ತಾನು ಭೂಮಿಯ ಮೇಲೆ ಇದ್ದಾಗ ಬಾಧೆಗಳನ್ನು ತೆಗೆದುಕೊಂಡು ಜನರ ಖಾಯಿಲೆಗಳನ್ನು ಗುಣ ಪಡಿಸಿದನು (ಮತ್ತಾಯ 8:16-17). ಆದರೆ ನಮ್ಮ ಪಾಪಗಳನ್ನು ಮಾತ್ರ ಶಿಲುಬೆಯ ಮೇಲೆ ಹೊತ್ತುಕೊಂಡನು ಎಂದು ವ್ಯಾಖ್ಯಾನಿಸುತ್ತಾರೆ. ಯೇಸುವು ನಮ್ಮ ಖಾಯಿಲೆ ಹಾಗೂ ಪಾಪಗಳಿಗಾಗಿ ಶಿಲುಬೆಯ ಮೇಲೆ ಸಾಯದೆ, ಕೇವಲ ಪಾಪಕ್ಕಾಗಿ ಮಾತ್ರ ಸತ್ತನೆಂದು ಇವರು ನಂಬುತ್ತಾರೆ.

ಈ ಎರಡು ಭಿನ್ನಾಭಿಪ್ರಾಯಗಳ ಮಧ್ಯದಲ್ಲಿರುವ ಮೂರನೆಯ ದೃಷ್ಟಿಕೋನದಲ್ಲಿ ಒಂದು ಸತ್ಯವಿರುವುದು ಕಂಡು ಬರುತ್ತದೆ. ಈ ಎರಡು ಅಭಿಪ್ರಾಯಗಳಲ್ಲಿ ಭಾಗಶಃ ಸತ್ಯವಿದೆ ಎಂದು ನಂಬುವಂತಹವರು ಸಂಬಂಧಿತ ವಿಷಯಕ್ಕಾಗಿ ಸರ್ವ ಸಾಮಾನ್ಯ ಲೇಖನಗಳು : ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಅವಲೋಕಿಸಿರಿ.

## ಗುಣಪಡಿಸುವಿಕೆಗಾಗಿ ಪ್ರಾರ್ಥಿಸುವುದು

ಸತ್ಯವೇದದಲ್ಲಿ ಜನರು ಬೇರೆ ಬೇರೆ ರೀತಿಯಲ್ಲಿ ಗುಣ ಹೊಂದಿದರು. . ನಾವು ಪಡೆಯಬೇಕಾದರೆ **ಕೇಳಲೇ ಬೇಕು** ಎಂದು ಯೇಸು ಹೇಳಿದನು (ಮತ್ತಾಯ 2:2, ಯಾಕೋಬ 4:2),ಅವರ ನಂಬಿಕೆಯೇ ಅವರನ್ನು ಗುಣಪಡಿಸಿತು ಎಂದು ಯೇಸುವು ಅನೇಕ ಜನರಿಗೆ ಹೇಳಿದನು (ಮತ್ತಾಯ 8:10-13 ; ಮಾರ್ಕ 10:52) ಮತ್ತು ಅಪೋಸ್ತಲರು ಸಹ ಹಾಗೆಯೇ ಮಾಡಿದರು (ಅ.ಕೃ. 3:16). ಇತರರು ತಮ್ಮ "ವಿಧೇಯತೆ"ಯ ಮೂಲಕ ಗುಣಹೊಂದಿದರು (2ನೇ ಅರಸಗಳು 5:1-14; ಲೂಕ 17:14, ಯೋಹಾನ 9:7). ಕ್ರಿಸ್ತನ ಅಥವಾ ಅಪೋಸ್ತಲರ "ಆಜ್ಞಾವಾಣಿ"ಯ ಮೂಲಕವಾಗಿ ಅನೇಕ ಪಾರ್ಶ್ವವಾಯು ರೋಗಿಗಳು ಗುಣಪಟ್ಟರು. (ಮಾಕ 2:10-11; ಯೋಹಾನ 5:8, ಅ.ಕೃ. 3:6; 14:10). ಯೇಸು "ತನ್ನ ವಾಗ್ದಾನಗಳ" ಮೇಲೆ ಹಕ್ಕು ಸಾಧಿಸಿರೆಂದು ತನ್ನ ಶಿಷ್ಯರಿಗೆ ಹೇಳಿದನು (ಮಾರ್ಕ 11:22-24; ಯೋಹಾನ 14:13-14). "ತೈಲಾಭಿಷೇಕ"ದಿಂದ ಅನೇಕರು ಗುಣ ಹೊಂದಿದರು (ಮಾರ್ಕ 6:13), ರೋಗಿಯನ್ನು ಗುಣಪಡಿಸಲು ತೈಲವನ್ನು ಹಚ್ಚಿ ಪ್ರಾರ್ಥಿಸಿರಿ ಎಂದು ಸಭೆಯ ಹಿರಿಯರಿಗೆ ಯಾಕೋಬನು ಸಲಹೆಯನ್ನು ಕೊಟ್ಟಿದ್ದಾನೆ (ಯಾಕೋಬ 5:14-16).

"ಕೈಗಳನ್ನಿಟ್ಟು" ಪ್ರಾರ್ಥಿಸಿದ್ದರಿಂದ ಅನೇಕರು ಗುಣ ಹೊಂದಿದರು (ಮಾರ್ಕ 6:5,6 ಲೂಕ 4:40, ಅ.ಕೃ. 28:8), ನಂಬಿಕೆ ಯಾರಿಗಿದೆಯೋ ಅವರು ರೋಗದ ವ್ಯಕ್ತಿಗಳ ಮೇಲೆ ಕೈಗಳನ್ನಿಡಬೇಕು ಮತ್ತು ಅವರು ಸ್ವಸ್ಥರಾಗುವರು ಎಂದು ಯೇಸುವು ಹೇಳಿದನು (ಮಾರ್ಕ 16:16, ಹಿಬ್ರಿಯ 6:1-2). "ಯೇಸುವಿನ ಬಟ್ಟೆ"ಯನ್ನು **"ಮುಟ್ಟಿದ್ದ"**ರಿಂದ (ಲೂಕ 6:19, 8:43-46), ಪೇತ್ರನ ನೆರಳು (ಅ.ಕೃ. 5:15) ಮತ್ತು ಪೌಲನ ಕರವಸ್ತ್ರ ಮತ್ತು ಕೈವಲ್ಕಗಳು ತಾಗಿದ್ದರಿಂದ ಅಭೂತಪೂರ್ವವಾದಂತ ಸ್ವಸ್ಥತೆಗಳುಂಟಾಗಿವೆ (ಅ.ಕೃ. 19:12). ಯೇಸುವಿನಿಂದ ಕಡೆಯ ಪಕ್ಷ **"ಪುನರಾವರ್ತನೆ"** ಪ್ರಾರ್ಥನೆ ಅಗತ್ಯವಾಗಿತ್ತು (ಮಾರ್ಕ 8:22-25).

ಏನೇ ಆದರೂ ಸುಧಾರಿತ ಔಷಧಿಯನ್ನು ಅಥವಾ ಇತರ ವೈಜ್ಞಾನಿಕ ಚಿಕಿತ್ಸೆಯನ್ನು ಯಾವೊಬ್ಬನು ತಿರಸ್ಕರಿಸಬಾರದು. ದೇವರು ನೇರವಾಗಿ ಗುಣ ಪಡಿಸಬಲ್ಲನು. ಆದರೂ ಕೆಲವೊಮ್ಮೆ ಕೆಲವು ವಸ್ತುಗಳನ್ನು ಉಪಯೋಗಿಸಿಕೊಂಡು ಸ್ವಸ್ಥತೆಯನ್ನು ತರುತ್ತಾನೆ. ಆತನು ಮುಟ್ಟಿದನು ಮತ್ತು ಎಣ್ಣೆಯನ್ನು, ಮಣ್ಣನ್ನು ಸಹ ಉಪಯೋಗಿಸಿದನು (ಯೋಹಾನ 9:6 "7). ಇದೇ ರೀತಿಯಲ್ಲಿ ಸ್ವಸ್ಥತೆಗಾಗಿ ಔಷಧಿಯ ಉಪಯೋಗವು ಒಂದು ಮಾರ್ಗೋಪಾಯವೆಂದು ತಿಳಿಯಬೇಕು. ಪೌಲನು ತಿಮೋಥೆಯನಿಗೆ ಹೊಟ್ಟೆಯ ನೋವು ಹಾಗು ಪುನರಾವರ್ತನೆ ಕಾಯಿಲೆಯ ನಿವಾರಣೆಗಾಗಿ ದ್ರಾಕ್ಷಾರಸವನ್ನು (ಮಧ್ಯಸಾರವನ್ನು) ಔಷಧಿಯಂತೆ ಉಪಯೋಗಿಸು ಎಂಬ ಸಲಹೆಯನ್ನು ಕೊಡುತ್ತಾನೆ (1 ತಿಮೋಥೆ 5:23). ಪೌಲನು ತನ್ನ ಜೊತೆಗೂಡಿ ಪ್ರಯಾಣಿಸಿದ ವೈದ್ಯನಾದ ಲೂಕನನ್ನು "ನನ್ನ ಪ್ರಿಯ ಸ್ನೇಹಿತ, ವೈದ್ಯನಾದಂತಹ ಲೂಕ" ಎಂದು ಸಂಬೋಧಿಸುತ್ತಾನೆ. ಅಥವಾ "ನನ್ನ ಪ್ರೀತಿಯ ವೈದ್ಯ ಸ್ನೇಹಿತನಾದಂತಹ ಲೂಕ" ಎಂದು ಕರೆಯುತ್ತಾನೆ (ಕೊಲೊಸ್ಸೆ 4:14). ಆದುದರಿಂದ ಕೇವಲ ದೇವರಿಂದ ಮಾತ್ರ ನೇರವಾಗಿ ಸ್ವಸ್ಥತೆಯನ್ನು ಹೊಂದುವುದನ್ನಾಗಲಿ ಅಥವಾ ವೈದ್ಯ ಹಾಗೂ ಔಷಧಿಗಳ "ಮೂಲಕ" ಗುಣ ಹೊಂದುವುದನ್ನು ಎದುರು ನೋಡುವುದಕ್ಕೆ ಬದಲಾಗಿ, ನೇರವಾಗಿ ದೇವರು ಹಾಗೂ ವೈದ್ಯಕೀಯ ಚಿಕಿತ್ಸೆ ಇವೆರಡರಿಂದ ಗುಣ ಹೊಂದಲು ನಿರೀಕ್ಷಿಸಬೇಕು (2 ಅರಸು 20:5-7) ಮತ್ತು ನಮ್ಮನ್ನು ಗುಣ ಪಡಿಸುವುದಕ್ಕೆ ಆತನು ಯಾವ ವಿಧಾನವನ್ನು ಆರಿಸಿಕೊಂಡಿದ್ದಾನೋ ಅದಕ್ಕಾಗಿ ದೇವರಿಗೆ ವಂದಿಸಬೇಕು.

ಕೆಲವು ಜನರು ಯಾಕೆ ಗುಣ ಹೊಂದಲಿಲ್ಲ ಎಂಬುದಕ್ಕೆ ಅನೇಕ ವಿವರಗಳು ಕೊಡಲ್ಪಟ್ಟಿವೆ. ಪ್ರಾರ್ಥನೆಗೆ ಉತ್ತರವಿಲ್ಲದಿರುವುದು ಅಪನಂಬಿಕೆ. ನಮ್ಮ ಸ್ವಂತ ಅಪನಂಬಿಕೆ (ಮಾರ್ಕ 9:23-24) ಅಥವಾ ವಾಸಿ ಮಾಡುವುದಕ್ಕೆ ಪ್ರಯತ್ನಿಸುತ್ತಿರುವಂತವರಲ್ಲಿ ಇರುವಂತ ಅಪನಂಬಿಕೆ (ಮತ್ತಾಯ 17:19-20) ಅಥವಾ ನಮ್ಮ ಸುತ್ತಲೂ ಇದ್ದಂತಹವರಲ್ಲಿ ಇರುವ ಅಪನಂಬಿಕೆಯು (ಮಾರ್ಕ 6:5-6) ಪ್ರಮುಖ ಕಾರಣವಾಗಿದೆ. ಅರಿಕೆ ಮಾಡದೆ ಇರುವಂತ ಪಾಪಗಳಾದ(ಯೋಹಾನ 5:14-ಯಾಕೋಬ 5:16) ಕ್ಷಮಿಸದಿರುವ, (ಮಾರ್ಕ 11:24-25), ಅವಿದೆಯತೆ, 2 ಅರಸು 5:8-14, ಅಥವಾ ಬೇರೊಬ್ಬನ ಹಂಡತಿಯೊಂದಿಗೆ ಅನೈತಿಕ ಸಂಬಂಧದ (1 ಪೇತ್ರ 3:7) ಪಾಪಗಳು ಮತ್ತು ಪಾಪಗಳನ್ನು ಅರಿಕೆ ಮಾಡದೆ, ಅಯೋಗ್ಯವಾದ ರೀತಿಯಲ್ಲಿ ಕರ್ತನ ಭೋಜನದಲ್ಲಿ ಬಾಗವಹಿಸಿ ಪಾಲನ್ನು ತೆಗೆದುಕೊಳ್ಳುವುದರ ಫಲವಾಗಿ ರೋಗಿಯಾಗುವರು ಎಂದು ಪೌಲನು ಹೇಳಿದ್ದಾನೆ (1 ಕೊರಿಂಥ 11:27-30). ಕೆಲವರಿಗೆ ಇದು ಗೊತ್ತಿಲ್ಲದಿರುವುದು ಅಥವಾ ಗುಣ ಹೊಂದುವ ಅವಕಾಶದ ಲಭ್ಯತೆಯಿದೆ, ಎಂದು ನಂಬದೆ ಇರುವುದು ಮತ್ತು ಕೆಲವರು ಗುಣಕ್ಕಾಗಿ ಕೇಳದೆ ಇರುವುದೇ ಆಗಿದೆ (ಯಾಕೋಬ 4:2). ನಾವು ನಮ್ಮ ದೇಹವನ್ನು ದುರುಪಯೋಗಪಡಿಸುವುದುಅಥವಾ ಗುಣ ಹೊಂದಲು ದೇವರು ಕೊಟ್ಟಿರುವ ವಿಧಾನಗಳನ್ನು ತಿರಸ್ಕರಿಸಿ ದೇವರನ್ನು "ಪರೀಕ್ಷಿಸುವುದು" (ಮತ್ತಾಯ 4:6-7).

ಕೆಲವೊಮ್ಮೆ ಅದು ಸರಿಯಾದ ಸಮಯವಾಗಿಲ್ಲದಿರಬಹುದು. ಉದಾಹರಣೆಗೆ ಯೇಸುವು ತನ್ನ ರೋಗಿ ಸ್ನೇಹಿತನನ್ನು ನೋಡಲು ಹೋಗಲಿಲ್ಲ. ಆದರೆ ನಂತರ ಮರಣದಿಂದ ಆತನನ್ನು ಎಬ್ಬಿಸಿದನು (ಯೋಹಾನ 11:6, 43-44). ಈ ರೀತಿಯಾಗಿ ಆತನು ಮಹಾ ಅದ್ಭುತವನ್ನು ಮಾಡುವಂತಹವನಾದನು. ದೇವರು ತನ್ನ ಶಕ್ತಿಯನ್ನು ತೋರ್ಪಡಿಸುವುದಕ್ಕಾಗಿ, ಒಬ್ಬನನ್ನು ಗುಣ ಪಡಿಸುವುದಕ್ಕೆ ಬಹಳ ವರ್ಷಗಳವರೆಗೆ ಕಾಯುತ್ತಾನೆ. ನಂತರ ವಿಶೇಷ ವ್ಯಕ್ತಿಯನ್ನು ಉಪಯೋಗಿಸುತ್ತಾನೆ ಅಥವಾ ವಿಶೇಷವಾದ ರೀತಿಯಲ್ಲಿ ಗುಣಪಡಿಸುವ ಮಹತ್ಕಾರ್ಯವನ್ನು ಮಾಡುತ್ತಾನೆ (ಮಾರ್ಕ 9:29, ಯೋಹಾನ 5:5-9, 9:3). ಅಥವಾ ವೈಯಕ್ತಿಕವಾಗಿ ದೇವರು ಒಬ್ಬನಿಗೆ ಹೆಚ್ಚು ಆಯುಷ್ಕಾಲವನ್ನು ಅನುಗ್ರಹಿಸಿ ಆತನ ಜೀವಿತದ ದಿನಗಳನ್ನು ದೀರ್ಘಗೊಳಿಸುವನು. ಹಳೆ ಒಡಂಬಡಿಕೆಯಲ್ಲಿ ದೇವರು ಯೆಹೆಜ್ಕೇಲನಿಗೆ 15 ವರ್ಷಗಳ ಹೆಚ್ಚಿನ ಆಯುಷ್ಕಾಲವನ್ನು ಕೊಟ್ಟು ಆ ಮೇಲೆ ಅದಕ್ಕಿಂತ ಹೆಚ್ಚು ಕೊಡದೆ ಹೋದನು (2 ಅರಸು 20:5-7).

ಖಂಡಿತವಾಗಿ ಒಬ್ಬನು ದುರಾತ್ಮ ಅಥವಾ ದೆವ್ವದಿಂದ ಹಿಡಿಯಲ್ಪಟ್ಟು ಆ ವ್ಯಕ್ತಿಯು ಶಾರೀರಿಕ ಖಾಯಿಲೆಯ ತೊಂದರೆಯಲ್ಲಿದ್ದಾನೆಂದು ನಾವು ಭಾವಿಸುವ ಸಮಯದಲ್ಲಿ ಖಂಡಿತವಾಗಿಯೂ ರೋಗ ಲಕ್ಷಣಗಳ ಸಂಶೋಧನೆಯ ಫಲಿತಾಂಶಗಳು ತಪ್ಪಾಗಿ ಕಂಡುಬರುವುವು.

## ದುರಾತ್ಮಗಳಿಂದ ಬಿಡುಗಡೆ

ದೈಹಿಕ ಸ್ವಸ್ಥತೆಗೆ ಇರುವ ಹಾಗೆಯೇ ಸೈತಾನ ಮತ್ತು ದೆವ್ವ ಅಥವಾ ದುರಾತ್ಮಗಳಿಂದ ಬಿಡುಗಡೆಗಾಗಿ ಅನೇಕ ವಾಗ್ದಾನಗಳು ಸತ್ಯವೇದದಲ್ಲಿವೆ. ಯೇಸುಕ್ರಿಸ್ತನು ತಾನು ಪವಿತ್ರಾತ್ಮನಿಂದ ಅಭಿಷೇಕ ಹೊಂದಿ ಬಲವನ್ನು ಹೊಂದಿರುವ ಕಾರಣಗಳಲ್ಲಿ ಮನ ಮುರಿಯಲ್ಪಟ್ಟವರನ್ನು ಬಿಡುಗಡೆಗೊಳಿಸುವುದು ಕೂಡ ಎಂದು ಹೇಳಿದನು (ಲೂಕ 4:18). ಆತನು ಎಲ್ಲಾ ಕಡೆಗೆ ಹೋಗಿ, ದುರಾತ್ಮ ಪೀಡಿತರಾದವರಿಂದ ದುರಾತ್ಮಗಳನ್ನು ಹೊರಹಾಕಿದನು (ಮತ್ತಾಯ 4:24; ಮಾರ್ಕ 1:34; 3:11). ಯೇಸುವು ತನ್ನ 12 ಜನ ಮೂಲ ಶಿಷ್ಯರಿಗೂ ಮತ್ತು ನಂತರ ಇತರ 70 ಮಂದಿ ಶಿಷ್ಯರಿಗೂ ಎಲ್ಲಾ ದುರಾತ್ಮಗಳನ್ನು

ಹೊರಹಾಕುವ ಅಧಿಕಾರವನ್ನು ಕೊಟ್ಟನು (ಲೂಕ 9:1, 10:1, 17-19). ಯೇಸುವನ್ನು ನಂಬುವವರು ಮಾಡುವ ಚಟುವಟಿಕೆಗಳಲ್ಲಿ ದುರಾತ್ಮಗಳನ್ನು ಹೊರದೂಡುವಂತಹ ಈ ಒಂದು ಕ್ರಿಯೆಯನ್ನು ಸೇರಿಸಿದನು (ಮಾರ್ಕ 16:17) ಮತ್ತು ಇದನ್ನು ಅ.ಕೃ.ಗಳ ಪುಸ್ತಕದ ಎಲ್ಲಾ ಭಾಗಗಳಲ್ಲಿ ನೋಡುತ್ತೇವೆ. (ಅ.ಕೃ. 5:16; 8:7; 16:18; 19:11-12). ಆತ್ಮಗಳನ್ನು ವಿವೇಚಿಸುವಂತಹ ವರವು ಪವಿತ್ರಾತ್ಮನ ವರಗಳಲ್ಲಿ ಒಂದಾಗಿದೆ (1 ಕೊರಿಂಥ 12:10).

ದುರಾತ್ಮಗಳು ಸತ್ತ ವ್ಯಕ್ತಿಯಿಂದ ಹಿಂತಿರುಗಿ ಬರದು. ಭೂಮಿಯ ಮೇಲಿರುವಂತ ಜನರನ್ನು ಪೀಡಿಸುವಂತವು ಆತ್ಮಗಳಲ್ಲ. ಸತ್ತಂತ ಸ್ತ್ರೀ ಪುರುಷರ ಆತ್ಮಗಳು ಕ್ರಿಸ್ತನೊಂದಿಗಿರಲು ಸ್ವರ್ಗಕ್ಕೆ ಹೋಗುವುವು (ಫಿಲಿಪ್ಪಿಯರಿಗೆ 1:23), ಅಥವಾ ಕಡೆಯ ತೀರ್ಪಿಗಾಗಿ ನರಕದಲ್ಲಿ ಕಾಯುವವು ಎಂಬುದಾಗಿ (ಹಿಬ್ರಿಯ 9:27, ಪ್ರಕಟಣೆ 20:5, 13) ಸತ್ಯವೇದವು ಸ್ಪಷ್ಟವಾಗಿ ಬೋಧಿಸುತ್ತದೆ.

ಸೈತಾನನ ಸೇವಕರಾಗಿರುವಂತ (ಮತ್ತಾಯ 12:26-27, ಮಾರ್ಕ 3:22-26) ದೆವ್ವಗಳು ದುಷ್ಟ ಅಥವಾ ಅಶುದ್ಧ ಆತ್ಮಗಳಾಗಿವೆ (ಮತ್ತಾಯ 10:1, 12:43), ಸೈತಾನನು ಮತ್ತು ಆತನ ದೂತರು ದೇವರಿಂದ ಸೃಷ್ಟಿಸಲ್ಪಟ್ಟರು. ಆದರೆ ದೇವರಿಗೆ ವಿರುದ್ಧವಾಗಿ ತಿರುಗಿಬಿದ್ದರು. (ಯೆಶಾಯ 14:12-15, ಯೆಹೆಜ್ಕೇಲ 28:13-17). ದುರಾತ್ಮಗಳು ಅಸಂಖ್ಯವಾಗಿದ್ದು ಪ್ರಪಂಚದ ಎಲ್ಲಾ ಕಡೆ ಕಂಡು ಬರುತ್ತವೆ (ಮಾರ್ಕ 5:9, ಎಫೇಸ. 6:12). ಇವು ದೇಹದ ಹೊರಗೆ ಇರಲು ಇಷ್ಟಪಡುವುದಿಲ್ಲ. ಅದಕ್ಕೆ ಬದಲಾಗಿ ಪ್ರಾಣಿ ಹಾಗೂ ಮನುಷ್ಯರಿಬ್ಬರ ದೇಹದಲ್ಲಿ ಪ್ರವೇಶಿಸುತ್ತವೆ ಮತ್ತು ತಮ್ಮ ಅಧೀನದಲ್ಲಿಟ್ಟು ಕೊಳ್ಳುತ್ತವೆ (ಮತ್ತಾಯ 12:43-45; ಮಾರ್ಕ 5:2, 12-13). ಯೇಸು ಕ್ರಿಸ್ತನನ್ನು ದೇವರ ಮಗನೆಂದು ಗುರುತಿಸುತ್ತವೆ (ಮಾರ್ಕ 1:23-24, 34, ಅ.ಕೃ. 19:15). ಈ ರೀತಿಯಾಗಿ ದೆವ್ವಗಳು "ಕ್ರಿಸ್ತನನ್ನು" ನಂಬುತ್ತವೆ (ಯಾಕೋಬ 2:19). ಆದರೂ ಅವು ಪಾತಾಳದಲ್ಲಿ ಯಾತನೆ ಪಡುವ ತಮ್ಮ ಅಂತಿಮ ಸ್ಥಿತಿಯನ್ನು ಬಲ್ಲವು (ಮತ್ತಾಯ 8:29, ಲೂಕ 8:31). ವಿಗ್ರಹಗಳಿಗೆ ಅರ್ಪಿಸುವ ಯಜ್ಞವು ದೆವ್ವಗಳಿಗೆ ಅರ್ಪಿಸಿದಂತೆಯೇ ಎಂದು ಪೌಲನು ಹೇಳಿದ್ದಾನೆ (1 ಕೊರಿಂಥ. 10:19-21).

ಕೆಲವೊಂದು ಸಮಯ ನಿಜವಾಗಿ ವ್ಯಕ್ತಿಯು ದುರಾತ್ಮಗಳ ಒಡೆತನದಲ್ಲಿರುತ್ತಾನೆ. ಇದರರ್ಥವೇನೆಂದರೆ ಅಧಿಕಾರ ನಡೆಸುವಂತಹ ದುರಾತ್ಮನು ತನ್ನ ವ್ಯಕ್ತಿತ್ವದಿಂದ ಆ ವ್ಯಕ್ತಿಯ ಮನಸ್ಸು ಹಾಗೂ ದೇಹವನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳುವಾಗ, ದುರಾತ್ಮ ಪೀಡಿತನು ತನ್ನ ದೇಹದ ವ್ಯಕ್ತಿತ್ವ ಹಾಗೂ ಮನಸ್ಥಿತಿಯನ್ನು ಕಳೆದುಕೊಳ್ಳುತ್ತಾನೆ (ಮಾರ್ಕ 5:15-16).

ಆದರೆ ಅನೇಕ ಸಮಯಗಳಲ್ಲಿ ವ್ಯಕ್ತಿಯು ಸಂಪೂರ್ಣವಾಗಿ ಅಧೀನಕ್ಕೊಳಪಡುವುದಿಲ್ಲ. ಅಂದರೆ ಶಾರೀರಿಕವಾಗಿ, ಮಾನಸಿಕವಾಗಿ ದುರಾತ್ಮನ ಆಕ್ರಮಣ ಅಥವಾ ದಬ್ಬಾಳಿಕೆಗೆ ಒಳಪಡುತ್ತಾನೆ (ಮತ್ತಾಯ 9:32; 12:22, ಮಾರ್ಕ 9:17-29, ಲೂಕ 6:18).

ವಿಶ್ವಾಸಿಗಳಾಗಿದ್ದು ಎಲ್ಲಾ ಕ್ರೈಸ್ತರಾದ ತಾವುಗಳು ಕ್ರಯಕ್ಕೆ ಕೊಳ್ಳಲ್ಪಟ್ಟವರು ಮತ್ತು ಸ್ವತಃ ದೇವರ ಸ್ವತ್ತು ಆಗಿರುವ ಕಾರಣದಿಂದ ಸಂಪೂರ್ಣವಾಗಿ ದುರಾತ್ಮನಿಂದ ಹಿಡಿಯಲ್ಪಡುವುದಿಲ್ಲವೆಂದು ವಿಶ್ವಾಸಿಗಳು ತಿಳಿದುಕೊಂಡಿದ್ದಾರೆ (1ಕೊರಿಂಥ 6:19-20). ಆದರೂ ಹೇಗೂ ಅನೇಕ ವಿಶ್ವಾಸಿಗಳು ದುರಾತ್ಮನ "ಆಕ್ರಮಣ" ಅಥವಾ "ದಬ್ಬಾಳಿಕೆಗೆ "ಒಳಪಡಬಹುದೆಂದು ತಮ್ಮಲ್ಲಿಯೇ ಭಾವಿಸಿಕೊಳ್ಳುತ್ತಾರೆ.

ಪೌಲನಲ್ಲಿಗೆ ಸೈತಾನನ ದೂತನು ಕಳುಹಿಸಲ್ಪಟ್ಟು ಪೌಲನು ದೇಹದಲ್ಲಿ ಬಾಧೆ ಪಟ್ಟನು (2 ಕೊರಿಂಥ 12:7), ಮತ್ತು ವಿಗ್ರಹಗಳಿಗೆ ಯಜ್ಞಾರ್ಪಿತವಾದದ್ದನ್ನು ಸೇವಿಸಿ ದೆವ್ವಗಳೊಂದಿಗೆ ಭಾಗಿಗಳು ಆಗಿರಬಾರದೆಂಬ ಪೌಲನ ಎಚ್ಚರಿಕೆಯನ್ನು ಆದಾರವಾಗಿ ತೋರಿಸುತ್ತಾರೆ (1 ಕೊರಿಂಥ 10:20-22). ಬಹುಶಃ ದೆವ್ವಗಳಿಂದ ದೈಹಿಕ ಅಸ್ವಸ್ಥತೆಯನ್ನು ಹೊಂದಿದಂತಹವರು ಗುಣ ಹೊಂದಲು ಕ್ರಿಸ್ತನ ಬಳಿಗೆ ತರಲ್ಪಟ್ಟಂತಹ ಅನೇಕ ಜನರ ಕಡೆಗೆ ತೋರಿಸುತ್ತಾರೆ (ಮಾರ್ಕ 3:10-11, ಲೂಕ 6:18-19). ಸೈತಾನನಿಂದ ಎಲ್ಲರೂ ಸಂಪೂರ್ಣವಾಗಿ ಆಳಲ್ಪಡಲಿಲ್ಲ. ಆದರೆ ಅವರಲ್ಲಿ ಕೆಲವರು ಮಾತ್ರ ಬಾಧಿಸಲ್ಪಟ್ಟರು ಎಂದು ಇವರು ನಂಬುತ್ತಾರೆ. ದುರಾತ್ಮಗಳ ಸುಳ್ಳನ್ನು ಹಾಗೂ ಬೋಧನೆಯನ್ನು ನಂಬುವಷ್ಟರವರೆಗೆ ಕ್ರೈಸ್ತರು ಸೈತಾನನಿಂದ ಪ್ರಭಾವಿತರಾಗುವರು (1 ತಿಮೋಥೆ 4:1-3) ಮತ್ತು ನಮ್ಮ ಸತತವಾದ ಹೋರಾಟ ನರ ಮನುಷ್ಯರೊಂದಿಗಲ್ಲ. ಆದರೆ ದುರಾತ್ಮಗಳ ಮೇಲೆಯೇ ಎಂದು ಪೌಲನು ಎಚ್ಚರಿಸುತ್ತಾನೆ (ಎಫೆಸದವರಿಗೆ 6:12). ಆತ್ಮಗಳು ದೇವರಿಂದ ಬಂದಂತವುಗಳು ಹೌದೋ,ಅಲ್ಲವೋ ಎಂದು ಅವುಗಳನ್ನು ನೋಡಿ ಪರೀಕ್ಷಿಸಲೇ ಬೇಕು (1 ಯೋಹಾನ 4:1-3).

ಕ್ರೈಸ್ತರಾದ ತಾವುಗಳು ಹೇಗಿದ್ದರು ಖಂಡಿತವಾಗಿ ದುರಾತ್ಮಗಳನ್ನು ಹೊಂದುವುದೇ ಇಲ್ಲವೆಂದು ಭಾವಿಸುತ್ತಾರೆ. ವಿಶ್ವಾಸಿಗಳ ಒಳಗೆ ಪವಿತ್ರಾತ್ಮನು ಹಾಗೂ ದುರಾತ್ಮನು ಜೊತೆಯಾಗಿ ಒಂದೇ ಸಮಯದಲ್ಲಿ ವಾಸಿಸಲು ಸಾಧ್ಯವೇ ಇಲ್ಲ

ಎಂದು ಇವರು ಹೇಳುತ್ತಾರೆ (1 ಕೊರಿಂಥ 6:19). ಇವರಲ್ಲಿ ಕೆಲವು ಕ್ರೈಸ್ತರು ನಿಜವಾದ ಕ್ರೈಸ್ತರು ದುರಾತ್ಮನ ಆಕ್ರಮಣಕ್ಕೆ ಖಂಡಿತವಾಗಿ ಒಳಗಾಗಲು ಸಾಧ್ಯವೇ ಇಲ್ಲ ಎಂದು ನಂಬುತ್ತಾರೆ. ದುರಾತ್ಮನು ವಿಶ್ವಾಸಿಯ ಹೊರಗಿನಿಂದ ಅತಿಕ್ರಮಣ ಮಾಡಬಹುದು ಅಥವಾ ಪ್ರಭಾವ ಬೀರಬಹುದು. ಆದರೆ ವಿಶ್ವಾಸಿಯ ದೇಹವನ್ನು ಪ್ರವೇಶಿಸುವುದಿಲ್ಲ ಎಂದು ಮತ್ತಿತರರು ಭಾವಿಸುತ್ತಾರೆ.

ನಾವು ಬೇರೆಯವರಿಗೆ ಹೇಗೆ ಪ್ರಾರ್ಥಿಸುತ್ತೇವೆಂಬುದನ್ನು ಇದು ನಿರ್ಧರಿಸುವ ಕಾರಣದಿಂದ ಈ ವಿಷಯವು ಬಹಳ ಮಹತ್ವದ್ದಾಗಿದೆ. ಒಂದು ವೇಳೆ ವಿಶ್ವಾಸಿಯು ದುರಾತ್ಮನನ್ನು ಹೊಂದಿರುವುದಾದರೆ, ಅಸ್ವಸ್ಥತೆಯ ಹಾಗೂ ಮಾನಸಿಕ ಸಮಸ್ಯೆಯಿಂದ ಸಂಪೂರ್ಣವಾದ ಬಿಡುಗಡೆ ಹೊಂದಬೇಕಾದರೆ ಅಥವಾ ಖಚಿತವಾದ ಪಾಪದ ಮೇಲೆ ಜಯವನ್ನು ಹೊಂದಬೇಕಾದರೆ ಆತನು ತನ್ನ ದೇಹದಿಂದ ದುರಾತ್ಮನನ್ನು ಹೊರಹಾಕಲೇ ಬೇಕು.ಏನೇ ಆದರೂ ಭಾಗಶಃ ಎಲ್ಲಾ ಪಾಪಗಳು ನಮ್ಮ ಪಾಪ ಸ್ವಭಾವದ ಪ್ರತಿಫಲಗಳಾಗಿವೆ ಮತ್ತು ದೆವ್ವ ಅಥವಾ ಸೈತಾನನಿಂದಲ್ಲವೆಂದು ನಾವು ನೆನಪಿಡಲೇ ಬೇಕು (ಗಲಾತ್ಯದವರಿಗೆ 5:19-21).

## ಬಿಡುಗಡೆಗಾಗಿ ಪ್ರಾರ್ಥಿಸುವುದು

ಯಾವುದಾದರೂ ಸರಿ ಕನಿಷ್ಟ ಪಕ್ಷ ಕ್ರೈಸ್ತರಲ್ಲದವರನ್ನು ಸೈತಾನನ ಮತ್ತು ಆತನ ದುರಾತ್ಮಗಳಿಂದ ಬಿಡುಗಡೆಗೊಳಿಸುವುದು ಹೇಗೆ ಎಂಬುದನ್ನು ತಿಳಿದುಕೊಳ್ಳುವುದು ಅಗತ್ಯ. ಎಫೆಸ. 6:10-17 ರಲ್ಲಿ ಸೂಚಿಸಿರುವಂತಹ ಸತ್ಯ, ನೀತಿ, ಸಮಾಧಾನ, ನಂಬಿಕೆ, ರಕ್ಷಣೆ ಮತ್ತು ದೇವರ ವಾಕ್ಯಗಳೆಂಬ **ದೇವರ ಸರ್ವಾಯುಧಗಳನ್ನು** ಎಲ್ಲಾ ಕ್ರೈಸ್ತರು ಧರಿಸಲೇ ಬೇಕು. ಬಿಡುಗಡೆಗೊಳಿಸುವುದಕ್ಕೆ ಮೊದಲೇ ಪ್ರಾರ್ಥನೆಯಿಂದ ಸಿದ್ಧರಾಗುವುದು ಬಹಳ ಪ್ರಾಮುಖ್ಯ (ಮಾರ್ಕ 9:28-29, ಎಫೆಸ 6:18). ಕೆಲವು ಕ್ರೈಸ್ತರು ಮಾರ್ಕ 9:29ರಲ್ಲಿರುವ "ಪ್ರಾರ್ಥನೆ"ಯಿಂದ ಮಾತ್ರ ಎಂಬುದಕ್ಕೆ ಬದಲಾಗಿ "ಉಪವಾಸ ಮತ್ತು ಪ್ರಾರ್ಥನೆ"ಯಿಂದಲೇ ಎಂಬುದಕ್ಕೆ ಭಾಷಾಂತರಿಸಿಕೊಳ್ಳಬೇಕು ಎಂದು ಮತ್ತು ಬಿಡುಗಡೆಗೊಳಿಸುವಂತಹ ಸೇವೆಯ ಯಶಸ್ಸಿಗಾಗಿ, ವಿಶೇಷವಾದ ಸಮಯದಲ್ಲಿ ಸಮರ್ಪಣೆಯಿಂದ ಕೂಡಿದ ಪ್ರಾರ್ಥನೆಯು ಬಹಳ ಅತ್ಯಗತ್ಯವೆಂದು ನಂಬುತ್ತಾರೆ. ಸಾಧ್ಯವಾದರೆ ಬಿಡುಗಡೆಯ ಪ್ರಾರ್ಥನೆಯು ಒಬ್ಬನಿಂದ ಮಾಡಲ್ಪಡುವುದಕ್ಕೆ ಬದಲಾಗಿ ಗುಂಪಾಗಿ ಪ್ರಾರ್ಥಿಸಬೇಕು. ಈ ಬಿಡುಗಡೆಗೊಳಿಸುವಂತಹ ಸೇವೆಯನ್ನು ವಹಿಸಿಕೊಳ್ಳುವ ಎಲ್ಲರೂ ಆತ್ಮಿಕ ಪರಿಪಕ್ವತೆಯುಳ್ಳಂತ ಕ್ರೈಸ್ತರಾಗಿರಬೇಕು (ಅ.ಕೃ. 19:13-16ರ ವಚನಗಳನ್ನು ನೋಡಿರಿ). ದುರಾತ್ಮಪೀಡಿತನಾದ ವ್ಯಕ್ತಿಯ ಮೇಲೆ ಕೈಗಳನ್ನಿಡುವುದಕ್ಕೆ ಸಮಯಾವಕಾಶವನ್ನು ಮಾಡಿಕೊಳ್ಳಬೇಕು. ನಾವು ಒಂದು ವೇಳೆ ವ್ಯಕ್ತಿಯು ಕ್ರೈಸ್ತನಾಗಿರದಿದ್ದರೆ ಅಥವಾ ಕ್ರೈಸ್ತನಾಗುವುದಕ್ಕೆ ಆಸಕ್ತಿಯನ್ನು ತೋರಿಸದಿದ್ದರೆ (ಪವಿತ್ರಾತ್ಮನ ಶಕ್ತಿಗೊಳಪಡದಿರುವುದಕ್ಕೆ) ಅಥವಾ ನಂತರ ಹಿಂಬಾಲಿಸದಿದ್ದರೆ ಇಂತಹ ವ್ಯಕ್ತಿಯ ಬಿಡುಗಡೆಗಾಗಿ ಪ್ರಾರ್ಥಿಸುವಾಗ ಬಹಳ ಎಚ್ಚರಿಕೆಯುಳ್ಳವರಾಗಿರಬೇಕು. ಅಲ್ಪ ಹಾಗೂ ಆತುರದ ನಿಮ್ಮ ಪ್ರಾರ್ಥನೆಯು ಅವನನ್ನು ಅಥವಾ ಅವಳನ್ನು ಮುಂಚಿನದಕ್ಕಿಂತಲೂ ಹೆಚ್ಚು ಕೆಟ್ಟದ್ದಾಗಿ ಮಾಡಿಬಿಡಬಹುದು (ಮತ್ತಾಯ 12:43-45). ವ್ಯಕ್ತಿಯು ತನ್ನ ಮನೆಯಲ್ಲಿ ಇರುವಂತಹ ವಿಗ್ರಹಗಳನ್ನು ತೆರವುಗೊಳಿಸದಿದ್ದರೆ ಅಥವಾ ನಾಶಮಾಡದಿದ್ದರೆ ಅವನನ್ನು ಬಿಡುಗಡೆಗೊಳಿಸಬಾರದು ಎಂದು ಕೆಲವರು ಭಾವಿಸುತ್ತಾರೆ (ಅ.ಕೃ. 19:19). ಇಲ್ಲದಿದ್ದರೆ, ದುರಾತ್ಮಗಳು ಸುಲಭವಾಗಿ ಮರಳಿ ಬರಬಹುದು. ಕೆಲವೊಂದು ದೈಹಿಕ ಖಾಯಿಲೆಗಳ ರಚನಾಂಶಗಳು ಸೈತಾನನ ಅಂಗಗಳಿಂದ ಕೂಡಿರುವುವು. ಆದರೆ ಕೆಲವೊಂದು ದೈಹಿಕ ಹಾಗೂ ಮಾನಸಿಕ ಅಸ್ವಸ್ಥತೆಗಳು ಮೂಲತಃ ಸೈತಾನನಿಂದ ಬಂದಂತೆ ಕಂಡುಬರುವುದು, ಆದರೆ ಹಾಗಾಗಿರುವುದಿಲ್ಲ. ಉದಾಹರಣೆಗೆ, ದೇಹದ ಮೇಲೆ ಸ್ವಾಧೀನವಿಲ್ಲದಿರುವುದು. ಇದು ಮೂಲತಃ ಸೈತಾನನ ಕ್ರಿಯೆಯಂತೆ ಕಂಡುಬರುವುದು. ಆದರೆ ಸಹಜವಾಗಿ ದೇಹದ ಅಸ್ವಸ್ಥತೆಯ ಸಮಸ್ಯೆಯು ಮೆದುಳಿನಲ್ಲಿರುವ ಖಾಯಿಲೆಯಿಂದಾಗುತ್ತದೆ. ಪೀಡಿಸುತ್ತಿರುವ ಅಥವಾ ಹಿಡಿದುಕೊಂಡಿರುವ ಒಂದೊಂದು ಆತ್ಮಗಳನ್ನು ಗುರುತಿಸಲು,ನಮಗೆ ಪವಿತ್ರಾತ್ಮನಿಂದ ಬಂದಂತಹ ವಿವೇಚಿಸುವ ವರದಿಂದ ಪ್ರಾಮುಖ್ಯವಾದ ಸಹಾಯವಾಗುತ್ತದೆ (1 ಕೊರಿಂಥ 12:10).

ಬಿಡುಗಡೆಗೊಳಿಸುವಿಕೆಯಲ್ಲಿ ಪಾತ್ರವಹಿಸುವ ಎಲ್ಲರು ವಿಶ್ವಾಸಿಗಳಾಗಿದ್ದು, ಇವರ ಸುರಕ್ಷತೆಯ ಭಿನ್ನಹಗಳಿಂದ ಕೂಡಿದ ಪ್ರಾರ್ಥನೆಯಿಂದ ಬಿಡುಗಡೆಗೊಳಿಸುವ ಕ್ರಿಯೆಯು ಪ್ರಾರಂಭವಾಗಬೇಕು (ಅ.ಕೃ. 19:13-16). ನಂತರ ಸೈತಾನನು ಮತ್ತು ಆತನ ಶಕ್ತಿಗಳು ಬಂಧಿಸಲ್ಪಡಬೇಕು (ಮತ್ತಾಯ 16:19, 18:18) ಮತ್ತು ತೊಂದರೆಗೊಳಗಾದ ವ್ಯಕ್ತಿಯಲ್ಲಿ ಅಡಕವಾಗಿರುವಂತಹ ಯಾವುದೇ ಪಾಪವಾದರೂ ಅದನ್ನು ಒಪ್ಪಿಕೊಳ್ಳಬೇಕು. ಗುಣಕ್ಕಾಗಿ ಮಾಡುವ ಪ್ರಾರ್ಥನೆಯು ಸಾಮಾನ್ಯವಾಗಿ ದೇವರಿಗೆ ಮಾಡುವ ವಿಜ್ಞಾಪನೆಯಾಗಿದೆ (ಬಹುಶಃ ಹೃದಯದಲ್ಲಿ ಮೌನವಾಗಿ ಮಾಡುವ ಪ್ರಾರ್ಥನೆ). ಆದರೆ ಬಿಡುಗಡೆಗೊಳಿಸಲು ತೊಲಗು ಎನ್ನುವುದು ಯೇಸುಕ್ರಿಸ್ತನ ಹೆಸರಿನಲ್ಲಿ ಮತ್ತು ಆತನ ಅಧಿಕಾರದಿಂದ ಕೊಡುವ "ಆಜ್ಞೆಯಾಗಿದೆ"(ಲೂಕ 10:17; ಅ.ಕೃ. 16:18; 19:13-16). ಜೋರಾಗಿ ಕೂಗುವುದು ಅಗತ್ಯವಿಲ್ಲ. ಯಾಕೆಂದರೆ

ವ್ಯಕ್ತಿಯಿಂದಾಗಿ ಆ ದೆವ್ವವು ದಿಗಿಲುಗೊಳ್ಳುವುದಿಲ್ಲ. ಪೀಡಿತನಿಗೆ ಮತ್ತು ಇನ್ನಾರಿಗೂ ಯಾವ ಹಾನಿಯನ್ನೂ ಮಾಡಬಾರದೆಂಬ ಷರತ್ತಿನಿಂದ ಯೇಸುಕ್ರಿಸ್ತನ ಮುಂದೆ ತೀರ್ಪಿಗಾಗಿ ಸ್ವತಃ ತಾನೇ ಹೋಗಬೇಕೆಂದು ಆಜ್ಞಾಪಿಸಬೇಕು (ಯೂದ:9ನೇ ವಚನ). ಯೇಸುಕ್ರಿಸ್ತನ ಹೆಸರು ಬಹು ಬಲವುಳ್ಳದ್ದು ಮತ್ತು ತಕ್ಷಣವೇ ತೊಂದರೆಯಿಂದ ಬಿಡುಗಡೆ ಹೊಂದುವುದರಿಂದ ಪೀಡಿತನು ಬಿಡುಗಡೆಯಾದನೆಂದು ಗ್ರಹಿಸುವನು.

ರ್ಥನೆಯಿಂದ ಹಿಂಬಾಲಿಸಲ್ಪಟ್ಟು ಆತನಿಗೆ ಪ್ರಾರ್ಥನೆ ಮಾಡಬೇಕು (ಮತ್ತಾಯ 12:43-45). ಬಿಡುಗಡೆ ಹೊಂದಿದ ವ್ಯಕ್ತಿಯು ದೇವರ ಮಗುವಾಗಿರದಿದ್ದರೆ, ಖಂಡಿತವಾಗಿಯು ದೇವರ ಮಗುವಾಗಲೇ ಬೇಕು. ಸೈತಾನನನ್ನು ಎದುರಿಸುವುದನ್ನು ಮತ್ತು ಆತನ ಜೀವಿತದಲ್ಲಿ ಸೈತಾನನ ಪ್ರವೇಶದ ಅನುಮತಿಗೆ ಕಾರಣವಾದ ಪಾಪಗಳಿಂದ ದೂರವಿರುವ ಹಾಗೆ ಕಲಿಸಿಕೊಡಬೇಕು (ಯಾಕೋಬ 4:2; 1ಯೋಹಾನ 1:9). ಸಂಪೂರ್ಣವಾದ ಬಿಡುಗಡೆಗೆ ಅಡ್ಡಿಯಾಗಿರುವ ಅಪನಂಬಿಕೆ (ಮತ್ತಾಯ 17:16-20), ಕ್ರಿಸ್ತನನ್ನು ತಿರಸ್ಕರಿಸಿರುವುದು, ಸಂಬಂಧಿತ ಯಾವುದಾದರೂ ಪಾಪದ ಅರಿಕೆಯ ವಿಫಲತೆ, ಕ್ಷಮಿಸದೆ ಇರುವಂತಹ ಮತ್ತು ಗುಣಲಕ್ಷಣಗಳ ವ್ಯತ್ಯಾಸ ಅಥವಾ ಆತ್ಮಗಳನ್ನು ಗುರುತಿಸುವಲ್ಲಿ ಸೋಲುವಿಕೆ ಮುಂತಾದವುಗಳು ಕಾರಣಗಳಾಗಿವೆ (ವ್ಯಕ್ತಿಯು ದುರಾತ್ಮನನ್ನು ಹೊಂದದೆ ಇದ್ದರು ಆತನನ್ನು ಬಿಡುಗಡೆಗೊಳಿಸುವ ಪ್ರಯತ್ನ).

## ಸಾರಾಂಶ

**ದೇವರು ನಮ್ಮನ್ನು ಪ್ರೀತಿಸುವವನು ಮತ್ತು ನಮ್ಮ ಆತ್ಮದ ಬಗ್ಗೆ ಚಿಂತಿಸುವಂತದ್ದು ಮಾತ್ರವಲ್ಲ ನಮ್ಮ ಶರೀರ ಹಾಗೂ ಮನಸ್ಸಿನ ಬಗ್ಗೆ ಚಿಂತಿಸುತ್ತಾನೆಂದು, ಈ ಬಿಡುಗಡೆ ಹಾಗೂ ಗುಣಪಡಿಸುವಿಕೆಗಳೆರಡು ಪ್ರಕಟಿಸುತ್ತದೆ. ದೇವರು ನಮ್ಮ ರೋಗಗಳನ್ನು ಮತ್ತು ಬಲಹೀನತೆಗಳನ್ನು ವಾಸಿ ಮಾಡಲು ಮತ್ತು ಬಂಧನದಿಂದಲೂ ಬಿಡಿಸಲು ಸಿದ್ಧನಾಗಿದ್ದಾನೆ. ನಾವು ಎಲ್ಲ ವಿಷಯಗಳಲ್ಲಿ ಸರಿಯಾಗಿ ಇರಬೇಕೆಂತಲೂ ಮತ್ತು ಆರೋಗ್ಯವನ್ನು ಆನಂದದಿಂದ ಅನುಭವಿಸಬೇಕೆಂತಲು ದೇವರು ಬಯಸುತ್ತಾನೆ. (3ಯೋಹಾನ 2),**

---

[1].ಹಳೆ ಒಡಂಬಡಿಕೆಯು ಮೂಲತಃ ಹಿಬ್ರಿಯ ಬಾಷೆಯಲ್ಲಿ ಬರೆಯಲ್ಪಟ್ಟಿತು.

# ನಾವು ದುಷ್ಟತ್ವವನ್ನು ಎದುರಿಸುವುದು - ಎಷ್ಟರಮಟ್ಟಿಗೆ?

## ಪ್ರಾಮುಖ್ಯ ವಚನಗಳು

ವಿಮೋಚನಕಾಂಡ 20:12, ನೀನು ನರಹತ್ಯ ಮಾಡಬಾರದು.
ವಿಮೋಚನಕಾಂಡ 21:12-17, 22:18-20, ಕೆಲವೊಂದು ಪಾಪಗಳಿಗೆ ಮರಣ ದಂಡನೆಯ ಶಿಕ್ಷೆ.
ಯೆಹೋಶುವ 8:1-8 ಯುದ್ಧದಿಂದ ನಾಶಗೊಳಿಸುವುದಕ್ಕೆ ದೇವರ ಅಧಿಕಾರ.
1 ಸಮುವೇಲ 15:2-3 ಯುದ್ಧದಿಂದ ಶಿಕ್ಷಿಸಲು ದೇವರ ಅಧಿಕಾರ.
ಮತ್ತಾಯ 5:38-48 ದುಷ್ಟ ವ್ಯಕ್ತಿಯನ್ನು ಎದುರಿಸಬಾರದು. ಒಂದು ವೇಳೆ ಯಾವನಾದರೂ ನಿನ್ನ ಬಲಗೆನ್ನೆಗೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನು ಒಡ್ಡು ಹಾಗೂ ............ ನಿನ್ನ ವೈರಿಗಳನ್ನು ಪ್ರೀತಿಸಿರಿ.
ಲೂಕ 6:30 ನಿನ್ನನ್ನು ಬೇಡುವ ಪ್ರತಿಯೊಬ್ಬನಿಗೂ ಕೊಡು.ಒಬ್ಬನು ನಿನ್ನಿಂದ ಏನಾದರೂ ತೆಗೆದುಕೊಂಡಾಗ ಅದನ್ನು ಹಿಂದಕ್ಕೆ ಕೊಡು ಎಂದು ಕೇಳಬೇಡ.
ರೋಮ 13:1-7 ದುಷ್ಟತ್ವವನ್ನು ಶಿಕ್ಷಿಸಲು ಸರಕಾರವು ದೇವರಿಂದ ಸ್ಥಾಪಿತವಾಗಿದೆ.
1 ಪ್ರೇತ 2:13-14 ಕೆಟ್ಟದ್ದು ಮಾಡುವವರನ್ನು ದಂಡಿಸುವುದಕ್ಕೆ ಅಧಿಕಾರಿಗಳು ದೇವರಿಂದ ನೇಮಿಸಲ್ಪಟ್ಟಿದ್ದಾರೆ.

## ಪ್ರಶ್ನೆಗಳು

ಯೇಸುವು ಪ್ರೀತಿ ಸ್ವರೂಪನು ಎಂದು ಬೋಧಿಸಿದನು ಮತ್ತು ಮಾಡಿ ತೋರಿಸಿದನು. ಯೇಸುಕ್ರಿಸ್ತನು ಹಳೆ ಒಡಂಬಡಿಕೆಯ ನಿಬಂಧನೆಗಳನ್ನು ಅಳಿಸಿಹಾಕಲಿಲ್ಲ (ಮತ್ತಾಯ 5:17). ಹಾಗೆಯೇ "ಯೇಸು ಕ್ರಿಸ್ತ"ನ ಬೋಧನೆಗಳು ಹೇಳಲ್ಪಟ್ಟಂತಹ ನಿಬಂಧನೆಗಳಿಗೆ ಸರಿಯಾಗಿ ಆಳವಾಗಿಯು ಮತ್ತು ಹೆಚ್ಚು ಆತ್ಮಿಕವಾಗಿಯೂ ಇದ್ದವು. ನಿಬಂಧನೆಯು ಜನರ ಹೊರಗಿನ ನಡವಳಿಕೆಯ ವಿಷಯದಲ್ಲಿ ವ್ಯವಹರಿಸುವುದು. ಆದರೆ ಯೇಸುಕ್ರಿಸ್ತನು ಜನರು ತಮ್ಮ ಹೃದಯದಲ್ಲಿ ಯಾವುದನ್ನು ಯೋಚಿಸುತ್ತಿದ್ದರೂ ಅದನ್ನೆ ನೋಡಿದನು . ಆತನು ಧರ್ಮಶಾಸ್ತ್ರದ ಕಟ್ಟಳೆಗಳನ್ನು ತೋರಿಸಿದನು ಮತ್ತು ನೀತಿಯೊಂದಿಗೆ ಪ್ರೀತಿಸುವುದನ್ನು ಮಾಡಿರಿ ಎಂದು ಹೇಳಿ ಆ ಕಟ್ಟಳೆಗಳು ಇನ್ನು ಹೆಚ್ಚು ಕಠಿಣವಾಗುವಂತೆ ಮಾಡಿದನು.

ಉದಾಹರಣೆಗೆ : ಧರ್ಮಶಾಸ್ತ್ರವು ನರಹತ್ಯೆಯನ್ನು ಖಂಡಿಸುತ್ತದೆ. ಆದರೆ ಯೇಸುಕ್ರಿಸ್ತನು ಹೃದಯದಲ್ಲಿರುವಂತಹ ದ್ವೇಷ ಮತ್ತು ಕೋಪವನ್ನು ಖಂಡಿಸಿದನು (ಮತ್ತಾಯ 5:21-22). ಧರ್ಮಶಾಸ್ತ್ರವು ವ್ಯಭಿಚಾರವನ್ನು ಖಂಡಿಸುತ್ತದೆ. ಆದರೆ ಯೇಸುಕ್ರಿಸ್ತನು ಒಬ್ಬನ ಹೃದಯದಲ್ಲಿರುವ ಶರೀರದಾಶೆಯನ್ನೇ ಖಂಡಿಸಿದನು (ಮತ್ತಾಯ 5:27-28). ಧರ್ಮಶಾಸ್ತ್ರವು ನಮ್ಮ ನೆರೆಯವರನ್ನು ಪ್ರೀತಿಸಬೇಕು ಎಂದು ಆಜ್ಞಾಪಿಸುತ್ತದೆ. ಆದರೆ ಯೇಸುಕ್ರಿಸ್ತನು ನಮ್ಮ ವೈರಿಗಳನ್ನೇ ಪ್ರೀತಿಸಬೇಕು ಎಂದು ನಮಗೆ ಆಜ್ಞಾಪಿಸಿದ್ದಾನೆ (ಮತ್ತಾಯ 5:43-47). ಧರ್ಮಶಾಸ್ತ್ರವು ಅತಿಯಾದ ವೈಯಕ್ತಿಕ ಸೇಡನ್ನು ನಿಷೇಧಿಸುತ್ತದೆ. ಆದರೆ ಯೇಸುಕ್ರಿಸ್ತನು ಸೇಡುಗಳೆಲ್ಲವನ್ನು ನಿಷೇಧಿಸುತ್ತಾನೆ. ಕೆಡುಕನನ್ನು ಎದುರಿಸಬೇಡ. ಒಂದು ವೇಳೆ ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನು ಸಹ ಒಡ್ಡು. ನಿನ್ನ ಸಂಗಡ ವ್ಯಾಜ್ಯವಾಡಿ ನಿನ್ನ ಒಳ ಅಂಗಿಯನ್ನು ತಕ್ಕೊಳ್ಳಬೇಕೆಂದಿರುವವನಿಗೆ ನಿನ್ನ ಮೇಲಂಗಿಯನ್ನು ಕೊಟ್ಟುಬಿಡು, (ಮತ್ತಾಯ 5:39-40). ನಿನ್ನ ಬೇಡುವ ಪ್ರತಿಯೊಬ್ಬನಿಗೂ ಕೊಡು. ಒಬ್ಬನು ನಿನ್ನಿಂದ ಏನಾದರೂ ತೆಗೆದುಕೊಂಡಾಗ ಅದನ್ನು ಹಿಂದಕ್ಕೆ ಕೊಡು ಎಂದು ಕೇಳಬೇಡ (ಲೂಕ 6:30) ಎಂದು ಆತನು ಹೇಳಿದನು. ಆದುದರಿಂದ ಜನರು ನಿಮಗೆ ಏನೇನು ಮಾಡಬೇಕೆಂದು ನೀವು ಬಯಸುತ್ತೀರೋ ಅವುಗಳನ್ನೆಲ್ಲಾ ನೀವು ಸಹ ಅವರಿಗೆ ಮಾಡಿರಿ ಎಂದು ಹೇಳಿದನು (ಮತ್ತಾಯ 7:22; ಲೂಕ 6:31).

ಕೆಟ್ಟದ್ದನ್ನು ಎದುರಿಸುವ ವಿಷಯದಲ್ಲಿ ಅನೇಕ ಪ್ರಶ್ನೆಗಳು ಉದ್ಭವಿಸಿದವು. ನಾವು ವಿರೋಧವನ್ನು ಎದುರಿಸಬಾರದೇ? ತಪ್ಪು ಮಾಡುವವರನ್ನು ಎದುರಿಸಲು ನಾವು ಬಲವನ್ನು ಪ್ರಯೋಗಿಸಬಾರದೆ? ದೇವರು ತಪ್ಪು ಮಾಡಿದವರನ್ನು ಶಿಕ್ಷಿಸುವುದಕ್ಕಾಗಿ ಸರ್ಕಾರದ ಅಧಿಕಾರಿಗಳನ್ನು ನೇಮಿಸಿದ್ದಾನೆ ಮತ್ತು ವಿನಾ ಕಾರಣವಿಲ್ಲದೆ ಅವರು ಕತ್ತಿಯನ್ನು ಬಿಚ್ಚುವುದಿಲ್ಲ ಎಂಬುದಾಗಿ ಪೌಲನು ಮತ್ತು ಪೇತ್ರನು ಹೇಳಿದ್ದಾರೆ (ರೋಮ 13:1-7; 1 ಪ್ರೇತ 2:13-14). ಸರ್ಕಾರಗಳು ಮತ್ತು ಸಂಘಸಂಸ್ಥೆಗಳು ಬಲಪ್ರಯೋಗಗಳನ್ನು ಉಪಯೋಗಿಸಬಾರದು ಅಥವಾ ಯಾವುದೇ ವ್ಯಕ್ತಿಯನ್ನು ಗಾಯಗೊಳಿಸಬಾರದು ಎಂದು ಆಜ್ಞೆಗಳಿವೆಯೆ? ಹಾಗೆ ಇರುವುದಾದರೆ ಕ್ರೈಸ್ತನು/ಳು ಆರಕ್ಷಕ ಪಡೆಯ ಸದಸ್ಯನಾಗಬಹುದೇ ಮತ್ತು ಬಂದೂಕವನ್ನು ಉಪಯೋಗಿಸಬಹುದೇ ಅಥವಾ ಅಪರಾಧಿಗಳೊಂದಿಗೆ ಹೋರಾಡಲು ಆಯುಧಗಳನ್ನು (ದೊಣ್ಣೆ, ಕತ್ತಿ, ಹತಾರಿ, ಕೊಡಲಿ, ಕೋಲು) ಉಪಯೋಗಿಸಬಹುದೇ ? ಕ್ರೈಸ್ತನು/ಳು ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಬಹುದೇ ಮತ್ತು ಶಾರೀರಿಕ ಶಿಕ್ಷೆಯ ದಂಡನೆ ವಿಧಿಸಬಹುದೇ ಅಥವಾ ಮರಣದಂಡನೆಯನ್ನು ಸಹ ವಿಧಿಸಬಹುದೇ ? ಕ್ರೈಸ್ತನು/ಳು ಶಸ್ತ್ರ ಪಡೆಯ ಸದಸ್ಯನಾಗಬಹುದೇ ಅಥವಾ ಯುದ್ಧದಲ್ಲಿ ಹೋರಾಡಬಹುದೇ ?

**ಮೊದಲ ದೃಷ್ಟಿಕೋನ : ಯಾವನು ಕೂಡ ಕೆಡುಕನ್ನು ಎದುರಿಸಲೇ ಬಾರದು**

ಯಾವುದೇ ಸಂದರ್ಭದಲ್ಲೂ ಕೇಡು ಮಾಡುವವರನ್ನು ಎದುರಿಸಲು ಬಲಪ್ರಯೋಗ ಮಾಡಲೇ ಬಾರದೆಂದು ಅನೇಕ ಕ್ರೈಸ್ತರು ನಂಬುತ್ತಾರೆ. ತನ್ನನ್ನು ಹಿಂಬಾಲಿಸಬೇಕೆಂದು ನಮ್ಮನ್ನು ಕ್ರಿಸ್ತನು ಕೇಳಿಕೊಂಡನು (ಮಾರ್ಕ 8:34-35). ನಾವು ಸೇವಕರಾಗಿರಲು ಆತನನ್ನು ಹಿಂಬಾಲಿಸಬೇಕು (ಮಾರ್ಕ 10:42-45). ಕ್ರಿಸ್ತನ ಶ್ರಮೆಯನ್ನು ಧರಿಸಿ, ಆತನನ್ನು ಹಿಂಬಾಲಿಸಬೇಕೆಂಬ ಆಜ್ಞೆಯನ್ನು ಹೊಂದಿದ್ದೇವೆ (1 ಪೇತ್ರ 2:19-24) ನಾವು ಸೇಡನ್ನು ತೀರಿಸಿಕೊಳ್ಳಬಾರದು ಆದರೆ ಕೆಟ್ಟದ್ದನ್ನು ಒಳ್ಳೇಯದರಿಂದ ಜಯಿಸಿರಿ ಎಂದು ಪೌಲನು ಹೇಳಿದನು. (ರೋಮ 12:17-21; 1 ಥೆಸಲೋನಿಕ 5:15). ಶಪಿಸುವವರನ್ನು ಆಶೀರ್ವದಿಸಿ ಹಿಂದಿರುಗಿರಿ ಎಂದು ಪೇತ್ರನು ಸಹ ಹಾಗೆಯೇ ಹೇಳುವನು (1 ಪೇತ್ರ 3:8-9). ಪ್ರೀತಿಸುವ ಈ ನೈತಿಕ ಮಾರ್ಗವು ಕಷ್ಟಕರವಾದದ್ದು. ಆದರೆ ಉನ್ನತವಾದದ್ದು ದೇವರಿಂದ ಅನುಮತಿಸಲ್ಪಟ್ಟಂತಹ ಹಳೆ ಒಡಂಬಡಿಕೆಯ ಶಾಸ್ತ್ರ ನಿಯಮವನ್ನು ಕ್ರಿಸ್ತನು ಪ್ರೀತಿಯ ಧರ್ಮಶಾಸ್ತ್ರದ ನಿಯಮವನ್ನಾಗಿ ಮಾರ್ಪಡಿಸಿರುವ ಕಾರಣದಿಂದ (ಮತ್ತಾಯ 5:17)ದೇವರಿಂದ ಅನುಮತಿಸಲ್ಪಟ್ಟಂತಹ ಹಳೆ ಒಡಂಬಡಿಕೆಯ ಈ ನಿಯಮಗಳನ್ನು ಮಾನದಂಡವನ್ನಾಗಿ ಈ ದಿನಗಳಲ್ಲಿ ಉಪಯೋಗಿಸಲಾಗುವುದಿಲ್ಲ (ರೋಮ 13:10).

ಆದುದರಿಂದ ವಿಶ್ವಾಸಿಗಳು ಹೋರಾಡಲು ಸೈನ್ಯದಲ್ಲಿರುವುದು ಮತ್ತು ಮತ್ತೊಂದು ಮಾನವ ಜೀವಿಗಳನ್ನು ಕೊಲ್ಲುವುದನ್ನು ಈ ಕ್ರೈಸ್ತರು ಯೋಚಿಸುವುದನ್ನು ಕೂಡ ಮಾಡುವುದಿಲ್ಲ. ಯುದ್ಧದ ಉಗಮವು ಪಾಪವೆ ಆಗಿದೆ (ಯಾಕೋಬ 4:1-4) ಮತ್ತು ಖಡ್ಗವನ್ನು ಹಿಡಿಯುವವರೆಲ್ಲರೂ ಖಡ್ಗದಿಂದಲೇ ಹತರಾಗುವರು ಎಂದುಇವರು ಹೇಳುತ್ತಾರೆ. (ಮತ್ತಾಯ 26:52) ದೇವರು ಇಸ್ರಾಯೆಲ್ಲರ ಅಲ್ಪ ಸಹಾಯದಿಂದ ಹಳೆ ಒಡಂಬಡಿಕೆಯಲ್ಲಿಯ ಕಾಲದಲ್ಲಿ ಭಾಗಶಃ ನಡೆದಂತಹ ಎಲ್ಲ ಯುದ್ಧಗಳಲ್ಲಿ ಸ್ವತಃ ತಾನೇ ಹೋರಾಡಿದನೆಂಬುದನ್ನು ಗಮನಿಸುತ್ತಾರೆ (ವಿಮೋಚನ 14:13 - 14; 24-28 ಯೆಹೋಶುವ 5:13 -15, 6:1-5, ನ್ಯಾಯಸ್ಥಾಪಕರು 4:14 -15, 7:2-7, 22). ಕಾಲಾನುಕ್ರಮವಾಗಿ ಯುದ್ಧಗಳು ದೇವರಿಂದ ಮಾನ್ಯತೆ ಪಡೆಯದೆ ಸೈನ್ಯಗಳ ಮೇಲೆ ಆತುಕೊಳ್ಳದೆ ದೇವರನ್ನು ಆತುಕೊಳ್ಳಬೇಕೆಂದು ಇಸ್ರಾಯೇಲರಿಗೆ ಎಚ್ಚರಿಸುತ್ತಾ, ಪ್ರವಾದಿಗಳ ಮುಖಾಂತರ ಖಂಡಿಸಿದನು (ಯೆಶಾಯ 31:1-3; ಜೆಕರ್ಯ 4:6). ಮಾನವರು ಶಾಂತಿಯಿಂದಿರಬೇಕೆಂಬ ದೇವರ ಉನ್ನತ ಶ್ರೇಣಿಯ ಅಭಿಲಾಷೆಯು ಹಳೆ ಒಡಂಬಡಿಕೆಯಲ್ಲಿರುವುದನ್ನು ಸ್ಪಷ್ಟವಾಗಿ ಕಾಣುತ್ತೇವೆ. ಇದಕ್ಕೆ ಉದಾಹರಣೆ ದಾವಿದನು ದೇವರಿಗೆ ದೇವಾಲಯವನ್ನು ಕಟ್ಟುವುದಕ್ಕೆ ಅನುಮತಿಯನ್ನು ಕೇಳಿದಾಗ, ತಿರಸ್ಕೃತವಾಗುತ್ತದೆ. ಕಾರಣ ಆತನ ಕೈಗಳು ಯುದ್ಧದಲ್ಲಿ ರಕ್ತವನ್ನು ಸುರಿಸಿದ್ದವು (1 ಪೂರ್ವಕಾಲ ವೃತ್ತಾಂತ 28:3).

ಇಂತಹ ಯುದ್ಧದ ಆಲೋಚನೆಗಳ ಸಹಿತವಾಗಿ ಮರಣದಂಡನೆಯು ಕೂಡ ತಪ್ಪೆಂದು ಇವರಲ್ಲಿ ಭಾಗಶಃ ಅನೇಕ ಕ್ರೈಸ್ತರು ನಂಬುತ್ತಾರೆ. ಕೆಟ್ಟವರನ್ನು ಎದುರಿಸುವುದು ಬೇಡ ಎಂಬುದಕ್ಕೆ ಸಂಬಂಧಪಟ್ಟ ವಾಕ್ಯಗಳ ಸಹಿತವಾಗಿ (ಮತ್ತಾಯ 5:39), ಯೇಸುಕ್ರಿಸ್ತನು ವ್ಯಭಿಚಾರ ಮಾಡುತ್ತಿರುವಾಗ ಸಿಕ್ಕಿಕೊಂಡಂತಹ ಸ್ತ್ರೀಯ ಮೇಲೆ ಕಲ್ಲು ಹಾಕಲು ಅನುಮತಿಸದೆ ಇರುವುದನ್ನುಇವರು ತೋರಿಸುತ್ತಾರೆ (ಯೋಹಾನ 8:1-11). ಕ್ರೈಸ್ತನಾದಂತವನು ತಪ್ಪು ಮಾಡಿದಂತವರನ್ನು ಶಿಕ್ಷಿಸಲು "ಕತ್ತಿಯನ್ನು ಹಿಡಿಯ"ಬೇಕಾಗಬಹುದು ಮತ್ತು ಮರಣ ದಂಡನೆಯನ್ನು ಯಾವಾಗ ಕೊಡಬೇಕೆಂದು ಮತ್ತು ಯುದ್ಧಕ್ಕೆ ಯಾವಾಗ ಹೋಗಬೇಕು ಎಂದು ನಿರ್ಧರಿಸಬೇಕಾಗುವುದು. ಆದುದರಿಂದ ಕ್ರೈಸ್ತನು ಸರ್ಕಾರದಲ್ಲಿನ ನ್ಯಾಯಾಂಗದಲ್ಲಿ ನ್ಯಾಯಾಧೀಶ ಅಥವಾ ಸರ್ಕಾರದ ನ್ಯಾಯ ಅಥವಾ ಕಾನೂನು ಮಂಡಳಿಯ ಸದಸ್ಯನಾಗಲೇ ಬಾರದು ಎಂದು ಅನೇಕ ಕ್ರೈಸ್ತರು ಯೋಚಿಸುತ್ತಾರೆ. ಸಮಾಜವನ್ನು ಕಾಪಾಡುವುದಕ್ಕಾಗಿ ಆರಕ್ಷಕ ಅಥವಾ ಪೋಲಿಸನು ಶಾರೀರಿಕ ಹಿಂಸೆಯ

ವಿಧಾನವನ್ನು ಅನುಸರಿಸಬೇಕಾಗ ಬಹುದು ಅಥವಾ ಸಾಯಿಸಬೇಕಾಗ ಬಹುದು. ಈ ಕಾರಣದಿಂದ ಕ್ರೈಸ್ತನು ಆರಕ್ಷಕ ಪಡೆಯ ಸದಸ್ಯನಾಗಿರಲೇಬಾರದೆಂದು ಸಹ ಇವರು ನಂಬುತ್ತಾರೆ. ನಾವು ಈ ಲೋಕದ ಪ್ರಜೆಗಳಾಗಿರದೆ ಪರಲೋಕದ ಪ್ರಜೆಗಳಾಗಿದ್ದೇವೆ (ಫಿಲಿಪ್ಪಿಯ 3:20), ಮತ್ತು ಶಾಂತಿಯುತವಾದ ಜೀವಿತಕ್ಕಾಗಿ ಕರೆಯಲ್ಪಟ್ಟಿದ್ದೇವೆ ಎಂದು ಹೇಳುತ್ತಾರೆ ( ಹಿಬ್ರಿಯ 12:14). ಈ ಕ್ರೈಸ್ತರು ಸರ್ಕಾರದಲ್ಲಿ ಭಾಗವಹಿಸಲು ತಿರಸ್ಕರಿಸುವರು. ಆದರೂ ಕೂಡ ತಮ್ಮ ಸರ್ಕಾರಗಳಿಗೆ ಅಧೀನರಾಗಲು ಬದ್ಧರಾಗಿರುತ್ತಾರೆ. ಉದಾಹರಣೆಗೆ ಸುಂಕ ಅಥವಾ ತೆರಿಗೆಯನ್ನು ಸಂದಾಯಿಸುತ್ತಾರೆ ಮತ್ತು ಸರ್ಕಾರಕ್ಕೆ ಹಾಗೂ ಆಡಳಿತಾಧಿಕಾರಿಗಳಿಗೂ ಪ್ರಾರ್ಥಿಸುತ್ತಾರೆ (ಮಾರ್ಕ 12:13-17; ರೋಮ 13:1-7; 1ತಿಮೋಥೆ 2:1-2; 1ಪೇತ್ರ 2:13-17).

## ಎರಡನೆಯ ದೃಷ್ಟಿಕೋನ : ಅಧಿಕಾರದಲ್ಲಿರುವವರು ಮಾತ್ರ, ಕೆಟ್ಟದ್ದನ್ನು ಎದುರಿಸಬೇಕು

ಅನೇಕ ಇನ್ನಿತರ ಕ್ರೈಸ್ತರು, ಕ್ರಿಸ್ತನ ಹೇಳಿಕೆಗಳನ್ನು ಈ ರೀತಿಯಾಗಿ ಅರ್ಥೈಸುತ್ತಾರೆ.ಯೇಸುಕ್ರಿಸ್ತನ ಮಾತುಗಳು ವೈಯಕ್ತಿಕವಾಗಿ ಪ್ರತಿಯೊಬ್ಬ ಕ್ರೈಸ್ತನ ಜೀವಿತದಿಂದ ಪಾಲಿಸಲ್ಪಡಬೇಕು. ಯೇಸುಕ್ರಿಸ್ತನು ಸರ್ಕಾರದ ವಿಷಯದಲ್ಲಿ ಅಥವಾ ಆರಕ್ಷಕ ಮತ್ತು ಇನ್ನಿತರ ಅಧಿಕಾರಿಗಳು ಮಾಡುವ ಸಾರ್ವಜನಿಕ ಕರ್ತವ್ಯಗಳ ಬಗ್ಗೆ ಮಾತನಾಡಲಿಲ್ಲ. ಒಂದು ವೇಳೆ ಕ್ರೈಸ್ತರಾದ ನಮ್ಮಲ್ಲಿ ವೈಯಕ್ತಿಕವಾಗಿ ಸಹೋದರ / ಸಹೋದರಿಯರಿಂದ ಅಥವಾ ಭಿನ್ನಮತೀಯರ ನೋವಿನಿಂದುಂಟಾಗುವ ಕೋಪದಿಂದ ಬಿಡುಗಡೆ ಹೊಂದಲು ಸಹೋದರನೊಂದಿಗೆ "ಸಮಾಧಾನ ಹೊಂದು" ಮತ್ತು "ವಿಷಯಗಳನ್ನು ಸರಿಪಡಿಸಿಕೋ" ಎಂದು ಯೇಸುಕ್ರಿಸ್ತನು ಹೇಳಿರುವನು (ಮತ್ತಾಯ 5:22-26). ನಮಗೆ ವೈಯಕ್ತಿಕವಾಗಿ ಯಾರಿಂದಲಾದರೂ ಪೆಟ್ಟು ಬಿದ್ದಾಗ, ನಾವು ಹಿಂತಿರುಗಿ ಸೇಡು ತೀರಿಸಿಕೊಳ್ಳಲು ಅಥವಾ ಕಾದಾಡಬಾರದು ಅಂದರೆ ಇದಕ್ಕೆ ಬದಲಾಗಿ ನಿನ್ನ ಮತ್ತೊಂದು "ಕೆನ್ನೆಯನ್ನು ಒಡ್ಡು"ವಿಕೆಯಿಂದ ನಮ್ಮ ಪ್ರೀತಿಯನ್ನು ಅವರಿಗೆ ತೋರಿಸಿರಿ (ಮತ್ತಾಯ 5:38-41), ವೈಯಕ್ತಿಕವಾಗಿ ಯಾರಾದರೂ ಅಥವಾ ವೈರಿಗಳಾಗಿದ್ದವರು ಸಹ ಹಣ ಕೊಡು ಎಂದು ಕೇಳಿದರೆ(ಮತ್ತಾಯ 5:42) ಅಥವಾ ಸಾಲವನ್ನು ಕೇಳಿದರೆ ಕೊಡಲು ಸಿದ್ಧನಾಗಿರಬೇಕು (ಲೂಕ 6:35).ಈ ಎರಡನೆಯ ದೃಷ್ಟಿಕೋನಕ್ಕನುಸಾರವಾದ ಕ್ರಿಸ್ತನ ಹೇಳಿಕೆಗಳು ವೈಯಕ್ತಿಕವಾಗಿ ಒಬ್ಬನಿಗೆ ನಿರ್ದೇಶಿಸುವಂತಹವುಗಳಾಗಿವೆ.

ಇಷ್ಟೇ ಅಲ್ಲದೆ ಯೇಸುಕ್ರಿಸ್ತನು ಶಸ್ತ್ರರಹಿತವಾದ ರಾಷ್ಟ್ರದಲ್ಲಿನ ಒಬ್ಬೊಬ್ಬನಿಗೂ ವ್ಯಕ್ತಿಗತವಾಗಿ ಹೇಳಿದನು ಎಂದು ಹೇಳುತ್ತಾರೆ. ಗ್ರಾಮೀಣ ಜನತೆಯ ದಿನನಿತ್ಯದ ಚರ್ಚೆಯ ವಿಷಯಗಳಿಂದಾಗಿ ಯೇಸುಕ್ರಿಸ್ತನು ಈ ರೀತಿಯಾಗಿ ಹೇಳಿದ್ದಾನೆ. ಕ್ರಿಸ್ತನಿಂದ ಕೇಳಿಸಿಕೊಂಡ ಮಾತುಗಳು ಆರಕ್ಷ ಅಥವಾ ಸೈನ್ಯಕ್ಕೆ ಅನ್ವಯವಾಗಿರಲಿಕ್ಕಿಲ್ಲ. ಈ ದೃಷ್ಟಿಯಿಂದ, ಅಧಿಕಾರದಲ್ಲಿರುವವರು ಕೆಟ್ಟವರನ್ನು ಎದುರಿಸಲೇಬೇಕು. ಒಂದು ವೇಳೆ ಅಧಿಕಾರಿಗಳು ತಪ್ಪನ್ನು ಮಾಡಿದಾಗ ಅವರನ್ನು ಸಹ ಎದುರಿಸಬೇಕು ಎಂದು ಹೇಳುವುದರಲ್ಲಿ ಈ ಕ್ರೈಸ್ತರು ಇನ್ನೊಂದು ಹೆಜ್ಜೆಮುಂದೆ ಹೋಗುತ್ತಾರೆ. ಅಧಿಕಾರಿಗಳನ್ನು ಎದುರಿಸಲು ಹೊಸ ಒಡಂಬಡಿಕೆಯಲ್ಲಿ ಮೂರು ಉದಾಹರಣೆಗಳಿವೆ. ಮೊದಲನೆಯದಾಗಿ, ಯೇಸುಕ್ರಿಸ್ತನು ದೇವಾಲಯವನ್ನು ಶುಚಿಗೊಳಿಸುವಾಗ, ಚಾಟಿಯನ್ನು ಉಪಯೋಗಿಸುತ್ತಾ ಅಲ್ಲಿದ್ದ ಮೇಜುಗಳನ್ನು ತಲೆ ಕೆಳಗೆ ಮಾಡಿದನು ಮತ್ತು ದೈಹಿಕವಾಗಿ ಅವರನ್ನು ಎದುರಿಸಿ, ತನ್ನ ಕೋಪವನ್ನು ತೋರಿಸಿದನು (ಯೋಹಾನ 2:13-16). ಎರಡನೆಯದಾಗಿ ಯೇಸುಕ್ರಿಸ್ತನು ನ್ಯಾಯಾಲಯದಲ್ಲಿ ಕಾನೂನುಬಾಹಿರವಾಗಿ ಕೆನ್ನೆಗೆ ಹೊಡಿಸಿಕೊಂಡಂತಹ ಸಮಯದಲ್ಲಿ ವಿರೋಧಿಸಿದನು (ಯೋಹಾನ 18:19-23) ಮತ್ತು ಪೌಲನು ಸ್ವತಃ ತಾನೇ ಉಚ್ಚನ್ಯಾಯಾಲಯಕ್ಕೆ ಮಾಡುವ ಮನವಿಯಿಂದ ಕೆಟ್ಟವರನ್ನು ಎದುರಿಸಿದನು (ಅ.ಕೃ. 25:11). ಈ ಉದಾಹರಣೆಗಳ ನಿಮಿತ್ತವಾಗಿ ಈ ಕ್ರೈಸ್ತರು ಈ ದಿನಗಳಲ್ಲಿ ಕೆಟ್ಟವರನ್ನು ಎದುರಿಸಲೇ ಬೇಕು ಎಂದು ಇವರು ನಂಬುತ್ತಾರೆ.

ಯುದ್ಧದ ಪಾಪಪ್ರಜ್ಞೆಗಳನ್ನು ಈ ಕ್ರೈಸ್ತರು ಒಪ್ಪಿಕೊಳ್ಳುತ್ತಾರೆ. ಆದರೆ ಪೌಲನು ತಪ್ಪು ಮಾಡಿದವರನ್ನು ಶಿಕ್ಷಿಸಲು ಸರ್ಕಾರವು "ಕತ್ತಿ"ಯನ್ನು ಉಪಯೋಗಿಸುವುದನ್ನು ಮಾನ್ಯ ಮಾಡಿದನು ಎಂದು ಈ ಕ್ರೈಸ್ತರ ಗುಂಪು ಗುರುತಿಸುತ್ತದೆ (ರೋಮ 13:4). ಸ್ನಾನಿಕನಾದ ಯೋಹಾನನ್ನು ಸೈನಿಕರು ತಾವು ನಿಜವಾದ ಪಶ್ಚಾತ್ತಾಪವನ್ನು ಪ್ರಕಟಿಸಲು ನಾವೇನು ಮಾಡಬೇಕು ಎಂದು ಕೇಳುವಾಗ ಆತನು ಅವರಿಗೆ ನೀವು ನಿಮ್ಮ ಸೈನಿಕ ವೃತ್ತಿಯನ್ನು ಬಿಟ್ಟುಬಿಡಿರಿ ಎಂದು ಹೇಳುವುದಿಲ್ಲ ಮತ್ತು ಅವರು ತಮ್ಮ ಸಂಬಳದಲ್ಲಿಯೇ ಸಂತೃಪ್ತರಾಗಿರಬೇಕು ಎಂದು ಹೇಳಿದನು (ಲೂಕ 3:14). ದೇವರು ಹಳೆ ಒಡಂಬಡಿಕೆಯ ಧರ್ಮಶಾಸ್ತ್ರದಲ್ಲಿ ಅನುಮತಿಸಿದಂತಹವುಗಳಾದ ವಿವಾಹ ವಿಚ್ಛೇದನ (ಮತ್ತಾಯ 5:31) ಮತ್ತು ಆಣೆಗಳನ್ನು (ಮತ್ತಾಯ 5:33) ಮಾಡಲೇ ಬಾರದೆಂದು ಹೇಳಿದಂತಹ ಯೇಸುಕ್ರಿಸ್ತನ ನುಡಿಗಳನ್ನು ಒಂದು ಕೈಯಲ್ಲಿಟ್ಟುಕೊಂಡು ಮತ್ತು ಹಳೆ ಒಡಂಬಡಿಕೆಯಲ್ಲಿ ವಿಶೇಷವಾಗಿ ಆಜ್ಞಾಪಿಸಲ್ಪಟ್ಟಂತಹವುಗಳಾದ, ನ್ಯಾಯಕ್ಕಾಗಿ ಯುದ್ಧ ಅಥವಾ ಪಕ್ಷಪಾತವಿಲ್ಲದ ಮರಣ ದಂಡನೆಯನ್ನು ಕ್ರಿಸ್ತನು ನಿರಾಕರಿಸಲಿಲ್ಲ ಎಂದು ನಂಬಿ ಇವುಗಳನ್ನು ಮತ್ತೊಂದು

ಕೈಯಲ್ಲಿಟ್ಟುಕೊಂಡು ಇವುಗಳೆರಡರ ಮಧ್ಯದಲ್ಲಿರುವ ವ್ಯತ್ಯಾಸಗಳನ್ನು ಕಾಣುತ್ತಾರೆ (ಅರಣ್ಯಕಾಂಡ 31:1-7; ಯೆಹೋಶುವ. 6-8ನೇ ಅಧ್ಯಾಯ; ನ್ಯಾಯಸ್ಥಾಪಕರು 4:14 -16; 7:2-22; 1ಸಮುವೇಲ 15:2-3). ಯೇಸುಕ್ರಿಸ್ತನು, ದೇವರೊಂದಿಗೆ ಹೋರಾಡುವವರನ್ನು ಸಂಪೂರ್ಣವಾಗಿ ನಾಶ ಮಾಡಲು, ಸೈನ್ಯದವರ ನಾಯಕನಂತೆ ಬರುವುದನ್ನು ಯೋಹಾನನ ದರ್ಶನವು ತೋರಿಸುತ್ತದೆ (ಪ್ರಕಟಣೆ 19:11-19). ಆದುದರಿಂದ ಭಾಗಶಃ ಎಲ್ಲಾ ಯುದ್ಧಗಳು ಅನ್ಯಾಯದ ಮತ್ತು ತಪ್ಪಾದಂತಹವುಗಳು ಆಗಿದ್ದವು ಎಂದು ಒಪ್ಪಿಕೊಂಡರು ಕೂಡ "ನ್ಯಾಯಕ್ಕಾಗಿ" ನಡೆಯುವ ಯುದ್ಧಗಳ ಅಗತ್ಯವಿದೆ ಎಂದು ನಂಬುತ್ತಾರೆ. ಈಗಲು ಮರಣದಂಡನೆಯ ಅನುಮತಿಯು ಒಳ್ಳೆಯದೆಂದು ಇವರಲ್ಲಿ ಅಧಿಕಸಂಖ್ಯೆಯ ಕ್ರೈಸ್ತರು ನಂಬುತ್ತಾರೆ. ಅಷ್ಟಲ್ಲದೆ ದೇವರಿಗೆ ವಿರೋಧವಾಗಿ ಸುಳ್ಳನ್ನು ಹೇಳಲು ಪ್ರಯತ್ನಿಸದ ಆ ಇಬ್ಬರಿಗೆ ಮರಣ ದಂಡನೆಯ ತೀರ್ಪನ್ನು ವಿಧಿಸಲು ದೇವರು ಪೇತ್ರನನ್ನು ಉಪಯೋಗಿಸಿದನು (ಅ.ಕೃ. 5:1-10) ಮರಣದಂಡನೆಯ ಶಿಕ್ಷೆ ಅಥವಾ ಯುದ್ಧವು ದೇವರ ಚಿತ್ತವಲ್ಲವೆಂದು ನಂಬುತ್ತಾರೆ. ಆದರೂ ಕೆಲವೊಂದು ಅನ್ಯಾಯಗಳನ್ನು ತಡೆಯಲು ಅಥವಾ ಕೆಲವೊಂದು ಪಾಪಗಳ ಗಂಭೀರತೆಯನ್ನು ತೋರಿಸಲು ದೇವರಿಗೆ ಇವುಗಳ ಅವಶ್ಯಕತೆ' ಇದೆ ಎಂದುಇವರುವಿ ನಂಬುತ್ತಾರೆ.

ಸರ್ಕಾರದಲ್ಲಿ ಭಾಗವಹಿಸುವುದನ್ನು ಸಮರ್ಥಿಸುವುದಕ್ಕಾಗಿ, ಸರ್ಕಾರಕ್ಕೆ ಮತ್ತು ಅದರ ಕಾನೂನುಗಳಿಗೆ ಅಧೀನರಾಗಬೇಕು ಮತ್ತು ತೆರಿಗೆ ಕೊಡಬೇಕೆಂಬ ಪೌಲನ ಸೂಚನೆಗಳನ್ನು ಈ ಕ್ರೈಸ್ತರು ತೋರಿಸುತ್ತಾರೆ (ರೋಮ 13:1-7). ರೋಮ ರಾಜ್ಯದ ಪ್ರಭುಗಳು ಆ ಕಾಲದಲ್ಲಿ ಕ್ರೈಸ್ತರನ್ನು ಬಹಳ ಕ್ರೂರವಾಗಿ ಹಿಂಸಿಸಿದ್ದಾಗ್ಯೂ ಕೂಡ, ಅಧಿಕಾರಿಗಳು ದೇವರಿಂದ ಸ್ಥಾಪಿತವಾದವರೆಂದು ಮತ್ತು ಅವರು ದೇವರ ಸೇವಕರು ಎಂದು ಪೌಲನು ಹೇಳಿದನು (ರೋಮ 13:1,4,6). ತೆರಿಗೆಯ (ಕಂದಾಯ) ಸಂಗ್ರಹಾಧಿಕಾರಿಗಳು ತಮ್ಮ ಉದ್ಯೋಗವನ್ನು ಬಿಡಬಾರದು, ಆದರೆ ಯುಕ್ತವಾಗಿ ತೆರಿಗೆಗಳನ್ನು ತೆಗೆದುಕೊಳ್ಳಬೇಕು (ಲೂಕ 3:12-13, ರೋಮ 13:6-7). ಸರ್ಕಾರ ಅಥವಾ ಆರಕ್ಷಪಡೆಯು, ದೇವರ ನ್ಯಾಯದ ಮಾರ್ಗದಲ್ಲಿ ನಡೆಯುವುದಕ್ಕೂ ಮತ್ತು ಕರುಣೆಯನ್ನು ತೋರಿಸುವುದಕ್ಕೆ ಪ್ರೋತ್ಸಾಹಿಸುವುದಕ್ಕೋಸ್ಕರವಾಗಿ ವಿಶ್ವಾಸಿಗಳು ಸರ್ಕಾರದಲ್ಲಿ ಅಥವಾ ಆರಕ್ಷಕ ಪಡೆಯ ಸದಸ್ಯರಾಗುವುದು ಒಳ್ಳೆಯದೆಂದು ಈ ಕ್ರೈಸ್ತರು ನಂಬುತ್ತಾರೆ. ಸರ್ಕಾರ ಅಥವಾ ಆಡಳಿತದಲ್ಲಿ ವಿಶ್ವಾಸಿಗಳು "ಬೆಳಕಾಗಿ"ಇರಬೇಕು ಎಂದು ಇವರು ಹೇಳುತ್ತಾರೆ (ಮತ್ತಾಯ 5:14-16). ಹಾಗೆಯೇ ಸ್ವಂತಕ್ಕಾಗಿ ಸೇಡು ತೀರಿಸಿಕೊಳ್ಳಲು ಅಥವಾ ಸ್ವಂತ ಹಿತಾಸಕ್ತಿಗಾಗಿ ಹೋರಾಡದೆ, ಸರ್ಕಾರದ ಅಥವಾ ಆರಕ್ಷಕ ಪಡೆಯ ಸದಸ್ಯರಾಗಿ, ಅವರು ತಪ್ಪು ಮಾಡಿದವರನ್ನು ದಂಡಿಸಲು ಸಹಾಯಿಸಬೇಕು ಮತ್ತು ಇತರರ ಹಿತಾಸಕ್ತಿಯನ್ನು ಕಾಪಾಡಬೇಕು.

## ಮೂರನೆಯ ದೃಷ್ಟಿಕೋನ : ಸ್ವಂತ ....ಕ್ಕಾಗಿ ಕೆಟ್ಟದ್ದನ್ನು ಎದುರಿಸುವುದು

ಯಾರಾದರೂ ಸರಿ ಅಗತ್ಯವಿದ್ದರೆ ಹಿಂಸೆಯ ಮೂಲಕ ಕೆಟ್ಟವರನ್ನು ಎದುರಿಸಬೇಕು ಎಂದು ಈ ಮೂರನೆ ತರದ ಕ್ರೈಸ್ತರ ಗುಂಪು ನಂಬುತ್ತದೆ. ಯೇಸುಕ್ರಿಸ್ತನು ಕೆಟ್ಟದ್ದನ್ನು ಎದುರಿಸುವ ಬಗ್ಗೆ ಆತನು ಬೋಧಿಸುವಾಗ,ಇವುಗಳನ್ನು ಎಲ್ಲಾ ಸಂದರ್ಭಗಳಲ್ಲಿ ಅನ್ವಯಿಸಿಕೊಳ್ಳಬೇಕೆಂಬ ಉದ್ದೇಶದಿಂದ ಹೇಳುವುದಿಲ್ಲ. ಯೇಸುಕ್ರಿಸ್ತನು ಹೇಳದೆ ಇದ್ದಂತಹ ಆತನ ಬಯಕೆಗಳನ್ನು ನಾವು ಕೇಳಿರದಿದ್ದರೂ ಸ್ವಾಭಾವಿಕವಾಗಿ ಅರ್ಥ ಮಾಡಿಕೊಳ್ಳಬೇಕೆಂದು ಈ ಕ್ರೈಸ್ತರು ಹೇಳುತ್ತಾರೆ. ಉದಾಹರಣೆಯಾಗಿ, ಒಂದು ವೇಳೆ ಕುಡಿದು ಮತ್ತನಾದ ವ್ಯಕ್ತಿಯು ಅಮಾಯಕನನ್ನು ಕೊಲ್ಲುವ ಪ್ರಯತ್ನದಲ್ಲಿದ್ದಾಗ, ಯಾವ ರೀತಿಯಿಂದಾದರೂ ಸಾಧ್ಯವಾದಷ್ಟು ಮಟ್ಟಿಗೆ ವಿರೋಧಿಸಬೇಕು. ಅವರು ಇನ್ನು ಮುಂದುವರಿಯುತ್ತಾ, ಮಕ್ಕಳ ಕೆನ್ನೆಯ ಮೇಲೆ ಹೊಡೆಯುವುದನ್ನು ಅಥವಾ ಎರಡು ಸಿಹಿಯನ್ನು ಕೊಟ್ಟಾಗ ಒಂದನ್ನು ಕಸಿದುಕೊಳ್ಳುವುದನ್ನು ಅಥವಾ ತಂದೆ ತಾಯಿಗಳಿಗೆ ಅವಮಾನಿಸುವುದನ್ನು ಅನುಮತಿಸಲೇ ಬಾರದು ಎಂದು ಹೇಳುತ್ತಾರೆ. ನಾವು ಇಂತಹ ಅನೇಕ ಕೆಟ್ಟವುಗಳನ್ನು ವಿರೋಧಿಸಬೇಕು ಎಂದು ದೇವರು ಅಪೇಕ್ಷಿಸುತ್ತಾನೆ ಎಂದು ತೋರಿಸುವಂತಹ ಉದಾಹರಣೆಗಳಿವೆ ಎಂದು ಈ ಕ್ರೈಸ್ತರು ನಂಬುತ್ತಾರೆ.

ತನ್ನ ಮೇಲೆ ಹಿಂಸೆಯ ಹಲ್ಲೆಯನ್ನು ಮಾಡುವ ಅಪರಾಧಿಯನ್ನು ಎದುರಿಸಬಹುದೆಂದು ಹಾಗೆಯೇ ತನ್ನ ಸ್ವಂತ ಅಭಿಲಾಷೆಗಳಿಗೆ ಬೆದರಿಕೆಯೊಡ್ಡುವವರನ್ನು ಸಹ ಎದುರಿಸಬೇಕೆಂದು ಈ ಕ್ರೈಸ್ತರು ನಂಬುತ್ತಾರೆ. (ಮತ್ತಾಯ 5:29-30)ರಲ್ಲಿ ಯೇಸುಕ್ರಿಸ್ತನು ಹೇಳಿದಂತಹ ಮಾತುಗಳು, ಮೂಲ ತತ್ತ್ವಗಳಾಗಿದ್ದು, ಅವುಗಳನ್ನು ಸ್ಪಷ್ಟಪಡಿಸುವುದು ಮತ್ತು ಅವುಗಳ ಮೇಲೆ ಬೆಳಕು ಚೆಲ್ಲುವುದೇ ಆಗಿತ್ತು. ಆದರೆ ಅವುಗಳು ಹೇಳಿದಂತೆಯೇ ಮಾಡುವುದಕ್ಕಲ್ಲ. ಯೇಸು ಕ್ರಿಸ್ತನಿದ್ದಂತಹ ಸಮಯದಲ್ಲಿ ಬೋಧಕರು ಆಗಾಗ ಉಪಯೋಗಿಸುತ್ತಾ ಇದ್ದದ್ದನ್ನು ಇವರು ಗಮನಿಸುತ್ತಾರೆ. ಸವಾಲಿನಿಂದ ಆಹ್ವಾನಿಸಲ್ಪಟ್ಟಾಗಲೂ ಕೂಡ ಬೇರೆಯವರೊಂದಿಗೆ ಹೋರಾಡಲು ಅಥವಾ ಜಗಳವಾಡಬಾರದು ಎಂದು ಈ ಕ್ರೈಸ್ತರು ಒಪ್ಪಿಕೊಳ್ಳುತ್ತಾರೆ (ಮತ್ತಾಯ 5:39). ಆದರೆ ಯಾರಾದರೊಬ್ಬರು ನಮಗೆ ಶಾಶ್ವತವಾದ ಹಾನಿಯನ್ನು ಮಾಡುವಾಗ

ಅಥವಾ ಸಾಯಿಸಲು ಪ್ರಯತ್ನಿಸುವಾಗ ನಮ್ಮನ್ನು ನಾವು ರಕ್ಷಿಸಿಕೊಳ್ಳಲು ಪ್ರತಿರೋದನಾತ್ಮಕ ಹೋರಾಟ ಮಾಡಲು ಅನುಮತಿಸಲಾಗಿದೆ ಎಂದು ಹೇಳುತ್ತಾರೆ. ಕ್ರೈಸ್ತರು ಖಂಡಿತವಾಗಿ ವೈರಿಗಳಿಗೆ ಒಳ್ಳೆಯದನ್ನು ಮಾಡಬೇಕು ಮತ್ತು ಬೇರೆಯವರಿಗೆ ಕೊಟ್ಟಂತೆಯೆ ಇವರಿಗೂ ಅಗತ್ಯವಾಗಿರುವಂತಹವುಗಳನ್ನುಕರುಣೆಯಿಂದ ಕೊಡಬೇಕು (ಮತ್ತಾಯ 5:43-44; ಲೂಕ 6:30-36). ಆದರೆ ತನಗೆ ಅಗತ್ಯವಿಲ್ಲದಿದ್ದರು ಒಬ್ಬನು ನಮ್ಮ ಎಲ್ಲ ಹಣ ಅಥವಾ ಆಸ್ತಿ ಕೇಳುವುದನ್ನು ಅಥವಾ ಅಪಹರಿಸುವ ಪ್ರಯತ್ನವನ್ನು ಇವರು ನಂಬುವುದಿಲ್ಲ.

ಈಗಾಗಲೆ (ಎರಡನೆ ದೃಷ್ಟಿಕೋನದಲ್ಲಿ ತಿಳಿಸಿರುವಂತಹ) ಆರಕ್ಷಕಪಡೆ, ಸೈನ್ಯ ಹಾಗೂ ಸರ್ಕಾರದ ಆಡಳಿತದಲ್ಲಿ ಭಾಗವಹಿಸುವುದರ ಬಗ್ಗೆ ಇರುವ ಎಲ್ಲಾ ತರ್ಕಗಳನ್ನು ಈ ಕ್ರೈಸ್ತರು ಒಪ್ಪಿಕೊಳ್ಳುತ್ತಾರೆ. ಇವುಗಳಲ್ಲಿ ಭಾಗವಹಿಸುವುದು ಒಪ್ಪಿಕೊಳ್ಳುವಂತಹದ್ದು ಮಾತ್ರವಲ್ಲದೆ ಇದು ದೇವರ ಚಿತ್ತವು ಕೂಡ ಆಗಿರುತ್ತದೆ ಎಂದು ನಂಬುತ್ತಾರೆ. ಈ ಮೇಲೆ ಹೇಳಿದಂತಹ ಮೂರು ದೃಷ್ಟಿಕೋನಗಳಲ್ಲಿರುವ ಎಲ್ಲಾ ಯೋಚನೆಗಳು ಸರಿಯಾದವುಗಳೆಂದು ಕೆಲವೊಂದು ಕ್ರೈಸ್ತರು ನಿರ್ಧರಿಸುತ್ತಾರೆ. ಇಂತಹ ಪ್ರಶ್ನೆಗಳ ಬಗ್ಗೆ ತೀರ್ಮಾನಿಸುವುದಕ್ಕಾಗಿ, ಪ್ರತಿಯೊಬ್ಬ ಕ್ರೈಸ್ತನು ಕೂಡಿ ಬಂದು, ಸತ್ಯವೇದ ಅಭ್ಯಾಸ, ಧ್ಯಾನ ಮತ್ತು ಪ್ರಾರ್ಥನೆ ಮಾಡುತ್ತಾ ಹಾಗೂ ಪವಿತ್ರಾತ್ಮನ ಸಹಾಯದಿಂದ ತೀರ್ಮಾನಕ್ಕೆ ಬರಬೇಕು. ಪರಿಪಕ್ವಗೊಂಡಂತಹ ಆತ್ಮಿಕ ನಾಯಕರು ಈ ಪ್ರಶ್ನೆಗಳ ಬಗ್ಗೆ ವ್ಯತ್ಯಾಸಗಳ ಅಭಿಪ್ರಾಯಗಳನ್ನು ಸಭಾಚರಿತ್ರೆಯೂದ್ದಕ್ಕೂ ಹೊಂದಿದ್ದಾರೆ. ಸತ್ಯವೇದವು ಈ ಮೇಲಿನ ಪ್ರಶ್ನೆಗಳಿಗೆ ಖಂಡಿತವಾದ ಉತ್ತರಗಳನ್ನು ಕೊಡುವುದಿಲ್ಲ. ನಾವು ಯಾವುದೇ ಅಭಿಪ್ರಾಯಗಳನ್ನು ಹೊಂದಿದ್ದಾಗ್ಯೂ ಮತ್ತೊಬ್ಬರು ಹೊಂದಿದ ಭಿನ್ನಾಭಿಪ್ರಾಯಗಳನ್ನು ಹೀಯಾಳಿಸಬಾರದು ಅಥವಾ ಇವುಗಳ ವಿಷಯದಲ್ಲಿ ಹೋರಾಡಬಾರದು.

## ಹಿಂಸೆ - ನಮ್ಮ ಪ್ರತ್ಯುತ್ತರ

ಕೆಲವರನ್ನು ಎದುರಿಸುವ ಬಗ್ಗೆ ಇರುವ ಪ್ರಶ್ನೆಯು ವಿಶ್ವಾಸಿಗಳ ಹಿಂಸೆಯ ಪ್ರಶ್ನೆಯು ಕೂಡ ಆಗಿದೆ. ನಾವು ಮಾಡುವಂತಹ ಒಳ್ಳೆಯ ಕ್ರಿಯೆಗಳಿಗಾಗಿ ಅಥವಾ ಕ್ರಿಸ್ತನಲ್ಲಿರುವ ನಮ್ಮ ನಂಬಿಕೆಯ ನಿಮಿತ್ತವಾಗಿ ಬೇರೆ ಜನರಿಂದ ನಮ್ಮ ಮೇಲೆ ಹೇರಲ್ಪಡುವ ಶಿಕ್ಷೆಯೇ ಹಿಂಸೆಯಾಗಿದೆ (ಮತ್ತಾಯ 5:10-11; ಲೂಕ 6:22; 1ಪೇತ್ರ 2:20). ಯಾವುದಾದರೊಂದು ರೀತಿಯಲ್ಲಿ ಕ್ರೈಸ್ತರು ಹಿಂಸಿಸಲ್ಪಡುವರು ಎಂದು ಹೊಸ ಒಡಂಬಡಿಕೆಯು ಬೋಧಿಸುತ್ತದೆ (ಮಾರ್ಕ 13:9; ಲೂಕ 21:12; 2 ತಿಮೋಥೆ. 3:12).

ಕ್ರೈಸ್ತರಾದ ನಾವು ಹೇಗೆ ಹಿಂಸೆಗೆ ಪ್ರ ತಿಕ್ರಿಯಿಸ ಬೇಕು ಎಂಬುದನ್ನು ಯೇಸುಕ್ರಿಸ್ತನು ಸಹ ನಮಗೆ ಕಲಿಸಿಕೊಟ್ಟಿದ್ದಾನೆ. ನಾವು ಭಯಪಡಬಾರದು ( ಮತ್ತಾಯ 10:26) . ಆದರೆ ಸಂತೋಷಪಡಿರಿ ( ಮತ್ತಾಯ 5:10-12) ಎಂದು ಆತನು ಹೇಳಿದ್ದಾನೆ. ನಾನು ಹಿಂಸೆಗಳಲ್ಲಿ ಸಂತೋಷವುಳ್ಳವನಾಗಿದ್ದೆನು ಎಂದು ಪೌಲನು ಹೇಳಿದ್ದಾನೆ. ಯಾಕೆಂದರೆ ಅವನು ಇದೆಲ್ಲವನ್ನೂ ತಾಳಿಕೊಳ್ಳುವುದಕ್ಕೆ ದೇವರ ಕೃಪೆಯನ್ನು **ಧಾರಾಳವಾಗಿ** ಹೊಂದುವ ಅನುಭವವನ್ನು ಪಡೆಯುವಂತಾಯಿತು (2 ಕೊರಿಂಥ 12:7-10). ಆದರೂ ನೀವು **ಸರ್ಪಗಳಂತೆ ಜಾಣರು......** ಮತ್ತು ನಮ್ಮನ್ನು ನಾವು ಎಚ್ಚರಿಕೆಯಿಂದ **ಕಾಯ್ದುಕೊಳ್ಳಬೇಕು** ಎಂದು ಯೇಸುಕ್ರಿಸ್ತನು ಹೇಳಿದ್ದಾನೆ (ಮತ್ತಾಯ 10:16-17).

**ಹಿಂಸಿಸುವವರನ್ನು ಶಪಿಸಬಾರದು ..... ಆಶೀರ್ವದಿಸಿರಿ**(ರೋಮ 12:44), ಮತ್ತು ಅವರನ್ನು **ಪ್ರೀತಿಸಿರಿ .......** ಹಾಗೂ ಅವರಿಗಾಗಿ **ಪ್ರಾರ್ಥಿಸಿರಿ** ಎಂದು ಹಿಂಸಕರ ವಿಷಯದಲ್ಲಿ ನಮಗೆ ಸಲಹೆ ಮಾಡಲಾಗಿದೆ (ಮತ್ತಾಯ 5:44). ನಾವುಗಳು ಸಹ ನ್ಯಾಯಾಲಯ ಹಾಗೂ ಜೈಲುಗಳಲ್ಲಿ ಸರ್ಕಾರದ ಆಡಳಿತಾಧಿಕಾರಿಗಳ ಮುಂದೆಯೂ ತರಲ್ಪಡುವೆವು. ಆದರೆ ಮುಂದೆ ಏನನ್ನು **ಹೇಳಬೇಕೆಂಬುದರ ಬಗ್ಗೆ ಚಿಂತೆಯುನ್ನು ಮಾಡಬಾರದು.** ಕಾರಣ ಆ ಸಮಯದಲ್ಲಿ ನಾವು ಏನು ಹೇಳಬೇಕೆಂಬುದನ್ನು ಯೇಸುಕ್ರಿಸ್ತನು ತಾನೇ ಪವಿತ್ರಾತ್ಮನ ಮೂಲಕ ನಮಗೆ ಕಲಿಸುವನು (ಮಾರ್ಕ 13:9-11; ಲೂಕ 21:12-19).

ನಾವು ಆತನಲ್ಲಿ ಇಟ್ಟನಂಬಿಕೆಯ ನಿಮಿತ್ತವಾಗಿ ಆಕ್ರಮಣಕ್ಕೊಳಪಟ್ಟಾಗ ನಾವು ಹೋರಾಡಬೇಕು ಎಂದು ಹೇಳಲಿಲ್ಲ. ಯೇಸುಕ್ರಿಸ್ತನು ತಾನು ಬಂಧನಕ್ಕೆ ಒಳಗಾಗುವ ಮೊದಲು ಖಡ್ಗಗಳನ್ನು ಕೊಂಡುಕೊಳ್ಳಬೇಕೆಂದು ತನ್ನ ಶಿಷ್ಯರಿಗೆ ಹೇಳಿದನು (ಲೂಕ 22:35-38). ಆದರೆ ಆತನು ತನ್ನನ್ನು ಕಾಪಾಡುವುದಕ್ಕೆ ಅವುಗಳನ್ನು ಉಪಯೋಗಿಸಲು ಅಪ್ಪಣೆ ಕೊಡಲಿಲ್ಲ(ಲೂಕ 22:51). ಬದಲಾಗಿ, ಖಡ್ಗವನ್ನು ಹಿಡಿಯುವವರು ಅದರಿಂದಲೇ ಹತರಾಗುವರು ಎಂದು ಅವರನ್ನು ಎಚ್ಚರಿಸಿದನು (ಮತ್ತಾಯ 26:52). ನಂಬಿಕೆಯ ನಿಮಿತ್ತವಾಗಿ ಹಿಂಸಿಸಲ್ಪಡುವ ವಿಶ್ವಾಸಿಗಳು ತಮ್ಮನ್ನು ಕಾಪಾಡಿಕೊಳ್ಳುವುದಕ್ಕಾಗಿ ಹಿಂಸಾತ್ಮಕ ಮಾರ್ಗಗಳನ್ನು ಹಿಡಿಯಬಾರದು ಎಂದು ಬಹಳ ಕ್ರೈಸ್ತರು ಯೋಚಿಸುತ್ತಾರೆ.

**ಸಾರಾಂಶ**

**ಯೇಸುಕ್ರಿಸ್ತನು ಹೇಳಿದಂತಹ ಕಠಿಣವಾದ ಈ ಮಾತುಗಳ ಬಗ್ಗೆ ನಾವು ಆಲೋಚನೆ ಮಾಡಿದರೂ, ನಾವು ನಮ್ಮಿಂದಾದ ಮಟ್ಟಿಗೆ ಸಮಾಧಾನದಿಂದ ಜೀವಿಸಬೇಕೆಂದು ಒಪ್ಪಿಕೊಳ್ಳುತ್ತಾರೆ (ಹಿಬ್ರಿಯ 12:14). ಮುಂದಿನ ಭವಿಷ್ಯತ್ತಿನಲ್ಲಿ ಸ್ಥಾಪಿಸುವ ದೇವರ ರಾಜ್ಯವನ್ನು ನಾವು ಎದುರುನೋಡುತ್ತಾ ಜನರು ತಮ್ಮ ಕತ್ತಿಗಳನ್ನು ಕುಲುಮೆಗೆ ಹಾಕಿ ಗುಳಗಳನ್ನಾಗಿಯೂ, ಭರ್ಜಿಗಳನ್ನು ಕುಡುಗೋಲುಗಳನ್ನಾಗಿಯು ಮಾಡುವಂತ, ಜನಾಂಗವು ಜನಾಂಗಕ್ಕೆ ವಿರುದ್ಧವಾಗಿ ಕತ್ತಿಯನ್ನೆತ್ತದ ಹಾಗೂ ಯುದ್ಧಾಭ್ಯಾಸಗಳು ನಡೆಯದೆ ಇರುವಂತ, ದಿನಗಳಿಂದ ಕೂಡಿ ಸ್ಥಾಪಿಸಲ್ಪಡುವ ದೇವರ ರಾಜ್ಯದ ಆ ಮುಂದಿನ ದಿನಗಳನ್ನು ಎದುರು ನೋಡುವವರಾಗಿದ್ದೇವೆ.(ಯೆಶಾಯ 2:4 ಮೀಕ 4:3). ಅಷ್ಟರವರೆಗೆ, ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ, ಎಲ್ಲರೊಂದಿಗೆ ಸಮಾಧಾನದಿಂದ ಜೀವಿಸಿರಿ (ರೋಮ 12:18).**

# ಯೇಸುಕ್ರಿಸ್ತನ ಎರಡನೇ ಬರೋಣ

## ಪ್ರಾಮುಖ್ಯ ವಚನಗಳು

ಯೆಹೆಜ್ಕೇಲ ಅಧ್ಯಾಯ 37 ರಿಂದ 47 ಇಸ್ರಾಯೇಲ್ಯರ ಧಾಳಿ, ಪುನಃ ಸ್ಥಾಪನೆ ಮತ್ತು ಹೊಸ ದೇವಾಲಯ.
ದಾನಿಯೇಲ ಅಧ್ಯಾಯಗಳು 7-12, ಮುಂದಿನ ಕಾಲಕ್ಕೆ ದಾನಿಯೇಲನ ದರ್ಶನಗಳು.
ಮತ್ತಾಯ 24 ನೇ ಅಧ್ಯಾಯ. ಯುಗಾಂತ್ಯದ ಸೂಚನೆಗಳು.
ಮಾರ್ಕ 13ನೇ ಅಧ್ಯಾಯ. ಯುಗದ ಸಮಾಪ್ತಿಯ ಸೂಚನೆಗಳು.
ಲೂಕ 17:20-37, 21:5-36 ದೇವರ ರಾಜ್ಯದ ಬರುವಿಕೆ.
1 ಕೊರಿಂಥ 15:12-58 . ದೇಹಗಳ ಪುನರುತ್ಥಾನ.
1 ಥೆಸಲೋನಿಕ 4:13-18. ಕರ್ತನ ಆಗಮನ.
2 ಥೆಸಲೋನಿಕ 2:1-10. ಕರ್ತನ ಆಗಮನಕ್ಕೆ ಮುಂಚೆ ಅಧರ್ಮದ ಮನುಷ್ಯನು.
2 ಪೇತ್ರ 3:3-13. ಕರ್ತನ ದಿನದಲ್ಲಿ ಬೆಂಕಿಯಿಂದ ನಾಶನ.
1 ಯೋಹಾನ 2:18; 4:1-3 ಕ್ರಿಸ್ತ ವಿರೋಧಿ ಮತ್ತು ಕ್ರಿಸ್ತ ವಿರೋಧಿಯ ಆತ್ಮ.
ಪ್ರಕಟಣೆ ಅಧ್ಯಾಯಗಳು 6-22. ದೇವರ ಕೋಪದ ಬಗ್ಗೆ ಕೆಲವು ದರ್ಶನಗಳು, ಮನುಷ್ಯರ ಮಹಾಸಂಕಟಗಳು, ಕ್ರಿಸ್ತ ವಿರೋಧಿಯ ಕಾರ್ಯಗಳು ಮತ್ತು ಕ್ರಿಸ್ತನ ಜಯದ ಆಳ್ವಿಕೆ.

## ಧರ್ಮಶಾಸ್ತ್ರದಲ್ಲಿ ಕ್ರಿಸ್ತನ ಎರಡನೇ ಬರೋಣ

ಯೇಸುಕ್ರಿಸ್ತನು "ಸತ್ತವರಿಗೂ ಜೀವಿಸುವವರಿಗೂ ನ್ಯಾಯ ತೀರಿಸಲು ತಿರುಗಿ ಬರುತ್ತಾನೆ" ಎಂದು ಎಲ್ಲಾ ಕ್ರೈಸ್ತರು ನಂಬುತ್ತಾರೆ (ನೋಡಿರಿ - ಸಾಮಾನ್ಯ ಲೇಖನಗಳು, ಪರಿಚಯ, ಮತ್ತಾಯ 25:31-46 ; ಪ್ರಕಟಣೆಗಳು 20:11-15). ಯೇಸು ಕ್ರಿಸ್ತನು ತನ್ನ ಮರಣ ಮತ್ತು ಪುನರುತ್ಥಾನವನ್ನು ಮುಂತಿಳಿಸಿದ್ದು (ಮತ್ತಾಯ 16:21, ಮಾರ್ಕ 8:31-32; 9:9-10; 10:33-34), ಮಾತ್ರವಲ್ಲದೆ ತನ್ನ ಎರಡನೆಯ ಬರುವಿಕೆಯನ್ನು ಸಹ ಮುಂತಿಳಿಸಿದನು (ಮತ್ತಾಯ 16:27; 25:31, ಮಾರ್ಕ 8:38, 13:26). ಯೇಸುಕ್ರಿಸ್ತನು ಮರಣದಿಂದ ಎದ್ದು ಬಂದ ನಂತರ, ತನ್ನ ಶಿಷ್ಯರನ್ನು ಪ್ರೋತ್ಸಾಹಿಸುವುದಕ್ಕೋಸ್ಕರ ಭೂಮಿಯ ಮೇಲೆ 40 ದಿನಗಳವರೆಗೆ ಇದ್ದನು (ಅ.ಕೃ. 1:3). ಯೇಸುಕ್ರಿಸ್ತನು ಸ್ವರ್ಗಕ್ಕೆ ಏರಿ ಹೋಗುವಾಗ, ಇದೇ ರೀತಿಯಾಗಿ ಹಿಂತಿರುಗಿ ಬರುವನು ಎಂಬ ಸಾಕ್ಷಿಯು ಶಿಷ್ಯರಿಗೆ ಹೇಳಲ್ಪಟ್ಟಿತು (ನೋಡಿರಿ - ಲೂಕ 24:51; ಅ.ಕೃ. 1:9-11). ಮೊದಲಿನಿಂದಲೂ ಅಪೋಸ್ತಲರು ನಿರೀಕ್ಷೆಯಿಂದ ಕ್ರಿಸ್ತನ ಎರಡನೇ ಆಗಮನಕ್ಕಾಗಿ ಕಾಯುತ್ತಿರಬೇಕು ಎಂದು ವಿಶ್ವಾಸಿಗಳಿಗೆ ಕಲಿಸಿದರು (ಅ.ಕೃ. 3:19-21; ತೀತನು 2:13; ಹಿಬ್ರಿಯ 9:28).

ಯೇಸುಕ್ರಿಸ್ತನು ಹೋಗುವೆನು ಮತ್ತು ಸ್ವರ್ಗದಲ್ಲಿ ನಮಗಾಗಿ ಸ್ಥಳವನ್ನು ಸಿದ್ಧಗೊಳಿಸುವೆನು ಮತ್ತು ತನ್ನೊಂದಿಗೆ ನಾವು ಜೀವಿಸುವುದಕ್ಕಾಗಿ ನಮ್ಮನ್ನು ಕರೆದೊಯ್ಯಲು ತಿರುಗಿ ಬರುವೆನು ಎಂದು ವಾಗ್ದಾನ ಮಾಡಿದ್ದಾನೆ (ಯೋಹಾನ 14:2-3). ಯೇಸುಕ್ರಿಸ್ತನು ತಾನು ಕಡೆಯ ದಿನದಲ್ಲಿ ತನ್ನ ಹಿಂಬಾಲಕರನ್ನು ಸತ್ತವರೊಳಗಿನಿಂದ ಎಬ್ಬಿಸುವೆನು ಎಂದು ಸಹ ವಾಗ್ದಾನ ಮಾಡಿದನು (ಯೋಹಾನ 6:39-40, 54). ಕ್ರಿಸ್ತನಲ್ಲಿ ಜೀವಿಸುವ ನಾವೆಲ್ಲರು ಜೀವಿಸುವಂತಹವರಾಗುವೆವು. ಆದರೆ ಪ್ರತಿಯೊಬ್ಬನು ತನ್ನ ತನ್ನ ಶ್ರೇಣಿಯಲ್ಲಿರುವನು ಕ್ರಿಸ್ತನು ಪ್ರಥಮ ಫಲವಾಗಿಯು, ನಂತರ ಕ್ರಿಸ್ತನ ಬರುವಿಕೆಯಲ್ಲಿರುವವರು ಕ್ರಮಾನುಸಾರವಾಗಿ ಎದ್ದು ಬರುವರು. ಇದಾದನಂತರ ಅಂತ್ಯವು ಬರುವುದು ಎಂದು ಪೌಲನು ಹೇಳಿದನು (1 ಕೊರಿಂಥ 15:22-24). ಪುತ್ರರ ಪದವಿಯನ್ನು ಪಡೆಯುವುದಕ್ಕಾಗಿ ನಮ್ಮ ದೇಹಗಳು ಪುನರುತ್ಥಾನಗೊಂಡು

ಅಂತಿಮವಾಗಿ ದತ್ತು ಪುತ್ರರ ಪದವಿಯನ್ನು ಪಡೆಯುವುದಕ್ಕಾಗಿ ನಮ್ಮ ರಕ್ಷಣೆಯ ಸಂಪೂಣತೆಯ ಸಮಯದಲ್ಲಿ ಮಹಿಮೆ ಹೊಂದುವೆವು ಎಂದು ಪೌಲನು ಬಣ್ಣಿಸುತ್ತಾನೆ (ನೋಡಿರಿ ರೋಮ 8:18-25, 30; ಫಿಲಿಪ್ಪಿಯ 3:20-21, ಸಾಮಾನ್ಯ ಲೇಖನ:ರಕ್ಷಣೆಯ ಮಾರ್ಗ).

ಈ ಪುನರುತ್ಥಾನವು ಥಟ್ಟನೆ ಸಂಭವಿಸುವ ಘಟನೆಯಾಗಿದೆ. ಯೇಸುವಿನಲ್ಲಿ ಈಗಾಗಲೇ ಸತ್ತವರ ಆತ್ಮಗಳನ್ನು ದೇವರು ಆತನೊಡನೆ ಕರೆದುಕೊಂಡು ಬರುವನು ಎಂದು ಪೌಲನು ಹೇಳಿದ್ದಾನೆ. ಏಕೆಂದರೆ ಕರ್ತನು ತಾನೇ ಆಜ್ಞಾ ಘೋಷದೊಡನೆಯು ಪ್ರಧಾನ ದೂತನ ಧ್ವನಿಯೊಡನೆಯೂ, ದೇವರ ತುತ್ತೂರಿಯೊಡನೆಯೂ ಆಕಾಶದಿಂದ ಇಳಿದು ಬರುವನು. ಆಗ ಕ್ರಿಸ್ತನಲ್ಲಿ ಸತ್ತವರು ಮೊದಲು ಎದ್ದು ಬರುವರು. ಆಮೇಲೆ ಜೀವದಿಂದುಳಿದಿರುವ ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವುದಕ್ಕಾಗಿ ಅವರೊಂದಿಗೆ ಮೇಘಗಳಲ್ಲಿ ಒಯ್ಯಲ್ಪಡುವೆವು ಎಂದು ಪೌಲನು ಬರೆದಿದ್ದಾನೆ (1 ಥೆಸಲೋನಿಕ 4:13-17). ಸತ್ತವರಿಗೆ ಮರಣ ಹೊಂದದ ಹೊಸ ದೇಹಗಳು ಕೊಡಲ್ಪಡುವುವು ಮತ್ತು ಜೀವದಿಂದಿರುವವರ ದೇಹಗಳು ಹೊಸ ದೇಹಗಳಾಗಿ ಮಾರ್ಪಡುವುವು. ಆಕಾಶದಲ್ಲಿ ಕಡೆಯ ತುತ್ತೂರಿಯ ಶಬ್ದ ಕೇಳಲ್ಪಡುವಾಗ ಕಣ್ಣುರೆಪ್ಪೆ ಬಡಿಯುವಷ್ಟರೊಳಗಾಗಿ ಒಂದು ಕ್ಷಣದಲ್ಲಿ ಇದು ಸಂಭವಿಸುವುದು (1 ಕೊರಿಂಥ 15:51-53). ಯೇಸುಕ್ರಿಸ್ತನು ತಾನು ಆದುಕೊಂಡವರನ್ನು ಭೂಮಿಯ ಎಲ್ಲಾ ಕಡೆಯಿಂದ ಒಟ್ಟಾಗಿ ಸೇರಿಸುವುದಕ್ಕೋಸ್ಕರ ಅವರಿಗಾಗಿ ತುತ್ತೂರಿ ಶಬ್ದದ ಕರೆಯೊಂದಿಗೆ ಆಕಾಶದಲ್ಲಿ ಮೋಡಗಳ ಸಹಿತವಾಗಿ ದೂತರನ್ನು ಕಳುಹಿಸುವೆನು ಎಂದು ನೆನಪಿಸಿದನು (ಮತ್ತಾಯ 24:30--31, ಮಾರ್ಕ 13:26-27). ಒಂದೇ ಹಾಸಿಗೆಯಲ್ಲಿ ಮಲಗಿಕೊಂಡಂತಹ (ಅಥವಾ ಹೊಲದಲ್ಲಿ ಕೆಲಸ ಮಾಡುತ್ತಿರುವಂತಹ ಅಥವಾ ಧಾನ್ಯಗಳನ್ನು ಬೀಸುತ್ತಿರುವಂತಹ) ಇಬ್ಬರಲ್ಲಿ ಒಬ್ಬನು ತೆಗೆದುಕೊಳ್ಳಲ್ಪಡುವನು ಮತ್ತು ಇನ್ನೊಬ್ಬನು ಬಿಡಲ್ಪಡುವನು ಎಂದು ಯೇಸುಕ್ರಿಸ್ತನು ಎಚ್ಚರಿಸಿದನು (ಮತ್ತಾಯ 24:40-41, ಲೂಕ 17:34-35). ಸಭೆಯ ಈ "ಎತ್ತಲ್ಪಡು"ವಿಕೆಯ ಈ ಘಟನೆಯ ವಿಷಯದಲ್ಲಿ ಹಲವಾರು ವಚನಗಳು ಸೂಚಿಸಲ್ಪಟ್ಟಿವೆ.

ಆದರೆ ದೇವರು ಎರಡನೆ ಆಗಮನದ ಸಮಯದಲ್ಲಿ ಸಮಾಧಾನ ಮತ್ತು ನ್ಯಾಯವನ್ನು ತರುವುದರಿಂದ ಈ ಎರಡನೆಯ ಬರುವಿಕೆಯು ಕೂಡ ಮುಖ್ಯವಾಗಿದೆ. ಯೇಸುಕ್ರಿಸ್ತನು ಮೇಸ್ಸಿಯನು ಎಂದು ಪ್ರವಾದಿಸಿದ ಪ್ರವಾದನೆಗಳು ಹಳೆ ಒಡಂಬಡಿಕೆಯ ದಾಖಲೆಯಲ್ಲಿವೆ. ಕೆಲವು ಪ್ರವಾದಿಗಳು, ಜನರ ದುಃಖ ಮತ್ತು ಪಾಪಗಳಿಗಾಗಿ ಆಗುವ ಆತನ ಮರಣವನ್ನು ಮುಂದಾಗಿಯೆ ತಿಳಿದಂತಹ (ಕೀರ್ತನೆಗಳು 22:1-31, ಯೇಶಾಯ 53:1-12, ದಾನಿಯೇಲ 9:25-26), ಇವುಗಳು ಯೇಸುಕ್ರಿಸ್ತನು 2000 ವರ್ಷಗಳ ಹಿಂದೆ ಯಾವಾಗ ಶಿಲುಬೆಗೇರಿಸಲ್ಪಟ್ಟು ಸತ್ತು ಜೀವಿತನಾಗಿ ಎದ್ದು ಬಂದನೋ ಆಗಲೇ ಸಾಮಾನ್ಯವಾಗಿ ಇವೆಲ್ಲವೂ ನೆರವೇರಿಸಲ್ಪಟ್ಟವು. ಮೆಸ್ಸಿಯನು ದೇವರು ಆರಿಸಿಕೊಂಡ ಜನರಾದ ಯಹೂದ್ಯರಿಗಾಗಿ ನೀತಿಯ ರಾಜ್ಯವನ್ನು ಸ್ಥಾಪಿಸುವನು ಎಂದು ಮುಂದಾಗಿಯೇ ತಿಳಿಸಿದ ಈ ಇತರ ಪ್ರವಾದನೆಗಳು ಯೇಸುಕ್ರಿಸ್ತನ ಈ ಲೋಕದ ಜೀವಿತದವಧಿಯಲ್ಲಿ ನೆರವೇರಿಸಲ್ಪಡಲಿಲ್ಲ (ಯೆಶಾಯ 2:1-4; 11:1-16; ಯೆರಮಿಯ 23:3-8, ಯೆಹೆಜ್ಕೇಲ 37:15-28)

ಆತನ ಎರಡನೆ ಆಗಮನವು ಸಮೀಪಿಸುತ್ತಾ ಅಥವಾ ಬಹಳ ಹತ್ತಿರವಾಗುತ್ತಾ ಇದೆ ಎಂದು ಸತ್ಯವೇದವು ಹಲವು ಭಾಗಗಳಲ್ಲಿ ಹೇಳಿದೆ (ಹಿಬ್ರಿಯ 10:25, ಯಾಕೋಬ 5:9, 1 ಯೋಹಾನ 2:18; ಪ್ರಕಟಣೆ 22:7, 12, 20). ಆದರೆ ಯಾವ ಘಳಿಗೆ ಅಥವಾ ದಿನದಲ್ಲಿ ಆತನು ಬರುತ್ತಾನೆ ಎಂದು ಯಾರು ಖಂಡಿತವಾಗಿ ಹೇಳಲಿಕ್ಕಾಗದು (ಮತ್ತಾಯ 24:36, 44; ಮಾರ್ಕ 13:32-35). ಮಿಂಚು ಮಿಂಚುತ್ತಾ ಆಕಾಶದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೂ ಹೇಗೆ ಹೊಳೆಯುವುದೋ ಹಾಗೆಯೇ ಆತನ ನ್ಯಾಯ ತೀರ್ಪಿನ ದಿನವು ಬರುವುದು ಮತ್ತು ಆಕಾಶದಲ್ಲಿ ಕಾಣಿಸಿಕೊಳ್ಳುತ್ತಾನೆ ಮತ್ತು ಎಲ್ಲಾ ದೇಶಗಳವರು ಆತನನ್ನು .... ನೋಡುವರು ಮತ್ತು ಅವರು ಗೋಳಾಡುವರು (ಮತ್ತಾಯ 24:27, 30; ಲೂಕ 17:24, ಪ್ರಕಟಣೆ 1:7) ಎಂದು ಸೂಚನೆಗಳೊಂದಿಗೆ ತನ್ನ ಬರುವಿಕೆಯ ದಿನದ ಬಗ್ಗೆ ಯೇಸುಕ್ರಿಸ್ತನು ಹೇಳಿದನು. ಯಜಮಾನನು ತನ್ನ ಸೇವಕನಿಗೆ ಹೇಳದೆಯೇ ಹಿಂದಿರುಗಿ ತನ್ನ ಮನೆಗೆ ಬರುವ ಮತ್ತು ಕಳ್ಳನು ಮನೆಗೆ ಕನ್ನ ಹಾಕಲು ಬರುವ ಸಂದರ್ಭಗಳಿಗೆ ಯೇಸುಕ್ರಿಸ್ತನು ತನ್ನ ಬರುವಿಕೆಯನ್ನು ಹೋಲಿಸಿಕೊಂಡನು (ಮತ್ತಾಯ 24:42-51, ಮಾರ್ಕ 13:34-37; ಪ್ರಕಟಣೆ 3:3, 16:15). ಪೌಲನು ಮತ್ತು ಪೇತ್ರನು ಇದೇ ರೀತಿ ಎಚ್ಚರಿಸಿದರು (1 ಥೆಸಲೋನಿಕ 5:1-4, 2 ಪೇತ್ರ 3:10).

ಎಷ್ಟೇ ಆದರೂ ಯೇಸು ಕ್ರಿಸ್ತನ ಬರುವಿಕೆಯು ಹತ್ತಿರವಾಯಿತೆಂದು ತಿಳಿದು ಕೊಳ್ಳುವುದಕ್ಕೆ ಸೂಚನೆಗಳು ಇವೆ ಎಂಬ ವಿಷಯದಲ್ಲಿಯೂ ಕೂಡ ಸತ್ಯವೇದವು ಬೋಧಿಸುತ್ತದೆ (ಮಾರ್ಕ 13:28-29). ಪರಲೋಕದ ಈ ಸುವಾರ್ತೆಯು ಸರ್ವಲೋಕದಲ್ಲೆಲ್ಲಾ ಎಲ್ಲಾ ಜನಾಂಗಗಳಿಗೆ ಸಾಕ್ಷಿಯಾಗಿ ಸಾರಲ್ಪಡುವುದು ಮತ್ತು ನಂತರ ಅಂತ್ಯವು ಬರುವುದು

(ಮತ್ತಾಯ 24:14; ಮಾರ್ಕ 13:10). ಕಡೆಯ ದಿನಗಳಲ್ಲಿ ದುಷ್ಟ ಜನರು ಕೆಟ್ಟತನದಿಂದ ಇನ್ನೂ ಹೆಚ್ಚು ಕೆಟ್ಟತನಕ್ಕೆ ಹೋಗುವರು. ಅನೇಕರು ನಂಬಿಕೆಯನ್ನು ತಿರಸ್ಕರಿಸುವರು ಮತ್ತು ಆತನ ಎರಡನೆ ಬರುವಿಕೆಯ ಬಗ್ಗೆ ಪರಿಹಾಸ್ಯ ಮಾಡುವರು (ಮತ್ತಾಯ 24:9-14; 2 ತಿಮೋಥೆ 3:1-7, 13; 2 ಪೇತ್ರ 3:3-10; ಯೂದ 17, 19). ಯೇಸುಕ್ರಿಸ್ತನು ಕೂಡ ಯುದ್ಧಗಳು, ಭೂಕಂಪಗಳು, ಬರಗಾಲಗಳು ಮತ್ತು ರೋಗಗಳು ಭೂಮಿಯಲ್ಲಿ ಸಂಭವಿಸುತ್ತವೆ ಎಂದು ಮತ್ತು ಇದಲ್ಲದೆ ಸೂರ್ಯ, ಚಂದ್ರ, ನಕ್ಷತ್ರಗಳಲ್ಲಿಯೂ ಸೂಚನೆಗಳು ಆಗುವುವು ಎಂದು ಮುಂದಾಗಿಯೇ ತಿಳಿಸಿದನು (ಮಾರ್ಕ 13:24-28; ಲೂಕ 21:10-11, 25-26; ಪ್ರಕಟಣೆ ಅಧ್ಯಾಯಗಳು 6, 8, 9, 16). ಕಷ್ಟದಿಂದ ಕೂಡಿದ ಈ ಸಮಯವು ಮಹಾಸಂಕಟದ ಕಾಲವೆಂದು ಕರೆಯಲ್ಪಟ್ಟಿದೆ (ದಾನಿಯೇಲನು 12:1, ಮಾರ್ಕ 13:19-20; ಪ್ರಕಟಣೆಗಳು 7:14).

ಜನರನ್ನು ಮೋಸ ಗೊಳಿಸುವುದಕ್ಕಾಗಿ ಸೂಚಕ ಕಾರ್ಯಗಳನ್ನು ಮತ್ತು ಮಹತ್ಕಾರ್ಯಗಳನ್ನು ಮಾಡುವಂತಹ ಸುಳ್ಳು ಕ್ರಿಸ್ತರು ಮತ್ತು ಸುಳ್ಳು ಪ್ರವಾದಿಗಳ ಬಗ್ಗೆ ಕ್ರಿಸ್ತನು ಎಚ್ಚರಿಸಿದನು (ಮಾರ್ಕ 13:6, 21 ರಿಂದ 23). ಮಾತ್ರವಲ್ಲದೆ ಕ್ರಿಸ್ತ ವಿರೋಧಿಗಳು ಈಗಾಗಲೇ ಬಂದಿದ್ದಾರೆ. ಇವರೊಂದಿಗೆ ಪ್ರತ್ಯಕ್ಷವಾಗುತ್ತ, ಕ್ರಿಸ್ತ ವಿರೋಧಿಯು ಬರುವನು ಎಂದು ಯೋಹಾನನು ಬರೆದಿದ್ದಾನೆ (1 ಯೋಹಾನ 2:18-22; 4:1-3).ಸುಳ್ಳಾದ ಅದ್ಭುತಗಳನ್ನು, ಮಹತ್ಕಾರ್ಯಗನ್ನು ಮತ್ತು ಸೂಚಕಗಳನ್ನು ಮಾಡುತ್ತಾ, ತಾನೇ ದೇವರೆಂದು ಹೇಳಿಕೊಳ್ಳುತ್ತಾನೆ ಎಂದು,ಈಗಾಗಲೇ ಮುಂತಿಳಿಸಲ್ಪಟ್ಟ ಹಾಗೆ ಅಧರ್ಮದ ವ್ಯಕ್ತಿಯು ಕಾಣಿಸಿಕೊಳ್ಳದ ಹೊರತು ಕರ್ತನ ದಿನವು ಬರುವುದಿಲ್ಲವೆಂದು ಪೌಲನು ಪುನಃ ಥೆಸಲೋನಿಕದವರಿಗೆ ಭರವಸೆಯನ್ನು ಕೊಡುತ್ತಾನೆ. (2 ಥೆಸಲೋನಿಕ 2:1-10, ಪ್ರಕಟಣೆಗಳು 13:14-15).ದಾನಿಯೇಲನು ಹೇಳಿದಂತೆ ಇದು ದೇವಾಲಯದಲ್ಲಿ ಇರುವ ಈ ಹಾಳು ಮಾಡುವ ಅಸಹ್ಯವಾದ ವಿಗ್ರಹವೆಂದು ಯೇಸುಕ್ರಿಸ್ತನು [1]ಮುಂತಿಳಿಸಿದನು (ದಾನಿಯೇಲ 9:26-27; 12:11; ಮತ್ತಾಯ 24:15; ಮಾರ್ಕ 13:14).

ಪ್ರಕಟಣೆ 6-16ರ ವರೆಗಿನ ಅಧ್ಯಾಯಗಳು ಯೇಸುಕ್ರಿಸ್ತನು ಹಿಂದುರಿಗಿ ಬಂದು ನೀತಿಯ ರಾಜ್ಯವನ್ನು ಸ್ಥಾಪಿಸುವುದರ ಮೂಲಕ ಮಹಾ ಹಿಂಸೆ ಹಾಗೂ ಬರಗಾಲದ ಅಂತ್ಯವನ್ನು ಕೊನೆಗಾಣಿಸುವುದನ್ನು ಸೂಚಿಸುವಂತ ಅನೇಕ ಮಹಾದರ್ಶನಗಳನ್ನು ತೋರಿಸುತ್ತವೆ. ರಾಜಕೀಯವಾಗಿ ಆಡಳಿತ ಮಾಡುವಂತ (ಸಮುದ್ರ ಮಧ್ಯದಿಂದ ಬರುವ ಮಹಾಮೃಗ) ಮತ್ತು ಸುಳ್ಳು ಪ್ರವಾದಿಯಾಗಿದ್ದು ದುಷ್ಟ ಕಾರ್ಯಗಳನ್ನು ಮಾಡುವ ವ್ಯಕ್ತಿಯನ್ನಾಗಿ ಚಿತ್ರಿಸಲ್ಪಟ್ಟಿರುವುದನ್ನು ದಾನಿಯೇಲ 13-19 ಅಧ್ಯಾಯಗಳು ಹೇಳುತ್ತವೆ. (ದಾನಿಯೇಲ 7:24-25; 9:26-27; 11:36-45;12:1-13 ಮಾರ್ಕ 13:14, 22, 2ನೇ ಥೆಸಲೋನಿಕ 2:1-10; 1ಯೋಹಾನ 2:18). ಹಿಂತಿರುಗಿ ಬರುವಂತಹ ಯೇಸುಕ್ರಿಸ್ತನಿಂದ ಸೋಲಿಸಲ್ಪಡುವ ಆರ್ಮಗೆದೋನ ಎಂಬ ಸ್ಥಳದಲ್ಲಿ ಭೂಲೋಕದ ಎಲ್ಲ ಸೈನ್ಯಗಳನ್ನು ಸೇರಿಸಿಕೊಂಡು,ಯುದ್ಧವನ್ನು ಮಾಡಿ, ಸೋಲನ್ನು ಪಡೆಯುವನು (ಪ್ರಕಟಣೆ 16:16; 17:14; 19:11-71) 2ಥೆಸಲೋನಿಕ 2:8 ಮತ್ತು ಯೆಹೇಜ್ಕೇಲ ಅಧ್ಯಾಯ 38-39ರ ವರೆಗಿನ ಅಧ್ಯಾಯಗಳು ಈ ಹೋರಾಟವನ್ನೇ ವಿವರಿಸುತ್ತವೆ.

ಸಾವಿರ ವರ್ಷಗಳವರೆಗೆ ಸೈತಾನನು ಪಾತಾಳದಲ್ಲಿ ಬಂದಿಸಲ್ಪಟ್ಟು, ಜನಾಂಗಗಳನ್ನು ಮೋಸಗೋಳಿಸಲು ಸಾಧ್ಯವಾಗದಿರುವಂತಹುದನ್ನು ಪ್ರಕಟಣೆ 20:1-7 ವಚನಗಳು ವಿವರಿಸುತ್ತವೆ. ಈ ಒಂದು ಸಾವಿರ ವರ್ಷಗಳ ಅವಧಿಯು ಮಿಲ್ಲೆನಿಯಂ ಎಂದು ಕರೆಯಲ್ಪಟ್ಟು ಇದು ಲ್ಯಾಟಿನ್ ಭಾಷೆಯ ಶಬ್ದದಿಂದ ಬಂದಿರುತ್ತದೆ. ಮಹಾಮೃಗದ ಭಯಂಕರವಾದ ಆಡಳಿತದ ಅವಧಿಯಲ್ಲಿ ಮೃಗದ ವಿಗ್ರಹಕ್ಕೆ ಅಡ್ಡ ಬೀಳದೆ, ಹತರಾದಂತಹವರ ಆತ್ಮಗಳು ಜೀವದಿಂದ ಎದ್ದು ಬರುವುವು. ಸತ್ತವರಲ್ಲಿ ಇನ್ನುಳಿದವರು ಒಂದು ಸಾವಿರ ವರ್ಷಗಳ ಅಂತ್ಯವು ಬರುವವರೆಗೆ ಜೀವದಿಂದ ಎದ್ದು ಬರುವುದಿಲ್ಲ. ಜೀವದಿಂದ ಎದ್ದವರು ಸಾವಿರ ವರ್ಷಗಳವರೆಗೆ ಕ್ರಿಸ್ತನೊಂದಿಗೆ ಆಳುವರು. ಇದಾದ ನಂತರ ಸೈತಾನನು ಸಾವಿರ ವರ್ಷಗಳ ಅವಧಿಗಾಗಿ ಬಿಡುಗಡೆ ಹೊಂದುವನು ಮತ್ತು ಎಲ್ಲಾ ದೇಶಗಳವರನ್ನು ಮೋಸಗೊಳಿಸಿ ತನ್ನ ಜನರ ಸಹಿತವಾಗಿ ಎಲ್ಲರನ್ನು ದೇವರಿಗೆ ವಿರೋಧವಾಗಿ ಎತ್ತಿ ಕಟ್ಟುವನು. ಬೆಂಕಿಯು ಸ್ವರ್ಗದಿಂದ ಬೀಳುವುದು ಮತ್ತು ಇವರೆಲ್ಲರನ್ನು ಧ್ವಂಸ ಮಾಡುವುದು. ಸೈತಾನನು ನರಕಕ್ಕೆ ದಬ್ಬಲ್ಪಡುವನು ಮತ್ತು ಸತ್ತವರೆಲ್ಲರಿಗೂ ಅಂತಿಮ ನ್ಯಾಯ ತೀರ್ಪು ನಡೆಯುವುದು. ಜೀವ ಬಾಧ್ಯರ ಪಟ್ಟಿಯಲ್ಲಿ ಕಂಡುಬರದಿರುವ ಹೆಸರಿನವರೆಲ್ಲರೂ ಕೂಡ ಅಗ್ನಿಯ ಕೆರೆಗೆ ದಬ್ಬಲ್ಪಡುವರು (ಪ್ರಕಟಣೆ 20:7-15).

## ಎರಡನೆಯ ಆಗಮನದ ಬಗ್ಗೆ ಮೂರು ಮುಖ್ಯ ದೃಷ್ಟಿಕೋನಗಳು

ಯೇಸುಕ್ರಿಸ್ತನ ಎರಡನೆ ಆಗಮನದ ಬಗ್ಗೆ ಅನೇಕ ವಾಕ್ಯಗಳು ಸತ್ಯವೇದದಲ್ಲಿದ್ದರೂ ಕೂಡ ಅಸ್ಪಷ್ಟತೆಯು ಹಾಗೆಯೇ ಇದೆ. ಅಂತ್ಯಕಾಲದಲ್ಲಿ ಸಂಭವಿಸುವಂತಹ ಘಟನಾವಳಿಗಳನ್ನು ಯಾವೊಂದು ವಾಕ್ಯವು ಕೂಡ ಸರಿಯಾದ ರೀತಿಯಲ್ಲಿ ಸ್ಪಷ್ಟನೆ ನೀಡುವುದಿಲ್ಲ. ಈ ಕಾರಣದಿಂದ ಎರಡನೆ ಆಗಮನದ ವಿಷಯದಲ್ಲಿ 3 ರೀತಿಯ ದೃಷ್ಟಿಕೋನದ ಅಭಿಪ್ರಾಯಗಳನ್ನು ಸೂಚಿಸಲಾಗಿದೆ. ಪ್ರಕಟಣೆ 20ನೇ ಅಧ್ಯಾಯದಲ್ಲಿನ ಒಂದು ಸಾವಿರ ವರ್ಷದ ಅವಧಿಗಾಗಿ ಎರಡನೆಯ ಬರುವಿಕೆಯ

ಸಂಬಂದದ ವಿಷಯದಲ್ಲಿರುವ ಬೇರೆ ಬೇರೆ ರೀತಿಯ ದೃಷ್ಟಿಕೋನದಿಂದಿರುವ ನಂಬಿಕೆಯ ಅಭಿಪ್ರಾಯಗಳನ್ನು ನಿಮ್ಮ ಮುಂದಿಡಲಾಗಿದೆ.

ಮೊದಲನೆ ದೃಷ್ಟಿಕೋನವು ಈ ಅಭಿಪ್ರಾಯವನ್ನು ಹೇಳುತ್ತದೆ, "ಭೂಮಿಯ ಮೇಲೆ ಸಾವಿರ ವರ್ಷದ ರಾಜ್ಯ ಇಲ್ಲವೇ ಇಲ್ಲ", ಬದಲಾಗಿ ಸತ್ತು ಸ್ವರ್ಗದಲ್ಲಿರುವ ವಿಶ್ವಾಸಿಗಳೊಂದಿಗೆ ಕ್ರಿಸ್ತನು ಆಳುವಂತಹ ಈಗಿನ ಸಮಯದ ಬಗ್ಗೆ ದರ್ಶನಗಳು ಸೂಚಿತವಾಗಿವೆ. ಸೂಚಿಸಲ್ಪಟ್ಟಿರುವ ಈ "ಸಾವಿರ ಸಂಖ್ಯೆ"ಯು ಯೇಸುಕ್ರಿಸ್ತನು ಪ್ರಥಮವಾಗಿ ಬಂದಂತಹ ಸಮಯದಿಂದ ಹಿಡಿದು ಆತನ ಎರಡನೆಯ ಬರುವಿಕೆಯ ಸಮಯದವರೆಗಿನ ಮಧ್ಯದ ಅವಧಿಯ ಸಂಕೇತವಾಗಿದೆ ಎಂದು ಮೊದಲನೆಯ ಅಭಿಪ್ರಾಯವನ್ನು ಹೊಂದಿದವರು ನಂಬುತ್ತಾರೆ. ಯೇಸುವಿನ ಎರಡನೆ ಬರುವಿಕೆಯಲ್ಲಿ ನಡೆಯುವ ಬಂಧನವು ಘಟಸರ್ಪದ ಅಥವಾ ಸೈತಾನನ (ಪ್ರಕಟಣೆ 20:2) ಆತ್ಮಿಕ ಬೀಳುವಿಕೆ ಮತ್ತು ಹಾಗೆಯೇ ಪವಿತ್ರಾತ್ಮನ ನಿರ್ಬಂಧಕ್ಕೊಳಗಾಗುವ ಘಟನೆಗೆ ಸಂಕೇತವಾಗಿದೆ ಎಂದು ನಂಬುತ್ತಾರೆ (ಲೂಕ 10:18; 2 ಥೆಸಲೋನಿಕ 2:7; 1ನೇ ಯೋಹಾನ 3:8).ಹತರಾಗಿ (ಪ್ರಕಟಣೆ 20:24) ಮರಣ ಹೊಂದಿದ ವಿಶ್ವಾಸಿಗಳ ಆತ್ಮಗಳು ಕ್ರಿಸ್ತನೊಂದಿಗೆ ಈಗ ಇರುವವು (2 ಕೊರಿಂಥ 5:6-8, ಫಿಲಿಪ್ಪಿ 1:23-34; 1ನೇ ಥೆಸಲೋನಿಕ 4:14; 2ನೇ ಪೇತ್ರ 1:13-14) ಮತ್ತು ದೇವರ ರಾಜ್ಯವು ಈಗಾಗಲೇ ಪ್ರಾರಂಭವಾಗಿದೆ (ಮತ್ತಾಯ 11:12; 12:28; ಕೊಲೋಸ್ಸೆ 1:13). ಆದರೆ ಇದು ಕಾಣುವಂತಹ ಈ ಲೋಕದ ರಾಜ್ಯವಲ್ಲ ಎಂಬುದರ ಬಗ್ಗೆ ಈ ಕ್ರೈಸ್ತರು ಒತ್ತಿ ಹೇಳುತ್ತಾರೆ (ಲೂಕ 17:20-21; ಯೋಹಾನ 18:36-37; ರೋಮ 14:17). ದಾನಿಯೇಲನ ಈ "ಎಪ್ಪತ್ತು" ಮತ್ತು "ಏಳು" ಎಂಬ ಪ್ರವಾದನೆಯು (ದಾನಿಯೇಲ 9:24-27) ಯೇಸುಕ್ರಿಸ್ತನು ಸತ್ತು ಮತ್ತು ಪುನರುತ್ಥಾನ ಹೊಂದಿದ ನಂತರ ಸಭೆಯ ಸ್ಥಾಪನೆಯ ಮತ್ತು ಯೆಹೂದ್ಯರ ದೇವಾಲಯದಲ್ಲಿ ರೋಮ್ ಸಾಮ್ರಾಜ್ಯಾಧಿಪತಿಯು ತನ್ನ ಪ್ರತಿಮೆಯ ಸ್ಥಾಪನೆಗಾಗಿ ಮಾಡಿದ ಆಕ್ರಮಣ ಮತ್ತು ಯೆರುಸಲೇಮ್ ನಗರ ಮತ್ತು ದೇವಾಲಯದ ನಾಶನ ಮತ್ತು ಇದರ ರಕ್ಷಣೆಗಾಗಿ ಯಹೂದ್ಯರ ಜೀವ ಸಮರ್ಪಣೆಯೊಂದಿಗೆ ಮುಕ್ತಾಯಗೊಂಡಂತಹ ಈ ಎಲ್ಲಾ ಘಟನಾವಳಿಗಳು ಸಂಪೂರ್ಣವಾಗಿ ನೆರವೇರಿಸಲ್ಪಟ್ಟಿವೆ ಎಂದು ಈ ಕ್ರೈಸ್ತರು ನಂಬುತ್ತಾರೆ. ಈ ಅಭಿಪ್ರಾಯವನ್ನು ಹಿಡಿದುಕೊಂಡಿರುವ ವಿಶ್ವಾಸಿಗಳು ಮೊದಲನೆ ಪುನರುತ್ಥಾನವು (ಪ್ರಕಟಣೆ 20:5) ಕೇವಲ ಆತ್ಮಿಕ ಪುನರುತ್ಥಾನವೆಂದು, **ನಂಬಿದವರಾದ ನಾವು ಕ್ರಿಸ್ತನೊಂದಿಗೆ ಜೀವಿಸುವುದಕ್ಕಾಗಿ ಈಗಾಗಲೇ ಎಬ್ಬಿಸಲ್ಪಟ್ಟಿರುವೆವೆಂದು ಮತ್ತು ಸ್ವರ್ಗೀಯ ರಾಜ್ಯದಲ್ಲಿ ಕ್ರಿಸ್ತನೊಂದಿಗೆ ಕುಳಿತುಕೊಳ್ಳುವಂತೆ ಮಾಡಿದ್ದಾನೆ.** ಎಂಬ ಅಭಿಪ್ರಾಯವನ್ನು ಹೊಂದಿದ ಇವರು ಇದನ್ನು ನಂಬುತ್ತಾರೆ (ಎಫೇಸ 2:4-6; 5:14, ಕೊಲೊಸ್ಸೆ 3:1).

ಈ ಮೊದಲನೆಯ ಅಭಿಪ್ರಾಯದ ಪ್ರಕಾರ "ಎರಡನೇ ಪುನರುತ್ಥಾನವು " ದೇಹದ ಪುನರುತ್ಥಾನವೆಂದು ಮತ್ತು ಕ್ರಿಸ್ತನು ಭೂಮಿಗೆ ಬರುವಾಗ ಇದು ಸಂಭವಿಸುವುದು. ಏಕ ಕಾಲದಲ್ಲಿಯೇ ವಿಶ್ವಾಸಿಗಳು ಮತ್ತು ಅವಿಶ್ವಾಸಿಗಳು ಶರೀರಧಾರಿಯಾಗಿ ಪುನರುತ್ಥಾನ ಹೊಂದುವರು ಮತ್ತು ಒಂದೇ ಒಂದು ಅಂತಿಮ ನ್ಯಾಯತೀರ್ಪು ಇರುವುದು ಎಂದು ಈ ಕ್ರೈಸ್ತರು ನಂಬುತ್ತಾರೆ. (ದಾನಿಯೇಲ 12:2; ಮತ್ತಾಯ 25:31-46; ಯೋಹಾನ 5:28-29; ಪ್ರಕಟಣೆ 20:11-15 ವಿಶ್ವಾಸಿಗಳು ಹಿಂತಿರುಗಿ ಬರುತ್ತಿರುವ ಕ್ರಿಸ್ತನನ್ನು ಆಕಾಶ ಮಧ್ಯದಲ್ಲಿಯೇ ಸಂಧಿಸುವರು (1 ಥೆಸಲೋನಿಕ 4:17). ಆದರೆ ಕಡೆಯ ಹೋರಾಟದಲ್ಲಿ ಸೈತಾನನನ್ನು ಮತ್ತು ಆತನ ಹಿಂಬಾಲಕರನ್ನು ಸೋಲಿಸುವುದಕ್ಕಾಗಿ ತಕ್ಷಣವೇ ಆತನೊಂದಿಗೆ ಭೂಮಿಗೆ ಇಳಿದು ಬರುವರು (ಪ್ರಕಟಣೆ 19:11-21; 20:7-10). ಭೂಮಿಯ ಮೇಲೆ ಸ್ಥಾಪಿತವಾಗಲಿಕ್ಕಿದ್ದಂತಹ ಮುಂದಿನ ಯಹೂದ್ಯರ ರಾಜ್ಯದ ವಿಷಯದಲ್ಲಿ ಬರೆಯಲ್ಪಟ್ಟಿದ್ದಂತಹ ಹಳೆಯ ಒಡಂಬಡಿಕೆಯ ಪ್ರವಾದನೆಗಳು ಈಗ ಕ್ರೈಸ್ತ ಸಭೆಗೆ ಸಂಪೂರ್ಣವಾಗಿ ಮಾರ್ಪಾಟು ಹೊಂದಿವೆ ಎಂದು ನಂಬುತ್ತಾರೆ (ಯೋವೇಲ 2:28-32ನ್ನು ಅ.ಕೃ. 2:14-21, ಜೆಕರ್ಯ 9:9-13ನೇ ವಚನಗಳಿಗೂ, ಇವನ್ನು ಮತ್ತಾಯ 21:1-9ನೇ ವಚನಗಳಿಗೆ ಹಾಗೂ ಮಲಾಕಿಯ 4:1-6ನ್ನು ಮತ್ತಾಯ 11:11-14; 17:10-13; ರೋಮ 4:16; ಗಲಾತ್ಯ 4:22-31ರ ವಚನಗಳಿಗೆ ಹೋಲಿಸಿ ನೋಡಿರಿ). ಆದುದರಿಂದ ಈ ಪ್ರವಾದನೆಗಳು ಈಗಿನ ಕಾಲದ ಸಭೆಗೆ ಸಂಕೇತವಾಗಿದ್ದು ಸಂಪೂರ್ಣವಾಗಿ ನೆರವೇರಿಸಲ್ಪಟ್ಟಿವೆ ಎಂದು ಇಲ್ಲವೆ ಪ್ರಕಟಣೆ ಅಧ್ಯಾಯ 21-22ರಲ್ಲಿ ಕಂಡು ಬಂದು ಮುಂದಿನ ಕಾಲದಲ್ಲಿ ಅಂತಿಮವಾಗಿ ಸ್ಥಾಪಿಸಲ್ಪಡುವಂತಹ ಹೊಸದಾದ ಭೂ-ಪರಲೋಕದ ಸಂಕೇತಗಳಾಗಿವೆ ಎಂದು ಇವರು ನಂಬುತ್ತಾರೆ.

ಕ್ರಿಸ್ತನ ಎರಡನೆಯ ಆಗಮನದ ವಿಷಯದಲ್ಲಿ ಇರುವ ಎರಡನೆಯ ಅಭಿಪ್ರಾಯವೇನೆಂದರೆ, ಭಾಗಶಃ ಪ್ರಪಂಚವೆಲ್ಲ ಕ್ರಿಸ್ತನ ನಂಬಿಕೆಗೆ ಬಂದು ದೇವರ ಕಡೆಗೆ ತಿರುಗಿ, ಭೂಲೋಕದಲ್ಲಿ ನಿಜವಾಗಿ ಶಾಂತಿ ಮತ್ತು ಸಮೃದ್ಧಿಯು ದೀರ್ಘಕಾಲದವರೆಗೆ ನೆಲೆಗೊಂಡ ನಂತರ ಯೇಸು ಕ್ರಿಸ್ತನ ಎರಡನೆಯ ಬರುವಿಕೆ ಸಂಭವಿಸುವುದು. ಇದು ಸರಿಯಾಗಿ ಒಂದು ಸಾವಿರ ವರ್ಷಗಳ ದೀರ್ಘಕಾಲದ್ದಾಗಿರುತ್ತದೆ. ಈ ಎರಡನೆ ಅಭಿಪ್ರಾಯವನ್ನು ಹೊಂದಿರುವ ಇವರು ಕ್ರಿಸ್ತನ ಮೊದಲನೆಯ ಬರುವಿಕೆಯಿಂದ ಈಗಾಗಲೇ ದೇವರ ರಾಜ್ಯವು ಪ್ರಾರಂಭವಾಗಿ ಬಿಟ್ಟಿದೆ ಎಂಬ ಮೊದಲನೆಯ ಗುಂಪಿನವರ

ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಕಾಲಾನುಕ್ರಮ ಲೋಕದಲ್ಲಿ ಕ್ರಿಸ್ತನ ರಾಜ್ಯವು ಹೆಚ್ಚು ಹೆಚ್ಚು ಅಭಿವೃದ್ಧಿಯನ್ನು ಹೊಂದುವುದು ಮತ್ತು ಸಭೆಯ ಮುಖಾಂತರ ಆಳಲ್ಪಡುವುದು ಎಂದು ಈ ಕ್ರೈಸ್ತರು ನಂಬುತ್ತಾರೆ (ಮತ್ತಾಯ 28:18; ಎಫೇಸ 1:19-23). ಪ್ರಪಂಚದ ಬಹುತೇಕ ಜನರು ಕ್ರಿಸ್ತನ ನಂಬಿಕೆಯಲ್ಲಿ ಜಯಿಸಲ್ಪಟ್ಟು, ಸಾವಿರ ವರ್ಷಗಳ (ದೀರ್ಘಕಾಲದ) **ಸುವಾರ್ತೆಯ ರಾಜ್ಯವು ಬರುವುದು**(ಮತ್ತಾಯ 24:14) (ಅತಿ ದೀರ್ಘಾವಧಿಯವರೆಗೆ) ಮತ್ತು ಸಭೆಯ ಮೂಲಕ ಶಾಂತಿ ಮತ್ತು ಆತ್ಮಿಕವಾದ ಆಶೀರ್ವಾದಗಳುಂಟಾಗುವುವು. (ಯೋವೇಲ 2:28-32; ಅ.ಕೃ. 2:17-21) ಕಡೆಯ ದಿನಗಳಲ್ಲಿ ಭೂಮಿಯ ಮೇಲಿರುವ ಎಲ್ಲಾ ಜನಾಂಗಗಳು ಒಬ್ಬರ ಮೇಲೊಬ್ಬರು ಮಾಡುವಂತಹ ಎಲ್ಲಾ ಯುದ್ಧಗಳನ್ನೂ ನಿಲ್ಲಿಸಿಬಿಡುವರು ಮತ್ತು ದೇವರ ಜ್ಞಾನಕ್ಕಾಗಿ ಹಾತೊರೆಯುವರು ಎಂಬ ಪ್ರವಾದನೆಗಳನ್ನು ತೋರಿಸುತ್ತಾರೆ. (ಯೆಶಾಯ 2:1-4; ಮೀಕ 4:1-5; ಜೆಕರ್ಯ 8:20-23). ಯೇಸುಕ್ರಿಸ್ತನು ಸ್ವರ್ಗದಿಂದ ಬರುವುದಕ್ಕೆ ಮುಂಚಿತವಾಗಿ ತನ್ನ ಸಭೆಯ ಮುಖಾಂತರವಾಗಿ ದೀರ್ಘಕಾಲ ಆಳುವನು ಎಂಬುದಕ್ಕೆ ಇನ್ನು ಅನೇಕ ಪ್ರವಾದನೆಗಳು ಸಂಕೇತಗಳಾಗಿವೆ ಎಂದು ಈ ಕ್ರೈಸ್ತರು ನಂಬುತ್ತಾರೆ (ಕೀರ್ತನೆ 2:72; ಯೇಶಾಯ 11:6-10; ಯೆಹೆಜ್ಕೇಲ 37:15-28; ಜೆಕರ್ಯ 9:9-10). ಪ್ರಕಟಣೆ ಪುಸ್ತಕದ 21-22 ಅಧ್ಯಾಯಗಳಲ್ಲಿ ವಿವರಿಸಿದಂತಹ **ಹೊಸದಾದ ಭೂಲೋಕ ಮತ್ತು ಹೊಸ ಪರಲೋಕಗಳು** ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಯೇಸುಕ್ರಿಸ್ತನ ಬರುವಿಕೆಯ ಸಮಯದಲ್ಲಿ ದೇಹದ ಪುನರುತ್ಥಾನ ಮತ್ತು ಅಂತಿಮ ತೀರ್ಪು ಒಂದೇ ಘಟನೆಯಲ್ಲಿ ಸಂಭವಿಸುವುದು ಎಂಬಂತಹ ಮೊದಲನೆಯ ಗುಂಪಿನವರ ಈ ಅಭಿಪ್ರಾಯವನ್ನು ಎರಡನೆಯ ಗುಂಪಿನವರಾದ ಇವರು ಒಪ್ಪಿಕೊಳ್ಳುತ್ತಾರೆ.

ಯೇಸು ಕ್ರಿಸ್ತನ ಎರಡನೆಯ ಆಗಮನದ ವಿಷಯದಲ್ಲಿರುವ ಮೂರನೆಯ ಪ್ರಾಮುಖ್ಯ ಅಭಿಪ್ರಾಯವೇನೆಂದರೆ "ಭೂಮಿಯ ಮೇಲೆ ಸಾವಿರ ವರ್ಷಗಳ ರಾಜ್ಯದ ಪ್ರಾರಂಭ"ವು ಉಂಟಾಗುವುದಕ್ಕೆ ಮೊದಲು ಯೇಸುಕ್ರಿಸ್ತನು ಭೂಮಿಗೆ ಹಿಂತಿರುಗಿ ಬರುವನು ಮತ್ತು ಎಲ್ಲಾ ವಿಶ್ವಾಸಿಗಳು ಪುನರುತ್ಥಾನಗೊಂಡು ಈ ಅವಧಿಯಲ್ಲಿಯೇ ಆತನೊಂದಿಗೆ ಆಳುವರು. ಈ ಅಭಿಪ್ರಾಯವನ್ನು ಹೊಂದಿರುವ ಮೂರನೆಯ ಗುಂಪಿನ ಕ್ರೈಸ್ತರು ಪ್ರವಾದಿಗಳು ಸಾಂಕೇತಿಕವಾಗಿ ಮಾತನಾಡಿದ್ದಾರೆ ಎಂದು ಒಪ್ಪುತ್ತಾರೆ. ಆದರೆ ಸಾಂಕೇತಿಕವಾಗಿ ವಿವರಿಸಲ್ಪಟ್ಟಿತು. ಎಲ್ಲಾ ಘಟನೆಗಳು ಹಾಗೆಯೇ ಕಾಣಿಸಿಕೊಳ್ಳುವುವು ಎಂದು ಒತ್ತಿ ಹೇಳುತ್ತಾರೆ. ಆದುದರಿಂದ ಯಹೂದ್ಯರ ವಿಷಯದಲ್ಲಿ ಹೇಳಲ್ಪಟ್ಟಿರುವ ವಾಗ್ದಾನಗಳು, ಮುಂದೆ ಬರುವಂತಹ "ಸಾವಿರ ವರ್ಷದ ರಾಜ್ಯ"ದಲ್ಲಿ ಹಾಗೆಯೇ ನೆರವೇರುವುವು ಎಂದು ಇವರಲ್ಲಿ ಹೆಚ್ಚಿನವರು ನಂಬುತ್ತಾರೆ (ಯೇಶಾಯ 11:1-16; 65:18-25; ಯೆರೆಮೀಯ 23:5-8; ಯೆಹೆಜ್ಕೇಲ 37:15-28; ಜೆಕರ್ಯ 14:9-21). ಪೌಲನು ಹಳೆಯ ಒಡಂಬಡಿಕೆಯಲ್ಲಿರುವ ವಾಗ್ದಾನಗಳನ್ನು ತೋರಿಸುತ್ತಾ, ಯಹೂದ್ಯರು ಕಡೆಯಲ್ಲಿ ಸುವಾರ್ತೆಯ ಕಡೆಗೆ ತಿರುಗುವರು ಎಂದು ರೋಮ 11:25-29ರಲ್ಲಿ ಹೇಳುತ್ತಾನೆಎಂದುಇವರು ಹೇಳುತ್ತಾರೆ. ಇವುಗಳು ಕೇವಲ ಸಂಕೇತಗಳಾಗಿರದೆ . ಆ ಸಮಯದ ಅವಧಿಯಲ್ಲಿ ನಡೆಯುವಂತ ನಿಜವಾದ ಪ್ರವಾದನೆಗಳಾಗಿವೆ ಎಂದು ಹೇಳುವುದರಲ್ಲಿ ಇವರು ಮುಂದಿರುತ್ತಾರೆ. ಪ್ರಕಟಣೆ 6-19ನೇ ಅಧ್ಯಾಯಗಳವರೆಗೆ ವಿವರಿಸಿರುವ, ಮುಂದಿನ ನಿಜವಾದ ಮಹಾ ಹಿಂಸೆಯು, ಕ್ರಿಸ್ತನು ತನ್ನ ಸಾವಿರ ವರ್ಷಗಳ ಆಳ್ವಿಕೆಯ ಪ್ರಾರಂಭಕ್ಕಾಗಿ, ಹಿಂತಿರುಗಿ ಬರುವ ಸಮಯಕ್ಕೆ ಮೊದಲು ಸಂಭವಿಸುವುದು ಎಂದು ಇವರು ನಂಬುತ್ತಾರೆ. (ದಾನಿಯೇಲ 12:1; ಮಾರ್ಕ 13:24-27, ಲೂಕ 21:10-11, 25-27). ದಾನಿಯೇಲನು ಸೂಚಿಸಿದ ಎಪ್ಪತ್ತು "ಏಳು"ವಾರಗಳು (ದಾನಿಯೇಲ 9:24-27) ನಿಜವಾಗಿಯೂ 490 ವರ್ಷಗಳ ಚರಿತ್ರೆಯ ಬಗ್ಗೆಯೇ ಸೂಚಿಸುತ್ತದೆ ಎಂದು ಇವರು ನಂಬುತ್ತಾರೆ. ಮೊದಲಿನ 69ರ "ಏಳು ವಾರಗಳು" (ಅಥವಾ 483 ವರ್ಷಗಳು) ಕ್ರಿಸ್ತಪೂರ್ವ 445ರಲ್ಲಿನ **ಯೆರುಸಲೆಮಿನ ಬಿಡುಗಡೆ ಮತ್ತು ಪುನರ್ನಿರ್ಮಾಣವು** ಪ್ರಾರಂಭವಾಗಿ (ನೆಹೆಮಿಯ 2:1-9)ಆಳುವುದಕ್ಕೆ **ಅಭಿಷೇಕಿಸಲ್ಪಟ್ಟವನು** ಬರುವನು ಎಂದುಇದರರ್ಥ, [1]ಮೆಸ್ಸಿಯನಾದ ಕ್ರಿಸ್ತನು ಬರುವವರೆಗೂ ಇದು ಮುಂದುವರಿಯಿತು.

ದಾನಿಯೇಲನು ಹೇಳಿದಂತಹ ರಾಜನನ್ನು ಅಥವಾ **ಆಡಳಿತ ನಡೆಸಲು ಬರುವವನನ್ನು** (ದಾನಿಯೇಲ 7:24-25; 9:26-27; 11:36). ಪೌಲನು ತಿಳಿಸಿದಂತಹ **ಧರ್ಮಭ್ರಷ್ಟ** (2ಥೆಸಲೋನಿಕ 2:1-10 ಮತ್ತು ಮೃಗ ಅಥವಾ ಪ್ರಕಟಣೆ 13-19ನೆಯ ಅಧ್ಯಾಯಗಳಲ್ಲಿರುವ **ಸುಳ್ಳು** ಪ್ರವಾದಿಯೇ ಆಗಿರುವವನೆಂದು ಈ ಮೂರನೆಯ ಅಭಿಪ್ರಾಯದ ಜನರು ಗುರುತಿಸುತ್ತಾರೆ. ಈ ರಾಜನು ಯಹೂದ್ಯರ ಹೊಸ ದೇವಾಲಯದಲ್ಲಿ ತನ್ನ ಪ್ರತಿಮೆಯನ್ನು ಸ್ಥಾಪಿಸಿ, ಆರಾಧನೆ ಹೊಂದುವುದಕ್ಕಾಗಿ ತಾನು ಇಸ್ರಾಯೇಲರೊಂದಿಗೆ ಮಾಡಿಕೊಂಡಿದ್ದಂತಹ ಒಡಂಬಡಿಕೆಯನ್ನು ಮಹಾಹಿಂಸೆಯ ಏಳು ವರ್ಷಗಳ ಅವದಿಯ ಮಧ್ಯದಲ್ಲಿಯೇ ಮುರಿದು ಬಿಡುವನು ( ದಾನಿಯೇಲ 9:27; 12:11, ಮಾರ್ಕ 13:14, 2 ಥೆಸಲೋನಿಕ 2:4, ಪ್ರಕಟಣೆ 13:14-15; ಯೆಹಜ್ಕೇಲ 40-47ರ ಅಧ್ಯಾಯದವರೆಗೆ ಈ ಮಹಾಸಂಕಟದ ಅವಧಿಯಲ್ಲಿ ವಿಶ್ವದ ವಿವಿಧ ಜನಾಂಗದವರು ಸಾಕಷ್ಟು ಸಂಖ್ಯೆಯಲ್ಲಿ ಮತ್ತು ಅನೇಕ ಯಹೂದ್ಯರು ನಂಬಿಕೆಯಲ್ಲಿ ಕ್ರಿಸ್ತನ ಕಡೆಗೆ ತಿರುಗುವರು. (ರೋಮ 11:25-31, ಪ್ರಕಟಣೆ 7:4, 9, 14). ಆದರೆ ಮಹಾಮೃಗದ ಪ್ರತಿಮೆಯನ್ನು ಆರಾಧಿಸಲು

ತಿರಸ್ಕರಿಸುವುದರ ಪ್ರಯುಕ್ತ ಹಿಂಸೆಯನ್ನು ಹೊಂದುವರು ಮತ್ತು ಹತರಾಗುವರು. (ಪ್ರಕಟಣೆ 6:9-11; 14:3; 15:2-4, 20:4) ಮಹಾ ಹಿಂಸೆಯ ಕೊನೆಯ ಅವಧಿಯಲ್ಲಿ ಅರ್ಮೆಗದೋನ್ ಎಂಬ ಸ್ಥಳದಲ್ಲಿ,ಕ್ರಿಸ್ತನ ಹಿಂತಿರುಗಿ ಬರುವಿಕೆಯು ತುತ್ತೂರಿ ಶಬ್ದದಿಂದ, ಈ ಮಹಾ ಮೃಗದ ಸೈನ್ಯವು ನಾಶಹೊಂದುವುದು. (ಜೆಕರ್ಯ 14:1-9, ಪ್ರಕಟಣೆ 19:11-21). ಮತ್ತಾಯ 24:31-46ರಲ್ಲಿ ವಿವರಿಸಿರುವ, ಭೂಮಿಯ ಮೇಲೆ ದೇವರಾಜ್ಯದ ಪ್ರಾರಂಭದಲ್ಲಿಯೇ, ಭೂಮಿಯ ಮೇಲೆ ಜೀವಿಸುವಂತಹ ಎಲ್ಲಾ ಜನಾಂಗಗಳಿಗೆ ತೀರ್ಪು ಆಗುವುದೆಂದು ಮತ್ತು ಪ್ರಕಟಣೆ 20:1-12ರಲ್ಲಿರುವರು ನಿಜವಾಗಿ ಪುನರುತ್ಥಾನ ಹೊಂದಿದವರಿಗೆ, ಅಂದರೆ ಸಾವಿರ ವರ್ಷಗಳ ರಾಜ್ಯದ ಅವಧಿಯಲ್ಲಿ ಮೊದಲು ಸತ್ತವರೊಳಗಿಂದ ಪುನರುತ್ಥಾನಗೊಂಡ ವಿಶ್ವಾಸಿಗಳಿಗೆ ತೀರ್ಪಾಗುವುದು ಮತ್ತು ಅಂತಿಮ ತೀರ್ಪಿಗಾಗಿ ಅವಿಶ್ವಾಸಿಗಳು ಸತ್ತವರೊಳಗಿನಿಂದ ಪುನರುತ್ಥಾನ ಹೊಂದುವವರೆಂದು ಕ್ರೈಸ್ತರಾದ ಇವರು ನಂಬುತ್ತಾರೆ. ನಂತರ ಹಳೆಯದಾಗಿರುವಂತಹ ಈಗಿನ ಪರಲೋಕ ಮತ್ತು ಭೂಲೋಕಗಳು ಬೆಂಕಿಯಿಂದ ನಾಶವಾಗುವುವು ಮತ್ತು ಹೊಸದಾದ ಪರಲೋಕ ಮತ್ತು ಭೂಲೋಕಗಳು ಸೃಷ್ಟಿಯಾಗುವುವು (2 ಪೇತ್ರ 3:10-13; ಪ್ರಕಟಣೆ 21:1).

ಮುಖ್ಯವಾದ ಈ ಮೂರನೆಯ ಅಭಿಪ್ರಾಯವನ್ನು ಹೊಂದಿರುವವರು ತಮ್ಮ ತಮ್ಮಲ್ಲಿಯೇ ವಿಶ್ವಾಸಿಗಳು ಪುನರುತ್ಥಾನ (ಅಥವಾ ತಮ್ಮ ದೇಹಗಳ ರೂಪಾಂತರ)ಗೊಂಡು ಆಕಾಶದಲ್ಲಿ ಕರ್ತನನ್ನು ಸಂಧಿಸುವ ಸಮಯದ ಬಗ್ಗೆ ಒಂದೇ ಅಭಿಪ್ರಾಯವಿಲ್ಲದವರಾಗಿದ್ದಾರೆ.ಕ್ರಿಸ್ತನ ಎರಡನೆಯ ಆಗಮನವು ಎರಡು ಸಂದರ್ಶನಗಳಿಂದ ಕೂಡಿದೆ ಎಂದು ಹೆಚ್ಚಿನವರು ನಂಬುತ್ತಾರೆ. ಮೊದಲನೆಯ ಸಂದರ್ಶನವು ಮಹಾ ಹಿಂಸೆಗೆ ಮೊದಲು ಮೇಘಗಳಲ್ಲಿ ಹಿಂದಿರುಗಿ ಬಂದು, ತನ್ನನ್ನು ನಂಬಿದವರನ್ನು, ಯಜ್ಞದ ಕುರಿಯಾದಾತನ ಮದುವೆಯ ಔತಣಕ್ಕೆ ಕರೆದೊಯ್ಯುವನು (1 ಥೆಸಲೋನಿಕ 4:17, ಮತ್ತಾಯ 25:1-13; ಪ್ರಕಟಣೆ 19:9). ಆತನ ಈ ಎರಡನೆಯ ಬರುವಿಕೆಯು ನೆನಸದ ರೀತಿಯಲ್ಲಿ ಕಳ್ಳನು ರಾತ್ರಿಯಲ್ಲಿ ಬರುವಂತಿರುವುದು (ಮತ್ತಾಯ 24:42-51; 1ನೇ ಥೆಸಲೋನಿಕ 5:1-4; ಪ್ರಕಟಣೆ 3:3). ಯೇಸುಕ್ರಿಸ್ತನು ತನ್ನ ಎರಡನೆಯ ಆಗಮನದ ಸಮಯದಲ್ಲಿ ಪುನರುತ್ಥಾನ ಹೊಂದಿದ ತನ್ನ ವಿಶ್ವಾಸಿಗಳ ಸಹಿತವಾಗಿ ಬಂದು ಮಹಾ ಘಟಸರ್ಪನನ್ನು ಸೋಲಿಸುವನು ಮತ್ತು ಭೂಮಿಯ ಮೇಲೆ ತನ್ನ ರಾಜ್ಯವನ್ನು ಸ್ಥಾಪಿಸುವನು. ಯೇಸುಕ್ರಿಸ್ತನು ಸ್ವರ್ಗದಿಂದ ಇಳಿದುಬಂದು ತಾನಿರುವಲ್ಲಿಗೆ ನಮ್ಮನ್ನು ತಗೆದುಕೊಂಡು ಹೋಗುವೆನು ಎಂದು ಯೋಹಾನ 14:2-3 ರರಲ್ಲಿ ವಾಗ್ದಾನ ಮಾಡಿದನು. ತೆಗದುಕೊಳ್ಳಲ್ಪಡುವ ಮತ್ತು ಬಿಡಲ್ಪಡುವವರ ಮಧ್ಯೆ ಕ್ಷಣಮಾತ್ರದ ಅಗಲುವಿಕೆಯನ್ನು ಈ ಕ್ರೈಸ್ತರು ಗಮನಿಸುತ್ತಾರೆ (ಮತ್ತಾಯ 24:40-41). ನಾವು ದೇವರ ಕೋಪದಿಂದುಂಟಾಗುವ ಕಷ್ಟಕ್ಕೆ ಗುರಿಯಾಗಬೇಕೆಂದು ಆತನು ನಮ್ಮನ್ನು ನೇಮಿಸಲಿಲ್ಲ ಎಂದು ಪೌಲನು ಹೇಳಿದನು. (1 ಥೆಸಲೋನಿಕ 5:9). ಸಂಭವಿಸಲಿಕ್ಕಿರುವ ಎಲ್ಲಾ ಹಿಂಸೆಯಿಂದ ಪಾರಾಗುವುದಕ್ಕೆ ಪ್ರಾರ್ಥಿಸಿರಿ ಎಂದು ಕ್ರಿಸ್ತನು ನಮಗೆ ಹೇಳಿದನು (ಲೂಕ 21:36). ಮೃಗವನ್ನು ಆರಾಧಿಸದೆ ಇದ್ದುದಕ್ಕೆ ಶಿರಚ್ಛೇದನಗೊಂಡು ಪುನರುತ್ಥಾನಗೊಂಡವರ ಬಗ್ಗೆ ಮಾತ್ರ ಇರುವ ವಿವರಣೆಯನ್ನು ಇವರು ತೋರಿಸುತ್ತಾರೆ. ಪ್ರಕಟಣೆ 20:4-6. ಮಹಾ ಸಂಕಟದ ಪ್ರಾರಂಭಕ್ಕೆ ಮೊದಲೆ ಎಲ್ಲ ನಿಜವಾದ ವಿಶ್ವಾಸಿಗಳು ಪುನರುತ್ಥಾನ ಹೊಂದುವರು ಮತ್ತು ಪರಲೋಕಕ್ಕೆ ಎತ್ತಲ್ಪಡುವರು ಎಂದು ಮತ್ತು ಏಳು ವರ್ಷಗಳ ಪ್ರಕಟಣೆ 20:4-6ರಲ್ಲಿನ ಈ ಪುನರುತ್ಥಾನವು ಮಹಾಸಂಕಟದ ಸಮಯದಲ್ಲಿ ನಂಬಿದವರಿಗೆ ಮತ್ತು ಹತರಾತವರಿಗೆ ಮಾತ್ರ ಇದು ಅನ್ವಯಿಸುತ್ತದೆ ಎಂದು ಈ ಕ್ರೈಸ್ತರು ನಂಬುತ್ತಾರೆ. ನಂಬದೆ ಸತ್ತವರು ಅಂತಿಮ ತೀರ್ಪಿಗೆ ಸ್ವಲ್ಪ ಮುಂಚೆ ಏಳುವರು.

ಹೇಗಿದ್ದರೂ ಈ ಮೂರನೆಯ ಅಭಿಪ್ರಾಯವನ್ನು ಹಿಡಿದುಕೊಂಡಿರುವ ಇತರ (ಸಾವಿರ ವರ್ಷಗಳ ರಾಜ್ಯವು ಪ್ರಾರಂಭವಾಗುವುದಕ್ಕೆ ಮೊದಲೇ ಕ್ರಿಸ್ತನು ಹಿಂತಿರುಗಿ ಬರುವನು) ಕ್ರೈಸ್ತರಾದ ಇವರು ಭೂಮಿಯ ಮೇಲೆ ಸಭೆಯು ಏಳು ವರ್ಷಗಳ ಸಂಕಟವನ್ನು ಅನುಭವಿಸುನರು ಎಂದು ನಂಬುತ್ತಾರೆ. ಬರುತ್ತಿರುವಂತಹ ಕ್ರಿಸ್ತನನ್ನು ಸಾಧಿಸುವುದಕ್ಕಾಗಿ ಜೀವದಿಂದಿರುವ ವಿಶ್ವಾಸಿಗಳು ಎತ್ತಲ್ಪಡುವರು ಎಂದು ಒಪ್ಪಿಕೊಳ್ಳುತ್ತಾರೆ. ಆದರೆ ಇದು ಮಹಾಹಿಂಸೆಯ ಕಡೆಯ ಸಮಯದಲ್ಲಾಗುವುದು ಎಂದು ಮತ್ತು ಇದು ಪ್ರಾರಂಭವಾಗುತ್ತಿದ್ದಂತೆಯೇ, ಭೂಮಿಯಲ್ಲಿ ಆರ್ಮಗಡೇನ ಎಂಬ ಸ್ಥಳದಲ್ಲಿ, ಕ್ರಿಸ್ತನು ಮೃಗವನ್ನು ಸೋಲಿಸಿ, ತನ್ನ ರಾಜ್ಯವನ್ನು ಸ್ಥಾಪಿಸುವನು ಎಂದು ನಂಬುತ್ತಾರೆ. ಮತ್ತಾಯ 24:15-31ರಲ್ಲಿ ತಿಳಿಸಿರುವಂತಹ, ತಕ್ಷಣ ಕೇಳಿ ಬರುವ ತುತ್ತೂರಿಯ ಶಬ್ದವನ್ನು ಮತ್ತು ಪುನರುತ್ಥಾನಗೊಂಡ ವಿಶ್ವಾಸಿಗಳು ಒಟ್ಟಾಗಿ ಸೇರುವ ಈ ಘಟನೆಯನ್ನು, ಮಹಾ ಹಿಂಸೆಯ ಸಮಯದಲ್ಲಿ ಕ್ರಿಸ್ತನು ಮಹಿಮೆ ಮತ್ತು ಅಧಿಕಾರದಿಂದ ಹಿಂತಿರುಗಿ ಬರುವಂತಹ ದೃಶ್ಯಕ್ಕೂ ಮತ್ತು ಲೂಕ 17:26-37ರಲ್ಲಿರುವ ಪ್ರವಾದನೆಯಂತೆ, ತಕ್ಷಣ ಸಂಭವಿಸುವ ನಾಶನದ ಸಮಯದಲ್ಲಿ ಒಬ್ಬನು ಎತ್ತಲ್ಪಡುವ ಹಾಗೂ ಇನ್ನೊಬ್ಬನು ಬಿಡಲ್ಪಡುವ ಈ ಘಟನೆಯನ್ನು ಥಳಕು ಹಾಕುತ್ತಾರೆ. ಯೇಸುಕ್ರಿಸ್ತನು ಎರಡು ಸಾರಿ ಬರುತ್ತೇನೆಂದು ತಾನು ನಿಜವಾಗಿ ಹೇಳಲೇ ಇಲ್ಲ. ಆದುದರಿಂದ ಮೊದಲಿನವರ ಹಾಗೂ ಎರಡನೆಯವ ಅಭಿಪ್ರಾಯದಂತೆಯೇ ಒಂದೇ ಸಾರಿ ಕ್ರಿಸ್ತನು ತಿರುಗಿ ಬರುತ್ತಾನೆ ಎಂದು ಸಹಮತಿಸಿದರೂ ಕೂಡ ಕ್ರಿಸ್ತನ

ಸಾವಿರ ವರ್ಷಗಳ ಆಳ್ವಿಕೆಯ ಪ್ರಾರಂಭಕ್ಕೆ ಮೊದಲೆ ಆತನ ಎರಡನೆಯ ಆಗಮನವು ಸಂಭವಿಸುವುದು ಎಂಬ ಅಭಿಪ್ರಾಯವುಳ್ಳವರಾಗಿದ್ದಾರೆ. ಎರಡು ತರಹದ ಪುನರುತ್ಥಾನಗಳು ಮಾತ್ರ ಇವೆ ಎಂದು ಈ ಕ್ರೈಸ್ತರು ನಂಬುತ್ತಾರೆ. ಮೊದಲನೆಯ ಮಹಾಹಿಂಸೆಯಾದ ನಂತರ ಯೇಸುಕ್ರಿಸ್ತನು ತಿರುಗಿ ಬರುವ ಸಮಯದಲ್ಲಿ ಮತ್ತು ಸಾವಿರ ವರ್ಷಗಳ ರಾಜ್ಯವು ಪ್ರಾರಂಭಿಸುವುದಕ್ಕೆ ಮೊದಲು ವಿಶ್ವಾಸಿಗಳು ಪುನರುತ್ಥಾನ ಹೊಂದುವರು. ಎರಡನೆಯ ಅಂತಿಮ ತೀರ್ಪು ಆಗುವ ಸ್ವಲ್ಪ ಸಮಯಕ್ಕೆ ಮುಂಚೆ ಸತ್ತಂತಹ ವಿಶ್ವಾಸಿಗಳು ಪುನರುತ್ಥಾನ ಹೊಂದುವರು.

## ಸಾರಾಂಶ

ಯಾವುದೇ ಅಭಿಪ್ರಾಯವನ್ನು ನಾವು ಹೊಂದಿದ್ದರೂ ಸಹ ಈ ವಿಷಯದ ಮೇಲೆ ಹೋರಾಡಬಾರದು. ನಿತ್ಯ ಜೀವದಿಂದ ಆತನೊಂದಿಗೆ ಇರಲು, ಕ್ರಿಸ್ತನ ಹಿಂತಿರುಗುವಿಕೆಯ ಸಮಯದಲ್ಲಿ ನಾವೆಲ್ಲರೂ ಎದ್ದೇಳುತ್ತೇವೆ. ನಮ್ಮ ರಕ್ಷಣೆಗೆ ಈ ನಿಕರವಾದ ಮಾಹಿತಿಗಳ ಅಗತ್ಯತೆಯು ಮುಖ್ಯವಲ್ಲ. ನಮ್ಮ ಸಾರ್ವಜನಿಕ ಹಾಗೂ ವೈಯಕ್ತಿಕ ಜೀವನಕ್ಕೆ ಕ್ರಿಸ್ತನ ಬರುವಿಕೆಯು, ಪ್ರೋತ್ಸಾಹವನ್ನುಂಟು ಮಾಡುವಂತಹದ್ದಾಗಿರಬೇಕು. ನಾವು ಆತನನ್ನು ಸಂಧಿಸುವುದಕ್ಕಾಗಿ, ನಂದದಿರುವ ದೀಪದಂತಹ ನಂಬಿಕೆಯಿಂದ್ದಿದ್ದು ಮತ್ತು ಸಾಕ್ಷಿಗಾಗಿ ಹೊರಗೆ ಹೋದವರಂತೆ ಇರಬೇಕು ಎಂದು ನಾವು ಎಚ್ಚರಿಸಲ್ಪಟ್ಟಿದ್ದೇವೆ (ಮತ್ತಾಯ 25:1-13). ಜೀವನದ ಚಿಂತೆಗಳಿಂದ ನಮ್ಮ ಹೃದಯಗಳನ್ನು ಭಾರ ಮಾಡಿಕೊಳ್ಳಬಾರದು, ಪರಿಶುದ್ಧರಾಗಿಯೂ ಮತ್ತು ಭಕ್ತಿವಂತರಾಗಿದ್ದು ನಮ್ಮ ನಡವಳಿಕೆಯನ್ನು ಕಾಯ್ದುಕೊಂಡು ನಮ್ಮನ್ನು ಹತೋಟಿಯಲ್ಲಿಟ್ಟುಕೊಂಡು, ಯಾವಾಗಲೂ ಎಚ್ಚರವಾಗಿರಬೇಕೆಂದು ನಾವು ಎಚ್ಚರಿಸ್ಪಪಟ್ಟಿದ್ದೇವೆ (ಲೂಕ21:34-36; 1ಥೆಸಲೋನಿಕ 5:4-11; 2ಪೇತ್ರ 3:11-14). ನಾವು ಸ್ಥಿರವಾಗಿ ನಿಲ್ಲಬೇಕು ಮತ್ತು ಎಚ್ಚರವಾಗಿರಬೇಕು. ಹೀಗಾದರೆ ನಾವು ನಿದ್ದೆ ಮಾಡುವುದರಲ್ಲಿ ಮಗ್ನರಾಗುವುದಿಲ್ಲ. ಅಥವಾ ಮತ್ತೊಬ್ಬರ ಮೇಲೆ ಅಧಿಕಾರಿಯುಂತಿರಬಾರದು. ಆದರೆ ನಮಗೆ ಕೊಡಲ್ಪಟ್ಟಿರುವುವುಗಳೆಂದು ತಿಳಿದು ನಾವು ನಂಬಿಗಸ್ತಿಕೆಯಿಂದ ಕರ್ತನಿಗಾಗಿ ಎಲ್ಲಾ ಕೆಲಸಗಳನ್ನು ಮಾಡಬೇಕು. (ಮತ್ತಾಯ 24:45-51; 25:14-30; ಮಾರ್ಕ 13:35-37; 1ಕೊರಿಂಥ 3:11-15; 15:58, 2ನೇ ಕೊರಿಂಥ 5:10). ಇದು ಸುವಾರ್ತೆ ಸೇವೆಯಾಗಿರಬಹುದು ಮತ್ತಾಯ 24:14, ಮಾರ್ಕ 13:10 ಅಥವಾ ವೃತ್ತಿ ಸೇವಾ ಕಾರ್ಯಗಳಾಗಿರಬಹುದು (ಮತ್ತಾಯ 25:31-46). ನಮ್ಮ ವೈಯಕ್ತಿಕವಾದ ಮಾನಸಾಂತರ, ವೈಯಕ್ತಿಕ ನಡವಳಿಕೆಗಳು ಮತ್ತು ಸ್ವಂತ ಸಾಕ್ಷಿಗಳು ನಿಜವಾಗಿಯೂ ಕ್ರಿಸ್ತನ ಬರುವುಕೆಯ ವೇಗವನ್ನು ಹೆಚ್ಚಿಸಬಹುದು (ಮಾರ್ಕ 13:10; ಅ.ಕೃ. 3:19-21; 2 ಪೇತ್ರ 3:11-12). ಯಾಕೆಂದರೆ ಎಲ್ಲಾ ಮನುಷ್ಯರಿಗೆ ರಕ್ಷಣೆಯನ್ನುಂಟುಮಾಡುವ ದೇವರ ಕೃಪೆಯು ಪ್ರತ್ಯಕ್ಷವಾಯಿತು. ನಾವು ಭಕ್ತಿಹೀನತೆಯನ್ನು ಲೋಕದ ಆಶೆಗಳನ್ನು ವಿಸರ್ಜಿಸಿ ಭಾಗ್ಯಕರವಾದ ನಿರೀಕ್ಷೆಯನ್ನು ಅಂದರೆ ಮಹಾ ದೇವರ ಮತ್ತು ನಮ್ಮ ರಕ್ಷಕನಾದ ಯೇಸುಕ್ರಿಸ್ತನ ಪ್ರಭಾವದ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ, ಇಹಲೋಕದಲ್ಲಿ ಸ್ವಸ್ಥಚಿತ್ತರಾಗಿಯು, ನೀತಿವಂತರಾಗಿಯೂ, ಭಕ್ತಿಯುಳ್ಳವರಾಗಿಯೂ ಬದುಕಬೇಕೆಂದು ಬೋಧಿಸುತ್ತದೆ. ತೀತ 2:11-13, ಕರ್ತನಾದ ಯೇಸುವೇ ಬೇಗನೇ ಬಾ. ಆಮೆನ್ (ಪ್ರಕಟಣೆ 22:20).

---

[1] ಯರುಸಲೇಮ್ ನಗರವು ರೋಮನ್ ಸೈನ್ಯಗಳಿಂದ ಸುತ್ತುವರೆಯಲ್ಪಟ್ಟು ದೇವಾಲಯವು ಕೆಡವಲ್ಪಡುವುದು ಎಂದು ಯೇಸುಕ್ರಿಸ್ತನು ಪ್ರವಾದಿಸಿದ್ದನು. (ಲೂಕ 21:6, 20 24) ಕ್ರಿಸ್ತಪೂರ್ವ 70ನೇ ವರ್ಷದಲ್ಲಿ ಯೆರುಸಲೇಮ್ ನಗರವು ಮತ್ತು ಇದರ ದೇವಾಲಯವು ರೋಮನ್‌ರಿಂದ ನಾಶವಾಯಿತು. ರೋಮ್ ಸಾಮ್ರಾಜ್ಯದ ರಾಜನಾದ ಕಾಲಿಗುಲ್ಲಾನು ದೇವಾಲಯದಲ್ಲಿ ತನ್ನ ಪ್ರತಿಮೆಯನ್ನಿಡುವುದಕ್ಕಾಗಿ (ಕ್ರಿಸ್ತಶಕ 37-41 ರವರೆಗೆ) ಮಾಡಿದ ಧಾಳಿಯು ವಿಫಲವಾಯಿತೆಂದು ಮತ್ತು ಯೇಸುಕ್ರಿಸ್ತನು ಹೇಳಿದ ಪ್ರವಾದನೆಯು ದೈವವಿರೋಧವಾಯಿತೆಂದು ಅನೇಕ ವಿದ್ವಾಂಸರು ನಂಬುತ್ತಾರೆ. ಯೇಸುಕ್ರಿಸ್ತನು ಮಾಡಿದ ಪ್ರವಾದನೆಯ ಈ ಭಾಗವು ಕಡೆಯ ದಿನಗಳಲ್ಲಿ ನೆರವೇರುವುದು ಎಂದು ಇತರ ವಿದ್ವಾಂಸರು ನಂಬುತ್ತಾರೆ.)

[2] ದಾನಿಯೇಲ ಮತ್ತು ಪ್ರಕಟಣೆಯಲ್ಲಿರುವಂತಹ 483 ವರ್ಷಗಳು 360 ದಿನಗಳಿಗೆ ಸಮವೆಂದು (ಪ್ರತಿ ತಿಂಗಳಿಗೆ 30 ದಿನಗಳಂತೆ) ಮೂರು ಮತ್ತು ಅರ್ಧ ವರ್ಷಗಳಿಗೆ ಹೋಲಿಸಿ ಹೆಚ್ಚಿನ ವಿದ್ವಾಂಸರುಗಳು ಇದನ್ನು ನಂಬುತ್ತಾರೆ (ದಾನಿಯೇಲ 7:25, 12:7-11, ಪ್ರಕಟಣೆ 11:2-3, 12:6,14). ದಾನಿಯೇಲನ 69ರ ಏಳು ವಾರಗಳಾದ 483 ವರ್ಷಗಳು ಯೇಸುಕ್ರಿಸ್ತನ ಜೀವಿತ, ಸೇವೆ ಮತ್ತು ಮರಣದ ಚರಿತ್ರೆಯ ಅಂತ್ಯ ಸಮಯದ ಕ್ರಿಸ್ತಶಕ 30 ರಲ್ಲಿ ನಿಜವಾಗಿ ಮುಕ್ತಾಯವಾಗುತ್ತದೆ)

# ಸಭೆಯ ಉದ್ದೇಶ

ಯೇಸುಕ್ರಿಸ್ತನು ಸ್ವರ್ಗಕ್ಕೆ ಹೋಗುವುದಕ್ಕೆ ಮುಂಚೆ ಆತನು ತನ್ನ ಶಿಷ್ಯರಿಗೆ ಈ ಕಡೆಯ ಮಾತುಗಳನ್ನು ಹೇಳಿದನು. **ಪವಿತ್ರಾತ್ಮನು ನಿಮ್ಮ ಮೇಲೆ ಬಂದಾಗ ನೀವು ಶಕ್ತಿಯನ್ನು ಪಡೆಯುವಿರಿ; ಆಗ ನೀವು ಯೆರುಸಲೇಮಿನ ಯೂದಾಯ ಮತ್ತು ಸಮಾಯರ್ಯದ ಎಲ್ಲಾ ಕಡೆಗಳಲ್ಲಿಯೂ ಹಾಗೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರುವಿರಿ** (ಅ.ಕೃ. 1:8). ಕ್ರೈಸ್ತರಾದ ನಾವು ಕ್ರಿಸ್ತನಿಗೆ **ಸಾಕ್ಷಿಗಳಾಗಿರಬೇಕು** ಎಂಬುವುದೇ. ಕ್ರಿಸ್ತನಿಗಾಗಿ ಈ ಲೋಕದಲ್ಲಿ ಸಾಕ್ಷಿಯಾಗಿರಬೇಕು ಇದೆ ಸಭೆಯ ಉದ್ದೇಶವಾಗಿದೆ. ಇದು ಸಭೆಯ ಪ್ರಾಥಮಿಕ ಉದ್ದೇಶವಾಗಿದ್ದು ಇನ್ನುಳಿದ ಇತರ ಚಟುವಟಿಕೆಗಳು ದ್ವಿತೀಯ ಸ್ಥಾನದಲ್ಲಿರಬೇಕು.

ಯೇಸುಕ್ರಿಸ್ತನಿಗೆ ಸಾಕ್ಷಿ ಕೊಡುವುದೆಂದರೇನರ್ಥ? :- ನಮ್ಮ ನುಡಿ ಮತ್ತು ನಡತೆಯ ಮೂಲಕ ಸ್ತ್ರೀ ಪುರುಷರನ್ನು ಕ್ರಿಸ್ತನೆಡೆಗೆ ತರುವುದು. ಇದರರ್ಥ, ನಾವು ಲೋಕಕ್ಕೆ ಬೆಳಕಾಗಿರುವುದು. **"....... ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಜನರು ನಿಮ್ಮ ಸತ್ಕ್ರಿಯೆಗಳನ್ನು ನೋಡಿ, ಪರಲೋಕದಲ್ಲಿರುವ ನಿಮ್ಮ ತಂದಯನ್ನು ಕೊಂಡಾಡುವರು"** ಎಂದು ಯೇಸುಕ್ರಿಸ್ತನು ಹೇಳಿದನು (ಮತ್ತಾಯ 5:16). ನಿಮ್ಮ ಬೆಳಕು ಪ್ರಕಾಶಿಸಲಿ ಇದರರ್ಥ ಕ್ರಿಸ್ತನಿಗೆ ನಾವು ಈ ಲೋಕದಲ್ಲಿ ರಾಯಭಾರಿಗಳಾಗಿರಬೇಕು. ಆದ್ದರಿಂದ **ನಾವು ಕ್ರಿಸ್ತನ ರಾಯಭಾರಿಗಳಾಗಿದ್ದೇವೆಂದು** (2 ಕೊರಿಂಥ 5:20) ಮತ್ತು ಸ್ತ್ರೀ ಪುರುಷರು ದೇವರಲ್ಲಿ ಒಂದಾಗುವುದಕ್ಕಾಗಿ ನಾವು ರಾಯಭಾರಿಗಳಂತೆ ಕೆಲಸ ಮಾಡಬೇಕು ಎಂದು ಪೌಲನು ಹೇಳಿದನು.

ಕಡೆಯದಾಗಿ, ಯೇಸುಕ್ರಿಸ್ತನಿಗೆ ಸಾಕ್ಷಿಗಳಾಗಿರಬೇಕು. ಇದರ ಅರ್ಥ, ಲೋಕದ ಕಟ್ಟಕಡೆಯವರೆಗೂ ಹೋಗುವುದು ಮತ್ತು ಆತನಿಗೆ ಶಿಷ್ಯರನ್ನು ಮಾಡುವುದು. ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ **"........ ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ನನ್ನ ಶಿಷ್ಯರನ್ನಾಗಿ ಮಾಡಿರಿ. ಅವರಿಗೆ ತಂದೆಯ, ಮಗನ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ, ನಾನು ನಿಮಗೆ ಆಜ್ಞಾಪಿಸಿದ್ದೆಲ್ಲವನ್ನು ಕೈಕೊಳ್ಳುವ ಹಾಗೆ ಅವರಿಗೆ ಬೋಧಿಸಿರಿ"** (ಮತ್ತಾಯ 28:19-20).

ನಮ್ಮ ಸಾಕ್ಷಿಯ ಉದ್ದೇಶವೇನಾಗಿರಬೇಕು? ಪ್ರೀತಿಯಾಗಿರಬೇಕು. ಎರಡನೆಯ ಮಹಾ ಆಜ್ಞೆಯು ಹೇಳುತ್ತದೆ, **ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸು** (ಮಾರ್ಕ 12:31). ವಿಶ್ವಾಸಿಗಳಾದ ನಾವು ಜೀವದ ರೊಟ್ಟಿಯನ್ನು ಕಂಡುಕೊಂಡಿದ್ದೇವೆ. ಒಂದು ವೇಳೆ ನಾವು ನೆರೆಯವನನ್ನು ಪ್ರೀತಿಸಿದ್ದೇ ಆದರೆ ಅದನ್ನು ಕಂಡುಕೊಳ್ಳುವುದು ಎಲ್ಲಿ ಎಂದು ಅವನಿಗೆ ತೋರಿಸಿಕೊಡುತ್ತೇವೆ.

ಯೇಸುಕ್ರಿಸ್ತನು ತನ್ನ ಬಳಿಗೆ ನಮ್ಮನ್ನು ಕರೆದ ಮತ್ತು ಸಭೆಯನ್ನಾಗಿ ಮಾಡಿದ ಉದ್ದೇಶ, ನಾವು ಆತನಿಗೆ ಫಲ ಕೊಡುವವರಾಗಬೇಕು ಎಂಬುದೇ. **"ನೀವು ನನ್ನನ್ನು ಆರಿಸಿಕೊಳ್ಳಲಿಲ್ಲ. ನಾನೇ ನಿಮ್ಮನ್ನು ಆರಿಸಿಕೊಂಡಿದ್ದೇನೆ. ನೀವು ಹೋಗಿ ಫಲ ಕೊಡುವಂತೆಯೂ ನೀವು ಕೊಡುವ ಫಲವು ನಿಲ್ಲುವಂತಾಗಬೇಕೆಂತಲೂ ನಿಮ್ಮನ್ನು ನೇಮಿಸಿದ್ದೇನೆ"** (ಯೋಹಾನ 15:16). ಈ ಸನ್ನಿವೇಶದಲ್ಲಿ ಫಲಗಳು ಎಂಬುದರ ಅರ್ಥ ಹೊಸ ಶಿಷ್ಯರು. **"ತಂದೆಯು ನನ್ನನ್ನು ಕಳುಹಿಸಿ ಕೊಟ್ಟಂತೆಯೇ ನಾನು ನಿಮ್ಮನ್ನು ಕಳುಹಿಸುವೆನು"** ಎಂದು ಯೇಸು ಕ್ರಿಸ್ತನು ಹೇಳಿದನು (ಯೋಹಾನ 20:21). ಯೇಸುಕ್ರಿಸ್ತನು ಯಾಕೆ ಕಳುಹಿಸಲ್ಪಟ್ಟನು? **"ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು"** ಆತನು ಈ ಲೋಕಕ್ಕೆ ಕಳುಹಿಸಲ್ಪಟ್ಟನು (ಯೋಹಾನ 3:16). ಇದನ್ನು ಯೋಚಿಸಿರಿ. ತಂದೆಯು ಯೇಸುಕ್ರಿಸ್ತನನ್ನು ಹೇಗೆ ಮತ್ತು ಯಾವ ಉದ್ದೇಶಕ್ಕಾಗಿ ಕಳುಹಿಸಲ್ಪಟ್ಟನೋ ಅದೇ ಉದ್ದೇಶಕ್ಕಾಗಿ ಮತ್ತು ಅದೇ ರೀತಿಯಾಗಿ ನಾವು ಕಳುಹಿಸಲ್ಪಟ್ಟಿದ್ದೇವೆ. ಸಭೆಯಾಗಿರುವಂತಹ ನಾವು, ಈ ದಿನಗಳಲ್ಲಿ ಪ್ರಕಾಶಿಸುವ ಬೆಳಕಾಗಿದ್ದುಕೊಂಡು ಕ್ರಿಸ್ತನ ಕೆಲಸವನ್ನು ಈ ಲೋಕದಲ್ಲಿ ಮುಂದುವರಿಸುತ್ತಾ ಸ್ತ್ರೀಪುರುಷರನ್ನು ಸ್ವರ್ಗದ ಮಾರ್ಗದಲ್ಲಿ ಮತ್ತು ನಿತ್ಯ ಜೀವಕ್ಕೆ ನಡೆಸಬೇಕು.

ಬೆಳಕು ಹೊರ ಚಿಮ್ಮಿ ಕತ್ತಲೆಯನ್ನು ಹೋಗಲಾಡಿಸುವುದು ಹಾಗೆಯೇ ಸಭೆಯು "ಜನರನ್ನು ಮುಟ್ಟುವಂತಹ ಉದ್ದೇಶವನ್ನಿರಿಸಿಕೊಂಡಿರುವುದನ್ನು ನಾವು ನೋಡಬೇಕಾಗಿದೆ. ದುಃಖದ ಸಂಗತಿ ಏನೆಂದರೆ ಅನೇಕ ಸಭೆಗಳು ತಾವು

ಸ್ಥಾಪಿಸಲ್ಪಟ್ಟಂತಹವುಗಳ ಮೇಲೆ, ತಮ್ಮ ಒಳ ಚಟುವಟಿಕೆಗಳಲ್ಲಿ ಮಗ್ನವಾಗಿ ಬಿಡುತ್ತವೆ. ಅವುಗಳು ಸಾರ್ವಜನಿಕ ಸಂಘಸಂಸ್ಥೆ ಅಥವಾ ಸಾಮಾಜಿಕ ಕೂಟಗಳಂತೆ ಆಗಿಬಿಡುತ್ತವೆ. ಸಭೆಯ ಸದಸ್ಯರು ತಮಗೆ ಸಭೆಯ ಮೂಲಕ ದೊರೆಯುವುದಕ್ಕೆ ನಿರೀಕ್ಷೆಯನ್ನಿಟ್ಟುಕೊಂಡಿರುವಂತಹವುಗಳ ಬಗ್ಗೆ ಮಾತ್ರ ಯೋಚಿಸುತ್ತಾರೆ ಮತ್ತು ತಾವು ಹೊಂದಿದ ಆಶೀರ್ವಾದಗಳನ್ನು ಸಭೆಯ ಮೂಲಕ ಇತರರಿಗೆ ಕೊಡಲೇಬೇಕು ಎಂಬಂತಹ ಆಲೋಚನೆಯನ್ನೇ ನಿಲ್ಲಿಸಿಬಿಡುತ್ತಾರೆ. ಕ್ರೈಸ್ತರಿಗೆ ಸಭೆಯು ಕೇವಲ ಭದ್ರತೆಯ ಆಶ್ರಯ ತಾಣದಂತಾಗಿರಲಿಲ್ಲ. ಪ್ರಾಥಮಿಕವಾಗಿ ಸಾಕ್ಷಿಗಳಾಗಿದ್ದಂತೆ, ರಾಯಭಾರಿಗಳನ್ನು ಫಲ ಕೊಡುವಂತಹವರನ್ನು, ಶಿಷ್ಯರನ್ನು ಮಾಡುವಂತಹ, ಸುವಾರ್ತಾ ಸೇವೆಯನ್ನು ಮಾಡುವಂತಹವರನ್ನು ಸಿದ್ಧಮಾಡಿ ಅವರನ್ನು ಕಳುಹಿಸುವುದನ್ನು ಸಭೆಯು ಮಾಡುತ್ತಿತ್ತು.

ಕ್ರಿಸ್ತನ ಸಭೆಯು ಸಾಕ್ಷಿ ಕೊಡುವ ಸಭೆ, ಸುವಾರ್ತೆಯನ್ನು ಸಾರುವುದಕ್ಕೆ ಕಳುಹಿಸುವ ಸಭೆಯಾಗಿದೆ. ಯೂರೋಪ್ ಖಂಡದಲ್ಲಿ ಸಭೆಯು ಹೇಗೆ ಪ್ರಾರಂಭವಾಯಿತು? ಪೌಲನೆಂಬ ಒಬ್ಬನು ಮಕೆದೋನಿಯಾದ (ಗ್ರೀಸ್) ಫಿಲಿಪ್ಪಿ ಎಂಬಲ್ಲಿಗೆ ಹೋಗಿದ್ದರಿಂದ ಮತ್ತು ಅಲ್ಲಿ ಸಭೆಯನ್ನು ಸ್ಥಾಪಿಸಿದ್ದರಿಂದ (ಅ.ಕೃ. 16:9-15, 40) ಭಾರತದೇಶದಲ್ಲಿ ಸಭೆಯು ಹೇಗೆ ಪ್ರಾರಂಭವಾಯಿತು? ಕೆಲವು ಕ್ರೈಸ್ತರು ಭಾರತಕ್ಕೆ ಪ್ರಯಾಣಿಸಿ ಸುವಾರ್ತೆಯನ್ನು ಸಾರಿದ್ದರಿಂದಲೇ. ಅಪೋಸ್ತಲನಾದ ಶ್ರೀ ತೋಮನೆ ಸ್ವತಃ ಭಾರತಕ್ಕೆ ಬಂದ ಪ್ರಥಮ ಸುವಾರ್ತಾ ಪ್ರಚಾರಕ ಎಂದು ಅನೇಕರು ಹೇಳುತ್ತಾರೆ. ಚೈನಾ ದೇಶದಲ್ಲಿ ಹೇಗೆ ಸಭೆಯು ಪ್ರಾರಂಭವಾಯಿತು? ಕೊರಿಯಾ ದೇಶದಲ್ಲಿ ಹೇಗಾಯಿತು? ಆಫ್ರಿಕಾ ದೇಶದಲ್ಲಿ ಹೇಗಾಯಿತು? ಈ ಎಲ್ಲಾ ಸ್ಥಳಗಳಿಗೆ ಸಾಕ್ಷಿಗಳು ಹೋಗಿ ಮತ್ತು ಸುವಾರ್ತೆಯನ್ನು ಸಾರಿದ ಈ ಒಂದು ಕಾರಣದಿಂದಲೇ. ಖಂಡಿತವಾಗಿಯೂ ಸಭೆಯಲ್ಲಿರು ಎಲ್ಲ ಸದಸ್ಯರು, ದೂರದ ಸ್ಥಳಗಳಿಗೆ ಹೋಗಿ, ಸುವಾರ್ತೆಯನ್ನು ಸಾರಬೇಕೆಂದು ಕರೆಯಲ್ಪಟ್ಟಿಲ್ಲ. ಆದಾಗ್ಯೂ ಈ ಕೆಲಸವನ್ನು ಮಾಡುವುದಕ್ಕೋಸ್ಕರ ಕೆಲವರು ಕರೆಯಲ್ಪಟ್ಟಿದ್ದಾರೆ. ಆದರೆ ಸಭೆಯ ಪ್ರತಿಯೊಬ್ಬನು, ಪ್ರತಿಯೊಬ್ಬಳು ವಾಸಿಸುವ ಮತ್ತು ಕೆಲಸ ಮಾಡುವ ಸ್ಥಳದಲ್ಲಿ ಸಾಕ್ಷಿಯುಳ್ಳವರಾಗಿರುವುದಕ್ಕೆ ಕರೆಯಲ್ಪಟ್ಟಿದ್ದಾರೆ (ಅ.ಕೃ. 1:8) ಸ್ಥಳೀಯ ಪ್ರದೇಶದಲ್ಲಿ ಮಾತ್ರವಲ್ಲದೆ ವಿಶ್ವದ ಕಟ್ಟಕಡೆಯವರೆಗೂ ಸಾಕ್ಷಿಯನ್ನು ಕೊಡುವಂತಹದ್ದೇ ಸಭೆಯ ಮೂಲ ಉದ್ದೇಶವಾಗಿರಬೇಕು ಎಂಬ ವಿಷಯವನನ್ನು ಸಭೆಯ ಪ್ರತಿಯೊಬ್ಬ ಸದಸ್ಯನು ತನ್ನ ಗಮನದಲ್ಲಿಟ್ಟುಕೊಂಡಿರುವುದು ಅಗತ್ಯವಾಗಿದೆ.

ಸಭೆಯು ದೇಹವಿದ್ದಂತೆ (1 ಕೊರಿಂಥ 12:27) ರಕ್ತವನ್ನು ತಳ್ಳಿ ಸರಬರಾಜು ಮಾಡುವುದು ಹೃದಯದ ಮುಖ್ಯ ಕೆಲಸ. ಉಸಿರಾಟವನ್ನು ಮಾಡುವುದು ಶ್ವಾಸಕೋಶದ ಕೆಲಸ. ಕೇಳಿಸಿಕೊಳ್ಳುವುದು ಕಿವಿಯ ಪ್ರಮುಖ ಕೆಲಸ. ನಡೆಯುವುದು ಕಾಲಿನ ಪ್ರಧಾನ ಕೆಲಸ. ಆದರೆ ಇವೆಲ್ಲವುಗಳ ಪ್ರಮುಖ ಉದ್ದೇಶ ದೇಹದ ಪ್ರತಿಯೊಂದು ಅಂಗಾಂಗವು ಕೆಲಸ ಮಾಡುತ್ತಾ ಜೀವಿಸುತ್ತಿರಬೇಕು ಎಂಬುದೇ ಆಗಿದೆ ಮತ್ತು ಸಭೆಯ ಪ್ರತಿಯೊಬ್ಬ ಸದಸ್ಯನು ಸಹ ಇದರಂತೆಯೇ ಇರಬೇಕು.

ಒಂದು ವೇಳೆ ಯಾವುದಾದರೂ ಸಭೆಯು ಸಾಕ್ಷಿಯನ್ನು ಕೊಡದಿದ್ದರೆ, ಸುವಾರ್ತೆಯನ್ನು ಹೇಳದಿದ್ದರೆ, ಇದು ಸಾಯುವಂತಹ ಸಭೆಯಾಗಿದೆ. ಸಭೆಯ ಆತ್ಮಿಕ ಆರೋಗ್ಯದ ಮಟ್ಟವನ್ನು ಅಳೆಯುವುದು ಸಭೆಯ ಸದಸ್ಯರ ಸಂಖ್ಯೆಯ ಆಕರ್ಷಣೆಯಿಂದಲ್ಲ ಬದಲಾಗಿ ಆ ಸಭೆಯಿಂದ ಕಳುಹಿಸಲ್ಪಡುತ್ತಿರುವ ಸುವಾರ್ತಿಕರ (ಸಾಕ್ಷಿಗಳ) ಆಧಾರದಿಂದ.

ಸಭೆಯ ಮುಖ್ಯ ಚಟುವಟಿಕೆಗಳಲ್ಲಿ ಈ ಸುವಾರ್ತಾ ಪ್ರಚಾರದ ಕೆಲಸವು ಸಹ ಒಂದು ಭಾಗವಾಗಿದೆ. ಆರಾಧನೆ, ಅನ್ಯೋನ್ಯತೆ, ಬೋಧನೆ ಮತ್ತು ಸುವಾರ್ತಾ ಪ್ರಚಾರಕರನ್ನು ಕಳುಹಿಸುವುದು, ಎಂಬಂತಹ ನಾಲ್ಕು ಕಾಲಿನಿಂದ ಮಾಡಲ್ಪಟ್ಟ ಮೇಜಿನಂತೆ ಸಭೆಯನ್ನು ಚಿತ್ರಿಸಿಕೊಳ್ಳುತ್ತಾರೆ. ಆದರೆ ಕ್ರಿಸ್ತನ ಸಭೆಗೆ ಇದು ಅಪೂರ್ಣವಾದಂತಹ ಹೋಲಿಕೆಯಾಗಿದೆ. ಸುವಾರ್ತಾ ಪ್ರಚಾರದ ಸೇವೆಯು ಎತ್ತರವಾದ ಮೇಜಿನ ಮೇಲಿರುವ ದೀಪವಿದ್ದಂತೆ! ಆರಾಧನೆ, ಅನ್ಯೋನ್ಯತೆ ಮತ್ತು ಬೋಧನೆಗಳೆಂಬ ಈ ಮೂರು ಕಾಲುಗಳು ಮಾತ್ರ ಮೇಜಿಗೆ ಅಗತ್ಯ. ಆರಾಧನೆ, ಅನ್ಯೋನ್ಯತೆ ಮತ್ತು ಬೋಧನೆಗಳು ತಮ್ಮಷ್ಟಕ್ಕೆ ತಾವೇ ಕೊನೆಗೊಳ್ಳುವುದಿಲ್ಲ; ಸುವಾರ್ತಾ ಪ್ರಚಾರದ ಸಹಾಯಕ್ಕಾಗಿ ಸಹಾಯವಾಗುವಂತಹ ಮೇಜಿನ ಕಾಲುಗಳಿದ್ದಂತೆ.

ಆದುದರಿಂದ ಸುವಾರ್ತಾ ಸೇವೆಗೆ ಕಳುಹಿಸುವಂತಹದ್ದು (ಸುವಾರ್ತೆಯನ್ನು ಹೇಳುವುದು ಮತ್ತು ಸಾಕ್ಷಿ ಕೊಡುವುದು) ಕ್ರಿಸ್ತನ ಸಭೆಯ ಪ್ರಾಥಮಿಕ ಉದ್ದೇಶವಾಗಿರಬೇಕು ಎಂದು ನಾವು ಮತ್ತೊಮ್ಮೆ ಹೇಳಲೇ ಬೇಕಾಗಿದೆ.

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಸುವಾರ್ತಾ ಪ್ರಚಾರಕ್ಕೆ ಕಳುಹಿಸುವಂತದ್ದು ಸಭೆಯ ಕಾರ್ಯಕಲಾಪಗಳಲ್ಲಿ ಒಂದಲ್ಲ, ಇದು ಎಲ್ಲರೂ ತಮ್ಮನ್ನು ತೊಡಗಿಸಿಕೊಳ್ಳುವಂತಹ ಸಭೆಯ ಕಾರ್ಯಕ್ರಮವಾಗಿರಬೇಕು. ಈ ಸತ್ಯವನ್ನು ನಾವು ಗಮನದಲ್ಲಿಟ್ಟುಕೊಂಡಾಗ, ಸಭೆಯ ಸೇವೆಯಲ್ಲಿಯೂ ಮತ್ತು ಸಭೆಯ ಪ್ರತಿ ಸದಸ್ಯರಲ್ಲಿಯೂ ಸರಿಯಾದ ಸಮತೋಲನವಾಗುವುದು. ಕ್ರೈಸ್ತರಾದ ನಾವು ಆಗಾಗ್ಗೆ ಈ ದ್ವಿತೀಯ (ಪ್ರಾಥಮಿಕವಲ್ಲದ) ಉದ್ದೇಶಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತವೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಮೂಲ ಉದ್ದೇಶ ಹಾಗೂ ಗುರಿಗಳಿಂದ ದೂರವಾಗುತ್ತೇವೆ. ದ್ವಿತೀಯ

(ಪ್ರಾಥಮಿಕವಲ್ಲದ) ಕಾರ್ಯಕ್ರಮಗಳಾದ ಸಾಮಾಜಿಕ ನ್ಯಾಯ, ಪ್ರಕೃತಿಯ ರಕ್ಷಣೆ, ಉತ್ತಮ ಆರೋಗ್ಯ, ಉತ್ತಮ ವಿದ್ಯಾಭ್ಯಾಸ, ಆರ್ಥಿಕ ಅಭಿವೃದ್ಧಿ ಇನ್ನು ಮುಂತಾದವುಗಳಾದ ಇವೆಲ್ಲವೂ ಬಹಳ ಒಳ್ಳೆಯವೆ ಮತ್ತು ಮುಖ್ಯವಾದ ಚಿಂತನೆಗಳು ಹಾಗೂ ಕ್ರೈಸ್ತರು ಇವುಗಳಲ್ಲಿರಲೇಬೇಕು. ಆದರೆ ಸ್ತ್ರೀಪುರುಷರನ್ನು ಕ್ರಿಸ್ತನ ಬಳಿಗೆ ಮತ್ತು ಆತನ ರಕ್ಷಣೆಗೆ ನಡೆಸುವಂತಹ ಪ್ರಾಥಮಿಕ ಉದ್ದೇಶದ ಮುಂದೆ ಇವುಗಳು ಪ್ರಾಥಮಿಕವಲ್ಲದ (ದ್ವಿತೀಯ) ಚಿಂತನೆಗಳಾಗಿರಬೇಕು. ಒಬ್ಬನನ್ನು ನಿತ್ಯಜೀವಕ್ಕೆ ನಡೆಸಿ ಸ್ವರ್ಗಕ್ಕೆ ಸೇರಿಸುವುದರ ಮುಂದೆ ಭೂಮಿಯ ಮೇಲೆ ಕೆಲ ವರ್ಷ ಜೀವಿಸುವುದಕ್ಕೆ ಕೊಡುವ ಬಹುಮಾನವಾದ ಸುಧಾರಣೆಯೆಂಬ ಇದನ್ನು ಹೋಲಿಸಿದಾಗ ಇದು ಅತಿಮುಖ್ಯವಲ್ಲ. ನಾವು ನಮ್ಮ ಸೇವೆಯ ಅಂತಿಮ ಗುರಿಯ ಮೇಲೆ ದೃಷ್ಟಿಯಿಡಬೇಕು. ದೇವರೊಂದಿಗೆ ಜನರು ಒಂದಾಗುವಂತೆ ಮಾಡಬೇಕು ಮತ್ತು ದೇವರ ರಾಜ್ಯಕ್ಕೆ ಅವರನ್ನು ತರಬೇಕು, (2 ಕೊರಿಂಥ 5:18-20ನ್ನು ಮತ್ತು ವ್ಯಾಖ್ಯಾನವನ್ನು ನೋಡಿರಿ).

ಯೇಸುಕ್ರಿಸ್ತನು ತನ್ನ ಗುರಿಯ ಮೇಲೆ ದೃಷ್ಟಿಯನ್ನಿಟ್ಟಿದ್ದನು. ಆತನು ಪ್ರಸಂಗಿಸಿದನು, ಕಲಿಸಿದನು, ಗುಣಪಡಿಸಿದನು ಮತ್ತು ಅದ್ಭುತಗಳನ್ನು ಮಾಡಿದನು. ಆದರೆ ಆತನ ಎಲ್ಲಾ ಚಟುವಟಿಕೆಗಳ ಗುರಿಯು ಒಂದೇ ಆಗಿತ್ತು. ಅದು ಜನರನ್ನು ದೇವರೊಂದಿಗೆ ಒಂದುಗೂಡಿಸುವುದು. ಆತನು ಮಾಡಿದ ಇತರ ಅದ್ಭುತಗಳು ಮತ್ತು ಗುಣಪಡಿಸುವಿಕೆಗಳು ತಮ್ಮಷ್ಟಕ್ಕೆ ತಾವೇ ಅಂತ್ಯಗೊಳ್ಳಲಿಲ್ಲ. ಜನರು ಆತನ ಮಾತುಗಳನ್ನು ಕೇಳಲೆಂದು ಮತ್ತು ಆತನು ದೇವರ ಮಗನು ಎಂಬುದನ್ನು ಅವರು ಕಂಡುಕೊಳ್ಳಲೆಂದು ಅವರಿಗಾಗಿ ಸೂಚಕ ಕಾರ್ಯಗಳನ್ನು ಮಾಡಿದನು. ಆತನು ತಾನು ಅದ್ಭುತಗಳನ್ನು ಮಾಡುವಂತಹವನೆಂದು ತನ್ನನ್ನು ತೋರಿಸಿಕೊಳ್ಳಲು ಮಾಡಲಿಲ್ಲ. ಆತನು ತನ್ನಿಂದ ಗುಣ ಹೊಂದಿದ ಪ್ರತಿಯೊಬ್ಬನಿಗೂ ಬೇರೆಯವರಿಗೆ ಅದರ ಬಗ್ಗೆ ಹೇಳಬೇಡವೆಂದು ಸೂಚಿಸಿದನು. ಜನರು ತಮ್ಮ ಆತ್ಮಿಕ ಅಗತ್ಯತೆಗಳ ಕಡೆಗಿರುವ ದೃಷ್ಟಿಯನ್ನು ಅವರಿಂದ ತೆಗೆಯಬೇಕೆಂಬುದಾಗಿರಲಿಲ್ಲ. ಆತನು ಗ್ರಾಮದಲ್ಲಿಯೇ ಇದ್ದು ಗುಣಪಡಿಸುವಿಕೆ ಅದ್ಭುತಗಳನ್ನು ಮಾಡುವುದಕ್ಕಾಗಿ ತಮ್ಮ ಗ್ರಾಮಗಳಲ್ಲಿಯೆ ಇರಬೇಕೆಂದು ಒತ್ತಾಯಿಸಿದಾಗ ಯೇಸುಕ್ರಿಸ್ತನು ನಿರಾಕರಿಸಿದನು ಮತ್ತು **ನಾನು ದೇವರ ರಾಜ್ಯದ ಸುವಾರ್ತೆಯನ್ನು ಬೇರೆ ಊರುಗಳಿಗೂ ಸಾರಿ ಹೇಳಬೇಕಾಗಿದೆ; ಇದಕ್ಕಾಗಿಯೇ ಕಳುಹಿಸಲ್ಪಟ್ಟಿದ್ದೇನೆ** ಎಂದು ಹೇಳಿದನು (ಲೂಕ 4:43). ಸ್ತ್ರೀಯರನ್ನು ಮತ್ತು ಪುರುಷರನ್ನು ದೇವರ ರಾಜ್ಯದೊಳಗೆ ತರಬೇಕು ಎಂಬುದೇ ಆತನ ಮುಖ್ಯ ಕೆಲಸವಾಗಿತ್ತು. ಅದು ಆತನ ಮುಖ್ಯ ಕೆಲಸವಾಗಿದ್ದರಿಂದ ನಾವು ಸಭೆಯಾಗಿಯೂ ವೈಯಕ್ತಿಕವಾಗಿ ಮಾಡುವ ಕೆಲಸ ಇದಾಗಿದೆ.

ಈ ಉದ್ದೇಶದ ಅಥವಾ ಸಭೆಯ ಸುವಾರ್ತಾ ಪ್ರಚಾರದ ಸೇವೆಯ ಬಗ್ಗೆ ಹೇಳಲಿಕ್ಕೆ ಕಡೆಯ ಮಾತುಂಟು. ಯಾವಾಗ ಕಳುಹಿಸುವಂತಹ ಉದ್ದೇಶವು ನೆರವೇರುವುದೋ ಆಗ ಕ್ರಿಸ್ತನು ಬರುವನು ಮತ್ತು ಲೋಕಕ್ಕೆ ಅಂತ್ಯವಾಗುವುದು. ಯೇಸುಕ್ರಿಸ್ತನು **ಪರಲೋಕರಾಜ್ಯದ ಈ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಯಾಗಿ ಸಾರವಾಗುವುದು; ಆಗ ಅಂತ್ಯವು ಬರುವುದು** ಎಂದು ಹೇಳಿದನು (ಮತ್ತಾಯ 24:14).

ನಾವು ಎಲ್ಲ ಕುಲಭಾಷೆಗಳವರಿಗೆ ಸುವಾರ್ತೆಯನ್ನು ಸಾರಬೇಕೆಂದು ನಮಗಾಗಿ ಯೇಸುಕ್ರಿಸ್ತನು ಕಾಯುತ್ತಿದ್ದಾನೆ. ವಿವಿಧ ವ್ಯತ್ಯಾಸಗಳುಳ್ಳ ಸಾಂಸ್ಕೃತಿಕ ಹಿನ್ನಲೆಯ ಸಾವಿರಾರು ಗುಂಪುಗಳು ವಿಶ್ವದಲ್ಲಿವೆ. ಮತ್ತಾಯ 24:14ರಲ್ಲಿ ಮತ್ತು 28:19ರಲ್ಲಿ ಈ ಗುಂಪುಗಳು[1] ಜನಾಂಗಗಳೆಂದು ಕರೆಯಲ್ಪಟ್ಟಿವೆ ಕನಿಷ್ಟಪಕ್ಷ ಇಂತಹ[2] 10,000 ಪ್ರತ್ಯೇಕ ಗುಂಪುಗಳಿವೆ ಎಂದು ಅಂದಾಜಿಸಲಾಗಿದ್ದು ಈಗಲೂ ಇವರ ಮಧ್ಯದಲ್ಲಿ ವೈಯಕ್ತಿಕವಾಗಿ ಸಾಕ್ಷಿಯ ರೂಪದಲ್ಲಿ ಸುವಾರ್ತೆಯು ಇನ್ನು ತಲುಪಿಲ್ಲ.

ಸುವಾರ್ತೆಯು ತಲುಪದಿರುವ ಜನಾಂಗಗಳಿಗೆ ತ್ವರಿತಗತಿಯಲ್ಲಿ ಕ್ರಿಸ್ತನ ಸುವಾರ್ತೆಯು ಮುಟ್ಟುಂತೆ ಮತ್ತು ಸಾಕ್ಷಿ ಕೊಡುವಂತಹ ತಮ್ಮ ಪ್ರತಿಯೊಂದು ಒಳಪಂಗಡಗಳಲ್ಲಿ ಸ್ವತಃ ಪುನರುತ್ಪತ್ತಿ ಮಾಡುವಂತಹ ಸಭೆಗಳನ್ನು ಸ್ಥಾಪಿಸುವ ಈ ಮಹತ್ತರ ಕಾರ್ಯವು ಪ್ರತಿಯೊಬ್ಬ ಕ್ರೈಸ್ತನ ಪ್ರಧಾನ ಕೆಲಸವಾಗಿರಬೇಕು. ಈ ಕಾರ್ಯವನ್ನು ಸಾಧಿಸುವವರೆಗೆ ಸಭೆಯ ಉದ್ದೇಶವು ನೇರವಾಗಿರುವುದಿಲ್ಲ ಮತ್ತು ಕ್ರಿಸ್ತನು ಹಿಂತಿರುಗಿ ಬರುವುದಿಲ್ಲ.

ಈ ಕಾರ್ಯವು ಎಷ್ಟು ದೊಡ್ಡದಿದೆ? ಜನಸಂಖ್ಯೆಯ ಬೆಳವಣಿಗೆಯಿಂದಾಗಿ ವಿಶ್ವದಲ್ಲಿ ಕ್ರೈಸ್ತರಲ್ಲದವರ ಸಂಖ್ಯೆಯು ಹೆಚ್ಚಾಗಿರುವುದನ್ನು ಈ ಹಿಂದಿನದಕ್ಕಿಂತಲೂ ಈಗಿನ ಚರಿತ್ರೆಯಲ್ಲಿ ನೋಡುತ್ತಿದ್ದೇವೆ. ಮತ್ತೊಂದೆಡೆ ಈ ಕಾರ್ಯವನ್ನು ಸಾಧಿಸಲು ಹೆಚ್ಚಿನ ಕ್ರೈಸ್ತರು ಹಿಂದಿನದಕ್ಕಿಂತಲೂ ಈಗ ಹೆಚ್ಚಾಗಿ ದೊರಕುವವರಾಗಿದ್ದಾರೆ. ಈ ಮಹತ್ವವಾದ ಕಾರ್ಯವನ್ನು ಮಾಡಲು ಸಾಧ್ಯ. ಕ್ರಿ.ಶ. 100ನೇ ಶತಮಾನದಲ್ಲಿ 360 ಕ್ರೈಸ್ತರಲ್ಲದವರಿಗೆ ಸಾಕ್ಷಿ ಕೊಡುವಂತಹ ಒಬ್ಬ ಕ್ರೈಸ್ತನಿದ್ದನು. 1950ರಲ್ಲಿ ಕ್ರೈಸ್ತರಲ್ಲದ 20 ಜನರಿಗೆ ಸಾಕ್ಷಿ ಕೊಡುವಂತಹ ಒಬ್ಬ ಕ್ರೈಸ್ತನಿದ್ದನು. ಈ ದಿನಗಳಲ್ಲಿ ಕ್ರೈಸ್ತರಲ್ಲದ ಪ್ರತಿ ಏಳು ಜನರಿಗೆ ಸಾಕ್ಷಿ ಕೊಡುವಂತಹ ಒಬ್ಬ ಕ್ರೈಸ್ತನಿದ್ದಾನೆ. ಈ ಶತಮಾನದ ಅಂತ್ಯದಲ್ಲಿ ಕ್ರೈಸ್ತರಲ್ಲದ ಪ್ರತಿನಾಲ್ಕು ಜನರಿಗೆ ಸಾಕ್ಷಿ ಕೊಡುವಂತಹ ಒಬ್ಬ ಕ್ರೈಸ್ತನಿರುವನು. ಈ ರೀತಿಯಾಗಿ ನಾವು ಈ ಮಹತ್ತರವಾದ ಕಾರ್ಯವನ್ನು ಮಾಡಿ ಮುಗಿಸಬಹುದು.

ಸರಿಯಾದ ವಿಧಾನದಿಂದ ಸುವಾರ್ತೆಯನ್ನು ಇನ್ನೂ ಕೇಳದೆಯೇ ಇರುವಂತಹ 200 ಕೋಟಿ ಜನರು ಪ್ರಪಂಚದಲ್ಲಿದ್ದಾರೆ. ಇವರನ್ನು ತಲುಪುವುದೇ ಸಭೆಯ ಉದ್ದೇಶವಾಗಿರಬೇಕು. ಕೆಲವರು ಸುವಾರ್ತಾ ಸೇವೆಗೆ ಕಳುಹಿಸುವಂತ ಕ್ರೈಸ್ತರಾಗಿರುತ್ತಾರೆ. ಅಂದರೆ ಪ್ರಾರ್ಥಿಸುವುದು, ಧನಸಹಾಯ ಮಾಡುವುದು ಮತ್ತು ಪ್ರೋತ್ಸಾಹಿಸುವುದು. ಕೆಲವರು ತಾವೇ ಹೋಗುವುದಕ್ಕಾಗಿ ಕರೆಯಲ್ಪಟ್ಟಿದ್ದಾರೆ. ಕಳುಹಿಸುವವರು ಮತ್ತು ಹೋಗುವವರು ಆದ ಇವರಿಬ್ಬರ ಅಗತ್ಯ ದೇವರಿಗಿದೆ. ಒಬ್ಬನು ವಿದೇಶಕ್ಕೆ ಹೋದರೂ ಸರಿ, ಸ್ವದೇಶದಲ್ಲಿದ್ದರೂ ಸರಿ ಅಥವಾ ಸ್ವ ಜನಾಂಗದವರ ಮಧ್ಯದಲ್ಲಿದ್ದರೂ ಸರಿ, ಸಾಕ್ಷಿಯನ್ನು ಕೊಡುವ ಕ್ರೈಸ್ತನಾಗಿರಬೇಕು. ನಾವು ಎಲ್ಲೆಲ್ಲಿ ಸೇವೆಗೆ ಅಥವಾ ಕೆಲಸಕ್ಕೆ ಕರೆಯಲ್ಪಟ್ಟಿದ್ದೇವೆಯೋ ಅದೇ ಸ್ಥಳದಲ್ಲಿ ನಾವು ಸಮರ್ಪಿಸಲ್ಪಟ್ಟವರಾಗಿ ಮತ್ತು ಪವಿತ್ರತೆಯಿಂದ ಇರುವುದನ್ನು ಆತನು ನಮ್ಮಿಂದ ಬಯಸುತ್ತಾನೆ.

---

[1]ಮತ್ತಾಯ 28:19ರಲ್ಲಿರುವ ದೇಶಗಳು ಎಂಬ ಗ್ರೀಕ್ ಪದದ ಅರ್ಥವು ಭೌಗೋಳಿಕವಾದ ರಾಷ್ಟ್ರ ಎಂಬ ಅರ್ಥವನ್ನು ಕೊಡುವುದಿಲ್ಲ ಬದಲಾಗಿ ಒಂದೇ ಭಾಷೆ ಹಾಗೂ ಸಂಸ್ಕೃತಿಯನ್ನು ಹೊಂದಿದ ಜನಗಳ ಸಮೂಹಗಳು ಅಥವಾ ಗುಂಪುಗಳು ಎಂದು ಅರ್ಥ)

[2]ಇಲ್ಲಿರುವ ಗುಂಪುಗಳ ಸಂಖ್ಯೆಯ ಬಗ್ಗೆ ವಾದವಿವಾದಗಳಿವೆ. ಇವುಗಳನ್ನು ಹೇಗೆ ಉಪಯೋಗಿಸುತ್ತಾರೆ ಮತ್ತು ಹೇಗೆ ಉಪಗುಂಪುಗಳಾಗಿ ವಿಂಗಡಿಸುತ್ತಾರೆ ಎಂಬುದರ ಮೇಲೆ ಅವಲಂಬಿತವಾಗಿವೆ.

# ಪುನರುಜ್ಜೀವನ

ಹೆಚ್ಚಿನ ಕ್ರೈಸ್ತರು ಕ್ರಿಸ್ತನನ್ನು ಕಂಡುಕೊಂಡ ಪ್ರಾರಂಭದ ದಿನಗಳಲ್ಲಿ ಸ್ವಾತಂತ್ರ, ಪ್ರೀತಿ ಮತ್ತು ಮಹಾ ಆನಂದದಿಂದ ತುಂಬಿದವರಾಗಿರುತ್ತಾರೆ. ಕ್ರಿಸ್ತನಿಗೆ ಬಹಳ ಸಮೀಪದಲ್ಲಿದ್ದೆವೆಂದು ಭಾವಿಸುತ್ತಾರೆ. ಕ್ರಿಸ್ತನ ಸೇವೆ ಮಾಡಲು ಅವರ ಹೃದಯಗಳು ಆಸೆಯಿಂದ ಹಾತೊರೆಯುತ್ತಿರುತ್ತವೆ. ಆದರೆ ಕಾಲಾನುಕ್ರಮವಾಗಿ, ಅವರಲ್ಲಿನ ಮೊದಲಿನ ಶ್ರದ್ಧೆಯು ಕುಂದುತ್ತಾ ಬರುತ್ತದೆ ಮತ್ತು ಸಂಪೂರ್ಣವಾಗಿ ಇಲ್ಲದಂತಾಗುತ್ತದೆ. ಯಾಕೆ? ಏನಾಯಿತು? ಕ್ರಿಸ್ತನ ಬಳಿಗೆ ಬಂದಾಗ ಮೊದಲಿದ್ದಂತಹ ಆ ಅನುಭವಕ್ಕೆ ಅವರನ್ನು ಹೇಗೆ ಮರಳಿ ತರುವುದು?

ನಂದಿ ಹೋದ ಪ್ರೀತಿ ಮತ್ತು ಕಡಿಮೆಯಾದ ಶ್ರದ್ಧೆಯ ಮಿಗಿಲಾದ ಸಮಸ್ಯೆಗಿಂತ ದೊಡ್ಡದಾದದ್ದು ನಮ್ಮ ಕ್ರಿಸ್ತಿಯ ಜೀವಿತದಲ್ಲಿಲ್ಲ. ಯೇಸು ಕ್ರಿಸ್ತನು ಪುರಾತನವಾದ ಎಫೆಸದ ಸಭೆಗೆ ಈ ಗದರಿಕೆಯ ಮಾತುಗಳನ್ನು ಹೇಳುತ್ತಾನೆ. **ಆದರೆ ಮೊದಲು ನಿನಗಿದ್ದ ಪ್ರೀತಿಯನ್ನು ನೀನು ಬಿಟ್ಟು ಬಿಟ್ಟಿದ್ದೀಯೆಂದು ನಾನು ನಿನ್ನ ಮೇಲೆ ತಪ್ಪು ಹೊರಿಸಬೇಕಾಗುತ್ತದೆ. ಆದುದರಿಂದ ನೀನು ಎಲ್ಲಿಂದ ಬಿದ್ದಿದ್ದೀಯೋ ಅದನ್ನು ನಿನ್ನ ನೆನಪಿಗೆ ತಂದುಕೊಡು, ದೇವರ ಕಡೆಗೆ ತಿರುಗಿಕೋ. ನೀನು ಮೊದಲು ಮಾಡುತ್ತಿದ್ದ ಕೃತ್ಯಗಳನ್ನು ಮಾಡು. ನೀನು ದೇವರ ಕಡೆಗೆ ತಿರುಗಿಕೊಳ್ಳದೆ ಹೋದರೆ ನಾನು ಬಂದು ನಿನ್ನ ದೀಪಸ್ತಂಭವನ್ನು ಅದರ ಸ್ಥಳದಿಂದ ತೆಗೆದು ಹಾಕುವೆನು** (ಪ್ರಕಟಣೆ 2:4-5).

ಸೈತಾನನು ತನ್ನ ರಾಜ್ಯವನ್ನು ಯಾರಾದರೂ ಬಿಟ್ಟು, ಬಿಟ್ಟು ನಂಬಿಕೆಯ ಮೂಲಕ ಕ್ರಿಸ್ತನಿಂದ ದೇವರ ರಾಜ್ಯವನ್ನು ಪ್ರವೇಶಿಸುವಾಗ ಅತಿ ಕೋಪವುಳ್ಳವನಾಗುತ್ತಾನೆ. ಆದುದರಿಂದ ವ್ಯಕ್ತಿಯು ಕ್ರೈಸ್ತನಾದ ಸಮಯದಿಂದಲೇ, ಅವನ ಮೇಲೆ ಸೈತಾನನು ತನ್ನಲ್ಲಿರುವ ಎಲ್ಲಾ ಆಯುಧಗಳಿಂದ ಆಕ್ರಮಣ ಮಾಡುತ್ತಾನೆ. ಕ್ರಿಸ್ತನಿಗಾಗಿ, ಹೊಸ ವಿಶ್ವಾಸಿಗಳಲ್ಲಿರುವಂತಹ ಪ್ರೀತಿಯನ್ನು ತೆಗೆದು ಹಾಕುವುದೇ ಸೈತಾನನ ಮುಖ್ಯವಾದ ಗುರಿಯಾಗಿರುತ್ತದೆ. ನಿಜವಾದ ವಿಶ್ವಾಸಿಗಳನ್ನು ಕ್ರಿಸ್ತನ ಕೈಯಿಂದ ಕಿತ್ತುಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಸೈತಾನನು ತಿಳಿದುಕೊಂಡಿರುತ್ತಾನೆ (ಯೋಹಾನ 10:28). ಆದರೆ ವಿಶ್ವಾಸಿಯನ್ನು ಪ್ರಯೋಜನಕ್ಕೆ ಬಾರದಂತಹ, ಪ್ರೀತಿಯಿಲ್ಲದಂತಹ ಮತ್ತು ಲವಲವಿಕೆಯಿಲ್ಲದ ಜೀವಿಯಂತೆ ಮಾಡಬಹುದು. ಸೈತಾನನು ಈ ಎಲ್ಲವುಗಳಲ್ಲಿ ಆಗಾಗ ಯಶಸ್ವಿಯಾಗುತ್ತಾನೆ.

ಈ ಕಾರಣಕ್ಕಾಗಿಯೇ ನಾವು ನಮ್ಮ ಕ್ರಿಸ್ತಿಯ ಜೀವನದಲ್ಲಿ ಆಗಾಗ ಆತ್ಮಿಕವಾಗಿ ಪುನರುಜ್ಜೀವನಗೊಳ್ಳುವ ಅಗತ್ಯವಿದೆ.ನಾವು ವೈಯಕ್ತಿಕವಾಗಿಯು ಮಾತ್ರವಲ್ಲದೆ, ಸಭೆಯು ಕೂಡ ಪುನರುಜ್ಜೀವನ ಹೊಂದಬೇಕು. ನಾವು ಯಾವಾಗಲೂ ನಮ್ಮನ್ನು ನಾವು ಪರೀಕ್ಷೆ ಮಾಡಿಕೊಳ್ಳುತ್ತಿರಬೇಕು. ಯೇಸುಕ್ರಿಸ್ತನಿಗಿಂತ ಹೆಚ್ಚಾಗಿ ನಾವು ಲೋಕದಲ್ಲಿರುದೇನನ್ನಾದರೂ ಪ್ರೀತಿಸುತ್ತೇವೆಯೋ? (ಮಾರ್ಕ 12:30) ದೇವರ ರಾಜ್ಯವನ್ನು ಎಲ್ಲವುಗಳಿಗಿಂತ ಮೊದಲು ನಿರೀಕ್ಷಿಸುತ್ತಿದ್ದೇವೆಯೇ? (ಮತ್ತಾಯ 6:33). ಪ್ರತಿಯೊಬ್ಬ ಕ್ರೈಸ್ತ ಸಹೋದರ ಹಾಗೂ ಸಹೋದರಿಯೊಂದಿಗೆ, ಸಂಪೂರ್ಣವಾದ ಪ್ರೀತಿ ಮತ್ತು ಅನ್ಯೋನ್ಯತೆಯಲ್ಲಿದ್ದೇವೆಯೇ? (1ಯೋಹಾನ 1:7, 4:20). ನಮ್ಮ ಅನುದಿನದ ಜೀವಿತದಲ್ಲಿ ಪವಿತ್ರಾತ್ಮನ ಫಲಗಳನ್ನು ಅನುಭವಿಸುತ್ತಿದ್ದೇವೆಯೇ? (ಗಲಾತ್ಯ 5:22:23) ನಮ್ಮ ಜೀವನದಲ್ಲಿ ಪವಿತ್ರಾತ್ಮನ ಬಲವಿದೆಯೇ? ನಮ್ಮ ಸಭೆಯಲ್ಲಿದೆಯೇ? (ಲೂಕ 24:49; ಅ.ಕೃ. 1:8). ಒಂದು ವೇಳೆ ಈ ಪ್ರಶ್ನೆಗಳಿಗೆ ನಮ್ಮ ಉತ್ತರವು ಇಲ್ಲವೆಂದಾದರೆ ನಾವು ಪುನರುಜ್ಜೀವಿತಗೊಳ್ಳುವ ಅಗತ್ಯವಿದೆ.

ನಾವು ದೇವರ ವಾಕ್ಯವನ್ನು ಧ್ಯಾನಿಸುವ ಉದ್ದೇಶ ನವೀಕರಣಗೊಳ್ಳುವುದು ಮತ್ತು ಪುನರುಜ್ಜೀವನ ಗೊಳ್ಳುವುದಾಗಿದೆ. ಈ ಒಂದು ಉದ್ದೇಶಕ್ಕಾಗಿಯೇ ಈ ವಿವರಾತ್ಮಕ ಗ್ರಂಥವು ಬರೆಯಲ್ಪಟ್ಟಿದೆ. ಇದನ್ನು ಅಭ್ಯಸಿಸುವಾಗ ಮತ್ತು ಉಪಯೋಗಿಸುವಾಗ, ಹೊಸತನದಿಂದ ಮತ್ತು ಬಲದಿಂದ ದೇವರ ವಾಕ್ಯವು ನಿಮ್ಮ ಹೃದಯದಲ್ಲಿ ಉಕ್ಕುವಂತ ಜೀವಿತವಾಗಲಿ ಎಂಬ ಪ್ರಾರ್ಥನೆಯು ನಿಮ್ಮದಾಗಿರಲಿ. ನೀವು ಇದನ್ನು ಉಪಯೋಗಿಸುವ ಮತ್ತು ಅಭ್ಯಾಸ ಮಾಡುವ ಸಂದರ್ಭದಲ್ಲಿ ನಿಮ್ಮ ಹೃದಯದಲ್ಲಿಯೂ ಮತ್ತು ಸಭೆಯಲ್ಲಿಯೂ ಪುನರುಜ್ಜೀವಸವುಂಟಾಗಲಿ ಎಂದು ಪ್ರಾರ್ಥಿಸಿರಿ.

ನಾವು ಪುನರುಜ್ಜೀವನ ಎಂಬ ಈ ವಿಷಯಕ್ಕೆ ಬರೋಣ. ಪ್ರಥಮವಾಗಿ ಪುನರುಜ್ಜೀವನವೆಂದರೆ ಏನು? ನಮ್ಮಲ್ಲಿ ಕ್ರಿಸ್ತನಿಗಿದ್ದ ಮೊದಲಿನ ಪ್ರೀತಿಗೆ ಬರುವುದೇ ಆಗಿದೆ. ಕ್ರಿಸ್ತನು ನಮ್ಮಲ್ಲಿ ಜೀವಿಸುವಂತೆ ಮಾಡುವುದು ಮತ್ತು ಆತನ ಬೆಳಕಿನಲ್ಲಿ ನಡೆಯುವಂತದ್ದೆ ಪುನರುಜ್ಜೀವನವಾಗಿದೆ. ಸ್ವಲ್ಪ ಸಮಯದ ಬಲಹೀನತೆಯಿಂದ ಚೇತರಿಸಿಕೊಂಡು ಆತ್ಮಿಕವಾದ ಆರೋಗ್ಯಕ್ಕೆ ಹಿಂತಿರುಗುವಂತದ್ದು ಪುನರುಜ್ಜೀವನವಾಗಿದೆ. ಪುನರುಜ್ಜೀವನವೆಂದರೆ ನಮ್ಮ ಪಾಪಗಳನ್ನು ಒಪ್ಪಿಕೊಳ್ಳುವುದು, ಕ್ಷಮಾಪಣೆಗಾಗಿ ಕ್ರಿಸ್ತನ ಮೊರೆ ಹೋಗುವುದು ಮತ್ತು ಶುದ್ಧೀಕರಣ ಹೊಂದುವುದು. ಪುನರುಜ್ಜೀವನವೆಂದರೆ ನಮ್ಮ ಜೀವಿತವನ್ನೆಲ್ಲಾ ಆತನ ನಿಯಂತ್ರಣಕ್ಕೊಳಪಡಿಸುವುದಾಗಿದೆ.

ಪುನರುಜ್ಜೀವನವೆಂದರೆ ನಿರ್ದಿಷ್ಟ ಅವಧಿಯಲ್ಲಿ ಉತ್ಸಾಹದಿಂದಿರುವ ಜೀವನವಾಗಿದೆ. ಏನೇ ಆದರೂ ಇದು ಒಬ್ಬನು ಭಾವೋದ್ವೇಗಕ್ಕೆ ಒಳಗಾಗಿ ತನ್ನಷ್ಟಕ್ಕೆ ತಾನೇ ಮಾಡುವಂತಹ ಕೆಲಸವು ಪುನರುಜ್ಜೀವನವಲ್ಲ. ಇದು ಪ್ರಾರ್ಥನೆಯಿಂದ ಕೂಡಿದ, ಧ್ಯಾನದಿಂದ ಕೂಡಿದ, ಸಾತ್ವಿಕ ಮನಸ್ಸಿನಿಂದ ತನ್ನನ್ನು ಪರೀಕ್ಷೆಗೊಳಪಡಿಸಿಕೊಂಡು ಕ್ರಿಸ್ತನ ಸಾನ್ನಿಧ್ಯಕ್ಕೆ ಬರುವಂತದ್ದು ಪುನರುಜ್ಜೀವನವಾಗಿದೆ. ಪುನರುಜ್ಜೀವನವು ನಮ್ಮ ಜೀವಿತದಲ್ಲಿರುವ ಕಪಟತನ ಮತ್ತು ಆತ್ಮ ವಂಚನೆಗಳನ್ನು ನಾವು ನಮ್ಮಿಂದ ಹೊರಗೆಳೆಯುವುದೇ ಪುನರುಜ್ಜೀವನವಾಗಿದೆ. ನಮ್ಮ ಸಭೆಯಲ್ಲಿ ಕೆಲವು ಕಲಹಗಳನ್ನು, ಟೀಕೆಗಳನ್ನು ಮತ್ತು ಅಸೂಯೆಗಳನ್ನು ಬಯಲಿಗೆ ತಂದು ಅವುಗಳಿಗಾಗಿ ಪಶ್ಚಾತ್ತಾಪಡುವುದೇ ಪುನರುಜ್ಜೀವನವಾಗಿದೆ. ನಮ್ಮ ಜೀವಿತವು ಬದಲಾಯಿಸಲ್ಪಟ್ಟು ಅನೇಕರನ್ನು ಆಕರ್ಷಿಸಿ ಕ್ರಿಸ್ತನ ಬಳಿಗೆ ತರುವಂತದ್ದು ಪುನರುಜ್ಜೀವನವಾಗಿದೆ. ಇದೆಲ್ಲಕ್ಕಿಂತಲೂ ಹೆಚ್ಚಾಗಿ ಪವಿತ್ರಾತ್ಮನು ಬಲದೋಪಾಧಿಯಲ್ಲಿ ನಮ್ಮಲ್ಲಿ ಪ್ರವೇಶಿಸಿ, ವೈಯಕ್ತಿಕವಾಗಿಯು ಸಭೆಯಾಗಿಯೂ ಕಾರ್ಯ ಮಾಡುವಂತಹದ್ದೇ ಪುನರುಜ್ಜೀವನವಾಗಿದೆ.

ಪುನರುಜ್ಜೀವನವು ಹೇಗೆ ಪ್ರಾರಂಭವಾಗುತ್ತದೆ? ಹೆಚ್ಚಾಗಿ ಏಕಪ್ರಕಾರವಾಗಿ ಪಾಪದ ಅರಿವು ಮತ್ತುಪಾಪಗಳನ್ನು ಅರಿಕೆ ಮಾಡಿಕೊಳ್ಳುವುದರಿಂದ ಪ್ರಾರಂಭವಾಗುತ್ತದೆ. ಪುನರುಜ್ಜೀವನದಲ್ಲಿ ಪಾಪ ಎಂಬ ವಿಷಯದ ಬಗ್ಗೆ ಪ್ರಥಮ ಸ್ಥಾನವನ್ನು ಕೊಡಲಾಗಿದೆ. ನಮ್ಮನ್ನು ಪಾಪದ ಶೋಧನೆಗೆ ಗುರಿಪಡಿಸುವಂತಹುದ್ದೇ ಆತನ ಪ್ರಥಮ ಆಕ್ರಮಣವಾಗಿದೆ. ನಾವು ಪಾಪವನ್ನು ಮಾಡಿದಾಗ ದೇವರಿಂದ ಬೇರ್ಪಡುತ್ತವೆ. ನಮ್ಮಲ್ಲಿರುವ ದೇವರಾತ್ಮನನ್ನು ದುಃಖಪಡಿಸುತ್ತೇವೆ. ನಮಗಿರುವ ಕ್ರಿಸ್ತನ ಅನ್ಯೋನ್ಯತೆಯನ್ನು ಕಳೆದುಕೊಳ್ಳುತ್ತೇವೆ. ನಾವು ನಮ್ಮಲ್ಲಿರುವ ಆನಂದ, ಸಮಾಧಾನ ಮತ್ತು ಬಲವನ್ನು ಕಳೆದುಕೊಳ್ಳುತ್ತೇವೆ. ಒಂದು ವೇಳೆ ನಮ್ಮಲ್ಲಿ ಪಾಪವಿಲ್ಲದಿದ್ದರೆ, ನಮಗೆ ಪುನರುಜ್ಜೀವನದ ಅಗತ್ಯವಿಲ್ಲ. ಹೀಗಾಗಿ ನಮ್ಮ ಪಾಪಗಳನ್ನು ಒಪ್ಪಿಕೊಳ್ಳುವುದರಿಂದ ಮತ್ತು ಅರಿಕೆ ಮಾಡಿಕೊಳ್ಳುವುದರ ಜೊತೆಯಲ್ಲಿ ಪುನರುಜ್ಜೀವನವು ಪ್ರಾರಂಭಗೊಳ್ಳುತ್ತದೆ.

ನಾವು ನಮ್ಮನ್ನು ಪಾಪಿಗಳೆಂದು ಯೋಚಿಸಲು ಇಷ್ಟಪಡುವುದಿಲ್ಲ. ನಾವು ನಮ್ಮ ಪಾಪಗಳನ್ನು ಅಡಗಿಸಿಕೊಳ್ಳುತ್ತೇವೆ. ಅನೇಕ ಸಮಯದಲ್ಲಿ ಅವುಗಳನ್ನು ಪುನಃ ಪುನಃ ಗುರುತಿಸುವುದಿಲ್ಲ. ಬಾಲಕನಾಗಿದ್ದಾಗಿನಿಂದಲೂ ಆಜ್ಞೆಗಳನ್ನು ಕೈಗೊಂಡು ಬಂದಿದ್ದೇನೆ ಎಂದು ಕ್ರಿಸ್ತನಿಗೆ ಹೇಳಿದಂತ ಆ ಶ್ರೀಮಂತ ಯುವಕನಂತೆ ನಾವು ಇರುತ್ತೇವೆ (ಮಾರ್ಕ 10:17-21). ತನ್ನಲ್ಲಿ ಎಳ್ಳಷ್ಟು ಪಾಪವಿಲ್ಲ ಎಂದು ಆತನಿಗೆ ಗೊತ್ತೇ!

ನಮ್ಮ ಪಾಪಗಳನ್ನು ನಾವು ನೋಡದಿದ್ದರೂ ದೇವರು ನೋಡುತ್ತಿರುತ್ತಾನೆ. ಆಜ್ಞೆಗಳನ್ನು ಮೀರುವಂತಹದ್ದು ಮಾತ್ರವೇ ಪಾಪವಲ್ಲ. ಸತ್ಯವೇದದಲ್ಲಿ ತಿಳಿಸಿರುವಂತೆ ದೇವರ ಚಿತ್ತಕ್ಕೆ ಸರಿಹೊಂದದಿರುವ ಯಾವುದೇ ವಿಷಯವಾಗಿರಲಿ ಅದು ಪಾಪವಾಗಿದೆ. ಇದರ ಅರ್ಥವೇನೆಂದರೆ ತಪ್ಪು ನಡವಳಿಕೆಗಳಿಂದ ಕೂಡಿದಂತಹ ಸ್ವಪ್ರೀತಿ, ಗರ್ವ, ಹೊಟ್ಟೆಕಿಚ್ಚು, ದುರಾಶೆ, ರೋಷ, ಉದ್ವೇಗ, ಅಪನಂಬಿಕೆಗಳಾಗಿವೆ. ತಪ್ಪಾಗಿರುವಂತಹುದನ್ನು ಮಾಡುವಂತಹದ್ದು ಮಾತ್ರವೇ ಪಾಪವಾಗಿರದೇ, ಒಳ್ಳೆಯದನ್ನು ಮಾಡದಿರುವುದು ಕೂಡ ಪಾಪವಾಗಿದೆ (ಯಾಕೋಬ 4:17). ನಮ್ಮ ಸಂಪೂರ್ಣ ಹೃದಯದಿಂದಲೂ, ಮನಸ್ಸಿನಿಂದ, ಜ್ಞಾನದಿಂದ ಮತ್ತು ಬಲದಿಂದ ದೇವರನ್ನು ನಂಬುವುದರಲ್ಲಿ ವಿಫಲನಾಗುವಂತದ್ದು ಪಾಪವಾಗಿದೆ (ಮಾರ್ಕ 12:30). ನಮ್ಮ ನೆರೆಯವರನ್ನು ನಮ್ಮಂತೆ ಪ್ರೀತಿಸದೆ ಇರುವುದು ಪಾಪವಾಗಿದೆ (ಮಾರ್ಕ 12:31). ಕಡೆಯವರೆಗೂ ನಂಬಿಕೆಯಲ್ಲಿ ನಿಲ್ಲದಿರುವಂತದ್ದು ಪಾಪವಾಗಿದೆ (ಮಾರ್ಕ 13:13). ಅವಕಾಶವಿದ್ದಾಗ ಸುವಾರ್ತೆಯನ್ನು ಸಾರದಿರುವಂತದ್ದು ಪಾಪವಾಗಿದೆ (1 ಪೇತ್ರ 3:15). ಸಹೋದರ ಅಥವಾ ಸಹೋದರಿಯ ಅಗತ್ಯತೆಯಲ್ಲಿ ಸಹಾಯ ಮಾಡದಿರುವಂತದ್ದು ಪಾಪವಾಗಿದೆ (ಮತ್ತಾಯ 25:41-45). ತಮ್ಮಲ್ಲಿ ಪಾಪವಿಲ್ಲವೆಂದು ಹೇಳುವವರು ನಮ್ಮೊಳಗೆ ಯಾರಿದ್ದಾರೆ? (1 ಯೋಹಾನ 1:8).

ನಮ್ಮ ಪಾಪಗಳನ್ನು ಒಪ್ಪಿಕೊಳ್ಳುವುದೇ ನಮ್ಮ ಪುನರುಜ್ಜೀವನದ ಪ್ರಥಮ ಹೆಜ್ಜೆಯಾಗಿದೆ. ಕ್ರಿಸ್ತನು ನಮ್ಮ ಪಾಪಗಳನ್ನು ನಮ್ಮಿಂದ ತೊಳೆದು ಶುದ್ಧ ಮಾಡುವುದಕ್ಕಾಗಿ ಆತನು ಕೊಟ್ಟ ಬೆಲೆಯನ್ನು ನೆನಪು ಮಾಡಿಕೊಳ್ಳೋಣ. ಪವಿತ್ರಾತ್ಮನು ನಮ್ಮಲ್ಲಿ ಅಡಗಿಕೊಂಡಿರುವ ನಮ್ಮ ಪಾಪಗಳನ್ನು ತೋರಿಸಿಕೊಡುವಂತೆ ಕೇಳಿಕೊಳ್ಳೋಣ. ಯೇಸುಕ್ರಿಸ್ತನ ಒಡೆತನಕ್ಕೆ

ಅಧೀನವಾಗದಂತಹ ನಮ್ಮ ಜೀವನದಲ್ಲಿರುವ ವಿಷಯಗಳನ್ನು ಪರೀಕ್ಷೆಗೊಳಪಡಿಸುವುದಕ್ಕಾಗಿ ನಮಗೆ ನಾವೇ ಪ್ರಶ್ನೆಗಳನ್ನು ಕೇಳಿಕೊಳ್ಳುವ ಉದ್ದೇಶದಿಂದ ಈ ಮಾದರಿ ಪ್ರಶ್ನೆಗಳನ್ನು ಅನುಸರಿಸಬೇಕು.

ನಾನು ದೇವರಿಗಿಂತ ಹೆಚ್ಚಾಗಿ ಏನನ್ನಾದರೂ ಪ್ರೀತಿಸುತ್ತಿರುವೆನೇನು? ನನ್ನ ಕುಟುಂಬ, ನನ್ನ ಕೆಲಸ, ನನ್ನ ಇಷ್ಟಾರ್ಥಗಳು ಮತ್ತು ನನ್ನನ್ನು ನಾನೇ? (ಮತ್ತಾಯ 6:33; ಮಾರ್ಕ 12:30).

ನಾನು ನನ್ನ ಜೀವಿತದ ಯಾವುದೇ ಸನ್ನಿವೇಶಕ್ಕಾಗಿ ದೇವರಿಗೆ ವಿರೋಧವಾಗಿ ಗುಣುಗುಟ್ಟಿದ್ದೇನೆಯೇ ಅಥವಾ ದೂರು ಮಾಡಿದ್ದೇನೆಯೇ? (1 ಕೊರಿಂಥ 10:10, ಫಿಲಿಪ್ಪಿ 2:14, 1ಥೆಸಲೋನಿಕ 5:18).ನಾನು ಮತ್ತೊಬ್ಬರಿಂದ ಹೊಗಳಿಸಿಕೊಳ್ಳುವುದನ್ನು ಇಷ್ಟಪಡುತ್ತೇನೆಯೇ? ನಾನು ಮಾಡುವಂತಹ ಒಳ್ಳೆಯ ಕೆಲಸಗಳಿಗೆ ಪ್ರಶಸ್ತಿ ಹೊಂದಲು ಇಷ್ಟಪಡುತ್ತೇನೆಯೇ? ನಾನು ಆಕರ್ಷಣೆಯ ಕೇಂದ್ರವಾಗಲು ಇಷ್ಟಪಡುತ್ತೇನೆಯೇ? (ಮತ್ತಾಯ 6:1-5, ಯೋಹಾನ 12:43).

ನಾನು ಯಾರೊಂದಿಗಾದರೂ ತಾಳ್ಮೆಗೆಟ್ಟು ನಡೆದಿದ್ದೇನೆಯೇ? ನಾನು ಯಾರನ್ನಾದರೂ ಟೀಕೆಗೊಳಪಡಿಸಿದ್ದೇನೆಯೇ? ನಾನು ಬೇರೆಯವರಿಂದ ಟೀಕೆಗೆ ಒಳಪಟ್ಟಾಗ ಮುಂಗೋಪ ಅಥವಾ ಖಿನ್ನನಾಗಿದ್ದೇನೆಯೇ? ನಾನು ಯಾರ ಬಗ್ಗೆಯಾದರೂ ರೋಷದ ಭಾವನೆಯಿಂದ ಇದ್ದೇನೆಯೇ? ನಾನು ಯಾವುದಾದರೂ ಕಹಿ ಭಾವನೆಯನ್ನು ಹೊಂದಿದ್ದೇನೆಯೇ? (ಹಿಬ್ರಿಯ 12:15).

ನಾನು ಕಲ್ಲು ಹೃದಯ ಅಥವಾ ತಗ್ಗಿಸಲ್ಪಡದವನಾಗಿದ್ದೇನೆಯೇ? ನಾನು ಯಾವಾಗಲೂ ಖಂಡಿತವಾಗಿ ಒಳ್ಳೆಯದನ್ನು ಮಾಡಿತ್ತಿದ್ದೇನೆಯೇ? ನಾನು ಯಾರಿಗಾದರೂ ಕಠಿಣವಾಗಿ ಅಥವಾ ಕ್ರೂರವಾಗಿ ನಡೆದುಕೊಂಡಿದ್ದೇನೆಯೇ? (ಫಿಲಿಪ್ಪಿ 2:3, ಎಫೇಸ 5:21).

ಜನರು ಏನು ಹೇಳುತ್ತಾರೆಂದು ನಾನು ಭಯಪಡುವೆನೋ? ನನ್ನ ಕರ್ತವ್ಯವನ್ನು ನಿಲ್ಲಿಸುವೆನೋ? ನನಗೆ ಕೊಟ್ಟಿರುವ ತಲಾಂತನ್ನು ಮುಚ್ಚಿಡುತ್ತೇನೋ? (ಮತ್ತಾ 25:24-28)

ಜನರು ಏನನ್ನಾದರೂ ಹೇಳುವಾಗ ಬಯಗೊಳ್ಳುತ್ತೇನೆಯೇ? ನಾನು ಮತ್ತೊಬ್ಬರು ಸೋಲುವಾಗ, ಗುಪ್ತವಾಗಿ ಸಂತೋಷಪಡುತ್ತೇನೆಯೇ? ಮತ್ತೊಬ್ಬರು ಯಶಸ್ವಿಯಾದಾಗ ನಾನು ಗುಪ್ತವಾಗಿ ಅಸೂಯೆ ಪಡುತ್ತೇನೆಯೇ? (1 ಕೊರಿಂಥ 13:4-6).

ಯಾವ ವಿಷಯದಲ್ಲಾದರೂ ನಾನು ಸಂಪೂರ್ಣವಾಗಿ ಪ್ರಾಮಾಣಿಕನಾಗಿ ನಡೆದುಕೊಂಡಿಲ್ಲದಿರುವುದು ಯಾವುದಾದರೂ ಇದೆಯೇ? ನಾನು ಯಾವ ಸತ್ಯವನ್ನೇನಾದರೂ ಮರೆಮಾಚಿದ್ದೇನೆಯೇ? ನಾನು ನನ್ನ ತಪ್ಪನ್ನು ಮುಚ್ಚಲು ಪ್ರಯತ್ನವನ್ನೇನಾದರೂ ಮಾಡಿದ್ದೇನೆಯೇ? ನನ್ನ ನೈಜ ಸ್ಥಿತಿಗೆ ವಿರೋಧವಾಗಿ ಒಳ್ಳೆಯವನಾಗಿ ತೋರುವುದಕ್ಕೆ ಪ್ರಯತ್ನಿಸಿದ್ದೇನೆಯೇ? ನಾನು ಯಾವುದಾದರು ಚಿಕ್ಕ ವಿಷಯವನ್ನು ದೊಡ್ಡದಾಗುವಂತೆ ಮಾಡಿದ್ದೆನೆಯೇ? (ಮತ್ತಾಯ 23:27-28; ಯಾಕೋಬ 5:16).

ನಾನು ನಿರಾಶೆ ಅಥವಾ ಎದೆಗುಂದಿದ್ದೇನೆಯೇ? ನಾನು ದೇವರನ್ನು ಸಂಪೂರ್ಣವಾಗಿ ನಂಬುವುದನ್ನು ನಿಲ್ಲಿಸಿದ್ದೇನೆಯೇ? ನನ್ನ ನಂಬಿಕೆಯು ಕುಂದುತ್ತಾ ಇದೆಯೇ? (ರೋಮ 1:17, 14:23; ಹಿಬ್ರಿಯ 11:6).

ನನ್ನ ಆತ್ಮಿಕ ಜೀವಿತವು ಬತ್ತಿ ಹೋಗುತ್ತಾ ಮತ್ತು ಸಾಂಪ್ರದಾಯಿಕವಾಗುತ್ತಾ ಇದೆಯೇ? ಕ್ರಿಸ್ತನನ್ನು ಅರಿಯದ ಜನರ ಬಗ್ಗೆ ಇದ್ದಂತಹ ಚಿಂತೆಯನ್ನು ಕಳೆದುಕೊಂಡಿದ್ದೇನೆಯೇ? ನಾನು ಆತ್ಮಿಕವಾಗಿ ಬಲಹೀನನಾಗುತ್ತಾ ಇದ್ದೇನೆಯೇ? ನಾನು ಉದಾಸೀನನಾಗುತ್ತಿದ್ದೇನೆಯೇ? ನಾನು ಶಿಷ್ಯತ್ವದ ಜೀವಿತದಿಂದ ತಿರುಗಿದ್ದೇನೆಯೇ? (ಮಾರ್ಕ 8:34; ಪ್ರಕಟಣೆ 2:4-5, 3:15-16).

ನಾನು ಈ ಲೋಕದ ಮಾದರಿಯನ್ನು ಅನುಸರಿಸುತ್ತಿದ್ದೇನೆಯೇ? ಅವಿಶ್ವಾಸಿಗಳು ಯೋಚಿಸುವಂತಹ ರೀತಿಯಲ್ಲಿ ನಾನು ಆಲೋಚಿಸುತ್ತಿದ್ದೇನೆಯೇ? ನಾನು ಈ ಲೋಕವನ್ನು ಮತ್ತು ಇದರ ಭೋಗಗಳನ್ನು ಪ್ರೀತಿಮಾಡಲು ಪ್ರಾರಂಭಿಸಿದ್ದೇನೆಯೇ? (ರೋಮ 12:2; 1ಯೋಹಾನ 2:15-17).

ಈ ಪ್ರಶ್ನೆಗಳಿಗೆ ನಮ್ಮ ಉತ್ತರವು ಹೌದಾದರೆ ದೇವರ ಮುಂದೆ ನಾವು ನಮ್ಮ ಪಾಪಗಳನ್ನು ಒಪ್ಪಿಕೊಳ್ಳಬೇಕು ಮತ್ತು ಅರಿಕೆ ಮಾಡಬೇಕು. ನಾವು ಹೀಗೆ ಮಾಡಿದರೆ, ದೇವರು ನಮ್ಮಲ್ಲಿ ಉಜ್ಜೀವನ ಮಾಡುವುದಕ್ಕೆ ಮಾರ್ಗವನ್ನು ತೋರಿಸಿದಂತೆಯೆ. ನಾವು ಹೀಗೆ ಮಾಡದಿದ್ದರೆ ಬಲಹೀನತೆಯಲ್ಲಿ ಮುಂದುವರಿಯುತ್ತೇವೆ ಮತ್ತು ದೇವರಿಂದ ತೆಗೆಯಲ್ಪಡುತ್ತೇವೆ.

ಪವಿತ್ರಾತ್ಮನು ಬೆಳಕಿಗೆ ತರುವಂತಹ ನಮ್ಮ ಎಲ್ಲ ಪಾಪಗಳಿಂದ ತಿರುಗುವಂತದ್ದು, ಉಜ್ಜೀವನಕ್ಕೆ ಎರಡನೆಯ ಹೆಜ್ಜೆಯಾಗಿದೆ. ತಿರುಗುವುದು ಎಂದರೆ, ಅವುಗಳಿಗಾಗಿ ಪಶ್ಚಾತ್ತಾಪ ಪಡುವುದು ಮತ್ತು ಸಂಪೂರ್ಣವಾಗಿ ಅವುಗಳಿಂದ ಹಿಂದಕ್ಕೆ ಸರಿಯುವುದು.

ನಾವು ಇದನ್ನು ಮಾಡುವಾಗ ದೇವರು ನಮ್ಮನ್ನು ಕ್ಷಮಿಸುವನು ಮತ್ತು ನಮ್ಮನ್ನು ಶುದ್ಧೀಕರಿಸುವನು (1ಯೋಹಾನ1:9). ನಾವು ಇದನ್ನು ಮಾಡದೆ ಹೋದ ಪಕ್ಷದಲ್ಲಿ ನಾವು ಕ್ಷಮಿಸಲ್ಪಡುವಿಕೆಯನ್ನು ಮತ್ತು ಶುದ್ಧೀಕರಣವನ್ನು ಅನುಭವಿಸುವುದಿಲ್ಲ ಎಂಬಂತಹ ಒಂದೇ ಒಂದು ವಿವರಣೆ ಮಾತ್ರವಿದೆ. ನಾವು ಸಂಪೂರ್ಣವಾಗಿ ನಮ್ಮ ಪಾಪದಿಂದ ತಿರುಗಬೇಕು.

ನಾವು ಬೇರೆಯವರಿಗೆ ಮಾಡಿದಂತಹ ನಮ್ಮ ತಪ್ಪುಗಳನ್ನು ಸರಿಪಡಿಸುವಂತಹದ್ದು, ಉಜ್ಜೀವನಕ್ಕೆ ಮೂರನೆಯಮಾರ್ಗವಾಗಿದೆ (ಮತ್ತಾಯ 5:23-24; ಲೂಕ 19:8). ನಾವು ಮತ್ತೊಬ್ಬರಲ್ಲಿ ಕ್ಷಮೆಯಾಚಿಸಬೇಕಾಗಬಹುದು. ನಾವು ಮತ್ತೊಬ್ಬರಿಂದ ತೆಗೆದುಕೊಂಡಂತಹ ಸ್ಥಾನವನ್ನು ಹಿಂತಿರುಗಿಸಲು ಅಗತ್ಯವುಂಟಾಗುವುದು. ಮತ್ತೊಬ್ಬನಿಂದ ಕಬಳಿಸಿದ ಕೀರ್ತಿಯನ್ನು ಹಿಂತಿರುಗಿಸಿ ಕೊಡಬೇಕಾಗಬಹುದು. ಇವೆಲ್ಲಕ್ಕಿಂತ ಹೆಚ್ಚಾಗಿ ನಿನಗೆ ವಿರೋಧವಾಗಿ ಮಾಡಿದಂತಹವರಲ್ಲಿ ಹಳೆಯ ದ್ವೇಷ ಅಥವಾ ಅಸಮಾಧಾನದ ಮಹಾ ಪಾಪಗಳನ್ನು ಕ್ಷಮಿಸಬೇಕಾಗುವುದು (ಮತ್ತಾಯ 6:12, 14-15).

ಕ್ರಿಸ್ತನಿಗೆ ನಮ್ಮನ್ನು ನಾವು ಪುನರ್‌ಸಮರ್ಪಣೆ ಮಾಡುವಂತದ್ದು ಉಜ್ಜೀವನಕ್ಕೆ ನಾಲ್ಕನೆಯ ಹಂತವಾಗಿದೆ. ನಮ್ಮ ಜೀವಿತದ ಪ್ರತಿಯೊಂದು ಹಂತಗಳಿಂದ ನಾವು ಆತನಿಗೆ ಶರಣಾಗತರಾಗಬೇಕು. ಆತನು ಹೇಳುವಂತಹವುಗಳನ್ನು ವಿಧೇಯತೆಯಿಂದ ಮಾಡುವುದಕ್ಕೆ ನಮ್ಮನ್ನು ನಾವು ಆತನಿಗೆ ಸಮರ್ಪಿಸಬೇಕು (ಯೋಹಾನ 6:14-15). ನಾವು ನಮ್ಮ ಸ್ವಂತ ಸ್ವತ್ತಲ್ಲ, ನಾವು ದೇವರಿಗೆ ಸೇರಿದವರಾಗಿದ್ದೇವೆ (1 ಕೊರಿಂಥ 6:19-20).

ಪಶ್ಚಾತ್ತಾಪ, ದೀನತೆ ಮತ್ತು ಪಶ್ಚಾತ್ತಾಪದ ಹೃದಯದಿಂದ ತಿರುಗಿದವರು ದೇವರ ವಾಗ್ದಾನಗಳ ಮೇಲೆ ಹಕ್ಕು ಸಾಧಿಸುವಂತದ್ದು ಉಜ್ಜೀವನಕ್ಕೆ ಐದನೆಯ ಹೆಜ್ಜೆಯಾಗಿದೆ. ಪವಿತ್ರಾತ್ಮನಿಂದ ತುಂಬಿಸಲ್ಪಡಲು ತೆರೆದ ಹೃದಯವುಳ್ಳವರಾಗಿರಬೇಕು. ದೇವರಾತ್ಮನಿಂದ ನಾವು ತುಂಬಿಸಲ್ಪಡಬೇಕೆಂದು ದೇವರು ನಮಗೆ ಆಜ್ಞಾಪಿಸಿದ್ದಾನೆ (ಎಫೆಸ 5:18). ಆದುದರಿಂದ ತುಂಬಿಸಲ್ಪಡುವಂತಹ ಆಶೆಯುಳ್ಳವರಾಗಿರಬೇಕು. ನಾವು ತುಂಬಿಸಲ್ಪಡಲಿಕ್ಕಾಗಿ ನಮ್ಮನ್ನು ಆತನಿಗೆ ಸಮರ್ಪಿಸಬೇಕು (ರೋಮ 12:1). ನಾವು ತುಂಬಿಸಲ್ಪಡಲಿಕ್ಕಾಗಿ ಆತನನ್ನು ಬೇಡಿಕೊಳ್ಳಬೇಕು (ಮತ್ತಾಯ 7:7-8, 11; ಲೂಕ 11:13).

ನಾವು ನಮ್ಮನ್ನು ಪವಿತ್ರಾತ್ಮನ ವಶಕ್ಕೆ ಅಧೀನ ಮಾಡಿಕೊಳ್ಳುವಂತದ್ದು ಆರನೆಯ ಮತ್ತು ಅಂತಿಮ ಹೆಜ್ಜೆಯಾಗಿದೆ. ಪವಿತ್ರಾತ್ಮನಿಂದ ನಿಯಂತ್ರಿಸಲ್ಪಡದಿರುವ ಯಾವೊಬ್ಬನು ಪವಿತ್ರಾತ್ಮನಿಂದ ತುಂಬಿಸಲ್ಪಡುವುದಿಲ್ಲ. ನಾನು ಹೇಳುವುದೇನೆಂದರೆ ಪವಿತ್ರಾತ್ಮನಲ್ಲಿ ನಡೆಯಿರಿ. ಆಗ ನೀವು ಶರೀರ ಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವುದಿಲ್ಲ ಎಂದು ಪೌಲನು ಬರೆದಿದ್ದಾನೆ (ಗಲಾತ್ಯ 5:16). ಕ್ರಿಸ್ತನಂತೆ ಜೀವಿಸುವುದಕ್ಕೆ ಇದು ಪ್ರಧಾನವಾದಂತಹ ಕೀಲಿ ಕೈಯಾಗಿದೆ. ಆತ್ಮಿಕವಾದಂತಹ ಜಯಕ್ಕೆ ಇದು ಕೀಲಿಕೈಯಾಗಿದೆ. ಜಯದಲ್ಲಿ ಜೀವಿಸುವುದೆಂದರೆ, ಕ್ರಿಸ್ತನು ತನ್ನ ಜೀವನದಿಂದ ನಮ್ಮಲ್ಲಿದ್ದು ನಮ್ಮ ಮೂಲಕ ಜೀವಿಸುವುದು (ಗಲಾತ್ಯ 2:20). ಯೇಸುಕ್ರಿಸ್ತನ ಸಾರೂಪ್ಯವನ್ನು ನಾವು ಧರಿಸಬೇಕು. ಇದು ನಿರಂತರವಾದ ನಮ್ಮ ಗುರಿಯಾಗಿರಬೇಕು (ರೋಮ 8:29). ಇದಕ್ಕಿಂತ ಮಿಗಿಲಾದ ಗುರಿಯು ಮತ್ತೊಂದಿಲ್ಲ.

ಹಾಗಾದರೆ ನಿರಂತರವಾಗಿ ಪುನರುಜ್ಜೀವನವು ಮುಂದುವರೆಯಲು ಈ ಹೆಜ್ಜೆಗಳಿಂದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಆದರೆ, ಪುನರುಜ್ಜೀವನದ ಈ ಕಾರ್ಯವು ತಾನಾಗಿಯೇ ಸಂಪೂರ್ಣವಾಗಿ ಪವಿತ್ರಾತ್ಮನಿಂದ ಆತನ ವಿಧಾನದಿಂದ, ಆತನ ಸಮಯದಲ್ಲಿ ನಡೆಯುವಂತದ್ದು ನಾವು ಮಾಡಲಿಕ್ಕಿದ್ದಂತಹ ಇವೆಲ್ಲವನ್ನು ಮಾಡಿದ ಮೇಲೆ ಆತನು ತನ್ನ ಕಾರ್ಯವನ್ನು ಮಾಡುವನು ಎಂದು ನಿರೀಕ್ಷಿಸಿಕೊಂಡಿರಬೇಕು.

**ನನ್ನವರೆಂದು ಹೆಸರುಗೊಂಡ ನನ್ನ ಪ್ರಜೆಗಳು ತಮ್ಮನ್ನು ತಗ್ಗಿಸಿಕೊಂಡು, ತಮ್ಮ ಕೆಟ್ಟ ನಡತೆಯನ್ನು ಬಿಟ್ಟು ತಿರುಗಿಕೊಂಡು ನನ್ನನ್ನು ಪ್ರಾರ್ಥಿಸಿ, ನನ್ನ ದರ್ಶನವನ್ನು ಬಯಸುವುದಾದರೆ ನಾನು ಪರಲೋಕದಿಂದ ಲಾಲಿಸಿ ಅವರ ಪಾಪಗಳನ್ನು ಕ್ಷಮಿಸಿ ಅವರ ದೇಶವನ್ನು ಗುಣಪಡಿಸುವೆನು (2 ಪೂರ್ವಕಾಲ 7:14).**

ಓ ದೇವರೆ, ನಮ್ಮನ್ನು ಉಜ್ಜೀವಿಸ ಮಾಡು!

# ಹಳೆ ಒಡಂಬಡಿಕೆಯ ಸಾರಾಂಶ

ಓದುವವರು, ಹಳೆ ಒಡಂಬಡಿಕೆಯ ಬಗ್ಗೆ ಜ್ಞಾನವನ್ನು ಹೊಂದಿರಬೇಕೆಂದು ಹೊಸ ಒಡಂಬಡಿಕೆಯನ್ನು ಬರೆದಂತಹ ಬರಹಗಾರರು ಬಯಸುತ್ತಾರೆ.ಇವರು ಹಳೆ ಒಡಂಬಡಿಕೆಯ ವಾಕ್ಯಗಳನ್ನು ಮತ್ತು ಯಹೂದ್ಯ ಜನರ ಬಗ್ಗೆ ಬರೆದ ಚರಿತ್ರೆಯನ್ನು ಪದೆಪದೇ ಉಲ್ಲೇಖಿಸುವವರಾಗಿದ್ದಾರೆ (ಅ.ಕೃ. 7ನೆ ಅಧ್ಯಾಯವನ್ನು, ಹಿಬ್ರಿಯ 11ನೆ ಅಧ್ಯಾಯವನ್ನು ನೋಡಿರಿ) ಹಳೆ ಒಡಂಬಡಿಕೆಯ ಸಾರಾಂಶವನ್ನು, ನಡೆದ ಘಟನೆಯನ್ನು ಒತ್ತಿ ಹೇಳುತ್ತದೆ ಮತ್ತು ಹೊಸ ಒಡಂಬಡಿಕೆಯಲ್ಲಿ ಪ್ರಸ್ತಾಪಿಸಿರುವ ವ್ಯಕ್ತಿಗಳ ಬಗ್ಗೆ ಸಂಕ್ಷಿಪ್ತವಾದ ಲೇಖನಗಳನ್ನು ಪ್ರಸ್ತುತ ಪಡಿಸುತ್ತದೆ. ವ್ಯಕ್ತಿ ಮತ್ತು ಘಟನೆಗಳನ್ನು ಸಂಬಂಧಪಟ್ಟಂತಹ ಉಲ್ಲೇಖನಗಳ ಬಗ್ಗೆ ಇದು ಗಮನ ಹರಿಸುತ್ತದೆ. ಹಳೆ ಒಡಂಬಡಿಕೆಯ ಪುಸ್ತಕಗಳ ಹೆಸರುಗಳನ್ನು ದಪ್ಪಕ್ಷರಗಳಲ್ಲಿ ಮುದ್ರಿಸಲಾಗಿದೆ.

ಆದಿಕಾಂಡ ಪುಸ್ತಕವು ಆರಂಭ,ದಿಂದ ಪ್ರಾರಂಭವಾಗುತ್ತದೆ. ದೇವರು ಭೂಮಿ ಆಕಾಶಗಳನ್ನು ಸೃಷ್ಟಿಸಿದನು (ಆದಿಕಾಂಡ 1:1-25, ಯೋಹಾನ 1:1-3). ದೇವರು ಆರು ದಿನಗಳಲ್ಲಿ ಜಗತ್ತನ್ನು ಉಂಟುಮಾಡಿದನು ಮತ್ತು ಆರನೆಯ ದಿನದಲ್ಲಿ ಪುರುಷನಾದ ಆದಾಮನನ್ನು ಮತ್ತು ಸ್ತ್ರೀಯಾದ ಹವ್ವಳನ್ನು ಸೃಷ್ಟಿಸಿದನು (ಆದಿಕಾಂಡ 1:26-31). ದೇವರು ತನ್ನ ಕೆಲಸವನ್ನು ಪೂರೈಸಿ ಏಳನೆಯ ದಿನದಲ್ಲಿ ವಿಶ್ರಾಂತಿಯನ್ನು ಪಡೆದನು. ಇದು ವಿಶ್ರಾಂತಿಯ ಪ್ರಥಮ ಸಬ್ಬತ್ ದಿನವಾಯಿತು. ನಂತರ ಮಾನವರು ಇದನ್ನು ಅನುಕರಿಸಬೇಕೆಂದು ಆಜ್ಞಾಪಿಸದನು (ಆದಿಕಾಂಡ 2:1-3, ಹಿಬ್ರಿಯಾ 4:1-11).

ಆದಾಮ ಮತ್ತು ಹವ್ವಳನ್ನು ಏದೇನ್ ಎಂಬ ತೋಟದಲ್ಲಿ ಇರಿಸಲಾಯಿತು ಮತ್ತು ಒಳ್ಳೆಯದರ ಮತ್ತು ಕೆಟ್ಟದ್ದರ ತಿಳುವಳಿಕೆಯ ಮರದ ಹಣ್ಣನ್ನು ನೀವು ತಿನ್ನಬಾರದು ಎಂಬ ಒಂದು ಆಜ್ಞೆಯು ಅವರಿಗೆ ಕೊಡಲ್ಪಟ್ಟಿತು. ಆದರೆ ಸೈತಾನನು ಸರ್ಪದ ರೂಪದಲ್ಲಿ ಬಂದನು ಮತ್ತು ವಂಚಿಸಿದನು. ಹಾಗೂ ನಿಷೇದಿಸಿದಂತ ಹಣ್ಣನ್ನು ತಿನ್ನುವಂತೆ ಶೋಧನೆಗೆ ಒಳಪಡಿಸಿದನು. ಅವಳು ತಿಂದಳು ಮತ್ತು ನಂತರ ಆದಾಮನು ಸಹ ತಿಂದನು. ಹೀಗೆ ಪಾಪ ಮತ್ತು ಮರಣವು ವಿಶ್ವವನ್ನು ಪ್ರವೇಶಿಸಿತು (ಆದಿಕಾಂಡ 3:1-19; ರೋಮ 5:12-19). ಇದನ್ನು "ಮನುಷ್ಯನ ಪತನ" ಅಥವಾ "ಬೀಳುವಿಕೆ" ಎಂದು ಕರೆಯಲಾಯಿತು. ಆಮೇಲೆ ಆದಾಮ ಮತ್ತು ಹವ್ವಳರ ಹಿರಿಯ ಮಗನಾದ ಕಾಯಿನನು ತನ್ನ ತಮ್ಮನಾದ ಹೇಬೆಲನನ್ನು ದ್ವೇಷಿಸಿದ ಕಾರಣ ಅವನನ್ನು ಕೊಲೆ ಮಾಡಿದನು. ಹೀಗೆ ಪ್ರಥಮವಾಗಿ ಮಾನವನ ರಕ್ತವು ಸುರಿಸಲ್ಪಟ್ಟಿತು (ಆದಿಕಾಂಡ 4:1-12; ಹಿಬ್ರಿಯಾ 11:4, 1ಯೋಹಾನ 3:12). ಇದಾದ ನಂತರ ಆದಾಮ ಹವ್ವಳು ಸೇತ್ ಎಂಬ ಹೆಸರುಳ್ಳ ಮತ್ತೊಬ್ಬ ಮಗನನ್ನು ಪಡೆದರು (ಆದಿಕಾಂಡ 5:3).

ಮರಣವನ್ನು ಹೊಂದದ ಮತ್ತು ದೇವರಿಂದ ಸ್ವರ್ಗಕ್ಕೆ ನೇರವಾಗಿ ತೆಗೆದುಕೊಳ್ಳಲ್ಪಟ್ಟ ಹನೋಕನೆಂಬುವವನು ಸೇತ್,ನ ವಂಶದಲ್ಲಿ ಹುಟ್ಟಿದನು (ಆದಿಕಾಂಡ 5:21-24; ಹಿಬ್ರಿಯ 11:5). ಹನೋಕನ ಕಾಲದ ನಂತರ ದೇವರ ಮುಂದೆ ಮಾನವನು ಅತಿ ಭ್ರಷ್ಟನಾದನು ಮತ್ತು ಇದಕ್ಕಾಗಿ ಆತನು ಜಲಪ್ರಳಯದ ಮೂಲಕ ಪ್ರಪಂಚವನ್ನು ನಾಶಗೊಳಿಸಲು ತೀರ್ಮಾನಿಸಿದನು. ದೇವರು ನೋಹನು ಎಂಬ ಹೆಸರಿನ ನೀತಿವಂತ ವ್ಯಕ್ತಿಗೆ, ತನ್ನ ಕುಟುಂಬ ಹಾಗೂ ಕಡೆಯ ಪಕ್ಷ ಒಂದೊಂದು ಜೊತೆಯ ಎಲ್ಲಾ ವಿಧದ ಪ್ರಾಣಿಗಳಿಗೆ ಆಶ್ರಯ ಕೊಡುವಂತಹ ಒಂದು ದೊಡ್ಡ ನಾವೆಯನ್ನು ಕಟ್ಟಬೇಕೆಂದು ಸೂಚಿಸಿದನು ಹಾಗೂ ಆ ನಾವೆಯಲ್ಲಿ ಇದ್ದಂತಹವರ ಸಹಿತವಾಗಿ ಎಲ್ಲವು ಪ್ರಳಯದಿಂದ ರಕ್ಷಿಸಲ್ಪಟ್ಟವು ಮತ್ತು ಬೇರೆ ಎಲ್ಲಾ ಸೃಷ್ಟಿಗಳು ನಾಶವಾದವು (ಆದಿಕಾಂಡ 6:1-22; 7:11-24; 1ಪೇತ್ರ 18-20). ಅಬ್ರಹಾಮನು ನೋಹನ ಮಗನಾದ ಸೇಮ್ ಎಂಬುವವನ ವಂಶಸ್ಥನು ಮತ್ತು ಈಗಿನ ಇರಾಕ್ ದೇಶದಲ್ಲಿ ಇದ್ದಂತಹ ಊರ್ ಎಂಬ ಸ್ಥಳದಲ್ಲಿ ಜನಿಸಿದನು. ದೇವರು ಅಬ್ರಹಾಮನನ್ನು ಕರೆದು ಊರ್ ಎಂಬ ಸ್ಥಳವನ್ನು ಬಿಟ್ಟು, ಅಬ್ರಹಾಮನ ಸಂತಾನದವರಿಗೆ ಕೊಡುತ್ತೇನೆಂದು ವಾಗ್ದಾನ ಮಾಡಿದಂತಹ, ಕಾನಾನ್ (ಈಗಿನ ಇಸ್ರೇಲ್) ಎಂಬ ಸ್ಥಳಕ್ಕೆ ಹೋಗಲು ಹೇಳಿದನು. ಅಬ್ರಹಾಮನಿಂದ ಬಂದಂತಹ ಸಂತಾನವನ್ನು ಆಶೀರ್ವದಿಸಿದ ದೇವರು ಅವನಿಂದ ಒಂದು ಮಹಾಜನಾಂಗವನ್ನು ಉಂಟುಮಾಡುವೆನು ಮತ್ತು ಅವನ

ಮುಖಾಂತರ ಪ್ರಪಂಚದ ಎಲ್ಲಾ ಜನರನ್ನು ಆಶೀರ್ವದಿಸುವೆನು ಎಂದು ವಾಗ್ದಾನಮಾಡಿದನು (ಆದಿಕಾಂಡ 12:1-7). ಅಬ್ರಹಾಮನ ವಂಶದಲ್ಲಿ ನೇರವಾಗಿ ಜನಿಸಿ ಬಂದ ಯೇಸು ಕ್ರಿಸ್ತನಲಿ ಈ ಆಶೀರ್ವಾದವು ನೆರವೇರಿತು (ಮತ್ತಾಯ 1:1, ರೋಮ 4:16-18; ಗಲಾಥ್ಯ 3:6-9, 14, 29).

ದೇವರಿಗೆ ಅಬ್ರಹಾಮನು ವಿಧೇಯನಾದನು ಮತ್ತು ತನ್ನ ಸ್ವದೇಶವನ್ನು ತೊರೆದನು. ಒಂದು ಸಮಯದಲ್ಲಿ, ಹೋರಾಟದ ನಂತರ, ತನ್ನ ಜಯದ ಸಂಪಾದನೆಯಲ್ಲಿ ಹತ್ತನೆಯ ಒಂದು ಭಾಗವನ್ನು ದೇವರ ಯಾಜಕನಾದ ಮೇಲ್ಕಿಜಿದೇಕನಿಗೆ ಕೊಟ್ಟನು (ಆದಿಕಾಂಡ 14:17-20, ಹಿಬ್ರಿಯ 5:6-10). ಸಂಪಾದನೆಯ ಮತ್ತು ಉತ್ಪಾದನೆಯ ದಶಮಾಂಶದ ಪಾಲನ್ನು ಕೊಟ್ಟಂತಹ ಹಾಗೂ ಉಲ್ಲೇಖಿಸಿದಂತಹ ಪ್ರಥಮ ದಶಮಾಂಶದ ಕಾಣಿಕೆಯು ಇದಾಗಿದೆ.

ದೇವರು ಅಬ್ರಹಾಮ ಮತ್ತು ಸಾರಯಳಿಗೆ ಮಗನನ್ನು ಕೊಡುವೆನು ಎಂದು ವಾಗ್ದಾನ ಮಾಡಿದನು. ಆದರೆ ಉತ್ತರವು ಬರುವುದರಲ್ಲಿ ನಿಧಾನವಾದದ್ದರಿಂದ, ಸಾರಯಳು ತನ್ನ ದಾಸಿಯಾದ ಹಾಗರಳನ್ನು ಅಬ್ರಹಾಮನಿಗೆ ಹೆಂಡತಿಯಾಗುವುದಕ್ಕೆ ಕೊಟ್ಟಳು ಇವಳು ಇಸ್ಮಾಯಿಲ್ ಎಂಬ ಹೆಸರಿನ ಮಗನನ್ನು ಅಬ್ರಹಾಮನಿಗೆ ಹಡೆದುಕೊಟ್ಟಳು (ಆದಿಕಾಂಡ 16:1-4, 15). ಆದರೆ ದೇವರು ಅಬ್ರಹಾಮನಿಗೆ ವಾಗ್ದಾನದ ಮಗನನ್ನು ಅವನ ಹೆಂಡತಿಯಾದ ಸಾರಯಳಿಂದ ಕೊಡುವೆನು ಎಂದು ಹೇಳಿದ ದೇವರ ವಾಗ್ದಾನದಲ್ಲಿ ನಿರೀಕ್ಷೆಯಿನ್ನಿಟ್ಟು ಎದುರುನೋಡುತ್ತಿದ್ದನು. ಕಡೆಯಲ್ಲಿ ಸಾರಯಳು 90 ವರ್ಷ ತುಂಬುವಾಗ ಮಗನನ್ನು ಪಡೆದಳು ಮತ್ತು ಆ ಸಮಯದಲ್ಲಿ ಅಬ್ರಹಾಮನು ಒಂದು ನೂರು ವರ್ಷದ ಮುದುಕನಾಗಿದ್ದನು. ಅವರು ಮಗನಿಗೆ ಇಸಾಕನೆಂದು ನಾಮಕರಣ ಮಾಡಿದರು ಮತ್ತು ಇವನು ಯಹೂದ್ಯ ಜನಾಂಗವನ್ನು ಸ್ಥಾಪಿಸಿದನು. ಇಸ್ಮಾಯಿಲನು ಅರಬ್ ಜನಾಂಗವನ್ನು ಸ್ಥಾಪಿಸಿದನು ಎಂದು ಸರ್ವ ಸಾಧಾರಣವಾಗಿ ನಂಬಲಾಗುತ್ತಿದೆ. ಈ ದಿನದವರೆಗೂ ಅರಬ್ಬರು ಯಹೂದ್ಯರಿಗೆ ವೈರಿಗಳಾಗಿಯೇ ಉಳಿದಿದ್ದಾರೆ (ಆದಿಕಾಂಡ 17:15-22; 21:1-5, ಗಲಾತ್ಯ 4:21-31).

ಪುರುಷನು ಮಾತ್ರ ಜನನಾಂಗದ ತುದಿಯ ಚರ್ಮವನ್ನು ಕತ್ತರಿ ಸುನ್ನತಿಯನ್ನು ಮಾಡುವುದರ ಮೂಲಕ ದೇವರು, ಅಬ್ರಹಾಮನೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡನು. ಆ ದಿನದಿಂದ ಇಸಾಕನಿಂದ ಹಿಡಿದು ಅಬ್ರಹಾಮನ ಸಂತಾನದವರಾದ ತಾವುಗಳೆಲ್ಲರೂ ದೇವರ ಜನಾಂಗದ ಭಾಗವಾಗಿದ್ದೇವೆಂದು ಸೂಚಿಸುವುದಕ್ಕಾಗಿ ಜನಿಸಿದ ಎಂಟನೆಯ ದಿನದಲ್ಲಿ ಸುನ್ನತಿ ಮಾಡಿಸುತ್ತಾರೆ (ಆದಿಕಾಂಡ 17:1-11). ಯಹೂದ್ಯರು ಸುನ್ನತಿಯನ್ನು ಮಾಡಿಸಿಕೊಳ್ಳುವ ಅಗತ್ಯವುಳ್ಳವರಾಗಿದ್ದಾರೆ. ಆದರೆ ಇದನ್ನು ಇತರರು ಸುನ್ನತಿ ಮಾಡಿಸಿ ಕೊಳ್ಳುವಂತದ್ದನ್ನು ಪಾಲಿಸಬಾರದೆಂದು ಒತ್ತಾಯಿಸಿದ್ದಾನೆ (ರೋಮ 2:25-29, 4:9-12; ಗಲಾಥ್ಯ :2-6; ಕೊಲೋಸ್ಸೆ 2:11-12).

ಅಬ್ರಹಾಮನ ತಮ್ಮನ ಮಗನಾದ ಲೋಟನು ಪಾಪದಿಂದ ತುಂಬಿ ತುಳುಕುತ್ತಿದ್ದ ಸೊದೊಮ್ ಮತ್ತು ಗೊಮೋರಾ ಎಂಬ ಪಟ್ಟಣಗಳಲ್ಲಿ ವಾಸ ಮಾಡಿದನು. ಈ ಪಟ್ಟಣಗಳ ಮೇಲೆ ಬರುವ ತೀರ್ಪಿನ ಬಗ್ಗೆ ಮತ್ತು ನಾಶನದ ವಿಷಯದಲ್ಲಿ ಅಬ್ರಹಾಮನನನ್ನು ಎಚ್ಚರಿಸುವುದಕ್ಕಾಗಿ ಆತನ ಬಳಿಗೆ ಮೂವರು ದೂತರನ್ನು ದೇವರು ಕಳುಹಿಸಿದನು (ಆದಿಕಾಂಡ 18:1-7, 20-21). ಲೋಟನು ದೇವದೂತರ ಸಹಾಯದಿಂದ ತಪ್ಪಿಸಿಕೊಂಡನು (ಆದಿಕಾಂಡ 19:15-29; ಮತ್ತಾಯ 10:15, ಲೂಕ 17:28-30).

ದೇವರು ಕೆಲವು ವರ್ಷಗಳಾದ ಮೇಲೆ ಅಬ್ರಹಾಮನಿಗೆ ತನ್ನ ಒಬ್ಬನೇ ಮಗನಾದ ಇಸಾಕನನ್ನು ಯಜ್ಞವನ್ನಾಗಿ ಅರ್ಪಿಸಬೇಕು ಎಂದು ಕೇಳುವುದರ ಮೂಲಕ ಅವನನ್ನು ಪರೀಕ್ಷಿಸಿದನು ಮತ್ತು ಅಬ್ರಹಾಮನು ವಿಧೇಯನಾದನು. ಅಬ್ರಹಾಮನು ಇಸಾಕನನ್ನು ಬಲಿಕೊಡುವ ಕ್ಷಣದಲ್ಲಿ ದೇವರು ಅವನನ್ನು ತಡೆದನು ಮತ್ತು ಮಗನಿಗೆ ಬದಲಾಗಿ ಯಜ್ಞವನ್ನರ್ಪಿಸಲು ಒಂದು ಟಗರನ್ನು ಒದಗಿಸಿದನು (ಆದಿಕಾಂಡ 22:1-18, ಹಿಬ್ರಿಯ 11:17-19). ಇದೇ ರೀತಿಯಾಗಿ ದೇವರು ಯಜ್ಞಾರ್ಪಿತನಾಗಿ ಸಾಯುವುದಕ್ಕೋಸ್ಕರ ನಮಗೆ ಬದಲಾಗಿ ಯೇಸುಕ್ರಿಸ್ತನು ಬಂದನು (ಹಿಬ್ರಿಯಾ 10:10).

ಇಸಾಕನು ರೆಬೆಕ್ಕಳನ್ನು ಮದುವೆಯಾದನು ಮತ್ತು ಅವಳು ಏಸಾವ ಮತ್ತು ಯಾಕೋಬ ಎಂಬ ಅವಳಿ ಮಕ್ಕಳನ್ನು ಹಡೆದಳು. ಏಸಾವನು ಹಿರಿಯನು. ಆದರೆ ಯಾಕೋಬನು ಏಸಾವನ ಚೊಚ್ಚಲುತನದ ಹಕ್ಕನ್ನು ಮತ್ತು ಅವನ ಆಶೀರ್ವಾದವನ್ನು ಮೋಸದಿಂದ ಅಪಹರಿಸಿದನು (ಆದಿಕಾಂಡ 25:19-34, 27:1-40). ಏಸಾವನ ಕೋಪದಿಂದ ಯಾಕೋಬನು ತಪ್ಪಿಸಿಕೊಂಡನು. ಬೇರೊಂದು ಸ್ಥಳಕ್ಕೆ ಹೋಗುವ ಮಾರ್ಗದಲ್ಲಿ ಆತನು ಕನಸಿನಲ್ಲಿ ದೇವರನ್ನು ಸಂದಿಸುತ್ತಾನೆ. ದೇವರು ಅಬ್ರಹಾಮನಿಗೆ ವಾಗ್ದನ ಮಾಡಿದಂತೆಯೇ ಈತನ ಸಂತಾನದ ಮೂಲಕವಾಗಿ ಪ್ರಪಂಚದ ಎಲ್ಲಾ ಜನಾಂಗಗಳಿಗೆ ಆಶಿರ್ವಾದ ಉಂಟಾಗುವಂತೆ ಮಾಡುವೆನು ಎಂದು ಯಾಕೋಬನಿಗೆ ವಾಗ್ದನವನ್ನು ಮಾಡಿದನು(ಆದಿಕಾಂಡ 38:10-17). ಇದರಂತೆಯೇ ಯೇಸುಕ್ರಿಸ್ತನಲ್ಲಿ ಈ ವಾಗ್ದಾನವು ನೆರವೇರಿತು.

ಲೇಯಾ ಮತ್ತು ರಾಹೇಲ ಎಂಬ ಇಬ್ಬರು ಅಕ್ಕತಂಗಿಯರನ್ನು ಮದುವೆ ಮಾಡಿಕೊಂಡನು. ಇಸ್ರಾಯೇಲರ ಹನ್ನೆರಡು ಕುಲಗಳನ್ನು ಸ್ಥಾಪಿಸಿದಂತ ಹನ್ನೆರಡು ಜನ ಗಂಡು ಮಕ್ಕಳನ್ನು ಇವರು ಮತ್ತು ಇವರ ದಾಸಿಯರು ಯಾಕೋಬನಿಗಾಗಿ

ಪಡೆದರು (ಅ.ಕೃ. 7:8), (ರೂಬೇನ, ಸಿಮೆಯೋನ ಲೇವಿಯರು ಯಾಜಕ ಕುಲವಾದರು), (ಈ ಕುಲದವರ ಸಂತಾನದಲ್ಲಿಯೇ ಕ್ರಿಸ್ತನು ಜನಿಸಿದನು), ಇಸ್ಸಾಕಾರ, ಜೆಬುಲೋನ್, ದಾನ್, ನಫ್ತಾಲಿ, ಗಾದ್,ಯೊಸೇಫ್ ಮತ್ತು ಬೆಂಜಮಿನ್ (ಆದಿಕಾಂಡ 35:23-26, ಪ್ರಕಟಣೆ 7:3-8). ದೇವರು ಮಾರ್ಗ ಮಧ್ಯದಲ್ಲಿ ಯಾಕೋಬನಿಗೆ "ಇಸ್ರಾಯೇಲ" ಎಂಬ ಹೊಸ ಹೆಸರನ್ನಿಟ್ಟನು. ಈ ಕುಟುಂಬವು ಕಾನಾನಿಗೆ ಮರಳಿ ಬಂದಿತು. ಹೀಗೆ ಬಂದಂತಹ ಯಹೂದ್ಯರೆ ಇಸ್ರಾಯೇಲ್ಯರು ಎಂದು ಕರೆಯಲ್ಪಟ್ಟರು (ಆದಿಕಾಂಡ 32:22-32).

ಯಾಕೋಬನಿಗೆ ಯೊಸೇಫನು ಮೆಚ್ಚಿಗೆಯ ಮಗನಾಗಿದ್ದನು. ಅಸೂಯೆಯ ನಿಮಿತ್ತದಿಂದಾಗಿ, ಯೊಸೇಫನು ತನ್ನ ಸಹೋದರರಿಂದಲೇ ಈಜಿಪ್ಟಿನ ವ್ಯಾಪಾರಸ್ಥರಿಗೆ ಮಾರಲ್ಪಟ್ಟನು. ನಂತರ ವ್ಯಾಪಾರಸ್ಥರು ಅವನನ್ನು ತಮ್ಮ ದೇಶಕ್ಕೆ ಕರೆದುಕೊಂಡು ಹೋದರು (ಆದಿಕಾಂಡ 37:12-36). ಹೀಗಿರುವಾಗಲೂ ದೇವರು ಯೂಸೇಫನ ಸಂಗಡವಿದ್ದನು ಮತ್ತು ದೇವರು ನಡೆದ ಘಟನೆಗಳಿಂದಲೇ ಒಳ್ಳೆಯ ಕಾರ್ಯಗಳಾಗುವಂತೆ ಮಾಡಿ, ಇವುಗಳ ಮುಖಾಂತರ, ಯೊಸೇಫನನ್ನು ಈಜಿಪ್ಟ್ ಸರ್ಕಾರದ ಉನ್ನತ ಅಧಿಕಾರಿಯನ್ನಾಗಿ ಮಾಡಿದನು (ಆದಿಕಾಂಡ 39:5; 41:41-57). ಬರಗಾಲದ ಸಮಯದಲ್ಲಿ, ಯೊಸೇಫನ ಕುಟುಂಬದವರು ಅವನಿಂದ ಆಹಾರವನ್ನು ಕೊಳ್ಳಲು ಅವನಲ್ಲಿಗೆ ಬಂದರು. ಆದರೆ, ಯೊಸೇಫನು ತನ್ನನ್ನು ತಾನೇ ಬಹಿರಂಗಪಡಿಸಿಕೊಳ್ಳುವವರೆಗೆ ಅವರು ಆತನನ್ನು ಗುರುತು ಹಿಡಿಯಲಿಲ್ಲ (ಆದಿಕಾಂಡ 42:1-8; 45:1-11). ಆಮೇಲೆ ಯೊಸೇಫನ ಮನೆಯವರು ಈಜಿಪ್ಟಿಗೆ ಬಂದು ಅಲ್ಲಿಯೇ ನೆಲೆಸಿದರು. ಯಾಕೋಬನು (ಇಸ್ರೇಯೆಲ) ಯೊಸೇಫನ ಇಬ್ಬರು ಮಕ್ಕಳಾದ ಮನಸ್ಸೆ ಮತ್ತು ಎಫ್ರಾಯೀಮ್‌ರನ್ನು ತನ್ನ ಮಕ್ಕಳನ್ನಾಗಿ ದತ್ತು ಸ್ವೀಕಾರ ಮಾಡಿದನು (ಆದಿಕಾಂಡ 48:1, 5; ಅ.ಕೃ. 7:9-16).

ಯೊಬನ ಪುಸ್ತಕವು ಬಹುಶಃ ಅಬ್ರಹಾಮನ ಕಾಲದಲ್ಲಿಯೇ ಬರೆಯಲ್ಪಟ್ಟಿರಬೇಕು. ಇದು ಯೊಬನೆಂಬ ಮನುಷ್ಯನ ಬಗ್ಗೆಯು ಮತ್ತು ಸಂಕಷ್ಟ ಹಾಗು ಸಮಸ್ಯೆಗಳ ಮಧ್ಯದಲ್ಲಿಯೂ ಆತನು ಇಟ್ಟ ನಂಬಿಕೆಯ ಬಗ್ಗೆ ತಿಳಿಸುತ್ತದೆ.

ಇಸ್ರಾಯೇಲರು, ಈಜಿಪ್ಟ್ ದೇಶದಲ್ಲಿ ಸುಮಾರು ನಾಲ್ಕು ನೂರು ವರ್ಷಗಳವರೆಗೆ ಇದ್ದರು ಮತ್ತು ಅಲ್ಲಿ ಅವರ ಸಂತಾನವು ಹೆಚ್ಚಿತು. ಈಜಿಪ್ಟ್‌ನವರು ಇವರಿಗೆ ಬಹಳವಾಗಿ ಹೆದರುವವರಾದರು ಮತ್ತು ತಮ್ಮ ದಾಸರನ್ನಾಗಿ ಮಾಡಿದರು. ಈಜಿಪ್ಟ್ ದೇಶದಲ್ಲಿ ಇಸ್ರಾಯೇಲರನ್ನು ಕುಗ್ಗಿಸುವುದಕ್ಕೆ ಕೊಟ್ಟ ಕಷ್ಟಗಳು ಭಯಂಕರವಾಗಿದ್ದವು ಮತ್ತು ದೇವರು ಅಂತಿಮವಾಗಿ ಮೋಶೆಯನ್ನು ಅವರ ವಿಮೋಚಕನನ್ನಾಗಿ ಎಬ್ಬಿಸಿದನು. ವಿಮೋಚನಕಾಂಡ ಪುಸ್ತಕವು ಇಸ್ರಾಯೇಲರ ಬಿಡುಗಡೆಯ ಮತ್ತು ಸೀನಾಯಿ ಪರ್ವತದವರೆಗಿನ ಅವರ ಪ್ರಯಾಣದ ಚರಿತ್ರೆಯನ್ನು ದಾಖಲಿಸಿದೆ. ಈ ಘಟನೆಯು ಹೆಚ್ಚು ಕಡಿಮೆ ಕ್ರಿ.ಪೂ.ವರ್ಷ 1400ರಲ್ಲಿ ಸಂಭವಿಸಿತು. ಇಸ್ರಾಯೇಲರನ್ನು ಈಜಿಪ್ಟಿನಿಂದ ಹೋಗಲು ಅನುಮತಿಸಬೇಕು ಎಂದು ಪರೋಹನನ್ನು, ಮೋಶೆಯು ಮತ್ತು ಇವನ ಅಣ್ಣನಾದ ಆರೋನರು ಪದೇ ಪದೇ ಕೇಳಿದರು. ಪ್ರತಿ ಸಾರಿಯು ನಿರಾಕರಿಸಿದ್ದರಿಂದ ದೇವರು ಈಜಿಪ್ಟಿನವರ ಮೇಲೆ ಪ್ಲೇಗ್ ಎಂಬ ಮಹಾ ಮರಣಾಂತಿಕವಾದ ರೋಗವನ್ನು ಬರಮಾಡಿದನು. ಈಜಿಪ್ಟ್ ದೇಶದವರ ಚೊಚ್ಚಲು ಮಕ್ಕಳನ್ನು ಸಾಯಿಸುವುದಕ್ಕೂ ಮತ್ತು ಇಸ್ರಾಯೇಲ್ಯರನ್ನು ಪ್ಲೇಗ್ ರೋಗದಿಂದಾಗುವ ಮರಣದಿಂದ ತಪ್ಪಿಸುವುದಕ್ಕಾಗಿ "ಪಸ್ಕ"ದ ಆಚರಣೆಯು ನೇಮಿಸಲ್ಪಟ್ಟಿತು. ಸಂಹಾರ ದೂತನಿಂದ ಗುರುತಿಸಲ್ಪಡುವುದಕ್ಕೆ ಮತ್ತು ಪ್ರತಿಯೊಂದು ಕುಟುಂಬಕ್ಕಾಗಿ ನೇಮಿಸಲ್ಪಟ್ಟಿತು ಮತ್ತು ಸಂಹಾರಕ ದೂತನು ಮನೆಯ ಮುಂದೆ ಹಾದು ಹೋಗುವಾಗ ಈ ದೂತನಿಂದ ಗುರುತಿಸಲ್ಪಡುವುದಕ್ಕಾಗಿ, ಮನೆಯ ಬಾಗಿಲಿನ ಅಡ್ಡಪಟ್ಟಿಯ ಮೇಲೆ ರಕ್ತವು ಪ್ರೋಕ್ಷಿಸುವುದಕ್ಕಾಗಿ ದೋಷ ರಹಿತವಾದ ಒಂದು ಗಂಡು ಕುರಿಮರಿಯು (ಪಸ್ಕದ ಆಚರಣೆಯಲ್ಲಿ) ಯಜ್ಞಾ ರ್ಪಿತವಾಗಿ ಅದರ ಮಾಂಸವು ಪ್ರತಿ ಕುಟುಂಬದವರಿಂದ ಸೇವಿಸಲ್ಪಟ್ಟಿತು (ವಿಮೋಚನಕಾಂಡ 12:1-23). ನಮಗೆ ಯೇಸು ಕ್ರಿಸ್ತನು ನಮ್ಮ ಪಸ್ಕದ ಕುರಿಮರಿಯೆಂದು ಹೇಳಲ್ಪಟ್ಟಿದೆ (1 ಕೊರಿಂಥ 5:7, 1ಪೇತ್ರ 1:19; ಪ್ರಕಟಣೆ 5:6-10). ಹಿಟ್ಟನ್ನು ಹದ ಮಾಡಲಿಕ್ಕೆ ಸಮವಿಲ್ಲದರಿಂದ, ಹುಳಿಯಿಲ್ಲದ ರೊಟ್ಟಿಯನ್ನು ತಿನ್ನಲಾಯಿತು. ಪರೋಹನು ತನ್ನ ಚೊಚ್ಚಲು ಮಗನು ಸತ್ತದ್ದನ್ನುಯಾವಾಗ ಕಂಡುಕೊಂಡನೋ ಆಗ ಅದೇ ದಿನದಲ್ಲಿ ಇಸ್ರಾಯೇಲರ ಬಿಡುಗಡೆಗೆ ಅಪ್ಪಣೆ ಮಾಡಿದನು (ವಿಮೋಚನ ಕಾಂಡ 12:29-39). ಆದರೆ ಇಸ್ರಾಯೇಲರು ಹೊರಟು ಹೋದ ತಕ್ಷಣವೇ ಫರೋಹನು ತನ್ನ ಮನಸ್ಸನ್ನು ಬದಲಾಯಿಸಿದನು ಮತ್ತು ಅವರನ್ನು ಬೆನ್ನಟ್ಟಲು ಈಜಿಪ್ಟಿನ ಸೈನಿಕರನ್ನು ಕಳುಹಿಸಿದನು (ವಿಮೋಚನ ಕಾಂಡ 14:5-14). ದೇವರ ಮೇಘವು ಈಜಿಪ್ಟ್ ಸೈನಿಕರ ಮತ್ತು ಇಸ್ರಾಯೇಲರ ಮಧ್ಯದಲ್ಲಿ ಸಾಗುತ್ತಿತ್ತು. ದೇವರು ಕೆಂಪು ಸಮುದ್ರವನ್ನು ಇಬ್ಭಾಗ ಮಾಡಿದನು ಮತ್ತು ಇಸ್ರಾಯೇಲರು ಒಣಗಿದ ಭೂಮಿಯ ಮುಖಾಂತರ ನಡೆದು ಹೋದರು (ವಿಮೋಚನಾಕಾಂಡ 14:15-22; 1 ಕೊರಿಂಥ 10:1-2). ಆದರೆ ಐಗುಪ್ತರು ಅವರನ್ನು ಹಿಂಬಾಲಿಸಲು ಪ್ರಾರಂಭಿಸಿದಾಗ, ಪುನಃ ಸಮುದ್ರದ ನೀರು ಮೊದಲಿನಂತೆ ಕೂಡಿಕೊಂಡಿತು ಮತ್ತು ಐಗುಪ್ತರು ನೀರಿನಲ್ಲಿ ಮುಳುಗಿ ಹೋದರು (ವಿಮೋಚನಾ ಕಾಂಡ 14:23-31).

ದೇವರು ಮೋಶೆಗೆ ಆರಾಧನೆಗೋಸ್ಕರ ಮಂಜೂಷದಿಂದಿರುವ ಗುಡಾರವನ್ನು ಮಾಡಬೇಕೆಂದು ಸಲಹೆ ಕೊಟ್ಟಂತಹ ಸೀನಾಯ್ ಪರ್ವತದ ಕಡೆಗೆ ಇಸ್ರಾಯೇಲರು ಪ್ರಯಾಣಿಸಿದರು (ಹಿಬ್ರಿಯಾ 9:1-10). ದೇವರು ಮೋಶೆಗೆ ಇದೆ ಸೀನಾಯ್ ಪರ್ವತದ ಮೇಲೆ ಧರ್ಮಶಾಸ್ತ್ರವನ್ನು ಸಹ ಕೊಟ್ಟನು. ಹಳೆ ಒಡಂಬಡಿಕೆಯ ಮೊದಲಿನ ಐದು ಪುಸ್ತಕಗಳು ಧರ್ಮಶಾಸ್ತ್ರದ ಪುಸ್ತಕಗಳು ಎಂದು ಕರೆಯಲ್ಪಡುತ್ತವೆ. ವಿಶೇಷವಾಗಿ ಯಾಜಕಕಾಂಡ ಪುಸ್ತಕ ಸಹಿತವಾಗಿ ಈ ಎಲ್ಲಾ ಪುಸ್ತಕಗಳಲ್ಲಿ ಯಹೂದ್ಯಜನಾಂಗಕ್ಕಾಗಿ ಇರುವಂತಹ ಎಲ್ಲಾ ಕಾನೂನು ಮತ್ತು ನಿಯಮಾವಳಿಗಳು ಕಂಡುಬರುತ್ತವೆ. ದೇವರೊಂದಿಗೆ ಸರಿಯಾದ ಸಂಬಂಧದಲ್ಲಿರಲು ಮತ್ತು ದೇವರಿಂದ ಆಶೀರ್ವದಿಸಲ್ಪಡುವುದಕ್ಕಾಗಿ ಯಹೂದ್ಯ ಜನಾಂಗದವರು ಈ ನಿಯಮಗಳಿಗೆ ವಿಧೇಯರಾಗಿರಬೇಕು. ಈ ನಿಯಮಾವಳಿಗಳನ್ನು ವಿವಿಧ ವಿಭಾಗಗಳಿಗಾಗಿ ವಿಂಗಡಿಸಬಹುದು (1) ಪ್ರಾಣಿಗಳ ಬಲಿದಾನಗಳು (2) ದೇವಲಾಯಕ್ಕಾಗಿ ಮತ್ತು ಯಾಜಕರಿಗಾಗಿ ನಿಯಮಾವಳಿಗಳು (3) ಶುದ್ಧೀಕರಣ ಮತ್ತು ಪವಿತ್ರತೆ (4) ಹಬ್ಬಗಳು ಮತ್ತು (5) ಸಾಮಾಜಿಕ ಸಂಬಂಧಗಳು.

ಯಾವ ಕಾರಣಕ್ಕೂ ನಾವು ಯಹೂದ್ಯರ[1] ಧರ್ಮಶಾಸ್ತ್ರವನ್ನು ಅನುಸರಿಸುವುದು ಬೇಕಾಗಿಯೇ ಇಲ್ಲ. ಯಾಕೆಂದರೆ ಇದು ಯೇಸು ಕ್ರಿಸ್ತನಿಂದ ನೆರವೇರಿಸಲ್ಪಟ್ಟಿದೆ (ಮತ್ತಾಯ 5:17). ದೇವರು ಪ್ರಾಣಿಗಳ ಯಜ್ಞಗಳನ್ನು ಕೇಳಿದನು. ಕಾರಣ ರಕ್ತಧಾರೆ ಇಲ್ಲದೆ ಪಾಪಕ್ಷಮಾಪಣೆಯಿಲ್ಲ (ಹಿಬ್ರಿಯಾ 9:22). ಹೀಗಿದ್ದರೂ ಖಂಡಿತವಾಗಿಯು ಹಳೆ ಒಡಂಬಡಿಕೆಯ ಯಜ್ಞಗಳು ಜನರನ್ನು ಶುದ್ಧೀಕರಿಸಲಿಲ್ಲ ಮತ್ತು ಅವರ ಹೃದಯಗಳನ್ನು ಬದಲಾಯಿಸಲಿಲ್ಲ (ಹಿಬ್ರಿಯಾ 9:9-10). ಆದುದರಿಂದ ಪವಿತ್ರತೆಗಾಗಿ ಮತ್ತು ಯಜ್ಞಕ್ಕಾಗಿ ಸಂಬಂಧಿಸಿದಂತಹ ಧರ್ಮಶಾಸ್ತ್ರದ ನಿಯಮಗಳನ್ನು ಕ್ರಿಸ್ತನು ನೆರವೇರಿಸಿದ್ದಾನ[2] (ಹಿಬ್ರಿಯಾ 9:14; 10:10). ಭೂಮಿಯ ಮೇಲಿನ ದೇವಾಲಯವು ನಾಶವಾಗಿದೆ. ಯೇಸುಕ್ರಿಸ್ತನು ನಮ್ಮ ಮಹಾಯಾಜಕನಾಗಿದ್ದು, ಸತ್ಯವಾದಂತಹ ಪರಲೋಕ ದೇವಾಲಯದಲ್ಲಿ ಸೇವೆ ಸಲ್ಲಿಸುತ್ತಿರುವವನಾಗಿದ್ದಾನೆ (ಹಿಬ್ರಿಯಾ 8:1-2).

ಕ್ರಿಸ್ತನ ಪ್ರಥಮ ಆಗಮನದಲ್ಲಿಯೇ ಆತನಿಂದ ಹಳೆ ಒಡಂಬಡಿಕೆಯಲ್ಲಿಂತಹ (ಯಾಜಕಕಾಂಡ 23 ಅದ್ಯಾಯದ). ಹಬ್ಬಗಳು ನೆರವೇರಿಸಲ್ಪಟ್ಟಿವೆ ಅಥವಾ ಆತನ ಎರಡನೆಯ ಆಗಮನದಲ್ಲಿ ಇವುಗಳು ನೆರವೇರುವುವು. ಯೇಸುಕ್ರಿಸ್ತನು ಯಜ್ಞದ ಕುರಿಯಾಗಿ ಪಸ್ಕ ಹಬ್ಬದ ಸಮಯದಲ್ಲಿಯೇ ಮರಣ ಹೊಂದುವುದರ ಮೂಲಕವಾಗಿ (ಯಾಜಕಕಾಂಡ 23:4-8). ಪಸ್ಕದ ಮತ್ತು ಹುಳಿಯಿಲ್ಲದ ರೊಟ್ಟಿಯ ಹಬ್ಬದ ಆಚರಣೆಯನ್ನು ನೆರವೇರಿಸಿ ನಿಜವಾಗಿಯೂ ನಮ್ಮನ್ನು ಮರಣದಿಂದ ತಪ್ಪಿಸಿದ್ದಾನೆ (ಯೇಸುಕ್ರಿಸ್ತನು ತನ್ನ ಶಿಷ್ಯರೊಂದಿಗೆ ಮಾಡಿದ "ಕರ್ತನ ಭೋಜನ"ವು ಪಸ್ಕದ ಹಬ್ಬದ ಊಟವಾಗಿತ್ತು).ಯೇಸು ಕ್ರಿಸ್ತನು ಪ್ರಥಮ ಪಲಗಳ ಸುಗ್ಗಿಯ ಹಬ್ಬದ ಆ ದಿನದಲ್ಲಿ ಎದ್ದು (ಯಾಜಕಕಾಂಡ 23:9-14),ಸತ್ತವರೊಳಗಿಂದ ಎದ್ದು ಬಂದವರಲ್ಲಿ ಮೊದಲಿಗನಾಗುವುದರ ಮೂಲಕ ಪ್ರಥಮ ಪಲಗಳ ಹಬ್ಬವು ನೆರವೇರಿಸ್ಲಟ್ಟು, ಕ್ರಿಸ್ತನೆ ಪ್ರಥಮ ಫಲವಾದನು. ಕ್ರಿಸ್ತನಲ್ಲಿ ವಿಶ್ವಾಸಿಗಳು ಅನಂತರ ಎದ್ದು ಬರುವರು (1ಕೊರಿಂಥ 15:22, 23). ವಾರಗಳ ಹಬ್ಬವೆಂದು ಕರೆಯಲ್ಪಡುವ (ಯಾಜಕಕಾಂಡ 23:15-21) ಪಂಚಾಶತ್ತಮ ಹಬ್ಬದ ಆ ದಿನದಲ್ಲಿ ಪವಿತ್ರಾತ್ಮನು ಇಳಿದು ಬಂದು ಸಭೆಯನ್ನು ಬಲಗೊಳಿಸುವುದರ ಮೂಲಕ ನೆರವೇರಿಸ್ಲಟ್ಟಿತು. (ಅ.ಕೃ 2:1-4) ಯೇಸುಕ್ರಿಸ್ತನು ಶಿಲುಬೆಯ ಮೇಲೆ ತನ್ನ ಪ್ರಾಣವನ್ನು ಅರ್ಪಿಸುವುದರ ಮೂಲಕ ಸಮರ್ಪಣೆಯ ದಿನವು ನೆರವೇರಿಸಲ್ಪಟ್ಟಿತು (ಯಾಜಕ ಕಾಂಡ 16:1-34, 23:26-32) ಮತ್ತು ಆತನು ಸ್ವರ್ಗಕ್ಕೆ ಹೋಗುವುದರ ಮೂಲಕವಾಗಿಯೂ ಮತ್ತು ಸ್ವರ್ಗದಲ್ಲಿರುವ ದೇವಾಯದಲ್ಲಿ ತನ್ನ ರಕ್ತವನ್ನು ಅರ್ಪಿಸಿ ನಮ್ಮನ್ನು ಶುದ್ಧಗೊಳಿಸುವಾಗ ಇದು ಸಂಪೂರ್ಣವಾಯಿತು (ಹಿಬ್ರಿಯಾ 9:11-14, 24-28). ಹಾಗೆಯೇ ಉಳಿದಿರುವ ತುತೂರಿಗಳ ಮತ್ತು ಗುಡಾರಗಳ ಈ ಎರಡು ಹಬ್ಬಗಳು (ಯಾಜಕಕಾಂಡ 23:23-25, 33-36). ಯೇಸುಕ್ರಿಸ್ತನ ಎರಡನೆಯ ಬರುವಿಕೆಯಲ್ಲಿ ನೆರವೇರಿಸಲ್ಪಡುವುವು.

ಸಮಾಜದಲ್ಲಿ ನೈತಿಕ ಸಂಬಂಧಗಳಿಗೋಸ್ಕರವಾಗಿರುವ ದಶಾಜ್ಞೆಗಳನ್ನು ನಾವು ಕೈಗೊಳ್ಳಬೇಕು ಎಂದು ದೇವರು ಬಯಸುತ್ತಾನೆ. (ವಿಮೋಚನಾಕಾಂಡ 20:1-17) ಆದರೆ ಇವುಗಳನ್ನು ಕೈಗೊಳ್ಳುವ ಮೂಲಕ ಯಾವೊಬ್ಬನು ನೀತಿವಂತನೆಂದು ಪರಿಗಣಿಸಲ್ಪಡುವುದಕ್ಕಾಗುವುದಿಲ್ಲ ಎಂದು ನಮಗೆ ತಿಳಿದಿದೆ. ಯಾಕೆಂದರೆ ಯಾವೊಬ್ಬನು, ಎಲ್ಲಾ ಸಮಯದಲ್ಲಿ ಈ ಆಜ್ಞೆಗಳನ್ನು ಕೈಗೊಳ್ಳುವುದಕ್ಕೆ ಸಾಧ್ಯವಾಗದು (ಗಲಾತ್ಯ 2:15-16; ಯಾಕೋಬ 2:10). ನಾವು ನಂಬಿಕೆಯಲ್ಲಿ ಕ್ರಿಸ್ತನೆಡೆಗೆ ನಡೆಸಲ್ಪಡಬೇಕೆಂದು ನಮ್ಮ ಮೇಲೆ ಧರ್ಮಶಾಸ್ತ್ರವು ಅಧಿಕಾರಿಯಂತೆ ನೇಮಿಸಲ್ಪಟ್ಟಿತು (ಗಲಾತ್ಯ 3:24-). ಕ್ರಿಸ್ತ ಯೆಸುವಿನಲ್ಲಿ ವಿಶ್ವಾಸಿಗಳಾದ ನಾವು ದರ್ಮಶಾಸ್ತ್ರ ನಿಯಮದ ಅದೀನದಲ್ಲಿ ಇಲ್ಲವೇ ಇಲ್ಲ (ರೋಮ.7:6 ಗಲಾತ್ಯ 3:13;25) ಆದರೆ ಪಾಪದ ಜೀವನ ನಡಿಸುವುದಕ್ಕಾಗಿ ನಮಗಿರುವ ಸ್ವಾತಂತ್ರವನ್ನು ದುರುಪಯೋಗ ಮಾಡಿಕೊಳ್ಳಬಾರದು (ಗಲಾತ್ಯ 5:13). ಒಬ್ಬರನ್ನೊಬ್ಬರು ಪ್ರೀತಿಸುವುದರಿಂದಲೇ ಧರ್ಮಶಾಸ್ತ್ರವು ನೆರವೇರುತ್ತದೆ ಎಂಬುವಂತದ್ದೇ ಹೊಸ ಒಡಂಬಡಿಕೆಯ ಪ್ರಾಮುಖ್ಯವಾದ ಬೋಧನೆಯಾಗಿದೆ (ಮತ್ತಾಯ 22:36-40; ರೋಮ 13:8-10; ಗಲಾತ್ಯ 5:14)

ಮತ್ತು ಕ್ರಿಸ್ತನನ್ನು ನಿಜವಾಗಿಯೂ ಪ್ರೀತಿಸುವವರು ಆತನು ಹೇಳುವ ಆಜ್ಞೆಗಳನ್ನು ಅನುಸರಿಸುತ್ತಾರೆ (ಯೋಹಾನ 14:15; 1 ಯೋಹಾನ 2:4-5)

ಇಸ್ರಾಯೇಲರು ಸೀನಾಯಿ ಪರ್ವತ ಪ್ರದೇಶದ ಮರಳುಗಾಡಿನಲ್ಲಿ ತಮ್ಮ ಪ್ರಯಾಣವನ್ನು ಮುಂದುವರಿಸಿದ್ದರ ಬಗ್ಗೆ, ಅರಣ್ಯಕಾಂಡ ಪುಸ್ತಕದಲ್ಲಿ ಓದುತ್ತೇವೆ. ಅನೇಕ ಸಮಯದಲ್ಲಿ ಅವರು ದೇವರು ಮತ್ತು ಮೋಶೆಯ ವಿರುದ್ಧವಾಗಿ ತಿರುಗಿಬಿದ್ದರು ಮತ್ತು ಗುಣಗುಟ್ಟಿದರು. ಕೊರಗ ಎಂಬ ಹೆಸರಿನ ವ್ಯಕ್ತಿಯು ಬಂಡಾಯವೆದ್ದ ಜನರ ಗುಂಪನ್ನು ಮುನ್ನಡೆಸಿದನು ಮತ್ತು ದೇವರು ಅವನನ್ನು ಹಾಗೂ ಅವನ ಜನರನ್ನು ನಾಶಗೊಳಿಸಿದನು (ಅರಣ್ಯಕಾಂಡ 16:1-40). ಮರಳುಗಾಡಿನಲ್ಲಿ ಅವರ ಪ್ರಯಾಣವು ಮುಗಿಯುತ್ತಾ ಬರುವಾಗ, ಅಬ್ರಹಾಮನ ಸಂತತಿಯವರಾದ ಇಸ್ರಾಯೇಲರಿಗೆ ಕೊಡುತ್ತೇನೆಂದು ಹೇಳಿದ ವಾಗ್ದಾನದ ಕಾನಾನ್ (ಇಸ್ರಾಯೇಲ್) ದೇಶವನ್ನು ನೋಡುವುದಕ್ಕಾಗಿ ಹನ್ನೆರಡು ಜನ ಗೂಢಚಾರರು ಕಳುಹಿಸಲ್ಪಟ್ಟರು. ಅಲ್ಲಿನವರು ಬಹು ಬಲಿಷ್ಠರು ಮತ್ತು ಅವರ ಪಟ್ಟಣಗಳು ಬಹಳ ಭದ್ರವಾಗಿವೆ ಮತ್ತು ಆ ಪ್ರದೇಶವನ್ನು ವಶಪಡಿಸಿಕೊಳ್ಳುವುದು ಅಸಾಧ್ಯವೆಂಬ ವರದಿಯನ್ನು ಗೂಢಚಾರರು ತಿಳಿಸಿದರು (ಅರಣ್ಯಕಾಂಡ 13:17-33; 1 ಕೊರಿಂಥ 10:1-11). ಗೂಢಚಾರರ ಈ ವರದಿಯಿಂದಾಗಿ ಜನರು ಬಹಳವಾಗಿ ಹೆದರಿದರು. ಹೀಗಾಗಿ ದೇವರು ಅವರ ಅಪನಂಬಿಕೆಯ ನಿಮಿತ್ತದಿಂದಾಗಿ ಅವರು ನಲ್ವತ್ತು ವರ್ಷಗಳ ತನಕ ಮರಳುಗಾಡಿನಲ್ಲಿ ಸುತ್ತಾಡುವಂತಹ ಶಿಕ್ಷೆಗೆ ಅವರನ್ನು ಒಳಪಡಿಸಿದನು (ಅರಣ್ಯಕಾಂಡ 14:1-38). ಈ ನಲ್ವತ್ತು ವರ್ಷಗಳ ಅವಧಿಯವರೆಗೆ ಅವರಿಗೆ ಸ್ವರ್ಗದಿಂದ ಬಂದ ಮನ್ನದ ಆಹಾರದಿಂದ ಉಣ್ಣಬಡಿಸಿದನು (ವಿಮೋಚನಕಾಂಡ 16:14-31; ಯೋಹಾನ 6:30-35). ಅವರು ನೀರಿಗಾಗಿ ಎರಡು ಸಾರಿ ದೂರಿದರು ಮತ್ತು ದೇವರುಬಂಡೆಯಿಂದ ನೀರನ್ನು ಒದಗಿಸಿದನು (ವಿಮೋಚನಕಾಂಡ 17:1-7; ಅರಣ್ಯಕಾಂಡ 20:1-11, 1ಕೊರಿಂಥ 10:3-5). ಒಂದು ಸಲ ಗುಣುಗುಟ್ಟುವಿಕೆಯ ನಿಮಿತ್ತದಿಂದಾಗಿ ವಿಷಭರಿತವಾದ ಹಾವುಗಳಿಂದ ಕಚ್ಚಿಸಿಕೊಳ್ಳುವಂತಹ ಶಿಕ್ಷೆಗೆ ಗುರಿಯಾದ ಸಂದರ್ಭದಲ್ಲಿ ದೇವರು ಕರುಣೆಯಿಂದ ಮೋಶೆಗೆ ಅವರ ಶಿಕ್ಷೆಯಿಂದ ಪಾರಾಗಲು ಹೇಗೆ ಸಹಾಯ ಮಾಡಬೇಕೆಂದು ಹೇಳಿದನು. ಮೋಶೆಯು ಕಂಚಿನ ಹಾವನ್ನು ಮಾಡಿದನು ಮತ್ತು ಅದನ್ನು ಕಂಬದ ಮೇಲೆ ಇಟ್ಟನು. ಹಾವುಗಳಿಂದ ಕಚ್ಚಲ್ಪಟ್ಟವರು ಯಾರು ಯಾರು ಅದನ್ನು ನೋಡಿದರೋ ಅವರು ಬದುಕಿಕೊಂಡರು (ಅರಣ್ಯಕಾಂಡ 21:4-9). ಇದೇ ರೀತಿಯಲ್ಲಿ ನಾವು ಶಿಲುಬೆಯ ಮೇಲೆ ತೂಗು ಹಾಕಲ್ಪಟ್ಟಂತಹ ಯೇಸು ಕ್ರಿಸ್ತನನ್ನು ನಂಬಿಕೆಯಿಂದ ದೃಷ್ಟಿಸುವುದಾದರೆ ಪಾಪ ಮತ್ತು ಮರಣದಿಂದ ಬಿಡುಗಡೆ ಹೊಂದುತ್ತೇವೆ (ಯೋಹಾನ 3:14-15).

ಇಸ್ರಾಯೇಲರು ಮರಳುಗಾಡಿನಲ್ಲಿ ನಲ್ವತ್ತು ವರ್ಷಗಳ ಅಂತ್ಯಕ್ಕೆ ಬರುವಾಗ ಮೋವಾಬ್ ಎಂಬ ಪ್ರದೇಶಕ್ಕೆ ಪ್ರಯಾಣ ಮಾಡಿದರು. ಮೋವಾಬಿನ ರಾಜನಾದ ಬಾಲಕನು ಇದನ್ನು ಕೇಳಿದಾಗ ಕೋಪಗೊಂಡನು ಮತ್ತು ಅಂಜಿದನು. ಆದುದರಿಂದ ಇಸ್ರಾಯೇಲರನ್ನು ಶಪಿಸುವುದಕ್ಕಾಗಿ ಬಿಳಾಮನೆಂಬ ಹೆಸರಿನ ಒಬ್ಬ ಸ್ಥಳೀಯ ಪ್ರವಾದಿಯನ್ನು ಕೊಂಡುಕೊಳ್ಳಲು ಪ್ರಯತ್ನಿಸುತ್ತಾನೆ. ಬಿಳಾಮನು ತಾನು ಹೋಗುವುದಕ್ಕೆ ಅನುಮತಿಸಬೇಕೆಂದು ದೇವರನ್ನು ಬೇಡಿಕೊಳ್ಳುತ್ತಾನೆ ಮತ್ತು ಕಡೆಯಲ್ಲಿ ಅನುಮತಿಯನ್ನು ಪಡೆಯುತ್ತಾನೆ. ಆದರೆ ದೇವರು ಬಿಳಾಮನ ಬಗ್ಗೆ ಕೋಪಗೊಳ್ಳುತ್ತಾನೆ. ಮಾರ್ಗ ಮಧ್ಯದಲ್ಲಿ ದೇವರಿಂದ ಕಳುಹಿಸಲ್ಪಟ್ಟಂತಹ ಭಯಪಡಿಸುವ ದೂತನನ್ನು ಬಿಳಾಮನ ಕತ್ತೆಯು ನೋಡುತ್ತದೆ ಮತ್ತು ಬಿಳಾಮನನ್ನು ಎಚ್ಚರಿಸುವುದಕ್ಕಾಗಿ ಕತ್ತೆಯು ಅವನಿಗೆ ಮಾತಾಡುತ್ತದೆ. ಇದರಿಂದಾಗಿ ಬಿಳಾಮನು ಇಸ್ರಾಯೇಲರನ್ನು ಶಪಿಸುವುದಿಲ್ಲ. ಆದರೆ ಇದಕ್ಕೆ ಬದಲಾಗಿ ಆಶೀರ್ವದಿಸುತ್ತಾನೆ. ಆದರೂ ಸಹ ಬಿಳಾಮನು ಬಾಲಕನಿಂದ ಹಣವನ್ನು ಸಂಪಾದಿಸುವುದಕ್ಕೋಸ್ಕರ ಇಸ್ರಾಯೇಲರು ಬಾಳನ ಹೆಸರಿನ ವಿಗ್ರಹವನ್ನು ಅವರು ಆರಾಧಿಸುವಂತೆ ಮಾಡಿ, ಅವರು ಹೇಗೆ ಬಲಗುಂದಬಹುದು ಎಂಬುವುದನ್ನು ಹೇಳುವುದಕ್ಕೆ ಪ್ರಯತ್ನಿಸುತ್ತಾನೆ (ಅರಣ್ಯಕಾಂಡ 22:21-35, 25:1-3; 2 ಪೇತ್ರ 2:15-16; ಪ್ರಕಟಣೆ 2:14). ಮೋಶೆಯು ಇಸ್ರಾಯೇಲರು ವಾಗ್ದಾನದ ದೇಶವಾದ ಕಾನಾನನ್ನು ಪ್ರವೇಶಿಸುವ ಮೊದಲು ಆ ಜನರೊಂದಿಗೆ ಕಡೆಯ ಸಾರಿ ಮಾತನಾಡುತ್ತಾನೆ. **ಧರ್ಮೋಪದೇಶಕಾಂಡ** ಪುಸ್ತಕದಲ್ಲಿ ಮಾತುಗಳು ದಾಖಲಿಸಿವೆ. ಯಾವ ಆಜ್ಞೆಗಳನ್ನು ಪಾಲಿಸುವಾಗ ಆಶೀರ್ವಾದಗಳು ಲಭಿಸುತ್ತದೆಯೋ ಅಂತಹವುಗಳನ್ನು ಮತ್ತು ಯಾವ ಆಜ್ಞೆಗಳನ್ನು ಪಾಲಿಸದಿದ್ದಾಗ, ಶಾಪಗಳು ಬರುವುದಕ್ಕೆ ಕಾರಣವಾಗುತ್ತವೆಯೋ ಅಂತಹ ಈ ಆಜ್ಞೆಗಳನ್ನು ಮೋಶೆಯು ಪುನರ್ವಿಮರ್ಶೆ ಮಾಡಿ ಅವುಗಳನ್ನು ಬರೆದನು. (ಧರ್ಮೋಪದೇಶಕಾಂಡ 11:26-28). ಆಮೇಲೆ ಮೋಶೆಯು ಮರಣ ಹೊಂದಿದನು ಮತ್ತು ದೇವರು ಅವನನ್ನು ಸಮಾಧಿ ಮಾಡಿದನು.

ಯೆಹೋಶುವನು ನಾಯಕನಾಗಲು, ಹೇಗೆ ಮೋಶೆಯ ಉತ್ತರಾಧಿಕಾರಿಯಾದನು ಎಂಬುದನ್ನು **ಯೆಹೋಶುವನ** ಪುಸ್ತಕದಲ್ಲಿ ನಾವು ಓದುತ್ತೇವೆ. ದೇವರ ಯೋಜನೆ ಮತ್ತು ದೇವರ ಶಕ್ತಿಯಿಂದ ಇಸ್ರಾಯೇಲರು ತಮ್ಮ ಪ್ರಥಮ ಜಯದೊಂದಿಗೆ ಯೆರಿಕೋ ಪಟ್ಟಣವನ್ನು ಗೆದ್ದುಕೊಂಡರು. ದೇವರ ಆಜ್ಞೆಯಂತೆ ಅವರು ಕೂಗುತ್ತಾ ಮತ್ತು ತುತ್ತೂರಿಗಳನ್ನು

ಊದುತ್ತಾ, ಯೆರಿಕೋ ಪಟ್ಟಣದ ಸುತ್ತಲೂ ಸುತ್ತಿದರು. ಪಟ್ಟಣದ ಗೋಡೆಗಳು ಬಿದ್ದವು ಮತ್ತು ಅವರು ಅದರೊಳಕ್ಕೆ ನಡೆದರು (ಯೆಹೋಶುವ 6:1-21). ಇಸ್ರಾಯೇಲರಾದ ಗೂಢಚಾರರು ಮೊದಲು ಆ ಪಟ್ಟಣದಲ್ಲಿದ್ದಾಗ ರಾಹಬಳು ಎಂಬ ಹೆಸರಿನ ವೇಶ್ಯೆಯೂ ಅವರನ್ನು ಅಡಗಿಸಿಟ್ಟಿದ್ದಳು ಮತ್ತು ಪಟ್ಟಣವು ಬಿದ್ದ ನಂತರ ಅವಳ ಪ್ರಾಣವನ್ನು ಉಳಿಸುವುದರ ಮೂಲಕ ಗೌರವಕ್ಕೆ ಪಾತ್ರಳಾದಳು (ಯೆಹೋಶುವ 3:1-21, 6:22-25; ಹಿಬ್ರಿಯಾ 11:30-31). ರಾಹಬಳು ಯೇಸುಕ್ರಿಸ್ತನ ಪೂರ್ವಜಳಾದಳು (ಮತ್ತಾಯ 1:5). ಯೆಹೋಶುವನು ಕಾನಾನ್ ದೇಶದ ಉಳಿದ ಪ್ರದೇಶವನ್ನೆಲ್ಲಾ ಗೆದ್ದುಕೊಂಡನು ಮತ್ತು ಹನ್ನೆರಡು ಕುಲದವರಿಗೆ ಭಾಗ ಮಾಡಿ ಹಂಚಿದನು.

ಯೆಹೋಶುವನ ಮರಣಾನಂತರ ಇಸ್ರೇಲ್ ದೇಶವನ್ನು ಆಳಿದ **ನ್ಯಾಯಸ್ಥಾಪಕರ** ಬಗ್ಗೆ ಯೆಹೋಶುವ ಪುಸ್ತಕವು ತಿಳಿಸುತ್ತದೆ. ದೇವರು ಅವರ ರಾಜನಾಗಿ ಮುಂದುವರಿದನು. ಹೀಗಿದ್ದರೂ ಜನರು ದೇವರಿಗೆ ವಿಧೇಯರಾಗಿ ಜೀವಿಸಲಿಲ್ಲ. ಅನೇಕ ಸಮಯಗಳಲ್ಲಿ ತಮ್ಮ ನೆರೆಹೊರೆಯವರ ದೇವರಲ್ಲದ ದೇವರುಗಳ ಮತ್ತು ಅವರ ವಿಗ್ರಹಗಳ ಕಡೆಗೆ ತಿರುಗಿದರು ಮತ್ತು ಹೀಗೆ ದೇವರಿಗೆ ವಿರೋಧವಾಗಿ ಪಾಪ ಮಾಡಿದರು. ಆದ್ದರಿಂದ ಅವರನ್ನು ಹಿಂಸಿಸುವರ ಕೈಗೆ ಒಪ್ಪಿಸಿಕೊಟ್ಟನು. ದೇವರ ಕಡೆಗೆ ಕೂಗಿಕೊಂಡ ಪ್ರತಿಯೊಂದು ಸಮಯದಲ್ಲಿಯೂ ದೇವರು ಅವರನ್ನು ಕರುಣಿಸಿದನು ಮತ್ತು ಬಿಡುಗಡೆಗಾಗಿ ನಾಯಕರನ್ನು ಎಬ್ಬಿಸಿದನು (ನ್ಯಾಯಸ್ಥಾಪಕರು 2:10-19). ಬಿಡುಗಡೆಗೊಳಿಸಿದಂತಹವರಲ್ಲಿ ಅಥವಾ ನ್ಯಾಯಸ್ಥಾಪಕರಲ್ಲಿಗಿದ್ಯೋನ್, ಬಾರಾಕ್ ಮತ್ತು ಸಂಸೋನ್ ಎಂಬುವರು ಬಹಳ ಪ್ರಸಿದ್ಧರಾದವರು (ಹಿಬ್ರಿಯಾ 11:32). ರೂತಳ ಪುಸ್ತಕವು ಇಸ್ರಾಯೇಲ್ಯಳಲ್ಲದ ಅಂದರೆ ನಿಜವಾದ ದೇವರನ್ನು ನಂಬಿದ ಮೋವಾಬ್ಯರ ಸ್ತ್ರೀಯಾದಂತಹ ದಾವೀದನ ಮುತ್ತಜ್ಜಿಯ ಚರಿತ್ರೆಯ ಬಗ್ಗೆ ತಿಳಿಸುತ್ತದೆ. ಇವಳು ಇಸ್ರಾಯೇಲನ ಸಂತಾನದವನೊಬ್ಬನನ್ನು ಮದುವೆಯಾದಳು ಮತ್ತು ಯೇಸುಕ್ರಿಸ್ತನ ಪೂರ್ವಜಳಾದಳು (ಮತ್ತಾಯ 1:5).

**1ನೇ ಸಮುವೇಲನ** ಪುಸ್ತಕವು ನ್ಯಾಯಸ್ಥಾಪಕರ ಚರಿತ್ರೆಯನ್ನು ಹೇಳುತ್ತದೆ. ಸಮುವೇಲನ ತಾಯಿಯು ತನ್ನ ಮಗನನ್ನು ದೇವರಿಗೆ ಸಮರ್ಪಿಸಿದಳು ಮತ್ತು ಮಗುವಿದ್ದಾಗಲೇ ಆತನನ್ನು ದೇವಾಲಯದಲ್ಲಿ ಸೇವೆ ಮಾಡುವುದಕ್ಕಾಗಿ ಕಳುಹಿಸಿದಳು. ದೇವರು ಅಲ್ಲಿ ಸಮುವೇಲನೊಂದಿಗೆ ಮಾತನಾಡಿದನು ಮತ್ತು ಈತನು ಪ್ರವಾದಿಯಾಗುವುದರ ಜೊತೆಗೆ ನ್ಯಾಯಸ್ಥಾಪಕನು ಸಹ ಆದನು. ಈತನು ವೃದ್ಧನಾಗುತ್ತಾ ಬಂದಾಗ ಸುತ್ತಲಿನ ದೇಶದವರಿಗೆ ಇರುವಂತೆ ನಮಗೂ ಕೂಡ ರಾಜನು ಬೇಕೆಂದು ಜನರು ಬೇಡಿಕೆಯನ್ನಿಟ್ಟರು. ಭೂರಾಜರಿಂದಾಗುವ ಕಷ್ಟಗಳ ಬಗ್ಗೆ ಸಮುವೇಲನು ಎಚ್ಚರಿಸಿದನು. ಆದರೆ ಜನರು ಒತ್ತಾಯಿಸಿದರು ಮತ್ತು ಆದ್ದರಿಂದ ದೇವರು ಅವರಿಗೆ ರಾಜನನ್ನು ಕೊಡುವೆನು ಎಂದು ಕಡೆಯಲ್ಲಿ ಒಪ್ಪಿಕೊಂಡನು (1 ಸಮುವೇಲ 8:6-22). ಸೌಲನೆಂಬ ಮನುಷ್ಯನು ದೇವರಿಂದ ಆರಿಸಲ್ಪಟ್ಟನು ಮತ್ತು ಮೊದಮೊದಲಿಗೆ ಸರಿಯಾಗಿ ಆಳಿದನು. ಹೀಗಾಗಿ ಈತನು ಅನೇಕ ಸಮಯದಲ್ಲಿ ತಾನು ಮಾಡಿದ ಪಾಪಗಳಿಂದ ತಿರುಗಲಿಲ್ಲ. ಆದುದರಿಂದ ದೇವರು ಕಡೆ ಘಳಿಗೆಯಲ್ಲಿ ಇವನನ್ನು ತಿರಸ್ಕರಿಸಿದನು.

ಮುಂದಿನ ರಾಜನಾಗುವುದಕ್ಕೆ ಕುರುಬನಾದ ದಾವೀತನೆಂಬ ಹುಡುಗನನ್ನು ಅಭಿಷೇಕಿಸಬೇಕು ಎಂದು ದೇವರು ಸಮುವೇಲನಿಗೆ ಹೇಳಿದನು ಮತ್ತು ಆ ದಿನದಿಂದ ದೇವರಾತ್ಮನು ಅವನ ಮೇಲೆ ಬಂದನು. ಒಂದು ಸಮಯದಲ್ಲಿ ವೈರಿ ಕಡೆಯ ಗೊಲ್ಯಾತನೆಂಬ ಹೆಸರಿನ ಅಸಾಧಾರಣ ಶಕ್ತಿಯ ಮನುಷ್ಯನು ಯುದ್ಧದ ಹೋರಾಟಕ್ಕೆ ಕರೆದನು. ಆದರೆ ಅವನೊಂದಿಗೆ ಹೋರಾಡಲು ಯಾರಿಗೂ ಧೈರ್ಯವಿರಲಿಲ್ಲ. ಕಡೆಯಲ್ಲಿ ದಾವೀದನು ಸ್ವ ಇಚ್ಛೆಯಿಂದ ಮುಂದೆ ಬಂದು ಕವಣೆಯ ಕಲ್ಲಿನ ಮೂಲಕ ಗೊಲ್ಯಾತನನ್ನು ಕೆಳಕ್ಕೆ ಬೀಳಿಸಿ, ತಲೆಯನ್ನು ತುಂಡರಿಸಿ ಹಾಕಿದನು (1 ಸಮುವೇಲ 17:32-51). ಆಗಿನಿಂದ ದಾವೀದನು ಮಹಾ ಶೂರನಾದಂತ ಸೈನಿಕನಾದನು ಮತ್ತು ಸೌಲನು ಅಸೂಯೆ ಪಡುವುದಕ್ಕೆ ಪ್ರಾರಂಭಿಸಿದನು. ದಾವೀದನನ್ನು ಹಲವು ಬಾರಿ ಕೊಲ್ಲಲು ಸೌಲನು ಪ್ರಯತ್ನಿಸಿದನು. ಆದರೆ ಪ್ರತಿಸಾರಿಯು ದಾವೀದನು ಪಾರಾದನು. ರಾಜನಾಗುವುದಕ್ಕೆ ದೇವರಿಂದ ಅಭಿಷೇಕಿಸಲ್ಪಟ್ಟ ಸೌಲನು ದೇವರಿಂದ ತಿರಸ್ಕಾರಗೊಂಡಂತ ಸಮಯದಲ್ಲಿ ದಾವೀದನಿಗೆ ಸೌಲನನ್ನು ಕೊಲ್ಲುವಂತಹ ಅವಕಾಶಗಳು ಬಂದಾಗ್ಯೂ ಸಹ ದಾವೀದನು ಸೌಲನಿಗೆ ಯಾವ ಕೇಡನ್ನು ಮಾಡಲಿಲ್ಲ.

**2ನೇ ಸಮುವೇಲನ** ಪುಸ್ತಕ ಮತ್ತು **1ನೇ ಪೂರ್ವಕಾಲ ವೃತ್ತಾಂತ** ಪುಸ್ತಕಗಳು ಸೌಲನು ಹೋರಾಟದಲ್ಲಿ ಸತ್ತನ ನಂತರ ದಾವೀದನು ಹೇಗೆ ರಾಜನಾದನು ಎಂಬುದನ್ನು ತಿಳಿಸುತ್ತವೆ. ದಾವೀದನು ಕ್ರಿ.ಪೂ. 970-1010 ವರ್ಷಗಳವರೆಗೆ ಆಳಿದನು. ದಾವೀದನು ರಾಜನಾದ ತಕ್ಷಣವೇ ಮೊದಲು ಅವನು ವೈರಿಗಳಾದ ಫಿಲಿಸ್ಟಿಯರಿಂದ ಕೊಳ್ಳೆ ಹೊಡೆಯಲ್ಪಟ್ಟು ಅವರ ವಶದಲ್ಲಿದ್ದ ದೇವರ ಮಂಜೂಷವನ್ನು ಮರು ವಶಪಡಿಸಿಕೊಂಡನು ಮತ್ತು ಯಹೂದ್ಯರ ರಾಜಧಾನಿಯಾದ ಯೆರುಸಲೇಮಿಗೆ ಆನಂದದ ವಿಜೃಂಭಣೆಯಿಂದ ತಂದನು (2 ಸಮುವೇಲ 6:12-15). ದಾವೀದನು ದೇವರಿಗಾಗಿ ಶಾಶ್ವತವಾದ ಆಲಯವನ್ನು ಕಟ್ಟಬೇಕೆಂದಿದ್ದನು. ಆದರೆ ಅವನ ಮಗನು ಆಲಯವನ್ನು ಕಟ್ಟಲಿ ಎಂದು ದೇವರು ಹೇಳಿದನು. ದಾವೀದನು ಯುದ್ಧಗಳಲ್ಲಿ ಮಹಾಜಯವನ್ನು ಸಾಧಿಸಿದನು ಮತ್ತು ದೇವರಿಂದ ಆಶೀರ್ವದಿಸಲ್ಪಟ್ಟನು. ದೇವರು

ದಾವೀದನಿಗೆ ಆತನ ಸಿಂಹಾಸನವು ಸದಾಕಾಲವಿರುವುದು ಎಂದು ವಾಗ್ದಾನ ಮಾಡಿದನು ಮತ್ತು ಅಂತ್ಯವೇ ಇಲ್ಲದಿರುವ ಯೇಸು ಕ್ರಿಸ್ತನ ರಾಜ್ಯದಿಂದ ಈ ವಾಗ್ದಾನವು ನೆರವೇರಿತು.

ಯೇಸುಕ್ರಿಸ್ತನು ದಾವೀದನ ವಂಶದಲ್ಲಿ ಜನಿಸಿ ಬಂದನು (ಮತ್ತಾಯ 1:1) ಮತ್ತು ದಾವೀದನ ಚಿಗುರು ಅಥವಾ ವಂಶಜನು ಹಾಗೂ ಯಹೂದದ ಸಿಂಹ ಎಂದು ಕರೆಯಲ್ಪಟ್ಟನು (ಪ್ರಕಟಣೆ 5:5). ದಾವೀದನು ಮಾದರಿಯಾದ ರಾಜನೆಂದು ನಂತರದಲ್ಲಿನ ಪ್ರವಾದಿಗಳು ಅಭಿಪ್ರಾಯ ಪಟ್ಟರು. ಆದರೆ ದಾವೀದನು ಅನೇಕ ಸಮಯದಲ್ಲಿ ಪಾಪವನ್ನು ಮಾಡಿದನು. ಹೀಗಿದ್ದಾಗ್ಯೂ ಸಹ ದಾವೀದನು ಸೌಲನಿಗಿಂತ ವ್ಯತ್ಯಾಸವುಳ್ಳವನಾಗಿದ್ದನು. ಯಾಕೆಂದರೆ ಪ್ರತಿ ಬಾರಿಯೂ ಪಶ್ಚಾತ್ತಾಪ ಪಡುತ್ತಿದ್ದನು ಮತ್ತು ದೇವರೊಂದಿಗಿನ ತನ್ನ ಸಂಬಂಧವನ್ನು ನವೀಕರಿಸುತ್ತಿದ್ದನು (ಪುನರ್‌ಸ್ಥಾಪಿಸಿಕೊಳ್ಳುತ್ತಿದ್ದನು). ದಾವೀದನು ವಾದ್ಯಗಾರನು ಹಾಗೂ ಕವಿಯು ಆಗಿದ್ದನು ಮತ್ತು ಬಹುತೇಕವಾಗಿ ಅನೇಕ **ಕೀರ್ತನೆಗಳನ್ನು** ಬರೆದನು. ಅನೇಕ ಕೀರ್ತನೆಗಳು, ಯೇಸುಕ್ರಿಸ್ತನ ಮತ್ತು ಆತನ ಮರಣದ ಬಗ್ಗೆ ಪ್ರವಾದಿಸಲ್ಪಟ್ಟಿವೆ (ಕೀರ್ತನೆಗಳು 22, 69).1 **ಮತ್ತು 2 ನೇಯ ಅರಸುಗಳು** ಹಾಗೂ **2 ಪೂರ್ವಕಾಲ ವೃತ್ತಾಂತ** ಪುಸ್ತಕಗಳು ಇಸ್ರಾಯೇಲ್ ರಾಜ್ಯ ಮತ್ತು ದಾವೀದನ ಮಗನಾದ ಸೊಲೋಮೋನನ ಪ್ರಾರಂಭಿಕ ರಾಜ್ಯಾಡಳಿತದ ಬಗ್ಗೆ ಹೇಳುತ್ತವೆ. ದೇವರು ಸೊಲೋಮೋನನ್ನು ನಿನಗೇನೇನು ಬೇಕು ಕೇಳಿಕೋ ಮತ್ತು ನಿನಗೆ ಕೊಡುತ್ತೇನೆ ಎಂದು ಕೇಳುತ್ತಾನೆ. ಅನೇಕರಿಗೆ ಇದನ್ನೇ ಕೇಳಿದ್ದರೆ ಬಹುಶಃ ಅವರು ಐಶ್ವರ್ಯ ಹಾಗೂ ಘನತೆಯನ್ನು ಕೇಳುತ್ತಿದ್ದರೇನೋ. ಆದರೆ ಸೊಲೊಮೋನನ್ನು, ತಿಳುವಳಿಕೆಯುಳ್ಳ ಹೃದಯವನ್ನು ಕೊಡಬೇಕು ಎಂದು ಕೇಳಿದನು (1 ಅರಸು 3:5-9). ದೇವರು ಸೊಲೊಮೋನನ ಕೇಳಿಕೆಯಂತೆಯೇ ಅವನಿಗೆ ಜ್ಞಾನವನ್ನು ಮತ್ತು ಮಾತ್ರವಲ್ಲದೆ ಅಪರಿಮಿತವಾದ ಐಶ್ವರ್ಯವನ್ನು ಹಾಗೂ ಘನವನ್ನು ಅನುಗ್ರಹಿಸಿದನು (ಮತ್ತಾಯ 12:42, ಲೂಕ 12:27). ಸೊಲೋಮೊನನು ಸತ್ಯವೇದದಲ್ಲಿರುವ **ಜ್ಞಾನೋಕ್ತಿಗಳು, ಪ್ರಸಂಗಿ** ಮತ್ತು **ಪರಮಗೀತ** ಎಂಬ ಜ್ಞಾನದ ಪುಸ್ತಕಗಳನ್ನು ಬರೆದನು. ಅವನು ಯೆರುಸಲೇಮಿನಲ್ಲಿ ದೇವರಿಗಾಗಿ ಶಾಶ್ವತವಾದ ಮನೆಯಂತಿರುವ ಆಲಯವನ್ನು ಕಟ್ಟಿಸಿದ್ದು ಮಹತ್ವವಾದ ಕೆಲಸವಾಗಿದೆ.

ಸೊಲೊಮೋನನ ಮರಣಾನಂತರ ಇಸ್ರಾಯೇಲರ ರಾಜ್ಯವು ಇಬ್ಭಾಗವಾಯಿತು. ಉತ್ತರದಲ್ಲಿನ ಹತ್ತು ಕುಲಗಳು ಬೇರೆಯಾಗಿ ತಮ್ಮದೇ ರಾಜ್ಯವನ್ನು ಸ್ಥಾಪಿಸಿಕೊಂಡವು ಮತ್ತು ಈ ಹೊಸ ರಾಜ್ಯವು ಇಸ್ರಾಯೇಲ್ ರಾಜ್ಯವೆಂದು ಕರೆಯಲ್ಪಟ್ಟಿತು. ಇನ್ನುಳಿದ ಎರಡು ಕುಲಗಳಿಂದ ದಕ್ಷಿಣದಲ್ಲಿ ಯಹೂದ್ಯ ರಾಜ್ಯವು ನಿರ್ಮಾಣವಾಯಿತು. ದಾವೀದನ ಸಂತಾನದವನಾದ ಸೊಲೊಮೋನನ ಮಗನಾದ ರೆಹಬ್ಬಾಮನಿಂದ ಯೆಹೂದ್ಯ ರಾಜ್ಯವು ಆಳಲ್ಪಟ್ಟಿತು. ಇಬ್ಭಾಗವಾದಂತಹ ಈ ರಾಜ್ಯಗಳು 334 ವರ್ಷಗಳ ಅವಧಿಯವರೆಗೆ ಮುಂದುವರಿದವು. ಯಹೂದ್ಯ ರಾಜ್ಯದ ಕೆಲವೊಂದು ರಾಜರುಗಳು ದೇವರಿಗೆ ವಿಧೇಯರಾದರು ಮತ್ತು ಜನರನ್ನು ವಿಗ್ರಹಾರಾಧನೆಯಿಂದ ಬಿಡಿಸಿ, ತಿರುಗಿ ದೇವರ ಕಡೆಗೆ ತಂದರು. ಆದರೆ ಇನ್ನಿತರರು ದೇವರ ದೃಷ್ಟಿಯಲ್ಲಿ ಕೆಟ್ಟದ್ದಾಗಿರುವುದನ್ನು ಮಾಡಿದರು ಮತ್ತು ವಿಗ್ರಹಾರಾಧನೆ ಮಾಡುವುದನ್ನು ಉತ್ತೇಜಿಸಿದರು. ಉತ್ತರದಲ್ಲಿನ ಇಸ್ರಾಯೇಲ ರಾಜ್ಯದ ಯಾವೊಬ್ಬ ರಾಜನು ಕೂಡ ದೇವರನ್ನು ಆರಾಧಿಸಲಿಲ್ಲ. ಅವರ ಮೊದಲನೆಯ ರಾಜನು ಬಸವನ ಎರಡು ವಿಗ್ರಹಗಳನ್ನು ಮಾಡಿಸಿ ಒಂದನ್ನು ಬೇತೇಲಿನಲ್ಲೂ ಇನ್ನೊಂದನ್ನು ದಾನ್ ಎಂಬ ಸ್ಥಳದಲ್ಲಿ ಸ್ಥಾಪಿಸಿದನು. ಕಾಲಾನುಕ್ರಮವಾಗಿ ಸಮಾರ್ಯರು ಎಂದು ಕರೆಯಿಸಿಕೊಂಡಂತ ಈ ಜನರು ಯೆರುಸಲೇಮಿನ ದೇವಾಲಯದಲ್ಲಿ ನಿಜ ದೇವರನ್ನು ಆರಾಧಿಸುವುದಕ್ಕೆ ಬದಲಾಗಿ, ವಿಗ್ರಹಗಳ ಆರಾಧನೆಯನ್ನು ಮುಂದುವರಿಸಿದರು. ಈ ಒಂದು ಕಾರಣಕ್ಕಾಗಿಯೇ ಸಮಾರ್ಯರಾದ ಇವರು, ಕ್ರಿಸ್ತನಿದ್ದ ಸಮಯದಲ್ಲಿ ಯೆಹೂದ್ಯರಿಂದ ತಿರಸ್ಕಾರಕ್ಕೊಳಗಾಗಿದ್ದರು (ಯೋಹಾನ 4:9, 19-24). ವಿದೇಶಿ ಸ್ತ್ರೀಯಾದ ಈಜೆಬೆಲ್ ಎಂಬಾಕೆಯನ್ನು ಮದುವೆಯಾದಂತಹ ಅಹಾಬನೆಂಬ ಈತನು ಬಹು ದುಷ್ಟನಾದ ಇಸ್ರಾಯೇಲ್ಯರ ರಾಜನಾಗಿದ್ದನು. ಇವರಿಬ್ಬರು ತಮ್ಮ ಕಾಲದಲ್ಲಿದ್ದ( 1 ಅರಸು, ಅಧ್ಯಾಯ 17-18). ಪ್ರವಾದಿಯಾದ ಎಲೀಯನನ್ನು ದ್ವೇಷಿಸಿದರು. ಇವರಿಬ್ಬರು ದೇವರ, ಪ್ರಬಲ ಪ್ರವಾದಿಯಾದ ಎಲಿಯನು ಮತ್ತು ಈತನ ಉತ್ತರಾಧಿಕಾರಿಯಾದಂತಹ ಎಲಿಷನು, (2 ಅರಸು ಅಧ್ಯಾಯ 2-8) ಅನೇಕ ಅದ್ಭುತಗಳನ್ನು ಮಾಡುವುದರ ಮೂಲಕ ದೇವರೇ ನಿಜವಾದ ಕರ್ತನೆಂದು ತೋರಿಸಿದರು (ಲೂಕ 4:24-27). ಎಲಿಯನು ಸಾಯಲಿಲ್ಲ. ಆದರೆ ನೇರವಾಗಿ ಸ್ವರ್ಗಕ್ಕೆ ಒಯ್ಯಲ್ಪಟ್ಟನು (2 ಅರಸು 2:11, ಮಾರ್ಕ 9:4 -5).

ಇನ್ನು ಅನೇಕ ಪ್ರವಾದಿಗಳು ಆಗಿನ ಕಾಲದ ವರ್ಷಗಳಲ್ಲಿ ಯಹೂದ್ಯ ಮತ್ತು ಇಸ್ರಾಯೇಲರೊಂದಿಗೆ ಮಾತನಾಡಿದರು. ಜನರು ಅವಿಧೇಯತೆಯಲ್ಲಿಯೂ ಮತ್ತು ಪಾಪದಲ್ಲಿಯೂ ಮುಂದುವರಿಯುವಾಗ ಅವರಿಗೆ ಮುಂದೆ ಬರುತ್ತಿದ್ದಂತಹ ತೀರ್ಪಿನ ವಿಷಯದಲ್ಲಿಯೂ ಸಹ ಎಚ್ಚರಿಸುತ್ತಿದ್ದರು. ಒಂದು ವೇಳೆ ಅವರು ಪಶ್ಚಾತ್ತಾಪ ಪಡೆದಿದ್ದ ಪಕ್ಷದಲ್ಲಿ ಯಹೂದ್ಯರ ಎರಡು ರಾಜ್ಯಗಳು ವಿದೇಶಿ ರಾಜ್ಯಗಳಿಗೆ ಸೆರೆಯಾಳಾಗಿ ಒಯ್ಯಲ್ಪಡುವರು ಎಂದು ಮುಂದಾಗುವಂತಹವುಗಳನ್ನು ಹೇಳುತ್ತಿದ್ದರು. ಕಡೆಯಲ್ಲಿ ಪ್ರವಾದಿಗಳು ಹೇಳಿದ ಮಾತುಗಳು ನಿಜವಾದವು. ದೇವರು ಅವರನ್ನು ಪರಸ್ಥಳಗಳಿಗೆ

ಅಟ್ಟಿಬಿಟ್ಟನು. ಕ್ರಿ.ಪೂ. 722ರಲ್ಲಿ ಇಸ್ರಾಯೇಲರು ಅಸ್ಸಿರಿಯಾ (ಈಗಿನ ಸಿರಿಯಾ) ಸಿರಿಯಾ ರಾಷ್ಟ್ರಕ್ಕೆ ಮತ್ತು ಯಹೂದ್ಯರು ಕ್ರಿ.ಪೂ. 586ರಲ್ಲಿ ಬಾಬಿಲೋನಿಗೆ (ಈಗಿನ ಇರಾಕ್) ಸೆರೆಯಾಗಿ ಒಯ್ಯಲ್ಪಟ್ಟರು. ಈ ಎರಡು ರಾಜ್ಯಗಳು ಬೇರೆ ಬೇರೆಯಾಗಿ ಇದ್ದಂತಹ ಸಮಯದಲ್ಲಿ ಗ್ರಂಥಗಳನ್ನು ಬರೆದೇತಹ ಪ್ರವಾದಿಗಳ ಹೆಸರುಗಳನ್ನು ಅವರ ಜೀವಿತದ ಕಾಲಕ್ಕನುಸಾರವಾಗಿ ಹೆಸರುಗಳನ್ನು ಇಲ್ಲಿ ಬರೆಯಲಾಗಿದೆ. (ಹೊಸ ಒಡಂಬಡಿಕೆಯಲ್ಲಿ ಪುನಃ ಪುನಃ ಹೆಸರಿಸಲ್ಪಟ್ಟವರು) **ಯೋವೇಲ** (ಅ.ಕೃ. 2:16-21), **ಯೋನ** (ಮತ್ತಾಯ 12:38-41), **ಆಮೋಸ, ಹೋಶೆಯ, ಯೆಶಾಯ ಮೀಕ, ನಹೂಮ, ಚೆಫನ್ಯ, ಹಬಕ್ಕೂಕ** ಮತ್ತು ಪ್ರಲಾಪಗಳ ಪುಸ್ತಕವನ್ನು ಬರೆದಂತಹ **ಯೆರೆಮೀಯ**. ಹಾಗೆಯೇ ಅನೇಕ ಪ್ರವಾದಿಗಳು ಕ್ರಿಸ್ತನ ಬಗ್ಗೆ ಮತ್ತು ಈತನ ಜನನ, ಈತನ ಮರಣ ಮತ್ತು ಈತನ ಎರಡನೆಯ ಆಗಮನದ ವಿಷಯದಲ್ಲಿ ಪ್ರವಾದಿಸಿದರು.ಇವರು ಸೆರೆಯಾಗಿ ಒಯಲ್ಪಟ್ಟ ಸಮಯದ ಅವಧಿಯಲ್ಲಿ ಚರಿತ್ರೆಯು ಬರೆಯಲ್ಪಡಲಿಲ್ಲ.

ಆದರೆ ಪ್ರವಾದಿಗಳಾದ **ಯೆಹೆಜ್ಕೇಲ** ಮತ್ತು **ದಾನಿಯೇಲ** ಇವರು ಇದೇ ಸಮಯದಲ್ಲಿ ಬರೆದರು. ಬಹುಶಃ **ಓಬದ್ಯನು** ಈ ಕಾಲದಲ್ಲಿಯೇ ಪ್ರವಾದಿಸಿರಲಿಕ್ಕೆ ಸಾಧ್ಯ. ಇವರು ಸೆರೆಯಾಗಿದ್ದಂತಹ ಅವಧಿಯ ಅಂತ್ಯದ ಸಮಯದಲ್ಲಿ ಬಾಬಿಲೋನ್ ರಾಜ್ಯವನ್ನು ಪರ್ಷಿಯಾ (ಈಗಿನ ಇರಾನ್) ದೇಶವು ಗೆದ್ದುಕೊಂಡಿತು.

ಇಷ್ಟಪಟ್ಟಂತಹವರು ಯೆರುಸಲೇಮಿಗೆ ಹೋಗಬಹುದು ಮತ್ತು ದೇವಾಲಯವನ್ನು ಪುನಃ ಕಟ್ಟಬಹುದು ಎಂಬ ಆಜ್ಞೆಯನ್ನು ಕ್ರಿ.ಪೂ. 538ರಲ್ಲಿ ಪರ್ಷಿಯಾ ದೇಶದ ರಾಜನಾಗಿದ್ದಂತ ಕೋರೇಷನು ಹೊರಡಿಸಿದನು. ಇದನ್ನು ಎಜ್ರನು ಬರೆದ ಚರಿತ್ರೆಯ ಗ್ರಂಥದಲ್ಲಿ ನೋಡುತ್ತೇವೆ. ಮೊದಲನೆಯ ತಂಡವು ಜೆರುಬ್ಬಾಬೇಲನ ನಾಯಕತ್ವದಲ್ಲಿ ಹಿಂತಿರುಗಿತು ಮತ್ತು ದೇವಾಲಯವನ್ನು ತಿರುಗಿ ಕಟ್ಟಲು ಪ್ರಾರಂಭಿಸಿದರು. ಅಲ್ಲಿ ವಿರೋಧ ಉಂಟಾಯಿತು ಮತ್ತು ಸ್ವಲ್ಪಕಾಲ ಕೆಲಸವು ನಿಂತಿತು. ಪ್ರವಾದಿಗಳಾದ **ಹಗ್ಗಾಯ** ಮತ್ತು **ಜೆಕರ್ಯ** ಎಂಬುವವರಿಂದ ಜನರು ಪ್ರೋತ್ಸಾಹಿತರಾದರು ಮತ್ತು ದೇವಾಲಯವು ಅಂತಿಮವಾಗಿ ಪೂರ್ಣಗೊಂಡಿತು (ಎಜ್ರನು. 6:14-16). ಕ್ರಿ.ಪೂ. 458ರಲ್ಲಿ ಎಜ್ರನು ಎರಡನೆಯ ತಂಡವನ್ನು ಯೆರುಸಲೇಮಿಗೆ ನಡಿಸಿದನು. ಯಾಜಕನಾಗಿದ್ದ ಎಜ್ರನು ಯಹೂದ್ಯರ ಧರ್ಮಶಾಸ್ತ್ರವನ್ನು ಕಲಿಸಿದನು ಮತ್ತು ಪರದೇಶದಲ್ಲಿರುವಾಗ ಅನ್ಯ ಸ್ತ್ರೀಯರನ್ನು ಮದುವೆಯಾದ ಗಂಡಂದಿರು ತಮ್ಮ, ಅನ್ಯಧರ್ಮಿಯ ಹೆಂಡತಿಯರ ಮರುಳುತನಕ್ಕೊಳಗಾಗಿ ಸುಳ್ಳು ದೇವರನ್ನು ಆರಾಧಿಸಿದ್ದ ಪಾಪದ ಬಗ್ಗೆ ಅನ್ಯಧರ್ಮಿಯ ಹೆಂಡತಿ ಮತ್ತು ಅವರಿಂದ ಪಡೆದ ಮಿಶ್ರ ಸಂತತಿಯ ವಂಶದಿಂದ ಬೇರ್ಪಡಿಸುವಂತಹ ಶುದ್ಧೀಕರಣವನ್ನು ಬೋಧಿಸುತ್ತಾನೆ. ಯಹೂದ್ಯ ಕನ್ಯೆಯಾದ **ಎಸ್ತೇರಳು** ಪರ್ಷಿಯಾ ದೇಶದ ರಾಣಿಯಾಗುವ ಇತಿಹಾಸವು ಇದೇ ಅವಧಿಯಲ್ಲಿ ನಡೆಯುತ್ತದೆ. ಎಸ್ತರಳು, ಇಸ್ರಾಯೇಲ್ಯರು ನಾಶವಾಗುವುದನ್ನು ತಪ್ಪಿಸುವುದಕ್ಕಾಗಿ ದೇವರಿಂದ ಉಪಯೋಗಿಸಲ್ಪಟ್ಟಳು.

ಒಂದು ವರ್ಷದ ನಂತರ ಪಾರಸಿಯ ರಾಜನ ಪಾನಸೇವಕನಾಗಿದ್ದಂತಹ **ನೆಹೆಮೀಯನು** ಯೆರುಸಲೇಮಿನ ಸುತ್ತು ಕೋಟೆಯನ್ನು ಮತ್ತೆ ಕಟ್ಟುವುದಕ್ಕಾಗಿ ಇಸ್ರಾಯೇಲ್ಯರ ಮೂರನೆಯ ಗುಂಪನ್ನು ಸಂಘಟಿಸಿ ಕರೆತಂದನು (ನೆಹಮೀಯ 6:15-16). ಪ್ರವಾದಿಯಾದ **ಮಲಾಕಿಯನು** ಸಹ ಈ ಕಾಲದಲ್ಲಿಯೇ ಪ್ರವಾದಿಸಿದನು. ಆನಂತರ ಸ್ನಾನಿಕನಾದ ಯೋಹಾನನು ಬಂದು ಯೇಸುಕ್ರಿಸ್ತನ ವಿಷಯದಲ್ಲಿ ಪ್ರಕಟಿಸುವದಕ್ಕೆ ಮುಂಚಿನ ಕ್ರಿ.ಪೂ. 400 ವರ್ಷಗಳವರೆಗೆ ಯಾವ ಪ್ರವಾದಿಗಳು ಪ್ರವಾದನೆ ಹೇಳಲಿಲ್ಲ.

---

[1]ಕ್ರೈಸ್ತರು ಹಳೆ ಒಡಂಬಡಿಕೆಯಲ್ಲಿರುವ ನೈತಿಕ ನಿಯಮಗಳನ್ನು ವಿಶೇಷವಾಗಿ ಹತ್ತು ದಶಾಜ್ಞೆಗಳಿಗೆ ವಿಧೇಯರಾಗಬೇಕೆಂದು ನಿರೀಕ್ಷಿಸಲಾಗಿದೆ. (ವಿಮೋಚನಾಕಾಂಡ 20:1-17).ಆದರೆ ಯೇಸುಕ್ರಿಸ್ತನು ನಿನ್ನ ದೇವರನ್ನು ಪ್ರೀತಿಸು ಮತ್ತು ನಿನ್ನ ನೆರೆಯವನನ್ನು ಪ್ರೀತಿಸು ಎಂಬಂತೆ ಈ ಎರಡು ಮಹಾ ಆಜ್ಞೆಗಳಲ್ಲಿಯೇ ಹಳೆ ಒಡಂಬಡಿಕೆಯ ಸಾರಾಂಶವನ್ನೆಲ್ಲಾ ಅಡಗಿಸಿ ಸಂಕ್ಷಿಪ್ತಗೊಳಿಸಿದನು(ಮಾರ್ಕ 12:30-31). ಒಂದು ವೇಳೆ ನಾವು ಈ ಎರಡು ಮಹಾ ಆಜ್ಞೆಗಳನ್ನು ಅನುಸರಿಸುವುದಾದರೆ, ಹತ್ತು ದಶಾಜ್ಞೆಗಳನ್ನು ನೆರವೇರಿಸಿದಂತಾಗುತ್ತದೆ (ಮತ್ತಾಯ 22:40; ರೋಮ 13:9)



# ನಾವು ಸತ್ಯವೇದವನ್ನು ಹೇಗೆ ಪಡೆದೆವು

## ಹಳೆ ಒಡಂಬಡಿಕೆಯು

ಬಹುಶಃ ಕ್ರಿ.ಪೂ.1400-400 ಮಧ್ಯದ ಅವಧಿಯಲ್ಲಿ ಒಂದು ಸಾವಿರ ವರ್ಷಗಳ ಹಿಂದೆ ಬರೆಯಲ್ಪಟ್ಟಿದೆ. ಹಳೆ ಒಡಂಬಡಿಕೆಯ ಮೊದಲ ಐದು ಪುಸ್ತಕಗಳು ಕೆಲವೊಂದು ಸಮಯದಲ್ಲಿ ಕಾನೂನು ಗ್ರಂಥಗಳೆಂದು ಅಥವಾ ಮೋಶೆಯ ಕಾನೂನಿನ ಗ್ರಂಥಗಳೆಂದು ಕರೆಯಲ್ಪಟ್ಟಿರುವ ಇವು ಕ್ರಿ.ಪೂ.1400ನೇ ವರ್ಷದಲ್ಲಿ ಮುಖ್ಯವಾಗಿ ಮೋಶೆಯಿಂದ ಬರೆಯಲ್ಪಟ್ಟಿವೆ. ಹಳೆ ಒಡಂಬಡಿಕೆಯ ಕಡೆಯ ಪುಸ್ತಕವು ಕ್ರಿ.ಪೂ. 400ರಲ್ಲಿ ಪ್ರವಾದಿಯಾದ ಮಲಾಕಿಯನಿಂದ ಬರೆಯಲ್ಪಟ್ಟಿತು.

ಹಳೆ ಒಡಂಬಡಿಕೆಯ ವೇದ ವಾಕ್ಯಗಳು ಹಸ್ತಾಕ್ಷರಗಳಾಗಿದ್ದು ಜಾಗರೂಕತೆಯಿಂದ ಕೈಯ ಬರವಣಿಗೆಯಿಂದ ಬರೆಯಲಾಗಿವೆ ಮತ್ತು ತಲೆಮಾರಿನಿಂದ ತಲೆಮಾರಿಗೆ ಹಸ್ತಾಂತರಿಸಲ್ಪಟ್ಟಿರುತ್ತವೆ. ಪ್ರತಿ ಸಂದರ್ಭದಲ್ಲಿಯೂ ಬರಹಗಾರನು ಪ್ರತಿಗಳನ್ನು ನಕಲು ಮಾಡಿ ನಂತರ ಹಳೆಯ ಪ್ರತಿಗಳನ್ನು ನಾಶಮಾಡುತ್ತಿದ್ದನು ಈ ಒಂದು ಕಾರಣಕ್ಕಾಗಿಯೇ ಪೂರ್ವಕಾಲದ ಹಳೆ ಒಡಂಬಡಿಕೆಯ ಪ್ರತಿಗಳು ಇಲ್ಲವೇ ಇಲ್ಲ. ಅತಿ ಇತ್ತೀಚಿನವರೆಗೂ ಇರುವಂತಹ ಹಳೆಯ ಪ್ರತಿಯು ಕ್ರಿ.ಶ.10ನೇ ಶತಮಾನದಲ್ಲಿ ದೊರೆತಿರುವಂತದ್ದಾಗಿದೆ.

ಏನೇ ಇರಲಿ, ಪೂರ್ವಕಾಲದಲ್ಲಿ ಚರ್ಮದಲ್ಲಿ ಬರೆಯಲ್ಪಟ್ಟ ಹಸ್ತಾಕ್ಷರದ ಪ್ರತಿಯು, 1947 ರಲ್ಲಿ, ಇಸ್ರಾಯೇಲ್ ದೇಶದಲ್ಲಿ, ಒಬ್ಬ ಕುರುಬ ಬಾಲಕನಿಂದ ಪತ್ತೆ ಹಚ್ಚಲ್ಪಟ್ಟಿತು. ಸತ್ತ ಸಮುದ್ರದ ಹತ್ತಿರವಿರುವ ಯೆರಿಕೋ ಪಟ್ಟಣದ ದಕ್ಷಿಣ ದಿಕ್ಕಿನಲ್ಲಿ 8 ಮೈಲಿ ಅಂತರದಲ್ಲಿರು ಕೆಲವು ಗುಹೆಗಳಲ್ಲಿ ಇವು ಕಂಡವು. ಈ ಹಸ್ತಪ್ರತಿಯು ಹಳೆ ಒಡಂಬಡಿಕೆಯ ಪ್ರತಿಯೊಂದು ಗ್ರಂಥಗಳ ಸಾರಾಂಶದಿಂದ ಕೂಡಿದೆ. ಸತ್ತ ಸಮುದ್ರದಲ್ಲಿ ದೊರೆತ ಈ ಪ್ರತಿಯು 1 ಮತ್ತು 2 ನೇ ಶತಮಾನದ ಕೆಲವೊಂದು ವರ್ಷಗಳಲ್ಲಿ ನಕಲುಗೊಂಡಿದೆ. ಕೆಲವೊಂದು ಅಲ್ಪ ವ್ಯತ್ಯಾಸ, ಭಾಷಾ ಶೈಲಿ ಮತ್ತು ವ್ಯಾಕರಣದಲ್ಲಿ ಸ್ವಲ್ಪ ವ್ಯತ್ಯಾಸಗಳು ಕಂಡು ಬಂದಿರುವಂತಹವುಗಳನ್ನು ಬಿಟ್ಟರೆ ಮತ್ತೆ ಉಳಿದೆಲ್ಲಾ ವಿಷಯಗಳಲ್ಲಿ ವ್ಯತ್ಯಾಸವಿಲ್ಲದೆ 10 ಶತಮಾನದಲ್ಲಿ ಇದ್ದಂತಹ ಪ್ರತಿಗಳಂತಿದ್ದು ಯಾವ ವ್ಯತ್ಯಾಸಗಳನ್ನು ಹೊಂದಿರುವುದಿಲ್ಲ. ಯಾವ ರೀತಿಯಲ್ಲಿ ಬಹಳ ನಿಪುಣತೆಯಿಂದ ಎಚ್ಚರಿಕೆಯಿಂದ ಯಹೂದ್ಯ ಬರಹಗಾರರು ಪ್ರತಿಗಳನ್ನು ನಕಲು ಮಾಡಿಕೊಂಡು ಬಂದಿದ್ದಾರೆ ಎಂಬುದನ್ನು ಇದು ತೋರಿಸಿಕೊಡುತ್ತದೆ. ಹೀಗಾಗಿ, ಇತ್ತೀಚಿನ ಈ ಹಳೆ ಒಡಂಬಡಿಕೆಯ ಪ್ರತಿಗಳು (ಈಗ ನಮ್ಮಲ್ಲಿರುವ ಸತ್ಯವೇದ ಇವುಗಳಿಂದ ಬರೆಯಲ್ಪಟ್ಟಿದೆ). ಸಂಪೂರ್ಣವಾಗಿ ಹಳೆ ಒಡಂಬಡಿಕೆಯ ಮೂಲ ಗ್ರಂಥಕರ್ತರಿಂದ ಬರೆದಂತಹ ಮೂಲ ಪ್ರತಿಗಳಿಗೆ ಸರಿಯಾಗಿಯೇ ಇವೆ ಎಂಬುದರಲ್ಲಿ ಎಳ್ಳಷ್ಟು ಸಂದೇಶವಿಲ್ಲದೆ ನಾವು ಭರವಸೆಯಿಡಬಹುದು. ಇದು ಬಹಳ ಪ್ರಾಮುಖ್ಯವಾದದ್ದು ಯಾಕೆಂದರೆ ಮೂಲ ಬರಹಗಾರರು (ಗ್ರಂಥಕರ್ತರು) ನೇರವಾಗಿ ದೇವರಿಂದ ಪ್ರೇರೇಪಿಸಲ್ಪಟ್ಟವರಾಗಿ ವಿಶೇಷವಾದ ರೀತಿಯಲ್ಲಿ ದೇವರು ಏನನ್ನು ಬರೆಯಬೇಕೆಂದಿದ್ದನೋ ಅದನ್ನೆ ಬರೆದರು. ಆದುದರಿಂದ ಅವರಿಂದ ಬರೆಯಲ್ಪಟ್ಟ ಪ್ರತಿಗಳು ನಂಬಿಗಸ್ತಿಕೆಯಿಂದಲೂ ಮತ್ತು ಸರಿಯಾಗಿ ಶತಶತಮಾನಗಳಿಂದ ಹಸ್ತಾಂತರಿಸಲ್ಪಟ್ಟು ಈಗ ನಮ್ಮ ಬಳಿಯಲ್ಲಿದೆ ಎಂದು ನಾವು ಭರವಸೆಯುಳ್ಳವರಾಗಿರಬಹುದು.

ಹಳೆ ಒಡಂಬಡಿಕೆಯ ಹೆಚ್ಚಿನ ಲಿಪಿಗಳು, ಯಹೂದ್ಯರ ಪುರಾತನ ಭಾಷೆಯಾದ ಹಿಬ್ರಿಯ ಭಾಷೆಯಲ್ಲಿ ಬರೆಯಲ್ಪಟ್ಟಿರುತ್ತವೆ. ಹೇಗಿದ್ದರು ಯೇಸು ಕ್ರಿಸ್ತನಿದ್ದ ಕಾಲದಲ್ಲಿ ಹಿಬ್ರಿಯ ಭಾಷೆಯು ಸಾಮಾನ್ಯ ಜನರಿಂದ ಬಳಸಲ್ಪಡದೆ, ಇದು ಪ್ರಮುಖವಾಗಿ ಯಹೂದ್ಯರ ಯಾಜಕರಿಂದ ಮತ್ತು ಧಾರ್ಮಿಕ ಪಂಡಿತರಿಂದ ಮಾತ್ರ ಬಳಸಲ್ಪಡುತ್ತಿತ್ತು. ಮಧ್ಯ ಪೂರ್ವದೇಶಗಳಲ್ಲಿ ಯೇಸುಕ್ರಿಸ್ತನಿದ್ದ ಸಮಯದಲ್ಲಿ ಅರಾಮಿಕ್ ಭಾಷೆಯು ಎಲ್ಲರಿಂದ ಬಳಸಲ್ಪಡುವ ಭಾಷೆಯಾಗಿದ್ದು ಸ್ವತಃ ಯೇಸುಕ್ರಿಸ್ತನು ಸಹ ಈ ಭಾಷೆಯಲ್ಲಿಯೆ ಮಾತನಾಡಿದನು. ಸಂಸ್ಕೃತಕ್ಕೂ ಮತ್ತು ಸುಧಾರಿತ ಭಾರತೀಯ ಭಾಷೆಗಳಿಗೆ ಸಂಬಂಧವಿರುವಂತೆಯೇ ಆರಾಮಿಕ ಹಾಗೂ ಹಿಬ್ರಿಯ ಭಾಷೆಗಳಿಗೆ ಭಾಷಾ ಸಂಬಂಧವಿದೆ.

ಹಾಗೆಯೇ ಯೇಸುಕ್ರಿಸ್ತನ ಕಾಲದಲ್ಲಿ ಗ್ರೀಕ್ ಭಾಷೆಯು ಮತ್ತೊಂದು ಪ್ರಮುಖವಾದಂತಹ ಭಾಷೆಯಾಗಿತ್ತು. ಗ್ರೀಕ್ ಭಾಷೆಯು ಮೆಡಿಟರೇನಿಯನ್ ಪ್ರಾಂತ್ಯದ ಎಲ್ಲಾ ಕಡೆಯಲ್ಲಿ ಉಪಯೋಗಿಸಲ್ಪಡುತ್ತಿತ್ತು ಮತ್ತು ಹೆಚ್ಚಿನ ವಿದ್ಯಾವಂತರಿಗೆ ಪರಿಚಿತವಾಗಿತ್ತು. ಕೇವಲ ಬಹಳ ಕಡಿಮೆ ಜನರು ಹಿಬ್ರಿಯ ಭಾಷೆಯನ್ನು ಬಳಸುತ್ತಿದ್ದುದರಿಂದ ಸರಿಸುಮಾರು ಕ್ರಿ.ಶ. 200ರಲ್ಲಿ ಈ ಹಳೆ ಒಡಂಬಡಿಕೆಯು ಹಿಬ್ರಿಯ ಭಾಷೆಯಿಂದ ಗ್ರೀಕ್ ಭಾಷೆಗೆ ಭಾಷಾಂತರಗೊಂಡಿತು. ಹೊಸ ಒಡಂಬಡಿಕೆಯ ಬರಹಗಾರರು, ಹಳೆ ಒಡಂಬಡಿಕೆಯನ್ನು ಉದಾಹರಣೆಗಾಗಿ ಉಪಯೋಗಿಸುವಾಗ ಹಿಬ್ರಿಯ ಭಾಷೆಯಲ್ಲಿರುವ ಮೂಲ ಗ್ರಂಥವನ್ನು ಉಪಯೋಗಿಸದೇ ಇದಕ್ಕೆ ಬದಲಾಗಿ ಗ್ರೀಕ್ ಭಾಷೆಯಲ್ಲಿದ್ದಂತಹ ಹಳೆ ಒಡಂಬಡಿಕೆಯನ್ನೇ ಉಪಯೋಗಿಸಿದರು.

ಹಳೆ ಒಡಂಬಡಿಕೆಯು ಮೂವತ್ತೊಂಬತ್ತು ಪುಸ್ತಕಗಳಿಂದ ಕೂಡಿದ್ದು ಅನೇಕ ಬೇರೆ ಬೇರೆ ಗ್ರಂಥಕರ್ತರಿಂದ ಬರೆಯಲ್ಪಟ್ಟಿದೆ. ಈ ಪುಸ್ತಕಗಳ ಬಗ್ಗೆ ಚರ್ಚಿಸುವುದಕ್ಕೆ ಸಾಮಾನ್ಯ ಲೇಖನದಲ್ಲಿ ಹಳೆ ಒಡಂಬಡಿಕೆಯ ಸಾರಾಂಶ ಭಾಗವನ್ನು ನೋಡಿರಿ.

## ಹೊಸ ಒಡಂಬಡಿಕೆ

ಯೇಸುಕ್ರಿಸ್ತನ ಮರಣವಾದ 20 ವರ್ಷಗಳ ನಂತರ, ಹೊಸ ಒಡಂಬಡಿಕೆಯೂ ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟಿತು. ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ಕೊಟ್ಟಂತಹ ಕಡೆಯ ಆಜ್ಞೆ, ಲೋಕದ ಕಟ್ಟ ಕಡೆಯವರೆಗೂ ಆತನಿಗೆ ಸಾಕ್ಷಿಗಳಾಗಿರಬೇಕು ಎಂಬುದೇ (ಅ.ಕೃ. 1:8), ಆದುದರಿಂದ ಪಂಚಾಶತ್ತಮ ದಿನದ ಪ್ರಾರಂಭದಿಂದಲೇ ಶಿಷ್ಯರು ಕ್ರಿಸ್ತನ ಜೀವನ ಮತ್ತು ಬೋಧನೆಯ ಬಗ್ಗೆ ಇತರರಿಗೆ ಹೇಳುವುದಕ್ಕೆ ಪ್ರಾರಂಭಿಸಿದರು. ಯೇಸುಕ್ರಿಸ್ತನ ಮರಣದ ನಂತರದ ಮೊದಲಿನ 20 ವರ್ಷಗಳವರೆಗೆ ಆತನ ಶಿಷ್ಯರು ಅಥವಾ ಅಪೋಸ್ತಲರು ಬಾಯಿ ಮಾತುಗಳಿಂದಲೆ ಬೋಧಿಸಿದರು. ವಯಸ್ಸಾಗುತ್ತ ಬಂದಂತಹ ಅಪೋಸ್ತಲರು, ಅವರ ಬೋಧನೆಗಳು ಸರಿಯಾಗಿ ಮುಂದಿನ ಜನಾಂಗಕ್ಕೆ ತಲುಪುವಂತಾಗಬೇಕೆಂಬ ಗ್ರಹಿಕೆಯಿಂದ ತಾವು ಕಲಿಸಿದ ಬೋಧನೆಗಳನ್ನು ಲಿಖಿತ ರೂಪದಲ್ಲಿ ದಾಖಲಿಸಿದರು. ಈ ಕಾರಣದಿಂದ ಕೆಲವು ಅಪೋಸ್ತಲರು ಮತ್ತು ಅವರ ಆತ್ಮೀಯ ಸಹೋದ್ಯೋಗಿಗಳು ಯೇಸುಕ್ರಿಸ್ತನ ಸಮಗ್ರ ಜೀವಿತವನ್ನು ಬರೆಯುವುದಕ್ಕೆ ಪ್ರಾರಂಭಿಸಿದರು. ಮಾರ್ಕನ ಸುವಾರ್ತೆಯನ್ನು ಬರೆಯುವುದಕ್ಕಾಗಿ ಅಪೋಸ್ತಲನಾದ ಪೇತ್ರನು ಮಾರ್ಕನೊಂದಿಗೆ ಸೇರಿ ಕೆಲಸ ಮಾಡಿದನು (ಪರಿಚಯ : ಮಾರ್ಕ ನೋಡಿರಿ). ಅಪೋಸ್ತಲನಾದ ಮತ್ತಾಯನು ಮತ್ತಾಯನ ಸುವಾರ್ತೆಯನ್ನು ಬರೆದನು ಮತ್ತು ಅಪೋಸ್ತಲನಾದ ಯೋಹಾನನು ಯೋಹಾನನ ಸುವಾರ್ತೆಯನ್ನು ಬರೆದನು. ಅಪೋಸ್ತಲನಾದ ಪೌಲನ ಆತ್ಮೀಯ ಸಹೋದ್ಯೋಗಿಯಾಗಿದ್ದಂತಹ ಲೂಕನು, ಲೂಕನ ಸುವಾರ್ತೆಯನ್ನು,ಮತ್ತು ಆದಿಸಭೆಯ ಚರಿತ್ರೆಯಿಂದ ಕೂಡಿದ ಅಪೋಸ್ತಲರ ಕೃತ್ಯಗಳು ಎಂಬ ಪುಸ್ತಕವನ್ನುಬರೆದನು.

ಕ್ರಿಸ್ತನ ಜೀವಿತವನ್ನು ಬರೆಯುವುದರ ಜೊತೆಗೆ ಕ್ರಿಸ್ತನು ಬರುವ ಉದ್ದೇಶದ ಸಂಪೂರ್ಣ ವಿವರಣೆಯೊಂದಿಗೆ ಬರೆಯಲು ಪ್ರಾರಂಭಿಸಿ ಹೊಸ ಸಭೆಗಳಲ್ಲಿ ಕಂಡು ಬಂದಂತಹ ತಪ್ಪುಗಳನ್ನು ಮತ್ತು ಸಭೆಗಳಲ್ಲಿ ಉದ್ಭವಿಸಿದ ಸುಳ್ಳು ಬೋಧನೆಗಳನ್ನು ತಿದ್ದುವುದಕ್ಕೋಸ್ಕರ ಬರೆಯುವ ಅಗತ್ಯವಿದೆ ಎಂದು ಕಂಡುಕೊಂಡರು. ಹೀಗಾಗಿ ಅವರು ತಾವು ಸ್ಥಾಪಿಸಿದ ಹೊಸ ಸಭೆಗಳಿಗೆ ಪತ್ರಗಳನ್ನು ಬರೆಯಲು ಪ್ರಾರಂಭಿಸಿದರು. ಅಪೋಸ್ತಲನಾದ ಪೌಲನು, ಕ್ರಿ.ಶ. 50ನೇ ವರ್ಷದಲ್ಲಿ ಗಲಾತ್ಯದ ಸಭೆಗೆ ಬರೆಯುವುದನ್ನು ಪ್ರಾರಂಭಿಸಿ 13 ಪತ್ರಿಕೆಗಳನ್ನು ಬರೆದನು (ಪರಿಚಯ:ಗಲಾತ್ಯವನ್ನು ನೋಡಿರಿ). ಯೇಸುಕ್ರಿಸ್ತನ ತಮ್ಮನಾದ ಯಾಕೋಬನ ಪತ್ರಿಕೆಯೇ ಹೊಸ ಒಡಂಬಡಿಕೆಯ ಪತ್ರಿಕೆಗಳಲ್ಲಿ ಮೊದಲು ಬರೆದ ಪತ್ರಿಕೆಯಾಗಿದೆ ಎಂದು ಕೆಲವು ಪಂಡಿತರು ನಂಬುತ್ತಾರೆ (ನೋಡಿರಿ, ಪರಿಚಯ : ಯಾಕೋಬ).

ಹೊಸ ಒಡಂಬಡಿಕೆಯ ಕಡೆಯ, ಪ್ರಕಟನೆಯ ಪುಸ್ತಕವು ಸರಿಸುಮಾರು ಕ್ರಿ.ಶ. 90-95ರಲ್ಲಿ ಅಪೋಸ್ತಲನಾದ ಯೋಹಾನನಿಂದ ಬರೆಯಲ್ಪಟ್ಟಿತು. ಹೊಸ ಒಡಂಬಡಿಕೆಯು ಕ್ರಿ.ಶ. 50ವರ್ಷದಿಂದ 100ನೇ ವರ್ಷದ ಮಧ್ಯಂತರದವಧಿಯಲ್ಲಿ ಸಂಪೂರ್ಣಗೊಂಡಿದೆ. ಹೀಗೆ ಹೊಸ ಒಡಂಬಡಿಕೆಯ ಭಾಗವೆಲ್ಲ ಕ್ರಿ.ಶ.50ನೇ ವರ್ಷದಿಂದ 100ನೇ ವರ್ಷದ ವರೆಗಿನ ಮಧ್ಯದ ಅವಧಿಯಲ್ಲಿ ಬರೆಯಲ್ಪಟ್ಟು ಸಂಪೂರ್ಣಗೊಂಡಿತು.

ಭಾಗಶಃ ಹೊಸ ಒಡಂಬಡಿಕೆಯ ಎಲ್ಲಾ ಮೂಲ ಬರವಣಿಗೆಯ ಗ್ರಂಥ ಕರ್ತರು 1ಪಾಪೈರಸ್ ಎಂಬ ಗಿಡದಿಂದ ಮಾಡಿದ ಹಾಳೆಯ ಮೇಲೆ ಬರೆದರು. ಪಾಪರೈಸನ ಹಾಳೆಯು ಈಗಿನ ನಮ್ಮ ಸುಧಾರಿತ ಹಾಳೆಯಂತೆ ಬಹಳ ಬಾಳಿಕೆ ಬರುತ್ತಿರಲಿಲ್ಲ ಮತ್ತು ಹೆಚ್ಚು ದಿನ ಇರುತ್ತಿರಲಿಲ್ಲ. ಇದರ ಫಲಿತಾಂಶವೇನೆಂದರೆ, ಪಾಪರೈಸನ ಹಾಳೆಯ ಮೇಲೆ ಹೊಸ ಒಡಂಬಡಿಕೆ, ಗ್ರಂಥಕರ್ತರುಗಳು ಬರೆದಂತಹ ನಿಜವಾದ ಎಲ್ಲ ಬರವಣಿಗೆಗಳು ನಾಶವಾದವು ಮತ್ತು ಹಳೆ ಒಡಂಬಡಿಕೆಯಂತೆಯೇ, ಈಗ ಉಳಿದಿರುವಂತಹ ಇಂದಿನ ಎಲ್ಲಾ ಪ್ರತಿಗಳು ಮೂಲ ಪ್ರತಿಗಳ ನಕಲುಗಳಾಗಿವೆ.

ಕ್ರಿಸ್ತನ ನಂತರದ ಮೊದಲ ಮೂರು ಶತಮಾನಗಳವರೆಗೆ, ಜಾಗ್ರತೆಯಿಂದ ಮತ್ತು ಸರಿಯಾಗಿ ಬರಹಗಾರರು ಪ್ರತಿಗಳನ್ನು ಪಾಪರೈಸನ ಹಾಳೆಯ ಮೇಲೆ ನಕಲು ಮಾಡುತ್ತಾ ಬಂದರು. ಕ್ರಿ.ಶ.1900ನೇ ವರ್ಷದ ಪ್ರಾರಂಭದಲ್ಲಿ ಈಜಿಪ್ಟಿನ ಮರಳಿನಲ್ಲಿ ಹುದುಗಿದಂತ ಪಾಪರೈಸ್ ಹಾಳೆಯ ಮೇಲೆ ಬರೆದಂತಹ ಪುರಾತನ ಹೊಸ ಒಡಂಬಡಿಕೆಯ ಮೂಲ ಪ್ರತಿಗಳ ಸಂಶೋಧನೆಯಾಯಿತು. ನಂತರ ಕಂಡುಕೊಂಡ ಇನ್ನುಳಿದ ಪ್ರತಿಗಳನ್ನು ರಕ್ಷಣ ಕವಚದ ಪೆಟ್ಟಿಗೆಯಲ್ಲಿ ರಕ್ಷಿಸಿಡಲಾಗಿದೆ. ಇವುಗಳಲ್ಲಿಯ ಹಳೆಯದಾದ ಪ್ರತಿಗಳನ್ನು ಕ್ರಿ.ಶ.135ರಲ್ಲಿ ತಯಾರಿಸಲಾಯಿತು ಮತ್ತು ಇವು ಯೋಹಾನನ ಸುವಾರ್ತೆಯ ಕೆಲವೊಂದು ಭಾಗಗಳಿಂದ ಕೂಡಿವೆ ಮತ್ತು ಕ್ರಿ.ಶ. 200ರಲ್ಲಿ ಬರಹಗಳ ಪ್ರತಿಗಳನ್ನು ನಕಲು ಮಾಡಲಾಯಿತು ಮತ್ತು ಇವುಗಳು ಹೊಸ ಒಡಂಬಡಿಕೆಯಲ್ಲಿರುವ ಹೆಚ್ಚಿನ ಭಾಗಗಳಿಂದ ಕೂಡಿವೆ. ಈ ಎಲ್ಲಾ ಪುರಾತನ ಬರಹಗಳನ್ನು ರಕ್ಷಿಸಿಡಲಾಗಿದೆ.

ಸತ್ಯವೇದವು ಬರೆಯಲ್ಪಟ್ಟ ಕಾಲದಲ್ಲಿ ಉಪಯೋಗಿಸಲ್ಪಟ್ಟಂತಹ ಮತ್ತೊಂದು ವಿಶೇಷ ಹಾಳೆಯು ಪರಿಷ್ಕೃತಗೊಂಡಂತಹ ಆಡಿನ ಅಥವಾ ಕುರಿಯ ಚರ್ಮದಿಂದ ಮಾಡಿದ, ಪರ್ಚಮೇಂಟ ಎಂಬ ಹಾಳೆಯಾಗಿದೆ. ಈ ಪರ್ಚಮೇಂಟ್ ಹಾಳೆಯು ಪಾಪರೈಸ್‌ನ ಹಾಳೆಗಿಂತ ದುಬಾರಿ. ಮೊದಲು ಬರೆದಂತಹ ಹೊಸ ಒಡಂಬಡಿಕೆಯ ಬರಹಗಳನ್ನು ಈ ಪರ್ಚಮೇಂಟ್ ಹಾಳೆಯ ಮೇಲೆ ಬರೆದಿರುತ್ತಿದ್ದರೆ ಖಂಡಿತ ರಕ್ಷಿಸಿಟ್ಟಿರುತ್ತಿದ್ದರು. ಅತಿ ಹಳೆಯದಾದ ನಕಲು ಮಾಡಿದ ಹೊಸ ಒಡಂಬಡಿಕೆಯನ್ನು 4ನೇ ಶತಮಾನದಲ್ಲಿ ಸಂಪೂರ್ಣಗೊಳಿಸಲಾಯಿತು ಮತ್ತು ಇದನ್ನು ಆಡಿನ ಚರ್ಮದ ಹಾಳೆಯ ಮೇಲೆ ಬರೆಯಲಾಯಿತು. ತುಂಬಾ ಹಳೆಯದಾದ ಪ್ರತಿಗಳು 1800ರ ಮಧ್ಯದ ಸಮಯದಲ್ಲಿ ಈಜಿಪ್ಟಿನ ಸೀನಾಯಿ ಪರ್ವತದ ಸನ್ಯಾಸಿಗಳ ಗೃಹದಲ್ಲಿ ಸಿಕ್ಕವು. ಇದರೊಂದಿಗೆ ಈಗಲೂ ಇರುವಂತಹ 4ನೇ ಮತ್ತು 9ನೇ ಶತಮಾನದಲ್ಲಿ ಆಡಿನ ಚರ್ಮದ ಹಾಳೆಯ ಮೇಲೆ ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟಂತ ಹೊಸ ಒಡಂಬಡಿಕೆಯ 270 ಪ್ರತಿಗಳು ಸಿಕ್ಕವು. 9ನೇ ಶತಮಾನದಿಂದ 15ನೇ ಶತಮಾನದ ವರೆಗಿನ ಅವಧಿಯಲ್ಲಿ ಅಧಿಕಸಂಖ್ಯೆಯಲ್ಲಿ ಗ್ರೀಕನ ಹೊಸ ಒಡಂಬಡಿಕೆಯ ಪ್ರತಿಗಳನ್ನು ಆಡಿನ ಚರ್ಮದ ಹಾಳೆಯ ಮೇಲೆ ಸಿದ್ಧಪಡಿಸಿದ್ದು ಇವುಗಳಲ್ಲಿನ ಇನ್ನು 2700 ಪ್ರತಿಗಳನ್ನು ಇಂದಿನವರೆಗೂ ರಕ್ಷಿಸಿಡಲಾಗಿದೆ. ಆಮೇಲೆ ಕ್ರಿ.ಶ.1456ರಲ್ಲಿ ಜರ್ಮನಿಯ ಜೊಹಾನ್ ಗುಟನ್‌ಬರ್ಗ್ ಎಂಬಾತನಿಂದ ಮುದ್ರಣದ ಯಂತ್ರವು ಕಂಡುಹಿಡಿಯಲ್ಪಟ್ಟಿತು ಮತ್ತು ಪ್ರಥಮವಾಗಿ ಮುದ್ರಿತವಾದ ಪುಸ್ತಕ - ಅದು ಸತ್ಯವೇದ. ಇದಾದ ಮೇಲೆ ಕೈಯಿಂದ ಬರೆದುನಕಲು ಮಾಡುವ ಅಗತ್ಯ ಕಂಡುಬರಲಿಲ್ಲ. ಇವು ಅತಿ ವೇಗದಲ್ಲಿ ಮುದ್ರಿಸಲ್ಪಟ್ಟು ಮತ್ತು ಕಡಿಮೆ ಖರ್ಚಿನಲ್ಲಿ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಸುಧಾರಿತ ಮುದ್ರಣದ ಯಂತ್ರಗಳಿಂದ ಮುದ್ರಿಸಲ್ಪಟ್ಟು ಹಂಚಲ್ಪಟ್ಟವು. ವಿವಿಧ ಭಾಷೆಗಳಿಗೆ ಸತ್ಯವೇದವು ತರ್ಜುಮೆಗೊಂಡು, ಸಾಮಾನ್ಯ ಜನರಿಗೂ ಸಹ ಹಂಚುವುದಕ್ಕೆ ಸಾಧ್ಯವಾಯಿತು. ಈ ಹೊತ್ತು ಸತ್ಯವೇದ ಅಥವಾ ಸತ್ಯವೇದದ ಕೆಲಭಾಗಗಳು ವಿಶ್ವದಲ್ಲಿನ 1200 ಬೇರೆ ಬೇರೆ ಭಾಷೆಗಳಿಗೆ ಅನುವಾದಗೊಂಡಿದೆ. ಇಷ್ಟೊಂದು ಅಧಿಕ ಸಂಖ್ಯೆಯ ಭಾಷೆಯಗಳಲ್ಲಿ ಭಾಷಾಂತರಗೊಂಡ ಮತ್ತು ಹೆಚ್ಚು ಜನರಿಂದ ಓದಲ್ಪಡುವಂತಹ ಪುಸ್ತಕವು ವಿಶ್ವದ ಚರಿತ್ರೆಯಲ್ಲಿ ಮತ್ತೊಂದಿಲ್ಲ.

ಪುರಾತನವಾದ ಮೂಲ ಹಸ್ತಪ್ರತಿಯಿಂದ, ಗ್ರೀಕ್‌ಭಾಷೆಯ ಲಿಪಿಯಲ್ಲಿದ್ದ ಕೈಯ್ಯಲ್ಲಿರುವ ಸತ್ಯವೇದವು ತುಂಬಾ ನಿಷ್ಕೃಷ್ಟತೆ (ಯಥಾರ್ಥತೆ)ಯಿಂದ ಕೂಡಿರುವಂತದ್ದಾಗಿದೆ ಎಂಬುದನ್ನು ಕಾಪಾಡಿಕೊಂಡು ಬಂದಂತಹ ನೂರಾರು ಮತ್ತು ಸಾವಿರಾರು, ಪುರಾತನ ಹಸ್ತಪ್ರತಿಗಳೇ ದೃಢಪಡಿಸುತ್ತವೆ. ಬರಹಗಾರರು ವೈಯಕ್ತಿಕವಾಗಿ ಮೂಲ ಹಸ್ತಪ್ರತಿಗಳ ನಕಲು ಮಾಡುವಾಗ ಅಲ್ಲಲ್ಲಿ ತಪ್ಪುಗಳಾಗಿರುವುದು ಕಂಡು ಬಂದಿದೆ. ಆದಾಗ್ಯೂ ಎಲ್ಲಾ ಪುರಾತನ ಮೂಲಹಸ್ತಪ್ರತಿಯಲ್ಲಿರುವ ಲಿಪಿಗಳನ್ನು ಒಟ್ಟಾಗಿ ಅಭ್ಯಸಿಸುವಾಗ ಮೂಲ ಬರಹಗಾರರು ಬರೆದಿರುವಂತಹವುಗಳ ಮಧ್ಯೆ ಒಂದೇ ಒಮ್ಮತವಿರುವುದನ್ನು ದೃಢಪಡಿಸಿಕೊಳ್ಳಬಹುದು. ಸತ್ಯವೇದವು ಹೊಂದಿರುವಂತಹ ಇಷ್ಟೊಂದು ಮೂಲ ಪ್ರತಿಗಳನ್ನು ಇನ್ನಾವುದೇ ಪುರಾತನ ಗ್ರಂಥವು ಹೊಂದಿಲ್ಲ. ಈ ಕಾರಣಕ್ಕಾಗಿಯೇ, ಈಗ ನಾವು ಹೊಂದಿರುವಂತಹ ನವೀಕರಣಗೊಂಡ ಸತ್ಯವೇದವು, ದೇವರಿಂದ ಬರಹಗಾರರಿಗೆ ಮೊದಲು ಕೊಡಲ್ಪಟ್ಟಂತಹ, ಸತ್ಯವೇದದ ಮೂಲ ನುಡಿಗಳ ಸರಿಯಾದ ಭಾಷಾಂತರದ ಪ್ರತಿಯೇ ಆಗಿದೆ ಎಂದು ಭರವಸೆಯಿಡಬಹುದು.

ಸತ್ಯವೇದದ ನಿಖರತೆಯ ಬಗ್ಗೆ ನಾವು ವಿಶ್ವಾಸವಿಡಲು ಇರುವ ಮತ್ತೊಂದು ಕಾರಣವೇನೆಂದರೆ ದೇವರು, ಎಲ್ಲಾ ಸಂತಾನದವರಿಗಾಗಿ ತನ್ನ ವಾಕ್ಯಗಳನ್ನು ಕಾಪಾಡಿಕೊಂಡು ಬರುವೆನು ಎಂದು ಹೇಳಿದ್ದು (ಕೀರ್ತನೆ 119:89, 152, 160). ದೇವರು ತನ್ನ ವಾಕ್ಯಗಳು ನಾಶವಾಗಲು ಅಥವಾ ಯಾವುದೇ ರೀತಿಯಿಂದ ಬದಲಾವಣೆ ಹೊಂದಲು ಆತನು ಅನುಮತಿಸಲಿಲ್ಲ ಎಂಬದಾಗಿ ಸಂಪೂರ್ಣವಾದ ಭರವಸೆಯಿಂದಿರಬಹುದು.

## ಕಾನಾನ್ ಹೊಸ ಒಡಂಬಡಿಕೆ

2ಕಾನಾನ್ ನ ಹೊಸ ಒಡಂಬಡಿಕೆಯಲ್ಲಿ ಯಾವ ಪುಸ್ತಕಗಳನ್ನು ಅಳವಡಿಸಬೇಕು ಎಂಬ ವಿಷಯವಾಗಿ ಸಾಮಾನ್ಯವಾದ ಒಪ್ಪಂದವಾಗಿತ್ತು. ಕ್ರಿ.ಶ. 200ರಲ್ಲಿದ್ದಂತಹ ಹೊಸ ಒಡಂಬಡಿಕೆಯಲ್ಲಿದ್ದಂತಹ ಎಲ್ಲಾ ಪುಸ್ತಕಗಳು, ಖಂಡಿತವಾಗಿಯೂ ಈಗಿರುವಂತಹ ಸತ್ಯವೇದದಲ್ಲಿ ಅಡಕವಾಗಿದ್ದವು. ಆದರೂ ಕೆಲವೊಂದು ಪುಸ್ತಕಗಳ ವಿಷದಲ್ಲಿ ಒಮ್ಮತವಿರಲಿಲ್ಲ ಮತ್ತು ಈ ಭಿನ್ನಾಭಿಪ್ರಾಯವು 4ನೇ ಶತಮಾನದವರೆಗೂ ಮುಂದುವರೆಯಿತು. ಇನ್ನೊಂದರ್ಥದಲ್ಲಿ ಪತ್ರಿಕೆಗಳಾದ ಹಿಬ್ರಿಯರಿಗೆ ಬರೆದಂತಹ ಪತ್ರಿಕೆ, ಯಾಕೋಬನು ಬರೆದ ಪತ್ರಿಕೆ, ಪೇತ್ರನು ಬರೆದ 2ನೇಯ ಪತ್ರಿಕೆ, ಯೋಹಾನನು ಬರೆದ 2ನೇ ಹಾಗೂ 3ನೇ ಪತ್ರಿಕೆ, ಯೂದನು ಬರೆದ ಪತ್ರಿಕೆ ಮತ್ತು ಪ್ರಕಟಣೆಯ ಈ ಎಲ್ಲಾ ಪುಸ್ತಕಗಳನ್ನು ಹೊಸ ಒಡಂಬಡಿಕೆಯಲ್ಲಿ ಸೇರಿಸಬೇಕೇ? ಎಂದು ಕೆಲವು ಕ್ರೈಸ್ತರು ಪ್ರಶ್ನಿಸಿದರು. ಇದರೊಂದಿಗೆ ಸತ್ಯವೇದದ ಭಾಗಗಾಗಿರದೆ, 1ನೇ ಶತಮಾನದ ಕ್ರೈಸ್ತ ನಾಯಕರಿಂದ ಬರೆಯಲ್ಪಟ್ಟಂತಹ ಪತ್ರಿಕೆಗಳನ್ನು ಕಾನಾನ್‌ನ ಹೊಸ ಒಡಂಬಡಿಕೆಯಲ್ಲಿ ಸೇರಿಸಲೇಬೇಕು ಎಂದು ಕೆಲವು ಜನರು ಅಭಿಪ್ರಾಯಪಟ್ಟರು. ಆದರೆ ಇನ್ನೂ ಕೆಲವರು ಕಾನಾನ್‌ನ ಹೊಸ ಒಡಂಬಡಿಕೆಯಲ್ಲಿ ಸೇರಿಸಲೇಬಾರದು ಎಂದು ಅಭಿಪ್ರಾಯಪಟ್ಟರು. ಏನೇ ಆದರೂ 4ನೇ ಶತಮಾನದ ಅಂತ್ಯಕ್ಕೆ ಬರುವಾಗ ಇದ್ದಂತಹ ಎಲ್ಲಾ ಭಿನ್ನಾಭಿಪ್ರಾಯಗಳು ನಿವಾರಣೆಯಾದವು ಮತ್ತು ವಿಶ್ವಾದಾದ್ಯಂತದ ಜಾಗತಿಕ ಸಭೆಗಳು ಒಮ್ಮತಾಭಿಪ್ರಾಯದಿಂದ ಈಗಿರುವ ಕಾನಾನ್‌ನ ಹೊಸ ಒಡಂಬಡಿಕೆಯನ್ನು ಒಪ್ಪಿಕೊಂಡವು ಮತ್ತು ಅಧಿಕೃತವಾದವುಗಳೆಂದು ಸಮ್ಮತಿಸಿದವು.ಆಗಿನಿಂದ, ಈ ಹೊಸ ಒಡಂಬಡಿಕೆಯ ಯಾವುದೇ ಭಾಗದ ಬಗ್ಗೆ ಭಿನ್ನಾಭಿಪ್ರಾಯಗಳಿರುವುದಿಲ್ಲ.

ಹೊಸ ಒಡಂಬಡಿಕೆಯಲ್ಲಿ ಈ ಪುಸ್ತಕಗಳನ್ನು ಸೇರಿಸಿಕೊಂಡಿರುವಂತಹದ್ದು ಈ ನಾಲ್ಕು ಅಂಶಗಳ ಆಧಾರದಿಂದಲೇ.ಮೊದಲನೆಯದು : ಪತ್ರಿಕೆಗಳು ಅಪೋಸ್ತಲರಿಂದ ಇಲ್ಲವೇ ಅಪೋಸ್ತಲರ ನಿಕಟ ಸಹೋದ್ಯೋಗಿಗಳಿಂದ ಬರೆಯಲ್ಪಟ್ಟಿರುವುದು.ಎರಡನೆಯದು : ಗ್ರಂಥದ ಸಾರಾಂಶವು ಉನ್ನತವಾದ ಆತ್ಮಿಕತೆಯಿಂದ ಕೂಡಿರಬೇಕು ಮತ್ತು ಹಳೆ ಒಡಂಬಡಿಕೆಯ ಹಾಗೂ ಅಪೋಸ್ತಲರ ಬೋಧನೆಗಳಿಗೆ ಒಪ್ಪುವಂತಹವುಗಳಾಗಿರಬೇಕು.ಮೂರನೆಯದು : ಗ್ರಂಥಗಳು ಅತಿ ಹೆಚ್ಚಿನ ಕ್ರೈಸ್ತ ಸಭೆಗಳಿಂದ ಸ್ವೀಕೃತಗೊಂಡಿರಬೇಕು.ನಾಲ್ಕನೆಯದು : ಈ ಗ್ರಂಥವು ಸಂಪೂರ್ಣವಾಗಿ ದೇವರಿಂದ ಪ್ರೇರೇಪಿಸಲ್ಪಟ್ಟಿರಬೇಕು. ಆದಿ ಸಭೆಯು ದೇವರಾತ್ಮನ ಮಾರ್ಗದರ್ಶನದಿಂದ ಈ ಗ್ರಂಥಗಳನ್ನು ಸೇರಿಸಿಕೊಂಡಿತು. ತಮ್ಮ ತೀರ್ಮಾನದಂತೆಯೇ ಗ್ರಂಥಗಳನ್ನು ಸತ್ಯವೇದದಲ್ಲಿ ಸೇರಿಸಿಕೊಳ್ಳಬೇಕು ಎಂಬ ಸಂಗತಿಯೂ ಪ್ರಾಮುಖ್ಯವಾಗಿರಲಿಲ್ಲ. ಬದಲಾಗಿ ಇವರಿಗೆ ತಾವು ಪವಿತ್ರಾತ್ಮನಿಂದ ನಡೆಸಲ್ಪಟ್ಟು ವಿಷಯಾಧಾರಿತವಾದಂತಹ ತೀರ್ಮಾನವಾಗಿದ್ದಿತು.

## ಸತ್ಯವೇದವು ಯಾಕೆ ಇತರ ಬೇರೆ ಎಲ್ಲಾ ಪುಸ್ತಕಗಳಿಗಿಂತ ಭಿನ್ನವಾಗಿದೆ

ಸತ್ಯವೇದವು ಇತರ ಎಲ್ಲಾ ಪುಸ್ತಕಗಳಿಗಿಂತ ಭಿನ್ನವಾಗಿದೆ, ಯಾಕೆಂದರೆ ಇದನ್ನು ಬರೆದ ಬರಹಗಾರರು ವಿಶೇಷವಾದ ರೀತಿಯಲ್ಲಿ ನೇರವಾಗಿ ದೇವರಾತ್ಮನಿಂದ ಪ್ರೇರೇಪಿಸಲ್ಪಟ್ಟವರಾಗಿದ್ದರು. ದೇವರು ತಾನು ಸತ್ಯವೇದ ಬರಹಗಾರರಿಂದ ಬರೆಸಬೇಕೆಂದಿದ್ದನೋ ಅದನ್ನು ಅವರು ದೇವರ ಪವಿತ್ರ ಆತ್ಮನ ಮಾರ್ಗದರ್ಶನದಲ್ಲಿ ಬರೆದರು (ನೋಡಿರಿ - 2ನೇ ತಿಮೋಥೆ. 3:16; 2 ಪೇತ್ರ 1:21 ಮತ್ತು ವ್ಯಾಖ್ಯಾನಗಳು). ಸತ್ಯವೇದವು ಮನುಷ್ಯನ ಮಾತುಗಳು ಮಾತ್ರವಲ್ಲದೆ. ಇದು ಸ್ವತಹ ದೇವರಾದ ಆತನ ವಾಕ್ಯವೇ ಆಗಿದೆ.

ಹೇಗೇ ಆಗಲಿ, ದೇವರು ತನ್ನ ವಾಕ್ಯಗಳನ್ನು ಬರೆಯುವುದಕ್ಕೆ ಮನುಷ್ಯರನ್ನು ಉಪಯೋಗಿಸಿಕೊಂಡನು. ಸತ್ಯವೇದವನ್ನು ಬರೆದಂತಹವನಿಗೆ ಪ್ರತಿಯೊಂದು ಮಾತನ್ನು ಹೇಳಿಸಿ ಬರೆಯಲಿಲ್ಲ. ಸತ್ಯವೇದದ ಬರಹಗಾರರು ಪವಿತ್ರಾತ್ಮನಿಂದ ನಡೆಸಲ್ಪಟ್ಟು ತಮ್ಮ ಬುದ್ಧಿಯನ್ನು ಉಪಯೋಗಿಸಿಕೊಂಡು ಬರೆದರು. ಅವರ ವೈಯಕ್ತಿಕ ವ್ಯಕ್ತಿತ್ವಗಳನ್ನು ಮತ್ತು ಗುಣಗಳನ್ನು ಅವರ ಬರಹಗಳ ಮೂಲಕ ನೋಡಬಹುದು. ಯೇಸುಕ್ರಿಸ್ತನು ಸ್ವತಃ ಜೊತೆಯಾಗಿಯೇ ಮಾನವನು ದೇವರು ಆಗಿರುವಂತೆಯೇ ಸತ್ಯವೇದವು ಸಹಾ ಜೊತೆಯಾಗಿಯೇ ದೇವರ ಮತ್ತು ಮನುಷ್ಯನ ಮಾತುಗಳಿಂದ ಕೂಡಿದೆ. ದೇವರ ಮನಸ್ಸನ್ನು ವಿಶೇಷವಾಗಿ ತಿಳಿದುಕೊಂಡಂತಹವರಿಂದ ಇದು ಬರೆಯಲ್ಪಟ್ಟಿತು. ದೇವರು ತನ್ನ ಚಿತ್ತವನ್ನು ಅವರಿಗೆ ಪ್ರಕಟಿಸಿದನು ಮತ್ತು ಅವರು ದೇವರು ಯಾವುದನ್ನು ಅವರಿಗೆ ಪ್ರಕಟಿಸಿದನೋ ಅದನ್ನೇ ಅವರು ಬರೆದರು. ಇತರ ಕ್ರೈಸ್ತ ನಾಯಕರು ಸಾಮಾನ್ಯವಾದ ರೀತಿಯಲ್ಲಿ ದೇವರಾತ್ಮನಿಂದ ಪ್ರೇರೇಪಣೆ ಹೊಂದಿದ್ದಾರೆ ಮತ್ತು ದೇವರಿಗೆ ಮೆಚ್ಚಿಕೆಯಾಗುವಂತಹ ಪುಸ್ತಕಗಳನ್ನು ಬರೆದಿರುತ್ತಾರೆ. ಆದರೆ ಸತ್ಯವೇದವನ್ನು ಬರೆದವರು ಹೊಂದಿದಂತಹ ವಿಶೇಷವಾದಂತಹ ದೇವಜ್ಞಾನವನ್ನು ಹೊಂದಿಲ್ಲ. ಈ ಕಾರಣಕ್ಕಾಗಿಯೇ ಸತ್ಯವೇದವು ಇತರ ಎಲ್ಲಾ ಪುಸ್ತಕಗಳಿಗಿಂತ ಭಿನ್ನವಾಗಿದೆ. ಇದೊಂದೇ ಪ್ರಕಟಿಸಲ್ಪಟ್ಟಂತಹ ಮತ್ತು ಅಧಿಕಾರಯುಕ್ತವಾದ ದೇವರ ವಾಕ್ಯವಾಗಿದೆ.

ಸತ್ಯವೇದವು ದೇವರ ವಾಕ್ಯವಾಗಿರುವ ಕಾರಣ ಇದು ಸಂಪೂರ್ಣವಾಗಿ ಸತ್ಯವಾಗಿದೆ. ಇದು ದೋಷ (ತಪ್ಪು)ರಹಿತವಾದದ್ದು. ಸತ್ಯವೇದದಲ್ಲಿ ನಾವು ಕೆಲವು ತಪ್ಪುಗಳನ್ನು ಕಂಡಿದ್ದೇವೆ ಎಂದು ಕೆಲವರು ಹೇಳಿದರು. ಆದರೆ ಕಾಲಾನುಕ್ರಮದಲ್ಲಿ ಸತ್ಯವೇದವು ತಪ್ಪಿನಿಂದ ಕೂಡಿಲ್ಲ. ಬದಲಾಗಿ ತಾವೇ ತಪ್ಪುಗಾರರೆಂಬುದನ್ನು ತಿಳಿದುಕೊಂಡರು. ಕಾಲ ಕಾಲಕ್ಕೆ ತಕ್ಕಂತೆ ಚರಿತ್ರೆಯ ಮತ್ತು ಪ್ರಾಚೀನ ವಸ್ತುಶಾಸ್ತ್ರದ ಸಂಶೋಧನೆಗಳು ಸತ್ಯವೇದದ ಬರವಣಿಗೆಗಳು ಸತ್ಯದಿಂದ ಕೂಡಿದವುಗಳೆಂಬುದನ್ನು ದೃಢಪಡಿಸಿವೆ. ಸತ್ಯವೇದದ ಎಲ್ಲಾ ಸಂಗತಿಗಳು ನೈಜತೆಯಿಂದ (ಸತ್ಯತೆಯಿಂದ) ಕೂಡಿದವುಗಳೆಂಬುದನ್ನು ಚರಿತ್ರೆ ಮತ್ತು ವಿಜ್ಞಾನವು ಸಾದರ ಪಡಿಸಿದೆ.

ಹೀಗಿದ್ದರೂ ಸಹ ಚರಿತ್ರೆಯ ಮತ್ತು ವಿಜ್ಞಾನದ ಸಾಹಿತ್ಯಗಳನ್ನು ಓದಿದಂತೆ ಸತ್ಯವೇದವನ್ನು ಓದುವುದಕ್ಕೆ ಸಾಧ್ಯವಿಲ್ಲ. ನಮ್ಮ ಬುದ್ಧಿಶಕ್ತಿಯಿಂದ ಓದಿದರೆ ಸಾಲದು. ನಾವು ಸತ್ಯವೇದವನ್ನು ನಮ್ಮ ಆತ್ಮನಿಂದ ಓದಬೇಕು. ಇಲ್ಲದಿದ್ದರೆ ನಾವು ಸತ್ಯವೇದದ ಆಳವಾದ ಸತ್ಯತೆಗಳನ್ನು ನಾವು ಕಳೆದುಕೊಳ್ಳುತ್ತೇವೆ. ನಾನು ಸತ್ಯವೇದವನ್ನು ಸ್ವೀಕರಿಸುವುದಕ್ಕೆ ತೆರೆದ ಮನಸ್ಸುಳ್ಳವರಾಗಿರಬೇಕು. ಆತ್ಮಿಕ ತಿಳುವಳಿಕೆಗಾಗಿ ಪ್ರಾರ್ಥಿಸಬೇಕು. ಹೀಗೆ ಇದನ್ನು ನಂಬಿಕೆಯಿಂದ ಮಾಡುವಾಗ ನಮಗೆ ಸತ್ಯವೇದವು ಜೀವವುಳ್ಳದ್ದಾಗಿ ಕಂಡು ಬಂದು ನಮ್ಮ ಜೀವಿತವನ್ನು ಬದಲಾಯಿಸುವುದು.

ಪವಿತ್ರಾತ್ಮನು, ನಾವು ಓದುವಾಗ ಸತ್ಯವೇದವು ನಮಗೆ ಜೀವವಾಗುವಂತೆ ಮಾಡುವನು ಮತ್ತು ಇದನ್ನು ಓದುವವರು ತಮ್ಮ ಹೃದಯದಲ್ಲಿ ಬಲವನ್ನು ಹೊಂದುವಂತೆ ಮಾಡುವನು(2 ಕೊರಿಂಥ 3:6). ಯಾರು ಪವಿತ್ರಾತ್ಮನನ್ನು ತಮ್ಮಲ್ಲಿಹೊಂದಿರುವವರೋ ಅಂತಹವರು ಸತ್ಯವೇದವು ನಿಜವಾದದ್ದೆಂದು ಮತ್ತು ದೇವರ ಜೀವಿಸುವ ವಾಕ್ಯಗಳಾಗಿವೆಯೆಂಬುದನ್ನು ತಮ್ಮ ಅನುಭವದಿಂದ ಕಂಡುಕೊಳ್ಳುವರು.ಅವರು ದೇವರು ಯಾರು ಮತ್ತು ಕ್ರಿಸ್ತನು ಯಾರು ಎಂಬುದನ್ನು ಖಂಡಿತವಾಗಿ ತಿಳಿದುಕೊಳ್ಳುವರು. ದೇವರು ಏನನ್ನು ಮಾಡಿದನು ಎಂಬುದನ್ನು ಸಹ ಸತ್ಯವೇದದಿಂದ ತಿಳಿದುಕೊಳ್ಳುವರು. ಹಳೆ ಒಡಂಬಡಿಕೆಯು ಮನುಷ್ಯರ ಅವಿಧೇಯತೆ, ಪಾಪ ಮತ್ತು ದೇವರು ಮನುಷ್ಯರ ಬಳಿಗೆ ಬರುವಂತಹ ವಿಷಯಗಳ ದಾಖಲೆಯ ಪುಸ್ತಕವಾಗಿದೆ. ಮಾನವರು ಪಾಪಿಗಳಾಗಿದ್ದು, ರಕ್ಷಕನ ಅಗತ್ಯತೆಯಿದೆ ಎಂಬುದನ್ನು ಹಳೆ ಒಡಂಬಡಿಕೆಯು ಸ್ಪಷ್ಟವಾಗಿ ತೋರಿಸುತ್ತದೆ. ಮಾನವರನ್ನು ಪಾಪದಿಂದ ರಕ್ಷಿಸುವುದಕ್ಕೋಸ್ಕರ ಮತ್ತು ನಿತ್ಯ ಜೀವವನ್ನು ಕೊಡುವುದಕ್ಕೋಸ್ಕರ ಹಿಂಸೆಯನ್ನು ಅನುಭವಿಸಿ, ಸಾಯುವುದಕ್ಕಾಗಿ ಕ್ರಿಸ್ತನು ಭೂಮಿಗೆ ಬಂದನು ಎಂಬುದನ್ನು ಹೊಸ ಒಡಂಬಡಿಕೆಯು ತಿಳಿಸುತ್ತದೆ.

ಇದನ್ನು ಅಭ್ಯಸಿಸುವವರು ಓದುವಾಗ ದೇವರು ತನ್ನ ವಾಕ್ಯಗಳ ಮೂಲಕ ಮಾತನಾಡುವನು ಎಂದು ನಿರೀಕ್ಷಿಸಬೇಕು. ಸತ್ಯವೇದವನ್ನು ಅರ್ಥಮಾಡಿಕೊಳ್ಳುವುದು ಮಾತ್ರ ಸಾಲದು; ಆದರೆ ಅದರಂತೆ ಜೀವಿಸುವವರಾಗಿರಬೇಕು.

---

1 ಪಾಪೈರಸ್ ಗಿಡವು ಉದ್ದವಾಗಿದ್ದು, ನೀರಿನಂಶದಿಂದ ಕೂಡಿದ ಈಜಿಪ್ಟಿನ ಸ್ಥಳೀಯ ಗಿಡವಾಗಿರುತ್ತದೆ. ಈ ಗಿಡದ ಕಾಂಡದ ಅತಿ ತೆಳುವಾದ ತಿರುಳಿನ ಹಾಳೆಗಳನ್ನು ಒಂದರ ಮೇಲೊಂದು ಅಡ್ಡವಾಗಿ ಸೇರಿಸಿ ಮಾಡುತ್ತಾರೆ. 3ನೇ ಶತಮಾನದವರೆಗೂ ಈ ಪಾಪೈರಸ್ ಕಾಂಡದ ಹಾಳೆಯು ಪ್ರಮುಖವಾಗಿ ಉಪಯೋಗಿಸಲ್ಪಡುತ್ತಿತ್ತು.

2 ಎಲ್ಲ ಕ್ರೈಸ್ತ ಸಭೆಗಳಿಂದ ಸ್ವೀಕೃತಗೊಂಡು, ಅಧಿಕೃತವಾಗಿ ಮಾನ್ಯತೆ ಹೊಂದಿರುವಂತಹ ಪುಸ್ತಕಗಳಿಂದ ಕೂಡಿರುವ ಹೊಸ ಒಡಂಬಡಿಕೆಯೇ "ಕಾನಾನ್ ಹೊಸ ಒಡಂಬಡಿಕೆ"ಯಾಗಿದೆ.)

# ವ್ಯಾಖ್ಯಾನ

# ಮತ್ತಾಯ

## ಪರಿಚಯ

ಇದು ಮತ್ತಾಯನ ಸುವಾರ್ತೆಯೆಂದು ಕೆಲವೊಮ್ಮೆ ಕರೆಯಲ್ಪಡುತ್ತದೆ. ಯೇಸುಕ್ರಿಸ್ತನು ಈ ಲೋಕಕ್ಕೆ ಬಂದನು ಮತ್ತು ಪಾಪಿಯಾದ ಮಾನವನನ್ನು ರಕ್ಷಿಸಲು ತನ್ನ ಸ್ವಂತ ಪ್ರಾಣವನ್ನು ಕೊಟ್ಟನು ಮತ್ತು ಯಾರ್ಯಾರು ಆತನ ಮೇಲೆ ನಂಬಿಕೆಯಿಡುತ್ತಾರೋ ಅಂತಹವರು ಪಾಪ ಕ್ಷಮಾಪಣೆ ಹೊಂದುವರು ಮತ್ತು ದೇವರ ರಾಜ್ಯವನ್ನು ಪ್ರವೇಶಿಸುವರು ಎಂಬಂತಹ ಶುಭ ಸಮಾಚಾರವೇ ಸುವಾರ್ತೆ. ಯೋಹಾನ 3:16ರಲ್ಲಿ ಸುವಾರ್ತೆಯ ಸಾರಾಂಶವನ್ನು ಕೊಡಲಾಗಿದೆ. **ದೇವರು ಲೋಕದ ಮೇಲೆ ಎಷ್ಟು ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.**

ಈ ಸುವಾರ್ತೆಯ ಬರಹಗಾರನಾದ ಮತ್ತಾಯನು ಮೂಲತಃ ಸುಂಕವನ್ನು ವಸೂಲಿ ಮಾಡುವಂತಹವನಾಗಿದ್ದು, ಯೇಸುಕ್ರಿಸ್ತನ ಹನ್ನೆರಡು ಜನ ಶಿಷ್ಯರಲ್ಲಿ ಒಬ್ಬನಾಗುವುದಕ್ಕೆ ಆತನಿಂದ ಕರೆಯಲ್ಪಟ್ಟವನು (ಮತ್ತಾಯ 10:3; ಮಾರ್ಕ 1:18). ಹೊಸ ಒಡಂಬಡಿಕೆಯಲ್ಲಿ ಮತ್ತಾಯನ ಸುವಾರ್ತೆಯು ಪ್ರಥಮ ಪುಸ್ತಕವಾಗಿದ್ದರೂ ಸಹ ಮಾರ್ಕನ ಸುವಾರ್ತೆಯೇ ಮೊದಲು ಸಂಪೂರ್ಣವಾಗಿ ಬರೆಯಲ್ಪಟ್ಟಿತು ಎಂದು ಅನೇಕ ಸತ್ಯವೇದ ಪಂಡಿತರು ನಂಬುತ್ತಾರೆ (ಮಾರ್ಕ:ಪರಿಚಯ - ನೋಡಿರಿ). ಆದಾಗ್ಯೂ ಮಾರ್ಕನ ಸುವಾರ್ತೆಯು ಬರೆಯಲ್ಪಡುವುದಕ್ಕೆ ಮುಂಚಿತವಾಗಿಯೇ ಮತ್ತಾಯನು ಕ್ರಿಸ್ತನ ಜೀವನ ಚರಿತ್ರೆಯ ಸಾರಾಂಶವನ್ನೊಳಗೊಂಡ ವಿವರಣೆಯನ್ನು ಸರಿಸುಮಾರಾಗಿ (ನಿಖರವಲ್ಲದ ರೀತಿಯಲ್ಲಿ) ಅರಾಮೀಯಿಕ್[1] ಭಾಷೆಯಲ್ಲಿ ಬರೆದನು ಎಂದು ಅನೇಕ ಪಂಡಿತರು ಭಾವಿಸುತ್ತಾರೆ. ಕ್ರಿ.ಶ.55-65ರಲ್ಲಿ ಮಾರ್ಕನ ಸುವಾರ್ತೆಯು ಪ್ರಕಟವಾದ ಮೇಲೆ ಮತ್ತಾಯನು ತಾನು ಬರೆದ ಸುವಾರ್ತೆಯನ್ನು ನವಿಕರಿಸಿದನು ಮತ್ತು ಮಾರ್ಕನ ಸುವಾರ್ತೆಯಲ್ಲಿದ್ದಂತಹ ಹೆಚ್ಚಿನ ಸಂಗತಿಗಳನ್ನು ತನ್ನ ಸುವಾರ್ತೆಯಲ್ಲಿಸೇರಿಸಿದನು.ಹಾಗು ಐವತ್ತೈದು ವಚನಗಳು ಮತ್ತಾಯನ ಸುವಾರ್ತೆಯಲ್ಲಿ ಸೇರಿವೆ. ಈ ಸತ್ಯವೇದದ ಪಂಡಿತರ ಅಭಿಪ್ರಾಯಕ್ಕನುಸಾರವಾಗಿ ಅಂತಿಮವಾಗಿ ನವೀಕರಣಗೊಂಡ ಮತ್ತಾಯನ ಸುವಾರ್ತೆಯು ಸ್ವತಃ ಮತ್ತಾಯನಿಂದ ಇಲ್ಲವೇ ಆತನ ಸಹೋದ್ಯೋಗಿಯೊಬ್ಬರಿಂದ [2]ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟಿತು.

ಮತ್ತಾಯನ ಸುವಾರ್ತೆಯಲ್ಲಿರುವ 1050 ವಾಕ್ಯಗಳಲ್ಲಿರುವಂತಹ 500 ವಚನಗಳು ಮಾರ್ಕನ ಸುವಾರ್ತೆಯಲ್ಲಿಯೂ ಕಂಡುಬರುತ್ತವೆ ಮತ್ತು 250 ವಚನಗಳು ಲೂಕನ ಸುವಾರ್ತೆಯಲ್ಲಿ ಸಹ ಕಂಡುಬರುತ್ತವೆ. ಮಾರ್ಕನ ಸುವಾರ್ತೆಯ ಬರಹಗಳ ಸಹಿತ, ಯೇಸುಕ್ರಿಸ್ತನ ಸಂಗ್ರಹಿಸಲ್ಪಟ್ಟತಹ ಬೋಧನೆಗಳ ಸಾರಾಂಶವನ್ನು ಮುಂಚಿತವಾಗಿಯೇ ಮತ್ತಾಯ ಹಾಗೂ ಮಾರ್ಕನು ತಿಳಿದಿದ್ದರೆಂದು ಮತ್ತು ಇವುಗಳನ್ನು ತಾವು ಬರೆದಂತಹ ಸುವಾರ್ತೆಗಳಲ್ಲಿ ಸೇರಿಸಿದರೆಂದು ಸತ್ಯವೇದ ಪಂಡಿತರನೇಕರು ನಂಬುತ್ತಾರೆ.

ಸರಿಸುಮಾರು ಕ್ರಿ.ಶ. 70 ವರ್ಷದ ಮತ್ತು ಕ್ರಿ.ಶ. 80ನೇ ವರ್ಷದ ಮಧ್ಯಂತರ ಅವಧಿಯಲ್ಲಿ ಮತ್ತಾಯನು ಉತ್ತರ ಸಿರಿಯಾದಲ್ಲಿನ[3] ಅಂತಿಯೊಕ್ ಎಂಬ ಪಟ್ಟಣದಲ್ಲಿದ್ದುಕೊಂಡು ಉಳಿದವುಗಳನ್ನು ಸೇರಿಸಿ ಅಂತಿಮವಾಗಿ ಸುವಾರ್ತೆಯನ್ನು ಬರೆದನು ಎಂದು ಅನೇಕ ಪಂಡಿತರು ಅಭಿಪ್ರಾಯ ಪಡುತ್ತಾರೆ. ಸುವಾರ್ತೆಯು ಓದುವಂತಹ ಯಹೂದ್ಯನಿಗಾಗಿ ಬರೆಯಲ್ಪಟ್ಟಿತು. ಮತ್ತಾಯನು ಈ ಸುವಾರ್ತೆಯಲ್ಲಿ, ಹಳೆ ಒಡಂಬಡಿಕೆಯ ಪ್ರವಾದನೆಗಳು, ಯಹೂದ್ಯ ಧರ್ಮಶಾಸ್ತ್ರಗಳು, ಯೇಸುಕ್ರಿಸ್ತನ ಜನನ ಮತ್ತು ಜೀವಿತದಲ್ಲಿ ಹೇಗೆ ನೆರವೇರಿದವು ಎಂಬುದನ್ನು ಮತ್ತೆ ಮತ್ತೆ ತೋರಿಸುತ್ತಾನೆ.

ಮತ್ತಾಯನ ಸುವಾರ್ತೆಯ ಭಾಗಗಳ ಬಗ್ಗೆ ಇರುವಂತಹ ವ್ಯಾಖ್ಯಾನಗಳು ಮಾರ್ಕನ ಸುವಾರ್ತೆಯ ಭಾಗದಲ್ಲಿಯೂ ಸಹ ಇರುವುವು. ಕಾರಣ ಓದುಗರು ಮಾರ್ಕನ ಸುವಾರ್ತೆಯನ್ನು ಅವಲೋಕಿಸಬೇಕೆಂದು ಕೇಳಿಕೊಳ್ಳಲಾಗಿದೆ.

## ಹೊರ ನೋಟ

ಅ. ಯೇಸುಕ್ರಿಸ್ತನ ಜನನ ಮತ್ತು ಆತನ ಬಾಲ್ಯಾವಸ್ಥೆ (1:1-2:23)
   1. ಯೇಸುಕ್ರಿಸ್ತನ ವಂಶಾವಳಿ (1:1-17)
   2. ಯೇಸುವಿನ ಜನನ (1:18-25)
   3. ಜ್ಞಾನಿಗಳಿಂದ ಸಂದರ್ಶನ (2:1-12)
   4. ಈಜಿಪ್ಟ್ ದೇಶಕ್ಕೆ ಪಾರಾಗಿದ್ದು ಮತ್ತು ನಜರೇತಿಗೆ ಹಿಂತಿರಗಿದ್ದು (2:13-23).

ಆ. ಯೇಸು ಕ್ರಿಸ್ತನ ಸೇವೆಯ ಪ್ರಾರಂಭಕ್ಕೆ ಮೊದಲು (3:1-4:11)
   1. ಸ್ನಾನಿಕನಾದ ಯೋಹಾನನು ಮಾರ್ಗವನ್ನು ಸಿದ್ಧಪಡಿಸುವುದು (3:1-12)
   2. ಯೇಸು ಕ್ರಿಸ್ತನ ದೀಕ್ಷಾಸ್ನಾನ (3:13-17)
   3. ಯೇಸುವಿನ ಶೋಧನೆ. (4:1-11)

ಇ. ಯೇಸುಕ್ರಿಸ್ತನ ಸೇವೆ (4:12-25:46)
   1. ಯೇಸುವಿನ ಉಪದೇಶದ ಪ್ರಾರಂಭ (4:12-17)
   2. ಯೇಸು ಪ್ರಥಮ ಶಿಷ್ಯರನ್ನು ಕರೆದದ್ದು (4:18-25)
   3. ಪರ್ವತದ ಮೇಲಿನ ಪ್ರಸಂಗ (5:1-7:29)
   4. ಹತ್ತು ಅದ್ಭುತಗಳು (8:1-9:38)
   5. ಯೇಸುಕ್ರಿಸ್ತನು 12 ಶಿಷ್ಯರನ್ನು ಕಳುಹಿಸಿದ್ದು (10:1-42)
   6. ಯೇಸುಕ್ರಿಸ್ತನು ಸ್ನಾನಿಕನಾದ ಯೋಹಾನನಿಗೆ ಉತ್ತರಿಸಿದ್ದು ಮತ್ತು ಸಂಬಂಧಿಸಿದ ಬೋಧನೆಗಳು (11:1-30)
   7. ಫರಿಸಾಯರ ವಿರೋಧ (12:1-50)
   8. ದೇವರ ರಾಜ್ಯವನ್ನು ಕುರಿತ ಸಾಮ್ಯಗಳು (13:1-58)
   9. ಸ್ನಾನಿಕನಾದ ಯೋಹಾನನ ಶಿರಚ್ಛೇಧನದ ನಂತರ ಹಿಂದಕ್ಕೆ ಹೋದದ್ದು (14:1-36)
   10. ಫರಿಸಾಯರೊಂದಿಗೆ ಯೇಸುವಿನ ಘರ್ಷಣೆ (15:1-20)
   11. ಹೆಚ್ಚು ಅದ್ಭುತಗಳು (15:21-39)
   12. ಇನ್ನಷ್ಟು ಬೋಧನೆಗಳು (16:1-28)
   13. ಯೇಸು ಕ್ರಿಸ್ತನ ರೂಪಾಂತರ (17:1-23)
   14. ಯೇಸು ಕಪೆರ್ನೌಮಿನಲ್ಲಿದ್ದುದು (17:24-18:35)
   15. ಹೊಳೆಯ ಆಚೆ ದಡದಲ್ಲಿ (19:1-20:16)
   16. ಯೂದಾಯದ ಪ್ರಾಂತ್ಯದಲ್ಲಿ (20:17-34)
   17. ಯೆರೂಸಲೇಮಿನಲ್ಲಿ (21:1-22:46)
   18. ಯೇಸು ಪರಿಸಾಯರನ್ನು ಗದರಿಸಿದ್ದು (23:1-39)
   19. ಯುಗದ ಸಮಾಪ್ತಿಯ ಬಗ್ಗೆ ಬೋಧನೆಗಳು (24:1-25:46

ಈ. ಯೇಸು ಕ್ರಿಸ್ತನ ಅನುಕಂಪ (26:1-27:66)
   1. ಯೇಸು ಕ್ರಿಸ್ತನ ವಿರೋಧವಾಗಿ ಸಂಚು (26:1-16)
   2. ಕರ್ತನ ಕಡೇ ಭೋಜನ (26:17-30)
   3. ಗೆತ್ಸೇಮನೆ ತೋಟದಲ್ಲಿ (26:31-56)
   4. ಯೇಸುವಿನ ಬಂಧನ ಮತ್ತು ವಿಚಾರಣೆ (26:57-27:31)
   5. ಯೇಸುವಿನ ಮರಣ (27:32-56)
   6. ಯೇಸುವನ್ನು ಸಮಾಧಿ ಮಾಡಿದ್ದು (27:57-66)

ಉ. ಯೇಸುಕ್ರಿಸ್ತನ ಪುನರುತ್ಥಾನ (28:1-20)
   1. ಬರಿದಾದ ಸಮಾಧಿಯನ್ನು ಕಂಡದ್ದು (28:1-8)
   2. ಯೇಸು ಕ್ರಿಸ್ತನ ದರ್ಶನಗಳು (28:9-10)
   3. ಕಾವಲುಗಾರರ ವರದಿ (28:11-15)
   4. ಮಹಾ ಆಜ್ಞೆ (28:16-20)

# ಅಧ್ಯಾಯ - 1

## ಯೇಸುಕ್ರಿಸ್ತನ ವಂಶಾವಳಿ (1:1-17)

(ಲೂಕ 3:23-38)

1 ಈ ಸುವಾರ್ತೆಯನ್ನು ಬರೆದಂತಹ ಮತ್ತಾಯನು ಸ್ವತಃ ಯೆಹೂದ್ಯನಾಗಿದ್ದನು. ಯೇಸುವೇ ಮೆಸ್ಸಿಯನಾದ **"ಕ್ರಿಸ್ತನು"**[4] ಎಂಬುದನ್ನು ಯಹೂದಿಯರಿಗೆ ತೋರಿಸಿ ಕೊಡಬೇಕೆಂಬ ಒಂದೇ ಉದ್ದೇಶದಿಂದ ಈ ಸುವಾರ್ತೆಯನ್ನು ಬರೆದನು. ಈತನು ಕ್ರಿಸ್ತನನ್ನು ದಾವಿದನ ಮಗನು ಎಂದು ಕರೆಯುತ್ತಾನೆ. ಯಾಕೆಂದರೆ ಹಳೆ ಒಡಂಬಡಿಕೆಯಲ್ಲಿ ಬರೆದಂತಹ ಪ್ರವಾದನೆಗಳಿಗನುಸಾರವಾಗಿ ಯಹೂದ್ಯರ ಮಹಾರಾಜನಾದ ಮೇಸ್ಸಿಯನು ದಾವೀದನ ಸಂತಾನದಿಂದಲೇ ಬರಬೇಕು (2 ಸಮುವೇಲ 7:12-14; ಕೀರ್ತನೆಗಳು 89:3-4, 132:11; ಮಾರ್ಕ 10:47-48). ಆದುದರಿಂದಲೇ ಯೇಸುಕ್ರಿಸ್ತನು ಪ್ರಥಮ ಯೆಹೂದ್ಯನಾದ ಅಬ್ರಹಾಮನಿಂದ ಮತ್ತು ದಾವಿದನ ಸಂತಾನದಿಂದ ಬಂದವನಾಗಿದ್ದನು ಎಂಬುದನ್ನು ಸಾದರ ಪಡಿಸುವುದಕ್ಕಾಗಿಯೇ ಮತ್ತಾಯನು ಯೇಸುಕ್ರಿಸ್ತನ ವಂಶಾವಳಿಯ ವಿವರವನ್ನು ಕ್ರಮವಾಗಿ ಬರೆಯುತ್ತಾನೆ (ಆದಿಕಾಂಡ 12:1-3).

ಈ ವಂಶಾವಳಿಯಲ್ಲಿರುವಂತಹ ಎಲ್ಲಾ ಹೆಸರುಗಳು ಹಳೆ ಒಡಂಬಡಿಕೆಯಲ್ಲಿ ಕಾಣ ಬರುತ್ತವೆ (ರೂತಳು 4:18-22; 1 ಪೂರ್ವಕಾಲ ವೃತ್ತಾಂತ 2:1-15; 3-10-16). ಆದಾಗ್ಯೂ ಮತ್ತಾಯನು ಸಂಪೂರ್ಣವಾದ ವಂಶಾವಳಿಯ ವಿವರಣೆಯನ್ನು ಕೊಡುವುದಿಲ್ಲ. ಅಬ್ರಹಾಮನಿಂದ ದಾವಿದನವರೆಗೆ ಇರುವ ಹೆಸರುಗಳಲ್ಲಿ (2ನೇ ವಚನ (ವಚನ 6) ಗಳಲ್ಲಿ,ಮೂರು ವ್ಯಕ್ತಿಗಳ ಹೆಸರುಗಳು ತಪ್ಪಿ ಹೋಗಿವೆ. ಜೊರಾಮನಿಂದ ಹಿಡಿದು ಉಜ್ಜಯಯನವರೆಗಿನ ವ್ಯಕ್ತಿಗಳ (8ನೇ ವಚನ) (1 ಪೂರ್ವಕಾಲ 3:11-12) ಮಧ್ಯದಲ್ಲಿರುವಂತಹ ಮೂರು ವ್ಯಕ್ತಿಗಳ ಹೆಸರುಗಳು ತಪ್ಪಿಹೋಗಿವೆ.

2-17 ಮತ್ತಾಯನು ಉಲ್ಲೇಖಿಸಿದ ವಂಶಾವಳಿಯನ್ನು ಮತ್ತು ಲೂಕನು ಬರೆದಂತಹ ವಂಶಾವಳಿಯನ್ನು (ಲೂಕ 3:23-38) ಹೊಂದಾಣಿಸಿ ನೋಡಿದಾಗ ಎರಡು ಪ್ರಮುಖವಾದ ವ್ಯತ್ಯಾಸಗಳನ್ನು ಕಾಣುತ್ತೇವೆ. ಮೊದಲನೆಯದು ಅಬ್ರಹಾಮನಿಗಿಂತ ಹಿಂದೆ ಹೋಗಿ ಭೂಮಿಯ ಮೇಲೆ ಸೃಷ್ಟಿಯಾದ ಪ್ರಥಮ ಮನುಷ್ಯನಾದ[5] ಆದಾಮನವರೆಗೂ ವಂಶಾವಳಿಯ ವಿವರಣೆಯು ಹೋಗುತ್ತದೆ. ಲೂಕನು ಯಹೂದ್ಯನಾಗಿರಲಿಲ್ಲ. ಯೇಸುಕ್ರಿಸ್ತನು ಯಹೂದ್ಯರಿಗೆ ಮಾತ್ರವೇ ಮೇಸ್ಸಿಯನಾಗಿರದೆ ಇಡೀ ಲೋಕದ ರಕ್ಷಕನು ಮತ್ತು ಯಹೂದ್ಯರಿಗೂ ಮತ್ತು ಅನ್ಯರಿಗೂ ಸಹ ರಕ್ಷಕನೂ ಆಗಿದ್ದಾನೆ ಎಂಬುದನ್ನು ತೋರಿಸುವಂತಹ ಉದ್ದೇಶವು ಲೂಕನದಾಗಿತ್ತು. ಈ ಒಂದು ಕಾರಣಕ್ಕಾಗಿಯೇ ಲೂಕನು ವಂಶಾವಳಿಯ ವಿವರಣೆಯನ್ನು ಆದಾಮನಿಂದ ಪ್ರಾರಂಭಿಸುತ್ತಾನೆ. ಎರಡನೆಯದು ಲೂಕನ ಸುವಾರ್ತೆಯಲ್ಲಿರುವ ದಾವಿದನಿಂದ ಯೇಸುಕ್ರಿಸ್ತನವರೆಗಿನ ವಂಶಾವಳಿಯ ವಿವರಣೆಯು ಮತ್ತಾಯನ ವಂಶಾವಳಿಯ ದಾಖಲೆಗಿಂತ ವ್ಯತ್ಯಾಸವುಳ್ಳದ್ದಾಗಿದೆ. (12ನೇ ವಚನ) ಶೆಯಲ್ತಿಯೇಲ ಮತ್ತು ಜೇರುಬ್ಬಾಬೆಲ ಎಂಬ ಈ ಎರಡು ಹೆಸರುಗಳು ಮಾತ್ರ ಎರಡು ಸುವಾರ್ತೆಗಳಲ್ಲಿಯು ಒಂದೇ ರೀತಿಯಲ್ಲಿವೆ. ಈ ಎರಡರಲ್ಲಿ ಕಂಡು ಬರುವ ಸಾಮಾನ್ಯ ವ್ಯತ್ಯಾಸವೇನೆಂದರೆ ನ್ಯಾಯಸಮ್ಮತವಾಗಿ ಯೂಸೇಫನು ಅಂದರೆ ಧರ್ಮಶಾಸ್ತ್ರದ ಕಾನೂನಿಗನುಸಾರವಾಗಿ ಮರಿಯಳನ್ನು ಮದುವೆಯಾದ ನಿಮಿತ್ತವಾಗಿ,, ತಂದೆಯಾದ ಯೂಸೇಫನ ನ್ಯಾಯ ಸಮ್ಮತವಾದ ವಂಶಾವಳಿಯ ದಾಖಲೆಯನ್ನು ಮತ್ತಾಯನು ಬರೆಯುತ್ತಾನೆ. ಆದರೆ ಶಾರೀರಿಕವಾಗಿ ಯೂಸೇಫನು ಯೇಸುಕ್ರಿಸ್ತನಿಗೆ ನಿಜವಾದ ತಂದೆಯಾಗಿರಲಿಲ್ಲ (ಪವಿತ್ರಾತ್ಮನೇ ಯೇಸುಕ್ರಿಸ್ತನ ನಿಜವಾದ ತಂದೆ). ಈ ಕಾರಣದಿಂದಲೇ ಲೂಕನು ವಂಶಾವಳಿಯನ್ನು ದಾಖಲಿಸುವಾಗ ವಂಶಾವಳಿಯಲ್ಲಿ ಯೂಸೇಫನು ಎಂಬುದಕ್ಕೆ ಬದಲಾಗಿ ಯೇಸುವಿನ ತಾಯಿಯಾದ ಮರಿಯಳು ಎಂದು ಬರೆಯುತ್ತಾನೆ. ಹೀಗೆ ಇದು, ಮತ್ತಾಯನು ಬರೆದ ವಂಶಾವಳಿಯ ದಾಖಲೆಗಿಂತ ವ್ಯತ್ಯಾಸವಾಗಿದೆ. ಆದರೆ ಒಂದು ಆಶ್ಚರ್ಯಕರ ಸಂಗತಿಯೇನೆಂದರೆ ಯೂಸೇಫನು ಮತ್ತು ಮರಿಯಳು ಇವರಿಬ್ಬರು ದಾವಿದ[6] ರಾಜನ ಸಂತಾನದಿಂದ ಬಂದದವರಾಗಿದ್ದಾರೆ. ಆದುದರಿಂದ ಮತ್ತಾಯ ಮತ್ತು ಲೂಕ ರಿಬ್ಬರು ತಮ್ಮ ತಮ್ಮದೇ ಆದಂತಹ ಬೇರೆ ಬೇರೆ ವಿಧಾನಗಳಿಂದ ಯೇಸುಕ್ರಿಸ್ತನು ದಾವಿದನ ಕುಮಾರನಾದ ಮೆಸ್ಸಿಯನು[7] ಎಂಬುದನ್ನು ದೃಢಪಡಿಸುತ್ತಾರೆ.**ಬಾಬೇಲ್‌ಗೆ ಸೆರೆಯಾದದ್ದು** (ಈಗಿನ ಇರಾಕ್) ಕ್ರಿ.ಪೂ. 587ರಲ್ಲಿ. ಯೆರುಸಲೇಮ್ ಮತ್ತು ಯೂದಾಯದ ಸುತ್ತಮುತ್ತಲಿನ ಎಲ್ಲಾ ಪ್ರಾಂತ್ಯಗಳು ಬ್ಯಾಬಿಲೋನಿಯನ್ನರಿಂದ ಸೋಲಿಸಲ್ಪಟ್ಟ ಸಂದರ್ಭದಲ್ಲಿ ಯಹೂದ್ಯರು ಸೆರೆಯಾದಾಗ; ಬ್ಯಾಬಿಲೋನಿಗೆ ಒಯ್ಯಲ್ಪಟ್ಟರು ಎಂಬುದನ್ನು 11 ಮತ್ತು 17ನೇ ವಚನದಲ್ಲಿ ತಿಳಿಸಲಾಗಿದೆ (2ಅರಸುಗಳು 25:1-12). ಈ ಘಟನೆಯಿಂದ ದಾವಿದನ ವಂಶದವರ ಆಡಳಿತವು ಮತ್ತು ದಾವಿದನ ಸಾಮ್ರಾಜ್ಯವು ಅಂತ್ಯವಾಯಿತು

## ಯೇಸುಕ್ರಿಸ್ತನ ಜನನ (1:18-25)

18 . ಸತ್ಯವೇದದಲ್ಲಿ ತಿಳಿಸುವಂತೆ ದೇವರ ಅಸಾಧಾರಣ ಶಕ್ತಿಯ ಪ್ರಭಾವದ ನಿಮಿತ್ತದಿಂದ ಲೋಕದ ತಂದೆಯಿಂದ ಜನಿಸಿದ, ಸ್ನಾನಿಕನಾದ ಯೋಹಾನ ಮತ್ತು ಇಸಾಕರಿಗೆ ಶಾರೀರಿಕ ತಂದೆಗಳಿದ್ದಂತೆ ಯೇಸುಕ್ರಿಸ್ತನಿಗೆ ಶಾರೀರಿಕವಾದ ತಂದೆಯು ಇರಲಿಲ್ಲ (ಆದಿಕಾಂಡ 18:10-14; ಲೂಕ 1:5-7, 11-13, 18-19). ಅಂದರೆ ಯೇಸುವಿನ ತಾಯಿಯಾದ ಮರಿಯಳು, ಕ್ರಿಸ್ತನ ಜನನಕ್ಕಿಂತ ಮುಂಚಿನಿಂದಲೂ ಪುರುಷನ ಸಂಪರ್ಕವನ್ನು ಹೊಂದಿರದೆ, ಶುದ್ಧ ಕನ್ನಿಕೆಯಾಗಿಯೇ ಇದ್ದಳು. ಪವಿತ್ರಾತ್ಮನು ಯೇಸುವಿನ ತಂದೆಯಾಗಿದ್ದನು (ಗಮನಿಸಿ - ಲೂಕ 1:26-35 ಮತ್ತು ವ್ಯಾಖ್ಯಾನ )

**19** ಯೂಸೇಫನ ದೃಷ್ಟಿಯಲ್ಲಿ ಮರಿಯಳು ಶೀಲಗೆಟ್ಟವಳಾಗಿದ್ದಳು. ಯಹೂದ್ಯರ ಶಿಷ್ಟಾಚಾರದ ಪ್ರಕಾರ, ಮದುವೆಯಾಗಲು ನಿಶ್ಚಿತಾರ್ಥವಾಗಿದ್ದು ಮದುವೆಯಾಗುವ ವ್ಯಕ್ತಿಗೆ ನಂಬಿಗಸ್ತ/ಳು ಆಗಿರದಿದ್ದರೆ ಅಂತಹವರು ವ್ಯಭಿಚಾರಿಗಳೆಂದು ಪರಿಗಣಿಸಲ್ಪಡುವರು. ಮದುವೆಯಾಗುವ ಒಪ್ಪಂದವು ಮುರಿದುಬಿದ್ದ ಸಂದರ್ಭದಲ್ಲಿ ನಿಶ್ಚಿತಾರ್ಥವನ್ನು ರದ್ದುಪಡಿಸುವುದಕ್ಕೋಸ್ಕರ ಅನುಮತಿಯನ್ನು ಪಡೆಯುವ ಅಗತ್ಯವಿತ್ತು. ಇಬ್ಬರು ಸಾಕ್ಷಿಗಳ ಸಮ್ಮುಖದಲ್ಲಿ ಮರಿಯಳಿಂದ ಬಿಡುಗಡೆಯಾಗಲು ಯೋಜಿಸಿದನು. ಯೂಸೇಫನು ಸಾತ್ವಿಕನು ಮತ್ತು ನೀತಿವಂತನಾಗಿದ್ದರಿಂದ ಮರಿಯಳನ್ನು ಬಹಿರಂಗವಾಗಿ ಅವಳನ್ನುಅವಮಾನ ಪಡಿಸಲು ಇಚ್ಛಿಸಲಿಲ್ಲ.

**20** ಕರ್ತನ ದೂತನು ಯೂಸೇಫನಿಗೆ ಕನಸಿನಲ್ಲಿ ಕಾಣಿಸಿಕೊಂಡು, ಮರಿಯಳು ಮತ್ತೊಬ್ಬನೊಂದಿಗೆ ವ್ಯಭಿಚಾರ ಮಾಡಲಿಲ್ಲ. ಆದರೆ ದೇವರಾತ್ಮನಿಂದ ಗರ್ಭ ಧರಿಸಿದ್ದು ಸ್ವತಃ ಆತನೇ ಆ ಮಗುವಿನ ತಂದೆಯಾಗಿದ್ದಾನೆ ಎಂದು ಹೇಳಿದನು.

**21** ದೂತನು ಯೂಸೇಫನಿಗೆ ನೀನು ಆ ಮಗುವಿಗೆ ಯೇಸು ಎಂದು ಹೆಸರಿಡಬೇಕು ಎಂದು ಹೇಳಿದನು. "ಯೇಸು" ಎಂಬುದು ಗ್ರೀಕ್ ಭಾಷೆಯ ಯೆಹೊಸುವ ಎಂಬ ಹೆಸರಿನಿಂದ ಬಂದಿದೆ. ಯೇಸು ಎಂಬ ಈ ಹೆಸರಿನ ಅರ್ಥ "ಕರ್ತನು ರಕ್ಷಿಸುವನು" ಎಂಬುದೇ. ಯೇಸುವು ರಕ್ಷಕನಾಗಿದ್ದಾನೆ. ಏಕೆಂದರೆ ಆತನು ತನ್ನ ಜನರನ್ನು ಅವರ ಪಾಪಗಳಿಂದ ರಕ್ಷಿಸುವನು. ಆತನು ಅವರನ್ನು ಪಾಪದ ಶಿಕ್ಷೆಯಾದಂತಹ ಶಾಶ್ವತ ಮರಣದಿಂದ ತಪ್ಪಿಸಿ ಕಾಪಾಡುವನು (ಯೋಹಾನ 3:16-17; ರೋಮ 6:23 ಮತ್ತು ವ್ಯಾಖ್ಯಾನವನ್ನು ನೋಡಿರಿ). ಮತ್ತು ಪವಿತ್ರಾತ್ಮನ ಕಾರ್ಯದ ಮುಖಾಂತರ ಅವರನ್ನು ಪಾಪದ ಶಕ್ತಿಯ ಬಂಧನದಿಂದ ರಕ್ಷಿಸುವನು (ರೋಮ 8:1-2 ಮತ್ತು ವ್ಯಾಖ್ಯಾನವನ್ನು ನೋಡಿರಿ).

**22-23** ಪ್ರವಾದಿಯಾದ ಯೆಶಾಯನು ಹೇಳಿದ ಪ್ರವಾದನೆಗಳು ಯೇಸು ಕ್ರಿಸ್ತನ ಜನನದಿಂದ ನೆರವೇರಿಸಲ್ಪಟ್ಟವು ಎಂಬುದನ್ನು ತೋರಿಸುವುದಕ್ಕಾಗಿ ಮತ್ತಾಯನು (ಯೆಶಾಯ 7:14) ವಚನವನ್ನು ಉಲ್ಲೇಖಿಸುತ್ತಾನೆ. ಯೇಸುವು ಇಮ್ಮಾನುವೇಲ್ ಎಂಬ ಹೆಸರಿನಿಂದ ಕರೆಯಲ್ಪಟ್ಟಿದ್ದಾನೆ ಅಥವಾ "ದೇವರು ನಮ್ಮ ಸಂಗಡ ಇದ್ದಾನೆ" ಎಂಬುದೇ ಇದರರ್ಥ. ಯಾಕೆಂದರೆ ದೇವರು ಯೇಸುಕ್ರಿಸ್ತನಲ್ಲಿ ಈ ಭೂಮಿಗೆ ಇಳಿದು ಬಂದು ತನ್ನ ಜನರ ಮಧ್ಯದಲ್ಲಿ ವಾಸಿಸಿದನು ಮತ್ತು ಯೇಸುಕ್ರಿಸ್ತನ ಮೂಲಕ ದೇವರು ಸದಾಕಾಲವು ನಮ್ಮಲ್ಲಿರುತ್ತಾನೆ (ಮತ್ತಾಯ 28:20).

**24-25** ಯೇಸುಕ್ರಿಸ್ತನ ನಂತರ, ಯೂಸೇಫ ಮತ್ತು ಮರಿಯಳು ಮತ್ತೆ ಬೇರೆ ಮಕ್ಕಳನ್ನು ಪಡೆದರು ಎಂದು ಅನೇಕ ಕ್ರೈಸ್ತರು ನಂಬುತ್ತಾರೆ (ಮಾರ್ಕ 6:3 ಮತ್ತು ಯೋಹಾನ 7:3-5ರಲ್ಲಿ ಉಲ್ಲೇಖಿಸಲ್ಪಟ್ಟಂತಹ ಯೇಸುಕ್ರಿಸ್ತನ ಸಹೋದರರು ಮತ್ತು ಸಹೋದರಿಯರು ಬಹುಶಃ ಮರಿಯಳ ಮಕ್ಕಳಾಗಿರಬಹುದು. ಹಾಗೆಯೇ ಮರಿಯಳು ತನ್ನ ಕನ್ಯತ್ವವನ್ನು ಕಾಪಾಡಿಕೊಂಡು ಬಂದಳು ಎಂದೇ ಇನ್ನಿತರ ಕ್ರೈಸ್ತರು ನಂಬುತ್ತಾರೆ. ಮೇಲೆ ಉಲ್ಲೇಖಿಸಲ್ಪಟ್ಟಂತಹ ಸಹೋದರರು ಮತ್ತು ಸಹೋದರಿಯರು ಯೂಸೇಫನ ಮದುವೆಯಾದ ಮೊದಲ ಹೆಂಡತಿಯಿಂದ ಬಂದವರು ಎಂದು ಇವರು ಹೇಳುತ್ತಾರೆ.

ಯೇಸುವಿನ ಜನನದ ವಿಷಯದಲ್ಲಿ ಹೆಚ್ಚಾಗಿ ತಿಳಿದುಕೊಳ್ಳಲು ಲೂಕ 2:17ನ್ನು ಮತ್ತು ವ್ಯಾಖ್ಯಾನವನ್ನು ನೋಡಿರಿ.

---

# ಅಧ್ಯಾಯ - 2

## ಜ್ಞಾನಿಗಳಿಂದ ಸಂದರ್ಶನ (2:1-12)

**1** ಬೆತ್ಲೆಹೇಮ್ ಚಿಕ್ಕ ಪಟ್ಟಣವಾಗಿದ್ದು ಯೆರುಸಲೇಮ್‌ನಿಂದ[8] ಸುಮಾರು 5 ಮೈಲಿ ದೂರದ ಯೂದಾಯ (ಇಸ್ರಾಯೇಲ್‌ನ ದಕ್ಷಿಣ ಭಾಗ) ಪ್ರಾಂತ್ಯದಲ್ಲಿತ್ತು. ಇದು ರಾಜನಾದ ದಾವೀದನು ಜನಿಸಿದ ಪಟ್ಟಣವಾಗಿತ್ತು (1 ಸಮುವೇಲ 16:1). ಹಾಗೆಯೇ ಗಲಿಲಾಯ ಪ್ರಾಂತ್ಯದ ಉತ್ತರದಲ್ಲಿದ್ದ ನಜರೇತ್ ಎಂಬ ಪಟ್ಟಣದಲ್ಲಿ ಯೂಸೇಫ ಮತ್ತು ಮರಿಯಳು ವಾಸವಾಗಿದ್ದು ಅವರು ರಾಜನಾದ ದಾವೀದನ ವಂಶದವರಾಗಿದ್ದರಿಂದ, ಜನಗಣತಿ (ಖಾನೇಸುಮಾರಿ)ಗಾಗಿ ತಮ್ಮ ಹೆಸರುಗಳನ್ನು ನೊಂದಾಯಿಸುವುದಕ್ಕಾಗಿ ಬೆತ್ಲೆಹೇಮಿಗೆ ಬಂದರು (ನೋಡಿರಿ, ಲೂಕ 2:4). ರೋಮ್ ಸಾಮ್ರಾಜ್ಯದ ಕೈಗೊಂಬೆಯಾಗಿದ್ದ ಹರೋದನು "ಯೆಹೂದ್ಯರ ಅರಸನು" ಎಂಬ ಹೆಸರಿನಿಂದ ರಾಜ್ಯಭಾರವನ್ನು ಮಾಡುತ್ತಿದ್ದಂತಹ ಸಮಯದಲ್ಲಿ ಈ ಜನಗಣತಿಯು ನಡೆಯಿತು. ಹೆರೋದನ ರಾಜ್ಯವು ರೋಮ್[9] ಸಾಮ್ರಾಜ್ಯದ ಭಾಗವಾಗಿತ್ತು ಮತ್ತು ರಾಜಧಾನಿಯಾದ ಯೆರುಸಲೇಮ್ ನಗರ ಮತ್ತು ಯೂದಾಯ ಪ್ರಾಂತ್ಯವು ಇದಕ್ಕೆ ಒಳಪಟ್ಟಿದ್ದವು (ನೋಡಿರಿ ಲೂಕ 1:5). ಹೆರೋದನು ಕ್ರಿ.ಪೂ. 40 ರಿಂದ ಕ್ರಿ.ಶ. 4ನೇಯ ವರ್ಷದವರೆಗೆ ಆಳಿದನು. ಹೆರೋದನ ಕಡೆಯ ಆಳ್ವಿಕೆಯ ವರ್ಷವಾದ ಕ್ರಿ.ಶ. 4ನೇಯ ವರ್ಷದಲ್ಲಿ ಯೇಸುಕ್ರಿಸ್ತನು ಜನಿಸಿದನು ಎಂದು ಆಧುನಿಕಕಾಲದ ಪಂಡಿತರು ನಂಬುತ್ತಾರೆ.

**2** ಯೇಸುವಿನ ಜನನವಾದ ಸಂದರ್ಭದಲ್ಲಿ ಪೂರ್ವದೇಶದ ಜ್ಞಾನಿಗಳು ಅಥವಾ ಶಾಸ್ತ್ರಜ್ಞರು, ಅಸಮಾನ್ಯವಾದ, ಅದ್ಭುತವಾಗಿ ಹೊಳೆಯುವ ಒಂದು ನಕ್ಷತ್ರದ ಉದಯವನ್ನು ಕಂಡರು. ಇದು ಒಬ್ಬ ಮಹಾರಾಜನು ಜನಿಸಿದ್ದರ ಸೂಚನೆಯೆಂದು ಅರ್ಥ ಮಾಡಿಕೊಂಡು ಯಹೂದ್ಯರು ತಮ್ಮ ರಾಜನಾದ ಮೆಸ್ಸಿಯನ ನಿರೀಕ್ಷೆಯಲ್ಲಿರುವವರು ಎಂಬುದನ್ನು ಈ ಶಾಸ್ತ್ರಜ್ಞರು ತಿಳಿದವರಾಗಿದ್ದರಿಂದ ಮೆಸ್ಸಿಯನು ಈಗಾಗಲೇ ಯಹೂದ್ಯರ ರಾಜಧಾನಿಯಾದ ಯೆರುಸಲೇಮಿನಲ್ಲಿ ಜನಿಸಿರುವನು ಎಂದು ಭಾವಿಸಿ ಯೆರುಸಲೇಮ್ ನಗರಕ್ಕೆ ಪ್ರಯಾಣಿಸಿ ಬಂದು ಸೇರಿದರು. ಯಹೂದ್ಯರ ಅರಸನಾಗಿ ಎಲ್ಲಿದ್ದಾನೆ? ಎಂದು ಕೇಳಿದರು..

**3** ಸ್ವತಃ ತನ್ನ ಹತ್ತಿರದಲ್ಲಿಯೇ ಮತ್ತೊಬ್ಬ ಯಹೂದ್ಯರ ಅರಸನು ಹುಟ್ಟಿದ್ದಕ್ಕೆ ಹಿರೋದನಿಗೆ ಸಂತೋಷವಾಗಲಿಲ್ಲ
ಸ್ವತಃ ತನ್ನ ಹತ್ತಿರದಲ್ಲಿಯೇ ಮತ್ತೊಬ್ಬ ಯಹೂದ್ಯರ ಅರಸನು ಹುಟ್ಟಿದ್ದಕ್ಕೆ ಹೆರೋದನಿಗೆ ಸಂತೋಷವಾಗಲಿಲ್ಲ. ಯೇಸುಕ್ರಿಸ್ತನು

ಹುಟ್ಟು ರಾಜನಾಗಿದ್ದು, ದಾವೀದನ ರಾಜ್ಯವನ್ನು ಪಡೆಯುವನು ಎಂದು ಮತ್ತಾಯನು ಪುನರುಚ್ಚರಿಸುತ್ತಾ ನಮ್ಮನ್ನು ನೆನಪಿಸುತ್ತಾನೆ. ಯೇಸು ಕ್ರಿಸ್ತನು ಆತ್ಮಿಕ ರಾಜ್ಯವನ್ನು ಸ್ಥಾಪಿಸಬೇಕೆಂದು ಬಂದನು. ಆದರೆ ಯಹೂದ್ಯರು ಆತನು ಈ ಲೋಕದ ರಾಜ್ಯವನ್ನು ಸ್ಥಾಪಿಸುವನು ಎಂದು ಭಾವಿಸಿದರು.

**4-6** ಮಲಾಕಿಯನ ಪ್ರವಾದನೆಗನುಸಾರವಾಗಿ (ಮೀಕ 5:2) "ಕ್ರಿಸ್ತ" ಅಥವಾ "ಮೇಸ್ಸಿಯ"ನಾದ ಈತನು [10]ಬೆತ್ಲೆಹೇಮ್ ಪಟ್ಟಣದಲ್ಲಿ ಹುಟ್ಟಬೇಕಾಗಿತ್ತು (ಯೋಹಾನ 7:42). ಇಲ್ಲಿ 6ನೇ ವಚನದಲ್ಲಿ ಪ್ರವಾದಿಯಾದ ಮೀಕನ ಮುಖಾಂತರವಾಗಿ ದೇವರು ಕ್ರಿಸ್ತನು **"ಇಸ್ರಾಯೇಲೆಂಬ ನನ್ನ ಜನಾಂಗಕ್ಕೆ ಕುರುಬನಾಗಿರುವನು"** ಎಂದು ಹೇಳುವನು (ಯೋಹಾನ 10:11; 1 ಪೇತ್ರ 5:4). ಇಸ್ರಾಯೇಲ್ ಎಂಬುದು ಯಹೂದ್ಯ ಜನಾಂಗದ ಹೆಸರು.

**7-8** ನಾನು ಕೂಡ ಹೋಗುವೆನು ಮತ್ತು ಆತನನ್ನು ಆರಾಧಿಸುವೆನು ಕಾರಣ ಯೇಸುವು ಹುಟ್ಟಿದ ಸ್ಥಳವನ್ನು ಕಂಡು ನನಗೂ ಸಹ ತಿಳಿಸಿರಿ ಎಂದುಹೆರೋದನು ಜೋಯಿಸರನ್ನು ಕೇಳಿದನು. ಆದರೆ ಖಂಡಿತವಾಗಿ ಹೋಗಿ ಆತನನ್ನು ನಿಜವಾಗಿ ಕೊಲ್ಲಬೇಕೆಂದಿದ್ದನು.

**9-12** ಆಶ್ಚರ್ಯಕರವಾದ ನಕ್ಷತ್ರವು ಜೋಯಿಸರನ್ನು ಕ್ರಿಸ್ತನಿದ್ದ ಸ್ಥಳಕ್ಕೆ ಸರಿಯಾಗಿ ನಡೆಸಿತು. "ಯಹೂದ್ಯರ ಅರಸ"ನು ಇಂತಹ ದೀನತೆಯ ಪರಿಸ್ಥಿತಿಯಲ್ಲಿ ಹುಟ್ಟಿದ್ದನ್ನು ಜೋಯಿಸರು ನೋಡಿದಾಗ ಖಂಡಿತವಾಗಿ ಅವರು ಆಶ್ಚರ್ಯಪಟ್ಟಿದ್ದರಲ್ಲಿ ಯಾವ ಸಂದೇಹವೂ ಇಲ್ಲ.

## ಪಾರಾಗಿ ಈಜಿಪ್ಟ್‌ಗೆ ಹೋದದ್ದು (2:13-23)

**13-15** ಯೂಸೇಫನಿಗೆ ತನ್ನ ಹೆಂಡತಿಯನ್ನು ಮತ್ತು ಮಗುವನ್ನು ಕರೆದುಕೊಂಡು ಈಜಿಪ್ಟ್ ದೇಶಕ್ಕೆ ಓಡಿಹೋಗಬೇಕೆಂದು ದೇವದೂತನು ಹೇಳಿದನು. ಹಳೆ ಒಡಂಬಡಿಕೆಯ ವಿಮೋಚನ ಕಾಂಡದಲ್ಲಿ ದಾಖಲಿಸಿರುವಂತೆ ಒಂದು ಕಾಲದಲ್ಲಿ ಈ ಈಜಿಪ್ಟ್ ದೇಶವು ಯಹೂದ್ಯರಿಗೆ ಹಿಂಸೆಯ ಮತ್ತು ಸೆರೆಯ ಸ್ಥಳವಾಗಿತ್ತು. ಆದರೆ ಈಗ ಇದು ಯೇಸುವಿಗೆ ಭದ್ರತೆಯನ್ನೊದಗಿಸುವ ಸ್ಥಳವಾಯಿತು. ಹೀಗೆ 1400 ವರ್ಷಗಳ ಹಿಂದೆ ಮೋಶೆಯು ಇಸ್ರಾಯೇಲರನ್ನು ಬಂಧನದಿಂದ ಬಿಡಿಸಿ ಈಜಿಪ್ಟ್‌ನಿಂದ ಹೊರತಂದನೋ ಹಾಗೆಯೇ ಕ್ರಿಸ್ತನು ತನ್ನ ಜನರನ್ನು ಪಾಪದ ಬಂಧನದಿಂದ ಬಿಡಿಸುವನು. ದೇವರು ವಾಗ್ದಾನ ಮಾಡಿದಂತಹ ಇಸ್ರಾಯೇಲ್ ದೇಶಕ್ಕೆ ಯಹೂದ್ಯರನ್ನು ಮೋಶೆಯು ನಡೆಸಿದಂತೆಯೇ ಯೇಸುವು ತನ್ನ ಜನರನ್ನು ದೇವರ ರಾಜ್ಯವಾದ ಸ್ವರ್ಗಕ್ಕೆ ನಡಿಸುವನು. 15ನೇ ವಚನದಲ್ಲಿ ಪ್ರವಾದಿಯಾದ ಹೋಶೆಯನು ಹೇಳಿದಂತಹ, **ನನ್ನ ಮಗನನ್ನು ಐಗುಪ್ತದೇಶದೊಳಗಿನಿಂದ ಕರೆದನು** ಎಂಬ ಪ್ರವಾದನೆಯನ್ನು ಮತ್ತಾಯನು ಉಲ್ಲೇಖಿಸುತ್ತಾನೆ (ಹೋಶೆಯ 11:1). ಹೋಶಯನು ಮಗನು ಎಂದು "ಯಹೂದ್ಯ"ರನ್ನು, ಇಸ್ರಾಯೇಲರ ಜನಾಂಗವನ್ನು ಉದ್ದೇಶಿಸಿ ಹೇಳುತ್ತಾನೆ. ವಿಮೋಚನಾಕಾಂಡ 4:22ರಲ್ಲಿ ಇಸ್ರಾಯೇಲನ್ನು **ದೇವರ ಚೊಚ್ಚಲು ಮಗನು** ಎಂದು ಕರೆಯಲ್ಪಟ್ಟಿದೆ. ಯೇಸುಕ್ರಿಸ್ತನು ಇಸ್ರಾಯೇಲ್ ಜನಾಂಗದ ಪ್ರತಿನಿಧಿಯಾಗಿದ್ದಾನೆ ಎಂದು ಮತ್ತಾಯನು ಅಭಿಪ್ರಾಯ ಪಡುತ್ತಾನೆ. ಈ ಕಾರಣದಿಂದ ಹೋಶೆಯನು ಹೇಳಿದಂತಹ ಮಾತುಗಳು ಕ್ರಿಸ್ತನಿಗೆ ಅನ್ವಯಿಸುತ್ತವೆ ಎಂದು ಹೇಳುತ್ತಾನೆ.

**16-18** ಜೋಯಿಸರು ಯಾವಾಗ ನಕ್ಷತ್ರವನ್ನು ನೋಡಿದರು ಎಂಬುದನ್ನು ಹೆರೋದನು ಅವರಿಂದ ತಿಳಿದುಕೊಳ್ಳುತ್ತಾನೆ (7ನೇ ವಚನ). ಆದುದರಿಂದ ಕೆಲವು ತಿಂಗಳುಗಳು ಕಳೆದರು, ಆತನ ವಿನಂತಿಯಂತೆ ಜೋಯಿಸರು ಹಿಂದಿರುಗಿ ಬಾರದಿದ್ದಾಗ, ಹೆರೋದನು ಬೆತ್ಲೆಹೇಮ್ ಸುತ್ತಲಿನ ಎಲ್ಲಾ ಸ್ಥಳಗಳಲ್ಲಿರುವಂತಹ 2 ವರ್ಷದೊಳಗಿನ ಎಲ್ಲಾ ಗಂಡು ಮಕ್ಕಳನ್ನು ಕೊಲ್ಲಬೇಕೆಂದು ಆಜ್ಞೆಯನ್ನು ಹೊರಡಿಸುತ್ತಾನೆ. ಈ ರೀತಿ ಮಾಡುವುದರಿಂದ ಖಂಡಿತವಾಗಿ ಸತ್ತಂತಹ ಮಕ್ಕಳಲ್ಲಿ ಕ್ರಿಸ್ತನು ಕೂಡ ಒಬ್ಬನಾಗಿರುತ್ತಾನೆ ಎಂದು ಹೆರೋದನು ಯೋಚಿಸುತ್ತಾನೆ.

ಯಾಕೋಬನ 12 ಮಕ್ಕಳಲ್ಲಿ ಇಬ್ಬರಾದ ಯೂಸೇಫ ಮತ್ತು ಬೆನ್ಯಾಮೀನರು ಯಾಕೋಬನ ಹೆಂಡತಿಯಾದ ರಾಹೇಲಳ ಮಕ್ಕಳು ಎಂದು ಯರೇಮಿಯ 31:15ರಲ್ಲಿರುವುದನ್ನು ಮತ್ತಾಯನು ಉಲ್ಲೇಖಿಸುತ್ತಾನೆ. ಬೆತ್ಲೆಹೇಮಿಗೆ ಹತ್ತಿರವಿದ್ದಂತಹ ರಾಮಾ ಎಂಬ ಸ್ಥಳದಲ್ಲಿ ಸಮಾಧಿಯಾದಳು (ಆದಿಕಾಂಡ 35:19). ಇಸ್ರಾಯೇಲರು ಸೆರೆಯಾಗಿ ಬಾಬೇಲಿಗೆ ಒಯ್ಯಲ್ಪಡುವಾಗ ರಾಹೇಲಳ ಸಮಾಧಿಯ ಬಳಿಯಿದ್ದ ಮಾರ್ಗವಾಗಿ ಹೋದರು ಎಂದು ಯೇರೆಮಿಯನು ಈ ವಚನದಲ್ಲಿ ಹೇಳುತ್ತಾನೆ. ಗಂಡು ಮಕ್ಕಳನ್ನು ಕಳೆದುಕೊಂಡದ್ದಕ್ಕೆ ಅಳುತ್ತಿರುವಾಗ ರಾಹೇಲಳು ಇಸ್ರಾಯೇಲರ ತಾಯಿ ಎಂದು ಹೇಳುತ್ತಾರೆ. ಇದೇ ರೀತಿಯಾಗಿ ಹೆರೋದನಿಂದ ಕೊಲ್ಲಲ್ಪಟ್ಟು ತನ್ನ ಮಕ್ಕಳನ್ನು ಕಳೆದು ಕೊಂಡದ್ದಕ್ಕಾಗಿ ಬೆತ್ಲೆಹೇಮ್ ರೋದಿಸುತ್ತದೆ ಎಂಬುದನ್ನು ಹೇಳುತ್ತಾನೆ. ಮುಂದಿನ ವಚನಗಳಲ್ಲಿ ದೇವರು ಹೇಳಿರುವುದನ್ನು ನೆನಪಿಸುತ್ತಾನೆ. ಯಹೋವನು ಇಂತೆನ್ನುತ್ತಾನೆ. **ನಿನ್ನ ಧ್ವನಿಯು ಗೋಳಾಗದಿಲಿ, ನಿನ್ನ ಕಣ್ಣು ನೀರು ಸುರಿಸದಿರಲಿ; ನಿನ್ನ ಪ್ರಯಾಸವು ಸಾರ್ಥಕವಾಗುವುದು; ಇದು ಯೆಹೋವನ ನುಡಿ; ನಿನ್ನ ಮಕ್ಕಳು ಶತ್ರುವಿನ ದೇಶದಿಂದ ಹಿಂತಿರುಗುವರು; ನಿನ್ನ ಅಂತ್ಯದಲ್ಲಿ ನಿರೀಕ್ಷೆ ಇದೆ** ಎಂದು ಯೆಹೋವನು ಹೇಳುತ್ತಾನೆ. ಯಾಕೆಂದರೆ ನಿನ್ನ ಮಕ್ಕಳು ತಮ್ಮ ಮೇರೆಗೆ ತಿರುಗಿ ಬರುತ್ತಾರೆ (ಯೆರೆಮೀಯ 31:16-17) ಮತ್ತು ಯಹೂದ್ಯರು ಸೆರೆಯಿಂದ ಬಂದ ಬೆನ್ನ ಹಿಂದೆಯೇ ಇಸ್ರಾಯೇಲ್ ರಾಜ್ಯವು ಪುನರ್‌ಸ್ಥಾಪನೆಯಾಯಿತು. ಇದರಂತೆಯೇ ಬೆತ್ಲೆಹೇಮಿನಲ್ಲಿ ಮೊಲೆ ಕೂಸುಗಳು ಕೊಲ್ಲಲ್ಪಟ್ಟವು ಮತ್ತು ಇದರ ಹಿಂದೆಯೇ ಕ್ರಿಸ್ತನ ರಾಜ್ಯವು ಸ್ಥಾಪನೆಯಾಯಿತು. ದೇವರು ಹಿಂಸೆಯಿಂದ ದೊಡ್ಡ ಆಶೀರ್ವಾದವನ್ನು ತಂದುಕೊಡುತ್ತಾನೆ. ಮರಣವಿಲ್ಲದೆ ಪುನರುತ್ಥಾನವಿಲ್ಲ. ಶಿಲುಬೆಯಿಲ್ಲದೆ ಕಿರೀಟವಿಲ್ಲ.

**19-23** **ಹೆರೋದನು ಸತ್ತ ಮೇಲೆ.................** ದೇವರು ತಕ್ಷಣವೇ ಹೆರೋದನನ್ನು ಹೇಗೆ ಶಿಕ್ಷಿಸಿದನು. ಕ್ರಿಸ್ತನನ್ನು ಕೊಂದ ನಂತರ ನಾನು ನನ್ನ ರಾಜ್ಯಭಾರವನ್ನು ಮುಂದುವರಿಸಬಹುದು ಎಂದು ಹೆರೋದನು ಭಾವಿಸುತ್ತಾನೆ. ಆದರೆ ಆದದ್ದೇ ಬೇರೆ. ಹೆರೋದನು ತನ್ನ ರಾಜ್ಯವನ್ನು ಕಳೆದುಕೊಂಡದ್ದಲ್ಲದೆ ತನ್ನ ಪ್ರಾಣವನ್ನೇ ಕಳೆದುಕೊಂಡನು.

ಮತ್ತೆ ಯೂಸೇಫನು ದೇವದೂತನಿಂದ ಮಾರ್ಗದರ್ಶನ ಹೊಂದುತ್ತಾನೆ (ಮತ್ತಾಯ 1:20; 2:13). ದೇವರು ತನ್ನ ಚಿತ್ತವನ್ನು ಮಾಡುವಂತಹವರಿಗೆ ಯಾವಾಗಲು ಮಾರ್ಗದರ್ಶನ ಮಾಡುತ್ತಾನೆ. ಸಾಮಾನ್ಯವಾಗಿ ದೇವರು, ಸತ್ಯವೇದದಲ್ಲಿರುವ ತನ್ನ ಮಾತುಗಳ ಮೂಲಕ ಅಥವಾ ಕ್ರೈಸ್ತ ಕುಟುಂಬದ ಸದಸ್ಯರಿಂದ ಮತ್ತು ಸ್ನೇಹಿತರ ಮೂಲಕ ಮಾರ್ಗದರ್ಶನ ಮಾಡುತ್ತಾನೆ. ಇಂತಹ ಮಾರ್ಗದರ್ಶನಗಳು ಪವಿತ್ರಾತ್ಮನಿಂದ ಪುಷ್ಟೀಕರಿಸಲ್ಪಡುತ್ತವೆ. ಆದರೆ ಕೆಲವು ಸಮಯಗಳಲ್ಲಿ ದೇವರು ಕನಸುಗಳ ಮತ್ತು ದರ್ಶನಗಳ ಮೂಲಕ ನೇರವಾಗಿ ಮಾರ್ಗದರ್ಶನ ಮಾಡುತ್ತಾನೆ. ಸಾಮಾನ್ಯವಾಗಿ ಓದಲು ಬಾರದಿರುವಂತಹವರಿಗೆ ಈ ರೀತಿಯಾದಂತಹ ನೇರವಾದ ಮಾರ್ಗದರ್ಶನಗಳು ಆಗುತ್ತವೆ.

ಯೂಸೇಫನಿಗೆ ಹೆರೋದನ ಮಗನಾದ ಅರ್ಬೆಲಾಯನ ಆಡಳಿತಕ್ಕೊಳಪಡದಿರುವ ಗಲಿಲಾಯ ಸೀಮೆಯ ಸ್ವಂತ ಊರಾದ ನಜರೇತಿಗೆ ಮರಳಿ ಹೋಗಬೇಕೆಂದು ದೇವದೂತನು ಹೇಳುತ್ತಾನೆ. "ಯೇಸು ನಜರೇತಿನವನೆಂದು ಕರೆಯಲ್ಪಡುವನು" ಎಂದು ಪ್ರವಾದಿಗಳು ಹೇಳಿದ ಮಾತು ನೆರವೇರಿತು (ವಚನ 23) ಎಂಬ ಮಾತನ್ನು ಮತ್ತಾಯನು ಹೇಳುತ್ತಾನೆ. ಈ ಪ್ರವಾದನೆಯು ಹಳೇ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿಲ್ಲ. ಯೇಸುಕ್ರಿಸ್ತನು ಮೂಲತಃ ದೀನನಾಗಿರುವನು ಮತ್ತು ತಿರಸ್ಕರಿಸಲ್ಪಡುವನು ಎಂದು ಪ್ರವಾದಿಯು ಪ್ರವಾದಿಸುತ್ತಾನೆ (ಯೆಶಾಯ 53:1-3). ಗಲಿಲಾಯ[11] ಸೀಮೆಯ ನಜರೇತ ಪಟ್ಟಣದಲ್ಲಿ ಬೆಳೆದಂತಹವರು ಇತರ ಯಹೂದ್ಯರಿಂದ ತಿರಸ್ಕಾರವನ್ನು ಹೊಂದುತ್ತಿರುತ್ತಾರೆ (ನೋಡಿರಿ ಯೋಹಾನ 1:46). ಆದುದರಿಂದ ಯೆಶಾಯನ ಪ್ರವಾದನೆಯಾದ ಇದು "ನಜರೇತಿನವನು" ಎಂದು ಕರೆಯಲ್ಪಡುವನು ಎಂಬ ಪ್ರವಾದನೆಯು ನೆರವೇರಿತು (ಯೆಶಾಯ 53:3)

---

## ಅಧ್ಯಾಯ - 3

**ಸ್ನಾನಿಕನಾದ ಯೋಹಾನನು ಮಾರ್ಗವನ್ನು ಸಿದ್ಧಪಡಿಸಿದ್ದು. 3:1-12**
(ಮಾರ್ಕ 1:2-8 ಲೂಕ 3:3-4,16-17, ಯೋಹಾನ 1:23,26).

**1-6** ನೋಡಿರಿ. ಮಾರ್ಕ 1:2-6 ಮತ್ತು ವ್ಯಾಖ್ಯಾನ.

**7** ಸ್ನಾನಿಕನಾದ ಯೋಹಾನನು ಜನರಿಗೆ ದೀಕ್ಷಾಸ್ನಾನ ಮಾಡಿಸಲು ಪ್ರಾರಂಭಿಸಿದಾಗ ಅನೇಕ ಸದ್ದುಕಾಯರು ಮತ್ತು ಫರಿಸಾರು ಆತನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಬಂದರು. ಯಹೂದ್ಯರಲ್ಲಿಯೇ ಇವರು ತುಂಬಾ ಕಟ್ಟುನಿಟ್ಟಿನ ಪಂಗಡದವರು., ಯಹೂದ್ಯ ಧರ್ಮಶಾಸ್ತ್ರದಂತೆಯೇ ನಾವು ನಡೆಯುತ್ತಿರುವವರೆಂದು ತಮ್ಮಲ್ಲಿಯೇ ಹೆಮ್ಮೆ ಪಡುವಂತಹವರು ಇವರು. ಮಹಾ ಯಾಜಕರಲ್ಲಿ ಹೆಚ್ಚಿನವರು ಇವರೇ. ಸದ್ದುಕಾಯರು ಮತ್ತು ಫರಿಸಾಯರಾದ ಇವರೇ ಯಹೂದಿ ಜನರಲ್ಲಿ ನಾಯಕರು ಆದರೂ ಇವರು ದೀಕ್ಷಾಸ್ನಾನವನ್ನು ಮಾಡಿಸಿಕೊಳ್ಳಲು ಬಂದಾಗ ಯೋಹಾನನು ಇವರನ್ನು ಕುರಿತು ಎಲೈ "ವಿಶಸರ್ಪಸಂತತಿ"ಯವರೇ ಎಂದು ಸಂಬೋಧಿಸುತ್ತಾನೆ.

ಈತನು ಹೀಗೆ ಹೇಳಿದ್ದಕ್ಕೆ ಕಾರಣ. ಈ ಯಹೂದ್ಯ ನಾಯಕರು ಕಪಟಿಗಳಾಗಿದ್ದರು. ಹೊರಗಿನ ತೋರಿಕೆಗೆ ಇವರು ಧಾರ್ಮಿಕವಂತರು ಆದರೆ ಆಂತರ್ಯದಲ್ಲಿ ಹಾಗಿರಲಿಲ್ಲ. ಇವರು ತಮ್ಮ ತುಟಿಗಳಿಂದ ದೇವರನ್ನು ಸನ್ಮಾನಿಸುತ್ತಾರೆ. ಆದರೆ ತಮ್ಮ ಹೃದಯದಿಂದಲ್ಲ. (ಮಾರ್ಕ 7:6-7 ಮತ್ತು ವ್ಯಾಖ್ಯಾನವನ್ನು ನೊಡಿರಿ). ಈತನು ಹೀಗೆ ಹೇಳಿದ್ದು ಯಾಕೆ?ಈತನು ಹೀಗೆ ಹೇಳಿದ್ದಕ್ಕೆ ಕಾರಣ. ಈ ಯಹೂದ್ಯ ನಾಯಕರು ಕಪಟಿಗಳಾಗಿದ್ದರು. ಹೊರಗಿನ ತೋರಿಕೆಗೆ ಇವರು ಧಾರ್ಮಿಕವಂತರು ಆದರೆ ಆಂತರ್ಯದಲ್ಲಿ ಹಾಗಿರಲಿಲ್ಲ. ಇವರು ತಮ್ಮ ತುಟಿಗಳಿಂದ ದೇವರನ್ನು ಸನ್ಮಾನಿಸುತ್ತಾರೆ. ಆದರೆ ತಮ್ಮ ಹೃದಯದಿಂದಲ್ಲ. (ಮಾರ್ಕ 7:6-7 ಮತ್ತು ವ್ಯಾಖ್ಯಾನವನ್ನು ನೊಡಿರಿ).

ದೀಕ್ಷಾಸ್ನಾನವನ್ನು ತೆಗೆದುಕೊಳ್ಳುವುದರಿಂದ ದೇವರ ಶೀರ್ಘನ ಕೂಪದಿಂದ ತಪ್ಪಿಸಿಕೊಳ್ಳಬಹುದೆಂದು ಇವರು ಭಾವಿಸಿದರು. ಆದರೆ ಇವರು ನಿಜವಾದ ಮಾನಸಾಂತರವನ್ನು ಹೊಂದಿರಲಿಲ್ಲ ಎಂಬುದನ್ನು ಸ್ನಾನಿಕನಾದ ಯೋಹಾನನು ತಿಳಿದವನಾಗಿದ್ದನು. ನಿಜವಾಗಿಯೂ ತಮ್ಮ ಪಾಪಗಳಿಗೆ ತಾವು ವಿಮೋಚಕರಾಗಬೇಕೆಂಬುದು ಇವರ ಉದ್ದೇಶವಾಗಿರಲಿಲ್ಲ. ತಾವು ತುಂಬಾ ನೀತಿವಂತರು ಎಂಬುದನ್ನು ಜನರಿಗೆ ತೋರಿಸಿಕೊಳ್ಳುವುದಕ್ಕಾಗಿಯೇ ದೀಕ್ಷಾಸ್ನಾನವನ್ನು ಮಾಡಿಸಿಕೊಂಡರು.

ಸದ್ದುಕಾಯರು ಮತ್ತು ಫರಿಸಾಯರು **ಸರ್ಪ ಸಂತಾನದಂತೆ** ಇದ್ದರು (ಮತ್ತಾಯ 12:34, 23:33). ಇವರು ವಂಚಕರು ಮತ್ತು ತಂತ್ರಗಾರರಾಗಿದ್ದರು. ಇವರು ವಿಷಕಾರಿಯಾಗಿದ್ದರು. ಆಂತರ್ಯದಲ್ಲಿ ನೀತಿವಂತರಲ್ಲದಿದ್ದರೂ ಸಹ ಹೊರಗೆ ನೀತಿವಂತರಂತೆ ತೋರಿಸಿಕೊಳ್ಳುವಂತಹ ಈ ನಾಯಕರ ಸಭೆಯಲ್ಲಿ ವಿಷಸರ್ಪಗಳಿದ್ದಂತ ಇವರನ್ನು ಬಿಟ್ಟರೆ ಮತ್ತಾರು ಇವರಷ್ಟು ವಿಷಕಾರಿಗಳಲ್ಲ (ಮತ್ತಾಯ 7:5ನ್ನು ಮತ್ತು ವ್ಯಾಖ್ಯಾನ ವನ್ನು ನೋಡಿರಿ).

**8** ಸ್ನಾನಿಕನಾದ ಯೋಹಾನನ ದೀಕ್ಷಾಸ್ನಾನವು **ಮಾನಸಾಂತರದ ಮತ್ತು ಪಾಪ ಕ್ಷಮಾಪಣೆಯ ದೀಕ್ಷಾಸ್ನಾನವಾಗಿತ್ತು** ಮಾನಸಾಂತರವೆಂದರೆ ಕೇವಲ ಪಾಪಕ್ಕೆ ಪಶ್ಚಾತ್ತಾಪ ಪಡುವುದಲ್ಲ. ಜೊತೆಗೆ ಪಾಪಕ್ಕೆ ವಿಮುಖನಾಗುವುದು. ಸದ್ದುಕಾಯರು ಮತ್ತು ಫರಿಸಾಯರು "ನಾವು ಪಶ್ಚಾತ್ತಾಪಪಟ್ಟಿದ್ದೇವೆ" ಎಂದು ಹೇಳಿದರು. ಆದರೆ ಮೊದಲಿನ ಹಾಗೆಯೇ ಪಾಪ ಮಾಡುವುದರಲ್ಲಿ ಮುಂದುವರಿದರೆ ಸ್ನಾನಿಕನಾದ ಯೋಹಾನನು ಅವರನ್ನು " ನಿಮ್ಮ ಪಶ್ಚಾತ್ತಾಪವೆಲ್ಲಿ? ನಿಮ್ಮಲ್ಲಾದ ಪಶ್ಚಾತ್ತಾಪಕ್ಕೆ ಗುರುತುಗಳನ್ನು ಕೊಡಿರಿ? ನಂಬಿಕೆಯು ಕ್ರಿಯೆಗಳನ್ನು ಉಂಟು ಮಾಡುತ್ತದೆ. ಹಾಗೆಯೇ **ಪಶ್ಚಾತ್ತಾಪವು ಫಲಗಳನ್ನು ಉತ್ಪಾದಿಸುತ್ತದೆ** " (ಯಾಕೋಬ

2:17). ಆದುದರಿಂದ ಪಶ್ಚಾತ್ತಾಪವು, ಪಾಪಕ್ಕೆ ವಿಮುಖನಾಗುವುದರ ಮೂಲಕ ಮುಂದುವರಿಯಬೇಕು. ಇಲ್ಲದಿದ್ದರೆ ನಮ್ಮ ಪಶ್ಚಾತ್ತಾಪವು ಬೂಟಾಟಿಕೆಯಾಗಿದೆ.

9 ಯಹೂದ್ಯ ನಾಯಕರು ಗರ್ವಿಷ್ಟರಾಗಿದ್ದರು. ಇವರು ಯಹೂದ್ಯರಲ್ಲದ, ಅನ್ಯರನ್ನು,ಕೀಳಾಗಿ ಕಾಣುತ್ತಿದ್ದರು. "ಯಹೂದಿಯಾದ ಅಬ್ರಹಾಮನ ಮೂಲ ಸಂತಾನದವರು ನಾವಾಗಿದ್ದೇವೆ, ದೇವರು ನಮ್ಮನ್ನು ಆಶೀರ್ವದಿಸುವನು ಎಂದು ವಾಗ್ದಾನ ಮಾಡಿದ್ದಾನೆ (ಆದಿಕಾಂಡ 12:1-3). ನಾವು ದೇವರ ಕೃಪೆಗೆ ಪಾತ್ರರಾಗಿದ್ದೇವೆ. ಆದುದರಿಂದ, ನಾವು ಇತರರಿಗಿಂತ ಶ್ರೇಷ್ಠರು" ಎಂದು ತಮ್ಮ ಪಕ್ಷಕ್ಕೆ ತಾವೇ ಭಾವಿಸಿಕೊಳ್ಳುತ್ತಿದ್ದರು.

ಆದರೆ ರಕ್ತಸಂಬಂಧದಿಂದ ಅಬ್ರಹಾಮನ ಸಂತತಿಯವರಾಗಿರುವುದು ಪ್ರಾಮುಖ್ಯವೇನಲ್ಲ ಎಂದು ಹೇಳುತ್ತಾ ಅವರನ್ನು, ಸ್ನಾನಿಕನಾದ ಯೋಹಾನನು ಎಚ್ಚರಿಸುತ್ತೇನೆ.ದೇವರು ಪ್ರಥಮ ಮನುಷ್ಯನಾದ ಆದಾಮನನ್ನು ಮಣ್ಣಿನಿಂದ ಸೃಷ್ಟಿಸಿದ್ದಾನೆ. ಅದರಂತೆಯೇ ದೇವರು ಅಬ್ರಹಾಮನಿಗೆ ಕಲ್ಲಿನಿಂದಲೇ ಮಕ್ಕಳನ್ನು ಉಂಟುಮಾಡಬಲ್ಲನು (ಆದಿಕಾಂಡ 2:7). ಮನುಷ್ಯನು ಶರೀರದಲ್ಲಿ ಯಹೂದಿಯಾಗಿರದೆ, ಹೃದಯಾಂತರಂಗದಲ್ಲಿ ನಿಜವಾದ ಯಹೂದಿಯರುವಂತದ್ದೇ ದೇವರಿಗೆ ಪ್ರಾಮುಖ್ಯವಾಗಿರುವಂತದ್ದಾಗಿದೆ.

ಫರಿಸಾಯರು ಮತ್ತು ಸದ್ದುಕಾಯರು ಶಾರೀರಿಕವಾಗಿ ಅಬ್ರಹಾಮನ ಸಂತತಿಯವರಾಗಿದ್ದರೂ ಸಹ ದೇವರ ದೃಷ್ಟಿಯಲ್ಲಿ ಅವರು ನಿಜವಾದ ಯಹೂದ್ಯರಾಗಿರಲಿಲ್ಲ. ಯಾಕೆಂದರೆ ಅವರು ತಮ್ಮ ಹೃದಯಗಳಲ್ಲಿ ನೀತಿವಂತರಾಗಿರಲಿಲ್ಲ. ದೇವರ ಒಬ್ಬನೇ ಮಗನಾದ ಯೇಸುಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟು ದೇವರ ಚಿತ್ತವನ್ನು ಮಾಡುವಂತಹವನೇ ನಿಜವಾದ "ಯಹೂದನು". ( ಯೋಹಾನ 8:39, ರೋಮಾ. 2:28-29, ಗಲಾತ್ಯ 3:6-9 ಮತ್ತು ವ್ಯಾಖ್ಯಾನವನ್ನು ನೋಡಿರಿ).

ಇದೇ ರೀತಿಯಾಗಿ ಹೊರಗಿನ ತೋರಿಕೆಯ ಕ್ರೈಸ್ತರು ನಿಜವಾದ ಕ್ರೈಸ್ತರಲ್ಲ. ಮನುಷ್ಯನು ಹುಟ್ಟಿನಿಂದ ಕ್ರೈಸ್ತನಾಗುವುದಿಲ್ಲ. ತಂದೆಯು ಕ್ರೈಸ್ತನಾಗಿದ್ದರೆ ಮಗನು ಕ್ರೈಸ್ತನಾಗುವುದಿಲ್ಲ. ಒಂದು ಸಭೆಯ ಸದಸ್ಯನಾಗಿದ್ದ ಪಕ್ಷದಲ್ಲಿ ಕ್ರೈಸ್ತನಾಗಲು ಸಾಧ್ಯವಿಲ್ಲ. ಬದಲಾಗಿ ಯೇಸುಕ್ರಿಸ್ತನಿಗೆ ತನ್ನ ಹೃದಯದಲ್ಲಿ ನಿಜವಾದ ನಂಬಿಕೆಯಿಟ್ಟು ಆಂತರ್ಯದಲ್ಲಿ ನಿಜ ಕ್ರೈಸ್ತನಾಗಿದ್ದರೆ ಮಾತ್ರ ಕ್ರೈಸ್ತನಾಗಿರುತ್ತಾನೆ.

10 ಫರಿಸಾಯರು ಮತ್ತು ಸದ್ದುಕಾಯರು ತಮ್ಮ ಮಾನಸಾಂತರ ಮತ್ತು ನಂಬಿಕೆಯಿಂದುಂಟಾಗುವ ಫಲಗಳನ್ನು ಪಲಿಸದೆ ಇದ್ದ ಪಕ್ಷದಲ್ಲಿ ದೇವರಿಂದ ತಿರಸ್ಕಾರಗೊಂಡವರಾಗಿ, ಶಿಕ್ಷೆಗೊಳಗಾಗುವರು ಎಂಬಂತಹ ಎಚ್ಚರಿಕೆಯನ್ನು ಕೊಡುವುದಕ್ಕೋಸ್ಕರವಾಗಿಯೇ ಯೋಹಾನನು ಫಲ ಕೊಡದಿರುವ ಮರವನ್ನು ಉದಾಹರಣೆಯನ್ನಾಗಿ ಕೊಡುತ್ತಾನೆ (ನೋಡಿರಿ. ಮತ್ತಾಯ 7:12-20; ಯೋಹಾನ 15:1-2, 5-6).

11 ಮಾರ್ಕ 1:7-8 ಮತ್ತುವ್ಯಾಖ್ಯಾನವನ್ನು ನೋಡಿರಿ.

12 ನನ್ನ ಹಿಂದೆ ಬರುವವನು ನನಗಿಂತ ಶಕ್ತನು ಎಂದು ಸ್ನಾನಿಕನಾದ ಯೋಹಾನನು ಹೇಳುತ್ತಾನೆ (ವಚನ 11). ಆತನೇ ಕ್ರಿಸ್ತನು. ಕ್ರಿಸ್ತನು ರಕ್ಷಕನ ಹಾಗೆ ಮಾತ್ರ ಬರದೆ ನ್ಯಾಯಾಧಿಪತಿಯಾಗಿಯೂ ಬರುತ್ತಾನೆ. ನ್ಯಾಯತೀರ್ಪಿಗೆ ಗುರುತಾಗಿರುವಂತಹ, ಮೊರವನ್ನು ಕೈಯಲ್ಲಿ ಹಿಡಿದುಕೊಂಡವನಾಗಿ ಬರುತ್ತಾನೆ. ನಿಜವಾದ ನೀತಿವಂತರನ್ನು ಗೌರವಿಸುವುದಕ್ಕೋಸ್ಕರ ಗೋಧಿಯನ್ನು ಮತ್ತು ಹೊಟ್ಟನ್ನು ಬೇರೆ ಬೇರೆ ಮಾಡುವ ರೀತಿಯಂತೆ, ಕಪಟಗಳನ್ನು ಮತ್ತು ಬಾಹ್ಯವಾದ ರೀತಿಯಲ್ಲಿರುವಂತಹ ನೀತಿವಂತರನ್ನು ನೀತಿವಂತರಿಂದ ಬೇರ್ಪಡಿಸುವನು. ದೇವರು ಹೊರಗಿನ ತೋರಿಕೆಯನ್ನು ನೋಡುವುದಿಲ್ಲ. ಆದರೆ ಹೃದಯವನ್ನೇ ನೋಡುತ್ತಾನೆ (1ನೇ ಸಮುವೇಲ 16:7).

**ಯೇಸು ಕ್ರಿಸ್ತನ ದೀಕ್ಷಾಸ್ನಾನ. (3:13-17)**

(ಮಾರ್ಕ 1:9-11; ಲೂಕ 3:21-22)

**13-17** ಗಮನಿಸಿರಿ, ಮಾರ್ಕ 1:9-11 ಮತ್ತು ವ್ಯಾಖ್ಯಾನವನ್ನು ನೋಡಿರಿ.

---

## ಅಧ್ಯಾಯ - 4

### ಯೇಸುವಿನ ಶೋಧನೆ (4:1-11)

(ಲೂಕ 4:1-13)

1 ಕ್ರಿಸ್ತನು ದೀಕ್ಷಾಸ್ನಾನವನ್ನು ಹೊಂದುವಾಗ ಹೆಚ್ಚು ಕಡಿಮೆ 30 ವರ್ಷದವನಾಗಿದ್ದನು (ಲೂಕ 3:23). ಯೇಸುವು ದುರಾತ್ಮನಾದ ಸೈತಾನನಿಂದ ಶೋಧಿಸಲ್ಪಡುವುದಕ್ಕಾಗಿ ಪವಿತ್ರಾತ್ಮನಿಂದ ಅರಣ್ಯಕ್ಕೆ ನಡೆಸಲ್ಪಟ್ಟನು.

ಪಾಪರಹಿತನಾದ ಕ್ರಿಸ್ತನು, ಸಂಪೂರ್ಣವಾಗಿ ಸಾಮಾನ್ಯ ಮನುಷ್ಯನಂತಾಗುವುದಕ್ಕೋಷ್ಕರವಾಗಿ, ಸಾಮಾನ್ಯವಾದಂತಹ ಶೋಧನೆಗಳನ್ನು ಅನುಭವಿಸುವಂತಾದನು (ಇಬ್ರಿಯಾ 2:17-18, 4:14-15 ಮತ್ತು ವ್ಯಾಖ್ಯಾನವನ್ನು ನೋಡಿರಿ). ದೇವರು ಸೈತಾನನಿಗೆ ಶೋಧನೆ ಮಾಡಲು ಅನುಮತಿಸುತ್ತಾನೆ ಮತ್ತು ನಾವು ಪರಿಶೋಧಿಸಲ್ಪಡಲು ಮತ್ತು ನಮ್ಮ ನಂಬಿಕೆಯಲ್ಲಿ ಬಲಗೊಳ್ಳಲು ನಮ್ಮನ್ನು ಪರೀಕ್ಷೆಗೊಳಪಡಿಸುತ್ತಾನೆ. ( 1ನೇ ಪೇತ್ರ 1:6-7 ಮತ್ತು ವ್ಯಾಖ್ಯನ). ಹೊಸ ಒಡಂಬಡಿಕೆಯಲ್ಲಿ ಎರಡು ರೀತಿಯ ಶೋಧನೆಗಳಿವೆ. ಮೊದಲನೆಯದು ಹೊರಗಿನಿಂದ ಬರುವಂತಹ ನೋವು ಮತ್ತು ಕಷ್ಟವೆಂಬ ಶೋಧನೆ. ಎರಡನೆಯದು ಪಾಪವನ್ನು ಮಾಡುವುದಕ್ಕೆ ನಡೆಸುವಂತಹ ನಮ್ಮೊಳಗಿನ ಆಶೆಯೆಂಬ ಶೋಧನೆ. ಮತ್ತಾಯನು ಈ ವಟನಗಳಲ್ಲಿ ಪ್ರಾಮುಖ್ಯವಾಗಿ

ಮಾತನಾಡುತ್ತಿರುವುದು, ನಮ್ಮಲ್ಲಿಂದಲೇ ಬರುವಂತಹ ಎರಡನೇಯ ಶೋಧನೆಯ ವಿಷಯದಲ್ಲಿ. ನಾವು ಪಾಪವನ್ನು ಮಾಡಲು ದೇವರು ಎಂದಿಗೂ ನಮ್ಮನ್ನು ಪ್ರೇರೇಪಿಸುವುದಿಲ್ಲ. ನಾವು ಪಾಪವನ್ನು ಮಾಡಲು ನಮ್ಮನ್ನು ಪ್ರೇರೇಪಿಸುವಂತಹವನು ಸೈತಾನನೆ ಮತ್ತು ನಮ್ಮಲ್ಲಿರುವ ಕೆಟ್ಟ ಆಶೆಗಳ ಮೂಲಕ ಮಾಡುತ್ತಾನೆ (ಯಾಕೋಬ 1:13-14 ಮತ್ತು ವ್ಯಾಖ್ಯಾನವನ್ನು ನೋಡಿರಿ). ಕ್ರಿಸ್ತನಿಗೆ, ತನ್ನಲ್ಲಿ ಯಾವುದೇ ರೀತಿಯ ಕೆಟ್ಟ ಆಶೆಗಳು ಇರಲಿಲ್ಲ. ಆದ್ದರಿಂದಲೇ ಕ್ರಿಸ್ತನು ಶೋಧನೆಗೆ ಒಳಗಾಗಲು ದೇವರಾತ್ಮನಿಂದ ಅರಣ್ಯಕ್ಕೆ ನಡೆಸಲ್ಪಟ್ಟನು.[12] ಶೋಧನೆಗೆ ಒಳಗಾಗುವುದು ಪಾಪವಲ್ಲ, ಅಂದರೆ, ಪಾಪ ಮಾಡುವುದಕ್ಕಲ್ಲ. ಆದರೆ ಶೋಧನೆಗೆ ಒಳಗಾಗಲು ಮಾತ್ರ. ಕ್ರಿಸ್ತನು ಶೋಧನೆಯಲ್ಲಿ ಬಿದ್ದುಹೋಗಲಿಲ್ಲ.

ಯೇಸುಕ್ರಿಸ್ತನು ತಾನು ದೀಕ್ಷಾಸ್ನಾನವನ್ನು ಹೊಂದಿದ ತಕ್ಷಣವೇ ಸೈತಾನನಿಂದ ಶೋಧಿಸಲ್ಪಟ್ಟನು. ಇದು ಕೂಡ ಅನೇಕ ಕ್ರೈಸ್ತರ ಅನುಭವವಾಗಿರುತ್ತದೆ. ನಾವು ಸೈತಾನನ ಅಧಿಕಾರದಿಂದ ತಪ್ಪಿಸಿಕೊಂಡು ಹೊರಬರುವಾಗ ಮತ್ತು ನಂಬಿಕೆಯ ಮೂಲಕ ದೇವರ ಕುಟುಂಬವನ್ನು ಪ್ರವೇಶಿಸುವಾಗ, ಸೈತಾನನು ಅತಿ ಕೋಪಗೊಳ್ಳುತ್ತಾನೆ ಮತ್ತು ಆಕ್ರಮಣ ಮಾಡುತ್ತಾನೆ ಹಾಗೂ ನಾವು ಪುನಃ ಆತನ ಅಧಿಕಾರದ ವ್ಯಾಪ್ತಿಗೆ ಹಿಂದಿರುಗುವಂತೆ ಮಾಡಲು ಪ್ರಯತ್ನಿಸುತ್ತಾನೆ. ಸೈತಾನನ ಆಕ್ರಮಣವನ್ನು ಎದುರಿಸುವುದಕ್ಕೆ ಇರುವಂತಹ ಅನೇಕ ಮಾರ್ಗಗಳಲ್ಲಿ ಒಂದಾಗಿರುವಂತದ್ದು ನಾವು ದೇವರ ಮಕ್ಕಳಾಗಿದ್ದೇವೆ ಎಂದು ಸಂಪೂರ್ಣವಾದ ಭರವಸೆಯನ್ನು ಹೊಂದಿರುವಂತದ್ದೇ ಆಗಿದೆ. "**ಈತನು ನನ್ನ ಮಗನು**" ಎಂದು ದೇವರು ಆಗ ತಾನೇ ಕ್ರಿಸ್ತನ ಬಗ್ಗೆ ಹೇಳಿದ್ದನು (ಮತ್ತಾಯ 3:17). ದೇವರಾತ್ಮನು ಆತನ ಮೇಲೆ ಇಳಿದಿದ್ದನು (ಮತ್ತಾಯ 3:16). ಆತನು **ಸಂಪೂರ್ಣವಾಗಿ ಪವಿತ್ರಾತ್ಮಭರಿತನಾಗಿ** ಅರಣ್ಯಕ್ಕೆ ಹೋದನು (ಲೂಕ 4:1). ನಾವು ಶೋಧನೆಗೆ ಒಳಪಡುವಾಗ ನಾವು ದೇವರ ಮಗ ಮತ್ತು ಮಗಳು ಆಗಿದ್ದೇವೆಂಬುದನ್ನು ನೆನಪಿಸಿಕೊಳ್ಳೋಣ ಮತ್ತು ಯೇಸುಕ್ರಿಸ್ತನು ಸೈತಾನನನ್ನು ಜಯಿಸಿದಂತೆ ನಾವು ಜಯಿಸುವಂತಾಗಲು ಪವಿತ್ರಾತ್ಮಭರಿತರಾಗುವುದಕ್ಕೆ ಪ್ರಾರ್ಥಿಸೋಣ.

2 ಯೇಸು ಕ್ರಿಸ್ತನು ಸೈತಾನನಿಂದ ಶೋಧಿಸಲ್ಪುವುದಕ್ಕೆ ಮುಂಚೆ ನಲವತ್ತು ದಿವಸ ಉಪವಾಸ ಮಾಡಿದನು. ಇಸ್ರಾಯೇಲರು ಐಗುಪ್ತದೇಶದಿಂದ ಪಾರಾದ ನಂತರ ಅವರು ನಲವತ್ತು ವರ್ಷಗಳವರೆಗೆ ಸೀನಾಯ್ ಪರ್ವತದ ಮರಳುಗಾಡಿನಲ್ಲಿ ಪರಿಶೋಧಿತರಾಗಿದ್ದಕ್ಕೆ ಗುರುತಾಗಿದೆ (ಈ ವರ್ಷಗಳಲ್ಲಿ ನಡೆದಂತಹವುಗಳ ವಿವರಣೆಗಳೆಲ್ಲಾ ಹಳೆ ಒಡಂಬಡಿಕೆಯ ವಿಮೋಚನಕಾಂಡ ಮತ್ತು ಅರಣ್ಯಕಾಂಡ ಪುಸ್ತಕಗಳಲ್ಲಿವೆ). ದೇವರಿಂದ ಆರಿಸಲ್ಪಟ್ಟಂತಹ ಜನರು ಸಹ ಯಹೂದ್ಯರಂತೆಯೇ ಶೋಧಿಸಲ್ಪಟ್ಟರು (ಧರ್ಮೋಪದೇಶಕಾಂಡ 8:2). ಅದರಂತೆಯೇ ಯೇಸುಕ್ರಿಸ್ತನು ಶೋಧನೆಗೊಳಗಾದನು. ಆದಾಗ್ಯೂ ಯಹೂದ್ಯರು ಪಾಪದಲ್ಲಿ ಬಿದ್ದಂತೆ ಯೇಸುಕ್ರಿಸ್ತನು ಬಿದ್ದು ಹೋಗಲಿಲ್ಲ.

ಪ್ರಥಮ ಪುರುಷ ಹಾಗೂ ಸ್ತ್ರೀಯಾದಂತಹ ಆದಾಮ ಹಾಗೂ ಹವ್ವಳು, ಇವರು ಒಳಗಾದ ಆ ಮೂರು ರೀತಿಯ ಶೋಧನೆಗಳಿಗೂ ಮತ್ತು ಇಲ್ಲಿರುವಂತಹ ಈ ಮೂರು ಶೋಧನೆಗಳಿಗೂ ನಿಖರವಾದ ಸಂಬಂಧವನ್ನು ಈ ಭಾಗದಲ್ಲಿ ವಿವರಿಸಲಾಗಿದೆ (ಆದಿಕಾಂಡ 3:1-6). ತಿನ್ನಲು ನಿಷೇಧಿಸಲ್ಪಟ್ಟಂತಹ ಮತ್ತು ಆದಾಮ ಹವ್ವಳು ತಿಂದಂತಹ **ಆ ಹಣ್ಣು ಆಹಾರಕ್ಕೆ ಒಳ್ಳೆಯದಾಗಿಯೂ, ಕಣ್ಣಿಗೆ ರಮ್ಯವಾಗಿಯೂ ಜ್ಞಾನಿಯನ್ನಾಗಿ ಮಾಡುವುದಕ್ಕೆ ಅಪೇಕ್ಷಿಸತಕ್ಕದ್ದಾಗಿಯೂ ಇತ್ತು** (ಆದಿಕಾಂಡ 3:6). ಮತ್ತಾಯನಿಂದ ತಿಳಿಸಲ್ಪಟ್ಟಂತಹ ಈ ಮೂರು ಶೋಧನೆಗಳಿಗೂ ಮತ್ತು 1 ಯೋಹಾನ 2:26ರಲ್ಲಿ ಉಲ್ಲೇಖಿಸಿರುವ ಈ ಮೂರು ಶೋಧನೆಗಳಿಗೂ ಸಂಬಂಧವಿದೆ. ಶರೀರದಾಸೆ, ಕಣ್ಣಿನಾಸೆ ಮತ್ತು ಅವನು ಮಾಡುವಂತಹ ಬದುಕು ಬಾಳಿನ ಡಂಬದಾಸೆ.

3 ಪ್ರಥಮವಾಗಿ, ಕ್ರಿಸ್ತನಲ್ಲಿ, ಯೇಸುಕ್ರಿಸ್ತನು ದೇವರ ಮಗ ಹೌದು ಅಲ್ಲವೋ ಎಂಬ ವಿಷಯದಲ್ಲಿ ಅಪನಂಬಿಕೆಯನ್ನು ಉಂಟುಮಾಡಲು ಶೋಧಕನಾದ ಸೈತಾನನು ಪ್ರಯತ್ನಿಸುತ್ತಾನೆ. "**ಒಂದು ವೇಳೆ ನೀನು ದೇವರ ಮಗನು**" **ಆಗಿದ್ದರೆ ಮಾಡಿ ತೋರಿಸು.** ಅದ್ಭುತವನ್ನು ಮಾಡು. ನೀನು ನಲವತ್ತು ದಿನಗಳ ತನಕ ಊಟವನ್ನು ಮಾಡಲಿಲ್ಲ, ನೀನು ಹಸಿದಿರುವೆ, ಈ ಕಲ್ಲುಗಳನ್ನು ರೊಟ್ಟಿಯನ್ನಾಗಿ ಮಾಡು.

ಕ್ರಿಸ್ತನಿಗೆ ಕಲ್ಲುಗಳನ್ನು ರೊಟ್ಟಿಗಳನ್ನಾಗಿ ಮಾಡುವುದಕ್ಕೆ ಶಕ್ತಿಯಿತ್ತು. ಯೇಸುಕ್ರಿಸ್ತನು ತನ್ನ ಸ್ವಂತ ಉಪಯೋಗ ಹಾಗೂ ಅನುಕೂಲಕ್ಕಾಗಿ ತನ್ನ ಶಕ್ತಿಯನ್ನು ಬಳಸುವಂತಾಗಬೇಕು ಎಂದು ಸೈತಾನನು ಶೋಧಿಸುತ್ತಾನೆ. ಏಕೆ ಕ್ರಿಸ್ತನು ಹಸಿವಿನಿಂದ ಮತ್ತು ನೋವಿನಿಂದ ನರಳಬೇಕು? ಆತನು ಸುಲಭವಾಗಿ ಜೀವನ ನಡೆಸಬಹುದಾಗಿತ್ತು. ಆದರೂ ಕ್ರಿಸ್ತನು ನಮಗಾಗಿ ಶ್ರಮ ಪಡಲು ಮತ್ತು ತನ್ನ ಜೀವವನ್ನು ನಮಗೆ ಕೊಡಲು ಈ ಲೋಕಕ್ಕೆ ಬಂದನು (ಮಾರ್ಕ 10:45 ಮತ್ತು ಅಭಿಪ್ರಾಯ ವನ್ನು ಗಮನಿಸಿರಿ). ಯೇಸುಕ್ರಿಸ್ತನು ಶಿಲುಬೆಯಲ್ಲಿ ನೇತಾಡುತ್ತಿರುವಾಗ "ನೀನು ದೇವರ ಮಗನಾಗಿದ್ದರೆ ನಿನ್ನನ್ನು ನೀನು ರಕ್ಷಿಸಿಕೋ, ಶಿಲುಬೆಯಿಂದ ಇಳಿದು ಬಾ" ಎಂದು ಹಾಸ್ಯ ಮಾಡುತ್ತಿದ್ದಂತವರು ಹೇಳುತ್ತಾರೆ (ಮತ್ತಾಯ 27:40). ಯೇಸುಕ್ರಿಸ್ತನು ಶಿಲುಬೆಯ ಮೇಲಿಂದ ಇಳಿದುಬರುವುದು ಎಷ್ಟು ಅವಶ್ಯವಾಗಿತ್ತೋ, ಹಾಗೆಯೇ, ಕಲ್ಲುಗಳಿಂದ ರೊಟ್ಟಿಗಳನ್ನು ಮಾಡುವಂತಹದ್ದೂ ಕೂಡ ಅಷ್ಟೇ ಅವಶ್ಯವಿದ್ದಂತ್ತಿತ್ತು. ಯೇಸುಕ್ರಿಸ್ತನು ಅರಣ್ಯದಲ್ಲಿ ಸೈತಾನನ ಮೇಲೆ ಜಯ ಸಾಧಿಸಿದ್ದು, ಆತನು ಉತ್ತಮವಾಗಿ ತನ್ನನ್ನು ಸಿದ್ಧನಾಗಿದ್ದುದರಿಂದಲೇ, ಶಿಲುಬೆಯಲ್ಲಿ ಸೈತಾನನ ಮೇಲೆ ಜಯವನ್ನು ಸಾಧಿಸಿದನು.
ಯೋಹಾನನು ನೆನಪಿಸಿದ್ದಂತಹ ಈ ಪಾಪದ ಮನಷ್ಯನ ಆಸೆಗಳಿಗೂ. ಮೊದಲನೆಯ ಶೋಧನೆಗೂ ತಳಕಿನ ಸಂಬಂಧವಿದೆ (1 ಯೋಹಾನ 2:16). ಆದಾಮ ಹಾಗೂ ಹವ್ವಳಿಗೆ ನಿಷೇಧಕ್ಕೊಳಪಟ್ಟಂತಹ ಫಲವು ಆಹಾರಕ್ಕೆ ಒಳ್ಳೆಯದಾಗಿ ಕಂಡಿತು

4 ಧರ್ಮೋಪದೇಶಕಾಂಡ 8:3ರಲ್ಲಿರುವಂತಹ ದೇವರ ವಾಕ್ಯವನ್ನು ಕ್ರಿಸ್ತನು ಉಪಯೋಗಿಸಿ ಸೈತಾನನ ಮೇಲೆ ಜಯವನ್ನು ಪಡೆದನು. ಈ ಒಂದು ವಾಕ್ಯಕ್ಕೂ ಮತ್ತು ಇಸ್ರಾಯೇಲರು ಯಾವಾಗಲೂ ದೇವರನ್ನು ಮಾತ್ರ ನಂಬಬೇಕು ಮತ್ತು ಆತನ ವಾಕ್ಯದ ಆಧಾರದಿಂದ ಮಾತ್ರ ಜೀವಿಸಬೇಕು ಎಂಬ ಉದ್ದೇಶದಿಂದ ಮರಳುಗಾಡಿನಲ್ಲಿ ಹಸಿವೆಯಿಂದ ನರಳುತ್ತಿದ್ದಂತಹ ಇಸ್ರಾಯೇಲರಿಗೆ ದೇವರು ವಿಶೇಷವಾದ ಆಹಾರವನ್ನು "ಮನ್ನ" ಎಂದು ಕರೆಯಲ್ಪಡುವ, ಆಕಾಶದಿಂದ ಸುರಿಸಿದಂತಹ ಆ ಘಟನೆಗೂ ಸಂಬಂಧವಿದೆ (ವಿಮೋಚನಕಾಂಡ 16:1-8, 13-16, 31). ಮನುಷ್ಯನು ಕೇವಲ ಆಹಾರವನ್ನು ಸೇವಿಸುವುದರಿಂದ ಆತ್ಮಿಕನಾಗಿ ಜೀವಿಸಲು

ಸಾಧ್ಯವಿಲ್ಲ. ಆಹಾರವೆಂದು ಕರೆಯಲ್ಪಡುವ ದೇವರ ವಾಕ್ಯ ಎಂಬಂತಹ ಆಹಾರವನ್ನು ಮನುಷ್ಯನು ಸೇವಿಸುವುದು ಅತ್ಯವಶ್ಯಕ (ನೋಡಿರಿ :ಯೋಹಾನ 6:30-35, 48-51). ಜೀವಿಸುವುದಕ್ಕಾಗಿ ದೇವರ ವಾಕ್ಯವನ್ನು ಸೇವಿಸುವುದು ಅಂದರೆ ದೇವರ ವಾಕ್ಯಕ್ಕೆ ವಿಧೇಯನಾಗಿ ನಡೆಯುವುದು ಎಂದರ್ಥ. ಅಂದರೆ ನಮ್ಮ ಜೀವಿಕ್ಕಾಗಿ ದೇವರ ಚಿತ್ತವನ್ನು ಅಂಗೀಕರಿಸುವುದು. ದೇವರು ಕೊಡುವ "ಆಹಾರ"ದ ಬಗ್ಗೆ ದೂರು ಮಾಡದೆ ಇರೋಣ. ಯಹೂದ್ಯರು ಮರಳುಗಾಡಿನಲ್ಲಿರುವಾಗ ದೇವರು ಕೊಟ್ಟಂತಹ ಆ "ಮನ್ನ" ಎಂಬ ಆಹಾರದ ಬಗ್ಗೆ ದೂರಿದರು ಮತ್ತು ಅದರ ಪ್ರತಿಫಲವಾಗಿ ಘೋರ ವ್ಯಾಧಿಯಾದಂತಹ ಪ್ಲೇಗು ಅಥವಾ ಗೆಡ್ಡೆ ಎಂಬ ರೋಗದಿಂದ ಶಿಕ್ಷಿಸಲ್ಪಟ್ಟರು (ಅರಣ್ಯಕಾಂಡ 11:4- 6, 31-34).

**5-6** ಆಮೇಲೆ ಸೈತಾನನು ಯೇಸುಕ್ರಿಸ್ತನನ್ನು ಯೆರೂಸಲೇಮಿನಲ್ಲಿರುವ ದೇವಾಲಯದ ತುತ್ತ ತುದಿಯ ಮೇಲೆ ಕರೆದುಕೊಂಡು ಹೋಗಿ ನಿಲ್ಲಿಸಿದನು. ಆತನಿಗೆ ನೀನು ದೇವರ ಮಗನಾಗಿದ್ದರೆ ಕೆಳಕ್ಕೆ ಧುಮುಕು; ಎಂದು ಸೈತಾನನು ಹೇಳುತ್ತಾನೆ ನಂತರ ಸ್ವತಃ ಸೈತಾನನು ಕೀರ್ತನೆ 91:11-12 ರಲ್ಲಿರುವ ವಾಕ್ಯವನ್ನು ಉಪಯೋಗಿಸಿ ಕ್ರಿಸ್ತನನ್ನು ಕೆಳಕ್ಕೆ ಧುಮುಕುವಂತೆ ಒತ್ತಾಯಿಸುತ್ತಾನೆ. ಆದರೆ ಕೀರ್ತನೆಯಲ್ಲಿರುವ ದೇವರ ವಾಕ್ಯವನ್ನು ಸೈತಾನನು ಸರಿಯಾಗಿ ಉಪಯೋಗಿಸಲಿಲ್ಲ. ಕೀರ್ತನೆಯಲ್ಲಿ ಕೊಡಲ್ಪಟ್ಟಿರುವ ವಾಗ್ದಾನವು ನಿಜವಾದದ್ದೆ. ದೇವರ ದೂತರು ನಮ್ಮನ್ನು ಕಾಪಾಡುತ್ತಾರೆ. ಆದರೆ ನಾವು ದೇವರ ಚಿತ್ತಕ್ಕನುಸಾರವಾಗಿ ಮಾಡದಿರುವಂತಹ ಸನ್ನಿವೇಶಗಳಲ್ಲಿ ದೇವರ ಈ ವಾಗ್ದಾನವನ್ನು ನೆರವೇರಿಸು ಎಂದು ಹಕ್ಕಿನಿಂದ ಕೇಳುವುದಕ್ಕೆ ಈ ವಾಕ್ಯವನ್ನು ಉಪಯೋಗಿಸಲು ಸಾಧ್ಯವಿಲ್ಲ. ಈ ರೀತಿಯಿಂದಾಗಿ ದೇವರ ವಾಕ್ಯವನ್ನು ದುರುಪಯೋಗಪಡಿಸಿಕೊಳ್ಳುವುದು ಬಹಳ ಸುಲಭ. ದೇವರ ವಾಕ್ಯವನ್ನು ಅಪೂರ್ಣವಾಗಿ ಉಪಯೋಗಿಸುವುದು ಅಥವಾ ಸನ್ನಿವೇಶಕ್ಕೆ ತಕ್ಕಂತೆ ಕೊಟ್ಟಿರುವುದನ್ನು ತಪ್ಪಾಗಿ ಅರ್ಥೈಸಿಕೊಳ್ಳುವುದು ಮತ್ತು ಇದನ್ನು ಉಪಯೋಗಿಸದಿರುವುದಕ್ಕೆ ಜಾಗ್ರತೆಯುಳ್ಳವರಾಗಿರಬೇಕು.

ಈ ಎರಡನೆಯ ಶೋಧನೆಯೂ ಯೇಸುಕ್ರಿಸ್ತನು ಅದ್ಭುತ ಕಾರ್ಯಗಳನ್ನು ಮತ್ತು ಸೂಚಕ ಕಾರ್ಯಗಳನ್ನು ಮಾಡಿ ತಾನು ದೇವರ ಮಗನೆಂದು ತೋರಿಸಿಕೊಳ್ಳುವಂತಹ ಶೋಧನೆಯಾಗಿತ್ತು. ತಾನು ಅದ್ಭುತಗಳನ್ನು ಮಾಡುವುದರ ಮೂಲಕ ಪ್ರತಿಯೊಬ್ಬನ ಪ್ರಶಂಸೆಯನ್ನು ಪಡೆಯಬಹುದಿತ್ತು. ಈ ಲೋಕದ ಮತ್ತು ಜನರ ದೃಷ್ಟಿಯಲ್ಲಿ ಯೇಸುಕ್ರಿಸ್ತನು ರಾಜನಂತಿರಬಹುದಾಗಿತ್ತು. ಇದು ಯೇಸುಕ್ರಿಸ್ತನಿಗೆ ತನ್ನ ಮನಸ್ಸಿನಲ್ಲಾದ ಶೋಧನೆ. ಇದು 1 ಯೋಹಾನ 2:16ರಲ್ಲಿ (ಮನುಷ್ಯನ) ಕಣ್ಣಿನಾಸೆಗೆ ಸಂಬಂಧಿಸಿದ್ದಾಗಿದೆ. ಹವ್ವಳು ಮತ್ತು ಆದಾಮರಿಂದ ತಿನ್ನಲ್ಪಟ್ಟಂತಹ ಆ ನಿಷೇಧಿಸಲ್ಪಟ್ಟ ಹಣ್ಣು ಕಣ್ಣಿಗೆ ರಮ್ಯವಾಗಿತ್ತು (ಆದಿಕಾಂಡ 3:6).

ಆದರೆ ಯೇಸುಕ್ರಿಸ್ತನು ಈ ಲೋಕದ ರಾಜನಾಗುವುದಕ್ಕಾಗಿ ಕಳುಹಿಸಲ್ಪಡಲಿಲ್ಲ. ಮಾನವರಿಂದ ಗೌರವವನ್ನು ಹೊಂದುವುದಕ್ಕಾಗಿ ಈ ಲೋಕಕ್ಕೆ ಕಳುಹಿಸಲ್ಪಡಲಿಲ್ಲ (ಯೇಶಾಯ 53:3; ಫಿಲಿಪ್ಪಿ. 2:6-8). ಆತನು ನಮಗಾಗಿ ಶ್ರಮ ಪಡಲು ಮತ್ತು ನಮಗೋಸ್ಕರ ಸಾಯುವುದಕ್ಕಾಗಿ ಈ ಲೋಕಕ್ಕೆ ಕಳುಹಿಸಲ್ಪಟ್ಟನು. ಈ ಕಾರಣದಿಂದಾಗಿಯೇ ಯೇಸುಕ್ರಿಸ್ತನು ಸೈತಾನನು ತಂದಂತಹ ಶೋಧನೆಯನ್ನು ತಿರಸ್ಕರಿಸುವುದು ಅಗತ್ಯವಾಗಿತ್ತು.

**7** ಮತ್ತೆ ಯೇಸುಕ್ರಿಸ್ತನು ಧರ್ಮೋಪದೇಶಕಾಂಡ 6:16ರಲ್ಲಿರುವ ದೇವರ ವಾಕ್ಯವನ್ನು ಉಪಯೋಗಿಸಿಕೊಂಡು ಸೈತಾನನ ಮೇಲೆ ಜಯ ಪಡೆಯುತ್ತಾನೆ. ಯಹೂದ್ಯರು ಮರಳುಗಾಡಿನಲ್ಲಿ ದೇವರ ಪ್ರಸನ್ನತೆಯ ಗುರುತಿಗಾಗಿ ಸೂಚನೆಗಳನ್ನು ಮಾಡಿ ತೋರಿಸಬೇಕೆಂದು ಕೇಳುವಂತಹ ಸಂದರ್ಭವನ್ನು ನೆನಪಿಗೆ ತರುತ್ತದೆ (ವಿಮೋಚನಕಾಂಡ 17:1-7). ಯೇಸುಕ್ರಿಸ್ತನು ತಾನೇ ಮೆಸ್ಸಿಯನು ಎಂಬುದನ್ನು ದೇವರೇ, ಸೂಚಕ ಕಾರ್ಯದ ಮೂಲಕ ತೋರಿಸಿಕೊಡಬೇಕು ಎಂದು ದೇವರನ್ನು ಆತನು ಕೇಳುವುದಿಲ್ಲ ಅಥವಾ ಪರೀಕ್ಷಿಸುವುದಿಲ್ಲ. ಇದೇ ರೀತಿಯಾಗಿ ನಾವು ದೇವರನ್ನು ವಿಶೇಷವಾದ ಸೂಚಕ ಕಾರ್ಯಗಳನ್ನು ಮಾಡಬೇಕೆಂದು ಕೇಳಬಾರದು ಮತ್ತು ಇವುಗಳ ಮೂಲಕ ದೇವರನ್ನು ಪರೀಕ್ಷಿಸಬಾರದು (ಗಮನಿಸಿ:ಮಾರ್ಕ 8:11-12 ಮತ್ತು ಅಭಿಪ್ರಾಯ).

**8-9** ಕ್ರಿಸ್ತನ ಈ ಮೂರನೆಯ ಶೋಧನೆಯೂ ಬಹು ದೊಡ್ಡದು. ಯೇಸುಕ್ರಿಸ್ತನಿಗೆ ಸಮಸ್ತಭೂ ರಾಜ್ಯಗಳ ಮೇಲೆಲ್ಲಾ ಅಧಿಕಾರವನ್ನು ಕೊಡುತ್ತೇನೆ ಎಂದು ಸೈತಾನನು ವಾಗ್ದಾನ ಮಾಡುತ್ತಾನೆ. ಸೈತಾನನು ಇದನ್ನು ಮಾಡುವುದಕ್ಕೆ ಶಕ್ತಿಯನ್ನು ಹೊಂದಿದ್ದಾನೆ. **ಸೈತಾನನು ಈ ಲೋಕದ ಅಧಿಪತಿಯಾಗಿದ್ದಾನೆ** (ಯೋಹಾನ 12:31; 14:30). **ಈ ಲೋಕವೆಲ್ಲಾ ಈ ದುರಾತ್ಮನ ಅಧೀನತೆಯ ನಿಯಂತ್ರಣದಲ್ಲಿ ಇದೆ** (1 ಯೋಹಾನ 5:19). ಆದುದರಿಂದ ಸೈತಾನನು ತಾನು ಕ್ರಿಸ್ತನಿಗೆ ಮಾಡಿದ ವಾಗ್ದಾನವನ್ನು ಬಹು ಸುಲಭವಾಗಿ ನೆರವೇರಿಸಬಹುದಾಗಿತ್ತು ಮತ್ತು ಕ್ರಿಸ್ತನು ಈ ಲೋಕದ ರಾಜಾಧಿರಾಜನಾಗಿರಬಹುದಾಗಿತ್ತು. ಯೇಸುಕ್ರಿಸ್ತನು ಇಡೀ ಲೋಕವನ್ನೆಲ್ಲಾ ಸಂಪಾದಿಸಬಹುದಾಗಿತ್ತು. ಇದಕ್ಕೆ ಒಂದೇ ಒಂದು ಷರತ್ತು ಇತ್ತು. ಅದು ಏನೆಂದರೆ ದೇವರಿಗೆ ಬದಲಾಗಿ ಸೈತಾನನನ್ನು ಆರಾಧಿಸುವುದು.

ಈ ಮೂರನೆಯ ಶೋಧನೆಯು ಗರ್ವದ ಶೋಧನೆಯಾಗಿತ್ತು. ತನ್ನನ್ನು ತಾನು ಹೊಗಳಿಕೊಳ್ಳುವುದು (ಕೆಲವೊಂದು ಭಾಷಾಂತರದಲ್ಲಿ "ಗರ್ವದ (ಅಹಂಭಾವದ) ಜೀವಿತ" ಎಂದು ಅರ್ಥೈಸಲಾಗಿದೆ.) ಇದನ್ನು 1 ಯೋಹಾ 2:16ರಲ್ಲಿ ಕೊಡಲಾಗಿದೆ. ಇದು ಜ್ಞಾನವನ್ನು (ಆದಿಕಾಂಡ 3:6) ಸಂಪಾದಿಸುವುದು ಮತ್ತುಆದಿಕಾಂಡ 3:5ರಂತೆ ದೇವರ ಹಾಗೆ ಆಗುವ ಆಸೆಯನ್ನು ಹೊಂದಿರುವಂತಹುದ್ದಾಗಿದೆ .ಯೇಸುಕ್ರಿಸ್ತನು ಯಾವುದೇ ಪ್ರಯತ್ನ ಮತ್ತು ಕಷ್ಟವಿಲ್ಲದೆಯೇ, ಎಲ್ಲಾ ಜ್ಞಾನವನ್ನು ಮತ್ತು ಶಕ್ತಿಯನ್ನು ಹಾಗೂ ಅಧಿಕಾರವನ್ನು ಈ ಲೋಕದಲ್ಲಿ ಹೊಂದಿಕೊಂಡಿರಬಹುದಾಗಿತ್ತು. ಎಲ್ಲಾ ಮಾನವರು ಆತನ ಪಾದಕ್ಕೆ ಅಡ್ಡ ಬೀಳುತ್ತಿದ್ದರು. ಆದರೂ ಯೇಸುಕ್ರಿಸ್ತನು ಸೈತಾನನ ಕೊಡುಗೆಯನ್ನು ತಿರಸ್ಕರಿಸುತ್ತಾನೆ.

**10** ಪುನಃ ಯೇಸುಕ್ರಿಸ್ತನು ತನ್ನ ಮೂರನೆಯ ಶೋಧನೆಯ ಈ ಸಮಯದಲ್ಲಿ ಧರ್ಮೋಪದೇಶಕಾಂಡ 6:13ರಲ್ಲಿರುವಂತಹ ದೇವರ ವಾಕ್ಯವನ್ನು ಉಪಯೋಗಿಸುತ್ತಾ ಸೈತಾನನನ್ನು ಎದುರಿಸಿ ಸೋಲಿಸುತ್ತಾನೆ. ವಿಮೋಚನಕಾಂಡ 32:1-6ರಲ್ಲಿನ ವಚನವು ಯಹೂದ್ಯರು ತಮ್ಮ ದೇವರಿಗೆ ಬದಲಾಗಿ, ಬಂಗಾರದ ಬಸವನನ್ನು ಆರಾಧಿಸಿದಂತಹ ಸಮಯ ಸನ್ನಿವೇಶದ ಕಡೆಗೆ ಗಮನ ಸೆಳೆಯುತ್ತದೆ. ಮನುಷ್ಯನು ದೇವರನ್ನೇ ಆರಾಧಿಸಬೇಕು. ಇದಕ್ಕೆ ಬದಲಾಗಿ ಯಾರನ್ನಾಗಲೀ ಅಥವಾ ಮತ್ತಾವುದನ್ನಾಗಲೀ ಆರಾಧಿಸಬಾರದು (ವಿಮೋಚನಕಾಂಡ 20:3-6).

ನಾವು ಹೇಗೆ ದೇವರ ವಾಕ್ಯವೆಂಬ ಆಯುಧವನ್ನು ಉಪಯೋಗಿಸಿಕೊಂಡು ಸೈತಾನನನ್ನು ಸೋಲಿಸಬಹುದು ಮತ್ತು ಎದುರಿಸಬಹುದು ಎಂಬುದನ್ನು ಯೇಸುಕ್ರಿಸ್ತನು ತಾನೇ ಈ ಶೋಧನೆಗಳಲ್ಲಿ ದೇವರ ವಾಕ್ಯವನ್ನು ಉಪಯೋಗಿಸಿ, ಪ್ರದರ್ಶಿಸಿ ನಮಗೆ ತೋರಿಸಿಕೊಟ್ಟಿದ್ದಾನೆ. ದೇವರ ವಾಕ್ಯವು ಆತ್ಮನ ಖಡ್ಗವಾಗಿದ್ದು (ಎಪೇಸ 6:17). ಇದು ಕ್ರೈಸ್ತರ ಆಯುಧಗಳಲ್ಲೊಂದಾಗಿದೆ. ಒಂದು ವೇಳೆ ನಾವು ಸೈತಾನನನ್ನು ಎದುರಿಸಿದರೆ ನಮ್ಮನ್ನು ಬಿಟ್ಟು ಓಡಿಹೋಗುವನು (ನೋಡಿರಿ:ಯಾಕೋಬ 4:7 ಮತ್ತು ಅಭಿಪ್ರಾಯ). ಶೋಧಕನು ಬಳಿಗೆ ಬಂದಾಗ ಕ್ರಿಸ್ತನು ಮಾಡಿದಂತೆ ಅಂದರೆ "ಸೈತಾನನೇ ನನ್ನಿಂದ ತೊಲಗಿ ಹೋಗು!" ಎಂದು ಹೇಳಿದಂತೆ ನಾವು ಸಹ ಮಾಡೋಣ.

**11** ಆಗ ಸೈತಾನನು ಆತನನ್ನು ಬಿಟ್ಟು ಹೋದನು. ಆದರೆ ಶಾಶ್ವತವಾಗಿ ಅಲ್ಲ. ಲೂಕ 4:13ನೇ ವಚನದ ಪ್ರಕಾರ ಸೈತಾನನು, ಕ್ರಿಸ್ತನನ್ನು,ಅವಕಾಶಕ್ಕಾಗಿ ಸ್ವಲ್ಪ ಸಮಯ ದವರೆಗೆ ಬಿಟ್ಟು ಹೊರಟು ಹೋದನು. ಮತ್ತೆ ಸೈತಾನನು, ಕ್ರಿಸ್ತನಿಗೆ ಗೆತ್ಸೆಮನೆ ತೋಟದಲ್ಲಿಯೂ ಮತ್ತು ಶಿಲುಬೆಯ ಮೇಲಿರುವಾಗ ಶೋಧನೆಯನ್ನುತಂದಂತಹದ್ದನ್ನು ನಾವು ತಿಳಿದವರಾಗಿದ್ದೇವೆ (ಮಾರ್ಕ 14:32-35; 15:30-32). ಯೇಸುಕ್ರಿಸ್ತನು ಶಿಲುಬೆಯನ್ನು ತಿರಸ್ಕರಿಸುವಂತೆ ಮಾಡುವುದಕ್ಕಾಗಿ ಸೈತಾನನು ಆತನ ಹಿರಿಯ ಶಿಷ್ಯನಾದ ಪೇತ್ರನ ಮುಖಾಂತರವಾಗಿಯೂ ಕೂಡ ಶೋಧನೆಯನ್ನು ತಂದನು (ಮಾರ್ಕ 8:31-33).

## ಕ್ರಿಸ್ತನು ಬೋಧಿಸಲು ಪ್ರಾರಂಭಿಸಿದ್ದು 4:12-17

(ಮಾರ್ಕ 1:14-15)

**12** ನೋಡಿರಿ : ಮಾರ್ಕ 1:14 ಮತ್ತು ಅಭಿಪ್ರಾಯ.

**13-16** ಗಲಿಲಾಯ ಸಮುದ್ರವೆಂಬ ಕೆರೆಯ ದಡದ ಉತ್ತರ ಭಾಗದಲ್ಲಿದ್ದಂತಹ ಕಪೆರ್ನೌಮ್ ಎಂಬ ಊರಲ್ಲಿ ಕ್ರಿಸ್ತನು ತನ್ನ ಬೋಧನೆಯ ಸೇವೆಯನ್ನು ಪ್ರಾರಂಭಿಸಿದನು.

ಪ್ರಥಮ ಶಿಷ್ಯರಾದಂತಹ ಸೀಮೋನ ಮತ್ತು ಅಂದ್ರೇಯ ಇವರಿಬ್ಬರು ಕಪರ್ನೌಮಿನಲ್ಲಿದ್ದಂತ ಯೇಸುವಿನ ಮನೆಯಲ್ಲಿ ಇದ್ದರು (ಮಾರ್ಕ 1:21-29).

ಮತ್ತಾಯನು ಹಳೇ ಒಡಂಬಡಿಕೆಯಲ್ಲಿಯಲ್ಲಿ ಮೆಸ್ಸಿಯನ ಬಗ್ಗೆ ಇರುವ ಯೆಶಾಯ 9:1-2ರ ಪ್ರವಾದನೆಯ ಉದಾಹರಣೆಯನ್ನು ತೆಗೆದುಕೊಂಡು ಇದು ಸಂಪೂರ್ಣವಾಗಿ ಕ್ರಿಸ್ತನಲ್ಲಿಯೇ ನೇರವೆರಿತು ಎಂದು ತೋರಿಸುತ್ತಾನೆ. ಯೇಶಾಯ ಪ್ರವಾದಿಯ ಕಾಲದಲ್ಲಿ ಇಸ್ರಾಯೇಲರ ಉತ್ತರದ ಬಾಗವು[18] ಅಸ್ಸಿರಿಯಾ ರಾಜ್ಯದ ಅದಿನಕ್ಕೊಳಪಟ್ಟದ್ದಾಗಿ ಆ ಸ್ಥಳವು ಜೆಬುಲೋನ್ ಮತ್ತು ನಪ್ತಾಲೀ ಎಂದು ಕರೆಯಲ್ಪಟ್ಟಿತು. ಆ ಬಾಗದ ಜನರು ಬಿಡುಗಡೆಹೊಂದುವರು ಎಂದು ಯೇಶಾಯನೆಂಬ ಪ್ರವಾದಿಯು ಪ್ರವಾದಿಸಿದ, ಕತ್ತಲಲ್ಲಿ ವಾಸಿಸಿದ ಈ ಸೀಮೆಯ ಜನರಿಗೆ ದೊಡ್ಡ ಬೆಳಕು ಕಾಣಿಸಿತು....... (ವಚನ 16). ಆ ಬೆಳಕೇ ಕ್ರಿಸ್ತನಾಗಿದ್ದಾನೆ.ಯೆಶಾಯನು ಪ್ರವಾದಿಸಿದ ಪ್ರವಾದನೆಗನುಸಾರವಾಗಿ ಇಸ್ರಾಯೇಲರ ಉತ್ತರ ಪ್ರಾಂತದಲ್ಲಿರುವ ಗಲಿಲಾಯ ಎಂಬ ಊರಿನಿಂದ. ಕ್ರಿಸ್ತನು ತನ್ನ ಸುವಾರ್ತಾ ಸೇವೆಯನ್ನು ಆರಂಭಿಸಿದನು (ವಚನ 15).

**17** ಮಾರ್ಕ 1:15 ಮತ್ತು ವ್ಯಾಖ್ಯಾನ ನೋಡಿರಿ.

## ಯೇಸು ಪ್ರಥಮ ಶಿಷ್ಯರನ್ನು ಕರೆದದ್ದು.(4:18-22)

(ಮಾರ್ಕ 1:16-20)

**18-22** ಮಾರ್ಕ 1:16-20 ಮತ್ತು ವ್ಯಾಖ್ಯಾನ ನೋಡಿರಿ

## ಯೇಸು ರೋಗಗಳನ್ನು ಗುಣಪಡಿಸುವುದು.(4:23-25)

**23-25** ಯೇಸು ತನ್ನ ಸೇವೆಯಲ್ಲಿ ಕಲಿಸುವ, ಬೋಧಿಸುವ ಮತ್ತು ಸ್ವಸ್ಥಯ ಸಂಪೂರ್ಣಸೇವೆಯನ್ನು ಮಾಡುತ್ತಾ ಮುಂದುವರಿಸಿದನು (ವಚನ 23). ಆತನು ಸೈನಾಗೋಗಸ್ ಅಥವಾ[19] ಸಭಾಮಂದಿರದಲ್ಲಿ ಬೋಧಿಸಿದನು ಮತ್ತು ಪರಲೋಕ ರಾಜ್ಯದ ಸುವಾರ್ತೆಯನ್ನು ಸಾರಿದನು (ಮಾರ್ಕ 1:14-15 ವ್ಯಾಖ್ಯಾನ ನೋಡಿರಿ).

**ರೋಗದಿಂದ ಬಳಲುತ್ತಿರುವ ಪ್ರತಿಯೊಬ್ಬರನ್ನೂ ವಾಸಿಮಾಡಿದನು.**

ಅಲ್ಲಿದ್ದವರಲ್ಲಿ ಯಾರನ್ನು ಬಿಡದೆ ಎಲ್ಲ ಕಾಯಿಲೆಯ ರೋಗಿಗಳನ್ನೂ ವಾಸಿ ಮಾಡಿದನು .ಆತನಿಂದ ವಾಸಿ ಮಾಡಲಾಗದಂತ ಯಾವ ರೋಗವು ಅಲ್ಲಿರಲಿಲ್ಲ. ಆತನು ಕೇವಲ ಜನರ ದೇಹದ ರೋಗಗಳನ್ನು ವಾಸಿ ಮಾಡಿದ್ದಲ್ಲದೇ ಅವರ ಆತ್ಮದ ರೋಗಗಳನ್ನು ಸಹ ವಾಸಿ ಮಾಡಿದನು.ಪಾಪವು ಆತ್ಮದ ರೋಗವಾಗಿದೆ.ಕ್ರಿಸ್ತನು, ಪಾಪದ ಬಂಧನದಲ್ಲಿರುವ ಗಂಡಸರು ಮತ್ತು ಹೆಂಗಸರನ್ನು ಬಿಡುಗಡೆಗೊಳಿಸಲು ಬಂದನು. ಕ್ರಿಸ್ತನು ಪಾಪಗಳನ್ನು ಕ್ಷಮಿಸುವುದಕ್ಕಾಗಿ ಬಂದನು. ಆತನು ಶಾರೀರಿಕವಾಗಿ ಮತ್ತು ಆತ್ಮೀಕವಾಗಿಯೂ ಸಮೃದ್ಧಿಯಾದ ಜೀವವನ್ನು ಕೊಡಲು ಬಂದನು.(ಯೋಹಾನ 10:10).

ಇಸ್ರಾಯೇಲಿನ ಎಲ್ಲಾ ಪ್ರಾಂತ್ಯಗಳಿಂದ, ಮಾತ್ರವಲ್ಲದೆ ದೆಕಪೊಲಿ[20] ಮತ್ತು[21] ಯೋರ್ದಾನ ಹೊಳೆಯ ಆಚೇ ಕಡೆಯಿಂದಲು ಆತನ ಬಳಿಗೆ ಗುಂಪು ಗುಂಪಾಗಿ ಕೂಡಿ ಬಂದರು.

# ಅಧ್ಯಾಯ - 5

## ಪರಲೋಕದ ಆನಂದ (5:1-12)

(ಲೂಕ 6:20-23)

**1-2** ಕ್ರಿಸ್ತನು ಮಾಡಿದ ಬೋಧನೆಯಲ್ಲಿ ಬೆಟ್ಟದ ಮೇಲೆ ಮಾಡಿದ ಪ್ರಸಿದ್ದವಾದಂತ ಪ್ರಸಂಗವನ್ನು ಮತ್ತಾಯನು ತನ್ನ ಸುವಾರ್ತೆಯ 5-7ರ ಅಧ್ಯಾಯಗಳಲ್ಲಿ ದಾಖಲಿ ಸಿದ್ದಾನೆ. ಇಲ್ಲಿ ಕ್ರಿಸ್ತನು ನಾವು ಹೇಗೆ ಜೀವಿಸಬೇಕೆಂದು ಬೋಧಿಸುತ್ತಾನೆ. ಮಾತ್ರವಲ್ಲದೆ ಈ ಸಂದರ್ಬದಲ್ಲಿಪ್ರಾಮುಖ್ಯವಾಗಿ ಆತನು ತನ್ನ 12 ಜನ ಶಿಷ್ಯರಿಗೂ ಹಾಗೆಯೇ ಕೂಡಿ ಬಂದ ಜನರಿಗೂ ಬೋಧಿಸಿದನು ಮತ್ತು ಆತನ ಭೋದನೆಯನ್ನು ಕೇಳಿ ಆಶ್ಚರ್ಯಪಟ್ಟರು (ಮತ್ತಾಯ 7:28).

**3** ಆತ್ಮದಲ್ಲಿ ಬಡವರಾಗಿರುವವರು ಧನ್ಯರು.ಕ್ರಿಸ್ತನ ಬೋಧನೆಯಲ್ಲಿ ಇದು ಮೊದಲನೆಯ ದಾಖಲೆಯಾಗಿದೆ ಮತ್ತು ಇದು ಎಲ್ಲರಿಗೂ ಅತೀ ಮುಖ್ಯವಾದ ಆತನ ಬೋಧನೆಯಾಗಿದೆ. ಯಾಕೆಂದರೆ ಆತ್ಮದಲ್ಲಿ ಬಡವನಾಗದೆ ಯಾವನು ಪರಲೋಕ ರಾಜ್ಯದಲ್ಲಿ ಪ್ರವೇಶಿಸಲಾರನು. ಆಶೀರ್ವಾದವನ್ನು ಪಡೆಯಲು ಶಕ್ತಿವಂತನು, ಐಶ್ವರ್ಯವಂತನು ಮತ್ತು ಸ್ವಾರ್ಥಮಯನು ಆಗಿರಬೇಕೆಂದು ಈ ಲೋಕವು ಭೋದಿಸುತ್ತದೆ. ಆದರೆ ಇದು ಒಂದು ದೊಡ್ಡ ತಪ್ಪು (ಲೂಕ 6:24 ವ್ಯಾಖ್ಯಾನ ನೋಡಿರಿ).ನಿಜವಾದ ಆಶೀರ್ವಾದ ಹೊಂದಬೇಕಾದಲ್ಲಿ ಆತ್ಮದಲ್ಲಿ ಬಡವನಾಗಬೇಕು ಎಂದು ಕ್ರಿಸ್ತನು ಭೋದಿಸಿದನು(ಲೂಕ 6:20) ಅಂದರೆ ನಿಜವಾಗಿಯೂ ಆಶೀರ್ವಾದ ಹೊಂದಿದವನಾಗಿದ್ದಾನೆ. ಆತ್ಮೀಕ ರೀತಿಯಲ್ಲಿ ಶ್ರೀಮಂತನಾಗ ಬಯಸುವುದಾದರೆ ಮಾನವ ಸ್ವಭಾವದಲ್ಲಿ ತಗ್ಗಿಸಲ್ಪಡ ಬೇಕು.

ಆತ್ಮದಲ್ಲಿ ಬಡವರಾಗುವುದೆಂದರೆ ತನ್ನನ್ನು ತಾನು ಬರಿದುಮಾಡಿಕೊಳ್ಳುವುದು. ನಾವು ದೇವರ ಆಶೀರ್ವಾದದಿಂದ ತುಂಬಿಸಲ್ಪಡಲು ಅಪೇಕ್ಷಿಸಿದರೆ, ಮೊದಲು ನಮ್ಮನ್ನು ನಾವು ತಗ್ಗಿಸಿಕೊಳ್ಳಬೇಕು ಅಥವಾ ಬರಿದು ಮಾಡಿಕೊಳ್ಳಬೇಕು. ಸ್ವಾಭಾವಿಕವಾಗಿ ಮನುಷ್ಯನು ಸ್ವಾರ್ಥತೆಯಿಂದ ಮತ್ತು ಸ್ವಾಭಿಮಾನದಿಂದ ತುಂಬಿದವನಾಗಿದ್ದಾನೆ. ಇದು ನಮ್ಮ ಹಳೆಯ ಸ್ವಬಾವ ಅಥವಾ ಹಳೆಯ ನಾನತ್ವ ಎಂದು ಕರೆಯಲ್ಪಟ್ಟಿದೆ. (ರೋಮಾ 6:6). ಕ್ರಿಸ್ತನು ಈ ಹಳೆಯ ಸ್ವಭಾವ ಅಥವಾ ಸ್ವಾರ್ಥದ ಪಾಪವನ್ನು ಖಂಡಿಸುತ್ತಾನೆ ಮತ್ತು ಆತ್ಮದಲ್ಲಿ ಬಡವರಾಗಿರುವವರನ್ನು ರಕ್ಷಿಸುತ್ತಾನೆ. ಆದುದರಿಂದ ಆತ್ಮದಲ್ಲಿ ಬಡವರಾಗುವುದರ ಅರ್ಥವೇನೆಂದರೆ ನಾವು ದಂಡನೆಗೆ ಯೋಗ್ಯರು ಎಂದು ಒಪ್ಪಿಕೊಳ್ಳುವುದು. ಅಂದರೆ ನಾವು ಅಪರಾದಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ... ಬದು ಕಿಸಿದನು (ಎಫೆಸ 2:1).

ಆದುದರಿಂದ ಆರಂಭದಿಂದಲೇ ನಾವು ಸರಿಯಾಗಿ ತಿಳಿದುಕೊಳ್ಳಬೇಕು. ನಾವು ನಮ್ಮ ಸ್ವಂತ ಶಕ್ತಿಯಿಂದ ಕ್ರೈಸ್ತ ಜೀವಿತ ನಡೆಸಲು ಮತ್ತು ಸ್ವಂತ ಶಕ್ತಿಯಿಂದ ಕ್ರಿಸ್ತನ ಭೋಧನೆಗಳನ್ನು ಪಾಲಿಸಲು ಸಾಧ್ಯವಿಲ್ಲ. ನಾವು ಅಯೋಗ್ಯರು, ನಾವು ದೋಷಿಗಳಾಗಿದ್ದೇವೆ. ನಾವು ಸತ್ತವರಂತೆ ಆಗಿದ್ದೇವೆ. ನಾವು ಯೋಗ್ಯರೆಂದು ಮತ್ತು ಸ್ವ ಶಕ್ತಿಯಿಂದ ಕ್ರಿಸ್ತನನ್ನು ಹಿಂಬಾಲಿಸುತ್ತೇವೆ ಎಂದು ಬಾವಿಸಿದರೆ ನಾವು ಆತ್ಮದಲ್ಲಿ ಬಡವರಲ್ಲ.

ಯಾವನಾದರೂ ಆತ್ಮದಲ್ಲಿ ಬಡವನಾಗಿರದಿದ್ದರೆ ಆತನು ದೇವರನ್ನು ಸಂದಿಸಿಲ್ಲ.. ನಾವು ನಿಜವಾಗಿಯೂ ದೇವರನ್ನು ಅರಿತಿದ್ದರೆ ನಾವು ಆತ್ಮದಲ್ಲಿ ಬಡವರಾಗುತ್ತೆ. ದೇವರು ದೊಡ್ಡವನು, ಸರ್ವಶಕ್ತನು,ಅತಿಪವಿತ್ರನು,ತುಂಬಾ ಒಳ್ಳೆಯವನು ಎಂದು ಒಮ್ಮೆ ನಾವು ತಿಳಿದುಕೊಂಡು ನಮ್ಮನ್ನು ಹೋಲಿಸಿಕೊಂಡಾಗ ನಮ್ಮನ್ನು ನಾವು ಎಂತಃ ನಿರ್ಭಾಗ್ಯರೂ ಮತ್ತು ಪಾಪಿಗಳು ಆಗಿದ್ದೇವೆಂದು ಪರಿಗಣಿಸುತ್ತೇವೆ.

ಆತ್ಮದಲ್ಲಿ ಬಡವ ಅಂದರೆ ಅಂಜಿಕೆ ಅಥವಾ ನಾಚಿಕೆ ಎಂದರ್ಥವಲ್ಲ, ಆತ್ಮದಲ್ಲಿ ಬಡವನಾಗಿರುವಂತದ್ದು ಸ್ವಾಭಾವಿಕವಾದ ಗುಣವಲ್ಲ. ಇದು ಒಂದು ಆತ್ಮೀಕ ಗುಣಮಟ್ಟದ್ದಾಗಿದೆ. ನಿಜವಾಗಿಯೂ ಈ ಎಲ್ಲಾ ಆತ್ಮೀಕ ಗುಣಗಳಿಂದ ಕೂಡಿದ ಫಲಗಳನ್ನು ನಾವು ವಚನ 3-10ರಲ್ಲಿ ನೋಡಬಹುದು. ಆತ್ಮದಲ್ಲಿ ಬಡವನು ಅಂದರೆ ಅಂತರಂಗದಲ್ಲಿ ದೀನನಾಗಿರುವುದು. ಬಹಳ ಜನರು ತಮ್ಮ ತುಟಿಗಳಿಂದ "ನಾನು ಬಲಹೀನನು ನನ್ನಿಂದ ಏನೂ ಮಾಡಲೂ ಸಾಧ್ಯವಿಲ್ಲ" ಹೇಳಿದ್ದಗ್ಯೂ ಅಂತರಂಗದಲ್ಲಿ ಅವರು ಇದನ್ನು ನಂಬಿರುವುದಿಲ್ಲ. ಅವರು ಹೇಳುವುದಿಷ್ಟೇ, ನಾನು ದೇವರ ವಿಷಯವಾಗಿ ಮಾಡದೇ ಇದ್ದದ್ದಕ್ಕೆ ಕ್ಷಮಿಸಿರಿ. ಆದರೆ ಅವರು ಆ ಸಮಯದಲ್ಲಿ ಮಾತ್ರ ದೀನತೆಯುಳ್ಳವರಂತೆ ನಟಿಸುತ್ತಾರೆ..

ದೇವರು ತನ್ನ ಮುಂದೆ ನಿಜವಾಗಿ ತಗ್ಗಿಸಿಕೊಂಡವರನ್ನು ಮಾತ್ರ ಸ್ವೀಕರಿಸುತ್ತಾನೆ. ನಾನು ಉನ್ನತ ಲೋಕವೆಂಬ ಪವಿತ್ರ ಆಲಯದಲ್ಲಿ ವಾಸಿಸುವ ನಾನು ಜಜ್ಜಿಹೋದ ದೀನ ಮನದೊಂದಿಗೆ ಇದ್ದುಕೊಂಡು ದೀನನ ಆತ್ಮವನ್ನೂ, ಜಜ್ಜಿ ಹೋದವನ ಮನಸ್ಸನ್ನೂ ಉಜ್ಜೀವಿಸುವವನಾಗಿದ್ದೇನೆ ಎಂದು ದೇವರು ಹೇಳಿದ್ದಾನೆ. (ಯೆಶಾಯ 57:15). ಯಾರು ಧರ್ಮವನ್ನು ತಿರಸ್ಕರಿಸುವರೋ, ಅವರನ್ನು ಆತನು ತಿರಸ್ಕರಿಸುವನು. ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುವನು (ಜ್ಞಾನೋಕ್ತಿ 3:34, 1 ಪೇತ್ರ 5:5).

ಪೇತ್ರನು ಯೇಸುವಿನ ಮುಖ್ಯ ಶಿಷ್ಯನಾಗಿದ್ದನು. ಯಾಕೆಂದರೆ ಆತನು ಸ್ವಭಾವದಲ್ಲಿ ಧೈರ್ಯ ಮತ್ತು ಬರವಸೆಯ ವ್ಯಕ್ತಿ.ಆತನು ಪ್ರಥಮವಾಗಿ ಯೇಸುವುಯಾರಾಗಿದ್ದಾನೆಂದು ಗುರುತಿಸಿದಾಗ ಯೇಸುವಿನ ಮೊಣಕಾಲಿಗೆ ಬಿದ್ದು, ಸ್ವಾಮಿ ನಾನು ಪಾಪಾತ್ಮನು; ನನ್ನನ್ನು ಬಿಟ್ಟು ಹೋಗಬೇಕು ಅಂದನು (ಲೂಕ 5:8). ಅಪೋಸ್ತಲರಲ್ಲಿ ಗಣ್ಯನಾದ ಪೌಲನು, ಆತ್ಮದಲ್ಲಿ ಬಡವನಾಗಿದ್ದನು (1ನೇ ಕೊರಿಂಥ 2:1-5, 2ನೇ ಕೊರಿಂಥ 3:5, 4:7, ಫಿಲಿಪ್ಪಿ 3:7-9 ನೋಡಿರಿ). ಕೊನೆಯದಾಗಿ ಆತನು ದೇವಸ್ವರೂಪನಾಗಿದ್ದರು....ದಾಸನ ರೂಪ ಧರಿಸಿಕೊಂಡನು (ಫಿಲಿಪ್ಪಿ 2:5-8, ವ್ಯಾಖ್ಯಾನ ನೋಡಿರಿ).

ಆದುದರಿಂದ ನಾವು ದೇವರ ಸನ್ನಿದಿಯಲ್ಲಿ ಹೊಗಳಿಕೊಳ್ಳುವುದಕ್ಕೆ ಏನೂ ಅಲ್ಲ ಎಂಬುದನ್ನು ನೆನಪುಮಾಡಿಕೊಳ್ಳೋಣ. ನಾವು ನಮ್ಮ ಜಾತಿ,ಹೆಸರು,ವಿದ್ಯೆ, ಜಾಣತನ ಮತ್ತು ಸಂಪತ್ತು ಇವುಗಳಿಗಾಗಿ ಹೊಗಳಿಕೊಳ್ಳುವುದಕ್ಕಾಗುವುದಿಲ್ಲ ಯಾಕೆಂದರೆ ಇವುಗಳು ಬೆಲೆ ಇಲ್ಲದವುಗಳೂ, ವ್ಯರ್ಥವಾದವುಗಳೂ ಆಗಿವೆ.ನಾವು, ದೇವರ ಮುಂದೆ ಏನನ್ನು ಕೊಂಡೊಯ್ಯಲು ಸಾದ್ಯವಿಲ್ಲ. ನಾವು ಬರಿದಾದ ಮಣ್ಣಿನ ಪಾತ್ರೆಯೋಪಾದಿಯಲ್ಲಿ ದೇವರ ಬಳಿಗೆ ಬರಬೇಕು. ದೇವರು ತನ್ನ ಕೃಪೆಯಲ್ಲಿ ಕರುಣೆಯಿಂದ ನಮ್ಮನ್ನು ಆತ್ಮಿಕಆಶೀರ್ವಾದಗಳಿಂದ ತುಂಬಿಸಲಿ ಎಂದು ಪ್ರಾರ್ಥನಾ ಪೂರ್ವಕವಾಗಿ ಆತನ ಬಳಿಗೆ ಬರಬೇಕು. **ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ. ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು** (1ನೇ ಪೇತ್ರ 5:6).

4 ದುಃಖಪಡುವವರು ಧನ್ಯರು. ಧನ್ಯರು ಎಂಬ ಶಬ್ದದ ಅರ್ಥವು ಸಂತೋಷ ಎಂಬುದಾಗಿದೆ. ಆದ್ದರಿಂದ ಯೇಸುವು ದುಃಖ ಪಡುವವರು ಸಂತೋಷಪಡುವವರಾಗಿದ್ದಾರೆ ಎಂದು ಹೇಳುತ್ತಾನೆ.

ಕ್ರಿಸ್ತನ ಭೋಧನೆಯು ಲೋಕದ ಭೋಧನೆಗೆ ವಿರುದ್ಧವಾಗಿದೆ. ದುಃಖ ಪಡಬಾರದು. ದುಃಖದಿಂದ ಪಾರಾಗಿ, ಸಂತೋಷವನ್ನು ಹುಡುಕಿರಿ ಎಂದು ಲೋಕವು ಹೇಳುತ್ತದೆ. ಆದರೆ ನಿಜವಾದ ಸಂತೋಷಕ್ಕಾಗಿ ದುಃಖಪಡಬೇಕು ಎಂದು ಯೇಸುವು ಅಪ್ಪಣೆ ಕೊಡುತ್ತಾನೆ.

ಯೇಸುವು ದುಃಖಪಡಬೇಕೆಂದು ಹೇಳಿದ್ದರ ಅರ್ಥವೇನು. ನಾವು ಮಾಡಿದ ಪಾಪಗಳಿಗಾಗಿ ದುಃಖಪಡಬೇಕು ಎಂದು ಇದರ ಅರ್ಥ. ಕ್ರಿಸ್ತನು ಮಾತಾಡುವುದು, ನಾವು ನಮ್ಮ ಆತ್ಮೀಕ ಜೀವಿತಕ್ಕಾಗಿ ದುಃಖಪಡಬೇಕು ಪ್ರಾಪಂಚಿಕವಾಗಿ ದುಃಖ ಪಡುವುದಲ್ಲ ಎಂಬುದಾಗಿ ಮಾತನಾಡಿದ್ದಾನೆ. ನಾವು ರಕ್ಷಣಯ ಆನಂದವನ್ನು ಅಂಗೀಕಾರ ಮಾಡುವುದಕ್ಕಿಂತ ಮುಂಚೆ, ನಮ್ಮ ಪಾಪಗಳಿಗಾಗಿ ದುಃಖಿಸಬೇಕು. ಇಂತಹ ದುಃಖವು ಪಶ್ಚಾತ್ತಾಕ್ಕೆ ನಡೆಸುವುದು. **ದೇವರ ಚಿತ್ತಾನುಸಾರವಾಗಿರುವ ದುಃಖವು ಮಾನಸಾಂತರವನ್ನುಂಟುಮಾಡಿ ರಕ್ಷಣೆಗೆ ಕಾರಣವಾಗಿದೆ. ಈ ಮಾನಸಾಂತರದಲ್ಲಿ ಪಶ್ಚಾತ್ತಾಪಕ್ಕೆ ಆಸ್ಪದವಿಲ್ಲ. ಆದರೆ ಲೋಕದವರಿಗಿರುವಂತಹ ದುಃಖವು ಮರಣವನ್ನುಂಟುಮಾಡುತ್ತದೆ** (2ನೇ ಕೊರಿಂಥ 7:10).

ನಾವು ನಮ್ಮ ಪಾಪಗಳಿಗಾಗಿ ಪದೆ ಪದೆ ದುಃಖ ಪಡಬೇಕೆ .ಸಹಜವಾಗಿ ನಾವು ಮಾಡಿದ ಪಾಪಗಳಿಗಾಗಿ ದುಃಖ ಪಡುವುದಿಲ್ಲ ಬದಲಾಗಿ ನಾವು ನಮ್ಮ ಪಾಪಗಳನ್ನು ತಪ್ಪುಗಳು ಎಂದು ಕರೆಯುತ್ತೆವೆ. ಆದರೆ ದೇವರು ಇವುಗಳನ್ನು ಪಾಪಗಳು ಎಂದು ಕರೆಯುತ್ತಾನೆ.ನಾವು ಮಾಡಿದ ಪಾಪಗಳನ್ನು ದೇವರು ನೋಡುವಂತ ರೀತಿಯಲ್ಲಿ ಎಲ್ಲಿಯ ತನಕ ನಾವು ನೋಡುವುದಿಲ್ಲವೋ ಅಲ್ಲಿಯವರೆಗೆ ನಾವು ನಿಜವಾಗಿ ಮಾನಸಾಂತರಪಡುವುದಿಲ್ಲ.

ದುಃಖ ಪಡುವವರು **ಸಮಾಧಾನ ಹೊಂದುವರು**. ನಾವು ನಮ್ಮ ಪಾಪಗಳಿಗಾಗಿ ಪಶ್ಚಾತಾಪ ಪಟ್ಟಾಗ ಕ್ರಿಸ್ತನು ನಮ್ಮನ್ನು ಆದರಿಸುವನು. ನಮ್ಮನ್ನು ನಾವು ಪರೀಕ್ಷಿಸಬೇಕು ಮತ್ತು ದುಃಖ ಪಡಬೇಕು. ಕ್ರಿಸ್ತನನ್ನು ದೃಷ್ಟಿಸಿ ನಿರೀಕ್ಷೆಯನ್ನು ಸಮಾಧಾನವನ್ನು ಮತ್ತು ಸಂತೋಷವನ್ನು ಕಂಡುಕೊಳ್ಳುತ್ತೆವೆ. ದುಃಖವಿಲ್ಲದೆ ಸಂತೋಷವಿಲ್ಲ. ನಿಜವಾದ ಪಶ್ಚಾತ್ತಾಪವಿಲ್ಲದೇ ರಕ್ಷಣೆ ಇಲ್ಲ.

5 ಶಾಂತರು ಧನ್ಯರು.ಪುನಃ ಈ ಭೋಧನೆಯು ಲೋಕದ ಭೋಧನೆಗೆ ವಿರುದ್ಧವಾಗಿದೆ ಲೋಕ ಹೇಳುತ್ತಿದೆ. ಒಂದು ವೇಳೆ ನೀನು ಲೋಕದಲ್ಲಿ ವಾರಸುದಾರನಾಗಬೇಕಾದರೆ, ಹಣ, ಅಧಿಕಾರ, ಕೀರ್ತಿಯನ್ನು ಗಳಿಸು.ಬಲಶಾಲಿಯಾಗಿರು, ಸ್ವಾಭಿಮಾನಿಯಾಗಿರು. ನಿನ್ನನ್ನು ನೀನ ಹೆಚ್ಚಿಸಿಕೋ. ಆದರೆ ಕ್ರಿಸ್ತನು ಇವೆಲ್ಲವುಗಳಿಗೆ ವಿರುದ್ಧವಾಗಿ ಹೇಳುತ್ತಾನೆ. ಶಾಂತ ಉಳ್ಳವರಾಗಿರಿ. ಯಾಕೆಂದರೆ ಶಾಂತರು ಮಾತ್ರ ಭೂಮಿಗೆ ಬಾದ್ಯರಾಗುವರು.

ಪ್ರಾಪಂಚಿಕ ಜನರು ಕ್ರಿಸ್ತನ ಭೋದನೆಯನ್ನು ಅರ್ಥಮಾಡಿಕೊಳ್ಳುವುದಿಲ್ಲ. ಕ್ರೈಸ್ತರನ್ನು ಇವರು ಅರ್ಥ ಮಾಡಿಕೊಳ್ಳುವುದಿಲ್ಲ. ನಮ್ಮತತ್ವಗಳು ಪ್ರಾಪಂಚಿಕ ತತ್ವಗಳಿಗಿಂತ ಸಂಪೂರ್ಣಈ ಬಿನ್ನವಾಗಿವೆ.

ಈ ಲೋಕವನ್ನು ಅವಲಂಬಿಸುವವರಿಗೆ ಇದು ಅಸಾಧ್ಯವಾಗಿದೆ. ಏಕ ಮನಸ್ಸಿನಿಂದ ಕ್ರಿಸ್ತನನ್ನು ಯಾರು ಅವಲಂಬಿಸಿರುವವರೋ ಅವರಿಗೆ ಇದು ಸಾಧ್ಯವಾಗಿದೆ.

ಮೊದಲನೆಯದಾಗಿ, ಈ ಪರಲೋಕದ ಸಮಾದಾನವು ಆತ್ಮದಲ್ಲಿ ಬಡವರಾಗಿರುವವರಿಗೆ. ಅಂದರೆ ದೇವರ ಸನ್ನಿದಿಯಲ್ಲಿರುವ ದೀನರಿಗೆ ಎಂದು ಅರ್ಥ.. ಈ ಮೂರನೆಯದಾಗಿ (ಶಾಂತರು) ಅಂದರೆ 'ಮನುಷ್ಯರ ಮುಂದೆ ದೀನತೆಯುಳ್ಳವರಾಗಿರುವುದು. ಇದು ಇನ್ನೂ ಬಹಳ ಕಷ್ಟಕರವಾದದ್ದು. ದೇವರು ನಮ್ಮನ್ನು ಪಾಪಿಗಳೆಂದು ಕರೆಯುವಾಗ ನಾವು ಒಪ್ಪಿಕೊಳ್ಳುತ್ತವೆ.ಅದರೆ ಒಂದು ವೇಳೆ ನಮ್ಮ ನೆರೆಯವರು ನಮ್ಮನ್ನು ಪಾಪಿಗಳೆಂದು ಕರೆದರೆ ಇದನ್ನು ಒಪ್ಪಿಕೊಳ್ಳುವುದು ಬಹು ಕಷ್ಟವಾಗುತ್ತದೆ.

ಶಾಂತಿಯ ವಿಷಯವಾಗಿ ಕ್ರಿಸ್ತನು ನಮಗೆ ಒಂದು ಉದಾಹರಣೆ ಕೊಟ್ಟನು.. **ನಾನು ಸಾತ್ವಿಕನೂ ದೀನ ಮನಸ್ಸುಳ್ಳವನೂ ಆಗಿರುವುದರಿಂದ............ ನನ್ನಿಂದ ಕಲಿತುಕೊಳ್ಳಿರಿ**(ಮತ್ತಾಯ 11:29). ಶಾಂತ ಮತ್ತು ಸೌಮ್ಯ ಗುಣವು ಸ್ವಾಭಾವಿಕ ಗುಣವಲ್ಲ. ಇದು ಆತ್ಮೀಕ ಗುಣವಾಗಿದೆ. ಇದು ಕೇವಲ ಪವಿತ್ರಾತ್ಮನ ಮೂಲಕ ಬರುವಂತಹದ್ದಾಗಿದೆ. ಇದು ಪವಿತ್ರಾತ್ಮನ ಫಲವಾಗಿದೆ (ಗಲಾತ್ಯ 5:23). ಯಾವಾಗ ನಾವು ಆತ್ಮದಲ್ಲಿ ಹೊಸದಾಗಿ ಹುಟ್ಟಿದಾಗ ಮತ್ತು, ಆತ್ಮೀಕ ಸ್ವಭಾವವನ್ನು ಹೊಂದುವಾಗ ಈ ನಿಜವಾದ ಶಾಂತಿಯನ್ನು ಪಡೆದುಕೊಳ್ಳುತ್ತೇವೆ (ಯೋಹಾನ 3:3, 5 ವ್ಯಾಖ್ಯಾನ ನೋಡಿರಿ).

ಕೆಲವು ಜನರು ಶಾಂತ ಅಥವಾ ಸೌಮ್ಯ ಅಂದರೆ ಬಲಹೀನ ಎಂದು ಬಾವಿಸುತ್ತಾರೆ. ಆದರೆ ಇದು ನಿಜವಾದುದಲ್ಲ. ನಿಜವಾಗಿ ಶಾಂತಿಯಿಂದ ತುಂಬಿಸಲ್ಪಟ್ಟ ವ್ಯಕ್ತಿಯು ಕರ್ತನಲ್ಲಿ ಆತ್ಮೀಕವಾಗಿ ಬಲವುಳ್ಳವನಾಗಿರುತ್ತಾನೆ.

ಒಬ್ಬ ಮನುಷ್ಯನು ಹೇಗೆ ಶಾಂತ ಮನಸ್ಸುಳ್ಳವನಾಗುತ್ತಾನೆ? ಮೊದಲನೆಯದಾಗಿ ಆತನು ಆತ್ಮದಲ್ಲಿ ಬಡವನಾಗುತ್ತಾನೆ (ವಚನ 3). ನಂತರ ಆತನು ತನ್ನ ಅಯೋಗ್ಯತನ ಮತ್ತು ಪಾಪಕ್ಕಾಗಿ ದುಃಖಿಸಬೇಕು. (ವಚನ 4). ಆಮೇಲೆ ಆತನು ತನ್ನ ನಂಬಿಕೆಯನ್ನು ಕ್ರಿಸ್ತನಮೇಲಿಡಬೇಕು . ಯಾವಾಗ ಒಬ್ಬ ವ್ಯಕ್ತಿಯು ಇದನ್ನು ಮಾಡುತ್ತಾನೋ, ಆಗ ಪವಿತ್ರಾತ್ಮನು ಅವನಲ್ಲಿ ಪ್ರವೇಶಿಸಿ ಆತನ ಜೀವಿತವನ್ನು ನೂತನಗೊಳಿಸುತ್ತಾನೆ. (2ನೇ ಕೊರಿಂಥ 5:17). ಪವಿತ್ರಾತ್ಮನು ಆತನಿಗೆ ಶಾಂತವಾದ ಮನಸ್ಸನ್ನು ಅನುಗ್ರಹಿಸುತ್ತಾನೆ.

ಶಾಂತನಲ್ಲಿ ನಾವು ಐದು ಸಂಗತಿಗಳು ಗುರುತಿಸಲ್ಪಟ್ಟಿವೆ. ಮೊದಲನೆಯದಾ ಗಿ ಶಾಂತು ತನ್ನ ಹಕ್ಕುಗಳಿಗಾಗಿಯೂ ಮತ್ತು ತನ್ನ ಲಾಭಕ್ಕಾಗಿಯೂ ನೋಡುವುದಿಲ್ಲ. ಎರಡನೆಯದಾಗಿ ಶಾಂತ ಮನಸ್ಸುಳ್ಳವನು ತನಗೆ ಅನ್ಯಾಯ ಮಾಡಿದವರ ಮೇಲೆ ತಪ್ಪು ಅಪರಾಧ ಹೊರಿಸುವುದಾಗಲಿ, ಅವನಿಗೆ ನೊವನ್ನುಂಟು ಮಾಡುವುದಿಲ್ಲ. ಶಾಂತ ಮನಸ್ಸುಳ್ಳವನು ತನ್ನ ಕೀರ್ತಿಗಾಗಿ ಆಶೆ ಪಡುವುದಿಲ್ಲ. ತನ್ನ ಪಾಪಗಳನ್ನು ಮುಚ್ಚಿಹಾಕುವುದಕ್ಕಾಗಿ ತನ್ನನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುವುದಿಲ್ಲ.ಮೂರನೆಯದಾಗಿ ಶಾಂತನು, ಸೇಡನ್ನು ತಿರಿಸಿಕೊಳ್ಳಲು ಪ್ರಯತ್ನಿಸುವುದಿಲ್ಲ(ರೋಮಾಯ 12:19, 1ನೇ ಪೇತ್ರ 2:19-23,ಮತ್ತು ವ್ಯಾಖ್ಯಾನ ನೋಡಿರಿ). ನಾಲ್ಕನೆಯದಾಗಿ, ಶಾಂತ ಮನಸ್ಸುಳ್ಳವನು ಯಾವಾಗಲೂ ಕಲಿಯುವುದನ್ನು ಬಯಸುತ್ತಾನೆ..ಮತ್ತು ಐದನೆಯದಾಗಿ ಶಾಂತ ಮನಸ್ಸುಳ್ಳವನು ತನ್ನ ಸ್ವಇಚ್ಛೆಯಲ್ಲಿ ನಡೆಯುವುದಿಲ್ಲ. ತನ್ನ ಸ್ವಂತ ಮನಸ್ಸಿನಂತೆ ನೋಡುವುದಿಲ್ಲ. ದೇವರ ಚಿತ್ತಕ್ಕೆ ಮತ್ತು ಇತರ ಚಿತ್ತಕ್ಕೆ ವಿದೆಯನಾಗುತ್ತಾನೆ. (ಎಫೆಸ 5:21). ಆತನು, ತನಗಾಗಿ ಏನನ್ನುಇಟ್ಟುಕೊಳ್ಳದೆ, ತನ್ನ ಜೀವಿತವನ್ನು ಮತ್ತು ತನಗಿರುವುದೆಲ್ಲವನ್ನು ದೇವರಿಗೆ ಕೊಡುತ್ತಾನೆ.

ಯಾವಾಗ, ಒಬ್ಬ ಮನುಷ್ಯನು ತನಗಿರುವುದೆಲ್ಲವನ್ನು ದೇವರಿಗೆ ಕೊಟ್ಟಾಗ ಅವನಿಗೆ ಸಿಕ್ಕುವುದಾದರೂ ಎನು? "ಭೂಮಿ" ಶಾಂತರು ಧನ್ಯರು. ಅವರು ಭೂಮಿಗೆ ಬಾಧ್ಯರಾಗುವರು. ನಾವು ದುಃಖಪಡುವವರಾಗಿದ್ದರೂ ಯಾವಾಗಲೂ ಸಂತೋಷ ಪಡುವರೂ, ಬಡವರಾಗಿದ್ದರೂ ಅನೇಕರಿಗೆ ಐಶ್ವರ್ಯವನ್ನುಂಟು ಮಾಡುವವರೂ, ಏನೂ ಇಲ್ಲದವರಾಗಿದ್ದರೂ ಎಲ್ಲಾ ಇದ್ದವರೂ ಆಗಿದ್ದೇವೆ (2ನೇ ಕೊರಿಂಥ 6:10)ಎಂದು ಪೌಲನು ಹೇಳಿದ್ದು ಈ ಕಾರಣಕ್ಕಾಗಿಯೇ.. ಒಂದು ವೇಳೆ ನಾವು ದೇವರ ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ. ದೇವರಿಗೆ ಬಾಧ್ಯರು, ಕ್ರಿಸ್ತನೊಂದಿಗೂ ಬಾಧ್ಯರು(ರೋಮಾಯ 8:17). ನಾವು ಯಾವ ಭೂಮಿಗೆ ಬಾಧ್ಯಸ್ಥರಾಗುತ್ತೇವೆ? ಪರಲೋಕದಲ್ಲಿರುವ ನೂತನ ಭೂಮಂಡಲ (ಪ್ರಕಟಣೆ 21:1-4). ಈಗಿರುವ ಭೂಮಂಡಲವೂ, ಮತ್ತು, ದೇವರ ಚಿತ್ತವನ್ನು ವಿರೋದಿಸುವ ಎಲ್ಲಾ ಜನವು ನಾಶವಾಗುವುದು (1ನೇ ಯೋಹಾನ 2:17). ಆದರೆ ಶಾಂತರು ಮಾತ್ರ ಪರಲೋಕದಲ್ಲಿದು ನೂತನ ಭೂಮಂಡಲಕ್ಕೆ ಬಾಧ್ಯರಾಗುವರು (ಕೀರ್ತನೆ 37:10-11). ತನ್ನನ್ನು ಹೆಚ್ಚಿಸಿಕೊಳ್ಳುವವನು ತಗ್ಗಿಸಲ್ಪಡುವನು. ತನ್ನನ್ನು ತಗ್ಗಿಸಿಕೊಳ್ಳುವ ವನು ಹೆಚ್ಚಿಸಲ್ಪಡುವನು. (ಮತ್ತಾಯ 23:12).

6 ನೀತಿಗೆ ಹಸಿದು ಬಾಯಾರಿದವರು ಧನ್ಯರು. ಭೂಲೋಕದ ಜನರು ಭೋಗಕ್ಕೂ ಮತ್ತು ಸಂತೋಷಕ್ಕಾಗಿ ಹಸಿದವರಾಗಿದ್ದಾರೆ. ಆದರೆ ಅವರಿಗೆ ತೃಪ್ತಿ ಇಲ್ಲ. ಒಬ್ಬ ಮನುಷ್ಯನು ಸುಖವನ್ನು ಬಯಸುವುದಾದರೆ, ಅದನ್ನು ಅವನು ಕಂಡುಕೊಳ್ಳುವುದಿಲ್ಲ. ಆದರೆ ಒಬ್ಬ ಮನುಷ್ಯನು ಮೊದಲು ನೀತಿಯನ್ನು ಹುಡುಕುವುದಾದರೆ ಆಗ ಅವನು ನಿಜವಾದ ನೀತಿ ಮತ್ತು ಸಂತೋಷ, ಈ ಎರಡನ್ನು ಕಂಡುಕೊಳ್ಳುವನು. ಆತನು ತುಂಬಿಸಲ್ಪಡುವನು.ಸಂಪೂರ್ಣವಾಗಿ ತೃಪ್ತಿಹೊಂದುವನು.

ಮನುಷ್ಯರು ಸಂತೋಷಕ್ಕಾಗಿ ಹಸಿದವರಾಗಿದ್ದಾರೆ. ಆದರೆ ಅವರು ದುಃಖದಲ್ಲಿಯೇ ಇದ್ದಾರೆ ಯಾಕೆ? ಯಾಕೆಂದರೆ ಪಾಪದ ನಿಮಿತ್ತ. ಅವರು ದುಃಖದಿಂದ ಬಿಡುಗಡೆ ಹೊಂದುವುದಾದರೆ ಮೊದಲು ಪಾಪದ ಬಂಧನದಿಂದ ಬಿಡುಗಡೆಯಾಗಬೇಕು. ಅಂದರೇ ನೀತಿವಂತನಾಗಬೇಕು.

ಅನೇಕ ಕ್ರೈಸ್ತರು ಕೂಡ ಈ ಭೋಧನೆಯು ಅರ್ಥವಾಗುವುದಿಲ್ಲ. ಇಂತಹ ಕ್ರೈಸ್ತರು, ಸಂತೋಷ, ಸಮಾಧಾನ, ಆತ್ಮೀಕ ಶಕ್ತಿ ಮತ್ತು ಇತರ ಆಶೀರ್ವಾದಗಳಿಗಾಗಿ ಹಸಿದು ಬಾಯಾರಿದವರಾಗಿರುತ್ತಾರೆ. ಆದರೆ ಯೇಸುವು ಹೇಳಿದ್ದೇನೆಂದರೆ ಮೊದಲು ನೀತಿಗಾಗಿ ಹಸಿದವರಾಗಿರಬೇಕು. ನಂತರ ಎಲ್ಲವೂ ಕೊಡಲ್ಪಡುವುವು (ಮತ್ತಾಯ 6:33).

ನೀತಿವಂತನಾಗುವುದು ಅಂದರೆ ಪವಿತ್ರನಾಗುವುದು, ದೇವರಿಗೆ ಹತ್ತಿರವಾಗುವದ,ಕ್ರಿಸ್ತನಂತಾಗುವುದು ಮತ್ತು ಪವಿತ್ರಾತ್ಮನಿಂದ ತುಂಬಿಸಲ್ಪಡುವುದು. ನಾವು ನೀತಿನಂತರಾಗುವುದಕ್ಕಾಗಿ ಪಾಪದಿಂದ ಬಿಡಿಸಲ್ಪಟ್ಟವರಾಗಿರಬೇಕು ಯಾಕೆಂದರೆ ಪಾಪವು ನಮ್ಮನ್ನು ದೇವರಿಂದ ಬೇರೆ ಮಾಡುತ್ತದೆ ಮತ್ತು ನಮ್ಮ ಜೀವಿತದಲ್ಲಿ ಪವಿತ್ರಾತ್ಮನು ನಮ್ಮಲ್ಲಿ ಕಾರ್ಯಮಾಡಲು ಇದು ಅಡ್ಡಿಯನ್ನೂಂಟು ಮಾಡುತ್ತದೆ. (ಎಫೆಸ. 4:30, ಮತ್ತು ವ್ಯಾಖ್ಯಾನ ನೋಡಿರಿ).

ನೀತಿಗಾಗಿ ಹಸಿದು ಬಾಯಾರಿದವರು ಧನ್ಯರು. ಒಬ್ಬ ಮನುಷ್ಯನು ಊಟ ಮಾಡದೇ ಮೂರು ದಿವನ ಹಸಿವೆಯುಳ್ಳವನಾದಂತೆ ನಾವೂ ಕೂಡ ನೀತಿಗಾಗಿ ಹಸಿವೆಯುಳ್ಳವರಾಗಿರಬೇಕು. ನಾವು ನೀತಿಗಾಗಿ ಸ್ವಲ್ಪ ಹಸಿವೆ ಉಳ್ಳವರಾಗಿದ್ದರೆ ದೇವರು ನಮಗೆ ಸ್ವಲ್ಪವಾಗಿ ಕೊಡುವನು. ನಾವು ನೀತಿಗಾಗಿ ಹೆಚ್ಚಾಗಿ ಹಸಿವೆಯುಳ್ಳವರಾಗಿದ್ದರೆ, ದೇವರು ನಮಗೆ ಹೆಚ್ಚಾಗಿ ಕೊಡುವನು. ಹಸಿವೆಯಿಂದ ನಾವು ದೇವರ ಬಳಿಗೆ ಬರುವುದಾದರೆ, ಆತನ ವಾಗ್ದಾನದಂತೆ ನಮ್ಮನ್ನು ತುಂಬಿಸುವನು. ಯೇಸುವು,........ ನನ್ನ ಬಳಿಗೆ ಬರುವವನನ್ನು ನಾನು ತಳ್ಳಿ ಬಿಡುವುದೆ ಇಲ್ಲಎಂದು ಹೇಳಿದನು. (ಯೋಹಾನ 6:37).

ನಾವು ನೀತಿಗೆ ಹಸಿದು ಬಾಯಾರಿದವರಾಗಿ ಸಾಧ್ಯವಾದಷ್ಟು ಬೇಗನೇ ಕ್ರಿಸ್ತನ ಬಳಿಗೆ ಬಂದರೇ ಇದನ್ನು ನಮಗೆ ಕೊಡುವನು.ಆತನು ನೀತಿಯನ್ನು ಕೊಡುವುದಕ್ಕಾಗಿ ಇದರೊಂದಿಗೆ ರಕ್ಷಣೆಯನ್ನು ಕೊಡುವುದು ಅತಿಅವಶ್ಯ. ನಾವು ಕ್ರಿಸ್ತನಲ್ಲಿಟ್ಟ ನಂಬಿಕೆಯ ಮೂಲಕ ದೇವರ ದೃಷ್ಟಿಯಲ್ಲಿ ನೀತಿವಂತರಾಗುತ್ತೇವೆ (ರೋಮಾ. 5:1, ಗಲಾತ್ಯ 2:15-16, ಮತ್ತು ವ್ಯಾಖ್ಯಾನ ನೋಡಿರಿ). ನಾವು ಅಪರಾಧದ ನಿರ್ಣಯದಡಿಯಲ್ಲಿ ಇಲ್ಲವೇ ಇಲ್ಲ (ರೋಮಾ. 8:1) ರಕ್ಷಣಾಮಾರ್ಗದ ಟಿಪ್ಪಣಿ ಭಾಗದಲ್ಲಿ ನೋಡಿರಿ.

ನಾವು ನೀತಿಗೋಸ್ಕರವಾಗಿ ಹಸಿವೆಯುಳ್ಳವರಾಗಿ ಮುಂದುವರಿಯಲೇಬೇಕು. ನಾವು ಹಸಿವೆಯಲ್ಲಿ ಮುಂದುವರೆಯುತ್ತಾ ಹೊದಂತೆ ದೇವರು ನಮ್ಮನ್ನು ತುಂಬಿಸುತ್ತಾ ಹೊಗುವನು. ನಾವು ಹೆಚ್ಚಾಗಿ ಪವಿತ್ರತೆಯಿಂದ ಹೇಚ್ಚು ಪವಿತ್ರರಾಗುತ್ತಾ ಹೋಗುತ್ತೇವೆ ಮತ್ತು ಪವಿತ್ರಾತ್ಮನ ಫಲಗಳನ್ನು ಹೇಚ್ಚೆಚ್ಚಾಗಿ ತೋರಿಸುತ್ತಾ ಹೋಗುತ್ತೇವೆ (ಗಲಾತ್ಯ 5:22-23). ನಾವೆಲ್ಲರು ಆತನ ಪರಿಪೂರ್ಣತೆಯೊಳಗಿಂದ ಕೃಪೆಯು ಮೇಲೆ ಕೃಪೆಯನ್ನು ಹೊಂದಿದೇವು (ಯೋಹಾನ 1:16). ನಮ್ಮಿಂದ ಕ್ರಿಸ್ತನು ಅಪೇಕ್ಷಿಸುವುದೇನೆಂದರೆ, ದೇವರ ಸಂಪೂರ್ಣತೆಯ ಮಟ್ಟಿಗೂ ಪರಿಪೂರ್ಣರಾಗುವ ಹಾಗೆ ತುಂಬಿಸಲ್ಪಡಬೇಕು.(ಎಫೆಸ 3:19).

ಇಲ್ಲಿ, ಒಂದು ಪ್ರಶ್ನೆ ಉದ್ಭವಿಸುತ್ತದೆ. ನಾವು ದೇವರಿಂದ ಕ್ಷಮಿಸಲ್ಪಟ್ಟು, ರಕ್ಷಣೆ ಹೊಂದಲು ಎಷ್ಟರ ಮಟ್ಟಿಗೆ ನೀತಿವಂತರಾಗಿರಬೇಕು? ಇದಕ್ಕೆ ಉತ್ತರ, ನಾವು ನೂರಕ್ಕೆ ನೂರರಷ್ಟು ನೀತಿವಂತರಾಗಿರಬೇಕು. ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವು ದೋಷವಿಲ್ಲದವರಾಗಿರಿ. (ವಚನ 48) ಎಂದು ಕ್ರಿಸ್ತನು ಹೇಳಿದ್ದಾನೆ. ರಕ್ಷಣೆಯ ವಿಷಯದಲ್ಲಿ ಜನರು ವಿರುದ್ಧವಾದ ಎರಡು ಸಂಗತಿಗಳನ್ನು ಹೇಳುತ್ತಾರೆ. ಕೆಲವರು ಹೇಳುತ್ತಾರೆ, ರಕ್ಷಣೆ ಹೊಂದುವುದು ಬಹಳ ಸುಲಭ. ಮತ್ತೇ ಕೆಲವರು ಹೇಳುತ್ತಾರೆ, ಇದು ಅಸಾಧ್ಯವಾದದ್ದು.ಈ ಎರಡೂ ಅಭಿಪ್ರಯಗಳು ನಿಜವಾದದ್ದೇ. ನಮ್ಮ ಸ್ವಂತ ಪ್ರಯತ್ನದಿಂದಾಗಲಿ ಅಥವಾ ಸ್ವನೀತಿಯಿಂದಾಗಲಿ ರಕ್ಷಣೆಯನ್ನು ಹೊಂದಲು (ದೊರಕಿಸಿಕೊಳ್ಳಲು) ಸಾಧ್ಯವಿಲ್ಲ. ಆದರೆ, ರಕ್ಷಣೆಯು ಸರಳವಾಗಿ ಹೊಂದುವಂತದ್ದಾಗಿದೆ. ಯಾಕೆಂದರೆ ಕ್ರಿಸ್ತನಲ್ಲಿ ನಂಬಿಕೆಯ ಇಡುವುದರ ಮೂಲಕ ಕ್ರಿಸ್ತನ ನೀತಿಯನ್ನು ಸ್ವೀಕರಿಸಿ ರಕ್ಷಣೆ ಹೊಂದುತ್ತೇವೆ. ಯಾಕೆಂದರೆ ಆತನ ಸ್ವಂತನೀತಿಯಿಂದ ಮತ್ತು, ಆತನು ನಮ್ಮ ಪಾಪಗಳಿಗಾಗಿ ಬಲಿಯಾಗಿದ್ದರಿಂದ ನಾವು ರಕ್ಷಣೆಯನ್ನು ಪಡೆದೇವು (ಮಾರ್ಕ 10:45, ಮತ್ತು ವ್ಯಾಖ್ಯಾನ ನೋಡಿರಿ). ಕ್ರಿಸ್ತನ ನೀತಿಯನ್ನು ಪಡೆದುಕೊಳ್ಳಲು ಇವುಗಳಲ್ಲಿ ಒಂದೇ ಒಂದು ಸಂಗತಿಯನ್ನು ಮಾಡಲೇ ಬೇಕು ಇದಕ್ಕಾಗಿ ನಾವು ಹಸಿವೆಯುಳ್ಳವರಾಗಿರಲೇ ಬೇಕು.

ನಮ್ಮ ಸ್ವಂತ ನಿತಿಗಾಗಿ ನಮ್ಮಲ್ಲಿರುವ ಹಸಿವೆಯನ್ನುಕಡಿಮೆ ಮಾಡುವುದಕ್ಕಾಗಿ ನಾವು ಯಾವುದನ್ನು ಮಾಡದಿರೋಣ. ನಾವು ದೇವರ ಕಡೆಗೆ ತಿರುಗಲು ನಮ್ಮ ಹೃದಯ ಮತ್ತು ಮನಸ್ಸನ್ನು, ಅಡ್ಡಿಪಡಿಸುವಂತ ಲೋಕದ ಸುಖಭೋಗಗಳಿಗೆ ಮನಸ್ಸು ಕೊಡದೆ ಇರೋಣ.ನಾವು ಊಟಕ್ಕೆ ಮುಂಚೆ ಸಿಹಿಯನ್ನು ತಿನ್ನುವುದಾದರೆ,ಎನಾಗುತ್ತದೆ ? ಹಸಿವೆ ಕಡಿಮೆಯಾಗುತ್ತದೆ, ಆದರೆ ಸಿಹಿ ಪದಾರ್ಥಗಳುತಮ್ಮಶ್ಯಕ್ಕೆ ತಾವೇ ಕೆಟ್ಟವುಗಳಲ್ಲ ಆದರೆ ಅವು ನಮ್ಮ ನಿಜವಾದ ಹಸಿವೆಯನ್ನು ಕಡಿಮೆ ಮಾಡಿ ನಮಗೆ ತೊಂದರೆಯನ್ನುಂಟು ಮಾಡುತ್ತವೆ. ಲೋಕದ ಸಿಹಿ ತಿಂಡಿಗಳು (ಸುಖಭೋಗಗಳು) ಇವುಗಳಂತಯೇ .ಹಾಗೆಯೇ ಇವುಗಳು ದೇವರಿಗಾಗಿ ಮತ್ತು ನೀತೆಗಾಗಿ ನಮ್ಮಲ್ಲಿರುವ ಹಸಿವೆಯನ್ನು ದುರ್ಬಲಗೊಳಿಸುತ್ತವೆ (ಲೂಕ 6:25 ವ್ಯಾಖ್ಯಾನ ನೋಡಿರಿ).

ಇದಕ್ಕೆ ಬದಲಾಗಿ ನಾವು ನಿತಿಗಾಗಿ, ಆತ್ಮೀಕ ಹಸಿವನ್ನು ವೃದ್ಧಿಪಡಿಸಲು, ದೇವರ ವಾಕ್ಯವನ್ನು ಓದುವುದನ್ನು ವಿಶ್ವಾಸಿಗಳ ಸಹವಾಸವನ್ನು ಮತ್ತು ಪ್ರಾರ್ಥನೆಯನ್ನು ಮಾಡಬೇಕು. ನಾವು ನಿತಿವಂತರಾಗಲು ನಿರಂತರವಾಗಿ ಪ್ರಾರ್ಥಿಸಬೇಕು. ಯಾಕೆಂದರೆ ನೀತಿವಂತರಾಗದೇ ದೇವರ ಮುಂದೆ ನಿಲ್ಲಲು ಅಸಾದ್ಯ. ನೀತಿವಂತರಾಗದೇ ನಾವು ರಕ್ಷಿಸಲ್ಪಡುವುದಿಲ್ಲ (ರಕ್ಷಣೆ ಹೊಂದುವುದಿಲ್ಲ)

7 ಕರುಣೆಯುಳ್ಳವರು ಧನ್ಯರು. ಈ ಎಂಟು ಸಂಗತಿಗಳು ನಾವು ಎನು ಮಾಡಬೇಕೆಂದು ವಿವರಣೆನೆಯನ್ನು ಮಾಡದೇ ನಾವು ಹೇಗೆ ನಡೆಯಬೇಕೆಂದು ಇವುಗಳು ನಮಗೆ ವಿವರಿಸುತ್ತಿವೆ. ಮೊದಲನೆಯದಾಗಿ ನಾವು ಇರುವವರಾಗಿರಬೇಕು. ನಂತರ ನಾವು ಮಾಡುವವರಾಗಿರಬೇಕು. ನಾವು ಮೊದಲು ಕ್ರೈಸ್ತರಾಗಿರಬೇಕು. ನಂತರ ಕ್ರೈಸ್ತರಂತೆ ನಡೆಯಬೇಕು. ನಾವು ದೇವರ ಕೃಪೆಯಿಂದ ಕ್ರೈಸ್ತರಾಗಿದ್ದೇವೆ. ಇದು ದೇವರ ಬಹುಮಾನವಾಗಿದೆ. ಕ್ರೈಸ್ತರಾಗಿಯು, ದೇವರ ಮಕ್ಕಳಾಗಿ ಕ್ರೈಸ್ತ ಜೀವಿತದಲ್ಲಿ ಮುಂದವರಿಯಲು ಮತ್ತು ಕ್ರಿಸ್ತನ ಆಜ್ಞೆಗಳಿಗೆ ವಿಧೇಯರಾಗಿ ನಡೆಯುವದಕ್ಕೆ ಪವಿತ್ರಾತ್ಮನಿಂದ ಬಲವನ್ನು ಹೊಂದುತ್ತೆವೆ. ಕ್ರಿಸ್ತನ ಪವಿತ್ರಾತ್ಮನು ನಮ್ಮಲ್ಲಿಲ್ಲದೆ ನಾವು ಈ ಭೋಧನೆಗಳನ್ನು ಅನುಸರಿಸಲು ಆಗುವುದಿಲ್ಲ. ಇದೇ ರೀತಿಯಾಗಿ ನಮ್ಮಲ್ಲಿ ವಾಸವಾಗಿರುವ ಪವಿತ್ರಾತ್ಮನ ಮೂಲಕ ನಡೆಯುವ ಕಾರ್ಯದ ಕರುಣೆಯು ಮೊದಲನೆಯದಾಗಿ ನಮ್ಮ ಹೃದಯು ದಲ್ಲಿರುವಾಗ, ನಾವು ನಮ್ಮ ಜೀವಿತದ ಕ್ರಿಯೇಗಳಲ್ಲಿ ಕರುಣೆಯನ್ನು ತೊರಿಸಲು ಶಕ್ತರಾಗುತ್ತೇವೆ. ದಯೆಅಥವಾ ಕರುಣೆಯು ಪವಿತ್ರಾತ್ಮನ ಫಲವಾಗಿದೆ. (ಗಲಾತ್ಯ 5:22). ಪವಿತ್ರಾತ್ಮನಿಲ್ಲದೆ ನಾವು ನಿಜವಾದ ಕರುಣೆಯುಳ್ಳವರಾಗಿರುವುದಿಲ್ಲ.

ನಿಜವಾದ ಕರುಣೆಯು ಯಾವಾಗಲೂ ತನ್ನಷ್ಟಕ್ಕೆ ತಾನೇ ತನ್ನಕರುಣೆಯ ಕಾರ್ಯಗಳಲ್ಲಿ ತೊರಿಬರುವುದು . ನಮ್ಮ ನಂಬಿಕೆಯು ಕ್ರಿಸ್ತನಿಗೆ ತೊರಿಸುವ ವಿಧೇಯತೆಯಲ್ಲಿರುವ ಹಾಗೆಯೇ ಕರುಣೆಗೆ ನಮ್ಮ ಕರುಣೆಯ ಕ್ರಿಯೆಗಳೆ ಗುರುತುಗಳಾಗಿವೆ. (ಯಾಕೋಬ 2:17, ವ್ಯಾಖ್ಯಾನ ನೋಡಿರಿ). ನಾವು ಕರುಣೆಯನ್ನು ತೋರಿಸದೇ ಹೋದರೆ ನಾವು ಕರುಣೆಯುಳ್ಳವರಲ್ಲ. ಕರುಣೆ ಮತ್ತು ಕರುಣೆಯಲ್ಲಿರುವುದು ಯಾವಾಗಲೂ ಜೊತೆಯಾಗಿ ಸಾಗಬೇಕು.ನಾವು ಮೊದಲು ಕ್ರೈಸ್ತರಾಗಿರಬೇಕು. ನಂತರ ಕ್ರೈಸ್ತರಂತೆ ನಡೆಯಬೇಕು. . ಬಹಿರಂಗವಾಗಿ ಯಾರು ಕ್ರೈಸ್ತರಂತೆ ವರ್ತಿಸುವುದಿಲ್ಲವೋ., ಅವರು [22] ಅಂತರಂಗದಲ್ಲಿ **(1ನೇ ಯೋಹಾನ 1:8)** ನಿಜವಾದ ಕ್ರೈಸ್ತರಾಗಿರುವುದಿಲ್ಲ. ಯಾರು ಅಂತರಂಗದಲ್ಲಿ ನಿಜವಾದ ಕ್ರೈಸ್ತರಾಗಿರುವುದಿಲ್ಲವೋ ಅವರು [23] ಬಹಿರಂಗವಾಗಿ ಕ್ರೈಸ್ತರಂತೆ ವರ್ತಿಸಲು ಶಕ್ತರಾಗುವುದಿಲ್ಲ. ನಾವು ಏನು ಆಗಿದ್ದೇವೆ ಮತ್ತು ಏನನ್ನು ಮಾಡುತ್ತಿದ್ದೇವೆ ಎಂಬವುಗನ್ನು ಪ್ರತ್ಯೇಕಿಸಲು ಆಗುವುದಿಲ್ಲ.

ಕರುಣೆಯನ್ನು ತೋರಿಸುವುದು ಅಂದರೆ ಮತ್ತೊಬ್ಬರ ಪಾಪವನ್ನು ಅಲಕ್ಷದಿಂದ ನೋಡುವುದು ಎಂದು ಅರ್ಥವಲ್ಲಅದು ಲೋಕದ ಕರುಣೆ.. ದೇವರು ಎಂದಿಗೂ ಪಾಪವನ್ನು ಅಲಕ್ಷಿಸುವುದಿಲ್ಲ.ನಾವು ಚಿಕ್ಕ ತಪ್ಪು ಎಂದು ಕರೆಯುವ ಸಣ್ಣ ಪಾಪವನ್ನು ಕೂಡ ಆತನು ಸಹಿಸುವುದಿಲ್ಲ. ಆತನು ಪ್ರತಿ ಪಾಪವನ್ನು ಶಿಕ್ಷಿಸುತ್ತಾನೆ ಮತ್ತು ಪಾಪದ ಶಿಕ್ಷೆಯು ಮರಣದಂಡನೆಯಾಗಿದೆ.

ಈ ಕಾರಣದಿಂದ ಕ್ರಿಸ್ತನು ನಮ್ಮ ಪಾಪಗಳನ್ನು ತನ್ನ ಮೇಲೆ ತೆಗೆದುಕೊಂಡದ್ದರಿಂದ ತನ್ನಷ್ಟಕ್ಕೆ ತಾನೇ ಮರಣವನ್ನು ಹೊಂದಿದನು. ಇದು ನಮ್ಮ ಕಡೆಗಿದ್ದ ದೇವರು ದೊಡ್ಡ ಕರುಣೆಯಾಗಿದ್ದು, ನಮ್ಮನ್ನು ರಕ್ಷಿಸುವುಕ್ಕೋಸ್ಕರ ನಮ್ಮ ಸ್ಥಾನದಲ್ಲಿ ತನ್ನ ಒಬ್ಬನೇ ಮಗನನ್ನು ಕೊಟ್ಟನು.

ಕರುಣೆಯುಳ್ಳವರು ಧನ್ಯರು. ಅವರು ಕರುಣೆ ಹೊಂದುವರು. ನಾವು ಇತರರಿಗೆ ಕರುಣೆ ತೋರಿಸಿದರೆ, ದೇವರು ನಮಗೆ ಕರುಣೆ ತೋರಿಸುವನು. ಒಂದು ವೇಳೆ ನಾವು ಇತರರಿಗೆ ಕರುಣೆ ತೋರಿಸದೆ ಹೋದರೆ, ದೇವರು ನಮಗೆ ಕರುಣೆ ತೋರಿಸುವುದಿಲ್ಲ (ಮತ್ತಾಯ 6:14-15).

ಮೊದಲು ದೇವರು ಮನುಷ್ಯರಿಗೆ ಕರುಣೆಯನ್ನು ತೋರಿಸಿದನು. ದೇವರ ಕರುಣೆ ಇಲ್ಲದಿದ್ದರೆ ನಮ್ಮಲ್ಲಿ ಒಬ್ಬನೂ ರಕ್ಷಿಸಲ್ಪಡುತ್ತಿರಲಿಲ್ಲ.. ನಾವು ಪಾಪಿಗಳಾಗಿದ್ದಾಗಲು ದೇವರು ನಮ್ಮನ್ನು ಕ್ಷಮಿಸಿದನು ಮತ್ತು ರಕ್ಷಿಸಿದನು. (ರೋಮಾ. 5:8) ನಾವು ಕರುಣೆಯುಳ್ಳವರಾಗಿರದೆ ಇದ್ದಾಗಲು ಕೂಡ ದೇವರು ನಮಗೆ ಕರುಣೆಯನ್ನು ತೋರಿಸಿದನು. ನಾವು ಕ್ರೈಸ್ತರಾದ ಮೇಲೆ

ಇತರರು ಹೇಗಿದ್ದರು ಸರಿ ಅವರಿಗೆ ಕರುಣೆ ತೋರಿಸಲು ಪ್ರಾರಂಭಿಸಬೇಕು. ನಾವು ಕ್ಷಮಾಪಣೆ ಹೊಂದುವುದಕ್ಕೆ ತಕ್ಕವರಲ್ಲದಿದ್ದಾಗಲು ದೇವರು ನಮ್ಮನ್ನು ಕ್ಷಮಿಸಿದನು. ಅದೇ ರೀತಿಯಾಗಿ ಇತರರು ಕ್ಷಮಾಪಣೆ ಹೊಂದಲು ಯೋಗ್ಯರಾಗಿರದಿದ್ದರೂ ಅವರನ್ನು ಕ್ಷಮಿಸಬೇಕು. ನಾವು ಇತರರಿಗೆ ಒಂದು ವೇಳೆ ಕರುಣೆ ತೋರಿಸದೇ ಹೋದರೆ, ದೇವರು ನಮಗೆ ಅನುಗ್ರಹಿಸಿದ ಕರುಣೆಯನ್ನು ನಮ್ಮಿಂದ ತೆಗೆದುಬಿಡುವನು. (ಮತ್ತಾಯ 18:23-35) ದೇವರು ನಮ್ಮ ಮೇಲಿದ್ದ ಕರುಣೆಯನ್ನು ತೆಗೆದುಬಿಟ್ಟರೆ, ಅದರೊಂದಿಗೆ ನಮ್ಮ ರಕ್ಷಣೆಯನ್ನು ತೆಗೆದು ಬಿಡುವನು ಎಂದು.ಕೆಲವರು ಹೇಳುತ್ತಾರೆ ಒಂದು ವೇಳೆ ದೇವರು, ಕ್ಷಮಿಸುವುದನ್ನು ನಿಲ್ಲಿಸಿಬಿಟ್ಟರೆ, ನಾವು ಹೇಗೆ ರಕ್ಷಿಸಲ್ಪಡುವೆವು? (ನಾವು ನಮ್ಮ ರಕ್ಷಣೆಯನ್ನು ಕಳೆದುಕೊಳ್ಳುತ್ತೇವೆಯೇ?.ಎಂಬ ಸಾಮಾನ್ಯ ಲೇಖನವನ್ನು ನೋಡಿರಿ).

ಎಲ್ಲಕ್ಕಿಂತಲೂ ದೊಡ್ಡದಾದ, ಕರುಣೆಯ ಉದಾಹರಣೆ, ಕ್ರಿಸ್ತನೇ ಆಗಿದ್ದಾನೆ. ಆತನು ನಮಗೆ ಕರುಣೆ ತೋರಿಸುವದಕ್ಕಾಗಿ ನಮಗೋಸ್ಕರ ಆತನು ಸತ್ತನು. ತನ್ನನ್ನು ಶಿಲುಬೆಗೆ ಹಾಕಿದ ಜನರನ್ನು ಕೂಡಾ ಕ್ಷಮಿಸಿದನು (ಲೂಕ 23:34). ಇದೇ ರೀತಿಯಾಗಿಕ್ರಿಸ್ತನ ಮೇಲಿದ್ದ ನಂಬಿಕೆಯ ನಿಮಿತ್ತವಾಗಿ ಕೊಲ್ಲಲ್ಪಟ್ಟ ಪ್ರಥಮ ಕ್ರೈಸ್ತನಾದಂತ ಸ್ತೇಪನನು ತನ್ನನ್ನು ಕೊಂದ ಕೊಲೆಗಾರರನ್ನು ಕ್ಷಮಿಸಿದನು. (ಅ.ಕೃ. 7:60). ನೆರೆಯವರು ನಮಗೆ ವಿರುದ್ಧವಾಗಿ ಪಾಪಗಳನ್ನು ಮಾಡುವಾಗ ಮಾದರಿಯಾದಂತ ಯೇಸುವನ್ನು ಮತ್ತು ಸ್ತೇಪನನನ್ನು ನೆನಪು ಮಾಡಿಕೊಳ್ಳೋಣ.

ನಾವು ಇತರರನ್ನು ಕ್ಷಮಿಸದಿದ್ದರೆ ದೇವರ ಪವಿತ್ರ ಆತ್ಮನು ನಮ್ಮಲ್ಲಿಲ್ಲ. ನಮ್ಮಲ್ಲಿ ಪವಿತ್ರಾತ್ಮನಿಲ್ಲದಿದ್ದರೆ ನಾವು ಕ್ರಿಸ್ತನಿಗೆ ಸೇರಿದವರಲ್ಲ. (ರೋಮಾ. 8:9) ನಮ್ಮಲ್ಲಿ ದೇವರ ಕರುಣೆ ಉಳಿಯಬೇಕಾದರೆ, ನಾವು ಇತರರಿಗೆ ಕರುಣೆ ತೋರಿಸುವುದನ್ನು ಮುಂದುವರೆಸಬೇಕು. ಇದು, ಅವರನ್ನು ಕ್ಷಮಿಸುವದಕ್ಕೊಸ್ಕರವೇ ಇದೆ.ಆ ನ್ಯಾಯ ತೀರ್ಪಿನ ದಿನದಲ್ಲಿ ನಾವೆಲ್ಲರೂ ದೇವರ ಮುಂದೆ ನಿಂತಿರುವಾಗ, ನಮಗೆ ನಿಜವಾಗಿಯೂ ಕರುಣೆಯ ಅವಶ್ಯಕತೆಯಿದೆ ಮತ್ತು ನಾವು ಈ ದಿನಗಳಲ್ಲಿ ಇತರರಿಗೆ ಕರುಣೆಯನ್ನು ತೋರಿಸಿರುವದರಿಂದ ಆ ದಿನದಲ್ಲಿ ಕರ್ತನು ನಮಗೆ ಕರುಣೆ ತೋರಿಸುವನು.

8 ನಿರ್ಮಲಚಿತ್ತರು (ಶುದ್ಧ ಹೃದಯ ಉಳ್ಳವರು) ಧನ್ಯರು. ನಮ್ಮ ಹೃದಯವು ದೇವರ ದೃಷ್ಟಿಯಲ್ಲಿ ಅತಿ ಮುಖ್ಯ ವಾಗಿದೆ. ಮನುಷ್ಯನು ಹೊರಗಿನ ತೋರಿಕೆಯನ್ನು ನೋಡುತ್ತಾನೆ ಆದರೆ ದೇವರು ಹೃದಯವನ್ನೇ ನೋಡುವವನಾಗಿದ್ದಾನೆ (1ನೇ ಸಮುವೇಲ. 16:7). ನಮ್ಮ ಹೃದಯಗಳು ಶುದ್ಧವಾಗಿವೆಯೋ ಎಂದು ನೋಡುತ್ತಾನೆ.

ಮೊದಲನೆಯದಾಗಿ, ಶುದ್ಧ ಹೃದಯ ಎಂಬುದರ ಅರ್ಥ ಏಕಮನಸ್ಸು. ನಾವು ಎರಡು ಮನಸ್ಸು ಉಳ್ಳವರಾಗಿ ಇರಬಾರದು (ಕೀರ್ತನೆ 86:11, ಯಾಕೊಬ. 1:7-8).

ಎರಡನೇಯದಾಗಿ, ಶುದ್ಧವಾದ ಹೃದಯ ಎಂಬುದರ ಅರ್ಥ, ಪವಿತ್ರ, ಪಾಪ ವಿಲ್ಲದ ಮತ್ತು ಸ್ವಾರ್ಥತೆ ಇಲ್ಲದ ಪ್ರೀತಿ ಎಂದಾಗುತ್ತದೆ. ಹೃದಯದಲ್ಲಿಶುದ್ದವುಳ್ಳವನು ಕರ್ತನನ್ನು ಪ್ರೀತಿಸುತ್ತಾನೆ. ಅವನು ಕರ್ತನನ್ನು ತನ್ನ ಪೂರ್ಣ ಹೃದಯದಿಂದಲೂ ಆತ್ಮನಿಂದಲೂ ಮನಸ್ಸಿನಿಂದಲೂ ಮತ್ತು ಶಕ್ತಿಯಿಂದಲೂ ಪ್ರೀತಿಸುತ್ತಾನೆ.ಇದೇ ಮೊದಲನೆಯ ಮಹಾ ಆಜ್ಞೆ.(ಮಾರ್ಕ 12:30, ವ್ಯಾಖ್ಯಾನ ನೋಡಿರಿ).

ಹೃದಯದಲ್ಲಿ ಶುದ್ದವುಳ್ಳವರು ಪವಿತ್ರತೆಯಿಂದ ಇರುವರು ಮಾತ್ರ ದೇವರನ್ನು ನೋಡುವರು (ಇಬ್ರಿಯ 12:14). ದೇವರ ರಾಜ್ಯದಲ್ಲಿ (ಪರಲೋಕದ ರಾಜ್ಯದಲ್ಲಿ) ಪ್ರವೇಶಿಸುವುದಕ್ಕಾಗಿ ನಾವು ಪವಿತ್ರರಾಗಿರಬೇಕು. ಪವಿತ್ರರಾಗಲು ನಮಗೆ ದೇವರ ಸಹಾಯ ಬೇಕು. ಅರಸನಾದ ದಾವೀದನು, ಕೀರ್ತನೆ ಎಂಬ ಗ್ರಂಥದಲ್ಲಿ 51:10ರಲ್ಲಿ ಬರೆಯಲ್ಪಟ್ಟಂತೆ, ದೇವರೇ ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು. ದೇವರ ಪವಿತ್ರಾತ್ಮನು ನಮ್ಮಲ್ಲಿ ಜೀವಿಸುವದರೀಂದ ಮಾತ್ರ ನಮ್ಮ ಹೃದಯಗಳು ಶುದ್ಧಿಕರಿಸಲ್ಪಡುತ್ತವೆ.

ನಾವು ಆತ್ಮದಲ್ಲಿ ಬಡವರಾಗಿ (ವಚನ 3) ನಾವು ನೀತಿಗಾಗಿ ಹಸಿದವರಾಗಿ (ವಚನ 6) ದೇವರ ಬಳಿಗೆ ಬರುವುದಾದರೆ ಆತನು ನಮ್ಮ ಹೃದಯವನ್ನು ಶುದ್ಧೀಕರಿಸುವನು. ನಾವು ದೇವರ ಸಮೀಪಕ್ಕೆ ಬಂದರೆ ದೇವರು ನಮ್ಮ ಸಮೀಪಕ್ಕೆ ಬರುವನು (ಯಾಕೋಬ 4:8). ಹೀಗೆ ಆತನು ನಮ್ಮ ಹೃದಯಗಳನ್ನು ಶುದ್ಧಿಕರಿಸುವುದರಿಂದ ನಾವು ದೇವರ ಸನ್ನಿಧಿಗೆ ಪ್ರವೇಶಿಸಲು ಶಕ್ತರಾಗುತ್ತೆವೆ. ಈ ಒಳ್ಳೇ ಕೆಲಸವನ್ನು ನಮ್ಮಲ್ಲಿ ಪ್ರಾರಂಭಿಸಿದಾತನು ನಡೆಸಿಕೊಂಡು ಬರುವನು (ಪಿಲಿಪ್ಪಿ. 1:6, ವ್ಯಾಖ್ಯಾನ ನೋಡಿರಿ).

ರಕ್ಷಣೆಯ ಮುಖ್ಯ ಕಾರ್ಯವು ದೇವರಿಂದ ಆಗಿದೆ. ಆದರೆ ನಾವು ನಮ್ಮ ಭಾಗದ ಕರ್ತವ್ಯ ಮಾಡಲೇ ಬೇಕು (ಫಿಲಿಪ್ 2:12-13, ವ್ಯಾಖ್ಯಾನ ನೋಡಿರಿ). ಯಾಕೋಬನು ನಮಗೆ ಹೇಳುತ್ತಾನೆ. ಪಾಪಿಗಳೇ ನಿಮ್ಮ ಕೈಗಳನ್ನು ಶುಚಿ ಮಾಡಿಕೊಳ್ಳಿರಿ. ಎರಡು ಮನಸ್ಸುಳ್ಳವರೇ ನಿಮ್ಮ ಹೃದಯಗಳನ್ನು ನಿರ್ಮಲಮಾಡಿಕೊಳ್ಳಿರಿ (ಯಾಕೋಬ 4:8). ಪಾಪದ ಸ್ಥಿತಿಯಿಂದ ನಾವು ದೂರವಿರಲಾಗಿ ಸೈತಾನನನ್ನು ಎದುರಿಸುತ್ತೇವೆ. (ಯಾಕೋಬ 4:7). ಪಾಪದ ಸ್ವಭಾವದಿಂದ ಉಂಟಾಗುವ ಕಾರ್ಯಗಳು ನಮ್ಮ ದೇಹದ ಮೇಲೆ ಬೀಳದಂತೆ ಅವುಗಳನ್ನು ಸಾಯಿಸಲೇಬೇಕು. (ರೋಮಾ. 6:12, 8:13, ಕೊಲಸ್ಸೆ 3:5, ವ್ಯಾಖ್ಯಾನ ನೋಡಿರಿ). ಈ ಸಂಗತಿಗಳನ್ನು ನಾವೇ ಮಾಡಬೇಕು. ಇದು ನಮ್ಮ ರಕ್ಷಣೆಗೆ ನಾವು ಮಾಡುವ ಕರ್ತವ್ಯವಾಗಿದೆ.

9 ಸಮಾಧಾನ ಪಡಿಸುವವರು ಧನ್ಯರು. ಇಲ್ಲಿ ಸಮಾಧಾನ ಪಡಿಸುವವರು ಯಾರು ಎಂದು ಪ್ರಸ್ತಾಪವಾದಲ್ಲಿ, ಯಾರು ದೇವರೊಂದಿಗೂ ಮತ್ತು ಮನುಷ್ಯರೊಂದಿಗೂ ಸಮಾಧಾನದಿಂದಿರುವರೋ ಅವರೇ ಎಂದರ್ಥ. ಬಹಳ ಜನರು ತಮ್ಮಷ್ಟಕ್ಕೆ ತಾವೇ ಹೇಳಿಕೊಳ್ಳುತ್ತಾರೆ. ನಾವು ಸಮಾಧಾನಪಡಿಸುವವರು. ಅವರಲ್ಲಿ ಅಧ್ಯಕ್ಷರೂ, ರಾಜರು, ಪ್ರಧಾನ ಮಂತ್ರಿಗಳು . ಇವರು ಸಮಾಧಾನದ ಬಗ್ಗೆ ಮಾತನಾಡುತ್ತಾರೆ. ಸಮಾಧಾನಕ್ಕಾಗಿ ಪ್ರಯತ್ನಿಸುತ್ತಾರೆ. ಆದರೆ . ಮನುಷ್ಯನ ಪಾಪದ ದೆಸೆಯಿಂದ ಲೋಕದಲ್ಲಿ ಸಮಾಧಾನವಿಲ್ಲ. ಲೋಕದಲ್ಲಿ ಸಮಾಧಾನ ಪಡಿಸುವವರು, ದುಷ್ಟಜನರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡು, ಪಾಪಕ್ಕೆ ಸಮಾಧಾನದ ಕವಚವನ್ನು ಕೊಟ್ಟು ಸಮಾಧಾನಕ್ಕಾಗಿ ಪ್ರಯತ್ನಿಸುತ್ತಾರೆ. ಆದರೆ ನಿಜವಾದ ಶಾಂತಿಸ್ಥಾಪಕರು ಜಗತ್ತಿನಲ್ಲಿರುವಂತ ಅನೀತಿ, ಅನ್ಯಾಯ, ವೇದನೆ ಮತ್ತು ಪಾಪಗಳನ್ನು ನಿವಾರಿಸಲು ಪ್ರಯತ್ನಿಸುತ್ತಾರೆ. ಇವರು ದೇವರೊಂದಿಗೆ ಮನುಷ್ಯರನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಾರೆ. ಇದೇ ನಿಜವಾದ ಸಮಾಧಾನವು.

ಸಮಾಧಾನ ಪಡಿಸುವವರಲ್ಲಿ ಮೊದಲನೆಯದಾಗಿ ನಾವು ಕಂಡುಕೊಳ್ಳುವುದೇನೆಂದರೆ, ಇವರು ಮೊದಲು ತಮ್ಮನ್ನು ದೇವರೊಂದಿಗೆ ಸಮಾಧಾನಪಡಿಸಿಕೊಂಡವರಾಗಿರುತ್ತಾರೆ. ನಾವು ಸಮಾಧಾನ ಹೊಂದಿರುವುದು ಕ್ರಿಸ್ತನ ಮೇಲಿಟ್ಟ ನಂಬಿಕೆಯಿಂದಲೇ (ರೋಮಾ. 5:1). ನಿಜವಾದ ಸಮಾಧಾನವನ್ನು ಕಂಡುಕೊಳ್ಳಬೇಕಾದರೆ,ಈಗಾಗಲೇ ವರ್ಣಿಸಿದ ಸ್ವರ್ಗೀಯ ಗುಣಗಳಾದಂತ ಆತ್ಮದಲ್ಲಿ ಬಡತನ, ದೀನತೆ, ಆತ್ಮೀಕ ಹಸಿವೆ, ಕರುಣೆ ಮತ್ತು ಶುದ್ಧ ಹೃದಯ ಉಳ್ಳವರಾಗಿರಲೇಬೇಕು. (ವಚನ 3-8). ಈ ಎಲ್ಲಾ ಗುಣಗಳು ಜೊತೆಗೂಡಿಯೇ ಮುಂದೆ ಸಾಗುವವು .ಇವುಗಳಲ್ಲಿ ಇತರ ಗುಣಗಳನ್ನು ಹೊಂದಿ,ಮತ್ತೊಂದನ್ನು ಹೊಂದಿಲ್ಲದೆ ಇರಲು ಆಗುವುದಿಲ್ಲ.

ಹೇಗೆ ನಾವು ಸಮಾಧಾನ ಪಡಿಸಬೇಕು. ನಮ್ಮಂತೆಯೇ ನಾವು ಇತರರನ್ನು (ನೆರೆಹೊರೆಯವರನ್ನು) ಪ್ರೀತಿಸಬೇಕು (ಮಾರ್ಕ 12:31, ವ್ಯಾಖ್ಯಾನ ನೋಡಿರಿ). ಪ್ರೀತಿಯು, ಸಮಾಧಾನಪಡಿಸುವಂತ ಒಂದು ಮುಖ್ಯ ಆಯುದವಾಗಿದೆ. ಪೌಲನು ಬರೆದಿದ್ದೇನೆಂದರೆ, ನಿನ್ನ ವೈರಿ ಹಸಿದಿದ್ದರೆ ಆತನಿಗೆ ಊಟವನ್ನು ಕೊಡು (ರೋಮಾ. 12:20). **ಯೇಸುವು, ಹೇಳಿದ್ದು ನಿಮ್ಮ ವೈರಿಗಳನ್ನು ಪ್ರೀತಿಸಿರಿ, ಯಾರು ನಿಮಗೆ ಹಿಂಸೆ ಕೊಡುವರೋ ಅವರಿಗೋಸ್ಕರ ಪ್ರಾರ್ಥಿಸಿರಿ. ಆಗ ನೀವು ಪರಲೋಕದಲ್ಲಿರುವ ತಂದೆಯ ಮಕ್ಕಳಾಗುವಿರಿ** (ವಚನ 44-45). **ಸಮಾಧಾನ ಪಡಿಸುವವರು ಧನ್ಯರು. ಅವರು ದೇವರ ಮಕ್ಕಳು ಎಂದು ಕರೆಯಲ್ಪಡುವರು** (ಯೋಹಾನ 1:12, ಗಲಾತ್ಯ 3:24, 4:7, ವ್ಯಾಖ್ಯಾನ ನೋಡಿರಿ).

ಯೇಸು ಕ್ರಿಸ್ತನೆ ಮಹಾ ಶಾಂತಿ ಸ್ಥಾಪಕನಾಗಿದ್ದಾನೆ. (ಎಫೆಸ 2:17, ಕೊಲಸ್ಸೆ 1:19-20). **ಆತನು ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆ, ನಿಮಗೆ ಸಮಾಧಾನವಾಗಲಿ. ತಂದೆ ನನ್ನನ್ನು ಕಳಿಸಿಕೊಟ್ಟ ಹಾಗೆಯೇ ನಾನು ನಿಮ್ಮನ್ನು ಕಳುಹಿಸಿಕೊಡುತ್ತೇನೆ.** (ಯೋಹಾನ 20:21). ಯೇಸುವು, ನಮ್ಮನ್ನು ಸಮಾಧಾನ ಪಡಿಸುವವರನ್ನಾಗಿ ಕಳಿಸಿದ್ದಾನೆ. ನಾವು ಕ್ರಿಸ್ತನ ರಾಯಭಾರಿಗಳಾಗಿದ್ದೇವೆ (2ನೇ ಕೊರಿಂಥ 5:20, ಮತ್ತು ವ್ಯಾಖ್ಯಾನ ನೋಡಿರಿ).

ಆದಾಗ್ಯೂ ನಾವು ಮತ್ತೊಂದು ಸತ್ಯವನ್ನು ಮರೆಯ ಬಾರದು. ಸಮಾಧಾನವನ್ನು ಹುಟ್ಟಿಸುವುದಕ್ಕೆ ನಾನು ಬಂದಿಲ್ಲ. ಖಡ್ಗವನ್ನು ಹಾಕುವುದಕ್ಕೆ ಬಂದೆನು ಎಂದುಇನ್ನೊಂದು ಸಂದರ್ಭದಲ್ಲಿಯೇಸುವು ಹೇಳಿದನು (ಮತ್ತಾಯ 10:34). ಕ್ರಿಸ್ತನು ಕೇವಲ ಜನರನ್ನು ದೇವರೊಂದಿಗೆ ಸಮಾಧಾನ ಪಡಿಸುವುದಲ್ಲದೇ, ಒಳ್ಳೆಯವರನ್ನು ದುಷ್ಟರಿಂದ ಬೇರ್ಪಡಿಸಲು ಬಂದನು. ನ್ಯಾಯ ತೀರ್ಪಿನ ದಿನದಲ್ಲಿ ಆತನೇ ನ್ಯಾಯಾತೀರಿಸುವನು (ಮತ್ತಾಯ 25:31-32, ಯೋಹಾನ 5:22, 2ನೇ ಕೊರಿಂಥ 5:10) ನಂಬಿಕೆಯ ಮುಲಕ ದೇವರ ಕಡೆಗೆ ತಿರುಗುವವರಲ್ಲಿ ಸಮಾದಾನವನ್ನು ಕೊಡುತ್ತಾನೆ ಆದರೆ ಯಾರು ದೇವರಿಗೆ ವಿಧೇಯರಾಗಿ ಆತನನ್ನು ಆರಾಧಿಸಲು ತಿರಸ್ಕರಿಸಿದರೊ ಅಂತವರಿಗೆ ನ್ಯಾಯತೀರ್ಪಿನ ದಿನದಲ್ಲಿ ಖಡ್ಗ ಹಿಡಿದು ನ್ಯಾಯ ತೀರಿಸುವನು.

ಕ್ರಿಸ್ತನು ಲೋಕಕ್ಕೆ ಸಮಾಧಾನ ಪಡಿಸುವವನಾಗಿ ಬಂದನು. ಆದಾಗ್ಯೂ, ಆತನು ಹಿಂಸೆಯನ್ನು ಅನುಭವಿಸಿದನು ಮತ್ತು ವೈರಿಗಳಿಂದ ಕೊಲ್ಲಲ್ಪಟ್ಟನು. ಇದೇ ರೀತಿಯಾಗಿ, ಸಮಾಧಾನ ಪಡಿಸುವವರಾದ ನಾವು ಕ್ರಿಸ್ಥ ವಿರೋದಿಗಳಿಂದ ವಿರೋಧವನ್ನು ಮತ್ತು ಹಿಂಸೆಯನ್ನು ಅನುಭವಿಸುವವರಾಗಿದ್ದೇವೆ. (2ನೇ ತಿಮಾಥೆ 3:12). **ಯೇಸು ಹೇಳಿದ್ದೇನೆಂದರೆ ಅವರು ನನ್ನನ್ನು ಹಿಂಸೆ ಪಡಿಸಿದರೆ ನಿಮ್ಮನ್ನೂ ಸಹ ಹಿಂಸೆ ಪಡಿಸುವರು.** (ಯೋಹಾನ 15:20) ಕ್ರೈಸ್ತ ವಿರೋಧಿಗಳನ್ನು ಸಮಾಧಾನ ಪಡಿಸಲು ಆಗುವುದಿಲ್ಲ.

**10** **ಹಿಂಸೆಯನ್ನು ತಾಳು ವವರು ಧನ್ಯರು** (1ನೇ ಪೇತ್ರ 3:14, 4:14, ನೋಡಿರಿ).3 ನೆಯ ವಚನದಲ್ಲಿರುವ **ಆತ್ಮದಲ್ಲಿ ಬಡವರಾಗಿರು ವವರು ಧನ್ಯರು** ಎಂಬ ವಚನದಂತೆ, **ಪರಲೋಕ ರಾಜ್ಯವು ಅವರದು.**

ಜನರು ಮುರ್ಖತನ ಮತ್ತು ಕೆಟ್ಟ ಅಭ್ಯಾಸಗಳೆಂಬ ಪಾಪದ ಕಾರಣಗಳಿಂದಾಗಿ ಹಿಂಸೆ ಅನುಭವಿಸುವರು

ಆದರೆ ನೀತಯ ನಿಮಿತ್ತವಾಗಿ ಹಿಂಸೆಯನ್ನು ಅನುಭವಿಸುವವರು ಆಶಿರ್ವದಿಸಲ್ಪಡುವರು. ಕೆಲವು ಸಾರಿ ಅನಾವಶ್ಯಕವಾಗಿ ನಾವು ನಮ್ಮ ಮೇಲೆ ತೊಂದರೆಗಳನ್ನು ತಂದುಕೊಳ್ಳುತ್ತೇವೆ. ನಾವು ನೀತಿವಂತರು ಆಗಿರುವದಕ್ಕಾಗಿಯೇ ಎಂದು ನಾವು ಭಾವಿಸುತ್ತೇವೆ. ಆದರೆ ಖಂಡಿತವಾಗಿಯೂ, ನಾವು ನಮ್ಮಲ್ಲಿರುವ ಕೆಲವೊಂದು ದೋಷಗಳ ಮತ್ತು ಅಜ್ಞಾನದ ನಿಮಿತ್ತವಾಗಿ ಸಮಸ್ಯೆಗಳನ್ನು ತಂದುಕೊಳ್ಳುತ್ತೆವೆ.ನಿಶ್ಚಯವಾಗಿ ನಾವು ದೇವರ ಮಹಿಮೆಗೋಸ್ಕರ ಮಾಡುವುದಾದರೆ, ನಿಜವಾಗಿ ದೇವರ ಸನ್ಮಾನಕ್ಕಾಗಿ ಹಿಂಸೆ ಪಡುವವರಾದರೆ, ದೇವರು ನಮ್ಮನ್ನು ಆಶೀರ್ವಾದಿಸುವನು.

ಹೊಸ ಒಡಂಬಡಿಕೆಗೆ ಅನುಸಾರವಾಗಿ ನಾವು ಹಿಂಸೆಯನ್ನು ಅನುಭವಿಸಲೇ ಬೇಕು. (2ನೇ ತಿಮೊಥೆ 3:12).ನಾವು ಈ ರೀತಿಯಾಗಿ ನಾವು ಹಿಂಸೆಯನ್ನು ಅನುಭವಿಸದೆ ಹೋದರೆ ದೇವರ ಮಹಿಮೆಗಾಗಿ ಜೀವಿಸುತ್ತಿಲ್ಲ. ನಾವು ದೇವರನ್ನು ಪ್ರೀತಿಸುವುದಾದರೆ, ಲೋಕವು ನಮ್ಮನ್ನು ದ್ವೇಷಿಸುವುದು (ಯೋಹಾನ 15:18-19)[24]. ಪ್ರಾಪಂಚಿಕ ಜನರು ಯಾವಾಗಲೂ ನೀತಿವಂತರಿಗೆ ವಿರೋಧವಾಗಿರುತ್ತಾರೆ. ಕ್ರಿಸ್ತನನ್ನು ಅಂಗೀಕರಿಸಿ ಆತನ ನೀತಿಯಲ್ಲಿ ಜೀವಿಸುವ ನೀತಿವಂತರು ಕತ್ತಲೆಯಲ್ಲಿಯೂ ಬೆಳಕಾಗಿರುತ್ತಾರೆ. ಪ್ರಾಪಂಚಿಕ ಜನರು ಬೆಳಕನ್ನು ದ್ವೇಷಿಸುವರು. ಯಾಕೆಂದರೆ ಬೆಳಕಿನಲ್ಲಿ ಅವರ ಕೆಟ್ಟ ಕೃತ್ಯಗಳು ಕಂಡು ಬರುವುದು (ಯೋಹಾನ 3:20).

ನೀತಿವಂತರು, ಗೌರವವಂತರು, ಬಹುಶ್ರೇಷ್ಠರು ಎಂದು ಲೋಕದಲ್ಲಿ ಎಷ್ಟೋ ಜನರು ಲೌಕಿಕ ಜನರಿಂದ ಕರೆಯಲ್ಪಡುತ್ತಾರೆ. ಆದರೆ ಇದು ಲೋಕದ ಲೌಕಿಕವಾದ ಮಾತು. ಇಂತಹ ಜನರು ಲೋಕದವರಿಂದ ಹಿಂಸೆ ಅನುಭವಿಸುವುದಿಲ್ಲ. ಯಾಕೆಂದರೆ ಇವರು ಲೋಕಕ್ಕೆ ಸೇರಿದವರು. ಇವರು ಲೋಕದಲ್ಲಿ ಮಾನ ಹೊಂದುವರು. ಇದೆ ಇವರ ಪ್ರಶಸ್ತಿ. (ಲೂಕ 6:26, ವ್ಯಾಖ್ಯಾನ ನೋಡಿರಿ). ನಿಜವಾದ ನೀತಿವಂತನು ಈ ಲೋಕದವನಲ್ಲ. ಇವನು ಪರಲೋಕ ರಾಜ್ಯದ ಪ್ರಜೆಯಾಗಿದ್ದಾನೆ. ಆದುದರಿಂದ ಲೋಕದ ಜನರು ಈತನನ್ನು ಹಿಂಸೆ ಪಡಿಸುವರು.

**11-12** ಯೇಸು, ಪರಲೋಕದ ಈ ಎಂಟು ಸಂಗತಿಗಳನ್ನು ಹೇಳಿದ ಮೇಲೆ, ಶಿಷ್ಯರ ಕಡೆಗೆ ತಿರುಗಿಕೊಂಡು ಹೇಳಿದ್ದೇನೆಂದರೆ, **ನನ್ನ ನಿಮಿ ತ್ತವಾಗಿ ಜನರು ಯಾವಾಗಲು ನಿಮ್ಮನ್ನು ನಿಂದಿಸಿ, ಹಿಂಸೆಪಡಿಸಿ, ನಿಮ್ಮ ಮೇಲೆ, ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿದರೆ ನೀವು ಧನ್ಯರು.**

ನಾವು ಕ್ರಿಸ್ತನ ನಿಮಿತ್ತವಾಗಿ ಹಿಂಸೆಯನ್ನು ಅನುಭವಿಸುವುದಾದರೆ, ನಾವು ಧನ್ಯರೇ.

ಆದುದರಿಂದ ಕ್ರಿಸ್ತನ ಹಿಂಬಾಲಕರಾದ ಪ್ರತಿಯೊಬ್ಬನು, ಅಪಮಾನ, ಸುಳ್ಳು, ಹಿಂಸೆಗಳಿಗೆ ಒಳಗಾಗಿ ತಾಳಿಕೊಳ್ಳಲು ಸಿದ್ಧನಾಗಿರಬೇಕು. ಇದು ಬರುವಾಗ ಆತನನ್ನು ನಂಬಿದ ವಿಶ್ವಾಸಿಗಳು ಏನು ಮಾಡಬೇಕು? **ಸಂತೋಷ ಪಡಿರಿ ಮತ್ತು ಆನಂದ ಪಡಿರಿ.** (ಅ.ಕೃ. 5:40-41 ನೋಡಿರಿ).ಹಿಂಸೆಯನ್ನು ಅನುಭವಿಸಿದ ಹಳೇ ಒಡಂಬಡಿಕೆಯ ಪ್ರವಾದಿಗಳೊಂದಿಗೆ ಕೂಡ ನಾವು ಎಣಿಸಲ್ಪಡುತ್ತೇವೆ (2 ಪೂರ್ವಕಾಲ ವೃತ್ತಾಂತ 36:15-16) . ಕ್ರಿಸ್ತನ ಬಾಧೆಗಳಲ್ಲಿ (ಹಿಂಸೆಗಳಲ್ಲಿ) ಪಾಲುಗಾರರಾದ ನಾವು ಆತನ ಮಹಿಮೆಯಲ್ಲಿ ಪದವಿ ಹೊಂದಿದವರಾಗಿದ್ದೇವೆ (ಫಿಲಿಪ್ಪ. 3:10).

ಸಾಮಾನ್ಯವಾಗಿ ಯಾರಾದರೂ ನಮಗೆ ವಿರುದ್ಧವಾಗಿ ನಡೆದರೆ ನಾವು ಏನು ಮಾಡುತ್ತೇವೆ ? ನಾವು ಸಿಟ್ಟಾಗುತ್ತೇವೆ. ಆ ವ್ಯಕ್ತಿಯನ್ನು ವಿರೋಧಿಸುತ್ತೇವೆ. ಆ ವ್ಯಕ್ತಿಯ ಮೇಲೆ ಸೇಡು ತೀರಿಸಿಕೊಳ್ಳಲು ಬಯಸುತ್ತೇವೆ. ಆದರೆ ಕ್ರಿಸ್ತನು ನಮಗೆ ಹೇಳುವುದೇನೆಂದರೆ, ನಾವು ಹಾಗೆ ಮಾಡಬಾರದು.

ಹೀಗಿರುವುದರಿಂದ ಈ ಕೋಪವನ್ನು ನಮ್ಮಲ್ಲಿಯೇ ಮುಚ್ಚಿಕೊಳ್ಳುತ್ತೇವೆ. ಈ ಒಂದು ಕಹಿ ಅನುಭವ ಮತ್ತು ಸಿಟ್ಟು ನಮ್ಮಲ್ಲಿಯೇ ಉಳಿಯುತ್ತದೆ. ಆದರೆ ಇದೂ ಕೂಡ ತಪ್ಪು ಎಂದು ಯೇಸುವು ಹೇಳುತ್ತಾನೆ.

ಕೋಪ ಇರುವವರೆಗೂ ಇದು ತಪ್ಪೇ. ನಮ್ಮಷ್ಟಕ್ಕೆ ನಾವೇ ಆ ಕೋಪ(ಸಿಟ್ಟು)ವನ್ನು ಮರೆ ಮಾಡಲು ಪ್ರಯತ್ನಿಸುತ್ತೇವೆ. ಅದರ ಫಲಿತಾಂಶವೇನೆಂದರೆ, ನಾವು ಕುಗ್ಗಿ ಹೋಗಿ, ತೊಂದರೆಗೆ ಒಳಗಾಗಿ ಎದೆಗುಂದಿದವರಾಗುತ್ತೇವೆ. ಇದು ಸರಿಯಾದ ಹೊಂದಾಣಿಕೆಯಲ್ಲ. ಯಾವಾಗ ಕ್ರಿಸ್ತನ ನಿಮಿತ್ತವಾಗಿ ನಮ್ಮನ್ನು ತಪ್ಪಿತಸ್ಥರನ್ನಾಗಿ ಮಾಡಿ ಹಿಂಸೆ ಪಡಿಸುವರೋ, ಇಂತಹ ಸಮಯದಲ್ಲಿ ಕ್ರಿಸ್ತನು ನಮಗೆ ಹೇಳುವ ಒಂದು ಮಾತೇನೆಂದರೆ ಸಂತೋಷಿಸಿರಿ. **ಸಂತೋಷ ಪಡಿರಿ ಮತ್ತು ಆನಂದ ಪಡಿರಿ.**

ಸ್ವಾಭಾವಿಕವಾಗಿ ತೊಂದರೆಗಳು ಬಂದಾಗ ಯಾರೂ ಸಂತೋಷ ಪಡುವುದಿಲ್ಲ. ಯಾರಲ್ಲಿ ಪವಿತ್ರಾತ್ಮನು ವಾಸವಾಗಿದ್ದಾನೋ ಅವನು ಮಾತ್ರ ಹಿಂಸೆಯ ಸಮಯದಲ್ಲಿ ಸಂತೋಷ ಪಡುವನು. ಸಂತೋಷವು ಪವಿತ್ರಾತ್ಮನಿಂದುಂಟಾಗುವ ಫಲವಾಗಿದೆ. (ಗಲಾತ್ಯ 5:22). ನಾವು ನಂಬಿಕೆಯಲ್ಲಿ ಇದ್ದುಕೊಂಡು ಪವಿತ್ರಾತ್ಮನೊಂದಿಗೆ ಸಹಕರಿಸುತ್ತೇವೆಯೋ ಇಲ್ಲವೋ ಎಂಬುದಾಗಿ, ದೇವರು ನಮಗೆ ಕೆಲವೊಂದು ಹಿಂಸೆಗಳನ್ನು ಬರಮಾಡಿ ನಮ್ಮನ್ನು ಪರೀಕ್ಷಿಸುತ್ತಾನೆ (1ನೇ ಪೇತ್ರ 1:6-7). ಒಂದು ವೇಳೆ ನಾವು ಕೋಪದಲ್ಲಿಯೂ, ಕುಗ್ಗಿಸಲ್ಪಟ್ಟವರಾಗಿಯೂ ಇದಕ್ಕೆ ಪ್ರತಿಕ್ರಿಯೆ ತೋರಿಸಿದರೆ ನಾವು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟಿಲ್ಲವೆಂದು ತಿಳಿದುಕೊಳ್ಳಬೇಕು.

ಯಾವಾಗ ನಾವು ಕಿತ್ತಳೆ ಹಣ್ಣು ಅಥವಾ ದ್ರಾಕ್ಷೆ ಹಣ್ಣು ಮತ್ತು ಬೇರೆ ಯಾವುದಾದರೂ ಹಣ್ಣನ್ನು ನಾವು ಹಿಸುಕು(ಹಿಂಡು)ವುದಾದರೆ ಅದರಿಂದ ರಸವು ಬರುತ್ತದೆ. ಯಾವಾಗ ನಾವು ಹಿಂಸೆಯಿಂದ ಹಿಸುಕಲ್ಪಡುತ್ತೇವೆಯೋ ಆಗ ನಮ್ಮಿಂದ ಯಾವ ರಸ ಬರುತ್ತದೆ? ಕಹಿಯಾದ ರಸವೋ ಅಥವಾ ಕೋಪದ ರಸವೋ? ಅಥವಾ ಸಿಹಿಯಾದ ಸಂತೋಷದ ರಸವೋ ? ನಮ್ಮಲ್ಲಿ ನೆಲೆಗೊಂಡಿರುವ ಪವಿತ್ರಾತ್ಮನಿಂದ ಇದು ಬರುವಂತಹದ್ದಾಗಿದೆ.

ಯಾಕೆ ಸಂತೋಷ ಪಡಬೇಕು. ? **ಯಾಕೆಂದರೆ ಪರಲೋಕದಲ್ಲಿ ನಿಮಗೆ ಒಂದು ದೊಡ್ಡ ಬಹುಮಾನ ಕೊಡಲ್ಪಡುತ್ತದೆ** (ವಚನ 12). ಈ ಬಹುಮಾನವು ಎಷ್ಟು ದೊಡ್ಡದಾಗಿದೆ? ಇದು ಅಳಿಯಲಾರದಂತಹ ದೊಡ್ಡ ಬಹುಮಾನವಾಗಿದೆ. ನಮ್ಮ ಬಹುಮಾನವು, ಪರಲೋಕ ರಾಜ್ಯವೇ (ವಚನ 10). ಪರಲೋಕದಲ್ಲಿ ದೇವರನ್ನು ನೋಡುವಂತದ್ದೆ ನಮ್ಮ ಬಹುಮಾನವಾಗಿರುತ್ತದೆ. (ವಚನ 8).ನಾವು ದೇವರ ಮಕ್ಕಳಾಗಿರುವುದು ಸಹ (ವಚನ 9) ಪೌಲನು ಬರೆಯುವುದೇನೆಂದರೆ **ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಾಪದವಿಯನ್ನು ಆಲೋಚಿಸಿ, ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ ಎಂದು ಎಣಿಸುತ್ತೇನೆ** (ರೋಮಾಯ 8:18). **ಹೇಗೆಂದರೆ ಕ್ಷಣಮಾತ್ರವಿರುವ ನಮ್ಮ ಹಗರವಾದ ಸಂಕಟವು ಅತ್ಯದಿಕವಾದ ಪ್ರತಿಫಲವನ್ನು ಉಂಟುಮಾಡಿ ನಮಗೆ ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸುತ್ತದೆ** (2ನೇ ಕೊರಿಂಥ 4:17).

ದೇವರು ಪ್ರೀತಿಸುವ ಸ್ವರ್ಗಿಯ ತಂದೆಯಾಗಿದ್ದಾನೆ ಮತ್ತು ಕ್ರಿಸ್ತನನ್ನು ವಿಶ್ವಾಸಿಸುವವರೆಲ್ಲರು ಆತನ ಮಕ್ಕಳಾಗಿದ್ದಾರೆ. ದೇವರು ನಮಗೆ ಬಹುಮಾನ ಕೊಡುವಂತವನಾಗದ್ದಾನೆ. ಆತನು ತನ್ನ ಮಹಿಮೆಯಲ್ಲಿ ನಮಗೆ ಪಾಲು ಕೊಡಲು ಬಯಸುತ್ತಾನೆ. ನಾವು ಬಹುಮಾನ ಹೊಂದಲು ದೇವರು ನಮಗೆ ಒತ್ತಾಯ ಮಾಡುವುದಿಲ್ಲ.' ಆತನ ಪ್ರೀತಿಯು ನಮ್ಮ ಜೀವಿತದ ಮೇಲೆ ಇರುವುದರಿಂದ ತನ್ನ ಚಿತ್ತದ ಪ್ರಕಾರ ನಡೆದುಕೊಂಡವರಿಗೆ ಬಹುಮಾನ ಕೊಡುತ್ತಾನೆ. ನಾವು ದೇವರ ಮಕ್ಕಳಾಗಿದ್ದೇವೆ. ಆದ್ದರಿಂದ ತಂದೆಯಾದ ದೇವರಿಗೆ ವಿಧೇಯರಾಗಿರುವುದು ನಮ್ಮ ಕರ್ತವ್ಯವಾಗಿದೆ. ಮತ್ತು ಪರಲೋಕ ಸೌಭಾಗ್ಯದ ಈ ಎಂಟು ವಿಷಯಗಳನ್ನು ಜನರಿಗೆ ತಿಳಿಸುವಂತದ್ದು (ವರ್ಣಿಸುವುದು) ನಮ್ಮ ಕರ್ತವ್ಯವಾಗಿದೆ.ವಚನ 3-10ರಲ್ಲಿ ವರ್ಣಿಸಿರುವ ಈ ಎಂಟು ಸಂಗತಿಗಳನ್ನು ನಾವು ಪವಿತ್ರಾತ್ಮನ ಮೂಲಕವಾಗಿ ಹೊಂದುವಾಗ ಮಾತ್ರ ನಾವು ನಿಜವಾಗಿಯೂ ಧನ್ಯರು.

## ಉಪ್ಪು ಮತ್ತು ಬೆಳಕು (5:13-16)

(ಮಾರ್ಕ 14:21, ಲೂಕ 14:33)

**13** **ಕ್ರೈಸ್ತರು ಭೂಮಿಗೆ ಉಪ್ಪಾಗಿದ್ದಾರೆ. ಉಪ್ಪು ಶುದ್ಧೀಕರಿಸುತ್ತದೆ. ಉಪ್ಪು ವಸ್ತುವನ್ನು ಜೋಪಾನವಾಗಿ (ನಾಶವಾಗದಂತೆ)** ಇಡುತ್ತದೆ. ಹಾಳಾಗುವುದನ್ನು ಉಪ್ಪು ತಡೆಯುತ್ತದೆ. ನೀವು ಮಾಂಸಕ್ಕೆ ಉಪ್ಪು ಹಾಕಿ ತಂಪು ಮಾಡುವ ಯಂತ್ರದಲ್ಲಿ ಇಡದೇ ಹೋದರು ಆ ಮಾಂಸವು ಒಂದು ತಿಂಗಳಾದರೂ ಕೆಟ್ಟು ಹೋಗುವುದಿಲ್ಲ.

ಲೋಕವು ಮಾಂಸದ ಹಾಗೆ. ಇದು ಗತಿಸಿ ಹೋಗುವುದು. ಲೋಕದಲ್ಲಿ ಪಾಪವಿದೆ. ಜನರು ದೇವರಿಗೆ ಅವಿಧೇಯರಾಗಿದ್ದಾರೆ. ಇವರು ಕೆಟ್ಟುಹೋದ ಮಾಂಸದಂತೆ ಆತ್ಮೀಕತೆಯಲ್ಲಿ ಹಾಳಾಗಿದ್ದಾರೆ. ಯಹೂದ್ಯ ಜನಾಂಗವು ಮತ್ತೇ ಮತ್ತೇ

ದೇವರಿಗೆ ವಿರೋಧವಾಗಿ ನಡೆಯಿತು. ಆಗ ದೇವರು ಯಹೂದ್ಯರು ಪಶ್ಚಾತ್ತಾಪ ಪಡಲು ಪ್ರವಾದಿಗಳನ್ನು ಕಳಿಸಿದನು. ಪ್ರವಾದಿಗಳು ಉಪ್ಪಿನ ಹಾಗೆ ಇದ್ದರು. ಇವರ ಮಾತುಗಳನ್ನು ಜಾಗ್ರತೆಯಿಂದ ಕೇಳಿದ ಜನರು ಶುದ್ಧರಾದರು. ಕ್ರೈಸ್ತರಾದ ನಾವು ಕೂಡ ಹಳೇ ಒಡಂಬಡಿಕೆಯ[25] ಪ್ರವಾದಿಗಳಂತೆ ಉಪ್ಪು ಎಂಬುದಾಗಿ ಕರೆಯಲ್ಪಟ್ಟಿದ್ದೇವೆ.

ಉಪ್ಪಿನಲ್ಲಿ ಇನ್ನೊಂದು ಗುಣ ಉಂಟು. ಇದು ತುಂಬಾ ಉಪ್ಪಾಗಿರುತ್ತದೆ . ಒಂದು ಸಣ್ಣ ಪ್ರಮಾಣದ ಉಪ್ಪು ದೊಡ್ಡ ಪರಿಣಾಮವನ್ನು ಉಂಟುಮಾಡುತ್ತದೆ. ಒಂದು ಚಿಟಿಕೆ ಉಪ್ಪು ದೊಡ್ಡ ಪ್ರಮಾಣದ ನೀರನ್ನು, ಉಪ್ಪು ನೀರನ್ನಾಗಿ ಮಾಡುತ್ತದೆ. ಉಪ್ಪು ವ್ಯತ್ಯಾಸವನ್ನು ಉಂಟು ಮಾಡುತ್ತದೆ. ಇದು ಪರಿಣಾಮನ್ನುಂಟು ಮಾಡುತ್ತದೆ. ಕ್ರೈಸ್ತರಾದ ನಾವುಉಪ್ಪಿನಂತಿರಬೇಕು. ನಾವು ಲೋಕದಲ್ಲಿ ವ್ಯತ್ಯಾಸವನ್ನುಂಟ್ಟು ಮಾಡಲೇ ಬೇಕು. ಯಾವ ರೀತಿಯಲ್ಲಿ ಉಪ್ಪು ನೀರಿನ ರುಚಿಯನ್ನು ಬದಲಾಯಿಸುತ್ತದೇಯೋ ಹಾಗೆಯೇ ನಾವು ಲೋಕದ ರುಚಿಯನ್ನು ಬದಲಾಯಿಸಲೆ ಬೇಕು. ಕ್ರೈಸ್ತರ ರುಚಿಯು ಹೇಗೆ ಇರಲೇಬೇಕೆಂಬುದಕ್ಕೆ ವಚನ 3-10 ರಲ್ಲಿ ಎಂಟು ಸ್ವರ್ಗಿಯ ಸಂಗತಿಗಳು ಬರೆಯಲ್ಪಟ್ಟಿವೆ.

ನಾವು ನಮ್ಮಷ್ಟಕ್ಕೆ ನಾವೇ ಪ್ರಶ್ನಿಸಿಕೊಳ್ಳೋಣ? ನಾವು ಉಪ್ಪಿನಂತೆ ರುಚಿಯಾಗಿದ್ದೇವೋ? ಲೋಕದಲ್ಲಿ ನಮ್ಮ ಸುತ್ತಲು ಇರುವ ಜನರಿಗೆ ಬೇರೆ ರುಚಿಯಾಗಿ ಇದ್ದೇವೋ.? ನಾವು ನಮ್ಮ ರುಚಿಯನ್ನು ಕಳೆದುಕೊಳ್ಳುವುದಾದರೆ ನಾವು ಬೆಲೆ ಇಲ್ಲದವರಾಗಿರುತ್ತೇವೆ. ನಾವು ಸುಳ್ಳು ಕ್ರೈಸ್ತರಾಗಿದ್ದವೆ. ಲೂಕ 14:35ರ ಪ್ರಕಾರ ಸಪ್ಪಗಾದ (ರುಚಿ ಇಲ್ಲದ) ಉಪ್ಪು ಒಳ್ಳೆಯದಾಗಿರದೇ ಇದನ್ನು ತಿಪ್ಪೆಗೆ[26] ಬಿಸಾಡಲ್ಪಡುವರು. ಇದು ಯಾವ ಒಳ್ಳೇತನಕ್ಕೂ ಉಪಯೋಗವಿಲ್ಲ. ಇದೇ ರೀತಿಯಾಗಿ ರುಚಿ ಇಲ್ಲದ ಕ್ರೈಸ್ತರು ಅಂದರೆ ಯಾರ ಜೀವಿತದಲ್ಲಿ ಪವಿತ್ರಾತ್ಮನು ಇಲ್ಲವೋ ಇವರು ಇದರಂತೆಯೆ. ಕ್ರೈಸ್ತರಲ್ಲಿ ಪವಿತ್ರಾತ್ಮನ ವಾಸವು ಇಲ್ಲದೇ ಹೋದರೆ ಆತನು ರುಚಿಯಾದ ಉಪ್ಪಿನಂತಿರಲು ಸಾಧ್ಯವಿಲ್ಲ (ಮಾರ್ಕ 9:50 ವ್ಯಾಖ್ಯಾನ ನೋಡಿರಿ). ನಮಗೆ ರುಚಿಯು ಪವಿತ್ರಾತ್ಮನಿಂದ ಬರುತ್ತದೆ.

ಹೆಚ್ಚಾಗಿ ಅನೇಕ ಜನರು ಅಭಿವೃದ್ಧಿಯ ವಿಷಯ ಮಾತಾಡುತ್ತಾರೆ. ಎಲ್ಲಾ ದೇಶಗಳು ಅಭಿವೃದ್ಧಿಯನ್ನು ಬಯಸುತ್ತವೆ. ಆದರೆ ಯಾವ ರೀತಿಯಾದಂತ ಅಭಿವೃದ್ಧಿ ಅವಶ್ಯಕತೆ ಬೇಕು? ಕ್ರೈಸ್ತ ಅಭಿವೃದ್ಧಿ ಗಾಗಿ, ಒಳ್ಳೇ ರಸ್ತೆ, ಕಾರ್ಖಾನೆ ಮತ್ತು ಸಕಲವಿಧವಾದ ಸೌಕರ್ಯಗಳಿಗಿಂತ ಹೇಚ್ಚಾಗಿ ಮನುಷ್ಯರಿಗೆ ದೇವರು ಬೇಕಾಗಿದ್ದಾವೆ. ಇವರಿಗೆ ಸಮಾಧಾನ, ಪ್ರೀತಿ, ಕ್ಷಮಾಪಣೆ ಮತ್ತು ರಕ್ಷಣೆ ಬೇಕಾಗಿದೆ. ಇದನ್ನು ಇನ್ನೊಂದು ರೀತಿಯಲ್ಲಿ ಹೇಳಬೇಕಾದರೆ ಇವರಿಗೆ ಬೇಕಾಗಿರುವುದು ಆತ್ಮೀಕವಾದಂತಹ ಉಪ್ಪು. ಪ್ರತಿಯೊಬ್ಬ ಕ್ರೈಸ್ತನು ಉಪ್ಪಿನ ಹರಳಿನಂತಿದ್ದಾನೆ. ಕ್ರಿಸ್ತನನ್ನು ನಂಬಿದ ವಿಶ್ವಾಸಿಗಳಲ್ಲಿ ಮಾತ್ರ ನಿಜವಾದ ಆತ್ಮೀಕ ಅಭಿವೃದ್ಧಿ ಹೊಂದಲು ಸಾಧ್ಯವಾಗಿದೆ. ನಾವು ಉಪ್ಪಾಗಿರುವುದಾದರೆ ಮಾತ್ರ ಹೀಗಿರಲು ಸಾಧ್ಯ.

**14-15** ಕ್ರೈಸ್ತರು ಕೇವಲ ಉಪ್ಪಾಗಿರದೆ **ಲೋಕಕ್ಕೆ ಬೆಳಕು ಕೂಡ ಆಗಿದ್ದಾರೆ**. ಪವಿತ್ರಾತ್ಮನು ನಮ್ಮಲ್ಲಿ ವಾಸವಾಗಿದ್ದು ಬೆಳಕು ಕೊಡುವವನಾಗಿದ್ದಾನೆ. ಇದು ನಮ್ಮ ಸ್ವಂತ ಬೆಳಕಾಗಿರದೇ ಕ್ರಿಸ್ತನಲ್ಲಿದ್ದ ಬೆಳಕಾಗಿದೆ. ನಾವು ಬೆಳಕಾಗಿದ್ದೇವೆ. ಯಾಕೆಂದರೆ ಕ್ರಿಸ್ತನು ಬೆಳಕಾಗಿದ್ದನು. (ಯೋಹಾನ 8:12 ನೋಡಿರಿ).

ಭೂಮಂಡಲವು, ಅವಿಧೇಯತೆ ಮತ್ತು ಪಾಪದ ದೇಶೆಯಿಂದಾಗಿ ದೇವರಿಂದ ಬೇರ್ಪಟ್ಟಿದ್ದು ಪಾಪವೆಂಬ ಕತ್ತಲೆಯಲ್ಲಿದೆ. ನಾವು ಕೂಡ ಒಂದು ಕಾಲದಲ್ಲಿ ಕತ್ತಲೆಯಲ್ಲಿ ಇದ್ದವರು. ಆದರೆ ಈಗ ಬೆಳಕಾಗಿದ್ದೇವೆ (ಎಫೆಸ 5:8, ಫಿಲಿಪ್ಪಿ. 2:15 ನೋಡಿರಿ).

ಗಂಡುಮಕ್ಕಳಿಗೂ ಮತ್ತು ಹೆಣ್ಣುಮಕ್ಕಳಿಗೂ ದೇವರ ಮತ್ತು ರಕ್ಷಣೆಯ ಮಾರ್ಗ ತೋರಿಸುವುದಕ್ಕಾಗಿ ನಾವು ಬೆಳಕುಗಳಾಗಿದ್ದೇವೆ. ನಮ್ಮ ನಡತೆ ಮತ್ತು ಮಾತುಗಳ ಮೂಲಕವಾಗಿ, ಸಾಕ್ಷಿಯ ಮುಖಾಂತರ ನಮ್ಮ ಬೆಳಕನ್ನು ಪ್ರಕಾಶಿಸಬೇಕು. ಈ ಎಂಟು ಗುಣಗಳು ವಚನ 3-10ನೇ ವಚನದಲ್ಲಿ ತೋರಿಸಲ್ಪಟ್ಟಿವೆ. ಇವು ಪವಿತ್ರಾತ್ಮನ ಎಂಟು ಫಲಗಳಾದ ಇವು (ಗಲಾತ್ಯ 5:22-23) ಬೆಳಕಿನಂತಿವೆ.

ಕತ್ತಲೆಯಿಂದ ಬೆಳಕು ಬೇರೆಯಾಗಿರುವಂತೆ ನಮ್ಮ ನಡವಳಿಕೆಯು (ಜೀವಿತವು) ಇತರರ ನಡವಳಿಕೆಯಂತಿರದೇ ಬೇರೆಯಾಗಿರಬೇಕು.ಇತರರು ಇದನ್ನು (ನಮ್ಮ ಬೆಳಕನ್ನು) ನೋಡುವಂತಿರಬೇಕು. ನಮ್ಮ ಸಭೆಯು **ಗುಡ್ಡದ ಮೇಲೆ ಕಟ್ಟಿರುವ ಪಟ್ಟಣದಂತಿರಬೇಕು** (ವಚನ 14).

ಜನರು ನಮ್ಮ ಬೆಳಕನ್ನು ನೋಡಿ (ಕ್ರಿಸ್ತನ ಬೆಳಕು) ಹಿಂಬಾಲಿಸುವುದಾದರೆ ಮಾತ್ರ ಅವರು ರಕ್ಷಣೆಯನ್ನು ಕಂಡುಕೊಳ್ಳುವರು ಅಥವಾ ಹೊಂದುವರು. ಅವರು ನಮ್ಮ ಬೆಳಕನ್ನು ಹಿಂಬಾಲಿಸಿದಾಗ ಮಾತ್ರ ಕತ್ತಲೆಯಿಂದ ಪಾರಾಗಲು ಸಾಧ್ಯ. ವಿಶ್ವದ ಎಲ್ಲಾ ಸ್ತ್ರೀಪುರುಷರನ್ನು (ಎಲ್ಲರನ್ನು) ರಕ್ಷಿಸುವುದಕ್ಕಾಗಿ ದೇವರು ಕ್ರಿಸ್ತನನ್ನು ಕಳಿಸಿಕೊಟ್ಟನು. (ಯೋಹಾನ 3:17). ದೇವರು ಕ್ರಿಸ್ತನನ್ನು ಕಳಿಸಿಕೊಟ್ಟಂತೆ, ಕ್ರಿಸ್ತನು ನಮ್ಮನ್ನು ಕಳಿಸುವವನಾಗಿದ್ದಾನೆ (ಯೋಹಾನ 17:18, 20:21). ಆದುದರಿಂದ ನಮ್ಮ ಬೆಳಕನ್ನು ಮುಚ್ಚಿಡುವುದು ಬೇಡ. ಸಪ್ಪೆಯಾದ ಉಪ್ಪು ಯಾವ ಕೆಲಸಕ್ಕೂ ಬಾರದು. ಅದರಂತೆ ನಾವು ಬೆಳಕನ್ನು ಕೊಳಗದಲ್ಲಿ ಹಾಕಿ ಬಚ್ಚಿಡುವುದಾದರೆ ಯಾವ ಕೇಲಸಕ್ಕೂ ಬಾರದು. ಅದರಂತೆಯೇ ಯಾವ ಕ್ರೈಸ್ತನು ಬೆಳಕನ್ನು ಪ್ರಕಾಶಿಸುವುದಿಲ್ಲವೋ ಅವನು ಉಪಯೋಗವಿಲ್ಲದಂತ ಕ್ರೈಸ್ತನಾಗಿದ್ದಾನೆ. ಇವನು ಫಲ ಬಿಡದಿರುವ ಹಣ್ಣಿನ ಮರದಂತಿರುವನು (ಯೋಹಾನ 15:5-6). ರುಚಿಯಿಲ್ಲದ, ಬೆಳಕಿಲ್ಲದ, ಫಲವಿಲ್ಲದ ಇಂತಹ ವ್ಯಕ್ತಿಯು ನಿಜವಾದ ಕ್ರೈಸ್ತನಲ್ಲ.

ನಾವು ನಮ್ಮಷ್ಟಕ್ಕೆ ನಾವೇ ಎಡಬಿಡದೆ ಪ್ರಶ್ನೆ ಹಾಕಿಕೊಳ್ಳೋತ್ತಿರೋಣ, ನನ್ನ ಬೆಳಕು ಪ್ರಕಾಶಿಸುತ್ತಿದೇಯೋ? ನನ್ನ ದೀಪದಲ್ಲಿ ಪವಿತ್ರಾತ್ಮನೆಂಬ ಎಣ್ಣೆ ಇದೆಯೋ,? ಪವಿತ್ರಾತ್ಮನೆಂಬ ಎಣ್ಣೆಯು ಇರದ ಹೊರತು, ನಮ್ಮ ಬೆಳಕು ಪ್ರಕಾಶಿಸಲಾರದು. ಎಣ್ಣೆಯು ಉಪಯೋಗಿಸಲ್ಪಡುತ್ತಾ ಉರಿದು ಹೋಗುತ್ತದೆ. ನಾವು ನಮ್ಮ ದೀಪಗಳು ಉರಿಯಲು ಎಣ್ಣೆಯನ್ನು ಪ್ರತಿದಿನವು ತುಂಬಿಸಿಕೊಳ್ಳಬೇಕು.ಉಳಿದಿರುವುದನ್ನು ಪವಿತ್ರಾತ್ಮನಿಂದ ತುಂಬಿಸಿಕೊಳ್ಳಬೇಕು (ಎಫೆಸ 5:19).

**16** ನಾವು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟಿದ್ದೇವೆ ಎಂಬುದನ್ನು ಇತರರು ತಿಳಿದುಕೊಳ್ಳುವುದು ಹೇಗೆ? ಇವರು ನಮ್ಮ ಒಳ್ಳೇ ಕ್ರಿಯೆಗಳನ್ನು ನೋಡುವರು. ನಮ್ಮ ಬೆಳಕು ನಮ್ಮ ಒಳ್ಳೇ ಕಾರ್ಯಗಳಿಂದ ಗುರುತಿಸಲ್ಪಡುತ್ತದೆ. ನಮ್ಮ ಬೆಳಕು ನಮಗಾಗಿ

ಪ್ರಕಾಶಿಸದೇ ದೇವರ ಮಹಿಮೆಗಾಗಿ ಪ್ರಕಾಶಿಸಬೇಕು. ನಮ್ಮ ಬೆಳಕಿನ ಮತ್ತು ಒಳ್ಳೇ ಕಾರ್ಯಗಳ ಗುರಿಯು ನಮ್ಮ ಲಾಭಕ್ಕಾಗಲಿ, ನಾವು ಸ್ತುತಿ ಹೊಂದುವುದಕ್ಕಾಗಿರದೆ.ದೇವರನ್ನು ಸ್ತುತಿಸುವುದಕ್ಕಾಗಿ ಇರಬೇಕು. ನೆನಪಿರಲಿ ಬೆಳಕು ನಮ್ಮ ಸ್ವಂತದ್ದಲ್ಲ. ಆ ಬೆಳಕು ನಮ್ಮಲ್ಲಿರುವ ದೇವರ ಪವಿತ್ರಾತ್ಮನಿಂದ ಬೆಳಗುವಂತಹದಾಗಿದೆ. ಎಲ್ಲಾ ವಿಷಯಗಳಲ್ಲಿ ಆತನಿಗೆ' ಮಹಿಮೆಯನ್ನು ಸಲ್ಲಿಸಬೇಕು.

## ಧರ್ಮಶಾಸ್ತ್ರವು ನೆರವೇರಿಸಲ್ಪಟ್ಟದ್ದು(5:17-20)

17 ಹಳ ಒಡಂಬಡಿಕೆಯು ಬೋಧಿಸುವ ಧರ್ಮಶಾಸ್ತ್ರವನ್ನಾಗಲಿ, ಮತ್ತು ಪ್ರವಾದನೆಗಳನ್ನಾಗಲಿ ತೆಗೆದು ಹಾಕುವುದಕ್ಕೆ ಕ್ರಿಸ್ತನು ಬರಲಿಲ್ಲ.ಇದು ಹಳೇ ಒಡಂಬಡಿಕೆಯ[27] ಬೋಧನೆಯಾಗಿತ್ತು.ಇವುಗಳನ್ನು ಆತನು **ಪೂರ್ಣವಾಗಿ ನೆರವೇರಿಸುವುದಕ್ಕಾಗಿ** ಬಂದನು. ಈತನು ಧರ್ಮಶಾಸ್ತ್ರವನ್ನು ಮತ್ತು ಪ್ರವಾದಿಗಳು ಬರೆಯಲ್ಪಟ್ಟ ಸಂಗತಿಗಳನ್ನು ನೆರವೇರಿಸುವುದಕ್ಕೆ ಬಂದನು.

ಕ್ರಿಸ್ತನು ಧರ್ಮಶಾಸ್ತ್ರವನ್ನು ಹೇಗೆ ನೆರವೇರಿಸಿದನು? ಸಂಪೂರ್ಣವಿಧೇಯತೆಯಿಂದ ಇದನ್ನು ನೆರವೇರಿಸಿದನು. ಯಹೂದ್ಯರು ಕ್ರಿಸ್ತನನ್ನು ಅಂಗೀಕರಿಸಲಿಲ್ಲ. ಕ್ರಿಸ್ತನು ಧರ್ಮಶಾಸ್ತ್ರವನ್ನು ಮುರಿಯುತ್ತಾನೆ (ಅಲ್ಲಗಳೆಯುತ್ತಾನೆ) ಎಂದು ಯಹೂದ್ಯರು ಆತನನ್ನು ದೂಷಿಸಿದರು. ಆದರೆ ಅವರ ದೋಷಾರೋಪಣೆ ತಪ್ಪಾಗಿತ್ತು. ಇದು ಇವರು ಮಾಡುವಂತದ್ದೇ ಆಗಿತ್ತು. ಇವರು ಇದನ್ನು ಲೌಕಿಕವಾಗಿ ಹಿಂಬಾಲಿಸುತ್ತಿದ್ದರು. ಆದರೆ ಇದು ಅವರ ಹೃದಯದಲ್ಲಿರಲಿಲ್ಲ. ಧರ್ಮಶಾಸ್ತ್ರವು ಬಹಿರಂಗವಾಗಿ ನಡೆಯುವಂತದ್ದು ಮಾತ್ರವಲ್ಲದೆ, ಅಂತರಂಗದಲ್ಲಿಯು ಸಹ ನಡೆಯಬೇಕೆಂದು ಯಹೂದ್ಯರಿಗೆ ಯೇಸುವು ತೋರಿಸಿಕೊಟ್ಟನು.

ಕ್ರಿಸ್ತನು ಹೇಗೆ ಹಳೇ ಒಡಂಬಡಿಕೆಯ ಪ್ರವಾದನೆಗಳನ್ನು ನೆರವೇರಿಸಿದನು? ಹೀಗೆ ಕ್ರಿಸ್ತನು ಮೆಸ್ಸಿಯನ ಮತ್ತು ರಕ್ಷಕನ ಕುರಿತಾಗಿ ಎಲ್ಲಾ ಪ್ರವಾದಿಗಳು ಪ್ರವಾದಿಸಿದಂತೆಯೇ, ಎಲ್ಲವನ್ನು ತನ್ನ ಸ್ವಂತ ಜೀವಿತದ ಮೂಲಕವಾಗಿ ನೆರವೇರಿಸಿದನು. ಕ್ರಿಸ್ತನು ಮನುಷ್ಯರ ಪಾಪಗಳಿಗಾಗಿ ಸಾಯುತ್ತಾನೆಂಬುದಾಗಿ ಪ್ರವಾದಿಗಳು ಪ್ರವಾದಿಸಿದ್ದರು. ಅವರ ಪಾಪಗಳ ಶಿಕ್ಷೆಯನ್ನು ತೆಗೆದುಕೊಳ್ಳುವನು (ಯೆಶಾಯ 53:5-6, ಮಾರ್ಕ 10:45, ವ್ಯಾಖ್ಯಾನ ನೋಡಿರಿ). ದೋಷ ಪರಿಹಾರಕ್ಕಾಗಿ ಕ್ರಿಸ್ತನು ತನ್ನ ಪ್ರಾಣವನ್ನೇ ಸಜೀವ ಯಜ್ಞವಾಗಿ **ಅರ್ಪಿಸುವನು**. (ಯಾಜಕ ಕಾಂಡ 5:14-16 ಯೆಶಾಯ 53:10).ಇದಕ್ಕಾಗಿ ನಮ್ಮ ಅಪರಾಧಗಳನ್ನು ಹೋಗಲಾಡಿಸಲು ಕ್ರಿಸ್ತನು ತನ್ನ ಜೀವಿತವನ್ನರ್ಪಿಸಿದನು. ಇವೆಲ್ಲವೂ ನೆರವೇರಲ್ಪಟ್ಟದ್ದು ಕ್ರಿಸ್ತನು ಕ್ರೂಜೆಯ ಮೇಲೆ ಪ್ರಾಣ ಬಿಟ್ಟದ್ದರಿಂದ.ಅಂತಿಮವಾಗಿ ಪಾಪಕ್ಕಾಗಿ ಕರ್ತನು ತನ್ನನ್ನೇ ಯಜ್ಞವಾಗಿ ಸಮರ್ಪಿಸಿಕೊಂಡನು. ಮತ್ತ್ಯಾವ ಯಜ್ಞದ ಅವಶ್ಯವಿಲ್ಲ. ಇತನ ಮರಣದ ಮೂಲಕ ಇತನನ್ನು ನಂಬಿದ ವಿಶ್ವಾಸಿಗಳೆಲ್ಲರೂ ಶಿಕ್ಷೆಯಿಂದ ತಪ್ಪಿಸಿಕೊಂಡವರಾಗಿ ರಕ್ಷಣೆ ಹೊಂದುವಂತಾಯಿತು. ಈ ರೀತಿಯಾಗಿ ಕ್ರಿಸ್ತನು ಹಳೇ ಒಡಂಬಡಿಕೆಯಲ್ಲಿ ಪ್ರವಾದಿಗಳು ಮಾಡಿದ ವಾಗ್ದಾನ ಮತ್ತು ಪ್ರವಾದನೆಯನ್ನು ನೆರವೇರಿಸಿದನು.

18 ಹಳೆ ಒಡಂಬಡಿಕೆಯಲ್ಲಿ ಕ್ರಿಸ್ತನ ಬಗ್ಗೆ ಬರೆಯಲ್ಪಟ್ಟಂತಹ **ಪ್ರತಿಯೊಂದೂ ಸಂಗತಿಗಳು ನೆರವೇರದ ಹೊರತು ಧರ್ಮಶಾಸ್ತ್ರವು ಅಳಿದು ಹೋಗುವುದಿಲ್ಲ**. ಕ್ರಿಸ್ತನು ಮರಣ ಮತ್ತು ಪುನರುತ್ಥಾನಕ್ಕಿಂತ ಮುಂಚೆ ಈ ಧರ್ಮಶಾಸ್ತ್ರವು ಪೂರ್ಣ ಪ್ರಯೋಜನವಾಗಿತ್ತು. ಆದರೆ ಕ್ರಿಸ್ತನು ಮರಣ ಹೊಂದಿ ಪುನರುತ್ಥಾನವಾದನೋ ಆಗ ಧರ್ಮಶಾಸ್ತ್ರದ ಒಂದು ಭಾಗವು ಅವಶ್ಯವಿಲ್ಲದ್ದಾಯಿತು. ಈ ಭಾಗವು ಕಾಣೆಯಾಗಲಿಲ್ಲ. ಆದರೆ ಆ ಭಾಗವು ಪ್ರಯೋಜನವಿಲ್ಲದ್ದಾಗಿ ನಿಂತುಹೋಯಿತು ಈ ಭಾಗದ ಧರ್ಮಶಾಸ್ತ್ರವು ಸಂಪ್ರದಾಯದಂತೆ ನಿಂತುಹೋಯಿತು. ಯಹೂದ್ಯ ಧರ್ಮಶಾಸ್ತ್ರದಲ್ಲಿ ತ್ಯಾಗಕ್ಕೋಸ್ಕರವಾಗಿ ಮತ್ತು ಪಾಪಶುದ್ಧೀಕರಣಕ್ಕೂ ಮಾಡಿದ ತಪ್ಪನ್ನು ತೆಗೆಯುವುದಕ್ಕಾಗಿಯೂ ಇದು ಕೆಲವೊಂದು ಕಟ್ಟಳೆಗಳಿಂದ ಕೂಡಿದ್ದಾಗಿ, ಇವು ಕೊನೆಯವರೆಗೂ ಅವಶ್ಯವಾಗಿರಲಿಲ್ಲವಾದ ಕಾರಣ ಕ್ರಿಸ್ತನು ಬಂದು ನಮ್ಮ ಅಪರಾದಗಳನ್ನು, ಪಾಪಗಳನ್ನು ತೆಗೆದು ಹಾಕಿದನು. (ಕೊಲಸ್ಸೆ 2:13-14, ಇಬ್ರಿಯಾ 8:12-13, ವ್ಯಾಖ್ಯಾನ ನೋಡಿರಿ).

19 ಧರ್ಮಶಾಸ್ತ್ರಕ್ಕೆ ಕ್ರೈಸ್ತರು ವಿಧೇಯರಾಗಿರಬೇಕೊ? ಹೌದು ವಿಧೇಯರಾಗಿರಬೇಕು. ನೈತಿಕತೇಗೆ ಸಂಬಂದಿಸಿದ ಮುಖ್ಯ ಆಜ್ಞೆಗಳಿಗೆ ವಿಧೇಯರಾಗಿರಬೇಕು. ಈ ಮುಖ್ಯ ಆಜ್ಞೆಗಳು ನಮ್ಮನ್ನು ನೀತಿ ಮಾರ್ಗದಲ್ಲಿ ನಡೆಸುತ್ತವೆ.ಇವು ತೆಗೆದುಹಾಕಲ್ಪಡದೆ ಇರುವುದರಿಂದ ನಾವು ಇವುಗಳಿಗೆ ವಿಧೇಯರಾಗಲೇಬೇಕು.

ಹಿಂದೆ ಮೋಶೆಯ ಕಾಲದಲ್ಲಿ ದೇವರು ಯಹೂದ್ಯರೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿ ಅವರಿಗೆ ಹೇಳಿದ್ದೇನೆಂದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವುದಾದರೆ ರಕ್ಷಿಸಲ್ಪಡುತ್ತೀರಿ. (ವಿಮೋಚನಾ ಕಾಂಡ 19:5-6).ದೇವರು ಎರಡು ಕಲ್ಲಿನ ಹಲಗೆಯ ಮೇಲೆ ಧರ್ಮಶಾಸ್ತ್ರವನ್ನು ಬರೆದನು(ವಿಮೋಚನಾ ಕಾಂಡ 31:18) ಆದರೆ ದೇವರು ಯಾವಾಗ ಕ್ರಿಸ್ತನನ್ನು ಲೋಕಕ್ಕೆ ಕಳುಹಿಸುವಾಗ ದೇವರು ಒಂದು [28] **ಹೊಸ ಒಡಂಬಡಿಕೆಯನ್ನು (ಮತ್ತಾಯ 22:40; ಗಲಾತ್ಯ 5:14).]** ಜನರೊಂದಿಗೆ ಮಾಡಿದನು. ದೇವರು ಹೇಳಿದ್ದು, ನಾನು ನನ್ನ ಧರ್ಮಶಾಸ್ತ್ರವನ್ನು ಅವರ ಮನಸ್ಸಿನಲ್ಲಿಟ್ಟು, ಅವರ ಹೃದಯಗಳಲ್ಲಿ ಅವುಗಳನ್ನು ಬರೆಯುವೆನು (ಯೆರಮೀಯ 31:31-33, ಇಬ್ರಿಯಾ 8:8-10). **ನಾನು ಅವರ ದುಷ್ಕೃತ್ಯಗಳ ವಿಷಯವಾಗಿ ಕ್ಷಮೆಯುಳ್ಳವನಾಗಿರುವೆನು. ಅವರ ಪಾಪಗಳನ್ನು ನನ್ನ ನೆನಪಿಗೆ ಎಂದಿಗೂ ತರುವುದಿಲ್ಲ** (ಯೆರೆಮಿಯಾ 31:34, ಇಬ್ರಿಯಾ 8:12).

ಈಗ, ನಾವು ಆಜ್ಞೆಗಳನ್ನು ಕೈಕೊಂಡು ನಡೆಯಲು ದೇವರು ಪವಿತ್ರಾತ್ಮನ ಮೂಲಕವಾಗಿ ಸಹಾಯ ಮಾಡುತ್ತಾನೆ. ನಾವು ನೀತಿಶಾಸ್ತ್ರದಿಂದ ಸ್ವತಂತ್ರರಾಗಿದ್ದೇವೆ. ಕ್ರಿಸ್ತನು ಧರ್ಮಶಾಸ್ತ್ರವನ್ನು ನಾಶಮಾಡಲಿಕ್ಕೆ ಬರಲಿಲ್ಲ. ಇವುಗಳನ್ನು ಕೈಕೊಂಡು ನಡೆಯಲು ಶಕ್ತಿ ಕೊಡುವುದಕ್ಕಾಗಿ ಬಂದನು.

ನಮ್ಮ ದಿನನಿತ್ಯದ ಜೀವಿತಕ್ಕೆ ಸಂಬಂದಿಸಿದ ಈ ನೀತಿಶಾಸ್ತ್ರವು, ಯಹೂದ್ಯ ಧರ್ಮಶಾಸ್ತ್ರದ ಒಂದು ಭಾಗವಾಗಿತ್ತು. ಈ ನೀತಿಶಾಸ್ತ್ರವು ಹತ್ತು ಆಜ್ಞೆಗಳನ್ನು ಒಳಗೊಂಡಿತ್ತು. (ವಿಮೋಚನಾ 20:1-17). ಈ ಆಜ್ಞೆಗಳು, ನಾವು ದೇವರನ್ನು ಮಾತ್ರ ಪ್ರೀತಿಸದೇ ನೆರೆಹೊರೆಯವರನ್ನು ಪ್ರೀತಿಸಬೇಕು, ಎಂಬಂತವುಗಳಾಗಿವೆ. (ಧರ್ಮೋಪದೇಶಕಾಂಡ 6:4-5, ಯಾಜಕಕಾಂಡ 19:18,

ಮಾರ್ಕ 12:29-31). ನಿಜವಾಗಿ ಈ ಎರಡೂ ಆಜ್ಞೆಗಳು ಎಲ್ಲಾ ಧರ್ಮಶಾಸ್ತ್ರವನ್ನು ಸಂಪೂರ್ಣ ಮಾಡಿ ದೇವರನ್ನು ಮನುಷ್ಯರನ್ನು ಒಂದು ಮಾಡುವಂತಹವುಗಳಾಗಿವೆ. (ಮತ್ತಾಯ 22:40, ಗಲಾತ್ಯ 5:14)

ಪ್ರೀತಿಯಿಂದಲೇ ಧರ್ಮಪ್ರಮಾಣವು ನೆರವೇರುತ್ತದೆ ಎಂಬುದಾಗಿ ಪೌಲನು ಬರೆಯುತ್ತಾನೆ (ರೋಮಾ. 13:10). ಈ ಎರಡೂ ಆಜ್ಞೆಗಳಿಗೆ ನಾವು ಸಂಪೂರ್ಣವಾಗಿ ವಿಧೇಯರಾದರೆ ಪರಿಪೂರ್ಣವಾಗಿ ಧರ್ಮಶಾಸ್ತ್ರಕ್ಕೆ ವಿಧೇಯರಾದ ಹಾಗೆಯೇ. ಆದುದರಿಂದ 19ನೆಯ ವಚನದಲ್ಲಿ ಮತ್ತಾಯನು "ಆಜ್ಞೆ" ಮತ್ತು "ಆಜ್ಞೆಗಳು" ಈ ವಿಷಯದಲ್ಲಿ. ಬರೆಯುವಾಗ ಶಿಷ್ಟಾಚಾರದ ವಿಷಯದಲ್ಲಿ ಬರೆಯದೆ ನೀತಿಶಾಸ್ತ್ರದ ವಿಷಯದಲ್ಲಿ ಬರೆದಿರುವನೆಂದು ತಿಳಿದುಕೊಳ್ಳಲೇಬೇಕು. ನಾವು ಚಿಕ್ಕ ಮತ್ತು ದೊಡ್ಡದಾದಂತ ಎಲ್ಲಾ ನೈತಿಕ ನಿಯಮಗಳಿಗೆ ವಿಧೇಯರಾಗಿ ನಮ್ಮಂತೆಯೆ ಇತರರು ಮಾಡುವ ಹಾಗೆ ನಾವು ಅವರಿಗೆ ಭೋದಿಸಲು ಆಗುತ್ತದೆ.

20 ಪರಿಸಾಯರು ಮತ್ತು ಧರ್ಮಶಾಸ್ತ್ರಿಗಳು. ಇವರು ಯಹೂದ್ಯರಲ್ಲಿಯೆ ಅತಿ ಹೆಚ್ಚು ಧಾರ್ಮಿಕವಂತರಾಗಿದ್ದರು. ಯಹೂದ್ಯರಲ್ಲಿ ಪರಿಸಾಯರು ಬಹಳ ಕಟ್ಟುನಿಟ್ಟಿನ ಪಂಗಡದವರಾಗಿದ್ದರು..ವಿಧೇಯರಾಗುವುದಕ್ಕೆ ಇರುವಂತ ಎಲ್ಲಾ ಆಜ್ಞೆಗಳನ್ನು ಶಾಸ್ತ್ರಿಗಳು ಬಲ್ಲವರಾಗಿದ್ದರು. ಒಬ್ಬನು, ಪರಿಸಾಯರ ಮತ್ತುಭೋದಿಸುವ ಶಾಸ್ತ್ರಿಗಳ ನೀತಿಗಿಂತ ಹೆಚ್ಚಿನವನಾಗಿರುವುದು ಹೇಗೆ?

ಕ್ರಿಸ್ತನ ಅರ್ಥವು ಹೀಗಿದೆ, ಈ ಯಹೂದ್ಯ ನಾಯಕರು ಬಹಿರಂಗವಾಗಿ ನೀತಿವಂತರಾಗಿದ್ಯಾಗ್ಯೂ ಅಂತರಂಗದಲ್ಲಿ ಇವರು ನೀತಿವಂತರಾಗಿರಲಿಲ್ಲ.ಜನರಿಂದ ಹೊಗಳಿಸಿಕೊಳ್ಳುವುದಕ್ಕಾಗಿ ಇವರು ಹೊರಗಿನ ತೋರಿಕೆಗಾಗಿ ಮಾತ್ರ ಧರ್ಮಶಾಸ್ತ್ರಕ್ಕೆ ವಿಧೇಯರಾಗಿರುತ್ತಿದ್ದರು. (ಲೂಕ 16:14 -15) ಇವರು ಚಿಕ್ಕ ನಿಯಮಗಳನ್ನು ಪಾಲಿಸುವರು ಆದರೇ ಮುಖ್ಯವಾದವುಗಳನ್ನೇ ಅಲಕ್ಷ ಮಾಡುತ್ತಾರೆ. (ಮತ್ತಾಯ 23:23-24, ಲೂಕ 11:42). ದೇವರು ಹೊರಗಿನ ತೋರಿಕೆಯನ್ನು ನೋಡದೇ ಅಂತರಂಗವನ್ನು ನೋಡುವವನು ಎಂಬ ಅಂಶವನ್ನು ಇವರು ಮರೆತುಬಿಟ್ಟಿದ್ದರು. ಪರಿಸಾಯರ ಮತ್ತು ಶಾಸ್ತ್ರಿಗಳ ಹೃದಯಗಳು ದೇವರಿಂದ ಬಹುದೂರವಾಗಿದ್ದವು. ಇವರ ಹೃದಯಗಳು ತಣ್ಣಗಿದ್ದವು. ಇವರಲ್ಲಿ ಮಾನವೀಯತೆಯಾಗಲಿ, ಪ್ರೀತಿಯಾಗಲಿ ಮತ್ತು ಕರುಣೆಯಾಗಲಿ ಇರಲಿಲ್ಲ. ಇವರು ಮತ್ತೊಬ್ಬರನ್ನು ಮೋಸಗೊಳಿಸುವವರೂ ಮತ್ತು ಕಪಟಿಗಳೂ ಆಗಿದ್ದರು.

ಇವರು ತಮ್ಮಷ್ಟಕ್ಕೆ ತಾವೇ ಮೋಸ ಹೋಗುತ್ತಿದ್ದರು. ಇವರು ತಮ್ಮ ಸ್ವನೀತಿಯ ಮೇಲೆ ವಿಶ್ವಾಸವಿಟ್ಟವರಾಗಿದ್ದರು. ಅವರು ತಮ್ಮಷ್ಟಕ್ಕೆ ತಾವೇ ನಾವು ಒಳ್ಳೆಯವರು ಮತ್ತು ಶುದ್ಧರು ಎಂದು ಹೇಳಿಕೊಳ್ಳುತ್ತಿದ್ದರು. ನಾವು ಇತರರಂತೆ ಅಲ್ಲ (ಲೂಕ 18:9-14 ನೋಡಿರಿ). ದೇವರು ನಮ್ಮನ್ನು ಅಂಗೀಕರಿಸುವನೆಂದು ಇವರು ಬಾವಿಸಿದ್ದರು.ಆದರೇ ಈ ವಿಚಾರದಲ್ಲಿ ಇವರು ದೊಡ್ಡ ತಪ್ಪು ಮಾಡುತ್ತಿದ್ದರು. ದೇವರ ದೃಷ್ಟಿಯಲ್ಲಿ ಇವರ ನೀತಿಯು ಸುಳ್ಳಾಗಿತ್ತು.

ಈ ಕಾರಣದಿಂದಲೇ ಕ್ರಿಸ್ತನು. ನಿಮ್ಮ ನೀತಿಯು ಪರಿಸಾಯ ಮತ್ತು ಶಾಸ್ತ್ರಿಗಳ ನೀತಿಗಿಂತ ಕಡಿಮೆಯಾಗದಿದ್ದರೆ ನೀವು ಪರಲೋಕ ರಾಜ್ಯದಲ್ಲಿ ಸೇರುವುದೇ ಇಲ್ಲ ಎಂದು ಈ ರೀತಿಯಾಗಿ ಬೋಧಿಸಿದನು. ನಾವು ರಕ್ಷಣೆ ಹೊಂದುವುದೇ ಇಲ್ಲ ಎಂದೇ ಇದರರ್ಥ. ತನ್ನ ಸ್ವನೀತಿಯನ್ನು ಆಧಾರವಾಗಿಟ್ಟುಕೊಂಡು, ಯಾವ ಪುರುಷ ಅಥವಾ ಸ್ತ್ರೀಯಾಗಲಿ, ಪರಲೋಕ ರಾಜ್ಯವನ್ನು ಪ್ರವೇಶಿಸಲಾರರು. ನಾವು ಮನುಷ್ಯನ ಸ್ವನೀತಿಯಿಂದ ರಕ್ಷಿಸಲ್ಪಡುವುದಿಲ್ಲ. ಆದರೆ ಕ್ರಿಸ್ತನ ನೀತಿಯಿಂದ ಮಾತ್ರ ನಾವು ರಕ್ಷಿಸಲ್ಪಡುತ್ತೇವೆ. ನಾವು ನಮ್ಮ ಸ್ವಂತ ಪ್ರಯತ್ನ ಮತ್ತು ಕೆಲಸದಿಂದ ರಕ್ಷಿಸಲ್ಪಡುವುದಿಲ್ಲ. ಕ್ರಿಸ್ತನು ನಮಗೋಸ್ಕರ ಮಾಡಿದ ತ್ಯಾಗದ ಕಾರ್ಯದಿಂದ ನಾವು ರಕ್ಷಿಸಲ್ಪಡುತ್ತೇವೆ. ನಾವು ನಮ್ಮ ಯೋಗ್ಯತೆಯಕಾರಣದಿಂದಾಗಿ ರಕ್ಷಿಸಲ್ಪಡಲಿಲ್ಲ. ನಾವು ರಕ್ಷಿಸಲ್ಪಟ್ಟಿರುವುದು ದೇವರ ಕೃಪೆಯಿಂದ ಮಾತ್ರ (ಗಲಾತ್ಯ 2:15-16, ಎಫೆಸ 3:4-9 ವ್ಯಾಖ್ಯಾನ ನೋಡಿರಿ).

ನಾವು ದೇವರಿಂದ ಇಂತಹ ಕೃಪೆಯನ್ನು ಹೊಂದಿರುವುದರಿಂದ ನಮ್ಮ ಜೀವಿತವು ದೇವರನ್ನು ಸಂತೋಷಪಡಿಸುವಂತರಾಗಿರಬೇಕು. ನಾವು ಪವಿತ್ರಾತ್ಮನನ್ನು ಪಡೆದವರಾಗಿದ್ದರೆ ಪವಿತ್ರಾತ್ಮನಿಂದುಂಟಾಗುವ ಫಲಗಳು ನಮ್ಮ ಜೀವಿತದಲ್ಲಿ ಕಂಡುಬರುತ್ತದೆ. (ಮತ್ತಾಯ 5:3-10, ಗಲಾತ್ಯ 5:22-23). ಒಂದು ವೇಳೆ ನಾವು ಆತ್ಮನ ಫಲಗಳನ್ನು ತೋರಿಸದೇ ಹೋದರೆ ಪವಿತ್ರಾತ್ಮನು ನಮ್ಮಲ್ಲಿ ಇಲ್ಲ. ಈ ಆತ್ಮನು ಇಲ್ಲದಿದ್ದರೆ. ನಾವು ಕ್ರಿಸ್ತನವರಲ್ಲ. (ರೋಮಾ. 8:9). ನಾವು ನಿಜ ಕ್ರೈಸ್ತರಲ್ಲ. ರಕ್ಷಿಸಲ್ಪಟ್ಟವರೂ ಅಲ್ಲ.

ಹೀಗಿರುವುದರಿಂದ ಪ್ರತಿಯೊಬ್ಬರು ತಮ್ಮನ್ನು ತಾವೇ ಪರೀಕ್ಷಿಸಿಕೊಳ್ಳಲಿ.

## ಕೊಲೆ: (5:21-26)

(ಲೂಕ 12:57-59)

21 ಯಹೂದ್ಯ ನಾಯಕರು ಭೋದಿಸುತ್ತಿದ್ದಂತ ಆರು ಉದಾಹರಣೆಗಳನ್ನು ಕ್ರಿಸ್ತನು, ಐದನೇಯ ಅಧ್ಯಾಯದಲ್ಲಿ ನೆನಪಿಸುತ್ತಾನೆ.ಇವರ ಪ್ರತಿಯೊಂದು ಉದಾಹರಣೆಗೆ ಪ್ರತಿಯಾಗಿ ಕ್ರಿಸ್ತನುತನ್ನದೆಯಾದಂತ ಒಂದೊಂದೇ ಉದಾಹರಣೆ ಯೊಂದಿದೆ ಯಹೂದ್ಯರಿಗೆ ಭೋಧಿಸುತ್ತಾನೆ.ಈ ಯಹೂದ್ಯರ ಬೋಧನೆಯು ಮನುಷ್ಯನ ಹೊರಗಿನ ತೋರಿಕೆಯ ನಡವಳಿಕೆಗೆ ಮಾತ್ರ ಸೀಮಿತವಾಗಿತ್ತು. ಆದರೆ ಕ್ರಿಸ್ತನ ಭೋಧನೆಯು ಮನುಷ್ಯನ ಅಂತರಂಗಕ್ಕೆ ಸಂಬಂಧಪಟ್ಟಿದ್ದಾಗಿತ್ತು. ಆತನು ಭೋಧಿಸಿದ್ದು, ನಾವು ಬರೆಯಲ್ಪಟ್ಟ ರೀತಿಯಂತೆ ಧರ್ಮಶಾಸ್ತ್ರವನ್ನು ಹಿಂಬಾಲಿಸದೇ ಆತ್ಮೀಕ ರೀತಿಯಲ್ಲಿ ಧರ್ಮಶಾಸ್ತ್ರವನ್ನು ಹಿಂಬಾಲಿಸಲೇಬೇಕು. ಇದು ಅಂತರಂಗದ (ಒಳಗಿನ) ಧರ್ಮಶಾಸ್ತ್ರವಾಗಿದೆ.

ಧರ್ಮಶಾಸ್ತ್ರ ಹೇಳುತ್ತದೆ. ನೀನು ಕೊಲೆ ಮಾಡಬಾರದು. (ವಿಮೋಚನಾಕಾಂಡ 20:13). ಇದರ ಅರ್ಥ ದೇಹವನ್ನು ಸಾಯಿಸಬೇಡ.

22 ಯೇಸುವು, ಈ ಆಜ್ಞೆಯಲ್ಲಿರತಕ್ಕ ಆಳವಾದ ಅರ್ಥವನ್ನು ನಮಗೆ ತೋರಿಸಿದ್ದಾನೆ. ಸ್ವಾಮಿ ಹೇಳಿದ್ದು "ಕೊಲ್ಲಲು ಆಶೆ ಪಡಬೇಡ" ಇದು ಮತ್ತೊಬ್ಬನನ್ನು ತುಚ್ಛೀಕರಿಸಿದ ಹಾಗೆ ಆಗುತ್ತದೆ. ನಾವು ಇತರರನ್ನು ತೊಂದರೆ ಪಡಿಸುವುದಾಗಲಿ, ಗಾಯ

ಮಾಡುವುದಾಗಲಿ ಯೋಚಿಸಲೇ ಬಾರದು. ಇದು ದೇವರ ದೃಷ್ಟಿಯಲ್ಲಿ ಅವನನ್ನು ಕೊಲೆ ಮಾಡಿದ ಹಾಗೆ ಆಗುತ್ತದೆ. ನಾವು ಮತ್ತೊಬ್ಬರನ್ನು ನಿಂದಿಸುವುದಾಗಲಿ, ತಪ್ಪೆಂದು ಹೇಳುವುದಾಗಲಿ, ಅಪಮಾನ ಮಾಡುವುದಾಗಲೀ, ಮಾಡಲೇಬಾರದು. ಹಾಗೆ ಮಾಡಿದರೆ ಅವನ ಪ್ರತಿಷ್ಠೆಯನ್ನು ಮತ್ತು ಅವನ ಮಾನವನ್ನು ಕೊಲೆ ಮಾಡಿದ ಹಾಗೆ ಆಗುತ್ತದೆ.

ಅರಾಮಿಕ ಭಾಷೆಯಲ್ಲಿ ರಾಖಾ ಎಂಬ ಪದದ ಅರ್ಥವು "ಮೂರ್ಖ" ಅಥವಾ "ಮೂಕ". ಸೇನ್ಹೆದ್ರಿಯನ್, ಎಂಬುದು ಯಹೂದ್ಯರ ಮುಖ್ಯ ಆಡಳಿತ ಮಂಡಳಿಯಾಗಿದ್ದು ಇದು ಒಂದು ನ್ಯಾಯಾ ಮಂಡಳಿಯಾಗಿತ್ತು. ಒಬ್ಬನು ಮತ್ತೊಬ್ಬನಿಗೆ ಅವಮಾನ ಮಾಡಿದರೆ ಆ ವಿಷಯವನ್ನು ನ್ಯಾಯಾ ಮಂಡಳಿಯ ಮುಂದೆ ತರಲಾಗುತ್ತಿತ್ತು.

ಕ್ರಿಸ್ತನ ಬೋಧನೆ (ಕಲಿಸುವಿಕೆಯ) ಮೂಲಕವಾಗಿ ಹೇಳುವುದೇನೆಂದರೆ "ನೀನು ಮೂರ್ಖ" ಕೆಟ್ಟವನಾಗಿದ್ದಿ. ಯಾವನಾದರೂ ನಿಮ್ಮನ್ನು ಮೂರ್ಖ ಎಂದು ತಿರಸ್ಕರಿಸಿದರೆ, ಅವನನ್ನು ಸಂಪೂರ್ಣವಾಗಿ ಮುಗಿಸಿಬಿಡುತ್ತೀರಿ. ಇದರಂತೆ ಮಾಡುವವನು ಅಪಾಯಕಾರಿಯೂ ಮತ್ತು ನರಕಕ್ಕೆ ಹೋಗುವವನೂ ಆಗಿದ್ದಾನೆ. ಒಬ್ಬನನ್ನು ತಿದ್ದಬಾರದು ಅಥವಾ ಗದರಿಸಬಾರದು ಎಂಬುದಾಗಿ ಈ ಭೋಧನೆಯ ಅರ್ಥವಲ್ಲ.

ನಾನು ಮೊದಲನೇ ಆಜ್ಞೆಯಿಂದ ಒಂಭತ್ತು ಆಜ್ಞೆಗಳಿಗೆ ವಿಧೇಯನಾಗಿದ್ದೇನೆ ಎಂದು ಹೇಳುತ್ತಾರೆ ಆದರೆ ಹತ್ತನೆಯ ಆಜ್ಞೆಗೆ ವಿಧೇಯನಾಗಿಲ್ಲವೆಂದು ಹೇಳುವುದಿಲ್ಲ. ನೀನು ಕಾಮಿಸುವುದು ಬೇಡ (ವಿಮೋಚನಾ ಕಾಂಡ 20:17). ಕಾಮಿಸು (ಬಯಸು) ಎಂಬುದರ ಅರ್ಥ ಧರ್ಮಶಾಸ್ತ್ರಕ್ಕೆ ವಿರೋಧವಾಗಿ ಸ್ವಲ್ಪ ಆಶೆ ಪಡುವಂತಹುದಾಗಿದೆ. ಇದರ ಅರ್ಥ ಪಾಪ ಮಾಡಲು ಆಶೆ ಪಡುವುದು. ನೆರೆಯವರ ಹೆಂಡತಿಯನ್ನು ಕಾಮಿಸುವ ಹಾಗೆ ಆಶೆ ಪಡುವುದಾದರೆ, ನೀವು ಆಶೆ ಪಟ್ಟು ಅಪರಾಧ ಮಾಡಿ ಅವಳೊಂದಿಗೆ ವ್ಯಭಿಚಾರ ಮಾಡುತ್ತೀರಿ. ಪಾಪವು ಕೇವಲ ಹೊರಗಿನ ಕಾರ್ಯವಲ್ಲ. ಇದು ಧರ್ಮಶಾಸ್ತ್ರಕ್ಕೆ ವಿರೋಧವಾದದ್ದು, ಸ್ವಾರ್ಥಕ್ಕೆ ಆಶೆ ಪಡುವಂತಹದು ಆಗಿದೆ.

ಎಲ್ಲಾ ಮನುಷ್ಯರು ಪಾಪಿಗಳೇ (ರೋಮಾ. 3:10). ಮನುಷ್ಯರ ಹೃದಯವು ಎಲ್ಲಾ ಕೆಟ್ಟತನದ ಆಶೆಗಳಿಂದ ತುಂಬಲ್ಪಟ್ಟಿದೆ. **ಹೃದಯವು ಎಲ್ಲಕ್ಕಿಂತಲೂ ವಂಚಕ, ಗುಣವಾಗದ ರೋಗಕ್ಕೆ ತು ತ್ತಾಗಿದೆ.** (ಯೆರೆಮೀಯ 17:9). ಪಾಪದ ದೆಸೆಯಿಂದ ಮನುಷ್ಯರೆಲ್ಲರೂ ಸಾಯತಕ್ಕವರೇ. ನಮ್ಮನ್ನು ನಾವೇ ರಕ್ಷಿಸಿಕೊಳ್ಳುವುದಕ್ಕಾಗುವುದಿಲ್ಲ.ಈ ಕಾರಣಕ್ಕಾಗಿ ನಮ್ಮನ್ನು ರಕ್ಷಿಸುವುದಕ್ಕಾಗಿ ಕ್ರಿಸ್ತನು ನಮಗೋಸ್ಕರ ಸತ್ತನು. ನೇಮದ ಪ್ರಕಾರ ನಮ್ಮನ್ನು ರಕ್ಷಿಸಲು ನಮ್ಮ ಪಾಪಗಳಿಗಾಗಿ ಶಿಕ್ಷೆ ಅನುಭವಿಸಲೂ ಒಬ್ಬ ನಮ್ರತೆಯುಳ್ಳವನೂ, ಪಾಪವಿಲ್ಲದವನು ಆದ ಒಬ್ಬ ಮನುಷ್ಯನ ಅವಶ್ಯಕತೆ ಇತ್ತು. ದೇವರು ಪಾಪ ಮಾಡಲಿಲ್ಲ. ಆತನು ಸಂಪೂರ್ಣವಾಗಿ ಪವಿತ್ರನಾಗಿದ್ದಾನೆ (1ನೇ ಯೋಹಾನ 1:5). ಆತನು ಪಾಪಕ್ಕೆ ಶಿಕ್ಷೆಯನ್ನು ಕೊಟ್ಟೇ ಕೊಡುವನು. ಆದುದರಿಂದ ದೇವರು ನಮ್ಮ ಶಿಕ್ಷೆಯನ್ನು ಕ್ರಿಸ್ತನ ಮೇಲೆ ಹಾಕಿದನು. ನಮ್ಮ ಪಾಪಗಳ ನಿಮಿತ್ತದಿಂದಾಗಿ ಕ್ರಿಸ್ತನು ಈ ಲೋಕಕ್ಕೆ ಬಂದನು.

ಆದುದರಿಂದ ನಾವು ಸುವಾರ್ತೆಯನ್ನು ಹೇಳುವಾಗ ಆರಂಭದಲ್ಲಿಯೇ ಮನುಷ್ಯನ ಪಾಪ ಮತ್ತು ಪಾಪದ ದಂಡನೆಯನ್ನು ವಿವರಿಸಬೇಕು. ಇದು ಹೊಸ ಒಡಂಬಡಿಕೆಯಲ್ಲಿ ಹೀಗೆ ಪ್ರಾರಂಭವಾಗಿದೆ? **"ಪಶ್ಚಾತ್ತಾಪ ಹೊಂದು"** (ಮಾರ್ಕ 1:4, 15, ಅ.ಕೃ. 2:38) ರಕ್ಷಣೆಯನ್ನು ಹೊಂದುವವನು ಮೊದಲು ತಾನು ಪಾಪಿ ಎಂದು ಒಪ್ಪಿ ಕೊಳ್ಳದ ಹೊರತು ರಕ್ಷಣೆ ಹೊಂದಲಾರನು. ನಮ್ಮ ಹೃದಯದಲ್ಲಿರುವ ಪಾಪವನ್ನು ನಾವು ಒಪ್ಪಿಕೊಳ್ಳಲೇಬೇಕು. ನಾವು ದೊಡ್ಡ ದೊಡ್ಡ ಪಾಪಗಳನ್ನು ನಾವು ಒಪ್ಪಿಕೊಂಡತೆಯೇ ಸಣ್ಣ ಪಾಪಗಳನ್ನೂಸಹ ಒಪ್ಪಿಕೊಳ್ಳಬೇಕು. ನಾವು ಪಾಪವನ್ನು ಒಪ್ಪಿಕೊಂಡಂತೆ ವರ್ತಿಸಬಾರದು. ಮತ್ತು ಪಾಪದಿಂದ ತುಂಬಿದ ಕೆಟ್ಟ ಆಲೋಚನೆಗಳನ್ನು ಒಪ್ಪಿಕೊಳ್ಳಬೇಕು. ಯಾವಾಗ ನಾವು ಪಾಪಕ್ಕಾಗಿ ಪಶ್ಚಾತ್ತಾಪಪಟ್ಟು ಪಾಪವನ್ನು ದೇವರ ಮುಂದೆ ಅರಿಕೆ ಮಾಡಿ ಅಥವಾ ಒಪ್ಪಿಕೊಂಡೆವೋ ಆಗ ದೇವರು ನಮ್ಮ ಪಾಪಗಳನ್ನು ಕ್ಷಮಿಸಿ ನಮ್ಮನ್ನು ಶುದ್ಧರನ್ನಾಗಿ ಮಾಡುವನು. (1ನೇ ಯೋಹಾನ 1:9 ವ್ಯಾಖ್ಯಾನ ನೋಡಿರಿ). ಪವಿತ್ರಾತ್ಮನ ಮೂಲಕವಾಗಿ ದೇವರು ನಮಗೆ ನೂತನ ಹೃದಯವನ್ನು ಮತ್ತು ನೂತನ ಮನಸ್ಸನ್ನು ಕೊಡುವನು.

ಈ ಬೋಧನೆಯು ಕೇವಲ ಅನ್ಯರಿಗೆ (ಅಕ್ರೈಸ್ತರಿಗೆ) ಮಾತ್ರವಲ್ಲ ಕ್ರೈಸ್ತರಿಗೂ ಕೂಡ ಸಂಬಂಧಪಟ್ಟದ್ದಾಗಿದೆ. ನಮ್ಮ ಪಾಪಕ್ಕಾಗಿಯೂ ಮತ್ತು ನಮ್ಮ ಮನಸ್ಸುಗಳ ಶುದ್ಧೀಕರಣಕ್ಕಾಗಿ, ನಿರಂತರವಾದ ಪಾಪದ ಅರಿಕೆಯು ಅವಶ್ಯವಾಗಿದೆ (ರೋಮಾ. 12:2). ಸೈತಾನನು ನಮ್ಮನ್ನು ಯಾವಾಗಲೂ ಪಾಪದಲ್ಲಿ ನಡಿಸಲು ಪ್ರಯತ್ನಿಸುತ್ತಾನೆ. ನಮ್ಮ ಹೃದಯದಲ್ಲಿ ವಾಸವಾಗಿರುವ ಪವಿತ್ರಾತ್ಮನ ಶಕ್ತಿಯನ್ನು ಕುಂದಿಸಲು ಪ್ರಯತ್ನಿಸುತ್ತಾನೆ (1ನೇ ಥೆಸಲೋನಿಕ 5:19). ನಮ್ಮ ಹೃದಯವು ಉಗುರು ಬೆಚ್ಚಗಾಗುವಂತೆ ತಣ್ಣಗಾಗುವಂತೆ ಮಾಡಲು ಪ್ರಯತ್ನಿಸುತ್ತಾನೆ. ನಾವು ಯಾವಾಗಲೂ ಪವಿತ್ರಾತ್ಮಭರಿತರಾಗಿರಬೇಕು. (ಎಫೆಸ 5:18). ಆತನು ನಮ್ಮ ಅಡಗಿಸಲ್ಪಟ್ಟ ಪಾಪವನ್ನು ತೋರಿಸುವನು ಮತ್ತು ಪಶ್ಚಾತ್ತಾಪಟ್ಟಾಗ ಪವಿತ್ರಾತ್ಮನು ನಮ್ಮ ಹೃದಯವನನ್ನು ಶುದ್ಧಮಾಡಿ, ನಮ್ಮಲ್ಲಿ ವಾಸವಾಗಿದ್ದು ನಮ್ಮ ಜೀವಿತದಲ್ಲಿ ನಾವು ಸಂಪೂರ್ಣಕಾರ್ಯ ಮಾಡಲು ನಮಗೆ ಶಕ್ತಿಕೊಡುತ್ತಾನೆ.

ಅಧಿಕಾರದಲ್ಲಿರುವ ಪಾಲಕರು, ಶಿಕ್ಷಕರು ಮತ್ತು ಸಭಾಪಾಲಕರು ತಮ್ಮ ಅಧಿನದಲ್ಲಿವವರನ್ನು ತಿದ್ದಬೇಕು ಮತ್ತು ಶಿಸ್ತಿನಲ್ಲಿಡಬೇಕು. ಒಬ್ಬ ಸಹೋದರನು ನಮಗೆ ವಿರುದ್ಧವಾಗಿ ಪಾಪ ಮಾಡಿದರೆ ಆತನಿಗೆ ತಿಳಿಸಿ ಹೇಳಬೇಕು (ಮತ್ತಾಯ 18:15). ಆದರೆ ಈ ವ್ಯಕ್ತಿಯನ್ನು ತಿರಸ್ಕರಿಸುವುದಾಗಲಿ, ದ್ವೇಷಿಸುವುದಾಗಲಿ ಮಾಡಬಾರದು. ಒಬ್ಬನು ತನ್ನ ಕೆಲಸದಲ್ಲಿ ಏನಾದರೂ ತಪ್ಪು ಮಾಡಿದರೆ, ಮಾಡಿದ್ದು ಮೂರ್ಖತನವೆಂದು ತಿಳಿಸಬೇಕು ಆದರೆ ಅವನನ್ನು ಮೂರ್ಖ ಎಂದು ಹೇಳಬಾರದು.

ಮನುಷ್ಯರು ಮೂರ್ಖವಾದಂತ ಸಂಗತಿಗಳನ್ನು ಮಾಡುತ್ತಾರೆ. ಇದು ದೇವರಿಗೆ ಅವಿಧೇಯರಾಗುವಂತಹ ಮೂರ್ಖತನವಾಗಿದೆ ಕ್ರಿಸ್ತನನ್ನು ಅಲ್ಲಗಳೆಯುವಂತದ್ದು ಮೂರ್ಖತನವಾಗಿದೆ. ಈ ಲೋಕವನ್ನು ಪ್ರೀತಿಸುವಂತದ್ದು ಮೂರ್ಖತನವಾಗಿದೆ. ಇಂತಹ ಮೂರ್ಖತನವು ಪರಿಸಾಯದವರಲ್ಲಿಯೂ, ಶಾಸ್ತ್ರಿಗಳಲ್ಲಿಯೂ ಇದ್ದು ತಮ್ಮ ಸ್ವನೀತಿಯ ಮೇಲೆ ನಂಬಿಕೆ ಇಟ್ಟಿದ್ದರು. ಮತ್ತಾಯ 23ನೇಯ ಅಧ್ಯಾಯದಲ್ಲಿ ಹೀಗೆ ಮಾಡುವವರನ್ನು ಕ್ರಿಸ್ತನು ಕಟುವಾಗಿ ಗದರಿಸಿದನು. ಇದೇ

ಸಮಯದಲ್ಲಿ ಕ್ರಿಸ್ತನು ಅವರನ್ನು ಪ್ರೀತಿಸಿದನು. ಕ್ರಿಸ್ತನು ಇಂತಹವರಿಗೋಸ್ಕರ ಸಾಯಲು ಬಂದನು. ಇವರಿಗೆ ಸತ್ಯವನ್ನು ಪ್ರೀತಿಯಲ್ಲಿ ಹೇಳಿದನು (ಎಫೆಸ 4:15). ಪೌಲನು ಈ ರೀತಿಯಾಗಿ ಬರೆದನು. **ಸಹೋದರರೇ ನಿಮ್ಮಲ್ಲಿ ಯಾರಾದರೂ ಯಾವುದೋ ಒಂದು ದೋಷದಲ್ಲಿ ಸಿಕ್ಕಿದರೆ ಅಂತಹವನ್ನು ಆತ್ಮನಿಂದ ನಡೆಸಿಕೊಳ್ಳುವ ನೀವು, ಶಾಂತಭಾವದಿಂದ ತಿದ್ದಿ ಸರಿಮಾಡಿರಿ.** (ಗಲಾತ್ಯ 6:1). ಒಬ್ಬನನ್ನು ನಾವು ಗದರಿಸುವಾಗ ನಮ್ಮ ಉದ್ದೇಶವು ಅವನು ಪೂರ್ವಸ್ಥಿತಿಗೆ ಬರುವಂತೆ ಇರಬೇಕು. ಮತ್ತು ನಾವು ಆ ಕೆಲಸವನ್ನು ಕೋಪದಿಂದ ಮಾಡದೇ ಪ್ರೀತಿಯಿಂದ ಮಾಡಬೇಕು. ನಾವು ಪಾಪಕ್ಕಾಗಿ ಸಿಟ್ಟಾಗಬೇಕು ಆದರೆ ಪಾಪ ಮಾಡಿದವನ ಮೇಲೆ ಅಲ್ಲ. ಪೌಲನು ಹೇಳಿದ್ದೇನೆಂದರೆ **ಕೋಪ ಮಾಡಬೇಕಾದರೂ ಪಾಪ ಮಾಡಬೇಡಿರಿ.** (ಎಫೆಸ 4:26). ಪಾಪಕ್ಕಾಗಿ ನಾವು ಕೋಪ ಉಳ್ಳವರಾಗಿರಲೇಬೇಕು. ಯಾಕೆಂದರೆ ದೇವರು ಪಾಪಗಳಿಗಾಗಿ ಕೋಪ ಉಳ್ಳವನಾಗಿದ್ದಾನೆ (ರೋಮಾ. 1:18). ಆದರೆ ನಾವು ಪಾಪಿಯ ಮೇಲೆ ಕೋಪವುಳ್ಳವರಾಗಬಾರದು. ಕೋಪವುಳ್ಳವರಾದರೆ ನಮ್ಮಷ್ಟಕ್ಕೆ ನಾವೇ ಪಾಪ ಮಾಡಿದ ಹಾಗೆ ಆಗುತ್ತದೆ. ದೇವರ ಕೊನೆಯ ನ್ಯಾಯತೀರ್ಪಿನ ಸಮಯದಲ್ಲಿ ಈ ವಿಷಯಕ್ಕಾಗಿ ನಮಗೂ ನ್ಯಾಯ ತೀರ್ಪಾಗುವುದು.

**23-24** ಒಂದು ವೇಳೆ ನಾವು ಕೊಲೆ ಮಾಡಿಲ್ಲದಿದ್ದರೂ, ಸಹೋದರನೊಂದಿಗೆ ಕೋಪ ಮಾಡದಿದ್ದರೂ ಸಹೋದರನನ್ನು ಹೀನೈಸದಿದ್ದರೂ, ಇಬ್ಬರ ಮಧ್ಯದಲ್ಲಿ ಯಾವ ವೈಯಕ್ತಿಕ ದ್ವೇಷವಾಗಲಿ, ತಪ್ಪಾದ ಅಭಿಪ್ರಾಯವಾಗಲಿ ಉಳಿದಿರಬಾರದು. ನಮ್ಮಲ್ಲಿದ್ದಂತಹ ಕೆಟ್ಟ ಆತ್ಮವನ್ನು ಹೋಗಲಾಡಿಸಿ, ಇದಕ್ಕೆ ಬದಲಾಗಿ ಪವಿತ್ರಾತ್ಮನ ಪ್ರೀತಿ, ಕ್ಷಮೆಯಿಂದ ತುಂಬಿಸಲ್ಪಡಬೇಕು.. ನಾವು ಮುಂಚಿತವಾಗಿ ಇದನ್ನು ಮಾಡಿ ನಮ್ಮ ಕಾಣಿಕೆಯನ್ನು[29] ಯಜ್ಞವೇದಿಯ ಬಳಿಗೆ ತಂದು ದೇವರಿಗೆ ಕೊಡೋಣ.

ಕ್ರಿಸ್ತನು ಇದಕ್ಕೆ ಉತ್ತರವಾಗಿ ಹೇಳಿದ್ದೇನೆಂದರೆ, ನಾವು ದೇವರನ್ನು ಆರಾಧಿಸಲು, ಪ್ರಾರ್ಥಿಸಲು ಮತ್ತು ಕೃತಜ್ಞತೆಯ ಕಾಣಿಕೆಯನ್ನು ಸಮರ್ಪಿಸಲು ದೇವರ ಬಳಿಗೆ ಬರುವಾಗ, ಸಹೋದರನ ವಿಷಯದಲ್ಲಿದ್ದ ಕೆಟ್ಟ ಭಾವನೆಯನ್ನು ತೆಗೆದು ಹಾಕಿ ಒಪ್ಪಿಕೊಂಡವರಾಗಿ ದೇವರ ಬಳಿಗೆ ಬರೋಣ. ನಮ್ಮಿಂದ ಸಹೋದರನಿಗೆ ಯಾವುದೇ ರೀತಿಯಾಗಿ ತಪ್ಪನ್ನು ಮಾಡಿದ್ದರೆ ಮೊದಲು ಇದನ್ನು ಸರಿಪಡಿಸಬೇಕು. ಸಹೋದರನ ಮೇಲೆ ಏನಾದರೂ ವಿರೋಧವಿದ್ದರೆ ನಾವು ಮೊದಲು ಅವನನ್ನು ಕ್ಷಮಿಸಬೇಕು (ಮಾರ್ಕ 11:25 ನೋಡಿರಿ). ಆಗ ಮಾತ್ರ ದೇವರು ನಮ್ಮ ಕಾಣಿಕೆಯನ್ನು ಅಂಗೀಕರಿಸಿ, ನಮ್ಮ ಪ್ರಾರ್ಥನೆಯನ್ನು ಕೇಳುವವನಾಗಿದ್ದಾನೆ. ಕೀರ್ತನೆ ಗ್ರಂಥ 66:18ರಲ್ಲಿ ಬರೆಯಲ್ಪಟ್ಟಿದ್ದೇನೆಂದರೆ **ನಾನು ಕೆಟ್ಟತನದ ಮೇಲೆ ಮನಸ್ಸಿಟ್ಟಿದ್ದರೆ, ಕರ್ತನು ನನ್ನ ವಿಜ್ಞಾಪನೆಯನ್ನು ಕೇಳುತ್ತಿದ್ದಿಲ್ಲ.** ಸಹೋದರನನ್ನು ಪ್ರೀತಿ ಇಲ್ಲದೇ ನಡೆಸಿಕೊಳ್ಳುವುದಾಗಲೀ ಅಥವಾ ಪ್ರೀತಿ ಇಲ್ಲದ ಆಚಾರ ವಿಚಾರಗಳಾಗಲಿ ನಮ್ಮಲ್ಲಿದ್ರೆ ಇದು ಪಾಪವಾಗಿದೆ. ದೇವರ ಬಳಿಗೆ ಬರುವುದಕ್ಕಿಂತ ಮುಂಚೆ ನಮ್ಮ ಹೃದಯದಲ್ಲಿದ್ದ ಎಲ್ಲಾ ಪಾಪವನ್ನು ತೆಗೆದುಹಾಕಿ ನಂತರ ದೇವರ ಬಳಿಗೆ ಬಂದು, ಆತನನ್ನು ಆರಾಧಿಸಿ, ಪ್ರಾರ್ಥಿಸಿ, ಕೃತಜ್ಞತೆಯನ್ನು ಸಮರ್ಪಿಬೇಕು. (1ನೇ ಸಮುವೇಲ 15:22, ಹೋಶೆಯ 6:6, ಮಾರ್ಕ 12:33 ವ್ಯಾಖ್ಯಾನ ನೋಡಿರಿ).

**25-26** 25ನೇಯ ವಚನದಲ್ಲಿವಂತೆ ದೇವರು ನ್ಯಾಯಾಧಿಪತಿ ಆಗಿದ್ದಾನೆ. ನಾವು ಕೊಡುವಂತಹ ಕೊನೆಯ (ಸಣ್ಣ) ನಾಣ್ಯವನ್ನು ಪ್ರಶ್ನಿಸುತ್ತಾನೆ.ನಾವು ಪ್ರತಿಯೊಂದು ಆಜ್ಞೆಗಳಿಗೆ ವಿದೇಯರಾಗಬೇಕೆಂದು ಬಯಸುತ್ತಾನೆ. ನಮ್ಮ ನೆರೆಯವರನ್ನು ಮತ್ತು ವೈರಿಗಳನ್ನು ಪ್ರೀತಿಸ ಬೇಕು ಎಂಬುದು ದೇವರ ಒಂದು ಪ್ರಾಮುಖ್ಯ ಆಜ್ಞೆಯಾಗಿದೆ (ವಚನ 44). ನಮ್ಮ ಹೃದಯಗಳನ್ನು ನಾವು ಪರೀಕ್ಷಿಸಿಕೊಳ್ಳೋಣ. ಯಾರನ್ನಾದರೂ ಪ್ರೀತಿಸದೇ ಇದ್ದೇವೆಯೋ?

ಯಾವ ಸಮಯದಲ್ಲಾದರೂ, ನಾವು ಸತ್ತು ನಂತರ ಮಹಾ ನ್ಯಾಯಾಧಿಪತಿಯ ಮುಂದೆ ನಿಲ್ಲಬೇಕಾಗುತ್ತದೆ. ನಾವು ಆತನಿಗೆ ಏನನ್ನು ಹೇಳುತ್ತೇವೆ? ನಾವು ನಂಬಿದ್ದನೆ, ಆರಾಧಿಸಿದ್ದೇವೆ. ತ್ಯಾಗ ಮಾಡಿ ಕಾಣಿಕೆಯನ್ನು ಸಮರ್ಪಿಸಿದ್ದೇನೆ. ಹಣವನ್ನು ಕೊಟ್ಟಿದ್ದೇನೆ. ನಾನು ಸಭಗಾಗಿ ಬಹಳಷ್ಟು ಕೆಲಸ ಮಾಡಿದ್ದೇನೆ . ಆಗ ನ್ಯಾಯಾಧಿಪತಿಯು ನಮಗೆ ಹೇಳುವುದೇನು? ಆತನು ಹೀಗೆ ಕೇಳುವನು. ನಿನ್ನ ಹೃದಯ ಹೇಗಿದೆ? ನಿನ್ನ ಹೃದಯವು ಶುದ್ಧವಾಗಿದೆಯೋ? ಕೋಪವನ್ನು ನೀನು ಯಾಕೆ ಹೃದಯದಲ್ಲಿ ಇಟ್ಟುಕೊಂಡಿದ್ದೀ? ಯಾಕೆ ನೀನು ನಿನ್ನ ಸಹೋದರನನ್ನು ಪ್ರೀತಿಸಲಿಲ್ಲ? ನೀನು ಯಾಕೆ ಅವನನ್ನು ಕ್ಷಮಿಸಲಿಲ್ಲ? ನನ್ನ ರಾಜ್ಯದಲ್ಲಿ ನಿನಗೆ ಪ್ರವೇಶವಿಲ್ಲ. ಯೇಸು ಹೇಳಿದ್ದು **ನನ್ನನ್ನು ಸ್ವಾಮಿ, ಸ್ವಾಮಿ ಅನ್ನುವವರೆಲ್ಲರೂ ಪರಲೋಕರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ. ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕ ರಾಜ್ಯಕ್ಕೆ ಸೇರುವನು** (ಮತ್ತಾಯ 7:21).

### ವ್ಯಭಿಚಾರ (5:27-30)

(ಮತ್ತಾಯ 18:8-9, ಮಾರ್ಕ 9:43-48)

**27-28** 21ನೇಯ ವಚನದ ಪ್ರಕಾರ ವ್ಯಭಿಚಾರವು ಕೊಲೆಯಲ್ಲ. ಈ ಆಜ್ಞೆಯು ಅಪರಾಧ ಮಾಡಬೇಡ ಎಂದು ಹೇಳುತ್ತದೆ. ಮತ್ತು ಹಳೇ ಒಡಂಬಡಿಕೆಯಲ್ಲಿ ದೇವರು ಕೊಟ್ಟಂತ ಶಾಜ್ಞೆಗಳಲ್ಲಿ ಇದು ಒಂದಾಗಿದೆ. ವ್ಯಭಿಚಾರ ಮಾಡಬಾರದು (ವಿಮೋಚನಾಕಾಂಡ 20:14). ಆದರೆ ಯೇಸು ಹೇಳಿದ್ದೇನೆಂದರೆ ಆಶೆಯು (ಮನುಷ್ಯನ ಮನಸ್ಸಿನೊಳಗಿಂದ) ಕೊಲೆ ಮಾಡಲು, ವ್ಯಭಿಚಾರ ಮಾಡಲು, ಕೆಟ್ಟ ಕಾರ್ಯ ಮಾಡಲು ಪ್ರೇರೇಪಿಸುತ್ತದೆ. ಪಾಪವು ಹೃದಯದಲ್ಲಿ ಆರಂಭವಾಗುತ್ತದೆಎಂದು ಆತನು ಕಲಿಸಿದನು. (ಮತ್ತಾಯ 15:19 ನೋಡಿರಿ).ಜನರು ಹೆಚ್ಚಾಗಿ ದಶಾಜ್ಞೆಗಳನ್ನು ಲೌಕಿಕವಾದ ರೀತಿಯಿಂದ ವಿಧೇಯರಾಗುತ್ತಾರೆ. ಆದರೆ ಅವರ ಹೃದಯವು ಪಾಪಗಳ ಆಶೆಯಿಂದ ತುಂಬಿಸಲ್ಪಟ್ಟಿದೆ. ಉದಾಹರಣೆ ಬಹಳ ಜನರು ಹೇಳುತ್ತಾರೆ

**29-30** ಹೃದಯದಲ್ಲಿರುವಂತ ಪಾಪಗಳಿಗೆ ಅಥವಾ ಪಾಪದ ಹೃದಯಕೆ, ವ್ಯಭಿಚಾರದಂತ ಈ ಪಾಪಗಳು ಗುರುತುಗಳಾಗಿವೆ. ರೋಗಗಳು ನಮ್ಮ ಹೃದಯದಲ್ಲಿವೆ.

ಪಾಪವು ಒಂದು ಕ್ಯಾನ್ಸರ್ ಖಾಯಿಲೆ ಇದ್ದಂತೆ ಅಥವಾ ಅಂಟು ರೋಗವಿದ್ದಂತೆ.ವೈದ್ಯರು ಈ ರೋಗವನ್ನು ವಾಸಿ ಮಾಡಬೇಕಾದರೆ ಅದರಲ್ಲಿರುವಂತ ಕೀವು ತೆಗೆಯಲೇ ಬೇಕು. ಇದೇ ಪಾಪವಾಗಿರುತ್ತದೆ. ಕ್ಯಾನ್ಸರ್ ಖಾಯಿಲೆ ವಾಸಿ ಮಾಡಬೇಕಾದರೆ ವೈದ್ಯರು ಆ ಭಾಗವನ್ನೇ ತೆಗೆಯಲೇ ಬೇಕು. ಇದೇ ರೀತಿಯಾಗಿ ನಮ್ಮ ಜೀವಿತದಲ್ಲಿರುವ ಪಾಪವನ್ನು ತೆಗೆದು ಹಾಕಲೇ ಬೇಕು.

ಹೇಗೆ? ನಾವು ಮೊದಲು ಪಶ್ಚಾತ್ತಾಪಪಟ್ಟು ಪಾಪಗಳನ್ನು ಒಪ್ಪಿಕೊಳ್ಳಬೇಕು. ನಂತರ ಪಾಪದಿಂದ ನಾವು ಓಡಿಹೋಗಬೇಕು. (2ನೆ ತಿಮಾಥೆ 2:22).ಪಾಪಕ್ಕಾಗಿ ಶೋಧನೆಗೆ ಒಳಗಾಗುವಂತ ಎಲ್ಲಾ ವಿಷಯಗಳನ್ನು ಒಪ್ಪಿಸಿಕೊಡಬೇಕು.ಪಾಪದಲ್ಲಿ ಸಿಕ್ಕಿಸುವದಕ್ಕೆ ಆಶೆಯನ್ನುಂಟುಮಾಡುವಂತಹ ಯಾವುದೇ ಚಟುವಟಿಕೆ ಅಥವಾ ವ್ಯಕ್ತಿಯಿಂದ' ನಾವು ದೂರವಿರಬೇಕು.ಯಾವುದೆ ಒಂದು ಸಂಗತಿಯು ಒಳ್ಳೆದಾಗಿಯು ಮತ್ತು ಕಾನೂನು ಬದ್ದವಾಗಿ ಕಂಡಾಗ್ಯೂಇದು ಶೋದನೆಗೆ ನಡಿಸುವುದಾದರೆ ಇದನ್ನು ನಾವು ಬಿಟ್ಟುಬಿಡಬೇಕು. ಉದಾಹರಣೆ - ಹಣವನ್ನು ಸಂಪಾದಿಸುವುದು ಒಳ್ಳೆಯದು. ಆದರೆ ಒಂದು ವೇಳೆ ನಾವು ದೇವರಿಗಿಂತ ಹಣವನ್ನೆ ಹೆಚ್ಚಾಗಿ ಪ್ರೀತಿಸುವವರಾದರೆ, ಹಣವು ನಮ್ಮನ್ನು ಪಾಪದ ಕಡೆಗೆ ನಡಿಸುವುದು (1ನೇ ತಿಮಾಥೆ 6:10).[30] ದೇವರಿಗಿಂತಲೂ ಅಥವಾ ಯೇಸುಸವಿಗಿಂತಲೂ ಬೇರೆ ಸಂಗತಿಗಳನ್ನು ಹೆಚ್ಚಾಗಿ ಪ್ರೀತಿಸುವುದಾದರೆ ನಾವು ಪಾಪ ಮಾಡುವವರಾಗಿದ್ದೇವೆ. ಈ ರೀತಿಯಾಗಿ ನಾವು ಪಾಪದಲ್ಲಿ ಮುಂದುವರೆದರೆ ಪರಲೋಕದಲ್ಲಿ ಪ್ರವೇಶಿಸಲಾರೆವು. ಈ ಕಾರಣಕ್ಕಾಗಿಯೆ ಕ್ರಿಸ್ತನು ಹೀಗೆ ಹೇಳಿದನು. **ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣ ನಷ್ಟ ಪಟ್ಟರೆ ಅವನಿಗೆ ಪ್ರಯೋಜನವೇನು?** (ಮಾರ್ಕ 8:36) ಕ್ರಿಸ್ತನಿಗಿಂತಲೂ ಹೆಚ್ಚಾಗಿ ಏನನ್ನಾದರೂ ಪ್ರೀತಿಸುವವನು, ಕ್ರಿಸ್ತನಿಗೆ ಯೋಗ್ಯನಲ್ಲ (ಮತ್ತಾಯ 10:37).

ಕ್ರಿಸ್ತನಿಗಿಂತ ಹೆಚ್ಚಾಗಿ ಪ್ರೀತಿಸುವಂತದ್ದು ಏನಾದರೂ ನಮ್ಮಲ್ಲಿದ್ದರೆ, ಅಂದರೆ ತಂದೆತಾಯಿ, ಮಕ್ಕಳು, ಹಣ, ನಮ್ಮ ಬಲಗಣ್ಣು, ಬಲಗೈ ಯಾಗಲಿ ಇವುಗಳನ್ನು ದೇವರಿಗೆ ಕೊಟ್ಟು ಬಿಡೋಣ. ಅಪೋಸ್ತಲನಾದ ಪೌಲನು ಹೇಳಿದ್ದೇನೆಂದರೆ **ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವುದಾದರೆ ಜೀವಿಸುವಿರಿ.** (ರೋಮಾ. 8:13). ಪವಿತ್ರಾತ್ಮನ ಸಹಾಯದಿಂದ ನಮ್ಮ ಎಲ್ಲಾ ಪಾಪದ ಕಾರ್ಯಗಳನ್ನೂ ಮತ್ತು ಆಶೆಗಳನ್ನು ಸಾಯಿಸಬೇಕು. ಆಗ ನಾವು ಪರಲೋಕ ರಾಜ್ಯ ಪ್ರವೇಶಿಸಲು ಶಕ್ತರಾಗುತ್ತೇವೆ.

29ನೇಯ ವಚನದಲ್ಲಿ "ಬಲಕಣ್ಣು" ರಾಯಭಾರಿಯಾಗಿ ಪಾಪ ಮಾಡಲು ನಮ್ಮ ಮನಸ್ಸಿನಲ್ಲಿ ಕಾರ್ಯ ಮಾಡುವುದು. 30ನೇ ವಚನದಲ್ಲಿ "ಬಲಗೈ" ರಾಯಭಾರಿಯಾಗಿ ನಮ್ಮ ದೇಹದ ಯಾವುದೇ ಭಾಗವನ್ನು ಪಾಪ ಮಾಡಲು ಪ್ರೇರೇಪಿಸುತ್ತದೆ (ಮಾರ್ಕ 9:43-48 ವ್ಯಾಖ್ಯಾನ ನೋಡಿರಿ). ನಮ್ಮ ಕಣ್ಣು ಮತ್ತು ಕೈ, ಪಾಪ ಮಾಡಲು ಮುನ್ನಡಿಸುವುದಾದರೆ ನಮ್ಮ ಕಣ್ಣು ಮತ್ತು ಕೈಯನ್ನು ಕಿತ್ತುಬಿಸಾಡುವುದುವುದು ಉತ್ತಮವಾಗಿದೆ. ಇಲ್ಲದಿದ್ದರೆ ನಮ್ಮ ಪ್ರಾಣ ಆತ್ಮವನ್ನು ಕಳೆದುಕೊಳ್ಳುತ್ತೇವೆ.

## (ದಾಂಪತ್ಯ) ವಿಚ್ಛೇದನ (5:31-32)

(ಮಾರ್ಕ 10:11-12; ಲೂಕ 16:16)

**31** ಮಾರ್ಕ 10:3-4; 1ನೇ ಕೊರಿಂಥ 7:10-11 ವ್ಯಾಖ್ಯಾನ ನೋಡಿರಿ.

**32** ಮಾರ್ಕ 10:11-12 ವ್ಯಾಖ್ಯಾನ ನೋಡಿರಿ.

## ಆಣೆಗಳು (5:33-37)

**33** ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದ ಪ್ರಕಾರವಾಗಿ ಯಾವನಾದರೂ ಆಣೆ ಮಾಡುವುದಾದರೆ (ಅರಣ್ಯಕಾಂಡ 30:7; ಧರ್ಮೋಪದೇಶಕಾಂಡ 23:21).ಅದಕ್ಕೆ ಬದ್ದನಾಗಿರಬೇಕಾಗಿತ್ತು.

**34-35** ಯೇಸುವಿನ ಸಮಯದಲ್ಲಿದ್ದ ಯಹೂದ್ಯರು ದೇವರ ಹೆಸರಿನಲ್ಲಿ ಮಾಡದೇ ಇದ್ದ ಆಣೆಗಳನ್ನು ವಿಚಾರಿಸುತ್ತಿರಲಿಲ್ಲ. ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಆದ್ದರಿಂದ ಅವರು ಆ ಆಣೆಗಳನ್ನು ನೆರವೇರಿಸುತ್ತಿರಲಿಲ್ಲ. ಯಹೂದ್ಯರು ದೇವರ ಮೇಲೆ ಆಣೆ ಮಾಡುತ್ತಿದ್ದಿಲ್ಲ. ಅದರ ಬದಲಾಗಿ ಅವರು ಪರಲೋಕದ ಮೇಲೆಯೂ, ಭೂಮಿಯ ಮೇಲೆಯೂ, ಮತ್ತು ಯರುಸಲೇಮಿನ ಮೇಲೆಯೂ ಆಣೆ ಇಡುತ್ತಿದ್ದರು. ಹೀಗೆ ಮಾಡುತ್ತಿದ್ದರಿಂದ ಅವರು ತಮ್ಮನ್ನೇ ಮೋಸಗೊಳಿಸುತ್ತಿದ್ದರು. ಯಾಕೆಂದರೆ, ಸ್ವರ್ಗ, ಭೂಮಿ ಮತ್ತು ಯೆರುಸಲೇಮ್ ಈ ಎಲ್ಲವುಗಳು ದೇವರನ್ನು ಅವಲಂಬಿಸಿದ್ದವು. ಸ್ವರ್ಗವು ದೇವರ ಸಿಂಹಾಸನ, ಭೂಮಿಯು ಆತನ ಪಾದಪೀಠ, ಆಗಿರುವುದರಿಂದ (ಯೆಶಾಯ 66:1; ಅ.ಕೃ. 7:49). ಈ ಎಲ್ಲಾ ಆಣೆಗಳು ದೇವರ ಮೇಲೆ ಆಣೆ ಇಟ್ಟಂತೆ.

ಯೇಸು ಬೋಧಿಸಿದ್ದು, ಯಾವುದರ ಮೇಲೆಯೂ ಆಣೆ ಇಡಬೇಡ. ಅದು ಅನಾವಶ್ಯಕವಾಗಿದೆ. ಆತನ ಹೆಸರಿನ ಮೇಲೆ ಮಾಡಿದ ಎಲ್ಲಾ ಆಣೆಗಳನ್ನು ನೆರವೇರಿಸಲೇಬೇಕು. ವಸ್ತುಗಳ ಮೇಲೆ ಮಾಡಿದಂತಹವುಗಳಲ್ಲ. ಹೀಗಿರುವುದರಿಂದ ಆಣೆ ಮಾಡುವುದು ಅವಶ್ಯವಿಲ್ಲ.

**36** ಯಹೂದ್ಯರು ಕೆಲವು ಸಾರಿ ತಮ್ಮ ತಲೆಗಳ ಮೇಲೆ ಆಣೆ ಇಡುತ್ತಿದ್ದರು. ಅದು ಕೂಡ ಹುರುಳಿಲ್ಲದ್ದು. ಮನುಷ್ಯನಿಗೆ ಸಂಬಂಧಪಟ್ಟವುಗಳ ಮೇಲೆ ಆಣೆ ಇಡುವುದರಲ್ಲಿ ಯಾವ ಪ್ರಯೋಜನವಿಲ್ಲ. ಆಣೆಗಳನ್ನು ಖಂಡಿತಗೊಳಿಸಲು ಮನುಷ್ಯನಲ್ಲಿಯಾವ ಶಕ್ತಿಯೂ ಇಲ್ಲ. ಅವನು ತನ್ನ ಸ್ವಂತ ಕೂದಲುಗಳ ಬಣ್ಣವನ್ನು ಬದಲಾಯಿಸಲು ಸಾಧ್ಯವಿಲ್ಲ.

**37** ನಾವು ಯಾವಾಗ "ಹೌದು" ಎಂದು ಹೇಳುತ್ತೇವೆಯೋ ಆಗ ನಾವು ಹೌದು ಎಂದು ಯಾವಾಗ ನಾವು ಇಲ್ಲ ಎಂಬುದಾಗಿ ಹೇಳುತ್ತೇವೆಯೋ ಆಗ ನಾವು ಇಲ್ಲ ಎಂದು ಅರ್ಥಯಿಸಬೇಕು . ಆಣೆ ಮಾಡುವುದಾಗಲಿ, ಇಡುವುದಾಗಲೀ ಇವಶ್ಯ ಇಲ್ಲ. ನಾವು ಒಂಭತ್ತನೆಯ ಆಜ್ಞೆಗೆ ವಿಧೇಯರಾಗಿರಲೇ ಬೇಕು. **ಮತ್ತೊಬ್ಬರ ಮೇಲೆ ಸುಳ್ಳು ಸಾಕ್ಷಿ ಹೇಳಬಾರದು.** (ವಿಮೋಚನಾಕಾಂಡ 20:16).

ಜನರು ಆಗಾಗ ಕೆಲವೊಂದು ಗುಪ್ತ ವಿಷಯ ಮುಚ್ಚಡುವುದಕ್ಕಾಗಿ ಸುಳ್ಳು ಹೇಳುತ್ತಾರೆ. ನಾವು ಸತ್ಯವನ್ನು ಹೇಳುವುದಾದರೆ ಅದಕ್ಕೆ ಆಣೆ ಮಾಡುವುದು ಅವಶ್ಯವಿಲ್ಲ. ಆಣೆ ಮಾಡುವುದು ಒಂದು ಪಾಪವಾಗಿದೆ. ಮತ್ತು ಅದು **ಸೈತಾನನ ಒಂದು ತಂತ್ರವಾಗಿದೆ.** (ಯಾಕೋಬ 5:12 ವ್ಯಾಖ್ಯಾನ ನೋಡಿರಿ).

ಕ್ರಿಸ್ತನುಈ ಅರ್ಥದಲ್ಲಿ ಹೇಳಲಿಲ್ಲ. ನ್ಯಾಯಾಲಯದಲ್ಲಿ ನಾವು ಆಣೆ ಇಟ್ಟು ಹೇಳುವುದಿಲ್ಲ. ಕ್ರಿಸ್ತನು ತಾನೇ ಮಹಾ ಯಾಜಕನ ಮುಂದೆ ವಿಚಾರಣೆಗೆ ನಿಂತಾಗ ಮಹಾಯಾಜಕನು, ಕ್ರಿಸ್ತನಿಗೆ, **ಜೀವಸ್ವರೂಪನಾದ ದೇವರ ಆಣೆಯನ್ನು** ಇಡುತ್ತೇನೆ. ನೀನು ದೇವಕುಮಾರನಾದ ಕ್ರಿಸ್ತನೋ ಆಗ ಕ್ರಿಸ್ತನು ಉತ್ತರ ಕೊಟ್ಟನು (ಮತ್ತಾಯ 26:63-64). ಈ ಭಾಗದಲ್ಲಿ ಕ್ರಿಸ್ತನು ತನ್ನ ವೈಯಕ್ತಿಕ ಸಂಬಂಧದ ಬಗ್ಗೆ ಮಾತನಾಡುತ್ತಾನೆ. ಉದ್ಯೋಗಸ್ಥನಂತೆ ಮಾತಾಡಲಿಲ್ಲ. ನಮ್ಮ ವೈಯಕ್ತಿಕವಾದ ಕಾರ್ಯಗಳನ್ನು ಮಾಡುವಾಗ ಆಣೆ ಇಡಬಾರದು.

## ಕಣ್ಣಿಗೆ ಪ್ರತಿಯಾಗಿ ಕಣ್ಣನ್ನು (5:38-42)

(ಲೂಕ 6:29-30)

**38** ಕಣ್ಣಿಗೆ ಕಣ್ಣು ಮತ್ತು ಹಲ್ಲಿಗೆ ಹಲ್ಲು. ಇದು ಹಳೇ ಒಡಂಬಡಿಕೆಯ ಕಟ್ಟಳೆ. ಅದನ್ನು ನಿಷೇಧಿಸಿ, ಅತಿಯಾದ ಪ್ರತೀಕಾರದ ಬಗ್ಗೆ ಮಾತಾಡುತ್ತಾನೆ (ವಿಮೋಚನೆ 21:23-25, ಯಾಜಕಕಾಂಡ 24:19-20, ಧರ್ಮೋಪದೇಶಕಾಂಡ 19:21). ಕಾನೂನುಗಳು ಕೇವಲ ಸರಕಾರದಿಂದಲೂ ಮತ್ತು ನ್ಯಾಯಾಧಿಪತಿಗಳಿಂದಲೂ ಬರೆಯಲ್ಪಟ್ಟಿದ್ದವು. ನ್ಯಾಯಾಧೀಶರು ಶಿಕ್ಷೆ ಕೊಡುವುದನ್ನು ತಪ್ಪಿಸುವ ಉದ್ದೇಶ ಕಾನೂನುಗಳಿಗಿತ್ತು. ಅದು ಒಂದು ದೊಡ್ಡ ಅಪರಾಧವಾಗಿತ್ತು.

**39** ಯೇಸುವಿನ ಕಾಲದಲ್ಲಿ ಯಹೂದ್ಯರ ಮುಖ್ಯಸ್ಥರು ಕಾನೂನಿಗೆ ಒಂದು ತಪ್ಪಾದ ಅರ್ಥವನ್ನು ಕೊಟ್ಟಿದ್ದರು. ವೈಯಕ್ತಿಕವಾಗಿ ಸೇಡು ತೀರಿಸಿಕೊಳ್ಳಲು ಯಹೂದ್ಯರಿಗೆ ಇದು ಒಂದು ಸಾಮಾನ್ಯ ಕಾನೂನಾಗಿತ್ತು. ಆದರೆ ಯೇಸು ಹೇಳಿದ್ದು ವೈಯಕ್ತಿಕವಾದ ಪ್ರತೀಕಾರ ಬೇಡ ಎಂದು. **ಕೆಟ್ಟ ಮನುಷ್ಯನನ್ನು ವಿರೋಧಿಸಬೇಡ.**

ಯೇಸುವಿನ ಅರ್ಥವನ್ನು ನಾವು ತಿಳಿದುಕೊಳ್ಳಲೇಬೇಕು. ಇದು ನ್ಯಾಯಾಧೀಶರಿಗೂ ಮತ್ತು ಪೋಲೀಸ್ ಅಧಿಕಾರಿಗಳಿಗೂ, ಕೆಟ್ಟ ಜನರಿಗಾಗಿ ಅವಶ್ಯವಾಗಿದೆ. ಇದು ಅಡಳಿತವನ್ನು ನಡೆಸುವ ಅಧಿಕಾರಿಗಿಗೆ ಅವಶ್ಯವಾಗಿದ್ದು ಸಂಸ್ಥೆಗಳಲ್ಲಿ ಕೆಲಸ ಮಾಡುವ ಯಾವನಾದರೂ ಆ ಸಂಸ್ಥೆಯ ಕಾನೂನು ಮೀರಿದರೆ ಅಂತಹವರಿಗೆ ಈ ಕಾನೂನು ಅವಶ್ಯವಾಗಿತ್ತು. ಇದು ಶಾಲೆಗಳಲ್ಲಿ ಶಿಕ್ಷಕರು ತಮ್ಮ ಮಕ್ಕಳನ್ನು (ವಿದ್ಯಾರ್ಥಿಗಳನ್ನು) ಶಿಸ್ತಿನಲ್ಲಿ ನಡೆಸುವುದಕ್ಕೆ ವಿದ್ಯಾರ್ಥಿಗಳಿಗೆ ಅವಶ್ಯವಾಗಿದೆ. ಅಧಿಕಾರದಲ್ಲಿದ್ದು ಶಿಕ್ಷೆ ಕೊಡುವವರಿಗೂ ಶಿಸ್ತಿನಲ್ಲಿ ನಡೆಸುವವರಿಗೂ ನಾವು ಅಧೀನರಾಗಿರಬೇಕು. (ರೋಮಾ.13:1-5; 1ನೇ ಪೇತ್ರ 2:13-14 ವ್ಯಾಖ್ಯಾನ ನೋಡಿರಿ).

ಈ ಭಾಗದಲ್ಲಿ ಕ್ರಿಸ್ತನು ವೈಯಕ್ತಿಕ ವಿಷಯಗಳನ್ನು ಮಾತ್ರ ಸ್ಪಂದಿಸುವವನಾಗಿದ್ದಾನೆ. ಬೇರೆ ವ್ಯಕ್ತಿಯಿಂದ ವೈಯಕ್ತಿಕವಾಗಿ ನಮಗೆ ಕೇಡಾದರೆ ನಾವು ಆ ವ್ಯಕ್ತಿಗೆ ಮುಯ್ಯಿ ತೀರಿಸಬಾರದು. ಕ್ರಿಸ್ತನಂತೆ ನಡೆಯ ಬೇಕು. ಉದಾಹರಣೆಗೆ ಕ್ರಿಸ್ತನು ಹಿಂಸಿಸುವವರನ್ನು ಕ್ಷಮಿಸಿದಂತೆ ನಾವು ಕ್ಷಮಿಸಬೇಕು. (ಲೂಕ 23:34).

**ಕೆಟ್ಟ ಮನುಷ್ಯನನ್ನು ವಿರೋಧಿಸಬೇಡ.** ಇದರ ಅರ್ಥವು ಬಹಳ ಆಳವಾಗಿದೆ. ಅದೇನೆಂದರೆ, ನಾವು ನಮ್ಮ ವೈರಿಗಳನ್ನು ಪ್ರೀತಿಸಬೇಕು. (ವಚನ 44). ನಾವು ಕರುಣೆಯುಳ್ಳವರೂ, ನಮ್ರರೂ ಆಗಿರಬೇಕು. ನಾವು ನಮ್ಮನ್ನೇ ಅವಲಂಬಿಸಬಾರದು. ನಾವು ನಮ್ಮ ಪ್ರಯೋಜನಕ್ಕಾಗಿ ನೋಡಬಾರದು. ಅದಿರಲಿ ಯಾವ ರೀತಿಯ ವೈಯಕ್ತಿಕವಾದ ತಪ್ಪನ್ನು ನಾವು ಅಂಗೀಕರಿಸುತ್ತೇವೆ. ನಾವು ಇನ್ನೊಂದು ತಪ್ಪು ಮಾಡಬಾರದು. ಒಬ್ಬನು ನಮ್ಮನ್ನು ಹೊಡೆದರೆ ನಾವು ಅವನಿಗೆ 2ನೇ ಸಾರಿ ಹೊಡೆಯಲು ಬಿಡಬೇಕು. ಒಬ್ಬನು ನಮ್ಮನ್ನು ಅವಮಾನ ಪಡಿಸಿದರೆ ನಾವು ನಮ್ಮನ್ನೇ ರಕ್ಷಿಸಿಕೊಳ್ಳಲು ಹೋಗಬಾರದು.

ಇದಕ್ಕೆ ಬದಲಾಗಿ ನಾವು ಮೌನದಿಂದಿದ್ದು ಇದನ್ನು ಸಹಿಸಿಬೇಕು. (1ನೇ ಪೇತ್ರ 2:19-21). ದೇವರು ನಮ್ಮನ್ನು ಕಾಪಾಡುತ್ತನೆ ಮತ್ತು ಮುಯ್ಯಿ ತೀರಿಸುತ್ತಾನೆ. (ಜ್ಞಾನೋಕ್ತಿ 24:29, ರೋಮಾ. 12:19). ನ್ಯಾಯವಾಗಿ ತೀರ್ಪು ಮಾಡುವುದಕ್ಕೆ ಆತನ ಮೇಲೆ ನಾವು ನಂಬಿಕೆ ಇಡಬೇಕು. (1ನೇ ಪೇತ್ರ 2:23).

ಎಷ್ಟೇ ಆದರೂ ಎಲ್ಲಾ ಸಂದರ್ಭಗಳಲ್ಲಿ ಕೆನ್ನೆಯನ್ನು ಕೊಡು ಎಂದು ಯೇಸು ಹೇಳಲಿಲ್ಲ. ಒಬ್ಬ ಕುಡುಕನು ನಮ್ಮನ್ನು ಹಿಂಸಿಸಿದರೆ ನಾವು ರಕ್ಷಿಸಿಕೊಳ್ಳಬೇಕು. ಅಧಿಕಾರಿಗಳ ನ್ಯಾಯ ವಿಚಾರಣೆ ಸಮಯದಲ್ಲಿ ಕ್ರಿಸ್ತನು ತನ್ನ ಮತ್ತೊಂದು ಕೆನ್ನೆಯನ್ನು ತಿರುಗಿಸಲಿಲ್ಲ. (ಯೋಹಾನ 18:19-23). ಕ್ರಿಸ್ತನು ಅಧಿಕಾರಿಗಳ ವಿರುದ್ಧವಾಗಿ ನಿಂತನು. ಆ ಅಧಿಕಾರಿಗಳು ದೇವರನ್ನು ದೂಷಿಸುವಂತಹವರು ಆಗಿದ್ದರು. ನ್ಯಾಯವಿಚಾರಣೆಯು ಅಕ್ರಮವಾಗಿತ್ತು. ಕರ್ತನು ತನ್ನ ಕೀರ್ತಿಗನುಸಾರವಾಗಿ ರಕ್ಷಿಸಿಕೊಳ್ಳಲು ಪ್ರಯತ್ನಿಸಲಿಲ್ಲ. ಆತನು ದೇವರ ಮಹಿಮೆಯಲ್ಲಿ ಕಾಪಾಡಲ್ಪಡುವವನಾಗಿದ್ದನು. ಯಾವಾಗಲೂ ನಾವು ಸರಿಯಾದ ಮಾರ್ಗದಲ್ಲಿ ನಡೆದು ದೇವರ ಕೃಪೆಯಲ್ಲಿ ರಕ್ಷಿಸಲ್ಪಡಬೇಕು. ದೇವರಿಂದ ದೂರವಿದ್ದವರೊಂದಿಗೆ ನಾವು ದೂರವಿರಬೇಕು. ಆದರೆ ನಾವು ಮಾಡುವುದು ನಿಜವಾಗಿಯೂ ಅದು ಸತ್ಯವಾಗಿದ್ದು, ನಮ್ಮಷ್ಟಕ್ಕೆ ನಾವೇ ರಕ್ಷಿಸಿಕೊಳ್ಳದೇ ದೇವರ ಮಹಿಮೆಯಲ್ಲಿ ಮತ್ತು ಕೃಪೆಯಲ್ಲಿ ರಕ್ಷಿಸಲ್ಪಡುವವರಾಗಿದ್ದೆವೆ.

**40** ಕ್ರಿಸ್ತನು ಎರಡನೆಯ ಉದಾಹರಣೆ ಕೊಡುತ್ತಾ, ಯಹೂದ್ಯರ ಧರ್ಮಶಾಸ್ತ್ರದ ಪ್ರಕಾರ ಒಬ್ಬ ಮನುಷ್ಯನು ತೆಗೆದುಕೊಂಡ ಸಾಲ ಕೊಡದೇ ಹೋದರೆ ಸಾಲಕ್ಕೆ ಪ್ರತಿಯಾಗಿ ಅವನಲ್ಲಿ ಏನೂ ಇಲ್ಲದಿದ್ದರೂ ತಾತ್ಕಾಲಿಕವಾಗಿ ಒಳಗಿನ ವಸ್ತ್ರವನ್ನು ಕೊಡಬೇಕು (ವಿಮೋಚನಾಕಾಂಡ 22:26-27). ಆದರೆ ಯೇಸು ಬೋಧಿಸಿದ್ದು ಅವಶ್ಯವಿದ್ದದ್ದನ್ನು ಹೆಚ್ಚಾಗಿ ಕೊಡಿರಿ. ಧರ್ಮಶಾಸ್ತ್ರ ಹೇಳುವುದಕ್ಕಿಂತಲೂ ಹೆಚ್ಚಾಗಿ ಕೊಡಿರಿ. ನಿಮಗೋಸ್ಕರವಾಗಿ ಯಾವ ವಸ್ತುವನ್ನು ಇಟ್ಟುಕೊಳ್ಳದೇ ಧರ್ಮಶಾಸ್ತ್ರ ಹೇಳಿದಂತೆ ಮಾಡಿರಿ.

41 ಕ್ರಿಸ್ತನು ಈ ಲೋಕದಲ್ಲಿದ್ದ ಸಮಯದಲ್ಲಿ ಮೆಡಿಟರೇನಿಯನ್ ಸಮುದ್ರದ ಸುತ್ತಮುತ್ತಲಿನ ರಾಜ್ಯಗಳು ಇಸ್ರಾಯೇಲ ಮೊದಲುಗೊಂಡು ಎಲ್ಲವೂ ರೋಮ ಚಕ್ರವರ್ತಿಯ ಅಧೀನದಲ್ಲಿ ಇದ್ದವು. ಆಗ ಇಸ್ರಾಯೇಲ್ ಅದರಲ್ಲಿ ಒಂದು ಪ್ರದೇಶ(ವಸಾಹತು)ವಾಗಿತ್ತು. ರೋಮನ್ನರ ಕಾನೂನಿನ ಪ್ರಕಾರ, ವಸಾಹತುವಿನಲ್ಲಿ ವಾಸವಾಗಿರುವವರಲ್ಲಿ ಒಬ್ಬನು ರೋಮ ಸಿಪಾಯಿಗಳ ಸಾಮಾನುಗಳನ್ನು ಒಂದು ಮೈಲಿನವರೆಗೆ ಹೊತ್ತುಕೊಂಡು ಹೋಗಬೇಕಾಗಿತ್ತು. ಆಗ ಸಿಪಾಯಿಯು ಮತ್ತೊಬ್ಬನನ್ನು ಕಂಡು ಆ ಸಾಮಾನುಗಳನ್ನು ಹೊರಿಸಿಕೊಂಡು ಇನ್ನೊಂದು ಮೈಲು ದೂರ ಪ್ರಯಾಣಿಸುತ್ತಿದ್ದನು.

ಕ್ರಿಸ್ತನು ಹೇಳಿದ್ದು, ರೋಮಾಯ ಸಿಪಾಯಿಯು ಒಬ್ಬನಿಗೆ ನನ್ನೊಡನೇ ಒಂದು ಮೈಲು ಬಾ ಎಂದು ಹೇಳಿದರೆ ನಾವು ಸಂತೋಷದಿಂದ ಎರಡು ಮೈಲು ಅವನೊಂದಿಗೆ ಹೋಗಿರಿ. ನಾವು ನಮ್ಮ ಕರ್ತವ್ಯಕ್ಕಿಂತ ಹೆಚ್ಚಾಗಿ ಮಾಡ ಬೇಕು. ಲೌಕಿಕ ಜನರು ತಮ್ಮ ಕೆಲಸವನ್ನು ಮಾತ್ರ ಮಾಡುವರು. ಕ್ರೈಸ್ತರು ಹೆಚ್ಚಾಗಿ ಮಾಡಲು ಸಿದ್ಧರಾಗಿರಬೇಕು. ಹೀಗೆ ಮಾಡುವುದರಿಂದ ನಮ್ಮ ಬೆಳಕು ಅವರ ಮೇಲೆ ಪ್ರಕಾಶಿಸುವುದು.

42 **ಯಾವನಾದರೂ ನಿಮಗೆ ಕೇಳಿದರೆ ಅವನಿಗೆ ಕೊಡಿರಿ.** ಇಲ್ಲಿ ಕ್ರಿಸ್ತನ ಅಭಿಪ್ರಾಯ(ಅರ್ಥ)ವೇನು? ಜನರು ಕೇಳುವುದನ್ನು ನಾವು ಯಾವಾಗಲೂ ಕೊಡಲೇಬೇಕೇ? ಇಲ್ಲ (ಅ.ಕೃ. 3:6). ಒಬ್ಬ ಕುಡುಕನಿಗೆ ಮಧ್ಯವನ್ನು (ಸರಾಯಿಯನ್ನು) ಕೊಡಲೇಬಾರದು. ಚಿಕ್ಕಮಕ್ಕಳ ಕೈಯಲ್ಲಿ ಬೆಂಕಿಪೊಟ್ಟಣವನ್ನು ಕೊಡಲೇಬಾರದು. ಕೆಲಸ ಮಾಡಲು ಯೋಗ್ಯತೆಯುಳ್ಳ ಭಿಕ್ಷೆಗಾರನಿಗೆ ಏನೂ ಕೊಡಬಾರದು (2ನೇ ಥೆಸಲೋನಿಕ 3:10-12).

ಕ್ರಿಸ್ತನ ಅರ್ಥ ಹೀಗಿರುತ್ತದೆ. ಯಾರಿಗೆ ನಮಗಿಂತ ಹೆಚ್ಚಾಗಿ ಅವಶ್ಯವಾಗಿರುವುದೋ ಅಂತಹವರಿಗೆ ಯಾವಾಗಲೂ ಕೊಡಿರಿ. ನಮ್ಮ ಹಣ, ನಮ್ಮ ಆಸ್ತಿ, ನಮ್ಮ ಸ್ವಂತದ್ದಲ್ಲ. ಅದು ದೇವರದು. ನಾವು ಕೇವಲ ಮನೆ ವಾರ್ತೆಯವರ ಸ್ಥಾನದಲ್ಲಿ ಇದ್ದೇವೆ. ಇದು ನನ್ನ ಮನೆಯೆಂದು ಎಂದಿಗೂ ಹೇಳಬಾರದು. ಇವು ನನ್ನ ಬಟ್ಟೆಗಳು ಎಂದು ಹೇಳುವುದು ತಪ್ಪು. ಎಲ್ಲವೂ ದೇವರಿಗೆ ಸಂಬಂಧಪಟ್ಟವುಗಳಾಗಿವೆ. ಅವುಗಳನ್ನು ಶುದ್ಧವಾಗಿ ಉಪಯೋಗಿಸಲು ನಮಗೆ ಕೊಡುತ್ತಾನೆ. ಕೊರತೆ ಇದ್ದವನನ್ನು ನಾವು ನೋಡುವಾಗ ಕರುಣಿಸಿ ಅವನಿಗೆ ಕೊಡಲೇಬೇಕು. (1ನೇ ಯೋಹಾನ 3:17-18 ನೋಡಿರಿ).

ಈ ಭಾಗದಲ್ಲಿ ಕ್ರಿಸ್ತನು ನಮಗೆ ಹೊಸ ಆಜ್ಞೆಯನ್ನು ಕೈಕೊಳ್ಳಲು ಹೇಳಲಿಲ್ಲ.ನಾವು ಹೊಸ ಜನರಾಗಬೇಕೆಂದು ನಮಗೆ ಭೋದಿಸಿದ್ದಾನೆ. ನೀವು ಲೋಕದ ಜನರಿಗಿಂತ ವ್ಯತ್ಯಾಸವುಳ್ಳವರಾಗಿದ್ದೀರಿ. ಆತನು ನಮಗೆ ನಿಃಸ್ವಾರ್ಥತೆಯನ್ನು ಕಲಿಸುತ್ತಿದ್ದಾನೆ. ಇತರರಿಗಿಂತ ಹೆಚ್ಚಾಗಿ (ಯೋಗ್ಯರಾಗಿ) ಜೀವಿಸಬೇಕೆಂದು ಮತ್ತು ನಮ್ಮಷ್ಟಕ್ಕೆ ನಾವೇ ನಿರಾಕರಿಸಲ್ಪಡುವವರಾಗಿರಬೇಕೆಂದು ಕಲಿಸುತ್ತಾನೆ. ಯೇಸು ಹೇಳಿದ್ದೇನೆಂದರೆ **ಯಾವನಿಗಾದರೂ ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ, ಅವನು ತನ್ನನ್ನು ನಿರಾಕರಿಸಿದವನಾಗಿ ನನ್ನ ಹಿಂದೆ ಬರಲಿ** (ಮಾರ್ಕ 8:34 ವ್ಯಾಖ್ಯಾನ ನೋಡಿರಿ).

ನಮ್ಮಷ್ಟಕ್ಕೆ ನಾವೇ ಹೇಗೆ ನಿರಾಕರಿಸಿಕೊಳ್ಳಬೇಕು? ಮೊದಲು ನಮಗೆ ಪವಿತ್ರಾತ್ಮನ ಸಹಾಯ ಬೇಕು. ಲೌಕಿಕ ಮನುಷ್ಯನು ತನ್ನನ್ನು ಎಂದಿಗೂ ನಿರಾಕರಿಸಿಕೊಳ್ಳುವುದಿಲ್ಲ. ಆದರೆ ಯಾವನಲ್ಲಿ ಪವಿತ್ರಾತ್ಮನಿರುವನೋ ಅವನು ಮಾತ್ರ ಮಾಡುವನು.

ನಮ್ಮಲ್ಲಿ ಸ್ವಾರ್ಥತೆ ಇದೆಯೆಂದು ಒಪ್ಪಿಕೊಳ್ಳಲೇಬೇಕು. ಸಾಧಾರಣವಾಗಿ ಸ್ವಾಭಾವಿಕ ಮನುಷ್ಯನು ತನ್ನಲ್ಲಿರುವ ಉದ್ದೇಶಪೂರ್ವಕವಾದ ಸ್ವಾರ್ಥತೆಯಿಂದ ಕೂಡಿದ ಸ್ವಪ್ರೀತಿಯನ್ನು ಮಾಡುವವನಾಗಿದ್ದಾನೆ. ನಾವು ಏನು ಮಾಡುತ್ತೇವೆ. ನಮ್ಮಷ್ಟಕ್ಕೆ ನಾವೇ ಮಾಡುತ್ತೇವೆ.ಸ್ವಬಾವಿಕವಾಗಿ ನಮ್ಮ ಮನಸ್ಸಿಗೆ ನೋವ್ವಾಗುವುದು ಯಾಕೆಂದರೆ ಇದು ಸ್ವಾರ್ಥತೆಯಿಂದಾಗಿದೆ. ನಾವು ಸಿಟ್ಟಾಗುವಾಗ ಇದು ಸಾಮಾನ್ಯವಾದದ್ದೇ. ಯಾಕೆಂದರೆ ಇದು ಸ್ವಾರ್ಥ ಉಳ್ಳದ್ದು. ಮನುಷ್ಯನ ಸ್ವಾರ್ಥತೆಯು ಎಲ್ಲಾ ಪಾಪಗಳಿಗೂ ಮೂಲ ಕಾರಣವಾಗಿದೆ. ಮಾತ್ರವಲ್ಲ ಈ ಲೋಕದಲ್ಲಿ ದುಃಖಕ್ಕೂ ಇದು ಕಾರಣವಾಗಿದೆ. ಯಾಕೆಂದರೆ ಸ್ವಾರ್ಥತೆಯ ನಿಮಿತ್ತದಿಂದಾಗಿ ಮನುಷ್ಯನು ದೇವರಿಂದ ಬೇರೆಯಾಗಿದ್ದಾನೆ. ಕ್ರಿಸ್ತನು ನಮ್ಮನ್ನು ಸ್ವಾರ್ಥತೆ ಎಂಬ ಪಾಪದಿಂದ ಬಿಡಿಸಲು ಬಂದನು. ಮತ್ತು ದೇವರೊಂದಿಗೆ ನಮ್ಮನ್ನು ಒಂದು ಮಾಡಲು ಬಂದನು. **ಜೀವಿಸುವವರು ಇನ್ನು ಮೇಲೆ ತಮಗಾಗಿ ಜೀವಿಸದೇ ತಮಗೋಸ್ಕರ ಸತ್ತು, ಎದ್ದು ಬಂದಾತನಿಗಾಗಿ ಜೀವಿಸಬೇಕೆಂತಲೇ ಆತನು ಎಲ್ಲರಿಗೋಸ್ಕರ ಸತ್ತನು** (2ನೇ ಕೊರಿಂಥ 5:15).

ಕ್ರಿಸ್ತನ ಪವಿತ್ರಾತ್ಮನ ಮೂಲಕ ಹೊಸದಾಗಿ ಹುಟ್ಟಿದ ಮನುಷ್ಯನು ತನಗೋಸ್ಕರವಾಗಿ ಜೀವಿಸುವುದಿಲ್ಲ. ಇತನು ಕ್ರಿಸ್ತನಿಗಾಗಿ ಜೀವಿಸುತ್ತಾನೆ. ಇಂತಹ ಮನುಷ್ಯನು ಸಂತೋಷವಾಗಿ ತನ್ನ ಕೆನ್ನೆಯನ್ನು ತೋರಿಸುತ್ತಾನೆ. ಇನ್ನೊಂದು ಕೆನ್ನೆಯನ್ನು ಕೊಡುತ್ತಾನೆ. ತನ್ನ ಹೊರ ವಸ್ತ್ರವನ್ನು ಕೊಡುವುದಲ್ಲದೇ, ಎರಡು ಮೈಲು ನಾಲ್ಕು ಮೈಲು ಹತ್ತು ಮೈಲು ನಡೆಯುವನು. ಇಂತಹ ಮನುಷ್ಯನು ತನಗೋಸ್ಕರವಾಗಿ ಚಿಂತಿಚಿಸದೇ ಕೊರತೆಯಲ್ಲಿದ್ದವನಿಗೆ ಧಾರಾಳವಾಗಿ ಕೊಡುವನು. ಇಂತಹ ವಿಶಾಲವಾದ ಬೋಧನೆಯನ್ನು ನಾವು ಎಷ್ಟರ ಮಟ್ಟಿಗೆ ನಮ್ಮ ಜೀವಿತದಲ್ಲಿ ಕಾರ್ಯರೂಪಕ್ಕೆ ತಂದಿದ್ದೇವೆ ಎಂಬುದನ್ನು ನಾವೇ ವಯಕ್ತಿಕವಾಗಿ ಪರೀಕ್ಷಿಸಿ ಕೊಳ್ಳೋಣ.

## ವೈರಿಗಳಿಗಾಗಿ ಪ್ರೀತಿ. (5:43-48)

(ಲೂಕ 6:27-28, 32-36)

43 **ಯಹೂದ್ಯರ ಹಿರಿಯರು ಹೇಳಿದ್ದು, ನಿಮ್ಮ ನೆರೆಯವರನ್ನು ಪ್ರೀತಿಸಿರಿ ಆದರೆ ನಿಮ್ಮ ವೈರಿಗಳನ್ನು ಹಗೆ ಮಾಡಿರಿ.** ಕೇವಲ ಯಹೂದ್ಯರು ಮಾತ್ರ ನೆರೆಯವರೆಂದು, ಇತರರು ಅಲ್ಲವೆಂದು ಇವರು ಕಲಿಸಿದರು. ಇವರು ಯಹೂದ್ಯರಲ್ಲದವರನ್ನು ನಮ್ಮ ನೆರೆಹೊರೆಯವರೆಂದು ಯೋಚಿಸದೇ, ಬದಲಾಗಿ ಇವರನ್ನು ಹೀನೈಸುತ್ತಿದ್ದರು.

ನಿಜವಾಗಿಯೂ ಪ್ರತಿಯೊಬ್ಬರೂ ನಮ್ಮ ನೆರೆಹೊರೆಯವರೇ ಎಂದು ಕ್ರಿಸ್ತನು ಕಲಿಸಿದನು. (ಲೂಕ 10:29-37). ಇದರರ್ಥ ಎಲ್ಲರೂ ನೆರೆಯವರೇ,ಯಾಕಂದರೆ ಆತ್ಮೀಕ ರೀತಿಯಲ್ಲಿ ಇದ್ದವರಾಗಲಿ, ಲೌಕಿಕ ರೀತಿಯಿಂದ ಇದ್ದವರಾಗಲಿ, ನಿಜವಾಗಿ

ಎಲ್ಲರೂ ನಮ್ಮ ನೆರೆಯವರೇ., ನಿನ್ನ ನೆರೆಯವರನ್ನು ಪ್ರೀತಿಸು ಎಂದು ಯೇಸು ಹೇಳಿದ್ದು ನಾವು ಎಲ್ಲರನ್ನೂ ಪ್ರೀತಿಸಲೇಬೇಕು ಎಂಬ ಭೋದನೇಯಾಗಿದೆ.

ಆದರೆ ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ಹಳೇ ಒಡಂಬಡಿಕೆಯಲ್ಲಿ ಇಸ್ರಾಯೇಲರು ತಮ್ಮ ವೈರಿಗಳನ್ನು ಶಿಕ್ಷಿಸುವ ಬಗ್ಗೆ ಬಹಳವಾಗಿ ಬರೆಯಲ್ಪಟ್ಟಿದೆ (ಒಂದು ಉದಾಹರಣೆಯನ್ನು ನಾವು 1ನೇ ಸಮುವೇಲ 15:1-3ರಲ್ಲಿ ಕಂಡುಕೊಳ್ಳುತ್ತೇವೆ). ಯೇಸುವು ಕೂಡ ಮತ್ತಾಯನ ಸುವಾರ್ತೆ 23ರಲ್ಲಿ ವಿಶೇಷಯವಾಗಿ 33ನೆ ವಚನದಲ್ಲಿ ಫರಿಸಾಯರ ವಿಷಯವಾಗಿ ಬಹಳ ಕೋಪಗೊಂಡನು. ಯಜ್ಞಕ್ಕೆ ನೇಮಕವಾದ ಪಶುಪಕ್ಷಿಗಳನ್ನು ಮಾರುವಂತನರನ್ನು ಮತ್ತು ಹಣ ಬದಲಾವಣೆ ಮಾಡುವವರನ್ನೂ, ದೇವಾಲಯದಿಂದ ಹೊರಡಿಸಿ ಬಿಟ್ಟನು. (ಮಾರ್ಕ 11:15-16, ಯೋಹಾನ 2:13-15). ನಮ್ಮನ್ನು ದ್ವೇಷಿಸುವುಂತಹ ವೈರಿಗಳನ್ನು ಹಗೆ ಮಾಡಬೇಕೆಂದು ಸತ್ಯವೇದವು ಬಹಳವಾಗಿ ಹೇಳುತ್ತಿರುವಲ್ಲಿ ನಾವು ವೈರಿಗಳನ್ನು ಪ್ರೀತಿಸಬೇಕೆಂದು ಕ್ರಿಸ್ತನು ಭೋದಿಸುವುದಾದರೂ ಹೇಗೆ.

**44** ಉತ್ತರ ಹೀಗೆ ಇರುತ್ತದೆ. ಹೇಗೆಂದರೆ, ಯಾರು ನಮ್ಮನ್ನು ವ್ಯಕ್ತಿಗತವಾಗಿ ದ್ವೇಷಿಸುವರೋ ಅಂತಹ ಸ್ವಂತ ವೈರಿಗಳನ್ನು ನಾವು ಪ್ರೀತಿಸಬೇಕು. ಆದರೆ ದೇವರಿಗೆ ವಿರುದ್ಧವಾದ ವೈರಿಗಳನ್ನು ನಾವು ಗದರಿಸಬೇಕು. ದೇವರು ಕೆಲವು ಸಮಯ ತನ್ನ ವೈರಿಗಳನ್ನು ಶಿಕ್ಷಿಸಲು ನಮ್ಮನ್ನು ಉಪಯೋಗಿಸುವನು. ಇಂತಹ ಸಮಯದಲ್ಲಿ ' ನಾವು ದೇವರಿಗೋಸ್ಕರವಾಗಿ ದೇವರ ವೈರಿಗಳನ್ನು ಎದುರಿಸಿದ್ದಾಗ್ಯೂ ವೈಯಕ್ತಿಕವಾಗಿ ನಾವು ಪ್ರೀತಿಸಬೇಕು. ಪಾಪವನ್ನು ಹಗೆ ಮಾಡಬೇಕು ಮತ್ತು ಪಾಪಿಗಳನ್ನು ಪ್ರೀತಿಸಬೇಕು.

**45** ಯೇಸು ಹೇಳಿದ್ದು, ನಾವು ಪರಲೋಕದಲ್ಲಿರುವ ತಂದೆಯ ಮಕ್ಕಳಾಗಲೇ ಬೇಕು .ಅಷ್ಟು ಮಾತ್ರವಲ್ಲದೆ. ಆತನು ಇನ್ನೂ ಹೇಳಿದ್ದೇನೆಂದರೆ ನಾವು ಪರಲೋಕದ ತಂದೆಯ ಹಾಗೆ ಇರಬೇಕು.(ವಚನ 48). ದೇವರು, ತನ್ನ ವೈರಿಗಳಿಗೆ ಪ್ರೀತಿಯನ್ನು ತೋರಿಸುತ್ತಾನೆ. ಇದರಂತೆ ನಾವು ಸಹ ಮಾಡಬೇಕು. ದೇವರು ನೀತಿವಂತರಿಗೂ ಮತ್ತು ಕೆಟ್ಟವರಿಗೂ ಸೂರ್ಯನ ಬೆಳಕನ್ನು ಮತ್ತು ಮಳೆಯನ್ನು ಕೊಡುತ್ತಾನೆ. ಪಾಪಿಗಳಿಗಾಗಿ ಸಾಯುವುದಕ್ಕಾಗಿ ಕ್ರಿಸ್ತನನ್ನು ದೇವರು ಕಳಿಸಿಕೊಟ್ಟನು. ನಾವು ಪಾಪಿಗಳಾಗಿದ್ದಾಗ್ಯೂ ಕ್ರಿಸ್ತನು ನಮಗೋಸ್ಕರ ಸತ್ತನು (ರೋಮಾ. 5:8). ದೇವರು ನಮ್ಮ ನಡತೆಗನುಸಾರವಾಗಿಯಾಗಲಿ ಅಥವಾ ನಮ್ಮ ಯೋಗ್ಯತೆಗನುಸಾರವಾಗಿ ನಮ್ಮನ್ನು ಪ್ರೀತಿಸಲಿಲ್ಲ. ನಾವು ದೇವರಿಗೆ ವೈರಿಗಳಾಗಿದ್ದಾಗಿಯೂ ಸಹ ನಮ್ಮನ್ನು ಸಂಪೂರ್ಣವಾಗಿ ಪ್ರೀತಿಸಿದನು. ಇದರಂತೆಯೇ ನಾವು ಇತರರನ್ನು ಪ್ರೀತಿಸಬೇಕು. ದೇವರು ಯಾಕೆ ತನ್ನ ವೈರಿಗಳಿಗೂ, ಪಾಪಿಗಳಿಗೂ ತನ್ನ ಪ್ರೀತಿಯನ್ನು ತೋರಿಸಿದನು? ಯಾಕೆಂದರೆ ದೇವರು ಪ್ರೀತಿ ಸ್ವರೂಪಿಯಾಗಿದ್ದಾನೆ (1ನೇ ಯೋಹಾನ 4:16). ಎಲ್ಲ ನಿಜವಾದ ಆತ್ಮೀಕ ಪ್ರೀತಿಗೆ ದೇವರೇ ಮೂಲಕಾರಣವಾಗಿದ್ದಾನೆ. (1ನೇ ಯೋಹಾನ 4:7-9). ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೇ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು. (ಯೋಹಾನ 3:16).

ನಾವು ವೈರಿಗಳಿಗೆ ಈ ಪ್ರೀತಿಯನ್ನು ಹೇಗೆ ತೋರಿಸಬೇಕು? ಲೂಕ 6:27-28ರಲ್ಲಿ ಕ್ರಿಸ್ತನು ಉತ್ತರ ಕೊಡುತ್ತಾನೆ. ಆತನು ಹೇಳಿದ್ದೇನೆಂದರೆ ನಿಮ್ಮ ವೈರಿಗಳನ್ನು ಪ್ರೀತಿಸಿರಿ. ನಿಮ್ಮನ್ನು ಹಗೆ ಮಾಡುವವರಿಗೆ ಉಪಕಾರ ಮಾಡಿರಿ. ನಿಮ್ಮನ್ನು ಶಪಿಸುವವರಿಗೆ ಆಶೀರ್ವಾದ ಮಾಡಿರಿ. ನಿಮ್ಮನ್ನು ಅವಮಾನ ಪಡಿಸು ವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ. ಹೀಗೆ ನಾವು ಮಾಡುವುದೇ ಆದರೆ, ನಮ್ಮ ಸಾಕ್ಷಿಯು ಎಷ್ಟು ದೊಡ್ಡದಾಗಿರುವುದು. ಹೀಗೆ ನಮ್ಮ ಬೆಳಕು ಪ್ರಕಾಶಿಸುವುದು. ಇಂತಹ ಬೋಧನೆಯನ್ನು ನಾವು ಇತರೇ ಧರ್ಮದಲ್ಲಿ ಕಂಡುಕೊಳ್ಳುತ್ತೇವೆಯೋ? (1ನೇ ಪೇತ್ರ 3:9).

ಇಂತಹ ಆಜ್ಞೆಗಳಿಗೆ ವಿಧೇಯರಾಗುವುದಕ್ಕೆ ಸಾಧ್ಯವೇ? ಹೌದು, ನಮ್ಮಲ್ಲಿ ವಾಸವಾಗಿರುವ ಪವಿತ್ರಾತ್ಮನ ಮೂಲಕವೇ ಸಾಧ್ಯ. ಪ್ರಥಮ ರಕ್ತ ಸಾಕ್ಷಿಯಾಗಿ ಹತ್ಯೆಯಾದಂತ ಸ್ತೇಫನನು ತನ್ನನ್ನು ಕೊಲ್ಲುತ್ತಿರುವವರಿಗಾಗಿ ಪ್ರಾರ್ಥಿಸಿದನು (ಅ.ಕೃ. 7:59-60). ಇದರಂತೆಯೆ ನಾವು ಇತರರನ್ನು ಪ್ರೀತಿಸಬೇಕು. ಇಲ್ಲದಿದ್ದರೆ ನಾವು ಕ್ರಿಸ್ತನ ಆಜ್ಞೆಗಳಿಗೆ ಅವಿಧೇಯರಾದಂತಾಗುತ್ತದೆ. ಆದರೆ ನೆನಪಿರಲಿ, ಕ್ರಿಸ್ತನು,ಇತರರನ್ನು ನಾವು ಪ್ರೀತಿ ಮಾಡಲು ಸಹಾಯಿಸುತ್ತಾನೆ ಮತ್ತು ಸಂಪೂರ್ಣ ಬಲವನ್ನು ಕೊಡದೆಯೇ ನಮಗೆ ಆಜ್ಞೆ ಕೊಡುವುದಿಲ್ಲ. (ರೋಮಾ. 5:5). ಇದಕ್ಕೆ ನಾವು ವಿಧೇಯರಾಗದೇ ಇರುವುದಾದರೆ ಇದು ನಮ್ಮ ತಪ್ಪು.

**46-47** ಈ ವಚನಗಳಲ್ಲಿ ಕ್ರಿಸ್ತನು ನಮಗೆ ಕಲಿಸುವುದೇನೆಂದರೆ, ನಾವು ವೈರಿಗಳನ್ನು ಪ್ರೀತಿಸದೇ ಹೋದರೆ, ಲೌಕಿಕ ಜನರಿಗೂ ಮತ್ತು ನಮಗೂ ಏನೂ ವ್ಯತ್ಯಾಸವಿಲ್ಲ. ನಮ್ಮನ್ನು ನಾವೇ ಪ್ರಶ್ನೆ ಕೇಳಿಕೊಳ್ಳೋಣ. ನಂಬದೇ ಇರುವವರಿಗಿಂತ ನಾವು ಬೇರೆಯಾಗಿದ್ದೇವೋ? ಲೌಕಿಕ ಜನರಿಗಿಂತ ನಾವು ಬೇರೆಯಾಗಿದ್ದೇವೋ? ಆಲೋಚಿಸಿರಿ. ಹೆಚ್ಚಾದ ಜನರು ವ್ಯಭಿಚಾರ ಕೊಲೆಯ ಅಪರಾಧ ಮಾಡುವುದಿಲ್ಲ ಮತ್ತು ಹೆಚ್ಚಾಗಿ ಜನರು ತಮ್ಮ ನೆರೆಯವರಿಗೆ ಸಹಾಯ ಮಾಡುತ್ತಾರೆ. ಬಡವರಿಗೆ ಕೊಡುತ್ತಾರೆ. ತಮ್ಮ ಗೆಳೆಯರಿಗೆ ಸಾಲ ಕೊಡುತ್ತಾರೆ. ಅದರಿಂದ ನೀನು ಹೇಗೆ ಬೇರೆಯಾಗಿದ್ದಿ? ಎಂದು ಯೇಸುವು ನಮ್ಮನ್ನು ಕೇಳುತ್ತಾನೆ.

ನಾವು ಕ್ರಿಸ್ತನ ಬೋಧನೆಯಂತೆ ನಡೆದು ಆತನನ್ನು ಹಿಂಬಾಲಿಸುವುದಾದರೆ ನಾವು ವ್ಯತ್ಯಾಸವುಳ್ಳವರಾಗಿರುತ್ತೇವೆ. ಕೆಟ್ಟ ಕೆಲಸಗಳನ್ನು ಮಾಡಬಾರದು ಎಂದು ಲೋಕವು ಹೇಳುತ್ತದೆ. ಯೇಸುವು ಹೇಳುತ್ತಾನೆ, ಕೆಟ್ಟ ಆಲೋಚನೆಗಳನ್ನು ಮಾಡಲೇ ವಾರದು ಎಂದು ಹೇಳುತ್ತಾನೆ. ಲೋಕ ಹೇಳುತ್ತದೆ, ಕೊಲೆ ಮಾಡಬೇಡ ಎಂದು. ಕ್ರಿಸ್ತನು ಹೇಳಿದನು, ನೀನು 'ಕೋಪಬಾರದು. ಲೋಕವು ಹೇಳುತ್ತದೆ, ಅತಿಯಾಗಿ ಮುಯ್ಯಿ ತೀರಿಸಬಾರದು ಎಂದು. ಯೇಸುವು ಹೇಳುತ್ತಾನೆ, ಯಾವುದಕ್ಕೂ ಮುಯ್ಯಿ ತೀರಿಸಬೇಡ. ಲೋಕವು ಹೇಳುತ್ತದೆ, ನಿಮ್ಮ ಗೆಳೆಯರನ್ನು ಪ್ರೀತಿಸಿರಿ. ಯೇಸುವು ಹೇಳುತ್ತಾನೆ ನಿಮ್ಮ ವೈರಿಗಳನ್ನು ಪ್ರೀತಿಸಿರಿ. ಯೇಸುವು ಈ ದಿನಗಳಲ್ಲಿಯು ಸಹ ನಮ್ಮನ್ನು ಕೇಳುವುದೇನಂದರೆ ಇತರರಿಗಿಂತ ನೀನು ಹೆಚ್ಚಾಗಿ ಏನನ್ನು ಮಾಡುತ್ತಿರು ವಿ?

**48** ಕೊನೆಯದಾಗಿ, ಕ್ರಿಸ್ತನು ಎಲ್ಲಕ್ಕಿಂತಲೂ ಕಠಿಣವಾದ ಆಜ್ಞೆಯನ್ನು ಕೊಡುತ್ತಾನೆ. ಪರಲೋಕದಲ್ಲಿರುವ ನಿನ್ನ ತಂದೆ ನಿರ್ದೋಷವುಳ್ಳವನಾಗಿರುವುದರಿಂದ ನೀನೂ ನಿರ್ದೋಷಿಯಾಗಿರು. ಇದಕ್ಕೆ ಸಮಾನವಾದ ಇನ್ನೊಂದು ವಚನವನ್ನು ನಾವು ಕೂಡ 6:36ರಲ್ಲಿ ನೋಡುತ್ತೇವೆ. ನಿಮ್ಮ ತಂದೆ ಕರುಣೆವುಳ್ಳವನಾಗಿರುವ ಪ್ರಕಾರವೇ ನೀವು ಕರುಣೆಯುಳ್ಳವರಾಗಿರಿ ಎಂದು ಯೇಸುವು

ಹೇಳುತ್ತಾನೆ (ಲೂಕ 6:36). ದೇವರು ನಮ್ಮ ತಂದೆಯಾಗಿದ್ದಾನೆ. ನಾವು ಆತನ ಮಕ್ಕಳಾಗಿರುವುದರಿಂದ ನಾವು ಆತನ ಮಕ್ಕಳಂತೆಯೇ ವರ್ತಿಸಬೇಕು ಇತರರಿಗಿಂತ ವ್ಯತ್ಯಾಸವುಳ್ಳವರಾಗಿರಬೇಕು. ನಾವು ಕತ್ತಲೆಯಲ್ಲಿ ಬೆಳಕು ಕೊಡುವವರಾಗಿರಲೇಬೆಕು. ನಾವು ಭೂಮಿಯ ಉಪ್ಪಿನಂತೆ ಇರಬೇಕು. ದೇವರು ಎಲ್ಲರಿಗೂ ತಂದೆಯಲ್ಲ. ಯಾರಾರು ಕ್ರಿಸ್ತನನ್ನು ಅಂಗೀಕರಿಸಿದರೋ ಅವರಿಗೆ ತಂದೆಯಾಗಿದ್ದಾನೆ (ಯೋಹಾನ 1:12). ಆತನು ಎಲ್ಲಾ ಮನುಷ್ಯರನ್ನು ಸೃಷ್ಟಿ ಮಾಡಿದವನಾಗಿದ್ದಾನೆ. ಆದರೆ ಯಾರಾರು ಯೇಸುವನ್ನು ಹಿಂಬಾಲಿಸುವರೋ ಅವರಿಗೆ ಮಾತ್ರ ತಂದೆಯಾಗಿದ್ದಾನೆ. ಮತ್ತು ನಾವು ಆತನ ಮಕ್ಕಳಾಗಿರುವುದರಿಂದ ತಂದಯೆ ನಿರ್ದೋಷವುಳ್ಳವನಾಗಿರುವಂತೆ ನಾವು ನಿರ್ದೋಷವುಳ್ಳವರಾಗಿರಬೇಕು. ಇದು ಹೇಗೆ ಸಾಧ್ಯ? ದೇವರು ಪ್ರೀತಿಸಿದ ಹಾಗೆಯೇ ನಾವು ಪ್ರೀತಿಸುವುದು ಮತ್ತು ದೇವರು ಕರುಣಿಸಿದಂತೆ ನಾವು ಕರುಣಿಸುವುದು, ಸಾಧ್ಯವೆ, ಹೇಗೆ ? ಇದು ಸಾಧ್ಯ. ಯಾಕೆಂದರೆ ದೇವರು ತನ್ನ ಪ್ರೀತಿಯನ್ನು ಪವಿತ್ರಾತ್ಮನ ಮೂಲಕವಾಗಿ ನಮ್ಮಲ್ಲಿ ಸುರಿಸಿದ್ದಾನೆ. (ರೋಮಾ. 5:5 ನೋಡಿರಿ). ಪವಿತ್ರಾತ್ಮನ ಮೂಲಕವಾಗಿ ಎಲ್ಲವೂ ಸಾಧ್ಯ. ಪೌಲನು ಹೇಳಿದ್ದಾನೆ, ನನ್ನನ್ನು ಬಲಪಡಿಸುವಾತನಲ್ಲಿದ್ದು ಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ (ಫಿಲಿಪ್ಪಿ 4:13). ತಿರುಗಿ ಪೌಲನು ಹೇಳಿದ್ದು, ನನ್ನ ದೇವರು ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ, ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು. (ಫಿಲಿಪ್ಪಿ 4:19).ದೇವರು ನಮ್ಮ ಎಲ್ಲಾ ಆತ್ಮೀಕ ಅವಶ್ಯತೆಗಳನ್ನು ಪೂರೈಸುವವನಾಗಿದ್ದಾನೆ.ನಮ್ಮ ಕೊರತೆಗಳನ್ನೆಲ್ಲಾ ನೀಗಿಸುವನು. (ಮತ್ತಾಯ 7:7 -11)

ನ್ಯಾಯತೀರ್ಪಿನ ದಿನದಲ್ಲಿ ದೇವರು ಪ್ರತಿಯೊಬ್ಬರನ್ನು ಕೇಳುವವನಾಗಿದ್ದಾನೆ. ಮೊದಲನೆಯದಾಗಿ, ನಾನು ನಿಮ್ಮನ್ನು ಪ್ರೀತಿಸಿದಂತೆ ಯಾಕೆ ನೀನು ನಿನ್ನ ವೈರಿಯನ್ನು ಪ್ರೀತಿಸಲಿಲ್ಲ? ನಾನು ನಿನ್ನನ್ನು ಕ್ಷಮಿಸಿದಂತೆ ಯಾಕೆ ನೀನು ನಿನ್ನ ಸಾಲಗಾರರನ್ನು ಕ್ಷಮಿಸಲಿಲ್ಲ? ನೀನು ನಿನ್ನ ಕೆಲಸಕ್ಕಿಂತ ಹೆಚ್ಚಾಗಿ ಯಾಕೆ ಕೇಲಸವನ್ನು ಮಾಡಲಿಲ್ಲ? ಲೋಕದ ಜನರು ಮಾಡಿದ್ದಕ್ಕಿಂತ ಹೆಚ್ಚು ಯಾಕೆ ಮಾಡಲಿಲ್ಲ? ನಾವು ಆ ನ್ಯಾತೀರ್ಪಿನ ದಿನದಲ್ಲಿ ಯಾವ ಉತ್ತರಕೊಡುತ್ತೇವೆ?

ಮಿತ್ರರೇ, ಆ ದಿನದಲ್ಲಿ ನಾಚಿಕೊಳ್ಳುವುದು ಬೇಡ. ಯೇಸುವಿನಂತೆ ನಾವು ಪವಿತ್ರಾತ್ಮನ ಮೂಲಕವಾಗಿ ನೋಡೋಣ. ನಾವು ದೇವರ ನೀತಿಗಾಗಿ ಹಸಿವೆಯುಳ್ಳವರಾಗಿರಬೇಕು. ಪರಲೋಕದ ತಂದೆ ನಿರ್ದೋಷವುಳ್ಳವನಾಗಿರುವಂತೆ ನೀವು ಕೂಡಾ ನಿರ್ದೋಷವುಳ್ಳವರಾಗಿರಬೇಕು. ನಾವು ಇಟ್ಟುಕೊಂಡ ಅತ್ಯುತ್ತಮ ಗುರಿಯಿಂದಲೇ ಹೊರತು ನಮ್ಮ ಜೀವಿತದಿಂದ, ಪರಲೋಕದ ತಂದೆಯಂತೆ ನಿರ್ದೋಷವುಳ್ಳವರಾಗಲು ಸಾಧ್ಯವೇ ಇಲ್ಲ.

---

## ಅಧ್ಯಾಯ - 6

### ಬಡವರಿಗೆ ಕೊಡುವುದು (6:1- 4)

1 ಕ್ರಿಸ್ತನು ಕಲಿಸಿದ್ದು, ಜಾಗ್ರತೆಯಿಂದ ಜೀವಿಸಿರಿ ಎಂದು. ಜನರು ನಿಮ್ಮ ಧರ್ಮಕಾರ್ಯಗಳನ್ನು ನೋಡಬೇಕೆಂದು ಅವರ ಮುಂದೆ ಮಾಡಬೇಡಿರಿ. ನಾವು ಏನೇ ಕಾರ್ಯ ಮಾಡಿದರೂ ಆ ಕಾರ್ಯದ ಉದ್ದೇಶ ಮತ್ತು ಕಾರಣವನ್ನು ದೇವರು ಯಾವಾಗಲೂ ನೋಡುವವನಾಗಿದ್ದಾನೆ. ನಾವು ಮಾಡುವ ಕಾರ್ಯಕ್ಕಿಂತಲೂ ಕಾರ್ಯದ ಉದ್ದೇಶವು ದೇವರ ದೃಷ್ಟಿಯಲ್ಲಿ ಪ್ರಾಮುಖ್ಯವಾಗಿದೆ. ನಾವು ನಮ್ಮ ಲಾಭಕ್ಕಾಗಿ ಒಳ್ಳೇ ಕೆಲಸಗಳನ್ನು ಮಾಡುವುದೇ ಆದರೆ ದೇವರು ಸಂತೋಷಪಡಿಸುವುದಿಲ್ಲ. ಇದು ಸ್ವಾರ್ಥವುಳ್ಳದ್ದಾಗಿದೆ. ದೇವರಿಗೆ ಮಹಿಮೆ ತರುವಂತಹ ಕೆಲಸ ಮಾಡಿದಾಗ ಮಾತ್ರ ದೇವರು ಸಂತೋಷವುಳ್ಳವನಾಗುತ್ತಾನೆ. ಮುಖ್ಯವಾದ ಪಾಠ ಏನೆಂದರೆ ದೇವರು ನಮ್ಮ ಹೃದಯದ ಉದ್ದೇಶಗಳನ್ನು ನೋಡುವವನಾಗಿದ್ದಾನೆಯೇ ಹೊರತು ನಮ್ಮ ಹೊರಗಿನ ಕಾರ್ಯಗಳನ್ನಲ್ಲ.. ದೇವರಿಗೆ, ಮೊದಲು ನಮ್ಮ ಹೃದಯದಲ್ಲಿರುವ ನೀತಿಯು ಬೇಕಾಗಿದೆ. ನೀತಿಯ ನಿಮಿತ್ತವಾಗಿ ನಮ್ಮಹೃದಯದಲ್ಲಿ ಉದಯಿಸುವಂತಹ ಒಳ್ಳೇ ಕಾರ್ಯಗಳು ದೇವರನ್ನು ಮೆಚ್ಚಿಸುತ್ತವೆ.

ಮತ್ತಾಯ 5:16 ಕ್ರಿಸ್ತನು ಹೀಗೆ ಹೇಳಿದ್ದನಂದರೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೇ ಕ್ರಿಯೆಗಳನ್ನು ನೋಡಿ, ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು. ಭೋದನೆಯಲ್ಲಿ ಕೊಡಲ್ಪಟ್ಟ ಈ ಭಾಗವು ನೋಡುವವರಿಗೆತಕ್ಷಣವೇ ತದ್ವಿರುದ್ಧವಾಗಿ ಕಾಣುತ್ತದೆ. ಆದರೆ ಮತ್ತಾಯ 5:16ರಲ್ಲಿ ಮುಖ್ಯವಾದ ಒಂದು ಅಂಶವಿರುತ್ತದೆ. ಜನರು ನಮ್ಮ ಒಳ್ಳೇ ಕಾರ್ಯಗಳನ್ನು ನೋಡಿ (ನಮ್ಮ) ಪರಲೋಕದ ತಂದೆಯನ್ನು ಸ್ತುತಿಸುವರು. ನಮ್ಮ ಒಳ್ಳೇ ಕಾರ್ಯಗಳ ಉದ್ದೇಶವು ದೇವರಿಗೆ ಸ್ತುತಿಯನ್ನು ಜಯವನ್ನು ಉಂಟುಮಾಡುವಂತಹುದೇ ಆಗಿರಬೇಕು. ಯಾವಾಗ ನಾವು ಒಂದು ಒಳ್ಳೇ ಕಾರ್ಯ ಮಾಡುತ್ತೇವೆಯೋ ಆಗ ಯಾವಾಗಲೂ ನಮ್ಮಷ್ಟಕ್ಕೆ ನಾವೇ ಪ್ರಶ್ನೆ ಮಾಡಿಕೊಳ್ಳಬೇಕು. ಯಾಕೆ ನಾನು ಈ ಕೆಲಸ ಮಾಡುತ್ತಾ ಇದ್ದೇನೆ? ಇದು ಸ್ವಾಭಿಮಾನಕ್ಕಾಗಿಯೇ? ಜನರು ಸ್ತುತಿಸುವುದಕ್ಕೆ, ನನ್ನಷ್ಟಕ್ಕೆ ನಾನೇ ಮಹಿಮೆ ಹೊಂದುವುದಕ್ಕಾಗಿಯೇ? ಹಾಗಿದ್ದರೆ ಜನರಿಂದ ಸ್ತುತಿ ಮತ್ತು ಪ್ರಶಸ್ತಿ ಹೊಂದುವುದಕ್ಕೆ. ಆಗಿರುವುದಾದರೆ ನಾವು ದೇವರಿಂದ ದೊರಕುವ ಶಾಶ್ವತ ಬಹುಮಾನವನ್ನು ಹೊಂದಲಾರೆವು.

ಯಹೂದ್ಯ ಹಿರಿಯರು ಇಂತಹ ಒಂದು ದೊಡ್ಡ ತಪ್ಪನ್ನು ಮಾಡಿದರು. ಅವರು ಆಲೋಚಿಸಿದ್ದೇನೆಂದರೆ, ನಮ್ಮ ನೀತಿಯ ಕಾರ್ಯಗಳ ಮೂಲಕವಾಗಿ ನಾವು ರಕ್ಷಣೆಯನ್ನು ಸಂಪಾದಿಸಿಕೊಳ್ಳುತ್ತೇವೆ. ಆದರೆ ಅವರ ಒಳಗಿನ ಅಂತರಂಗ ಜೀವಿತವು ಅವರ ಹೊರಗಿನ ಜೀವಿತಕ್ಕೆ ಸರಿ ಬರುತ್ತಿರಲಿಲ್ಲ. ಭಕ್ತಿಯ ವೇಷವಿದ್ದು ಅದರ ಬಲವನ್ನು ಬೇಡವೆನ್ನುವರು ಆಗಿದ್ದರು (2ನೇ ತಿಮಾಥೆ 3:5). ದೇವರು ಎಂದಿಗೂ ಮೂರ್ಖನಲ್ಲ. ನಮ್ಮ ಹೃದಯವನ್ನು ಬಲ್ಲವನಾಗಿದ್ದಾನೆ. ಲೋಕದ ಜನರು ಯವುದನ್ನು

ಒಳ್ಳೆಯದೆಂದು ಬಾವಿಸುತ್ತಾರೊ ಅದನ್ನು ದೇವರು ಹೊಲಸಾದದ್ದೆಂದು ಪರಿಗಣಿಸುತ್ತಾನೆ (ಲೂಕ 16:15). ಯಹೂದ್ಯ ಹಿರಿಯರು ಲೌಕಿಕರಾಗಿದ್ದರು. ಲೌಕಿಕ ಜನರು ಜನರಿಂದ ಸ್ತುತಿ ಹೊಂದುವುದನ್ನು ನೋಡುತ್ತಾರೆ. ಆತ್ಮೀಕ ಜನರು ದೇವರಿಂದ ಮಾತ್ರವೇ ಸ್ತುತಿಹೊಂದುವರು.

ಯಾವಾಗ ನಾವು ನಮ್ಮ ಸ್ವಂತ ಹೃದಯವನ್ನು ನೋಡುವಾಗ ಕೆಲವು ಸಮಯ ಯಾಕೆ ಈ ಸಂಗತಿಗಳನ್ನು ಮಾಡುತ್ತೇವೆ ಎಂದು. ನಿಶ್ಚಯಿಸುವುದು ಸುಲಭವಲ್ಲ. ಆಗಾಗ್ಗೆ ನಮ್ಮಷ್ಟಕ್ಕೆ ನಾವೇ ಮೂರ್ಖರಾಗುತ್ತೇವೆ. ದೇವರಿಗೋಸ್ಕರವಾಗಿ ಸ್ವಲ್ಪವನ್ನಾದರೂ ನಾವು ಮಾಡಿದ್ದೇವೆಯೋ ಎಂದು ಆಲೋಚಿಸುವ. ಆದರೆ ನಾವು ನಿಜವಾಗಿಯೂ ನಮಗೋಸ್ಕರವಾಗಿಯೇ ಮಾಡುವವರಾಗಿದ್ದೇವೆ. ಯೆರೆಮೀಯ ಪ್ರವಾದಿಯ ಮನುಷ್ಯರ ಹೃದಯದ ಬಗ್ಗೆ ಹೇಳಿದ್ದನು. ನೆನಪು ಮಾಡಿಕೊಳ್ಳಿರಿ. **ಹೃದಯವು ಎಲ್ಲಕ್ಕಿಂತಲೂ ವಂಚಕ ಗುಣವಾಗದ ರೋಗಕ್ಕೆ ಒಳಗಾಗಿದೆ** (ಯೆರೆಮೀಯ 17:9). ನಮ್ಮ ಹೃದಯದಲ್ಲಿರುವುದನ್ನು ತೋರಿಸಿಕೊಡಲು ನಾವು ಸತತವಾಗಿ ಪವಿತ್ರಾತ್ಮನಿಗೆ ಪ್ರಾರ್ಥಿಸಬೇಕು. ಪವಿತ್ರಾತ್ಮನು ನಮ್ಮ ನಿಜವಾದ ಉದ್ದೇಶವನ್ನು ತೋರಿಸುವನು.

**2** ನಾವು ಜನರಿಂದ ಸ್ತುತಿಯನ್ನು ನಿರಿಕ್ಷಿಸಿದರೆ ಈ ಬಹುಮಾನವನ್ನು ಮಾತ್ರ ಹೊಂದುತ್ತೇವೆ. ಆದರೆ ದೇವರಿಂದ ದೊರಕುವಂತ ಪರಲೋಕದ ಬಹುಮಾನವನ್ನು ಕಳೆದುಕೊಳ್ಳುತ್ತೇವೆ. ಜನರ ಹೋಗಳಿಕೆಗಳು ನಾಶವಾಗುವವು. ದೇವರಿಂದ ಬರುವಂತಹ ಬಹುಮಾನವು ಕೊನೆಯವರೆಗಿರುವುದು. **ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣ ನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು?** (ಮಾರ್ಕ 8:36).

**3-4** ಆದುದರಿಂದ ನಾವು ಒಳ್ಳೇ ಕಾರ್ಯಗಳನ್ನು ಮಾಡುವಾಗ ನಾವು ಇವುಗಳನ್ನು ಶಾಂತವಾಗಿಯು, ರಹಸ್ಯವಾಗಿಯೂ ಮಾಡಬೇಕು. ನಾವು ಬೇರೆಯವರಿಗೆ ಹೇಳಲೇಬಾರದು. ನಮ್ಮಷ್ಟಕ್ಕೆ ನಾವು ಸಹ ಇದನ್ನು ಹೇಳಿಕೊಳ್ಳಬಾರದು. **ನಮ್ಮ ಬಲಗೈ ಮಾಡುತ್ತಿರುವುದು ಎಡಗೈಗೂ ತಿಳಿಯದಿರಲಿ** (ವಚನ 3). ಇದು ಒಂದು ದೃಷ್ಟಾಂತವಾಗಿದೆ. ಬಲಗೈ ಹಣ ಕೊಡುವುದನ್ನೂ ಅಥವಾ ಕೊರತೆಯಲ್ಲಿದ್ದವರಿಗೆ ಸಹಾಯ ಮಾಡುವವರನ್ನು ಎಡಗೈ ನೋಡುತ್ತದೆ. ಎಡಗೈ ಹೇಳುತ್ತದೆ. ಓ ನಾನು ಎಂಥಾ ಒಳ್ಳೆ ಮನುಷ್ಯನು. ನೋಡು, ನಾನು ಎಷ್ಟು ಕೊಡುತ್ತಾ ಇದ್ದೇನೆ ಎಂದು ಹೇಳುತ್ತಾ ತನ್ನ ಸ್ವಾಭಿಮಾನವನ್ನು ತೋರಿಸುತ್ತದೆ. ಇದು ಕೂಡಾ ನಮ್ಮ ಸ್ವಾರ್ಥತೆಯ ಗುಣವನ್ನು ತೋರಿಸುತ್ತದೆ. ಎಡಗೈ ಹೇಳುತ್ತದೆ. ನೀನು ಇಷ್ಟೊಂದು ಕೊಡುವ ಅವಶ್ಯವಿಲ್ಲ ನೀತಿವಂತನಂತೆ ನಿನ್ನನ್ನು ನೀನು ತೋರಿಸಿಕೊಳ್ಳುವುದಕ್ಕಾಗಿ ನೀನು ಸ್ವಲ್ಪವನ್ನೇ ಕೊಡು. ಎಡಗೈ ಯಾವಾಗಲೂ ನಮ್ಮ ಬಲಗೈ (ನಮ್ಮಲ್ಲಿರುವ ಆತ್ಮೀಕ ಭಾಗ) ಕೊಡ ಬೇಕಾಗಿರುವುದನ್ನು ಲೆಕ್ಕ ಮಾಡುತ್ತದೆ. ಇದು ಹೀಗಾಗಬಾರದು. ನಾವು ಲೆಕ್ಕ ಮಾಡದೇ ದೇವರ ನಿಮಿತ್ತ ಉಚಿತವಾಗಿ ಕೊಡಬೇಕು. ಆಗ ದೇವರು ಎಣಿಸದೆ ನಮಗೆ ಕೊಟ್ಟಂತೆಯೇ ನಾವು ಕೂಡಾ ಎಣಿಸದೆಯೆ ಇತರರಿಗೆ ಕೊಡೋಣ ನಾವು ಹೃದಯಪೂರ್ವಕವಾಗಿ ಎಷ್ಟನ್ನು ನಾವು ಕೊಟ್ಟೆವು ಎಂದು ದೇವರು ಲೆಕ್ಕಹಾಕುವನು. ಮತ್ತು ಇದಕ್ಕನುಸಾರವಾಗಿ ನಮಗೆ ಬಹುಮಾನ ಕೊಡುವನು. (ಲೂಕ 14:13-14, ಕೊಲಸ್ಸೆ 3:23-24).

## ಪ್ರಾರ್ಥನೆ (6:5-15)

(ಲೂಕ 11:2-4)

**5** ಯಹೂದ್ಯ ಹಿರಿಯರಲ್ಲಿ ಕೆಲವರು ತಾವು ಪ್ರಾರ್ಥಿಸುವುದನ್ನು ನೋಡಲಿ ಮತ್ತು ನೀತಿವಂತರೆಂದು ತಮ್ಮನ್ನು ಜನರು ಕರೆಯಲಿ ಎಂದು ಸಾರ್ವಜನಿಕ ಸ್ಥಳಗಳಲ್ಲಿ ನಿಂತು ಪ್ರಾರ್ಥಿಸುತ್ತಿದ್ದರು. ಅವರು ವಾಸ್ತವವಾಗಿ ಜನರಿಂದ ಸ್ತುತಿ ಹೊಂದುತ್ತಿದ್ದರು. ಆದರೆ ಅವರು ದೇವರಿಂದ ಈ ಜೀವಿತ ಇಲ್ಲವೇ ಮುಂದಿನ ಜೀವಿತದಲ್ಲಾಗಲೀ ಏನನ್ನೂ ಹೊಂದದವರಾಗಿದ್ದರು.

**6** ಕ್ರಿಸ್ತನು ಕಲಿಸಿದ್ದು, **ನೀನು ಪ್ರಾರ್ಥನೆ ಮಾಡಬೇಕಾದರೆ ಕೋಣೆಯೊಳಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡು ದೇವರಿಗೆ ಪ್ರಾರ್ಥನೆ ಮಾಡು.** ಇದರ ಅರ್ಥ ನಮ್ಮಷ್ಟಕ್ಕೆ ನಾವಲ್ಲದೇಯೆ ಪೂರ್ಣ ಮನಸ್ಸಿನಿಂದ ಪ್ರಾರ್ಥಿಸಬೇಕು. ನಾವು ದೇವರೊಂದಿಗೆ ಮಾತಾಡುವಾಗ ಎಲ್ಲಾ ಲೌಕಿಕ ಆಲೋಚನೆಗಳನ್ನು ಬಿಟ್ಟುಬಿಡಬೇಕು . ಅಂದರೆ ನಾವು ಏಕಾಂತವಾಗಿ ಮತ್ತು ಏಕಾಂಗಿಯಾಗಿ ಮಾತ್ರ ಪ್ರಾರ್ಥಿಸಬೇಕು ಎಂದರ್ಥವಲ್ಲ.ನಾವು ಇತರ ವಿಶ್ವಾಸಿಗಳೊಂದಿಗೆ ಕೂಡಿಕೊಂಡು ಪ್ರಾರ್ಥಿಸುವುದು ಅತ್ಯವಶ್ಯವಾದದ್ದು ಮತ್ತು ಉತ್ತಮವಾದದ್ದು. ನಾವು ಒಬ್ಬರಾಗಲಿ,ಅಥವಾ ಇಬ್ಬರಾಗಲಿ ಕೂಡಿಕೊಂಡು ಪ್ರಾರ್ಥಿಸುವಾಗ ನಾವು ದೇವರನ್ನೇ ನೋಡಬೇಕೇ ಹೊರತು ಜನರು ನೋಡಲಿ ಎಂದಲ್ಲ (ವಚನ 5).

**7** ಜನರು ಪ್ರಾರ್ಥಿಸುವಾಗ ಮಾಡುವ ಎರಡನೆಯ ತಪ್ಪು ಏನೆಂದರೆ, ನಾವು ವಿಶೇಷವಾದ ರೀತಿಯಲ್ಲಿ, ವಿಶೇಷವಾದ ನುಡಿಗಳನ್ನು ಉಪಯೋಗಿಸುವುದರಿಂದ, ವಿಶೇಷವಾದ ಸ್ಥಳಗಳಲ್ಲಿ, ಉದ್ದವಾದ ಪ್ರಾರ್ಥನೆ ಮಾಡುವುದರಿಂದ, ದೇವರು ನಮ್ಮ ಪ್ರಾರ್ಥನೆಯನ್ನು ಅಂಗೀಕರಿಸುವನು ಮತ್ತು ದೇವರು ಇದಕ್ಕೆ ಉತ್ತರ ಕೊಡುವನು ಎಂಬಂತ ಭಾವನೆ. ಆದರೆ ಇವುಗಳ ಅವಶ್ಯಕತೆಯಿಲ್ಲ. ದೇವರು ನಮ್ಮ ನಂಬಿಕೆಗನುಸಾರವಾಗಿ ಪ್ರಾರ್ಥನೆಗೆ ಉತ್ತರ ಕೊಡುತ್ತಾನೆಯೇ ಹೊರತು ನಮ್ಮ ವಿಶೇಷವಾದ ನುಡಿಗಳಿಂದಲ್ಲ ಅಥವಾ ಹೇಗೆ [31] ಪ್ರಾರ್ಥನೆ ಮಾಡಿದೆವು ಎಂಬುದರಿಂದಲ್ಲ.

**8** ದೇವರು ಪ್ರೀತಿ ಸ್ವರೂಪನಾದ ಪರಲೋಕದ ತಂದೆ ಎಂಬುದನ್ನು ನಾವು ನೆನಪು ಮಾಡಿಕೊಳ್ಳಬೇಕು. ನಾವು ಕೇಳುವುದಕ್ಕೆ ಮುಂಚಿತವಾಗಿಯೆ ನಮ್ಮ ಎಲ್ಲಾ ಅವಶ್ಯಕತೆಗಳನ್ನು ಬಲ್ಲವನಾಗಿದ್ದಾನೆ.ಆದರೆ ನಾವು ಕೇಳಿಕೋಳ್ಳುವುದನ್ನು ಆತನು ಬಯಸುತ್ತಾನೆ. ಮಕ್ಕಳು ತಮ್ಮ ತಂದೆತಾಯಿಗಳನ್ನು ಅವಲಂಬಿಸಿದಂತೆ ನಾವು ಆತನನ್ನೇ ಅವಲಂಬಿಸಿರುವುದನ್ನು ಆತನು ಬಯಸುತ್ತಾನೆ. ದೇವರು ನಮಗೆ ಅವಶ್ಯವಾಗಿ ಬೇಕಾದದ್ದನ್ನು ಕೊಡಲು ಆತುರವುಳ್ಳವನಾಗಿದ್ದಾನೆ (ಮತ್ತಾಯ 7:11 ಮತ್ತು ವ್ಯಾಖ್ಯಾನವನ್ನು ನೋಡಿರಿ). ಆತನು ನಮಗೆ ಕೊಡಲು ಶಕ್ತನಾಗಿದ್ದಾನೆ. ನಮ್ಮಲ್ಲಿ **ಕಾರ್ಯ ಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವುದಕ್ಕಿಂತಲೂ**

ಯೋಚಿಸುವುದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಶಕ್ತನಾಗಿದ್ದಾನೆ (ಎಫೆಸ 3:20). ಕೋಣೆಯೊಳಗೆ ಹೋಗಿ ನಾವು ಪ್ರಾರ್ಥಿಸುವಾಗ ಇಂತಃ ದೇವರನ್ನು ಸಂದಿಸುತ್ತೇವೆ. ಆತನು ನಮಗೆ ಅತ್ಯಧಿಕವಾದ ಆತ್ಮೀಕ ಆಶೀರ್ವಾದಗಳನ್ನು ಇಚ್ಚಿಸುತ್ತಾನೆ. ಇದಕ್ಕಾಗಿ ನಾವು ಮಾಡುವಂತದ್ದೇನಂದರೆ, ನಂಬಿಕೆಯಿಂದ ಕೇಳುವುದೆ ಆಗಿದೆ.

9 ಶಿಷ್ಯರು ಯೇಸುವಿಗೆ ನಮಗೆ ಪ್ರಾರ್ಥನೆ ಮಾಡುವುದನ್ನು ಕಲಿಸು ಎಂದು ಕೇಳಿದರು. (ಲೂಕ 11:1). ಆಗ ಆತನು ಮಾದರಿಯಾದಂತ ಕರ್ತನ ಪ್ರಾರ್ಥನೆಯನ್ನು ಹೇಳಿ ಕೊಟ್ಟನು

**ಪರಲೋಕದಲ್ಲಿರುವ ನಮ್ಮ ತಂದೆಯೇ.** ನಾವು ಪ್ರಾರ್ಥನೆ ಮಾಡುವಾಗ ನಮ್ಮ ತಂದೆಗೆ ಹೇಸರಿಸಿ ಆತನಿಗೆ ಮಾಡಬೇಕು. ಆದರೆ ಯಾವ ಮೂರ್ತಿಯ ಹೆಸರನ್ನಾಗಲೀ, ಆತ್ಮವನ್ನಾಗಲೀ ದೇವದೂತರನ್ನಾಗಲಿ ಮತ್ತು ಭಕ್ತರ ಹೆಸರಿನಿಂದಾಗಲಿ ಪ್ರಾರಂಭಿಸಬಾರದು. ದೇವರು ವಿಶ್ವಾಸಿಗಳಾದ ತನ್ನ ಎಲ್ಲಾ ಮಕ್ಕಳಿಗೆ ಒಳ್ಳೇಯದಾಗಿರುಂತ ಎಲ್ಲಾ ಶ್ರೇಷ್ಠವಾದವುಗಳನ್ನು ಕೊಡುವಂತ ಪ್ರೀತಿಯುಳ್ಳ ತಂದೆಯಾಗಿದ್ದಾನೆ. ಇದೇ ಸಮಯದಲ್ಲಿ ಸರ್ವಶಕ್ತನಾಗಿದ್ದು ಸೃಷ್ಟಿಯನ್ನು ಉಂಟುಮಾಡಿ ಪರಲೋಕದಲ್ಲಿರುವ ದೇವರಾಗಿದ್ದಾನೆ..ಈತನು ನಮ್ಮನ್ನು ಸಂಪೂರ್ಣನಾಗಿ ಬಲ್ಲವನಾಗಿದ್ದಾನೆ (ಇಬ್ರಿಯಾ 4:13). ಮತ್ತು ನಮ್ಮ ನ್ಯಾಯಾಧಿಪತಿಯಾಗಿರುವನು. ಮನುಷ್ಯರನ್ನು ಅತ್ಯಧಿಕವಾಗಿ ಆಶೀರ್ವದಿಸಲು ಆತನಲ್ಲಿ ಶಕ್ತಿ ಇದೆ. (ಎಫೆಸ 1:3). ಅನಂತಕಾಲದವರೆಗೆ ಮನುಷ್ಯರನ್ನು ನರಕಕ್ಕೆ ಕಳಿಸಲು ಶಕ್ತನಾಗಿದ್ದಾನೆ.

ಆದುದರಿಂದ ಇಂತಹ ದೇವರ ಬಳಿಗೆ ಬರುವಾಗ **ಭಯದಿಂದಲೂ, ಭಕ್ತಿಯಿಂದಲೂ** ಬರಬೇಕು. (ಇಬ್ರಿಯಾ 12:28-29). ಆತನ ಆಶೀರ್ವಾದಕ್ಕಾಗಿ ನಾವು ಕೃತಜ್ಞತಾ ಕಾಣಿಕೆಯೊಂದಿಗೆ ಬರುವುದು ಅವಶ್ಯವಾಗಿದೆ. ದೇವರ ಘನತೆಗಾಗಿ ಮತ್ತು ಆತನ ಮಹಿಮೆಗಾಗಿ ನಮ್ಮ ಪ್ರಾರ್ಥನೆಯನ್ನು ಸ್ತುತಿಯಿಂದ ಆರಂಭಿಸುವುದು ಬಹು ಅವಶ್ಯವಾಗಿದೆ. (ಕೀರ್ತನೆ 34:1-3). ನಿನ್ನ ನಾಮವು ಪರಿಶುದ್ಧವೆಂದು ತಿಳಿ. ಈ ವಚನದ ಅರ್ಥವು **"ದೇವರ ಸ್ತುತಿ ಹೊಂದತಕ್ಕವನು"**. ಅದರ ಮೂಲಕ ದೇವರಿಗೆ ಮಹಿಮೆ ಉಂಟಾಗುವುದು. ನಾವು ಆಗಾಗ ಪ್ರಾರ್ಥಿಸುವಾಗ ನಮ್ಮ ಕೊರತೆಗಳಿಗಾಗಿ ಆಲೋಚಿಸುತ್ತೇವೆ. ಆದರೆ ದೇವರ ಘನಕ್ಕಾಗಿ ಚಿಂತಿಸುವುದಿಲ್ಲ.

10 **ನಿನ್ನ ರಾಜ್ಯವು ಬರಲಿ.** ಯಾವಾಗ ಕ್ರಿಸ್ತನು ಬಂದನೋ ಆಗ ದೇವರ ರಾಜ್ಯ ಈ ಲೋಕಕ್ಕೆ ಬಂತು. ಕ್ರಿಸ್ತನನ್ನು ನಂಬುವ ಪ್ರತಿಯೊಬ್ಬರಲ್ಲಿಯೂ ದೇವರ ರಾಜ್ಯವಿದೆ (ಲೂಕ 17:20-21).ಇದರಿಂದಾಗಿಯೆ **ದೇವರ ರಾಜ್ಯವು ಸಮೀಪವಾಗಿದೆ** (ಮಾರ್ಕ 1:14-15 ವ್ಯಾಖ್ಯಾನ ನೋಡಿರಿ) ಎಂದು ಕ್ರಿಸ್ತನು ಬೋಧಿಸಿದ್ದು.

ಆದರೆ ಇನ್ನೊಂದು ರೀತಿಯಿಂದ ನೋಡುವುದಾದರೆ, ದೇವರ ರಾಜ್ಯವು ಇನ್ನೂ ಸಂಪೂರ್ಣವಾಗಿ ಬಂದಿಲ್ಲ. ಸೈತಾನನು ಈಗಲೂ ಈ ಲೋಕವನ್ನು ಆಳುತ್ತಿದ್ದಾನೆ. ಇತನು ಲೋಕದ ಆದಿಪತಿಯಾಗಿದ್ದಾನೆ (ಯೋಹಾನ 12:31, 16:11). ಬಹಳ ಜನರು ಸೈತಾನನ ರಾಜ್ಯದ ಕತ್ತಲೆಯಲ್ಲಿ ಇಗಲೂ ಖೈದಿಗಳಾಗಿದ್ದಾರೆ. ಆದುದರಿಂದ ದೇವರು ಜನರ ಜೀವಿತದಲ್ಲಿ ಬರುವಂತೆಯು, ಹೆಚ್ಚೆಚ್ಚಾಗಿ ಜನರು ಸೈತಾನನ ರಾಜ್ಯದಿಂದ ಬಿಡುಗಡೆ ಹೊಂದಿ, ದೇವರ ರಾಜ್ಯಕ್ಕೆ ಬಾಧ್ಯಸ್ಥರಾಗುವುದಕ್ಕಾಗಿ ನಾವು ಪ್ರಾರ್ಥಸುವುದು ಬಹಳ ಅವಶ್ಯ

ಮಾತ್ರವಲ್ಲ ಕ್ರಿಸ್ತನು ತಿರುಗಿ ಬಂದು, ಸೈತಾನನನ್ನು ನಾಶ ಮಾಡಿ, ದೇವರ ರಾಜ್ಯವನ್ನು ಸಂಪೂರ್ಣವಾಗಿ ಈ ಲೋಕದಲ್ಲಿ ಸ್ಥಾಪನೆಯಾಗುವ ಹಾಗೆ ಆಗಲೆಂದು ಪ್ರಾರ್ಥಿಸಬೇಕು.**ಕರ್ತನಾದ ಯೇಸುವೇ ಬಾ.** (ಪ್ರಕಟಣೆ 22:20). ಯಾಕಂದರೆ ಕ್ರಿಸ್ತನು ತಿರುಗಿ ಬಂದ ನಂತರವೇ ದೇವರ ರಾಜ್ಯವು ಪರಲೋಕದಲ್ಲಿಯೂ ಮತ್ತು ಈ ಲೋಕದಲ್ಲಿಯೂ ಸಂಪೂರ್ಣವಾಗಿ ಸ್ಥಾಪಿತವಾಗುವುದು.

**.....ನಿನ್ನ ಚಿತ್ತವು ನೆರವೇರಲಿ.** ಎಲ್ಲಲ್ಲಿ ದೇವರ ರಾಜ್ಯವು ಇದಯೋ ಅಲ್ಲಿ ಆತನ ಚಿತ್ತವು ಸಂಪೂರ್ಣವಾಗಿ ನೆರವೇರುವುದು. ಆತನ ಚಿತ್ತವು ಪ್ರತಿ ದಿನವು ನಮ್ಮ ಜೀವಿತದಲ್ಲಿ ಸಂಪೂರ್ಣವಾಗಿ ನೇರವೆರಲ್ಪಡುವಂತೆ ದೃಢಮನಸ್ಸಿನಿಂದ ಪ್ರಾರ್ಥಿಸುವುದು ಬಹು ಅವಶ್ಯವಾಗಿದೆ.

11 ದೇವರನ್ನು ಸ್ತುತಿಸಿದ ನಂತರ, ನಮ್ಮ ವಿಜ್ಞಾಪನೆಗಳನ್ನು ದೇವರ ಮುಂದೆ ತರಬೇಕು 11ನೇ ವಚನದಲ್ಲಿ ಮತ್ತು 12ನೇ ವಚನದಲ್ಲಿ ನಮ್ಮ ಎಲ್ಲಾ ಕೊರತೆಗಳು ನಮೂದಿಸಲ್ಪಟ್ಟಿವೆ. ನಮ್ಮ ದೇಹ, ಆಹಾರದ ವಿಷಯವಾಗಿ (ವಚನ 11) ನಮ್ಮ ಆತ್ಮ, ಕ್ಷಮಾಪಣೆಯ ವಿಷಯವಾಗಿ (ವಚನ 12) ಮತ್ತು ನಮ್ಮ ಮನಸ್ಸುಗಳನ್ನು ಮಾತ್ರವಲ್ಲ ಕೇಡುಗಳಿಂದ ನಮ್ಮನ್ನು ತಪ್ಪಿಸು ಎಂಬಂತ ಇಷಯಗಳನ್ನು ವಚನ 13ರಲ್ಲಿ ನೋಡುತ್ತೇವೆ.

**ನಮ್ಮ ದಿನದ ಆಹಾರವನ್ನು ಈ ಹೊತ್ತು ನಮಗೆ ದಯಪಾಲಿಸು.** ಇದರ ಅರ್ಥ ನಮಗೆ ದಿನದಿಂದ ದಿನಕ್ಕೆ ಅವಶ್ಯವಾದ ಎಲ್ಲಾ ಸಂಗತಿಗಳು. ಅಂದರೆ ನಮ್ಮ ದೇಹಗಳಿಗೆ, ಬೇಕಾದಂತ ಆಹಾರ, ಬಟ್ಟೆ, ಮನೆ ಮತ್ತು ಆರೋಗ್ಯಕ್ಕಾಗಿ (ಇವು ಕೂಡಾ ಅತೀ ಭೋಗಕ್ಕೂ ದುಂದುತನಕ್ಕೂ ಕಾರಣವಾಗಿರಬಾರದು). ಪ್ರತಿ ದಿವಸ ನಾವು ದೇವರನ್ನು ಅವಲಂಬಿಸಿರಬೇಕು. ಆತನ ಶಕ್ತಿಯನ್ನು ಆಧಾರ ಮಾಡಿಕೊಳ್ಳದೇ ಒಂದು ದಿನವೂ ಜೀವಿಸಬಾರದು. ಆತನು ಮಳೆಯನ್ನು ನಿಲ್ಲಿಸಿದಾಗ ಅಥವಾ ಆತನು ಆಣೆಕಲ್ಲಿನ ಮಳೆ ಮತ್ತು ಗಾಳಿಗಳಿಂದ ನಮ್ಮ ಬೆಳೆಗಳೆಲ್ಲಾ ನಾಶಮಾಡುವುದಾದರೆ ಇಲ್ಲಿ ನಮಗೆ ಆಹಾರ ದೊರಕುವುದಿಲ್ಲ. ನಮ್ಮ ಜೀವಿತವು ಆತನ ಕೈಯಲ್ಲಿದೆ. ಆದಾಗ್ಯೂ ಅನಾಸ್ತಿಕರು ಒಂದು ದಿನವಾದರೂ ದೇವರಿಲ್ಲದೆ ಜೀವಿಸು ವು ದಿಲ್ಲ.

ದೇವರು ನಮ್ಮ ಅವಶ್ಯಕತೆಗಳನ್ನು ಲಕ್ಷಿಸುವವನಾಗಿದ್ದಾನೆ. ಭೂಮಿಯನ್ನು ಪರಲೋಕವನ್ನು (ಆಕಾಶವನ್ನು) ಸೃಷ್ಟಿಸಿದ ದೊಡ್ಡ ದೇವರಾದ ಆತನು ನಮ್ಮ ದಿನನಿತ್ಯದ ಆಹಾರಕ್ಕಾಗಿಯೂ ಲಕ್ಷಿಸುವವನಾಗಿದ್ದಾನೆ. ಆತನ ದೃಷ್ಟಿಯಲ್ಲಿ ದೇಶಗಳು ಧೂಳಿನಂತಿವೆ (ಯೆಶಾಯ 40:15). ಆದಾಗ್ಯೂ ಹಸಿದಿರುವಾಗ ನಮ್ಮೆಲ್ಲರನ್ನು ಬಲ್ಲವನಾಗಿದ್ದಾನೆ. ಗುಬ್ಬಿಗಳು ಕೆಳಗೆ ಬೀಳದಂತೆ ಕಾಪಾಡುವವನಾಗಿದ್ದಾನೆ. (ಮತ್ತಾಯ 10:29-30 ನೋಡಿರಿ). ನಮ್ಮ ಎಲ್ಲಾ ಚಿಂತಾಭಾರವನ್ನು ಆತನ ಮೇಲೆ ಹಾಕೋಣ. ಆತನು ನಮಗೋಸ್ಕರ ಚಿಂತಿಸುವವನಾಗಿದ್ದಾನೆ (1ನೇ ಪೇತ್ರ 5:7).

**12** **ನಮ್ಮ ತಪ್ಪುಗಳನ್ನು ಕ್ಷಮಿಸು.** ಲೂಕ 11:4ರ ಪ್ರಕಾರವಾಗಿ ನಮ್ಮ ಪಾಪಗಳನ್ನು ಕ್ಷಮಿಸು. ಎಂದು ಯೇಸುವು ಕೂಡಾ ಹೇಳಿದ್ದಾನೆ. ಮೂಲ ಶಬ್ದದ ವಾದ "ತಪ್ಪು" ಎಂಬುದನ್ನು ಮತ್ತಾಯನು ಇಲ್ಲಿ ಬರೆದಿದ್ದಾನೆ. ತಪ್ಪು ಎಂಬುದು ದೇವರಿಗೆ ವಿರೋದ್ದವಾಗಿ ಪಾಪದಲ್ಲಿರುವುದು ಎಂದು ಕ್ರಿಸ್ತನು ಬೋಧಿಸಿದ್ದಾನೆ. ಗ್ರೀಕ್ ಭಾಷೆಯ ಮೂಲಗ್ರಂಥದ ಪ್ರಕಾರವಾಗಿ ಲೂಕ 11:4ರಲ್ಲಿ ಯೇಸು ಹೇಳಿದ್ದು ಪರಲೋಕದ ದೇವರು (ತಂದೆಯು) ನಮ್ಮ ತಪ್ಪು ಕ್ಷಮಿಸಿದಂತೆ ಅಥವಾ ಸಾಲಗಳನ್ನು ಮನ್ನಾ ಮಾಡಿದಂತೆ **ನಾವು ಇತರರ ತಪ್ಪುಗಳನ್ನು ಕ್ಷಮಿಸಬೇಕು ಅಥವಾ ಸಾಲಗಳನ್ನು ಮನ್ನಾ ಮಾಡಬೇಕು** . ಯಾರು ನಮ್ಮ ಸಾಲಗಳನ್ನು ತೀರಿಸುವುದಿಲ್ಲವೋ ಅವರು ನಮಗೆ ವಿರುದ್ಧವಾಗಿ ಪಾಪ ಮಾಡುವವರಾಗಿದ್ದಾರೆ. ಆದುದರಿಂದ ನಮ್ಮ ಕರ್ತನ ಪ್ರಾರ್ಥನೆಯಲ್ಲಿ ಸಾಲ ಮತ್ತು ಪಾಪ ಎಂಬುದು ಒಂದೇ ಅರ್ಥವುಳ್ಳದ್ದಾಗಿದೆ.

**ನಮಗೆ ತಪ್ಪು ಮಾಡಿದವರನ್ನು ಕ್ಷಮಿಸಿದಂತೆ.** ನಮ್ಮ ತಪ್ಪುಗಳನ್ನು ಕ್ಷಮಿಸು.ಯಾವ ರೀತಿಯಾಗಿ ನಾವು ನಮ್ಮ ಸಾಲಗಾರರನ್ನು ಕ್ಷಮಿಸುತ್ತವೆಯೋ ಅದರಂತೇಯೆ ದೇವರು ನಮ್ಮನ್ನು ಕ್ಷಮಿಸುತ್ತಾನೆ. ನಾವು ಯಾವಾಗ ದೇವರನ್ನು ನಂಬಿ, ರಕ್ಷಣೆಯನ್ನು ಹೊಂದುವಾಗ ದೇವರು ನಮ್ಮನ್ನು ಕ್ಷಮಿಸುತ್ತಾನೆ .ಕ್ರಿಸ್ತನು ಇದರ ಸಲುವಾಗಿ ಮಾತಾಡುವುದು ಇದು ಮೊದಲನೆಯ ಸಲವಲ್ಲ. ಇಲ್ಲಿ ಕ್ರಿಸ್ತನು ಕ್ರೈಸ್ತ ರಾದ ನಮ್ಮ ದಿನನಿತ್ಯದ ಜೀವಿತದ ಬಗ್ಗೆ ಹೇಳುತ್ತಾನೆ. ನಾವು ದೇವರನ್ನು ನಂಬುವುದಕ್ಕೆ ಮುಂಚೆ ಮಾಡಿದ ಎಲ್ಲಾ ಅಪರಾಧಗಳನ್ನು ಧಾರಾಳವಾಗಿ ಕ್ಷಮಿಸುತ್ತಾನೆ. ಯಾಕೆಂದರೆ ದೇವರು ಕೃಪೆ ಮತ್ತು ಕರುಣೆಯುಳ್ಳವನಾಗದ್ದಾನೆ. ಆತನು ನಮ್ಮನ್ನು ಕ್ಷಮಿಸುತ್ತಾನೆ. ಆದರೆ ನಾವು ಕ್ರೈಸ್ತರಾದ ಮೇಲೆ ಮಾಡುವಂತಹ ಪಾಪಕ್ಕಾಗಿ ದೇವರ ಕ್ಷಮಾಪಣೆ ಅವಶ್ಯವಾಗಿದೆ (1ನೇ ಯೋಹಾನ 1:9). ನಾವು ಇತರರನ್ನು ಕ್ಷಮಿಸಿದಂತೆಯೆ ಆತನು ನಮ್ಮನ್ನು ಕ್ಷಮಿಸುವನು. ನಾವು ಇತರರನ್ನು ಕ್ಷಮಿಸುವುದನ್ನು ನಿಲ್ಲಿಸಿದರೆ ದೇವರು ನಮಗೆ ಕ್ಷಮಿಸುವುದನ್ನು ನಿಲ್ಲಿಸುತ್ತಾನೆ. (ಮತ್ತಾಯ 6:14-15; 18:23-35 ನೋಡಿರಿ). ನಾವು

**13** **ಶೋಧನೆಗೆ ಒಳಗಾಗದಂತೆ ನಮ್ಮನ್ನು ನಡೆಸು.** ಈ ವಚನದಲ್ಲಿ ನಾವು ಶೋಧನೆಯಲ್ಲಿ ಬಿಳದಂತೆ ಎಂಬುದರ ಅರ್ಥ ಸೈತಾನನಿಂದ ಸೋಲು ಹೊಂದುವುದು. ಪಾಪದಲ್ಲಿ ಬೀಳುವುದು ಅಂದರೆ ದೇವರಿಂದ ಬೇರೆಯಾದಂತೆ "ಶೋಧನೆ" ಎಂಬ ಶಬ್ದವು ಈ ವಚನದಲ್ಲಿ ಒಂದು ರೀತಿಯ ಪರೀಕ್ಷೆಯಲ್ಲ. ದೇವರು ಕ್ರೈಸ್ತರಿಗೆ ಇದರ ಮೂಲಕ ನಂಬಿಕೆಯನ್ನು ಪರೀಕ್ಷಿಸುವವನಾಗಿದ್ದಾನೆ ಎಂದಾಗುವುದಿಲ್ಲ. (1ನೇ ಪೇತ್ರ 1:6-7). ಈ ತರವಾದ ಪರೀಕ್ಷೆಗಳು ನಮ್ಮನ್ನು ಬಲಪಡಿಸಿ, ನಮ್ಮ ನಂಬಿಕೆಗಳು ನಮ್ಮನ್ನು ಪ್ರತಿಫಲಕ್ಕೆ ಲಾಭದಾಯಕವನ್ನಾಗಿ ಮಾಡುತ್ತವೆ. ಯಾವಾಗ ಶೋಧನೆಗಳು ನಮ್ಮ ಮೇಲೆ ಬರುತ್ತಿವೆಯೋ ಆಗ ನಾವು ಸಂತೋಷವುಳ್ಳವರಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಬೇಕು. (ಯಾಕೋಬ 1:2).

ಹೇಗೂ ಈ ವಚನದಲ್ಲಿ ಶೋಧನೆ ಅನ್ನುವ ಶಬ್ದವು ಬೇರೆ ಅರ್ಥವುಳ್ಳದ್ದಾಗಿದೆ. ಕ್ರಿಸ್ತನು ಇಲ್ಲಿ ನಮಗೆ ಕಲಿಸುವುದೇನೆಂದರೆ ಕೊನೆಯ ಶೋಧನೆಯವರೆಗೂ ನಾವು ಶೋಧನೆಯಲ್ಲಿ ಬೀಳದಂತೆ ಕಾಪಾಡು ಎಂದು ಪ್ರಾರ್ಥಿಸಬೇಕು. ಈ ಶೋಧನೆಯು ಅಂದರೆ ದೇವರಿಗೆ ವಿಮುಖನಾಗುವುದು ಎಂದರ್ಥ.ಅದುದರಿಂದ **ಕೇಡಿನಿಂದ ನಮ್ಮನ್ನು ಬಿಡುಗಡೆ ಮಾಡು** (ತಪ್ಪಿಸು) ಎಂದು ಸತತವಾಗಿ ಪ್ರಾರ್ಥನೆ ಮಾಡಬೇಕು. **ಸೈತಾನನು** ಗರ್ಜಿಸುವ ಸಿಂಹದೋಪಾದಿಯಲ್ಲಿ ನಮ್ಮನ್ನು ಹರಕೊಂಡು ತಿನ್ನುವಂತೆ ನೋಡುತ್ತಾನೆ (1ನೇ ಪೇತ್ರ 5:8). ಕ್ರಿಸ್ತನು ತಿರುಗಿ ಬರುವುದಕ್ಕಿಂತ ಮುಂಚಿನ ದಿನಗಳಲ್ಲಿ ಕ್ರೈಸ್ತರು ಕಠಿಣವಾದ ಶೋಧನೆಗಳನ್ನು ಅನುಭವಿಸುವರು. ಕೆಲವರು ಬಿದ್ದು ಹೋಗುವರು. ಆಗ ಕ್ರೈಸ್ತರು ಆ ದಿನಗಳಲ್ಲಿಹಿಂದಿನವುಗಳಿಗಂತ ಹೆಚ್ಚಾಗಿ ಪ್ರಾರ್ಥಿಸಬೇಕು.

ಕರ್ತನ ಪ್ರಾರ್ಥನೆಯು ಪ್ರಾರಂಬದಂತೆಯೆ ದೇವರನ್ನು ಸ್ತುತಿಸುವುದರೊಂದಿಗೆ ಮುಕ್ತಾಯವಾಗುತ್ತದೆ. ಎಷ್ಟೋ ಗ್ರೀಕ್ ಕೈಬರಹದ ಪುಸ್ತಕಗಳಲ್ಲಿ "ರಾಜ್ಯವು ಬಲವು ಮಹಿಮೆಯು" ಯಾವಾಗಲೂ ನಿಮ್ಮವೇ, ಆಮೇನ್ ಎಂದು ಬರೆಯಲ್ಪಟ್ಟಿದೆ. ಆಮೇನ್ ಎಂಬ ಶಬ್ದವು "ಹಾಗೆಯೇ ಆಗಲಿ" ಎಂಬುದಾಗಿ ಆಗುತ್ತದೆ.' ದೇವರು ನಮ್ಮ ನಂಬಿಕೆಯನ್ನು ನೋಡಿ ಅಂಗೀಕರಿಸಿ, ನಮ್ಮ ಪ್ರಾರ್ಥನೆಗೆ ಉತ್ತರ ಕೊಡುವನು. ಎಂದು ಇದು ಸೂಚಿಸಿದಂತಾಗುತ್ತದೆ

**14-15** ವಚನ 12 ಮತ್ತು ವ್ಯಾಖ್ಯಾನ ನೋಡಿರಿ.

## ಉಪವಾಸ (6:16-18)

**16-18** ಯಹೂದ್ಯರು ನೀತಿಶಾಸ್ತ್ರದ ಕ್ರಮವನ್ನು ನೆರವೇರಿಸುತ್ತಿದ್ದರು. ಜನರ ಸ್ತುತಿಗಾಗಿ ಅವರು ಪ್ರಾರ್ಥಿಸುತ್ತಿದ್ದರು. ಈ ಕಾರಣಕ್ಕಾಗಿ ಅವರು ಉಪವಾಸ ಮಾಡುತ್ತಿದ್ದರು. ಇತರರಿಗೆ ತಾವು ಉಪವಾಸ ಮಾಡುತ್ತಿದ್ದೇವೆಂದು ತೋರಿಸಿಕೊಳ್ಳಲು ಮುಖಕ್ಕೆ ಬೂದಿಯನ್ನು ಹಚ್ಚಿಕೊಳ್ಳುತ್ತಿದ್ದರು. ಅವರ ಉದ್ದೇಶವು ತಮ್ಮಷ್ಟಕ್ಕೆ ತಾವೇ ಸನ್ಮಾನ ಹೊಂದುವುದು. ದೇವರಿಗಲ್ಲಾ. ಜನರು ತಮ್ಮ ಲಾಭಕ್ಕಾಗಿ ಸ್ತುತಿಸುತ್ತಿದ್ದರೆ ಹೊರತು, ದೇವರಿಂದ ದೊರಕುವ ಬಹುಮಾನಕ್ಕಾಗಿ ಮಾಡುತ್ತಿರಲಿಲ್ಲ.

**ನೀನು ಉಪವಾಸ ಮಾಡುವಾಗ .....** ಒಳ್ಳೆಯ ಉದ್ದೇಶಕ್ಕಾಗಿ ಮಡುವ ಉಪವಾಸವನ್ನು ಕ್ರಿಸ್ತನು ಮಾನ್ಯತೆ ಮಾಡಿದನು ಎಂದರ್ಥ. ಕ್ರೈಸ್ತರು ದೇವಂ ತಮ್ಮನ್ನು ತಗ್ಗಿಸಿಕೊಳ್ಳುವುದಕ್ಕು ಮಾತ್ರವಲ್ಲದೇ, ಪವಿತ್ರಾತ್ಮನ ವಿಶೇಷ ಸಹಾಯ ಮತ್ತು ಶಕ್ತಿಯಿಂದ ನಮ್ಮ ದೇಹಗಳನ್ನು ಆತನ ಪವಿತ್ರಾತ್ಮನ ವಶದಲ್ಲಿ ರುವುದಕ್ಕು ಉಪವಾಸಿಸಬೇಕು.

ಯೇಶಾಯ ಪ್ರವಾದಿಯು ಹೇಳಿದಂತೆ ಉಪವಾಸವು ದೇವರ ದೃಷ್ಟಿಯಲ್ಲಿ ಮನೋಹರವೂ, ದೀನತೆಯುಳ್ಳದ್ದಾಗಿ ಪ್ರೀತಿಯ ಕೆಲಸವನ್ನು ಮಾಡುವಂತಹದ್ದಾಗಿದೆ (ಯೆಶಾಯ 58:1-7). ದೀನತೆ ಇಲ್ಲದೇ ಮಾಡುವಂತಹ ಪ್ರೀತಿಯ ಕಾರ್ಯಗಳು ಖಾಲಿಯಾದ (ಟೊಳ್ಳು) ಉಪವಾಸವೆಂಬುದಾಗಿ ತೋರಿಸುತ್ತದೆ.

## ಪರಲೋಕದಲ್ಲಿಯ ಆಸ್ತಿಯು ಗಂಟು (6:19-24)

(ಲೂಕ 11:34-36; 12:33-34; 16:13)

19 ಈಗ ನಾವು ಈ ಲೋಕದಲ್ಲಿ ಕೀರ್ತಿಯನ್ನು, ಸ್ತುತಿಯನ್ನು ನೋಡುವುದಲ್ಲ. ಆದುದರಿಂದ ಈ ಲೋಕದಲ್ಲಿ ನಾವು ಗಂಟು ಮಾಡಿಟ್ಟುಕೊಳ್ಳಬಾರದು. ಗಂಟು ಮಾಡುವುದು ಅಂದರೆ ಹಣ. ಆದರೆ ಇದರಲ್ಲಿ ಎಲ್ಲಾ ವಿಧವಾದ ಆಸ್ತಿಗಳು, ಅನುಭೋಗಗಳು ಇರುತ್ತವೆ. ಗಂಟು ಕೂಡಿಸು ಎಂದರೆ ಅದನ್ನು ನಮಗಾಗಿ ಇಟ್ಟುಕೊಳ್ಳುವುದು ಮತ್ತು ಪ್ರೀತಿಸುವುದು ಎಂದರ್ಥ. ಐಶ್ವರ್ಯ ಇರುವುದು ತಪ್ಪಲ್ಲ. ತಪ್ಪು ಯಾವುದೆಂದರೆ ನಮ್ಮ ಐಶ್ವರ್ಯದ ಮೇಲೆ ಪ್ರೀತಿಯಿದ್ದು ಅದನ್ನು ನಮಗೋಸ್ಕರ ಮಾತ್ರ ಉಪಯೋಗಿಸುವುದು (1ನೇ ತಿಮಾಥೆ 6:10 ನೋಡಿರಿ). ಅವಶ್ಯಕವಾದಂತ ಐಶ್ವರ್ಯಕ್ಕಿಂತಲೂ ಹೆಚ್ಚಾಗಿ ಆಶೆ ಪಡುವುದು ತಪ್ಪಾಗುತ್ತದೆ.

ಆದರೆ ಈ ವಚನಗಳಲ್ಲಿ ಐಶ್ವರ್ಯದ ಬಗ್ಗೆ ಕ್ರಿಸ್ತನು ಮಾತ್ರ ಮಾತಾಡದೇ ನಾವು ಲೋಕದಲ್ಲಿ ಬೆಲೆ ಕಟ್ಟುವಂತಹ ಪ್ರತಿಯೊಂದು ವಸ್ತುವಿನ ವಿಷಯವಾಗಿ ಯೂ ಮಾತನಾಡುತ್ತಾನೆ. ಶಿಕ್ಷಣ, ಭವಿಷ್ಯತ್ತಿನ ಭದ್ರತೆ, ನಮ್ಮ ಮಕ್ಕಳಭದ್ರತೆಗಳು ಸಹ ಸೇರಿ. ವಿಷಯವಾಗಿ ಅದು ಒಂದು ರೀತಿಯಲ್ಲಿನಮಗಾಗಿ ಕೂಡಿಸಿಟ್ಟುಕೊಳ್ಳುವ ಆಸ್ತಿ ಸಹಿತವಾಗಿ.ನಾವು ಹೊಂದಿರುವ ಕೀರ್ತೀಯ ವಿಷಯ, ಇವೆಲ್ಲವೂ ಲೋಕದ ಐಶ್ವರ್ಯಗಳಾಗಿವೆ ಮತ್ತು ಯೇಸು ಹೇಳುತ್ತಾನೆ. ಈ ಆಸ್ತಿಗಳನ್ನು ಹೆಚ್ಚಾಗಿ ಕೂಡಿಸಬೇಡ ಮತ್ತು [33]ಇವುಗಳನ್ನು ಪ್ರೀತಿಸಬೇಡ. ಇವುಗಳ ಮೇಲೆ ನೀನು ನಿರೀಕ್ಷೆ ಇಡಬೇಡ. ಒಂದು ವೇಳೆ ಇಂತಹ ಸಂಗತಿಗಳ ವಿಷಯದಲ್ಲಿ ನಾವು ನಿರೀಕ್ಷೆ ಇಡುವವರಾದರೆ, ಮುಂದಿನ ಲೋಕದ ಬಗ್ಗೆ ಯಾವ ನಿರೀಕ್ಷೆಯು ನಮ್ಮಲ್ಲಿಲ್ಲ .ಈ ಲೋಕದಲ್ಲಿ ನಾವು ಹಣವನ್ನು ಕೂಡಿಸುವುದಾದರೆ ಮುಂದಣಲೋಕದಲ್ಲಿ ನಮಗೇನು ದೊರಕದು. ಈ ಲೋಕದಲ್ಲಿ ನಾವು ಹಣವನ್ನು ಕೂಡಿಸುವುದಾದರೆ ಅದು ಬೇಗನೇ ನಾಶವಾಗಿ ಹೋಗುವುದು. ಅದು ಕೊನೆಯವರೆಗೂ ಉಳಿಯುವುದಿಲ್ಲ. ಅದು ನುಸಿ ಹತ್ತಿ ಕಿಲುಬು ಹಿಡಿದು ಹಾಳಾಗಿ ಹೋಗುವುದು. ಹೂವಿನಂತೆ ಬಾಡಿ ಹೋಗುವುದು. ಮನುಷ್ಯರು ಚಿನ್ನವನ್ನು ಹೊಂದುವುದಾದರೆ ಅದರ ಸೌಂದರ್ಯ ಬಾಡಿ ಹೋಗುವುದು. ಅಲ್ಲಿ ಕಳ್ಳರೂ ಕೂಡಾ ಇದ್ದಾರೆ. ಅನಾರೋಗ್ಯವು ಒಬ್ಬ ಕಳ್ಳನಿದ್ದಂತೆ. ಇದು ನಮ್ಮ ಆರೋಗ್ಯವನ್ನು ಕದಿಯು ಕಳ್ಳನಂತ್ತಿದೆ. ಜಲಪ್ರಳಯಗಳೂ, ಭೂಕಂಪಗಳೂ ಇರುತ್ತವೆ. ಗಾಳಿಯು ಆಣೆಕಲ್ಲಿನ ಮಳೆಯು ನಮ್ಮ ಬೆಳೆಗಳನ್ನು ಅಪಹರಿಸಿ ಬಿಡುತ್ತವೆ (ಇಲ್ಲದಂತೆ ಮಾಡಿಬಿಡುತ್ತವೆ). ಜಗತ್ತು ಮೊದಲುಗೊಂಡು ಜಗತ್ತಿನಲ್ಲಿರುವ ಪ್ರತಿಯೊಂದು ನಾಶವಾಗಿ ಹೋಗುತ್ತದೆ. ಕ್ರಿಸ್ತನು ಹೇಳಿದ್ದು **ಲಯವಾಗುವ ಆಹಾರಕ್ಕಾಗಿ ದುಡಿಯಬೇಡಿರಿ. ನಿತ್ಯ ಜೀವಕ್ಕೆ ಉಳಿಯುವ ಆಹಾರಕ್ಕಾಗಿ ದುಡಿಯಿರಿ. ಇಂಥ ಆಹಾರವನ್ನು ಮನುಷ್ಯಕುಮಾರನು ನಿಮಗೆ ಕೊಡುವನು** (ಯೋಹಾನ 6:27).ನಳಿಗೆಗಳಂತೆ ಇದ್ದೇವೆ.ದೇವರ ಕ್ಷಮಾಪಣೆಯು ನಳಿಗೆಯಲ್ಲಿ ನೀ ಹರಿಯುವ ನೀರಿದ್ದಂತೆ . ದೇವರು ನಮ್ಮನ್ನು ಕ್ಷಮಿಸುವವನಾಗಿದ್ದಾನೆ. ನಾವು ಇತರರನ್ನು ಕ್ಷಮಿಸದೇ ಇರುವಂತದ್ದು ನಳಿಗೆಯ ಒಂದು ಬಾಯಿಯ ತುದಿಯನ್ನು ಮುಚ್ಚಿದ ಹಾಗೆಯೇ. ಇತರರಿಗೆ ನೀರಿನಂತೆ ನಮ್ಮ ಕ್ಷಮಾಪಣೆಯು ಹರಿದು ಹೋಗದೆ ಇದ್ದರೆ, ದೇವರ ಕ್ಷಮಾಪಣೆಯು ನಮ್ಮಲ್ಲಿಗೆ ಹರಿಯುವುದಿಲ್ಲ (ಮಾರ್ಕ 11:25-26 ಮತ್ತು ವ್ಯಾಖ್ಯಾನ ನೋಡಿರಿ).

20 ಪರಲೋಕದಲ್ಲಿ ಸಂಪತ್ತನ್ನು ಕೊಡಿಸಿರಿ. ಕ್ರಿಸ್ತನು ಇದನ್ನು ಅರ್ಥ್ಯಸಿದ್ದು ಹೀಗೆ, ದೇವರಿಗೋಸ್ಕರವಾಗಿ ಈ ಲೋಕದಲ್ಲಿ ಮಾಡುವಂತ ಪ್ರತಿಯೊಂದು ಒಳ್ಳೆಯ ಕಾರ್ಯಗಳು ಪರಲೋಕದಲ್ಲಿ ಸಂಪತ್ತು ಮಾಡಿದ ಅಥವಾ " ಕೂಡಿಸಿಟ್ಟ" ಹಾಗಿರುವುದು. ನಾವು ಈ ಲೋಕದಲ್ಲಿ ಒಳ್ಳೇ ಕಾರ್ಯವನ್ನು ಮಾಡಲು ಆರಂಭ ಮಾಡುತ್ತೇವೆಯೋ ಆಗ ಪರಲೋಕದಲ್ಲಿಯ ಆಸ್ತಿಗಾಗಿ ನಾವು ತಳಪಾಯ ಹಾಕಿದ ಹಾಗೆ (1ನೇ ತಿಮಾಥೆ 6:17-18 ನೋಡಿರಿ).

ಈ ಒಳ್ಳೇ ಕಾರ್ಯಗಳಿಂದ ನಾವು ರಕ್ಷಿಸಲ್ಪಡುತ್ತೇವೆಂದು ತಿಳಿದುಕೊಳ್ಳಬಾರದು. ನಂಬಿಕೆಯ ಮೂಲಕ ದೇವರ ಕೃಪೆಯಿಂದಲೇ ನಾವು ರಕ್ಷಿಸಲ್ಪಟ್ಟಿದ್ದೇವೆ (ಎಫೆಸ 2:8 ನೋಡಿರಿ). ಅಂದರೆ ಒಳ್ಳೇ ಕಾರ್ಯಗಳು ನಂಬಿಕೆಗೆ ಬಹಿರಂಗವಾದಂತ ಸಾಕ್ಷಿಗಳಾಗಿವೆ. ಒಂದು ಒಳ್ಳೇ ಗಿಡವು ಒಳ್ಳೇ ಫಲ ಬಿಡುವಂತೆ ನಿಜವಾದ ನಂಬಿಕೆಯು ಯಾವಾಗಲೂ ಒಳ್ಳೆ ಕಾರ್ಯಗಳನ್ನು ಉತ್ಪತ್ತಿ ಮಾಡುತ್ತದೆ. ನಮ್ಮಲ್ಲಿ ನಿಜವಾದ ನಂಬಿಕೆಯು ಇದಯೋ ಅಥವಾ ಇಲ್ಲವೋ ಎಂಬುದನ್ನು ನಮ್ಮ ಒಳ್ಳೇ ಕಾರ್ಯಗಳಿಂದ ತೋರಿಸಬಹುದು(ಯಾಕೋಬ 2:14-24 ಮತ್ತು ವ್ಯಾಖ್ಯಾನ ನೋಡಿರಿ).

ಯಾಕೆಂದರೆ ಕ್ರಿಸ್ತನಲ್ಲಿರುವ ನಂಬಿಕೆಯ ಮೂಲಕ ಯಾರು ಒಳ್ಳೇ ಕಾರ್ಯವನ್ನು ಮಾಡುತ್ತಾರೋ ಅವರು ಪರಲೋಕ ರಾಜ್ಯವು ಸಿದ್ಧ ಮಾಡಿರುವಂತ ತಮ್ಮ **ಬಾದ್ಯತೆಯ ಸೊತ್ತನ್ನು** ಹೊಂದುವರು (ಮತ್ತಾಯ 25:34-40 ನೋಡಿರಿ). ಒಬ್ಬ ಶ್ರೀಮಂತನಾದ ಯವನಸ್ತನು ಕ್ರಿಸ್ತನ ಬಳಿಗೆ ಬಂದು ಕೇಳುತ್ತಾನೆ. **"ಒಳ್ಳೇ ಬೋಧಕನೇ, ನಾನು ನಿತ್ಯಜೀವಕ್ಕೆ ಬಾಧ್ಯಸ್ಥನಾಗಬೇಕಾದರೆ ಏನು ಮಾಡಬೇಕು?"** (ಮಾರ್ಕ 10:17). ಇವನು ಪರಲೋಕದಲ್ಲಿನ ಎದುರು ನೋಡುವಂತವನಾಗಿದ್ದನು. ಅದಕ್ಕೆ ಯೇಸು ಅವನಿಗೆ ಕೊಟ್ಟ ಉತ್ತರ, **"ಹೋಗು ನಿನ್ನ ಬದುಕನ್ನೆಲ್ಲಾ ಮಾರಿ ಬಡವರಿಗೆ ಕೊಡು, ಪರಲೋಕದಲ್ಲಿ ನಿನಗೆ ಸಂಪತ್ತಿರುವುದು. "** (ಮಾರ್ಕ 10:21). ಆದರೆ ಆ ಯುವಕನು ಕ್ರಿಸ್ತನ ಸಲಹೆಗಳನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಲಿಲ್ಲ. ಇತನು ತನ್ನ ಸಂಪತ್ತನ್ನು ಈ ಲೋಕದಲ್ಲಿ ಕೂಡಿಸಿಟ್ಟವನಾಗಿ ಇದನ್ನು ಪ್ರೀತಿಸುತ್ತಿದ್ದನು. ಇದನ್ನು ಆತನು ಬಡವರಿಗೆ ಕೊಡುವುದಕ್ಕೆ ಇಸ್ಟವಿಲ್ಲದವನಾಗಿದ್ದನು ಆದ್ದಾಗ್ಯೂ ಈತನು ಪರಲೋಕದ ನಿತ್ಯಜೀವಕ್ಕಾಗಿ (ಆಸ್ತಿಗಾಗಿ) ಇಷ್ಟಪಟ್ಟನು. ನಿಜವಾಗಿಯೂ ಈತನು ಲೋಕದ ಬಹುಮಾನಕ್ಕಾಗಿ ಇಷ್ಟ ಪಟ್ಟನೇ ಹೊರತು ಪರಲೋಕದ ಬಹುಮಾನಕ್ಕಾಗಿ ಇಷ್ಟಪಡಲಿಲ್ಲ (ಮಾರ್ಕ 10:22-23).

ಮನುಷ್ಯನು ಪರದೇಶಿಯಂತೆ ಈ ಲೋಕದಲ್ಲಿ ಒಬ್ಬ ಪ್ರಯಾಣಿಕನಾಗಿದ್ದಾನೆ. ನಮ್ಮ ನಿಜವಾದ ಮನೆಯು ಪರಲೋಕದಲ್ಲಿದೆ. ನಾವು ಕೇವಲ ದೇವರ ಸೇವಕರು ಮತ್ತು ರಾಯಭಾರಿಗಳೂ ಆಗಿದ್ದೇವೆ. ಈ ಲೋಕದಲ್ಲಿ ನಮಗೆ ಇರುವಂತಹ ಪ್ರತಿಯೊಂದು ಕೂಡ ದೇವರಿಂದ ದೊರಕಿದ್ದಾಗಿದೆ. ಇದು ನಮ್ಮದಲ್ಲ.ಮತ್ತು ನ್ಯಾಯತೀರ್ಪಿನ ಆ ದಿನದಲ್ಲಿ ನಾವು ದೇವರಿಗೋಸ್ಕರ ಮಾಡಿದ ಪ್ರತಿಯೊಂದಕ್ಕೂ ಮತ್ತು ನಮ್ಮ ಸ್ವತ್ತನ್ನು ಹೇಗೆ ಉಪಯೋಗಿಸಿಕೊಂಡೆವು ಎಂಬುದಕ್ಕೆ ಉತ್ತರ ಕೊಡಲೇಬೇಕು. ಇದು

ಕೇವಲ ಲೆಕ್ಕ ಕೊಡುವುದು ಅಷ್ಟೇ ಅಲ್ಲ, ನಮ್ಮ ಶಿಕ್ಷಣ, ನಮ್ಮ ಬಹುಮಾನ, ಮತ್ತು ನಮ್ಮ ಪ್ರವೀಣತೆಯನ್ನು ಮತ್ತು ಹಣವನ್ನು ಹೇಗೆ ಉಪಯೋಗಿಸಿದೆವು ಎಂಬುದಕ್ಕೂ ನಾವು ಉತ್ತರ ಕೊಡಬೇಕಾಗಿದೆ. ಇವೆಲ್ಲವುಗಳು ದೇವರಿಂದ ಬಂದದ್ದೇ.ಇವೆಲ್ಲವು ದೇವರಿಗೆ ಸೇರಿದ್ದು. ಸ್ವಾರ್ಥತೆಯಿಂದ ಇವುಗಗಳನ್ನುಸೇರಿಸಿಟ್ಟುಕೊಂಡು ಸ್ವಂತಕ್ಕೆ ನಾವೇ ಉಪಯೋಗಿಸಿಕೊಂಡಾಗ ಪರಲೋಕದಲ್ಲಿ ಬಹಮಾನವನ್ನು ಖಂಡಿತವಾಗಿಯೂ ಕಳೆದುಕೊಳ್ಳುತ್ತೇವೆ (ಮಾರ್ಕ 8:36; ಲೂಕ 12:16-21). ಯೇಸು ಹೇಳಿದನು, "**ನಿನ್ನ ಆಸ್ತಿಯನ್ನು (ಬದುಕನ್ನು) ಮಾರಿ ಬಡವರಿಗೆ ಕೊಡು**" (ಲೂಕ 12:33). ನಮ್ಮ ಅವಶ್ಯಕ್ಕಿಂತಲೂ ಹೆಚ್ಚಾಗಿ ನಾವು ಇಟ್ಟುಕೊಳ್ಳಬಾರದು ಮತ್ತು ನಾವು ನಮಗೆ ಅವಶ್ಯವಾದಂತೆ ನಮ್ಮ ಸುತ್ತಮುತ್ತಲೂ ಇರುವ ಬಡವರ ಅವಶ್ಯಕತೆಗಳನ್ನು ಸಹ ಲೆಕ್ಕ ಮಾಡಬೇಕು.

**21** ಈ ಲೋಕದಲ್ಲಿ ಸಂಪತ್ತನ್ನು ಮಾಡಿಟ್ಟುಕೊಳ್ಳುವುದು ಮೂರ್ಖತನ ಎಂಬುದಕ್ಕೆ ಎರಡು ಕಾರಣಗಳು ಉಂಟು. ಮೊದಲನೆಯದಾಗಿ, ಈ ಲೋಕದಲ್ಲಿ ಕೂಡಿಸಿದ ಆಸ್ತಿಯು ನಶಿಸಿ ಹೋಗುವುದು. ಎರಡನೆಯದಾಗಿ ಇದು ನಮಗೆ ಒಡೆಯನಾಗುವುದು. ನಾವು ನಮ್ಮ ಆಸ್ತಿಯನ್ನು ಎಷ್ಟು ಆಳವಾಗಿ ಪ್ರೀತಿಸುತ್ತೇವೆಯೋ. ಅಷ್ಟೇ ಆಳವಾಗಿ ಇದು ನಮ್ಮನ್ನು ತನ್ನ ಸ್ವಾಧೀನದಲ್ಲಿ ಇಟ್ಟುಕೊಳ್ಳುತ್ತದೆ. ನಾವು ನಮ್ಮ ಆಸ್ತಿಗೆ ಗುಲಾಮರಾಗುತ್ತೇವೆ. ಸೈತಾನನು ಈ ಲೋಕದ ಸಂಪತ್ತನ್ನು ಉಪಯೋಗಿಸಿಕೊಂಡು ನಮ್ಮನ್ನು ಬಲೆಯಲ್ಲಿ ಸಿಕ್ಕಿಸಿ, ದೇವರಿಂದ ನಮ್ಮನ್ನು ದೂರ ಮಾಡುವವನಾಗಿದ್ದಾನೆ. ಯಾವಾಗ ನಾವು ಪರಲೋಕದ ಆಸ್ತಿಯನ್ನು ಕೂಡಿಸಲು ಆರಂಭಿಸುತ್ತೇವೆಯೋ ಅದೇ ಸಮಯದಲ್ಲಿ ನಮ್ಮ ಹೃದಯಗಳನ್ನು ದೇವರಿಗೆ ಕೊಡುತ್ತೇವೆ. ನಾವು ಯಾವಾಗ ಲೋಕದ ಆಸ್ತಿಯನ್ನು ಕೂಡಿಸಲು ಆರಂಭಿಸುತ್ತೇವೆಯೋ ಆಗ ನಾವು ನಮ್ಮ ಹೃದಯವನ್ನು ಸೈತಾನನಿಗೆ ಕೊಡುತ್ತೇವೆ. **ನಿನ್ನ ಗಂಟು (ಸಂಪತ್ತು) ಇದ್ದಲ್ಲಿಯೇ ನಿನ್ನ ಮನಸ್ಸು ಇರುವುದು.**

ಈ ಬೋಧನೆಗೆ ನಾವು ಲಕ್ಷ್ಯ ಕೊಡುವ (ಗಮನ ಕೊಡುವ). ಇದು ನಮಗೆ ಸಂಬಂಧಪಡುವುದಿಲ್ಲ ನಾನು ಬಡ ಎಂದು ಹೇಳುವುದು ಬೇಡ. "ನಾನು ಏನನ್ನು ಆಶೆ ಹಡುತ್ತಿರುವೆ ? ನಾನು ಏನನ್ನು ನಿರೀಕ್ಷಿಸುತ್ತೀದ್ದೇನೇ?" ಎಂಬ ಈ ಮುಖ್ಯವಾದ ಪ್ರಶ್ನೆಗಳನ್ನು ನಮ್ಮನ್ನು ನಾವೇ ಕೇಳಿಕೊಳ್ಳೋಣ. ಬಡವನು ಕೂಡ ಶ್ರಿಮಂತಿಕೆಯ ಮೇಲೆ ನಿರೀಕ್ಷೆಯನ್ನಿಡುತ್ತಾನೆ. ಆಸ್ತಿಗಾಗಿಯೇ ನಾವು ನೋಡುತ್ತಾ ಇದ್ದೇವೆ. "ನಿಮ್ಮ ಹೃದಯದಲ್ಲಿ ಏನಿದೆ? ನಿಮ್ಮ ಗುರಿಯು ಏನು? ನಿಮ್ಮ ಒಡೆಯನು ಯಾರು? ಯಾರನ್ನು ನೀವು ಸೇವಿಸುತ್ತಾ ಇದ್ದೀರಿ?" ಎಂದು ಕ್ರಿಸ್ತನು ಕೇಳುತ್ತಾನೆ ನಾವು ಈ ಲೋಕದ ಆಸ್ತಿಗಳಿಗೆ ವಿಮುಖರಾಗಿ (ಬೆನ್ನು ಹಾಕಿದವರಾಗಿ) ನಮ್ಮ ಕಣ್ಣುಗಳನ್ನು ದೇವರ ಕಡೆಗೆ ತಿರುಗಿಸೋಣ.ನಾವು ಇದನ್ನು ಮಾಡಲು ಆರಂಭಿಸುವಾಗ ಎಂದೆಂದಿಗೂ ನಾಶವಾಗದ ಪರಲೋಕದ ಸಂಪತ್ತನ್ನು ಕೂಡಿಸಲು ಪ್ರಾರಂಭಿಸುತ್ತೇವೆ.

**22** **ಕಣ್ಣು ದೇಹಕ್ಕೆ ದೀಪವಾಗಿದೆ.** ಇಲ್ಲಿ"ಕಣ್ಣು" ಅಂದರೆ ನಮ್ಮ ಹೃದಯ ಅಥವಾ ಮನಸ್ಸಿನ "ಆತ್ಮೀಕ ಕಣು"ಣ ಎಂದಾಗುತ್ತದೆ ನಮ್ಮ ಈ ದೈಹಿಕ ಕಣ್ಣುಗಳಿಂದ ಈ ಲೋಕದ ಸಂಗತಿಗಳನ್ನು ನೋಡುತ್ತೇವೆ. ಆದರೆ ನಮ್ಮ ಆತ್ಮೀಕ ಕಣ್ಣುಗಳಿಂದ ಆತ್ಮೀಕ ಸಂಗತಿಗಳನ್ನು ನೋಡುತ್ತೇವೆ. ನಾವು ಆತ್ಮೀಕ ಕಣ್ಣುಗಳಿಂದ ಒಳ್ಳೆಯದನ್ನು ಮತ್ತು ಕೆಟ್ಟದ್ದನ್ನು, ಲೌಕಿಕವಾದ ಸಂಪತ್ತನ್ನು ಮತ್ತು ಸ್ವರ್ಗದ ಸಂಪತ್ತನ್ನು ಗುರುತಿಸುತ್ತೆವೆ.

**ನಮ್ಮ ಆತ್ಮೀಕ ಕಣ್ಣುಗಳು ಒಳ್ಳೆಯದಾಗಿದ್ದರೆ,** ಆರೋಗ್ಯ ಮತ್ತು ಒಳ್ಳೆಯದಾಗಿದ್ದು, ದೇವರ ಬೆಳಕು ನಮ್ಮಲ್ಲಿದ್ದು **ನಮ್ಮ ಇಡೀ ದೇಹವು ಬೆಳಕಿನಿಂದ ಕೂಡಿರುತ್ತದೆ.**

**23** ನಮ್ಮ ಆತ್ಮೀಕ ಕಣ್ಣುಗಳ ಮೂಲಕವಾಗಿ ದೇವರ ಆತ್ಮನು ನಮ್ಮ ಜೀವಿತದಲ್ಲಿ ಬರುವನು. ನಮ್ಮ ಆತ್ಮೀಕ ಕಣ್ಣುಗಳು ಮುಚ್ಚಲ್ಪಟ್ಟದ್ದಾಗಿ ಅಥನಾ ಕುರುಡಾಗಿದ್ದರೆ, ದೇವರ ಬೆಳಕು ನಮ್ಮ ಆತ್ಮದಲ್ಲಿ ಪ್ರಕಾಶಿಸುವುದಿಲ್ಲ. ಆಗ ನಾವು ಆತ್ಮೀಕ ಕತ್ತಲೆಯಲ್ಲಿ ಉಳಿಯುವವರಾಗಿದ್ದೇವೆ. ಆತ್ಮೀಕ ಬೆಳಕಿನ ಉಗಮ ಸ್ಥಾನವು ದೇವರು ತಾನೇ ಆಗಿದ್ದಾನೆ.ಆ **ಬೆಳಕೇ ಕತ್ತಲಾದರೆ** ನಿಜವಾಗಿಯೂ ನಾವು ಕತ್ತಲೆಯಲ್ಲಿ ಇದ್ದಂತೆಯೇ. "**ಆದುದರಿಂದ ನಿನ್ನೊಳಗಿರುವ ಬೆಳಕೇ ಕತ್ತಲಾಗಿದೆಯೋ ಏನೋ, ನೋಡಿಕೋ**" ಎಂದು ಯೇಸು ಹೇಳಿದನು (ಲೂಕ 11:35-36).

ನಮ್ಮ ಆತ್ಮೀಕ ಕಣ್ಣುಗಳು ಹೇಗಿವೆ? ಅವು ಚೆನ್ನಾಗಿಯೂ ಮತ್ತು ಸ್ವಚ್ಛವಾಗಿಯೂ ಉಂಟೋ? . ಇವುಗಳ ಮೂಲಕ ನಾವು ಯೇಸುವನ್ನು ನೋಡುತ್ತೇವೆಯೋ? ಕ್ರಿಸ್ತನು ಲೋಕಕ್ಕೆ ಬೆಳಕಾಗಿದ್ದಾನೆ (ಯೋಹಾನ 1:9, 8:12). ನಾವು ಈ ಬೆಳಕನ್ನು ನೋಡುವವರಾಗಿದ್ದೇವೆಯೋ?

**24** **ಯಾವನೂ ಇಬ್ಬರು ಯಜಮಾನರ ಸೇವೆ ಮಾಡಲಾರನು.** ಈ ಇಬ್ಬರು ಯಜಮಾನರು **ದೇವರು** ಮತ್ತು **ಹಣ**ವಾಗಿದ್ದಾರೆ. "ಹಣ" ಇದರ ಅರ್ಥ ಇಲ್ಲಿ ಯಾವುದೇ ರೀತಿಯಾದಂತ ಲೌಕಿಕ ಸಂಪತ್ತಾಗಿದೆ.

ಒಂದು ವೇಳೆ ಇದು ಭೂಮಿ,. ಮನೆ, ಪ್ರಾಣಿಗಳು, ಕುಟುಂಬ, ಶಿಕ್ಷಣ, ಕೆಲಸ, ಅಧಿಕಾರ ಮತ್ತು ಕೀರ್ತಿಯಾಗಿರಬಹುದು. ಹಣ ಎಂಬ ಶಬ್ದದ ಸ್ಥಾನದ ಬದಲು ಸ್ವಾರ್ಥತೆ ಎಂದು ತಿಳಿದುಕೊಳ್ಳಬೇಕು.

ಪ್ರತಿಯೊಬ್ಬ ಮನುಷ್ಯನು ಈ ಎರಡರಲ್ಲಿ ಒಂದನ್ನು ಆರಿಸಿಕೊಂಡು ಒಬ್ಬ ಯಜಮಾನನ ಸೇವೆ ಮಾಡುತ್ತಾನೆ. ಇದೇ ರೀತಿಯಾಗಿ ಮನುಷ್ಯನು ದೇವರ ರಾಜ್ಯ ಅಥವಾ ಕತ್ತಲೆಯ ರಾಜ್ಯಎಂಬ ಈ ಎರಡರಲ್ಲಿಒಂದನ್ನು ಆರಿಸಿಕೊಂಡು ಜೀವಿಸುವನು. ಯಾವ ಮನುಷ್ಯನಾಗಲೀ ಒಂದೇ ಸಮಯದಲ್ಲಿ ಎರಡೂ ರಾಜ್ಯಗಳಲ್ಲಿ ನಾಗರೀಕನಾಗಲು ಸಾಧ್ಯವಿಲ್ಲ. ಇಬ್ಬರು ಯಜಮಾನರೂ, ಎರಡು ರಾಜ್ಯಗಳು ಇದ್ದಂತೆ ಎರಡು ದಾರಿಗಳು ಉಂಟು. ಒಂದು ಇಕ್ಕಟ್ಟಾದ ದಾರಿ ಇದು. ಮನುಷ್ಯನನ್ನು ನಿತ್ಯ ಜೀವಕ್ಕೆ ನಡಿಸುತ್ತದೆ. ಮತ್ತೊಂದು ಅಗಲವಾದ ದಾರಿ ಇದು ನಿತ್ಯವಾದಂತ ಶಿಕ್ಷೆಗೆ ನಡಿಸುತ್ತದೆ. (ಮತ್ತಾಯ 7:13-14 ಮತ್ತು ವ್ಯಾಖ್ಯಾನ ನೋಡಿರಿ).

ಬಹಳ ಜನರು ಸೈತಾನನಿಂದ ವಂಚನೆಗೆ ಒಳಗಾಗುತ್ತಾರೆ. ನಾವು ದೇವರನ್ನು ಮತ್ತು ಹಣವನ್ನು ಎರಡನ್ನೂ ಸೇವಿಸಬಹುದೆಂದು ಇವರು ಆಲೋಚಿಸುತ್ತಾರೆ. ನಮಗೆ ಈ ಲೋಕದ ಮತ್ತು ಪರಲೋಕದ ಸಂಪತ್ತುಗಳಾದ ಇವೆರಡು ಏಕಕಾಲದಲ್ಲಿರಬೇಕು ಎಂದು ಇವರು ಬಯಸುತ್ತಾರೆ. ಆದರೆ ಈ ಯಾವ ಕೆಲಸಗಳೂ ಆಗುವುದಿಲ್ಲ. ಯೇಸುವು ಹೇಳಿದ್ದು, - ನಿನ್ನ

**ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ, ಪೂರ್ಣ ಪ್ರಾಣದಿಂದಲೂ, ಪೂರ್ಣ ಬುದ್ಧಿಯಿಂದಲೂ, ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು.** (ಮತ್ತಾಯ 12:30). ಇಲ್ಲಿ ಮುಖ್ಯವಾದ ಶಬ್ದ ಪೂರ್ಣ (ಎಲ್ಲಾ) ಎಂಬುದಾಗಿರುತ್ತದೆ. "ಪೂರ್ಣ" ಅರ್ಥ ಅಲ್ಲ 90 ಶೇಕಡ ಅಲ್ಲ ಆದರೆ ಪೂರ್ಣ.

ಯೇಸುವು ಯವನಸ್ಥನಿಗೆ ಹೇಳಿದನು. ನಿನ್ನ ಬದುಕನ್ನೆಲ್ಲಾ ಮಾರು (ಮಾರ್ಕ 10:21). ಯಾಕೆಂದರೆ, ಈತನು ಆ ಯವನಸ್ಥನು ತನ್ನ ಆಸ್ತಿಯನ್ನು ಪ್ರೀತಿಸಿದ್ದನು. ಸುವಾರ್ತಿಕನಾದ ಯೋಹಾನನು ಈ ರೀತಿಯಾಗಿ ಬರೆದಿದ್ದಾನೆ. **ಲೋಕವನ್ನಾಗಲಿ, ಲೋಕದಲ್ಲಿರುವುವುಗಳನ್ನಾಗಲಿ ಪ್ರೀತಿಸಬೇಡಿರಿ. ಯಾವನಾದರೂ ಲೋಕವನ್ನು ಪ್ರೀತಿಸಿದರೆ, ತಂದೆಯ ಮೇಲಣ ಪ್ರೀತಿ ಅವನಲ್ಲಿಲ್ಲ.** (1ನೇ ಯೋಹಾನ 2:15). ನಾವು ಲೋಕವನ್ನು ಪ್ರೀತಿಸಬೇಕು. ಇಲ್ಲವೇ ತಂದೆಯನ್ನು ಪ್ರೀತಿಸಬೇಕು. ಇವೆರಡರಲ್ಲಿ ಒಂದನ್ನು ಮಾತ್ರ ಪ್ರೀತಿಸಬೇಕು. ಎರಡನ್ನು ಪ್ರೀತಿಸಲು ಸಾಧ್ಯವಿಲ್ಲ. ನಾವು ಆರಿಸಿಕೊಳ್ಳಬೇಕು. ಯಾಕೆ ಜನರು ಲೋಕದ ಮೇಲೆ ಸಂಪತ್ತನ್ನು ಕೂಡಿಸಿಟ್ಟು ಕೊಳ್ಳುತ್ತಾರೆ ? ಇದು ಹಾಳಾಗಿ ಹೋಗುವುದೆಂದು ಅವರು ತಿಳಿದಿದ್ದಾರೆ. ಒಂದು ವೇಳೆ ಆಸ್ತಿಯು ಬೇಗನೆ ಹಾಳಾಗಿ ಹೋಗದಿದ್ದರೂ ಮನುಷ್ಯರು ಹಾಳಾಗಿ ಹೋಗುತ್ತಾರೆ. ಮನುಷ್ಯರು ನಶಿಸಿ ಹೋಗುವಾಗ ತಮ್ಮ ಸಂಪತ್ತಿನೊಂದಿಗೆ ಮಾತನಾಡುವುದಿಲ್ಲ. ತಮ್ಮ ಶಿಕ್ಷಣವಾಗಲಿ, ಕೀರ್ತಿಯಾಗಲಿ ಪರಲೋಕದಲ್ಲಿ ಉಪಯೋಗವಾಗುವುದಿಲ್ಲ. ಮನುಷ್ಯರು ಲೋಕದ ಸಂಪತ್ತನ್ನು ಕೂಡಿಸಿಟ್ಟುಕೋಳ್ಳಲು ತವಕ ಪಡುತ್ತಾ ಪರಲೋಕದ ಆಸ್ತಿಯನ್ನು ಕಳೆದುಕೊಳ್ಳುತ್ತಾರೆ, ಯಾಕೆ ?

ಇದಕ್ಕೆ ಕಾರಣ ಪಾಪ. ಯಾವಾಗ ಮನುಷ್ಯನ ಹೃದಯದಲ್ಲಿ ಪಾಪವು ಪ್ರವೇಶಿಸುವುದೋ ಆಗ ಅವನಲ್ಲಿ ಸ್ವಾರ್ಥತೆ ಉಂಟಾಗುತ್ತದೆ. ಆ ಸ್ವಾರ್ಥತೆಯಿಂದ ಗರ್ವ, ದುರಾಶೆ, ವ್ಯಾಮೋಹ ಎಂಬ ಮುಂತಾದ ಎಲ್ಲಾ ಪಾಪಗಳು ಬರುತ್ತವೆ.

ಪಾಪವು ಮೂರು ಸಂಗತಿಗಳನ್ನು ಮಾಡುತ್ತದೆ. ಮೊದಲನೇಯದಾಗಿ, ನಮ್ಮನ್ನು ಪಾಪದ ಗುಲಾಮರನ್ನಾಗಿ ಮಾಡುತ್ತದೆ. ಎರಡನೆಯದಾಗಿ, ನಮ್ಮನ್ನು ಆತ್ಮೀಕ ಕುರುಡರನ್ನಾಗಿ ಮಾಡುತ್ತದೆ. ನಾವು ಕುರುಡರಾಗಿದ್ದೇವೆಂದು ಕಂಡು ಬರುವುದಿಲ್ಲ. ನಾವು ನಿಜವಾದ ಬೆಳಕಾದಂತ ಕ್ರಿಸ್ತನನ್ನು ನೋಡುವದಕ್ಕಾಗುವುದಿಲ್ಲ.ನಾವು ಸ್ವರ್ಗಕ್ಕೆ ಹೋಗುವ ಇಕ್ಕಟ್ಟಾದ ದಾರಿಯನ್ನು ಕಂಡುಕೊಳ್ಳಲಾಗುವುದಿಲ್ಲ. ಮೂರನೇಯದಾಗಿ, ಪಾಪವು ನಮ್ಮನ್ನು ನಾಶ ಮಾಡುತ್ತದೆ. ಪಾಪವು ಕೊಡುವ ಶಿಕ್ಷೆಯು ನಿತ್ಯವಾದ ಮರಣವಾಗಿದೆ.

ಈ ಕಾರಣದಿಂದಲೇ, ಯಾಕೆ, ಜನರು ಪಾಪ ಮತ್ತು ಲೋಕದ ಸಂಪತ್ತಿನಿಂದ ತಿರುಗಬೇಕೆಂದು ಬೋಧಿಸಿದನು. ಮನುಷ್ಯನು ಲೋಕದಲ್ಲಿ ಸಂಪತ್ತನ್ನು ಕೂಡಿಸಿಟ್ಟುಕೊಂಡು ಮಾಡುವಂತ ದೊಡ್ಡದಾದ ತಪ್ಪಿಗಿಂತ, ಇನ್ನೊಂದಿಲ್ಲ.

## ಚಿಂತೆ ಮಾಡಬೇಡಿರಿ (6:25-34)

(ಲೂಕ 12:22-32)

25 ಆದುದರಿಂದ ನಿಮ್ಮ ಜೀವಿತಕ್ಕಾಗಿ **ಚಿಂತೆ ಮಾಡಬೇಡಿರಿ.** ಭವಿಷ್ಯತ್ತಿನಲ್ಲಿ ನಡೆಯುವ ಕಾರ್ಯಗಳನ್ನು ಅವಲೋಕಿಸಿ ಅವುಗಳಿಗಾಗಿ ಯೋಜನೆ ಮಾಡಬಾರದು ಎಂದರ್ಥವಲ್ಲ. ನಾವು ಕೆಲಸ ಮಾಡುವುದನ್ನು ನಿಲ್ಲಿಸಿ ನಮ್ಮ ಆಹಾರಕ್ಕಾಗಿ ದೇವರನ್ನು ನೋಡಬೇಕೆಂಬ ಅರ್ಥವಲ್ಲ. ದೇವರು ಪಕ್ಷಿಗಳಿಗೂ ಆಹಾರವನ್ನು ಕೊಡುತ್ತಾನೆ (ವಚನ 26). ಆದರೆ ಅವುಗಳು ತಮ್ಮ ಆಹಾರಕ್ಕಾಗಿ ಅರಸುತ್ತವೆ. ಅದರಂತೆ ದೇವರು ಮನುಷ್ಯರಿಗೂ ಆಹಾರ ಒದಗಿಸುತ್ತಾನೆ. ಆದರೆ ಜನರುಭೂಮೀಯನ್ನು ಅಗಿಯ ಬೇಕು ಮತ್ತು ಗಿಡ ನೆಡಬೇಕು ಹಾಗು ಅದಕ್ಕೆ ನೀರು ಹಾಕಬೇಕು. ಕೆಲಸ ಮಾಡಲೊಲ್ಲದವನು ಊಟ ಮಾಡಬಾರದು (2ನೇ ಥೆಸಲೋನಿಕ 3:10).

ಕರ್ತನು ಇಲ್ಲಿ ಕಲಿಸುವುದೇನೆಂದರೆ, ನಾವು ಚಿಂತಿಸಬಾರದು. ಇದೇ ವಿಷಯವಾಗಿ ಪೌಲನು ಬರೆದಿದ್ದಾನೆ, ಯಾವ ಸಂಬಂಧವಾಗಿಯೂ ಚಿಂತೆ ಮಾಡದೇ ಸರ್ವ ವಿಷಯದಲ್ಲಿ ದೇವರ ಮುಂದೆ ಕೃತಜ್ಞತಾಸ್ತುತಿಯನ್ನೂ, ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ, ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ. (ಫಿಲಿಪ್ಪಿ 4:6).

ನಮ್ಮ ಕೊರತೆಗಳಿಗಾಗಿ ನಾವು ಯಾಕೆ ಚಿಂತಿಸಿಬಾರದು? ಯಾಕೆಂದರೆ ಇದು ಅನಾವಶ್ಯಕವಾಗಿದೆ. ದೇವರು ನಮಗೆ ಜೀವ ಕೊಟ್ಟಿರುವುದರಿಂದ ನಮಗೆ ಸಣ್ಣ ಸಣ್ಣ ಸಂಗತಿಗಳಾದ ಆಹಾರ ಮತ್ತು ಬಟ್ಟೆ ಕೊಡದೇ ಇರುವನೋ? ಒಂದು ದಿವಸಕ್ಕಾಗಿ ನಮಗೆ ದೇಹವನ್ನು ಕೊಟ್ಟಿದ್ದರೆ ಅದು ನಿಧಾನವಾಗಿ ಒಂದು ದಿನ ಹಸಿವೆಯಿಂದ ಸತ್ತು ಹೋಗುತ್ತಿತ್ತಲ್ಲವೋ? ಖಂಡಿತವಾಗಿಯು ಇಲ್ಲ. ದೇವರು ಜೀವ ಎಂಬಂತ ಒಂದು ದೊಡ್ಡ ಬಹುಮಾನವನ್ನು ಕೊಟ್ಟಿರುವಾಗ ಖಂಡಿತವಾಗಿಯೂ ಸಣ್ಣ ಬಹುಮಾನಗಳನ್ನೂ ಕೊಡುವವನಾಗಿದ್ದಾನೆ. ನಮ್ಮ ಅವಶ್ಯಕ್ಕಿಂತಲೂ ಹೆಚ್ಚಾಗಿ ಕೊಡುತ್ತೇನೆಂದು ದೇವರು ವಾಗ್ದಾನ ಮಾಡಿಲ್ಲ. ಆದರೆ ಆತನು ನಮ್ಮ ಅವಶ್ಯಕತೆಗಳನ್ನು ಒದಗಿಸುವನು ಎಂದು ನಾವು ಆತನ ಮೇಲೆ ಆದಾರಗೊಂಡಿರಬೇಕು.

26 ಪಕ್ಷಿಗಳಲ್ಲಿಯೂ ಈ ಸಂಗತಿಯು ನಿಜವಾಗುತ್ತದೆ. ದೇವರು ಇವುಗಳಿಗೆ ಶರೀರವನ್ನು ಕೊಟ್ಟ ಮೇಲೆ. ಆಹಾರವನ್ನು ಇವುಗಳಿಗೆ ಕೊಡದೇ ಇರಲಾರನೋ? ಪಕ್ಷಿಗಳಿಗೆ ಆಹಾರವನ್ನು ಸಿದ್ಧ ಮಾಡಿದ ದೇವರು, ಪಕ್ಷಿಗಳಿಗಿಂತ ಎಷ್ಟೋ ಹೇಚ್ಚಿನವರಾದ ನಮಗೆ ಆಹಾರವನ್ನು ಕೊಡದೇ ಇರುವನೋ? (ಮತ್ತಾಯ 10:31).

ಇದೇ ರೀತಿಯಾಗಿ ಆತ್ಮೀಕ ಬಹುಮಾನಗಳಿಗೂ ಕೂಡ ಇದು ಅನ್ವಯಿಸುತ್ತದೆ. ದೇವರು ನಮಗೆ ಕೊಟ್ಟ ಎಲ್ಲಾ ಬಹುಮಾನಗಳಲ್ಲಿ ದೊಡ್ಡದಾದ ಬಹುಮಾನವು ತನ್ನ ಮಗನಾದ ಕ್ರಿಸ್ತನು ಆಗಿದ್ದಾನೆ. ಇತನು ನಮಗೆ ಆತ್ಮೀಕವಾಗಿಯೂ, ಶಾರೀರಿಕವಾಗಿಯೂ ಎಲ್ಲಾ ಆಶೀರ್ವಾದಗಳನ್ನು ಕೊಡುವವನಾಗಿದ್ದಾನೆ. (ರೋಮಾ. 8:32 ಮತ್ತು ವ್ಯಾಖ್ಯಾನ ನೋಡಿರಿ).

27 ಚಿಂತೆ ಮಾಡುವುದು ಅನಾವಶ್ಯಕವಾದದ್ದು ಮಾತ್ರವಲ್ಲ ವ್ಯರ್ಥವಾದದ್ದು .ಇದಕ್ಕಾಗಿ ಯೋಚಿಸುವುದೂ ತಪ್ಪಾಗಿದೆ. ನಾವು ಚಿಂತೆ ಮಾಡಿ " **ನಮ್ಮ ಜೀವಿತದಲ್ಲಿ ಒಂದು ತಾಸನ್ನು ಹೆಚ್ಚಿಸಲಾರೆವು.**

ಅಥವಾ ಒಂದು [34] ಮೊಳ ಎತ್ತರ ಬೆಳೆಯಲು ಸಾಧ್ಯವಿಲ್ಲ" ಲೂಕ 12:26ರಲ್ಲಿ ಯೇಸುವು ಕೂಡಾ ಹೇಳಿದ್ದಾನೆ. ಆದುದರಿಂದ ಕೇವಲ ಅಲ್ಪವಾದದ್ದನ್ನಾದರೂ ಮಾಡುವುದಕ್ಕೆ ನೀವು ಅಶಕ್ತರಾಗಿರಲಾಗಿ ಮಿಕ್ಕದದ್ದರ ವಿಷಯದಲ್ಲಿ ಚಿಂತೆ ಮಾಡುವುದೇಕೆ? ಇದಕ್ಕೆ ಯೇಸುವಿನ ಅರ್ಥವು, ಚಿಂತೆಯು ಏನನ್ನು ಸಾಧಿಸುವುದಿಲ್ಲ ಎಂಬುದೆ.

**28-30** ದೇವರು ಪಕ್ಷಿಗಳಿಗೆ ಆಹಾರವನ್ನು ಕೊಡುತ್ತಾನೆ (ವಚನ 26). ಹೀಗೆಯೇ ಹೂಗಳಿಗೆ ಸೌಂದರ್ಯವನ್ನು ಕೊಡುತ್ತಾನೆ.ತನ್ನ ಮಕ್ಕಳಲ್ಲದ ಹೂಗಳಿಗೆ ಸೌಂದರ್ಯವನ್ನು ಕೊಡುವುದಾದರೆ ಆತನ ಮಕ್ಕಳಾದ ನಮಗೆ ಖಂಡಿತವಾಗಿಯೂ ಬಟ್ಟೆಯನ್ನು ಕೊಡುವವನಾಗಿದ್ದಾನೆ. ದಾವೀದನ ಮಗನಾದಂತ ಅರಸನಾದ ಸೊಲೋಮೋನನು ಐಶ್ವರ್ಯವಂತನಾಗಿ ತನ್ನ ಸಕಲ ವೈಭವದಿಂದ ಅಲಂಕಾರದಿಂದ ಇರುವಾಗಲೂ ಈ ಹೂಗಳಲ್ಲಿ ಒಂದಕ್ಕಿರುವಷ್ಟು ಅಲಂಕಾರವು ಸೊಲೋಮೋನನಿಗೆ ಇರಲಿಲ್ಲ.

ಆಮೇಲೆ ಯೇಸು ಹೇಳಿದ್ದು "ಎಲೈ, ಅಲ್ಪ ವಿಶ್ವಾಸಿಗಳೇ, ನಿಮಗೆ ದೇವರು ಬಟ್ಟೆ ಕೊಡದೇ ಇರುವನೇ?" (ವಚನ 30). ಚಿಂತೆಯು ಅಲ್ಪ ವಿಶ್ವಾಸದ ಸೂಚನೆಯಾಗಿದೆ. ಕ್ರಿಸ್ತನು ಮುಖ್ಯವಾಗಿ ತನ್ನ ಶಿಷ್ಯರಿಗೂ ವಿಶ್ವಾಸಿಗಳಿಗೂ ಮಾತನಾಡುವಾಗ "ನಂಬಿಕೆ ಇಲ್ಲ" ಎಂದು ಹೇಳಲಿಲ್ಲ. ಆದರೆ ಬಹಳ ಜನ ವಿಶ್ವಾಸಿಗಳು ಅಲ್ಪ ವಿಶ್ವಾಸಿಗಳಾಗಿದ್ದಾರೆ. ಅವರು ರಕ್ಷಣೆ ಹೊಂದಲು ಸಾಕಷ್ಟು ನಂಬಿಕೆ ಇದೆ ಆದರೆ ಚಿಂತೆಗಳನ್ನು ನಿಲ್ಲಿಸಿ ಬಿಡುವುದಕ್ಕೆ ಸಾಕಷ್ಟು ನಂಬಿಕೆ ಇಲ್ಲ. ಅವರು ಕ್ರಿಸ್ತನನ್ನು ನಂಬುತ್ತಾರೆ. ಆದರೆ ಕ್ರಿಸ್ತನು ಹೇಳಿದ ಎಲ್ಲವನ್ನು ನಂಬುವುದಿಲ್ಲ.

ಕ್ರಿಸ್ತನು ಹೇಳಿದನು, "ದೇವರು ನಿಮಗೆ ಆಹಾರವನ್ನು ಬಟ್ಟೆಯನ್ನು ಕೊಡುತ್ತಾನೆ." ಇದನ್ನು ನೀನು ನಂಬುತ್ತಿಯೋ? ........". ನನ್ನ ಬಳಿಗೆ ಬನ್ನಿರಿ, ನಾನು ನಿಮಗೆ ವಿಶ್ರಾಂತಿ ಕೊಡುವೆನು." ಎಂದು ಕ್ರಿಸ್ತನು ಹೇಳಿದನು (ಮತ್ತಾಯ 11:28). ಇದನ್ನು ನಾವು ನಂಬುತ್ತೇವೋ? ಕ್ರಿಸ್ತನು ಹೇಳಿದನು," ನಾನು ಕೊಡುವ ನೀರನ್ನು ಕುಡಿದವನಿಗೆ ಎಂದಿಗೂ ನೀರಡಿಕೆಯಾಗುವುದಿಲ್ಲ." (ಯೋಹಾನ 4:14) ಇದನ್ನು ನಾವು ನಂಬುತ್ತೇವೆಯೋ? ಇಂತಹ ಜೀವಕರವಾದ ನೀರು ನಮ್ಮಲ್ಲಿ ಇದೆಯಾ? ಅಲ್ಪ ವಿಶ್ವಾಸದವರು ನಾವೆಂಬುದನ್ನು ಅರಿಕೆ ಮಾಡಿಕೊಳ್ಳಲೇಬೇಕು.

"ಅಲ್ಪ ವಿಶ್ವಾಸ" ಎಂಬುದಕ್ಕೆ ಇನ್ನೊಂದು ಅರ್ಥವೂ ಕೂಡ ಇದೆ. ಅರ್ಥ ಏನೆಂದರೆ ಪರಿಸ್ಥಿತಿಗಳಿಗನುಸಾರವಾಗಿ ಎದೆಗುಂದುವಂತದ್ದು. ನಮ್ಮ ಪರಿಸ್ಥಿತಿಗಳು ನಮಗೆ ಯಜಮಾನನಂತಾಗಬಹುದು. ಈ ಪರಿಸ್ಥಿತಿಗಳು ನಮ್ಮನ್ನು ಬಲಹೀನರನ್ನಾಗಿ ಮಾಡಿ ನಮ್ಮ ನಂಬಿಕೆಯನ್ನು ನಾಶ ಮಾಡಬಹುದು.ನಾವು ಯಾವ ಪರಿಸ್ಥಿತಿಗಳಲ್ಲಿದ್ದರು ಕೂಡ ನಾವು ನಿರೀಕ್ಷಿಸುತ್ತಾ, ಸಂತೋಷಿಸುತ್ತಾ, ನಂಬಿಕೆಯಲ್ಲಿ ಮುಂದುವರಿಯುವುದು ಅವಶ್ಯ.. ಯಾಕೆಂದರೆ ನಮ್ಮ ಎಲ್ಲ ಪರಿಸ್ಥಿತಿಗಳೂ ದೇವರ ನಿಯಂತ್ರಣದಲ್ಲಿವೆ. ಪ್ರೀತಿಯುಳ್ಳ ತಂದೆಯು ನಮ್ಮ ದೇವರಾಗಿದ್ದಾನೆ. ನಮಗೆ ಒಳ್ಳೇಯದಾಗದಿರುವಂತ ಯಾವುದೆ ಸಂಗತಿಯು ನಮಗೆ ಸಂಬವಿಸದಂತೆ ನೋಡಿಕೋಳ್ಳುವವನಾಗಿದ್ದಾನೆ (ರೋಮಾ. 8:28 ಮತ್ತು ವ್ಯಾಖ್ಯಾನ ನೋಡಿರಿ). ಆದುದರಿಂದ ನಾವು ಯಾಕೆ ಚಿಂತಿಸಬೇಕು? ನಾವು ನಿಜವಾಗಿಯೂ ಜೀವಿಸುವ ದೇವರನ್ನು ನಂಬಿದರೆ ಚಿಂತಿಸುವುದಿಲ್ಲ. (ರೋಮಾ. 8:35, 37 ನೋಡಿರಿ). ಆದರೆ ಆರಂಭದಲ್ಲಿ ಯೇಸುವಿನ ಶಿಷ್ಯರಲ್ಲಿಯೂ ಅಲ್ಪ ವಿಶ್ವಾಸವಿತ್ತು (ಮಾರ್ಕ 4:37-40 ನೋಡಿರಿ). ಪ್ರತಿಯೊಬ್ಬ ಕ್ರೈಸ್ತನೂ ನಂಬಿಕೆಯಲ್ಲಿ ಬೆಳೆಯುವುದು ಅವಶ್ಯವಾಗಿದೆ. ಇದು ನಮ್ಮ ಕೊನೆಯ ಜೀವಿತದವರೆಗೂ ಇರಬೇಕಾದ ಒಂದು ಕ್ರಮಯಾಗಿದೆ.

**31-32** ಯೇಸು ಹೇಳಿದನು "ನೀನು ಆಹಾರ, ನೀರು ಮತ್ತು ಬಟ್ಟೆಗಳಿಗಾಗಿ ಚಿಂತಿಸಬೇಡ. ಮೂರ್ತಿಪೂಜಕರಂತೆ ಎಲ್ಲಾ ಸಂಗತಿಗಳು ಓಡಿ ಹೋಗುವುವು." ಇಲ್ಲಿ "ಮೂರ್ತಿ ಪೂಜಕರು" ಎಂಬ ಶಬ್ದವು ಅರ್ಥವು ಕೇವಲ ನಾಸ್ತಿಕರಿಗೆ ಮಾತ್ರವಲ್ಲ. ಯಹೂದ್ಯರಲ್ಲದವರಿಗೂ ಮತ್ತು ಒಬ್ಬನೆ ನಿಜವಾದ [35]ದೇವರನ್ನು ನಂಬದೇ ಇರುವವರಿಗೂ ಅನ್ವಯಿಸುವಂತದ್ದಾಗಿದೆ. ಅಪನಂಬಿಗಸ್ಥರಿಗೆ ಪ್ರೀತಿಯುಳ್ಳ ತಂದೆಯು ದೇವರಾಗುವುದಿಲ್ಲ. ಅವರು ದೇವರನ್ನು ನಂಬುವುದಿಲ್ಲ. ಆದುದರಿಂದ ಅವರು ಆಹಾರ ಬಟ್ಟೆಗಳಿಗಾಗಿ ಚಿಂತಿಸುತ್ತಾರೆ. ಅವರು ದೇವರನ್ನು ನೀರಿಕ್ಷಿಸುವುದಕ್ಕೆ ಬದಲಾಗಿ ಮೋದಲು ಈ ಸಂಗತಿಗಳನ್ನು ನಿರೀಕ್ಷಿಸುವವರಾಗಿದ್ದಾರೆ.

ಎಷ್ಟೇ ಆದರೂ, ಹೇಚ್ಚಿನ ವಿಶ್ವಾಸಿಗಳು ಮೂರ್ತಿ ಪೂಜಕರಂತೆ ಅಪನಂಬಿಗಸ್ಥರಾಗಿ ಇವರೂ ಕೂಡ ಆಹಾರ, ಬಟ್ಟೆ ಮತ್ತು ಇನ್ನಿತರ ಅವಶ್ಯಕತೆಗಳಿಗಾಗಿ ಚಿಂತಿಸುವವರಾಗಿದ್ದಾರೆ. ಇವರು ಭವಿಷ್ಯತ್ತಿಗಾಗಿ ಚಿಂತಿಸುತ್ತಾರೆ. ಇವರು ಹೆಚ್ಚಾಗಿ ಈ ಲೌಕಿಕ ಸಂಗತಿಗಳಿಗಾಗಿ ಚಿಂತಿಸುತ್ತಾರೆ. ಇಂತಹ ಕ್ರೈಸ್ತರು ಅಲ್ಪ ವಿಸ್ವಾಸವನ್ನು ಹೊಂದಿದ್ದಾರೆ.

ನಾವು ನಮ್ಮ ವಿಶ್ವಾಸವನ್ನು ಅಭಿವೃದ್ಧಿ ಪಡಿಸಿಕೊಳ್ಳುವುದು ಹೇಗೆ? ಮೊದಲನೆಯದಾಗಿ, ನಾವು ಯಾರು ಎಂಬುದನ್ನು ನೆನಸಿಕೊಳ್ಳಬೇಕು. ನಾವು ದೇವರ ಮಕ್ಕಳು. ದೇವರು ಯಾವಾಗಲೂ,ಯಾವುದು ಉತ್ತಮವೋ ಅದನ್ನೆ ತನ್ನ ಮಕ್ಕಳಿಗೆ ಮಾಡುತ್ತಾನೆ. ಎರಡನೆಯದಾಗಿ, ದೇವರು ಯಾರೆಂಬುದನ್ನು ನೆನಪಿಸಿಕೋಳ್ಳಬೇಕು. ದೇವರು ನಮ್ಮ ತಂದೆ. ಆತನ ಪ್ರೀತಿ, ಶಕ್ತಿ ಮತ್ತು ಜ್ಞಾನಗಳು ಮಿತಿಯಿಲ್ಲದವುಗಳಾಗಿವೆ. ದೇವರಿಗೆ ಗೊತ್ತಿಲ್ಲದೆಯೇ ಒಂದು ಗುಬ್ಬಿಯಾದರು ನೆಲಕ್ಕೆ ಬೀಳದು. ನಿಮ್ಮ ತಲೆಯ ಎಲ್ಲ ಕೂದಲುಗಳು ಸಹ ಎಣಿಕೆಯಾಗಿದೆ (ಮತ್ತಾಯ 10:29-30). ಇದೆಲ್ಲವನ್ನು ತಿಳಿದಿರುವಂತಹ ದೇವರು ಖಂಡಿತವಾಗಿಯು ನಮ್ಮ ಎಲ್ಲಾ ಅವಶ್ಯತೆಗಳನ್ನು ಬಲ್ಲವನಾಗಿದ್ದಾನೆ. (ವಚನ 32).

**33** ಕ್ರಿಸ್ತನು ಹೇಳಿದನು, "ಕೇವಲ ಈ ಲೋಕದ ಸಂಗತಿಗನ್ನು ಮಾತ್ರ ನಿರೀಕ್ಷಿಸುವಂತ ಅವಿಶ್ವಾಸಿಗಳ ಹಾಗೆ ನೀವು ಅಪನಂಬಿಗಸ್ಥರಂತೆ ಇರಬೇಡಿರಿ." ನೀವು ದೇವರಲ್ಲಿ ಭರವಸೆಯಿಡಿರಿ."......ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ಆತನ ನೀತಿಗಾಗಿಯೂ ತವಕ ಪಡಿರಿ. ಇವುಗಳ ಕೂಡ ಎಲ್ಲವೂ ನಿಮಗೆ ದೊರಕುವುವು.

ಇಬ್ರಿಯ 11:6ರಲ್ಲಿ, ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ. ದೇವರ ಬಳಿಗೆ ಬರುವವನು ದೇವರು ಇದ್ದಾನೆ ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲ ಕೊಡುತ್ತಾನೆ ಎಂದು ನಂಬುವುದು ಅವಶ್ಯ, ಎಂದು ಬರೆಯಲ್ಪಟ್ಟಿದೆ. ಯೆರೆಮೀಯ ಪ್ರವಾದಿಯ ಮೂಲಕವಾಗಿದೇವರು ತಾನೇ ಹೇಳಿರುವುದೇನೆಂದರೆ, ನೀವು ನನ್ನನ್ನು ಹುಡುಕುವಿರಿ.ನನ್ನನ್ನು ಮನಃ ಪೂರ್ವಕವಾಗಿ ಹುಡುಕುವಾಗ ನನ್ನನ್ನು ಕಂಡುಕೊಳ್ಳುವಿರಿ (ಯೆರೆಮೀಯ 29:13). ನಾವು ಮನಃಪೂರ್ವಕವಾಗಿ (ಶ್ರದ್ಧೆಯಿಂದ)

ದೇವರನ್ನು ಹುಡುಕುತ್ತಿದ್ದೇವೆಯೋ? ಎಲ್ಲಕ್ಕಿಂತಲೂ ಮೇಲಾಗಿ ಆತನನ್ನು ನಿರೀಕ್ಷಿಸುತ್ತಿದ್ದೇವೆಯೋ? ನಾವು ನಮ್ಮ ಪರಲೋಕದ ಐಶ್ವರ್ಯದ ಬಗ್ಗೆ ಆಲೋಚಿಸುತ್ತೇವೆಯೋ? ಭೂಸಂಬಂಧವಾದವುಗಳ ಮೇಲೆ ಮನಸ್ಸಿಡದೆ, ಮೇಲಿರುವಂಥವುಗಳ ಮೇಲೆ ಮನಸ್ಸಿಡಿರಿ ಎಂದು ಪೌಲನು ಕೊಲಸ್ಸೆ 3:2ರಲ್ಲಿ ಬರೆಯುತ್ತಾನೆ.

ಕ್ರಿಸ್ತನಂತೆಯೇ ನಾವು ದೇವರ ರಾಜ್ಯಕ್ಕೆ ತವಕ ಪಡುವಂತದ್ದು ಮಾತ್ರವಲ್ಲದೆ ಹಾಗೆಯೇ ಆತನ **ನೀತಿಗಾಗಿಯು ತವಕ ಪಡುವವರಾಗಿರಬೇಕು. ನಾವು ನೀತಿಗೆ ಹಸಿಯ ಬೇಕು ಮತ್ತು ಬಾಯಾರಿಕೆಯುಳ್ಳ ವರು ಆಗಿರಬೇಕು.** (ಮತ್ತಾಯ 5:6). ಹೀಗೆ ಮಾಡುವುದಾದರೆ, ತುಂಬಿಸಲ್ಪಡುತ್ತೇವೆ. ನಮ್ಮ ನಂಬಿಕೆಯು ಬೆಳೆಯುವುದು. ಯಾವಾಗ ನಾವು ದೇವರನ್ನು ಆತನ ನೀತಿಯನ್ನು ನಿರೀಕ್ಷಿಸುವುದನ್ನು ನಿಲ್ಲಿಸುತ್ತೇವೆಯೋ ಆಗ ನಮ್ಮ ನಂಬಿಕೆಯು ಕುಂದುವುದು ಮತ್ತು, ನಮ್ಮ ಚಿಂತೆಯು ಹೆಚ್ಚಾಗುವುದು. ನಮ್ಮ ನಂಬಿಕೆಯು ಅಭಿವೃದ್ಧಿ ಹೊಂದಲು ನಾವು ದೇವರಿಗೆ ಹತ್ತಿರದವರಾಗಬೇಕು. ಆತನನ್ನು ಪ್ರಾರ್ಥಿಸಬೇಕು ಮತ್ತು ಆತನು ಕೊಟ್ಟ ದೇವರ ವಾಕ್ಯವನ್ನು ಓದಬೇಕು. **ದೇವರ ಸಮೀಪಕ್ಕೆ ಬನ್ನಿರಿ ಆಗ ಆತನು ನಿಮ್ಮ ಸಮೀಪಕ್ಕೆ ಬರುವನು** ಎಂದು ಯಾಕೋಬನು ಬರೆಯುತ್ತಾನೆ (ಯಾಕೋಬ 4:8). ನಾವು ಆತನನ್ನು ನಂಬಿ ಆತನಿಗೆ ಹತ್ತಿರದವರಾಗಿದ್ದಾಗ ಮಾತ್ರ, ದೇವರು, ನಮಗೆ ಅವಶ್ಯವಾಗಿರುವಂತದ್ದೆಲ್ಲವನ್ನು ಕೊಡಲು ಸಿದ್ಧನಾಗಿದ್ದಾನೆ. ಆತನು ಹೇಳುತ್ತಾನೆ," **ಮೊದಲು ನನ್ನನ್ನು ನಿರೀಕ್ಷಿಸಿರಿ. ಆಗ ನಿಮಗೆ ಅವಶ್ಯವಾದಂತ ಎಲ್ಲವುಗಳು ಕೊಡಲ್ಪಡುತ್ತವೆ."** ಇಷ್ಟು ಮಾತ್ರ ವಲ್ಲದೆ, ದೇವರು ತನ್ನ ರಾಜ್ಯವನ್ನು ಸಹ ನಮಗೆ ಕೊಟ್ಟಿದ್ದಾನೆ. ಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆ, **ಚಿಕ್ಕ ಹಿಂಡೇ, ಹೆದರಬೇಡ, ಆ ರಾಜ್ಯವನ್ನು ನಿಮಗೆ ದಯಪಾಲಿಸುವುದಕ್ಕೆ ನಿಮ್ಮ ತಂದೆಯು ಸಂತೋಷವುಳ್ಳವನಾಗಿದ್ದಾನೆ** (ಲೂಕ 12:32). ನಾವು ಮೊದಲು ದೇವರನ್ನು ನಿರೀಕ್ಷಿಸುವಾಗ, ಆತನು ನಮಗೆ ಆಹಾರ, ನೀರು ಮತ್ತು ಬಟ್ಟೆಯನ್ನು ಕೊಡುತ್ತಾನೆ,ತನ್ನ ನಿತೀಯನ್ನು ಕೊಡುತ್ತಾನೆ, ಕ್ರಿಸ್ತನಲ್ಲಿ ನಮಗೆ ಎಲ್ಲಾ ಆತ್ಮೀಕ ಆಶೀರ್ವಾದಗಳನ್ನು ಕೊಡುತ್ತಾನೆ. (ಎಫೆಸ 1:3). ಅಂತಿಮವಾಗಿ, ಆತನು ನಮಗೆ ತನ್ನ ರಾಜ್ಯವನ್ನು ಕೊಡುತ್ತಾನೆ, **ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ ಲೋಕಾದಿಯಿಂದ ನಿಮಗೋಸ್ಕರ ಸಿದ್ಧ ಮಾಡಿದ ರಾಜ್ಯವನ್ನು ಸ್ವಾಸ್ಥ್ಯವಾಗಿ ತೆಗೆದು ಕೊಳ್ಳಿರಿ,** ಎಂದು ಕ್ರಿಸ್ತನು ಹೇಳಿದನು(ಮತ್ತಾಯ 25:34). ಮಿತ್ರರೇ, ಇಂತಹ ಅಮೂಲ್ಯವಾದಂತ ದೊಡ್ಡದಾದ ಆಶೀರ್ವಾದಗಳನ್ನು ಕಳೆದುಕೊಳ್ಳುವುದು ಬೇಡ!

**34** **ಆದುದರಿಂದ ನಾಳೆಗೋಸ್ಕರ ಚಿಂತಿಸಬೇಡಿರಿ.**ನಾವು ಮೊದಲು ಆತನನ್ನು ನಿರೀಕ್ಷಿಸುವುದಾದರೆ, ನಮಗೆ ಅವಶ್ಯವಾದ ಎಲ್ಲಾ ಕೊರತೆಗಳನ್ನು ನೀಗಿಸಲು ವಾಗ್ದಾನ ಮಾಡಿದ್ದಾನೆ. **ನನ್ನ ದೇವರು ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು,** ಎಂದು ಪೌಲನು ಬರೆದನು. (ಫಿಲಿಪ್ಪಿ 4:19).

ಇಲ್ಲಿ ಯೇಸು ಕಲಿಸುತ್ತಾನೆ.ನಾವು ಒಂದು ದಿನದ ಸಮಯಕ್ಕಾಗಿ ಮಾತ್ರ ಜೀವಿಸ ಬೇಕು. ನಿನ್ನೆ ಮಾಡಿದ ತಪ್ಪುಗಳ ಬಗ್ಗೆ ನಾವು ಚಿಂತಿಸಲೇಬಾರದು; ಅದು ಮುಗಿದು ಹೋಗಿದೆ. ನಾಳೆಗೋಸ್ಕರವಾಗಿ ನಾವು ಚಿಂತಿಸಲೇಬಾರದು; ಇನ್ನೂ ಅದು ಬಂದಿಲ್ಲ. **ನಾಳಿನ ದಿನವು ತನ್ನದನ್ನು ತಾನೇ ಚಿಂತಿಸಿಕೊಳ್ಳುವುದು. ಆ ಹೊತ್ತಿನ ಕಾಟ ಆ ಹೊತ್ತಿಗೆ ಸಾಕು.** ಈ ದಿನಕ್ಕಾಗಿ ಮಾತ್ರ ನಾವು ಚಿಂತಿಸಬೇಕು. ಈ ದಿವಸದಲ್ಲಿ ನಾವು ದೇವರಿಗೆ ವಿಧೇಯರಾಗಿರಬೇಕು; ಈ ದಿವಸ ನಾವು ದೇವರೊಂದಿಗೆ ನಡೆಯಬೇಕು; ಈ ದಿವಸ ನಾವು ಆತನನ್ನು ನಂಬಲೇಬೇಕು. ಯೇಸು ಪ್ರಾರ್ಥಿಸಿದನು, **ನಮ್ಮ ಅನುದಿನದ ಆಹಾರವನ್ನು ಈ ಹೊತ್ತು ದಯಪಾಲಿಸು** (ವಚನ 11). ನಾಳೆಯ ನಮ್ಮ ಆಹಾರಕ್ಕಾಗಿ ಪ್ರಾರ್ಥಿಸುವುದು ಬೇಡ. ನಮಗೆ ಬೇಕಾದದ್ದನ್ನು ದೇವರು ನಮಗೆ ದಿನದಿಂದ ದಿನಕ್ಕೆ ಕೊಡುತ್ತಾನೆ.

ಕ್ರಿಸ್ತನನ್ನು ಅರ್ಥ ಮಾಡಿಕೊಳ್ಳೋಣ ಹೌದು, ನಾವು ನಾಳಿಯ ಬಗ್ಗೆ ಯೋಚಿಸಲೇ ಬೇಕು, ಯೋಜನೆ ಮಾಡಲೇಬೇಕು. ಈ ಹೊತ್ತು ನಾವು ಗಿಡ ನೆಟ್ಟರೆ (ಬಿತ್ತಿದರೆ) ನಾಳೆ ನಾವು ಸುಗ್ಗಿಯನ್ನು ಮಾಡುತ್ತೇವೆ. ಆದರೆ ನಾವು ನಾಳೆಗೋಸ್ಕರವಾಗಿ **ಚಿಂತೆ** ಮಾಡುವುದು ಬೇಡ.

ಚಿಂತೆಯು ಸೈತಾನನಿಂದ ಬಂದದ್ದಾಗಿರುತ್ತದೆ. ಇದು ಅವನು ಉಪಯೋಗಿಸುವ ಒಂದು ಆಯುಧ. ಇದರ ಅರ್ಥ ಆತನು ಚಿಂತೆಯೆಂಬುದರ ಮೂಲಕವಾಗಿ ನಮ್ಮನ್ನು ಬಲಹೀನರನ್ನಾಗಿ ಮಾಡಲು ಪ್ರಯತ್ನಿಸುತ್ತಾನೆ ಮತ್ತು ನಮ್ಮ ನಂಬಿಕೆಯನ್ನು ನಾಶ ಮಾಡುತ್ತಾನೆ..ಅಂದಮೇಲೆ,ನಾವು ಸೈತಾನನನ್ನು ಎದುರಿಸುತ್ತಾ ಇದರಿಂದ ಹೊರಗೆ ಬರುವುದು ಹೇಗೆ? ಯಾಕೋಬನು ಬರೆದಿದ್ದಾನೆ,. **ಸೈತಾನನನ್ನು ಎದುರಿಸಿರಿ, ಆಗ ಆತನು ನಿಮ್ಮನ್ನು ಬಿಟ್ಟು ಓಡಿ ಹೋಗುವನು** (ಯಾಕೋಬ 4:7). "ಸೈತಾನನೇ, ನೀನು ತೊಲಗಿ ಹೋಗು" ಎಂದು ನಾವು ಸೈತಾನನಿಗೆ ಯಾವಾಗಲೂ ಹೇಳುತ್ತಿರಬೇಕು: (ಮತ್ತಾಯ 4:10).

ನಾವು ಸೈತಾನನೊಂದಿಗೆ ವಿರೋಧಿಸುತ್ತಿರುವಾಗ, ನಾವು ದೇವರಲ್ಲಿ ಭರವಸೆಯುಳ್ಳವರಾಗಿರಬೇಕು. **ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ,ಯಾಕಂದರೆ ಆತನು ನಿಮಗೋಸ್ಕರ ಚಿಂತಿಸುತ್ತಾನೆ,** ಎಂದು ಪೇತ್ರನು ಬರೆಯುತ್ತಾನೆ.(1ನೇ ಪೇತ್ರ 5:7) ಈ ವಾಕ್ಯವನ್ನು ನಾವು ನಂಬೋಣ. ನಮ್ಮ ನಂಬಿಕೆಯನ್ನು ನಮಗೆ ಅನ್ವಯಿಸಿಕೋಳ್ಳೊಣ,' ನಮ್ಮ ಚಿಂತೆ ಅಂತ್ಯವಾಗುವುದು..

ದೇವರು ತನ್ನ ವಾಗ್ದಾನಗಳನ್ನು ನೇರವೇರಿಸುವುದರಲ್ಲಿ ಎಂದಿಗೂ ತಪ್ಪುವುದಿಲ್ಲ. ದಾವೀದನು ಬರೆದದ್ದೇನೆಂದರೆ, **ನಾವು ಬಾಲಕನಾಗಿದ್ದೆನು. ಈಗ ವೃದ್ಧನಾಗಿದ್ದೇನೆ. ಈವರೆಗೂ ನೀತಿವಂತನು ದಿಕ್ಕಿಲ್ಲದೆ ಬಿದ್ದಿರುವುದನ್ನಾಗಲೀ ಅವನ ಸಂತತಿಯವರು ಭಿಕ್ಷೆ ಬೇಡಿ ತಿನ್ನುವುದನ್ನಾಗಲೀ ನೋಡಲಿಲ್ಲ** (ಕೀರ್ತನೆ 37:25). ಪ್ರೀತಿಯನ್ನು ನಂಬಿ, ದೇವರಿಗೆ ನಂಬಿಗಸ್ಥರಾಗಿರಿ. ನೀವು ನಿಮ್ಮ ಪೂರ್ಣ ಹೃದಯದಿಂದಲೂ, ಆತ್ಮದಿಂದಲೂ, ಮನಸ್ಸಿನಿಂದಲೂ, ಮತ್ತು ಎಲ್ಲಾ ಶಕ್ತಿಯಿಂದಲೂ ಪ್ರೀತಸಿರಿ. ಎಲ್ಲಾ ವಿಷಯಗಳಿಗಾಗಿ ದೇವರನ್ನು ನಿರೀಕ್ಷಿಸಿರಿ. **ಇವುಗಳ ಕೂಡ ಎಲ್ಲವೂ ನಿಮಗೆ ದೊರಕುವವು.** ಎಣಿಸಲು ಸಾಧ್ಯವಾಗದಂತಹ ದೇವರ ಐಶ್ವರ್ಯವು ಕ್ರಿಸ್ತ ಯೇಸುವಿನಲ್ಲಿ ನಮ್ಮದಾಗಿದೆ ಅಂದರೆ ಈ ಜೀವಿತಲ್ಲಿ ಮಾತ್ರವಲ್ಲ ನಿತ್ಯಕಾಲದವರೆಗೆ ನಮ್ಮದಾಗಿದೆ.

## ಅಧ್ಯಾಯ - 7

### ಇತರರಿಗೆ ತೀರ್ಪು ಮಾಡಬೇಡಿರಿ (7:1-6)

(ಲೂಕ 6:37-38, 41-42)

1 **ಇತರರಿಗೆ ತೀರ್ಪು ಮಾಡಬೇಡಿರಿ.** ಈ ವಚನದ ಅರ್ಥವನ್ನು ತಿಳಿದುಕೊಳ್ಳುವುದಕ್ಕೋಸ್ಕರವಾಗಿ ಈ ಎರಡೂ ರೀತಿಯ ತೀರ್ಪಿನಲ್ಲಿರುವ ತಾರತಮ್ಯವನರಿಯಬೇಕು. ಮೊದಲನೆಯದು, ಮನುಷ್ಯನ ಕಾರ್ಯ ಮತ್ತು ನಡವಳಿಕೆಯ ಮೇಲೆ ತೀರ್ಪು ಎರಡನೆಯದು, ಮನುಷ್ಯನು ತನ್ನಷ್ಟಕ್ಕೆ ತಾನೇ ತೀರ್ಪು ನೀಡುವ ವಿಷಯ. ಇಲ್ಲಿ ಕ್ರಿಸ್ತನು, ಒಬ್ಬನು ತನ್ನ ಬಗ್ಗೆ ತಾನೇ ತೀರ್ಪುಕೊಡುವ ವಿಷಯದ ಬಗ್ಗೆ ಮಾತನಾಡುತ್ತಾನೆ.

ನಾವು ಮನುಷ್ಯನ ನಡತೆ, ಆತನ ಉದ್ದೇಶ, ಅವನ ಆಲೋಚನೆ, ಆತನ ಅಂತರಂಗದ ಜೀವಿತ ಮತ್ತು ಆತನ ಆತ್ಮ' ವಿಷಯಗಳ ಬಗ್ಗೆ ತೀರ್ಪು ಮಾಡಲೇಬಾರದು. ಇವುಗಳಿಗಾಗಿ ದೇವರು ತಾನೇ ನ್ಯಾಯ(ತೀರ್ಪು) ಕೊಡುವನು. ಪೌಲನು ಬರೆದದ್ದೇನೆಂದರೆ, **ಮತ್ತೊಬ್ಬನ ಸೇವಕನ ವಿಷಯವಾಗಿ ತೀರ್ಪು ಮಾಡುವುದಕ್ಕೆ ನೀನು ಯಾರು? ಅವನು ನಿರ್ದೋಷಿಯಾಗಿ ನಿಂತರೂ, ದೋಷಿಯಾಗಿ ಬಿದ್ದರೂ, ಅದು ಅವನ ಯಜಮಾನನಿಗೇ ಸೇರಿದ್ದು** (ರೋಮಾ. 14:4). ಲೂಕ 18:11ರಲ್ಲಿ ಫರಿಸಾಯನು ತನ್ನ ಬಗ್ಗೆ ತಪ್ಪಾದ ರೀತಿಯಲ್ಲಿ ತೀರ್ಪು ಮಾಡಿಕೊಳ್ಳುವಂತ ಒಂದು ಉದಾಹರಣೆಯನ್ನು ಯೇಸುವು ಕೊಡುತ್ತಾನೆ. ಫರಿಸಾಯನು ತನ್ನ ಪಕ್ಕದಲ್ಲಿ ನಿಂತಿದ್ದ ಸುಂಕದವನನ್ನು ನೋಡಿ,, "**ದೇವರೇ, ನಿಮಗೆ ಉಪಕಾರ ಸಲ್ಲಿಸುತ್ತೇನೆ. ದೇವರೇ ಸು.ಲು ಕೊಳ್ಳುವವರು, ಅನ್ಯಾಯಗಾರರೂ, ಹಾದರ ಮಾಡುವವರೂ ಆಗಿರುವ ಉಳಿದ ಜನರಂತೆ ಮತ್ತು ತೆರಿಗೆ ಕೊಡಿಸುವವರಂತೆ, ನಾನಲ್ಲ.**"ಎಂದು ಅಂದುಕೊಳ್ಳುತ್ತಾನೆ. ಹೀಗೆ ಆತನು ಹೇಳುತ್ತ ಹತ್ತಿರದಲ್ಲಿ ನಿಂತಂತಹ ತೆರಿಗೆ ವಸೂಲಿ ಮಾಡುವ ಅಧಿಕಾರಿಯನ್ನು ನೋಡಿ, "ನಾನು ಒಳ್ಳೆಯವನು", "ನೀನು ಕೆಟ್ಟವನು " ಅಂದುಕೊಳ್ಳುತ್ತಾನೆ. ಹೀಗೆ ಬೇರೆಯವರನ್ನು ನಿಂದಿಸುವಂತಹ, ಹೀನೈಸುವಂತಹ, ಮನೋಭಾವವು ತಪ್ಪಾಗಿದೆ. ಈ ರೀತಿಯಾದ ತೀರ್ಪನ್ನು ನಾವು ಎಂದಿಗೂ ಮಾಡಲೇಬಾರದು. ಫರಿಸಾಯರಂತ ಜನರು ಯಾವಾಗಲೂ ಬೇರೆಯವರ ತಪ್ಪುಗಳನ್ನು ನೋಡುವವರಾಗಿದ್ದರು. ಅವರು ಯಾವಾಗಲೂ ಬೇರೆಯವರನ್ನು "ತುಳಿಯುವುದಕ್ಕೆ" ಪ್ರಯತ್ನಿಸುತ್ತಿದ್ದರು. ಒಬ್ಬನು ತಪ್ಪು ಮಾಡುವುದನ್ನು, ಪಾಪ ಮಾಡುವುದನ್ನು, ನೋಡಿ ಫರಿಸಾಯರು ಸಂತೋಷ ಪಡುತ್ತಿದ್ದರು. ಇತರರು ಮಾಡಿದ ಕೆಟ್ಟ ಸಂಗತಿಗಳನ್ನು ಕೇಳಲು ಇಷ್ಟ ಪಡುತ್ತಿದ್ದರು. (ರೋಮಾ. 14:10-13 ನೋಡಿರಿ). ಇಂತಹ ಮನೋಭಾವದಿಂದ ಕೊಡುವ ತೀರ್ಪು ಪ್ರೀತಿಗೆ ವಿರುದ್ಧವಾಗಿದೆ (1ನೇ ಕೊರಿಂಥ 13:4, 6-7 ನೋಡಿರಿ).

ಆದರೂ ಇನ್ನೊಂದು ರೀತಿಯಾದಂತ ತೀರ್ಪು ಸರಿಯಾಗಿದ್ದು ಅವಶ್ಯವಾಗಿರುವಂತದ್ದಾಗಿದೆ. ಬೇರೆ ಜನರ ಹೊರಗಿನ ಕೃತ್ಯಗಳಿಗನುಸಾರವಾಗಿ ತೀರ್ಪು ಮಾಡುವುದು ಉಂಟು. ನಾವು ಪಾಪಿಗಳನ್ನು ತೀರ್ಪಿಗೆ ಗುರಿ ಮಾಡಲೇಬಾರದು. ಆದೆ ಅವನ ಪಾಪಕ್ಕಾಗಿ ತೀರ್ಪು ನೀಡಬೇಕು. ಬೇರೆಯವರ ಕೆಲಸಕ್ಕಾಗಿ ಮತ್ತು ಅವರ ಮಾತುಗಳಿಗಾಗಿ ನಾವು ತೀರ್ಪು ಮಾಡಲೇಬೇಕು. ಯೇಸು ಹೇಳಿದ್ದಾನೆ, " ಸುಳ್ಳು ಪ್ರವಾದಿಗಳ ವಿಷಯದಲ್ಲಿ ಎಚ್ಚರವಾಗಿರಿ" (ವಚನ 15). ಆದುದರಿಂದ ಸುಳ್ಳು ಪ್ರವಾದಿಗಳನ್ನು, ಸುಳ್ಳು ಭೋದಕರನ್ನು ಗುರುತಿಸಲು ಶಕ್ತರಾಗಿರಬೇಕು. ಅವರ ಬೋಧನೆಗೂ ದೇವರ ವಾಕ್ಯದ ಬೋಧನೆಗೂ ಇರುವ ವ್ಯತ್ಯಾಸವನ್ನು ಗುರುತಿಸಲೇಬೇಕು. ಯೇಸು ಹೇಳಿದ್ದು, "ಪರಿಶುದ್ಧವಾದದ್ದನ್ನು ನಾಯಿಗಳಿಗೆ ಕೊಡಬೇಡಿರಿ" (ವಚನ 6). "ನಾಯಿಗಳು" ಅಂದರೆ ದೇವರಿಗೆ ವಿರುದ್ಧವಾಗಿರುವವರು; ಅವರು ದೇವರಿಗೆ ಅವಿಧೇಯರಾಗಿದ್ದಾರೆ. ದೇವರಿಗೆ ವೈರಿಗಳನ್ನು ಗುರುತಿಸಲು ಶಕ್ತರಾಗಿರಬೇಕು. ಕ್ರಿಸ್ತನು ಹೇಳಿದನು, ಅವರು **ಬಿಡುವ ಫಲಗಳಿಂದಲೇ** ಅವರನ್ನು ತಿಳಿದುಕೊಳ್ಳುತ್ತೇವೆ (ವಚನ 16, 20). ಆದುದರಿಂದ ಅವರ ಫಲಗಳಿಗೆ ತೀರ್ಪು ಮಾಡಬೇಕು. ಅಧಿಕಾರದಲ್ಲಿರುವವರೂ,ಜನರ ಕಾರ್ಯಗಳಿಗಾಗಿ ನ್ಯಾಯ ತೀರಿಸಬಹುದು. ನ್ಯಾಯಾಧೀಶರು ನ್ಯಾಯಾಲಯಗಳಲ್ಲಿ ನ್ಯಾಯ ತೀರಿಸುತ್ತಾರೆ. ಸಭಾ ಹಿರಿಯರು ತಮ್ಮ ಅಧೀನದಲ್ಲಿರುವವರನ್ನು ಶಿಸ್ತಿನಲ್ಲಿಡಬೇಕು. (1ನೇ ಕೊರಿಂಥ 5:1, 3-4). ಹೀಗಿದ್ದರೂ ಅಧಿಕಾರದಲ್ಲಿದ್ದವರು ಶಿಸ್ತಿಗಾಗಿ ಮತ್ತು ನ್ಯಾಯಕ್ಕಾಗಿ ತೀರ್ಪುಕೊಡುವಾಗ, ವ್ಯಕ್ತಿಯ ವಿಷಯವಾಗಿ ಎಲ್ಲವನ್ನು ಅವರು ತಿಳಿಯದೆ ಇದ್ದಾಗ್ಯೂ. ಜನರ ನಡವಳಿಕೆಗನುಸಾರವಾಗಿಯೇ ತೀರ್ಪು ಕೊಡಬೇಕು.. ಆದರೆ ದೇವರು ಮಾತ್ರ ಮನುಷ್ಯನಿಗೆ ನಿರಂಕುಶವಾದಂತ ಅಂತಿಮ ತೀರ್ಪನ್ನು ಕೊಡುತ್ತಾನೆ. ಯಾಕೆಂದರೆ ದೇವರು ಎಲ್ಲವನ್ನೂ ಬಲ್ಲವನಾಗಿದ್ದಾನೆ.

2 **ತೀರ್ಪು ಮಾಡಬೇಡಿರಿ,ಅಥವಾ ನೀವು ಮಾಡುವ ತೀರ್ಪಿಗೆ ಸರಿಯಾಗಿ ನಿಮಗೂ ತೀರ್ಪಾಗುವುದು.** ನಾವು ಒಬ್ಬರಿಗೆ ತಪ್ಪಾದ ರೀತಿಯಲ್ಲಿ ತೀರ್ಪು ನೀಡಿದರೆ, ದೇವರು ನಮಗೆ ತೀರ್ಪು ಕೊಡುವನು. ನಾವು ಮತ್ತೊಬ್ಬರ ಮೇಲೆ ತಪ್ಪು ಹೊರಿಸಿದರೆ, ದೇವರು ನಮ್ಮ ಮೇಲೆ ತಪ್ಪು ಹೊರಿಸುವನು. ನಾವು ಇತರರನ್ನು ಕ್ಷಮಿಸಿದರೆ, ದೇವರು ನಮ್ಮನ್ನು ಕ್ಷಮಿಸುವನು. (ಲೂಕ 6:37). ನಾವು ಪಾಪಿಗಳಾಗಿದ್ದಾಗಲೇ ದೇವರು ನಮ್ಮನ್ನು ಕ್ಷಮಿಸಿದನು. ನಾವು ಇತರರನ್ನು ಕ್ಷಮಿಸದೇ ಹೋದರೆ ಇದರ ಅರ್ಥ ದೇವರಿಂದ ದೊರಕುವ ಕ್ಷಮಾಪಣೆ ನಮ್ಮಲಿಲ್ಲ. ಕ್ಷಮಿಸುವುದು ಏನು ಎಂಬುದು ನಾವು ಅರಿಯೆವು. ನಾವು ಖಂಡನೆಗೋಳಗಾಗುವೆವು (ಮತ್ತಾಯ 6:14-15).

ಇದರಿಂದ ನಾವು ಕಂಡುಕೊಳ್ಳುವುದೇನೆಂದರೆ, ನಾವು ಇತರರನ್ನು ನಡಿಸಿದಂತೆ ದೇವರು ನಮ್ಮನ್ನು ನಡಿಸುತ್ತಾನೆ. ನಾವು ಇತರರಿಗೆ ತೀರ್ಪು ಮಾಡಿದಂತೆ ದೇವರು ನಮಗೆ ತೀರ್ಪು ಮಾಡುತ್ತಾನೆ.ನಾವು ಇತರರಿಗೆ ಕರುಣೆಯನ್ನು ತೋರಿಸಿದಂತೆಯೆ ದೇವರು ನಮಗೆ ಕರುಣೆಯನ್ನುತೋರಿಸುವನು . ನಾವು ಇತರರಿಗೆ ಎಷ್ಟು ಸಾಧ್ಯವಾದಷ್ಟು ಕೊಡುತ್ತೆವೆಯೋ ಅಷ್ಟರಮಟ್ಟಿಗೆ. ದೇವರು ನಮಗೆ ಕೊಡುತ್ತಾನೆ. ಲೂಕ 6:38ರಲ್ಲಿ, "**ಕೊಡಿರಿ, ಆಗ ನಿಮಗೂ ಕೊಡುವರು, ಜಡಿದು ಅಲ್ಲಾಡಿಸಿ ಹೊರ ಚಲ್ಲುವ ಹಾಗೆ**

ತುಂಬಾ ಅಳತೆಯನ್ನು ಅಳೆದು ನಿಮ್ಮ ಸೆರಗಿಗೆ ಹಾಕುವರು. ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು,'' ಎಂದು ಯೇಸು ಹೇಳುತ್ತಾನೆ .ಇದು ಹಿಟ್ಟನ್ನು ತುಂಬಿಕೊಡುವ ವಿಷಯದ ಬಗ್ಗೆ ಸೂಚಿಸುವಂತದ್ದಾಗಿದೆ. ದೇವರು ಸಂಪೂರ್ಣವಾಗಿ ತುಂಬಿಸಿ ಕೊಡುವನು. ದೇವರು ಲೋಭಿಯಲ್ಲ. ಆತನು ಸಂಪೂರ್ಣವಾಗಿ ಒಳ್ಳೆಯವನಾಗಿದ್ದಾನೆ. ನಾವು ಏನನ್ನಾದರೂ ಕೊಟ್ಟರೆ ತಿರುಗಿ ಆತನು ನಮಗೆ ಸಂಪೂರ್ಣವಾದ ಅಳತೆಯಿಂದ ಕೊಡುವನು ಮತ್ತು ಹೆಚ್ಚಾಗಿಯೇ ಕೊಡುವನು (ಮಾರ್ಕ 4:24 ಮತ್ತು ವ್ಯಾಖ್ಯಾನವನ್ನು ನೋಡಿರಿ).

ಅಂತಿಮ ನ್ಯಾಯ ತೀರ್ಪಿನ ದಿನದಲ್ಲಿ ನಾವೆಲ್ಲರೂ ದೇವರ ನ್ಯಾಯಾಸನದ ಮುಂದೆ ನಿಲ್ಲಬೇಕು. (ರೋಮಾ. 14:10). ಯಾರಾರು ರಕ್ಷಿಸಲ್ಪಟ್ಟಿದ್ದಾರೋ ಅವರೆಲ್ಲರಿಗೆ ತಾವು ಮಾಡಿದ ಕ್ರೀಯೆಗಳಿಗಾಗಿ ತೀರ್ಪು ಆಗುತ್ತದೆ (1ನೇ ಕೊರಿಂಥ 5:10 ವ್ಯಾಖ್ಯಾನ ನೋಡಿರಿ). ನಾವು ಸುಮ್ಮ ಸುಮ್ಮನೆ ಆಡಿದ ಪ್ರತಿಯೊಂದು ಮಾತಿಗಾಗಿ ತೀರ್ಪಾಗುವುದು (ಮತ್ತಾಯ 12:36-37). ಆದುದರಿಂದ ನಾವು ಈ ಭೋದನೆಗಳನ್ನು ಎಚ್ಚರಿಕೆಯಿಂದ ಪಾಲಿಸೋಣ. ನಾವು ಇತರರನ್ನು ದೂಷಿಸುವುದು ಬೇಡ. ಇದಕ್ಕೆ ಬದಲಾಗಿ ಕರುಣೆಯನ್ನು ತೋರಿಸೋಣ. ಯಾಕೆಂದರೆ ನ್ಯಾಯ ತೀರ್ಪಿನ ದಿನದಲ್ಲಿ ದೇವರ ಅಪಾರವಾದ ಕರುಣೆಯು ನಮಗೆ ಅವಶ್ಯವಾಗಿದೆ.

**3** ವಚನ 3-5ರಲ್ಲಿ ಕ್ರಿಸ್ತನು, ನಾವು ಯಾಕೆ ತೀರ್ಪು ಮಾಡಬಾರದು ಎಂಬುದಕ್ಕೆ ಮತ್ತೊಂದು ಕಾರಣವನ್ನು ಕೊಡುತ್ತಾನೆ. ಸಾಧಾರಣವಾಗಿ ನಾವು ತೀರ್ಪು ಮಾಡಲು ಯೋಗ್ಯರಲ್ಲ ಮತ್ತು ತೀರ್ಪು ಮಾಡುವುದಕ್ಕೆ ಸಂಪೂರ್ಣವಾದ ' ವಿಷಯ ನಮಗೆ ತಿಳಿಯದು.. ಒಬ್ಬನು ತಪ್ಪು ಅಥವಾ ಪಾಪ ಮಾಡುವುದನ್ನು ನಾವು ನೋಡುವಾಗ "ಓಹೋ ಎಂತಹ ದೊಡ್ಡ ತಪ್ಪು" ಎಂದು ಉದ್ಗರಿಸುತ್ತಾ!, ಎಷ್ಟು ಬೇಗನೇ ಅವನ ಮೇಲೆ ತಪ್ಪು ಹೊರಿಸುತ್ತೇವೆ ಮತ್ತು ಖಂಡಿಸುತ್ತೇವೆ. . ನಾವು ನೆನಸಬಹುದು. ಮತ್ತೊಬ್ಬರ ತಪ್ಪುಗಳನ್ನು ಕಂಡುಹಿಡಿಯುವುದೇ ನಮ್ಮ ಕೆಲಸವೆಂದು. ಆದರೆ ಯಾವಾಗ ಈ ಕೆಲಸವನ್ನು ಮಾಡುತ್ತೇವೆಯೋ ನಾವು ದೇವರ ದೃಷ್ಟಿಯಲ್ಲಿ ಕಪಟಿಗಳಾಗಿ ಕಾಣಿಸುತ್ತೇವೆ.ನಮ್ಮಲ್ಲಿರು ಹಲಿಗೆಯೋಪಾದಿಯಂತ ದೊಡ್ಡ ಪಾಪ ವನ್ನು ತೇಗೆಯಲು ಚಿಂತಿಸುವುದಿಲ್ಲ ಆದರೆ, ಕಟ್ಟಿಗೆ ಕೊಯ್ಯುವಾಗ ಉದುರುವ ಹುಡಿ ಯೋಪಾದಿಯಲ್ಲಿರುವ ಸಣ್ಣ ಪಾಪವನ್ನುಸಹೋದರನಿಂದ ತೆಗೆಯಲು ಆಸಕ್ತಿ ವಹಿಸುತ್ತೆವೆ..

**4** ಯಾಕೆಂದರೆ ನಾವೇ ಪಾಪಿಗಳಿರಲಾಗಿ ಮತ್ತೊಬ್ಬರ ಕಣ್ಣಿನಲ್ಲಿರುವ ಚುಕ್ಕಿಯನ್ನು ನೋಡಲು ಬರುವುದಿಲ್ಲ. ತೆಗೆಯಲು ಬರುವುದಿಲ್ಲ. ನಮ್ಮ ಪಾಪವು ನಮ್ಮನ್ನು ಆತ್ಮೀಕ ಕುರುಡರನ್ನಾಗಿ ಮಾಡುತ್ತಿದೆ. ಇದು ನಮ್ಮ ಕಣ್ಣಿನಲ್ಲಿಯೇ ಹಲಿಗೆಯ ಹಾಗೆ ಇರುವಂತ ದೊಡ್ಡ ಪಾಪವಾಗಿದೆ. ನಾವೇ, ಕಣ್ಣಿನ ಕುರುಡ ವೈದ್ಯನಂತಿದ್ದು ಮತ್ತೊಬ್ಬ ಸಹೋದರನ ಕಣ್ಣಿನಲ್ಲಿರುವ ರವೆಯನ್ನು ತೆಗೆಯಲು ಸಾಧ್ಯವಿಲ್ಲ. ಒಂದು ಸಂದರ್ಭದಲ್ಲಿಯಹೂದ್ಯರು, ವ್ಯಭಿಚಾರ ಮಾಡುತ್ತಿದ್ದಂತಹ ಒಬ್ಬ ಸ್ತ್ರೀಯನ್ನು ಹಿಡಿದು, ಯಹೂದ್ಯರ ಧರ್ಮಶಾಸ್ತ್ರ ಪ್ರಕಾರ ಎಲ್ಲರೂ ಆಕೆಯ ಮೇಲೆ ಕಲ್ಲು ಹಾಕಬೇಕೆಂದಿದ್ದರು. (ಕಲ್ಲು ಹೊಡೆದು ಸಾಯಿಸಬೇಕು) (ಯೋಹಾನ 8:1-11). ಯೇಸು ಅವರಿಗೆ ಹೇಳಿದನು, (ಯೋಹಾನ 8:7ರಲ್ಲಿ ಬರೆಯಲ್ಪಟ್ಟಿದೆ). ನಿಮ್ಮಲ್ಲಿ ಪಾಪವಿಲ್ಲದವನು ಯಾರೋ ಅವನೇ ಮೊದಲು ಆಕೆಯ ಮೇಲೆ ಕಲ್ಲನ್ನು ಹಾಕಲಿ.ಆ ಸ್ತ್ರೀಗೆ ತೀರ್ಪು ಕೊಡಲು ಅವರಲ್ಲಿ ಯೋಗ್ಯತೆ ಇರಲಿಲ್ಲ. ಯಾಕೆಂದರೆ ಯಹೂದ್ಯೇ ಪಾಪಿಗಳಾಗಿದ್ದರು.

**5** ವೇಷಧಾರಿ (ಕಪಟಿಗಳು ಅಥವಾ ಪಾಶಂಡಿಗಳು) "ವೇಷಧಾರಿ" ಇದು ಒಂದು ಖಟಿಣವಾದಂತ ಶಬ್ದ. ಈ ವೇಷಧಾರಿಗಳು ಹೊರಗಿನ ತೋರಿಕೆಗೆ ನೀತಿವಂತರಂತೆ ಕಾಣಿಸಿಕೊಂಡು ಅಂತರಂಗದ ಹೃದಯದಲ್ಲಿ ಪಾಪದಿಂದ ತುಂಬಿಸಲ್ಪಟ್ಟವರು.ಈ ಜನರು ಒಂದು ಸಂಗತಿಯನ್ನು ಹೇಳಿ, ತಮ್ಮ ಹೃದಯದಲ್ಲಿ ಇದರ ವಿರುದ್ಧವಾದುದನ್ನು ನಂಬುತ್ತಿದ್ದರು. ಇವರ ಭಾಷಣವು ಚಂಚಲತೆಯುಳ್ಳದ್ದಾಗಿತ್ತು. ಇವರು ತಾವೇ ಪಾಪಿಗಳಾಗಿದ್ದರೂ ತಮ್ಮ ಸಹೋದರನ ಪಾಪಗಳನ್ನು ತೋರಿಸುವುದರಲ್ಲಿ ಸಂತೋಷವುಳ್ಳವರಾಗಿದ್ದರು. ಇವರು, ಸಹೋದರನು ಮಾಡಿದ ಸಣ್ಣ ಪಾಪವನ್ನು ತೆಗೆಯಲಿಕ್ಕೆ ಪ್ರಯತ್ನಿಸುತ್ತಿದ್ದರು. ಆದರೆ ತಮ್ಮ ತಪ್ಪುಗಳನ್ನು ತೆಗೆಯಲು ಪ್ರಯತ್ನ ಮಾಡುತ್ತಿರಲಿಲ್ಲ. ಇದು ಇತರರಿಗೆ ದೊಡ್ಡದಾಗಿಯೂ ಸ್ಪಷ್ಟವಾಗಿಯೂ ದೊಡ್ಡದಾಗಿಯೂ ಕಾಣಿಸುತ್ತಿತ್ತು. ಇದು ಹಲಿಗೆಯಂತೆ ದೊಡ್ಡದಿದ್ದರು ಇವರ ಕಣ್ಣಿಗೆ ಕಟ್ಟಿಗೆಯ ಒಂದು ಸಣ್ಣ ಕೋಲಿನಂತಿರುತಿತ್ತು.

ನೀವು ಕಪಟಿಗಳು ಮೊದಲು ನಿಮ್ಮ ಕಣ್ಣಿನಲ್ಲಿರುವ ಹಲಿಗೆಯಂತಹ ದೊಡ್ಡ ಪಾಪವನ್ನು ತೆಗೆಯಿರಿ. ನಮ್ಮ "ಹಲಿಗೆ" ಯು ನಮ್ಮ ಕಪಟತನವಾಗಿದೆ. ಇದು ತೀರ್ಪುಕೊಡುವಂತ ಮತ್ತು ಖಂಡಿಸುವಂತ ನಮ್ಮ ಆತ್ಮವಾಗಿದೆ. ಇದು ನಮ್ಮ, ಅಹಂಕಾರದ ಮತ್ತು ಸ್ವನೀತಿಯ ನೆಲೆಯಾಗಿದೆ. ಯಾವುದೇ ರೀತಿಯಲ್ಲಿ ನಮ್ಮ ಸಹೋದರ ಪಾಪ ಮಾಡಿ ಅಪರಾಧಿಯಾಗಿದ್ದರೂ ಸಹ ನಮ್ಮಲ್ಲಿರುವ ತೀರ್ಪುಮಾಡುವಂತದ್ದು ಮತ್ತು ದೂಷಿಸುವಂತದ್ದು ದೊಡ್ಡ ಪಾಪವಾಗಿದೆ. ಇದರ ಬಗ್ಗೆ ಯೋಚಿಸಿರಿ.

ಇತರರಿಗೆ ತೀರ್ಪು ಮಡುವುದಕ್ಕೆ ಬದಲಾಗಿ ನಮ್ಮಷ್ಟಕ್ಕೆ ನಾವೇ ನಮ್ಮನ್ನು ತೀರ್ಪಿಗೊಳಪಡಿಸೋಣ. (1ನೇ ಕೊರಿಂಥ 11:31 ನೋಡಿರಿ). ನಮ್ಮ ಕಣ್ಣಿನೊಳಗಿನ ಹಲಿಗೆ(ದೊಡ್ಡದಾದ)ಯನ್ನು ತೆಗೆಯುವ. ಇದು ಅಷ್ಟು ಸುಲಭವಾಗಿ ತೆಗೆಯಲಿಕ್ಕೆ ಬರುವುದಿಲ್ಲ. ಇದು ನಮ್ಮ ಗರ್ವವನ್ನು ತಗ್ಗಿಸುತ್ತದೆ ಮತ್ತುಇದು ಬಹಳ ನೋವಿನದಾಗಿದೆ. ಆದರೆ ಇದನ್ನು ನಾವು ಮಾಡಲೇಬೇಕು.

ನಮ್ಮ ಕಣ್ಣಿಂದ ಹಲಿಗೆಯನ್ನು ತೆಗೆಯುವುದಾದರೆ, ನಾವು ಬಹು ದೀನತೆಯುಳ್ಳವರು, ಮಮತೆಯುಳ್ಳವರಾಗಿ, ಇತರರಿಗೆ ಕಾಣಿಸಿಕೊಳ್ಳುತ್ತೇವೆ. ಆಮೇಲೆ ನಾವು ನಮ್ಮ ನಮ್ಮಷ್ಟಕ್ಕೆ ನಾವೇ ತೀರ್ಪು ಮಾಡಿಕೊಳ್ಳೋಣ. ಇತರರಿಗೆ ತೀರ್ಪುಮಾಡುವುದನ್ನು ನಿಲ್ಲಿಸಿಬಿಡೋಣ. ಆಗ ನಾವು ಸ್ಪಷ್ಟವಾಗಿ ನೋಡಲು ಶಕ್ತರಾಗುತ್ತೇವೆ. ದೇವರು ನನ್ನ ಸಹೋದರನನ್ನು ನೋಡಿದ ಹಾಗೆ ನಾವು ನೋಡಲು ಶಕ್ತರಾಗುತ್ತೇವೆ. ಸಹೋದರನನ್ನು ನಾವು ಪ್ರೀತಿಯಿಂದಲೂ, ಕರುಣೆಯಿಂದಲೂ ನೋಡುತ್ತೇವೆ. ಹೌದು, ಆಗ ನಾವು ಆತನ ಕಣ್ಣಿನಲ್ಲಿರುವ ಚುಕ್ಕೆ(ಹುಡಿ)ಯನ್ನು ನೋಡುವವರಾಗಿದ್ದೇವೆ (ಗಲಾತ್ಯ 6:1 ಮತ್ತು ವ್ಯಾಖ್ಯಾನ ನೋಡಿರಿ). ಅಂದರೆ ನಮ್ಮಲ್ಲಿರುವಂತ ತೀರ್ಪು ಮಾಡುವಂತ ಮತ್ತು ದೋಷ ಹೊರಿಸುವಂತ ಆತ್ಮವು ಹೋಗುವುದು.

**6** ಯಹೂದ್ಯರು, ನಾಯಿ, ಹಂದಿಗಳನ್ನು ಅಶುದ್ಧವಾದವುಗಳೆಂದು ಯೋಚಿಸಿದ್ದರು. ದೇವಾಲಯದ ಮಾಂಸವನ್ನು ನಾಯಿಗಳಿಗೆ ಕೊಡುವುದನ್ನು, ಇವರು ಉಹಿಸುತ್ತಲು, ಒಪ್ಪುತ್ತಲು ಇರಲು ಇಲ್ಲ. ಮತ್ತು ಅವರು ಆತ್ಮೀಕ ಆಶೀರ್ವಾದಗಳನ್ನು ಪಾಶಂಡಿಗಳೊಡನೆ ಹಂಚಿಕೊಳ್ಳುವದು ಮುತ್ತುಗಳನ್ನು ಹಂದಿಯ ಮುಂದೆ ಹಾಕಿದಂತೆಯೇ ಎಂದು ಇವರ ಬಾವನೆ. ಮುತ್ತುಗಳನ್ನು ಹಂದಿಗಳಿಗೆ ಆಹಾರವಾಗಿ ಕೊಟ್ಟರೆ ಏನಾಗುತ್ತದೆ? ಹಂದಿಗಳು ಆ ಮುತ್ತುಗಳನ್ನು ಉಗುಳಿ ಮತ್ತು ತುಳಿದು ಬಿಡುತ್ತವೆ, ನಂತರ ಅವುಗಳನ್ನು ಕೊಟ್ಟ(ಹಾಕಿದ)ವನನ್ನು ಸೀಳಿಬಿಡುತ್ತವೆ.

ಆದುದರಿಂದ ನಾವು ತಿಳಿಯಬೇಕಾದದ್ದೇನೆಂದರೆ ಇಲ್ಲಿ ಹೇಳಲ್ಪಟ್ಟಂತಹ ನಾಯಿ ಮತ್ತು ಹಂದಿ, ಇವುಗಳು ಕಠಿಣ ಹೃದಯವುಳ್ಳವರಿಗೂ, ಅಪನಂಬಿಗಸ್ಥರಿಗೂ ಮತ್ತು ಉದ್ದೇಶಪೂರ್ವಕವಾಗಿ ಯಾವಾಗಲೂ ದೇವರನ್ನು ವಿರೋಧಿಸುವವರಿಗೆ ಹೋಲಿಕೆಯಾಗಿದೆ. ದೇವರ ವಾಕ್ಯಗಳೆಂಬ "ಮುತ್ತು" ಗಳನ್ನು ಸ್ವಿಕಾರ ಮಾಡದವರಾಗಿರುವರು. ಇಂತಹವರ ಮುಂದೆ ಆತ್ಮೀಕ ಸಂಗತಿಗಳು ತಿಳಿಸಲ್ಪಡುವುದು ಉಪಯೋಗವಾಗುವುದಿಲ್ಲ (ಲೂಕ 23:9, ಅ.ಕೃ. 13:44-46, 18:5-6).

ನಾವು ಈ ಹಂದಿ ಮತ್ತು ನಾಯಿಗಳೋಪಾದಿಯಲ್ಲಿರುವವರ ವಿಷಯದಲ್ಲಿ ಬಹಳ ಎಚ್ಚರಿಕೆಯುಳ್ಳವರಾಗಿರಬೇಕು. ಹೆಚ್ಚಿನ ಜನರು "ಹಂದಿ" ಮತ್ತು"ನಾಯಿ" ಗಳಂತಿರುವುದಿಲ್ಲ. ಕೇವಲ ಸ್ವಲ್ಪ ಜನರು ಮಾತ್ರ ಇಂತಹವರಾಗಿರುತ್ತಾರೆ. ಹೀಗಿದ್ದರೂ ಕೂಡ ಇವರು ದೇವರಿಗೆ ವೈರಿಗಳಾಗಿದ್ದಾರೆ. ಇವರನ್ನು ನಾವು ಪ್ರೀತಿಸಬೇಕು (ಮತ್ತಾಯ 5:44). ಹೀಗಿದ್ದರೂ ನಾವು ಇವರೊಂದಿಗೆ ಮಾತಾಡದಿದ್ದರು ಸಹ ಇವರಿಗೋಸ್ಕರವಾಗಿ ಪ್ರಾರ್ಥಿಸಬೇಕು. ಇವರಿಗೆ ಕರುಣೆ ತೋರಿಸಬೇಕು. (ರೋಮಾ.12:14, 17, 19-21 ನೋಡಿರಿ). ಇಂತಹವರು ಸೈತಾನನಿಗೆ ಗುಲಾಮರಾಗಿರುತ್ತಾರೆ. ಇವರಲ್ಲಿ ಯಾವ ನಿರೀಕ್ಷೆಯಾಗಲಿ, ಬೆಳಕಾಗಲಿ ಇರುವುದಿಲ್ಲ. ಇವರನ್ನು ಪ್ರೀತಿಸುವಂತೆ, ದೇವರು ನಮಗೆ ಸಹಾಯ ಮಾಡಲಿ.

## ಕೇಳಿಕೊಳ್ಳಿರಿ, ಹುಡುಕಿರಿ, ತಟ್ಟಿರಿ (7:7-12)

(ಲೂಕ 6:31, 11:9-13)

**7-8** ಕ್ರೈಸ್ತ ಜೀವಿತವು ಒಂದು ಪ್ರಯಾಣದಂತೆ. ಇದನ್ನು ಸುಗಮವಾದ ಪ್ರಯಾಣವೆಂದು ಯೇಸು ಎಲ್ಲಿಯೂ ಹೇಳಿಲ್ಲ. ಆದರೆ ಇಲ್ಲಿ ಈ ವಚನಗಳಲ್ಲಿ, ಯಾವನು, ಈ ಪ್ರಯಾಣಕ್ಕೆ ಬೇಕಾದದ್ದನ್ನೆಲ್ಲಾ ಕೊಡಲು ಶಕ್ತನಾಗಿದ್ದಾನೋ ಅವನು ಈ ಪ್ರಯಾಣದ ಮಾರ್ಗ ನಮಗೆ ತೋರಿಸುತ್ತಾನೆ,. ಬಾಗಿಲುಗಳನ್ನು ತೆರೆಯುತ್ತಾನೆ, ಮತ್ತು ಕೊನೆಯಲ್ಲಿ ಪರಲೋಕದ ಮತ್ತು ನಿತ್ಯ ಜೀವದ ಬಾಗಿಲನ್ನು ತೆರೆಯುತ್ತಾನೆ ಎಂದು ಯೇಸು ಹೇಳುತ್ತಾನೆ . ಇವೆಲ್ಲವುಗಳಿಗಾಗಿ ನಾವು ಮಾಡುವಂತದ್ದು, **ಕೇಳಿಕೊಳ್ಳಬೇಕು. ಹುಡುಕಬೇಕು ಮತ್ತು ತಟ್ಟುವಂತಹವರಾಗಿರಬೇಕು.**

ನಮಗೆ ಬೇಕಾದದ್ದನ್ನು ಬೇಡಿಕೊಳ್ಳಿರಿ ಆಗ ನಮಗೆ ಎಲ್ಲವು ದೊರೆಯುವುದೆಂದು ಕ್ರಿಸ್ತನು ಹೇಳಲಿಲ್ಲ. ಕೆಲವು ಸಮಯ ನಾವು ಕೇಳಿಕೊಳ್ಳುತ್ತೇವೆ. ಆದರೆ ಹೊಂದುವುದಿಲ್ಲ(ಯಾಕೋಬ 4:3 ನೋಡಿರಿ). ದೇವರೊಂದಿಗೆ ನಿರಾಶೆ ಹೊಂದುತ್ತೇವೆ. ಆದರೆ, ನಂತರ ನಮಗೆ ಸರಿಯಾದ ಸಮಯಕ್ಕೆ ಬೇಕಾದದ್ದನ್ನು ಕೊಡುವನು. ನಮ್ಮ ಈ ಪ್ರಯಾಣದಲ್ಲಿ ನಮಗೆ ಏನು ಬೇಕಾಗಿದೆ ಎಂಬುದನ್ನು ದೇವರು ನಮಗಿಂತಲೂ ಹೆಚ್ಚಾಗಿ ಬಲ್ಲನು.

**ಕೇಳಿರಿ ನಿಮಗೆ ಕೊಡಲ್ಪಡುವುದು.** ನಾವು ಯಾವುದಕ್ಕೋಸ್ಕರವಾಗಿ ಕೇಳಿಕೊಳ್ಳಬೇಕು? ಯೇಸುವನ್ನು ಹಿಂಬಾಲಿಸುವ ಕ್ರೈಸ್ತನಂತಾಗಲು ನನಗೆ ಸಹಾಯ ಮಾಡು ಎಂದು ಕೇಳಿಕೊಳ್ಳಬೇಕು. ಈಕಾರಣಕ್ಕಾಗಿಯೆ ವಚನಗಳಲ್ಲಿ ವಾಗ್ದಾನಗಳು ನಮಗೆ ಕೊಡಲ್ಪಟ್ಟಿವೆ.

ಕ್ರಿಸ್ತನನ್ನು ಹಿಂಬಾಲಿಸಲು ನಮಗೆ ಅವಶ್ಯಕವಾದವುಗಳೆಲ್ಲವುಗಳು ಸಾಧ್ಯವಿದ್ದು, ಇವೆಲ್ಲವು ಕೊಡಲ್ಪಟ್ಟಿವೆ. ನಾವು ನಂಬಿಕೆಯಿಂದ ಕೇಳಿಕೊಳ್ಳುವುದಾದರೆ ಮಾತ್ರ ಕೊಡಲ್ಪಡುವವು. (ಮಾರ್ಕ 11:24 ಮತ್ತು ವ್ಯಾಖ್ಯಾನವನ್ನು ನೋಡಿರಿ).

ಆದುದರಿಂದ ನಮ್ಮ ಕ್ರೈಸ್ತ ಜೀವಿತವು ಬಲಹೀನವಾದರೆ ಇದು ದೇವರ ತಪ್ಪಲ್ಲ. ಇದು ನಮ್ಮ ಸ್ವಂತ ತಪ್ಪಾಗಿರುತ್ತದೆ. ನಾವು ಜಾರಿ ಅಥವಾ ನೂಣುಚಿಕೊಳ್ಳಲು ಆಸ್ಪದವಿಲ್ಲ. ನಾವೆಲ್ಲರೂ ಮಾಡಬೇಕಾದದ್ದು, **ಕೇಳುವುದು, ಹುಡುಕುವುದು** ಮತ್ತು ತಟ್ಟುವುದು. ಮತ್ತು ಹೀಗೆ ಮಾಡುವುದರಿಂದ ನಮ್ಮ ಕ್ರೈಸ್ತ ಜೀವಿತವು ಬಲಹೀನವಾಗುವುದಿಲ್ಲ. ಗ್ರೀಕ್‌ಭಾಷೆಯ ಮೂಲ ಪುಸ್ತಕದಲ್ಲಿ **ಕೇಳು, ಹುಡುಕು, ತಟ್ಟು** ಎಂಬ ಶಬ್ದಗಳ ಅರ್ಥವು "ಕೇಳಿಕೊಳ್ಳುತ್ತಲೇ ಇರು" "ಹುಡುಕುತ್ತಲೇ ಇರು" "ತಟ್ಟುತ್ತಲೇ ಇರು" ಎಂಬುದಾಗಿ ಇದೆ. ನಾವು ಹೊಂದುವವವರೆಗೂ ಕೇಳುತ್ತಲೇ ಇರಬೇಕು. (ಲೂಕ 18:1-8 ನೋಡಿರಿ). ನಂಬಿಕೆಯಿಂದ ನಾವು ಎಷ್ಟನ್ನು ಕೇಳುತ್ತವೇಯೋ ಅಷ್ಟನ್ನೇ ಹೊಂದುತ್ತೇವೆ.

ಕ್ರಿಸ್ತನನ್ನು ಹಿಂಬಾಲಿಸಲು, ಇದಕ್ಕಿಂತ ಹೆಚ್ಚಾಗಿ, ಅವಶ್ಯಕವಾಗಿ ಇನ್ನೇನು ನಮಗೆ ಬೇಕಾಗಿದೆ?ಪವಿತ್ರ ಆತ್ಮ ಬೇಕಾಗಿದೆ. ಕ್ರಿಸ್ತನ ಪ್ರಸನ್ನತೆ, [36]ಕ್ರಿಸ್ತನ ಆತ್ಮ ನಮ್ಮಲ್ಲಿರಬೇಕಾಗಿದೆ .ಮತ್ತು ಯೇಸು ಹೇಳಿದ್ದು,... ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ (ಯೋಹಾನ 15:5). ನಾವು ಒಂಟಿಯಾಗಿ ನಮ್ಮ ಪ್ರಯಾಣವನ್ನು ಮಾಡುತ್ತಿಲ್ಲ. ಯೇಸುವು, ಕಡೆಯಲ್ಲಿ, ತನ್ನ ಶಿಷ್ಯರಿಗೆ ಈ ಮಾತನ್ನು ಹೇಳಿದನು, **ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡವಿರುತ್ತೇನೆ.** (ಮತ್ತಾಯ 28:20).

**9-11** ದೇವರು, ಒಳ್ಳೆಯ ವರವಾದಂತಹ : ಜೀವ. ಸೂರ್ಯ, ಮಳೆ ಮತ್ತು ಆಹಾರ, ಇವುಗಳನ್ನು ಎಲ್ಲಾ ಜನರಿಗೂ ಕೊಡುತ್ತಾನೆ. ಮತ್ತು ಇವುಗಳೊಂದಿಗೆ, ಕ್ರಿಸ್ತನಲ್ಲಿ ನಂಬಿಕೆಯನ್ನು ಇಟ್ಟಂತಹ, ತನ್ನ ಮಕ್ಕಳಿಗೆ, ವಿಶೇಷವಾದ ಆತ್ಮೀಕ ವರಗಳನ್ನು ಕೊಡುತ್ತಾನೆ.

ಸತ್ಯವೇದವು ಸ್ಪಷ್ಟವಾಗಿ ಬೋಧಿಸುತ್ತದೆ, ಎಲ್ಲಾ ಜನರೂ ದೇವರ ಮಕ್ಕಳಲ್ಲ, ಕ್ರಿಸ್ತನಲ್ಲಿರುವ ವಿಶ್ವಾಸಿಗಳೆ, ದೇವರ ಮಕ್ಕಳಾಗಿದ್ದಾರೆ. ಎಲ್ಲಾ ಜನರು ಸೈತಾನನ ಮಕ್ಕಳಾಗಿ ಜನಿಸಿದ್ದಾರೆ. ಇವರೆಲ್ಲರೂ ಕತ್ತಲೆಯ ರಾಜ್ಯದಲ್ಲಿ ಹುಟ್ಟಿದವರು. ಸ್ವಭಾವದಿಂದ ಎಲ್ಲರೂ ಪಾಪಿಗಳೇ. ಆದಿಯಲ್ಲಿ, ನಾವೆಲ್ಲರೂ ದೇವರಿಗೆ ವಿರೋಧಿಗಳಾಗಿ ಪಾಪಿಗಳಾಗಿದ್ದೆವು (ರೋಮಾ. 3:10). ಆದರೆ ಈಗ ಕ್ರಿಸ್ತನಲ್ಲಿ ನಂಬಿಕೆ ಇಡುವುದರ ಮೂಲಕವಾಗಿ, ·ನೇವರಿಗೆ ವೈರಿಗಳಾಗಿದ್ದ ನಾವು ದೇವರ ಮಕ್ಕಳಾಗಿದ್ದೇವೆ (ಯೋಹಾನ 1:12). ಹೀಗಿರುವುದರಿಂದ, ಈಗ,ದೇವರು, ನಮಗೆ ಪರಲೋಕದ ಪ್ರೀತಿಯುಳ್ಳ ತಂದೆಯಾಗಿದ್ದಾನೆ. ಮತ್ತು ನಾವು ಆತನ ಬಳಿಗೆ ಬಂದು ಕೇಳಿಕೊಳ್ಳುವಾಗ ನಾವು ಹೊಂದುತ್ತೇವೆ.

ನಾವು ಒಳ್ಳೇಯ ವರಗಳನ್ನು ಸ್ವೀಕರಿಸುತ್ತೇವೆ( ವಚನ 11). ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ, "ಒಳ್ಳೆಯ ಪದಾರ್ಥಗಳನ್ನು" ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಇನ್ನು ಎಷ್ಟೋ ಹೆಚ್ಚಾಗಿ ಒಳ್ಳೇ ವರಗಳನ್ನು ಕೊಡುವನಲ್ಲವೇ. ದೇವರ ವರಗಳು ನಮಗೆ ಯಾವಾಗಲೂ ಒಳ್ಳೆಯವುಗಳಾಗಿವೆ. ಒಂದು ವೇಳೆ, ಸಮಯದಿಂದ ಸಮಯಕ್ಕೆ ಆತನು ನಮ್ಮನ್ನು ಬೇರೆ ಬೇರೆ ರೀತಿಯಲ್ಲಿ ಪರೀಕ್ಷಿಸಿದರೂ, ಕೂಡ ಯಾವಾಗಲೂ ನಮ್ಮ ಒಳ್ಳೇದಕ್ಕಾಗಿಯೇ ಆಗಿದೆ.. (ರೋಮಾ. 5:3-4 ಮತ್ತು ವ್ಯಾಖ್ಯಾನವನ್ನು ನೋಡಿರಿ). ಏನನ್ನಾದರೂ ದೇವರು ತನ್ನ ಮಕ್ಕಳಿಗೆ ಕೊಟ್ಟರೇ ಅದು, ಅಂತ್ಯದಲ್ಲಿ ಅವರ ಒಳ್ಳೆಯದಕ್ಕಗಿಯೆ (ರೋಮಾ. 8:28 ಮತ್ತು ವ್ಯಾಖ್ಯಾನವನ್ನು ನೋಡಿರಿ).

ದೇವರು ನಮಗೆ ಕೊಡುವಂತ ಒಂದು ದೊಡ್ಡ ಬಹುಮಾನವು ಯಾವುದು ? ಆ ವರವು ಪವಿತ್ರಾತ್ಮನೆ. ಲೂಕನು ತನ್ನ ಸುವಾರ್ತೆಯಲ್ಲಿ ಈ ವಚನಕ್ಕೆ ಸರಿಬೀಳುವಂತೆ, ಒಳ್ಳೇಯ ವರಗಳು ಎಂಬುದಕ್ಕೆ ಬದಲಾಗಿ ಪವಿತ್ರಾತ್ಮನು ಎಂಬುದಾಗಿ ಬರೆದಿದ್ದಾನೆ (ಲೂಕ 11:13). ಎಲ್ಲಾ ಆತ್ಮೀಕ ವರದಾನಗಳು ಪವಿತ್ರಾತ್ಮನ ವರದಲ್ಲಿಯೆ ಅಡಕವಾಗಿವೆ.ನಾವು ಒಂದು ವೇಳೆ ಪವಿತ್ರಾತ್ಮನನ್ನು ಹೊಂದುವುದಾರೆ ನಮ್ಮ ಕ್ರೈಸ್ತ ಜೀವಿತಕ್ಕೆ ಬೇಕಾಗಿರುವಂತ ಎಲ್ಲ ಪವಿತ್ರಾತ್ಮನ ಪಲಗಳನ್ನು, ಪವಿತ್ರಾತ್ಮನ ಅನ್ಯೂನ್ಯತೆ, ಪವಿತ್ರಾತ್ಮನ ಬಲವನ್ನು ಹೊಂದಿಕೊಳ್ಳುತ್ತೇವೆ. ಇವುಗಳೇ ಪವಿತ್ರಾತ್ಮನಿಂದ ಉಂಟಾಗುವ ಫಲಗಳು (ಗಲಾತ್ಯ 5:22-23 ನೋಡಿರಿ).

ಈಗ ನಾವು ಶ್ರೇಷ್ಟ ವರವಾದಂತಹ ಪವಿತ್ರಾತ್ಮನಿಗಾಗಿ ಕೇಳಿಕೊಳ್ಳೋಣ. ನಾವು ದೇವರನ್ನು ಮತ್ತು ಕ್ರಿಸ್ತನನ್ನು ಅರಿಯುವದಕ್ಕಾಗಿ ಶ್ರೇಷ್ಟ ವಾದಂತವುಗಳನ್ನೆ ನಿರೀಕ್ಷಿಸೋಣ. ನಾವು ತಟ್ಟೋಣ ಮತ್ತು ಸಂತೋಷ ಮತ್ತು ಮಹಿಮೆಯುಳ್ಳ ಕ್ರಿಸ್ತನಲ್ಲಿರುವ ಜೀವಿತಕ್ಕೆ ಪ್ರವೇಶಿಸೋಣ.ಆತನೊಂದಿಗೆ ನಾವು ಈ ಜೀವಿತ ಮತ್ತು ನಂತರದ ಜೀವಿತದಲ್ಲಿಯೂ ಪರಲೋಕದ ಎಲ್ಲಾ ಐಶ್ವರ್ಯದಲ್ಲಿ ಪಾಲುಗಾರರಾಗುತ್ತೇವೆ.

**12** **ಅಂತೂ ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ.** ಬಹಳ ಜನ ಕ್ರೈಸ್ತರು ಇದನ್ನು "ಬಂಗಾರದ ನಿಯಮ" ಎಂದು ಕರೆಯುತ್ತಾರೆ. ಯಾಕೆಂದರೆ ಕ್ರಿಸ್ತನ ಬೋಧನಗಳಲ್ಲಿಯೆ ಈ ನಿಯಮವು ಬಹು ಮುಖ್ಯವಾಗಿದೆ.ವಾಸ್ತವವಾಗಿ, ಈ ನಿಯಮವು ಕ್ರಿಸ್ತನು ಕೊಡುವ ಎರಡನೆಯ ಮಹಾ ಆಜ್ಞೆಯಾದ. ನಿನ್ನಂತೆಯೇ ನಿನ್ನ ನೆರೆಯವನನ್ನು ಪ್ರೀತಿಸು (ಮಾರ್ಕ 12:31). ಎಂಬ ಈ ನಿಯಮದೊಂದಿಗೆ ಸಂಬಂಧಹೊಂದಿದೆ. ನಾವು ನಮ್ಮ ನೆರೆಯವರನ್ನು ಹೇಗೆ ಪ್ರೀತಿಸಬೇಕು ಎಂಬುದನ್ನು ಈ "ಬಂಗಾರದ ನಿಯಮವು" ನಮಗೆ ಹೇಳುತ್ತದೆ. ನಿನ್ನ ನೆರೆಯವನನ್ನು ಪ್ರೀತಿಸು ಎಂದು ಹೇಳುವುದು ಬಹಳ ಸುಲಭ ಆದರೆ ನಾನು ಆತನನ್ನು ಹೇಗೆ ಪ್ರೀತಿಸಬೇಕು? ಎಂದು ಕೇಳಲೇಬೇಕು. ಈ ಬಂಗಾರದ ನಿಯಮವು ಇದಕ್ಕೆ ಉತ್ತರ ಕೊಡುತ್ತದೆ.ಈ ಎರಡನೆಯಮಹಾ ಆಜ್ಞೆಯು ಧರ್ಮಶಾಸ್ತ್ರದ ಮತ್ತು [37]ಪ್ರವಾದನೆಗಳ ಕೇಲವೊಂದು ಬಾಗಗಳಲ್ಲಿ ಕಂಡು ಬರುತ್ತದೆ (ಗಲಾತ್ಯ 5:14 ಮತ್ತು ವ್ಯಾಖ್ಯಾನವನ್ನು ನೋಡಿರಿ). ಉದಾಹರಣೆಗೆ ಈ ಬಂಗಾರದ ನಿಯಮವು, ಪಾಲಕರು ತಮ್ಮ ಮಕ್ಕಳನ್ನು ಶಿಕ್ಷಿಸುವುದನ್ನು ನಿಲ್ಲಿಸಬೇಕೆಂದು ಹೇಳುವುದಿಲ್ಲ. ನ್ಯಾಯಾಧಿಪತಿಗಳು ಮತ್ತು ಅಧಿಕಾರಿಗಳೂ ಅಪರಾದಿಗಳಿಗೆ ಶಿಕ್ಷಿ ಕೊಡುವುದನ್ನು ತಡೆಯಲೇಬೇಕು ಎಂದಲ್ಲ.ಈ ಬಂಗಾರದ ನಿಯಮವು ನೆರೆಯವರೊಂದಿಗೆ ವೈಯಕ್ತಿಕವಾಗಿ ಒಳ್ಳೆಯ ಸಂಬಂದವನ್ನಿರಿಕೊಳ್ಳುವಂತೆ ಸೂಚಿಸುತ್ತದೆ. **ಯೋಚಿಸಿರಿ:** ಪ್ರತಿಯೊಬ್ಬನೂ ಈ ನಿಯಮವನ್ನು ಪಾಲಿಸುವುದಾದರೆ ವಾದವಿವಾದಗಳಾಗಲಿ,ಯುದ್ಧಗಳಾಗಲಿ, ಸಂಪುಗಗಳಾಗಲಿ, ಮತ್ತು ವಿವಾಹ ವಿಚ್ಛೇದನಗಳಾಗಲಿ ಇರುವುದೇ ಇಲ್ಲ..ಹೀಗಾಗುವುದರಿಂದ ಅರಸುಗಳ, ನ್ಯಾಯಾಧೀಶರ, ಪೊಲೀಸರ, ಸೈನ್ಯದ ಅವಶ್ಯಕತೆಗಳು ಇರುವುದೇ ಇಲ್ಲ. ಜಗತ್ತಿನಲ್ಲಿ ಯಾವ ಸಮಸ್ಯೆಗಳೂ ಇರುವುದಿಲ್ಲ.

ಅಂದ ಮೇಲೆ ಜನರು ಈ ಬಂಗಾರದ ಕಾನೂನಿಗೆ ಯಾಕೆ ವಿಧೇಯರಾಗುವುದಿಲ್ಲ? ಯಾಕೆಂದರೆ, ಪಾಪದ ನಿಮಿತ್ತ. ಮತ್ತು ಮನುಷ್ಯನು ತನ್ನ ನೆರೆಯವನಿಗಿಂತ ತನ್ನನ್ನು ತಾನೇ ಹೆಚ್ಚು ಪ್ರೀತಿಸಿಕೊಳ್ಳುತ್ತಾನೆ.. ಮನುಷ್ಯನ ಪಾಪದ ಮೂಲ ಬೇರು ಸ್ವಾರ್ಥ ಪ್ರೀತಿ ಅಥವಾ ಸ್ವಾರ್ಥತೆಯಾಗಿದೆ. ಸ್ವಾರ್ಥ ಪ್ರೀತಿಯೆ ಜಗತ್ತಿನ ಎಲ್ಲಾ ಕಲಹ ಮತ್ತು ಸಮಸ್ಯೆಗಳಿಗೆ ಕಾರಣವಾಗಿದೆ.

ನಮ್ಮ ಸ್ವಾರ್ಥ ಪ್ರೀತಿಯು ಸಾಯಲು ಪ್ರಾರಂಬಿಸಿದಾಗ ನಮ್ಮಲ್ಲಿ ಕ್ರೈಸ್ತ ಜೀವಿತವು ಪ್ರಾರಂಬವಾಗುತ್ತದೆ.ನಮ್ಮಲ್ಲಿರುವಂತ ನಮ್ಮ ಹಳೆಯ ಮನುಷ್ಯ, ನಮ್ಮ ಹಳೆಯ ಸ್ವಾರ್ಥತೆ ಸಾಯಲೇಬೇಕು. (ರೋಮಾ. 6:6). ಆದರೆ ನಾವು ಸಾಯುವಂತದ್ದು ಮಾತ್ರವಲ್ಲದೆ, ಪವಿತ್ರಾತ್ಮನಿಂದ ಹೊಸದಾಗಿ ಹುಟ್ಟಬೇಕು (ಯೋಹಾನ 3:5).ನಾವು ಪವಿತ್ರಾತ್ಮನನ್ನು ಅಂಗೀಕರಿಸದೇ, ನೂತನವಾದ ಆತ್ಮೀಕ ಜೀವವನ್ನು ಹೊಂದದೆ, ಕ್ರಿಸ್ತನನ್ನು ಹಿಂಬಾಲಿಸಲು ಆಗುವುದಿಲ್ಲ. ಪವಿತ್ರಾತ್ಮನಿಂದ ದೇವರ ಪ್ರೀತಿಯ ರಸವು ನಮ್ಮ ಹೃದಯಗಳಲ್ಲಿ ಸುರಿಸಲ್ಪಡದೆ ಹೋದರೆ (ರೋಮಾ. 5:5). ನಾವು ಈ ಬಂಗಾರದ ನಿಯಮವನ್ನು ಅನುಸರಿಸಲು ಆಗುವುದಿಲ್ಲ.

## ಇಕ್ಕಟ್ಟಾದ ಮತ್ತು ಅಗಲವಾದ ದ್ವಾರಗಳು (7:13-14)

**13-14** ಸಾಮಾನ್ಯವಾಗಿ ಕ್ರಿಸ್ತನು ಪರ್ವತದ ಮೇಲೆ ಮಾಡಿದ ಪ್ರಸಂಗವನ್ನು ಮತ್ತಾಯನ ಸುವಾರ್ತೆ 5 ರಿಂದ 7 ಅಧ್ಯಾಯಗಳಲ್ಲಿ ಓದುವಾಗ ಇದರಲ್ಲಿರುವಂತಹ ಪ್ರಸಂಗಗಳೂ ಮತ್ತು ಬೋಧನೆಗಳು ಬಹಳ ಶ್ರೇಷ್ಠವಾದವುಗಳೆಂದು 'ಮತ್ತು ಕ್ರಿಸ್ತನು ಒಬ್ಬ ಒಳ್ಳೇ ಬೋಧಕನಾಗಿದ್ದಾನೆ ಎಂದು ಒಪ್ಪಿಕೊಳ್ಳುತ್ತವೆ ಆದರೆ ಆಲಿಸುವುದು ಮತ್ತು ಹೊಗಳುವುದು ಆತನಿಗೆ ಇಷ್ಟವಿಲ್ಲ. ಆದರೆ

ಜನರು ತನಗೆ ವಿಧೇಯರಾಗಿ ನಡೆದುಕೊಳ್ಳಬೇಕೆಂದು ಕ್ರಿಸ್ತನು ಬಯಸುತ್ತಾನೆ ಮತ್ತು ಆತನ ಬೋಧನೆಯನ್ನು ಲಕ್ಷಿಸಬೇಕೆಂದು ಆತನು ಇಷ್ಟ ಪಡುತ್ತಾನೆ.

ಆದುದರಿಂದ, ಕ್ರಿಸ್ತನು ನಮಗೆ ಹೇಳುತ್ತಾನೆ. "ಒಳ್ಳೇದು, ನನ್ನ ಬೋಧನೆಯನ್ನು ನೀವು ಕೇಳಿದ್ದೀರಿ. ಇದರ ವಿಷಯವಾಗಿ ಏನು ಮಾಡುತ್ತೀರಿ? ಇದಕ್ಕೆ ಲಕ್ಷ್ಯ ಕೊಡಿರಿ. ಇಲ್ಲವೇ ಇದನ್ನು ನಿರ್ಲಕ್ಷಿಸುವಿರೋ? ಇಕ್ಕಟ್ಟಾದ ದ್ವಾರದಿಂದ ಅಥವಾ ಅಗಲವಾದ ದ್ವಾರದಿಂದ ಹೋಗುತ್ತೀರೋ? ಎರಡು ದ್ವಾರಗಳು ಮಾತ್ರ ಇವೆ. ಒಂದನ್ನು ನೀನು ಆರಿಸಿಕೊಳ್ಳಲೇಬೇಕು."

ನಾವುಊಹಿಸುಕೊಳ್ಳೋಣ. ಒಂದು ದಾರಿಗುಂಟ ನಾವು ನಡೆಯುತ್ತಾ ಹೋಗುತ್ತಿರುವಾಗ ಎರಡು ದ್ವಾರಗಳ ಬಳಿಗೆ ಬರುತ್ತೇವೆ. ಇಲ್ಲಿ ಕೇವಲ ಎರಡು ದ್ವಾರಗಳು ಮಾತ್ರ ಇವೆ.. ಇವುಗಳಲ್ಲಿ ಒಂದು ದ್ವಾರದಲ್ಲಿ ನಾವು ಹೋಗಲೇಬೇಕು. ಈ ಎರಡು ದ್ವಾರಗಳಲ್ಲಿ ಒಂದು ಅಗಲವಾದ ದ್ವಾರವಿದೆ. ಇದರಲ್ಲಿಯ ದಾರಿಯು ಸಮತಟ್ಟಾಗಿದ್ದು ನಾವು ಸುಲಭವಾಗಿ ಹೋಗಲು ಸಹಾಯವಾಗುವುದು. ಹೆಚ್ಚಾದ ಜನರು ಈ ಅಗಲವಾದ ದಾರಿಯಲ್ಲಿ ನಡೆಯುತ್ತಾ ಹೋಗುತ್ತಾರೆ. ಖಂಡಿತವಾಗಿಯೂ ಇಷ್ಟೊಂದು ಜನರು ತಪ್ಪು ಮಾಡುವುದಿಲ್ಲ ಇವರು ಸರಿಯಾದ ದಾರಿಯಲ್ಲಿ ಇರುತ್ತಾರೆ, ಎಂದು ಖಂಡಿತವಾಗಿಯು ನಾವು ಯೋಚಿಸುತ್ತೆವೆ.

ಎರಡನೆಯ ಬಾಗಿಲು ಬಹು ಇಕ್ಕಟ್ಟಾಗಿದೆ. ಇದು ಆರಂಭದಿಂದಲೂ ಬಲು ಇಕ್ಕಟ್ಟಾದ ದಾರಿಯಾಗಿದೆ. ಇದು ಇಕ್ಕಟ್ಟಾಗಿಯೂ ಕಲ್ಲು ಬಂಡೆಗಳಿಂದ ಕೂಡಿದ್ದಾಗಿಯೂ ಇದೆ. ಅತಿ ಕಡಿಮೆ ಜನರು ಮಾತ್ರ ಈ ದಾರಿಯಲ್ಲಿ ನಡೆಯುತ್ತಾರೆ. ಆದರೆ ಯೇಸು ಹೇಳುತ್ತಾನೆ. ನೀನು ನನ್ನನ್ನು ಹಿಂಬಾಲಿಸುವುದಾದರೆ ನೀನು ಈ ಸಣ್ಣ ದ್ವಾರದಿಂದ ಸಾಗಿ ಇಕ್ಕಟ್ಟಾದ ದಾರಿಯಿಂದ ನಡೆಯಬೇಕು.

ಕ್ರಿಸ್ತನನ್ನು ಹಿಂಬಾಲಿಸಲು ನಾವು ಜನಸ್ತೋಮದಿಂದ ದೂರವಿರಬೇಕು. ನಾವು ಲೋಕವನ್ನು ಬಿಡಬೇಕು. ಆದಾಗ್ಯೂ ನಮ್ಮ ಮಿತ್ರರು ಮತ್ತು ಬಂಧುಗಳು ಅಗಲವಾದ ದ್ವಾರದ ಮೂಲಕವಾಗಿ ನಡೆಯುತ್ತ ಇದ್ದಾಗ್ಯೂ ನಾವು ಅವರಿಂದ ಬೇರೆಯಾಗಲೇ ಬೇಕು. ನಾವು ಒಬ್ಬಂಟಿಗರಾಗಿ ನಿಲ್ಲಲೇಬೇಕು. ನಾವು ಇವರಿಂದ ವ್ಯತ್ಯಾಸವುಳ್ಳವಗಾಗಿರಲೇ ಬೇಕು. ನಾವು ಲೋಕದ ಸಂಪ್ರದಾಯಗಳಿಂದ ತಿರುಗಿಕೊಳ್ಳಲೇ (ಬೆನ್ನು ಹಾಕಲೇ) ಬೇಕು. ಕ್ರಿಸ್ತನನ್ನು ಹಿಂಬಾಲಿಸಲಿಕ್ಕಾಗಿ ಗೆಳೆಯರನ್ನು ಮತ್ತು ಕುಟುಂಬವನ್ನು ಬಿಡುವುದು ಎಷ್ಟೋ ಕಷ್ಟಕರವಲ್ಲವೇ (ಮತ್ತಾಯ 10:35-37 ನೋಡಿರಿ). ನಾವು ಇಕ್ಕಟ್ಟಾದ ದ್ವಾರದಿಂದ ಪ್ರವೇಶಿಸುವದಕ್ಕೆ ಇದು ಮೊದಲನೆಯ ಮೆಟ್ಟಲಾಗಿದೆ. ನಾವು ಲೋಕದ ಜನರ ಗುಂಪುಗಳಿಂದ ದೂರವಿರಲೇಬೇಕು. ನಾವು ನೆನಪಿನಲ್ಲಿಡಲೇ ಬೇಕಾದ ಒಂದು ಸಂಗತಿ ಏನೆಂದರೆ ಒಂದು ದಿವಸ ನಾವು ಒಂಟಿಯಾಗಿ ದೇವರ ಮುಖದ ಮುಂದೆ ನಿಲ್ಲಲೇಬೇಕು. ದೇವರು ಪ್ರತಿಯೊಬ್ಬಬ್ಬರಿಗೂ ನ್ಯಾಯ ತೀರಿಸುವನು. ಆ ದಿನದಲ್ಲಿ ನಾವು ಪರಲೋಕವನ್ನು ಪ್ರವೇಶಿಸಬೇಕಾಗಿದ್ದರೆ ಈ ಹೊತ್ತೇ ನಾವು ಲೋಕದಿಂದಲೂ ಮತ್ತು ಜನರ ಗುಂಪಿನಿಂದಲೂ ದೂರವಾಗಿ ಇಕ್ಕಟ್ಟಾದ ದ್ವಾರದಿಂದ ಪ್ರವೇಶಿಸಲೇಬೇಕು.

ಒಂದು ರಿತೀಯಿಂದ ಕ್ರೈಸ್ತಜೀವಿತವು ಸುಲಭವಾಗಿದೆ. ಯೇಸು ಹೇಳಿದ್ದೆನಂದರೇ - **ಎಲೈ ಕಷ್ಟಪಡುವವರೇ ಹೊರೆ ಹೊತ್ತವರೇ ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ. ನಾನು ನಿಮಗೆ ವಿಶ್ರಾಂತಿ ಕೊಡುವೆನು. ನಾವು ಸಾತ್ವಿಕನೂ, ದೀನಮನಸ್ಸುಳ್ಳವನೂ ಆಗಿರುವುದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ. ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವುದು. ಯಾಕೆಂದರೆ ನನ್ನ ನೊಗವು ಮೃದುವಾದದ್ದು ನನ್ನ ಹೊರೆಯು ಹೌರವಾದದ್ದೂ ಅಂದನು** (ಮತ್ತಾಯ 11:28-30). ಅಗಲವಾದ ದಾರಿಯಲ್ಲಿ ಪ್ರಯಾಣಿಸುವವರು ಭಾರವಾದ ಪಾಪದ ಹೊರೆಯಿಂದಲೂ, ತೊಂದರೆಗಳಿಂದಲೂ ಮತ್ತು ಭಯದಿಂದಲೂ ತುಂಬಿದವರಾಗಿರುತ್ತಾರೆ. ಆದರೆ ಇಕ್ಕಟ್ಟಾದ ಮಾರ್ಗದಲ್ಲಿ ನಡೆಯುವವರಿಗೆ ಈ ಎಲ್ಲಾ ಬಾರದ ಹೊರೆಗಳಿರುವುದಿಲ್ಲ. ಯಾಕೆಂದರೆ ಆ ಎಲ್ಲಾ ಭಾರದ ಹೊರೆಗಳು ಕ್ರಿಸ್ತನ ಮೇಲೆ ಇರುತ್ತವೆ.

ಹೇಗೂ ಇಕ್ಕಟ್ಟಾದ ಮಾರ್ಗದಲ್ಲಿ ನಡೆಯುವವರು ಒಂದನ್ನು ಮಾತ್ರ ಹೊತ್ತುಕೊಂಡು ಹೋಗಲೇಬೇಕು. ಅದೇನೆಂದರೆ ಶಿಲುಬೆ. **ಯಾವನಿಗಾದರೂ ನನ್ನ ಹಿಂದೆ ಬರಲಿಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಕೊಂಡು ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ** (ಮಾರ್ಕ 8:34 ವ್ಯಾಖ್ಯಾನ ನೋಡಿರಿ). ನಾವು ನಮ್ಮ ಹಳೆಯ ಸ್ವಭಾವ ಮತ್ತು ಹಳೆಯ ಮನುಷ್ಯನ ಸ್ಥಿತಿ ಸ್ವಭಾವವನ್ನು ದ್ವಾರದ ಹೊರಗೇ ಬಿಟ್ಟು ಪ್ರಯಾಣ ಬೆಳೆಸಬೇಕು. ನಾವು ನಮ್ಮ ಐಶ್ವರ್ಯವನ್ನು ಬಿಟ್ಟು ಬಿಡಬೇಕು. ನಮ್ಮ ಹಕ್ಕುಗಳು ಮತ್ತು ನಮ್ಮ ಪ್ರತಿಷ್ಠೆಗಳು ಎಲ್ಲವೂ ಭಾಗಿಲಿನ ಹೊರಗೆಯೇ ಇರಬೇಕು. ನಮ್ಮ ಹಳೇ ಸ್ವಭಾವ. ಕ್ರಿಸ್ತನ ಕೂಡಾ ಶಿಲುಬೆಗೆ ಹಾಕಲ್ಪಡಲೇಬೇಕು. (ರೋಮಾ. 6:6). ನಾವು ಬಾಗಿಲಿನಿಂದ ಒಳಗೆ ತೆಗೆದುಕೊಂಡು ಹೋಗುವ ಒಂದೇ ಒಂದು ಸಂಗತಿ ಏನೆಂದರೆ:ನಮ್ಮ ಶಿಲುಬೆ. ಪೌಲನು ಬರೆದಿದ್ದೇನೆಂದರೆ **ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡಿದ್ದೇನೆ.** ಇನ್ನು ಜೀವಿಸುವವನು ನಾನಲ್ಲ. ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ (ಗಲಾತ್ಯ 2:20) ಮತ್ತು ನನಗಾದರೋ ನಮ್ಮ ಕರ್ತನಾದ ಯೇಸುಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಹೆಚ್ಚಳ ಪಡುವುದು ಬೇಡವೇ ಬೇಡ. ಆತನ ಮೂಲಕ ಲೋಕವು ಶಿಲುಬೆಗೆ ಹಾಕಿಸಿಕೊಂಡು ನನ್ನ ಪಾಲಿಗೆ ಸತ್ತಿತು. ನಾನು ಶಿಲುಬೆಗೆ ಹಾಕಿಸಿಕೊಂಡು ಲೋಕದ ಪಾಲಿಗೆ ಸತ್ತನು (ಗಲಾತ್ಯ 6:14). ಎಂದು ಆತನು ಬರೆದನು.

ಇಕ್ಕಟ್ಟಾದ ದಾರಿಯು ಬಲು ಕಷ್ಟ. ಹಿಂಸೆ ಉಂಟು.ದಾರಿಯಲ್ಲಿ ನಾವು ಅನೇಕ ಹಿಂಸೆ ಮತ್ತು ಕಷ್ಟಗಳನ್ನು ನಾವು ಸಂದಿಸುವೇವು. (2ನೇ ತಿಮಾಥೆ 3:12). ಸೈತಾನನು ನಾನಾ ರೀತಿಯಾದ ತೊಂದರೆಗಳನ್ನು ಶೋಧನೆಗಳನ್ನು ನಮ್ಮ ದಾರಿಯಲ್ಲಿ ಕೊಡುವವನು. ಇಲ್ಲಿ ಕೇಲವೊಂದು ಅನುಕೂಲತೆಗಳು ಇರುವವು . (ಮತ್ತಾಯ 8:19-20). ಈ ದಾರಿಯು ಅಷ್ಟು ಸುಲಭವಾಗಿರುವುದಿಲ್ಲ. ನಮ್ಮ ಜೀವಿತದ ಪ್ರತಿಯೊಂದು ಘಟ್ಟದಲ್ಲಿಯೂ ಸೈತಾನನು ನಮಗೆ ಹೊಸ ಹೊಸ ಶೋಧನೆಯನ್ನು ಕೊಡುವನು.

ಆದಾಗ್ಯೂ ಇಂತಹ ಮಾರ್ಗದಿಂದ ಜನರು ಯಾಕೆ ಹೋಗುತ್ತಾರೆ? ಯಾಕೆಂದರೆ, ಈ ಇಕ್ಕಟ್ಟಾದ ದಾರಿಯು ನಮ್ಮನ್ನು **ನಿತ್ಯಜೀವಕ್ಕೆ ನಡಿಸುವುದು** (ವಚನ 14). ಅಗಲವಾದ ದಾರಿಯು ನಮ್ಮನ್ನು **ನಾಶನಕ್ಕೆ ನಡಿಸುತ್ತದೆ** (ಯೆರೆಮೀಯ 21:8).

ಮಿತ್ರರೆ, ಕೇವಲ ಎರಡು ದಾರಿಗಳು ಮಾತ್ರ ಇವೆ.ಎಂದು ವೇಳೆ ನೀನು ಇಕ್ಕಟ್ಟಾದ ಮಾರ್ಗದಲ್ಲಿ ನಡೆಯುತ್ತಾ ಇಲ್ಲದಿರುವದಾದರೆ ಖಂಡಿತವಾಗಿಯು ನೀನು ಅಗಲವಾದ ಮಾರ್ಗದಲ್ಲಿ ನಡೆಯುತ್ತಿರುವಿ.

ಈ ದಾರಿಯ ಉದ್ದೇಶವೇನು? ಇದು ಒಂದು ಗೊತ್ತಾದ ಸ್ಥಳಕ್ಕೆ ನಡಿಸುವುದು. ಅಗಲವಾದ ದಾರಿಯಲ್ಲಿ ಸಾಗುತ್ತಿರುವ ಜನರಿಗಾಗಿ ಆಲೋಚಿಸಿರಿ? ಇದು ಅವರ ಪ್ರಯಾಣಕ್ಕೆ ಬಹಳ ಸುಲಭವಾಗಿದೆ. ಮತ್ತು ಸಂತೋಷಕರವಾಗಿದೆ. ಕೆಲವರು ಪ್ರಯಾಣದಲ್ಲಿ ನೃತ್ಯ ಮಾಡುತ್ತಲೂ ಹಾಡುತ್ತಲೂ ಇರುತ್ತಾರೆ. ಕೆಲವರು ತಮ್ಮ ಆಸ್ತಿಯನ್ನು ಕೂಡಿಡುತ್ತಾರೆ. ಕೆಲವರು ಭೂಮಿಯನ್ನು ಮನೆಗಳನ್ನು ಸಂಪಾದಿಸಿಕೊಳ್ಳುತ್ತಾರೆ. ಮತ್ತೆ ಅವರು ಈ ಮಾರ್ಗದ ಕೊನೆಗೆ ಬರುತ್ತಾರೆ. ಏನಾಗುತ್ತದೆ? ಮರಣ ಸಂಭವಿಸುತ್ತದೆ. ಅಲ್ಲಿ ಕುಣಿತವೂ ಇಲ್ಲ, ಹಾಡುವುದೂ ಇಲ್ಲ. ಒಬ್ಬನಿಗೆ ಎಷ್ಟೇ ಇದ್ದರು ಪ್ರಯೋಜನವೇನು? (ಮಾರ್ಕ 8:36, ಲೂಕ 12:16-20).

ಪ್ರತಿಯೊಬ್ಬ ಮನುಷ್ಯನೂ ತಾನು ಹೋಗುತ್ತಿರುವ ದಾರಿಯು ಎಲ್ಲಿಗೆ ನಡಿಸುತ್ತಿದೆ ಎಂದು ಯೋಚಿಸಲಿ. ಇಕ್ಕಟ್ಟಾದ ಮಾರ್ಗವು ಮಾತ್ರ ನಮ್ಮನ್ನು ನಿತ್ಯಜೀವಕ್ಕೆ ನಡಿಸಿಕೊಂಡು ಹೋಗುವುದು. ಹೌದು, ಈ ಜೀವಿತದಲ್ಲಿ ಈ ಮಾರ್ಗವು ಬಹು ಇಕ್ಕಟ್ಟಾಗಿದೆ. ನೆನಪಿರಲಿ,ಇದರ ಅಂತಿಮ ಸ್ಥಳ! ( ರೋಮ 18:18) (2ನೇ ಕೊರಿಂಥ 4:17).

ಕ್ರಿಸ್ತನು ಪ್ರತಿಯೊಬ್ಬರಿಗೆ ಹೇಳುತ್ತಾನೆ. ಇಕ್ಕಟ್ಟಾದ ಬಾಗಿಲಿನಿಂದ ಒಳಗೆ ಪ್ರವೇಶಿಸಿರಿ. " ಕ್ರಿಸ್ತನಿಂದ ಕೇಳಿಸಿಕೋಳ್ಳುವಂತ ಈ ಭೋದನೆಯು ಆಶ್ಚರ್ಯಕರವಾದದ್ದಲ್ಲವೆ." ಇದಕ್ಕೆ ನಾವು ವಿಧೇಯರಾಗಲೇಬೇಕು. ನಾವು ಈ ದ್ವಾರದಿಂದ ಪ್ರವೇಶಿಸಲೇಬೇಕು. ಕ್ರಿಸ್ತನು ತನ್ನ ಮೊದಲ ಶಿಷ್ಯರನ್ನು ಕರೆಯುವಾಗ, ಆತನು ಅವರಿಗೆ ಹೇಳಿದ್ದು, "ನನ್ನನ್ನು ಹಿಂಬಾಲಿಸಿರಿ". (ಮಾರ್ಕ 1:17, 2:14). ಕ್ರಿಸ್ತನು ಪ್ರತಿಯೊಬ್ಬರಿಗೂ ತನ್ನನ್ನು ಹಿಂಬಾಲಿಸುವ ಅಥವಾ ಹಿಂಬಾಲಿಸದೇ ಇರುವ ಅವಕಾಶವನ್ನು ಕೊಟ್ಟಿದ್ದಾನೆ. ನಾವು ಕಾಯುವುದು ಬೇಡ. ನಾವು ತಡ ಮಾಡದೆ ಇರೋಣ. ಯಾಕೆಂದರೆ ಕ್ರಿಸ್ತನು ಮತ್ತೊಮ್ಮೆ ನಮ್ಮನ್ನು ಕರೆಯದೆ ಇರಬಹುದು.

## ಗಿಡ ಮತ್ತು ಅದರ ಫಲ (7:15-20) (ಲೂಕ 6:43-44)

**15** ಸುಳ್ಳು ಪ್ರವಾದಿಗಳ (ಬೋಧಕರ) ವಿಷಯವಾಗಿ ಎಚ್ಚರದಿಂದಿರಿ. ಇಕ್ಕಟ್ಟಾದ ದ್ವಾರದಿಂದ ಪ್ರವೇಶಿಸುವವರನ್ನು ತಡೆಹಿಡಿಯುವ ಇವರು ಈ ಸುಳ್ಳು ಪ್ರವಾದಿಗಳು ಸುಳ್ಳು ಬೋಧಕರಾಗಿದ್ದಾರೆ, ಸುಳ್ಳು ಕ್ರೈಸ್ತರಾಗಿದ್ದಾರೆ . ಇವರು, "ಇದು ಮಾರ್ಗವಲ್ಲ, ನಾವು ನಿಮಗೆ ಸುಲಭವಾದ, ವಿಶಾಲವಾದ ದಾರಿಯನ್ನು ತೋರಿಸುತ್ತೇವೆ." ಎಂದು ಹೇಳುವರು.

ಯಾಕೆ ಇವರು ಅಷ್ಟು ಅಪಾಯಕಾರಿಯಾಗಿದ್ದಾರೆ? ಯಾಕೆಂದರೆ ಇವರು ಹೊರಗಿನ ತೋರಿಕೆಯಲ್ಲಿ ಒಳ್ಳೆಯವರಂತೆ ಕಾಣುತ್ತಾರೆ.. ಇವರ ಬೋಧನೆಯು ಮಧುರವಾಗಿರುತ್ತದೆ. ಆದರೆ ಇವರು ಜನರನ್ನು ನಾಶನದತ್ತ ನಡಿಸುವವರಾಗಿದ್ದಾರೆ. ಇಂತಹವರನ್ನು ಯೇಸುವು "**ಕ್ರೂರವಾದ ತೋಳಗಳು**" ಎಂದು ಕರೆಯುತ್ತಾನೆ (ಅ.ಕೃ. 20:29-31).

**16** ಇವರ ಫಲಗಳಿಂದಲೂ ಮತ್ತು ಇವರ ಬೋಧನೆ ಹಾಗು ಕೆಲಸಗಳಿಂದಲೂ ಇವರು ಸುಳ್ಳುಬೋಧಕರೆಂಬುದನ್ನು ನಾವು ಗುರುತಿಸಬಹುದು. ಇವರು ದೇವರ ಬಗ್ಗೆ, ಕ್ರಿಸ್ತನಬಗೆ, ಪ್ರೀತಿ, ಮತ್ತು ಸಂತೋಷದ ವಿಷಯವಾಗಿ ಮಾತನಾಡುತ್ತಾರೆ. ಆದರೆ ಇಕ್ಕಟ್ಟಾದ ದ್ವಾರದ ವಿಷಯವಾಗಿ ಮಾತನಾಡುವುದಿಲ್ಲ. ಇವರು ಸುಲಭವಾದ ಸಂಗತಿಗಳ ಬಗ್ಗೆ ಮತ್ತು ಇವರು ರಮಣೀಯವಾದ ಕ್ರೈಸ್ತಧರ್ಮದ ಬಗ್ಗೆ ವರ್ಣಿಸುತ್ತಾರೆ. ಆದರೆ ಇವರು ದೇವರ ಪವಿತ್ರತೆಯ ವಿಷಯವಾಗಿಯೂ, ಪಾಪದ ವಿಷಯವಾಗಿ, ಮತ್ತುಪಾಪಕ್ಕಾಗಿ ದೇವರಲ್ಲಿರುವ ಕೋಪದ ವಿಷಯವಾಗಿ ಇವರು ಬೋದಿಸುವುದಿಲ್ಲ.

ಪಾಪಿಯಾದ ಮನುಷ್ಯನಿಗೆ ತೊಂದರೆ ಪಡಬೇಡ. ಎಲ್ಲವೂ ಸರಿಯಾಗುವುದು ಎಂದು ಸುಳ್ಳು ಪ್ರವಾದಿಗಳು (ಬೋಧಕರು) ಹೇಳುತ್ತಾರೆ. ಆದರೆ ಅವರು ಪಶ್ಚಾತ್ತಾಪದ ವಿಷಯವಾಗಿಯೂ ಮತ್ತು ಪಾಪಕ್ಕೆ ಬೆನ್ನು ಹಾಕುವ (ಪಾಪದಿಂದ ಹೊರಬರುವ) ವಿಷಯವಾಗಿ ಮತ್ತು ಸ್ವಾರ್ಥತೆಯನ್ನು ಅಲ್ಲಗಳೆಯುವುದರ ವಿಷಯವಾಗಿ ಬೋಧಿಸುವುದಿಲ್ಲ. ಯೆರೆಮೀಯನು ತನ್ನ ಕಾಲದಲ್ಲಿ ಇಂತಹ ಸುಳ್ಳು ಪ್ರವಾದಿಗಳ (ಬೋಧಕರ) ವಿಷಯದಲ್ಲಿ ಹೇಳಿದ್ದೇನೆಂದರೆ - ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ಬಾಚಿಕೊಳ್ಳುತ್ತಲೇ ಇದ್ದಾರೆ. ಪ್ರವಾದಿಗಳು ಮೊದಲಾಗಿ ಯಾಜಕರವರೆಗೂ ಸಕಲರು ಮೋಸ ಮಾಡುತ್ತಲೇ ಇದ್ದಾರೆ. ಮೇಲಾಗದಿದ್ದರೂ ಮೇಲು ಮೇಲು ಎಂದು ಹೇಳಿ ನನ್ನ ಜನರ ಗಾಯವನ್ನು ಮೇಲೆ ಮೇಲೆ ವಾಸಿಮಾಡುತ್ತಾರೆ. (ಯೆರೆಮಿಯಾ 6:13-14) ಜನರು ಇಂತಹ ಸುಳ್ಳು ಬೋಧನೆಯನ್ನು ಕೇಳುಲು ಇಷ್ಟವುಳ್ಳವರಾಗಿ ಇರುತ್ತಾರೆ (2ನೇ ತಿಮಾಥೆ 4:3-4).

**17-18** ಕೆಲವು ಸುಳ್ಳು ಪ್ರವಾದಿಗಳನ್ನು ಗುರುತಿಸುವುದು ಸುಲಭ. ಇವರು ತೋಳದಂತೆಯೂ ಮತ್ತು ಮುಳ್ಳುಗಿಡಗಳಂತೆಯೂ ಇರುವರು. (ವಚನ 16). ಆದರೆ ಇನ್ನೀತರ ಬೇರೆ ಸುಳ್ಳು ಪ್ರವಾದಿಗಳನ್ನು ಗುರುತಿಸುವುದು ಕಷ್ಟ . ಅವರು ಸುಂದರವಾದ ಎಲೆಗಳಿಂದ ಸೊಗಸಾಗಿ ಕಾಣುವ ಅಂಜೂರ ಮರದಂತೆ ಕಾಣಿಸುವರು ಆದರೆ ಇವರು ಕೆಟ್ಟ ಹಣ್ಣು ಬಿಡುವರು ಅಥವಾ ಫಲಗಳಿಲ್ಲದೆ ಇರುವರು.

ಮರಕ್ಕೆ ತಕ್ಕಂತೆ ಅದರ ಫಲಗಳಿರುವವು. . ನಮ್ಮಂತೆಯೇ ನಮ್ಮ ಕಾರ್ಯಗಳು ಇರುತ್ತವೆ. ನಾವು ಲೋಕದವರಾಗಿದ್ದರೆ ನಮ್ಮ ಫಲವೂ ಲೋಕದ್ದಾಗಿರುತ್ತದೆ. ನಾವು ಪವಿತ್ರಾತ್ಮನವರಾಗದ್ದರೆ,ನಮ್ಮಫಲಗಳು ಪವಿತ್ರಾತ್ಮನ ಫಲಗಳಾಗಿರುತ್ತವೆ ಲೂಕ 6:45.ರಲ್ಲಿ, ಯೇಸು ಹೇಳಿದ್ದು, ಒಳ್ಳೆಯವನು ತನ್ನ ಒಳ್ಳೆಯ ಬೊಕ್ಕಸದೊಳಗಿಂದ ಒಳ್ಳೆಯ ವಸ್ತುಗಳನ್ನು ತೆಗೆಯುತ್ತಾನೆ. ಕೆಟ್ಟವನು ಕೆಟ್ಟ ಬೊಕ್ಕಸದೊಳಗಿಂದ ಕೆಟ್ಟ ವಸ್ತುಗಳನ್ನು ತೆಗೆಯುತ್ತಾನೆ. ಅವನ ಹೃದಯದಲ್ಲಿ ತುಂಬಿರುವುದೇ ಬಾಯಲ್ಲಿ ಬರುತ್ತದೆ. ಅದೇ ರೀತಿಯಾಗಿ ನಮ್ಮ ಹೃದಯದಲ್ಲಿರುವುದನ್ನೇ ನಾವು ಮಾತನಾಡುವವರಾಗಿದ್ದೇವೆ (ಮತ್ತಾಯ 12:35-36 ವ್ಯಾಖ್ಯಾನ ನೋಡಿರಿ).

ಕೆಲವು ಸಮಯ ಕೆಟ್ಟ ಮರವು ಒಳ್ಳೇ ಫಲ ಕೊಡುವ ಹಾಗೆ ಕಂಡು ಬರುತ್ತವೆ. ನಾವು ಮೋಸ ಹೋಗುತ್ತೇವೆ. ಒಬ್ಬನು ಹೀಗೆ ಹೇಳಬಹುದು,"ನಾನು ಒಬ್ಬ ಕ್ರೈಸ್ತನು, ನಾನು ನಂಬಿರುವೇನು." ಕೆಲವು ಸಮಯ ಕ್ರೈಸ್ತನಂತೆ ವರ್ತಿಸಬಹುದು. ಆದರೆ

ಕೊನೆಯಲ್ಲಿ ಬಿದ್ದು ಹೋಗುತ್ತಾನೆ. ಆ ರೀತಿಯ ಜನರು ಹಂದಿಗಳಂತೆ ಇದ್ದಾರೆ. ಅವುಗಳನ್ನು ತೊಳೆದು ಶುದ್ಧ ಮಾಡಿದರೂ ತಿರುಗಿ ಅವು ಮಣ್ಣಿನ ಕೆಸರಿನಲ್ಲಿಗೆ ಹೋಗುವುವು ಪೇತ್ರನು ಹೇಳುತ್ತಾನೆ(2ನೇ ಪೇತ್ರ 2:20-22 ನೋಡಿರಿ). ನಾವು ಹಂದಿಯ ಹೊರಭಾಗವನ್ನು ತೊಳೆಯಬಹುದು. ಆದರೆ ಅದರ ಒಳಗಿನ ಸ್ವಭಾವ ಬದಲಾಗದು. ಅದು ತಿರುಗಿ ಬೇಗನೇ ಕೆಸರಿನೊಳಗೆ ಹೋಗುತ್ತದೆ. ಅದರಂತೆಯೇ ಸುಳ್ಳಾದ ಕ್ರೈಸ್ತರು ಇರುತ್ತಾರೆ.

19 ಒಳ್ಳೇ ಫಲವನ್ನು ಕೊಡದ ಮರವನ್ನು ಕಡಿದು ಹಾಕುತ್ತಾರೆ. ಒಬ್ಬ ಮನುಷ್ಯನು ಹೇಳಬಹುದು "ನಾವು ನಂಬಿದ್ದೇನೆ" ಆದರೆ ಪವಿತ್ರಾತ್ಮನಿಂದುಂಟಾದ ಫಲಗಳನ್ನು ಬಿಡದೇ ಹೋದರೆ ದೇವರಿಂದ ತೀರಸ್ಕರಿಸ್ಪಟ್ಟು, ಕಡಿದುಹಾಕಲ್ಪಡುವುದು (ಯೋಹಾನ 15:6).

20 ಯೇಸು ಹೇಳಿದನು:" ನೀವು ನನ್ನನ್ನು ಆರಿಸಿ ತೆಗೆದುಕೊಂಡಿಲ್ಲ, ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡಿದ್ದೇನೆ ನೀವು ಹೊರಟು ಹೋಗಿ ಫಲಕೊಡುವವರಾಗಬೇಕೆಂತಲೂ, ನೀವು ಕೊಡುವ ಫಲವು ನಿಲ್ಲುವಂತಹುದಾಗಬೇಕೆಂತಲೂ ನಿಮ್ಮನ್ನು ನೇಮಿಸಿದ್ದೇನೆ" (ಯೋಹಾನ 15:16). ನಾವು ಪಲಿಸಲೇ ಬೇಕಾದಂತ ಫಲಗಳ ಬಗ್ಗೆ ಮತ್ತಾಯ 5:3-10ರಲ್ಲಿ ವಿವರಿಸಲ್ಪಟ್ಟಿದೆ. ಗಲಾತ್ಯ 5:22-23ರಲ್ಲಿ ಇದೇ ಫಲಗಳ ಬಗ್ಗೆ ಬೇರೊಂದು ಮಾತುಗಳಲ್ಲಿ ವಿವರಿಸಲ್ಪಟ್ಟಿವೆಳಿವುಗಳು ಪವಿತ್ರಾತ್ಮ[38]. ನಿಂದುಂಟಾದ ಫಲಗಳು. ಇವುಗಳೆ ನಿಜವಾದ ಕ್ರೈಸ್ತನ ಗುರುತುಗಳಾಗಿರುತ್ತವೆ. ಜನರು ನಮ್ಮ ಫಲಗಳಿಂದ ನಮ್ಮನ್ನು ಗುರುತಿಸುವರು.

## ಮಾತು ಗಳು ಮತ್ತು ಕಾರ್ಯಗಳು (7:21-23)

21 ಜನರು ಎರಡು ರೀತಿಯಿಂದ, ತಮ್ಮಷ್ಟಕ್ಕೆ ತಾವೇ ಮೋಸ ಹೋಗುವರು. ಕೆಲವರು ನೆನಸುತ್ತಾರೆ, "ನಾನು ನಂಬಿ, ಕರ್ತನೆ, ಕರ್ತನೆ ಎಂದು ಹೇಳುತ್ತೆನೆ. ನಂತರ ನಾನು ರಕ್ಷಿಸಲ್ಪಡುತ್ತೇನೆ. ಮತ್ತು ನಾನು ಬಯಸಿದ್ದನ್ನು ಮಾಡಬಹುದು. ನಾನು ಎಲ್ಲಾ ವಿಧವಾದ ಪಾಪವನ್ನು ಮಾಡಬಹುದು. ಕ್ರಿಸ್ತನಿಗೆ ವಿಧೇಯನಾಗಿರುವುದು ಅವಶ್ಯವಿಲ್ಲ." ಇದೇ ರೀತಿಯಾಗಿ ಇನ್ನು ಕೆಲವರು ತಮ್ಮಷ್ಟಕ್ಕೆ ತಾವೇ ವಿರುದ್ಧವಾದ ದಾರಿಯಿಂದ ಮೋಸ ಹೋಗುತ್ತಾರೆ. ಇವರು ನಾವು ಮತ್ತು ನಾವು ಮಹಾ ಕೆಲಸಗಳನ್ನು ಮಾಡುವುದರಿಂದ ರಕ್ಷಿಸಲ್ಪರಕ್ಷಿಸಲ್ಪಡುತ್ತೇವೆಂದು ಭಾವಿಸುತ್ತಾರೆ. ಇವರು ನೆನಸುವಂತೆ ಇವರ ಬಹಿರಂಗ ಕಾರ್ಯಗಳು ಒಳ್ಳೆಯವುಗಳಾಗಿದ್ದು, ದೇವರಂದ ಇವುಗಳು ಸ್ವಿಕರಿಸ್ಲಡುತ್ತ ವೆಂದು ನಂಬುತ್ತಾರೆ? (ವಚನ 22-23).

ಈ ಭಾಗದಲ್ಲಿ ಕ್ರಿಸ್ತನು ನಮಗೆ ಭೋದಿಸುವುದೇನೆಂದರೆ, "ಸ್ವಾಮಿ, ಸ್ವಾಮಿ" ಎಂದು ಹೇಳುತ್ತಾ, ಕರ್ತನಿಗೆ ವಿಧೇಯರಾಗಿರುವುದಿಲ್ಲವೋ ಅವರು ನರಕಕ್ಕೆ ಹೋಗುವರು. ಮಹಾ ಕೆಲಸಗಳನ್ನು ಮಾಡುವರು ಆದರೆ ನಂಬಿಕೆ ಇರುವುದಿಲ್ಲ, ಇಂತವರು ಕೂಡ ನರಕಕ್ಕೆ ಹೋಗುವರು. ಮನುಷ್ಯನು ನಂಬಿಕೆಯಿಂದಲೇ ನೀತಿವಂತನೆಂದು ನಿರ್ಣಯಿಸಲ್ಪಡುತ್ತಾನೆಯೇ ಹೊರತು ಕ್ರೀಯೆಗಳಿಂದಲ್ಲ ಮತ್ತು ರಕ್ಷಣೆ ಹೊಂದುವುದಕ್ಕೆ ನಂಬಿಕೆ ಮತ್ತು ಕ್ರೀಯೇಗಳೆರಡು ಅವಷ್ಯ. (ಯಾಕೋಬ 2:24).

ನಿಜವಾಗಿಯೂ ಒಳ್ಳೇ ಕಾರ್ಯಗಳೆಂದರೆ ಕ್ರಿಸ್ತನಿಗೆ ವಿಧೇಯರಾಗಿರುವುದು ಮತ್ತು ನಮ್ಮ ನಂಬಿಕೆಯು ನಿಜವಾದದ್ದೆಂಬುದಕ್ಕೆ ಒಳ್ಳೆಯ ಕಾರ್ಯಗಳು ಗುರುತಾಗಿವೆ. ನಂಬಿಕೆಯು ಯಾವಾಗಲೂ ಒಳ್ಳೇ ಕಾರ್ಯಗಳಿಗೆ ಒತ್ತಾಸೆಯನ್ನುಂಟು ಮಾಡುತ್ತದೆ.ಇದು ಇಲ್ಲದಿದ್ದರೆ ನಂಬಿಕೆಯು ನೀಜವಾದದ್ದಲ್ಲ. ಆದ್ದರಿಂದ ನಾವು, ನಂಬಿಕೆಯನ್ನು ಕಾರ್ಯಗಳನ್ನು ಬೇರೆ ಬೇರೆ ಮಾಡಲಿಕ್ಕೆ ಆಗುವುದಿಲ್ಲ. ಕ್ರಿಯೆಗಳಿಲ್ಲದ ನಂಬಿಕೆ ಸತ್ತದ್ದಾಗಿದೆ. (ಯಾಕೋಬ 2:14-17 ವ್ಯಾಖ್ಯಾನ ನೋಡಿರಿ). ನಂಬಿಕೆ ಇಲ್ಲದ ಕಾರ್ಯಗಳು ಹುರುಳಿಲ್ಲದ್ದು ಆಗಿದೆ. ನಂಬಿಕೆ ಇಲ್ಲದೇ ದೇವರನ್ನು ಮೆಚ್ಚಿಸುವುದು ಅಸಾಧ್ಯವಾಗಿದೆ (ಇಬ್ರಿಯಾ 11:6). ನಂಬಿಕೆಯಿಲ್ಲದೆ ಸ್ವಭಾವಿಕವಾದಂತ ಮನುಷ್ಯನು ದೇವರ ಚಿತ್ತಕ್ಕೆ ವಿಧೇಯನಾಗುವದಿಲ್ಲ. ನಂಬಿಕೆ ಇಲ್ಲದೆ ಮತ್ತು ಹೊಸದಾಗಿ ಹುಟ್ಟದೆ ಇರುವ ಯಾವೊಬ್ಬನು,ಸಹ ಕ್ರಿಸ್ತನ ಬೋಧನೆಯನ್ನು ಅನುಸರಿಸುವುದಿಲ್ಲ ನಾವು ಪವಿತ್ರಾತ್ಮನ ಮೂಲಕ ಕ್ರಿಸ್ತನನ್ನು ಅಂಗೀಕರಿಸುತ್ತೇವೆಯೋ ಆಗ ಮಾತ್ರ ನಾವು ಕ್ರಿಸ್ತನ ಬೋಧನೆಯಂತೆ ನಡೆಯುವಂತವರಾಗುತ್ತೆವೆ..

ಕ್ರಿಸ್ತನನ್ನು "ಕರ್ತನೇ" ಎಂದು ಕರೆಯುವರು ಆದರೆ ಆತನು ಹೇಳಿದ್ದನ್ನು ಮಾಡದೆ ಇರುವರು.ಇಂತವರ ಬಗ್ಗೆ ಈ ವಚನಗಳಲ್ಲಿ ಕ್ರಿಸ್ತನು ಮಾತಾಡುವುದೇನೆಂದರೆ. ಸತ್ಯವೆಂಬುದು ಅವರಲ್ಲಿಲ್ಲಾ (1ನೇ ಯೋಹಾನ 2:4 ನೋಡಿರಿ). ಅವರು ಕ್ರಿಸ್ತನನ್ನು ಅರಿತಿದ್ದೇವೆಂದು ಪ್ರತಿವಾದಿಸಿದರು ಆದರೆ ದೆವ್ವಗಳು ಕೂಡ ಕ್ರಿಸ್ತನನ್ನು ಅರಿತಿದ್ದವು ಎಂಬುದನ್ನು ಮರೆತು ಬಿಟ್ಟರು. (ಮಾರ್ಕ 1:23-24, ಯಾಕೋಬ 2:19). ಇಂತಹ ಜನರಲ್ಲಿ ಸುಳ್ಳಾದ ನಂಬಿಕೆ ಇದ್ದು, ಇದು ಇವರನ್ನು ರಕ್ಷಿಸುವುದಿಲ್ಲ.

ಇಂತಹ ಜನರು ಕ್ರಿಸ್ತನನ್ನು ಮತ್ತು ಆತನ ಬೋಧನೆಯನ್ನು ನಂಬುತ್ತಾರೆ ಆದರೆ ಇವರ ಜೀವಿತದಲ್ಲಿ ಬದಲಾವಣೆ ಇರುವುದಿಲ್ಲ. ಕೆಲವೊಂದು ಜನರು ಆಸಕ್ತಿಯಿಂದ ಸಹ ಪ್ರಾರ್ಥಿಸುವರು. ಇವರು "ಕರ್ತನೆ" ಎಂದು ಒಂದು ಸಾರಿ ಮಾತ್ರ ಅನ್ನುವುದಿಲ್ಲ.ಎರಡು ಇದನ್ನು : " ಕರ್ತನೇ", "ಕರ್ತನೇ," ಎಂದು ಇವರು ಅನ್ನುವರು. ಅವರ ಮಾತುಗಳು ಮತ್ತು ಪ್ರಾರ್ಥನೆಗಳು ಉತ್ಸಾಹದಿಂದಲೂ, ಅಧಿಕವಾದ ಉದ್ರೇಕದಿಂದಲೂ ಕೂಡಿರುತ್ತವೆ. ಆದರೆ ವಿಧೇಯತೆ ಇರುವುದಿಲ್ಲ. ಇಂತಹ ಪ್ರಾರ್ಥನೆಗಳು ಮತ್ತು ಮಾತುಗಳು ಪವಿತ್ರಾತ್ಮವುಗಳಾಗಿರದೇ, ಶಾರೀರಿಕವಾದಂತವುಗಳಾಗಿವೆ. ಯಾರಲ್ಲಿ ಪವಿತ್ರಾತ್ಮನು ನೆಲೆಸಿರುತ್ತಾನೋ ಮತ್ತು ಯಾರು ತಮ್ಮ ಜೀವಿತದಲ್ಲಿ ಕ್ರಿಸ್ತನಿಗೆ ವಿಧೇಯರಾಗಿ ನಡೆದುಕೊಳ್ಳುತ್ತಾರೋ ಅಂತವರು ಮಾತ್ರವೆ ದೇವರ ಪರಲೋಕ ರಾಜ್ಯವನ್ನು ಪ್ರವೇಶಿಸುವರು. ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಆತನು ಕ್ರಿಸ್ತನವನಲ್ಲ (ರೋಮಾ. 8:9).ಮತ್ತು ಪವಿತ್ರಾತ್ಮನ ಪ್ರೇರಣೆಯಿಂದಲೇ ಹೊರತು ಯಾವ ಮನುಷ್ಯನಾದರೂ "ಯೇಸು ವು ಕರ್ತನು" ಎಂದು ಹೇಳಲಾರನು. (1ನೇ ಕೊರಿಂಥ 12:3)

22-23 ಈ ವಚನಗಳಲ್ಲಿ ಕ್ರಿಸ್ತನು ಮಹಾ ಕಾರ್ಯಗಳನ್ನು ಮಾಡುವವರೆ ಅಂದರೆ ಯಾರಲ್ಲಿ ನಿಜವಾದಂತ ನಂಬಿಕೆ ಮತ್ತು ಪವಿತ್ರಾತ್ಮನಿಂದುಂಟಾಗುವ ಫಲಗಳು ಇರುವುದಿಲ್ಲವೊ, ಅಂತವರ ವಿಷಯವಾಗಿ ಮಾತನಾಡುತ್ತಾನೆ. ನಿಜವಾದ ನಂಬಿಕೆ

ಯಿಲ್ಲದೆನೆಯೇ, ಪ್ರವಾದಿಸುವುದು, ದೆವ್ವಗಳನ್ನು ಬಿಡಿಸುವುದು ಸಾದ್ಯ ಮತ್ತು ಕ್ರಿಸ್ತನ ಹೆಸರಿನಲ್ಲಿ ಅದ್ಭುತಾಕಾರಗಳನ್ನು ಮಾಡುವುದು ಸಾಧ್ಯವಿದೆ. ಆದರೆ ಇಂತಹ ಜನರು ಪರಲೋಕ ರಾಜ್ಯದಲ್ಲಿ ಪ್ರವೇಶಿಸುವುದಿಲ್ಲ.

ಅಪೊಸ್ತಲನಾದ ಸುವಾರ್ತಿಕ, ಪೌಲನು ಈ ಸತ್ಯವನ್ನು ತಿಳಿದಿದ್ದನು. ಇತನ ಸುವಾರ್ತಾಸಾರಿದ್ದರೂ ಮತ್ತು ಮಾಡಿದ ಅದ್ಭುತ ಗಳನ್ನು ಮಾಡಿದವನಾಗಿದ್ಯಾಗ್ಯೂ, ಅವನು ನಿಜವಾದ ಸತ್ಯತೆಯನ್ನು ಅರಿತವನಾಗಿದ್ದನು. ತನ್ನ ದೇಹವನ್ನು ಸ್ವಾಧೀನ ಪಡಿಸಿಕೊಳ್ಳದಿದ್ದರೇ, ನಂಬಿಕೆಯಲ್ಲಿ ಜೀವಿಸದಿದ್ದರೇ ಮತ್ತು ವಿಧೇಯನಾಗಿರದಿದ್ದರೇ ಜಯಮಾಲೆ ಹೊಂದುವುದಕ್ಕೆ ಅಯೋಗ್ಯನೆನಿಸಿಕೊಳ್ಳುವೆನು ಎಂಬುದನ್ನು ತಿಳಿದವನಾಗಿದ್ದನು(1ನೇ ಕೊರಿಂಥ 9:25-27).

ಹಾಗೆಯೇ ಪೌಲನು,. ನಾನು ಮನುಷ್ಯರ ಭಾಷೆಗಳನ್ನು ದೇವದೂತರ ಭಾಷೆಗಳನ್ನು ಆಡುವವನಾದರೂ, ಪ್ರೀತಿಯಿಲ್ಲದವನಾಗಿದ್ದರೆ ನಾದ ಕೊಡುವ ಕಂಚೂ ಗಣಗಣಿಸುವ ತಾಳವೂ ಆಗಿದ್ದೇನೆ. ನನಗೆ ಪ್ರವಾದನಾ ವರವಿದ್ದರೂ ಎಲ್ಲಾ ರಹಸ್ಯಗಳೂ, ಸಕಲವಿಧವಾದ ವಿದ್ಯೆ ತಿಳಿದರೂ ಬೆಟ್ಟಗಳನ್ನು ತೆಗೆದಿಡುವುದಕ್ಕೆ ಬೇಕಾದಷ್ಟು ನಂಬಿಕೆ ಇದ್ದರೂ ನಾನು ಪ್ರೀತಿ ಇಲ್ಲದವನಾಗಿದ್ದರೆ ಏನೂ ಅಲ್ಲದವನಾಗಿದ್ದೇನೆ. ನನಗಿರುವುದೆಲ್ಲವನ್ನು ಅನ್ನದಾನ ಮಾಡಿದರೂ, ನನ್ನ ದೇಹವನ್ನು ಸುಡುವುದಕ್ಕೆ ಒಪ್ಪಿಸಿದರೂ ಪ್ರೀತಿಯು ನನಗಿಲ್ಲದಿದ್ದರೆ ನನಗೇನು ಪ್ರಯೋಜನವಾಗುವುದಿಲ್ಲ, ಎಂದು ಬರೆಯುತ್ತಾನೆ. (1ನೇ ಕೊರಿಂಥ 13:1-3). ಪವಿತ್ರಾತ್ಮನಿಂದ ಬರದ ಪ್ರೀತಿ ಮತ್ತು ನಿಜವಾದ ನಂಬಿಕೆಯಿಂದ ಬರದ ಪ್ರೀತಿಯಿಲ್ಲದ ಪೌಲನ ಮಹಾ ಕೆಲಸಗಳು ಶೂನ್ಯ ಎಂದರ್ಥ.

ಜನರು ಪವಿತ್ರಾತಮನ ಸಹಾಯವಿಲ್ಲದೆಯೇ ಪ್ರವಾದಿಸುವ, ದೆವ್ವಗಳನ್ನು ಓಡಿಸುವಂತಹ ಮಹಾ ಕಾರ್ಯಗಳನ್ನು ಹೇಗೆ ಮಾಡುವರು? ಇವರು ಇಂತಹ ಕಾರ್ಯಗಳನ್ನು ಮಾಡುವುದಕ್ಕೆ ಎಲ್ಲಿಂದ ಶಕ್ತಿಯನ್ನು ಹೊಂದುತ್ತಾರೆ? ಇದಕ್ಕೆ ಉತ್ತರ, ಹೀಗಿದೆ : ಸೈತಾನನಿಂದ. ಸೈತಾನನು ಶಕ್ತಿವಂತನಾಗಿದ್ದಾನೆ. ಇತನು ತನ್ನ ಲೋಕದ ಎಲ್ಲಾ ರಾಜ್ಯಗಳನ್ನು ತನ್ನ ನಿಯೊತ್ರಿಸುತ್ತಾನೆ (ಮತ್ತಾಯ 4:8-9). ಸೈತಾನನು ಶಕ್ತಿವಂತನು ಮಾತ್ರವೇ ಆಗಿರದೆ ಮೋಸಗಾರನೂ ಕೂಡ ಆಗಿದ್ದಾನೆ (2ನೇ ಕೊರಿಂಥ 11:14). ಕ್ರೈಸ್ತರನ್ನು ಮೋಸಗೊಳಿಸುವದಕ್ಕೋಸ್ಕರ ಸುಳ್ಳು ಪ್ರವಾದಿಗಳೂ ಸೈತಾನನ ಮೂಖಾಂತರವಾಗಿ ಸೂಚಕ ಕಾರ್ಯಗಳನ್ನು ಅದ್ಭುತ ಕಾರ್ಯಗಳನ್ನು ಮಾಡುವರು. (ಮಾರ್ಕ 13:22).ಮೇಲಾಗಿ, ಈ ಎಲ್ಲಾ ಸಂಗತಿಗಳಿಂದ ಸುಳ್ಳು ಪ್ರವಾದಿಗಳು ತಮ್ಮಷ್ಟಕ್ಕೆ ತಾವೇ ತಮ್ಮನ್ನು ಮೋಸಗೋಳಿಸಿಕೊಳ್ಳುವರು..

ಇವರು, ತಾವು, "ನಾನು ಮಾಡಿದ ಕಾರ್ಯಗಳನ್ನು ನೋಡು".ಎಂದು ಹೇಳುತ್ತಾರೆ. ಆದರೆ ಕ್ರಿಸ್ತನು ಅವರಿಗೆ ಹೇಳುತ್ತಾನೆ "ನಾನು ನಿಮ್ಮನ್ನು ಅರಿಯೆನು" (ವಚನ 23).

ಇದು ಸೈತಾನಿಂದ ಬಂದಂತ ಕಾರ್ಯ ಮತ್ತು ಇದು ಪವಿತ್ರಾತ್ಮನಿಂದಬಂದಂತ ಕಾರ್ಯ ಎಂದು, ಇವೆರಡರ ಮದ್ಯ ಇರುವಂತ ವ್ಯತ್ಯಾಸವನ್ನು ಅರಿಯುವುದು ಹೇಗೆ? ಉತ್ತರ ಹೀಗೆ ಇರುತ್ತದೆ: ಪವಿತ್ರಾತ್ಮನ ಪ್ರತಿಯೊಂದು ಕಾರ್ಯವು ಕ್ರಿಸ್ತನಿಗೆ ಯಾವಾಗಲೂ ಮಹಿಮೆಯನ್ನು ತರುವಂತದ್ದಾಗಿದ್ದು; ಸೈತಾನನ ಕಾರ್ಯಗಳು ಯಾವಾಗಲೂ ಸೈತಾನನಿಗೂ ಮತ್ತು ಆತನಿಗಾಗಿ ಕೆಲಸ ಮಾಡುವಂತವರಿಗೆ ಮಹಿಮೆಯನ್ನು ತರುತ್ತವೆ.

ಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿದನು: -"ಆದರೂ ದೆವ್ವಗಳು ನಮಗೆ ಅಧೀನವಾಗಿವೆ ಎಂದು ಸಂತೋಷ ಪಡದೇ ನಮ್ಮ ಹೆಸರುಗಳು ಪರಲೋಕದಲ್ಲಿ ಬರೆದಿರುತ್ತವೆಂದು ಸಂತೋಷ ಪಡಿರಿ" (ಲೂಕ 10:20). ಬೇರೆ ಮಾತುಗಳಲ್ಲಿ ಯೇಸುವು ಹೀಗೆ ಹೇಳುತ್ತಾನೆ - ನೀವು ಮಾಡುವ ಕಾರ್ಯಗಳ ಮೇಲೆ ಭರವಸೆ ಇಡಬೇಡಿರಿ; ನಿಮ್ಮ ಹೆಸರು ಪರಲೋಕದಲ್ಲಿ ಬರೆಯಲ್ಪಟ್ಟಿರುವುದಾದರೆ ಮಾತ್ರ ನೀವು ರಕ್ಷಿಸಲ್ಪಡುವಿರಿ"

ನಾವು ಎಲ್ಲಕ್ಕಿಂತ ಮುಖ್ಯವಾಗಿ ಕೇಳುವಂತ ಪ್ರಶ್ನೆ ಇದಾಗಿದೆ :- ನನ್ನ ಹೆಸರು ಪರಲೋಕದಲ್ಲಿ ಬರೆಯಲ್ಪಟ್ಟಿದೆಯೋ? ಕ್ರಿಸ್ತನು ನನ್ನಲ್ಲಿ ಜೀವಿಸುತ್ತಿರವನೋ? ಪವಿತ್ರಾತ್ಮನು ನನ್ನಲ್ಲಿ ವಾಸವಾಗಿದ್ದಾನೋ? ಇದಕ್ಕೆ ಉತ್ತರ "ಇಲ್ಲ", ಎಂದಾದರೆ. ನ್ಯಾಯ ತೀರ್ಪಿನ ದಿನದಲ್ಲಿ ಕ್ರಿಸ್ತನು ನಮಗೆ ಹೇಳುತ್ತಾನೆ: "ನಾನೆಂದೂ ನಿಮ್ಮನ್ನು ಅರಿಯೆನು. ಧರ್ಮವನ್ನು ಮೀರಿ ನಡೆಯುವವರೇ ನನ್ನಿಂದ ತೊಲಗಿ ಹೋಗಿರಿ! ನಿಮ್ಮ ಎಲ್ಲಾ ಕಾರ್ಯಗಳು ನೀಮ್ಮ ಮಹಿಮೆಗಾಗಿಯೇ, ನನಗಲ್ಲ"

ನ್ಯಾಯತೀರ್ಪಿನ ದಿನದ ವಿಷಯವಾಗಿ ಯೋಚಿಸುವ, ನಮ್ಮಲ್ಲಿರುವ ಪ್ರತಿಯೊಬ್ಬರೂ ಆ ದಿನದಲ್ಲಿ ಕರ್ತನ ಮುಂದೆ ನಿಲ್ಲಬೇಕಾಗಿದೆ. ಕ್ರಿಸ್ತನು ನಮಗೆ ಹೇಳುವುದಾದರು ಏನು? "ನನ್ನ ತಂದೆಯು ಆಶೀರ್ವಾದ ಹೊಂದಿದವರೇ, ಬನ್ನಿರಿ. ಲೋಕಾದಿಯಿಂದ ನಿಮಗೋಸ್ಕರ ಸಿದ್ಧ ಮಾಡಿದ ರಾಜ್ಯವನ್ನು ಸ್ವಸ್ಥ್ಯವಾಗಿ ತೆಗೆದುಕೊಳ್ಳಿರಿ" (ಮತ್ತಾಯ 25:34). ಎಂದು ಹೇಳುವನೋ ಅಥವಾ " ನಾನೆಂದೂ ನಿಮ್ಮ ಗುರುತನ್ನು ಕಾಣೆನು. ಧರ್ಮ ಮೀರಿ ನಡೆಯುವವರೇ ನನ್ನಿಂದ ತೊಲಗಿ ಹೋಗಿರಿ ಎಂದು ಹೇಳುವನೋ"?

## ಬುದ್ಧಿವಂತ ಮತ್ತು ಬುದ್ಧಿಹೀನ ಮನೆ ಕಟ್ಟುವವರು (7:24-29)

(ಲೂಕ 6:46-49)

**24-27** ಯೇಸುವು, ಈ ದೃಷ್ಟಾಂತದಲ್ಲಿ, ನಿಜವಾದ ಕ್ರೈಸ್ತ ಮತ್ತು ಸುಳ್ಳು ಕ್ರೈಸ್ತನಂತಿರುವ, ಒಬ್ಬ ಬುದ್ಧಿವಂತ ಮನುಷ್ಯ ಮತ್ತು ಒಬ್ಬ ಮಾರ್ಕ ಮನುಷ್ಯನ ವಿಷಯವಾಗಿ ಮಾತನಾಡುತ್ತಾನೆ. ಇಬ್ಬರೂ ಯೋಚಿಸುತ್ತಾರೆ. ನಾವು ನಿಜವಾದ ಕ್ರೈಸ್ತರು. ಮತ್ತು ಇಬ್ಬರೂ ಯೋಚಿಸುತ್ತಾರೆ, ನಾವು ಬಂಡೆಯ ಮೇಲೆ ಮನೆ ಕಟ್ಟುತ್ತಿದ್ದೇವೆ. ಆದರೆ ಎರಡನೆಯ ಮನುಷ್ಯನು ತನ್ನನ್ನು ತಾನೇ ಮೊಸಗೋಳಿಕೊಳ್ಳುತ್ತಿದ್ದಾನೆ.

ಈ ಇಬ್ಬರೂ ಒಂದೇ ರೀತಿಯಾದಂತಹ ಮನೆಯನ್ನು ಕಟ್ಟಿದರು. ಅವರ ಮನೆಗಳು ನೋಡಲು ಒಂದೇ ಆಗಿದ್ದವು. ಅಲ್ಲಿ ಒಂದೇ ಒಂದು ವ್ಯತ್ಯಾಸವಿತ್ತು. ಒಂದಕ್ಕೆ ಅಸ್ತಿವಾರ ಹಾಕಿತ್ತು ಮತ್ತು ಇನ್ನೊಂದಕ್ಕೆ ಅಸ್ತಿವಾರವಿಲ್ಲ. ಲೂಕನ 6:48-49ರ

ಪ್ರಕಾರ ಮೊದಲನೆಯ ಮನುಷ್ಯನು ಆಳವಾಗಿ ಅಗಿದು ಬಂಡೆಯ ಮೇಲೆ ಅಸ್ತಿವಾರವನ್ನು ಹಾಕಿದನು. ಎರಡನೆಯ ಮನುಷ್ಯನು ತನ್ನ ಮನೆಯನ್ನು ಅಸ್ತಿವಾರ ಇಲ್ಲದೆಯೇ ನೆಲದ ಅಥವಾ ಮರಳಿನ ಮೇಲೆ ಕಟ್ಟಿದನು.

ಈ ದೃಷ್ಟಾಂತದಿಂದ ನಾವು ಪ್ರಾಮುಖ್ಯವಾದ ಸತ್ಯವನ್ನು ಕಲಿತುಕೊಳ್ಳಬಹುದು: ನಿಜವಾದ ಕ್ರೈಸ್ತನಿಗೂ ಮತ್ತು ಸುಳ್ಳು ಕ್ರೈಸ್ತನಿಗೂ ಇರುವ ವ್ಯತ್ಯಾಸವನ್ನು ಸುಲಭವಾಗಿ ಕಾಣಲು ಸಿಗುವುದಿಲ್ಲ. ವಚನ 15ರ ಪ್ರಕಾರವಾಗಿ, ಸುಳ್ಳು ಕ್ರೈಸ್ತರು, ಸುಳ್ಳು ಪ್ರವಾದಿಗಳು, ಕುರಿವೇಷ ಧರಿಸಿದ ತೋಳಗಳಂತೆ ಇದ್ದಾರೆ. ಇವರನ್ನು ನೀವು ನೋಡುವಾಗ, ಕುರಿಗಳ ಹಾಗೆ, ನಿಜವಾದ ಕ್ರೈಸ್ತರಂತೆ, ಕಾಣುತ್ತಾರೆ.

ಈ ಮನೆಯ ವಿಷಯವಾಗಿ ಪ್ರಾಮುಖ್ಯವಾಗಿರುವಂತದ್ದು ಏನು? ಅಸ್ತಿವಾರ. ಮನೆಯು ಎಷ್ಟು ಸುಂದರವಾಗಿರಲಿ, ಅಸ್ತಿವಾರ, ಇಲ್ಲದಿದ್ದರೆ, ಮನೆ ಕಟ್ಟಿದ್ದು ವ್ಯರ್ಥ. ಇದೇ ರೀತಿ ಮನುಷ್ಯರಿಗೆ ಒಂದು ಅಸ್ತಿವಾರ ಬೇಕಾಗಿದೆ. ಮನುಷ್ಯರಿಗೂ ಕೂಡ ಅಸ್ತಿವಾರ ಅವಶ್ಯ.ಮತ್ತು ನೀಜವಾದಂತ ಒಂದೆ ಒಂದು ನೀಜವಾದ ಅಸ್ತಿವಾರವಿದೆ:ಅಸ್ತಿವಾರವೇ, ಕ್ರಿಸ್ತನು. (1ನೇ ಕೊರಿಂಥ 3:11). ಇದನ್ನು ಬಿಟ್ಟರೆ ಉಳಿದದ್ದೆಲ್ಲಾ ಮರುಳು.

ಸುಳ್ಳು ಕ್ರೈಸ್ತನು ತನ್ನ ಮನೆಯನ್ನು ಉಸುಬಿನ ಮೇಲೆ (ಮರಳ) ಕಟ್ಟಿದಂತೆ ಇರುತ್ತಾನೆ. "ನಾನು ಸುರಕ್ಷಿತನಾಗಿದ್ದೇನೆ. ನಾನು ಒಬ್ಬ ಕ್ರೈಸ್ತನಾಗಿದ್ದೇನೆ. ನನ್ನ ಮನೆಯು ಬೀಳುವುದಿಲ್ಲ" ಎಂದು ಭಾವಿಸುತ್ತಾನೆ. ಸೈತಾನನು ಈ ರೀತಿಯಾಗಿ ಜನರಲ್ಲಿ ತಪ್ಪು ಭರವಸೆಗಳನ್ನು ನೀಡುವುದಕ್ಕೆ ಆಶೆ ಪಡುತ್ತಾನೆ. ಶಿಷ್ಯರಲ್ಲಿ ಕ್ರಿಸ್ತನಿಗೆ ದ್ರೋಹ ಬಗೆದಂತ ಇಸ್ಕರಿಯೂತ ಯೂದನು ಪ್ರಾರಂಭದಲ್ಲಿ ಶಿಷ್ಯನಂತೆಕಾಣಿಸಿಕೊಂಡನು. ಆದರೆ ಆರಂಭದಿಂದಲೂ ಈತನು ಸೈತಾನನ ಸೇವಕನಾಗಿದ್ದನು.

ಈಗ ನಮ್ಮಷ್ಟಕ್ಕೆ ನಾವೇ ಪರೀಕ್ಷಿಸಿಕೊಳ್ಳೋಣ. ನಾವು ಯಾವ ತರವಾದ ಮನೆಯನ್ನು ಕಟ್ಟುತ್ತಾ ಇದ್ದೇವೆ? ನಮಗೆ ಭದ್ರತೆ, ಸುರಕ್ಷತೆ,ಸುಖ ಮತ್ತು ಸಮಾಧಾನ ಹೊಂದ ಬೇಕು ಎಂಬ ಆಶೆಯಿರುವುದಾದರೆ ನಾವು ಕೂಡ ಉಸುಬಿನ (ಮರಳ) ಮೇಲೆ ಮನೆ ಕಟ್ಟುವವರಾಗಿದ್ದೇವೆ. ನಮ್ಮ ಮುಖ್ಯ ಆಶೆಯು ಕ್ರಿಸ್ತನನ್ನು ಅರಿತು ಆತನಂತೆ ಜೀವಿಸುವವರಾಗಿರಬೇಕೆಂಬುವದಾದರೆ. ಆಗ ನಾವು ಬಂಡೆಯ ಮೇಲೆ ಮನೆಯನ್ನು ಕಟ್ಟುತ್ತಿರುವೆವು.

ಸುಳ್ಳು ಕ್ರೈಸ್ತನು ಮೊದಲು ತನ್ನ ಒಳ್ಳೆಯದಕ್ಕಾಗಿಯೆ ನೋಡಿಕೊಳ್ಳುತ್ತಾನೆ. ಈತನು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕ ಪಡುವುದಿಲ್ಲ. ಮತ್ತಾಯ 6:33 ತನ್ನ ಸಂತೋಷಕ್ಕಾಗಿಯೇ ಜೀವಿಸುವವನಾಗಿದ್ದಾನೆ. ಈವನು ದೇವರನ್ನುನಿರಿಕ್ಷಿಸುವುದಿಲ್ಲ ಆದರೆ ದೇವರ ಆಶೀರ್ವಾದಕ್ಕಾಗಿ ಎದುರು ನೋಡುತ್ತಾನೆ. ಈತನು ದೇವರ ಆಶೀರ್ವಾದಗಳನ್ನು ಪ್ರೀತಿಸುತ್ತಾನೆ. ಆದರೆ ದೇವರನ್ನು ಮಾತ್ರ ಪ್ರೀತಿಸುವುದಿಲ್ಲ. ಈತನು ಎಂದಿಗೂ ನಿಜವಾದ ಕ್ರೈಸ್ತನಾಗಲಾರ. ಯಾಕೆಂದರೆ ಈತನು ಕ್ರಿಸ್ತನಿಗೆ ಪ್ರಥಮ ಆದ್ಯತೆ ಕೊಡುವುದಿಲ್ಲ. ಈತನು ಕ್ರಿಸ್ತನನ್ನು ತನ್ನ ಜೀವಿತದ ಒಡೆಯನನ್ನಾಗಿ ಮಾಡಿಕೊಳ್ಳುವುದಿಲ್ಲ. ಕ್ರಿಸ್ತನನ್ನು ತನ್ನ ತನ್ನ ಜೀವಿತದ ಅಸ್ತಿವಾರವನ್ನಾಗಿ ಮಾಡಿಕೊಳ್ಳುವುದಿಲ್ಲ. ಈವನ ಮನೆಯು ಉಸುಬಿನ (ಮರಳ) ಮೇಲೆ ಕಟ್ಟಲ್ಪಟ್ಟಿರುವುದು..

ನಿಜವಾದ ಕ್ರೈಸ್ತನು ಕ್ರಿಸ್ತನನ್ನು ಅರಿತವನಾಗಿ ಆತನಿಗೆ ವಿಧೇಯನಾಗಿರುತ್ತಾನೆ. ಈವನು ಕ್ರಿಸ್ತನ ವಾಕ್ಯಗಳನ್ನು ಕೇಳಿ ಇವುಗಳನ್ನು ಕಾರ್ಯರೂಪದಲ್ಲಿ ತೊಡಗಿಸಿಕೊಳ್ಳುತ್ತಾನೆ. (ವಚನ 24). ಕ್ರಿಸ್ತನನ್ನು ಅರಿತುಕೊಳ್ಳುವುದೆಂದರೆ ಕ್ರಿಸ್ತನನ್ನು ಪ್ರೀತಿಸಿದಂತೆ. ಕ್ರಿಸ್ತನನ್ನು ಪ್ರೀತಿಸುವುದೆಂದರೆ ಕ್ರಿಸ್ತನಿಗೆ ವಿಧೇಯರಾದಂತೆ. ಯೇಸು ಹೇಳಿದ್ದಾನೆ, ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವನು (ಯೋಹಾನ 14:21). ಈವನೇ ಬಂಡೆಯ ಮೇಲೆ ಮನೆ ಕಟ್ಟಿದವನಾಗಿರುವನು (ಲೂಕ 11:28, ಯೋಹಾನ 13:17)

ಈ ಎರಡೂ ಮನೆಗಳಿಗಿರುವ ವ್ಯತ್ಯಾಸವನ್ನು ನಾವು ಗುರ್ತಿಸಿ ಹೇಳುವದಾದರು ಹೇಗೆ? ಮಳೆ,ಮಹಾಪೂರ ಮತ್ತುಬಿರುಗಾಳಿಗಳು ಬರುವವರೆಗೆ ಸಾಧಾರಣವಾಗಿ ನಮಗೆ ಹೇಳಲಿಕ್ಕಾಗದು.ಇದು ಸಂಭವಿಸುವಾಗ ಮರಳಿನ ಮೇಲೆಮಳೆ, ಪ್ರವಾಹ ಮತ್ತು ಬಿರುಗಾಳಿಗಳು, ಅದರ ಮೇಲೆ ಬರುತ್ತದೆ. ಇದಾದ ನಂತರ ಮರಳಿನ ಮೇಲೆ ಕಟ್ಟಲ್ಪಟ್ಟಂತಹ ಮನೆಯೂ ಕುಸಿದುಬಿದ್ದು ಹೋಗುತ್ತದೆ.

ಮನುಷ್ಯನು ಸಹ ಇದರ ಹಾಗೆಯೇ. ಕಷ್ಟಗಳು ಮತ್ತು ಸಂಕಟಗಳು ಬಂದಾಗಲೆ ನಿಜವಾದ ಕ್ರೈಸ್ತರು ಯಾರು ಎಂಬುದನ್ನು ನಾವು ಹೇಳಬಹುದು. ನಮ್ಮ ನಂಬಿಕೆಯನ್ನು ಮತ್ತು ನಂಬಿಕೆಯ ಅಸ್ತಿಭಾರವನ್ನು ಪರೀಕ್ಷಿಸುವುದಕ್ಕೋಸ್ಕರವಾಗಿಯೇ ದೇವರು ನಮಗೆ ಕಷ್ಟಗಳು ಮತ್ತು ಶೋಧನೆಗಳು ಬರುವಂತೆ ಅನುಮತಿಸುತ್ತಾನೆ. (1ನೇ ಪೇತ್ರ 1:6-7). ಯೇಸುಕ್ರಿಸ್ತನು ಪ್ರತಿಯೊಬ್ಬರನ್ನು ಹೀಗೆ ಕೇಳುತ್ತಾನೆ. "ಸಂಕಷ್ಟಗಳು ಬಂದ ಸಂದರ್ಭದಲ್ಲಿಯೂ ಸಹ ನಿಮ್ಮಲ್ಲಿರುವ ನಂಬಿಕೆಯು ಸ್ಥಿರವಾಗಿರುತ್ತದೆಯೇ?"

ಮೂರು ತರಹದ ಸಂಕಟಗಳಿವೆ. ಮಳೆ, ಪ್ರವಾಹ ಮತ್ತು ಬಿರುಗಾಳಿಗಳು (27ನೇ ವಾಕ್ಯ). ಮಳೆಯೂ ಅನೇಕ ವಿಧವಾದಂತಹ ಕಷ್ಟಗಳಿಗೆ ಅಂದರೆ ಹಿಂಸೆ, ಆಸ್ತಿಯ ನಷ್ಟ, ಆರೋಗ್ಯವನ್ನು ಕಳೆದುಕೊಳ್ಳುವುದು ಮತ್ತು ಕಡೆಯದಾಗಿ ಮರಣ ಇಂತಹವುಗಳಿಗೆ ಗುರುತಾಗಿದೆ. ಈ ರೀತಿಯಾದಂತಹ ಕಷ್ಟಗಳು ನಮಗೆ ಹೊರಗಿನಿಂದ ಬರುತ್ತವೆ. ಪ್ರವಾಹವು ದೈಹಿಕ ಆಸೆ ಮತ್ತು ಗರ್ವಕ್ಕೆ ಗುರುತಾಗಿದೆ. (ನೋಡಿರಿ, 1ನೇ ಯೋಹಾನ 2:15). ಈ ಶೋಧನೆಗಳು ನಮ್ಮಲ್ಲಿಯೆ ಉಂಟಾಗುತ್ತವೆ. ನಮ್ಮ ಹೊರಗಿನಿಂದ ಮತ್ತು ನಮ್ಮಲ್ಲಿಯೇ ಉಂಟಾಗುವ ಈ ಎರಡು ವಿಧವಾದ ಶೋಧನೆಗಳ ಮೇಲೆ ಸೈತಾನನು ಜಯ ಹೊಂದಲು ಪ್ರಯತ್ನಿಸುತ್ತಾನೆ. ಮೊದಲನೆಯದಾಗಿ ಸೈತಾನನು ನಾವು ಈ ಲೋಕವನ್ನು ಪ್ರೀತಿಸುವಂತೆ ಮಾಡುತ್ತಾನೆ. ನಂತರ ಒಂದು ವೇಳೆ ನಾವು ಆತನ ಪ್ರಚೋದನೆಯನ್ನು ತಿರಸ್ಕರಿಸಿದರೆ ನಮ್ಮನ್ನು ಹಿಂಸಿಸುತ್ತಾನೆ.

ಬಿರುಗಾಳಿಯು ಸ್ವತಃ ಸೈತಾನನಿಗೆ ಗುರುತಾಗಿದೆ. ಒಂದು ವೇಳೆ ಮೇಲಿನ ಈ ಎರಡು ಪ್ರಯತ್ನಗಳಲ್ಲಿ ತಾನು ಸೋತು ಹೋದಾಗ ನಮ್ಮಲ್ಲಿ ಅನುಮಾನಗಳು ಮತ್ತು ಭೀತಿಗಳು ಹಾಗೂ ಹತಾಶೆಗಳುಂಟಾಗುವಂತೆ ಮಾಡಿ, ಅವುಗಳ ಮೂಲಕ ನೇರವಾಗಿ ನಮ್ಮ ಮೇಲೆ ಆಕ್ರಮಣವನ್ನು ಮಾಡುತ್ತಾನೆ. ಇವುಗಳನ್ನು ಉರಿಯುತ್ತಿರುವ ಅಗ್ನಿಬಾಣಗಳು ಎಂದು ಪೌಲನು ಎಫೆಸ 6:16ರಲ್ಲಿ ಹೇಳುತ್ತಾನೆ. ಸೈತಾನನ್ನು ದುಷ್ಟ ಬಿರುಗಾಳಿಯಿದ್ದಂತೆ.

ಯೇಸುಕ್ರಿಸ್ತನು ಬಿತ್ತುವವನ ಸಾಮ್ಯದಲ್ಲಿ ಈ ಮೂರು ರೀತಿಯ ಕಷ್ಟಗಳ ಬಗ್ಗೆ ಹೇಳಿದನು (ಮಾರ್ಕ 4:3-8). ಕೆಲವು ಬೀಜಗಳು (ದೇವರ ವಾಕ್ಯ) ಸೈತಾನನೆಂಬ ಪಕ್ಷಿಯಿಂದ ತಿನ್ನಲ್ಪಟ್ಟವು. (ಮಾರ್ಕ 4:15). ಕೆಲವು ಬೀಜಗಳು ಮೊಳಕೆಯೊಡೆದವು. ಆದರೆ ಬಿಸಿಲು ಬರಲು ಬಾಡಿ ಹೋದವು. ಇವು ಹೊರಗಿನಿಂದ ಬರುವಂತಹ **ಕಷ್ಟ ಮತ್ತು ಹಿಂಸೆಗಳಿಗೆ** ಗುರುತುಗಳಾಗಿವೆ (ಮಾರ್ಕ 4:16-17). ಇನ್ನು ಕೆಲವು ಬೀಜಗಳು ಮೊಳಕೆಯೊಡೆದವು. ಆದರೆ ಮುಳ್ಳು ಗಿಡಗಳು ಅವುಗಳನ್ನು ಅಡಗಿಸಿಬಿಟ್ಟವು. ಇದು ನಮ್ಮಲ್ಲಿರುವ ಆಂತರ್ಯದ **ಚಿಂತೆಗಳು** ಮತ್ತು **ಆಶೆಗಳಿಗೆ** ಗುರುತಾಗಿದೆ (ಮಾರ್ಕ 4:18-19).

ದೇವರು ಪ್ರತಿಯೊಬ್ಬ ಕ್ರೈಸ್ತನ ಅಸ್ತಿವಾರವನ್ನು ಪರೀಕ್ಷಿಸುತ್ತಾನೆ. ಒಂದು ವೇಳೆ, **ಮಳೆ, ಪ್ರವಾಹ ಮತ್ತು ಬಿರುಗಾಳಿಗಳು** ಬಂದಾಗ ನಮ್ಮ ಮನೆಗಳು ಭದ್ರವಾಗಿ ನಿಲ್ಲುತ್ತವೆಯೋ?

**28-29** ಯೇಸುಕ್ರಿಸ್ತನು ಪರ್ವತದಲ್ಲಿ ಪ್ರಸಂಗವನ್ನು ಮಾಡಿ ಮುಗಿಸುವಾಗ ಜನರು ಅತ್ಯಾಶ್ಚರ್ಯಪಟ್ಟರು. ಯೇಸುಕ್ರಿಸ್ತನ ಬೋಧನೆಯಿಂದ ಆಶ್ಚರ್ಯಪಟ್ಟರು. ಹಾಗೆಯೇ ಕ್ರಿಸ್ತನ ಬಗ್ಗೆಯೂ ಆಶ್ಚರ್ಯಪಟ್ಟರು (ಮಾರ್ಕ 1:22). ವಿಶ್ವದಲ್ಲಿ ಅನೇಕ ಬೋಧಕರುಗಳಿದ್ದರು. ಅವರ ಬೋಧನೆಗಳು ಆಳವಾಗಿಯೂ ಮತ್ತು ಬುದ್ಧಿವಂತಿಕೆಯಿಂದ ಕೂಡಿದ್ದವು. ಅನೇಕ ಮಹಾ ಪ್ರವಾದಿಗಳಿದ್ದರು. ಬುದ್ಧ ಹಾಗೂ ಮೊಹಮದ್‌ರಂತಹ ಧಾರ್ಮಿಕ ಸಂಸ್ಥಾಪಕರುಗಳಿದ್ದರು. ಆದರೆ ಈ ಎಲ್ಲಾ ಬೋಧಕರು ಮಾನವರಾಗಿದ್ದರು. ಆದರೆ ಯೇಸುಕ್ರಿಸ್ತನು ವ್ಯತ್ಯಾಸವುಳ್ಳವನು. **ಈತನು ದೇವರು.** ಆದುದರಿಂದ ಈತನು ದೈವಿಕ ಅಧಿಕಾರದಿಂದ ಮಾತನಾಡಿದನು. ಈ ಕಾರಣಕ್ಕಾಗಿಯೇ ಕೂಡಿ ಬಂದಿದ್ದ ಜನರು **ಅತ್ಯಾಶ್ಚರ್ಯ** ಪಟ್ಟರು. ಒಟ್ಟಾಗಿ ಕೂಡಿ ಬಂದು ಕೇಳಿಸಿಕೊಂಡಂತಹ ಜನರ ದೃಷ್ಟಿಯಲ್ಲಿ ಯೇಸುಕ್ರಿಸ್ತನು ಸಾಧಾರಣ ವ್ಯಕ್ತಿಯಂತೆ ಕಂಡನು. ಈತನು ಬಡಗಿಯ ಮಗನಾಗಿದ್ದನು. ಈತನ ಮಾತುಗಳು ಸಹಜವಾಗಿರುತ್ತಿದ್ದವು. ಆದರೆ ಈತನಲ್ಲಿ ಎಲ್ಲರಲ್ಲೂ ಕಾಣದಿರುವಂತಹ ಸಂಗತಿ ಇದ್ದಿತು. ಈತನು ಆಗಿನ ಯಹೂದಿ ಧರ್ಮಶಾಸ್ತ್ರದ ಬೋಧಕರಂತಿರಲಿಲ್ಲ. ಈತನು ಜ್ಞಾನದಿಂದಲೂ ಮತ್ತು ದೇವರ ಅಧಿಕಾರವಾಣಿಯಿಂದ ಮಾತನಾಡಿದನು. ನಾವು ಕೂಡ **ಆಶ್ಚರ್ಯ** ಪಡುತ್ತೇವೆ..

ಆದರೆ ಆಶ್ಚರ್ಯ ಪಡುವುದಷ್ಟೇ ಸಾಕಾಗುವುದಿಲ್ಲ. "ಇದು ಅದ್ಭುತವಾದ ಬೋಧನೆ" ಎಂದು ಹೇಳಿದರೆ ಮಾತ್ರ ಸಾಲದು. "ಕರ್ತನೇ, ಕರ್ತನೇ" ಎಂದು ಹೇಳಿದರೆ ಮಾತ್ರ ಸಾಲದು (ವಾಕ್ಯ 21). ಈತನ ಬೋಧನೆಗೆ ವಿಧೇಯರಾಗಬೇಕು. **ನನ್ನ ಮಾತುಗಳನ್ನು ಕೇಳಿ, ಅವುಗಳಂತೆ ನಡೆಯುವವನನ್ನು ಬುದ್ಧಿವಂತನು** ಎಂದು ಕ್ರಿಸ್ತನು ಹೇಳುತ್ತಾನೆ (ವಾಕ್ಯ 24).

ಪ್ರತಿಯೊಬ್ಬನು ತನ್ನಲ್ಲಿಯೇ ಪ್ರಶ್ನೆಯನ್ನು ಕೇಲಿಕೊಳ್ಳಲಿ. ನಮ್ಮ ಮನೆಯೂ ಬಂಡೆಯ ಮೇಲೆ ಕಟ್ಟಲ್ಪಟ್ಟಿದೆಯೇ ಅಥವಾ ಮರಳಿನ ಮೇಲೆ ಕಟ್ಟಲ್ಪಟ್ಟಿದೆಯೇ?

---

## ಅಧ್ಯಾಯ - 8

### ಕುಷ್ಠರೋಗಿಯಾದ ಮನುಷ್ಯನು (8:1-4)

(ಮಾರ್ಕ 1:40-45, ಲೂಕ 5:12-16)

**1-4** ನೋಡಿರಿ, ಮಾರ್ಕ 1:40-45 ಮತ್ತು ಅಭಿಪ್ರಾಯ.

### ಶತಾಧಿಪತಿಯ ನಂಬಿಕೆ (8:5-13)

(ಲೂಕ 7:1-10)

**5-6** ಗಲಿಲಾಯ ಸಮುದ್ರದ ಉತ್ತರ ಕರಾವಳಿಯಲ್ಲಿರುವ ಕಪೆರ್ನೌಮ್ ಎಂಬ ಊರನ್ನು ಪ್ರವೇಶಿಸುತ್ತಿರುವಾಗ, ರೋಮಾಯ ಸೈನ್ಯದ ಶತಾಧಿಪತಿಯು ಓಡಿ ಬಂದು, ತನ್ನ ಸೇವಕನನ್ನು ಗುಣ ಪಡಿಸು ಎಂದು ಕೇಳಿಕೊಳ್ಳುತ್ತಾನೆ. ಲೂಕ 7:3-5ರ ಪ್ರಕಾರ, ಶತಾಧಿಪತಿಯು ಮೊದಲಿಗೆ ತನ್ನ ಯಹೂದಿ ಸೈನಿಕರನ್ನು ಕಳುಹಿಸಿಕೊಡುತ್ತಾನೆ. ಶತಾಧಿಪತಿಯು ತಾನು ಅನ್ಯಧರ್ಮಿಯನಾದಂತಹ ರೋಮಾಯನಾಗಿದ್ದರಿಂದ,39. ಯಹೂದಿಯಾದ ಯೇಸುಕ್ರಿಸ್ತನ ಬಳಿಗೆ ಬರುವುದಕ್ಕೆ ಆತನು ಭಯ ಪಡುತ್ತಾನೆ.

ಈತನು ಯೋಗ್ಯನಾದ ವ್ಯಕ್ತಿಯೆಂದು ಆ ಯಹೂದಿ ನಾಯಕರು ಕ್ರಿಸ್ತರಿಗೆ ಹೇಳುತ್ತಾರೆ. **"ಈತನು ನಮ್ಮ ಜನಾಂಗವನ್ನು ಪ್ರೀತಿಸುತ್ತಾನೆ ಮತ್ತು ನಮ್ಮ ಸಭಾಮಂದಿರವನ್ನು ಕಟ್ಟಿಸಿದನು"** ಎಂದು ಯೇಸುಕ್ರಿಸ್ತನಿಗೆ ಹೇಳಿದರು (ಲೂಕ 2:5)

**7-9** ಲೂಕ 7:6-8 ರಲ್ಲಿ ಹೇಳಿರುವಂತೆ, ಯೇಸು ಕ್ರಿಸ್ತನು ಯಹೂದ್ಯರ ಹಿರಿಯರೊಂದಿಗೆ ಹೋಗುತ್ತಿರುವಾಗ, ಶತಾಧಿಪತಿಯ ಕೆಲವು ಸ್ನೇಹಿತರು ಯೇಸುಕ್ರಿಸ್ತನಿಗೆ ಸಂದೇಶವನ್ನು ಹೇಳುವುದಕ್ಕಾಗಿ ಮುಂದಾಗಿಯೇ ಬಂದರು. ನಂತರ [40]ಸ್ವತಃ ಶತಾಧಿಪತಿಯೇ ಕ್ರಿಸ್ತನ ಬಳಿಗೆ ಬಂದು ಮತ್ತೇ ಇದೇ ಸಂಗತಿಯನ್ನು ಪುನರುಚ್ಚರಿಸುತ್ತಾನೆ

ಗುರುವೇ "ನೀನು ನನ್ನ ಮನೆಗೆ ಬರುವ ಅಗತ್ಯವಿಲ್ಲ" ಎಂದು ಯೇಸುವಿಗೆ ಹೇಳುತ್ತಾನೆ. ನಾನು ಯೋಗ್ಯನಲ್ಲ. ನಾನು ಪಾಪದವನು. **ಆದರೆ ನೀನು ಒಂದು ಮಾತು ಹೇಳಿದರೆ ಸಾಕು ನನ್ನ ಸೇವಕನು ಗುಣಹೊಂದುವನು** (ವಚನ 8). ಕ್ರಿಸ್ತನಿಗೆ ಅಧಿಕಾರವಿದೆ ಎಂಬುದನ್ನು ಶತಾಧಿಪತಿಯೂ ಗುರುತಿಸುತ್ತಾನೆ. ಸ್ವತಃ ಶತಾಧಿಪತಿಯೂ ಕೂಡ ಅಧಿಕಾರವೇನು ಎಂಬುದನ್ನು ತಿಳಿದವನಾಗಿದ್ದನು.

ಶತಾಧಿಪತಿಯಾದ ತಾನು ತನ್ನ ಕೈಕೆಳಗಿರುವ ಸೈನಿಕರ ಮೇಲೆ ಅಧಿಕಾರವನ್ನು ಹೊಂದಿದ್ದೇನೆಯೋ ಹಾಗೆಯೇ ಯೇಸುಕ್ರಿಸ್ತನು ಸಹ ಗುಣಪಡಿಸುವ ಅಧಿಕಾರವನ್ನು ಹೊಂದಿರುವನು ಎಂದು ತಿಳಿದವನಾಗಿದ್ದನು.

**10** ಯೇಸುಕ್ರಿಸ್ತನು ಶತಾಧಿಪತಿಯ[41] ನಂಬಿಕೆಗೆ ಆಶ್ಚರ್ಯಪಡುತ್ತಾನೆ. ಯೇಸುಕ್ರಿಸ್ತನು ವಾಸಿ ಮಾಡುವನು ಎಂದು ಮಾತ್ರವಲ್ಲದೆ, ದೂರದಲ್ಲಿರುವಾಗಲು ಕೂಡ ಗುಣಪಡಿಸಬಲ್ಲನು ಎಂದು ಶತಾಧಿಪತಿಯೂ ನಂಬಿದ್ದನು. ಯೇಸುಕ್ರಿಸ್ತನು[42] **ಇಸ್ರಾಯೆಲ್ಯ** ಜನರಲ್ಲಿಯೂ ಸಹ ಇಂತಹ ನಂಬಿಕೆಯನ್ನು ಕಂಡಿರಲಿಲ್ಲ.

**11-12** ಕ್ರಿಸ್ತನನ್ನು ಮುಂದಿನ ದಿನಗಳಲ್ಲಿ ನಂಬಲಿಕ್ಕಿದ್ದಂತಹ ಮತ್ತು ರಕ್ಷಣೆಯನ್ನು ಹೊಂದಲಿಕ್ಕಿದ್ದಂತಹ ಅನ್ಯ ಜನರಲ್ಲಿಯೆ ಈ ಸತಾಧಿಪತಿಯು ಮೊದಲಿಗನಾದನು. ಅನ್ಯ ಜನಾಂಗದವರಾದ ಇವರಲ್ಲಿ ಅನೇಕರು ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಿಂದ ಕೂಡಿ ಬರು ವ ರು ಮತ್ತು ಪರಲೋಕದ ರಾಜ್ಯದಲ್ಲಿ ಸ್ವಾಗತ ಹೊಂದುವರು (ವಚನ.11). ಎಂದು ಯೇಸುಕ್ರಿಸ್ತನು ಹೇಳಿದನು. ಯೇಸುಕ್ರಿಸ್ತನು ಪರಲೋಕ ರಾಜ್ಯವನ್ನು ಔತಣಕೂಟಕ್ಕೆ ಹೋಲಿಸುತ್ತಾನೆ. ಯಹೂದ್ಯರ ಮೂವರು ಮೂಲ ಪಿತೃಗಳಾದ ಅಬ್ರಹಾಮನು, ಇಸಾಕನು ಮತ್ತು ಯಾಕೋಬನು ಸಹ ಅಲ್ಲಿರುವರು. ಆದರೆ ಯೇಸುಕ್ರಿಸ್ತನ ಕಾಲದಲ್ಲಿದ್ದಂತಹ ಯಹೂದ್ಯರು ಶಾರೀರಿಕವಾಗಿ ಅಬ್ರಹಾಮನ ಮಕ್ಕಳಾಗಿದ್ದು ರಾಜ್ಯಕ್ಕೆ ಬಾಧ್ಯಸ್ತರಾಗಿದ್ದರೂ ಸಹ ಅವರಿಗೆ ಆಮಂತ್ರಣವಿರುವುದಿಲ್ಲ. ಔತಣಕೂಟದಲ್ಲಿರುವ ತಮ್ಮ ಸ್ಥಳವನ್ನು ಅವರು ಕಳೆದುಕೊಂಡಿದ್ದಾರೆ. ಯಾಕೆಂದರೆ ಅವರು ಮೇಸ್ಸಿಯನಾದ ಯೇಸುಕ್ರಿಸ್ತನನ್ನು ತಿರಸ್ಕರಿಸಿದರು. ಅವರು ಹೊರಕ್ಕೆ ಹಾಕಲ್ಪಟ್ಟು ನರಕದ ಕತ್ತಲೆಗೆ ದ್ಲೊಬ್ಬಲ್ಪಡುವರು (ಲೂಕ 13:28-29ನ್ನು ನೋಡಿರಿ).

ನಂಬಿದಂತಹವರು ಮಾತ್ರ ಔತಣಕೂಟಕ್ಕೆ ಆಮಂತ್ರಿಸಲ್ಪಡುವರು. ಯೇಸುಕ್ರಿಸ್ತನನ್ನು ನಂಬಿದವರು ಮಾತ್ರ ಅಬ್ರಹಾಮನ ನಿಜವಾದ ಮಕ್ಕಳಾಗಿದ್ದು ರಾಜ್ಯಕ್ಕೆ ನಿಜವಾದ ಬಾಧ್ಯಸ್ಥರಾಗುವರು.(ಗಲಾತ್ಯ **3:7-8,29** ಅಭಿಪ್ರಾಯ ನೋಡಿರಿ.)

**13** ಯೇಸುವು ದೂರದಿಂದಲೇ ಸೇವಕನನ್ನು ಗುಣಪಡಿಸಿದನು.ಆತನು ಸೇವಕ ಮೇಲೆ ತನ್ನ ಕೈಗಳನ್ನು ಕೂಡ ಇಡಲಿಲ್ಲ.

## ಯೇಸುಕ್ರಿಸ್ತನು ಅನೇಕರನ್ನು ಗುಣಪಡಿಸಿದ್ದು (8:14-17)

(ಮಾರ್ಕ 1:29-34, ಲೂಕ 4:38-41)

**14-17** ಮಾರ್ಕ 1:29:34 ಮತ್ತು ಅಭಿಪ್ರಾಯ ನೋಡಿರಿ.

## ಯೇಸುವನ್ನು ಹಿಂಬಾಲಿಸುವುದಕ್ಕೆ ತೆರಬೇಕಾದ ಬೆಲೆ (8:18-22)

(ಲೂಕ 9:57-62)

**18-20** ಅನೇಕರು ಮೊದಮೊದಲು ಯೇಸುಕ್ರಿಸ್ತನನ್ನು ಅನುಸರಿಸಲು ಬಯಸುತ್ತಾರೆ. ಆದರೆ (ಮತ್ತಾಯ 7:14) ಅನುಸರಿಸುವುದು ಅಂದರೆ ಇಕ್ಕಟ್ಟಾದ ದಾರಿಯಲ್ಲಿ ನಡೆಯುವುದು ಎಂದು ಅವರಿಗೆ ಸ್ಪಷ್ಟವಾಗಿ ಗ್ರಹಿಕೆಯಾಗಿರುವುದಿಲ್ಲ. ಯೇಸುಕ್ರಿಸ್ತನನ್ನು ಹಿಂಬಾಲಿಸುವಂತಹ ವ್ಯಕ್ತಿಯು ತನ್ನನ್ನು **ತಾನೇ ತಿರಸ್ಕರಿಸಲು** ಸಿದ್ಧನಾಗಿರಬೇಕು (ನೋಡಿರಿ ಮಾರ್ಕ 8:34). ಅವನು ಯೇಸುಕ್ರಿಸ್ತನ ಶಿಷ್ಯನಾಗಿರಲು ತೆರಬೇಕಾದ ಬೆಲೆಯನ್ನು ಲೆಕ್ಕ ಹಾಕಬೇಕು. (ಲೂಕ 14:26-32). ಒಬ್ಬನು ಶಿಷ್ಯನಾಗುವುದಕ್ಕಾಗಿ **ತನಗಿರುವುದೆಲ್ಲವನ್ನು ತ್ಯಜಿಸಲೇ ಬೇಕಾಗುತ್ತದೆ** (ಲೂಕ 14:33). ಬಹುಶಃ ಶಿಷ್ಯನಾದವನಿಗೆ ಜೀವಿಸುವುದಕ್ಕೆ ಮನೆಯಾಗಲಿ, ತಲೆ ಇಡುವಷ್ಟು ಸ್ಥಳವು ಕೂಡ ಸಿಗುವುದಿಲ್ಲ. ಯೇಸುಕ್ರಿಸ್ತನನ್ನು ಹಿಂಬಾಲಿಸುವುದಕ್ಕಾಗಿ ತೆರಬೇಕಾದ ಬೆಲೆಯೂ ಬಹಳ ದೊಡ್ಡದು.

**21-22** ಯೇಸುಕ್ರಿಸ್ತನ ಶಿಷ್ಯರಲ್ಲಿ ಒಬ್ಬನು ತನ್ನ ತಂದೆಯ ಸಮಾಧಿಯನ್ನು ಮಾಡಲು ಹೋಗಿ ಬರುವುದಕ್ಕೆ ಅನುಮತಿಯನ್ನು ಕೇಳುತ್ತಾನೆ. ಬಹುಶಃ ಅವನ ತಂದೆಯು ಇನ್ನು ಸತ್ತಿರಲಿಕ್ಕಿಲ್ಲ ಮತ್ತು ತನಗೆ ಬರಬೇಕಾದ ಪಿತ್ರಾರ್ಜಿತ ಆಸ್ತಿಯ ಪಾಲನ್ನು ಪಡೆಯುವುದಕ್ಕಾಗಿ ಮನೆಗೆ ಹಿಂತಿರುಗಿ ಹೋಗುತ್ತಿರಬಹುದು. ಯೇಸುಕ್ರಿಸ್ತನು ಹೇಳಿದನು .......... **ಸತ್ತವರೇ ತಮ್ಮವರಲ್ಲಿ ಸತ್ತು ಹೋದವರನ್ನು ಸಮಾಧಿ ಮಾಡಲಿ.** ಇನ್ನೊಂದರ್ಥದಲ್ಲಿ ಹೇಳುವುದಾದರೆ, ಆತ್ಮಿಕವಾಗಿ ಸತ್ತುಹೋದಂತಹವರು ಈ ಲೋಕದ ಸಂಗತಿಗಳಿಗಾಗಿ ಚಿಂತಿಸಲಿ.

ಆತ್ಮೀಕವಾಗಿ ಜೀವಿಸುತ್ತಾ ಶಿಷ್ಯರಾಗುವುದಕ್ಕಾಗಿ ಕರೆಯಲ್ಪಟ್ಟವರು ಮೊದಲು ದೇವರ ರಾಜ್ಯದ ಕಾರ್ಯವನ್ನು ಮಾಡಲೇ ಬೇಕಾಗುತ್ತದೆ. ತ್ವರಿತವಾಗಿ ದೇವರ ರಾಜ್ಯದ ಕಾರ್ಯವು ನಡೆಯಬೇಕು. ಇದಕ್ಕಿಂತ ಮೊದಲು ಇನ್ನಾವುದಕ್ಕೂ ಪ್ರಾಶಸ್ತ್ಯವಿರಬಾರದು (ನೋಡಿರಿ 10:37-38).

ಶಿಷ್ಯರು ತಮ್ಮ ತಂದೆ ತಾಯಿಗಳಿಗೆ ಗೌರವವನ್ನು ಕೊಡಬಾರದು ಎಂದು ಇಲ್ಲಿ ಬೋಧಿಸುವುದಿಲ್ಲ. ಯೇಸುಕ್ರಿಸ್ತನನ್ನು ಹಿಂಬಾಲಿಸಲು ಮತ್ತು ಹಾಗೆಯೇ ಕುಟುಂಬದ ಜವಾಬ್ದಾರಿಯನ್ನು ಸಹ ಯಾವಾಗಲೂ ಮಾಡಬೇಕು. ಆದರೆ ನಾವು ಎರಡನ್ನು ಏಕ ಪ್ರಕಾರವಾಗಿ ಮಾಡದೆ ಕುಟುಂಬಕ್ಕಿಂತ ಮೊದಲು ಕ್ರಿಸ್ತನಿಗಾಗಿ ಪ್ರಥಮ ಆದ್ಯತೆಯನ್ನು ಕೊಡಬೇಕು.

ಲೂಕ 9:61-62ರ ಪ್ರಕಾರ ಆಮೇಲೆ, ಮೂರನೆಯ ವ್ಯಕ್ತಿಯೂ ಕ್ರಿಸ್ತನ ಬಳಿಗೆ ಬರುತ್ತಾನೆ ಮತ್ತು **"ಕರ್ತನೇ, ನಾನು ನಿನ್ನನ್ನು ಹಿಂಬಾಲಿಸುವೆನು. ಆದರೆ ನಾನು ಮೊದಲು ಹೋಗಿ ನನ್ನ ಮನೆಯಲ್ಲಿದ್ದವರನ್ನು ಬೀಳ್ಕೊಡುವಂತೆ ನನಗೆ ಅಪ್ಪಣೆಕೊಡು"** ಎಂದನು. ಯೇಸುಕ್ರಿಸ್ತನು ಮನುಷ್ಯನ ಹೃದಯವನ್ನು ಬಲ್ಲನು. ಈ ಮನುಷ್ಯನು ತನ್ನ ಕುಟುಂಬವನ್ನು ಇನ್ನು ಬಹಳವಾಗಿ ಹಚ್ಚಿಕೊಂಡಿದ್ದಾನೆ ಎಂದು ಯೇಸುಕ್ರಿಸ್ತನು ತಿಳಿದಿದ್ದನು. ಈ ಮನುಷ್ಯನು ಕ್ರಿಸ್ತನನ್ನು ಹಿಂಬಾಲಿಸಬೇಕೆಂದಿದ್ದನು. ಆದರೆ ಪೂರ್ಣ ಹೃದಯದಿಂದಲ್ಲ. ಯೇಸುಕ್ರಿಸ್ತನು ಅವನಿಗೆ **"ಯಾವನಾದರೂ ನೇಗಿಲಿನ ಮೇಲೆ ತನ್ನ ಕೈಯನ್ನು ಹಾಕಿ ಹಿಂದಕ್ಕೆ ನೋಡಿದರೆ ಅವನು ದೇವರ ರಾಜ್ಯಕ್ಕೆ ತಕ್ಕವನಲ್ಲವೆಂದು"** ಹೇಳಿದನು.

ರೈತನು ತನ್ನ ಭೂಮಿಯನ್ನು ಉಳುವಾಗ ಮುಂದಕ್ಕೆ ನೋಡುತ್ತಿರುವ ಹಾಗೆಯೇ ಯೇಸುಕ್ರಿಸ್ತನನ್ನು ಹಿಂಬಾಲಿಸುವವನು ಮುಂದೆ ಮಾತ್ರ ನೋಡಬೇಕು. ಆತನಿಗೆ ಒಂದೇ ಗುರಿಯಿರಬೇಕು. ಆತನು ತನ್ನ ಹಳೆಯ ಜೀವಿತಕ್ಕೆ ಹಿಂದಿರುಗಲು ಅಪೇಕ್ಷಿಸಬಾರದು. ಲೋಬನ ಹೆಂಡತಿಯು ಹಿಂದಕ್ಕೆ ತಿರುಗಿದಳು ಮತ್ತು ಉಪ್ಪಿನ ಸ್ತಂಬವಾದಳು (ಆದಿಕಾಂಡ 19:15-17, 23-26). ಯಹೂದ್ಯರು ಐಗುತ್ತದಿಂದ ಪಾರಾದ ನಂತರ ದೇವರ ವಿರುದ್ಧ ಗುಣಗುಟ್ಟಿದರು ಮತ್ತು ಐಗುಪ್ತಕ್ಕೆ ಹಿಂದುರಿಗಿ ಹೋಗಲು ಬಯಸಿದರು ಮತ್ತು ಅವರು ಗುಣಗುಟ್ಟುವಿಕೆಯ ಮತ್ತು ಹಿಂದುರುಗಿ ಹೋಗಲು ಬಯಸಿದ್ದರ ಪ್ರಯುಕ್ತ ದೇವರು ಅವರನ್ನು ನಾಶಗೊಳಿಸಿದನು (ಅರಣ್ಯಕಾಂಡ 14:1-4, 26-29).

## ಯೇಸು ಕ್ರಿಸ್ತನು ಬಿರು ಗಾಳಿ ಯನ್ನು ಶಾಂತಗೊಳಿಸಿದ್ದು ಲೂಕ 8:23-27

(ಮಾರ್ಕ 4:35-41; ಲೂಕ 8:22-25)

**23-27** ನೋಡಿರಿ, ಮಾರ್ಕ 4:35-41 ಮತ್ತು ಅಭಿಪ್ರಾಯ.

## ಕ್ರಿಸ್ತನು ಇಬ್ಬರು ದು ರಾತ್ಮ ಪೀಡಿತರನ್ನು ಗುಣಪಡಿಸಿದ್ದು (8:28-34)

(ಮಾರ್ಕ 5:1-20; ಲೂಕ 8:26-39)

**28-34** ನೋಡಿರಿ, ಮಾರ್ಕ 5:1-20 ಮತ್ತು ಅಭಿಪ್ರಾಯ.

---

# ಅಧ್ಯಾಯ - 9

## ಯೇಸು ಕ್ರಿಸ್ತನು ಪಾರ್ಶ್ವವಾಯು ರೋಗಿಯನ್ನು ಗುಣಪಡಿಸಿದ್ದು (9:1-8)

(ಮಾರ್ಕ 2:1-12; ಲೂಕ 5:17-26)

**1-8** ನೋಡಿರಿ, ಮಾರ್ಕ 2:1-12 ಮತ್ತು ಅಭಿಪ್ರಾಯ

## ಮತ್ತಾಯನನ್ನು ಕರೆದದ್ದು (9:9-13)

(ಮಾರ್ಕ 2:13-17; ಲೂಕ 5:27-32)

**9-13** ನೋಡಿರಿ, ಮಾರ್ಕ 2:13-17 ಮತ್ತು ಅಭಿಪ್ರಾಯ.

## ಯೇಸು ಕ್ರಿಸ್ತನು ಉಪವಾಸದ ಬಗ್ಗೆ ಪ್ರಶ್ನಿಸಿದ್ದು (9:14-17)

(ಮಾರ್ಕ 2:18-22; ಲೂಕ 5:33-39)

**14-17** ನೋಡಿರಿ. ಮಾರ್ಕ 2:18-22 ಮತ್ತು ಅಭಿಪ್ರಾಯ.

### ಸತ್ತಂತಹ ಬಾಲಕಿ ಮತ್ತು ರೋಗಿಯಾದ ಸ್ತ್ರೀ (9:18-26)

(ಮಾರ್ಕ 5:21-43; ಲೂಕ 8:40-56)

**18-26** ನೋಡಿರಿ. ಮಾರ್ಕ 5:31-43 ಮತ್ತು ಅಭಿಪ್ರಾಯ.

## ಯೇಸು ಕ್ರಿಸ್ತನು ಇಬ್ಬರು ಕು ರು ಡರನ್ನು ಸ್ವಸ್ಥ ಮಾಡಿದ್ದು (9:27-31)

**27** ಯೇಸುಕ್ರಿಸ್ತನು ಬಂದಿದ್ದಾನೆ ಎಂದು ಇಬ್ಬರು ಕುರುಡರು ಕೇಳಿದರು ಮತ್ತು ಜೋರಾಗಿ ಕೂಗುತ್ತಾ "ದಾವೀದನ ಕುಮಾರನೇ, ನಮ್ಮ ಮೇಲೆ ಕರುಣೆಯಿಡು" ಎಂದು ಹೇಳಿದರು. ನೋಡಿರಿ. ಮಾರ್ಕ 10:47-48 ಮತ್ತು ಅಭಿಪ್ರಾಯ.

**28** ಯೇಸುಕ್ರಿಸ್ತನು ಅವರನ್ನು ಗುಣಪಡಿಸುವುದಕ್ಕೆ ಮುಂಚೆ, ಅವರಲ್ಲಿ ನಂಬಿಕೆಯಿದೆಯೇ ಎಂದು ಖಚಿತಪಡಿಸಿಕೊಂಡನು. ಮನುಷ್ಯ ಜೀವಿತದಲ್ಲಿ ದೇವರ ಶಕ್ತಿಯು ತೋರಿ ಬರುವುದಕ್ಕೆ ಮನುಷ್ಯನಲ್ಲಿ ನಂಬಿಕೆಯ ಅಗತ್ಯವಿದೆ. ನಮ್ಮಲ್ಲಿ ನಂಬಿಕೆಯಿಲ್ಲದಿದ್ದರೆ ಕ್ರಿಸ್ತನು ತನ್ನ ಮಹಾಕಾರ್ಯಗಳನ್ನು ಮಾಡುವುದಿಲ್ಲ. (ನೋಡಿರಿ ಮಾರ್ಕ 6:4-6 ಮತ್ತು ಅಭಿಪ್ರಾಯ).

**29-31** ಕ್ರಿಸ್ತನು ಯಾವಾಗಲೂ ಮಾಡಿದಂತೆಯೇ ಅವರ ಕಣ್ಣುಗಳನ್ನು ಸ್ವಸ್ಥ ಮಾಡಿದನು. "ನಿಮ್ಮ ನಂಬಿಕೆಯಂತೆ ನಿಮ್ಮಗಾಗಲಿ" (ನೋಡಿರಿ ಮಾರ್ಕ 5:34; 10:52 ಮತ್ತು ಅಭಿಪ್ರಾಯ). ಆಮೇಲೆ ಅವರಿಗೆ ಯಾರಿಗೂ ಹೇಳಬೇಡಿರಿ ಎಂದು ಕಟ್ಟಪ್ಪಣೆ ಮಾಡುತ್ತದೆ (ನೋಡಿರಿ ಮಾರ್ಕ 1:44-45; 5:43; 7:36 ಮತ್ತು ಅಭಿಪ್ರಾಯ).

**ನಿಮ್ಮ ನಂಬಿಕೆಯಂತೆ** ............. ಒಂದು ವೇಳೆ ಯೇಸುಕ್ರಿಸ್ತನು ಗುಣಪಡಿಸುವಾತನಾಗಿದ್ದಾನೆ ಎಂದು ನಾವು ನಂಬಿದರೆ, ಆತನು ಗುಣಪಡಿಸುವನು. ಆತನು ರಕ್ಷಕನು ಎಂದು ನಂಬಿದರೆ ನಮ್ಮನ್ನು ರಕ್ಷಿಸುವನು. ನಮ್ಮ ನಂಬಿಕೆಯನ್ನು ಬೆಳೆಸೋಣ!

## ಯೇಸುವು ದೆವ್ವ ಹಿಡಿಯಲ್ಪಟ್ಟಂತಹ ಮನುಷ್ಯನನ್ನು ಗುಣಪಡಿಸಿದ್ದು (ಮತ್ತಾಯ 9:32-34)

(ಮತ್ತಾಯ 12:22-24; ಮಾರ್ಕ 3:22; ಲೂಕ 11:14-15)

**32-34** ನೋಡಿರಿ ಮತ್ತಾಯ. 12:22-24, ಮಾರ್ಕ 3:22 ಮತ್ತು ಅಭಿಪ್ರಾಯಗಳು

## ಕೆಲಸದವರು ಬಹಳ ಕಡಿಮೆ (9:35-38)

(ಲೂಕ 10:2)

**35** ನೋಡಿರಿ. ಮತ್ತಾಯ 4:23, ಮಾರ್ಕ 1:14 -15 ಮತ್ತು ಅಭಿಪ್ರಾಯಗಳು

**36** ಯೇಸುಕ್ರಿಸ್ತನು ತನ್ನ ಎಲ್ಲಾ ಸೇವೆಯನ್ನು ಕನಿಕರದಿಂದಲೇ ಮಾಡಿದನು. ಆತನು ಮಾನವರನ್ನು ಕನಿಕರಿಸಿದ ಕಾರಣದಿಂದಲೇ ತನ್ನ ಪ್ರಾಣವನ್ನು ಕೊಟ್ಟನು. ಆತನು ದಿನವೆಲ್ಲಾ ಪ್ರಯಾಣಿಸಿದನು. ಮತ್ತು ಜನರನ್ನು ಹಿಂದಕ್ಕೆ ಕಳುಹಿಸಿ ಕೊಡದೆ, ದಿನವೆಲ್ಲಾ ಪ್ರಸಂಗಿಸಿದನು. ಆವರು ಕುರುಬನಿಲ್ಲದ ಕುರಿಗಳಂತಿದ್ದರು ಮತ್ತು ಆತನು ಅವರಿಗೆ ಕುರುಬನಾಗಿದ್ದನು (ನೋಡಿರಿ 6:34 ಮತ್ತು ಅಭಿಪ್ರಾಯ).

**37** ಯೇಸುಕ್ರಿಸ್ತನು ಜನರ ಸಮೂಹವನ್ನು, ಆತನು ತನ್ನ ಶಿಷ್ಯರಿಗೆ, "**ಬೆಳೆಯು ಬಹಳ**" ಎಂದು ಹೇಳಿದನು. ಇದು ರಾಗಿಯ ಅಥವಾ ಜೋಳದ ಬೆಳೆಯಲ್ಲ. ಆದರೆ ಮನುಷ್ಯರೆಂಬ ಬೆಳೆಯಾಗಿದೆ. ಮನುಷ್ಯರು ಬೆಳೆದು ನಿಂತು ಕೊಯಿಲಿಗೆ ಸಿದ್ಧವಾದ ತೆನೆಯಲ್ಲಿರುವ ಕಾಳುಗಳಿದ್ದಂತೆ (ಯೋಹಾನ 4:35-38). ಆದರೆ **ಕೆಲಸದವರು ಬಹಳ ಕಡಿಮೆ**.

**38** ಬೆಳೆಯು ದೇವರಿಗೆ ಸೇರಿದ್ದು. ಆದರೆ ಇದನ್ನು ನಮಗೆ ವಹಿಸಿದ್ದಾನೆ. ಆತನು ತನ್ನ ಬೆಳೆಯ ಜವಾಬ್ದಾರಿಯನ್ನು ನಮಗೊಪ್ಪಿಸಿದ್ದಾನೆ. "**ಕೆಲಸಗಾರರನ್ನು ಕಳುಹಿಸುವುದಕ್ಕಾಗಿ, ಬೆಳೆಯ ಒಡೆಯನನ್ನು ಕೇಳಿಕೊಳ್ಳಿರಿ**" ಎಂದು ಯೇಸುಕ್ರಿಸ್ತನು ಹೇಳಿದನು. ನಾವು ಪ್ರಾರ್ಥಿಸದಿದ್ದರೂ ಆತನು ಕೆಲಸದವರನ್ನು ಕಳುಹಿಸಿ ಕೊಡಬಲ್ಲನು. ಆದರೆ ಆತನು ಹೆಚ್ಚಿನ ಕೆಲಸದವರನ್ನು ಕಳುಹಿಸಿ ಕೊಡುವಂತೆ ಪ್ರಾರ್ಥಿಸಿರಿ ಎಂದು ನಮಗೆ ಹೇಳಿದ್ದಾನೆ.

ಬೆಳೆಯ ಕೊಯಿಲಿನ ಸಮಯದಲ್ಲಿ ಸಾಕಷ್ಟು ಕೆಲಸದವರಿಲ್ಲದಿದ್ದರೆ ಏನಾಗುತ್ತದೆ? ಬೆಳೆದು ನಿಂತ ಕೊಯಿಲಿನ ಒಂದು ಭಾಗವು ನಾಶವಾಗುತ್ತದೆ ಮತ್ತು ಬೆಳೆಯು ನಾಶವಾಗಿ ಹೋಯಿತೆಂದರೆ ಇದಕ್ಕೆ ಕಾರಣ ನಾವು ಸಾಕಷ್ಟು ಕೆಲಸದವರಿಗಾಗಿ ಕೇಳಿಕೊಳ್ಳಲಿಲ್ಲವಷ್ಟೇ.

ದೇವರ ಬೆಳೆಯ ಬಗ್ಗೆ ನಾವು ಚಿಂತಿಸುವವರಾಗಿದ್ದೇವೆಯೋ? ನಮ್ಮ ಸುತ್ತಲಿರುವಂತಹ ಸ್ತ್ರೀ ಹಾಗೂ ಪುರುಷರ ಆತ್ಮಗಳ ಬಗ್ಗೆ ನಾವು ಚಿಂತಿಸುವವರಾಗಿದ್ದೇವೆಯೋ? ಒಂದು ವೇಳೆ ನಾವು ಚಿಂತಿಸುವವರಾಗಿದ್ದರೆ, ಕೆಲಸಗಾರರಿಗಾಗಿ ಪ್ರಾರ್ಥಿಸುವವರಾಗುತ್ತೇವೆ. ಆದರೆ ದೇವರು ನಮಗೆ ಉತ್ತರ'ಕೊಡುವುದಕ್ಕೆ ಮೊದಲು, ನಮಗೊಂದು ಪ್ರಶ್ನೆಯನ್ನು ಕೇಳುತ್ತಾನೆ. "ನೀನು ನಿನ್ನಷ್ಟಕ್ಕೆ ನೀನೇ ಕೆಲಸ ಮಾಡುತ್ತೀಯೋ? ಅಥವಾ ಬೆಳೆಯನ್ನು ಕೊಯ್ಯಲು ಕೆಲಸಗಾರರನ್ನು ಕಳುಹಿಸಿ ಕೊಡು ಎಂದು ನೀನು ಪ್ರಾರ್ಥಿಸುವಿಯಾ?" ನಂತರ ದೇವರು ನಮಗೆ ಹೇಳುತ್ತಾನೆ "ಮೊದಲು ನೀನು ಹೊಲಕ್ಕೆ ಅಥವಾ ಜಮೀನಿಗೆ ಹೋಗು ಮತ್ತು ಕೆಲಸವನ್ನು ಪ್ರಾರಂಭಿಸು. ಮತ್ತು ನೀನು ನಿನ್ನ ಪೂರ್ಣ ಹೃದಯದಿಂದ ಮತ್ತು ಬಲದಿಂದ, ಕೆಲಸ ಮಾಡುವುದನ್ನು ನಾವು ನೋಡುವೆನು ನಂತರ ನಿನ್ನ ಪ್ರಾರ್ಥನೆಯನ್ನು ಕೇಳುವೆನು ಮತ್ತು ಇತರರನ್ನು ನಿನ್ನ ಸಹಾಯಕ್ಕೆ ಕಳುಹಿಸಿಕೊಡುವೆನು". ಹೊಲದಲ್ಲಿ ಬೆಳೆದಿರುವಂತಹ ಬೆಳೆಗಾಗಿ ಕೆಲಸ ಮಾಡಲು, ಜನರನ್ನು ಕಳುಹಿಸಿಕೊಡು ಎಂದು ಅನೇಕ ಕ್ರೈಸ್ತರು ದೇವರನ್ನು ಬೇಡಿಕೊಂಡಿದ್ದಾರೆ ಮತ್ತು "ದೇವರು ಆಯಿತು, ಹಾಗೆಯೇ ಆಗಲಿ, ನಾನು ನಿಮ್ಮನ್ನೇ ಕಳುಹಿಸಿಕೊಡುತ್ತೇನೆ" ಎಂದು ಅವರಿಗೆ ಹೇಳಿ, ಅವರನ್ನು ಆಶ್ಚರ್ಯ ಪಡಿಸಿದ್ದಾನೆ.

ಯೆಶಾಯ ಪ್ರವಾದಿಯಂತೆಯೇ ನಾವು ಸಹ ಇರೋಣ. "**ನಾನು ಯಾರನ್ನು ಕಳುಹಿಸಿಕೊಡಲಿ**" ಎಂಬ ದೇವರ ಮಾತನ್ನು ಕೇಳಿಸಿಕೊಳ್ಳುತ್ತಾನೆ ಮತ್ತು "**ನಾನಿಲ್ಲಿ ಇದ್ದೇನೆ. ನನ್ನನ್ನೇ ಕಳುಹಿಸು**" ಎಂದು ಉತ್ತರಿಸುತ್ತಾನೆ (ಯೆಶಾಯ 6:8).

---

# ಅಧ್ಯಾಯ - 10

## ಹನ್ನೆರಡು ಜನ ಶಿಷ್ಯರು (10:1-4)

(ಮಾರ್ಕ 3:13-19; ಲೂಕ 6:12-16)

**1-4** ನೋಡಿರಿ, ಮಾರ್ಕ 3:13-19 ಮತ್ತು ಅಭಿಪ್ರಾಯ.

## ಯೇಸು ಕ್ರಿಸ್ತನು ಹನ್ನೆರಡು ಜನ ಶಿಷ್ಯರನ್ನು ಕಳುಹಿಸಿದ್ದು (10:5-15)

(ಮಾರ್ಕ 6:7-13; ಲೂಕ 9:1-6; 10:4-12)

**5-6** "ಅನ್ಯ ಜನರ ಬಳಿಗೆ ಹೋಗಬೇಡಿರಿ.[43] ಸಮಾರ್ಯದವರ ಊರುಗಳನ್ನು ಪ್ರವೇಶಿಸಬೇಡಿರಿ ಯಹೂದ್ಯ ಜನಾಂಗದವರಾದ ಇಸ್ರಾಯೇಲರಿಗೆ, ಯೇಸುಕ್ರಿಸ್ತನು ಮತ್ತು ಶಿಷ್ಯರು ಸುವಾರ್ತೆಯನ್ನು ಮೊದಲು ಸಾರಬೇಕೆಂಬುದೇ ದೇವರ ಮೊದಲ ಯೋಜನೆಯಾಗಿತ್ತು (ಮತ್ತಾಯ 15:24, ರೋಮ. 1:16). ಸುವಾತೆಯನ್ನು ಕೇಳಿಸಿಕೊಂಡು ಯೇಸುಕ್ರಿಸ್ತನನ್ನು ನಂಬುವ ಮತ್ತು ರಕ್ಷಣೆಯನ್ನು ಸ್ವೀಕರಿಸುವ ಮೊದಲ ಅವಕಾಶವು ಯಹೂದ್ಯರಿಗೆ ದೊರೆಯಿತು ಮತ್ತು ನಂತರ ಯಹೂದ್ಯರಾದ ಇವರ ಮೂಲಕ ವಿಶ್ವದಲ್ಲಿರುವ ಇತರ ಜನಾಂಗದವರಿಗೆ ಆಶೀರ್ವಾದವು ಉಂಟಾಗಬೇಕಾಗಿತ್ತು (ಆದಿಕಾಂಡ 12:3). ಆದರೆ ಭಾಗಶಃ ಯಹೂದ್ಯರು ಕ್ರಿಸ್ತನನ್ನು ತಿರಸ್ಕರಿಸಿದರು ಮತ್ತು ಈ ಕಾರಣದಿಂದಲೇ ಕಡೆಯಲ್ಲಿ ಯೇಸುಕ್ರಿಸ್ತನು ತನ್ನ ಸುವಾರ್ತೆಯನ್ನು ಎಲ್ಲಾ ದೇಶ ಅಥವಾ ಜನಾಂಗಗಳಿಗೆ ಸಾರಲು ತನ್ನ ಶಿಷ್ಯರನ್ನು ಕಳುಹಿಸಿದನು (ಮತ್ತಾಯ 28:19).

ಯಹೂದ್ಯರು ತಮ್ಮ ನಾಯಕರ ತಪ್ಪಾದ ಬೋಧನೆಯ ಪರಿಣಾಮದಿಂದಾಗಿ ಸ್ವತಃ ತಾವೇ ತಪ್ಪಿಸಿಕೊಂಡ ಕುರಿಗಳಂತಾದರು (ಮತ್ತಾಯ 9:36).

**7** ನೋಡಿರಿ ಮಾರ್ಕ 1:14-15 ಮತ್ತು ಅಭಿಪ್ರಾಯ.

**8** ಯೇಸುಕ್ರಿಸ್ತನು ಗುಣಪಡಿಸುವಂತಹ ಮತ್ತು ದೆವ್ವಗಳನ್ನು ಹೊರ ಹಾಕುವ ಅಧಿಕಾರವನ್ನು ಮೊದಲು ತನ್ನ ಶಿಷ್ಯರಿಗೆ ಕೊಟ್ಟನು. ಸತ್ತವರನ್ನು ಎಬ್ಬಿಸುವ ಅಧಿಕಾರವನ್ನು ಕೂಡ ಅವರಿಗೆ ಕೊಟ್ಟನು. ಉಚಿತವಾಗಿ ಹೊಂದಿದ ಕರುಣೆಯ ಮತ್ತು ಕೃಪೆಯ ಆಶೀರ್ವಾದವನ್ನು ಹೊಂದಿದ್ದು, ಈಗ ಇದನ್ನು ಇವರು ಇತರರಿಗೆ ಹಂಚಿಕೊಳ್ಳಬೇಕಾಯಿತು. ಒಂದು ವೇಳೆ ನಾವು ದೇವರ ವರಗಳನ್ನು ನಮ್ಮಲ್ಲಿಯೇ ಇಟ್ಟುಕೊಳ್ಳುವುದಾದರೆ, ಇವುಗಳನ್ನು ದೇವರು ನಮ್ಮಿಂದ ತೆಗೆದುಕೊಂಡು ಬಿಡುತ್ತಾನೆ. ಯಾಕೆಂದರೆ ನಾವು ಇತರರನ್ನು ಕ್ಷಮಿಸಲೇ ಬೇಕು ಎಂಬ ಉದ್ದೇಶದಿಂದ ನಮ್ಮನ್ನು ಕ್ಷಮಿಸುತ್ತಾನೆ (ಮತ್ತಾಯ 6:14-15). ಈತನು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಇತರರನ್ನು ಪ್ರೀತಿಸಬೇಕು (1ನೇ ಯೋಹಾನ 4:11).

ಯೇಸುಕ್ರಿಸ್ತನ ಮತ್ತು ಶಿಷ್ಯರ ಗುಣಪಡಿಸುವಂತಹ ದೇವರ ಶಕ್ತಿಯು ಆತನ ಪ್ರೀತಿಯ ಸೂಚನೆಯಾಗಿದೆ. ದೇವ ರಾಜ್ಯವು ಪ್ರಾರಂಭವಾಯಿತು ಎಂಬುದಕ್ಕೆ ಇದು ಮುನ್ಸೂಚನೆಯಾಗಿತ್ತು. ಯೇಸುಕ್ರಿಸ್ತನು ಮಾಡಿದಂತೆಯೇ ಆತನ ಶಿಷ್ಯರು ಮಾಡಿದರು (ಯೋಹಾನ 14:12). ತಂದೆಯು ಯೇಸುಕ್ರಿಸ್ತನನ್ನು ಕಳುಹಿಸಿಕೊಟ್ಟಂತೆಯೇ, ಯೇಸುಕ್ರಿಸ್ತನು ತನ್ನ ಶಿಷ್ಯರನ್ನು ಕಳುಹಿಸಿದನು (ಯೋಹಾನ 17:18) ಮತ್ತು ಇದನ್ನೇ ಈ ದಿನಗಳಲ್ಲಿ ಯೇಸುಕ್ರಿಸ್ತನನ್ನು ಹಿಂಬಾಲಿಸುವವರು ಸಹ ಮಾಡುತ್ತಿರುವುದು.

**9-15** ನೋಡಿರಿ ಮಾರ್ಕ. 6:7-13 ಮತ್ತು ಅಭಿಪ್ರಾಯ.

## ಹಿಂಸೆಯ ನಿರೀಕ್ಷೆಯ ಲ್ಲಿರುವುದು (10:16:25)

(ಮಾರ್ಕ 13:9-13; ಲೂಕ 10:3; 12:11-12; 21:12-19)

**16** ಯೇಸುಕ್ರಿಸ್ತನ ಶಿಷ್ಯರು ಸಾರುವುದಕ್ಕೆ ಹೋದಾಗ, ಅವರು ಲೋಕದವರ ದೃಷ್ಟಿಯಲ್ಲಿ, ಭದ್ರತೆಯಿಲ್ಲದ ಕುರಿಗಳಂತಿದ್ದರು. ಅವರು ಯಾವುದೇ ರೀತಿಯ ಆಯುಧಗಳನ್ನು ಹೊಂದಿರಲಿಲ್ಲ ; ಮಾತ್ರವಲ್ಲದೇ ಅವರಲ್ಲಿ ಯಾವ ಹಣವು ಸಹ ಇರಲಿಲ್ಲ 9.ನೆಯ ವಚನ.) ಆದುದರಿಂದಲೇ ಅವರು ಸರ್ಪಗಳಂತೆ ಜಾಣರಾಗಿಯು ಮತ್ತು ಜಾಗರೂಕರಾಗಿಯೂ ಇರಬೇಕು. ಇದೇ ಸಮಯದಲ್ಲಿ ಪಾರಿವಾಳಗಳಂತೆ ನಿಷ್ಕಪಟಿಗಳಾಗಿದ್ದು, ದೇವರಿಂದ ಕಾಪಾಡಲ್ಪಡುವುದಕ್ಕಾಗಿ ಯಥಾರ್ಥವಾಗಿಯೂ ಮತ್ತು ವಿಧೇಯತೆಯುಳ್ಳವರಾಗಿರಬೇಕು. ದೇವರು ತನ್ನ ಚಿತ್ತವನ್ನು ಮಾಡುವಂತಹವರನ್ನು ಕಾಪಾಡುತ್ತಾನೆ.

**17-20** ನೋಡಿರಿ, ಮಾರ್ಕ 13:9-11 ಮತ್ತು ಅಭಿಪ್ರಾಯ.

**21-22** ನೋಡಿರಿ, ಮಾರ್ಕ 13:12-13 ಮತ್ತು ಅಭಿಪ್ರಾಯ.

**23** ಯೇಸುಕ್ರಿಸ್ತನ ಹಿಂಬಾಲಕರು ಹಿಂಸೆಯನ್ನನುಭವಿಸಲು ಸಿದ್ಧರಾಗಿರಬೇಕು. ಆದರೆ ಅನವಶ್ಯಕವಾದ ಕಷ್ಟಗಳನ್ನು ಎದುರುನೋಡಬಾರದು. ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ಒಂದು ವೇಳೆ ಒಂದು ಊರಿನಲ್ಲಿ ಹಿಂಸೆಯು ಬಂದರೆ ಅವರು ಮತ್ತೊಂದು ಊರಿಗೆ ಹೋಗಬೇಕು ಎಂದು ಕಲಿಸಿದನು. ಅವರು ಅಪಾಯಗಳಿಂದ ದೂರಹೋದರು. ಆದರೆ ಯೇಸುಕ್ರಿಸ್ತನ ಸೇವೆಯಿಂದ ದೂರ ಹೋಗಲಿಲ್ಲ.

ಆಮೇಲೆ ಆತನು ತನ್ನ ಶಿಷ್ಯರಿಗ[44] ಮನುಷ್ಯ ಕುಮಾರನು ಬರುವವಷ್ಟರಲ್ಲಿ ಇಸ್ರಾಯೇಲಿನ ಪಟ್ಟಣಗಳ ಸಂಚಾರವನ್ನು ನೀವು ಮುಗಿಸುವುದಿಲ್ಲವೆಂದು ನಾನು ಹೇಳುತ್ತೇನೆ (ಆತನು ಪುನರುತ್ಥಾನ ಹೊಂದಿ ಬರುವವಷ್ಟರಲ್ಲಿ). ಯೇಸುಕ್ರಿಸ್ತನು ಮರಣದಿಂದ ಎದ್ದು ಬಂದ ಮೇಲೆ ಆತನು ತನ್ನ ಶಿಷ್ಯರ ಬಳಿಗೆ ಬರುತ್ತಾನೆ ಮತ್ತು ನೀವು ಇಸ್ರಾಯೇಲ್ ದೇಶಕ್ಕೆ ಮಾತ್ರವಲ್ಲದೆ ಎಲ್ಲಾ ದೇಶಗಳಿಗೆ ಹೋಗಬೇಕು ಎಂದು ತನ್ನ ಶಿಷ್ಯರಿಗೆ ಹೇಳುತ್ತಾನೆ (ಮತ್ತಾಯ 28:18-20).

**24-25** ಗುರುವಿಗಿಂತ ಶಿಷ್ಯನು ಶ್ರೇಷ್ಠನಲ್ಲ. ಹೀಗಿರುವುದರಿಂದ ಗುರುವೇ ಹಿಂಸಿಸಲ್ಪಡುವುದಾದರೆ, ವಿದ್ಯಾರ್ಥಿಯು ಸಹ ಹಿಂಸೆಯಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ (ನೋಡಿರಿ. ಯೋಹಾನ. 15:20 ಮತ್ತು ಅಭಿಪ್ರಾಯ). ಯಜಮಾನನ ಮತ್ತು ದಾಸನ ವಿಷಯದಲ್ಲಿಯೂ ಕೂಡ ಸತ್ಯವೇ ಸರಿ. ಒಂದು ವೇಳೆ ಮನೆಯ ಯಜಮಾನನನ್ನೇ ಅವರು[45] 'ಬೆಲ್ಜಬೂಲನು' ಸೈತಾನ ಎಂದು ಕರೆದರೆ ಅವನ ಮನೆಯವರನ್ನು ಇನ್ನೂ ಎಷ್ಟೋ ಕೆಟ್ಟದ್ದಾಗಿ ಕರೆಯುವರಲ್ಲವೆ ( ನೋಡಿರಿ, ಮಾರ್ಕ 3:22 ಮತ್ತು ಅಭಿಪ್ರಾಯ). ಆದುದರಿಂದ ಇದು ಯೇಸುಕ್ರಿಸ್ತನ ಶಿಷ್ಯರಿಗೆಲ್ಲ ಅನ್ವಯಿಸುತ್ತದೆ. ಕ್ರಿಸ್ತನು ಹಿಂಸೆ ಹಾಗೂ ನಿಂದೆಗಳಿಂದ ಹಿಂಸಿಸಲ್ಪಟ್ಟು ಕಷ್ಟಪಟ್ಟ ಹಾಗೆಯೇ ಆತನ ಶಿಷ್ಯರುಗಳು ಕೂಡ ಕಷ್ಟ ಪಡುವರು (1ನೇ ಪೇತ್ರ 2:20-21).

## ಹೆದರು ವ ಅಗತ್ಯವಿಲ್ಲ (10:26-33)

(ಲೂಕ 12:2-9)

26 ಯೇಸುಕ್ರಿಸ್ತನು, ತನ್ನ ಶಿಷ್ಯರಿಗೆ ನೀವು ದೇವರ ಕೆಲಸವನ್ನು ಮಾಡುತ್ತಿರುವಿರಿ, ಭಯ ಪಡಬೇಡಿರಿ ಎಂದು ಹೇಳಿದನು. ಸುವಾರ್ತೆ ಸಾರುವುದನ್ನು ಯಾರು ತಡೆಯಲು ಸಾಧ್ಯವಿಲ್ಲ. ಯೇಸುಕ್ರಿಸ್ತನ ಬೋಧನೆಗಳು ಮತ್ತು ರಕ್ಷಣೆಯ ಮಾರ್ಗವನ್ನು ಶಿಷ್ಯರ ಮುಖಾಂತರ ಎಲ್ಲಾ ಜನರು ತಿಳಿದುಕೊಳ್ಳುವಂತಾಯಿತು (ಮಾರ್ಕ 4:22 ಮತ್ತು ಅಭಿಪ್ರಾಯ)

27 ಶಿಷ್ಯರು ಯೇಸುಕ್ರಿಸ್ತನಿಂದ ಏನನ್ನು ಕೇಳಿದ್ದರೋ ಅದನ್ನು ಬಹಿರಂಗವಾಗಿ ಸಾರುವಂತದ್ದೇ ಅವರ ಮುಖ್ಯದ ಕೆಲಸವಾಗಿತ್ತು. ಎಲ್ಲಾ ಕ್ರೈಸ್ತರು ಸಾಕ್ಷಿಗಳಾಗಿರಲೇಬೇಕು. ನಾವು ಕ್ರಿಸ್ತನ ಬೆಳಕನ್ನು **ಪಾತ್ರೆಯ ಅಡಿಯಲ್ಲಿ** ಮುಚ್ಚಿಡಬಾರದು (ಮತ್ತಾಯ 5:15).

28 ಶಿಷ್ಯರೆ, ಮನುಷ್ಯರಿಗೆ ಭಯ ಪಡಬೇಡಿರಿ. ಸೈತಾನನಿಗೂ ಕೂಡ ಭಯ ಪಡಬೇಡಿರಿ. ದೇವರಿಗೆ ಮಾತ್ರ ಭಯಪಡಿರಿ. ಮನುಷ್ಯನು ಮತ್ತು ದುರಾತ್ಮಗಳು ನಿಮ್ಮ ದೇಹವನ್ನು ಮಾತ್ರ ನಾಶಪಡಿಸಬಲ್ಲವು. ಆದರೆ ದೇವರು ಆತ್ಮವನ್ನು ನಾಶಪಡಿಸಬಲ್ಲನು. ದೇವರು ಮಾತ್ರ ನಿತ್ಯ ಜೀವವನ್ನು ಕೊಡಬಲ್ಲನು. ಮತ್ತು ಅದನ್ನು ತೆಗೆದು ಹಾಕಬಲ್ಲನು. ಮನುಷ್ಯನ ಆತ್ಮವು ನರಕಕ್ಕೆ ಹಾಕಲ್ಪಟ್ಟಾಗ ಅದು ನಾಶವಾಗುವುದು. ಅದು ಅಲ್ಲಿ ದೇವರಿಂದ ಬೇರ್ಪಡುತ್ತದೆ.ಕ್ರಿಸ್ತನಲ್ಲಿರುವ ವಿಶ್ವಾಸಿಗಳು ಯಾವ ಮನುಷ್ಯನಿಗಾಗಲಿ, ಇಲ್ಲವೇ ಯಾವುದೇ ತರಹದ ಹಿಂಸೆಗೆ ಹೆದರುವ ಅಗತ್ಯವಿಲ್ಲ. ಕಾರಣ ಯಾವುದೇ ಶಕ್ತಿಯು ಕೂಡ ವಿಶ್ವಾಸಿಗಳನ್ನು ದೇವರಿಂದ ಬೇರೆ ಮಾಡಲಾರದು (ನೋಡಿರಿ ರೋಮ 8:35, 38-39).

29-31 ದೇವರಿಗೆ ಮನುಷ್ಯನ ಆತ್ಮವನ್ನು ಮತ್ತು ಎಲ್ಲಾ ರೀತಿಯ ಶಕ್ತಿಗಳನ್ನು ಸಹ ನಾಶಪಡಿಸುವಂತಹ ಶಕ್ತಿಯಿದೆ. ಆದರೆ ದೇವರು ಸರ್ವಶಕ್ತನಾದ ಸೃಷ್ಟಿಕರ್ತನು. ಮಾತ್ರವಲ್ಲದೆ, ಪ್ರೀತಿಸುವ ತಂದೆಯು ಕೂಡ ಆಗಿದ್ದಾನೆ. ಆತನು ಪ್ರತಿಯೊಂದು ಪಕ್ಷಿಯನ್ನು ತನ್ನ ಗಣನೆಗೆ ತಂದುಕೊಂಡು, ಅವುಗಳು ಅಲ್ಪವಾಗಿದ್ದರೂ ಸಹ ಅವುಗಳ ಬಗ್ಗೆ ಚಿಂತಿಸುತ್ತಾನೆ. ನಮ್ಮ ಜೀವಿತದ ಪ್ರತಿಯೊಂದು ವಿಷಯದಲ್ಲಿ ಚಿಂತಿಸುತ್ತಾನೆ. ಮತ್ತು ಆತನು ಅತಿ ಚಿಕ್ಕವುಗಳಾದಂತಹ ಪಕ್ಷಿಗಳ ಮತ್ತು ನಮ್ಮ ತಲೆಯಲ್ಲಿರುವ ಕೂದಲುಗಳ ಬಗ್ಗೆ ಚಿಂತಿಸುವುದಾದರೆ, ಖಂಡಿತವಾಗಿಯೂ, ಆತನ ಮಕ್ಕಳಾದ ನಮ್ಮನ್ನು ಆತನು ಕಾಪಾಡುತ್ತಾನೆ.

32-33 ಈ ವಾಕ್ಯದಲ್ಲಿರುವ ಯೇಸುಕ್ರಿಸ್ತನ ಬೋಧನೆಯಂತೆ ದೇವರ ಸೃಷ್ಟಿಯಲ್ಲಿ "ಗುಪ್ತ ವಿಶ್ವಾಸಿ" ಎನ್ನುವಂತಹದ್ದು ಇಲ್ಲವೇ ಇಲ್ಲ. ಗುಪ್ತ ವಿಶ್ವಾಸಿಯಂತೆ ಕ್ರಿಸ್ತನನ್ನು ಹಿಂಬಾಲಿಸುವವನು[46] ಕ್ರೈಸ್ತನೇ ಅಲ್ಲ. ನಾವು **ಜನರ ಮುಂದೆ ಕ್ರಿಸ್ತನನ್ನು ಒಪ್ಪಿಕೊಳ್ಳಲೇಬೇಕು.** ಇಲ್ಲದಿದ್ದರೆ ಆ ನ್ಯಾಯತೀರ್ಪಿನ ದಿನದಲ್ಲಿ ಕ್ರಿಸ್ತನು ದೇವರಿಗೆ **"ಈ ಮನುಷ್ಯನನ್ನು ನಾನರಿಯೇನು"** ಎಂದು ಹೇಳುವನು. ರಕ್ಷಿಸಲ್ಪಡಬೇಕಾದರೆ ನಾವು ನಮ್ಮ ಬಾಯಿಂದ ಕ್ರಿಸ್ತನನ್ನು ಅರಿಕೆ ಮಾಡಿಕೊಳ್ಳಲೇಬೇಕು. (ರೋಮ 10:9-10 ಮತ್ತು ಅಭಿಪ್ರಾಯ). ದೇವರ ಮುಂದೆ ನಮಗಾಗಿ ಕ್ರಿಸ್ತನು ವಾದಿಸುವ ವಕೀಲನಾಗಿದ್ದಾನೆ (1ನೇ ಯೋಹಾನ 2:1). ಆತನು ನಮ್ಮ ವಿಜ್ಞಾಪನಗಾರನಾಗಿದ್ದಾನೆ (ನೋಡಿರಿ ರೋಮ 8:34; ಹಿಬ್ರಿಯಾ 7:25 ಮತ್ತು ಅಭಿಪ್ರಾಯಗಳು). ಕ್ರಿಸ್ತನು ನಮ್ಮ ಪರವಾಗಿ ಮಾತನಾಡಿದಾಗ ದೇವರು ನಮ್ಮನ್ನು ಸ್ವೀಕರಿಸುತ್ತಾನೆ ಮತ್ತು ನಮ್ಮನ್ನು ರಕ್ಷಿಸುತ್ತಾನೆ. ಒಂದು ವೇಳೆ ಕ್ರಿಸ್ತನು ನಮ್ಮನ್ನು ಒಪ್ಪಿಕೊಳ್ಳದಿದ್ದರೆ ದೇವರು ಕೂಡ ಒಪ್ಪಿಕೊಳ್ಳುವುದಿಲ್ಲ. ನಾವು ಕ್ರಿಸ್ತನ ಪರವಾಗಿ ಜನರ ಮುಂದೆ ಹೇಳುವುದನ್ನು ಮುಂದುವರಿಸಿದಂತೆ ಕ್ರಿಸ್ತನು ದೇವರ ಮತ್ತು ದೇವದೂತರ ಮುಂದೆ ನಮ್ಮ ಪರವಾಗಿ ಮಾತನಾಡುವುದನ್ನು ಮುಂದುವರಿಸುತ್ತಾನೆ (ನೋಡಿರಿ ಲೂಕ 12:8-9, ಪ್ರಕಟಣೆ 3:5). ಆದರೆ ಒಂದು ವೇಳೆ ನಾವು ಕ್ರಿಸ್ತನ ಹಿಂಬಾಲಕರು ಎಂದು ಹೇಳಿಕೊಳ್ಳಲು ಭಯ ಪಟ್ಟರೆ ಅಥವಾ ನಾಚಿಕೆಪಟ್ಟರೆ, ಕ್ರಿಸ್ತನು ನ್ಯಾಯತೀರ್ಪಿನ ದಿನದಲ್ಲಿ ನಮ್ಮನ್ನು ಒಪ್ಪಿಕೊಳ್ಳುವುದಿಲ್ಲ. ನೋಡಿರಿ ಮಾರ್ಕ 8:38 ಮತ್ತು ಅಭಿಪ್ರಾಯ.

## ಕ್ರಿಸ್ತನಿಗೆ ಯೋಗ್ಯವಾಗಿರುವುದು (10:34-42)

(ಮಾರ್ಕ 8:34-35; 9:41; ಲೂಕ 9:23-24; 12:51-53; 14:26-27)

34 ಯೇಸುಕ್ರಿಸ್ತನು ಶಾಂತಿದಾಯಕನು ಯೇಸುಕ್ರಿಸ್ತನು ಮೂಲಕ ಮನುಷ್ಯರ ಮಧ್ಯ ಶಾಂತಿಯನ್ನುಂಟು ಮಾಡುವುದಕ್ಕೆ ಬರದೇ ಪ್ರಾಥಮಿಕವಾಗಿ ಆತನು ಮನುಷ್ಯರ ಮತ್ತು ದೇವರ ಮಧ್ಯ ಶಾಂತಿಯನ್ನೇರ್ಪಡಿಸಲು ಬಂದನು. ಆದರೆ ಎಲ್ಲಾ ಮನುಷ್ಯರು ಯೇಸುವನ್ನು ನಂಬಲಿಲ್ಲ. ಎಲ್ಲ ಜನರು ದೇವರೊಂದಿಗೆ ಸಮಾಧಾನವನ್ನು ಮಾಡಿಕೊಳಲಿಲ್ಲ. ಅಂದರೆ ಎಲ್ಲ ಜನರು ಪಶ್ಚಾತ್ತಾಪ ಪಡಲಿಲ್ಲ. ಮತ್ತು ಕ್ಷಮಾಪಣೆಯನ್ನು ದೇವರಿಂದ ಹೊಂದಲಿಲ್ಲ. ಪಶ್ಚಾತ್ತಾಪ ಪಡದ ಮತ್ತು ಕ್ಷಮಾಪಣೆ ಹೊಂದದವರು, ಪಶ್ಚಾತ್ತಾಪ ಮತ್ತು ಕ್ಷಮಾಪಣೆ ಹೊಂದಿದವರನ್ನು ಇವರು ವಿರೋಧಿಸುತ್ತಾರೆ. ಸೈತಾನನ ರಾಜ್ಯದಲ್ಲಿರುವವರು ದೇವರ ರಾಜ್ಯವನ್ನು ಪ್ರವೇಶಿಸುವಂತಹವರನ್ನು ವಿರೋಧಿಸುತ್ತಾರೆ. ಈ ಕಾರಣಕ್ಕಾಗಿಯೇ ಯೇಸುಕ್ರಿಸ್ತನು, **ನಾನು ಶಾಂತಿಯನ್ನು ಉಂಟುಮಾಡಲು ಬರಲಿಲ್ಲ, ಖಡ್ಗ ಹಾಕಲು ಅಥವಾ ಭೇದವನ್ನುಂಟು ಮಾಡಲು ಬಂದಿದ್ದೇನೆ** ಎಂದು ಹೇಳಿದನು ಎಂಬುದಾಗಿ ಲೂಕನು ಹೇಳುತ್ತಾನೆ (ಲೂಕ 12:51). ಯೇಸುಕ್ರಿಸ್ತನು ತನ್ನನ್ನು ನಂಬಿದವರನ್ನು ಮತ್ತು ನಂಬದವರನ್ನು ವಿಂಗಡಿಸುತ್ತಾನೆ. ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ **"ನಾನು ನಿಮ್ಮನ್ನು ಈ ಲೋಕದೊಳಗಿಂದ ಆರಿಸಿ ತೆಗೆದುಕೊಂಡಿದ್ದೇನೆ. ಆದ್ದರಿಂದ ಈ ಲೋಕವು ನಿಮ್ಮನ್ನು ದ್ವೇಷಿಸುತ್ತದೆ"** ಎಂದು ಹೇಳಿದನು. ಕತ್ತಿಯು ವಸ್ತುವನ್ನು ಇಬ್ಭಾಗ ಮಾಡುತ್ತದೆ. ಹಾಗೆಯೇ ಕ್ರಿಸ್ತನ ನುಡಿಗಳು, ವಿಶ್ವಾಸಿಗಳಲ್ಲದವರಿಂದ ವಿಶ್ವಾಸಿಗಳನ್ನು ಬೇರೆ ಮಾಡುತ್ತವೆ (ಹಿಬ್ರಿಯಾ 4:12).

35-36 ಯೇಸುಕ್ರಿಸ್ತನು ಇಲ್ಲಿ ಒಂದೇ ಕುಟುಂಬದಲ್ಲಿರುವ ಸ್ವಂತದವರಲ್ಲಿ ನಂಬದೆ ಇರುವಂತಹವರು, ಕ್ರಿಸ್ತನಲ್ಲಿರುವಂತಹವರನ್ನು ವಿರೋಧಿಸುತ್ತಾರೆ ಎಂಬುದನ್ನು ತೋರಿಸುವುದಕ್ಕಾಗಿ ಈ ಮೂಕ 7:6, ವಚನವನ್ನು ಉಪಯೋಗಿಸುತ್ತಾನೆ. ನೀನು ನಿನ್ನ ತಂದೆ

ತಾಯಿಗಳಿಗಿಂತ ಹೆಚ್ಚಾಗಿ ನನ್ನನ್ನು ಪ್ರೀತಿಸಬೇಕು ಎಂದು ಯೇಸುಕ್ರಿಸ್ತನು ಹೇಳುತ್ತಾನೆ. ನೀನು ಹೀಗೆ ಮಾಡದಿದ್ದರೆ, "ನನ್ನ ಶಿಷ್ಯನಾಗುವುದಕ್ಕೆ ಯೋಗ್ಯನಲ್ಲ" ಎಂದು ಹೇಳುತ್ತಾನೆ.

**37** ಯೇಸುಕ್ರಿಸ್ತನನ್ನು ಹಿಂಬಾಲಿಸುವುದಕ್ಕಾಗಿ ಕೆಲವು ಸಂದರ್ಭಗಳಲ್ಲಿ ಈ ಲೋಕದವುಗಳನ್ನು ಬಿಟ್ಟುಕೊಡಲೇ ಬೇಕು. ನಾವು ನಮ್ಮ ಸ್ವಂತ ಆಸ್ತಿಯನ್ನು, ನಮ್ಮ ಪಿತ್ರಾರ್ಜಿತ ಸಂಪತ್ತು ಮತ್ತು ನಮ್ಮ ಉದ್ಯೋಗವನ್ನು ಕಳೆದುಕೊಳ್ಳಬೇಕಾಗಬಹುದು. ಇಂತಹ ಪ್ರತಿಕೂಲತೆಗಳು ನಮ್ಮ ಮಕ್ಕಳ ಮೇಲೆ ಬರಬಹುದು. ಆದರೆ ನಮ್ಮ ಮಕ್ಕಳ ಮೇಲಿರುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯನ್ನು ಕ್ರಿಸ್ತನ ಮೇಲೆ ಇಡಬೇಕು. ಯೇಸುಕ್ರಿಸ್ತನು ಇದನ್ನು ಬಲವಾಗಿ ಒತ್ತಿ ಲೂಕ 14:26ರಲ್ಲಿ **ನನ್ನ ಬಳಿಗೆ ಬರುವವನು ನನ್ನನ್ನು ಪ್ರೀತಿಸುವುದಕ್ಕಿಂತಲೂ ಹೆಚ್ಚಾಗಿ ತನ್ನ ತಂದೆ ತಾಯಿಗಳನ್ನು, ಹೆಂಡತಿಯನ್ನು, ಮಕ್ಕಳನ್ನು ಸಹೋದರ ಸಹೋದರಿಯನ್ನು ಮತ್ತು ತನ್ನನ್ನು ಪ್ರೀತಿಸುವುದಾದರೆ, ಅವನು ನನ್ನ ಶಿಷ್ಯನಾಗಿರಲು ಸಾಧ್ಯವಿಲ್ಲ** ಎಂದು ಹೇಳುತ್ತಾನೆ. ಇಲ್ಲಿ ಯೇಸುಕ್ರಿಸ್ತನು "ದ್ವೇಷ" ಎಂಬಂತಹ ಪದವನ್ನು ಉಪಯೋಗಿಸುವಾಗ, ನಾವು ಆತನಿಗೋಸ್ಕರ ನಾವು ನಮ್ಮ ತಂದೆತಾಯಿಗಳನ್ನು ಮತ್ತು ಮಡದಿ ಮಕ್ಕಳನ್ನು ಬಿಡುವುದಕ್ಕೂ ಸಿದ್ಧರಾಗಿರಬೇಕು ಎಂಬ ಅರ್ಥದಲ್ಲಿ ಹೇಳುತ್ತಾನೆ ಇದು ಮಾತ್ರವಲ್ಲದೆ ನಾವು ಶಿಷ್ಯರಾಗುವುದಕ್ಕಾಗಿ, ನಮ್ಮ ಜೀವಿತವನ್ನು ನಾವು "ದ್ವೇಷಿಸ"ಬೇಕಾಗುತ್ತದೆ (ಗಮಿಸಿರಿ : ಯೋಹಾನ 12:25 ಮತ್ತು ಅಭಿಪ್ರಾಯ). ಅಂದರೆ "ನಮ್ಮನ್ನೇ ನಾವು ನಿರಾಕರಿಸಬೇಕು. **ಯಾವನಿಗಾದರೂ ನನ್ನನ್ನು ಹಿಂಬಾಲಿಸಲು ಮನಸ್ಸಿದ್ದರೆ, ಅವನು ತನ್ನನ್ನು ತಾನು ನಿರಾಕರಿಸಬೇಕು**" ಎಂದು ಯೇಸುಕ್ರಿಸ್ತನು ಹೇಳಿದನು (ಮಾರ್ಕ 8:34). "ನನ್ನ ಹಿಂದೆ ಬರುವುದು" ಎಂಬ ಮಾತನ್ನು ಯೇಸುಕ್ರಿಸ್ತನು ನನ್ನ ಶಿಷ್ಯನಾಗು ಎಂಬ ಅರ್ಥದಿಂದ ಹೇಳುತ್ತಾನೆ. ಎಲ್ಲಾ ಕ್ರೈಸ್ತರು ಆತನ ಶಿಷ್ಯರೆಂದು ಕರೆಯಲ್ಪಡುವರು. **ಯಾವನಾದರೂ "ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬಾರದಿದ್ದರೆ ಅವನು ನನ್ನ ಶಿಷ್ಯನಾಗಿರಲಾರನು**" ಎಂದು ಯೇಸುಕ್ರಿಸ್ತನು ಹೇಳಿದನು (ಲೂಕ 14:27). ತನ್ನ ಶಿಲುಬೆಯನ್ನು ಹೊತ್ತು ಕೊಳ್ಳಲಾರದ ವ್ಯಕ್ತಿಯು ಕ್ರಿಸ್ತನ ಶಿಷ್ಯನಾಗುವುದಕ್ಕೆ "**ಯೋಗ್ಯತೆ**"ಯುಳ್ಳವನಾಗುವುದಿಲ್ಲ (ವಾಕ್ಯ 38).

**38-39** ಗಮನಿಸಿರಿ : ಮಾರ್ಕ 8:34-35 ಮತ್ತು ಅಭಿಪ್ರಾಯ.

**40** ಯೇಸುಕ್ರಿಸ್ತನನ್ನು ಹಿಂಸಿಸಿದವರು ಆತನ ಶಿಷ್ಯರನ್ನು ಕೂಡ ಹಿಂಸಿಸಿದರು. ಹಾಗೆಯೇ ಕ್ರಿಸ್ತನನ್ನು ಸ್ವೀಕರಿಸಿದವರು ಆತನ ಶಿಷ್ಯರನ್ನು ಸಹ ಸ್ವೀಕರಿಸುವರು. ಗುರುವಿಗೆ ಏನೇನು ಸಂಭವಿಸುವುದೋ ಅದೆಲ್ಲ ಶಿಷ್ಯನಿಗೂ ಸಹ ಸಂಭವಿಸುವುದು (ಗಮನಿಸಿರಿ :ಮಾರ್ಕ 9:37; ಲೂಕ 16; ಯೋಹಾನ 15:20).

**41** ಈ ವಾಕ್ಯಗಳಲ್ಲಿ ತಿಳಿಸಿರುವಂತಹ, ಪ್ರವಾದಿ ಅಥವಾ ನೀತಿವಂತನಾದ ವ್ಯಕ್ತಿಯನ್ನು ಸ್ವೀಕರಿಸು ಅಂದರೆ ಯೇಸುಕ್ರಿಸ್ತನ ಶಿಷ್ಯರಲ್ಲಿ ಒಬ್ಬನನ್ನು ಸ್ವೀಕರಿಸಬೇಕು ಎಂದು ಅರ್ಥ. ಯೇಸುಕ್ರಿಸ್ತನ ಶಿಷ್ಯರನ್ನು ಸ್ವೀಕರಿಸುವಂತಹವರಿಗೆ ಬಹಳ ಸನ್ಮಾನವು ಸಿಕ್ಕುವುದು. ಅವರು ಶಿಷ್ಯರ ಆಶೀರ್ವಾದದಲ್ಲಿ ಪಾಲನ್ನು ಹಂಚಿಕೊಳ್ಳುವರು. ಜನರು ತಾವು ಯಾರನ್ನು ಸ್ವೀಕರಿಸಿ, ಅವರನ್ನು ನಂಬುತ್ತಾರೋ ಅವರೊಂದಿಗೆ ತಮ್ಮ ಆಶೀರ್ವಾದಗಳನ್ನು ಹಂಚಿಕೊಳ್ಳುತ್ತಾರೆ. ಕ್ರಿಸ್ತನನ್ನು ಸ್ವೀಕರಿಸಿದ ನಾವುಗಳು ಕ್ರಿಸ್ತನ ಆಶೀರ್ವಾದಗಳನ್ನು ಸಹಾ ಪಡೆಯುತ್ತೇವೆ. ನಾವು ಶಿಷ್ಯರನ್ನು ಸ್ವೀಕರಿಸಿದರೆ, ಸ್ವತಃ ಕ್ರಿಸ್ತನನ್ನೇ ಸ್ವೀಕರಿಸಿದಂತೆ, ನಾವು ಕ್ರಿಸ್ತನನ್ನು ಆಹ್ವಾನಿಸಿದಾಗ, ದೇವರನ್ನು ಆಹ್ವಾನಿಸಿದ್ದೇವೆ. ಯೇಸುಕ್ರಿಸ್ತನ ಶಿಷ್ಯರಿಗೆ ನೀವು ಮಾಡುವಂತಹ ಚಿಕ್ಕ ಸೇವೆಯು ಕೂಡ ಸ್ವತಃ ಯೇಸುಕ್ರಿಸ್ತನಿಗೆ ಮಾಡಿದ್ದೆಂದು ಎಣಿಸಲ್ಪಡುವುದು (ಮತ್ತಾಯ 10:42; 25:40).

**42** ಗಮನಿಸಿರಿ : ಮಾರ್ಕ 9:41 ಮತ್ತು ಅಭಿಪ್ರಾಯ.

---

# ಅಧ್ಯಾಯ - 11

## ಯೇಸು ಕ್ರಿಸ್ತನು ಮತ್ತು ಸ್ನಾನಿಕನಾದ ಯೋಹಾನನು (11:1-19)

(ಲೂಕ 7:18-28, 31-35)

**1-3** ಸ್ನಾನಿಕನಾದ ಯೋಹಾನನು ಅರಸನಾದ ಹೆರೋದನಿಂದ ಸೆರೆಮನೆಗೆ ಹಾಕಲ್ಪಟ್ಟಿದ್ದನು (ನೋಡಿರಿ : ಮಾರ್ಕ 1:14, 6:17-20). ಯೋಹಾನನು ಸೆರೆಮನೆಯಲ್ಲಿರುವಾಗ ಯೇಸುಕ್ರಿಸ್ತನ ಚಟುವಟಿಕೆಗಳ ಬಗ್ಗೆ ಸ್ವಲ್ಪ ತಿಳಿದುಕೊಂಡಿದ್ದನು. ಕ್ರಿಸ್ತನನ್ನು ಯೋಹಾನನು ದೀಕ್ಷಾಸ್ನಾನ ಮಾಡಿಸುವಾಗ ಗುರುತಿಸಿದ್ದನು. (ಯೋಹಾನ 1:32-34).[47] ಮೆಸ್ಸಿಯನು ಯಹೂದ್ಯರನ್ನು ರೋಮನ್ನರ ರಾಜಕೀಯ ಆಡಳಿತದಿಂದ ಹಾಗೂ ಹೆರೋದನಂತಹ ಸ್ಥಳೀಯ ಆಡಳಿತಗಾರರಿಂದ ಬಿಡುಗಡೆಗೊಳಿಸುವನು ಎಂದು ಯಹೂದ್ಯರು ಭಾವಿಸಿದಂತೆಯೇ ಯೋಹಾನನು ಕೂಡ ಭಾವಿಸಿದ್ದನು. ಆದರೆ ಈಗ ಯೋಹಾನನು ಸೆರೆಮನೆಗೆ ಹಾಕಲ್ಪಟ್ಟನು ಮತ್ತು ಯೇಸುಕ್ರಿಸ್ತನು ನಿಜವಾದ ಮೇಸ್ಸಿಯನು ಹೌದೇ ಎಂದು ಸಂದೇಹಿಸತೊಡಗಿದನು. ಯೇಸುಕ್ರಿಸ್ತನು ಮೇಸ್ಸಿಯನು ಹೌದೋ ಅಥವಾ ಅಲ್ಲವೋ ಎಂಬುದನ್ನು ತಿಳಿದುಕೊಳ್ಳುವುದಕ್ಕೋಸ್ಕರವಾಗಿ ಯೋಹಾನನು ತನ್ನ ಇಬ್ಬರು ಶಿಷ್ಯರನ್ನು ಕ್ರಿಸ್ತನ ಬಳಿಗೆ ಕಳುಹಿಸಿಕೊಡುತ್ತಾನೆ (ಲೂಕ 7:18-20).

**4** ಯೋಹಾನನು ತನ್ನ ಕಾರ್ಯಕರ್ತರಿಂದ ನಿಜವಾದ ವರದಿಯನ್ನು ಪಡೆದಿರಲಿಲ್ಲ ಎಂಬುದನ್ನು ಕ್ರಿಸ್ತನು ಅರಿತವನಾಗಿದ್ದನು.

**5** ಆದುದರಿಂದಲೇ, ಯೇಸುಕ್ರಿಸ್ತನು ತಾನು ಏನು ಮಾಡುತ್ತಿದ್ದೇನೆ ಎಂಬುದನ್ನು, ಯೋಹಾನ ಶಿಷ್ಯರಿಗೆ ಹೇಳುತ್ತಾನೆ. ಯೇಸುಕ್ರಿಸ್ತನು ತಾನು ಗುಣಪಡಿಸುವ ಮತ್ತು ಬೋಧಿಸುವ ಹಾಗೂ ಸತ್ತವರನ್ನು ಎಬ್ಬಿಸುವಂತಹ ಕಾರ್ಯಗಳನ್ನು ಮಾಡುತ್ತಾ

ಹಳೆಯ ಒಡಂಬಡಿಕೆಯ ಪ್ರವಾದನೆಗಳನ್ನು ನೆರವೇರಿಸುತ್ತಿದ್ದನು. ಮೇಸ್ಸಿಯನ ದಿನಗಳಲ್ಲಿ. **ಕುರುಡರ ಕಣ್ಣುಗಳು ತೆರೆಯಲ್ಪಡುವುವು. ಕಿವುಡರ ಕಿವಿಗಳು ಕೇಳಿಸುವುವು. ಆಗ ಕುಂಟನು ಜಿಂಕೆಯಂತೆ ಹಾರುವನು, ಮೂಕನ ನಾಲಿಗೆಯೂ ಹರ್ಷಧ್ವನಿಗೈಯುವುದು** ಎಂದು ಪ್ರವಾದಿಸಿದ್ದನು (ಯೆಶಾಯ 35:5-6) ಮತ್ತು[48] ಬಡವರಿಗೆ ಶುಭ ವರ್ತಮಾನವು ಸಾರಲ್ಪಡುವುದು (ಯೆಶಾಯ 61:1). ಅಂದರೆ, ಆತ್ಮದಲ್ಲಿ ಬಡವರಾಗಿರುವವರಿಗೆ (ಮತ್ತಾಯ 5:3). ಯೇಸುಕ್ರಿಸ್ತನು "ಪಂಚವಾರ್ಷಿಕ ಯೋಜನೆ"ಗಳನ್ನು ಮತ್ತು ಜಟಿಲವಾದ ವಾರ್ಷಿಕ ವೆಚ್ಚಗಳ ಪಟ್ಟಿಯನ್ನು ನಿರೂಪಿಸಿರಲಿಲ್ಲ ಎಂಬುದನ್ನು ಗಮನಿಸಬೇಕು. ಆತನು ಸಲಹಾ ಮಂಡಳಿಯನ್ನು ಮತ್ತು ಸ್ವಯಂ ಸೇವಕರನ್ನು ಹೊಂದಿರಲಿಲ್ಲ. ಯೋಹಾನನ ಶಿಷ್ಯರು ಯೇಸುಕ್ರಿಸ್ತನು ಮೇಸ್ಸಿಯನೇ ಆಗಿದ್ದಾನೆ ಎಂಬುದಕ್ಕೆ ಆತನಿಂದ ಗುರುತನ್ನು ಕೇಳುತ್ತಾರೆ. ಮತ್ತು ಯೇಸುಕ್ರಿಸ್ತನು "ನೀವೇ ನೋಡಿಕೊಳ್ಳಿ" ಎಂದು ಉತ್ತರಿಸುತ್ತಾನೆ. ನನ್ನ ಕಾರ್ಯಕ್ರಮಗಳು ಬಹಳ ಸರಳವಾಗಿವೆ. ಬೋಧನೆಯನ್ನು ಕೇಳಿರಿ, ಗುಣಪಡಿಸುವುದನ್ನು ನೋಡಿರಿ. ಇದೇ ಗುರುತು ಆಗಿದೆ.

**6** ಆದುದರಿಂದ ಯೋಹಾನನು "ನಾನು ಮೇಸ್ಸಿಯನು ಎಂಬುದರಲ್ಲಿ ಸಂದೇಹ ಪಡುವುದೇ ಬೇಡ" ಎಂದು ಹೇಳಿರಿ ಎಂದು ಯೋಹಾನನ ಶಿಷ್ಯರಿಗೆ ಖಂಡಿತವಾಗಿ ಹೇಳುತ್ತಾನೆ. ಯೋಹಾನನಂತೆ ನಿರಾಶೆ ಮತ್ತು ಅಪನಂಬಿಕೆಯಿಂದ ಬೀಳುವುದು ಬೇಡ. ಮಹಾಭಕ್ತರ ನಂಬಿಕೆಯು ಸಹ ಅಪನಂಬಿಕೆ ಮತ್ತು ಅವಿಶ್ವಾಸಗಳ ಸಮ್ಮಿಶ್ರತನದಿಂದ ಕೂಡಿದ್ದಾಗಿತ್ತು.

**7** ಸ್ನಾನಿಕನಾದ ಯೋಹಾನನ ಶಿಷ್ಯರು ಬಿಟ್ಟು ಹೋದ ನಂತರ ಕ್ರಿಸ್ತನು ನೆರೆದು ಬಂದಂತಹ ಜನರಿಗೆ ಸ್ನಾನಿಕನಾದ ಯೋಹಾನನ ಬಗ್ಗೆ ಕಲಿಸಿಕೊಡುತ್ತಾನೆ.

**ಯೋಹಾನನು ಗಾಳಿಯಿಂದ ತೂರಿ ಹೋಗಲಿಲ್ಲ.** ಅಂದರೆ, ಯೋಹಾನನು ಈ ಲೋಕದ ಮತ್ತು ದುಷ್ಟ ಜನರ ಅಭಿಪ್ರಾಯವನ್ನು ಹಿಂಬಾಲಿಸಲಿಲ್ಲ. ಆತನು ತನ್ನ ನಂಬಿಕೆಯಲ್ಲಿ ಸ್ಥಿರವಾಗಿಯೂ ಮತ್ತು ದೃಢವಾಗಿಯೂ ನಿಂತನು. ಆತನು ದೂಷಣೆ ಮತ್ತು ಹಿಂಸೆಯಿಂದ ಚಂಚಲನಾಗಲಿಲ್ಲ.

**8** ಯೋಹಾನನು ಸರಳವಾದ ಜೀವಿತವನ್ನು ಬಯಸಲಿಲ್ಲ. ತನ್ನನ್ನು ತಾನೆ ನಿರಾಕರಿಸಿಕೊಂಡನು. ಮಾರ್ಕ 1:6

**9-10** ಯೋಹಾನನು ನಿಜವಾದ ಪ್ರವಾದಿಯಾಗಿದ್ದನು. **ಪ್ರವಾದಿಗಿಂತಲೂ ದೊಡ್ಡವನು.** ಯಾಕೆಂದರೆ ಮೇಸ್ಸಿಯನಿಗಾಗಿ ಮಾರ್ಗವನ್ನು ಸಿದ್ಧ ಮಾಡಲು ಬಂದಿದ್ದನು. ಯೇಸುಕ್ರಿಸ್ತನು ಇಲ್ಲಿ ಮಲಾಕಿಯ 3:1ರಲ್ಲಿನ ವಚನವನ್ನು ಉಲ್ಲೇಖಿಸುತ್ತಾನೆ (ನೋಡಿರಿ : ಮಾರ್ಕ 1:2-3, ಮತ್ತು ಅಭಿಪ್ರಾಯ).

**11** ಹಳೇ ಒಡಂಬಡಿಕೆಯಲ್ಲಿರುವ ಎಲ್ಲಾ ಪ್ರವಾದಿಗಳಿಗಿಂತ ಯೋಹಾನನು ದೊಡ್ಡವನು. ಯೇಸುಕ್ರಿಸ್ತನು ಬರುವವರೆಗೆ ಇವನಂತಹ ದೊಡ್ಡ ಪ್ರವಾದಿಯು ಇರಲಿಲ್ಲ. ಆದರೂ ಯೋಹಾನನು ಹಳೆಯ ಒಡಂಬಡಿಕೆಗೆ ಸೇರಿದ ಪ್ರವಾದಿಯಾಗಿದ್ದಾನೆ. ಯಹೂದ್ಯರ ಪ್ರವಾದಿಗಳಲ್ಲಿ ಕಡೆಯವನಾಗಿದ್ದಾನೆ. ಈತನು ಯೇಸುಕ್ರಿಸ್ತನ ಪುನರುತ್ಥಾನವನ್ನು ನೋಡಲಿಲ್ಲ. ಯೇಸುಕ್ರಿಸ್ತನ ಶಿಷ್ಯರು ಪವಿತ್ರಾತ್ಮನನ್ನು ಸ್ವೀಕರಿಸಿದ ಮಾದರಿಯಂತೆ ಈತನೂ ಪವಿತ್ರಾತ್ಮನನ್ನು ಹೊಂದಲಿಲ್ಲ (ಯೋಹಾನ 20:22). ಆದಾಗ್ಯೂ ಪರಲೋಕ ರಾಜ್ಯದ ಬರುವಿಕೆಯನ್ನು ಘೋಷಣೆ ಮಾಡಿದನು (ನೋಡಿರಿ : ಮತ್ತಾಯ 3:1-2). ತನ್ನ ಜೀವಿತದವಧಿಯಲ್ಲಿ ಇದರ ಭಾಗವೇನು ಆಗಿರಲಿಲ್ಲ. ಹೀಗಾಗಿ ಕ್ರಿಸ್ತನಲ್ಲಿ ಅಲ್ಪನಾದ ವಿಶ್ವಾಸಿಯು ಕೂಡ ಸ್ವರ್ಗದಲ್ಲಿ ಯೋಹಾನನಿಗಿಂತ ಹೆಚ್ಚಿನ ಪದವಿಯನ್ನು ಪಡೆಯಬಹುದು.

**12** ಆಮೇಲೆ ಯೇಸುಕ್ರಿಸ್ತನು **"ಸ್ನಾನಿಕನಾದ ಯೋಹಾನನ ದಿನಗಳಿಂದ ಇದುವರೆಗೆ ಪರಲೋಕ ರಾಜ್ಯವು[49] ಬಲಾತ್ಕಾರಕ್ಕೆ ಒಳಗಾಗಿದೆ ; ಬಲಾತ್ಕಾರಿಗಳು ಅದನ್ನು ಬಲವಂತವಾಗಿ ತೆಗೆದುಕೊಳ್ಳುತ್ತಾರೆ"** ಎಂದು ಹೇಳುತ್ತಾನೆ. ಅಂದರೆ ಸ್ನಾನಿಕನಾದ ಯೋಹಾನನ ಕಾಲದಿಂದಲೂ ಜನರು ಯೇಸುಕ್ರಿಸ್ತನ ಆಶೀರ್ವಾದಗಳನ್ನು ಆತುರದಿಂದ ಸ್ವೀಕರಿಸುವ ಪ್ರಯತ್ನದಲ್ಲಿದ್ದಾರೆ. ಇವರು ಪರಲೋಕವನ್ನು ಪ್ರವೇಶಿಸುವುದಕ್ಕಾಗಿ, ಬಲವಾಗಿ ಹೆಣಗಾಡುತ್ತಿದ್ದಾರೆ. ಕ್ರಿಸ್ತನು ಲೂಕ 16:16ರಲ್ಲಿ ಇದೇ ತರಹದ ಬೋಧನೆಯನ್ನು ಕೊಡುತ್ತಾನೆ **"ಸ್ನಾನಿಕನಾದ ಯೋಹಾನನು ಬಂದ ಕಾಲದಿಂದ ದೇವರ ರಾಜ್ಯದ ಸುವಾರ್ತೆಯು ಸಾರಲ್ಪಡುತ್ತಾ ಇದೆ. ಅನೇಕ ಜನರು ಈ ಮಾರ್ಗದಿಂದ ಒಳಗೆ ಹೋಗಲು ಬಹಳ ಪ್ರಯಾಸ ಪಡುತ್ತಿದ್ದಾರೆ"** ಎಂದು ಹೇಳಿದನು.

ಹೀಗೆ ಯೇಸುಕ್ರಿಸ್ತನು ಸ್ನಾನಿಕನಾದ ಯೋಹಾನನ ಸೇವೆಯು ಯಶಸ್ವಿಯಿಂದ ಕೂಡಿದ್ದಿತು ಎಂದು ಹೇಳುತ್ತಾ ಯೋಹಾನನನ್ನು ಹೊಗಳುತ್ತಾನೆ. ಅನೇಕ ಯಹೂದ್ಯರು ಪಶ್ಚಾತ್ತಾಪಪಟ್ಟರು ಮತ್ತು ಯೋಹಾನನನ್ನು ಹಿಂಬಾಲಿಸಿದರು. ಎಲ್ಲಾ ತರಹದ ಜನರು ಪರಲೋಕ ರಾಜ್ಯವನ್ನು ಪ್ರವೇಶಿಸುವುದಕ್ಕೆ ಪ್ರಾರಂಭಿಸಿದರು. ಈ ರೀತಿಯಾಗಿ "ಬಲವಂತವಾಗಿ" ಪರಲೋಕ ರಾಜ್ಯವು ಈ ಲೋಕಕ್ಕೆ ಬಂತು.

**13** ಎಲ್ಲಾ ಪ್ರವಾದಿಗಳು ಮತ್ತು [50]ಧರ್ಮಶಾಸ್ತ್ರಗಳು ಕ್ರಿಸ್ತನ ಬರೋಣದ ಮತ್ತು ಆತನು ಸ್ಥಾಪಿಸಲಿಕ್ಕಿರುವಂತಹ ಆತನ ರಾಜ್ಯದ ಬಗ್ಗೆಯೆ ಪ್ರವಾದಿಸಲ್ಪಟ್ಟಿದ್ದವು. ಯೋಹಾನನು ಹಳೆ ಒಡಂಬಡಿಕೆಯ ಕಡೆಯ ಪ್ರವಾದಿಯಾಗಿದ್ದಾನೆ (ವಚನ 11). ಕ್ರಿಸ್ತನು ಬಂದದ್ದರಿಂದ ಹಳೇ ಒಡಂಬಡಿಕೆಯ ಪ್ರವಾದನೆಗಳು ನೆರವೇರಿಸಲ್ಪಟ್ಟವು ಮತ್ತು ಮುಕ್ತಾಯಗೊಂಡವು (ಹಿಬ್ರಿಯಾ 1:1).

**14-15** ಮಲಾಕಿಯನು ಪ್ರವಾದಿಸಿದಂತಹ ಪ್ರವಾದಿಯಾದ ಎಲಿಯನೆಂಬುವವನೇ ಈ ಯೋಹಾನನಾಗಿದ್ದನು (ಮಲಾಕಿ 4:5). ಮೊದಲನೆಯ ಎಲೀಯನು ಹಳೇ ಒಡಂಬಡಿಕೆ ಪ್ರವಾದಿಗಳಲ್ಲೆಲ್ಲಾ ಮಹಾಪ್ರಸಿದ್ಧನಾದ ಒಬ್ಬ ಪ್ರವಾದಿಯಾಗಿದ್ದನು. ಯಾಕೆಂದರೆ ಎಲಿಯನು ಸಾಯಲಿಲ್ಲ. ಆದರೆ ದೇವರಿಂದ ಸ್ವರ್ಗಕ್ಕೆ ತೆಗೆದುಕೊಳ್ಳಲ್ಪಟ್ಟನು ಹಾಗೂ ಈತನು ಹಿಂತಿರುಗಿ ಬರುತ್ತಾನೆ ಎಂದು ಯಹೂದ್ಯರು ನಂಬಿದ್ದರು (2ನೇ ಅರಸು 2:11). ಯೋಹಾನನು ಎಲೀಯನ ಅವತಾರವಾಗಿರಲಿಲ್ಲ (ಯೋಹಾನ 1:21). ಆದರೆ ಮಲಾಕಿಯನು ಪ್ರವಾದಿಸಿದಂತೆ ಎಲೀಯನ ಕೆಲಸವನ್ನು ಈತನು ನೆರವೇರಿಸುತ್ತಾನೆ (ಲೂಕ 1:17). ಯೇಸುಕ್ರಿಸ್ತನು ಅರ್ಥೈಸಿದ್ದು ಮಲಾಕಿಯನು ಪ್ರವಾದಿಸಿದ್ದು ಈ ಯೋಹಾನನ ವಿಷಯವಾಗಿಯೇ ಎಂದು ಆತ್ಮೀಕವಾದ ದೃಷ್ಟಿಯಿಂದ ಆಲೋಚಿಸಿದರೆ ಅವರಿಗೆ ಅರ್ಥವಾಗುತ್ತದೆ ಎಂದು (ನೋಡಿರಿ: ಮತ್ತಾಯ 17:10-13). ಸ್ನಾನಿಕನಾದ ಯೋಹಾನನ ವಿಷಯವಾಗಿ ಪ್ರವಾದಿಯಾದ

ಮಲಾಕಿಯನು ಪ್ರವಾದಿಸಿದ ಪ್ರವಾದನೆಯು ಹಳೇ ಒಡಂಬಡಿಕೆಯಲ್ಲಿ ಇದು ಕಡೆಯ ಪ್ರವಾದನೆಯಾಗಿದೆ. ಹೀಗಾಗಿ ಹಳೆಯ ಮತ್ತು ಹೊಸ ಒಡಂಬಡಿಕೆಯ ಮಧ್ಯದಲ್ಲಿ ಕೊಂಡಿಯ ಹಾಗೆ ಸೇವೆಗೈದಿದ್ದಾನೆ. ಈ ಯೋಹಾನನು, ಹೊಸ ಯುಗ, ಹೊಸ ರಾಜ್ಯ ಮತ್ತು ಹೊಸ ಒಪ್ಪಂದದ ಘೋಷಣೆಯನ್ನು ಮಾಡುತ್ತಾನೆ. (ಹಿಬ್ರಿಯಾ 8:8, 13 ಮತ್ತು ವ್ಯಾಖ್ಯಾನ).

**16-17** ಯೇಸು ಕ್ರಿಸ್ತನಿದ್ದಂತಹ ಕಾಲದ ಯಹೂದಿ **ಸಂತಾನದವರಿಗೆ** ದೇವರ ರಾಜ್ಯವನ್ನು ಪ್ರವೇಶಿಸುವಂತಹ ಒಂದು ಸುವರ್ಣಾವಕಾಶವು ದೊರಕಿತು. **ದೇವರ ರಾಜ್ಯವು ಸನಿಹದಲ್ಲೇ ಇದೆ** ಎಂದು ಸ್ನಾನಿಕನಾದ ಯೋಹಾನ ಮತ್ತು ಯೇಸುಕ್ರಿಸ್ತರಿಬ್ಬರು ಸಾರಿದರು (ಮತ್ತಾಯ 3:1-2; ಮಾರ್ಕ 1:14-15). ಆದರೆ ಮಕ್ಕಳ ಆಟಗಳಾದಂತ "ಮದುವೆಯಾಟ ಮತ್ತು ಸಮಾಧಿಯಾಟ" ದಂತೆಯೇ ಯಹೂದ್ಯರು ಮಕ್ಕಳಂತೆ ಆಟವಾಡಿದರು. ಆಟವು ಹೀಗೆ ಮುಂದುವರಿಯಿತು. ಒಂದು ತಂಡದ ಮಕ್ಕಳು **ಕೊಳಲು ಬಾರಿಸುತ್ತಾರೆ** ಮತ್ತು ಇನ್ನೊಂದು **ತಂಡದವರು ಕುಣಿಯುತ್ತಿರಬೇಕಾಗಿತ್ತು**. ಆದರೆ ಯಹೂದ್ಯರು ಕುಣಿಯಲಿಲ್ಲ ಮತ್ತೆ ಎರಡನೇ ತಂಡದ ಮಕ್ಕಳು **ಚರಮಗೀತೆ** ಅಥವಾ (**ಸ್ಮಶಾನ ಗೀತೆ - ಶವಸಂಸ್ಕಾರದಲ್ಲಿ ಮೃತನ ಸ್ಮರಣೆಗಾಗಿ ಹಾಡುವಂತದ್ದು**) ಹಾಡುವರು ಮತ್ತು ಸಮಾಧಿ ಮಾಡುವಾಗ ದುಃಖದಿಂದ ಗೋಳಾಡುವಂತಹ ಜನರ ಹಾಗೆ, ಇತರರು ದುಃಖಿಸುವರು. ಆದರೆ ಯಹೂದ್ಯರು "ದುಃಖಿಸುವುದನ್ನು" ತಿರಸ್ಕಾರ ಮಾಡುತ್ತಾರೆ. ಒಬ್ಬರಿಗೊಬ್ಬರು ಆಟವಾಡುವುದಕ್ಕೆ ಸಮ್ಮತಿಸದಿರುವ ಚಂಚಲತೆಯಿಂದಿರುವ ಮಕ್ಕಳಂತೆಯೆ ಯಹೂದ್ಯರಿದ್ದರು.

**18** ಇದೇ ರೀತಿಯಾಗಿ, ಸ್ನಾನಿಕನಾದ ಯೋಹಾನನು **ತಿನ್ನುವುದಕ್ಕಾಗಲಿ ಅಥವಾ ಕುಡಿಯುವುದಕ್ಕಾಗಲಿ ಬರಲಿಲ್ಲ**. ಮಕ್ಕಳು "ಸಮಾಧಿಯಾಟ" ಮತ್ತು ಶೋಕ ಗೀತೆಯಾಟದಂತೆ ಯೋಹಾನನು ಮಾಡುವುದಕ್ಕೆ ಬಂದನು. ಆದರೆ ಅನೇಕ ಯಹೂದ್ಯರು **ಈತನಿಗೆ ದೆವ್ವ ಹಿಡಿದಿದೆ** ಎಂದು ಹೇಳುತ್ತಾ ಯೋಹಾನನ ಮಾತುಗಳನ್ನು ತಿರಸ್ಕರಿಸುತ್ತಾರೆ. ಸಾಮಾನ್ಯವಾಗಿ ಯಾರು ದೇವರ ಮಾತುಗಳನ್ನು ತಿರಸ್ಕರಿಸಿದರೋ ಅವರು ಉಪದೇಶ ಮಾಡಿದಂತಹ ಬೋಧಕರನ್ನು ದೂಷಿಸಿದರು.

**19** ಮನುಷ್ಯ ಪುತ್ರನಾದ ಯೇಸುಕ್ರಿಸ್ತನು **ತಿನ್ನುವುದಕ್ಕೂ ಮತ್ತು ಕುಡಿಯುವುದಕ್ಕೂ** ಬಂದನು. ಮಕ್ಕಳ ಹಾಗೆ "ಕೊಳಲು" ನುಡಿಸುವುದಕ್ಕೂ ಮತ್ತು ಮಕ್ಕಳ "ಮದುವೆಯಾಟ"ದ ಆಟವನ್ನು ಆಡುವುದಕ್ಕೆ ಯೇಸು ಕ್ರಿಸ್ತನು ಬಂದನು. ಆದರೆ ಈತನನ್ನು ಕೂಡ ಸ್ವೀಕರಿಸಲಿಲ್ಲ. ಹೊಟ್ಟೆಬಾಕರನ್ನು ಮತ್ತು ಕುಡುಕರನ್ನು ಮತ್ತು **ಸುಂಕದವರನ್ನು** ಹಾಗೂ "**ಪಾಪಿಗಳನ್ನು**" ಈತನು ರಕ್ಷಿಸುವುದಕ್ಕಾಗಿ ಬಂದಿರುವ ಕ್ರಿಸ್ತನನ್ನು "**ಹೊಟ್ಟೆ ಬಾಕನು ಮತ್ತು ಕುಡುಕನು ಇಲ್ಲಿದ್ದಾನೆ**" ಎಂದು ಇವರು ಹೇಳಿದರು (ಮಾರ್ಕ 2:15-16; 18). ಅತಿ ಪವಿತ್ರನಾದ ವ್ಯಕ್ತಿಯಾಗಿದ್ದರೂ ಸಹ ನಿಂದೆ ಹಾಗೂ ಸುಳ್ಳು ಅಪರಾಧಗಳಿಂದ ಕಷ್ಟವನ್ನು ಅನುಭವಿಸಿದನು. ಒಬ್ಬ ಮನುಷ್ಯನ ಉನ್ನತ ಸದ್ಗುಣಗಳ ಮತ್ತು ಮಹಾಕಾರ್ಯದ ಬಗ್ಗೆ ಆಗಾಗ್ಗೆ ಜನರು ಕೆಟ್ಟದ್ದಾಗಿ ಮಾತನಾಡುತ್ತಾರೆ. ಹೀಗೆ ಚಂಚಲ ಹಾಗೂ ಮೂರ್ಖತನದಿಂದ ಕೂಡಿದಂತಹ ಮಕ್ಕಳ ಹಾಗೆ ಬಹಳಷ್ಟು ಜನ ಯಹೂದ್ಯರು ಯಾವ ಪಾತ್ರ ಮಾಡಬೇಕೆಂಬುದಾಗಿ ಒಂದು ಒಪ್ಪಂದಕ್ಕೆ ಬರಲಾರದೆ ಹೋಗುತ್ತಾರೆ. ಶೋಕಗೀತೆಯ ಹಾಗೂ ಕೊಳಲು ನುಡಿಯ ಮೂಲಕ ದೇವರು ಯಾವ ರೀತಿಯಿಂದ ಮಾತನಾಡಿದರೂ ಸಹ ಇವರು ಆತನ ಮಾತುಗಳನ್ನು ತಿರಸ್ಕರಿಸಿದರು.

ಆದರೆ ಆಕೆಯ ಕೆಲಸಗಳಿಂದ ಆಕೆಯ ಸರಿಯಾದ ಬುದ್ಧಿವಂತಿಕೆಯು ಸರಿಯೆಂದು ದೃಢಪಡುತ್ತದೆ. ಯೋಹಾನ ಮತ್ತು ಯೇಸುಕ್ರಿಸ್ತನು ಅನೇಕರಿಂದ ದೂಷಿಸಲ್ಪಟ್ಟರು. ಆದರೆ ಅವರದೇ ಸರಿ ಎಂಬುದನ್ನು ಅವರ ಕೃತಿಗಳೇ ದೃಢಪಡಿಸಿದವು. ಯೇಸುಕ್ರಿಸ್ತನನ್ನು ನಂಬಿದ ಪ್ರತಿಯೊಬ್ಬನು ಹೊಸ ಜೀವಿತದ ರಕ್ಷಣೆಯನ್ನು ಹೊಂದಿದನು. ಯೋಹಾನನ ಮತ್ತು ಯೇಸುಕ್ರಿಸ್ತನ ಬೋಧನೆಗಳು ಸತ್ಯವಾದಂತಹವುಗಳಾಗಿದ್ದವು ಎಂಬುದಕ್ಕೆ ಇದು ಗುರುತಾಗಿತ್ತು. ಲೂಕ 7:35ನೇ ವಚನಕ್ಕನುಸಾರವಾಗಿ ಯೇಸುಕ್ರಿಸ್ತನು ಆಕೆಯ ಜ್ಞಾನವು ಯೋಗ್ಯವೆಂದು ತನ್ನ ಎಲ್ಲಾ ಮಕ್ಕಳಿಂದ ನೀತಿಕರಿಸಲ್ಪಡುತಿದೆ ಎಂದು ಹೇಳಿದನು. ಇಲ್ಲಿ ಮಕ್ಕಳು ಅಂದರೆ "ಕೃತ್ಯಗಳು" ಎಂದು ಅರ್ಥ. ಒಳ್ಳೆಯ "**ಕೃತ್ಯಗಳು**" ಜ್ಞಾನದ "**ಮಕ್ಕಳು**" ಆಗಿರುವರು.

## ಪಶ್ಚಾತ್ತಾಪ ಪಡದ ಪಟ್ಟಣಗಳಿಗಾಗಿ ದುಃಖ (11:20-24)

(ಲೂಕ 10:13-15.)

**20-21** ಯೇಸುಕ್ರಿಸ್ತನು [51]ಖೊರಾಜಿನ್ ಮತ್ತು ಬೇತ್ಸಾಯಿದ ಎಂಬ ಈ ಪಟ್ಟಣಗಳಲ್ಲಿ ಅನೇಕ ಅದ್ಭುತಗಳನ್ನು ಮಾಡಿದ್ದನು. ಬೇತ್ಸಾಯಿದ ಪಟ್ಟಣದ ಸನಿಹದಲ್ಲಿಯೇ ಐದು ಸಾವಿರ ಜನರಿಗೆ ಊಣ ಬಡಿಸಿದನು (ಮಾರ್ಕ 6:44-45). ಆದರೆ ಯೆಹೂದರ ಈ ಪಟ್ಟಣಗಳ ಜನರು ತಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಡಲಿಲ್ಲ. ಮತ್ತು ಕ್ರಿಸ್ತನ ಕಡೆಗೆ ತಿರುಗಲಿಲ್ಲ. ಟೈರ್ ಮತ್ತು ಸಿದೋನ್ ಇವು ಅನ್ಯ ಜನಾಂಗದವರ ದೊಡ್ಡ ಪಟ್ಟಣಗಳಾಗಿದ್ದು, ಇಸ್ರಾಯೇಲ್‌ನ ಉತ್ತರದ ಮೆಡಿಟರೇನಿಯನ್ ಸಮುದ್ರದ ಕರಾವಳಿಯ (ಈಗಿನ ಲೇಬನಾನ್‌ದೇಶ) ಪ್ರದೇಶದಲ್ಲಿದ್ದವು. ಯೇಸುಕ್ರಿಸ್ತನ ಕಾಲದಲ್ಲಿ ಈ ಪಟ್ಟಣಗಳು ತಮ್ಮ ಶ್ರೀಮಂತಿಕೆ ಮತ್ತು ದುಷ್ಟ ನಡತೆಗಳಿಂದ ಪ್ರಸಿದ್ಧವಾಗಿದ್ದವು. ಆದರೆ ಇದೇ ರೀತಿಯ ಸೂಚಕ ಕಾರ್ಯಗಳು ಟೈ ಮತ್ತು ಸಿದೋನ್ ಪಟ್ಟಣಗಳಲ್ಲಿ ಆತನು ನಡೆಸಿದ್ದರೆ ಅವುಗಳ ಜನರು ಪಶ್ಚಾತ್ತಾಪ ಪಟ್ಟು **ಗೋಣಿತಟ್ಟನ್ನು ಧರಿಸಿಕೊಂಡು ಬೂದಿಯಲ್ಲಿ**[52] ಕುಳಿತುಕೊಳ್ಳುತ್ತಿದ್ದರು ಎಂದು ಕ್ರಿಸ್ತನು ಹೇಳಿದನು.

**22** ಖೊರಾಜಿನ್ ಮತ್ತು ಬೇತ್ಸಾಯಿದ ಪಟ್ಟಣಗಳು ಪ್ರತ್ಯಕ್ಷವಾಗಿ ಕ್ರಿಸ್ತನ ಹೆಚ್ಚು ಸೂಚಕ ಕಾರ್ಯಗಳನ್ನು, ನೋಡಿದ್ದಾಗ್ಯೂ ಕೂಡ ಪಶ್ಚಾತ್ತಾಪ ಪಡಲು ಹಿಂಜರಿದು ಕ್ರಿಸ್ತನನ್ನು ಸ್ವೀಕರಿಸಲು ನಿರಾಕರಿಸಿದ್ದರಿಂದ ಅವುಗಳ ಮೇಲಿನ ಅಪರಾಧವು ಬಹಳ ದೊಡ್ಡದಾಗಿಯೇ ಇತ್ತು. **ಯಾವನಿಗೆ ಹೆಚ್ಚಾಗಿ ಒಪ್ಪಿಸಿರುವುದೋ ಅವನಿಂದ ಹೆಚ್ಚಾಗಿಯೇ ಕೇಳಲ್ಪಡುವುದು** (ಲೂಕ 12:48).

**23-24** **ಕಪೆರ್ನೌಮೇ, ನೀನು ಆಕಾಶದವರೆಗೂ ಹೆಚ್ಚಿಸಲ್ಪಟ್ಟಿರುವೆಯೋ? ಕಪೆರ್ನೌಮ್, ಯೇಸುಕ್ರಿಸ್ತನ ಸ್ವಂತ ಊರಾಗಿತ್ತು.** ಇದು ಗಲಿಲಾಯ ಸಮುದ್ರದ ಉತ್ತರದ ಕಡಲಿನಲ್ಲಿ ಇದೆ (ಮತ್ತಾಯ 9:1; ಮಾರ್ಕ 2:1). ಇದು ಒಂದು ಹೆಮ್ಮೆಯ ಊರಾಗಿತ್ತು. ಇದರ ಜನರು ತಮ್ಮನ್ನು ತಾವೇ ಹೆಚ್ಚಿಸಿಕೊಳ್ಳುವಂತವರಾಗಿದ್ದರು. ಆದರೆ ಅವರು ಕೆಳಕ್ಕೆ ಎಸೆಯಲ್ಪಡುವರು ಎಂದು ಯೇಸುಕ್ರಿಸ್ತನು

ಹೇಳಿದನು. ಯಾಕೆಂದರೆ ಅವರು ಕ್ರಿಸ್ತನನ್ನು ತಿರಸ್ಕರಿಸಿದ್ದು, ಸೊದೋಮಿನ ಜನರಿಗಿಂತಲು ಹೆಚ್ಚಿನ ಶಿಕ್ಷೆಯನ್ನು ಪಡೆಯುವರು ಎಂದು ಕ್ರಿಸ್ತನು ಹೇಳಿದನು. (ಆದಿಕಾಂಡ 19:1-29; ಮತ್ತಾಯ 10:14-15). ಸೊದೋಮ್ ಪಟ್ಟಣವು ತನ್ನ ದುಷ್ಟತನದ ನಿಮಿತ್ತವಾಗಿ ದೇವರಿಂದ ನಾಶ ಹೊಂದಿತು. ಹಾಗೆಯೇ ಅಂತಿಮ ನ್ಯಾಯತೀರ್ಪಿನ ದಿನದಲ್ಲಿ ಕಪೆರ್ನೌಮ್, ಸೊದೋಮಿಗಿಂತ ಹೆಚ್ಚಿನ ಶಿಕ್ಷೆಯನ್ನು ಹೊಂದುವುದು.

**ಕಷ್ಟ ಪಡುವವರಿಗೆ ವಿಶ್ರಾಂತಿ (11:25-30) (ಲೂಕ 10:21-22)**

**25-26** ಯೇಸುಕ್ರಿಸ್ತನ ಹೇಸರಾದಂತ ಯೇಸು ಎಂಬ ಹೆಸರಿನ ಮತ್ತು ಸೂಚಕ ಕಾರ್ಯಗಳ ಗೂಢಾರ್ಥಗಳನ್ನು ಬುದ್ಧಿವಂತರ ಮತ್ತು ಜ್ಞಾನಾರ್ಜನೆ ಮಾಡಿದವರ ದೃಷ್ಟಿಗೆ ಮರೆಯಾಗಿರುವಂತೆ ದೇವರು ಮಾಡಿದ್ದಾನೆ. ಆದಾಗ್ಯೂ **ಈ ಚಿಕ್ಕ ಮಕ್ಕಳಿಗೆ** ಅಂದರೆ ತನ್ನನ್ನು ನಂಬಿದವರಿಗೆ ಇವುಗಳು ಗೋಚರಿಸುವಂತೆ ದೇವರು ಮಾಡಿದ್ದಾನಲ್ಲಾ ಎಂದು ಯೇಸುಕ್ರಿಸ್ತನು ಸಂತೋಷ ಪಡುತ್ತಾನೆ (ಮಾರ್ಕ 10:15).

ಜ್ಞಾನವಂತರು ಮತ್ತು ಕಲಿತವರು ಆತ್ಮಿಕ ಅಜ್ಞಾನದಲ್ಲಿರುವುದರಿಂದ ಯೇಸುಕ್ರಿಸ್ತನು ಸಂತೋಷ ಪಡಲಿಲ್ಲ ಮತ್ತು ಅಲ್ಪರಾದಂತಹ ಮಕ್ಕಳು ಆತ್ಮಿಕವಾಗಿ ಬುದ್ಧಿವಂತರಾಗಿದ್ದರಿಂದ ಸಂತೋಷಪಟ್ಟನು. ತಮ್ಮ ಸ್ವಬುದ್ಧಿಯಿಂದ ಆತ್ಮಿಕವಾದವುಗಳನ್ನು ಅರ್ಥ ಮಾಡಿಕೊಳ್ಳುವಂತವರೇ ಜ್ಞಾನಿಗಳು ಮತ್ತು ಕಲಿತವರು ಆಗಿದ್ದಾರೆ. ಆದರೆ ಇದು ಅಸಾಧ್ಯವಾದಂತದ್ದು (ನೋಡಿರಿ : 1ನೇ ಕೊರಿಂಥ 2:14).

ಲೋಕವು ತನ್ನ ಸ್ವಂತ ಜ್ಞಾನದ ಮೂಲಕವಾಗಿ ಈತನನ್ನು ಕಂಡುಕೊಳ್ಳಲಿಲ್ಲ (1ನೇ ಕೊರಿಂಥ 1:21). ತಗ್ಗಿಸಲ್ಪಟ್ಟಂತಹವರು ಪವಿತ್ರಾತ್ಮನ ಮೇಲೆ ಆಧಾರಗೊಂಡಂತಹವರಾದ **ಈ ಅಲ್ಪ ಮಕ್ಕಳ** ಮನಸ್ಸನ್ನು ದೇವರು ತೆರೆದನು. ಇಂತಹ ಜನರು ಮಾತ್ರ ದೇವರ ಸಂಗತಿಗಳನ್ನು ಸ್ವೀಕರಿಸಬಹುದು (1ನೇ ಕೊರಿಂಥ 2:7-10, 12). ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ. ಆದರೆ ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ. ಇದು ತಂದೆಗೆ ಮೆಚ್ಚಿಕೆಯಾಗಿದೆ. (ವಚನ 26).

**27** "ನನ್ನ ತಂದೆ ಎಲ್ಲವನ್ನು ನನಗೆ ಒಪ್ಪಿಸಿದ್ದಾನೆ" ಎಂದು ಹೇಳಿದನು. ಎಲ್ಲಾ ಸಂಗತಿಗಳು ಅಂದರೆ ಎಲ್ಲಾ ಬಲ, ಜ್ಞಾನ ಮತ್ತು ಅಧಿಕಾರಿಗಳು ತಂದೆಯಿಂದ ಕೊಡಲ್ಪಟ್ಟಿವೆ. (ಮತ್ತು 28:18). ದೇವರು ಕ್ರಿಸ್ತನಿಗೆ ಆತ್ಮವನ್ನು ಮಿತಿಯಿಲ್ಲದೆ ಕೊಟ್ಟಿದ್ದಾನೆ. (ಯೋಹಾನ 3:34). ತಂದೆಯು ಮಗನನ್ನು ಪ್ರೀತಿಸಿ ಎಲ್ಲವನ್ನು ಆತನ ಕೈಯಲ್ಲಿ ಕೊಟ್ಟಿದ್ದಾನೆ (ಯೋಹಾನ 3:35). ತಂದೆಗೆ ಇರುವುದೆಲ್ಲ ನನ್ನದು ಎಂದು ಕ್ರಿಸ್ತನು ಹೇಳಿದನು (ಯೋಹಾನ 16:15).

ತಂದೆಗೆ ಮಾತ್ರ ಕ್ರಿಸ್ತನ ವಿಷಯದಲ್ಲಿ ಸಂಪೂರ್ಣವಾದ ಜ್ಞಾನವುಂಟು. ಇದೇ ರೀತಿಯಾಗಿ ಯೇಸುಕ್ರಿಸ್ತನಿಗೆ ಮಾತ್ರ ತಂದೆಯ ಬಗ್ಗೆ ಪರಿಪೂರ್ಣವಾದ ಜ್ಞಾನವುಂಟು. ಯಾಕೆಂದರೆ ಕ್ರಿಸ್ತನು ಮತ್ತು ತಂದೆಯು **ಒಂದೇ ಆಗಿದ್ದಾರೆ** (ಯೋಹಾನ 10:30).ಆತನು ಯಾರನ್ನು ತನ್ನ ಮಗನಾಗುವುದಕ್ಕೆ ಆರಿಸಿಕೊಂಡು ಜ್ಞಾನವನ್ನು ಕೊಟ್ಟಿದ್ದಾನೋ ಅಂತಹವನಿಗೆ ತನ್ನನ್ನು ಪ್ರಕಟಿಸಿಕೊಳ್ಳುತ್ತಾನೆ. ನಾವು ಕ್ರಿಸ್ತನನ್ನು ಆರಿಸಿಕೊಳ್ಳಲಿಲ್ಲ. ಆತನು ನಮ್ಮನ್ನು ಆರಿಸಿಕೊಂಡನು (ಯೋಹಾನ 15:16). ಯೇಸುಕ್ರಿಸ್ತನು ತನ್ನ ತಂದೆಯಿಂದ ಪಡೆದದ್ದನ್ನೆಲ್ಲವನ್ನು ತನ್ನನ್ನು ನಂಬಿದಂತಹವರಿಗೆ ತಿಳಿಯಪಡಿಸಿದ್ದಾನೆ (ಯೋಹಾನ 15:15).

ಯೇಸುಕ್ರಿಸ್ತನು, ದೇವರನ್ನು ತೋರಿಸುವವರೆಗೆ ಯಾರು ಆತನನ್ನು ನಿಜವಾಗಿಯೂ ಅರಿಯಲು ಆಗುವುದಿಲ್ಲ. **ದೇವರನ್ನು ಯಾರು ಎಂದು ಕಂಡಿಲ್ಲ. ಯಾವನು ಏಕ ಪುತ್ರನೂ ಸ್ವತಃ ದೇವರೂ ಆಗಿದ್ದು ತಂದೆಯ ಎದೆಯಲ್ಲಿದ್ದಾನೋ ಆತನೇ ತಿಳಿಯಪಡಿಸಿದನು** (ಯೋಹಾನ 1:18). ಪ್ರತಿಯೊಂದು ಜನಾಂಗ ಮತ್ತು ದೇಶಗಳ ಜನರು ದೇವರನ್ನು ನಿರಂತರವಾಗಿ ಎದುರು ನೋಡುತ್ತಿದ್ದಾರೆ. ಆದರೆ ಯಾರು ನಿಜವಾಗಿ ಯೇಸುಕ್ರಿಸ್ತನನ್ನು ನಂಬುತ್ತಾರೋ ಅವರು ಮಾತ್ರ ದೇವರನ್ನು ತಿಳಿದುಕೊಳ್ಳಬಹುದು. ಯೇಸುಕ್ರಿಸ್ತನು ಮಾತ್ರ ದೇವರ ನಿಜವಾದ ಸ್ವರೂಪವನ್ನು ತೋರಿಸಿದ್ದಾರೆ (ನೋಡಿರಿ : ಕೊಲಸ್ಸೆ 2:9 ಮತ್ತು ವ್ಯಾಖ್ಯಾನ). ದೇವರು ತನ್ನನ್ನು ಸಂಪೂರ್ಣವಾಗಿ ಯೇಸುಕ್ರಿಸ್ತನಲ್ಲಿ ಪ್ರಕಟಿಸಿಕೊಂಡಿದ್ದಾನೆ. ಯೇಸುಕ್ರಿಸ್ತನನ್ನು ಕಂಡುಕೊಂಡಾಗ ದೇವರನ್ನು ಕಂಡುಕೊಳ್ಳುತ್ತವೆ. ಕ್ರಿಸ್ತನನ್ನು ತಿರಸ್ಕರಿಸಿ ದೇವರನ್ನು ಎದುರು ನೋಡುವುದು ನಿರರ್ಥಕ.

**28** ಭಾರ (ಹೊರೆ) ಹೊತ್ತಂತಹ ಮತ್ತು ಕಷ್ಟ ಪಡುವಂತಹವರು ಪಶ್ಚಾತ್ತಾಪ ಪಟ್ಟು ತನ್ನ ಬಳಿಗೆ ಬರುವವರಿಗೆ ವಿಶ್ರಾಂತಿಯನ್ನು ಕೊಡುತ್ತೇನೆ ಎಂದು ಯೇಸುಕ್ರಿಸ್ತನು ವಾಗ್ದಾನ ಮಾಡುತ್ತಾನೆ. ಆತನು ಅವರ ಪಾಪದ ಭಾರವನ್ನು ತೆಗೆದುಬಿಡುತ್ತಾನೆ. ಆತನು ಕೊಡುವ **ವಿಶ್ರಾಂತಿಯು** ಆತ್ಮಿಕವಾದದ್ದು. ಇದು ಅಂತರ್ಯದಲ್ಲಿನ **ಶಾಂತಿಯಾಗಿದೆ.** ಇದು ಭಯದ ಮತ್ತು ವ್ಯಸನದ ಬಿಡುಗಡೆಯಾಗಿದೆ. **ಇದು ನಿನ್ನ ಆತ್ಮದ ವಿಶ್ರಾಂತಿಯಾಗಿದೆ** (ವಚನ 29). ಇದು ನಿರಂತರವಾಗಿರುವಂತಹ ವಿಶ್ರಾಂತಿಯಾಗಿದೆ (ನೋಡಿರಿ : ಹಿಬ್ರಿಯಾ 4:9-10).

ಪ್ರಾಪಂಚಿಕ ಮನುಷ್ಯನು ಧಾರ್ಮಿಕ ಸಂಸ್ಕಾರಗಳ ಮತ್ತು ಪುಣ್ಯ (ಒಳ್ಳೆಯ) ಕಾರ್ಯಗಳ ಮುಖಾಂತರ ಶಾಂತಿಯನ್ನು ಪಡೆಯಲು ಎದುರುನೋಡುತ್ತಾನೆ. ನಿಜವಾದ ಶಾಂತಿ ಸಮಾಧಾನವನ್ನು ಹೊಂದಿಕೊಳ್ಳಬೇಕಾದರೆ ನಿಜವಾದ ಶಾಂತಿದಾಯಕನಾದ ಯೇಸು ಕ್ರಿಸ್ತನ ಬಳಿಗೆ ಬರುವುದು ಅತ್ಯಗತ್ಯ. ಯೇಸು ಕ್ರಿಸ್ತನಿಂದ ಹೊರತು ಮತ್ತಾರಲ್ಲೂ, ಮತ್ತೆಲ್ಲೂ ನಿಜವಾದ ಶಾಂತಿ ಸಮಾಧಾನ ಕಂಡುಕೊಳ್ಳಲು ಸಾಧ್ಯವಾಗದು (ನೋಡಿರಿ : ಯೋಹಾನ 14:27 ಮತ್ತು ವ್ಯಾಖ್ಯಾನ).

ಯೇಸುಕ್ರಿಸ್ತನು ಕೊಡುವಂತಹ ಶಾಂತಿಯು ನಿಂತು ಹೋಗುವಂತಹ ಕ್ರಿಯೆಯೇನಲ್ಲ. ಇದು ಆನಂದಗಳಿಂದ ಮತ್ತು ಸ್ತೋತ್ರಗಳಿಂದ ತುಂಬಿರುವಂತದ್ದಾಗಿದೆ. ಇದು ಪ್ರೀತಿಯಿಂದ ಮತ್ತು ಅನ್ಯೋನ್ಯತೆಯಿಂದ ತುಂಬಲ್ಪಟ್ಟಿರುವಂತದ್ದಾಗಿದೆ. ಇದು ಸ್ವತಃ ದೇವರಿಂದ ತುಂಬಲ್ಪಟ್ಟಿರುವಂತದ್ದಾಗಿದೆ.

**29** **ನನ್ನ ನೊಗವನ್ನು ನಿಮ್ಮ ಮೇಲೆ ಹೊತ್ತುಕೊಳ್ಳಿರಿ** ಯಹೂದ್ಯರು ನೊಗ ಎಂಬಂತ ಧರ್ಮಶಾಸ್ತ್ರದಡಿಯಲ್ಲಿ ಜೀವಿಸುತ್ತಿದ್ದರು. ಈ ನೊಗವು ಬಲು ಭಾರವಾಗಿತ್ತು (ಮತ್ತಾಯ 23:4). ಇವರು ನೂರಾರು ನಿಬಂಧನೆಗಳಿಗೆ ವಿಧೇಯರಾಗಿ ಹಂಗಿನಲ್ಲಿದ್ದರು. ಒಂದು ವೇಳೆ ಅವರು ಯಾವುದಾದರೊಂದನ್ನು ಮೀರಿದರೆ ಇಡೀ ಧರ್ಮಶಾಸ್ತ್ರವನ್ನು ಮೀರಿದಂತೆಯೇ. ಯಾಕೋಬ 2:10. ಯಾವೊಬ್ಬ ಯಹೂದಿಯು ಕೂಡ ಧರ್ಮಶಾಸ್ತ್ರವನ್ನು ಪಾಲಿಸಲಿಕ್ಕೆ ಸಾಧ್ಯವಿರಲಿಲ್ಲ. (ಅ.ಕೃ. 15:10).

ಯೇಸುಕ್ರಿಸ್ತನು ಧರ್ಮಶಾಸ್ತ್ರವೆಂಬ ನೊಗದಿಂದ ಮುಕ್ತಿಗೊಳಿಸದನು. ಆದರೆ ಆತನು ಅವರಿಗೆ ಮತ್ತೊಂದು ರೀತಿಯ ನೊಗವನ್ನು ಕೊಟ್ಟನು. ಕ್ರಿಸ್ತನ "ನೊಗವು" ವಿಧೇಯತೆಯ ನೊಗವಾಗಿದೆ.ಆದರೆ ಈ ವಿಧೇಯತೆಯು ಧರ್ಮಶಾಸ್ತ್ರಕ್ಕಲ್ಲ ಆದರೆ ಸ್ವತಃ ಕ್ರಿಸ್ತನಿಗೆ. ಕ್ರಿಸ್ತನಿಗೆ ವಿಧೇಯನಾಗುವುದು ಕಷ್ಟವೇನಲ್ಲ. ಯಾಕೆಂದರೆ ಈತನು ನಮ್ಮ ಸ್ನೇಹಿತನು, ನಮ್ಮ ಕುರುಬನು, ರಕ್ಷಕನು ಆಗಿದ್ದಾನೆ. ಯಾರು ಕ್ರಿಸ್ತನನ್ನು ಪ್ರೀತಿಸುತ್ತಾರೋ ಅವರು ಈತನ ಆಜ್ಞೆಗಳನ್ನು ಕೈಕೊಂಡು ನಡೆಯಲು ಬಯಸುತ್ತಾರೆ (ಯೋಹಾನ 14:15).

**ಯೇಸುಕ್ರಿಸ್ತನು ಸಾತ್ವಿಕನು ಮತ್ತು ದೀನನು.** ನಾವು ಕಲಿಯುವುದರಲ್ಲಿ ನಿಧಾನಿಸಿದಾಗ ಈತನು ತಾಳ್ಮೆಗೆಡುವುದಿಲ್ಲ. ನಾವು ಮುಗ್ಗರಿಸಿದಾಗ (ಎಡವಿದಾಗ) ನಮ್ಮ ವಿಷಯದಲ್ಲಿ ಕಠಿಣನಾಗುವುದಿಲ್ಲ. **ಜಜ್ಜಿದ ದಂಟನ್ನು ಮುರಿದು ಹಾಕುವುದಿಲ್ಲ ಮತ್ತು ಆರಿಹೋಗುತ್ತಿರುವ ದೀಪವನ್ನು ನಂದಿಸುವುದಿಲ್ಲ.** (ಯೆಶಾಯ 42:3; ಮತ್ತಾಯ 12:20). ಇಂತಹ ಗುರುವಿನಿಂದ ಕಲಿಯದಿರಲು ಯಾರು ತಾನೆ ಇಷ್ಟಪಡುವುದಿಲ್ಲ?

**30** ಯೇಸು ಕ್ರಿಸ್ತನ ನೊಗವು ಸುಲಭವಾದದ್ದು (ಹಗುರವಾದದ್ದು). ಯೇಸುಕ್ರಿಸ್ತನ ಹಿಂಬಾಲಕರು ಸುಲಭವಾಗಿ ಜೀವಿಸುವರು ಎಂದರ್ಥವಲ್ಲ. ಕ್ರೈಸ್ತರ ಈ ಮಾರ್ಗವು ಇಕ್ಕಟ್ಟಾಗಿಯು ಮತ್ತು ಕಠಿಣವಾಗಿಯೂ ಇರುತ್ತದೆ. (ಮತ್ತಾಯ 7:13-14). ಆದರೆ ಕ್ರೈಸ್ತರ ನೊಗವು ಸುಲಭವಾಗಿದ್ದು ಆತನ ಭಾರವು ಹಗುರವಾದದ್ದು. ನಾವು ದಾಸತ್ವದ ನೊಗವೆಂದ ಧರ್ಮಶಾಸ್ತ್ರದಡಿಯಲ್ಲಿ ಶ್ರಮವನ್ನು ಪಡಬೇಕಿಲ್ಲ. (ನೋಡಿರಿ : ರೋಮ 8:2). ನಾವು ಪಾಪದ ಮತ್ತು ದುಃಖದ ಹಾಗೂ ಚಿಂತೆಯ ಭಾರವನ್ನು ಹೊತ್ತುಕೊಳ್ಳಬೇಕಿಲ್ಲ. ಕ್ರಿಸ್ತನು ನಮಗೆ ಸಹಾಯ ಮಾಡುತ್ತಾನೆ ಮತ್ತು ನಮ್ಮನ್ನು ಬಲಪಡಿಸುತ್ತಾನೆ. ನಾವು ಆತನನ್ನು ಹಿಂಬಾಲಿಸುತ್ತಿರುವಾಗ ಆತನು ನಮಗೆ ಆನಂದವನ್ನು ಕೊಡುತ್ತಾನೆ (ಯೋಹಾನ 15:11).

---

## ಅಧ್ಯಾಯ - 12

### ಸಬ್ಬತ್ ದಿನಕ್ಕೆ ಒಡೆಯ (12:1-8)

(ಮಾರ್ಕ 2:23-28; ಲೂಕ 6:1-5)

**1-8** ನೋಡಿರಿ ಮಾರ್ಕ 2:23-28 ಮತ್ತು ವ್ಯಾಖ್ಯಾನ

### ಒಬ್ಬನು ಸಬ್ಬತ್ ದಿನದಲ್ಲಿ ಗುಣಹೊಂದಿದ್ದು (12:9-14)

(ಮಾರ್ಕ 3:1-6; ಲೂಕ 6:6-11)

**9-14** ನೋಡಿರಿ ಮಾರ್ಕ 3:1-6, ಮತ್ತು ವ್ಯಾಖ್ಯಾನ

### ದೇವರಿಂದ ಆರಿಸಲ್ಪಟ್ಟ ಸೇವಕ (12:15-21)

**15-16** ನೋಡಿರಿ, ಮಾರ್ಕ 3:7-12 ಮತ್ತು ವ್ಯಾಖ್ಯಾನ.

**17** ತಾನು ಯಾರು ಎಂಬುದನ್ನು ಬೇರೆಯವರಿಗೆ ಹೇಳಬಾರದು ಎಂದು ತನ್ನಿಂದ ಗುಣ ಹೊಂದಿದವರಿಗೆ ಹೇಳಿದನು (ವಚನ 16). ಯಾಕೆ ಯೇಸುಕ್ರಿಸ್ತನು ತನ್ನ ಗುರುತನ್ನು ಗುಪ್ತವಾಗಿಡಲು ಬಯಸುತ್ತಾನೆ ಎಂಬುದನ್ನು ಮತ್ತಾಯನು ಯೆಶಾಯ 42:1-4ನೇ ವಚನವನ್ನು ಉಪಯೋಗಿಸಿಕೊಂಡು ವಿವರಿಸುತ್ತಾನೆ.

**18** ದೇವರು ಪ್ರವಾದಿಯಾದ ಯೆಶಾಯನ ಮುಖಾಂತರವಾಗಿ ಮಾತನಾಡುತ್ತಾ ಯೇಸುಕ್ರಿಸ್ತನ ಬಗ್ಗೆ **"ಈತನು ನಾನು ಆರಿಸಿಕೊಂಡ ನನ್ನ ಸೇವಕನು".** ಯೇಸುಕ್ರಿಸ್ತನು ಕೇವಲ ಮಗನೆಂದು ಮಾತ್ರ ಕರಸಿಕೊಳ್ಳಲ್ಪಡದೆ **ಸೇವಕನು** ಎಂದು ಸಹ ಕರೆಲಯಲ್ಪಟ್ಟನು. ದೇವರು ತನ್ನ ಆತ್ಮನನ್ನು ಈತನಲ್ಲಿಟ್ಟನು. (ಮಾರ್ಕ 1:10-11, ಯೋಹಾನ 3:34). ಕ್ರಿಸ್ತನು **ಎಲ್ಲಾ ದೇಶಗಳಿಗೆ ನ್ಯಾಯವನ್ನು ಸಾರುತ್ತಾನೆ.** ಅಂದರೆ ಯಹೂದ್ಯರು ಮತ್ತು ಅನ್ಯ ಜನಾಂಗಗಳಿಗೆ ಸಹಿತವಾಗಿ ಎಲ್ಲ ಜನಾಂಗಗಳಿಗೆ ಯೇಸುಕ್ರಿಸ್ತನು ಭೂಮಿಯಲ್ಲಿ ದೇವರ ನ್ಯಾಯ ಮತ್ತು ನೀತಿಯನ್ನು ಸ್ಥಾಪಿಸುವುದಕ್ಕಾಗಿ ಬಂದನು.

**19** ಆದರೆ ಯೇಸು ಕ್ರಿಸ್ತನು **ಜಗಳ ಅಥವಾ ಕೂಗಾಡುವುದಿಲ್ಲ.** ಯೇಸುಕ್ರಿಸ್ತನು ಪ್ರಾಪಂಚಿಕ ರಾಜನಾಗಿ ತನ್ನ ವೈರಗಳನ್ನು ಸೋಲಿಸಲು ಬರಲಿಲ್ಲ. ಆತನು ವಾಗ್ವಾದಗಳನ್ನು ಎದುರು ನೋಡಲಿಲ್ಲ. ಬಲದಿಂದ ರಾಜ್ಯಸ್ಥಾಪನೆಯ ನಿರೀಕ್ಷೆಯನ್ನಿಟ್ಟುಕೊಂಡು ಬರಲಿಲ್ಲ. ಆತನು ತೋರಿಸಿಕೊಳ್ಳದೆ ನಿಶ್ಯಬ್ದವಾಗಿ ಬಂದನು. ಆತನ ರಾಜ್ಯವು ಗೋಚರವಾಗಿರದೆ, ಮನುಷ್ಯನ ಹೃದಯದಲ್ಲಿರುವಂತಹುದು (ನೋಡಿರಿ 17:20-21 ಮತ್ತು ವ್ಯಾಖ್ಯಾನ). ಯೇಸುಕ್ರಿಸ್ತನು, ದೇವರ ಆಡಳಿತವನ್ನು ಮನುಷ್ಯರ ಹೃದಯಗಳಲ್ಲಿ ಸ್ಥಾಪಿಸಲು ಬಂದನು.

ಆದಾಗ್ಯೂ ಯಹೂದ್ಯರು ತಮ್ಮ ಮೆಸ್ಸಿಯನು ಭೂಲೋಕದ ರಾಜನಂತೆ ಇರುವನು ಎಂದು ನಂಬಿದ್ದರು. ಈ ಕಾರಣದಿಂದಲೆ ತಾನೇ ಮೆಸ್ಸಿಯನು ಎಂಬ ವಿಷಯವು ಪ್ರತಿಯೊಬ್ಬರಿಗೂ ಗೊತ್ತಾಗಬಾರದೆಂದು ಕ್ರಿಸ್ತನು ಬಯಸಿದನು. ಇಲ್ಲದಿದ್ದರೆ ಜನರು ಯೇಸುಕ್ರಿಸ್ತನನ್ನು ರಾಜನನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದರು. ಆತನನ್ನು ಶಿಲುಬೆಗೆ ಹಾಕುವುದಕ್ಕೆ ತಡೆಯನ್ನುಂಟುಮಾಡುತ್ತಿದ್ದರು.ಆತನು ಜನರಿಗೆ ತನ್ನ ಪ್ರಾಣವನ್ನು ಈಡು ಕೊಡುವಂತಹ ಕಾರ್ಯವನ್ನು ಈ ಜನರು ನಿಲ್ಲಿಸುತ್ತಿದ್ದರು (ಮಾರ್ಕ 10:45). ಹೀಗೆ ಇದು ಮನುಷ್ಯ ರಕ್ಷಣೆಗಾಗಿ ದೇವರು ಮಾಡಿರುವ ಯೋಜನೆಯ ನೆರವೇರುವಿಕೆಗೆ ಅಡ್ಡಿಯಾಗುತ್ತಿತ್ತು. (ನೋಡಿರಿ, ಮಾರ್ಕ 1:34, 3:12 5:43 ಮತ್ತು ವ್ಯಾಖ್ಯಾನ. ).

**20-21** ಯೇಸುಕ್ರಿಸ್ತನು ಬಲವಂತವಾಗಿ ಬರದೆ, ಸಾತ್ವಿಕನಾಗಿ (ದೀನತೆಯಿಂದ) ಬಂದನು (ಮತ್ತಾಯ 11:29). **ಆತನು ಜಜ್ಜಲ್ಪಟ್ಟ ದಂಟನ್ನು ಮುರಿದು ಹಾಕಲಿಲ್ಲ.** ಒಬ್ಬನು ಪಾಪದಿಂದ ಜಜ್ಜಲ್ಪಟ್ಟು ಮತ್ತು ಬಲಹೀನನಾಗಿ ಸೋತು, ನಿರಾಸೆಯಿಂದಿರುವಾಗ ಕ್ರಿಸ್ತನು ಅವನನ್ನು ಬಲಪಡಿಸುವನು ಮತ್ತು ಪುನಶ್ಚೇತನಗೊಳಿಸುವನು. ಇಂತಹ ವ್ಯಕ್ತಿಯು ಕ್ರಿಸ್ತನ ಬಳಿಗೆ ಬರುವುದಾದರೆ, ಕ್ರಿಸ್ತನು ಇವನನ್ನು ಮುರಿಯುವುದಿಲ್ಲ ಮತ್ತು ತಿರಸ್ಕರಿಸುವುದಿಲ್ಲ. ....... **ನನ್ನ ಬಳಿಗೆ ಬರುವವರನ್ನು ನಾನು ಎಂದಿಗೂ ತಳ್ಳಿಬಿಡುವುದೇ ಇಲ್ಲ** ಎಂದು ಯೇಸುಕ್ರಿಸ್ತನು ಹೇಳಿದನು (ಯೋಹಾನ 6:37).

**ಆರಿ ಹೋಗುತ್ತಿರುವ ದೀಪವನ್ನು ಆತನು ನಂದಿಸುವುದೇ ಇಲ್ಲ.** ಕ್ರಿಸ್ತನು ಬಲಹೀನತೆಯ ನಂಬಿಕೆಯಿಂದ ಕೂಡಿದ ವ್ಯಕ್ತಿಯನ್ನು ದಂಡಿಸುವುದಿಲ್ಲ.

ಯೇಸುಕ್ರಿಸ್ತನು ಕಡೆಯಲ್ಲಿ ಸೈತಾನನನ್ನು ಸಂಪೂರ್ಣವಾಗಿ ಜಯಿಸುತ್ತಾನೆ. **ಕ್ರಿಸ್ತನು ನ್ಯಾಯವನ್ನು ನಡೆಸಿ ಜಯವನ್ನುಂಟು ಮಾಡು ತ್ತಾನೆ.** ಆತನು ಬಿದ್ದು ಹೋದವರನ್ನು ಎಬ್ಬಿಸುತ್ತಾನೆ. **ಆತನು ತು ಳಿ ಯ ಲ್ಪಟ್ಟವರನ್ನು ಬಿಡಿಸುತ್ತಾನೆ** (ಲೂಕ 4:18). ದೇವರ ಕಡೆಗೆ ತಿರುಗಿದಂತಹ ಮತ್ತು ನಂಬಿದಂತಹವರೆಲ್ಲರಿಗೆ ರಕ್ಷಣೆಯನ್ನು ತರುತ್ತಾನೆ. ಎಲ್ಲ **ಜನಾಂಗಗಳವರು ಕ್ರಿಸ್ತನ ಮೇಲೆ ನಿರೀಕ್ಷೆಯ ನ್ನಿಡು ವರು. (ವಚನ 21).**

## ಯೇಸುಕ್ರಿಸ್ತನು ಮತ್ತು ಬೆಲ್ಜೆಬೂ ಲನು (12:22-32)

(ಮಾರ್ಕ 3:20-30; ಲೂಕ 11:14-23; 12:10)

**22-32** ನೋಡಿರಿ, ಮಾರ್ಕ 3:20-30 ಮತ್ತು ವ್ಯಾಖ್ಯಾನ.

## ಮ ರ ಮತ್ತು ಅದರ ಫಲವು (12:33-37)

(ಮತ್ತಾಯ 7:16-18; ಲೂಕ 6:43-45)

**33-35** ಒಬ್ಬ ಮನುಷ್ಯನ ಹೃದಯದಂತೆಯೇ ಆತನ ಕೃತ್ಯಗಳು ಮತ್ತು ಮಾತುಗಳು ಇರುತ್ತವೆ. ಯೇಸುಕ್ರಿಸ್ತನು ಪರಿಸಾಯರನ್ನು ವಿಷಸರ್ಪಗಳೆಂದು ಕರೆದನು. ಯಾಕೆಂದರೆ ಅವರು ಮೊದಮೊದಲು ಒಳ್ಳೆಯವರಂತೆ ಕಂಡರೂ ಸಹ ಅವರ ಹೃದಯಗಳು ವಿಷದಿಂದಲೂ ಮತ್ತು ಅವರ ಮಾತುಗಳು ಕೂಡ ವಿಷದಿಂದ ಕೂಡಿರುತ್ತಿದ್ದವು. ಕೆಟ್ಟ ಮರವು ಕೆಟ್ಟ ಹಣ್ಣುಗಳನ್ನು ಉತ್ಪತ್ತಿ ಮಾಡಿದಂತೆಯೇ, ದುಷ್ಟ ಹೃದಯವು ಕೆಟ್ಟದ್ದನ್ನು ಮತ್ತು ಕೆಟ್ಟ ಮಾತುಗಳನ್ನು ಉತ್ಪತ್ತಿ ಮಾಡುತ್ತದೆ. ಮರವು ತನ್ನ ಫಲದಿಂದ ಗುರುತಿಸಲ್ಪಡುತ್ತದೆ (ನೋಡಿರಿ 7:16-18; ಯಾಕೋಬ 3:10-12, ಮತ್ತು ವ್ಯಾಖ್ಯಾನ).

**36** **ಸುಮ್ಮನೆ ಆಡು ವ** ಪ್ರತಿಯೊಂದು ಮಾತಿನ ವಿಷಯವಾಗಿ ನ್ಯಾಯ ವಿಚಾರಣೆಯ ದಿನದಲ್ಲಿ ಉತ್ತರ ಕೊಡಬೇಕು ಎಂದು ಇಲ್ಲಿ ಕ್ರಿಸ್ತನು ನಿಷ್ಠುರವಾದ ಎಚ್ಚರಿಕೆಯನ್ನು ಕೊಡುತ್ತಾನೆ.ನ್ಯಾಯತೀರ್ಪಿನ ದಿನದ ಬಗ್ಗೆ ನಾವು ಹೆಚ್ಚು ಆಲೋಚಿಸುವುದಿಲ್ಲ. ದೇವರು ನಾವು ಮಾಡುವಂತಹ ಪ್ರತಿಯೊಂದು ಅಂದರೆ ಚಿಕ್ಕದು ಮತ್ತು ದೊಡ್ಡದಾಗಿರುವ ಅಥವಾ [53]ಕೆಟ್ಟದ್ದು ಮತ್ತು ಒಳ್ಳೆಯದು ಆಗಿರುವಂತಹವುಗಳನ್ನೆಲ್ಲಾ ನೆನಪಿನಲ್ಲಿಟ್ಟುಕೊಳ್ಳುತ್ತಾನೆ (ಮತ್ತಾಯ 25:31-46).

ಪ್ರತಿಯೊಂದು **ತಾತ್ಸಾರದ ಮಾತುಗಳನ್ನು** ಕೂಡ ಆತನು ನೆನಪಿಡುತ್ತಾನೆ. ನಾವು ಈ ಜೀವಿತದಲ್ಲಿ ಮಾಡಿದ ಕೃತ್ಯಗಳಿಗನುಸಾರವಾಗಿ ನಾವು ನಿತ್ಯತ್ವದಲ್ಲಿ ಪ್ರತಿಫಲವನ್ನು ಪಡೆಯುವೆವು (ನೋಡಿರಿ 2ನೇ ಕೊರಿಂಥ 5:10 ಮತ್ತು ವ್ಯಾಖ್ಯಾನ). ಮನುಷ್ಯನ ತಾತ್ಸಾರದ ಮಾತುಗಳಿಂದ ಇವನ ಹೃದಯವು ಬಹಿರಂಗವಾಗುವುದು. ಆಲೋಚನೆ ಮಾಡದಿರುವಾಗಲೂ ಈ ಮಾತುಗಳು, ತಮ್ಮಷ್ಟಕ್ಕೆ ತಾವೇ ಬಾಯಿಂದ ಹೊರಬರುತ್ತವೆ. ದುಷ್ಟರು ಮತ್ತು ಕಪಟಿಗಳು, ಅಭ್ಯಾಸ ಮಾಡಿದವರಿಗೆ ಸಮಾನವಾಗಿ ಪ್ರಸಂಗಿಸುವರು ಮತ್ತು ಪದೇ ಪದೇ ಪ್ರಾರ್ಥಿಸುವರು. ಇವರು ಪ್ರಯತ್ನಪೂರ್ವಕವಾಗಿ ಎಲ್ಲಾ ಒಳ್ಳೆಯ ಮಾತುಗಳನ್ನು ಮಾತನಾಡಬಹುದು. ಆದರೆ ಇವರ ತಾತ್ಸಾರದ ಮಾತುಗಳು ಇವರ ಅಂತರ್ಯದ ಆಲೋಚನೆಗಳನ್ನು ಹೊರಗೆಡುಹುತ್ತದೆ. (ನೋಡಿರಿ, ಯಾಕೋಬ 3:10-12). ಒಂದು ವೇಳೆ ನಮ್ಮ ಹೃದಯದಲ್ಲಿ ದುಷ್ಟತ್ವವು ಇರುವಲ್ಲಿ ತಕ್ಷಣದಲ್ಲಿ ಅಥವಾ ನಂತರದಲ್ಲಿ ನಮ್ಮ ಮಾತುಗಳ ಮೂಲಕ ಪ್ರಕಟವಾಗುತ್ತದೆ (ವಾಕ್ಯ 34).

**37** ಯೇಸುಕ್ರಿಸ್ತನು ಹೇಳಿದಂತೆ ನ್ಯಾಯತೀರ್ಪಿನ ದಿನದಲ್ಲಿ ನಮ್ಮ ಹೃದಯದ ಮಾತುಗಳು ಬಹಿರಂಗವಾಗುವುವು ಮತ್ತು ನಮ್ಮ ಮಾತುಗಳಿಗೆ ತಕ್ಕಂತೆ ಸರಿಯಾಗಿ ನಮ್ಮನ್ನು ನೀತಿವಂತರೆಂದಾಗಲಿ, ಅಪರಾಧಿಗಳೆಂದಾಗಲಿ ತೀರ್ಪುನೀಡಲಾಗುವುದು. ದೇವರು ನ್ಯಾಯ ತೀರಿಸುವಾಗ ನಮ್ಮ ಹೃದಯಗಳನ್ನೇ ನೋಡುತ್ತಾನೆ. ಈ ನಿರ್ಲಕ್ಷ ಭಾವದ ಮಾತುಗಳು ಹೃದಯದಿಂದ ಹೊರಡುವುವು. ಒಳ್ಳೆಯ ಹೃದಯವು ಒಳ್ಳೆಯ ಮಾತುಗಳನ್ನು ಮತ್ತು ಕೆಟ್ಟ ಹೃದಯವು ಕೆಟ್ಟ ಮಾತುಗಳನ್ನು ಉತ್ಪತ್ತಿ ಮಾಡುತ್ತದೆ. ಆದುದರಿಂದ ದೇವರು ನಮ್ಮ ಮಾತುಗಳಿಂದಲೇ ನಮ್ಮ ಹೃದಯಗಳ ಬಗ್ಗೆ ತೀರ್ಪು ಕೊಡಲು ಶಕ್ತನು.

ನಾವು ನಮ್ಮ ತಾತ್ಸಾರದ ಮಾತುಗಳನ್ನು ನಿಯಂತ್ರಣದಲ್ಲಿಡುವುದು ಹೇಗೆ? ನಮ್ಮ ಹೃದಯಗಳನ್ನು ಸರಿಪಡಿಸಿಕೊಂಡು ಇವುಗಳನ್ನು ನಿಯಂತ್ರಣದಲ್ಲಿಡಬಹುದು. ನಮ್ಮ ಹೃದಯವು ಸರಿಯಾದರೆ ನಾವು ಆಡುವ ಮಾತುಗಳು ಸಹ ಸರಿಯಾಗುವುವು.

## ಯೋನನ ಸೂಚನೆ (12:38-45)

(ಮಾರ್ಕ 8:11-12; ಲೂಕ 11:24-26; 29-32)

**38-39** ನೋಡಿರಿ. ಮಾರ್ಕ 8:11-12 ಮತ್ತು ವ್ಯಾಖ್ಯಾನ.

**40** ನೀನು ಮೆಸ್ಸಿಯನೇ ಎಂದು ನಿರೂಪಿಸುವುದಕ್ಕಾಗಿ ಒಂದು ಸೂಚಕ ಕಾರ್ಯವನ್ನು ಮಾಡು ಎಂದು ಯಹೂದಿ ನಾಯಕರು ಯೇಸುಕ್ರಿಸ್ತನನ್ನು ಕೇಳುವಾಗ ಆತನು **ಪ್ರವಾದಿಯಾದ ಯೋನನ** ಸೂಚನೆಯ ಗುರುತನ್ನು ಉದಾಹರಣೆಯನ್ನಾಗಿ ಅವರಿಗೆ ಕೊಡುತ್ತಾನೆ. (ವಚನ 39). ಯೋನನು ಹಳೆ ಒಡಂಬಡಿಕೆಯ ಪ್ರವಾದಿಯಾಗಿದ್ದಾನೆ. ದುಷ್ಟತನದಿಂದ ಕೂಡಿದ ನಿನವೆ ಪಟ್ಟಣದ ಜನರು ತಮ್ಮ ಪಾಪಗಳಿಂದ ತಿರುಗಬೇಕು ಎಂದು ಹೇಳುವುದಕ್ಕಾಗಿ ಯೋನನನ್ನು ದೇವರು ಕಳುಹಿಸುತ್ತಾನೆ.ಆದರೆ ಯೋನನು ದೇವರಿಗೆ ಅವಿಧೇಯನಾದನು ಮತ್ತು ಹಡಗನ್ನು ಹತ್ತಿ ದೇವರು ಸೂಚಿಸಿದ ಪಟ್ಟಣಕ್ಕೆ ಬದಲಾಗಿ ಬೇರೊಂದು ಪಟ್ಟಣಕ್ಕೆ ಹೊರಟನು. ಆದರೆ ಭಯಂಕರವಾದ ಚಂಡಮಾರುತ ಸಮುದ್ರದ ಮೇಲೆ ಬಂದಿತು ಮತ್ತು ಯೋನನು ಒತ್ತಡಕ್ಕೊಳಗಾಗಿ ತಾನು ಅವಿಧೇಯನಾದನೆಂದು ದೇವರಲ್ಲಿ ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಾನೆ. ಯೋನನ ನಿಮಿತ್ತವಾಗಿ ದೇವರ ಶಾಪದಿಂದ ಬಿರುಗಾಳಿಯು ಬಂದಿದೆಯೆಂದು ಹಡಗಿನ ನಾವಿಕರು ಭಾವಿಸಿ, ಹಡಗನ್ನು ರಕ್ಷಿಸುವುದಕ್ಕೋಸ್ಕರವಾಗಿ ಆತನನ್ನು ಹಡಗಿನಿಂದ ಸಮುದ್ರದೊಳಕ್ಕೆ ಎಸೆದರು. ಒಂದು **ದೊಡ್ಡ ಮೀನು** ಯೋನನನ್ನು ನುಂಗಿತು ಮತ್ತು ಮೂರು ದಿನಗಳವರೆಗೆ ಮೀನಿನ ಹೊಟ್ಟೆಯೊಳಗೆ ಇದ್ದನು (ಯೋನ 1:1-17). ಇದೇ ರೀತಿಯಾಗಿ, ಯೇಸು ಕ್ರಿಸ್ತನು ಹತ್ಯೆಯಾದ ನಂತರ **ಭೂಮಿ ಯ ಗರ್ಭದಲ್ಲಿ**[54] ಮೂರು ದಿನಗಳವರೆಗೆ ಇರುವನು. ಆದುದರಿಂದ ಪ್ರವಾದಿಯು ಯೋನನ ಸೂಚನೆಯ ಅರ್ಥ. ಯೇಸುಕ್ರಿಸ್ತನು ಸಾಯುವನು ಮತ್ತು ಮೂರು ದಿನದ ನಂತರ ಮರಣದಿಂದ ಎದ್ದು ಬರುವನು ಎಂಬುದಕ್ಕೆ ಗುರುತಾಗಿದೆ. ಯೇಸುಕ್ರಿಸ್ತನು ನಿಜವಾದ ಮೆಸ್ಸಿಯನೆಂಬುದಕ್ಕೆ ಯಹೂದ್ಯರಿಗೆ ಇದು ಒಂದು ಸೂಚನೆಯಾಗಿತ್ತು.

**41** ದೇವರು, ಆ ದೊಡ್ಡ ಮೀನು ಯೋನನನ್ನು ಕಾರುವಂತೆ ಮಾಡಿದನು. (ಯೋನ 2:10). ಆಮೇಲೆ ದೇವರು ಮತ್ತೆ ಯೋನನು ನಿನವೆ ಪಟ್ಟಣಕ್ಕೆ ಹೋಗಬೇಕೆಂದು ಆಜ್ಞೆಯನ್ನು ಮಾಡುತ್ತಾನೆ ಮತ್ತು ಈ ಸಲ ಯೋನನು ವಿಧೇಯನಾದನು. ಜನರು ಯೋನನ ಬೋಧನೆಗಳನ್ನು ಕೇಳಿದರು ಮತ್ತು ಪಶ್ಚಾತ್ತಾಪ ಪಟ್ಟರು ಹಾಗೂ ದೇವರನ್ನು ನಂಬಿದನು. ಆದುದರಿಂದ ದೇವರು ಯೋಜಿಸಿದ ಶಿಕ್ಷೆಯನ್ನು ಕೈಬಿಟ್ಟು ಅವರನ್ನು ಉಳಿಸಿದನು. (ಯೋನ 3:1-10). ಹೀಗೆ ನ್ಯಾಯತೀರ್ಪಿನ ಕಡೆಯ ದಿನದಲ್ಲಿ ನಿನೆವೆಯ ಜನರು ರಕ್ಷಿಸಲ್ಪಡುವರು. ದೇವರಿಂದ ನೀತಿವಂತರೆಂದು ಎಣಿಸಲ್ಪಡುವರು. ಯಾಕೆಂದರೆ ಅವರು ಪಶ್ಚಾತ್ತಾಪ ಪಟ್ಟರು ಮತ್ತು ನಂಬಿದರು. ನಿನವೆಯ ಜನರು ತಮ್ಮ ಮಾದರಿಯಿಂದ, ತಮ್ಮ ನೀತಿಯಿಂದ, ಯೇಸುಕ್ರಿಸ್ತನ ಕಾಲದಲ್ಲಿ ಅನೀತಿಯಿಂದಿರುವ ಯಹೂದ್ಯರಿಗೆ ಬೆಳಕನ್ನು ಕೊಡುವಂತಹ ಮತ್ತು ಯೇಸುಕ್ರಿಸ್ತನಿದ್ದ ಕಾಲದ ಯಹೂದ್ಯರನ್ನು ಅಪರಾಧಿಗಳೆಂದು ಘೋಷಿಸುವರೆಂದು ಯೇಸುಕ್ರಿಸ್ತನು ಹೇಳುತ್ತಾನೆ. ಯೋನನ ಬೋಧನೆಯ ನಿಮಿತ್ತ ಅಲ್ಲಿಯೇ ನಿನವೆಯ ಪಟ್ಟಣದ ಜನರು ಪಶ್ಚಾತ್ತಾಪ ಪಡುತ್ತಾರೆ. ಈಗ **ಯೋನನಿಗಿಂತಲೂ ದೊಡ್ಡವನಾದ** ಮೆಸ್ಸಿಯನು ಸ್ವತಃ ತಾನೇ ಬಂದಿದ್ದಾನೆ ಮತ್ತು ಆಗಲೂ ಸಹ ಯಹೂದ್ಯರು ಪಶ್ಚಾತ್ತಾಪಪಡಲು ಸಮ್ಮತಿಸಲಿಲ್ಲ. ಈ ಕಾರಣದ ನಿಮಿತ್ತವಾಗಿಯೆ ಯೇಸುಕ್ರಿಸ್ತನು ಯಹೂದ್ಯರನ್ನು **ದುಷ್ಟರು ಮತ್ತು ವ್ಯಭಿಚಾರದ ಕೆಟ್ಟ ಸಂತತಿಯವರು** ಎಂದು ಅವರನ್ನು ಕರೆದನು ( ವಚನ.39). ಇವರು ಕೆಟ್ಟ ಹೃದಯವುಳ್ಳವರಾಗಿದ್ದರಿಂದ ಇವರು ದುಷ್ಟರಾಗಿದ್ದರು ಮತ್ತು ತಮ್ಮ ನಿಜವಾದ ಧರ್ಮದ ಪತಿಯನ್ನು ತೋರದಿದ್ದರಿಂದ ಇವರು ವ್ಯಭಿಚಾರಿಗಳಾದರು ಮತ್ತು ಈ ಲೋಕದ ಜೊತೆ ಸಾಗಿದರು.

**42** **ದಕ್ಷಿಣ ದೇಶದ ರಾಣಿಯೂ** ಯೇಸುಕ್ರಿಸ್ತನಿದ್ದ ಕಾಲದ ಯಹೂದ್ಯರ ಈ ಸಂತಾನದವರಿಗೂ ಸಹ ನ್ಯಾಯ ತೀರಿಸುವಳು.

ಅರಸನಾದ **ಸೊಲೊಮೋನನ**[55] **ಜ್ಞಾನವನ್ನು** ಅರಿಯಲು ಬಂದಂತಹ ಈ ರಾಣಿಯು ಶೀಬಾ ದೇಶದ (ಅರೇಬಿಯಾದ ಒಂದು ಭಾಗ) ರಾಣಿಯಾಗಿದ್ದಳು. ಇವಳು ಸೊಲೊಮೋನನಿಂದ ಸತ್ಯವನ್ನು ತಿಳಿದುಕೊಂಡಳು (1 ಅರಸು 10:1-13). ಆದರೆ ಸೊಲೊಮೋನನಿಗಿಂತ ಹೆಚ್ಚಿನವನಾದ ಯೇಸುಕ್ರಿಸ್ತನನ್ನು ಯಹೂದ್ಯರು ನಿರೀಕ್ಷಿಸಲಿಲ್ಲ. ಆದುದರಿಂದ ದಕ್ಷಿಣ ದೇಶದ ಈ ರಾಣಿಯು ಸಹ ನ್ಯಾಯತೀರ್ಪಿನ ಕಡೆಯ ದಿನದಲ್ಲಿ ಯಹೂದ್ಯರನ್ನು ತಪ್ಪಿತಸ್ಥರೆಂದು ನಿರೂಪಿಸುವಳು.

**43** ದುರಾತ್ಮವು ಒಬ್ಬ ವ್ಯಕ್ತಿಯಿಂದ ಹೊರ ದಬ್ಬಲ್ಪಡುವಾಗ ಮತ್ತೊಬ್ಬನಲ್ಲಿ ಪ್ರವೇಶಿಸಲು ಹಿಂದಿರುಗಿ ಬರುವುದು (ನೋಡಿರಿ: ಮಾರ್ಕ 5:8-12). ಒಂದು ವೇಳೆ ಸ್ಥಳವು ದೊರೆಯದೆ ಇದ್ದಾಗ ನೀರಿಲ್ಲದ **ಹಾಳು ಬಾವಿಗೆ** ಹೋಗಿ ಅಲ್ಲಿಯೇ ಕಾದು ಮತ್ತೊಬ್ಬ ಹೊಸ ವ್ಯಕ್ತಿಯು ಸಿಕ್ಕಾಗ ಪ್ರವೇಶಿಸಲು ತಿರುಗಿ ಬರುತ್ತದೆ.

**44-45** ಆದರೂ ಸಹ ದುರಾತ್ಮವು ತಾನು ಬಿಟ್ಟು ಬಂದ ವ್ಯಕ್ತಿಯಲ್ಲಿ ಇರಲು ಮತ್ತೆ ಹಿಂದಿರುಗಿ ಬರುತ್ತದೆ. ಒಂದು ವೇಳೆ ಅದು ಅವನ ಬಳಿ ಮತ್ತೆ ಬಂದಾಗ ಆ ವ್ಯಕ್ತಿಯು **ಬರಿದಾಗಿದ್ದು ಮತ್ತು ಗುಡಿಸಿ ಚೊಕ್ಕಟವಾಗಿರುವುದನ್ನು** (**ವಚನ.44**) ನೋಡಿ, ಪುನಃ ಅವನಲ್ಲಿಯೇ ವಾಸಿಸಲು ಪ್ರವೇಶಿಸುತ್ತದೆ ಮತ್ತು ಹಾಗೆಯೇ ಇನ್ನು ಅನೇಕ ದುರಾತ್ಮಗಳು ಸಹ ಒಂದು ಸೇರಿಕೊಳ್ಳಬಹುದು.

ಈ ಬೋಧನೆಯ ಅರ್ಥವು ಹೀಗೆ ಇರುತ್ತದೆ. ಒಬ್ಬ ಮನುಷ್ಯನು ಯೇಸುಕ್ರಿಸ್ತನ ಬಳಿಗೆ ಬರುತ್ತಾನೆ ಮತ್ತು ತನ್ನ ಪಾಪದ ಬಗ್ಗೆ ಪಶ್ಚಾತ್ತಾಪ ಪಡುತ್ತಾನೆ. ಹಾಗೂ ಕ್ರಿಸ್ತನು ಅವನನ್ನು ಕ್ಷಮಿಸುತ್ತಾನೆ. ಯೇಸುವು ಅವನನ್ನು ಶುದ್ಧೀಕರಿಸುವನು. ಆತನ ಪಾಪವನ್ನು ಹೊರದಬ್ಬುತ್ತಾನೆ. ನಾವು ಪಶ್ಚಾತ್ತಾಪ ಪಡುವಾಗ ಕ್ರಿಸ್ತನು ದುರಾತ್ಮಗಳನ್ನು ಹೊರಹಾಕಿದಂತೆಯೇ ಆತನು ನಮ್ಮಲ್ಲಿರುವ ಸ್ವಾರ್ಥತೆ ಮತ್ತು ಅಹಂಕಾರಗಳೆಂಬ ದುರಾತ್ಮಗಳನ್ನು ನಮ್ಮಿಂದ ಹೊರ ಹಾಕುತ್ತಾನೆ. ಆದಾಗ್ಯೂ ಅನೇಕ ಜನರು

ಸ್ನಾನಿಕನಾದ ಯೋಹಾನನ ಮತ್ತು ಯೇಸುಕ್ರಿಸ್ತನ ಬಳಿಗೆ ಬಂದು. ಮತ್ತು ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪ ಪಟ್ಟರು. ಆದರೆ ತಕ್ಷಣ ಅವರು ಬಿದ್ದು ಹೋದರು. ಯಾಕೆ? ಯಾಕೆಂದರೆ, ಅವರು ಪವಿತ್ರಾತ್ಮನನ್ನು ಹೊಂದಿರಲಿಲ್ಲ. ಪಾಪವೆಂಬ ಆತ್ಮನು ಅವರಿಂದ ಹೊರಗೆ ಹೋಗಿದ್ದನು. ಆದರೆ ಪವಿತ್ರಾತ್ಮನು ಅವರಲ್ಲಿ ಬಂದಿರಲಿಲ್ಲ. ಅವರ "ಮನೆಯು" ಗುಡಿಸಿ ಶೃಂಗರಿಸಲ್ಪಟ್ಟು ಬರಿದಾಗಿತ್ತು. ಅವರು ಪಶ್ಚಾತ್ತಾಪದಿಂದ ಉಂಟಾದ ಫಲಗಳನ್ನು ಅವರು ಇನ್ನು ತಂದಿರಲಿಲ್ಲ. (ಮತ್ತಾಯ 3:8).ಅವರ ನಂಬಿಕೆಯು ಬೆಳೆದಿರಲಿಲ್ಲ. ಮತ್ತು ಹಾಗೆಯೆ ಹಳೆಯ ಸ್ವಾರ್ಥವೆಂಬ ಮತ್ತು ಪಾಪವೆಂಬ ಆತ್ಮನು ಹಿಂದಿರುಗಿ ಬಂದನು.

ಮತ್ತು ಆ ಮನುಷ್ಯನ ಕಡೇ ಸ್ಥಿತಿಯು ಮೊದಲಿಗಿಂತಲೂ ಕೆಟ್ಟದ್ದಾಗಿರುವುದು. ಇಂತಹ ಜನರು ಯೇಸುಕ್ರಿಸ್ತನ ಆಶೀರ್ವಾದದ ರುಚಿಯನ್ನು ಅನುಭವಿಸಿರುತ್ತಾರೆ. ಆದರೆ ಕಡೆಯಲ್ಲಿ ಆತನನ್ನು ತಿರಸ್ಕರಿಸುತ್ತಾರೆ. ಇಂತಹ ಜನರನ್ನು ತಿರುಗಿ ಪಶ್ಚಾತ್ತಾಪಕ್ಕೆ ತರಲು ಸಾಧ್ಯವಾಗದು. (ಹಿಬ್ರಿಯಾ 6:4-6, 2ನೇ ಪೇತ್ರ 2:20 ಮತ್ತು ವ್ಯಾಖ್ಯಾನವನ್ನು ನೋಡಿರಿ).

## ಯೇಸು ಕ್ರಿಸ್ತನ ತಾಯಿ ಯು ಮತ್ತು ಸಹೋದರರು (12:46-50)

(ಮಾರ್ಕ 3:31-35; ಲೂಕ 8:19-21)

**46-50** ಮಾರ್ಕ 3:31-35 ಮತ್ತು ವ್ಯಾಖ್ಯಾನವನ್ನು ನೋಡಿರಿ.

---

# ಅಧ್ಯಾಯ - 13

## ಬಿತ್ತುವವನ ಸಾಮ್ಯ (13:1-23)

(ಮಾರ್ಕ 4:1-20; ಲೂಕ 8:4-15)

**1-23** ಮಾರ್ಕ 4:1-20 ಮತ್ತು ವ್ಯಾಖ್ಯಾನ ನೋಡಿರಿ.

## ಕಳೆಯ ಸಾಮ್ಯ (13:24-30)

**24-30** ಸ್ವರ್ಗ ರಾಜ್ಯದ ವಿಷಯವಾಗಿ, ಈ ಅಧ್ಯಾಯಗಳಲ್ಲಿರುವ ಐದು ಸಾಮ್ಯಗಳಲ್ಲಿ ಇದು ಮೊದಲನೆಯದು. ಈ ಕಳೆಯ ಸಾಮ್ಯದಲ್ಲಿ ಸ್ವರ್ಗದ ರಾಜ್ಯವು ಭೂಮಿಯ ಹೊಲದಲ್ಲಿ ಒಳ್ಳೆಯ ಬೀಜಗಳನ್ನು ಬಿತ್ತನೆ ಮಾಡಿದ ರೈತನಿಗೆ (ಒಕ್ಕಲಿಗನಿಗೆ) ಹೋಲಿಕೆಯಾಗಿದೆ.(ವಚನ 24). ಆದರೆ ವೈರಿಯಾದಂತಹವನು ಸಹ ಅದೇ ಭೂಮಿಯಲ್ಲಿ ಕಳೆಯ ಬೀಜವನ್ನು ಬಿತ್ತನೆ ಮಾಡುವನು ಮತ್ತು ಒಂದೇ ಹೊಲದಲ್ಲಿ ರಾಗಿ ಅಥವಾ ಜೋಳದ ಬೆಳೆಯು ಮತ್ತು ಕಳೆಯು ಜೊತೆ ಜೊತೆಯಾಗಿಯೇ ಬೆಳೆದನು.(ವಚನ 25-26). ಆದರೆ ಹೊಲದ ಯಜಮಾನನು, ಬೆಳೆಯನ್ನು ಕಿತ್ತು ಬಿಟ್ಟು ನಾಶ ಮಾಡಿರಿ, ಕೊಯಿಲಿನವರೆಗೂ ಕಾಯಿರಿ ಎಂದು ಹೇಳುವನು (ವಚನ 29-30). 36-42ನೇ ವಚನಗಳಲ್ಲಿ ಈ ಸಾಮ್ಯದ ಅರ್ಥವನ್ನು ಕೊಡಲಾಗಿದೆ.

## ಸಾಸಿವೆ ಕಾಳಿನ ಮತ್ತು ಹು ಳಿ ಹಿಟ್ಟಿನ ಸಾಮ್ಯಗಳು (13:31-35) (ಮಾರ್ಕ 4:30-34; ಲೂಕ 13:20-21)

**31-32** ಮಾರ್ಕ 4:30-32 ಮತ್ತು ವ್ಯಾಖ್ಯಾನವನ್ನು ನೋಡಿರಿ.

**33** ಸ್ವರ್ಗದ ರಾಜ್ಯವು ಹುಳಿಯ ಹಿಟ್ಟಿನಂತೆ. ಹುಳಿಯು ಹಿಟ್ಟಿನ ಕಣಕದಲ್ಲಿ ಹರಡುವಂತೆಯೇ ಇದು ವಿಶ್ವವನ್ನು ಪ್ರಸರಿಸುತ್ತದೆ. ದೇವರ ರಾಜ್ಯವು ವಿಶ್ವವನ್ನು ಬದಲಾಯಿಸುವುದು. ಇದು ಕತ್ತಲೆಯಲ್ಲಿ ಬೆಳಕು ಇದ್ದಂತೆ.

**34-35** ಯೇಸುಕ್ರಿಸ್ತನು ಜನರೊಂದಿಗೆ ಮಾತನಾಡುವಾಗ ಸಾಮ್ಯರೂಪದಲ್ಲಿ ಮಾತನಾಡಿದನು. ಸಾಧಾರಣವಾಗಿ ನೆರೆದ ಜನ ಸಮೂಹವು ಸಾಮ್ಯಗಳನ್ನು ಅರ್ಥ ಮಾಡಿಕೊಳ್ಳುತ್ತಿರಲಿಲ್ಲ ಮತ್ತು ಕೆಲವು ಸಮಯಗಳಲ್ಲಿ ಆತನ ಸ್ವಂತ ಶಿಷ್ಯರೇ ಅರ್ಥ ಮಾಡಿಕೊಳ್ಳುತ್ತಿರಲಿಲ್ಲ. (ವಚನ 36). ಸಾಮ್ಯಗಳನ್ನು ಉದಾಹರಣೆಯನ್ನು ಕೊಡದಿರುವ ಉದ್ದೇಶವೇನೆಂದರೆ ಸಾಮಾನ್ಯ ಜನರು ಸುಲಭವಾಗಿ ಅರ್ಥಮಾಡಿಕೊಳ್ಳಲಿಕ್ಕಾಗಿಯೇ. ಹಾಗೆಯೇ ಈ ಸಾಮ್ಯಗಳು ದೇವವಾಣಿಯ ಗುಪ್ತ ಸಂಗತಿಗಳನ್ನು ಆತ್ಮೀಕ ಪರಿಜ್ಞಾನವುಳ್ಳವರು[56] ಅರ್ಥಮಾಡಿಕೊಳ್ಳುವುದಕ್ಕೋಸ್ಕರವಾಗಿಯೇ ಇವು ಉದಾಹರಿಸಲ್ಪಟ್ಟವು. (ಮಾರ್ಕ 4:10-12, 33-34 ಮತ್ತು ವ್ಯಾಖ್ಯಾನವನ್ನು ನೋಡಿರಿ).

## ಕಳೆಯ ಸಾಮ್ಯದ ವಿವರಣೆ (13:36-43)

**36-39** ಕಳೆಯ ಸಾಮ್ಯದ ಅರ್ಥವು ಈ ರೀತಿಯಾಗಿ ಇದೆ. ಯೇಸುಕ್ರಿಸ್ತನು ಈಲೋಕದಲ್ಲಿ ಒಳ್ಳೆಯ ಬೀಜಗಳನ್ನು ಬಿತ್ತಿದನು. ಆ ಬೀಜಗಳು ವಿಶ್ವಾಸಿಗಳಾಗಿದ್ದಾರೆ. ಆದರೆ ಅದೇ ಸಮಯದಲ್ಲಿ ಕ್ರಿಸ್ತನ ವೈರಿಯಾದ ಸೈತಾನನು, ಕೆಟ್ಟದಾದಂತಹ ಬೀಜಗಳನ್ನು ಬಿತ್ತಿದನು. ಸಾಮ್ಯದಲ್ಲಿ ಹೆಸರಿಸಿದ ಬೀಜಗಳು ಗೋಧಿಯ ಕಾಳಿನಂತಹ ಬೀಜಗಳಾಗಿದ್ದವು. ಆದುದರಿಂದ ಗೋಧಿಯ ಮತ್ತು ಗೋಧಿಯಂತಹ ಬೀಜಗಳು ಬೆಳೆಯಲಾರಂಭಿಸಿದಾಗ ಅವುಗಳನ್ನು ಬೇರೆಯಾಗಿ ಕಿತ್ತುಹಾಕುವುದು ಬಲು ಕಷ್ಟಕರವೇ.

ಇದೇ ರೀತಿಯಾಗಿ ಸಭೆಯಲ್ಲಿರುವ ವಿಶ್ವಾಸಿಗಳೊಂದಿಗೆ ಇರುವ ಅವಿಶ್ವಾಸಿಗಳಾದ ಇವರೇ "ಕಳೆಗಳು". ಇವರೇ ಸೈತಾನನ ಮಕ್ಕಳು. (ವಚನ 38).ಅಂದರೆ ಸೈತಾನನ ಸೇವಕರು. "ನಾನು ನಂಬುತ್ತೇನೆ" ಎಂದು ಅವರು ಹೇಳುತ್ತಾರೆ. ಕೆಲವು ರೀತಿಯಲ್ಲಿ ಕ್ರೈಸ್ತರಂತೆ ನಟಿಸುತ್ತಾರೆ. ಮಳೆ ಮತ್ತು ಸೂರ್ಯನ ಕಿರಣಗಳೆಂಬ ಆಶೀರ್ವಾದಗಳನ್ನು ಹೊಂದುತ್ತಾರೆ ಮತ್ತು ಒಳ್ಳೆಯ ಬೀಜಗಳ ಸಸಿಗಳಂತೆಯೇ ಹಚ್ಚ ಹಸುರಾಗಿ ಕಂಗೊಳಿಸುತ್ತಾರೆ. ಆದರೆ ನಿಜ ಸಂಗತಿಯೇನೆಂದರೆ ಅವರು ಕಳೆಯಾಗಿದ್ದಾರೆ (ಮತ್ತಾಯ 5:45).

ಈ ಸಾಮ್ಯದಲ್ಲಿ ಆಳುಗಳು ಯಜಮಾನನನ್ನು ಈ ರೀತಿಯಾಗಿ ಕೇಳುತ್ತಾರೆ. ನಾವು **ಹೊರಟು ಹೋಗಿ (ಕಳೆಗಳನ್ನು) ಕಿತ್ತು ಹಾಕೋಣವೆನ್ನುತ್ತೀಯಾ?** (ವಚನ 28). ನಮ್ಮಲ್ಲಿ ಅನೇಕರು ಇಂತಹ ಸೇವಕರಂತಿದ್ದಾರೆ. ನಾವು ತಕ್ಷಣ ತೀರ್ಪು ಮಾಡುವುದರಲ್ಲಿ ಮತ್ತು ತಕ್ಷಣ ಖಂಡಿಸುವುದರಲ್ಲಿ ತ್ವರೆ ಪಡುತ್ತೇವೆ. ಒಂದು ಸಲ ಆ ಕಳೆಗಳಿಂದ ದೂರವಿರಲು ಬಯಸುತ್ತೇವೆ.

ಆದರೆ ಕ್ರಿಸ್ತನು "**ಬೇಡ**". **ಯಾಕೆಂದರೆ ಕಳೆಯನ್ನು ಆರಿಸಿ ತೆಗೆಯುವಾಗ ಅದರ ಸಂಗಡ ಗೋಧಿಯನ್ನೆಲ್ಲಾದರೂ ಕಿತ್ತೀರಿ** ಎಂದು ಹೇಳುತ್ತಾನೆ (ವಚನ 29). ಕಳೆಗಳು ಯಾವುವೆಂದು ನಿಮಗೆ ನಿಖರವಾಗಿ ತಿಳಿದಿರಲಾರದು. **ಸು ಗ್ಗಿಯ ಕಾಲದ ತನಕ ಎರಡೂ ಕೂಡ ಬೆಳೆಯು ಲಿ** (ವಚನ 30).

**40-43** ಕಡೆಯ ತೀರ್ಪಿನ ದಿನದವರೆಗೂ ದುಷ್ಟತ್ವವು ಈ ಲೋಕದಲ್ಲಿರುವುದು ಎಂದು ಈ ಸಾಮ್ಯದಲ್ಲಿ ನಮಗೆ ಕ್ರಿಸ್ತನು ಬೋಧಿಸುತ್ತಾನೆ. ಅಲ್ಲಿಯವರೆಗೆ ಮಾತ್ರ ಸೈತಾನನು ಬೆಳೆಯುತ್ತಲೇ ಇರುತ್ತಾನೆ. ನಂತರ ಆಗ ಮಾತ್ರ ಕಳೆಗಳು ಕೀಳಲ್ಪಡುವುವು ಮತ್ತು ಸುಡಲ್ಪಡುವುವು. ಕಳೆಗಳನ್ನು ಕೀಳುವಂತದ್ದು ನಮ್ಮದಲ್ಲ. ಅಂದರೆ ಬೇರೆಯವರನ್ನು ತೀರ್ಪು ಮಾಡುವುದು ಮತ್ತು ಖಂಡಿಸುವಂತಹುದು. ಈ ಕೆಲಸವು ಮನುಷ್ಯ ಕುಮಾರನಿಗೆ ಮತ್ತು ಈತನ ದೂತರಿಗೆ ಮಾತ್ರೇರಿದ್ದು (ವಚನ 41).

ಸಭೆಯಲ್ಲಿಯೂ ಸಹ ಕಳೆಗಳಿರುತ್ತವೆ. ಯೇಸುಕ್ರಿಸ್ತನಿಗೆ ದ್ರೋಹ ಬಗೆದಂತೆ, ಯೂದನು ಹನ್ನೆರಡು ಮಂದಿ ಶಿಷ್ಯರಲ್ಲಿದ್ದಂತೆಯೇ ಸಭೆಯಲ್ಲಿ ಕಳೆಗಳು ಅಂದರೆ ಕಪಟದ ಕ್ರೈಸ್ತರು ಮತ್ತು ಕುರಿಯ ಚರ್ಮದ ಹೊದಿಕೆಯನ್ನು ಧರಿಸಿದ ತೋಳಗಳಂತಹವರು ಇರುತ್ತಾರೆ. (ಮತ್ತಾಯ 7:15). ನಾವು ಇವರ ಬಗ್ಗೆ ಎಚ್ಚರದಿಂದಿರಬೇಕು. ಇವರ ಬೋಧನೆಯನ್ನು ಪರೀಕ್ಷಿಸಬೇಕು. ಇಂತಹ ತಪ್ಪನ್ನು ಮಾಡುವಂತಹವರನ್ನು ಗದರಿಸಬೇಕು ಮತ್ತು ಸಭೆಯವರು ಇಂತಹ ತಪ್ಪಾದ ಬೋಧನೆಯ ಬಲೆಗೆ ಬೀಳದಂತೆ ಅವರನ್ನು ಶಿಸ್ತಿನಲ್ಲಿಡಬೇಕು (1ನೇ ಕೊರಿಂಥ 5:1-5 ಮತ್ತು ವ್ಯಾಖ್ಯಾನವನ್ನು ನೋಡಿರಿ). ಆದರೆ ಅವರಿಗೆ ತೀರ್ಪು ಮಾಡಬಾರದು. (ಮತ್ತಾಯ 7:1, 1ನೇ ಕೊರಿಂಥ 4:5 ಮತ್ತು ವ್ಯಾಖ್ಯಾನವನ್ನು ನೋಡಿರಿ).

ಪ್ರತಿಯೊಂದು ಸಭೆಯು ಎರಡು ರೀತಿಯ ದೊಡ್ಡ ಅಪಾಯಗಳನ್ನು ಎದುರಿಸುತ್ತಾ ಇದೆ. ಮೊದಲನೆಯ ಅಪಾಯ ಕಳೆಗಳು. ಕಳೆಗಳು ಸಭೆಯನ್ನು ಕಳೆಗುಂದಿಸುತ್ತದೆ. ಇದು ಇತರ ಕ್ರೈಸ್ತರ ನಂಬಿಕೆಯನ್ನು ಕುಂದಿಸುತ್ತದೆ. ಇವರು ಸಭೆಗೆ ಅಗೌರವವನ್ನು ತರುತ್ತಾರೆ.

ಆದರೆ ಎರಡನೆಯ ಅಪಾಯವು ಇದರಷ್ಟು ದೊಡ್ಡದು. ಇದು ತಕ್ಷಣವೇ ಕಳೆಗಳನ್ನು ಕಿತ್ತು ಬಿಸಾಡುವಂತಹ ಶ್ರದ್ಧೆಯುಳ್ಳ ಕ್ರೈಸ್ತರಿಂದ ಬರುತ್ತದೆ. ಇವರು ಸಭೆಯನ್ನು ಶುದ್ಧೀಕರಿಸುವಂತಹ ಬಯಕೆಯುಳ್ಳವರಾಗಿರುತ್ತಾರೆ ಮತ್ತು ಇದು ಒಳ್ಳೆಯದೆ. ಆದರೆ ಹಾಗೆಯೇ ತೀರ್ಪು ಮಾಡುವಂತಹ ಮನೋವೃತ್ತಿಯುಳ್ಳವರು ಸಹ ಆಗಿರುತ್ತಾರೆ. ಇದು ತಪ್ಪು. ಖಂಡಿತವಾಗಿಯೂ ಇವರು ಅನೇಕ ಕಳೆಗಳನ್ನು ಕಿತ್ತು ಹಾಕುತ್ತಾರೆ. ಇವರು ಕಪಟಿಯಾದ ಕ್ರೈಸ್ತರನ್ನು ಬಹಿರಂಗಪಡಿಸುತ್ತಾರೆ. ಆದರೆ ಅದೇ ಸಮಯದಲ್ಲಿ ನಿಜ ಕ್ರೈಸ್ತರಿಗೂ ತೀರ್ಪು ಮಾಡುತ್ತಾರೆ. ಇವರು ಸಭೆಯನ್ನು ಒಡೆಯುತ್ತಾರೆ. ಇವರು ಕಳೆಗಳನ್ನು ಹೀಗೆಯೇ ಬಿಡುವುದಕ್ಕಿಂತಲೂ ಹೆಚ್ಚಾಗಿ ಕಡೆಯಲ್ಲಿ ಹೆಚ್ಚಿನ ಹಾನಿಯನ್ನುಂಟು ಮಾಡುತ್ತಾರೆ. ಇದೇ ಕಳೆಯ ಸಾಮ್ಯದ ಆಳವಾದಂತಹ ಅರ್ಥವಾಗಿರುತ್ತದೆ.

ಮನುಷ್ಯಕುಮಾರನಾದ ದೇವರು ಮಾತ್ರ ನಿಜವಾದ ತೀರ್ಪು ಮಾಡುವನು. ಸರಿಯಾದ ಸಮಯದಲ್ಲಿ ಆತನು ಕಳೆಯನ್ನು (ಹಣಜಿ) ಮತ್ತು ಗೋಧಿ ಅಥವಾ ರಾಗಿ ಅಥವಾ ಜೋಳವನ್ನು ಬೇರೆ ಬೇರೆ ಮಾಡುವನು. ತರುವಾಯ **ನೂತನಾಕಾಸಮಂಡಲವು ನೂತನ ಭೂಮಂಡಲ ನೂತನವಾದ ಯೆರುಸಲೇಮ್** ಇರುವುವು (ಪ್ರಕಟಣೆ 21:1-2). ಆ ಸಮಯದಲ್ಲಿ ಕಳೆಗಳು (ಹಣಜಿ) ತೆಗೆಯಲ್ಪಡುವುವು ಮತ್ತು ನಾಶಗೊಳಿಸಲ್ಪಡುವ ಅಶುದ್ಧವಾದಂತಹ ಯಾವುದು ಇದರಲ್ಲಿ ಪ್ರವೇಶಿಸುವುದಿಲ್ಲ (ಪ್ರಕಟಣೆ 21:27). ಆ ಸಮಯದಲ್ಲಿ ಕಳೆ(ಹಣಜಿ)ಗಳು ತೆಗೆಯಲ್ಪಡುವುವು ಮತ್ತು ನಾಶಹೊಂದುವುವು. ಮತ್ತು ಆಮೇಲೆ ಯೇಸುಕ್ರಿಸ್ತನು ತನ್ನ ದೂತರನ್ನು **ಕಳುಹಿಸುವನು ಮತ್ತು ತಾನು ಆದುಕೊಂಡವರನ್ನು ಒಟ್ಟುಗೂಡಿಸುವನು** (ಮಾರ್ಕ 13:26-27). **ಆಗ ನೀತಿವಂತರು ಸೂರ್ಯನಂತೆ ಪ್ರಕಾಶಿಸುವರು** (ವಚನ 43). ಈ ಲೋಕದಲ್ಲಿ ಬೆಳಕಾಗಿದ್ದಂತಹವರು ಮುಂದೆ ಪ್ರಕಾಶಿಸುತ್ತಾ ಇದಕ್ಕೂ ಹೆಚ್ಚಾಗಿ ಬೆಳಗುವರು (ಮತ್ತಾಯ 5:14).

## ದೇವರ ರಾಜ್ಯದ ಇತರ ಮೂರು ಸಾಮ್ಯಗಳು (13:44-52)

**44** ಪರಲೋಕ ರಾಜ್ಯವು ಹೊಲದಲ್ಲಿ ಹೂಳಿಟ್ಟ ದ್ರವ್ಯಕ್ಕೆ ಹೋಲಿಕೆಯಾಗಿದೆ. ಅಡಗಿಸಿಟ್ಟಿದ್ದ ದ್ರವ್ಯವು ಬಹಳ ಬೆಲೆಯುಳ್ಳದ್ದು. ಕಾರಣ ಬುದ್ಧಿವಂತನು ಅದನ್ನು ಸಂಪಾದಿಸುವುದಕ್ಕಾಗಿ ತನಗಿರುವಂತಹ ಎಲ್ಲವನ್ನು ಮಾರಿಬಿಡುತ್ತಾನೆ. ಪರಲೋಕ ರಾಜ್ಯದವನ್ನು ಪಡೆಯುವುದು ಅಂದರೆ ರಕ್ಷಣೆಯನ್ನು ಪಡೆಯುವುದಕ್ಕಾಗಿ ನಿತ್ಯ ಜೀವದಸಹಿತವಾಗಿ ದೇವರೊಂದಿಗೆ ಪರಲೋಕದಲ್ಲಿರುವುದು ಎಂದರ್ಥ.

**45-46** ಮಾನವನು ಪಡೆಯುವಂತಹ ಪರಲೋಕ ರಾಜ್ಯವು ಮಾನವನನ್ನು ಗಳಿಸುವ ಎಲ್ಲವುಗಳಿಗಿಂತ ಬೆಲೆಯುಳ್ಳದ್ದು ಎಂಬುದನ್ನು ಈ ಮುತ್ತಿನ ಸಾಮ್ಯದಲ್ಲಿ ಕ್ರಿಸ್ತನು ಬೋಧಿಸುತ್ತಾನೆ. ಈ ಲೋಕದಲ್ಲಿ ಹಲವಾರು ರೀತಿಯ ಧರ್ಮಗಳಿವೆ. ಆದರೆ ಯೇಸು ಎಂಬ ಈ ಒಂದೇ ಹೆಸರು ಸಂಪೂರ್ಣವಾದ ಸತ್ಯಕ್ಕೆ ನಡಿಸುತ್ತದೆ. ಈ ಲೋಕದಲ್ಲಿ ಹಲವಾರು ಆಶೀರ್ವಾದಗಳಿವೆ. ಆದರೆ ಎಲ್ಲ ಆಶೀರ್ವಾದಗಳಿಗಿಂತ ಮಿಗಿಲಾದ ನಿತ್ಯ ಜೀವ ಮತ್ತು ರಕ್ಷಣೆಯ ಉನ್ನತವಾದ ಆಶೀರ್ವಾದಕ್ಕೆ ಈ ಯೇಸುವಿನ ಹೆಸರು ಮಾತ್ರ

ನಡೆಸುತ್ತದೆ. ಯೇಸುವು, "**ನಾನೆ ಮಾರ್ಗವು, ಸತ್ಯವು ಮತ್ತು ಜೀವವು ಆಗಿದ್ದೇನೆ. ನನ್ನ ಮೂಲಕವಾಗಿ ಹೊರತು ಯಾರು ತಂದೆಯ ಬಳಿಗೆ ಬರಲಾರರು**" (ಯೋಹಾನ 14:6). ಈ ಲೋಕದಲ್ಲಿ ಅನೇಕ ಮುತ್ತುಗಳು ಇವೆ. ಆದರೆ ಈ ಅಮೂಲ್ಯವಾದ ಬೆಲೆಯ ಮುತ್ತನ್ನು ಯೇಸುಕ್ರಿಸ್ತನೊಬ್ಬನಿಂದ ಮಾತ್ರ ಪಡೆಯಬಹುದು. ವಾಸ್ತವಿಕವಾಗಿ ಸ್ವತಃ ಯೇಸುಕ್ರಿಸ್ತನೇ ಈ ಮುತ್ತು ಆಗಿದ್ದಾನೆ. ಬುದ್ಧಿವಂತ ಮನುಷ್ಯನು ತನಗಿರುವುದೆಲ್ಲವನ್ನು ಮಾರಿ, ಈ ಅಮೂಲ್ಯವಾದ ಮುತ್ತನ್ನು ಸಂಪಾದಿಸುವುದಕ್ಕೋಸ್ಕರ, ತನಗೆ ಅವಶ್ಯವಾಗಿದ್ದಂತಹವುಗಳನ್ನು ಕೂಡ ಮಾರಿ ಬಿಡುತ್ತಾನೆ (ಫಿಲಿಪ್ಪಿ. 3:7-8 ಮತ್ತು ವ್ಯಾಖ್ಯಾನ ನೋಡಿರಿ).

**47-50** ಕಳೆಯ, ಸಾಮ್ಯದಂತೆಯೇ ಈ ಬಲೆಯ ಸಾಮ್ಯವು ಸಹ ನಮಗೆ ಬೋಧಿಸುತ್ತದೆ (ವಚನ 37-43). ಕ್ರಿಸ್ತನು ಮತ್ತು ಆತನ ಶಿಷ್ಯರು ಸಮುದ್ರದಲ್ಲಿ (ಪ್ರಪಂಚದಲ್ಲಿ) ಬಲೆಯನ್ನು ಹಾಕಿದರು (ಬೀಸಿದರು). ಮತ್ತು ಒಳ್ಳೆಯ ಹಾಗೂ ಕೆಟ್ಟ ಮೀನುಗಳು ಸಿಕ್ಕಿಕೊಂಡವು. ಎಲ್ಲಿಯವರೆಗೆ ಸಮುದ್ರದ ನೀರಿನಲ್ಲಿ ಬಲೆಯು ಇರುವುದೋ ಅಲ್ಲಿಯವರೆಗೆ ಆ ಬಲೆಯಲ್ಲಿ ಏನೇನಿರವುದು ಎಂದು ಹೇಳಲು ಮೀನುಗಾರನಿಗೆ ಸಾಧ್ಯವಾಗದು. ಯುಗದ ಅಂತ್ಯದ ನ್ಯಾಯತೀರ್ಪಿನ ದಿನದಲ್ಲಿ,ವಚನ 49) ಮೀನಿನ ಬಲೆಯನ್ನು ದಡಕ್ಕೆ ಎಳೆದು ತಂದಾಗ ಮಾತ್ರ ಕೆಟ್ಟ ಮೀನುಗಳು ಬಲೆಯಿಂದ ಬಿಡಿಸಲ್ಪಡುವುವು ಮತ್ತು ಹೊರಕ್ಕೆ ಎಸೆಯಲ್ಪಡುವುವು.

**51-52** ಶಿಷ್ಯರು ಮೊದಮೊದಲಿಗೆ ಎಲ್ಲಾ ಸಾಮ್ಯಗಳನ್ನು ಅರ್ಥ ಮಾಡಿಕೊಳ್ಳಲು ಆಗಲಿಲ್ಲ. (ವಚನ 36). ಆದರೆ ಬಹಳ ಬೇಗನೆ ಅವುಗಳನ್ನು ಅರ್ಥ ಮಾಡಿಕೊಳ್ಳಲಾರಂಭಿಸಿದರು. ತಮಗೆ ತಾವೇ ಬೋಧಿಸುವಂತ ಬೋಧಕರಾಗುವುದನ್ನು ಕಲಿಯತೊಡಗಿದರು. ಎಲ್ಲಾ ಹನ್ನೆರಡು ಜನ ಶಿಷ್ಯರು ಯಹೂದ್ಯರಾಗಿದ್ದರು ಮತ್ತು ಹೀಗೆ ಒಂದು ರೀತಿಯಿಂದ ಅವರಲ್ಲಿ ಪ್ರತಿಯೊಬ್ಬರು ಯಹೂದ್ಯರ ಧರ್ಮಶಾಸ್ತ್ರದ ಅಥವಾ ಹಳೇ ಒಡಂಬಡಿಕೆಯ, **ಧರ್ಮಶಾಸ್ತ್ರದ ಬೋಧಕರಾಗತೊಡಗಿದರು**.ಆದರೆ ಈಗ ಅವರು **ಪರಲೋಕ ರಾಜ್ಯದ ವಿಷಯದಲ್ಲಿ ಸೂಚನೆಯನ್ನು ಹೊಂದಲಾರಂಭಿಸಿದರು** (ವಚನ 52). ಹೀಗೆ ಅವರು ಹಳೆಯ ದ್ರವ್ಯವಾದಂತಹ ಹಳೇ ಒಡಂಬಡಿಕೆಯನ್ನು ಮತ್ತು **ಹೊಸದಾದ** ದ್ರವ್ಯವಾದಂತ ಕ್ರಿಸ್ತನ ಸುವಾರ್ತೆಯನ್ನು ಸ್ವಾಧೀನಪಡಿಸಿಕೊಳ್ಳಲಾರಂಭಿಸಿದರು.

### ಗೌರವವಿಲ್ಲದ ಪ್ರವಾದಿ (13:53-58)

(ಮಾರ್ಕ 6:1-6)

**53-58** ಮಾರ್ಕ 6:1-6 ಮತ್ತು ವ್ಯಾಖ್ಯಾನವನ್ನು ನೋಡಿರಿ.

---

## ಅಧ್ಯಾಯ - 14

### ಸ್ನಾನಿಕನಾದ ಯೋಹಾನನ ಶಿರಚ್ಛೇದನ (14:1-12)

(ಮಾರ್ಕ 6:14-29; ಲೂಕ 9:7-9)

**1-12** ಮಾರ್ಕ 6:14-29 ಮತ್ತು ವ್ಯಾಖ್ಯಾನ ನೋಡಿರಿ.

### ಯೇಸು ಕ್ರಿಸ್ತನು ಐದು ಸಾವಿರ ಜನರಿಗೆ ಊಟ ಮಾಡಿಸಿದ್ದು (14:13-21)

(ಮಾರ್ಕ 6:30-44; ಲೂಕ 9:10-17; ಯೋಹಾನ 6:1-15)

**13-21** ಮಾರ್ಕ 6:30-44 ಮತ್ತು ವ್ಯಾಖ್ಯಾನ ನೋಡಿರಿ.

### ಯೇಸು ಕ್ರಿಸ್ತನು ನೀರಿನ ಮೇಲೆ ನಡೆದದ್ದು (14:22-36)

(ಮಾರ್ಕ 6:45-56; ಯೋಹಾನ 6:16-24)

**22-36** ಮಾರ್ಕ 6:45-56 ಮತ್ತು ವ್ಯಾಖ್ಯಾನವನ್ನು ನೋಡಿರಿ.

---

## ಅಧ್ಯಾಯ - 15

### ಶುದ್ಧ ಮತ್ತು ಅಶುದ್ಧ (15:1-20)

(ಮಾರ್ಕ 7:1-23)

**1-20** ನೋಡಿರಿ, ಮಾರ್ಕ 7:1-23 ಮತ್ತು ವ್ಯಾಖ್ಯಾನ

**ಕಾನಾನ್ಯ ಸ್ತ್ರೀಯ ನಂಬಿಕೆ (15:21-28)**
(ಮಾರ್ಕ 7:24-30)

**21-28** ನೋಡಿರಿ, ಮಾರ್ಕ 7:24-30 ಮತ್ತು ವ್ಯಾಖ್ಯಾನ.

**ಕ್ರಿಸ್ತನು ಅನೇಕರನ್ನು ಗುಣಪಡಿಸಿದ್ದು (15:29-31)**
ಮಾರ್ಕ 7:31-37

**29-31** ನೋಡಿರಿ, ಮಾರ್ಕ 7:31-37 ಮತ್ತು ವ್ಯಾಖ್ಯಾನ.

**ಕ್ರಿಸ್ತನು ನಾಲ್ಕು ಸಾವಿರ ಜನರಿಗೆ ಊಟ ಕೊಟ್ಟಿದ್ದು (15:31-39)**
(ಮಾರ್ಕ 8:1-10)

**32-39** ನೋಡಿರಿ, ಮಾರ್ಕ 8:1-10 ಮತ್ತು ವ್ಯಾಖ್ಯಾನ

---

## ಅಧ್ಯಾಯ -16

**ಸೂಚಕ ಕಾರ್ಯವನ್ನು ಕೇಳಿದ್ದು (16:1-4)**
(ಮಾರ್ಕ 8:11-13; ಲೂಕ 12:54-56)

**1-4** ನೋಡಿರಿ 8:11-13 ಮತ್ತು ವ್ಯಾಖ್ಯಾನ.

**ಫರಿಸಾಯ ರ ಮತ್ತು ಸದ್ದು ಕಾಯ ರ ಹು ಳಿ ಹಿಟ್ಟಿನ ವಿಷಯ (16:5-12)**
(ಮಾರ್ಕ 8:14-21)

**5-12** ನೋಡಿರಿ, ಮಾರ್ಕ8: 14-21 ಮತ್ತು ವ್ಯಾಖ್ಯಾನ.

**ಕ್ರಿಸ್ತನ ವಿಷಯವಾಗಿ ಪೇತ್ರನ ಅರಿಕೆ (16:13-20)**
(ಮಾರ್ಕ 4:27-30, ಲೂಕ 9:18-21)

**13-20** ನೋಡಿರಿ, ಮಾರ್ಕ 8:27-30 ಮತ್ತು ವ್ಯಾಖ್ಯಾನ.

**ಕ್ರಿಸ್ತನು ತನ್ನ ಮರಣವನ್ನು ಮುಂತಿಳಿಸಿದ್ದು(16:21-23)**
(ಮಾರ್ಕ 8:31-33; ಲೂಕ 9:22)

**21-23** ನೋಡಿರಿ, ಮಾರ್ಕ 8:31-33 ಮತ್ತು ವ್ಯಾಖ್ಯಾನ.

**ತನ್ನನ್ನು ತಾನೇ ನಿರಾಕರಿಸಿಕೊಳ್ಳುವುದು (16:24-28)**
(ಮಾರ್ಕ 8:34-38; ಲೂಕ 9:23-26)

**24-28** ನೋಡಿರಿ, ಮಾರ್ಕ 8:34-38; 9:1 ಮತ್ತು ವ್ಯಾಖ್ಯಾನ

---

## ಅಧ್ಯಾಯ - 17

**ಕ್ರಿಸ್ತನು ರೂಪಾಂತರ ಹೊಂದಿದ್ದು (17:1- 13)**
(ಮಾರ್ಕ 9:2-13; ಲೂಕ 9:27-36)

**1-13** ಮಾರ್ಕ 9:2-13 ಮತ್ತು ವ್ಯಾಖ್ಯಾನ

### ಮೂರ್ಛಾ ರೋಗಿಯಾದ ಬಾಲಕನನ್ನು ಗುಣಪಡಿಸಿದ್ದು (17:14-23)

(ಮಾರ್ಕ 9:14-32; 11:22-23; ಲೂಕ 9:37-45)

**14-19** ನೋಡಿರಿ, ಮಾರ್ಕ 9:14-29 ಮತ್ತು ವ್ಯಾಖ್ಯಾನ.
**20** ನೋಡಿರಿ, ಮಾರ್ಕ 11:22-23 ಮತ್ತು ವ್ಯಾಖ್ಯಾನ.
**21-23** ನೋಡಿರಿ, ಮಾರ್ಕ 9:29-32 ಮತ್ತು ವ್ಯಾಖ್ಯಾನ[57]

### ದೇವಾಲಯದ ಸುಂಕ (17:24-27)

**24** ಯಹೂದ್ಯರಲ್ಲಿ 20 ವರ್ಷಕ್ಕೂ ಹೆಚ್ಚಿನ ವಯಸ್ಕರು, ಎರಡು ದ್ರಚ್ಮ[58], ದೇವಾಲಯದ ಸುಂಕವನ್ನು ಕೊಡಲೇಬೇಕು. (ವಿಮೊ 30:11-14). ಯೇಸುವಿನ ಕಾಲದಲ್ಲಿ ಎರಡು ದ್ರಚ್ಮ ನಾಣ್ಯವು ಚಲಾವಣೆಯಲ್ಲಿ ಇರಲಿಲ್ಲವಾದ್ದರಿಂದ, ಇಬ್ಬರು ಒಟ್ಟಿಗೆ ಸೇರಿ ನಾಲ್ಕು ದ್ರಚ್ಮ ಹಣವನ್ನು ಅವರಿಬ್ಬರ ಸುಂಕವೆಂದು ಪಾವತಿಸುತ್ತಿದ್ದರು (ವಚನ 27). ಯೆರುಸಲೇಮ್ ಪಟ್ಟಣದಲ್ಲಿ ದೇವಾಲಯವು ಬಹು ವಿಸ್ತಾರವಾದ ಅನೇಕ ಕಟ್ಟಡಗಳ ಸಂಕೀರ್ಣವಾಗಿದ್ದು ಅದನ್ನು ನಿರ್ವಹಿಸಲು ಬಹಳ ವೆಚ್ಚವಾಗುತ್ತಿತ್ತು. ಇದು ಯಹೂದ್ಯ ಮತದ ಧಾರ್ಮಿಕ ಕೇಂದ್ರವಾಗಿತ್ತು. ಯಹೂದ್ಯರು ಎಲ್ಲಾ ಕ್ಷೇತ್ರಗಳಿಂದಲೂ, ಆರಾಧನೆಗಾಗಿ ಈ ಯೆರುಸಲೇಮ್‌ಗೆ ಬಂದು ತಮ್ಮ ಬಲಿಯನ್ನು ಅರ್ಪಿಸುತ್ತಿದ್ದರು. ಆದುದರಿಂದ ಇವರೆಲ್ಲರ ತಲೆ ಗಂಧಾಯದಿಂದ ಯಹೂದ್ಯ ಯಾಜಕರು, ದೇವಾಲಯದ ನಿರ್ವಹಣಾ ವೆಚ್ಚವನ್ನು ಭರಿಸುತ್ತಿದ್ದರು.

**25-26** ಪೇತ್ರನು ಸುಂಕದವರಿಗೆ, ಯೇಸುವು ದೇವಾಲಯದ ಸುಂಕವನ್ನು ಕೊಡುತ್ತಾನೆ ಎಂದು ತಿಳಿಸಿದನು. ಪೇತ್ರನ ಮನಸ್ಸಿನಲ್ಲಿ ಯೇಸುವು ಮತ್ತು ಆತನ ಶಿಷ್ಯರೆಲ್ಲರೂ, ಇತರೇ ಯಹೂದ್ಯರಂತೆ ಸುಂಕವನ್ನು ಕೂಡಲೇ ಕೊಡಬೇಕಾಗಿತ್ತು.

ಆದರೆ ಯೇಸುವು ಪೇತ್ರನಿಗೆ ಹೇಳಿದ್ದೇನೆಂದರೆ, ಮಕ್ಕಳು ಸುಂಕ ಕೊಡಬೇಕಾದ ಅವಶ್ಯಕತೆಯಿಲ್ಲವೆಂದು (ವಚನ 26). ಮಕ್ಕಳು ಅಂದರೆ ದೇವರ ನಿಜವಾದ ಮಕ್ಕಳು ಎಂದು ಯೇಸು ಅರ್ಥೈಸಿದನು. ಇವರು ಯಾರೆಂದರೆ ಕ್ರಿಸ್ತನಲ್ಲಿ ವಿಶ್ವಾಸವಿಟ್ಟವರು. ಸಾಧಾರಣವಾಗಿ ಈ ಲೋಕದ ರಾಜರು ತಮ್ಮ ಮಕ್ಕಳಿಂದ ಸುಂಕವನ್ನು ವಸೂಲು ಮಾಡುವುದಿಲ್ಲವಷ್ಟೇ. ಆದುದರಿಂದ ಯಹೂದ್ಯ ಮುಖಂಡರು ಯೇಸುವು ಮತ್ತು ಆತನ ಶಿಷ್ಯರು. ಅಂದರೆ ದೇವರ ನಿಜವಾದ ಮಕ್ಕಳಾದ ಇವರಿಂದ ಸುಂಕಕ್ಕಾಗಿ ತಗಾದೆ ಮಾಡಕೂಡದು. ಯೇಸುವಿನಲ್ಲಿ ವಿಶ್ವಾಸವುಳ್ಳವರು, ದೇವಾಲಯದಲ್ಲಿ ಇನ್ನು ಮೇಲೆ ಆರಾಧಿಸುವ ಅವಶ್ಯಕತೆಯಿಲ್ಲ.

ಕ್ರಿಸ್ತನು ಬರುವುದಕ್ಕೆ ಮೊದಲು, ದೇವಾಲಯದಲ್ಲಿ ಪಾಪಗಳಿಗಾಗಿ, ಬಲಿ ಅರ್ಪಣೆ ಮಾಡಲೇ ಬೇಕಾಗಿತ್ತು. ಆದರೆ, ಕ್ರಿಸ್ತನೇ ಸ್ವತಃ ಪಾಪಕ್ಕಾಗಿ ಕಡೆಯ ಬಲಿಪಶುವಾದನು (ಇಬ್ರಿಯಾ 7:27, ಮತ್ತು ವ್ಯಾಖ್ಯಾನ). ಆದುದರಿಂದ, ಕ್ರಿಸ್ತನು ಬಂದ ಮೇಲೆ ಬಲಿಯ ಅಗತ್ಯವಿರುವುದಿಲ್ಲ. ಹಳೇಯ ಯಹೂದ್ಯ ದೇವಾಲಯವು ಸಹ ಬೇಕಾಗಿಲ್ಲ. **ದೇವಾಲಯಕ್ಕಿಂತ ಹೆಚ್ಚಿನವನಾದ** ಬಂದಿದ್ದಾನಲ್ಲ. ಈತನೇ ಯೇಸು ಕ್ರಿಸ್ತನು (ಮತ್ತಾಯ 12:6).ವಾಸ್ತವವಾಗಿ, ವಿಶ್ವಾಸಿಗಳಾದಂತ ಹೊಸ ಇಸ್ರಾಯೇಲ್ಯರೇ ಹೊಸದಾದ ಆತ್ಮೀಯ ದೇವಾಲಯಗಳಾದರು(1ನೇ ಕೊರಿಂಥ 3:16-17 ಎಫೆಸ 2:21-22 ಮತ್ತು ವ್ಯಾಖ್ಯಾನ). ಆದುದರಿಂದ ಯೇಸುವು, ಪೇತ್ರನಿಗೆ, ದೇವಾಲಯದ ಸುಂಕ ಕೊಡುವ ಅವಶ್ಯವಿಲ್ಲವೆಂದು ಹೇಳಿದನು.

**27** ಆದಾಗ್ಯೂ "ನಾವು ಅವರನ್ನು ಬೇಸರ ಅಥವಾ ಅವಮಾನ ಪಡಿಸಬಾರದು" ಎಂಬ ಕಾರಣಕ್ಕಾಗಿ,ಯಹೂದ್ಯ ಯಾಜಕರಿಗೆ ಸುಂಕವನ್ನು ಕೊಡು ಎಂದು ಯೇಸುವು ಪೇತ್ರನಿಗೆ ಹೇಳಿದನು. ಯೇಸು ಮತ್ತು ಪೇತ್ರನು ಸುಂಕವನ್ನು ಕೊಡಬೇಕಾಗಿಲ್ಲವಾದರೂ, ಹಲವಾರು ಯಹೂದ್ಯರು ಸುಂಕ ಕೊಡದೇ ಹೋದರೂ ಸಹಾ ಯಹೂದ್ಯರಿಗೆ ಅಪಮಾನವೆಸಗಬಾರದೆಂದು, ಸುಂಕವನ್ನು ಕೊಟ್ಟರು. (1ನೇ ಕೊರಿಂಥ 8:9 ಮತ್ತು ವ್ಯಾಖ್ಯಾನ). ದೇವರು ಆಶ್ಚರ್ಯಕರವಾದ ರೀತಿಯಲ್ಲಿ ಮೀನಿನ ಬಾಯಿಯಲ್ಲದ್ದಂತೆ, ಅವಶ್ಯವಾದ ಈ ನಾಲ್ಕು ಡ್ರಾಕ್ಮಾ ಬೆಲೆಯುಳ್ಳ ನಾಣ್ಯವನ್ನು ಇವರಿಗೆ ಒದಗಿಸಿದನು.

---

## ಅಧ್ಯಾಯ - 18

### ಪರಲೋಕ ರಾಜ್ಯದಲ್ಲಿ ಯಾರು ಶ್ರೇಷ್ಠರು (18:1-5)

(ಮಾರ್ಕ 9:36-37, 10:15)

**1-4** ಮಾರ್ಕ 9:33-35, 10:14-15 ನೋಡಿರಿ ಮತ್ತು ವ್ಯಾಖ್ಯಾನಿಸಿರಿ.
**5** ಮತ್ತಾಯ 10:40, ಮಾರ್ಕ 9:36-37 ನೋಡಿರಿ ಮತ್ತು ವ್ಯಾಖ್ಯಾನಿಸಿರಿ.

### ಪಾಪದ ವಿಷಯವಾಗಿ ಬೋಧನೆ (18:6-9)

(ವಿಗರ್ತ 9:42-50, ಲೂಕ 17:1-2)

**6-9** ಮಾರ್ಕ 9:42-50 ನೋಡಿರಿ ಮತ್ತು ವ್ಯಾಖ್ಯಾನಿಸಿರಿ.

## ಕಳೆದು ಹೋದ ಕುರಿಯ ಸಾಮ್ಯ (18:10-14)

(ಲೂಕ 15:3-7)

**10** ಈ ಚಿಕ್ಕ ಮಕ್ಕಳನ್ನು ನಾವು ಆಹ್ವಾದಿಸುತ್ತಾ ಮತ್ತು ಮಾನ್ಯತೆ ನೀಡಬೇಕೆಂದು ಅಂದರೆ ಹೊಸದಾದ ಮತ್ತು ಬಲಹೀನರಾದ ಕ್ರೈಸ್ತರನ್ನು ನೋಡಿ, ಯೇಸು ನಮಗೆ ಬೋಧಿಸಿದನು (ವಚನ 5-6). ಆತನು ಪ್ರೀತಿಸುವ ಪ್ರಕಾರವೇ, ನಾವು ಅವರನ್ನು ಪ್ರೀತಿಸಬೇಕು (ಯೋಹಾನ 13:34). ದೇವರು ತನ್ನ ಅವೇ ಕಿರಿದಾದ ಮಕ್ಕಳ ಮೇಲೂ ಬಹಳ ಬೆಲೆಯಿಟ್ಟಿರುವುದರಿಂದ, ನಾವು ಸಹಾ ಹಾಗೆಯೇ ಮಾಡಬೇಕು.

ಪ್ರತಿಯೊಬ್ಬ ಕ್ರೈಸ್ತನಿಗೂ ಪರಲೋಕದಲ್ಲಿ ಒಬ್ಬ ಕಾವಲಾದ ದೂತನು ಇರುತ್ತಾನೆ (ಕೀರ್ತನೆ 61:11, ಅ.ಕೃ. 12:15 ನೋಡಿರಿ). ಈ ದೂತರು, ದೇವರ ಸಿಂಹಾಸದ ಮುಂದೆ ನಿಂತು ಕೊಂಡಿದ್ದಾರೆ. ಪ್ರಕಟಣೆ 5:11. ಇವರು ಯಾವಾಗಲೂ ತಂದೆಯ ಮುಖವನ್ನು ನೋಡುತ್ತಲೇ ಇರುವರು. ಕ್ರಿಸ್ತನ ಈ ಚಿಕ್ಕ ಮಕ್ಕಳನ್ನು ನಾವು ತಾತ್ಸಾರ ಮಾಡಿದಲ್ಲಿ ಅಥವಾ ಅವರು ಪಾಪ ಮಾಡಲು ನಾವು ಹೊಣೆಯಾದರೆ (ವಚನ 6). ದೇವರಿಗೆ ತಕ್ಷಣವೇ ತಿಳಿದು ಬರುತ್ತದೆ. ದೇವರು ತನ್ನ ಮಕ್ಕಳನ್ನು ದೂತರ ಮುಖಾಂತರ ಕಾಪಾಡುವನು. ನಾವು ಯೇಸುವಿನ ಚಿಕ್ಕ ಮಗುವನ್ನು ವಿರೋಧಿಸಿದ್ದೇ ಆದರೆ, ಆತನ ದೂತನನ್ನು ಸಹ ವಿರೋಧಿಸಿದಂತೆ.

**11** ಲೂಕ 19:10 ಮತ್ತು ವ್ಯಾಖ್ಯಾನವನು[59] ನೋಡಿರಿ

**12-14** ದೇವರು ಪ್ರತಿಯೊಂದು ಮಗುವನ್ನು ಪಾಲನೆ ಮಾಡುತ್ತಾನೆ. ಆದರೆ ಆತನು ವಿಶೇಷವಾಗಿ ಎಳೆಪ್ರಾಯದ ಮತ್ತು ಬಲಹೀನರಾದ ಕ್ರೈಸ್ತರನ್ನು ದಾರಿ ತಪ್ಪಿ ಹೋಗುವುದನ್ನು ಗಮನಿಸುತ್ತಾನೆ. ನಾವು ಸಹ ಅಂತಹ ಕ್ರೈಸ್ತರ ಬಗ್ಗೆ ಕಾಳಜಿ ವಹಿಸಬೇಕು. ಮತ್ತು ಅಂತಹವರನ್ನು ತಿರುಗಿ ಕರೆತರುವುದಕ್ಕೆ ಎಲ್ಲಾ ಪ್ರಯಾಸವನ್ನು ಮಾಡಬೇಕು. ಅಂತಹ ಬಿದ್ದು ಹೋದ ಸಹೋದರ, ಸಹೋದರಿಯರನ್ನು ಮಾನಸಾಂತರ ಪಡುವುದಕ್ಕೂ, ಮಹಾ ಕುರುಬನಾದ ಕ್ರಿಸ್ತನ ಕಡೆಗೆ ತರುವುದಕ್ಕೂ ನಾವು ಪ್ರೋತ್ಸಾಹಿಸಬೇಕು.

ದೇವರು, ದಾರಿ ತಪ್ಪಿ ಹೋಗದ ತೊಂಭತ್ತೊಂಭತ್ತು ಮಕ್ಕಳಿಗಿಂತ, ದಾರಿ ತಪ್ಪಿ, ಹಿಂದಿರುಗಿ ಬಂದ ಆ ಒಬ್ಬ ಮಗನಿಗಾಗಿ ಬಹಳ ಸಂತೋಷ ಪಡುವವನಿದ್ದಾನೆ. **ದೇವರು ತನ್ನ ಮಕ್ಕಳಲ್ಲಿ ಯಾರು ನಾಶವಾಗಬಾರದೆಂದು ಇಚ್ಛಿಸುತ್ತಾನೆ.**

ಈ ಬೋಧನೆಯು, ದಾರಿತಪ್ಪಿ ಹೋದ ಕ್ರೈಸ್ತರಿಗೆ ಮಾತ್ರವಲ್ಲ ಬದಲಾಗಿ ಎಲ್ಲಾ ಮಕ್ಕಳಿಗಾಗಿಯೇ ಇದೆ. ಲೂಕನ ಸುವಾರ್ತೆ 15:7ರಲ್ಲಿ **ಪರಲೋಕದಲ್ಲಿ ತೊಂಭತ್ತೊಂಭತ್ತು ಮಂದಿ ಮಾನಸಾಂತರ ಪಡಬೇಕಾಗಿಲ್ಲದವರಿಗಿಂತ, ಮಾನಸಾಂತರ ಪಡುವ ಒಬ್ಬ ಪಾಪಿಯ ವಿಷಯದಲ್ಲಿ, ಬಹಳ ಸಂತೋಷವಿದೆ** ಎಂದು ತಿಳಿಯುತ್ತದೆ. ಹಾಗೆಂದರೆ, ತೊಂಭತ್ತೊಂಭತ್ತು ಮಂದಿ ಈಗಾಗಲೇ ವಿಶ್ವಾಸಿಗಳಾಗದ್ದವರಿಗಿಂತ ಈಗ ಹೊಸದಾಗಿ ವಿಶ್ವಾಸ ವ್ಯಕ್ತಪಡಿಸುವ ಒಬ್ಬನ ಮೇಲೆ ಪರಲೋಕದಲ್ಲಿ ಬಹಳ ಸಂತೋಷವಾಗುತ್ತದೆ. ನಮ್ಮ ದೇವರು ಯಾವಾಗಲೂ ತಪ್ಪಿ ಹೋದವರನ್ನು ಹುಡುಕುವವನು ಮತ್ತು ಅವನು ರಕ್ಷಿಸಲ್ಪಟ್ಟಾಗ ಸಂತೋಷ ಪಡುವಂತ ದೇವರಾಗಿದ್ದಾನೆ. (ಲೂಕ 15:8-10, 19:10 ಮತ್ತು ವ್ಯಾಖ್ಯಾನ ನೋಡಿ).

## ನಿನಗೆ ವಿರುದ್ಧವಾಗಿ ಪಾಪ ಮಾಡಿದ ಒಬ್ಬ ಸಹೋದರನನ್ನು ಕುರಿತು

(ಲೂಕ 18:15-20)

**15** ಇಲ್ಲಿ ಒಬ್ಬ ಸಹೋದರನು ಒಬ್ಬ ಸಹಾ ವಿಶ್ವಾಸಿಯೊಡನೆ ವಿರುದ್ಧವಾಗಿ ಪಾಪ ಮಾಡಿದ್ದಾಗಿ, ನಾವು ಏನು ಮಾಡಬೇಕೆಂದು ಯೇಸುವು ಇಲ್ಲಿ ಬೋಧಿಸುತ್ತಾನೆ. ನಾವು ಅವನೊಡನೆ ನೇರವಾಗಿ ಮುಖಾಮುಖಿಯಾಗಿ ಮಾತನಾಡಬೇಕು. ಬಹಳ ನಮ್ರತೆಯಿಂದಲೂ, ಪ್ರೀತಿಯಿಂದಲೂ ಆ ಸಹೋದರನ ಜೊತೆ ಮಾತನಾಡಬೇಕು. ನಾವು ಹೀಗೆ ಮಾಡಿದರೆ ನಾವು ಯಾವಾಗಲೂ, ಎಲ್ಲಾ ಸಂದರ್ಭದಲ್ಲಿಯೂ ನಮ್ಮ ಸಹೋದರನೊಡನೆ ರಾಜಿಮಾಡಿಕೊಳ್ಳಬಹುದು.

ನಮ್ಮ ಸಹೋದರನು ನಮಗೆ ವಿರುದ್ಧವಾಗಿ ಪಾಪ ಮಾಡುವಾಗ, ನಾವು ಈ ಮೂರು ಕಾರ್ಯಗಳನ್ನು ಮಾಡಕೂಡದು. ಮೊದಲನೇಯದಾಗಿ, ಅವನನ್ನು ಕಾಣಲು ಹೋಗುವಾಗ ಕೋಪ ಪಡಬಾರದು. ನಾವು ನಮ್ಮ ಸಹೋದರನನ್ನು ಕೋಪ ದಿಂದ ಗೆಲ್ಲಲಾರೆವು. ಎರಡನೇಯದಾಗಿ, ನಮ್ಮ ಹೃದಯದಲ್ಲಿ ಕಹಿ ಭಾವನೆಗಳನ್ನು ಬಚ್ಚಿಟ್ಟುಕೊಳ್ಳಬಾರದು. ನಾವು ನೇರವಾಗಿ ನಮ್ಮ ಸಹೋದರನೊಡನೆ ಮಾತನಾಡಿ, ಅವನಿಂದ ನಮಗಾದ ಹಾನಿಯನ್ನು ತಿಳಿಸಬೇಕು. ಮೂರನೇಯದಾಗಿ, ನಮ್ಮ ಸಹೋದರನ ಬಗ್ಗೆ ಬೇರೆಯವರೊಡನೆ ಮಾತನಾಡುವಾಗ ಪ್ರಾರಂಭದಲ್ಲಿ ನಕಾರಾತ್ಮಕವಾಗಿಯಾಗಲೀ, ಅಥವಾ ಅವನನ್ನು ಖಂಡಿಸುವುದಾಗಲೀ ಮಾಡಬಾರದು. ಬೇರೆಯವರ ಬಗ್ಗೆ ನಕಾರಾತ್ಮಕ ಭಾವನೆಯ ಮತ್ತು ಖಂಡನೀಯ ಮಾತುಗಳನ್ನಾಡುವಂತ ಈ ತರಹವಾದ ಪಾಪಗಳನ್ನು ಸಾಮಾನ್ಯವಾಗಿ ಸಭೆಯಲ್ಲಿ ನಾವು ಕಾಣುತ್ತೇವೆ. ಯೇಸುವು ಹೇಳುತ್ತಾನೆ,........... **ನಿವಿಬ್ಬರು ಇರುವಾಗ ಮಾತ್ರ ಅವನ ತಪ್ಪನ್ನು ಅವನಿಗೆ ತೋರಿಸಿಕೊಡು.**

ಈ ರೀತಿಯಾಗಿ ನಾವು ನಮ್ಮ ಸಹೋದರನನ್ನು ಸಂಧಿಸುವಾಗ ಬಹಳಷ್ಟು ಸಾರಿ, ನಾವು ತಿಳಿದುಕೊಂಡಷ್ಟು ಪಾಪವನ್ನು ಆತನು ನಿಜವಾಗಿ ಮಾಡಲಿಲ್ಲವೆಂಬ ಅರಿವು ನಮಗಾಗುತ್ತದೆ. ಈದೂ ಅಲ್ಲದೇ ನಾವು ಅವನಿಗೆ ವಿರುದ್ಧವಾಗಿ ಮಾಡಿರಬಹುದಾದ ಯಾವುದೇ ಪಾಪದ ವಿಷಯವಾಗಿ ನಮಗೆ ಒಂದು ವೇಳೆ ಅವನು ತಿಳಿಸಲೂ ಬಹುದು.

**16** ಒಂದು ವೇಳೆ ನಮ್ಮ ಸಹೋದರನು[60] ನಿಜವಾಗಿ ನಮ್ಮ ವಿರುದ್ಧ ಪಾಪ ಮಾಡಿದ್ದರೆ ಮತ್ತು ಅದರಿಂದಾದ ನೋವನ್ನು ಸರಿಪಡಿಸದಿದ್ದರೆ, ನಮಗೆ ಎರಡು ವಿಧವಾದ ದಾರಿಯುಂಟು. ಅವನನ್ನು ಸರಿಪಡಿಸುವುದಕ್ಕೆ, ಮೊದಲನೇಯದಾಗಿ ಒಂದು ವೇಳೆ ಅವನ ಪಾಪ ಬಹಳ ಚಿಕ್ಕದಾಗಿದ್ದು, ನಮಗೆ ವಿರುದ್ಧವಾಗಿ ವೈಯಕ್ತಿಕವಾಗಿದ್ದರೆ, (ಅದರ ಬಗ್ಗೆ ಅವನು ಪಶ್ಚಾತ್ತಾಪ ಪಡದಿದ್ದರೂ ಸಹ) ನಾವು ಅವನನ್ನು ಕ್ಷಮಿಸಿ. ಆ ವಿಷಯವನ್ನು ಅಲ್ಲಿಗೆ ಮರೆತುಬಿಡಬೇಕು. ಅವನ ಪಾಪವನ್ನು ಮರೆ ಮಾಚುವುದಕ್ಕೆ, ನಾವು ಇಟ್ಟಿರುವ ಪ್ರೀತಿಯೇ ಸಾಕು (ಪ್ರೀತಿಯು ಬಹು ಪಾಪಗಳನ್ನು ಮುಚ್ಚುತ್ತದೆ, 1ನೇ ಪೇತ್ರ 4:8).

ಆದಾಗ್ಯೂ, ನಮ್ಮ ಸಹೋದರನ ಪಾಪವು ಬೇರೆಯವರನ್ನು ಬಾಧಿಸಿದರೆ, ಅಥವಾ ನಾವು [60]ಸಕ್ರಿಯವಾಗಿ ಆತನ ಪಾಪವನ್ನು ಎತ್ತಿ ತೋರಿಸಬೇಕಾದರೆ, ಮತ್ತೊಮ್ಮೆ ಎರಡು ಅಥವಾ ಮೂರು ಸಭಾ ಹಿರಿಯರ ಸಹಿತ ಜೊತೆಗೂಡಿ ಹೋಗಿ ಅವನೊಡನೆ ಮಾತನಾಡಬೇಕು. ನಮ್ಮ ಗುರಿಯು ಅವನೊಡನೆ ಸಂಧಾನ ಏರ್ಪಡಿಸುವುದೇ ಹೊರತು, ಅವನ ಮೇಲೆ ದೋಷಾರೋಪಣೆ ಮಾಡುವುದಿಲ್ಲ. ಒಂದು ವೇಳೆ ಇನ್ನು ಮುಂದೆ, ಸಭೆಯ ಮುಂದೆ, ಆ ಸಹೋದರನ ದೋಷವನ್ನು ತೋರಿಸಬೇಕಾಗಿ ಬಂದರೆ, (ವಚನ 17). ಆವಾಗ ಸಭಾ ಹಿರಿಯರ ಸಾಕ್ಷಿ ಬೇಕಾಗುತ್ತದೆ. ಯಾವುದೇ ದೋಷವನ್ನು ಸಭೆಯಲ್ಲಿ ಸಾಬೀತು ಪಡಿಸುವುದಾದರೆ, ಇಬ್ಬರು ಅಥವಾ ಮೂವರ ಸಾಕ್ಷಿಗಳ ಮೂಲಕವೇ ಇದನ್ನು ಸ್ಥಿರಪಡಿಸಬೇಕು (ಧರ್ಮೋಪದೇಶಕಾಂಡ 19:15, 2ನೇ ಕೊರಿಂಥ 13:1).

17 ಒಂದು ವೇಳೆ ನಮ್ಮ ಸಹೋದರನು ಇನ್ನೂ ಪಶ್ಚಾತ್ತಾಪ ಪಡದಿದ್ದಲ್ಲಿ ಮತ್ತು ನಮ್ಮ ವಿರುದ್ಧ ಪಾಪ ಮಾಡುತ್ತಲೇ ಇದ್ದರೆ ಆವಾಗ, ಯೇಸುವು ಹೇಳುವಂತೆ ಸಭೆಗೆ ತಿಳಿಸಬೇಕು.

ವಿಶ್ವಾಸಿಗಳ ನಡುವಣ ವಾದಗಳ ವಿಷಯದಲ್ಲಿ ನಾವು ಸ್ಥಳೀಯ ದಂಡಾಧಿಕಾರಿಗಳ ಬಳಿಗೆ ಹೋಗಬಾರದು (1ನೇ ಕೊರಿಂಥ 6:1-6, ಮತ್ತು ವ್ಯಾಖ್ಯಾನ ನೋಡಿರಿ). ಇಲ್ಲಿ ಸಭೆ ಎಂದಾಗ, ಸ್ಥಳೀಯ ಸಭೆ ಎಂದೇ ಅರ್ಥ ಮಾಡಿಕೊಳ್ಳಬೇಕು. ಸಭೆ ಎಂದರೆ, ಹಿರಿಯರ ಒಂದು ಸಮುದಾಯವೆಂದೇ ಹೇಳಿಕೊಳ್ಳಬಹುದು, ಅಥವಾ ಒಟ್ಟು ಸಭಾ ಸದಸ್ಯರೆಂದು ಪರಿಗಣಿಸಬಹುದು. ಸಾಕ್ಷಿಗಳು, ಸಭೆಯ ಮುಂದೆ ಬಂದು ತಮ್ಮ ಹೇಳಿಕೆಯನ್ನು ಕೊಡಬೇಕು.

ಒಂದು ವೇಳೆ ಆ ಸಹೋದರನು, ಇನ್ನೂ ಪಶ್ಚಾತ್ತಾಪ ಪಡದೇ ಇದ್ದರೆ, ಅವನನ್ನು ಸಭೆಯಿಂದ ಹೊರದೂಡಬೇಕು ಮತ್ತು ಸಭಾ ಸದಸ್ಯರು ಅವನೊಡನೆ ಯಾವ ಸಂಬಂಧವನ್ನು ಇಟ್ಟುಕೊಳ್ಳಕೂಡದು. ಒಬ್ಬ ಮನುಷ್ಯನು ಸಭೆಯ ತೀರ್ಮಾನ ಹಾಗೂ ಕಟ್ಟುಪಾಡುಗಳಿಗೆ ಬಗ್ಗದಿದ್ದರೆ, ಆತನು ಸದಸ್ಯನಾಗಿರಲು ಅರ್ಹನಲ್ಲ. ಹೇಗಿದ್ದರೂ, ಈ ತರಹ ಕಠಿಣವಾದ ಶಿಕ್ಷೆಯು ಅವನ ಆತ್ಮವನ್ನು ಕೆಡಿಸುವುದಕ್ಕಲ್ಲ. ಆದರೆ ಅವನನ್ನು ಪಶ್ಚಾತ್ತಾಪದ ಕಡೆಗೆ ತಿರುಗಿಸಲು ಮಾತ್ರ (1ನೇ ಕೊರಿಂಥ 5:4-5 ನೋಡಿರಿ ಮತ್ತು ವ್ಯಾಖ್ಯಾನಿಸಿರಿ).

ಒಬ್ಬ ಸಹೋದರನು ಮಾನಸಾಂತರ ಪಡದೇ ಮತ್ತು ತನ್ನ ಪಾಪದಲ್ಲೇ ಮುಂದುವರೆದರೆ, ಅವನು ಒಬ್ಬ ವಿಗ್ರಹಾರಾಧಕ ಅಥವಾ ಸುಂಕದವನೆಂದು ಪರಿಗಣಿಸಬೇಕು. ವಿಗ್ರಹಾರಾಧಕರೂ ಮತ್ತು ಸುಂಕದವರು ಯಹೂದ್ಯರಲ್ಲಿ ಪಾಪಿಗಳೆಂದೇ ಪರಿಗಣಿಸಲ್ಪಡುತ್ತಾರೆ ಮತ್ತು ಅವರ ದೇವರ ಕುಟುಂಬಕ್ಕೆ ಸೇರಿದವರಲ್ಲ. ಪಶ್ಚಾತ್ತಾಪ ಪಡೆಯದ, ವಿಶ್ವಾಸಿಗಳನ್ನು ಹಾಗೆಯೇ ಪರಿಗಣಿಸಬೇಕು.

ನಾವು ಪಶ್ಚಾತ್ತಾಪ ಪಡದ ಮತ್ತು ಕಠಿಣವಾದ ಆ ಸಹೋದರನನ್ನು ನಾವು ಕ್ಷಮಿಸಬಹುದೇ ಎಂಬ ಪ್ರಶ್ನೆ ಉದ್ಭವಿಸುತ್ತದೆ? ಆತನು ಮಾನಸಾಂತರ ಪಟ್ಟರೆ, ಖಂಡಿತವಾಗಿ, ನಾವು ಅವನನ್ನು ಕ್ಷಮಿಸಬಹುದು. ಲೂಕ 17:3-4 ನೋಡಿರಿ. ಒಂದು ವೇಳೆ ಅವನು ಪಶ್ಚಾತ್ತಾಪ ಪಡದೇ ಹೋದರೂ ಸಹ, ನಾವು ಇನ್ನು ಅವನನ್ನು ಕ್ಷಮಿಸಬೇಕು (ವಚನ 21-22).

ಒಂದು ವೇಳೆ ನಾವು ಸಂಪೂರ್ಣವಾಗಿ ಮತ್ತು ಸ್ವ ಇಚ್ಛೆಯಿಂದ ನಮ್ಮ ಸಹೋದರನನ್ನು ಕ್ಷಮಿಸುವುದಾದರೆ, ನಂತರ ಅವನ ತಪ್ಪನ್ನು ಮರೆತರೆ, ಆವಾಗ ಈ ವಿಷಯವನ್ನು ಬಿಟ್ಟು ಬಿಡಬಹುದು. ಅವನ ಪಾಪ ನಮ್ಮ ಮೇಲೆ ಮಾತ್ರ ಇದ್ದರೆ, ಬೇರೆಯವರ ಸಮ್ಮುಖದಲ್ಲಿ ಅವನನ್ನು ನಿಂದಿಸುವ ಅಗತ್ಯವಿರುವುದಿಲ್ಲ. (1ನೇ ಕೊರಿಂಥ 6:7). ಆದರೆ ನಾವು ಪರಿಶುದ್ಧಾತ್ಮ ಪ್ರೇರಿತನಾಗಿ ಆ ಸಹೋದರನನ್ನು ಎದುರಿಸಬೇಕಾದಾಗ ಯೇಸುವು ನಮಗೆ ಈ ಮೂರು ವಚನಗಳ ಮುಖಾಂತರ ಹೇಗೆ ಅದರ ಬಗ್ಗೆ ನಡೆದುಕೊಳ್ಳಬೇಕೆಂದು ತಿಳಿಸಿದ್ದಾನೆ.

18 ಅಂತಹ ವಿಷಯಗಳಲ್ಲಿ ಸಭೆ ಅಥವಾ ಸಭಾ ಹಿರಿಯರ ಮಂಡಳಿಯು ಅಂತಿಮ ತೀರ್ಮಾನ ತೆಗೆದುಕೊಳ್ಳಬಹುದು. ಅವರು ತೀರ್ಪು, ಪರಲೋಕದಲ್ಲಿಯೂ ಬದ್ಧವಾಗಿರುತ್ತದೆ. ಅಂದರೆ ದೇವರಿಂದ ಅಂಗೀಕರಿಸಲ್ಪಡುತ್ತದೆ. ಅದೇ ರೀತಿ, ಆತನನ್ನು ಕ್ಷಮಿಸಿ ಅಥವಾ ತಪ್ಪಿತಸ್ಥನಾದ ಸಹೋದರನನ್ನು ಬಿಟ್ಟು ಬಿಟ್ಟರೆ, ದೇವರು ಸಹ ಆತನನ್ನು ಕ್ಷಮಿಸುತ್ತಾನೆ. ಆತನ ಹೆಸರಿನಲ್ಲಿ ಕಾರ್ಯ ಮಾಡುವುದಕ್ಕೆ ದೇವರು ಸಭೆಗೂ, ಸಭಾ ಹಿರಿಯರಿಗೂ ಸಂಪೂರ್ಣ ಅಧಿಕಾರ ಕೊಟ್ಟಿದ್ದಾನೆ (ಮತ್ತಾಯ 16:19, ಯೋಹಾನ 20:23 ನೋಡಿರಿ).

19-20 ಈ ಎರಡು ವಚನಗಳು, 18ರಲ್ಲಿದ್ದ ಸಂದರ್ಭವನ್ನು ಅನುಸರಿಸುತ್ತವೆ. ಸಭೆಯು ತನ್ನ ನಿರ್ಣಯವನ್ನು ಬದ್ಧ ಮಾಡಲು, ಅಥವಾ ಬಿಟ್ಟುಬಿಡಲು, ಸದಸ್ಯರೆಲ್ಲರೂ ಒಪ್ಪಬೇಕು.ಸಭೇಯವರು ಸರಿಯಾದ ತೀರ್ಮಾನ ತೆಗೆದುಕೊಳ್ಳಲು ಪರಿಶುದ್ಧಾತ್ಮನು ಸಹಾಯ ಮಾಡಲೇಬೇಕು. ಮತ್ತು ಇತನು ಎಲ್ಲರಿಗೂ ಇದೇ ರೀತಿಯಾದಂತ ಮಾರ್ಗದರ್ಶನ ನೀಡುವನು.ಒಂದು ವೇಳೆ, ಸಭಾ ಸದಸ್ಯರಲ್ಲಿ ಸಂಪೂರ್ಮವಾದ ಒಮ್ಮತ ಇಲ್ಲದಿದ್ದಾಗ ದೇವರ ಚಿತ್ತವೇನೆಂದು ತಿಳಿಯಲು ಬಹಳ ಕಷ್ಟವಾಗುತ್ತದೆ. ಒಂದು ವೇಳೆ ಸಭೆಯಲ್ಲಿ ಒಮ್ಮತವಿಲ್ಲದಿದ್ದಲ್ಲಿ, ಸಭೆಯು ಆ ಸಹೋದರನ ಮೇಲೆ ಯಾವ ಕಾರ್ಯವನ್ನು ಅವನಿಗೆ ವಿರುದ್ಧವಾಗಿ ಮಾಡಕೂಡದು.ಆದರೆ ಯಾವುದೇ ಕ್ರಮದ ಬಗ್ಗೆ ಒಮ್ಮತವಿದ್ದಲ್ಲಿ ಆ ಕ್ರಿಯೆಯು ದೇವರ ಚಿತ್ತಕ್ಕನುಸಾರವಾಗಿದ್ದು ಅದಕ್ಕೆ ದೇವರ ಅಧಿಕಾರಯುತ ಬೆಂಬಲವಿದೆ.

ಈ ವಚನಗಳನ್ನು ಬರೇ ತೀರ್ಮಾನಗಳನ್ನು ಒಬ್ಬ ಸಹೋದರ ಮೇಲೆ ತೆಗೆದುಕೊಳ್ಳುವುದಕ್ಕಾಗಿ ಮಾತ್ರ ಬರೆದಿಲ್ಲ. ಯಾವುದೇ ವಿಧವಾದ ಪ್ರಾರ್ಥನೆ ಅಥವಾ ಕೋರಿಕೆಯ ಬಗ್ಗೆಯೂ ಈ ವಚನಗಳು ಬರೆಯಲ್ಪಟ್ಟಿವೆ. ಎಲ್ಲಿ ಇಬ್ಬರಾಗಲೀ, ಮೂವರಾಗಲೀ, ಯೇಸುವಿನ ಹೆಸರಿನಲ್ಲಿ ಕೂಡಿ ಬರುತ್ತಾರೋ, ಅಲ್ಲಿ ಯೇಸು ಅವರೊಡನೆ ಇರುತ್ತಾನೆ. (ವಚನ 20). ಆತನ ಪವಿತ್ರಾತ್ಮವು ಅವರೊಳಗೆ ನೆಲೆಸಿರುತ್ತದೆ. ಅವರು ಪ್ರಾರ್ಥನಾ ಪೂರ್ವಕವಾಗಿ ಒಮ್ಮತಕ್ಕೆ ಬಂದರೆ, ಅದು ಪವಿತ್ರಾತ್ಮನಿಂದಲೇ ಆದದ್ದು ಎಂದು ಅವರು ಖಾತ್ರಿ ಮಾಡಿಕೊಳ್ಳಬಹುದು ಮತ್ತು ದೇವರ ಚಿತ್ತ[61] ದಂತೆ ಅವರು ಪ್ರಾರ್ಥಿಸುತ್ತಾ ಇರಬೇಕು.

ನಿಜವಾದ ಸಂಯುಕ್ತ ಪ್ರಾರ್ಥನೆಯು ಇರುವುದಕ್ಕೆ ನಮ್ಮ ಮನಸ್ಸುಗಳು "ಒಂದೆ" ಆಗಿರಬೇಕು. (ವಚನ 19). ನಾವು ಯಾವುದೇ ನಿರ್ದಿಷ್ಟವಾದ ವಿಷಕ್ಕಾಗಿ ಪ್ರಾರ್ಥಿಸುವಾಗ ಅದರ ಬಗ್ಗೆ ನಮ್ಮಲ್ಲಿ ಒಮ್ಮತವಿರಬೇಕು. ಒಗ್ಗಟ್ಟಿನ ಪ್ರಾರ್ಥನೆಗೆ ಬೇಕಾದ ಎರಡನೇ ಅಗತ್ಯತೆಯು ಏನೆಂದರೆ, ಅದು ಯೇಸುವಿನ ಹೆಸರಿನಲ್ಲಿಯೇ ಆಗಬೇಕು (ವಚನ 20). ಅಂದರೆ ಯೇಸುವಿಗಾಗಿ, ನಾವು ಒಂದೇ ಮನಸ್ಸುಳ್ಳವನಾಗಿ ಪ್ರಾರ್ಥಿಸುವುದಾದರೆ ಅದರಲ್ಲೂ ಯೇಸುವಿನ ಹೆಸರಿನಲ್ಲಿ ಮಾಡಿದರೆ, ಅದು ನೆರವೇರುವುದು. ಒಂದು ವೇಳೆ ದೇವರು ನಮ್ಮ ಪ್ರಾರ್ಥನೆಯನ್ನು ಈಡೇರಿಸದಿದ್ದರೆ, ಅನೇಕ ವೇಳೆ ನಾವು ಒಗ್ಗಟ್ಟಿನಿಂದ ಪ್ರಾರ್ಥನೆ ಮಾಡದಿರುವುದೇ ಇದಕ್ಕೆ ಕಾರಣ.

ವೈಯಕ್ತಿಕ ಪ್ರಾರ್ಥನೆ ಖಂಡಿತವಾಗಿ, ಬಹಳ ಮುಖ್ಯ (ಮತ್ತಾಯ 6:6). ಆದರೂ ಸಾಮೂಹಿಕ ಪ್ರಾರ್ಥನೆಯು ಸಹ ಮುಖ್ಯವೇ.ಈ ಎರಡು ತರಹದ ಪ್ರಾರ್ಥನೆಗಳು ಅತ್ಯವಶ್ಯಕ. ನಾವು ದೇವರಿಂದ ಸಹಾಯ ಹಾಗೂ ಮಾರ್ಗದರ್ಶನ ಕೇಳುವಾಗ ಗುಂಪು ಪ್ರಾರ್ಥನೆ ಬಹಳ ವಿಶೇಷವಾಗಿ ಕಾರ್ಯರೂಪಕ್ಕೆ ಬರುತ್ತದೆ.ನಾವು ಪ್ರಾರ್ಥಿಸುತ್ತರುವುದರಿಂದ, ಪರಿಶುದ್ಧಾತ್ಮನು, ಎಲ್ಲಾ ವಿಶ್ವಾಸಿಗಳಲ್ಲೂ ಕೆಲಸ ಮಾಡುತ್ತಾ, ಸಂಪೂರ್ಣವಾಗಿ ತನ್ನ ಶಕ್ತಿಯನ್ನು ನಮ್ಮಲ್ಲಿ ತೋರಮಾಡುತ್ತಾನೆ.

**ಯಾವುದೇ ಒಂದು ವಿಷಯದಲ್ಲಿ ಈ ಲೋಕದಲ್ಲಿ ನಿಮ್ಮಲ್ಲಿ ಇಬ್ಬರು ಒಪ್ಪಿಕೊಂಡು, ಕೇಳಿಕೊಂಡರೆ, ಅದು ನಿಮಗಾಗಿ ಮಾಡಲ್ಪಡುವುದು.** ಎಂಥಾ ವಿಸ್ಮಯಕಾರವಾದ, ವಾಗ್ದಾನ!

ಇದನ್ನು ನಾವು ನಂಬುತ್ತೇವೆಯೋ? ಗಂಡಂದಿರು ಮತ್ತು ಹೆಂಡತಿಯರು ಒಟ್ಟಾಗಿ ಪ್ರಾರ್ಥಿಸುವಾಗ ಇವರು ಈದನ್ನು ನಂಬುತ್ತಾರೋ? ನಾವು ಪ್ರಾರ್ಥನಾ ಕೂಟಗಳಲ್ಲಿ ಒಟ್ಟಾಗಿ ಸೇರಿದಾಗ, ನಾವು ಈ ವಾಗ್ದಾನದಲ್ಲಿ ನಂಬಿಕೆ ಇಟ್ಟಿದ್ದೇವೆಯೋ? ನಾವು ಮಾಡಬೇಕಾದುದು ಇಷ್ಟೇ, ನಾವು ಒಬ್ಬರಿಗೊಬ್ಬರು ಒಮ್ಮತಗೊಂಡು ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸಿದರೆ ನಂತರ ದೇವರು ಏನು ವಾಗ್ದಾನ ಮಾಡಿದ್ದಾನೊ ಅದನ್ನು ನಾವು ಕೇಳಿದಂತೆ ಕೊಡುವನು.

ಆದುದರಿಂದ ನಾವು ಒಟ್ಟಾಗಿ ಪ್ರಾರ್ಥನೆಗಾಗಿ ಕೂಡಿ ಬಂದಾಗ, ನಾವು ಸಣ್ಣ ಪುಟ್ಟ ವಿಷಯಗಳಿಗಾಗಿ ಪ್ರಾರ್ಥನೆ ಮಾಡದಿರೋಣ. ನಾವು ಧೈರ್ಯಗೊಂಡುಮಹತ್ತರವಾದ ಕೆಲಸಗಳಿಗಾಗಿ, ಮಹಾ ಕೋರಿಕೆಗಳನ್ನು ದೇವರ ಮುಂದೆ ಇಡಲು ನಾವು ಪ್ರಾರ್ಥನೆ ಮಾಡೋಣ. ನಮ್ಮ ಒಮ್ಮತದ ಪ್ರಾರ್ಥನೆಯನ್ನು ಮಾಡುವಾಗ ದೇವರ ಮಹಿಮಾ ಶಕ್ತಿಯು ನಮ್ಮ ಕೈಯಲ್ಲಿ ಇರುತ್ತದೆ. ನಾವು ದೇವರ ರಾಜ್ಯ ಬರಲೆಂದು ಪ್ರಾರ್ಥಿಸಬೇಕು. (ಮತ್ತಾಯ 6:10). ಒಕ್ಕಣೆ ಮಾಡಲು ಬೇಕಾದ ಆಳುಗಳಿಗಾಗಿ ನಾವು ಪ್ರಾರ್ಥಿಸಬೇಕು. (ಮತ್ತಾಯ 9:38). ಪರಿಶುದ್ಧಾತ್ಮನ ಸಹಾಯಕ್ಕಾಗಿ ನಾವು ಪ್ರಾರ್ಥಿಸಬೇಕು (ಲೂಕ 11:13). ನಮ್ಮ ಸಭೆಗಳಲ್ಲೂ, ನಮ್ಮ ಜೀವಿತದಲ್ಲೂ, ಪವಿತ್ರಾತ್ಮನ ಪ್ರೀತಿ ಮತ್ತು ಶಕ್ತಿ ತುಂಬಿ ಬರುವಂತೆ ಪಾರ್ಥಿಸಬೇಕು. ನಾವು ಯೇಸುಕ್ರಿಸ್ತನು ಸಭೆಯ ಮೂಲಕ ಮಹಿಮೆ ಹೊಂದಬೇಕೆಂದು ಪ್ರಾರ್ಥಿಸೋಣ.

## ಕೃಪೆ ತೋರದ ಆಳಿನ ಬಗ್ಗ ಸಾಮ್ಯ (18:21-25)

**21-22** ಲೂಕನ ಸುವಾರ್ತೆ 7:14ರಲ್ಲಿ ಯೇಸುವು ಈಗಾಗಲೇ ಹೇಳಿರುವಂತೆ, ಅವನು ದಿನಕ್ಕೆ ಏಳು ಸಾರಿ ನಿನಗೆ ತಪ್ಪು ಮಾಡಿ ಏಳು ಸಾರಿಯೂ ನಿನ್ನ ಕಡೆಗೆ ತಿರುಗಿಕೊಂಡು ನನಗೆ ಪಶ್ಚಾತ್ತಾಪವಾಯಿತೆಂದು ಹೇಳಿದರೆ ಅವನಿಗೆ ಕ್ಷಮಿಸು ಎಂದು ಹೇಳಿದನು. ಇದು ಯೇಸುವಿನ ಶಿಷ್ಯರಿಗೆ ಹೊಸ ಬೋಧನೆಯಾಗಿತ್ತು. ಒಂದು ವೇಳೆ ಈ ಮಾತುಗಳನ್ನು ಹೇಳುವಾಗ ಪೇತ್ರನು ಅಲ್ಲಿರಲಿಲ್ಲವೇನೋ ಮತ್ತು ಆತನಲ್ಲಿ ಯೇಸುವಿನ ಮಾತುಗಳ ಬಗ್ಗೆ ಸಂಶಯವಿದ್ದಿತೆಂದು ಕಾಣುತ್ತದೆ. ಆದುದರಿಂದ, ಯೇಸುವಿನ ಬಳಿಗೆ ಪೇತ್ರನು ಬಂದು ತನ್ನ ತಮ್ಮನನ್ನು ಎಷ್ಟು ಸಾರಿ ಕ್ಷಮಿಸಬೇಕೆಂದು ಕೇಳಿದನು. ಏಳೆಪ್ಪತ್ತುಸಾರಿ? ಪೇತ್ರನು ಒಂದು ಸುಲಭವಾದ ಸೂತ್ರವನ್ನು ಎದುರುನೋಡುತ್ತಿದ್ದಿರಬಹುದು.

ಅದಕ್ಕೆ ಯೇಸು ಹೇಳಿದ್ದು "ನಾನು ನಿನಗೆ ಹೇಳುತ್ತೇನೆ. ಏಳು ಸಾರಿ ಅಲ್ಲ.[62] ಏಳೆಪ್ಪತ್ತುಸಾರಿ". ನಾವು ನಮ್ಮ ಸಹೋದರನನನಲು ಏಳೆಪ್ಪತ್ತು ಸಾರಿ ಅಂದರೆ, 490 ಸಾರಿ ಕ್ಷಮಿಸಿದೆ ನಂತರ ಅಲ್ಲಿಗೆ ನಿಲ್ಲಿಸಬಿಡಬೇಕೆಂದು ಹೇಳಿಲ್ಲ. ಯೇಸು ಹೇಳಿದ ಅರ್ಥ ಹೀಗಿದೆ. ನಮ್ಮ ಸಹೋದರನು ಎಷ್ಟು ಸಾರಿ ಪಾಪ ಮಾಡಿದರೂ, ಅಥವಾ ಅವನ ಪಾಪ ಎಷ್ಟು ಗುರುತರವಾಗಿದ್ದರೂ, ಅವನನ್ನು ನಾವು ಕ್ಷಮಿಸುತ್ತಲೇ ಇರಬೇಕು. ಒಂದು ವೇಳೆ ಏಳೆಪ್ಪತ್ತು ಸಾರಿಗಿಂತಲೂ 490ಕ್ಕಿಂತಲೂ ಮತ್ತು ಈ ವಚನಗಳಲ್ಲಿ ನಮ್ಮ ಸಹೋದರನು ನಮ್ಮ ಕ್ಷಮೆಗಾಗಿ, ಅವನು ಪಶ್ಚಾತ್ತಾಪ ಪಡಬೇಕೆಂದು ಎಲ್ಲೂ ಹೇಳಿಲ್ಲ.

ನಾವು ದೇವರಿಂದ ಧಾರಾಳವಾಗಿ, ಕ್ಷಮೆ ಹೊಂದಿದ ಪ್ರಕಾರವೇ, ನಾವು ಇತರರನ್ನು ಖಂಡಿತವಾಗಿ ಧಾರಾಳವಾಗಿ ಮತ್ತು ಯಾವ ಷರತ್ತು ಇಲ್ಲದೆ ಕ್ಷಮಿಸಬೇಕು. ಅವರು ಪಶ್ಚಾತ್ತಾಪ ಪಟ್ಟರೂ ಸರಿ, ಪಡದಿದ್ದರೂ ಸರಿ. (ಮತ್ತಾಯ 6:12, 14:15, ಮಾರ್ಕ 11:25-26 ನೋಡಿರಿ ಮತ್ತು ವ್ಯಾಖ್ಯಾನಿಸಿರಿ).

ಒಂದೊಂದು ಸಾರಿ, ನಾವು ನಮ್ಮ ಸಹೋದರನನ್ನು ಬೇರೆ ಬೇರೆ ವಿಧ ವಿಧವಾದ ಪಾಪಗಳಿಗೆ ಕ್ಷಮಿಸಬೇಕು. ಒಂದೊಂದು ಸಾರಿ, ಅವನನ್ನು ಪದೇ ಪದೇ ಮಾಡುತ್ತಿರುವ ಪಾಪಕ್ಕಾಗಿ ಕ್ಷಮಿಸುತ್ತಲೇ ಇರಬೇಕು. ಆದರೆ ಒಂದೇ ಒಂದು ಪಾಪವನ್ನು ಮಾಡಿದ್ದಕ್ಕಾಗಿ, ನಾವು ಆತನನ್ನು ಯಾವಾಗಲೂ, ಮನ್ನಿಸುತ್ತಲೇ ಇರಬೇಕು. ಒಂದು ವೇಳೆ ನಮ್ಮ ಸಹೋದರನು ಒಂದು ದಿನ ಮಾಡಿದ ಪಾಪವನ್ನು ನಾವು ಕ್ಷಮಿಸಿದರೆ, ಮರುದಿನ, ಕ್ಷಮೆ ಮಾಡಲಾರದಂತಹ ದುರಾತ್ಮ ನಮ್ಮ ಮೇಲೆ ಬರಬಹುದು.

ಹಾಗಿದ್ದರೆ ಆ ಪಾಪಕ್ಕಾಗಿ ಅವನನ್ನು ಪದೇ ಪದೇ ಮನ್ನಿಸಬೇಕಾಗಬಹುದು. ಆ ಒಂದೇ ಪಾಪಕ್ಕಾಗಿ ನಮ್ಮ ಸಹೋದರನನ್ನು ಏಳೆಪ್ಪತ್ತು ಸಾರಿ ಕ್ಷಮಿಸಬೇಕೋ ಏನೋ!

**23** ಕ್ಷಮಿಸುವುದರ ಬಗ್ಗೆ ಯೇಸು ಈ ಸಾಮ್ಯವನ್ನು ಆವಾಗ ಹೇಳಿದನು. ಹಳೇ ಒಡಂಬಡಿಕೆಯಲ್ಲಿ ಕಟ್ಟಳೆ ಏನೆಂದರೆ, ಕಣ್ಣಿಗೆ ಕಣ್ಣು (ಮತ್ತಾಯ 5:38). ಆದರೆ ದೇವರ ರಾಜ್ಯದಲ್ಲಿ ಕಟ್ಟಳೆ ಹೀಗಿದೆ. ನಿನ್ನ ತಮ್ಮನನ್ನು ಕ್ಷಮಿಸು ಮತ್ತು ನಿನಗಂ ಕ್ಷಮೆ ದೊರಕುವುದು. ಈ ಸಾಮ್ಯದಲ್ಲಿರುವ ರಾಜನೇ ದೇವರು ಮತ್ತು ಆತನ ಸೇವಕರೇ ವಿಶ್ವಾಸಿಗಳಾಗಿ ಪ್ರತಿನಿಧಿಸುತ್ತಾರೆ.

**24** ಮೊದಲನೇ ಸೇವಕನು ರಾಜನಿಗೆ ಹತ್ತು ಸಾವಿರ ತಲಾಂತು ಕೊಡಬೇಕಾಗಿತ್ತು, ಅಂದರೆ ಅನೇಕ ಮಿಲಿಯನ್ ಡಾಲರ್‌ಗಳು.

**25** ಅವನು ಸಾಲ ಕೊಡಬೇಕಾದ್ದನ್ನು ಕೊಡಲಾರದೇ ಹೋದಾಗ, ರಾಜನು ಅವನನ್ನು ಅವನ ಕುಟುಂಬದವರನ್ನು ಗುಲಾಮರನ್ನಾಗಿ ಮಾಡಲು ಅಪ್ಪಣೆ ಮಾಡಿದನು.

**26-27** ಆದರೆ ಆ ಸೇವಕನು ಕೆಲ ಕಾಲ ಸಮಯಕ್ಕಾಗಿ ಬೇಡಿಕೊಂಡಾಗ ರಾಜ ಅವನ ಮೇಲೆ ಕನಿಕರಪಟ್ಟು ಅವನನ್ನು ಕ್ಷಮಿಸಿದನು. ಅವನ ಕೂಡಬೇಕಾದ ಸಾಲವನ್ನೆಲ್ಲಾ ಕ್ಷಮಿಸಿಬಿಟ್ಟನು.

**28-31** ಆದರೆ ಮೊದಲನೇ ಸೇವಕನು, ಇನ್ನೊಬ್ಬ ಜೊತೆ ಸೇವಕನ ಹತ್ತಿರ ಹೋಗಿ, ಅವನಿಗೆ ಬರಬೇಕಾದ ನೂರು ದಿನಾರ್ ಅಂದರೆ ಕೆಲವೇ ಡಾಲರ್‌ಗಳ ಸಾಲ ಕೇಳಿದನು. ಮತ್ತು ಮೊದಲನೇ ಸೇವಕನು ಎರಡನೇ ಸೇವಕನ ಮೇಲೆ ದಯ ತೋರಲಿಲ್ಲ. ಅವನು ಈತ ಸಾಲವನ್ನು ಮನ್ನ ಮಾಡಲೂ ಇಲ್ಲ ಮತ್ತು ತೀರಿಸಲು ಕಾಲಾವಕಾಶ ಕೊಡಲೂ ಇಲ್ಲ.

**32-35** ರಾಜನು ಈ ಸುದ್ಧಿಯನ್ನು ಕೇಳಿದ ಕೂಡಲೇ, ತಾನು ಕೊಟ್ಟಿದ್ದ ಕ್ಷಮೆಯನ್ನು ಆ ದುಷ್ಟ ಕನಿಕರವಿಲ್ಲದ ಸೇವಕನಿಂದ ವಾಪಸ್ಸು ಪಡೆದು, ಅವನು ಸಾಲ ತೀರಿಸುವ ತನಕ, ಅವನನ್ನು ಸೆರೆಮನೆಯಲ್ಲಿ ಹಿಂಸಿಸಿಬಿಟ್ಟನು. ಮತ್ತು ಈ ರೀತಿಯಾಗಿ ಪರಲೋಕದಲ್ಲಿ ನನ್ನ ತಂದೆಯು ನಿಮ್ಮೊಬ್ಬಬ್ಬರನ್ನು ನಡೆಸುವನು. ನೀನು ನಿನ್ನ ತಮ್ಮನನ್ನು ಕ್ಷಮಿಸದೇ ಹೋದಲ್ಲಿ ಮಾತ್ರ (ವಚನ 35).

ದೇವರು ಎಲ್ಲಾ ಮನುಷ್ಯರ ಪಾಪಗಳ (ಸಾಲಗಳ) ಲೆಕ್ಕವನ್ನಿಟ್ಟಿದ್ದಾನೆ. ನಾವು ದೇವರಿಗೆ ಕೊಡಬೇಕಾದ ಸಾಲವು ಬಹಳವಾಗಿದ್ದು ಅದು ಮೊದಲನೇ ಸೇವಕನ ಸಾಲದ ರೂಪದಲ್ಲಿದೆ. ನಾವು ಏನೇ ಒಳ್ಳೇ ಕಾರ್ಯಗಳನ್ನು ಮಾಡಿದ್ದಾಗ್ಯೂ, ನಾವು ನಮ್ಮ ಸಾಲವನ್ನು ತೀರಿಸಲಾರೆವು. ಆದರೆ ದೇವರು ತನ್ನ ಕೃಪೆಯ ಮೂಲಕ ಸಂಪೂರ್ಣವಾಗಿ ನಮ್ಮನ್ನು ಕ್ಷಮಿಸಿಬಿಡುತ್ತಾನೆ. ಅಂತಹ ಮಹಾ ಕ್ಷಮೆಯನ್ನು ಹೊಂದಿದವರಾದ ನಾವು ಹೇಗೆ ಬೇರೆಯವರವರ ಬಗ್ಗೆ ದಯೆ ತೋರಿಸದೇ ಇರುವುದು? ಆದುದರಿಂದ ನಮ್ಮ ಸಹೋದರರನ್ನು ಕ್ಷಮಿಸೋಣ. ಬರೇ ಮಾತಿನಿಂದಲ್ಲ. ಹೃದಯದ ಆಳದಿಂದ.

ಈ ಸಾಮ್ಯವು ನಾವು ನಮ್ಮ ಸಹೋದರರನ್ನು ಕ್ಷಮಿಸದೇ ಹೋದರೆ, ದೇವರು ತನ್ನ ಕನಿಕರವನ್ನು ನಮ್ಮಿಂದ ಹಿಂತೆಗೆದುಕೊಳ್ಳುತ್ತಾನೆ. ಕೆಲವು ಕ್ರೈಸ್ತರು ಹೀಗೆ ಹೇಳುತ್ತಾರೆ. ಬೇರೆಯವರಿಗೆ ದಯೆ ತೋರದವನು, ತಾನೇ ದೇವರ ದಯೆಯನ್ನು ಪಡೆದವನಾಗಿಲ್ಲ. ಅಂದರೆ ಆತನು ಯಾವಾಗ್ಯೂ ನಿಜವಾದ ಕ್ರಿಸ್ತನಾಗಿ ಪ್ರಾರಂಭದಿಂದಲೇ ಇರಲಿಲ್ಲ. (ಲೂಕ 7:41-43, 47). ಆದರೆ ಇನ್ನು ಕೆಲವರು ಒಂದು ವೇಳೆ ದೇವರಿಂದ ದಯೆ ಹೊಂದಿದ, ಕ್ಷಮೆ ಪಡೆದ ನಂತರವೂ, ಬೇರೆಯವರನ್ನು ಕ್ಷಮಿಸದೇ ಹೋದ ಕಾರಣ ಅದನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ ಎಂದು ಹೇಳುತ್ತಾರೆ (ಸಾಮಾನ್ಯ ವಿಷಯಗಳು, ನಾವು ನಮ್ಮ ರಕ್ಷಣೆಯನ್ನು ಕಳೆದುಕೊಳ್ಳಬಹುದೇ? ನೋಡಿರಿ).

---

## ಅಧ್ಯಾಯ - 19

### ವಿವಾಹ ವಿಚ್ಛೇದ (19:1-12) (ಮಾರ್ಕ 10:1-12)

**1-19** ಮಾರ್ಕನ ಸುವಾರ್ತೆ 10:1-12ನ್ನು ನೋಡಿರಿ ಮತ್ತು ವ್ಯಾಖ್ಯಾನಿಸಿರಿ.

**10** ಯೇಸುವು ವಿವಾಹದ ಬಗ್ಗೆ ಮಾತನಾಡುವಾಗ, ಹೇಗೆ ಹೇಳಿದನಲ್ಲಾ, ದೇವರು ಕೂಡಿಸಿದ್ದನ್ನು ಮನುಷ್ಯನು ಅಗಲಿಸಬಾರದು (ವಚನ 6).

ಬೇರೆ ಮಾತಿನಲ್ಲಿ ಹೇಳುವುದಾದರೆ ಮದುವೆ ಸಂಬಂಧ, ಅವನ ನಂಬಿಗಸ್ತಳಾಗದೇ ಇದ್ದಲ್ಲಿ, ಒಬ್ಬನು ತನ್ನ ಹೆಂಡತಿಯನ್ನು ತ್ಯಜಿಸಿ, ಬೇರೊಬ್ಬಳನ್ನು ಮದುವೆಯಾಗಕೂಡದು (ವಚನ 9). ದೇವರ ಸಮಾಲೋಚನೆ ಮತ್ತು ಆಸೆ ಇದೇ ಆಗಿದೆ. ಒಂದು ಸಾರಿ ಒಬ್ಬ ಪುರುಷನು ಒಬ್ಬ ಸ್ತ್ರೀಯನ್ನು ಮದುವೆ ಮಾಡಿಕೊಂಡರೆ, ಅವರು ಅದೇ ಸ್ಥಿತಿಯಲ್ಲಿರಲೇಬೇಕು. ಮನುಷ್ಯರು ಪ್ರಾಣಿಗಳಂತಲ್ಲ (1ನೇ ಕೊರಿಂಥ 7:10-11 ನೋಡಿರಿ ಮತ್ತು ವ್ಯಾಖ್ಯಾನಿಸಿರಿ).

ಶಿಷ್ಯರಿಗೆ ಗಂಡ ಹೆಂಡತಿಯರ ನಡುವೆ ಆಗಾಗ ಸಮಸ್ಯೆಗಳು ಬರುತ್ತವೆಯೆಂದು ಗೊತ್ತಿತ್ತು. ಒಂದು ವೇಳೆ ವಿವಾಹ ವಿಚ್ಛೇದನಕ್ಕೆ ಆಸ್ಪದ ಕೊಡದಿದ್ದರೆ ನಂತರ ಮದುವೆ ಮಾಡಿಕೊಳ್ಳದೇ ಇರುವುದೇ ಲೇಸೆಂದು ಅವರು ಭಾವಿಸಿದ್ದರು. ಅಸಂತೋಷವುಳ್ಳ ಮದುವೆಗಿಂತ, ಮದುವೆ ಇಲ್ಲದೇ ಇರುವುದು ಲೇಸು ಎಂದು ಯಹೂದ್ಯರ ಹೇಳಿಕೆಯೊಂದಿದೆ. ಜ್ಞಾನೋಕ್ತಿ 21:9, 19,)

**11.** ಆದರೆ ಯೇಸು ಅದಕ್ಕೆ ಉತ್ತರ ಕೊಟ್ಟು ಹೀಗೆ ಹೇಳಿದನು. ಮದುವೆ ಮಾಡಿಕೊಳ್ಳದಿರುವುದೇ ಲೇಸು (ವಚನ 10). ಈ ಮಾತು ಬಹಳ ಜನರಿಗಲ್ಲ. ಯಾರನ್ನು ದೇವರು ವಿಶೇಷವಾಗಿ ಕರೆದಿದ್ದಾನೋ ಅವರು ಮದುವೆಯಾಗದೇ ಇರಬೇಕೆಂದು ಆಶಿಸುತ್ತಾನೋ, ಅಂತಹವರು ಈ ಬೋಧನೆಯನ್ನು ಅಂಗೀಕರಿಸಬಹುದು. ಅದಂರೆ ಯಾರಿಗೆ ಈ ಅವಕಾಶವನ್ನು ದೇವರು ಕೊಟ್ಟಿದ್ದಾನೋ ಅವರು ಮದುವೆಯಾಗದೇ ಇರಬಹುದು (1ನೇ ಕೊರಿಂಥ 7:7-9 ನೋಡಿರಿ ಮತ್ತು ವ್ಯಾಖ್ಯಾನಿಸಿರಿ).

ಅನೇಕ ಜನರು ಮದುವೆ ಮಾಡಿಕೊಳ್ಳಲು ಕರೆಯಲ್ಪಟ್ಟಿದ್ದಾರೆ. ನಿಜವಾಗಿಯೂ, ಯಹೂದ್ಯರು ಮದುವೆ ಎಂಬುದು ಒಂದು ಕರ್ತವ್ಯವೆಂದು ನೆನಸಿದ್ದಾರೆ. (ಆದಿಕಾಂಡ 2:24). ಮದುವೆ ಮಾಡಿಕೊಳ್ಳುವುದು ದೇವರ ಅಪ್ಪಣೆಯೇ ಸರಿ. (ಯೆರೆಮಿಯಾ 29:6). ಮದುವೆ ಎಂಬ ನೊಗವನ್ನು ಸುಲಭವಾಗಿ ಕಳಚಿಬಿಡುವುದು ಆಗುವುದಿಲ್ಲ ಎಂಬ ಕಾರಣದಿಂದ, ಮದುವೆಯನ್ನು ತಪ್ಪಿಸುವುದು ಸರಿಯಲ್ಲ.

**12** ಯೇಸುವು ಮೂರು ವಿಧವಾದ ಜನರು ಮದುವೆ ಮಾಡಿಕೊಳ್ಳದೇ ಇರಬಹುದೆಂದು ತಿಳಿಸುತ್ತಾನೆ. ಮೊದಲನೆಯವರು ಯಾಕೆಂದರೆ, ಜನ್ಮದಿಂದಲೇ ನಪುಂಸಕರಾಗಿ ಹುಟ್ಟಿದವರು. ಇನ್ನು ಕೆಲವರು ಅಂಗ ಊನವುಳ್ಳವರಾಗಿದ್ದು, ಅವರು ದಾಂಪತ್ಯದಲ್ಲಿ ಸಂಭೋಗ ಮಾಡಲು ಅಶಕ್ತರಾಗಿರುವವರು. ಎರಡನೆಯದಾಗಿ, ಬೇರೆ ಜನರಿಂದ, ನಪುಂಸಕರಾಗಿ ಮಾಡಲ್ಪಟ್ಟವರು. ಕ್ರೂರವಾದ ಹಿಂಸೆಯಾಗಿತ್ತು. ಮೂರನೇಯದಾಗಿ, ಪರಲೋಕ ರಾಜ್ಯದ ಸಲುವಾಗಿ, ಇನ್ನು ಕೆಲವರು ದೇವರಿಂದ, ಆರಿಸಲ್ಪಟ್ಟ ಅವರು ಒಂಟಿಯಾಗಿ ಇರಬೇಕೆಂದು ಆಜ್ಞೆ ಹೊಂದಿದವರು. ಅವರು ತಮ್ಮ ಎಲ್ಲಾ ಲಕ್ಷ್ಯವನ್ನು ಇವರನ್ನು ಸೇವಿಸುವುದಕ್ಕೋಸ್ಕರವೇ ಪೂರ್ಣವಾಗಿ ಕೊಡಬೇಕಾದವರು ಅಪೋಸ್ತಲನಾದ ಪಾಲನು ಅಂತಹ ವ್ಯಕ್ತಿಯಾಗಿದ್ದನು. (1ನೇ ಕೊರಿಂಥ 7:32-35 ನೋಡಿರಿ).

ಆದುದರಿಂದ ಯೇಸುವು ಇವುಗಳಿಗೆ ಕೊನೆಗಾಣಿಸುತ್ತಾ, ಯಾರು ಮದುವೆ ಮಾಡಿಕೊಳ್ಳಕೂಡದೆಂದು ಎಂಬ ಬೋಧನೆಯನ್ನು ಅಂಗೀಕರಿಸುತ್ತಾರೆ, ಅವರು ಇದನ್ನು ಒಪ್ಪಲಿ.

## ಚಿಕ್ಕಮಕ್ಕಳು ಮತ್ತು ಯೇಸುವು (19:13-15)

(ಮಾರ್ಕ 10:13-16, ಲೂಕ 18:15-17)

**13-15** ಮಾರ್ಕ 10:13-16 ನೋಡಿರಿ ಮತ್ತು ವ್ಯಾಖ್ಯಾನಿಸಿರಿ.

## ಐಶ್ವರ್ಯವಂತನಾದ ಯವನಸ್ಥನು (19:16-30)

(ಮಾರ್ಕ 10:17-31, ಲೂಕ 18:18-30)

**16-30** ಮಾರ್ಕ 10:17-31 ನೋಡಿರಿ ಮತ್ತು ವ್ಯಾಖ್ಯಾನಿಸಿರಿ.

---

# ಅಧ್ಯಾಯ - 20

## ದ್ರಾಕ್ಷಿ ತೋಟದಲ್ಲಿನ ಕೆಲಸಗಾರರ ಕುರಿತು ಸಾಮ್ಯ (20:1-16)

**1-2** ಮತ್ತಾಯನ ಸುವಾರ್ತೆ ಅಧ್ಯಾಯ 13ರಲ್ಲಿ ಬರೆದಿರುವ ಸಾಮ್ಯದಲ್ಲಿ, ದೇವರ ರಾಜ್ಯ ಹೇಗಿದೆ ಎಂದು ಯೇಸುವು ವರ್ಣಿಸುತ್ತಾನೆ. ಈ ಸಾಮ್ಯದಲ್ಲಿ ಭೂಮಾಲೀಕನು, ದೇವರೇ ಸಾಮ್ಯದಲ್ಲಿ ಭೂ ಒಡೆಯನು ತನ್ನ ದ್ರಾಕ್ಷೆ ತೋಟದಲ್ಲಿ ಕೆಲಸ ಮಾಡಲು ಕೆಲವು ಆಳುಗಳನ್ನು ಬೆಳಗ್ಗೆ ಕರೆದನು. ಯೇಸುವಿನ ಕಾಲದಲ್ಲಿ ತೋಟದ ಕೆಲಸಗಾರರು, ಬೆಳಗ್ಗೆ 6 ರಿಂದ ಸಂಜೆ 6ರ ವರೆಗೆ ಕೆಲಸ ಮಾಡುತ್ತಿದ್ದರು. ಭೂಮಾಲೀಕನು ಅವರಿಗೆ ದಿನಗೂಲಿ ಎಂದು ಒಂದು [63]ದಿನಾರ್ ನಾಣ್ಯಕೊಡುತ್ತಿದ್ದನು. ಅದು ಯೋಗ್ಯ ಕೂಲಿಯಾಗಿದ್ದು, ಕೆಲಸಗಾರರು ಸಂತೋಷದಿಂದ ಸ್ವೀಕರಿಸುತ್ತಿದ್ದರು.

**3-7** ಮೂರನೇ, ಆರನೇ, ಒಂಭತ್ತನೇ ಮತ್ತು ಹನ್ನೊಂದನೇ ಗಂಟೆಗಳಲ್ಲಿ ಅಂದರೆ ಬೆಳಗ್ಗೆ, 9 ಘಂಟೆ, ಮಧ್ಯಾಹ್ನ 12 ಘಂಟೆಗೆ, ಅಪರಾಹ್ನ 3 ಘಂಟೆ ಮತ್ತು ಸಂಜೆ 5 ಘಂಟೆಗೆ ಇನ್ನು ಅನೇಕರು ಕೆಲಸವಿಲ್ಲದೇ ಕುಳಿತಿರುವವರನ್ನು ಭೂಮಾಲೀಕನು ಅವರನ್ನು ಕರೆದು ಕೆಲಸಕ್ಕೆ ನೇಮಿಸಿಕೊಂಡನು. "ನಾನು ನಿಮಗೆ ಸರಿಯಾದ ಕೂಲಿಯನ್ನು ಕೊಡುತ್ತೇನೆ" (ವಚನ 4).

**8-10** ಸಾಯಂಕಾಲ ಸಮೀಪಿಸಿದಾಗ ಅಂದರೆ 6 ಘಂಟೆಯಾದಾಗ, ಎಲ್ಲಾ ಕೂಲಿಯಾಳುಗಳಿಗೆ ಒಂದು ದಿನಾರಿನಂತೆ ಅವರು ಎಷ್ಟು ಹೊತ್ತು ಕೆಲಸ ಮಾಡಿದ್ದರೂ ಸರಿ, ಕೂಲಿ ಕೊಟ್ಟನು.

ನಾವು ಇಲ್ಲಿ ಎರಡು ಅಂಶಗಳನ್ನು ಈ ಸಾಮ್ಯದಲ್ಲಿ ಗಮನಿಸಬೇಕು. ಮೊದಲನೇಯದಾಗಿ ದಿನಾರ್ ಎಂಬುದು ರಕ್ಷಣೆಯನ್ನು ಸೂಚಿಸುತ್ತದೆ. ದೇವರಿಂದ ಆರಿಸಲ್ಪಟ್ಟವರೆಲ್ಲರೂ, ಒಂದೇ ಸಮನಾದ ರಕ್ಷಣೆಯನ್ನು ಪಡೆಯುತ್ತಾರೆ. ಅವರು ಎಷ್ಟು ಕಾಲ[64] ಕ್ರೈಸ್ತರಾಗಿದ್ದರು, ಎಷ್ಟು ಕಾಲ ದೇವರ ಸೇವೆ ಮಾಡಿದ್ದರು ಎಂಬ ಗಣನೆಯಿಲ್ಲದೇನೇ ಶಿಲುಬೆಯ ಮೇಲೆ ಯೇಸುವಿನ ಜೊತೆಯಲ್ಲಿ ತೂಗುಹಾಕಲ್ಪಟ್ಟ ಕಳ್ಳನು ತನ್ನ ಜೀವಿತದ ಕಡೇ ಘಳಿಗೆಯಲ್ಲಿ ಯೇಸುವನ್ನು ನಂಬಿದನು. ಮತ್ತು ಇತರ ವಿಶ್ವಾಸಿಗಳಂತೆ ಅದೇ ರಕ್ಷಣೆ ಪಡೆದನು (ಲೂಕ 23:39-43).

ಈ ವಚನಗಳಲ್ಲಿ ನಾವು ತಿಳಿಯಬೇಕಾದುದು ಏನೆಂದರೆ, ದೇವರು ನಿಷ್ಪಕ್ಷಪಾತಿಯಾಗಿದ್ದಾನೆ. ಅವನು 12 ಘಂಟೆಗಳ ಕಾಲ ಕೆಲಸ ಮಾಡಿದವರಿಗೆ, ಒಂದು ದಿನಾರ್‌ನಂತೆ ಕೂಲಿ ಕೊಡಲು ಒಪ್ಪಿದನು. ಮತ್ತು ಆತನು ಆ ಕರಾರಿಗೆ ಬದ್ಧನಾಗಿದ್ದನು. ಬಹಳ ಕಡಿಮೆ ಕೆಲಸ ಮಾಡಿದವರ ಬಗ್ಗೆ ಉದಾರ ನೀತಿ ತಳೆದನು. ಅವರು ನಿರೀಕ್ಷೆ ಮಾಡಿದ್ದಕ್ಕಿಂತ ಹೆಚ್ಚಾಗಿ ಅವರಿಗೆ ಕೂಲಿ ಕೊಟ್ಟನು. ಉದಾರಿಯಾಗಿರುವುದು ನಿಷ್ಪಕ್ಷಪಾತವಲ್ಲ. ದೇವರು ಯಾರನ್ನು ಆರಿಸಿಕೊಳ್ಳುತ್ತಾನೆ. ಅವರ ಬಗ್ಗೆ ಉದಾರಿಯಾಗಿರುತ್ತಾನೆ. ಯಾರಿಗೆ ತನ್ನ ಕೃಪೆ ತೋರಿಸಬೇಕೋ ಅವರಿಗೆ ಕೊಡುತ್ತಾನೆ (ರೋಮಾಯ 9:18-21 ನೋಡಿರಿ ಮತ್ತು ವ್ಯಾಖ್ಯಾನಿಸಿರಿ).

ನಮ್ಮ ರಕ್ಷಣೆಯು ಕೃಪೆಯಿಂದಲೇ ಬರುವಂತಹದ್ದು. ನಾವು ಎಷ್ಟು ಘಂಟೆ ಕಾಲ ಕೆಲಸ ಮಾಡಿದೆವು ಎಂಬುದನ್ನು ಅದು ಅವಲಂಬಿಸಿರುವುದಿಲ್ಲ. ನಾವು ರಕ್ಷಣೆಯನ್ನು ಸಂಪಾದಿಸಲಾರೆವು. ಅದು ದೇವರ ವರವೇ ಸರಿ. (ಎಫೆಸ 2:8-9 ನೋಡಿರಿ ಮತ್ತು ವ್ಯಾಖ್ಯಾನಿಸಿರಿ).

**11-12** ಯಾರು ಹನ್ನೆರಡು ಘಂಟೆಗಳ ಕಾಲ ಕೆಲಸ ಮಾಡಿದರೋ, ಆ ವ್ಯಕ್ತಿಗಳು ಕಡಿಮೆ ಕೆಲಸ ಮಾಡಿದವರಿಗೂ ಅಷ್ಟೇ ಕೂಲಿ ದೊರೆತದನ್ನು ನೋಡಿ, ಗುಣ ಗುಟ್ಟಿದರು. ಯಾಕೆ? ಅವರಿಗೆ ಅನ್ಯಾಯವಾಯಿತು ಎಂದಲ್ಲ. ಆದರೆ ಅವರಲ್ಲಿ ಅಸೂಯೆ ಉಂಟಾದುದರ ಫಲವಾಗಿ ಹಾಗೆಂದರು.

ನಾವು ಸಹ ಇದೇ ತರಹದ ಅಸೂಯೆಯನ್ನು ಆಗಾಗ್ಗೆ ಅನುಭವಿಸುವುದಿಲ್ಲವೇ? ಯಾರಿಗೋ ಬಡ್ತಿ ದೊರಕಿತು ಅಥವಾ ಹೆಚ್ಚಿನ ಸಂಬಳ ದೊರೆಯಿತು ಮತ್ತು ನಾವು ಈಗೇನು ಮಾಡುವುದು? ನಾವು ಗುಣುಗುಟ್ಟುತ್ತೇವೆ. ಅನ್ಯಾಯವಾಯಿತೆಂದು ನಾವು ಗುಣುಗುಟ್ಟುತ್ತೇವೆ. ಆದರೆ ನಾವು ಇಲ್ಲೇ ತಪ್ಪಿದ್ದೇವೆ. ಯಾಕೆಂದರೆ ನಾವು ಅಸೂಯೆ ಪಡುತ್ತೇವೆ. ನಾವು ನಮ್ಮ ನೆರೆಯವನಿಗೆ ಸಿಕ್ಕಿದ ಒಳ್ಳೇ ಅದೃಷ್ಟ ನೋಡಿ ಹಾಗೆ ಮಾಡುತ್ತೇವೆ. (ವಿಮೋ 20:17).

ಇನ್ನೊಂದು ಅಸೂಯೆ ಪಡುವಂತಹ ದೃಷ್ಟಾಂತವು ಲೂಕ 25:35ರಲ್ಲಿ ನಮಗೆ ಹಿರಿಯ ಸಹೋದರನನ್ನು ಕಳೆದು ಹೋದ ಮಗನ ಸಾಮ್ಯದಲ್ಲಿ ಮಾಡಿ ತೋರಿಸಿದ್ದಾನೆ. ಇಲ್ಲಿ ಹನ್ನೆರಡು ಘಂಟೆಗಳ ಕಾಲ ಕೆಲಸ ಮಾಡಿದ ಆಳುಗಳಿಗೆ ಸಮನಾಗಿ ಹಿರಿಯ ಮಗನು ಮಾಡಿದನು. ಅವನಿಗೇನು ಅನ್ಯಾಯವಾಗಿಲ್ಲ. ಅವನ ತಂದೆಯೂ ಅವನಿಗೆ ಹೀಗೆ ಹೇಳಿದನು. ಮಗನೇ ನನ್ನದೆಲ್ಲವೂ ನಿನ್ನದೇ ಅಲ್ಲವೇ? (ಲೂಕ 15:31). ಹಾಗಿದ್ದರೂ ಹಿರಿಯ ಸಹೋದರನು ಕೋಪಗೊಂಡನು. ಯಾಕೆ? ಯಾಕೆಂದರೆ ಅವನಿಗೆ ತನ್ನ ತಮ್ಮನ ಮೇಲೆ ಅಸೂಯೆ ಉಂಟಾಯಿತು.

**13-15** ಆಮೇಲೆ ಭೂಮಾಲಿಕನು, ಒಬ್ಬನನ್ನು ಕರೆದು ಹಾಗೆಂದನು, ನಾನು ನಿಮಗೇನು ಅನ್ಯಾಯ ಮಾಡಲಿಲ್ಲವಲ್ಲ (ವಚನ 13). ನಾವು ಒಂದು ವೇಳೆ ಕಡಿಮೆ ಕೆಲಸ ಮಾಡಿದವರ ಬಗ್ಗೆ ಉದಾರವಾಗಿ ನಡೆದುಕೊಂಡರೆ, ಅದು ನನ್ನ ಹಕ್ಕು. ನಾನು ಉದಾರಿಯಾಗಿದ್ದೇನೆಂದು ನೀವು ನನ್ನ ಮೇಲೆ ಅಸೂಯೆ ಪಡುತ್ತೀರಾ?

ನಾವು ದೇವರ ಎದುರಾಗಿ ಗುಣಗುಟ್ಟದೇ ಇರೋಣ. ನಾವು ನಮ್ಮ ಲೌಕಿಕ ಯಜಮಾನರ ಮೇಲೆ ಗುಣುಗುಟ್ಟಿದರೆ, ನಾವು ದೇವರಿಗೆ ಗುಣುಗುಟ್ಟಿದ ಹಾಗಾಯಿತು. ಯಾಕೆಂದರೆ, ದೇವರೆ ಆ ಯಜಮಾನರನ್ನು ನಮ್ಮ ಮೆಲೆ ನೇಮಿಸಿದ್ದಾನೆ. ಒಂದು ವೇಳೆ ಮಾನವ ಯಜಮಾನನು ನಿಜವಾಗಿಯೂ ಅನ್ಯಾಯವಾಗಿದ್ದರೆ ನಾವು ದೇವರಲ್ಲಿ ಮೊರೆ ಇಡೋಣ (ಯಾಕೋಬ 5:4). ಆದರೆ ಅಸೂಯೆತನದಿಂದ ನಾವು ಗುಣುಗುಟ್ಟದೇ ಇರೋಣ. ದೇವರ ಎಲ್ಲ ವಿಶ್ವಾಸಿಗಳೊಡನೆ ಒಂದು ಒಪ್ಪಂದ ಮಾಡಿ ಕೊಂಡಿದ್ದಾನೆ.

ದೇವರು ನಮಗೆ ಕೂಲಿ ಕೊಡಲು ಒಪ್ಪಿಕೊಂಡಿದ್ದಾನೆ. ಆ ಕೂಲಿ ಏನೆಂದರೆ ನಿತ್ಯಜೀವ[65] ಮತ್ತು ನಾವು ಆತನನ್ನು ಸೇವಿಸಲು ಒಪ್ಪಿಕೊಂಡಿದ್ದೇವೆ. ಆದುದರಿಂದ ಈ ಸೇವೆ ಮಾಡುವ ಕಾಲದಲ್ಲಿ ನಮ್ಮ ಕೆಲಸ ಕಠಿಣಗೊಂಡರೆ, ಅಥವಾ ಕಷ್ಟಕರವಾದ ಸನ್ನಿವೇಶದಲ್ಲಿ ಸಿಕ್ಕಿಕೊಂಡಾಗ ನಾವು ದೂರುವುದಕ್ಕೆ ನಮ್ಮಲ್ಲಿ ಏನು ಸಿಕ್ಕುವುದಿಲ್ಲ. ದೇವರು ಅವನು ಒಪ್ಪಿಕೊಂಡಂತೆ ತನ್ನ ಕಾರ್ಯ ಮಾಡುವನು. ನಾವು ಸಹ ನಮ್ಮ ಒಪ್ಪಂದದಂತೆ ನಡೆದುಕೊಳ್ಳಬೇಕು.

**16** ಆದುದರಿಂದ, ಕಡೆಯಲ್ಲಿ ಬರುವವನು ಮೊದಲಿಗನಾಗುವನು. ಮೊದಲಿಗನಾಗಿರುವವನು ಕಡೆಯವನಾಗುವನು. ಕಡೇ ಕೆಲಸಗಾರರಿಗೆ ಮೊದಲು ಕೂಲಿ ದೊರಕಿತು (ವಚನ 8-9). ಕೆಲವು ಸಾರಿ ಜೀವನದ ಕಡೇ ಭಾಗದಲ್ಲಿ ಕ್ರಿಸ್ತನಲ್ಲಿ ವಿಶ್ವಾಸಿಗಳಾದರೆ, ಅವರಿಗೆ ಹೆಚ್ಚಿನ ಕೃಪೆ ಮತ್ತು ಹೆಚ್ಚಿನ ಸರ್ಮದ್ಧಿಯು, ತಮ್ಮ ಜೀವಮಾನದ ಬಹಳಷ್ಟು ಭಾಗವನ್ನು ಕ್ರಿಸ್ತರಾಗಿ ಬದುಕದವರಿಗಿಂತ ಅವರಿಗೆ ದೊರಕುತ್ತದೆ.

ಯಾರು ಮೊದಲು ಬರಬೇಕೆಂದು ಕಷ್ಟಪಟ್ಟು ಕೆಲಸ ಮಾಡುತ್ತಾರೋ ಅವರು ಅನೇಕ ಸಲ ಕಡೆಯಲ್ಲಿ ಬೀಳುತ್ತಾರೆ. ಯಾರು ಕ್ರಿಸ್ತನಲ್ಲಿ ಆತನ ಕೃಪೆಯಲ್ಲಿ ಭರವಸೆ ಇಡುತ್ತಾರೋ ಅವರೇ ಮೊದಲಿಗರಾಗುತ್ತಾರೆ. ಯಾರು ತಮ್ಮ ಕೆಲಸದ ಮೇಲೆ ಭರವಸೆ ಇಡುತ್ತಾರೋ, ಅವರು ಕಡೆಯವರಾಗುವರು. ಯಾರು ಕೃತಜ್ಞತೆಯುಳ್ಳವರಾಗಿರುವರೋ ಅವರೇ ಮೊದಲಿಗರಾಗುತ್ತಾರೆ. ಯಾರು ಅಸೂಯೆ ಪಟ್ಟು ಗುಣಗುಟ್ಟುತ್ತಾರೋ ಅವರೇ ಕಡೆಯವರಾಗುವರು (ಮಾರ್ಕ 10:3, ನೋಡಿರಿ ಮತ್ತು ವ್ಯಾಖ್ಯಾನಿಸಿರಿ).

---

# ಅಧ್ಯಾಯ - 21

## ವಿಜಯೋದ್ಭವ ಪ್ರವೇಶ (21:1-11)

(ಮಾರ್ಕ 11:1-11, ಲೂಕ 19:28-40, ಯೋಹಾನ 12:12-16)

**1-11** ಮಾರ್ಕನ ಸುವಾರ್ತೆ 11:1-11 ನೋಡಿರಿ ಮತ್ತು ವ್ಯಾಖ್ಯಾನಿಸಿರಿ.

## ಸಭಾ ಮಂದಿರದಲ್ಲಿ ಯೇಸು 21:12-17

ಮಾರ್ಕ 11:15-19, ಲೂಕ 19:45-48

**12-17** ಮಾರ್ಕ 11:15-13 ನೋಡಿರಿ ಮತ್ತು ವ್ಯಾಖ್ಯಾನಿಸಿರಿ.

## ಅಂಜೂರದ ಮರವು ಒಣಗಿ ಹೋದದ್ದು (21:18-22)

ಮಾರ್ಕ 11:12-14, 20-24

**18-19** ಮಾರ್ಕ 11:12-14 ನೋಡಿರಿ ಮತ್ತು ವ್ಯಾಖ್ಯಾನಿಸಿರಿ.

**20-22** ಮಾರ್ಕ 11:20-24 ನೋಡಿರಿ ಮತ್ತು ವ್ಯಾಖ್ಯಾನಿಸಿರಿ.

**ಯೇಸುವಿನ ಅಧಿಕಾರವನ್ನು ಪ್ರಶ್ನಿಸಿದ್ದು (21:23-27)**

ಮಾರ್ಕ 11:27-33, ಲೂಕ 20:1-8

**23-27** ಮಾರ್ಕ 11:27-33 ನೋಡಿರಿ ಮತ್ತು ವ್ಯಾಖ್ಯಾನಿಸಿರಿ.

**ಯೇಸು ತನ್ನ ಮರಣದ ಬಗ್ಗೆ ಭವಿಷ್ಯ ಹೇಳಿದ್ದು (20:17-19)**

(ಮಾರ್ಕ 10:32-34, ಲೂಕ 18:31-34)

**17-19** ಮಾರ್ಕ 10:32-34 ನೋಡಿರಿ ಮತ್ತು ವ್ಯಾಖ್ಯಾನಿಸಿರಿ.

**ಒಬ್ಬ ತಾಯಿಯ ಕೋರಿಕೆ (20:20-28)**

ಮಾರ್ಕ 10:35-45, ಲೂಕ 22:24-27

**20-28** ಮಾರ್ಕ 10:35-45 ನೋಡಿರಿ ಮತ್ತು ವ್ಯಾಖ್ಯಾನಿಸಿರಿ.

**ಇಬ್ಬರು ಕುರುಡರಿಗೆ ಕಣ್ಣು ಬಂದದ್ದು (20:29-34)**

ಮಾರ್ಕ 10:46-52, ಲೂಕ 18:35-43

**29-34** ಮಾರ್ಕ 10:46-52 ನೋಡಿರಿ ಮತ್ತು ವ್ಯಾಖ್ಯಾನಿಸಿರಿ.

**ವಿಜಯೋತ್ಸವದ ಪ್ರವೇಶ (21:1-11)**

ಮಾರ್ಕ 11:1-11, ಲೂಕ 19:28-40; ಯೋಹಾನ (12:12-16)

**1-11** ಮಾರ್ಕ 11:1-11 ವ್ಯಾಖ್ಯಾನ ನೋಡಿರಿ

**ದೇವಾಲಯದಲ್ಲಿ ಯೇಸು (21 :12- 17)**

(ಮಾರ್ಕ 11:15-19; ಲೂಕ 19:45-48)

**12-17** ಮಾರ್ಕ 11:15-19 ವ್ಯಾಖ್ಯಾನ ನೋಡಿರಿ

**ಅಂಜೂರದ ಮರವು ಬತ್ತಿಹೋದದ್ದು (21:18- 22)**

(ಮಾರ್ಕ 11:12-14, 20-24)

**18-19** ಮಾರ್ಕ 11:12-14 ವ್ಯಾಖ್ಯಾನ ನೋಡಿರಿ

**20-22** ಮಾರ್ಕ 11:20-24 ವ್ಯಾಖ್ಯಾನ ನೋಡಿರಿ.

**ಯೇಸುವಿನ ಅಧಿಕಾರವನ್ನು ಪ್ರಶ್ನಿಸಿದ್ದು (21:23-27)**

(ಮಾರ್ಕ 11:27-33; ಲೂಕ 20:1-8)

23- 27 ಮಾರ್ಕ 11:27-33 ವ್ಯಾಖ್ಯಾನ ನೋಡಿರಿ.

**ಎರಡು ಮಕ್ಕಳ ಸಾಮ್ಯ (21:28-32)**

**28-29** ಯಹೂದ್ಯರು ತಾವು ಆಜ್ಞೆಗಳ ಪ್ರಕಾರ ನಡೆಯುತ್ತೇವೆಂದು, ಜಂಭಕೊಚ್ಚಿಕೊಳ್ಳುವ ಮುಖಂಡರಿಗೆ ಈ ಸಾಮ್ಯ ಹೇಳಿದನು. ಮೊದಲನೇ ಮಗನು ಸುಂಕದವರನ್ನು ಮತ್ತು ಸೂಳೆಯರನ್ನು (ವಚನ 31) ಪ್ರತಿನಿಧಿಸುತ್ತದೆ. ಅವರು ತಾವು ಅಯೋಗ್ಯರೆಂದು ತಮ್ಮಲ್ಲಿ ತೀರ್ಮಾನಿಸಿಕೊಂಡರು. ಅವರು ಯೇಸುವಿಗೆ ಪೇತ್ರನು ಹೇಳಿದ ಹಾಗೆಯೇ "ಪ್ರಭುವೇ ನಮ್ಮಿಂದ ದೂರ ಹೋಗು, ನಾನು ಒಬ್ಬ ಪಾಪಿಯಾದ ಮನುಷ್ಯನಾಗಿದ್ದೇನೆ" ಲೂಕ 5:8. ಅಂತಹ ಜನರು, ಮತಾಚಾರದಲ್ಲಿ ಸರಿಯಾಗಿ ನಡೆಯುತ್ತೇವೆ ಎಂದು, ವಾಗ್ದಾನ ಕೊಡುವುದಿಲ್ಲ. ಅವರು ಯೇಸುವಿಗೆ ಇಲ್ಲವೆಂದು ಹೇಳಿ, ನಂತರ ಪಶ್ಚಾತ್ತಾಪ ಪಟ್ಟು ದೇವರ ಕಡೆಗೆ ತಿರುಗಿಕೊಂಡರು. ಲೂಕ 18:13-14.

ದೇವರು ಪಶ್ಚಾತ್ತಾಪ ಪಡುವ ಪಾಪಿಗಳನ್ನು ನೀತಿವಂತರೆಂದು ಎಣಿಸುತ್ತಾನೆ. ಯಾಕೆಂದರೆ ಕಡೆಯಲ್ಲಿ ಅವರೆ ಆತನ ಚಿತ್ತವನ್ನು ನೆರವೇರಿಸುವವರು.

**30-31** ಎರಡನೇ ಮಗನು, ಯಹೂದ್ಯ ಮುಖಂಡರಿಗೆ ಹೋಲಿಕೆಯಾಗಿದ್ದಾನೆ. ಅವರು ಹೇಳಿದ್ದರು "ನಾವು ನೀತಿವಂತರು ನಾವು ವಿಧೇಯರಾಗಿದ್ದೇವೆ. ನಾವು ನಿಜವಾಗಿಯೂ ದೇವರಿಗೆ ವಿಧೇಯರಾಗಿರುವೆವು" ಆದರೆ ಅವರು ಹಾಗೆ ಮಾಡಲಿಲ್ಲ. ದೇವರು ಸ್ನಾನಿಕನಾದ ಯೋಹಾನನ ಮೂಲಕ ಪಶ್ಚಾತ್ತಾಪ ಪಡು ಎಂದು ಹೇಳಿಸಿದನು. ಆದರೆ ಅವರು ಪಶ್ಚಾತ್ತಾಪ ಪಡಲಿಲ್ಲ. ಅವರು ಕ್ರಿಸ್ತನಲ್ಲಿ ನಂಬಿಕೆ ಇಡಲಿಲ್ಲ. ಅವರು ದೇವರನ್ನು ಪ್ರೀತಿಸಲೂ ಇಲ್ಲ. ಅವರು ತಮ್ಮನೇ ಪ್ರೀತಿಸತೊಡಗಿದರು.

ಅದೇ ರೀತಿ ಕಡೆಯವರೆಗೂ, ಅವರು ದೇವರಿಗೆ ವಿಧೇಯರಾಗಿರಲಿಲ್ಲ. ಯೇಸುವು ಯಹೂದ್ಯ ಮುಖಂಡರಿಗೆ ಹೇಳಿದ್ದೇನೆಂದರೆ ಪಶ್ಚಾತ್ತಾಪ ಪಡುವ ಪಾಪಿಗಳಿಂದ ಸುಂಕದವರೂ ಮತ್ತು ಸೂಳೆಯರು, ಅವರಿಗಿಂತ ಮೊದಲು ಪರಲೋಕದಲ್ಲಿರುವರು ಎಂದನು. ಲೂಕ 18:9-14. ಕಡೆಯವರು ಮೊದಲಿಗರಾಗುವರು. ಮತ್ತಾಯ 20:16 ನೋಡಿರಿ ಮತ್ತು ವ್ಯಾಖ್ಯಾನಿಸಿರಿ.

ಈ ಸಾಮ್ಯದಲ್ಲಿ ನೋಡುವುದಾದರೆ, ಯಾವ ಮಕ್ಕಳ ನಡತೆಯೂ ಸರಿಯಿರಲಿಲ್ಲ. ಮೊದಲನೇ ಮಗನ ತನ್ನ ನಾಲಿಗೆಯಿಂದ ತಪ್ಪು ಮಾಡಿದನು. ಎರಡನೇಯವನು ತನ್ನ ಕೆಲಸದಿಂದ ತಪ್ಪು ಮಾಡಿದನು. ಆದುದರಿಂದ ಈ ಸಾಮ್ಯದ ಮೂಲಕ ನಾವು ತಿಳಿದುಕೊಳ್ಳುವುದೇನೆಂದರೆ ದೇವರು ಬಾಯಿ ವಾಗ್ದಾನಕ್ಕಿಂತ ಕೆಲಸವನ್ನೇ ಮೆಚ್ಚುತ್ತಾನೆ ಎಂಬುದೇ. (ಮತ್ತಾಯ 7:21).

**32** ಆಮೇಲೆ ಯೇಸುವು, ಯಹೂದ್ಯ ಮುಖಂಡರು ಯಾವ ರೀತಿ ದೇವರಿಗೆ ಅವಿಧೇಯರಾಗಿದ್ದಾರೆ ಎಂದು ಅವರಿಗೆ ತಿಳಿಸಿ ಹೇಳಿದನು. ಯೋಹಾನನು ನೀತಿಯ ಮಾರ್ಗವನ್ನು ತೋರಿಸಲು ಬಂದನು. ಅಂದರೆ ಅವರು ಹೇಗೆ ನಡೆದುಕೊಳ್ಳಬೇಕೆಂಬುದರ ಬಗ್ಗೆ. ಆದರೆ ಅವರು ಯೋಹಾನನನ್ನು ನಂಬಲಿಲ್ಲ. ಯೋಹಾನನಿಗೆ ವಿಧೇಯರಾಗಿರಲಿಲ್ಲ. ಅವರು ಪಶ್ಚಾತ್ತಾಪ ಪಡಲಿಲ್ಲ. ಮತ್ತು ಪಶ್ಚಾತ್ತಾಪವನ್ನು ತೋರಿಸುವ ಯಾವ ಕಾರ್ಯವನ್ನು ಮಾಡಲಿಲ್ಲ. (ಮತ್ತಾಯ 3:8). ಆದರೆ ಅನ್ಯ ಜನರು ಮತ್ತು ಪಾಪಿಗಳು ಯೋಹಾನನನ್ನು ನಂಬಿದರು (ಲೂಕ 7:29-30).

ಇಷ್ಟು ಮಾತ್ರವಲ್ಲದೆ ಅನೇಕ ಜನರು ಯೋಹಾನನ ಬಳಿಗೆ ಹೋಗಿ, ಪಶ್ಚಾತ್ತಾಪ ಪಡುವುದನ್ನು ಯಹೂದ್ಯ ಮುಖಂಡರು ನೋಡಿದರು. ಹೀಗಿದ್ದರೂ ಸಹಾ ಅವರು ವಿಶ್ವಾಸಿಸಲಿಲ್ಲ. ಅವರನ್ನು ಬಹಳವಾಗಿ ಖಂಡನೆ ಆಯಿತು. ಮತ್ತು ನಾವು ಪಶ್ಚಾತ್ತಾಪ ಪಟ್ಟು ಮತ್ತು ಕ್ರಿಸ್ತನ ಕಡೆಗೆ ತಿರುಗಿಕೊಳ್ಳದಿದ್ದರೆ ಹಾಗೂ ದೇವರ ಇಷ್ಟಾನುಸಾರ ನಡೆದುಕೊಳ್ಳದಿದ್ದರೆ ನಮ್ಮ ಖಂಡನೆಯು ಸಹ ಬಹಳವಾಗಿರುತ್ತದೆ.

### ಒಕ್ಕಲಿಗರ ಸಾಮ್ಯ :- ಮತ್ತಾಯ 21:33-46

ಮಾರ್ಕ 12:1-12, ಲೂಕ 20:9-19

**33-46** ಮಾರ್ಕ 12:1-12, ನೋಡಿರಿ ಮತ್ತು ವ್ಯಾಖ್ಯಾನಿಸಿರಿ.

---

## ಅಧ್ಯಾಯ - 22

### ಮದುವೆ ಔತಣದ ಸಾಮ್ಯ (22:1-14)

**1-2** ಯೇಸುವು ಯಾವಾಗಲೂ ದೇವರ ರಾಜ್ಯವನ್ನು ಒಂದು ಔತಣ ಕೂಟಕ್ಕೆ ಸಮನಾಗಿ ಹೋಲಿಕೆ ಮಾಡಿದ್ದಾನೆ. (ಮತ್ತಾಯ 8:11, ಲೂಕ 14:15). ಈ ಸಾಮ್ಯದಲ್ಲಿ ರಾಜನ ದೇವರನ್ನು ಪ್ರತಿನಿಧಿಸುತ್ತಾನೆ. ಮಗನು ಕ್ರಿಸ್ತನನ್ನು ಪ್ರತಿನಿಧಿಸುತ್ತಾನೆ.

**3-5** ಆ ರಾಜನು ಅನೇಕ ಅತಿಥಿಗಳನ್ನು ಅಂದರೆ ಯಹೂದ್ಯರನ್ನು ಕರೆದನು. ಆದರೆ ಅನೇಕ ಮಂದಿ ಯಹೂದ್ಯರು ದೇವರ ಮಗನೆನಿಸಿಕೊಳ್ಳುವ ಕ್ರಿಸ್ತನೇ ಮೆಸ್ಸಿಯನೆಂದು ವಿಶ್ವಾಸಿಸಲಿಲ್ಲ. ಅವರನ್ನು ಏರ್ಪಡಿಸಿದ, ಗೌರವಾರ್ಥ ಔತಣಕೂಟಕ್ಕೆ ಅವರು ಬರಲಿಲ್ಲ. ರಾಜನು ಬಹಳ ತಾಳ್ಮೆಯುಳ್ಳವನಾಗಿ, ಎರಡು ಸಾರಿ ಅವರಿಗೆ ಕರೆ ಕಳಿಸಿದನು. ಆದರೂ ಅವರು ಬರಲು ಒಪ್ಪಲಿಲ್ಲ.

**6** ಅವರು ಬರಲು ಒಪ್ಪಲಿಲ್ಲ ಒಂದೇ ಅಲ್ಲ, ಅವರನ್ನು ಕರೆಯಲು ಬಂದಿದ್ದ ಆಳುಗಳನ್ನು ತಗಾದೆಗೆ ತೆಗೆದುಕೊಂಡರು. ಆಳುಗಳು ಕ್ರಿಸ್ತನ ಸೇವಕರೆಂದು ಪ್ರತಿನಿಧಿಸುತ್ತಾರೆ. ಅಂತಹವರನ್ನು ಯಹೂದ್ಯರು ಹಿಂಸಿಸಿದರು.

**7** ಆದುದರಿಂದ ರಾಜನು ಆ ಕೊಲೆಗಾರರನ್ನು ನಾಶಪಡಿಸಿದನು. ಮತ್ತು ಅವರ ಪಟ್ಟಣವನ್ನು ಸುಟ್ಟು ಹಾಕಿದನು. ಪ್ರವಾದನೆಯು ಯೇಸುವಿನ ಮರಣದ ನಂತರ ಕ್ರಿ.ಶ.70ರಲ್ಲಿ ಯಹೂದ್ಯರ ಪಟ್ಟಣವಾದ ಯೆರುಸಲೇಂನ್ನು ರೋಮಾಯರು ಕೊಳ್ಳೆ ಹೊಡೆದು, ನಾಶಪಡಿಸಿ ಅಲ್ಲಿ ವಾಸವಾಗಿದ್ದ ಎಲ್ಲಾ ಯಹೂದ್ಯರನ್ನು ನಾಶ ಮಾಡಿದರು.

**8-9** ಅನೇಕ ಮಂದಿ ಯಹೂದ್ಯರು ಕ್ರಿಸ್ತನು ಏರ್ಪಡಿಸಿದ ಔತಣಕ್ಕೆ ಬರಲು ನಿರಾಕರಿಸಿದರು. ನಂತರ ದೇವರು ಅನ್ಯಜನರನ್ನು ಕರೆದನು. ಮತ್ತಾಯ 8:11-12, 21-43, ಲೂಕ 14:15-24 ನೋಡಿರಿ ಮತ್ತು ವ್ಯಾಖ್ಯಾನಿಸಿರಿ.

**10** ಆಳುಗಳು ಹೋಗಿ ಎಲ್ಲರನ್ನು ಕೆಟ್ಟವರು. ಒಳ್ಳೆಯವರನ್ನು ಔತಣಕ್ಕೆ ಕರೆದರು. ಅವರು ಸುಂಕದವರನ್ನು ಕರೆದರು ಮತ್ತು ಸೂಳೆಯರನ್ನು ಕರೆದರು (ಮತ್ತಾಯ 21:31-32). ಜಾತಿ ಬಾಹಿರರೂ ಮತ್ತು ಪಾಪಿಗಳನ್ನು ಕರೆದರು. ಕಣ್ಣಿಗೆ ಬಿದ್ದವರನ್ನೆಲ್ಲಾ

ಕರೆದರು ಅವರು ಗೋಧಿ ಮತ್ತು ಹಣಜಿ ಇದ್ದ ಹಾಗೆ ಮತ್ತಾಯ 13:29-30, 40-41. ಒಂದೇ ಬಲೆಯಲ್ಲಿ ಸಿಕ್ಕಿಬಿದ್ದ, ಒಳ್ಳೇ ಮೀನು ಮತ್ತು ಕೆಟ್ಟ ಮೀನಿನಂತೆ (ಮತ್ತಾಯ 13:47-49).

**11-13** ಒಬ್ಬ ಅತಿಥಿಯು ಮದುವೆಯ ವಸ್ತ್ರ ಧರಿಸಿರಲಿಲ್ಲ. ಮದುವೆಯ ವಸ್ತ್ರವು, ನೀತಿಯತೆ ಅಂದರೆ ಕ್ರಿಸ್ತನಲ್ಲಿರುವ ನೀತಿಯತೆಯಾಗಿದ್ದು, ಅದು ನಂಬಿಕೆಯ ಮೂಲಕ ದೊರಕುತ್ತದೆ. ಔತಣಕ್ಕೆ ಬಂದು ಎಲ್ಲರೂ ಕ್ರಿಸ್ತನ ನೀತಿವಸ್ತ್ರವನ್ನು ಹೊದ್ದುಕೊಳ್ಳಬೇಕು. ರೋಮಾಯ 13:14, ಗಲಾತ್ಯ 3:26-27, ಫಿಲಿಪ್ಪಿ 3:8-9 ನೋಡಿರಿ ಮತ್ತು ವ್ಯಾಖ್ಯಾನಿಸಿರಿ. ಮದುವೆಯ ವಸ್ತ್ರವನ್ನು ಧರಿಸಿದ ಒಬ್ಬ ಅತಿಥಿಯು ನಿಜವಾಗಿ ಕ್ರಿಸ್ತನಲ್ಲಿ ನಂಬಿಕೆ ಇಡದೇ ಆತನ ನೀತಿ ವಸ್ತ್ರವನ್ನು ಪಡೆದುಕೊಳ್ಳದೇ ಇರುವಂತಹವನಾಗಿದ್ದಾನೆ. ಅವರು ವಚನ 10ರಲ್ಲಿ ಹೇಳಿರುವ ಕೆಟ್ಟ ಅತಿಥಿಗಳು ಕಳೆ ಮತ್ತು ಕೆಟ್ಟ ಮೀನುಗಳಿಗೆ ಹೋಲಿಕೆಯಾಗಿದ್ದಾರೆ. ಅವರು ರಾಜನ ಮನೆಗೆ ಬಂದದ್ದರೂ ಎಲ್ಲಾ ನೆಂಟರ ಜೊತೆಯಿದ್ದರೂ, ಅವರು ಊಟಕ್ಕೆ ಕುಳಿತು ಕೊಳ್ಳಲು ಯೋಗ್ಯರಾಗಿರಲಿಲ್ಲ. ಅವರನ್ನು ಹೊರದೂಡಲಾಗುವುವು.

**14** ಅನೇಕ ಜನರನ್ನು ಕರೆಯಲಾಯಿತು, ಆಹ್ವಾನಿಸಲಾಯಿತು. ಆದರೆ ಕೆಲವರು ಮಾತ್ರ ಆರಿಸಲ್ಪಟ್ಟರು. ಕ್ರಿಸ್ತ ಯೇಸುವಿನ ಸುವಾರ್ತೆಯು ಎಲ್ಲಾ ಜನರಿಗೆ ಸಾರಲ್ಪಡುವುದು ಮತ್ತು ಅನೇಕರು ಕ್ರಿಸ್ತನ ಕರೆಯುವಿಕೆಗೆ ಓಗೊಡುತ್ತಾರೆ. ಮೊದಲು ಅವರು ಬರುತ್ತಾರೆ. ಕ್ರಿಸ್ತನ ಸುವಾರ್ತೆಯು ಆನಂದಕರವಾಗಿದೆ ಎಂದು ಹೇಳುತ್ತಾರೆ. ಅವರು ಅದನ್ನು ಒಪ್ಪಲೂ ಬಹುದು. ಆದರೆ ಅವರ ಹೃದಯದಲ್ಲಿ, ತಮ್ಮ ಜೀವಿತವನ್ನು ಕ್ರಿಸ್ತನಿಗೆ ಸಂಪೂರ್ಣವಾಗಿ ಒಪ್ಪಿಸಿಕೊಡುವುದಿಲ್ಲ. ಅವರು ಕ್ರಿಸ್ತನು ಏರ್ಪಡಿಸಿದ ಮದುವೆ ಔತಣಕ್ಕೆ ಬಂದು, ಅದರಲ್ಲಿ ಭಾಗವಹಿಸಿ ಎಲ್ಲಾ ರುಚಿಯಾದ ಊಟವನ್ನು ಮಾಡಿ ಕ್ರಿಸ್ತನ ಆಶೀರ್ವಾದ ಪಡೆದರೂ ಸಹ ಅವರು ಕ್ರಿಸ್ತನ ಸೇವಕರಾಗಿ ಉಳಿದುಕೊಂಡು, ಅದರಲ್ಲೇ ಮುಂದುವರಿಯಲು ಸಿದ್ಧರಿರುವುದಿಲ್ಲ. ಅವರು ಆರಿಸಲ್ಪಟ್ಟವರಲ್ಲ. ಕ್ರಿಸ್ತನ ಸೇವಕರು ಆರಿಸಲ್ಪಟ್ಟವರಾಗಿರಬೇಕು. (ಯೋಹಾನ 15:16ನೋಡಿರಿ)

## ಸಿಸರನಿಗೆ ಕಂದಾಯ ಕೋಡುವುದು. (22:15-22)

ಮಾರ್ಕ 12:13-17, ಲೂಕ 20:20-26

**15 -22** ಮಾರ್ಕ 12:13-17 ಮತ್ತು ವ್ಯಾಖ್ಯಾನ ನೋಡಿರಿ

## ಪುನರುತ್ಥಾನದಲ್ಲಿ ಮದುವೆ.22:23-33

ಮಾರ್ಕ 12:18-27, ಲೂಕ 20:27-40 ಮತ್ತು ವ್ಯಾಖ್ಯಾನ. ನೋಡಿರಿ

**23-33** ಮಾರ್ಕ 12:18-27 ಮತ್ತು ವ್ಯಾಖ್ಯಾನ,ನೋಡಿರಿ

## ದೇವರ ಮಹಾ ಆಜ್ಞೆ:- 22:34-40. ಮಾರ್ಕ 12:28-34

**33-40** ಮಾರ್ಕ 12:28-34 ಮತ್ತು ವ್ಯಾಖ್ಯಾನ,ನೋಡಿರಿ

## ಕ್ರಿಸ್ತನು ಯಾರ ಮಗನು? (22:41-46)

ಮಾರ್ಕ 12:35-37, ಲೂಕ 20:41-44

**41-46** ಮಾರ್ಕ 12:35-37 ಮತ್ತು ವ್ಯಾಖ್ಯಾನ.ನೋಡಿರಿ

---

# ಅಧ್ಯಾಯ - 23

## ಯಹೂದ್ಯ ಮುಖಂಡರ ಪಾಪಗಳು (23:1-12)

ಲೂಕ 11:46, 14:11

**1-2** ಈ ಅಧ್ಯಾಯದಲ್ಲಿ ಕ್ರಿಸ್ತನು,ಯಹೂದ್ಯ ಜನರ ಮುಖಂಡರರಾದಂತ ಧರ್ಮಶಾಸ್ತ್ರದ ಬೋಧಕರ ಮತ್ತು ಫರಿಸಾಯರ ವಿರುದ್ಧ ಮಾತನಾಡುತ್ತಿದ್ದಾನೆ, ಆದರೆ ನಾವು ಇಲ್ಲಿ ತಿಳಿದುಕೊಳ್ಳಬೇಕಾದ ವಿಚಾರವೇನೆಂದರೆ ಈ ಅಧ್ಯಾಯವು,, ಅನುಚಿತವಾಗಿ ವರ್ತಿಸುತ್ತಾರೋ, ಮತ್ತು ತಮ್ಮ ಅಧಿಕಾರವನ್ನು ದುರುಪಯೋಗಿಸಿಕೊಳ್ಳುತ್ತಾರೋ, ಅಂತಹ,ಧಾರ್ಮಿಕ ಮುಖಂಡರೂ ಬಗ್ಗೆಯೇ ಬರೆಯಲಾಗಿದೆ. ಈ ಅಧ್ಯಾಯದಲ್ಲಿ ಕ್ರಿಸ್ತನು ಯಹೂದ್ಯ ಮುಖಂಡರ ಕೆಟ್ಟ ನಡತೆಯ ಬಗ್ಗೆ ವರ್ಣಿಸುತ್ತಿದ್ದಾನೆ. ಅವರ ಮುಖ್ಯ ಪಾಪವೇನೆಂದರೆ, ಕಪಟತನ. ಹೊರನೋಟಕ್ಕೆ ಅವರು ನೀತಿವಂತರೆಂದು ಕಾಣಿಸಿಕೊಂಡಾಗ್ಯೂ, ಅಂತರಂಗದಲ್ಲಿ ಅವರು ಅನೀತಿವಂತರೇ ಆಗಿರುತ್ತಾರೆ. ಎಲ್ಲಾ, ಧಾರ್ಮಿಕ ಮುಖಂಡರುಗಳು ಸಹಾ, ಈ ಪಾಪವನ್ನು ಮಾಡುವ ಸಂಭಾವನೀಯಕ್ಕೆ ಒಳಪಡುತ್ತಾರೆ.

ಧರ್ಮಶಾಸ್ತ್ರಬೋಧಕರು ಮತ್ತು ಫರಿಸಾಯರು, ಮೋಶೆಯ ಸ್ಥಾನದಲ್ಲಿ ಕುಳಿತು ಕೊಂಡವರಾಗದಯದರು. ಮೋಶೆಯು, ಹಳೆ ಒಡಂಬಡಿಕೆ ಕಾಲದ, ಮಹಾ ಯಹೂದ್ಯನಾಗಿದ್ದನು. ಅವನು ದೇವರಿಂದ ಯಹೂದ್ಯ ಧರ್ಮಶಾಸ್ತ್ರವನ್ನು ಪಡೆದು ಅದನ್ನು ಯಹೂದ್ಯ ಜನರಿಗೆ ಕೊಟ್ಟನು. ಶಾಸ್ತ್ರಿಗಳು ಮತ್ತು ಫರಿಸಾಯರು, ಈ ಧರ್ಮಶಾಸ್ತ್ರದಲ್ಲಿ ಪರಿಣತರಾಗಿದ್ದರು.. ಈಗ ಅವರು ಮೋಶೆಯ ಸ್ಥಾನದಲ್ಲಿ ಕುಳಿತುಕೊಂಡು, ಜನರಿಗೆ ಧರ್ಮಶಾಸ್ತ್ರವನ್ನು ಬೋಧಿಸುತ್ತಿರುತ್ತಾರೆ.

3 ಆದುದರಿಂದ ಯೇಸು ಹೀಗೆ ಹೇಳಿದನು "ನೀವು ಇವುಗಳಿಗೆ ವಿಧೇಯರಾಗಿರಲೇಬೇಕು" ಎಲ್ಲಿಯವರೆಗೆ, ಅವರು ಹಳೇ ಒಡಂಬಡಿಕೆಯಲ್ಲಿ ತಿಳಿಸಿರುವ ಪ್ರಕಾರ ನಿಜವಾದ ಧರ್ಮಶಾಸ್ತ್ರವನ್ನು ಬೋಧಿಸುತ್ತಾರೋ, ಅದಷ್ಟಕ್ಕೆ ಕಿವಿಗೊಡಬೇಕು., ಕೆಟ್ಟ ಬೋಧಕರಿಂದ ಒಳ್ಳೆ ಬೋಧನೆಯು ಬಂದ ಕಾರಣದಿಂದ ಈ ಒಳ್ಳೇ ಬೋಧನೆಯನ್ನು ನಾವು ತಿರಸ್ಕರಿಸಬಾರದು. ಅದೇ ರೀತಿಯಲ್ಲಿ ಕೆಟ್ಟ ನ್ಯಾಯಾಧಿಪತಿಗಳಿಂದ ಅವರು ಅಪರಾದದ ತಿರ್ಪಿಗೆ ಗುರಿಯಾಗಿದ್ದರು ನಾವು ಅವರ ಒಳ್ಳೆಯ ಧರ್ಮನಿಬಂದನೆಗಳಿಗೆ ಅವಿಧೇಯರಾಗಬಾರದು.

ಆದರೆ . ಅವರನ್ನು ಅನುಕರಣೆ ಮಾಡಬೇಡಿರಿ ಎಂದು ಯೇಸುವು ಎಚ್ಚರಿಸುತ್ತಾನೆ ಅವರು ಹೇಳಿದ ಹಾಗೆ ಮಾಡಿರಿ, ಆದರೆ ಅವರು ಮಾಡಿದ ಹಾಗೆ ಮಾಡಬೇಡಿರಿ. ಯಾಕೆಂದರೆ, ಅವರು ಏನು ಹೇಳುತ್ತಾರೋ, ಅದನ್ನು ಅವರು ಸ್ವತಃ ಮಾಡುವುದಿಲ್ಲ. ಅವರು ತಾವು ಏನನ್ನು ಮಾಡುವುದಕ್ಕಾಗುವುದಿಲ್ಲವೊ ಅದನ್ನು ಇತರರೂ ಮಾಡಬೇಕೆಂದು ಬಯಸುತ್ತಾರೆ

4 ಧರ್ಮಶಾಸ್ತ್ರ ಬೋಧಕರು ಮತ್ತು ಫರಿಸಾಯರು, ಮೂಲ ಧರ್ಮಶಾಸ್ತ್ರಕ್ಕೆ, ಅವಶ್ಯಕವಲ್ಲದ ಅನೇಕ ನಿಯಮಗಳನ್ನು ಸೇರಿಸಿದ್ದರು. ಈ ನಿಯಮಗಳು, ಮನುಷ್ಯರ ಹೆಗಲ ಮೇಲೆ ಬಹಳ ಭಾರವಾದ ಹೊರೆಯಾಗಿದ್ದವು ಇಂತಹ ಬಾರವನ್ನು ಹೊರುವ ಸಲುವಾಗಿ, ಯಹೂದ್ಯ ಮುಖಂಡರು ಬೆರಳಿನಷ್ಟು ಕೂಡ ಸಹಾಯ ಮಾಡಲಿಲ್ಲ. ಇವರು ಇದಕ್ಕಾಗಿ ಪ್ರೋತ್ಸಾಹ ಮಾಡಲೂ ಇಲ್ಲ. ಇವರು ತಮ್ಮನ್ನೇ ಮಾದರಿಯನ್ನಾಗಿ ಮಾಡಿಕೊಳ್ಳಲಿಲ್ಲ.

ಉತ್ತಮವಾದ ಹಾಗೂ ಸಂತೋಷದಾಯಕವಾದ ಜೀವನವನ್ನು ಮಾಡಲು ಸಹಾಯ ಮಾಡದೇ ಈ ಯಹೂದ್ಯ ಮುಖಂಡರು, ಜನರ ಮೇಲೆ ಇನ್ನಷ್ಟು ನಿಯಮಗಳನ್ನು ಹೇರಿ, ಅವರನ್ನು ನಿರುತ್ಸಾಹಗೊಳಿಸಿದರು ಮತ್ತು ತುಳಿದುಹಾಕಿದರು. ಈ ನಿಯಮಗಳು ದೇವರಿಂದ ಬಂದವುಗಳಾಗಿರದೇ ಸಂಪ್ರದಾಯದ ನಿಯಮ ಮತ್ತು ಕಾನೂನುಗಳು ಮನುಷ್ಯರ ಬಂದಂತವುಗಳಾಗಿವೆ. (ಮಾರ್ಕ 7:8 ನೋಡಿರಿ ಮತ್ತು ವ್ಯಾಖ್ಯಾನಿಸಿರಿ)

ಯಹೂದ್ಯ ಮುಖಂಡರು ಜನರ ಮೇಲೆ ಹೇರಿದ ಬಹಳವಾದ ಭಾರಕ್ಕಿಂತಲೂ, ಕ್ರಿಸ್ತನು ಜನರ ಮೇಲೆ ಹಾಕಿದ ಭಾರವು ಬಹಳ ಹಗುರವಾಗಿದೆಯೆಂದು ನಾವು ಹೋಲಿಸಬಹುದು. (ಮತ್ತಾಯ 11:28-30 ನೋಡಿರಿ)

5 ಯಹೂದ್ಯ ಮುಖಂಡರು ಏನೇನು ಮಾಡಿದರೋ, ಅದೆಲ್ಲವೂ ಜನರಿಂದ ಮೆಚ್ಚುಗೆ ಪಡೆಯುವುದಕ್ಕಾಗಿಯೇ. ಮತ್ತಾಯ 6:1-2 ನೋಡಿರಿ ಮತ್ತು ವ್ಯಾಖ್ಯಾನಿಸಿರಿ.

ಅವರು ತಮ್ಮ ಚರ್ಮದ ಪಟ್ಟಿ ಗಳನ್ನು ಇನ್ನಷ್ಟು ಅಗಲ ಮಾಡಿಕೊಂಡರು. ಇದರಲ್ಲಿ ವೇದದ ವಚನಗಳನ್ನು ಇದರಲ್ಲಿ ಇಟ್ಟುಕೊಳ್ಳಲಾಗುತ್ತಿತ್ತು. ಈ ಕೈಪಟ್ಟಿಗಳನ್ನು ಅವರು ತಮ್ಮ ಹಣೆ ಮತ್ತು ತೋಳುಗಳಿಗೆ ದರಿಸಿಕೊಳ್ಳುತ್ತಿದ್ದರು. ಯಹೂದ್ಯ ಮುಖಂಡರು ಅಗಲವಾದ ಕೈಪಟ್ಟಿಯನ್ನು ಧರಿಸಿಕೊಂಡು, ಇವರು ಎಂಥಾ ಮತಾಭಿಮಾನಿಗಳು ಎಂದು ಜನರಿಗೆ ತೋರಿಸಿಕೊಳ್ಳುತ್ತಿದ್ದರು. ಕೈಪಟ್ಟಿಯನ್ನು ಧರಿಸುವುದು ತಪ್ಪೇನಲ್ಲ. ಆದರೆ ಅದನ್ನು ಧರಿಸಿಕೊಂಡು ಹೊಗಳಿಸಿಕೊಳ್ಳುವುದು ತಪ್ಪು. ದೇವರು ನಾವು ಮಾಡುವ ಎಲ್ಲಾ ಕೆಲಸಗಳಿಗೂ, ಕಾರಣವನ್ನು ಕಂಡು ಹಿಡಿಯುತ್ತಾನೆ.

ಇದೇ ರೀತಿಯಲ್ಲಿ,ಯಹೂದ್ಯ ಮುಖಂಡರು ತಮ್ಮ ನಿಲುವಂಗಿಯ ಮೇಲಿನ ಗೊಂಡೆಗಳನ್ನು ಉದ್ದುದ್ದವಾಗಿ ಮಾಡಿಕೊಳ್ಳುತ್ತಿದ್ದರು (ಅರಣ್ಯ 15:37-39). ಇದರಿಂದ ತಾವು ಇತರರಿಗಿಂತ ಬಹಳ ಮತಾಸಕ್ತಿಯುಳ್ಳವರೆಂದು ಜನರಿಗೆ ತೋರಿಸಿಕೊಳ್ಳುವುದರಲ್ಲಿ ನಂಬಿಕೆಯುಳ್ಳವರಾಗಿದ್ದರು.

6 ಅವರು ಮರ್ಯಾದೆಯ ಸ್ಥಾನಗಳಿಗಾಗಿ, ಮತ್ತು ಮುಖ್ಯವಾದ ಪೀಠಾಸನಗಳಲ್ಲಿ ಆಸಕ್ತರಾಗಿದ್ದರು (ಅದರಲ್ಲಿ ಕೆಲವರು ಕುಳಿತುಕೊಳ್ಳಬೇಕಾಗಿತ್ತು). ಆದರೆ ಅಲ್ಲಿ ಕುಳಿತು ಕೊಳ್ಳುವುದಕ್ಕೆ ಆಸೆ ಪಡುವುದು ತಪ್ಪು. ಮರ್ಯಾದೆ ಪಡೆದುಕೊಳ್ಳುವುದು ತಪ್ಪೇನಿಲ್ಲ. ಆದರೆ ಮರ್ಯಾದೆ ಬರಲೆಂದು ಕುಳಿತುಕೊಳ್ಳಲು ಪ್ರೀತಿಸುವುದು ತಪ್ಪು. (ಮಾರ್ಕ 12:38-39 ನೋಡಿರಿ ಮತ್ತು ವ್ಯಾಖ್ಯಾನಿಸಿರಿ)

7 ಯಹೂದ್ಯ ಮುಖಂಡರು ಹೊಗಳಿಕೆಯನ್ನು ಪ್ರೀತಿಸುತ್ತಿದ್ದರು ಅವರು ರಬ್ಬೀ ಎಂದು ಕರೆಸಿಕೊಳ್ಳಲು ಅಂದರೆ ಮಹಾ ಶ್ರೇಷ್ಠರು ಎಂದೆನಿಸಿಕೊಳ್ಳುವುದನ್ನು ಪ್ರೀತಿಸುತ್ತಿದ್ದರು. ಅದರಲ್ಲೂ ಸಾರ್ವಜನಿಕ ಸ್ಥಳಗಳಲ್ಲಿ ತಾವು ಸನ್ಮಾನ ಪಡಯುವುದನ್ನು ಎಲ್ಲರೂ ನೋಡಬೇಕೆಂದು ಆಶಿಸುತ್ತಿದ್ದರು.

ಅವರು ತಮ್ಮನ್ನು ತಾವೇ ಮಹಾ ಬೋಧಕರೆಂದು ಎಣಿಸಿಕೊಳ್ಳುತ್ತಿದ್ದರು. ಆದರೆ ಕ್ರಿಸ್ತನ ಶಾಲೆಯಲ್ಲಿ ಕಲಿಯಬೇಕಾದ ಮೊದಲನೇ ಪಾಠವಾದಂತ "ದೀನತೆ"ಯನ್ನು ಕಲಿಯಲೇ ಇಲ್ಲ.

8 ಯೇಸುವು ತನ್ನ ಶಿಷ್ಯರನ್ನು ಎಚ್ಚರಿಸುತ್ತಾ, ಅವರು ಮನುಷ್ಯರಿಂದ ಬಹಳ ಮರ್ಯಾದೆಯನ್ನು ಅಪೇಕ್ಷಿಸಬಾರದೆಂದು ತಿಳಿಸಿದನು. ಅವರಿಗೆ ಒಬ್ಬನೇ ಒಡೆಯ, ಒಬ್ಬನೇ ಗುರು, ಅಂದರೆ ಯೇಸುವು ತಾನೇ ಎಂಬುದನ್ನು ಕಲಿಸಿದನು. ಯೇಸುವಿಗೆ ಹೊರತಾಗಿ, ಉಳಿದ ಕ್ರೈಸ್ತ ಸಹೋದರ, ಸಹೋದರಿಯರೆಲ್ಲರೂ, ದೇವರ ಕುಟುಂಬದಲ್ಲಿ ಸಮಾನರಾಗಿರುವರು.

9 ಇದೇ ರೀತಿಯಲ್ಲಿ ಕ್ರೈಸ್ತರು ಯಾವ ಮನುಷ್ಯನನ್ನು ತಂದೆ, ಅಂದರೆ ಆತ್ಮೀಯ ತಂದೆ ಎಂದು ಕರೆಯಬಾರದು,. ದೇವರೊಬ್ಬನೇ ನಮಗೆ ಆತ್ಮೀಯ ತಂದೆಯಾಗಿರುವನು. ನಾವು ಕ್ರೈಸ್ತರಾದಾಗ, ನಾವು ಹೊಸದಾಗಿ ದೇವರ ಆತ್ಮನಿಂದ

ಹುಟ್ಟಿದವರಾಗುತ್ತೇವೆ. ನಾವು ನಮ್ಮ ಹೊಸ ಜೀವಿತವನ್ನು ಬೇರಾವ ಮನುಷ್ಯನಿಂದಲೂ ಹೊಂದಲಿಲ್ಲ, ದೇವರಿಂದ ಮಾತ್ರವೇ.

**10** ಶಿಷ್ಯರನ್ನು **ಗುರು**, ಅಥವಾ ಒಡೆಯ ಎಂದು ಕರೆಯಬಾರದು. ಅವರು ತಮ್ಮ ಬೋಧನೆಯು ತಮ್ಮಿಂದ ಬಂತೆಂದು, ಬಾವಿಸಿ ಮರ್ಯಾದೆಯನ್ನು ಎದುರು ನೋಡಬಾರದು.. ಕ್ರಿಸ್ತನು ಮತ್ತು ಪವಿತ್ರಾತ್ಮನೂ ಏನನ್ನು ಬೋಧಿಸುತ್ತಾನೊ ಅದನ್ನೇ ಉಪದೇಶಿಸಬೇಕು. ನಮಗೆ ನಿಜವಾದ ಭೋದಕನು ಒಬ್ಬನೇ, ಆತನೇ ಮೆಸ್ಸೀಯಾನಾದ ಕ್ರಿಸ್ತನು.

**11** ಶಿಷ್ಯರುಗಳು ಮನುಷ್ಯರೊಳಗೆ ದೊಡ್ಡವರೆಂದು ಬಾವಿಸಿಕೊಳ್ಳದೆ, ಮನುಷ್ಯರ ಸೇವಕರಾಗಿರಬೇಕು. ನೋಡಿರಿ . ಮಾರ್ಕ 10:43-44ಮತ್ತು ವ್ಯಾಖ್ಯಾನ. ಯಾರು ತನ್ನನ್ನು ತಗ್ಗಿಸಿಕೊಂಡು ಮತ್ತು ಎಲ್ಲರಿಗಿಂತಲೂ ಹೆಚ್ಚಿನ ಸೇವಕನಾಗಿರುತ್ತಾನೋ ಅವನೇ ದೇವರ ಪ್ರೀತಿಗೆ ಪಾತ್ರನು.

**12** ಕ್ರಿಸ್ತನ ಉಪದೇಶವು. ಲೋಕದ ಉಪದೇಶಕ್ಕೆ ವಿರೊದವಾಗಿದೆ . ಲೋಕದ ಮನುಷ್ಯರು ತಮ್ಮನ್ನು ಹೊಗಳಿಸಿಕೊಳ್ಳಲು ಇಷ್ಟಪಡುತ್ತಾರೆ. ಆದರೆ ಯೇಸು ಹೇಳುವ ಪ್ರಕಾರ, ಅವರು ತಗ್ಗಿಸಲ್ಪಟ್ಟು, ತುಳಿಯಲ್ಪಡುತ್ತಾರೆ. ಆದರೆ ಯಾರು ಈ ಲೋಕದಲ್ಲಿ ತಮ್ಮನ್ನು ತಗ್ಗಿಸಿಕೊಂಡು ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪ ಪಡುತ್ತಾರೋ, ಅವರು ಪರಲೋಕದಲ್ಲಿ ಉನ್ನತ ಸ್ಥಾನಕ್ಕೆ ಏರಿಸಲ್ಪಡುವರು. ಮತ್ತಾಯ 5:5, 18:1-4, ಮಾರ್ಕ 9:35, 1ನೇ ಪೇತ್ರ 5:5-6 ಮತ್ತು ವ್ಯಾಖ್ಯಾನವನ್ನು ನೋಡಿರಿ

## ಯಹೂದ್ಯ ಮು ಖಂಡರಿಗಾಗು ವ ವಿಪತ್ತು (23:13-39)

ಮಾರ್ಕ 12:40, ಲೂಕ 11:42-43, 49-51, 13:34-35

**13** ಇಲ್ಲಿ ಯೇಸುವು ಯಹೂದ್ಯ ಮುಖಂಡರ ಮೇಲಾಗುವ ಗತಿಯನ್ನು ಅಥವಾ ಮುಂದಿನ ಸ್ಥಿತಿಯನ್ನು ತೋರಿಸುತ್ತಾನೆ. ಮೊದಲನೆಯದಾಗಿ, **ಅವರು ಮನುಷ್ಯರ ಮುಖದಿಂದ ಪರಲೋಕದ ಬಾಗಿಲನ್ನು ಮುಚ್ಚಿಬಿಟ್ಟರು.** ಅವರು ತಮ್ಮ ಸುಳ್ಳು ಬೋಧನೆಗಳಿಂದ, ಮನುಷ್ಯರು ಪರಲೋಕ ರಾಜ್ಯಕ್ಕೆ ಸೇರದಂತೆ ಮಾಡಿಬಿಟ್ಟರು. ಅವರು ಮನುಷ್ಯನು ಧರ್ಮಶಾಸ್ತ್ರವನ್ನು ಅನುಸರಿಸಿದರೆ ರಕ್ಷಣೆ ಹೊಂದುವವನು ಎಂದು ಹೇಳಿದರು. ಆದರೆ ಅದು ಸುಳ್ಳು. ಯಾವ ಮನುಷ್ಯನು ಧರ್ಮಶಾಸ್ತ್ರಕ್ಕೆ ವಿಧೇಯನಾದರೆ, ರಕ್ಷಣೆ ಹೊಂದಲಾರನು (ಗಲಾತ್ಯ 15:16 ಮತ್ತು ವ್ಯಾಖ್ಯಾನವನ್ನು ನೋಡಿರಿ). ಮನುಷ್ಯನು ನಂಬಿಕೆಯ ಮೂಲಕ ದೇವರ ಕೃಪೆಯಿಂದ ಮಾತ್ರವೇ ರಕ್ಷಣೆ ಹೊಂದುತ್ತಾನೆ. (ಎಫೆಸ 2:8)

ಯಹೂದ್ಯ ಮುಖಂಡರು, ತಾವು ಪಶ್ಚಾತ್ತಾಪ ಪಡುವುದನ್ನು ಮತ್ತು ನಂಬುವುದನ್ನು ನೀರಾಕರಿದರು.. ಪರಲೋಕಕ್ಕೆ, ಮಾರ್ಗವಾದಂತ ಕ್ರಿಸ್ತನನ್ನು ನಂಬಲೇ ಇಲ್ಲ. (ಯೋಹಾನ 14:6) ಇದು ಮಾತ್ರವಲ್ಲ. ಬೇರೊಬ್ಬರು ಈ ಮಾರ್ಗವನ್ನು ಅನುಸರಿಸಿ ನಡೆದು, ರಕ್ಷಣೆ ಹೊಂದಲು ಬಿಡಲಿಲ್ಲ. (ಲೂಕ 11:52 ನೋಡಿರಿ) ಜನರು ತಮ್ಮ ಮುಖಂಡರು ನಂಬದ ಕಾರಣ, ತಾವು ಸಹಾ ಅವರನ್ನೆ ಹಿಂಬಾಲಿದರು..

**14** ಮಾರ್ಕ 12:40 ನೋಡಿರಿ ಮತ್ತು[66] ವ್ಯಾಖ್ಯಾನ

**15** ಯಹೂದ್ಯರು ಯಹೂದ್ಯ ಮತಕ್ಕೆ ಜನರನ್ನು ಸೇರಿಸಿಕೊಳ್ಳುವಲ್ಲಿ ಪ್ರಯತ್ನಿಸಿದರು. ಅನೇಕ ಸಾರಿ,ಈ ಕಾರ್ಯಕ್ಕಾಗಿ ಬೇರೆ ದೇಶಗಳಿಗೆ ಪ್ರಯಾಣಿಸಿದರು ಕೆಲವು ಅನ್ಯಜನರು ಈ ಪರಿಣಾಮದಿಂದ ಯಹೂದ್ಯ ಮತಾವಲಂಬಿಗಳಾದರು.

ಶಾಸ್ತ್ರಿಗಳು ಮತ್ತು ಫರಿಸಾಯರು ಇವರ ಗುರುಗಳಾಗಿದ್ದರಿಂದ ಅವರಂತೆಯೆ ಹೊರನೋಟಕ್ಕಾಗಿ ಇವರು ಸಹ ಯಹೂದ್ಯರಂತಾದರು (ನೋಡಿರಿ. ರೋಮಾಯ 2:28-29 . ಮತ್ತು ವ್ಯಾಖ್ಯಾನ) ಆದರೆ ಇವರು ಕ್ರಿಸ್ತನನ್ನು ಅಂಗೀಕರಿಸಲು, ಒಪ್ಪಲಿಲ್ಲ. ಹಾಗೆಯೇ ಇವರು ಯಹೂದ್ಯರಾಗಿ, ಯಾವ ಸಹಾಯವನ್ನು ಯಹೂದ್ಯರಿಂದ ಪಡೆಯಲಿಲ್ಲ. ಅಂದರೆ ಅವರು ನಿತ್ಯ ನಾಶನಕ್ಕೆ ಗುರಿಯಾಗಲು ಅರ್ಹರಾಗಿ, **ನರಕದ ಪುತ್ರರಾದರು.** ಕಪಟಿಗಳಾದ ಯಹೂದ್ಯ ಮುಖಂಡರು ಸಹಾ ನರಕದ ಪುತ್ರರಾದರು. ಆದರೆ ಅವರನ್ನು ಅನುಸರಿಸಿದ, ಮಾಂಸರೂಪವಾಗಿ ಯಹೂದ್ಯರಾಗಿದ್ದವರೂ ಸಹಾ, ಇಮ್ಮಡಿಯಾಗಿ ನರಕಪುತ್ರರಾದರು.

**16-20** ಯಹೂದ್ಯ ಮುಖಂಡರು ಪ್ರಮಾಣ ಮಾಡಿ ಆಣೆ ಇಟ್ಟುಕೊಂಡು ಯಾವುದೇ ಒಪ್ಪಂದ ಅಥವಾ ವಾಗ್ದಾನ ಮಾಡಿಕೊಳ್ಳುತ್ತಿದ್ದರು. ಮತ್ತಾಯ 5:33 ನೋಡಿರಿ ಮತ್ತು ವ್ಯಾಖ್ಯಾನಿಸಿರಿ) ಆದರೆ ಅವರು ಯಾವಾಗಲೂ, ತಮ್ಮ ಆಣೆ ಪ್ರಮಾಣದಿಂದ ತಪ್ಪಿಸಿಕೊಳ್ಳಲು ದಾರಿಯನ್ನು ಕಂಡುಹಿಡಿಯುತ್ತಿದ್ದರು. ಅವರು ಹೇಳುವ ಹಾಗೆ, ದೇವಾಲಯದ ಮೇಲೆ ಆಣೆ ಇಟ್ಟುಕೊಂಡರೆ, ಅದು ಬದ್ದವಾಗುವುದಿಲ್ಲ. ಅವರು ದೇವಾಲಯದಲ್ಲಿರುವ ದೇವರ ಮೇಲೆ ಆಣೆ ಇಟ್ಟುಕೊಂಡರೆ ಅದು ಬದ್ಧವಾಗಿದ್ದು, ಅದನ್ನು ಪಾಲಿಸಲೇಬೇಕೆಂದು ತಿಳಿದಿದ್ದರು (ವಚನ 16). ದೇವಾಲಯದಲ್ಲಿನ ಪೀಠದ ಮೇಲೆ ಆಣೆ ಇಟ್ಟುಕೊಂಡರೆ, ಅದು ಏನು ಇಲ್ಲ. ಆದರೆ, ಪೀಠದ ಮೇಲಿರುವ ಕಾಣಿಕೆಯ ಮೇಲೆ ಪ್ರಮಾಣ ಮಾಡಿದರೆ, ಅದನ್ನು ಪಾಲಿಸಬೇಕೆಂದು ತಿಳಿದಿದ್ದರು. (ವಚನ 18)

ಆದರೆ ಅವರ ಬೋಧನೆಯು ಶುದ್ದ ಸುಳ್ಳು ದೇವಾಲಯದಲ್ಲಿನ ಚಿನ್ನಕ್ಕಿಂತ, ದೇವಾಲಯ ದೊಡ್ಡದು. ಪೀಠದ ಮೇಲಿನ ಕಾಣಿಕೆಗಿಂತ, ಪೀಠವೇ ದೊಡ್ಡದ್ದು. ಆದ್ದರಿಂದ, ದೇವಾಲಯದ ಮೇಲೆ, ಹಾಗೂ ಪೀಠದ ಮೇಲೆ ಆಣೆ ಮಾಡಿದರೆ, ಅದು ಏನೂ ಇಲ್ಲ ಎಂದು ಅವರು ಹೇಳುವುದು ಹೇಗೆ? ದೇವಾಲಯದಲ್ಲಿನ ಚಿನ್ನವು ದೇವಾಲಯಕ್ಕೆ ಸೇರಿದೆ. ಪೀಠದ ಮೇಲಿನ ಕಾಣಿಕೆಯು ಪೀಠಕ್ಕೆ ಸೇರಿದೆ. ಆದುದರಿಂದ ದೇವಾಲಯದ ಮೇಲಾಗಲೀ, ದೇವಾಲಯದ ಚಿನ್ನದ ಮೇಲಾಗಲೀ, ಅಥವಾ ಪೀಠದ ಮೇಲಾಗಲೀ, ಅಥವಾ ಪೀಠದ ಮೇಲಿನ ಕಾಣಿಕೆಯ ಮೇಲಾಗಲೀ, ಆಣೆ ಇಟ್ಟುಕೊಂಡರೆ, ಅದರಲ್ಲಿ ಯಾವ ವ್ಯತ್ಯಾಸವು ಕಾಣುವುದಿಲ್ಲ. ಅವರು ಯಾವುದರ ಮೇಲೆ ಆಣೆ ಇಟ್ಟರೂ, ಅದನ್ನು ಅವರು ಪಾಲಿಸಲೇಬೇಕು. ಆದರೆ ಯಹೂದ್ಯ ಮುಖಂಡರು ಕಪಟಿಗಳಾಗಿದ್ದರು ಅವರಿಗೆ ತಮ್ಮ ಆಣೆಯ ಮೇಲೆ ಬದ್ಧರಾಗಿರುವುದಕ್ಕೆ ಇಷ್ಟವಿರಲಿಲ್ಲ. ಇವರು ಇವುಗಳನ್ನು ಪಾಲಿಸದೇ ಇರುವುದಕ್ಕೆ ಅನೇಕ ನೆಪಗಳನ್ನು ಸೃಷ್ಟಿಸುವುದರಲ್ಲೇ ಇರುತ್ತಿದ್ದರು.

**21-22** ನಾವು ದೇವರಿಗೆ ಸಂಬಂಧಿಸಿದ ಯಾವುದೇ ವಸ್ತುವಿನ ಮೇಲೆ ಆಣೆ ಇಟ್ಟುಕೊಂಡರೆ, ನಾವು ದೇವರನ್ನೇ ಆಣೆ ಮಾಡಿಕೊಂಡ ಹಾಗೆ. ನಾವು ದೇವಾಲಯದ ಮೇಲೆ ಆಣೆ ಇಟ್ಟುಕೊಂಡರೇ ನಾವು ಚಿನ್ನದ ಮೇಲೆ ಆಣೆ ಇಟ್ಟುಕೊಂಡರೆ ನಾವು ದೇವಾಲಯದ ಮೇಲೆ ಆಣೆ ಇಟ್ಟುಕೊಂಡ ಹಾಗೆ. ನಾವು ದೇವಾಲಯದ ಮೇಲೆ ಆಣೆ ಇಟ್ಟುಕೊಂಡರೆ ನಾವು ಅಲ್ಲಿ ವಾಸವಾಗಿರುವ ದೇವರ ಮೇಲೆ ಆಣೆ ಇಟ್ಟುಕೊಂಡ ಹಾಗೆಯೇ (ವಚನ 21) ನಾವು ಪರಲೋಕದ ಮೇಲೆ ಆಣೆ ಇಟ್ಟುಕೊಂಡರೆ, ನಾವು ದೇವರ ಸಿಂಹಾಸನದ ಮೇಲೆ ಆಣೆ ಇಟ್ಟುಕೊಂಡರೆ, ಅಲ್ಲಿ ಕುಳಿತಿರುವಾತನ ಮೇಲೆ ಇಟ್ಟುಕೊಳ್ಳುತ್ತೇವೆ. ಆತನೇ ದೇವರು. ನಾವು ಯಾವುದರ ಮೇಲೆ ಆಣೆ ಇಟ್ಟುಕೊಂಡರೂ, ಅದು ದೇವರ ಮೇಲೆ ಆಣೆ ಇಟ್ಟುಕೊಂಡ ಹಾಗೆ. ಏಕೆಂದರೆ ಎಲ್ಲವನ್ನು ಸೃಷ್ಟಿ ಮಾಡಿದ್ದಾನೆ.

ಆದರೆ ಯೇಸುವಿನ ಮುಖ್ಯ ಬೋಧನೆ ಇದಾಗಿದೆ. ನೀವು ಆಣೆ ಇಟ್ಟುಕೊಳ್ಳಲೇ ಬಾರದು. ಒಬ್ಬ ಮನುಷ್ಯನು ಸತ್ಯವಂತನಾಗಿದ್ದು, ಮತ್ತು ಪ್ರಮಾಣಿಕವಾಗಿದ್ದರೆ, ಅವನು ಆಣೆ ಇಡಲೇ ಬೇಕಿಲ್ಲ. ಆಣೆ ಇಟ್ಟುಕೊಳ್ಳುವುದು ಅಸತ್ಯದ ಸಂಕೇತ. ಮತ್ತಾಯ 5:34-37 ಮತ್ತು ನೋಡಿರಿ ವ್ಯಾಖ್ಯಾನ.

**23** ಯಹೂದ್ಯರು ಯಾವಾಗಲು ತಮ್ಮ ಬೆಳೆಯ ಅಥವಾ ಪ್ರಾಣಿಗಳ ಹತ್ತನೇ ಒಂದು ಭಾಗವನ್ನು ದೇವರಿಗೆ ಸಮರ್ಪಿಸುತ್ತಿದ್ದರು. (ಯಾಜಕ 27:30) ಇದು ಒಳ್ಳೇದು ಮತ್ತು ಅವಶ್ಯಕವಾದದ್ದು.ಎಲ್ಲಾ ಕ್ರೈಸ್ತರು ತಮ್ಮ ಆದಾಯದ ಹತ್ತನೇ ಒಂದು ಭಾಗವನ್ನು ದೇವರಿಗೆ ಕೊಡಲೇಬೇಕಾಗಿದೆ. ಯಾರು ಕೊಡುವುದಿಲ್ಲವೋ, ಅವರು ಫರಿಸಾಯರಿಗಿಂತಲೂ ಕೆಟ್ಟವರಾಗಿರುತ್ತಾರೆ. ಯಾಕೆಂದರೆ, ಅವರಾದರೋ ಅಷ್ಟನ್ನಾದರೂ ಕೊಡುತ್ತಿದ್ದರು.

ಆದಾಗ್ಯೂ, ದಶಮಾಂಶ ಕೊಡುವುದಕ್ಕಿಂತಲೂ ಬಹಳ ಮುಖ್ಯವಾದ ಕಟ್ಟಳೆಗಳು ಇವೆ. (ಮಿಕ 6:8) ಯಹೂದ್ಯರು ದಶಮಾಂಶ ಯಾವಾಗಲೂ ಕೊಡುತ್ತಿದ್ದರು ಆದರೆ ಬಹಳ ಮುಖ್ಯವಾದ ಧರ್ಮಶಾಸ್ತ್ರದ ಅಂಶಗಳಾದ, ನ್ಯಾಯ, **ಕರುಣೆ ಮತ್ತು ನಂಬಿಗಸ್ಥಿಕೆಯನ್ನು** ಅವರು ಕಡೆಗಾಣಿಸಿದರು. **ದೇವರ ಪ್ರೀತಿಯನ್ನು** ಕಡೆಗಾಣಿಸಿದರು. (ಲೂಕ. 11:42) ನಿಜವಾಗಿ ದೇವರಿಗೆ ವಿಧೇಯರಾಗಿ ನಡೆದುಕೊಳ್ಳುವುದೆಂದರೆ ಈ ಮುಖ್ಯಾಂಶಗಳನ್ನು ಪಾಲಿಸುವುದೇ ಆಗಿದೆ. ಬಲಿ ಅರ್ಪಣೆ. ದಶಮಾಂಶ ಕೊಡುವಿಕೆ ಇವುಗಳು ಅಷ್ಟು ಪ್ರಾಮುಖ್ಯವಲ್ಲ. 1ನೇ ಸಮುವೇಲ 15:22. **ನನಗೆ ಕರುಣೆ ಬೇಕು. ಬಲಿ ಅರ್ಪಣೆ "ಅಲ್ಲ"** ದೇವರು ಈ ರೀತಿಯಾಗಿ ಪ್ರವಾದಿಯಾದ ಹೋಶಯನ ಮೂಲಕ ಹೇಳಿದ್ದಾನೆ. (ಹೋಶಯ 6:6)

**24** ಇಲ್ಲಿ ಯೇಸುವು ಯಹೂದ್ಯರ ಒಂದು ಸಾಮ್ಯವನ್ನು ಎತ್ತಿ ಹೇಳಿದ್ದಾನೆ. ಸಣ್ಣ ಆಜ್ಞೆಗಳನ್ನು ಕೈಕೊಂಡು ಮತ್ತು ದೊಡ್ಡ ಆಜ್ಞೆಗಳಿಗೆ ವಿಧೇಯರಾಗದೇ ಇರುವವರು ಗದ್ದಲ ಮಾಡುತ್ತಾ, ಚಹಾದ ಬಟ್ಟಲಲ್ಲಿ ಬಿದ್ದಿದ್ದ ಒಂದು ಚಿಕ್ಕ ನೊಣವನ್ನು ಎತ್ತಿ ತೋರಿಸುತ್ತಾದರೂ, ಅದರಲ್ಲೇ ಬಿದ್ದಿರುವ ಜಿರಳೆ ಅಥವಾ ಒಂಟೆಯನ್ನು ನೋಡದೆ ಹಾಗೇಯೇ ಚಹಾವನ್ನು ಹೀರಿಬಿಡುತ್ತಾರೆ.

**25** ಯಹೂದ್ಯ ಮುಖಂಡರು ಕಪ್ಪುಗಳನ್ನು ಪಾತ್ರಗಳನ್ನು ಶುದ್ಧ ಮಾಡುವ ವಿಷಯದಲ್ಲಿ ಅನೇಕ ಕಟ್ಟಳೆಗಳನ್ನು ಅನುಸರಿಸುತ್ತಿದ್ದರು. (ಮಾರ್ಕ 7:4) ಯೇಸು ಹೇಳಿದ್ದೇನೆಂದರೆ, ಧರ್ಮಶಾಸ್ತ್ರದ ಬೋಧಕರು ಮತ್ತು ಪರಿಸಾಯರು ಕಪ್ಪುಗಳಂತೆ ಇದ್ದು ಹೊರಗೆ ಸ್ವಚ್ಛವಾಗಿದ್ದು, ಒಳಗೆ ಮಾತ್ರ ಹಾಗೆ ಇರುವುದಿಲ್ಲ. ಯಹೂದ್ಯರು ಹೊರಗಿನ ಜನರು ನೋಡಲೆಂದು ಹಾಗೂ ಹೊಗಳಲೆಂದು ಕಟ್ಟಳೆಗಳಿಗೆ ವಿಧೇಯರಾಗಿ ನಡೆದುಕೊಳ್ಳುತ್ತಾರೆ. ಆದರೆ, ಅವುಗಳನ್ನು ಅವರ ಹೃದಯದಿಂದ ಮಾಡುವುದಿಲ್ಲ. ಅವರು **ಸಂಪೂರ್ಣವಾಗಿ ದುರಾಶೆ ಮತ್ತು ಸ್ವಾರ್ಥತೆಯಿಂದ** ಕೂಡಿದ್ದರು.

ಬಟ್ಟಲಿನ ಒಳಗಡೆಯ ಕೊಳೆಯನ್ನು ತೆಗೆಯದೆಯೆ ಹೊರಭಾಗವನ್ನು ಶುಚಿಗೊಳಿಸುವುದು ವ್ಯರ್ಥವಲ್ಲವೆ ಬಟ್ಟಲು ಒಳಗಡೆ, ಅಶುಚಿಯಾಗಿದ್ದರೆ, ಆ ಬಟ್ಟಲಲ್ಲಿ ಏನು ಇದೆಯೋ ಅದೂ ಸಹ ಅಶುಚಿಯಾಗಿಯೇ ಇರುತ್ತದೆ ಮತ್ತು ಕುಡಿಯಲು ಅಯೋಗ್ಯವಾಗಿರುತ್ತದೆ. (ಲೂಕ 11:40-41 ನೋಡಿರಿ ಮತ್ತು ವ್ಯಾಖ್ಯಾನ)

**26** ಯೇಸು ಹೀಗೆ ಹೇಳಿದನು, ಯಹೂದ್ಯ ಮುಖಂಡರು ಮೊದಲು **ಬಟ್ಟಲಿನ ಒಳಭಾಗದಂತಿರುವ** ತಮ್ಮ ಹೃದಯಗಳನ್ನು ಶುದ್ಧ ಮಾಡಿಕೊಳ್ಳಬೇಕು. ಯೇಸು ಹೇಳಿದ್ದಾನೆ. **ಯಾವುದು ಮನುಷ್ಯನ ಬಾಯಿಂದ ಹೊರಬರುತ್ತದೋ, ಅದು ಅವನನ್ನು ಅಶುದ್ಧಗೊಳಿಸುತ್ತದೆ** (ಮಾರ್ಕ 7:20 ನೋಡಿರಿ ಮತ್ತು ವ್ಯಾಖ್ಯಾನ) ಒಬ್ಬನ ಹೃದಯವು ಶುದ್ಧವಾಗಿದ್ದರೆ ಅಂದರೆ ಒಬ್ಬನಲ್ಲಿನ ಆಂತರಿಕ ಆಶೆಗಳು ಶುದ್ಧವಾಗಿದ್ದುದಾದರೆ, ಅವನ ಹೊರಗಿನ ಆ ನಡತೆಯು ಸಹಾ ಶುದ್ಧವಾಗಿರುತ್ತದೆ.
ಹೃದಯವು ಅಶುದ್ಧವಾಗಿದ್ದಲ್ಲಿ, ಹೊರಗಡೆಯಿಂದ ತೊಳೆಯುವುದರಿಂದ ಯಾವ ಪ್ರಯೋಜನವೂ ಇಲ್ಲ. ದೇವರು ಹೃದಯವನ್ನು ನೋಡುತ್ತಾನೆ. (1ನೇ ಸಮುವೇಲ 6:7)**ಕುರುಡ ಫರಿಸಾಯನು** ತಾನು ನಿಜವಾಗಿಯು ಕುರುಡನಾಗಿರುವುದರಿಂದ ತನ್ನ ಹೃದಯದಲ್ಲಿನ ಪಾಪವನ್ನು ಕಂಡಿತವಾಗಿ ನೊಡಲಾರನು.

**27-28** ಯಹೂದ್ಯ ಮುಖಂಡರು, ಸುಣ್ಣ ಬಳಿದ ಸಮಾಧಿಗಳಂತಿದ್ದಾರೆ. ಹೊರ ನೋಟಕ್ಕೆ ಅವರು ಆತ್ಮೀಯರಾಗಿ ಜೀವಿಸುತ್ತಿದ್ದರೂ, ಅವರು ಅಂತರಂಗದಲ್ಲಿ ಭ್ರಷ್ಟರಾಗಿ ಆತ್ಮೀಯವಾಗಿ ಸತ್ತಿದ್ದಾರೆ.

**29** ಯೇಸುವಿನ ಕಾಲದಲ್ಲಿದ್ದ ಯಹೂದ್ಯರು ಹಳೇ ಒಡಂಬಡಿಕೆಯ ಪ್ರವಾದಿಗಳನ್ನು ಸನ್ಮಾನಿಸುತ್ತಿದ್ದರು. ಅವರಿಗಾಗಿ ದೊಡ್ಡ ಸಮಾಧಿಗಳನ್ನು ರಕ್ತ ಸಾಕ್ಷಿಗಳಿಗೆ ಕಟ್ಟುವ ಸ್ಮಾರಕಗಳಂತೆ ಕಟ್ಟುತ್ತಿದ್ದರು. ಆದಾಗ್ಯೂ ಅವರು ಕ್ರಿಸ್ತನನ್ನು ಆತನ ಶಿಷ್ಯರನ್ನು ಸನ್ಮಾನಿಸಲು ಒಪ್ಪಲಿಲ್ಲ. ಜೀವಂತವಾಗಿರುವ ಪ್ರವಾದಿಯನ್ನು ಸನ್ಮಾನಿಸುವುದಕ್ಕಿಂತ ಸತ್ತು ಹೋದ ಪ್ರವಾದಿಯನ್ನು ಸನ್ಮಾನಿಸುವುದು ಎಷ್ಟೋ ಸುಲಭವಾಗಿತ್ತು.

**30** ಕ್ರಿಸ್ತನ ಕಾಲದ ಲ್ಲಿದ್ದಂತ ಈ ಯಹೂದ್ಯರು ತಮ್ಮ ಪೂರ್ವಿಕರು ಪ್ರವಾದಿಗಳನ್ನು ಕೊಂದರೆಂದು ಒಪ್ಪಿಕೊಂಡರು. ಇವರು ತಮ್ಮ ಪೂರ್ವಿಕರಿಗಿಂತ ಉತ್ತಮರಾಗಿರಲಿಲ್ಲ.ಯೇಸುವು ಸಾಯಲು ಇವರು ಕಾರಣರಾದರು. ಮತ್ತು ಆತನ ಹಿಂಬಾಲಕರನ್ನು ಹಿಂಸಿಸಿದರು ಮತ್ತು ಹತ್ಯಮಾಡಿದರು. (ಇಬ್ರಿಯ.11:32-38 ) ಹಳೇ ಒಡಂಬಡಿಕೆಯ ಪ್ರವಾದಿಗಳು ಇಸ್ರಾಯೇಲ್ ಜನರ

ಪಾಪಗಳನ್ನು ಖಂಡಿಸುತ್ತಾ ಅವರನ್ನು ದೇವರ ಕಡೆಗೆ ತಿರುಗಿಸುತ್ತಿರುವಾಗ, ಅನೇಕ ಯಹೂದ್ಯ ಆ ಕಾಲದಲ್ಲಿ ಅದನ್ನು ತಿರಸ್ಕರಿಸಿದರು. ಮತ್ತು ಅವರನ್ನು ಕೊಂದು ಹಾಕಿದರು. ಇಬ್ರಿಯಾ 11:32-38 ಆದರೆ ಯೇಸುವಿನ ಕಾಲದಲ್ಲಿದ್ದ ಯಹೂದ್ಯರು, ನಾವು ಆಗ ಜೀವಿಸುತ್ತಿರುವುದಾದರೆ, ನಾವು ಹಾಗೆ ಮಾಡುತ್ತಿರಲಿಲ್ಲವೆಂದು ಹೇಳಿದರು. ಆದರೆ ಹಾಗೇ ಹೇಳುತ್ತಿರುವಾಗಲೇ ಎಲ್ಲಾ ಹಳೇ ಒಡಂಬಡಿಕೆ ಪ್ರವಾದಿಗಳು ಸಾಕ್ಷಿ ಕೊಟ್ಟಂತಹ ಯೇಸುವೆಂಬ ಮೆಸ್ಸಿಯನನ್ನು ಕೊಲ್ಲಲು ಸಂಚು ಮಾಡುತ್ತಿದ್ದರು.

**31-32** ಯೇಸುವಿನ ಕಾಲದ ಯಹೂದ್ಯರು ಸಹಾ ಅವರ ಪೂರ್ವಿಕ ಮಾಡಿದ ಹಾಗೆಯೇ ನಡೆದುಕೊಂಡರು. ಅವರ ಪೂರ್ವಿಕರಿಗಿಂತ, ಇವರೇನು ಮೇಲಲ್ಲ. ಯಹೂದ್ಯರು ಯೇಸುವನ್ನು ಸಾವಿಗೆ ಈಡು ಮಾಡಿದರು. (ಅ.ಕೃ.7:51-52 ನೋಡಿರಿ) ಮತ್ತು ಆತನ ಹಿಂಬಾಲಕರನ್ನು ಹಿಂಸಿಸಿದರು ಮತ್ತು ಕೊಂದು ಹಾಕಿದರು (ಅ.ಕೃ. 7:58, 8:1 ನೋಡಿರಿ. ಆದುದರಿಂದ, ಅವರನ್ನು ನೋಡಿ ಯೇಸುವು ವ್ಯಂಗ್ಯವಾಗಿ ಹೇಳಿದ್ದೇನೆಂದರೆ, ನೀವು ನನ್ನನ್ನು ಕೊಲ್ಲಲು ಹವಣಿಸುತ್ತಿದ್ದೀರಿ. ಹಾಗೇ ಮುಂದುವರಿಯಿರಿ, ಮಾಡಿರಿ. **"ನಿಮ್ಮ ಪೂರ್ವಿಕರು ಮಾಡಿದ ಪಾಪ ಕೊಡವನ್ನು ಇನ್ನಷ್ಟು ತುಂಬಿರಿ"** ಅವರ ಪೂರ್ವಿಕರು ಹಳೇ ಒಡಂಬಡಿಕೆಯ ಪ್ರವಾದಿಗಳನ್ನು ಕೊಂದರು. ಆದರೂ ಇನ್ನು ಕೆಲವು ಕೊಲೆಗಳು ಉಳಿದುಕೊಂಡಿವೆ. ಅವರ ಪೂರ್ವಿಕರು ಮಾಡಿದ ಅಪರಾಧಗಳ ಜೊತೆಗೆ ಇನ್ನಷ್ಟು ಸೇರಿಸಬೇಕಾಗಿದೆ. ಅದೇನೆಂದರೆ, ಅವರು ಮೆಸ್ಸಿಯಾನನ್ನು ಆತನ ಹಿಂಬಾಲಕರನ್ನು ಇನ್ನು ಕೊಂದು ಹಾಕಲಿಲ್ಲ. ಯೇಸುವನ್ನು ಮತ್ತು ಆತನ ಶಿಷ್ಯರನ್ನು ಕೊಂದು ಹಾಕಿದ ನಂತರವೇ, ಅವರ ಪೂರ್ವಿಕರು ಮಾಡಿದ ಪಾಪದ ಕೊಡ ಸಂಪೂರ್ಣವಾಗಿ ತುಂಬಲ್ಪಡುತ್ತದೆ. ಅವರ ಪೂರ್ವಿಕರು ಮಾಡಿದ ಕೆಡುಕಿನ ಕೆಲಸಗಳು ತುಂಬಿ ಬರುತ್ತವೆ.

**33** ಇಂಥಾ ಕೆಡುಕನ್ನು ಮಾಡುವವರು, ದೈವ ಕೋಪದಿಂದ ಹೇಗೆ ತಪ್ಪಿಸಿಕೊಂಡಾರು? **ಎಲೈ ಸರ್ಪಗಳೇ, ಸರ್ಪ ಜಾತಿಗೆ ಸೇರಿದವರೇ!** ಯಹೂದ್ಯ ಮುಖಂಡರು, ಸರ್ಪ ಮತ್ತು ವಿಷ ಸರ್ಪಗಳಂತೆ, ವಿಷಕಾರಿಗಳು. ಕ್ರಿಸ್ತನು ಸಾಧಾರಣವಾಗಿ ಸಾಧು ಮತ್ತು ಸಭ್ಯನು ಆಗಿದ್ದನು. ಆದರೆ ಕಪಟಿಗಳನ್ನು ಸುಳ್ಳು ಬೋಧಕರನ್ನು ಎದುರಿಸುತ್ತಿರುವಾಗ, ಆತನ ಖಂಡನೆ ಬಹಳ ಕಠಿಣವಾದದ್ದು ಆಗಿತ್ತು. (ಮಾರ್ಕ 11:15-17 ನೋಡಿರಿ)

**34** ಯೇಸುವು ಮತ್ತೂ ವ್ಯಂಗ್ಯವಾಗಿ ಹೇಳಿದ್ದೇನೆಂದರೆ ಆದುದರಿಂದ, ನೀವು ನಿಮ್ಮ ಪೂರ್ವಿಕರು ಮಾಡಿದ ಅಪರಾಧಗಳನ್ನು ಇನ್ನಷ್ಟು ತುಂಬಿಸಿರಿ. **ಅದಕ್ಕಾಗಿ ಕ್ರಿಸ್ತನ ಶಿಷ್ಯರಾದಂತ ಪ್ರವಾದಿಗಳನ್ನು ಮತ್ತು ಜ್ಞಾನಿಗಳನ್ನು, ಉಪದೇಶಕರನ್ನು ನಿಮ್ಮಲ್ಲಿಗೆ ಕಳಿಸಿಕೊಡುತ್ತೇನೆ.** ನನ್ನನ್ನು ಹಿಂಸಿಸುವಂತೆಯೇ, ನನ್ನ ಶಿಷ್ಯರನ್ನು ಹಿಂಸಿಸುವರಂದು ಯೇಸುವಿಗೆ ತಿಳಿದಿತ್ತು. (ಮಾರ್ಕ 8:31, 13:13, ಅ.ಕೃ. 14:19, 17:13 ನೋಡಿರಿ)

**35-36** ಆಗ ಯೇಸುವು ಅವರನ್ನು ಎಚ್ಚರಿಸುತ್ತಾ ಎಲ್ಲಾ ಪ್ರವಾದಿಗಳನ್ನು ಕೊಂದು ಹಾಕಿದ ಪಾಪಕ್ಕೆ ದಂಡನೆಯು ಆತನ ಕಾಲದ ಯಹೂದ್ಯರೆಲ್ಲರ ಮೇಲೆ ಬೀಳುತ್ತದೆ ಎಂದು ಹೇಳಿದನು. ಅವರಿಗೆ ಅವರು ಮಾಡಿದ ಅಪರಾಧಕ್ಕಲ್ಲದೇ, ಅವರ ಪೂರ್ವಿಕರು ಮಾಡಿದ ಅಪರಾಧಕ್ಕೂ ಅವರು ದಂಡನೆ ಅನುಭವಿಸಲು ಅವರೇ ಹೊಣೆಗಾರರಾಗಿರುತ್ತಾರೆ. **ಇದೆಲ್ಲವೂ ಈ ಸಂತತಿಯ ಮೇಲೆ ಬರಲಿದೆ.** (ಲೂಕ 11:50-51 ನೋಡಿರಿ) ಈ ದಂಡನೆ ಯಾವುದೆಂದರೆ, ಯೆಸುಸಲೇಂ ದೇವಾಲಯ ಹಾಳುಗೆಡವಿದ್ದ ಮತ್ತು ಅಲ್ಲಿ ಎಲ್ಲಾ ನಿವಾಸಿಗಳನ್ನು ಕ್ರಿ.ಶ. 70ರಲ್ಲಿ ನಾಶಗೊಳಿಸಿದ್ದುದೇ ಹಾಗಿದೆ.

ಕ್ರಿಸ್ತನ ಕಾಲದ ಯಹೂದ್ಯ ಸಂತತಿಯವರು ಹಳೇ ಒಡಂಬಡಿಕೆಯಲ್ಲಿನ **ಹೇಬೇಲ್‌ನಿಂದ ಬರಕೀಯನ** [67] **ಮಗನಾದ ಜಕರಿಯನ** ವರೆಗಿನ ನೀತಿ ಪುರುಷರನ್ನು ಕೊಲೆ ಮಾಡಿದ ಆರೋಪಕ್ಕೆ ದಂಡನೆಯನ್ನು ಪಡೆದುಕೊಳ್ಳಲೇ ಬೇಕು (ವಚನ 35)ಹೇಬೇಲನು ಮೊದಲನೇ ಪುರುಷ ಮತ್ತು ಸ್ತ್ರೀಯ ಮಗನು, ಆತನು ತನ್ನ ತಮ್ಮನಿಂದಲೇ ಕೊಲೆಗೈಯಲ್ಪಟ್ಟನು. ಆದಿಕಾಂಡ 4:1-8 ಎರಡನೇ ಪೂರ್ವಕಾಲ ವೃತ್ತಾಂತ 24ನೇ ಅಧ್ಯಾಯ 20-21 ವಚನಗಳಲ್ಲಿ ಪ್ರವಾದಿಯಾದ ಜಕರೀಯನ ಕೊಲೆ ಬಗ್ಗೆ ಬರೆಯಲಾಗಿದೆ.ಯಹೂದ್ಯರ ಹಳೇ ಒಡಂಬಡಿಕೆ ಪ್ರಕಾರ 2ನೇ ಪೂರ್ವಕಾಲ ವೃತ್ತಾಂತವೂ, ಕಡೆಯ ಪುಸ್ತಕವಾಗಿತ್ತು. ಆದುದರಿಂದ, ಹೇಬೇಲಿನಿಂದ ಜಕರೀಯನವರೆಗೂ ಎಂದು ತಿಳಿಸುವಾಗ, ಎಲ್ಲಾ ಹಳೇ ಒಡಂಬಡಿಕೆಯ ಪ್ರವಾದಿಗಳ ಬಗ್ಗೆ ಹೇಳಿದ ಹಾಗಾಯ್ತು.

**37** ಕ್ರಿಸ್ತ ಯೇಸುವು ಇಸ್ರಾಯೇಲ್‌ರಲ್ಲಿ ಕಳೆದು ಹೋದ ಕುರಿಗಳನ್ನು ಹುಡುಕಿ, ಅವುಗಳಿಗೆ ರಕ್ಷಣೆ ಕೊಡಲು ಬಂದನು. (ಮತ್ತಾಯ 15:24) ಆತನೇ ಸ್ವತಃ ಯಹೂದ್ಯನು. ಯಹೂದ್ಯರ ಮೇಲೆ ಆತನಿಗೆ ಪ್ರೀತಿಯಿತ್ತು. ಯಹೂದ್ಯ ಮುಖಂಡರನ್ನು ಗದರಿಸುವಾಗಲೂ ಅವರನ್ನು ಪ್ರೀತಿಸುತ್ತಿದ್ದನು. ಯೆರುಸಲೇಂ ಪಟ್ಟಣವನ್ನು ನೋಡಿ, ಆತನು ಅತ್ತನು (ಲೂಕ 19:41) ಮುಂಬರುವ ದೈವ ಕೋಪದಿಂದ ಯಹೂದ್ಯರನ್ನು ತಪ್ಪಿಸಲು ಆತನಿಗೆ ಇಷ್ಟವಿತ್ತು. ಆದರೆ, ಅವರು ಆತನ ಕಾಪಾಡುವಿಕೆಯನ್ನು ಅಂಗೀಕರಿಸಲಿಲ್ಲ. ಅವರು ಆತನನ್ನು ಮೆಸ್ಸಿಯನೂ, ರಕ್ಷಕನೂ ಎಂದು ಒಪ್ಪಿಕೊಳ್ಳಲೇ ಇಲ್ಲ.

**38** ಆದುದರಿಂದ ಯಹೂದ್ಯರನ್ನು ಯಾರು ಕಾಪಾಡದೇ, ಅವರು ಒಂಟಿಯಾಗಿಯೇ ಉಳಿದುಕೊಂಡರು. ಯೇಸುವು ಅವರಿಗೆ ಹೇಳಿದನು **"ನಿಮ್ಮ ಮನೆಗಳು ನಿಮಗಾಗಿ ಹಾಳು ಬಿದ್ದು ಹೋಗಿವೆ"** ಅಂದರೆ ನಿಮ್ಮ ಮಹಾದೇವಾಲಯವು ನಾಶ ಹೊಂದುತ್ತದೆ ಮತ್ತು ನಿಮ್ಮ ಪಟ್ಟಣವೂ ಸೇರಿದಂತೆ ನಾಶವಾಗುತ್ತದೆ ಎಂದು ಹೇಳಿದನು.

**39** ಆದುದರಿಂದ, ಯಾರಿಂದ ರಕ್ಷಣೆ ಪಡೆಯಬಹುದಿತ್ತೋ ಆತನನ್ನು ಕೊಂದು ಹಾಕಿದರು. ಆದರೆ ಈ ಲೋಕದ ಅಂತ್ಯದಲ್ಲಿ ತನ್ನ ಭಕ್ತರನ್ನು ಕರೆಯಲು ಬರುವಾಗ ಅವರನ್ನು ಮತ್ತೆ ನೋಡುವನು (ಮಾರ್ಕ 13:26-27) ಆ ಸಮಯದಲ್ಲಿ ಎಲ್ಲಾ ಮನುಷ್ಯರು ಆತನನ್ನು ಗುರುತು ಹಿಡಿಯುವರು. ಅವರು ಕೂಗಿಕೊಳ್ಳುವರು. **ಯಹೋವನ ಹೆಸರಿನಲ್ಲಿ ಒಳಗೆ ಬರುವವನಿಗೆ ಆಶೀರ್ವಾದ** (ಕೀರ್ತನೆ 118:20) ಆದರೆ ಯಾರ್ಯಾರು ಅವನನ್ನು ತಿರಸ್ಕರಿಸಿದರೋ, ಈ ಲೋಕದಲ್ಲಿ ಅವರು ಭಯಪೀಡಿತರಾಗಿ ಕೂಗುವರು. ಯಾಕೆಂದರೆ ಆ ಸಮಯದಲ್ಲಿ ಯೇಸು ರಕ್ಷಕನಾಗಿ ಬರದೇ, ನ್ಯಾಯಾಧಿಪತಿಯಾಗಿ ಬರುವನು. ಯಾರು ಆತನನ್ನು ತಿರಸ್ಕರಿಸಿದರೋ, ಅವರು ಆತನ ರಾಜ್ಯಕ್ಕೆ ಸೇರುವುದಿಲ್ಲ. ಅಲ್ಲದೆ ಅವರು ಸದಾ ಕಾಲ ನರಕದಲ್ಲಿರುವರು.

## ಅಧ್ಯಾಯ - 24

### ಯುಗದ ಸಮಾಪ್ತಿಯ ಸೂಚನೆಗಳು 24 (1-14)

ಮಾರ್ಕ 13:1-13, ಲೂಕ 21:5-19)

**1-14** ಮಾರ್ಕನ ಸುವಾರ್ತೆ 13:1-13ರನ್ನು ಮತ್ತು ವ್ಯಾಖ್ಯಾನವನ್ನು ನೋಡಿರಿ.

### ಮಹಾ ವಿಪತ್ತು (24:15-28)

ಮಾರ್ಕ 13:14-23, ಲೂಕ 21:20-24

**15-28** (ಮಾರ್ಕ 13:14-23 ಮತ್ತು ವ್ಯಾಖ್ಯಾನ ನೋಡಿರಿ)

### ಭೂಲೋಕದ ಅಂತ್ಯ (24:29-31)

ಮಾರ್ಕ 13:24-27, (ಲೂಕ 21:25-28)

**29-31** ಮಾರ್ಕ 13:24-27 ಮತ್ತು ವ್ಯಾಖ್ಯಾನ ನೋಡಿರಿ.

### ಯೆರುಸಲೇಮಿನ ಅಂತ್ಯ (24:32-35)

(ಮಾರ್ಕ 13:28-31) ಲೂಕ 21:29-33)

**32:35** ಮಾರ್ಕ 13:28-31 ಮತ್ತು ವ್ಯಾಖ್ಯಾನ ನೋಡಿರಿ.

### ಆ ದಿನ, ಆ ಗಳಿಗೆ ಯಾರಿಗೂ ತಿಳಿಯದು (24:36-44)

(ಮಾರ್ಕ 13:32, 35, ಲೂಕ 12:39-40, 17:26-27, 34-35)

**36** ಯೇಸುಕ್ರಿಸ್ತನು ತಿರುಗಿ ಬರುವ ಆ ದಿನ ಹಾಗೂ ಗಳಿಗೆಯನ್ನು ಯಾರೂ ತಿಳಿಯರು. ಸ್ವತಃ ಕ್ರಿಸ್ತನಿಗೆ ತಿಳಿಯದು. ಆದುದರಿಂದ, ಯಾವಾಗ ಆತನು ಬರಬಹುದೆಂದು, ಊಹೆ ಮಾಡುವುದು ವ್ಯರ್ಥವಾದ ಅಭ್ಯಾಸ. (ಮಾರ್ಕ 13:32 ಮತ್ತು ವ್ಯಾಖ್ಯಾನ ನೋಡಿರಿ).

**37-39** ಹಳೇ ಕಾಲದಲ್ಲಿ ಮನುಷ್ಯನ ಕೆಟ್ಟತನ ಬಹಳವಾಗಿತ್ತು ಮತ್ತು ದೇವರು ಅಸಂತೋಷಗೊಂಡಿದ್ದನು. ಆದುದರಿಂದ, ಆತನು ಎಲ್ಲಾ ಮನುಷ್ಯರನ್ನು, ಪ್ರಾಣಿಗಳನ್ನು, ಜೀವ ಜಂತುಗಳನ್ನು ಭೂಮಿಯ ಮೇಲೆ ಮಹಾ ಜಲ ಪ್ರಳಯದ ಮೂಲಕವಾಗಿ ನಾಶ ಮಾಡಲು ತೀರ್ಮಾನಿಸಿದನು ಒಬ್ಬ ಮನುಷ್ಯನು, ನೋಹನು ನೀತಿವಂತನಾಗಿದ್ದು, ಮತ್ತು ದೇವರ ಅನುಗ್ರಹಕ್ಕೆ ಪಾತ್ರನಾಗಿದ್ದನು. ಆದುದರಿಂದ, ದೇವರು ನೋಹನಿಗೆ ಒಂದು ದೊಡ್ಡ ನಾವೆಯನ್ನು ಕಟ್ಟಲು ಹೇಳಿದನು. ಮತ್ತು ಅದರ ಮೂಲಕ ಅವರನ್ನು ಪ್ರಳಯದಿಂದ ತಪ್ಪಿಸಲು ಆಜ್ಞಾಪಿಸಿದನು.

ಆ ಕಾಲದಲ್ಲಿ ಇತರ ಎಲ್ಲಾ ಮನುಷ್ಯರು ಈ ಲೋಕದ ಆಶಾಭೋಗಗಳನ್ನು ಅನುಭವಿಸುತ್ತಿದ್ದರು. ದೇವರ ನ್ಯಾಯತೀರ್ಪಿಗಾಗಿ ಅವರು ಅಂಜಲಿಲ್ಲ. ಅವರು ಒಂದು ವೇಳೆ, ನೋಹನು ನಾವೆ ಕಟ್ಟುವುದನ್ನು ನೋಡಿ, ಗೇಲಿ ಮಾಡಿ ನಕ್ಕಿರಬಹುದು. ಅವರು ಪ್ರಳಯ ಬರಬಹುದೆಂದು ನಂಬಲೇ ಇಲ್ಲ. ಅವರು ಸಿದ್ಧರಿರಲಿಲ್ಲ ಮತ್ತು ಅವರೆಲ್ಲರೂ ನಾಶ ಹೊಂದಿದರು. ಆದಿಕಾಂಡ 6:5-22, 7:6-12, 17-24

ಹಿಂತುರುಗಿ ಬರುವ ಮನುಷ್ಯಕುಮಾರನು ಅಂದರೆ ಕ್ರಿಸ್ತನು ಈ ಲೋಕದ ಅಂತ್ಯದಲ್ಲಿ ಬರುವನು; ಆ ಮಹಾ ಪ್ರಳಯದಂತಿದೆ. ಅದು ಯಾವ ಸೂಚನೆಯನ್ನು ಕೊಡದೇ ಬರುವುದು. ಮತ್ತು ಯಾರು ದೇವರ ಚಿತ್ತದಲ್ಲಿ ನೀತಿವಂತರೆಂದು ಕಾಣಿಸಿಕೊಳ್ಳುವುದಿಲ್ಲವೋ ಅವರೆಲ್ಲರೂ, ನರಕದಲ್ಲಿ[68]ನಿತ್ಯನಾಶನವನ್ನು ಪಡೆಯುವರು.

**40-41** ಮನುಷ್ಯ ಕುಮಾರನು ಬರುವಾಗ, ಈ ಲೋಕದಲ್ಲಿ ನ್ಯಾಯತೀರ್ಪು ಆಗುವುದು. ಆತನ ದೇವದೂತರು ಆರಿಸಲ್ಪಟ್ಟವರನ್ನು ಒಟ್ಟುಗೂಡಿಸುವರು (ಮಾರ್ಕ 13:27) ಯಾರು ಆರಿಸಲ್ಪಟ್ಟಿಲ್ಲವೋ, ಅನೀತಿವಂತರೂ, ಅಪನಂಬಿಗಸ್ಥರು ನಾಶ ಹೊಂದುವರು. ಮತ್ತಾಯ 13:40-42, 47-50 ಮತ್ತು ವ್ಯಾಖ್ಯಾನ ನೋಡಿರಿ ).

ಹೊಲದಲ್ಲಿದ್ದ ಇಬ್ಬರು ಹೊರ ನೋಟಕ್ಕೆ ಒಂದೇ ಹಾಗಿದ್ದರು. (ವಚನ 40). ಆದರೆ ಅವರಲ್ಲಿ ಒಬ್ಬನು ಪರಲೋಕಕ್ಕೆ ಒಯ್ಯಲ್ಪಡುವನು (1ನೇ ಥೆಸಲೋನಿಕಾ 4:16-17) ಮತ್ತು ಇನ್ನೊಬ್ಬನು ನರಕಕ್ಕೆ ಹಾಕಲ್ಪಟ್ಟು ನಾಶ ಹೊಂದುವನು. ಮತ್ತು ಬೀಸುತ್ತಿರುವಂತ ಇಬ್ಬರು ಹೆಂಗಸರ ಗತಿಯೂ ಸಹ ಇದೇ ರೀತಿಯಾಗಿರುತ್ತದೆ (ವಚನ 41)

**42** ನಾವು ಕ್ರಿಸ್ತನು ಬರುವ ದಿನವನ್ನು ಹೇಳುವುದಕ್ಕಾಗುವುದಿಲ್ಲ. ಆದುದರಿಂದ, ಇದೇ ಕಾರಣಕ್ಕಾಗಿ, ನಾವು ಯಾವಾಗಲೂ ಆತನ ಬರುವಿಕೆಗಾಗಿ ಸಿದ್ಧರಾಗಿರಬೇಕು. ಮಾರ್ಕ 13:33-37ಮತ್ತು ವ್ಯಾಖ್ಯಾನ ನೋಡಿರಿ

**43-44** ಕ್ರಿಸ್ತನು ಕಳ್ಳನ ಹಾಗೆ ರಾತ್ರಿಯಲ್ಲಿ ಬರುವನು. ಅಂದರೆ ನಾವು ನಿರೀಕ್ಷಿಸಿರದ ವೇಳೆಯಲ್ಲಿ ಒಬ್ಬ ಕಳ್ಳನು ಬಂದು ಮನೆಗೆ ಕನ್ನ ಹಾಕುವ ಸಮಯವನ್ನು ಹೇಳಿ ಬರುವುದಿಲ್ಲವೊ ಹಾಗೆ ಬರುವನು. ಆದುದರಿಂದ ನಾವು ಇಡೀ ರಾತ್ರಿಯಲ್ಲಾ ಜಾಗರೂಕರಾಗಿರಬೇಕು. (1ನೇ ಥೆಸಲೋನಿಕ 5:2-6 ನೋಡಿರಿ). ದೇವರ ದೃಷ್ಟಿಯಲ್ಲಿ ನಾವು ಯಾವಾಗಲೂ ವಿಧೇಯರಾಗಿಯೂ, ಶುದ್ಧರಾಗಿಯೂ ಇರೋಣ. ನಾವು ಯಾವೊಂದು ಅರಿಕೆ ಮಾಡಲಾರದ ಪಾಪವನ್ನು ಹೊಂದಿರದೆ ಇರೋಣ. ಆಗ, ಅವನು ಬರುವಾಗ, ನಾವು ಸಿದ್ಧರಾಗಿರುವೆವು (ಪ್ರಕಟಣೆ 3:3 ನೋಡಿರಿ).

ಆದುದರಿಂದ (ಎಚ್ಚರವಾಗಿರಿ. ವಚನ 42) ಮತ್ತು ಸಿದ್ಧರಾಗಿರಿ (ವಚನ 44) ಅಂದರೆ ಯಾವಾಗಲೂ ಕರ್ತನ ಕಡೆಗೆ ದೃಷ್ಟಿಸಿರಿ. ಆತನನ್ನು ಧ್ಯಾನಿಸುವುದಕ್ಕೆ, ಆತನ ಸಾನ್ನಿಧ್ಯವನ್ನು ಆಶಿಸುವುದಕ್ಕೆ, ಆತನ ಚಿತ್ತಕ್ಕೆ ವಿಧೇಯರಾಗಲೂ ಮತ್ತು ತಕ್ಷಣವೇ ಯಾವುದಾದರೂ ಗೊತ್ತಿರುವ ಪಾಪದ ಬಗೆ ಪಶ್ಚಾತ್ತಾಪ ಪಡಲು ಸಿದ್ಧರಾಗೋಣ. ನಾವು ಈ ಕಾರ್ಯಗಳನ್ನು ಮಾಡಿದ್ದೇ ಆದರೆ, ಆಗ ನಾವು ಆತನ ಬರೋಣಕ್ಕೆ ಸಿದ್ಧರಿರುತ್ತೇವೆ.

## ಎರಡು ತರದ ಸೇವಕರು (24:45-51)

(ಲೂಕ 12:42-46)

**45** ಕ್ರಿಸ್ತನ ಎರಡನೇ ಬರೋಣದ ಬಗಗೆ ಹೇಳಿರುವ ಈ ಸಾಮ್ಯದಲ್ಲಿ ಯಜಮಾನನೇ ಕ್ರಿಸ್ತನು ಮತ್ತು ನಂಬಿಗಸ್ಥ ಮತ್ತು ಬುದ್ಧಿವಂತ ಆಳು ಸಭೆಯಲ್ಲಿ ಜವಾಬ್ದಾರಿಯನ್ನು ಹೊತ್ತ ಆತನ ಶಿಷ್ಯರಲ್ಲಿ ಒಬ್ಬನಾಗಿರುವನು. ವಿಶೇಷವಾಗಿ ಈ ಸಾಮ್ಯವು ಸಭಾ ಮುಖಂಡರಿಗೆ ಒಂದು ಎಚ್ಚರಿಕೆಯಾಗಿದೆ. ಯಾಕೆಂದರೆ, ಸಭಾ ಸದಸ್ಯರಿಗೆ ಆತ್ಮೀಯ ಆಹಾರ ಹಂಚುವ ಕೆಲಸವನ್ನು ಅವರಿಗೆ ವಹಿಸಲಾಗಿದೆಯೊ ಅವರಿಗೆ.

**46-47** ಕ್ರಿಸ್ತನು ನಮಗೆ ನೇಮಕ ಮಾಡಿಕೊಟ್ಟ ಕೆಲಸದ ಮೇಲೆ ನಾವು ಕಾರ್ಯನಿರತರಾಗೋಣ. ಒಂದು ಸಣ್ಣ ಜವಾಬ್ದಾರಿಯನ್ನು ನಂಬಿಕೆಯಿಂದ ವಹಿಸಿದ್ದೇ ಆದರೆ, ಕ್ರಿಸ್ತನು ದೊಡ್ಡ ಜವಾಬ್ದಾರಿಯನ್ನು ಇನ್ನು ಹೆಚ್ಚಾಗಿ ಕೊಡುವನು. ಮತ್ತಾಯ 25:20-21. ನಿಜವಾಗಿಯೂ ಪರಲೋಕದಲ್ಲಿರುವ ಎಲ್ಲಾ ಕೆಲಸಗಳ ಮೇಲೆ ಉಸ್ತುವಾರಿಕೆಯನ್ನು ಅವರ ಮೇಲೆ ವಹಿಸುವನು.

**48-51** ಆದರೆ ಯಾರೊಬ್ಬ ಶಿಷ್ಯನು ಕ್ರಿಸ್ತನು ಆತನಿಗೆ ಕೊಟ್ಟ ಅಧಿಕಾರವನ್ನು ದುರುಪಯೋಗಿಸಿಕೊಂಡರೆ ಅಥವಾ ಆತನ ಜವಾಬ್ದಾರಿಯನ್ನು ಸಂಪೂರ್ಣಗೊಳಿಸದೇ ಇದ್ದರೆ, ಕ್ರಿಸ್ತನು ಆತನು ನೆನಸದ ದಿನದಲ್ಲಿ ಬರುವನು. ಆ ಮನುಷ್ಯನು ದೇವರ ಮನೆತನದಿಂದ ಅಥವಾ ಕುಟುಂಬದಿಂದ ದೊಬ್ಬಲ್ಪಡವನು ಮತ್ತು ಅವನು ನರಕಕ್ಕೆ ಕಳಿಸಲ್ಪಡುವನು, ಅಲ್ಲಿ ಆಳುವುದು, ಕಟಕಟನೆ ಹಲ್ಲು ಕಡಿಯುವುದು ಇರುವುದು. ಮತ್ತಾಯ 25:28-30 ಲೂಕ 21:34-36.

---

# ಅಧ್ಯಾಯ - 25

## ಹತ್ತು ಕನ್ನಿಕೆಯರ ಸಾಮ್ಯ (25:1-13)

**1** ಇದು, ಕ್ರಿಸ್ತನ ಎರಡನೇಯ ಬರೋಣ ಮತ್ತು ಕಡೆಯ ತೀರ್ಪಿನ ಸಾಮ್ಯಗಿದೆ. ಈ ಸಾಮ್ಯದಲ್ಲಿ ಮದಲಿಂಗನು ಕ್ರಿಸ್ತನೇ, ಮತ್ತು ಹತ್ತು ಕನ್ನಿಕೆಯರು, ಕ್ರಿಸ್ತನ ಆಗಮನಕ್ಕಾಗಿ ಕಾದುಕೊಂಡಿರುವ ಸಭೆಯಾಗಿದೆ.

ಯಹೂದ್ಯರ ಮದುವೆ ಆಚರಣೆ ಬಗ್ಗೆ ಯೇಸುವಿನ ಕಾಲದಲ್ಲಿ ಮದಲಿಂಗನೇ ಕನ್ನಿಕೆಯ ಮನೆಗೆ ಬಂದು ಆಕೆಯನ್ನು ಆಲಂಗಿಸುವನು. ಆ ಸಮಯದಲ್ಲಿ ಒಂದು ಔತಣ ಕೂಟವಿರುತಿತ್ತು. ಮದಲಿಂಗನು ಯಾವಾಗ ಬರುವಾಗ ಕನ್ನಿಕೆಯರು ಹೊರಗೆ ಬಂದು ಅವನನ್ನು ಸ್ವಾಗತಿಸತಿಸುವರು. ಆತನು ರಾತ್ರಿಯಲ್ಲಿ ಬರುವದಾದರೆ ಅವರಿಗೆ ದೀಪಗಳ ಅಗತ್ಯವಿರುತ್ತಿತ್ತು.

**2-5** ಎರಡು ವಿಧವಾದ ಜನರು ಸಭೆಗಳಲ್ಲಿ ಇರುತ್ತಾರೆ. ಬುದ್ಧಿವಂತರು ಮತ್ತು ಮೂಢರು ಮತ್ತಾಯ 7:24-27 ನೋಡಿರಿ. ಮೂಢರಾದ ಅವರ ದೀಪದಲ್ಲಿ ಎಣ್ಣೆ ಇರುವುದಿಲ್ಲ. ಅಂದರೆ ಪವಿತ್ರಾತ್ಮನು ಇರುವುದಿಲ್ಲ. ಅವರು ಕ್ರಿಸ್ತನನ್ನು ಎದುರುಗೊಳ್ಳಲು ಸಿದ್ದರಾಗಿರುವುದಿಲ್ಲ. ಅವರು ಕ್ರಿಸ್ತನನ್ನು ನಿಜವಾಗಿ ಅರಿತುಕೊಂಡಿಲ್ಲ ಮತ್ತು ಮತ್ತೊಮ್ಮೆ ಆತ್ಮದಲ್ಲಿ ಹುಟ್ಟಿಲ್ಲ (ಯೋಹಾನ 3:5) ನಿಜ ಹೇಳುವುದಾದರೆ, ಅವರು ಸುಳ್ಳು ಕ್ರೈಸ್ತರು ಮತ್ತಾಯ 13:40-42, 47-50 ನೋಡಿರಿ. ನಮ್ಮ ದೀಪಗಳು ಪವಿತ್ರಾತ್ಮರಿಂದ ಮಾತ್ರ ಉರಿಯುತ್ತವೆ. ಪರಿಶುದ್ಧಾತ್ಮನ ಎಣ್ಣೆಯಿಂದ ಮಾತ್ರ ನಾವು ಈ ಲೋಕದಲ್ಲಿ ಬೆಳಕಾಗಿರಲು ಸಾಧ್ಯ (ಮತ್ತಾಯ 5:14).

**6-8** ಮದಲಿಂಗನು ಬಂದಾಗ, ತಮ್ಮ ದೀಪದಲ್ಲಿ ಎಣ್ಣೆಯಿಲ್ಲವೆಂಬುದನ್ನು ಬುದ್ಧಿಯಿಲ್ಲದ ಕನ್ನಿಕೆಯರು ಕಂಡುಕೊಂಡರು. ಆದ್ದರಿಂದ ಅವರು ಸ್ವಲ್ಪ ಎಣ್ಣೆ ಕೊಡಿರಿ ಎಂದು ಬುದ್ಧಿಯುಳ್ಳ ಕನ್ನಿಕೆಯರನ್ನು ಕೇಳಿಕೊಂಡರು.

**9** ಆದರೆ ಬುದ್ಧಿವಂತ ಕನ್ನಿಕೆಯರು, ಬುದ್ಧಿಯಿಲ್ಲದ ಕನ್ನಿಕೆಯರಿಗೆ ಎಣ್ಣೆಯನ್ನು ಕೊಡಲು ನಿರಾಕರಿಸಿದರು. ಇದರಿಂದ ನಾವು ಒಂದು ಮುಖ್ಯವಾದ ಆತ್ಮೀಕವಾದಂತ ಪಾಠವನ್ನು ಕಲಿತುಕೊಳ್ಳಲೇ ಬೇಕು. ಪವಿತ್ರಾತ್ಮನು ದೇವರಿಂದ ನೇರವಾಗಿ ಬರುವನು. ಕೃಪೆ ಮತ್ತು ರಕ್ಷಣೆಯೂ ನೇರವಾಗಿ ದೇವರಿಂದ ಬಂದಿವೆ. ಬೇರೊಬ್ಬ ವ್ಯಕ್ತಿಯಿಂದ ಇವನ್ನು ಸಾಲ ಪಡೆದುಕೊಳ್ಳಲು ಆಗುವುದಿಲ್ಲ. ನಾವು ಪ್ರತಿಯೊಬ್ಬರು ಕ್ರಿಸ್ತನ ನ್ಯಾಯಾಸನದ ಮುಂದೆ ಒಂಟಿಯಾಗಿ ನಿಂತುಕೊಳ್ಳಬೇಕು. ತಮ್ಮ ಸ್ನೇಹಿತರಿಗೆ .ಅವರು ತಮ್ಮ ದೀಪಗಳಿಗೆ ಸ್ವಲ್ಪ ಎಣ್ಣೆಯನ್ನು ಕೊಳ್ಳಲು ತುಂಬಾ ತಡವಾಗಿತ್ತು.

**10** ಆ ಬುದ್ಧಿ ಇಲ್ಲದ ಕನ್ಯೆಯರು ಎಣ್ಣೆಯನ್ನು ತರಲು ಅಂಗಡಿಗೆ ಹೋದರು. ಆದರೆ ಎಣ್ಣೆಯ ಅಂಗಡಿಗಳು ಬಂದಾಗಿದ್ದವು. ಅದು ಮಧ್ಯರಾತ್ರಿಯ ಸಮಯವಾಗಿತ್ತು. ಅವರು ಅಲ್ಲಿಗೆ ಹೋದಾಗ ಮದುವಣಿಗನು ಬಂದನು. ಬುದ್ಧಿವಂತ ಕನ್ಯೆಯರು ಅವನೊಡನೆ ಒಳಗೆ ಹೋದರು. **ಆಗ ಬಾಗಿಲು ಮುಚ್ಚಲ್ಪಟ್ಟಿತು.**

**11-13** ಬುದ್ಧಿ ಇಲ್ಲದ ಕನ್ಯೆಯರು ತಮಗೆ ಸಿಕ್ಕ ಅವಕಾಶವನ್ನು ಕಳೆದು ಕೊಂಡರು. ಅವರು ಸಿದ್ಧರಾಗಿರಲಿಲ್ಲ. ಕ್ರಿಸ್ತನು ಅವರನ್ನು ಅರಿಯಲಿಲ್ಲ (ನೋಡಿರಿ ಲೂಕ 13:24-27). ಅವರು ಬಾಗಿಲು ತಟ್ಟುವಾಗ ತೆರೆಯುವಂತಹ ಒಂದು ಸಮಯವಿತ್ತು (ಮತ್ತಾಯ 7:7). ಆದರೆ ಈಗ ಅದು ಶಾಶ್ವತವಾಗಿ ಮುಚ್ಚಲ್ಪಟ್ಟಿತು.

ಆದುದರಿಂದ ಎಚ್ಚರಿಕೆ ಉಳ್ಳವರಾಗಿರಿ (ಮತ್ತಾಯ 24:42-44; ಮಾರ್ಕ 13:35 ಇದರ ವ್ಯಾಖ್ಯಾನ ವನ್ನು ನೋಡಿರಿ). ನಮ್ಮ ದೀಪಗಳಲ್ಲಿ ಎಣ್ಣೆ ಇರುವುದನ್ನು ದೃಢಪಡಿಸಿಕೊಳ್ಳೋಣ. (ನೋಡಿರಿ ಲೂಕ 12:35-38).

## ಬುದ್ಧಿವಂತಿಕೆಯ ದೃಷ್ಟಾಂತ ರೂಪದಸಾಮ್ಯಗಳು . (25:14-30)

(ಲೂಕ 19:11-27)

**14-18** ತಿರುಗಿ ಅದು (ಕ್ರಿಸ್ತನ ಎರಡನೆಯ ಬರೋಣ) ಒಬ್ಬ ಮನುಷ್ಯನು ಪ್ರಯಾಣಕ್ಕೆ ಹೋಗಿರುವಂತಹದನ್ನು ತೋರಿಸುತ್ತದೆ. ಆ ಮನುಷ್ಯನು ಕ್ರಿಸ್ತನೇ. ತನ್ನಹಿಂಬಾಲಕರಿಗೆ ನಾನಾ ರೀತಿಯ [69] ವರಗಳನ್ನು ಅಥವಾ ಬುದ್ಧಿಯನ್ನು ಕೊಟ್ಟಿದ್ದಾನೆ. ಈ ವರಗಳು ಸ್ವಬಾವಿಕವಾದಂತವುಗಳು ಮತ್ತು ಆತ್ಮೀಕವಾದಂತವುಗಳಾಗಿರುತ್ತವೆ. ಇವುಗಳಲ್ಲಿ ಕೆಲವುಗಳು ಸ್ವಾಭಾವಿಕವಾಗಿಯೂ ಮತ್ತು ಕೆಲವು ಪವಿತ್ರಾತ್ಮನಿಂದ ಅನುಗ್ರಹಿಸಲ್ಪಟ್ಟ ವರದಾನಗಳಾಗಿರಬಹುದು (1ನೇ ಕೊರಿಂಥ 12:7-11) ಅಥವಾ ಅವುಗಳು ಪವಿತ್ರಾತ್ಮನಿಂದಾದ ಫಲಗಳಿರಬಹುದು (ಗಲಾತ್ಯ 5:22-23). ಪವಿತ್ರಾತ್ಮನು ತಾನೇ ಒಂದು ವರದಾನವಾಗಿದ್ದಾನೆ. ನಮಗಿರುವುದೆಲ್ಲವೂ ದೇವರಿಂದ ದೊರೆತ ವರದಾನಗಳಾಗಿವೆ. ಆದ್ದರಿಂದ ಯಾವುದನ್ನು ನಮ್ಮದು ಎಂದು ಹೇಳಿಕೊಳ್ಳಲು ಆಸ್ಪದವಿಲ್ಲ.ನಮ್ಮದೆಂದು ಹೇಳಿಕೊಳ್ಳುವಂತದ್ದು ಒಂದು ಮಾತ್ರ ಅದೇನೆಂದರೆ ನಮ್ಮಸ್ವಂತ ಪಾಪವೇ.

ಈ ದೃಷ್ಟಾಂತಗಳ ಅರ್ಥವೇನೆಂದರೆ, ಕ್ರಿಸ್ತನು ಅವರವರ ಯೋಗ್ಯತೆಗನುಸಾರವಾಗಿ ಬೇರೆ ಬೇರೆ ವರಗಳನ್ನು (ಬಹುಮಾನಗಳನ್ನು) ಕೊಡುತ್ತಾನೆ. ಅವುಗಳಲ್ಲಿ ಕೆಲವರಿಗೆ ಬಹಳವಾಗಿಯೂ ಮತ್ತು ಕೆಲವರಿಗೆ ಸ್ವಲ್ಪವಾಗಿಯೂ ಕೊಡುತ್ತಾನೆ. ಆದರೆ ಯಾರ್ಯಾರಿಗೆ ವರಗಳನ್ನು ದಯಪಾಲಿಸುತ್ತಾನೋ ಅವುಗಳನ್ನು ಇತರರಿಗಾಗಿ ಉಪಯೋಗಿಸಬೇಕು. ಒಂದು ವೇಳೆ ಆತನು ಭೂಮಿಯನ್ನು ಕೊಟ್ಟರೆ ಅದರಲ್ಲಿ ಅವನು ಪರಿಶ್ರಮಪಟ್ಟು ಬೆಳೆಗಳನ್ನು ತೆಗೆಯಬೇಕು. ಒಂದು ವೇಳೆ ಅಭ್ಯಾಸ ಮಾಡುವ ಸಂದರ್ಭ ಕೊಟ್ಟರೆ ರೆ ಕಷ್ಟಪಟ್ಟು ಅಭ್ಯಾಸ ಮಾಡಬೇಕು. ಒಂದು ವೇಳೆ ಆತನು ನಮಗೆ ಕಲಿಸುವ ವರವನ್ನು ಅಥವಾ ಮುಂದಾಳತ್ವ ವರವನ್ನು ದಯಪಾಲಿಸಿದರೆ ನಾವು ಯೋಗ್ಯವಾದ ರೀತಿಯಲ್ಲಿ ಕಲಿಸುವುದು ಮಾತ್ರವಲ್ಲ ಪರಿಶ್ರಮದಿಂದಲೂ ವಿವೇಕದಿಂದ ಮುಂದಾಳತ್ವವನ್ನು ನಡೆಸಬೇಕು. ಒಂದು ವೇಳೆ ಆತನು ನಮಗೆ ಐಶ್ವರ್ಯವನ್ನು ಕೊಟ್ಟಿರುವುದಾದರೆ ದೇವರ ಮಹಿಮೆಗಾಗಿ ನಾವು ಅದನ್ನು ಉಪಯೋಗಿಸಬೇಕು. ಎಲ್ಲರೂ ಸಮನಾಗಿ ಹಿಂತಿರುಗಿ ಕೊಡಬೇಕೆಂದು ಕರ್ತನು ಬಯಸುವುದಿಲ್ಲ (ಮಾರ್ಕ 4:20). ಆದರೆ ಯಾವುದನ್ನೂ ನಾವು ಕರ್ತನಿಂದ ಹೊಂದಿದ್ದೇವೆಯೋ ಅದೆಲ್ಲವನ್ನು ಆತನಿಗೆ ಸಾಧ್ಯವಾದರೆ ಕೊಡಬೇಕೆಂದು ಆಶಿಸುತ್ತಾನೆ. ಮುಖ್ಯವಾಗಿ ಕರ್ತನು ನಮ್ಮಿಂದ ಆಶಿಸುವಂತಹವುಗಳು ಪ್ರೀತಿ, ನಂಬಿಕೆ ಮತ್ತು ವಿಧೇಯತೆಗಳಾಗಿವೆ.

ಈ ದೃಷ್ಟಾಂತದಲ್ಲಿ, ಒಬ್ಬ ಸೇವಕನು ಒಂದು ಸಣ್ಣ ವರಹವನ್ನು ಅಂಗೀಕರಿಸಿದನು. ಆತನು ನಾಚಿಕೆ ಪಟ್ಟನು ಮತ್ತು ಮೈಗಳ್ಳನಾಗಿದ್ದನು. ಆತನು ತನ್ನ ಯಜಮಾನನು ಕೊಟ್ಟಂತಹ ಹಣವನ್ನು ಉಪಯೋಗಿಸದೇ ಅದನ್ನು ಭೂಮಿಯಲ್ಲಿ ಬಚ್ಚಿಡಲ್ಪಟ್ಟನು (ವಚನ 18). ಆದಾಗ್ಯೂ ಕೆಲವರು ಈ ದೃಷ್ಟಾಂತವನ್ನು ಗ್ರಹಿಸಲಿಲ್ಲ. ಕೆಲವರು ಎರಡು ವರ(ಹಣ)ಗಳನ್ನು ಕೆಲವರು ಐದು(ಹಣ)ಗಳನ್ನು ಅಂಗೀಕರಿಸಿದರೂ ಅವರು ಅದೆಲ್ಲವನ್ನು ಬಚ್ಚಿಡುವವರಾಗಿದ್ದಾರೆ. ಇದು ಮನುಷ್ಯನಲ್ಲಿರುವ ಪಾಪದ ಗುಣಕ್ಕಿಂತಲೂ ದೊಡ್ಡದಾಗಿ ಎಣಿಸಲ್ಪಡುತ್ತದೆ.

**19-23** ಯಾವ ಯಾವ ಸೇವಕರು ತಮಗೆ ಅನುಗ್ರಹಿಸಿದ ವರಗಳನ್ನು ಉಪಯೋಗಿಸಿಕೊಂಡರೋ ಅವರೆಲ್ಲರೂ ದೇವರಿಂದ ಬಹುಮಾನ (ಆಶೀರ್ವಾದಗಳನ್ನು) ಪಡೆದರು. ಯಾಕೆಂದರೆ ಅವರು ಸ್ವಲ್ಪದರಲ್ಲಿಯೇ ನಂಬಿಗಸ್ಥರಾಗಿ ಲೋಕದಲ್ಲಿ ಕಾಣಿಸಿಕೊಂಡರು. ಆಗ ಯಜಮಾನನು ಪರಲೋಕದಲ್ಲಿ ಅವರನ್ನು ಅನೇಕ ಕೆಲಸಗಳ ಮೇಲೆ ನೇಮಿಸಿದನು (ಮತ್ತಾಯ 24:45-47).

**24-25** ಏನೇ ಆದರೂ ಒಂದು ವರ ಹೊಂದಿದ ಮನುಷ್ಯನು ತನ್ನ ಜೀವಿತದಲ್ಲಿ ಅದನ್ನು ಕಳೆದುಕೊಂಡನು. ಯಾಕೆಂದರೆ ಈ ಒಂದು ವರದಿಂದ ಯಜಮಾನನು ಸಂತೃಪ್ತಿ ಪಡುವುದಿಲ್ಲ ಎಂಬುದಾಗಿ ತಿಳಿದು ಕೊಂಡಿದ್ದನು ಮತ್ತು ಆತನು ತಿಳಿದಿದ್ದೇನೆಂದರೆ ಯಜಮಾನನನ್ನು ನನ್ನಿಂದ ಬಹಳ ಕೇಳುತ್ತಾನೆಂಬುದಾಗಿ ತಿಳಿದು ಅದನ್ನು ಕಾರ್ಯರೂಪಕ್ಕೆ ತರಲಿಲ್ಲ. ಆದಾಗ್ಯೂ ತಾನು ಅನ್ಯಾಯಗಾರನಾದರೂ ತನ್ನ ಯಜಮಾನನನ್ನು ದೂಷಿಸಿದನು.

ಸುಗ್ಗಿ ಕಾಲದಲ್ಲಿ ಎಲ್ಲ ಕಡೆ ಬೀಜವನ್ನು ಬಿತ್ತಲಿಲ್ಲ. ಆತನ ದೋಷಾರೋಪಣೆ ನಿಜವಾದದ್ದಲ್ಲ. ದೇವರು ಯಾವಾಗಲೂ ನ್ಯಾಯವಂತನಾಗಿದ್ದಾನೆ. ಆದರೆ ದುಷ್ಟ ವ್ಯಕ್ತಿಗಳು ತಮ್ಮ ದುಷ್ಟತ್ವಗಳನ್ನು ಮರೆ ಮಾಡಿ ದೇವರನ್ನು ದೂಷಿಸುವವರಾಗಿದ್ದಾರೆ.

ದುಷ್ಟ ಸೇವಕನು ತನ್ನನ್ನು ತಾನೆ ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ನಾನು ಆ ವರವನ್ನು ಒಂದು ಸ್ಥಳದಲ್ಲಿ ಭದ್ರವಾಗಿ ಇಟ್ಟಿದ್ದೇನೆ. ಅದಕ್ಕೆ ನಾನು ಹೆಚ್ಚಿಗೆ ಮಾಡಲಿಲ್ಲ, ಕಡಿಮೆಯೂ ಮಾಡಲಿಲ್ಲ ಎಂದು ಆತನು ಹೇಳಿದನು .ಆದ್ದರಿಂದ ತಾನು ಶಿಕ್ಷೆಯಿಂದ ತಪ್ಪಿಸಿಕೊಳ್ಳಬಲ್ಲೆನು ಎಂದು ಆ ಮೈಗಳ್ಳನು (ಆಲಸಿಯು) ತಿಳಿದಿದ್ದನು.

**26-27** ಯಜಮಾನನು ಅದಕ್ಕೆ ಉತ್ತರ ಹೇಳಿದ್ದೇನೆಂದರೆ ನೀನು ತಿಳಿದ ಹಾಗೆ ನಾನು ಒಬ್ಬ ಕಠಿಣ ಮನುಷ್ಯನೋ? ಆದರೆ ಯಾಕೆ ನೀನು ಆ ಹಣವನ್ನು ಬ್ಯಾಂಕಿನಲ್ಲಿ ಇಡಲಿಲ್ಲ. ಅದರಿಂದ ಸ್ವಲ್ಪ ಬಡ್ಡಿಯಾದರೂ ಬರುತ್ತಿತ್ತಲ್ಲವೆ? ನೀನು ನನ್ನನ್ನು ವಂಚಿಸಿದ್ದಿ. ನಾನು ನಿನಗೆ ಕೊಟ್ಟ (ವರಗಳನ್ನು) ಹಣವನ್ನು ಸರಿಯಾಗಿ ಉಪಯೋಗಿಸಲಿಲ್ಲ.

**28-29** ದುಶ್ಚನೂ ಮತ್ತು ಮೈಗಳ್ಳನೂ ಆದಂತ ಸೇವಕನು ತನಗೆ ದೊರಕಿದ ಹಣವನ್ನು ಒಳ್ಳೇ ರೀತಿಯಿಂದ ಉಪಯೋಗಿಸದೆ ಕೊನೆಗೆ ಅದನ್ನು ಕಳೆದುಕೊಂಡನು. ಅದೇ ರೀತಿಯಾಗಿ ದೇವರಿಂದ ನಮಗೆ ದೊರಕಿದ ಆತ್ಮೀಕ ಮತ್ತು ಪ್ರಾಪಂಚಿಕ ಆಶೀರ್ವಾದಗಳನ್ನು ದೇವರ ಸೇವೆಯಲ್ಲಿ ಉಪಯೋಗಿಸದೇ ಹೋದರೆ ಅವೆಲ್ಲವುಗಳೂ ನಮ್ಮಿಂದ ತೆಗೆಯಲ್ಪಡುವುವು. ನಾವು ಪವಿತ್ರಾತ್ಮನನ್ನು ನೋಯಿಸಿದರೆ ಆತನು ನಮ್ಮನ್ನು ಬಿಟ್ಟು ಹೋಗುವನು.

ನಾವು ದೇವರ ಈ ವರಗಳನ್ನು ಆತನ ಸೇವೆಯ ಅಬಿವೃದ್ಧಿಗಾಗಿ ಉಪಯೋಗಿಸುವಾಗ ದೇವರು ಇದಕ್ಕಿಂತಲೂ ಹೆಚ್ಚಾಗಿ ನಮಗೆ ಕೊಡುವನು. ಪೌಲನು, ತಿಮೋಥಿಯನಿಗೆ ಬರೆದು ತಿಳಿಸುವುದೇನೆಂದರೆ, ನಿನ್ನಲ್ಲಿರುವ ವರಗಳನ್ನು ಅಲಕ್ಷ್ಯ ಮಾಡಬೇಡ (1 ತಿಮೊಥೆ. 4:14). ಆದರೆ ಒಂದು ವೇಳೆ ನಾವು ಆ ವರಗಳನ್ನು ಬಚ್ಚಿಡುವುದಾಗಲಿ (ಉಪಯೋಗಿಸದೇ ಇರುವುದಾಗಲಿ) ಅಥವಾ ಆ ವರಗಳನ್ನು ನಮ್ಮ ಸ್ವಂತಕ್ಕೆ ಸ್ವಾರ್ಥತೆಯಿಂದ ಉಪಯೋಗಿಸುವುದಾದರೆ ದೇವರು ಅವುಗಳನ್ನು ನಮ್ಮಿಂದ ಹಿಂದಕ್ಕೆ ತೆಗೆದುಕೊಳ್ಳುವನು (ಮತ್ತಾಯ 13:12, ಮಾರ್ಕ 4:24-25 ಮತ್ತು ವ್ಯಾಖ್ಯಾನವನ್ನು ನೋಡಿರಿ).

**30** ಯಾರು ದೇವರು ಅನುಗ್ರಹಿಸಿದ ಆಶೀರ್ವಾದಗಳನ್ನು ದುರ್ವಿನಿಯೋಗಿಸುವರೋ, ಅವರು ಶಿಕ್ಷೆ ಹೊಂದಿದ ಸೇವಕನಂತೆ ಆಗುವರು. ನಾವು ದೇವರನ್ನು ವಂಚಿಸುತ್ತೇವೆ. ದೇವರಿಗೆ ವಿರೋಧವಾಗಿ ನಡೆಯುತ್ತೇವೆ. ಆದುದರಿಂದ ದೇವರು ನಮಗೆ ವಿರೋಧವಾಗಿರುವನು. ಬಹಳ ಜನರು ತಾವು ಹೇಳಿಕೊಳ್ಳುವುದೇನೆಂದರೆ ನಾನು ದೇವರಿಗೆ ಸ್ವಲ್ಪವಾಗಿ ಮಾಡುತ್ತೇನೆ ಮತ್ತು ಕೆಲವರು ಎನನ್ನು ಮಾಡದೇ ಇರುವುದಕ್ಕಾಗಿ ಕ್ಷಮೆ ಕೇಳುತ್ತಾರೆ. ದುಶ್ಚ ಮತ್ತು ಮೈಗಳ್ಳ ಸೆವಕರಂತೆ ಇರುವ ಇಂತಹ ಜನರಿಗೆ ಈ ದೃಷ್ಟಾಂತವು ಉದಾಹರಣೆಯಾಗಿದೆ.

ಹತ್ತು[70] ಮೊಹರಿಗಳ ಸಾಮ್ಯ ಲೂಕ 19:11-27ರಲ್ಲಿ ಬರೆಯಲ್ಪಟ್ಟಿದೆ. ಇದು ಕೂಡಾ ಮೇಲೆ ಹೇಳಿದ ದೃಷ್ಟಾಂತಕ್ಕೆ ಸಮವಾಗಿದೆ. ಈ ಎರಡೂ ಸಾಮ್ಯಗಳಲ್ಲಿ 2 ಮುಖ್ಯವಾದ ವಿಷಯಗಳುಂಟು. ಮೊದಲನೆಯದಾಗಿ, ಲೂಕನ ಸುವಾರ್ತೆಯಲ್ಲಿಯ ದೃಷ್ಟಾಂತ 3 ಸೇವಕರ ಬದಲಾಗಿ 10 ಸೇವಕರು ಎಂದು ಉಂಟು. ಈ ಹತ್ತು ಸೇವಕರು 10 ಮೊಹರೆಗಳನ್ನು ಅಂಗೀಕರಿಸಿದರು. ಹೇಗೆ ಅವರು ತಮ್ಮ ತಮ್ಮ ಯೋಗ್ಯತೆಗನುಸಾರವಾಗಿಯೂ ಮತ್ತು ತಮ್ಮ ನಂಬಿಗಸ್ತಿಕೆಯ ಆಧಾರದ ಮೇಲೆ ಬೇರೆ ಬೇರೆಯಾಗಿ ಬಹುಮಾನ (ಆಶೀರ್ವಾದ) ಹೊಂದಿದರು. 10 ಮೊಹರೆಗಳನ್ನು ಹೊಂದಿದ ಸೇವಕನು ಅವುಗಳಿಗೆ ತಿರುಗಿ 10 ಮೊಹರೆಗಳನ್ನು ಸಂಪಾದಿಸಿ ಒಳ್ಳೇ ನಂಬಿಗಸ್ಥ ಸೇವಕನೆಂದು ಹೆಸರು ಹೊಂದಿದನು.ಯಾವ ಸೇವಕನು 5 ಮೊಹರೆಗಳನ್ನು ಅದಿಕವಾಗಿ ಸೆರಿಸಿದನೊ ಆ ಸೇವಕನು ಅಲ್ಪ ನಂಬಿಗಸ್ತನಾಗಿದ್ದನು. ಯಾವ ಸೇವಕನು ತನ್ನ ಮೊಹರೆಗಳನ್ನು ಬಚ್ಚಿಟ್ಟನೋ ಅವನು ಅಪನಂಬಿಗಸ್ಥನು ಎಂಬುದಾಗಿ ಕರೆಯಲ್ಪಟ್ಟನು. ಆ ಇಬ್ಬರೂ ಸೇವಕರು ತಮ್ಮ ತಮ್ಮ ನಂಬಿಗಸ್ತಿಕೆಯ ಆಧಾರದ ಮೇಲೆ ಪ್ರತಿಫಲ ಹೊಂದಿದರು. ಆದುದರಿಂದ ಲೂಕನ ಸುವಾರ್ತೆಯ ದೃಷ್ಟಾಂತದಲ್ಲಿ ಇದ್ದಂತಹ ವಿಷಯವೇ ಮತ್ತಾಯನ ಸುವಾರ್ತೆಯ ದೃಷ್ಟಾಂತದಲ್ಲಿದೆ. ಮುಖ್ಯವಾಗಿ ದೇವರು ನಮಗೆ ಕೊಟ್ಟ ವರಗಳನ್ನು ದಕ್ಷತೆಯಿಂದ ಮಾಡಲೇಬೇಕು. ಆಗ ದೇವರು ನಮ್ಮ ನಂಬಿಗಸ್ತಿಕೆ ಮತ್ತು ಕಾರ್ಯಕ್ಕನುಸಾರವಾಗಿ ಯೋಗ್ಯ ಬಹುಮಾನ (ಆಶೀರ್ವಾದ)ಗಳನ್ನು ಅನುಗ್ರಹಿಸುತ್ತಾನೆ (ಮತ್ತಾಯ 16:27; 2ನೇ ಕೊರಿಂಥ 5:10).

ಲೂಕನ ಸುವಾರ್ತೆಯಲ್ಲಿ ಇನ್ನೊಂದು ವ್ಯತ್ಯಾಸವೇನೆಂದರೆ10 ಮೊಹರೆಗಳ ಸಾಮ್ಯ. ಅರಸನ ಅಪ್ಪಣೆಯ ಮೇರೆಗೆ ಯಜಮಾನನು ಮತ್ತೊಂದು ದೇಶಕ್ಕೆ ಹೋದನು (ಲೂಕ 19:12). ಆದರೆ ಪಟ್ಟಣದ ನಿವಾಸಿಗಳು ಅವನನ್ನು ದ್ವೇಷಿಸಿ ಅವನೊಂದಿಗೆ ರಾಯಭಾರಿಗಳನ್ನು ಕಳುಹಿಸಿ ಇವನು ನಮ್ಮ ಮೇಲೆ ದೊರೆತನ ಮಾಡುವುದು ನಮಗೆ ಇಷ್ಟವಿಲ್ಲ ಎಂದು ಹೇಳಿದರು (ಲೂಕ 19:14). ಆಮೇಲೆ ಈ ದೃಷ್ಟಾಂತದ ಕೊನೆಯ ಭಾಗದಲ್ಲಿ, ರಾಜನು ತನ್ನ ವೈರಿಗಳನ್ನು ಸಂಹಾರ ಮಾಡಿದನು ಎಂದು ಹೇಳಿಯದೆ. (ಲೂಕ 19:27)

ಇದರಲ್ಲಿ ಅರಸನ ಬಗ್ಗೆ ಅದಿಕವಾದ ವಿವರಗಳಿದ್ಯಾಗ್ಯೂ ಈ ದೃಷ್ಟಾಂತಗಳ ಅರ್ಥದಲ್ಲಿ ಯಾವುದೆ ಬದಲಾವಣೆಗಳಿಲ್ಲ. ಹೇಗಿದ್ದರೂ ಇವರು ಇದನ್ನು ಒಂದು ಐತಿಹಾಸಿಕ ಸಂಗತಿಯಂತೆ ವರ್ಣಿಸಿದರು. ಅರಸನಾದ ಹೆರೋದನು ತೀರಿಕೊಂಡ ನಂತರ ಆತನ ಮಗನಾದ ಅರ್ಖೆಲಾಯನು ರೋಮ ಚಕ್ರವರ್ತಿಯ ಆದೇಶದ ಮೇರೆಗೆ ಯಾದಾಯಕ್ಕೆ ಬಂದು ತನ್ನ ತಂದೆಯ ಬದಲಾಗಿ ಸಿಂಹಾಸನವನ್ನು ಏರಿ ಯಾದಾಯ ಪ್ರಾಂತಕ್ಕೆ ಅರಸನಾದನು.ಮತ್ತಾಯ. 2:1,22. ಆದರೆ ಯಹೂದ್ಯರ ಪ್ರತಿನಿಧಿಗಳು ರೋಮ ಚಕ್ರವರ್ತಿಯ ಮುಂದೆ ಹೋಗಿ ಅರ್ಖೆಲಾಯನು ನಮ್ಮ ಪ್ರಾಂತ್ಯದ ರಾಜನಾಗಿರುವುದು ಬೇಡ ಎಂದು ಭಿನ್ನವಿಸಿದರು. ಆಗ ಚಕ್ರವರ್ತಿಯು ಅರ್ಖೆಲಾಯನ ಕೆಲವು ಅಧಿಕಾರಗಳನ್ನು ಕಡಿಮೆ ಮಾಡಿದನು. ನಂತರ ಅರ್ಖೆಲಾಯನು ತನಗೆ ವಿರುದ್ಧರಾದವರಿಗೆ ಹಿಂಸೆ ಕೊಡಲು ಪ್ರಾರಂಭಿಸಿದನು.

ಅರಸರ ಅರಸನಾಗಿರುವಂತ ನಿಜವಾದ ರಾಜನಾದ ಕ್ರಿಸ್ತನಿಗೆ ವಿರೋಧವಾಗಿರುವುದು ಬೇಡ. ಒಂದು ವೇಳೆ ನಾವು ಕ್ರಿಸ್ತನ ವರಗಳನ್ನು ತಾತ್ಸಾರ ಮಾಡುವುದಾದರೆ ಆತನನ್ನು ಸೇವಿಸಿದಂತಾಗುವುದಿಲ್ಲ. ಇದರಿಂದ ನಿತ್ಯವಾದ ದಂಡನೆಯನ್ನು ನಮ್ಮ ಮೇಲೆ ನಾವೇ ತಂದುಕೊಳ್ಳುತ್ತೇವೆ.

## ಕುರಿ ಮತ್ತು ಆಡು ಗಳು (25:31-46)

**31** ಈ ಭಾಗದಲ್ಲಿ ಯೇಸುವು ಕೊನೆಯ ನ್ಯಾಯ ವಿಚಾರಣೆಯು ಏನಾಗಿರುತ್ತದೆ ಎಂದು ವಿವರಣೆಯನ್ನು ಕೊಡುತ್ತಾನೆ. ಆತನು ನ್ಯಾಯ ತೀರ್ಪಿಗಾಗಿ ತನ್ನ ಮಹಿಮೆಯೊಂದಿಗೆ ಬರುವವನಾಗಿದ್ದಾನೆ (ಮಾರ್ಕ 13:26, ಯೋಹಾನ 5:22). ಕ್ರಿಸ್ತನು ನ್ಯಾಯ ತೀರ್ಪಿನ ಸಿಂಹಾಸನವಾಗಿರುವಂತ **ತನ್ನ ಸಿಂಹಾಸನದ ಮೇಲೆ ಕೂತುಕೊಳ್ಳುವನು** (ಪ್ರಕಟಣೆ 20:11)

**32-33** ಕ್ರಿಸ್ತನು ಎಲ್ಲ **ದೇಶಗಳ ಜನರಿಗೆ** ನ್ಯಾಯ ತೀರಿಸುವನು .ಆ ದಿನದಲ್ಲಿ ಎಲ್ಲ ದೇಶದ ಜನರು ಕ್ರಿಸ್ತನನ್ನು ದೇವರೆಂದು ಒಪ್ಪಿಕೊಳ್ಳುವರು (ಫಿಲಿಪ್ಪಿ. 2:10-11). ಆಗ ಕ್ರಿಸ್ತನು **ಜನರನ್ನುಬೇರೆ ಬೇರೆ ಮಾಡಿ ಭಾಗವಾಗಿ ವಿಂಗಡಿಸುವನು.** ನ್ಯಾಯ ತೀರ್ಮಾನವು ಬೇರ್ಪಡಿಸುವಿಕೆಯ ಕ್ರಿಯೆಯಾಗಿರುವುದು. ಕ್ರಿಸ್ತನು ಕುರುಬನಂತೆ ಕುರಿ ಮತ್ತು ಆಡುಗಳನ್ನು ಬೇರೆ ಬೇರೆ ಮಾಡುವನು (ಯೆಜ್ಕೇಯೇಲ 34:17).ನೀತಿವಂತ **ಕುರಿಗಳನ್ನು** ತನ್ನ ಬಲಗಡೆಯಲ್ಲಿಯೂ ಮತ್ತು ಅನೀತಿವಂತ ಆಡುಗಳನ್ನು ತನ್ನ ಎಡಗಡೆಯಲ್ಲಿ ಇರಿಸುವನು.

**34** ಕ್ರಿಸ್ತನು, ತನ್ನ ಬಲಗಡೆ ಇರುವವರಿಗೆ ತನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ. **ಲೋಕಾದಿಯಿಂದ ನಿಮಗೋಸ್ಕರ ಸಿದ್ಧವಾಗಿರುವ ರಾಜ್ಯವನ್ನು ಸ್ವಾಸ್ತವಾಗಿ ತೆಗೆದು ಕೊಳ್ಳಿರಿ** (ಎಫೆಸ 1:4 ನೋಡಿರಿ). ದೇವರು ಆದಿಯಿಂದಲೂ ನೀತಿವಂತರಾದವರನ್ನು ಮತ್ತು ಪಾಪಗಳಿಗಾಗಿ ಪಶ್ಚಾತ್ತಾಪ ಪಟ್ಟು ಕ್ರಿಸ್ತನನ್ನು ರಕ್ಷಕನನ್ನಾಗಿ ಅಂಗೀಕಾರ ಮಾಡಿದವರನ್ನು ತಿಳಿದವನಾಗಿದ್ದಾನೆ.

ಮನುಷ್ಯನು ಒಳ್ಳೆಯದನ್ನುಮತ್ತು ಕೆಟ್ಟದ್ದನ್ನು ಆಯ್ಕೆಮಾಡಿಕೊಳ್ಳಲು ಸ್ವತಂತ್ರನಾಗಿದ್ದಾನೆ. ಮನುಷ್ಯನು **ಇಕ್ಕಟ್ಟಾದ** ಅಥವಾ ಅಗಲವಾದ **ಬಾಗಿಲುಗಳಲ್ಲಿ** ಹೋಗಲು ಸ್ವತಂತ್ರನಾಗಿದ್ದಾನೆ (ಮತ್ತಾಯ 7:13-14). ಇದು ಪ್ರತಿಯೊಬ್ಬ ಮನುಷ್ಯನ ಆರಿಸಿಕೊಳ್ಳುವಿಕೆಗೆ ಸಂಬಂಧಪಟ್ಟದ್ದಾಗಿದೆ. ಒಂದು ವೇಳೆ ಮನುಷ್ಯನು ದೇವರಿಗೆ ಅವಿಧೇಯನಾದರೆ ಮತ್ತು ಅಗಲವಾದ ದಾರಿಯಲ್ಲಿ ನಡೆಯುವುದಾದರೆ ಅದು ಅವನ ಸ್ವಂತ ತಪ್ಪಾಗಿರುತ್ತದೆ. ಇವನು ದೇವರನ್ನು ದೂಷಿಸುವಹಾಗಿಲ್ಲ. (ರೋಮಾ. 9:19-21 ನೋಡಿರಿ).

ಹೀಗಿರುವಾಗ ಜನರು ಆರಿಸಿಕೊಳ್ಳಲು ಸ್ವತಂತ್ರರಾಗಿದ್ದಾರೆ. ಆದಾಗ್ಯೂ ದೇವರ ದೃಷ್ಟಿಯಲ್ಲಿ ಮನುಷ್ಯನು ಯಾವುದನ್ನು ಆರಿಸಿಕೊಳ್ಳುತ್ತಾನೆಂದು ತಿಳಿದಿರುತ್ತಾನೆ. ದೇವರ ಜ್ಞಾನವು ವಿಶಾಲವಾಗಿದೆ. ಆತನು ಎಲ್ಲವನ್ನೂ ಬಲ್ಲವನಾಗಿದ್ದಾನೆ. **ನನ್ನವರು ಯಾರು ಎಂದು ಕರ್ತನು ತಿಳಿದವನಾಗಿದ್ದಾನೆ** (2 ತಿಮೊಥೆ. 2:19). ಇವರ ಹೆಸರುಗಳು ಜೀವಬಾಧ್ಯರ ಪುಸ್ತಕದಲ್ಲಿ ಬರೆಯಲ್ಪಟ್ಟಿವೆ (ಪ್ರಕಟಣೆ 3:5, 21:27) ಮತ್ತು ಆತನು ಪ್ರತಿಯೊಬ್ಬರಿಗೋಸ್ಕರ ರಾಜ್ಯವನ್ನು ಸ್ಥಾಪಿಸಿದ್ದಾನೆ (ಲೂಕ 12:32).

ನ್ಯಾಯತೀರ್ಪಿನ ದಿನದಲ್ಲಿ ನಾನು ಕ್ರಿಸ್ತನ ಬಲಭಾಗದಲ್ಲಿ ನಿಲ್ಲುತ್ತೇನೆಯೋ ಅಥವಾ ಎಡಭಾಗದಲ್ಲಿ ನಿಲ್ಲುತ್ತೇನೆಯೋ? ಎಂದು ಯಾರು ಬೇಕಾದರೂ ಕೇಳಲಾರದಿರುವಷ್ಟು ಮುಖ್ಯವಾದ ಪ್ರಶ್ನೆಗಳೇನೂ ಅಲ್ಲ.

**35-36** ಕ್ರಿಸ್ತನು, ಯಾವ ಆಧಾರದ ಮೇಲೆ ಜನರನ್ನು ಭಾಗವಾಗಿ ವಿಂಗಡಿಸುವನು? ಕ್ರಿಸ್ತನು, ಯಾವ ಕಾರಣಕ್ಕಾಗಿ ಜನರನ್ನು ಕರೆದು ತನ್ನ ಬಲಗಡೆ ಬನ್ನಿರಿ ಮತ್ತು ನನ್ನ ಎಡಗಡೆಗೆ ಬನ್ನಿರಿ ಎಂದು ಕರೆಯುವನು? ಉತ್ತರ ಹೀಗಿರುತ್ತದೆ. ಯಾರು ಭೂಮಿಯ ಮೇಲೆ ಇರುವಾಗ ತಮ್ಮ ಜೀವಿತದಲ್ಲಿ ಕ್ರಿಸ್ತನನ್ನು ನಂಬಿ ಆತನ ಪ್ರೀತಿಯಲ್ಲಿ ನಡೆಯುವರೋ ಅಂಥವರನ್ನು ಕ್ರಿಸ್ತನು ತನ್ನ ಬಲಗಡೆಯ ಸ್ಥಳದಲ್ಲಿರಿಸುವನು. ಇವರು ನೀತಿವಂತರೆಂದು ಎಣಿಸಲ್ಪಡುವರು (ಇಬ್ರಿಯಾ 6:10).

**37-39** ಆದರೇ ನೀತಿವಂತರು ಇದನ್ನು ಮುಂಚಿತವಾಗಿ ಗ್ರಹಿಸಲಾರರು. ಇವರಿಗೆ ಜ್ಞಾಪಕವಿರುವುದಿಲ್ಲ.ಇವರು ಕ್ರಿಸ್ತನಿಗೋಸ್ಕರವಾಗಿ ಮಾಡಿದ್ದೆಲ್ಲವನ್ನೂ ನೆನಪಿಟ್ಟಿರುವುದಿಲ್ಲ. ಇವರು ಸರಳವಾಗಿ ಮಾಡಿದಂತಹ ಪ್ರೀತಿಯ ಕಾರ್ಯಗಳನ್ನು ಮತ್ತು ದೊರಕುವಂತಹ ಅಮೂಲ್ಯ ಕೀರ್ತಿಯನ್ನು ಘಣನೇಗೆ ತಂದುಕೊಳ್ಳುವುದಿಲ್ಲ.ತಾವು ಗೌರವಕ್ಕೆ ಪಾತ್ರರೆಂದು ತಮ್ಮನ್ನು ತಾವು ಎಣಿಸಿಕೊಳ್ಳುವುದಿಲ್ಲ. ಇವರು ದೀನತೆಯುಳ್ಳವರು.

**40** ಕ್ರಿಸ್ತನು ಹೇಳುವ ಉತ್ತರವೇನೆಂದರೆ **ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದ್ದಿರೋ ಅದನ್ನು ನನಗೂ ಮಾಡಿದ ಹಾಗಾಯಿತು.** ಯಾರ್ಯಾರು ಪ್ರೀತಿ ಮತ್ತು ಕರುಣೆಯ ಕ್ರೀಯೆಗಳನ್ನು ಇತರರಿಗೆ ಮಾಡಿದ್ದಿರೋ ಅವೆಲ್ಲವುಗಳನ್ನು ನನಗೆ ಮಾಡಿದ ಹಾಗಾಯಿತು ಎಂದು ಹೇಳುವನು.

ಕ್ರಿಸ್ತನು ಪ್ರೀತಿಯುಳ್ಳ ಕುರುಬನಾಗಿರುತ್ತಾನೆ. ಈತನು ಭೂಮಿಗೆ ಬಂದು ಕೆಟ್ಟು ಹೋಗಿರುವವರನ್ನು ಹುಡುಕಿ ರಕ್ಷಿಸುವುದಕ್ಕೆ ಬಂದನು. ಈತನು ಎಲ್ಲ ಜನರನ್ನು ಪ್ರೀತಿಸುತ್ತಾನೆ. ಈತನು ಸಹೋದರರಂತೆ ಪ್ರೀತಿಸುತ್ತಾನೆ. ಈತನು ಮಾನವನ ಸ್ಥಾನದಲ್ಲಿ ನಿಲ್ಲಬಲ್ಲನು. ನಮ್ಮ ನಿರ್ಬಲಾವಸ್ಥೆಯನ್ನು ಬಲ್ಲನು. (ಇಬ್ರಿಯಾ 4:15, 5:2). ಈ ಕಾರಣಕ್ಕಾಗಿ ನಾವು ಇತರ ವ್ಯಕ್ತಿಗೆ ಪ್ರೀತಿಯನ್ನು ತೋರಿಸಿದರೆ, ನಾವು ಕ್ರಿಸ್ತನಿಗೆ ಪ್ರೀತಿಯನ್ನು ತೋರಿಸಿದಂತಾಗುತ್ತದೆ. ಕ್ರಿಸ್ತನು ಶರೀರಧಾರಿಯಾಗಿ ಭೂಮಿಯ ಮೇಲೆ ಇಲ್ಲ. ಆದರೆ[71] ಇತರರಿಗೆ ಸೇವೆಯನ್ನು ಮಾಡುವುದರ ಮೂಲಕ ಕ್ರಿಸ್ತನಿಗೆ ಸೇವೆಯನ್ನು ಮಾಡುವಂತಹ ಅವಕಾಶ ಉಂಟು. (ಜ್ಞಾನೋಕ್ತಿ 19:17, ಮತ್ತಾಯ 10:42, ಮಾರ್ಕ 9:41).

ಇಲ್ಲಿ ಜ್ಞಾಪಕದಲ್ಲಿಡುವಂತಹ ಒಂದು ಮುಖ್ಯ ವಿಷಯವಿದೆ.ಇವರು ನೀತಿಯಿಂದ ಕೂಡಿದಂತಹ ಪ್ರೀತಿಯ ಕ್ರಿಯೆಗಳನ್ನು ಮಾಡಿದ ಕಾರಣದಿಂದ ರಕ್ಷಿಸಲ್ಪಡಲಿಲ್ಲ. ಇವರು ನಂಬಿಕೆಯ ಮೂಲಕವೇ ರಕ್ಷಣೆ ಹೊಂದಿದರು.

ಆದರೆ ಮಾಡತಕ್ಕ ಪ್ರೀತಿಯ ಕ್ರಿಯೆಗಳು ನಿಜವಾದ ನಂಬಿಕೆಯ ಗುರುತುಗಳಾಗಿವೆ. ಯಾವಾಗ ಕ್ರಿಸ್ತನು ನಮ್ಮ ನಂಬಿಕೆಯ ಪ್ರೀತಿಯ ಕ್ರಿಯೆಗಳನ್ನು ನೋಡಲಾಗಿ ನಮ್ಮ ನಂಬಿಕೆಯು ನಿಜವಾದದ್ದೆಂದು ತಿಳಿದುಕೊಳ್ಳುತ್ತಾನೆ.ಇವೆರಡೂ ಪ್ರೀತಿಯ ಕ್ರಿಯೆಗಳಾಗದ್ದು, ಇವುಗಳಲ್ಲಿ ಮೊದಲನೆಯದಾಗಿ ಬರುವಂತದ್ದು ನಂಬಿಕೆ. ನಂತರ ಎರಡನೆಯದಾಗಿ ಬರುವಂತದ್ದು ನಂಬಿಕೆಯ ಫಲ. (ಎಫೆಸ 2:8-9, ಯಾಕೋಬ 2:14-17ರ ವಿವರಣೆ ನೋಡಿರಿ). ಒಂದು ವಿಶೇಷವಾದ ಸಂಗತಿಯೇನೆಂದರೆ **ಪ್ರೀತಿಯಿಂದ ಕೆಲಸ ನಡಿಸುವ ನಂಬಿಕೆಯಿಂದಲೇ ಪ್ರಯೋಜನವಾಗಿದೆ** (ಗಲಾತ್ಯ 5:6).

**41-45** ಆಮೇಲೆ ಅರಸನು ತನ್ನ ಎಡಗಡೆಗೆ ಇರುವವರನ್ನು ಶಿಕ್ಷೆಗೆ ಗುರಿ ಮಾಡಿ, **ಸೈತಾನನಿಗೂ ಮತ್ತು ಆತನ ದೂತರಿಗಾಗಿ ಸಿದ್ಧ ಮಾಡಲ್ಪಟ್ಟಿರುವ ಆ ನಿತ್ಯವಾದ ಬೆಂಕಿಯ ಕೆರೆಗೆ** ಇವರನ್ನು ಕಳುಹಿಸುವನು (ಪ್ರಕಟಣೆ 20:10 ನೋಡಿರಿ). ಇತನ ಎಡಭಾಗದಲ್ಲಿರುವವರು ಒಂದು ಕಾಲದಲ್ಲಿ ಕ್ರಿಸ್ತನ ಪ್ರೀತಿಯ ಕ್ರಿಯೆಗಳನ್ನು ಮಾಡದೇ ಇದ್ದವರು. ಇವರು ನಾವು ಕ್ರಿಸ್ತನ ಸೇವೆಯನ್ನು ಮಾಡಿದವರೆಂದು ಬಾವಿಸಿದಂತವರು. ಒಂದು ವೇಳೆ ಇವರು ಸಭೆಗೆ ಹೋಗುತ್ತಿದ್ದಂತವರಾಗಿರಬಹುದು. ಒಂದು ವೇಳೆ ಇವರು ಧಶಮ ಭಾಗ ಕೊಂಟ್ಟಂತವರಾಗಿರಬಹುದು. ಇವರು ಧಾರ್ಮಿಕ ಅಭಿಮಾನವುಳ್ಳವನಾಗಿರಬಹುದು. ಆದರೆ ಈ ಎಲ್ಲ ಕಾರ್ಯಗಳು ತಮ್ಮನ್ನು ಹೊಗಳಿಕೊಳ್ಳುವುದಕ್ಕೆ ಮಾತ್ರ ಸೀಮಿತವಾಗಿದ್ದವು. ಇವರು ನಿಜವಾಗಿಯೂ ತಮ್ಮ ನೆರೆಯವರನ್ನು ಪ್ರೀತಿಸಲಿಲ್ಲ. ಇವರು ಕಷ್ಟದಲ್ಲಿದ್ದ ನೆರೆಯವನಿಗೆ ಸಹಾಯ ಮಾಡುವುದನ್ನು ನಿರಾಕರಿಸಿದ ಸಮಯದಲ್ಲಿಯೇ ನಿಜವಾಗಿಯೂ ತಾವು ಕ್ರಿಸ್ತನಿಗೆ ಸಹಾಯ ಮಾಡಲು ನಿರಾಕರಿಸಿದ್ದೆವೆ ಎಂಬುದನ್ನು ಅರಿಯಲಿಲ್ಲ. **ಒಬ್ಬನು ತಾನು ದೇವರನ್ನು ಪ್ರೀತಿಸುತ್ತೇನೆ ಎಂದು ಹೇಳಿ ತನ್ನ ಸಹೋದರರನ್ನು ದ್ವೇಷಿಸಿದರೆ ಅವನು ಸುಳ್ಳುಗಾರನಾಗಿದ್ದಾನೆ. ತಾನು ಕಂಡಿರುವ ತನ್ನ ಸಹೋದರನನ್ನೂ ಪ್ರೀತಿಸದವನು ತಾನು ಕಾಣದಿರುವ ದೇವರನ್ನು ಪ್ರೀತಿಸಲಾರನು.**(1ನೇ ಯೋಹಾನ 4:20).

**46** **ಯಾವಾಗ ಅವರಿಗೆ ಶಿಕ್ಷೆ ಅನುಭವಿಸಲು ಬೆಂಕಿಯ ಕೆರೆಗೆ ನಿತ್ಯ ನರಕಕ್ಕೆ ದಬ್ಬಲ್ಪಡುವರೋ** ಆಗ ಕೊನೆಯ ತೀರ್ಪು ಕೊಡಲ್ಪಡುತ್ತದೆ. ಪ್ರತಿವಾದಿಸಲು ಯಾರಿಗೂ ಅವಕಾಶವಿಲ್ಲ. ದೇವರ ನ್ಯಾಯತೀರ್ಪು ನೀತಿಯುಳ್ಳದ್ದಾಗಿ ಸದಾಕಾಲವೂ ಇರುವಂತಹುದಾಗಿದೆ. ಪ್ರತಿಯೊಬ್ಬ ಮನುಷ್ಯ ಮತ್ತು ಸ್ತ್ರೀಯು ಈ ದೇವರ ನ್ಯಾಯ ತೀರ್ಪಿನ ವಿಷಯವಾಗಿ ಆಲೋಚಿಸಲಿ. ಆ ದಿನದಲ್ಲಿ ಕರ್ತನು **ಬನ್ನಿರಿ ನಿಮಗೋಸ್ಕರ ಸಿದ್ಧವಾಗಿರುವುದನ್ನು ತೆಗೆದುಕೊಳ್ಳಿರಿ ಎಂದು ನಮಗೆ ಹೇಳುತ್ತನೆಯೇ? (ವಚನ 34) ಇಲ್ಲವೆ . ನನ್ನಿಂದ ತೊಲಗಿ ಆ ನಿತ್ಯವಾದ ಬೆಂಕಿಯ ಕೆರೆಗೆ ಹೋಗಿರಿ ಎಂದು ಹೇಳುವನೇ.?** (ವಚನ 41).

ಇನ್ನೊಂದು ಸಂಗತಿ ಆಲೋಚಿಸುವಂತದ್ದಿದೆ. ಕ್ರಿಸ್ತನ ಎಡಭಾಗದಲ್ಲಿದ್ದವರು ಯಾವ ಪಾಪವನ್ನು ಮಾಡಿ ಶಿಕ್ಷೆ ಹೊಂದಿ ನಿರಂತರವಾದ ಬೆಂಕಿ ಕೆರೆಗೆ ದಬ್ಬಲ್ಪಟ್ಟರು? ಕೊಲೆಯೆ? ವ್ಯಭಿಚಾರವೆ? ಕಳ್ಳತನವೆ? ದೊಡ್ಡ ಪಾಪಗಳೆ? ಇಲ್ಲ. ಆದರೆ ಒಳ್ಳೆಯದನ್ನು ಮಾಡದೇ ಇದ್ದದ್ದೆ ಅವರ ಪಾಪವಾಗಿತ್ತು . ಬಹಳ ಜನರು ಇದನ್ನು ಪಾಪವೆಂದು ತಿಳಿಯುವುದೇ ಇಲ್ಲ. ಅನೇಕರು ಕೆಟ್ಟದ್ದನ್ನು ಮಾಡುವಂತದ್ದು ಮಾತ್ರ ಪಾಪ ಎಂದು ಅರ್ಥೈಸುತ್ತಾರೆ. ಆದರೆ ಯೇಸುವು, ನಮಗೆ, ಒಳ್ಳೆಯ ಕೆಲಸ ಮಾಡುವುದಕ್ಕೆ ಅವಕಾಶವಿದ್ದಾಗ್ಯೂ ಒಳ್ಳೆಯದನ್ನು ಮಾಡದೆಯಿರುವಂತದ್ದು ಕೂಡ ಪಾಪವಾಗಿದೆ ಎಂದು ಭೋದಿಸಿದನು.

ಇವು "ಕರ್ತವ್ಯ ಲೋಪದ ಪಾಪಗಳಾಗಿವೆ". ನಾವು ಮಾಡಬೇಕಾಗಿದ್ದ ಕೆಲವು ಸಂಗತಿಗಳನ್ನು ಮಾಡದೇ ಇದ್ದಾಗ ಆದಂತ ಪಾಪಗಳು. 10 ಜನ ಕನ್ಯಾಸ್ತ್ರೀಯರ ಪಾಪವು ಇಂತದ್ದೆ ಆಗಿತ್ತು. ಇವರು ತಮ್ಮ ದೀಪಕ್ಕೆ ಬೇಕಾಗುವಷ್ಟು ಎಣ್ಣೆಯನ್ನು ತಮ್ಮ ದೀಪದ ಬುಗ್ಗೆಯಲ್ಲಿ ತರಲಿಲ್ಲ (ವಚನ 3). ಮೈಗಳ್ಳನಾದ ಸೇವಕನು ತನ್ನ ಯಜಮಾನನು ಕೊಟ್ಟ ...ವರಹಗಳನ್ನು ಉಪಯೋಗಿಸಿಕೊಳ್ಳಲಿಲ್ಲ (ವಚನ 27). ಇಂತಹವುಗಳೆಲ್ಲ ಪಾಪಕ್ಕೆ ಮೂಲಾಧಾರವಾಗಿವೆ. ಈ ರೀತಿಯ ಪಾಪಗಳನ್ನು ಮಾಡಿದಂತಹ ಜನರೆಲ್ಲರೂ ನ್ಯಾಯತೀರ್ಪಿನ ದಿನದಲ್ಲಿ ಶಿಕ್ಷೆಗೆ ಒಳಗಾಗುವರು.

ಎಷ್ಟೋ ಒಳ್ಳೆ ಸಂದರ್ಭಗಳಲ್ಲಿ, ಕಳೆದ ತಿಂಗಳು ನಾವು ಮಾಡಬೇಕಾದ ಒಳ್ಳೇ ಕಾರ್ಯಗಳನ್ನು ಬಿಟ್ಟು ಬಿಟ್ಟಿದ್ದೇವೆ? ಈ ಕಳೆದ ವಾರ? ಪ್ರತಿ ದಿವಸ? ಎಷ್ಟೋ ಸಾರಿ ಮಾಡಬೇಕಾದುದನ್ನು ಮಾಡಲಿಲ್ಲ. ಬಟ್ಟೆ ಇಲ್ಲದವರಿಗೆ ಬಟ್ಟೆ ಕೊಡಲಿಲ್ಲ. ಸಂದರ್ಶಿಸಬೇಕಾದವರನ್ನು ಸಂಧಿಸಲಿಲ್ಲ. ಉಪಚರಿಸುವವರನ್ನು ಉಪಚರಿಸಲಿಲ್ಲ. ಓ ದೇವರೇ ನಮ್ಮನ್ನು ಕ್ಷಮಿಸು. ನಾವು ಮಾಡಬೇಕಾದ್ದನ್ನು ಮಾಡಲಿಲ್ಲ. ನಾವು ಪ್ರೀತಿಸಬೇಕಾದಂತವರನ್ನು ಪ್ರೀತಿಸಲಿಲ್ಲ. ಓ ತಂದೆಯೇ, ನಮ್ಮ ಮೇಲೆ ನಿನ್ನ ಕರುಣೆ ಇರಲಿ.

ಈಗ, ಯಾಕೆ ನಾವು ನಮ್ಮ ನೀತಿಯ ಕಾರ್ಯಗಳಿಂದ ರಕ್ಷಿಸಲ್ಪಡುವುದಿಲ್ಲ ಎಂದು ನಮಗೆ ಸ್ಪಷ್ಟವಾಯಿತಲ್ಲ? ಇದು ದೇವರ ಕೃಪೆ ಮತ್ತು ಕರುಣೆಯಿಂದಲೇ ಸಾಧ್ಯ ಮತ್ತು ನಂಬಿಕೆಯ ಮೂಲಕ ನಮ್ಮ ರಕ್ಷಕನಾದ ಯೇಸು ಕ್ರಿಸ್ತನಲ್ಲಿ ಮಾತ್ರ ನಾವು ನಿತ್ಯ ದಂಡನೆಯಿಂದ ರಕ್ಷಿಸಲ್ಪಡುತ್ತೇವೆ.

---

## ಅಧ್ಯಾಯ - 26

### ಕ್ರಿಸ್ತನಿಗೆ ವಿರೋಧವಾದ ಕು ಯುಕ್ತಿ (26:1-5)

(ಮಾರ್ಕ 14:1-2, ಲೂಕ 22:1-2)

**1-5** ಮಾರ್ಕ 1:1-2 ವ್ಯಾಖ್ಯಾನ ನೋಡಿರಿ.

### ಬೇಥಾನ್ಯದಲ್ಲಿ ಕ್ರಿಸ್ತನಿಗೆ ತೈಲದ ಅಭಿಷೇಕ (26:6-13)

(ಮಾರ್ಕ 14:3-9 ಮತ್ತು ಯೋಹಾನ12:1-8 ವ್ಯಾಖ್ಯಾನ ನೋಡಿರಿ)

**6-13** ನೋಡಿರಿಮಾರ್ಕ 14:3-9 ಮತ್ತು ವ್ಯಾಖ್ಯಾನ

**ಕ್ರಿಸ್ತನಿಗೆ ದ್ರೋಹ ಮಾಡಲು ಯೂದನ ಒಪ್ಪಂದ (ಮತ್ತಾಯ 26:14-16)**

(ಮಾರ್ಕ 14:10-11, ಲೂಕ 22:3-6)

**14-16** ನೋಡಿರಿ. ಮಾರ್ಕ 14:10-11 ಮತ್ತು ವ್ಯಾಖ್ಯಾನ

**ಕರ್ತನ ಭೋಜನ (26:17-30)**

(ಮಾರ್ಕ 14:12-26, ಲೂಕ 22:7-26)

**17-30** ನೋಡಿರಿ. ಮಾರ್ಕ 14:12-26 ಮತ್ತು ವ್ಯಾಖ್ಯಾನ

**ಪೇತ್ರನು ತನ್ನನ್ನು ಅಲ್ಲ ಳೆಯುವನೆಂದು ಕ್ರಿಸ್ತನು ಮು ಂತಿಳಿಸಿದ್ದು (26:31-35)**

(ಮಾರ್ಕ 14:27-31, ಲೂಕ 22:33-34 ಯೋಹಾನ 13:37-38)

**31-35** ನೋಡಿರಿ. ಮಾರ್ಕ 14:27-31 ಮತ್ತು ವ್ಯಾಖ್ಯಾನ

**ಗೆತ್ಸೇಮನೆ (26:36-46)**

(ಮಾರ್ಕ 14:32-42, ಲೂಕ 22:39-46)

**36-46** ನೋಡಿರಿ.ಮಾರ್ಕ 14:32-42 ಮತ್ತು ವ್ಯಾಖ್ಯಾನ

**ಕ್ರಿಸ್ತನು ಬಂದಿಸಲ್ಪಟ್ಟಿದ್ದು (26:47-56)**

(ಮಾರ್ಕ 14:43-52, ಲೂಕ 22:47-53 ಯೋಹಾನ 18:1-11)

**47-56** ನೋಡಿರಿ.ಮಾರ್ಕ 43-52 ಮತ್ತು ವ್ಯಾಖ್ಯಾನ

**ನ್ಯಾಯ ಸಭೆಯ ಮುಂದೆ ಕ್ರಿಸ್ತನು (26:57-68)**

(ಮಾರ್ಕ 14:53-65, ಲೂಕ 22:63-71)

**57-68** ನೋಡಿರಿ. ಮಾರ್ಕ 14:53-65 ಮತ್ತು ವ್ಯಾಖ್ಯಾನ

**ಪೇತ್ರನು ಕ್ರಿಸ್ತನ ನ್ನು ನಿರಾಕರಿಸಿದ್ದು (26:69-75)**

(ಮಾರ್ಕ 14:66-72, ಲೂಕ 22:54-62 ಯೋಹಾನ 18:15-18, 25-27)

**69-75** ನೋಡಿರಿ. ಮಾರ್ಕ 14:66-72ರ ಮತ್ತು ವ್ಯಾಖ್ಯಾನ.

---

## ಅಧ್ಯಾಯ - 27

**ಯೂದನು ತಾನೇ ನೇಣು ಹಾಕಿಕೊಂಡದ್ದು (27:1-10)**

**1-2** ನೋಡಿರಿ. ಮಾರ್ಕ 15:1 ಮತ್ತು ವ್ಯಾಖ್ಯಾನ.

**3** ಯೇಸುವಿಗೆ ದ್ರೋಹ ಮಾಡಿದ ಯೂದನು ಆತನಿಗೆ ಮರಣದಂಡನೆಯ ತೀರ್ಪು ಆದದ್ದನ್ನು ನೋಡಿ ಪಶ್ಚಾತಾಪ ಪಟ್ಟನು (ಮಾರ್ಕ 14:10-11) . ಮನೋದುಃಖದಿಂದ ತುಂಬಿದ ಕ್ರಿಸ್ತನನ್ನು ಒಬ್ಬ ಕೊಲೆಗಾರನಂತೆ ಬೇಡಿಯಿಂದ ಬಂದಿಸಲ್ಪಟ್ಟನು. ಯೂದನು ನೆನಸಿದ್ದೇನೆಂದರೆ ಕ್ರಿಸ್ತನು ತನ್ನನ್ನು ಹಿಡಿದವರಿಂದ ತಪ್ಪಿಸಿಕೊಳ್ಳುವನೆಂದೂ ಆಗ ಯಾವ ಕಷ್ಟವಿಲ್ಲದೆ 30 ಬೆಳ್ಳಿಯ ನಾಣ್ಯ ನನಗೆ ದೊರೆಯುತ್ತದೆ ಎಂದು ಭಾವಿಸಿದ್ದನು. ಆದರೆ ಕ್ರಿಸ್ತನಿಗೆ ಮರಣ ದಂಡನೆಗೆ ಗುರಿಯಾದದ್ದನ್ನು ನೋಡಿದಾಗ ದುಃಖಗೊಂಡನು.

ಈ ದುಃಖವು ಆತನ ನಿಜವಾದ ಪಶ್ಚಾತ್ತಾಪವಾಗಲಿಲ್ಲ . ಏಕೆಂದರೆ ಅದು ಆತನ ಅಶುದ್ಧವಾದಂತ ಮನಃಸಾಕ್ಷಿಯಿಂದ ಬಂದದ್ದಾಗಿತ್ತು. ಆಗ ಯೂದನು ತಾನು ಕ್ರಿಸ್ತನನ್ನು ಹಿಡಿದು ಕೊಡುವುದಕ್ಕೆಮಹಾಯಾಜಕನಿಂದ ತೆಗೆದುಕೊಂಡ ಹಣವನ್ನು ಹಿಂದಿರುಗಿ ಕೊಡುವುದರಿಂದ ತನ್ನ ಮನಃಸಾಕ್ಷಿಯನ್ನು ಸರಿಪಡಿಸಿಕೊಳ್ಳಬಹುದೆಂದು ಆಲೋಚಿಸಿದನು. (ಮತ್ತಾಯ 26:15)

**4-5** ಹಣವನ್ನು ಹಿಂದಿರುಗಿಸುವಂತದ್ದು ಕೂಡ ಆತನ ಮನಃಸಾಕ್ಷಿಯ ಮೇಲೆ ಏನೂ ಪರಿಣಾಮ ಬೀರಲಿಲ್ಲ. ನಿಜವಾದ ಪಶ್ಚಾತ್ತಾಪ ಪಡದೆ ಮನುಷ್ಯನು ಶುದ್ಧವಾಗಲಾರನು. ಯೂದನಿಗೆ ಕೆಟ್ಟ ಅನುಭವವಾಯಿತು. ಯಹೂದ್ಯರು ಆತನನ್ನು ತಾತ್ಸರ ಮಾಡಿದರು (ದ್ರೋಹಿಯನ್ನು ಯಾರೂ ಗೌರವದಿಂದ ನೋಡುವುದಿಲ್ಲ). ಕ್ರಿಸ್ತನ ಹಿಂಬಾಲಕರು ಆತನನ್ನು ತಾತ್ಸರ ಮಾಡಿದರು. ಯೂದನು ತನ್ನನ್ನು ತಾನೇ ತಾತ್ಸರ ಮಾಡಿಕೊಂಡನು. ಆತನಿಗೆ ಮಿತ್ರರಿರಲಿಲ್ಲ. ತಾನು ಪಾಪಿ ಎಂದು ತಿಳಿದುಕೊಂಡನು.ಮತ್ತೂ ಆತನು ಮಹಾಯಾಜಕ ಹಾಗು ಹಿರಿಯರ ಬಳಿಗೆ ಹೋಗಿ ತನ್ನ ಪಾಪ ವನ್ನು ಒಪ್ಪಿಕೊಂಡನು (ವಚನ 4). ಆದರೆ ಇದಷ್ಟೆ ಸಾಕಾಗಲಿಲ್ಲ. ನಾನು ಪಾಪ ಮಾಡಿದ್ದೇನೆ ಪಶ್ಚಾತ್ತಾಪವಿಲ್ಲ.ಎಂತಹ ಕಠಿಣವಾದ ಕೊಲೆಗಾರರೂ ಸಹ ನಾನು ಪಾಪ ಮಾಡಿದ್ದೇನೆ ಎಂದು ಪಶ್ಚಾತ್ತಾಪವಿಲ್ಲದೆಯೇ ಹೇಳಬಹುದು. ನಿಜವಾದ ಪಶ್ಚಾತ್ತಾಪವು ದೀನತೆಯಿಂದ ದೇವರ ಬಳಿಗೆ ಬರುವುದು,. ಕರುಣೆಗಾಗಿ ದೇವರಲ್ಲಿ ಗೋಳಾಡುವುದು ಮತ್ತು . ಪಾಪದಿಂದ ಸಂಪೂರ್ಣವಾಗಿ ತಿರುಗುವುದು. ಪಶ್ಚಾತ್ತಾಪದಲ್ಲಿ ಪಾಪದ ಅರಿಕೆಯು ಮೊದಲನೆಯ ಮೆಟ್ಟಿಲಾಗಿದೆ (1ನೇ ಯೋಹಾನ 1:9 ವ್ಯಾಖ್ಯಾನ ನೋಡಿರಿ).

ಯೂದನ ಕಪಟ ಮನಃಸಾಕ್ಷಿಯ ಬಗ್ಗೆ ಮಹಾಯಾಜಕರೂ ಮತ್ತು ಹಿರಿಯರು ತಮ್ಮ ಲಕ್ಷ್ಯಕ್ಕೆ ತಂದು ಕೊಳ್ಳಲಿಲ್ಲ. ಆತನು ಮಾಡಿದ ಪಾಪದಲ್ಲಿಅವರು ಭಾಗಿಗಳಾಗಿದ್ದರು ಆದರೆ ಅವರು ಪಶ್ಚಾತ್ತಾಪ ಪಡಲಿಲ್ಲ ಹಾಗೂ ಯೂದನನ್ನು ಸಮಾಧಾನ ಪಡಿಸಲು ಪ್ರಯತ್ನಿಸಲೂ ಇಲ್ಲ. ಅವನು ಮಾಡಿದ ಭಯಂಕರ ಕಾರ್ಯದಲ್ಲಿ ಮತ್ತು ಅವನ ಆಶಾಭಂಗದಲ್ಲಿ ಏಕಾಂಗಿಯನ್ನಾಗಿ ಮಾಡಿದರು. ಪಾಪದಲ್ಲಿ ಸಹಬಾಗಿಗಳಾದಂತಹ ಸ್ನೇಹಿತರು ಕೊನೆಯವರೆಗೂ ನಿಷ್ಠಾವಂತ ರಾಗಿರುವುದಿಲ್ಲ.

ಯೂದನು ನಿರಾಶೆರೊಂಡನು ಮತ್ತು ತನ್ನ ಸ್ವಂತ ಜೀವವನ್ನು ದ್ವೇಶಿಸಿದನು.ಹೊರಟು ಹೋದನು ಮತ್ತುತನ್ನಷ್ಟಕ್ಕೆ ತಾನೇ ನೇಣು ಹಾಕಿಕೊಂಡನು.ಸಾಯುತ್ತಿರುವಾಗಲೇ **ತಲೆ ಕೆಳಗಾಗಿ ಸತ್ತನು ಇಲ್ಲವೆ ಸತ್ತ ತಕ್ಷಣವೆ ತಲೆ ಕೆಳಗಾಗಿ ಬಿದ್ದು ಹೊಟ್ಟೆ ಒಡೆದವನಾದನು. (ಅ.ಕೃ. 1:18 ವ್ಯಾಖ್ಯಾನ ನೋಡಿರಿ).**

**6** ಯೂದನಿಗೆ ಹಣವನ್ನು ಕೊಡುವುದಕ್ಕಾಗಿ ಮಹಾಯಾಜಕರು ದೇವಾಲಯದ ಬೊಕ್ಕಸಲ್ಲಿದ್ದ ಹಣವನ್ನು ಸಂತೋಷದಿಂದ ತೆಗೆದುಕೊಂಡರು. ಆದರೆ ಆ ಹಣವನ್ನು ತಿರುಗಿ ದೇವಾಲಯದ ಬೊಕ್ಕಸಕ್ಕೆ ಹಾಕಲು ಮನಸ್ಸು ಮಾಡಲಿಲ್ಲ. **ಇದು ರಕ್ತದ ಹಣವಾಗಿತ್ತು.** ಬಂದಿಸಿ ಮತ್ತು ಗಲ್ಲಿಗೇರಿಸಿದ ಯೇಸು ಎಂಬ ವ್ಯಕ್ತಿಯ ರಕ್ತಕ್ಕೆ ಈ ಹಣವು ಉಪಯೋಗವಾಗಿದೆ ಎಂದು ಹೇಳಿದರು

**7-8** ಯೂದನು ಹಿಂದಿರುಗಿಸಿದ ಹಣವನ್ನು ಮಹಾಯಾಜಕನು ತೆಗೆದುಕೊಂಡು ಜೀವಹತ್ಯದ ಹೊಲ ಎಂದು ಕರೆಯಲ್ಪಟ್ಟಂತ **ಕುಂಬಾರನ ಹೊಲವೊಂದನ್ನು** ಕೊಂಡುಕೊಂಡರು. ಯೆರುಸಲೇಮಿನಲ್ಲಿ ಅಕಸ್ಮಿಕವಾಗಿ ಅನ್ಯರು ಸತ್ತಂತಹ ಸಂದರ್ಬದಲ್ಲಿ ಅಂತವರ ಶವ ಸಂಸ್ಕಾರಕ್ಕಾಗಿ ಉಪಯೋಗಿಸಲು ಇದನ್ನು ಖರೀದಿಸಿದರು. ಈ ಕಾರಣಕ್ಕಾಗಿ ಇದು ಒಂದು ಸ್ಮಶಾನದ ಭೂಮಿ ಯಾದ್ದರಿಂದ **ರಕ್ತದ ಹೊಲ** ಎಂಬುದಾಗಿ ಕರೆಯಲ್ಪಟ್ಟಿತು. ಯಾಕೆಂದರೆ ಯೂದನು ಇಲ್ಲಿ ತನ್ನಷ್ಟಕ್ಕೆ ತಾನೇ ಕೊಲ್ಲಲ್ಪಟ್ಟನು (ಅ.ಕೃ. 1:18-19 ನೋಡಿರಿ).

ಅ.ಕೃ. 1:18ರ ಪ್ರಕಾರ ಯೂದನು ಒಂದು ಹೊಲವನ್ನು ಕೊಂಡು ಕೊಂಡನು. ಆದರೆ ಇದು ಕಾನೂನಿನ ದೃಷ್ಟಿಯಲ್ಲಿ ಮಾತ್ರ. ಇದು ಮಹಾಯಾಜಕನಿಂದ ಕೊಂಡ ಹೊಲವಾಗಿತ್ತು. ಆದರೆ ಇವರು ಯೂದನ ಹಣವನ್ನು ಭೊಕ್ಕಸಕ್ಕಾಗಿ ಸ್ವಿಕರಿಸಲು ಒಪ್ಪಿಕೊಳ್ಳಲಿಲ್ಲವಾದ್ದ ರಿಂದ ಇವರು ಯೂದನ ಹೆಸರಿನ ಮೇಲೆ ಹೊಲವನ್ನು ಕೊಂಡು ಕೊಂಡನು .ಹೀಗಾಗಿ ಕಾನೂನಿನಂತೆ ಇದು ಯೂದನ ಹೊಲವಾಯಿತು. ಆದ್ದರಿಂದ ಈ ಹೊಲವು ಯೂದನು ಕೊಂಡುಕೊಂಡನು ಎಂಬುದಾಗಿ ಹೇಳಲ್ಪಟ್ಟಿದೆ.

**9-10** ಈ ವಚನಗಳಲ್ಲಿ ಮತ್ತಾಯನು ಇಬ್ಬರು ಪ್ರವಾದಿಗಳನ್ನು ಮುಂದಿಡುತ್ತಾನೆ. ಮೊದಲನೆಯದಾಗಿ ಜೆಕರ್ಯ, ಎರಡನೆಯದಾಗಿ ಯೆರೆಮೀಯ. ಈ ಇವರಿಬ್ಬರೂ ಹಳೇ ಒಡಂಬಡಿಕೆಯಲ್ಲಿ ಬರುತ್ತಾರೆ. ಆದರೆ ಹಳೇಒಡಂಬಡಿಕೆಯಲ್ಲಿ ಐತಿಹಾಸಿಕವಾಗಿ ಈ ಪ್ರವಾದಿಗಳಿಬ್ಬರಿಗೆ ಯಾವುದೆ ಸಂಬಂಧವಿರುವುದಿಲ್ಲ.

ಜೆಕರ್ಯ 11:12-13ರ ಪ್ರಕಾರವಾಗಿ ಇಸ್ರಾಯೇಲ್ಯರು ಜೆಕರ್ಯನ ಪ್ರವಾದನೆಯ ಸೇವೆಗಾಗಿ 30 ಬೆಳ್ಳಿಯ ನಾಣ್ಯಗಳನ್ನು ಕೊಡುತ್ತಿದ್ದರು. ಆದರೆ ದೇವರು ಪ್ರವಾದಿಗೆ ಹೇಳಿದ್ದೇನೆಂದರೆ, ಈ ಹಣವನ್ನು ತಿರುಗಿ [72]ಹುಂಡಿಗೆ ಹಾಕಿ ಬಿಡು. ಆದ್ದರಿಂದ ಜೆಕರ್ಯನು ಈ 30 ಬೆಳ್ಳಿಯ ನಾಣ್ಯಗಳನ್ನು ದೇವಾಲಯದ ಹುಂಡಿಗೆ ಹಾಕಿ ಬಿಟ್ಟನು (ಜೆಕರ್ಯ 11:13). ಇದೇ ರೀತಿಯಾಗಿ ಯೂದನು ತಾನು ತೆಗೆದುಕೊಂಡ 30 ಬೆಳ್ಳಿಯ ನಾಣ್ಯವನ್ನು ದೇವಾಲಯದಲ್ಲಿ ಬಿಸಾಕಿದನು (ವಚನ 5) ಮತ್ತು ಈ ಹಣವು **ಕುಂಬಾರನ ಹೊಲವನ್ನು** ಕೊಂಡುಕೊಳ್ಳುವುದಕ್ಕೆ ಉಪಯೋಗಿಸಲ್ಪಟ್ಟಿತು.

ಯೆರೆಮೀಯ 32:8-9ರ ಪ್ರಕಾರವಾಗಿ ಯೆರೆಮೀಯನು **17 ಬೆಳ್ಳಿಯ ನಾಣ್ಯಗಳನ್ನು** ಕೊಟ್ಟು ಹೊಲವನ್ನು ಕೊಂಡು ಕೊಂಡನು. ಇದೇ ರೀತಿಯಾಗಿ ಯಾಜಕರು 30 ಬೆಳ್ಳಿಯ ನಾಣ್ಯಗಳಿಂದ ಒಂದು ಹೊಲವನ್ನು ತೆಗೆದುಕೊಂಡರು.

ಮತ್ತಾಯನು, ಹಳೇ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಂತ ಈ ಇಬ್ಬರ ಪ್ರವಾದನೆಗಳು ಯೇಸು ಕ್ರಿಸ್ತನ ಜೀವನದಲ್ಲಿ ಹೇಗೆ ನೆರೆವೇರಿಸ್ಪಟ್ಟವು ಎಂಬುದನ್ನು ತೋರಿಸುವುದಕ್ಕಾಗಿ ಹಳೇ ಒಡಂಬಡಿಕೆಯ ಇವೆರಡು ಪ್ರವಾದನೆಗಳನ್ನು ಒಟ್ಟಾಗಿ ಸೇರಿಸಿ ಬರೆಯುತ್ತಾನೆ.

ಯಾಕೆಂದರೆ ಇದು ಇಸ್ರಾಯೇಲ ಜನರಲ್ಲಿ ಒಬ್ಬ ವ್ಯಕ್ತಿಗೆ ಬೆಲೆ ಕಟ್ಟುವ ಪದ್ಧತಿಯಂತೆ, ಇಸ್ರಾಯೇಲ್ಯರ ಮುಖಂಡರು ಕ್ರಿಸ್ತನಿಗೆ ಕಟ್ಟಿದ ಬೆಲೆಯು **ಮೂವತ್ತು** ಬೆಳ್ಳಿ ನಾಣ್ಯಗಳಾಗಿತ್ತು (ವಚನ.9). ಇವರಿಗೆ ದೇವರ ಮಗನ ಮೌಲ್ಯವು ಕುಂಬಾರನ ಹೊಲ (ಜೀವಹತ್ಯದ ಹೊಲ) ದ ಮೌಲ್ಯದಷ್ಟೆ ಇತ್ತು.

## ಪೀಲಾತನ ಮುಂದೆ ಕ್ರಿಸ್ತನು (27:11-31)

(ಮಾರ್ಕ 15:2-10, ಲೂಕ 23:1-3, 18-25, ಯೋಹಾನ. 19:1-3)

**11-31** ನೋಡಿರಿ. ಮಾರ್ಕ 15:2-20 ಮತ್ತು ವ್ಯಾಖ್ಯಾನ

### ಕ್ರಿಸ್ತನನ್ನು ಶಿಲುಬೆಗೆ ಹಾಕುವುದು (27:32-44)

(ಮಾರ್ಕ 14:21-32, ಲೂಕ 23:26-43, ಯೋಹಾನ 19:17-24)

**32-44** ಮಾರ್ಕ 15:21-32 ಮತ್ತು ವ್ಯಾಖ್ಯಾನವನ್ನು ನೋಡಿರಿ.

### ಕ್ರಿಸ್ತನ ಮರಣ (27:45-56)

(ಮಾರ್ಕ 15:33-41, ಲೂಕ 23:44-49, ಯೋಹಾನ 19:28-30)

**45-56** (ಮಾರ್ಕ 15:33-41, ಮತ್ತು ವ್ಯಾಖ್ಯಾನವನ್ನು ನೋಡಿರಿ.

### ಕ್ರಿಸ್ತನನ್ನು ಸಮಾಧಿ ಮಾಡಿದ್ದು (27:57-61)

(ಮಾರ್ಕ 15:42-47, ಲೂಕ 23:50-56, ಯೋಹಾನ 19:38-42)

**57-61** (ಮಾರ್ಕ 15:42-47 ಮತ್ತು ವ್ಯಾಖ್ಯಾನವನ್ನು ನೋಡಿರಿ.

### ಸಮಾಧಿಗೆ ಕಾವಲು (27:62-66)

**62** ಮರುದಿನ ಸಬ್ಬತ್ತ ದಿನದ ಆಚರಣೆಯ ದಿವಸ [73]ಅಂದರೆ ಸಬ್ಬತ ದಿವಸವಾಗಿತ್ತು. (ಶನಿವಾರ) ಕರ್ತನ ಭೋಜನವು ಸಂಬವಿಸಿದ್ದು ಗುರುವಾರ. ಕ್ರಿಸ್ತನನ್ನು ಶಿಲುಬೆಗೆ ಹಾಕಿದ ಮತ್ತು ಸತ್ತ ನಂತರ ಸಮಾಧಿ ಮಾಡಿದ ಘಟನೆಯು ಸಂಬವಿಸಿದ ದಿನವು ಸಿದ್ದತೆಯ ದಿನವಾದ ಶುಕ್ರವಾರವಾಗಿತ್ತು. ಆಮೇಲೆ ಮರುದಿನ ಶನಿವಾಂದಂದು ಯಹೂದ್ಯರ ಹಿರಿಯರು,ಸಮಾಧಿ ಕಾಯಲು ಹೆಚ್ಚಿನ ರೋಮಾಯ ಸಿಪಾಯಿಗಳನ್ನು ಕೇಳುವುದಕ್ಕಾಗಿ ಪಿಲಾತನ ಬಳಿಗೆ ಹೋದರು

**63-64** ನಾನು ತಿರುಗಿ ಏಳುತ್ತೇನೆ ಎಂದು ಹೇಳಿದ ಯೇಸುವಿನ ಮಾತು ಅವರ ನೆನಪಿನಲ್ಲಿತ್ತು (ಮಾರ್ಕ 8:31, 9:31, 10:34). ಕ್ರಿಸ್ತನು ಒಬ್ಬ ಮೋಸಗಾರನು ಎಂದು ಅವರು ಪರಿಗಣಿಸಿದ್ದರು (ವಚನ 63) ಮಾತ್ರವಲ್ಲ ಆತನ ಶಿಷ್ಯರು ಮೋಸಗಾರರೆಂದು,. ಯಾಕೆಂದರೆ ಅವರು ಬಂದು ಯೇಸುವಿನ ದೇಹವನ್ನು ಸಮಾಧಿಯಿಂದ ಕದ್ದುಕೊಂಡು, ನೋಡಿರಿ ಅವನು ಎದ್ದಿದ್ದಾನೆ ಎಂದು ಹೇಳುವಲ್ಲಿ ಜನರೆಲ್ಲರೂ ಆತನನ್ನು ಮೆಸ್ಸಿಯನು ಎಂದು ನಂಬಿ, ಆತನ ಶಿಷ್ಯರನ್ನು ಹಿಂಬಾಸುವರು ಎಂಬ ಭಾವನೆ ಅವರಲ್ಲಿತ್ತು.ಇದು ಯಹೂದ್ಯರ ಮುಖಂಡರಿಗೆ ಅಪಕೀರ್ತಿ ತರುವಂತಹುದಾಗಿತ್ತು. ಆದುದರಿಂದ ಶಿಷ್ಯರು ಯೇಸುವಿನ ದೇಹವನ್ನು ಸಮಾಧಿಯಿಂದ ಕದಿಯದಿರುವುದನ್ನು ಖಚಿತ ಪಡಿಸಿಕೊಳ್ಳಲು ಅವರು ಬಯಸಿದರು.

ಕೊನೆಯಲ್ಲಿ ಯೇಸುವಾಗಲೀ, ಶಿಷ್ಯರಾಗಲಿ ವಂಚಕರಾಗಲಿಲ್ಲ. ಆದರೆ ಯಹೂದ್ಯರ ಮುಖಂಡರಾದ ತಾವೇ ವಂಚಕರಾಗಿದ್ದರು.ಭಾನುವಾರ ಬೆಳಗಿನ ಜಾವದಲ್ಲಿ ಸಮಾಧಿಯು ಬರಿದಾಗಿರುವುದನ್ನು ಅವರು ಕಾಣುವಾಗ' ಯೇಸುವಿನ ಶಿಷ್ಯರು ಆತನ ದೇಹವನ್ನು ಕಳವು ಮಾಡಿದ್ದಾರೆಂಬ ಸುದ್ದಿಯನ್ನು ಹಬ್ಬಿಸಿದರು. (ಮತ್ತಾಯ 28:12-13).

**65-66** ಆದರೆ ಮತ್ತಾಯನು ಈ ವಚನಗಳಲ್ಲಿ ಅವರು ಹಬ್ಬಿಸಿದ ಸುದ್ದಿಯು ಸುಳ್ಳು ಎಂದು ಸಾಬಿತು ಪಡಿಸುತ್ತಾನೆ. ಯಹೂದ್ಯರು ತಮ್ಮ ದೇವಾಲಯದ ಕಾವಲುಗಾರರನ್ನು ಒಂದು ವೇಳೆ ಆಗಲೇ ನೇಮಿಸಿರ ಬಹುದು. ಕಾವಲುಗಾರರನ್ನು ತೆಗೆದುಕೊಳ್ಳಿರಿ ಎಂಬ ಪಿಲಾತನ ಮಾತುಗಳು ಕೂಡ ನಿಮಗೆ ಕಾವಲು ಗಾರರಿದ್ದಾರೆ ಎಂದು ಸಹಾ ಭಾಷಾಂತರಿಸಲ್ಪಡುವುದು ದೇವಾಲಯದ ಕಾವಲುಗಾರರ ಜೊತೆಗೆ ಇನ್ನೂ ಹೆಚ್ಚಿನ ರೋಮಯ ಸೈನಿಕ ಕಾವಲುಗಾರರನ್ನು ಪಿಲಾತನು ಕೊಟ್ಟನು (ವಚನ 66). ಆದುದರಿಂದ ಶಿಷ್ಯರು ಸಮಾಧಿಯನ್ನು ಒಡೆದು ದೇಹವನ್ನು ಕಳವು ಮಾಡವುದಕ್ಕೆ ಯಾವುದೇ ರೀತಿಯಾದಂತ ಅಸ್ಪದವಿರಲಿಲ್ಲ.

ಮರುದಿನ ಅದೇ ಕಾವಲುಗಾರರು ಕ್ರಿಸ್ತನು ನಿಜವಾಗಿ ಎದ್ದಿದ್ದಾನೆ ಎಂದು ಸಾಕ್ಷಿ ಹೇಳಿದರು. ಮುಚ್ಚಲ್ಪಟ್ಟ ಸಮಾಧಿಯ ಬಳಿಯಲ್ಲಿದ್ದ ಕಾವಲುಗಾರರನ್ನು ಯಹೂದಿ ಮುಖಂಡರು ಕರೆದರು .ಯಹೂದಿ ಮುಖಂಡರು ಅವರಿಗೆ ಹಣವನ್ನು ಕೊಟ್ಟು ಅವರ ಬಾಯಿಯನ್ನು ಮುಚ್ಚಿಸಿದರು (ಮತ್ತಾಯ 28:11-15 ನೋಡಿರಿ).

---

## ಅಧ್ಯಾಯ - 28

### ಪುನರುತ್ಥಾನ (28:1-8)

(ಮಾರ್ಕ 16:1-8, ಲೂಕ 24:1-8, ಯೋಹಾನ 20:1)

**1-8** ನೋಡಿರಿ. ಮಾರ್ಕ 16:1-8 ಮತ್ತು ವ್ಯಾಖ್ಯಾನ

### ಕ್ರಿಸ್ತನು ಸ್ತ್ರೀಯ ರಿಗೆ ಕಾಣಿಸಿಕೊಂಡದ್ದು (28:9-10)

**9-10** ಕ್ರಿಸ್ತನು ಪುನರುತ್ಥಾನವಾದ ನಂತರ ಮೊದಲು ಕಾಣಿಸಿಕೊಂಡದ್ದು ಆತನು ಶಿಲುಬೆಯ ಮೇಲಿದ್ದಾಗ ತನ್ನನ್ನು ನೋಡುತ್ತಿದ್ದಂತ ಮಗ್ದಲದ ಮರಿಯಳಿಗೆ ಮತ್ತು ಯಾಕೋಬನ ತಾಯಿಯಾದ ಮರಿಯಳಿಗೆ.. (ನೋಡಿರಿ ಮಾರ್ಕ 15:40,

ಮತ್ತು ವ್ಯಾಖ್ಯಾನ ). ಪಕ್ಕನೇ ಆತನು ಅವರಿಗೆ ಕಾಣಿಸಿಕೊಂಡನು. ಕ್ರಿಸ್ತನು ಸ್ವತಃಹ ಅಲ್ಲಿಯೇ ಇರುವುದನ್ನು, ಆತನು ಸಾಯದೆ ಇದ್ದದ್ದನ್ನು, ಆತನು ಮೃತ್ಯುವನ್ನು ಜಯಿಸಿದ್ದನ್ನು ಅವರು ನೋಡಿದಾಗ ಅವರಿಗಾದ ಆಶ್ಚರ್ಯ ಮತ್ತು ಸಂತೋಷವನ್ನು ಊಹಿಸಿರಿ.

ಕ್ರಿಸ್ತನು ತಾನು ಸಂದಿಸುವ ಸ್ತಳವಾದ ಗಲಿಲಾಯಕ್ಕೆ ತಕ್ಷಣವೇ ಹೊರಟು ಹೋಗಿ ನೀವು ಈ ಸಂಗತಿಯನ್ನು ಶಿಷ್ಯರಿಗೆ ತಿಳಿಸಿರೆಂದು ಸೂಚಿಸಿದನು. ಕ್ರಿಸ್ತನು ತಾನು ಮಾಡಿದ ವಾಗ್ದಾನವನ್ನು ಬೇಗನೆ ನೆರವೇರಿಸುವೆನೆಂದು ಕೊನೆಯ ಭೋಜನ ಸಮಯದಲ್ಲಿ ಶಿಷ್ಯರಿಗೆ ಹೇಳಿದ್ದನು. (ಮಾರ್ಕ 14:28 ನೋಡಿರಿ). ತಕ್ಷಣವೆ, ಸ್ತ್ರೀಯರು ತಾವು ಹೊಂದಿದ ಅಪ್ಪಣೆಯ ಮರೆಗೆ ಹೋರಟು ಹೋದರು ಮತ್ತು ಶಿಷ್ಯರಿಗೆ ತಿಳಿಸಿದರು (ಯೋಹಾನ 20:10-18 ವ್ಯಾಖ್ಯಾನ ನೋಡಿರಿ).

## ಕಾವಲುಗಾರರ ವರದಿ. (28:11-15)

**11** ಕರ್ತನ ದೂತನು ಸಮಾಧಿಗೆ ಮುಚ್ಚಲ್ಪಟ್ಟ ಕಲ್ಲನ್ನು ಉರುಳಿಸಿದ್ದನ್ನು ಸಮಾಧಿಯನ್ನು ಕಾಯುವುದಕ್ಕೆ ಕಳುಹಿಸಲ್ಪಟ್ಟ ಸಿಪಾಯಿಗಳು ನೊಡಿದರು. (ವಚನ 2-3). ಆಮೇಲೆ ಕಾವಲುಗಾರರು **ಹೆದರಿ, ನಡುಗಿ ಸತ್ತವರ ಹಾಗಾದರು** (ವಚನ 4). ನಂತರ ಅವರು ಎಚ್ಚರಗೊಂಡವರಾಗಿ ಹೋಗಿ ನಡೆದ ವರದಿಯನ್ನು ಮಹಾಯಾಜಕನಿಗೆ ಒಪ್ಪಿಸಿದರು.

**12-13** ಆಗ ಯಹೂದ್ಯ ಶಾಸ್ತ್ರಿಗಳು ಮತ್ತು ಹಿರಿಯರು ಕೂಡಿಕೊಂಡು ಆಲೋಚಿಸಿ, ಆ ಸಿಪಾಯಿಗಳಿಗೆ ತಾವು ಮಲಗಿದ ಸಮಯದಲ್ಲಿ ಶಿಷ್ಯರು ಯೇಸುವಿನ ದೇಹವನ್ನು ಕದ್ದುಕೊಂಡು ಹೋಗಿದ್ದಾರೆಂದು ಸುಳ್ಳು ಹೇಳಲು ಹಣವನ್ನು ಕೊಟ್ಟರು. (ಮತ್ತಾಯ 27:63-64 ವ್ಯಾಖ್ಯಾನ ನೋಡಿರಿ). ಇದು ಒಂದು ಸಣ್ಣ ಸುಳ್ಳೆ ಆಗಿತ್ತು. ಯಾಕೆಂದರೆ ಅವರು ನಿದ್ರಿಸಿದ್ದೆಯಾಗಿದ್ದಲ್ಲಿ ನಡೆದದ್ದನ್ನು ಹೇಗೆ ಹೇಳಿದರು?

**14** ಕಾವಲುಗಾರರು ಕಾವಲು ಕಾಯುತ್ತಿರುವಾಗ ನಿದ್ದೆ ಮಾಡುವುದು ಒಂದು ದೊಡ್ಡ ಅಪರಾಧವಾಗಿತ್ತು. ಯಾರು ಕಾವಲಿನ ಸಮಯದಲ್ಲಿ ಕರ್ತವ್ಯವನ್ನು ನಿರ್ಲಕ್ಷಿಸುತ್ತಾರೋ ಅಂತಹವರಿಗೆ ಮರಣದಂಡನೆ ಶಿಕ್ಷೆ ವಿಧಿಸಲ್ಪಡುತ್ತಿತ್ತು(ಅ.ಕೃ. 12:19).

ಒಂದು ವೇಳೆ ಸಮಾಧಿಗೆ ಕಾವಲಿದ್ದ ರೋಮಾಯ ಸಿಪಾಯಿಗಳು ನಿದ್ರೆಯ ಸಮಯದಲ್ಲಿ ಇದು ನಡೆಯಿತೆಂದು ಪಿಲಾತನಿಗೆ ಹೇಳಿದ್ದರೆ, ಪಿಲಾತನಿಂದ ಬಹು ದೊಡ್ಡ ಅಪಾಯವು ಅವರ ಮೇಲಿರುತ್ತಿತ್ತು. ಸಿಪಾಯಿಗಳು ಮುಂಚಿತವಾಗಿ ಯಾಕೆ ಯಹೂದ್ಯ ಮಹಾಯಾಜಕನ ಬಳಿಗೆ ಹೋದರು?.ಎಂಬುದನ್ನು ಇದು ವಿವರಿಸುತ್ತದೆ. ಪಿಲಾತನು ಒಂದು ವೇಳೆ ಈ ಸುದ್ದಿಯನ್ನು ಕೇಳಿದ್ದಾದರೆ ತಾವು ಅವರನ್ನು ಪಿಲಾತನಿಂದ ರಕ್ಷಿಸುವ ವಾಗ್ದಾನವನ್ನು ಸಿಪಾಯಿಗಳಿಗೆ ಯಹೂದ್ಯ ಹಿರಿಯರು ಮಾಡಿದ್ದರು.ರೋಮಾಯ ಸಿಪಾಯಿಗಳನ್ನು ರಕ್ಷಿಸುತ್ತೇವೆಂಬ ಈ ಹೇಳಿಕೆಯಾದ ಇದು ಕೂಡ ಸಣ್ಣದಾದಂತ ಒಂದು ಸುಳ್ಳು ವಾಗ್ದಾನವಾಗಿತ್ತು.

**15** ಯಾಕೆಂದರೆ ಎಷ್ಟೇ ಆದರೂ ಒಪ್ಪಿಕೊಂಡ ಕಾಣಿಕೆಯನ್ನು ಸ್ವಿಕರಿಸಿದ್ದರಿಂದ ಪಿಲಾತನು ಕೊಡುವಂತ ಶಿಕ್ಷೆಯ ನ್ನು ಹೊಂದುವ ಇಚ್ಚೆಯಿಂದ ಸಿದ್ಧರಾಗಿದ್ದರು. ಹೀಗೆ ಅವರು ಹೊರಟು ಹೋಗಿ, ನಾವು ನಿದ್ರೆಯಲ್ಲಿದ್ದಾಗ ಯೇಸುವಿನ ಶಿಷ್ಯರು ಬಂದು ಆತನ ದೇಹವನ್ನು ಕದ್ದುಕೊಂಡು ಹೋಗಿದ್ದಾರೆಂದು ಸುದ್ಧಿ ಹಬ್ಬಿಸಿದರು. ಬಹಳ ಜನರು ಆ ಕಥೆಯನ್ನು ನಂಬಿದರು. ಮತ್ತಾಯನು ಈ ಸುವಾರ್ತೆಯನ್ನು ಬರೆದಂತ ಆ ಸಮಯದಲ್ಲಿಯು ಇದನ್ನು ನಂಬಿದರು.

## ಮ ಹಾ ಆಜ್ಞೆ. (28:16-20)

**16** ಯಾವಾಗ ಶಿಷ್ಯರು ಸ್ತ್ರೀಯರಿಂದ ಕ್ರಿಸ್ತನು ಎದ್ದಿದ್ದಾನೆಂದು ತಿಳಿದರೋ ತಕ್ಷಣವೆ ಅವರು ಗಲಿಲಾಯಕ್ಕೆ ಹೋಗಲಿಲ್ಲ. ಸ್ತ್ರೀಯರು ಹೇಳಿದ್ದು ನಿಜವಾಗಿದೆಯೋ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಪೇತ್ರ ಮತ್ತು ಯೋಹಾನ ಇವರಿಬ್ಬರೂ ಮೊದಲು ಸಮಾಧಿಗೆ ಹೋದರು (ಲೂಕ 24:9-12, ಯೋಹಾನ 20:1-3). ಆದರೆ ಅವರು ಸ್ತ್ರೀಯರಂತೆಯೇ, ತಾವು ಬರಿದಾದ ಸಮಾಧಿಯನ್ನು ಕಣ್ಣಾರೆ ನೋಡಿದ್ದಾಗ್ಯೂ ಶಿಷ್ಯರೆಲ್ಲರೂ ಯಹೂದ್ಯರಿಗೆ ಭಯಪಟ್ಟವರಾಗಿ ಯೆರುಸಲೇಮಿನಲ್ಲಿ ಅಡಗಿಕೊಳ್ಳುವುದರಲ್ಲಿ ಮುಂದುವರಿದರು. (ಯೋಹಾನ 20:10-19). ಕ್ರಿಸ್ತನು ಅವರಿಗೆ 2 ಸಾರಿ ಕಾಣಿಸಿಕೊಂಡನು (ಲೂಕ 24:36, ಯೋಹಾನ 20:19, 26). ಇದಾದ ನಂತರ 11 ಜನ ಶಿಷ್ಯರು ಯೇಸುವು ಹೇಳಿದ ಗೆಲಿಲಾಯ ಬೆಟ್ಟಕ್ಕೆ ಹೋದರು.

**17-11** ಜನ ಶಿಷ್ಯರು ಯೇಸುವನ್ನು ನೋಡಿದಾಗ ಅವರು ಆತನನ್ನು ಆರಾಧಿಸಿದರು ಆದರೆ ಅವರಲ್ಲಿ **ಕೆಲವರು ಸಂಶಯಪಟ್ಟರು.** ಯಾಕೆಂದರೆ ಅವರಲ್ಲಿ ಸಂಶಯ ಪಟ್ಟವರಲ್ಲಿ ಕೆಲವರು ಮರಣ ಮತ್ತು ಪುನರುತ್ಥಾನವಾದಂದಿನಿಂದ ಕ್ರಿಸ್ತನನ್ನು ನೋಡಿರಲಿಲ್ಲ. ಪೌಲನು, ಆ ಒಂದೆ **ಸಮಯದಲ್ಲಿ ಕ್ರಿಸ್ತನು ಐದು ನೂರಕ್ಕಿಂತ ಹೆಚ್ಚು ಸಹೋದರರಿಗೆ ಕಾಣಿಸಿಕೊಂಡನು** ಎಂದು ಬರೆದನು (1ನೇ ಕೊರಿಂಥ 15:6). ಶಿಷ್ಯರು ಮೊದಲು ಸಂಶಯಪಟ್ಟಂತೆ, ಪ್ರಾರಂಬದಲ್ಲಿ ಈ ಐದು ನೂರು ಜನರೂ **ಸಂಶಯ** ಪಟ್ಟಿರಬಹದು.ಶಿಷ್ಯರು ಪ್ರಾರಂಬದಲ್ಲಿ ತಾವು ಕಂಡದ್ದನ್ನು ಭೂತವೆಂದು ಬಾವಿಸಿದಂತೆ ಇವರು ನೊಡುತ್ತಿರುವಲ್ಲಿ ಭಾವಿಸಿದವರಾಗಿರವಹುದು (ಲೂಕ 24:37).

**18** **ಆ ಮೇಲೆ ಕ್ರಿಸ್ತನು ಅವರ ಬಳಿಗೆ ಬಂದನು** . ಮತ್ತು ಆತನು ಎಂದು ಹೇಳದಂತ ಒಂದು ಆಶ್ಚರ್ಯಕರವಾದ ಸಂಗತಿಗಳನ್ನು ಹೇಳಿದ್ದೇನೆಂದರೆ, ಪರಲೋಕ ಮತ್ತು ಭೂಲೋಕದ ಎಲ್ಲಾ ಅಧಿಕಾರ ನನಗೆ ಕೊಡಲ್ಪಟ್ಟಿದೆ. ಇಲ್ಲ, ಇದನ್ನು ಯಾವ ಸಾಮಾನ್ಯ ಮನುಷ್ಯನು ಕೂಡ ಹೇಳಲು ಸಾಧ್ಯವಿಲ್ಲ. ದೇವರ ಒಬ್ಬನೇ ಮಗನಾದ ಕ್ರಿಸ್ತನು ಮಾತ್ರವೇ ಈ ಘೋಷಣೆಯನ್ನು ಮಾಡಬಲ್ಲನು.

ಒಂದು ಸಾರಿ ಸೈತಾನನು ಬಂದು ಕ್ರಿಸ್ತನಿಗೆ ಭೂಲೋಕದ ಈ ಎಲ್ಲಾ ರಾಜ್ಯಗಳನ್ನು ಕೊಡುತ್ತೇನೆಂದನು (ಮತ್ತಾಯ 4:8-9). ಆದರೆ ಕ್ರಿಸ್ತನು ತನ್ನ ತಂದೆಗೆ ವಿಧೇಯನಾಗಿ ಈ ಭೂಮಿಯ ಮೇಲಿನ ಅಧಿಕಾರ ಮಾತ್ರವಲ್ಲ ಪರಲೋಕದಲ್ಲಿಯೂ ಸರ್ವ ಸೃಷ್ಟಿಯ ಮೇಲೆ ಎಲ್ಲಾ ಅಧಿಕಾರವನ್ನು ಪಡೆದನು. (ಎಫೆಸ 1:20-22, ಫಿಲಿಪ್ಪಿ. 2:9-11ರ ವ್ಯಾಖ್ಯಾನ ನೋಡಿರಿ).

ಆದಿಯಲ್ಲಿಯೂ ಮತ್ತು ಆತನು ಭೂಮಿಗೆ ಬರುವುದಕ್ಕಿಂತ ಮುಂಚಿನಿಂದಲೂ, ಎಲ್ಲಾ ಅಧಿಕಾರವು ಕ್ರಿಸ್ತನದೆ. ಮಾತ್ರವಲ್ಲ ಆತನು ದೇವಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನನಾಗಿರುವುದೆಂಬ ಅಮೂಲ್ಯ ಪದವಿಯನ್ನು........ ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು (ಫಿಲಿಪ್ಪಿ. 2:6-7). ಇನ್ನೊಂದು ರೀತಿಲ್ಲಿ ಹೇಳುವುದಾದರೆ ಕ್ರಿಸ್ತನು ಭೂಲೋಕದಲ್ಲಿರುವಾಗ ತನ್ನ ಅಧಿಕಾರವನ್ನು ಸ್ವಲ್ಪ ಸಮಯ ಬಿಟ್ಟಿದ್ದನು. ಆದರೆ, ಈಗ ಕ್ರಿಸ್ತನು ಪುನರುತ್ಥಾನದ ನಂತರ ತನ್ನ ಅಧಿಕಾರವನ್ನು ತಿರುಗಿ ಪಡೆದನು.

19 ಈ ಕಾರಣದಿಂದ ಕ್ರಿಸ್ತನಿಗೆ ಎಲ್ಲಾ ಅಧಿಕಾರವಿದೆ.ಆದುದರಿಂದ ತನ್ನ ಹಿಂಬಾಲಕರಿಗೆ ಹೇಳುವುದೇನೆಂದರೆ ಎಲ್ಲಾ[74] ದೇಶಗಳಲ್ಲಿ. ಶಿಷ್ಯರನ್ನಾಗಿ ಮಾಡಿರಿ. ಯಾಕೆಂದರೆ ಕ್ರಿಸ್ತನು ಸರ್ವಲೋಕದ ಅಧಿಪತಿಗಿದ್ದಾನೆ, ಲೋಕದ ಪ್ರತಿಯೊಂದು ಮೂಲೆಗೂ ಹೋಗಿ, ಆತನ ಪ್ರಭುತ್ವವನ್ನು ಸ್ಥಾಪಿಸುವುದು ನಮ್ಮ ಕರ್ತವ್ಯವಾಗಿದೆ. ಆತನು ಎಲ್ಲಾ ಜನಾಂಗಗಳ ದೇವರಾಗಿದ್ದಾನೆ. ಆದುದರಿಂದ ನಾವು ಎಲ್ಲಾ ದೇಶಗಳಿಗೆ ಹೋಗಬೇಕು.

ನೀವು ಹೋಗಿ ನನ್ನ ಶಿಷ್ಯರನ್ನಾಗಿ ಮಾಡಿರಿ ಎಂದು ಯೇಸು ಹೇಳಿದನು ಮತ್ತು ಇನ್ನೂ ಹೇಳಿದ್ದೇನೆಂದರೆ ನೀವು ಕಲಿಸುವುದು, ಬೋಧಿಸುವುದು ಮಾತ್ರವಲ್ಲ . ಆದರೆ ಅವರನ್ನು ನನ್ನ ಶಿಷ್ಯರನ್ನಾಗಿ ಮಾಡಿರಿ ಅಂದನು. ಈ ವಚನಗಳಲ್ಲಿರುವ ಸತ್ಯಾಂಶ 18-20ರ ಕ್ರಿಯಾಪದ ಮೂಲ ಗ್ರೀಕ್ ಗ್ರಂಥದಲ್ಲಿರುವ ಕ್ರಿಯಾಪದವು ಮಾಡು ಎಂಬುದಾಗಿರುತ್ತದೆ. ಇನ್ನೊಂದರಲ್ಲಿ ದೀಕ್ಷಾಸ್ನಾನ ಮತ್ತು ಕಲಿಸು ಎಂಬ ಈ ಎಲ್ಲಾ ಕ್ರಿಯಾಪದಗಳು ಸಹಕಾರಿಯಾಗಿವೆ. ಇದರಿಂದ ನಾವು ತಿಳಿದುಕೊಳ್ಳುವುದೇನೆಂದರೆ - ದೊಡ್ಡ ಆಜ್ಞೆಯಲ್ಲಿರುವ ಅತೀ ಪ್ರಾಮುಖ್ಯವಾದ ಮೂಲತತ್ತ್ವವು, ಶಿಷ್ಯರನ್ನಾಗಿ ಮಾಡುವಂತದ್ದು. ಆತನ ಮೇಲೆ ವಿಶ್ವಾಸವಿಟ್ಟಿರುವವರನ್ನು ವೈಯಕ್ತಿಕವಾದ ನಂಬಿಕೆಯಲ್ಲಿ ದೃಡಪಡಿಸಬೇಕು. ಅವರು ಸಂಪೂರ್ಣವಾಗಿ ಪರಿಪಕ್ವತೆಯುಳ್ಳಂತ ಕ್ರೈಸ್ತರಾಗಲು ಸಹಾಯ ಮಾಡಲೇಬೇಕು. ಈ ರೀತಿಯಾಗಿ, ನಾವು ಸಭೆಯನ್ನು ಕಟ್ಟಲು ಶಕ್ತರಾಗುತ್ತೇವೆ. ಹೀಗೆ ಇದು ಬಲವಾಗಿರುತ್ತದೆ ಮತ್ತು ತನ್ನ ಕರ್ತನಿಗೆ' ನಂಬಿಕೆಯುಳ್ಳದ್ದಾಗಿರುತ್ತದೆ.

ನಾವು, ಹೊಸದಾಗಿ ಶಿಷ್ಯರಾದವರಿಗೆ ತಂದೆ, ಮಗ ಮತ್ತು ಪವಿತ್ರಾತ್ಮನ ಹೇಸರಿನಲ್ಲಿ ದೀಕ್ಷಾಸ್ನಾನ ಮಾಡಿಸಬೇಕು ತಂದೆ, ಮಗ ಮತ್ತು ಪವಿತ್ರಾತ್ಮ ಎಲ್ಲರೂ ಒಂದೇ ದೇವರಾಗಿದ್ದಾರೆ. 3 ದೇವರುಗಳಲ್ಲ. ದೇವರು ತ್ರಿಯೇಕತ್ವ ಆಗಿದ್ದಾನೆ. ಆತನು 3 ಸ್ವರೂಪವುಳ್ಳವನು ಅಥವಾ ರೀತಿಯ ಅಸ್ತಿತ್ವವುಳ್ಳವನಾಗಿದ್ದಾನೆ. ಆತನು ಸರ್ವ ಶಕ್ತಿಯುಳ್ಳ ಸೃಷ್ಟಿ ಕರ್ತನು. ಭೂಮಿ ಮತ್ತು ಸ್ವರ್ಗವನ್ನು ಉಂಟುಮಾಡಿದ್ದಾನೆ. ಆತನು ದೇವರ ಮಗನಾಗಿದ್ದಾನೆ. ಕ್ರಿಸ್ತನು, ದೇವರ ನಿಜವಾದ ಅವತಾರವಾಗಿದ್ದಾನೆ. ಆತನು ನಮ್ಮನ್ನು ನಮ್ಮ ಪಾಪಗಳಿಂದ ರಕ್ಷಿಸುವುದಕ್ಕೋಸ್ಕರ ಭೂಮಿಗೆ ಬಂದು ರಕ್ಷಣೆಯ ಮಾರ್ಗವನ್ನು ತೋರಿಸಿದನು. ಮೂರನೆಯದಾಗಿ, ಆತನು ಪವಿತ್ರಾತ್ಮನಾಗಿದ್ದಾನೆ. ನಂಬಿದ ವಿಶ್ವಾಸಿಗಳ ಹೃದಯದಲ್ಲಿ ವಾಸವಾಗಿದ್ದು ಎಂದೂ ನಾಶವಾಗದ ನಿತ್ಯವಾದ ಹೊಸ ಜೀವವನ್ನು ಕೊಡುತ್ತಾನೆ. ಈತ್ರೀಯೇತತ್ವ ದೇವರನ್ನೇ ನಾವು ಆರಾಧಿಸುವಂತದ್ದು: ಆತನ ಹೆಸರಿನ ಮೇಲೆ ದೀಕ್ಷಾಸ್ನಾನ ತೆಗೆದುಕೊಂಡ ನಾವು ಆತನೊಂದಿಗೆ ಸೇರಿದವರಾಗಿದ್ದೇವೆ ಎಂದೇ ಅರ್ಥ. ಆತನ ಹೆಸರಿನಲ್ಲಿ ನಾವು ಯಾವಾಗ ದೀಕ್ಷಾಸ್ನಾನ ತೆಗೆದುಕೊಂಡೆವೋ ಆಗ ನಾವು ಜಗತ್ತಿಗೆ ಹೇಳುವುದೇನೆಂದರೆ, ನಾನು ದೇವರವನು ಮತ್ತು, ಯೇಸು ಕ್ರಿಸ್ತನವನು ಆಗಿದ್ದೇನೆ. (2ನೇ ಕೊರಿಂಥ 13:14 ನ್ನು ನೋಡಿರಿ).

ಕ್ರಿಸ್ತನು ತನ್ನ ಆರಂಭದಲ್ಲಿ ವಿಶೇಷವಾಗಿ ಯಹೂದ್ಯರ ಮದ್ಯದಲ್ಲಿ ಬೋಧನೆಯನ್ನು ಮತ್ತು ಸ್ವಸ್ತತೆಯನ್ನು ಮಾಡಿದನು (ಮತ್ತಾಯ 10:5-6, 15:24 ಮತ್ತು ವ್ಯಾಖ್ಯಾನವನ್ನು ನೋಡಿರಿ). ಆತನು ಮರಣದಿಂದ ಎದ್ದು ಎಲ್ಲ ಸೃಷ್ಟಿಯ ಅಧಿಕಾರ ಹೊಂದಿದನಾಗಿ, ಎಲ್ಲಾ ದೇಶಗಳಿಗೆ ಹೋಗಿ ಸುವಾರ್ತೆಯನ್ನು ಸಾರಿರಿ ಎಂದು ಶಿಷ್ಯರಿಗೆ ಹೇಳಿದನು . ಆದರೂ ಕೂಡ ಮೊದಲು, ಅವರು ಯಹೂದ್ಯರಲ್ಲಿ ಸವೆಯನ್ನು ಆರಂಭಿಸಿದರು. ಶಿಷ್ಯರಾದ ತಾವು ಯಹೂದ್ಯರಾಗಿದ್ದರು. ಎಲ್ಲಾ ಜನಾಂಗಗಳಲ್ಲಿಯೂ ಮತ್ತು ಎಲ್ಲ ಜನರಲ್ಲಿಯೂ ಕ್ರಿಸ್ತನ ಸಭೆಯನ್ನು ಸ್ಥಾಪಿಸಬೇಕು ಎಂದು ಅವರಿಗೆ ಮನವರಿಕೆಯಾಗಲು ಸಮಯ ಹಿಡಿಯಿತು

20 ಶಿಷ್ಯರ ಮುಖ್ಯವಾದ ಕೆಲಸ ಯಾವುದು? ವಿಧೇಯತೆ. ಕ್ರಿಸ್ತನು ತನ್ನ ಹಿಂಬಾಲಕರಿಗೆ ಶಿಷ್ಯರನ್ನು ಮಾಡಿರಿ. ಅವರಿಗೆ ಪ್ರತಿಯೊಂದರಲ್ಲಿಯೂ ವಿಧೇಯತೆಯುಳ್ಳವರಾಗಿರಬೇಕೆಂದು ಕಲಿಸಿರಿ. ಇದು ನಾನು ನಿಮಗೆ ಕೊಟ್ಟ ಆಜ್ಞೆಯಾಗಿದೆ. ಯಾವ ಶಿಷ್ಯನು ವಿಧೇಯತೆಯುಳ್ಳವನಾಗಿರಲಾರನೋ ಅವನು ಶಿಷ್ಯನೇ ಅಲ್ಲ.

ಈ ಒಂದು ದೊಡ್ಡ ಆಜ್ಞೆ ಕೇವಲ 11 ಜನ ಶಿಷ್ಯರಿಗೆ ಮಾತ್ರವಲ್ಲ ಕ್ರಿಸ್ತನನ್ನು ಹಿಂಬಾಲಿಸುವ ಪ್ರತಿಯೊಬ್ಬನಿಗೂ ಈ ಸಮಯದಲ್ಲಿ ಕೊಡಲ್ಪಟ್ಟಿದೆ. ಕ್ರಿಸ್ತನು ತನ್ನ 11 ಜನ ಶಿಷ್ಯರಿಗೆ ಹೇಳಿದ್ದೇನೆಂದರೆ ಹೊಸ ಶಿಷ್ಯರಿಗೆ ಕಲಿಸಿರಿ, ನಾನು ನಿಮಗೆ ಕೊಟ್ಟ ಆಜ್ಞೆಯಲ್ಲಿ ಪ್ರತಿಯೊಂದರಲ್ಲಿಯೂ ವಿಧೇಯರಾಗಿರಬೇಕೆಂದು. ಆಗ ಈ ದೊಡ್ಡ ಆಜ್ಞೆಯು ತನ್ನಷ್ಟಕ್ಕೆ ತಾನೇ ಮುಂದುವರೆಯುವುದು ಪ್ರತಿಯೊಬ್ಬ ಕ್ರೈಸ್ತನ ಕ್ರಿಸ್ತನಿಗೆ ವಿಧೇಯನಾಗಿರಬೇಕು ಮತ್ತು ಎಲ್ಲಾ ದೇಶದ ಜನರನ್ನು ಶಿಷ್ಯರನ್ನಾಗಿ ಮಾಡಬೇಕು. ಕಾರಣವೇನೆಂದರೆ ಈ ದಿವಸಗಳಲ್ಲಿ ಕ್ರಿಸ್ತನನ್ನು ಅರಿಯದ ಎಷ್ಟೋ ಜನರು ಈ ಜಗತ್ತಿನಲ್ಲಿ ಇನ್ನೂಇದ್ದಾರೆ.

ಯಾಕೆಂದರೆ ಎಷ್ಟೋ ಜನ ಕ್ರೈಸ್ತರು ದೇವರಿಗೆ ಅವಿಧೇಯರಾಗಿ ಕ್ರಿಸ್ತನ (ದೇವರ) ದೊಡ್ಡ ಆಜ್ಞೆಯನ್ನು ಮೀರಿದವರಾಗಿದ್ದಾರೆ. (ಸಾಧಾರಣವಾದ ತತ್ತ್ವ ಮತ್ತು ಸಭೆಯ ಗುರಿ ನೋಡಿರಿ).

ಕೊನೆಯದಾಗಿ ಶಿಷ್ಯರಿಗೆ ಕೊಡಲ್ಪಟ್ಟ ಕೊನೆಯ ಹಂಚಿಕೆಗೆ ಕ್ರಿಸ್ತನು ಒಂದು ವಾಗ್ದಾನವನ್ನು ಕೊಟ್ಟಿದ್ದಾನೆ. ನಾನು ಯಾವಾಗಲೂ ನಿಮ್ಮ ಸಂಗಡವಿರುತ್ತೇನೆ. ಮುಂಚೆ ಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆ ನಾನು ನಿಮ್ಮನ್ನು ಅನಾಥರನ್ನಾಗಿ ಬಿಡುವುದಿಲ್ಲ. ನಾನು ನಿಮ್ಮೊಂದಿಗೆ ಬರುತ್ತೇನೆ. ಯಾಕೆಂದರೆ ನಾನಿರುವಲ್ಲಿಯೇ ನೀವು ಇರಬೇಕು. ನಾನು ನನ್ನ ತಂದೆಯಲ್ಲಿಯೂ, ನೀವು ನನ್ನಲ್ಲಿಯೂ ನಾನು ನಿಮ್ಮಲ್ಲಿಯೂ ಇರುವುದನ್ನು ಆ ದಿನದಲ್ಲಿ ತಿಳಿದುಕೊಳ್ಳುವಿರಿ (ಯೋಹಾನ 14:18-20). ಕ್ರಿಸ್ತನು ನಮ್ಮ ಸಂಗಡ ಮಾತ್ರವಲ್ಲ ನಮ್ಮೊಳಗೆ ಇದ್ದಾನೆ. ಆತನ ಪವಿತ್ರಾತ್ಮವು ನಮ್ಮಲ್ಲಿ ವಾಸವಾಗಿರುತ್ತದೆ (ಯೋಹಾನ 14:17). ತನ್ನ ಶಿಷ್ಯರಿಗೆ ಪವಿತ್ರಾತ್ಮನು ಶಕ್ತಿಯನ್ನು ಕೊಡುತ್ತಾನೆ ಮತ್ತು ಆತನಿಗೆ ಸಾಕ್ಷಿಗಳಾಗಿರುತ್ತಾರೆ (ಅ.ಕೃ. 1:8 ವ್ಯಾಖ್ಯಾನ ನೋಡಿರಿ).

ಕ್ರಿಸ್ತನು ನಮ್ಮಲ್ಲಿರುವುದಾದರೆ ಆತನ ಅಧಿಕಾರವು ನಮ್ಮಲ್ಲಿ ಉಂಟು. ಮಿತ್ರರೇ ಎಲ್ಲಾ ಶಕ್ತಿಯೂ ಅಧಿಕಾರವೂ, ಸಕಲ ಸೃಷ್ಟಿಯೂ ಕ್ರಿಸ್ತನಲ್ಲಿ ನಮ್ಮದಾಗಿರುತ್ತದೆ. ಜಗತ್ತಿನಿಂದ ನಾವು ಹೊರಗೆ ಹೋಗುವಾಗ ಕ್ರಿಸ್ತನು ನಮ್ಮೊಂದಿಗೆ ಹೋಗುವನು. ನಾವು ಒಬ್ಬಂಟಿಗರು ಅಲ್ಲವೇ ಅಲ್ಲ. ನಿಜವಾಗಿಯೂ ನಾನು ಯಾವಾಗಲೂ ಲೋಕದ ಕಟ್ಟ ಕಡೆಯವರೆಗೂ ನಿಮ್ಮೊಂದಿಗೆ ಇರುತ್ತೇನೆ.

ಪೇತ್ರನು ಅನ್ಯ ಮತಸ್ಥನ ಮನೆಗೆ ಹೋಗಿ ಸುವಾರ್ತೆ ಸಾರುವುದನ್ನು ಒಪ್ಪಿಕೊಳ್ಳುವಂತೆ ಆತನಿಗೆ ದೇವರು ವಿಶೇಷವಾದಂತಹ ಒಂದು ದರ್ಶನವನ್ನು ಕೊಟ್ಟನು. (ಅ.ಕೃ. 10:9-20). ಆದರೆ ಅವರು ಹಂತ ಹಂತವಾಗಿ ಕ್ರಿಸ್ತನ ಸುವಾರ್ತೆಯನ್ನು ಇಡೀ ಲೋಕಕ್ಕೆ ಹಬ್ಬಿಸಿದರು. ಯೇಸು ಅವರಿಗೆ, ನೀವು ಮೊದಲು ನನಗೆ ಯೆರುಸಲೇಮಿ ನ ಲ್ಲಿಯೂ, ಎಲ್ಲಾ ಯೂದಾಯ ದಲ್ಲಿಯೂ ಸಮಾರ್ಯದಲ್ಲಿಯೂ. ಮತ್ತು ಲೋಕದ ಕಟ್ಟಕಡೆಯವರೆಗೂ ಸಾಕ್ಷಿಗಳಾಗಿ ಇರಬೇಕು (ಅ.ಕೃ. 1:8) ಎಂದು ಹೇಳಿದನು. ಇದರಂತೆಯೆ ಸಂಬವಿಸಿತು (ಮಾರ್ಕ 16:15-18 ಮತ್ತು ವ್ಯಾಖ್ಯಾನವನ್ನುನೋಡಿರಿ.

---

## ಟಿಪ್ಪಣಿ

1 ಯೇಸುಕ್ರಿಸ್ತನ ಕಾಲದಲ್ಲಿ ಅರಾಮಿಯಿಕ್ ಭಾಷೆಯು ಇಸ್ರೇಲ್ ದೇಶದಲ್ಲಿ ಒಂದು ಸಾಮಾನ್ಯವಾದ ಭಾಷೆಯಾಗಿತ್ತು. ಇದು ಸ್ವತಃ ಯೇಸುಕ್ರಿಸ್ತನು ಮಾತನಾಡುತ್ತಿದ್ದಂತಹ ಭಾಷೆಯಾಗಿತ್ತು.)

2 ಗ್ರೀಕ್ ಭಾಷೆ, ಹೊಸ ಒಡಂಬಡಿಕೆಯ ಕಾಲದಲ್ಲಿ ಇದು ಮಧ್ಯ ಪೂರ್ವದ ಹಾಗೂ ಯೂರೋಪ್ ಖಂಡದ ದಕ್ಷಿಣ ಭಾಗದ ದೇಶಗಳಲ್ಲಿದ್ದಂತಹ ವಿದ್ಯಾವಂತ ಜನರು ಮಾತನಾಡುವ ಭಾಷೆಯಾಗಿತ್ತು. ಹೊಸ ಒಡಂಬಡಿಕೆಯ ಗ್ರಂಥಗಳು ಮೂಲತಃ ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟವು. ಈಗಲೂ ಇರುವಂತ ಹೊಸ ಒಡಂಬಡಿಕೆಯ ಎಲ್ಲಾ ಲಿಪಿಯ ಪ್ರತಿಗಳು ಮೂಲತಃ ಗ್ರೀಕ್ ಭಾಷೆಯಲ್ಲಿದ್ದಂತಹ ಮೂಲ ಲಿಪಿಗಳ ನಕಲು ಪ್ರತಿಗಳಾಗಿವೆ (ಗಮನಿಸಿರಿ - ಸಾಮಾನ್ಯ ಲೇಖನಗಳು: ನಾವು ಸತ್ಯವೇದವನ್ನು ಪಡೆದದ್ದು ಹೇಗೆ?)

3 ಹೊಸ ಒಡಂಬಡಿಕೆಯ ಕಾಲದಲ್ಲಿ ಮಧ್ಯಪೂರ್ವದಲ್ಲಿದ್ದಂತಹ ಅಂತಿಯೊಕ್ ಪಟ್ಟಣವು ಮುಂದುವರೆಯಲ್ಪಟ್ಟಂತಹ ಒಂದು ನಗರವಾಗಿತ್ತು.)

4 ಗ್ರೀಕ್ ಭಾಷೆಯಲ್ಲಿ "ಕ್ರಿಸ್ತನು" ಅಂದರೆ "ಅಭಿಷಿಕ್ತನು" ಎಂದು ಅರ್ಥ. ಯಹೂದಿ ಅಥವಾ ಹಿಬ್ರಿಯ ಭಾಷೆಯಲ್ಲಿರುವ "ಮೇಸ್ಸಿಯ" ಎಂಬ ಪದಕ್ಕೆ "ಕ್ರಿಸ್ತ"ನು ಎಂಬಂತಹ ಈ ಪದವು ಸಮನಾಂತರವಾದ ಅರ್ಥವನ್ನು ಕೊಡುತ್ತದೆ.)

5 "ಆದಾಮ" ಅಂದರೆ ಮನುಷ್ಯ ಎಂದು ಅರ್ಥ.)

6 ಈ ಕಾರಣದಿಂದ ಲೂಕನು ಬರೆದ ದಾವಿದನಿಗಿಂತ ಹಿಂದಿನವರ ವಂಶಾವಳಿಯ ದಾಖಲೆ ಮತ್ತು ಮತ್ತಾಯನು ಬರೆದ ವಂಶಾವಳಿಯ ದಾಖಲೆಯಲ್ಲಿ ವ್ಯತ್ಯಾಸವಿಲ್ಲ.)

7 ಯಹೂದ್ಯರ ವಂಶಾವಳಿಯು ವಿಪರೀತವಾದ ಗೊಂದಲದಿಂದ ಕೂಡಿರುವಂತಹುದ್ದಾಗಿದೆ. ದತ್ತುಸ್ವೀಕಾರ ಹೊಂದಿದ ಅನೇಕ ಮಕ್ಕಳು ವಂಶದಲ್ಲಿ ಸೇರ್ಪಡೆಯಾಗಿದ್ದಾರೆ. ಆದ್ದರಿಂದಲೇ ಬೇರೆ ಬೇರೆ ವಂಶದಿಂದ ಬಂದಂತಹವರು ಸಮ್ಮಿಶ್ರ ಸಂತಾನದವರಾಗಿದ್ದು ಕೆಲವೊಂದು ಸಂದರ್ಭದಲ್ಲಿ ಒಂದೇ ವಂಶದಿಂದ ಬಂದಂತಹವರು ಒಬ್ಬರೊಬ್ಬರನ್ನು ಮದುವೆಯಾದರು. ಈ ಕಾರಣದಿಂದಲೇ ಶೆಯಲ್ತಿಯೇಲನ ಮತ್ತು ಜೆರುಬ್ಬಾಬೆಲನ ಹೆಸರುಗಳು ಯೂಸೇಫನ ವಂಶಾವಳಿಯ ದಾಖಲೆಯಲ್ಲಿ ಮತ್ತು ಮರಿಯಳ ವಂಶಾವಳಿಯ ದಾಖಲೆಯಲ್ಲಿ ಕಂಡುಬರುತ್ತವೆ)

8 ಯೇಸುಕ್ರಿಸ್ತನ ಕಾಲದಲ್ಲಿ ಯೆರುಸಲೇಮ್ ನಗರವು, ಯಹೂದ್ಯರ ರಾಷ್ಟ್ರವಾದ ಇಸ್ರಾಯೇಲ್ ದೇಶದ ದಕ್ಷಿಣ ಪ್ರಾಂತ್ಯವಾದ ಯುದಾಯದ ರಾಜಧಾನಿಯಾಗಿತ್ತು. ಈ ದಿನ ಯೆರುಸಲೇಮ್ ನಗರವು ಸುಧಾರಿತ ಇಸ್ರಾಯೇಲ್ ರಾಷ್ಟ್ರದ ಒಂದು ಪ್ರಮುಖ ನಗರವಾಗಿದೆ.)

9 ಹೊಸ ಒಡಂಬಡಿಕೆಯ ಕಾಲದಲ್ಲಿ ರೋಮ್ ಸಾಮ್ರಾಜ್ಯವು ವಿಶ್ವದಲ್ಲಿಯೇ ಒಂದು ಬಲವಾದ ಸಾಮ್ರಾಜ್ಯವಾಗಿತ್ತು. ಮೆಡಿಟರೇನಿಯನ್ (ಕಾರಿ) ಸಮುದ್ರದ ಸುತ್ತಮುತ್ತಲಿನ ಎಲ್ಲಾ ರಾಷ್ಟ್ರಗಳ ಮೇಲೆ ತನ್ನ ಬಲವಾದ ಅಧಿಕಾರದ ಹಿಡಿತವನ್ನು ಹೊಂದಿತು. ಇದರ ರಾಜಧಾನಿ ರೋಮ್ ನಗರವಾಗಿದ್ದು ಈಗ ಇದು ದಕ್ಷಿಣ ಯೂರೋಪ್ ಖಂಡದ ಸುಧಾರಿತ ಇಟಲಿ ರಾಷ್ಟ್ರದ ರಾಜಧಾನಿಯಾಗಿದೆ. ಹೆಚ್ಚಿನ ಚರ್ಚೆಗಾಗಿ ಪದಗಳ ಸಂಗ್ರಹ : ರೋಮ್ ಸಾಮ್ರಾಜ್ಯ ನೋಡಿರಿ.)

10 ಮತ್ತಾಯನು ಸ್ಪಷ್ಟವಾಗಿ ಪ್ರವಾದಿಯಾದ ಮೀಕನ ಪ್ರವಾದನೆಯನ್ನು ಉಲ್ಲೇಕಿಸಿರುವುದಿಲ್ಲ.ಮೀಕ 5:2 ನೇ ವಚನದ ಬಗ್ಗೆ ಖಂಡಿತವಾಗಿ ಆತನು ತನ್ನ ಅಬಿಪ್ರಾಯವನ್ನುತಿಳಿಸುತ್ತಾನೆ..

11 ಬೇರೆ ಬೇರೆ ಪ್ರಾಂತ್ಯಗಳಲ್ಲಿರುವ ಯಹೂದಿಗಳು ಗಲಿಲಾಯ ಪ್ರಾಂತ್ಯದ ಯಹೂದಿಗಳನ್ನು ಕೀಳಾಗಿ ಕಾಯುತ್ತಿದ್ದರು. ವಿದ್ಯೆ ಮತ್ತು ಆಚಾರ ವಿಚಾರಗಳಲ್ಲಿ ಗಲಿಲಾಯದವರು ಇತರೆ ಯಹೂದಿಗಳಿಗಿಂತ ಹಿಂದುಳಿದವರಾಗಿದ್ದರು.)

12 ವಿವರಣೆಯು ಇಲ್ಲಿದೆ, "ಶೋಧನೆಯಲ್ಲಿ ಬಿದ್ದು ಹೋಗುವುದು" ಅಂದರೆ "ಶೋಧನೆಗೆ ಬಲಿ ಅಥವಾ ವಶನಾಗುವುದು" ಅಂದರೆ ಅದೇ ಪಾಪ ಎಂದು ಅರ್ಥ.)

13 ಇಸ್ರಾಯೇಲ್ ಮತ್ತು ಐಗುಪ್ತ ದೇಶದ ಮಧ್ಯದಲ್ಲಿರುವ ಭೂಪ್ರದೇಶದಲ್ಲಿ ಸೀನಾಯ್ ಪರ್ವತದ ಮರಳುಗಾಡು ಹಬ್ಬಿದೆ. ಯಹೂದ್ಯರು (ಇಸ್ರಾಯೇಲ್ ಜನಾಂಗ) ಐಗುಪ್ತದೇಶದ ಬಂಧನದಿಂದ ದೇವರಿಂದ ಬಿಡುಗಡೆಗೊಂಡ ನಂತರ, ದೇವರು ಸಿದ್ಧ ಮಾಡಿದ ದೇಶವನ್ನು ಮುಟ್ಟುವುದಕ್ಕೆ ಮೊದಲು ನಲವತ್ತು ವರ್ಷಗಳವರೆಗೆ, ದೇವರು ಇವರನ್ನು ಈ ಮರಳುಗಾಡಿನಲ್ಲಿ ಅಲೆಯುವಂತೆ ಮಾಡಿದನು. ಈ ದಿನಗಳಲ್ಲಿ ಈ ಭೂಪ್ರದೇಶವು ಮುಂದುವರಿದ (ಸುಧಾರಿಸಲ್ಪಟ್ಟಂತಹ) ಇಸ್ರಾಯೇಲ್ ರಾಷ್ಟ್ರವಾಗಿದೆ.)

14 ಮಧ್ಯಪೂರ್ವದೇಶಗಳಲ್ಲಿ ರೊಟ್ಟಿಯು ಮುಖ್ಯವಾದ ಆಹಾರವಾಗಿದೆ.)

15 ಎಲ್ಲರಿಗೂ ಸಾಮಾನ್ಯವಾಗಿ ಗೊತ್ತಿದ್ದು, ತಪ್ಪಾಗಿ ಅರ್ಥೈಸಿ, ಉಪಯೋಗಿಸುವಂತಹ ಕೀರ್ತನೆ 14:1 ರಲ್ಲಿರುವ ವಾಕ್ಯವನ್ನು ಉದಾಹರಣೆಗಾಗಿ ಇಲ್ಲಿ ಕೊಡಲಾಗಿದೆ. ಈ ರೀತಿಯಾಗಿ ವಾಕ್ಯಗಳು ಬರೆಯಲ್ಪಟ್ಟಿದೆ. ದೇವರು ಇಲ್ಲ. ಆದಾಗ್ಯೂ ಸಂಪೂರ್ಣವಾಗಿ ಓದಿದಾಗ ಮೂರ್ಖನು "ಮೂರ್ಖನು ಇಲ್ಲ" ಎಂದು ತನ್ನ ಮನಸ್ಸಿನಲ್ಲಿ ಅಂದುಕೊಳ್ಳುತ್ತಾನೆ. ಹೀಗೆ ವಾಕ್ಯದ ಒಂದು ಭಾಗವು ಸಂಪೂರ್ಣವಾಗಿ ಇರುವಂತಹ ವಾಕ್ಯವು ಕೊಡುವ ಅರ್ಥಕ್ಕೆ ವಿರೋಧವಾದ ಅರ್ಥವನ್ನೇ ಕೊಡುತ್ತದೆ.)

16 ಲೂಕನ ಸುವಾರ್ತೆಯಲ್ಲಿರುವ ಶೋಧನೆಗಳಾದ 2 ಮತ್ತು 3ನೇ ಶೋಧನೆಗಳು ಹಿಂದೆ ಮುಂದೆಯಾಗಿದೆ (ನೋಡಿರಿ - ಲೂಕ 4:5-12)

17 ದೇವರನ್ನು ಪರಿಶೋಧಿಸುವುದು ಅಥವಾ ಪರೀಕ್ಷಿಸುವುದು ಅಂದರೆ ಲಾಭದಾಸೆಗಾಗಿ ಹಕ್ಕಿನಿಂದ ಆತನನ್ನು ಕೇಳಿ ಪರೀಕ್ಷಿಸುವುದು ಅಥವಾ ಸಮಂಜಸವಲ್ಲದ ರೀತಿಯಲ್ಲಿ ಕೇಳುವುದು.)

18 ಹಳೇ ಒಡಂಬಡಿಕೆಯ ಕಾಲದಲ್ಲಿ ಅಸ್ಸಿರಿಯಾವು ಇಸ್ರಾಯೇಲಿನ ಉತ್ತರ ಭಾಗದಲ್ಲಿ ಒಂದು ಬಲಶಾಲಿಯಾದ ರಾಜ್ಯವಾಗಿತ್ತು.

19 ಸಭಾಮಂದಿರ ಎಂಬುದು ಇಸ್ರಾಯೇಲರು ಕರ್ತನನ್ನು ಆರಾಧಿಸುವುದಕ್ಕೆ ಸೇರುವಂತ ಮನೆಯ ಹೆಸರಾಗಿದೆ.)

20 ದೆಕಪೊಲಿ ಎಂಬುದು ಪೂರ್ವ ಗಲಿಲಾಯದಲ್ಲಿ ಹತ್ತು ಪಟ್ಟಣಗಳಿಂದ ಕೂಡಿದ ಒಂದು ಪ್ರಾಂತ್ಯವಾಗಿದೆ.

21 ಯೋರ್ದಾನ ನದಿಯು ಗಲಿಲಾಯ ಸಮುದ್ರದಿಂದ ದಕ್ಷಿಣಕ್ಕೆ ಹರಿಯುವ ಒಂದು ಮುಖ್ಯವಾದ ನದಿಯಾಗಿದೆ. ಈಗಿನ ಇಸ್ರಾಯೇಲ್ ರಾಷ್ಟ್ರದ ಪೂರ್ವದಿಕ್ಕಿನ ಗಡಿಭಾಗದಲ್ಲಿಹುಟ್ಟಿದೆ

22 ಏನೇ ಆದರೂ ಕಾಲದಿಂದ ಕಾಲಕ್ಕೆ ನಿಜವಾದ ಕ್ರೈಸ್ತರು ಪಾಪದಲ್ಲಿ ಬೀಳುವರು . ಅಂತಹ ಸಮಯದಲ್ಲಿ ಅವರ ಬಹಿರಂಗ ಕ್ರೀಯೆಗಳು (ಕಾರ್ಯವು) ಬಹು ಕೆಟ್ಟದ್ದಾಗಿರಬಹುದು. ಆದರೆ ನಿಜವಾದ ಕ್ರೈಸ್ತನು ತಕ್ಷಣವೇ ಪಶ್ಚಾತ್ತಾಪ ಪಟ್ಟು ಶುದ್ಧನಾಗುವನು

23 ಅವಿಶ್ವಾಸಿಗಳ ಜೀವಿತವು ದೂರದಿಂದ ನೀತಿಯಂತೆ ಕಾಣು ವುದು ಆದರೆ ಅವರನ್ನು ಹತ್ತಿರದಿಂದ ನೋಡಲಾಗಿ ಅವರ ಜೀವಿತದಲ್ಲಿ ಪವಿತ್ರಾತ್ಮನ ಫಲಗಳನ್ನು ಕಾಣುವುದೇ ಇಲ್ಲ.)

24 ಲೌಕಿಕ ಜನರು ದೇವರ ಮೇಲಿನ ಪ್ರೀತಿಗಿಂತ, ಲೋಕದಲ್ಲಿರುವ ವಸ್ತುಗಳನ್ನೇ ಹೆಚ್ಚಾಗಿ ಪ್ರೀತಿಸುವವರಾಗಿದ್ದಾರೆ.)

25 ಹಳೇ ಒಡಂಬಡಿಕೆಯ ಪ್ರವಾದಿಗಳು ಕೇವಲ ಭವಿಷ್ಯವನ್ನು ನುಡಿಯಲಿಲ್ಲ. ಅವರು ದೇವರ ಮಾತುಗಳನ್ನು ಯಹುದ್ಯ ಜನರೊಂದಿಗೆ ಮಾತನಾಡಿದರು. ಅವರು ದೇವರ ಬಾಯಿಂದ ಬರುವ ಮಾತಿನಂತೆ ವರ್ತಿಸಿದರು. ದೇವರು ಅವರಿಗೆ ಕೊಟ್ಟ ತನ್ನ ಆಜ್ಞೆಗಳನ್ನು ಮತ್ತು ಎಚ್ಚರಿಕೆಯನ್ನು ಜನರಿಗೆ ತಿಳಿಸಿದರು. ಹೀಗೆ ಸತ್ಯವೇದದಲ್ಲಿ ಪ್ರವಾದಿ ಎಂಬ ಶಬ್ದದ ಅರ್ಥವು ಹೆಚ್ಚಾಗಿ ಭವಿಷ್ಯವನ್ನು ಹೇಳುವವ ಎಂಬುದಾಗಿ ಉಂಟು.)

26 ಹೊಸ ಒಡಂಬಡಿಕೆಯ ಕಾಲದಲ್ಲಿ ಮಧ್ಯ ಏಶಿಯಾ ಖಂಡದಲ್ಲಿ ಉಪ್ಪನ್ನು ಗೊಬ್ಬರವನ್ನಾಗಿ ಉಪಯೋಗಿಸುತ್ತಿದ್ದರು.)

27 ಹಳೇ ಒಡಂಬಡಿಕೆಯ ಮೊದಲಿನ ಐದು ಪುಸ್ತಕಗಳು ಧರ್ಮಶಾಸ್ತ್ರ ಎಂದು ಕರೆಯಲ್ಪಡುತ್ತವೆ. ಧರ್ಮಶಾಸ್ತ್ರವು ಯಹೂದ್ಯರಿಗೆ ದೇವರಿಂದ ಕೊಡಲ್ಪಟ್ಟಿತು. ಇದು ಹತ್ತು ಆಜ್ಞೆಗಳನ್ನು ಒಳಗೊಂಡಿದೆ (ವಿಮೋಚನಾಕಾಂಡ:20:1-17). ಮಾತ್ರವಲ್ಲ ಇದು ಇನ್ನು ಬೇರೆ ಕಟ್ಟಳೆ(ಕಾನೂನು)ಗಳಿಂದ ಕೂಡಿದ್ದಾಗಿದೆ. ಈ ಧರ್ಮಶಾಸ್ತ್ರವನ್ನು ಹಿಂಬಾಲಿಸುವುದರಿಂದ ನಾವು ರಕ್ಷಿಸಲ್ಪಡುತ್ತೇವೆಂದು ನಂಬಿದ್ದರು. ಮುಂದಿನ ವಿವರಣೆಯನ್ನು ಶಬ್ದಗಳ ಪಟ್ಟಿಯ ಲ್ಲಿರುವ ಧರ್ಮಶಾಸ್ತ್ರ ನೋಡಿರಿ. (Next Para) ಹಳೇ ಒಡಂಬಡಿಕೆಯಲ್ಲಿ ಯಹೂದ್ಯ ಜನರ ಮತ್ತು ಯಹೂದ್ಯ ಪ್ರವಾದಿಗಳು ಬರೆದ ಗ್ರಂಥಗಳು ಐತಿಹಾಸಿಕವಾಗಿ ಹೊಂದಿಕೊಂಡಿರುವುದನ್ನು ನಮ್ಮ ನೆನಪಿಗೆ ತರುತ್ತದೆ.ಆದುದರಿಂದ ಸಂಪೂರ್ಣ ಹಳೇ ಒಡಂಬಡಿಕೆಯು. ಧರ್ಮಶಾಸ್ತ್ರ ಮತ್ತು ಪ್ರವಾದನೆಗಳೆಂದು ಕರೆಯಲ್ಪಡುತ್ತವೆ.)

28 ಹೊಸ ಒಡಂಬಡಿಕೆಯ ನಿಜವಾದ ಅರ್ಥವು ಹೊಸ ಒಪ್ಪಂದವಾಗಿದೆ.. ಈ ಹೊಸ ಒಡಂಬಡಿಕೆಯು ದೇವರು ಯೇಸುಕ್ರಿಸ್ತನ ಮೂಲಕ ಜನರೊಂದಿಗೆ ಮಾಡಿಕೊಂಡಂತಹ ಹೊಸ ಒಪ್ಪಂದವಾಗಿದೆ.

29 ಸೂಚನೆಯಂತೆ ತಪ್ಪು ಮಾಡುವುದು ತಪ್ಪು ಮಾಡಿದಂತೆಯೇ. ನೀವು ತಿಳಿದಿರುವಂತೆ ಇನ್ನೊಬ್ಬ ವ್ಯಕ್ತಿಯು ನಿಮ್ಮಿಂದ ದುಃಖಿಪಡುವುದಾದರೆ ಅಥವಾ ನಕಾರಾತ್ಮಕ ರೀತಿಯಲ್ಲಿ ವೇದನೆಯನ್ನು ಪಡುವುದಾದರೆ ಕ್ರಿಸ್ತನು ಹೇಳುತ್ತಾನೆ. ನೀವು ಮೊದಲು ಹೋಗಿ ನಿನ್ನ ಸಹೋದರನೊಡನೆ ಒಂದಾಗು (ವಚನ 24)

30 ದೇವರು ಮತ್ತು ಕ್ರಿಸ್ತನು ಒಂದೇಯಾಗಿದ್ದಾರೆ. ಯೋಹಾನ 10:30 ನೋಡಿರಿ.)

31 ಕೆಲವೊಂದು ವಿಶೇಷವಾದ ಸಮಯಗಳಲ್ಲಿ ಪವಿತ್ರಾತ್ಮನು ನಮ್ಮನ್ನು ಹೆಚ್ಚಾಗಿ ಪ್ರಾರ್ಥಿಸಲು ನಡೆಸುತ್ತಾನೆ. ಕರ್ತನು ತನ್ನ 12 ಜನ ಶಿಷ್ಯರನ್ನು ಹುಡುಕಲು ಇಡೀ ರಾತ್ರಿ ಪ್ರಾರ್ಥಿಸಿದನು (ಲೂಕ 6:12-13). ಹೆಚ್ಚಾಗಿ ಇಂತಹ ಸನ್ನಿವೇಶಗಳಲ್ಲಿ ಇದರ ಅವಶ್ಯಕತೆ ಇರವುದಿಲ್ಲ

32 ಹೊಸ ಒಡಂಬಡಿಕೆಯ ಮೂಲಕೃತಿಗಳು ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟಿವೆ.)

33 ನಾವು ಮಕ್ಕಳನ್ನು ಪ್ರೀತಿಸಲೇಬೇಕು. ನಮಗೋಸ್ಕರವಾಗಿ ಅಲ್ಲ ಮಕ್ಕಳಿಗೋಸ್ಕರವಾಗಿ ಪ್ರೀತಿಸಬೇಕು. ನಾವು ಮಕ್ಕಳನ್ನು ಪ್ರೀತಿಸುವುದಿಲ್ಲ. ಯಾಕೆಂದರೆ ಅದರಿಂದ ಯಾವ ಲಾಭವೂ ಇಲ್ಲ. ಇದು ಸ್ವಾರ್ಥತೆಯ ಪ್ರೀತಿ. ಇದು ನಿಜವಾಗಿಯೂ ನಮ್ಮ ಸ್ವಾರ್ಥ ಪ್ರೀತಿಯಿಂದಾಗಿದೆ.)

34 ಅವನ ಜೀವಿತದ ಒಂದು ಗಳಿಗೆ ಎಂಬುದಕ್ಕೆ ಬದಲಾಗಿ ಅವನ ಎತ್ತರದ ಗೇಣುದ್ದ ಎಂಬುದಾಗಿ ಕೇಲವೊಂದು ಸತ್ಯವೇದಗಳಲ್ಲಿದೆ. ಈ ಪದ ಪುಂಜವನ್ನು ಗ್ರಿಕ್ ಭಾಷೆಯಲ್ಲಿ ಯಾವುದಕ್ಕಾದರು ಅನ್ವಯಿಸಿಕೊಳ್ಳಬಹುದು.ಆದಾಗ್ಯೂ ಇದು ಆತನ ಜೀವಿತದವದಿಗೆ ಒಂದು ಗಂಟೆ ಅಥವಾ ಗಳಿಗೆ ಸೇರಿಸು ಎಂಬ ಪದ ಪುಂಜಕ್ಕೆ ಸರಿ ಹೊಂದುತ್ತದೆ.ಜನರು ತಮ್ಮ ದೇಹದ ಎತ್ತರದ ಬಗ್ಗೆಗಿಂತಲೂ ಹೇಚ್ಚಾಗಿ ತಮ್ಮ ಜೀವಿತದ ಅವದಿಯ ಹೇಚ್ಚಿಸುವಿಕೆಯ ಬಗ್ಗೆಹೇಚ್ಚು ಚಿಂತಿಸುತ್ತಾರೆ.

35 ಪುಟ.ಯೇಸು ಕ್ರಿಸ್ತನ ಕಾಲದಲ್ಲಿ ಯೆಹೂದ್ಯರು ಮತ್ತು ಯೆಹೂದ್ಯಮತಾವಲಂಬಿಗಾಗಿದ್ದಂತ ಅನ್ಯಜನರು ಮಾತ್ರ ಒಬ್ಬನೇ ಸತ್ಯದೇವರಲ್ಲಿನಂಬಿಕೆಯನ್ನಿಟ್ಟಿದ್ದರು.

36 ದೇವರು ಕ್ರಿಸ್ತನೂ ಮತ್ತು ಪವಿತ್ರಾತ್ಮನು ಒಂದೇ ಆಗಿದ್ದಾರೆ (ಪವಿತ್ರಾತ್ಮ ವಿಷಯವಾಗಿ ಬರೆದ ಸಾಧಾರಣ ಟಿಪ್ಪಣಿಯನ್ನು ನೋಡಿರಿ) ಪವಿತ್ರಾತ್ಮನು ದೇವರ ಆತ್ಮವಾಗಿರುತ್ತಾನೆ. ಆದುದರಿಂದ ಪವಿತ್ರಾತ್ಮನು ಕ್ರಿಸ್ತನ ಆತ್ಮನೂ ಆಗಿದ್ದಾನೆ.

37 ಧರ್ಮಶಾಸ್ತ್ರ ಮತ್ತು ಪ್ರವಾದಿಗಳು ಎಂಬುದಕ್ಕೆ ಇನ್ನೊಂದು ಅರ್ಥವು ಹಳೆಯ ಒಡಂಬಡಿಕೆ ಎಂದು ಇರುತ್ತದೆ. ಹಳೇ ಒಡಂಬಡಿಕೆಯ ಮೊದಲನೆಯ ಐದು ಪುಸ್ತಕಗಳು ಧರ್ಮಶಾಸ್ತ್ರ ಎಂದು ಕರೆಯಲ್ಪಡುತ್ತದೆ. ಮುಂದಿನ ವಿಚಾರವನ್ನು ಮತ್ತಾಯ 5:17ರ ವ್ಯಾಖ್ಯಾನದಲ್ಲಿ, ಕೆಳಗಿನ ಟಿಪ್ಪಣಿಯಲ್ಲಿ ನೋಡಿರಿ.)

38 ಯೋಹಾನ 15:16ರಲ್ಲಿ "ಫಲ" ಅನ್ನುವಂತಹ ಶಬ್ದವು ಹೊಸ ವಿಶ್ವಾಸಿಗಳನ್ನು ಸೂಚಿಸುತ್ತದೆ. ಫಲ ಬಿಡುವುದು ಎಂಬುದು ಕೂಡಾ ನಮ್ಮ ಸಾಕ್ಷಿಗಳ ಮೂಲಕವಾಗಿ ಇತರರನ್ನು ಕ್ರಿಸ್ತನ ಬಳಿಗೆ ನಡೆಸುವಂತಹುದಾಗಿದೆ.)

39 ಸತ್ಯವೇದದ ಕಾಲದಲ್ಲಿ ಯಹೂದ್ಯರಲ್ಲಿ ಅನ್ಯರನ್ನು, ಯಹೂದಿಗಳು ದ್ವೇಷಿಸುತ್ತಿದ್ದರು. ಯೇಸುಕ್ರಿಸ್ತನು ಸಹ, ಇತರ ಯಹೂದ್ಯರಂತೆಯೇ ಇರಬಹುದೆಂದು ಭಾವಿಸಿ ಈತನ ಬಳಿಗೆ ನೇರವಾಗಿ ಹೋಗಲು ಭಯಪಡುತ್ತಾನೆ.)

40 ತಾಧಿಪತಿಯ ಆಳನ್ನು ಗುಣಪಡಿಸುವ ಸಂದರ್ಭದಲ್ಲಿ ಯಹೂದ್ಯರ ಹಿರಿಯರು ಮತ್ತು ಸ್ನೇಹಿತರು ಇರುತ್ತಾರೆ ಎಂಬುದನ್ನು ಮತ್ತಾಯನು ತಿಳಿಸುವುದಿಲ್ಲ ಮತ್ತು ಹಾಗೆಯೇ ಈ ಸಂದರ್ಭದಲ್ಲಿ ಶತಾಧಿಪತಿಯೂ ಸ್ವತಃ ಯೇಸುಕ್ರಿಸ್ತನ ಬಳಿಗೆ ಬರುತ್ತಾನೆ ಎಂಬುದನ್ನು ಕೂಡ ತಿಳಿಸುವುದಿಲ್ಲ

ಎಂಬ ವಿಷಯಗಳನ್ನು ಗಮನಿಸಿರಿ. ಇವರಿಬ್ಬರು ತಿಳಿಸಿದಂತಹವುಗಳನ್ನು ಒಟ್ಟಾಗಿ ಸೇರಿಸಿ ಅವಲೋಕಿಸುವಾಗ ಸಂಪೂರ್ಣವಾದ ಚರಿತ್ರೆಯನ್ನು ಗ್ರಹಿಸಿಕೊಳ್ಳುತ್ತೇವೆ. ಈ ಇಬ್ಬರು ಸುವಾರ್ತೆಯನ್ನು ಬರೆಯುವಾಗ, ಯೇಸುಕ್ರಿಸ್ತನ ಜೀವನ ಚರಿತ್ರೆಯನ್ನು ಬರೆಯುವಾಗ ಪ್ರತಿಯೊಂದು ಸಂಗತಿಯ ವಿವರಣೆಯನ್ನು ಕೊಡಲಿಲ್ಲ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಲೇಬೇಕು. ಒಬ್ಬ ಲೇಖಕನು ಒಂದರ ಘಟನೆಯ ಸಂಪೂರ್ಣ ವಿವರ ಕೊಟ್ಟರೆ ಮತ್ತೊಬ್ಬರು ಇನ್ನೊಂದರ ಸಂಪೂರ್ಣವಾದ ವಿವರವನ್ನು ಸೇರಿಸಿರಬೇಕು (ನೋಡಿರಿ : ಯೋಹಾನ 20:30; 21:25).

41 ಈ ಶತಾಧಿಪತಿಗೆ ಕ್ರಿಸ್ತನ ಶಕ್ತಿಯಲ್ಲಿ ಬಹಳ ನಂಬಿಕೆಯಿಟ್ಟಿದ್ದನು. ಈಗ ಆತನು ಕ್ರಿಸ್ತನನ್ನು ನಂಬಲು ಒಂದು ಹೆಜ್ಜೆ ಮುಂದೆ ಹೋಗುತ್ತಾನೆ ಮತ್ತು ಯೇಸುಕ್ರಿಸ್ತನು ದೇವರ ಮಗನಾದ ರಕ್ಷಕನು ಎಂದು ನಂಬುತ್ತಾನೆ.)

42 ಸತ್ಯವೇದದಲ್ಲಿ ಯಹೂದಿಯರಿಗೆ ಇಸ್ರಾಯೇಲರು ಎಂದು ಸರ್ವಸಾಧಾರಣವಾಗಿ ಹೆಸರಿಸಲಾಗಿದೆ. ಈ ಕಾರಣಕ್ಕಾಗಿಯೇ "ಇಸ್ರಾಯೇಲ"ರು ಎಂದರೆ ಯಹೂದ್ಯ ಜನರು ಎಂದು ಅರ್ಥ. ಹೆಚ್ಚಿನ ವಿವರಕ್ಕಾಗಿ, ಶಬ್ದಗಳ ಪಟ್ಟಿಯಲ್ಲಿ ಇಸ್ರಾಯೇಲನ್ನು ನೋಡಿರಿ.)

43 ಇಸ್ರಾಯೇಲರ ಪ್ರದೇಶವಾದ ಯೂದಾಯಕ್ಕೂ ಮತ್ತು ಗಲಿಲಾಯಕ್ಕೂ ಮಧ್ಯದಲ್ಲಿರುವ ಸಮಾರ್ಯ ಎಂಬ ಸ್ಥಳದಲ್ಲಿ ಈ ಸಮಾರ್ಯರು ವಾಸಮಾಡುತ್ತಿದ್ದರು. ಬಹುಕಾಲದ ಹಿಂದೆ ಯಹೂದ್ಯರ ಪುರುಷರು ಅನ್ಯ ಜನಾಂಗದ ಸ್ತ್ರೀಯರನ್ನು ವಿವಾಹವಾಗಿದ್ದರಿಂದ ಜನಿಸಿದ ಇವರು ಸಂಪೂರ್ಣವಾಗಿ ಯಹೂದ್ಯರಾಗಿರದ ಜನಾಂಗವಾಗಿದ್ದರು ಈ ಕಾರಣದಿಂದ ನಿಜವಾದ ಯಹೂದ್ಯರು ಯಾವಾಗಲೂ ಇವರನ್ನು ತಿರಸ್ಕಾರದಿಂದ ಕಾಣುತ್ತಿದ್ದರು (.ಯೋಹಾನ. 4:8-9 ಮತ್ತು ವ್ಯಾಖ್ಯಾನ ನೋಡಿರಿ)

44 ಯೇಸುಕ್ರಿಸ್ತನು ತನ್ನನ್ನು ಮನುಷ್ಯಪುತ್ರ ಎಂದು ಕರೆದುಕೊಳ್ಳುತ್ತಾನೆ (ನೋಡಿರಿ, ಮಾರ್ಕ 2:10 ಮತ್ತು ಅಭಿಪ್ರಾಯ).

45 ಯಹೂದ್ಯರು ಸಾಮಾನ್ಯವಾಗಿ ಸೈತಾನನನ್ನು ಬೆಲ್ಜಬೂಲ ಎಂದು ಕರೆಯುತ್ತಿದ್ದರು.)

46 ಒಬ್ಬನು ನಿಜವಾದ ವಿಶ್ವಾಸಿಯಾಗಿದ್ದುಕೊಂಡು ಸ್ವಲ್ಪ ಕಾಲದವರೆಗೆ ಗುಟ್ಟನ್ನು ಪಾಲನೆ ಮಾಡಿಕೊಂಡು ಬರಲು ಸಾಧ್ಯವಿದೆ. ಪ್ರಥಮ ಹಂತದಲ್ಲಿ ಒಬ್ಬನ ಕ್ರಿಸ್ತೀಯ ಜೀವಿತ ಹಾಗೂ ನಂಬಿಕೆ ಬಲಹೀನತೆಯಿಂದ ಕೂಡಿರುವಂತಹದ್ದಾಗಿರುತ್ತೆ. ಆದರೆ ನಂತರದ ದಿನಗಳಲ್ಲಿ ಪ್ರತಿಯೊಬ್ಬ ಕ್ರೈಸ್ತನು ಬಹಿರಂಗವಾಗಿ ತನ್ನ ನಂಬಿಕೆಯನ್ನು ಅರಿಕೆ ಮಾಡಿಕೊಳ್ಳಲೇಬೇಕು. ಅಥವಾ ಇಲ್ಲದಿದ್ದರೆ ಆತನು ತನ್ನಲ್ಲಿರುವ ನಂಬಿಕೆಯು ನಿಜವಾದದ್ದಲ್ಲವೆಂದು ತೋರಿಸಿದಂತಾಗುತ್ತದೆ. "ಗುಪ್ತ ವಿಶ್ವಾಸಿಗಳು" ಎಂದು ಕರೆಸಿಕೊಂಡಂತಹ ಅರಿಮತಾಯದ ಯೂಸೇಫನು ಮತ್ತು ನೀಕೋದೇಯನು ಇದಕ್ಕೆ ಒಳ್ಳೆಯ ಉದಾಹರಣೆಯಾಗಿದ್ದಾರೆ (ಮಾರ್ಕ 15:42-47; ಯೋಹಾನ 3:1-2 ಮತ್ತು ಅಭಿಪ್ರಾಯಗಳನ್ನು ಗಮನಿಸಿರಿ). ಆದರೆ ಸಂದರ್ಭಕ್ಕನುಸಾರವಾಗಿ ಸ್ವತಃ ತಾವೇ ಮುಂದೆ ಬಂದು ತಾವು ಕ್ರಿಸ್ತನ ಹಿಂಬಾಲಕರು ಎಂಬುದನ್ನು ತೋರಿಸುವುದಕ್ಕೋಸ್ಕರ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ.)

47 "ಮೆಸ್ಸಿಯ" ಹಿಬ್ರಿಯ ಭಾಷೆಯಮಲ್ಲಿ ಕ್ರಿಸ್ತನು ಎಂದು ಅರ್ಥ. ಅಂದರೆ "ಅಭಿಷಿಕ್ತನು".)

48 ಯೇಶಾಯ 61:1ರಲ್ಲಿರುವ ಬಡವ ಎಂಬುದನ್ನು "ದೀನನಾದವನು" ಅಥವಾ "ವ್ಯಥೆಪಡುವವನು" ಎಂದು ಸಹ ಅನುವಾದಿಸಲಾಗಿದೆ.)

49 "ಬಲಾತ್ಕಾರಕ್ಕೆ ಒಳಗಾಗಿದೆ" ಎಂಬುದಕ್ಕೆ ಬದಲಾಗಿ ಬಲಾತ್ಕಾರಕ್ಕೆ ಗುರಿಯಾಗಿದೆ ಅಥವಾ ಆಕ್ರಮಣಗಳಿಗೆ ಒಳಗಾಗಿದೆ ಎಂದು ನವೀಕರಿಸಲ್ಪಟ್ಟಂತಹ ಸತ್ಯವೇದಗಳಲ್ಲಿ ಬರೆಯಲ್ಪಟ್ಟಿದೆ.)

50 ಇಲ್ಲಿ ಧರ್ಮಶಾಸ್ತ್ರಗಳು ಅಂದರೆ ಹಳೆ ಒಡಂಬಡಿಕೆಯ ಮೊದಲ ಐದು ಪುಸ್ತಕಗಳು ಎಂದು ಅರ್ಥ. ಪ್ರವಾದಿಗಳು ಮತ್ತು ಧರ್ಮಶಾಸ್ತ್ರ ಅಂದರೆ ಇಡೀ ಹಳೇ ಒಡಂಬಡಿಕೆ ಎಂದು ಅರ್ಥ ಮಾಡಿಕೊಳ್ಳಬೇಕು.)

51 ಖೊರಿಜಿನ್ ಎಂಬ ಈ ಪಟ್ಟಣವು ಗಲಿಲಾಯ ಸಮುದ್ರದಿಂದ ಎರಡು ಮೈಲಿಗಳ ದೂರದಲ್ಲಿತ್ತು. ಬೇತ್ಸಾಯಿದವು ಇದಕ್ಕೆ ಹತ್ತಿರದಲ್ಲಿತ್ತು. ಖೊರೊಜಿನ್ ಪಟ್ಟಣದಲ್ಲಿ ಯೇಸುಕ್ರಿಸ್ತನು ಮಾಡಿದ ಸೂಚಕ ಕಾರ್ಯಗಳ ಬಗ್ಗೆ ಯಾವ ಮಾಹಿತಿಯು ಇಲ್ಲ. ಇದರಿಂದ, ಯೇಸುಕ್ರಿಸ್ತನು ಮಾಡಿದ ಅನೇಕ ಸೂಚಕಕಾರ್ಯಗಳ ಬಗ್ಗೆ, ನಾಲ್ಕು ಸುವಾರ್ತೆಗಳಲ್ಲಿ ಬರೆಯಲ್ಪಡಲಿಲ್ಲ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬಹುದು. ಯೋಹಾನ 21:25.)

52 ಸತ್ಯವೇದದ ಕಾಲದಲ್ಲಿ ಗೋಣಿತಟ್ಟನ್ನು ಸುತ್ತಿಕೊಳ್ಳುವುದು ಅಥವಾ ಧರಿಸುವುದು ಮತ್ತು ಮುಖ ಅಥವಾ ದೇಹಕ್ಕೆ ಬೂದಿಯನ್ನು ಹಚ್ಚಿಕೊಳ್ಳುವುದು ಮಾನಸಾಂತರಕ್ಕೆ ಗುರುತಾಗಿತ್ತು.)

53 ಯರೇಮಿಯಾ 31:34, ಮತ್ತು ಹಿಬ್ರಿಯಾ 8:12ರಲ್ಲಿ ದೇವರು :"ನಾನು ಅವರ ಪಾಪಗಳನ್ನು ಮತ್ತೆ ನೆನಪಿಗೆ ತರುವುದೇ ಇಲ್ಲವೆಂದು ಹೇಳಿದನು. ನ್ಯಾಯ ತೀರ್ಪಿನ ಆ ದಿನದಲ್ಲಿ, ಕ್ರಿಸ್ತನನ್ನು ನಂಬಿದವರು ಅಪರಾಧಿಗಳೆಂಬ ತೀರ್ಪಿಗೆ ಒಳಗಾಗುವುದಿಲ್ಲ ಎಂಬುದೇ ಇದರ ಅರ್ಥ (ರೋಮ 4:1). ದೇವರು ವಿಶ್ವಾಸಿಗಳಿಗೆ ನ್ಯಾಯ ತೀರಿಸುವಾಗ ಅವರ ಪಾಪಗಳನ್ನು ಗಣನೆಗೆ ತಂದುಕೊಳ್ಳುವುದಿಲ್ಲ. ಅವರ ಪಾಪಗಳನ್ನು ಅಳಿಸಿಹಾಕಿದಂತೆಯು ಮರೆತು ಹೋದಂತೆಯು ಇರುವುದು. ಆದರೆ ವಿಶ್ವಾಸಿಗಳಿಗೆ ಇದೊಂದು ರೀತಿಯ "ನ್ಯಾಯತೀರ್ಪು" ಅಂದರೆ ಭೂಮಿಯ ಮೇಲೆ ಜೀವಿಸಿದ್ದಾನೆ. ನಾವು ಮಾಡಿದ ಪ್ರತಿಯೊಂದಕ್ಕೂ ಪ್ರತಿಫಲವು ದೇವರಿಂದ ದೊರೆಯುವುದು. ದೇವರು ನ್ಯಾಯ ತೀರಿಸುವಾಗ ನಮ್ಮ ಮಾಡಿದಂತಹ ಪ್ರತಿಯೊಂದು ಕಾರ್ಯಗಳನ್ನು ಮತ್ತು ನಾವು ಮಾತನಾಡಿದ ಪ್ರತಿಯೊಂದು ಮಾತುಗಳನ್ನು ಪರೀಕ್ಷಿಸಿ ನಮಗೆ ಪ್ರತಿಫಲವನ್ನು ಕೊಡುತ್ತಾನೆ.

54 ಭೂಮಿಯ ಗರ್ಭದೊಳು ಅಂದರೆ ಸತ್ತವರ ನಿವಾಸ ಅಥವಾ ಪಿತೃಲೋಕ ಎಂದು ಅರ್ಥ.

55 ಸೊಲೊಮೋನನು ಅರಸನಾದ ದಾವೀದನ ಮಗನಾಗಿದ್ದನು. ಆತನು ತನ್ನ ಜ್ಞಾನಕ್ಕೆ ಪ್ರಸಿದ್ಧನಾಗಿದ್ದನು. ಈತನು ಹಳೇ ಒಡಂಬಡಿಕೆಯ ಜ್ಞಾನೋಕ್ತಿಪುಸ್ತಕದಲ್ಲಿರುವ ಜ್ಞಾನೋಕ್ತಿಗಳನ್ನು ಬರೆದನು.

56 ಈ ಸಾಮ್ಯಗಳನ್ನು ಅರ್ಥಮಾಡಿಕೊಳ್ಳಲು ವಿಶೇಷವಾದ ಆತ್ಮೀಕ ಪರಿಜ್ಞಾನದ ಅವಶ್ಯಕತೆಯು ನಮಗೆ ಬೇಕಾಗಿದೆ. ಸತ್ಯವೇದದ ಆಳವಾದ ಅರ್ಥವನ್ನು ಗ್ರಹಿಸಿಕೊಳ್ಳಲು ನಮಗೆ ಸಹಾಯದ ಅಗತ್ಯವಿದೆ. ಪವಿತ್ರಾತ್ಮನು ನಮಗೆ ಈ ಸಹಾಯವನ್ನು ಕೊಡುತ್ತಾನೆ. ನಾವು ಸತ್ಯವೇದವನ್ನು ಅಭ್ಯಸಿಸುವಾಗಲೆಲ್ಲಾ ಪವಿತ್ರಾತ್ಮನು ಆತ್ಮೀಕ ಅರ್ಥವನ್ನು ನಮಗೆ ಕೊಡಲಿ ಎಂದು ಪ್ರಾರ್ಥಿಸಬೇಕು.

57 21ನೇ ವಚನದ ಸಾರಂಶವು ಎಲ್ಲಾ ಮೂಲ ಹಸ್ತಪ್ರತಿಗಳಲ್ಲಿ ಇರುವುದಿಲ್ಲ. ಇದೇ ರೀತಿಯಾದಂತಹ ವಚನವು ಮಾರ್ಕ 9:29ರಲ್ಲಿ ಕಂಡುಬರುತ್ತದೆ.

58 ದ್ರಚ್ಮ ಎಂಬುದು ಗ್ರೀಕ್ ನಾಣ್ಯವಾಗಿದೆ ಈ ನಾಲ್ಕು ನಾಣ್ಯಗಳು ಯೆಹೂದ್ಯರ ಚಕ್ಕ ನಾಣ್ಯನಾದಂತ ಶೆಕೆಲ್‌ಗೆ ಸರಿಸಮ. ಎರಡು ದ್ರಚ್ಮ ಸುಂಕಕ್ಕೆ ಬದಲಾಗಿ, ಕೆಲವೊಂದು ಸತ್ಯವೇದಗಳಲ್ಲಿ ಅರ್ದ ಶೆಕೆಲ್ ಸುಂಕ ಎಂದುಭಾಷಾಂತರಿಸಲ್ಪಟ್ಟಿದೆ.

59 ಮತ್ತಾಯನ ಸುವಾರ್ತೆಯಲ್ಲಿರುವ ಈ 11 ನೆಯ ವಚದ ಸಾರಾಂಶವು ಎಲ್ಲಾ ಪುರಾತನ ಮೂಲ ಲಿಪಿಯ ಹಸ್ತ ಪ್ರತಿಗಳಲ್ಲಿರುವುದಿಲ್ಲ. ಇಂತಹದೆ ವಚನವು ಲೂಕ.19:10 ರಲ್ಲಿ ಕಂಡು ಬರುತ್ತದೆ.

[60] ಉದಾಹರಣೆಗೆ ಒಂದು ವೇಳೆ ನಮ್ಮ ಸಹೋದರರು ಗೊತ್ತಿದ್ದು ಮತ್ತು ಉದ್ದೇಶಪೂರಕವಾಗಿ ನಮ್ಮ ವಿರೋದವಾಗಿ ಪಾಪ ಮಾಡುತ್ತಿದ್ದರೆ ಅಥವಾ ಒಂದು ವೇಳೆ ಅತನು ಮಾಡುತ್ತಿರುವಂತ ಪಾಪವು ಆತನಿಗೆ ಅಥವಾ ಸಭೆಗೆ ಹಾನಿಯನ್ನು ಮಾಡುವಂತ್ತಿದ್ದರೆ ಆಗ ನಾವು ವಚನ15-17 ರ ಪ್ರಕಾರ ಆತನ ಪಾಪವನ್ನು ವಿರೋದಿಸಲು ಕ್ರಮ ತೆಗೆದುಕೊಳ್ಳಬೇಕು.

[61] ಸತ್ಯವೇದದಲ್ಲಿ ಪ್ರಕಟಿಸಿರುವಂತೆ ಅವರ ಪ್ರಾರ್ಥನೆಗಳು ದೇವರ ಚಿತ್ತಕ್ಕೆ ವಿರುದ್ದವಾಗಿರವಾರದು. ಸತ್ವೇದದಲ್ಲಿ ಬರೆದಿರುವುದಕ್ಕೆ ವಿರುದ್ದವಾಗಿ ಪವಿತ್ರಾತ್ಮನು ನಡಿಸುವುದೆ ಇಲ್ಲ.

[62] "ಎಪ್ಪತ್ತು - ಏಳು ಸಾರಿ" ಎಂಬುದಕ್ಕೆ ಬದಲಾಗಿ ಕೆಲವೊಂದು ಮಾದರಿಯ ಸತ್ಯವೇದಗಳಲ್ಲಿ, "ಏಳು - ಎಪ್ಪತ್ತುಸಾರಿ" ಎಂಬುದಾಗಿ ಭಾಷಾಂತರಿಸಲ್ಪಟ್ಟಿದೆ.ಮೂಲ ಗ್ರೀಕ್ ಭಾಶೆಯಲ್ಲಿ ಯಾವ ರೀತಿಯಲ್ಲಾದರು ಇದು ಇರಬಹುದು. ಈ ಎರಡು ಸಂದರ್ಬದಲ್ಲಿ ಭೋದಿಸುವ ಉದ್ದೇಶ ಒಂದೆಯಾಗಿರುತ್ತದೆ.

[63] ಹೊಸ ಒಡಂಬಡಿಕೆಯ ಸಮಯದಲ್ಲಿ ರೋಮನ್ನರ ದೀನಾರ್ ಎಂಬ ಈ ನಾಣ್ಯವು ಸಾಮಾನ್ಯವಾಗಿ ಬಳಕೆಯಲ್ಲಿತ್ತು.

[64] ಸ್ವರ್ಗದಲ್ಲಿ ಎಲ್ಲಾ ವಿಶ್ವಾಸಿಗಳು ಒಂದೆ ರೀತಿಯಾದಂತ ರಕ್ಷಣೆ ಮತ್ತುನಿತ್ಯಜೀವವನ್ನು ಹೊಂದುವರು ಆದರೆ ಅವರ ಭೂಲೋಕದ ಕಾರ್ಯಗಳಿಗೆ ಅನುಗುಣವಾಗಿ ವಿವಿದ ರೀತಿಯ ಬಹುಮಾನಗಳನ್ನು ಹೊಂದುವರು. ಮತ್ತಾಯ16:27,2ನೆ ಕೊರಿಂಥ.5:10 ಮತ್ತುವ್ಯಾಖ್ಯಾನವನ್ನು ನೋಡಿರಿ.

[65] ನಿತ್ಯಜೀವವು ನಿಜವಾದ ಸಂಬಳವಲ್ಲ ಯಾಕೆಂದರೆ ಈ ನಿತ್ಯಜೀವವಾದ ಇದು ಉಚಿತವಾದ ವರದಾನವಾಗಿದೆ. ನಾವು ನಮ್ಮ ನಿತ್ಯಜೀವವನ್ನು ಸಂಪಾದಿಸಲು ಸಾದ್ಯವಿಲ್ಲ.

[66] ಮತ್ತಯನ ಸುವಾರ್ತೆಯ ಈ 14 ನೆಯ ವಚನದ ಸಾರಾಂಶವು ಎಲ್ಲಾ ಪೂರಾತನ ಹಸ್ತಪ್ರತಿಗಳ ಲಿಪಿಯಲ್ಲಿ ಇಲ್ಲ. ಇಂತಹದೆ ವಚನವು ಮಾರ್ಕ.12:40 ರಲ್ಲಿ ಕಂಡು ಬರುತ್ತದ

[67] ಈ ವಚನದಲ್ಲಿರುವಂತ ಜಕರಿಯನ ತಂದೆಯೇ,ಜೇಹೊದಿಯಾ (2ಪೂ. 24:20). ಬರಾಕಿಯ ಎಂಬುವವನು ಇನ್ನೊಬ್ಬ ಜಕರಿಯನ ತಂದೆಯಾಗಿದ್ದಾನೆ. (ಜೆಕರ್ಯ 1:1) ಈ ಎರಡನೆಯ ಜಕರ್ಯನು ಕೊಲ್ಲಲ್ಪಟ್ಟನೊ ಅಥವಾ ಇಲ್ಲವೊ ಎಂಬುದು ಗೊತ್ತಿಲ್ಲ. ಅದುದರಿಂದ ಮತ್ತಾಯನು ಜಕರ್ಯನ ನಿಖರತೆಯಬಗ್ಗೆಸ್ಪಷ್ಟವಾದ ಅಭಿಪ್ರಾಯ ಕೊಟ್ಟಿಲ್ಲ.

[68] ಒಬ್ಬ ವ್ಯಕ್ತಿಯು ಮರಣಿಸುವಾಗ ಅವನ ಈ ಲೋಕದ ಪ್ರಬಾವಕ್ಕೆ ಅಂತ್ಯವಾಗುತ್ತದೆ. ಮರಣದ ನಂತರ ಪಶ್ಚಾತಾಪ ಪಡುವುದಕ್ಕು ಮತ್ತು ದೇವರ ದೃಷ್ಟಿಯಲ್ಲಿ ನೀತಿವಂತನಾಗುವುದಕ್ಕೆ ಯಾವ ಅವಕಾಶವಿರುವುದಿಲ್ಲ.ಇವರು ಜೀವಿಸುತ್ತಿದ್ದಾಗ ನಡೆದುಕೊಂಡ ರೀತಿಗನುಗುಣವಾಗಿ ಲೋಕದ ಅಂತ್ಯದಲ್ಲಿ ನ್ಯಾಯ ತಿರ್ಪೂ ಆಗುವುದು.

[69] ಈ ಗುಣವು ಹಣದ ತೂಕ ಮತ್ತು ಅಳತೆಯನ್ನು ತೋರಿಸುತ್ತದೆ. ಈ ಒಂದು ಗುಣವು ಹತ್ತು ಸಾವಿರ ಡಾಲರಿಗಿಂತ ಹೆಚ್ಚಿನದಾಗಿದೆ.)

[70] ಒಂದು ಮೊಹರಿಯ ಬೆಲೆ, ಆ ಕಾಲದ ಮೂರು ತಿಂಗಳಿನ ಕೂಲಿಗೆ ಸಮವಾಗಿತ್ತು.

[71] ಸಾಧಾರಣವಾಗಿ ಹೊಸ ಒಡಂಬಡಿಕೆಯಲ್ಲಿ ಕ್ರೈಸ್ತರು ಕ್ರಿಸ್ತನ ಸಹೋದರರು ಎಂದು ಕರೆಯಲ್ಪಡುತ್ತಾರೆ. ಕ್ರೈಸ್ತರು ಮಾತ್ರ ದೇವರ ಮಕ್ಕಳು. ಆದರೆ ಈ ವಚನಗಳನ್ನು ಗಮನಿಸುವಾಗ ಕ್ರಿಸ್ತನು ಎಲ್ಲಾ ಜನರನ್ನು ಸಹೋದರರು ಎಂದು ಕರೆದಿದ್ದಾನೆ.ನಾವು ಕೇವಲ ಕ್ರೈಸ್ತರಿಗೆ ಮಾತ್ರ ಪ್ರೀತಿಯನ್ನು ತೋರಿಸದೆ. ಎಲ್ಲ ಜನರಿಗೂ ಪ್ರೀತಿಯನ್ನು ತೋರಿಸಬೇಕು (ಮತ್ತಾಯ 5:44, ಮಾರ್ಕ 12:31 ನೋಡಿರಿ).

[72] ಹುಂಡಿ ಎಂಬ ಶಬ್ದಕ್ಕೆ ಬೊಕ್ಕಸ ಎಂಬುದಾಗಿ ಜಕರ್ಯ 11:13ರಲ್ಲಿ ಭಾಷಾಂತರಿಸಲಾಗಿದೆ.)

[73] ಸಿದ್ಧಪಡಿಸಿಕೊಳ್ಳುವ ದಿನವು ಸಬ್ಬತ ದಿನದ ಹಿಂದಿನ ದಿನವಾಗಿತ್ತು. ಅದು ಸಬ್ಬತ್ತ ದಿನದ ಸಿದ್ಧತೆಯ ಹಿಂದಿನ ದಿನವಾಗಿತ್ತು (ಶನಿವಾರ) ಸಿದ್ಧತೆಯ ದಿನವು ಯಾವಾಗಲೂ ಶುಕ್ರವಾರದ ದಿನವಾಗಿತ್ತು (ಮಾರ್ಕ 14:12ರ ವ್ಯಾಖ್ಯಾನವನ್ನು ನೋಡಿರಿ)

[74] ಗ್ರೀಕ್ ಬಾಷೆಯಲ್ಲಿ ದೇಶ ಎಂಬ ಪದಕ್ಕೆ ನೋಟದಲ್ಲಿಮ ತ್ತು ಸಂಸ್ಕೃತಿ ಯ ಲ್ಲಿ ಒಂದೇ ರೀತಿ ಹೋಲು ವ ಜನರ ಒಂದು ಗುಂಪಿಗೆ ಜನಾಂಗ ಎಂಬ ಪದವನ್ನು ಉಪಯೋಗಿಸುತ್ತಾನೆ.ಯಾವುದೇ ದೇಶದೊಳಗೆ ಇಂತಹ ಅನೇಕ ಜನಾಂಗ ಅಥವಾ ಜನರ ಗುಂಪುಗಳನ್ನು ದೇಶಗಳು.ಎಂದು ಕರೆಯಲ್ಪಡುತ್ತಿದ್ದವು).

# ಮಾರ್ಕನು

## ಪರಿಚಯ

ಮಾರ್ಕನು ಯೇಸುವಿನ ಹನ್ನೆರಡು ಮಂದಿ ಶಿಷ್ಯರಲ್ಲಿ ನಾಯಕನಾಗಿದ್ದ ಪೇತ್ರನ ನಿಕಟ ಸಹವರ್ತಿಯಾಗಿದ್ದನು. ಪೇತ್ರನು ತನ್ನ ಮೊದಲನೆಯ ಪತ್ರಿಕೆ 5:13 ರಲ್ಲಿ ಮಾರ್ಕನನ್ನು "ನನ್ನ ಮಗ" ಎಂದು ಕರೆದನು. ಮಾರ್ಕನು ಅಪೊಸ್ತಲನಾದ ಪೌಲನ ಸಹಪಾಠಿಗಳಲ್ಲೊಬ್ಬನಾದ ಬಾರ್ನಬನ ಸಂಬಂಧಿಯಾಗಿದ್ದನು (ಅ.ಕೃ 12:25, ಕೊಲೊ 4:10, 2 ತಿಮೋಥೆ 4:11).

ಮಾರ್ಕನು ಹನ್ನೆರಡು ಮಂದಿ ಮೂಲ ಶಿಷ್ಯರಲ್ಲೊಬ್ಬನಲ್ಲದಿದ್ದಾಗ್ಯು ಪೇತ್ರನ ಮೂಲಕ ನೇರವಾಗಿ ಯೇಸುವಿನ ಜೀವನದ ಕುರಿತು ಸಾಕಷ್ಟು ವಿಷಯಗಳನ್ನು ತಿಳಿಯಲು ಶಕ್ತನಾಗಿದ್ದನು. ಮಾರ್ಕನು ತನ್ನ ಸುವಾರ್ತೆಯ ಹೆಚ್ಚಿನ ಭಾಗವನ್ನು ಪೇತ್ರನು ತನಗೆ ನೀಡಿದ ಮಾಹಿತಿಯ ಮೇಲೆ ಆಧಾರಮಾಡಿದ್ದಾನೆ. ಮಾರ್ಕನು ತನ್ನ ಸುವಾರ್ತೆಯನ್ನು ರೋಮ ಸಾಮ್ರಾಜ್ಯದ ರಾಜಧಾನಿಯಾದ ರೋಮನಲ್ಲಿ ಬರೆದಿರುತ್ತಾನೆಂದು ಹೆಚ್ಚಿನ ಪಾಲು ಸತ್ಯವೇದ ಪಂಡಿತರು ನಂಬುತ್ತಾರೆ. ಮತ್ತಾಯನು ತನ್ನ ಸುವಾರ್ತೆಯನ್ನು ಮುಖ್ಯವಾಗಿ ಯೆಹೂದ್ಯ ವಾಚಕರಿಗಾಗಿ ಬರೆದಂತೆಯೇ ಮಾರ್ಕನು ತನ್ನ ಸುವಾರ್ತೆಯನ್ನು ರೋಮಾಯರಿಗಾಗಿ ಬರೆದನು. ನಾಲ್ಕು ಸುವಾರ್ತೆಗಳಲ್ಲಿ ಮಾರ್ಕನ ಸುವಾರ್ತೆಯು ಮೊದಲು ಬರೆಯಲ್ಪಟ್ಟಿತು. ಇದು ಕ್ರಿ.ಶಕ 55 ಮತ್ತು ಕ್ರಿ.ಶಕ 65 ರ ನಡುವೆ ಅಂದರೆ ಯೇಸುವಿನ ಮರಣದ ಮೂವತ್ತು ವರ್ಷಗಳ ನಂತರ ಬರೆಯಲ್ಪಟ್ಟಿತು. ಮತ್ತಾಯ ಮತ್ತು ಲೂಕ ಇಬ್ಬರೂ ತಮ್ಮ ಸುವಾರ್ತೆಗಳಲ್ಲಿ ಮಾರ್ಕನಿಂದ ಬರೆಯಲ್ಪಟ್ಟ ಸಾಮಗ್ರಿಯನ್ನು ಉಪಯೋಗಿಸಿದರು. ನಿಜವಾಗಿಯೂ ಹೇಳಬೇಕಾದರೆ ಮತ್ತಾಯನ ಸುವಾರ್ತೆಯು ಹೆಚ್ಚು ಕಡಿಮೆ ಮಾರ್ಕನ ಸುವಾರ್ತೆಯನ್ನೆಲ್ಲಾ ಒಳಗೊಂಡಿದೆ.

## ಹೊರ ರೇಖೆ

ಅ. ಕ್ರಿಸ್ತನ ಸೇವೆಗಾಗಿ ಸಿದ್ಧತೆ (1:1-13)
   1. ಸ್ನಾನಿಕನಾದ ಯೋಹಾನ (1:1-8)
   2. ಯೇಸುವಿನ ದೀಕ್ಷಾಸ್ನಾನ ಮತ್ತು ಶೋಧನೆ (1:9-13)

ಆ. ಗಲಿಲಾಯದಲ್ಲಿ ಯೇಸುವಿನ ಸೇವೆ (1:14-10:52)
   1. ಪ್ರಥಮ ಶಿಷ್ಯರ ಕರೆಯುವಿಕೆ (1:14-20)
   2. ಕಪೆರ್ನೌಮಿನಲ್ಲಿನ ಪ್ರಾರಂಭಿಕ ಸೇವೆ (1:21-45)
   3. ವಿರೋಧಗಳ ಪ್ರಾರಂಭ (2:1-3:12)
   4. ಹನ್ನೆರಡು ಶಿಷ್ಯರ ನೇಮಿಕಾತಿ (3:13-19)
   5. ಯೇಸುವಿನ ವಿರುದ್ಧ ಆಪಾದನೆಗಳು (3:20-35)
   6. ಸಾಮ್ಯಗಳು (4:1-34)
   7. ಮಹತ್ಕಾರ್ಯಗಳು (4:35-5:43)
   8. ಗಲಿಲಾಯದಲ್ಲಿಯೂ, ಆಚೆ ಸೀಮೆಗಳಲ್ಲೂ ಹೆಚ್ಚಿನ ಅದ್ಭುತಗಳು ಹಾಗು ಬೋಧನೆ (6:1-8:26)
   9. ಮೆಸ್ಸಿಯತ್ವ ಹಾಗು ಬಾಧೆ ಮತ್ತು ಸಂಬಂಧಿತ ಚರ್ಚೆಗಳು (8:27-9:50)
   10. ಯೆರೂಸಲೇಮಿಗೆ ಹೋಗುವ ಮಾರ್ಗದಲ್ಲಿ ಹೆಚ್ಚಿನ ಬೋಧನೆಗಳು (10:1-52)

ಇ. ಯೆರೂಸಲೇಮಿನಲ್ಲಿ ಕ್ರಿಸ್ತನ ಸೇವೆ (11:1-13:37)
   1. ಜಯೋತ್ಸಾಹದ ಪ್ರವೇಶ (11:1-26)
   2. ಯೆಹೂದ್ಯ ನಾಯಕರೊಂದಿಗೆ ಕೊನೆಯ ವಿವಾದಗಳು (11:27-12:44)
   3. ಪ್ರವಾದನಾ ಬೋಧನೆ (13:1-37)

ಈ. ಕ್ರಿಸ್ತನ ಶ್ರಮಾಮರಣ ಹಾಗು ಪುನರುತ್ಥಾನ (14:1-16:20)
   1. ಯೇಸು ಅಭಿಷೇಕ ಹೊಂದಿದ್ದು ಹಾಗು ಹಿಡುಕೊಡಲ್ಪಟ್ಟಿದ್ದು (14:1-11)
   2. ಕರ್ತನ ಭೋಜನ (14:12-31)
   3. ಯೇಸುವಿನ ಬಂಧನ ಹಾಗು ನ್ಯಾಯವಿಚಾರಣೆ (14:32-15:20)
   4. ಯೇಸುವಿನ ಮರಣ (15:21-47)
   5. ಯೇಸುವಿನ ಪುನರುತ್ಥಾನ (16:1-20)

## ಅಧ್ಯಾಯ - 1

### ಸ್ನಾನಿಕನಾದ ಯೋಹಾನನು ದಾರಿಯನ್ನು ಸಿದ್ಧಮಾಡುತ್ತಾನೆ (1:1-8)

(ಮತ್ತಾಯ 3:1-6,11, ಲೂಕ 3:3-4,16 ಯೋಹಾನ 1:23,26)

**1** ಮಾರ್ಕನು ತನ್ನ ಸುವಾರ್ತೆಯ ಮೊದಲ ವಚನದಲ್ಲಿಯೇ ಯೇಸು ಕ್ರಿಸ್ತನು ದೇವರ ಮಗನೆಂದು ಪರಿಚಯಿಸುತ್ತಾನೆ (ಮಾರ್ಕ 1:11, 3:11, 9:7, 13:32, 14:60-61). ನಾವು ಯೇಸುವಿನ ಕುರಿತು ಅರ್ಥಮಾಡಿ ಕೊಳ್ಳಬೇಕಾದ ಅತಿ ಪ್ರಾಮುಖ್ಯ ಸಂಗತಿಯೇನೆಂದರೆ ಆತನು ಮಾನವ ಮಾತ್ರವಲ್ಲ ಆದರೆ ದೇವರು ಸಹ ಆಗಿದ್ದಾನೆ. ಆತನು ದೇವರ ಸ್ವಂತ ಮಗನು (ಸಾಮಾನ್ಯ ಲೇಖನ: ಯೇಸು ಕ್ರಿಸ್ತನು ನೋಡಿರಿ). ಆತನಿಗೆ ಮಾನವ ತಂದೆಯಿರಲಿಲ ಆದರೆ ಆತನು ಪವಿತ್ರಾತ್ಮನ ಮೂಲಕ ಹುಟ್ಟಿದ್ದನು (ಮತ್ತಾಯ 1:18,20-21)

**2-3** ಮಾರ್ಕನು ಇಲ್ಲಿ ಪ್ರವಾದಿಯಾದ ಯೇಶಾಯನ ಬರಹದಿಂದ[1] (ಯೇಶಾಯ 40:3), ಹಾಗು ಪ್ರವಾದಿಯಾದ ಮಲಾಕಿಯನ ಬರಹದಿಂದ ಉಲ್ಲೇಖಿಸುತ್ತಾನೆ. ಈ ಹಳೆ ಒಡಂಬಡಿಕೆಯ ಪ್ರವಾದಿಗಳು ಕ್ರಿಸ್ತನ ಬರೋಣವನ್ನು ಪ್ರಕಟಿಸಲು ಮುಂದೂತನಾಗಿ ಬಂದ ಸ್ನಾನಿಕನಾದ ಯೋಹಾನನ ಕುರಿತಾಗಿ ಪ್ರವಾದಿಸಿದರು. ದೇವರು ಪ್ರವಾದಿಗಳ ಮುಖಾಂತರ ಕ್ರಿಸ್ತನಿಗೆ ಹೀಗೆ ಹೇಳುತ್ತಾನೆ: "ನಾನು ನಿನಗೆ ಮುಂದಾಗಿ ನನ್ನ ದೂತನನ್ನು ಕಳುಹಿಸುವೆನು" (ಸ್ನಾನಿಕನಾದ ಯೋಹಾನ). ಯೋಹಾನನು ಯೇಸುವನ್ನು ಸ್ವೀಕರಿಸುವಂತೆ ಜನರ ಹೃದಯಗಳನ್ನು ಸಿದ್ದಮಾಡಲು ಬಂದನು ಮತ್ತು ಅವರು ತಮ್ಮ ಪಾಪಗಳಿಗಾಗಿ ಪಶ್ಚಾತಾಪ ಪಡಬೇಕೆಂಬುದಾಗಿ ಬೋಧಿಸುವದರ ಮೂಲಕ ಇದನ್ನು ಮಾಡಿದನು. (ವಚನ 4)

ಲೂಕನು ತನ್ನ ಸುವಾರ್ತೆಯಲ್ಲಿ ಯೇಶಾಯ 40:3ನ್ನು ಮಾತ್ರವಲ್ಲದೆ ಯೇಶಾಯ 40:4-5 ನ್ನು ಸಹ ಉಲ್ಲೇಖಿಸುತ್ತಾನೆ (ಲೂಕ 3:5-6 ನೋಡಿರಿ). ಯೇಶಾಯನು ಕರ್ತನಾದ ಕ್ರಿಸ್ತನಿಗೆ ದಾರಿಗಳನ್ನು ನೆಟ್ಟಗೆ ಮಾಡಲು ಒಬ್ಬನು ಬರುವನು ಎಂದು ಪ್ರವಾದಿಸಿದನು. ಎಲ್ಲಾ ಹಳ್ಳಕೊಳ್ಳಗಳು ಮುಚ್ಚಲ್ಪಡುವವು, ಎಲ್ಲಾ ಬೆಟ್ಟ–ಗುಡ್ಡಗಳು ತಗ್ಗಿಸಲ್ಪಡುವವು, ಡೊಂಕಾಗಿರುವ ದಾರಿಗಳು ನೀಟಾಗುವವು (ಲೂಕ 3:5).

ಇದರರ್ಥವೇನೆಂದರೆ ಕ್ರಿಸ್ತನು ತರುವಂಥ ರಕ್ಷಣೆಯನ್ನು ಪಡೆದುಕೊಳ್ಳಬೇಕಾದರೆ ತಗ್ಗುಗಳು ಅಂದರೆ ಆತ್ಮೀಕ ಕೊರತೆ (ಉದಾ: ನಂಬಿಕೆ) ಗಳು. ಮುಚ್ಚಲ್ಪಡಬೇಕು. ಬೆಟ್ಟಗುಡ್ಡಗಳ ಹಾಗೆ ಮಾರ್ಗಕ್ಕೆ ತಡೆಯಾಗಿರುವಂತವು ಗಳು ತಗ್ಗಿಸಲ್ಪಡಬೇಕು. ಅಂದರೆ ಗರ್ವ ಅಥವಾ ಸ್ವಸಾಮರ್ಥ್ಯದಲ್ಲಿ ನಂಬಿಕೆ ಇವು ಗಳು ತಗ್ಗಿಸಲ್ಪಡಬೇಕು. ಡೊಂಕು ದಾರಿಗಳಲ್ಲಿ ನಡೆಯುತ್ತಿರುವವರು ನೀಟಾದ ಮಾರ್ಗಗಳಿಗೆ ತಿರುಗಬೇಕು (ಲೂಕ 3:4). ಆಗ ಮಾತ್ರವೇ ಮಾನವ ಜನಾಂಗವೆಲ್ಲಾ ದೇವರ ರಕ್ಷಣೆಯನ್ನು ಕಾಣುವದು (ಲೂಕ 3:6). ರಕ್ಷಣೆಯು ಯೆಹೂದ್ಯರಿಗೆ ಮಾತ್ರವಲ್ಲದೆ ಯೆಹೂದ್ಯೇತರರಿಗೂ ಸಹ ಕೊಡಲ್ಪಡುವದು. ಪಶ್ಚಾತಾಪ ಪಟ್ಟು ನಂಬಿಕೆಯೊಂದಿಗೆ ಕ್ರಿಸ್ತನ ಕಡೆಗೆ ತಿರಿಗಿಕೊಳ್ಳುವದರ ಮೂಲಕ ತಮ್ಮ ಹೃದಯಗಳನ್ನು ಸಿದ್ಧಪಡಿಸಿಕೊಂಡಿರುವ ಎಲ್ಲಾ ಪು ರುಷ ಸ್ತ್ರೀಯರಿಗೂ ರಕ್ಷಣೆಯು ಕೊಡಲ್ಪಡುವದು. ಸ್ನಾನಿಕನಾದ ಯೋಹಾನನ ಜನನವು (ಲೂಕ 1:5-17, 57-60,80).

**4** ಹೀಗೆ ಯೋಹಾನನು ಬಂದು ಜನರಿಗೆ ದೇವರ ಕಡೆಗೆ ತಿರಿಗಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಸಾರಿಹೇಳುತ್ತಾ.... ಯೇಸುವನ್ನು ರಕ್ಷಕನಾಗಿ ಸ್ವೀಕರಿಸಬೇಕಾದರೆ ಒಬ್ಬ ಮನುಷ್ಯನು ತಾನು ಪಾಪಿಯೆಂದು ಗ್ರಹಿಸಿಕೊಂಡು ನಂತರ ತನ್ನ ಪಾಪಕ್ಕಾಗಿ ಪಶ್ಚಾತಾಪ ಪಡಬೇಕು. ದೇವರ ದೃಷ್ಟಿಯಲ್ಲಿ ತನ್ನನ್ನು ಒಬ್ಬ ಪಾಪಿಯೆಂದು ಪರಿಗಣಿಸಿಕೊಳ್ಳದವನು "ನನಗೆ ರಕ್ಷಕನ ಅವಶ್ಯಕತೆಯಿಲ್ಲಾ" ಎಂದು ಯೋಚಿಸುವನು. ಆದರೆ ಪ್ರತಿ ಮನುಷ್ಯನು ಪಾಪಿಯಾಗಿದ್ದಾನೆ (ರೋಮ 3:9-10), ಹಾಗು ಪ್ರತಿ ಮನುಷ್ಯನಿಗೂ ರಕ್ಷಕನೊಬ್ಬನ ಆಗತ್ಯತೆಯಿರುತ್ತದೆ. ಅದುದರಿಂದ ಯೋಹಾನನು ಎಲ್ಲಾ ಮಾನವರನ್ನೂ ಪಶ್ಚಾತಾಪಕ್ಕೆ ಕರೆಯುತ್ತಾನೆ. ಅಂದರೆ ತಮ್ಮಪಾಪಗಳನ್ನು ಒಪ್ಪಿಕೊಂಡು ಅವು ಗಳ ಕಡೆಯಿಂದ ವಿಮುಖನಾಗುವದು. ಆತನ ಸಂದೇಶವೇನಾಗಿತ್ತೆಂದರೆ: ಪರಲೋಕ ರಾಜ್ಯವು ಸಮೀಪವಾಯಿತು ದೇವರ ಕಡೆಗೆ ತಿರುಗಿಕೊಳ್ಳಿರಿ.(ಮತ್ತಾಯ 3:2) ಯೇಸುಕ್ರಿಸ್ತನು ಸ್ವತ: ಇದೇ ಸಂದೇಶವನ್ನು ಬೋಧಿಸಿದನು (ವ:15). ಪಶ್ಚಾತಾಪಪಟ್ಟವರನ್ನು ಯೋಹಾನನು ನೀರಿನಿಂದ ದೀಕ್ಷಾಸ್ನಾನ ಮಾಡಿಸುತ್ತಿದ್ದನು. ಇದು ಅವರ ಪಾಪಗಳು ತೊಳೆಯಲ್ಪಟ್ಟು ಪಾಪದಿಂದ ಕ್ಷಮಿಸಲ್ಪಟ್ಟವರೂ, ಶುದ್ಧರಾದವರೂ ಆಗಿದ್ದಾರೆಂಬುದಕ್ಕೆ ಗುರುತಾಗಿರುತ್ತದೆ (ಸಾಮಾನ್ಯ ಬರಹ:ನೀರಿನ ದೀಕ್ಷಾಸ್ನಾನ ನೋಡಿರಿ).

**5** ಯೂದಾಯ[2] ಸೀಮೆ ಮತ್ತು ಯೆರೂಸಲೇಮಿನ[3] ಪಟ್ಟಣದಿಂದ ಜನರು ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಬಂದರು. ಯೋಹಾನನು ಅವರನ್ನು ಯೋರ್ದಾನ್ ನದಿಯಲ್ಲಿ ದೀಕ್ಷಾಸ್ನಾನ ಮಾಡಿಸಿದನು. ಇದು ಇಸ್ರಾಯೇಲಿನ ಪ್ರಮುಖ ನದಿಯಾಗಿದ್ದು ಆಧುನಿಕ ಇಸ್ರಾಯೇಲಿನ ಪಶ್ಚಿಮ ಗಡಿರೇಖೆಯ ಭಾಗವೊಂದನ್ನು ರೂಪಿಸುತ್ತದೆ. ಯೋರ್ದಾನ ನದಿಯ ಎರಡು ಬದಿಯೂ ಮರುಳಿನ ಬೀಳು ಪ್ರದೇಶವಾಗಿದೆ. ಯೋಹಾನನು ಇಲ್ಲಿಯೇ ವಾಸಿಸಿದನು, ಬೋಧಿಸಿದನು ಮತ್ತು ದೀಕ್ಷಾಸ್ನಾನ ಮಾಡಿಸಿದನು.

**6** ಯೋಹಾನನು ದೇವರ ಪ್ರವಾದಿಯಾಗಿದ್ದು ರಕ್ಷಕನಾದ ಕ್ರಿಸ್ತನ ಬರೋಣವನ್ನು ಪ್ರಕಟಿಸಿದನು. ಒಬ್ಬ ಪ್ರವಾದಿಯಾಗಿ ಆತನು ಪ್ರಾಪಂಚಿಕ ಸುಖಭೋಗಗಳನ್ನು ತೊರೆದನು (ಮತ್ತಾಯ 11:7-9). ಆತನು ಇತರ ಹಳೆ ಒಡಂಬಡಿಕೆಯ ಪ್ರವಾದಿಗಳ

ಹಾಗೆ ಬಡತನದಲ್ಲಿ ಜೀವಿಸಿದನು. ಆತನು ಅತಿ ಒರಟಾದ ಬಟ್ಟೆಗಳನ್ನು ಧರಿಸುತ್ತಿದ್ದನು (2 ಅರಸು 1:8). ಹಾಗು ಅತಿ ಬಡವರು ಮಾತ್ರವೇ ತಿನ್ನುವಂತ ಮಿಡತೆಗಳನ್ನು ತಿನ್ನುತ್ತಿದ್ದನು.

7 ಯೋಹಾನನು, ಎಲ್ಲಾ ಯೆಹೂದ್ಯ ಪ್ರವಾದಿಗಳಿಗಿಂತ ಅತಿ ಶ್ರೇಷ್ಟನೂ, ಬಲಿಷ್ಟನೂ ಆಗಿದ್ದನು (ಮತ್ತಾಯ 11:11) ಆದಾಗ್ಯು ಆತನು ತನ್ನ ಹಿಂದೆ ಬರುವವನ – ಯೇಸುವಿನ – ಕೆರಗಳನ್ನು ಬಿಚ್ಚುವದಕ್ಕು ಯೋಗ್ಯನಾಗಿರಲಿಲ್ಲ. ಯೆಹೂದ್ಯ ಪದ್ದತಿಯ ಪ್ರಕಾರ ಅತಿ ಹೀನ ಗುಲಾಮನೂ ಸಹ ತನ್ನ ಒಡೆಯನ ಪಾದರಕ್ಷೆಗಳನ್ನು ಬಿಚ್ಚಬಾರದಾಗಿತ್ತು. ಗುಲಾಮನೊಬ್ಬನು ಸಹ ಅದನ್ನು ಮಾಡುವದು ಅರ್ಥಹೀನ ಕಾರ್ಯವಾಗಿತ್ತು. ಆದರೆ ಇಲ್ಲಿ ಸ್ತ್ರೀಯಲ್ಲಿ ಹುಟ್ಟಿದ ಶ್ರೆಷ್ಟ ವ್ಯಕ್ತಿಯೊಬ್ಬನು ಯೇಸುವಿಗೆ ಈ ದಿನ ಕಾರ್ಯಗಳನ್ನು ಮಾಡಲು ಯೋಗ್ಯನಾಗಿರಲಿಲ್ಲ, ಯಾಕೆಂದರೆ ಯೇಸು ಕೇವಲ ಮಾನವನಾಗಿರಲಿಲ್ಲ ಆದರೆ ಆತನು ಸ್ವತಃ ದೇವರೇ ಆಗಿದ್ದನು.

8 ಯೋಹಾನನು ನೀರಿನಿಂದ ಮಾತ್ರ ದೀಕ್ಷಾಸ್ನಾನ ಮಾಡಿಸಿದನು. ಆದರೆ ಯೇಸು ಪನಿತ್ರಾತ್ಮನಿಂದ ದೀಕ್ಷಾಸ್ನಾನ ಮಾಡಿಸಿದನು (ಯೇಶಾಯ 44:3 ಯೆಹೆಜ್ಕೇಲ 36:24-27, ಯೋವೇಲ 2:28-32) ಪವಿತ್ರಾತ್ಮನು ದೇವರ ಸ್ವಂತ ಆತ್ಮನು, ಒಬ್ಬ ವ್ಯಕ್ತಿ ಯೇಸುವಿನಲ್ಲಿ ನಂಬಿಕೆಯಿಡುವಾಗ ಪವಿತ್ರಾತ್ಮನು ಅವಳ ಅಥವಾ ಅವನೊಳಗೆ ಪ್ರವೇಶಿಸುತ್ತಾನೆ. ಅಥವಾ ಪವಿತ್ರಾತ್ಮನು ಕ್ರಿಸ್ತನ ಅತ್ಮನೆಂದು ಸಹ ಹೇಳಬಹುದು, ಎರಡೂ ಒಂದೇ ಆಗಿರುತ್ತವೆ. ಯಾಕೆಂದರೆ ಏಕೈಕ ಸತ್ಯ ದೇವರು "ತ್ರೈಯೇಕ ದೇವರಾಗಿರುತ್ತಾನೆ. ಹಾಗೆಂದರೆ ದೇವರು ಮೂರು ರೂಪ ಅಥವಾ ವ್ಯಕ್ತಿಗಳನ್ನು"[4] ಹೊಂದಿದ್ದಾನೆ. ತಂದೆಯಾದ ದೇವರು, ಮಗನಾದ ಯೇಸು, ಹಾಗು ಪವಿತ್ರಾತ್ಮನು. ಈ ಮೂವರು ಒಬ್ಬ ದೇವರಾಗಿದ್ದಾರೆ.

ಆದುದರಿಂದ, ಒಬ್ಬ ವ್ಯಕ್ತಿಯು ಯೇಸುವನ್ನು ಅಂಗೀಕರಿಸಿಕೊಳ್ಳುವಾಗ, ಯೇಸು ಆತನ ಜೀವಿತದಲ್ಲಿ ಪವಿತ್ರಾತ್ಮನ ರೂಪದಲ್ಲಿ ಬರುವನು (ಪ್ರಕ 3:20). ಈ ವಿಧದಲ್ಲಿ ಒಬ್ಬ ಮನುಷ್ಯನು ಹೊಸದಾಗಿ ಹುಟ್ಟುವವನಾಗಿದ್ದಾನೆ (ಯೋಹಾನ 3:20 ಹಾಗು ವ್ಯಾಖ್ಯಾನ ನೋಡಿರಿ). ಪವಿತ್ರಾತ್ಮನ ಮುಖಾಂತರ ಆತನು ನೂತನ ಸೃಷ್ಠಿಯಾಗುತ್ತಾನೆ (2 ಕೊರಿ. 5:17 ಹಾಗು ವ್ಯಾಖ್ಯಾನ ನೋಡಿರಿ). ಮತ್ತು ಪವಿತ್ರಾತ್ಮನ ಮೂಲಕ ಆತನು ಸೇವೆಗಾಗಿ ಅಭಿಷೇಕ ಹಾಗು ಬಲವನ್ನು ಹೊಂದುವನು (ಅ.ಕೃತ್ಯ 1:4-5 ಹಾಗು ವ್ಯಾಖ್ಯಾನ ನೋಡಿರಿ). ವಿಶಾಲವಾಗಿ ಹೇಳುವದಾದರೆ ಪವಿತ್ರಾತ್ಮನಿಂದ ದೀಕ್ಷಾಸ್ನಾನ ಹೊಂದುವು ದೆಂದರೆ ಇದೇ ಆಗಿದೆ (ಸಾಮಾನ್ಯ ಬರಹ: ಪವಿತ್ರಾತ್ಮನ ದೀಕ್ಷಾಸ್ನಾನ ನೋಡಿರಿ).

ಆದುದರಿಂದ ಯೋಹಾನನ ನೀರಿನ ದೀಕ್ಷಾಸ್ನಾನವು ಬಹಿರಂಗದ ಪಾಪಗಳನ್ನು ತಾತ್ಕಾಲಿಕ ಶುಚಿಗೊಳಿಸುವಿಕೆಯಾಗಿತ್ತು. ನೀರು ಮೈಮೇಲೆ ಮಾತ್ರ ಶುಚಿಮಾಡುತ್ತದೆ. ಆದರೆ ಯೇಸು ಪವಿತ್ರಾತ್ಮನ ಮೂಲಕ ಮಾಡಿಸುವ ದೀಕ್ಷಾಸ್ನಾನವು ಅಂತರಂಗದ ಶಾಶ್ವತ ಶುಚಿಗೊ ಳಿಸುವಿಕೆ ಮತ್ತು ಹೃದಯವನ್ನು ಬದಲಾಯಿಸಿ ಅಂತರ್ಯದಲ್ಲಿ ಹೊಸ ಆತ್ಮೀಕ ಜೀವವನ್ನು ಸೃಷ್ಟಿಸುವದಾಗಿದೆ. ಯೋಹಾನನ ನೀರಿನ ದೀಕ್ಷಾಸ್ನಾನದ ಉದ್ದೇಶವು ಮನುಷ್ಯರನ್ನು ಪವಿತ್ರಾತ್ಮನ ಅತಿಶ್ರೇಷ್ಠ ದೀಕ್ಷಾಸ್ನಾನ ಹೊಂದಿಕೊಳ್ಳಲು ಸಿದ್ಧಪಡಿಸುವದೇ ಆಗಿತ್ತು.

ಇದಕ್ಕೆ ಸಂಬಂಧಪಟ್ಟಂತೆ ಮತ್ತಾಯ 3:11 ರಲ್ಲಿ ಮತ್ತಾಯನು ಬರೆಯುವದೇನೆಂದರೆ ಯೇಸು ಪವಿತ್ರಾತ್ಮನಿಂದ ಮಾತ್ರವೇ ಅಲ್ಲ ಆದರೆ ಬೆಂಕಿಯಿಂದಲೂ ದೀಕ್ಷಾಸ್ನಾನ ಮಾಡಿಸುವನು. ಬೆಂಕಿಯೂ ಸಹ ನೀರಿನ ಹಾಗೆ ಶುಚಿಗೊಳಿಸುವ ಒಂದು ಗುರುತಾಗಿದೆ. ಹೊಟ್ಟನ್ನು, ಅಶುದ್ಧತೆಯನ್ನು ಸುಟ್ಟು ಹಾಕುವದು. ನಮ್ಮ ಹಳೆಯ ಪಾಪಸ್ವಭಾವವನ್ನು ಸುಟ್ಟು ಹಾಕುವು ದಾಗಿದೆ (ಮತ್ತಾಯ 3:10,12 1 ಪೇತ್ರ 1:7). ಬೆಂಕಿಯು ದೇವರ ಪ್ರಸನ್ನತೆಯ ಗುರುತಾಗಿದೆ (ಅ.ಕೃತ್ಯ 2:2-3 ಹಾಗು ವ್ಯಾಖ್ಯಾನ ನೋಡಿರಿ). ಅಲ್ಲದೆ ಬೆಂಕಿಯು ನ್ಯಾಯತೀರ್ಪಿನ ಸಂಕೇತವೂ ಆಗಿರುತ್ತದೆ. ಯೇಸುವನ್ನು ಅಂಗೀಕರಿಸಿಕೊಳ್ಳುವವರು ನ್ಯಾಯತೀರ್ಪಿನ ದಿನದಲ್ಲಿ ರಕ್ಷಣೆ ಹೊಂದುವರು. ಯೇಸುವನ್ನು ಅಂಗೀಕರಿಸಿಕೊಳ್ಳದವರು ದಂಡನೆಗೆ ಗುರಿಯಾಗುವರು (ಯೋಹಾನ 3:16-18,36 ಹಾಗು ವ್ಯಾಖ್ಯಾನ ನೋಡಿರಿ).

## ಯೇಸುವಿನ ದೀಕ್ಷಾಸ್ನಾನ ಹಾಗು ಶೋಧನೆ (1:9-13)

(ಮತ್ತಾಯ 3:13-17, ಲೂಕ 3:21-22)

9 ಯೇಸು ನಜರೇತಿನಲ್ಲಿ ಬೆಳೆದನು, ಇದು ಇಸ್ರಾಯೇಲನ ಉತ್ತರ ಪ್ರಾಂತ್ಯದಲ್ಲಿರುವ ಗಲಿಲಾಯದಲ್ಲಿನ ಒಂದು ನಗರವಾಗಿತ್ತು. ಆತನು ಇತರ ಎಲ್ಲಾ ಯೆಹೂದ್ಯರೊಂದಿಗೆ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಬಂದನು. ಯೇಸು ಸ್ವತ: ಯಾವ ಪಾಪವನ್ನು ಹೊಂದಿರಲಿಲ್ಲ (ಇಬ್ರಿಯ 4:14-15). ಆದುದರಿಂದ ಆತನು ತನಗೋಸ್ಕರವಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕಾಗಿರಲಿಲ್ಲ. ದೇವರ ಮಗನಾದ ಯೇಸು ತನ್ನನ್ನು ತಗ್ಗಿಸಿಕೊಂಡನು. ಆತನು ನಮ್ಮ ಪಾಪಗಳನ್ನು ತನ್ನ ಮೇಲೆ ಹೊತ್ತುಕೊಂಡನು. ಆತನು ಬಂದು ನಮ್ಮ ಸ್ಥಾನದಲ್ಲಿ ಪಾಪಕ್ಕಾಗಿ ಮರಣದಂಡನೆಯನ್ನು ಹೊಂದಿದನು. ಆತನು ಅಪರಾಧಿಗಳಲ್ಲಿ ಒಬ್ಬನೆಂದು ಎಣಿಸಲ್ಪಟ್ಟನು. (ಯೇಶಾಯ 53:12) ಮತ್ತಾಯ 3:13-15ರ ಪ್ರಕಾರ, ಯೇಸು ಎಲ್ಲಾ ನೀತಿಯನ್ನು ನೆರವೇರಿಸುವದಕ್ಕಾಗಿ ದೀಕ್ಷಾಸ್ನಾನ ಮಾಡಿಸಿಕೊಂಡನು. ಯೇಸು ಮನುಷ್ಯನ ರೂಪದಲ್ಲಿ ಭೂಮಿಗೆ ಬಂದು ಮಾನವನ ಪಾಪಗಳನ್ನು ತನ್ನ ಮೇಲೆ ತೆಗೆದುಕೊಂಡು ಮಾನವನ ಸ್ಥಾನದಲ್ಲಿ ಪಾಪದ ಶಿಕ್ಷೆಯನ್ನು ಅನುಭವಿಸಬೇಕೆಂದು ದೇವರ ನೀತಿಯಳ್ಳ ಚಿತ್ತವಾಗಿತ್ತು. ಆದುದರಿಂದ ಯೇಸು ಮಾನವನ ಪಾಪಗಳನ್ನು ತನ್ನ ಮೇಲೆ ಹೊತ್ತುಕೊಳ್ಳಲು ಬಂದನಾದ ಕಾರಣ ಆತನು ಇತರ ಮನುಷ್ಯರಂತೆ ದೀಕ್ಷಾಸ್ನಾನ ಮಾಡಿಸಿಕೊಳ್ಳುವದುಅವಶ್ಯಕವಾಗಿತ್ತು. ಮತ್ತಾಯ 3:14ರ

ಪ್ರಕಾರವಾಗಿ ಮೊದಲು ಯೇಸುವಿಗೆ ದೀಕ್ಷಾಸ್ನಾನ ಮಾಡಿಸಲು ಬಯಸಲಿಲ್ಲ. ಹೇಗೂ ಯೇಸು ಪಾಪರಹಿತನೆಂದೂ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಬರುತ್ತಿದ್ದ ಇತರ ಎಲ್ಲಾ ಪಾಪಮಯ ಮನುಷ್ಯರಿಗಿಂತ ಆತನು ವ್ಯತ್ಯಾಸವಾದವನೆಂದೂ ಯೋಹಾನನಿಗೆ ತಿಳಿದಿತ್ತು. ಯೇಸುವಿಗೆ ಹೋಲಿಸಿದಾಗ ಯೋಹಾನನಿಗೆ ನಾನು ಪಾಪಿಯಾಗಿದ್ದು ದೀಕ್ಷಾಸ್ನಾನ ನನಗೇ ಅವಶ್ಯವೆಂಬಂತೆ ಅನಿಸಿತು.[5]

**10-11** ಯೇಸು ದೀಕ್ಷಾಸ್ನಾನ ಹೊಂದಿದವನಾಗಿ ನೀರಿನಿಂದ ಹೊರ ಬರುತ್ತಿದ್ದಂತೆ ಪವಿತ್ರಾತ್ಮನು ಅವನ ಮೇಲೆ ಇಳಿದು ಬಂದನು (ಯೇಶಾಯ 11:2, 42:1, 61:1). ಪವಿತ್ರಾತ್ಮನು ದೇಹಾಕಾರವಾಗಿ ಪಾರಿವಾಳದ ಹಾಗೆ ಇಳಿದು ಬಂದನು (ಲೂಕ 3:22). ಆಗ ದೇವರು ಪರಲೋಕದಿಂದ ಮಾತನಾಡಿ ಯೇಸುವಿಗೆ "ನೀನು ಪ್ರಿಯನಾಗಿರುವ ನನ್ನ ಮಗನು, ನಿನ್ನನ್ನು ನಾನು ಮೆಚ್ಚಿದ್ದೇನೆ" ಎಂದು ಹೇಳಿದನು ( ವಚನ1 ಹಾಗು ವ್ಯಾಖ್ಯಾನ ನೋಡಿರಿ). ಈ ರೀತಿಯಾಗಿ ಯೇಸು ನಿಜವಾಗಿಯೂ ಕ್ರಿಸ್ತನು, ರಕ್ಷಕನು, ದೇವರ ಮಗನು ಆಗಿದ್ದಾನೆಂಬದನ್ನು ದೇವರು ಯೋಹಾನನಿಗೂ ಮತ್ತು ಎಲ್ಲಾ ಮನುಷ್ಯರಿಗೂ ಸಿದ್ಧಾಂತಪಡಿಸಿದನು (ಕೀರ್ತನೆಗಳು 2:7).

ಯೇಸು ಕೇವಲ ದೀಕ್ಷಾಸ್ನಾನದ ಸಮಯದಲ್ಲಿ ಮಾತ್ರ ಆಕಸ್ಮೀಕವಾಗಿ ದೇವರ ಮಗನಾಗಿ ಪವಿತ್ರಾತ್ಮನನ್ನು ಸ್ವೀಕರಿಸಲಿಲ್ಲ. ಆತನು ನಿರಂತರವಾಗಿ ಜಗತ್ತಿನ ಪ್ರಾರಂಬಕ್ಕೆ ಮುನ್ನವೇ ದೇವರ ಮಗನಾಗಿರುತ್ತಾನೆ (ಯೋಹಾನ 1:1-3). ಪವಿತ್ರಾತ್ಮನು ಯಾವಾಗಲೂ ಯೇಸುವಿನೊಂದಿಗಿದ್ದಾನೆ, ಪವಿತ್ರಾತ್ಮನು ಯೇಸುವಿನ ಸ್ವಂತ ಆತ್ಮನಾಗಿದ್ದನು (ಆದಿ 1:1-2). ಆದರೆ ತನ್ನ ದೀಕ್ಷಾಸ್ನಾನದ ವೇಳೆಯಲ್ಲಿ ಯೇಸು ದೇವರ ಮಗನೆಂದು ಸಾರ್ವಜನಿಕವಾಗಿ ಮನುಷ್ಯರ ಮುಂಭಾಗದಲ್ಲಿ ಸಿದ್ಧಾಂತಪ-ಡಿಸಲ್ಪಟ್ಟನು.

**12-13** ಯೇಸು ದೀಕ್ಷಾಸ್ನಾನ ಆದ ತಕ್ಷಣವೇ ಮರುಭೂಮಿಗೆ ನಡೆಸಲ್ಪಟ್ಟನು. ಅಲ್ಲಿ ಆತನು ಸೈತಾನನಿಂದ ಶೋಧಿಸಲ್ಪಟ್ಟನು. ಯೇಸು ಸೈತಾನನ್ನು ಸೋಲಿಸಿ ಲಯಮಾಡುವದಕ್ಕಾಗಿ ಭೂಮಿಗೆ ಬಂದನು. ಹೀಗೆ ಯೇಸು ತನ್ನ ಭೂಲೋಕದ ಸೇವೆಯ ಪ್ರಾರಂಭದಲ್ಲಿಯೇ ಸೈತಾನನೊಂದಿಗೆ ಹೋರಾಡಿ ಅವನನ್ನು ಜಯಿಸಿದನು. ಯೇಸುವನ್ನು ಶೋಧಿಸುವದರ ಮೂಲಕ ಆತನು ದೇವರ ಚಿತ್ತಕ ವಿಧೇಯನಾಗದೇ ವಿಮುಖನಾಗುವಂತೆ ಮಾಡಲು ಸೈತಾನನು ಪ್ರಯತ್ನಿಸಿದನು, ಆದರೆ ಯೇಸು ದೃಢವಾಗಿ ನಿಂತನು. ಇದರಲ್ಲಿ ಯೇಸು ನಮಗೆ ಒಂದು ಮಾದರಿಯನ್ನು ತೋರಿಸಿದ್ದಾನೆ. ನಾವು ಅನುಭವಿಸುವ ಎಲ್ಲಾ ಶೋಧನೆಗಳನ್ನು ಆತನು ಅನುಭವಿಸಿದನು (ಇಬ್ರಿಯ 2:18,4:15). ಯೇಸುವನ್ನು ಹಿಂಬಾಲಿಸಲು ಮನಸ್ಸು ಮಾಡುವ ಪ್ರತಿಯೊಬ್ಬ ಕ್ರೈಸ್ತನು ಸೈತಾನನಿಂದ ಇದೇ ರೀತಿಯ ಶೋಧನೆಗಳನ್ನು ಎದುರಿಸಲು ಸಿದ್ಧನಾಗಿರಬೇಕು ಮತ್ತು ಯೇಸು ಶೋಧನೆಯ ಮೇಲೆ ಜಯ ಸಾಧಿಸಿರುವದರಿಂದ ನಾವು ಸಹ ಜಯಶಾಲಿಗಳಾಗಿರುವಂತೆ ನಮಗೆ ಬಲವನ್ನು ನೀಡುತ್ತಾನೆ. ಯೇಸುವಿನ ಶೋಧನೆಗಳ ಪೂರ್ಣ ಚಿತ್ರಣಕ್ಕಾಗಿ (ಮತ್ತಾಯ 4:1-11 ಹಾಗು ವ್ಯಾಖ್ಯಾನ ನೋಡಿರಿ).

## ಪ್ರಥಮ ಶಿಷ್ಯರ ಕರೆಯುವಿಕೆ (1:14-20)

(ಮತ್ತಾಯ 4:12,17-22)

**14-15** ಯೋಹಾನನನ್ನು ಸೆರೆಮನೆಗೆ[6] ಹಾಕಿದ ಮೇಲೆ ಯೇಸು ಗಲಿಲಾಯಕ್ಕೆ ಹಿಂದಿರುಗಿ ಬೋಧಿಸಲು ಪ್ರಾರಂಭಿಸಿದನು. ಆತನ ಬೋಧನೆಯು ಸರಳವಾಗಿತ್ತು: "ಕಾಲ ಪರಿಪೂರ್ಣವಾಯಿತು. ದೇವರ ರಾಜ್ಯವು[7] ಸಮೀಪವಾಯಿತು". (2 ಕೊರಿ 6:2ನ್ನು ನೋಡಿರಿ). ದೇವರ ರಾಜ್ಯವೆಂದರೆ ಮಾನವನ ಹೃದಯ ಮತ್ತು ಸಮಾಜದಲ್ಲಿ ದೇವರ ಪ್ರಸನ್ನತೆ ಅಧಿಕಾರ ಮತ್ತು ಆಳುವಿಕೆಯಾಗಿದೆ. ಒಂದು ವಿಧದಲ್ಲಿ ಯೇಸು ಸ್ವತ: ಭೂಮಿಗೆ ಬಂದ ದೇವರ ರಾಜ್ಯವಾಗಿದ್ದಾನೆ. ಆತನ ಮೂಲಕ ದುಷ್ಟ ಶಕ್ತಿಯು ಮುರಿಯಲ್ಪಟ್ಟು ಮನುಷ್ಯರು ಆನಂದ, ಸಮಾಧಾನ ಮತ್ತು ಸ್ವಸ್ಥತೆಯನ್ನು ಅನುಭವಿಸಲು ಪ್ರಾರಂಭಿಸಿದರು. ಕ್ರಿಸ್ತನು ದೇವರ ರಾಜ್ಯದ ದೇಹ ಧಾರಿಯಾಗಿದ್ದನು. ಪು ರುಷ ಮತ್ತು ಸ್ತ್ರೀಯರು ಯೇಸುವನ್ನು ಸ್ವೀಕರಿಸಿಕೊಳ್ಳುವಾಗ ಅವರು ದೇವರ ರಾಜ್ಯದ ಪ್ರಜೆಗಳಾಗಿರುತ್ತಾರೆ. ಯೇಸು ವಿಶ್ವಾಸಿಗಳ ಒಂದು ನೂತನ ರಾಷ್ಟ್ರವನ್ನು ಸ್ಥಾಪಿಸಲು ಬಂದನು, ಅವರ ಆಡಳಿತಗಾರನು ದೇವರೇ (ಮಾರ್ಕ 9:1, ಯೋಹಾನ 3:3 ಹಾಗು ವ್ಯಾಖ್ಯಾನ ನೋಡಿರಿ).

ಆದುದರಿಂದ "ದೇವರ ಕಡೆಗೆ ತಿರಿಗಿಕೊಂಡು ಸುವಾರ್ತೆಯನ್ನು ನಂಬಿರಿ" ಎಂದು ಯೇಸು ನಮಗೆ ಹೇಳುತ್ತಾನೆ (ವಚನ 15). ಎಲ್ಲಾ ವೇಳೆಯಲ್ಲೂ ಮೊದಲ ಹೆಜ್ಜೆಯೇನೆಂದರೆ ಪಶ್ಚಾತಾಪ ಪಡುವದು (ಅ.ಕೃತ್ಯ 2:38, 17:30). ಪಶ್ಚಾತಾಪ ಅಂದರೆ ನಮ್ಮ ಪಾಪಗಳಿಗಾಗಿ ಬೇಸರಪಡುವದು ಮಾತ್ರವಲ್ಲ, ನಮ್ಮ ಪಾಪಗಳಿಂದ ತಿರಿಗಿಕೊಳ್ಳುವದೂ ಆಗಿದೆ. ಒಂದು ಪಾಪಕ್ಕಾಗಿ ನಿಜವಾಗಿಯೂ ಪಶ್ಚಾತಾಪ ಪಡುವದೆಂದರೆ ಆ ಪಾಪವನ್ನು ಮಾಡುವದನ್ನು ನಿಲ್ಲಿಸುವದು ಎಂದರ್ಥ. ಇಲ್ಲವೆಂದರೆ ನಮ್ಮ ಪಶ್ಚಾತಾಪವು ಸುಳ್ಳಾಗಿರುತ್ತದೆ.

ನಾವು ಪಶ್ಚಾತಾಪ ಪಟ್ಟ ಮೇಲೆ ಎರಡನೆಯ ಹೆಜ್ಜೆಯನ್ನಿಡಲು ನಾವು ಸಿದ್ಧರಾಗುತ್ತೇವೆ, ಅದೇನೆಂದರೆ ರಕ್ಷಕನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದು. ನಂಬುವದು ಅಂದರೆ ಕ್ರಿಸ್ತನಲ್ಲಿ ನಂಬಿಕೆ ಹೊಂದುವದು, ಅದರರ್ಥವೇನೆಂದರೆ ನಾವು ಆತನನ್ನು ನಮ್ಮ ಜೀವಿತಗಳ ಕರ್ತನೆಂದು ಸ್ವೀಕರಿಸುವದು ಮಾತ್ರವಲ್ಲ ಆದರೆ ನಾವು ಆತನಿಗೆ ವಿಧೇಯರೂ ಆಗುತ್ತೇವೆ.

ನಾವು ಯೇಸುವಿನಲ್ಲಿ ವಿಶ್ವಾಸಿಸುತ್ತೇವೆ ಎಂದು ಹೇಳಿದರೂ ಆತನಿಗೆ ವಿಧೇಯರಾಗದಿದ್ದರೆ ನಾವು ಸುಳ್ಳುಗಾರರಾಗಿದ್ದೇವೆ (ಮತ್ತಾಯ 7:21, ಯಾಕೋಬ 2:14,17,20-24, 1 ಯೋಹಾನ 2:4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಶುಭವಾರ್ತೆಯೇನೆಂದರೆ: ಯೇಸು ಪಾಪಿಗಳನ್ನು ರಕ್ಷಿಸುವದಕ್ಕಾಗಿ ಹಾಗು ಆತನಲ್ಲಿ ನಂಬಿಕೆಯಿಡುವ ಎಲ್ಲರಿಗೂ ನಿತ್ಯಜೀವವನ್ನು ನೀಡುವದಕ್ಕಾಗಿ ಈ ಲೋಕಕ್ಕೆ ಬಂದನು (ಯೋಹಾನ 3:16 ಮತ್ತು ವ್ಯಾಖ್ಯಾನ ನೋಡಿರಿ). ಕ್ಲುಪ್ತವಾಗಿ ಹೇಳುವದಾದರೆ, ಇದು ಯೇಸುವಿನ ಸುವಾರ್ತೆಯಾಗಿದೆ. ಇದರ ಮೂಲಕ ಯೇಸು ಪ್ರತಿಯೊಬ್ಬರಿಗೂ ಆಯ್ಕೆಯನ್ನು ನೀಡುತ್ತಾನೆ: ದೇವರ ರಾಜ್ಯದ ಪ್ರಜೆಯಾಗಿರಲು ಅಥವಾ ಸೈತಾನನ ರಾಜ್ಯದ ಪ್ರಜೆಯಾಗಿರಲು, ನಂಬಿ ನಿತ್ಯಜೀವವನ್ನು ಪಡೆಯಲು ಅಥವಾ ನಂಬಿಕೆಯಿಡದೆ ನಿತ್ಯಶಿಕ್ಷೆಯನ್ನು ಪಡೆದುಕೊಳ್ಳಲು ಆರಿಸಿಕೊಳ್ಳ ಬಹುದು. ಈ ಜೀವನದಲ್ಲಿ ಕೇವಲ ಎರಡು ಆಯ್ಕೆಗಳು ಮಾತ್ರ ಇರುತ್ತವೆ (ಮತ್ತಾಯ 7:13-14 ಮತ್ತು ವ್ಯಾಖ್ಯಾನ ನೋಡಿರಿ).

**16-20** ಮಾರ್ಕನು ಇಲ್ಲಿ ಯೇಸು ತನ್ನ ಮೊದಲ ನಾಲ್ಕು ಶಿಷ್ಯರನ್ನು ಹೇಗೆ ಆರಿಸಿ ಕೊಂಡನೆಂದು ಬಣ್ಣಿಸುತ್ತಾನೆ. ಮೊದಲು ಆತನು ಗಲಿಲಾಯ ಸಮುದ್ರದಲ್ಲಿ ಮೀನು ಹಿಡಿಯುತ್ತಿದ್ದ ಸಿಮೋನ[8] ಮತ್ತು ಅವನ ತಮ್ಮನಾದ ಅಂದ್ರೇಯರನ್ನು[9] ಸಂಧಿಸಿದನು.

ಯೇಸು ಅವರಿಗೆ "ನನ್ನ ಹಿಂದೆ ಬನ್ನಿರಿ" ಅಂದನು. ತಕ್ಷಣವೇ ಅವರು ತಮ್ಮ ಕೆಲಸವನ್ನು ಬಿಟ್ಟು ಆತನನ್ನು ಹಿಂಬಾಲಿಸಿದರು (ವ 18). ಅದೇ ರೀತಿಯಲ್ಲಿ ಆತನು ಯಾಕೋಬ ಮತ್ತು ಯೋಹಾನ (ಸ್ನಾನಿಕನಾದ ಯೋಹಾನನಲ್ಲ) ನನ್ನು ಕರೆದನು; ಅವರು ಸಹ ತಕ್ಷಣವೇ ಮೇಲೆದ್ದು ತಮ್ಮ ಕುಟುಂಬ, ದೋಣಿ, ತಮ್ಮ ಕೆಲಸವನ್ನು ತೊರೆದು ಆತನನ್ನು ಹಿಂಬಾಲಿಸಿದರು.[10] (ಲೂಕ 5:1-11 ಮತ್ತು ವ್ಯಾಖ್ಯಾನ ನೋಡಿರಿ). ಅಬ್ರಹಾಮನಂತೆ ಅವರು ತಾವು ಎಲ್ಲಿ ಹೋಗುತ್ತಿರುವರೆಂದು ತಿಳಿದಿರಲಿಲ್ಲ (ಇಬ್ರಿಯ 11:8). ಆದರೆ ಯಾರೊಂದಿಗೆ ಹೋಗುತ್ತಿರುವರೆಂದು ತಿಳಿದವರಾಗಿದ್ದರು.

ಇದಕ್ಕೆ ಮುಂಚೆ ಸಿಮೋನ ಮತ್ತು ಅಂದ್ರೇಯರು ಯೇಸುವನ್ನು ಬೇಟಿಯಾಗಿ ಆತನಲ್ಲಿ ನಂಬಿಕೆಯಿಟ್ಟಿದ್ದರು (ಯೋಹಾನ 1:35-42 ನ್ನು ನೋಡಿರಿ). ಈಗ ಯೇಸು ಅವರನ್ನು ತನ್ನ ಆಪ್ತ ಶಿಷ್ಯರಾಗಿರುವದಕ್ಕೆ ಕರೆಯುತ್ತಿದ್ದಾನೆ. ತಾವು ಎಲ್ಲವನ್ನೂ ತೊರೆದು ತನ್ನನ್ನು ಹಿಂಬಾಲಿಸಬೇಕೆಂದು ಆತನು ಅವರಿಗೆ ಹೇಳುತ್ತಿದ್ದನು. ಅದೇ ರೀತಿಯಲ್ಲಿ ಯೇಸು ನಮ್ಮನ್ನು ಸಹ ತನ್ನ ಶಿಷ್ಯರಾಗಿರಲು ಕರೆಯುತ್ತಾನೆ. ಆತನು ನಮಗೆ "ನನ್ನ ಹಿಂದೆ ಬನ್ನಿರಿ" ಎಂದು ಮಾತ್ರವೇ ಹೇಳುತ್ತಾನೆ. ಪೇತ್ರ, ಅಂದ್ರೇಯ ಮತ್ತು ಯಾಕೋಬ, ಯೋಹಾನರ ಹಾಗೆ ನಾವು ಸಹ ಮೇಲೆದ್ದು ಯಾವ ಮಾತನ್ನು ಆಡದೆ ಯೇಸುವನ್ನು ಹಿಂಬಾಲಿಸೋಣ. ಯೇಸು, ಸಿಮೋನ (ಪೇತ್ರ) ಮತ್ತು ಅಂದ್ರೇಯನಿಗೆ "ನಾನು ನಿಮ್ಮನ್ನು ಮನುಷ್ಯರನ್ನು ಹಿಡಿಯುವ ಬೇಸ್ತರನ್ನಾಗಿ ಮಾಡುವೆನು" ಅಂದನು(ವಚನ 17). ಯೇಸು ಅವರ ಸ್ವಾಭಾವಿಕ ಸಾಮರ್ಥ್ಯಗಳನ್ನು (ಬೇಸ್ತರಾಗಿದ್ದ) ತೆಗೆದುಕೊಂಡು ದೇವರ ರಾಜ್ಯಕ್ಕೆ ಉಪಯುಕ್ತವಾದ ಒಂದು ರೀತಿಯಲ್ಲಿ ರೂಪಾಂತರ ಪಡಿಸಿದನು. ಅದೇ ರೀತಿಯಲ್ಲಿ ಯೇಸು ನಮ್ಮನ್ನು ಹಾಗು ನಮ್ಮ ಸ್ವಾಭಾವಿಕ ವರಗಳು ಮತ್ತು ಸಾಮರ್ಥ್ಯಗಳನ್ನು ತೆಗೆದುಕೊಂಡು ತಾನು ನಮಗೆ ನೇಮಿಸಿದ ಕಾರ್ಯಕ್ಕಾಗಿ ಯೋಗ್ಯರಾಗಿರುವಂತೆ ನಮ್ಮನ್ನು ಉಪಯುಕ್ತ ಶಿಷ್ಯರನ್ನಾಗಿ ಮಾರ್ಪಡಿಸುವನು.

ಅಂತಿಮವಾಗಿ, ಈ ಶಿಷ್ಯರು ಸಾಮಾನ್ಯ ಜನರು (ಬೇಸ್ತರು) ಎಂಬುದನ್ನು ನೋಡುತ್ತೇವೆ. ಅವರು ಬಡವರಾಗಿದ್ದರು. ಅವರು ಕಷ್ಟಪಟ್ಟು ಕೆಲಸ ಮಾಡಿ ಶ್ರಮಗಳನ್ನು ಅನುಭವಿಸಬೇಕಿತ್ತು. ಅವರು ಅವಿಧ್ಯಾವಂತರಾಗಿದ್ದರು. ಅವರು ಇಸ್ರಾಯೇಲಿನ ಅತ್ಯಂತ ಹಿಂದುಳಿದ ಪ್ರಾಂತವಾದ ಗಲಿಲಾಯದವರಾಗಿದ್ದರು. ಅದಾಗ್ಯು ಯೇಸು ತನ್ನ ರಾಜ್ಯ ಸ್ಥಾಪನೆಗೆ ಸಹಾಯ ಮಾಡಲು ಇವರನ್ನು ಆರಿಸಿಕೊಂಡನು.

## ಯೇಸು ದುರಾತ್ಮವನ್ನು ಹೊರಡಿಸಿದ್ದು (1:21-28)

(ಲೂಕ4:31-37)

**21-22** ತರುವಾಯ ಯೇಸು ಮತ್ತು ಆತನ ನಾಲ್ವರು ನೂತನ ಶಿಷ್ಯರು ಕೆಪೆರ್ನೌಮಿಗೆ ಹೋದರು, ಇದು ಪೇತ್ರನ ಸ್ವಂತ ಊರಾಗಿದ್ದು. ಗಲಿಲಾಯ ಸಮದ್ರದ ಬಳಿಯಲಿತ್ತು. ಸಬ್ಬತ್ತಿನ ದಿನದಲ್ಲಿ ಅಂದರೆ ಶನಿವಾರದಂದು ಅವರು ಯೆಹೂದ್ಯ ಸಭಾಮಂದಿರ[11]ಕ್ಕೆ ಹೋದರು. ಪ್ರತಿವಾರವೂ ಯೆಹೂದ್ಯರು ಅಲ್ಲಿ ಸೇರಿ ಬರುತ್ತಿದ್ದರು. ಅಲ್ಲಿ ಉಪದೇಶ ಮಾಡಲು ಯೇಸು ಆಮಂತ್ರಿಸಲ್ಪಟ್ಟಿದ್ದನು. ಆತನು ಧರ್ಮೋಪದೇಶಕರಂತೆ [12] ಉಪದೇಶ ಮಾಡದ ಕಾರಣದಿಂದ ಜನರು ಆಶ್ಚರ್ಯಪಟ್ಟರು. ಆ ಧರ್ಮೋಪದೇಶಕರು ಯೆಹೂದ್ಯ ಧರ್ಮಶಾಸ್ತ್ರ, ಯೆಹೂದ್ಯ ಶಾಸ್ತ್ರಗಳು (ಹಳೆ ಒಡಂಬಡಿಕೆ) ಮತ್ತು ಬರಹಗಳ ಬಗ್ಗೆ ಎಲ್ಲವನ್ನು ತಿಳಿದಿದ್ದ ಪಂಡಿತರಾಗಿದ್ದರು. ಈ ಬೋಧಕರು ತಮ್ಮ ಸ್ವಂತ ಅಧಿಕಾರದಿಂದಲ್ಲ ಅದರೆ ಇತರ ಬರಹಗಾರರಿಂದ ಅಧಿಕಾರವನ್ನು ಸೆಳೆದುಕೊಂಡು ಮಾತ್ರ ಬೋಧಿಸುತ್ತಿದ್ದರು. ಆದರೆ ಯೇಸು ನೇರವಾಗಿ ದೇವರಿಂದ ಬಂದ ಸ್ವಂತ ಅಧಿಕಾರದಿಂದ ಉಪದೇಶಿಸಿದನು (ಮತ್ತಾಯ 7:28-29 ಮತ್ತು ವ್ಯಾಖ್ಯಾನ ನೋಡಿರಿ).

**23-28** ಸಭಾಮಂದಿರದಲ್ಲಿ ಯೆಹೂದ್ಯನೊಬ್ಬನು ದುರಾತ್ಮ ಪೀಡಿತನಾಗಿದ್ದನು. ದುರಾತ್ಮ ಅಥವಾ ದೆವ್ವ ತಕ್ಷಣವೇ ಯೇಸು ಯಾರೆಂಬದನ್ನು ಗುರುತಿಸುತ್ತದೆ. ಸಭಾಮಂದಿರದಲ್ಲಿದ್ದ ಇತರರು ಯೇಸುವಿನ ವಿಷಯವಾಗಿ ಹಳೆ ಒಡಂಬಡಿಕೆಯಲ್ಲಿನ ಪ್ರವಾದನೆಗಳನ್ನು ಪ್ರತಿವಾರವೂ ಓದಿದವರಾಗಿದ್ದರೂ ಅವರಲ್ಲಿ ಯಾರೊಬ್ಬರೂ ಯೇಸುವನ್ನು ಗುರುತಿಸಲಿಲ್ಲ; ಆದರೆ ದುರಾತ್ಮ ಮಾತ್ರವೇ ಆತನನ್ನು ಗುರುತಿಸಿತು. ಯೇಸು ಮರುಭೂಮಿಯಲ್ಲಿ ತನ್ನ ಶೋಧನೆಯ ವೇಳೆ ಸೈತಾನನ್ನು ಈಗಾಗಲೇ

ಸೋಲಿಸಿ ದ್ದಾನೆಂದು ದುರಾತ್ಮಕ್ಕೆ ತಿಳಿದಿತ್ತು (ವಚನ 13). ಅಲ್ಲದೆ ಯೇಸು ಸೈತಾನನ ಆಧಿನದಲ್ಲಿರುವ ಎಲ್ಲಾ ದುರಾತ್ಮಗಳನ್ನು ನಾಶ ಮಾಡಲು ಸಹ ಬಂದಿರುವನೆಂದು ಅವನಿಗೆ ಗೊತ್ತಿತ್ತು. ಯೇಸುವಿನ ಹೆಸರನ್ನು ಹೇಳುವದರ ಮೂಲಕ ದುರಾತ್ಮವು ಯೇಸು ತನ್ನ ಮೇಲೆ ಅಧಿಕಾರವನ್ನು ಉಪಯೋಗಿಸದಂತೆ ತಡೆಯಲು ಪ್ರಯತ್ನಿಸಿತು[13] (ವಚನ 24). ಆದರೆ ಯೇಸು ಒಂದೇ ಮಾತಿನೊಂದಿಗೆ ದುರಾತ್ಮವನ್ನು ಹೊರಡಿಸಿದನು. ಮತ್ತು ಆ ವ್ಯಕ್ತಿಯು ತಕ್ಷಣವೇ ಸಂಪೂರ್ಣ ಗುಣಹೊಂದಿದನು. ಯೇಸುವಿನ ಶಕ್ತಿಯು ಆತನ ಮಾತಿನಲ್ಲಿತ್ತು. ಜನರು ಆಶ್ಚರ್ಯಪಟ್ಟರು. ಅವರು ಎಂದಿಗೂ ಸಹ ದುರಾತ್ಮಗಳ ಮೇಲೆ ಈ ರೀತಿಯಾಗಿ ಅಧಿಕಾರ ಚಲಾಯಿಸುವ ಯಾರನ್ನೂ ನೋಡಿರಲಿಲ್ಲ.

ದೆವ್ವ ಪೀಡಿತರಾಗುವದು ಒಂದು ಮಾನಸಿಕ ರೋಗದ ವಿಧವಲ್ಲ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ದೆವ್ವಗಳು ಅಥವಾ ದುರಾತ್ಮಗಳು, ದೆವ್ವಗಳ ಮುಖ್ಯಸ್ಥನಾದ ಸೈತಾನನ ಸೇವಕರಾಗಿವೆ. ಅವು ದುಷ್ಟ ಕಾರ್ಯ ಮಾಡುವವು ಗಳಾಗಿವೆ. ಅವು ಗಳು ಒಬ್ಬ ಮನಷ್ಯನೊಳಗೆ ಬರುವಾಗ ಅವನನ್ನು ಸೈತಾನನಿಗೆ ಬಂಧಿ ಅಥವಾ ಗುಲಾಮನನ್ನಾಗಿ ಮಾಡುತ್ತವೆ. ಯೇಸುವಿನ ಶಕ್ತಿಯ ಮೂಲಕ ಮಾತ್ರವೇ ಈ ದೆವ್ವಗಳ ಮೇಲೆ ಜಯ ಹೊಂದಬಹುದು ಹಾಗು ಮನುಷ್ಯನಿಗೆ ಬಿಡುಗಡೆ ಕೊಡಬಹುದು.

## ಯೇಸು ಅನೇಕರನ್ನು ಸ್ವಸ್ಥ ಮಾಡುತ್ತಾನೆ (1:29-39)

(ಮತ್ತಾಯ 8:14-17, ಲೂಕ 4:38-44)

**29-31** ಬಳಿಕ ಯೇಸು ಸಿಮೋನ ಮತ್ತು ಅಂದ್ರೇಯನ ಮನೆಗೆ ಹೋದನು, ಅಲ್ಲಿ ಆತನು ಸಿಮೋನನ ಅತ್ತೆಯನ್ನು ಗುಣಪಡಿಸಿದನು. ಅವಳು ಎಷ್ಟು ಶೀಘ್ರ ಮತ್ತು ಸಂಪೂರ್ಣವಾಗಿ ಗುಣಹೊಂದಿದಳೆಂದರೆ ತಕ್ಷಣವೇ ಮೇಲೆ ಎದ್ದು ಯೇಸು ಮತ್ತು ನಾಲ್ಕು ಶಿಷ್ಯರಿಗೆ ಉಪಚರಿಸಿದಳು.

**32-34** ಯೇಸು "ಘನ ವೈದ್ಯ" ಎಂದು ಪರಿಚಿತನಾಗಿದ್ದಾನೆ. ಮತ್ತಾಯ 8:16 ರ ಪ್ರಕಾರವಾಗಿ ಈ ಸಂದರ್ಭದಲ್ಲಿ ಆತನು "ಎಲ್ಲಾ ರೋಗಿಗಳನ್ನು ಗುಣಪಡಿಸಿದನು". ಆತನು ಔಷಧವನ್ನು ಉಪಯೋಗಿಸಲಿಲ್ಲ. ಆತನ "ಚಿಕಿತ್ಸೆಯು" ಯಾವಾಗಲೂ ಯಶಸ್ವಿಕರವಾಗಿತ್ತು. ರೋಗಿಗಳು ತಕ್ಷಣ ಹಾಗು ಸಂಪೂರ್ಣವಾಗಿ ಸ್ವಸ್ಥರಾದರು. ಪ್ರವಾದಿಯಾದ ಯೇಶಾಯನು "ನಮ್ಮ ಬೇನೆಗಳನ್ನು ತಾನೇ ತೆಗೆದುಕೊಂಡು ನಮ್ಮ ರೋಗಗಳನ್ನು ಹೊತ್ತುಕೊಂಡನು" ಎಂದು ಹೇಳಿದ ಮಾತು ನೆರವೇರುವಂತೆ ಇದಾಯಿತೆಂದು ಮತ್ತಾಯನು ಹೇಳುತ್ತಾನೆ (ಯೇಶಾಯ 53:4, ಮತ್ತಾಯ 8:17).

ಹೊತ್ತು ಮುಳುಗಿದ ಮೇಲೆ ಜನರು ರೋಗಿಗಳನ್ನು ಯೇಸುವಿನ ಬಳಿಗೆ ಕರೆತಂದರು, ಯಾಕೆಂದರೆ ಸಬ್ಬತ್ ದಿನದಲ್ಲಿ ರೋಗಿಗಳನ್ನು ಇನ್ನೊಂದು ಕಡೆಗೆ ಕರೆದೊಯ್ಯವು ದು ಯೆಹೂದ್ಯ ನಿಯಮವಿರುದ್ಧವಾಗಿತ್ತು. ನಿಯಮದ ಪ್ರಕಾರ ಸಬ್ಬತ್ತಿನಲ್ಲಿ ಯಾವ ವಿಧವಾದ ಕೆಲಸವನ್ನೂ ಮಾಡಬಾರದಾಗಿತ್ತು. ಅಲ್ಲದೆ ಯೇಸು ದೆವ್ವ ಹಿಡಿದವರೊಳಗಿಂದ ದೆವ್ವಗಳನ್ನು ಬಿಡಿಸಿದನು. ಪು ನಃ ದೆವ್ವಗಳು ಮಾತ್ರವೇ ಆತನು ಯಾರೆಂದು ತಿಳಿದಿದ್ದವು . ಇತರ ಜನರು ಆತನೊಬ್ಬ ಅದ್ಭುತ ಮಾಡುವವನು ಎಂದು ಮಾತ್ರವೇ ಯೋಚಿಸಿದರು. ಆದರೆ ತಾನು ಯಾರೆಂದು ಹೇಳಬಾರದೆಂದು ಯೇಸು ದೆವ್ವಗಳಿಗೆ ಖಂಡಿತವಾಗಿ ಹೇಳಿದನು (ವಚನ 34). ಶಿಷ್ಯರನ್ನು ಹೊರತುಪಡಿಸಿ ಯಾರೂ ಸಹ ತಾನು ಕ್ರಿಸ್ತನೆಂದು ತಿಳಿಯಬಾರದೆಂದು ಆತನು ಬಯಸಿದನು. ಇಲ್ಲವಾದರೆ ಎಲ್ಲಾ ಜನರು ಆತನನ್ನು ಲೌಕಿಕ ರಾಜನನ್ನಾಗಿ ಮಾಡಲು ಪ್ರಯತ್ನಿಸುವರು. ಆತನು ಅವರ ಪಾಪಗಳಿಗಾಗಿ ಬಾಧೆಪಟ್ಟು ಸಾಯಲು ಭೂಮಿಗೆ ಬಂದನೆಂಬದನ್ನು ಅವರು ಅರ್ಥಮಾಡಿಕೊಳ್ಳುವದಿಲ್ಲವೆಂದು ಅವನು ತಿಳಿದಿದ್ದನು (ಮಾರ್ಕ 10:45 ಮತ್ತು ವ್ಯಾಖ್ಯಾನ ನೋಡಿರಿ).

**35-39** ಯೇಸು ದೇವರ ಮಗನಾಗಿದ್ದಾಗ್ಯು ಆತನು ಏಕಾಂತವಾಗಿ ದೇವರನ್ನು ಪ್ರಾರ್ಥಿಸಿ ಬೇಕಾದ ಬಲವನ್ನು ಸ್ವೀಕರಿಸಬೇಕಾಗಿತ್ತು. ಆದುದರಿಂದ ಬೆಳಗಾಗುವದಕ್ಕೆ ಮುಂಚೆಯೇ ಯೇಸು ಅಡವಿಯ ಸ್ಥಳಕ್ಕೆ ಹೋಗಿ ಪ್ರಾರ್ಥಿಸುತ್ತಿದ್ದನು. ಆತನು ಒಮ್ಮೆಲೇ ಯಾಕೆ ಹೋದನೆಂದು ಮತ್ತು ಯಾವ ಕಾರಣವೆಂದು ಶಿಷ್ಯರಿಗೆ ಅರ್ಥಮಾಡಿಕೊಳ್ಳಲಾಗಲಿಲ್ಲ ಯಾಕೆಂದರೆ ಸ್ವಸ್ಥತೆಗಾಗಿ ಜನರು ಇನ್ನೂ ಬರುತ್ತಿದ್ದರು. ಆದರೆ ಯೇಸು ಅವರಿಗೆ ನಾನು ಕೇವಲ ರೋಗಿಗಳನ್ನು ಗುಣಪಡಿಸಲು ಬಂದವನಲ್ಲ ಎದು ಹೇಳುತ್ತಾನೆ. ಆತನು ಮುಖ್ಯವಾಗಿ ಮನುಷ್ಯರು ಪಶ್ಚಾತಾಪಪಟ್ಟು ಸುವಾರ್ತೆಯನ್ನು ನಂಬಬೇಕೆಂದು ಸಾರಲು ಬಂದಿದ್ದಾನೆ (ವಚನ 14-15) ಆದರೆ ರೋಗವು ಳ್ಳ ಜನರಗುಂಪು ಸೇರಿಬಂದಿರುವದರಿಂದ ಬೋಧಿಸುವದು ಕಷ್ಟಕರವಾಗಿತ್ತು. ಆದುದರಿಂದ ಆತನು ಮತ್ತು ಆತನ ಶಿಷ್ಯರು ಕೆಪೆರ್ನೌಮನ್ನು ತೊರೆದು ಗಲಿಲಾಯದಲ್ಲಿನ ಪಟ್ಟಣಗಳಿಗೆಲ್ಲಾ ಪ್ರಯಾಣಿಸಿದರು.

## ಒಬ್ಬ ಕುಷ್ಟರೋಗಿ (1:40-45)

(ಮತ್ತಾಯ 8:1-4, ಲೂಕ 5:12-16)

**40-42** ಒಬ್ಬ ಕುಷ್ಟರೋಗಿಯು ಯೇಸುವಿನ ಬಳಿಗೆ ಬಂದು ಆತನ ಮುಂದೆ ಮೊಣಕಾಲೂರಿ" ನಿನಗೆ ಮನಸ್ಸಿದ್ದರೆ ನನ್ನನ್ನು ಶುದ್ಧ ಮಾಡಬಲ್ಲೆ" ಎಂದು ಬೇಡಿಕೊಂಡನು. ಆ ವ್ಯಕ್ತಿಯು ಯೇಸುವಿನ ಬಲದಲ್ಲಿ ನಂಬಿಕೆ ಹೊಂದಿದ್ದನು. ಆದರೆ ಆತನು ತನ್ನನ್ನು ಯೇಸುವಿನ ಚಿತ್ತಕ್ಕೆ ಸಹ ಒಪ್ಪಿಸಿಕೊಟ್ಟನು. ಹಾಗಾದರೆ ವಾವು ಸಹ ಯೇಸುವಿನಲ್ಲಿ ಸಂಪೂರ್ಣ ನಂಬಿಕೆಯಿಂದ

ಮತ್ತು ಆಸಕ್ತಿಯಿಂದ ಪ್ರಾರ್ಥಿಸಬೇಕು. ಆದರೆ ಅದೇ ಸಮಯದಲ್ಲಿ ಕ್ರಿಸ್ತನ ಚಿತ್ತವು ನೆರವೇರಲ್ಪಡಲಿ ಎಂದು ಸಹ ನಾವು ಪ್ರಾರ್ಥಿಸಬೇಕು.

ಯೇಸು ಅವನನ್ನು ಸ್ವಸ್ಥಮಾಡಲು ಮನಸ್ಸು ಹೊಂದಿದ್ದನು. "ಶುದ್ಧ ನಾಗು" ಎಂದನು. ಆತನು ಆ ವ್ಯಕ್ತಿಯ ಕುಷ್ಟರೋಗವನ್ನು ತನ್ನ ಮಾತಿನಿಂದಲೇ ಗುಣಪಡಿಸಿದನು.

**43-44** ಯೇಸು ಕುಷ್ಟರೋಗಿಯನ್ನು ಗುಣಪಡಿಸಿದ ಮೇಲೆ ಅವನಿಗೆ ಯಾಜಕರ ಬಳಿಗೆ ಹೋಗಿ ಮೋಶೆಯ ಪ್ರಕಾರ ಅಂದರೆ ಯೆಹೂದ್ಯರ ಧರ್ಮಶಾಸ್ತ್ರದ ಪ್ರಕಾರ ಯಜ್ಞಗಳನ್ನು ಅರ್ಪಿಸುವಂತೆ ಹೇಳಿದನು. (ಯಾಜಕ ಕಾಂಡ 14:1-20). ಯೆಹೂದ್ಯ ಯಾಜಕರು ಮಾತ್ರವೇ ಒಬ್ಬಕುಷ್ಟರೋಗಿಯು ಶುದ್ಧನಾಗಿದ್ದಾನೋ ಅಥವಾ ಇಲ್ಲವೋ ಎಂದು ನಿರ್ಧರಿಸಲು ಅರ್ಹರಾಗಿದ್ದರು..

ಆದುದರಿಂದ ಯೇಸು ತಾನು ಗುಣಪಡಿಸಿದ ವ್ಯಕ್ತಿಯು ಯಾಜಕರು ಮತ್ತು ಇತರ ಯೊಹೂದ್ಯರಿಗೆ ತಾನು ಹೊಂದಿದ್ದ ಸ್ವಸ್ಥತೆಯ ಶಕ್ತಿಯ ಕುರಿತು ಸಾಕ್ಷಿಯಾಗಿರಬೇಕೆಂದು ಬಯಸಿದನು. ಮನುಷ್ಯನು ನಿಯಮವನ್ನು ಪಾಲಿಸುವದರಿಂದ ಸ್ವಸ್ಥನಾಗುವದಿಲ್ಲ ಹಾಗು ರಕ್ಷಣೆ ಹೊಂದುವದಿಲ್ಲ. ಕ್ರಿಸ್ತನ ಶಕ್ತಿಯ ಮೂಲಕ ಮಾತ್ರವೇ ಮನುಷ್ಯನು ಸ್ವಸ್ಥತೆ ಮತ್ತು ರಕ್ಷಣೆ ಪಡೆಯ ಬಲ್ಲನು. ಕ್ರಿಸ್ತನ ಶಕ್ತಿಯ ಮೂಲಕ ಮಾತ್ರವೇ ಧರ್ಮಶಾಸ್ತ್ರದ ಆರ್ಹತೆಗಳು ನೆರವೇರಬಲ್ಲವು (ರೋಮ 8:1-4 ಮತ್ತು ವ್ಯಾಖ್ಯಾನ ನೋಡಿರಿ).

**45- 44** ನೇ ವಚನ44ಲ್ಲಿ ಕುಷ್ಟರೋಗಿಯಾದ ವ್ಯಕ್ತಿಗೆ ತನ್ನ ಸ್ವಸ್ಥತೆಯ ಕುರಿತು ಯಾರಿಗೂ ಹೇಳಬೇಡ ಎಂದು ಯೇಸು ಅಪ್ಪಣೆ ಮಾಡಿದ್ದನು (ವಚನ 34 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ಆ ವ್ಯಕ್ತಿಯು ವಿಧೇಯನಾಗದೆ ವಿಷಯವನ್ನು ಎಲ್ಲಾ ಕಡೆಯಲ್ಲಿ ತಿಳಿಯಪಡಿಸಿದನು, ಅದರ ಫಲಿತವಾಗಿ ಹೆಚ್ಚು ಹೆಚ್ಚು ಜನರು ಯೇಸುವಿನಿಂದ ಸ್ವಸ್ಥತೆಯನ್ನು ಬಯಸಿದರು. ಆದುದರಿಂದ ಇನ್ನೂ ಯೇಸು ಪಟ್ಟಣಗಳೊಳಗೆ ಹೋಗಲಾಗಲಿಲ್ಲ, ಯಾಕೆಂದರೆ ಅಸ್ವಸ್ಥತೆಯುಳ್ಳ ಜನರು ಗುಂಪು ಗೂಡುತ್ತಿದ್ದರು. ಅದಕ್ಕೆ ಬದಲಾಗಿ ಆತನು ಪಟ್ಟಣದ ಹೊರಗೆ ಬೋಧಿಸಿದನು.

---

## ಅಧ್ಯಾಯ - 2

### ಯೇಸು ಪಾರ್ಶ್ವವಾಯು ರೋಗಿಯನ್ನು ಸ್ವಸ್ಥ ಮಾಡಿದ್ದು (2:1-12)

(ಮತ್ತಾಯ 9:1-8, ಲೂಕ 5:17-26)

**1-4** ಕೆಲವು ತಿಂಗಳ ವರೆಗೆ ಪಟ್ಟಣದ ಹೊರಗಡೆಯಲ್ಲಿ ಬೋಧಿಸಿದ ನಂತರ ಯೇಸು ಮತ್ತು ಪೇತ್ರ ಹಾಗು ಅಂದ್ರೇಯರ ಊರಿಗೆಬಂದನು (ಮಾರ್ಕ 1:29 ನೋಡಿರಿ). ಆತನು ಅಲ್ಲಿ ಬೋಧಿಸುತ್ತಿದ್ದಾಗ ನಾಲ್ವರು ಒಬ್ಬ ಪಾರ್ಶ್ವವಾಯು ರೋಗಿಯನ್ನು ಹೊತ್ತುಕೊಂಡು ಬಂದರು. ಅವರು ಆತನನ್ನು ಮೆಟ್ಟಿಲುಗಳ ಮೂಲಕ ಚಾವಣಿಗೆ ಹೊತ್ತೊಯ್ದು ಮನೆಯ ಮೇಲ್ಚಾವಣೆಯನ್ನು ಬಿಚ್ಚಿ (ಲೂಕ 5:19) ರೋಗಿಯ ಹಾಸಿಗೆಯನ್ನು ಯೇಸು ಇದ್ದ ಕೋಣೆಗೆ ಇಳಿಸಿದರು.

**5** ಆಗ ಯೇಸು ಪಾರ್ಶ್ವವಾಯ ರೋಗಿಗೆ ಒಂದು ಆಶ್ಚರ್ಯಕರ ಸಂಗತಿಯನ್ನು ಹೇಳಿದನು. "ಮಗನೇ, ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ". ಯೇಸು ಯಾಕೆ ಹಾಗೆ ಹೇಳಿದನು? ಯಾಕೆಂದರೆ ಆ ಮನುಷ್ಯನ ಮುಖ್ಯ ಸಮಸ್ಯೆಯು ಪಾರ್ಶ್ವವಾಯು ಆಗಿರಲಿಲ್ಲ. ಆದರೆ ಆತನ ಪಾಪವೇ ಆಗಿತ್ತು. ಆತನ ಮುಖ್ಯ ಸಮಸ್ಯೆ ಶಾರೀರಿಕವಲ್ಲ, ಅದು ಆತ್ಮೀಕ ಸಮಸ್ಯೆಯಾಗಿತ್ತು. ಆ ಮನುಷ್ಯನಿಗೆ ಪಾರ್ಶ್ವವಾಯು ಆತನ ಪಾಪದ[15] ಕಾರಣದಿಂದ ಬಂದಿರುವ ಸಾಧ್ಯತೆಯಿದೆ. ಒಂದು ವೇಳೆ ಇದು ನಿಜವಾಗಿದ್ದರೆ ಯೇಸು ಆ ವ್ಯಕ್ತಿಯ ದೇಹವನ್ನು ಗುಣಪಡಿಸುವ ಮುಂಚೆ ಆತನ ಆತ್ಮವನ್ನು ಗುಣಪಡಿಸ ಬೇಕಾಗಿತ್ತು.

ಎಲ್ಲಾ ಮನುಷ್ಯರು ಅಸ್ವಸ್ಥರಾಗುತ್ತಾರೆ, ಎಲ್ಲರೂ ಪಾಪಮಾಡುತ್ತಾರೆ. ಪಾಪವು ಯಾವಾಗಲೂ ಶಾರೀರಿಕ ಅನಾರೋಗ್ಯಕ್ಕಿಂತಲೂ ಅತಿ ದೊಡ್ಡ ಸಮಸ್ಯೆಯಾಗಿದೆ. ಯೇಸು ಒಬ್ಬ ಮನುಷ್ಯನ ದೇಹ ಮತ್ತು ಆತ್ಮವನ್ನೂ ಸಹ ಗುಣಪಡಿಸಬಲ್ಲನು. ಇಲ್ಲಿ ಆತನು ಮೊದಲು ಆ ಮನುಷ್ಯನ ಪಾಪವನ್ನು ಕ್ಷಮಿಸಿದನು. ಅದು ದೊಡ್ಡ ಕೆಲಸವಾಗಿತ್ತು. ನಂತರ ವ್ಯಕ್ತಿಯ ಪಾಪಗಳು ನಿಜವಾಗಿಯೂ ಕ್ಷಮಿಸಲ್ಪಟ್ಟಿವೆ ಎಂಬುದಕ್ಕೆ ಸಾಕ್ಷಿಯನ್ನು ಒದಗಿಸಲು ಯೇಸು ಆತನ ದೇಹವನ್ನು ಸಹ ಗುಣಪಡಿಸುತ್ತಾನೆ(ವಚನ10)

ಒಬ್ಬ ಮನುಷ್ಯನ ಆತ್ಮ ಅಥವಾ ಅಂತರ್ಯವನ್ನು ಪಾಪದಿಂದ ಶುದ್ಧಿಮಾಡದೆಯೇ ಆತನ ದೈಹಿಕ ಅನಾರೋಗ್ಯವನ್ನು ಗುಣಪಡಸುವದೆಂದರೆ ಮುಳ್ಳನ್ನು ತೆಗೆಯದೆ ಮುಳ್ಳಿನಿಂದಾದ ಗಾಯಕ್ಕೆ ಔಷದ ಪಟ್ಟಿಯನ್ನು ಕಟ್ಟಿದ ಹಾಗಿರುವದು. ಯೇಸು ಮುಖ್ಯವಾಗಿ ಮಾನವನನ್ನು ಪಾಪದಿಂದ ಶುದ್ದೀಕರಿಸಿ, ರಕ್ಷಿಸಲು ಬಂದನು. ಅದರ ಜೊತೆಗೆ ತನ್ನ ಕರುಣೆ ಮತ್ತು ಶಕ್ತಿಯನ್ನು ತೋರ್ಪಡಿಸಲು ಯೇಸು ಮಾನವರ ದೇಹಗಳನ್ನು ಸಹ ಗುಣಪಡಿಸಿದನು. ಮಾನವನು ಶರೀರ, ಆತ್ಮ ಮತ್ತು ಪ್ರಾಣಗಳಲ್ಲಿ ಸಂಪೂರ್ಣ ಗುಣಹೊಂದ ಬೇಕೆಂಬುದು ದೇವರ ಬಯಕೆಯಾಗಿದೆ.

**6-7** ಈ ವಚನಗಳಲ್ಲಿ ಯೇಸುವಿಗೆ ಉಂಟಾಗುವ ವಿರೋದಗಳ ಪ್ರಾರಂಭವನ್ನು ನೋಡುತ್ತೇವೆ. ಒಬ್ಬನ ಕಾರ್ಯವು ಎಷ್ಟು ಒಳ್ಳೆಯ ಅಥವಾ ಕರುಣೆಯುಳ್ಳದ್ದಾಗಿದ್ದರೂ ಸಹ ಅದರಲ್ಲಿ ತಪ್ಪನ್ನು ಕಂಡು ಹಿಡಿಯುವ ಕೆಲವರು ಯಾವಾಗಲೂ ಇದ್ದೇ ಇರುತ್ತಾರೆ. ಶಾಸ್ತ್ರಿಗಳಲ್ಲಿ (ಧರ್ಮೋಪದೇಶಕರಲ್ಲಿ) ಕೆಲವರು (ಮಾರ್ಕ 1:22 ನೋಡಿರಿ). ಯೇಸು ಪಾರ್ಶ್ವವಾಯು ವ್ಯಕ್ತಿಯ ಪಾಪಗಳ ಕ್ಷಮಿಸುವದನ್ನು ಕೇಳಿಸಿಕೊಂಡರು. ಅವರ ದೃಷ್ಠಿಯಲ್ಲಿ ಯೇಸು ದೈವದೂಷಣೆ ಮಾಡಿದವನಂತೆ ಕಂಡನು, ಯಾಕೆಂದರೆ ಪಾಪಗಳನ್ನು ಕ್ಷಮಿಸುವ ಅಧಿಕಾರ ದೇವರಿಗೆ ಮಾತ್ರ ಇದೆಯೆಂದು ಅವರಿಗೆ ತಿಳಿದಿತ್ತು. ಅವರ ಅಭಿಪ್ರಾಯದಲ್ಲಿ ದೇವರಿಗೆ ಮಾತ್ರವೇ ಸೇರಿದ್ದ ಅಧಿಕಾರವನ್ನು ಯೇಸು ತೆಗೆದುಕೊಳ್ಳುತ್ತಿದ್ದಾನೆ. ಹೀಗೆ ಮಾಡುವದರ ಮೂಲಕ ಆತನು ದೇವರನ್ನು ಅವಮಾನಿಸುತ್ತಿದ್ದಾನೆ; ದೇವರ ಮಹಿಮೆಯನ್ನು ತನ್ನದಾಗಿಸಿಕೊಳ್ಳುತ್ತಿದ್ದಾನೆ, ಆತನು "ದೇವರು ಮಾಡುವದನ್ನು ನಾನು ಮಾಡಬಲ್ಲೆನು" ಎಂದು ಕೊಚ್ಚಿಕೊಳ್ಳುತ್ತಿದ್ದಾನೆ!

ಶಾಸ್ತ್ರಿಗಳು ಒಂದು ವಿಧದಲ್ಲಿ ಸರಿಯಾಗಿರುತ್ತಾರೆ: ದೇವರು ಮಾತ್ರವೇ ಪಾಪಗಳನ್ನು ಕ್ಷಮಿಸಬಲ್ಲನೆಂಬುದು ಸತ್ಯವೇ. ಆದರೆ ಯೇಸು ಸ್ವತಃ ದೇವರಾಗಿದ್ದಾನೆಂಬುದನ್ನು ಅವರು ಗ್ರಹಿಸಿಕೊಳ್ಳಲಿಲ್ಲ!

**8-12** ಈ ಶಾಸ್ತ್ರಿಗಳ ಆಲೋಚನೆಗಳನ್ನು ಯೇಸು ತಿಳಿದವನಾಗಿದ್ದನು. ತಾನು ಪಾಪಗಳನ್ನು ಕ್ಷಮಿಸುವ ಅಧಿಕಾರ ಹೊಂದಿದ್ದನ್ನು. ಅವರು ಸಂಶಯಿಸಿದರೆಂದು ಆತನಿಗೆ ತೋರಿತು. ಅವರು ಯೋಚಿಸಿದ್ದೇನೆಂದರೆ, "ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ" ಎಂದು ಯಾರಾದರೂ ಹೇಳಬಹುದು. ಅದನ್ನು ಹೇಳುವದು ಸುಲಭ. ಆದರೆ ಒಬ್ಬರನ್ನು ಗುಣಪಡಿಸುವದು ಸುಲಭವೇನಲ್ಲ. ಆದುದರಿಂದ ಅದಕ್ಕೆ ಪ್ರತಿಯಾಗಿ ಯೇಸು" ಹಾಗಾದರೆ, ಪಾಪಗಳನ್ನು ಕ್ಷಮಿಸಲು ನನಗೆ ಅಧಿಕಾರವಿದೆಯೆಂದು ನಿರೂಪಿಸಲು ನಾನು ಈ ವ್ಯಕ್ತಿಯನ್ನು ಸ್ವಸ್ಥಪಡಿಸುವೆನು. ನಿಮ್ಮ ದೃಷ್ಠಿಯಲ್ಲಿ ಯಾವದು ಕಷ್ಟವೋ ಅದನ್ನು ನಾನು ಮಾಡುತ್ತೇನೆ, ಹೀಗೆ ನಾನು ಬರಿದಾದ ಮಾತುಗಳನ್ನು ಆಡುತ್ತಿಲ್ಲವೆಂದು ನಿಮಗೆ ಗೊತ್ತಾಗುವದು" ಎಂದು ಹೇಳಿದನು. ಅದರಂತೆ ಆತನು ಪಾರ್ಶ್ವವಾಯು ವ್ಯಕ್ತಿಗೆ ತನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ ಎಂದನು. ಮತ್ತು ತಕ್ಷಣವೇ ಯೇಸುವಿನ ಮಾತಿನ ಶಕ್ತಿಯಿಂದ ಆ ವ್ಯಕ್ತಿಯು ಗುಣಹೊಂದಿ ನಡೆಯುತ್ತಾ ಹೊರಗೆ ಹೋದನು.ಆದಕಾರಣ ಈ ಅದ್ಭುತಕಾರ್ಯವು ಕೇವಲ ಒಂದು ಕರುಣೆಯ ಕ್ರಿಯೆ ಅಲ್ಲ ಆದರೆ ಯೇಸು ನಿಜವಾಗಿಯೂ ದೇವರ ಪೂರ್ಣ ಸ್ವಭಾವ ಮತ್ತು ಅಧಿಕಾರವನ್ನು ಹೊಂದಿದ್ದಾನೆಂಬುದಕ್ಕೆ ನಮಗೊಂದು ಗುರುತಾಗಿದೆಯೆಂದು ನಾವು ಅರ್ಥಮಾಡಿಕೊಳ್ಳೋಣ. ದೇವರ ರಾಜ್ಯವು ನಿಜವಾಗಿಯೂ ಮಾನವರ ಮದ್ಯದಲ್ಲಿ ಬಂದಿದೆ ಯೆಂಬದಕ್ಕೆ ಇದೊಂದು ಸಂಕೇತವಾಗಿದೆ.

ವಚನ10ಲ್ಲಿ ಯೇಸು ತನ್ನನ್ನು ಮನುಷ್ಯಕುಮಾರನೆಂದು ಕರೆದು ಕೊಳ್ಳುತ್ತಾನೆ. ಇದು ಸಾಮಾನ್ಯವಾಗಿ ಯೇಸು ತನಗೆ ನೀಡಿದ ಹೆಸರಾಗಿತ್ತು. ಯೇಸು ಸಂಪೂರ್ಣ ದೇವರಾಗಿದ್ದರೂ (ಕೊಲೊಸ್ಸೆ 2:9 ಮತ್ತು ವ್ಯಾಖ್ಯಾನ ನೋಡಿರಿ). ಆತನು ಮರಿಯಳೆಂಬ ಸ್ತ್ರೀಯಲ್ಲಿ ಹುಟ್ಟಿದ ಸಂಪೂರ್ಣವಾದ ಮಾನವನು ಸಹ (ಫಿಲಿಪ್ಪಿ 2:5-8, ಮತ್ತು ವ್ಯಾಖ್ಯಾನ ನೋಡಿರಿ) ಆಗಿದ್ದಾನೆಂದು ಇದರರ್ಥವಾಗಿದೆ. ಈ ಕಾರಣದಿಂದಲೇ ಯೇಸು ತನ್ನನ್ನು ಮನುಷ್ಯಕುಮಾರನೆಂದು ಕರೆದನು (ದಾನಿಯೇಲ 7:13-14, ಯೋಹಾನ 1:51, ಮತ್ತು ವ್ಯಾಖ್ಯಾನ ನೋಡಿರಿ).

## ಲೇವಿಯನ ಕರೆಯುವಿಕೆ (2:13-17)

(ಮತ್ತಾಯ 9:9-13, ಲೂಕ 5:27-32)

**13-14** ಲೇವಿಯನು ಮತ್ತಾಯ 9:9[16] ರಲ್ಲಿ ಮತ್ತಾಯನು ಉಲ್ಲೇಖಿಸಿದ ಅದೇ ವ್ಯಕ್ತಿಯಾಗಿದ್ದಾನೆ. ಈತನು ಒಬ್ಬ ಯೆಹೂದ್ಯನಾಗಿದ್ದರೂ ಗಲಿಲಾಯವನ್ನು[17] ಆಳುತ್ತಿದ್ದ ಅರಸನಾದ ಹೆರೋದನ ಸರ್ಕಾರದಲ್ಲಿ ಇವನೊಬ್ಬ ಸುಂಕ ವಸೂಲಿಗಾರನಾಗಿದ್ದನು. ಸುಂಕ ವಸೂಲಿಗಾರರನ್ನು ಪ್ರತಿಯೊಬ್ಬರೂ ದ್ವೇಷಿಸಿ ಹೀನಾಯವಾಗಿ ಕಾಣುತ್ತಿದ್ದರು. ಯಾಕೆಂದರೆ ಅವರು ಕಾನೂನಿಗೆ ಬದ್ಧವಾದ ಸುಂಕಕ್ಕಿಂತಲೂ ಹೆಚ್ಚು ಸುಂಕವನ್ನು ವಸೂಲಿ ಮಾಡಿ ತಮಗಾಗಿ ಇಟ್ಟುಕೊಳ್ಳುತ್ತಿದ್ದರು. ಹೀಗೆ ಅವರು ಶ್ರೀಮಂತರಾದರು. ಇಂತಹ ಒಬ್ಬ ದುಷ್ಕೃತ್ಯ ಮಾಡುವವನಾದ ಸುಂಕ ವಸೂಲಿಗಾರನನ್ನು ಯೇಸು ತನ್ನ ಶಿಷ್ಯರಲ್ಲೊಬ್ಬನನ್ನಾಗಿ ಆರಿಸಿಕೊಳ್ಳುವದು ಒಂದು ಆಶ್ಚರ್ಯಕರ ಸಂಗತಿಯಾಗಿದೆ (ಲೂಕ 19:2-7 ಮತ್ತು ವ್ಯಾಖ್ಯಾನ ನೋಡಿರಿ).

ಆದಾಗ್ಯು ನಾವು ಇಲ್ಲಿ ಯೇಸುವಿನ ಕೃಪೆ ಮತ್ತು ಜ್ಞಾನವನ್ನು ನೋಡುತ್ತೇವೆ: ಅಂತಹ ಪಾಪಿಯನ್ನು ಕರೆಯುವ ಕೃಪೆ ಮತ್ತು ಗ್ರೀಕ ಹಾಗು ಆರಾಮಿಕ[18] ಭಾಷೆಗಳೆರಡನ್ನೂ ಮಾತನಾಡಬಲ್ಲ ವ್ಯಕ್ತಿಯನ್ನು ಕರೆಯುವ ಜ್ಞಾನ ಮತ್ತು ಲೇವಿಯನು ತಾನು ಕರೆಯಲ್ಪಟ್ಟಾಗ ಏನು ಮಾಡಿದನು? ಆತನು ತಕ್ಷಣವೇ ತನ್ನ ಐಶ್ವರ್ಯವನ್ನು ತೊರೆದು ಯೇಸುವನ್ನು ಹಿಂಬಾಲಿಸಿದನು. ಆತನು ತನ್ನ ಲೇಖನಿ ಹಾಗು ಬರೆಯುವ ಕಾಗದವನ್ನು ಹೊರತು ಪಡಿಸಿ ಉಳಿದೆಲ್ಲವನ್ನೂ ತೊರೆದುಬಿಟ್ಟನು. ಅನಂತರ ಇದೇ ಲೇವಿಯನು ಅಂದರೆ ಮತ್ತಾಯನು ಹೊಸ ಒಡಂಬಡಿಕೆಯಲ್ಲಿ ಪ್ರಥಮ ಪು ಸ್ತಕವಾದ ಮತ್ತಾಯನ ಸುವಾರ್ತೆಯನ್ನು ಬರೆಯುವವನಾದನು. ಇಲ್ಲಿ ನಾವು ಗಮನಿಸ ಬೇಕಾದದ್ದೇನೆಂದರೆ ಲೇವಿಯನು ಯೇಸುವನ್ನು ಆರಿಸಿಕೊಳ್ಳಲಿಲ್ಲ, ಯೇಸುವೇ ಮೊದಲು ಅವನನ್ನು ಆರಿಸಿಕೊಂಡನು. ಅದೇ ರೀತಿಯಲ್ಲಿ ಯೇಸು ಮೊದಲು ನಮ್ಮನ್ನು ಆರಿಸಿಕೊಳ್ಳುತ್ತಾನೆ, ಆಗ ಮಾತ್ರವೇ ನಾವು ಎದ್ದು ಆತನನ್ನು ಹಿಂಬಾಲಿಸುತ್ತೇವೆ (ಯೋಹಾನ 15:16).

**15** ಲೇವಿಯನು ತಾನು ಯೇಸುವಿನಿಂದ ಹೊಂದಿಕೊಂಡ ನೂತನ ಆನಂದ, ಬಿಡುಗಡೆ ಹಾಗು ರಕ್ಷಣೆಯನ್ನು ಕೊಂಡಾಡಲು ಆತನು ತನ್ನ ಮನೆಯಲ್ಲಿ ಔತಣವನ್ನು ಏರ್ಪಡಿಸಿ ತನ್ನ ಹಳೆಯ ಸ್ನೇಹಿತರು ಹಾಗು ಕೆಲಸದ ಸಹ ಪಾಲಿಗಳನ್ನು ಯೇಸುವನ್ನು ಸಂಧಿಸಲು ಆಮಂತ್ರಿಸಿದನು. ಅವರು ಸಹ ರಕ್ಷಣೆಯನ್ನು ಕಂಡುಕೊಳ್ಳಲು ಅವಕಾಶವನ್ನು ಹೊಂದಬೇಕೆಂದು ಆತನು ಇಚ್ಛಿಸಿದನು. ಕ್ರಿಸ್ತನ ಆಶೀರ್ವಾದಗಳನ್ನು ನಮಗಾಗಿಯೇ ಇಟ್ಟುಕೊಳ್ಳದೆ ಹಂಚಿಕೊಳ್ಳಲ್ಪಡಬೇಕು. ನಾವು ನಮ್ಮ ನೂತನ ಜೀವನವನ್ನು ಇತರರೊಂದಿಗೆ ಹಂಚಿಕೊಳ್ಳದೆ ಹೋದರೆ ಅದು ಶೀಘ್ರವೇ ಒಣಗಿ ಹೋಗುವದು.

**16-17** ಫರಿಸಾಯರಾದ [19] ಶಾಸ್ತ್ರಿಗಳಲ್ಲಿ ಕೆಲವರು ಯೇಸು ಸುಂಕ ವಸೂಲಿಗಾರರಂತಹ ಪಾಪಿಗಳ ಸಂಗಡ ಊಟ ಮಾಡುವದನ್ನು ಒಪ್ಪಿಕೊಳ್ಳಲಿಲ್ಲ.

ಪುನ: ಇಲ್ಲಿ ನಾವು ಒಳ್ಳೆಯ ಕಾರ್ಯಗಳ ವಿರುದ್ಧ ಜನರು ಎಷ್ಟು ಬೇಗ ಕೆಟ್ಟದ್ದಾಗಿ ಮಾತನಾಡುತ್ತಾರೆಂದು ನೋಡುತ್ತೇವೆ. ಆದರೆ ಯೇಸು ಉತ್ತರಿಸಿ "ನಾನು ನೀತಿವಂತರನ್ನು ಕರೆಯುವದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವದಕ್ಕೆ ಬಂದವನು" ಎಂದು ಉತ್ತರಿಸಿದನು (ವಚನ 17). ನೀತಿವಂತರು ತಮ್ಮನ್ನು ತಾವೇ ನೀತಿವಂತರೆಂದು ಪರಿಗಣಿಸಿಕೊಳ್ಳುವ ಫರಿಸಾಯರಂತೆ ಇದ್ದಾರೆ. ಅವರ ಮನಸ್ಸಿನಲ್ಲಿ ರಕ್ಷಕನ ಅಗತ್ಯತೆ ಅವರಿಗಿಲ್ಲ. ಅವರು ಯೇಸುವಿನ ಮಾತನ್ನು ಕೇಳುವದಿಲ್ಲ. ತಾವು ಪಾಪಿಗಳೆಂದು ಒಪ್ಪಿಕೊಳ್ಳುವವರು ಮಾತ್ರವೇ ಯೇಸುವಿನ ಕರೆಯನ್ನು ಆಲಿಸಬಲ್ಲರು. ಮತ್ತು ಪಶ್ಚಾತಾಪ ಪಡುವವರು ಮಾತ್ರವೇ ಆತ್ಮೀಕವಾಗಿ ಗುಣಹೊಂದಬಲ್ಲರು. ಯೇಸು ಮನುಷ್ಯನ ದೇಹದ ವೈದ್ಯನು ಮಾತ್ರವೇ ಅಲ್ಲ, ಆತನು ಮನುಷ್ಯನ ಆತ್ಮಕ್ಕೂ ವೈದ್ಯನಾಗಿದ್ದಾನೆ, ಮತ್ತು ಆತ್ಮದ ಮುಖ್ಯ

ವ್ಯಾಧಿಯು ಪಾಪವೇ ಆಗಿದೆ. ಯೇಸುವನ್ನು ಹೊರತು ಪಡಿಸಿ ಆತ್ಮವನ್ನು ಪಾಪದಿಂದ ಗುಣಪಡಿಸಬಹುದಾದ ಇನ್ನಾವ ವೈದ್ಯರೂ ಇರುವದಿಲ್ಲ. ಮತ್ತಾಯ 9:13 ರ ಪ್ರಕಾರವಾಗಿ ಯೇಸು ಫರಿಸಾಯರಿಗೆ ದೇವರು ಪ್ರವಾದಿಯಾದ ಹೋಶೆಯನ ಮೂಲಕ ಹೇಳಿದ ಮಾತನ್ನು ಜ್ಞಾಪಕಪಡಿಸಿದನು, ಅದೇನೆಂದರೆ "ನನಗೆ ಯಜ್ಞವು ಬೇಡ, ಕರುಣೆಯೇ ಬೇಕು" (ಹೋಶೆಯ 6:6). ಫರಿಸಾಯರು ತಾವು ಸರಿಯಾದ ಯಜ್ಞಗಳನ್ನು ಹೊತ್ತೊಯ್ಯುವದರ ಮೂಲಕ ಮತ್ತು ಯೆಹೂದ್ಯ ಧರ್ಮಶಾಸ್ತ್ರಕ್ಕೆ ವಿಧೇಯರಾಗುವದರ ಮೂಲಕ ದೇವರನ್ನು ಮೆಚ್ಚಿಸಬಹುದೆಂದು ಯೋಚಿಸಿದನು. ಆದರೆ ದೇವರು ಮೆಚ್ಚುವದು ಕರುಣೆಯನ್ನು ಎಂದು ಯೇಸು ಹೇಳುತ್ತಾನೆ. ಫರಿಸಾಯರಂತೆ ಪಾಪಿಗಳಿಂದ ದೂರವಿದ್ದು ಅವರನ್ನು ಶಪಿಸುವದರ ಬದಲಾಗಿ ಯೇಸು ಅವರ ಹತ್ತಿರ ಹೋಗಿ ಅವರನ್ನು ಕರೆದನು, ಅವರನ್ನು ಕ್ಷಮಿಸಿದನು ಹಾಗು ಪ್ರೀತಿಸಿದನು.

## ಯೇಸುವನ್ನು ಉಪವಾಸದ ಕುರಿತು ಪ್ರಶ್ನಿಸಿದ್ದು (2:18-22)

(ಮತ್ತಾಯ 9:14-17, ಲೂಕ 5:33-39).

**18-19** ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರವಾಗಿ ಯೆಹೂದ್ಯರು ವರ್ಷಕ್ಕೆ ಒಂದಾವರ್ತಿ ದೋಷ ಪರಿಹಾರಕ ದಿನದಂದು ಮಾತ್ರವೇ ಉಪವಾಸ ಮಾಡಬೇಕಿತ್ತು (ಯಾಜಕಕಾಂಡ 23:27-29). ಆದರೆ ಜನರ ಕಣ್ಣುಗಳಲ್ಲಿ ನೀತಿವಂತರಾಗಿ ಕಾಣುವದಕ್ಕಾಗಿ ಫರಿಸಾಯರು ಇನ್ನು ಅನೇಕ ಉಪವಾಸ ದಿನಗಳನ್ನು ಆಚರಿಸುತ್ತಿದ್ದರು. ಅಂತಹ ಉಪವಾಸದಿನಗಳೊಂದರಲ್ಲಿ ಫರಿಸಾಯರು ಮತ್ತು ಸ್ನಾನಿಕನಾದ ಯೋಹಾನನ ಶಿಷ್ಯರುಗಳು ಉಪವಾಸ ಮಾಡುತ್ತಿದ್ದರು. ಆದರೆ ಯೇಸು ಮತ್ತು ಆತನ ಶಿಷ್ಯರು ಮಾಡುತ್ತಿರಲಿಲ್ಲ. ಕೆಲವು ಯೆಹೂದ್ಯರು ಯೇಸುವಿನ ಶಿಷ್ಯರು ಯೆಹೂದ್ಯ ಸಂಪ್ರದಾಯಗಳನ್ನು ಅನುಸರಿಸುತ್ತಿಲ್ಲವೆಂದು ಆರೋಪ ಹೊರಿಸಲು ಪ್ರಯತ್ನಿಸಿದರು. ಆದರೆ ಯೇಸು ಅವರಿಗೆ, ನಾನು ಅವರೊಂದಿಗಿರುವಾಗ ನನ್ನ ಶಿಷ್ಯರು ಏಕೆ ಉಪವಾಸ ಮಾಡಬೇಕು?

ಇದು ಮದುವೆಯ ಔತಣವಿದ್ದಂತೆ ಇರುತ್ತದೆ. ಮದಲಿಂಗನು ಸಂಗಡ ಇರುವಾಗ ಯಾರೂ ಉಪವಾಸಮಾಡುವದಿಲ್ಲ, ಅದು ಉಣ್ಣುವ ಮತ್ತು ಸಂತೋಷಿಸುವ ಸಮಯವಾಗಿರುತ್ತದೆ " ಎಂದು ಹೇಳಿದನು. ಹೇಗೂ, ಸ್ನಾನಿಕನಾದ ಯೋಹಾನನ ಶಿಷ್ಯರಿಗೆ ಉಪವಾಸ ಮಾಡುವದು ಸರಿಹೊಂದುತ್ತಿತ್ತು ಯಾಕೆಂದರೆ ಯೋಹಾನನು ಸೆರೆಮನೆಗೆ ಹಾಕಲ್ಪಟ್ಟಿದ್ದಾನೆ (ಮಾರ್ಕ1:14). ಆದರೆ ಯೇಸುವಿನ ಶಿಷ್ಯರು ಉಪವಾಸ ಮಾಡುವದು ಸರಿಹೊಂದದ್ದಾಗಿತ್ತು ಯಾಕೆಂದರೆ ಆತನು ಇನ್ನೂ ಅವರೊಂದಿಗಿದ್ದನು. ಆಕಾಶದ ಕೆಳಗೆ ನಡೆಯುವ ಒಂದೊಂದು ಕೆಲಸಕ್ಕೂ ತಕ್ಕ ಸಮಯವು ಂಟು..... ಅಳುವ ಸಮಯ, ನಗುವ ಸಮಯ, ಗೋಳಾಡುವ ಸಮಯ, ಕುಣಿದಾಡುವ ಸಮಯ (ಪ್ರಸಂಗಿ 3:1,4).

**20** ಅನಂತರ ಯೇಸು ಅವರಿಗೆ, ಮದಲಿಂಗನನ್ನು ಅವರ ಬಳಿಯಿಂದ ತೆಗೆದು ಕೊಂಡು ಹೋಗುವ ಕಾಲ ಬರುತ್ತದೆ ಎಂದು ಹೇಳಿದನು. ಅಂದರೆ ಒಂದು ದಿನ ತಾನು ಕೊಲ್ಲಲ್ಪಡುವೆನೆಂದು ಅವನರ್ಥವಾಗಿತ್ತು. ಆಗ ಆತನ ಶಿಷ್ಯರು ಗೋಳಾಡಿ ಉಪವಾಸ ಮಾಡುವ ಸಮಯವಾಗಿರುತ್ತದೆ.

**21** ಯೇಸುವಿನ ಶಿಷ್ಯರನ್ನು ಹಳೆಯ ಯೆಹೂದ್ಯ ಸಂಪ್ರದಾಯಗಳನ್ನು [20] ಅನುಸರಿಸುವಂತೆ ಮಾಡುವದು ಹರಿದು ಹೋದ ಹಳೆಯ ಬಟ್ಟೆಯ ಮೇಲೆ ಹೊಸಬಟ್ಟೆಯ ತ್ಯಾಪೆ ಹಚ್ಚಿದಹಾಗೆ ಅಸಮರ್ಪಕವಾಗಿರುತ್ತದೆ. ಹೊಸ ಬಟ್ಟೆಯು ಹಳೆಯ ಬಟ್ಟೆಯಿಂದ ಸವೆದು ಹರಿದು ಹೋಗುತ್ತದೆ ಮತ್ತು ರಂಧ್ರವು ದೊಡ್ಡದಾಗುತ್ತದೆ. ಒಬ್ಬ ಕ್ರೈಸ್ತನ ಹೊಸ ಆತ್ಮೀಕ ಜೀವನವು ಪ್ರಪಂಚದ ಹಳೆಯ ಸಂಪ್ರದಾಯಗಳೊಂದಿಗೆ ಸರಳವಾಗಿ ಸೇರಿಕೊಳ್ಳುವದಿಲ್ಲ.

**22** ಅದೇ ವಿಧದಲ್ಲಿ ಹಳೆಯ ಬುದ್ದಲಿಯಲ್ಲಿ [21] ಹೊಸ ದ್ರಾಕ್ಷಾರಸವನ್ನು ಹಾಕಕೂಡದು. ಹೊಸ ದ್ರಾಕ್ಷಾರಸವು ವಿಸ್ತಾರಗೊಂಡು ಹಳೆಯ ಬುದ್ದಲಿಯನ್ನು ಒಡೆದು ದ್ರಾಕ್ಷಾರಸವು ಬುದ್ದಲಿಗಳು ಎರಡೂ ಕೆಟ್ಟು ಹೋಗುವವು. ಹೊಸ

ದ್ರಾಕ್ಷಾರಸಕ್ಕೆ ಹಿರಿದಾಗುವ ಹೊಸ ಬುದ್ದಲಿಗಳು ಅಗತ್ಯ. ಅದೇ ರೀತಿಯಲ್ಲಿ ಹೊಸ ಆತ್ಮೀಕ ಜೀವಿತಕ್ಕೆ ಹೊಸ ನಡವಳಿಕೆ ಬೇಕು. ಉಪವಾಸವನ್ನು ಯೆಹೂದ್ಯರು ಮುಖ್ಯವಾಗಿ ಸಂಕಷ್ಟದ ಸಮಯಗಳಲ್ಲಿ ಅಥವಾ ನ್ಯಾಯತಿರ್ಪಿನ ಭಯದಿಂದಾಗಿ ಮಾಡುತ್ತಿದ್ದರು. ಆದರೆ ಯೇಸು ಕ್ರಿಸ್ತನು ಆನಂದ ಮತ್ತು ರಕ್ಷಣೆಯನ್ನು ತಂದಿದ್ದಾನೆ, ಆದುದರಿಂದ ಸಂಕಷ್ಟ ಅಥವಾ ಭಯದ ಕಾರಣದಿಂದಾಗಿ ಉಪವಾಸಮಾಡುವದು ಇನ್ನೆಂದಿಗೂ ಸರಿಯಲ್ಲ.

ಹಾಗಿದ್ದರೂ, ನಾವು ಉಪಪಾಸ ಮಾಡಲೇಬಾರದೆಂದು ಯೇಸು ಬೋಧಿಸುವದಿಲ್ಲ (ಮತ್ತಾಯ 6:16-18). ವಿಶೇಷ ಪ್ರಾರ್ಥನಾ ವೇಳೆಗಳಲ್ಲಿ ವಿಶೇಷವಾಗಿ ಪ್ರಾಮುಖ್ಯದ ತಿರ್ಮಾನಗಳನ್ನು ಮಾಡಬೇಕಾದ ಸಮಯಗಳಲ್ಲಿ ಉಪವಾಸ ಮಾಡುವದು ಉತ್ತಮವಾದದ್ದು (ಅ.ಕೃತ್ಯ 13:2-3, 14:23). ಯೇಸು ಶೋಧನೆಗೊಳಗಾದ ವೇಳೆಯಲ್ಲಿ ನಾಲ್ವತ್ತು ದಿನ ಉಪವಾಸ ಮಾಡಿದನು (ಮತ್ತಾಯ 4:2) ಕ್ರೈಸ್ತರು ಯಾವದೇ ನಿಯಮ ಅಥವಾ ನೀತಿವಂತರಾಗಿ ಕಾಣಿಸಿಕೊಳ್ಳುವದಕ್ಕಾಗಿ ಉಪವಾಸ ಮಾಡುವದಿಲ್ಲ. ಆದರೆ ಉಪವಾಸದ ಮೂಲಕ ದೇವರನ್ನು ಹೆಚ್ಚು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಬಯಸುವದರಿಂದ ಉಪವಾಸ ಮಾಡುತ್ತಾರೆ. ಆದರೆ ನಾವು ಉಪವಾಸ ಮಾಡುವದರಿಂದ ಉಪವಾಸ ಮಾಡದಿರುವವರಿಗಿಂತ ಹೆಚ್ಚು ನೀತಿವಂತರಾಗಿ ಗುರುತಿಸಲ್ಪಡುವೆವು ಎಂದು ಯೋಚಿಸದಿರೋಣ. ನೀತಿವಂತಿಕೆಯು ಹೃದಯದಿಂದ ಬರುತ್ತದೆ ಹೊರತು ಹೊರಗಿನ ಆಚಾರಗಳನ್ನು ಅನುಸರಿಸುವದರಿಂದಲ್ಲ.

ಲೂಕನು ತನ್ನ ಸುವಾರ್ತೆಯಲ್ಲಿ ಈ ಭಾಗಕ್ಕೆ ಇನ್ನೊಂದು ಹೇಳಿಕೆಯನ್ನು ಸೇರಿಸುತ್ತಾನೆ:" ಇದಲ್ಲದೆ ಹಳೇ ದ್ರಾಕ್ಷಾರಸವನ್ನು ಕುಡಿದವನು ಹೊಸದು ಬೇಕು ಅನ್ನುವದಿಲ್ಲ, ಹಳೆಯದೆ ಉತ್ತಮ ಅನ್ನುವನು"(ಲೂಕ 5:39). ಕ್ರಿಸ್ತನನ್ನು ತಿರಸ್ಕರಿಸಿದ ಫರಿಸಾಯರು ಮತ್ತು ಇತರ ಯೆಹೂದ್ಯರು, ಯೆಹೂದ್ಯ ಧರ್ಮದ ಹಳೆಯ ದ್ರಾಕ್ಷಾರಸವನ್ನು ಇಷ್ಟಪಟ್ಟರು. ಅವರು ಕ್ರೈಸ್ತ ಜೀವನದ ಹೊಸ ದ್ರಾಕ್ಷಾರಸವನ್ನು ರುಚಿ ನೋಡಲು ಬಯಸಲಿಲ್ಲ.
ಆದರೆ ಯಾವನಾದರೂ ಕ್ರಿಸ್ತನ ಹೊಸ ದ್ರಾಕ್ಷಾರಸವನ್ನು ರುಚಿಸುವದಾದರೆ ಅವನು ಹಳೆಯದಕ್ಕೆ ಹಿಂದಿರುಗಲು ಇಚ್ಛಿಸುವದಿಲ್ಲ.

## ಸಬ್ಬತ್ ದಿನಕ್ಕೆ ಒಡೆಯನು (2:23-28)

(ಮತ್ತಾಯ 12:1-8, ಲೂಕ 6:1-5)

**23-24** ಯೆಹೂದ್ಯರ ನಿಯಮದ ಪ್ರಕಾರ ನೆರೆಯವನ ಪೈರಿನಲ್ಲಿನ ತೆನೆಗಳನ್ನು ಕೈಯಿಂದ ಮುರುಕೊಳ್ಳಬಹುದಾಗಿತ್ತು ಆದರೆ ಸಬ್ಬತ್ತಿನ ದಿನದಂದು ಆ ರೀತಿ ಮಾಡುವದು ನಿಯಮಕ್ಕೆ ವಿರುದ್ಧವಾಗಿತ್ತು (ಧರ್ಮೋಪದೇಶಕಾಂಡ 23:25). ಫರಿಸಾಯರು ಅದನ್ನು "ಕೊಯ್ಲು" ಎಂದು ಕರೆದರು, ಸಬ್ಬತ್ತಿನಂದು ಅದು ನಿಷೇಧಿಸಲ್ಪಟ್ಟಿತು (ವಿ.ಕಾಂಡ 34:21). ಯೆಹೂದ್ಯರ ಪ್ರಕಾರ ಸಬ್ಬತ್ತಿನಂದು [22] ಯಾವ ರೀತಿಯ ಕೆಲಸವನ್ನು ಮಾಡಬಾರದಾಗಿತ್ತು. ಮತ್ತು ತೆನೆಗಳನ್ನು "ಮುರುಕೊಳ್ಳುವದು" ಒಂದು ರೀತಿಯ ಕೆಲಸ ಎಂದು ಯೆಹೂದ್ಯರು ಪರಿಗಣಿಸಿದರು. ಆದುದರಿಂದ ಯೇಸುವಿನ ಶಿಷ್ಯರು ಸಬ್ಬತ್ತಿನ ನಿಯಮವನ್ನು ಉಲ್ಲಂಘಿಸಿದ್ದಾರೆಂದು ಆರೋಪಿಸಿದರು, ಯಾಕೆಂದರೆ ಅವರು ಹಸಿವೆಗೊಂಡವರಾಗಿ ತೆನೆಗಳನ್ನು ಮುರಿದು ಕೊಳ್ಳುತ್ತಿದ್ದರು.

**25-27** ಆದರೆ ಯೇಸು ಯೆಹೂದ್ಯರಿಗೆ ಅವರ ಅರಸನೇ ಆದ ದಾವಿದನು ಯೆಹೂದ್ಯ ನಿಯಮವೊಂದಕ್ಕೆ ಅವಿಧೇಯನಾದದ್ದನ್ನು ಜ್ಞಾಪಿಸುತ್ತಾನೆ. ಆತನು ಹಸಿವೆಗೊಂಡಿದ್ದನು. ಆದ್ದರಿಂದ ಯಾಜಕರಿಗೆ ಮಾತ್ರ ಸೀಮಿತವಾಗಿದ್ದ ವಿಶೇಷ ರೊಟ್ಟಿಯೊಂದನ್ನು ತಿಂದನು[23] (1 ಸಮುವೇಲ 21:1-6). ಯೇಸು ಹೇಳಿದ್ದರ ಇಂಗಿತವೇನೆಂದರೆ: ದೇವರು ಸಬ್ಬತ್ತನ್ನು ಮಾನವನ ಉಪಯೋಗಕ್ಕಾಗಿ ಮಾಡಿದನು ಹೊರತು ಭಾರವನ್ನು ಹೆಚ್ಚಿಸಲಿಕ್ಕಲ್ಲ (ವಿ. ಕಾಂಡ 20:8-11, 23:12). ಒಂದು ವೇಳೆ ಒಬ್ಬನು ಹಸಿವೆಗೊಂಡಿದ್ದರೆ ಸಬ್ಬತ್ತಿನಲ್ಲಿ ತಿನ್ನುವ ಹಕ್ಕು ಅವನಿಗಿತ್ತು. ಆದುದರಿಂದ ಶಿಷ್ಯರು ಸಬ್ಬತ್ತಿನಲ್ಲಿ ತಮ್ಮ ಹಸಿವೆಯನ್ನು ತೃಪ್ತಿಪಡಿಸಲು ತೆನೆಗಳನ್ನು ಮುರಿದು ಕೊಳ್ಳುವ ಹಕ್ಕನ್ನು ಹೊಂದಿದ್ದರು. ಸಬ್ಬತ್ತು ಮಾನವನಿಗಾಗಿ ಮಾಡಲ್ಪಟ್ಟಿತ್ತು ಆನಂದದ ದಿನವಾಗಿರಲೆಂದು ಬಯಸಿದನೇ ಹೊರತು ಹಸಿವೆಯದಿನವಲ್ಲ! ಫರಿಸಾಯರ ನಿಯಮಗಳು ಬಹಳ ಕಟ್ಟುನಿಟ್ಟಿನವಾಗಿದ್ದವು. ಅವರು ಸಬ್ಬತ್ತನ್ನು ದಬ್ಬಾಳಿಕೆಯ ದಿನವನ್ನಾಗಿ ಮಾರ್ಪಡಿಸಿದ್ದರು (ಯೋಹಾನ 5:10 ಮತ್ತು ವ್ಯಾಖ್ಯಾನ ನೋಡಿರಿ).

**28** ಮನುಷ್ಯಕುಮಾರನು ಅಂದರೆ ಯೇಸು ಸಬ್ಬತ್ತಿನ ಮೇಲೆ ಅಂತಿಮ ಅಧಿಕಾರವನ್ನು ಹೊಂದಿದ್ದಾನೆ. ಸಬ್ಬತ್ತಿನಲ್ಲಿ ಏನು ಮಾಡಬಹುದು ಮತ್ತು ಮಾಡಲ್ಪಡಕೂಡದು ಎಂಬುದನ್ನು ಆತನು ನಿರ್ಧರಿಸಬಹುದು. ಸಬ್ಬತ್ತಿನ ದಿನದಲ್ಲಿ ಅಗತ್ಯತೆಯ ಕಾರ್ಯಗಳನ್ನು (ಹಸಿವೆ ನೀಗಿಸಿಕೊಳ್ಳುವಂತಹ ಕಾರ್ಯಗಳು) ಮತ್ತು ಕರುಣೆಯ ಕಾರ್ಯಗಳನ್ನು (ಮಾರ್ಕ 3:1-5) ಮಾಡುವದು ನಿಯಮಕ್ಕನುಸಾರವಾದದ್ದು ಎಂಬದಾಗಿ ಯೇಸು ಬೋಧಿಸಿದನು.

ಮತ್ತಾಯ 12:5-7ರ ಪ್ರಕಾರವಾಗಿ ಇದೇ ಸಂದರ್ಭದ ವೇಳೆ ಯೇಸು ಸಬ್ಬತ್ತಿನ ದಿನದಂದು ಯಾಜಕರು ದೇವಾಲಯದಲ್ಲಿ ತಮ್ಮ ಯಾಜಕ ಕರ್ತವ್ಯಗಳನ್ನು ಮಾಡಬೇಕಾದ ಉದಾಹರಣೆಯನ್ನು ಸಹ ನೀಡುತ್ತಾನೆ. ಅರಸನಾದ ದಾವಿದನ ಹಾಗೆ ಅವರು ಸಹ ಸಬ್ಬತ್ತಿನ ನಿಯಮವನ್ನು "ಮುರಿದರು" ಆದರೆ ಅವರನ್ನು ತಪ್ಪಿತಸ್ಥರೆಂದು ಪರಿಗಣಿಸಲಿಲ್ಲ. ಆದರೆ ಈಗ ಅರಸನಾದವನಿಗಿಂತಲೂ ಶ್ರೇಷ್ಟ ನಾದವನು ಬಂದಿದ್ದಾನೆ, ಆತನು ಕ್ರಿಸ್ತನು. ಅಷ್ಟು ಮಾತ್ರವಲ್ಲದೆ "ದೇವಾಲಯಕ್ಕಿಂತಲೂ ಹೆಚ್ಚಿನವನು ಇದ್ದಾನೆ" ಎಂದು ಯೇಸು ಹೇಳುತ್ತಾನೆ (ಮತ್ತಾಯ 12:6). ಯೇಸು ಬಂದಮೇಲೆ

ದೇವಾಲಯದ ಎಲ್ಲಾ ನಿಯಮಗಳು ಮತ್ತು ಯಜ್ಞಗಳು ಅನಾವಶ್ಯಕವಾದವು . ಯೇಸು ನಿಜವಾದ ದೇವಾಲಯವಾಗಿದ್ದನು. ದೇವರ ಪ್ರಸನ್ನತೆಯು ದೇವಾಲಯದಲ್ಲಿದೆಯೆಂದು ಯೆಹೂದ್ಯರು ಯೋಚಿಸಿದರು. ಆದರೆ ನಿಜವಾಗಿಯೂ ದೇವರ ಪ್ರಸನ್ನತೆಯು ಸಂಪೂರ್ಣವಾಗಿ ಯೇಸುವಿನಲ್ಲಿತ್ತು. ದೇವಾಲಯದಲ್ಲಿ ಸೇವೆ ಮಾಡುತ್ತಿದ್ದ ಯಾಜಕರು ಸಬ್ಬತ್ತಿನ "ನಿಯಮವನ್ನು ಮುರಿಯ ಬಹುದಾಗಿದ್ದರೆ ನಿಶ್ಚಯವಾಗಿಯೂ ಯೇಸುವಿನ ಸೇವೆ ಮಾಡುತ್ತಿದ್ದ ಶಿಷ್ಯರೂ ಸಹ ಅದನ್ನು ಮುರಿಯಬಹುದು, ಯಾಕೆಂದರೆ ಕ್ರಿಸ್ತನು ದೇವಾಲಯಕ್ಕಿಂತಲೂ ಹೆಚ್ಚಿನವನಾಗಿದ್ದನು.

ಅಲ್ಲದೆ ಮತ್ತಾಯ 12:7 ರಲ್ಲಿ ಯೇಸು ಫರಿಸಾಯರಿಗೆ ಪು ನ: ದೇವರ ಮಾತುಗಳನ್ನು ಜ್ಞಾಪಕಪಡಿಸುತ್ತಾನೆ: ನನಗೆ ಯಜ್ಞವು ಬೇಡ, ಕರುಣೆಯೇ ಬೇಕು" (ಹೋಶೇಯ 6:6, ಮತ್ತಾಯ9:13). ದೇವರ ದೃಷ್ಟಿಯಲ್ಲಿ ಸಬ್ಬತ್ತಿನಂದು ಯೆಹೂದ್ಯರ ಎಲ್ಲಾ ಆಚಾರ ಮತ್ತು ಯಜ್ಞಗಳನ್ನು ಅನುಸರಿಸುವದಕ್ಕಿಂತಲೂ ಕರುಣೆಯನ್ನು ತೋರಿಸುವದು ಹೆಚ್ಚು ಪ್ರಾಮುಖ್ಯವಾಗಿತ್ತು. ಒಂದು ವೇಳೆ ಯೆಹೂದ್ಯರು ದೇವರ ಈ ಮಾತುಗಳನ್ನು ನೆನಪಿನಲ್ಲಿಟ್ಟುಕೊಂಡಿದ್ದರೆ ಅವರು ಯೇಸುವಿನ ಶಿಷ್ಯರ ಮೇಲೆ ಸಬ್ಬತ್ತಿನ ನಿಯಮವನ್ನು ಮೀರಿದ ಆರೋಪ ಹೊರಿಸುತ್ತಿರಲಿಲ್ಲ.

---

# ಅಧ್ಯಾಯ - 3

## ಕೈ ಬತ್ತಿ ಹೋದ ಮನುಷ್ಯ (3:1-12)

(ಮತ್ತಾಯ 12:9-16, ಲೂಕ 6:6-11, 17-19)

**1-3** ಇನ್ನೊಂದು ಸಬ್ಬತ್ತಿನ ದಿನದಲ್ಲಿ ಯೇಸು ಕೈ ಬತ್ತಿಹೋದವನೊಬ್ಬನನ್ನು ಕಂಡನು. ಯೆಹೂದ್ಯ ಸಂಪ್ರದಾಯದ ಪ್ರಕಾರ ಸಬ್ಬತ್ತಿನಂದು ಜೀವವನ್ನು ಕಾಪಾಡುವದು ಮಾತ್ರವೇ ಕಾನೂನು ಬದ್ಧವಾಗಿತ್ತು. ಇತರ ಎಲ್ಲಾ ಸ್ವಸ್ಥತೆಯ ಕಾರ್ಯಗಳಿಗಾಗಿ ಮರುದಿನದ ವರೆಗೆ ಕಾಯಬೇಕಿತ್ತು. ಆದುದರಿಂದ ಯೆಹೂದ್ಯರು ಯೇಸು ಏನು ಮಾಡುವನೋ ಎಂದು ಹೊಂಚಿನೋಡುತ್ತಿದ್ದರು. ಯೆಹೂದ್ಯ ನಿಯಮದ ಪ್ರಕಾರ ಸಬ್ಬತ್ತಿನ ನಿಯಮವನ್ನು ಮೀರುವದು ಗಂಭೀರವಾದ ಅಪರಾಧವಾಗಿತ್ತು. ಆ ಅಪರಾಧಕ್ಕೆ ಶಿಕ್ಷೆಯು ಮರಣವೇ ಆಗಿತ್ತು (ವಿಮೋಚನ ಕಾಂಡ 31:14-17).

**4** ಯೆಹೂದ್ಯರು ಸಬ್ಬತ್ತಿನ ಉದ್ದೇಶ ಮತ್ತು ಅರ್ಥವನ್ನು ವಿರೂಪಗೊಳಿಸಿದರು. ಒಂದು ಕುರಿಯು ಹಳ್ಳದಲ್ಲಿ ಬೀಳುವದಾದರೆ ಅವರು ಸಬ್ಬತ್ತಿನಲ್ಲಿ ಮೇಲಕ್ಕೆ ಎತ್ತುತ್ತಿದ್ದರು (ಮತ್ತಾಯ 12:11-12). ಹಾಗಾದರೆ ಏಕೆ ಅವರು ಸಬ್ಬತ್ತಿನಲ್ಲಿ ಮನುಷ್ಯನಿಗೆ ಕರುಣೆತೋರಿಸುವದಿಲ್ಲ? ಒಬ್ಬನು ಮನುಷ್ಯನು ಕುರಿಗಿಂತಲೂ ಎಷ್ಟೋ ಹೆಚ್ಚು ಅಮೂಲ್ಯನು!

ದೇವರು ಸಬ್ಬತ್ತನ್ನು ಮಾನವನ ಪ್ರಯೋಜನಕ್ಕಾಗಿ ಮಾಡಿದನು. ಆದುದರಿಂದ ಮನುಷ್ಯರು ಸಬ್ಬತ್ ದಿನದಂದು ಒಳ್ಳೆಯದನ್ನು ಮಾಡಬೇಕು. ಅವರು ಕಷ್ಟದಲ್ಲಿರುವ ತಮ್ಮ ನೆರೆಯವರಿಗೆ ಸಹಾಯ ಮಾಡಬೇಕು. ಸಬ್ಬತ್ ದಿನದಲ್ಲಿ ಯೇಸು ಕೈ ಬತ್ತಿ ಹೋದ ಆವ್ಯಕ್ತಿಗೆ ಒಳ್ಳೆಯದನ್ನು ಮಾಡಲು ಸಿದ್ದನಾಗಿದ್ದನು. ಆದರೆ ಅದೇ ಸಬ್ಬತ್ ದಿನದಂದು ಯೆಹೂದ್ಯರು ಅವನನ್ನು ಕೊಲ್ಲಲು ಹೊಂಚು ಹಾಕುತ್ತಿದ್ದರು (ವಚನ 6). "ಸಬ್ಬತ್ ದಿನದಲ್ಲಿ ಯಾವದನ್ನು ಮಾಡುವದು ನ್ಯಾಯ, ನಿಮ್ಮದೋ ಅಥವಾ ನನ್ನದೋ?" ಎಂದು ಯೇಸು ಅವರಿಗೆ ಕೇಳುತ್ತಾನೆ.

## ಯೆಹೂದ್ಯರಿಗೆ ಉತ್ತರಿಸಲು ಆಗಲಿಲ್ಲ

(ಯೋಹಾನ 5:8-10 ಮತ್ತು ವ್ಯಾಖ್ಯಾನ ನೋಡಿರಿ)

**5-6** ಯೇಸು ಆ ಮನುಷ್ಯನ ಕೈಯನ್ನು ಗುಣಪಡಿಸಿದನು. ಆತನು ಫರಿಸಾಯರು ಮತ್ತು ಇತರ ಯೆಹೂದ್ಯರಲ್ಲಿದ್ದ ಕಪಟತನ ಮತ್ತು ಪ್ರೀತಿಯ ಕೊರತೆಯನ್ನು ಬಯಲು ಪಡಿಸುವದರ ಮೂಲಕ ಅವರಿಗೆ ನಾಚಿಕೆಯುಂಟಾಗುವಂತೆ ಮಾಡಿದನು. ಅವರ ಆಲೋಚನೆಯಲ್ಲಿ ಆತನು ಸಬ್ಬತ್ ನಿಯಮವನ್ನು ಮೀರಿದ್ದನು. ಈ ನಜರೇತಿನ ಬೋಧಕ ಮತ್ತು ಸ್ವಸ್ಥಗಾರನನ್ನು ಅವರು ಇನ್ನೆಂದಿಗೂ ಸಹಿಸಿಕೊಳ್ಳಲಾಗಲಿಲ್ಲ. ಆತನು ದೇವರ ವಿರುದ್ಧ ದೂಷಣೆಯನ್ನು ಮಾಡಿದ್ದಾನೆ (ಮಾರ್ಕ 2:5-7). ಆತನು ಸುಂಕ ವಸೂಲಿಗಾರರು ಮತ್ತು ಪಾಪಿಗಳೊಂದಿಗೆ ಊಟ ಮಾಡಿದನು (ಮಾರ್ಕ 2:15-16). ಅದು ಮಾತ್ರವಲ್ಲದೆ ಆತನು ದಿನ ದಿನವು ಪ್ರಸಿದ್ದನಾಗುತ್ತಿದ್ದನು. ಎಲ್ಲಾ ಜನರು ಆತನ ಹಿಂದೆ ಹೋಗುತ್ತಿದ್ದರು. ಫರಿಸಾಯರು ತಾವು ಜನರ ದೃಷ್ಟಿಯಲ್ಲಿ ತಮ್ಮ ಘನತೆ ಮತ್ತು ಅಧಿಕಾರವನ್ನು ಕಳೆದುಕೊಳ್ಳುತ್ತೇವೇನೋ ಎಂದು ಭಯಪಟ್ಟರು–ಆದುದರಿಂದ, ಅವರು ಹೆರೋದ್ಯರೊಂದಿಗೆ [25] ಸೇರಿಕೊಂಡು ಆತನನ್ನು ಕೊಲ್ಲಲು ಉಪಾಯ ಮಾಡಿದರು (ಯೋಹಾನ 5:16-17 ನೋಡಿರಿ).

**7-12** ಯೇಸು ತನ್ನ ಶಿಷ್ಯರ ಕೂಡ ಆ ಸ್ಥಳವನ್ನು ಬಿಟ್ಟು ಸಮುದ್ರದ ಬಳಿಗೆ ಹೋದನು, ಅದು ಗಲಿಲಾಯ ಸಮುದ್ರವಾಗಿತ್ತು (ಮಾರ್ಕ 1:16). ಯೇಸು ಆ ವ್ಯಕ್ತಿಗಳು ತನ್ನನ್ನು ಕೊಲ್ಲಲು ಹೊಂಚು ಹಾಕಿದ ಸ್ಥಳದಲ್ಲಿ ಉಳಿಯಲಿಲ್ಲ. ಆತನು ಅನಾವಶ್ಯಕವಾಗಿ ಅಪಾಯವನ್ನು ಬಯಸಲಿಲ್ಲ. ಆತನು ಬೋಧಿಸುವದು ಇನ್ನೂ ಸಾಕಷ್ಟಿತ್ತು! ಆತನು ಸಾಯುವ ಸಮಯ ಇನ್ನೂ ಬಂದಿರಲಿಲ್ಲ.

ಇಸ್ರಾಯೇಲಿನ ಎಲ್ಲಾ ಕಡೆಗಳಿಂದಲೂ ಮತ್ತು ಲೇಬನೋನಿನ [26] ದಕ್ಷಿಣದ ತೂರ್, ಸೀದೋನ ಪಟ್ಟಣಗಳ ಸುತ್ತಲಿನಿಂದಲೂ ಜನರು ಗುಂಪಾಗಿ ಯೇಸುವಿನ ಬೋಧನೆ ಕೇಳಲು ಮತ್ತು ಸ್ವಸ್ಥತೆ ಹೊಂದಲು ಬಂದರು. ಜನರು ಆತನ ಅಂಗಿಯ ತುದಿಯನ್ನಾದರೂ ಮುಟ್ಟಿ ಗುಣಹೊಂದಬೇಕೆಂದು ಆತನ ಮೈಮೇಲೆ ಬಿದ್ದು ನೂಕಾಡಿದರು (ಮಾರ್ಕ 6:56). ಅವರು ಎಷ್ಟು ಬಲವಾಗಿ ನೂಕಾಡಿದರೆಂದರೆ ಕೊನೆಗೆ ಯೇಸು ಜನರ ನೂಕಾಟದಿಂದ ತಪ್ಪಿಸಿಕೊಳ್ಳಲು ಒಂದು ಸಣ್ಣ ದೋಣಿಯನ್ನು ಸಿದ್ಧಮಾಡಿರಿ ಎಂದು ಶಿಷ್ಯರಿಗೆ ಹೇಳಿದನು. ಬಹುಶಃ ಆತನು ಆ ದೋಣಿಯಲ್ಲಿದ್ದು ಕೊಂಡು ದಡದಲ್ಲಿ ನಿಂತಿದ್ದ ಜನರಿಗೆ ಬೋಧನೆಯನ್ನು ಸಹ ಮಾಡಿದನು (ಮಾರ್ಕ 4:1).

ದೆವ್ವಗಳಿಂದ ಪೀಡಿತರಾದವರು ಯೇಸುವಿನ ಮುಂದೆ ಬಿದ್ದರು. ಮಾರ್ಕ 1:24-25,34 ರಲ್ಲಿ ಸಹ ಪ್ರಸ್ತಾಪಿಸಿರುವ ಹಾಗೆ ದೆವ್ವಗಳು ಯೇಸುವನ್ನು ಗುರುತಿಸಿದವು . ಆದರೆ ತಾನಾರೆಂದು ಹೇಳಬಾರದೆಂದು ಯೇಸು ಅವು ಗಳಿಗೆ ನಿಷೇದಿಸಿದನು. ಯೇಸು ತನ್ನ ಹೆಸರು ಹರಡಬೇಕೆಂದು ಇಚ್ಚಿಸಲಿಲ್ಲ. ಆತನು ಮನುಷ್ಯರಿಂದ ಹೊಗಳಿಕೆಯನ್ನಾಗಲಿ ಅಥವಾ ಪ್ರಸಿದ್ಧಿಯನ್ನಾಗಲಿ ಬಯಸಲಿಲ್ಲ. ಆತನ ಒಂದೇ ಉದ್ದೇಶವು ಸುವಾರ್ತೆಯನ್ನು ಸಾರಿ ಪು ರುಷ ಮತ್ತು ಸ್ತ್ರೀಯರಿಗೆ ರಕ್ಷಣೆಯ ಮಾರ್ಗವನ್ನು ತೋರಿಸುವದಾಗಿದೆ (ಮತ್ತಾಯ 4:23-25, 12:17-19, ಮಾರ್ಕ 1:34, 5:43 ಹಾಗು ವ್ಯಾಖ್ಯಾನ ನೋಡಿರಿ).

## ಹನ್ನೆರಡು ಮಂದಿ ಅಪೊಸ್ತಲರ ನೇಮಿಸುವಿಕೆ ( 3:13-19)

(ಮತ್ತಾಯ 10:1-4, ಲೂಕ 6:12-16)

**13** ಲೂಕ 6:12 ರ ಪ್ರಕಾರವಾಗಿ ಯೇಸು ತನ್ನ ಹನ್ನೆರಡು ಜನ ಶಿಷ್ಯರನ್ನು ಆರಿಸಿಕೊಳ್ಳುವದಕ್ಕೆ ಮುಂಚೆ ರಾತ್ರಿಯಲ್ಲಿ ಪ್ರಾರ್ಥನೆಯಲ್ಲಿ ಕಳೆದನು. ಈ ಹನ್ನೆರಡು ಜನರಿಗೆ ಆತನ ಮರಣದ ನಂತರ ಸಭೆಯನ್ನು ಸ್ಥಾಪಿಸುವವರಾಗಿದ್ದರು. ಈ ಜನರು ಆತನು ಮಾಡಿದ ಕಾರ್ಯಗಳಿಗಿಂತಲೂ ದೊಡ್ಡ ಕಾರ್ಯಯಗಳನ್ನು ಮಾಡುವವರಾಗಿದ್ದರು (ಯೋಹಾನ 14:12). ಈಗಿನ ಯೇಸುವಿನ ಮುಖ್ಯ ಕೆಲಸವು, ಈ ಹನ್ನೆರಡು ಶಿಷ್ಯರಿಗೆ ಬೋಧಿಸಿ ತರಬೇತಿ ಮಾಡುವದಾಗಿತ್ತು. ಇಡೀ ಜಗತ್ತಿಗೆ ಯೇಸು ತಾನು ಒಬ್ಬನೇ ಬೋಧಿಸಲು ಆಗಲಿಲ್ಲ. ಆದರೆ ಈ ಹನ್ನೆರಡು ಜನರು ಮಾಡಬಹುದಿತ್ತು, ಮತ್ತು ಈ ಹನ್ನೆರಡು ಜನರಲ್ಲಿ ಪ್ರತಿಯೊಬ್ಬನೂ ಇತರರನ್ನು ತರಬೇತಿಗೊಳಿಸುವವರಾಗಿದ್ದರು. ಹೀಗೆ ಶಿಷ್ಯರ ಸಂಖ್ಯೆಯು ದ್ವಿಗುಣಗೊಳ್ಳುವದಾಗಿತ್ತು. ಈ ರೀತಿಯಲ್ಲಿಯೇ ಸಭೆ ಬೆಳದಿದೆ ಮತ್ತು ಹೆಚ್ಚು ಕಡಿಮೆ ಜಗತ್ತಿನ ಪ್ರತಿಯೊಂದು ರಾಷ್ಟ್ರದಲ್ಲಿಯೂ ಈಗ ಸಭೆ ಸ್ಥಾಪಿತಗೊಂಡಿದೆ.

ಯೇಸು, ತಾನು ಇಚ್ಚಿಸಿದವರನ್ನು ತನ್ನ ಬಳಿಗೆ ಕರೆದನು, ಆಯ್ಕೆ ಮತ್ತು ಕರೆ ಯೇಸುವಿಗೆ ಸೇರಿದ್ದು, ಆದರೆ ಅವರು ಆತನ ಬಳಿಗೆ ಬಂದರು. ಅವರು "ಹೌದು, ನಾನು ಬರುತ್ತೇನೆ" ಎಂದರು ಅವರು ಕ್ರಿಸ್ತನ ಕರೆಗೆ ವಿಧೇಯರಾದರು.

**14-15** ಯೇಸು ಹನ್ನೆರಡು ಶಿಷ್ಯರನ್ನು ಅಪೊಸ್ತಲರೆಂದು ಕರೆದನು, ಅಂದರೆ ಯೇಸುವಿನ ಆತ್ಮನಾದ ಪವಿತ್ರಾತ್ಮನಿಂದ "ಕಳುಹಿಸಲ್ಪಟ್ಟವರು" ಅಥವಾ "ನಡೆಸಲ್ಪಟ್ಟವರು" ಎಂದರ್ಥ ಆತನು ಅವರನ್ನು ತನ್ನೊಂದಿಗಿರಲು, ಆತನ ಮಾದರಿಯನ್ನು ನೋಡಿ ಕಲಿಯಲು, ಮತ್ತು, ಆತನ ಸೇವೆಯಲ್ಲಿ ಪಾಲುಗಾರರಾಗಲು ಕರೆದನು. ಆತನು ಅವರಿಗೆ ತನ್ನ ಹೆಸರಿನಲ್ಲಿ ಬೋಧಿಸಲು, ಎಲ್ಲಾ ರೋಗವನ್ನು ಮತ್ತು ಪ್ರತಿಯೊಂದು ವ್ಯಾಧಿಯನ್ನು ಗುಣಪಡಿಸಲು (ಮತ್ತಾಯ 10:1), ಮತ್ತು ತನ್ನ ಹೆಸರಿನಲ್ಲಿ ದೆವ್ವಗಳನ್ನು ಬಿಡಿಸುವ ತನ್ನ ಅಧಿಕಾರವನ್ನು ಕೊಟ್ಟನು. ದೆವ್ವಗಳು ಸೈತಾನನ ದುಷ್ಟ ಆತ್ಮಗಳು, ಸೈತಾನನ ಸಿಪಾಯಿಗಳು, ಹೀಗೆ, ಸೈತಾನ ಆತನ ದುರಾತ್ಮಗಳ ಶಕ್ತಿಗಳ ವಿರುದ್ಧ ಹೋರಾಡಿ ಜಯಸುವದು ನೂತನ ಹನ್ನೆರಡು ಜನ ಶಿಷ್ಯರ ಜವಾಬ್ದಾರಿಗಳಲ್ಲಿ ಮುಖ್ಯವಾದದ್ದಾಗಿತ್ತು.

**16-19** ಸಿಮೋನ (ಪೇತ್ರ), ಯಾಕೊಬ, ಯೋಹಾನ, ಆಂದ್ರೇಯ ಮತ್ತು ಮತ್ತಾಯ (ಲೇವಿ) ಯರ ಬಗ್ಗೆ ಈಗಾಗಲೇ ಮಾರ್ಕ 1:16, 19, 2:14 ರಲ್ಲಿ ಪ್ರಸ್ಥಾಪಿಸಲಾಗಿದೆ. ಫಿಲಿಪ್ಪನು ಪ್ರಥಮ ಬಾರಿಗೆ ಯೇಸುವನ್ನು ಸಂಧಿಸುವದು. ಯೋಹಾನ 1:43 ರಲ್ಲಿ ಬಣ್ಣಿಸಲಾಗಿದೆ. ಬಾರ್ಥಲೋಮಾಯನು ಯೋಹಾನ 1:45-50 ರಲ್ಲಿ ಉಲ್ಲೇಖಿಸಿರುವ ನತಾನಿಯೇಲ ಇಬ್ಬರೂ ಒಂದೇ ಆಗಿದ್ದಾರೆ. ಅಲ್ಪಾಯನ ಮಗನಾದ ಯಾಕೋಬನು ಲೇವಿಯನ ಸಹೋದರನಾಗಿರಬಹುದು. ಮಾರ್ಕ 2:14 ರಲ್ಲಿ ಈತನನ್ನು ಅಲ್ಪಾಯನೆಂದು ಕರೆಯಲಾಗಿದೆ. ತದ್ದಾಯನು ಲೂಕ 6:16 ರಲ್ಲಿ ಮತ್ತು ಅ.ಕೃತ್ಯ 1:13ರಲ್ಲಿ ಉಲ್ಲೇಖಿಸಿರುವ ಯಾಕೋಬನ ಮಗನಾದ ಯೂದಾಯ ಇಬ್ಬರೂ ಒಂದೇ ಇಸ್ಕರಿಯೋತ ಅಂದರೆ "ಕೆರಿಯೊತ್ತಿನ ಮನುಷ್ಯ" ಈತನೊಬ್ಬನೆ ಗಲಿಲಾಯಕ್ಕೆ ಸೇರಿದ ವ್ಯಕ್ತಿಯಾಗಿರಲಿಲ್ಲ. ನಂತರ ಯೇಸುವನ್ನು ಹಿಡಿದು ಕೊಟ್ಟವನು ಈತನೇ.

## ಯೇಸು ಮತ್ತು ಬೆಲ್ಜೆಬೂಬ (3:20-30)

(ಮತ್ತಾಯ 12:22-32, ಲೂಕ 11:14-23, 12-10)

**20-21** ಯೇಸುವಿನ ಕುಟುಂಬದವರು ಆತನ ಚಟುವಟಿಕೆಗಳ ಬಗ್ಗೆ ಕೇಳಿದಾಗ ಆತನಿಗೆ ಹುಚ್ಚು ಹಿಡಿದಿರಬೇಕೆಂದು ಅವರು ಯೋಚಿಸಿದರು, ಯಾಕಂದರೆ ಆತನು ತಿನ್ನಲು, ನಿದ್ರಿಸಲು, ಸರಿಯಾದ ಸಮಯ ಕೊಡಲೇ ಇಲ್ಲ ಆತನು ಯಾವಾಗಲು ಬೋಧಿಸುವದರಲ್ಲಿಯೂ ಮತ್ತು ಗುಣಪಡಿಸುವದರಲ್ಲಿಯೂ, ತೊಡಗಿದ್ದನು. ಆದುದರಿಂದ ಅವರು ಆತನನ್ನು ಹಿಡಿಯಬೇಕೆಂದು ಬಂದರು (31-34 ವಚನಗಳನ್ನು ನೋಡಿರಿ).

**22** ಮತ್ತಾಯ 12:22-23ರ ಪ್ರಕಾರವಾಗಿ ಅದೇ ಸಮಯದಲ್ಲಿಯೇ ಯೇಸು ದೆವ್ವ ಹಿಡಿಯಲ್ಪಟ್ಟ, ಕುರುಡನೂ ಮೂಕನು ಆಗಿದ್ದ ವ್ಯಕ್ತಿಯನ್ನು ಗುಣಪಡಿಸಿದನು. ಜನರು ಆಶ್ಚರ್ಯಪಟ್ಟವರಾಗಿ "ಈತನು ದಾವಿದನ ಕುಮಾರನಾಗಿರಬಹುದೋ? – ಅಂದರೆ ಮೆಸ್ಸಿಯನೆಂಬುದಾಗಿ [27] ಆದರೆ ಫರಿಸಾಯರು, ಕ್ರಿಸ್ತನನ್ನು ಯೆಹೂದ್ಯರು ನಿರೀಕ್ಷಿಸುತಿದ್ದ "ದಾವಿದನ ಕುಮಾರ "ಎಂಬುದನ್ನು ನಿರಾಕರಿಸಿದರು. ಅವರು ಈತನ ಬಲವು ದೇವರಿಂದಲ್ಲ. ಆದರೆ ಸೈತಾನನಿಂದ ಬಂದದ್ದು ಅಂದರು. ಯೇಸು ಸ್ವತಃ ದೆವ್ವ ಪೀಡಿತನು ಎಂದು ಅವರು ಆರೋಪಿಸಿದರು (ಯೋಹಾನ 10:19-20). ಅವರು, ಈತನು ಬೆಲ್ಜೆಬೂಬನಿಂದ ಅಂದರೆ ಸೈತಾನನಿಂದ ಪೀಡಿತನಾಗಿದ್ದಾನೆಂದು ಅಂದರು. ಈತನು ಸೈತಾನನ ಬಲದಿಂದ ದೆವ್ವಗಳನ್ನು ಬಿಡಿಸುತ್ತಾನೆಂದು ಹೇಳಿದರು. (ಇದೇ ರೀತಿಯ ಇನ್ನೊಂದು ಘಟನೆ (ಮತ್ತಾಯ 9:32-34 ರಲ್ಲಿ ಬಣ್ಣಿಸಲಾಗಿದೆ).
ಇಲ್ಲಿ ಗಮನಿಸಬೇಕಾದದ್ದೇನೆಂದರೆ ಶಾಸ್ತ್ರಿಗಳು ಮತ್ತು ಫರಿಸಾಯರು ಯೇಸುವಿನ ಕರೆಯನ್ನು ಅಲ್ಲಗಳೆಯಲು ಆಗಲಿಲ್ಲ. ಅದು ಎಲ್ಲರಿಗೂ ಪ್ರತ್ಯಕ್ಷವಾಗಿಯೆ ಇತ್ತು. ಆದುದರಿಂದ ಆತನ ಬಲವು ಸೈತಾನನಿಂದ ಬಂದಿದೆ ಎಂದು ಹೇಳುವದರ ಮೂಲಕ ಆತನಿಗೆ ಘನತೆ ಬಾರದಂತೆ ಮಾಡಲು ಪ್ರಯತ್ನಿಸಿದರು.

**23-26** ಆದರೆ ಯೇಸು ಇದು ಅಸಾದ್ಯವೆಂಬುದನ್ನು ತೋರಿಸಿದನು. ದೆವ್ವಗಳ ಒಡೆಯನು ಅಂದರೆ ಸೈತಾನನೇ ತನ್ನ ಸ್ವಂತ ದೆವ್ವಗಳನ್ನು ಏಕೆ ಹೊರಡಿಸುವನು? ಒಂದು ವೇಳೆ ಆತನು ಹಾಗೆ ಮಾಡಿದರೆ ಆತನ ರಾಜ್ಯ ಅಥವಾ ಮನೆಯಲ್ಲಿ ಬೇದ ಉಂಟಾಗುವದು. ಆದರೆ ಸೈತಾನನ ರಾಜ್ಯವು ಇನ್ನು ನಾಶವಾಗಿರುವದಿಲ್ಲ. ಸೈತಾನ ಮತ್ತು ಆತನ ದೆವ್ವಗಳು ಈಗಲೂ ಶ್ರಮದಿಂದಲೂ ಹಾಗೂ ಬಹು ಬಲದಿಂದಲೂ ಕೆಲಸ ಮಾಡುತ್ತಿವೆ. (ಮತ್ತಾಯ 12:27-28 ಮತ್ತು ಲೂಕ 11:19-20). ಪ್ರಕಾರವಾಗಿ ಇದೇ ಸಮಯದಲ್ಲಿ ಯೇಸು ಫರಿಸಾಯರಿಗೆ ಸ್ವತಃ ಅವರ ಮಕ್ಕಳು ಅಂದರೆ – ಅವರ ಶಿಷ್ಯರೂ ಸಹ ದೇವರ ಹೆಸರಿನಿಂದ ದೆವ್ವಗಳನ್ನು ಬಿಡಿಸಿದರೆಂದು ಜ್ಞಾಪಕಪಡಿಸಿದನು. ಹಾಗಾದರೆ ಯೇಸು ಅದೇ ಸಂಗತಿಯನ್ನು ಮಾಡಿದಾಗ ಯಾಕೆ ಫರಿಸಾಯರು ಆತನು ಸೈತಾನನ ಶಕ್ತಿಯಿಂದ ಮಾಡುತ್ತಿದ್ದಾನೆಂದು ಹೇಳಿದರು? ಫರಿಸಾಯರ ಆರೋಪವು ಸುಳ್ಳಾಗಿತ್ತು. ದೇವರ ರಾಜ್ಯವು ಭೂಮಿಗೆ ಬಂದಿದೆ (ಮಾರ್ಕ 1:15) ಮತ್ತು ಸೈತಾನನ ರಾಜ್ಯದ ವಿರುದ್ಧ ಅಂತಿಮ ಯುದ್ಧವು ಪ್ರಾರಂಭವಾಗಿದೆ ಎಂಬುದರ ಸಂಕೇತವಾಗಿದೆ.

**27** ದೆವ್ವ ಪೀಡಿತರನ್ನು ಅಂದರೆ ಸೈತಾನನ ಕಟ್ಟಿದಲ್ಲಿರುವವರನ್ನು ಬಿಡುಗಡೆಗೊಳಿಸಲು ಕ್ರಿಸ್ತನು ಬಲಿಷ್ಠನ ಮನೆ (ಸೈತಾನನ ಮನೆ) ಯನ್ನು ಪ್ರವೇಶಿಸಿ ಸೈತಾನನನ್ನು ಬಂಧಿಸಬೇಕಾಗಿತ್ತು. ಯೇಸು ಪ್ರತಿಸಾರಿ ದೆವ್ವವೊಂದನ್ನು ಹೊರಡಿಸುವಾಗ ಮೊದಲು ಆತನು ಸೈತಾನನನ್ನು ಬಂಧಿಸಿದನು. ಆದಾಗ್ಯು ಯೇಸು ತಾನು ಭೂಮಿಯಲ್ಲಿದ್ದಾಗ ಸೈತಾನನನ್ನು ಸಂಪೂರ್ಣವಾಗಿ ಸೋಲಿಸಲಿಲ್ಲ. ಲೋಕದ ಅಂತ್ಯದಲ್ಲಿ ಮಾತ್ರವೇ ಅಂತಿಮವಾಗಿ ಸೈತಾನನು ಸಂಪೂರ್ಣವಾಗಿ ನಾಶಹೊಂದುವನು (ಪ್ರಕಟಣೆ 20:10)

ಇನ್ನೊಂದು ವಿಧದಲ್ಲಿ ಹೇಳುವದಾದರೆ, ದೆವ್ವ ಪೀಡಿತರಷ್ಟೇ ಅಲ್ಲದೆ ವಿಶ್ವಾಸವಿಲ್ಲದ ಪ್ರತಿಯೊಬ್ಬರು ಸೈತಾನನ ಬಂಧನದಲ್ಲಿದ್ದಾರೆ. ಈ ಪ್ರಪಂಚವು ಸೈತಾನನ ರಾಜ್ಯವಾಗಿದೆ. ಒಬ್ಬ ವ್ಯಕ್ತಿಯು ಯೇಸುವಿನ ಕರೆಯನ್ನು ಕೇಳಿ ಆತನಲ್ಲಿ ನಂಬಿಕೆಯಿಡುತ್ತಾನೋ ಆತನು ಸೈತಾನನ ರಾಜ್ಯದಿಂದ ಬಿಡುಗಡೆ ಹೊಂದಿ ದೇವರ ರಾಜ್ಯವನ್ನು ಪ್ರವೇಶಿಸುತ್ತಾನೆ. ಮತ್ತಾಯ ಮತ್ತು ಲೂಕ ಇಬ್ಬರೂ ಇಲ್ಲಿ ಯೇಸುವಿನ ಒಂದು ಮಾತನ್ನು ಕೂಡಿಸುತ್ತಾರೆ: ನನ್ನ ಪಕ್ಷ ಹಿಡಿಯದವನು ನನಗೆ ವಿರೋಧಿ, ನನ್ನ ಜೊತೆಯಲ್ಲಿ ಒಟ್ಟು ಗೂಡಿಸದವನು ಚದುರಿಸುವವನಾಗಿರುತ್ತಾನೆ! [28] (ಮತ್ತಾಯ 12:30, ಲೂಕ 11:23). ಸೈತಾನ ಮತ್ತು ಆತನ ದುರಾತ್ಮಗಳೊಂದಿಗಿನ ಹೋರಾಟದಲ್ಲಿ ಒಬ್ಬನು ತಟಸ್ಥನಾಗಿ ಉಳಿಯಲು ಆಗದು. ಮನುಷ್ಯರು ಸೈತಾನನ ಪಕ್ಷದಲ್ಲಿದ್ದಾರೆ ಇಲ್ಲವೆ ಕ್ರಿಸ್ತನ ಪಕ್ಷದವರಾಗಿದ್ದಾರೆ, ಮದ್ಯ ಸ್ಥಳವೆಂಬುದಿಲ್ಲ. ಕ್ರಿಸ್ತನ ಪಕ್ಷವನ್ನು ಹಿಡಿಯದವರು ಯಾಂತ್ರಿಕವಾಗಿ ಸೈತಾನನ ಪರವಾಗಿದ್ದಾರೆ. ನಾವು ಯಾವ ಪಕ್ಷವನ್ನು ವಹಿಸಿಕೊಂಡಿಲ್ಲ ಎಂದು ಅವರು ಯೋಚಿಸಬಹುದು ಆದರೆ ನಿಜವೇನೆಂದರೆ ಅವರು ಸೈತಾನನನ್ನು ಸೇವಿಸುತ್ತಿದ್ದಾರೆ. ಎರಡು ರಾಜ್ಯಗಳು ಮಾತ್ರವೇ ಇವೆ: ದೇವರ ರಾಜ್ಯ ( ಅಂದರೆ ಕ್ರಿಸ್ತನ ರಾಜ್ಯ) ಮತ್ತು ಸೈತಾನನ ರಾಜ್ಯ. ಪ್ರತಿಯೊಬ್ಬ ವ್ಯಕ್ತಿಯು ಒಂದಿಲ್ಲಾ ಒಂದು ರಾಜ್ಯದಲ್ಲಿರುತ್ತಾನೆ.

ನನ್ನ ಜೊತೆಯಲ್ಲಿ ಒಟ್ಟುಗೂಡಿಸದವನು ಚದುರಿಸುವವನಾಗಿರುತ್ತಾನೆ (ಮತ್ತಾಯ 12:30). ಯೇಸು ಜನರೆಂಬ ಪೈರನ್ನು ಒಟ್ಟುಗೂಡಿಸಲು ಬಂದನು. ನಾವು ಈ ಕಾರ್ಯದಲ್ಲಿ ಸಹಾಯ ಮಾಡದಿದ್ದರೆ ನಿಜವಾಗಿಯೂ ನಾವು ತಡೆಯೊಡ್ಡುತ್ತಿದ್ದೇವೆ. ನಾವು ಕೇವಲ ಕೆಟ್ಟದ್ದನ್ನು ಮಾಡದೇ ಇರುವದು ಸಾಲದು, ನಾವು ಒಳ್ಳೆಯದನ್ನು ಮಾಡಬೇಕು.

**28-30** ಯೇಸು ಸೈತಾನನ ಬಲದಿಂದ ಕಾರ್ಯಮಾಡುತ್ತಿದ್ದಾನೆಂದು ಫರಿಸಾಯರು ಹೇಳಿದ್ದರು. ಆದರೆ ವಾಸ್ತವದಲ್ಲಿ, ಯೇಸು ದೇವರಾತ್ಮನಾದ ಪವಿತ್ರಾತ್ಮ ಬಲದಿಂದ ಕಾರ್ಯಮಾಡುತ್ತಿದ್ದನು. ಹೀಗೆ ಫರಿಸಾಯರು ಪವಿತ್ರಾತ್ಮನನ್ನು "ಸೈತಾನ"! ಎಂದು ಕರೆಯುತ್ತಿದ್ದಾರೆ. ಈ ಕಾರಣದಿಂದಲೇ ಯೇಸು ಪವಿತ್ರಾತ್ಮನ ದೂಷಣೆಯ ಬಗ್ಗೆ ಎಚ್ಚರಿಸಿದನು. ಯೇಸು ಇಲ್ಲಿ ಮನುಷ್ಯರು ಎಲ್ಲಾ ಪಾಪಗಳು ಮತ್ತು ದೂಷಣೆಗಳು, ಅಲ್ಲದೆ ಮನುಷ್ಯ ಕುಮಾರನಿಗೆ ವಿರುದ್ಧವಾಗಿ ಆಡಿದ ಮಾತುಗಳಿಗೂ (ಮತ್ತಾಯ 12:32) ಕ್ಷಮಾಪಣೆ ಇರುತ್ತದೆ, ಒಂದು ವೇಳೆ ಒಬ್ಬನು ಪಶ್ಚಾತಾಪ ಪಡುವದಾದರೆ ಮಾತ್ರ. ಆದರೆ ಒಂದು ಪಾಪಕ್ಕೆ ಮಾತ್ರ ಕ್ಷಮಾಪಣೆ ಇರುವದಿಲ್ಲ, ಅದೆಂದರೆ ಪವಿತ್ರಾತ್ಮದೂಷಣೆಗೆ ಕ್ಷಮಾಪಣೆ ಇರುವದಿಲ್ಲ (ಮತ್ತಾಯ 12:31) ಪವಿತ್ರಾತ್ಮ ದೂಷಣೆ ಎಂದರೇನು? ದೇವರಾತ್ಮನನ್ನು ಹಠಸ್ವಭಾವದಿಂದ ತಿರಸ್ಕರಿಸುವದು. ದೇವರು ನಮ್ಮನ್ನು ತನ್ನ ಆತ್ಮನ ಮೂಲಕ ಕರೆಯುತ್ತಾನೆ. ನಾವು ಆತನ ಆತ್ಮನನ್ನು ತಿರಸ್ಕರಿಸಿ ದೂಷಿಸುವದಾದರೆ ಇನ್ನು ಮುಂದೆ ದೇವರು ನಮ್ಮನ್ನು

ಕರೆಯುವದಕ್ಕೆ ಇನ್ನಾವಮಾರ್ಗವಿಲ್ಲ. ನಾವು ನಮ್ಮನ್ನು ದೇವರ ಕರುಣೆ ಮತ್ತು ಕ್ಷಮೆಗಳಿಂದ ಮಾತ್ರವೇ ದೇವರನ್ನು ತಿಳಿಯಬಹುದು. ಮನುಷ್ಯನು ತನ್ನ ಜೀವಿತದಲ್ಲಿ ಪವಿತ್ರಾತ್ಮನ ಕಾರ್ಯದ ಮೂಲಕ ಮಾತ್ರವೇ ಪಶ್ಚಾತಾಪ ಪಟ್ಟು ಕ್ಷಮಾಪಣೆಯನ್ನು ಸ್ವೀಕರಿಸಿಕೊಳ್ಳಬಹುದು. ಪವಿತ್ರಾತ್ಮನು ನಮ್ಮ ಮತ್ತು ದೇವರ ನಡುವೆ ಸೇತುವೆ ಇದ್ದಂತೆ. ನಾವು ಸೇತುವೆಯನ್ನು ನಾಶಮಾಡುವದಾದರೆ, ನಮ್ಮ ರಕ್ಷಣೆಯ ನಿರೀಕ್ಷೆ, ದೇವರ ರಾಜ್ಯವನ್ನು ಪ್ರವೇಶಿಸುವ ನಮ್ಮ ನಿರೀಕ್ಷೆಯು ಅಳಿದು ಹೋಗುವದು. ಕೆಲವು ಕ್ರೈಸ್ತರು "ನಾನು ಪವಿತ್ರಾತ್ಮ ವಿರುದ್ಧ ದೂಷಣೆಯ ಈ ಕ್ಷಮೆಯಿಲ್ಲದ ಪಾಪವನ್ನು ಮಾಡಿರುತ್ತೇನೋ? ನಾನು ನನ್ನ ರಕ್ಷಣೆಯನ್ನು ಕಳೆದು ಕೊಂಡಿದ್ದೇನೋ? ಎಂದು ಚಿಂತೆಯಿಂದ ಕೇಳಿಕೊಳ್ಳುತ್ತಾರೆ. ಆದರೆ ಅವರು ಹೆದರಬೇಕಿಲ್ಲ. ಇದರ ಕುರಿತು ಚಿಂತಿಸುವ ಯಾರೇ ಆಗಲಿ ಖಂಡಿತವಾಗಿಯೂ ಈ ಪಾಪವನ್ನು [29] ಮಾಡಿರುವದಿಲ್ಲ. ಪವಿತ್ರಾತ್ಮನನ್ನು ದೂಷಿಸಿದ ವ್ಯಕ್ತಿಯು ಅದರ ಕುರಿತು ಚಿಂತಿಸುವದಿಲ್ಲ. ಆತನು ದೇವರ ಬಗ್ಗೆ ಚಿಂತೆ ಇಲ್ಲದವನಾಗಿರುತ್ತಾನೆ.

ಆತನ ಹೃದಯವು ಕಠಿಣವಾಗಿದೆ. ಅವನು ಪಶ್ಚಾತಾಪ ಪಡಲು ನಿರಾಕರಿಸುತ್ತಾನೆ. ಆತನು ಗೊತ್ತಿದ್ದು ದೇವರಿಗೆ ವಿರುದ್ಧವಾಗಿ ಜೀವಿಸುತ್ತಾನೆ.

ಆದುದರಿಂದ ನಾವು ಪಾಪದಲ್ಲಿ ಬೀಳುವಾಗ ಶೀಘ್ರವೇ ಪಶ್ಚಾತಾಪ ಪಡೋಣ. ನಮ್ಮ ಹೃದಯಗಳನ್ನು ದೇವರಿಗೆ ತೆರೆದಿಡೋಣ ಯಾಕೆಂದರೆ ನಾವು ಇಚ್ಛಾಪೂರ್ವಕವಾಗಿ ದೇವರಿಂದ ವಿಮುಖರಾಗುತ್ತಾ ಇರುವದಾದರೆ ಕೊನೆಗೆ ಆತನು ನಮ್ಮಿಂದ ವಿಮುಖನಾಗುವನು. ಆ ಪರಿಸ್ಥಿತಿಯು ಎಂದಿಗೂ ಸಂಭವಿಸದಿರಲಿ.

ಯೇಸುವಿನ ತಾಯಿ ಮತ್ತು ಸಹೋದರರು (3:31-35) (ಮತ್ತಾಯ 12:46-50, ಲೂಕ 8:19-21)

**31-32** ಬಳಿಕ ಯೇಸುವಿನ ಕುಟುಂಬದವರು ಆತನು ಬೋಧಿಸುತ್ತಿದ್ದ ಸ್ಥಳಕ್ಕೆ ಬಂದರು (ವಚನ 21 ನೋಡಿರಿ). ಮಾರ್ಕನು ಇಲ್ಲಿ ಯೇಸುವಿನ ತಮ್ಮಂದಿರು ಎಂದು ಪ್ರಸ್ತಾಪಿಸುತ್ತಾನೆ. ಕೆಲವು ಕ್ರೈಸ್ತರು, ಇವರು ಯೇಸುವಿನ ನಿಜವಾದ ಸಹೋದರರಲ್ಲ ಎಂದು ಯೋಚಿಸುತ್ತಾರೆ. ಮರಿಯಳಿಗೆ ಯೇಸುವಿನ ಹೊರತು ಬೇರೆ ಇನ್ನಾವ ಮಕ್ಕಳಿರಲಿಲ್ಲ ಎಂದು ಅವರು ನಂಬುತ್ತಾರೆ. ಆದರೆ ಈ ವಚನಗಳ ಸಾಮಾನ್ಯ ತಿಳುವಳಿಕೆಯ ಪ್ರಕಾರವಾಗಿ ಮಾರ್ಕನು ಇಲ್ಲಿ ಯೇಸುವಿನ ಕಿರಿಯ ಸಹೋದರರು ಅಂದರೆ ಮರಿಯಳು ಮತ್ತು ಯೋಸೆಫರ ಗಂಡುಮಕ್ಕಳ ಬಗ್ಗೆ ಮಾತನಾಡುತ್ತಿದ್ದಾನೆ. ಹೇಗೂ, ಯೇಸು ಮಾತ್ರವೇ ಪವಿತ್ರಾತ್ಮನಿಂದ ಹುಟ್ಟಿದ್ದನು (ಮತ್ತಾಯ 1:18, 24-25, ಮಾರ್ಕ 6:3, ಲೂಕ2:7).

**33-35** ಯೇಸು ತನ್ನ ಕುಟುಂಬದವರು ಬಂದಿರುತ್ತಾರೆಂಬುದನ್ನು ಕೇಳಿದಾಗ ಆತನು "ನನ್ನ ತಾಯಿಯೂ ತಮ್ಮಂದಿರು ಯಾರು?"ಎಂದು ಕೇಳುತ್ತಾನೆ (ವಚನ 33). ಇದರ ಮೂಲಕ ತನ್ನ ಕುಟುಂಬವನ್ನು ಅವಮಾನ ಪಡಿಸುವದು ಆತನ ಅರ್ಥವಾಗಿರಲಿಲ್ಲ. ನಮ್ಮ ಶಾರೀರಿಕ ಕುಟುಂಬವು ಪ್ರಾಮುಖ್ಯವಾಗಿದ್ದರೂ ನಮ್ಮ ಆತ್ಮೀಕ ಕುಟುಂಬವು ಇನ್ನೂ ಹೆಚ್ಚು ಪ್ರಾಮುಖ್ಯವಾಗಿರುತ್ತದೆಂದು ಕಲಿಸುತ್ತಿದ್ದನಷ್ಟೇ. ಕ್ರಿಸ್ತನಲ್ಲಿ ನಂಬಿಕೆಯಿಟ್ಟು ದೇವರ ಚಿತ್ತಕ್ಕೆ ವಿಧೇಯರಾಗುವವರು ಒಂದು ಆತ್ಮೀಕ ಕುಟುಂಬದವರೂ. ದೇವರ ಮಕ್ಕಳೂ, ಕ್ರಿಸ್ತನಿಗೆ ಮತ್ತು ಪರಸ್ಪರರಿಗೆ ಸಹೋದರರೂ ಹಾಗು ಸಹೋದರಿಯರೂ ಆಗಿರುತ್ತಾರೆ. ಆತ್ಮೀಕ ಕುಟುಂಬವು ನಿತ್ಯ ನಿತ್ಯಕ್ಕೂ ಉಳಿಯುವದು, ನಾವು ವಿಶ್ವಾಸಿಗಳಲ್ಲದ ನಮ್ಮ ಸ್ವಂತ ಶಾರೀರಿಕ ಕುಟುಂಬಕ್ಕಿಂತಲೂ ನಮ್ಮ ವಿಶ್ವಾಸಿಗಳಾದ ಸಹೋದರ ಮತ್ತು ಸಹೋದರಿಯರೊಂದಿಗೆ ಆಪ್ತರಾಗಿರಬೇಕು. ನಾವು ನಮ್ಮ ಸ್ವಂತ ತಂದೆ ತಾಯಿ ಮತ್ತು ಸಹೋದರ ಸಹೋದರಿಯರಿಗಿಂತಲೂ ಕ್ರಿಸ್ತನಿಗೆ ಮತ್ತು ಆತನ ಸಭೆಗೆ ಹೆಚ್ಚು ಪ್ರಾಧಾನ್ಯತೆ ನೀಡಬೇಕು (ಮತ್ತಾಯ 10:37)

---

## ಅಧ್ಯಾಯ - 4

### ಬಿತ್ತುವವನ ಸಾಮ್ಯ (4:1-20)

(ಮತ್ತಾಯ 13:1-23, ಲೂಕ 8:4-15)

**1-2** ಯೇಸು ಸಾಮ್ಯಗಳ ಮೂಲಕ ಅನೇಕ ಸಂಗತಿಗಳನ್ನು ಬೋಧಿಸಿದನು. ಸಾಮ್ಯವು ಒಂದು ಆತ್ಮೀಕ ಸತ್ಯವನ್ನು ದೃಷ್ಟಾಂತೀಕರಿಸುವ ಒಂದು ಸರಳ ಹೇಳಿಕೆ ಅಥವಾ ಕಥೆಯಾಗಿದೆ. ಆತ್ಮೀಕ ತಿಳುವಳಿಕೆಯಿರುವವರು ಸಾಮ್ಯಗಳನ್ನು ಅರ್ಥಮಾಡಿಕೊಳ್ಳಬಹುದು ಆದರೆ ಆತ್ಮೀಕ ತಿಳುವಳಿಕೆಯಿಲ್ಲದವರು ಅರ್ಥಮಾಡಿಕೊಳ್ಳಲಾಗದು.

**3-9** ಬಿತ್ತುವವನ ಸಾಮ್ಯವು ದೇವರ ವಾಕ್ಯದ ಬೋಧನೆಯ ವಿಷಯವಾಗಿರುತ್ತದೆ. ವಾಕ್ಯವು ವಿವಿಧ ರೀತಿಯ ನೆಲದಲ್ಲಿ ಬೀಳುವ ಬೀಜದಂತಿದೆ. ಈ ಸಾಮ್ಯದಲ್ಲಿ ನಾಲ್ಕು ರೀತಿಯ ನೆಲಗಳ ಬಗ್ಗೆ ಉಲ್ಲೇಖಿಸಲಾಗಿದೆ. ಬೇರೆ ಬೇರೆ ನೆಲಗಳು ಬೇರ ಬ್ಬೇರೆ ಜನರನ್ನು ಪ್ರತಿನಿಧಿಸುತ್ತವೆ. ನಾವು ಈ ಸಾಮ್ಯವನ್ನು ಅಭ್ಯಾಸಿಸುವಾಗ ನಾವೆಲ್ಲರೂ ಕೇಳಿಕೊಳ್ಳಬೇಕಾದ ಪ್ರಶ್ನೆಯೇನೆಂದರೆ "ಈ ನಾಲ್ಕು ರೀತಿಯ ನೆಲಗಳಲ್ಲಿ ನಾನು ಯಾವ ರೀತಿಯ ನೆಲವಾಗಿದ್ದೇನೆ ? ಅಂದರೆ ನಾವು ಯಾವ ರೀತಿಯ ಹೃದಯವನ್ನು ಹೊಂದಿದ್ದೇವೆ"ಎಂಬುದಾಗಿ. ಯೇಸು 14-20 ವಚನಗಳಲ್ಲಿ ಸಾಮ್ಯದ ಅರ್ಥವನ್ನು ನೀಡುತ್ತಾನೆ.

**10-11** ಯೇಸು ಬಿತ್ತುವವನ ಸಾಮ್ಯವನ್ನು ಹೇಳಿ ಮುಗಿಸಿದ ಮೇಲೆ ಹಾಗು ಜನರ ಗುಂಪು ಹೊರಟು ಹೋದನಂತರ ಹನ್ನೆರಡು ಶಿಷ್ಯರು ಮತ್ತು ಇತರ ಕೆಲವು ವಿಶ್ವಾಸಿಗಳು ಯೇಸುವಿನ ಸುತ್ತಲೂ ಸೇರಿ ಸಾಮ್ಯದ ಕುರಿತು ಕೇಳುತ್ತಾರೆ. ಯೇಸು

ಅವರಿಗೆ – "ದೇವರ ರಾಜ್ಯದ ಗೂಡಾರ್ಥವು ನಿಮಗೆ ಕೊಡಲ್ಪಟ್ಟಿದೆ" – ಎಂದನು, ಅಂದರೆ ಮುಕ್ತ ಹೃದಯ ಇರುವವರಿಗೂ, ದೇವರಿಗಾಗಿ ತವಕಪಡುವವರಿಗೂ ಕೊಡಲ್ಪಟ್ಟಿದೆ ಎಂದರ್ಥ. ಆದರೆ ಹೊರಗಿನವರಿಗೆ ಅಂದರೆ ಗರ್ವದ ಹಾಗು ಕಠಿಣಹೃದಯ ಉಳ್ಳವರಿಗೆ, ದೇವರಿಗಾಗಿ ತವಕ ಪಡದವರಿಗೆ ದೇವರ ರಾಜ್ಯದ ಗುಟ್ಟುಕೊಡಲ್ಪಟ್ಟಿರುವದಿಲ್ಲ. ಅವರು ಅದನ್ನು ಪಡೆಯಲು ಸಾದ್ಯವಿಲ್ಲ. ದೇವರ ರಾಜ್ಯದ ಗೂಡಾರ್ಥವೇನೆಂದರೆ ಯೇಸು ಕ್ರಿಸ್ತನಲ್ಲಿ ಇರುವಂಥ ದೇವರ ರಕ್ಷಣೆಯ ಯೋಜನೆಯಾಗಿದೆ. ಕೇವಲ ದೀನ, ಪಶ್ಚಾತಾಪದ ಮತ್ತು ನಂಬಿಕೆಯ ಹೃದಯಗಳುಳ್ಳವರು ಮಾತ್ರವೇ ರಕ್ಷಣೆಯನ್ನು ಅರ್ಥಮಾಡಿಕೊಂಡು ಸ್ವೀಕರಿಸಿಕೊಳ್ಳುವರು.

**12** ವಚನ 12 ಅರ್ಥಮಾಡಿಕೊಳ್ಳಲು ಕಠಿಣವಾದ ವಚನವಾಗಿದೆ. ನಂಬುವಂತಹ ಮತ್ತು ಹೃದಯವುಳ್ಳವರು ಉತ್ತಮವಾಗಿ ಅರ್ಥಮಾಡಿಕೊಳ್ಳುವ ಹಾಗೆಯೂ ಆದರೆ ನಂಬದಂತಹ ಕಠಿಣ ಹೃದಯಗಳುಳ್ಳವರು ಅಂದರೆ ಹೊರಗಿನವರು ಅರ್ಥಮಾಡಿಕೊಳ್ಳದಂತೆಯೂ [30] ಇರುವದಕ್ಕಾಗಿ ಯೇಸು ಸಾಮ್ಯದಲ್ಲಿ ಬೋಧಿಸಿದನು. ಒಂದು ಸಾಮ್ಯವು ವಿಶ್ವಾಸಿಸುವ ಹೃದಯಕ್ಕೆ ಸತ್ಯವನ್ನು ಬಯಲು ಪಡಿಸುತ್ತದೆ ಆದರೆ ವಿಶ್ವಾಸಿಸದ ಹೃದಯಕ್ಕೆ ಮರೆಮಾಡುತ್ತದೆ. ಯೇಸು ಸಾಮ್ಯಗಳ ಮೂಲಕ ಬೋಧಿಸುವದರಿಂದ ಮುಕ್ತ, ದೀನ ಹೃದಯವುಳ್ಳವರನ್ನು ಹಾಗು ಕಠಿಣ ಗರ್ವದ ಹೃದಯವುಳ್ಳವರನ್ನು ವಿವೇಚಿಸಲು ಶಕ್ತನಾಗುತ್ತಿದ್ದನು. ಕಠಿಣ, ಗರ್ವದ ಹೃದಯವುಳ್ಳವರು ತಮ್ಮ ಕಣ್ಣುಗಳಿಂದ ನೋಡಿದರೂ ತಾವು ನೋಡಿದ್ದನ್ನು ಅರ್ಥಮಾಡಿಕೊಳ್ಳುವದಿಲ್ಲ. ಅವರು ಯೇಸುವನ್ನು ನೋಡುತ್ತಾರೆ ಆದರೆ ಆತನು ಯಾರೆಂದು ಅರ್ಥಮಾಡಿಕೊಳ್ಳುವದಿಲ್ಲ. ಅವರು ದೇವರ ವಾಕ್ಯವನ್ನು ತಮ್ಮ ಕಿವಿಗಳಿಂದ ಕೇಳಿಸಿಕೊಳುತ್ತಾರೆ. ಆದರೆ ಅದನ್ನು ಅರ್ಥ ಮಾಡಿಕೊಳ್ಳುವದಿಲ್ಲ. ಅಂತಹ ಜನರು ಈಗಾಗಲೇ ತಮ್ಮ ಹೃದಯದಲ್ಲಿ ದೇವರಿಂದ ವಿಮುಖರಾಗಿದ್ದಾರೆ. ಅವರು ಈಗಾಗಲೇ ದೇವರನ್ನು ಅಲ್ಲಗಳೆದಿದ್ದಾರೆ. ದೇವರು ಅವರನ್ನು ಮೊದಲಿನಿಂದಲೂ ಕರೆದಿದ್ದಾನೆ. ಆದರೆ ಅವರು ಆತನನ್ನು ತಿರಸ್ಕರಿಸಿದ್ದಾರೆ. ತಮ್ಮ ಅಪನಂಬಿಕೆಯಲ್ಲಿ ಮುಂದುವರೆಯುವ ಈ ಜನರು ಕ್ಷಮಾಪಣೆಯ ಅವಕಾಶವನ್ನು ಕಳೆದುಕೊಂಡಿದ್ದಾರೆ. ಯಾಕೆಂದರೆ ಅವರು ಸತತವಾಗಿ ದೇವರನ್ನು ತಿರಸ್ಕರಿಸಿ ಅವಿಧೇಯರಾಗಿದ್ದಾರೆ, ದೇವರು ಅವರನ್ನು ಕೈ ಬಿಟ್ಟಿರುತ್ತಾನೆ (ರೋಮ 1:24-26,28 ಮತ್ತು ವ್ಯಾಖ್ಯಾನ ನೋಡಿರಿ). ಆದುದರಿಂದ ಅಂತಹ ಜನರ ಆತ್ಮೀಕ ಕಣ್ಣುಗಳು ಹಾಗು ಹೃದಯಗಳು ಮುಚ್ಚಿರುತ್ತವೆ. ಅವರು "ತಾವು ತಿರಿಗಿ ಕೊಂಡು ಕ್ಷಮೆಯನ್ನು ಹೊಂದಿಕೊಳ್ಳಬಾರದೆಂದು" ಅವರು ಯೇಸುವಿನ ಸಾಮ್ಯಗಳನ್ನು ಅರ್ಥಮಾಡಿಕೊಳ್ಳಲು ಸಾದ್ಯವಿಲ್ಲ. ಒಂದು ವೇಳೆ ಅವರು ಸಾಮ್ಯಗಳನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗಿದ್ದರೆ, ಅವರು ಆಗ ಪಶ್ಚಾತಾಪ ಪಟ್ಟು ಕ್ರಿಸ್ತನ ಮೂಲಕ ಕ್ಷಮಾಪಣೆ ಹಾಗು ರಕ್ಷಣೆಯನ್ನು ಪಡೆದಿರುತ್ತಿದ್ದರು.

ಸ್ವತಃ ದೇವರೇ ಜನರ ಆತ್ಮೀಕ ಕಣ್ಣುಗಳನ್ನು ಮುಚ್ಚುವದಿಲ್ಲ. ದೇವರು ಆತ್ಮೀಕ ಸತ್ಯವನ್ನು ಜನರಿಗೆ ಮರೆಮಾಡುವದಿಲ್ಲ. ಎಲ್ಲಾ ಮನುಷ್ಯರು ಅರ್ಥಮಾಡಿಕೊಂಡು ಪ್ರತಿಯೊಬ್ಬರೂ ರಕ್ಷಣೆ ಹೊಂದಬೇಕೆಂದು ಆತನು ಬಯಸುತ್ತಾನೆ (1 ತಿಮೊಥೆ 2:3-4). ಆದರೆ ಜನರು ತಮ್ಮಷ್ಟಕ್ಕೆ ತಾವೇ ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡು ದೇವರಿಂದ ವಿಮುಖರಾಗುತ್ತಾರೆ. ಅವರು ದೇವರ ಕೃಪೆಯನ್ನು ತಿರಸ್ಕರಿಸುತ್ತಾರೆ. ಈ ಕಾರಣಕ್ಕಾಗಿಯೇ ಮತ್ತಾಯ 13:12 ರಲ್ಲಿ ಯೇಸು "ಇದ್ದವನಿಗೆ ಕೊಡಲ್ಪಡುವದು, ಅವನಿಗೆ ಮತ್ತು ಹೆಚ್ಚಾಗುವದು, ಇಲ್ಲದವನ ಕಡೆಯಿಂದ ಇದ್ದದ್ದೂ ತೆಗೆಯಲ್ಪಡುವದು" ಎಂದು ಹೇಳುತ್ತಾನೆ (ಮಾರ್ಕ 4:25 ಹಾಗು ವ್ಯಾಖ್ಯಾನ ನೋಡಿರಿ).

ಮತ್ತಾಯ 13:14-15 ರಲ್ಲಿ ಯೇಸು ಯೇಶಾನ 6:9-10 ರ ಪ್ರವಾದನೆಯನ್ನು ಪೂರ್ಣವಾಗಿ ಪ್ರಸ್ತಾಪಿಸುತ್ತಾನೆ, ಇಲ್ಲಿ 12 ನೇ ವಚನದಲ್ಲಿ ಅದರ ಕೆಲಭಾಗವನ್ನು ಮಾತ್ರ ನೋಡುತ್ತೇವೆ. ಮತ್ತಾಯ 13:15 ರಲ್ಲಿ ಜನರ ಅಪರಾಧವು ಸ್ಪಷ್ಟವಾಗಿ ತೋರಿಸಲ್ಪಟ್ಟಿದೆ. "ಈ ಜನರ ಹೃದಯವು ಕೊಬ್ಬಿತು, ಇವರ ಕಿವಿ ಮಂದವಾಯಿತು. ಇವರು ಕಣ್ಣು ಮುಚ್ಚಿಕೊಂಡಿದ್ದಾರೆ. ತಾವು ಕಣ್ಣಿನಿಂದ ಕಂಡು ಕಿವಿಯಿಂದ ಕೇಳಿ ಹೃದಯದಿಂದ ತಿಳಿದು ನನ್ನ ಕಡೆಗೆ ತಿರಿಗಿಕೊಂಡು ನನ್ನಿಂದ ಸ್ವಸ್ಥತೆಯನ್ನು ಹೇಗೂ ಹೊಂದಬಾರದೆಂದು ಮಾಡಿಕೊಂಡಿದ್ದಾರೆ" (ಯೋಹಾ 12:39-40). ನಂತರ ಮತ್ತಾಯ 13:16-17 ರಲ್ಲಿ ಯೇಸು ತನ್ನ ಶಿಷ್ಯರಿಗೆ "ಆದರೆ ನಿಮ್ಮ ಕಣ್ಣು ಕಾಣುತ್ತವೆ, ನಿಮ್ಮ ಕಿವಿ ಕೇಳುತ್ತವೆ, ಆದುದರಿಂದ ನೀವು ಧನ್ಯರು" ಎಂದು ಹೇಳುತ್ತಾನೆ. ಶಿಷ್ಯರು ಧನ್ಯರು ಯಾಕೆಂದರೆ ಅವರು ಯೇಸುವನ್ನು ನೋಡಿ ಕೇಳಿದವರಾಗಿದ್ದರು. ಯೇಸು "ನಿಮಗೆ ಸತ್ಯವಾಗಿ ಹೇಳುತ್ತೇನೆ, ನೀವು ನೋಡುತ್ತಿರುವ ಕಾರ್ಯಗಳನ್ನು ಬಹುಮಂದಿ ಪ್ರವಾದಿಗಳೂ ಸತ್ಪುರುಷರೂ ನೋಡಬೇಕೆಂದು ಅಪೇಕ್ಷಿಸಿದರೂ ನೋಡಲಿಲ್ಲ, ನೀವು ಕೇಳುತ್ತಿರುವ ಸಂಗತಿಗಳನ್ನು ಅವರು ಕೇಳಬೇಕೆಂದು ಅಪೇಕ್ಷಿಸಿದರೂ ಕೇಳಲಿಲ್ಲ "ಎಂದು ಯೇಸು ಹೇಳಿದನು (ಮತ್ತಾಯ 13:17).

ಹಳೆ ಒಡಂಬಡಿಕೆಯ ಪ್ರವಾದಿಗಳೂ ಸತ್ಪುರುಷರು ಮೆಸ್ಸಿಯನಾದ ಕ್ರಿಸ್ತನ ಬರೋಣವನ್ನು ಎದುರು ನೋಡಿದರು ಆದರೆ ಅದನ್ನು ಕಾಣಲು ಅವರು ಜೀವಂತವಿರಲಿಲ್ಲ.

**13-14** 13-20 ರ ವಚನಗಳಲ್ಲಿ ಯೇಸು ಬಿತ್ತುವವನ ಸಾಮ್ಯದ ಅರ್ಥವನ್ನು ಏಕಾಂತದಲ್ಲಿ ತನ್ನ ಹಿಂಬಾಲಕರಿಗೆ ತಿಳಿಸುತ್ತಾನೆ. ಬಿತ್ತುವವನು ಬೀಜಗಳನ್ನು ಬಿತ್ತುತ್ತಾನೆ. ಯೇಸು ಬಿತ್ತುವವನಾಗಿದ್ದಾನೆ [31] ದೇವರ ವಾಕ್ಯವು ಬೀಜವಾಗಿರುತ್ತದೆ. ಅದು ಜನರ ಹೃದಯಗಳಲ್ಲಿ ಬಿತ್ತಲ್ಪಡುವಾಗ ನೂತನ ಆತ್ಮೀಕ ಜೀವನ ಚಿಗುರುತ್ತದೆ. ಈ ನೂತನ ಆತ್ಮೀಕ ಜೀವನದಲ್ಲಿ ಒಬ್ಬವ್ಯಕ್ತಿಯು ನಿಜ ಕ್ರೈಸ್ತನಾಗಿರಲಾಗದು (1 ಪೇತ್ರ 1:23 ನೋಡಿರಿ).

**15** ವಿವಿಧ ರೀತಿಯ ನೆಲಗಳು ಬೇರೆ ಬೇರೆ ಜನರನ್ನು ಸೂಚಿಸುತ್ತವೆ. ಕೆಲವು ಜನರು ದಾರಿಯ ಮಗ್ಗುಲಲ್ಲಿನ ಗಟ್ಟಿಯಾದ ನೆಲವಾಗಿರುತ್ತಾರೆ. ಬೀಜವು ದಾರಿಯ ಮಗ್ಗುಲಲ್ಲಿ ಬೀಳುತ್ತದೆ ಆದರೆ ಚಿಗುರೊಡೆಯುವದಿಲ್ಲ. ಅಂತಹ ಜನರು

ವಾಕ್ಯವನ್ನು ಕೇಳುತ್ತಾರೆ ಆದರೆ ಅದು ಅವರ ಕಠಿಣ ಹೃದಯಗಳನ್ನು ಸೇರುವದಿಲ್ಲ. ಮತ್ತು ಶೀಘ್ರವೇ ಸೈತಾನನು ಪಕ್ಷಿಯ ಹಾಗೆ ಬಂದು ವಾಕ್ಯವನ್ನು ಕಸಿದುಕೊಳ್ಳುತ್ತಾನೆ. ಇವರು ಫರಿಸಾಯರು ಮತ್ತು ಶಾಸ್ತ್ರಿಗಳಂತಿದ್ದಾರೆ, ಅವರು ಯೇಸುವಿನ ಸಾಮ್ಯಗಳನ್ನು ಕೇಳುವವರಾದರೂ ಅವು ಗಳನ್ನು ಅರ್ಥಮಾಡಿ ಕೊಳ್ಳದವರಂತೆ ಇದ್ದಾರೆ (ವಚನ 12). ಇಂತವರು ಬೋಧನೆಯನ್ನು ಸಿದ್ಧವಿಲ್ಲದ ಹೃದಯಗಳೊಂದಿಗೆ ಕೇಳಿ ಅನಂತರ ತಾವು ಕೇಳಿದ್ದನ್ನು ಧ್ಯಾನಿಸಿ ಪ್ರಾರ್ಥಿಸದವರಾಗಿದ್ದಾರೆ. ಯೇಸು "ನೀವು ಕಿವಿಗೊಡುವ ವಿಷಯದಲ್ಲಿ ಎಚ್ಚರಿಕೆ" ಎಂದು ಹೇಳಿದನು. (ವಚನ 24) ನಾವು ಗಟ್ಟಿಯಾದ ನೆಲದ ಹಾಗೆ ಉಳಿಯುವದೇ ಇರೋಣ. ನಾವು ಬೀಜವನ್ನು ಸ್ವೀಕರಿಸಲು ನೆಲವನ್ನು ಅಗೆಯೋಣ ಮತ್ತು ಅನಂತರ ಬೀಜವನ್ನು ಧ್ಯಾನ ಹಾಗು ಪ್ರಾರ್ಥನೆಯೊಂದಿಗೆ ಆವರಿಸಿಕೊಳ್ಳೋಣ.

**16-17** ಬಂಡೆಯ ಸ್ಥಳಗಳು ಆಳವಲ್ಲದ ನೆಲವನ್ನು ಹೊಂದಿರುತ್ತವೆ, ಮೇಲ್ಪದರಿನ ಕೆಳಗಡೆಯೇ ಬಂಡೆಯಿರುತ್ತದೆ. ಮೊದಮೊದಲು ಬೀಜವು ಚಿಗುರುತ್ತದೆ. ಈ ರೀತಿಯ ವ್ಯಕ್ತಿಯು ಶೀಘ್ರವೇ ಸಂತೋಷದಿಂದ ಸ್ವೀಕರಿಸುತ್ತಾನೆ. ಅಂತಹ ವ್ಯಕ್ತಿಯು ಯಾವದೇ ಹೊಸ ಆಲೋಚನೆಯನ್ನು ಕಾತುರದಿಂದ ಸ್ವೀಕರಿಸಿಕೊಳ್ಳುತ್ತಾನೆ, ಅಥವಾ ಬಹುಷಃ ಆತನು ದೇವರ ವಾಕ್ಯವನ್ನು ಸ್ವೀಕರಿಸುವದರ ಮೂಲಕ ಯಾವದಾದರೂ ಲಾಭವನ್ನು ಪಡೆಯುತ್ತೇನೆ ಎಂದು ನಿರೀಕ್ಷಿಸುತ್ತಾನೆ. ಕೆಲವರು ಉದ್ಯೋಗ ಅಥವಾ ವಿದ್ಯಾರ್ಥಿ ವೇತನವನ್ನು ಪಡೆಯಬೇಕೆಂಬದಕ್ಕಾಗಿ ಕ್ರೈಸ್ತರಾಗುತ್ತಾರೆ. ಕೆಲವು ಜನರು ಸುಲಭ ರಕ್ಷಣೆಯನ್ನು (ಅಗ್ಗ ಕೃಪೆ) ಕಂಡು ಕೊಳ್ಳಲು ಬಯಸುತ್ತಾರೆ. ಮತ್ತು ಅವರು ಮೊದಲು ನಂಬುತ್ತಾರಾದರೂ ಅವರ ನಂಬಿಕೆ ಬಲವಾಗಿರುವದಿಲ್ಲ. ಅವರ ನಂಬಿಕೆಯ ಬೇರುಗಳು ಬಂಡೆಯ ಕಾರಣದಿಂದ ಆಳವಾಗಿ ಹೋಗುವದಿಲ್ಲ. ಆದಕಾರಣ ಸೂರ್ಯ ಪ್ರಕಾಶಿಸುತ್ತಿದ್ದಂತೆಯೇ ಅಂದರೆ ಯಾವದಾದರೂ ಸಮಸ್ಯೆ ಅಥವಾ ಹಿಂಸೆ ಬರುತ್ತಿದ್ದಂತೆಯೇ ಹೊಸ ಸಸಿ (ಅವರ ನೂತನ ನಂಬಿಕೆ) ಸಾಯುತ್ತದೆ ಮತ್ತು ಅವರು ಬೇಗನೇ ಬಿದ್ದು ಹೋಗುತ್ತಾರೆ.

ಅವರಿಗೆ ದೇವರ ಆಶೀರ್ವಾದ ಬೇಕಿತ್ತು ಆದರೆ ಅದಕ್ಕಾಗಿ ಬೆಲೆ ಕಟ್ಟಲು ಅವರಿಗೆ ಮನಸ್ಸಿರಲಿಲ್ಲ. ಯೇಸುವನ್ನು ಹಿಂಬಾಲಿಸಲು ಬಯಸುವವರಿಗೆಲ್ಲಾ ಹಿಂಸೆಯು ಬರುತ್ತದೆಂಬದನ್ನು ಅವರು ಗ್ರಹಿಸಿಕೊಳ್ಳಲಿಲ್ಲ (2 ತಿಮೊಥೆ 3:12 ಮತ್ತು ವ್ಯಾಖ್ಯಾನ ನೋಡಿರಿ). ಅಥವಾ ಬಹುಶಃ ಅವರು ಇಚ್ಛಿಸಿದ ಲಾಭವು ಅವರಿಗೆ ಸಿಕ್ಕಲಿಲ್ಲ, ಆದುದರಿಂದ ಅವರು ನಿರಾಶೆ ಮತ್ತು ಕಹಿ ಮನಸ್ಸಿನವರಾದರು. ಸ್ವಲ್ಪ ಕಾಲದವರೆಗೆ ತಾಳಿಕೊಂಡರೂ ಕೊನೆಯವರೆಗೂ ತಾಳಿಕೊಳ್ಳದವರು ಬಹಳ ಜನರಿದ್ದಾರೆ. ಅಂತಹ ಜನರು ರಕ್ಷಿಸಲ್ಪಡುವದಿಲ್ಲ (ಮಾರ್ಕ 13:13 ಮತ್ತು ವ್ಯಾಖ್ಯಾನ ನೋಡಿರಿ).

ಶೋಧನೆಗಳು ಮತ್ತು ಕಷ್ಟಗಳು ಕೆಲವು ಕ್ರೈಸ್ತರ ನಂಬಿಕೆಯನ್ನು ದೃಡಪಡಿಸುತ್ತವೆ. ಆದರೆ ಇತರರ ನಂಬಿಕೆಯನ್ನು ನಡುಗಿಸುತ್ತವೆ ಬೆಳೆಯಲು ನಮಗೆ ಸೂರ್ಯನು ಅಗತ್ಯ, ಆದರೆ ನಾವು ಬೇರುಗಳಿಲ್ಲದವರಾದರೆ ಅದೇ ಸೂರ್ಯನು ನಮ್ಮನ್ನು ಕೊಲ್ಲುವನು. ಶೋಧನೆಗಳು ನಮ್ಮ ನಂಬಿಕೆಯನ್ನು ಪರೀಕ್ಷಿಸುತ್ತವೆ. (ಯಾಕೋಬ 1:2-3, 1 ಪೇತ್ರ 1:6-7), ತಾಪತ್ರಯಗಳು ನಿಜ ಕ್ರೈಸ್ತರನ್ನು ಸುಳ್ಳು ಕ್ರೈಸ್ತರಿಂದ ಬೇರ್ಪಡಿಸುತ್ತವೆ (ಮತ್ತಾಯ 7:24-27 ಹಾಗು ವ್ಯಾಖ್ಯಾನ ನೋಡಿರಿ).

**18-19** ಮುಳ್ಳುಗಳಿದ್ದ ನೆಲವು ಉತ್ತಮ ನೆಲವಾಗಿತ್ತು. ಅದು ಗಡಸಾಗಿರುವದಿಲ್ಲ, ಬಂಡೆಗಳಿಂದಲೂ ಕೂಡಿರುವದಿಲ್ಲ ಅದು ಆಳವಾದದ್ದು ಮತ್ತು ಫಲವತ್ತಾದದ್ದು ಆಗಿದೆ. ಈ ನೆಲದಲ್ಲಿ ಬಿದ್ದ ಬೀಜವು ಚಿಗುರೊಡೆದು ಚೆನ್ನಾಗಿ ಬೆಳೆಯುತ್ತದೆ. ಈ ನೆಲವು ದೇವರ ವಾಕ್ಯವನ್ನು ಸ್ವೀಕರಿಸಿ ಅದನ್ನು ಆಳವಾಗಿ ನಂಬಿ ತಮ್ಮ ಕ್ರೈಸ್ತೀಯ ಜೀವಿತವನ್ನು ಉತ್ತಮವಾಗಿ ಪ್ರಾರಂಭಿಸುವ ಜನರನ್ನು ಪ್ರತಿನಿಧಿಸುತ್ತದೆ (ಗಲಾತ್ಯ 5:7). ಆದರೆ ಆ ಒಳ್ಳೆ ನೆಲದಲ್ಲಿ ಮುಳ್ಳುಗಳೂ ಇರುತ್ತವೆ, ಅಂದರೆ ಸ್ವಾರ್ಥತೆ, ಪ್ರಪಂಚದ ಚಿಂತೆಗಳು, ಐಶ್ವರ್ಯದಿಂದುಂಟಾಗುವ ಮೋಸ ಹಾಗು ಇತರ ಸಂಗತಿಗಳನ್ನು ಮೇಲಣ ಆಶೆಗಳು ಆಗಿರುತ್ತದೆ. ಇವು ಗಳು ದೇವರ ವಾಕ್ಯಕ್ಕಿಂತಲೂ ಶೀಘ್ರವಾಗಿ ಬೆಳೆದು ಬೇಗನೇ ಕ್ರೈಸ್ತನ ಆತ್ಮೀಕ ಜೀವಿತವನ್ನು ಚಿವು ಟಿಹಾಕುತ್ತವೆ. ಕ್ರೈಸ್ತನ ಆತ್ಮೀಕ ಜೀವನ ಬಹುಶಃ ಸಾಯುವದಿಲ್ಲ ಆದರೆ ಅದು ಫಲವಿಲ್ಲದ್ದಾಗುತ್ತದೆ. ಮತ್ತು ಫಲಕೊಡದ ಕೊಂಬೆಗಳಿಗೆ ದೇವರು ಮಾಡುವು ದೇನು? ಆತನು ಅವು ಗಳನ್ನು ಕತ್ತರಿಸಿ ಬೆಂಕಿಗೆ ಹಾಕುತ್ತಾನೆ (ಯೋಹಾನ 15:2,6). ಎಷ್ಟೋ ಜನ ಕ್ರೈಸ್ತರು ಉತ್ತಮವಾಗಿ ಪ್ರಾರಂಭಿಸಿದರು ಆದರೆ ಅವರು ಈ ಚಿಂತೆಗಳೂ ಮತ್ತು ಆಶೆಗಳ ಕಾರಣದಿಂದ ಬಿದ್ದು ಹೋಗಿರುತ್ತಾರೆ! ನಮ್ಮಲ್ಲಿ ಯಾರಾದರೂ ಈ ಮುಳ್ಳಿನ ನೆಲದಂತೆ ಇದ್ದೇವೊ?

**20** ಆದರೆ ಬಿತ್ತುವವನು ವ್ಯರ್ಥವಾಗಿ ಬಿತ್ತುವದಿಲ್ಲ. ನಿಜ, ಕೆಲವು ಸ್ಥಳಗಳಲ್ಲಿ ದೇವರ ವಾಕ್ಯದಿಂದ ಯಾವ ಫಲವು ಬರುವದಿಲ್ಲ, ಹೇಗಿದ್ದರೂ, ಬೇರೆ ಸ್ಥಳಗಳಲ್ಲಿ ಖಂಡಿತವಾಗಿ ಫಲವು ಂಟಾಗುತ್ತದೆ. ದೇವರು ಹೇಳುತ್ತಾನೆ "ಹಾಗೆಯೇ ನನ್ನ ಬಾಯಿಂದ ಹೊರಟ ಮಾತು ನನ್ನ ಇಷ್ಟಾರ್ಥವನ್ನು ನೆರವೇರಿಸಿ ನಾನು ಉದ್ದೇಶಿಸಿದ್ದನ್ನು ಕೈಗೂಡಿಸಿದ ಹೊರತು ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವದಿಲ್ಲ" (ಯೇಶಾಯ 55:11). ನಾವು ದೇವರ ವಾಕ್ಯವನ್ನು ಬೋಧಿಸುವಾಗಲೆಲ್ಲಾ ನೆಲದ ಕೆಲ ಭಾಗದಿಂದ ಪೈರು ಸಿಕ್ಕುತ್ತದೆ. ಒಳ್ಳೆ ನೆಲವು ಫಲವನ್ನು ನೀಡುವ ನೆಲವಾಗಿದೆ. ಒಳ್ಳೇ ನೆಲದಲ್ಲಿ ಬಂಡೆಗಳಾಗಲಿ ಮುಳ್ಳುಗಳಾಗಲಿ ಇರುವದಿಲ್ಲ ಎಂದು ಯೇಸು ಹೇಳಲಿಲ್ಲ. ಆದರೆ ಆತನು ಹೇಳುವದೇನೆಂದರೆಃ ಈ ನೆಲವು ಫಲವನ್ನು ನೀಡುತ್ತದೆ. ನಮ್ಮಲ್ಲಿ ಕೆಲವರು ಇತರರಿಗಿಂತ ಹೆಚ್ಚು ಫಲವನ್ನು ನೀಡುತ್ತಾರೆ ಆದರೆ ನಾವೆಲ್ಲರೂ ದೇವರು ನಮಗೆ ನೀಡುವ ಕೃಪೆಗನುಸಾರವಾಗಿ ಫಲವನ್ನು ನೀಡುವವರಾಗಿರೋಣ. ಮತ್ತು ದೇವರ ಸಹಾಯದಿಂದ ನಮ್ಮ ನೆಲದಲ್ಲಿರುವ ಕಲ್ಲು ಮತ್ತು ಮುಳ್ಳುಗಳನ್ನು ಸಾಧ್ಯವಾದಷ್ಟು ತೆಗೆದುಹಾಕೋಣ. ನಾವು ಯಾವ ಫಲವನ್ನು ನೀಡಬೇಕು? ಮೊದಲು, ನಾವು ಪವಿತ್ರಾತ್ಮನ ಫಲವನ್ನು ನೀಡಬೇಕು (ಗಲಾತ್ಯ 5:22-23ನೋಡಿರಿ). ಇದು ಆತ್ಮನ ಫಲವಾಗಿದ್ದು ನಮ್ಮ ಫಲವಲ್ಲ ಎಂಬುದು ಸತ್ಯ ಆದರೆ ಹಾಗಿದ್ದರೂ

ಸಹ ನಾವು ನೆಲವನ್ನು ಅದಕ್ಕಾಗಿ ಸಿದ್ಧಗೊಳಿಸಿ ಅದಕ್ಕೆ ನೀರು ಹಾಕುವವರಾಗಿರಬೇಕು. ಎರಡನೆಯದಾಗಿ, ನಾವು ಸಹ ಬೀಜವನ್ನು ಬಿತ್ತಿ ಅದರ ಮೂಲಕ ಹೊಸ ಕ್ರೈಸ್ತರನ್ನು ಉತ್ಪಾದಿಸಬೇಕು. ಹೊಸ ಕ್ರೈಸ್ತರು ಸಹ ಫಲವಾಗಿದ್ದಾರೆ. ನಾವು ಉಂಟು ಮಾಡುವ ಫಲಕ್ಕನುಸಾರವಾಗಿ ನಾವು ದೇವರಿಗೆ ಮಹಿಮೆಯನ್ನು ತರುತ್ತೇವೆ (ಯೋಹಾನ 15:8).

ಸಾರಾಂಶದಲ್ಲಿ, ಈ ಸಾಮ್ಯದ ಮೂಲಕ ಮನುಷ್ಯನ ಹೃದಯ ನೆಲದಂತೆ ಇರುತ್ತದೆ ಎಂಬದನ್ನು ನಾವು ಅರ್ಥಮಾಡಿಕೊಳ್ಳಬೇಕು. ಈ ನೆಲದಲ್ಲಿ ಬಂಡೆಗಳು ಮತ್ತು ಮುಳ್ಳುಗಳಿರುತ್ತವೆ. ಈ ಮುಳ್ಳುಗಳು ಅಂದರೆ ಅತಿಯಾಸೆ, ದುರಾಶೆಗಳು, ಕೋಪ, ನಿಂದನೆ, ಅಸೂಯೆಗಳು ಶೀಘ್ರವಾಗಿ ಬೆಳೆಯುವವು . ಆದುದರಿಂದ, ಹೊಸ ಆತ್ಮೀಕ ಜೀವಿತವು ಬೆಳೆಯುವದಕ್ಕಾಗಿ ನಮ್ಮ ನೆಲವು ಉತ್ತಮ ಸ್ಥಿತಿಯಲ್ಲಿ ಇಡಲ್ಪಡುವದು ಅವಶ್ಯಕವಾದದ್ದು. ಅದಕ್ಕೆ ಬೈಬಲ್ ಅಭ್ಯಾಸ ಮತ್ತು ಪ್ರಾರ್ಥನೆ ಹಾಗು ಅನ್ಯೋನ್ಯತೆಗಳ ಮೂಲಕ ನೀರು ಹಾಕುತ್ತಾ ಇರಬೇಕು, ಮತ್ತು ಮುಳ್ಳುಗಳು ಕಾಣಿಸುವಾಗ ತಕ್ಷಣವೇ ಅವು ಗಳನ್ನು ಕಿತ್ತು ಹಾಕಬೇಕು. ಇಲ್ಲವಾದರೆ ನಮ್ಮಲ್ಲಿರುವ ನೂತನ ಆತ್ಮೀಕ ಜೀವನ ಸಾಯುವದು.

## ಸ್ತಂಭದ ಮೇಲಿನ ದೀಪ (4:21-25)

(ಮತ್ತಾಯ 5:15, 7:2, 10:26, 13:12, 25:29; ಲೂಕ 6:38, 8:16-18, 11:33, 12:2, 19:26)

**21-23** ನೀವು ದೀಪವನ್ನು ತಂದು ಕೊಳಗದೊಳಗಾಗಲಿ ಮಂಚದ ಕೆಳಗಾಗಲಿ ಇಡುವದುಂಟೆ? ಇಲ್ಲಿ ದೀಪವೆಂದರೆ ಕ್ರಿಸ್ತನು ಅಥವಾ ಆತನ ವಾಕ್ಯ (ಯೋಹಾನ 8:12). ಕ್ರಿಸ್ತನ ಬರೋಣವು ಮೊದಲು ಕೆಲಪ್ರಮಾಣದಲ್ಲಿ ರಹಸ್ಯವಾಗಿತ್ತು. ತಾನು ಯಾರೆಂದು ಹೇಳಬಾರದೆಂದು ಆತನು ದೆವ್ವಗಳಿಗೆ ನಿಷೇದಿಸಿದನು (ಮಾರ್ಕ 3:11-12). ಆತನು ಸಾಮ್ಯಗಳಲ್ಲಿ ಮಾತನಾಡಿದನು, ಅದನ್ನು ಎಲ್ಲರೂ ಅರ್ಥಮಾಡಿಕೊಳ್ಳಲಿಲ್ಲ. ಆದರೆ ಅಂತ್ಯದಲ್ಲಿ ಕ್ರಿಸ್ತನು ಪೂರ್ಣ ಬಯಲಿಗೆ ಬರುವನು, ಪೂರ್ಣವಾಗಿ ತೋರ್ಪಡಿಸಿಕೊಳ್ಳುವನು (ಮತ್ತಾಯ 10:26-27 ನೋಡಿರಿ). ಈಗ ಪ್ರತಿಯೊಬ್ಬರೂ ಕ್ರಿಸ್ತನನ್ನು ಅಂಗೀಕರಿಸುವದಿಲ್ಲ. ಆದರೆ ಒಂದು ದಿನ ಎಲ್ಲರೂ ಆತನನ್ನು ಕರ್ತನೆಂದು ಒಪ್ಪಿಕೊಳ್ಳುವರು (ಫಿಲಿಪ್ಪಿ 2:9-11 ನೋಡಿರಿ). ಆ ದಿನದಲ್ಲಿ ಆತನ ಬೆಳಕು ಸ್ತಂಭದ ಮೇಲೆ ಇಡಲ್ಪಡುವದು.

**24-25** ನೀವು ಕೇಳುವದನ್ನು ಜಾಗ್ರತೆಯಿಂದ ಆಲೋಚಿಸಿರಿ. ಆಲೋಚಿಸಿರಿ ಮತ್ತು ನಂಬಿರಿ. ನೀವು ಉಪಯೋಗಿಸುವ ಅಳತೆಯಿಂದಲೇ. ಅಂದರೆ ನೀವು ಉಪಯೋಗಿಸುವ ನಂಬಿಕೆಗನುಸಾರವಾಗಿ ನಿಮಗೂ ಅಳೆಯಲ್ಪಡುವದು. ನೀವು ಎಷ್ಟು ನಂಬುತ್ತೀರೋ ಅಷ್ಟು ಸ್ವೀಕರಿಸುವಿರಿ ಹೊಸ ಜೀವನ, ಆನಂದ ಬಲ, ಮತ್ತು ಅದಕ್ಕಿಂತಲೂ ಹೆಚ್ಚಾಗಿ ಪರಲೋಕದಲ್ಲಿ ನಿತ್ಯ ಜೀವನವನ್ನು ಸ್ವೀಕರಿಸಿಕೊಳ್ಳುವಿರಿ.

ಇದ್ದವನಿಗೆ ಅಂದರೆ ನಂಬಿಕೆ ಹೊಂದಿರುವವನಿಗೆ ಹೆಚ್ಚು ಕೊಡಲ್ಪಡುವದು (ವಚನ 25). ಅವನಿಗೆ ಹೆಚ್ಚು ತಿಳುವಳಿಕೆ (ಮತ್ತಾಯ 13:12). ಹೆಚ್ಚು ಆನಂದ ಮತ್ತು ಬಲ, ಹೆಚ್ಚು ನಂಬಿಕೆ, ಹೆಚ್ಚು ಜೀವ ಕೊಡಲ್ಪಡುವದು. ನಂಬಿಕೆ ಇಲ್ಲದವನಕಡೆಯಿಂದ ಇದ್ದದ್ದೂ ತೆಗೆಯಲ್ಪಡುವದು. ಇತನು ದಾರಿಯ ಮಗ್ಗುಲಿನ ನೆಲವಾಗಿದ್ದಾನೆ, ಅಲ್ಲಿ ಬೀಜವು ಬಿದ್ದರೂ ಚಿಗುರೊಡೆಯಲಿಲ್ಲ ಮತ್ತು ಸೈತಾನನು ಬೀಜವನ್ನು ದೋಚಿಕೊಂಡನು.

ದೇವರು ನಮಗೆ ಕೊಟ್ಟಿರುವ ನಮ್ಮ ನಂಬಿಕೆಯ ವರ ಮತ್ತು ಇತರ ವರಗಳನ್ನು ಉಪಯೋಗಿಸದೆ ಇರುವದಾದರೆ ನಾವು ಅವು ಗಳನ್ನು ಕಳೆದುಕೊಳ್ಳುತ್ತೇವೆ (ಮತ್ತಾಯ 25:24-30). ನಾವು ನಮ್ಮ ಕಾಲುಗಳನ್ನು ಉಪಯೋಗಿಸದೇ ಹೋದರೆ ನಾವು ಶೀಘ್ರವೇ ನಡೆಯಲು ಅಸಮರ್ಥರಾಗುತ್ತೇವೆ. ನಮ್ಮ ದೇಹಗಳ ವಿಷಯದಂತೆಯೇ ನಮ್ಮ ಆತ್ಮೀಕ ಜೀವಿತಗಳ ವಿಷಯವು ಆಗಿರುತ್ತದೆ. ಆದುದರಿಂದ ನಾವು ನಮ್ಮ ಕಿವಿಗಳನ್ನು ಉಪಯೋಗಿಸೋಣ (ವಚನ 23) ಮತ್ತು ನಾವು ಕಿವಿಗೊಡುವದರಲ್ಲಿ ಎಚ್ಚರಿಕೆಯಾಗಿರೋಣ!.

## ಬೆಳೆಯುವಂತ ಬೀಜದ ಸಾಮ್ಯ (4:26-29)

**26-29** ಈ ಸಾಮ್ಯದಲ್ಲಿ ಯೇಸು ದೇವರ ರಾಜ್ಯವನ್ನು ಪೈರಿಗೆ (ಸುಗ್ಗಿ) ಹೋಲಿಸುತ್ತಾನೆ. ಒಬ್ಬನು, ಅಂದರೆ ಯೇಸು ಬೀಜವನ್ನು ಹಾಕುತ್ತಾನೆ. ನಂತರ ಬೀಜವು ತನ್ನಷ್ಟಕ್ಕೆ ದೇವರ ಶಕ್ತಿಯ ಮೂಲಕ ಚಿಗುರೊಡೆದು ಬೆಳೆಯುತ್ತದೆ. ಯಾವನೂ ಸಹ "ನಾನು ಸುಗ್ಗಿಯನ್ನು ಉತ್ಪಾದಿಸಿದ್ದೇನೆ" ಎಂದು ಹೇಳಲಾಗದು. ಮನುಷ್ಯನ ಕೆಲಸವು ಬಿತ್ತುವದು, ನೀರು ಹಾಕುವದು, ಮತ್ತು ಕೊಯ್ಯುವದು. ದೇವರು ಅದನ್ನು ಬೆಳೆಸುತ್ತಾನೆ (1 ಕೊರಿಂಥ 3:6-7)

## ಸಾಸಿವೆ ಕಾಳಿನ ಸಾಮ್ಯ (4:30-34)

(ಮತ್ತಾಯ 13:31-32, ಲೂಕ 13:18-19)

**30-32** ಪ್ರಾರಂಭದಲ್ಲಿ ದೇವರ ರಾಜ್ಯವು ಸಣ್ಣ ಸಾಸಿವೆ ಕಾಳಿನಂತಿತ್ತು. ಯೇಸು ಬೋಧಿಸಲು ಪ್ರಾರಂಭಿಸಿದಾಗ ಕೆಲವರು ಮಾತ್ರವೇ ಕೇಳಿ ನಂಬಿಕೆಯಿಟ್ಟರು. ಹೆಚ್ಚಿನ ಪಾಲು ಜನ ಆತನನ್ನು ತಿರಸ್ಕರಿಸಿದರು. ಅವರು ಆತನನ್ನು ಹಾಸ್ಯಮಾಡಿದರು ಮತ್ತು ಸಾಯಿಸಿದರು. ಆತನ ಶಿಷ್ಯರು ಓಡಿಹೋದರು. ಆದರೆ ಏನು ನಡೆಯಿತು ನೋಡಿರಿ. ಪವಿತ್ರಾತ್ಮನ ಬಲದ

ಮುಖಾಂತರವಾಗಿ ಆ ಚಿಕ್ಕ ಸಾಸಿವೆ ಬೀಜದಿಂದ ಒಂದು ಬಲಿಷ್ಠವಾದ ಸಭೆಯು ಬೆಳೆದಿರುತ್ತದೆ ಮತ್ತು ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲೂ ಅದು ಹರಡಿರುತ್ತದೆ. ಅದೇ ದೇವರ ರಾಜ್ಯವಾಗಿರುತ್ತದೆ.

**33-34** ಈ ರೀತಿಯಾಗಿ ಯೇಸು ಜನರ ಗ್ರಹಿಕೆಗೆ ತಕ್ಕ ಹಾಗೆ ಅನೇಕ ಸಾಮ್ಯಗಳನ್ನು ಬೋಧಿಸಿದನು (ವಚಸ 33). ಜನರು ಎಲ್ಲಾ ಆತ್ಮೀಕ ಸಂಗತಿಗಳನ್ನು ಒಮ್ಮೆಲೇ ಅರ್ಥಮಾಡಿಕೊಳ್ಳಲು ಆಗುವದಿಲ್ಲ. ಅವರು ಮೊದಲು ಸರಳವಾದ ದೃಷ್ಟಾಂತ ಅಥವಾ ಸಾಮ್ಯ ಕೇಳಬೇಕಾಗುತ್ತದೆ. ನಂತರ ಅವರ ಹೃದಯಗಳು ತೆರೆಯಲ್ಪಡುವಾಗ ಅವರು ನಿಧಾನವಾಗಿಹೆಚ್ಚು ಅರ್ಥಮಾಡಿಕೊಳ್ಳಲು ಪ್ರಾರಂಭಿಸುವರು. (ಮತ್ತಾಯ 13:34-35 ಮತ್ತು ವ್ಯಾಖ್ಯಾನ ನೋಡಿರಿ).

ಹೇಗೂ, ಕ್ರಿಸ್ತನು ತನ್ನ ಹನ್ನೆರಡು ಶಿಷ್ಯರಿಗೂ, ಇತರ ಹಿಂಬಾಲಕರಿಗೂ ಎಲ್ಲವನ್ನು ವಿವರಿಸಿದನು. ಅವರು ತಮ್ಮ ಹೃದಯಗಳನ್ನು ತೆರೆದಿದ್ದರು ಮತ್ತು ಹೆಚ್ಚು ಕಲಿಯಲು ಸಿದ್ಧರಾಗಿದ್ದರು. ಯೇಸುವಿನ ಅತಿಪ್ರಾಮುಖ್ಯ ಕೆಲಸವೇನೆಂದರೆ ಈ ಶಿಷ್ಯರನ್ನು ಮುಂದೆ ಬೋಧಕರಾಗುವದಕ್ಕಾಗಿ, ಮನುಷ್ಯರನ್ನು ಹಿಡಿಯುವ ಬೇಸ್ತರಾಗುವದಕ್ಕಾಗಿ ತರಬೇತಿ ಗೊಳಿಸುವದಾಗಿತ್ತು (ಮಾರ್ಕ 1:17)

ಯೇಸು ಬಿರುಗಾಳಿಯನ್ನು ಶಾಂತಗೊಳಿಸುತ್ತಾನೆ (4:35-41) (ಮತ್ತಾಯ 8:23-27, ಲೂಕ 8:22-25)

**35-36** ಯೇಸು ದೋಣಿಯಲ್ಲಿದ್ದುಕೊಂಡು ದಿನವೆಲ್ಲಾ ಜನರ ಗುಂಪಿಗೆ ಬೋಧಿಸಿದ್ದನು. ಆತನು ಖಂಡಿತವಾಗಿಯೂ ಆಯಾಸಗೊಂಡಿದ್ದನು. ಆದ್ದರಿಂದ ಆತನ ಶಿಷ್ಯರು ಅವನನ್ನು ಅದೇದೋಣಿಯಲ್ಲಿ ಹಾಗೆಯೇ ಗಲಿಲಾಯ ಸಮುದ್ರದ ಆಚೆ ದಡಕ್ಕೆ ಕರೆದುಕೊಂಡು ಹೋದರು.

**37-38** ಸಮುದ್ರದ ಮದ್ಯದಲ್ಲಿ ಒಂದು ರೋಷಭರಿತವಾದ ಬಿರುಗಾಳಿ ಎದ್ದಿತು. ಅಂತಹ ಬಿರುಗಾಳಿಯು ಹಲವಾರು ವೇಳೆ ಗಲಿಲಾಯ ಸಮುದ್ರದ ಮೇಲೆ ಸಂಭವಿಸುತ್ತದೆ. ದೋಣಿಯು ಅತ್ತ ಇತ್ತ ತೂರಾಡಲ್ಪಟ್ಟು ತೆರೆಗಳು ಅದರೊಳಗೆ ಸುರಿಯಲ್ಪಟ್ಟವು . ದೋಣಿಯು ಮುಳುಗಲು ಪ್ರಾರಂಭವಾಯಿತು. ಶಿಷ್ಯರಲ್ಲಿ ಕೆಲವರು ಅನುಭವವುಳ್ಳ ಬೇಸ್ತರಾಗಿದ್ದರೂ ಅವರು ಹೆದರಿದರು. ಆದರೆ ಯೇಸು ನಿದ್ರೆ ಮಾಡುತ್ತಿದ್ದನು. ಶಿಷ್ಯರು ಅವನೊಂದಿಗೆ ಸ್ವಲ್ಪ ಬೇಸರಗೊಂಡಿದ್ದರು. "ಗುರುವೇ, ನಾವು ಮುಳುಗುವದರಲ್ಲಿ ನಿನಗೆ ಚಿಂತೆಯಿಲ್ಲವೇ? " ಎಂದು ಅವರು ಆತನನ್ನು ಎಬ್ಬಿಸುತ್ತಾ ಪ್ರಶ್ನಿಸಿದರು.

**39** ದೇವರ ಮಗನಾದ ಯೇಸು ಪ್ರಕೃತಿಯ ಎಲ್ಲಾ ಶಕ್ತಿಯ ಮೇಲೆ ಸಂಪೂರ್ಣ ಹತೋಟಿ ಹೊಂದಿದ್ದನು. ಮಾರ್ಕನು ಇದುವರೆಗೆ ರೋಗಗಳು ಮತ್ತು ದೆವ್ವಗಳ ಮೇಲೆ ಆತನಿಗಿದ್ದ ಶಕ್ತಿಯನ್ನು ಬಣ್ಣಿಸಿದ್ದಾನೆ. ಆದರೆ ಈಗ ನಾವು ಪ್ರಕೃತಿಯ ಶಕ್ತಿಗಳ ಮೇಲೆ ಆತನ ಸಂಪೂರ್ಣ ಅಧಿಕಾರವನ್ನು ನೋಡುತ್ತೇವೆ. ಅತನ ಮಾತಿನ ಮೇಲೆ ಬಿರುಗಾಳಿಯು ನಿಂತಿತು.

**40-41** ಬಳಿಕ ಯೇಸು ತನ್ನ ಶಿಷ್ಯರ ನಂಬಿಕೆಯ ಕೊರತೆಗಾಗಿ ಅವರನ್ನು ಗದರಿಸುತ್ತಾನೆ. ನಿಮಗೆ ಇನ್ನು ನಂಬಿಕೆಯಿಲ್ಲವೊ? "ಅವರು ತಮ್ಮ ತಮ್ಮಲ್ಲಿಯೇ"ಈತನು ಯಾರಿರಬಹುದು? ಅಂದುಕೊಂಡರು. ಶಿಷ್ಯರಿಗೆ ಸಹ ಯೇಸುವಿನ ಬಗ್ಗೆ ಪೂರ್ಣ ತಿಳುವಳಿಕೆಯನ್ನು ಹೊಂದಿರಲಿಲ್ಲ. ಅವರು ಕ್ರಮವಾಗಿ ಕಲಿತುಕೊಳ್ಳುವವರಾಗಿದ್ದರು.

ಮತ್ತಾಯನು ಈ ಘಟನೆಯನ್ನು ವಿವರಿಸುವದರಲ್ಲಿ ಯೇಸು ಮೊದಲು ತನ್ನ ಶಿಷ್ಯರನ್ನು ಗದರಿಸಿ ನಂತರ ಗಾಳಿಯನ್ನು ಶಾಂತಗೊಳಿಸುತ್ತಾನೆ. ಮತ್ತಾಯ ಮತ್ತು ಮಾರ್ಕ ಇಬ್ಬರ ದಾಖಲೆಯೂ ಸತ್ಯವಾಗಿದೆ. ಯೇಸು ತನ್ನ ಶಿಷ್ಯರನ್ನು ಗಾಳಿಯನ್ನು ಶಾಂತಗೊಳಿಸುವದಕ್ಕೆ ಮುಂಚೆ ಮತ್ತು ನಂತರವೂ ಗದರಿಸಿದನು. ನಾವು ನಾಲ್ಕು ಸುವಾರ್ತೆಗಳನ್ನು ಹೋಲಿಸಿ ನೋಡುವಾಗ ಪ್ರತಿ ಗ್ರಂಥಕರ್ತನೂ ಎಂದಿಗೂ ಘಟನೆಗಳ ಪೂರ್ಣ ದಾಖಲೆಯನ್ನು ಬರೆಯಲಿಲ್ಲ ಎಂಬದನ್ನು ನಾವು ನೆನಪಿನಲ್ಲಿಟ್ಟಕೊಳ್ಳಬೇಕು. ನಾವು ನಾಲ್ಕು ಸುವಾರ್ತೆಗಳನ್ನು ಒಟ್ಟಾಗಿ ಅಭ್ಯಾಸಿಸುವಾಗ ಏನು ನಡೆಯಿತೆಂಬುದರ ಸಂಪೂರ್ಣ ವಿವರಣೆಯನ್ನು ಹೊಂದಿಕೊಳ್ಳಬಹುದು.

---

## ಅಧ್ಯಾಯ - 5

### ದೆವ್ವಪೀಡಿತನಾದ ಮನುಷ್ಯನನ್ನು ಸ್ವಸ್ಥ ಮಾಡುವದು (5:1-20)

(ಮತ್ತಾಯ 8:28-34, ಲೂಕ 8:26-39)

**1** ಯೇಸು ಮತ್ತು ಆತನ ಶಿಷ್ಯರು ಪುನಃ ಸಮುದ್ರದ ಅಂದರೆ ಗಲಿಲಾಯ ಸಮುದ್ರದ ಆಚೆದಡಕ್ಕೆ ಗೆರಸೇನರ[32] ಸೀಮೆಗೆ ಹೋದರು.32 ಈ ಘಟನೆಯ ಕುರಿತು ಮತ್ತಾಯನ ವರದಿಯಲ್ಲಿ ಆತನು ಇಬ್ಬರು ದೆವ್ವ ಹಿಡಿದಿದ್ದ ವ್ಯಕ್ತಿಗಳ ಬಗ್ಗೆ ಪ್ರಸ್ತಾಪಿಸುತ್ತಾನೆ (ಮತ್ತಾಯ 8:28). ಆದರೆ ಮಾರ್ಕನು ಕೇವಲ ಅವರಲ್ಲಿ ಒಬ್ಬನ ಬಗ್ಗೆ ಬರೆಯುತ್ತಾನೆ (ಮಾರ್ಕ 4:40-41 ಹಾಗು ವ್ಯಾಖ್ಯಾನ ನೋಡಿರಿ).

**2-8** ತಿರಿಗಿ ಇಲ್ಲಿ ದೆವ್ವವು ಯೇಸುವನ್ನು ಗುರುತಿಸಿತು (ಮಾರ್ಕ 1:23-24 ನೋಡಿರಿ). "ದೆವ್ವವು , ನನ್ನ ಗೊಡವೆ ನಿನಗೇಕೆ"? ಎಂದಿತು (ವಚನ 7).ಕೆಲವು ಬೈಬಲ್ ಅವೃತ್ತಿಗಳಲ್ಲಿ ಇದು "ನೀನು ನನ್ನ ಜೊತೆ ಮಾಡುವು ದೇನಿದೆ"? ಎಂದು ಭಾಷಾಂತರಿಸಲ್ಪಟ್ಟಿದೆ. ದೆವ್ವವು ಖಂಡಿತವಾಗಿಯೂ ಯೇಸುವಿನ ಗೊಡವೆಗೆ ಹೋಗಲು ಬಯಸಲಿಲ್ಲ! ದೆವ್ವವು ಯೇಸುವಿಗೆ ನನ್ನನ್ನು ಕಾಡಬೇಡ ಎಂದು ಬೇಡಿಕೊಂಡಿತು ಅಂದರೆ ತನ್ನನ್ನು ಅವ್ಯಕ್ತಿಯೊಳಗಿಂದ ಹೊರಡಿಸಬೇಡ ಎಂಬದಾಗಿ.

ನಾವು ಜ್ಞಾಪಿಸಿಕೊಳ್ಳಬೇಕಾದದ್ದೇನೆಂದರೆ ಯೇಸುವನ್ನು ಗುರುತಿಸುವದಷ್ಟೇ ಸಾಲದು ದೆವ್ವಗಳು ಸಹ ಯೇಸು ದೇವರ ಮಗನೆಂದು ಬಲ್ಲವು ಮತ್ತು ಅರಿಕೆ ಸಹ ಮಾಡುತ್ತವೆ. ನಾವು ಅತನನ್ನು ತಿಳಿಯುವದು ಮಾತ್ರವಲ್ಲ, ನಾವು ಆತನನ್ನು ಪ್ರೀತಿಸಿ ವಿಧೇಯರಾಗಬೇಕು (ಯಾಕೋಬ 2:18-19 ಮತ್ತು ವ್ಯಾಖ್ಯಾನ ನೋಡಿರಿ).

**9-10** ದೆವ್ವದ ಹೆಸರು ದಂಡು, ಅದರ ಲ್ಯಾಟಿನ [33]ಪದದ ಅರ್ಥವು ಆರು ಸಾವಿರ ಜನರ ಒಂದು ಸೈನ್ಯ ಎಂಬದಾಗಿರುತ್ತದೆ. ಆ ವ್ಯಕ್ತಿಯು ಕೇವಲ ಒಂದು ದೆವ್ವವನ್ನಲ್ಲ ಆದರೆ ಅನೇಕ ದೆವ್ವಗಳನ್ನು ಹೊಂದಿದ್ದನು! ದೆವ್ವವು ತನ್ನನ್ನು ಮತ್ತು ತನ್ನ ಸಹ ದೆವ್ವಗಳನ್ನು ಸೀಮೆಯಿಂದ ಹೊರಡಿಸಬೇಡವೆಂದು ಬೇಡಿಕೊಂಡಿತು.

ಈ ಘಟನೆಯ ಕುರಿತ ಲೂಕನ ವರದಿಯಲ್ಲಿ ದೆವ್ವಗಳು ತಮ್ಮನ್ನು ಪಾತಾಳಕ್ಕೆ ಕಳುಹಿಸದಂತೆ ಬೇಡಿಕೊಂಡವು (ಲೂಕ 8:31). "ಪಾತಾಳವು" ದುರಾತ್ಮಗಳು ಬಂಧಿಯಾಗಿಡಲ್ಪಡುವ ಸ್ಥಳವಾಗಿತ್ತು (ಪ್ರಕಟನೆ 9:1-2, 20:2-3). ಯೇಸು ತಮ್ಮನ್ನು ದಂಡಿಸುವನೆಂದು ದೆವ್ವಗಳಿಗೆ ಗೊತ್ತಿತ್ತು, ಆದಕಾರಣ ಅವರ ದಂಡನೆಯು ಕಠಿಣವಾಗಿರಬಾರದೆಂದು ಅವು ಕೇಳಿಕೊಂಡವು. ದೆವ್ವಗಳು ಪಡೆದುಕೊಳ್ಳಬಹುದಾದ ಘೋರದಂಡನೆಯು ಪಾತಾಳಕ್ಕೆ ಕಳುಹಿಸಲ್ಪಡುವದು, ಅಲ್ಲಿ ಅವು ಗಳು ವಾಸಿಸಲು ಯಾವ ದೇಹಗಳೂ ಇರುವದಿಲ್ಲ.

**11-12** ದೆವ್ವಗಳು ಸುಲಭವಾಗಿ ಸಜೀವ ದೇಹವೊಂದರ ಹೊರಗೆ ಜೀವಿಸಲಾಗದು. ಆದ್ದರಿಂದ ಅವು ತಮ್ಮನ್ನು ಹತ್ತಿರದಲ್ಲಿದ್ದ ಹಂದಿಗಳೊಳಗೆ ಸೇರಿಕೊಳ್ಳುವದಕ್ಕೆ ಅನುಮತಿಸಬೇಕೆಂದು ಕೇಳಿಕೊಂಡವು.

**13** ದೆವ್ವಗಳು ಹಂದಿಗಳೊಳಗೆ ಹೊಕ್ಕಾಗ ಹಂದಿಗಳು ಹುಚ್ಚೆದ್ದು ಕಡಿದಾದ ಸ್ಥಳದಿಂದ ಓಡಿ ಹೋಗಿ ಸಮುದ್ರದೊಳಕ್ಕೆ ಬಿದ್ದವು. ಹಂದಿಗಳ ಯಜಮಾನನಿಗೆ ಬಹಳ ನಷ್ಟವುಂಟಾಯಿತು. ಆದರೆ ಈ ಘಟನೆಯಿಂದ ಎರಡು ಸಂಗತಿಗಳು ಸ್ಪಷ್ಟವಾಗುತ್ತದೆ. ಮೊದಲನೆ ಯದಾಗಿ, ದೇವರ ದೃಷ್ಟಿಯಲ್ಲಿ ಅನೇಕ ಹಂದಿಗಳಿಗಿಂತಲೂ ಒಬ್ಬ ಮನುಷ್ಯನು ಹೆಚ್ಚು ಅಮೂಲ್ಯನಾಗಿದ್ದಾನೆ. ಎರಡು ಸಾವಿರ ಹಂದಿಗಳ ಹಿಂಡು ನಾಶವಾಯಿತು ಆದರೆ ಅದೇ ಸಮಯದಲ್ಲಿ ದೆವ್ವಪೀಡಿತನಾದ ಒಬ್ಬ ಮನುಷ್ಯನು ಸಂಪೂರ್ಣವಾಗಿ ಗುಣವಾದನು.

ಎರಡನೆಯದಾಗಿ, ಈ ಘಟನೆಯಿಂದ ನಾವು ಯೇಸುವಿನ ಮಹಾಶಕ್ತಿಯನ್ನು ನೋಡಬಹುದು. ಆತನಿಗೆ ಗುಣಪಡಿಸುವ ಶಕ್ತಿ ಮಾತ್ರವೇ ಅಲ್ಲದೆ ಅವನಿಗೆ ನಾಶಮಾಡುವ ಶಕ್ತಿಯೂ ಇತ್ತು.

**14-15** ಪಟ್ಟಣದ ಜನರು ಏನು ಸಂಭವಿಸಿತೆಂದು ನೋಡಲು ಬಂದಾಗ ಯೇಸುವನ್ನು, ಆತನ ಜೊತೆಗೆ ದೆವ್ವ ಪೀಡಿತನಾದ ಮನುಷ್ಯನು ಸ್ವಸ್ಥ ಬುದ್ಧಿಯಿಂದ ಕುಳಿತಿರುವದನ್ನು ನೋಡಿ ಅವರು ಹೆದರಿದರು. ಅವರು ದೇವರ ಪ್ರಸನ್ನತೆಯೊಳಗೆ ಬಂದಿದ್ದರು ಮತ್ತು ಆತನ ಭಯಂಕರ ಶಕ್ತಿಯನ್ನು ಅನುಭವಿಸಿದರು. ವಿಶ್ವಾಸವಿಲ್ಲದ ಜನರು ದೇವರ ಸನ್ನಿಧಿಗೆ ಬರುವಾಗ ಯಾವಾಗಲೂ ಭಯಗೊಳ್ಳುತ್ತಾರೆ.

**16-17** ಅಗ ಪಟ್ಟಣದ ಜನರು ಯೇಸುವನ್ನು ಅಲ್ಲಿಂದ ಹೊರಟು ಹೋಗುವಂತೆ ಕೇಳಿಕೊಳ್ಳಲಾರಂಭಿಸುತ್ತಾರೆ. ಅವರು ತಮ್ಮ ಇನ್ನು ಹೆಚ್ಚು ಪ್ರಾಣಿಗಳು ನಾಶಗೊಳ್ಳುವದನ್ನು ಇಚ್ಚಿಸಲಿಲ್ಲ. ಅವರು ದೇವರ ಮಗನಾದ ಯೇಸುವಿಗಿಂತಲೂ ಹಂದಿಗಳಿಗೆ ಹೆಚ್ಚು ಮೌಲ್ಯತೆ ಕೊಟ್ಟರು.

**18-20** ಯೇಸು ತಕ್ಷಣವೇ ಆ ಸೀಮೆಯನ್ನು ಬಿಟ್ಟು ಹೊರಡಲು ಸಿದ್ಧನಾದನು. ಯೇಸು ತಾನು ಬೇಕಾಗಿಲ್ಲದ ಕಡೆಯಲ್ಲಿ ಇರಲು ಇಷ್ಟಪಡುವದಿಲ್ಲ. ಗುಣ ಹೊಂದಿದ ವ್ಯಕ್ತಿಯು ಯೇಸುವಿನ ಜೊತೆಯಲ್ಲಿ ಹೋಗಲು ಇಚ್ಚಿಸಿದನು. ಆದರೆ ಯೇಸು ಅವನನ್ನು ಡೆಕಪೊಲಿಯಲ್ಲಿನ[34] ತನ್ನ ಕುಟುಂಬ ಹಾಗು ನೆರೆಹೊರೆಯವರಿಗೆ ಸಾಕ್ಷಿಯಾಗಿರಲು ಕಳುಹಿಸಿದನು (ವಚನ 20). ಹೆಚ್ಚಿನ ಪಾಲು ಕ್ರೈಸ್ತರು ತಮ್ಮ ಮನೆಗಳನ್ನು ತೊರೆದು ದೂರಸ್ಥಳಗಳಿಗೆ ಪ್ರಯಾಣಿಸುವಂತೆ ಕರೆಯಲ್ಪಟ್ಟಿರುವದಿಲ್ಲ. ಹೆಚ್ಚು ಕ್ರೈಸ್ತರು ತಮ್ಮ ಸ್ವಂತ ಊರುಗಳಲ್ಲಿ ಸಾಕ್ಷಿಯಾಗಿರುವಂತೆ ಕರೆಯಲ್ಪಟ್ಟಿದ್ದಾರೆ. ನಾವು ಕ್ರಿಸ್ತನಿಗಾಗಿ ಸಾಕ್ಷಿ ನೀಡಬೇಕಾದ ಪ್ರಥಮಸ್ಥಳ ನಮ್ಮ ಸ್ವಂತ ಮನೆಗಳಾಗಿರುತ್ತವೆ.

## ಒಬ್ಬ ಸತ್ತಹುಡುಗಿ ಮತ್ತು ರೋಗಿಯಾದ ಸ್ತ್ರಿ (5:21-43)

(ಮತ್ತಾಯ 9:18-26, ಲೂಕ 8:40-56)

**21-24** ಯೇಸು ದೆವ್ವಪೀಡಿತನಾದ ವ್ಯಕ್ತಿಯನ್ನು ಗುಣಪಡಿಸಿದ ಬಳಿಕ ಆ ಸೀಮೆಯವರು ಆತನಿಗೆ ಅಲ್ಲಿಂದ ಹೊರಟು ಹೋಗ ಬೇಕೆಂದು ಕೇಳಿಕೊಂಡ ಪ್ರಕಾರ ಅತನು ಆ ಸ್ಥಳದಿಂದ ಹೊರಡುತ್ತಾನೆ. (ವಚನ 17), ಮತ್ತು ತಿರಿಗಿ ಸಮುದ್ರ ದಾಟಿ ಈಚೆದಡಕ್ಕೇ ಬಂದನು. ಯೇಸು ತಾನು ಸ್ವಾಗತಿಸಲ್ಪಡದ ಸ್ಥಳದಲ್ಲಿ ಉಳಿದುಕೊಳ್ಳಲಿಲ್ಲ. ಒಬ್ಬ ಸಭಾಮಂದಿರದ ಅಧಿಕಾರಿ, ಅಂದರೆ ಯೆಹೂದ್ಯನಾಯಕರಲ್ಲಿ ಒಬ್ಬನಾದ ಯಾಯಿರನೆಂಬವನು ಯೇಸುವಿನ ಹತ್ತಿರ ಬಂದು ಯೇಸುವಿಗೆ, ನೀನು ಬಂದು ನನ್ನ ಮಗಳನ್ನು ಸ್ವಸ್ಥಮಾಡು ಎಂದು ಕೇಳಿಕೊಂಡನು. ಆತನು "ನನ್ನ ಚಿಕ್ಕ ಮಗಳು ಸಾಯುತ್ತಿದ್ದಾಳೆ" ಎಂದು ಹೇಳಿದನು.[35]

**25-29** ಯಾಯಿರನ ಮನೆಗೆ ಹೋಗುತ್ತಿರುವ ಮಾರ್ಗದಲ್ಲಿ ಹನ್ನೆರಡು ವರುಷಗಳಿಂದ ರಕ್ತಕುಸುವು ರೋಗಹೊಂದಿದ್ದ ಸ್ತ್ರೀಯೊಬ್ಬಳು ಗುಂಪಿನಲ್ಲಿ ಯೇಸುವನ್ನು ಹಿಂಬಾಲಿಸಿದಳು. ಅಂತಹ ರೋಗವಿರುವ ಯಾವದೇ ಸ್ತ್ರೀಯು ಅಶುದ್ಧಳೆಂದು ಯೆಹೂದ್ಯರು ಪರಿಗಣಿಸುತ್ತಿದ್ದರು (ಯಾಜಕ ಕಾಂಡ 15:25). ಆದಕಾರಣ ಅವಳು ಆತನ ಹಿಂದಿನಿಂದ ಬಂದಳು

(ವಚನ 27). "ನಾನು ಆತನ ಬಟ್ಟೆಯನ್ನು ಮುಟ್ಟಿದರೆ ಸಾಕು ನಾನು ಗುಣ ಹೊಂದುವೆನು" ಅಂದುಕೊಂಡಳು (ಮಾರ್ಕ 6:56, ಅ.ಕೃತ್ಯ 5:15, 19:12). ಮತ್ತು ಅವಳು ಮುಟ್ಟಿದ ಕೊಡಲೇ ಒಂದೇ ಸಾರಿ ಗುಣಹೊಂದಿದಳು. ಹನ್ನೆರಡು ವರ್ಷಗಳಿಂದ ವೈದ್ಯರು ಆಕೆಯನ್ನು ಗುಣಪಡಿಸಲು ಪ್ರಯತ್ನಿಸಿ ಆಗದೆ ಹೋಗಿದ್ದರು, ಆಕೆಯು ತನ್ನಲ್ಲಿದ್ದ ಹಣವನ್ನೆಲ್ಲಾ ವೈದ್ಯರಿಗೆ ಖರ್ಚು ಮಾಡಿದ್ದಳು. ಈಗ, ಅವಳು ಯೇಸುವಿನ ಬಟ್ಟೆಗಳನ್ನು ಮುಟ್ಟುವದರ ಮೂಲಕ ಸಂಪೂರ್ಣವಾಗಿ ಗುಣ ಹೊಂದಿದ್ದಳು. ಸ್ವಸ್ಥತೆಯ ಶಕ್ತಿಯು ಯೇಸುವಿನ ಬಟ್ಟೆಗಳಲ್ಲಿರಲಿಲ್ಲ, ಅದು ಆತನಲ್ಲಯೇ ಇತ್ತು ಮಾರ್ಕನು ಬರೆಯುತ್ತಾನೆಃ ಅ ಕ್ಷಣವೇ ಯೇಸು ತನ್ನಿಂದ ಶಕ್ತಿಯು ಹೊರಟಿತೆಂದು ತಿಳಿದುಕೊಂಡನು (ವಚನ 30) ಸ್ತ್ರೀಯು ಇಂದ್ರಜಾಲವೇನೊ ಎಂಬಂತೆ ಯೇಸುವಿನ ಬಟ್ಟೆಗಳ ಸ್ಪರ್ಶದಿಂದ ಗುಣಹೊಂದಲಿಲ್ಲ, ಬದಲಾಗಿ ಆಕೆಯು ಆಕೆಯ ನಂಬಿಕೆಯ ಮೂಲಕ ಕಾರ್ಯ ಮಾಡುತ್ತಿರುವ ಯೇಸುವಿನ ಶಕ್ತಿಯಿಂದ ಗುಣ ಹೊಂದಿದಳು (ವಚನ 34). ಯೇಸುವಿನ ಸುತ್ತಲೂ ಬಹಳಷ್ಟು ಜನರ ಗುಂಪಿತ್ತು ಆದರೆ ಅವರು ಯಾವದೇ ಆಶೀರ್ವಾದ ಅಥವಾ ಲಾಭವನ್ನು ಪಡೆದುಕೊಳ್ಳಲಿಲ್ಲ. ಯೇಸುವನ್ನು ವೈಯುಕ್ತಿಕ ರೀತಿಯಲ್ಲಿ ಕರ್ತನನ್ನಾಗಿ ಅಂಗೀಕರಿಸಿಕೊಂಡು ಆತನಲ್ಲಿ ತಮ್ಮ ನಂಬಿಕೆಯನ್ನು ಇಡುವವರೂ ಮಾತ್ರವೇ ಸ್ವಸ್ಥತೆ ಹೊಂದಲು ಹಾಗು ರಕ್ಷಣೆ ಹೊಂದಲು ಸಾಧ್ಯ.

**30-31** ಯೇಸು ತನ್ನನ್ನು ಯಾರು ಮುಟ್ಟಿದರು ಎಂದು ಕೇಳಿದಾಗ ಶಿಷ್ಯರು ಆಶ್ಚರ್ಯಗೊಂಡರು. ಜನರ ಗುಂಪೆಲ್ಲಾ ಆತನ ಮೇಲೆ ಬಿದ್ದು ನೂಕಾಡುತ್ತಾ ಆತನನ್ನು ಮುಟ್ಟುತ್ತಾ ಇದ್ದರು.

**32-34** ಆದರೆ ಯೇಸು ತನ್ನನ್ನು ಮುಟ್ಟಿದ ವ್ಯಕ್ತಿಗಾಗಿ ಹುಡುಕುತ್ತಾ ಇದ್ದನು. ಆ ಸ್ತ್ರೀಯು ಮುಂದೆ ಬರುವದನ್ನು ಯೇಸು ಬಯಸಿದ್ದನು, ಇದರ ಮೂಲಕ ಅವಳು ಆತನ ಶಕ್ತಿ ಹಾಗು ಆತನಲ್ಲಿ ಆಕೆಗಿದ್ದ ನಂಬಿಕೆಯಿಂದಲೇ ಗುಣ ಹೊಂದಿದಳೆಂಬದನ್ನು ಆಕೆಯೂ, ಇತರರೂ ಅರ್ಥಮಾಡಿಕೊಳ್ಳಬೇಕೆಂಬದು ಆತನ ಇಚ್ಚೆಯಾಗಿತ್ತು. ಯೇಸುವಿನ ಹೊರತು ನಂಬಿಕೆಯೊಂದೆ ಇರುವದಾದರೆ ಅದು ಕುರುಡು ನಂಬಿಕೆಯಾಗಿದೆ. ಇನ್ನೊಂದು ಕಡೆಯಲ್ಲಿ ನಮ್ಮ ನಂಬಿಕೆಯಿಲ್ಲದೆ ಯೇಸು ನಮಗೆ ಸಹಾಯ ಮಾಡಲಾಗದು. ನಾವು ಸ್ವಸ್ಥತೆಯನ್ನಾಗಲಿ, ರಕ್ಷಣೆಯನ್ನಾಗಲಿ ಪಡೆದುಕೊಳ್ಳಲು ಯೇಸು ಶಕ್ತಿ ಮತ್ತು ನಮ್ಮ ನಂಬಿಕೆಗಳೆರಡೂ ಒಟ್ಟಾಗಿ ಕಾರ್ಯಮಾಡುವದು ಅವಶ್ಯವಾಗಿದೆ.

**35-36** ರಕ್ತಕುಸುಮ ರೋಗಿಯಾದ ಸ್ತ್ರೀಯು ಸ್ವಲ್ಪ ತಡವನ್ನು ಉಂಟು ಮಾಡಿದಳು. ಅದೇ ವೇಳೆಯಲ್ಲಿ ಯಾಯಿರನ ಮಗಳು ಸತ್ತು ಹೋದಳು. ಆದರೆ ಯೇಸು ಯಾಯಿರನಿಗೆ"...ನಂಬಿಕೆ ಮಾತ್ರ ಇರಲಿ[36] ನೀನು ನನ್ನ ಹತ್ತಿರ ನಂಬಿಕೆಯಿಂದ ಬಂದಿರುವಿ, ಈಗ ನಂಬಿಕೆಯನ್ನು ಕಳೆದುಕೊಳ್ಳಬೇಡ, ನಂಬಿಕೆಯಲ್ಲಿ ಮುಂದೆ ಸಾಗು" ಎಂದು ಹೇಳಿದನು.

**37-39** ಯಾಯಿರನ ಮನೆಯಲ್ಲಿ ದೊಡ್ಡಗಲಾಟೆ ನಡೆದಿತ್ತು ಮದುವೆಯೊಂದಕ್ಕೆ ಸಂಗೀತಗಾರರನ್ನು ಬಾಡಿಗೆಗೆ ತರುವಂತೆ ಯೇಸುವಿನ ಸಮಯದಲ್ಲಿ ಕುಟುಂಬದಲ್ಲಿ ಯಾರಾದರೂ ಸತ್ತುಹೋದರೆ ಅಥವಾ ಸಾಯುವ ಹಾಗಿದ್ದರೆ ಅಳುವವರನ್ನು ಬಾಡಿಗೆಗೆ ತರುತ್ತಿದ್ದರು. ಯಾಯಿರನಂತಹ ಶ್ರೀಮಂತನು ಅನೇಕ ಮಂದಿ ಗೋಳಾಡುವವರನ್ನು ಬಾಡಿಗೆಗೆ ತರುವದು ಸಾಧ್ಯವಿತ್ತು. ಈ ಗೋಳಾಡುವವರನ್ನು ಯಾಯಿರನು ಯೇಸುವನ್ನು ಹುಡುಕಲು ಹೋಗುವ ಮುಂಚೆಯೇ ಕರೆಯಲಾಗಿತ್ತು.

ಆದರೆ ಯೇಸು ಅವರಿಗೆ "ಮಗುವು ಸತ್ತಿಲ್ಲ ಆದರೆ ಅವಳು ನಿದ್ರಿಸುತ್ತಿದ್ದಾಳೆ" ಎಂದು ಹೇಳಬೇಕಾಗಿತ್ತು. ಯೇಸು ಆಗಾಗಲೇ ಮಗುವನ್ನು ಮರಣದಿಂದ ಕಾಪಾಡಿದ್ದನು. ಆ ಮಗಳು ನಿಜವಾಗಿಯೂ ಸತ್ತು ಹೋಗಿದ್ದಳು (ಲೂಕ 8:53). ಈ ಘಟನೆಯ ಕುರಿತು ಲೂಕನು ತನ್ನ ದಾಖಲೆಯಲ್ಲಿ ಆಕೆಯ "ಆತ್ಮವು ಹಿಂದಿರುಗಿತು" (ಲೂಕ 8;55) ಎಂದು ಹೇಳುತ್ತಾನೆ, ಇದರರ್ಥ ಅವಳು ಸತ್ತು ಹೋಗಿದ್ದಳು.

**40** ಆದರೆ ಗೋಳಾಡುವವರು ಹುಡುಗಿಯು ಸತ್ತಿಲ್ಲ ಎಂದು ಯೇಸು ಹೇಳಿದಾಗ ಹಾಸ್ಯಮಾಡಿ ನಕ್ಕರು. ಅವರು ಮಿಥ್ಯಗೋಳಾಟಗಾರರಾಗಿದ್ದಾರೆ, ಒಂದು ಕ್ಷಣ ಅಳುವದು, ಇನ್ನೊಂದು ಕ್ಷಣದಲ್ಲಿ ನಗುವದು. ಆ ಮಗವು ಜೀವಿಸುವದು ಅವರಿಗಿಷ್ಟವಿರಲಿಲ್ಲ, ಅವಳು ಜೀವಿಸಿದ್ದಾದರೆ ಅಲ್ಲಿ ಅಳುವವರ ಅಗತ್ಯತೆ ಇರುವದಿಲ್ಲ. ಅವರು ಉದ್ಯೋಗವಿಲ್ಲದವರಾಗುತ್ತಾರೆ. ಅವರಿಗೆ ಇನ್ನು ಯಾವ ಸಂಬಳವೂ ದೊರೆಯುವದಿಲ್ಲ.

**41-42** ಗೋಳಾಡುವವರನ್ನು ಹೊರಗೆ ಕಳುಹಿಸಿದ ನಂತರ ಯೇಸು ಆ ಹುಡುಗಿಯನ್ನು ಜೀವಂತಗೊಳಿಸುತ್ತಾನೆ. ಯೇಸು ದೆವ್ವಗಳ ಮೇಲೆಯೂ, ರೋಗಗಳ ಮೇಲೆಯೂ, ಬಿರುಗಾಳಿಯ ಮೇಲೆಯೂ ಸಹ ಶಕ್ತಿಯನ್ನು ಹೊಂದಿದ್ದನು (ಮಾರ್ಕ 4:39). ಈಗ, ಆತನು ಮರಣದ ಮೇಲೆಯೂ ಶಕ್ತಿಯನ್ನು ಹೊಂದಿದ್ದಾನೆಂದು ನೋಡುತ್ತೇವೆ. ಮರಣಿಸುವವರು ಇನ್ನೂ ಯೇಸು ಹಸ್ತಗಳಲ್ಲಿ

ರುತ್ತಾರೆ. ಯೇಸುವಿನ ಸ್ವರವು ಅವರನ್ನು ತಲುಪಬಲ್ಲದು. ವಿಶ್ವಾಸಿಗಳಿಗೆ ಮರಣವು ನಿದ್ರೆಯ ಹಾಗಿರುತ್ತದೆ (1 ಥೆಸಲೋನಿಕ 4:13-14) ಮತ್ತು ಬಹುಶಃ ಈ ಕಥೆಯ ಮೂಲಕ ನಂಬಿಕೆಯಿಡಲು ಅವಕಾಶವೊಂದು ದೊರೆಯುವ ಮುನ್ನವೇ ಮರಣಿಸುವ ಚಿಕ್ಕ ಮಕ್ಕಳು ಹಾಗು ಕೂಸುಗಳ ಬಗ್ಗೆ ಯೇಸು ಎಷ್ಟು ಚಿಂತಿಸುತ್ತಾನೆಂದು ನಾವು ಅರ್ಥಮಾಡಿಕೊಳ್ಳಬಹುದು.

ಪೇತ್ರನು ನಿಶ್ಚಯವಾಗಿಯೂ ಈ ಸಂದರ್ಭದಲ್ಲಿ ಯೇಸುವನ್ನು ನೋಡಿ ಕಲಿತುಕೊಂಡನು. ಅನಂತರ ಆತನು ಸಹ ತಬಿಥಾ ಎಂಬ ಸ್ತ್ರೀಯನ್ನು ಮರಣದಿಂದ ಎಬ್ಬಿಸಿದನು ( ಅ.ಕೃತ್ಯ 9:36-43). ಯೇಸು "ನನ್ನನ್ನು ನಂಬುವವನು ನಾನು ನಡೆಸುವಕ್ರಿಯೆಗಳನ್ನು ತಾನೂ ನಡೆಸುವನು ಮತ್ತು ಅವು ಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡಿಸುವನು" ಎಂದು ಹೇಳಿದನು (ಯೋಹಾನ 14:12).

**43** ಈ ಬಾಲಕಿಯನ್ನು ಮರಣದಿಂದ [37] ಜೀವಕ್ಕೆ ಎಬ್ಬಿಸಿದ್ದನ್ನು ಕುರಿತು ಯಾರಿಗೂ ತಿಳಿಸಬಾರದೆಂದು ಯೇಸು ಕಟ್ಟುನಿಟ್ಟಾಗಿ ಅಪ್ಪಣೆ ಮಾಡಿದನು. ಅದರಲ್ಲೂ ಮೊದಲನೆಯದಾಗಿ ಮನೆಯ ಹೊರಗಿದ್ದ ನಂಬಿಕೆಯಿಲ್ಲದ ಗೋಳಾಟಗಾರರ ಗುಂಪಿಗೆ ಹೇಳವು ವದರಲ್ಲಿ ಯಾವ ಅರ್ಥವು ಇರಲಿಲ್ಲ ಯಾಕೆಂದರೆ, ಅವರು ಕೇವಲ ಹಾಸ್ಯ ಮಾಡುವರು ಮತ್ತು ಹೆಚ್ಚು ಕಡಿಮೆ ಮಗುವು ಸತ್ತಿರಲೇಬೇಕು ಎಂದು ಹೇಳಿದರೂ ಹೇಳಿ ಬಿಡಬಹುದು– ಎರಡನೆಯದಾಗಿ, ತಾನು ಒಬ್ಬ ಅದ್ಭುತ ಮಾಡುವವನೆಂದು ಪ್ರಸಿದ್ಧ ನಾಗಲು ಆತನಿಗಿಷ್ಟವಿರಲಿಲ್ಲ ಇಲ್ಲವಾದರೆ ಜನರು ಆತನ ಬೋಧನೆಯ ಮೇಲೆ ಗಮನವನ್ನು ನೀಡುವದಿಲ್ಲ. ಆತನ ಮುಖ್ಯ ಉದ್ದೇಶವು ಜನರಿಗೆ ದೇವರ ರಾಜ್ಯದ ಕುರಿತಾಗಿ ಬೋಧಿಸುವದು ಮತ್ತು ಅವರಿಗೆ ರಕ್ಷಣೆಯ ಮಾರ್ಗವನ್ನು ತೋರಿಸುವದಾಗಿತ್ತು (ಮತ್ತಾಯ 12:17-19, ಮಾರ್ಕ 1:34 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಈ ಅದ್ಭುತದ ವಾರ್ತೆಯು ಎಲ್ಲಿಯೂ ಹರಡಬಾರದೆಂದು ಯೇಸು ಬಯಸಿದ್ದಕ್ಕೆ ಮೂರನೆಯ ಕಾರಣವೊಂದಿತ್ತು. ಒಂದು ವೇಳೆ ಅದು ಹರಡಿದರೆ ಜನರು ಆತನನ್ನು ಮೆಸ್ಸಿಯನೆಂದು ಯೋಚಿಸಲು ಪ್ರಾರಂಭಿಸಿ ಆತನನ್ನು ಅವರ ಅರಸನನ್ನಾಗಿ ಮಾಡುತ್ತಾರೆ (ಮಾರ್ಕ 8:30, ಮತ್ತು ವ್ಯಾಖ್ಯಾನ ನೋಡಿರಿ). ಆದರೆ ಆತನು ಭೂಲೋಕದ ಅರಸನಾಗಿರುವದಕ್ಕೆ ಬಂದಿಲ್ಲ ಆತನು ಬಾಧೆಪಟ್ಟು ಮರಣಿಸಲು ಬಂದಿದ್ದನು. ಆತನ ರಾಜ್ಯವು ಒಂದು ಆತ್ಮೀಕ ರಾಜ್ಯವಾಗಿತ್ತು.

---

# ಅಧ್ಯಾಯ - 6

## ಒಬ್ಬ ಗೌರವರಹಿತ ಪ್ರವಾದಿ (6:1-6)

(ಮತ್ತಾಯ 13:53-58)

**1** ಬಳಿಕ ಯೇಸು ತನ್ನ ಊರಾದ ನಜರೇತಿಗೂ ಮತ್ತು ನೆರೆಯಗ್ರಾಮಗಳಿಗೂ ಹೋದನು [38] ಅಲ್ಲಿ ಜನರು ಇದಕ್ಕೆ ಮುಂಚೆ ಒಮ್ಮೆಆತನನ್ನು ತಿರಸ್ಕರಿಸಿದ್ದರು (ಲೂಕ 4:16,28-30). ಆದರೆ ಈಗ ಆತನನ್ನು ಅವರಿಗೆ ಎರಡನೆಯ ಅವಕಾಶ ನೀಡಲು ಇಚ್ಛಿಸಿದ್ದನು.

**2-3** ಮೊದಮೊದಲು ನಜರೇತಿನ ಜನರು ಯೇಸು ಬೋಧನೆಗೆ ಆಶ್ಚರ್ಯಪಟ್ಟರು. ಆತನು ಅಧಿಕಾರದಿಂದ ಬೋಧಿಸಲೆಂದು (ಮತ್ತಾಯ 7:28-29).

ಅವರು ಆತನ ಜ್ಞಾನಕ್ಕೂ, ಅದ್ಭುತಗಳಿಗಾಗಿಯೂ ವಿಸ್ಮಯಗೊಂಡರು. ಯೇಸು ಅವರು ಆಲಿಸಿದ ಇತರ ಬೋಧಕರಂತಿರಲಿಲ್ಲ. ಆದರೆ ನಂತರ ಏನಾಯಿತು? ಯೇಸು ತಮ್ಮ ಸ್ವಂತ ಊರಿನವನೆಂದು ಜನರು ಗ್ರಹಿಸಿಕೊಂಡರು. ಅವರು ಆತನು ಬಾಲಕನಾಗಿದ್ದದ್ದನ್ನು ಜ್ಞಾಪಿಸಿಕೊಂಡರು. ಆತನು ಅವರಲ್ಲೊಬ್ಬನಾಗಿದ್ದನು ಮತ್ತು ಅವರು ಅಸೂಯೇ ಮತ್ತು ಕೋಪಗೊಂಡವರಾಗಿ ಅವರು "ಆತನ ವಿಷಯವಾಗಿ ಬೇಸರಗೊಂಡರು". ನಮಗೆ ಬೋಧಿಸಲು ಇವನಾರು? ಈತನು ಬಡಗಿಯನ ಮಗನಷ್ಟೇ ಎಂದು ಮಾತಾಡಿಕೊಂಡರು.

**4** ಈ ರೀತಿಯ ತಿರಸ್ಕಾರ ಬಹುಸಾಮಾನ್ಯವಾದ ಸಂಗತಿ. ಒಂದು ವೇಳೆ ನಮ್ಮ ಸ್ವಂತ ಗ್ರಾಮದಿಂದ ಯಾರಾದರೂ ಪ್ರಸಿದ್ಧರಾಗುವದಾದರೆ ಮತ್ತು ನಂತರ ತಿರಿಗಿ ಬಂದು ನಮಗೆ ಬೋಧಿಸಲು ಪ್ರಾರಂಭಿಸುವದಾದರೆ ನಾವು ಅದನ್ನು ಇಷ್ಟಪಡುವದಿಲ್ಲ, ದ್ವೇಷ , ಅಸೂಯೆಯ ಕಾರಣದಿಂದ ನಾವು ಆತನ ಬೋಧನೆಯನ್ನು ತಿರಸ್ಕರಿಸುತ್ತೇವೆ. ಆದಾಗ್ಯು ಆತನು ಬೇರೆ ಕಡೆಗೆ ಹೋಗುವದಾದರೆ ಮಾನವನ್ನು ಪಡೆಯವನು.

**5-6** ಯೇಸು ಅಲ್ಲಿ ಯಾವ ಮಹತ್ಕಾರ್ಯವನ್ನು ಮಾಡುವದಕ್ಕಾಗಲಿಲ್ಲ. ಯೇಸು ಸಕಲಶಕ್ತಿಯನ್ನು ಹೊಂದಿದ್ದಾನೆ. ಹಾಗಿದ್ದರೂ ನಂಬದೆ ಇರುವ ಜನರ ಮದ್ಯದಲ್ಲಿ ಆತನು ಯಾವ ಮಹತ್ಕಾರ್ಯವನ್ನೂ ಮಾಡುವದಕ್ಕಾಗಲಿಲ್ಲ. ಆತನು ತನ್ನ ಶಿಷ್ಯರಿಗೆ ಯಾವ ಊರಿನವರಾದರೂ ಅವರನ್ನು ತಿರಸ್ಕರಿಸಿದರೆ ಬೇರೆ ಸ್ಥಳಕ್ಕೆ ಹೋಗಬೇಕೆಂದು ಬೋಧಿಸಿದನು (ವಚನ 11) ಅದೇ ವಿಧದಲ್ಲಿ ಯೇಸು ನಂಬಿಕೆಯಿಲ್ಲದ ವ್ಯಕ್ತಿಯಹೃದಯದಲ್ಲಿ ಕಾರ್ಯಮಾಡುವದಿಲ್ಲ. ನಾವು ನಮ್ಮ ಸಮಾಜದಲ್ಲಿ ಮತ್ತು ನಮ್ಮ ವಯುಕ್ತಿಕ ಜೀವಿತಗಳಲ್ಲಿ ಕ್ರಿಸ್ತನ ಶಕ್ತಿಯನ್ನು ಅನುಭವಿಸಲು ಬಯಸಿದರೆ ನಾವು ನಂಬಲೇಬೇಕು.

## ಯೇಸು ಹನ್ನೆರಡು ಶಿಷ್ಯರನ್ನು ಕಳುಹಿಸುತ್ತಾನೆ (6:7-13)

(ಮತ್ತಾಯ 10:9-15, ಲೂಕ 9:1-6)

**7** ಮಾರ್ಕನು ಪ್ರಥಮ ಬಾರಿಗೆ ಇಲ್ಲಿ ಯೇಸು ಹನ್ನೆರಡು ಮಂದಿ ಶಿಷ್ಯರನ್ನು ಸೇವೆಗೆ ಕಳುಹಿಸಿ ಕೊಡುವದನ್ನು ಬಣ್ಣಿಸುತ್ತಾನೆ. ಈ ಅನುಭವದ ಮೂಲಕ ಯೇಸು ತಮ್ಮ ಜೊತೆಯಲ್ಲಿ ಇಲ್ಲದಿದ್ದರೂ ದುರಾತ್ಮಗಳ ಮೇಲೆಯೂ, ಎಲ್ಲಾ ರೀತಿಯ ರೋಗಗಳ ಮೇಲೆಯೂ ಆತನ ಅಧಿಕಾರ ಮತ್ತು ಶಕ್ತಿಯನ್ನು ಹೊಂದಿದ್ದಾರೆಂಬದನ್ನು ಕಲಿತುಕೊಂಡರು (ಮತ್ತಾಯ 10:18, ಲೂಕ 9:1). ಯೇಸು ಅವರನ್ನು ಇಬ್ಬಿಬ್ಬರಾಗಿ ಕಳುಹಿಸಿತ್ತಾನೆಂದು ಮಾರ್ಕನು ಇಲ್ಲಿ ಹೇಳುತ್ತಾನೆ. ಬೋಧಕರ ಮತ್ತು ಕ್ರೈಸ್ತ ಸೇವಕರು ಸಾದ್ಯವಾದಾಗಲೆಲ್ಲಾ ಇಬ್ಬಿಬ್ಬರಾಗಿ ಪ್ರಯಾಣಿಸುವದು ಉತ್ತಮ (ಲೂಕ 10:1, ಅ.ಕೃ 13:2-3, 15:40).

**8-9** ಅಲ್ಲದೆ ದೇವರು ತಮ್ಮ ಎಲ್ಲಾ ಅಗತ್ಯತೆಗಳನ್ನು ಒದಗಿಸುವನೆಂದು ಸಹ ಶಿಷ್ಯರು ಕಲಿತುಕೊಂಡರು. ಯೇಸು ಅವರಿಗೆ ಬುತ್ತಿ[39] ಯಾವ ಚೀಲವನ್ನಾಗಲಿ [40] ಮತ್ತು ದುಡ್ಡನ್ನಾಗಲಿ ತೆಗೆದುಕೊಂಡು ಹೋಗಬಾರದೆಂದು ಹೇಳಿದನು (ಮತ್ತಾಯ 10:9-10). ಅವರು ಯಾರಿಗೆ ಬೋಧಿಸಿದರೋ ಅವರೇ ಇವರಿಗೆ ಇರಲು ಸ್ಥಳವನ್ನು ಮತ್ತು ಆಹಾರವನ್ನು ಒದಗಿಸಬೇಕು ಮತ್ತಾಯ 10:10,ರ ಪ್ರಕಾರವಾಗಿ ಯೇಸು ಆಳು ಅಂಬಲಿಗೆ ಯೋಗ್ಯನಷ್ಟೇ ಎಂದು ಹೇಳಿದನು (1 ಕೊರಿಂಥ 9;14, 1 ತಿಮೊಥೆ 5:18 ನೋಡಿರಿ).

ಮಾರ್ಕನ ದಾಖಲೆಯ ಪ್ರಕಾರ, ಶಿಷ್ಯರು ಒಂದು ಕೋಲು (ವಚನ 8) ಕೆರಗಳು (ವಚನ 9) ತಕ್ಕೊಂಡು ಹೋಗಲು ಅನುಮತಿಸಲ್ಪಡುತ್ತಾರೆ. ಆದರೆ ಮತ್ತಾಯ 10:10 ಕ್ಕನುಸಾರವಾಗಿ ಯೇಸು ಶಿಷ್ಯರಿಗೆ ಕೋಲು ಮತ್ತು ಕೆರಗಳನ್ನು ಒಯ್ಯಬಾರದೆಂದು ಅಪ್ಪಣೆ ಮಾಡಿದನು. ಹೆಚ್ಚಿನ ಪಾಲು ಬೈಬಲ್ ಪಂಡಿತರ ಅಭಿಪ್ರಾಯದಂತೆ ಯೇಸು ವಿವಿಧ ರೀತಿಯ ಪ್ರಯಾಣಗಳಿಗೆ ವಿವಿಧ ರೀತಿಯ ಸೂಚನೆಗಳನ್ನು ಕೊಟ್ಟನು. ದೀರ್ಘಕಾಲ ಗುಡ್ಡಗಾಡುಗಳ ಮೂಲಕ ಪ್ರಯಾಣಗಳಿಗೆ ಕೆರಗಳು ಮತ್ತು ಕೋಲು ಅವಶ್ಯಕವಾಗಿವೆ. ಯೇಸು ಹೇಳಿದ್ದರ ಅರ್ಥವೇನೆಂದರೆ ಅವಷ್ಯಕವಾಗಿರುವದನ್ನು ಮಾತ್ರವೇ ತೆಗೆದುಕೊಳ್ಳಬೇಕು. ಅವರು ಎಲ್ಲವು ಗಳಿಗಾಗಿ ದೇವರನ್ನೇ ಆಶ್ರಯಿಸಬೇಕು ಎಂಬದೇ.

**10** ಶಿಷ್ಯರು ಒಂದು ಊರನ್ನು ಪ್ರವೇಶಿಸುವಾಗ ಮೊದಲು ಅವರು ಯೋಗ್ಯರಾದವರೊಬ್ಬರನ್ನು ಕಂಡುಕೊಳ್ಳಬೇಕಾಗಿತ್ತು (ಮತ್ತಾಯ 10:11) ಅಂದರೆ ನೀತಿವಂತರು ಮತ್ತು ದೇವರಲ್ಲಿ ಭಯಭಕ್ತಿಯುಳ್ಳವರಾಗಿದ್ದು ಅವರ ಸಂದೇಶವನ್ನು ಸ್ವೀಕರಿಸಿಕೊಂಡು ಅವರನ್ನು ಉಪಚರಿಸುವಂತ ವ್ಯಕ್ತಿಗಳಿಗಾಗಿ ಹುಡುಕಬೇಕಿತ್ತು. ಅವರು ಅಂತಹ ವ್ಯಕ್ತಿಯನ್ನು ಕಂಡುಕೊಂಡಾಗ ಆ ಊರನ್ನು ಬಿಡುವವರೆಗೂ ಅವರು ಆತನ ಮನೆಯಲ್ಲಿ ಉಳಿದುಕೊಳ್ಳಬೇಕಿತ್ತು. ಅವರು ಹೆಚ್ಚು ಅನುಕೂಲತೆಯನ್ನು ಹಾರೈಸುತ್ತಾ ಬಂದು ಮನೆಯಿಂದ ಇನ್ನೊಂದು ಮನೆಗೆ ವಾಸವನ್ನು ಬದಲಾಯಿಸಬಾರದಾಗಿತ್ತು, ಇಲ್ಲವಾದರೆ ಮೊದಲನೆಯ ಮನೆ ಯಜಮಾನನಿಗೆ ಬೇಸರಗೊಳ್ಳಬಹುದು. ಮತ್ತಾಯ 10:12-13ರ ಪ್ರಕಾರವಾಗಿ ಅವರು ಅರ್ಹವಾದ ಮನೆಗೆ ತಮ್ಮ ವಂದನೆಗಳನ್ನು ತಿಳಿಸಬೇಕಿತ್ತು ಅಂದರೆ ಅವರು ಆ ಮನೆಯ ಮೇಲೆ ಸಮಾಧಾನದ ಆಶೀರ್ವಾದವನ್ನು ಉಚ್ಛರಿಸಬೇಕಾಗಿತ್ತು.[41] ಅವರು ದೇವರ ಸಮಾಧಾನವನ್ನು ಆ ಮನೆಯೊಳಗೆ ತರಬೇಕಿತ್ತು ಒಂದು ವೇಳೆ ಮನೆಯು ಅದಕ್ಕೆ ಅರ್ಹವಾಗಿರದಿದ್ದರೆ ಅನರು ಹೇಳಿದ ಆಶಿರ್ವಾದವನ್ನು ಹಿಂದಕ್ಕೆ ಪಡೆಯಬೇಕಾಗಿತ್ತು. ಅಂತಹ ಒಂದು ಮನೆಯಲ್ಲಿ ದೇವರ ಸಮಾಧಾನವು ನೆಲೆಗೊಳ್ಳುವದಿಲ್ಲ (ಲೂಕ 10:5-7 ನೋಡಿರಿ).

**11** ಶಿಷ್ಯರ ಸಂದೇಶವನ್ನು ಸ್ವೀಕರಿಸದ ಮತ್ತು ಅವರಿಗೆ ಉಪಚಾರ ಮಾಡದ ಯಾವದೇ ಊರಾಗಲಿ ಅಥವಾ ಕುಟುಂಬವಾಗಲಿ "ಅಯೋಗ್ಯವಾಗಿತ್ತು" ಅಥವಾ " ಅನರ್ಹವಾಗಿತ್ತು". ಶಿಷ್ಯರು ಅಂತಹ ಮನೆ ಅಥವಾ ಕುಟುಂಬಕ್ಕೆ ತಮ್ಮ ಕಾಲಿಗೆ ಹತ್ತಿದ ದೂಳನ್ನು ಜಾಡಿಸಬೇಕಾಗಿತ್ತು. ಇದು ಆ ಅನರ್ಹ ಸ್ಥಳಕ್ಕೆ ನ್ಯಾಯ ತಿರ್ಪಿನ ಸಂಕೇತವಾಗಿತ್ತು (ಅ.ಕೃತ್ಯ 13:51) (ಮತ್ತಾಯ 10:15 ರ ಪ್ರಕಾರವಾಗಿ ಅಂತಹ ಒಂದು ಪಟ್ಟಣ ದೇವರು ಬೆಂಕಿ ಗಂಧಕಗಳಿಂದ ನಾಶ ಮಾಡಿದ ಸೋದೋಮ, ಗೋಮೋರ ಪಟ್ಟಣಗಳಿಗಿಂತಲೂ ಹೆಚ್ಚಿನ ದಂಡನೆಯನ್ನು ಹೊಂದುವದು (ಆದಿಕಾಂಡ 19:1-29) ಸೋದೋಮ ಮತ್ತು ಗೋಮೋರಿನ ಜನರು ದೇವರು ಕಳುಹಿಸಿದ ಇಬ್ಬರು ದೇವದೂತರೊಂದಿಗೆ ಕೆಟ್ಟದ್ದಾಗಿ ವರ್ತಿಸಿದ್ದರು. ಆದರೆ ಕ್ರಿಸ್ತನ ಶಿಷ್ಯರನ್ನು ತಿರಸ್ಕರಿಸಿ ಪಟ್ಟಣಗಳು ದೇವರ ಮಗನಾದ ಕ್ರಿಸ್ತನನ್ನೇ ತಿರಸ್ಕರಿಸಿದವು ಗಳಾಗಿದ್ದವು , ಆದಕಾರಣ ಅವು ಗಳದಂಡನೆಯು ಅತಿ ಹೆಚ್ಚಾಗಿರುತ್ತದೆ (ಲೂಕ 10:8-12 ನೋಡಿರಿ).

ಇಂದು ಸಹ ನಾವು ದೇವರ ವಾಕ್ಯವನ್ನು ಬೋಧಿಸುತ್ತಾ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಪ್ರಯಾಣಿಸುವಾಗ ಆ ಪ್ರಥಮ ಶಿಷ್ಯರಿಗೆ ಆದ ಸಂಗತಿಯೂ ನಮ್ಮ ವಿಷಯದಲ್ಲಿಯೂ ಅಷ್ಟೇ ಸತ್ಯವಾಗಿದೆ. ನಮ್ಮ ವಾಕ್ಯವನ್ನು ತಿರಸ್ಕರಿಸುವವರು ಕ್ರಿಸ್ತನನ್ನು ತಿರಸ್ಕರಿಸುತ್ತಾರೆ. ಅವರು ರಕ್ಷಣೆ ಹೊಂದಿದವರಾಗುವ ಸಧಾವಕಾಶವನ್ನು ಕಳೆದುಕೊಳ್ಳುತ್ತಾರೆ. ಆದರೆ ನಮ್ಮ ಮಾತನ್ನು ಅಂಗೀಕರಿಸುವವರು ಕ್ರಿಸ್ತನಿಂದ ಅಂಗೀಕರಿಸಲ್ಪಟ್ಟು ದೇವರ ಕುಟುಂಬದಲ್ಲಿ ತರಲ್ಪಟ್ಟು ರಕ್ಷಣೆಯನ್ನು ಹೊಂದುವರು.

**12-13** ಶಿಷ್ಯರು ಹೊರಟು ಹೋದರು ಮತ್ತು ಕ್ರಿಸ್ತನು ಮಾಡಿದಂತೆಯೇ ಅವರೂ ಮಾಡಿದರು. ಜನರು ದೇವರ ಕಡೆಗೆ ತಿರಿಗಿಕೊಳ್ಳಬೇಕೆಂದು ಅವರು ಬೋಧಿಸಿದರು (ಮಾರ್ಕ 1:15 ಮತ್ತು ವ್ಯಾಖ್ಯಾನ ನೋಡಿರಿ) ಮತ್ತು ಅವರು ರೋಗಿಗಳನ್ನು ಸ್ವಸ್ಥಮಾಡಿ ದೆವ್ವಗಳನ್ನು ಬಿಡಿಸಿದರು (ಲೂಕ 9:6). ಅವರು ಅನೇಕ ರೋಗಿಗಳಿಗೆ ಎಣ್ಣೆ ಹಚ್ಚಿ ಸ್ವಸ್ಥ ಮಾಡಿದರು ಎಂದು ಮಾರ್ಕನು ಹೇಳುತ್ತಾನೆ. ರೋಗಿಗಳಿಗೆ ಎಣ್ಣೆಯನ್ನು ಹಚ್ಚುವದು ಯೇಸುವಿನ ಸಮಯದಲ್ಲಿ ಒಂದು ಪದ್ಧತಿಯಾಗಿತ್ತು. ಅದು ಒಂದು ರೀತಿಯ ವೈದ್ಯಕೀಯ ಚಿಕಿತ್ಸೆಯೆಂದು ಪರಿಗಣಿಸಲಾಗಿತ್ತು (ಲೂಕ 10:34, ಯಾಕೋಬ 5:14 ಮತ್ತು ವ್ಯಾಖ್ಯಾನ ನೋಡಿರಿ). ಅನೇಕ ಜನರು ಕೇಳಬಹುದುಃ ಕ್ರಿಸ್ತನ ಶಿಷ್ಯರು ರೋಗಿಯನ್ನು ಗುಣಪಡಿಸುವ ಮತ್ತು ದೆವ್ವಗಳನ್ನು ಹೊರಡಿಸುವ ಶಕ್ತಿಯನ್ನು ಇಂದು ಯಾಕೆ ಹೊಂದಿರುವದಿಲ್ಲ? ಅನೇಕ ಬೈಬಲ್ ಪಂಡಿತರು ನೀಡುವ ಉತ್ತರ ಹೊಸ ಒಡಂಬಡಿಕೆಯ ಸಮಯಗಳಲ್ಲಿ ಯೇಸು ನಿಜವಾಗಿಯೂ ರಕ್ಷಕನೂ, ದೇವರ ಮಗನೂ ಮತ್ತು ದೇವರ ರಾಜ್ಯವು ನಿಜವಾಗಿಯೂ ಮನುಷ್ಯರ ಮದ್ಯದಲ್ಲಿ ಬಂದಿದೆಯೆಂಬದನ್ನು ಜನರಿಗೆ ನಿರೂಪಿಸಲು ಅದ್ಭುತಗಳ ಒಂದು ವಿಶೇಷ ಅಗತ್ಯವಿತ್ತು. ಅಲ್ಲದೆ ಪ್ರಥಮ ಅಪೊಸ್ತಲರು ಮಾಡಿದ ಅನೇಕ ಅದ್ಭುತಗಳು ಸಭೆಯ ಸ್ಥಾಪನೆಯಲ್ಲಿ ಒಂದು ಪ್ರಾಮುಖ್ಯ ಪಾತ್ರವನ್ನು ವಹಿಸಿತು. ಬೈಬಲ್ ಪಂಡಿತರು ಹೇಳುವದೇನೆಂದರೆ ಆಧುನಿಕ ಪ್ರಪಂಚದಲ್ಲಿ ಅದ್ಭುತಗಳಿಗೆ ಅಂತಹ ಒಂದು ದೊಡ್ಡ ಅಗತ್ಯತೆಯಿರುವದಿಲ್ಲ. ಹೇಗಿದ್ದರೂ, ಇತರ ಕ್ರೈಸ್ತರು ಜಗತ್ತಿನ ವಿವಿಧ ರಾಷ್ಟಗಳಲ್ಲಿ ಅನೇಕ ಅದ್ಭುತಗಳು ನಡೆಯುತ್ತಿವೆ ಯೆಂದು ಸೂಚಿಸುತ್ತಾರೆ. ಕ್ರಿಸ್ತನು ತಾನು

ಪ್ರಥಮ ಶಿಷ್ಯರಿಗೆ ಕೊಟ್ಟಂಥ ಅದೇ ಶಕ್ತಿಯನ್ನು ಇಂದು ಸಹ ತನ್ನ ಸೇವಕರಿಗೆ ಕೊಡಲು ಸಿದ್ದನಾಗಿದ್ದಾನೆ (ಯೋಹಾನ 14:12) ಈ ಉತ್ತರಗಳೆರಡೂ ನಿಜವಾಗಿರಬಹುದು. ಆದರೆ ನಾವು ಒಂದು ಸಂಗತಿಯನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಅತ್ಯಂತ ಪ್ರಾಮುಖ್ಯ ಅದ್ಭುತವು ಒಬ್ಬ ಪಾಪಿಯು ಮಾನಸಾಂತರ ಹೊಂದಿ ಆತ್ಮೀಕ ಹೊಸ ಜನ್ಮವನ್ನು ಪಡೆಯುವದೇ ಆಗಿದೆ. ಪು ರುಷ ಮತ್ತು ಸ್ತ್ರೀಯರನ್ನು ಕ್ರಿಸ್ತನೆಡೆಗೆ ನಡಿಸುವದು ದೇವರು ನಮಗೆ ನೀಡುವ ಅತಿ ಶ್ರೇಷ್ಠ ಕೆಲಸವಾಗಿದೆ.

## ಸ್ನಾನಿಕನಾದ ಯೋಹಾನನ ಶಿರಶ್ಚೇಧನ (6:14-29)

(ಮತ್ತಾಯ 14:1-12, ಲೂಕ 9:7-9)

**14-15** ಅರಸನಾದ ಹೆರೋದನು ಇದರ ಬಗ್ಗೆ ಅಂದರೆ ಯೇಸುವಿನ ಪ್ರಸಿದ್ಧಿಯ ಬಗ್ಗೆ ಕೇಳಿದನು. ಈ ಅರಸನಾದ ಹೆರೋದನು ಮತ್ತಾಯ 2ನೇ ಅಧ್ಯಾಯದಲ್ಲಿ ಪ್ರಸ್ತಾಪಿಸಿರುವ ಹೆರೋದ ಚಕ್ರವರ್ತಿಯ ಮಗನಾಗಿದ್ದಾನೆ. ಗಲಿಲಾಯವನ್ನು ಆಳುವ ಅಧಿಕಾರವನ್ನು ಹೆರೋದನಿಗೆ ರೋಮನ್ ಚಕ್ರವರ್ತಿಯು ಕೊಟ್ಟಿದ್ದನು. ಆದುದರಿಂದ ಹೆರೋದನಿಗೆ ಯೇಸುವಿನ ಬಗ್ಗೆ ಚಿಂತೆಯಾಯಿತು, ಯಾಕೆಂದರೆ ಯೇಸು ಗಲಿಲಾಯದಲ್ಲಿ ಮಾಡುತ್ತಿದ್ದ ಎಲ್ಲಾ ಅದ್ಭುತಗಳ ಫಲಿತವಾಗಿ ಆತನು ಹೆರೋದನಿಗಿಂತಲೂ ಹೆಚ್ಚು ಪ್ರಸಿದ್ಧನಾಗುತ್ತಿದ್ದನು.

ಹೊಸ ಒಡಂಬಡಿಕೆಯ ಕಾಲದಲ್ಲಿ ಒಬ್ಬ ವ್ಯಕ್ತಿಯು ಜೀವಂತವಾಗಿದ್ದಾಗ ಹೊಂದಿದ ಬಲಕ್ಕಿಂತಲೂ ಸತ್ತ ಆ ವ್ಯಕ್ತಿಯ ಆತ್ಮ ಹೆಚ್ಚು ಬಲವಿರುತ್ತದೆಂದು ನಂಬುತ್ತಿದ್ದರು. ಆದುದರಿಂದ ಅದ್ಭುತಕಾರ್ಯಮಾಡುವ ಯೇಸು ಮರಣದಿಂದ ಜೀವಿತನಾಗಿ ಎದ್ದ ಸ್ನಾನಿಕನಾದ ಯೋಹಾನನಿರಬೇಕೆಂದು ಊಹಿಸಿದರು. ಯೋಹಾನನು ತನ್ನ ಜೀವಿತಕಾಲದಲ್ಲಿ ಯಾವ ಅದ್ಭುತಗಳನ್ನು ಮಾಡಲಿಲ್ಲ (ಯೋಹಾನ 10:41). ಆದಕಾರಣ ಈ ಜನರು ಯೋಹಾನನು ತಿರಿಗಿ ಜೀವಂತನಾಗಿ ಅದ್ಭುತಗಳನ್ನು ಮಾಡುತ್ತಿದ್ದಾನೆಂದು ಊಹಿಸಿಕೊಂಡರು. ಇನ್ನು ಕೆಲವರು ಯೇಸು ಹಳೆ ಒಡಂಬಡಿಕೆಯ ಶ್ರೇಷ್ಠ ಪ್ರವಾದಿಯಾದ ಎಲಿಯನೆಂದು ಯೋಚಿಸಿದರು. ಎಲಿಯನು ತಿರಿಗಿ ಬರುತ್ತಾನೆ ಎಂದು ಯೆಹೂದ್ಯರಲ್ಲಿ ಬಹಳಷ್ಟು ಜನ ನಂಬಿದ್ದರು (ಮಲಾಕಿ 4:5) ಇತರ ಕೆಲವರು ಯೇಸು ಹಳೆ ಒಡಂಬಡಿಕೆಯ ಪ್ರವಾದಿಗಳಲ್ಲಿ ಒಬ್ಬನೆಂದು ಆಲೋಚಿಸಿದರು.

**16** ಆದರೆ ಯೇಸು ನಿಜವಾಗಿ ಸ್ನಾನಿಕನಾದ ಯೋಹಾನನೆಂದು ಹೆರೋದನು ಊಹಿಸುವದಕ್ಕೆ ವಿಶೇಷ ಕಾರಣವೊಂದಿತ್ತು – ಯಾಕೆಂದರೆ ಆತನು ಯೋಹಾನನನ್ನು ಕೊಲ್ಲಿಸಿದ್ದನು. ಯೋಹಾನನ ಆತ್ಮವು ತನ್ನನ್ನು ದಂಡಿಸಲು ತಿರಿಗಿ ಬಂದಿದೆಯೆಂದು ಅವನು ಯೋಚಿಸಿಕೊಂಡನು. ಅಪರಾಧದಿಂದ ತುಂಬಿದ ಮನಸ್ಸಾಕ್ಷಿಯು ಅನೇಕ ರೀತಿಯ ಅನಾವಶ್ಯಕ ಭಯಗಳಿಗೆ ದಾರಿಮಾಡುತ್ತದೆ. ಹಿಂದಟ್ಟದಿದ್ದರೂ ದುಷ್ಟನು ಹೆದರಿ ಓಡುವನು (ಜ್ಞಾನೋಕ್ತಿ 28:1).

**17-18** ವಚನ 17-29 ರಲ್ಲಿ ಯೋಹಾನನು ಹೇಗೆ ಕೊಲ್ಲಲ್ಪಟ್ಟನು ಎಂದು ಮಾರ್ಕನು ವಿವರಿಸುತ್ತಾನೆ. ಹೆರೋದನು ತನ್ನ ಅಣ್ಣನ ಹೆಂಡತಿಯಾದ ಹೆರೋದ್ಯಳನ್ನು ಇಟ್ಟುಕೊಂಡಿದ್ದನು, ಅವನ ಅಣ್ಣನು ಇನ್ನೂ ಜೀವಂತವಿರುವಾಗಲೇ ಆಕೆಯನ್ನು ಹೆರೋದನು ವಿವಾಹವಾಗಿದ್ದನು. ಯೋಹಾನನು ಈ ವ್ಯಭಿಚಾರದ ವಿರುದ್ದವಾಗಿ ಗದರಿಸಿದ್ದನು. ಆದುದರಿಂದ ಹೆರೋದ್ಯಳು ಯೋಹಾನನ ಮೇಲೆ ಕೋಪಗೊಂಡು ಅವನನ್ನು ಕೊಲ್ಲಲು ಅವಕಾಶಕ್ಕೆ ಎದುರುನೋಡುತ್ತಿದ್ದಳು. ದೇವಸೇವಕರ ಗದರಿಕೆಗಳಿಂದ ಜನರು ಪ್ರಯೋಜನ ಹೊಂದುತ್ತಾರೆ ಇಲ್ಲವೆ ಅವು ಗಳಿಂದ ಕೋಪಗೊಳ್ಳುತ್ತಾರೆ. ಅನೇಕ ದೇವರ ಸೇವಕರಂತೆ ಯೋಹಾನನು ಸಹ ಒಳ್ಳೆಯದನ್ನು ಮಾಡಿದ್ದಕ್ಕಾಗಿ ಬಾಧೆಗೆ ಒಳಗಾಗಿದ್ದನು.

**19-20** ಯೋಹಾನನನ್ನು ಕೊಲ್ಲಿಸಲು ಹೆರೋದನು ಹೆದರಿದ್ದನು. ಯೋಹಾನನು ನೀತಿವಂತನೂ, ದೈವಭಕ್ತನೆಂದೂ ತಿಳಿದು ಅವನಿಗೆ ಅಂಜಿಕೊಂಡಿದ್ದನು. ಹೆರೋದನು ಜನರ ಕೋಪಕ್ಕಾಗಿಯೂ ಹೆದರಿದನು. ಯಾಕೆಂದರೆ ಜನರು ಯೋಹಾನನನ್ನು ಪ್ರವಾದಿಯೆಂದು ತಿಳಿದಿದ್ದರು. (ಮತ್ತಾಯ 14:5). ಆದುದರಿಂದ ಹೆರೋದನು ತನ್ನ ಹೆಂಡತಿಯಾದ ಹೆರೋದ್ಯಳ ಹೊಂಚುಗಳಿಂದ ಯೋಹಾನನನ್ನು ಕಾಪಾಡಿದ್ದನು.

ಹೆರೋದನು ಯೋಹಾನನ ಮಾತುಗಳನ್ನು ಆಲಿಸಲು ಇಷ್ಟಪಟ್ಟನು ಎಂದು ಮಾರ್ಕನು ಹೇಳುತ್ತಾನೆ. ಆದರೆ ಅವನು ಆಲಿಸಿದರೂ ಯೋಹಾನನ ಸಂದೇಶವನ್ನು ಎಂದಿಗೂ ನಂಬಲಿಲ್ಲ, ತನ್ನ ಪಾಪಗಳಿಗೆ ಎಂದಿಗೂ ಪಶ್ಚಾತಾಪ ಪಡಲಿಲ್ಲ. ಯೋಹಾನನ ಮೂಲಕ ಕೊಡಲ್ಪಟ್ಟ ದೇವರ ವಾಕ್ಯವನ್ನು ಅವನು ತಿರಸ್ಕರಿಸಿದನು. ಹೆರೋದನು ದೇವರ ವಾಕ್ಯವನ್ನು ಕೇಳುವವನಾಗಿದ್ದನು (ಯಾಕೋಬ 1:23 ನೋಡಿರಿ). ಆದರೆ ಕೇಳುವದು ಮಾತ್ರವೇ ಸಾಲದು. ಅಂತ್ಯದಲ್ಲಿ ಹೆರೋದನು ಪ್ರವಾದಿಗಳಲೆಲ್ಲಾ ಶ್ರೇಷ್ಠನಾದವನನ್ನು ಕೊಲ್ಲಿಸಿದನು (ವಚನ 27). 21-29 ಮಾರ್ಕನು ಇಲ್ಲಿ ಸ್ನಾನಿಕನಾದ ಯೋಹಾನನ ಮರಣದ ಚಿತ್ರಣವನ್ನು ನೀಡುತ್ತಾನೆ.

## ಯೇಸು ಐದು ಸಾವಿರ ಜನರಿಗೆ ಊಟ ಮಾಡಿಸಿದ್ದು (6:30-44)

(ಮತ್ತಾಯ 14:13-21, ಲೂಕ 9:10-17, ಯೋಹಾನ 6:1-15)

**30-34** ಹನ್ನೆರಡು ಮಂದಿ ಶಿಷ್ಯರು (ಅಂದರೆ ಅಪೊಸ್ತಲರು) ತಮ್ಮ ಸುವಾರ್ತಾ ಪ್ರಯಾಣದಿಂದ ಹಿಂದಿರುಗಿ ಬಂದು ನಡೆದಿರುವದೆಲ್ಲದರ ಬಗ್ಗೆ ಯೇಸುವಿಗೆ ವರದಿ ಮಾಡುತ್ತಾರೆ. ನಂತರ, ಅವರು ಬಳಲಿದ್ದದರಿಂದ ಅಡವಿಯ ಸ್ಥಳವನ್ನು 42

ಹುಡುಕುವ ನಿರೀಕ್ಷೆಯಲ್ಲಿ ದೋಣಿಯ ಮೂಲಕ ಸಮುದ್ರವನ್ನು ದಾಟಿದರು. ಆದರೆ ಅವರು ಹೊರಡುವದನ್ನು ಜನರ ಸಮೂಹವು ನೋಡಿದಂಡೆಯುದ್ದಕ್ಕೂ ಓಡಿ ಹೋಗಿ ಆಚೆಯದಡದಲ್ಲಿ ಅವರಿಗಾಗಿ ಕಾಯುತ್ತಿದ್ದರು.

ಆದರೆ ಯೇಸು ನಾನು ಆಯಾಸಗೊಂಡಿರುವೆ ಎಂದು ಹೇಳಲಿಲ್ಲ. ಆತನು ಜನರ ಗುಂಪನ್ನು ಕಳುಹಿಸಿಬಿಡಲಿಲ್ಲ. ಜನರುಂ ಇದ್ದರು (ವಚನ 34) ಮತ್ತು ಒಬ್ಬ ಒಳ್ಳೇ ಕುರುಬನಾಗಿರುವ ಯೇಸು (ಯೋಹಾನ 10:11) ಅವರ ಮೇಲೆ ಕನಿಕರಗೊಂಡು ಅವರಿಗೆ ಅನೇಕ ಸಂಗತಿಗಳನ್ನು ಬೋಧಿಸಲು ಪ್ರಾರಂಬಿಸಿದನು(ಮತ್ತಾಯ 9:36). ಆತನು ಅವರ ರೋಗಗಳನ್ನು ಸಹ ಗುಣಪಡಿಸಿದನು (ಮತ್ತಾಯ 14:14).

**35-37** ಅಲ್ಲಿ ಸೇರಿರುವ ಅಷ್ಟೊಂದು ಜನಕ್ಕೆ ಅಂತಹ ಅಡವಿಯಲ್ಲಿ ಎಲ್ಲಿಂದ ಆಹಾರ ತರುವದು ಎಂಬದಾಗಿ ಶಿಷ್ಯರು ಚಿಂತಿಸಲು ಪ್ರಾರಂಭಿಸಿದರು. ಶಿಷ್ಯರು ಯಾವಾಗಲೂ ಅಂತಹ ಸಂಗತಿಗಳಿಗಾಗಿ ಚಿಂತಿಸುತ್ತಿದ್ದರು. ಅವರು ಯೇಸುವಿಗೆ **"ಜನರನ್ನು ಕಳುಹಿಸಿ ಬಿಡು"** ಅಂದರು. ಆದರೆ ಯೇಸು ಜನರನ್ನು ಕಳುಹಿಸಿಬಿಡಲು ಇಷ್ಟಪಡಲಿಲ್ಲ. ಆತನು ಒಂದು ಯೋಜನೆ ಹೊಂದಿದ್ದನು. ಜನರ ಗುಂಪಿಗೆ ಆಹಾರ ಒದಗಿಸಲು ಆತನು ತನ್ನ ಶಿಷ್ಯರನ್ನು ಉಪಯೋಗಿಸಲಿದ್ದನು. ಆದ್ದರಿಂದ **ಯೇಸು ಅವರಿಗೆ "ನೀವೇ ಅವರಿಗೆ ಊಟಕ್ಕೆ ಕೊಡಿರಿ"** ಎಂದನು.

ಆದರೆ ಶಿಷ್ಯರು ವಿರೋಧಿಸಿ ಇಷ್ಟೊಂದು ಜನರಿಗೆ ಊಟವನ್ನು ಕೊಂಡುಕೊಳ್ಳಲು ಇನ್ನೂರು ಹಣ (ಎಂಟು ತಿಂಗಳ ಕೂಲಿ) ಬೇಕಾಗುತ್ತದೆ ಅಂದರು (2 ಅರಸು 4:42:44).

**38** ನಂತರ ಯೇಸು ಅವರ ಹತ್ತಿರ ಎಷ್ಟು ಆಹಾರ ವಿದೆಯೆಂದು ಕೇಳಿದನು ಅವರು ಹುಡುಕಿ ಕಂಡುಕೊಂಡ ಮೇಲೆ ಐದು ರೊಟ್ಟಿ ಎರಡು ಮೀನುಗಳಿವೆ ಎಂದು ಹೇಳಿದರು. ನಿಜವಾಗಿ ಹೇಳುವದಾದರೆ ಆ ಐದು ರೊಟ್ಟಿ ಎರಡು ಮೀನುಗಳು ಅಂದ್ರೇಯ ಜನರ ಗುಂಪಿನಲ್ಲಿ ಹುಡುಕಿ ಕಂಡುಕೊಂಡ ಒಬ್ಬ ಬಾಲಕನಿಗೆ ಸೇರಿದ್ದವು (ಯೋಹಾನ 6:8-9). ಹೀಗೆ ಅವರು ರೊಟ್ಟಿ ಮತ್ತು ಮೀನುಗಳನ್ನು ಯೇಸುವಿಗೆ ಕೊಟ್ಟರು. ಅದು ಬಾಲಕನ ಊಟವಾಗಿತ್ತು. ಅದು ಒಬ್ಬ ವಯಸ್ಕನಿಗೆ ಸಾಕಾಗುವಷ್ಟಿತ್ತಷ್ಟೆ, ಸಾವಿರಾರು ಜನರು ಹಾಗೆ ಉಳಿಯಬೇಕಿತ್ತು.

**39-44** ನಂತರ ಯೇಸು ತನ್ನ ಅದ್ಭುತಗಳಲ್ಲಿ ಅತಿಶ್ರೇಷ್ಠವಾದ ಅದ್ಭುತವನ್ನು ಮಾಡಿದನು. ಐದು ರೊಟ್ಟಿ ಎರಡು ಮೀನುಗಳನ್ನು ತೆಗೆದುಕೊಂಡು ಆತನು ಜನರಗುಂಪಿಗೆ ಹಂಚಿದನು. ಅಲ್ಲಿ ಐದು ಸಾವಿರ ಗಂಡಸರು ಇದ್ದರು ಮತ್ತು ಗಂಡಸರಷ್ಟೇ ಅಲ್ಲದೆ ಸ್ತ್ರೀಯರು ಹಾಗು ಮಕ್ಕಳು ಸಹ ಇದ್ದರು (ಮತ್ತಾಯ 14:21) ಅವರೆಲ್ಲರೂ ಊಟಮಾಡಿ ತೃಪ್ತರಾದರು (ವಚನ 42).

ಆ ರೊಟ್ಟಿ ಮತ್ತು ಮೀನುಗಳ ಮೂಲಕ ಜೀವಸ್ವರೂಪ ದೇವರಾದ ಯೇಸು ಆ ಜನರ ಸಮೂಹಕ್ಕೆ ಊಟಮಾಡಿಸಲು ಸಾಕಾಗುವಷ್ಟು ಆಹಾರವನ್ನು ಸೃಷ್ಟಿಸಿದನು. ದೇವರಿಗೆ ಅಸಾದ್ಯವಾದದ್ದು ಯಾವದೂ ಇಲ್ಲ (ಮಾರ್ಕ 10:27). ಆದರೆ ಮೊದಲು ಯೇಸು ಆ ಚಿಕ್ಕ ಬಾಲಕನು ಶಿಷ್ಯರಿಗೆ ಕೊಟ್ಟಿರುವದನ್ನು ತೆಗೆದುಕೊಂಡನು. ಅದೇ ರೀತಿಯಲ್ಲಿ ಯೇಸು ನಮ್ಮಲ್ಲಿರುವದನ್ನು ಕೊಡುವಂತೆ ನಮಗೆ ಕೇಳುತ್ತಾನೆ. ನಮ್ಮಲ್ಲಿ ಹೆಚ್ಚು ಇಲ್ಲದಿರಬಹುದು ಆದರೆ ಯೇಸು ನಮ್ಮದು ಬಡ ಸಭೆ ಎಂದು ನಾವು ಹೇಳಬಹುದು. ಅಂದರೆ ಯೇಸು ನಿಮ್ಮಲ್ಲಿರುವದನ್ನು ನನಗೆ ಕೊಡಿರಿ ಎನ್ನುತ್ತಾನೆ. ಮತ್ತು ನಾವು ಆತನಿಗೆ ವಿಧೇಯರಾಗುವಾಗ ನಮ್ಮಲ್ಲಿರುವ ಸ್ವಲ್ಪನ್ನು ಹಂಚಿಕೊಳ್ಳಲು ನಾವು ಸಿದ್ದರಾಗಿರುತ್ತೇವೆ, ಆತನು ನಾವು ಕೊಡುವದನ್ನು ತೆಗೆದುಕೊಂಡು ಮಹತ್ಕಾರ್ಯವನ್ನು ಮಾಡಲು ಉಪಯೋಗಿಸುವನು. ಆದುದರಿಂದ ನಾವು ನಮ್ಮ ಸ್ವಮೂಲವಸ್ತುಗಳನ್ನು ನೋಡಿ ನಾವು ಆ ಜನರಿಗೆಲ್ಲಾ ಊಟಮಾಡಿಸಲು ಸಾದ್ಯವಿಲ್ಲ ಎಂದು ಹೇಳದಿರೋಣ. ಬದಲಾಗಿ ನಾವು ಊಟಮಾಡಿಸಲು ಆತನ ಶಕ್ತಿಯನ್ನೇ ದೃಷ್ಟಿಸೋಣ. ಆತನು ಅವರಿಗೆ ಊಟಮಾಡಿಸಲು ಶಕ್ತನಾಗಿದ್ದಾನೆ. ಮತ್ತು ಯೇಸು ಜನರಿಗೆ ಊಟಮಾಡಿಸಲು ಅವರು ತೃಪ್ತರಾಗುತ್ತಾರೆ.

ಯೇಸು ಜನಸಮೂಹಕ್ಕೆ ದೈಹೀಕ ಆಹಾರವನ್ನು ಕೊಟ್ಟಂತೆಯೇ ಆತನು ಜನರಿಗೆ ಆತ್ಮೀಕ ಆಹಾರವನ್ನೂ ಕೊಡುತ್ತಾನೆ. ಆತನು ನಮಗೆ **ಜೀವಕರವಾದ** ನೀರನ್ನು ಒದಗಿಸುತ್ತಾನೆ (ಯೋಹಾನ 4:10) ಮತ್ತು ನಾವು ಅದನ್ನು ಕುಡಿಯುವಾಗ ತಿರಿಗಿ ಎಂದಿಗೂ ಬಾಯಾರಿಕೆಗೊಳ್ಳುವದಿಲ್ಲ (ಯೋಹಾನ 4:13- 14) ಆತನು ನಮಗೆ **ಜೀವವುಳ್ಳ ರೊಟ್ಟಿಯನ್ನು** ನೀಡುತ್ತಾನೆ ಮತ್ತು ನಾವು ಅದನ್ನು ತಿನ್ನುವಾಗ ಇನ್ನು ಎಂದಿಗೂ ಹಸಿವೆಗೊಳ್ಳುವದಿಲ್ಲ (ಯೋಹಾನ 6: 35) ಯೇಸು ಐದು ರೊಟ್ಟಿಯನ್ನು ಎರಡು ಮೀನುಗಳಿಂದ

ಐದು ಸಾವಿರಕ್ಕಿಂತಲೂ ಹೆಚ್ಚು ಜನರಿಗೆ ಊಟ ಮಾಡಿಸುವದಕ್ಕೆ ಶಕ್ತನಾಗಿರುವದಾದರೆ, ಆತನ ಬಳಿಗೆ ನಂಬಿಕೆಯಿಂದ ಬರುವ ಪ್ರತಿಯೊಬ್ಬರಿಗೂ ದೈಹೀಕವಾಗಿ ಮತ್ತು ಆತ್ಮೀಕವಾಗಿಯೂ ಆತನು ಖಂಡಿತವಾಗಿಯೂ ಊಟ ಮಾತ್ರವೇ ಅಲ್ಲ (ಯೋಹಾನ 1: 3 ) ಆತನು ಶಾರೀರಿಕವಾಗಿ ಮತ್ತು ಆತ್ಮೀಕವಾಗಿಯೂ ಸಹ ಎಲ್ಲಾ ಜೀವಗಳನ್ನು ಪೋಷಿಸುವವನೂ ಆಗಿದ್ದಾನೆ. ಐದು ಸಾವಿರ ಜನರಿಗೆ ಊಟ ಮಾಡಿಸಿದ್ದು ಒಂದು ಅತಿ ಆಶ್ಚರ್ಯಕರ ಅದ್ಭುತ ಮಾತ್ರವೇ ಅಲ್ಲ ಇದು ದೇವರ ರಾಜ್ಯವು ಹೇಗೆ ಬೆಳೆಯುತ್ತದೆ ಎಂಬದಕ್ಕೆ ಒಂದು ದೃಷ್ಟಾಂತ ಸಹ ಆಗಿರುತ್ತದೆ. ಇದು ಒಂದು ಸೇವಾಕಾರ್ಯಗಳ ಸಾಮ್ಯವಾಗಿದೆ. ನಾವು ಒಂದು ಪ್ರಶ್ನೆಯನ್ನು ಕೇಳಿಕೊಳ್ಳಬೇಕಾಗಿರುತ್ತದೆ, ಅದೇನೆಂದರೆ ರೊಟ್ಟಿ ಮತ್ತು ಮೀನುಗಳು ಯಾವ ಕ್ಷಣದಲ್ಲಿ ದ್ವಿಗುಣಗೊಳ್ಳಲು ಪ್ರಾರಂಭಿಸಿದವು? ಅವುಗಳು ಶಿಷ್ಯರ ಕೈಗಳಿಂದ ಕೊಡಲ್ಪಟ್ಟ ಮೇಲೆ ದ್ವಿಗುಣಗೊಂಡವು. ಶಿಷ್ಯರು ಕೊಡಲಿಕ್ಕೆ ಪ್ರಾರಂಭಿಸಿದ ಹಾಗೆ ಅವರಲ್ಲಿ ಕೊಡುವದಕ್ಕೆ ನಿರಂತರವಾಗಿ ಇನ್ನೂ ಹೆಚ್ಚಾಗುತ್ತಾ ಇತ್ತು.

ಕೆಲವು ಕ್ರೈಸ್ತರು ಚಿಕ್ಕ ಬಾಲಕನಂತಿರುತ್ತಾರೆ – ಅವರು ಒದಗಿಸುವವರು. ಇತರ ಕ್ರೈಸ್ತರು ಶಿಷ್ಯರ ಹಾಗಿರುತ್ತಾರೆ – ಅವರು ವಿತರಕರಾಗಿರುತ್ತಾರೆ ಮತ್ತು ಪ್ರಪಂಚದಲ್ಲಿ ಹಸಿವೆಗೊಂಡಿರುವ ಜನರ ಮಹಾಸಮೂಹಗಳಿರುತ್ತವೆ, ಅವರು ಜೀವವುಳ್ಳ ರೊಟ್ಟಿಯನ್ನು ತಿನ್ನಲು ಕಾಯುತ್ತಿದ್ದಾರೆ.

ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವಿರುವ ದೇವರ ಮಗನಾದ ಯೇಸು ತಾನು ಜನಸಮೂಹಕ್ಕೆ ಊಟಮಾಡಿಸಲು ಸಹಾಯಮಾಡಲು ನಮ್ಮನ್ನು ಆರಿಸಿಕೊಂಡಿದ್ದಾನೆ. ಆತನು ತನ್ನಷ್ಟಕ್ಕೆ ತಾನೇ ಅದನ್ನು ಮಾಡಬಲ್ಲನು ಆದರೆ ಆತನು ಮಾಡದಿರಲು ತಿರ್ಮಾನಿಸಿದ್ದಾನೆ. ಅದಕ್ಕೆ ಬದಲಾಗಿ ನಮ್ಮನ್ನು ಉಪಯೋಗಿಸಲು ಇಷ್ಟಪಟ್ಟಿರುತ್ತಾನೆ. ನಾವು ನಮ್ಮಲ್ಲಿನ ಮೂಲವಸ್ತುಗಳನ್ನು ನಮ್ಮ ಸಮಯ ನಮ್ಮ ತಲಾಂತಗಳು, ನಮ್ಮನ್ನೂ ಆತನಿಗೆ ನೀಡುವಾಗ ಹಸಿವೆಯಿಂದಿರುವ ಜನಸಮೂಹವನ್ನು ಸಂಧಿಸಲು ಆತನು ನಮ್ಮನ್ನು ಉಪಯೋಗಿಸುವನು ಮತ್ತು ಈ ಪ್ರಕ್ರಿಯೆಯಲ್ಲಿ ಊಹಿಕೆಗೂಮೀರಿ ನಮ್ಮನ್ನು ಸಮೃದ್ಧಿಗೊಳಿಸುವನು.

ಯೇಸು ನೀರಿನ ಮೇಲೆ ನಡೆಯುತ್ತಾನೆ (6:45-56) (ಮತ್ತಾಯ 14:22-36, ಯೋಹಾನ 6:16-24)

**45** ಯೋಹಾನನ ಸುವಾರ್ತೆಗನುಸಾರವಾಗಿ ಯೇಸು ಐದು ಸಾವಿರ ಜನರಿಗೆ ಊಟ ಮಾಡಿಸಿದ ಮೇಲೆ ಜನರು ತಮ್ಮೊಳಗೆ "ಲೋಕಕ್ಕೆ ಬರಬೇಕಾದ ಪ್ರವಾದಿ ಈತನೇ ನಿಜ" ಎಂದು ಹೇಳಿಕೊಂಡರು. (ಧರ್ಮೋಪದೇಶಕಾಂಡ 18:15, ಯೋಹಾನ 6:14). ಜನರು ಯೇಸುವನ್ನು ಒತ್ತಾಯದಿಂದ ತಮ್ಮ ಅರಸನನ್ನಾಗಿ ಮಾಡಿಕೊಳ್ಳ ಬಯಸಿದರು ಎಂದು ಯೋಹಾನನು ತಿಳಿಸುತ್ತಾನೆ. ಆದರೆ ಯೇಸು ಅವರಿಗೆ ಅನುಮತಿಸಲಿಲ್ಲ. ಆತನು ಜನರಬಳಿಯಿಂದ ಹೊರಟು ಏಕಾಂತದಲ್ಲಿ ಪ್ರಾರ್ಥಿಸಲು ಹೋದನು (ಯೋಹಾನ 6:15).

ಜನರು ತನ್ನನ್ನು ಅರಸನನ್ನಾಗಿ ಮಾಡುವ ಪ್ರಯತ್ನದಲ್ಲಿದ್ದಾರೆಂದು ಯೇಸು ತಿಳಿದುಕೊಂಡಾಗ, ಆತನು ಕೂಡಲೆ ತನ್ನ ಶಿಷ್ಯರನ್ನು ದೋಣಿಯ ಮೂಲಕ ಬೇತ್ಸಾಯಿದಕ್ಕೆ [43] ಕಳುಹಿಸಿದನು. ಯೇಸುವಿನ ಶಿಷ್ಯರು ಸಹ ಆತನು ಅರಸನಾಗಿರಬೇಕೆಂದು ಇಚ್ಚಿಸಿದರು. ಯೇಸು ಅರಸನಾಗುವದಕ್ಕೆ ಬದಲಾಗಿ ಬಾಧೆ ಪಟ್ಟುಸಾಯಬೇಕು ಎಂಬದನ್ನು ಅವರು ಇನ್ನೂ ಅರ್ಥಮಾಡಿಕೊಳ್ಳಲಿಲ್ಲ. ಆತನು ಭೂಲೋಕದ ಅರಸನಾಗುವದಾದರೆ ಆತನು ಬಾಧೆ ಪಟ್ಟು ಸಾಯಲು ಅವಕಾಶ ಇಲ್ಲದಾಗುತ್ತದೆ, ಮತ್ತು ಹೀಗೆ ಮಾನವನ ರಕ್ಷಣೆಗಾಗಿ ದೇವರು ಹೊಂದಿದ್ದ ಯೋಜನೆಗೆ ತಡೆಯುಂಟಾಗುತ್ತಿತ್ತು. ಆದ್ದರಿಂದ ತನ್ನ ಶಿಷ್ಯರು ಆಸ್ಥಳದಲ್ಲಿ ಉಳಿದುಕೊಂಡು ಆತನನ್ನು ಅರಸನನ್ನಾಗಿಸುವದರ ಬಗ್ಗೆ ಜನರ ಗುಂಪು ಮಾತನಾಡವದನ್ನು ಕೇಳಿಸಿಕೊಳ್ಳುವದು ಯೇಸುವಿಗೆ ಇಷ್ಟವಿರಲಿಲ್ಲ.

ಆದ್ದರಿಂದ ಆತನು ತಕ್ಷಣವೇ ಅವರನ್ನು ಅಲ್ಲಿಂದ ಕಳುಹಿಸುತ್ತಾನೆ.

ಯೇಸು ತನ್ನನ್ನು ಆರಾಧಿಸಲು ಒಪ್ಪುವದಾದರೆ ಆತನನ್ನು ಅನೇಕ ರಾಜ್ಯಗಳ ಮೇಲೆ ಒಡೆತನವನ್ನು ಕೊಡುತ್ತೇನೆ, ಸೈತಾನನು ಯೇಸುವಿಗೆ ವಾಗ್ದಾನ ಮಾಡಿದ್ದನು (ಮತ್ತಾಯ 4:8-9) ಪುನಃ ಶೋಧನೆಯು ಎದುರಾಗಿತ್ತು ಯೇಸು ಶೋಧನೆಯನ್ನು ಪುನಃ ಎದುರಿಸಿದ್ದನು. ಆತನು ಭೂಲೋಕದ ಅರಸನಾಗಿರಬೇಕಾಗಿರಲಿಲ್ಲ ಆದರೆ ಬದಲಾಗಿ ಒಬ್ಬ ಬಾಧೆಪಡುವ ಸೇವಕನಾಗಿರಬೇಕಿತ್ತು (ಯೇಶಾಯ 53:3,11) ಆತನ ರಾಜ್ಯವು ಇಹಲೋಕದ್ದಾಗಿರಲಿಲ್ಲ (ಯೋಹಾನ 18:36).

**46-47** ಆದುದರಿಂದ ಯೇಸು ತನ್ನ ಶಿಷ್ಯರನ್ನು ಕಳುಹಿಸಿದ ಬಳಿಕ ಜನರ ಗುಂಪಿನಿಂದ ಹೊರಟು ಪ್ರಾರ್ಥಿಸಲು ಬೆಟ್ಟಕ್ಕೆ ಹೋದನು. ಈ ಮಧ್ಯದಲ್ಲಿ ಆತನ ಶಿಷ್ಯರು ದೋಣಿಯಲ್ಲಿದ್ದು ಬೇತ್ಸಾಯಿದೆಡೆಗೆ ಹುಟ್ಟು ಹಾಕಲು ಪ್ರಯತ್ನಿಸುತ್ತಿದ್ದರು. ಆದರೆ ಗಾಳಿಯು ಅವರ ವಿರುದ್ಧವಾಗಿ ಬೀಸುತ್ತಿತ್ತು ಮತ್ತು ಅವರಂತೂ ಸಮುದ್ರದ ಮಧ್ಯ ತೂರಲ್ಪಟ್ಟಿದ್ದರು.

**48-50** ರಾತ್ರಿಯ ನಾಲ್ಕನೆಯ ಜಾವದಲ್ಲಿ ಅಂದರೆ ಸುಮಾರು ಮುಂಜಾನೆ ೩ ಗಂಟೆಯಹೊತ್ತಿಗೆ ಯೇಸು ನೀರಿನ ಮೇಲೆ ನಡೆಯುತ್ತಾ ಅವರ ಬಳಿಗೆ ಬಂದನು. ಆತನು ಅವರನ್ನು ದಾಟಿ ಮುಂದಕ್ಕೆ ಹೋಗಬೇಕೆಂದಿದ್ದನು. (ವಚನ 48) ಆತನು ಅವರ ನಂಬಿಕೆಯನ್ನು ಪರೀಕ್ಷಿಸಲು ಬಯಸಿದ್ದನು. ಶಿಷ್ಯರು ತಾವು ಭೂತವನ್ನು ನೋಡುತ್ತಿದ್ದೇವೆಂದು ಅಂದುಕೊಂಡು ಬಹಳವಾಗಿ ಭಯ ಪಟ್ಟರು. ಆದರೆ ಯೇಸು ಅವರಿಗೆ ಅಂಜಬೇಡಿ, "ನಾನೆ" ಅಂದನು. ತರುವಾಯ, ಮತ್ತಾಯ 14:28-31 ರ ಪ್ರಕಾರವಾಗಿ ಪೇತ್ರನು "ಕರ್ತನೇ, ನೀನೇಯಾದರೆ ನನಗೆ ನೀರಿನ ಮೇಲೆ ನಡೆದು ನಿನ್ನ ಬಳಿಗೆ ಬರುವದಕ್ಕೆ ಅಪ್ಪಣೆ ಕೊಡು" ಎಂದು ಹೇಳಿದನು (ಮತ್ತಾಯ 14:28). ಆತನು ನಿಜವಾಗಿಯೂ ಯೇಸುವೋ ಅಥವಾ ಬರೀ ಒಂದು ಭೂತವೋ ಎಂದು ಪೇತ್ರನು ಯೇಸುವನ್ನು ಪರೀಕ್ಷಿಸುತ್ತಿದ್ದನು. ಯೇಸು "ಬಾ" ಅಂದನು. ಹೀಗೆ ಪೇತ್ರನು ಮೊದಲು ಧೈರ್ಯದಿಂದ ತುಂಬಿದವನಾಗಿ ನೀರಿನ ಮೇಲೆ ಇಳಿದು ಯೇಸುವಿನೆಡೆಗೆ ನಡೆದನು. ಆದರೆ ನಂತರ ಆತನನಂಬಿಕೆಯು ವಿಫಲವಾಯಿತು. ಆತನು ಯೇಸುವಿನ ಮೇಲೆ ದೃಷ್ಟಿಯನ್ನು ಬಿಟ್ಟು ಬಿರುಗಾಳಿ ಮತ್ತು ತೆರೆಗಳನ್ನು ನೋಡಿದನು. ಯೇಸು ಬಿರುಗಾಳಿ ಮತ್ತು ತೆರೆಗಳ ಒಡೆಯನು ಎಂಬದನ್ನು ಪೇತ್ರನು ಮರೆತು ಹೋದನು (ಮಾರ್ಕ 4:39-41). ಮತ್ತು ಅವನು ಮುಳುಗುವದಕ್ಕೆ ಪ್ರಾರಂಭಿಸಿದನು. ಆದರೆ ಯೇಸು ತನ್ನ ಕೈಚಾಚಿ ಅವನನ್ನು ಹಿಡಿದು ಮೇಲೆತ್ತಿ ದೋಣಿಯ ಒಳಗೆ ಕರೆದುಕೊಂಡು ಬಂದನು. ಬಳಿಕ ಯೇಸು ಅವನಿಗೆ "ಅಲ್ಪ ವಿಶ್ವಾಸಿಯೇ, ಯಾಕೆ ಸಂದೇಹ ಪಟ್ಟೆ?" ಅಂದನು (ಮತ್ತಾಯ 14:31) ಅದೇ ರೀತಿಯಲ್ಲಿ ನಾವು ಯೇಸುವಿನ ಮೇಲಿನಿಂದ ನಮ್ಮ ದೃಷ್ಟಿಯನ್ನು ತೊಲಗಿಸುವದಾದರೆ ನಾವು ನಮ್ಮ ಸಮಸ್ಯೆಗಳನ್ನು ನೋಡಲು ಪ್ರಾರಂಭಿಸಿ ನಿಶ್ಚಯವಾಗಿಯೂ ಮುಳುಗಿ ಹೋಗುತ್ತೇವೆ.

ನಾವು ಯೇಸುವಿನಲ್ಲಿಯೂ, ಆತನ ವಾಗ್ದಾನಗಳಲ್ಲಿಯೂ ನಂಬಿಕೆಯಿಡುವದಾದರೆ ಬಿರುಗಾಳಿ ಮತ್ತು ತೆರೆಗಳಿಗೆ ನಾವು ಅಂಜುವದಿಲ್ಲ. ಮತ್ತಾಯ 14:30 ಕ್ಕನುಸಾರವಾಗಿ ಪೇತ್ರನು ತೆರೆಗಳನ್ನು ನೋಡಿ ಮುಳುಗಲು ಪ್ರಾರಂಭಿಸಿ ಬಹಳವಾಗಿ ಹೆದರಿದನಂತರ ಆತನು ತಿರಿಗಿ ತನ್ನ ಕಣ್ಣುಗಳನ್ನು ಯೇಸುವಿನೆಡೆಗೆ ತಿರುಗಿಸಿ "ಕರ್ತನೇ ನನ್ನನ್ನು ರಕ್ಷಿಸು" ಎಂದು ಕೂಗಿಕೊಂಡನು. ನಾವು ಸಹ ನಮ್ಮ ಮೇಲೆ ಸಮಸ್ಯೆಗಳು ಬರುವಾಗ ಮತ್ತು ನಾವು ಮುಳುಗುತ್ತಿದ್ದೇವೆ ಎಂದು ನಮಗನಿಸಿದಾಗ ಯೇಸುವನ್ನು ಕೂಗಬಹುದು, ಆತನು ತನ್ನ ಕೈಯನ್ನು ಚಾಚಿ ಮುಳುಗದಂತೆ ನಮ್ಮನ್ನು ಕಾಪಾಡುತ್ತಾನೆ. ಪೇತ್ರನು ಸ್ವತಃ ತನ್ನನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಲಿಲ್ಲ, ನಾವೂ ಮಾಡದಿರೋಣ.

**51-52** ಶಿಷ್ಯರು ವಿಸ್ಮಯಪಟ್ಟರು. ಯೇಸು ಜನಸಮೂಹಕ್ಕೆ ಊಟ ಮಾಡಿಸಿದ್ದನ್ನು ಅವರು ನೋಡಿದ್ದರು. ಅವರು ಈಗಷ್ಟೇ ಆತನು ನೀರಿನ ಮೇಲೆ ನಡೆಯುವದನ್ನೂ ಕಂಡಿದ್ದರು. ಇದಕ್ಕೂ ಮುಂಚೆ ಆತನು ಬಿರುಗಾಳಿಯನ್ನು ಶಾಂತಗೊಳಿಸುವದನ್ನು ಅವರು ನೋಡಿದ್ದರು. (ಮಾರ್ಕ 4:39-4). ಆದರೆ ಇದೆಲ್ಲವನ್ನು ನೋಡಿದವರಾಗಿದ್ದರೂ ಯೇಸು ಯಾರಾಗಿದ್ದಾನೆಂದು ಅವರು ಇನ್ನೂ ಅರ್ಥಮಾಡಿಕೊಳ್ಳಲಿಲ್ಲ. ಅವರು ಆತನನ್ನು ನೀರಿನ ಮೇಲೆ ನೋಡಿದಾಗ "ಅದು ಭೂತ" ಅಂದರು (ಮತ್ತಾಯ 14:26), ಆದರೆ ಅವರು "ಅದು ನಮ್ಮ ಕರ್ತನು" ಎಂದು ಹೇಳಿರಬೇಕಿತ್ತು. ಒಂದುವೇಳೆ ಯೇಸು ದೇವರಾಗಿದ್ದಾನೆಂದು ಅವರು ತಿಳಿದಿದ್ದರೆ ಈ ಅದ್ಭುತಗಳನ್ನುನೋಡಿ ಅವರು ಆಶ್ಚರ್ಯಗೊಳ್ಳುತ್ತಿರಲಿಲ್ಲ. ಅವರು ಹೆದರಿಕೊಳ್ಳುತ್ತಿರಲೂ ಇಲ್ಲ. ಯೇಸು ಯಾರಾಗಿದ್ದಾನೆಂದು ಅವರು ತಿಳಿದಿರಲಿಲ್ಲ ಯಾಕೆಂದರೆ ಅವರ ಹೃದಯಗಳು ಕಠಿಣವಾಗಿದ್ದವು (ಅವರ ಮನಸ್ಸು ಕಲ್ಲಾಗಿತ್ತು ವಚನ 52). ಅವರು ಯೇಸುವಿನಲ್ಲಿ ಸಂಪೂರ್ಣ ನಂಬಿಕೆಯಿಡಲಿಲ್ಲ. ಅವರು ಇನ್ನೂ ಅಲ್ಪವಿಶ್ವಾಸಿಗಳಾಗಿದ್ದರು.

ಹೇಗಿದ್ದರೂ, ಪೇತ್ರ ಮತ್ತು ಯೇಸು ದೋಣಿಯೊಳಗೆ ಹೋದ ಮೇಲೆ ಮತ್ತು ಬಿರುಗಾಳಿಯು ನಿಂತ ಬಳಿಕ ಶಿಷ್ಯರು ಯೇಸುವನ್ನು ಆರಾಧಿಸಿ ನೀನು "ನಿಜವಾಗಿಯೂ ದೇವಕುಮಾರನು" ಎಂದು ಹೇಳಿದರು ಎಂದು ಮತ್ತಾಯನು ಬರೆಯುತ್ತಾನೆ (ಮತ್ತಾಯ 14: 33). ಕೊನೆಗೂ, ಅವರು ಯೇಸು ಯಾರೆಂದು ತಿಳಿಯಲಾರಂಭಿಸಿದರು.

**53-56** ಇಲ್ಲಿ ಮಾರ್ಕನು ಗಲಿಲಾಯದಲ್ಲಿ ಯೇಸು ಮಾಡಿದ ಸ್ವಸ್ಥತೆಯ ಸೇವೆಯ ಅಂತಿಮ ಚಿತ್ರಣವನ್ನು ನೀಡುತ್ತಾನೆ (ಮತ್ತಾಯ 15: 29-31) ಮತ್ತು ಆತನನ್ನು ಮುಟ್ಟಿದವರೆಲ್ಲಾ ಗುಣ ಹೊಂದಿದರು (ವಚನ 56). ಅಲ್ಲದೆ ಆತನ ಅಂಗಿಯ ತುದಿಯನ್ನು ಮುಟ್ಟಿದವರೂ ಸಹ ಸ್ವಸ್ಥರಾದರು (ಮಾರ್ಕ 5:27-29). ಯೋಹಾನ 6:22-24 ರ ಪ್ರಕಾರವಾಗಿ ಯೇಸು ಐದು ಸಾವಿರ ಜನರಿಗೆ ಊಟಮಾಡಿಸಿದ ಮರುದಿನ ಬೆಳಿಗ್ಗೆ ಜನರ ಗುಂಪು ಯೇಸುವನ್ನು ಹುಡುಕುತ್ತಿದ್ದರು. ಯೇಸುವಿನ ಶಿಷ್ಯರು ಆತನಿಲ್ಲದೆ ದೋಣಿಯಿಂದ ಇಳಿಯುವದನ್ನು ನೋಡಿದ್ದರು, ಆದ್ದರಿಂದ ಯೇಸು ಇನ್ನೂ ಅಲ್ಲಿಯೇ ಎಲ್ಲಾದರೂ ಇದ್ದಾನೆಂದು ಊಹಿಸಿಕೊಂಡರು. ಅವರು ಇನ್ನೂ ಆತನನ್ನು ಅರಸನನ್ನಾಗಿ ಮಾಡಲು ಬಯಕೆ ಹೊಂದಿದ್ದರು. ಆದರೆ ಅಂತಿಮವಾಗಿ ಅವರಿಗೆ ಯೇಸು ಎಲ್ಲಿಯೂ ಸಿಕ್ಕದೆಹೋದಾಗ ಅವರು ಬಂದ ಅದೇ ದೋಣಿಯಲ್ಲಿ ಹತ್ತಿ ಯೇಸುವನ್ನು ಹುಡುಕುತ್ತಾ ಕಪೆರ್ನೌಮಿನ ತಿಬೇರಿಯಕ್ಕೆ ಬಂದರು.[44]

---

## ಅಧ್ಯಾಯ - 7

### ಶುದ್ಧ ಮತ್ತು ಅಶುದ್ಧ (7: 1-23)

(ಮತ್ತಾಯ 15:1-20)

**1-4** ಯೆಹೂದ್ಯರು ಅನೇಕ ಧಾರ್ಮಿಕ ಸಂಪ್ರದಾಯಗಳನ್ನಿಟ್ಟುಕೊಂಡು ಅನುಸರಿಸುತ್ತಿದ್ದರು. ಅವುಗಳಲ್ಲಿ ಹೆಚ್ಚಿನ ಪಾಲು ಮೌಖಿಕ ಸಂಪ್ರದಾಯಗಳಾಗಿದ್ದವು, ಅಂದರೆ ಅವುಗಳು ಹಿರಿಯರ ಸಂಪ್ರದಾಯಗಳಾಗಿದ್ದವು, ಮನುಷ್ಯರ ಸಂಪ್ರದಾಯಗಳು (ವಚನ 3). ಅವುಗಳು ದೇವರ ವಾಕ್ಯವಾದ ಹಳೆ ಒಡಂಬಡಿಕೆಯಲ್ಲಿ 45 ಬರೆಯಲ್ಪಟ್ಟಿರಲಿಲ್ಲ. ಅಂತಹ ಸಂಪ್ರದಾಯಗಳಲ್ಲಿ ಊಟಕ್ಕೆ ಮುಂಚೆ ಕೈಗಳನ್ನು ತೊಳೆಯುವದು ಒಂದಾಗಿತ್ತು. ಯೆಹೂದ್ಯರು ತಮ್ಮ ಕೈಗಳಲ್ಲಿನ ಹೊಲಸನ್ನು ಶುಚಿಗೊಳಿಸಲು ತೊಳೆದುಕೊಳ್ಳಲಿಲ್ಲ. ತೊಳೆಯುವದು ಅವರ ಕೈಗಳು ಆಚಾರಕ್ಕೆ ಬದ್ಧವಾಗಿ "ಶುದ್ಧ" ಎಂಬುದರ ಸಂಕೇತ ಮಾತ್ರವೇ ಆಗಿತ್ತು. ಅವರು ಅಶುದ್ಧ ಕೈಗಳಿಂದ ಊಟಮಾಡುವದಾದ ಅವರ ಊಟವು "ಅಶುದ್ಧಗೊಳ್ಳುತ್ತದೆ" ಎಂದು ಅವರು ನಂಬುತ್ತಿದ್ದರು. ಇದೇಕಾರಣಕ್ಕಾಗಿ ಯೆಹೂದ್ಯರು ಧಾರ್ಮಿಕವಾಗಿ ಅವರ ಬಟ್ಟಲು, ತಂಬಿಗೆ, ತಪ್ಪಲೆಗಳನ್ನು ತೊಳೆಯುತ್ತಿದ್ದರು (ವಚನ 4).

ಅಷ್ಟು ಮಾತ್ರವೇ ಅಲ್ಲದೆ, ಯೆಹೂದ್ಯರು ಪೇಟೆಗಳಿಗೆ ಹೋದಾಗ ಹಲವು ವೇಳೆ ಆಕಸ್ಮೀಕವಾಗಿ ಯೆಹೂದ್ಯೇತರನ್ನು ಅಂದರೆ ಅನ್ಯ ಜನರನ್ನು ಸ್ಪರ್ಷಿಸುತ್ತಿದ್ದರು., ಹೀಗೆ ಅವರು ಅಶುದ್ಧಗೊಳ್ಳುತ್ತಿದ್ದರು. ಆದುದರಿಂದ ಅವರು ಊಟಕ್ಕೆ ಮುಂಚೆ ಧಾರ್ಮಿಕವಾಗಿ ಸ್ನಾನಮಾಡಬೇಕಿತ್ತು ಇಂತಹ ನೂರಾರು ನಿಯಮಗಳು ಇದ್ದವು.

**5** ಫರಿಸಾಯರು ಮತ್ತು ಶಾಸ್ತ್ರಿಗಳು ಯೇಸುವಿನ ಶಿಷ್ಯರು ಕೈಯನ್ನು ತೊಳೆಯದೇ ಊಟ ಮಾಡಿದ್ದರಿಂದ ಹಿರಿಯರ ಸಂಪ್ರದಾಯಗಳಿಗೆ ಅವಿಧೇಯರಾಗಿದ್ದಾರೆಂದು ಆರೋಪಿಸಿದರು.

**6-8** ಆದರೆ ಯೇಸುವಿಗೆ ಫರಿಸಾಯರು ಮತ್ತು ಶಾಸ್ತ್ರಿಗಳ ಕಪಟತನವನ್ನು ತಿಳಿದಿದ್ದನು. ಅವರು ತಮ್ಮ ದೇಹದ ಹೊರಗೆ ಮಾತ್ರ ಶುದ್ಧ ಮಾಡಿಕೊಂಡರು ಆದರೆ ಅವರ ಹೃದಯಗಳು ಅಶುದ್ಧವಾಗಿಯೇ ಉಳಿದವು , ಅಂದರೆ ಗರ್ವ ಮತ್ತು ಪ್ರೀತಿರಹಿತವಾಗಿದ್ದವು . ಅವರು ಸರಾಗವಾದ ಪ್ರಾರ್ಥನೆಗಳನ್ನು ತುಟಿಗಳಿಂದ ಪು ನರಾವರ್ತಿಸಿದರು. ಆದರೆ ಅವರು ತಮ್ಮ ಹೃದಯಗಳಿಂದ ದೇವರನ್ನು ಆರಾಧಿಸಲಿಲ್ಲ ಹಾಗು ಘನಪಡಿಸಲೂ ಇಲ್ಲ. ಅವರು ನಿಜವಾಗಿಯೂ ಕಪಟಿಗಳಾಗಿದ್ದರು. (ಮತ್ತಾಯ 6: 5, 23:25-28) ವಚನ 6-7 ರಲ್ಲಿ ಯೇಸು ಯೇಶಾಯ 29:13 ರಿಂದ ಪ್ರಸ್ತಾಪಿಸುತ್ತಾನೆ. ಯೆಹೂದ್ಯರು ಹಿರಿಯರ ಸಂಪ್ರದಾಯಗಳನ್ನು ಹಳೆ ಒಡಂಬಡಿಕೆಯಲ್ಲಿ ಬರೆದಿರುವ ದೇವರ ಆಜ್ಞೆಗಳಿಗೆ ಸರಿಸಮಾನವಾಗಿ ಮಾಡಿದ್ದರು. ಹಿರಿಯರ ಸಂಪ್ರದಾಯಗಳು ಕೇವಲ ಮನುಷ್ಯರ ಬೋಧನೆಗಳು ಹೊರತು ದೇವರದಲ್ಲ.[46] ಇವು ಗಳಲ್ಲಿ ಎಷ್ಟೋ ಸಂಪ್ರದಾಯಗಳನ್ನು ಅನುಸರಿಸುವದರಿಂದ ಯೆಹೂದ್ಯರು ದೇವರ ಕೆಲವು ಆಜ್ಞೆಗಳಿಗೆ ಅವಿಧೇಯರಾಗುತ್ತಿದ್ದರು. ಯೇಸು ಅವರಿಗೆ "ನೀವು ದೇವರ ಆಜ್ಞೆಯನ್ನು ಬಿಟ್ಟು ಮನುಷ್ಯರು ಕಲ್ಪಿಸಿದ ಸಂಪ್ರದಾಯವನ್ನು ಹಿಡಿದಿದ್ದೀರಿ" ಅಂದನು.

**9-13** ಈ ವಚನಗಳಲ್ಲಿ ಯೇಸು ಯೆಹೂದ್ಯರು ಹೇಗೆ ತಮ್ಮ ಸಂಪ್ರದಾಯಗಳಲ್ಲಿ ಒಂದನ್ನು ಅನುಸರಿಸುವದರಮೂಲಕ ದೇವರ ನಿಯಮವನ್ನು ಉಲ್ಲಂಘಿಸಿದ್ದಾರೆಂಬದಕ್ಕೆ ಯೇಸು ಒಂದು ಉದಾಹರಣೆಯನ್ನು ಕೊಡುತ್ತಾನೆ. ದೇವರಿಂದ ಬರೆಯಲ್ಪಟ್ಟು ಮೋಶೆಯ [47] ಮುಖಾಂತರ ನೀಡಿದ ಆಜ್ಞೆಗಳಲ್ಲಿ ಒಂದು ಏನೆಂದರೆ **ನಿನ್ನ ತಂದೆತಾಯಿಗಳನ್ನು ಸನ್ಮಾನಿಸು**. (ವಿಮೋಚನಾಕಾಂಡ 20:12) ಈ ಆಜ್ಞೆಯ ಪ್ರಕಾರವಾಗಿ ಒಬ್ಬ ಮಗನು ಮುಪ್ಪಿನ ಪ್ರಾಯದ ತಂದೆತಾಯಿಗಳಿಗೆ ಸಹಾಯ ಮಾಡಬೇಕಿತ್ತು ಆದರೆ ಯೆಹೂದ್ಯರೂ ಸಹ ಒಂದು ಮೌಖಿಕ ಸಂಪ್ರದಾಯವನ್ನು ಹೊಂದಿದ್ದರು, ಅದರ ಪ್ರಕಾರ ಅವರು ದೇವರಿಗೆ ಕಾಣಿಕೆ ಕೊಡುವ ಹರಕೆ ಮಾಡುತ್ತಿದ್ದರು. ಬಹುಶಃ ಸ್ವಲ್ಪ ಆಸ್ತಿ ಅಥವಾ ಹಣವನ್ನು ದೇವರಿಗೆ ಪ್ರತ್ಯೇಕಿಸಲ್ಪಟ್ಟ ಕಾಣಿಕೆಯಾಗಿ ಇಡುತ್ತಿದ್ದರು, ಅದಕ್ಕೆ ಕೊರ್ಬಾನ[48] ಅನ್ನುತ್ತಿದ್ದರು. ವಾಸ್ತವದಲ್ಲಿ ಅವರು ಜೀವಿಸಿರುವಾಗ ಆ ಆಸ್ತಿಯನ್ನು ಅಥವಾ ಹಣವನ್ನು ಕೊಟ್ಟು ಬಿಡಬೇಕಾಗಿರಲಿಲ್ಲ, ಅವರ ಮರಣಾನಂತರ ಅದು ದೇವರಿಗಾಗಿ ತೆಗೆದುಕೊಳ್ಳಲ್ಪಡಬಹುದಿತ್ತು. ಈ ರೀತಿಯಾಗಿ ಅವರು ತಮ್ಮ ಆಸ್ತಿ ಅಥವಾ ಹಣವನ್ನು ತಮ್ಮ ಸ್ವಂತ ಉಪಯೋಗಕ್ಕಾಗಿ ಇಟ್ಟುಕೊಳ್ಳಬೇಕಿತ್ತು ಮತ್ತು ಅವರ ವೃದ್ಧ ತಂದೆತಾಯಿಗಳಿಗೆ ಸಹಾಯ ಮಾಡಲು ಉಪಯೋಗಿಸದಂತೆ ತಡೆಯಲಾಗಿತ್ತು.

ಬೇರೆ ಮಾತುಗಳಲ್ಲಿ ಹೇಳುವದಾದರೆ ದೇವರಿಗೆ ಕಾಣಿಕೆಯಹರಕೆ ಮಾಡುವ ಸಂಪ್ರದಾಯವನ್ನು ಅವರ ತಂದೆತಾಯಿಗಳಿಗೆ ಸಹಾಯಮಾಡದಿ ರುವದಕ್ಕೆ ನೆಪವಾಗಿ ಉಪಯೋಗಿಸಿದರು. ಒಂದುವೇಳೆ ವೃದ್ಧತಂದೆ ಅಥವಾ ತಾಯಿ ತಮ್ಮ ಮಗನಿಂದ ಸಹಾಯದ ಅಗತ್ಯವಿರುವದಾದರೆ ಮಗನು "ಇಲ್ಲ, ನಾನು ನಿಮಗೆ ಸಹಾಯ ಮಾಡಲಾಗದು. ನಾನು ನನ್ನ ಹಣವನ್ನು ದೇವರಿಗೆ ಕೊಡಲು ಹರಕೆ ಮಾಡಿದ್ದೇನೆ " ಎಂದು ಹೇಳುವವನಾಗಿದ್ದನು. ಈ ರೀತಿಯಾಗಿ ತಮ್ಮ ಸಂಪ್ರದಾಯವನ್ನು ಅನುಸರಿಸುವದರ ಮೂಲಕ ಅವರು ತಂದೆತಾಯಿಗಳನ್ನು ಸನ್ಮಾನಿಸಬೇಕೆಂಬ ದೇವರ ಆಜ್ಞೆಗೆ ಅವಿಧೇಯರಾದರು. ಈ ಆಜ್ಞೆಯನ್ನು ಮುರಿಯುವದು ದೇವರ ದೃಷ್ಟಿಯಲ್ಲಿ ಗಂಭೀರ ಅಪರಾಧವಾಗಿತ್ತೆಂಬದನ್ನು ಯೆಹೂದ್ಯರು ಜ್ಞಾಪಕಲ್ಲಿಟ್ಟುಕೊಂಡಿರಬೇಕಿತ್ತು ತಂದೆಯನ್ನಾಗಲಿ ತಾಯಿಯನ್ನಾಗಲಿ ದೂಷಿಸುವವನಿಗೆ ಮರಣ ಶಿಕ್ಷೆಯಾಗಬೇಕು (ವಿಮೋಚನಾಕಾಂಡ 21: 17).

ಇದರ ಮುಲಕ ನಾವು ಒಂದು ಪ್ರಾಮುಖ್ಯ ಸೂತ್ರವನ್ನು ಕಲಿತುಕೊಳ್ಳಬಹುದು. ದೇವರ ವಾಕ್ಯದ ಒಂದು ಭಾಗಕ್ಕೆ ವಿಧೇಯರಾಗದಂತೆ ಇರಲು ಇನ್ನೊಂದು ಭಾಗವನ್ನು ಉಪಯೋಗಿಸಬಾರದು. ನಾವು ಬೈಬಲಿನ ಒಂದು ಭಾಗವನ್ನು ಇನ್ನೊಂದು ವಚನಕ್ಕೆ ತದ್ದಿರುದ್ಧವಾಗಿ ಉಪಯೋಗಿಸಬಾರದು. ದೇವರು ತನ್ನನ್ನೇ ತದ್ವಿರುದ್ಧವಾಗಿ ಮಾಡಿಕೊಳ್ಳುವದಿಲ್ಲ. ನಾವು ಇಷ್ಟ ಪಡುವ ಒಂದು ಭಾಗವನ್ನು ಮಾತ್ರವಲ್ಲದೆ ಬೈಬಲಿನ ಸಂಪೂರ್ಣ ಬೋಧನೆಗೆ ವಿಧೇಯರಾಗಬೇಕು. ದೇವರಿಗೆ ಕಾಣಿಕೆಗಳನ್ನು ಕೊಡುವದರ ಮೂಲಕ ನಮ್ಮ ತಂದೆತಾಯಿಗಳನ್ನು ಸನ್ಮಾನಿಸಬೇಕೆಂಬ ದೇವರ ಆಜ್ಞೆಯನ್ನು ನಾವು ಉಲ್ಲಂಘಿಸಬಾರದು.

**14-16** ಯೆಹೂದ್ಯರು "ಅಶುದ್ಧ" ಕೈಗಳೊಂದಿಗೆ ಊಟ ಮಾಡುವದರ ಕುರಿತು ಚಿಂತೆಗೊಳಗಾಗಿದ್ದರು. ಅಶುದ್ದ ಕೈಗಳಿಂದ ಊಟಮಾಡುವದರಿಂದ ಅವರ ಊಟವು ಅಶುದ್ಧವಾಗುತ್ತದೆ ಮತ್ತು ಅಶುದ್ಧ ಆಹಾರವನ್ನು ತಿನ್ನುವದರ ಮೂಲಕ ಅವರು ಅಶುದ್ಧರಾಗುತ್ತಾರೆಂದು ಹೆದರಿದರು. ಆದರೆ ಯೇಸು ಒಳಗೆ ಹೋಗುವಂತದ್ದು ಮನುಷ್ಯನನ್ನು ಅಶುದ್ಧಮಾಡುವದಿಲ್ಲ ಆದರೆ ಮನುಷ್ಯನೊಳಗಿಂದ ಹೊರಡುವವು ಗಳೇ ಆತನನ್ನು ಅಶುಧ್ಧ ಮಾಡುತ್ತವೆ ಎಂದು ಬೋಧಿಸಿದನು. ಅಂದರೆ ಮನುಷ್ಯನೊಳಗಿಂದ ಹೊರಡುವ ಆತನ ದುಷ್ಟ ಆಲೋಚನೆ ಮತ್ತು ಇಚ್ಛೆಗಳು ಮಾತುಗಳು ಹಾಗು ಕಾರ್ಯಗಳು ಆತನನ್ನು ಹೊಲೆಮಾಡುತ್ತವೆ (ವಚನ 20-23 ನೋಡಿರಿ). ನಮ್ಮ ಆಲೋಚನೆ, ಇಚ್ಛೆಗಳು, ಮತ್ತು ಕಾರ್ಯಗಳು ಅಶುದ್ಧವಾಗಿರುವದಾದರೆ ನಮ್ಮ ಹೃದಯಗಳು ಸಹ ಅಶುದ್ಧವಾಗಿರುತ್ತವೆ. ಈ ಸಂಗತಿಗಳೇನಿಜ–ವಾಗಿಯೂ ನಮ್ಮನ್ನು ಅಶುದ್ಧಗೊಳಿಸುತ್ತವೆ.

ಮತ್ತಾಯ 15:12-14ಕ್ಕ ನುಸಾರವಾಗಿ ಶಿಷ್ಯರು ಯೇಸುವಿನ ಬಳಿಗೆ ಬಂದು ಆತನು ಅಂತರ್ಯದ ಅಶುದ್ಧಗೊಳಿಸುವಿಕೆಯ ಕುರಿತು ಹೇಳಿದ ಬೋಧನೆಯನ್ನು ಕೇಳಿ ಫರಿಸಾಯರು ಬೇಸರಗೊಂಡರು ಎಂದು ಆತನಿಗೆ ಹೇಳಿದರು. ಯೇಸು ಉತ್ತರಿಸಿ ಪರಲೋಕದಲ್ಲಿರುವ ನನ್ನ ತಂದೆಯು ನಡದೆ ಇರುವಗಿಡಗಳೆಲ್ಲಾ ಬೇರಿನೊಂದಿಗೆ ಕಿತ್ತು ಹಾಕಲ್ಪಡುವವು (ಮತ್ತಾಯ 15: 13) ಎಂದು ಹೇಳಿದನು. ಫರಿಸಾಯರು ದೇವರು ನೆಡಲ್ಪಡದ ಗಿಡಗಳಾಗಿದ್ದರು. ಅವರು ಬೇಗನೆ ಕಿತ್ತು ಹಾಕಲ್ಪಡುವರು. ವಾಸ್ತವಿಕವಾಗಿ ನಾಲ್ವತ್ತು ವರ್ಷಗಳ ನಂತರ ಯೆರೂಸಲೇಮನ್ನು ರೋಮಾಯರು ನಾಶಮಾಡಿದರು

ಮತ್ತು ಯೆಹೂದ್ಯರು ಕೊಲ್ಲಲ್ಪಟ್ಟರು ಇಲ್ಲವೆ ಚದುರಿಸಲ್ಪಟ್ಟರು. ಯೇಸುವಿನ ಕಾಲದಲ್ಲಿದ್ದ ಫರಿಸಾಯರ ಹಾಗೆ ದೇವರಿಂದ ನೆಡಲ್ಪಡದವರು ಸಭೆಯಲ್ಲಿ ಯಾವಾಗಲೂ ಇದ್ದೇ ಇದ್ದಾರೆ. ಯೇಸು ಉತ್ತಮ ಬೀಜಗಳನ್ನು ಬಿತ್ತುತ್ತಿರುವಾಗ ದುಷ್ಟನಾದ ಸೈತಾನನು ಕೆಟ್ಟ ಬೀಜಗಳನ್ನು ಬಿತ್ತುವದರಲ್ಲಿ ನಿರತನಾಗಿದ್ದಾನೆ (ಮತ್ತಾಯ 13: 24-26 ನೋಡಿರಿ) ನಾವು ಅದರ ಫಲದಿಂದಲೇ ಒಳ್ಳೆಯ ಬೀಜ ಮತ್ತು ಕೆಟ್ಟ ಬೀಜ ಯಾವದೆಂದು ಗುರುತಿಸಬಹುದು (ಮತ್ತಾಯ 7:20) ಆದರೆ ದೇವರು ಹಣಜಿಗಳನ್ನು ಅಂದರೆ ಕೆಟ್ಟ ಬೀಜದ ಫಲವನ್ನು ಕಿತ್ತು ಹಾಕಿ ತನ್ನ ಆರಿಸಿಕೊಳ್ಳುವ ಸಮಯದಲ್ಲಿ ಅವು ಗಳನ್ನು ನಾಶ ಮಾಡುವನು (ಮತ್ತಾಯ 13:27-30)

ನಂತರ ಮತ್ತಾಯನ ದಾಖಲೆಯ ಪ್ರಕಾರವಾಗಿ, ಯೇಸು ತನ್ನ ಶಿಷ್ಯರಿಗೆ ಫರಿಸಾಯರ ಬಗ್ಗೆ ಚಿಂತಿಸಬೇಡಿರಿ ಎಂದು ಹೇಳಿದನು. "ಅವರ ಮಾತನ್ನು ಬಿಡಿರಿ, ತಾವೇ ಕುರುಡರು, ಮತ್ತೊಬ್ಬರಿಗೆ ದಾರಿ ತೋರಿಸುವದಕ್ಕೆ ಹೋಗುತ್ತಾರೆ, ಅವರಿಬ್ಬರೂ ಕುಣಿಯಲ್ಲಿ ಬೀಳುತ್ತಾರೆ" ಅಂದನು. (ಮತ್ತಾಯ 15:14). ಯೆಹೂದ್ಯರು ಆತ್ಮೀಕವಾಗಿ ಕುರುಡರಾಗಿದ್ದರು. ಮತ್ತು ಅವರ ನಾಯಕರು ಸಹ ಕುರುಡರಾಗಿದ್ದರು. ಅವರ ಫಲಿತವಾಗಿ ಅವರು ದಾರಿಯನ್ನು ಕಳೆದುಕೊಂಡು ದೇವರ ವಾಕ್ಯದಿಂದ ತಪ್ಪಿಹೋದರು ಮತ್ತು ಶೀಘ್ರ್ರವೇ ವಿನಾಶವು ಅವರನ್ನು ಆವರಿಸಿತು ಇತರರನ್ನು ಮೋಸಗೊಳಿಸಿ ಮಾರ್ಗತಪ್ಪಿಸುವಾತ ಸ್ವತಃ – ತಾವೇ ದಂಡನೆಯಿಂದ ತಪ್ಪಿಸಿಕೊಳ್ಳಲಾಗುವದಿಲ್ಲ.

**17-19** ಶಿಷ್ಯರು ಯೇಸುವಿನ ಬೋಧನೆಯನ್ನು ಅರ್ಥಮಾಡಿಕೊಳ್ಳಲು ನಿಧಾನವಾಗಿದ್ದರು ಯಾಕೆಂದರೆ ಯೆಹೂದ್ಯರಾದ ಅವರು ತಮ್ಮ ಯೌವ್ವನ ಪ್ರಾಯದಿಂದಲೂ ಕಲಿಸಲ್ಪಟ್ಟ ಎಲ್ಲಾ ಸಂಗತಿಯನ್ನು ಯೇಸು ಬುಡಮೇಲು ಮಾಡುತ್ತಿದ್ದನು. ಈಗ ಯೇಸು ಅವರಿಗೆ ತಾವು ತಮ್ಮ ಕೈಗಳನ್ನು ಮತ್ತು ಬಟ್ಟಲುಗಳನ್ನು ಧಾರ್ಮಿಕವಾಗಿ ಶುದ್ಧಮಾಡಿಕೊಳ್ಳುವ ಅವಶ್ಯವಿಲ್ಲವೆಂದು ಬೋಧಿಸುತ್ತಿದ್ದನು ಅಷ್ಟುಮಾತ್ರವಲ್ಲದೆ "ಆಹಾರ ವೆಲ್ಲವೂ ಶುದ್ಧವೇ" ಎಂದು ಪ್ರಕಟಿಸಿದನು. (ರೋಮ 14: 14 ನೋಡಿರಿ). ಇದು ಶಿಷ್ಯರಿಗೆ ಆಶ್ಚರ್ಯಕರವಾಗಿತ್ತು. ಯೆಹೂದ್ಯರು ತಾವು ಏನು ಊಟ ಮಾಡುತ್ತಾರೆಂಬುದರ ಬಗ್ಗೆ ಬಹಳ ಕಟ್ಟುನಿಟ್ಟಾಗಿದ್ದರು. ಕೆಲವನ್ನು ಶುದ್ಧ ಇನ್ನು ಕೆಲವು ವಿಷಯಗಳು ಅಶುದ್ಧವೆಂದು ಪರಿಗಣಿಸಲಾಗಿತ್ತು (ಯಾಜಕಕಾಂಡ 11:1-47, ಅ.ಕೃತ್ಯ 10:9-16). ಈಗ ಯೇಸು ಈ ನಿಯಮಗಳು ಇನ್ನೆಂದಿಗೂ ಅಗತ್ಯವಿಲ್ಲ ಎಂದು ಹೇಳುತ್ತಿದ್ದನು. ಆಹಾರವು ಒಬ್ಬನನ್ನು ಶುದ್ಧನನ್ನಾಗಲಿ ಅಥವಾ ಅಶುದ್ಧನನ್ನಾಗಲಿ ಮಾಡುವದಿಲ್ಲ. ಆಹಾರವು ಹೊಟ್ಟೆಯನ್ನು ಸೇರಿ ಬಹಿರ್ದೆಸೆಯ ಮೂಲಕ ಹೊರ ಬರುತ್ತದೆ. ಅದು ಹೃದಯದೊಳಗೆ ಹೋಗಲಿಲ್ಲ. ಯಾವ ಮನುಷ್ಯನು ಬಹಿರಂಗದ ನಿಯಮಗಳು ಮತ್ತು ಆಚಾರಗಳ ಮೂಲಕ ತನ್ನ ಹೃದಯವನ್ನು ಶುದ್ಧ ಮಾಡಿ ಕೊಳ್ಳಲು ಸಾಧ್ಯವಿಲ್ಲ.

**20-23** ಈ ವಚನಗಳಲ್ಲಿ ಯೇಸು ಮನುಷ್ಯನ ಹೃದಯದೊಳಗಿಂದ ಬಂದು ಆತನನ್ನು ಅಶುದ್ಧ ಮಾಡುವ ಸಂಗತಿಗಳ ಕೆಲವು ಉದಾಹರಣೆಗಳನ್ನು ಕೊಡುತ್ತಾನೆ (ರೋಮ 1:28-31, ಗಲಾತ್ಯ 5:19-21). ಈ ಎಲ್ಲಾ ಪಾಪಗಳು ಮೊದಲು ಮಾನವನ ಹೃದಯದಲ್ಲಿ ಕೆಟ್ಟ ಇಚ್ಛೆಗಳಾಗಿ ಏಳುತ್ತವೆ (ಯಾಕೋಬ 1:14-15).

## ಒಬ್ಬ ಸುರೋಪೊಯಿನಿಕ್ಯ ಸ್ತ್ರೀಯ ನಂಬಿಕೆ (7: 24-30)

(ಮತ್ತಾಯ 15: 21-28)

**24** ಯೇಸುವಿಗೆ ಒಂದು ದಿನದ ವಿಶ್ರಾಂತಿ ಬೇಕಾಗಿತ್ತು ಆತನು ತೂರ್ ಮತ್ತು ಸಿದೋನ ಪ್ರಾಂತಕ್ಕೆ ಹೋದನು (ಮಾರ್ಕ 3: 8) ಮತ್ತು ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಒಂದು ಮನೆಯೊಳಗೆ ಪ್ರವೇಶಿಸಿದನು.

**25-27** ಹೇಗೂ, ಒಬ್ಬ ಹೆಂಗಸು ಯೇಸು ಅಲ್ಲಿರುವದನ್ನು ತಿಳಿದು ಬಂದು ತನ್ನ ಮಗಳನ್ನು ಸ್ವಸ್ಥ ಮಾಡಬೇಕೆಂದು ಕೇಳಿಕೊಂಡಳು. ಆಕೆಯ ಮಗಳಿಗೆ ದೆವ್ವ ಹಿಡಿದಿತ್ತು. ಆ ಸ್ತ್ರೀಯು ಗ್ರೀಕಳಾಗಿದ್ದಳು[49] ಸುರೋಪೊಯಿನಿಕ್ಯದಲ್ಲಿ ಹುಟ್ಟಿದವಳಾಗಿದ್ದಳು, ಅಂದರೆ ಆದುನಿಕ ಸಿರಿಯಾದೇಶ[50]. ಆಸ್ಥಳದ ಜನರನ್ನು ಮೊದಲು ಕಾನಾನ್ಯರೆಂದು ಕರೆಯುತ್ತಿದ್ದರು (ಮತ್ತಾಯ 15:22) ಇವರು ಅನ್ಯಜನರಾಗಿದ್ದರು ಅಂದರೆ ಯೆಹೂದ್ಯೇತರು.

ಮತ್ತಾಯ 15:23-24ರ ಪ್ರಕಾರ ಮೊದಲು ಯೇಸು ಆಕೆಗೆ ಉತ್ತರಿಸಲಿಲ್ಲ. ದೇವರು ಯಾವಾಗಲೂ ನಮ್ಮ ವಿಜ್ಞಾಪನೆಗಳಿಗೆ ತಕ್ಷಣವೇ ಉತ್ತರಿಸುವದಿಲ್ಲ. ನಂತರ ಆತನು **"ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲಿನ ಮನೆತನದವರ ಬಳಿಗೆ ಹೊರತು ಮತ್ತಾರ ಬಳಿಗೂ ನಾನು ಕಳುಹಿಸಲ್ಪಟ್ಟವನಲ್ಲ"** ಅಂದನು, ಅಂದರೆ ಯೆಹೂದ್ಯರ ಬಳಿಗೆ.

ಯೆಹೂದ್ಯರಿಗೆ ರಕ್ಷಣೆಯನ್ನುಂಟು ಮಾಡಲು ಯೇಸು ತಂದೆಯಿಂದ ಕಳುಹಿಸಲ್ಪಟ್ಟವನಾಗಿದ್ದನು. ಪ್ರಾರಂಭದಲ್ಲಿ ದೇವರು ಯೆಹೂದ್ಯ ಜನರಾದ ಇಸ್ರಾಯೇಲಿನ ವಿಶೇಷ ಜನಾಂಗಕ್ಕೆ ತಂದೆಯನ್ನಾಗಿ ಅಬ್ರಹಾಮನನ್ನು ಆರಿಸಿಕೊಂಡಿದ್ದನು (ಆದಿಕಾಂಡ 12: 2, 17: 3-7) ಬಳಿಕ ಮೋಶೆಯ ಕಾಲದಲ್ಲಿ ದೇವರು ಯೆಹೂದ್ಯರಿಗೆ ಹೀಗಂದನು — ಹೀಗಿರಲಾಗಿ ನೀವು ನನ್ನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಮಾಡುವ ನಿಬಂಧನೆಯನ್ನು ಅನುಸರಿಸಿ ನೀವು ಎಲ್ಲಾ ಜನಾಂಗಗಳಲ್ಲಿ ನನಗೆ ಸ್ವಕೀಯ ಜನರಾಗುವಿರಿ (ವಿಮೋಚನಕಾಂಡ 19 5-6). ಅನೇಕ ವೇಳೆ ದೇವರು ತನ್ನ ಹಳೆ ಒಡಂಬಡಿಕೆಯ ಪ್ರವಾದಿಗಳ ಮುಖಾಂತರ ತನ್ನ ಜನರಾದ ಇಸ್ರಾಯೇಲನ್ನು ರಕ್ಷಿಸಲು ಒಬ್ಬ ರಕ್ಷಕನು ಬರುವನೆಂದು ವಾಗ್ದಾನ ಮಾಡಿದನು (ಮತ್ತಾಯ 1:21, ಲೂಕ 1: 68-70).

ಆ ರಕ್ಷಕನು ಯೇಸುಕ್ರಿಸ್ತನು, ಆತನು ಸ್ವತಃ ಅಬ್ರಹಾಮ ಮತ್ತು ದಾವಿದ ವಂಶದಿಂದ ಬಂದ ಯೆಹೂದ್ಯನಾಗಿದ್ದನು (ಮತ್ತಾಯ 1:15- 22). ಅದುದರಿಂದಲೇ ಕ್ರಿಸ್ತನು ಮೊದಲು ಯೆಹೂದ್ಯರ ಬಳಿಗೆ ಕಳುಹಿಸಲ್ಪಟ್ಟನು ಪ್ರಾರಂಬದಲ್ಲಿ ಆತನ ಕೆಲಸವು ಯೆಹೂದ್ಯರ ಮದ್ಯದಲ್ಲಿ ಮಾತ್ರವಾಗಿತ್ತು.

ಆದರೆ ಈ ಪ್ರಾಮುಖ್ಯವಾದ ಕತೆಯಲ್ಲಿ ಒಬ್ಬ ಯೆಹೂದ್ಯಳಲ್ಲಿದ್ದ ಸ್ತ್ರೀಯು ತನ್ನ ಮಗಳನ್ನು ಸ್ವಸ್ಥ ಮಾಡುವಂತೆ ಯೇಸುವಿಗೆ ಕೇಳಿಕೊಳ್ಳುವದನ್ನು ನಾವು ನೋಡುತ್ತೇವೆ. ಮೊದಲು ಯೇಸು ಆಕೆಗೆ ದೇವರು ತನ್ನನ್ನು ಯೆಹೂದ್ಯರ ಬಳಿಗೆ ಕಳುಹಿಸಿದ್ದಾನೆ. ಹೊರತು ಅನ್ಯ ಜನರ ಬಳಿಗೆ ಅಲ್ಲ ಎಂದು ಹೇಳಿದನು. ಆತನು ಆಕೆಯ ನಂಬಿಕೆಯನ್ನು ಪರೀಕ್ಷಿಸಲು ಹೀಗೆ ಹೇಳಿದನು. ಆತನು ಆಕೆಗೆ "ಮಕ್ಕಳಿಗೆ (ಯೆಹೂದ್ಯರಿಗೆ) ಮೊದಲು ತೃಪ್ತಿಯಾಗಲಿ ಮಕ್ಕಳು ತಿನ್ನುವ ರೊಟ್ಟಿಯನ್ನು ತಕ್ಕೊಂಡು ನಾಯಿ ಮರಿಗಳಿಗೆ (ಅನ್ಯಜನರಿಗೆ)[51] ಹಾಕುವದು ಸರಿಯಲ್ಲ" ಎಂದು ಹೇಳಿದನು. ಯೇಸುವಿನ ಅರ್ಥವೇನೆಂದರೆ ಮನೆಯಲ್ಲಿ ಮಕ್ಕಳು ಮೊದಲು ಊಟಮಾಡುತ್ತಾರೆ ನಂತರ ಪ್ರಾಣಿಗಳು ಅಂದರೆ ಯೆಹೂದ್ಯರಿಗೆ ಮೊದಲು ರಕ್ಷಣೆಯ ಸುವಾರ್ತೆಯನ್ನು ಕೇಳುವ ಅವಕಾಶ ಹೊಂದಬೇಕು. ಆದರ ನಂತರ ಮಾತ್ರವೇ ಸುವಾರ್ತೆಯು ಅನ್ಯರಿಗೆ ಸಾರಲ್ಪಡುವದು.

ದೇವರು ತಾನು ಯೆಹೂದ್ಯರನ್ನು ಮಾತ್ರವೇ ಆಶೀರ್ವದಿಸುತ್ತೇನೆಂದು ಎಂದಿಗೂ ಹೇಳಲಿಲ್ಲ. ಆದಿಯಲ್ಲಿ ದೇವರು ಅಬ್ರಹಾಮನಿಗೆ..ನಿನ್ನ ಮೂಲಕವಾಗಿ ಎಲ್ಲಾ ಜನಾಂಗಗಳಿಗೂ ಆಶಿರ್ವಾದವು ಂಟಾಗುವದು ಎಂದು ಹೇಳಿದನು (ಆದಿಕಾಂಡ 12: 3) ಮತ್ತು ಇದು ನಿಜವಾಗಿಯೂ ನೆರವೇರಿರುತ್ತದೆ. ಅಬ್ರಹಾಮನ ಸಂತತಿಯವನಾದ ಕ್ರಿಸ್ತನ ಮೂಲಕವಾಗಿ ಭೂಮಿಯ ಎಲ್ಲಾ ಜನಾಂಗಗಳು ಆಶಿರ್ವಧಿಸಲ್ಪಟ್ಟಿವೆ (ಎಪೆಸ್ 2:1-13, 17-19 ಮತ್ತು ವ್ಯಾಖ್ಯಾನ ನೋಡಿರಿ) ಕ್ರಿಸ್ತನು ಇಸ್ರಾಯೇಲರಿಗೆ ಕೀರ್ತಿಯ ಬೆಳಕು ಮಾತ್ರವೇ ಅಲ್ಲ, ಆತನು ಅನ್ಯದೇಶದವರಿಗೆ ಜ್ಞಾನೋದಯದ ಬೆಳಕು ಆಗಿದ್ದಾನೆ (ಲೂಕ 2: 32)

**28** ಆ ಸ್ತ್ರೀಯು ಪ್ರತ್ಯುತ್ತರ ನೀಡಿ, "ಆದರೆ ಅನ್ಯ ಜನರಾದ, ನಾಯಿಗಳಾದ "ನಾವು ಮಕ್ಕಳ ಕೈಯಿಂದ ಬೀಳುವ ರೊಟ್ಟಿ ತುಂಡುಗಳನ್ನು ತಿನ್ನಲು ಸಂತೋಷಿಸುತ್ತೇವೆ. ಸ್ತ್ರೀಯು ಚಾಣಾಕ್ಷಳಾಗಿದ್ದಳು. ನಾಯಿಗಳು ಇನ್ನೂ ಮಕ್ಕಳು ತಿನ್ನುತ್ತಿರುವಾಗಲೇ ರೊಟ್ಟಿತುಂಡುಗಳನ್ನು ತಿನ್ನುತ್ತವೆ ಅವು ಅನಂತರ ಆಹಾರಕ್ಕಾಗಿ ಕಾಯಬೇಕಾಗಿಲ್ಲ. ಯೇಸು ಅವಳಿಗೆ ಒಂದು ತುಂಡು ಮಾತ್ರಕೊಡುವದಾದರೆ ಅದು ಅವಳ ಮಗಳನ್ನು ಸ್ವಸ್ಥ ಮಾಡಲು ಸಾಕಾಗುತ್ತದೆ. ಈ ಸ್ತ್ರೀಯು ಯೇಸುವಿನಲ್ಲಿ ಆತನ ಸ್ವಂತ ಶಿಷ್ಯರು ಆತನಲ್ಲಿಟ್ಟನಂಬಿಕೆಗಿಂತಲೂ ಹೆಚ್ಚು ನಂಬಿಕೆಯನ್ನು ಹೊಂದಿದ್ದಳು. ಯೇಸು ಯಾರೆಂಬುದನ್ನು ಅವಳು ಅರ್ಥಮಾಡಿಕೊಂಡಳು. ಯೇಸುವಿನಿಂದ ದೊರೆಯುವ ತುಂಡುಗಳು ಸಹ ಜೀವದ ರೊಟ್ಟಿಯಾಗಿವೆ.

**29-30** ಯೇಸು ಆಕೆಗೆ "ಅಮ್ಮ ನಿನ್ನ ನಂಬಿಕೆ ದೊಡ್ಡದು ಅಂದನು" (ಮತ್ತಾಯ 15:28). ಮತ್ತು ಯೇಸು ಆಕೆಯ ಮಗಳನ್ನು ತಕ್ಷಣವೇ ಗುಣಪಡಿಸಿದನು. ಆತನು ಆಕೆಯ ಮಗಳಿದ್ದ ಮನೆಗೆ ಸಹ ಹೋಗಲೂ ಇಲ್ಲ ಆದರೆ ದೂರದಿಂದಲೇ ಆಕೆಯನ್ನು ಗುಣಪಡಿಸಿದನು. ಇದು ಕ್ರಿಸ್ತನು ಅನ್ಯ ಜನರಲ್ಲಿ ಮಾಡಿದ ಪ್ರಥಮ ಕಾರ್ಯವಾಗಿದೆ. ಅನ್ಯ ಜನರು ಕ್ರಿಸ್ತನನ್ನು ತಿರಸ್ಕರಿಸಿ ಆತನನ್ನು ವಿರೋಧಿಸುತ್ತಿದ್ದರು ಆದರೆ ಈ ಅನ್ಯಮತದವಳಾದ ಸ್ತ್ರೀಯು ನಿಜವಾಗಿ ನಂಬಿಕೆಯನ್ನು ತೋರಿಸಿದ್ದಳು. ಮತ್ತು ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವರು ಅಸಾದ್ಯ (ಇಬ್ರಿಯ 11:6).

## ಮೂಕಮತ್ತು ಕಿವು ಡ ವ್ಯಕ್ತಿಯನ್ನು ಸ್ವಸ್ಥ

ಮಾಡಿದ್ದು (7: 31-37)

**31-37** ಅನಂತರ ಯೇಸು ಆತನು ಮೊದಲು ಅನೇಕ ದೆವ್ವಗಳಿಂದ ಪೀಡಿತನಾದ ವ್ಯಕ್ತಿಯನ್ನು ಸ್ವಸ್ಥ ಮಾಡಿದ ದೆಕಪೊಲಿಯ ಪ್ರಾಂತ್ಯಕ್ಕೆ (ಹತ್ತು ಪಟ್ಟಣಗಳು) ತಿರಿಗಿ ಬಂದನು (ಮಾರ್ಕ 5:20). ಅಲ್ಲಿ ಆತನು ತೊದಲು ಮಾತನಾಡುವ ಒಬ್ಬ ಕಿವು ಡನನ್ನು ಸ್ವಸ್ಥಮಾಡಿದನು. ಯೇಸು ವ್ಯಕ್ತಿಯನ್ನು ಗುಣಪಡಿಸಲು ತನ್ನ ಮಾತನ್ನು ಉಪಯೋಗಿಸುವದರ ಜೊತೆಗೆ ತನ್ನ ಸ್ವಂತ ಜೊಲ್ಲನ್ನು ಸಹ ಉಪಯೋಗಿಸಿದನು (ಮಾರ್ಕ 8:23, ಯೋಹಾನ 9:6 ನೋಡಿರಿ) ಬಳಿಕ ಯೇಸು ಆವ್ಯಕ್ತಿಗೆ ಯಾರಿಗೂ ಹೇಳಬಾರದೆಂದು ಅಪ್ಪಣೆ ಮಾಡಿದನು (ಮಾರ್ಕ 5:43 ಮತ್ತು ವ್ಯಾಖ್ಯಾನ ನೋಡಿರಿ) ಆದರೆ ಆತನು ವಿಧೇಯನಾಗಲಿಲ್ಲ.

ಜನರು ಮುಖ್ಯವಾಗಿ ತಾವು ಗಳು ಮತ್ತು ಇತರರು ಮಾತನಾಡುವದನ್ನು ಕೇಳಿಸಿಕೊಳ್ಳುವದರಿಂದ ಮಾತಾಡಲು ಕಲಿತುಕೊಳ್ಳುತ್ತಾರೆ.ಆದುದರಿಂದ ಕಿವು ಡರಾಗಿ ಹುಟ್ಟಿದವರು ಸರಿಯಾಗಿ ಮಾತನಾಡಲು ಆಗದು. ಆದರೆ ಅವರ ಕಿವಿಗಳು ತೆರೆಯಲ್ಪಡುವದಾದರೆ ಅವರು ಮಾತನಾಡಲು ಕಲಿಯುವರು. ಆತ್ಮೀಕ ವಿಷಯಗಳಲ್ಲಿಯೂ ಇದು ಅಷ್ಟೇ ಸತ್ಯವಾಗಿದೆ. ನಮ್ಮ ಕಿವಿಗಳು ದೇವರ ಸ್ವರವನ್ನು ಕೇಳಲು ತೆರೆಯಲ್ಪಡುವಾಗ ನಮ್ಮ ನಾಲಿಗೆಯು ಆತನನ್ನು ಸ್ತುತಿಸಲು ಮತ್ತು ಆತನಿಗೆ ಸಾಕ್ಷಿನೀಡಲು ಸಡಿಲಿಸಲ್ಪಡುವದು. ಮತ್ತಾಯ 15: 29-31 ರ ಪ್ರಕಾರವಾಗಿ ಇದೇ ಸಂದರ್ಭದಲ್ಲಿ ಯೇಸು ಇನ್ನೂ ಅನೇಕ ಕುಂಟರು, ಕುರುಡರು, ಕಾಲಿಲ್ಲದವರು ಮತ್ತು ಮೂಕರನ್ನು ಸ್ವಸ್ಥಮಾಡಿದನು. ಮೂಕರಾಗಿದ್ದವರು ಮಾತಾಡಿದ್ದನ್ನು ಕೈಕಾಲಿಲ್ಲದವರು ಸ್ವಸ್ಥವಾದದ್ದನ್ನು ಕುಂಟರಿಗೆ ಕಾಲು ಬಂದದ್ದನ್ನು ಕುರುಡರಿಗೆ ಕಣ್ಣು ಬಂದದ್ದನ್ನು ಜನರು ಕಂಡು ಆಶ್ಚರ್ಯಪಟ್ಟರು (ಮತ್ತಾಯ 15: 31) ನಿಜವಾಗಿಯೂ ಯೇಶಾಯನ ಪ್ರವಾದನೆಯು ಯೇಸುವಿನ ಮುಖಾಂತರ ನೆರವೇರಿರುತ್ತದೆಃ ಆಗ ಕುರುಡರ ಕಣ್ಣು ಕಾಣುವದು, ಕಿವು ಡರ ಕಿವಿ ಕೇಳುವದು ಕುಂಟನು ಜಿಂಕೆಯಂತೆ ಹಾರುವದು, ಮೂಕನ ನಾಲಿಗೆಯು ಹರ್ಷಧ್ವನಿಗೈಯುವದು. (ಯೇಶಾಯ 35:5-6).

# ಅಧ್ಯಾಯ - 8

## ಯೇಸು ನಾಲ್ಕುಸಾವಿರ ಜನರಿಗೆ ಊಟಮಾಡಿಸಿದ್ದು (8:1-10)

(ಮತ್ತಾಯ 15:32-39)

**1-10** ಮಾರ್ಕನು ಇಲ್ಲಿ ಯೇಸು ಇನ್ನೊಂದು ಸಂದರ್ಭದಲ್ಲಿ ಎರಡನೆಯ ಸಾರಿ ಜನಸಮೂಹಕ್ಕೆ ಊಟ ಮಾಡಿಸಿದ್ದನ್ನು ವಿವರಿಸುತ್ತಾನೆ. ಮೊದಲನೆಯ ಸಂದರ್ಭದಂತೆಯೇ ಈಗಲು ಯೇಸು ಜನರ ಮೇಲೆ ಹೊಂದಿದ ಕರುಣೆಯ ಕಾರಣದಿಂದ ಅವರಿಗೆ ಊಟಮಾಡಿಸಿದನು (ಮಾರ್ಕ 6:34). ಈ ಸಾರಿ ಅಲ್ಲಿ ಏಳು ಸಾವಿರ ಗಂಡಸರು, ಏಳು ರೊಟ್ಟಿಗಳು ಮತ್ತು ಎಲ್ಲರೂ ತಿಂದು ಮಿಕ್ಕಿದ ತುಂಡುಗಳನ್ನು ಸೇರಿಸಲು ಏಳು ಹೆಡಿಗೆಗಳಿದ್ದವು (ಮಾರ್ಕ 6:32-44 ಮತ್ತು ವ್ಯಾಖ್ಯಾನ ನೋಡಿರಿ). [52] ಆತನು ಜನಸಮೂಹಕ್ಕೆ ಊಟಮಾಡಿಸಿದ ನಂತರ ದಲ್ಮನೂಥ ಸೀಮೆಗೆ ಹೋದನು. ಮತ್ತಾಯ 15:39 ರ ಪ್ರಕಾರವಾಗಿ ಆತನು ಮಗದಾನ ಸೀಮೆಗೆ ಹೋದನು. ಈ ಎರಡೂ ಸ್ಥಳಗಳು ಎಲ್ಲಿರುತ್ತವೆಂಬದು ತಿಳಿದು ಬಂದಿಲ್ಲ. ಅಥವಾ ಬಹುಶ ಮತ್ತಾಯ ಮತ್ತು ಮಾರ್ಕನು ಒಂದೇ ಸ್ಥಳದ ಎರಡು ಬೇರೆ ಬೇರೆ ಹೆಸರುಗಳನ್ನು ಸೂಚಿಸುತ್ತಿರಬಹುದು.

ಈ ಜನರ ಗುಂಪು ಮೂರು ದಿನಗಳಿಂದ ಏನನ್ನು ತಿನ್ನದೆ ಯೇಸುವಿನೊಂದಿಗಿತ್ತು (ವಚನ 2) ಅವರು ದೇವರ ವಾಕ್ಯಗಳನ್ನು ಕೇಳಲು ಬಂದಿದ್ದರು. ಅವರು ತಮ್ಮ ಆತ್ಮಗಳಿಗೆ ಆತ್ಮೀಕ ಆಹಾರವನ್ನು ಪಡೆದು ಕೊಳ್ಳಲು ಬಂದಿದ್ದರು. ಆದರೆ ದೇವರು ಅವರ ದೇಹಗಳಿಗೆ ಕೂಡಾ ಆಹಾರ ಕೊಟ್ಟನು.

ಇಲ್ಲಿ ನಾವು ಒಂದು ಅತಿ ಪ್ರಾಮುಖ್ಯ ಸೂತ್ರವನ್ನು ಕಾಣಬಹುದು. ನಾವು ಮೊಟ್ಟಮೊದಲು ದೇವರ ವಾಕ್ಯ ಮತ್ತು ಆತನ ನೀತಿಯನ್ನು ಹುಡುಕುವದಾದರೆ ನಮ್ಮ ದೈಹೀಕ ಅಗತ್ಯತೆಗಳನ್ನೆಲ್ಲಾ ಆತನೇ ನೋಡಿಕೊಳ್ಳುವನು (ಮತ್ತಾಯ 6:31-33 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ನಾವು ಕೇವಲ ಯಾವದಾದರೂ ಶಾರೀರಿಕ ಅಥವಾ ಭೌತಿಕ ಲಾಭಕ್ಕಾಗಿ – ಆಹಾರ, ವಿದ್ಯಾರ್ಥಿ ವೇತನ, ಒಂದು ಉದ್ಯೋಗ–ಮಾತ್ರವೇ ಕ್ರಿಸ್ತನನ್ನು ಹಿಂಬಾಲಿಸುವದಾದರೆ ನಾವು ದೇವರಿಂದ ಏನನ್ನೂ ಪಡೆದುಕೊಳ್ಳುವದಿಲ್ಲ. ನಿಜವಾಗಿಯೂ, ಒಬ್ಬ ಮನುಷ್ಯನು ಸಭೆಯ ಕೂಟ ಅಥವಾ ಬೈಬಲ್ ಅಧ್ಯಯನಕ್ಕಾಗಿ ಕೇವಲ ಕೆಲವೊಂದು ಭೌತಿಕ ಲಾಭಗಳಿಗಾಗಿ ಮಾತ್ರವೇ ಯಥಾರ್ಥವಲ್ಲದ ಹೃದಯದಿಂದ ಬರುವದಾದರೆ ದೇವರ ದೃಷ್ಟಿಯಲ್ಲಿ ಆತನ ಅಪರಾಧವು ಹೆಚ್ಚುವದು. ಯಾಕೆಂದರೆ ದೇವರ ಕುರಿತು ಅವರ ತಿಳುವಳಿಕೆಯು ಹೆಚ್ಚಾದಂತೆ ದೇವರಿಗೆ ವಿಧೇಯನಾಗಬೇಕಾದ ಆತನ ಜವಾಬ್ದಾರಿಯು ಸಹ ಹೆಚ್ಚಾಗುತ್ತದೆ – ಹಾಗೆ ಮಾಡದಿರುವದಕ್ಕಾಗಿ ಆತನಲ್ಲಿನ ಅಪರಾಧಭಾವದೊಂದಿಗೆ ಒಟ್ಟಾಗಿ ಹೆಚ್ಚಾಗುತ್ತದೆ (ಲೂಕ 12:47-48).

## ಫರಿಸಾಯರು ಒಂದು ಸೂಚಕ ಕಾರ್ಯಕ್ಕಾಗಿ ಕೇಳುತ್ತಾರೆ (8: 11-13)

(ಮತ್ತಾಯ 16:1-4, ಲೂಕ 12:54-56)

**11-13** ಫರಿಸಾಯರು ಯೇಸುವನ್ನು ಪರೀಕ್ಷಿಸಬೇಕೆಂದು ಒಂದು ಸೂಚಕ ಕಾರ್ಯವನ್ನು ತೋರಿಸಿಕೊಡಬೇಕೆಂದು ಆತನನ್ನು ಕೇಳಿದರು. ಯೇಸು ರಕ್ಷಕನಾದ ಮೆಸ್ಸಿಯನೋ ಎಂದು ಕಂಡು ಕೊಳ್ಳುವದಕ್ಕಾಗಿ ಅವರು ಪ್ರಯತ್ನಿಸುತ್ತಿರಲಿಲ್ಲ. ಆತನು ಮೆಸ್ಸಿಯನೇ ಎಂದು ಅವರು ಈಗಾಗಲೇ ತೀರ್ಮಾನಿಸಿದ್ದರು. ಸೂಚಕಕಾರ್ಯ ತೋರಿಸಬೇಕೆಂಬ ಅವರ ಮನವಿಯು ಯತಾರ್ಥವಾಗಿರಲಿಲ್ಲ. ಯೇಸು ಮೆಸ್ಸಿಯನಲ್ಲವೆಂದು ನಿರೂಪಿಸುವದೇ ಅವರ ಬಯಕೆಯಾಗಿತ್ತು. ಅವರು ಎದುರು ನೋಡಿದ ಸೂಚಕ ಕಾರ್ಯವು ಯೇಸುವು ದೇವಕುಮಾರನಾದ ಮೆಸ್ಸೀಯನೆಂಬದಕ್ಕೆ ಒಂದು ಪರಿಪೂರ್ಣ ಆಧಾರದ ರೀತಿಯದಾಗಿತ್ತು. ಅವರು ಆಕಾಶದಲ್ಲಿ ಒಂದು ಸೂಚಕಕಾರ್ಯವನ್ನು ಬಯಸಿದ್ದರು. ಅವರು ಕ್ರಿಸ್ತನು ಮಾಡಿದ ಅಧ್ಭುತಗಳನ್ನು ನೋಡಿದ್ದರು ಆದರೆ ಆತನು ದೇವಕುಮಾರನೆಂಬದಕ್ಕೆ ಇವು ಗಳನ್ನು ಸಾಕಷ್ಟು ಆಧಾರವಾಗಿ ಪರಿಗಣಿಸಲಿಲ್ಲ. ಅಂತೂ ಯೆಹೂದ್ಯರು ಈಗಾಗಲೇ ಯೇಸು ಸೈತಾನನ ಶಕ್ತಿಯಮೂಲಕ ಅದ್ಭುತಗಳನ್ನು ಮಾಡಿದನೆಂದು ಹೇಳಿದ್ದರು. (ಮಾರ್ಕ 3: 22). ಆದ್ದರಿಂದ ಫರಿಸಾಯರು ಅಪೇಕ್ಷಿಸಿದ ಸೂಚಕಕಾರ್ಯವು ಯೇಸುವಿನ ಬಲವು ದೇವರಿಂದಲೇ ಬಂದಿತು ಹೊರತು ಸೈತಾನನಿಂದಲ್ಲ ಎಂಬುದಕ್ಕೆ ಒಂದು ವಿಶೇಷ ಆಧಾರವಾಗಿತ್ತು ಯೇಸು ಫರಿಸಾಯರಿಗೆ ಉತ್ತರಿಸಿ.."ಈ ಸಂತತಿಗೆ ಸೂಚಕಕಾರ್ಯವು ಸಿಕ್ಕುವದೇ ಇಲ್ಲ" ಅಂದನು– ಮತ್ತಾಯ 16:4 ರ ಪ್ರಕಾರವಾಗಿ ಯೇಸು ಯೋನನಲ್ಲಿ ಆದ ಸೂಚಕಕಾರ್ಯವೇ ಹೊರತು ಬೇರ ಯಾವದೂ ಇದಕ್ಕೆ ಸಿಕ್ಕುವದಿಲ್ಲ ಎಂದು ಹೇಳಿದನು. ಯೋನನು ಒಬ್ಬ ಪ್ರವಾದಿಯಾಗಿದ್ದು ಒಂದು ದೊಡ್ಡಮೀನಿನಿಂದ ನುಂಗಲ್ಪಟ್ಟು ಅದರ ಹೊಟ್ಟೆಯೊಳಗೆ ಮೂರು ದಿನಗಳನ್ನು ಕಳೆದನು (ಯೋನ 1:17). ಅದೇ ರೀತಿಯಲ್ಲಿ ಕ್ರಿಸ್ತನು ಕೊಲ್ಲಲ್ಪಟ್ಟು ಮೂರು ದಿನಗಳ ವರೆಗೆ ಭೂಮಿಯೊಳಗಿದ್ದು ನಂತರ ಸತ್ತವರೊಳಗಿಂದ ಎದ್ದುಬರುವನು. ಆತನು ನಿಜವಾಗಿಯೂ ದೇವರ ಮಗನೆಂಬುದಕ್ಕೆ ಅದು ಗುರುತಾಗಿರುವದು (ಮತ್ತಾಯ 12:38-41 ಮತ್ತು ವ್ಯಾಖ್ಯಾನ ನೋಡಿರಿ). ಆದಾಗ್ಯು ಯೆಹೂದ್ಯರು ಕೊನೆಯಲ್ಲಿ ಆ ಸೂಚಕಕಾರ್ಯವನ್ನೂ ಅಂಗೀಕರಿಸಲಿಲ್ಲ. ಕ್ರಿಸ್ತನು ಪು ನರುತ್ಥಾನಗೊಂಡ ನಂತರ ಅವರು ಹೇಳಿದ್ದೇನೆಂದರೆ ಆತನ ಶಿಷ್ಯರು ರಾತ್ರಿಯಲ್ಲಿ ಬಂದು ಆತನ ದೇಹವನ್ನು ಕದ್ದಿದ್ದಾರೆ ಎಂಬದಾಗಿ (ಮತ್ತಾಯ 28:12-13) ಯೇಸು ತಾನು ದೇವಕುಮಾರನೆಂಬುದಕ್ಕೆ ಯಾವ ಸೂಚಕಕಾರ್ಯವನ್ನು ಅಂದರೆ ಪರಿಪೂರ್ಣ ಆದಾರವನ್ನು ನೀಡಲು ಇಚ್ಚಿಸಲಿಲ್ಲ

ಯಾಕೆಂದರೆ ಆತನು ನೀಡಿದ್ದರೂ ಸಹ ಅಲ್ಲಿ ಇನ್ನೆಂದಿಗೂ ನಂಬಿಕೆಗೆ ಸ್ಥಳವಿರುತ್ತಿರಲಿಲ್ಲ. ನಮ್ಮ ನಂಬಿಕೆಯ ವಿಷಯವು ನಮ್ಮ ಪರಿಮಿತ ಜ್ಞಾನವನ್ನು ಮೀರಿದ ಸಂಗತಿಯವಾಗಿರುವಾಗ ಮಾತ್ರವೇ ನಂಬಿಕೆ ಅಸ್ತಿತ್ವದಲ್ಲಿರಬಲ್ಲದು.

ಯಾರು ನಂಬಿಕೆ ಹೊಂದಿದ್ದಾರೆ ಮತ್ತು ಯಾರು ನಂಬಿಕೆ ಹೊಂದಿಲ್ಲ ಎಂಬದನ್ನು ಯೇಸು ಕಂಡುಕೊಳ್ಳಲು ಬಯಸಿದನು. ಆತನು ಒಂದು ಪರಿಪೂರ್ಣ ಸೂಚಕ ಕಾರ್ಯವನ್ನು ನೀಡಿದ್ದಾದರೆ ಪ್ರತಿಯೊಬ್ಬನು ಆತನನ್ನು ಹಿಂಬಾಲಿಸಿರುತ್ತಿದ್ದನು. ಆದರೆ ಯಾರು ನಂಬಿಕೆಯುಳ್ಳವರಾಗಿದ್ದಾರೋ ಅವರು ಮಾತ್ರವೇ ತನ್ನ ಹಿಂಬಾಲಕರಾಗಿರಬೇಕೆಂದು ಆತನು ಇಚ್ಚಿಸಿದನು. ಒಂದು ಸೂಚಕ ಕಾರ್ಯವನ್ನೂ ಅಪೇಕ್ಷಿಸುವದೆಂದರೆ ನಂಬದಿರುವದೇ ಆಗಿದೆ. ವಿಶ್ವಾಸವಿಲ್ಲದವರಿಗೆ ಒಂದು ಸೂಚಕಕಾರ್ಯವನ್ನು ತೋರಿಸಲು ಯೇಸು ಇಷ್ಟಪಡಲಿಲ್ಲ.

ಮತ್ತಾಯ 16:2-3 ಕ್ಕನುಸಾರವಾಗಿ ಯೇಸು ಫರಿಸಾಯರಿಗೆ ಅವರು ಆಕಾಶದ ಕಡೆಗೆ ನೋಡುವದರ ಮೂಲಕ ಅವರು ಹವಾಮಾನವು ಹೇಗಿರಬಹುದೆಂದು ಮುಂತಿಳಿಸಬಲ್ಲವರೆಂಬದನ್ನು ಜ್ಞಾಪಿಸುತ್ತಾನೆ. ಸಾಯಂಕಾಲ ಕೆಂಪು ಆಕಾಶ ವಿರುವದು ಹವಾಮಾನವು ಸ್ವಲ್ಪ ಉತ್ತಮವಾಗಿರುತ್ತದೆಂಬದಕ್ಕೆ ಗುರುತಾಗಿರುವದು. ಮುಂಜಾನೆಯಲ್ಲಿ ಆಕಾಶವು ಕೆಂಪಾಗಿದ್ದರೆ ಅದು ಕೆಟ್ಟ ಹವಾಮಾನಕ್ಕೆ ಗುರುತಾಗಿತ್ತು. ಫರಿಸಾಯರು ಮುಂದಾಗುವ ಹವಾಮಾನದ ಬಗ್ಗೆ ಮುಂದಾಗಿ ತಿಳಿಯಲು ಶಕ್ತರಾಗಿರುವಾಗ ದೇವರ ರಾಜ್ಯದ ಬರೋಣದ ಕುರಿತ ಆತ್ಮೀಕ ಗುರುತುಗಳನ್ನೇಕೆ ಅವರಿಗೆ ಗ್ರಹಿಸಲಾಗದು? (ಲೂಕ 12: 54-56 ನೋಡಿರಿ).

ಮುಕ್ತವಾದ ನಂಬಿಕೆಯುಳ್ಳ ಹೃದಯಗಳುಳ್ಳವರಿಗೆ ಕ್ರಿಸ್ತನು ಈಗಾಗಲೇ ತಾನು ದೇವಕುಮಾರನೆಂಬುವದಕ್ಕೆ ಸಾಕಷ್ಟು "ಸೂಚಕ ಕಾರ್ಯಗಳನ್ನು" ತೋರಿಸಿದ್ದನು. ಆದರೆ ಯೇಸು ಎಷ್ಟೇ ಸೂಚಕ ಕಾರ್ಯಗಳನ್ನು ತೋರಿಸಿದರೂ ಸಹ ಫರಿಸಾಯರು ನಂಬಲಿಲ್ಲ (ಯೋಹಾನ 10:24-25).

## ಫರಿಸಾಯರ ಮತ್ತು ಹೆರೋದನ ಹುಳಿಹಿಟ್ಟು (8:14-21)

(ಮತ್ತಾಯ 16:5-12)

**14-16** ಇಲ್ಲಿ ಮಾರ್ಕನು ಯೇಸುವಿನ ಶಿಷ್ಯರು ಆತನ ಬೋಧನೆಗಳನ್ನು ಅರ್ಥಮಾಡಿಕೊಳ್ಳಲು ನಿಧಾನವಾಗಿರುವದನ್ನು ಬಣ್ಣಿಸುತ್ತಾನೆ. ಯೇಸು ಅವರಿಗೆ ಕೆಲವು ಆತ್ಮೀಕ ಸತ್ಯವನ್ನು ಕಲಿಸಲು ಪ್ರಯತ್ನಿಸಿದಾಗಲೆಲ್ಲಾ ಆತನು ಸಾಮಾನ್ಯ ಪ್ರಾಪಂಚಿಕ ವಿಷಯಗಳ ಕುರಿತು ಮಾತಾಡುತ್ತಿದ್ದಾನೆಂದು ಶಿಶ್ಯರು ಯೋಚಿಸಿದರು.

ಯೇಸು ಅವರನ್ನು ಫರಿಸಾಯರು ಮತ್ತು ಹೆರೋದ (ಲೂಕ 12:1) ಮತ್ತು ಸದ್ದುಕಾಯರ (ಮತ್ತಾಯ 16:16)[53] ಹುಳಿಹಿಟ್ಟಿನ ವಿಷಯದಲ್ಲಿ ಅಂದರೆ ದುಷ್ಟತನ ಹಾಗು ಕಪಟತನದ ಬಗ್ಗೆ ಎಚ್ಚರಿಸಲು ಬಯಸಿದನು. ಹೊಸ ಒಡಂಬಡಿಕೆಯಲ್ಲಿ ಹುಳಿಹಿಟ್ಟು ಸಾಮಾನ್ಯವಾಗಿ ಕೆಟ್ಟದ್ದನ್ನು ದೃಷ್ಟಾಂತಿಕರಿಸಲು ಉಪಯೋಗಿಸಲಾಗಿದೆ (1 ಕೊರಿಂಥ 5:6-8 ಮತ್ತು ವ್ಯಾಖ್ಯಾನ ನೋಡಿರಿ). ಒಂದು ಚಿಕ್ಕ ಕೆಟ್ಟ ವಿಷಯವು ಹುಳಿ ಹಿಟ್ಟಿನ ಹಾಗೆ ಇಡೀ ಸಭೆಯೊಳಗೆ ಹರಡಬಹುದು. ಒಂದು ಚಿಕ್ಕ ಮಿಥ್ಯ ಬೋಧನೆಯು ನೂತನ ಕ್ರೈಸ್ತರ ನಂಬಿಕೆಯನ್ನು ಹಾಳು ಮಾಡಬಲ್ಲದು (ಗಲಾತ್ಯ 5:7-9).

ಆದರೆ ಯೇಸು ಆತ್ಮೀಕ "ಹುಳಿಹಿಟ್ಟು" ಅಂದರೆ ಕಪಟತನ ಹಾಗು ಮಿಥ್ಯ ಬೋಧನೆಯ ಕೆಟ್ಟ ಹುಳಿಹಿಟ್ಟಿನ ವಿಷಯವಾಗಿ ಮಾತನಾಡುತ್ತಿದ್ದಾನೆಂದು ಮೊದಲಲ್ಲಿ ಶಿಷ್ಯರು ಗ್ರಹಿಸಿಕೊಳ್ಳಲಿಲ್ಲ (ಮತ್ತಾಯ 16:12). ನಾವು ರೊಟ್ಟಿಬುತ್ತಿ ತರಲು ಮರೆತದ್ದಕ್ಕೆ ಆತನು ಹೀಗೆನುತ್ತಿದ್ದಾನೆಂದು ಅವರು ಯೋಚಿಸಿದರು (ವಚನ 14).

**17-21** ಯೇಸು ತನ್ನ ಶಿಷ್ಯರಿಗೆ "ರೊಟ್ಟಿಯಿಲ್ಲವಲ್ಲಾ" ಎಂದು ಮಾತಾಡಿಕೊಳ್ಳುವದೇಕೆ? ನಾನು ಐದುರೊಟ್ಟಿ ಎರಡು ಮೀನುಗಳಿಂದ ಐದುಸಾವಿರ ಜನರಿಗೂ ಮತ್ತು ಏಳು ರೊಟ್ಟಿಗಳಿಂದ ನಾಲ್ಕು ಸಾವಿರ ಜನರಿಗೆ ಊಟ ಮಾಡಿಸಿದ್ದನ್ನು ನೀವು ನೋಡಲಿಲ್ಲವೊ? ರೊಟ್ಟಯಿಲ್ಲವಲ್ಲಾ ಎಂದು ನೀವು ಹೇಗೆ ಯೋಚಿಸಬಹುದು? ನಾನು ಯಾರೆಂದು ನೀವು ಗ್ರಹಿಸಲಿಲ್ಲವೊ? ನಾನು ಜಗತ್ತಿನ ಕರ್ತನೂ ನಿರ್ಮಾಣಿಕನೂ ಆಗಿದ್ದೇನೆ. ನಿಮ್ಮ ಒಂದು ರೊಟ್ಟಿಯಿಂದ ನಾನು ಹೆಚ್ಚು ರೊಟ್ಟಿಗಳನ್ನು ಉಂಟುಮಾಡಲು ಸಾಧ್ಯವಿಲ್ಲವೆಂದು ಅಂದುಕೊಳ್ಳುತ್ತಿರಾ? ನಿಮಗೆ ಇನ್ನೂ ತಿಳುವಳಿಕೆ ಬರಲಿಲ್ಲವೊ? ನಿಮ್ಮ ಹೃದಯ ಕಲ್ಲಾಗಿದೆಯೋ? ಅಂದನು. ಶಿಷ್ಯರಿಗೆ ಕಣ್ಣುಗಳು ಮತ್ತು ಕಿವಿಗಳು ಇದ್ದವು (ವಚನ 18) ಆದರೆ ಅವರು ಇನ್ನೂ ಆತ್ಮೀಕ ಸಂಗತಿಗಳನ್ನು ಗ್ರಹಿಸಿಕೊಳ್ಳಲಿಲ್ಲ (1ಕೊರಿಂಥ 2:12-14 ನೋಡಿರಿ)[54].

## ಬೇತ್ಸಾಯಿದ ಬಳಿಯಲ್ಲಿ ಕುರುಡನನ್ನು ಸ್ವಸ್ಥಮಾಡಿದ್ದು (8:22-26)

**22-26** ಬಳಿಕ ಯೇಸು ಒಬ್ಬ ಕುರುಡನನ್ನು ಗುಣಪಡಿಸಿದನು (ಯೋಹಾನ 9:1-7 ನೋಡಿರಿ). ಮೊದಲು ಆತನು ಆ ವ್ಯಕ್ತಿಯ ಕಣ್ಣುಗಳನ್ನು ಸ್ವಲ್ಪ ಮಟ್ಟಿಗೆ ಗುಣಪಡಿಸಿದನು. ನಂತರ ಎರಡನೆಯ ಸಾರಿ ಆತನು ಆ ವ್ಯಕ್ತಿಯ ಕಣ್ಣುಗಳ ಮೇಲೆ ತನ್ನ ಕೈಗಳನ್ನಿಟ್ಟನು, ಆಗ ಆತನು ಸಂಪೂರ್ಣವಾಗಿ ದೃಷ್ಟಿ ಪಡೆದುಕೊಂಡನು.

ಆತ್ಮೀಕವಾಗಿ ಶಿಷ್ಯರು ಈ ಕುರುಡನಂತಿದ್ದರು. ಪ್ರಾರಂಭದಲ್ಲಿ ಅವರು ಆತ್ಮೀಕ ಸಂಗತಿಗಳನ್ನು ನೋಡಲು ಮತ್ತು ಅರ್ಥ ಮಾಡಿಕೊಳ್ಳಲು ಆಗಲಿಲ್ಲ. ನಂತರ ಅವನು ಸ್ವಲ್ಪ ಸ್ವಲ್ಪವಾಗಿ ನೋಡಲಾರಂಬಿಸಿದರು. ಆ ಕುರುಡನಿಗೆ ಜನರು ಮರಗಳಂತೆ ತಿರುಗಾಡುತ್ತಿರುವ ಹಾಗೆ ಕಂಡನು (ವಚನ 24) ಶಿಷ್ಯರಿಗಾದರೋ ಯೇಸು ಕೇವಲ ಒಬ್ಬ ಅದ್ಭುತಗಾರ,

ಸ್ವಸ್ಥತೆಗಾರನಾಗಿಯೂ, ಒಬ್ಬ ಬೋಧಕ, ಒಬ್ಬ ಪ್ರವಾದಿಯಂತೆಯೂ ಮಾತ್ರ ಕಂಡನು. ಆತನು ಇವೆಲ್ಲಕ್ಕಿಂತಲೂ ಹೆಚ್ಚಿನವನು, ಆತನು ಮೆಸ್ಸೀಯನೂ, ದೇವ ಕುಮಾರನೂ ಎಂಬದನ್ನು ಅವರು ಇನ್ನೂ ಕಾಣದವರಾಗಿದ್ದರು.

### ಕ್ರಿಸ್ತನ ಬಗ್ಗೆ ಪೇತ್ರನ ಅರಿಕೆ ( 8:27-30)

(ಮತ್ತಾಯ 16:13-10; ಲೂಕ 9: 18-21)

**27** ಅವರು ಇಸ್ರಾಯೇಲನ ಉತ್ತರಾರ್ಧದಲ್ಲಿ ಅತಿ ಮುಖ್ಯಪಟ್ಟಣ ವೊಂದಾದ ಫಿಲಿಪ್ಪನ ಕೈಸರೈಯ ಪಟ್ಟಣಕ್ಕೆ ಪ್ರಯಾಣಿಸುತ್ತಿರುವಾಗ ಯೇಸು ತನ್ನ ಶಿಷ್ಯರಿಗೆ "ಜನರು ನನ್ನನ್ನು ಯಾರು ಅನ್ನುತ್ತಾರೆ"? ಎಂದು ಕೇಳಿದನು. ಯೇಸು ಯಾರು ಭೂಮಿಯ ಮೇಲಿರುವ ಪ್ರತಿಯೊಬ್ಬ ಪು ರುಷ ಮತ್ತು ಸ್ತ್ರೀಯರಿಗೆ ಇದಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾದ ಪ್ರಶ್ನೆ ಇನ್ನೊಂದಿರುವದಿಲ್ಲ.

**28-29** ಕೆಲವರು ಯೇಸು ಸತ್ತವರೊಳಗಿಂದ ಎದ್ದು ಬಂದ ಸ್ನಾನಿಕನಾದ ಯೋಹಾನನೆಂದು ಯೋಚಿಸಿದರು (ಮಾರ್ಕ 6:14) ಇನ್ನು ಕೆಲವರು ಆತನು ಹಳೆ ಒಡಂಬಡಿಕೆಯ ಪ್ರವಾದಿಗಳಾದ ಎಲಿಯ ಮತ್ತು ಯೆರೆಮೀಯರಂತೆ ಒಬ್ಬನೆಂದು ಕೊಂಡರು (ಮತ್ತಾಯ 16:14, ಮಾರ್ಕ 6:15).

ಆದರೆ ಯೇಸು ಇತರರು ಏನಂದುಕೊಂಡಿರುವರೆಂದು ಬಲ್ಲವನಾಗಿದ್ದನು. ಆತನ ಶಿಷ್ಯರು ಏನಂದುಕೊಂಡಿದ್ದಾರೆಂದು ತಿಳಿಯಲಿಚ್ಚಿಸಿದನು ನೀವು ನನ್ನನ್ನು ಯಾರನ್ನುತ್ತೀರಿ?. ಆಗ ಪೇತ್ರನು "ನೀನು ಕ್ರಿಸ್ತನು,[55] ಜೀವಸ್ವರೂಪನಾದ ದೇವರ ಕುಮಾರನು" ಎಂದು ಉತ್ತರ ಕೊಟ್ಟನು. ಕೊನೆಗೂ ಶಿಷ್ಯರ ಕಣ್ಣುಗಳು ತೆರೆಯಲ್ಪಟ್ಟಿದ್ದವು .

ನಂತರ ಮತ್ತಾಯ 16:17-19 ರ ಪ್ರಕಾರವಾಗಿ ಯೇಸು ಪೇತ್ರನಿಗೆ ಒಂದು ಶ್ರೇಷ್ಠ ಆಶೀರ್ವಾದವನ್ನು ಮಾಡಿದನು[56] ಆತನು ಪೇತ್ರನಿಗೆ "ಯೋನನ ಮಗನಾದ ಸಿಮೋನನೇ, ನೀನು ಧನ್ಯನು. ಈ ಗುಟ್ಟು ನಿನಗೆ ತಿಳಿಸಿದವರು ನರಮನುಷ್ಯನಲ್ಲ, ಪರಲೋಕದಲ್ಲಿರುವ ನನ್ನ ತಂದೆಯೇ ತಿಳಿಸಿದನು". ಎಂದು ಹೇಳಿದನು. ನಂಬಿಕೆಯು ದೇವರ ವರವಾಗಿದೆ ದೇವರು ತಾನೇ ಯಾವಾಗಲು ಕ್ರಿಸ್ತನು ಯಾರೆಂದು ನಮಗೆ ಬಯಲು ಪಡಿಸುತ್ತಾನೆ. ಬಳಿಕ ಯೇಸು ಪೇತ್ರನಿಗೆ – ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು ಅಂದನು (ಮತ್ತಾಯ 16:18). ಗ್ರೀಕ ಭಾಷೆಯಲ್ಲಿ ಪೇತ್ರನೆಂಬ ಹೆಸರಿಗೆ ಬಂಡೆ ಎಂದರ್ಥ ಯೇಸುವಿನ ಅರ್ಥವೇನಾಗಿತ್ತೆಂದರೆ ಪೇತ್ರ ಮತ್ತು ಇತರ ಅಪೊಸ್ತಲರು ಕ್ರಿಸ್ತನ ಸಭೆಗೆ ಅಸ್ತಿವಾರ ವಾಗುವರೆಂಬುದೇ (ಎಫೆಸ 2:19-20) ಪಾತಾಳ ಲೋಕದ ಬಲವು (ಯೇಶಾಯ 38:10) ಅಂದರೆ ಮರಣದ ಬಲವು ಸಭೆಯನ್ನು ಸೋಲಿಸಲಾರದು (ಮತ್ತಾಯ 16:18). ಪಾತಾಳದ ದ್ವಾರಗಳು ಕೋಟೆಯ ದ್ವಾರಗಳಿದ್ದಂತೆ. ಅವು ಗಳು ಸತ್ತವರ ಅತ್ಮಗಳನ್ನು ಒಳಗೆ ಮುಚ್ಚಿಬಿಡುತ್ತವೆ ಮತ್ತು ಕ್ರಿಸ್ತನು ಅವು ಗಳನ್ನು ರಕ್ಷಿಸಲು ಬರದಂತೆ ತಡೆಯಾಗುತ್ತವೆ. ಈ ದ್ವಾರಗಳು ಕ್ರಿಸ್ತನಿಗೂ ಮತ್ತು ಆತನ ಸಭೆಗೂ ವಿರುದ್ಧವಾಗಿ ನಿಲ್ಲಲಾರವು . ಕ್ರಿಸ್ತನ ಮರಣದ ಮೇಲೆ ಹೊಂದಿದ ಜಯದ ಮೂಲಕ ಸೈತಾನನ ಬಲವನ್ನು ನಾಶಮಾಡಿ ಬಂಧಿತರನ್ನು ಬಿಡುಗಡೆ ಮಾಡಿದ್ದಾನೆ (ಯೇಶಾಯ 61:1, ಲೂಕ 4:18, 1 ಪೇತ್ರ 3:18-20 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ನಂತರ ಮತ್ತಾಯನ ದಾಖಲೆಗನುಸಾರವಾಗಿ ಯೇಸು ತನ್ನ ಶಿಷ್ಯರಿಗೆ "ಪರಲೋಕ ರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು. ಭೂಲೋಕದಲ್ಲಿ ನೀನುಯಾವದನ್ನು ಕಟ್ಟುತ್ತೀಯೋ, ಅದು ಪರಲೋಕದಲ್ಲಿಯೂ ಕಟ್ಟಿರುವದು, ಮತ್ತು ಭೂಲೋಕದಲ್ಲಿ ನೀನು ಯಾವದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವದು". ಅಂದನು (ಮತ್ತಾಯ 16:19). ಇದನ್ನು ಹೇಳುವದರ ಮೂಲಕ ಯೇಸು ಅಪೊಸ್ತಲರಿಗೆ ಸಭೆಯನ್ನು ಸ್ಥಾಪಿಸಲು ಮತ್ತು ಅದರ ನಾಯಕರಾಗಿರಲು ಅಧಿಕಾರ ಕೊಟ್ಟನು. ಯೇಸು ಇದನ್ನು ಪೇತ್ರನಿಗೆ ಮಾತ್ರವೇ ಹೇಳಲಿಲ್ಲ ಆದರೆ ಎಲ್ಲಾ ಅಪೊಸ್ತಲರಿಗೂ ಹೇಳಿದನು (ಮತ್ತಾಯ 18:18). ಪರಲೋಕರಾಜ್ಯದ ಬೀಗದ ಕೈಗಳು ಅಪೊಸ್ತಲರಿಗೆ ರಕ್ಷಣೆಯ ಸಂದೇಶವನ್ನು ಸಾರುವ ಮತ್ತು ನಂಬಿ ರಕ್ಷಣೆಹೊಂದುವವರನ್ನೆಲ್ಲಾ ಸಭೆಯೊಳಗೆ ಕರೆತರುವ ಅಧಿಕಾರವನ್ನು ಕೊಟ್ಟವು . ಕ್ರಿಸ್ತನು ದಾವಿದನ ಬೀಗದ ಕೈಗಳುಳ್ಳವನಾಗಿದ್ದಾನೆ (ಯೇಶಾಯ 22:22, ಪ್ರಕ 3:7) ತನ್ನ ಬೀಗಗಳನ್ನು ಅಪೊಸ್ತಲರಿಗೆ ನೀಡಿದನು. ಕ್ರಿಸ್ತನ ಹೆಸರಿನಲ್ಲಿ [58] ಕಟ್ಟುವ ಮತ್ತು ಬಿಚ್ಚುವ ಅಧಿಕಾರವನ್ನು ಆತನಿಂದ ಪಡೆದುಕೊಂಡರು. ಇದರರ್ಥವೇನೆಂದರೆ ಅವರು ಸತ್ಯಬೋಧನೆಯನ್ನು ನಿರ್ಧರಿಸಲು, ಸುಳ್ಳುಬೋಧಕರನ್ನು ಮತ್ತು ಪಶ್ಚಾತಾಪ ವಿಲ್ಲದ ಪಾಪಿಗಳನ್ನು ಶಿಕ್ಷಿಸುವದಕ್ಕೂ ಹಾಗು ಸಭೆಯಲ್ಲಿ ಪೂರ್ಣ ಅಧಿಕಾರವನ್ನು ಚಲಾಯಿಸುವ ಅಧಿಕಾರ ಹೊಂದಿದ್ದರು. ಅದರ ನಂತರ ಅಪೊಸ್ತಲರು ಮಾಡಿದ್ದೆಲ್ಲವೂ ಸರಿಯಾದದ್ದು ಅಥವಾ ಅವರು ಎಂದಿಗೂ ಮತ್ತು ಪಾಪ ಮಾಡಲಿಲ್ಲ ಎಂದು ಇದರ್ಥವಲ್ಲ. ಪೇತ್ರನು ಅನಂತರ ಯೇಸುವನ್ನು ಅಲ್ಲಗಳೆದನು (ಮಾರ್ಕ 14:66-72) ಗಲಾತ್ಯದಲ್ಲಿ ಪೇತ್ರನು ಇನ್ನೊಂದು ಘೋರ ತಪ್ಪನ್ನು ಮಾಡಿ ಅಪೊಸ್ತಲನಾದ ಪೌಲನಿಂದ ಗದರಿಸಲ್ಪಟ್ಟನು (ಗಲಾತ್ಯ 2:11-14). ಆದರೆ ಎಲ್ಲಿಯವರೆಗೆ ಅಪೊಸ್ತಲರು ಕ್ರಿಸ್ತನ ಚಿತ್ತಕ್ಕನುಸಾರವಾಗಿ ನಡೆದರೋ ಅವರು ಆತನ ಸಂಪೂರ್ಣ ಅಧಿಕಾರದೊಂದಿಗೆ ನಡೆದರು ಮತ್ತು ಭೂಲೋಕದಲ್ಲಿ ಅವರು ಏನು ತಿರ್ಮಾನಿಸಿದರೋ ಅದನ್ನು ಪರಲೋಕದಲ್ಲಿ ಕ್ರಿಸ್ತನು ದೃಡಪಡಿಸಿದನು.

**30** ಬಳಿಕ ಯೇಸು ತನ್ನ ಶಿಷ್ಯರಿಗೆ ತಾನು ಕ್ರಿಸ್ತನು, ಮೆಸ್ಸಿಯನೂ ಆಗಿದ್ದಾನೆಂದು ಯಾರಿಗೂ ಹೇಳಬಾರದೆಂದು ಖಂಡಿತವಾಗಿ ಅಪ್ಪಣೆಮಾಡಿದನು (ಮಾರ್ಕ 5:43, 7 36). ಯೇಸು ಯಾಕೆ ಇದನ್ನು ಹೇಳಿದನೆಂದು ನಾವು

ಅರ್ಥಮಾಡಿಕೊಳ್ಳಬೇಕು. ಎಲ್ಲ ಯೆಹೂದ್ಯರು ತಮ್ಮನ್ನು ರೋಮಾಯರ ಅಧಿನದಿಂದ ಬಿಡಿಸಿ ಇಸ್ರಾಯೇಲ ರಾಜ್ಯವನ್ನು ಪು ನಃ ಸ್ಥಾಪಿಸುವವನಾಗಿ ಅವರ ಅರಸ ನಾಗುವದಕ್ಕೆ ಒಬ್ಬ ಜಯಶಾಲಿ ಮೆಸ್ಸಿಯನು ಬರುವನೆಂದು ನಿರೀಕ್ಷಿಸುತ್ತಿದ್ದರು. (ಯೇಶಾಯ 11:1-5, ಯೋಹಾನ 6:14-15). ಆದರೆ ಮೆಸ್ಸಿಯನು ಬಾಧೆ ಪಟ್ಟು ಸಾಯಲೂ ಬೇಕೆಂಬದನ್ನು ಯೆಹೂದ್ಯರು ಮರೆತರು (ಯೇಶಾಯ 53: 1-12, ಲೂಕ 24: 26). ಮೆಸ್ಸಿಯನ ಭೂಲೋಕದ ರಾಜ್ಯವನ್ನು ಸ್ಥಾಪಿಸಲು ಬರುವನೆಂದು ಯೇಹೂದ್ಯರು ಯೋಚಿಸಿದರು. ಆದರ ಬದಲಾಗಿ ಆತನು ನಿರಂತರವಾಗಿ ಇರುವ ಆತ್ಮೀಕ ರಾಜ್ಯವೊಂದನ್ನು ಸ್ಥಾಪಿಸಲು ಬಂದನು (ಯೇಶಾಯ 9:7, ದಾನಿಯೇಲ 7:13-14, ಲೂಕ 1:33, ಪ್ರಕ 11:15). ಮನುಷ್ಯರಿಗೆ ರಾಜಕೀಯ ಬಿಡುಗಡೆಯನ್ನು ಕೊಡುವದಕ್ಕಾಗಿ ಕ್ರಿಸ್ತನು ಬರಲಿಲ್ಲ ಆದರೆ ಅವರಿಗೆ ರಕ್ಷಣೆ ಮತ್ತು ನಿತ್ಯ ಜೀವವನ್ನು ಕೊಡುವದಕ್ಕೆ ಬಂದನು.

ಆದುದರಿಂದ ಒಂದು ವೇಳೆ ಶಿಷ್ಯರು ಯೇಸುವೇ ಕ್ರಿಸ್ತನು, ಮೆಸ್ಸೀಯನು ಎಂದು ತಕ್ಷಣವೇ ಎಲ್ಲರಿಗೂ ಹೇಳಲು ಪ್ರಾರಂಬಿಸುವದಾದರೆ ಖಂಡಿತವಾಗಿಯೂ ಜನರು ಅತನನ್ನು ತಮ್ಮ ಅರಸನನ್ನಾಗಿ ಮಾಡಲು ಪ್ರಯತ್ನಿಸಿರುತ್ತಿದ್ದರು. ಆತನಿಗೆ ಶಿಲುಬೆಯ ಮೇಲೆ ಬಾಧೆಪಟ್ಟು ಸಾಯಲು ಅವಕಾಶ ಸಿಗುತ್ತಿರಲಿಲ್ಲ. ಎಲ್ಲಾ ಮಾನವರ ಪಾಪಗಳಿಗಾಗಿ ಮರಣಿಸಬೇಕೆಂದು ಭೂಮಿಗೆ ಬಂದ ಆತನ ಉದ್ದೇಶವು ನೆರವೇರದೇ ಹೋಗುತ್ತಿತ್ತು (ಮಾರ್ಕ 10:45 ಹಾಗು ವ್ಯಾಖ್ಯಾನ ನೋಡಿರಿ). ಆತನ ಮರಣವಿಲ್ಲದೆ ಮಾನವರು ರಕ್ಷಣೆಹೊಂದಲಾಗದು. ಆದುದರಿಂದ ಯೇಸು ಮರಣಿಸಿ ತಿರಿಗಿ ಜೀವಿತನಾಗಿ ಎದ್ದು ಬರುವ ತನಕ ಆತನು ಮೆಸ್ಸಿಯನೆಂಬ ಸತ್ಯವನ್ನು ಗುಪ್ತವಾಗಿಡುವದು ಅವಶ್ಯಕವಾಗಿತ್ತು (ಮಾರ್ಕ 9:9).

## ಯೇಸು ತನ್ನ ಮರಣವನ್ನು ಮುಂಚಿಳಿಸಿದ್ದು ( 8: 31-33)

(ಮತ್ತಾಯ 16:21-23, ಲೂಕ 9:22)

**31-32** ಯೇಸು ಕ್ರಿಸ್ತನು, ಮೆಸ್ಸಿಯನೂ, ಜೀವಸ್ವರೂಪನಾದ ದೇವರ ಕುಮಾರನು ಎಂದು ಈಗಷ್ಟೇ ಅರಿಕೆ ಮಾಡಿದನು (ವಚನ 29) ಆದರೆ ಕ್ರಿಸ್ತನು ಭೂಲೋಕಕ್ಕೆ ಏನು ಮಾಡಲು ಬಂದನೆಂದು ಆತನು ಇನ್ನೂ ಪೂರ್ತಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಆತನು ಇತರ ಯೆಹೂದ್ಯರ ಹಾಗೆಯೇ ಆಲೋಚಿಸಿದನು, ಉದಾಹರಣೆಗೆ ಕ್ರಿಸ್ತನು ಭೂಲೋಕದ ರಾಜನಾಗಿರುವದಕ್ಕೆ ಬಂದನು. ಆದ್ದರಿಂದಲೇ ಯೇಸು ಆತನಿಗೆ "ಮನುಷ್ಯಕುಮಾರನು ಬಹು ಕಷ್ಟಗಳನ್ನುನುಭವಿಸಿ ನಿರಾಕೃತನಾಗಿ ಕೊಲ್ಲಲ್ಪಡಬೇಕು"..ಎಂದು ಹೇಳಿದಾಗ ಪೇತ್ರನು ಅದನ್ನು ಒಪ್ಪಿ ಕೊಳ್ಳಲಾಗಲಿಲ್ಲ, ಯೇಸು ಹಾಗೆ ಹೇಳಿದ್ದಕ್ಕೆ ಆತನನ್ನು ಪೇತ್ರನು ಹಾಗನ್ನಬೇಡ ಎಂದನು. ಅಲ್ಲದೆ ಯೇಸು ಮೂರು ದಿನಗಳಾದ ಮೇಲೆ ಮನುಷ್ಯ ಕುಮಾರನು ತಿರಿಗಿ ಜೀವಿತನಾಗಿ ಎದ್ದು ಬರುವನು ಎಂದು ಸಹ ಹೇಳಿದನು. ಯೇಸು ತಾನು ಸಾಯಬೇಕೆಂದು ಮಾತ್ರವಲ್ಲದೆ ಮೂರನೆಯ ದಿನದಲ್ಲಿ ತಾನು ಸತ್ತವರೊಳಗಿಂದ ಎದ್ದು ಬರುತ್ತೇನೆಂದು ಸಹ ತಿಳಿದವನಾಗಿದ್ದನು. ಶಿಷ್ಯರು ಇದನ್ನು ಅರ್ಥಮಾಡಿಕೊಳ್ಳಲೇ ಇಲ್ಲ.

**33** ಪೇತ್ರನ ತುಟಿಗಳ ಮೂಲಕ ಯೇಸು ಪು ನಃ ಆತನನ್ನು ಶೋಧಿಸಲು ಪ್ರಯತ್ನಿಸಿದ ಸೈತಾನನ ಸ್ವರವನ್ನು ಆಲಿಸಿದನು (ಮತ್ತಾಯ 4:8-10 ಹಾಗು ವ್ಯಾಖ್ಯಾನ ನೋಡಿರಿ). ಸೈತಾನನು ಆತನಿಗೆ ನೀನು ಬಾಧೆ ಪಟ್ಟು ಸಾಯಬೇಕಾಗಿಲ್ಲ. ನೀನು ನನಗೆ ಅಡ್ಡ ಬೀಳುವದಾದರೆ ನಿನ್ನನ್ನು ಅರಸನನ್ನಾಗಿ ಮಾಡುತ್ತೇನೆ ಎಂದು ಹೇಳುವದನ್ನು ಯೇಸು ಕೇಳಿಸಿಕೊಂಡನು ಆದುದರಿಂದ ಯೇಸು ಪೇತ್ರನ ಕಡೆಗೆ ತಿರಿಗಿ ಕೊಂಡು "ಸೈತಾನನೇ, ನನ್ನ ಮುಂದೆ ನಿಲ್ಲಬೇಡ, ನಡೆ" ಎಂದು ಹೇಳಿದನು.

ಕೆಲವು ವೇಳೆಗಳಲ್ಲಿ ನಮ್ಮ ಉತ್ತಮ ಸ್ನೇಹಿತ್ತರು, ನಮ್ಮ ಅತಿ ನಂಬಿಗಸ್ಥ ಸಹಪಾಠಿಗಳು ನಾವು ದೇವರಚಿತ್ತವನ್ನು ಮಾಡದಂತೆ ಮನಸ್ಸನ್ನು ಕೆಡಿಸುವವರಾಗಿದ್ದಾರೆ. ಅವರ ಇಂಗಿತವು ಒಳ್ಳೆಯದು. ನಮಗೆ ಸಮಸ್ಯೆ ಮತ್ತು ನೋವು ಗಳುಂಟಾಗಬಾರದೆಂದು ಅವರು ಇಚ್ಚಿಸುತ್ತಾರೆ. ಆದರೆ ನಾವು ಅವರ ಮಾತಿಗೆ ಕಿವಿಗೊಡಬಾರದು ಬದಲಾಗಿ ನಾವು ದೇವರ ಚಿತ್ತವನ್ನು ಮಾಡಬೇಕು (ಅ.ಕೃತ್ಯ 21:10-14).

ಪೇತ್ರನ ಆಲೋಚನೆಗಳು ದೇವರ ಆಲೋಚನೆಗಳಂತಿರಲಿಲ್ಲ, ಆದರೆ ಮನುಷ್ಯನ ಯೋಚನೆಗಳಾಗಿದ್ದವು . ದೇವರು ಪ್ರವಾದಿಯಾದ ಯೇಶಾಯನ ಮೂಲಕ ಹೀಗೆನ್ನುತ್ತಾನೆ. ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ, ನನ್ನ ಮಾರ್ಗಗಳು ನಿಮ್ಮ ಮಾರ್ಗಗಳಲ್ಲ ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೊ ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಿಗಿಂತಲೂ ಮತ್ತು ನನ್ನ ಮಾರ್ಗಗಳು ನಿಮ್ಮ ಮಾರ್ಗಗಳಿಗಿಂತಲೂ ಉನ್ನತವಾಗಿವೆ (ಯೇಶಾಯ 55:8-9) ಪೇತ್ರನ ಮನಸ್ಸು ಲೌಕಿಕ ಸಂಗತಿಗಳ ಮೇಲಿತ್ತು ಹೊರತು ಪರಲೋಕದ ಸಂಗತಿಗಳ ಮೇಲಿರಲಿಲ್ಲ (ಕೊಲೊಸ್ಸೆ 3:2). ಆತನು ದೇವರ ಯೋಜನೆ ಮತ್ತು ಉದ್ದೇಶವನ್ನು ಎದುರಿಸುತ್ತಿದ್ದನು. ಯೇಸು ಆತನಿಗೆ "ನೀನು ನನಗೆ ವಿಘ್ನವಾಗಿದ್ದೀ, ನಿನ್ನ ಯೋಚನೆ ಮನುಷ್ಯರ ಯೋಚನೆಯೇ ಹೊರತು ದೇವರದಲ್ಲ". ಎಂದು ಹೇಳಿದನು (ಮತ್ತಾಯ 16:23).

## ನಿಜ ಶಿಷ್ಯತ್ವ (8: 34-38)

(ಮತ್ತಾಯ 16:24-27, ಲೂಕ 9:23-26)

**34** ಯೇಸು ಈಗಷ್ಟೇ ತನ್ನ ಶಿಷ್ಯರಿಗೆ ಕಠಿಣಮಾತೊಂದನ್ನು ಅಂದರೆ ತಾನುಬಾಧೆಪಟ್ಟು ಸಾಯುತ್ತಾನೆಂಬದನ್ನು ಹೇಳಿದ್ದನು ಈಗ ಆತನು ಅವರಿಗೆ ಇನ್ನೂ ಕಠಿಣವಾದ ವಿಷಯವೊಂದನ್ನು ತಿಳಿಸುತ್ತಾನೆ, ಅದೇನೆಂದರೆ ಅವರು ಸಹ

ಬಾಧೆಗೊಳಗಾಗಬೇಕು ಮತ್ತು ಬಹುಶಃ ಸಾಯಲೂ ಬೇಕು ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತು ಕೊಂಡು ನನ್ನ ಹಿಂದೆ ಬರಲಿ. ಎಂದು ಹೇಳಿದನು. (ಮತ್ತಾಯ 10:38, ಲೂಕ 14:27).

ಯಾವನಿಗಾದರೂ ನನ್ನ ಹಿಂದೆ ಬರಲು ಮನಸ್ಸಿದ್ದರೆ ಅಂದರೆ ಎಲ್ಲಾ ಕ್ರೈಸ್ತರು ಎಂಬುದಾಗಿ. ಕ್ರೈಸ್ತರೆಲ್ಲರೂ ಶಿಷ್ಯರಾಗಿರುವದಕ್ಕೆ ಕರೆಯಲ್ಪಟ್ಟಿದ್ದಾರೆ. ಎರಡು ವಿಧದವರು ಯೇಸುವನ್ನು ಹಿಂಬಾಲಿಸಿ ಆತನೊಂದಿಗೆ ಬಾಧೆಯನ್ನು ಅನುಭವಿಸುವವರು, ಇನ್ನೊಂದು ವಿಧದವರು ಸರಳವಾದ ಜೀವನವನ್ನು ನಡೆಸಬಲ್ಲವರು ಎಂಬದಾಗಿ ಯೋಚಿಸಿದಿರೋಣ. ಕೇವಲ ಒಂದೇ ಒಂದು ವಿಧವಾದ ನಿಜ ಕ್ರೈಸ್ತನಿದ್ದಾನೆ, ಅದೆಂದರೆ ಒಬ್ಬ ಶಿಷ್ಯನು ಯಾವನಿಗಾದರೊ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಲಿ ಅನೇಕಜನರು ನಾನು ಕ್ರಿಸ್ತನನ್ನು ಹಿಂಬಾಲಿಸಲಿಚ್ಚಿಸುತ್ತೇನೆ ಎಂದು ಹೇಳುತ್ತಾರೆ ಆದರೆ ಕೊನೆಯಲ್ಲಿ ಅವರು ಆತನನ್ನು ಹಿಂಬಾಲಿಸುವದಿಲ್ಲ. ಯಾಕೆ ಹಿಂಬಾಲಿಸಲಿಲ್ಲ, ಯಾಕೆಂದರೆ ಕ್ರಿಸ್ತನು ಹೀಗೆನ್ನುತ್ತಾನೆ " ನೀವು ನಿಮ್ಮನ್ನು ನಿರಾಕರಿಸಬೇಕು" ಅದರರ್ಥವೇನೆಂದರೆ ಕ್ರಿಸ್ತನನ್ನು ಹಿಂಬಾಲಿಸಲು ಒಬ್ಬ ವ್ಯಕ್ತಿಯು ತನ್ನ ಸ್ವಯಿಚ್ಚೆಗಳನ್ನು ತೊರೆದು ಬಿಟ್ಟು ಕ್ರಿಸ್ತನ ಇಚ್ಚೆಗನುಸಾರವಾಗಿ ಮಾತ್ರವೇ ಜೀವಿಸಬೇಕು. ನಾವು ನಮ್ಮ ಸ್ವಂತ ಸುಖವನ್ನು, ಸ್ವಪ್ರಯೋಜನವನ್ನೂ, ನಮ್ಮ ಸ್ವಹಿತವನ್ನು ನಿರಾಕರಿಸಬೇಕು. ನಾವು ಕ್ರೈಸ್ತರಾಗುವದಕ್ಕೆ ಮುಂಚೆ ನಾವು ಸಂಪೂರ್ಣ ನಮಗಾಗಿ ಜೀವಿಸಿದೆವು ಆದರೆ ನಾವು ಕ್ರೈಸ್ತರಾದ ಮೇಲೆ ಸಂಪೂರ್ಣ ದೇವರಿಗಾಗಿ ಜೀವಿಸಬೇಕು. ಈ ಕಾರಣದಿಂದಲೇ ಪ್ರಾರಂಬದಲ್ಲಿ ಅನೇಕರು ಕ್ರಿಸ್ತನ ಬಳಿಗೆ ಬರುತ್ತಾರೆ ಆದರೆ ಅನಂತರ ಹಿಂದೆ ಹೋಗುತ್ತಾರೆ. ಅವರು ಮನಸ್ಸಿನಲ್ಲಿ ಕ್ರಿಸ್ತನನ್ನು ಹಿಂಬಾಲಿಸುವದು ಬಹಳ ಕಷ್ಟಕರವಾಗಿರುತ್ತದೆ ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಆತನು ತನ್ನ ಶಿಲುಬೆಯನ್ನು ಹೊತ್ತು ಕೊಂಡು. ಮಾರ್ಕನು ಇದೇ ಮೊದಲ ಬಾರಿಗೆ ಶಿಲುಬೆ ಬಗ್ಗೆ ಪ್ರಸ್ತಾಪಿಸುತ್ತಾನೆ. ಶಿಲುಬೆಯು ಮರಣದಂಡನೆ ವಿಧಿಸುವ ರೋಮಾಯರ ವಿಧಾನವಾಗಿತ್ತು. ಅಪರಾಧಿಗಳನ್ನು ಜೀವಂತವಾಗಿ ಉದ್ದನೆಯ ಕಂಬದಲ್ಲಿ ಬಂಧಿಸಿ, ಕೈಗಳನ್ನು ಅಡ್ಡಕಂಬಕ್ಕೆ ಕಟ್ಟುತ್ತಿದ್ದರು. ಅಥವಾ ಮೊಳೆಗಳನ್ನು ಹೊಡೆಯುತ್ತಿದ್ದರು. ನಂತರ ಅಪರಾಧಿಯು ವೇದನೆಯನ್ನು ಪಡುತ್ತಾ ನಿಧಾನವಾಗಿ ಸಾಯುತ್ತಿದ್ದನು. ಅಪರಾಧಿಗಳು ಈ ರೀತಿಯಾಗಿ ಮರಣಕ್ಕೆ ಒಳಪಡಿಸುವದು ಮಾತ್ರವಲ್ಲ, ಅವರು ದಂಡನೆಯಸ್ಥಳದ ವರೆಗೆ ತಮ್ಮ ಶಿಲುಬೆಗಳನ್ನು ತಾವೇ ಹೊತ್ತು ಕೊಳ್ಳಬೇಕಾಗಿತ್ತು, ಆದುದರಿಂದ ಯೇಸು ತನ್ನ ಹಿಂಬಾಲಕರಿಗೆ ತಮ್ಮ ಶಿಲುಬೆಯನ್ನು ಹೊತ್ತು ಕೊಳ್ಳಬೇಕೆಂದು ಹೇಳಿದಾಗ ಅವರ ಮನಸ್ಸಿನಲ್ಲಿ ಅದರರ್ಥವು ಒಂದೇ ಆಗಿರಲು ಸಾಧ್ಯಃ ಅದೇಂದರೆ ಅವರು ಆತನಿಗಾಗಿ ಬಾಧೆಪಟ್ಟು ಸಾಯಬೇಕು. ಯೇಸುವನ್ನು ಹಿಂಬಾಲಿಸುವ-ವರೆಲ್ಲರಿಗೂ ಬಾಧೆಗಳು ಹಿಂಸೆಗಳು ಬರುವವು (ಯೋಹಾನ 15:19, 2 ತಿಮೊಥಿ 3:12 ಮತ್ತು ವ್ಯಾಖ್ಯಾನ ನೋಡಿರಿ). ಶಿಲುಬೆಯಲ್ಲದ ಕಿರೀಟವಿರಲು ಸಾದ್ಯವಿಲ್ಲ. ಯೇಸು ಶಿಲುಬೆಯ ಮೇಲೆ ಮರಣಿಸಿದನಾದ್ದರಿಂದ ಶಿಲುಬೆಯು ಕ್ರೈಸ್ತಸಭೆಯ ಗುರುತಾಗಿರುತ್ತದೆ. ಶಿಲುಬೆಯು ಯೇಸು ನಮ್ಮ ಪಾಪಗಳಿಗಾಗಿ ಅನುಭವಿಸಿದ ಮರಣದ ಒಂದು ಗುರುತಾಗಿರುತ್ತದೆ. ಕೊನೆಯದಾಗಿ ಯೇಸು ಹೇಳುತ್ತಾನೆ.... "ನನ್ನ ಹಿಂದೆ ಬರಲಿ". ನಾವು ತಿರುಗಿಕೊಳ್ಳಬೇಕು. ನಾವು ನಮ್ಮ ಸ್ವಂತ ದಾರಿಯಲ್ಲಿ ಹೋಗುವದನ್ನು ನಿಲ್ಲಸಿ. ಯೇಸುವಿನ ಮಾರ್ಗದಲ್ಲಿ ಹೋಗುವದಕ್ಕೆ ಪ್ರಾರಂಬಿಸಬೇಕು. ಯೇಸು ಮಾರ್ಗವು ಬಾಧೆಯ ಮಾರ್ಗವಾಗಿತ್ತು, ಶಿಲುಬೆಯ ದಾರಿಯಾಗಿದೆ,ನಮ್ಮ ಮಾರ್ಗವು ಸಹ ಇದೇ ಆಗಿರಬೇಕು, ಕ್ರೈಸ್ತರು ಒಂದು ಆಲೋಚನೆ ಅಥವಾ ತತ್ವಜ್ಞಾನ ಅಥವಾ ಒಂದು ರಾಜಕೀಯ ಪಕ್ಷವನ್ನಾಗಲಿ ಹಿಂಬಾಲಿಸಬೇಕು ಅಲ್ಲದೆ ಅವರು ಒಂದು ಧರ್ಮವನ್ನಾಗಲೀ ಹಿಂಬಾಲಿಸುವದಿಲ್ಲ. ಅವರು ಒಬ್ಬ ವ್ಯಕ್ತಿಯನ್ನು ಹಿಂಬಾಲಿಸುತ್ತಾರೆ, ಆತನು ಯೇಸು ಕ್ರಿಸ್ತನೇ.

**35** ಯೇಸು ಒಂದು ಆಶ್ಚರ್ಯಕರ ಸಂಗತಿಯನ್ನು ಹೇಳಿದನು. ಅದೇನೆಂದರೆ "ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು. ಆದರೆ ನನ್ನ ನಿಮಿತ್ತವಾಗಿಯೂ, ಸುವಾರ್ತೆಯ ನಿಮಿತ್ತವಾಗಿಯೂ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಉಳಿಸಿ ಕೊಳ್ಳುವನು. " ಯಾವನೂ ತನ್ನ ಪ್ರಾಣವನ್ನು (ಇಹಲೋಕದ ಆತನ ಜೀವನ, ಆತನ ಸುಖಭೋಗ, ಆತನ ಗರ್ವ ಆತನ ಘನತೆ ಮತ್ತು ಪ್ರಸಿದ್ದಿ, ಆತನ ಆಸ್ತಿ, ಆತನ ದೈಹಿಕ ಜೀವನ) ಉಳಿಸಿಕೊಳ್ಳುವದಕ್ಕಾಗಿ ಕ್ರಿಸ್ತನನ್ನು ನಿರಾಕರಿಸುತ್ತಾನೋ, ಅವನು ತನ್ನ ಪ್ರಾಣವನ್ನು (ಆತನ ನಿಜ ಜೀವನ, ಆತ್ಮೀಕ ಜೀವನ, ನಿತ್ಯಜೀವನ) ಕಳಕೊಳ್ಳುವನು. ಆದರೆ ಯಾವನೂ ಕ್ರಿಸ್ತನಿಗಾಗಿ ತನ್ನ ಪ್ರಾಣವನ್ನು (ಇಹಲೋಕದಲ್ಲಿನ ಜಿವನ, ಆತನ ಗರ್ವ, ಘನತೆ, ಆಸ್ತ, ಶಾರೀರಿಕ ಜೀವನ) ಕಳಕೊಳ್ಳುತ್ತಾನೋ ಅವನು ಅದನ್ನು ಉಳಿಸಿಕೊಳ್ಳುವನು. ಆತನು ನಿಜವಾದ ಆತ್ಮೀಕ ಜೀವನ, ನಿತ್ಯ ಜೀವವನ್ನು ಪಡೆದು ಕೊಳ್ಳುವನು. ಕ್ರಿಸ್ತನಿಗಾಗಿ ಮತ್ತು ಸುವಾರ್ತೆಗಾಗಿ ಒಬ್ಬನು ಪ್ರಾಣವನ್ನು ಕಳೆದುಕೊಳ್ಳುವದರ ಅರ್ಥವೇನೆಂದರೆ ತನ್ನನ್ನು ನಿರಾಕರಿಸಿ (ತನ್ನ) ಶಿಲುಬೆಯನ್ನು ಹೊತ್ತುಕೊಂಡು ಯೇಸುವನ್ನು ಹಿಂಬಾಲಿಸಬೇಕೆಂಬುದೇ (ವ 34).ಪ್ರಾಪಂಚಿಕ ಜೀವನ ಮತ್ತು ಆತ್ಮೀಕ ಜೀವನಗಳು ಒಂದಕ್ಕೊಂದು ವಿರುದ್ದವಾಗಿವೆ (ಗಲಾತ್ಯ 5:17). ನಾವು ಎಷ್ಟರ ಮಟ್ಟಿಗೆ ಪ್ರಾಪಂಚಿಕ ಆಶೀರ್ವಾದಗಳನ್ನು ಹುಡುಕುತ್ತೇವೆಯೋ ಅಷ್ಟರ ಮಟ್ಟಿಗೆ ನಾವು ಆತ್ಮೀಕ ಆಶಿರ್ವಾದಗಳನ್ನು ಕಳೆದುಕೊಳ್ಳುವೆವು . ಇಷ್ಟರವರೆಗೆ ನಾವು ಕ್ರಿಸ್ತನಿಗೋಸ್ಕರ ಪ್ರಾಪಂಚಿಕ ಲಾಭವನ್ನು ಬಿಟ್ಟು ಬಿಡುತ್ತೇವೆವೋ. ಅಷ್ಟರವರೆಗೆ ಆತ್ಮೀಕ ಲಾಭವನ್ನು ಹೊಂದಿಕೊಳ್ಳುವೆವು . ಸಾಮಾನ್ಯವಾಗಿ ಒಮ್ಮೆ ನಾವು ಕ್ರಿಸ್ತನಿಗಾಗಿ ಪ್ರಾಪಂಚಿಕ ಲಾಭವನ್ನು ನಿರಾಕರಿಸುವಾಗ ಹೇಗೂ ಕ್ರಿಸ್ತನು ನಮ್ಮನ್ನು ಪ್ರಾಪಂಚಿಕ ಸಂಗತಿಗಳಲ್ಲಿಯೂ ಸಹ ಆಶೀರ್ವಧಿಸುವನು (ಮತ್ತಾಯ 6:33 ಮಾರ್ಕ 1: 29-31 ಮತ್ತು ವ್ಯಾಖ್ಯಾನ ನೋಡಿರಿ). ಯೇಸು ತನ್ನ ಹಿಂಬಾಲಕರಿಗೆ ವಾಗ್ದಾನ ಮಾಡಿದ ಸಮೃದ್ದಿಯಾದ

ಜೀವನವು (ಯೋಹಾನ 10:10) ಈ ಲೋಕದಲ್ಲಿಯೇ ಪ್ರಾರಂಭವಾಗುತ್ತದೆ. ನಿತ್ಯ ಜೀವವು ನಾವು ನಂಬುವ ಕ್ಷಣದಿಂದಲೇ ಪ್ರಾರಂಭಗೊಳ್ಳುತ್ತದೆ. ಯೇಸು ನಮಗೆ ಹೇಳುವದು ಇಷ್ಟೇ; "ಪ್ರಾಪಂಚಿಕ ಆಶೀರ್ವಾದಗಳನ್ನು ಹುಡುಕ ಬೇಡಿರಿ, ನನ್ನನ್ನು ಮಾತ್ರವೇ ಹುಡಿಕಿರಿ, ಮತ್ತು ನಾನು ನಿಮ್ಮನ್ನೂ ಇಂದು ಎಂದೆಂದೂ ಆಶೀರ್ಧಿಸುವೆನು"(ಯೋಹಾನ 12:25, 1 ಯೋಹಾನ 2:15-17 ಮತ್ತು ವ್ಯಾಖ್ಯಾನಗಳನ್ನು ನೋಡಿರಿ) ಮತ್ತು ನಾವು ನಮ್ಮನ್ನು ಮೋಸಪಡಿಸಿಕೊಳ್ಳದಿರೋಣ, ನಾವು ಕ್ರಿಸ್ತನನ್ನು ಮತ್ತು ಪ್ರಾಪಂಚಿಕ ಆಶೀರ್ವಾದಗಳನ್ನು ಏಕ ಕಾಲದಲ್ಲಿಯೇ ಹುಡುಕಲು "ಸಾಧ್ಯವಿಲ್ಲ" ನಾವು ಅರಿಸಿಕೊಳ್ಳಬೇಕು (ಮತ್ತಾಯ 6:20-24 ವ್ಯಾಖ್ಯಾನ ನೋಡಿರಿ).

**36** ಒಬ್ಬನು ಇಡೀ ಲೋಕವನ್ನೇ ಸಂಪಾದಿಸಿಕೊಂಡರೂ ತನ್ನ ಪ್ರಾಣ (ಅಂದರೆ ಆತನ ಆತ್ಮ) [59] ನಷ್ಟಮಾಡಿಕೊಂಡರೆ ಏನು ಪ್ರಯೋಜನ? ಬೇರೆ ಮಾತುಗಳಲ್ಲಿ ಹೇಳುವದಾದರೆ ನಾವು ನಮ್ಮ ಶಾಸ್ವತವಾದ ಆತ್ಮವನ್ನು ಕಳೆದುಕೊಳ್ಳುವದಾದರೆ ಈ ಲೋಕದಿಂದ ನಮಗೇನು ಒಳ್ಳೆಯದು? ಈ ಲೋಕದಲ್ಲಿನ ಜೀವನ ಬಹಳ ಕ್ಲುಪ್ತೆ.

ಈ ಜೀವನದಲ್ಲಿ ಕೆಲವು ಸುಖಮಯ ವರ್ಷಗಳನ್ನು ಪಡೆಯಲು ದೇವರೊಂದಿಗಿನ ನಿತ್ಯ ಜೀವನವನ್ನು ಏಕೆ ಕಳೆದುಕೊಳ್ಳಬೇಕು?

**37** ಈ ಲೋಕದಲ್ಲಿ ನಮ್ಮ ಆತ್ಮಕ್ಕಿಂತಲೂ ಹೆಚ್ಚು ಅಮೂಲ್ಯವಾದದ್ದು ಬೇರೊಂದಿಲ್ಲ. ನಿತ್ಯ ಜೀವಕ್ಕಿಂತಶ್ರೇಷ್ಟವಾದದ್ದು ಪ್ರಪಂಚದಲ್ಲಿ ಬೇರೊಂದಿಲ್ಲ. ಯೇಸು, ಹೀಗೆನ್ನುತ್ತಾನೆ – " ಒಬ್ಬ ಮನುಷ್ಯನು ತನ್ನ ಆತ್ಮಕ್ಕೆ ಏನು ಈಡುಕೊಡಬಲ್ಲನು? " ಅದಕ್ಕೆ ಉತ್ತರವೇನೆಂದರೆಃ ಏನೂ ಇಲ್ಲ. ಒಂದು ಆತ್ಮವೂ ಇಡೀ ಲೋಕಕ್ಕಿಂತಲೂ ಬೆಲೆ ಉಳ್ಳದ್ದಾಗಿದೆ. ನಮ್ಮ ಆತ್ಮವು ಕಳೆದುಹೋಗುವದಾದರೆ ಅದರ ನಷ್ಟವನ್ನು ತಿರಿಗಿ ಸಂಪಾದಿಸಲಾಗದು. ನಂತರ ಮತ್ತಾಯ 16:17ರ ಪ್ರಕಾರವಾಗಿ ಯೇಸು ಹೀಗೆಂದನು, "ಮನುಷ್ಯಕುಮಾರನು ತನ್ನ ತಂದೆಯ ವೈಭವದೊಡನೆ ತನ್ನ ದೂತರ ಸಮೇತವಾಗಿ ಬರುವನು. ಅವಾಗ ಆತನು ಒಬ್ಬೊಬ್ಬನಿಗೆ ಅವನವನ ನಡತೆಗೆ ತಕ್ಕ ಫಲವನ್ನು ಕೊಡುವನು" (ಮಾರ್ಕ 13:26-27 ಮತ್ತು ವ್ಯಾಖ್ಯಾನ ನೋಡಿರಿ) ಲೋಕಾಂತ್ಯದಲ್ಲಿ ಕ್ರಿಸ್ತನು ನ್ಯಾಯಾದೀಶನಾಗಿ ತಿರಿಗಿ ಬರುವನು (ಯೋಹಾನ 5:22) ಮತ್ತು ನಾವು ಆತನಿಗೋಸ್ಕರ ಮಾಡಿದ್ದಕ್ಕೆಲ್ಲ ಪ್ರತಿಫಲವನ್ನು ಕೊಡುವನು. (2 ಕೊರಿಂಥ 5:10 ಮತ್ತು ವ್ಯಾಖ್ಯಾನ ನೋಡಿರಿ) ಈ ಲೋಕದಲ್ಲಿ ನಾವು ಆತನಿಗೋಸ್ಕರ ಏನೆಲ್ಲಾ ನಷ್ಟ ಅನುಭವಿಸಿದ್ದರೂ ಪರಲೋಕದಲ್ಲಿ ಆತನು ನಮಗೆ ಸಮೃದ್ಧಿಯಾಗಿ, ಹಿಂದಕ್ಕೆ ಕೊಡುವನು.

**38** ಒಂದು ವೇಳೆ ಈ ಲೋಕದಲ್ಲಿ ನಾವು ಕ್ರಿಸ್ತನ ವಿಷಯದಲ್ಲಿ ನಾಚಿಕೆಪಟ್ಟುಕೊಂಡರೆ, ಲೋಕಾಂತ್ಯದಲ್ಲಿ ಆತನು ಪು ನಃ ಬರುವಾಗ ನಮ್ಮ ಕುರಿತು ನಾಚಿಕೆ ಪಟ್ಟುಕೊಳ್ಳುವನು. ನಾವು ಮನುಷ್ಯರ ಮುಂದೆ ಕ್ರಿಸ್ತನನ್ನು ಅಲ್ಲಗಳೆದರೆ, ಪರಲೋಕದಲ್ಲಿ ತಂದೆಯ ಮುಂದೆ ಆತನು ನಮ್ಮನ್ನು ಅಲ್ಲಗಳೆಯುವನು (ಮತ್ತಾಯ 10:32-33 ಮತ್ತು ವ್ಯಾಖ್ಯಾನ ನೋಡಿರಿ) ನಾವು ಕ್ರೈಸ್ತಯೆಂಬುದಕ್ಕಾಗಿ ಎಂದಿಗೂ ನಾಚಿಕೆ ಪಟ್ಟುಕೊಳ್ಳಬಾರದು ಹೆದರಿಕೆ ಕಾರಣದಿಂದ ನಾವು ಅದನ್ನು ಗುಪ್ತವಾಗಿ ಇಡಕೂಡದು, ಕ್ರಿಸ್ತನಿಗೆ ರಹಸ್ಯ ಹಿಂಬಾಲಕರು ಬೇಕಾಗಿಲ್ಲ.

---

## ಅಧ್ಯಾಯ - 9

### ರೂಪಾಂತರ (9:1-13)

(ಮತ್ತಾಯ 16:28, 17: 1-13, ಲೂಕ 9: 27-36)

**1** ಯೇಸು ಹೇಳಿದ್ದು "ಇಲ್ಲಿ ನಿಂತಿರುವವರೊಳಗೆ ಕೆಲವರು ದೇವರ ರಾಜ್ಯವು ಪ್ರಭಲವಾಗಿ ಬಂದಿರುವದನ್ನು ನೋಡುವತನಕ ಮರಣ ಹೊಂದುವದಿಲ್ಲ " ಈ ವಚನದಲ್ಲಿ ದೇವರ ರಾಜ್ಯವು ಅಂದರೆ ಯೇಸುವೇ ಆಗಿದ್ದಾನೆ ಎಂದರ್ಥ (ಮಾರ್ಕ 1:14 ಮತ್ತು ವ್ಯಾಖ್ಯಾನ ನೋಡಿರಿ) ಮತ್ತಾಯ 16:28 ರ ಪ್ರಕಾರವಾಗಿ ಯೇಸು ಹೀಗೆನ್ನುತ್ತಾನೆ – ಇಲ್ಲಿ ನಿಂತವರೊಳಗೆ ಕೆಲವರು ಮನುಷ್ಯಕುಮಾರನು ತನ್ನ ರಾಜ್ಯದಲ್ಲಿ ಬರುವದನ್ನು ನೋಡುವ ತನಕ ಮರಣಹೊಂದುವದಿಲ್ಲ ಅಂದನು. ಆದುದರಿಂದ ಈ ಮತ್ತಾಯ ಮತ್ತು ಮಾರ್ಕನ ಸುವಾರ್ತೆಗಳಲ್ಲಿನ ಈ ಹೋಲಿಕೆಯ ವಚನಗಳನ್ನು ಹೊಂದಿಸಿ ನೋಡುವಾಗ ("ದೇವರ ರಾಜ್ಯವು ಪ್ರಭಲವಾಗಿ ಬರುವದು") ಎಂಬುದು "ಮನುಷ್ಯಕುಮಾರನು ತನ್ನ ರಾಜ್ಯದೊಂದಿಗೆ ಬರುವನು" ಎರಡು ಒಂದೇಯಾಗಿರುತ್ತದೆ. ಕ್ರಿಸ್ತನು ದೇವರ ರಾಜ್ಯವನ್ನು ಭೂಮಿಗೆ ತಂದಿರುವದು ಮಾತ್ರವಲ್ಲದೇ ಸ್ವತಃ ಆತನೇ ದೇವರ ರಾಜ್ಯವಾಗಿದ್ದಾನೆ. ಕ್ರಿಸ್ತನು ನಮ್ಮಲ್ಲಿ ಜೀವಿಸುವಾಗ ದೇವರ ರಾಜ್ಯವು ಸಹ ನಮ್ಮಲ್ಲಿ ಜೀವಿಸುತ್ತದೆ. ದೇವರ ರಾಜ್ಯವು ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ ಶಾಶ್ವತವಾಗಿ ಸ್ಥಾಪಿಸಲ್ಪಡುವದು.

ಯೇಸು "..ದೇವರ ರಾಜ್ಯವು ಪ್ರಭಲವಾಗಿ ಬರುವದನ್ನು ಅವರು ನೋಡುವ ತನಕ" ಎಂದು ಹೇಳಿದ್ದರ ಅರ್ಥವೇನು?"ದೇವರ ರಾಜ್ಯವು ಬಲದೊಂದಿಗೆ ಬರುವದು" ಎಂಬ ಹೇಳಿಕೆಯು ಯಾವ ಘಟನೆಯನ್ನು ಸೂಚಿಸುತ್ತದೆ. ಎರಡೂ ಉತ್ತರಗಳ ಸಾದ್ಯತೆ ಇದೆ. ಕೆಲವು ಬೈಬಲ್ ಪಂಡಿತರು ಹೇಳುವದೇನಂದರೆ – ಈ ಹೇಳಿಕೆಯೂ, ಯೇಸುವಿನ ರೂಪಾಂತರ–ಗೊಳ್ಳುವಿಕೆಯನ್ನು ಸೂಚಿಸುತ್ತದೆ, ಇದನ್ನು ಮತ್ತಾಯ, ಮಾರ್ಕ, ಲೂಕನೂ, ಯೇಸು ಹೇಳಿಕೆಯನ್ನು ನೀಡಿದ

ತಕ್ಷಣವೇ ಅದರ ಬಗ್ಗೆ ಬಣ್ಣಿಸುತ್ತಾರೆ. ರೂಪಾಂತರ ಗೊಳ್ಳುವಿಕೆಯು ನಿಜವಾಗಿಯೂ ದೇವರ ರಾಜ್ಯದ ಮನುಷ್ಯಕುಮಾರನು ತನ್ನ ರಾಜ್ಯದಲ್ಲಿ ಬರುವದನ್ನು ಸಿದ್ಧಾಂತಪಡಿಸುವಿಕೆಯಾಗಿದೆ.

ಆದರೆ ಇತರ ಕೆಲವು ಪಂಡಿತರು ಈ ಹೇಳಿಕೆಯು ಕ್ರಿಸ್ತನ ಪು ನರುಥ್ಥಾನ, ಆತನ ಪರಲೋಕಾರೋಹಣ ಮತ್ತು ಪವಿತ್ರಾತ್ಮನ ಬರೋಣವನ್ನು ಸೂಚಿಸುತ್ತದೆ (ಅ.ಕೃತ್ಯ 1:4) ಪವಿತ್ರಾತ್ಮನ ಮೂಲಕ ಕ್ರಿಸ್ತನು ದೇವರ ರಾಜ್ಯವನ್ನು ವಿಶ್ವಾಸಿಗಳ ಹೃದಯಗಳಲ್ಲಿ ಸ್ಥಾಪಿಸಿದನು. ಪವಿತ್ರಾತ್ಮನ ವ್ಯಕ್ತಿತ್ವದಲ್ಲಿ ನಿಜವಾಗಿಯೂ ದೇವರರಾಜ್ಯವು ಬಲದೊಂದಿಗೆ ಬಂದಿರುತ್ತದೆ. ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನ ಎರಡನೆಯ ಬರೋಣವನ್ನು ಸೂಚಿಸುತ್ತದೆ. ಹೇಗಿದ್ದರೂ ಈ ವಚನದಲ್ಲಿ ಅದು ಬೇರೆಯಾಗಿರುತ್ತದೆ. ಯಾಕಂದರೆ ದೇವರ ರಾಜ್ಯವು ಪ್ರಭಲವಾಗಿ ಬರುವದನ್ನು ನೋಡುವ ತನಕ ಕೆಲವರು ಸಾಯುವದಿಲ್ಲವೆಂದು ಯೇಸು ಹೇಳುತ್ತಾನೆ. ಲೋಕಾಂತ್ಯವೂ ಇನ್ನು ಬಂದಿರುವದಿಲ್ಲವಾದ್ದರಿಂದ ಯೇಸುವಿನ ಈ ಮಾತುಗಳನ್ನು ಕೇಳಿದ ಜನರೆಲ್ಲರೂ ಮರಣಿಸಿರುವದರಿಂದ ಯೇಸು ಈ ವಚನದಲ್ಲಿ ಅಥವಾ ಮತ್ತಾಯ 16:28 ರಲ್ಲಿ ಎರಡನೆಯ ಬರೋಣವನ್ನು ಕುರಿತು ಮಾತನಾಡಿರುವದು ಸಾದ್ಯವಿಲ್ಲ.

**2-3** ಆರು ದಿನಗಳ ಬಳಿಕ ಪೇತ್ರ, ಯಾಕೊಬ ಮತ್ತು ಯೋಹಾನರು [60] ಯೇಸು ಒಂದು ಮಹಿಮೆಯುಳ್ಳ ರೀತಿಯಲ್ಲಿ ರೂಪಾಂತರಗೊ ಳ್ಳುವದನ್ನು ನೋಡಿದನು. ಯೇಸು ನಿಜವಾಗಿಯೂ ಕ್ರಿಸ್ತನೂ (ಮಾರ್ಕ 8:29) ಎಂದು ಅರಿಕೆ ಮಾಡಿದವನಾಗಿ, ಈಗ ಯೇಸು ಮೂರು ಜನ ಮಹಿಮೆಗೊಂಡ ದೇವಕುಮಾರನಾಗಿ ಆರಿಸಿಕೊಳ್ಳುವದರ ಮೂಲಕ ಶಿಷ್ಯರ ನಂಬಿಕೆಯನ್ನು ದೃಡಪಡಿಸಿದನು.

**4** ಮೋಶೆ, ಮತ್ತು ಎಲೀಯ (ಮಾರ್ಕ 6:15) ಸಹ ಯೇಸುವಿನೊಂದಿಗೆ ವೈಭವದೊಡನೆ ಕಾಣಿಸಿಕೊಂಡರು (ಲೂಕ 9:31) ಲೂಕನ ದಾಖಲೆಯ ಪ್ರಕಾರವಾಗಿ ಅವರು ಯೇಸುವಿನೊಂದಿಗೆ ಬರಲಿರುವ ಆತನ ಅಗಲುವಿಕೆ ಅಂದರೆ ಆತನ ಮರಣ, ಪು ನರುಥ್ಥಾನ ಮತ್ತು ಪರಲೋಕಾರೋಹಣ ಕುರಿತು ಮಾತನಾಡಿದರು. (ಲೂಕ 9:31).

ಇದರ ಮೂಲಕ ದೇವರಭಕ್ತರು, ಈ ಲೋಕವನ್ನು ಬಿಡುವಾಗ ಮರಣಿಸುವದಿಲ್ಲ, ಅವರು ಕೇವಲ ನಿದ್ರಿಸುತ್ತಾರೆ (1 ಥೆಸಲೋನಿಕ 4:13-14) ಕ್ರಿಸ್ತನು ಅವರನ್ನು ಸುಲಭವಾಗಿ ಎಬ್ಬಿಸುತ್ತಾನೆ. ಶಿಷ್ಯರು ಮೋಶೆ ಮತ್ತು ಎಲೀಯರನ್ನು ಗುರುತಿಸಿದಂತೆಯೇ ನಾವು ಸಹ ಪರಲೋಕದಲ್ಲಿ ಒಬ್ಬರನ್ನೊಬ್ಬರು ಗುರುತಿಸುವೆವು .

**5-6** ಪೇತ್ರನು ಯೇಸುವಿಗೆ "ಗುರುವೇ, ನಾವು ಇಲ್ಲೇ ಇರುವದು ಒಳ್ಳೆಯದು" , ಅಂದನು. ಪೇತ್ರನು ತಾನು ಮೋಶೆ, ಎಲೀಯ ಮತ್ತು ಯೇಸುವಿಗಾಗಿ ಇರಲು ಮೂರು ಆಶ್ರಯಗಳನ್ನು ನೇಮಿಸಬೇಕೆಂದು ಯೋಚಿಸಿದನು. ಮೋಶೆ ಮತ್ತು ಎಲೀಯ ಆ ಪರ್ವತದಲ್ಲಿ ಯೇಸುವಿನೊಂದಿಗೆ ಉಳಿದುಕೊಳ್ಳಲು ಅವನು ಊಹಿಸಿಕೊಂಡನು. ಮೂವರು ಶಿಷ್ಯರು ಏನು ನಡೆಯುತ್ತಿತ್ತೆಂದು ನಿಜವಾಗಿಯೂ ಅರ್ಥಮಾಡಿಕೊಳ್ಳಲಿಲ್ಲ.

**7-8** ಕ್ರಿಸ್ತನು ದೇವಕುಮಾರನೆಂಬುದಕ್ಕೆ ರೂಪಾಂತರವು ಒಂದು ಗುರುತಾಗಿತ್ತು. ಇದು ಮುಂದೆ ದೇವರು ಮೋಡಗಳಿಂದ ಮಾತಾಡುವ ಮೂಲಕ ಇನ್ನೂ ದೃಡಪಟ್ಟಿತು "ಈತನು ಪ್ರಿಯನಾಗಿರುವ ನನ್ನ ಮಗನು, ಈತನ ಮಾತನ್ನು ಕೇಳಿರಿ " (ಮತ್ತಾಯ 17:5, ಮಾರ್ಕ 1:11, 2 ಪೇತ್ರ 1:17-18 ನೋಡಿರಿ). ಈಗಿನಿಂದ ಯೇಸು ಯಾರೆಂಬದರ ಬಗ್ಗೆ ಶಿಷ್ಯರು ಯಾವ ಸಂಶಯವನ್ನು ಹೊಂದದಿರಲಿ, ಮತ್ತು ಅವರು ಆತನ ಮಾತನ್ನು ಕೇಳಲಿ. ವಿಶೇಷವಾಗಿ ಪೇತ್ರನು ಮುಂಚೆಯೆ ಯೇಸುವಿನ ಮಾತನ್ನು ಕೇಳಲು ಸಿದ್ದನಾಗಿರಲಿಲ್ಲ (ಮಾರ್ಕ 8:32). ದೇವರ ಮನಸ್ಸನ್ನು ತಿಳಿಯಲು ಇಚ್ಚಿಸುವವರು ಕ್ರಿಸ್ತನ ಮಾತನ್ನು ಕೇಳಬೇಕು. ದೇವರ ಸ್ವರವು ಕೇಳಿದಾಕ್ಷಣವೇ ಮೂವರು ಶಿಷ್ಯರು ಹೆದರಿದವರಾಗಿ ಬೋರಲ ಬಿದ್ದರು. ಆದರೆ ಯೇಸು ಅವರಿಗೆ " ಏಳಿರಿ,.... ಹೆದರಬೇಡಿರಿ" ಅಂದನು (ಮತ್ತಾಯ 17:6-7).

**9** ಮಾರ್ಕ 8:30 ಮತ್ತು ವ್ಯಾಖ್ಯಾನ ನೋಡಿರಿ.

**10** ಯೇಸು 9ನೇ ವಚನದಲ್ಲಿ "ಸತ್ತವರೊಳಗಿಂದ ಎದ್ದು ಬರುವ" ಕುರಿತು ಮಾತಾಡಿದಾಗ ಆತನ ಮಾತಿನ ಅರ್ಥವೇನೆಂದು ಶಿಷ್ಯರು ಅರ್ಥಮಾಡಿಕೊಳ್ಳಲಿಲ್ಲ. ದೇವಕುಮಾರನು ಮೊದಲು ಬಾಧೆಪಟ್ಟು ಸಾಯಬೇಕು ಆಗ ಮಾತ್ರವೇ ಆತನು ಸತ್ತವರೊಳಗಿಂದ ಎದ್ದು ಬರುವನೆಂಬದನ್ನು ಅವರು ಇನ್ನೂ ಅರ್ಥಮಾಡಿಕೊಳ್ಳಲಿಲ್ಲ (ಲೂಕ 24:25-27, 45-46).

**11** ಪರ್ವತದಲ್ಲಿ ಎಲೀಯನನ್ನು ನೋಡಿದ ಬಳಿಕ ಶಿಷ್ಯರು ಹಳೆ ಒಡಂಬಡಿಕೆಯಲ್ಲಿ ಎಲೀಯನು ಮೆಸ್ಸಿಯನು ಬರುವದಕ್ಕಿಂತ ಮುಂಚೆ ತಿರಿಗಿ ಬರುವನೆಂಬುದಾಗಿ ಪ್ರವಾದಿಯಾದ ಮಲಾಖಿಯು ಬರೆದಿದ್ದನ್ನು ಜ್ಞಾಪಿಸಿಕೊಂಡರು (ಮಲಾಕಿ 4:5) ಯೇಸುವೇ , ಮೆಸ್ಸಿಯನಾಗಿದ್ದಾದರೆ ಎಲಿಯನು ಬಂದಿರಲಿಲ್ಲವೇಕೆ? ಎಂಬುದನ್ನು ಶಿಷ್ಯರು ತಿಳಿಯಲಿಚ್ಚಿಸಿದರು. ಎಲಿಯನು ಮೆಸ್ಸಿಯನನ್ನು ಇಸ್ರಾಯೇಲರ ಅರಸನನ್ನಾಗಿ ಅಭಿಷೇಕಿಸಲು ಬರುವನೆಂದು ಯೆಹೂದ್ಯರು ನಂಬಿದ್ದರು.

**12** ಯೇಸು ಮೂವರು ಶಿಷ್ಯರಿಗೆ ಉತ್ತರಿಸಿ "ಹೌದು, ಮೆಸ್ಸಿಯನಿಗಿಂತಲೂ ಮೊದಲು ಎಲೀಯನು ಬಂದು ಎಲ್ಲಾ ಸಂಗತಿಗಳನ್ನು ಸರಿ ಮಾಡುವದು ನಿಜ" ಎಂದನು. "ಎಲ್ಲಾ ಸಂಗತಿಗಳು ಪಶ್ಚಾತಾಪ ಮತ್ತು ಕ್ಷಮಾಪಣೆ ಮೂಲಕ ಸರಿ ಮಾಡಲ್ಪಡುವದು. ಮಲಾಕಿಯ ಪ್ರವಾದನೆಯು ಮುಂದಿನ ವಚನದ ಅರ್ಥ ಇದೇ ಆಗಿದೆ (ಮಲಾಕಿಯನ 4:6) ಆದರೆ ಯೇಸು ತನ್ನ ಶಿಷ್ಯರು ತಾನು ಏಕೆ ಬಹಳ ಬಾಧೆಯನ್ನು ಅನುಭವಿಸಿ ತಿರಸ್ಕರಿಸಲ್ಪಡಬೇಕೆಂಬುದನ್ನು ಅರ್ಥಮಾಡಿಕೊಳ್ಳಲಿಲ್ಲ ಎಂದು ಬಲ್ಲವನಾಗಿದ್ದನು. ಮೆಸ್ಸಿಯನ ಕುರಿತಾದ ಯೇಶಾಯನ ಪ್ರವಾದನೆಯನ್ನು ಅವರು ಮರೆತಿದ್ದರು

(ಯೇಶಾಯ 53:1-12) ಅವರ ಮನಸ್ಸುಗಳಲ್ಲಿದ್ದ ಪ್ರಶ್ನೆ ಏನಂದರೆ, ಎಲೀಯನು ಎಲ್ಲಾ ಸಂಗತಿಗಳನ್ನು ಸರಿಪಡಿಸಲಿರುವದಾದರೆ ಇನ್ನೂ ಮೆಸ್ಸಿಯನು ಬಾಧೆ ಪಡಬೇಕೆ?

**13** ಆಗ ಯೇಸು ಉತ್ತರಿಸಿ – ಎಲಿಯನು ಈಗಾಗಲೇ ಸ್ನಾನಿಕನಾದ ಯೋಹಾನನ[61] ರೂಪದಲ್ಲಿ ಬಂದವನೆಂದು ಹೇಳಿದನು (ಮತ್ತಾಯ 11:13-14, 17:13). ಎಲೀಯನೂ ತಿರುಗಿ ಬರಬೇಕೆಂದು ಶಾಸ್ತ್ರಿಗಳು ಹೇಳಿದ್ದರು. ಮತ್ತು ಅದು ಸರಿಯಾದದ್ದೇ, ಆದರೆ ಆತನು ಬಂದಿದ್ದಾಗ ಅವರು ಗುರುತಿಸಲಿಲ್ಲ (ಮತ್ತಾಯ 17:11-12) ಅವರು ವಾಖ್ಯಗಳನ್ನು ಓದುತಿದ್ದರೂ, ದೇವರ ರಾಜ್ಯದ ಸಂಕೇತಗಳನ್ನು ಗುರುತಿಸಲು ಆಗಲಿಲ್ಲ. (ಮತ್ತಾಯ 16:3) - ಹಳೆ ಒಡಂಬಡಿಕೆಯ ಎಲಿಯನು ತಿರಸ್ಕರಿಸಲ್ಪಟ್ಟಿದ್ದನು (1 ಅರಸು 19:1-3, 9-10).

ಅದೇರೀತಿ ಸ್ನಾನಿಕನಾದ ಯೋಹಾನನು ಸಹ ತಿರಸ್ಕರಿಸಲ್ಪಟ್ಟು ಕೊನೆಗೆ ಕೊಲ್ಲಲ್ಪಟ್ಟಿದ್ದನು. ಅದೇ ರೀತಿಯಲ್ಲಿ ಯೇಸುವಿನ ಕರೆಯುವಿಕೆಯಲ್ಲಿಯೂ ಸಹ ಬಾಧೆ ಮತ್ತು ಮರಣದ ಮೂಲಕ ನೆರವೇರಿಸಲ್ಪಡುವದು. ಮಹಿಮೆಗೆ ಹೋಗುವದಾರಿ ಯಾವಾಗಲೂ ಬಾಧೆಯ ಮೂಲಕವೇ.

## ದುರಾತ್ಮ ಪೀಡಿತನಾದ ಒಬ್ಬ ಬಾಲಕನನ್ನು ಸ್ವಸ್ಥಮಾಡುವದು ( 9: 14-32)

(ಮತ್ತಾಯ 17: 14-23, ಲೂಕ 9: 37-45)

**14-18** ಇಲ್ಲಿ ನಾವು ಪರ್ವತದ ತುದಿಯಲ್ಲಿನ ರೂಪಾಂತರ ಮತ್ತು ಕೆಳಗಿನ ತಗ್ಗು ಇವು ಗಳನಡುವೆ ವಿಸ್ಮಯಕಾರಿ ವಿರೋದತೆಯನ್ನು ಕಾಣುತ್ತೇವೆ. ಪರ್ವತದ ಅಡಿ ಭಾಗದಲ್ಲಿ ನಾವು ಒಬ್ಬ ಬಡ ಬಾಲಕನ ಮೇಲೆ ಸೈತಾನನ ಅಕ್ರಮಣ, ತಂದೆಯ ವೇದನೆ, ಮತ್ತು ಇದಕ್ಕು ಮುಂಚೆ, ದೆವ್ವಗಳನ್ನು ಓಡಿಸುವ ಶಕ್ತಿಯನ್ನು ಕೊಡಲ್ಪಟ್ಟ 9 ಜನ ಶಿಷ್ಯರ ಅಸಮರ್ಥತೆಯನ್ನು ನೋಡುತ್ತೇವೆ (ಮಾರ್ಕ 3:14-15, 6:7) ಮತ್ತು ಅಂತಿಮವಾಗಿ ಶಾಸ್ತ್ರಿಗಳು, ಧಾರ್ಮಿಕ ಅಧಿಕಾರಿಗಳು ಅಲ್ಲಿ ವಾಗ್ವಾದ ಮಾಡುತ್ತಿದ್ದರು. ಅವರು ಬಾಲಕನನ್ನು ಗುಣ ಪಡಿಸುತ್ತಿಲ್ಲ, ಅವರು ಕೇವಲ ಟೀಕಿಸುತ್ತಾ, ಮಾತನಾಡುತ್ತಾ ಇದ್ದರು. ನಮ್ಮ ಲೋಕದ ಎಂತಹ ಸರಿಯಾದ ಚಿತ್ರಣ!.

**19** ಶಿಷ್ಯರ ಅಪನಂಬಿಕೆಗಾಗಿ ಯೇಸು ಅವರನ್ನು ಗದರಿಸುತ್ತಾನೆ ನಂಬಿಕೆಯ ಕೊರತೆಯ ಕಾರಣದಿಂದಲೇ ಅವರು ದೆವ್ವವನ್ನು ಬಿಡಿಸಲಾಗಲಿಲ್ಲ, (ಮತ್ತಾಯ 17:20), ಯೇಸು "ಇನ್ನು ಎಷ್ಟುಕಾಲ ನಿಮ್ಮ ಸಂಗಡ ಇರಲಿ? ಇನ್ನೆಷ್ಟು ದಿನ ನಿಮ್ಮನ್ನು ಸಹಿಸಿಕೊಳ್ಳಲಿ?" ಎಂದನು. ಇದನ್ನು ಹೇಳುವದರ ಮೂಲಕ ಯೇಸು ಶಿಷ್ಯರನ್ನು ಗದರಿಸುತ್ತಿದ್ದರೂ ಮಾತ್ರವಲ್ಲದೆ ಆತನು ದೆವ್ವ ಪೀಡಿತನಾದ ಬಾಲಕನ ತಂದೆಯನ್ನು, ಶಾಸ್ತ್ರಿಗಳನ್ನು ಅವರ ಅಪ ನಂಬಿಕೆಗಾಗಿ ಗದರಿಸುತ್ತಿದ್ದನು. "ಎಲಾ ನಂಬಿಕೆ ಇಲ್ಲದಂತಹ ಸಂತಾನವೇ".

**20-22** ತಂದೆಯು ಯೇಸುವಿಗೆ "ಆದರೆ ನಿನ್ನ ಕೈಲಿ ಏನಾದರೂ ಆಗುವ ಹಾಗೇ ಇದ್ದರೆ ನಮ್ಮ ಮೇಲೆ ಕರುಣೆ ಇಟ್ಟು ಸಹಾಯಮಾಡು" ಎಂದನು. ತಂದೆಯು ಯೇಸುವಿಗೆ ತಪ್ಪಾದ ಪ್ರಶ್ನೆಯನ್ನು ಕೇಳಿದನು...."ನಿನ್ನ ಕೈಲಿ ಏನಾದರೂ ಆಗುವ ಹಾಗೆ ಇದ್ದರೆ" ಯೇಸು ಎಲ್ಲವನ್ನು ಮಾಡಬಲ್ಲನು! ಆತನ ಶಕ್ತಿಯು ಅಪರಿಮಿತ.

**23** "ನಿನ್ನ ಕೈಲಿ ಆಗುವಹಾಗೆ ಇದ್ದರೆ ಅನ್ನುತ್ತಿಯೋ? ನಾನು ನಿನ್ನ ಮಗನನ್ನು ಸ್ವಸ್ಥ ಮಾಡಬಲ್ಲೆ, ಆದರೆ ಪ್ರಶ್ನೆ ಏನಂದರೆ ನೀನು ನಂಬುತ್ತಿಯಾ? ನಂಬುವವನಿಗೆ ಎಲ್ಲಾ ಸಾದ್ಯವಿದೆ" ಬಾಲಕನ ಸ್ವಸ್ಥತೆ ಯೇಸುವಿನ ಶಕ್ತಿಯ ಮೇಲೆ ಆತುಕೊಂಡಿರಲಿಲ್ಲ. ಆತನ ಬಲವು ಯಾವಾಗಲು ಸಾಕಷ್ಟಿದೆ, ಅದಕ್ಕೆ ಮಿತಿಯೇ ಇಲ್ಲಾ, ಬದಲಾಗಿ ಬಾಲಕನ ಸ್ವಸ್ಥತೆಯೂ ತಂದೆಯು, ಯೇಸುವಿನ ಮೇಲೆ ಇಡುವ ನಂಬಿಕೆಯ ಮೇಲೆ ಆಧಾರವಾಗಿತ್ತು. ತಂದೆಯ ಕಡೆಯಲ್ಲಿ ನಂಬಿಕೆ ಇಲ್ಲದ ಹೊರತು ಈ ಪರಿಸ್ಥಿತಿಯಲ್ಲಿ ಯೇಸುವಿನ ಬಲವು ಕಾರ್ಯ ಮಾಡದು, ತಂದೆಯ ನಂಬಿಕೆ ಯೊಂದಿಗೆ ಯೇಸುವಿನ ಬಲವು ಏನಾದರೂ ಮಾಡಬಲ್ಲದು.

**24** ಬಳಿಕ ತಂದೆಯು "ನಾನು ನಂಬುತ್ತೇನೆ, ಆದರೆ ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯ ಮಾಡು" ಅಂದನು. ಇದು ಪ್ರತಿಯೊಬ್ಬ ಕ್ರೈಸ್ತನ ಕೂಗಾಗಿದೆ, ನಾವು ಎಲ್ಲರೂ ಸ್ವಲ್ಪ ನಂಬಿಕೆಯನ್ನು ಹೊಂದಿದ್ದೇವೆ. ಆದರೂ ಅವಿಶ್ವಾಸಿ, ಸಂಶಯಗಳಿಂದ ಕೂಡಿದೆ, ನಮ್ಮ ನಂಬಿಕೆಯನ್ನು ಹೆಚ್ಚಿಸುವಂತೆಯೂ ಅದರ ಮೂಲಕ ಸಂಶಯ ಅವಿಶ್ವಾಸಗಳ ಮೇಲೆ ಜಯ ಸಾಧಿಸುವಂತೆ ನಾವು ನಿರಂತರವಾಗಿ ಯೇಸುವನ್ನು ಕೇಳಿಕೊಳ್ಳಬೇಕು. ನಾವು ಕ್ರಿಸ್ತನಿಂದ ಅಲ್ಲವಾಗಿ ಸ್ವೀಕರಿಸಲು ಮತ್ತು ಆತನಿಗಾಗಿ ನಾವು ಮಾಡುವ ಕಾರ್ಯವು ಬಲಹೀನವೂ ಫಲವಿಲ್ಲದೆಯೂ ಇರುವದಕ್ಕೆ ಮುಖ್ಯ ಕಾರಣ ಅವಿಶ್ವಾಸವೇ ಆಗಿದೆ.

**25-29** ಯೇಸು, ದೆವ್ವ ಪೀಡಿತಬಾಲಕನನ್ನು ಗುಣಪಡಿಸಿದ ನಂತರ ಶಿಷ್ಯರು ಯೇಸುವಿಗೆ "ಅದನ್ನು ಬಿಡಿಸಲು ನಮ್ಮಿಂದ ಯಾಕೆ ಆಗಲಿಲ್ಲ? ಎಂದು ಕೇಳಿದರು. ಒಂದು ಕಾರಣ ಅವರಿಗೆ ಈಗಾಗಲೇ ಗೊತ್ತಿತ್ತು – ಅದಾವದೆಂದರೆ ನಂಬಿಕೆಯ ಹೊರತು[62], ಆದರೆ ಯೇಸು ಅವರಿಗೆ ಇನ್ನು ಎರಡು ಕಾರಣಗಳನ್ನು ಕೊಟ್ಟನು. ಅವು ಗಳಾವವೆಂದರೆ – ಅವರು ಸಾಕಷ್ಟು ಪ್ರಾರ್ಥನೆ ಮತ್ತು ಉಪವಾಸ ಮಾಡಿರಲಿಲ್ಲ [63](ಮತ್ತಾಯ 17:21, ಮಾರ್ಕ 9:29). ಶಕ್ತಿಯನ್ನು ಪಡೆದುಕೊಳ್ಳಲು ಪ್ರಾರ್ಥನೆಯು ಮಾರ್ಗವಾಗಿದೆ. ನಾವು ಪ್ರಾರ್ಥನೆಯನ್ನು ನಂಬಿಕೆಯೊಂದಿಗೆ ಒಂದು ಗೂಡಿಸಬೇಕು. ನಂಬಿಕೆ ಇಲ್ಲದೆ, ನಮ್ಮ ಪ್ರಾರ್ಥನೆಗಳು ಪರಿಣಾಮಕಾರಿಯಾಗಿರುವದಿಲ್ಲ! ಪ್ರಾರ್ಥನೆಯಿಲ್ಲದೆ ನಮ್ಮ ನಂಬಿಕೆ ಪರಿಣಾಮಕಾರಿಯಾಗಿರುವದಿಲ್ಲ. ಪರಿಣಾಮಕಾರಿಯಾದ ಪ್ರಾರ್ಥನೆಗೆ ನಂಬಿಕೆ ಅವಶ್ಯಕ ಮತ್ತು ನಂಬಿಕೆಯನ್ನು ಪಡೆದುಕೊಳ್ಳಲು ಪ್ರಾರ್ಥನೆ ಅವಶ್ಯವಾದದ್ದು,

ನಾವು ಹೆಚ್ಚು ಪ್ರಾರ್ಥಿಸುವಾಗ, ಹೆಚ್ಚು ನಂಬಿಕೆಯನ್ನು ಪಡೆಯುತ್ತೇವೆ. ನಾವು ಹೆಚ್ಚು ನಂಬುವಾಗ ನಮ್ಮ ಪ್ರಾರ್ಥನೆಗಳು ಹೆಚ್ಚು ಪರಿಣಾಮಕಾರಿಯಾಗಿರುತ್ತವೆ; ಮತ್ತಾಯ 9:29 ರಲ್ಲಿ "ನೀವು ನಂಬಿದಂತೆಯೇ ನಿಮಗೆ ಆಗಲಿ" ಎಂದು ಯೇಸು ಹೇಳಿದನು. ನಂಬಿಕೆಯಿಂದ ಪ್ರಾರ್ಥಿಸುವಂತಹದ್ದು ಒಂದು ಯಂತ್ರದ ಸ್ವಿಚ್ಚನ್ನು ಹಾಕಿದ ಹಾಗೆ ಇರುತ್ತದೆ. ನಾವು ಅದನ್ನು ಹಾಕದೇ ಹೋದರೆ ಯಂತ್ರವು ಓಡುವದಿಲ್ಲ. ಕೆಲವು ಪರಿಸ್ಥಿತಿಗಳಲ್ಲಿ ದೇವರಿಂದ ನಮ್ಮ ಮನವಿಯನ್ನು ಪಡೆದುಕೊಳ್ಳಲು ಉಪವಾಸ ಮಾಡುವದು ಅವಶ್ಯಕವಾದದ್ದು. ಅನೇಕ ಕ್ರೈಸ್ತರು ಪ್ರಾರ್ಥನೆಯಿಂದ ಉಪವಾಸದಲ್ಲಿರುವಾಗ ಶ್ರೇಷ್ಠ ಫಲಿತಗಳನ್ನು ಅನುಭವಿಸಿದ್ದಾರೆ, ಹೆಚ್ಚು ಶಕ್ತಿ, ಹೆಚ್ಚು ಆಶೀರ್ವಾದ ಹೆಚ್ಚು ಮಾರ್ಗದರ್ಶನ. ಉಪವಾಸ ಮಾಡುವದೆಂದರೆ ಕೇವಲ ಕೆಲ ಕಾಲ ಊಟಮಾಡದೇ ಇರುವದೆಂಬ ಅರ್ಥವಲ್ಲ. ಉಪವಾಸವು ನಮ್ಮ ದೈಹಿಕ ಹಸಿವುಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವ, ಮತ್ತು ಆತ್ಮೀಕ ಪ್ರಯೋಜನವನ್ನು ಪಡೆದುಕೊಳ್ಳಲು, ಎಲ್ಲಾ ಪ್ರಾಪಂಚಿಕ ಯೋಜನೆಗಳನ್ನು, ಆಶಯಗಳನ್ನು ಬದಿಗೊತ್ತಿ ಬಯಕೆಯನ್ನು ಪ್ರದರ್ಶಿಸುವದೆ ಆಗಿದೆ. ದೇವರ ಚಿತ್ತವು ನೆರವೇರಿಸಲ್ಪಡುವಂತೆ ನಮ್ಮನ್ನು ಸಂಪೂರ್ಣವಾಗಿ ಆತನಿಗೆ ಅರ್ಪಿಸುವದಕ್ಕೆ ನಾವು ಸಿದ್ಧರಾಗಿದ್ದೇವೆಂಬದಕ್ಕೆ ಉಪವಾಸವು ಒಂದು ಗುರುತಾಗಿದೆ. ಆತನ ಸೇವೆಯಲ್ಲಿ ಉತ್ತಮವಾಗಿ ಗಮನ ಹರಿಸುವದಕ್ಕಾಗಿ ಆಹಾರದಂತಹ ಕಡ್ಡಾಯವಾದ ವಸ್ತುವನ್ನು ನಾವು ತೊರೆದು ಬಿಡಲು ಮನಸುಳ್ಳವರಾಗಿದ್ದೇವೆ ಎಂಬುದಕ್ಕೆ ಗುರುತಾಗಿದ್ದೇವೆ. ಉಪವಾಸದ ಮೂಲಕ ನಮ್ಮನ್ನು ದೇವರಿಗೆ ಅರ್ಪಿಸಲು ಗಂಭೀರವಾಗಿದ್ದೆವೆಂದು ಆತನಿಗೆ ತೋರ್ಪಡಿಸುವಾಗ, ಆತನು ನಮಗೆ ದೊಡ್ಡ ಪ್ರಮಾಣದಲ್ಲಿ ಶಕ್ತಿಯನ್ನು ಮತ್ತು ಜ್ಞಾನವನ್ನು ಆತ್ಮೀಕ ಆಶೀರ್ವಾದವನ್ನು ಕೊಡುವದರ ಮೂಲಕ ನಮ್ಮ ಪ್ರಾರ್ಥನೆಗೆ ಪ್ರತಿಕ್ರಯಿಸುವನು.

**30-32** ಇಲ್ಲಿ ಮಾರ್ಕನು ಯೇಸು ತನ್ನ ಮರಣ ಮತ್ತು ಪುನರುತ್ಥಾನದ ಕುರಿತು ಎರಡನೆಯ ಸಾರಿ ಹೇಳಿದ್ದನ್ನು ದಾಖಲಿಸುತ್ತಾನೆ (ಮಾರ್ಕ 8:31 ಮತ್ತು ವ್ಯಾಖ್ಯಾನ ನೋಡಿರಿ). ಯೇಸು ತನಗೆ ಏನು ಸಂಭವಿಸಲಿದೆ ಎಂಬುದನ್ನು ಸರಿಯಾಗಿ ತಿಳಿದವನಾಗಿದ್ದನು. ದೇವರು ತನ್ನನ್ನು ದುಷ್ಟ ಮಾನವರ ಕೈಗೆ ಒಪ್ಪಿಸುವನು ಮತ್ತು ಮೂರು ದಿನಗಳ ನಂತರ, ತಿರುಗಿ ದೇವರು ಅವನನ್ನು ಎಬ್ಬಿಸುವನೆಂದು ಬಲ್ಲವನಾಗಿದ್ದನು (ಅ.ಕೃ. 2:22-24) ಆದರೆ ಶಿಷ್ಯರು ಇನ್ನೂ ಯೇಸುವಿನ ಅರ್ಥವನ್ನು ತಿಳಿದುಕೊಳ್ಳಲಾಗಲಿಲ್ಲ.

## ಯಾರು ದೊಡ್ಡವರು (9:33-41)

(ಲೂಕ 9:46-50)

**33-34** ಶಿಷ್ಯರು ತಮ್ಮೊಳಗೆ ಯಾರು ದೊಡ್ಡವರು ಎಂದು ಚರ್ಚಿಸಲು ಪ್ರಾರಂಭಿಸುವರು, ಯೇಸು ಅವರನ್ನು ನೀವು ಏನು ಮಾತನಾಡುತ್ತಿರುವಿರೆಂದು ಕೇಳಲು ಅವರು ಕಸಿವಿಸಿಗೊಂಡರು, ಯಾಕಂದರೆ ಯೇಸು ಮರಣಿಸಿದ ಮೇಲೆ ಅವರಲ್ಲಿ ಯಾರು ನಾಯಕನಾಗಿರುತ್ತಾರೆಂದು ಅವರು ಚರ್ಚಿಸುತ್ತಿದ್ದರು. ಆದರೆ ಅವರು ಏನು ಚರ್ಚಿಸುತ್ತಿದ್ದಾರೆಂದು ಯೇಸುವಿಗೆ ಗೊತ್ತಿತ್ತು ಮತ್ತು ಗರ್ವದ ಕಾರಣದಿಂದಲೇ ಅವರು ತಮ್ಮೊಳಗೆ ಯಾರು ದೊಡ್ಡವರೆಂಬದರ ಬಗ್ಗೆ ವಾಗ್ವಾದ ಮಾಡುತ್ತಿದ್ದಾರೆಂದು ಯೇಸು ಬಲ್ಲವನಾಗಿದ್ದನು. ಶಿಷ್ಯರು ಕ್ರಿಸ್ತನ ರಾಜ್ಯದಲ್ಲಿ ಆಳುವದಕ್ಕಾಗಿ ಕಾತುರಗೊಂಡಿದ್ದರು, ಆದರೆ ಮುಂದಿನ ಘಟನೆಗಳು ನಿರೂಪಿಸುವ ಹಾಗೆ ಅವರು ಆತನಿಗಾಗಿ ಪ್ರಯಾಸ ಮತ್ತು ಬಾಧೆಯನ್ನು ಪಡೆಯಲು ಅಷ್ಟು ಕಾತುರರಾಗಿರಲಿಲ್ಲ.

**35** ನಂತರ ಯೇಸು ಅವರಿಗೆ ಇನ್ನೊಂದು ಪ್ರಾಮುಖ್ಯವಾದ ಸಂಗತಿಯನ್ನು ಬೋಧಿಸಿದರು. ಅದೇನಂದರೆ ನಾಯಕನಾಗ ಬೇಕೆಂದಿರುವವನು ಸೇವಕನಾಗಬೇಕು. (ಮಾರ್ಕ 10:43-44 ನೋಡಿರಿ). ಮೊದಲನೆಯವನು ಕಡೆಯವನಾಗುವನು (ಮಾರ್ಕ 10:31) ಯಾರೂ ಕೂಡಾ ಮೊದಲನೆಯವನಾಗಲು ಪ್ರಯತ್ನಿಸಬಾರದು. ತಮ್ಮನ್ನು ಕೊನೆಯವರನ್ನಾಗಿ ಮಾಡಿಕೊಂಡವರಲ್ಲಿ ದೇವರು ಆರಿಸಿಕೊಂಡು ನಾಯಕರನ್ನಾಗಿ ನೇಮಿಸುತ್ತಾನೆ, ಕಾರಣ ತನ್ನನ್ನು ಹೆಚ್ಚಿಸಿಕೊಳ್ಳುವವನು ತಗ್ಗಿಸಲ್ಪಡುವನು, ತನ್ನನ್ನು ತಗ್ಗಿಸಿಕೊಳ್ಳಲ್ಪಡುವವನು ತನ್ನನ್ನು ಹೆಚ್ಚಿಸಿಕೊಳ್ಳುವನು (ಮತ್ತಾಯ 23:12) ಹೀಗಿರುವದರಿಂದ ಯಾವನು ಈ ಚಿಕ್ಕ ಮಗುವಿನಂತೆ ತನ್ನನ್ನು ತಗ್ಗಿಸಿಕೊಳ್ಳುತ್ತಾನೋ ಅವನೇ ಪರಲೋಕ ರಾಜ್ಯದಲ್ಲಿ ಹೆಚ್ಚಿನವನು (ಮತ್ತಾಯ 18:4).

ತಿರಿಗಿ ನಾವಿಲ್ಲಿ ಕ್ರಿಸ್ತನ ಬೋಧನೆಯು ಪ್ರಪಂಚದ ಬೋಧನೆಗೆ ತದ್ವಿರುದ್ದವಾಗಿದೆ ಎಂಬುದನ್ನು ಕಾಣುತ್ತೇವೆ. ಪ್ರಪಂಚದ ಮನುಷ್ಯರು[64] ಮೊದಲನೆಯವರಾಗಲು ತವಕಪಡುತ್ತಾರೆ, ಆತ್ಮೀಕ ಮನುಷ್ಯರು ಕಡೆಯವರಾಗಿ ನೋಡುತ್ತಾರೆ. ಪ್ರಪಂಚದ ದೃಷ್ಟಿಯಲ್ಲಿ ಕಡೆಯವರಾಗಿ ಇರುವವರು ದೇವರ ದೃಷ್ಟಿಯಲ್ಲಿ ಮೊದಲನೆಯವರಾಗಿರುತ್ತಾರೆ. ಮನುಷ್ಯರಲ್ಲಿ ಶ್ರೇಷ್ಟ ಎನಿಸಿಕೊಳ್ಳುವಂತಹದ್ದು ದೇವರ ದೃಷ್ಟಿಯಲ್ಲಿ ಅಸಹ್ಯವಾಗಿದೆ (ಲೂಕ 16:15) ಪ್ರಪಂಚವು ದೇವರಿಗೆ ವಿರೋಧಿಯಾಗಿದೆ ಶರೀರಭಾವವು ಬದಲಾಯಿಸುವದು ಆತ್ಮನಿಗೆ ವಿರುದ್ದವಾಗಿದೆ (ಗಲಾತ್ಯ 5:17).

ಪ್ರಾಪಂಚಿಕ ಲಾಭವನ್ನು ಹುಡುಕುವವರು ಆತ್ಮೀಕ ನಷ್ಟವನ್ನು ಅನುಭವಿಸುವರು! ಕ್ರಿಸ್ತನಿಗೋಸ್ಕರ ನಷ್ಟವನ್ನು ಅನುಭವಿಸುವವರು ಆತ್ಮೀಕ ಲಾಭವನ್ನು ಪಡೆದುಕೊಳ್ಳುವರು. (ಮಾರ್ಕ 8:35 ಮತ್ತು ವ್ಯಾಖ್ಯಾನ ನೋಡಿರಿ).

**36-37** ಮೊದಲನೆಯವನಾಗಬೇಕೆಂದಿರುವವನು ಸೇವಕನಾಗಿರಬೇಕು ಎಂದು ಹೇಳಿದ ನಂತರ ಯೇಸು ಒಬ್ಬ ಚಿಕ್ಕ "ಮಗು" ವನ್ನು ತನ್ನ ಬಾಹುಗಳಲ್ಲಿ ಎತ್ತಿಕೊಂಡು ತಾನು ಹೇಳುತ್ತಿರುವ ಸಂಗತಿಗೆ ಉದಾಹರಣೆಯಾಗಿ ತೋರಿಸಿದನು. ಯೇಸು ಮಾತನಾಡುತ್ತಿದ್ದ ಆರಾಮಿಕ ಭಾಷೆಯಲ್ಲಿ "ಸೇವಕ" ಮತ್ತು "ಮಗು" ಇವು ಗಳಿಗೆ ಇರುವ ಪದ ಒಂದೆ ಆಗಿದೆ. ಹೀಗೆ ಯೇಸು ಇಲ್ಲಿ ಹೇಳುತ್ತಿದ್ದದ್ದು ಏನಂದರೆ ಒಬ್ಬ ಸೇವಕ (ಒಬ್ಬ ಶಿಷ್ಯ) ನಾಗಿರಲು ಅವನು ಬಾಲಕ ನಂತಾಗಬೇಕು. ಚಿಕ್ಕ

ಮಗು ಮುಗ್ದನಾಗಿರುತ್ತಾನೆ. ಚಿಕ್ಕ ಮಗು ತನ್ನನ್ನು ದೊಡ್ಡವನನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುವದಿಲ್ಲ. ಆತನು ಇತರರನ್ನು ಮೆಚ್ಚಿಸಲು ಪ್ರಯತ್ನಿಸುತ್ತಾನೆ (ಮತ್ತಾಯ 18:1-5 ಮತ್ತು ವ್ಯಾಖ್ಯಾನ ನೋಡಿರಿ). ಬಳಿಕ ಯೇಸು ಇಂಥಹ ಒಂದು ಮಗುವನ್ನು ಅಂದರೆ ಒಬ್ಬ ಶಿಷ್ಯನನ್ನು ನನ್ನ ಹೆಸರಿನಲ್ಲಿ ಸೇರಿಸಿಕೊಂಡರೆ ನನ್ನನ್ನು ಸೇರಿಸಕೊಂಡ ಹಾಗಾಯಿತು. ಮತ್ತು ಯೇಸುವನ್ನು ಸ್ವೀಕರಿಸುವವನು ತನ್ನನ್ನು ಕಳುಹಿಸಿಕೊಟ್ಟ ದೇವರನ್ನು ಸ್ವೀಕರಿಸಿದ ಹಾಗಾಯಿತೆಂದು ಹೇಳಿದನು (ಮತ್ತಾಯ 10:40 ಯೋಹಾನ 12:44-45, 13:20 ನೇ. ವ. ಮತ್ತು ವ್ಯಾಖ್ಯಾನ ಗಳನ್ನು ನೋಡಿರಿ). ತಮ್ಮನ್ನು ಚಿಕ್ಕ ಮಕ್ಕಳಂತೆ ದೀನ ಸೇವಕರಂತೆ ಮಾಡಿಕೊಳ್ಳುವವರನ್ನು ಯೇಸು ತನ್ನ ಪ್ರತಿನಿಧಿಗಳನ್ನಾಗಿ ಮಾಡುವನು. ಹೀಗೆ ಯೇಸುವಿನ ಪ್ರತಿನಿದಿಗಳನ್ನು ಸ್ವೀಕರಿಸುವವರು ಯೇಸುವನ್ನು ಸ್ವೀಕರಿಸುವರು! ಆತನ ಪ್ರತಿನಿಧಿಗಳನ್ನು ತಿರಸ್ಕರಿಸುವವರು ಯೇಸುವನ್ನು ಮತ್ತು ದೇವರನ್ನು ತಿರಸ್ಕರಿಸುವವರಾಗಿದ್ದಾರೆ (ಲೂಕ 10:16), ದೇವರ ಕುಮಾರನಾದ ಕ್ರಿಸ್ತನ ಪ್ರತಿನಿಧಿಗಳೂ ತಮ್ಮ ರಾಯಭಾರಿಗಳೂ ಆಗಿರುವದು ಒಂದು ದೊಡ್ಡ ಘನತೆಯಾಗಿದೆ, ಆದರೆ ದೀನ ಮತ್ತು ಮಕ್ಕಳ ಹಾಗೆ ಇರುವಂತವರು ಮಾತ್ರವೇ ಆ ಗೌರವವನ್ನು ಹೊಂದಿಕೊಳ್ಳುತ್ತಾರೆ.

**38** ಇಲ್ಲಿ ಮಾರ್ಕನು ಶಿಷ್ಯರು ಮಾಡಿದಂತಹ ಒಂದು ತಪ್ಪನ್ನು, ಯೇಸುವಿನ ಕಾಲದಿಂದಲೂ ಕ್ರಿಸ್ತರು ಮಾಡುತ್ತಿರುವಂತಹ ಒಂದು ತಪ್ಪನ್ನು ಕುರಿತು ಬಣ್ಣಿಸುತ್ತಾನೆ. ಶಿಷ್ಯರು ತಮ್ಮ ಗುಂಪು ತಮ್ಮ ಪಕ್ಷ ಮಾತ್ರವೇ ಯೇಸುವಿನ ನಿಜವಾದ ಹಿಂಬಾಲಕರೆಂದು ಯೋಚಿಸಿದರು. ಅವರ ಗುಂಪಿಗೆ ಸೇರದ ಒಬ್ಬನನ್ನು ಅವರು ನೋಡಿದಾಗ ಅವನು ಯೇಸುವಿನ ಹೆಸರಿನಲ್ಲಿ ದೆವ್ವಗಳನ್ನು ಬಿಡಿಸಿದಂತೆ ತಡೆಯಲು ಪ್ರಯತ್ನಿಸಿದನು "ನಾವು ಮಾತ್ರವೇ ನಿಜವಾದ ಶಿಷ್ಯರು, ನಮಗೆ ಮಾತ್ರವೇ ಯೇಸುವಿನ ನಾಮದಲ್ಲಿ ಕಾರ್ಯಮಾಡುವ ಅಧಿಕಾರ ಉಂಟು" ಎಂದು ಯೋಚಿಸಿಕೊಂಡರು. ಈ ರೀತಿಯ ಮನೋಭಾವದಿಂದಲೇ ಸಭೆಯಲ್ಲಿ ವಿಭಾಗಗಳು ಮತ್ತು ವಿವಾದಗಳು ಉಂಟಾಗಿವೆ. ಯಾವನಾದರೂ ಯೇಸುವಿನ ಹೆಸರಿನಲ್ಲಿ ಒಳ್ಳೆಯದನ್ನು ಮಾಡುತ್ತಿರುವದಾದರೆ ನಾವು ಅವನನ್ನು ವಿರೋದಿಸಬಾರದು ಇಲ್ಲವಾದರೆ ನಾವು ಯೇಸುವನ್ನೆ ವಿರೋದಿಸಿದಂತಾಗುತ್ತದೆ.

**39-40** ಯೇಸು ತನ್ನ ಶಿಷ್ಯರಿಗೆ "ಅವನಿಗೆ ಅಡ್ಡಿ ಮಾಡಬೇಡಿರಿ" ನನ್ನ ಹೆಸರಿನ ಮೇಲೆ ಮಹತನ್ನು ಮಾಡಿ ಏಕಾ ಏಕಿ ನನ್ನನ್ನು ದೂಷಿಸುವವನು ಒಬ್ಬನೂ ಇಲ್ಲ. ನಮ್ಮನ್ನು ಎದುರಿಸದವನು ನಮ್ಮ ಪಕ್ಷದವನೇ. ಯೇಸುವನ್ನು ವಿರೋಧಿಸದವರೆಲ್ಲರೂ ಆತನ ಪಕ್ಷದವರೇ ಎಂಬುದನ್ನು ನಾವು ಪರಿಗಣಿಸಬೇಕು. ಕ್ರಿಸ್ತನು ಮತ್ತು ಸೈತಾನನ ನಡುವಿನ ಹೋರಾಟದಲ್ಲಿ ಯಾವನು ಕೂಡಾ ತಟಸ್ಥನಾಗಿರಲು ಸಾದ್ಯವಿಲ್ಲ. ಆದುದರಿಂದ ಯೇಸುವನ್ನು ವಿರೋಧಿಸಿದವನು ಆತನ ಪರವಾಗಿ ಇರುಬೇಕು. ಇತರರು ವ್ಯತ್ಯಾಸಕರವಾದ ರೀತಿಯಲ್ಲಿ ಯೇಸುವನ್ನು ಸೇವಿಸಬಹುದು. ಅವರು ಇನ್ನೊಂದು ಗುಂಪು , ಇನ್ನೊಂದು ಸಂಸ್ಥೆಯವರಾಗಿರಬಹುದು, ಆದರೆ ಅವರು ಯೇಸುವಿನ ನಾಮದಲ್ಲಿ ಕೆಲಸ ಮಾಡುತ್ತಿರುವದಾದರೆ ನಾವು ಅವರನ್ನು ಜೊತೆ ಸಹೋದರರರಂತೆಯೂ ಮತ್ತು ಕ್ರಿಸ್ತನ ಸಹ ಸೇವಕರಂತೆಯೂ ಸ್ವೀಕರಿಸಬೇಕು [65], (ಮತ್ತಾಯ 12:30, ಮಾರ್ಕ 3:27 ಮತ್ತು ವ್ಯಾಖ್ಯಾನ ನೋಡಿರಿ).

**41** ಕ್ರಿಸ್ತನ ಸೇವೆ ಮಾಡುವವರೆಲ್ಲರೂ ಪ್ರತಿಫಲವನ್ನು ಹೊಂದುವರು, (ಮತ್ತಾಯ 16:27, 2 ಕೊರಿಂಥ 5:16). ಕ್ರಿಸ್ತನು ತನ್ನ ಹೆಸರಿನಲ್ಲಿ ಮಾಡಲ್ಪಟ್ಟ ಅತಿ ಚಿಕ್ಕ ಕಾರ್ಯವನ್ನೂ (ಶಿಷ್ಯರಿಗೆ ಒಂದು ಗ್ಲಾಸ ನೀರನ್ನು ಕೊಡುವದನ್ನು ಸಹ) ಮರೆಯುವದಿಲ್ಲ (ಮತ್ತಾಯ 10: 42). ಕ್ರಿಸ್ತನು ನಮ್ಮ ಕಾಣಿಕೆಯ ಗಾತ್ರಕ್ಕನುಸಾರವಾಗಿ ಪ್ರತಿಫಲ ಕೊಡುವದಿಲ್ಲ ಆದರೆ ನಾವು ಅದನ್ನು ಕೊಡುವ ಪ್ರೀತಿಗನುಸಾರವಾಗಿ ಪ್ರತಿಫಲ ಕೊಡುತ್ತಾನೆ (ಮಾರ್ಕ 12:42-44 ನೋಡಿರಿ).

## ಪಾಪ ಮಾಡುವಂತೆ ಪ್ರಚೋದಿಸುವದು (9: 42-50)

(ಮತ್ತಾಯ 18:6-9, ಲೂಕ 17: 1-2)

**42** ಒಬ್ಬ ಸಹೋದರನಿಗೆ ಅಡ್ಡಿ ಮಾಡುವದು ಅಂದರೆ ಪಾಪಕ್ಕೆ ನಡೆಸುವದು ದೇವರ ದೃಷ್ಟಿಯಲ್ಲಿ ಅತಿ ದೊಡ್ಡ ಪಾಪವಾಗಿದೆ ಈ ಚಿಕ್ಕವರಲ್ಲಿ ಒಬ್ಬನು ಎಂದರೆ ದೀನತೆಯುಳ್ಳ ಚಿಕ್ಕ ಮಗುವಿನಂತಿರುವ ಕ್ರಿಸ್ತನ ಸೇವಕ ಎಂದರ್ಥ. ಬಹುಶ ಶಿಷ್ಯರು ದೆವ್ವಗಳನ್ನು ಬಿಡಿಸುತ್ತಿದ್ದ ವ್ಯಕ್ತಿಯನ್ನು (ವಚನ 38) ಅಡ್ಡಿ ಪಡಿಸಿರಬಹುದು. (ಅಂದರೆ ಪಾಪಕ್ಕೆ ನಡೆಸುವದು). ಒಂದು ವೇಳೆ ಅವರು ಆತನನ್ನು ನಿರಾಶೆಗೊಳಿಸಿ ಯೇಸುವಿನಿಂದ ಅವನನ್ನು ಅಗಲಿಸಿರಬಹುದು. ನಾವು ಈ ಎಚ್ಚರಿಕೆಯನ್ನು ನೆನಪಿನಲ್ಲಿಟ್ಟುಕೊಂಡು ನಮ್ಮ ಸಹೋದರನು ಎಡವು ವಂತೆ ಏನನ್ನೂ ಮಾಡದೇ ಇರಲು ಜಾಗೃತೆವಹಿಸಿಕೊಳ್ಳೊಣ (ರೋಮ 14:13-21). ನಾವು ನಮ್ಮ ಸಹೋದರನಿಗೆ ನಿರಾಶೆಮಾಡುವಾಗ ಅಥವಾ ಯಾವದೇ ರೀತಿಯ ಶೋಧನೆ ನಡೆಸುವಾಗಲೆಲ್ಲಾ ನಾವು ಆತನು ಪಾಪಮಾಡಲು ಕಾರಣವಾಗುತ್ತೇವೆ. ತನ್ನ ಸಹೋದರನಿಗೆ ಈ ರೀತಿಯಾಗಿ ಎಡೆ ಬಿಡದೆ ಅಡ್ಡಿಮಾಡುತ್ತಿರುವ ವ್ಯಕ್ತಿ ಸಮುದ್ರದಲ್ಲಿ ಮುಳುಗಿ ಹೋಗುವದು ಉತ್ತಮ, ಯಾಕೆಂದರೆ ನ್ಯಾಯತೀರ್ಪಿನ ದಿನದಲ್ಲಿ ದೇವರು ಆತನ ದುಷ್ಟ ಕಾರ್ಯಕ್ಕಾಗಿ ದಂಡಿಸಲಿದ್ದಾನೆ.

**43** ನಿನ್ನ ಕೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕತ್ತರಿಸಿಬಿಡು. ನಾವು ಕತ್ತಿಯನ್ನು ತೆಗೆದುಕೊಂಡು ನಿಜವಾಗಿಯೂ ಕೈಯನ್ನು ಕತ್ತರಿಸಿಕೊಳ್ಳಬೇಕೆಂದು ಯೇಸುವಿನ ಅರ್ಥವಲ್ಲ. ಕೈ ಪಾಪದ ಸಾಧನ ಮಾತ್ರವೇ ಆಗಿದೆ. ನಾವು ನಮ್ಮ ಹೃದಯದಿಂದ ಪಾಪವನ್ನು ಕತ್ತರಿಸುವ ಅಗತ್ಯವಿದೆ. ನಮಗೆ ಕಳ್ಳತನ ಮಾಡುವ ಬಯಕೆಯಿದ್ದರೆ, ನಮ್ಮ ಕೈ ಕೆಟ್ಟದ್ದು ಎಂದಲ್ಲ ಆದರೆ ನಮ್ಮ ಹೃದಯ ಕೆಟ್ಟದ್ದಾಗಿದೆ. ಆ ಪಾಪವನ್ನು ತೆಗೆದು ಹಾಕಲು ಸಾದ್ಯವಿರುವದನೆಲ್ಲಾ ನಾವು ಮಾಡಬೇಕು.

ಶಸ್ತ್ರ ಚಿಕಿತ್ಸಕನು ರೋಗಿಯ ಜೀವ ಉಳಿಸುವದಕ್ಕಾಗಿ ವ್ಯಾಧಿಪೀಡಿತ ಕೈ ಅಥವಾ ಕಾಲನ್ನು ಕತ್ತರಿಸುವ ಹಾಗೆಯೇ ನಾವು ಸಹ ನಮ್ಮ ಆತ್ಮಗಳ ರಕ್ಷಣೆಗಾಗಿ ನಮ್ಮ ಜೀವಿತಗಳಿಂದ ಪಾಪವನ್ನು ಕತ್ತರಿಸಿ ಹಾಕಬೇಕು ನಮಗೆ ಅತಿಪ್ರಿಯವಾಗಿರುವಂತೆ ಸಂಗತಿಯು ನಮ್ಮ ಪಾಪಕ್ಕೆ ನಡೆಸುವದಾದರೆ ನಾವು ಅದರಿಂದ ಬೇರ್ಪಡಲು ಸಿದ್ಧರಾಗಿರಬೇಕು.

ಪಾಪವನ್ನು ನಮ್ಮ ಹೃದಯದಿಂದ ತೆಗೆದು ಹಾಕುವದು ಒಂದು ಕೈ ಅಥವಾ ಕಾಲನ್ನು ಕತ್ತರಿಸುವಂತೆಯೇ ಬಹಳ ನೋವು ದಾಯಕವಾಗಿರಬಹುದು (ವಚನ 45). ನಾವು ಜೀವವನ್ನು ಅಂದರೆ ದೇವರೊಂದಿಗೆ ಪರಲೋಕದಲ್ಲಿ ಕಳೆಯುವ ಜೀವವನ್ನು ಪ್ರವೇಶಿಸಬೇಕಾದರೆ ಇದನ್ನು ಮಾಡಲೇಬೇಕು. ನಾವು ನಮ್ಮ ಪಾಪವನ್ನು ನಮ್ಮೊಂದಿಗೆ ದೇವರ ರಾಜ್ಯದಲ್ಲಿ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ (ಮತ್ತಾಯ 29-30, ರೋಮ 8:13, 13-14, ಕೊಲೊಸ್ಸೆ 3:5-6, ಪ್ರಕಟಣೆ 21:27 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**44-48** ಇಲ್ಲಿ ಪು ನಃ ಕಾಲು ಮತ್ತು ಕಣ್ಣನ್ನು ಪಾಪಮಯ ಅಂಗಗಳ ಉದಾಹರಣೆಯಾಗಿ ಉಪಯೋಗಿಸಿ ಹೇಳುವ ಬೋಧನೆಯು ಪು ನರಾವರ್ತನೆಗೊಳ್ಳುತ್ತದೆ. ನಮ್ಮ ಕಾಲು ಕ್ರಿಸ್ತನ ಕಡೆಯಿಂದ ಓಡಲು, ತಪ್ಪು ಮಾರ್ಗದಲ್ಲಿ ನಡೆಯಲು ಕಾರಣವಾಗುವದಾದರೆ ನಾವು ಅದನ್ನು ಕತ್ತರಿಸಿ ಬಿಡಬೇಕು. ಒಂದು ವೇಳೆ ನಮ್ಮ ಸ್ತ್ರೀಯನ್ನು ಮೋಹಿಸಿ, ವ್ಯಬಿಚಾರಕ್ಕೆ ನಡೆಸುವದಾದರೆ ನಾವು ಅದನ್ನು "ಕಿತ್ತು ಹಾಕಬೇಕು" (ಮತ್ತಾಯ 5: 29-30) ಅಂದರೆ ನಮ್ಮ ಜೀವಿತಗಳಿಂದ ಪಾಪವನ್ನು ಕಿತ್ತುಹಾಕಲು ಅವಶ್ಯಕವಾದದ್ದನ್ನೆಲ್ಲಾ ನಾವು ಮಾಡಬೇಕು. ನರಕವು ಒಂದು ಅತ್ಯಂತ ಕೆಟ್ಟ ಸ್ಥಳವಾಗಿದೆಯಂದು ಯೇಸು ಬೋಧಿಸಿದನು. ಅದು ನಿತ್ಯ ಬಾಧೆಯ ಅಥವಾ ಬೆಂಕಿಯ, ಗೋಳಾಟವು , ಹಲ್ಲುಕಡಿಯೋಣವು ಇರುವಂತ ಸ್ಥಳವಾಗಿದೆ (ಮತ್ತಾಯ 13:40-42).

48 ನೇ ವಚನದಲ್ಲಿ ಯೇಸು ಯೇಶಾಯ 66:12 ರಿಂದ ಒಂದು ಸಂಗತಿಯನ್ನು ಉಲ್ಲೇಖಿಸುತ್ತಾನೆ. ಅವರ ಹುಳು ಸಾಯುವದಿಲ್ಲ. ನರಕಕ್ಕೆ ಕಳುಹಿಸಲ್ಪಟ್ಟವರ ನಾಶನ, ಗೋಳಾಟ ನಿತ್ಯ ನಿತ್ಯಕ್ಕು ಸಾಗುವದು. ನಮ್ಮ ಮುಖ್ಯ ಸಾಧನ ಪಾಪ. ಆದುದರಿಂದ ನಮ್ಮ ಮುಖ್ಯ ವೈರಿ ಪಾಪ ಎಂದು ಸಹ ನಾವು ಹೇಳಬಹುದು. ಪಶ್ಚಾತಾಪ ಪಡದ ಪಾಪವು ನಮ್ಮನ್ನು ದೇವರು ಮತ್ತು ಪರಲೋಕದಿಂದ ಶಾಶ್ವತವಾಗಿ ಅಗಲಿಸುತ್ತದೆ.

ಪಾಪವು ನಮ್ಮನ್ನು ನರಕದಂಡನೆಗೆ ಒಳಪಡಿಸುತ್ತದೆ. ಆದ್ದರಿಂದ ನಮ್ಮ ಜೀವಿತದಲ್ಲಿ ಉಳಿಯಲು ನಾವು ಅದಕ್ಕೆ ಅನುಮತಿಸಬಾರದು ಅದು ನಮ್ಮನ್ನು ಪ್ರವೇಶಿಸಿ, ಉಳಿದು ಕೊಳ್ಳುವದಾದರೆ ಅದು, ನಮ್ಮನ್ನು ನಾಶ ಮಾಡುವದು. ಅತಿ ಚಿಕ್ಕ ಪಾಪವನ್ನು ಸಹ ನಮ್ಮ ಜೀವಿತಗಳಲ್ಲಿ ಉಳಿಯಲು ಬಿಡಬಾರದು. ದೋಣಿಯ ಅಡಿಯಲ್ಲಿರುವ ಅತಿ ಚಿಕ್ಕ ರಂಧ್ರವು ಸಹ ಕ್ರಮೇಣ ದೋಣಿಯಲ್ಲಿ ನೀರು ತುಂಬುವಂತೆ ಮಾಡಿ ಮುಳುಗಿಸುತ್ತದೆ. ಅದೇ ವಿಧದಲ್ಲಿ ನಾವು ಅತಿ ಚಿಕ್ಕ ಪಾಪವನ್ನು ಸಹ ನಮ್ಮ ಜೀವಿತದಲ್ಲಿ ಅನುಮತಿಸುವದಾದರೆ ಅದು ಬೆಳೆದು ಕ್ರಮೇಣ ನಮ್ಮನ್ನು ನಾಶಮಾಡುವದು.

**49** ಪ್ರತಿಯೊಬ್ಬನಿಗೂ ಬೆಂಕಿಯೆಂಬ ಉಪ್ಪಿನ ಹದವು ಕೊಡಲ್ಪಡಬೇಕು ಈ ವಚನದಲ್ಲಿ "ಬೆಂಕಿ" ಹಿಂಸೆಯನ್ನು ಸೂಚಿಸುತ್ತದೆ. ನಮ್ಮ ನಂಬಿಕೆಯು ಬೆಂಕಿಯಿಂದ ಪರೀಕ್ಷಿಸಲ್ಪಡುತ್ತದೆ (1 ಪೇತ್ರ 1:6-7). ಉಪ್ಪಿನ ಹದಕೊಡಲ್ಪಡುವದೆಂದರೆ ಪರಿಣಾಮಕಾರಿಯಾಗಿ ಮಾಡಲ್ಪಡುವದು ಹೀಗೆ, ಹಿಂಸೆಯ ಮೂಲಕವೇ ಶಿಷ್ಯರು ಕ್ರಿಸ್ತನಿಗಾಗಿ ಪರಿಣಾಮಕಾರಿ ಮತ್ತು ಬಲಿಷ್ಠರಾಗಿ ಮಾಡಲ್ಪಡುತ್ತಾರೆ.

**50** ಉಪ್ಪು ಜೀವನಕ್ಕೆ ಪ್ರಾಮುಖ್ಯವಾಗಿದೆ. ನಮ್ಮ ರಕ್ತದಲ್ಲಿಯೂ, ನಮ್ಮ ದೇಹದಲ್ಲಿಯೂ ಉಪ್ಪು ಇರುತ್ತದೆ. ನಂಬಿಕೆ ಲೋಕದಲ್ಲಿ ಉಪ್ಪಿನಂತಿರುತ್ತದೆ. ನಾವು ಉಪ್ಪುಳ್ಳವರಾಗಿ ಅಂದರೆ ನಂಬಿಗಸ್ಥರು, ವಿಧೇಯರೂ ಆಗಿ ಉಳಿಯಬೇಕು. ಇಲ್ಲವಾದರೆ ನಾವು ಅಯೋಗ್ಯರೂ, ರುಚಿಯಿಲ್ಲದವರೂ ಆಗುವೆವು (ಮತ್ತಾಯ 5:13 ಮತ್ತು ವ್ಯಾಖ್ಯಾನ ನೋಡಿರಿ). ನಮ್ಮನ್ನು ಉಪ್ಪಾಗಿ ಮಾಡುವವನು ಪವಿತ್ರಾತ್ಮನು. ಪವಿತ್ರಾತ್ಮನು ನಮ್ಮ ಜೀವಿತಗಳಿಂದ ಹೊರಟು ಹೋಗುವದಾದರೆ ನಾವು ಪು ನಃ ಹೇಗೆ ಉಪ್ಪಾಗಿರಲು ಸಾಧ್ಯ. ನಾವು ಪವಿತ್ರಾತ್ಮನ ಉಪ್ಪನ್ನು ನಮ್ಮ ಜೀವಿತಗಳಲ್ಲಿ ಇಟ್ಟುಕೊಳ್ಳಬೇಕು. ಪವಿತ್ರಾತ್ಮನು ನಮ್ಮಲ್ಲಿರುವದಾದರೆ ನಾವು ಒಂದೇ ಆತ್ಮ ಮತ್ತು ಒಂದೇ ಮನುಸ್ಸುಳ್ಳವರಾಗಿರುತ್ತೇವೆ. ಇತರರಿಗಿಂತಲೂ ದೊಡ್ಡವರೆನಿಸಿಕೊಳ್ಳುವದಕ್ಕೆ ಪ್ರಯತ್ನಿಸುವದರ ಬದಲಾಗಿ (ವಚನ 34), ನಾವು ಒಬ್ಬರೊಂದಿಗೊಬ್ಬರು ಸಮಾಧಾನದಿಂದಿರಬೇಕು.

---

## ಅಧ್ಯಾಯ - 10

### ವಿಚ್ಛೇದನ (10: 1-12)
(ಮತ್ತಾಯ 19:1-9)

**1-2** ಫರಿಸಾಯರು ತಿರಿಗಿ ಕಠಿಣವಾದ ಪ್ರಶ್ನೆಯೊಂದಿಗೆ ಯೇಸುವನ್ನು ಪರೀಕ್ಷಿಸಲು ಪ್ರಯತ್ನಿಸಿದರು. ಅವರ ಉದ್ದೇಶವು ಸತ್ಯವನ್ನು ತಿಳಿಯಬೇಕೆಂದಲ್ಲ, ಆದರೆ ಯೇಸು ಏನಾದರೂ ತಪ್ಪಾಗಿ ಹೇಳುವಂತೆ ಮಾಡಿ ಖಂಡಿಸಬೇಕೆಂಬದಾಗಿತ್ತು. ವಿಛ್ಛೇದನದ ಕುರಿತಾಗಿ ಪ್ರಶ್ನೆ ಕೇಳುವದರ ಮೂಲಕ ಹೆರೋದನು ಯೇಸುವಿನ ವಿರುದ್ಧ ಕೋಪ ಮಾಡಿಕೊಳ್ಳದಂತೆ

ಮಾಡಿದರೆ ಆಗ ಆತನು ಸ್ನಾನಿಕನಾದ ಯೋಹಾನನಿಗೆ ಮಾಡಿದ್ದನ್ನೇ ಯೇಸುವಿಗೂ ಮಾಡಬಹುದೆಂದು ನಿರೀಕ್ಷಿಸಿದರು (ಮಾರ್ಕ 6: 16-17). ಅವರು "ಒಬ್ಬನು ಹೆಂಡತಿಯನ್ನು ಬಿಟ್ಟು ಬಿಡುವದು ಧರ್ಮವೋ ಹೇಗೆ" ಎಂದು ಕೇಳಿದರು.

**3-4** ಅನೇಕವೇಳೆ ಅಂಥಹ ಪ್ರಶ್ನೆಗಳಿಗೆ ಯೇಸು ಇನ್ನೊಂದು ಪ್ರಶ್ನೆಯನ್ನು ಕೇಳುವದರ ಮೂಲಕ ಉತ್ತರಿಸಿದನು. ಮೋಶೆಯ (ಯೆಹೂದ್ಯರು) ಧರ್ಮಶಾಸ್ತ್ರವು ವಿಛ್ಛೇದನ ಕುರಿತು ಏನು ಹೇಳುತ್ತದೆಂದು ಯೇಸು ಫರಿಸಾಯರನ್ನು ಕೇಳಿದನು ಯಾವನಾದರೂ ತನ್ನ ಹೆಂಡತಿಗೆ ವಿಛ್ಛೇದನವನ್ನು ಕೊಡಲು ಬಯಸಿದರೆ ಅವನು ತ್ಯಾಗಪತ್ರವನ್ನು ಬರೆದು ಕೊಡತಕ್ಕದ್ದು ಎಂದು ಧರ್ಮಶಾಸ್ತ್ರವು ಹೇಳುತ್ತದೆ. (ಧರ್ಮೋಪದೇಶಕಾಂಡ 24: 1-4). ಸ್ತ್ರೀಯ ಹಕ್ಕುಗಳನ್ನು ಕಾಪಾಡುವದಕ್ಕಾಗಿ ಇದು ಬರೆಯಲ್ಪಟ್ಟಿದೆ. ಹೊರತು ವಿಛ್ಛೇದನವು ನ್ಯಾಯವಾದದ್ದು ಎಂದು ನಿರೂಪಿಸುವದಕ್ಕಲ್ಲ, ತ್ಯಾಗಪತ್ರವು ಹೀಗೆ ಕೆಲವೊಂದು ಕಾನೂನಬದ್ಧವಾದ ಹಕ್ಕುಗಳನ್ನು ಒದಗಿಸುತ್ತದೆ. ಉದಾ – ಮರುವಿವಾಹ.

**5** ಗಂಡಸರು ಉತ್ತಮ ಕಾರಣಗಳಿಲ್ಲದೆ ತಮ್ಮ ಹೆಂಡತಿಯರನ್ನು ತೊರೆದು ಬಿಡುತ್ತಿದ್ದರಿಂದ ಮೋಶೆಯು ವಿಛ್ಛೇದನದ ನಿಯಮವನ್ನು ಬರೆದನು. ಅನರು ದೇವರು ಒಂದುಗೂಡಿಸಿದ್ದನ್ನು ಬೇರ್ಪಡಿಸುತ್ತಿದ್ದರು (ವಚನ. 9). ಮನುಷ್ಯರ ಹೃದಯಗಳು ದೇವರು ಮತ್ತು ತಮ್ಮ ಹೆಂಡತಿಯರು ಇಬ್ಬರ ವಿರುದ್ಧವಾಗಿ ಕಠಿಣಗೊಂಡವು. ಮತ್ತಾಯನ ದಾಖಲೆಯ ಪ್ರಕಾರವಾಗಿ ಯೇಸು ಹೀಗೆನ್ನುತ್ತಾನೆ "ಮೋಶೆಯು ನಿಮ್ಮ ಮೊಂಡತನವನ್ನು ನೋಡಿ ನಿಮ್ಮ ಹೆಂಡರನ್ನು ಬಿಟ್ಟು ಬಿಡುವದಕ್ಕೆ ಅಪ್ಪಣೆಕೊಟ್ಟನು. ಆದರೆ ಆದಿಯಿಂದಲೇ ಹಾಗೇ ಇರಲಿಲ್ಲ". (ಮತ್ತಾಯ 19:8). 6-8 ಬಳಿಕ ಯೇಸು ಪುರುಷ ಮತ್ತು ಸ್ತ್ರೀಯರನ್ನು ದೇವರು ಹೇಗೆ ನಿರ್ಮಿಸಿದನೆಂದು (ಆದಿಕಾಂಡ 1:27), ಮತ್ತು ಅವರು ತಮ್ಮ ಹೆತ್ತವರನ್ನು ತೊರೆದು ಗಂಡ–ಹೆಂಡತಿಯರಾಗಿ ಜೊತೆಗೂಡಿ ಒಂದೇ ಶರೀರವಾಗಬೇಕೆಂದು ಇಚ್ಚಿಸಿದನೆಂಬುದನ್ನು ಬಣ್ಣಿಸುತ್ತಾನೆ (ಆದಿಕಾಂಡ 2:24). ಒಬ್ಬ ಪುರುಷ ಮತ್ತು ಆತನ ಹೆಂಡತಿ ಹೆತ್ತವರು ಮತ್ತು ಅವರ ಮಕ್ಕಳಿಗಿಂತಲೂ ಆಪ್ತರಾಗಿದ್ದಾರೆ. ತಂದೆ–ತಾಯಿಗಳು ತಮ್ಮ ಮಕ್ಕಳನ್ನು ಕೈ ಬಿಡುವದು ತಪ್ಪಾಗಿರುವದಾದರೆ, ಒಬ್ಬ ಗಂಡನೂ ತನ್ನ ಹೆಂಡತಿಯನ್ನು ತೊರೆದು ಬಿಡುವದು ಇನ್ನೂ ಎಷ್ಟೋ ತಪ್ಪಾಗಿರುತ್ತದೆ.

**9** ಆದುದರಿಂದ ಗಂಡ ಮತ್ತು ಹೆಂಡತಿ ಎಂದಿಗೂ ವಿಛ್ಛೇದನ ಮಾಡಬಾರದೆಂದು ದೇವರ ಇಂಗಿತವಾಗಿತ್ತು ವಿವಾಹವು ದೇವರಿಂದಲೇ ಸ್ಥಾಪಿಸಲ್ಪಟ್ಟಿತು. ಆದುದರಿಂದ ಒಂದು ವಿವಾಹವು ಒಡೆದು ಹೋಗುವಾಗ ಆತನಿಗೆ ಎಂದಿಗೂ ಸಂತೋಷವಾಗುವದಿಲ್ಲ.

**10-12** ನಂತರ ಯೇಸು ಒಂದು ಹೊಸ ಬೋಧನೆಯನ್ನು ನೀಡಿದನು. ಯೆಹೂದ್ಯರ ಧರ್ಮಶಾಸ್ತ್ರದ ಪ್ರಕಾರ ಸ್ತ್ರೀ ಮಾತ್ರವೇ ವ್ಯಭಿಚಾರ ಮಾಡುತ್ತಿದ್ದಳು. ಒಬ್ಬ ಗಂಡನೂ ಇನ್ನೊಬ್ಬ ಸ್ತ್ರೀಯೊಂದಿಗೆ ಹೋಗಬಹುದಿತ್ತು. ಮತ್ತು ಅದು ವ್ಯಭಿಚಾರವೆಂದು ಪರಿಗಣಿಸುತ್ತಿರಲಿಲ್ಲ. ಹೀಗೆ ಧರ್ಮಶಾಸ್ತ್ರವು ಸ್ತ್ರೀ ಮತ್ತು ಪುರುಷನನ್ನು ಸಮಾನವಾಗಿ ಕಾಣಲಿಲ್ಲ. ಆದರೆ ಯೇಸುವಿನ ಬೋಧನೆಯ ಪ್ರಕಾರವಾಗಿ ಒಬ್ಬ ಪುರುಷನು ಇನ್ನೊಬ್ಬ ಸ್ತ್ರೀಯೊಂದಿಗೆ ಹೋಗುವದಾದರೆ ಅವನೂ ಸಹ ವ್ಯಭಿಚಾರ ಮಾಡಿದವನಾಗಿದ್ದಾನೆ, ವಿವಾಹದಲ್ಲಿ ಗಂಡ ಮತ್ತು ಹೆಂಡತಿಯರಿಗೆ ಸಮಾನವಾದ ಜವಾಬ್ದಾರಿ ಮತ್ತು ಹಕ್ಕುಗಳು ಇವೆ.

ಗಂಡ ಅಥವಾ ಹೆಂಡತಿ ಇನ್ನೊಬ್ಬರನ್ನು ವಿವಾಹವಾಗುವದಕ್ಕಿಂತ ಮುಂಚೆಯೇ ತ್ಯಾಗ ಪತ್ರವನ್ನು ತುಂಬಿಕೊಟ್ಟರೂ ಸಹ ಅದು ದೇವರ ದೃಷ್ಠಿಯಲ್ಲಿ ಆಗಲೂ ವ್ಯಭಿಚಾರವಾಗಿದೆ. ದೇವರ ಆ ಕಾನೂನು ಮನುಷ್ಯರ ಕಾನೂನಿಗಿಂತಲೂ ಹೆಚ್ಚು ಉನ್ನತವಾಗಿದೆ ಮತ್ತಾಯ 5:32 ಮತ್ತು ಲೂಕ 16:18 ಕ್ಕನುಸಾರವಾಗಿ ಯಾವ ಪುರುಷನಾಗಲೀ ಆತನು ಒಬ್ಬಂಟಿಗನಾಗಿದ್ದರೂ ಸಹ ವಿಛ್ಛೇಧನ ಹೊಂದಿದ ಸ್ತ್ರೀಯನ್ನು ವಿವಾಹವಾಗುವದಾದರೆ ಸಹ ವ್ಯಭಿಚಾರ ಮಾಡಿದವನಾಗಿದ್ದಾನೆಂದು ಯೇಸು ಎಂದು ಸಹ ಬೋಧಿಸಿದನು. ವಿಛ್ಛೇಧನಗೊಂಡ ಪುರುಷನನ್ನು [66]. ವಿವಾಹವಾಗುವ ಏಕಾಂಗಿ ಸ್ತ್ರೀಗೂ ಇದೇ ನಿಯಮವು ಅನ್ವಯಿಸುವದು. ದಂಪತಿಗಳಲ್ಲಿ ಒಬ್ಬರು ಈಗಾಗಲೇ ವ್ಯಭಿಚಾರ ಮಾಡಿದ್ದರೆ ಮಾತ್ರವೇ ವಿಛ್ಛೇದನವು ನ್ಯಾಯವಾದದ್ದು ಎಂದು ಯೇಸು ತಿಳಿಸಿದನು(ಮತ್ತಾಯ 5:32, 19:9) ಒಬ್ಬ ಸಹಪಾಠಿ ವಿಚಾರಮಾಡುವದಾದರೆ ಇನ್ನೊಬ್ಬ ನಿರಪರಾದಿ ಸಹಪಾಠಿಯು ವಿವಾಹವಾಗಲು ಸ್ವತಂತ್ರನಾಗಿದ್ದಾನೆ (1 ಕೊರಿಂಥ 7:10-11 ಮತ್ತು ವ್ಯಾಖ್ಯಾನ ನೋಡಿರಿ). ಯೇಸುವಿನ ಮರಣದ ನಂತರ ಯೇಸುವಿನಲ್ಲಿ ಹೆಚ್ಚು ಹೆಚ್ಚು ಜವರು ನಂಬಿಕೆ ಇಡಲು ಪ್ರಾರಂಭಿಸಿದಂತೆ ಒಬ್ಬ ಗಂಡ ಅಥವಾ ಹೆಂಡತಿ ಕ್ರೈಸ್ತರಾಗಿ ಅವರ ಸಹಪಾಠಿ ಕ್ರೈಸ್ತನಾಗದೇ ಹೋದರೆ ಏನು ಮಾಡಬೇಕು ಎಂಬ ಪ್ರಶ್ನೆ ಎದುರಾಯಿತು. ಅಪೊಸ್ತಲನಾದ ಪೌಲನು ಕೊರಿಂಥದವರಿಗೆ ಬರೆದ ಮೊದಲನೆಯ ಪತ್ರಿಕೆಯಲ್ಲಿ ಈ ವಿಷಯದ ಕುರಿತು ಪ್ರಶ್ನಿಸುತ್ತಾನೆ (1 ಕೊರಿಂಥ 7:12-16 ಮತ್ತು ವ್ಯಾಖ್ಯಾನ ನೋಡಿರಿ).

## ಚಿಕ್ಕ ಮಕ್ಕಳು ಮತ್ತು ಯೇಸು ( 10: 13-16)

(ಮತ್ತಾಯ 19:13-15, ಲೂಕ 18:15-17)

**13** ಹಲವಾರು ವೇಳೆ ಶಿಷ್ಯರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡರು (ಮಾರ್ಕ 9:38) ಇಲ್ಲಿ ಅವರು ಚಿಕ್ಕ ಮಕ್ಕಳು ಯೇಸುವಿನ ಬಳಿಗೆ ಬಾರದಂತೆ ಅಡ್ಡಿ ಮಾಡುತ್ತಿದ್ದರು.

**14** ಆದರೆ ಯೇಸು ಶಿಷ್ಯರನ್ನು ಗದರಿಸಿ "ಚಿಕ್ಕ ಮಕ್ಕಳನ್ನು ನನ್ನ ಹತ್ತಿರ ಬರಗೊಡಿಸಿರಿ ದೇವರ ರಾಜ್ಯ ಅಂಥವರದೆ". ಎಂದು ಹೇಳಿದನು. ದೇವರ ರಾಜ್ಯವು ಆ ಚಿಕ್ಕ ಮಕ್ಕಳ ಗುಣಗಳನ್ನು ಹೊಂದಿರುವಂತಹವರಿಗೆ ಸೇರಿರುತ್ತದೆ. ಚಿಕ್ಕ ಮಕ್ಕಳು

ನೇರವಾಗಿ ಮಾತನಾಡುವವರು – ಕಪಟತನ ಇಲ್ಲದವರೂ ಆಗಿರುತ್ತಾರೆ. ಚಿಕ್ಕ ಮಕ್ಕಳು ಗೌರವ ಅಥವಾ ಸ್ಥಾನಕ್ಕಾಗಿ ಹಂಬಲಿಸುವದಿಲ್ಲ (ಮಾರ್ಕ. 9:36-37 ಮತ್ತು ವ್ಯಾಖ್ಯಾನ ನೋಡಿರಿ) ಚಿಕ್ಕ ಮಕ್ಕಳು ಮುಗ್ದರು, ದೀನರು, ವಿಶ್ವಾಸಿಸುವವರು ಆಗಿದ್ದಾರೆ. ನಾವು ದೇವರ ರಾಜ್ಯದಲ್ಲಿ ಪಾಲುಗಾರರಾಗಬೇಕಾದರೆ ಈ ಗುಣಗಳು ಅವಶ್ಯಕ. ಈ ವಚನದ ಮೂಲಕ ದೇವರು ಚಿಕ್ಕ ಮಕ್ಕಳೆಡೆಗೆ ಹೊಂದಿರುವ ಕ್ರೈಸ್ತ ಪ್ರೀತಿ ಮತ್ತು ಆರೈಕೆಯನ್ನು ನೋಡುತ್ತೇವೆ. ಚಿಕ್ಕ ಮಕ್ಕಳು ಸಾಯುವಾಗ ಏನಾಗುತ್ತಾರೆಂದು ಬೈಬಲ್ ಹೇಳುವದಿಲ್ಲ. ಆದರೆ ಅವರು ದೇವರ ಪ್ರೀತಿಯಿಂದ ಆಗಲಿದ್ದಾರೆ ಎಂದು ನಾವು ನಂಬಲಿಕ್ಕೆ ಸಾಧ್ಯವಿಲ್ಲ (ಸಾಮಾನ್ಯ ಬರಹಃ ಮಕ್ಕಳು ಮತ್ತು ದೇವರ ರಾಜ್ಯ ನೋಡಿರಿ.)

**15** ಯೇಸು ಮಕ್ಕಳನ್ನು ಪ್ರೀತಿಸುವದೇ ಅಲ್ಲ ನಾವು ಚಿಕ್ಕ ಮಕ್ಕಳಂತಾಗದೇ ಹೋದರೆ ದೇವರ ರಾಜ್ಯವನ್ನು ಪ್ರವೇಶಿಸಲಾರೆವು ಎಂದು ಸಹ ಬೋಧಿಸಿದನು. (ಮತ್ತಾಯ 18:3) ಯಾವನಾದರು ಚಿಕ್ಕ ಮಗುವಿನಂತೆ ದೇವರ ರಾಜ್ಯವನ್ನು ಸ್ವೀಕರಿಸದೇ ಹೋದರೆ ಅದರಲ್ಲಿ ಪ್ರವೇಶಿಸುವದೇ ಇಲ್ಲ. ಚಿಕ್ಕ ಮಗುವು ಹೇಗೆ ಏನನ್ನಾದರೂ ಪಡೆಯಲು ಸಾಧ್ಯ? ಅವನು ತನ್ನ ಕೈಯನ್ನು ಚಾಚುತ್ತಾನೆ, ಅವನು ಕೇಳುತ್ತಾನೆ. ಚಿಕ್ಕ ಮಗುವು ಅಸಹಾಯಕನು ಅವನು ಏನನ್ನು ಸಂಪಾದಿಸಲು ಸಾಧ್ಯವಿಲ್ಲ. ಅವನು ತಾನು ಇಚ್ಚಿಸುವದಕ್ಕೆ ಹಣವನ್ನು ಕೊಟ್ಟುಕೊಳ್ಳಲು ಆಗದು. ಅವನು ನಾನು ಕಷ್ಟಪಟ್ಟು ಕೆಲಸ ಮಾಡಿದ್ದೇನೆ– ನನಗೆ ಪ್ರತಿಫಲ ಸಿಗಲೇಬೇಕೆಂದು ಹೇಳಲಾಗದು. ಮಗುವು ತಾನು ಬಯಸುವದು ತನಗೆ ಕೊಡಲ್ಪಡುತ್ತದೆ ಎಂದು ನಂಬುತ್ತಾನೆ ಅಷ್ಟೇ – ಅವನು ಏನು ಕೇಳಿದರೂ ನಂಬಿಕೆಯಲ್ಲಿ ಕೇಳುತ್ತಾನೆ, ಸಂಶಯಸುವದಿಲ್ಲ. ಈ ರೀತಿಯಲ್ಲಿಯೇ ನಾವು ದೇವರ ರಾಜ್ಯವನ್ನು ಪ್ರವೇಶಿಸತಕ್ಕದ್ದು – ನಾವು ಪ್ರವೇಶಿಸಲು ಯೋಗ್ಯರಲ್ಲ ನಾವು ನಮ್ಮ ಪ್ರವೇಶವನ್ನು ಸಂಪಾದಿಸಿಕೊಳ್ಳಲು ಸಾಧ್ಯವಿಲ್ಲ. ನಾವು ಚಿಕ್ಕ ಮಕ್ಕಳಂತೆ ನಂಬಿಕೆಯಿಂದ ದೇವರ ರಾಜ್ಯವನ್ನು ಸ್ವೀಕರಿಸಿಕೊಳ್ಳಬೇಕು. ಅನ್ಯ ಮಾರ್ಗವಿಲ್ಲ.

**16** ಯೇಸು ಮಕ್ಕಳನ್ನು ಅಪ್ಪಿಕೊಂಡನು ನಾವು ಯೇಸುವಿನ ಮಾದರಿಯನ್ನು ಅನುಸರಿಸೋಣ, ನಾವು ಮಕ್ಕಳನ್ನು ದುಃಖಗೊಳಿಸದೆ ಹಾಗೆ ಅಥವಾ ಅಯೋಗ್ಯವಾಗಿ ವರ್ತಿಸದಂತೆ ಜಾಗ್ರತೆವಹಿಸಿಕೊಳ್ಳೋಣ, ಬದಲಾಗಿ ಯೇಸು ಅವರನ್ನು ಎಷ್ಟು ಪ್ರೀತಿಸುತ್ತಾನೆಂಬುದನ್ನು ಜ್ಞಾಪಿಸಿಕೊಳ್ಳೋಣ.

## ಐಶ್ವರ್ಯವಂತನಾದ ಯೌವ್ವನಸ್ಥನು (10:17-31)

(ಮತ್ತಾಯ 19:16-30–ಲೂಕ 18:18-30)

**17** ಒಬ್ಬನು ಓಡುತ್ತಾ ಯೇಸುವಿನ ಬಳಿಗೆ ಬಂದು –"ನಾನು ನಿತ್ಯ ಜೀವಕ್ಕೆ ಬಾಧ್ಯಸ್ಥನಾಗಬೇಕಾದರೆ ಏನು ಮಾಡಬೇಕು? ಎಂದು ಕೇಳಿದನು" ಆತನು ಕೇಳುತ್ತಿದ್ದ ವಿಷಯವೇನೆಂದರೆ "ನಾನು ಹೇಗೆ ರಕ್ಷಿಸಲ್ಪಡಬಲ್ಲೆನು"? ಪ್ರತಿಯೊಬ್ಬ ವ್ಯಕ್ತಿಯ ಹೃದಯಾಂತರಾಳದಲ್ಲಿ ಇದು ಪ್ರಾಮುಖ್ಯವಾದಂತಹ ಪ್ರಶ್ನೆಯಾಗಿರುತ್ತದೆ, ಇವನು ಐಶ್ವರ್ಯವಂತನಾಗಿದ್ದನು (ವಚನ 22) ಮತ್ತು ಈತನು "ಯೌವ್ವನಸ್ಥನೂ"ಆಗಿದ್ದನು (ಮತ್ತಾಯ 19:22, ಲೂಕ 18:18) ರ ಪ್ರಕಾರವಾಗಿ ಈತನು ಒಬ್ಬ ಅಧಿಕಾರಿಯಾಗಿದ್ದನು. ಈ ಲೋಕವು ಕೊಡುವಂತ ಎಲ್ಲವನ್ನು ಹೊಂದಿದ್ದನು. ಆದರು ಆತನು ಇನ್ನು ಪರಲೋಕದ ನಿತ್ಯ ಜೀವಕ್ಕಾಗಿ ಹುಡುಕುತ್ತಿದ್ದ

**18** ಸ್ಥತ್ಯಯಾವನ ಸ್ಥಿನಾ ಪ್ರಾಪಂಚಿಕ ರೀತಿಗಳಲ್ಲಿ ಯೋಚಿಸುತ್ತಿದ್ದನು. ಅವನು ಯೇಸು ವನ್ನುಒಳ್ಳೆಯ ಬೋಧಕನೇ ಎಂದು ಕರೆದನು (ವಚನ. 17). ಅವನೊಬ್ಬನೇ ಮಾನವ ಬೋಧಕನೆಂದು ಊಹಿಸಿದನು. ಆತನು ತಾನು ಒಬ್ಬನೇ ಒಳ್ಳೆಯವನೆಂದು ಯೋಚಿಸಿದನು. ಅಂದರೆ ತಾನು ಚಿಕ್ಕಂದಿನಿಂದಲೂ ಎಲ್ಲಾ ಕಟ್ಟಳೆಗಳನ್ನು ಸರಿಯಾಗಿ ಕೈಕೊಂಡು ನಡೆದಿದ್ದಾನೆಂದು ನಂಬಿದನು (ವಚನ. 20), ನಿತ್ಯ ಜೀವನ ಪಡೆಯಲು ಒಬ್ಬನು ಒಳ್ಳೆಯವನಾಗಿರಬೆಕೆಂದು ಅವನು ಅಂದುಕೊಂಡನು ಮತ್ತು ಆತನು ಯೇಸುವಿಗೆ ತಾನು ರಕ್ಷಣೆಹೊಂದುವದಕ್ಕೆ ಇನ್ನೇನಾದರೂ "ಒಳ್ಳೆಯ" ಕಾರ್ಯಮಾಡಬೇಕೋ ಎಂದು ಕೇಳುತ್ತಿದ್ದನು.ಆದುದರಿಂದ ಯೇಸು ಅವರಿಗೆ ಸ್ವಕಾರ್ಯದಿಂದ ಯಾವ ಮನುಷ್ಯನೇ ಆಗಲಿ ಒಳ್ಳೆಯವನಾಗಲು ಸಾಧ್ಯವಿಲ್ಲ ವೆಂದು ಹೇಳಿದನು. ದೇವರು ಒಬ್ಬನೇ ಒಳ್ಳೆಯವನು. ದೇವರು ದೃಷ್ಠಿಯಲ್ಲಿ ಎಲ್ಲಾ ಮಾನವರ ನೀತಿಯೂ ಹೊಲಸು ಬಟ್ಟೆಗಳಿದ್ದಂತೆ (ಯೇಶಾಯ 64:6). ಪೌಲನು ಹೀಗೆ ಬರೆದನುಃ ನನ್ನಲ್ಲಿ ಒಳ್ಳೆ ಯದೇನು ವಾಸವಾಗಿಲ್ಲವೆಂದು ಬಲ್ಲೆನು (ರೋಮಾ 17:18). ಮಾನವನು ಎಷ್ಟೇ ಒಳ್ಳೆಯವನಾಗಿದ್ದರೂ ತನ್ನ ಸ್ವಂತ ಯೋಗ್ಯತೆಯ ಮೂಲಕ ರಕ್ಷಣೆ ಪಡೆಯಲು ಸಾಧ್ಯವಿಲ್ಲ

**19-20** ನಂತರ ಯೇಸು ಆ ಯೌವ್ವನಸ್ಥನಿಗೆ ದಶಾಜ್ಞೆಯ ಕೆಲ ಆಜ್ಞೆಗಳನ್ನು ಜ್ಞಾಪಕಪಡಿಸಿದನು (ವಿಮೋಚನ ಕಾಂಡ 20:12- 16) ಅಲ್ಲದೆ, ಆತನು ಎರಡನೆಯ ಶ್ರೇಷ್ಟ ಆಜ್ಞೆ ನಿನ್ನ ನೆರೆಯವನನ್ನು ನಿನ್ನಂತೆ ಪ್ರೀತಿಸಬೇಕೆಂದು ತಿಳಿಸಿದನು (ಮತ್ತಾಯ 19:19, ಮಾರ್ಕ 12:31 ರೋಮ 13:9-10, ಗಲಾತ್ಯ 5:14), ಚಿಕ್ಕಂದಿನಿಂದಲೂ ಎಲ್ಲಾ ಆಜ್ಞೆಗಳಿಗೆ ತಾನು ವಿಧೇಯನಾಗಿದ್ದೆನೆಂಬದಾಗಿ ಯೌವನಸ್ಥನು ಯೇಸುವಿಗೆ ದೃಡಪಡಿಸಿದನು.

ಪೌಲನ ಹಾಗೆ ಇವನು ಸಹ ನೇಮ ನಿಷ್ಟೆಗಳನ್ನು ನೊಡಿದರೆ ನಿರ್ಧೋಶಿಯಾಗಿದ್ದನು (ಫಿಲಿಪ್ಪಿ 3:6) ಆದಾಗ್ಯೂ ಆ ಯೌವ್ವನಸ್ಥನು ತಾನು ರಕ್ಷಿಸಲ್ಪಟ್ಟಿದ್ದೇನೆಂದು ದೃಡ ನಿಶ್ಚಯ ಹೊಂದಿರಲಿಲ್ಲ. ಒಬ್ಬನು ನಿಜವಾಗಿಯೂ ಧರ್ಮಶಾಸ್ತ್ರಕ್ಕೆ ಪರಿಪೂರ್ಣವಾಗಿ, ಎಲ್ಲಾ ವಿಧದಲ್ಲಿಯೂ ಅವನು ನಿತ್ಯ ಜೀವವನ್ನು[67] ಪಡೆಯಬಹುದು. ಆದರೆ ಒಂದು ಸಮಸ್ಯೆವೇನಂದರೆ ಧರ್ಮಶಾಸ್ತ್ರಕ್ಕೆ ಪರಿಪೂರ್ಣವಾಗಿ ವಿಧೇಯರಾಗಲು ಇದುವರೆಗೂ ಒಬ್ಬನಿಗೂ ಸಾಧ್ಯವಾಗಿಲ್ಲ (ಯಾಕೋಬ 2:10-11).

ಯೌವ್ವನಸ್ಥನೂ ಸಹ ಧರ್ಮಶಾಸ್ತ್ರಕ್ಕೆ ಪರಿಪೂರ್ಣವಾಗಿ ವಿಧೇಯನಾಗುವದಿಲ್ಲ. ಈತನು ದಶಾಜ್ಞೆಗಳಲ್ಲಿ ಮೊದಲನೆಯದನ್ನು ಉಲ್ಲಂಘಿಸಿದ್ದನು. ಅದೇನಂದರೆ — ನನ್ನ ಹೊರತು ನಿಮಗೆ ಬೇರೆ ದೇವರುಗಳು ಇರಬಾರದು (ವಿ.ಕಾಂಡ 20:3). ಅವನು ತನ್ನ ಐಶ್ವರ್ಯವನ್ನೆ ದೇವರನ್ನಾಗಿ ಮಾಡಿಕೊಂಡಿದ್ದನು. ಅಲ್ಲದೆ ಅವನು ಆಜ್ಞೆಗಳಲೆಲ್ಲಾ ಶ್ರೇಷ್ಠ ಆಜ್ಞೆಯನ್ನು ಉಲ್ಲಂಘಿಸಿದನು ಅದೇನಂದರೆ – ನಿನ್ನ ದೇವರಾದ ಕರ್ತನನ್ನು ನಿಮ್ಮ ಪೂರ್ಣ ಹೃದಯದಿಂದಲೂ ಅಥವಾ ಪೂರ್ಣ ಪ್ರಾಣದಿಂದಲೂ, ನಿನ್ನ ಪೂರ್ಣ ಮನಸ್ಸಿನಿಂದಲೂ ಮತ್ತು ನಿನ್ನ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು (ಧರ್ಮೋಪದೇಶಕಾಂಡ 6:5, ಮಾರ್ಕ 12:30). ಇವನು ಸ್ವಲ್ಪ ಮಟ್ಟಿಗೆ ದೇವರನ್ನು ಪ್ರೀತಿಸಿದ್ದು ನಿಜ ಆದರೆ ಅವನು ದೇವರಿಗೆ ಎಲ್ಲಾ ಪ್ರೀತಿಯನ್ನು ನೀಡಿದನು. ಅವನು ದೇವರಿಗಿಂತಲೂ ಹೆಚ್ಚಾಗಿ ಐಶ್ವರ್ಯವನ್ನು ಪ್ರೀತಿಸಿದನು. ಈ ಕಾರಣದಿಂದಲೇ ಅವನು ಇತರೆ ಎಲ್ಲಾ ಆಜ್ಞೆಗಳನ್ನು ಕೈಕೊಂಡು ನಡೆದಿದ್ದರೂ, ನಿತ್ಯಜೀವನ ಪಡೆದುಕೊಳ್ಳಲು ಯೋಗ್ಯನಾಗಿರಲಿಲ್ಲ.

**21** ಯೇಸು ಅವನನ್ನು ದೃಷ್ಟಿಸಿ ನೋಡಿ "ಪ್ರೀತಿಸಿ ನಿನಗೆ ಒಂದು ಕಡಿಮೆಯಾಗಿದೆ" ಎಂದು ಹೇಳಿದನು. ಯೌವ್ವನಸ್ಥನಿಗೆ ಏನು ಕಡಿಮೆಯಾಗಿತ್ತು? ದೇವರ ಕಡೆಗೆ ಮತ್ತು ನೆರೆಯವರೆಡೆಗೆ ಪ್ರೀತಿ (ಮಾರ್ಕ 10: 30-31). ಆ ಯೌವ್ವನಸ್ಥನು ದೇವರಿಗೆ ತನ್ನ ಪ್ರೀತಿಯನ್ನು ಹೇಗೆ ತೋರಿಸಬಲ್ಲನು. ಅವನು ಅತೀಯಾಗಿ ಪ್ರೀತಿಸುವ ತನ್ನ ಐಶ್ವರ್ಯವನ್ನು ತೊರೆದು ಬಿಡುವದರಿಂದಲೇ. ದೇವರಿಗಾಗಿ ತಮ್ಮ ಭೌತಿಕ ಆಸ್ತಿಗಳನ್ನು ತೊರೆದು ಬಿಡುವವರು. ಪರಲೋಕದಲ್ಲಿ ನಿತ್ಯ ಐಶ್ವರ್ಯವನ್ನು ಪಡೆಯುವರು (ಮತ್ತಾಯ 6:19-21, ಲೂಕ 12:33 ಮತ್ತು ವ್ಯಾಖ್ಯಾನ ನೋಡಿರಿ). ಯೌವ್ವನಸ್ಥನು ತನ್ನ ಆಸ್ತಿಯನ್ನು ಮಾರಿಬಿಟ್ಟರೆ, ತನ್ನಷ್ಟಕ್ಕೆ ತಾನೇ ನಿತ್ಯಜೀವ ಪಡೆಯುವನೆಂದು ಯೇಸು ಹೇಳಲಿಲ್ಲ.

ಪೌಲನು ಹೀಗೆ ಬರೆಯುತ್ತಾನೆ – ನನಗೆ ಇರುವದೆಲ್ಲವನ್ನು ಬಡವರಿಗೆ ಕೊಡುವದಾದರೂ ನನ್ನಲ್ಲಿ ಪ್ರೀತಿಇಲ್ಲವಾದರೆ ನನಗೆ ಯಾವ ಪ್ರಯೋಜನವು ಇಲ್ಲ (1 ಕೋರಿಂಥ 13:3). ಬದಲಾಗಿ ಧರ್ಮಶಾಸ್ತ್ರವನ್ನು ಪರಿಪೂರ್ಣವಾಗಿ ಅನುಸರಿಸುವದೆಂದರೆ ಏನೆಂಬುದನ್ನು ಯೇಸು ಮಾನವರಿಗೆ ತೋರಿಸಿಕೊಡುತ್ತಿದ್ದಾನೆ. ಧರ್ಮಶಾಸ್ತ್ರವು ನಾವು ಏನು ಮಾಡಬೇಕೆಂಬುದನ್ನು ಬೋಧಿಸುತ್ತದೆ. ಆದರೆ ಅದನ್ನು ಮಾಡಲು ಬಲವನ್ನು ಕೊಡುವದಿಲ್ಲ. ಧರ್ಮಶಾಸ್ತ್ರವು ನಮ್ಮನ್ನು ಕ್ರಿಸ್ತನ ಬಳಿಗೆ ನಡಿಸುತ್ತದೆ (ಗಲಾತ್ಯ 3:24), ಆದರೆ ಅದು ನಮ್ಮನ್ನು ರಕ್ಷಿಸಲು ಸಾದ್ಯವಿಲ್ಲ. ನಾವು ಕ್ರಿಸ್ತನಲ್ಲಿ ನಂಬಿಕೆ ಇಡುವದರ ಮೂಲಕವೇ ರಕ್ಷಿಸಲ್ಪಟ್ಟದ್ದೇವೆ, ಹೊರತು ಧರ್ಮ ಕಾರ್ಯಗಳಿಂದಲ್ಲ (ಗಲಾತ್ಯ 2:15-16 ಮತ್ತು ವ್ಯಾಖ್ಯಾನ ನೋಡಿರಿ). ಯೇಸು ಯೌವ್ವನಸ್ಥನಿಗೆ ಆತನ ಆಸ್ತಿಯನ್ನೆಲ್ಲ ಮಾರಲು ಹೇಳುವದರಲ್ಲಿ ಒಂದು ಹೊಸ ಕಾನೂನನ್ನು ನೀಡುತ್ತಾಇಲ್ಲ, ಯೇಸು ಪ್ರತಿಯೊಬ್ಬನಿಗೂ ಅವರ ಆಸ್ತಿಗಳನ್ನು ಮಾರಬೇಕೆಂದು ಹೇಳುವದಿಲ್ಲ. ಆದರೆ ಆಸ್ತಿಯ ಮೇಲಿನ ಪ್ರೀತಿಯು ಈ ಯೌವ್ವನಸ್ಥನು ತನ್ನ ಜೀವಿತವನ್ನೆ ದೇವರಿಗೆ ಕೊಡುವದಕ್ಕೆ ಅಡ್ಡಿ ಮಾಡುತ್ತದೆಂದು ಯೇಸು ಬಲ್ಲವನಾಗಿದ್ದನು. ನಾವು ದೇವರಿಗಿಂತಲೂ ಹೆಚ್ಚಾಗಿ ಏನನ್ನಾದರೂ ಪ್ರೀತಿಸುವದಾದರೆ, ನಾವು ಅದನ್ನು ಬಿಟ್ಟು ಬಿಡಬೇಕು "ಮಾರಿಬಿಡಬೇಕು" ನಾವು ದೇವರನ್ನೂ ಧನವನ್ನು ಸೇವಿಸಲಾರೆವು (ಮತ್ತಾಯ 6:24 ಮತ್ತು ವ್ಯಾಖ್ಯಾನ ನೋಡಿರಿ).

**22** ಯೇಸು ಯೌವ್ವನಸ್ಥನಿಗೆ "ಹೋಗಿ ನಿನಗೆ ಇರುವದನ್ನು ಮಾರಿ ಬಂದು ನನ್ನನ್ನು ಹಿಂಬಾಲಿಸು, ಇದನ್ನು ಕೇಳಿ ಆ ಯೌವ್ವನಸ್ಥನು ಮೂಕ ಬಡಿದವನಾದನು". ಯೇಸುವಿನ ಶಿಷ್ಯನಾಗಿರುವದು ಬಹಳ ಕಠಿಣವಾದದ್ದೇ. ಆದರೆ ಬೆಲೆ ಬಹಳ ದೊಡ್ಡದು ಯೌವ್ವನಸ್ಥನು ನಿತ್ಯ ಜೀವವನ್ನು ಹುಡುಕಲು ಯೇಸುವಿನ ಬಳಿಗೆ ಬಂದಿದ್ದನು. ಯೇಸು ಅವನಿಗೆ "ನನ್ನನ್ನು ಹಿಂಬಾಲಿಸು". ನಾನು ನಿನ್ನನ್ನು ನಿತ್ಯಜಿವಕ್ಕೆ ನಡೆಸುವೆನೆಂದು ಹೇಳಿದನು. ಆದರೆ ಯೇಸುವಿಗಿಂತಲೂ ಹೆಚ್ಚಾಗಿ ತನ್ನ ಆಸ್ತಿಯನ್ನು ಪ್ರೀತಿಸಿದನು. ಅವನು ನಿತ್ಯ ಜೀವವನ್ನು ಹೊಂದಿ ತನ್ನ ಆಸ್ತಿಯನ್ನು ಸಹ ಉಳಿಸಿಕೊಳ್ಳುವ ನಿರೀಕ್ಷೆ ಹೊಂದಿದ್ದನು. ಆದರೆ ಯೇಸು ಅವನಿಗೆ ನೀನು ಎರಡನ್ನು ಹೊಂದಲು ಸಾದ್ಯವಿಲ್ಲ. ಒಂದನ್ನು ಆರಿಸಿಕೊಳ್ಳಬೇಕು, ಎಂದು ಹೇಳಿದನು. ಆಸ್ತಿಯ ಮೇಲಿನ ಪ್ರೀತಿಯೊಂದೇ ನಮ್ಮನ್ನು ಯೇಸುವನ್ನು ಹಿಂಬಾಲಿಸುವದರಿಂದ ತಡೆಯುವದಿಲ್ಲ. ಕುಟುಂಬದ ಪ್ರೀತಿ ಸ್ನೇಹಿತರುಗಳ ಮೇಲಿನ ಪ್ರೀತಿ, ಕೆಲಸದ ಮೇಲಿನ ಪ್ರೀತಿ ಪ್ರಸಿದ್ದಿಯ ಮೇಲಿನ ಪ್ರೀತಿ ಮುಂತಾದವು ಗಳು ಆಗಿರಬಹುದು (ಮತ್ತಾಯ 10:37-38). ಯೇಸು ನಮ್ಮ ಒಬ್ಬೊಬ್ಬರಿಗೂ ಕೂಡಾ..ಇವೆಲ್ಲಕ್ಕಿಂತಲೂ ಹೆಚ್ಚಾಗಿ ನೀನು ನನ್ನನ್ನು ಪ್ರೀತಿಸುವಿಯಾ? ಎಂದು ಕೇಳುತ್ತಾನೆ (ಯೋಹಾನ 21:15). ಪೌಲನು ಫಿಲಿಪ್ಪಿಯವರಿಗೆ ಬರೆಯುವದೇನಂದರೆ – ನನ್ನ ಕರ್ತನಾದ ಕ್ರಿಸ್ತ ಯೇಸುವನ್ನರಿಯುವದೇ ಅತೀ ಶ್ರೇಷ್ಟವಾದದ್ದೆಂದು ತಿಳಿದು ನಾನು ಎಲ್ಲವನ್ನು (ಈ ಎಲ್ಲಾ ನಷ್ಟವೆಂದೆಣಿಸುತ್ತೇವೆ). ಆತನ ನಿಮಿತ್ಯ ಕಳಕೊಂಡು ಅದನ್ನು ಹೊಸದೆಂದೆನಿಸುತ್ತೇನೆ. ಇದರಲ್ಲಿ ನನ್ನ ಉದ್ದೇಶವೇನೆಂದರೆ – ನಾನು ಕ್ರಿಸ್ತನನ್ನು ಸಂಪಾದಿಸಿಕೊಂಡು ನೇಮ ನಿಷ್ಠೆಗಳ ಫಲವಾಗಿರುವ ಸ್ವನೀತಿಯನ್ನಾಶ್ರಯಿಸದೇ ಕ್ರಿಸ್ತನನ್ನು ನಂಬುವದರಿಂದ ದೊರಕುವಂತಹ ಅಂದರೆ ಕ್ರಿಸ್ತನ ಮೇಲಣ ನಂಬಿಕೆಯ ಆಧಾರದಿಂದ ದೇವರು ಕೊಡುವಂಥ ನೀತಿಯನ್ನು ಹೊಂದಿ ಕ್ರಿಸ್ತನಲ್ಲಿ ಇರುವವನಾಗಿ ಕಾಣಿಸಿಕೊಳ್ಳಬೇಕೆಂಬುದೆ (ಫಿಲಿಪ್ಪಿ. 3:8-9).

**23-25** ನಂತರ ಯೇಸು ತನ್ನ ಶಿಷ್ಯರಿಗೆ ಐಶ್ವರ್ಯವಂತರೂ ದೇವರ ರಾಜ್ಯವನ್ನು ಪ್ರವೇಶಿಸುವದು ಬಹಳ ಕಠಿಣವೆಂದು ಹೇಳಿದನು. ಯೇಸು ಇಲ್ಲಿ ಹಣದಲ್ಲಿ ಐಶ್ವರ್ಯವಂತ ನಾಗಿರುವವನ ಕುರಿತು ಮಾತ್ರವೇ ಹೇಳುತ್ತಿಲ್ಲ. ಆದರೆ ದೇವರಿಗಿಂತಲೂ ಹೆಚ್ಚು ಪ್ರಪಂಚದ ಸಂಗತಿಗಳನ್ನು ಮೌಲ್ಯವನ್ನೆಣಿಸುವಂತಹವರೆಲ್ಲರನ್ನು ಕುರಿತು ಹೇಳುತ್ತಿದ್ದಾನೆ. ಬಡವರು ಸಹ ಶ್ರಿಮಂತರಂತೆಯೇ ತಮ್ಮ ಕೆಲವು ಆಸ್ತಿಗಳನ್ನು ಪ್ರೀತಿಸಬಹುದು ಆದರೆ ಪ್ರಪಂಚದ ದೃಷ್ಟಿಯಲ್ಲಿ ಶ್ರೀಮಂತನೇ. ಯೇಸುವನ್ನು ಹಿಂಬಾಲಿಸುವದರ ಮೂಲಕ ಹೆಚ್ಚನ್ನು ಕಳೆದುಕೊಳ್ಳಬೇಕಾಗುತ್ತದೆ. ಆದುದರಿಂದ ಸಾಮಾನ್ಯವಾಗಿ ಶ್ರಿಮಂತನೂ ಪರಲೋಕ

ರಾಜ್ಯವನ್ನು ಪ್ರವೇಶಿಸುವದು ಕಷ್ಟಕರವಾಗಿರುತ್ತದೆ. ಸಾಮಾನ್ಯವಾಗಿ ಶ್ರೀಮಂತರು ಕ್ರೈಸ್ತರಾಗಿ ತಮ್ಮ ಆಸ್ತಿಗಳನ್ನು ಬದಿಗಿಡಲು ಅಷ್ಟಾಗಿ ಮನಸ್ಸುಳ್ಳವರಾಗಿರುವದಿಲ್ಲ.

**26-27** ಶಿಷ್ಯರು ಯೇಸುವಿನ ಆಳವಾದ ಅರ್ಥವನ್ನು ತಿಳಿದು ಕೊಂಡರು. ಒಬ್ಬನು ಸ್ವಂತ ಪ್ರಯತ್ನದಿಂದ ದೇವರ ರಾಜ್ಯವನ್ನು ಪ್ರವೇಶಿಸುವದು ಸಾದ್ಯವೆಂದು ಯೇಸು ಹೇಳುತ್ತಿದ್ದಾನೆ. ಯಾವ ಮನುಷ್ಯನು ತನ್ನನ್ನು ರೂಷಿಸಿಕೊಳ್ಳಲಾರ– ಇದು ಅಸಾಧ್ಯ, ಆದರೆ ದೇವರು ನಮ್ಮನ್ನು ರಕ್ಷಿಸಬಲ್ಲನು, ಆತನಿಗೆ ಎಲ್ಲಾ ಸಂಗತಿಗಳು ಸಾದ್ಯವಾಗಿವೆ ರಕ್ಷಣೆಯು ದೇವರ ವರವಾಗಿದೆ. (ಎಪೆಸ. 2:8)

**28** ಬಳಿಕ ಪೇತ್ರನು ತನ್ನನ್ನು ಮತ್ತು ಇತರ ಶಿಷ್ಯರನ್ನು ಐಶ್ವರ್ಯವಂತನಾದ ಯೌವನಸ್ಥನೊಂದಿಗೆ ಹೋಲಿಸಿಕೊಳ್ಳಲು ಪ್ರಾರಂಬಿಸಿದನು. "ಇಗೋ ನಾವು ಎಲ್ಲವನ್ನು ಬಿಟ್ಟು ಬಿಟ್ಟು ಹಿಂಬಾಲಿಸಿದ್ದೇವೆ" ನಂತರ (ಮತ್ತಾಯ 19:27)ರ ಪ್ರಕಾರವಾಗಿ ಪೇತ್ರನು ನಮಗೆ ಏನು ದೊರಕುವದು?ಎಂದು ಕೇಳಿದನು. ಕ್ರಿಸ್ತನನ್ನು ಹಿಂಬಾಲಿಸುವದರಿಂದ ಏನು ದೊರಕುತ್ತದೆಂದು ನಾವು ವಿಚಾರಿಸುವದರಲ್ಲಿ ತಪ್ಪೇನಿಲ್ಲ ಕ್ರಿಸ್ತನು ನಮಗೆ ಪ್ರಯೋಜನವನ್ನುಂಟು ಮಾಡಲು ಕರೆಯುತ್ತಾನೆ ಹೊರತು ನಷ್ಟವನ್ನುಂಟು ಮಾಡುವದಕ್ಕಲ್ಲ (ಮತ್ತಾಯ 19:28 ಕ್ಕೆ ಅನುಸಾರವಾಗಿ). ಯೇಸು ಮೊದಲು ಪೇತ್ರನ ಪ್ರಶ್ನೆಗೆ ಉತ್ತರಿಸುತ್ತಾ ಹೊಸ ಸೃಷ್ಟಿಯಲ್ಲಿ ಅಂದರೆ ಲೋಕಾಂತ್ಯದಲ್ಲಿ ಕ್ರಿಸ್ತನು ತಿರಿಗಿ ಬರುವಾಗ ಹನ್ನೆರಡು ಶಿಷ್ಯರು ಹನ್ನೆರಡು ಕುಲಗಳಿಗೆ ನ್ಯಾಯ ತೀರಿಸುವದು ಎಂದು ಹೇಳಿದನು. ಅವರು ಒಂದಿಲ್ಲಾ ಒಂದು ವಿಧದಲ್ಲಿ ಕ್ರಿಸ್ತನ ಆಡಳಿತ ಮತ್ತು ದೇವರ ರಾಜ್ಯದಲ್ಲಿ ಆತನ ನ್ಯಾಯತೀರ್ಪಿನ ಕೆಲಸದಲ್ಲಿಯೂ ಅವರು ಬಾಗಿಗಳಾಗುವರು. ಅವರು ವಿಶೇಷ ಗೌರವವನ್ನು ಪಡೆದುಕೊಳ್ಳುವರು. ಈ ಪ್ರಪಂಚದಲ್ಲಿ ಅವರು ತುಚ್ಛೀಕರಿಸಲ್ಪಟ್ಟವರು – ಮುಂದಿನ ಪ್ರಪಂಚದಲ್ಲಿ ಘನತೆ ಹೊಂದುವರು.

**29-30** ಅನಂತರ ಯೇಸು ತನಗೋಸ್ಕರವಾಗಿ ತಮ್ಮ ಮನೆ ಕುಟುಂಬವನ್ನು ಮತ್ತು ಭೂಮಿಯನ್ನಾಗಲಿ ಬಿಟ್ಟಿರುವವನಿಗೆ ಒಂದು ವಾಗ್ದಾನವನ್ನು ಮಾಡುತ್ತಾನೆ, ಮೊದಲನೆಯದಾಗಿ, ಅವರು ನಿತ್ಯ ಜೀವಹೊಂದುವರು (ವಚನ 30). ಅವರು ಕ್ರಿಸ್ತನನ್ನು ಮತ್ತು ಆತನೊಂದಿಗೆ ಎಲ್ಲವನ್ನು ಹೊಂದಿಕೊಳ್ಳುವರು (ರೋಮಾ 8:32, ಎಫೆಸ್ 1:3). ಕ್ರಿಸ್ತನು ಅವರು ಬಿಟ್ಟು ಬಿಟ್ಟಿರುವದೆಲ್ಲದಕ್ಕಾಗಿ ಪರಲೋಕದಲ್ಲಿ ಮಾತ್ರವೇ ಅಲ್ಲ ಆದರೆ ಈ ಲೋಕದಲ್ಲಿಯೂ ಸಹ ನೂರರಷ್ಟು ಹಿಂದಕ್ಕೆ ಪಡೆದು ಕೊಳ್ಳುವವರು ಎಂದು ವಾಗ್ದಾನ ಮಾಡಿದನು. ಕ್ರಿಸ್ತನು ನಾವು ಮನೆ, ಸಹೋದರ, ಸಹೋದರಿಯರು, ತಾಯಿಯರು, ಮಕ್ಕಳು ಮತ್ತು ಭೂಮಿಯನ್ನು ಪಡೆದುಕೊಳ್ಳುವೆವು ಎಂದು ಹೇಳುವಾಗ ಆತನು ಸಭೆಯ ಕುರಿತು ಮಾತನಾಡುತ್ತಿದ್ದಾನೆ. ನಾವು ಕ್ರೈಸ್ತರಾಗುವಾಗ ಒಂದು ದೊಡ್ಡ ಕುಟುಂಬದ ಸದಸ್ಯರಾಗುತ್ತೇವೆ. ಅದು ಅನೇಕ ಮನೆಗಳು ಭೂಮಿಗಳನ್ನು ಹೊಂದಿರುತ್ತವೆ. ಆದರೆ ಆಕುಟುಂಬದ ಸದಸ್ಯರಾಗಿ ನಾವು ಹಿಂಸೆಯನ್ನು ಸಹ ಅನುಭವಿಸುತ್ತೇವೆ (2 ತಿಮೊಥೆ 3: 12). ಮಕ್ಕಳಾಗಿದ್ದರೆ ಬಾದ್ಯರಾಗಿದ್ದೇವೆ, ದೇವರಿಗೆ ಬಾದ್ಯರು, ಕ್ರಿಸ್ತನೊಂದಿಗೆ ಬಾದ್ಯರು. ಹೇಗೆಂದರೆ ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ನಾವು ಪಾಲುಗಾರರಾಗುವದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು (ರೋಮ8: 17).

**31** ಶಿಷ್ಯರು "ಮೊದಲನೆಯವರು" ಅಥವಾ "ದೊಡ್ಡವರಾಗಿರಲು" ಬಯಸಿದ್ದರು (ಮಾರ್ಕ 9:34, 10:37). ತಾವು ಕ್ರಿಸ್ತನನ್ನು ಹಿಂಬಾಲಿಸಿ ಆತನಿಗಾಗಿ ಎಲ್ಲವನ್ನು ಬಿಟ್ಟು ಬಿಟ್ಟಿದ್ದರಿಂದ ಮೊದಲನೆಯವರಾಗಿರಬೇಕು ಎಂದು ಅವರು ಯೋಚಿಸಿದರು. ಆದರೆ ಯೇಸು "ಮೊದಲನೆಯವರಾಗಲು ತವಕಪಡಬೇಡಿರಿ" ಎಂದು ಬೋಧಿಸಿದನು. ನಾವು ಎಂದಿಗೂ ದೇವರೊಂದಿಗೆ ಪ್ರಶ್ನಿಸಬಾರದು. ನಾವು ಎಂದಿಗೂ "ನಾನು ದೇವರಿಗಾಗಿ ಇದನ್ನು ಮಾಡಿದ್ದೇನೆ, ಈಗ ದೇವರು ನನಗೇ ಪ್ರತಿಫಲ ನೀಡಬೇಕು" ಎಂದು ಯೋಚಿಸಬಾರದು. ದೇವರು ಮಾನವರಿಗೆ ಅವರ ಅಭಿಪ್ರಾಯಗಳಿಗನುಸಾರವಾಗಿ ಪ್ರತಿಫಲ ನೀಡುವದಿಲ್ಲ. ತಾವು ಮೊದಲನೆ ಯವರಾಗಿರಲು ಯೋಗ್ಯರೆಂದು ಯೋಚಿಸುವವರು ಸಾಮಾನ್ಯವಾಗಿ ಕಡೆಯವರಾಗುತ್ತಾರೆ. ತಮ್ಮನ್ನು ಕಡೆಯವರನ್ನಾಗಿ ಮಾಡಿಕೊಳ್ಳುವವರು ಮೊದಲನೆಯವರಾಗುವರು (ಮತ್ತಾಯ 20:16, ಲೂಕ 13:30). ದೇವರು ದೀನರನ್ನು ಮೇಲೆತ್ತುವನು ಮತ್ತು ಗರ್ವಿಷ್ಠರನ್ನು ತಗ್ಗಿಸುವನು (ಯಾಕೋಬ 4:6-10, 1 ಪೇತ್ರ 5:6). ಪ್ರತಿಯೊಬ್ಬ ವಿಶ್ವಾಸಿ ಕ್ರಿಸ್ತನನ್ನೇ ಹುಡುಕುವವನಾಗಿ ಆತನನ್ನು ಮಾತ್ರವೇ ಹಿಂಬಾಲಿಸಲಿ. ಆಗ ದೇವರು ತಾನೇ ಪ್ರತಿಯೊಬ್ಬನನ್ನು ಆತನಿಗಾಗಿ ಸಿದ್ಧಮಾಡಲ್ಪಟ್ಟ ಸ್ಥಾನದಲ್ಲಿಡುತ್ತಾನೆ (ವಚನ 40).

## ಯೇಸು ತಿರಿಗಿ ತನ್ನ ಮರಣದ ಬಗ್ಗೆ ಮುಂತಿಳಿಸುತ್ತಾನೆ ( 10:32-34).

(ಮತ್ತಾಯ 20:17-19, ಲೂಕ 31:34)

**32** ಯೇಸು ಮತ್ತು ಆತನ ಶಿಷ್ಯರು ಯೆರೂಸಲೇಮಿಗೆ ತಮ್ಮ ಕೊನೆಯ ಪ್ರಯಾಣವನ್ನು ಪ್ರಾರಂಭಿಸಿದ್ದರು, ಯೇಸು ಅಲ್ಲಿ ಮರಣಕ್ಕೆ ಒಪ್ಪಿಸಲ್ಪಡಲಿದ್ದನು. ಶಿಷ್ಯರು ಆತನ ಬೋಧನೆ, ಆತನ ಅದ್ಭುತಗಳು ಮತ್ತು ಆತನ ರೂಪಾಂತರದ ಬಗ್ಗೆ ವಿಸ್ಮಯಪಟ್ಟರು. ಶಿಷ್ಯರ ಹೊರತಾಗಿ ಇನ್ನು ಅನೇಕರು ಸಹ ಯೇಸುವನ್ನು ಹಿಂಬಾಲಿಸಿದರು. ಅವರು ಹೆದರಿದ್ದರು. ಬಹುಶಃ ಅವರು ಯೆರೂಸಲೇಮಿನಲ್ಲಿ ಏನೋ ಭಯಂಕರವಾದದ್ದು ನಡೆಯಲಿದೆ ಎಂದು ಊಹಿಸಿಕೊಂಡಿದ್ದರು.

**33-34** ಮೂರನೆಯ ಸಾರಿ ಯೇಸು ತನ್ನ ಮರಣದ ಬಗ್ಗೆ ಮುಂತಿಳಿಸಿದನು (ಮಾರ್ಕ 8:31, 9:31 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಈ ಸಾರಿ ಯೇಸು ಮಹಾಯಾಜಕರು ಮತ್ತು ಶಾಸ್ತ್ರಿಗಳು ತನಗೆ ಮರಣದಂಡನೆ ವಿಧಿಸಿ ಅನ್ಯಜನರ 68 ಕೈಗಳಲ್ಲಿ ಒಪ್ಪಿಸಿಕೊಡುವರು ಎಂದು ಹೇಳಿದನು. ಅನ್ಯಜನರೆಂದರೆ ರೋಮಾಯರು ಆಗ ಅನ್ಯಜನರು ಆತನನ್ನು ಕೊಲ್ಲುವರು.

ಮತ್ತಾಯ 20 :19 ಕ್ಕನುಸಾರವಾಗಿ ಯೇಸು ಶಿಲುಬೆಗೆ ಹಾಕಲ್ಪಡುವನು, ಇದು ಅಪರಾಧಿಗಳನ್ನು ದಂಡಿಸುವ ರೋಮಾಯ ಪದ್ಧತಿಯಾಗಿತ್ತು. ಯೇಸು ಹೇಳಿದಂತೆಯೇ ಇದೆಲ್ಲವೂ ನೆರವೇರಿತು (ಮಾರ್ಕ 14:64, 15:1, 19:20). ಆದರೆ ಇದನ್ನು ಮೂರು ಸಾರಿ ಕೇಳಿದ್ದರೂ ಯೇಸು ಏನು ಹೇಳುತ್ತಿದ್ದನೆಂದು ಶಿಷ್ಯರು ಅರ್ಥಮಾಡಿಕೊಳ್ಳಲಿಲ್ಲ (ಲೂಕ 18:34).

## ಯಾಕೋಬ ಮತ್ತು ಯೋಹಾನರ ಮನವಿ (10:35-45)

(ಮತ್ತಾಯ 20:20-28, ಲೂಕ 22:24,27)

**35-37** ಯೇಸು ತನ್ನ ಮರಣ ಮತ್ತು ಪುನರುತ್ಥಾನಗಳ ಕುರಿತು ಮಾತಾಡಿಮುಗಿಸಿದ ಮೇಲೆ ಯಾಕೋಬ ಮತ್ತು ಯೋಹಾನ (ಮಾರ್ಕ 1:19-20) ಯೇಸುವಿನ ರಾಜ್ಯದಲ್ಲಿ ತಮಗೆ ಅತಿಮುಖ್ಯ ಸ್ಥಾನವನ್ನು (ಅಂದರೆ ಆತನ ಬಲಗಡೆಯಲ್ಲಿ ಮತ್ತು ಎಡಗಡೆಯಲ್ಲಿ ಕುಳಿತುಕೊಳ್ಳುವಂತೆ) ನೀಡಬೇಕೆಂದು ಅತನನ್ನು ಕೇಳಿದರು. ಮತ್ತಾಯ 20:20-21ರ ಪ್ರಕಾರವಾಗಿ ಯಾಕೋಬ ಮತ್ತು ಯೋಹಾನರ ತಾಯಿಯು ಸಹ ಅವರ ಪರವಾಗಿ ಇದೇ ಮನವಿಯನ್ನು ಮಾಡಿದಳು. ಬಹುಶಃ ಅವರು ಯೇಸುವಿನ

ಭೂಲೋಕದ ರಾಜ್ಯವನ್ನು ಕುರಿತು ಯೋಚಿಸುತ್ತಿರಬಹುದು. ಅವರು ಪೇತ್ರನ ಬಗ್ಗೆ ಅಸೂಯೆವುಳ್ಳವರಾಗಿ ಆತನಿಗಿಂತಲೂ ಮುಂದೆ ಸಾಗಲು ಬಯಸಿದರು. ಯೇಸು ಅವರಿಗೆ ಅವರು ಎಂದಿಗೂ ಮೊದಲನೆಯರಾಗಲು ಪ್ರಯತ್ನಿಸಬಾರದೆಂದು (ಮಾರ್ಕ 9:34, 10:31), ಬೋಧಿಸಿದ ಮೇಲೆಯೂ ಸಹ ಅತನ ಶಿಷ್ಯರು ಉನ್ನತ ಸ್ಥಾನಕ್ಕಾಗಿ ತಮ್ಮೊಳಗೆ ಹೋರಾಟವನ್ನು ಮುಂದುವರೆಸಿದರು.

**38** ಯೇಸು ಯಾಕೋಬ, ಯೋಹಾನರಿಗೆ ನಾನು ಕುಡಿಯುವ ಪಾತ್ರೆಯಲ್ಲಿ, ಕುಡಿಯುವದು ನಿಮ್ಮಿಂದಾದೀತೆ? ಎಂದು ಕೇಳಿದನು "ಪಾತ್ರೆಯಲ್ಲಿ ಕುಡಿಯುವದು" ಎಂಬದು "ಬಾಧೆ ಪಡಲು" ಎಂದು ಹೇಳಲು ಯೆಹೂದ್ಯರು ಉಪಯೋಗಿಸುವ ಒಂದು ಪದವಾಗಿತ್ತು ಆ ಪಾತ್ರೆಯು ಒಂದು "ಬಾಧೆಯ ಪಾತ್ರೆಯಾಗಿತ್ತು" (ಮಾರ್ಕ 16:36), ನನಗಾಗುವ ದೀಕ್ಷಾಸ್ನಾನವನ್ನು ಹೊಂದುವದು ನಿಮ್ಮಂದಾದೀತೇ ಎಂದು ಯೇಸು ಕೇಳಿದನು. ಇಲ್ಲಿ ದೀಕ್ಷಾಸ್ನಾನವೆಂದರೆ "ಮರಣ"ವೆಂದರ್ಥ (ರೋಮ 6:3-4ನ್ನು ನೋಡಿರಿ). ಯೇಸು ಬಾಧೆ ಪಡಲು ಮಾತ್ರವಲ್ಲದೆ ಸಾಯುವದಕ್ಕು ಸಹ ಕರೆಯುಲ್ಪಟ್ಟಿದ್ದನು. ಯಾಕೋಬ, ಯೋಹಾನರು ಕ್ರಿಸ್ತನೊಂದಿಗೆ ಬಾಧೆಪಟ್ಟು ಸಾಯಲು ಸಿದ್ಧರಾಗಿದ್ದರೋ? ಕ್ರಿಸ್ತನೊಂದಿಗೆ ಮಹಿಮೆ ಹೊಂದಲು ಬಯಸುವವರು, ಮೊದಲು ಆತನೊಂದಿಗೆ ಬಾಧೆಯನ್ನು ಅನುಭವಿಸಬೇಕು (ರೋಮ 8:17).

ಅವರು ಯೇಸುವಿನ ಪಾತ್ರೆಯಲ್ಲಿ ಕುಡಿದು ಆತನ ದೀಕ್ಷಾಸ್ನಾನದೊಂದಿಗೆ (ಮರಣ) ದೀಕ್ಷಾಸ್ನಾನ ಹೊಂದಲುಸಾಧ್ಯವೊ, ಎಂಬ ಆತನ ಪ್ರಶ್ನೆಗೆ ಉತ್ತರಿಸುತ್ತಾ ಯಾಕೋಬ ಯೋಹಾನರು "ಆಗುವದು ಎಂದು ನಿಶ್ಚಯದೊಂದಿಗೆ ಹೇಳಿದರು ಮತ್ತು ಯೇಸು ಅವರಿಗೆ "ನಿಜವಾಗಿಯೂ ನಿಮಗೆ ಆಗುವದು"ಅಂದನು. ಯಾಕೋಬ, ಯೋಹಾನರು ಅವರು ಏನು ಹೇಳುತ್ತಿದ್ದಾರೆಂದು ಗ್ರಹಿಸಿಕೊಳ್ಳಲಿಲ್ಲ. ಆದರೆ ಅನಂತರ ಅವರಿಬ್ಬರೂ ನಿಜವಾಗಿಯೂ ಆತನಿಗಾಗಿ ಬಾಧೆಯನ್ನು ಅನುಭವಿಸುವರೆಂದು ಯೇಸುವಿಗೆ ಗೊತ್ತಿತ್ತು (ಅ.ಕೃ 12:2 ಪ್ರಕಟಣೆ 1:9). ಆಗ ಅವರು ಬಾಧೆಪಡಲು ಸಿದ್ಧರಾಗಿರಲಿಲ್ಲ. ಆದರೆ ತರುವಾಯ ಅವರು ಪವಿತ್ರಾತ್ಮನಿಂದ ತುಂಬಿ ಕ್ರಿಸ್ತನಿಗಾಗಿ ಎಲ್ಲಾ ಬಾಧೆಗಳನ್ನು ಅನುಭವಿಸಲು ಬಲವನ್ನು ಪಡೆಯುವವರಾಗಿದ್ದರು.

**40** ಯಾಕೋಬ, ಯೋಹಾನರು ಕ್ರಿಸ್ತನಿಗಾಗಿ ಬಾಧೆಪಟ್ಟು ಸಾಯುವವರಾಗಿದ್ದರೂ, ಅವರನ್ನು ತನ್ನ ಬಲಗಡೆಯಲ್ಲಿಯೂ ಎಡಗಡೆಯಲ್ಲಿಯೂ ನೇಮಿಸುವದಕ್ಕೆ ಅದು ಕ್ರಿಸ್ತನ ಸ್ಥಳವಾಗಿರಲಿಲ್ಲ. ದೇವರು ತಾನೆ ಪ್ರತಿಯೊಬ್ಬರಿಗೂ ತನ್ನ ಪರಲೋಕ ರಾಜ್ಯದಲ್ಲಿ ಅವನವನ ಸ್ಥಾನವನ್ನುನೀಡುವನು ಮತ್ತು ದೇವರು ಪಕ್ಷಪಾತಿಯಲ್ಲ (ಅ ಕೃ 10:34, ರೋಮ 2:6-11, 1 ಪೇತ್ರ 1:17 ವಚನ). ದೇವರು ನಮ್ಮ ನಂಬಿಕೆ ಆತನಿಗಾಗಿ ನಾವು ಹೊಂದಿರುವ ಪ್ರೀತಿಗನುಸಾರವಾಗಿ ನಮಗೆ ಸ್ಥಾನವನ್ನು ಕೊಡುವನು

ಇತರ ಹತ್ತು ಶಿಷ್ಯರು ಕ್ರಿಸ್ತನ ರಾಜ್ಯದಲ್ಲಿ ತಮಗಿಂತ ಉನ್ನತ ಸ್ಥಾನವನ್ನು ಕೇಳಿದ್ದಕ್ಕೆ ಯಾಕೋಬ, ಯೋಹಾನರ ಮೇಲೆಸಿಟ್ಟಿಗೆದ್ದರು ಆದರೆ ಅವರು ಯಾಕೋಬ ಯೋಹಾನರಿಗಿಂತ ಉತ್ತಮರಾಗಿರಲಿಲ್ಲ. ಅವರು ಸಹ ಉನ್ನತ ಸ್ಥಾನಗಳನ್ನು ಇಚ್ಛಿಸಿದ್ದರು!ಅವರು ಕಡೆಯವರಾಗಿರಲು ಸಂತೋಷ ಪಡಲಿಲ್ಲ. ಇತರರ ಪಾಪಕ್ಕೆ ನಾವು ಎಷ್ಟು ಶೀಘ್ರ ಕೋಪಗೊಳ್ಳುತ್ತೇವೆ, ಅದು ಪಾಪವೆಂಬುದಕ್ಕಾಗಿ ಅಲ್ಲ ಆದರೆ ನಮ್ಮ ಸ್ವಾರ್ಥ ಉದ್ದೇಶಗಳಿಗೆ ದಕ್ಕೆಯಾಗಿದ್ದರಿಂದಲೇ

**42-44** ಆದರೆ ಯೇಸು ತಿರಿಗೊಂದಾವರ್ತಿ ತನ್ನ ಶಿಷ್ಯರು ಪ್ರಪಂಚದ ಜನರಂತೆ ಇರಬಾರದೆಂದು ಅವರಿಗೆ ಜ್ಞಾಪಕಪಡಿಸಿದನು. (ಮಾರ್ಕ 9:35, 10:31 ಮತ್ತು ವ್ಯಾಖ್ಯಾನ ನೋಡಿರಿ). ಪ್ರಪಂಚದಲ್ಲಿ ಜನರು ತಮ್ಮ ಸ್ವಲಾಭಕ್ಕಾಗಿ ಬಲ ಮತ್ತು ಅಧಿಕಾರವನ್ನು ಪಡೆಯಲು ಮೊದಲನೆಯವರಾಗಿರಲು ಹೋರಾಡುತ್ತಾರೆ. ಒಮ್ಮೆ ಅವರು ಅಧಿಕಾರ ಪಡೆದುಕೊಂಡರೆ ಇತರರ ಮೇಲೆ ದೊರೆತನ ನಡೆಸುತ್ತಾರೆ. ಇತರರನ್ನು ಕೆಳದಬ್ಬುತ್ತಾರೆ, ಆದರೆ ಕ್ರಿಸ್ತನ ಶಿಷ್ಯರು ಹಾಗಿರಬಾರದು ಅವರು ನಾಯಕರಾಗಲು ಬಯಸುವದಾದರೆ, ಸೇವಕನಾಗಬೇಕು.

ಕ್ರೈಸ್ತರಲ್ಲಿ ನಿಜವಾದ ನಾಯಕನಾಗಿರುವದೆಂದರೆ ಇತರರ ಸೇವಕನಾಗಿರಬೇಕೆಂದರ್ಥ. ಸಭೆಯಲ್ಲಿ ನಾಯಕನಾಗುವದರಲ್ಲಿ ಬಯಸುವದು ತಪ್ಪಲ್ಲ. (1 ತಿಮೊಥೆ 3:1). ಆದರೆ ತನಗೆ ಪ್ರಯೋಜನವನ್ನುಂಟು ಮಾಡಿಕೊಳ್ಳಲು

ಇತರರ ಮೇಲೆ ದೊರೆತನ ಮಾಡಲು ನಾಯಕರಾಗಲು ತಪ್ಪಾಗಿರುತ್ತದೆ (1 ಪೇತ್ರ 5:2-3). ಇತರರ ಸೇವೆ ಮಾಡುವದಕ್ಕಾಗಿಯೇ ಮಾತ್ರ ನಾವು ನಾಯಕರಾಗಿರಲು ಆಸೆ ಪಡಬೇಡಿರಿ.

**45** ಮಾರ್ಕನ ಸುವಾರ್ತೆಯಲ್ಲಿ ಇದು ಅತ್ಯಂತ ಪ್ರಾಮುಖ್ಯ ವಚನವಾಗಿದೆ ಯಾಕೆಂದರೆ ಪ್ರಥಮ ಬಾರಿಗೆ ಇಲ್ಲಿ ಯೇಸು ತಾನು ಭೂಲೋಕಕ್ಕೆ ಬಂದ ಉದ್ದೇಶವನ್ನು ಶಿಷ್ಯರಿಗೆ ವಿವರಿಸುತ್ತಾನೆ. ಮನುಷ್ಯ ಕುಮಾರನು (ಅಂದರೆ ದೇವ ಕುಮಾರನು) ಪ್ರಪಂಚವು ಕಂಡ ಅತೀಶ್ರೆಷ್ಟ ನಾಯಕನೂ, ಸೇವೆ ಮಾಡಿಸಿಕೊಳ್ಳಲಿಕ್ಕೆ ಬರಲಿಲ್ಲ, ಸೇವೆ ಮಾಡುವದಕ್ಕೆ ಬಂದನು. ಆತನು ಸೇವಕನಾಗಿ ಬಂದನು ಹೊರತು ಒಡೆಯನಾಗಿ ಬರಲಿಲ್ಲ (ಪಿಲಿಪ್ಪಿ 2:2-8 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ಯೇಸು ಸೇವೆ ಮಾಡುವದಕ್ಕೆ ಮಾತ್ರವೇ ಬರಲಿಲ್ಲ. ನಮಗಾಗಿ ಬಾಧೆಪಟ್ಟು ಸಾಯಲು ಬಂದನು. ಸೇವೆಯು ಒಳ್ಳೆಯದಾದರೆ ಅಷ್ಟೇ ಸಾಲದು ನಮಗೆ ಸೇವೆಗಿತಲೂ ಹೆಚ್ಚಿನದು ಬೇಕು! ನಮಗೆ ರಕ್ಷಣೆ ಅಗತ್ಯ, ನಮಗೆ ನಿತ್ಯ ಮರಣವನ್ನುಂಟು ಮಾಡುವ ದಂಡನೆಯಿಂದ ರಕ್ಷಣೆ ಬೇಕು (ರೋಮಾ 6:23). ಆದುದರಿಂದ, ಯೇಸು ನಮ್ಮ ಪಾಪದ ಶಿಕ್ಷೆಯನ್ನು ತಾನು ಹೊತ್ತುಕೊಳ್ಳಲು ಬಂದನು, ಇಲ್ಲವಾದರೆ ಅದು ನಮ್ಮ ಮೇಲೆ ಬರುತ್ತಿತ್ತು. ಆತನು ನಮ್ಮ ಸ್ಥಾನದಲ್ಲಿ ಸತ್ತನು, ಆತನು ನಮಗಾಗಿ ದೋಷ ಪರಿಹಾರಕ ಯಜ್ಞವಾದನು (ಯಾಜಕಕಾಂಡ 5:17-19 ಯೇಶಾಯ 53:10, ಇಬ್ರಿಯ, 9:28 ಮತ್ತು ವ್ಯಾಖ್ಯಾನ ನೋಡಿರಿ). ಆತನು ತನ್ನ ಪ್ರಾಣವನ್ನು ಅನೇಕರಿಗಾಗಿ ಈಡುಕೊಟ್ಟನು ಅಂದರೆ ನಮ್ಮ ಜೀವಿತದ ಬದಲಾಗಿ ತನ್ನ ಜೀವವನ್ನುಕೊಟ್ಟನು (1 ತಿಮೋಥಿ 2:5-6). ಒಮ್ಮೆ ನಾವು ಪಾಪ ಮತ್ತು ಸೈತಾನನಿಗೆ ದಾಸರಾಗಿದ್ದೆವು ! ಯೇಸು ನಮ್ಮನ್ನು ಕೊಂಡುಕೊಂಡನು, ಅಂದರೆ ನಮಗೆ ಬಿಡುಗಡೆಯನ್ನು ತಂದನು, ಮತ್ತು ಆತನು ಕೊಟ್ಟ ಬೆಲೆ ಆತನ ರಕ್ತವೇ ಆಗಿತ್ತು. ಪೌಲನು ಕೊರಿಂಥದವರಿಗೆ ನೀವು ನಿಮ್ಮ ಸ್ವಂತ ಸ್ವತ್ತಲ್ಲ! ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು ಎಂದು ಬರೆಯುತ್ತಾನೆ (1 ಕೋರಿಂಥ 6:19-20).

ಕ್ರಿಸ್ತನು ನಮ್ಮ ರಕ್ಷಣೆಯನ್ನು ಕೊಂಡುಕೊಳ್ಳುವದಕ್ಕಾಗಿ ತನ್ನ ಸ್ವ ರಕ್ತವನ್ನು ಸುರಿಸಿದನು (ಮಾರ್ಕ 14:24). ಪ್ರವಾದಿಯಾದ ಯೇಶಾಯನು ತನ್ನ ಪ್ರವಾದನ ಪು ಸ್ತಕದ ಶ್ರೇಷ್ಟ 53 ನೇ ಅಧ್ಯಾಯದಲ್ಲಿ ಬರಲಿರುವ ರಕ್ಷಕನಾದ ಯೇಸುಕ್ರಿಸ್ತನ ಜೀವನ ಮತ್ತು ಕಾರ್ಯವನ್ನು ಕುರಿತು ವರ್ಣಿಸುತ್ತಾನೆ. ಏನೆಂದರೆಃ ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ಯ ಅವನು ಜಜ್ಜಲ್ಪಟ್ಟನು, ನಮಗೆ ಸುಶಾಂತಿಯನ್ನುಂಟು ಮಾಡುವ ದಂಡನೆಯನ್ನು ಅವನು ಅನುಭವಿಸಿದನು. ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು...ನಮ್ಮೆಲ್ಲರ ದೋಷ ಫಲವನ್ನು ಕರ್ತನು ಅವನ ಮೇಲೆ ಹಾಕಿದನು—ಧುರಾತ್ಮನಾದ (ನೀತಿವಂತನಾದ) ನನ್ನ ಸೇವಕನು ಬಹು ಜನರನ್ನು ಧರ್ಮಮಾರ್ಗಕ್ಕೆ ತರುವನು ಅಪರಾಧಗಳನ್ನು ಹೊತ್ತುಕೊಂಡು ಹೋಗುವನು—ತನ್ನ ಪ್ರಾಣವನ್ನು ದಾರೆಯೆರೆದು ಮರಣ ಹೊಂದಿದನು (ಯೇಶಾಯ 53:5-6, 11-12). ಪ್ರಪಂಚದಲ್ಲಿ ಯಾವನಾದರೂ ತಿಳಿಯಬಲ್ಲಂತ ಎರಡು ಅತೀ ಪ್ರಾಮುಖ್ಯವಾದ ಸಂಗತಿಗಳು ಯಾವವೆಂದರೆಃ ಯೇಸು ದೇವ ಕುಮಾರನು (ಮಾರ್ಕ 1:1) ಮತ್ತು ಆತನು ಅನೇಕರಿಗಾಗಿ ತನ್ನ ಪ್ರಾಣವನ್ನು ಈಡು ಕೊಟ್ಟನು ಎಂಬದು. ಆತನ ಬಳಿ ವಿಶ್ವಾಸಿಸುವ ಎಲ್ಲರಿಗೂ ಅವನು ರಕ್ಷಕನಾಗಿರುತ್ತಾನೆ (ರೋಮಾ 10:9) ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯು ಸಿಕ್ಕುವದಿಲ್ಲ. ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ (ಅ.ಕೃ 4:12).

## ಬಾರ್ತಿಮಾಯ ಎಂಬ ಕುರುಡನು ತನ್ನ ದೃಷ್ಟಿಯನ್ನು ಪಡೆದನು (10:46-52)

(ಮತ್ತಾಯ 20:29-34, ಲೂಕ 18:35-43)

**46** ಯೆರೂಸಲೇಮಿಗೆ ಪ್ರಯಾಣಿಸುತ್ತಿರುವಾಗ ಯೇಸು ಮತ್ತು ಅವನ ಶಿಷ್ಯರು ಯೆರೂಸಲೇಮಿನ ಉತ್ತರಕ್ಕೆ 18 ಮೈಲುಗಳಷ್ಟು ದೂರವಿದ್ದ ಯರಿಕೋ[69] ಪಟ್ಟಣಕ್ಕೆ ಬಂದರು ಮತ್ತಾಯ ೨೦:೩೦ರ ಪ್ರಕಾರವಾಗಿ ಯೇಸು ಈ ಸಂದರ್ಭದಲ್ಲಿ ಇಬ್ಬರು ಕುರುಡರನ್ನು ಗುಣಪಡಿಸಿದನು. ಆದರೆ ಮಾರ್ಕನು ಅವರಲೊಬ್ಬನಾದ ಬಾರ್ತಿಮಾಯನ ಬಗ್ಗೆ ಮಾತ್ರ ಬರೆಯುತ್ತಾನೆ.

**47-48** ಯೇಸು ಬಂದನೆಂದು ಬಾರ್ತಿಮಾಯನು ಕೇಳಿದಾಗ "ಯೇಸುವೇ ದಾವಿದ ಕುಮಾರನೆ" ಎಂದು ಕೂಗಿದನು. ಮೆಸ್ಸೀಯನೂ ಯೆಹೂದ್ಯರ ಶ್ರೇಷ್ಟ ಅರಸನಾದ ದಾವೀದನ ಸಂತತಿಯಿಂದ ಬರುವನೆಂದು ಯರೇಮಿಯನು ಪ್ರವಾದಿಸಿದ್ದನು (ಯರೇಮಿಯನ 23:5) ಮತ್ತು ನಿಜವಾಗಿಯೂ ಯರೇಮಿಯನ ಪ್ರವಾದನೆಯು ನೆರವೇರಿತು (ಮತ್ತಾಯ 1:6, 20:21 ರೋಮ 1:2-3). ಬಾರ್ತಿಮಾಯನು ಕುರುಡನಾಗಿದ್ದರೂ ಯೇಸುವೇ ಮೆಸ್ಸೀಯನಾಗಿದ್ದಾನೆಂದು ಗುರುತಿಸಿದನು. ಮತ್ತು ಜನರ ಗುಂಪು ಅವನನ್ನು ಗದರಿಸಿದರೂ ತಾನು ಕೂಗಿಕೊಳ್ಳುವದನ್ನು ನಿಲ್ಲಸಲಿಲ್ಲ (ಲೂಕ 18:1-8).

**49-51** ಯೇಸು ಬಾರ್ತಿಮಾಯನಿಗೆ "ನಾನು ನಿನಗೆ ಏನು ಮಾಡಬೇಕೆಂದು ಕೋರುತ್ತಿ" ಎಂದನು. ಬಾರ್ತಿಮಾಯನು ಒಬ್ಬ ಬಿಕ್ಷುಕನಾಗಿದ್ದನು (ಲೂಕ 18:35). ಬಾರ್ತಿಮಾಯನು ಹಣವನ್ನು ಕೇಳುತ್ತಿಲ್ಲ, ಆದರೆ ದೃಷ್ಟಿಯನ್ನು ಕೇಳುತ್ತಿದ್ದಾನೆಂಬದನ್ನು ಜನರು ತಿಳಿದುಕೊಳ್ಳಬೇಕೆಂಬುದಕ್ಕಾಗಿ ಯೇಸು ಈ ಪ್ರಶ್ನೆ ಕೇಳಿದನು. ನಮಗೂ ಸಹ ಯೇಸು "ನಾನು ನಿನಗೆ ಏನು ಮಾಡಬೇಕೆಂದು ಕೇಳುತ್ತಿ"ಎಂದು ಕೇಳುತ್ತಾನೆ. ನಮಗೆ ಏನು ಬೇಕೆಂಬುದನ್ನು ಸರಿಯಾಗಿ ನಾವು ಹೇಳಬೇಕೆಂದು ಆತನು ಬಯಸುತ್ತಾನೆ, ಕೇಳಿ ಕೊಳ್ಳಿರಿ ನಿಮಗೆ ದೊರೆಯುವದು (ಮತ್ತಾಯ 7:7).

**52** ಬಾರ್ತಿಮಾಯನು ತನ್ನ ನಂಬಿಕೆ ಕಾರಣದಿಂದ ಸ್ವಸ್ಥನಾದನು "ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥ ಮಾಡಿಯದೆ"(ಮಾರ್ಕ 5:34 ಮತ್ತು ವ್ಯಾಖ್ಯಾನ ನೋಡಿರಿ).

# ಅಧ್ಯಾಯ - 11

## ಜಯೋತ್ಸಾಹದ ಪ್ರವೇಶ (11:1-11)

(ಮತ್ತಾಯ 21:1-11, ಲೂಕ 19:28-40, ಯೋಹಾನ 12:12-16).

**1** ಇದುವರೆಗೂ ಮಾರ್ಕನು ಬಣ್ಣಿಸಿದ ಯೇಸುವಿನ ಜೀವಿತದ ಘಟನೆಗಳು ಮೂರು ವರ್ಷಗಳ ಕಾಲದಲ್ಲಿ ಸಂಭವಿಸಿರುತ್ತವೆ. ಈಗ ಮಾರ್ಕನು ಯೇಸುವಿನ ಮರಣಕ್ಕೆ ಮುಂಚಿನ ಕೊನೆಯ ವಾರದ ದಾಖಲೆಯನ್ನು ಪ್ರಾರಂಭಿಸುತ್ತಾನೆ. ಯೇಸು ಮತ್ತು ಆತನ ಶಿಷ್ಯರು ಯೆರೂಸಲೇಮಿನ ಹೊರಭಾಗದ ದೊಡ್ಡ ಪರ್ವತವಾಗಿದ್ದ ಎಣ್ಣೆ ಮರಗಳ ಗುಡ್ಡದ ಬಳಿಯಲ್ಲಿರುವ ಎರಡು ಚಿಕ್ಕ ಗ್ರಾಮಗಳಾದ ಬೆತ್ಪಗೆಗೂ, ಬೆಥಾನ್ಯಕ್ಕು ಬಂದರು.

**2-3** ಮೆಸ್ಸೀಯನೂ ಪ್ರಾಯದ ಕತ್ತೆ ಮರಿಯನ್ನು[70] ಹತ್ತಿದವನಾಗಿ ಯೆರೂಸಲೇಮನ್ನು ಪ್ರವೇಶಿಸುವನೆಂದು ಪ್ರವಾದಿಯಾದ ಜಕರ್ಯನು ಪ್ರವಾದಿಸಿದನು (ಜಕರ್ಯ 9:9, ಮತ್ತಾಯ 21:5) ಯೇಸು ತನಗಾಗಿ ಕತ್ತೇಮರಿ ಸಿದ್ದವಾಗಿತ್ತೆಂದು ಬಲ್ಲವನಾಗಿದ್ದನು. ಆದನ್ನು ತರಲು ತನ್ನ ಇಬ್ಬರು ಶಿಷ್ಯರನ್ನು ಕಳುಹಿಸಿದನು. ಮತ್ತಾಯ 21:2-7ರ ಪ್ರಕಾರವಾಗಿ ಶಿಷ್ಯರು ಕತ್ತೆಮರಿ ಹಾಗು ಅದರ ತಾಯಿಯನ್ನು ಹಿಡಿದು ತಂದರು. ಆದರೆ ಯೇಸು ಇದುವರೆಗೂ ಯಾರೂ ಸವಾರಿ ಮಾಡಿರದ ಕತ್ತೆ ಮರಿಯ ಮೇಲೆ ಕುಳಿತನು.

**4-7** ಶಿಷ್ಯರು ಕತ್ತೆಯನ್ನು ಮತ್ತು ಅದರ ಮರಿಯನ್ನು ಯೇಸುವಿನ ಬಳಿಗೆ ತಂದು ತಮ್ಮ ಬಟ್ಟೆಗಳನ್ನು ಅವು ಗಳ ಮೇಲೆ ಹಾಕಿದರು (ಮತ್ತಾಯ 21:7), ಯೇಸು ಅದರ ಮೇಲೆ ಕುಳಿತುಕೊಂಡು ಯೆರೂಸಲೇಮಿನೊಳಗೆ ಸಾಗಿದನು.

**8-10** ಅನೇಕ ಜನರು ತಮ್ಮ ಬಟ್ಟೆಗಳನ್ನು ದಾರಿಯಲ್ಲಿ ಹಾಕಿದರು.ಕೆಲವು ಜನರು ಯೇಸುವನ್ನು ಗಲಿಲಾಯದಿಂದ ಹಿಂಬಾಲಿಸಿದ್ದರು. ಇತರರು ಯೆರೂಸಲೇಮಿನಲ್ಲಿ ವಾಸಿಸುತ್ತಿದ್ದವರು ಯೇಸುವಿನ ಶಿಷ್ಯರಾಗಿದ್ದರು. ತಾವು ಕ್ರಿಸ್ತನಿಗೆ ಆಧೀನರು ಎಂಬದು ಗುರುತಾಗಿ ಅವರು ದಾರಿಯಲ್ಲಿ ತಮ್ಮ ಬಟ್ಟೆಗಳನ್ನು ಹಾಸಿದರು (2 ಅರಸು 9:13). ಇತರರು ಆನಂದ ಮತ್ತು ಜಯದ ಗುರುತಾಗಿ ಅಂಜೂರದ ಚಿಗುರುಗಳನ್ನು ಹಾಸಿದರು. ಜನರು "ಹೋಸನ್ನ 71 ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ ಎಂದು ಕೂಗುತ್ತಿದ್ದರು"! (ಕೀರ್ತನೆಗಳು 118:25-26 ಲೂಕ 19:39-40) ರ ಪ್ರಕಾರವಾಗಿ ಅಲ್ಲಿ ಎಷ್ಟೊಂದು ಗದ್ದಲವಿತ್ತೆಂದರೆ ಜನರ ಗುಂಪಿನಲ್ಲಿದ್ದ ಫರಿಸಾಯರಲ್ಲಿ ಕೆಲವರು ನಿನ್ನ ಶಿಷ್ಯರನ್ನು ಗದರಿಸು, ಈ ತೊಂದರೆಗೆ ಅವರೇ ಕಾರಣರೆಂದು ಯೇಸುವಿಗೆ ಹೇಳಿದರು. ಆದರೆ ಯೇಸು ಅವರಿಗೆ ಉತ್ತರಿಸುತ್ತಾ "...ಇವರು ಸುಮ್ಮನಾದರೆ ಕಲ್ಲುಗಳು ಕೂಗುವವು "ಎಂದು ಹೇಳಿದನು (ಲೂಕ 19:40) ಯೇಸು ದೇವಕುಮಾರನಾದ ಮೆಸ್ಸೀಯನಂತೆ ನೇರವಾಗಿ ಯೆರೂಸಲೇಮನ್ನು ಪ್ರವೇಶಿಸಿದನು. ಇಂಥಹದೊಡ್ಡ ಸಂದರ್ಭದಲ್ಲಿ ನಿಶಃಕ್ತತೆ ಇರುವದು ಅಸಾಧ್ಯ ಯೋಹಾನ 16ರ ಪ್ರಕಾರವಾಗಿ ಶಿಷ್ಯರು ಮೊದಲು ಯೇಸು ಕತ್ತೆ ಮರಿಯ ಮೇಲೆ ಯೆರೂಸಲೇಮನ್ನು ಪ್ರವೇಶಿಸುವದರ ಮಹತ್ವವನ್ನು ಶಿಷ್ಯರು ಅರ್ಥಮಾಡಿಕೊಳ್ಳಲಿಲ್ಲ. ಯೇಸು ಮಹಿಮೆ ಹೊಂದಿದ ಮೇಲೆ ಸತ್ತವರೊಳಗಿಂದ ಎದ್ದು ಬಂದ ಮೇಲೆ ಮಾತ್ರವೇ ಈ ರೀತಿಯಾಗಿ ಜಕರ್ಯನ ಪ್ರವಾದನೆಯು ನೆರವೇರಿದೆ ಎಂಬುದನ್ನು ಅವನು ಅರ್ಥ ಮಾಡಿಕೊಂಡರು (ಲೂಕ 24:25-27,45, ಯೋಹಾನ 12:12-16). ಯೇಸುವಿನ ಮರಣ ಮತ್ತು ಪು ನರುಥ್ಥಾನದ ನಂತರ ವಷ್ಟೇ ಪವಿತ್ರಾತ್ಮನು ಅವರನ್ನು ಎಲ್ಲಾ ಸತ್ಯದಲ್ಲಿ ನಡೆಸುತ್ತಾನೆ (ಯೋಹಾನ 16:13).

ಮೆಸ್ಸೀಯನು ಒಬ್ಬ ಭೂಲೋಕದ ರಾಜನಂತೆ ವಿಜೃಂಬಣೆಯ ಸೈನ್ಯದ ನಾಯಕನಾಗಿ ಕುದುರೆಯ ಮೇಲೆ ಸವಾರಿ ಮಾಡುತ್ತಾ ಯೆರೂಸಲೇಮನ್ನು ಪ್ರವೇಶಿಸಲಿಲ್ಲ. ಆತನು ನ್ಯಾಯವಂತನೂ ಸುರಕ್ಷಿತನೂ (ರಕ್ಷಣೆಯನ್ನುತೆಗೆದುಕೊಂಡನನಾಗಿ) ಶಾಂತಗುಣವು ಳ್ಳವನಾಗಿಯೂ ಕತ್ತೆಮರಿಯನ್ನು ಹತ್ತಿದವನಾಗಿ ಬಂದಿದ್ದನು (ಜಕರ್ಯ 9:9). ಆತನು ಜನಾಂಗಗಳಿಗೆ ಸಮಾಧಾನವನ್ನು ಸಾರಲು ಬಂದಿದ್ದನು (ಜಕರ್ಯ 9:10).

**11** ಯೆರೂಸಲೇಮಿನಲ್ಲಿನ ಈ ಕೊನೆಯ ವಾರದವೇಳೆ ಯೇಸು ಪ್ರತಿ ಸಂಜೆ ಬೇಥಾನ್ಯಕ್ಕೆ ಹೋಗಿ ಅಲ್ಲಿ ರಾತ್ರಿಯನ್ನು ಕಳೆದನು.

## ಯೇಸು ದೇವಾಲಯವನ್ನು ಶುದ್ದೀಕರಿಸುತ್ತಾನೆ (11:12-19)

(ಮತ್ತಾಯ 21:12-19, ಲೂಕ 19:45-48)

**12-14** ಮರುದಿನ ಮುಂಜಾನೆ ಯೇಸು ಯೆರೂಸಲೇಮಿಗೆ ಹೋಗುವಾಗ ಮಾರ್ಗದಲ್ಲಿ ಹಣ್ಣುಗಳಿಲ್ಲದ ಒಂದು ಅಂಜೂರದ ಮರವನ್ನು ಕಾಣುತ್ತಾನೆ. ಆತನು ಎಲೆಗಳನ್ನೇ ಹೊರತು ಮತ್ತೇನೂ ಕಾಣಲಿಲ್ಲ, ಅದು ಅಂಜೂರದ ಹಣ್ಮಿನ ಕಾಲವಲ್ಲ ಆಗ ಯೇಸು ಅಂಜೂರದ ಮರವನ್ನು ಶಪಿಸುತ್ತಾನೆ, ಮತ್ತು ಮತ್ತಾಯ 21:19ಕ್ಕನುಸಾರವಾಗಿ ಅಂಜೂರದ ಮರವು ತಕ್ಷಣವೆ ಒಣಗಿಹೋಗುತ್ತದೆ (ವಚವ 20-21 ನೋಡಿರಿ). ಯೇಸು ಏಕೆ ಹಾಗೆ ಮಾಡಿದನು? ಹಣ್ಣುಗಳಿಲ್ಲದಿರುವದಕ್ಕೆ ಅಂಜೂರ ಮರದ ತಪ್ಪಲ್ಲ ಅದು ಅಂಜೂರದ ಹಣ್ಣಿನ ಕಾಲವಾಗಿರಲಿಲ್ಲ. ಯೆಹೂದ್ಯ ರಾಷ್ಟವಾದ ಇಸ್ರಾಯೇಲರಿಗೆ ಶೀಘ್ರವೇ ಸಂಭವಿಸಲಿರುವ ಸಂಗತಿಯನ್ನು ದೃಷ್ಟಾಂತ ನೀಡಲು ಯೇಸು ಅಂಜೂರದ ಮರವನ್ನು ಶಪಿಸುತ್ತಾನೆ. ಆತನು ಇದನ್ನು

ಯೆಹೂದ್ಯರಿಗೆ ಎಚ್ಚರಿಕೆಯಂತೆ ಮಾಡಿದನು. ಹಳೆ ಒಡಂಬಡಿಕೆಯ ಪ್ರವಾದಿಗಳು ಹಲವಾರು ವೇಳೆ ಇಸ್ರಾಯೇಲನ್ನು ಅಂಜೂರದ ಮರಕ್ಕೆ ಹೋಲಿಸಿದ್ದಾರೆ (ಯೆರೇಮಿಯ 8:13, 29:17, ಮೀಕ7:1-2) ದೂರದಿಂದ ಇಸ್ರಾಯೇಲವು ಉತ್ತಮವಾಗಿ ಕಂಡಿತು (ಎಲೆಗಳಿಂದ ಆವರಿಸಲ್ಪಟ್ಟಿದ್ದಾಗಿ ). ಆದರೆ ಯಾರಾದರೂ ಹತ್ತಿರದಿಂದ ನೋಡಿದಾಗ ಅಲ್ಲಿ ಕಾಣುವಂಥ ನೀತಿಯ ಯಾವ "ಫಲ" ವೂ ಇರಲಿಲ್ಲ. ಅಂದಿನಿಂದ ಯಾರೂ ಸಹ ಇಸ್ರಾಯೇಲನಿಂದ "ಫಲವನ್ನು ತಿನ್ನುವದಿಲ್ಲ" ಅಂದರೆ ಆಶೀರ್ವಾದವನ್ನು ಹೊಂದಿಕೊಳ್ಳುವದಿಲ್ಲ. ಇಸ್ರಾಯೇಲವು ಲೋಕಕ್ಕೆ ಬೆಳಕು, ಆಶೀರ್ವಾದವು ಆಗಿರಬೇಕಿತ್ತು. ಅದಕ್ಕೆ ಬದಲು ಯಾವ ಆತ್ಮೀಕ ಫಲ ಇಲ್ಲದೆ ಅದು ಆತ್ಮೀಕವಾಗಿ ಸತ್ತದ್ದಾಗಿತ್ತು. ಅದು ಫಲವಿಲ್ಲದ ಅಂಜೂರದ ಮರವಾಗಿತ್ತು ಮತ್ತು ಕ್ರಿಸ್ತನು ಅಂಜೂರದ ಮರವು ಒಣಗಿ ಹೋಗುವಂತೆ ಶಪಿಸಿದ ಹಾಗೆ ನಲ್ವತ್ತು ವರ್ಷಗಳ ನಂತರ ಇಸ್ರಾಯೇಲಿನ ರಾಜದಾನಿಯಾದ ಯೆರೂಸಲೇಮಿನ ಮೇಲೆ ದೇವರ ನ್ಯಾಯತೀರ್ಪು ಬಂದಿತು.ಕ್ರಿ.ಶ.70 ರಲ್ಲಿ ರೋಮಾಯರ ಸೈನ್ಯವು ಯೆರೂಸಲೇಮನ್ನು ಸಂಪೂರ್ಣವಾಗಿ ನಾಶಮಾಡಿತು. ತಮ್ಮನ್ನು ಕ್ರೈಸ್ತರೆಂದು ಕರೆದುಕೊಳ್ಳುವವರು ಅನೇಕ ಸಲ ಫಲವಿಲ್ಲದ ಅಥವಾ ಬಂಜೆಯಾದ ಅಂಜೂರದ ಮರದಂತಿದ್ದಾರೆ ಫಲಗಳು ಇರಬೇಕಾಗಿತ್ತು ಆದರೆ ಎಲೆಗಳು ಮಾತ್ರ ಇರುತ್ತವೆ. ನಮ್ಮ ಧಾರ್ಮಿಕತೆ ಕೇವಲ ಜೀವನವು (ಜೀವಿತವು ) ಆ ಅಂಜೂರದ ಮರದ ಹಾಗೆ ಬೇಗನೆ ಒಣಗಿ ಸತ್ತು ಹೋಗುವರು. ಫಲವನ್ನು ಬಿಡದ ಒಂದು ಧರ್ಮವು ಅದು ಸತ್ತ ಧರ್ಮವಾಗಿದೆ.

**15-16** ಎಲ್ಲಾ ಯೆಹೂದ್ಯರ ಒಂದು ದೊಡ್ಡ ದೇವಾಲಯವು ಯೆರೂಸಲೇಮಿನಲ್ಲಿ ಇತ್ತು ಮುಖ್ಯ ದೇವಾಲಯದ ಕಟ್ಟಡದ ಸುತ್ತಲೂ ಅನ್ಯ ಜನರ ಸ್ಥಳವೆಂದು ಕರೆಯಲ್ಪಡುವ ಹೊರ ಆವರಣವಿತ್ತು. ಅಲ್ಲಿ ಅನ್ಯ ಜನರು ಪ್ರಾರ್ಥನೆಗೆ ಬರುತ್ತಿದ್ದರು. ಈ ಆವರಣದಲ್ಲಿ ಯೆಹೂದ್ಯ ದೇವಾಲಯದ ಅಧಿಕಾರಿಗಳು ಚಿಕ್ಕ ಚಪ್ಪರಗಳನ್ನು ನಿರ್ಮಿಸಿದ್ದರು ಅಲ್ಲಿ ಆಲಯಕ್ಕೆ ಬರುವ ಯಾತ್ರಿಗಳು ಯಜ್ಞಕ್ಕಾಗಿ ಪಾರಿವಾಳಗಳನ್ನು ಕೊಳ್ಳುತ್ತಿದ್ದರು, ಮತ್ತು ಅಲ್ಲಿ ಹಣವು ವರ್ಗಾಯಿಸಲ್ಪಡುತ್ತಿತ್ತು (ಆಲಯದ ಸುಂಕವು ವಿಶೇಷ ನಾಣ್ಯಗಳ ಮೂಲಕವೇ) ಸಂದಾಯ ಮಾಡಬೇಕಾಗಿತ್ತು ಆದರೆ ಅದರಲ್ಲಿ ಕೆಲಸ ಮಾಡುವಂತವರು ಜನರನ್ನು ಮೋಸಗೊಳಿಸಿ ತಮಗಾಗಿ ಹೆಚ್ಚಿನ ಲಾಭವನ್ನು ಪಡೆಯುತ್ತಿದ್ದರು. ಆದಕಾರಣ ಅವರನ್ನು ಹೊರಗೆ ಹೊರಡಿಸಿ ಅವರ ಮೇಜು, ಕಾಲ್ಮಣೆಗಳನ್ನು ದಬ್ಬಿಬಿಟ್ಟನು.[72]

**17** ನಂತರ ಯೇಸು ಯೇಶಾಯ 56-70 ರಲ್ಲಿ ಬರೆದದ್ದನ್ನು ಪ್ರಸ್ತಾಪಿಸುತ್ತಾ ದೇವಾಲಯವು ಎಲ್ಲಾ ಜನಾಂಗಗಳಿಗೂ ಪ್ರಾರ್ಥನಾಲಯವಾಗಿರಬೇಕು. ಆದರೆ ಅದಕ್ಕೆ ಬದಲಾಗಿ ಯೆಹೂದ್ಯರು ಕಳ್ಳರ ಗವಿಯನ್ನಾಗಿ ಮಾಡಿದ್ದರೆಂದು ಜನರಿಗೆ ಕಲಿಸಿದನು (ಯೆರೇಮಿಯಾ 7:11). ಅಂಜೂರದ ಮರದಂತೆ ದೇವಾಲಯವು ಯೆಹೂದ್ಯರಾಷ್ಟ್ರಕ್ಕೆ ಒಂದು ಪ್ರಾಂತ್ಯವಾಗಿತ್ತು. ಹೊರಗಡೆ ಅದು ವಿಜ್ರಂಬಣೆಯಿಂದಿದ್ದು ಅದರ ಒಳಗಡೆ "ಕಳ್ಳರ ಗವಿಯಾಗಿತ್ತು".

**18-19** ಸಹಜವಾಗಿ ಯೆಹೂದ್ಯ ನಾಯಕರು ಯೇಸುವಿನ ಕಾರ್ಯದ ಮೇಲೆ ರೋಷಗೊಂಡರು, ಯೇಸು ಅವರಿಗೆ ನಾಚಿಕೆಯನ್ನು ಉಂಟು ಮಾಡಿದನು. ಅವರ ದುರಾಸೆ, ಮತ್ತು ಕಪಟತನವನ್ನು ಬಯಲಿಗೆ ತಂದಿದ್ದನು. ಆದಕಾರಣ ಅವರು ಆತನನ್ನು ಕೊಲ್ಲಲೂ ಹೊಂಚು ಹಾಕಲು ಪ್ರಾರಂಬಿಸಿದರು. ಅವರು ಅವನನ್ನು ಜನರ ಮಧ್ಯದಲ್ಲಿ ಬಂದಿಸಲಾಗಲಿಲ್ಲ. ಯಾಕಂದರೆ ಅವರು ಜನರಿಗೆ ಹೆದರಿದರು. ಹೆಚ್ಚಿನಪಾಲು ಜನರು ಯೇಸುವನ್ನು ಗೌರವಿಸಿದರು ಮತ್ತು ಆತನೊಬ್ಬ ದೊಡ್ಡ ಪ್ರವಾದಿಯೆಂದು ಪರಿಗಣಿಸಿದ್ದರು. (ಮತ್ತಾಯ 21: 10-11) ನಿಜವಾಗಿ ಹೇಳುವದಾದರೆ, ಅನೇಕರು ಆತನು ಮೆಸ್ಸೀಯನೆಂದು ಯೋಚಿಸಿದರು (ಮತ್ತಾಯ 21:14-16). ರ ಪ್ರಕಾರವಾಗಿ ಯೇಸು ಚಿನಿವಾರರನ್ನು ಹೊರಡಿಸಿ ಬಿಟ್ಟ ಮೇಲೆ ಆತನು ದೇವಾಲಯಕ್ಕೆ ಬಂದಿದ್ದ ಕುರುಡರನ್ನು ಕಾಲಿಲ್ಲದವರನ್ನು ಗುಣಪಡಿಸಲಾರಂಬಿಸಿದನು. ದೇವಾಲಯದ ಆವರಣದಲ್ಲಿದ್ದ ಮಕ್ಕಳು ಸಹ "ದಾವೀದ ಕುಮಾರನಿಗೆ ಹೋಸನ್ನ" [73] ಎಂದು ಕೂಗುತ್ತಿದ್ದರು. ಮಹಾಯಾಜಕರೂ ಶಾಸ್ತ್ರಿಗಳು ಯೇಸುವೇ ಮೆಸ್ಸೀಯನೆಂದು ಹೇಳಲು ಇಚ್ಚಿಸಲಿಲ್ಲ. ಈಗಾಗಲೆ ಆತನ ಪ್ರಸಿದ್ಧಿ ವಿಷಯದಲ್ಲಿ ಅಸೂಯೆಗೊಂಡಿದ್ದರು. ಮಕ್ಕಳು ಸಹ ಆತನನ್ನು ದಾವೀದ ಕುಮಾರನು – ಅಂದರೆ ಮೆಸ್ಸೀಯ ಎಂದು ಕರೆಯುತ್ತಿದ್ದಾರೆಂಬುದಕ್ಕೆ ಬೇಸರಗೊಂಡಿದ್ದರು. ಆದರೆ ಯೇಸು ಅವರಿಗೆ ಮೆಸ್ಸೀಯನ ಕುರಿತಾದ ಪ್ರವಾದನೆಗಳಲ್ಲಿ ಒಂದರ ನೆರವೇರುವಿಕೆ ಎಂದು ಉತ್ತರಿಸಿದನು. ಅದೇನಂದರೆ ಸಣ್ಣ ಮಕ್ಕಳ ಬಾಯಿಯಿಂದಲೂ ಮೊಲೆ ಕೂಸುಗಳ ಬಾಯಿಯಿಂದಲೂ ಸ್ತೋತ್ರವನ್ನು [74] ಸಿದ್ಧಿಗೆ ತಂದನು (ಕೀರ್ತನೆ 8:2 ಮತ್ತಾಯ 21:16).

## ಒಣಗಿದ ಅಂಜೂರದ ಮರ (11:20-26)

(ಮತ್ತಾಯ 21:20-22)

**20-21** ಮರುದಿನ ಮುಂಜಾನೆ ಯೇಸು ಮತ್ತು ಶಿಷ್ಯರು ಹಿಂದಿನ ದಿನ [75] ಒಣಗಿದ ಅಂಜೂರದ ಮರವನ್ನು ಪು ನಃ ಕಂಡರು. ಯೇಸುವಿನ ಮಾತಿನಿಂದ ಮರವು ಬುಡದಿಂದ ಹಿಡಿದು ಪೂರ್ತಿಯಾಗಿ ಒಣಗಿ ಹೋಗಿದ್ದಕ್ಕೆ ಪೇತ್ರನು ಆಶ್ಚರ್ಯಗೊಂಡನು.

**22-24** ಆಗ ಯೇಸು ಶಿಷ್ಯರಿಗೆ ಹೆಚ್ಚಿನ ವಿಷಯವನ್ನು ಕಲಿಸಲು ಅಂಜೂರದ ಮರದ ಉದಾಹರಣೆಯನ್ನು ಉಪಯೋಗಿಸಿದನು. ಅದೇನಂದರೆ ಒಬ್ಬನಿಗೆ ನಂಬಿಕೆ ಇರುವದಾದರೆ ಆತನು ಕೇಳುವದೆಲ್ಲವೂ ನೆರವೇರಿಸಲ್ಪಡವದು (ವಚನ 24) ಒಬ್ಬನು ನಂಬಿಕೆ ಹೊಂದಿರುವದಾದರೆ ಆತನು ಅಂಜೂರದ ಮರಕ್ಕೆ ಒಣಗಿ ಹೋಗು ಎಂದರೆ ಅದು ಒಣಗುವದು. ಒಬ್ಬನಿಗೆ ನಂಬಿಕೆ ಇರುವದಾದರೆ ಆತನು ಬೆಟ್ಟಕ್ಕೆ ನೀನು, ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ[76] ಬೀಳು,

ಎಂದು ಹೇಳಿದರೆ ಹಾಗೇ ಆಗುವದು. ಯೇಸುವಿನ ಅರ್ಥವೇನೆಂದರೆ ನಾವು ನಂಬಿಕೆ ಯಿಂದ ಪ್ರಾರ್ಥಿಸುವದಾದರೆ ದೇವರು ಎಲ್ಲವನ್ನು ಮಾಡಬಲ್ಲನು ಎಂಬದೇ ನಿಜವಾಗಿಯೂ ದೇವರಿಗೆ ಎಲ್ಲವೂ ಸಾಧ್ಯವಿದೆ. (ಮಾರ್ಕ 10:27) - ಯೇಸು ಇಲ್ಲಿ ನಾವು ಬಯಸುವ ಎಲ್ಲದಕ್ಕಾಗಿ ಪ್ರಾರ್ಥಿಸಬಹುದು ಮತ್ತು ದೇವರು ಅದನ್ನು ಮಾಡುವನು ಎಂದು ಹೇಳುತ್ತಿಲ್ಲ. ನಮ್ಮ ಮನವಿಗಳು ಉತ್ತರಿಸಲ್ಪಡಬೇಕಾದರೆ ಕೆಲವೊಂದು ಶರತ್ತುಗಳನ್ನು ನೆರವೇರಿಸುವದು ಅಗತ್ಯ. ಎಲ್ಲರಿಗಿಂತಲೂ ಮುಖ್ಯವಾದದ್ದೆಂದರೆ ನಾವು ನಂಬಿಕೆಯಿಂದ ಪ್ರಾರ್ಥಿಸಬೇಕು. ನಂಬಿಕೆ ಇಲ್ಲದ ಪ್ರಾರ್ಥನೆ ಏನನ್ನು ಸಾಧಿಸದು. ಎರಡನೇದಾಗಿ ನಾವು ದೇವರ ಚಿತ್ತಕ್ಕನುಸಾರವಾಗಿ ಪ್ರಾರ್ಥಿಸಬೇಕು (1 ಯೋಹಾನ 5:14-15). ತನ್ನ ಉದ್ದೇಶಕ್ಕೆ ವಿರುದ್ಧವಾದ ಯಾವದನ್ನೇ ನಾವು ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸಬೇಕು ಅಂದರೆ ಯೇಸುವಿಗಾಗಿ ಹೊರತು ನಮಗಾಗಿಯಲ್ಲ (ಯೋಹಾನ 14:13-14, 16:23). ನಾಲ್ಕನೇದಾಗಿ ನಾವು ಕ್ರಿಸ್ತನಲ್ಲಿಯೇ ನೆಲೆಗೊಳ್ಳಬೇಕು ಮತ್ತು ಆತನ ವಾಕ್ಯಗಳು ನಮ್ಮಲ್ಲಿ ನೆಲೆಗೊಳ್ಳಬೇಕು (ಯೋಹಾನ 15:7) "ಕ್ರಿಸ್ತನಲ್ಲಿ" ಎಂದರೆ ನಾವು ಆತನ ಪ್ರೀತಿಯಲ್ಲಿದ್ದೇವೆ, ನಾವು ಆತನ ಅಧಿಕಾರದ ಅಡಿಯಲ್ಲಿ ಇದ್ದೇವೆ, ನಾವು ಆತನ ಚಿತ್ತಕ್ಕೆ ವಿಧೇಯರಾಗಿದ್ದೇವೆ ಎಂದರ್ಥ (1 ಯೋಹಾನ 3:22). ಕ್ಲುಪ್ತವಾಗಿ ಹೇಳುವದಾದರೆ ಕ್ರಿಸ್ತನು ನಮ್ಮ ಜೀವಿತ ಒಡೆಯನು ಎಂಬುದೇ ಇದರರ್ಥ, ಆತನ ಆತ್ಮನಾದ ಪವಿತ್ರಾತ್ಮನು ನಮ್ಮಲ್ಲಿದ್ದು, ನಮ್ಮನ್ನು ನಡೆಸುತ್ತಿದ್ದಾನೆ ಎಂದರ್ಥ, ನಿಜವಾಗಿಯೂ ಪವಿತ್ರಾತ್ಮನು ಏನು ಪ್ರಾರ್ಥಿಸಬೇಕೆಂದು ಕಲಿಸುವದು ಮಾತ್ರವೇ ಅಲ್ಲ ಆದರೆ ಅದಕ್ಕಾಗಿ ಪ್ರಾರ್ಥಿಸಲು ನಮಗೆ ನಂಬಿಕೆಯನ್ನು ನೀಡುತ್ತಾನೆ ಹೀಗೆ ಈ ರೀತಿಯಾಗಿ ನಾವು "ಕ್ರಿಸ್ತನಲ್ಲಿ"ಇದ್ದರೆ ಕ್ರಿಸ್ತನ ಪರವಾಗಿ ನಾವು ನಂಬಿಕೆಯಲ್ಲಿ ಕೇಳುವಂತದ್ದೆಲ್ಲವನ್ನು ಆತನು ಮಾಡುವನು. ಇದರ ಮೂಲಕ ನಾವು ತಿಳಿದುಕೊಳ್ಳುವದೇನೆಂದರೆ ನಂಬಿಕೆಯಿಂದ ದೇವರನ್ನು ಪ್ರಾರ್ಥಿಸುವದು ಒಂದು ರೀತಿಯ ಮಾಯಾಜಾಲದ ಸೂತ್ರ ಅಥವಾ ಆಚಾರ ಇಲ್ಲದೆ ಶೂನ್ಯ ಮಾತುಗಳು ಎಂಬಂತೆ ಅಲ್ಲ. ಸರಿಯಾದ ಮಾರ್ಗದಲ್ಲಿ ನಂಬಿಕೆಯಿಂದ ಪ್ರಾರ್ಥಿಸುವದು ಜೀವ ಸ್ವರೂಪನಾದ ದೇವರ ಅಪರಿಮಿತ ಶಕ್ತಿಯನ್ನು ಬಿಡುಗಡೆಗೊಳಿಸುತ್ತದೆ. ನಾವು ಪ್ರಾರ್ಥಿಸುವಾಗ ದೇವರು ಆಲಿಸುತ್ತಾನೆ, ದೇವರು ಕಾರ್ಯ ಮಾಡುತ್ತಾನೆ ಆದರೆ ನಾವು ಇನ್ನೊಂದು ಸಂಗತಿಯನ್ನು ನೆನಪಿನಲ್ಲಿಟ್ಟುಕೊಳ್ಳಬೇಕು, ಅದೇನೆಂದರೆ: ದೇವರು ನಮ್ಮ ನಂಬಿಕೆಯ ಪ್ರಾರ್ಥನೆಗೆ ಯಾವಾಗಲೂ ಉತ್ತರಿಸುತ್ತಾನೆ ಆದರೆ ನಾವು ನಿರೀಕ್ಷಿಸಿದ ರೀತಿಯಲ್ಲಿ ಆತನು ಅದನ್ನು ಉತ್ತರಿಸಲಿರಬಹುದು. ನಾವು ಒಂದು ವಿಷಯಕ್ಕಾಗಿ ಪ್ರಾರ್ಥಿಸಬಹುದು ಆದರೆ ದೇವರು ತನ್ನ ಜ್ಞಾನಕ್ಕನುಸಾರವಾಗಿ ಇನ್ನೂ ಉತ್ತಮ ವಾದದ್ದೊಂದನ್ನು ಕೊಡಬಹುದು. ನಾವು ಇಚ್ಛಿಸುವದಕ್ಕಿಂತಲೂ ಹೆಚ್ಚಾಗಿ ದೇವರು ನಮ್ಮ ಜೀವಿತಗಳನ್ನು ಸಮೃದ್ಧಿಗೊಳಿಸಲು ಮತ್ತು ಆಶಿರ್ವದಿಸಲು ಬಯಸುತ್ತಾನೆ. ಉತ್ತಮವಾದ ಮಾರ್ಗದಲ್ಲಿ ನಮ್ಮ ಪ್ರಾರ್ಥನೆಗಳಿಗೆ ಉತ್ತರಿಸುವಂತೆ ನಾವು ಆತನಲ್ಲಿ ವಿಶ್ವಾಸವಿಡಬಹುದು. ಯೇಸು 24 ನೇ ವಚನದಲ್ಲಿ "ನೀವು ಪ್ರಾರ್ಥನೆಮಾಡಿ ಏನೇನು ಬೇಡಿಕೊಳ್ಳುತ್ತಿರೊ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ, ಅದು ನಿಮಗೆ ಸಿಕ್ಕುವದು" ಎಂದು ಹೇಳುತ್ತಾನೆ. ದೇವರು ಖಂಡಿತವಾಗಿಯೂ ನಮ್ಮ ಮನವಿಗಳನ್ನು ನೆರವೇರಿಸುವನು, ಆತನು ನೆರವೇರಿಸುತ್ತೇನೆ ಎಂದು ವಾಗ್ದಾನಮಾಡಿದ್ದಾನೆ, ಮತ್ತು ದೇವರು ವಾಗ್ದಾನಮಾಡುವದನ್ನು ಆತನು ಯಾವಾಗಲೂ ನೆರವೇರಿಸುವನು. ಅರಸನಾದ ದಾವಿದನ ಮಗನಾದ ಸೊಲೊಮೋನನು ದೇವರನ್ನು ಸ್ತುತಿಸುತ್ತಾ ಹೀಗೆಂದನು, "ಇಸ್ರಾಯೇಲ್ ದೇವರಾದ ಯೆಹೋವನಿಗೆ ಸ್ತೋತ್ರವಾಗಲಿ, ನನ್ನ ತಂದೆಯಾದ ದಾವೀದನಿಗೆ ಆತನ ಬಾಯಿ ನುಡಿದದ್ದನ್ನು ಆತನ ಹಸ್ತವು ಈಗ ನೆರವೇರಿಸಿಯದೆ" (2 ಪೂ.ಕಾಲ ವೃತ್ತಾಂತ 6:4).

ಹೇಗು ದೇವರು ನಮ್ಮ ಮನವಿಗೆ ಉತ್ತರಿಸುತ್ತಾನೆಂಬ ನಿಶ್ಚಯ ನಮಗಿದ್ದರೂ ಅನೇಕ ವೇಳೆಗಳಲ್ಲಿ ನಾವು ಶೀಘ್ರವೇ ಉತ್ತರವನ್ನು ಹೊಂದುವದಿಲ್ಲ. ನಮ್ಮ ಪ್ರಾರ್ಥನೆಯನ್ನು ನೆರವೇರಿಸಲು ಉತ್ತಮ ಸಮಯ ಯಾವದೆಂದು ಆತನು ಬಲ್ಲನು ನಾವು ಆತನ ಉತ್ತರವನ್ನು ಸ್ವೀಕರಿಸಲು ಸಿದ್ಧವಾಗಿದ್ದೇವೆಂದು ಆತನು ಬಲ್ಲನು. ಆದಕಾರಣ ನಾವು ಉತ್ತರವನ್ನು ಪಡೆದುಕೊಳ್ಳುವವರೆಗೂ ನಂಬಿಕೆಯಿಂದ ಅದಕ್ಕಾಗಿ ಪ್ರಾರ್ಥಿಸುವದನ್ನು ಮುಂದುವರಿಸಬೇಕು ಎಲೀಯನು ಮಳೆಗಾಗಿ ಏಳು ಸಾರಿ ಪ್ರಾರ್ಥಿಸಬೇಕಾಯಿತು. ಮತ್ತು ಅವಾಗ ಮಾತ್ರವೇ ಮಳೆಯಾಯಿತು. (1 ಅರಸ 15:18, 41-45) ನಮ್ಮ ಮನವಿಗೆ ದೇವರು ಒಪ್ಪಿದ್ದಾನೆಂದು ನಿಶ್ಚಯ ನಮಗಿರಬಹುದು ಆದರೆ ನಾವು ವಾಸ್ಥವದಲ್ಲಿ ಉತ್ತರವನ್ನು ನಮ್ಮ ಅನುಭವದಲ್ಲಿ (ನಮ್ಮ ಕೈಯಲ್ಲಿ) ಹೊಂದುವತನಕ ನಿರಂತರವಾಗಿ ಪ್ರಾರ್ಥಿಸಬೇಕು. ನಂಬಿಕೆ ಮತ್ತು ಕಾರಣ (ದೀರ್ಘಪ್ರಯತ್ನ) ಗಳೆರಡು ನಮ್ಮ ಪ್ರಾರ್ಥನೆಗೆ ಉತ್ತರ ಪಡೆಯಲು ಅವಶ್ಯಕ (ಲೂಕ 18:1-8, ಇಬ್ರಿಯ 6:12, ಮತ್ತು ವ್ಯಾಖ್ಯಾನ ನೋಡಿರಿ) ನಮ್ಮ ಪ್ರಾರ್ಥನೆಗೆ ಉತ್ತರವು ಬರುವದು ನಿದಾನವಾಗಿ ಇರುವದಾದರೆ ನಮ್ಮ ಪ್ರಾರ್ಥನೆಯು ನೆರವೇರದಂತೆ ತಡೆಯುತ್ತಿರುವ ಯಾವದೋ ಸಂಗತಿ ನಮ್ಮ ಜೀವಿತದಲ್ಲಿ ಇರಬಹುದು. ನಾವು ಯಾವಾಗಲು ನಮ್ಮನ್ನು ಪರೀಕ್ಷಿಸಿಕೊಳ್ಳುತ್ತಿರಬೇಕು. ನಾವು ದೇವರ ಚಿತ್ತದಂತೆ ನಡೆಯುತ್ತಿದ್ದೇವೊ? ನಾವು ಯಾವದಾದರು ಸಹೋದರನನ್ನು ಕ್ಷಮಿಸದೇ ಇದ್ದೇವೋ? (ವ.25). ನಾವು ಅರಿಕೆ ಮಾಡದಿರುವ ಯಾವದಾದರೂ ಪಾಪವು ನಮ್ಮ ಹೃದಯದಲ್ಲಿ ಅಡಗಿದೆಯೋ? (ಕೀರ್ತನೆ 66:18) ನಾವು ರಾತ್ರಿ ಹಗಲು ಮೊರೆ ಇಡುತ್ತಿದ್ದೇವೋ? (ಲೂಕ 18:7) ನಾವು ಕ್ರಿಸ್ತನನ್ನೆ ಹುಡುಕುತ್ತಿದ್ದೇವೊ ಅಥವಾ ಕೇವಲ ಆತನ ಆಶಿರ್ವಾದಗಳನ್ನೊ? ನಮ್ಮನ್ನು ನಾವು ಪರೀಕ್ಷೆ ಮಾಡಿಕೊಳ್ಳುವಾ, ನಾವು ಕೇವಲ ಕ್ರಿಸ್ತನನ್ನು ಆತನ ಚಿತ್ತವನ್ನು ಹುಡುಕೋಣ, ಏನೇನು ಆತನಲ್ಲಿ ನಂಬಿಕೆಯಿಟ್ಟು ನೀವು ಪ್ರಾರ್ಥನೆ ಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದುವಿರಿ.

**25-26** ಯೇಸು ಇಲ್ಲಿ ಪರಿಣಾಮಕಾರಿಯಾದ ಪ್ರಾರ್ಥನೆಗೆ ಐದನೇಯ ಷರತ್ತನ್ನು ತಿಳಿಸುತ್ತಾನೆ. ನಾವು ಯಾರ ವಿರುದ್ಧವಾಗಿಯೂ ದ್ವೇಷ ಅಥವಾ ಕಹಿ ಬಾವನೆಯನ್ನು ಹೊಂದಿರಬಾರದು ನಾವು ಯಾರನ್ನಾದರೂ ಕ್ಷಮಿಸದೇ ಇರುವದಾದರೆ, ದೇನರು ನಮ್ಮ ಪ್ರಾರ್ಥನೆಯನ್ನು ಕೇಳುವದಿಲ್ಲ. ಯಾರನ್ನಾದರೂ ಕ್ಷಮಿಸದೇ ಇರುವದು, ದೇವರಿಗೆ ಅವಿಧೇಯರಾದಂತೆ

ಇರುತ್ತದೆ. ದಾವಿದನು ಹೀಗೆ ಬರೆಯುತ್ತಾನೆ – ನಾನು ಕೆಟ್ಟತನದ ಮೇಲೆ ಮನಸಿಟ್ಟಿದ್ದರೆ ಆತನು ನನ್ನ ಪ್ರಾರ್ಥನೆಯನ್ನು ಕೇಳುತ್ತಿದ್ದಿಲ್ಲ. (ಕೀರ್ತನೆ 66:18).

ನಾವು ಯಾರನ್ನಾದರು ಕ್ಷಮಿಸಲು ಬಯಸದೇ ಹೋದರೆ ದೇವರು ನಮ್ಮ ಪ್ರಾರ್ಥನೆ ಕೇಳದೆ ಇರುವದುಮಾತ್ರವೇ ಅಲ್ಲ ಆದರೆ ನಮ್ಮನ್ನು ಕ್ಷಮಿಸುವದೂ ಇಲ್ಲ. (ಮತ್ತಾಯ 6:14-15) ನಾವು ನಮಗೆ ತಪ್ಪು ಮಾಡಿದವರನ್ನು ಕ್ಷಮಿಸುವಂತೆಯೇ ದೇವರು ನಮ್ಮ ತಪ್ಪುಗಳನ್ನು ಕ್ಷಮಿಸುತ್ತಾನೆ (ಮತ್ತಾಯ 6:12).

ನಾವು ಮೊದಲು ದೇವರು ಬಳಿಗೆ ಬಂದು ಕ್ರಿಸ್ತನಲ್ಲಿ ನಂಬಿಕೆ ಇಟ್ಟಾಗ ದೇವರು ನಮ್ಮನ್ನು ಉಚಿತವಾಗಿ ಕ್ಷಮಿಸುವನೆಂಬುದು ನಿಜವೇ (ಎಫೆಸ್ 4:32, ಕೊಲೊಸ್ಸೆ 3:13) ಆದರೆ ಅದರ ನಂತರ ನಾವು ನಿರಂತರವಾಗಿ ದೇವರಿಗೆ ಅವಿಧೇಯರಾಗುವದಾದರೆ ಯಾರನ್ನಾದರೂ ಕ್ಷಮಿಸದೇ ಹೋದರೆ ದೇವರು ನಮ್ಮಿಂದ ತನ್ನ ಕ್ಷಮೆಯನ್ನು ಹಿಂದೆಗೆದುಕೊಂಡು ನಮ್ಮ ಪ್ರಾರ್ಥನೆಗೆ ಉತ್ತರ ಕೊಡಲು ನಿರಾಕರಿಸುವನು. ಈ ವಚನಗಳಿಂದ ನಾವು [17] ಹೆಚ್ಚಿನ ಸತ್ಯವನ್ನು ತಿಳಿದುಕೊಳ್ಳಬಹುದು. ಕ್ಷಮಿಸುವಂತದ್ದು ಪ್ರೀತಿಗೆ ಒಂದು ಮುಖ್ಯಸಾಕ್ಷಿಯಾಗಿದೆ, ದೇವರು ನಮ್ಮ ಪ್ರಾರ್ಥನೆಗೆ ಉತ್ತರಿಸಬೇಕೆಂದು ನಾವು ಬಯಸವದಾದರೆ ನಾವು ಇತರರನ್ನು ಕ್ಷಮಿಸುವದು ಮಾತ್ರವಲ್ಲ ನಾವು ಅವರನ್ನು ಪ್ರೀತಿಸಲು ಬೇಕು ಈ ವಚನಗಳಲ್ಲಿ ಯೇಸು "ಮೊದಲು ಹೋಗಿ ನಿನ್ನ ನೆರೆಯವರನ್ನು" ಕ್ಷಮಿಸಿ ಪ್ರೀತಿಸು. ಆಗ ದೇವರು ನಿನ್ನ ಪ್ರಾರ್ಥನೆಯನ್ನು ನಾವು ದೇವರ ಬಳಿಗೆ ಬರುವದಕ್ಕಾಗಿ ನಾವು ಆತನನ್ನು ಪ್ರೀತಿಸಬೇಕು ಆದರೆ ನಮ್ಮ ಕಣ್ಣಿಗೆ ಕಾಣುವ ನೆರೆಯವನನ್ನು ಪ್ರೀತಿಸದೇ ಹೋಗುವದಾದರೆ ನಾವು ಕಾಣದೇ ಇರುವ ದೇವರನ್ನು ಪ್ರೀತಿಸಲು ಸಾದ್ಯವಿಲ್ಲ (1 ಯೋಹಾನ 4:20-21) ಪ್ರಾರ್ಥನಾ ವೇಳೆಗಳಲ್ಲಿ ನಾವು ಸಾಮಾನ್ಯವಾಗಿರುವದಕ್ಕಿಂತಲೂ ಹೆಚ್ಚು ನೀತಿವಂತರೆಂದು ಯೋಚಿಸಿಕೊಳ್ಳುವ ಶೋಧನೆಗೆ ಒಳಗಾಗುತ್ತೇವೆ. ಆದರೆ ದೇವರು ಪ್ರಾರ್ಥನಾ ವೇಳೆಗಳಲ್ಲಿಯೇ ಮಾತ್ರ ನಮ್ಮ ಜೀವನ ಹೇಗಿರುತ್ತದೆಂದು ನೋಡಲು ದೇವರು ಇಚ್ಚಿಸುತ್ತಾನೆ. ನಮ್ಮ ನೆರೆಯವರನ್ನು ಪ್ರೀತಿಸಿ ಕ್ಷಮಿಸುವಂತ ಮನಸ್ಸು ದಿನವೆಲ್ಲಾ ಇರುತ್ತದೊ? ನಾವು ದಿನವೆಲ್ಲಾ ನಂಬಿಕೆಯಲ್ಲಿ ನಿರಂತರವಾಗಿ ಸಾಗುತ್ತೇವೊ?ದೇವರು ಇದನ್ನು ನೋಡಲಿಚ್ಚಿಸುತ್ತಾನೆ. ದೇವರು ನಮ್ಮ ದಿನ ನಿತ್ಯದ ನಡುವಳಕೆಗನುಸಾರವಾಗಿ ನಮ್ಮ ಪ್ರಾರ್ಥನೆಗಳನ್ನು ಪಾಲಿಸುತ್ತಾನೆ

## ಯೇಸುವಿನ ಅಧಿಕಾರವು ಪ್ರಶ್ನಿಸಲ್ಪಟ್ಟಿದ್ದು (11:27-33)

(ಮತ್ತಾಯ 21:23-27, ಲೂಕ 20:1-8)

**27-28** ಯೆಹೂದ್ಯ ನಾಯಕರು ಯೇಸುವನ್ನು ನಿನಗೆ ಬೋಧಿಸಲು, ಸ್ವಸ್ಥ ಮಾಡಲು ಮತ್ತು ಚಿನವಾರರನ್ನು ಪಾರಿವಾಳದವರನ್ನು ಹೊರಡಿಸುವ ಅಧಿಕಾರವನ್ನು ಯಾರು ಕೊಟ್ಟರು ಎಂದು ಕೇಳಿದರು. ಆತನನ್ನು ತಪ್ಪಿನಲ್ಲಿ ಸಿಕ್ಕಿಸಬೇಕೆಂದು ಇದನ್ನು ಕೇಳುತ್ತಾರೆ. ಒಂದು ವೇಳೆ ಆತನು ಒಬ್ಬ "ಮನುಷ್ಯನಿಗೆ ಅಧಿಕಾರ ಕೊಟ್ಟನು" ಎಂದು ಹೇಳಿದ್ದರೆ ಜನರು ಆತನೆಡೆಗೆ ಇದ್ದ ಗೌರವವನ್ನು ಕಳೆದುಕೊಳ್ಳುತ್ತಿದ್ದರು. ಒಂದು ವೇಳೆ ಅವನು "ದೇವರು ನನಗೆ ಅಧಿಕಾರ ಕೊಟ್ಟನು" ಎಂದು ಹೇಳುವದಾದರೆ ಯೆಹೂದ್ಯ ನಾಯಕರು ಆತನ ಮೇಲೆ ದೇವದೂಷಣೆಯ (ಅಂದರೆ ದೇವರ ಅಧಿಕಾರವನ್ನು ಹೊಂದಿದ್ದೇನೆ ಎಂದು ಹೇಳಿಕೊಳ್ಳುವದು). ಆರೋಪವನ್ನು ಹೊರಿಸುತ್ತಿದ್ದರು. ಯಾಕೆಂದರೆ ಯೆಹೂದ್ಯರ ದೃಷ್ಟಿಯಲ್ಲಿ ದೇವರ ಅಧಿಕಾರ ಹೊಂದಿದ್ದೆನೆಂದು ಹೇಳುವದು, ದೇವರಾಗಿದ್ದೇನೆ ಎಂದು ಹೇಳಿಕೊಳ್ಳುವಂತಾಗುತ್ತಿತ್ತು, ಮತ್ತು ಒಬ್ಬ ಮನುಷ್ಯನು ನಾನು ದೇವರಂತೆ ಎಂದು ಹೇಳಿಕೊಳ್ಳುವದು[78] (ಒಬ್ಬ ಮನುಷ್ಯನು ದೇವರ ಸ್ಥಾನದಲ್ಲಿ ಇದ್ದೇನೆಂದು ನೆನೆಸುವದು) ದೇವರಿಗೆ ಒಂದು ದೊಡ್ಡ ಅವಮಾನವಾಗುವದು. ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರ ಈ ರೀತಿಯಲ್ಲಿ ದೇವರಿಗೆ ಅವಮಾನ ಮಾಡಿದ ಯಾವದೇ ವ್ಯಕ್ತಿಗೆ ಮರಣದಂಡನೆಯಾಗಬೇಕಿತ್ತು (ಯಾಜಕಕಾಂಡ 24:16). ಆದುದರಿಂದ ಯೇಸು ಆತನ ಅಧಿಕಾರದ ಕುರಿತು ಅವರು ಕೇಳಿದ ಪ್ರಶ್ನೆಗೆ ಯಾವರೀತಿಯಲ್ಲಿ ಉತ್ತರಿಸಿದರೂ ಯೆಹೂದ್ಯ ನಾಯಕರು ಅದನ್ನು ಆತನ ವಿರುದ್ಧವಾಗಿ ಉಪಯೋಗಿಸಲು ಶಕ್ತರಾಗುವರು.

**29-30** ಒಂದು ಪ್ರಶ್ನೆಗೆ ಇನ್ನೊಂದು ಪ್ರಶ್ನೆಯನ್ನು ಕೇಳುವದರ ಮೂಲಕ ಯೆಹೂದ್ಯರಲ್ಲಿ ಒಂದು ಸಾಮಾನ್ಯ ಪದ್ಧತಿಯಾಗಿತ್ತು (ಮಾರ್ಕ 10:3), ಆದಕಾರಣ ಯೇಸು ಯೆಹೂದ್ಯ ನಾಯಕರಿಗೆ ಸ್ನಾನಿಕನಾದ ಯೋಹಾನನು ತನ್ನ ಅಧಿಕಾರವನ್ನು ಎಲ್ಲಿಂದ ಪಡೆದನು – ದೇವರಿಂದಲೋ ಅಥವಾ ಮನುಷ್ಯರಿಂದಲೋ? ಎಂದು ಹೇಳಬೇಕೆಂದು ಕೇಳಿದನು. ಒಂದು ವೇಳೆ ಅವರು ಯೋಹಾನನ ಅಧಿಕಾರವು ದೇವರಿಂದ ಬಂತೆಂದು ಹೇಳಿದರೆ ಯೇಸುವಿನ ಅಧಿಕಾರವು ದೇವರಿಂದ ಬಂದಿತೆಂದು ಅವರು ಒಪ್ಪಿದಂತಾಗುತ್ತಿತ್ತು.

**31-32** ಅವರು ಯೇಸುವನ್ನು ತಪ್ಪಿನಲ್ಲಿ ಸಿಕ್ಕಿಸಲು ಪ್ರಯತ್ನಿಸಿದಂತೆಯೇ, ಯೇಸು ಈಗ ಅವರನ್ನು ತಪ್ಪಿನಲ್ಲಿ ಸಿಕ್ಕಿಸಿದ್ದನು. ಆ ಸಮಯದಲ್ಲಿ ಹೆಚ್ಚು ಕಡಿಮೆ ಎಲ್ಲಾ ಜನರು ಸ್ನಾನಿಕನಾದ ಯೋಹಾನನು ಅವನೊಬ್ಬ ದೊಡ್ಡ ಪ್ರವಾದಿ, ಆತನಿಗೆ ಅಧಿಕಾರವು ದೇವರಿಂದ ಬಂದಿದ್ದೆಂದು ನಂಬಿದ್ದರು. ಆದುದರಿಂದ ಯೆಹೂದ್ಯ ನಾಯಕರು ಯೋಹಾನನ ಅಧಿಕಾರವು ಮನುಷ್ಯನಿಂದ ಬಂದಿತೆಂದು ಹೇಳುವದಾದರೆ ಜನರ ಗುಂಪು ಅವರನ್ನು ಹಾಸ್ಯ ಮಾಡಿ ತೊಂದರೆ ಮಾಡಬಹುದಿತ್ತು. ಹೇಗೂ ಯೆಹೂದ್ಯ ನಾಯಕರಿಗೆ ಯೋಹಾನನ ಅಧಿಕಾರವು ದೇವರಿಂದಲೇ ಎಂದು ಒಪ್ಪಿಕೊಳ್ಳಲು ಇಷ್ಟವಿರಲಿಲ್ಲ. ಯೋಹಾನನು ಅವರಿಗೆ ಪಶ್ಚಾತಾಪ ಪಟ್ಟು ಬರಲಿರುವ ಮೆಸ್ಸೀಯನಿಗೆ ಸಿದ್ದ ಮಾಡಿಕೊಳ್ಳಿರಿ ಎಂದು ಹೇಳಿದ್ದನು

(ಮಾರ್ಕ 1:4, 7-18). ಯೇಸುವೇ ಮೆಸ್ಸೀಯನೆಂದು ಆತನು ಅವರಿಗೆ ಹೇಳಿದ್ದನು (ಯೋಹಾನ 1:29-34) ಅವರು ಒಂದು ವೇಳೆ ಯೋಹಾನನ ಅಧಿಕಾರವು ದೇವರಿಂದ ಬಂದಿತೆಂದು ಹೇಳಿದ್ದರೆ – ಯೇಸು ಅವರಿಗೆ "ಹಾಗಾದರೆ ನೀವು ಯಾಕೆ ನನ್ನನ್ನು ನಂಬಲಿಲ್ಲ?" ಎಂದು ಕೇಳಿರಬಹುದಿತ್ತು (ವಚನ.31)

**33** ಆದಕಾರಣ ಯೆಹೂದ್ಯ ನಾಯಕರು "ಯೋಹಾನನಿಗೆ ಅಧಿಕಾರವು ಎಲ್ಲಿಂದ ಬಂದಿತೆಂದು ನಮಗೆ ಗೊತ್ತಿಲ್ಲ" ಎಂದು ಉತ್ತರಿಸಿದರು. ಅವರಿಗೆ ಗೊತ್ತಿತ್ತಷ್ಟೆ ಆದರೆ ಹೇಳಲು ಇಚ್ಛಿಸಲಿಲ್ಲ. ಆದುದರಿಂದ ಯೇಸು ತನ್ನ ಅಧಿಕಾರ ಎಲ್ಲಿಂದ ಬಂದಿತೆಂದು ಹೇಳಲು ನಿರಾಕರಿಸಿದನು.

---

## ಅಧ್ಯಾಯ - 12

### ಹಿಡುವಳಿದಾರರ ಸಾಮ್ಯ ( 1:12).

(ಮತ್ತಾಯ 21:33-46, ಲೂಕ 20:9-19)

**1** ಒಬ್ಬ ಮನುಷ್ಯನು ದ್ರಾಕ್ಷೆಯ ತೋಟವನ್ನು ಮಾಡಿದನು, ಈ ಸಾಮ್ಯದಲ್ಲಿ ಈ ಮನುಷ್ಯನು ದೇವರಿಗೆ ಸೂಚಿತನಾಗಿದ್ದಾನೆ. ದ್ರಾಕ್ಷೆಯ ತೋಟವು ಯೆಹೂದ್ಯ ರಾಷ್ಟ್ರವಾದ ಇಸ್ರಾಯೇಲಿಗೆ ಸೂಚಿತವಾಗಿದೆ. (ಯೇಶಾಯ 5:1-7). ಆ ಮನುಷ್ಯನು ದ್ರಾಕ್ಷೆಯ ಆಲೆಗಾಗಿ ಒಂದು ಗುಂಡಿಯನ್ನು ತೋಡಿಸಿದನು. ಯೇಸುವಿನ ಕಾಲದಲ್ಲಿ ದ್ರಾಕ್ಷೆಯ ತೋಟವನ್ನು ಮಾಡಲು ಇದ್ದ ಅತೀ ಸಾಮಾನ್ಯ ಕಾರಣವೇನಂದರೆ ದ್ರಾಕ್ಷಾರಸವನ್ನು ಉತ್ಪಾಧಿಸುವದಕ್ಕಾಗಿಯೇ. ದ್ರಾಕ್ಷೆಯ ಹಣ್ಣುಗಳನ್ನು ಗಾಣಕ್ಕೆ ಹಾಕಿ ನಂತರ ತುಳಿಯುತ್ತಿದ್ದರು. ದ್ರಾಕ್ಷಾರಸವು ಬಾನೆಗಳಲ್ಲಿ ಹರಿದು ಶೇಖರಣೆಯಾಗುತ್ತಿತ್ತು.

**2-6** ಈ ವಚನಗಳು ಇಸ್ರಾಯೇಲಿನ ಇತಿಹಾಸವನ್ನು ಬಣ್ಣಿಸುತ್ತಿದೆ. ದೇವರು ತನ್ನ ಸೇವಕರನ್ನು ಅಂದರೆ ಹಳೆ ಒಡಂಬಡಿಕೆಯ ಪ್ರವಾದಿಗಳನ್ನು ಇಸ್ರಾಯೇಲಿನ ಬಳಿಗೆ ಒಬ್ಬೊಬ್ಬರನ್ನಾಗಿ ಕಳುಹಿಸಿ ಪಶ್ಚಾತಾಪ ಮತ್ತು ನೀತಿಯ ಫಲಗಳು ಸಿಗುತ್ತವೆಯೇ ಎಂದು ಹುಡುಕಿದನು. ಅಂತ್ಯದಲ್ಲಿ ತನ್ನ ಸ್ವಂತ ಮಗನಾದ ಯೇಸುವನ್ನು ಕಳಿಸಿದನು ಹಿಡುವಳಿದಾರರು ಯೆಹೂದ್ಯರಾಗಿದ್ದಾರೆ. ಅವರು ನಿರಂತರವಾಗಿ ದೇವರ ಪ್ರವಾದಿಗಳನ್ನು ತಿರಸ್ಕರಿಸಿಕೊಂಡರು.

**7** ಹಿಡುವಳಿದಾರರು ಒಡೆಯನು ಸತ್ತು ಹೋಗಿದ್ದಾನೆ ಮತ್ತು ಈಗ ಆತನ ಮಗನು ತನ್ನ ಆಸ್ತಿಯನ್ನು ತಗೆದುಕೊಳ್ಳಲು ಬಂದಿದ್ದಾನೆಂದು ತಪ್ಪಾಗಿ ಊಹಿಸಿಕೊಂಡರು. ಅವರು ಮಗನನ್ನು ಸಾಯಿಸುವದಾದರೆ ದ್ರಾಕ್ಷಾತೋಟವು ಆ ಯೆಹೂದ್ಯರ ಧರ್ಮಶಾಸ್ತ್ರದ ಪ್ರಕಾರ ಅವರದಾಗುವದು.

**8** ಇಲ್ಲಿ ಸಾಮ್ಯವು ಒಂದು ಪ್ರವಾದನೆಯಾಗುತ್ತದೆ. ದೇವಕುಮಾರನಾದ ಯೇಸು ಯೆಹೂದ್ಯ ಜನಾಂಗದ ಬಳಿ ಬಂದಾಗ ಯೆಹೂದ್ಯರು ಅವನನ್ನು ತಿರಸ್ಕರಿಸಿದರು ಮತ್ತು ಕೊಲ್ಲಲ್ಪಡುವಂತೆ ಮಾಡಿದರು.

**9** ಈ ವಚನವು ಕ್ರಿ.ಶ.70. ರಲ್ಲಿ ನೆರವೇರಿದ ಪ್ರವಾದನೆಯು ಸಹ ಆಗಿದೆ. ಆಗ ರೋಮಾಯರು ಯೆರೂಸಲೇಮನ್ನು ನಾಶ ಮಾಡಿದರು. ಹಿಡಿವಳಿದಾರರನ್ನು ಸಾಯಿಸಿದ ಮೇಲೆ ಯಜಮಾನನು (ದೇವರು) ದ್ರಾಕ್ಷಾ ತೋಟವನ್ನು ಇತರರಿಗೆ ಕೊಡುವನು ಅಂದರೆ ಅನ್ಯ ಜನರಿಗೆ ಕೊಡುವನು. ಮತ್ತು ನಿಜವಾಗಿಯೂ ಇದು ನಡೆಯಿತು.ಯೆಹೂದ್ಯರು ಯೇಸುವನ್ನು ಮತ್ತು ಆತನ ಅಪೊಸ್ತಲರನ್ನು ತಿರಸ್ಕರಿಸಿದಾಗ ರಕ್ಷಣೆಯ ಸುವಾರ್ತೆಯು ಅನ್ಯ ಜನರಿಗೆ ಕೊಡಲ್ಪಟ್ಟಿತು.

**10-11** ನಂತರ ಯೇಸು ಯೆಹೂದ್ಯ ಆಲಯ ಕಟ್ಟಿದವರು ಅಂದರೆ ಯೆಹೂದ್ಯ ಜನಾಂಗದ ನಾಯಕರು ಆತನನ್ನು ತಿರಸ್ಕರಿಸಿದ್ದಾರೆ ಮತ್ತು ಆತನು ಈಗ ನೂತನ "ಇಸ್ರಾಯೇಲಿಗೆ ಮೂಲೆಗಲ್ಲಾಗುವನೆಂದು" ತೋರಿಸಲು ಯೇಸು ಕೀರ್ತನೆಗಳು 118:22-23 ರಿಂದ ಪ್ರಸ್ತಾಪಿಸಿ ಮಾತನಾಡುತ್ತಾನೆ (ಅ.ಕೃ 4:11 ಎಫೆಸ್ 2:19-20, 1 ಪೇತ್ರ 2:4-7 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಂತರ ಮತ್ತಾಯ 21:43-44ರ ಪ್ರಕಾರವಾಗಿ ಯೇಸು ಯೆಹೂದ್ಯ ನಾಯಕರಿಗೆ ಹೀಗೆಂದನು" ಆದುದರಿಂದ ದೇವರ ರಾಜ್ಯವು ನಿಮ್ಮಿಂದ ತಗೆಯಲ್ಪಟ್ಟು ಅದರ ಫಲಗಳನ್ನು ಕೊಡುವ ಜನಕ್ಕೆ ಕೊಡಲಾಗುವದು. ದೇವರ ರಾಜ್ಯವು ನಂಬಿಕೆಯಿಲ್ಲದ ಯೆಹೂದ್ಯರಿಂದ ತಗೆಯಲ್ಪಟ್ಟು ನಂಬಿಕೆ ಇರುವ ಅನ್ಯ ಜನರಿಗೆ ಕೊಡಲ್ಪಟ್ಟಿದೆ. ದೇವರ ರಾಜ್ಯವು ಶರೀರ ಸಂಬಂಧವಾಗಿ ಬಂದ ಅಬ್ರಹಾಮನ ಸಂತತಿಯವರಿಗೆ ಸೇರಿರುವದಿಲ್ಲ. ಆದರೆ ನಂಬಿಕೆಯ ಮೂಲಕ ಅಬ್ರಹಾಮನ ಸಂತತಿಯಾದವರಿಗೆ ಸೇರಿರುತ್ತದೆ (ಗಲಾತ್ಯ 3:6-9 ಮತ್ತು ವ್ಯಾಖ್ಯಾನ ನೋಡಿರಿ). ನಂತರ ಮತ್ತಾಯ 21:44 ರ ಯೇಸು ಹೀಗೆಂದನು "ಈ ಕಲ್ಲಿನ ಮೇಲೆ ಬೀಳುವವನು ಪು ಡಿ ಪು ಡಿಯಾಗುವನು ಇದು ಯಾರ ಮೇಲೆ ಬಿಳುತ್ತದೊ ಅವನನ್ನು ಎತ್ತಿ ಹಾಕುವದು" (ಲೂಕ 20:18).ಯೆಹೂದ್ಯರು "ಕಲ್ಲನ್ನು" (ಕ್ರಿಸ್ತನು) ಬೇಡವೆಂದು ಬಿಟ್ಟಿದ್ದರು. ಆದರೆ ಬಳಿಕ ಅವರು ತಮ್ಮ ಅಪನಂಬಿಕೆಯ ಕಾರಣದಿಂದ ಅದರ ಮೇಲೆ ಎಡವಿದರು (ಯೇಶಾಯ 8:14-15, ರೋಮಾ 9:32-33,ಪೇತ್ರ 2:8) ಅಷ್ಟು ಮಾತ್ರವೆ ಅಲ್ಲ "ಕಲ್ಲು" ಸಹ ಅವರ ಮೇಲೆ ಬಿದ್ದು ಅವರನ್ನು ಜಜ್ಜಿ ಪು ಡಿ ಪು ಡಿ ಮಾಡಿತು. ಅಂದರೆ ಅವರು ತಿರಸ್ಕರಿಸಿದ ಯೇಸು ಬಳಿಕ ನ್ಯಾಯ ತೀರ್ಪಿನಲ್ಲಿ "ಅವರ ಮೇಲೆ ಬಿದ್ದನು". ಈಗ ಅನ್ಯ ಜನರಿಗೆ ದ್ರಾಕ್ಷಾ ತೋಟವು ಅಂದರೆ ದೇವರ ರಾಜ್ಯವು ಕೊಡಲ್ಪಟ್ಟಿದೆ. ಅನ್ಯಜನರು ಈಗ ಯೆಹೂದ್ಯರು ತಿರಸ್ಕರಿಸಿದ ರಕ್ಷಣೆಯ ಆಶಿರ್ವಾದವನ್ನು ಪಡೆದು ಕೊಂಡಿದ್ದಾರೆ, ನಾವು ಈಗ ದ್ರಾಕ್ಷಾ ತೋಟದ ಹಿಡುವಳಿದಾರರು ಆಗಿದ್ದೇವೆ. ನಾವು ಯಾವ ರೀತಿಯ ಹಿಡುವಳಿದಾರರು?

ನಮ್ಮ ಬಳಿಗೆ ಬರುವ ದೇವರ ಸೇವಕರನ್ನು ನಾವು ತಿರಸ್ಕರಿಸುತ್ತೇವೆಯೋ? ನಾವು ದೇವರಿಗೆ ಕೊಡಬೇಕಾದದ್ದನ್ನು ಕೊಡುತ್ತೇವೆಯೋ ಆತನು ನಮಗೆ ಕೇಳುವ ನೀತಿಯ ಫಲಗಳನ್ನು ಕೊಡುತ್ತೇವೆಯೊ?

**12** ಯೇಸು ತಮ್ಮ ವಿರುದ್ಧವಾಗಿ ಸಾಮ್ಯವನ್ನು ಹೇಳಿದನೆಂದು ಯೆಹೂದ್ಯ ನಾಯಕರು ಅರ್ಥ ಮಾಡಿಕೊಂಡರು. ಸಾಮ್ಯದಲ್ಲಿ ಅವರು ಹಿಡುವಳಿದಾರರಾಗಿದ್ದರು. ಆದುದರಿಂದ ಅವರು ಯೇಸುವಿನ ಮೇಲೆ ಮತ್ತಷ್ಟು ಕೋಪಗೊಂಡು ಆತನನ್ನು ಹಿಡಿಯುವದಕ್ಕೆ ಗುಪ್ತ ಮಾರ್ಗವನ್ನು ಹುಡುಕುತ್ತಿದ್ದರು (ಮಾರ್ಕ.11:18).

## ಕೈಸರನಿಗೆ ತೆರಿಗೆ ಕೊಡುವದು (12:13-17)

(ಮತ್ತಾಯ 22:15-22, ಲೂಕ 20:20-22)

**13** ತರುವಾಯ ಯೆಹೂದ್ಯ ನಾಯಕರು ಯೇಸುವನ್ನು ತಪ್ಪಿನಲ್ಲಿ ಸಿಕ್ಕಿಸುವದಕ್ಕೆ ಪ್ರಯತ್ನಿಸಲು ಫರಿಸಾಯರನ್ನು ಹೆರೊದ್ಯರಲ್ಲಿ[79] ಕೆಲವರನ್ನು ಕಳುಹಿಸಿದರು. ಲೂಕನು ಅವರನ್ನು ಗೂಡಚಾರ್ಯರೆಂದು ಕರೆಯುತ್ತಾನೆ( ಲೂಕ 20:20), ಲೂಕ 20:20ರ ಪ್ರಕಾರವಾಗಿ ಈ ಗೂಡಚಾರ್ಯರು ಯೇಸು ರೋಮ ಚಕ್ರವರ್ತಿಯಾದ ಕೈಸರನ ವಿರುದ್ಧವಾಗಿ ಏನನ್ನಾದರೂ ಹೇಳುವಂತೆ ಮಾಡಲು ಪ್ರಯತ್ನಿಸುತ್ತಿದ್ದರು. ಹೀಗೆ ಯೇಸುವನ್ನು ಅಧಿಪತಿಯ ವಶಕ್ಕು (ಅಂದರೆ ರೋಮ ರಾಜ್ಯಾಧಿಪತಿಯಾದ ಪೊಂತಿಪಿಲಾತನಿಗೆ) ಅಧಿಕಾರಕ್ಕು ಒಪ್ಪಿಸಬೇಕೆಂದು ಹೊಂಚು ಹಾಕುತಿದ್ದರು. ಯೇಸುವಿನ ಸಮಯದಲ್ಲಿ ಇಸ್ರಾಯೇಲವು ರೋಮ ಸಾಮ್ರಾಜ್ಯದ[80] ಅಧಿಕಾರದ ಅಡಿಯಲ್ಲಿತ್ತು, ಮತ್ತು ಇಸ್ರಾಯೇಲಿನ ಪ್ರಧಾನ ಆಡಳಿತಗಾರನು ರೋಮಾಯದ ರಾಜ್ಯಾಧಿಪತಿ ಯಾಗಿದ್ದನು. ಯೆಹೂದ್ಯ ನಾಯಕರು ಯೇಸುವಿನ ಮೇಲೆ ರೋಮದ ವಿರುದ್ಧ ಕ್ರಾಂತಿ ಮತ್ತು ದೊಂಬಿಯ ಆರೋಪ ಹೊರಿಸಲು ಪ್ರಯತ್ನಿಸಿದರು. ಒಂದು ವೇಳೆ ಅವರು ಈ ಆರೊಪವನ್ನು ಮಾಡುವದಾದರೆ ರೋಮಾಯರು ಆತನನ್ನು ಬಂದಿಸಿ ನ್ಯಾಯ ವಿಚಾರಣೆ ಮಾಡುವದು ಸುಲಭವಾಗುತ್ತಿತ್ತು. ಯೆಹೂದ್ಯನಾಯಕರು ಈ ರೀತಿಯಾಗಿ ಯೇಸುವನ್ನು ಮುಗಿಸಲು ನಿರೀಕ್ಷಿಸಿದರು.

**14** ಆದಕಾರಣ ಫರಿಸಾಯರು ಮತ್ತು ಹೆರೋದ್ಯರು ಯೇಸುವನ್ನು ಹೊಗಳಿದ ನಂತರ ಕೈಸರೆಯನಿಗೆ[81] "ತೆರಿಗೆ ಕೊಡುವದು ಸರಿಯೋ, ತಪ್ಪೊ?" ಎಂದು ಕೇಳಿದರು. ಒಂದು ವೇಳೆ ಯೇಸು ಸರಿಯಲ್ಲ ಎಂದು ಹೇಳಿದರೆ ಆತನು ರೋಮಾಯರ ನಿಯಮಕ್ಕೆ ಅವಿಧೇಯ–ನಾದನೆಂದು ರಾಜ್ಯಾಧಿಪತಿಯ ಮುಂದೆ ಆರೋಪಿಸುತ್ತಿದ್ದರು. ಹೇಗೂ, ಕೈಸರನಿಗೆ ತೆರಿಗೆ ಕೊಡುವದು ಸರಿಯಾದದ್ದು ಎಂದು ಯೇಸು ಹೇಳುವದಾದರೆ ಸಾಮಾನ್ಯ ಯೆಹೂದ್ಯ ಜನರು ಆತನ ಮೇಲೆ ಕೋಪಗೊಂಡು ಆತನಿಗೆ ವಿರುದ್ಧವಾಗುತ್ತಿದ್ದರು. ಅವರು ಕೋಪಗೊಳ್ಳುವದಕ್ಕೆ ಕಾರಣವೇನೆಂದರೆ ಅವರು ರೋಮಾಯರನ್ನು ಮತ್ತು ಮುಖ್ಯವಾಗಿ ರೋಮ ಚಕ್ರವರ್ತಿಗೆ ತೆರಿಗೆ ಕೊಡುವದನ್ನು ದ್ವೇಷಿಸುತ್ತಿದ್ದರು. ಹೀಗೆ ಯೇಸು ಯಾವ ಉತ್ತರ ಕೊಟ್ಟರೂ ಆತನು ತನ್ನ ಮೇಲೆ ಸಮಸ್ಯೆಯನ್ನು ತಂದು ಕೊಳ್ಳುತ್ತಿದ್ದನು. (ಮಾರ್ಕ 11:28 ಮತ್ತು ವ್ಯಾಖ್ಯಾನ ನೋಡಿರಿ).

**15-17** ನಂತರ ಯೇಸು ಕೈಸರನ ಚಿತ್ರವಿದ್ದ ರೋಮನ ನಾಣ್ಯವೊಂದನ್ನು ತೋರಿಸಬೇಕೆಂದು ಕೇಳಿದನು. ಆಗ ಆತನು "ಕೈಸರನದನ್ನು ಕೈಸರನಿಗೆ ಕೊಡಿರಿ, ದೇವರದನ್ನು ದೇವರಿಗೆ ಕೊಡಿರಿ" ಎಂದು ಸರಿಯಾದ ಉತ್ತರಕೊಟ್ಟನು. ಜನರು ತೆರಿಗೆ ಕೊಡುವದು ಸರಿಯಾದದ್ದು. ಯೆಹೂದ್ಯರು ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದರೂ ಕೈಸರನು ಅವರಿಗೆ ರಸ್ತೆಗಳನ್ನು, ಸಮಾಧಾನ, ಸುರಕ್ಷತೆಗಳಂತಹ ಅನೇಕ ಪ್ರಯೋಜನಗಳನ್ನು ಒದಗಿಸಿದ್ದನು. ಈ ಪ್ರಯೋಜನಗಳಿಗಾಗಿ ಯೆಹೂದ್ಯರು ತೆರಿಗೆ ನೀಡಬೇಕಾಗಿತ್ತು. ವಾಸ್ತವದಲ್ಲಿ ಸರ್ಕಾರಕ್ಕು ಮತ್ತು ದೇವರಿಗೂ ನಾವು ಮಾಡತಕ್ಕ ಕರ್ತವ್ಯದಲ್ಲಿ ಯಾವ ವಿರುದ್ಧತೆಯಿರುವದಿಲ್ಲ, ಸರ್ಕಾರವು ನಮ್ಮನ್ನು ದೇವರ ನಿಯಮಕ್ಕೆ ಅವಿಧೇಯರಾಗುವಂತೆ ಒತ್ತಡ ಹೇರುವದಾದರೆ ಮಾತ್ರವೇ ಆ ನಿರ್ದಿಷ್ಟ ವಿಷಯಕ್ಕಾಗಿ ನಾವು ವಿರೋಧಿಸಬೇಕು (ಅ.ಕೃತ್ಯ 4:18-20, 5:29, ರೋಮ 13:1-7 ಮತ್ತು ವ್ಯಾಖ್ಯಾನ ನೋಡಿರಿ).

ಯೇಸುವಿನ ಸಮಯದಲ್ಲಿ ಯಾವದೇ ವಸ್ತುವು ಮನುಷ್ಯನ ಚೀಟಿ (ಚಿತ್ರಣ) ಅಥವಾ ಬರಹವನ್ನು ಹೊಂದಿದ್ದರೆ ಅದು ಆ ವ್ಯಕ್ತಿಗೆ ಸಂಬಂಧಪಟ್ಟದ್ದಾಗಿತ್ತು. ರೋಮಾಯದ ನಾಣ್ಯದ ಮೇಲೆ ಕೈಸರನ ಮುದ್ರೆಯಿತ್ತು (ಕೈಸರನ ಚಿತ್ರ) ಆದುದರಿಂದ ಅದು ಕೈಸರನಿಗೆ ಸೇರಿದ್ದಾಗಿತ್ತು.

ಅದೇ ರೀತಿಯಲ್ಲಿ ಮನುಷ್ಯನ ಮೇಲೆ ದೇವರ ಮುದ್ರೆಯಿದೆಯೆಂದು ಹೇಳಲೂ ಬಹುದು, ಮನುಷ್ಯನು ದೇವರ ಸ್ವರೂಪದಲ್ಲಿ ನಿರ್ಮಿಸಲ್ಪಟ್ಟಿದ್ದಾನೆ (ಆದಿಕಾಂಡ 1:27). ಆದಕಾರಣ ಮನುಷ್ಯನು ದೇವರಿಗೆ ಸೇರಿದ್ದಾನೆ. ನಮ್ಮ ತೆರಿಗೆಯು ಕೈಸರನಿಗೆ ಸೇರಿದ್ದಾಗಿದೆ ಆದರೆ ನಾವು ದೇವರ ಸ್ವತ್ತಾಗಿದ್ದೇವೆ. ಆದುದರಿಂದ ನಾವು ಕೈಸರನಿಗೆ ತೆರಿಗೆಯನ್ನು ಮತ್ತು ದೇವರಿಗೆ ನಮ್ಮನ್ನು ಕೊಡಬೇಕು.

## ಪು ನರುತ್ಥಾನದ ವೇಳೆ ಮದುವೆ (12:18-27)

(ಮತ್ತಾಯ 22:23-33, ಲೂಕ 20:27-40)

**18-23** ತರುವಾಯ ಸದ್ದುಕಾಯರು ಯೇಸುವಿನ ಬಳಿಗೆ ಬಂದು ಆತನಿಗೆ ಒಂದು ಉದ್ದವಾದ ಪ್ರಶ್ನೆಯನ್ನು ಕೇಳುತ್ತಾರೆ. ಸದ್ದುಕಾಯರು ಮರಣಾ ನಂತರದ ಜೀವನ ಅಥವಾ ಪು ನರುತ್ಥಾನವನ್ನು ನಂಬದಂತಹ ಯೆಹೂದ್ಯರ ಒಂದು ಗುಂಪಾಗಿದ್ದರು. ಯೇಸು ಬೋದಿಸಿದ್ದನ್ನು ತಿಳಿದವರಾಗಿದ್ದ ಸದ್ದುಕಾಯರು ಯೇಸುವಿಗೆ ಅವಮಾನ ವನ್ನುಂಟುಮಾಡಲು ಒಂದು ಪ್ರಶ್ನೆಯನ್ನು

ಕೇಳುತ್ತಾರೆ. ಅವರು ಒಬ್ಬ ಸ್ತ್ರೀಯು ಒಬ್ಬರ ನಂತರ ಒಬ್ಬರಾಗಿ[82] ಒಟ್ಟು ಏಳು ಪುರುಷರನ್ನು ಮದುವೆಮಾಡಿಕೊಳ್ಳುವ ಕಥೆಯೊಂದನ್ನು ಹೇಳಿದರು. ನಂತರ ಅವರು "ಪುನರುತ್ಥಾನದಲ್ಲಿ ಅವಳು ಯಾರ ಹೆಂಡತಿಯಾಗಿರುವಳು ?" ಎಂದು ಕೇಳಿದರು (ವಚನ 23). ಅವರ ಪ್ರಶ್ನೆಯ ಅರ್ಥವು ಏನಾಗಿತ್ತೆಂದರೆಃ ಒಂದು ವೇಳೆ ಏಳು ಮಂದಿ ಅಣ್ಣ ತಮ್ಮಂದಿರು ಪರಲೋಕದಲ್ಲಿ ಪುನರುತ್ಥಾನಗೊಳ್ಳುವದಾದರೆ ಅವಳು ಅವರೆಲ್ಲರಿಗು ಹೆಂಡತಿಯಾಗಿರುವಳು ಎಂಬದಾಗಿತ್ತು. ಆದರೆ ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರವಾಗಿ ಒಬ್ಬ ಸ್ತ್ರೀಯು ಒಬ್ಬನೇ ಗಂಡನನ್ನು ಹೊಂದಿರಬಹುದಾಗಿತ್ತು. ಹೀಗೆ ಪುನರುತ್ಥಾನದ ಕುರಿತಾದ ಯೇಸುವಿನ ಬೋಧನೆಯ ಯೆಹೂದ್ಯರ ಧರ್ಮಗ್ರಂಥಕ್ಕೆ ವಿರುದ್ಧವಾಗಿತ್ತು. ಆದುದರಿಂದ ಸದ್ದುಕಾಯರ ಅಭಿಪ್ರಾಯದಲ್ಲಿ ದೇಹದ ಪುನರುತ್ಥಾನವು ಅಸಾದ್ಯವಾಗಿತ್ತು.

**24** ಆದರೆ ಯೇಸು, ಸದ್ದುಕಾಯರು ಎರಡು ವಿಷಯಗಳಲ್ಲಿ ತಪ್ಪಾಗಿದ್ದಾರೆಂದು ತೋರಿಸುತ್ತಾನೆ. ಮೊದಲನೆಯದಾಗಿ, ಪುನರುತ್ಥಾನವನ್ನು ನಿರಾಕರಿಸುವದರ ಮೂಲಕ ಅವರು ದೇವರ ಶಕ್ತಿಯನ್ನು ನಿರಾಕರಿಸುವವರಾಗಿದ್ದರು. ದೇಹದ ಪುನರುತ್ಥಾನವು ದೇವರ ಶಕ್ತಿಗೆ ಸಾಕ್ಷಿಯಾಗಿರುತ್ತದೆ. ಎರಡನೆಯದಾಗಿ, ಅವರಿಗೆ ದೇವರ ವಾಕ್ಯವು ತಿಳಿದಿರಲಿಲ್ಲ. ಪರಲೋಕದಲ್ಲಿ ಮದುವೆಯ ಅವಶ್ಯಕತೆಯಿರುವದಿಲ್ಲ. ಭೂಲೋಕದಲ್ಲಿ ಮಾನವ ಸಂತತಿ ನಶಿಸದಂತೆ ಮಕ್ಕಳನ್ನು ಹಡೆಯಲು ಮದುವೆಯ ಅವಶ್ಯಕವಾದದ್ದು ಆದರೆ ಪರಲೋಕದಲ್ಲಿ ಮರಣವು ಇರುವದಿಲ್ಲ (ಪ್ರಕ 21:4), ಆದುದರಿಂದ ಅಲ್ಲಿ ಜನನಗಳ ಅಗತ್ಯಯಿಲ್ಲ ಮತ್ತು ಹೀಗೆ ಮದುವೆಯ ಅವಶ್ಯಕವಾಗುವದಿಲ್ಲ.

**25** ಪರಲೋಕದಲ್ಲಿ ಮನುಷ್ಯರು ದೇವದೂತರಂತಿರುತ್ತಾರೆ; ಅಂದರೆ, ನಿರಂತರವಾಗಿ ಜೀವಿಸುತ್ತಾರೆ. ಲೂಕ 20:35-36ಕ್ಕನುಸಾರವಾಗಿ ಯೇಸು ಈ ಅಂಶದಲ್ಲಿ ಹೀಗೆ ಹೇಳುತ್ತಾನೆ. ಆದರೆ ಆ ಲೋಕವನ್ನೂ (ಮುಂದಿನ ಜೀವನ), ಸತ್ತವರೊಳಗಿಂದ ಪುನರುತ್ಥಾನವನ್ನೂ ಪಡೆಯುವದಕ್ಕೆ ಯೋಗ್ಯರೆನಿಸಿಕೊಂಡಿರುವವರೂ ಪುನರುತ್ಥಾನ ಹೊಂದಿದವರಾಗಿದ್ದು ದೇವರ ಮಕ್ಕಳು ಆಗಿದ್ದಾರೆ. ಕ್ರಿಸ್ತನಲ್ಲಿ ನಂಬಿಕೆಯಿಡುವವರೆಲ್ಲರೂ ದೇವರ ಮಕ್ಕಳಾಗುತ್ತಾರೆ, ಮತ್ತು ಸತ್ತವರೊಳಗಿಂದ ಪುನರುತ್ಥಾನಗೊಳ್ಳದವರಲ್ಲಿ [83] ಪಾಲುಗಾರಾಗುತ್ತಾರೆ (ರೋಮ 8:16,23, 1 ಕೊರಿಂಥ 15:20-22, 42-49, ಗಲಾತ್ಯ 3:26, 4:7 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**26-27** ಸದ್ದುಕಾಯರು ಮುಖ್ಯವಾಗಿ ಮೋಶೆಯು ಬರೆಯಲ್ಪಟ್ಟ ಹಳೆ ಒಡಂಬಡಿಕೆಯ ಮೊದಲಿನ ಐದು ಪುಸ್ತಕಗಳನ್ನು ನಂಬುತ್ತಿದ್ದರು. ವಿಮೋಚನಕಾಂಡ 3:6 ರಲ್ಲಿ ಮೋಶೆಯು ದೇವರ ಕುರಿತು ಮಾತನಾಡುತ್ತಾ "ನಾನು..ಅಬ್ರಹಾಮನ ದೇವರು, ಇಸಾಕನ ದೇವರು, ಯಾಕೋಬನ ದೇವರು" ಎಂದು ಬರೆಯುತ್ತಾನೆ. ಯೆಹೂದ್ಯರ ಪಿತೃವಾದ ಅಬ್ರಹಾಮನನು ಮತ್ತು ಆತನ ಮಗನಾದ ಇಸಾಕ ಹಾಗು ಮೊಮ್ಮಗನಾದ ಯಾಕೋಬ ಎಲ್ಲರೂ ಮೋಶೆ ಇದನ್ನು ಬರೆಯುವಾಗ ಸತ್ತಹೋಗಿದ್ದರು. ಆದಾಗ್ಯು ದೇವರು, ನಾನು ನಿರಂತರವಾಗಿ ಅವರ ದೇವರಾಗಿರುತ್ತೇನೆಂದು ಹೇಳುತ್ತಾನೆ. "ನಾನು ಅವರ ದೇವರು" ಎನ್ನುತ್ತಾನೆ. ಆದುದರಿಂದ ಅವರೆಲ್ಲರೂ ಈಗಲೂ ಜೀವಂತವಾಗಿರಬೇಕು. ಯಾಕೆಂದರೆ ದೇವರು ಜೀವಿತರಿಗೆ ಹೊರತು ಸತ್ತವರಿಗಲ್ಲ. ಹೀಗೆ ಹಳೆ ಒಡಂಬಡಿಕೆಯ ಮೊದಲ ಐದು ಪುಸ್ತಕಗಳು ಮರಣಾನಂತರ ಜೀವನ ವಿದೆಯೆಂದು ಕಲಿಸುತ್ತವೆ, ಸದ್ದುಕಾಯರು ಅದನ್ನು ನಿರಾಕರಿಸಿದರು.

## ಅತೀಶ್ರೇಷ್ಠ ಆಜ್ಞೆ ( 12:28-34)

(ಮತ್ತಾಯ 22:34-40)

**28-30** ಯೆಹೂದ್ಯರು ತಮ್ಮನ್ನು ನೀತಿವಂತರೆಂದೆಣಿಸಿಕೊಂಡಿದ್ದರು. ಯೆಹೂದ್ಯ ಧರ್ಮಶಾಸ್ತ್ರದಲ್ಲಿ ಬರೆಯಲ್ಪಟ್ಟಿದ್ದ ಆಜ್ಞೆಗಳನ್ನು (ವಿಮೋಚನಕಾಂಡ 20:1-17), ಮತ್ತು ಯಜ್ಞ ಕಾಣಿಕೆಗಳನ್ನು ಅತಿಪ್ರಾಮುಖ್ಯವೆಂದು ಪರಿಗಣಿಸಿದ್ದು. ಯೆಹೂದ್ಯನೊಬ್ಬನು ದಶಾಜ್ಞೆಗಳಿಗೆ ವಿಧೇಯನಾಗಿ ಎಲ್ಲಾ ಸರಿಯಾದ ಯಜ್ಞಗಳು ಮತ್ತು ಕಾಣಿಕೆಗಳನ್ನು ಅರ್ಪಿಸುವದಾದರೆ ಅವನು ನೀತಿವಂತನೆಂದು ಕರೆಯಲ್ಪಡಬಹುದಾಗಿತ್ತು.

ಆದರೆ 30ನೇ ವಚನದಲ್ಲಿ (ಇಡೀ ಬೈಬಲ್ಲಿನಲ್ಲಿ ಅತಿಮುಖ್ಯ ವಚನಗಳಲ್ಲಿ ಒಂದಾಗಿದೆ) ಯೇಸು ಇನ್ನೂ ಉನ್ನತವಾದ ಅಥವಾ ಶ್ರೇಷ್ಠವಾದ ನಿಯಮವಿದೆಯೆಂದು ಹೇಳುತ್ತಾನೆ, ಅದೇನೆಂದರೆ ದೇವರನ್ನು ಪ್ರೀತಿಸುವದು. ಯಜ್ಞ ಮತ್ತು ಕಾಣಿಕೆಗಳಿಗಿಂತಲೂ ಹೆಚ್ಚಾಗಿ ದೇವರು ನಮ್ಮ ಪ್ರೀತಿಯನ್ನು ಬಯಸುತ್ತಾನೆ.

ನಿಜವಾಗಿ ಹೇಳುವದಾದರೆ ಯೆಹೂದ್ಯರಿಗೆ ಈ ನಿಯಮ ಗೊತ್ತಿತ್ತು ಇದು ಧರ್ಮೋಪದೇಶಕಾಂಡ 6:4-5ರಲ್ಲಿ ಬರೆಯಲ್ಪಟ್ಟಿದ್ದು ಭಕ್ತಿವಂತ ಯೆಹೂದ್ಯರು ದಿನಕ್ಕೆ ಎರಡಾವರ್ತಿ ಗಟ್ಟಿಯಾಗಿ ಇದನ್ನು ಉಚ್ಚರಿಸುತ್ತಿದ್ದರು. ಆದರೆ ಅವರು ಇದನ್ನು ಅತಿಉನ್ನತ ನಿಯಮ, ಆದರ ಮೂಲಕ ಉಳಿದೆಲ್ಲಾ ನಿಯಮಗಳು ಹೊರಟು ಬಂದಿವೆ ಎಂಬದನ್ನು ಪರಿಗಣಿಸಲಿಲ್ಲ (ಮತ್ತಾಯ 22:40).

ನಿನ್ನ ದೇವರಾದ ಕರ್ತನನ್ನು ಪ್ರೀತಿಸು. ಎಷ್ಟು ಪ್ರೀತಿಯನ್ನು ದೇವರು ನಮ್ಮಿಂದ ಅಪೇಕ್ಷಿಸುತ್ತಾನೆ? ಎಲ್ಲಾ ಪ್ರೀತಿಯನ್ನು ಬಯಸುತ್ತಾನೆ ನಾಲ್ಕು ಸಾರಿ "ಪೂರ್ಣ" ಎಂಬ ಪದ ಇಲ್ಲಿ ಪುನರಾವರ್ತಿತಗೊಂಡಿದೆ ನಾವು ದೇವರಿಗೆ ನಮ್ಮ "ಪೂರ್ಣ" ಪ್ರೀತಿಯನ್ನು ಕೊಡಬೇಕು ಎಂಬದರರ್ಥವೇನೆಂದರೆ ನಮಗಾಗಿ ಪ್ರೀತಿಯನ್ನು ಉಳಿಸಿಕೊಳ್ಳಬಾರದು ಎಂಬದೇ.

ನಾವು ನಮ್ಮ ಪೂರ್ಣ ಜೀವನದಿಂದ (ಹೃದಯ, ಪ್ರಾಣ, ಬುದ್ಧಿ, ಶಕ್ತಿಯಿಂದ) ದೇವರನ್ನು ಪ್ರೀತಿಸಬೇಕು. ನಾವು ನಮ್ಮ ಜೀವಿತಗಳನ್ನು ಪ್ರೀತಿಯಿಂದ ದೇವರಿಗೆ ನೀಡಬೇಕು. ದೇವರಿಗೆ ಪ್ರಾಣಿಯಜ್ಞಗಳು ಬೇಕಿಲ್ಲ, ಆತನು

ಮಾನವಯಜ್ಞಗಳನ್ನು ಬಯಸುತ್ತಾನೆ! ನಾವು ನಮ್ಮನ್ನೇ ಸಜೀವ ಯಜ್ಞವಾಗಿ ಆತನಿಗೆ ಅರ್ಪಿಸಬೇಕೆಂದು ಇಚ್ಚಿಸುತ್ತಾನೆ (ರೋಮ 12:1 ಮತ್ತು ವ್ಯಾಖ್ಯಾನ ನೋಡಿರಿ). ನಾವು ನಮ್ಮ ಜೀವಿತವನ್ನು ದೇವರಿಗೆ ಕೊಟ್ಟಿದ್ದೇವೆಂದು ಹೇಳುವದಾದರೆ ಇತರ ಸಂಗತಿಗಳನ್ನು ನಮಗಾಗಿ ಇಟ್ಟುಕೊಳ್ಳುವದು ಹೇಗೆ? ಇದು ನನ್ನ ಮನೆ, ನನ್ನ ಟಿವಿ, ನನ್ನ ಕೆಲಸ, ನನ್ನ ಘನತೆ, ನನ್ನ ಭವಿಷ್ಯತ್ತು ಎಂದು ನಾವು ಹೇಳುವದು ಹೇಗೆ ಸಾಧ್ಯ? ನಾವು ದೇವರಿಗೆ ಸಂಬಂದಪಟ್ಟಿರುವದಾದರೆ ಈ ಎಲ್ಲಾ ಸಂಗತಿಗಳು ಆತನಿಗೆ ಸೇರಿದವು ಗಳಾಗಿವೆ. ಇಲ್ಲಿ ಒಂದು ಪ್ರಶ್ನೆ ಎದುರಾಗುತ್ತದೆ. ನಾವು ದೇವರಿಗೆ ನಮ್ಮ ಪ್ರೀತಿಯನ್ನು ಹೇಗೆ ತೋರಿಸಬಹುದು? "ನಾನು ದೇವರನ್ನು ಪ್ರೀತಿಸುತ್ತೇನೆ" ಎಂದು ಹೇಳುವದು ಸುಲಭ, ಆದರೆ ನಿಜವಾಗಿಯೂ ಅದರ ಅರ್ಥವೇನು? ದೇವರನ್ನು ಪ್ರೀತಿಸುವದೆಂದರೆ ಆತನಿಗೆ ವಿಧೇಯರಾಗುವದೇ ಆಗಿದೆ. ನಾವು ದೇವರಿಗೆ ವಿಧೇಯರಾಗದಿದ್ದರೆ ನಾವು ಆತನನ್ನು ಪ್ರೀತಿಸುವದಿಲ್ಲ. ವಿಧೇಯತೆಯು ನಾವು ದೇವರನ್ನು ಪ್ರೀತಿಸುತ್ತೇವೆಂಬದಕ್ಕೆ ಆಧಾರವೂ ಸಿದ್ಧಾಂತಪಡಿಸುವಿಕೆಯು ಆಗಿದೆ (ಯೋಹಾನ 14:15, 21, 23:24). ಹೇಗೂ, ನಮ್ಮ ವಿಧೇಯತೆಯು ಫರಿಸಾಯರು ಮತ್ತು ಶಾಸ್ತ್ರಿಗಳವಿಧೇಯತೆಯಂತೆ ಇರಬಾರದು. ಅವರು ದೇವರನ್ನು ಪ್ರೀತಿಸುತ್ತಾರೆಂಬದಕ್ಕೆ ವಿಧೇಯರಾಗಲಿಲ್ಲ ಆದರೆ ತಾವು ಎಷ್ಟು ಧಾರ್ಮಿಕರೆಂದು ಜನರಿಗೆ ತೋರಿಸಿಕೊಳ್ಳಲು ವಿಧೇಯರಾದರು (ಮತ್ತಾಯ 5:20).

31 ಬಳಿಕ ಯೇಸು ಎರಡನೆಯ ಆಜ್ಞೆಯನ್ನು ನೀಡಿದನು. ಏನೆಂದರೆ "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು" (ಯಾಜಕಕಾಂಡ 19:18) ದೇವರ ಮೇಲಿನ ನಮ್ಮ ಪ್ರೀತಿಯು ಇತರರಿಗೆ ನಾವು ತೋರುವ ಪ್ರೀತಿಯಲ್ಲಿ ಕಂಡುಬರಬೇಕು. ದಶಾಜ್ಞೆಗಳ ಕೊನೆಯ ಆರು ಆಜ್ಞೆಗಳು ನಮ್ಮ ನೆರೆಯವರನ್ನು ಪ್ರೀತಿಸುವದರ ಕುರಿತಾಗಿರುತ್ತದೆ (ವಿ.ಕಾಂಡ 20:12-17)ಮೊದಲ ನಾಲ್ಕು ಆಜ್ಞೆಗಳು ದೇವರನ್ನು ಪ್ರಿತಿಸುವ ವಿಷಯವಾಗಿರುತ್ತದೆ (ವಿಮೋಚನ ಕಾಂಡ 20:3-4, 7-8). ಆದುದರಿಂದ ಯೇಸು ಮತ್ತಾಯ 22:40ರಲ್ಲಿ "ಈ ಎರಡು ಆಜ್ಞೆಗಳು ಎಲ್ಲಾಧರ್ಮಶಾಸ್ತ್ರಕ್ಕೂ ಪ್ರವಾದನಗ್ರಂಥಕ್ಕೂ[84] ಆಧಾರವಾಗಿವೆ" ಎಂದು ಹೇಳಿದನು (ರೋಮ 13:8-10, ಗಲಾತ್ಯ 5:14 ಮತ್ತು ವ್ಯಾಖ್ಯಾನ ನೋಡಿರಿ).

ನಾವು ನಮ್ಮ ನೆರೆಯವರನ್ನು ಹೇಗೆ ಪ್ರೀತಿಸಬೇಕು? ನಮ್ಮನ್ನು ಪ್ರೀತಿಸುವಂತೆಯೇ. ನಮಗೆ ಏನು ಇಚ್ಚಿಸಿಕೊಳ್ಳುತ್ತೇವೊ ಅದನ್ನು ನೆರೆಯವರಿಗೂ ಇಚ್ಚಿಸಬೇಕು. ಯೇಸು "ನಿನ್ನನ್ನು ಮತ್ತು ನೆರೆಯವನನ್ನು ಸಮಾನವಾಗಿ ಪ್ರೀತಿಸು" ಎಂದು ಯೇಸು ಹೇಳಲಿಲ್ಲ. "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು" ಎಂದು ಹೇಳಿದನು. ಇಹಲೋಕದ ಪ್ರಾಕೃತಿಕ ಮನುಷ್ಯನು ಎಲ್ಲಕ್ಕಿಂತ ಮೊದಲು ತನ್ನನ್ನೇ ಪ್ರೀತಿಸಿಕೊಳ್ಳುತ್ತಾನೆ. ನಾವು ನಮ್ಮ ನೆರೆಯವನನ್ನು ಎಲ್ಲಕ್ಕಿಂತ ಮೊದಲು ಮತ್ತು ದೇವರ ನಂತರ ಪ್ರೀತಿಸಬೇಕು. ಕ್ರೈಸ್ತನು ತನ್ನ ನೆರೆಯವನನ್ನು ತನಗಿಂತಲೂ ಹೆಚ್ಚಾಗಿ ಪ್ರೀತಿಸಬೇಕು. ವಾಸ್ತವದಲ್ಲಿ, ಕ್ರೈಸ್ತನು ಇನ್ನೆಂದಿಗೂ ತನ್ನನ್ನು ಪ್ರೀತಿಸಿಕೊಳ್ಳಲೇಬಾರದು[85]. ಕ್ರೈಸ್ತನು ತನ್ನನ್ನು ನಿರಾಕರಿಸಿಕೊಳ್ಳಲು (ಮಾರ್ಕ 8:34) ಮತ್ತು ತನ್ನ ಪೂರ್ಣಪ್ರೀತಿಯನ್ನು ದೇವರಿಗೂ ಮತ್ತು ತನ್ನ ನೆರೆಯವನಿಗೂ ಅರ್ಪಿಸುವದಕ್ಕೆ ಕರೆಯಲ್ಪಟ್ಟಿದ್ದಾನೆ. ಯೇಸು ನಮ್ಮನ್ನು ಪ್ರೀತಿಸಿದಂತೆಯೇ ನಾವು ಪರಸ್ಪರರನ್ನು ಪ್ರೀತಿಸಬೇಕು (ಯೋಹಾನ 13:34, 15:12-113) ಯೇಸು ನಮ್ಮನ್ನು ಎಷ್ಟೋ ಪ್ರೀತಿಸಿ ತನ್ನ ಪ್ರಾಣವನ್ನೇ ನಮಗಾಗಿ ನೀಡಿದನು (1 ಯೋಹಾನ 3:16). ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು. ನಮ್ಮ ನೆರೆಯವನು ಯಾರು? ಯೆಹೂದ್ಯರು ಇತರ ಯೆಹೂದ್ಯರನ್ನು ಮಾತ್ರವೇ ತಮ್ಮ ನೆರೆಯವರೆಂದು ಪರಿಗಣಿಸಿದ್ದರು. ಆದರೆ ಯೇಸು ಎಲ್ಲಾ ಮಾನವರು ಮತ್ತು ವಿಶೇಷವಾಗಿ ಅಗತ್ಯತೆಯಲ್ಲಿರುವವರೆಲ್ಲರೂ ನೆರೆಯವರಾಗಿದ್ದಾರೆಂದು ಕಲಿಸಿದನು (ಲೂಕ 10:25-37). ದೇವರನ್ನು ಮತ್ತು ನಮ್ಮ ನೆರೆಯವರನ್ನು ಪ್ರೀತಿಸಬೇಕು, ಎಂಬ ಎರಡು ಶ್ರೇಷ್ಠ ಆಜ್ಞೆಗಳು ತಾತ್ಪರ್ಯದಲ್ಲಿ ಒಂದೇ ಆಜ್ಞೆಯಾಗಿದೆ. ದೇವರನ್ನು ಪ್ರೀತಿಸುವರು ಮತ್ತು ನೆರೆಯವರನ್ನು ಪ್ರೀತಿಸುವದು ಎರಡೂ ಜೊತೆಯಾಗಿ ಸಾಗಬೇಕು. ನಾವು ನಮ್ಮ ನೆರೆಯವನನ್ನು ಪ್ರೀತಿಸದಿದ್ದರೆ ನಾವು ನಿಜವಾಗಿಯೂ ದೇವರನ್ನು ಪ್ರೀತಿಸುವದಿಲ್ಲ ಯಾವನಾದರೂ, ನಾನು ದೇವರನ್ನು ಪ್ರೀತಿಸುತ್ತೆನೆಂದು ಹೇಳಿ, ತನ್ನ ಸಹೋದರನನ್ನು ದ್ವೇಷಿಸುವದಾದರೆ ಅವನು ಸುಳ್ಳುಗಾರನಾಗಿದ್ದಾನೆ (1 ಯೋಹಾನ 4:20-21 ಮತ್ತು ವ್ಯಾಖ್ಯಾನ ನೋಡಿರಿ). ನಂತರ, ಪು ನಃ ಜನರು ಇದಕ್ಕೆ ತದ್ವಿರುದ್ಧವಾದ ತಪ್ಪನ್ನು ಮಾಡುತ್ತಾರೆ, ಅವರು ದೇವರನ್ನು ಪ್ರಾರ್ಥಿಸದೆಯೇ ಇತರರಗೆ ಪ್ರೀತಿಯನ್ನು ತೋರಿಸಲು ಪ್ರಯತ್ನಿಸುತ್ತಾರೆ. ಇದು ಮಾನವತಾವಾದಿ ಪ್ರೀತಿಯಾಗಿದ್ದು ಅದು ಉಳಿಯುವದಿಲ್ಲ. ಎಲ್ಲಾ ನಿಜವಾದ ಪ್ರೀತಿಯು ನಾವು ದೇವರಿಗೆ ತೋರುವ ಪ್ರೀತಿ ಮತ್ತು ಆತನಲ್ಲಿ ಇಡುವ ನಂಬಿಕೆಗಳಿಂದ ಹೊರ ಸೂಸುತ್ತದೆ. ಪ್ರೀತಿಯು ದೇವರಿಂದ ಬರುತ್ತದೆ. ಎಂದು ಯೋಹಾನನು ಬರೆಯುತ್ತಾನೆ (1 ಯೋಹಾನ 4:7) ಪೌಲನು ಹೀಗೆ ಬರೆದನು – ನಮಗೆ ಕೊಟ್ಟಿರುವ ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದದೆಯಲ್ಲಾ (ರೋಮ 5:5) ನಾವು ನಮ್ಮ ನೆರೆಯವರನ್ನು ನಿಜವಾಗಿಯೂ ಪ್ರೀತಿಸುವಾಗ ನಮ್ಮ ಸ್ವಾರ್ಥಮಾನವ ಪ್ರೀತಿಯಿಂದಲ್ಲ ಆದರೆ ನಮ್ಮಲ್ಲಿ ವಾಸಮಾಡುವ ಪವಿತ್ರಾತ್ಮನ ಮೂಲಕ ದೇವರು ನೀಡಿರುವ ಪ್ರೀತಿಯಿಂದಲೇ ಆಗಿದೆ. ನಮ್ಮ ಮೂಲಕ ಇತರ ಜನರೆಡೆಗೆ ದೇವರ ಪ್ರೀತಿಯು ಹರಿಯುವಂತೆ ಕೊಳವೆ ಅಥವಾ ಕಾಲುವೆ ನಾವಾಗಿದ್ದೇವೆ. ನಾವು ದೇವರ ಪ್ರೀತಿಯು ಹರಿಯುವಂತ ತೆರೆದಕಾಲುವೆಗಳಾಗಿ ಉಳಿದು ದೇವರ ಪ್ರೀತಿಯು ಹರಿಯದಂತೆ ಯಾವದು ತಡೆಯಾಗಬಾರದೆಂದು ನಾವು ಎಡಬಿಡದೆ ಪ್ರಾರ್ಥಿಸುವವರಾಗಿರೋಣ. ಒಂದು ಕಡೆಯು ಮುಚ್ಚಲ್ಪಟ್ಟಿರುವ ಕೊಳವೆಯಲ್ಲಿ ನೀರು ಹರಿಯಲಾರದು. ಆದೇ ರೀತಿಯಲ್ಲಿ ನಮ್ಮ ಪ್ರೀತಿಯು ನಮ್ಮಿಂದ ಹೊರಗೆ ಹರಿಯದಿರುವ ದಾದರೆ ದೇವರ ಪ್ರೀತಿಯು ನಮ್ಮೊಳಗೆ ಹರಿಯಲಾರದು.

**32-34** ಅತಿ ಶ್ರೇಷ್ಠ ಆಜ್ಞೆಯಾವದು? ಎಂದು ಕೇಳಿದ ಶಾಸ್ತ್ರಿಗಳು ಯೇಸುವಿನ ಉತ್ತರವನ್ನು ಅರ್ಥಮಾಡಿಕೊಂಡರು. ದೇವರನ್ನು ಪ್ರೀತಿಸುವದು ಎಲ್ಲಾ ಹೋಮ ಮತು ಯಜ್ಞಗಳಿಗಿಂತಲೂ ಪ್ರಾಮುಖ್ಯವಾದದ್ದು ಎಂದು ಹೇಳಿದ್ದು ಸರಿಯಾಗಿಯೇ ಇದೆ. ದೇವರು ಪ್ರವಾದಿಯಾದ ಹೋಶೆಯನ ಮೂಲಕವಾಗಿ "ನನಗೆ ಯಜ್ಞವು ಬೇಡ, ಕರುಣೆಯೇ ಬೇಕು, [86]ಹೋಮಗಳಿಗಿಂತ ದೇವಜ್ಞಾನವೇ ಇಷ್ಟ" (ಹೋಶೇಯ 6:6) ಮತ್ತು 1ಸಮುವೇಲ ಪು ಸ್ತಕದಲ್ಲಿ ಸಮುವೇಲನು ಹೀಗೆನ್ನುತ್ತಾನೆ:

ಕರ್ತನು ವಿಧೇಯತ್ವಕ್ಕೆ ಮೆಚ್ಚುವಷ್ಟು ಯಜ್ಞ ಹೋಮಗಳಿಗೆ ಮೆಚ್ಚುತ್ತಾನೋ ಯಜ್ಞವನ್ನು ಅರ್ಪಿಸುವದಕ್ಕಿಂತ ದೇವರ ಮಾತು ಕೇಳುವದು ಉತ್ತಮವಾಗಿದೆ. ಟಗರುಗಳ ಕೊಬ್ಬಿಗಿಂತ ವಿಧೇಯತ್ವವು ವಿಶೇಷವಾಗಿದೆ" (1 ಸಮುವೇಲ 15:22)

ನಂತರ ಶಾಸ್ತ್ರಿಯು ಬುದ್ಧಿಯಿಂದ ಉತ್ತರ ಕೊಟ್ಟದ್ದನ್ನು ನೋಡಿ ಯೇಸು ಅವನಿಗೆ ನೀನು ದೇವರ ರಾಜ್ಯಕ್ಕೆ ದೂರವಾದವನಲ್ಲ ಎಂದು ಹೇಳಿದನು.

## ಕ್ರಿಸ್ತನು ಯಾರ ಮಗನು? (12:35-40)

(ಮತ್ತಾಯ 22:41-46, ಲೂಕ 20:41-47)

**35** ಕ್ರಿಸ್ತನಾದ ಮೆಸ್ಸೀಯನು ಅರಸನಾದ ದಾವೀದನ ಸಂತತಿಯ ಮೂಲಕ ಬರುವನೆಂದು ಯೆಹೂದ್ಯರು ನಂಬಿದ್ದರು. ಆದುದರಿಂದ ಮೆಸ್ಸೀಯನನ್ನು ದಾವೀದ ಕುಮಾರನೆಂದು ಕರೆದರು. (ಮಾರ್ಕ 10:47-48) ಯೆಹೂದ್ಯರ ಮನಸ್ಸಿನಲ್ಲಿ ಮೆಸ್ಸೀಯನು ದಾವೀದನಂತೆ ಇನ್ನೊಬ್ಬ ಭೂಲೋಕದ ಅರಸನಾಗಿದ್ದು ರಾಜ್ಯವನ್ನು ದಾವೀದನ ಕಾಲದಲ್ಲಿ ಹಳೆಯ ಇಸ್ರಾಯೇಲನಂತೆ ಲೌಕಿಕ ರಾಜ್ಯವನ್ನು ಸ್ಥಾಪಿಸುವನೆಂಬುದಾಗಿ.

**36** ಆದರೆ ಯೇಸು ಅವರಿಗೆ ಮೆಸ್ಸೀಯನು ದಾವೀದ ಕುಮಾರನಿಗಿಂತಲೂ ಹೆಚ್ಚಿನವನೆಂದು ತೋರಿಸಲು ಬಯಸಿದನು. ಆತನು ಅದೇ ಸಮಯದಲ್ಲಿ ದಾವಿದನ ಕರ್ತನೂ ಸಹ ಆಗಿದ್ದನು. ಇದನ್ನು ತೋರಿಸಲು ಯೇಸು ಸ್ವತಃ ದಾವೀದನೇ ಬರೆದ ಕೀರ್ತನೆಗಳು 110:1ನ್ನು ಉಲ್ಲೇಖಿಸುತ್ತಾನೆ. ಕರ್ತನು (ದೇವರು) ನನ್ನ ಒಡೆಯನಿಗೆ (ಮೆಸ್ಸೀಯ) ನನ್ನ ಬಲಗಡೆಯಲ್ಲಿ ಕುಳಿತುಕೊಂಡಿರು ಎಂದು ನುಡಿದನು. ಇದರ ಮೂಲಕ ದಾವೀದನು ಮೆಸ್ಸೀಯನನ್ನು ಕರ್ತನೆಂದು ಕರೆಯುತ್ತಿದ್ದಾನೆಂಬುದನ್ನು ತಿಳಿದು ಕೊಳ್ಳಬಹುದು.

**37** ಯೇಸು ಅವರಿಗೆ "ದಾವೀದನೇ ಮೆಸ್ಸೀಯನನ್ನು ಒಡೆಯನೆಂದು ಹೇಳಿರುವಲ್ಲಿ ಆತನು ಅವನಿಗೆ ಮಗನಾಗುವದು ಹೇಗೆ? ಎಂದು ಕೇಳಿದನು. ಸತ್ಯವೇನೆಂದರೆ ಮೆಸ್ಸೀಯನಾದ ಕ್ರಿಸ್ತನು ದಾವೀದನ ಮಗನು ಮತ್ತು ದಾವೀದನ ಒಡೆಯನು ಎರಡೂ ಆಗಿದ್ದನು. "ಮನುಷ್ಯಕುಮಾರನಾದ" ಕ್ರಿಸ್ತನು ದಾವೀದನ ಮಗನು "ದೇವಕುಮಾರನಾದ ಕ್ರಿಸ್ತನು" ದಾವೀದನ ಒಡೆಯನಾದ ಕರ್ತನಾದ ಕ್ರಿಸ್ತನು ಭೂಲೋಕದ ರಾಜ್ಯವನ್ನು ಸ್ತಾಪಿಸಲು ಬರದೇ ನಿರಂತರವಾದ ಆತ್ಮೀಕ ರಾಜ್ಯವನ್ನು ಸ್ಥಾಪಿಸಲು ಬಂದನು (ದಾನಿಯಲ್ 7:13-14).

**38-39** ನಂತರ ಯೇಸು ಶಾಸ್ತ್ರಿಗಳ ಕುರಿತು ಒಂದು ಎಚ್ಚರಿಕೆಯನ್ನು ಕೊಟ್ಟನು. ಅವರು ಉನ್ನತ ಸ್ಥಾನಗಳಲ್ಲಿದ್ದವರು ಮತ್ತು ಜನರಿಂದ ಗೌರವಿಸಲ್ಪಡುವವರು ಆಗಿದ್ದರು. ಆದರೆ ಆ ಕಾರಣದಿಂದ ಅವರು ಗರ್ವಿಷ್ಟರಾಗಿದ್ದರು ಧಾರ್ಮಿಕ ನಾಯಕರು ದೇವರ ಮಹಿಮೆಯನ್ನು ಹುಡುಕಬೇಕಷ್ಟೆ, ಆದರೆ ಅವರು ಮುಖ್ಯವಾಗಿ ಸ್ವ ಮಹಿಮೆಯನ್ನು ಹುಡುಕುತ್ತಿದ್ದರು. ಗರ್ವವು ಯಾವದೇ ನಾಯಕನಿಗೆ ಅವನು ಕ್ರೈಸ್ತನಾಗಿರಲಿ ಅಥವಾ ಅಲ್ಲದಿರಲಿ ಅವನಿಗೆ ಅದು ದೊಡ್ಡ ಶೋಧನೆಯಾಗಿತ್ತು (ಮತ್ತಾಯ 23:5-7).

**40** ಅವರು ವಿಧವೆಯರ ಮನೆಗಳನ್ನು ನುಂಗುತ್ತಾರೆ.

ಶಾಸ್ತ್ರಿಗಳು ತಮ್ಮ ಧಾರ್ಮಿಕಸೇವೆಗಳಿಗೆ ಹಣವನ್ನು ಕೇಳುತ್ತಿದ್ದರು. ಜನರು ಅವರಿಗೆ ಏನಾದರು ಕೊಡಲಿಚ್ಚಿಸಿದರೆ ಅದನ್ನು ಉಚಿತವಾಗಿ ಕೊಡಬೇಕಾಗಿತ್ತು. ಹೇಗೂ ಶಾಸ್ತ್ರಿಗಳ ವೇತನವನ್ನು ನಿರೀಕ್ಷಿಸಿದರು. ಜನರು ಶಾಸ್ತ್ರಿಗಳಿಗೆ ಏನಾದರೂ ಕೊಡಲೇಬೇಕು ಎಂದು ಯೋಚಿಸುವಂತೆ ಮಾಡಿದರು. ಅವರು ವಿಧವೆಯರಂತಹ ಬಡವರ ಜೀವನಗಳನ್ನು ಸುಲಿದು ಕೊಂಡಿದ್ದರು. ಬಡವರು ಅವರನ್ನು ಗೌರವಿಸಿ ವಿಶ್ವಾಸಿಸಿದರು ಮತ್ತು ಈ ಕಾರಣದಿಂದ ಅವರಿಗೆ ಕೊಡಲೇಬೇಕೆಂಬ ಕಡ್ಡಾಯತೆ ಅವರಿಗಿತ್ತು. ಈ ಶಾಸ್ತ್ರಿಗಳು ಜನರು ತಮ್ಮನ್ನು ಧಾರ್ಮಿಕರೆಂದು ಯೋಚಿಸಿ ಇನ್ನು ಹೆಚ್ಚು ಹೊಗಳಿಕೆ ಮತ್ತು ಗೌರವವನ್ನು ಸಲ್ಲಿಸುವಂತಾಗಲು ಉದ್ದವಾದ ಪ್ರಾರ್ಥನೆಗಳನ್ನು ಮಾಡುತ್ತಿದ್ದರು (ಮತ್ತಾಯ 6:5-6 ಮತ್ತು ವ್ಯಾಖ್ಯಾನ ನೋಡಿರಿ). ಇಂಥಹ ವೈರಾಗ್ಯದ ಪ್ರದರ್ಶನಗಳಿಂದ ಅವರು ಜನರ ವಿಶ್ವಾಸವನ್ನು ಗಳಿಸಿಕೊಂಡು ಅವರ ಮನೆಗಳನ್ನು ಸುಲಭವಾಗಿ ಸುಂಗಲು ಶಕ್ತರಾದರು. "ಉದ್ದವಾಗಿ ಪ್ರಾರ್ಥಿಸುವಂತ ವ್ಯಕ್ತಿಗಳು ಖಂಡಿತವಾಗಿ ನಮಗೆ ಮೋಸ ಮಾಡುವದಿಲ್ಲ" ಎಂದು ಜನರು ಊಹಿಸಿದರು. ಆದರೆ ಶಾಸ್ತ್ರಿಗಳು ಕುರಿಯ ಚರ್ಮದಲ್ಲಿ ಇರುವ ತೋಳಗಳಾಗಿದ್ದರು,(ಮತ್ತಾಯ 7:15 ಮತ್ತು ವ್ಯಾಖ್ಯಾನ ನೋಡಿರಿ). ಅಂತಹ ಜನರು ಜೀವನದಲ್ಲಿ ಮಾತ್ರವೇ ಅವರ "ಪ್ರತಿಫಲ" ಹೊಂದುವರು. ಮುಂದಿನ ಜೀವಿತದಲ್ಲಿ ಅವರ ದುರಾಸೆ ಮತ್ತು ಕಪಟತನಕ್ಕಾಗಿ[87] ಕಠಿಣ ದಂಡನೆಯನ್ನು ಹೊಂದುವರು.

## ವಿಧವೆಯ ಕಾಣಿಕೆ - (12:41-44)

(ಲೂಕ 21:1-4)

**41-44** ನಾವು ದೇವರಿಗೆ ಕಾಣಿಕೆಯನ್ನು ಕೊಡುವಾಗ ನಾವು ಎಷ್ಟು ಕೊಡುತ್ತೇವೆ. ಎಂಬುದರ ಬಗ್ಗೆ ಯೋಚಿಸುತ್ತೇವೆ ಆದರೆ ದೇವರು ನಾವು ಎಷ್ಟು ಕೊಡುವದಿಲ್ಲ ಎಂಬುದರ ಬಗ್ಗೆ ಯೋಚಿಸುತ್ತಾರೆ. ಅಂದರೆ ನಮ್ಮಲ್ಲಿ ಎಷ್ಟು ಉಳಿಸಿಕೊಂಡಿದ್ದೇವೆ ಎಂಬುದರ ಬಗ್ಗೆ ಯೋಚಿಸುತ್ತಾನೆ. ಒಬ್ಬ ಶ್ರೀಮಂತನು ಲಕ್ಷಾಂತರ ಹಣವನ್ನು ಕೊಡುಬಹುದು, ಆದರೆ ಅದು ದೇವರಿಗೆ ಏನೂ ಅಲ್ಲ ದೇವರಿಗೆ ನಮ್ಮ ಹಣದ ಅವಶ್ಯಕತೆ ಇಲ್ಲ. ದೇವರ ದೃಷ್ಟಿಯಲ್ಲಿ ಎಲ್ಲಾ ಶ್ರೀಮಂತರು ಕೊಟ್ಟದ್ದಕ್ಕಿಂತಲೂ ಹೆಚ್ಚಾಗಿ ಬಡ ವಿಧವೆ ಕೊಟ್ಟಿದ್ದಳು. ಅವಳು ಕೊಟ್ಟ ನಂತರ ಅವಳಲ್ಲಿ ಏನೂ ಉಳಿದಿರಲಿಲ್ಲ ಅವಳು ಎಲ್ಲವನ್ನು ದೇವರಿಗೆ ಕೊಟ್ಟಳು ಅದು ಕೇವಲ ಒಂದೆರಡು ನಾಣ್ಯವಾಗಿದ್ದರೂ ದೇವರಿಗೆ ಅದು ಶ್ರೀಮಂತರು ಕೊಟ್ಟ ಎಲ್ಲಾ ಹಣಕ್ಕಿಂತಲೂ ಬೆಲೆ ಉಳ್ಳದ್ದಾಗಿತ್ತು( 2 ಕೋರಿಂಥ 8:12) ತ್ಯಾಗವು ಕೊಡುವದರ ತಿರುಳಾಗಿದೆ. ನಾವು ದೇವರಿಗೆ ಕೊಡುವಾಗ ನಮಗೆ ಬೇಕಾದ ಅಥವಾ ಅಗತ್ಯವಿರುವ ಯಾವದನ್ನು ಹೊಂದದೆ ಹೋಗಬೇಕು ನಮ್ಮ ಕೈಲಾದಷ್ಟು ಕೊಡಲು ಮಾತ್ರವೇ ತೃಪ್ತರಾಗಿರಬಾರದು. ನಮ್ಮ ಶಕ್ತಿ ಮೀರಿ ಕೊಡುವದು ಅಗತ್ಯವಾಗಿದೆ. (2 ಕೊರಿಂಥ 8:1-3) ನಾವು ಹೀಗೆ ಮಾಡುವದಾದರೆ ದೇವರು ನಮಗೆ ಪ್ರತಿಫಲ ನೀಡುವನು, ನಾವು ಇತರರಿಗೆ ಎಷ್ಟು ತ್ಯಾಗಪೂರ್ವಕವಾಗಿ ಕೊಡುತ್ತೇವೊ, ದೇವರು ನಮಗೆ ಅಷ್ಟು ಕೊಡುವನು (2 ಕೊರಿಂಥ 9:6-9 ಮತ್ತು ವ್ಯಾಖ್ಯಾನ ನೋಡಿರಿ). ಒಬ್ಬನು ತನ್ನ ಧನವನ್ನು ಚಲ್ಲಿದರೂ ಅವನಿಗೆ ವೃದ್ಧಿ! ಮತ್ತೊಬ್ಬನು ನ್ಯಾಯವಾದದ್ದನ್ನು ಬಿಗಿ ಹಿಡಿದರೂ ಅವನಿಗೆ ಬಡತನ ಉದಾರಿಯು ಪು ಷ್ಟನಾಗುವನು, ನೀರು ಹಾಯಿಸುವವನಿಗೆ ನೀರು ಸಿಕ್ಕುವದು (ಜ್ಞಾನೋಕ್ತಿಗಳು 11:24-25)

---

# ಅಧ್ಯಾಯ - 13

## ಅಂತ್ಯ ಕಾಲದ ಸೂಚನೆಗಳು (13:1-13)

(ಮತ್ತಾಯ 10:17-22, 24:1-14 ಲೂಕ 21:5-19)

**1** ಪ್ರಾಚೀನ ಪ್ರಪಂಚದಲ್ಲಿ ಯೆರೂಸಲೇಮಿನಲ್ಲಿದ್ದ ಯೆಹೂದ್ಯ ದೇವಾಲಯವು ಅತೀ ದೊಡ್ಡ ಮತ್ತು ಬಹು ವೈಭವದಿಂದ ಕೂಡಿದ ಕಟ್ಟಡಗಳಲ್ಲಿ ಒಂದಾಗಿತ್ತು. ಅದರ ಸುತ್ತಲೂ ಅನೇಕ ಸಾಲುಕಂಬಗಳು ಮತ್ತು ಆವರಣಗಳು ಹಾಗೂ ಚಿಕ್ಕ ಕಟ್ಟಡಗಳೂ ಇದ್ದವು, ದೇವಾಲಯದ ಸ್ಥಳವು ಯೆರೂಸಲೇಮಿನ ಪಟ್ಟಣದ ಒಂದರಲ್ಲಿ ಅರ್ಧದಷ್ಟು ಸ್ಥಳವನ್ನು ತುಂಬಿಕೊಂಡಿತ್ತು. ಅದರ ಮುಂಬಾಗವು ಚಿನ್ನದಿಂದ ಆವರಿಸಲ್ಪಟ್ಟಿತ್ತು. ಅದರ ಕೆಲವು ಕಲ್ಲುಗಳು ಮೂವತ್ತು ಅಡಿಗಳಷ್ಟು ಉದ್ದವಾಗಿಯೂ, ಹನ್ನೆರಡು ಅಡಿಗಳಷ್ಟು ಅಗಲವಾಗಿಯು ಇದ್ದವು . ಆದ ಕಾರಣ ಯೇಸುವಿನ ಶಿಷ್ಯರಲ್ಲಿ ಒಬ್ಬನು "ಎಂಥಹ ಕಲ್ಲುಗಳು! ಎಂಥಹ ಕಟ್ಟಡಗಳು"! ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದರಲ್ಲಿ ವಿಸ್ಮಯ ಪಡಬೇಕಾದದ್ದು ಇರುವದೇ ಇಲ್ಲ.

**2** ದೇವಾಲಯವು ಎಂದಿಗೂ ನಾಶವಾಗುವದಿಲ್ಲವೇನೋ ಎಂದು ನಿಶ್ಚಯವಾಗಿ ತೋರುತ್ತಿತ್ತು. ಆದಾಗ್ಯು ಯೇಸು ತನ್ನ ಶಿಷ್ಯರಿಗೆ ಇಲ್ಲಿ ಕಲ್ಲಿನ ಮೇಲೆ ಕಲ್ಲು ಉಳಿಯುವದಿಲ್ಲ ಎಂದು ಹೇಳಿದನು (ಲೂಕ 19:41-44 ಮತ್ತು ವ್ಯಾಖ್ಯಾನ ನೋಡಿರಿ). ಮತ್ತು ನಾಲ್ವತ್ತು ವರ್ಷಗಳನಂತರ ಕ್ರಿ.ಶ 70 ರಲ್ಲಿ ಯೆರೂಸಲೇಮನ್ನು ನಾಶ ಪಡಿಸಿದಾಗ ಅವರು ದೇವಾಲಯವನ್ನು ಸಹ ನಾಶಮಾಡಿದರು. ಅಂದಿನಿಂದ ದೇವಾಲಯವು ಪು ನಃ ಕಟ್ಟಲು ಆಗಲಿಲ್ಲ.

**3-4** ಪೇತ್ರ, ಯಾಕೋಬ, ಯೋಹಾನ, ಮತ್ತು ಅಂದ್ರೇಯರ (ಮಾರ್ಕ 1:16-20) ದೇವಾಲಯವು ನಾಶಹೊಂದುತ್ತದೆಂದು ಯೇಸು ಹೇಳಿದ ಮಾತುಗಳು ಅಕ್ಷರಸಹ ನಿಜವಾಯಿತು. ಅವರು ಯೇಸುವಿಗೆ "ಅದು ಯಾವಾಗ ಆಗುವದು? ನಮಗೆ ಹೇಳು ಎಂದು ಕೇಳಿದರು" (ಮತ್ತಾಯ 24:30 ಪ್ರಕಾರವಾಗಿ ಶಿಷ್ಯರು ನೀನು ಪ್ರತ್ಯಕ್ಷನಾಗುವದಕ್ಕು ಯುಗದ ಸಮಾಪ್ತಿಗೂ ಸೂಚನೆ ಏನು? ಎಂದು ಸಹ ಕೇಳಿದರು. ಶಿಷ್ಯರು ಈ ಎರಡೂ ಪ್ರಶ್ನೆಗಳನ್ನು ಒಟ್ಟಿಗೆ ಕೇಳಿದರು. ಯಾಕೆಂದರೆ ಯೆರೂಸಲೇಮಿನ ನಾಶನ, ಜಗತ್ತಿನ ಅಂತ್ಯ ಒಂದೇ ಸಮಯದಲ್ಲಿ ಆಗುವದೆಂದು ಅವರು ಊಹಿಸಿದ್ದರು ಆದರೆ ಅವರ ಪ್ರಶ್ನೆಗಳನ್ನು ಎರಡು ಭಾಗವಾಗಿ ಉತ್ತರಿಸಿದನು. ಈ ಅಧ್ಯಾಯವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಯೇಸುವಿನ ಉತ್ತರದ ಎರಡು ಭಾಗಗಳನ್ನು ಗೊಂದಲಕ್ಕೀಡು ಮಾಡಬಾರದು (ವ. 5-23, 28-31) ರಲ್ಲಿ ಯೇಸು ಯೆರೂಸಲೇಮಿನ ಕುರಿತಾದ ಶಿಷ್ಯರ ಪ್ರಶ್ನೆಗೆ ಉತ್ತರಿಸುತ್ತಾನೆ (ಮತ್ತಾಯ 24:4-21-28, 32-35 ಲೂಕ 21:8-24, 29-33) – (ವಚನ 24-27 ಮತ್ತಾಯ; 32:37, 36-44 ಲೂಕ21:25-28;34-36) ಯೇಸುವಿಗೆ ಯೆರೂಸಲೇಮಿನ ನಾಶನ ಯಾವಾಗ ಆಗುವದೋ ಎಂಬುದನ್ನು ಗೊತ್ತಿತ್ತು (ವ.30) ಆದರೆ ಯಾವಾಗ ಆಗುವದೆಂದು ಅವನು ತಿಳಿದಿರಲಿಲ್ಲ (ವ.32) ಎಂಬುದನ್ನು ನಾವು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ದೇವರು ಮಾತ್ರವೇ ಆದನ್ನು ಬಲ್ಲನು ಆದರೆ ನಾವು ಈ ಅದ್ಯಾಯದ ಮೂಲಕ

ನಾವು ಅರ್ಥಮಾಡಿಕೊಳ್ಳಬಹುದೇನಂದರೆ ಯೆರೂಸಲೇಮಿನ ನಾಶನಕ್ಕೆ ಮುಂಚಿತ ಸೂಚನೆಗಳು ಯುಗಾಂತ್ಯದ ಮುಂಚಿನ ಸೂಚನೆಗಳನ್ನು ಹೋಲುತ್ತದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ ಯೆರೂಸಲೇಮಿನ ನಾಶನ ಯುಗಾಂತ್ಯದಲ್ಲಿ ಸಂಭವಿಸುವ ಘಟನೆಗಳ ಒಂದು ಛಾಯೆ ಆಗಿದೆ. ಆದುದರಿಂದ ಅಧ್ಯಾಯದಲ್ಲಿ ಯೆರೂಸಲೇಮಿನ ನಾಶನವನ್ನು ಸೂಚಿಸುವ ಆ ಭಾಗಗಳು ಲೋಕಾಂತ್ಯದಲ್ಲಿ [88]. ಏನು ಸಂಭವಿಸುವದೆಂಬುದರ ನಮಗೆ ಒಂದು ಎಚ್ಚರಿಕೆ ಸಹ ಆಗಿರಬಲ್ಲದು.

**5** ಶಿಷ್ಯರು ಈ ಸಂಗತಿಗಳು ಯಾವಾಗ ನಡೆಯುವವು ಎಂದು ತಿಳಿಯಲಿಚ್ಚಿಸಿದರು. ಆದರೆ ಯೇಸು ಅವರಿಗೆ ಇನ್ನೂ ಹೆಚ್ಚು ಪ್ರಾಮುಖ್ಯವಾದ ಸಂಗತಿಯೊಂದನ್ನು ತಿಳಿಸುತ್ತಾನೆ "ಎಚ್ಚರವಾಗಿರಿ" (ವಚನ 5,37) "ನೋಡಿಕೊಳ್ಳಿರಿ" (ವಚನ. 9-33) ಶಿಷ್ಯರು ಒಂದು ವೇಳೆ ಯಾವಾಗಲೂ ಎಚ್ಚರವಾಗಿಯೂ, ಸಿದ್ಧರಾಗಿಯೂ ಇರುವದಾದರೆ ಈ ಘಟನೆಗಳು ಯಾವಾಗ ಸಂಭವಿಸುತ್ತವೆಂಬುದು ಸರಿಯಾದ ಸಮಯವನ್ನು ತಿಳಿಯುವದು ಅವಶ್ಯಕವಿಲ್ಲ. ಯೇಸು ಇಂದು ನಮಗೆ ಇದೇ ಮಾತುಗಳನ್ನು ಹೇಳುತ್ತಾನೆ, ನಾವು ಯಾವಾಗಲು "ಯಾವಾಗ? ಎಲ್ಲಿ? " ಎಂದು ಕೇಳದಿರೋಣ ಬದಲಾಗಿ ಯಾವಾಗಲು ಸಿದ್ಧರಾಗಿಯೂ, ಎಚ್ಚರವಾಗಿಯೂ ಇರೋಣ. " ಯಾರಾದರು ನಿಮ್ಮನ್ನು ಮೋಸಗೊಳಿಸ್ಯಾರು ನೋಡಿಕೊಳ್ಳಿರಿ" ಎಂದು ಯೇಸು ಹೇಳಿದನು. ಹಿಂಸಕರಿಗಿಂತಲೂ ವಂಚಕರು ಸಭೆಗೆ ಹೆಚ್ಚು ಅಪಾಯಕಾರಿ . ಸೈತಾನನು ಕ್ರೈಸ್ತರ ವಿರುದ್ಧ ಉಪಯೋಗಿಸುವ ಮುಖ್ಯ ಆಯುಧ ಹಿಂಸೆ ಅಲ್ಲ; ಆದರೆ ವಂಚನೆಯೇ ಆಗಿದೆ (ವ.22 ಮತ್ತು ವ್ಯಾಖ್ಯಾನ ನೋಡಿರಿ) "ಅನೇಕರು ಬಂದು ನನ್ನ ಹೆಸರನ್ನು ಎತ್ತಿಕೊಂಡು——ಎಷ್ಟೋ ಜನರಿಗೆ ಮೋಸಗೊಳಿಸುವರು "(ವ.6) ಅನೇಕರು ನೂತನ ಕ್ರೈಸ್ತರನ್ನು ಮತ್ತು ನೂತನ ಸುವಾರ್ತೆಗಳನ್ನು ಹಿಂಬಾಲಿಸುವಂತೆ ವಂಚಿಸಲ್ಪಟ್ಟು ನಿಜಕ್ರೈಸ್ತನಲ್ಲಿನ ತಮ್ಮ ನಂಬಿಕೆಯನ್ನು ಕಳೆದುಕೊಂಡಿದ್ದಾರೆ.

**6-8** ಈ ವಚನಗಳಲ್ಲಿ ಯೇಸು ಯೆರೂಸಲೇಮಿನ ನಾಶನಕ್ಕೆ ಮುಂಚೆ ಮೂರು ರೀತಿಯ ಘಟನೆಗಳು ಸಂಭವಿಸುವವು ಎಂದು ಪ್ರವಾದಿಸಿದನು ಮೊದಲನೆಯದಾಗಿ ಅನೇಕರು ಕಾಣಿಸಿಕೊಂಡು "ನಾನು ಕ್ರಿಸ್ತನು ನಾನು ಕ್ರಿಸ್ತನು" ಎಂದು ಹೇಳಿಕೊಳ್ಳುವರು (ಮತ್ತಾಯ 24:4) ಶಿಷ್ಯರು ಈ ಮಿಥ್ಯಕ್ರೈಸ್ತರನ್ನು ನಂಬಬಾರದು (ವ 21-22) ಯೆರೂಸಲೇಮಿನ ನಾಶನಕ್ಕೆ ಮುಂಚೆ ಈಮಿಥ್ಯ ಕ್ರೈಸ್ತರಲ್ಲಿ ಅನೇಕರು ಕಾಣಿಸಿಕೊಂಡರು (ಅ.ಕೃ 5:36-37 ಎರಡನೆದಾಗಿ ರಾಷ್ಟಗಳ ಮಧ್ಯದಲ್ಲಿ ಯುದ್ಧಗಳು ಹಾಗೆಯುದ್ಧಗಳಾಗುವ ಹಾಗಿದೆ ಎಂಬ ಸುದ್ದಿಯು ಇರುವದು ಎಂದು ಯೇಸು ಹೇಳಿದನು. ಅದರಂತೆಯೇ ಕ್ರಿ.ಶ 62- 66 ರಲ್ಲಿ ಅಂದರೆ ಯೆರೂಸಲೇಮಿನ ನಾಶವಾಗುವದಕ್ಕೆ ಕೆಲ ವರ್ಷಗಳ ಮುಂಚೆಯೇ ರೋಮ ಸಾಮಾಜ್ಯದ ಉದ್ದಕ್ಕೂ ಅನೇಕ ಯುದ್ಧಗಳು ನಡೆದವು ಮತ್ತು ಚಕ್ರವರ್ತಿಯ ವಿರುದ್ಧ ದಂಗೆಗಳುಂಟಾಗುವ ಸುದ್ದಿಯು ಇತ್ತು. ಮೂರನೆಯದಾಗಿ ಯೇಸು ಅಲ್ಲಲ್ಲಿ ಭೂಕಂಪಗಳು, ಬರಗಳು, ಉಂಟಾಗುವವು ಎಂದು ಹೇಳಿದನು. ಅದರಂತೆಯೇ ಯೆರೂಸಲೇಮಿನ ನಾಶನಕ್ಕೆ ಮುಂಚೆ ರೋಮ ಸಾಮ್ರಾಜ್ಯದ ಹಲವಾರು ಭಾಗಗಳಲ್ಲಿ ಬರಗಾಲಗಳು ಸಂಭವಿಸಿದವು (ಅ.ಕೃ 11:28).

ರೋಮಾಯ ಇತಿಹಾಸಕಾರರ ಪ್ರಕಾರವಾಗಿ ಆ ವೇಳೆಯಲ್ಲಿಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ಹಲವಾರು ಭೂಕಂಪಗಳು ಉಂಟಾದವು . ಲೂಕ 21:11ಕ್ಕನುಸಾರವಾಗಿ ಯೇಸು ಯೆರೂಸಲೇಮಿನ ನಾಶನದ ಮುಂಚೆ ಉತ್ಪಾತಗಳು, ಆಕಾಶದಲ್ಲಿ ಮಗಿ ಸೂಚನೆಗಳು ತೋರುವವು ಎಂದು ಸಹ ಹೇಳಿದನು. ರೋಮಾಯ ಮತ್ತು ಯೆಹೂದ್ಯ ಇತಿಹಾಸಕಾರರಿಬ್ಬರ ಪ್ರಕಾರವಾಗಿ ಇತಿಹಾಸಕಾರನಾದ ಜೋಸೆಫಸ್ ಪ್ರಕಾರವಾಗಿ ಯೇಸು ಯೆರೂಸಲೇಮಿನ ಮೇಲೆ ಅನೇಕ ರಾತ್ರಿಗಳವರೆಗೆ ಖಡ್ಗದಾಕಾರದಲ್ಲಿ ಒಂದು "ಧೂಮಕೇತು" ಕಾಣಿಸಿಕೊಂಡಿತು.

ಆದಾಗ್ಯು ಎಲ್ಲಾ ಸಂಗತಿಗಳು ಪ್ರಸವ ವೇದನೆ ಪ್ರಾರಂಭವಷ್ಟೆ ಆಗಿತ್ತು (ವ–8) ಯೆರೂಸಲೇಮಿನ ನಾಶನಕ್ಕೆ ಮುಂಚೆ ಸಂಭವಿಸಿದ ಈ ಘಟನೆಗಳು ಅಂತಿಮವಾಗಿ ಯುಗಾಂತ್ಯಕ್ಕೆ ನಡೆಸುವ ಘಟನೆಗಳು ಪ್ರಾರಂಭ ಮಾತ್ರವೇ ಆಗಿತ್ತು. ಕಳೆದ 1900 ವರ್ಷಗಳಲ್ಲಿ ಅತೀ ದೊಡ್ಡ ಯುದ್ಧಗಳು ಮತ್ತು ದೊಡ್ಡ ಭೂಕಂಪಗಳು ಬರಗಾಲಗಳನ್ನು ಸಂಭವಿಸಿರುವದನ್ನು ನಾವು ನೋಡಿದ್ದೇವೆ ಇಂದೂ ಸಹ ಪ್ರಪಂಚದ ವಿವಿಧ ಭಾಗಗಳಲ್ಲಿ ಮಿಥ್ಯ ಕ್ರೈಸ್ತರು ಎದ್ದೇಳುತ್ತಿದ್ದಾರೆ. ಯೇಸುವಿನ ಪ್ರವಾದನೆಯು ಯೆರೂಸಲೇಮಿನ ನಾಶನಕ್ಕೆ ಮುಂಚೆ ನೆರವೇರಿದಲ್ಲಿ ಮಾತ್ರವೇ ಅಲ್ಲ, ಆದರೆ ಈ ಪ್ರಸ್ತುತ ಸಮಯದಲ್ಲಿ ನಾವು ಆತನು ಲೋಕಾಂತ್ಯದಲ್ಲಿ ಬರುವದನ್ನು ಎದುರು ನೋಡುತ್ತಿರುವಹಾಗೆ ಆತನ ಪ್ರವಾದನೆಗಳನ್ನು ನೆರವೇರುವದನ್ನು ಮುಂದುವರೆಸುತ್ತಿದೆ.

**9** ಈ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಪ್ರವಾದನೆಯು ಯೇಸುವಿನ ಹನ್ನೆರಡು ಶಿಷ್ಯರ ಜೀವಿತಗಳಲ್ಲಿಯೂ ಮತ್ತು ಪೌಲನ ಜೀವಿತದಲ್ಲಿಯೂ ನೆರವೇರಿದವು . ಯೇಸುವಿನ ಹಿಂಬಾಲಕರಿಗಾದ ಹಿಂಸೆಯ ಕುರಿತಾಗಿ ಅ.ಕೃ. ಗಳ ಪು ಸ್ತಕದಲ್ಲಿ ವಿವರವಾಗಿ ವರ್ಣಿಸಲಾಗಿದೆ.

**10** ಮೊದಲು ಎಲ್ಲಾ ಜನಾಂಗಗಳಿಗೆ ಸುವಾರ್ತೆಯು ಸಾರಲ್ಪಡಬೇಕು ಇದಕ್ಕೆ ಸಂಬಂಧಪಟ್ಟ ಮತ್ತಾಯನ ಸುವಾರ್ತೆಯಲ್ಲಿ ಕಾಣುತ್ತೇವೆ. ಅದೇನಂದರೆ – ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸುವಾರ್ತೆಯು ಸಾಕ್ಷಿಗಾಗಿ ಸಾರಲ್ಪಡುವದು. ಆಗ ಅಂತ್ಯವು ಬರುವದು (ಮತ್ತಾಯ 24:14). ಅಂದರೆ ಲೋಕದ ಅಂತ್ಯ ಅನೇಕ ಕ್ರೈಸ್ತರು ಎಲ್ಲಾ ರಾಷ್ಟಗಳು[89] ಸುವಾರ್ತೆಯನ್ನು ಕೇಳಿದ ಕೊಡಲೇ ಕ್ರಿಸ್ತನು ಬರುವನು ಮತ್ತು ಲೋಕದ ಅಂತ್ಯವಾಗುವದೆಂದು ನಂಬುತ್ತಾರೆ. ಪ್ರಕಟನೆ 14:6 ರಿಂದ 7ರ ಪ್ರಕಾರವಾಗಿ ಅಂತ್ಯವು ಬರುವದಕ್ಕೆ ಸ್ವಲ್ಪ ಕಾಲ ಮುಂಚೆ ಒಬ್ಬ ದೇವದೂತನು ಕಡೆಯಸಾರಿ ಎಲ್ಲಾ ಜನಾಂಗ – ಕುಲ ಪ್ರಜೆಗಳ ವರೆಗೂ, ಸಕಲ ಭಾಷೆಗಳನ್ನು ಆಡುವವರಿಗೂ ಸುವಾರ್ತೆಯನ್ನು ಸಾರುವನು. ಈ

ವಚನವನ್ನು ನಾವು ಯಾವ ರೀತಿಯಲ್ಲಿ ಅರ್ಥ ಮಾಡಿಕೊಂಡರೂ ಸಹ ಪ್ರತಿಯೊಬ್ಬ ಕ್ರೈಸ್ತನ ಕರ್ತವ್ಯವು ಸ್ಪಷ್ಟವಾಗಿದೆ. ಯೇಸು ತನ್ನ ಶಿಷ್ಯರಿಗೆ ನೀಡಿದ ಕೊನೆಯ ಆಜ್ಞೆ ಏನಂದರೆ – ಆದ್ದರಿಂದ ನೀವು ಹೊರಟುಹೋಗಿ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿರಿ. ನಾನು ನಿಮಗೆ ಅಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ.ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ (ಮತ್ತಾಯ 28:19-20) ಎಂದು ಹೇಳಿದನು. ಯೇಸುವಿನ ಶಿಷ್ಯರು ದೇವರ ರಾಜ್ಯದ ಸುವಾರ್ತೆಯನ್ನು ಸಾರಿದ್ದಕ್ಕಾಗಿ ಹಿಂಸೆಗೊಳಗಾದರು (ಮತ್ತಾಯ 24:24) ಈ ಸುವಾರ್ತೆಯ ಭೋಧಕರು ಹಿಂಸೆಗೋಸ್ಕರ ಯಾವಾಗಲೂ ಸಿದ್ಧರಾಗಿರಬೇಕು.

**11** ನಾವು ಸುವಾರ್ತೆಯನ್ನು ಸಾರಿ ಎಲ್ಲಾ ಜನಾಂಗಗಳನ್ನು ಶಿಷ್ಯರನ್ನಾಗಿ ಮಾಡುವಾಗ ಯೇಸು ನಮ್ಮೊಂದಿಗಿರುತ್ತಾನೆ. ಅಂದರೆ ಪವಿತ್ರಾತ್ಮನು ನಮ್ಮಲ್ಲಿಯೂ, ನಮ್ಮೊಂದಿಗೂ ಇರುತ್ತಾನೆ. ಕಷ್ಟಕರ ಸನ್ನಿವೇಷಗಳು ಎದುರಾಗುವಾಗ ನಾವು ಮಾತನಾಡಬೇಕಾದ ಮಾತುಗಳನ್ನು ಆತನ ಪವಿತ್ರಾತ್ಮಾನು ನಮಗೆ ಅನುಗ್ರಹಿಸುವನು. ನೀವು ಹೇಳತಕ್ಕದ್ದನ್ನು ಪವಿತ್ರಾತ್ಮನು ಆ ಗಳಿಗೆಯಲ್ಲಿಯೇ ನಿಮಗೆ ಕಲಿಸಿಕೊಡುವನು (ಲೂಕ 112:12) ಕ್ರಿಸ್ತನಿಗಾಗಿ ಸಾಕ್ಷಿ ನೀಡಿದ್ದಕ್ಕಾಗಿ ಬಂಧಿಸಲ್ಪಟ್ಟ ಅನೇಕ ಕ್ರೈಸ್ತರು ನಿಜವಾಗಿಯೂ ಪವಿತ್ರಾತ್ಮನು ಅವರಿಗೆ ಮಾತನಾಡ ತಕ್ಕ ಮಾತುಗಳನ್ನು ಅನುಗ್ರಹಿಸಿದ್ದಾನೆಂದು ಸಾಕ್ಷಿಯಾಗಿ ಹೇಳಬಲ್ಲರು (ಮತ್ತಾಯ 10:19-20, ಲೂಕ 21:14-15 ನೋಡಿರಿ)

**12** ಕಡೆಯ ದಿವಸಗಳಲ್ಲಿ ಕ್ರಿಸ್ತನ ಕಾರಣದಿಂದಾಗಿ ಕುಟುಂಬಗಳಲ್ಲಿ ಒಡಕು ಉಂಟಾಗುವದು. ಕ್ರಿಸ್ತನಲ್ಲಿ ವಿಶ್ವಾಸಿಸದ ಕುಟುಂಬದವರು ವಿಶ್ವಾಸಿ ಸದಸ್ಯರನ್ನು ವಿರೋಧಿಸುವರು (ಮತ್ತಾಯ 10:35-36) ತಂದೆಗಳು ತಮ್ಮ ಮಕ್ಕಳನ್ನು ನಿರಾಕರಿಸುವರು, ಒಂದೇ ಕುಟುಂಬದ ಸದಸ್ಯರು ಇತರರನ್ನು ಮರಣಕ್ಕೆ ಒಪ್ಪಿಸುವರು. ಹಿಂಸೆಯ ಕಾರಣದಿಂದಾಗಿ ಅನೇಕರು ನಂಬಿಕೆಯಿಂದ ಹಿಂಜರಿದ ಒಬ್ಬರನ್ನೊಬ್ಬರು ಹಿಡುಕೊಡುವರು, ಒಬ್ಬರ ಮೇಲೊಬ್ಬರು ದ್ವೇಷ ಮಾಡುವರು.... ಇದಲ್ಲದೆ ಅಧರ್ಮವು (ಕೆಟ್ಟತನವು ) ಹೆಚ್ಚಾಗುವದರಿಂದ ಬಹು ಜನರಲ್ಲಿ ಪ್ರೀತಿಯು ತಣ್ಣಗಾಗಿ ಹೋಗುವದು (ಮತ್ತಾಯ 24:10-12). ಈ ಎಲ್ಲಾ ಸಂಗತಿಗಳು ಯೆರೂಸಲೇಮಿನ ನಾಶನಕ್ಕೆ ಮುಂಚೆ ನೆರವೇರಿದವು . ಮತ್ತು ಪು ನಃ ಇದೇ ಸಂಗತಿಗಳು ಲೋಕದ ಅಂತ್ಯಕ್ಕೆ ಮುಂಚೆ ಸಂಭವಿಸುವವು ಅಂತೂ. ಪ್ರಪಂಚದ ವಿವಿಧ ಭಾಗಗಳಲ್ಲಿ ಈ ಸಂಗತಿಗಳು ಸಂಭವಿಸುತ್ತವೆ.

**13** ನನ್ನ ಹೆಸರಿನ ನಿಮಿತ್ತವಾಗಿ ನಿಮ್ಮನ್ನು ಎಲ್ಲರೂ ಹಗೆಮಾಡುವರು. ನಾವು ಈ ಪ್ರಪಂಚಕ್ಕೆ ಸಂಬಂದ ಪಟ್ಟಿರುತ್ತೇವೆ ಇಲ್ಲವೆ ದೇವರ ರಾಜ್ಯಕ್ಕೆ ಸಂಬಂದ ಪಟ್ಟವರಾಗಿರುತ್ತೇವೆ. ನಾವು ದೇವರ ರಾಜ್ಯಕ್ಕೆ ಸೇರಿದವರಾಗಿರುವದಾದರೆ ಪ್ರಪಂಚವು ನಮ್ಮನ್ನು ದ್ವೇಷಿಸುವದು (ಯೋಹಾನ 15:18-19 ನೋಡಿರಿ). ನಾವು ಏಕಕಾಲದಲ್ಲಿ ಲೋಕವನ್ನು, ಕ್ರಿಸ್ತನನ್ನೂ ಹಿಂಬಾಲಿಸಲಾರೆವು .

ಆದರೆ ಕೊನೆಯ ವರೆಗೂ ತಾಳಿಕೊಳ್ಳುವವನು ರಕ್ಷಣೆಹೊಂದುವನು ಇಲ್ಲಿ "ಕೊನೆಯವರೆಗೂ" ಎಂಬದು "ಲೋಕದ ಅಂತ್ಯದ ವರೆಗೂ" ಎಂದರ್ಥವಲ್ಲ. "ಸಾಯಬೇಕಾದರೂ ಅಥವಾ ಮರಣದವರೆಗೂ ಧೃಡವಾಗಿರು "ಎಂಬದು ಆ ಮಾತಿನ ಅರ್ಥವಾಗಿದೆ. ನಮ್ಮ ಮೇಲೆ ಯಾವ ಹಿಂಸೆಗಳು ಬಂದರೂ ಸಹ ನಾವು ಧೃಡವಾಗಿ ನಿಲ್ಲಬೇಕು, ಸಂಪೂರ್ಣವಾಗಿ ಧೃಡತೆಯಿಂದಿರಬೇಕು ಎಂಬದೇ. "ಧೃಡವಾಗಿ ನಿಲ್ಲುವದು" ಎಂದರೆ ನಂಬಿಕೆಯಲ್ಲಿ ಧೃಡವಾಗಿ ನಿಲ್ಲುವದು ಎಂದರ್ಥವಾಗಿದೆ. ನಂಬಿಕೆಯಲ್ಲಿ ಧೃಡವಾಗಿ ನಿಂತುಕೊಳ್ಳುವವರು ರಕ್ಷಣೆ ಹೊಂದುವರು. ಧೃಡವಾಗಿ ನಿಲ್ಲದವರು ರಕ್ಷಣೆ ಹೊಂದುವದಿಲ್ಲ. ಅನೇಕ ಕ್ರೈಸ್ತರು ನಾವು ಬೇಕೆಂದೇ ನಮ್ಮ ನಂಬಿಕೆಯನ್ನು ಬಿಟ್ಟು ಬಿಡುವದಾದರೆ ನಮ್ಮ ರಕ್ಷಣೆಯನ್ನು ಕಳೆದುಕೊಳ್ಳುವೆವು ಎಂಬದಾಗಿ ಈ ವಚನವನ್ನು ವ್ಯಾಖ್ಯಾನಿಸುತ್ತದೆ. ಇನ್ನು ಕೆಲವರಂತೂ, ಒಬ್ಬನು ತನ್ನ ನಂಬಿಕೆಯನ್ನು ಬಿಟ್ಟು ಬಿಡುವದಾದರೆ ಆತನು ನಿಜವಾದ ಕ್ರೈಸ್ತನಾಗಿರಲೇ[90] ಇಲ್ಲ ಎಂದು ನಂಬುತ್ತಾರೆ. ಆದರೆ ಮೇಲಿನ ಪ್ರಶ್ನೆಯಕುರಿತು ನಾವು ಏನೇ ಅಭಿಪ್ರಾಯ ಹೊಂದಿದ್ದರೂ ಪ್ರತಿಯೊಬ್ಬ ಕ್ರೈಸ್ತನಿಗೂ ಬೈಬಲ್ಲಿನ ಬೋಧನೆಯು ಸ್ಪಷ್ಟವಾಗಿದೆ. ಏನೆಂದರೆಃ ಧೃಡವಾಗಿ ನಿಲ್ಲಿರಿ. ಕಡೇಯ ವರೆಗೂ ಧೃಡವಾಗಿ ನಿಲ್ಲಿರಿ (1 ಕೊರಿಂಥ 16:13, ಗಲಾತ್ಯ 5:1, ಎಫೆಸ್ 6:14-15, ಫಿಲಿಪ್ಪಿ 4:1, ಕೊಲೊಸ್ಸೆ 1:22-23, ಇಬ್ರಿಯ 10:35-36, ಯಾಕೋಬ 5:8, 1 ಪೇತ್ರ 5:9 ನೋಡಿರಿ). ನಾವು ಬಂಡೆ ನೆಲದ ಮೇಲೆ ಬಿದ್ದ ಬೀಜವು ಸೂರ್ಯನ ಬಿಸಿಲು ಬಂದ ಕೂಡಲೆ ಒಣಗಿ ಸತ್ತು ಹೋಗದಂತೆ ಇರದಂತೆ ನೋಡಿಕೊಳ್ಳೋಣ. ಸ್ವಲ್ಪ ಕಾಲ ತಾಳಿ ಕೊಂಡು ಬಿದ್ದು ಹೋಗುವವರು ವ್ಯರ್ಥವಾಗಿ ನಂಬಿದವರಾಗಿದ್ದಾರೆ (ಮಾರ್ಕ 4:16-17 ಮತ್ತು ವ್ಯಾಖ್ಯಾನ ನೋಡಿರಿ).

ಲೂಕ 21:18ರ ಪ್ರಕಾರವಾಗಿ ಇದೇ ಸಂದರ್ಭದಲ್ಲಿ ಯೇಸು ತನ್ನ ಶಿಷ್ಯರಿಗೆ "ನಿಮ್ಮ ತಲೆಕೂದಲುಗಳಲ್ಲಿ ಒಂದಾದರೂ ನಾಶವಾಗುವದಿಲ್ಲ" ಯೇಸು ತನ್ನ ಹಿಂಬಾಲಕರು ಸಾಯುವದಿಲ್ಲ ಎಂದು ಹೇಳಲಿಲ್ಲ. ವಾಸ್ತವದಲ್ಲಿ ಯೊಹಾನನನ್ನು ಹೊರತು ಪಡಿಸಿ ಯೇಸುವಿನ ಶಿಷ್ಯರೆಲ್ಲರು ಕ್ರೂರವಾಗಿ ಮರಣಕ್ಕೆ ಒಪ್ಪಿಸಲ್ಪಟ್ಟರು ಮತ್ತು. ಅಂದಿನಿಂದ ಲೆಕ್ಕವಿಲ್ಲದಷ್ಟು ಕ್ರೈಸ್ತರು ಮರಣಕ್ಕೆ ಒಪ್ಪಿಸಲ್ಪಟ್ಟಿದ್ದಾರೆ. ಯೇಸುವಿನ ಆ ಮಾತುಗಳ ಅರ್ಥವೇನೆಂದರೆ, ಪರಲೋಕದಲ್ಲಿನ ನಮ್ಮ ಮುಂದಿನ ಜೀವನದಲ್ಲಿ, ನಮ್ಮ ಪು ನ– ರುಥ್ಥಾನಗೊಂಡ ದೇಹಗಳು ಒಂದು ಕೂದಲವೂ ಕಳೆದುಹೋಗದೆ ಪರಿಪೂರ್ಣವಾಗಿರುವವು ಮನುಷ್ಯರು ಈ ಲೋಕದಲ್ಲಿ ನಮ್ಮ ದೇಹಗಳನ್ನು ಕೊಲ್ಲಬಹುದು, ಆದರೆ ಮುಂದಿನ ಕಾಲದಲ್ಲಿ ದೇವರು ನಮ್ಮ ಆತ್ಮೀಕ ದೇಹಗಳನ್ನು ಸಂರಕ್ಷಿಸುವವನು (ಮತ್ತಾಯ 10:28-31 ನೋಡಿರಿ).

## ಹಾಳು ಮಾಡುವ ಅಸಹ್ಯ ವಸ್ತುವು (13:14-23)

(ಮತ್ತಾಯ 24:15-28, ಲೂಕ 21:20-24)

**14** ಈ ವಚನದಲ್ಲಿ ಯೇಸು ಪ್ರಸ್ತಾಪಿಸುವ ಹಾಳುಮಾಡುವ [91] ಅಸಹ್ಯವಸ್ತುವು ಕ್ರಿ.ಶ 70.ರಲ್ಲಿ ರೋಮಾಯ ಸೈನ್ಯದಿಂದ ಯೆರೂಸಲೇಮಿನಲ್ಲಿನ ಯೆಹೂದ್ಯ ದೇವಾಲಯವನ್ನು ನಾಶಮಾಡುವದರ ಕುರಿತಾಗಿದೆ (ಲೂಕ 21:20 ನೋಡಿರಿ). ಕೆಲವು ಇತಿಹಾಸಕಾರರ ಪ್ರಕಾರವಾಗಿ ಯೆಹೂದ್ಯ ಮತಾಭಿಮಾನಿಗಳು ಸಹ ರೋಮಾಯರ ವಿರುದ್ಧ ಕ್ಲುಪ್ತ ಕಾಲದವರೆಗೆ ದೇವಾಲಯವನ್ನು ಆಕ್ರಮಿಸಿಕೊಂಡು ಅದರೊಳಗೆ ಪ್ರಾವಿತ್ರಕ್ಕೆ ಭಂಗ ತಂದರು ಹೇಗೂ, ಯೇಸು ತನ್ನ ಹಿಂಬಾಲಕರಿಗೆ ಕೊಡಲಿಚ್ಚಿಸಿದ ಮುಖ್ಯ ಎಚ್ಚರಿಕೆಯೇನೆಂದರೆ ಅವರು ರೋಮಾಯರಸೈನ್ಯವು ಯೆರೂಸಲೇಮ ನೆಡೆಗೆ ಬರುವದನ್ನು ನೋಡುವಾಗ ಅಲ್ಲಿಂದ ಓಡಿಹೋಗಬೇಕು. ಯೂದಾಯದಲ್ಲಿ ರುವವರು[92] ಗುಡ್ಡಗಳಿಗೆ ಓಡಿಹೋಗಲಿ. ಕೆಲವು ವೇಳೆ ದೇವರು ನಮ್ಮನ್ನು ನಿಂತು ಅಪಾಯವನ್ನು ಎದುರಿಸಲು ಕರೆಯುತ್ತಾನೆ. ಆದರೆ ಇನ್ನು ಕೆಲವು ಸಮಯಗಳಲ್ಲಿ ಓಡಿಹೋಗುವಂತೆ ನಮಗೆ ಹೇಳುತ್ತಾನೆ. ಪ್ರತಿ ಪರಿಸ್ಥಿತಿಯಲ್ಲಿಯೂ ನಾವು ದೇವರ ಚಿತ್ತವನ್ನು ಹುಡುಕಬೇಕು. ಅಪಾಯದಿಂದ ತಪ್ಪಿಸಿಕೊಂಡು ಓಡುವದರಲ್ಲಿ ಯಾವ ತಪ್ಪಿರುವದಿಲ್ಲ ಆದರೆ ಕರ್ತವ್ಯದಿಂದಲ್ಲ.

**15-16** ಈ ಕ್ರೈಸ್ತರು ತಡಮಾಡದೆ ಯೆರೂಸಲೇಮಿನಿಂದ ಓಡಿಹೋಗಬೇಕಾಗಿತ್ತು. ಒಂದು ವೇಳೆ ಅವರು ಮನೆಯ ಮಾಳಿಗೆಯ ಮೇಲಿರುವದಾದರೆ ಅವರು ಅಲ್ಲಿಂದ ಕೆಳಗಿಳಿದು ಗುಡ್ಡಗಳಿಗೆ ಓಡಿಹೋಗಬೇಕಿತ್ತು ಆಗ ಅವರ ಸ್ವತ್ತುಗಳನ್ನು ಕೂಡಿಸಿಕೊಳ್ಳಲು ಸಮಯವಿರುವದಿಲ್ಲ.

**17-18** ಆ ಸಮಯಗಳಲ್ಲಿ ವಿಶೇಷವಾಗಿ ಗರ್ಭಿಣಿ ಮತ್ತು ಚಿಕ್ಕಮಕ್ಕಳಿರುವ ಸ್ತ್ರೀಯರಿಗೂ ಬಹಳ ಕಠಿಣವಾಗಿರುತ್ತದೆ. ಅವರು ಶೀಘ್ರವಾಗಿ ಓಡಿಹೋಗಲಾಗದೆ ರೋಮಾಯರು ಅವರನ್ನು ಹಿಡಿದು ಕೊಲ್ಲುವರು (ಲೂಕ 23:28-29).

ಕ್ರೈಸ್ತರು ಸಹ ಈ ಭಯಂಕರ ಸಮಯವು ಚಳಿಗಾಲದಲ್ಲಿ ಸಂಭವಿಸದಂತೆ ಪ್ರಾರ್ಥಿಸಲಿ. ಚಳಿಗಾಲದ ವೇಳೆ ಇಸ್ರಾಯೇಲಿನಲ್ಲಿ ಮಳೆಯಾಗುತ್ತದೆ ಮತ್ತು ನದಿಗಳು ಉಕ್ಕಿ ಹರಿಯುವವು. ಹೀಗೆ ಜನರು ಓಡಿಹೋಗುವದಕ್ಕೆ ಅಡ್ಡಿಯಾಗಬಹುದು (ನಿಜವಾಗಲೂ, ರೋಮಾಯರಿಂದ ತಪ್ಪಿಸಿಕೊಂಡು ಓಡುತ್ತಿದ್ದ ಜನರಿಗೆ ಉಕ್ಕಿಹರಿಯುತ್ತಿದ್ದ ಯೋರ್ದಾನ ನದಿಯು ಅಡ್ಡಿಯಾಯಿತು. ಮತ್ತಾಯ ೨೪:೨೦ಕ್ಕನುಸಾರವಾಗಿ ಅವರ ಪಲಾಯನವು ಸಬ್ಬತ್ ದಿನದಲ್ಲಿ ಜರುಗಬಾರದೆಂದು ಸಹ ಅವರು ಪ್ರಾರ್ಥಿಸಬೇಕು. ಸಬ್ಬತದಿನದ ಅನೇಕ ನಿಯಮಗಳು ಪಲಾಯನವನ್ನು ಕಷ್ಟಕರವಾಗಿಸುತ್ತವೆ. ಉದಾಹರಣೆಗೆ ಯೆಹೂದ್ಯಧರ್ಮಶಾಸ್ತ್ರದ ಪ್ರಕಾರ ಸಬ್ಬತ್ ದಿನದಲ್ಲಿ ಒಬ್ಬನು ಕೇವಲ ಮೂರು ಮೈಲು ಮಾತ್ರವೇ ಪ್ರಯಾಣಿಸಬಹುದಾಗಿತ್ತು (ಅ.ಕೃತ್ಯ 1:12).

**19** ಯೆರುಸಲೇಮಿನ ನಾಶನವು ಜಗತ್ತಿನ ಇತಿಹಾಸದಲ್ಲಿ ಇನ್ನಾವದಕ್ಕಿಂತಲೂ ಬಹು ಘೋರವಾದವೇದನಾತೀತ ಸಮಯವಾಗಿತ್ತು. ಯೆಹೂದ್ಯರು ರೋಮಾಯರಿಂದ ಹತರಾದದ್ದನ್ನು ಯೆಹೂದ್ಯ ಇತಿಹಾಸಕಾರನಾದ ಜೋಸೇಫಸನು ಪೂರ್ಣವಾಗಿ ಬಣ್ಣಿಸುತ್ತಾನೆ. ರೋಮಾಯರು ನಂಬಲಾಗದಂಥಹ ಕ್ರೂರಕೃತ್ಯಗಳನ್ನು ನಡೆಸಿದರು, ಖಡ್ಗಕ್ಕೆ ತಪ್ಪಿಸಿಕೊಂಡ ಯೆಹೂದ್ಯರು ಕ್ಷಾಮ ಮತ್ತು ವಿನಾಶಗಳಿಂದ ಸತ್ತರು ಅಥವಾ ಗುಲಾಮರಾಗಿ ಮಾಡಲ್ಪಟ್ಟರು (ಲೂಕ 21:24). ಒಂದು ಮಿಲಿಯನಗಿಂತಲೂ ಹೆಚ್ಚು ಯೆಹೂದ್ಯರು ಕೊಲ್ಲಲ್ಪಟ್ಟರು. ಒಬ್ಬನೇ ಒಬ್ಬ ಯೆಹೂದ್ಯನಾದರೂ ಪಟ್ಟಣದಲ್ಲಿ ಸಜೀವವಾಗಿ ಉಳಿಯಲಿಲ್ಲ. ಲೂಕ 21:24 ರಲ್ಲಿ ಯೇಸು "ಅನ್ಯ ದೇಶದವರ ಸಮಯಗಳು ಪೂರೈಸುವ [93]. ತನಕ ಯೆರೂಸಲೇಮ್ ಪಟ್ಟಣವು ಅನ್ಯದೇಶದವರಿಂದ ತುಳಿದಾಡಲ್ಪಡುತ್ತಿರುವದು" ಎಂದು ಹೇಳುತ್ತಾನೆ ತನ್ನ ಸ್ವಂತ ಮಗನಾದ ಯೇಸುವನ್ನು ತಿರಸ್ಕರಿಸಿ ಮರಣಕ್ಕೆ ಒಪ್ಪಿಸಿದ್ದಕ್ಕಾಗಿ ನಂಬಿಕೆಯಿಲ್ಲದ ಯೊಹೂದ್ಯ ಜನಾಂಗದ ಮೇಲೆ ದೇವರು ಬರಮಾಡಿದ ಆತನ ನ್ಯಾಯತೀರ್ಪು ಇದಾಗಿದೆ (ಲೂಕ 21:22-24).

**20** ಯೆರೂಸಲೇಮಿನಲ್ಲಿದ್ದ ಹೆಚ್ಚಿನ ಪಾಲು ಕ್ರೈಸ್ತರು ರೋಮಾಯರು ಬರುವದಕ್ಕೆ ಎರಡು ವರ್ಷಗಳಿಗೆ ಮುಂಚೆ ಕ್ರಿ.ಶ 6.8 ರಲ್ಲಿ ಪಲಾಯನಮಾಡಿದರು. ಆದರೆ ಇತರರು ರೋಮಾಯ ಸೈನ್ಯವು ಬರುವದಕ್ಕೆ ಸ್ವಲ್ಪ ಕಾಲ ಮುಂಚೆಯೇ ಪಲಾಯನ ಮಾಡಿದರು. ಗ್ರಾಮಗಳಲ್ಲಿರುವವರು ಉಪವಾಸದಿಂದ ಬಳಲಿದರು ಯಾಕೆಂದರೆ ರೋಮಾಯ ಸೈನಿಕರು ಅವರ ಪೈರು ಹಾಗು ಗದ್ದೆಗಳನ್ನು ನಾಶ ಮಾಡಿ ದೊರೆತ ಎಲ್ಲಾ ಆಹಾರವನ್ನು ತಮಗಾಗಿ ಕೊಂಡೊಯ್ದರು. ಆದರೆ ದೇವರು ತಾನು ಆದುಕೊಂಡವರಿಗೋಸ್ಕರ ಅಂದರೆ ವಿಶ್ವಾಸಿಗಳಿಗೋಸ್ಕರ ಆ ದಿನಗಳನ್ನು ಕಡಿಮೆ ಮಾಡಿದನು.

**21-23** ಯೇಸು ಪುನಃ ಮಿಥ್ಯ ಕ್ರಿಸ್ತರ ಕುರಿತು ತನ್ನ ಎಚ್ಚರಿಕೆಯನ್ನು ಪುನರುಚ್ಚರಿಸುತ್ತಾನೆ. ರೋಮಾಯ ಸೈನ್ಯವು ಯೆರೂಸಲೇಮಿನ ಮೇಲೆ ದಾಳಿಮಾಡಿದ ವೇಳೆಯಲ್ಲಿ ಕೆಲವು ಯೆಹೂದ್ಯರು ಎದ್ದು ತಮ್ಮನ್ನು ಮೆಸ್ಸೀಯನೆಂದು ಹೇಳಿಕೊಳ್ಳುತ್ತಾ ರೋಮಾಯರ ವಿರುದ್ಧ ಹೋರಾಡುವಂತೆ ಜನರಿಗೆ ಕರೆ ಕೊಟ್ಟರು. ಇಲ್ಲಿ ಯೇಸು ಪಲಾಯನ ಮಾಡುವ ಕ್ರೈಸ್ತರು ಇಂತಹ ಮಿಥ್ಯ ಕ್ರಿಸ್ತರನ್ನು ಹಿಂಬಾಲಿಸಬಾರದೆಂದು ಎಚ್ಚರಿಸುತ್ತಾನೆ. ಅವರು ತಮ್ಮ ಪಲಾಯನವನ್ನು ಮುಂದುವರಿಸಬೇಕು (ವಚನ 5-6 ನೋಡಿರಿ).

ಈ ವಚನಗಳ ಸಂದರ್ಭವು ಯೆರೂಸಲೇಮಿನ ನಾಶನಕ್ಕೆ ಸಂಬಂಧ ಪಟ್ಟವುಗಳಾಗಿದ್ದರೂ ಲೋಕದ ಅಂತ್ಯದವರೆಗೂ ಮಿಥ್ಯಕ್ರಿಸ್ತರು ಏಳುತ್ತಲಿರುವದರಿಂದ ನಾವು ಅರ್ಥಮಾಡಿಕೊಳ್ಳಬಹುದು. ವಿಶೇಷವಾಗಿ ಲೋಕದ ಅಂತ್ಯವು ಹತ್ತಿರವಾಗುತ್ತಿದ್ದಂತೆ ಸೈತಾನನಿಂದ ಕಳುಹಿಸಲ್ಪಟ್ಟ ಬಲವುಳ್ಳ ವ್ಯಕ್ತಿಗಳು ಮತ್ತು ದುಷ್ಟ ಶಕ್ತಿಗಳು ಕ್ರಿಸ್ತನನ್ನು ಮತ್ತು ಆತನ ಹಿಂಬಾಲಕರನ್ನು

ವಿರೋಧಿಸುವವು (2 ಥೆಸಲೋನಿಕ 2:1-10, 1 ಯೋಹಾನ 2:18, 4:1-3), ಪ್ರಕಟಣೆ 13:1-8,11-17 ಮತ್ತು ವ್ಯಾಖ್ಯಾನ ನೋಡಿರಿ).

ಈ ಮಿಥ್ಯ ಕ್ರಿಸ್ತರು ಸೂಚಕ ಕಾರ್ಯ ಮತ್ತು ಅಧ್ಭುತಗಳನ್ನು[94] ಸಹ ಮಾಡುವರು. ಆದರೆ ನಾವು ಮೋಸಕ್ಕೊಳಗಾಗಬಾರದು. ನಾವು ಈ ಮಿಥ್ಯಕ್ರಿಸ್ತರನ್ನು ಗುರುತಿಸುವೆವು ಯಾಕಂದರೆ ಅವರು ಕ್ರಿಸ್ತನಿಗೆ ಮಹಿಮೆಯನ್ನು ತರುವದಿಲ್ಲ ಮತ್ತು ಆತನು ದೇವಕುಮಾರ ನೆಂಬದನ್ನು ನಿರಾಕರಿಸುತ್ತಾರೆ (1 ಯೋಹಾನ 4:1-3 ಮತ್ತು ವ್ಯಾಖ್ಯಾನ ನೋಡಿರಿ). ಮಿಥ್ಯಕ್ರಿಸ್ತರು ಮತ್ತು ಮಿಥ್ಯ ಪ್ರವಾದಿಗಳು ಸಾಧ್ಯವಾದರೆ ದೇವರಾದುಕೊಂಡವರನ್ನು ಮೋಸಗೊಳಿಸಲು ಪ್ರಯತ್ನಿಸುವರು ಎಂದು ಯೇಸು ಹೇಳುತ್ತಾನೆ. ವಾಸ್ತವದಲ್ಲಿ, ಕೊನೆಯ ವರೆಗೂ ಮೋಸಗೊಳಗಾಗದೆ ಉಳಿಯುವವರು ದೇವರಾದುಕೊಂಡ ಜನರೇ ಆಗಿದ್ದಾರೆ. ಯಾರು ಆದುಕೊಂಡವರು ಮತ್ತು ಯಾರು ಆದುಕೊಂಡವರಲ್ಲ ಎಂದು ದೇವರು ಮಾತ್ರವೇ ಬಲ್ಲನು. ಎಚ್ಚರವಾಗಿದ್ದು ನೋಡಿಕೊಳ್ಳಿರಿ ಎಂಬ ಎಚ್ಚರಿಕೆಗೆ ಕಿವಿಗೊಡುವವರು (ವಚನ 9,23) ಮತ್ತು ಕೊನೆಯತನಕ ನಂಬಿಗಸ್ಥರಾಗಿ ಉಳಿಯುವವರು (ವಚನ 13) ತಾವು ದೇವರಾದುಕೊಂಡವರೆಂಬದನ್ನು ನಿರೂಪಿಸುವರು. ಆದಕಾರಣ ಯೇಸು ಎಲ್ಲರಿಗೂ...ನಿಮ್ಮನ್ನು ನೋಡಿಕೊಳ್ಳಿರಿ ಎಂದು ಹೇಳುತ್ತಾ ಮತ್ತಾಯ 24:26-27ರ ಪ್ರಕಾರವಾಗಿ ಯೇಸು ಇಲ್ಲಿ ತಾನು ಮೆಸ್ಸೀಯನು ಎಂದು ಹೇಳಿಕೊಳ್ಳುವವನು ಅಡವಿಯ ಮತ್ತು ಕೋಣೆಗಳಂತಹ ವಿಶೇಷ ಸ್ಥಳಗಳಲ್ಲಿ ಕಾಣಿಸಿಕೊಂಡರೆ ಆತನು ಸುಳ್ಳು ಮೆಸ್ಸೀಯನೆಂಬದು ಖಚಿತವಾದಂತೆ ಎಂದು ಹೇಳುತ್ತಾನೆ. ಯಾಕೆಂದರೆ ನಿಜವಾದ ಮೆಸ್ಸೀಯನಾದ ಯೇಸು ಆಕಾಶದಲ್ಲಿ ಮಿಂಚಿ ಒಂದು ಕಡೆಯಿಂದ ಇನ್ನೊಂದುಕಡೆ ಹೊಳೆಯುವಂತೆ ಒಂದೇ ಸಾರಿ ಎಲ್ಲಾ ಮನುಷ್ಯರಿಗೆ ಕಾಣಿಸಿಕೊಳ್ಳುತ್ತಾನೆ. ನಂತರ ಯೇಸು "ಹೆಣವಿರುವಲ್ಲಿ ಹದ್ದುಗಳು [95] ಸೇರುವವು " ಎಂದು ಹೇಳುತ್ತಾನೆ (ಮತ್ತಾಯ 24:28). ಹೆಣವು ಯೆಹೂದ್ಯ ಜನಾಂಗ ಮತ್ತು ಹದ್ದುಗಳು ರೋಮಾಯರಾಗಿದ್ದಾರೆ [96] ಯೆರೂಸಲೇಮಿನ ಮತ್ತು ಯೂದಾಯದ ನಾಶನ ಇಂತಹದಾಗಿತ್ತು.

## ಲೋಕದ ಅಂತ್ಯ (13:24-27)

(ಮತ್ತಾಯ 24:29-31, ಲೂಕ 21:25-28)

**24-25** ಯೆರೂಸಲೇಮಿನ ನಾಶನದ ಬಗ್ಗೆ ಮಾತನಾಡಿದ ಬಳಿಕ ಯೇಸು ಆ ಸಂಕಟಕಾಲದ ನಂತರದ ದಿನಗಳಲ್ಲಿ ಸಂಭವಿಸುವ ಲೋಕಾಂತ್ಯವನ್ನು ಎಣಿಸಲು ಪ್ರಾರಂಭಿಸುತ್ತಾನೆ. ಮತ್ತಾಯ 24:29ರ ಪ್ರಕಾರವಾಗಿ ಲೋಕಾಂತ್ಯವು ಆ ಸಂಕಟ ದಿನಗಳ ನಂತರ ಅಂದರೆ ಯೆರೂಸಲೇಮಿನ ನಾಶನದ ನಂತರ ಶೀಘ್ರವೇ ಸಂಭವಿಸುತ್ತದೆ. ಇದನ್ನು ಅರ್ಥಮಾಡಿಕೊಳ್ಳುವದು ಕಷ್ಟಕರವಾಗಿದೆ. ಯೆರೂಸಲೇಮಿನ ನಾಶನದ ನಂತರ 1900 ವರ್ಷಗಳು ಕಳೆದಿವೆ ಆದರೆ ಲೋಕಾಂತ್ಯವು ಇನ್ನೂ ಬರಲಿಲ್ಲ. ಆದರೆ ದೇವರದೃಷ್ಟಿಯಲ್ಲಿ 1900 ವರ್ಷಗಳು ಒಂದು ಕ್ಷಣದಂತಿರುತ್ತವೆ (2 ಪೇತ್ರ 3:8) ಸ್ವತಃ ಯೇಸುವಿಗೆ ಲೋಕಾಂತ್ಯವು ಯಾವಾಗ ಸಂಭವಿಸುವದು ಎಂಬದು ಗೊತ್ತಿಲ್ಲವೆಂದು ಆತನೇ ಹೇಳಿದನು (ವಚನ 32).

ಲೋಕಾಂತ್ಯವು ಹೇಗಿರುವದೆಂಬದನ್ನು ಬಣ್ಣಿಸಲು ಯೇಸು ಯೇಶಾಯ 13:10 ಮತ್ತು 34:4 ನ್ನು ಉಲ್ಲೇಖಿಸುತ್ತಾನೆ. ಲೂಕ 21:25-26ರ ಪ್ರಕಾರವಾಗಿ ಇದೇ ಸಂದರ್ಭದಲ್ಲಿ ಯೇಸು ಹೀಗೆ ಹೇಳಿದನು. "ಸೂರ್ಯ ಚಂದ್ರ ನಕ್ಷತ್ರಗಳಲ್ಲಿ ಸೂಚನೆಗಳು ತೋರುವವು . ಭೂಮಿಯ ಮೇಲೆ ಸಮುದ್ರದ ಮತ್ತು ತೆರೆಗಳ ಘೋಷದ ನಿಮಿತ್ತವಾಗಿ ಜನಗಳಿಗೆ ದಿಕ್ಕು ಕಾಣದೆ ಸಂಕಟವು ಉಂಟಾಗುವದು. ಆಕಾಶದ ಶಕ್ತಿಗಳು ಕದಲುವದರಿಂದ ಮನುಷ್ಯರು ಭಯಹಿಡಿದವರಾಗಿ ಲೋಕಕ್ಕೆ ಏನು ಬರುವದೋ ಎಂದು ನೋಡುತ್ತಾ ಪ್ರಾಣಹೋದಂತಾಗುವದು" (2 ಪೇತ್ರ 3:10)

**26-27** ಆಗ ಮನುಷ್ಯ ಕುಮಾರನು ಬಲದಿಂದಲೂ ಬಹು ಮಹಿಮೆಯಿಂದಲೂ ಮೇಘದಲ್ಲಿ ಬರುವದನ್ನು ಕಾಣುವರು. ಹಳೆ ಒಡಂಬಡಿಕೆಯ ಪ್ರವಾದಿಯಾದ ದಾನಿಯೇಲನು ಈ ಘಟನೆಯ ಕುರಿತು ದರ್ಶನವನ್ನು ಕಂಡು ಹೀಗೆ ಬರೆಯುತ್ತಾನೆ: "ನಾನು ಕಂಡ ರಾತ್ರಿಯ ದರ್ಶನದಲ್ಲಿ, ಇಗೋ ಮನಷ್ಯಕುಮಾರನಂತಿರುವವನು ಆಕಾಶದ ಮೇಘಗಳೊಂದಿಗೆ ಬಂದನು" (ದಾನಿಯೇಲ 7:13) ಜಗತ್ತು ಸೃಷ್ಟಿಸಲ್ಪಟ್ಟ ದಿನದಿಂದ ಎಲ್ಲಾ ಇತಿಹಾಸದಲ್ಲಿ ಶಾಶ್ವತವಾದ ಮಹತ್ವವನ್ನು ಹೊಂದಿರುವ ಎರಡು ಘಟನೆಗಳು ಮಾತ್ರವೇ ಇರುತ್ತವೆ. ಆ ಎರಡು ಘಟನೆಗಳು ಬಹು ಶ್ರೇಷ್ಠವು ಮತ್ತು ಇತಿಹಾಸದಲ್ಲಿನ ಎಲ್ಲಾ ಘಟನೆಗಳಿಗಿಂತಲೂ ಹೆಚ್ಚು ಪ್ರಾಮುಖ್ಯವಾಗಿದೆ ಇತರ ಎಲ್ಲಾ ಘಟನೆ, ಪ್ರತಿಯೊಬ್ಬ ಅರಸ., ಎಲ್ಲಾ ಯುದ್ಧಗಳು ಮತ್ತು ಪ್ರತಿಯೊಂದು ಸಾಮ್ರಾಜ್ಯವು ನೆನಪಿನಿಂದ ಅಳಿಯವವು . ಕೇವಲ ಎರಡು ಸಂಗತಿಗಳು ಮಾತ್ರವೇ ಜ್ಞಾಪಕದಲ್ಲಿ ಉಳಿಯುವವು . ಮೊದಲನೆಯದಾಗಿ, ಕರ್ತನಾದ ಯೇಸು ಕ್ರಿಸ್ತನು ಮೊದಲನೆಯ ಸಾರಿ ಭೂಮಿಗೆ ಬಂದದ್ದು. ಎರಡನೆಯದು, ಮನುಷ್ಯಕುಮಾರನಾದ ಯೇಸು ಕ್ರಿಸ್ತನು ತಿರಿಗಿ ಬಲದಿಂದಲೂ ಬಹು ಮಹಿಮೆಯಿಂದಲೂ ಮೇಘದಲ್ಲಿ ಬರುವನು (ಮತ್ತಾಯ 24:30) ಯೇಸು ತನ್ನ ಎರಡನೆಯ ಬರೋಣದ ಸಮಯದಲ್ಲಿ ತಾನು ಆದುಕೊಂಡವರನ್ನು ಭೂಮಿಯ ಕಟ್ಟಕಡೆಯಿಂದ ಆಕಾಶದ ಕಟ್ಟಕಡೆಯವರೆಗೆ ನಾಲ್ಕು ದಿಕ್ಕುಗಳಿಂದ ಒಟ್ಟುಗೂಡಿಸುವನು (ವಚನ 27) ಆತನು ನಮ್ಮನ್ನು ತನ್ನ ನಿತ್ಯ ರಾಜ್ಯದೊಳಗೆ ಒಟ್ಟುಗೂಡಿಸುವನು, ಅಲ್ಲಿ ಸದಾಕಾಲವೂ ಆತನೊಂದಿಗೆ ಒಟ್ಟಾಗಿ ಜೀವಿಸುವೆವು (1 ಥೆಸಲೋನಿಕ 4:16-18). ಕ್ರಿಸ್ತನು

ಬರುವಾಗ ಇತರ ಎಲ್ಲಾ ಮನುಷ್ಯರು ಭಯಹಿಡಿದವರಾಗಿ ಪ್ರಾಣಹೋದಂತಾಗುವರು (ಲೂಕ 21:26) ಆಗ ಭೂಲೋಕದಲ್ಲಿರುವ ಎಲ್ಲಾ ಕುಲದವರು ಎದೆಬಡೆದುಕೊಳ್ಳುವರು (ಮತ್ತಾಯ 24:30) ರಕ್ಷಕನಾಗಿ ಬಂದ ಯೇಸುವನ್ನು ತಿರಸ್ಕರಿಸಿರುವವರೆಲ್ಲರೂ ಆತನನ್ನು ಅವರ ನ್ಯಾಯಾಧಿಪತಿಯಾಗಿ ಎದುರುಗೊಳ್ಳುವರು (ಯೋಹಾನ 5:22) ಆದರೆ ಯೇಸುವಿನಲ್ಲಿ ನಂಬಿಕೆಯಿಟ್ಟವರಿಗೆ ಭಯವಿರುವದಿಲ್ಲ. ಕಾರಣ ಯೇಸು "ಇವು ಸಂಭವಿಸುವದಕ್ಕೆ ತೊಡಗುವಾಗ ಮೇಲಕ್ಕೆ ನೋಡಿರಿ, ನಿಮ್ಮ ತಲೆಎತ್ತಿರಿ, ನಿಮ್ಮ ಬಿಡುಗಡೆಯು ಸಮೀಪವಾಗಿದೆ" ಎಂದು ಹೇಳಿದನು (ಲೂಕ 21:28).

## ಯೆರೂಸಲೇಮಿನ ನಾಶನ (13:28-31)

(ಮತ್ತಾಯ 24:32-35, ಲೂಕ 21:29-33)

**28-29** 5-23 ವಚನಗಳಲ್ಲಿ ಯೆರೂಸಲೇಮಿನ ನಾಶನಕ್ಕೆ ಮುಂಚೆ ಸಂಭವಿಸುವ ಅನೇಕ ಘಟನೆಗಳನ್ನು ವರ್ಣಿಸುತ್ತಾನೆ.ಅಂತ್ಯವು ಹತ್ತಿರವಾಗಿದೆ ಎಂಬುದಕ್ಕೆ ಇವು ಗಳು ಗುರುತಾಗಿದ್ದಾವೆ. ಅಂಜೂರ ಮರದಲ್ಲಿ ಚಿಗುರಿದ ಎಲೆಗಳು ಬೇಸಿಗೆ ಬಂತೆಂಬುದಕ್ಕೆ ಗುರುತಾಗಿರುವಂತಯೇ 5-23 ರಲ್ಲಿ ಬಣ್ಣಿಸಿರುವ ಘಟನೆಗಳು ಯೆರೂಸಲೇಮ ನಾಶವಾಗುವದರಲ್ಲಿದೆ ಎಂಬುದಕ್ಕೆ ಸಂಕೇತಗಳಾಗಿವೆ.

**30** ಈ ಎಲ್ಲಾ ಸಂಗತಿಗಳು (ಅಂದರೆ ಮೇಲೆ ಹೇಳಲ್ಪಟ್ಟ ಸೂಚನೆಗಳು ಹಾಗು ಯೆರೂಸಲೇಮಿನ ನಾಶನವೂ ಸೇರಿದಂತೆ ) ತನ್ನ ಜನಾಂಗದ ಜೀವಿತ ಕಾಲದೊಳಗೆ ಸಂಭವಿಸುವವು ಎಂದು ಯೇಸು ಪ್ರವಾದಿಸಿದನು. ಈ ಪ್ರವಾದನೆಯ ಕ್ರಿ.ಶಕ. 70ರಲ್ಲಿ ನೆರವೇರಿತು.

**31** ನನ್ನ ಮಾತುಗಳು ಅಳಿದು ಹೋಗುವದೇಯಿಲ್ಲ. ಯೇಸುವಿನ ಮಾತುಗಳು, ಪ್ರವಾದನೆಗಳು, ಆತನ ಬೋಧನೆಗಳು ಸಂಪೂರ್ಣ ಖಚಿತವಾಗಿವೆ. ಅವು ಭೂಮಿ ಮತ್ತು ಆಕಾಶಕ್ಕಿಂತಲೂ ಹೆಚ್ಚು ಖಚಿತ ಮತ್ತು ಸ್ಥಿರವಾಗಿರುತ್ತವೆ. ನಾವು ದೊಡ್ಡ ಮರಗಳನ್ನು ಬೃಹತ್ ಪರ್ವತಗಳನ್ನು ನೋಡುವಾಗ ನಾವು "ಇವು ಗಳು ಸ್ಥಿರವಾದವು ಗಳು, ಅಳಿದುಹೋಗವದಿಲ್ಲ" ಎಂದು ಯೋಚಿಸುತ್ತೇವೆ. ನಾವು ಸೂರ್ಯ ಚಂದ್ರ ನಕ್ಷತ್ರಗಳನ್ನು ನೋಡುವಾಗ "ಈ ಸಂಗತಿಗಳು ಸದಾಕಾಲ ಇರುವವು" ಅಂದುಕೊಳ್ಳುವೆವು. ಆದರೆ ಅವು ಗಳು ಒಂದು ದಿನ ಅಳಿದು ಹೋಗುವವು. ಶಾಶ್ವತವಾಗಿ ಉಳಿಯುವಂತ ಸಂಗತಿಗಳು ಮಾತ್ರವೇ ಜ್ಞಾಪಕವಿರಲಿ, ಯೇಸು ಸ್ವತಃ ದೇವರ ವಾಕ್ಯವಾಗಿದ್ದು ಆದಿಯಲ್ಲಿ ದೇವರ ಬಳಿಯಲ್ಲಿದ್ದನು....ದೇವರಾಗಿದ್ದನು (ಯೋಹಾನ 1:1), ಮತ್ತು ಆತನ ರಾಜ್ಯಕ್ಕೆ ಎಂದಿಗೂ ಅಂತ್ಯವಿಲ್ಲ.

## ದಿನ ಮತ್ತು ಗಳಿಗೆ ನಿಗೂಡವಾಗಿವೆ (13:32-37)

ತಿಳಿಯದ ದಿನ ಮತ್ತು ಸಮಯ (13:32-37)

**32** ಆ ದಿನದ ವಿಷಯವಾಗಲಿ, ಆ ಗಳಿಗೆಯ ವಿಷಯವಾಗಲಿ ಯಾರಿಗೂ ತಿಳಿಯದು, ಅಂದರೆ ಕ್ರಿಸ್ತನು ಯಾವಾಗ ತಿರಿಗಿ ಬರುತ್ತಾನೆಂಬದು ತಂದೆಯ ಹೊರತು ಮತ್ತಾರಿಗೂ ತಿಳಿಯುವದಿಲ್ಲ. ಸ್ವತಃ ಕ್ರಿಸ್ತನಿಗೂ ಗೊತ್ತಿರುವದಿಲ್ಲ. ಆದಕಾರಣ ನಾವು ಯಾವಾಗಲೂ ಸಿದ್ಧರಾಗಿರಬೇಕು. ಯೇಸು ಈ ದಿನವೇ ಬರಬಹುದು ಇಲ್ಲವೇ ನಾಳೆಯೇ ಬರಬಹುದು, ಆತನು ಬಂದಾಗ ನಾವು ನಿದ್ರಿಸುತ್ತಿರುವದನ್ನು ಕಾಣುತ್ತಾನೋ? (ವ.36) ಆತನು ಬಂದಾಗ ನಮ್ಮನ್ನು ನಂಬಿಗಸ್ಥರನ್ನಾಗಿ ಕಾಣುತ್ತಾನೋ? ಅನೇಕ ಕ್ರೈಸ್ತರು ಕ್ರಿಸ್ತನು ಯಾವಾಗ ಬರುತ್ತಾನೆ ಎಂದು ಮುಂತಿಳಿಸುವ ಪ್ರಯತ್ನದಲ್ಲಿಯೇ ಹೆಚ್ಚು ಕಾಲ ಕಳೆಯುತ್ತಾರೆ. ಇದು ಹುಚ್ಚುತನ. ಅವರು ಕ್ರಿಸ್ತನು ಯಾವಾಗ ತಿರುಗಿ ಬರುತ್ತಾನೆಂದು ಚಿಂತನೆಗೊಳ್ಳು–ವದಕ್ಕಿಂತಲೂ ಬದಲಾಗಿ ಆತನು ಅವರಿಗೆ ಕೊಟ್ಟ ಕಾರ್ಯವನ್ನು ಮಾಡುವದರಲ್ಲಿ ಹೆಚ್ಚು ಸಮಯ ಕಳೆದರೆ ಅವರಿಗೆ ಒಳ್ಳೆಯದು.

**33-37** ಕ್ರಿಸ್ತನು ಬೇರೊಂದು ದೇಶಕ್ಕೆ ಹೋದ ಮನುಷ್ಯರಂತಿರುವನು (ವ.34). ಕ್ರಿಸ್ತನು ತನ್ನ ಮನೆಯನ್ನು ಅಂದರೆ ತನ್ನ ಸಭೆಯನ್ನು ನಮ್ಮ ಕೈಗಳಲ್ಲಿ ಕೊಟ್ಟು ಪರಲೋಕಕ್ಕೆ ಹೋದನು. ಆತನು ನಮ್ಮಲ್ಲಿ ಪ್ರತಿಯೊಬ್ಬರಿಗೂ ಮಾಡಬೇಕಾದ ಒಂದು ವಿಶೇಷ ಕೆಲಸವನ್ನು ಕೊಟ್ಟಿದ್ದಾನೆ ಆದರೆ ಇಷ್ಟು ಮಾತ್ರವಲ್ಲ ನಮ್ಮೆಲ್ಲರಿಗೂ ಆತನು ಪ್ರಾರ್ಥಿಸುವ, ಎಚ್ಚರಿಕೆಯಿಂದಿರುವ, ಮತ್ತು ಸಾಕ್ಷ್ಯಯನ್ನು ನೀಡುವ ಗುರಿಗಳನ್ನು ಸಹ ಕೊಟ್ಟಿರುತ್ತಾನೆ. ಆತನು ಕಳ್ಳನ ಹಾಗೆ ಭೂಮಿಗೆ ಬರುವನು. ಅಂದರೆ ಆತನ ಹೊರತು ಮತ್ತಾರಿಗೂ ತಿಳಿಯದು. (ಮತ್ತಾಯ 24:42-44, ಲೂಕ 12:35-38, 1 ಥೆಸಲೋನಿಕ 5:1-2 ನೋಡಿರಿ) ತಾನು ಬಂದಾಗ ನಾವು ಏನು ಮಾಡುತ್ತಿರುವದನ್ನು ಕಾಣುತ್ತಾನೆ ನಮ್ಮಷ್ಟಕ್ಕೆ ನಾವೇ "ಆತನು ಬೇಗನೆ ಬರುವದಿಲ್ಲ ನನಗೆ ಸಿದ್ಧನಾಗಲು ಸಮಯವು ಂಟು, ನಾನಿನ್ನು ಕಾಲ ನಿದ್ರಿಸುತ್ತೇನೆ, ಆ ವ್ಯಕ್ತಿಗೆ ನಾನು ಬೇರೆ ಸಮಯದಲ್ಲಿ ಸಾಕ್ಷಿ ನೀಡುತ್ತೇನೆ, ನಾನು ಒಳ್ಳೆಯ ಕಾರ್ಯವನ್ನು ಇನ್ನಾವದಿನದಲ್ಲಿಯಾದರೂ ಮಾಡುತ್ತೇನೆ, ನಾನು ಆ ಪಾಪವನ್ನು ನಾಳೆ ಬಿಟ್ಟು ಬಿಡುತ್ತೇನೆ" ಎಂದು ಹೇಳಿಕೊಳ್ಳದಿರೋಣ ಅಂಥಹ ಭಯಂಕರ ತಪ್ಪನ್ನು ಮಾಡದಿರೋಣ, ಯೇಸು ಯಾವ ಗಳಿಗೆಯಲ್ಲಾದರೂ ಬರಬಹುದು. ಮತ್ತು ಆತನು ಬಂದಾಗ ನಮ್ಮನ್ನು ಸಿದ್ಧರಾಗಿ ಆತನ ಚಿತ್ತವನ್ನು ಮಾಡುತ್ತಿರುವವರಾಗಿ ಕಾಣದೇ ಹೋದರೆ ನಮ್ಮನ್ನು ಹೊರಗೆ ಬೀಸಾಡುವನು, (ಮತ್ತಾಯ 24:45-51, ಲೂಕ 21:34-36) ಎಚ್ಚರವಾಗಿರುವದು (ವ.35) ಎಂದರೆ

ಎಲ್ಲಾ ಸಮಯಗಳಲ್ಲಿ ಕ್ರಿಸ್ತನಲ್ಲಿ ನೆಲೆಗೊಂಡಿರುವದೆಂದರ್ಥ ಕ್ರಿಸ್ತನು ನಾಳೆಯೇ ಬರಲಿದ್ದಾನೇನೋ ಎಂಬಂತೆ ನಾವು ಪ್ರತಿ ದಿನವನ್ನು ಜೀವಿಸುವ ಅಗತ್ಯವಿದೆ. ನಾವು ಈ ಕೆಳಗಿನ ಪ್ರಶ್ನೆಗಳನ್ನು ಕೇಳಿಕೊಳ್ಳುವದರ ಮೂಲಕ ನಮ್ಮನ್ನು ಪರೀಕ್ಷಿಸಿಕೊಳ್ಳುವದು ಅಗತ್ಯ. ಒಂದು ವೇಳೆ ಪರಲೋಕದಿಂದ ಒಬ್ಬ ದೇವದೂತನು ಬಂದು ಕ್ರಿಸ್ತನು ಮುಂದಿನ ತಿಂಗಳು ಬರುತ್ತಾನೆಂದು ಈ ದಿನ ನಮಗೆ ಹೇಳುವದಾದರೆ ನಾವು ನಮ್ಮ ಜೀವಿತಗಳನ್ನು ಯಾವದೇ ರೀತಿಯಲ್ಲಿ ವ್ಯತ್ಯಾಸವಾಗಿ ಜೀವಿಸುತ್ತೇವೋ? ಒಂದು ವೇಳೆ ಉತ್ತರವು "ಹೌದು" ಎನ್ನುವದಾದರೆ ನಾವು ಎಚ್ಚರವಾಗಿಲ್ಲ, ಸಿದ್ಧರಾಗಿಲ್ಲ"ನಾನು ನಿಮಗೆ, ಪ್ರತಿಯೊಬ್ಬರಿಗೆ ಹೇಳುವದೇನೆಂದರೆ: ಎಚ್ಚರವಾಗಿರ್ರಿ".

---

## ಅಧ್ಯಾಯ - 14

### ಯೇಸು ಬೇಥಾನ್ಯದಲ್ಲಿ ಅಭಿಷೇಕ ಹೊಂದಿದ್ದು (14:1-11)

(ಮತ್ತಾಯ 26:1-16, ಲೂಕ 22:1-6, ಯೋಹಾನ 12:1-8)

**1-2** ಯೇಸು ಪಸ್ಕ ಹಬ್ಬಕ್ಕೆ[97] ಮುಂಚೆ ಯೆರೂಸಲೇಮಿನಲ್ಲಿದ್ದನು. ಯೆಹೂದ್ಯರು ಐಗುಪ್ತ್ಯದಿಂದ ವಿಮೋಚನೆ ಹೊಂದಿದ್ದರ ಜ್ಞಾಪಕಾರ್ಥವಾಗಿ ಪ್ರತಿ ವರ್ಷವು ಪಸ್ಕ ಹಬ್ಬವು ಆಚರಿಸಲ್ಪಡುತ್ತಿತ್ತು. ಫಸ್ಕ ಹಬ್ಬದ ಮುಂಚಿನ ದಿನ ಹುಳಿಯಿಲ್ಲದ ರೊಟ್ಟಿಯ ಹಬ್ಬವು ಪ್ರಾರಂಭವಾಗಿ ಒಂದು ವಾರದವರೆಗೆ ಇರುತ್ತಿತ್ತು (ವಿ.ಕಾಂಡ 12:15-20 ಧರ್ಮೋಪದೇಶ ಕಾಂಡ 16:1-8) ಕೆಲವು ವೇಳೆಯಲ್ಲಿ ಫಸ್ಕ ಹಬ್ಬವು ಹುಳಿಯಿಲ್ಲದ ರೊಟ್ಟಿಯ ಹಬ್ಬದ ಮೊದಲನೆಯ ದಿನ ಎಂದು ಕರೆಯಲ್ಪಟ್ಟಿದೆ (ವ.12), ಆದರೆ ಇದು ವಾಸ್ತವದಲ್ಲಿ ಬೇರೆ ದಿನವಾಗಿತ್ತು. ಮತ್ತಾಯ 26:3ರ ಪ್ರಕಾರವಾಗಿ ಪ್ರಧಾನ ಯಾಜಕರೂ ಮತ್ತು ಶಾಸ್ತ್ರಿಗಳು ಯೆಹೂದ್ಯ ಮಹಾ ಯಾಜಕರೂ ಕಾಯಫನನ್ನು ಬೇಟಿಯಾದರು, ಮತ್ತು ಯೋಹಾನ 11:47-53ರ ಪ್ರಕಾರವಾಗಿ ಕಾಯಫನು ಯೇಸುವಿನ ವಿರುದ್ದದ ಹೊಂಚಿನಲ್ಲಿ ಪ್ರಧಾನ ಸೂತ್ರದಾರನಾಗಿದ್ದನು. ಫಸ್ಕದ ಮತ್ತು ಹುಳಿಯಿಲ್ಲದ ರೊಟ್ಟಿಯ ಹಬ್ಬದ ವೇಳೆಯಲ್ಲಿ ಯೆರೂಸಲೇಮಿನ ಸಾಮಾನ್ಯ ಜನಸಂಖ್ಯೆ 50,000 ಆಗಿದ್ದದ್ದು. 250,000ಕ್ಕೆ ಏರುತಿತ್ತು ಯಾಕೆಂದರೆ ಈ ಎಲ್ಲಾ ಯೆಹೂದ್ಯ ಯಾತ್ರಿಗಳು ಹಬ್ಬಗಳನ್ನು ಆಚರಿಸಲು ಬರುತ್ತಿದ್ದರು. ಯೆಹೂದ್ಯ ನಾಯಕರು ಆ ವೇಳೆಯಲ್ಲಿ ಯೇಸುವನ್ನು ಬಂಧಿಸಲು ಹೆದರಿದರು. ಯಾಕೆಂದರೆ ಯಾತ್ರಿಗಳಲ್ಲಿ ಅನೇಕರು ಯೇಸುವನ್ನು ಬೆಂಬಲಿಸಿದರು. ಮತ್ತು ಯೇಸು ಬಂಧಿಸಲ್ಪಟ್ಟನು ಎಂಬ ಸುದ್ದಿಯು ಅವರ ಕಿವಿಗೆ ಪಟ್ಟಣದಲ್ಲಿ ದೊಡ್ಡ ಗಲಭೆಯನ್ನುಂಟು ಮಾಡುವದು ನಿಶ್ಚಯವಾಗಿತ್ತು.

**3** ವ.3-9 ರಲ್ಲಿ ಬಣ್ಣಿಸಲ್ಪಟ್ಟ ಯೇಸುವಿನ ಅಭಿಷೇಕವು ಬಹುಶ: ಯೋಹಾನ 12:1-8ರಲ್ಲಿ ಬಣ್ಣಿಸಲ್ಪಟ್ಟಿರುವ ಅಭಿಷೇಕವು ಎರಡೂ ಒಂದೇ ಆಗಿರಬಹುದು. ಇದು ಫಸ್ಕ ಹಬ್ಬಕ್ಕೆ ಆರು ದಿನಗಳ ಮುಂಚೆ ನಡೆಯಿತು, (ಯೋಹಾನ 12:1) ಮತ್ತು ಯೇಸು ಜಯೋತ್ಸಾಹದಿಂದ ಯೆರೂಸಲೇಮನ್ನು[98] ಪ್ರವೇಶಿಸುದಕ್ಕೆ ಒಂದು ದಿನ ಮುಂಚೆ ಇದಾಯಿತು (ಮಾರ್ಕ 11:1-11 ಯೋಹಾನ 12:12). ಯೇಸುವನ್ನು ತೈಲದಿಂದ ಅಭಿಷೇಕಿಸಿದ ಸ್ತ್ರೀಯು ಮಾರ್ಥ ಮತ್ತು ಲಾಜರನ ಸೋದರಿಯಾದ ಮರಿಯಳಾಗಿದ್ದಳು (ಯೋಹಾನ 11:1-2, 12:2-3). ಸುಗಂಧ ತೈಲವು ಬಹು ಬೆಲೆಯುಳ್ಳದ್ದಾಗಿತ್ತು.ಬಹುಶಃ ಅದು ಜನಾಂಗದಿಂದ ಜನಾಂಗದವರೆಗೂ ಕಾಪಾಡಲ್ಪಟ್ಟಿರುವದು. ಅಂದರೆ ಜನರು ಚಿನ್ನವನ್ನು ಕಾಪಾಡಿ ಇಡುವ ಹಾಗೆ ಇಡಲ್ಪಟ್ಟಿತ್ತು. ಅದು ಕುಟುಂಬಕ್ಕೆ ಹಣಕಾಸಿನ ಸುರಕ್ಷತೆ ಯಾಗಿತ್ತು , ಮತ್ತು (ವ.5)ರ ಪ್ರಕಾರವಾಗಿ ಅದು ಮುನ್ನೂರು ರೂಪಾಯಿ ಅಂದರೆ ಒಂದು ವರ್ಷದ ಕೂಲಿಯಷ್ಟು ಬೆಲೆ ಹೊಂದಿದ್ದಾಗಿತ್ತು. ಹಾಗಿದ್ದರೂ ಆ ಸ್ತ್ರೀಯು ಅದನ್ನು ಯೇಸುವಿನ ತಲೆ ಮತ್ತು ಕಾಲುಗಳ ಮೇಲೆ ಹೊಯ್ದು ಬಿಟ್ಟು ನಂತರ ತನ್ನ ಕೂದಲುಗಳಿಂದ ಆತನ ಪಾದಗಳನ್ನು ಒರೆಸಿದಳು (ಯೋಹಾನ 12:3).

ಇದು ಇನ್ನೊಬ್ಬ ವ್ಯಕ್ತಿಗೆ ತೋರಿಸುವ ಪ್ರೀತಿ ಮತ್ತು ಗೌರವವನ್ನು ಪ್ರದರ್ಶಿಸಲು ಸಾಧ್ಯವಾದ ಅತೀ ಶ್ರೇಷ್ಠ ಮಾರ್ಗವಾಗಿತ್ತು, ಯೇಸುವಿನ ಮನಸ್ಸಿನಲ್ಲಿ ಮರಿಯಳು ಮಾಡಿದ್ದು ಅತ್ಯಂತ ಪ್ರಾಮುಖ್ಯವಾದದ್ದಾಗಿ ಕಂಡಿತು (ವ–9) ಆಕೆಯು ಆತನಿಗೆ ಅತೀ ಅಮ್ಯುಲ್ಯವಾದದ್ದನ್ನು ಕೊಟ್ಟಳು. ಬಹುಶ ಆ ಸುಗಂಧ ತೈಲವೇ ಅವಳ ಜೀವಿತದಲ್ಲಿ ಕೂಡಿಸಿಟ್ಟ ಎಲ್ಲವೂ ಆಗಿತ್ತು (ಮಾರ್ಕ 12:43-44) ಯೇಸು ನಮ್ಮೆಲ್ಲರಿಂದ ಬಯಸುವದು ಇದೇ ಆಗಿದೆ, ಆತನು ದಶಮಾಂಶ ಅಥವಾ ಹತ್ತನೆಯ ಭಾಗವನ್ನು ಮಾತ್ರವೇ ಕೋರುವದಿಲ್ಲ. ನಮ್ಮಲ್ಲಿರುವದೆಲ್ಲವನ್ನು ಆತನಿಗೆ ಅರ್ಪಿಸಬೇಕೆಂದು ಬಯಸುತ್ತಾನೆ. ಜಟಾಮಾಂಸಿ ತೈಲದ ಭರಣಿಯನ್ನು ಒಡೆದನಂತರ ಮನೆಯಲೆಲ್ಲಾ ಸುಗಂಧ ವಾಸನೆ ಹರಡಿತು. (ಯೋಹಾನ 12:3) ಸುಗಂಧ ತೈಲವು ಭರಣಿಯಲ್ಲಿರುವ ತನಕ ಸುಗಂದ ವಾಸನೆ ಇರಲಿಲ್ಲ. ಆ ತೈಲದಿಂದ ಯಾರಿಗೂ ಪ್ರಯೋಜನವಾಗುತ್ತಿರಲಿಲ್ಲ, ಆದರೆ ಯಾವಾಗ ಭರಣಿ ಒಡೆಯಲ್ಪಟ್ಟು ತೈಲವನ್ನು ಕ್ರಿಸ್ತನ ಮೇಲೆ ಹೊಯ್ದಾಗ, ಮನೆಯನ್ನೆಲ್ಲಾ ಸುಗಂಧ ವಾಸನೆ ಹರಡಿಕೊಂಡಿತು. ನಮಗಾದರೂ ಯೇಸುವನ್ನು ಅಭಿಷೇಕಿಸುವ ಕಥೆಯು ಒಂದು ಸಾಮ್ಯದಂತೆ ಇರುತ್ತರೆ. ದೇವರು ನಮ್ಮ ಒಬ್ಬೊಬ್ಬರಿಗೂ "ಸುಗಂಧ ತೈಲದ ಭರಣಿಯನ್ನು", ಅಂದರೆ ನಮ್ಮ ಒಬ್ಬೊಬ್ಬರಿಗೂ ವರಗಳನ್ನು ಮತ್ತು ತಲಾಂತುಗಳನ್ನು

ಮತ್ತು ಸ್ವತ್ತುಗಳನ್ನು ಕೊಟ್ಟಿದ್ದಾನೆ. ನಾವು ಅವು ಗಳನ್ನು ನಮ್ಮಲ್ಲಿಯೇ ಇಟ್ಟುಕೊಂಡರೆ ಅವು ಗಳಿಂದ ಯಾರಿಗೂ ಪ್ರಯೋಜ-ನವಾಗುವದಿಲ್ಲ. ಮತ್ತು ಕೊನೆಯಲ್ಲಿ ನಮಗೂ ಪ್ರಯೋಜನವಾಗುವದಿಲ್ಲ, ಯಾಕಂದರೆ ನಾವು ಸಾಯುವಾಗ ಅವು ಗಳನ್ನು ತಗೆದುಕೊಂಡು ಹೋಗಲು ಸಾದ್ಯವಿಲ್ಲ. ನಾವು ನಮ್ಮ ಎಲ್ಲ ವರಗಳನ್ನು, ತಲಾಂತುಗಳನ್ನು, ಸ್ವತ್ತುಗಳನ್ನು ಯೇಸುವಿನ ಪಾದಕ್ಕೆ ಸುರಿಯುವದಾದರೆ ಮಾತ್ರವೇ ಆತನು ಅವುಗಳನ್ನು ತೆಗೆದುಕೊಂಡು ದೇವರ ಮಹಿಮೆಗಾಗಿ ಮತ್ತು ಇತರರ ಪ್ರಯೋಜನಕ್ಕಾಗಿ ಉಪಯೋಗಿಸುವನು. ನಾವು ಭರಣಿಗಳಿದ್ದ ಹಾಗೆ, ನಾವು ಒಡೆಯಲ್ಪಟ್ಟಾಗ ಮಾತ್ರವೇ ನಮ್ಮಲ್ಲಿರುವಂತ ಆತ್ಮವು ಹರಿಯಲ್ಪಡುವದು. ನಮ್ಮ ಸ್ವಾರ್ಥ ಮತ್ತು ಗರ್ವ ಮುರಿಯಲ್ಪಟ್ಟಾಗ ಮಹಿಮೆ ತರಬಲ್ಲದು.

**4-5** ಅಲ್ಲಿ ಇದ್ದವರಲ್ಲಿ ಕೆಲವರು ಆ ತೈಲವನ್ನು ನಷ್ಟಮಾಡಿದ್ದಕ್ಕೆ ಸ್ತ್ರೀಯನ್ನು ಗದರಿಸಿದರು. ಅವರಲ್ಲಿ ಇಸ್ಕರಿಯೋತ ಯೂದನು ಒಬ್ಬನಾಗಿದ್ದು, ಇವನು ಬಳಿಕ ಯೇಸುವನ್ನು ಹಿಡುಕೊಡಲಿದ್ದನು. (ಯೋಹಾನ 12:4-6) ನಾವು ನಮ್ಮ ವರಗಳನ್ನು ತಲಾಂತುಗಳನ್ನು, ವಸ್ತುಗಳನ್ನು ಯೇಸುವಿಗಾಗಿ ಸುರಿಯುವಾಗ ಜನರು ನಮಗೆ ನಾವು ಜೀವಿತಗಳನ್ನು ನಷ್ಟ ಮಾಡಿಕೊಳ್ಳುತ್ತಿದ್ದೇವೆಂದು ಸಹ ಹೇಳುವರು. ನಾವು ಕ್ರಿಸ್ತನಿಗಾಗಿ ಈ ಲೋಕದಲ್ಲಿ ಮಾಡುವದು ನಷ್ಟವೆಂಬಂತೆ ಪರಿಗಣಿಸಲ್ಪಡುತ್ತದೆ, ಆದರೆ ವಾಸ್ತವದಲ್ಲಿ ಯೇಸುವಿನ ಮೇಲೆ ಯಾವದೂ ವ್ಯರ್ಥವಲ್ಲ. ಈ ಕಥೆಯ ಮೂಲಕ ಇತರರು ಮಾಡುವ ರೀತಿಯ ಕಾರ್ಯಗಳನ್ನು ಎಂದಿಗೂ ಟೀಕಿಸದಿರುವದನ್ನು ಸಹ ಕಲಿತುಕೊಳ್ಳೋಣ, ಶಿಷ್ಯರು ಎಷ್ಟು ಬೇಗನೆ ಈ ಸ್ತ್ರೀಯನ್ನು ಟೀಕಿಸಿದರು! ಮತ್ತು ಅವರು ಎಂಥಹ ದೊಡ್ಡ ತಪ್ಪನ್ನು ಮಾಡಿದರು!

**6-7** ಅಲ್ಲಿದ್ದ ಕೆಲವರು ಆ ತೈಲವನ್ನು ಮಾರಿ ಹಣವನ್ನು ಬಡವರಿಗೆ ಕೊಡಬಹುದಿತ್ತು ಎಂದು ಯೋಚಿಸಿದರು. ಯೂದನನ್ನು ಹೊರತುಪಡಿಸಿ(ಯೋಹಾನ 12:6) ಬಹುಶಃ ಇತರರು ಬಡವರ ಕುರಿತು ಯಥಾರ್ಥವಾಗಿ ಯೋಚಿಸಿರಬಹುದು. ಆದರೆ ಯೇಸು ಬಡವರಿಗೆ ನೀವು ಯಾವಾಗಲಾದರೂ ಸಹಾಯ ಮಾಡಬಹುದು. ಬಡವರು ಯಾವಾಗಲು ನಿಮ್ಮೊಂದಿಗೆ ಇರುತ್ತಾನೆ, ಎಂದು ಹೇಳಿದನು ಯೇಸುವನ್ನು ಪ್ರೀತಿಸುವದೇ ನಮ್ಮ ಅತೀಶ್ರೇಷ್ಟ ಕರ್ತವ್ಯ! ಇದು ಅತೀಶ್ರೇಷ್ಟ ಆಜ್ಞೆಯಾಗಿದೆ (ಮಾರ್ಕ 12:30) ಬಡವರನ್ನು ಅಂದರೆ ನೆರೆಯವರನ್ನು ಪ್ರೀತಿಸುವದು ನಮ್ಮ ಎರಡನೆಯ ಕರ್ತವ್ಯ (ಮಾರ್ಕ 12:31)

**8-9** ಈಕೆಯು ಮುಂದಾಗಿ ನನ್ನ ಉತ್ತರ ಕ್ರಿಯೆಗೆ ಕೈಲಾದಷ್ಟು ಮಾಡಿದ್ದಾಳೆ. ಯೆಹೂದ್ಯರು ಯಾವಾಗಲು ದಂಡನೆಗೆ ಒಳಗಾದ ಅಪರಾಧಿಗಳನ್ನು ಹೊರತು ಪಡಿಸಿ ಉಳಿದ ಸತ್ತ ದೇಹಗಳಿಗೆ ತೈಲದಿಂದ ಲೇಪಿಸುತ್ತಿದ್ದರು. ಆದರೆ ಯೇಸು ತಾನು ಅಪರಾಧಿಯಾಗಿ ದಂಡನೆ ಹೊಂದುವನು. ಮತ್ತು ಆ ಕಾರಣದಿಂದ ಆತನ ಶರೀರಕ್ಕೆ ಸರಿಯಾದ ಅಭಿಷೇಕ ಮಾಡುವದಿಲ್ಲವೆಂದು ತಿಳಿದವನಾಗಿದ್ದನು. ಈ ಸ್ತ್ರೀಯು ಅವನನ್ನು ಮುಂದಾಗಿ ತೈಲವನ್ನು ಹಚ್ಚಿದ್ದಳು. ಅವಳು ಏನು ಮಾಡುತ್ತಿದ್ದಾಳೆಂದು ಸ್ವತಃ ಅವಳು ಗ್ರಹಿಸಿಕೊಳ್ಳಲಿಲ್ಲ. ಆದರೆ ಯೇಸುವಿಗೆ ಗೊತ್ತಿತ್ತು. ಮತ್ತು ಸುವಾರ್ತೆಯು ಸರ್ವ ಲೋಕದಲ್ಲಿ ಎಲ್ಲೆಲ್ಲಿ ಸಾರಲಾಗುವದೊ, ಅಲ್ಲಲ್ಲಿ ಈಕೆಯು ಮಾಡಿದ್ದನ್ನು ಸಹ, ಈಕೆಯ ನೆನಪಿಗಾಗಿ ಹೇಳುವವರೆಂದು ಯೇಸು ವಾಗ್ದಾನ ಮಾಡಿದನು, ಮತ್ತು ಆ ವಾಗ್ದಾನವು ನಿಜವಾಗಿಯೂ ನೆರವೇರಿದೆ.

**10-11** ಯೇಸುವನ್ನು ಹಿಡುಕೊಡುತ್ತೇನೆಂಬ ಯೂದನ ಮಾತು ಯೆಹೂದ್ಯ ನಾಯಕರಿಗೆ ಸಂತೋಷವನ್ನುಂಟು ಮಾಡಿತು. ಯಾಕೆಂದರೆ ಯೇಸುವನ್ನು ಬಂಧಿಸಲು ಅವರು ಹುಳಿಯಿಲ್ಲದ ರೊಟ್ಟಿಯಹಬ್ಬವು ಮುಗಿಯುವ ತನಕ ಕಾಯಬೇಕಾಗಿದ್ದಿಲ್ಲ (ವ.2) ಯೂದನು ಯೇಸುವನ್ನು ಅವರ ಕೈಗಳಲ್ಲಿ ಒಪ್ಪಿಸಿದರೆ ಅವನಿಗೆ ಮೂವತ್ತು ಬೆಳ್ಳಿಯ ನಾಣ್ಯಗಳನ್ನುರ್ಣ ಕೊಡುವದಾಗಿ ಹೇಳಿದರು. (ಮತ್ತಾಯ 26:14-18) ಈಗ ಯೂದನ ಸಹಾಯದೊಂದಿಗೆ ಯೇಸುವನ್ನು ಮರಣಕ್ಕೆ ಒಪ್ಪಿಸುವದು ಯೆಹೂದ್ಯರಿಗೆ ಸುಲಭನಾಯಿತು. ಯೂದನು ಎಂದಿಗೂ ತನ್ನ ಹೃದಯವನ್ನು ನೀಡಿರಲಿಲ್ಲ, ಅವನೊಬ್ಬ ಕಳ್ಳನಾಗಿದ್ದನು, (ಯೋಹಾನ 12:6) ಆತನು ನಿರೀಕ್ಷಿಸಿದಂತೆ ಯೇಸು ಮೆಸ್ಸೀಯನಾಗಿ ಭೂಲೋಕದ ರಾಜ್ಯವನ್ನು ಸ್ಥಾಪಿಸುವಾಗ ಆತನು ಒಬ್ಬ ಪ್ರಾಮುಖ್ಯ ಅಧಿಕಾರಿಯಾಗಬಹುದೆಂದು ಯೇಸುವನ್ನು ಹಿಂಬಾಲಿಸಿದನು. ಆದರೆ ಕೊನೆಗೆ ಯೇಸು ಭೂಲೋಕದ ರಾಜ್ಯವನ್ನು ಸ್ಥಾಪಿಸುವದಿಲ್ಲ ಮತ್ತು ಅ ಸ್ತ್ರೀಯು ಯೇಸುವಿನ ಉತ್ತರ ಕ್ರಿಯೆಗಳನ್ನು ಮಾಡಿದಳು ಎಂಬುದನ್ನು ನೋಡಿ ಯೂದನು ಈ ಯೇಸುವನ್ನು ಹಿಂಬಾಲಿಸುವದರಲ್ಲಿ ಏನು ಲಾಭವಿಲ್ಲವೆಂದು ಗ್ರಹಿಸಿಕೊಂಡನು. ಯೂದನು ಹಣಕ್ಕಾಗಿ ದುರಾಸೆಹೊಂದಿ ಯೇಸುವನ್ನು ಮೂವತ್ತು ನಾಣ್ಯಗಳಿಗೆ ಹಿಡಿದುಕೊಟ್ಟನು. ಸೈತಾನನು ಅವನೊಳಗೆ ಹೊಕ್ಕನು (ಯೋಹಾನ 13:2-7) ಯೇಸುವಿನ ಶಿಷ್ಯರಲ್ಲಿ ಒಬ್ಬನು ಆತನನ್ನು ಹಿಡುಕೊಡುವನೆಂದು ಹಳೆ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿತ್ತು (ಕೀರ್ತನೆಗಳು 41:9 ಯೋಹಾನ 13:15) ಮತ್ತು ಯೂದನೇ ಆ ವ್ಯಕ್ತಿಯೆಂದು ಯೇಸು ಮುಂಚಿತವಾಗಿ ತಿಳಿದಿದ್ದನು. ಆದಾಗ್ಯು ಯೂದನು ಯೇಸುವಿನ ಸ್ವ ಚಿತ್ತದ ಪ್ರಕಾರ ಅವನನ್ನು ಹಿಡುಕೊಟ್ಟನು. ಸೈತಾನನು ಅವನಲ್ಲಿ ಪ್ರವೇಶಿಸುವಂತೆ ಅವನು ಅನುಮತಿಸಬೇಕಾಗಿದ್ದಿಲ್ಲ, ಅವನು ನಂಬಿಗಸ್ತನಾಗಿ ಉಳಿದಿರಬಹುದಿತ್ತು. ಆದರೆ ಯೇಸು ತಾನು ದೇವರಾಗಿದ್ದರಿಂದ ಯೂದನು ಏನೆಂಬುದನ್ನು ಮುಂಚಿತವಾಗಿ ತಿಳಿದಿದ್ದನು. ಯೂದನ ಪಾಪದಿಂದ ನಾವು ಕಲಿತುಕೊಳ್ಳೋಣ. ಯೇಸುವಿನ ಆಶೀರ್ವಾದಗಳನ್ನು ಅನುಭವಿಸಿ ಆತನಿಂದ ವಿಮುಖವಾಗುವವರು ಕಠಿಣ ದಂಡನೆಗೆ ಗುರಿಯಾಗುವರು. ಅವರಿಗೆ ಪಶ್ಚಾತಾಪದ ನಿರೀಕ್ಷೆಯಾಗಲಿ, ರಕ್ಷಣೆಯ ನಿರೀಕ್ಷೆಯಾಗಲಿ ಇರುವದಿಲ್ಲ (ಇಬ್ರಿಯ 6:4-6 ಮತ್ತು ವ್ಯಾಖ್ಯಾನ ನೋಡಿರಿ).

## ಕರ್ತನ ಭೋಜನ (14:12-26)

(ಮತ್ತಾಯ 26:17-30, ಲೂಕ 22:7-23)

**12** ಫಸ್ಕ ಹಬ್ಬವು ಹುಳಿಯಿಲ್ಲದ ರೊಟ್ಟಿಯ ಹಬ್ಬದ ಮೊದಲನೆಯ ದಿನವೆಂದು ಕರೆಯಲ್ಪಡುತ್ತದೆ (ವ.1 ಮತ್ತು ವ್ಯಾಖ್ಯಾನ ನೋಡಿರಿ) ಆದುದರಿಂದ ಮತ್ತಾಯ, ಮಾರ್ಕ ಮತ್ತು ಲೂಕರು, ಕರ್ತನ ಭೋಜನವು ಫಸ್ಕ ಹಬ್ಬದಂದು[100] ಜರುಗಿತೆಂದು ಬರೆಯುತ್ತಾರೆ ಅಂದರೆ, ಫಸ್ಕದ ಕುರಿಯನ್ನು ಕೊಯ್ಯುವ ದಿವಸದಲ್ಲಿ ಜರುಗಿತು (ಮತ್ತಾಯ 27:62).

**13-16** ಯೇಸು ತನ್ನ ಶಿಷ್ಯರಲ್ಲಿ ಇಬ್ಬರಾದ ಪೇತ್ರ ಮತ್ತು ಯೋಹಾನರನ್ನು ಫಸ್ಕ ಹಬ್ಬದ ಊಟಕ್ಕಾಗಿ ಸಿದ್ಧ ಮಾಡಲು ಕಳುಹಿಸಿದನು. (ಲೂಕ 22:8) ಯೇಸು ವೈರಿಗಳ ತೊಂದರೆ ಇಲ್ಲದಂತೆ ಶಿಷ್ಯರ ಜೊತೆಯಲ್ಲಿ ಫಸ್ಕದ ಊಟವನ್ನು ಮಾಡುವದಕ್ಕಾಗಿ ಮುಂಚಿತವಾಗಿಯೇ ಗುಪ್ತವಾದ ಸಿದ್ಧತೆಯನ್ನು ಮಾಡಿದ್ದನು. ಪೇತ್ರ ಮತ್ತು ಯೋಹಾನರು ನೀರಿನ ಕೊಡವನ್ನು ಹೊತ್ತಿಕೊಂಡು ಹೋಗುವ ಮನುಷ್ಯನನ್ನು ಕಂಡುಕೊಳ್ಳಬೇಕಿತ್ತು (ವ–13) ಯೇಸುವಿನ ಕಾಲದಲ್ಲಿ ಸ್ತ್ರೀಯರು ಮಾತ್ರವೇ ನೀರನ್ನು ಹೊರುತ್ತಿದ್ದರು ಮತ್ತು ಶಿಷ್ಯರು ಆ ಪು ರುಷನನ್ನು ಸುಲಭವಾಗಿ ಗುರುತಿಸಲು ಶಕ್ತರಾಗುವರು. ಮತ್ತಾಯನ ಪ್ರಕಾರವಾಗಿ ಅವರು "ಆ ವ್ಯಕ್ತಿಗೆ ನನ್ನ ಕಾಲ ಸಮೀಪವಾಯಿತು, ನಿನ್ನ ಮನೆಯಲ್ಲಿ ನನ್ನ ಶಿಷ್ಯರ ಸಂಗಡ ಫಸ್ಕಹಬ್ಬ ಮಾಡುತ್ತೇನೆಂದು ಬೋಧಕನು ಹೇಳುತ್ತಾನೆ" ಎಂದು ಹೇಳಬೇಕಾಗಿತ್ತು (ಮತ್ತಾಯ 26:18). ಇದರ ಮೂಲಕ ಆ ವ್ಯಕ್ತಿಯು ಪೇತ್ರ, ಯೋಹಾನರು ಯೇಸುವಿನ ಶಿಷ್ಯರೆಂದು ತಿಳಿದುಕೊಳ್ಳುವನು.

**17-20** ಅವರು ಕೊನೆಯ ರಾತ್ರಿ ಭೋಜನವನ್ನು ತಿನ್ನುತ್ತಿರುವಾಗ ಯೇಸು ತನ್ನ ಶಿಷ್ಯರಿಗೆ ಅವರಲ್ಲಿ ಒಬ್ಬನು ನನ್ನನ್ನು ಹಿಡಿದುಕೊಡುವನೆಂದು ಹೇಳಿದನು. ಅವರೆಲ್ಲರೂ ಆಶ್ಚರ್ಯದಿಂದ ನಾನಲ್ಲವಲ್ಲ? ಎಂದು ಹೇಳಿದರು. ಯೇಸು ನನ್ನ ಪಾತ್ರೆಯಲ್ಲಿ ಅದ್ದಿ ತಿನ್ನುವವನೇ ನನ್ನನ್ನು ಹಿಡಿದು ಕೊಡುವನು ಎಂದು ಹೇಳಿದನು (ಯೋಹಾನ 13:22-26 ಮತ್ತು ವ್ಯಾಖ್ಯಾನ ನೋಡಿರಿ). ಶಿಷ್ಯರು ತಮ್ಮನ್ನು ತಿಳಿದಿದ್ದಕ್ಕಿಂತಲೂ ಹೆಚ್ಚಾಗಿ ಯೇಸು ಅವರನ್ನು ತಿಳಿದಿದ್ದನು. ಅದೇ ರೀತಿಯಲ್ಲಿ ನಮಗಿಂತಲೂ ಹೆಚ್ಚಾಗಿ ಆತನು ನಮ್ಮ ಬಗ್ಗೆ ತಿಳಿದವನಾಗಿದ್ದಾನೆ.

**21** ನಂತರ ಯೇಸು ಮನುಷ್ಯ ಕುಮಾರನು ತನ್ನ ಕುರಿತು ಬರೆಯಲ್ಪಟ್ಟಿರುವ ಪ್ರಕಾರವೇ ಹೊರಟು ಹೋಗುವನು ಎಂದು ಹೇಳಿದನು. ಆತನು ಇಲ್ಲಿ ಮೆಸ್ಸೀಯನು ಹಿಡಿದುಕೊಡಲ್ಪಡುವನು ಎಂದು ಹೇಳುವ ಕೀರ್ತನೆಗಳು 41:9 ರ ಪ್ರವಾದನೆಯನ್ನು ಕುರಿತು ಸೂಚಿಸುವದು (ಯೋಹಾನ 13:18). ಆದರೆ ಯಾವನು ಮನುಷ್ಯಕುಮಾರನನ್ನು ಹಿಡಿದುಕೊಡುವನೋ ಅವನ ಗತಿ ಏನೆಂದು ಹೇಳಲಿ. ಯೂದನು ಯೇಸುವನ್ನು ಹಿಡಿದುಕೊಡುವ ಸಾದನವಾಗಿ ನೇಮಿಸಲ್ಪಟ್ಟಿದ್ದರೂ ತನ್ನ ಕ್ರಿಯೆಗಳಿಗೆ ಸಂಪೂರ್ಣ ಜವಾಬ್ದಾರನಾಗಿದ್ದಾನೆ ಮತ್ತು ಪೂರ್ಣ ದಂಡನೆಯನ್ನು ಅನುಭವಿಸಿದನು. ಮತ್ತಾಯ 26:25ರ ಪ್ರಕಾರವಾಗಿ ಯೂದನು ಯೇಸುವಿಗೆ "ನಾನಲ್ಲವಲ್ಲಾ" ಎಂದನು. ಮತ್ತು ಯೇಸು ಅವನಿಗೆ "ನೀನೇ ಹೇಳಿದ್ದೀ"[101] ಅಂದನು ನಂತರ ಯೋಹಾನ 13:26 ರಪ್ರಕಾರವಾಗಿ ಯೇಸು ರೊಟ್ಟಿಯ ತುಂಡನ್ನು ಪಾತ್ರೆಯಲ್ಲಿ ಅದ್ದಿ ಯೂದನಿಗೆ ಕೊಟ್ಟನು. ಮತ್ತು ಯೂದನು ಆ ತುತ್ತನ್ನು ತಗೆದುಕೊಂಡು ಹೊರಗಡೆ ಹೋದನು (ಯೋಹಾನ 13:27-30)

**22** ಯೇಸು ಮತ್ತು ಆತನ ಉಳಿದ ಹನ್ನೆರಡು ಜನ ಶಿಷ್ಯರು ಊಟ ಮಾಡುತ್ತಿರುವಾಗ ಯೇಸು ರೊಟ್ಟಿಯನ್ನು ತೆಗೆದುಕೊಂಡು "ತಕ್ಕೊಳ್ಳಿರಿ ಇದು ನನ್ನ ದೇಹ" ಅಂದನು ಲೂಕ ೨:೧೯ರ ಪ್ರಾಕಾರವಾಗಿ ಯೇಸು "ಇದು ನಿಮಗೋಸ್ಕರ ಕೊಟ್ಟಿರುವ ದೇಹ ನನ್ನನ್ನು ನೆನೆಸಿಕೊಳ್ಳುವದಕ್ಕೋಸ್ಕರ ಹೀಗೆ ಮಾಡಿರಿ" ಅಂದನು (1 ಕೋರಿಂಥ 11:23-24) ಈ ಮಾತುಗಳ ಮೂಲಕ ಯೇಸು ಕರ್ತನ ಬೋಜನ ಸಂಸ್ಕಾರದ ಮೊದಲ ಭಾಗವನ್ನು ಸ್ಥಾಪಿಸಿದನು. "ಇದು ನನ್ನ ದೇಹ" ರೊಟ್ಟಿ ಯೇಸುವಿನ ದೇಹವನ್ನು ಪ್ರತಿನಿಧಿಸುತ್ತದೆ. ಇದು ಯೇಸುವಿನ ಪ್ರಸನ್ನತೆಯ ಗುರುತಾಗಿದೆ. ಪ್ರತಿ ಸಾರಿ ನಾವು ಕರ್ತನ ಭೋಜನವನ್ನು ಆಚರಿಸುವಾಗ ರೊಟ್ಟಿ ನಮ್ಮೊಂದಿಗೆ ಇರುವ ಹಾಗೆ ಯೇಸುವಿನ ಪ್ರಸನ್ನತೆಯು ಇರುವದೆಂದು ನಾವು ಬಲ್ಲೆವು ಯೇಸು "ನಾನೇ ಜೀವದ ರೊಟ್ಟಿ" ಅಂದನು (ಯೋಹಾನ 6:35) ನಮ್ಮ ಶಾರೀರಿಕ ಜೀವನವು ರೊಟ್ಟಿಯಿಂದ [102] ಬದುಕಿ ಕೊಳ್ಳುವ ಹಾಗೆಯೇ ನಮ್ಮ ಆತ್ಮೀಕ ಜೀವನವು ಯೇಸುವಿನಿಂದ ಬದುಕಿಕೊಳ್ಳುವದು "ಸಾಮಾನ್ಯ ಬರಹ: ಕರ್ತನ ಭೋಜನ ನೋಡಿರಿ"ಇದುನಿಮಗಾಗಿ ಕೊಟ್ಟಿರುವ ಕರ್ತನ ದೇಹ (ಲೂಕ 22:19) ಯೇಸು ರೊಟ್ಟಿಯನ್ನು ಮುರಿದು ತನ್ನ ಶಿಷ್ಯರಿಗೆ ಕೊಟ್ಟನು. ಆತನ ದೇಹವು ಮುರಿಯಲ್ಪಟ್ಟಿತು. ಯೇಸು ತನ್ನ ದೇಹವನ್ನು ತನ್ನ ಜೀವವನ್ನು ನಮಗಾಗಿ ಕೊಟ್ಟನು. ಆತನು ಅನೇಕರಿಗಾಗಿ ತನ್ನ ಪ್ರಾಣವನ್ನು ಈಡುಕೊಡುವದಕ್ಕೆ ಬಂದನು (ಮಾರ್ಕ 10:45 ಮತ್ತು ವ್ಯಾಖ್ಯಾನ ನೋಡಿರಿ) ನಂತರ ಯೇಸು ತನ್ನ ಶಿಷ್ಯರಿಗೆ "ತಕ್ಕೊಳ್ಳಿರಿ" ಅಥವಾ ಮತ್ತಾಯನ ಪ್ರಕಾರವಾಗಿ "ತಕ್ಕೊಂಡು ತಿನ್ನಿರಿ" ಅಂದನು (ಮತ್ತಾಯ 26:26). ಯೇಸುವಿನ ಜೀವನ ನಮಗಾಗಿ ಒಂದು ವರವಾಗಿದೆ ಆದರೆ ನಾವು ಅದನ್ನು "ತಕ್ಕೊಳ್ಳಬೇಕು" ಆಹಾರವನ್ನು ತಿನ್ನುವದರ ಮೂಲಕ ನಾವು ನಮ್ಮದಾಗಿಸಿ ಕೊಳ್ಳುವಂತೆಯೇ ನಂಬಿಕೆಯ ಮೂಲಕ ಯೇಸುವಿನ ಯಜ್ಞವನ್ನು ನಾವು ನಮ್ಮ ದಾಗಿಸಿಕೊಳ್ಳಬೇಕು. ನಾವು ಆತವ ದೇಹವನ್ನು ತಗೆದುಕೊಂಡು ಸಾಂಕೇತಿಕವಾಗಿ ತಿನ್ನಬೇಕು. ಯೇಸುವಿನ ದೇಹವನ್ನು "ತಕ್ಕೊಂಡು ತಿನ್ನುವದು" ಎಂದರೆ ಆತನಲ್ಲಿ ನಂಬಿಕೆ ಇಡುವದಾಗಿದೆ. ಆತನ ಜೀವವನ್ನು, ನಿತ್ಯ ಜೀವವನ್ನು ಪಡೆದುಕೊಳ್ಳುವದೇ ಇದರರ್ಥ (ಯೋಹಾನ 6:56-58) ಆದರೆ ಯೇಸುವಿನ ದೇಹವನ್ನು ತಿನ್ನುವದು ಎಂದರೆ ಆತನ ಮರಣದಲ್ಲಿ ಪಾಲುಗಾರರಾಗುವದು, ಆತನೊಂದಿಗೆ ಸಾಯುವದು ಎಂದು ಸಹ ಅರ್ಥವಾಗಿದೆ. ನಾವು ಕೂಡಾ ಸಹ ಸಾಯಲೇಬೇಕು (ರೋಮಾ 6:3-8 ಮತ್ತು ವ್ಯಾಖ್ಯಾನ ನೋಡಿರಿ) ಯೇಸು ಹೀಗೆನ್ನುತ್ತಾನೆ "ನಿಮಗೆ ನಿಜನಿಜವಾಗಿ ಹೇಳುತ್ತೇನೆ

ಗೋದಿಯ ಕಾಳು ಭೂಮಿಯಲ್ಲಿ ಬಿದ್ದು ಸಾಯದಿದ್ದರೆ ಒಂದೆ ಆಗಿ ಉಳಿಯುವದು". "ಸತ್ತರೆ ಬಹಳ ಫಲ ಕೊಡುವದು" (ಯೋಹಾನ 12:24) ಯೇಸು ಇದನ್ನು ತನ್ನ ಕುರಿತು ಮಾತ್ರವೇ ಅಲ್ಲ ನಮ್ಮ ಕುರಿತಾಗಿಯು ಹೇಳಿದನು

**23-24** ಯೇಸು ಪಾತ್ರೆಯನ್ನು ತೆಗೆದುಕೊಂಡು "ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ! ಇದು ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ" ಅಂದನು. ಮತ್ತಾಯನು "ಇದು ಪಾಪಗಳ ಕ್ಷಮೆಗಾಗಿ ಬಹು ಜನರಿಗೋಸ್ಕರ ಸುರಿಸಲ್ಪಟ್ಟಿರುವ ರಕ್ತ" ಎಂಬ ಮಾತುಗಳನ್ನು ಕೂಡಿಸುತ್ತಾನೆ (ಮತ್ತಾಯ 26:28). ಲೂಕ 20:22 ರ ಪ್ರಕಾರವಾಗಿ ಯೇಸು "ಈ ಪಾತ್ರೆಯು ನಿಮಗೋಸ್ಕರ ಸುರಿಸಲ್ಪಡುವ ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ" ಎಂದು ಹೇಳಿದನು (1 ಕೋರಿಂಥ 11:25-26 ಮತ್ತು ವ್ಯಾಖ್ಯಾನ ನೋಡಿರಿ).

ಹಳೆ ಒಡಂಬಡಿಕೆಯು ಯೆಹೂದ್ಯರು ತಮ್ಮ ಧರ್ಮಶಾಸ್ತ್ರಕ್ಕೆ ವಿಧೇಯರಾಗುವದಾದರೆ ಅವರ ಇಸ್ರಾಯೇಲ ರಾಷ್ಟ್ರವನ್ನು ಆಶೀರ್ವದಿಸಿ ಕಾಪಾಡುತ್ತೆನೆಂದು ದೇವರು ಅವರಿಗೆ ನೀಡಿದ ಒಂದು ವಾಗ್ದಾನವಾಗಿದೆ. ರಕ್ತದಿಂದ ಒಡಂಬಡಿಕೆಯನ್ನು ಸ್ಥಾಪಿಸುವದು ಅವಶ್ಯವಾಗಿತ್ತು (ವಿ.ಕಾಂಡ 24:6-8) ಈ ದಿನವು ಸಹ ಮಧ್ಯಪೂರ್ವಾತ್ಯದ ಜನರು ಪ್ರಾಮುಖ್ಯವಾದ ಒಪ್ಪಂದಗಳನ್ನು ಈಗಲೂ ರಕ್ತದಿಂದ ದೃಡಪಡಿಸುತ್ತಾರೆ. ಯೆಹೂದ್ಯರು ಒಡಂಬಡಿಕೆಯ ತಮ್ಮ ಪಾತ್ರವನ್ನು ಅನುಸರಿಸಲಿಲ್ಲ. ಅವರು ಪು ನಃ ವು ನಃ ದೇವರ ಅಜ್ಞೆಗೆ ಅವಿಧೇಯರಾದರು. ಹಳೆ ಒಡಂಬಡಿಕೆಯ ಪ್ರವಾದಿಗಳ ಮೂಲಕ ದೇವರು ಕಳುಹಿಸಿದ ಎಚ್ಚರಿಕೆಗಳನ್ನು ತಿರಸ್ಕರಿಸಿದರು. ಅದರ ಫಲಿತವಾಗಿ ಯೆಹೂದ್ಯರು ದೇವರು ಇಸ್ರಾಯೇಲರೊಂದಿಗೆ ಒಂದು ನೂತನ ಒಡಂಬಡಿಕೆಯನ್ನು ಮಾಡಲು ತೀರ್ಮಾನಿಸಿ ಕೊಂಡರು, ಇದರ ಕುರಿತು ಪ್ರವಾದಿಯಾದ ಯರೇಮಿಯನು ಪ್ರವಾದಿಸಿದನು (ಯರೇಮಿಯ 31:31-34) ಈ ನೂತನ ಒಡಂಬಡಿಕೆಯ ಪ್ರಕಾರವಾಗಿ ದೇವರು ನಂಬುವಂತಹ ಎಲ್ಲರಿಗೂ ಕ್ಷಮಾಪಣೆಯನ್ನು ರಕ್ಷಣೆಯನ್ನು ಕೊಡುವ ವಾಗ್ದಾನ ಮಾಡಿದನು. ಯೇಸು ಆ ಒಡಂಬಡಿಕೆಯನ್ನು ನೆರವೇರಿಸಿ ತನ್ನ ಸ್ವಂತ ರಕ್ತದಿಂದ – ಸ್ವೀಕರಿಸಲು ಬಂದನು. ಇದು ರಕ್ತದ ಒಡಂಬಡಿಕೆ, ಬಹು ಜನರಿಗಾಗಿ ಅಂದರೆ ನಂಬುವ ಎಲ್ಲರಿಗಾಗಿ ಸುರಿಸಲ್ಪಟ್ಟ ಯೇಸುವಿನ ಸ್ವ–ರಕ್ತವಾಗಿದೆ. ಮತ್ತು ರೊಟ್ಟಿಯಂತೆಯೇ ಕರ್ತನ ಭೋಜನದ ವೇಳೆ ಪಾತ್ರೆಯಲ್ಲಿ ನಾವು ಪಾಲುಗಾರರಾಗುವಾಗ ಒಂದು ರೀತಿಯಲ್ಲಿ ಪು ನಃ ನಾವು ಆತನ ಬಾದೆ ಮತ್ತು ಮರಣದಲ್ಲಿ ಪಾಲುಗಾರರಾಗುತ್ತೇವೆ. ಮತ್ತು ನಾವು ನಮ್ಮ ಪಾಪಗಳಿಗೆ ಕ್ಷಮೆಯನ್ನು ಮತ್ತು ನಿತ್ಯ ಜೀವವನ್ನು ಪಡೆದುಕೊಳ್ಳುವದಕ್ಕಾಗಿ ಹೇಗೆ ಆತನು ತನ್ನ ರಕ್ತವನ್ನು ಸುರಿಸಿದನೂ ಎಂಬುದನ್ನು ಪು ನಃ ಜ್ಞಾಪಕಕ್ಕೆ ತಂದು ಕೊಳ್ಳುತ್ತೇವೆ.

ಹಳೆ ಒಡಂಬಡಿಕೆಯ ರಕ್ತವು ಕೇವಲ ಯೆಹೂದ್ಯರಿಗಾಗಿ ಸುರಿಸಲ್ಪಟ್ಟಿತ್ತು, ಆದರೆ ಹೊಸ ಒಡಂಬಡಿಕೆಯ ರಕ್ತವು ಬಹು ಜನರಿಗಾಗಿ ಅಂದರೆ ಇಡೀ ಲೋಕಕ್ಕಾಗಿ ಸುರಿಸಲ್ಪಟ್ಟಿತು. "ಯೇಸು ನಮ್ಮ ಪಾಪಗಳನ್ನು ನಿವಾರಣೆ ಮಾಡುವ ಯಜ್ಞವಾಗಿದ್ದಾನೆ!" ನಮ್ಮ ಪಾಪಗಳನ್ನು ಮಾತ್ರವಲ್ಲದೆ ಸಮಸ್ತ ಲೋಕದ ಪಾಪಗಳನ್ನು ನಿವಾರಣೆ ಮಾಡುತ್ತಾನೆ (1 ಯೋಹಾನ 2:2).

**25-26** ಅಂತಿಮವಾಗಿ ಯೇಸು ತನ್ನ ಶಿಷ್ಯರಿಗೆ ಲೋಕಾಂತ್ಯದಲ್ಲಿ [103]. ಸ್ಥಾಪಿತವಾಗುವ ದೇವರ ರಾಜ್ಯದಲ್ಲಿ ದ್ರಾಕ್ಷಾ ರಸವನ್ನು ಹೊಸದಾಗಿ ಕುಡಿಯುವ ದಿನದವರೆಗೂ ಅದನ್ನು ಇನ್ನು ಕುಡಿಯುವದೇ ಇಲ್ಲ ಅಂದನು. ಲೂಕ 22:16ರ ಪ್ರಕಾರವಾಗಿ ಯೇಸು ಇದು ದೇವರ ರಾಜ್ಯದಲ್ಲಿ ನೆರವೇರುವ ತನಕ ನಾನು ಇನ್ನು ಮೇಲೆ ಪಸ್ಕದ ಊಟವನ್ನು ಮಾಡುವದೇ ಇಲ್ಲ ಎಂದು ಸಹ ಹೇಳಿದನು. ಫಸ್ಕ ಹಬ್ಬವು ಇಸ್ರಾಯೇಲರು ಐಗುಪ್ತ್ಯದಿಂದ ವಿಮೋಚನೆ ಹೊಂದಿದ್ದರ ಸಂಕೇತವಾಗಿದೆ. ಫಸ್ಕ ಹಬ್ಬದ ವೆರವೇರಿವಿಕೆಯು ವಿಶ್ವಾಸಿಗಳ ನೂತನ ಇಸ್ರಾಯೇಲಿನ ರಕ್ಷಣೆ ಮತ್ತು ಪರಲೋಕದಲ್ಲಿ ಕ್ರಿಸ್ತನ ನಿತ್ಯ ರಾಜ್ಯದ ಸ್ಥಾಪನೆ ಆಗಿರುತ್ತದೆ.

## ಯೇಸು ಪೇತ್ರನ ಅಲ್ಲಗಳೆಯುವಿಕೆಯನ್ನು ಮುಂಚಿಳಿಸಿದ್ದು (14:22 ರಿಂದ 31)

(ಮತ್ತಾಯ 26:31-35 ಲೂಕ 22:33-34, ಯೋಹಾನ 14:37-38)

**27** ಯೇಸು ತನ್ನ ಶಿಷ್ಯರಿಗೆ ಅವರು ದಿಗಿಲುಪಟ್ಟು ಹಿಂಜರಿಯುವರು ಎಂದು ಹೇಳಿದನು. ಜಕಾರ್ಯ 13:7ರ ಪ್ರವಾದನೆಯು ನೆರವೇರಿತ್ತು ದೇವರು ಕುರುಬನನ್ನು ಅಂದರೆ, ಯೇಸುವನ್ನು ಹೊಡೆಯುವನು ಕುರಿಗಳು ಅಂದರೆ ಶಿಷ್ಯರು ಚದುರಿ ಹೋಗುವರು (ಯೋಹಾನ 16:32).

**28** ಆದರೆ ಯೇಸು ಸತ್ತಾಗ ಎಲ್ಲರ ನಂಬಿಕೆಯು ನಡುಗುವದು ಆದರೂ ಅವರು ಆತನು ಸತ್ತವರೊಳಗಿಂದ ಎದ್ದು ಬರುವದನ್ನು ನೋಡುವಾಗ ಪು ನಃ ನಂಬಿಕೆಯನ್ನು ಸ್ಥಿರಪಡಿಸಿಕೊಳ್ಳುವರು (ಮಾರ್ಕ 16:6-7) ಅವರು ಯೇಸುವನ್ನು ತೊರೆದು ಬಿಟ್ಟರೂ, ಆತನು ಅವರನ್ನು ತೊರೆದು ಬಿಡುವದಿಲ್ಲ.

**29-31** ಪೇತ್ರನೂ ದೊಡ್ಡ ಬಾಯಿವು ಳ್ಳವನು, ಆದರೆ ಚಿಕ್ಕ ನಂಬಿಕೆಯವನಾಗಿದ್ದನು. ಅವನು ಗರ್ವಿಷ್ಟವಾಗಿದ್ದನು (1 ಕೋರಿಂಥ 10:12 ಮತ್ತು ವ್ಯಾಖ್ಯಾನ ನೋಡಿರಿ) ಹೇಗೂ ಪೇತ್ರನು ಮಾತ್ರವೇ ಅಲ್ಲ, ಆದರೆ ಇತರ ಎಲ್ಲಾ ಶಿಷ್ಯರು ಸಹ ತಾವು ದೃಡವಾಗಿ ನಿಲುತ್ತೇವೆಂದು ಹೇಳಿದರು. ಆದಾಗ್ಯೂ ಯೇಸು ಬಂದಿಸಲ್ಪಟ್ಟಾಗ ಅವರೆಲ್ಲರು ಪಲಾಯನ ಮಾಡಿದರು (ವ.50) ಯೇಸು ದೇವರನ್ನು ಹೊರತು ಪಡಿಸಿ ಒಬ್ಬಂಟಿಗನಾಗಿಯೇ ಮರಣ ಹೊಂದಿದನು. ಆತನ ಶಿಷ್ಯರಲ್ಲಿ ಒಬ್ಬನಾದರೂ ಆತನಿಗೆ ನಂಬಿಗಸ್ತರಾಗಿ ಉಳಿಯಲಿಲ್ಲ. ಎಲ್ಲರೂ ಆತನನ್ನು ಕೈಬಿಟ್ಟರು.[104]

## ಗೆತ್ಸೇಮನೆ (14:32-42)

(ಮತ್ತಾಯ 26:36-46, ಲೂಕ 22:39-46)

**32-33** ಯೇಸು ತನ್ನ ಎಂಟು ಮಂದಿ ಶಿಷ್ಯರಿಗೆ "ಇಲ್ಲೇ ಕುಳಿತು ಕೊಳ್ಳಿರಿ, ನಾನು ಪ್ರಾರ್ಥನೆ ಮಾಡಿ ಬರುತ್ತೇನೆ" ಎಂದು ಪೇತ್ರ, ಯಾಕೋಬ, ಯೋಹಾನರನ್ನು ಗೆತ್ಸೇಮನೆ ತೋಟದಲ್ಲಿನ ಇನ್ನೊಂದು ಸ್ಥಳಕ್ಕೆ ಕರೆದು ಕೊಂಡು ಹೋದನು (ಮಾರ್ಕ 5:37, 9:2). ಆತನು ಬೆಚ್ಚಿಬೆರಗಾಗಿ ಮನಗುಂದಿದನಾದನು. ಆತನು ಮರಣ ಮತ್ತು ನೋವಿಗಾಗಿ ಹೆದರಿದ್ದನೆಂಬ ಕಾರಣಕ್ಕಾಗಿ ಅಲ್ಲ ಆದರೆ. ಆತನು ಸ್ವಲ್ಪಕಾಲ ದೇವರಿಂದ ಬೇರ್ಪಡಲಿದ್ದನೆಂಬ ಕಾರಣಕ್ಕಾಗಿಯೇ. ಆತನು ಮಾನವ ಜನಾಂಗದವಿರುದ್ಧದ ದೇವರ ಪೂರ್ಣ ಕೋಪಾಗ್ನಿಯನ್ನು ಪಡೆದು ಕೊಳ್ಳಲಿದ್ದನು. ಆತನು ನಮ್ಮ ಪಾಪದ ದಂಡನೆಯನ್ನು ತನ್ನ ಮೇಲೆ ತೆಗೆದುಕೊಳ್ಳಲಿದ್ದನು, ಹೀಗೆ ನಾವು ಆತನಲ್ಲಿ ನಂಬಿಕೆಯಿಟ್ಟು ದೇವರ ಕೋಪ ದಿಂದ ತಪ್ಪಿಸಿಕೊಂಡು ರಕ್ಷಣೆಯನ್ನು ಪಡೆದುಕೊಳ್ಳುವದು ಆತನ ಚಿತ್ತವಾಗಿತ್ತು (ಮಾರ್ಕ 10:45 ಮತ್ತು ವ್ಯಾಖ್ಯಾನ ನೋಡಿರಿ).

**34** ನನ್ನ ಪ್ರಾಣವು ಸಾಯುದಷ್ಟು ದುಃಖಕ್ಕೆ ಒಳಗಾಗಿದೆ. ಇಲ್ಲಿ ನಾವು ಯೇಸು ಸಂಪೂರ್ಣ ದೇವರು ಮಾತ್ರವಲ್ಲ ಆದರೆ ಸಂಪೂರ್ಣವಾಗಿ ಮಾನವನೂ ಆಗಿದ್ದಾನೆಂಬದನ್ನು ನೋಡುತ್ತೇವೆ. ಆತನ ಈ ದುಃಖದಲ್ಲಿ ಆತನ ಮೂವರು, ಆಪ್ತ ಶಿಷ್ಯರು ತನ್ನನ್ನು ಬೆಂಬಲಿಸಿ ಆಧರಿಸಬೇಕು ಎಂದು ಇಚ್ಚಿಸಿದನು. ಆತನು ಅವರಿಗೆ "ನೀವು ಇಲ್ಲೇ ಇದ್ದು ಎಚ್ಚರವಾಗಿರಿ" ಎಂದು ಹೇಳಿದನು (ಮತ್ತಾಯ 26:38).

**35-36** ಯೇಸು ಸ್ವತಃ ಮನುಷ್ಯರು ಅನುಭವಿಸಿದ ಎಲ್ಲಾ ಶೋಧನೆಗಳನ್ನು ಅನುಭನಿಸಿದನು (ಇಬ್ರಿಯ 4:15) ಆದರೆ ಆತನು ಇನ್ನು ಎಷ್ಟೋ ಅನುಭವಿಸಿದನು. ಆತನು ಪಟ್ಟಂತ ವೇದನೆಯನ್ನು ನಾವು ಎಂದಿಗೂ ಅರ್ಥಮಾಡಿಕೊಳ್ಳಲಾರೆವು. ಆತನು ಪಾಪರಹಿತನಾಗಿದ್ದು ನಮ್ಮ ಪಾಪಗಳ ದಂಡನೆಯಾದ ಮರಣ ಮತ್ತು ದೇವರಿಂದ ಅಗಲುವಿಕೆಯನ್ನು ಅನುಭವಿಸಿದನು (ರೋಮ 8:3). ಪಾಪರಹಿತ ದೇವಕುಮಾರನು ನಮಗಾಗಿ ಪಾಪಿಯಾಗಿ ಮಾಡಲ್ಪಟ್ಟನು (2 ಕೊರಿಂಥ 5:21) ಕ್ರಿಸ್ತನು ಪ್ರತಿಯೊಬ್ಬರಿಗಾಗಿ ಮರಣವನ್ನು ಅನುಭವಿಸಿದನು (ಇಬ್ರಿಯ 2:9), ಹೀಗೆ ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು– ಅಂದರೆ, ಸೈತಾನನನ್ನು ಅಡಗಿಸಿ ಬಿಡುವದಕ್ಕು "ಶಕ್ತನಾದನು" (ಇಬ್ರಿಯ 2:14). ಕ್ರಿಸ್ತನು ತನ್ನ ಮರಣದ ಮೂಲಕ ತನ್ನ ಬಳಿಗೆ ನಂಬಿಕೆಯಿಂದ ಬರುವ ಎಲ್ಲರಿಗೂ ರಕ್ಷಣೆಯನ್ನು ಸುಲಭ ಮಾಡಿದ್ದಾನೆ(ರೋಮ 5:8-10).

ಮೊದಲಿಗೆ ಯೇಸು ಈ ಗಳಿಗೆಯು ಅಂದರೆ, ಆತನ ಮರಣ ಮತ್ತು ದೇವರಿಂದ ಅಗಲುವಿಕೆಯು ತನ್ನನ್ನು ಬಿಟ್ಟು ಹೋಗುವಂತೆಯು ಕೇಳಿ ಕೊಂಡನು. ಆತನು ದೇವರಿಗೆ ಮಾನವರನ್ನು ರಕ್ಷಿಸಲು ಬೇರಾವದಾದರೂ ಮಾರ್ಗವಿರುತ್ತದೋ ಎಂದು ಕೇಳಿದನು. ದೇವರು ಇಷ್ಟಪಟ್ಟಿದ್ದರೆ ನಿಶ್ಚಯವಾಗಿಯು ಇನ್ನೊಂದು ಮಾರ್ಗವನ್ನು ಕಂಡು ಕೊಂಡಿರುತ್ತಿದ್ದನು "ಆತನು ಅಪ್ಪ [105] ತಂದೆಯೇ ನಿನಗೆ ಎಲ್ಲವೂ ಸಾಧ್ಯ" ಅಂದನು ಯೇಸು "ಈ ಪಾತ್ರೆಯನ್ನು ನನ್ನಿಂದ ತೊಲಗಿಸು" ಎಂದು ಪ್ರಾರ್ಥಿಸಿದನು. ಈ ಪಾತ್ರೆಯು ದೇವರ ಕೋಪಾಘ್ನೆಯ ಪಾತ್ರೆಯಾಗಿತ್ತು (ಯೇಶಾಯ 51:17, ಮಾರ್ಕ 10:38).

ತಾನು ಶಿಲುಬೆಯ ಮೇಲೆ ಸಾಯಬಾರದೆಂಬುದು ಕ್ರಿಸ್ತನ ಇಚ್ಛೆಯಾಗಿತ್ತು. ಕ್ರಿಸ್ತನು ದೇವಕುಮಾರನಾಗಿದ್ದರೂ ಸಹ ಆತನ ಸ್ವಂತ ಮಾನವನ ಬಯಕೆಯು, ದೇವರ ಬಯಕೆಗಿಂತ ವ್ಯತ್ಯಾಸವಾಗಿತ್ತು. ಆದ ಕಾರಣ ಆತನು ದೇವರಿಗೆ ತನ್ನನ್ನು ಉಳಿಸುವಂತೆ ಪ್ರಾರ್ಥನೆ ಮಾಡಿದನು. ಆದರೆ ಹಾಗೆ ಪ್ರಾರ್ಥಿಸಿದ ಬಳಿಕ ಅವನು ದೇವರ ಚಿತ್ತಕ್ಕೆ ಸಮರ್ಥಿಸಿಕೊಂಡನು. ಹೇಗೂ ನನ್ನ ಚಿತ್ತದಂತೆ ಅಲ್ಲ ನಿನ್ನ ಚಿತ್ತವೇ ಆಗುವದು. ದೇವರ ಚಿತ್ತಕ್ಕೆ ಸಮರ್ಪಿಸಿಕೊಳ್ಳುವದರ ಮೂಲಕ ಯೇಸು ಸೈತಾನನ ಮೇಲೆ ಜಯ ಹೊಂದಿದನು. ಇದರಲ್ಲಿ ನಮಗೆ ಒಂದು ಮಾದರಿಯನ್ನು ನೀಡುತ್ತಾನೆ. ಏನಂದರೆ ನಾವು ಸಹ ಎಲ್ಲಾ ಸಂಗತಿಗಳಲ್ಲಿ ದೇವರ ಚಿತ್ತವನ್ನೆ ಹೊರತು ನಮ್ಮ ಚಿತ್ತವನ್ನು ಹುಡುಕುವವರಾಗಿಬಾರದು.

**37-38** ಕ್ರಿಸ್ತನು ಪ್ರಾರ್ಥಿಸುತ್ತಿರುವಾಗ ಶಿಷ್ಯರು ನಿದ್ರೆಮಾಡುತ್ತಿದ್ದರು. ಸೈತಾನನು ಅವರ ಮೇಲೆ ಬರದಂತೆ ಅವರು ಎಚ್ಚರವಾಗಿದ್ದು ಯೇಸುವಿಗಾಗಿ ತಮಗಾಗಿಯೂ ಪ್ರಾರ್ಥಿಸುತ್ತಿರಬೇಕಾಗಿತ್ತು. ಅನೇಕ ವರ್ಷಗಳ ನಂತರ ಪೇತ್ರನು ತನ್ನ ಮೊದಲನೆಯ ಪತ್ರಿಕೆಯಲ್ಲಿ ಸೈತಾನನು ಗರ್ಜಿಸುವ ಸಿಂಹನೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ತಿರುಗುವವನಾಗಿದ್ದಾನೆ. ಆದ್ದರಿಂದ ಕ್ರೈಸ್ತರು ಸ್ವಸ್ಥ ಚಿತ್ತರಾಗಿಯೂ ಎಚ್ಚರವಾಗಿಯೂ ಇರಬೇಕೆಂದು ಎಚ್ಚರಿಸಿದನು (1 ಪೇತ್ರ 5:8) ಆದರೆ ಗೆತ್ಸೇಮನೆ ತೋಟದಲ್ಲಿ ಪೇತ್ರನು ನಿದ್ರೆಹೊದನು ಮತ್ತು ಶೀಘ್ರವೇ ಸೈತಾನನಿಗೆ ಬೇಟೆಯಾದನು (ವ.ಗಳು 66 ರಿಂದ 72 ನೋಡಿರಿ) ಪೇತ್ರನು ಮಾತ್ರವೇ ಅಲ್ಲ ಉಳಿದ ಶಿಷ್ಯರೆಲ್ಲರೂ (ಯೇಸುವನ್ನು ತೊರೆದು ಪಲಾಯನ ಮಾಡಿದರು (ವ.50) ಇಂದು ಯೇಸು ಪ್ರತಿಯೊಬ್ಬ ವಿಶ್ವಾಸಿಗೂ "ನೀವು ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ" ಎಂದು ನಿರಂತರವಾಗಿ ಹೇಳುತ್ತಿದ್ದಾನೆ (ಮತ್ತಾಯ 6:13) ಎಷ್ಟೋ ವೇಳೆಗಳಲ್ಲಿ ನಮ್ಮ ಶರೀರಗಳು ಎಚ್ಚರವಾಗಿದ್ದರೂ ನಾವು ಆತ್ಮೀಕವಾಗಿ ನಿದ್ರೆಮಾಡುತ್ತಿರುತ್ತೇವೆ, ಪ್ರತಿದಿನ ನಾವು ಎಷ್ಟು ಸಾರಿ ಪ್ರಾರ್ಥಿಸುತ್ತೇ, ಎಷ್ಟು ಸಾರಿ ನಾವು ಯೇಸುವಿನ ಬಗ್ಗೆ ಯೋಚನೆ ಮಾಡುತ್ತೇವೆ, ನಾವು ಸೈತಾನನ್ನು ಜಯಿಸಬೇಕಾದರೆ ಎಚ್ಚರವಾಗಿದ್ದು ಪ್ರಾರ್ಥಿಸಬೇಕು. ನಮ್ಮ ಮಾನವ ಅತ್ಮಿಗಳು ಯೇಸುವಿನೊಂದಿಗೆ ಎಚ್ಚರವಾಗಿರಲು ಇಚ್ಚೆಹೊಂದಿವೆ. ಆದರೆ ನಮ್ಮ ಶರೀರಗಳು ಬಲಹೀನವಾಗಿವೆ (ವ.38). ಬೇಸ್ತರಾದ ಪೇತ್ರ ಯಾಕೋಬ, ಯೋಹಾನರು, ಗಲಿಲಾಯ ಸಮುದ್ರದಲ್ಲಿ ತಮ್ಮ ದೋಣಿಗಳಲ್ಲಿ ಎಷ್ಟೋ ರಾತ್ರಿಗಳನ್ನು ನಿದ್ರೆ ಇಲ್ಲದೆ ಕಳೆದವರಾಗಿದ್ದರೂ ಅವರು ಸಹ ಯೇಸುವಿನೊಂದಿಗೆ ಎಚ್ಚರವಾಗಿರಲು ಆಗಲಿಲ್ಲ. ಅವರು ಕ್ರಿಸ್ತನಿಗಾಗಿ ಸಾಯಲುಸಿದ್ದರು ಎಂದು ಹೇಳಿದ್ದರು (ವ.31) ಆದರೆ ಪರೀಕ್ಷೆಯ ಸಮಯವು ಬಂದಾಗ ಅವರು ಯೇಸುವಿನೊಂದಿಗೆ ಒಂದು ಗಳಿಗೆಯಾದರೂ

ಎಚ್ಚರವಾಗಿರಲು ಆಗಲಿಲ್ಲ. ಯೇಸುವಿಗಾಗಿ ಜೀವಿಸುವದಕ್ಕಿಂತಲೂ ಆತನಿಗಾಗಿ ಮರಣಿಸುವದು ಸುಲಭ ಎಂಬ ನುಡಿಯು ಎಷ್ಟು ಸತ್ಯ!!

**39-40** ಯೇಸು ತಿರಿಗಿ ಎರಡು ಸಾರಿ ಹೊರಟು ಹೋಗಿ ಪ್ರಾರ್ಥಿಸಿದನು. ಪರಲೋಕದಿಂದ ಒಬ್ಬ ದೇವದೂತನು ಕಾಣಿಸಿಕೊಂಡು ಅವನನ್ನು ಬಲಪಡಿಸಿದನು. (ಲೂಕ 22:43), ಆತನ ಮನೋವ್ಯಥೆಯು ಎಷ್ಟು ದೊಡ್ಡದಾಗಿತ್ತೆಂದರೆ ಆತನ ಬೆವರು ದೊಡ್ಡ ರಕ್ತದ ಹನಿಗೋಳೋಪಾದಿಯಲ್ಲಿ ಬೀಳುತ್ತಿದ್ದವು (ಲೂಕ 24:42)

**41-42** ಯೇಸು ಪ್ರತಿ ಸಾರಿ ತಿರಿಗಿ ಬಂದಾಗಲೆಲ್ಲಾ ಶಿಷ್ಯರು ನಿದ್ರಿಸುವದನ್ನು ಕಂಡನು. ಆಗ ಆತನು ಯೂದ ಮತ್ತು ಯಹೂದ್ಯನಾಯಕರು ಕಳುಹಿಸಿದ ಒಂದು ದೊಡ್ಡ ಗುಂಪು ಅವನನ್ನು ಬಂದಿಸಲು ಬರುವದನ್ನು ಕಂಡನು "ಏಳಿರಿ! ಹೋಗೋಣ" ಎಂದು ತನ್ನ ಶಿಷ್ಯರಿಗೆ ಹೇಳಿದ್ದು, ಅವರು ಪಲಾಯನ ಮಾಡಬೇಕೆಂದು ಅರ್ಥವಾಗಿರಲಿಲ್ಲ. ಆದರೆ ಅವರ ವೈರಿಗಳನ್ನು ಸಂದಿಸಲು ಹೋಗಬೇಕೆಂಬುದಾಗಿತ್ತು.

## ಯೇಸು ಬಂದಿಸಲ್ಪಟ್ಟಿದ್ದು (14:43-52)

(ಮತ್ತಾಯ 26:47-56, ಲೂಕ 22:47-53, ಯೋಹಾನ 18:1-11)

**43** ಯೂದ ಮತ್ತು ಜನರ ಗುಂಪು ಕಾಣಿಸಿದಾಕ್ಷಣವೇ ಯೇಸು ತನ್ನ ಮೇಲೆ ಬರುವದನ್ನೆಲ್ಲಾ ತಿಳಿದು ಹೊರಗೆ ಹೋಗಿ ನೀವು ಯಾರನ್ನು ಹುಡುಕುತ್ತೀರಿ ಎಂದು ಕೇಳಿದನು (ಯೋಹಾನ 18:4) ಅವರು ನಜರೇತಿನ ಯೇಸುವನ್ನು ಹುಡುಕುತ್ತಿದ್ದೇವೆ ಎಂದು ಉತ್ತರಿಸಿದಾಗ "ನಾನೇ ಅವನು" ಎಂದು ಯೇಸು ಹೇಳಿದನು. ಹಾಗೇ ಹೇಳಿದಾಗ ಅವರು ಹಿಂದಕ್ಕೆ ಸರಿದು ನೆಲದ ಮೇಲೆ ಬಿದ್ದರು (ಯೋಹಾನ 18:5-6), ಒಂದಿಲ್ಲಾ ಒಂದು ವಿಧದಲ್ಲಿ ಆ ಜನರ ಗುಂಪು ಯೇಸು ಒಬ್ಬ ಸಾಮಾನ್ಯ ಮನುಷ್ಯನಲ್ಲ ಎಂಬುದನ್ನು ಬಲ್ಲವರಾಗಿದ್ದರು. ಆತನು "ನಾನೇ ಅವನು" ಎಂದಾಗ ಅವರು ಭಯಹಿಡಿದವರಾದರು. ನಂತರ ಯೋಹಾನ 18:8-9ರ ಪ್ರಕಾರವಾಗಿ ತನ್ನ ಶಿಷ್ಯರನ್ನು ಹೋಗಗೊಡುವಂತೆ ಎಂದು ಅವರನ್ನು ಕೇಳಿಕೊಂಡನು. ಆ ಜನರು ಅದಕ್ಕೆ ವಿಧೇಯರಾದರು. ಈ ರೀತಿಯಾಗಿ ಯೋಹಾನ 6:39 ಮತ್ತು 7:12 ರಲ್ಲಿನ ಯೇಸುವಿನ ಮಾತುಗಳು ನೆರವೇರಿದವು.

**44-47** ನಂತರ ಯೇಸುವಿನ ಶಿಷ್ಯನೇ ಆದ ಯೂದನು ಆತನು ಮುದ್ದಿಡುವದರ ಮೂಲಕ ಹಿಡಿದುಕೊಟ್ಟನು. ಆ ಗುಂಪು ಯೇಸುವನ್ನು ಹಿಡಿದುಕೊಂಡರು. ಮತ್ತು ಪೇತ್ರನು ಎಚ್ಚತ್ತುಕೊಂಡನು. ಆತನು ತಕ್ಷಣವೇ ಏನು ನಡೆಯುತ್ತದೆ ಎಂಬುದನ್ನು ಗ್ರಹಿಸಿಕೊಂಡನು. ಆತನು ಶೀಘ್ರವೇ ಕ್ರಿಯಾಶೀಲನಾದನು. ಆದರೆ ಆತನು ಮಾಡಿದ್ದೇನು? ಹುಚ್ಚುತನದ ಕಾರ್ಯವನ್ನು ಮಾಡಿದನು. ಆತನು ಮಹಾ ಯಾಜಕನ ಆಳಿನ ಕಿವಿಯನ್ನು ಕತ್ತರಿಸಿದನು (ಯೋಹಾನ 18:10) ಮುಖ್ಯ ಶಿಷ್ಯನಾದ ಪೇತ್ರನು ನಿದ್ರೆ ಮಾಡುತ್ತಿದ್ದನು ಇಲ್ಲವೆ ದೇವರಿಗಾಗಿಏನನ್ನು ಮಾಡುತ್ತಿದ್ದಿಲ್ಲ ಅಥವಾ ಆತನು ಎಚ್ಚೆತ್ತು ಕೊಂಡು ದೇವರಿಗೆ ವಿರುದ್ದವಾದದ್ದನ್ನು ಮಾಡುತ್ತಿದ್ದನು. ಯೇಸು ಬಾದೆ ಪಟ್ಟು ಸಾಯ ಬೇಕೆಂಬುದು ದೇವರ ಯೋಜನೆಯಾಗಿದೆ ಎಂಬುದನ್ನು ಪೇತ್ರನು ಇನ್ನೂ ಅರ್ಥ ಮಾಡಿಕೊಳ್ಳಲಾಗಲಿಲ್ಲ. ಬಳಿಕಯೇಸು ಪೇತ್ರನನ್ನು ಬೆದರಿಸಿ ಆ ಆಳಿನ ಕಿವಿಯನ್ನು ಗುಣಪಡಿಸಿದನು (ಲೂಕ 22:51) ಆಗ ಆತನು ಪೇತ್ರನಿಗೆ ಕತ್ತಿಯನ್ನು ಹಿರಿಯುವವನು ಕತ್ತಿಯಿಂದಲೇ ಸಾಯುವನು ಎಂದು ಹೇಳಿದನು.

(ಮತ್ತಾಯ 26:52) ಅಂದರೆ ಹಿಂಸೆಯು ಯಾವಾಗಲು ಹಿಂಸೆಗೆ ದಾರಿಮಾಡಿಕೊಡುತ್ತದೆ. ಒಂದು ವೇಳೆ ಶಿಷ್ಯರು ಆ ಸಮಯದಲ್ಲಿ ಆ ಗುಂಪಿನೊಂದಿಗೆ ಹೋರಾಡಲು ಪ್ರಯತ್ನಿಸಿದ್ದರೆ, ಅವರೆಲ್ಲರೂ ಕೊಲ್ಲಲ್ಪಡುತ್ತಿದ್ದರು. ಯಾವ ಪರಸ್ಥಿತಿಯಲ್ಲಾಗಲಿ ಕತ್ತಿಯನ್ನು ಹಿಡಿಯುವದು ತಪ್ಪು ಎಂದು ಇಲ್ಲಿ ಕಲಿಸುತ್ತಿಲ್ಲ! ಯೇಸು ಆ ಕ್ಷಣದಲ್ಲಿನ ಸನ್ನಿವೇಶದ ಕುರಿತು ಮಾತ್ರವೇ ಮಾತನಾಡುತ್ತಿದ್ದಾನೆ. ಅನೇಕ ಸಂದರ್ಭಗಳಲ್ಲಿ ಕತ್ತಿಯನ್ನು ಹಿರಿದು ಸಾಯದೆ ಉಳಿದಿರುವವ .[106] ರ ಅನೇಕ ಉದಾಹರಣೆಗಳನ್ನು ಬಲ್ಲೆವು. ಬಳಿಕ ಯೇಸು ಪೇತ್ರನಿಗೆ ದೇವರು ಅವನನ್ನು ರಕ್ಷಿಸಲು ಬಯಸಿದ್ದರೆ ತಕ್ಷಣವೇ ದೇವದೂತರ ದಂಡುಗಳನ್ನು ಕಳುಹಿಸಿರುತ್ತಿದ್ದನು ಎಂದು ಜ್ಞಾಪಕಪಡಿಸಿದನು (ಮತ್ತಾಯ 26:53-54) ಆದರೆ ಅದು ದೇವರ ಯೋಜನೆಯಾಗಿರಲಿಲ್ಲ.

ದೇವರಿಗೆ ತನ್ನ ಉದ್ದೇಶವನ್ನು ನೆರವೇರಿಸಲು ಪೇತ್ರನ ಸಹಾಯದ ಅವಶ್ಯಕತೆ ಇರಲಿಲ್ಲ. ಮತ್ತು ಆತನಿಗೆ ನಮ್ಮ ಸಹಾಯದ ಅಗತ್ಯವೂ ಸಹ ಇಲ್ಲವೆಂಬುದನ್ನು ನಾವು ಜ್ಞಾಪಕದಲ್ಲಿಟ್ಟು–ಕೊಳ್ಳುವದು ಉತ್ತಮ. ನಮ್ಮಲ್ಲಿ ಯಾರೂ ಕೂಡಾ ಅತ್ಯವಶ್ಯವಾದವರೂ ಆಗಿರುವದಿಲ್ಲ. ನಾವು ಆತನನ್ನು ಸೇವಿಸಲಿ ಅಥವಾ ಸೇವಿಸದಿರಲಿ ಆತನು ತನ್ನ ಉದ್ದೇಶವನ್ನು ನೆರವೇರಿಸಲು ಶಕ್ತನಾಗಿದ್ದಾನೆ. ಹೇಗೂ ತನ್ನ ಅನೇಕ ಉದ್ದೇಶಗಳನ್ನು ಬಲಹೀನ ಮತ್ತು ವಿಫಲರಾಗುವ ಪೇತ್ರ ಮತ್ತು ನಮ್ಮಂತಹ ಮಾನವ ಜೀವಿಗಳ ಮೂಲಕ ನೆರವೇರಿಸಲು ಇಚ್ಚಿಸಿರುವದು ಕೂಡಾ ಅಷ್ಟೇ ಸತ್ಯ.

**48-49** ಆದರೆ ಶಾಸ್ತ್ರ ವಚನಗಳು ನೆರವೇರುವಂತೆ ಇದೆಲ್ಲಾ ಆಯಿತು ಯೇಶಾಯ 53:12ರ ಪ್ರಕಾರವಾಗಿ ಯೇಸು ಅಪರಾಧಿಗಳಲ್ಲಿ ಒಬ್ಬನಾಗಿ ಎಣಿಸಲ್ಪಟ್ಟನು. ಆದ್ದರಿಂದ ಯೇಸು ನೇಮ ಮೀರಿದ ಒಬ್ಬ ಪ್ರಮುಖ ದಂಗೆಕೋರನೋ ಎಂಬಂತೆ ಆ ರಾತ್ರಿಯಲ್ಲಿ ಸಿಪಾಯಿಗಳ ಗುಂಪು ಕತ್ತಿಗಳನ್ನು, ಭರ್ಚಿಗಳನ್ನು ಹಿಡಿದುಕೊಂಡು ಬಂದಿದ್ದರು.

**50** ಶಿಷ್ಯರು ಇನ್ನು ಯಾವ ನಿರೀಕ್ಷೆ ಇಲ್ಲ ಎಂಬುದನ್ನು ಕಂಡಾಗ ಯೇಸುವನ್ನು ತೊರೆದು ಅವರೆಲ್ಲರೂ ಪಲಾಯನ ಮಾಡಿದರು. (ವ.27). ಈ ಕ್ಲುಪ್ತ ವಚನವು ಹೊಸ ಒಡಂಬಡಿಕೆಯಲ್ಲಿ ಅತೀ ದುಃಖದ ವಚನಗಳಲ್ಲಿ ಒಂದಾಗಿದೆ. ಆದರೆ ಅದೇ ಸಮಯದಲ್ಲಿ ಯೇಸು ಸತ್ತವರೊಳಗಿಂದ ಎದ್ದು ಬಂದನೆಂಬುದಕ್ಕೆ ಇದು ಅತೀ ಶ್ರೇಷ್ಟ ಆಧಾರಗಳಲ್ಲಿ ಒಂದಾಗಿರುತ್ತೆ. ಒಂದು ವೇಳೆ ಯೇಸು ಸತ್ತವರೊಳಗಿಂದ ಎದ್ದು ಬರಲಿಲ್ಲವಾಗಿದ್ದರೆ ಈ ಶಿಷ್ಯರುಗಳಲ್ಲಿ ಯಾರೂ ಆತನ ಬಗ್ಗೆ ಮಾತನಾಡುತ್ತಿರಲಿಲ್ಲ ಮತ್ತು ಅವರ ಸುದ್ದಿಯು ಇರುತ್ತಿರಲಿಲ್ಲ. ಕ್ರೈಸ್ತತ್ವವು ಇದೇ ವಚನದಲ್ಲಿಯೇ ಅಂತ್ಯಗೊಳ್ಳುತಿತ್ತು.

**51-52** ಒಬ್ಬ ಯೌವ್ವನಸ್ಥನು ತನ್ನ ನಾರುಮಡಿಯನ್ನು ಜನರ ಕೈಯಲ್ಲಿಯೇ ಬಿಟ್ಟು ಬರೀ ಮೈಲಿ ಓಡಿಹೋದನು. ಬೈಬಲ್ ಪಂಡಿತರು ಈ ಯೌವ್ವನಸ್ಥನು ಈ ಮಾರ್ಕನ ಸುವಾರ್ತೆಯ ಗ್ರಂಥ ಕರ್ತನಾದ ಮಾರ್ಕನೇ ಎಂದು ನಂಬುತ್ತಾರೆ. ಅಲ್ಲದೆ ಯೇಸು ತನ್ನ ಕೊನೆಯ ರಾತ್ರಿ ಭೋಜನವನ್ನು ಮಾಡಿದ ಯಜಮಾನನ ಮಗನೇ ಮಾರ್ಕನೆ ಎಂದು ನಂಬುತ್ತಾರೆ (ವ.14).

## ಹಿರಿ ಸಭೆಯ ಮುಂದೆ (14:53-65)

(ಮತ್ತಾಯ 26:57-68 ಲೂಕ 22:63-71)

**53** ಯೋಹಾನನ ಸುವಾರ್ತೆಯ ಪ್ರಕಾರವಾಗಿ ಆ ಗುಂಪಿನಲ್ಲಿ ಸಿಪಾಯಿಗಳು, ಯೆಹೂಧ್ಯ ಅಧಿಕಾರಿಗಳು ಇದ್ದರು. (ಯೋಹಾನ 18:3,12) ಅವರು ಯೇಸುವನ್ನು ಮೊದಲು ಮಹಾ ಯಾಜಕನ ಮಾವನಾದ ಅನ್ನನ ಬಳಿಗೆ ಕರೆದುಕೊಂಡು ಬಂದನು (ಯೋಹಾನ 18:13-14, 19:24 ನೋಡಿರಿ). ಬಳಿಕ ಅವರು ಆತನನ್ನು ಮಹಾ ಯಾಜಕನಾದ ಕಾಯಫನ ಬಳಿಗೆ ಕರೆದುಕೊಂಡು ಬಂದರು (ಮತ್ತಾಯ 26:57).

**54** ಪೇತ್ರನು ದೂರದಿಂದ ಹಿಂಬಾಲಿಸಿದನು. ಆತನು ಯೇಸುವಿಗೆ ನಂಬಿಗಸ್ಥನಾಗಿರಬೇಕೆಂದು ಹಿಂಬಾಲಿಸಲಿಲ್ಲ, ಆದರೆ ಕಾತುರತೆಯಂದ ಹಿಂಬಾಲಿಸುತ್ತಿದ್ದನು ಮತ್ತಾಯ 26:58 ರ ಪ್ರಕಾರವಾಗಿ ಆತನು ಮಹಾಯಾಜಕನಾದ ಕಾಯಫನ ಅಂಗಳದಲ್ಲಿ ಪ್ರವೇಶಿಸಿ ಆತನ ಗತಿ ಏನಾಗುವದೋ ನೋಡಬೇಕೆಂದು ಕಾವಲುಗಾರರ ಸಂಗಡ ಕುಳಿತುಕೊಂಡನು.

**55-56** ಯೆಹೂದ್ಯ ನಾಯಕರು ಮದ್ಯರಾತ್ರಿಯಲ್ಲಿ ಕಾಯಫನ ಮನೆಗೆ ಹೋಗಿ ಅವನನ್ನು ಸಂಧಿಸಿದರು. ನಂತರ ಬೆಳಗಾಗುತ್ತಿದ್ದಂತೆ ಹಿರಿಸಭೆಯವರೆಲ್ಲರೂ ಸೇರಿ ಬಂದರು (ಲೂಕ 22:66). ಆ ಸಭೆಯಲ್ಲಿ 70 ಸದಸ್ಯರಿದ್ದು ಯೆಹೂದ್ಯರ ಆಳುವ ಗುಂಪಾಗಿತ್ತು ಯೆಹೂದ್ಯ ಜನಾಂಗಕ್ಕೆ ಸಂಬಂದಿಸಿದ ಎಲ್ಲಾ ಧಾರ್ಮಿಕ ವಿಷಯಗಳ ಮೇಲೆ ಆ ಸಭೆಗೆ ಅಧಿಕಾರವಿತ್ತು. ಹಿರೀಸಭೆಯ ಕ್ರಿಸ್ತನ ವಿರುದ್ದದ ಆರೋಪವನ್ನು ಒಪ್ಪಿಕೊಳ್ಳುವ ಇಬ್ಬರು ಸಾಕ್ಷಿಗಳನ್ನು ಹುಡುಕಿದರು. ಯೆಹೂದ್ಯ ಧರ್ಮ ಶಾಸ್ತ್ರದ ಪ್ರಕಾರ ಒಬ್ಬ ಮನುಷ್ಯನಿಗೆ ಇಬ್ಬರು ಸಾಕ್ಷಿಗಳಿಲ್ಲದೆ ಆತನನ್ನು ಅಪರಾದಿಯೆಂದು ತೀರ್ಪು ನಾಡಬಾರದಾಗಿತ್ತು (ಧರ್ಮೋಪದೇಶಕಾಂಡ 17:6, 19:15). ಆದರೆ ಆರೋಪವನ್ನು ಒಪ್ಪಿಕೊಂಡ ಇಬ್ಬರು ಸಾಕ್ಷಿಗಳು ಸಿಕ್ಕಲಿಲ್ಲ! ಸಾಕ್ಷಿಗಳ ಆರೋಪಗಳು ಒಂದಕ್ಕೊಂದು ವಿರುದ್ದವಾಗಿದ್ದವು. ಆದ ಕಾರಣ ಅವರನ್ನು ಯೇಸುವಿನ ವಿರುದ್ದ ಸಾಕ್ಷಿಯಾಗಿ ಸ್ವೀಕರಿಸಲಾಗಲಿಲ್ಲ.

**57-59** ಬಳಿಕ ಕೆಲವು ಸುಳ್ಳು ಸಾಕ್ಷಿಗಾರರು ಯೇಸು ತಾನು "ಮನುಷ್ಯನು ಕಟ್ಟಿದ ದೇವಾಲಯವನ್ನು ಕೆಡುವಿ ಬಿಟ್ಟು ಮತ್ತೊಂದನ್ನು ಮೂರು ದಿನಗಳಲ್ಲಿ ಕಟ್ಟುವೆನು" ಎಂದು ಹೇಳಿದನೆಂದು ಆರೋಪಿಸಿದರು, ಅವರು ಯೇಸುವಿನ ಮಾತನ್ನು ತಪ್ಪಾಗಿ ಹೇಳುತ್ತಿದ್ದರು. ಯೇಸು "ದೇವಾಲಯವನ್ನು ಕೆಡುವಿರಿ ನಾನು ಅದನ್ನು ಮೂರು ದಿನಗಳಲ್ಲಿ ಪುನಃ ಕಟ್ಟುವೆನು" ಎಂದು ಹೇಳಿದನು 9ಯೋಹಾನ 2:19). ಆದರೆ ಯೇಸು ಯರೊಸಲೇಮಿನಲ್ಲಿದ್ದ ದೇವಾಲಯದ ಬಗ್ಗೆ ಮಾತನಾಡುತ್ತಿದ್ದಿಲ್ಲ! ಆತನು ತನ್ನ ದೇಹವೆಂಬ ದೇವಾಲಯದ ಕುರಿತು ಮಾತನಾಡುತ್ತಿದ್ದನು. (ಯೋಹಾನ 2:21-22) ದೇವಾಲಯವನ್ನು ನಾಶ ಮಾಡುತ್ತೇನೆಂದು ಬೆದರಿಸುವದು ಯೆಹೂದ್ಯರ ದೃಷ್ಟಿಯಲ್ಲಿ ಮಹಾ ಗಂಭೀರ ಅಪರಾಧವಾಗಿತ್ತು (ಅ.ಕೃ. 6:12-14). ಆದರೆ ಆರೋಪವು ಗಂಭೀರವಾಗಿದ್ದರೂ ಯೇಸು ಏನು ಹೇಳಿದನು ಎಂಬುದರಬಗ್ಗೆ ಸಾಕ್ಷಿಗಾರರು ಭಿನ್ನಾಬಿಪ್ರಾಯ ಹೊಂದಿದ್ದರು (ವ.59)

**60-61** ಮಹಾ ಯಜಕನು ಯೇಸುವನ್ನು ಪ್ರಶ್ನಿಸತೊಡಗಿದನು. ಆದರೆ ಯೇಸು ಮೊದಲು ಮೌನವಾಗಿಯೇ ಇದ್ದನು. ಆತನು ತನ್ನ ವಿರುದ್ದದ ಆರೋಪಗಳಿಗೆ ವಾಗ್ವಾದ ಮಾಡಲಿಲ್ಲ (ಮಾರ್ಕ 15:3-5, 1 ಪೇತ್ರ 2:23), ಆತನು ವಧ್ಯ ಸ್ತಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ, ಉಣ್ಣೆ ಕತ್ತರಿಸುವವರ ಮುಂದೆ ಮೌನವಾಗಿ ಇರುವ ಕುರಿಯ ಹಾಗೂ ಇದ್ದನು. ಬಾಯಿ ತಗೆಯಲೇ ಇಲ್ಲ (ಯೇಶಾಯ 53:7) ಅವರ ಸಾಕ್ಷಿ ಒಂದಕ್ಕೊಂದು ಸರಿ ಬೀಳದೇ ಯಾವ ಆರೋಪವನ್ನು ಕಂಡುಕೊಳ್ಳಲಾಗದ ಮಹಾ ಯಾಜಕನು ಯೇಸುವನ್ನು ನೇರವಾಗಿ ಅವನು ಭಗವಂತನ ಕುಮಾರನಾದ ಕ್ರಿಸ್ತನೋ, ಮೆಸ್ಸೀಯನೋ ಎಂದು ಕೇಳಲು ತೀರ್ಮಾನಿಸಿದನು.

**62** ಯೇಸು "ನಾನೇ" ಎಂದು ಉತ್ತರಿಸಿದನು..ಮತ್ತಾಯ 26:64ರ ಪ್ರಕಾರವಾಗಿ ಯೇಸು "ಹೌದು" ನೀನು ಹೇಳಿದಂತೆಯೇ ಅಂದನು. ಕೆಲ ಬೈಬಲ್ ಆವೃತ್ತಿಗಳು ಇದನ್ನು "ನೀನೆ ಆದನ್ನು ಹೇಳಿದ್ದಿ" ಎಂದು ಭಾಷಾಂತರಿಸುತ್ತಾನೆ. ಇದು ಯೆಹೂದ್ಯರು ಹೌದು[107] ಎಂದು ಹೇಳುವದರ ಅಕ್ಷರಸಹ ಭಾಷಾಂತರವಾಗಿದೆ. ಇಲ್ಲಿ ಯೇಸು ಪ್ರಥಮ ಬಾರಿಗೆ ತಾನು ಮೆಸ್ಸೀಯನೆಂದು ಸಾರ್ವಜನಿಕವಾಗಿ ಒಪ್ಪಿಕೊಂಡನು. ಆದರೆ ಮಹಾ ಯಾಜಕನೂ ಊಹಿಸಿಕೊಂಡಂತಹ ಮೆಸ್ಸೀಯನು

ಮಾತ್ರವೇ ಆಗಿರಲಿಲ್ಲ. ಈತನು ಕಟ್ಟಡವನ್ನು ಕೆಡುವಿ ಅದನ್ನು ಮೂರು ದಿನದಲ್ಲಿ ಕಟ್ಟಬಲ್ಲಂತಹ ಒಬ್ಬ ಅದ್ಭುತ ಕೆಲಸಗಾರನು ಮಾತ್ರವೇ ಆಗಿರಲಿಲ್ಲ ಈತನು ಇಸ್ರಾಯೇಲನ್ನು ಅವಳ ಪಾಪದಿಂದ ಬಿಡಿಸಲು ದೇವರಿಂದ ಕಳುಹಿಸಲ್ಪಟ್ಟ ನಿಜ ಮೆಸ್ಸೀಯನಾಗಿದ್ದನು. ಈಗ ಆತನು ಒಬ್ಬ ಬಂದಿಯಾಗಿದ್ದರೂ ಆತನು ಒಂದು ದಿನ ಸರ್ವಶಕ್ತನಾದ ದೇವರ ಬಲಗಡೆಯಲ್ಲಿ ಕುಳಿತುಕೊಂಡು ಮೇಘಗಳೊಂದಿಗೆ ಬರುವದನ್ನು ಯೆಹೂದ್ಯನಾಯಕರು ಮತ್ತು ಮಹಾ ಯಾಜಕರು ನೋಡುವರು (ದಾನಿಯೇಲ 7:13, ಮಾರ್ಕ 13:26) ಈ ವಚನದಲ್ಲಿ ಯೇಸು ತನ್ನನ್ನು ಮನುಷ್ಯಕುಮಾರ ಮತ್ತು ದೇವಕುಮಾರ ಇಬ್ಬರಂತೆಯೂ ಗುರುತಿಸಿಕೊಳ್ಳುವದನ್ನು ನಾವು ಗಮನಿಸುತ್ತೇವೆ (ಮಾರ್ಕ 1:1, 2:10 ಮತ್ತು ವ್ಯಾಖ್ಯಾನ ನೋಡಿರಿ). ನಿಜವಾಗಿಯೂ ಆತನು ಸಂಪೂರ್ಣವಾಗಿ ಮಾನವ ಮತ್ತು ಸಂಪೂರ್ಣವಾಗಿ ದೇವರು ಎರಡೂ ಆಗಿದ್ದಾ.ನೆ ಆತನು ಮಾನವನ ರೂಪದಲ್ಲಿ ಭೂಮಿಗೆ ಬಂದ ದೇವರಾಗಿದ್ದಾನೆ. ಈತನು ಜೀವಸ್ವರೂಪಿ ದೇವರಾದ ಒಂದೇ ನಿಜವಾದ ಪರಾವತಾರವಾಗಿದ್ದಾನೆ. (ಸಾಮಾನ್ಯ ಬರಹ: ಯೇಸು ಕ್ರಿಸ್ತನು ನೋಡಿರಿ).

**63-64** ಒಬ್ಬ ಮನುಷ್ಯನು ದೇವರು ಅಥವಾ ದೇವಕುಮಾರನಾಗಿದ್ದೇನೆಂದು ಹೇಳಿಕೊಳ್ಳುವದು ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರ ಮರಣ ದಂಡನೆಗೆ ಯೋಗ್ಯವಾದ ಅಪರಾಧವಾಗಿತ್ತು (ಯೋಹಾನ 5:18 ಮತ್ತು ವ್ಯಾಖ್ಯಾನ ನೋಡಿರಿ) ಯೇಸು ತಾನು ಭಗವಂತನ ಮಗನು ಅಂದರೆ ದೇವ ಕುಮಾರನು, ಮೆಸ್ಸೀಯನು, ಎಂದು ಮಹಾಯಾಜಕನ ಮುಂದೆ ಒಪ್ಪಿಕೊಂಡಿದ್ದನು. ಯೇಸು ಮೆಸ್ಸೀಯನೆಂದು ಕರೆದುಕೊಳ್ಳುವದು ಯೆಹೂದ್ಯರಿಗೆ ಬೇಸರದ ಸಂಗತಿಯಾಗಿತ್ತು. ಈ ಮನುಷ್ಯನು ಮೆಸ್ಸೀಯನಾಗಿ ಇರಲಾರನು ಎಂಬುದಾಗಿ ಅವರಿಗೆ ಸ್ಪಷ್ಟವಾಗಿತ್ತು. ಮೆಸ್ಸೀಯನು ಒಬ್ಬ ಬಲಾಢ್ಯ ಅರಸನಾಗಿ ಕಾಣಿಸಿಕೊಳ್ಳುವನೆಂದು ಅವರು ನಿರೀಕ್ಷಿಸಿದ್ದರು ಹೊರತು ಒಬ್ಬ ದೀನ ಬಂದಿಯಾಗಿ ಅಲ್ಲ! ಯೇಸು ಸುಳ್ಳಾಡುತ್ತಿದ್ದಾನೆಂದು ತೋರಿತು. ಅವನು ದೇವ ದೂಷಕನಾಗಿದ್ದನು. ಆದ ಕಾರಣ ಯೆಹೂದ್ಯರು ಅವನನ್ನು ಮರಣಕ್ಕೆ ಪಾತ್ರನೆಂದು ಎಣಿಸಿದರು. ಬೇರೆ ಯಾವ ಸಾಕ್ಷಿಯು ಅವಶ್ಯವಾಗಿರಲಿಲ್ಲ. ಯೇಸು ತನ್ನನ್ನು ತಾನೆ ದಂಡಿಸಿಕೊಂಡಿದ್ದಾನೆ. ಮಹಾಯಾಜಕನು ತನ್ನ ಬಟ್ಟೆಗಳನ್ನು ಹರಿದು ಕೊಂಡನು ಯೆಹೂದ್ಯರಲ್ಲಿ ಯಾವನಾದರು ದೇವದೂಷಣೆ ಮಾಡುವದನ್ನು ಕೇಳಿದರೆ ತಮ್ಮ ಬಟ್ಟೆಗಳನ್ನು ಹರಿದು ಕೊಂಡು ಆ ವ್ಯಕ್ತಿಯ ಮೇಲೆ ಕೋಪವನ್ನು ದುಃಖವನ್ನು ತೋರ್ಪಡಿಸುವದರ ಗುರುತಾಗಿತ್ತು (ಅ.ಕೃ 14:14). ಯೆಹೂದ್ಯ ನಾಯಕರು ತಮ್ಮಷ್ಟಕ್ಕೆ ತಾವೇ ಮರಣ ದಂಡನೆಯನ್ನು ವಿಧಿಸಲು ಅಧಿಕಾರ ಹೊಂದಿರಲಿಲ್ಲ. ರೋಮಾಯ ದೇಶಾಧಿಪತಿ ಮಾತ್ರವೇ ಒಬ್ಬನಿಗೆ ಮರಣ ದಂಡನೆಯನ್ನು ವಿಧಿಸುವ ಅಧಿಕಾರವನ್ನು ಹೊಂದಿದ್ದನು. ಆದ ಕಾರಣ ಆ ಸಮಯದಲ್ಲಿ ರೋಮಾಯ ದೇಶಾಧಿಪತಿಯಾದ ಪೊಂತ್ಯ ಪಿಲಾತನ ಕೈಯಲ್ಲಿ ಯೇಸುವನ್ನು ಒಪ್ಪಿಸಲು ತೀರ್ಮಾನಿಸಿದರು (ಮಾರ್ಕ 15:1).

**65** ಬಳಿಕ ಯೆಹೂದ್ಯ ಅಧಿಕಾರಿಗಳು ಮತ್ತು ಸಿಪಾಯಿಗಳು ಯೇಸುವಿನೊಂದಿಗೆ ಕ್ರೂರವಾಗಿ ವರ್ತಿಸಲು ಪ್ರಾರಂಭಿಸಿದರು. ಅವರು ಅವನಿಗೆ ಮುಸುಕು ಹಾಕಿ "ಗುದ್ದಿ" ನಮಗೆ ಪ್ರವಾದನೆ ಹೇಳು ಕ್ರಿಸ್ತನೇ ನಿನ್ನನ್ನುಹೊಡೆದವರು ಯಾರು? ಅನ್ನುತ್ತಿದ್ದರು (ಮತ್ತಾಯ 27:67-68).

## ಪೇತ್ರನು ಯೇಸುವನ್ನು ಅಲ್ಲಗಳೆಯುತ್ತಾನೆ (14:66-72)

(ಮತ್ತಾಯ 26:69-75, ಲೂಕ 22:54-62, ಯೋಹಾನ 18:15-18, 25:27)

**66** ಯೋಹಾನ 18:15-16ರ ಪ್ರಕಾರವಾಗಿ ಪೇತ್ರನ ಜೊತೆಯಲ್ಲಿ ಮತ್ತೊಬ್ಬ ಶಿಷ್ಯನು ಮಹಾಯಾಜಕನ ಅಂಗಳಕ್ಕೆ ಬಂದಿದ್ದನು.ಆ ಶಿಷ್ಯನಿಗೆ ಮಹಾ ಯಾಜಕನ ಪರಿಚಯ ಇದ್ದುದರಿಂದ ಯೇಸುವಿನ ಕೂಡ ಮಹಾ ಯಾಜಕನ ಅಂಗಳದೊಳಗೆ ಹೋದನು ಮತ್ತು ಪೇತ್ರನನ್ನು ಅಂಗಳದೊಳಕ್ಕೆ ಕರೆದು ತರುವ ಅಪ್ಪಣೆಯನ್ನು ಪಡೆಯಲು ಶಕ್ತನಾಗಿದ್ದನು.

**67-69** ಮೊದಲು ಪೇತ್ರನನ್ನು ಗುರುತಿಸಿದ ದಾಸಿಯರಲ್ಲೊಬ್ಬಳಾದ ಹುಡುಗಿಯೂ ಇತರರಿಗೂ ಸಹ ಇವನೂ ಕೂಡಾ ಅವರಲ್ಲೊಬ್ಬನು ಎಂದು ಹೇಳಿದಳು (ಮತ್ತಾಯ 26:71)

**70** ಬಳಿಕ ಇತರರು ಅವನ ಮಾತಿನ ರೀತಿಯನ್ನು ಗುರುತಿಸಿದರು. ಪೇತ್ರನು ಗಲೀಲಾಯದ ಇತರ ಪ್ರಾಂತ್ಯಕ್ಕೆ ಸೇರಿದವನಾಗಿದ್ದನು. ಮತ್ತು ಗಲೀಲಾಯದ ಜನರು ವಿಭಿನ್ನ ಉಚ್ಚಾರಣೆಯೊಂದಿಗೆ ಮಾತನಾಡುವವರು. ಪೇತ್ರನು ಕಿವಿಯನ್ನು ಕತ್ತರಿಸಿದ್ದ ವ್ಯಕ್ತಿಯ ಸಂಬಂಧಿ ಯೊಬ್ಬನು ಸಹ ಪೇತ್ರನು ಯೇಸುವಿನೊಂದಿಗೆ ಇದ್ದನೆಂದು ಆರೋಪಿಸಿದನು (ಯೋಹಾನ 18:26)

**71** ಮೂರನೇ ಸಾರಿ ಪೇತ್ರನು ಯೇಸುವನ್ನು ಅರಿಯನೆಂದು ಹೇಳಿದನು "ಶಪಿಸಿ ಕೊಳ್ಳುವದಕ್ಕೂ ಆಣೆ ಇಟ್ಟುಕೊಳ್ಳುವದಕ್ಕು"ಪ್ರಾರಂಭಿಸಿದನು. ಅಂದರೆ "ನಾನು ಸುಳ್ಳು ಹೇಳುತ್ತಿರುವದಾದರೆ ಶಪಿಸಲ್ಪಡಲಿ"

**72** ಆಗ ಕೋಳಿಯು ಎರಡು ಸಾರಿ ಕೂಗಿತು. ಸ್ವಾಮಿಯು ಹಿಂತಿರುಗಿಕೊಂಡು ಪೇತ್ರನನ್ನು ದೃಷ್ಟಿಸಿ ನೋಡಿದನು (ಲೂಕ 22:61) ಆಗ ಪೇತ್ರನು ಯೇಸು ಹೇಳಿದ್ದನ್ನು ಜ್ಞಾಪಿಸಿಕೊಂಡನು (ವ.30), ಆತನು ಹೊರಗೆ ಹೋಗಿ ಬಹಳ ವ್ಯಥೆ ಪಟ್ಟು ಅತ್ತನು. (ಲೂಕ 22:62).

ಒಬ್ಬ ಪು ರಾತನ ಬರಹಗಾರನು ಹೇಳಿದ್ದೇನೆಂದರೆ – ಪೇತ್ರನು ಉಳಿದ ತನ್ನ ಜೀವಿತ ಕಾಲವೆಲ್ಲ ಕೋಳಿ ಕೂಗುವದನ್ನು ಕೇಳುವಾಗಲೆಲ್ಲಾ ಆ ರಾತ್ರಿ ತನ್ನ ಕರ್ತನನ್ನು ಅಲ್ಲಗಳೆದದ್ದನ್ನು ಜ್ಞಾಪಿಸಿಕೊಂಡು ಅಳುತ್ತಿದ್ದನು. ಆ ರಾತ್ರಿಯ ನಂತರ ಪೇತ್ರನು ಇನ್ನೆಂದಿಗೂ ತನ್ನ ಕರ್ತನನ್ನು ಅಲ್ಲಗಳೆಯಲಿಲ್ಲ.

# ಅಧ್ಯಾಯ - 15

## ಪಿಲಾತನ ಮುಂದೆ ಯೇಸು (15:1-20)

(ಮತ್ತಾಯ 27:1-2, 11-31, ಲೂಕ 23:1-3, 18-25, ಯೋಹಾನ 19:1-3)

1 ಬೆಳಗಾದ ಕೊಡಲೇ ಯೆಹೂದ್ಯ ನಾಯಕರು ಒಂದು ತೀರ್ಮಾನಕ್ಕೆ ಬಂದರು. ರಾತ್ರಿಯ ವೇಳೆಯಲ್ಲಿ ದೇವದೂಷಣೆಗಾಗಿ ಯೇಸುವಿಗೆ ಮರಣದಂಡನೆ ವಿಧಿಸಿದ್ದರು (ಮಾರ್ಕ 14:64) ಆದರೆ ಅವರು ತಮ್ಮಷ್ಟಕ್ಕೆ ತಾವೇ ಮರಣದಂಡನೆಯನ್ನು ಜಾರಿಗೆ ತರಲು ಯಾವ ಅಧಿಕಾರವನ್ನು ಹೊಂದಿರಲಿಲ್ಲ. ಇಸ್ರಾಯೇಲವು ರೋಮ ಸಾಮ್ರಾಜ್ಯದ ವಸಾಹತಿಗೆ ಸೇರಿತ್ತು, ಮತ್ತು ರೋಮಾಯ ದೇಶಾಧಿಪತಿಯಾದ ಪೊಂತ್ಯ ಪಿಲಾತನು[108] ಮಾತ್ರವೇ ಅಪರಾಧಿಗಳಿಗೆ ನ್ಯಾಯದಂಡನೆ ವಿಧಿಸಬಹುದಾಗಿತ್ತು. ಹೇಗೂ, ದೇವದೂಷಣೆಯ ಆರೋಪವು ರೋಮಾಯರಿಗೆ ಯಾವ ಅರ್ಥವನ್ನು ನೀಡಲಿಲ್ಲ. ಅದು ಸಂಪೂರ್ಣವಾಗಿ ಯೆಹೂದ್ಯಧಾರ್ಮಿಕ ವಿಷಯವಾಗಿತ್ತು. ಪಿಲಾತನು ಆ ಕಾರಣಕ್ಕಾಗಿ ಒಬ್ಬನಿಗೆ ಮರಣದಂಡನೆಯನ್ನು ವಿಧಿಸಲು ಒಪ್ಪುವದಿಲ್ಲ. ಆದಕಾರಣ, ಪಿಲಾತನ ದೃಷ್ಟಿಯಲ್ಲಿ ಯೇಸುವಿಗೆ ಮರಣದಂಡಣೆ ವಿಧಿಸುವದು ನ್ಯಾಯವಾಗಿ ತೋರುವಂತಾಗಿ ಮಾಡಬಹುದಾದ ಒಂದು ಆರೋಪವನ್ನು ಯೆಹೂದ್ಯ ನಾಯಕರು ತರಬೇಕಾಗಿತ್ತು. ಹಿರೀಸಭೆಯವರು ಯೇಸುವಿನ ಮೇಲೆ ಆತನು ತನ್ನನ್ನು "ಯೆಹೂದ್ಯರ ಅರಸನನ್ನಾಗಿ "ಮಾಡಿಕೊಳ್ಳುವ ಆರೋಪವನ್ನು ಹೊರಿಸುವ ಆಲೋಚನೆ ಮಾಡಿಕೊಂಡರು. ಯೇಸು ಸ್ವತಂತ್ರ ರಾಜ್ಯವನ್ನು ಸ್ಥಾಪಿಸಲು ಪ್ರಯತ್ನಿಸಿದನೆಂದು ಯೆಹೂದ್ಯ ನಾಯಕರು ಹೇಳುವರು. ರೋಮಾಯರಿಗೆ ಇದೊಂದು ರಾಜದ್ರೋಹ, ಪಿಲಾತನು ಈ ಆರೋಪದ ಮೇಲೆ ಯೇಸುವನ್ನು ಮರಣಕ್ಕೊಪ್ಪಿಸಲು ಒಪ್ಪುವವನಾಗಿರುತ್ತಾನೆ. ಅಲ್ಲದೆ ಯೆಹೂದ್ಯನಾಯಕರು ಯೇಸುವಿನ ಮೇಲೆ ಆತನು ಕೈಸರನಿಗೆ ತೆರಿಗೆಕೊಡುವದನ್ನು ವಿರೋಧಿಸದನೆಂದು ಸುಳ್ಳು ಆರೋಪ ಹೊರಿಸಿದರು (ಲೂಕ 23:1-2ನೋಡಿರಿ).

2 ಆದುದರಿಂದ, ಯೇಸುವಿನ ವಿರುದ್ಧದ ಈ ಆರೋಪವನ್ನು ಕೇಳಿದ್ದವನಾಗಿ ಆತನನ್ನು "ನೀನು ಯೆಹೂದ್ಯರ ಅರಸನು ಹೌದೊ?" ಎಂದು ಕೇಳಿದನು. ಯೇಸು ಉತ್ತರಿಸಿ "ನೀನೇ ಹೇಳಿದ್ದಿ'[109] ಎಂದು ಹೇಳುತ್ತಾನೆ. ಆದರೆ ಯೇಸು ಪಿಲಾತನು ಊಹಿಸಿಕೊಂಡ ರೀತಿಯ ಅರಸನಾಗಿರಲಿಲ್ಲ. ಯೇಸುವಿನ ರಾಜ್ಯವು ಇಹಲೋಕದ್ದಾಗಿರಲಿಲ್ಲ (ಯೋಹಾನ 18:36)

3-5 ಬಳಿಕ ಯೆಹೂದ್ಯರು ಇನ್ನು ಹೆಚ್ಚು ದೂರು ಹೇಳಿದರು. ಆದರೆ ಯೇಸು ಅವು ಗಳಿಗೆ ಉತ್ತರಿಸಲಿಲ್ಲ (ಮಾರ್ಕ 14:61 ಮತ್ತು ವ್ಯಾಖ್ಯಾನ ನೋಡಿರಿ). ಯೇಸು ಪಿಲಾತನ ಮುಂದೆ ಹೊಂದಿದ ನ್ಯಾಯ ವಿಚಾರಣೆಯ ಪೂರ್ಣ ಚಿತ್ರಣಕ್ಕಾಗಿ ಯೋಹಾನ 18:28-40 ಮತ್ತು ವ್ಯಾಖ್ಯಾನ ನೋಡಿರಿ). ಲೂಕನ ಸುವಾರ್ತೆಯ ಪ್ರಕಾರವಾಗಿ ಪಿಲಾತನಿಗೆ ಯೇಸುವಿನ ವಿರುದ್ಧದ ಆರೋಪಗಳಿಗೆ ಯಾವ ಆಧಾರವು ಕಂಡು ಬರಲಿಲ್ಲ. ಗಲಿಲಾಯದ ಅರಸನಾದ ಹೆರೋದನು ಸಹ ಆ ಸಮಯದಲ್ಲಿ ಯೆರೂಸಲೇಮಿನಲ್ಲಿದ್ದನು, ಮತ್ತು ಯೇಸು ಗಲಿಲಾಯದವನಾದ ಕಾರಣ ಈ ವಿಷಯದಲ್ಲಿ ಹೆರೋದನ ಅಭಿಪ್ರಾಯವನ್ನು ತಿಳಿದುಕೊಳ್ಳಲು ಯೇಸುವನ್ನು ಆತನ ಬಳಿಗೆ ಕಳುಹಿಸುತ್ತಾನೆ. ಆದರೆ ಹೆರೋದನು ಸಹ ಯೇಸುವಿನಲ್ಲಿ ಮರಣ ದಂಡನೆಗೆ ಅರ್ಹವಾದಯಾವ ಅಪರಾಧವೂ ಕಾಣದೆ ತಿರಿಗಿ ಅವನನ್ನು ಪಿಲಾತನ ಬಳಿಗೆ ಕಳುಹಿಸಿದನು (ಲೂಕ 23:4-16 ಮತ್ತು ವ್ಯಾಖ್ಯಾನ ನೋಡಿರಿ).

6-8 ಪ್ರತಿ ವರ್ಷ ಪಸ್ಕ ಹಬ್ಬದ ದಿನದಂದು ರೋಮಾಯ ದೇಶಾಧಿಪತಿಯು ಯೆಹೂದ್ಯ ಕೈದಿಯೊಬ್ಬನನ್ನು ಬಿಡುಗಡೆಮಾಡುತ್ತಿದ್ದನು. ಇದು ಯೆಹೂದ್ಯರನ್ನು ಸಂತೋಷಪಡಿಸುವದಕ್ಕಾಗಿ ಮಾಡಲ್ಪಡುವ ಸಂಜೆಯಾಗಿತ್ತು. ಯೆಹೂದ್ಯರೇ ತಾವು ಬಿಡುಗಡೆಹೊಂದಬೇಕೆಂದು ಇಚ್ಚಿಸುವ ವ್ಯಕ್ತಿಯನ್ನು ಆರಿಸಿಕೊಳ್ಳುತ್ತಿದ್ದರು. ಈ ವರ್ಷವೂ ಜನರು ಪಿಲಾತನಿಗೆ ತಾನು ಸಾಮಾನ್ಯವಾಗಿ ಮಾಡುತ್ತಿದ್ದದ್ದನ್ನೆ ಈಗ ಮಾಡುವಂತೆ ಅಂದರೆ ಒಬ್ಬ ಬಂಧಿಯನ್ನು ಬಿಡುಗಡೆಗೊಳಿಸುವಂತೆ ಕೇಳಿಕೊಂಡರು.

9-11 ಪಿಲಾತನು, ಯೇಸುವನಲ್ಲಿ ಯಾವ ಅಪರಾಧವನ್ನು ಕಾಣದೆ ಆತನನ್ನು ಬಿಡುಗಡೆಗೊಳಿಸಲು ಬಯಸಿದ್ದನು (ಲೂಕ 23:26) ಯೆಹೂದ್ಯ ನಾಯಕರು ಯೇಸುವಿನ ಪ್ರಸಿದ್ಧಿಯನ್ನು ಕುರಿತು ಹೊಟ್ಟೆಕಿಚ್ಚಿನಿಂದ ಆತನನ್ನು ಕೊಲ್ಲಲು ಬಯಸಿದ್ದರೆಂದು ಪಿಲಾತನು ಬಲ್ಲವನಾಗಿದ್ದನು (ವಚನ 10) ಹೇಗೂ, ಗುಂಪಿನಲ್ಲಿದ್ದ ಸಾಮಾನ್ಯ ಯೆಹೂದ್ಯರು ಯೇಸುವನ್ನು ಬಿಡುಗಡೆಗೊಳಿಸುವದಕ್ಕೆ ಸಂತೋಷಿಸುವರೆಂದು ಪಿಲಾತನು ಯೋಚಿಸಿದನು. ಯಾವ ಬಂಧಿಯನ್ನು ಬಿಡುಗಡೆಮಾ-ಡಬೇಕೆಂಬದನ್ನು ಸಾಮಾನ್ಯ ಜನರೇ ಆರಿಸಿಕೊಳ್ಳಲು ಬಿಡುವದರ ಮೂಲಕ ಅವರಿಗೆ ಸಂತೋಷ ತರುವದು ಮತ್ತು ಅದೇಸಮಯದಲ್ಲಿ ನಿರಪರಾಧಿಯನ್ನು ಮರಣದಂಡನೆಯಿಂದ ತಪ್ಪಿಸಬಹುದೆಂಬುದು ಪಿಲಾತನ ಯೋಚನೆಯಾಗಿತ್ತು. ಹೀಗೆ ಪಿಲಾತನು ಜನರನ್ನು ತೃಪ್ತಿಪಡಿಸಬಹುದು ಮತ್ತು ತನ್ನ ಮನಸಾಕ್ಷಿಯನ್ನು ನಿಷ್ಕಳಂಕವಾಗಿಟ್ಟು ಕೊಳ್ಳಬಹುದು. ಆದರೆ ಜನರು ಯೇಸುವನ್ನು ಆರಿಸಿಕೊಳ್ಳದಿರುವದು ಪಿಲಾತನಿಗೆ ವಿಸ್ಮಯವನ್ನು ಮಾಡಿತು. ಕೆಲವು ದಿನಗಳ ಹಿಂದಷ್ಟೇ ಯೇಸು ಯೆರೂಸಲೇಮನ್ನು ಪ್ರವೇಶಿಸುವಾಗ ಅವರು "ಹೊಸನ್ನಾ" ಎಂದುಕೂಗುತ್ತಿದ್ದರು (ಮಾರ್ಕ 11:9-10) ಈಗ ಅವರು ಯೇಸುವಿಗೆ ವಿರುದ್ಧವಾಗಿದ್ದಾರೆ – ಯಾಕೆ? ಯಾಕೆಂದರೆ ಆತ್ತಲಾಗಿ ಮಹಾಯಾಜಕರು ಬರಬ್ಬನನ್ನೇ ಬಿಟ್ಟುಕೊಡಬೇಕೆಂದು ಬೇಡಿಕೊಳ್ಳಿರಿ ಎಂಬದಾಗಿ ಜನರನ್ನು ಪ್ರೇರೇಪಿಸಿದರು (ವಚನ 11). ಬರಬ್ಬನು ಒಬ್ಬ ಕೊಲೆಗಾರ ಮತ್ತು ದಂಗೆಕೋರ

ಎಂದು ನಿರೂಪಿಸಲ್ಪಟ್ಟ ಅಪರಾಧಿಯಾಗಿದ್ದನು. ಜನರು ಎಷ್ಟು ಆಳವಾಗಿ ಅವರ ಮಹಾಯಾಜಕನ ಪ್ರಭಾವಕ್ಕೊಳಗಾಗಿದ್ದರು. ಜನರು ಎಷ್ಟು ಹೇಡಿಗಳಾಗಿದ್ದಾರೆ ! ಒಂದು ಕ್ಷಣ ಅವರು ಯೇಸುವನ್ನು ಮೆಸ್ಸಿಯನೆಂದು ಪರಿಗಣಿಸಿದರು, ಇನ್ನೊಂದು ಕ್ಷಣದಲ್ಲಿ ಅವರು ಅವನನ್ನು ಒಬ್ಬ ಕೊಲೆಗಾರನಿಗಿಂತಲೂ ಕೆಟ್ಟವನಾಗಿಪರಿಗಣಿಸಿದ್ದು (ಅ.ಕೃತ್ಯ 14:11-19 ಕೊರಿಂಥ 6-8 ನೋಡಿರಿ). ಮತ್ತಾಯ 27:19-21 ರ ಪ್ರಕಾರವಾಗಿ, ಆದೇದಿನ ಪಿಲಾತನ ಹೆಂಡತಿಗೆ ಯೇಸುವಿನ ಕುರಿತು ಕನಸು ಬಿತ್ತು. ಮತ್ತು ಅವಳು "ಈ ಸತ್ಪುರುಷನ (ನಿರಪರಾಧಿಯ) ಗೊಡವೆಗೆ ಹೋಗಬೇಡ" ಎಂದು ಪಿಲಾತನಿಗು ಹೇಳಿ ಕಳುಹಿಸಿದಳು. ಇದರ ಮೂಲಕ ದೇವರು ಪಿಲಾತನಿಗೆ ಒಂದು ವಿಶೇಷ ಎಚ್ಚರಿಕೆಯನ್ನು ಕಳುಹಿಸಿದನು. ದೇವರು ಕರುಣೆಯಿಂದ ಮಾನವರನ್ನು ಪಾಪಮಾಡದಂತೆ ತಡೆಯಲು ಯಾವಾಗಲೂ ಎಚ್ಚರಿಕೆಗಳನ್ನು ಕಳುಹಿಸುತ್ತಿದ್ದಾನೆ, ಮತ್ತು ಅಂತಹ ಎಚ್ಚರಿಕೆಗಳಿಗೆ ಕಿವಿಗೊಡುವದು ಮಾನವನ ಜವಾಬ್ದಾರಿಯಾಗಿದೆ ಆದರೆ ಪಿಲಾತನು ಎಚ್ಚರಿಕೆಗೆ ಕಿವಿಗೊಡಲಿಲ್ಲ. ಆತನು ಜನರ ಬಯಕೆಗಳಂತೆ ನಡೆದನು. ಆತನು ದೇವರನ್ನು ಮೆಚ್ಚಿಸುವದಕ್ಕಿಂತಲೂ ಜನರನ್ನು ಮೆಚ್ಚಿಸಲು ಹೆಚ್ಚು ಆಸಕ್ತನಾಗಿದ್ದನು.

**12-14** ಪಿಲಾತನಿಗೆ ಏನೂ ತೋಚದಾಯಿತು. ಆತನು ಬರಬ್ಬನನ್ನು ಬಿಡುಗಡೆ ಗೊಳಿಸಲು ಇಚ್ಚಿಸಲಿಲ್ಲ. ಯಾಕೆಂದರೆ ಅವನೊಬ್ಬ ದಂಗೆಕೋರನು, ಕೊಲೆಗಾರನೂ ಆಗಿದ್ದನು. ಮತ್ತು ಆತನು ಯೇಸುವನ್ನು ಮರಣದಂಡನೆಗೊಳಪಡಿಸಲೂ ಇಚ್ಚಿಸಲಿಲ್ಲ. ಯಾಕೆಂದರೆ ಆತನು ಮರಣದಂಡನೆ ಪ್ರಕಾರವಾಗಿ ಪಿಲಾತನು ಜನರಿಗೆ ಪು ನಃ ಯೋಚನೆಮಾಡಿ ಯೇಸುವನ್ನು ಮುಕ್ತಗೊಳಿಸುವಂತೆ ಮೂರು ಸಾರಿ ಕೇಳಿಕೊಂಡನು. ಪಿಲಾತನು ಕೊನೆಗೆ ಜನರ ಮನಸ್ಸನ್ನು ಸಂತೋಷಪಡಿಸಲು ಆತನನ್ನು ಕೊರಡೆಗಳಿಂದ ಹೊಡೆಸಿ ಬಿಟ್ಟು ಬಿಡುತ್ತೇನೆಂದು ಹೇಳಿದನು. ಆದರೆ ಅವರು ಅವನನ್ನು "ಶಿಲುಬೆಗೆ ಹಾಕಿಸು" [110] ಎಂದು ಬಹಳವಾಗಿ ಅರ್ಭಟಿಸಿದರು (ವಚನ 14). ಮತ್ತಾಯ 27:24-25ರ ಪ್ರಕಾರವಾಗಿ ಪಿಲಾತನು ತನ್ನ ಯತ್ನನಡೆಯುವದಿಲ್ಲ ಎಂದು ತಿಳಿದುಕೊಂಡನು ಗದ್ದಲವು ಹೆಚ್ಚಾಗುತಿತ್ತು. ಅವನು ಯೇಸುವನ್ನು ಬಿಡುಗಡೆಮಾಡಿದರೆ ಖಂಡಿತವಾಗಿಯೂ ಇನ್ನೂ ದೊಡ್ಡಗದ್ದಲ ಉಂಟಾಗುತ್ತಿತ್ತು. ಮತ್ತು ಅಂತಹ ದೊಡ್ಡ ಗಲಭೆಯು ರೋಮನಲ್ಲಿನ ಚಕ್ರವರ್ತಿಯ ಗಮನಕ್ಕೆ ಬರುವದಾದರೆ ಶಾಂತಿಯನ್ನು ಕಾಪಾಡಲು ವಿಫಲನಾಗಿದ್ದಕ್ಕಾಗಿ ಪಿಲಾತನು ತನ್ನ ಉದ್ಯೋಗವನ್ನು ಕಳೆದುಕೊಳ್ಳುತ್ತಿದ್ದನು. ಆದ್ದರಿಂದ ಯೇಸುವನ್ನು ಶಿಲುಬೆಗೆ ಹಾಕಿಸುವದಕ್ಕೆ ಒಪ್ಪಿಸಲು ತಿರ್ಮಾನಿಸಿದನು. ಆದರೆ ಮೊದಲು ನೀರು ತಕ್ಕೊಂಡು ಜನರ ಮುಂದೆ ಕೈ ತೊಳಕೊಂಡನು (ಮತ್ತಾಯ 27:24) ಇದು ಅಪರಾಧವನ್ನು ತೊಳೆಯುವದರ ಗುರುತಾಗಿ ಮಾಡುವ ಯೆಹೂದ್ಯರ ಒಂದು ಪದ್ಧತಿಯಾಗಿತ್ತು (ಧರ್ಮೋಪದೇಶಕಾಂಡ 21:6-7). "ಈ ಪು ರುಷನನ್ನು ಕೊಲ್ಲಿಸಿದ್ದಕ್ಕೆ ನಾನು ಸೇರಿದವನಲ್ಲ" ಎಂದು ಪಿಲಾತನು ಹೇಳಿದನು[111] ಮತ್ತು ಆಗ ಜನರು ಅವನನ್ನು ಕೊಲ್ಲಿಸಿದ್ದಕ್ಕೆ ನಾವೂ ನಮ್ಮ ಮಕ್ಕಳೂ ಉತ್ತರ ಕೊಡುತ್ತೇವೆ! ಎಂದರು (ಮತ್ತಾಯ 27:24-25). ಮತ್ತು ನಿಜವಾಗಿಯೂ 40 ವರ್ಷಗಳನಂತರ ರೋಮಾಯರು ಯೆರೂಸಲೇಮಿನ ಮೇಲೆ ದಾಳಿ ಮಾಡಿ ಪಟ್ಟಣವನ್ನು ನಾಶಗೊಳಿಸಿ, ಅದರಲ್ಲಿನ ಎಲ್ಲಾ ಯೆಹೂದ್ಯರನ್ನು ಹತ್ಯೆಗೈದಾಗ ಅವರು ಕ್ರಿಸ್ತನ ರಕ್ತಹರಿಸಿದ್ದಕ್ಕಾಗಿ ಅವರು ತಮ್ಮ ರಕ್ತವನ್ನು ಹರಿಸಬೇಕಾಯಿತು.

**15** ಯೇಸುವಿನ ಕಾಲದಲ್ಲಿ ಶಿಲುಬೆ ಮರಣದ ದಂಡನೆಗೊಳಗಾದವರನ್ನು ಮೊದಲು ಕೊರಡೆಗಳಿಂದ ಹೊಡೆಯಲಾಗುತ್ತಿತ್ತು. ಆ ಕೊರಡೆಯು ಚರ್ಮದಿಂದ ಮಾಡಲ್ಪಟ್ಟು ತುದಿಯಲ್ಲಿ ಲೋಹ ಅಥವಾ ಮೂಳೆಯ ತುಂಡುಗಳನ್ನು ಜೋಡಿಸಲಾಗಿರುತ್ತಿತ್ತು. ಅನೇಕ ಜನರು ಕೊರಡೆಗಳ ಏಟುಗಳಿಂದ ಮಾತ್ರವೇ ಮರಣಿಸಿದರು. ಯೋಹಾನ 19:1-4 ಕ್ಕನುಸಾರವಾಗಿ ಯೇಸುವನ್ನು ಕೊರಡೆಗಳಿಂದ ಹೊಡೆಸುವದರಿಂದ ಜನರಿಗೆ ತೃಪ್ತಿಯಾಗಿ ಆತನನ್ನು ಶಿಲುಬೆಗೆ ಹಾಕಿಸು ಎಂದು ಹೇಳುವದನ್ನು ನಿಲ್ಲಿಸುತ್ತಾರೆಂದು ಪಿಲಾತನು ನಿರೀಕ್ಷಿಸಿದ್ದನು. ಹೇಗೂ, ಆದರಿಂದ ಪ್ರಯೋಜನವಾಗಲಿಲ್ಲ. ಜನರು ಮುಂಚೆಗಿಂತಲೂ ಹೆಚ್ಚಾಗಿ ಯೇಸುವಿನ ಮರಣಕ್ಕಾಗಿ ಅರ್ಭಟಿಸಿದರು.

**16-20** ಪಿಲಾತನು ಯೇಸುವನ್ನು ಶಿಲಬೆಗೆ ಹಾಕುವದಕ್ಕೆ ರೋಮ ಸಿಪಾಯಿಗಳ ಕೈಗೆ ಒಪ್ಪಿಸಿದನು. ಸಿಪಾಯಿಗಳು ಮೊದಲು ಸ್ವಲ್ಪಕಾಲ ಯೇಸುವನ್ನು ಹೊಡೆಯವದರಲ್ಲಿಯೂ, ಹಾಸ್ಯಮಾಡುವದರಲ್ಲಿಯೂ ಕಳೆದರು. ಆ ವೇಳೆಯಲ್ಲಿ ಪಿಲಾತನು ಯೇಸುವನ್ನು ಹೋಗಬಿಡುವಂತೆ ಜನರ ಮನವೊಲಿಸಲು ಅಂತಿಮ ಪ್ರಯತ್ನವನ್ನು ಮಾಡಿದನೆಂತಲು ಯೋಹಾನನ ಸುವಾರ್ತೆಗನುಸಾರವಾಗಿ ತಿಳಿದು ಬರುತ್ತದೆ. ಆದರೆ ಆತನು ಯಶಸ್ವಿಯಾಗಲಿಲ್ಲ (ಯೋಹಾನ 19:1-16 ಮತ್ತು ವ್ಯಾಖ್ಯಾನ ನೋಡಿರಿ).

## ಶಿಲುಬೆಗೇರಿಸಲ್ಪಡುವದು (15:21-32)

(ಮತ್ತಾಯ 27:32-44, ಲೂಕ 23:26-43, ಯೋಹಾನ 19:17-24)

**21** ಮರಣದ ತೀರ್ಪನ್ನು ಹೊಂದಿದ ಅಪರಾಧಿಗಳು ತಮ್ಮ ಶಿಲುಬೆಯನ್ನು ತಾವೇ ದಂಡನೆಯ ಸ್ಥಳಕ್ಕೆ ಹೊತ್ತು ಕೊಂಡು ಹೋಗಬೇಕಾಗಿತ್ತು ಮೊದಲು ಯೇಸು ತನ್ನ ಶಿಲುಬೆಯನ್ನು ಹೊತ್ತುಕೊಂಡು ನಡೆದನು (ಯೋಹಾನ 19:17). ಆದರೆ ಕೊರಡೆಗಳ ಏಟಿನ ಕಾರಣದಿಂದ ಆತನು ಬಹಳ ಬಲಹೀನನಾಗಿದ್ದು ಹೊತ್ತುಕೊಂಡು ಮುಂದುವರೆಯಲು ಆಗಲಿಲ್ಲ, ಮತ್ತು ಆಗ ಕುರೇನ ಪಟ್ಟಣದ[112] ಸಿಮೋನನೆಂಬವನು[113] ಯೇಸುವಿಗಾಗಿ ಶಿಲುಬೆಹೊತ್ತುಕೊಳ್ಳಲು ಒತ್ತಾಯ ಪಡಿಸಲಾಯಿತು. ಲೂಕ 23:27-31 ಕ್ಕನುಸಾರವಾಗಿ ಯೇಸು ದಂಡನೆಯ ಸ್ಥಳಕ್ಕೆ ಹೋಗುತ್ತಿರುವ ವೇಳೆ ಅನೇಕ ಜನರು ಆತನಹಿಂದೆ ಹೋದರು. ಗುಂಪಿನಲ್ಲಿದ್ದ ಸ್ತ್ರೀಯರು ಆತನಿಗಾಗಿ ಗೋಳಾಡಿ ಅಳುತ್ತಿದ್ದರು. ಆದರೆ ಯೇಸು ಅವರಿಗೆ "ಯೆರೂಸಲೇಮಿನ

ಸ್ತ್ರೀಯರೇ, ನನಗೋಸ್ಕರ ಅಳಬೇಡಿರಿ, ನಿಮಗೋಸ್ಕರವೂ ನಿಮ್ಮ ಮಕ್ಕಳಿಗೋಸ್ಕರವೂ ಅಳಿರಿ" ಅಂದನು (ಲೂಕ 23:28). ಆಗ ಯೇಸು ರೋಮಾಯರಿಂದ ಯೆರೂಸಲೇಮು ನಾಶವಾಗುವದರ ಬಗ್ಗೆ ಪ್ರವಾದಿಸಿದನು. ಆಕಾಲದಲ್ಲಿ, ಬಂಜೆಯೂ, ಮಕ್ಕಳಿಲ್ಲದವರೂ ಧನ್ಯರು ಯಾಕೆಂದರೆ ಅವರ ಮಕ್ಕಳು ಹಿಂಸೆಪಡುವದನ್ನು ನೋಡಬೇಕಾಗಿರುವದಿಲ್ಲ. ಅಲ್ಲದೆ ಅವರು ಬಹಳ ಸುಲಭವಾಗಿ ಪಲಾಯನ ಮಾಡಲು ಶಕ್ತರಾಗುವರು. ಹೋಶೆಯನು ಪ್ರವಾದಿಸಿದಂತೆ ರೋಮಾಯರು ತರುವ ಹಿಂಸೆಯು ಎಷ್ಟು ಘೋರವಾಗಿರುತ್ತದೆಂದರೆ ಜನರು ಬೆಟ್ಟಗಳಿಗೂ, ಗುಡ್ಡಗಳಿಗೂ ನಮ್ಮ ಮೇಲೆ ಬೀಳಿರಿ, ಹೀಗೆ ನಮ್ಮ ಬಾಧೆಯನ್ನು ಅಂತ್ಯಗೊಳಿಸಿರಿ ಎಂದು ಕೇಳಿಕೊಳ್ಳುವರು (ಹೋಶೆಯ 10:8, ಲೂಕ 23:30) ನಂತರ ಲೂಕನ ದಾಖಲೆಯ ಪ್ರಕಾರವಾಗಿ ಯೇಸು "ಮರ ಹಸಿಯಾಗಿರುವಾಗ ಇಷ್ಟೆಲ್ಲಾ ಮಾಡಿದರೆ ಮರ ಒಣಗಿರುವಾಗ ಏನಾಗಬಹುದು?" ಅಂದನು (ಲೂಕ 23:31) ಅಂದರೆ ರೋಮಾಯರು ನಿರಪರಾಧಿಯಾದ ಯೇಸುವನ್ನು ಶಿಲುಬೆಗೇರಿಸುತ್ತಿರುವದಾದರೆ, ಯೇಸುವಿನ ಮರಣದ ಅಪರಾಧ ಹೊಂದಿರುವ ಯೆಹೂದ್ಯರಿಗೆ ಅವರು ಇನ್ನೇನು ಮಾಡಬಹುದು?

**22-24** ಗೊಲ್ಗೋಥಾ (ಅಂದರೆ ಕಪಾಲಸ್ಥಳ) ಯೆರೂಸಲೇಮಿನ ಹೊರ ಭಾಗದಲ್ಲಿದ್ದ ಒಂದು ಚಿಕ್ಕ ಗುಡ್ಡವಾಗಿದ್ದು ಅದು ಮನುಷ್ಯನ ತಲೆಬುರುಡೆಯ ಆಕಾರದಲ್ಲಿತ್ತು. ಸ್ತ್ರೀಯರು ಆತನಿಗೆ ರಕ್ತಬೋಳ [114] ಬೆರಸಿದ ದ್ರಾಕ್ಷಾರಸವನ್ನು ಕೊಟ್ಟರು. ರಕ್ತ ಬೋಳವು ನಿದ್ರಾ ಜನಕ ಔಷದವಾಗಿತ್ತು ಮತ್ತು ಮರಣದಂಡನೆಗೊಳಗಾಗಲಿರುವ ಅಪರಾಧಿಗಳಿಗೆ ಕೊಡುವದು ಯೆಹೂದ್ಯರ ಪದ್ಧತಿಯಾಗಿತ್ತು (ಜ್ಞಾನೋಕ್ತಿ 31:6-7) ಆದರೆ ಯೇಸು ಅದನ್ನು ತೆಗೆದುಕೊಳ್ಳಲಿಲ್ಲ, ಯಾಕೆಂದರೆ ಆತನು ಯಾವ ನಿದ್ರಾ ಜನಕ ಔಷದವಿಲ್ಲದೆಯೇ ಸಂಪೂರ್ಣವಾಗಿ ಶಿಲುಬೆಯ ಹಿಂಸೆಯನ್ನು ಅನುಭವಿಸಲು ದೃಡನಿಶ್ಚಯಮಾಡಿಕೊಂಡಿದ್ದನು. ರೋಮ ಸಿಪಾಯಿಗಳು ತಾವು ಮರಣ ವಿಧಿಸಿಲ್ಪಟ್ಟ ಅಪರಾಧಿಗಳ ಬಟ್ಟೆಗಳನ್ನು ತಮ್ಮಲ್ಲಿ ಹಂಚಿಕೊಳ್ಳುವದು ಸಾಮಾನ್ಯ ಪದ್ಧತಿಯಾಗಿತ್ತು. ಯೋಹಾನ 19:23-24 ರ ಪ್ರಕಾರವಾಗಿ ಯೇಸುವನ್ನು ಶಿಲುಬೆಗೇರಿಸಿದ ನಾಲ್ಕು ಮಂದಿ ಸಿಪಾಯಿಗಳು ಆತನ ಬಟ್ಟೆಗಳನ್ನು ಒಬ್ಬೊಬ್ಬರಿಗೆ ಒಂದೊಂದರಂತೆ ನಾಲ್ಕು ಭಾಗಗಳಾಗಿ ಮಾಡಿಕೊಂಡರು. ಹೇಗೂ, ಯೇಸುವಿನ ಒಳ ಅಂಗಿಗೆ ಹೊಲಿಗೆಯಿರಲಿಲ್ಲ. ಅದು ಮೇಲಿನಿಂದ ಅಖಂಡವಾಗಿ ಹೆಣೆದದ್ದಾಗಿತ್ತು. ಆದ್ದರಿಂದ ಅದನ್ನು ಮೇಲಿನಿಂದ ಹರಿಯಲಿಚ್ಚಿಸದೇ ಸಿಪಾಯಿಗಳು ಅದಕ್ಕೆ ಚೀಟು ಹಾಕಿದರು. ಈ ರೀತಿಯಲ್ಲಿ ಕೀರ್ತನೆಗಳು 22:18 ಪ್ರವಾದನೆಯು ನೆರವೇರಿತು.

**25** ಯೇಸುವನ್ನು ಮೂರನೆಯ ಜಾವದಲ್ಲಿ ಅಂದರೆ ಹೊತ್ತಾರೆ ಸುಮಾರು 9 ಘಂಟೆಗೆ ಶಿಲುಬೆಗೇರಿಸಿದರು. ಯೋಹಾನ 19:14 ರ ಪ್ರಕಾರವಾಗಿ ಯೇಸು ಆರನೆಯಗಳಿಗೆ ಅಥವಾ ಮಧ್ಯಾಹ್ನ 12 ಘಂಟೆಯವರೆಗೆ ಇನ್ನು ಪಿಲಾತನ ಮುಂದೆಯೇ ಇದ್ದನು. ಕೆಲವು ಬೈಬಲ್ ಪಂಡಿತರು, ಯೇಹಾನನು ರೋಮಾಯ ಪದ್ಧತಿಗನುಸಾರವಾಗಿ ಮಧ್ಯರಾತ್ರಿಯಿಂದ "ಆರನೆಯ ಗಳಿಗೆಯನ್ನು" ಲೆಕ್ಕಿಸುತ್ತಿದ್ದಾನೆ. ಅದೇ ವೇಳೆಯಲ್ಲಿ ಮಾರ್ಕನು ಯೆಹೂದ್ಯ ಪದ್ಧತಿಗನುಸಾರವಾಗಿ ಸೂರ್ಯೋದಯದಿಂದ "ಮೂರು ಘಂಟೆ" ಎಂದು ಲೆಕ್ಕಿಸುತ್ತಿದ್ದಾನೆಂದು ನಂಬುತ್ತಾರೆ. ಒಂದು ವೇಳೆ ಈ ವಿವರಣೆಯು ಸರಿಯಾಗಿರುವದಾದರೆ ಯೇಸು ಮುಂಜಾನೆ 6 ಘಂಟೆಗೆ ಪಿಲಾತನಿಂದ ಹೊರಟು ಮುಂಜಾನೆ 9 ಘಂಟೆಗೆ[115] ಶಿಲುಬೆಗೇರಿಸಲ್ಪಟ್ಟನು.

**26** ರೋಮಾಯರು ಅಪರಾಧಿಯ ಶಿಲುಬೆಯ ಮೇಲೆ ಆತನ ಅಪರಾಧವನ್ನು ಬರೆದು ಅಂಟಿಸುತ್ತಿದ್ದರು. ಯೇಸುವಿನ ತಲೆಯ ಮೇಲ್ಗಡೆಯಲ್ಲಿ ಶಿಲುಬೆಯ ಮೇಲಿದ್ದ ಬರಹವು ನಜರೇತಿನ ಯೇಸು, ಯೆಹೂದ್ಯರ ಅರಸನು. ಎಂಬದಾಗಿತ್ತು (ಮತ್ತಾಯ 27:37, ಲೂಕ 23:38, ಯೋಹಾನ 19:19) ರೋಮಾಯರ ದೃಷ್ಟಿಯಲ್ಲಿ ಯೇಸುವಿನ ಅಪರಾಧವು ಆತನು ತನ್ನನ್ನು ಅರಸನನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿದ್ದಾಗಿತ್ತು. ಈ ಲಿಪಿಯನ್ನು ಬರೆಯುವದರ ಮೂಲಕ ಇನ್ನಾರಾದರೂ ರೋಮಾಯರ ವಿರುದ್ಧ ಎದ್ದೇಳುವದಾದರೆ ಇದೇ ದಂಡನೆಗೆ ಗುರಿಯಾಗುವನೆಂಬದಾಗಿ ರೋಮಾಯರು ಯೆಹೂದ್ಯರಿಗೆ ಎಚ್ಚರಿಕೆಯನ್ನು ನೀಡುತ್ತಿದ್ದಾರೆ. ಯೋಹಾನ 19:20-22ರ ಪ್ರಕಾರವಾಗಿ ಯೆಹೂದ್ಯರು ಈ ಬರಹವನ್ನು ಕುರಿತು ಬೇಸರಗೊಂಡಿದ್ದರು, ಅದು ಯೆಹೂದ್ಯ ಜನಾಂಗವನ್ನು ಕುಚೋದ್ಯ ಮಾಡಿದಂತಿತ್ತು. ಅವರು ಅದನ್ನು ಬದಲಾಯಿಸುವಂತೆ ಪಿಲಾತನನ್ನು ಮನವೊಲಿಸಲು ಪ್ರಯತ್ನಿಸಿದರು ಆದರೆ ಆತನು ಒಪ್ಪಲಿಲ್ಲ.

ಯೇಸು ಶಿಲುಬೆಗೇರಿಸಲ್ಪಟ್ಟ ಮೇಲೆ ಲೂಕ 23:24ರ ಪ್ರಕಾರವಾಗಿ ಯೇಸು ಶಿಲುಬೆಯಿಂದ ಆಡಿದ ಮೊದಲ ಮಾತುಗಳಾವ ವೆಂದರೆ: "ತಂದೆಯೇ, ಅವರನ್ನು ಕ್ಷಮಿಸು, ತಾವು ಏನು ಮಾಡುತ್ತಿದ್ದೇವೆಂಬದನ್ನು ಅರಿಯರು" ಅಂದನು. ನಾವು ಹಾಗೆ ನಮ್ಮ ವೈರಿಗಳನ್ನೂ ಕ್ಷಮಿಸಬೇಕೆಂಬದನ್ನು ಕುರಿತು ಯೇಸು ಇಲ್ಲಿ ನಮಗೊಂದು ಸ್ಪಷ್ಟ ಮಾದರಿಯನ್ನು ತೋರಿದ್ದಾನೆ (ಲೂಕ 6:27, ಅ.ಕೃತ್ಯ 7:60).

**27-28** ಇಬ್ಬರು ಕಳ್ಳರನ್ನು ಸಹ ಯೇಸುವಿನ ಜೊತೆಯಲ್ಲಿ ಶಿಲುಬೆಗೇರಿಸಿದ್ದರು. ಈ ಕಳ್ಳರು ರೋಮ ಸರ್ಕಾರದ ವಿರುದ್ಧ ಯಾವದಾದರೂ ಗಂಭೀರ ಅಪರಾಧ ಮಾಡಿದ್ದಿರಬಹುದು. ಇಲ್ಲವಾದರೆ ಅವರು ಮರಣ ದಂಡನೆಯನ್ನು ಹೊಂದಿರುತ್ತಿರಲಿಲ್ಲ. ಅವರು ಯೇಸುವಿನ ಜೊತೆಯಲ್ಲಿರುವದು "ಆತನು ಅಪರಾಧಿಗಳಲ್ಲಿ[116] ಒಬ್ಬನಾಗಿ ಎಣಿಸಲ್ಪಟ್ಟನು" ಎಂದು ಯೆಶಾಯನು ನುಡಿದ ಪ್ರವಾದನೆಯ ನೆರವೇರಿಕೆಯಾಗಿತ್ತು (ಯೆಶಾಯ 53:12).

**29-31** ರೋಮಾಯರು ಮತ್ತು ಯೆಹೂದ್ಯರು ಯೇಸುವನ್ನು ಹಾಸ್ಯ ಮಾಡಿದರು. ಅವರು "ಆಹಾ, ದೇವಾಲಯವನ್ನು ಕೆಡವಿ ಮೂರು ದಿನಗಳಲ್ಲಿ ಕಟ್ಟುವೆನು ಎಂದು ಹೇಳಿದನು (ಮಾರ್ಕ 14-57) ಹಾಗಾದರೆ, ಈತನು ಶಿಲುಬೆಯಿಂದ ಇಳಿದು ಬರಬಾರದೇಕೆ?" ಎಂದು ಹೇಳಿದರು. "ಅವನು ಮತ್ತೊಬ್ಬರನ್ನು ರಕ್ಷಿಸಿದನು. ತನ್ನನ್ನು ರಕ್ಷಿಸಿಕೊಳ್ಳಲಾರನೇ?ಶ

ಯೇಸು ಶಿಲುಬೆಯಿಂದ ಕೆಳಗಿಳಿದು ಬರಲು ಅಶಕ್ತನು ಎಂದು ಅವರು ಯೋಚಿಸಿದರು. ಆದರೆ, ವಾಸ್ತವದಲ್ಲಿ, ಆತನು ಇಳಿದು ಬರದಿರಬಹುದಿತ್ತು ಹೇಗೂ, ನಮ್ಮನ್ನು ನಮ್ಮ ಪಾಪಗಳಿಂದ ರಕ್ಷಿಸುವದಕ್ಕಾಗಿ ಆತನು ಮುಂಚೆ ತನ್ನ ಶಿಷ್ಯರಿಗೆ ಮೂರು ಸಾರಿ ಹೇಳಿದಂತೆಯೇ ಸಾಯುವದು ಅವಶ್ಯಕವಾಗಿತ್ತು (ಮಾರ್ಕ 8:31, 9:31, 10:33-34).

32 .....ಕ್ರಿಸ್ತನು ಈಗ ಶಿಲುಬೆಯಿಂದ ಇಳಿದು ಬರಲಿ, ಇಳಿದು ಬಂದರೆ ನಾವು ನೋಡಿ, ನಂಬೇವು" ಎಂದು ಮಹಾಯಾಜಕರು ಮತ್ತು ಶಾಸ್ತ್ರಿಗಳು ಹೇಳಿಕೊಂಡು ಹಾಸ್ಯಮಾಡಿದರು. ಯೆಹೂದ್ಯನಾಯಕರು ಇದಕ್ಕೆ ಮುಂಚೆ ಒಂದು ಸೂಚಕ ಕಾರ್ಯವನ್ನು ತೋರಿಸುವಂತೆ ಕ್ರಿಸ್ತನನ್ನು ಕೇಳಿದ್ದರು. ಆದರೆ ಆತನು ಅದಕ್ಕೆ ನಿರಾಕರಿಸಿದ್ದನು (ಮಾರ್ಕ 8:11-12 ಮತ್ತು ವ್ಯಾಖ್ಯಾನ ನೋಡಿರಿ) ಮೊಂಡುತನದ ಹೃದಯಗಳುಳ್ಳವರು ಸೂಚಕಕಾರ್ಯವೊಂದನ್ನು ನೋಡುವರಾದರೂ ನಂಬುವದಿಲ್ಲ. ಯೇಸು ಸತ್ತವರೊಳಗಿಂದ ಎದ್ದು ಬಂದದ್ದು ಆತನು ಶಿಲುಬೆಯಿಂದ ಇಳಿದು ಬರುವದಕ್ಕಿಂತಲೂ ಅತಿದೊಡ್ಡ ಅಧ್ಭುತವಾಗಿತ್ತು ಆದರೆ ಆಗಲೂ ಯೆಹೂದ್ಯರು ಆತನು ಮೆಸ್ಸೀಯನೆಂಬದನ್ನು ನಂಬಲಿಲ್ಲ (ಲೂಕ 16:19-31 ಮತ್ತು ವ್ಯಾಖ್ಯಾನ ನೋಡಿರಿ). ಯೇಸು ಎರಡು ಬದಿಯಲ್ಲಿ ಶಿಲುಬೆಗೇರಿಸಲ್ಪಟ್ಟಿದ್ದ ಇಬ್ಬರು ಕಳ್ಳರು ಸಹ ಯೇಸುವಿಗೆ ಹಾಸ್ಯ ಮಾಡಿದರು. ಆದರೆ, ಲೂಕ 23:39-43ರ ಪ್ರಕಾರವಾಗಿ ಒಬ್ಬ ಕಳ್ಳನು ಪಶ್ಚಾತಾಪಪಟ್ಟು ತನ್ನ ಸಹಪಾಠಿಯನ್ನು ಗದರಿಸಿದನು. ಆತನು "ನಾವಂತೂ ನ್ಯಾಯವಾಗಿ ದಂಡನೆಯಲ್ಲಿದ್ದೇವೆ, ಆದರೆ ಈತನಾದರೋ ಅಲ್ಲದೇನೂ ಮಾಡಲಿಲ್ಲ" ಎಂದು ಹೇಳಿದನು. ಪಶ್ಚಾತಾಪ ಹೊಂದಿದ ಕಳ್ಳನು ಯೇಸುವಿಗೆ "ನೀನು ನಿನ್ನ ರಾಜ್ಯವನ್ನು ಪಡೆದವನಾಗಿ ಬರುವಾಗ ನನ್ನನ್ನು ನೆನಸಿಕೊ" ಎಂದು (ಲೂಕ 23:42) ಮತ್ತು ಯೇಸು ಉತ್ತರಿಸಿ "ಈ ಹೊತ್ತೇ ನನ್ನ ಸಂಗಡ ಪರದೈಸಿನಲ್ಲಿರುವಿ" ಅಂದನು (ಲೂಕ23:43).

ಇದರ ಮೂಲಕ ನಾವು ಎರಡು ಸಂಗತಿಗಳನ್ನು ಕಲಿಯುತ್ತೇವೆ. ಮೊದಲನೆಯದಾಗಿ, ಒಬ್ಬ ಮನುಷ್ಯನು ತನ್ನ ಜೀವಿತದ ಕೊನೆಯ ಕ್ಷಣಗಳಲ್ಲಿ ನಂಬಿದರೂ ಅವನು ರಕ್ಷಿಸಲ್ಪಡುವನು. ಎರಡನೆಯದಾಗಿ, ವಿಶ್ವಾಸಿಗಳು ಮರಣಿಸಿದ ಕೂಡಲೇ ಅವರ ಆತ್ಮಗಳು ಪರದ್ಯೆಸಿಗೆ ಹೋಗುತ್ತವೆ. ಪರದೈಸವು ಪರಲೋಕದಲ್ಲಿನ ಆನಂದದಾಯಕ ಸ್ಥಳವಾಗಿದ್ದು, ಅಲ್ಲಿ ನಮ್ಮ ಆತ್ಮಗಳು ನಮ್ಮ ದೇಹಗಳ ಪು ನರುತ್ಥಾನಕ್ಕಾಗಿ ಕಾಯ್ದುಕೊಳ್ಳುತ್ತವೆ (2 ಕೊರಿಂಥ 12:2-4, ಪ್ರಕಟನೆ 2:7, ಮತ್ತು ವ್ಯಾಖ್ಯಾನ ನೋಡಿರಿ).

## ಯೇಸುವಿನ ಮರಣ (15:33-41)

(ಮತ್ತಾಯ 27:45-56, ಲೂಕ 23:44-49, ಯೋಹಾನ 19:28-30)

33 ಮದ್ಯಾಹ್ನ 12 ಘಂಟೆಯಿಂದ 3 ಘಂಟೆಯ ತನಕ ದೇಶದ ಮೇಲೆಲ್ಲಾ ಕತ್ತಲೆಕವಿಯಿತು. ಇದು ಒಂದು ಸಾಮಾನ್ಯ ಸೂರ್ಯಗ್ರಹಣವಾಗಿರಲಿಲ್ಲ[117], ಯಾಕೆಂದರೆ ಪಸ್ಕ ಹಬ್ಬವು ಯಾವಾಗಲೂ ಹುಣ್ಣಿಮೆಯಲ್ಲಿ ಬೀಳುತ್ತಿತ್ತು. ಲೂಕನಪ್ರಕಾರವಾಗಿ ಸೂರ್ಯನು ಕಳೆ ಗುಂದಿದನು (ಲೂ 23:45). ಭೂಮಿಯಮೇಲೆ ಯೇಸುವಿನ ಜೀವಿತದ ಕೊನೆಯ ಮೂರು ಗಳಿಗೆಗಳಲ್ಲಿ ಅನೇಕ ಶ್ರೇಷ್ಠ ಹಾಗು ವಿಶೇಷ ಘಟನೆಗಳು ಸಂಭವಿಸಿದವು. ಕತ್ತಲೆಯು ಪಾಪಮಯಮಾನವರ ಮೇಲೆ ದೇವರ ಶಾಪಕ್ಕೆ ಗುರುತಾಗಿತ್ತು, ದೇವರು ಮಾನವರಿಂದ ತನ್ನ ಪ್ರಸನ್ನತೆಯನ್ನು ಹಿಂತೆಗೆದುಕೊಂಡಿದ್ದಾನೆಂಬದರ ಸಂಕೇತವಾಗಿತ್ತು ಇದಕ್ಕೆ ಕಾರಣ ಇಡೀ ಇತಿಹಾಸದುದ್ದಕ್ಕೂ ಮಾಡಿದ ಮಾನವ ಜನಾಂಗದ ಎಲ್ಲಾ ಭಯಂಕರ ಕೃತ್ಯಗಳು ಮತ್ತು ಅವೆಲ್ಲವು ಕ್ಕಿಂತಲೂ ಭಯಂಕರವಾದ ಕೃತ್ಯವೆಂದರೆ ದೇವರ ಕುಮಾರನಾದ ಯೇಸುವನ್ನು ಶಿಲಬೆಗೇರಿಸಿದ್ದೇ ಆಗಿತ್ತು. ಜಗತ್ತಿನ ಇಡೀ ಚರಿತ್ರೆಯಲ್ಲಿ ಆ ಮೂರು ಗಳಿಗೆಯಲ್ಲಿದ್ದಂಥ ಕಗ್ಗತ್ತಲೆ ಮತ್ತು ಕೆಟ್ಟದ್ದಾದದ್ದು ಸಂಭವಿಸಿರುವ ಪು ರಾವೆಯು ಇರುವದಿಲ್ಲ.

34 ಬಳಿಕ ಯೇಸು ತಾನು ಸಾಯುವದಕ್ಕೆ ಸ್ವಲ್ಪ ಮುಂಚೆ "ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ" ಎಂದು ಕೂಗಿದನು. ಇದು ಕೀರ್ತನೆಗಳು 22:1 ರಲ್ಲಿನ ಮಾತಾಗಿರುತ್ತದೆ. ಯೇಸು ಅದನ್ನು ಹೇಳಿದ್ದೇಕೆ? ಯಾಕೆಂದರೆ ದೇಶದ ಮೇಲೆಲ್ಲಾ ಬಂದ ಕತ್ತಲೆ ಯೇಸುವಿನ ಮೇಲೂ ಬಂದಿತ್ತು. ಆತನು ಸಹ ಪೂರ್ಣ ಪ್ರಮಾಣದಲ್ಲಿ ದೇವರಿಂದ ಅಗಲುವಿಕೆಯನ್ನು ಅನುಭವಿಸಿದನು. ಆತನು ಪಾಪಮಯಮಾನವರ ಮೇಲಿನ ದೇವರ ಪೂರ್ಣಕೋಪಾಗ್ನಿಯನ್ನು ಪೂರ್ಣ ಶಾಪವನ್ನು ಅನುಭವಿಸಿದನು. ಆತನು "ಮರದ ಮೇಲೆ ಅಂದರೆ ಶಿಲುಬೆಯ ಮೇಲೆ ನೇತಾಡಲ್ಪಡುವ ಪ್ರತಿಯೊಬ್ಬನು ಶಾಪಗ್ರಸ್ತನು" ಎಂಬುವದನ್ನು ಬಲ್ಲವನಾಗಿದ್ದನು. (ಧರ್ಮೋಪದೇಶಕಾಂಡ 21:23, ಗಲಾತ್ಯ 3:13 ಮತ್ತು ವ್ಯಾಖ್ಯಾನ ನೋಡಿರಿ). ಯೇಸು ಶಿಲುಬೆಯ ಮೇಲೆ ನೇತಾಡುವಾಗ ದೇವರು ನಿಜವಾಗಿಯೂ ಆತನನ್ನು ಕೈಬಿಟ್ಟನು. ನಮ್ಮ ಪಾಪವು ಆತನ ಮೇಲೆ ಹಾಕಲ್ಪಟ್ಟಿತು, ಆತನು ನಮಗಾಗಿ ಪಾಪವಾಗಿ ಮಾಡಲ್ಪಟ್ಟನು (2 ಕೊರಿಂಥ 5:21). ಆದರೆ ದೇವರು ಪಾಪವನ್ನು ನೋಡಲು ಸಾದ್ಯವಿಲ್ಲ, ಆದುದರಿಂದ ದೇವರು ಯೇಸುವಿನಿಂದ ವಿಮುಖನಾದನು. ಬಲಪಡಿಸಿದನು (ಲೂಕ 22:43). ಆದರೆ ಶಿಲುಬೆಯ ಮೇಲೆ ಆತನನ್ನು ಆದರಿಸಿ ಬಲಪಡಿಸಲು ಯಾರೊಬ್ಬರೂ ಇರಲಿಲ್ಲ. ಇದು ಯೇಸು ನಮ್ಮನ್ನು ವಿಮೋಚಿಸಲು, ನಮ್ಮನ್ನು ದೇವರ ಉಗ್ರ ಕೋಪದಿಂದ ಬಿಡಿಸಲು ಕೊಟ್ಟ ಬೆಲೆಯಾಗಿತ್ತು. ಆತನು ತಾನು ಬಹುಜನರಿಗಾಗಿ ತನ್ನ ಪ್ರಾಣವನ್ನು ಈಡುಕೊಡುವದರ ಅರ್ಥ ಇದೇ ಈಗಿತ್ತು (ಮಾರ್ಕ 10:45 ಮತ್ತು ವ್ಯಾಖ್ಯಾನ ನೋಡಿರಿ).

35-36 ಹತ್ತಿರದಲ್ಲಿ ನಿಂತಿದ್ದವರಲ್ಲಿ ಕೆಲವರು ಯೇಸು "ಎಲೋಹಿ, ಎಲೋಹಿ" ಎನ್ನುವದನ್ನು ಕೇಳಿಸಿಕೊಂಡು ಆತನು ಪ್ರವಾದಿಯಾದ ಎಲೀಯನನ್ನು ಕರೆಯುತ್ತಿದ್ದಾನೆಂದು ತಪ್ಪಾಗಿ ಯೋಚಿಸಿಕೊಂಡರು. ಯೋಹಾನ 19:28-30 ಪ್ರಕಾರವಾಗಿ

ಯೇಸು ನೀರಡಿಕೆಯಾಗಿದೆ ಎಂದು ಕೇಳಿದ್ದನಾದ್ದರಿಂದ ಆತನಿಗೆ ಕುಡಿಯಲು ಕೊಟ್ಟರು. ಸಿಪಾಯಿಯು ಅವನಿಗೆ ಕುಡಿಸಿದ ನಂತರ ಆತನು "ತೀರಿತು" ಎಂದು ಹೇಳಿದನು. ಆತನ ಕೆಲಸವು ಮುಗಿದಿತ್ತು. ಆತನು ತಂದೆಯು ಲೋಕದಲ್ಲಿ ಆತನಿಗೆ ಮಾಡಲು ಕಳುಹಿಸಿದ ಕಾರ್ಯವನ್ನು ನೆರವೇರಿಸಿದ್ದನು (ಯೋಹಾನ 17:4).

**37** ಈ ಸಂದರ್ಭದಲ್ಲಿ ಲೂಕ 23:46ರ ಪ್ರಕಾರವಾಗಿ ಯೇಸು "ತಂದೆಯೇ ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸುತ್ತೇನೆ" ಎಂದು ಸಹ ಹೇಳಿದನು. ಯೇಸು ಇದನ್ನು ಹೇಳಿ ಗಟ್ಟಿಯಾಗಿ ಕೂಗಿ ತನ್ನ ಕೊನೆಯುಸಿರೆಳೆದನು.

**38** ಈ ವಚನದಲ್ಲಿ ಉಲ್ಲೇಖಿಸಲ್ಪಟ್ಟಿರುವ ದೇವಾಲಯದ ತೆರೆಯು ಯೆಹೂದ್ಯ ದೇವಾಲಯದ ಅತಿ ಒಳಗಿನ ಕೋಣೆಯಾದ "ಅತಿ ಪರಿಶುದ್ಧ ಸ್ಥಳದ" ಪ್ರವೇಶ ದ್ವಾರದಲ್ಲಿದ್ದ ತೆರೆಯಾಗಿತ್ತು ಅಲ್ಲಿ ಮಹಾಯಾಜಕರು ಮಾತ್ರವೇ ಪ್ರವೇಶಿಸಬೇಕಾಗಿತ್ತು. ದೇವರ ಪ್ರಸನ್ನತೆಯು ಆ ಕೋಣೆಯಲ್ಲಿ ವಾಸಿಸುತ್ತದೆಂದು ಯೆಹೂದ್ಯರು ಪರಿಗಣಿಸಿದ್ದರು (ಇಬ್ರಿಯ 9:1-5 ಮತ್ತು ವ್ಯಾಖ್ಯಾನ ನೋಡಿರಿ) ವರ್ಷದಲ್ಲಿ ಒಂದಾವರ್ತಿ ಮಹಾಯಾಜಕನು ತನ್ನ ಮತ್ತು ಜನರ ಪಾಪಗಳಿಗಾಗಿ ಯಜ್ಞವನ್ನು ಅರ್ಪಿಸಲು ಪ್ರವೇಶಿಸುತ್ತಿದ್ದನು (ಇಬ್ರಿಯ 9:7 ಮತ್ತು ವ್ಯಾಖ್ಯಾನ ನೋಡಿರಿ). ಯೇಸು ಮರಣಿಸಿದವೇಳೆ, ಅತಿಪರಿಶುದ್ಧ ಸ್ಥಳದ ಪ್ರವೇಶ ದ್ವಾರದಲ್ಲಿದ್ದ ತೆರೆಯು ಮೇಲಿನಿಂದ ಕೆಳಗಿನವರೆಗೆ ಇಬ್ಭಾಗವಾಯಿತು ಅನಂತರ ಅದು ನಾಶ ಮಾಡಲ್ಪಟ್ಟಿತು. ಈ ಕ್ಷಣದಿಂದ ಮಹಾಯಾಜಕನು ಪಾಪಗಳಿಗಾಗಿ ಯಜ್ಞಗಳನ್ನು ಅರ್ಪಿಸಲು ಇನ್ನೆಂದಿಗೂ ಪ್ರವೇಶಿಸಬೇಕಾಗಿರುವದಿಲ್ಲ. ಯೇಸುವೇ ಪಾಪಕ್ಕಾಗಿ ಅಂತಿಮ ಯಜ್ಞವಾಗಿದ್ದನು, ಇನ್ನು ಮುಂದೆ ಯಾವ ಯಜ್ಞವು ಅವಶ್ಯಕವಾಗಿರುವದಿಲ್ಲ.

ಯೇಸುವಿನ ಯಜ್ಞದಕಾರಣದಿಂದ ದೇವರು ಈಗ ವಿಶ್ವಾಸಿಗಳ ಪಾಪಗಳನ್ನು ಕ್ಷಮಿಸಿ ಅವರನ್ನು ನೀತಿವಂತರೆಂದು ಘೋಷಿಸಿದ್ದಾನೆ. ಅಷ್ಟುಮಾತ್ರವೇ ಅಲ್ಲ ವಿಶ್ವಾಸಿಗಳು ದೇವರಿಂದ ನೀತಿವಂತರೆಂಬ ನಿರ್ಣಯ ಹೊಂದಿರುವದರಿಂದ ಅವರು ನೇರವಾಗಿ ದೇವರ ಸನ್ನಿದಿಯೊಳಗೆ ಈಗ ಪ್ರವೇಶಿಸಬಹುದು (ಇಬ್ರಿಯ 4:16, 1 ಪೇತ್ರ 3:18 ನೋಡಿರಿ). ಈಗ ಇನ್ನೆಂದಿಗೂ ನಮ್ಮನ್ನು ದೇವರಿಂದ ದೂರವಿರಿಸುವ ಯಾವ ತೆರೆಯೂ ಇರುವದಿಲ್ಲ. "ಹೀಗಿರುವಲ್ಲಿ ಸಹೋದರರೇ, ಯೇಸು ನಮಗೋಸ್ಕರ ಪ್ರತಿಷ್ಠಿಸಿದ ಜೀವವುಳ್ಳ ಹೊಸದಾರಿಯಲ್ಲಿ ಆತನ ರಕ್ತದಮೂಲಕ ಆತನ ಶರೀರವೆಂಬ ತೆರೆಯ ಮುಖಾಂತರ ದೇವರ ಸಮಕ್ಷಮದಲ್ಲಿ ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು...ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ, ಯತಾರ್ಥ ಹೃದಯವುಳ್ಳವರಾಗಿಯೂ ದೇವರ ಬಳಿಗೆ ಬರೋಣ (ಇಬ್ರಿಯ 10:19-22) ಅನೇಕ ಯೆಹೂದ್ಯ ಯಾಜಕರಿಗೆ ತೆರೆಯು ಹರಿಯಲ್ಪಟ್ಟಿರುವದು ತಿಳಿದು ಬಂದಿತು. ಬಹಶಃ ಆ ಕಾರಣಕ್ಕಾಗಿಯೇ ಅನಂತರ ಯಾಜಕರಲ್ಲಿಯೂ ಬಹುಜನರು ಕ್ರಿಸ್ತನಂಬಿಕೆಗೆ ಒಳಗಾದರು (ಅ.ಕೃತ್ಯ 6:7). ಮತ್ತಾಯ 27:51-53ರ ಪ್ರಕಾರವಾಗಿ ಯೇಸುವಿನ ಮರಣದ ವೇಳೆ ಭೂಕಂಪವೂ ಸಹ ಸಂಭವಿಸಿತು, ಸಮಾಧಿಗಳು ತೆರಯಲ್ಪಟ್ಟವು ಮತ್ತು ಸತ್ತು ಹೋಗಿದ್ದ ಅನೇಕ ಭಕ್ತರ ದೇಹಗಳು ಎದ್ದವು ಮತ್ತು ಯೇಸುವಿನ ಪುನರುತ್ಥಾನದ ಬಳಿಕ ಅವರು ಯೆರೂಸಲೇಮಿನೊಳಗೆ ಬಂದು ಅನೇಕರಿಗೆ ಕಾಣಿಸಿಕೊಂಡವು. ಇದು ಲೋಕಾಂತ್ಯದಲ್ಲಿ ಎಲ್ಲಾ ವಿಶ್ವಾಸಿಗಳಿಗೆ ಸಂಭವಿಸುವ ಪುನರುತ್ಥಾನಕ್ಕೆ ಗುರುತಾಗಿತ್ತು. ಯೇಸು ತಿರಿಗಿ ಬರುವಾಗ ನಮಗೆ ಸಂಭವಿಸುವ ಸಂಗತಿಗೆ ಇದು "ಪ್ರಾರಂಭ" (ಮುಂಗಡ) ದಂತೆ ಇತ್ತು. ಯೇಸು ನಿದ್ರೆಹೋದವರೊಳಗೆ ಪ್ರಥಮ ಫಲ ಆಗಿದ್ದನು (1 ಕೊರಿಂಥ 15:20-23 ಮತ್ತು ವ್ಯಾಖ್ಯಾನ ನೋಡಿರಿ) ಆತನು ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆಗಿದ್ದಾನೆ (ಕೊಲೊಸ್ಸೆ 1:18). ಹೀಗೆ ಯೇಸುವಿನ ಮರಣ ಮತ್ತು ಪುನರುತ್ಥಾನದ ವೇಳೆಯಲ್ಲಿ ಹಳೆ ಒಡಂಬಡಿಕೆಯ ಕೆಲವು ಭಕ್ತರು ಸಹ ಎದ್ದು ಬಂದರು ನಂತರ ಯೇಸು ತಿರಿಗಿ ಬರುವಾಗ ಉಳಿದ ನಾವೆಲ್ಲರು ಸಹ ಎದ್ದು ಬರುವೆವು. ಇದರ ಮೂಲಕ ಯೇಸುವನ್ನು ಎಂದಿಗೂ ತಿಳಿಯದಿದ್ದ ಹಳೆ ಒಡಂಬಡಿಕೆಯ ನಂಬಿಗಸ್ಥ ಭಕ್ತರು ಸಹ ಅಂತ್ಯದಲ್ಲಿ ಜೀವಿತರಾಗಿ ಎಬ್ಬಿಸಲ್ಪಡುವರು. ನಿಜವಾಗಿಯೂ ಕ್ರಿಸ್ತನು ತನ್ನ ಮರಣದ ಮೂಲಕ ಮರಣದ ಮೇಲೆ ಜಯ ಸಾಧಿಸಿದ್ದಾನೆ! (1 ಕೊರಿಂಥ 15:54,57) ಮತ್ತು ತನ್ನ ಮರಣದ ಮೂಲಕ ಮರಣಾಧಿಕಾರಿಯನ್ನು ಅಂದರೆ ಸೈತಾನನ್ನು ನಾಶಮಾಡಿದ್ದಾನೆ (ಇಬ್ರಿಯ 2:14). ಎಂಬದನ್ನು ತಿಳಿದುಕೊಳ್ಳಬಹುದು.

**39** ಯೇಸುವನ್ನು ಶಿಲುಬೆಗೇರಿಸಿದ ಶತಾಧಿಪತಿ ಮತ್ತು ಸಿಪಾಯಿಗಳು ಆತನು ಸಾಯುವದನ್ನು ನೋಡುತ್ತಾ ಆಶ್ಚರ್ಯಗೊಂಡರು (ಮತ್ತಾಯ 27:54). ಸ್ವಲ್ಪ ಹೊತ್ತಿನ ಮುಂಚೆಯಷ್ಟೇ ಅವರು ಯೇಸುವನ್ನು ಹಾಸ್ಯಮಾಡುತ್ತಿದ್ದರು. ಅವರು ಆತನನ್ನು ಶಿಲುಬೆಯ ಮೇಲೇರಿಸಿ ಆತನ ಕೈಗಳಿಗೆ ಮೊಳೆಗಳನ್ನು ಹೊಡೆದಿದ್ದರು. ಆದರೆ ಬಳಿಕ ಅವರು ಭೂಮಿಯ ಮೇಲೆ ಕತ್ತಲಾಗುವದನ್ನು ಕಂಡರು. ಅವರಿಗೆ ಭೂಕಂಪದ ಅನುಭವವಾಯಿತು. ಅವರು ಯೇಸು ಶಿಲುಬೆಯ ಮೇಲಿಂದ ಆಡಿದ ಮಾತುಗಳನ್ನು ಆಲಿಸಿದರು. ಅವರು ಆತನ ಅಂತಿಮಕೂಗನ್ನು ಕೇಳಿದರು. ಅವರು ಇದುವರೆಗೆ ನೋಡಿದ ಇತರ ವ್ಯಕ್ತಿಗಳಂತೆ ಯೇಸು ಸಾಯಲಿಲ್ಲ ಶತಾಧಿಪತಿಯು "ಈ ಮನುಷ್ಯನು ನೀತಿವಂತನೇ ನಿಜ" (ಲೂಕ 23:47) "ನಿಜವಾಗಿಯೂ ಈ ಮನುಷ್ಯನು ದೇವಕುಮಾರನಾಗಿದ್ದನು" ಎಂದು ಹೇಳಿದನು.

**40-41** ಯೇಸುವಿನೊಂದಿಗೆ ಬಂದಿದ್ದ ಗಲಿಲಾಯದ ಸ್ತ್ರೀಯರು ಆತನ ಶಿಷ್ಯರಿಗಿಂತಲೂ 118 ಹೆಚ್ಚು ನಂಬಿಗಸ್ಥರೂ, ಭಕ್ತಿವಂತರೂ ಆಗಿದ್ದರು. ಅವರು ಯೇಸುವಿನ ಪುನರುತ್ಥಾನಕ್ಕೆ ಪ್ರತ್ಯಕ್ಷ ಸಾಕ್ಷಿಗಳಾಗಿದ್ದರು ಮತ್ತು ಅನಂತರ ತಾವು ಕಂಡು ಕೇಳಿದ್ದನ್ನೆಲ್ಲಾ ಶಿಷ್ಯರಿಗೆ ತಿಳಿಸಿದರು. ಮಗ್ದಲದ ಮರಿಯಳು ಏಳು ದೆವ್ವಗಳಿಂದ ಪೀಡಿತಳಾಗಿದ್ದು ಯೇಸುವಿಂದ ಗುಣಹೊಂದಿದ್ದಳು (ಲೂಕ 8:2) ಸಲೋಮೇಯು ಜೆಬದಾಯನ ಹೆಂಡತಿಯೂ ಹಾಗು ಶಿಷ್ಯರಾದ ಯಾಕೋಬ ಮತ್ತು ಯೋಹಾನರ

ತಾಯಿಯಾಗಿದ್ದಳು. (ಮತ್ತಾಯ 27:56). ಇಲ್ಲಿ ಉಲ್ಲೇಖಿಸಲ್ಪಟ್ಟಿರುವ ಎರಡನೆಯ ಮರಿಯಳು ಯೇಸುವಿನ ತಾಯಿಯಾಗಿರಬಹುದೆಂದು ಕೆಲವು ಬೈಬಲ್ ಪಂಡಿತರು ನಂಬುತ್ತಾರೆ ಆದರೆ ಇದು ಖಚಿತವಾಗಿರುವದಿಲ್ಲ.

### ಯೇಸುವಿನ ಹೂಣಲ್ಪಡುವಿಕೆ (15:42-47)

(ಮತ್ತಾಯ 27:57-61, ಲೂಕ 23:50-56, ಯೋಹಾನ 19:38-42)

**42-43** ಪಸ್ಕ ವಾರದ ಸಿದ್ಧತೆಯ ದಿನದಲ್ಲಿ ಅಂದರೆ ಸಬ್ಬತ್ತದಿನದ ಮುಂಚಿನ ಶುಕ್ರವಾರದಂದು ಅರಿಮಥಾಯದ ಯೋಸೇಫನು ಪಿಲಾತನ ಬಳಿಗೆ ಹೋಗಿ ಯೇಸುವಿನ ದೇಹವನ್ನು 119 ತನಗೆ ಕೊಡಿಸಬೇಕೆಂದು ಬೇಡಿಕೊಂಡನು. ಇವನು ಯೆಹೂದ್ಯ ಹಿರೀಸಭೆಯ ಸದಸ್ಯನಾಗಿದ್ದನು. ಇತನು ಯೇಸುವಿನ ಶಿಷ್ಯನಾಗಿದ್ದನು. ಆದರೆ ಯೆಹೂದಿಯರ ಭಯದಿಂದ ರಹಸ್ಯವಾಗಿ ಮಾತ್ರವೇ ನಂಬಿದನು (ಯೋಹಾನ 19:38) ಇವನು ಉತ್ತಮನು, ನೀತಿವಂತನು ಆಗಿದ್ದು ಯೇಸುವನ್ನು ಖಂಡಿಸಿದ್ದ ಯೆಹೂದ್ಯರ ಆಲೋಚನೆಗೆ ಸಮ್ಮತಿಪಟ್ಟಿರಲಿಲ್ಲ (ಲೂಕ 23:50-51)

**44-46** ಪಿಲಾತನು ಯೋಸೇಫನ ಮನವಿಯನ್ನು ಒಪ್ಪಿಕೊಂಡನು. ಯೋಸೇಫನು ಯೇಸುವಿನ ದೇಹವನ್ನು ತೆಗೆದುಕೊಂಡು ಹೋಗಿ ಆತನು ಇತ್ತೀಚೆಗಷ್ಟೇ ತನಗೋಸ್ಕರವೆಂದು ಸಿದ್ದಪಡಿಸಿದ್ದ ಹೊಸ ಸಮಾಧಿಯಲ್ಲಿ ಇಟ್ಟನು (ಮತ್ತಾಯ 27:60, ಲೂಕ 23:53) ನಂತರ ಅವನು ಸಮಾಧಿಯ ಬಾಗಿಲಿಗೆ ಒಂದು ದೊಡ್ಡ ಕಲ್ಲನ್ನು ಮುಚ್ಚಿದನು (ಮಾರ್ಕ 16:4) ಯೇಸು ಜೀವಿಸಿರುವಾಗ ತನ್ನ ತಲೆಯನ್ನು ಇಡಲು ಸಹ ಸ್ಥಳವನ್ನು ಹೊಂದಿರದ ಹಾಗೆಯೇ ಆತನು ಮರಣಿಸಿದಾಗಲೂ ಆತನ ದೇಹವನ್ನಿಡಲು ಸಮಾಧಿಹೊಂದಿರಲಿಲ್ಲ. ಆತನ ದೇಹವು ಇನ್ನೊಬ್ಬರ ಸಮಾಧಿಯಲ್ಲಿ ಇಡಲ್ಪಟ್ಟಿತು.

**47** ಯೇಸುವಿನೊಂದಿಗೆ ಬಂದಿದ್ದ ಮರಿಯಳು ಹಾಗು ಮಗ್ದಲದ ಮರಿಯಳೆಂಬ ಇಬ್ಬರು ಗಲಿಲಾಯದ ಸ್ತ್ರೀಯರು ಯೇಸು ಹೂಣಲ್ಪಟ್ಟ ಸ್ಥಳವನ್ನು ನೋಡಿದ್ದರು (ವಚನ 40) ಬಳಿಕ ಅವರು ಮನೆಗೆ ಹೋಗಿ ಯೇಸುವಿನ ದೇಹಕ್ಕೆ ಲೇಪಿಸಲು ಸುಗಂಧ ದ್ರವ್ಯಗಳನ್ನು ಸಿದ್ದ ಮಾಡಿದರು (ಲೂಕ 23:56). ಯೋಹಾನ 19:39-42 ಪ್ರಕಾರವಾಗಿ ನಿಕೋದೇಮನು [120]ಯೋಸೇಫನ ಜೊತೆಯಲ್ಲಿ ಪಿಲಾತನ ಬಳಿಗೆ ಹೋದನು. ಮತ್ತು ನಂತರ ಯೇಸುವಿನ ದೇಹವನ್ನು ಹೂಣಿಡಲು ಆತನಿಗೆ ಸಹಾಯ ಮಾಡಿದನು. ಅವರು ದೇಹವನ್ನು ಯೆಹೂದ್ಯ ಪದ್ಧತಿಯಂತೆ ನಾರು ಮಡಿಗಳಿಂದ ಸುತ್ತಿದರು. ಈ ಸ್ತ್ರೀಯರು ಯೇಸುವಿನೆಡೆಗೆ ಇರುವ ತಮ್ಮ ಪ್ರೀತಿ ಮತ್ತು ಭಕ್ತಿಗೆ ಗುರುತಾಗಿ ಹೆಚ್ಚು ನಾರುಮಡಿಗಳನ್ನು ಸೇರಿಸಲು ಬಯಸಿದ್ದರು.

---

## ಅಧ್ಯಾಯ - 16

### ಪುನರುತ್ಥಾನ (16:1-8)

(ಮತ್ತಾಯ 28:1-8, ಲೂಕ 24:01-8, ಯೋಹಾನ 20:1)

**1** ಸಬ್ಬತ್‌ದಿನ ಕಳೆದ ಮೇಲೆ ಅಂದರೆ ಶನಿವಾರ [121]ಸಂಜೆ 6 ಘಂಟೆಗೆ ಯೇಸುವನ್ನು ಶಿಲುಬೆಯ ಮೇಲೆ ನೋಡಿದ್ದ ಅದೇ ಸ್ತ್ರೀಯರು (ಮಾರ್ಕ 15:40) ಯೇಸುವಿನ ದೇಹಕ್ಕೆ ಹಚ್ಚುವದಕ್ಕಾಗಿ ಸುಗಂಧ ದ್ರವ್ಯಗಳನ್ನು ಕೊಂಡು ಸಿದ್ದಪಡಿಸಿದರು (ಲೂಕ 23:56)

**2-4** ಸ್ತ್ರೀಯರು ಸಮಾಧಿಯ ಬಳಿಗೆ ಹೋದಾಗ ಸಮಾಧಿಯ ದೊಡ್ಡಕಲ್ಲು ಉರುಳಿಸಲ್ಪಟ್ಟಿರುವದನ್ನು ಕಂಡರು. ಮತ್ತಾಯ 28:2-4 ಪ್ರಕಾರವಾಗಿ ಒಂದು ಭೂಕಂಪ ಉಂಟಾಗಿ ದೇವದೂತನೊಬ್ಬನು ಪರಲೋಕದಿಂದ ಇಳಿದು ಬಂದು ಕಲ್ಲನ್ನು ಉರುಳಿಸಿದನು. ಆ ಸಮಾಧಿಯನ್ನು ಕಾಯಲು ಇಡಲ್ಪಟ್ಟಿದ್ದ ಕಾವಲುಗಾರರು ಹೆದರಿ ನಡುಗಿ ಸತ್ತವರಂತಾದರು (ಮತ್ತಾಯ 28:4)

**5** ಯೌವನಸ್ಥ ರೂಪದಲ್ಲಿ ಕಾಣಿಸಿಕೊಂಡ ದೂತನು ಸಮಾಧಿಯ ಬಾಗಿಲಿನ ಬಲಗಡೆಯಲ್ಲಿ ಕುಳಿತು ಕೊಂಡಿದ್ದನು. ಅವನ ಮುಖ ಭಾವವು ಮಿಂಚಿನಂತಿದ್ದದರಿಂದ ಸ್ತ್ರೀಯರು ಬೆಚ್ಚಿದರು (ಮತ್ತಾಯ 28:3) ಲೂಕ 24:4) ರ ಪ್ರಕಾರವಾಗಿ ಇನ್ನೊಬ್ಬ ದೇವದೂತನು ಅಲ್ಲಿ ಇದ್ದನು ಮತ್ತಾಯ ಮತ್ತು ಮಾರ್ಕ ಈತನ ಬಗ್ಗೆ ಉಲ್ಲೇಖಿಸಿರುವದಿಲ್ಲ.

**6-7** ದೇವದೂತನು ಆ ಸ್ತ್ರೀಯರಿಗೆ ಸತ್ತವರೊಳಗೆ ಬದುಕಿರುವವನ್ನು ಹುಡುಕುವದೇನು? (ಲೂಕ 24:5) – "ಆತನು ಎದ್ದಿದ್ದಾನೆ.....ಆತನು ನಿಮಗೆ ಹೇಳಿದ್ದಂತೆಯೇ ನಿಮಗೆ ಮುಂಚಿತವಾಗಿ ಗಲಿಲಾಯಕ್ಕೆ ಹೋಗುತ್ತಿದ್ದಾನೆ" (ಮಾರ್ಕ 14:28, ಲೂಕ 24:6-7).

**8** ಆ ಸ್ತ್ರೀಯರು ಸಮಾಧಿ ಬಳಿಯಿಂದ ಓಡಿ ಹೋದರು. ಮೊದಲು ಯಾರಿಗೂ ಏನೂ ಹೇಳಲಿಲ್ಲ ಆದರೆ ಬಳಿಕ ಅವರು ದೇವದೂತನ ಅಪ್ಪನಿಗೆ ವಿಧೇಯರಾಗಿ (ವ.7), ಶಿಷ್ಯರಿಗೆ ತಿಳಿಸಲು ಓಡಿ ಹೋದರು. (ಮತ್ತಾಯ 28:8) ಆತನು ಎದ್ದಿದ್ದಾನೆ!! ಜಗತ್ತು ಉತ್ಪತ್ತಿಯಾದಂದಿನಿಂದ ಕ್ರಿಸ್ತನು ಸತ್ತವರೊಳಗಿಂದ ಎದ್ದಂಥಹ ಘಟನೆಗಿಂತಲೂ ಪ್ರಾಮುಖ್ಯವಾದದ್ದು

ಇನ್ನೊಂದಿಲ್ಲ. ಕ್ರಿಸ್ತನು ಸತ್ತವರೊಳಗಿಂದ ಎದ್ದಿಲ್ಲದಿದ್ದರೆ ಕ್ರೈಸ್ತ ಧರ್ಮವಾಗಲಿ ಕ್ರೈಸ್ತರಾಗಲಿ ಇರುತ್ತಿರಲಿಲ್ಲ ಮನುಷ್ಯನಿಗೆ ರಕ್ಷಣೆ ಇರುತ್ತಿರಲಿಲ್ಲ.

(1 ಕೊರಿಂಥ 15:17-19), ಇಡೀ ಇತಿಹಾಸಿದ ಚಕ್ರವೇ ಸಂಪೂರ್ಣವಾಗಿ ವ್ಯತ್ಯಾಸವಾಗಿರುತ್ತಿತ್ತು. ಸತ್ತವರೊಳಗಿಂದ ಎದ್ದೇಳುವದರ ಮೂಲಕ ತಾನು ನಿಜವಾಗಿಯೂ ದೇವರ ಮಗನೇ ಯಾಗಿದ್ದನೆಂಬುದಕ್ಕೆ ಯೇಸು ಅಂತಿಮ ಮತ್ತು ಸಂಪೂರ್ಣ ಆಧಾರವನ್ನು ನೀಡಿದನು. ದೇವರು ತಾನೆ ಭೂಮಿಗೆ ಬಂದು ಅಂತಿಮ ವೈರಿಯಾದ ಮರಣವನ್ನು ಸೋಲಿಸಿ ಪು ರುಷ ಸ್ತ್ರೀಯರಿಗೆ ಪರಲೋಕದ ಮಾರ್ಗವನ್ನು ತೋರಿದನು. ಕೆಲವು ನಾಸ್ತಿಕರು ಯೇಸು ಜೀವದಿಂದ ಎದ್ದೇಳಲೇ ಇಲ್ಲ ಅದು ಕೇವಲ ಆತನ ಶಿಷ್ಯರು ಕಲ್ಪಿಸಿರುವ ಸುಳ್ಳು ಕಥೆಯಾಗಿದೆ, ಎಂದು ಹೇಳಲು ಪ್ರಯತ್ನಿಸುತ್ತಾರೆ ಹೇಗೂ ಅವರು ಹೇಳುವದು ಸರಿಯಾಗಿರುವದಿಲ್ಲ.

ಯೇಸುವಿನ ಪು ನರುಥ್ಥಾನವು ಐತಿಹಾಸಿಕ ಅಂಶವಾಗಿದೆ. ನಾವು ಇದನ್ನು ಹೇಗೆ ತಿಳಿಯಬಲ್ಲೆವು . ಮೊದಲನೆಯದಾಗಿ, ಸಮಾಧಿಯು ಬರಿದಾಗಿತ್ತು ಅದನ್ನು ಯಾರೂ ಅಲ್ಲಗಳೆಯಲಾಗದು, ಒಂದು ವೇಳೆ ಯೇಸು ಸತ್ತವರೊಳಗಿಂದ ಎದ್ದೇಳದಿರುವದಾದರೆ ಅತನ ದೇಹ ಎಲ್ಲಿ ಹೋಯಿತು. ರೋಮ ಸಿಪಾಯಿಗಳು ಕಾವಲಾಗಿದ್ದರು. ಕೆಲವು ಯೆಹೂದ್ಯರು ಈ ದಿನದವರೆಗೂ ಯೇಸುವಿನ ಶಿಷ್ಯರು ದೇಹವನ್ನು ಕದ್ದರು ಎಂದು ಹೇಳುತ್ತಾರೆ, ಆದರೆ ಕಾವಲಿಗೆ ರೋಮ ಸೈನಿಕರಿರುವಾಗ ಅದು ಅಸಾದ್ಯ ಅಷ್ಟು ಮಾತ್ರವೇ ಅಲ್ಲದೆ ಶಿಷ್ಯರು ಯೇಸುವನ್ನು ಕೈಬಿಟ್ಟು ಯೆಹೂದಿಯರ ಭಯದಿಂದ ಅಡಿಗಿ ಕೊಂಡಿದ್ದರು (ಯೋಹಾನ 19:20) ಅಲ್ಲದೆ, ಯೆಹೂದ್ಯರು ಮತ್ತು ರೋಮಾಯರು ಖಂಡಿತವಾಗಿ ಯೇಸುವಿನ ದೇಹಕ್ಕಾಗಿ ಜಾಗರೂಕತೆಯಿಂದ ಹುಡುಕಿದರು. ವಿಶೇಷವಾಗಿ ಯೆಹೂದ್ಯರು ಯೇಸುವಿನ ಪು ನರುಥ್ಥಾನವನ್ನು ಅಲ್ಲಗಳೆಯಲು ಅಥವಾ ಸುಳ್ಳೆಂದು ಸಾಬೀತಪಡಿಸಲು ಯಾವದಾದರೂ ಒಂದು ಮಾರ್ಗವನ್ನು ಬಯಸುತ್ತಿದ್ದರು (ಮಾತ್ತಾಯ 27:64), ಆತನ ದೇಹವನ್ನು ಕಂಡುಕೊಂಡರೆ ಉತ್ತಮವಾದ ಬೇರೆ ಇನ್ನಾವ ಮಾರ್ಗವೂ ಬೇಕಿಲ್ಲವೆಂದು ಕೊಂಡರು!! ಆದರೆ ದೇಹವು ಎಲ್ಲಿಯೂ ಸಿಗುವ ಹಾಗಿರಲಿಲ್ಲ ಯೇಸು ಸತ್ತವರೊಳಗಿಂದ ಎದ್ದನೆಂಬುದನ್ನು ನಾವು ತಿಳಿಯುವದಕ್ಕೆ ಕಾರಣವೇನೆಂದರೆ ತನ್ನ ಪು ನರುಥ್ಥಾನದ ನಂತರ ಆತನು ಅನೇಕ ಜನರಿಗೆ ಕಾಣಿಸಿಕೊಂಡನು. (1 ಕೊರಿಂಥ 15:6 ಮತ್ತು 25 ವರ್ಷಗಳ ನಂತರ ಪೌಲನು ಕೊರಿಂಥದವರಿಗೆ ಪತ್ರವನ್ನು ಬರೆಯುವಾಗ ಅವರಲ್ಲಿ ಅನೇಕರು ಜೀವಂತವಾಗಿದ್ದರು. ಇವರೆಲ್ಲರೂ ಕ್ರಿಸ್ತನ ಪು ನರುಥ್ಥಾನಕ್ಕೆ ಸಾಕ್ಷಿಗಳಾಗಿದ್ದರು. ಕ್ರಿಸ್ತನು ಸತ್ತವರೊಳಗಿಂದ ಎದ್ದನೆಂಬುವದು ತಿಳಿಯುವದಕ್ಕೆ ಮೂರನೆಯ ಕಾರಣಗಳೇನಂದರೆ – ಆ ಹನ್ನೊಂದು ಮಂದಿ ಅಪನಂಬಿಗಸ್ತ ಹೆದರಿಕೆಯುಳ್ಳ ಶಿಷ್ಯರ ಜೀವಿತಗಳಲ್ಲಿ ಜರುಗಿದ ಆಶ್ಚರ್ಯಕರವಾದ ಬದಲಾವಣೆಯಾಗಿದೆ. ಒಂದು ಕ್ಷಣ ಅವರು ಪಲಾಯನ ಮಾಡುತ್ತಿದ್ದರು, ಅಡಗಿಕೊಳ್ಳುತ್ತಿದ್ದರು. ಆದರೆ ಎದ್ದಿರುವ ಯೇಸುವನ್ನು ಕಂಡಾಗ ಸಂಪೂರ್ಣ ನೂತನಗೊಂಡು, ಆನಂದದಿಂದ ತುಂಬಿ ಆತನ ಪವಿತ್ರಾತ್ಮನಿಂದ ಬಲಗೊಂಡವರಾದರು. (ಯೋಹಾನ 20:22, ಅ.ಕೃ. 2:4), ಶಿಷ್ಯರ ಜೀವಿತಗಳಲ್ಲಿ ಜರುಗಿದ ಅಸ್ವಾಭಾವಿಕ ಬದಲಾವಣೆಯನ್ನು ವಿವರಿಸಲು ಬೇರಾವ ಮಾರ್ಗವಿರುವದಿಲ್ಲ. ಪು ನರುಥ್ಥಾನಗೊಂಡ ಕ್ರಿಸ್ತನು ಮಾತ್ರವೇ ಅಂಥಹ ಬದಲಾವಣೆಯನ್ನು ತಂದಿರಬಲ್ಲನು. ಆದರೆ ಶಿಷ್ಯರಲ್ಲಿ ಮಾತ್ರವೇ ಬದಲಾವಣೆ ಉಂಟಾಗಲಿಲ್ಲ. ಇತರರ ಜೀವಿತಗಳಲ್ಲಿಯೂ ಸಹ ಅದು ಕಂಡು ಬರಲು ಪ್ರಾರಂಬಿಸಿತು. ಅಪೊಸ್ತಲನಾದ ಪೌಲನು ದಮಾಸ್ಕದ ಮಾರ್ಗದಲ್ಲಿ ಪು ನರುಥ್ಥಾನಗೊಂಡ ಯೇಸುವನ್ನು ಸಂಧಿಸಿದನು. ಆಗ ಆತನ ಜೀವನ ಸಂಪೂರ್ಣವಾಗಿ ಬದಲಾಯಿತು. (ಅ.ಕೃ. 9:1-9, 17:20 ನೋಡಿರಿ). ಇತಿಹಾಸದುದ್ದಕ್ಕು ಅನೇಕ ಕೋಟ್ಯಾನುಕೋಟಿ ಇತರ ಕ್ರೈಸ್ತರು ಪು ನರುಥ್ಥಾನಗೊಂಡ ಯೇಸುವನ್ನು ತಿಳಿದಿದ್ದಾರೆ ಮತ್ತು ಅತನ ಪವಿತ್ರಾತ್ಮವನ್ನು ಅವರ ಜೀವಿತಗಳನ್ನು ತುಂಬಿದ್ದಾನೆ. ಕ್ರಿಸ್ತನು ಎದ್ದಿದ್ದಾನೆಂದು ನಾವು ಬಲ್ಲೆವು ಯಾಕೆಂದರೆ ಆತನು ನಮ್ಮ ಹೃದಯಗಳೊಳಗೆ ಜೀವಿಸುತ್ತಾನೆ. ಕ್ರಿಸ್ತನ ಪು ನರುಥ್ಥಾನದ ಅರ್ಥವೇನು? ಅದೇನಂದರೆ ಕ್ರಿಸ್ತನು ಮರಣವನ್ನು ಜಯಿಸಿದನು ಆತನು ನಮ್ಮನ್ನು ಮರಣದಿಂದ ರಕ್ಷಿಸಲು ಶಕ್ತನಾಗಿದ್ದಾನೆ. ಆತನು ಜೀವ ಸ್ವರೂಪನಾದ ದೇವರ ಕುಮಾರನಾಗಿದ್ದಾನೆ ಮತ್ತು ಇಂದು ಆತನು ಪ್ರತಿಯೊಬ್ಬ ವಿಸ್ವಾಸಿಯ ಹೃದಯದಲ್ಲಿ ಜೀವಿಸುತ್ತಿದ್ದಾನೆ. "ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ" (ಮತ್ತಾಯ 28:20) ಆದುದರಿಂದ ನಾವು ಆತನ ಅಪ್ಪಣೆಗೆ ವಿಧೇಯರಾಗಿ ಜಗತ್ತಿಗೆಲ್ಲಾ ಹೊರಟು ಹೋಗಿ ಎಲ್ಲಾ ಸೃಷ್ಟಿಗೂ ಸುವಾರ್ತೆಯನ್ನು ಸಾರೋಣ (ವ.15).

ಯೇಸು ತನ್ನ ಹಿಂಬಾಲಕರಿಗೆ ಕಾಣಿಸಿಕೊಳ್ಳುತ್ತಾನೆ (16:9-20)

**9-11** ಮತ್ತಾಯ 28:9-10 ಲೂಕ 24:9-12, ಯೋಹಾನ 20:1-18 ಮತ್ತು ವ್ಯಾಖ್ಯಾನಗಳನ್ನು[122] ನೋಡಿರಿ)

**12-13** ಲೂಕ 24:13-15 ಮತ್ತು ವ್ಯಾಖ್ಯಾನ ನೋಡಿರಿ.

**14** ಲೂಕ 24:36-44, ಯೋಹಾನ 20:19-31 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

**15** ಯೇಸು ತನ್ನ ಶಿಷ್ಯರಿಗೆ "ನೀವು ಹೊರಟು ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ "ಎಂದು ಹೇಳಿದನು. ಅಲ್ಲದೆ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ ಎಂದು ಸಹ ಹೇಳಿರಿ (ಮತ್ತಾಯ 28- 16-20 ಮತ್ತು ವ್ಯಾಖ್ಯಾನ ನೋಡಿರಿ). ಎಲ್ಲಾ ಕ್ರೈಸ್ತರು ಬೋಧಕರಾಗಿ ಕರೆಯಲ್ಪಟ್ಟಿಲ್ಲ ಮತ್ತು ಎಲ್ಲರೂ ಜಗತ್ತಿಗೆಲ್ಲಾ ವಿದೇಶಿ ಸೇವಾ ಕಾರ್ಯಕರ್ತರಾಗಿ ಹೋಗಲು ಕರೆಯಲ್ಪಟ್ಟಿಲ್ಲ. ಆದರೆ ಶ್ರೇಷ್ಟ ಅಪ್ಪಣೆಯನ್ನು ನೆರವೇರಿಸಲು ಪ್ರತಿಯೊಬ್ಬ ಕ್ರೈಸ್ತನು ಯಾವದಾದರೂ ಪಾತ್ರವನ್ನು ವಹಿಸಿಕೊಳ್ಳಲು ಕರೆಯಲ್ಪಟ್ಟಿದ್ದಾನೆ. ಒಂದು ವೇಳೆ "ಹೋಗುವವರು" ಅಲ್ಲದಿದ್ದರೂ ತಮ್ಮ ಕಾಣಿಕೆ ಮತ್ತು ಪ್ರಾರ್ಥನೆಗಳ

ಮೂಲಕ ಕಳುಹಿಸುವವರು ಆಗಿರಬೇಕು. ಮತ್ತು ಪ್ರತಿಯೊಬ್ಬ ಕ್ರೈಸ್ತರು ತಮ್ಮ ಕುಟುಂಬ ಮತ್ತು ನೆರೆಹೊರೆಯವರಿಗೆ ಸಾಕ್ಷಿಗಳಾಗಲು ಕರೆಯಲ್ಪಟ್ಟಿದ್ದಾರೆ.

**16** ಮನುಷ್ಯನು ನಂಬಿಕೆಯಿಂದಲೇ ರಕ್ಷಣೆ ಹೊಂದುತ್ತಾನೆ. (ಗಲಾತ್ಯ 2:15-16, ಎಫೆಸ್ 2:8 ಮತ್ತು ವ್ಯಾಖ್ಯಾನ ನೋಡಿರಿ). ನಾವು ನಂಬಿದ್ದವೆಂಬುದನ್ನು ಸಾರ್ವಜನಿಕವಾಗಿ ಸಿದ್ದಾಂತ ಪಡಿಸಲು ದೀಕ್ಷಾಸ್ನಾನ ಹೊಂದುವದು ಸಹ ಅವಶ್ಯಕವಾಗಿದೆ (ಸಾಮಾನ್ಯ ಬರಹ: ನೀರಿನ ದೀಕ್ಷಾಸ್ನಾನ ನೋಡಿರಿ). ಅಪೊಸ್ತಲನಾದ ಪೇತ್ರನು ಹೇಳಿದ್ದೇನೆಂದರೆ ನಿಮ್ಮಲ್ಲಿ ಪ್ರತಿಯೊಬ್ಬರೂ ದೇವರ ಕಡೆಗೆ ತಿರುಗಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ (6.ಅ.ಕೃ 2:38) ಅಂದರೆ ನಾವು ನಂಬುತ್ತೇವಾದರೂ ದೀಕ್ಷಾಸ್ನಾನ ಹೊಂದಲು ನಿರಾಕರಿಸಿದರೆ ನಾವು ಅವಿಧೇಯರಾಗಿದ್ದೇವೆ ಮತ್ತು ಈ ಕಾರಣದಿಂದ ನಮ್ಮ ನಂಬಿಕೆ ಮಿಥ್ಯವಾದದ್ದು ವಿಧೇಯತೆ ಇಲ್ಲದ ನಂಬಿಕೆ ಅದು ನಿಜವಾದ ನಂಬಿಕೆ ಅಲ್ಲ (ಯಾಕೋಬ 2:17 ಮತ್ತು ವ್ಯಾಖ್ಯಾನ ನೋಡಿರಿ). ಒಬ್ಬ ವ್ಯಕ್ತಿ ಕ್ರಿಸ್ತನಲ್ಲಿ ನಂಬಿಕೆ ಇಟ್ಟು ದೀಕ್ಷಾಸ್ನಾನ ಹೊಂದುವ ಇಂಗಿತವನ್ನು ಹೊಂದಿದವನು ಆಗಿದ್ದಾನೆ, ಆದರೆ ಅವನು ಅದಕ್ಕಿಂತ ಮುಂಚೆಯೆ ದೀಕ್ಷಾಸ್ನಾನ ಹೊಂದದೆ ಮರಣಿಸಿದರೆ ಏನಾಗುತ್ತಾರೆ. ಅಂಥಹ ವ್ಯಕ್ತಿ ಆಗಲು ರಕ್ಷಣೆ ಹೊಂದಿದವನೇ ಆಗಿದ್ದಾನೆ. ಆದರೆ ನಾವು ಕ್ರಿಸ್ತನಲ್ಲಿ ನಂಬಿಕೆ ಇಟ್ಟ ಮೇಲೆ ಸಾಧ್ಯವಾದಷ್ಟು ಬೇಗನೆ ದೀಕ್ಷಾಸ್ನಾನ ಪಡೆದುಕೊಳ್ಳುವದು ಪ್ರಾಮುಖ್ಯವಾದದ್ದು, ಬೇಕೆಂದೇ ತಡ ಮಾಡುವದು ಅವಿಧೇಯತೆ ಆಗಿದೆ.

**17-18** ನಂಬುವವರು ದೆವ್ವಗಳನ್ನು ಓಡಿಸುವ ಬಲವನ್ನು ಹೊಂದುವರು (ಅ.ಕೃ.5:14-16, 6:8, 14:3) ಮತ್ತು ಹೊಸಭಾಷೆಗಳಿಂದ ಮಾತಾಡುವದು(ಅ.ಕೃ 2:4, 10:44-46 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಅವರು ಹಾವು ಗಳನ್ನು ಎತ್ತುವರು (ಅ.ಕೃ 28:3-5) ನಿಜವಾಗಿಯೂ ಹೊಸ ಒಡಂಬಡಿಕೆಯಲ್ಲಿ ಸುವಾರ್ತೆ ಸಾರೋಣದ ಜೊತೆಗೆ ನಿರಂತರವಾಗಿ ಸೂಚಕ ಮತ್ತು ಅದ್ಭುತ ಕಾರ್ಯಗಳನ್ನು ಸಂಭವಿಸುವದನ್ನು ನೋಡುತ್ತೇವೆ (ವ.20) ಪವಿತ್ರಾತ್ಮನ ಬಲದ ಮೂಲಕ ಜರುಗಿಸಲ್ಪಟ್ಟವು (1 ಕೊರಿಂಥ 12:7-11 ಮತ್ತು ವ್ಯಾಖ್ಯಾನ ನೋಡಿರಿ).

**19-20** ಪು ನರುತ್ಥಾನದ ನಂತರ ಯೇಸು ಭೂಮಿಯ ಮೇಲೆ ನಾಲ್ವತ್ತು ದಿನ ಉಳಿದುಕೊಂಡನು (ಅ.ಕೃ 1:3) ತರುವಾಯ ಆತನು ಪರಲೋಕಕ್ಕೆ ಏರಿ ಹೋದನು (ಲೂಕ 24:50-53 ). ಮತ್ತು ದೇವರ ಬಲಪಾರ್ಶ್ವದಲ್ಲಿ ಕುಳಿತುಕೊಂಡನು (ಅ.ಕೃ.2:32-33 ಎಫೆಸ್ 1:20-22 ಮತ್ತು ವ್ಯಾಖ್ಯಾನ ನೋಡಿರಿ). ಮತ್ತು ಲೋಕದ ಅಂತ್ಯದಲ್ಲಿ ಇದೇ ಯೇಸುವು ತಾನು ಹೋದ ರೀತಿಯಲ್ಲಿ ತಿರಿಗಿ ಬರುವನು (ಅ.ಕೃ.1:9-11) ಆತನು ಪ್ರಭಾವದೊಡನೆಯೂ, ಮಹಿಮೆಯಿಂದಲೂ ಮೇಘಗಳಲ್ಲಿ ಬರುವನು (ಮಾರ್ಕ 13:26). ಆ ದಿನದವರೆಗೂ ನಾವು ನಂಬಿಗಸ್ಥರಾಗಿ ಕರ್ತನು ನಮಗೆ ಕೊಟ್ಟಿರುವ ಕೆಲಸದಲ್ಲಿ ನಿರತರಾಗಿ ಇರೋಣ. ಮತ್ತು ಹೀಗೆ ಮಾಡುವಾಗ ಕರ್ತನು (ಪು ನರುತ್ಥಾನಗೊಂಡ ಕ್ರಿಸ್ತನು)ಯುಗದ ಸಮಾಪ್ತಿಯವರೆಗೂ ನಮ್ಮ ಜೊತೆಯಲ್ಲಿರುವನು ( ಮತ್ತಾಯ 28:20).

---

## ಟಿಪ್ಪಣಿ

[1] ಹಳೆ ಒಡಂಬಡಿಕೆಯ ಪ್ರವಾದಿಗಳು ಕೇವಲ "ಭವಿಷ್ಯದ ಬಗ್ಗೆ ಹೇಳುವವರು" ಮಾತ್ರ ಆಗಿರಲಿಲ್ಲ. ಅವರು ಸ್ವತ: ದೇವರ ಮಾತುಗಳನ್ನು ಆಡಿದರು. ಅವರು ದೇವರ ವಕ್ತಾರರಾಗಿದ್ದರು. ಪ್ರವಾದಿಗಳ ಮೂಲಕ ದೇವರು ಜನರಿಗೆ ಪ್ರಬೋಧನೆ ಮಾಡಿದನು. ಹಾಗು ಕಲಿಸಿದನು. ಹೆಚ್ಚಿನ ಚರ್ಚೆಗಾಗಿ ಪದಗಳ ಪಟ್ಟಿಯನ್ನು ನೋಡಿರಿ: ಪ್ರವಾದನೆ, ಪ್ರವಾದಿ.

[2] ಯೂದಾಯವು ಇಸ್ರಾಯೇಲ ರಾಷ್ಟ್ರದ ದಕ್ಷಿಣ ಪ್ರಾಂತ್ಯವಾಗಿದೆ. ಹೊಸ ಒಡಂಬಡಿಕೆಯ ಕಾಲದ ವೇಳೆಯಲ್ಲಿ ಯೂದಾಯವು ರೋಮಾಜ್ಯದ ಒಂದು ಪ್ರಾಂತ್ಯವಾಗಿತ್ತು.

[3] ಹೊಸ ಒಡಂಬಡಿಕೆಯ ವೇಳೆಯಲ್ಲಿ ಯೆರೂಸಲೇಮು ಯೂದಾಯ ಪ್ರಾಂತ್ಯದ ರಾಜಧಾನಿಯಾಗಿತ್ತು. ಇಂದು ಆಧುನಿಕ ಇಸ್ರಾಯೇಲ ರಾಷ್ಟ್ರದ ಪ್ರಾಮುಖ್ಯವಾದ ಪಟ್ಟಣಗಳಲ್ಲಿ ಇದೂ ಒಂದಾಗಿದೆ.

[4] ತ್ರೈಯೇಕ ದೇವರ – ತಂದೆ, ಮಗ ಮತ್ತು ಪವಿತ್ರಾತ್ಮ – ಬಗ್ಗೆ ಮಾತಾಡುವಾಗ "ಅಸ್ತಿತ್ವದ ವಿಧ" ಶಬ್ದವು " ರೂಪ"ಅಥವಾ "ವ್ಯಕ್ತಿ" ಗಿಂತಲೂ ಹೆಚ್ಚು ನಿಖರವಾಗಿದೆ. ಹೇಗಿದ್ದರೂ, ಸರಳವಾಗಿರಲೆಂದು ಈ ವ್ಯಾಖ್ಯಾನ ಗ್ರಂಥದಲ್ಲಿ "ರೂಪ" ಪದವನ್ನು ಸಾಮಾನ್ಯವಾಗಿ ಉಪಯೋಗಿಸಲಾಗಿದೆ.

[5] ಯೋಹಾನನು ತನ್ನ ಬಳಿಯಲ್ಲಿ ದೀಕ್ಷಾಸ್ನಾನಕ್ಕಾಗಿ ಬರುತ್ತಿದ್ದ ಇತರ ಮನುಷ್ಯರಿಗಿಂತಲೂ ಯೇಸು ವ್ಯತ್ಯಾಸವಾಗಿದ್ದಾನೆಂದು ತಿಳಿದವನಾಗಿದ್ದರೂ, ಯೇಸುವೇ ರಕ್ಷಕನು, ಕರ್ತನಾದ ಕ್ರಿಸ್ತನು ಆತನ ದಾರಿಯನ್ನೇ ತಾನು ಸಿದ್ದಮಾಡುತ್ತಿದ್ದಾನೆಂದು ಅವನು ಮೊದಲು ತಿಳಿದಿರಲಿಲ್ಲ ಪವಿತ್ರಾತ್ಮನು ಯೇಸುವಿನಲ್ಲಿ ಇಳಿದು ಬಂದ ಮೇಲೆ ಮಾತ್ರವೇ ಯೇಸು ಯಾರೆಂದು ಯೋಹಾನನು ಅರಿತುಕೊಂಡನು. (ಯೋಹಾನ 1:32-34)

[6] ಯೋಹಾನನ ಸೆರಮನೆವಾಸವು ಮಾರ್ಕ 6:17-20 ರಲ್ಲಿ ಬಣ್ಣಿಸಲ್ಪಟ್ಟಿದೆ.

[7] ಮತ್ತಾಯ 4:17ರಲ್ಲಿ ದೇವರ ರಾಜ್ಯ ಎಂಬ ಪದಗಳ ಬದಲಾಗಿ ಯೇಸು ಪರಲೋಕ ರಾಜ್ಯ ಎಂಬ ಪದಗಳನ್ನು ಉಪಯೋಗಿಸುತ್ತಾನೆ. ಅರ್ಥವು ಒಂದೇ ಆಗಿದೆ, ಅದು ಒಂದೇ ರಾಜ್ಯವಾಗಿದೆ. ಹೆಚ್ಚಿನ ಚರ್ಚೆಗಾಗಿ ಪದಪಟ್ಟಿ: ದೇವರ ರಾಜ್ಯ ನೋಡಿರಿ.

8 ಸಿಮೋನನು ಪೇತ್ರನೆಂದು (ಆತನ ಗ್ರೀಕ ಹೆಸರು) ಮತ್ತು ಕೇಪನು (ಆತನ ಆರಾಮಿಕ ಹೆಸರು) ಎಂದು ಸಹ ಕರೆಯಲ್ಪಟ್ಟಿದ್ದಾನೆ. ಸಿಮೋನ ಎಂಬದು ಪೇತ್ರನ ಯೆಹೂದ್ಯ ಹೆಸರಾಗಿತ್ತು (ಯೋಹಾನ 1:42 ನ್ನು ನೋಡಿರಿ) ಯೇಸುವಿನ ಸಮಯದಲ್ಲಿ ಆರಾಮಿಕ ಇಸ್ರಾಯೇಲರ ಸಾಮಾನ್ಯ ಭಾಷೆಯಾಗಿತ್ತು.

9 ಗಲಿಲಾಯ ಸಮುದ್ರವು ವ್ಯಾಸ (ಡಾಯಮೀಟರ್)ದಲ್ಲಿ ಸುಮಾರು ಎಂಟು ಮೈಲುಗಳಿಷ್ಟಿದ್ದ ಚಿಕ್ಕ ಸಮುದ್ರವಾಗಿದ್ದ ಇಸ್ರಾಯೇಲನ ಉತ್ತರದಲ್ಲಿತ್ತು.

10 ಈ ಪ್ರಥಮ ಶಿಷ್ಯರು ಯೇಸುವನ್ನು ಹಿಂಬಾಲಿಸುವದಕ್ಕಾಗಿ ತಮ್ಮ ಉದ್ಯೋಗ ಮತ್ತು ಪ್ರಾಪಂಚಿಕ ಸುರಕ್ಷತೆಗಳನ್ನು ತೊರೆದರು.. ಇಂದು "ಶಿಷ್ಯರು" ಎಂದು ಕರೆದು ಕೊಳ್ಳುವ ಅನೇಕರು ಉದ್ಯೊಗಗಳನ್ನು ಮತ್ತು ಪ್ರಾಪಂಚಿಕ ಸುರಕ್ಷತೆಗಳನ್ನು ಗಳಿಸಿಕೊಳ್ಳಲು ಯೇಸುವನ್ನು ಹಿಂಬಾಲಿಸುತ್ತಾರೆ. ಇದು ಹೀಗಿರಬಾರದು!

11 ಸಭಾ ಮಂದಿರವು ಯೆಹೂದ್ಯರ ಆರಾಧನಾ ಗೃಹವಾಗಿತ್ತು. ಯೆಹೂದ್ಯರು ಪ್ರತಿ ಸಬ್ಬತ್ತಿನ ದಿನದಂದು ಅಂದರೆ ಶನಿವಾರದಂದು ಆರಾಧನೆಗಾಗಿ ಸೇರಿ ಬರುತ್ತಿದ್ದರು.

12 "ಧರ್ಮೋಪದೇಶಕರು" ಎಂಬ ಶಬ್ದಗಳ ಸ್ಥಳದಲ್ಲಿ ಬೈಬಲ್ಲಿನ ಅನೇಕ ಆವೃತ್ತಿ (ಭಾಷಾಂತರ)ಗಳು "ಸದ್ದುಕಾಯರು" ಎಂದು ಹೇಳುತ್ತವೆ. ಅರ್ಥವು ಒಂದೇ ಆಗಿದೆ.

13 ಯೇಸುವಿನ ಸಮಯದಲ್ಲಿ, ಇನ್ನೊಬ್ಬ ವ್ಯಕ್ತಿಯ ಹೆಸರನ್ನು ಹೇಳುವದರ ಮೂಲಕ ಒಬ್ಬನು ಆ ವ್ಯಕ್ತಿಯ ಮೇಲೆ ಬಲವನ್ನು ಸಾಧಿಸಿಕೊಳ್ಳಬಹುದೆಂದು ಜನರು ಯೋಚಿಸಿದರು.

14 ಮೋಶೆಯು ಯೆಹೂದ್ಯರ ಶ್ರೇಷ್ಠನಾಯಕನಾಗಿದ್ದು ಆತನು ದೇವರಿಂದ ಯೆಹೂದ್ಯ ಧರ್ಮಶಾಸ್ತ್ರವನ್ನು ಪಡೆದು ಅದನ್ನು ಜನರಿಗೆ ನೀಡಿದನು. ಆದುದರಿಂದಲೇ ಯೆಹೂದ್ಯ ಧರ್ಮ ಶಾಸ್ತ್ರವು ಹಲವು ವೇಳೆ "ಮೋಶೆಯ ಧರ್ಮಶಾಸ್ತ್ರ" ಎಂದು ಕರೆಯಲ್ಪಟ್ಟಿದೆ, ಹೆಚ್ಚಿನ ಚರ್ಚೆಗಾಗಿ ಪದಪಟ್ಟಿ: ಮೋಶೆ ನೋಡಿರಿ).

15 ಕೆಲವು ಅನಾರೋಗ್ಯಗಳು ನೇರವಾಗಿ ಪಾಪದ ಫಲಿತದಿಂದ ಬರುತ್ತದೆ. ಉದಾಹರಣೆಗೆ, ಸೀಫಿಲಿಸ, ಗೊನೊರೇಯೊ ಮತ್ತು ಹೆಚ್ಚಿನ ಪಾಲು ಏಡ್ಸ್ ರೋಗಗಳು ವ್ಯಭಿಚಾರ ಅಥವಾ ಸಲಿಂಗರತಿಯ ಫಲಿತವಾಗಿವೆ. ಕೆಲವು ರೀತಿಯ ಪಿತ್ತ ಜನಕಾಂಗ ವ್ಯಾಧಿಗಳು ವಿಪರೀತವಾದ ಸರಾಯಿ ಅಥವಾ ಮದ್ಯಪಾನಗಳಿಂದ ಬರುತ್ತವೆ. ಇತರ ರೋಗಗಳು ಸಹ ಪಾಪದಿಂದ ಬರಬಹುದು. ಆದರೆ ಎಲ್ಲಾ ರೋಗಗಳು ಮತ್ತು ಅಪಘಾತಗಳು ನೇರವಾಗಿ ಪಾಪದ ಫಲಿತವಲ್ಲ, ನಿಜವಾಗಿ ಹೇಳುವದಾದರೆ ಅವು ಗಳಲ್ಲಿ ಹೆಚ್ಚಿನ ಪಾಲು ಹಾಗಿರುವದಿಲ್ಲ (ಲೂಕ 13:1-5, ಯೋಹಾನ 9:2 ನೋಡಿರಿ).

16 ಯೇಸು ಸಿಮೋನನಿಗೆ "ಪೇತ್ರ" ಎಂದು ಹೆಸರು ಕೊಟ್ಟಂತೆಯೇ ಯೇಸು ಲೇವಿಯನಿಗೂ ಸಹ "ಮತ್ತಾಯ" ಎಂದು ಹೆಸರು ಕೊಟ್ಟನೆಂದು ಕೆಲವು ವೇದಾಂತಿಗಳು ಯೋಚಿಸುತ್ತಾರೆ. ಮತ್ತಾಯ ಅಂದರೆ "ದೇವರ ವರ" ಎಂಬದಾಗಿ.

17 ಇಸ್ರಾಯೇಲರೆಲ್ಲರೂ ರೋಮಾಯ ಸಾಮ್ರಾಜ್ಯದ ಹತೋಟಿಯಲ್ಲಿ ಬಿದ್ದಿದ್ದರೂ ರೋಮ ಚಕ್ರಾದಿಪತಿಯು ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ಸ್ಥಳಿಯ ಅರಸರು ಹಾಗು ಆಡಳಿತಗಾರರಿಗೆ ಸೀಮಿತವಾದ ಅಧಿಕಾರವನ್ನು ಚಲಾಯಿಸಲು ಅನುಮತಿಸಿದ್ದನು. ಹೀಗೆ ಹೆರೋದನಿಗೆ ಗಲಿಲಾಯ ಪ್ರಾಂತ್ಯದ ಮೇಲೆ ಅಧಿಕಾರ ಕೊಡಲಾಗಿತ್ತು.

18 ಹೊಸ ಒಡಂಬಡಿಕೆಯ ಕಾಲದಲ್ಲಿ ರೋಮಾಯ ಸಾಮ್ರಾಜ್ಯದ ಬಹು ಪಾಲು ವಿದ್ಯಾವಂತ ಜನರು ಗ್ರೀಕ ಭಾಷೆಯನ್ನಾಡುತ್ತಿದ್ದರು, ಈ ಭಾಷೆಯಲ್ಲಿಯೇ ಹೊಸ ಒಡಂಬಡಿಕೆಯು ಮೂಲವಾಗಿ ಬರೆಯಲ್ಪಟ್ಟಿತು.ಅದೇ ಕಾಲದವೇಳೆ ಆರಾಮಿಕ ಭಾಷೆಯ ಮಧ್ಯ ಪೂರ್ವದಲ್ಲಿನ ಸಾಮಾನ್ಯ ಜನರ ಪ್ರಧಾನ ಭಾಷೆಯಾಗಿತ್ತು.

19 ಫರಿಸಾಯರು ಯೆಹೂದ್ಯರ ಅತಿ ಕಟ್ಟುನಿಟ್ಟಿನ ಪಂಗಡವಾಗಿದ್ದರು. ಅವರನ್ನು "ಮೇಲ್ಜಾತಿಯ" ಯೆಹೂದ್ಯರು ಎಂದು ಕರೆಯಬಹುದು, ತಾವು ಅಶುದ್ಧರಾಗಬಾರದೆಂದು ಇತರ ಕೀಳಜಾತಿಯವರೊಂದಿಗೆ ಸಹವಾಸ ವಿಟ್ಟಕೊಳ್ಳಲು ಬಯಸುತ್ತಿರಲಿಲ್ಲ. ಯೇಸು ಪಾಪಗಳೊಂದಿಗೆ ಸಹವಾಸವಿಟ್ಟುಕೊಳ್ಳುವದರ ಮೂಲಕ ತನ್ನನ್ನು ಮಲೀನ ಮಾಡಿ ಕೊಳ್ಳುತ್ತಿದ್ದಾನೆಂದು ಅವರು ಯೋಚಿಸಿದರು. ಹೆಚ್ಚಿನ ಚರ್ಚೆಗಾಗಿ ಪದಪಟ್ಟಿ:ಫರಿಸಾಯರು, ನೋಡಿರಿ.

20 ಇವು ಗಳಲ್ಲಿ, ಅನೇಕ ಸಂಪ್ರದಾಯಗಳು ಮನುಷ್ಯನಿರ್ಮಿತವಾಗಿವೆ (ಮಾರ್ಕ7:1-8, ಮತ್ತು ವ್ಯಾಖ್ಯಾನ ನೋಡಿರಿ.)

21 ಬೈಬಲ್ ಕಾಲದಲ್ಲಿ ದ್ರಾಕ್ಷಾರಸವು ಚರ್ಮದಿಂದ ಮಾಡಿದ ಚೀಲಗಳಲ್ಲಿ ಇಡಲ್ಪಡುತ್ತಿತ್ತು.

22 ಸಬ್ಬತ್ ದಿನವು ವಾರದ ಏಳನೆಯ ದಿನವಾಗಿದೆ. ದೇವರು ವಿಶ್ವವನ್ನು ಆರು ದಿನಗಳಲ್ಲಿ ಉಂಟು ಮಾಡಿದನು, ನಂತರ ಏಳನೆಯದಲ್ಲಿ ವಿಶ್ರಾಂತಿ ಮಾಡಿದನು (ಆದಿಕಾಂಡ 2:1-3). ಆದುದರಿಂದ ದೇವರು ಏಳನೆಯ ದಿನವನ್ನು ಒಂದು ವಿಶೇಷ ವಿಶ್ರಾಂತಿಯ ದಿನವನ್ನಾಗಿ ಪ್ರಾತ್ಯೇಕಿಸಿದನು (ವಿಮೋಚನ ಕಾಂಡ 20:8-11) ಯೆಹೂದ್ಯರು ಶನಿವಾರದಂದು ಸಬ್ಬತನ್ನು ಆಚರಿಸುತ್ತಾರೆ ಮತ್ತು ಕ್ರೈಸ್ತರು ಅದನ್ನು ಭಾನುವಾರದಂದು ಆಚರಿಸುತ್ತಾರೆ. ಬೈಬಲ್ಲಿನಲ್ಲಿ ಎಲ್ಲಿಯೂ ಸಹ ವಾರದ ಯಾವ ದಿನವು "ಏಳನೆಯ ದಿನ" ಎಂದು ನಿಖರವಾಗಿ ಹೇಳಿರುವದಿಲ್ಲ.

23 1 ಸಮುವೇಲ 21:1-6ರ ಅನುಸಾರವಾಗಿ ದಾವಿದನಿಗೆ ಪವಿತ್ರ ರೊಟ್ಟಿಯನ್ನು ಕೊಟ್ಟಿದ್ದು ಮಹಾಯಾಜಕನಾದ ಅಹೀಮೆಲೆಕ ಎಬ್ಯಾತಾರನು ಅಹೀಮೆಲೆಕನ ಮಗನಾಗಿದ್ದಾನೆ (1 ಸಮುವೇಲ 22:20) ಮಾರ್ಕನು ಇಲ್ಲಿ ಎಬ್ಯಾತಾರನ ಪ್ರಸ್ತಾಪವನ್ನೇಕೆ ಮಾಡುತ್ತಾನೆ ಎಂಬುದು ನಿಖರವಾಗಿ ತಿಳಿದು ಬಂದಿಲ್ಲ.

24 ಮಾರ್ಕ 2:21 ರ ಮೇಲಿನ ವ್ಯಾಖ್ಯಾನಕ್ಕೆ ಅಡಿಟಿಪ್ಪಣಿಯನ್ನು ನೋಡಿರಿ.

25 ಹೆರೋದ್ಯರು ಗಲಿಲಾಯದ ಅರಸನಾದ ಹೆರೋದನ ಹಿಂಬಾಲಕರಾಗಿದ್ದರು. ಅವರು ಸಹ ಯೇಸು ಪ್ರಸಿದ್ಧಿ ಕುರಿತು ದಿಗಿಲುಗೊಂಡರು. ಆತನು ಹೆರೋದನ ವಿರುದ್ಧ ದಂಗೆ ಎಬ್ಬಿಸುವನೆಂದು ಅವರು ಹೆದರಿದರು.

26 ತೂರ್ ಮತ್ತು ಸಿದೋನ್ ಲೇಬಲೋನಿನ ಪ್ರಾಮುಖ್ಯಪಟ್ಟಣಗಳಾಗಿವೆ, ಅವು ಮೆಡಿಟರೆನಿಯನ್ ಸಮುದ್ರದ ದಂಡೆಯಲ್ಲಿರುತ್ತದೆ. ಲೇಬನೋನು ಇಸ್ರಾಯೇಲಿನ ಉತ್ತರಕ್ಕೆ ಇರುವ ಒಂದು ಚಿಕ್ಕ ರಾಷ್ಟ್ರವಾಗಿದೆ.

27 "ಮೆಸ್ಸಿಯ" ಕ್ರಿಸ್ತನ ಒಂದು ಹೆಸರಾಗಿದೆ. ಇದು ಇಬ್ರಿಯ ಪದವಾಗಿದ್ದು" ದೇವರಿಂದ ಅಭಿಷೇಕಿಸಲ್ಪಟ್ಟವನು" ಎಂಬದು ಇದರರ್ಥ. "ಕ್ರಿಸ್ತನು" ಗ್ರೀಕ ಪದವಾಗಿದ್ದು ಅದೇ ಅರ್ಥವನ್ನು ಹೊಂದಿದೆ. ದೇವರು ಯೆಹೂದ್ಯರಿಗೆ ದಾವಿದನ ಸಂತತಿಯವನೊಬ್ಬನು ರಕ್ಷಕವಾಗಿರುವನು, ಮೆಸ್ಸಿಯನು ಎಂಬದಾಗಿ ವಾಗ್ದಾನ ಮಾಡಿದ್ದನು (2 ಸಮುವೇಲ 7:12-14, ಯೆರೆಮೀಯ 23:5) ಹೀಗೆ ಮೆಸ್ಸಿಯನು ಎಂಬದು ಹಲವು ವೇಳೆ "ದಾವಿದನ ಕುಮಾರನು" ಎಂಬದಕ್ಕೆ ಸೂಚಿತವಾಗಿದೆ.

28 ಮಾರ್ಕ 9:40ರಲ್ಲಿ ಯೇಸು ತದ್ವಿರುದ್ಧವಾದ ಬೋಧನೆಮಾಡಿದನು. ಆತನು "ನಮ್ಮನ್ನು ವಿರೋಧಿಸದವನು ನಮ್ಮ ಪಕ್ಷದವನು" ಎಂದು ಹೇಳಿದನು. ಇದರಿಂದ ಯೇಸು ವಿಶ್ವಾಸಿಗಳ ನಡುವಿನ ಚಿಕ್ಕ ಭಿನ್ನಾಭಿಪ್ರಾಯಗಳಿಗಾಗಿ ನಾವು ಒಬ್ಬರನ್ನೊಬ್ಬರು ವೈರಿಗಳಂತೆ ಎಣಿಸಬಾರದೆಂದು ಕಲಿಸಿದನು. ಆದರೆ ಮತ್ತಾಯ ಮತ್ತು ಲೂಕ ಸುವಾರ್ತೆಯಲ್ಲಿ ಯೇಸು, ಸೈತಾನ ಮತ್ತು ಕ್ರಿಸ್ತನ ನಡುವಿನ ದೊಡ್ಡ ಹೋರಾಟವನ್ನು ಕುರಿತು ಹೇಳುತ್ತಿದ್ದಾನೆ, ಕ್ರಿಸ್ತನ ಪಕ್ಷದಲ್ಲಿದ್ದವರು ನಿಜವಾಗಿಯೂ ವೈರಿಗಳೇ (ಮಾರ್ಕ 9:40 ವ್ಯಾಖ್ಯಾನ ನೋಡಿರಿ). ಹೀಗೆ ಆ ಎರಡು ಬೋಧನೆಗಳ ನಡುವೆ ಯಾವವಿರುದ್ದತೆಯಿರುವದಿಲ್ಲ, ಅವು ಬೇರೆ ಬೇರೆ ವಿಷಯಗಳಕುರಿತಾಗಿವೆ.

29 ಈ ಕ್ಷಮೆಯಿಲ್ಲದ ಪಾಪವನ್ನು ಬಣ್ಣಿಸಲು ಇನ್ನು ಎರಡು ಮಾರ್ಗಗಳಿವೆ. ಮೊದಲನೆಯದಾಗಿ, ನಾವು ಒಪ್ಪಿಕೊಂಡು ಅರಿಕೆ ಮಾಡಲು ಇಷ್ಟ ಪಡದ ಯಾವದೇ ಪಾಪ. ಎರಡನೆಯದಾಗಿ, ನಾವು ಪಾಪಮಾಡಿದ್ದೇವೆ ಎಂಬದನ್ನು ಅಲ್ಲಗಳೆಯುವದು (1 ಯೋಹಾನ 1:8-10 ನೋಡಿರಿ).

30 ಯೇಸು ಜನರು ಅರ್ಥಮಾಡಿಕೊಳ್ಳದಂತೆ ಮಾಡಲು ಪ್ರಯತ್ನಿಸಲಿಲ್ಲ. ಆತನು ಸಾಮ್ಯಗಳ ಮೂಲಕ ಬೋಧಿಸಿದ್ದಕ್ಕೆ ಅದು ಕಾರಣವಾಗಿರಲಿಲ್ಲ "ನೀವು ಕಿವಿಯಾರೆ ಕೇಳಿದರೂ ತಿಳಿಯಬಾರದು, ಕಣ್ಣಾರೆ ಕಂಡರೂ, ಗ್ರಹಿಸಬಾರದು" ಎಂಬ ಯೇಶಾಯ 6:9-10ರ ಪ್ರವಾದನೆಯು ನೆರವೇರುವಂತಾಗಲು ಯೇಸು ಸಾಮ್ಯಗಳ ಮೂಲಕಬೋಧಿಸಿದನು. ಇದು ಪ್ರವಾದನೆಯ ನೆರವೇರಿಕೆಯನ್ನು ಸೂಚಿಸುತ್ತದೆ ಹೊರತು ಸಾಮ್ಯಗಳಲ್ಲಿ ಬೋಧಿಸಿದ್ದಕ್ಕಲ್ಲ (ಮತ್ತಾಯ 13:14-15).

31 ಪ್ರತಿಯೊಬ್ಬ ಸುವಾರ್ತಾ ಬೋಧಕನು ಒಬ್ಬ "ಬಿತ್ತುವವನು" ಅಥವಾ "ವ್ಯವಸಾಯಗಾರನು" ಆಗಿದ್ದಾನೆ. ಪ್ರತಿಯೊಬ್ಬ ಕ್ರೈಸ್ತನು ಸಹ ಸ್ವತ: ಸಾಕ್ಷಿ ನೀಡುವದರ ಮೂಲಕ ಒಬ್ಬ "ಬಿತ್ತುವವನು " ಆಗಿದ್ದಾನೆ.

32 ಗೆರಸೇನರ ಎಂಬ ಹೆಸರು ನಿಖರವಾಗಿರುವದಿಲ್ಲ. ಕೆಲವು ಹಸ್ತ ಪ್ರತಿಗಳಲ್ಲಿ "ಗದರೇನರ" ಎಂದಿರುತ್ತದೆ (ಮತ್ತಾಯ 8:28 ನೋಡಿರಿ). ಗೆರೇಸಾ ಎಂಬದು ಗಲಿಲಾಯ ಸಮುದ್ರದ ಪೂರ್ವ ದಂಡೆಯಿಂದ ಮೂವತ್ತು ಮೈಲುಗಳಷ್ಟು ದೂರದಲ್ಲಿದ್ದ ಪಟ್ಟಣವಾಗಿತ್ತು ಗದರಾ ಪಟ್ಟಣವು ದಂಡೆಯಿಂದ ಆರುಮೈಲು ದೂರದಲ್ಲಿತ್ತು.

33 ಲ್ಯಾಟಿನ ಭಾಷೆಯು ರೋಮಾಯ ಸಾಮ್ರಾಜ್ಯದ ಮುಖ್ಯ ಭಾಷೆಯಾಗಿತ್ತು. ಇಂದು ಲ್ಯಾಟಿನ್ ಒಂದು ಸಾಮಾನ್ಯ ಭಾಷೆಯಾಗಿ ಬಳಕೆಯಲ್ಲಿರುವದಿಲ್ಲ.

34 ದೆಕಪೊಲಿ ಎಂದರೆ "ಹತ್ತು ಪಟ್ಟಣಗಳು" ಎಂಬದಾಗಿ. ಆದುದರಿಂದ ಗುಣಹೊಂದಿದ ವ್ಯಕ್ತಿಯು ಗಲಿಲಾಯಸಮುದ್ರದ ಪೂರ್ವದಲ್ಲಿದ್ದ ತನ್ನ ಸ್ವಂತ ಊರಿನ ಹತ್ತಿರದಲ್ಲಿದ್ದ ಹತ್ತು ಪಟ್ಟಣಗಳಲ್ಲಿ ಕ್ರಿಸ್ತನಿಗೆ ಸಾಕ್ಷಿಯನ್ನು ನೀಡಿದನು.

35 ಮತ್ತಾಯ 9:18ಕ್ಕ ನುಸಾರವಾಗಿ ಯಾಯಿರನು ಯೇಸುವಿಗೆ "ನನ್ನ ಮಗಳು ಈಗಲೇ ತೀರಿಹೋದಳು" ಎಂದು ಹೇಳುತ್ತಾನೆ. ಯಾಯಿರನ ಮನಸ್ಸಿನಲ್ಲಿ ಅವಳು ಇನ್ನೇನು ಸತ್ತವಳಾಗಿಯೇ ಇದ್ದಳಷ್ಟೇ. ಯೇಸು ಮಾತ್ರವೇ ಅವಳಿಗೆ ಪು ನ: ಜೀವ ನೀಡಲು ಶಕ್ತನಾದನು.

36 ಗ್ರೀಕ ನಲ್ಲಿ ಈ ಪದಗಳ ಅರ್ಥವು "ನಂಬುವದನ್ನು ಮುಂದುವರೆಸು" ಎಂಬದಾಗಿದೆ.

37 ಯೇಸು ಸಾಮಾನ್ಯವಾಗಿ ಅಧ್ಭುತವನ್ನು ಮಾಡಿದ ನಂತರ ಈ ಅಪ್ಪಣೆಯನ್ನು ಕೊಟ್ಟನು(ಮಾರ್ಕ 1:43-44, 3:12, 7:36). ಆತನು ದೆವ್ವ ಪೀಡಿತ ವ್ಯಕ್ತಿಗೆ ತಾನು ಹೇಗೆ ಗುಣಹೊಂದಿದನೆಂದು ತನ್ನ ಕುಟುಂಬದವರಿಗೆ ಹೇಳಬೇಕೆಂದು ತಿಳಿಸಿದನು ಆದರೆ ಆತನು ಪ್ರತಿಯೊಬ್ಬನಿಗೂ ಹೇಳಬೇಕೆಂದು ಯೇಸು ಅವನಿಗೆ ಹೇಳಲಿಲ್ಲ (ಮಾರ್ಕ 5:19).

38 ನಜರೇತಿಗೆ ಮಾಡಿದ ಈ ಬೇಟಿಯು ಲೂಕ 4:16ರಲ್ಲಿನ ಭೇಟಿ ಎರಡೂ ಬೇರೆ ಬೇರೆಯಾಗಿರುತ್ತವೆಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ. ಲೂಕನು ಪ್ರಸ್ತಾಪಿಸಿರುವ ಭೇಟಿಯು ಒಂದು ವರ್ಷ ಮುಂಚೆ ಜರುಗಿತೆಂದು ಅವರು ಹೇಳುತ್ತಾರೆ. ಆದರೆ ಅದಕ್ಕೆ ತದ್ವಿರುದ್ಧ ಅಭಿಪ್ರಾಯಕ್ಕಾಗಿ (ಲೂಕ 4:16-17 ಮತ್ತು ವ್ಯಾಖ್ಯಾನ ನೋಡಿರಿ).

39 ಮದ್ಯಪೂರ್ವಾತ್ಯ ರಾಷ್ಟ್ರಗಳಲ್ಲಿ ರೊಟ್ಟಿಯು ಮುಖ್ಯ ಆಹಾರವಾಗಿದೆ. ಈ ಸಂದರ್ಭದಲ್ಲಿ, ಅದು ಯಾವದೇ ರೀತಿಯ ಆಹಾರ ಎಂದರ್ಥ ನೀಡುತ್ತದೆ.

40 ಚೀಲವು (ಹಸಿಬೆ) ಒಂದು ಬಿಕ್ಷೆಯ ಚೀಲ ಅಥವಾ ಅಗತ್ಯವಸ್ತುಗಳನ್ನೊಯ್ಯುವ ಒಂದು ಚೀಲವಾಗಿರಬಹುದು.

41 ಯೆಹೂದ್ಯರ ಸಾಮಾನ್ಯವಾದ ವಂದಿಸುವಿಕೆಯು "ನಿಮಗೆ ಸಮಾಧಾನವಾಗಲಿ" ಎಂಬುದಾಗಿತ್ತು.

42 ಮತ್ತಾಯ 14:13 ರಲ್ಲಿ ಯೇಸು ಏಕೆ ಏಕಾಂತ (ಅಡವಿ) ಸ್ಥಳಕ್ಕಾಗಿ ಹುಡುಕಲಿಚ್ಛಿಸಿದನೆಂಬದಕ್ಕೆ ಎರಡನೆಯ ಕಾರಣವು ಉಲ್ಲೇಖಿಸಲಾಗಿದೆ. ಹೆರೋದನು ತನ್ನ ಬಗ್ಗೆ ಕೇಳಿ ತನ್ನನ್ನು ಸ್ನಾನಿಕನಾದ ಯೋಹಾನನೆಂದು ಯೋಚಿಸಿಕೊಂಡಿದ್ದಾನೆಂಬದನ್ನು ಯೇಸು ಈಗಷ್ಟೇ ತಿಳಿದು ಕೊಂಡಿದ್ದನು (ಮಾರ್ಕ 6:16.) ಆದುದರಿಂದ, ಹೆರೋದನು ಖಂಡಿತವಾಗಿ ಯೇಸು ಬಂಧಿಸಿ ಬಹುಶ: ಸಾಯಿಸಲೂ ಬಹುದು. ಆದರೆ ಯೇಸು ಮಾಡಬೇಕಾದ ಕಾರ್ಯ ಇನ್ನು ಬಹಳವಿತ್ತು. ಆತನ ಸಾಯಬೇಕಾದ ಸಮಯ ಇನ್ನು ಬಂದಿರಲಿಲ್ಲ. ಆದಕಾರಣ ಯೇಸು ಅಲ್ಲಿಂದ ಹೊರಟು ಹೆರೋದ ನ್ಯಾಯಾಂಗಕ್ಕೊಳಪಡದ ಗಲಿಲಾಯ ಸಮುದ್ರದ ಆಚೆದಡಕ್ಕೆ ಹೋದನು.

43 ಲೂಕನ ಸುವಾರ್ತೆಗನುಸಾರವಾಗಿ ಯೇಸು ಬೇತ್ಸಾಯಿದ ಎಂಬ ಸ್ಥಳದ ಹತ್ತಿರ ಐದು ಸಾವಿರ ಜನರಿಗೆ ಊಟ ಮಾಡಿಸಿದನು (ಲೂಕ 9:10). ಇಲ್ಲಿ ಮಾರ್ಕನ ಪ್ರಕಾರವಾಗಿ, ಆತನು ಅವರನ್ನು ತನಗಿಂತ ಮುಂದಾಗಿ ಬೇತ್ಸಾಯಿದಕ್ಕೆ ಕಳುಹಿಸಿದನು ಅಥವಾ

ಇತರ ಆವೃತ್ತಿಗಳು ಅದನ್ನು ಆತನು ಅವರನ್ನು "ಆಚೆ ಕಡೆಗೆ ಬೇತ್ಸಾಯಿದಕ್ಕೆ ಕಳುಹಿಸಿದನು" ಎಂದು ಭಾಷಾಂತರಿಸುತ್ತವೆ. ಆದುದರಿಂದ ಬೈಬಲ್ ಪಂಡಿತರು ಬೇತ್ಸಾಯಿದ ಎಂದು ಕರೆಯಲ್ಪಡುವ ಎರಡು ಬೇರೆ ಬೇರೆ ಪಟ್ಟಣಗಳಿದ್ದಿರಬಹುದೆಂದು ನಂಬುತ್ತಾರೆ.

44 ತಿಬೇರಿಯವು ಗಲಿಲಾಯ ಸಮದ್ರದ ಪಶ್ಚಿಮ ದಿಕ್ಕಿನ ದಡದಲ್ಲಿರುವ ದೊಡ್ಡ ಪಟ್ಟಣವಾಗಿದೆ. ಯೇಸುವಿನ ಸಮಯದಲ್ಲಿ ಇದು ಅರಸನಾದ ಹೆರೋದನ ರಾಜಧಾನಿಯಾಗಿತ್ತು.

45 ಹಳೆ ಒಡಂಬಡಿಕೆಯು ಯೆಹೂದ್ಯರ ಧರ್ಮಗ್ರಂಥವಾಗಿದೆ.

46 ಪ್ರಾರಂಭದಲ್ಲಿ ಮೊದಲ ಸಂಪ್ರದಾಯಗಳು ಯೆಹೂದ್ಯ ಧರ್ಮ ಶಾಸ್ತ್ರಕ್ಕೆ ವಿರುದ್ಧವಾಗಿರಲಿಲ್ಲ. ಧರ್ಮಶಾಸ್ತ್ರದಲ್ಲಿ ಪ್ರಸ್ತಾಪ ಮಾಡಿರದಿದ್ದ ಅನೇಕ ಚಿಕ್ಕ ಸಂಗತಿಗಳ ಬಗ್ಗೆ ಅವು ಮಾರ್ಗದರ್ಶನ ನೀಡಿದವು. ಹೇಗೂ ಅನಂತರ ಸೇರಿಸಲ್ಪಟ್ಟ ಕೆಲವು ಸಂಪ್ರದಾಯಗಳು ವಿರುದ್ಧವಾಗಿದ್ದವು.

47 ಮೋಸೆಯು, ಯೆಹೂದ್ಯರನ್ನು ಐಗುಪ್ತ್ಯರ ದಾಸ್ಯತ್ವದ ಒಳಗಿಂದ ಬಿಡುಗಡೆ ಮಾಡಿಸಿದ ಯೆಹೂದ್ಯರ ಶ್ರೇಷ್ಠ ನಾಯಕನಾಗಿದ್ದನು. ಆತನು ದೇವರಿಂದ ದಶಾಜ್ಞೆಗಳನ್ನು ಪಡೆದುಕೊಂಡನು. ಯೆಹೂದ್ಯ ಧರ್ಮಶಾಸ್ತ್ರವು ಹಲವಾರು ವೇಳೆ "ಮೋಶೆಯ ಧರ್ಮಶಾಸ್ತ್ರ" ಎಂದು ಸಹ ಕರೆಯಲ್ಪಟ್ಟಿವೆ. ಯಾಕೆಂದರೆ ಮೋಶೆಯು ಬರೆದ ಹಳೆ ಒಡಂಬಡಿಕೆಯ ಮೊದಲು ಐದು ಪುಸ್ತಕಗಳಲ್ಲಿ ಅದು ಬರೆಯಲ್ಪಟ್ಟಿದೆ.

48 ಕೋರ್ಬಾನ್– ಇದು ಒಂದು ಇಬ್ರಿಯ ಪದವಾಗಿದ್ದು ಆದರರ್ಥವೇನಂದರೆ – "ದೇವರಿಗೆ ಸೀಮಿತವಾದ ಕಾಣಿಕೆ" ಎಂಬುದಾಗಿ.

49 ಗ್ರೀಸ್ ದಕ್ಷಿಣ ಯೂರೋಪಿನ ಒಂದು ಪ್ರಾಮುಖ್ಯ ರಾಷ್ಟ್ರವಾಗಿದೆ. ಯೇಸುವಿನ ಸಮಯದಲ್ಲಿ ಇದು ರೋಮ ಸಾಮ್ರಾಜ್ಯದ ಭಾಗವಾಗಿತ್ತು.

50 ಸಿರಿಯಾ ಮದ್ಯ ಪೂರ್ವಾತ್ಯ ರಾಷ್ಟ್ರವಾಗಿದ್ದು, ಲೆಬನಾನ್ ಮತ್ತು ಇಸ್ರಾಯೇಲಿನ ಪೂರ್ವ ದಿಕ್ಕಿನಲ್ಲಿತ್ತು.

51 ಯೆಹೂದ್ಯರು ಅನ್ಯ ಜನರನ್ನು ತುಚ್ಚೀಕರಿಸಿ ಅವರನ್ನು ಪಾಪಿಗಳು ಮತ್ತು ಅಶುದ್ಧರೆಂದು ಪರಿಗಣಿಸುತ್ತಿದ್ದರು. ಹೇಗೂ ಯೇಸು ಅನ್ಯ ಜನಾಂಗದ ಸ್ತ್ರೀಗೆ ಅವಮಾನ ಉಂಟು ಮಾಡಬೇಕೆಂಬುದಕ್ಕಾಗಿ ಇಲ್ಲಿ "ನಾಯಿ" ಎಂಬ ಪದವನ್ನು ಉಪಯೋಗಿಸಲಿಲ್ಲ. ಆದರೆ ಅವಳ ಮಕ್ಕಳನ್ನು ಸ್ವಸ್ಥ ಮಾಡದಿರುವದಕ್ಕೆ ತನ್ನ ಕಾರಣವನ್ನು ದೃಷ್ಟಾಂತ ಪಡಿಸಲು ಉಪಯೋಗಿಸಿದನು..

52 ಈ ಸಂದರ್ಭದಲ್ಲಿ ಉಲ್ಲೇಖಿಸಲ್ಪಟ್ಟಿರುವ ಏಳು ಬುಟ್ಟಿಗಳು ಮಾರ್ಕ ೬:೪೩ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಹನ್ನೆರಡು ಬುಟ್ಟಿಗಳು ಬೇರೆ ಬೇರೆ ಎಂಬುದು ಆಶ್ಚರ್ಯಕರವಾದದ್ದು. ಈ ಭಾಗದಲ್ಲಿ ಬುಟ್ಟಿ ಎಂಬುದು ವಿಭಿನ್ನ ಗ್ರೀಕ ಪದ ಉಪಯೋಗಿಸಲ್ಪಟ್ಟಿದೆ. ಇಲ್ಲಿ ಉಪಯೋಗಿಸಿರುವ ಬುಟ್ಟಿಯು ದೊಡ್ಡ ಗಾತ್ರದವುಗಳಾಗಿದ್ದವು ಹೀಗೆ ಕಡಿಮೆ ಬುಟ್ಟಿಗಳು ಸಾಕಾಗಿತ್ತು.

53 ಮತ್ತಾಯ 16:6, 11:12ರ ಪ್ರಕಾರವಾಗಿ ಈ ಸಂದರ್ಭದಲ್ಲಿ ಯೇಸು ಸದ್ದುಕಾಯರ ದುಷ್ಟತನ ಮತ್ತು ಕಪಟತನವನ್ನು ಸಹ ಪ್ರಸ್ತಾಪಿಸಿದನು. ಸದ್ದುಕಾಯರು ಫರಿಸಾಯರಂತೆ ಯೆಹೂದ್ಯರ ಇನ್ನೊಂದು ಪಂಗಡವಾಗಿದ್ದರು (ಮಾರ್ಕ 12:18, ಅ.ಕೃ23: 6-8, ಮತ್ತು ವ್ಯಾಖ್ಯಾನ ನೋಡಿರಿ).

54 ಮಾರ್ಕನು 19-20ವ. ಗಳಲ್ಲಿ "ಬುಟ್ಟಿ" (ಹೆಡಿಗೆ) ಎಂಬುದಕ್ಕೆ ಎರಡು ವಿಭಿನ್ನವಾದ ಗ್ರೀಕ ಪದಗಳನ್ನು ಉಪಯೋಗಿಸುತ್ತಾನೆ. ಹೆಚ್ಚಿನ ಚರ್ಚೆಗಾಗಿ ವ. 1-10 ರ ಮೇಲಿನ ವ್ಯಾಖ್ಯಾನಗಳ ಅಡಿಟಿಪ್ಪಣೆ ನೋಡಿರಿ.

55 ಕ್ರಿಸ್ತನು ಎಂಬುದು ಗ್ರೀಕ ಪದವಾಗಿದ್ದು ಆದರರ್ಥ "ಅಭಿಷಿಕ್ತನು" "ಮೆಸ್ಸಿಯ" ಎಂಬುದು ಅದೇ ಅರ್ಥವನ್ನು ಕೊಡುವ ಇಬ್ರಿಯ ಪದವಾಗಿದೆ.

56 ಮಾರ್ಕನು ತನ್ನ ಸುವಾರ್ತೆಯನ್ನು ಮುಖ್ಯವಾಗಿ ಕ್ರಿಸ್ತನ ಜೀವನ ಕುರಿತು ತನಗೆ ಪೇತ್ರನು ಹೇಳಿದ ಪ್ರಕಾರವಾಗಿ ಬರೆದನು. (ಮಾರ್ಕ – ಪರಿಚಯ ನೋಡಿರಿ). ಹೇಗೂ ಪೇತ್ರನು ದೀನತೆಯಿಂದ ಈ ಸಂದರ್ಭದಲ್ಲಿ ತಾನು ಪಡೆದುಕೊಂಡ ಆಶೀರ್ವಾದವನ್ನು ಕುರಿತು ಮಾರ್ಕನಿಗೆ ತಿಳಿಸಲಿಲ್ಲ. ಇದು ಮತ್ತಾಯ 16:17-19ರಲ್ಲಿ ಮಾತ್ರ ವರ್ಣಿಸಲ್ಪಟ್ಟಿದೆ.

57 ಯೋನನ ಮಗ ಎಂಬ ಸ್ಥಳದಲ್ಲಿ ಬೈಬಲ್ಲಿನ ಕೆಲವು ಭಾಷಾಂತರಗಳು "ಭಾರ್ – ಯೊನ" ಎಂದು ಹೇಳುತ್ತದೆ. ಅದರ ಅರ್ಥವು ಒಂದೇ (ಯೋಹಾನ 1:42).

58 ಕಟ್ಟುವದು ಮತ್ತು ಬಿಚ್ಚುವದು ಅಂದರೆ ನಮ್ಮ ಅನುದಿನದ ಜೀವಿತಕ್ಕೆ ನಡಾವಳಿಯ ನೇಮಗಳನ್ನು ರೂಪಿಸುವದೆಂದರ್ಥ.

59 ಮಾರ್ಕನು ಇಲ್ಲಿ ಪ್ರಾಣ ಎಂಬದಕ್ಕೆ ಉಪಯೋಗಿಸುವ ಗ್ರೀಕ ಪದ ವಚನ 37 ರಲ್ಲಿ. ಮತ್ತು ವ.35 ಅದು ಜೀವ ಎಂದು ಭಾಷಾಂತರಿಸಲ್ಪಟ್ಟಿದೆ. ಗ್ರೀಕನ ಒಂದೇ ಪದದ ಅರ್ಥ"ಪ್ರಾಣ" ಮತ್ತು "ಜೀವ" ಗಳೆರಡೂ ಆಗಿರುತ್ತದೆ. ವ.35ರಲ್ಲಿ ಯೇಸು ಮುಖ್ಯವಾಗಿ ಈಹಲೋಕದಲ್ಲಿನ ಜೀವಿತದ ಕುರಿತು ಮಾತನಾಡುತ್ತಿದ್ದಾನೆ. ವ.36-37ರಲ್ಲಿ ಆತನು ಮುಖ್ಯವಾಗಿ ಮನುಷ್ಯನ ನಿತ್ಯ ಆತ್ಮದ ಕುರಿತು ಮಾತಾಡುತ್ತಿದ್ದಾನೆ.

60 ಪೇತ್ರ ಯಾಕೋಬ ಮತ್ತು ಯೋಹಾನರು ಬಳಿಕ ಕ್ರಿಸ್ತನನ್ನು ಸಮಸ್ಯೆ ಮತ್ತು ವೇದನೆಗಳಲ್ಲಿ ನೋಡಲಿದ್ದಾರೆ (ಮಾರ್ಕ 14:33). ಆದರೆ ಈಗ ಅವರು ಆತನನ್ನು ಮಹಿಮೆಯಲ್ಲಿ ಕಂಡರು.

61 ಸ್ನಾನಿಕನಾದ ಯೋಹಾನನು ಎಲೀಯನ ಪುನರಾವತಾರವಾಗಿರಲಿಲ್ಲ. ಆತನು ಕೇವಲ ಎಲೀಯನ ಕುರಿತಾದ ಮಾಲಾಕಿ ತಿಳಿಸಿದಂತಹ ಪ್ರವಾದನೆಯನ್ನು ನೆರವೇರಿಸಿದನಷ್ಟೇ.

62 ಮತ್ತಾಯ 17-20ರ ಪ್ರಕಾರವಾಗಿ ಯೇಸು ತನ್ನ ಶಿಷ್ಯರಿಗೆ ಸಾಸಿವೆ ಕಾಳಿನಷ್ಟು ನಂಬಿಕೆ ಇರುವದಾದರೆ, ಅವರು ಪರ್ವತಗಳನ್ನು ಕದಲಿಸಬಲ್ಲರೆಂದು ಯೇಸು ಹೇಳಿದನು. ನಿಜ ನಂಬಿಕೆಯ ಚಿಕ್ಕ ಬೀಜವು ಬಲವಾಗಿಯೂ, ಫಲಕಾರಿಯಾದ ನಂಬಿಕೆಯಾಗಿಯೂ ಬೆಳೆಯುತ್ತದೆ. ಅದರ ಮೂಲಕ ಅಸಾಧ್ಯವಾದ ಸಂಗತಿಗಳನ್ನು ಕೂಡಾ ಸಾಧಿಸಬಹುದು.

63 ವಚನ 29 ರಲ್ಲಿ ಪ್ರಾರ್ಥನೆ ಎಂಬ ಒಂದೇ ಪದದ ಬದಲಾಗಿ ಕೆಲವು ಪುರಾತನ ಹಸ್ತ ಪ್ರತಿಗಳು "ಪ್ರಾರ್ಥನೆ ಮತ್ತು ಉಪವಾಸ" ಎಂದು ಹೊಂದಿರುತ್ತದೆ. ಇದಕ್ಕೆ ಸಂಬಂಧಪಟ್ಟ 17:21 ರ ವಚನದಲ್ಲಿ "ಪ್ರಾರ್ಥನೆ ಮತ್ತು ಉಪವಾಸಗಳು" ಎಂಬ ಪದಗಳು ಸಹ ಕಂಡುಬರುತ್ತವೆ.

64 ಲೋಕದ ಜನರು ಎಂದರೆ ದೇವರಿಗಿಂತಲೂ ಹೆಚ್ಚಾಗಿ ಲೋಕವನ್ನು ಅದರಲ್ಲಿರುವ ಸಂಗತಿಗಳನ್ನು ಪ್ರೀತಿಸುವವರು.

65 ಯೇಸುವಿನ ಹೆಸರಿನಲ್ಲಿ ಕಾರ್ಯಮಾಡುವದೆಂದರೆ, ಯೇಸುವಿಗೋಸ್ಕರ ಕಾರ್ಯ ಮಾಡುವದು ಎಂದರ್ಥ. ಅಂದರೆ ಯೇಸುವಿಗೆ ಮಹಿಮೆ ತರುವ ರೀತಿಯಲ್ಲಿ ಕಾರ್ಯಮಾಡುವದು ಎಂದರ್ಥ ಆತನಿಗಾಗಿ ಹೃದಯಾಂತರಾಳದಿಂದ ಯತಾರ್ಥವಾಗಿ ಕೆಲಸ ಮಾಡುವದು. ನಾವು ಯೇಸುವಿನ ಹೆಸರಿನಲ್ಲಿ ಕಾರ್ಯ ಮಾಡುತ್ತಿದ್ದೇವೆಂದು ಹೇಳುವವರಿದ್ದಾರೆ ಆದರೆ ಅವರ ಕಾರ್ಯಗಳು ಯೇಸುವನ್ನು ಮಹಿಮೆ ಪಡಿಸುವದಿಲ್ಲ ಆಂಥಹ ಜನರು ಯೇಸುವಿನ ಪಕ್ಷದವರಲ್ಲ.

66 ಹೇಗೂ, ವಿಚ್ಛೇಧನ ಹೊಂದಿದ ವ್ಯಕ್ತಿಯನ್ನು ವಿವಾಹವಾಗುವದರಲ್ಲಿ ತಪ್ಪಿಲ್ಲ (ಆ ವ್ಯಕ್ತಿಯ ಮಾಜಿ ಸಂಗಾತಿಯು ಇನ್ನೊಬ್ಬ ವ್ಯಕ್ತಿಯೊಂದಿಗೆ ವ್ಯಭಿಚಾರದಲ್ಲಿ ಜೀವಿಸುತ್ತಿರುವದಾದರೆ ಮಾತ್ರವೇ). ವಿಚ್ಛೇಧನ ಮತ್ತು ಮರುವಿವಾಹದ ವಿಷಯದ ಮೇಲಿನ ಹೆಚ್ಚಿನ ಚರ್ಚೆಗಾಗಿ ಸಾಮಾನ್ಯ ಬರಹ ಕ್ರೈಸ್ತ ವಿವಾಹ ನೋಡಿರಿ.

67 ಮತ್ತಾಯ 19:17ರ ಪ್ರಕಾರವಾಗಿ ಆ ಯೌವ್ವನಸ್ಥನನ್ನು ಪರೀಕ್ಷಿಸಬೇಕೆಂಬುದಾಗಿ ಯೇಸು ಅವನಿಗೆ "ನೀನು ಜೀವದಲ್ಲಿ ಸೇರಬೇಕೆಂದಿದ್ದರೆ ದೇವರ ಆಜ್ಞೆಗಳಿಗೆ ಸರಿಯಾಗಿ ನಡೆದುಕೊ" ಎಂದು ಹೇಳಿದನು. ಅಂದರೆ ಯೇಸು ಅವನಿಗೆ "ನೀನು ಅವು ಗಳಿಗೆ ಪರಿಪೂರ್ಣವಾಗಿ ವಿಧೇಯನಾಗುವದಾದರೆ ನಿತ್ಯ ಜೀವಕ್ಕೆ ಬಾಧ್ಯನಾಗುವಿ" ಎಂಬರ್ಥದಲ್ಲಿ ಹೇಳಿದನು.

68 ಬೈಬಲ್ಲಿನಲ್ಲಿ ಅನ್ಯ ಜನರು ಎಂಬುದು ಯಾವದೇ ಯೆಹೂದ್ಯೇತರ ಜನರನ್ನು ಸೂಚಿಸುತ್ತದೆ. ಆದರೆ ಈ ವಚನದಲ್ಲಿ ಮಾರ್ಕನು ನಿರ್ಧಿಷ್ಟವಾಗಿ ಕ್ರಿಸ್ತನನ್ನು ಶಿಲುಬೆಗೆ ಹಾಕಿದ ರೋಮಾಯ ಅನ್ಯ ಜನರನ್ನು ಸೂಚಿಸಿದ್ದಾನೆ. ಹೆಚ್ಚಿನ ಚರ್ಚೆಗಾಗಿ ಪದಪಟ್ಟ:ಅನ್ಯರು ನೋಡಿರಿ.

69 ಯೆಹೋಶಿವಾ 6:1-21ರಲ್ಲಿ. ಯರೀಕೋ ಪಟ್ಟಣವು ಸಹ ಉಲ್ಲೇಖಿಸಲ್ಪಟ್ಟಿದೆ.

70 ಕತ್ತೆಯ ಮೇಲೆ, ಕತ್ತೆಯ ಮರಿಯ ಮೇಲೆ ಎಂಬ ಪದಗಳ ಬದಲಾಗಿ ಮೂಲ ಇಬ್ರಿಯ ಪ್ರತಿಯಲ್ಲಿ "ಕತ್ತೆಯ ಮೇಲೆ ಮತ್ತು ಕತ್ತೆಯ ಮರಿ ಮೇಲೆ" ಸವಾರಿ ಮಾಡಿದನೆಂಬ ಆಲೋಚನೆಯನ್ನು ಕೊಡುತ್ತದೆ. ಆದರೆ ಈ ವಚನದಲ್ಲಿರುವ "ಮತ್ತೂ" ಎಂಬದು ಒಂದು ಇಬ್ರಿಯ ನುಡಿಗಟ್ಟಾಗಿದೆ. ಮತ್ತು ಅದು "ಅಂದರೆ" ಎಂಬರ್ಥ ಕೊಡುತ್ತದೆ. ಹೀಗೆ ಜಕರ್ಯನ ಪ್ರವಾದನೆಯನ್ನು ಯೇಸು ಪ್ರಾಣಿಯ ಮೇಲೆ ಸವಾರಿ ಮಾಡುವದರ ಬಗ್ಗೆ ಮಾತನಾಡುತ್ತಾನೆ.

71 ಹೋಸನ್ ಎಂಬದು ಇಬ್ರಿಯ ಪದವಾಗಿದೆ. ಅದರರ್ಥ "ರಕ್ಷಿಸು" ಎಂಬದಾಗಿದೆ. ಇದು "ಹಲ್ಲೆಲೂಯ" ಎಂಬಂತೆ ದೇವರಿಗೆ ಸ್ತುತಿಯನ್ನು ವ್ಯಕ್ತ ಪಡಿಸುವದಕ್ಕೆ ಉಪಯೋಗಿಸಲ್ಪಡುತಿತ್ತು.

72 ಇಲ್ಲಿ ಮಾರ್ಕನು ಎರಡನೆಯ ಸಾರಿ ಯೇಸು ಯೆರೂಸಲೇಮಿನ ದೇವಾಲಯವನ್ನು ಶುದ್ದೀಕರಿಸುವದನ್ನು ಬಣ್ಣಿಸುತ್ತಾನೆ. ಯೋಹಾನ 12-17ರ ಪ್ರಕಾರವಾಗಿ ತನ್ನ ಸಾರ್ವಜನಿಕ ಸೇವೆಯ ಪ್ರಾರಂಭದಲ್ಲಿ ಸಹ ಯೇಸು ದೇವಾಲಯಕ್ಕೆ ಬಂದು ಚಿನಿವಾರರನ್ನು ಪಾರಿವಾಳ ಮಾರುವವರನ್ನು ಹೊರಡಿಸಿಬಿಟ್ಟನು.

73 ದಾವೀದನ ಕುಮಾರನು ಎಂಬದು ಮೆಸ್ಸಿಯ ಅಥವಾ ಕ್ರಿಸ್ತನ ಇನ್ನೊಂದು ಹೆಸರಾಗಿತ್ತು ಹೆಚ್ಚಿನ ಚರ್ಚೆಗಾಗಿ ಮಾರ್ಕ 3:22ರ ವ್ಯಾಖ್ಯಾನಕ್ಕಾಗಿ ಅಡಿ ಟಿಪ್ಪಣಿಗಳು 8:2 ರಲ್ಲಿರುವ ಸ್ತೋತ್ರ ಎಂಬ ಪದವು "ಬಲ" ಎಂದು ಭಾಷಾಂತರಿಸಲ್ಪಟ್ಟಿದೆ.

75 ಮತ್ತಾಯ ತನ್ನ ಸುವಾರ್ತೆಯಲ್ಲಿ ಅಂಜೂರ ಮರದ ದಾಖಲೆಗಳನ್ನು ಒಂದು ಭಾಗವಾಗಿ ಸೇರಿಸುತ್ತಾನೆ. ಮತ್ತು ಯೇಸು ದೇವಾಲಯದಲ್ಲಿದ್ದುದರ ಕುರಿತು ಬಣ್ಣಿಸಿದ ನಂತರ ಇದನ್ನು ಕುರಿತು ಹೇಳುತ್ತಾನೆ.

76 ಬೆಟ್ಟಕ್ಕೆ ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳುವದು ಯಾವದೇ ಅಸಾದ್ಯವಾದ ಮನವಿಯನ್ನು ಬಣ್ಣಿಸಲು ಹೇಳುತ್ತಿದ್ದ ಯೆಹೂದ್ಯರ ನಾಣ್ಣುಡಿಯಾಗಿತ್ತು.

77 ಮಾರ್ಕನ ಎಲ್ಲಾ ಪು ರಾತನ ಹಸ್ತ ಪ್ರತಿಗಳಲ್ಲಿ ಎಲ್ಲವೂ ವ.26ನ್ನು. ಹೊಂದಿರುವದಿಲ್ಲ. ಇದೇ ರೀತಿಯ ವಚನ ಮತ್ತಾಯ 6:15ರಲ್ಲಿ ಕಂಡುಬರುತ್ತದೆ. ಹಳೆ ಒಡಂಬಡಿಕೆಯ ಪ್ರವಾದಿಗಳು ದೇವರ ಅಧಿಕಾರದೊಂದಿಗೆ ಮಾತನಾಡಿದ್ದರಷ್ಟೇ, ಮತ್ತು ಅವರು ದೇವದೂಷಕರೆಂದು ಪರಿಗಣಿಸಲ್ಪಡಲಿಲ್ಲ. ಆದರೆ ಯೆಹೂದ್ಯ ನಾಯಕರು ಯೇಸುವನ್ನು ಪ್ರವಾದಿಯೆಂದು ಪರಿಗಣಿಸಲಿಲ್ಲ. ಆದ್ದರಿಂದ ಅವರ ದೃಷ್ಟಿಯಲ್ಲಿ ಯೇಸು ತನಗೆ ದೇವರ ಅಧಿಕಾರವಿದೆಯೆಂದು ಹೇಳಿಕೊಳ್ಳುವದು ನಿಜವಾಗಿಯೂ ದೇವದೂಷಕನು ಆಗಿದ್ದನು.

79 ಮಾರ್ಕ 3:6 ಮತ್ತು ವ್ಯಾಖ್ಯಾನದಲ್ಲಿ ಹೆರೋದ್ಯರು ಪ್ರಾಸ್ತಪಿಸಲ್ಪಟ್ಟಿದ್ದಾರೆ.

80 ರೋಮ ಸಾಮ್ರಾಜ್ಯವು ಕ್ರಿ.ಪೂ..27ರಲ್ಲಿ ಸ್ಥಾಪಿಸಲ್ಪಟ್ಟು ನಾನೂರು ವರ್ಷಗಳ ವರೆಗೆ ಅಸ್ತಿತ್ವದಲ್ಲಿತ್ತು. ಆದರ ರಾಜಧಾನಿಯು ರೋಮ ಆಗಿತ್ತು. ಅದು ಇಂದು ಆಧುನಿಕ ರಾಷ್ಟ್ರವಾದ ಇಟಲಿಯ ರಾಜಧಾನಿಯಾಗಿದೆ. ರೋಮನ್ ಸಾಮ್ರಾಜ್ಯದ ದಕ್ಷಿಣ ಐರೋಪ್ಯ ಮಧ್ಯ ಪೂರ್ವ ಮತ್ತು ಉತ್ತರ ಆಫ್ರೀಕಾದ ಅನೇಕ ರಾಷ್ಟ್ರಗಳನ್ನು ಹೊಂದಿತ್ತು. ಹೆಚ್ಚಿನ ಚರ್ಚೆಗಾಗಿ ಪದಪಟ್ಟಿ: ರೋಮನ್ ಸಾಮ್ರಾಜ್ಯ ನೋಡಿರಿ.

81 ಕೈಸರ್ ಎಂದರೆ ಚಕ್ರವರ್ತಿ ಎಂಬದಾಗಿ ಎಲ್ಲಾ ರೋಮಾಯ ಚಕ್ರವರ್ತಿಗಳು "ಕೈಸರ" ಎಂದು ಕರೆಯಲ್ಪಟ್ಟಿದ್ದಾರೆ.

82 ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರ ಒಬ್ಬನು ಬಾಧ್ಯಸ್ಥನನ್ನು ಪಡೆಯದೆ ಸಾಯುವದಾದರೆ ಆತನ ತಮ್ಮನು ಅಣ್ಣನ ವಂಶಾವಳಿಯನ್ನು ಮುಂದುವರೆಸುವದಕ್ಕಾಗಿ ಆತನ ವಿಧವೆಯನ್ನು ಮದುವೆ ಮಾಡಿಕೊಳ್ಳಬೇಕಾಗಿತ್ತು (ಧರ್ಮೋಪದೇಶಕಾಂಡ 25:5-10)

83 ಲೂಕನ ಸುವಾರ್ತೆಯಲ್ಲಿನ ಈ ವಚನಗಳಲ್ಲಿ ಯೇಸು ಪರಲೋಕದಲ್ಲಿ ವಿಶ್ವಾಸಿಗಳ ಪು ನರುತ್ಥಾನದ ಕುರಿತಾಗಿ ಮಾತನಾಡುತ್ತಿದ್ದಾನೆ. ನ್ಯಾಯತೀರ್ಪಿನ ದಿನದಲ್ಲಿ ಅವಿಶ್ವಾಸಿಗಳ ಪು ನರುಥ್ಥಾನವು ಸಹ ಆಗುವದು (ಯೋಹಾನ 5:28-29 ಮತ್ತು ವ್ಯಾಖ್ಯಾನ ನೋಡಿರಿ)

84 ಹಳೆ ಒಡಂಬಡಿಕೆಯು ಹಲವಾರು ವೇಳೆ ಧರ್ಮಶಾಸ್ತ್ರ ಮತ್ತು ಪ್ರವಾದಿಗಳು ಕರೆಯಲ್ಪಟ್ಟಿದೆ. ಹಳೆ ಒಡಂಬಡಿಕೆಯ ಮೊದಲ ಐದು ಪು ಸ್ತಕಗಳು "ಧರ್ಮಶಾಸ್ತ್ರ" ಎಂದು ಕರೆಯಲ್ಪಟ್ಟಿದೆ.

85 ವಿಶ್ವಾಸಿಗಳು ತಮ್ಮನ್ನು ಹೀನೈಸಿಕೊಳ್ಳಬೇಕೆಂದು ಅರ್ಥವಲ್ಲ. ಸ್ವಾರ್ಥವನ್ನು ಪ್ರೀತಿಸದಿರಬೇಕೆನ್ನುವದು ನಾವು ಕಡಿಮೆ ಸ್ವಗೌರವಹೊಂದಿರಬೇಕಂದರ್ಥವಲ್ಲ. ನಾವು ದೇವರ ಕುಟುಂಬದ ಸದಸ್ಯರಾಗಿದ್ದು, ನಾವು ಆತನ ಸ್ವರೂಪದಲ್ಲಿ ನಿರ್ಮಿಸಲ್ಪಟ್ಟಿದ್ದೇವೆ. ನಮ್ಮ ಯೋಗ್ಯತೆಯು ಆತನಿಂದಲೇ ಬರುವದಾಗಿದೆ.

86 ಕರುಣೆ ಎಂಬ ಪದದ ಸ್ಥಾನದಲ್ಲಿ ಬೈಬಲ್‌ನ ಕೆಲವೊಂದು ಭಾಷಾಂತರಗಳು ಶಾಶ್ವತ ಪ್ರೀತಿ ಎಂದು ಹೇಳುತ್ತವೆ.

87 ಯಾವದೇ ಯಾಜಕ ಅಥವಾ ಧಾರ್ಮಿಕ ಬೋಧಕನು ತಾನು ಸೇವೆ ಸಲ್ಲಿಸುವವರ ಜೀವಿತಗಳನ್ನು ಈಡು ಕೊಟ್ಟು ಶ್ರೀಮಂತನಾಗುವದಾದರೆ ಆತನು ಒಬ್ಬ ಮಿಥ್ಯ ಯಾಜಕ ಮತ್ತು ಮಿಥ್ಯ ಬೋಧಕನಾಗಿದ್ದಾನೆ.

88 ಈ ಇಡೀ ಅಧ್ಯಾಯವು ಅರ್ಥಮಾಡಿಕೊಳ್ಳಲು ಕಷ್ಟಕರಎಂದು ಹೇಳ ಬಹುದು. ಬೈಬಲ್ ಪಂಡಿತರು ಅನೇಕ ವಚನಗಳ ಅರ್ಥಗಳ ಬಗ್ಗೆ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದಾರೆ. ಈ ವ್ಯಾಖ್ಯಾನ ಪುಸ್ತಕವು ಅತಿ ಸಾಮಾನ್ಯವಾದ ವ್ಯಾಖ್ಯಾನಗಳನ್ನು ನೀಡಲು ಪ್ರಯತ್ನಿಸುತ್ತದೆ.

89 ಎಲ್ಲಾ ಜನಾಂಗಗಳು ಅಂದರೆ ಪ್ರಪಂಚದಲ್ಲಿರುವ ಪ್ರತಿಯೊಂದು ಗೋತ್ರ ವೆಂಬದಾಗಿಯೇ ಅಥವಾ ಸಾಮಾನ್ಯ ಅರ್ಥದಲ್ಲಿ "ಜಗತ್ತಿನಲ್ಲಿರುವ ಎಲ್ಲಾ ಜನರು" ಎಂಬ ಅರ್ಥವೊ ಎಂಬದು ಖಚಿತವಾಗಿರುವದಿಲ್ಲ (ರೋಮ 1:5,8, 10:17-18, ಕೊಲೊಸ್ಸೆ 1:6,23 ನೋಡಿರಿ). ಕೆಲವು ಬೈಬಲ್ ಪಂಡಿತರು ಎಲ್ಲಾ ಜನಾಂಗಗಳು ಹೇಳುವದರ ಮೂಲಕ ಯೇಸು ಅಂದು ಪರಿಚಿತವಿದ್ದ ರೋಮ ಸಾಮ್ರಜ್ಯದ ಎಲ್ಲಾ ಜನಾಂಗಗಳು ಎಂದು ಸೂಚಿಸಿದನು ಎಂದು ನಂಬುತ್ತಾರೆ. ಇದು ನಿಜವಾಗಿದ್ದರೆ ಮತ್ತಾಯ 24:14ರ ಪ್ರವಾದನೆಯು ಯೆರೂಸಲೇಮಿನ ನಾಶನಕ್ಕೆ ಮುಂಚೆಯೇ ನೆರವೇರಿತು. ಈ ವಿಷಯದಲ್ಲಿ ಮತ್ತಾಯ 24:14ರಲ್ಲಿನ ಅಂತ್ಯವು ಎಂಬ ಪದ ಯೆರೂಸಲೇಮಿನ ಅಂತ್ಯವನ್ನು ಸೂಚಿಸುತ್ತದೆ ಹೊರತು ಲೋಕದ ಅಂತ್ಯವನ್ನಲ್ಲ ಎಂದಾಗುತ್ತದೆ. ಹೇಗೂ ಮತ್ತಾಯದಲ್ಲಿನ ಯೇಸುವಿನ ಪ್ರವಾದನೆಯು ಯೆರೂಸಲೇಮಿನ ನಾಶನ ಮತ್ತು ಲೋಕದ ಅಂತ್ಯ ಎರಡನ್ನು ಸೂಚಿಸುವ ಸಾಧ್ಯತೆಯಿದೆ, ಹೀಗಿದ್ದರೆ ಇದನ್ನು ಎರಡು ಮಟ್ಟಗಳಾಗಿ ವ್ಯಾಖ್ಯಾನಿಸಬೇಕಾಗುತ್ತದೆ. ಒಂದು ಮಟ್ಟದಲ್ಲಿ ಪ್ರವಾದನೆಯು ಯೆರೂಸಲೇಮಿನ ನಾಶನದ ವೇಳೆ ಸ್ವಲ್ಪಮಟ್ಟಿಗೆ ನೆರವೇರಿತು. ಇನ್ನೊಂದು ಮಟ್ಟದಲ್ಲಿ ಪ್ರವಾದನೆಯು ಲೋಕದ ಅಂತ್ಯದ ವೇಳೆಗೆ ಸಂಪೂರ್ಣವಾಗಿ ನೆರವೇರುವದು.

90 ಈ ವಿಷಯದ ಮೇಲಿನ ಹೆಚ್ಚಿನ ಚರ್ಚೆಗಾಗಿ ಸಾಮಾನ್ಯ ಬರಹಃ ನಾವು ನಮ್ಮ ರಕ್ಷಣೆಯನ್ನು ಕಳೆದುಕೊಳ್ಳಬಹುದೆ?

91 ಕೊಲೆ ಮಾಡುವ ಅಸಹ್ಯ ವಸ್ತು ಎಂಬ ಹೆಸರು ದಾನಿಯೇಲ 9:27, 11:31, 12:11 ರಿಂದ ಬಂದಿರುತ್ತದೆ. ಹಳೆ ಒಡಂಬಡಿಕೆಯಲ್ಲಿ ಇದರರ್ಥ ಯೆಹೂದ್ಯ ದೇವಾಲಯವನ್ನು ಹೊಲಸು ಮಾಡುವಯಾವದೇ ವಿಗ್ರಹ ಅಥವಾ ದುಷ್ಟ ವ್ಯಕ್ತಿ ಎಂಬದಾಗಿ.

92 ಯೂದಾಯವು ಇಸ್ರಾಯೇಲಿನ ದಕ್ಷಿಣ ಪ್ರಾಂತ್ಯವಾಗಿತ್ತು, ಯೆರೂಸಲೇಮ ಅದರೊಳಗೆ ಸೇರಿರುತ್ತದೆ.

93 ಅನ್ಯ ದೇಶದವರ ಕಾಲಗಳು ಎಂಬುದು ಅನ್ಯದೇಶಗಳವರು ಯೆರೂಸಲೇಮನ್ನು ಆಳಿದ ವೇಳೆಯ ಕಾಲವಾಗಿತ್ತು. ಆ ಕಾಲವು ಕ್ರಿ.ಶ.70 ರಿಂದ ಪ್ರಾರಂಭವಾಗಿ 1948ರಲ್ಲಿ ಆಧುನಿಕ ಇಸ್ರಾಯೇಲ್ ರಾಷ್ಟ್ರವು ಸ್ಥಾಪಿತವಾಗುವ ತನಕ ಮುಂದುವರೆದಿತ್ತು ಯೆಹೂದ್ಯರು 1966 ಯೆರೂಸಲೇಮಿನ ಮೇಲೆ ಸಂಪೂರ್ಣ ಹತೋಟಿಯನ್ನು ಹಿಂದಕ್ಕೆ ಪಡೆದುಕೊಂಡರು. ಲೋಕದ ಕಡೆಯ ದಿನಗಳು ಹತ್ತಿರವಾಗಿವೆ ಎಂಬುದಕ್ಕೆ ಇದೊಂದು ಕಾರಣವಾಗಿದೆ.

94 ಮಿಥ್ಯ ಕ್ರಿಸ್ತರು ಮತ್ತು ಮಿಥ್ಯ ಪ್ರವಾದಿಗಳು ಎಂದಿಗೂ ನಿಜ ಅಸ್ವಾಭಾವಿಕವಾದ ಅದ್ಭುತಗಳನ್ನು ಮಾಡರು, ಆದರೆ ಅದ್ಭುತಗಳಂತೆ ಕಾಣುವ ಬರೀ ಮಂತ್ರ –ತಂತ್ರಗಳನ್ನೇ ಮಾಡುತ್ತಾರೆಂದು ಕೆಲವು ಬೈಬಲ್ ಪಂಡಿತರು ನಂಬುತ್ತಾರೆ. ಕ್ರಿಸ್ತನ ಶಕ್ತಿಯ ಮೂಲಕ ಮಾತ್ರವೇ ಪ್ರಕೃತಿಯ ನೇಮಗಳನ್ನು ಬದಿಗಿರಸಬಲ್ಲದು ಎಂದು ಹೇಳುತ್ತಾರೆ. ಹೇಗೂ, ಸೈತಾನನು ಮತ್ತು ಆತನ ಸೇವಕರು ಸಹ ಅದ್ಭುತಗಳನ್ನು ಮಾಡಬಲ್ಲರೆಂದು, ಇತರರು ನಂಬುತ್ತಾರೆ. ಉದಾಹರಣೆಗೆ, ಐಗುಪ್ತ್ಯದ ಮಂತ್ರವಾದಿಗಳು ತಮ್ಮ ಕೋಲುಗಳನ್ನು ನಿಜವಾದ ಹಾವು ಗಳಾಗಿ ಮಾರ್ಪಡುವಂತೆ ಮಾಡಿದರು (ವಿಮೋಚನಕಾಂಡ 7:10-12). ಹೇಗೂ, ಪ್ರಾಮುಖ್ಯವಾದ ಅಂಶವೇನೆಂದರೆ ಅದ್ಭುತಗಳನ್ನು ನೋಡಿಮಾತ್ರವೇ ನಾವು ಸೈತಾನ ಮತ್ತು ಆತನ ಸೇವಕರು ಮಾಡಿದ ಅದ್ಭುತಗಳನ್ನು ಕ್ರೈಸ್ತರು ಮಾಡುವ ಅದ್ಭುತಗಳಿಂದ ವಿಮರ್ಶಿಸಿ ನೋಡಲು ಆಗುವದಿಲ್ಲ. ಆ ಅದ್ಭುತಗಳು ಕ್ರಿಸ್ತನಿಗೆ ಮಹಿಮೆಯನ್ನು ತರುತ್ತವೋ ಎಂಬದನ್ನು ನಾವು ನೋಡಬೇಕು, ಇದೇ ಪರೀಕ್ಷೆಯಾಗಿದೆ.

95 ರಣ ಹದ್ದುಗಳು ಎಂಬ ಪದದ ಸ್ಥಾನದಲ್ಲಿ ಬೈಬಲ್ಲಿನ ಕೆಲವು ಭಾಷಾಂತರಗಳು "ಗರುಡಗಳು" ಎಂದು ಹೇಳುತ್ತವೆ.

96 ಗರುಡವು ರೋಮಾಯ ಸೈನ್ಯದ ಗುರುತು ಅಥವಾ ಲಾಂಛನವಾಗಿತ್ತು.

97 ಯೆಹೂದ್ಯರು ಐಗುಪ್ತ್ಯದ ದಾಸತ್ವದೊಳಗಿದ್ದ ಕೊನೆಯರಾತ್ರಿಯಲ್ಲಿ ದೇವರು ಐಗುಪ್ತ್ಯರ ಎಲ್ಲಾ ಚೊಚ್ಚಲು ಮಕ್ಕಳನ್ನು ಸಾಯಿಸಿದನು, ಅದರಲ್ಲಿ ಮನುಷ್ಯರು ಮತ್ತು ಪ್ರಾಣಿಗಳು ಸೇರಿವೆ. ಮೋಶೆಯು ಯೆಹೂದ್ಯರಿಗೆ ಒಂದು ಕುರಿಮರಿಯನ್ನು ಯಜ್ಞವರ್ಪಿಸಿ ಅದರ ರಕ್ತವನ್ನು ಅವರ ಮನೆಗಳ ನಿಲುವು ಪಟ್ಟಿಗಳ ಮೇಲೆ ಪ್ರೋಕ್ಷಿಸುವಂತೆ – ಸೂಚಿಸಿದ್ದನು. ಈ ಗುರುತನ್ನು ನೋಡಿ ವಿನಾಶಕನು ಅಂದರೆ ಸಂಹಾರದೂತನು ಯೆಹೂದ್ಯರ ಮನೆಗಳನ್ನು "ದಾಟಿ ಹೋಗುವನು " ಅಥವಾ ಅವರ ಮನೆಗಳನ್ನು ದಾಟುವನು. ಮತ್ತು ಅವರ ಚೊಚ್ಚಲು ಮಕ್ಕಳನ್ನು ಉಳಿಸುವನು. ಐಗುಪ್ತ್ಯದ ಅರಸನಾದ ಪರೋಹನು ಅವನ ದೇಶದ ಮೇಲೆಲ್ಲಾ ದೇವರು ತಂದಿದ್ದ ಭಯಂಕರ ವಿನಾಶವನ್ನು ನೋಡಿ ಅದೇ ರಾತ್ರಿಯಲ್ಲಿಯೇ ಯೆಹೂದ್ಯರನ್ನು ಹೋಗಗೊಡಿಸಲು ತೀರ್ಮಾನಿಸಿದನು (ವಿಮೋಚನಾಕಾಂಡ 12:1-14, 21-36). ಹಾಗಾದರೆ "ಪಸ್ಕ" ಅಂದರೆ ದಾಟಿಕೊಂಡು ಹೋಗುವದು ಅಥವಾ ಯೆಹೂದ್ಯ ಕುಟುಂಬಗಳ ಚೊಚ್ಚಲು ಮಕ್ಕಳನ್ನು ಉಳಿಸುವದು ಎಂದರ್ಥ. ಅಲ್ಲದೆ ಇದು ಐಗುಪ್ತ್ಯದ ದಾಸತ್ವದೊಳಗಿಂದ ಯೆಹೂದ್ಯರಿಗೆ ಉಂಟಾದ ವಿಮೋಚನೆಯನ್ನು ಸಹ ಸೂಚಿಸುತ್ತದೆ.

98 ಯೇಸು ಯೆರೂಸಲೇಮನ್ನು ಪ್ರವೇಶಿಸುವದನ್ನು ಬಣ್ಣಿಸಿದ ಬಳಿಕ ಯೇಸುವಿನ ಅಭಿಷೇಕವನ್ನು ಕುರಿತು ಮಾರ್ಕನು ಬರೆಯುತ್ತಾನೆ, ಆದರೆ ವಾಸ್ತವದಲ್ಲಿ ಅಭಿಷೇಕವು ಮುಂಚೆಯೇ ಮಾಡಲ್ಪಟ್ಟಿತ್ತು. ಯಾವ ದಿನದಲ್ಲಿ ಅಭಿಷೇಕವು ಜರುಗಿತೆಂದು ಮಾರ್ಕನು ನಮಗೆ ತಿಳಿಸುವದಿಲ್ಲ. ಅದು ನಮಗೆ ಯೋಹಾನನ ಸುವಾರ್ತೆಯಿಂದ ತಿಳಿದು ಬರುತ್ತದೆ.

99 ವಿಮೋಚನ ಕಾಂಡ 21:32ರ ಪ್ರಕಾರವಾಗಿ ಮೂವತ್ತು ಬೆಳ್ಳಿಯನಾಣ್ಯಗಳು ಒಬ್ಬ ದಾಸನ ಬೆಲೆಯಾಗಿತ್ತು.

100 ಯೋಹಾನ 18:28 ರ ಪ್ರಕಾರವಾಗಿ ಯೇಸು ಮರಣವು ಪಸ್ಕಹಬ್ಬದ ದಿನದಂದಾಯಿತೆಂದು ಕೆಲವು ಬೈಬಲ್ ಪಂಡಿತರು ಹೇಳುತ್ತಾರೆ, ಹಾಗೆ ಕಡೆಯ ರಾತ್ರಿ ಬೋಜನವು ಪಸ್ಕ ಹಬ್ಬದಂದಲ್ಲ, ಆದರೆ ಆದಕ್ಕೆ ಮುಂಚಿನ ದಿನದಲ್ಲಿ ಜರುಗಿರಬಹುದು. ಯೋಹಾನನು,

ಯಾಕೆ ಮತ್ತಾಯ, ಮಾರ್ಕ ಮತ್ತು ಲೂಕರೊಂದಿಗೆ ಒಪ್ಪಿದಂತೆ ಕಾಣುವದಿಲ್ಲ? ಈ ಪ್ರಶ್ನೆಯ ಮೇಲೆ ಬೈಬಲ್ ಪಂಡಿತರು ವಿಭಿನ್ನ ಅಭಿಪ್ರಾಯಗಳನ್ನು ಹೊಂದಿರುತ್ತಾರೆ. ಆ ಸಮಯದಲ್ಲಿ ಯೆಹೂದ್ಯರೊಳಗೆ ಎರಡು ವಿಭಿನ್ನರೀತಿಯ ದಿನ ಸೂಚಿಗಳು ಬಳಕೆಯಲ್ಲಿದ್ದವು. ಮತ್ತು ಯೇಸುವಿನ ಶಿಷ್ಯರು ಒಂದನ್ನು ಅನುಸರಿಸಿದರೆ ಯೆಹೂದ್ಯನಾಯಕರು ಇನ್ನೊಂದನ್ನು ಅನುಸರಿಸಿದರೆಂದು ಕೆಲವರು ಹೇಳುತ್ತಾರೆ. ಈ ವಿವರಣೆಯ ಪ್ರಕಾರವಾಗಿ ಯೋಹಾನನು ಯೆಹೂದ್ಯನಾಯಕರು ಉಪಯೋಗಿಸುವ ದಿನ ಸೂಚಿಗನುಸಾರವಾಗಿ ಬರೆದನು, ಅದೇ ವೇಳೆಯಲ್ಲಿ ಮತ್ತಾಯ, ಮಾರ್ಕ, ಮತ್ತು ಲೂಕರು ಇನ್ನೊಂದು ದಿನ ಸೂಚಿಗನುಸಾರವಾಗಿ ಬರೆದರು.

ಎರಡನೆಯ ವಿವರಣೆಯೇನೆಂದರೆ ಯೋಹಾನ 18:28ರಲ್ಲಿ ಉಪಯೋಗಿಸಲಾದ "ಪಸ್ಕ" ವು ನಿಜವಾದ ಪಸ್ಕದಿನದ ಅರ್ಥವನ್ನು ನೀಡುವದಿಲ್ಲ. ಆದರೆ ಹುಳಿಯಿಲ್ಲದ ರೊಟ್ಟಿಯ ಹಬ್ಬವಿರುವ ವಾರದವೇಳೆಯಲ್ಲಿನ ಪಸ್ಕ ಹಬ್ಬವಾದ ಯಾವದೇ ಬೋಜನದ ಸಾಮಾನ್ಯ ಪದವಾಗಿದೆ. ಈ ಅಭಿಪ್ರಾಯವನ್ನು ಸಮ್ಮತಿಸುವ ಬೈಬಲ್ ಪಂಡಿತರು ಯೋಹಾನ 19:14,31,42 ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಸೌರಣೆಯದಿನವು ಆ ವರ್ಷದಲ್ಲಿ ಬಿದ್ದ ಪಸ್ಕ ಹಬ್ಬದ ಅಂದರೆ ಪಸ್ಕವಾರದ "ಶುಕ್ರವಾರ" ದಿನವೆಂದರ್ಥ ಹೊರತು ಪಸ್ಕಹಬ್ಬದ ಮುಂಚಿನ ದಿನ ವೆಂದಲ್ಲ ಎಂದು ಸಹ ಹೇಳುತ್ತಾರೆ (ಸೌರಣೆಯದಿನ ಎಂಬದು ಯೆಹೂದ್ಯ ಪದವಾಗಿದ್ದು ಸಬ್ಬತ್ತಿನ ಮುಂಚಿನ ದಿನ ಎಂದರ್ಥ, ಹೀಗೆ ಅದು ಯಾವಾಗಲೂ ಶುಕ್ರವಾರದಂದು ಬರುತ್ತದೆ).

ಆ ಎರಡು ವಿವರಣೆಗಳಲ್ಲಿ ಒಂದಾದರೂ ಸರಿಯಾಗಿರುವದಾದರೆ ಯೋಹಾನ ಮತ್ತು ಇತರ ಮೂರು ಸುವಾರ್ತೆಗಳ ಬರಹಗಾರರ ನಡುವೆ ಯಾವ ಭಿನ್ನಾಭಿಪ್ರಾಯ ಇರುವದಿಲ್ಲ (ಇನ್ನು ಬೇರೆ ವಿವರಣೆಗಳು ಸಹ ಇರುತ್ತವೆ). ಮೇಲಿನವು ಗಳಲ್ಲಿ ಎರಡನೆಯದು ಸರಿಯಾಗಿರುವ ಹೆಚ್ಚು ಸಾದ್ಯತೆಯಿದೆ ಎಂಬದು ಈ ವ್ಯಾಖ್ಯಾನ ಗ್ರಂಥದ ಅಭಿಪ್ರಾಯವಾಗಿರುತ್ತದೆ. ಕರ್ತನ ಕಡೆಯ ಬೋಜನವು ಆ ವರ್ಷದ ಪಸ್ಕದ ಪ್ರಾರಂಭ ದಿನವಾದ ಗುರುವಾರ ಸಂಜೆಯಲ್ಲಿ ಜರುಗಿತೆಂದು ನಮ್ಮ ನಾಲ್ಕು ಸುವಾರ್ತಾ ಬಹಗಾರರು ಒಪ್ಪುತ್ತಾರೆಂದು ನಾವು ನಂಬುತ್ತೇವೆ. (ಯೊಹೂದ್ಯರು ದಿನವನ್ನು ಸಾಯಂಕಾಲ 6 ಘಂಟೆಗೆ ಪ್ರಾರಂಬವಾಗುತ್ತದೆಂದು ಗುರುತಿಸಿದರು) ಮತ್ತಾಯ, ಮಾರ್ಕ ಮತ್ತು ಲೂಕರು ಸ್ಪಷ್ಟವಾಗಿ ತಿಳಿಸುವಂತೆ ಇದು ಮುಖ್ಯ ಪಸ್ಕಹಬ್ಬದ ಭೋಜನವಾಗಿತ್ತು (ಮತ್ತಾಯ 26:17-19. ಮಾರ್ಕ 14-12, ಲೂಕ 22:7-8). ನಂತರ ಆತನು ಮರುದಿನ ಶುಕ್ರವಾರ ದಂದು ಅಂದರೆ "ಸೌರಣೆಯ (ಸಿದ್ದತೆಯ) ದಿನದಂದು ಶಿಲುಬೆಗೇರಿಸಲ್ಪಟ್ಟನು (ಯೋಹಾನ 18:28 ಮತ್ತು ವ್ಯಾಖ್ಯಾನ ನೋಡಿರಿ).

101 ಕೆಲವು ಬೈಬಲ್ ಆವೃತ್ತಿಗಳಲ್ಲಿ ಹೌದು ನೀನೇ ಎಂಬ ಪದಗಳ ಸ್ಥಾನದಲ್ಲಿ "ನೀನೆ ಹೇಳಿದ್ದಿ" ಎಂಬದಾಗಿ ಹೇಳುತ್ತವೆ. ಅದು ಗ್ರೀಕನ ಅಕ್ಷರಸಹ ಭಾಷಾಂತರ "ನೀನೆ ಹೇಳಿದ್ದಿ ಎಂಬುದು ಯೆಹೂದ್ಯ ನುಡಿಗಟ್ಟಾಗಿದ್ದು" ಹೌದು ನೀನೆ ಎಂಬ ಅರ್ಥವನ್ನು ಕೊಡುತ್ತದೆ.

102 ರೊಟ್ಟಿಯು ಮದ್ಯ ಪೂರ್ವದ ರಾಷ್ಟ್ರಗಳ ಪ್ರಮುಖ ಆಹಾರವಾಗಿದೆ,. ಹೊಸ ಒಡಂಬಡಿಕೆಯಲ್ಲಿ ರೊಟ್ಟಿ ಎಂಬ ಪದ ಹಲವಾರು ವೇಳೆ ಯಾವದೇ ರೀತಿಯ ಆಹಾರಕ್ಕೆ ಎಂಬ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ.

103 ಪರಲೋಕ ರಾಜ್ಯದಲ್ಲಿ ಜನರು ಸಾಮಾನ್ಯ ಆಹಾರ ತಿಂದು ಕುಡಿಯುವರೆಂದು ಯೇಸು ಹೇಳಲಿಲ್ಲ. ಅಲ್ಲಿ ನಮ್ಮ "ಆಹಾರವು ಆತ್ಮೀಕವಾದದ್ದು".

104 ಹೇಗೂ, ಯೇಸು ಸಂಪೂರ್ಣವಾಗಿ ಕೈ ಬಿಡಲ್ಪಟ್ಟಿರಲಿಲ್ಲ. ಆತನನ್ನು ಹಿಂಬಾಲಿಸಿದ ಕೆಲವು ಸ್ತ್ರೀಯರು ದೂರದಿಂದ ಆತನ ಶಿಲುಬೆಗೇರಿಸುವಿಕೆಯನ್ನು ನೋಡಿದರು (ಮಾರ್ಕ 15:40-41). ಅಪೊಸ್ತಲನಾದ ಯೋಹಾನನು ಸಹ ಅಲ್ಲಿದ್ದನು (ಯೋಹಾನ 19:25-27).

105 ಅಪ್ಪಾ, ಎಂಬುದು ಅನಾಮಿಕ ಪದವಾಗಿದ್ದು ಅದರರ್ಥ "ತಂದೆ" ಎಂಬುದಾಗಿ (ರೋಮ 8:15 ಗಲಾತ್ಯ 4:6).

106 ಈ ವಿಷಯದ ಹೆಚ್ಚಿನ ಚರ್ಚೆಗಾಗಿ ಸಾಮಾನ್ಯ ಬರಹ – ಕೆಟ್ಟದ್ದನ್ನು ಎದುರಿಸುವದು ನೋಡಿರಿ.

107 ಮತ್ತಾಯ 25:26ರಲ್ಲಿ ಇದೇ ರೀತಿಯ ವ್ಯಕ್ತಪಡಿಸಿದ್ದು ಕಂಡುಬರುತ್ತದೆ (ಮಾರ್ಕ 14:21 ಮತ್ತು ವ್ಯಾಖ್ಯಾನ ನೋಡಿರಿ)

108 ಪೊಂತ್ಯ ಪಿಲಾತನು ಕ್ರಿ.ಶ.26-36 ವರೆಗೆ ಯೂದಾಯ ಪ್ರಾಂತ್ಯದ ದೇಶಾಧಿಪತಿಯಾಗಿದ್ದನು. ಸಾಮಾನ್ಯವಾಗಿ ಆತನು ಕೈಸರ್ಯೆದಲ್ಲಿ ವಾಸಿಸುತ್ತಿದ್ದನು. ಆದರೆ ಪ್ರತಿವರ್ಷ ಯೆಹೂದ್ಯರಲ್ಲಿ ಯಾವ ಗಲಬೆಗಳು ಇಲ್ಲದಂತೆ ನೋಡಿಕೊಳ್ಳಲು ಪಸ್ಕ ಹಬ್ಬದ ದಿನ ಯೆರೂಸಲೇಮಿಗೆ ಬರುತ್ತಿದ್ದನು. ಯಾಕೆಂದರೆ ಪಸ್ಕ ವಾರದ ವೇಳೆಯಲ್ಲಿ ಯೆಹೂದ್ಯರ ರಾಷ್ಟ್ರೀಯತೆಯ ಭಾವನೆಗಳು ಉಚ್ಚ ಮಟ್ಟದಲ್ಲಿರುತ್ತಿದ್ದವು.

109 ಹೌದು, ನೀನು ಹೇಳಿದಂತೆಯೆ ಎಂಬ ಪದಗಳ ಸ್ಥಾನದಲ್ಲಿ ಕೆಲವು ಬೇಬಲ್ ಅವೃತ್ತಿಗಳು "ನೀನೆ ಹೇಳಿದ್ದೀ" ಎಂದು ಹೇಳುತ್ತದೆ, ಅದು ಗ್ರೀಕ ಪ್ರತಿಯ ಅಕ್ಷರಸಹ ಭಾಷಾಂತರವಾಗಿದೆ. "ನೀನೆ ಹೇಳಿದ್ದಿ" ಎಂಬುದು ಯೆಹೂದ್ಯರ ಒಂದು ನುಡಿಗಟ್ಟಾಗಿತ್ತು ಅದರರ್ಥ ಹೌದು ಎಂಬುದಾಗಿ (ಮತ್ತಾಯ 26:25,64, ಮಾರ್ಕ 14:62 ಮತ್ತು ವ್ಯಾಖ್ಯಾನ ನೋಡಿರಿ).

110 ದಂಡನೆಗೊಳಗಾದ ಅಪರಾಧಿಗಳಿಗೆ ಮರಣ ವಿಧಿಸುವ ರೋಮಾಯರ ಪದ್ದತಿಯು ಅವರನ್ನು ಶಿಲುಬೆಯ ಮೇಲೆ ತೂಗು ಹಾಕುವದಾಗಿತ್ತು (ಮಾರ್ಕ 8:34 ಮತ್ತು ವ್ಯಾಖ್ಯಾನ ನೋಡಿರಿ).ಇದು ಅವಮಾನಕರ ಮತ್ತು ನೋವು ದಾಯಕ ಮರಣದಂಡನೆಯ ವಿಧಾನವಾಗಿತ್ತು. ಹೆಚ್ಚಿನ ಚರ್ಚೆಗಾಗಿ ಪದಪಟ್ಟಿ – I ಶಿಲುಬೆ ನೋಡಿರಿ.

111 ದೇವರ ದೃಷ್ಟಿಯಲ್ಲಿ ಪಿಲಾತನು ನಿರಪರಾಧಿಯಾಗಿರಲಿಲ್ಲಷ್ಟೇ ಆತನು ಯೆಹೂದ್ಯರ ಅಪರಾಧದಲ್ಲಿ ಪಾಲುಗಾರನಾಗಿದ್ದನು. ಆತನು ಕ್ರಿಸ್ತನನ್ನು ಮುಕ್ತಗೊಳಿಸಬಹುದಾಗಿತ್ತು. ತನ್ನ ಸ್ಥಾನವನ್ನು ಉಳಿಸಿಕೊಳ್ಳಲು ಹಾಗೇ ಮಾಡದಿರಲು ತೀರ್ಮಾನಿಸಿದನು. ಆದರೆ ಯೇಸುವನ್ನು ಸಾಯಸುವದರ ಅಪರಾಧವನ್ನು ಅವನು ಯೆಹೂದ್ಯರ ಮೇಲೆ ತಿರುಗಿಸಲು ಪ್ರಯತ್ನಿಸಿದನು. ಅವನು "ನಾನು ನಿರಪರಾಧಿ...ಅದಕ್ಕೆ ನೀವೇ ಹೊಣೆಗಾರರೆಂದು"ಹೇಳಿದನು (ಮತ್ತಾಯ 27:24) ಹೇಗೂ ಈ ರೀತಿಯಲ್ಲಿ ಅಪರಾಧವನ್ನು ವರ್ಗಾಯಿಸುವದು ಅಸಾಧ್ಯ. ಇನ್ನೊಬ್ಬರ ಪಾಪಗಳಿಗೆ ಸಮ್ಮತಿಸುವವರು ಅವರ ಪಾಪಗಳಲ್ಲಿ ಪಾಲುಗಾರರಾಗಿದ್ದಾರೆ.

112 ಕುರೇನವು ಉತ್ತರ ಅಪ್ರಿಕಾದ ಒಂದು ಪ್ರಾಂತ್ಯವಾಗಿದ್ದು, ಈಗ ಅಲ್ಲಿ ಲಿಬ್ಯವಿರುತ್ತದೆ.

113 ಸಿಮೋನನ ಮಗನಾದ ರೂಫನು ರೋಮ 16:13 ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ರೂಫನೆ ಆಗಿರಬಹುದು, ಅವನು ರೋಮದಲ್ಲಿನ ಸಭೆಯ ಒಬ್ಬ ಸದಸ್ಯನಾಗಿದ್ದನು.

114 ಮತ್ತಾಯ 27:34ರ ಪ್ರಕಾರವಾಗಿ ಇತರರು ಯೇಸುವಿಗೆ ಕಹಿ ಮಿಶ್ರಿತ ದ್ರಾಕ್ಷಾರಸವನ್ನು ಕೊಟ್ಟರು. ಅದು ತುಂಬಾ ಕಹಿಯಾಗಿತ್ತು, ಸಿಪಾಯಿಗಳು ಯೇಸುವನ್ನು ಹಾಸ್ಯಮಾಡಲು ಇದನ್ನು ನೀಡಿರುವ ಸಾದ್ಯತೆಯಿದೆ, ಅನಂತರ ಸಿಪಾಯಿಗಳಲ್ಲಿ ಒಬ್ಬನು ಯೇಸುವಿಗೆ ಹುಳಿ ರಸವನ್ನು ಕುಡಿಯಲು ಕೊಟ್ಟನು (ವಚನ 36). ಇದು ಸಿಪಾಯಿಗಳು ಕುಡಿಯುತ್ತಿದ್ದ ಅಗ್ಗದ ದ್ರಾಕ್ಷಾರಸವಾಗಿತ್ತು. (ಮತ್ತಾಯ 27:48, ಲೂಕ 23:36).

115 ಮಾರ್ಕ ಮತ್ತು ಯೋಹಾನರ ನಡುವಿನ ವ್ಯತ್ಯಾಸದ ಬಗ್ಗೆ ಇನ್ನು ಅನೇಕ ವಿವರಣೆಗಳುಂಟು ಯಾವ ವಿವರಣೆಯು ಸರಿಯಾಗಿದೆಂದು ಖಚಿತವಾಗಿರುವದಿಲ್ಲ.

116 ಮಾರ್ಕನ ಎಲ್ಲಾಪು ರಾತನ ಹಸ್ತ ಪ್ರತಿಗಳಲ್ಲೂ ವ.೨೮ ಇರುವದಿಲ್ಲ. ಇದನ್ನೆ ಹೋಲುವ ವಚನವು ಲೂಕ 22:37ರಲ್ಲಿ ಕಂಡುಬರುತ್ತದೆ.

117 ಭೂಮಿ ಮತ್ತು ಸೂರ್ಯನ ನಡುವೆ ಚಂದ್ರನು ಬರುವಾಗ ಸ್ವಾಭಾವಿಕ ಸೂರ್ಯಗ್ರಹಣವು ಸಂಭವಿಸುತ್ತದೆ. ಆದರೆ ಹುಣ್ಣಿಮೆಯ ದಿನದಲ್ಲಿ ಇದು ಅಸಾಧ್ಯ.

118 ಶಿಷ್ಯರಲ್ಲಿ ಯೋಹಾನನು ಮಾತ್ರವೆ ಶಿಲುಬೆಯ ಹತ್ತಿರ ಹಾಜರಿದ್ದನೆಂದು ದಾಖಲಿಸಲ್ಪಟ್ಟಿದೆ (ಯೋಹಾನ 19:26).

ಸಾಮಾನ್ಯವಾಗಿ ರೋಮಾಯರು ಶಿಲುಬೆಗೇರಿಸಲ್ಪಟ್ಟ ಅಪರಾಧಿಗಳನ್ನು ಹೂಣಿಡಲು ಅನುಮತಿಸುತ್ತಿರಲಿಲ್ಲ, ಅವರ ದೇಹಗಳನ್ನು ಪಕ್ಷಿಗಳು ತಿನ್ನುವಂತೆ ಶಿಲುಬೆಯ ಮೇಲೆಯೇ ನೇತಾಡಲು ಬಿಡುತ್ತಿದ್ದರು. (ಅವರು ಇದನ್ನು ಇನ್ನೊಬ್ಬರಿಗೆ ಎಚ್ಚರಿಕೆಯಂತೆ ಮಾಡಿದ್ದರು, ಆದರೆ ಯೆಹೂದ್ಯರ ಧರ್ಮಶಾಸ್ತ್ರದ ಪ್ರಕಾರವಾಗಿ ಒಬ್ಬ ವ್ಯಕ್ತಿಯು ಸತ್ತ ದಿನದಲ್ಲಿ ಹೂಳಿಡುವದು ಅವಶ್ಯಕವಾಗಿತ್ತು (ಧರ್ಮೋಪದೇಶಕಾಂಡ 21:22-23). ಈ ಕಾರಣಕ್ಕಾಗಿಯೆ ಯೋಸೇಫನು ಯೇಸುವಿನ ದೇಹವನ್ನು ಹೂಳಿಡಲು ಪಿಲಾತನಿಂದ ಅಪ್ಪಣೆ ಪಡೆದಿದ್ದನು.

120 ನಿಕೋದೇಮನು ಯೋಹಾನ 3:15ರಲ್ಲಿ ಸಹ ಪ್ರಸ್ತಾಪಿಸಲ್ಪಟ್ಟಿದ್ದಾನೆ.

121 ಸಬ್ಬತ್ ದಿನವು ಶುಕ್ರವಾರ ಸಂಜೆ 6 ಗಂಟೆಗೆ ಪ್ರಾರಂಭವಾಗಿ ಶನಿವಾರ ಸಂಜೆ 6 ಗಂಟೆಗೆ ಮುಕ್ತಾಯ ಗೊಳ್ಳುತ್ತದೆಂದು ಯೆಹೂದ್ಯರು ಪರಿಗಣಿಸಿದ್ದರು.

122 ಮಾರ್ಕನ ಪು ರಾತನ ಎಲ್ಲಾ ಹಸ್ತ ಪ್ರತಿಗಳಲ್ಲೂ 9ರಿಂದ 20 ವಚನಗಳು ಇರುವದಿಲ್ಲ.

# ಲೂಕ

## ಪರಿಚಯ

ಲೂಕನು ಒಬ್ಬ ವೈದ್ಯನು (ಕೊಲೊಸ್ಸೆ 4:14) ಮತ್ತು ಅಪೊಸ್ತಲನಾದ ಪೌಲನ ಸಹ ಪಾಲಿಯಾಗಿದ್ದನು. ಈ ಸುವಾರ್ತೆಯ ಜೊತೆಗೆ ಲೂಕನು ಅಪೊಸ್ತಲರ ಕಾರ್ಯಗಳ ಪುಸ್ತಕವನ್ನು ಸಹ ಬರೆದನು (ಲೂಕ 1:1-4, ಅ.ಕೃ.1:1-2).

ಅಪೊಸ್ತಲನಾದ ಪೌಲನು ಗ್ರೀಸ ಮತ್ತು ಟರ್ಕಿಗಳಿಗೆ ಮಾಡಿದ ಎರಡು ಮತ್ತು ಮೂರನೆಯ ಸುವಾರ್ತಾ ಪ್ರಯಾಣಗಳಲ್ಲಿ ಅವನ ಜೊತೆಯಲ್ಲಿದ್ದನು. (ಅ.ಕೃ 16:10, 20:6 ನೋಡಿರಿ). ಮತ್ತು ಪೌಲನು ರೋಮಿಗೆ ಮಾಡಿದ ಅಂತಿಯ ಸಮುದ್ರ ಪ್ರಯಾಣದಲ್ಲಿ ಲೂಕನು ಅವನ ಜೊತೆ ಇದ್ದನು (ಅ.ಕೃ 27:1-2) ಅಲ್ಲದೆ ಪೌಲನು ರೋಮಿನಲ್ಲಿ ಸೆರೆಯಾಳಾಗಿರುವಾಗಲು ಲೂಕನು ಅವನೊಂದಿಗೆ ಉಳಿದನು (2 ತಿಮೊಥಿ 4:11) ಹೀಗೆ ಲೂಕನು ಕ್ರೈಸ್ತ ಧರ್ಮದ ಪ್ರಾರಂಭದ ಕುರಿತು ಬರೆದದ್ದು ಅಲ್ಲದೆ ಅದರಲ್ಲಿ ಭಾಗಿಯೂ ಸಹ ಆದನು. ಮತ್ತಾಯನು ಯೆಹೂದ್ಯನಾಗಿದ್ದ ತನ್ನ ಸುವಾರ್ತೆಯನ್ನು ಮುಖ್ಯವಾಗಿ ಯೆಹೂದ್ಯ ವಾಚಕರಿಗೆ ಬರೆದರೆ, ಲೂಕನು ಒಬ್ಬ ಗ್ರೀಕನಾಗಿದ್ದು[1] ಅಂದರೆ ಒಬ್ಬ ಅನ್ಯ ಜನಾಂಗದವನಾಗಿದ್ದನು[PI]. ಆದುದರಿಂದ ಲೂಕನು ತನ್ನ ಸುವಾರ್ತೆಯನ್ನು ಅನ್ಯ ಜನರು ಸರಳವಾಗಿ ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಬರೆದಿರುತ್ತಾನೆ. ಲೂಕನು ತನ್ನ ಸುವಾರ್ತೆಯನ್ನು ಬರೆಯುತ್ತಿರುವಾಗ ಆತನು ಮಾರ್ಕನ ಸುವಾರ್ತೆಯ ಒಂದು ಪ್ರತಿಯನ್ನು ಹೊಂದಿದ್ದನು. ಆದುದರಿಂದ ಲೂಕನು ತನ್ನ ಸುವಾರ್ತೆಯಲ್ಲಿ ಮಾರ್ಕನು ಬರೆದ ಅನೇಕ ವಚನಗಳನ್ನು ಪುನರಾವರ್ತನೆ ಮಾಡಿದ್ದಾನೆ (ಈ ವ್ಯಾಖ್ಯಾನ ಗ್ರಂಥದಲ್ಲಿ ವಾಚಕರು ಆ ವಚನಗಳ ವ್ಯಾಖ್ಯಾನಗಳಿಗೆ ಮಾರ್ಕನ ಸುವಾರ್ತೆಯನ್ನು ನೋಡಲು ಕೇಳಲಾಗಿದೆ).

ಲೂಕನು ಯೇಸುವಿನ ಜೀವಿತದ ಚರಿತ್ರೆಯನ್ನು ಬರೆಯುವಾಗ ಇತರ ಸಾಮಗ್ರಿಗಳನ್ನು ಸಹ ಉಪಯೋಗಿಸಿದ್ದಾನೆ. ಈ ಸಾಮಗ್ರಿಗಳು ಮತ್ತಾಯನ ಸುವಾರ್ತೆಯಲ್ಲಿ ಅಡಕವಾಗಿದೆ. ಕೆಲವು ಸಾಮಗ್ರಿಗಳು ಲೂಕನ ಸುವಾರ್ತೆಯಲ್ಲಿ ಮಾತ್ರವೇ ಕಂಡು ಬರುತ್ತವೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಲೂಕನು ಒಬ್ಬ ಇತಿಹಾಸಕಾರನಾಗಿದ್ದನು. ತನ್ನ ಸುವಾರ್ತೆ ಮತ್ತು ಅಪೊಸ್ತಲರ ಕೃತ್ಯಗಳ ಪುಸ್ತಕಗಳೆರಡರಲ್ಲಿಯೂ ನಿಖರವಾದ ವಿವರಗಳನ್ನು ನೀಡುವಲ್ಲಿ ಬಹು ಜಾಗರೂಕತೆ ವಹಿಸಿದ್ದಾನೆ. ಲೂಕನ ನಿಖರತೆಯು ಆ ಕಾಲದ ಇತರ ಐತಿಹಾಸಿಕ ಬರಹಗಳಿಂದಲೂ ಮತ್ತು ಅನೇಕ ಭೂಗರ್ಭ ಶಾಸ್ತ್ರದ ಶೋಧಗಳಿಂದಲೂ ಸಂಪೂರ್ಣವಾಗಿ ದೃಢಪಟ್ಟಿರುತ್ತದೆ.

ಹೊಸ ಒಡಂಬಡಿಕೆಯಲ್ಲಿ ದಾಖಲಾಗಿರುವ ಯೇಸು ಕ್ರಿಸ್ತನ ಕಥೆಯು ಮನುಷ್ಯನ ಊಹೆಗಳಿಂದ ರೂಪಿತವಾದಂತದ್ದಲ್ಲ, ಇದು ಸಂಪೂರ್ಣ ಸತ್ಯ ಮತ್ತು ಐತಿಹಾಸಿಕವಾದ್ದು, ಲೂಕನು ಸುವಾರ್ತೆಯನ್ನು ಯಾವಾಗ ಬರೆದನೆಂಬದು ಖಚಿತವಾಗಿ ಇರುವದಿಲ್ಲ. ಅನೇಕ ಬೈಬಲ್ ಪಂಡಿತರು ನಂಬುವದೇನಂದರೆ ಇದು ಕ್ರಿ.ಶ.65 ಮತ್ತು 70ರ ನಡುವೆ ಬರೆಯಲ್ಪಟ್ಟಿದೆ. ಇತರರು ಇದು ಆ ಕಾಲಕ್ಕಿಂತಲೂ ತಡವಾಗಿ ಬರೆಯಲ್ಪಟ್ಟಿದೆ ಎಂದು ಸೂಚಿಸುತ್ತಾರೆ.

## ಹೊರ ರೇಖೆ

ಅ. ರಕ್ಷಕನ ಬರುವಿಕೆಯ ಪ್ರಕಟಣೆ – (1:1,2;52 )
1. ಜಕರೀಯನಿಗಾದ ಪ್ರಕಟಣೆ (1:1,25)
2. ಮರಿಯಳಿಗೆ ಆದ ಪ್ರಕಟಣೆ (1:26-56)
3. ಯೋಹಾನನ ಜನನ (1:57-80)

4. ಯೇಸುವಿನ ಜನನ (1:1-20)
5. ದೇವಾಲಯದಲ್ಲಿ ಅರ್ಪಿಸುವಿಕೆ (1:21-38)
6. ಯೇಸುವಿನ ಬಾಲ್ಯ (2:39-52)

ಆ. ಯೇಸು ಕ್ರಿಸ್ತನ ಕಾಣಿಸಿಕೊಳ್ಳುವಿಕೆ (3:1, 4:13)
1. ಸ್ನಾನಿಕನಾದ ಯೋಹಾನ ಮತ್ತು ಯೇಸುವಿನ ದೀಕ್ಷಾಸ್ನಾನ (3:1-22)
2. ಯೇಸುವಿನ ವಂಶಾವಳಿ (3:23-38)
3. ಯೇಸುವಿನ ಶೋಧನೆ (4:1-13)

ಇ. ಯೇಸು ಕ್ರಿಸ್ತನ ಸೇವೆ (4:14,9:62)
1. ಯೇಸುವಿನ ಸೇವೆಯ ವಿವರಣೆ (4:14-11)
2. ಯೇಸುವಿನ ಶಕ್ತಿಯ ಆಧಾರಗಳು (5:1,6:11)
3. ಅಪೊಸ್ತಲರ ಆಯ್ಕೆ (6:12-19)
4. ಮುಖ್ಯ ಬೋಧನೆಗಳು (6:20-49)
5. ಇನ್ನು ಹೆಚ್ಚಿನ ಅದ್ಭುತಗಳು ಮತ್ತು ಬೋಧನೆಗಳು (7:1, 9:17)
6. ಯೇಸುವಿನ ಸೇವೆಯ ಉತ್ತಂಗತೆ (9:18-62)

ಈ. ಶಿಲುಬೆಗೆ ದಾರಿ (10:1, 18:30)
1. ಎಪ್ಪತ್ತು ಮಂದಿಯ ಸೇವೆ (10:1-24)
2. ಪ್ರಸಿದ್ಧ ಬೋಧನೆ (10:25, 13:21)
3. ಸಾರ್ವಜನಿಕ ವಾಗ್ವಾದದ ಪ್ರಾರಂಭ (13:22, 16:31)
4. ಶಿಷ್ಯರಿಗೆ ಸಲಹೆ ಮಾಡುವದು (17:1, 18:30)

ಉ. ಯೇಸು ಕ್ರಿಸ್ತನ ಬಾಧೆ (18:31, 23:56)
1. ಯೆರೂಸಲೇಮಿಗೆ ಮಾರ್ಗ (18:31 ;19:27)
2. ಯೆರೂಸಲೇಮಿನೊಳಗೆ ಪ್ರವೇಶ (19:28-44)
3. ಯೆರೂಸಲೇಮಿನಲ್ಲಿ ಬೋಧನೆ (19:45, 21:4)
4. ಯುಗಾಂತ್ಯದ ಕುರಿತು ಬೋಧನೆಗಳು (21:5-38)
5. ಕರ್ತನ ಭೋಜನ(22:1-38)
6. ಯೇಸುವಿನ ಬಂಧನ ಮತ್ತು ನ್ಯಾಯ ವಿಚಾರಣೆ (22:39, 23:25)
7. ಯೇಸುವಿನ ಮರಣ (23:26-49)
8. ಯೇಸುವಿನ ಹೂಣಲ್ಪಡುವಿಕೆ (23:50-56)

ಊ. ಯೇಸುಕ್ರಿಸ್ತನ ಪುನರುತ್ಥಾನ ( 24:1-53)
1. ಬರಿದಾದ ಸಮಾಧಿ (24:1-12)
2. ಎಮ್ಮಾಹುಗೆ ನಡೆದು ಹೋದದ್ದು (24:13-35)
3. ಯೇಸು ಶಿಷ್ಯರಿಗೆ ಕಾಣಿಸಿಕೊಂಡದ್ದು (24:36-43)
4. ಕೊನೆಯ ಅಪ್ಪಣೆ (24:44-49)
5. ಯೇಸುವಿನ ಆರೋಹಣ (24:50-53)

## ಅಧ್ಯಾಯ - 1

### ಪೀಠಿಕೆ – (1:1-4)

**1-2** ಯೇಸುವಿನ ಮರಣಾಂತರ ಕೆಲವು ವರ್ಷಗಳ ವರೆಗೆ ಆತನ ಜೀವನದ ದಾಖಲೆ ಮೌಖಿಕವಾಗಿ ಹರಡಿತು. ಯೇಸುವನ್ನು ನೋಡಿದ ಹಾಗೂ ಕೇಳಿದ ಪ್ರತ್ಯಕ್ಷದರ್ಶಿಗಳ ಮೂಲಕ ಅದು ಹೇಳಲ್ಪಡುತ್ತಿತ್ತು ಮತ್ತು ವಾಕ್ಯದ ಸೇವಕರಿಂದ ಅಂದರೆ ಆತನ ಶಿಷ್ಯರಿಂದ ಅದು ಸಾರಲ್ಪಡುತಿತ್ತು ತರುವಾಯ ಕೆಲವು ಜನರು ಈ ಪ್ರತ್ಯಕ್ಷದರ್ಶಿಗಳ ದಾಖಲೆಗಳನ್ನು ಬರೆದಿಡುವದಕ್ಕೆ ಪ್ರಾರಂಭಿಸಿದರು. ಉದಾಃ – ಯೇಸುವಿನ ಪ್ರಮುಖ ಶಿಷ್ಯನಾದ ಪೇತ್ರನು ತನಗೆ ಗೊತ್ತಿರುವದನ್ನು ಮಾರ್ಕನಿಗೆ ಹೇಳಿದನು. ಆಗ ಆತನು ಮಾರ್ಕನ ಸುವಾರ್ತೆಯನ್ನು ಬರೆದನು (ಮಾರ್ಕ ಪರಿಚಯ ನೋಡಿರಿ) ಆದರೆ ಬರೆದಿದ್ದೆಲ್ಲವೂ ಯೇಸುವನ್ನು ಕಣ್ಣಾರೆ ಕಂಡು, ಕಿವಿಯಾರೆ ಕೇಳಿಸಿ ಕೊಂಡವರ ಸಾಕ್ಷಿಯ ಮೇಲೆಯೇ ನೇರವಾಗಿ ಆಧಾರವಾಗಿರುತ್ತದೆ (1 ಯೋಹಾನ 1:1)

**3-4** ಲೂಕನು ಈ ಬರೆಯಲ್ಪಟ್ಟ ದಾಖಲೆಗಳನ್ನು ಪಡೆದುಕೊಂಡನು. ಯೇಸುವನ್ನು ಬಲ್ಲಂತ ಅನೇಕರೊಂದಿಗೆ ಸಹ ಮಾತನಾಡಿದನು. ಈತನು ತನ್ನ ಈ ಚರಿತ್ರೆಯನ್ನು ಥಿಯೋಪೇಲ ಎಂಬ ವ್ಯಕ್ತಿಗೆ ಬರೆದ (ಅ.ಕೃ.1:1) ಥಿಯೋಪೇಲನು ಯಾರೆಂದು ತಿಳಿದು ಬಂದಿಲ್ಲ. ಈತನು ರೋಮ ಸಾಮ್ರಾಜ್ಯದ ಅಧಿಕಾರಿಯಾಗಿ ಈ ನೂತನ ಧರ್ಮ ಅಂದರೆ ಕ್ರೈಸ್ತತ್ವದೆಡೆಗೆ ಮಮತೆ ಹೊಂದಿದ್ದನು ಎಂದು ಕೆಲವರು ನಂಬುತ್ತಾರೆ. ಥಿಯೋಪೇಲನು ಕ್ರಿಸ್ತನ ಮತ್ತು ನೂತವ ಧರ್ಮದ ಬಗ್ಗೆ ಕೆಲವು ಸಂಗತಿಗಳನ್ನು ತಿಳಿದುಕೊಂಡಿದ್ದನು. ಆತನ ತಿಳಿವಳಿಕೆ ಪರಿಪೂರ್ಣವಾಗಿರಲಿಲ್ಲ. ಬಹುಶ: ಆತನು ಕ್ರಿಸ್ತನ ಕುರಿತು ಕೆಟ್ಟ ಸಂಗತಿಗಳನ್ನು ಕೇಳಿಸಿಕೊಂಡಿದ್ದನು. ಯೆಹೂದ್ಯರು ಕ್ರಿಸ್ತನನ್ನು ಒಬ್ಬ ದುಷ್ಟನೂ ಮತ್ತು ದೂಷಕನೆಂದು ಕರೆದರು. ರೋಮಾಯರು ಆತನನ್ನು ತೊಂದರೆ ಪಡಿಸುವವನು, ಗಲಬೆಕೋರನು ಎಂದು ಕರೆದರು. ಆದುದರಿಂದ ಲೂಕನು ಥಿಯೋಪೇಲನಿಗೆ ಯೇಸುವಿನ ಒಂದು ಸತ್ಯ, ಹಾಗೂ ಕ್ರಮವಾದ ಚರಿತ್ರೆಯನ್ನು ಬರೆಯಲು ಇಚ್ಚಿಸಿದನು. ಹೀಗೆ ಥಿಯೋಪೇಲನು ತಾನು ಕೇಳಿಸಿಕೊಂಡ ಸಂಗತಿಗಳನ್ನು ಖಚಿತವಾಗಿ ತಿಳಿದುಕೊಳ್ಳುವದಾಗಿತ್ತು, ಆದರೆ ಲೂಕನು ದೇವರ ಆ ಯೋಜನೆಗೆ ಅನುಸಾರವಾಗಿ ಥಿಯೋಫೇಲನಿಗಾಗಿ ಮಾತ್ರವೇ ಬರೆಯದೆ ನಮಗಾಗಿಯೂ ಸಹ ಬರೆದನು. ನಾವು ಸಹ ಕ್ರಿಸ್ತನ ಸುವಾರ್ತೆಯ ಖಚಿತತೆಯನ್ನು ತಿಳಿಯಬಹುದು. ನಮ್ಮ ನಂಬಿಕೆಯು ನಿತ್ಯ ಪುರಾಣಗಳ ಮೇಲೆ ಆಧಾರವಾದದ್ದಲ್ಲ, ಆದರೆ ಇತಿಹಾಸದ ಮೇಲೆಯೇ ಆಧಾರವಾದದ್ದು. ಆದರೆ ಖಚಿತವಾಗಿ ತಿಳಿಯುವದು ಅಷ್ಟೇ ಸಾಲದು ಯೇಸು ಕ್ರಿಸ್ತನೇ ದೇವಕುಮಾರನು ಎಂದು ನಮ್ಮ ಹೃದಯಗಳಲ್ಲಿ ನಾವು ನಂಬಬೇಕು! ಯೇಸುವಿನಲ್ಲಿ ನಂಬಿಕೆ ಇಡುವದರ ಮೂಲಕವೇ ನಾವು ಆತನ ಹೆಸರಿನಲ್ಲಿ ಜೀವವನ್ನು ಪಡೆದುಕೊಳ್ಳಬಹುದು (ಯೋಹಾನ 20:31).

### ಸ್ನಾನಿಕನಾದ ಯೋಹಾನನ ಜನನ ಮುಂತಿಳಿಸಲ್ಪಟ್ಟಿತ್ತು (15-25)

**5-7** ಅರಸನಾದ ಹೆರೋದನ[3] ಕಾಲದಲ್ಲಿ ಜಕರೀಯನೆಂಬ ಒಬ್ಬ ಯೆಹೂದ್ಯ ಯಾಜಕನಿದ್ದನು (ಈ ಜಕರೀಯನು ಹಳೆ ಒಡಂಬಡಿಕೆಯ ಜಕರ್ಯನಲ್ಲ ಮತ್ತು ಈತನು ಮತ್ತಾಯ :23:35ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಇನ್ನೊಬ್ಬ ಪ್ರವಾದಿ ಜಕರ್ಯನು ಅಲ್ಲ. ಈತನು ಅಬೀ, ಜನವರ್ಗಕ್ಕೆ ಸೇರಿದ ಯಾಜಕನಾಗಿದ್ದನು. ಯೆಹೂದ್ಯ ಯಾಜಕರು 24 ವರ್ಗಗಳಾಗಿ ವಿಭಾಗಿಸಲ್ಪಟ್ಟಿದ್ದರು. ಅವು ಗಳಲ್ಲಿ ಅಬೀ ಅನ್ನುವದು ಎಂದಾಗಿತ್ತು (1 ಪೂ.ವೃತ್ತಾಂತ 24:10) ಜಕರೀಯನ ಹೆಂಡತಿಯಾದ ಎಲಿಸ್‌ಬೇತಳು ಸಹ ಯಾಜಕನ ಮಗಳಾಗಿದ್ದು ಆರೋನ[4] ವಂಶಕ್ಕೆ ಸೇರಿದವಳಾಗಿದ್ದನು.

ಎಲಿಸಬೇತಳು ಬಂಜೆಯಾಗಿದ್ದರಿಂದ ಅವರಿಗೆ ಮಕ್ಕಳಿರಲಿಲ್ಲ. ಒಬ್ಬ ಸ್ತ್ರೀಯು ಬಂಜೆಯಾಗಿದ್ದರೆ ಅದಕ್ಕೆ ಅವಳ ಯಾವದೋ ಪಾಪವು ಕಾರಣವೆಂದು ನಂಬುತ್ತಿದ್ದರು. ಆದರೆ ಲೂಕನ ಪ್ರಕಾರವಾಗಿ ಜಕರೀಯ ಮತ್ತು ಆತನ ಹೆಂಡತಿಗಳಿಬ್ಬರೂ ದೇವರ ದೃಷ್ಟಿಯಲ್ಲಿ ನೀತಿವಂತರಾಗಿದ್ದರು (ವ.6), ನಮಗೆ ಮಕ್ಕಳಾಗಬೇಕೆಂದು ದೇವರನ್ನು ಪ್ರಾರ್ಥಿಸಿದ್ದರು (ವ.13), ಆದರೆ ದೇವರು ಇನ್ನು ಅವರ ಮನವಿಗೆ ಉತ್ತರ ಕೊಟ್ಟಿರಲಿಲ್ಲ.

**8-10** 24 ಯಾಜಕರ ವರ್ಗಗಳಲ್ಲಿ ಪ್ರತಿಯೊಂದು ವರ್ಗಕ್ಕೆ ಪ್ರತಿವರ್ಷ ಎರಡುವಾರ ಯೆರೂಸಲೇಮಿನಲ್ಲಿಯ ಯೆಹೂದ್ಯ ದೇವಾಲಯದಲ್ಲಿ ಸೇವೆ ಮಾಡುವ ಕರ್ತವ್ಯ ಇರುತ್ತಿತ್ತು. ಪರಿಶುದ್ಧಸ್ಥಳವೆಂದು ಕರೆಯಲ್ಪಡುವ ದೇವಾಲಯದ ಒಳ ಕೋಣೆಯಲ್ಲಿ ದಿನಕ್ಕೆ ಎರಡಾವರ್ತಿ ಧೂಪವನ್ನು ಉರಿಸಲಾಗುತಿತ್ತು (ಇಬ್ರಿಯ 9:2) ಪ್ರತಿಯೊಂದು ವರ್ಗದಲ್ಲಿ ಅನೇಕ ಯಾಜಕರು ಇದ್ದುದರಿಂದ ಧೂಪವನ್ನು ಉರಿಸಲು ಪ್ರತಿದಿನ ಚೀಟು ಹಾಕುವದರ ಮೂಲಕ ಒಬ್ಬನನ್ನು ಆಯ್ಕೆ ಮಾಡಲಾಗುತ್ತಿತ್ತು (ವ.9) ಯಾಜಕರು ಪರಿಶುದ್ಧ ಸ್ಥಳದೊಳಗೆ ಧೂಪವನ್ನು ಉರಿಸುತ್ತಿರುವಾಗ ಆರಾಧನೆಗಾಗಿ ಬಂದಂತಹ ಜನರು ಹೊರಗಡೆಯಲ್ಲಿ ಕಾಯ್ದು ಕೊಳ್ಳುತ್ತಿದ್ದರು (ವ.10) ಬಳಿಕ ಧೂಪವನ್ನು ಉರಿಸಿದ ನಂತರ ಯಾಜಕನು ಹೊರಬಂದು ಜನರನ್ನು ಆಶೀರ್ವದಿಸುತ್ತಿದ್ದನು. ಈ ನಿರ್ಧಿಷ್ಟವಾದ ದಿನದಲ್ಲಿ ಧೂಪವನ್ನು ಉರಿಸಲು ಜಕರೀಯನು ಆಯ್ಕೆಗೊಂಡಿದ್ದನು.

**11-13** ಜಕರೀಯನು ಪರಿಶುದ್ಧ ಸ್ಥಳದಲ್ಲಿ ಇರುವಾಗ ಒಬ್ಬ ದೇವದೂತನು ಕಾಣಿಸಿಕೊಂಡು ಅವನಿಗೆ ನೀನು ಮತ್ತು ನಿನ್ನ ಹೆಂಡತಿಯಾದ ಎಲಿಸ್‌ಬೇತಳಿಗೆ ಒಬ್ಬ ಮಗನು ಹುಟ್ಟುವನೆಂದು ತಿಳಿಸಿದನು. ಅವರು ಆತನಿಗೆ ಯೋಹಾನನೆಂದು ಹೆಸರಿಡಬೇಕು. ಆ ಹೆಸರಿಗೆ ದೇವರು ಕೃಪೆಯುಳ್ಳವನೆಂದರ್ಥ.

**14-15** ಯೋಹಾನನು ಕರ್ತನ ದೃಷ್ಟಿಯಲ್ಲಿ ಮಹಾ ಪು ರುಷನು ಆಗುವನು, ಎಂದು ದೇವದೂತನು ತಿಳಿಸಿದನು. ಸ್ನಾನಿಕನಾದ ಯೋಹಾನನು ನಿಜವಾಗಿಯೂ ಮಹಾ ಪು ರುಷನಾಗಿದ್ದನು. ಯೇಸು ಹೇಳಿದ್ದೇನಂದರೆ ಆತನ ಕಾಲದಲ್ಲಿ ಸ್ತ್ರೀ ಯೊಳಗೆ ಹುಟ್ಟಿದವರಲ್ಲಿ ಯೋಹಾನನಗಿಂತ ಶ್ರೇಷ್ಟನಾದವನು ಮತ್ತೊಬ್ಬನಿಲ್ಲ ಎಂದು ಹೇಳಿದನು (ಮತ್ತಾಯ 11:11) ಯೋಹಾನನು ಪವಿತ್ರಾತ್ಮನಿಂದ ತುಂಬಿಸಲ್ಪಡುವನೆಂದು ಸಹ ದೇವದೂತನು ಹೇಳಿದನು. ಹಳೆ ಒಡಂಬಡಿಕೆಯಲ್ಲಿ ದೇವರ ಪವಿತ್ರಾತ್ಮನು ದೇವ ಜನರು ವಿಶೇಷ ಗುರಿಯನ್ನು ಸಾಧಿಸುವತನಕ ಮಾತ್ರವೇ ಕ್ಲುಪ್ತಕಾಲ ಅವರ ಮೇಲೆ ಇರುತ್ತಿತ್ತು. ಆದರೆ ಯೋಹಾನನ ವಿಷಯದಲ್ಲಾದರೂ ಪವಿತ್ರಾತ್ಮನು ಹುಟ್ಟಿದಂದಿನಿಂದಲೇ ಅವನಲ್ಲಿ ತುಂಬಿತ್ತು (ವ.15). ಮತ್ತು ಯಾವಾಗಲೂ ಅವನೊಂದಿಗೆ ನೆಲೆಯಾಗಿತ್ತು.

**16** ಯೋಹಾನನು ಇಸ್ರಾಯೇಲರಲ್ಲಿ ಅನೇಕರನ್ನು ದೇವರಾದ ಕರ್ತನ ಕಡೆಗೆ ತಿರುಗಿಸುವನೆಂದು ದೇವದೂತರು ಹೇಳಿದರು. ಅಂದರೆ ಪಾಪಗಳ ಕ್ಷಮಾಪಣೆಗಳಿಗಾಗಿ ಪಶ್ಚಾತಾಪದ ದೀಕ್ಷಾಸ್ನಾನದ ಕುರಿತು ಬೋಧಿಸುವದರ ಮೂಲಕ ಅನೇಕ ಯೆಹೂದ್ಯರನ್ನು ದೇವರ ಕಡೆಗೆ ತಿರುಗಿಸುವನು (ಮಾರ್ಕ 1:4). ಮತ್ತು ನಿಜವಾಗಿಯೂ ಯೋಹಾನನ ಮುಖ್ಯ ಕಾರ್ಯಗಳಲ್ಲಿ ಯೆಹೂದ್ಯರು ತಮ್ಮ ಪಾಪಗಳಿಗಾಗಿ ಪಶ್ಚಾತಾಪ ಪಟ್ಟು ದೇವರ ಕಡೆಗೆ ತಿರಿಗಿಕೊಳ್ಳಲು ಪ್ರಬೋಧಿಸುವದು ಮುಖ್ಯ ಕಾರ್ಯವಾಗಿತ್ತು.

**17** ಅವನು ಸಿದ್ದವಾದ ಜನವನ್ನು ಕರ್ತನಿಗೆ ಒದಗಿಸುವನು. ಯೋಹಾನನ ಇನ್ನೊಂದು ಪ್ರಮುಖ ಕೆಲಸವೇನೆಂದರೆ, ಯೆಹೂದ್ಯರು ಅವರ ಮೆಸ್ಸಿಯನಾದ [5]ಅಂದರೆ ಅವರ ರಕ್ಷಕನಾದ ಕರ್ತನನ್ನು, ಕ್ರಿಸ್ತನನ್ನು ಸ್ವೀಕರಿಸುವಂತೆ ಅವರನ್ನು ಸಿದ್ದಗೊಳಿಸುವದಾಗಿತ್ತು. ಅಂದರೆ ಕರ್ತನಿಗಾಗಿ ಜಗವನ್ನು ಸಿದ್ದ ಪಡಿಸುವದಾಗಿತ್ತು. ಯೋಹಾನನು ಇದನ್ನು ಎಲೀಯನ ಗುಣ ಮತ್ತು ಶಕ್ತಿಗಳಿಂದ ಕೂಡಿದವನಾಗಿ ಮಾಡುವನೆಂದು ದೇವದೂತನು ಹೇಳಿದನು.. ಎಲೀಯನು ಹಳೆ ಒಡಂಬಡಿಕೆಯ ಶ್ರೇಷ್ಠ ಪ್ರವಾದಿಯಾಗಿದ್ದು ಅವನು ಒಂದು ದಿನ ಭೂಮಿಗೆ ತಿರಿಗಿ ಬರುವನೆಂದು ಜನರು ನಿರೀಕ್ಷಿಸಿದ್ದರು. (ಮಲಾಕಿ 4:5, ಮತ್ತಾಯ 11:13-15 ಮತ್ತು ವ್ಯಾಖ್ಯಾನ ನೋಡಿರಿ). ಯೋಹಾನನು ತಂದೆಯ ಹೃದಯಗಳನ್ನು ಮಕ್ಕಳ ಕಡೆಗೆ ತಿರಿಗಿಸುವನು. ಪ್ರಸ್ತುತ ಯೆಹೂದ್ಯ ಜನಾಂಗ ಮಕ್ಕಳಾಗಿದ್ದರು ಮತ್ತು ಅವರ ಪೂರ್ವಜರು ತಂದೆಗಳಾಗಿದ್ದರು.ಯೆಹೂದ್ಯರ ಪ್ರಸ್ತುತ ಜನಾಂಗವನ್ನು ಪಶ್ಚಾತಾಪಕ್ಕೆ ನಡೆಸುವದರ ಮೂಲಕ ಯೋಹಾನನು ಒಂದುಅರ್ಥದಲ್ಲಿ ಅವರ ನೀತಿವಂತರಾದ ಪೂರ್ವಜರನ್ನು ತೃಪ್ತಿಪಡಿಸುವವನಾಗುವನು. ಪ್ರಸ್ತುತ ಜನಾಂಗಗಳ ಕುಟುಂಬದೊಳಗೆ ಸಂಧಾನಗಳು ಜರುಗುವವೆಂದು ಸಹ ಲೂಕನಅರ್ಥವಾಗಿದೆ. ಮಕ್ಕಳು ಪಶ್ಚಾತಾಪಪಡುವಾಗ ಹೆತ್ತವರು ಅವರೆಡೆಗೆ ಕ್ಷಮಾಪಣೆಯೊಂದಿಗೆ ತಿರಿಗಿಕೊಳ್ಳುವರು ಯೋಹಾನನು ಹಟಹಿಡಿದವರನ್ನು ನೀತಿವಂತರ ಜ್ಞಾನದ ಕಡೆಯವರೆಗೂ ತಿರಿಗಿಸುವನು– ಅಂದರೆ, ಯೆಹೂದ್ಯರ ಪ್ರಸ್ತುತ ಹಟಮಾರಿ ಜನಾಂಗವು ಪಾಪದಿಂದ ತಿರಿಗಿಕೊಂಡು ಪು ನಃ ದೇವರಿಗೆ ಭಯಪಟ್ಟು ವಿಧೇಯರಾಗುವದಕ್ಕೆ ಪ್ರಾರಂಭಿಸುವಂತೆ ಮಾಡುವನು. ದೇವರ ಭಯವೇ ಜ್ಞಾನದ ಪ್ರಾರಂಭ (ಜ್ಞಾನೋಕ್ತಿ 1:7).

**18-20** ಜಕರೀಯನು ತನಗೆ ದೇವದೂತನು ಹೇಳಿದ್ದನ್ನು ಸಂಶಯಿಸಿದನು "ನಾನು ನಿನ್ನನ್ನು ಹೇಗೆ ನಂಬಲಿ?" ಎಂದು ಕೇಳಿದನು. ದೇವದೂತನು ಅವನಿಗೆ "ನಾನು ದೇವರ ಸನ್ನಿಧಿಯಲ್ಲಿ ನಿಲ್ಲುವ ಗಬ್ರಿಯೇಲನು ಆದುದರಿಂದ ನಾನು ಮಾತಾಡಿದ್ದೆಲ್ಲವೂ ಸತ್ಯವಾಗಿದೆ" ಅಂದನು. ಗಬ್ರಿಯೇಲನು ದೇವರ ಮುಖ್ಯದೂತನಾಗಿದ್ದಾನೆ ಆತನು ದೇವರ ದೇವದೂತರುಗಳಲ್ಲಿ ಅತಿ ಶ್ರೇಷ್ಟನಾದ ದೇವದೂತನಾಗಿದ್ದಾನೆ (ದಾನಿಯೇಲ 18:15-16, 20:23). ದೇವದೂತರ ದೇವರ ಸನ್ನಿಧಿಯಲ್ಲಿ ನಿಲ್ಲುತ್ತಾರೆ (ಮತ್ತಾಯ 18:10, ಪ್ರಕಟಣೆ 5:11) ಮತ್ತು ಆತನ ಅಪ್ಪಣೆಗಳನ್ನು ನೆರವೇರಿಸುತ್ತಾರೆ (ಇಬ್ರಿಯ 1:15) ದೇವದೂತನನ್ನು ನಂಬದಿರುವದೆಂದರೆ ದೇವರನ್ನೇ ನಂಬದಿರುವ ಹಾಗಿರುತ್ತದೆ.

ನಾನು ಇದನ್ನು ಯಾತರಿಂದ ತಿಳಿದುಕೊಳ್ಳಲಿ? ಎಂದು ಜಕರೀಯನು ಕೇಳಿದನು (ವ.15) ಅವನಿಗೊಂದು ಗುರುತು ಬೇಕಾಗಿತ್ತು ಆದ್ದರಿಂದ ದೇವದೂತನು ಅವನಿಗೊಂದು "ಗುರುತು" ನೀಡಿದನು! ಆತನ ಅವಿಶ್ವಾಸಕ್ಕೆ ಶಿಕ್ಷೆಯಾಗಿ ಮಾತನಾಡದೆ ಮೂಖನಾಗಿರುವಂತೆ ಮಾಡಿದನು.

**21-25** ಜಕರೀಯನು ದೀಪವನ್ನು ಉರಿಸಿದ ನಂತರ ಪರಿಶುದ್ಧ ಸ್ಥಳದಿಂದ ಹೊರ ಬಂದಾಗ ಅತನು ಯಥಾ ರೀತಿಯಾಗಿ ಮಾಡುತ್ತಿದ್ದಂತೆ ಮಾತನಾಡಲು, ಆಶೀರ್ವಧಿಸಲು ಆಗಿಲಿಲ್ಲ. ತರುವಾಯ ದೇವಾಲಯದಲ್ಲಿ ಆತನ ಸೇವೆಯ ಅವದಿ ಮುಗಿದ ಮೇಲೆ ಮನೆಗೆ ಹಿಂತಿರುಗಿದನು ಮತ್ತು ಆತನ ಹೆಂಡತಿ ಗರ್ಭಿಣಿಯಾದಳು. "ಕರ್ತನು——ನನ್ನ ಅವಮಾನವನ್ನು ಪರಿಹರಿಸಿದ್ದಾನಲ್ಲ. ಎಂದು ಅವಳು ಹೇಳಿದಳು (ವ.25) ಒಬ್ಬ ಸ್ತ್ರೀಯು ಮಕ್ಕಳನ್ನು ಹಡೆಯಲು ವಿಫಲಳಾದರೆ ಒಂದು ಅವಮಾನವೆಂದು ಯೆಹೂದ್ಯರು ಪರಿಗಣಿಸಿದ್ದರು. (ಆದಿಕಾಂಡ 30:22-23)

## ಯೇಸುವಿನ ಜನನವು ಮುಂತಿಳಿಸಲ್ಪಟ್ಟಿದ್ದು (1:26-38)

**26-28** ಎಲಿಸ್‌ಬೇಥಳ ಗರ್ಭದಾರಣೆಯ ಒನೇತಿಂಗಳಲ್ಲಿ ನಜರೇತ ಪಟ್ಟಣದಲ್ಲಿ ವಾಸವಾಗಿದ್ದ ಮರಿಯಳೆಂಬ ಕನ್ನಿಕೆಯ ಬಳಿಗೆ ಗಬ್ರಿಯೇಲನೆಂಬ ದೇವದೂತನು ದೇವರಿಂದ ಕಳಿಸಲ್ಪಟ್ಟನು. ಅವಳಿಗೆ ಮದುವೆಯ ನಿಶ್ಚಿತಾರ್ಥವಾಗಿತ್ತು. ಆ ಸಮಯದಲ್ಲಿ ಅವಳು ಪು ರುಷನನ್ನು ಅರಿಯದವಳಾಗಿದ್ದಳು.

**29-32** ದೇವದೂತರು ಮರಿಯಳಿಗೆ ಅವಳು ಒಬ್ಬ ಮಗನನ್ನು ಹಡೆಯುವಳು ಮತ್ತು ಆತನಿಗೆ ಯೇಸು ಎಂದು ಹೆಸರಿಡತಕ್ಕದ್ದು, ಆ ಹೆಸರಿಗೆ "ರಕ್ಷಕನು" ಎಂದರ್ಥ ಎಂಬದಾಗಿ ತಿಳಿಸಿದನು. ಈ ಮಗನು ಪರಾತ್ಪರನ ಕುಮಾರನೆನಿಸಿಕೊಳ್ಳುವನು, ಅಂದರೆ ದೇವರ ಕುಮಾರನು ಎಂಬುದಾಗಿ, ಇವನು ಯೆಹೂದ್ಯರ ಮಹಾ ಅರಸನಾದ ದಾವೀದನ ಸಿಂಹಾಸನವನ್ನು ಭಾಗ್ಯವಾಗಿ ಹೊಂದುವನು. (ಮತ್ತಾಯ 1:1 ಮತ್ತು ವ್ಯಾಖ್ಯಾನ ನೋಡಿರಿ). ಇದರ ಮೂಲಕ ಯೇಸುವಿನ ತಾಯಿಯಾದ ಮರಿಯಳು ದಾವೀದನ ವಂಶದವಳೆಂದು ನಮಗೆ ತಿಳಿದುಬರುತ್ತದೆ. ಮರಿಯಳೊಂದಿಗೆ ನಿಶ್ಚಿತಾರ್ಥವಾಗಿದ್ದ ಯೋಸೇಫ ಎಂಬುವವನು ಸಹ ದಾವೀದನ ವಂಶಸ್ಥನಾಗಿದ್ದನು (ವ.27ನ್ನು ನೋಡಿರಿ).

**33** ಯೇಸು ಯಾಕೋಬನ ವಂಶವನ್ನು ಸದಾಕಾಲ ಆಳುವನು ಸಹ ಎಂದು ದೇವದೂತನು ಹೇಳಿದನು. ಯಾಕೋಬ ವಂಶವು ಯೆಹೂದ್ಯ ರಾಷ್ಟ್ರವಾದ 'ಇಸ್ರಾಯೇಲ ಆಗಿದೆ. ಯೇಸು ಕ್ರಿಸ್ತನು ಒಂದು ನೂತನ ಆತ್ಮೀಕ ಇಸ್ರಾಯೇಲಿನ ಮೇಲೆ ಅಂದರೆ ಸಭೆಯ ಮೇಲೆ ಆಳುವನು ಆತನ ರಾಜ್ಯವು ಒಂದು ಆತ್ಮೀಕ ರಾಜ್ಯವಾಗಿರುವದು. ಆದುದರಿಂದ ಅದು ಶಾಶ್ವತವಾಗಿ ಉಳಿಯುವದು (2 ಸಮುವೇಲ 7:12-13 ಕೀರ್ತನೆಗಳು 89:3-4)

**34** ಮರಿಯಳು ಇದು ಹೇಗಾದೀತು? ಎಂದು ಕೇಳಿದಳು. "ನಾನು ಅದನ್ನು ಹೇಗೆ ತಿಳಿಯುವೆ"? ಎಂದು ಜಕರೀಯನು ಕೇಳಿದಂತೆ ಅವಳು ಕೇಳಲಿಲ್ಲ. ಆತನ ಪ್ರಶ್ನೆಯು ಅವಿಶ್ವಾಸದಿಂದ ಹೊಮ್ಮಿತು. ಅವಳ ಪ್ರಶ್ನೆಯು ಯಾವ ವಿಧದಲ್ಲಿ ದೇವರು ಈ ಮಹಾ ಅದ್ಭುತವನ್ನು ಯಾವ ರೀತಿಯಲ್ಲಿ ಮಾಡುವನೆಂಬುದನ್ನು ತಿಳಿಯುವ ಬಯಕೆಯಿಂದ ಹೊಮ್ಮಿತು.

**35** ನಂತರ ದೇವದೂತರು ಮರಿಯಳಿಗೆ ಆಕೆಯ ಮಗನು ಮಾನವ ತಂದೆಯಿಂದ ಹುಟ್ಟುವದಿಲ್ಲ. ದೇವರ ಆತ್ಮನಿಂದಲೇ ಎಂದು ಹೇಳಿದನು. ಯೇಸು ನಿಜವಾಗಿಯೂ ದೇವರ ಮಗನಾಗಿರುವನು (ಮತ್ತಾಯ 1:18 ಮತ್ತು ವ್ಯಾಖ್ಯಾನ ನೋಡಿರಿ). ಮರಿಯಳ ಗರ್ಭದಾರಣೆಯ ಕುರಿತು ಯೋಸೆಫನಿಗೆ ತಿಳಿದು ಬಂದಾಗ ಆತನು ಅವಳನ್ನು ಬಿಟ್ಟು ಬಿಡಲು ತೀರ್ಮಾನಿಸಿದನು (ಮತ್ತಾಯ 1:19). ಆದರೆ ಒಬ್ಬ ದೇವದೂತನು ಅವನೊಂದಿಗೆ ಸಹ ಮಾತನಾಡಿ ಮರಿಯಳಿಗೆ ತ್ಯಾಗ ಪತ್ರ ನೀಡಬಾರದು ಯಾಕೆಂದರೆ, ಅವಳು ಇನ್ನೊಬ್ಬ ಪು ರುಷನಿಂದ ಗರ್ಭಿಣಿಯಾಗಿಲ್ಲ. ಆದರೆ ಪವಿತ್ರಾತ್ಮನಿಂದಲೇ ಆಗಿದ್ದಾಳೆ ಎಂದು ಹೇಳಿದನು (ಮತ್ತಾಯ 1:20-21, 24:25 ಮತ್ತು ವ್ಯಾಖ್ಯಾನ ನೋಡಿರಿ).

**36-38** ತರುವಾಯ ದೇವದೂತನು ಮರಿಯಳಿಗೆ ಹೇಳಿದ್ದೇ ತಡ ಗರ್ಭಧಾರಣೆಯ ಕುರಿತಾಗಿ ಹೇಳಿದನು. ಎಲಿಸ್‌ಬೇಥಳು ಮರಿಯಳ ತಾಯಿಯ ಕಡೆಯಿಂದ ಅವಳ ಸಂಬಂಧಿಯಾಗಿದ್ದಳು. ಮರಿಯಳು ಸಂಶಯ ಪಡದಿರಲಿ, ದೇವರು ಎಲಿಸ್‌ಬೇಥಳಂತ ವೃದ್ಧ ಬಂಜೆಗೆ ಮಗುವನ್ನು ಕೊಡುವದಾದರೆ ಆತನು ಒಬ್ಬ ಕನ್ನೆಗೂ ಸಹ ಮಗುವನ್ನು ಕೊಡಬಲ್ಲನು (ಆದಿಕಾಂಡ 18:10-14 ಮಾರ್ಕ 10:27)

## ಮರಿಯಳು ಎಲಿಸ್‌ಬೇಥಳನ್ನು ಸಂದಿಸುತ್ತಾಳೆ (1:39-45)

**39-40** ಮರಿಯಳು ಎಲಿಸ್‌ಬೇಥಳ ಗರ್ಭದ ಬಗ್ಗೆ ಕೇಳಿದಾಗ ಯೆರೂಸಲೇಮಿನ ದಕ್ಷಿಣಕ್ಕೆ ಇರುವ ಯೂದಾ (ಯೂದಾಯ ಪ್ರಾಂತ್ಯ) ಎಂಬಲ್ಲಿನ ಆಕೆಯ ಮನೆಗೆ ಸಂಧಿಸಲು ಹೋದಳು.

**41-44** ಎಲಿಸ್‌ಬೇಥಳು ಮರಿಯಳನ್ನು ಕಂಡಾಗ ಅವಳು ಪವಿತ್ರಾತ್ಮನಿಂದ ಭರಿತಳಾಗಿ ಮರಿಯಳು ರಕ್ಷಕನಾದ ಮೆಸ್ಸೀಯನ ತಾಯಿಯಾಗುವಳೆಂದು ತಕ್ಷಣವೇ ಅರಿತುಕೊಂಡಳು. ಅವಳು ಮರಿಯಳನ್ನು ಕರ್ತನತಾಯಿ ಎಂದು ಕರೆದಳು (ವ.43) ದೇವದೂತನು ಒಂದು ಗುರುತಾಗಿ ಮರಿಯಳಿಗೆ ಹೇಳಿದ್ದು ಸತ್ಯವೇ ಆಗಿತ್ತು, ಎಲಿಸ್‌ಬೇಥಳ ಕೂಸು ಅವಳ ಗರ್ಭದಲ್ಲಿ ಉಲ್ಲಾಸದಿಂದ ಹಾರಾಡಿತು.

**45** ದೇವರು ಹೇಳಿದ ಮಾತು ನೆರವೇರುತ್ತದೆಂದು ಮರಿಯಳು ನಂಬಿದ್ದಕ್ಕಾಗಿ ಎಲಿಸ್‌ಬೇಥಳು ಅವಳನ್ನು ಆಶೀರ್ವಧಿಸುತ್ತಾಳೆ

## ಮರಿಯಳ ಗೀತೆ (1:46-56)

**46-47** ಮರಿಯಳು ಎಲಿಸ್‌ಬೇಥಳ ಮಾತುಗಳನ್ನು ಕೇಳಿದಾಗ ಸಾಮಾನ್ಯ ಹಳ್ಳಿಯ ಸ್ತ್ರೀಯಾದ ಅವಳನ್ನು ದೇವ ಕುಮಾರನು, ಕ್ರಿಸ್ತನಾದ ಮೆಸ್ಸಿಯನ ತಾಯಿಯಾಗಿರುವಂತೆ, ತನ್ನನ್ನು ಆರಿಸಿಕೊಂಡಿದ್ದಕ್ಕಾಗಿ ದೇವರನ್ನು ಕೊಂಡಾಡುತ್ತಾಳೆ (1 ಕೊರಿಂಥ 26:29 ಮತ್ತು ವ್ಯಾಖ್ಯಾನ ನೋಡಿರಿ). ಯಾವ ಸ್ತ್ರೀಯು ಎಂದಿಗೂ ಇಂಥಹ ಶ್ರೇಷ್ಟ ಗೌರವವನ್ನು ಪಡೆದಿರಲಿಲ್ಲ. ಅವಳು ದೇವರನ್ನು ರಕ್ಷಕನೆಂದು ಕರೆದಳು. ಯಾಕಂದರೆ ಗರ್ಭದಲ್ಲಿದ್ದ ತನ್ನ ಮಗನ ಮೂಲಕ ಆತನಲ್ಲಿ ನಂಬಿಕೆ ಇಡುವ ಎಲ್ಲರನ್ನು ರಕ್ಷಿಸುತ್ತಾನೆ ಎಂಬುದಕ್ಕಾಗಿ (1 ತಿಮೋಥಿ 2:3)

**50-56** ಬಳಿಕ ಮರಿಯಳು ದೇವರನ್ನು ತನ್ನ ಸೇವಕನಾದ ಇಸ್ರಾಯೇಲ ಅಂದರೆ ಯೆಹೂದ್ಯ ಜನಾಂಗ ದೆಡೆಗೆ ತೋರಿದ ಆತನ ಕರುಣೆಗಾಗಿ ಅತನನ್ನು ಕೊಂಡಾಡುತ್ತಾಳೆ (ವ.54 - 55) ಮುಖ್ಯವಾಗಿ ಅಬ್ರಹಾಮನಿಗೂ ಅವನ ವಂಶದವರಿಗೂ ತಾನು ವಾಗ್ದಾನ ಮಾಡಿದ್ದನ್ನು ಆಕೆಯ ಮಗನಾದ ಯೇಸುವಿನ ಮೂಲಕ ನೆರವೇರಿಸುವಿಕೆಯಲ್ಲಿನ ಆತನ ಕರುಣೆಗಾಗಿ ಕೊಂಡಾಡುತ್ತಾಳೆ (ಆದಿಕಾಂಡ 17:7, 22:17) ಅಬ್ರಹಾಮನು ಯೆಹೂದ್ಯ ಜನಾಂಗದ ಪಿತೃವಾಗಿದ್ದನು. ದೇವರು ತನ್ನನ್ನು ಭಯ ಭಕ್ತಿಯುಳ್ಳವರಿಗೆ ಯಾವಾಗಲು ದಯೆ ತೋರಿಸುವನು (ವ.50). ಆತನು ಸೊಕ್ಕಿದ ಮನಸುಳ್ಳವರನ್ನು ತಳ್ಳಿಬಿಟ್ಟು

ದೀನರನ್ನು ಉನ್ನತ ಸ್ಥಿತಿಗೆ ತರುತ್ತಾನೆ (ವ.51-52. ದೇವರು ಗರ್ವಿಷ್ಟರನ್ನು ಎದುರಿಸುತ್ತಾನೆ. ಆದರೆ ದೀನರಿಗೆ ಕೃಪೆ ತೋರಿಸುತ್ತಾನೆ (ಜ್ಞಾನೋಕ್ತಿಗಳು 3:34 ಮತ್ತು ಯಾಕೋಬ 4:6). ಆತನು ಬಡವರಿಗೆ ಸಹಾಯ ಮಾಡುತ್ತಾನೆ. ಆದರೆ ಸ್ಥಿತಿವಂತರನ್ನು ಬರಿಗೈಯಲ್ಲಿ ಕಳುಹಿಸುತ್ತಾನೆ (ವ.53) ಮತ್ತು ಈಗ ಮರಿಯಳ ಮೂಲಕ ತನ್ನ ಸ್ವಂತ ಮಗನನ್ನು ಲೋಕದ ಜನರ ರಕ್ಷಣೆಗಾಗಿ ಕಳುಹಿಸುವದರ ಮೂಲಕ ದೇವರು ಲೋಕಕ್ಕೆ ತನ್ನ ಅತೀ ಶ್ರೇಷ್ಟ ಕೃಪೆ ಮತ್ತು ಪ್ರೀತಿಯನ್ನು ತೋರಿಸಲಿದ್ದನು (ಯೋಹಾನ 3:16 ಮತ್ತು ವ್ಯಾಖ್ಯಾನ ನೋಡಿರಿ). ಅಂತಹ ದೇವರನ್ನು ಮರಿಯಳು ಸ್ತುತಿಸದಿರಲು ಹೇಗೆ ಸಾದ್ಯ? ನಾವು ಸಹ ಆತನನ್ನು ಸ್ತುತಿಸದೇ ಇರುವದು ಹೇಗೆ?

## ಸ್ನಾನಿಕನಾದ ಯೋಹಾನನ ಜನನ (1:57-66)

**57-60** ಯೆಹೂದ್ಯರ ಎಲ್ಲಾ ಗಂಡು ಮಕ್ಕಳಿಗೆ ಹುಟ್ಟಿದ ಎಂಟನೆಯ ದಿನದಲ್ಲಿ ಸುನ್ನತಿ ಮಾಡಲ್ಪಡುತ್ತಿತ್ತು (ಆದಿಕಾಂಡ 17:12, ಯಾಜಕ ಕಾಂಡ 12:3). ಸಾಮಾನ್ಯವಾಗಿ ಯೆಹೂದ್ಯ ಮಕ್ಕಳಿಗೆ ಹುಟ್ಟಿದಾಗಲೇ ತಂದೆಯು ಹೆಸರಿಡುತ್ತಿದ್ದನು. ಆದರೆ ಜಕರೀಯನು ದೇವದೂತನಾದ ಗಬ್ರಿಯೇಲನನ್ನು ನೋಡಿದ ಕಾಲದಿಂದ ಮೂಕನೂ, ಕಿವು ಡನೂ ಆಗಿದ್ದನು (ವ.20) ಆಗ ಎಲಿಸ್‌ಬೇಥಳು ದೇವದೂತನ ಆಜ್ಞೆಗೆ ವಿಧೇಯಳಾಗಿ ಆತನಿಗೆ ಯೋಹಾನನೆಂದು ಹೆಸರಿಡಬೇಕು ಅಂದಳು.

**61-63** ಮಗುವಿನ ಹೆಸರು ಯೋಹಾನನೆಂದು ಜಕರೂಯನು ದೃಡಪಡಿಸಿದನು.

**64-66** ಜಕರೀಯನು ಆತನ ಹೆಸರು "ಯೋಹಾನನೆಂತಲೇ" ಎಂದು ಬರೆದ ಕೂಡಲೆ ಅವನಿಗೆ ಮಾತು ಬಂದಿತು. ಸುನ್ನತಿಯ ಕಾರ್ಯಕ್ರಮಕ್ಕೆ ಬಂದಿದ್ದ ಸ್ನೇಹಿತರು ನೆರೆಹೊರೆಯವರಿಗೆ ಭಯವೂ, ಆಶ್ಚರ್ಯವು ಆಯಿತು. ಆತನ ಜನನದಲ್ಲಾದ ಆಶ್ಚರ್ಯಕರ ಸನ್ನಿವೇಶಗಳ ಕಾರಣದಿಂದ ದೇವರು ಯೋಹಾನನಿಗೆ ಒಂದು ವಿಶೇಷಕಾರ್ಯವನ್ನು ಕೊಟ್ಟಿದ್ದಾನೆಂದು ಅವರು ನಂಬಿದರು. (ಜಕರೀಯನ ಗೀತೆ 1:67-80).

**67** ಬಳಿಕ ಜಕರೀಯನು ಪವಿತ್ರಾತ್ಮನಿಂದ ತುಂಬಿದವನಾಗಿ ಪ್ರವಾದಿಸಿದನು. ಹಳೆ ಒಡಂಬಡಿಕೆಯ ಪ್ರವಾದಿಗಳು ಪ್ರವಾದಿಸಿದಾಗಲೆಲ್ಲಾ ಪವಿತ್ರಾತ್ಮನ ಶಕ್ತಿಯ ಮೂಲಕವೇ ಪ್ರವಾದಿಸಿದರು. ಅಂದರೆ ಸ್ವತಃ ದೇವರು ಅವರ ಬಾಯಿ ಮತ್ತು ಬರಹಗಳ ಮೂಲಕ ಮಾತನಾಡಿದನು (2 ಪೇತ್ರ 1:19-21 ಮತ್ತು ವ್ಯಾಖ್ಯಾನ ನೋಡಿರಿ). ಕ್ರಿಸ್ತನ ಮರಣ ಮತ್ತು ಪು ನರುಥ್ಥಾನದ ನಂತರ ಶಿಷ್ಯರ ಮೇಲೆ ಪವಿತ್ರಾತ್ಮನು 8 ಇಳಿದು ಬಂದು ಅವರೊಂದಿಗೆ ನೆಲೆಸಿದನು. ಯೇಸು ಅವರಿಗೆ "ಪವಿತ್ರಾತ್ಮನು ನಿಮ್ಮೊಂದಿಗೆ ಜೀವಿಸಿ ನಿಮ್ಮಲ್ಲಿ ಇರುವನು" ಎಂದು ಹೇಳಿದನು (ಯೋಹಾನ 14:17) ಕ್ರೈಸ್ತರಿಗೆ ಪವಿತ್ರಾತ್ಮನು ವಿಶೇಷ ಸಮಯಗಳಲ್ಲಿಯೇ ಬರುವದಿಲ್ಲ. ಪವಿತ್ರಾತ್ಮನು ನಿರಂತರವಾಗಿ ಪ್ರತಿಯೊಬ್ಬ ವಿಶ್ವಾಸಿಯಲ್ಲಿ ಜೀವಿಸುತ್ತಾನೆ (1 ಕೊರಿಂಥ 6-19).

**68-69** ಜಕರೀಯನು ತನ್ನ ಮಗನು ಕರ್ತನಿಗಾಗಿ ಜನರನ್ನು (ಯೆಹೂದ್ಯರನ್ನು ಸಿದ್ದ ಮಾಡುವದಕ್ಕಾಗಿ ಸೇಮಿಸಲ್ಪಟ್ಟಿದ್ದಾನೆಂದು) ತಿಳಿದವನಾಗಿದ್ದನು (ವ.17). ಕರ್ತನು ಈಗ ಮರಿಯಳ ಗರ್ಭದಲ್ಲಿದ್ದಾನೆಂದು ಅವನಿಗೆ ಗೊತ್ತಿತ್ತು. ಆದುದರಿಂದ ದೇವರು ತನ್ನ ಪ್ರಜೆಯನ್ನು ಪರಾಮರಿಸಿ ಬಿಡುಗಡೆಯನ್ನುಂಟು ಮಾಡಿದ್ದಕ್ಕಾಗಿ ಆತನ್ನು ಕೊಂಡಾಡಿದನು. (ವ.68) ದೇವರು ವಿಮೋಚಕನಾದ ಮೆಸ್ಸಿಯನನ್ನು ಭೂಮಿಗೆ ಕಳುಹಿಸಿದ್ದನು. ಜಕರೀಯನು ಅವನನ್ನು ರಕ್ಷಣ ವೀರ[8]. ಕೊಂಬು, (ವ.69) ರಕ್ಷಕ ದಾವೀದನ ಮನೆತನದವನು ಎಂದು ಕರೆದನು. ರಕ್ಷಕನು ತನ್ನ ಜನರನ್ನು ಬಿಡಿಸಲು ಅಂದರೆ ಅವರ ಪಾಪಗಳಿಗಾಗಿ ಈಡು ಕೊಟ್ಟು ದೇವರೊಂದಿಗೆ ಸಂಧಾನ ಮಾಡುವದಕ್ಕಾಗಿ ಬಂದನು.

**70** ದೇವರು ಹಳೆ ಒಡಂಬಡಿಕೆಯಲ್ಲಿ ತನ್ನ ಪ್ರವಾದಿಗಳ ಮುಲಕ ಅಂಥಹ ಒಬ್ಬ ರಕ್ಷಕನನ್ನು ಕಳುಹಿಸುವೆನೆಂದು ಹೇಳಿದ್ದನು. ಈಗ ಈ ಪ್ರವಾದನೆಗಳು ನೆರವೇರಿದ್ದವು.

**71** ರಕ್ಷಕನಾದ ಮೆಸ್ಸಿಯನು, ಬಂದು ತಮ್ಮನ್ನು ವೈರಿಗಳಿಂದ ಬಿಡಿಸುವನೆಂದು ಯೆಹೂದ್ಯರು ನಂಬಿದ್ದರು. ಯೇಸುವಿನ ಕಾಲದಲ್ಲಿ ಇಸ್ರಾಯೇಲವು ರೋಮ ಸಾಮ್ರಾಜ್ಯದ ಹತೋಟಿಯಲ್ಲಿ ಸಿಕ್ಕಿಕೊಂಡಿತ್ತು. ಅವರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದರು. ಅವರು ಹಿಂಸೆಗೊಳಗಾದ ಜನರಾಗಿದ್ದರು ಆದುದರಿಂದ ಮೆಸ್ಸಿಯನು ಬಂದು ಅವರ ವೈರಿಗಳಾದ ರೋಮಾಯರಿಂದ ರಕ್ಷಿಸುವನೆಂದು ಎದುರು ನೋಡುತ್ತಿದ್ದರು.

**72** ದೇವರು ಯೆಹೂದ್ಯರಿಗೆ ಕರುಣೆ ತೋರಿಸುವದಕ್ಕಾಗಿಯೂ ತನ್ನ ಪರಿಶುದ್ಧವಾದ ಒಡಂಬಡಿಕೆಯನ್ನು ನೆನೆಸಿಕೊಳ್ಳುವದಕ್ಕಾಗಿ ರಕ್ಷಣ ಕೊಂಬನ್ನು ಎತ್ತಿದ್ದನು. ಈ ಒಡಂಬಡಿಕೆಯು ದೇವರು ಮತ್ತು ಯೆಹೂದ್ಯರ ನಡುವೆ ಮಾಡಲ್ಪಟ್ಟ ಒಪ್ಪಂದವಾಗಿತ್ತು. ಯೆಹೂದ್ಯರು ತಮ್ಮ ಧರ್ಮಶಾಸ್ತ್ರಕ್ಕೆ ವಿಧೇಯರಾಗುವದಾದರೆ, ಆತನು ಅವರ ದೇವರಾಗಿದ್ದು ಅವರನ್ನು ಕಾಪಾಡಿ ನಡೆಸುವನೆಂದು ಹೇಳಿದ್ದನು(ವಿ.ಕಾಂಡ 19:5-6).

**73-75** ದೇವರು ಕ್ರಿಸ್ತನಿಗಿಂತ 2000 ವರ್ಷಗಳ ಮುಂಚೆ ಪ್ರಥಮ ಯೆಹೂದ್ಯ ಅಬ್ರಹಾಮನಿಗೆ ಮಾಢಿದ ಪ್ರಮಾಣವನ್ನು ನೆರವೇರಿಸಲು ಸಹ "ರಕ್ಷಣೆಯ ಕೊಂಬು" ಅಂದರೆ ರಕ್ಷಕನೊಬ್ಬನನ್ನು ಎಬ್ಬಿಸಿದ್ದಾನೆ. ಅಬ್ರಹಾಮನು ದೇವರಿಗೆ ವಿಧೇಯನಾದದ್ದರಿಂದ ದೇವರು ಆತನ ಸಂತತಿಯನ್ನು ಅಶೀರ್ವಧಿಸುವನು(ಆದಿಕಾಂಡ 2:15-18). ಮತ್ತು ಅವರನ್ನು ವೈರಿಗಳ ಕೈಯಿಂದ ತಪ್ಪಿಸಿ ಕಾಪಾಡುವನೆಂದು ವಾಗ್ದಾನ ಮಾಡಿದ್ದನು (ವ.74) ಆತನು ಅವರಿಗೆ ಒಂದು ದೇಶವನ್ನು ಕೊಡುತ್ತೆನೆಂದು, (ಆದಿಕಾಂಡ 15:18) ಆದರಲ್ಲಿ ಅವರು ಭಯವಿಲ್ಲದೆ ಸುರಕ್ಷಿತವಾಗಿದ್ದು, ಪರಿಶುದ್ಧತೆಯುಂದಲೂ, ನೀತಿ ಯಿಂದಲೂ, ದೇವರನ್ನು ಸೇವಿಸುವವರಾಗುವರೆಂದು ವಾಗ್ದಾನ ಮಾಡಿದ್ದನು (ವ.75).

76 ಈ ಅಂಶದಿಂದ ಜಕರೀಯನ ಗೀತೆಯು ಸ್ತುತಿಯ ಗೀತೆಯಿಂದ ಪ್ರವಾದನಾ ಗೀತೆಗೆ ತಿರಗುತ್ತದೆ. ಜಕರೀಯನು ತನ್ನ ಮಗನು ಪರಾತ್ಪರನ ಮಗನು ಅಂದರೆ ದೇವರ ಪ್ರವಾದಿಯಾಗಿದ್ದು (ಮತ್ತಾಯ 11:9) ಕರ್ತನಾದ ಕ್ರಿಸ್ತನಿಗೆ ಮಾರ್ಗವನ್ನು ಸಿದ್ಧ ಮಾಡುತ್ತಾನೆಂದು ಪ್ರವಾದಿಸಿದನು (ಮಾರ್ಕ 1:2-3, ಲೂಕ 1:17 ಮತ್ತು ವ್ಯಾಖ್ಯಾನ ನೋಡಿರಿ).

77 ಯೋಹಾನನು ಆತನ ಜನರಾದ ಯೆಹೂದ್ಯರಿಗೆ ರಕ್ಷಣೆಯ ತಿಳುವಳಿಕೆಯನ್ನು, ಅವರ ಆತ್ಮಗಳ ರಕ್ಷಣೆಯ ಆತ್ಮೀಕ ರಕ್ಷಣೆಯ ಜ್ಞಾನವನ್ನು ಕೊಡಲಿದ್ದನು. ಯೆಹೂದ್ಯರಲ್ಲಿ ಹೆಚ್ಚಿನ ಪಾಲು ಜನರು ಕೇವಲ ಲೌಕಿಕ "ರಕ್ಷಣೆ" ಅಂದರೆ ಅವರ ಲೌಕಿತ ವೈರಿಗಳಿಂದ ಬಿಡುಗಡೆಯೆಂದು ಮಾತ್ರವೇ ಯೋಚಿಸಿಕೊಂಡರು. ಆದರೆ ಯೋಹಾನನು ಅವರಿಗೆ ನಿಜವಾಗಿಯೂ ಅಗತ್ಯವಿರುವದು ಅವರ ಆತ್ಮೀಕ ವೈರಿಗಳಿಂದ ಅಂದರೆ ಅವರ ಪಾಪಗಳಿಂದ ಬಿಡುಗಡೆ ಅಥವಾ ರಕ್ಷಣೆ ಎಂಬದನ್ನು ಅವರಿಗೆ ಹೇಳಲು ಬಂದನು (ಮತ್ತಾಯ 1:21 ಮತ್ತು ವ್ಯಾಖ್ಯಾನ ನೋಡಿರಿ). ಅವರು ತಮ್ಮ ಪಾಪಗಳನ್ನು ಒಪ್ಪಿಕೊಂಡು ಕ್ಷಮಾಪಣೆಯನ್ನು ಪಡೆಯುವದಾದರೆ ಮಾತ್ರವೇ ಈ ರಕ್ಷಣೆ ಅವರಿಗೆ ಬರುವದು. ಈ ಕಾರಣದಿಂದಲೇ ಜನರು ತಮ್ಮ ಪಾಪಗಳಿಂದ ತೊಳೆಯಲ್ಪಡುವಂತಾಗಲು ಅವರಿಗೆ ಪಶ್ಚಾತಾಪ ಮತ್ತು ದೀಕ್ಷಾಸ್ನಾನವನ್ನು ಬೋಧಿಸುತ್ತಾ ಬಂದದ್ದು (ಮಾರ್ಕ 1:4 ಮತ್ತು ವ್ಯಾಖ್ಯಾನ ನೋಡಿರಿ).

78 ಮಾನವನ ರಕ್ಷಣೆಯು ಉದಯಿಸುವ ಸೂರ್ಯನಾದ ಆತನ ಮಗನಾದ ಯೇಸುವನ್ನು ಪರಲೋಕದಿಂದ ತನ್ನ ಜನರಾದ ಇಸ್ರಾಯೇಲರನ್ನು ಕಳುಹಿಸಿದ ದೇವರ ಅತ್ಯಂತ ಕರುಣೆಯಿಂದಲೇ ಸಾಧ್ಯವಾಗುತ್ತದೆ.

79 ಈ ಜಕರೀಯನು ಯೇಸು ಕತ್ತಲಲ್ಲಿ ಪ್ರಕಾಶಿಸಿ ಮನುಷ್ಯರನ್ನು ಸಮಾದಾನ ಮಾರ್ಗದಲ್ಲಿ ಅಂದರೆ ದೇವರೊಂದಿಗಿನ ಸಮಾದಾನದಲ್ಲಿ ನಡೆಸುವ ಬೆಳಕಾಗಿದ್ದಾನೆ ಎಂದು ಹೇಳುತ್ತಾನೆ (ಮತ್ತಾಯ 4:16) ಯೋಹಾನ 1:4, 8:12 ರೋಮಾ 5:1 ಮತ್ತು ವ್ಯಾಖ್ಯಾನ ನೋಡಿರಿ). ಮತ್ತು ಸ್ನಾನಿಕನಾದ ಯೋಹಾನನು ರಕ್ಷಕನಾದ ಯೇಸುವಿನ ಬರೋಣವನ್ನು ಪ್ರಕಟಿಸುವವ–ನಾಗಿದ್ದಾನೆ.(ಯೋಹಾನ 1:6-9) ಜಕರೀಯನು ಪ್ರವಾದಿಸಿದ ಈ ಎಲ್ಲ ಸಂಗತಿಗಳು ಆತನು ಮುಂತಿಳಿಸಿದಂತೆ ನೆರವೇರಿದವು .

80 ಸ್ನಾನಿಕನಾದ ಯೋಹಾನನು ಅರಣ್ಯದಲ್ಲಿ ಬೆಳೆದನು. ಆತನು ತನ್ನ ಸಾರ್ವಜನಿಕ ಸೇವೆಯನ್ನು ಪ್ರಾರಂಬಿಸುವ ತನಕ ಅಲ್ಲಿಯೇ ಉಳಿದನು. ಆತನಿಗೆ ಶಾಲಾ – ವಿಧ್ಯಾಬ್ಯಾಸ ಅಗತ್ಯವಿರಲಿಲ್ಲ. ಆತನು ತನ್ನ ವಿಧ್ಯಾಭ್ಯಾಸವನ್ನು ನೇರವಾಗಿ ದೇವರಿಂದಲೇ ಪಡೆದನು.

---

## ಅಧ್ಯಾಯ - 2

### ಯೇಸುವಿನ ಜನನ (2:1-20)

1 ಚಕ್ರವರ್ತಿಯಾದ ಕೈಸರ್ ಔಗುಸ್ತನು ಕ್ರಿ.ಪೂ. 31ರಿಂದ ಕ್ರಿ.ಶಕ 14ರ ವರೆಗೆ ರೋಮಾಯ ಚಕ್ರವರ್ತಿಯಾಗಿದ್ದನು. ರೋಮಾಯ ಸಾಮ್ರಾಜ್ಯದ ರಾಜಧಾನಿಯು ರೋಮ ನಗರವಾಗಿತ್ತು (ಈಗ ಆಧುನಿಕ ಇಟಲಿಯ ರಾಜಧಾನಿ) ಹೊಸ ಒಡಂಬಡಿಕೆಯ ಕಾಲಗಳಲ್ಲಿ ರೋಮಾಯರು ಮೆಡಿಟರಿಯನ್ ಸಮುದ್ರದ ಸುತ್ತಲಿನ ಹೆಚ್ಚು ಕಡಿಮೆ ಎಲ್ಲಾ ರಾಷ್ಟ್ರಗಳನ್ನು ಗೆದ್ದುಕೊಂಡಿದ್ದರು. ಅವರ ಅಧಿಕಾರವು ಪ್ರಾನ್ಸ್ ಮತ್ತು ಇಂಗ್ಲೆಂಡಗಳವರೆಗೆ ಸಹ ತಲುಪಿತ್ತು. ಹೀಗೆ, ಹೆಚ್ಚು ಕಡಿಮೆ ಎಲ್ಲಾ ಯುರೋಪ, ಉತ್ತರ ಆಪ್ರಿಕಾ ಮತ್ತು ಮಧ್ಯ ಪೂರ್ವದ ವರೆಗೂ ರೋಮಾಯ ಸಾಮ್ರಾಜ್ಯವು ವಿಸ್ತರಣೆಗೊಂಡಿತ್ತು. ಗೆದ್ದುಕೊಂಡ ರಾಷ್ಟ್ರಗಳಲ್ಲಿ ಇಸ್ರಾಯೇಲ ಮತ್ತು ಸಿರಿಯಾಗಳೂ ಸೇರಿದ್ದವು . ಔಗುಸ್ತನು ಇತ್ತೀಚಿಗಷ್ಟೇ ಗೆದ್ದಕೊಂಡ ರಾಷ್ಟ್ರಗಳ ಮತ್ತು ಪ್ರಾಂತ್ಯಗಳ ಆಡಳಿತವನ್ನು ಮನ್ನನೆ ಮಾಡಿದ್ದನು. ಮತ್ತು ಹೊಸದಾಗಿ ಖಾನೇಷುಮಾರಿ ನಡೆಸಲು ಆಜ್ಞೆ ಹೊರಡಿಸಿದ್ದನು.

2 ಈ ಖಾನೇಷುಮಾರಿಯು ಸುಮಾರು ಕ್ರಿ.ಪೂ. 4 ರಲ್ಲಿ ಪ್ರಾರಂಭಗೊಂಡಿತು, ಅದು ಯೇಸುವಿನ ಜನನದ ದಿನಾಂಕವಾಗಿದೆ (ಮತ್ತಾಯ 2:1 ಮತ್ತು ವ್ಯಾಖ್ಯಾನ ನೋಡಿರಿ). ಖಾನೇಷುಮಾರಿಯು, ಕುರೇನ್ಯನು ಸಿರಿಯಕ್ಕೆ ಅಧಿಪತಿಯಾಗಿದ್ದಾಗ ಪೂರ್ಣಗೊಂಡಿತು, ಅದು ಕ್ರಿ.ಶ 6-9ರ ಕಾಲವಾಗಿತ್ತು.[10]

3-4 ಚಕ್ರವರ್ತಿಯ ಅಜ್ಞೆಯ ಪ್ರಕಾರವಾಗಿ ಪ್ರತಿಯೊಬ್ಬನು ತನ್ನ ಸ್ವಂತ ಊರಿನಲ್ಲಿ ಖಾನೇಷುಮಾರಿ ಬರೆಸಿಕೊಳ್ಳಬೇಕಾಗಿತ್ತು. ಮರಿಯಳಿಗೆ ನಿಶ್ಚಿತಾರ್ಥಗೊಂಡ ಗಂಡನಾದ ಯೋಸೇಫನು ದಾವಿದನ ವಂಶದವನಾಗಿದ್ದನು (ಮತ್ತಾಯ 1:20, ಲೂಕ 1:27) ದಾವಿದನು ಸಾವಿರ ವರ್ಷಗಳಿಗೆ ಮುಂಚೆ ಬೇತ್ಲೆಹೇಮಿನಲ್ಲಿ ಹುಟ್ಟಿದ್ದನು. ಆದುದರಿಂದ ದಾವಿದನ ವಂಶಸ್ಥರೆಲ್ಲರೂ ಯೆರೂಸಲೇಮಿನ ದಕ್ಷಿಣಕ್ಕೆ ಆರು ಮೈಲುಗಳಷ್ಟು ದೂರವಿದ್ದ ಚಿಕ್ಕಗ್ರಾಮವಾದ ಬೇತ್ಲೆ ಹೇಮಿನಲ್ಲಿ ನೊಂದಾಯಿಸಬೇಕಾಗಿತ್ತು. ಈ ರೀತಿಯಾಗಿ ಮೆಸ್ಸಿಯನು ಬೇತ್ಲೆ ಹೇಮಿನಲ್ಲಿ ಹುಟ್ಟುವನೆಂದು ಮೀಕನು ತಿಳಿಸಿದ ಪ್ರವಾದನೆಯು ನೆರವೇರಿತು (ಮೀಕ 5:2, ಮತ್ತಾಯ 2:4-6).

5-7 ಅವರು ಬೇತ್ಲೆಹೇಮಿಗೆ ಹೋದ ವೇಳೆಯಲ್ಲಿ ಯೋಸೇಫನು ತನ್ನ ನಿಶ್ಚಿತಾರ್ಥಗೊಂಡ ಹೆಂಡತಿಯಾದ ಮರಿಯಳನ್ನು ಕೂಡಿರಲಿಲ್ಲ. (ಮತ್ತಾಯ 1:24-25). ಮರಿಯಳು ವಿವಾಹಕ್ಕೆ ನಿಶ್ಚಿತಾರ್ಥ ಹೊಂದಿದ್ದಾಳೆಂದು ಲೂಕನು ತಿಳಿಸುತ್ತಾನೆ

(ವಚನ. 5). ಅಂದರೆ ಅವಳು ಕಾನೂನು ಬದ್ಧವಾಗಿ ವಿವಾಹವಾಗಿದ್ದಳು, ಆದರೆ ಅವಳು ಇನ್ನೂ ಕೇವಲ ನಿಶ್ಚಿತಾರ್ಥ ಹೊಂದಿದವಳೋ ಎಂಬಂತೆ ಜೀವಿಸುತ್ತಿದ್ದಳು.

ಬೇತ್ಲೆಹೇಮನ್ನು ತಲುಪಿದ ನಂತರ ಮರಿಯಳು ಯೇಸುವಿಗೆ ಜನ್ಮ ನೀಡಿದಳು. ಅಲ್ಲಿ ಯಾವ ಸ್ಥಳವೂ ದೊರೆಯದಿದ್ದುದರಿಂದ, ಮರಿಯಳು ಗೋದಲಿಯಲ್ಲಿ ಮಗುವನ್ನು ಇಟ್ಟುಕೊಂಡಿದ್ದಳು. ದೇವಕುಮಾರನ ಜನನವು ಅಂತಹ ದೀನ ಸ್ಥಿತಿಯದಾಗಿತ್ತು.

**8-12** ಯೇಸುವಿನ ಜನನದ ಸುದ್ದಿಯು ಮೊದಲು ಸಾಮಾನ್ಯ ಜನರಾದ ಕುರುಬರಿಗೆ ಪ್ರಕಟಿಸಲಾಯಿತು "ನಾನು ನಿಮಗೆ ಸಂತೋಷವನ್ನು ಉಂಟು ಮಾಡುವ ಶುಭ ಸಮಾಚಾರವನ್ನು ತಿಳಿಸುತ್ತೇನೆ" ಎಂದು ದೇವದೂತನು ಅವರಿಗೆ ಹೇಳಿದ (ವಚನ 10) ಆ ಶುಭಸಮಾಚಾರವು ಕ್ರಿಸ್ತನ ಸುವಾರ್ತೆ, ರಕ್ಷಣೆಯ ಸುವಾರ್ತೆಯಾಗಿತ್ತು. ಸುವಾರ್ತೆಯು ಎಲ್ಲಾ ಜನರಿಗಾಗಿರುತ್ತದೆ, ಅಂದರೆ ಅದು ಪ್ರಾರಂಭದಲ್ಲಿ ಎಲ್ಲಾ ಇಸ್ರಾಯೇಲ ಜನರಿಗೆ, ಯೆಹೂದ್ಯರಿಗಾಗಿ ಆಗಿತ್ತು. ಆದರೆ ಇದು ಅನ್ಯಜನರಿಗಾಗಿಯೂ ಸಹ ಸುವಾರ್ತೆಯಾಗಿದೆ, ಅಂದರೆ ಯೆಹೂದ್ಯೇತರರು (ವಚನ 30-32) ಈ ಸುವಾರ್ತೆಯನ್ನು ಮತ್ತು ಕ್ರಿಸ್ತನನ್ನು ನಂಬುವ ಎಲ್ಲರಿಗೂ (ಯೆಹೂದ್ಯರು ಮತ್ತು ಅನ್ಯಜನ ಇಬ್ಬರಿಗೂ) ರಕ್ಷಣೆಯು ದೊರೆಯುವದಾಗಿದೆ (ಯೋಹಾನ 3:16) ಈ ರೀತಿಯಾಗಿ ಯೇಶಾಯನ ಪ್ರವಾದನೆಯು ನೆರವೇರಿತು: ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನು, ಆಡಳಿತವು ಅವನ ಬಾಹುವಿನ ಮೇಲಿರುವದು, ಅದ್ಭುತಸ್ವರೂಪನು, ಆಲೋಚನಾಕರ್ತನು ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬವು ಅವನ ಹೆಸರು. ಅವನ ಮುಖಾಂತರ ದಾವೀದನ ಸಿಂಹಾಸನದ ಆಡಳಿತವು ಅಭಿವೃದ್ಧಿಯಾಗುವದು, ನಿತ್ಯ ಸಮಾಧಾನ ವಿರುವದು" (ಯೇಶಾಯ 9:6-7).

**13-15** ಪರಲೋಕದಿಂದ ಒಂದು ದೊಡ್ಡ ಸೈನ್ಯವು ಅಂದರೆ ಇತರ ದೇವದೂತರು ಕುರುಬರಿಗೆ ಕಾಣಿಸಿಕೊಂಡು ದೇವರನ್ನು ಕೊಂಡಾಡಿದರು. ದೇವದೂತರು ಹೊರಟು ಹೋದ ಕೂಡಲೇ ಆಶ್ಚರ್ಯವೂ, ಉತ್ಸಾಹವೂ ತುಂಬಿದ್ದ ಕುರುಬರು ರಕ್ಷಕನನ್ನು ಕಂಡುಕೊಳ್ಳಲು ಹೋಗುತ್ತಾರೆ.

**16-20** ದೇವರು ತಿಳಿಸಿದ್ದ ಸ್ಥಳದಲ್ಲಿಯೇ ಕುರುಬರು ಯೇಸುವನ್ನು ಕಂಡುಕೊಂಡರು. ಕುರುಬರು ಪ್ರತಿಯೊಬ್ಬರಿಗೂ ದೂತರು ತಮಗೆ ಕಾಣಿಸಿಕೊಂಡು ಮೆಸ್ಸಿಯನಾದ ರಕ್ಷಕನ ಜನನದ ಬಗ್ಗೆ ತಿಳಿಸಿದರೆಂಬದನ್ನು ಹೇಳಿದರು. ಮತ್ತು ಮರಿಯಳು ಆಮಾತುಗಳನ್ನೆಲ್ಲಾ ತನ್ನ ಮನಸ್ಸಿನಲ್ಲಿಟ್ಟುಕೊಂಡು ಯೋಚಿಸುತ್ತಿದ್ದಳು (ವಚನ 19). ಮತ್ತು ಖಂಡಿತವಾಗಿಯೂ ಕೆಲವು ವರ್ಷಗಳನಂತರ ಈ ಕೆಲವು ಮಾತುಗಳನ್ನು ಯೇಸುವಿನ ಹಿಂಬಾಲಕರಿಗೆ ಹೇಳಿದಳು. ಬಹುಶ: ಸ್ವತ: ಲೂಕನಿಗೆ ಮರಿಯಳು ಹೇಳಿರಬಹುದು ಮತ್ತು ಲೂಕನು ಅವಳು ಹೇಳಿದ್ದನ್ನು ತನ್ನ ಸುವಾರ್ತೆಯ ಈ ಅಧ್ಯಾಯವನ್ನು ಬರೆಯುಲು ಉಪಯೋಗಿಸಿದನು.

## ಯೇಸು ದೇವಾಲಯದಲ್ಲಿ ಸಮರ್ಪಿಸಲ್ಪಟ್ಟಿದ್ದು (2:21-38)

**21** ಕ್ರಿಸ್ತನು ಎಂಟು ದಿನದವನಾಗಿದ್ದಾಗ ಸುನ್ನತಿ ಮಾಡಲ್ಪಟ್ಟು ಆತನಿಗೆ ಯೇಸು ಎಂದು ಹೆಸರಿಡಲಾಯಿತು (ಗಬ್ರಿಯೇಲದೂತನು ಅಪ್ಪಣೆ ಮಾಡಿದಂತೆಯೇ) (ಲೂಕ 1:31). ಆತನು ದೇವಕುಮಾರನಾಗಿದ್ದರೂ ತಾನ ಧರ್ಮಶಾಸ್ತ್ರವನ್ನು ನೆರವೇರಿಸುವದರ ಮೂಲಕ ಎಲ್ಲಾ ನೀತಿಯನ್ನು ನೆರವೇರಿಸುವದಕ್ಕಾಗಿ ತನ್ನನ್ನು ಯೆಹೂದ್ಯ ಧರ್ಮಶಾಸ್ತ್ರಕ್ಕೆ ಒಪ್ಪಿಸಿ ಕೊಟ್ಟನು (ಮತ್ತಾಯ 3:15, 5:17, ಗಲಾತ್ಯ 4:4).

**22-24** ಯೇಸುವಿನ ಜನನದ ನಂತರ ನಾಲ್ವತ್ತುದಿನಗಳಾದ ಮೇಲೆ ಮರಿಯಳು ಮತ್ತು ಯೋಸೇಫನು ಯೆರುಸಲೇಮಿಗೆ ಹೋದರು. ಮೊದಲನೆಯದಾಗಿ ಯೇಸುವನ್ನು ಕರ್ತನಿಗೆ ಸಮರ್ಪಿಸುವದಕ್ಕಾಗಿ ದೇವಾಲಯಕ್ಕೆ ಹೋದರು (ವಚನ 22). ಕರ್ತನ ಧರ್ಮಶಾಸ್ತ್ರದ ಪ್ರಕಾರ (ಯೆಹೂದ್ಯ ಧರ್ಮಶಾಸ್ತ್ರ) ಎಲ್ಲಾ ಚೊಚ್ಚಲ ಮಕ್ಕಳೂ ಅಲ್ಲದೆ ಪ್ರಾಣಿಗಳಲ್ಲಿಯೂ ಚೊಚ್ಚಲು ಮರಿಗಳನ್ನು ದೇವರಿಗೆ ಸಮರ್ಪಿತವೆಂದು ಪರಿಗಣಿಸಲಾಗಿತ್ತು (ವಚನ 23). ಶುದ್ಧ ಪ್ರಾಣಿಗಳ ಚೊಚ್ಚಲು ಮರಿಗಳನ್ನು ಯಜ್ಞಮಾಡುತ್ತಿದ್ದರು, ಅಂದರೆ ದೇವರಿಗೆ ಅರ್ಪಿಸಲಾಗುತ್ತಿತ್ತು ಮಾನವರ ಚೊಚ್ಚಲು ಮಕ್ಕಳನ್ನು ಯಜ್ಞಮಾಡಲಾಗುತ್ತಿರಲಿಲ್ಲ, ಬದಲಾಗಿ ಅವರು ಒಂದು ತಿಂಗಳಿನವರಾದಾಗ ಅವರಿಗಾಗಿ ಹಣವನ್ನು ಕ್ರಯ ಕೊಟ್ಟು ಬಿಡಿಸಿಕೊಳ್ಳಬೇಕಾಗಿತ್ತು (ವಿಮೋಚನ ಕಾಂಡ 13:2, 12-13, ಅರಣ್ಯಕಾಂಡ 18:15-16). ಮರಿಯಳು ಮತ್ತು ಯೋಸೇಫರು ಯೆರೂಸಲೇಮಿಗೆ [11]ಹೋಗಲು ಎರಡನೆಯ ಕಾರಣವೇನೆಂದರೆ ಪವಿತ್ರಗೊಳಿಸುವಿಕೆಯ ಯಜ್ಞವನ್ನು ಅರ್ಪಿಸುವದಕ್ಕಾಗಿ ಆಗಿತ್ತು (ವಚನ 24). ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರ ತಾಯಿ ಮತ್ತು ಆಕೆಯ ಮಗು ಹೆರಿಗೆ ಆಗಿ 40 ದಿನಗಳವರೆಗೂ "ಅಶುದ್ಧರಾಗಿ" ಇರುತ್ತಾರೆಂದು ಪರಿಗಣಿಸಲಾಗಿತ್ತು. ಆ ಸಮಯದಲ್ಲಿ ತಾಯಿ ಮತ್ತು ಮಗು ಶುದ್ಧರಾಗುವಂತೆ ಯಜ್ಞವೊಂದನ್ನು ಅರ್ಪಿಸಬೇಕಾಗಿತ್ತು. ಬಡವರು ಜೋಡಿಬೆಳವಕ್ಕಿ–ಯನ್ನಾಗಿಲಿ, ಎರಡುಪಾರಿವಾಳದ ಮರಿಗಳನ್ನಾಗಲಿ ಯಜ್ಞವಾಗಿ ಅರ್ಪಿಸಬಹುದಾಗಿತ್ತು (ಯಾಜಕಕಾಂಡ 12:1-8).

**25** ಯೇಸು ನಿಜವಾಗಿಯೂ ರಕ್ಷಕನು, ಇಸ್ರಾಯೇಲರ ಮೆಸ್ಸಿಯನು ಆಗಿದ್ದನೆಂಬದಕ್ಕೆ ಲೂಕನು ಇನ್ನೊಂದು ಗುರುತನ್ನು ಕುರಿತು ಬಣ್ಣಿಸುತ್ತಾನೆ. ಅವನು ಸಿಮೆಯೋನನೆಂಬ ವ್ಯಕ್ತಿಯ ಒಗ್ಗೆ ಪ್ರಸ್ತಾಪಿಸುತ್ತಾನೆ. ಇವನು ಇಸ್ರಾಯೇಲನ್ನು ಸಂತೈಸುವವನು ಅಂದರೆ ಇಸ್ರಾಯೇಲರಿಗೆ ರಕ್ಷಣೆಯನ್ನು ಉಂಟು ಮಾಡುವವನು ಯಾವಾಗ ಬಂದಾನೆಂದು ಹಾರೈಸುತ್ತಿದ್ದನು. ಬೇರೆ ಮಾತುಗಲ್ಲಿ ಹೇಳುವದಾದರೆ ಅವನು ಕರ್ತನ ಕ್ರಿಸ್ತನನ್ನು ಅಂದರೆ ದೇವರು ಕಳುಹಿಸುವ ಕ್ರಿಸ್ತನಿಗಾಗಿ [12] ಕಾದುಕೊಂಡಿದ್ದನು, ಆತನು ತನ್ನ ಜನರನ್ನು ರಕ್ಷಿಸಲು ಬರುವ ಮೆಸ್ಸಿಯನಾಗಿದ್ದನು.

**26-28** ಸಿಮೆಯೋನನು ಸಾಯುವದಕ್ಕಿಂತ ಮುಂಚೆ ಕ್ರಿಸ್ತನನ್ನು ನೋಡುವನೆಂದು ಪವಿತ್ರಾತ್ಮನು ಅವನಿಗೆ ಹೇಳಿದ್ದನು. ಆದುದರಿಂದ ಮರಿಯಳು, ಯೋಸೇಫರು ಯೇಸುವನ್ನು ದೇವಾಲಯದೊಳಗೆ ತಂದಾಗ ಸಿಮೆಯೋನನು ಪವಿತ್ರಾತ್ಮನಿಂದ ನಡೆಸಲ್ಪಟ್ಟವನಾಗಿ ತಕ್ಷಣವೇ ಮಗುವಾದ ಯೇಸುವನ್ನು ಗುರುತಿಸಿ ತನ್ನ ಬಾಹುಗಳಲ್ಲಿ ತೆಗೆದುಕೊಂಡನು.

**29-32** ನಂತರ ಸಿಮೆಯೋನನು ದೇವರನ್ನು ಕೊಂಡಾಡಿದನು. ಈಗ ಆತನು ದೇವರು ಇಸ್ರಾಯೇಲರಿಗೆ ಮಾತ್ರವಲ್ಲದೆ ಅನ್ಯರ ಜನರಿಗೂ–ಇಡೀ ಲೋಕದ ರಕ್ಷಣೆಗಾಗಿ ಮಾಡಿದ ರಕ್ಷಣೆಯನ್ನು ಕಣ್ಣಾರೆಕಂಡಿದ್ದರಿಂದ ಸಮಾಧಾನದಿಂದ ಸಾಯಬಹುದು (ಯೇಶಾಯ 49:6, 52:10, ಕೀರ್ತನೆಗಳು 98:2-3).

**33** ದೇವದೂತನು ಯೋಸೋಫ ಮರಿಯಳರಿಗೆ ಅವರ ಮಗನಾದ ಯೇಸು ದೇವಕುಮಾರನೂ, ರಕ್ಷಕನೂ ಆಗಿರುವನೆಂದು ಹೇಳಿದ್ದರೂ ಅವರು ಈಗಲೂ ಸಿಮೆಯೋನನ ಮಾತುಗಳಿಗೆ ಆಶ್ಚರ್ಯಪಟ್ಟರು. ಅವರ ಮಗನು ಇಸ್ರಾಯೇಲರಿಗೆ ಮಾತ್ರವಲ್ಲ ಆದರೆ ಇಡೀ ಲೋಕಕ್ಕೆ ರಕ್ಷಕನಾಗಿರುವನು.

**34** ಮರಿಯಳು, ಯೋಸೇಫ ಮತ್ತು ಅವರ ಮಗುವನ್ನು ಆಶೀರ್ವದಿಸಿದ ಬಳಿಕ ಸಿಮೆಯೋನನು "ಈ ಮಗುವು ಇಸ್ರಾಯೇಲರಲ್ಲಿ ಅನೇಕರು ಬೀಳುವದಕ್ಕೂ ಅನೇಕರು ಏಳುವದಕ್ಕೂ ಕಾರಣನಾಗುವನು" ಎಂದು ಹೇಳಿದನು. ಕ್ರಿಸ್ತನಲ್ಲಿ ನಂಬಿಕೆಯಿಟ್ಟು ಆತನು ತರುವ ರಕ್ಷಣೆಯನ್ನು ಸ್ವೀಕರಿಸಿಕೊಳ್ಳುವವರು "ಏಳುವರು" ಆತನನ್ನು ತಿರಸ್ಕರಿಸುವವರು "ಬೀಳುವರು" ಅಂದರೆ ದಂಡನೆಗೆ ಗುರಿಯಾಗುವರು (ಯೋಹಾನ 3:18,36 ನೋಡಿರಿ). ಕ್ರಿಸ್ತನು ಮೂಲೆಗಲ್ಲಾಗಿದ್ದು ಆತನ ಮೇಲೆ ನೂತನ ಇಸ್ರಾಯೇಲ ಆಗಿರುವ ಸಭೆಯು ಏಳುವದು (ಎಫೆಸ 2:19-21, 1ಪೇತ್ರ; 2:6,ಮತ್ತು ವ್ಯಾಖ್ಯಾನ ನೋಡಿರಿ). ಆದರೆ ಆ ಕಲ್ಲನ್ನು ತಿರಸ್ಕರಿಸುವದಾದರೆ ಅದು ಮಾನವರಿಗೆ ಎಡವು ವ ಕಲ್ಲಾಗುತ್ತದೆ (ಮತ್ತಾಯ 21-44.1ಪೇತ್ರ 2-7-8 ಮತ್ತು ವ್ಯಾಖ್ಯಾನ ನೋಡಿರಿ) ಅಲ್ಲದೆ ಯೇಸು ಜನರು ಎದುರು ಮಾತಾಡುವದಕ್ಕೆ ಗುರತಾಗಿದೆ ಎಂದು ಸಹ ಸಿಮೆಯೋನನು ಹೇಳಿದನು.ಈತನು ಮೊದಲನೆಯ ಸಾರಿ ಮಾನವರನ್ನು ರಕ್ಷಿಸಲು ಬಂದನು. ಆದರೆ ಆತನು ಎರಡನೆಯ ಸಾರಿ ಮಾನವರಿಗೆ ನ್ಯಾಯ ತೀರಿಸಲು ಬರುವನು (ಮತ್ತಾಯ 24:30, ಮಾರ್ಕ 13:26, 14:61-62, ಯೋಹಾನ 5:22-23, ಮತ್ತು ವ್ಯಾಖ್ಯಾನ ನೋಡಿರಿ). ಯೇಸು ನೀತಿವಂತರನ್ನು ಅನೀತಿವಂತರಿಂದ ಪ್ರತ್ಯೇಕಿಸಲು ಕತ್ತಿ ಹಿಡಿದವನಾಗಿ ಬಂದನು (ಮತ್ತಾಯ 10:34). ಯೇಸು ಒಂದು "ಗುರುತು" ಆಗಿದ್ದ "ನನ್ನಲ್ಲಿ ನಂಬಿಕೆಯಿಡದ ಪ್ರತಿಯೊಬ್ಬರು ನಾಶವಾಗುವರು" ಎಂದು ಅದು ಹೇಳುತ್ತದೆ. ನನ್ನ ಮೂಲಕವಾಗಿ ಹೊರತು ಯಾರು ತಂದೆಯ ಬಳಿಗೆ ಬರಲಾರರು (ಯೋಹಾನ 14:6). ಹಾಗಿದ್ದರೂ, ಯೇಸು ಮೊದಲು ರಕ್ಷಿಸಲುಬಂದ ಯೆಹೂದ್ಯ ಜನರೇ ಆತನನ್ನು ತಿರಸ್ಕರಿಸಿದರು. ಆತನ ವಿರುದ್ದವಾಗಿ ಮಾತನಾಡಿ ಕೊನೆಗೆ ಅವನನ್ನು ಸಾಯಿಸಿದರು. ದೇವರು ಆರಿಸಿಕೊಂಡು ಆಶೀರ್ವದಿಸಲ್ಪಟ್ಟ ಜನಾಂಗವಾದ ಯೆಹೂದ್ಯರು ತಮ್ಮ ಆಶಿರ್ವಾದವನ್ನು ತಮ್ಮ ಸ್ವಾಸ್ಥ್ಯವನ್ನು ಕಳೆದುಕೊಂಡು ಬಿದ್ದುಹೋದರು. ಮತ್ತು ಆಶಿರ್ವಾದವು ಕ್ರಿಸ್ತನನ್ನು ನಂಬಿ ಅಂಗೀಕರಿಸಿಕೊಂಡ ಅನ್ಯಜನರೆಡೆಗೆ ಹೋಯಿತು (ಮತ್ತಾಯ 21:43).

**35** ಕ್ರಿಸ್ತನು ಲೋಕಕ್ಕೆ ಬರುವದು ಅನೇಕ ಹೃದಯದ ಆಲೋಚನೆಗಳು ಬೈಲಿಗೆ ಬರಲು ಕಾರಣವಾಗುವದು. ಆಗ ಯಾರು ನಂಬಿಕೆಹೊಂದಿದ್ದರು ಮತ್ತು ಹೊಂದಿರಲಿಲ್ಲ ಎಂಬದು, ಯಾರು ದೇವರ ನಿಜವಾದ ಸೇವಕರು ಹಾಗು ಯಾರು ಅಲ್ಲ ಎಂಬದು ನಿರೂಪಿಸಲ್ಪಡುವದು. ದೇವರು ಹೊರಗಿನ ನೀತಿಯನ್ನು ನೋಡುವದಿಲ್ಲ, ಕ್ರಿಸ್ತನೆಡೆಗಿರುವ ನಮ್ಮ ಮನೋಭಾವವೇ ಪ್ರಾಮುಖ್ಯವಾದದ್ದು. ಕ್ರಿಸ್ತನ ನೀತಿಯನ್ನು ನಂಬಿಕೆಯ ಮೂಲಕ ಸ್ವೀಕರಿಸುವವರು ಮಾತ್ರವೇ ಅಂತ್ಯದಲ್ಲಿ ದೇವರಿಂದ ನೀತಿವಂತರೆಂದು ಪರಿಗಣಿಸಲ್ಪಡುವರು (ಗಲಾತ್ಯ 2:15-16 ಮತ್ತು ವ್ಯಾಖ್ಯಾನ ನೋಡಿರಿ). ಬಳಿಕ ಸಿಮೆಯೋನನು ಮರಿಯಳ ಪ್ರಾಣಕ್ಕಂತೂ ಅಲಗು ನಾಟಿದಂತಾಗುವದೆಂದು ಹೇಳಿದನು. ಆ ಅಲಗು ಆಕೆಯ ಮಗನ ಕೊಲೆಯೇಆಗಿತ್ತು. ಆಕೆಯ ಸ್ವಂತ ಜನಾಂಗದ ನಾಯಕರೇ ಆಕೆಯ ಚೊಚ್ಚಲ ಮಗನನ್ನು ಶಿಲುಬೆಯ ಮೇಲೆ ಸಾಯಿಸುವದನ್ನು ನೋಡುವಳು.

**36-38** ಸಿಮೆಯೋನನು ಮಾತನಾಡಿದ ಬಳಿಕ ಪ್ರವಾದಿನಿಯಾದ ಅನ್ನಳು ಸಹ ಮಗುವಾದ ಯೇಸುವಿನ ಕುರಿತು ಮಾತನಾಡಿದಳು. ಅವಳು ಆಸೇರ[13] ಕುಲದವಳಾಗಿದ್ದಳು. ಅವಳು ಯೆರೂಸಲೇಮಿನ ಬಿಡುಗಡೆಯನ್ನು ಹಾರೈಸುತ್ತಿದ್ದವರೆಲ್ಲರೊಂದಿಗೆ ಮಾತನಾಡಿದಳು. ಯೆಹೂದ್ಯರಲ್ಲಿ ಅನೇಕರು ರಕ್ಷಕನಾದ ಮೆಸ್ಸಿಯನು ಬಂದು ಇಸ್ರಾಯೇಲಿಗೆ ಬಿಡುಗಡೆ ತರುವದನ್ನು ಹಾರೈಸುತ್ತಿದ್ದರಷ್ಟೇ. ಆದಾಗ್ಯು ಆತನು ಬಂದಾಗ ಅವರಲ್ಲಿ ಹೆಚ್ಚು ಜನರು ಆತನನ್ನು ಗುರುತಿಸಲಿಲ್ಲ. ದೇವಕುಮಾರನು ಗೋದಲಿಯಲ್ಲಿ ಒಬ್ಬ ಬಡಗಿ ಹಾಗು ಗ್ರಾಮದ ಸ್ತ್ರೀಯ ಮಗನಾಗಿ ಜನಿಸುವನೆಂಬದನ್ನು ಅವರು ನಂಬಲಿಲ್ಲ.

## ಯೇಸುವಿನ ಬಾಲ್ಯ (2:39-52)

**39** ಲೂಕನು ಇಲ್ಲಿ ಯೇಸುವಿನ ಕುಟುಂಬವು ಇಸ್ರಾಯೇಲಿನ ಉತ್ತರಕ್ಕಿರುವ ಗಲಿಲಾಯ ಪ್ರಾಂತ್ಯದಲ್ಲಿನ ನಜರೇತೆಂಬ ಅವರ ಊರಿಗೆ ಹಿಂತಿರಿಗಿದರೆಂದು ತಿಳಿಸುತ್ತಾನೆ. ಆದರೆ ಅವರು ಹಿಂದಿರಿಗಿ ಬರುವದಕ್ಕೆ ಮುಂಚೆ ಮತ್ತಾಯ 2:1-12ರಲ್ಲಿ ಬಣ್ಣಿಸಲ್ಪಟ್ಟಿರುವ ಹಾಗೆ ಮೂಡಣ ಜೋಯಿಸರು ಅವರನ್ನು ದರ್ಶಿಸಿದರು. ತರುವಾಯ ದುಷ್ಟರಾಜನಾದ ಹೆರೋದನ ಭಯದಿಂದಾಗಿ ಕುಟುಂಬವು ಐಗುಪ್ತ್ಯಕ್ಕೆ ಪಲಾಯನ ಮಾಡಿದರು (ಮತ್ತಾಯ 13-23 ನೋಡಿರಿ). ಹೆರೋದನು ಸತ್ತ ಮೇಲೆ ಮಾತ್ರವೇ ಯೋಸೇಫ ಮತ್ತು ಮರಿಯಳರು ಯೇಸುವಿನೊಂದಿಗೆ ನಜರೇತಿಗೆ ಹಿಂದಿರುಗಿದರು.

**40** ವಚನ 40-52 ರಲ್ಲಿ ಬರೆಯಲ್ಪಟ್ಟ ಸಂಗತಿಯನ್ನು ಹೊರತು ಪಡಿಸಿ ಯೇಸುವಿನ ಪ್ರಾರಂಬಿಕ ಕುರಿತಾಗಿ ಇನ್ನಾವ ಸಂಗತಿಯು ತಿಳಿದು ಬಂದಿರುವದಿಲ್ಲ. ಯೇಸು ದೇವಕುಮಾರನಾಗಿದ್ದರೂ ಆತನು ನರಾವತಾರವನ್ನು ಎತ್ತಿ ಸ್ತ್ರೀಯಲ್ಲಿ ಜನಿಸಿ ಬಂದನು. ಆದುದರಿಂದ ಇತರ ಮನುಷ್ಯರಂತೆ ಯೇಸು ಬೆಳೆದು ಬಲಗೊಂಡವನಾಗಿರಬೇಕಿತ್ತು. ಆದರೆ ಪ್ರಾರಂಬದಿಂದಲೂ ಆತನು ತನ್ನ ಪರಲೋಕ ತಂದೆಯ ಜ್ಞಾನದಿಂದಲೂ, ಕೃಪೆಯಿಂದಲೂ ತುಂಬಿದವನಾಗಿದ್ದನು.

**41** ಯೆರೂಸಲೇಮು ಯೆಹೂದ್ಯ ಜನಾಂಗದ ರಾಜಧಾನಿಯಾಗಿತ್ತು. ಅಲ್ಲದೆ ಅಲ್ಲಿ ಯೆಹೂದ್ಯರ ಶ್ರೇಷ್ಟ ದೇವಾಲಯವಿದ್ದು, ಎಲ್ಲಾ ಯೆಹೂದ್ಯರಿಗೂ ಆರಾಧನೆಯ ಕೇಂದ್ರ ಸ್ಥಳವಾಗಿತ್ತು (ಮಾರ್ಕ 13:1 ಮತ್ತು ವ್ಯಾಖ್ಯಾನ ನೋಡಿರಿ). ಪ್ರತಿವರ್ಷವೂ ಪಸ್ಕ ಹಬ್ಬವನ್ನು ಆಚರಿಸಲು ಸಾವಿರಾರು ಯೆಹೂದ್ಯರು ಯೆರೂಸಲೇಮಿಗೆ ಬರುತ್ತಿದ್ದರು (ಮಾರ್ಕ 11 ಮತ್ತು ವ್ಯಾಖ್ಯಾನ ನೋಡಿರಿ). ಆದ್ದರಿಂದ ಈ ಉದ್ದೇಶಕ್ಕಾಗಿ ಯೋಸೇಫ ಮತ್ತು ಮರಿಯಳರು ಪ್ರತಿವರ್ಷ ಯೆರೂಸಲೇಮಿಗೆ ಪ್ರಯಾಣಿಸುತ್ತಿದ್ದರು.

**42-45** ಯೇಸು ಹನ್ನೆರಡು ವರ್ಷದವನಾಗಿದ್ದಾಗ ಯೋಸೇಫ ಮತ್ತು ಮರಿಯಳರು ಪದ್ಧತಿಯ ಪ್ರಕಾರ ಪಸ್ಕಹಬ್ಬಕ್ಕಾಗಿ ಯೆರೂಸಲೇಮಿಗೆ ಹೋದರು, ಆದರೆ ಅವರು ಮನೆಗೆ ಹಿಂದಿರುಗುವ ವೇಳೆಯಲ್ಲಿ ಯೇಸು ಅವರೊಂದಿಗೆ ಹೋಗಿರಲಿಲ್ಲ. ನಜರೇತಿಗೆ ಒಟ್ಟಾಗಿ ಹಿಂದಿರುಗುತ್ತಿದ್ದ ನೂರಾರು ಯೆಹೂದ್ಯರಿದ್ದರು, ಆದ್ದರಿಂದ ಯೇಸು ಯಾತ್ರೆಯವರ ಗುಂಪಿನಲ್ಲಿರಬಹುದೆಂದು, ಆದರೆ ತಮ್ಮ ಬದಲಾಗಿ ಆತನು ಸ್ನೇಹಿತರೊಂದಿಗೆ ಮತ್ತು ಬಂಧುಗಳೊಂದಿಗೆ ನಡೆದು ಬರುತ್ತಿದ್ದಾನೆಂದು ಊಹಿಸಿಕೊಂಡರು. ಆದರೆ ಒಂದು ದಿನದ ಪ್ರಯಾಣಮಾಡಿದ ಬಳಿಕ ಯೇಸು ಯಾತ್ರೆಯವರ ಗುಂಪಿನಲ್ಲಿರಲೇ ಇಲ್ಲ ಎಂಬದನ್ನು ಯೋಸೇಫ ಮತ್ತು ಮರಿಯಳರು ಕಂಡುಕೊಂಡರು ಆದುದರಿಂದ ಅವರು ತಿರಿಗಿ ಯೆರೂಸಲೇಮಿಗೆ ಹೋದರು.

**46-48** ಮೂರು ದಿನಗಳಾದ ಮೇಲೆ ಆತನು ದೇವಾಲಯದಲ್ಲಿ ಬೋಧಕರ ನಡುವೆ ಕುಳಿತುಕೊಂಡು ಮಾತಾಡುತ್ತಿರುವದನ್ನು ಕಂಡರು. ಆತನು ಆಡಿದ ಮಾತುಗಳನ್ನು ಕೇಳಿದವರೆಲ್ಲರೂ ಆಶ್ಚರ್ಯಪಟ್ಟರು (ವಚನ 47). ಆದರೆ ತಮಗೆ ಚಿಂತೆಯನ್ನುಂಟು ಮಾಡಿದ್ದಕ್ಕೆ ಹೆತ್ತವರು ಆತನನ್ನು ಗದರಿಸಿದರು.

**49-50** ಆದರೆ ಯೇಸು ಅವರಿಗೆ "ನಾನು ಎಲ್ಲಿರುತ್ತೇನೆಂದು ನಿಮಗೆ ತಿಳಿದಿರಬೇಕಿತ್ತು. ನಾನು ನನ್ನ ತಂದೆಯ ಮನೆಯಲ್ಲಿ ಅಂದರೆ ದೇವಾಲಯದಲ್ಲಿ ಮಾಡಬೇಕಾದ ಕಾರ್ಯಗಳಿವೆ" ಎಂದು ಉತ್ತರಿಸಿದನು. ಇದರ ಮೂಲಕವಾಗಿ ಯೇಸು ತನ್ನ ಬಾಲ್ಯದಲ್ಲಿಯೂ ಸಹ ತಾನು ದೇವರ ಕುಮಾರನು, ಮೆಸ್ಸಿಯನು ಎಂಬದನ್ನು ಬಲ್ಲವನಾಗಿದ್ದನೆಂದು ನಾವು ತಿಳಿದುಕೊಳ್ಳುತ್ತೇವೆ. ಆದರೆ ಆತನ ತಂದೆತಾಯಿಗಳು ತಮ್ಮ ಹನ್ನೆರಡು ವರ್ಷದ ಮಗನು ಮೂರು ದಿನಗಳ ತನಕ ದೇವಾಲಯದಲ್ಲಿ ಉಳಿಯ ಬೇಕಾಗಿತ್ತೆಂಬದನ್ನು ಅರ್ಥಮಾಡಿಕೊಳ್ಳಲಿಲ್ಲ.

**51-52** ಯೇಸುವಿನ ತಂದೆತಾಯಿಗಳು ತಮ್ಮೊಂದಿಗೆ ಹಿಂದಿರುಗುವಂತೆ ಆತನಿಗೆ ಹೇಳಿದಾಗ ಆತನು ಅವರಿಗೆ ಅಧೀನನಾಗಿದ್ದನು ಎಂದು ಲೂಕನು ಹೇಳುತ್ತಾನೆ. ಮತ್ತು ಯೇಸು ಜ್ಞಾನದಲ್ಲಿಯೂ, ಬಲದಲ್ಲಿಯೂ ವೃದ್ಧಿಯಾಗುತ್ತಾ ಬಂದನು.

ಇದರ ನಂತರ ಯೇಸು ಹದಿನೆಂಟು ವರ್ಷಗಳ ಬಳಿಕ ಸ್ನಾನಿಕನಾದ ಯೋಹಾನನಿಂದ ದಿಕ್ಷಾಸ್ನಾನ ಮಾಡಿಸಿಕೊಳ್ಳಲು ಬರುವ ತನಕ ಆತನ ಕುರಿತು ಅಷ್ಟಾಗಿ ತಿಳಿದು ಬಂದಿರುವದಿಲ್ಲ. ಯೇಸು ತನ್ನ ತಂದೆಯಾದ ಯೋಸೇಫನಂತೆ ಬಡಗಿಯಾಗಿರಲು ಕಲಿತು ಕೊಂಡನೆಂದು ಮಾರ್ಕ 6:3ರಿಂದ ತೋರುತ್ತದೆ (ಮತ್ತಾಯ 13:55).

---

## ಅಧ್ಯಾಯ - 3

### ಸ್ನಾನಿಕನಾದ ಯೋಹಾನನು ದಾರಿಯನ್ನು ಸಿದ್ಧಮಾಡುತ್ತಾನೆ (3:1-20)

(ಮತ್ತಾಯ 3:1-3, 7-12, ಮಾರ್ಕ 1:3-4, 7-8)

**1** ಚಕ್ರವರ್ತಿಯಾದ ತಿಬೇರಿಯನು ಕ್ರಿ..ಶ 37ರ ವರೆಗೆ ರೋಮ ಸಾಮ್ರಾಜ್ಯದ ಚಕ್ರವರ್ತಿಯಾಗಿದ್ದನು. ಹೀಗೆ ಆತನ ಆಳಿಕೆಯ ಹದಿನೈದನೆಯ ವರ್ಷವು ಸುಮಾರು ಕ್ರಿ.ಶ. 28 ಆಗಿದ್ದು, ಆ ವರ್ಷದಲ್ಲಿ ಯೋಹಾನನು ತನ್ನ ಸಾರ್ವನಿಕ ಸೇವೆಯನ್ನು ಪ್ರಾರಂಭಿಸುತ್ತಾನೆ. ಪೊಂತ್ಯ ಪಿಲಾತನು ಕ್ರಿ.ಶ. 26-36ರಲ್ಲಿ ಯೂದಾಯಕ್ಕೆ ಅಧಿಪತಿಯಾಗಿದ್ದನು. ಈತನು ಅನಂತರ ಯೇಸುವಿನ ಮರಣದಂಡನೆಗೆ ಕಾರಣನಾದನು. ಹೆರೋದನು ಯೇಸುವಿನ ಜನನದ ವೇಳೆಯಲ್ಲಿ ಆಳಿದ ಅರಸನಾದ ಹೆರೋದನ ಮಗನಾಗಿದ್ದನು (ಮತ್ತಾಯ 2:1). ಇಲ್ಲಿ ಹೆರೋದನು ಗಲಿಲಾಯದ ಉಪರಾಜನೆಂದು ಕರೆಯಲ್ಪಟ್ಟಿದ್ದಾನೆ, ಅಂದರೆ ಗಲಿಲಾಯ ಜಿಲ್ಲೆಯನ್ನು[14] ಆಳುವವನು. ಇವನು ಅನಂತರ ಸ್ನಾನಿಕನಾದ ಯೋಹಾನನ ಶಿರಛ್ಛೇದ ಮಾಡಿಸಿದನು (ಮಾರ್ಕ 6:16-17.)

**2** ಯೋಹಾನನು ಬಯಲಿಗೆ ಬಂದಾಗ ಕಾಯಫನು ಯೆಹೂದ್ಯ ಮಹಾ ಯಾಜಕನಾಗಿದ್ದನು. ಕಾಯಫನ ಮಾವನಾದ ಅನ್ನನು ಅವನಿಗಿಂತ ಮುಂಚೆ ಮಹಾಯಾಜಕನಾಗಿದ್ದನು. ಆದರೆ ರೋಮಾಯರು ಅವನನ್ನು ವಜಾಮಾಡಿದ್ದರು. ಹಾಗಿದ್ದರೂ, ಜನರು ಆಗಲೂ ಅವನನ್ನು ಒಬ್ಬ ಮಹಾಯಾಜಕನಂತೆ ಪರಿಗಣಿಸಿದರು. ಮತ್ತು ಅವನು ಪ್ರಭಾವ ಬೀರುವದನ್ನು ಮುಂದುವರೆಸಿದನು (ಯೋಹಾನ 18:12-13, ಅ.ಕೃತ್ಯ 4:6).

**3-6** ಮಾರ್ಕ 1:3-4 ಮತ್ತು ವ್ಯಾಖ್ಯಾನ ನೋಡಿರಿ.

**7-9** ಮತ್ತಾಯ 3:7-10 ಮತ್ತು ವ್ಯಾಖ್ಯಾನ ನೋಡಿರಿ.

**10** ಯೋಹಾನನ ಬೋಧನೆಯು ಯೆಹೂದ್ಯರಿಗೆ ಹೊಸತಾಗಿತ್ತು. ಜನರು ಮೊದಲು ಪಶ್ಚಾತಾಪ ಹೊಂದಿ ನಂತರ ದೀಕ್ಷಾಸ್ನಾನ ಪಡೆಯಬೇಕೆಂದು ಆತನು ಹೇಳಿದನು. ಯೆಹೂದ್ಯರು ತಮ್ಮ ಧರ್ಮವನ್ನು ಅನುಸರಿಸಲು ಇಚ್ಛಿಸುವ ಅನ್ಯಜನರಿಗೆ ದೀಕ್ಷಾಸ್ನಾನ ಮಾಡಿಸುತ್ತಿದ್ದರು. ಆದರೆ ಅವರು ತಮಗೆ ದೀಕ್ಷಾಸ್ನಾನ ಅಗತ್ಯ ವಿದೆಯೆಂದು ಯೋಚಿಸಲಿಲ್ಲ. ಅವರು ತಾವು ದೇವರು ಆರಿಸಿಕೊಂಡ ಅಬ್ರಹಾಮನ ಸಂತತಿಯವರೂ ಆಗಿರುವದರಿಂದ ತಮ್ಮನ್ನು ನೀತಿವಂತರೆಂದು ಪರಿಗಣಿಸಿದ್ದರು. ಅನ್ಯಜನರಿಗೆ ದೀಕ್ಷಾಸ್ನಾನ ಅವಶ್ಯಕ, ಯಾಕೆಂದರೆ "ಅವರು ಪಾಪಿಗಳು" ಎಂದು ಯೆಹೂದ್ಯರು ಹೇಳಿದರು (ಗಲಾತ್ಯ 2:15). ಆದರೆ ಯೆಹೂದ್ಯರು ತಾವು ಈ ರೀತಿಯಲ್ಲಿ[15] ಪವಿತ್ರಗೊಳ್ಳುವದರ ಅಗತ್ಯತೆ ಇಲ್ಲ ಎಂದು ಯೋಚಿಸಿಕೊಂಡರು. ಹೇಗಿದ್ದರೂ, ಅನೇಕ ಯೆಹೂದ್ಯರು ಯೋಹಾನನ ಬೋಧನೆಯನ್ನು ಸ್ವೀಕರಿಸಿ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಬಂದರು. ಅವರು ದೇವರಿಗೆ ನ್ಯಾಯತೀರ್ಪಿನಿಂದ ಕಾಪಾಡಿಕೊಳ್ಳಬಹುದೆಂದು ಅವರು ಯೋಚಿಸಿಕೊಂಡರು. ಆದರೆ ಯೆಹೂದ್ಯರಲ್ಲಿ ಅನೇಕರು ಯಥಾರ್ಥವಾಗಿಲ್ಲ ಎಂದು ಯೋಹಾನನಿಗೆ ಗೊತ್ತಿತ್ತು. ವಿಶೇಷವಾಗಿ ಅವರಲ್ಲಿ ಫರಿಸಾಯರು ಮತ್ತು ಸದ್ದುಕಾಯರು ಪ್ರಾಮಾಣಿಕರಾಗಿಲ್ಲವೆಂದು ತಿಳಿದುಕೊಂಡನು. (ಮತ್ತಾಯ 3:7 ಮತ್ತು ವ್ಯಾಖ್ಯಾನ ನೋಡಿರಿ). ಅವರು ದೀಕ್ಷಾಸ್ನಾನವು ಕೂಡಾ ಯೆಹೂದ್ಯರ ಇತರ ಪದ್ದತಿಗಳಂತೆ ಒಂದು ಹೊರಗಿನ ಆಚಾರವೆಂದಷ್ಟೇ ಪರಿಗಣಿಸಿದರು. ಆದರೆ ಅವರು ನಿಜವಾಗಿಯೂ ಪಶ್ಚಾತಾಪಪಡಬೇಕು ಮತ್ತು ನಿಜವಾಗಿಯೂ ಪಶ್ಚಾತಾಪ ಹೊಂದಲು ಅವರು ಪಶ್ಚಾತಾಪದ ಕಾರ್ಯಗಳನ್ನು ಮಾಡಬೇಕು ಎಂದು ಯೋಹಾನನು ಹೇಳಿದನು (ವಚನ 8). ಆದುದರಿಂದ ಇಲ್ಲಿ ಯೆಹೂದ್ಯರು 10ನೇ ವಚನದಲ್ಲಿ ಯೋಹಾನನಿಗೆ "ಹಾಗಾದರೆ ನಾವೇನು ಮಾಡಬೇಕು" ಎಂದು ಕೇಳುತ್ತಾರೆ.

**11** ಯೋಹಾನನು ಅವರಿಗೆ ಅವರು ಪ್ರೀತಿಯ ಕಾರ್ಯಗಳನ್ನು ಮಾಡಬೇಕೆಂದು ಹೇಳಿದನು. ಅವರು ತಮ್ಮ ನೆರೆಯವನನ್ನು ಪ್ರೀತಿಸಬೇಕು (ಮಾರ್ಕ 12:31). ನೆರೆಯವನು ತಮಗೆ ಮಾಡಬೇಕೆಂದು ಬಯಸುವದನ್ನು ಅವರು ಆತನಿಗೂ ಮಾಡಬೇಕು (ಮತ್ತಾಯ 7:12). ಅವರು ತಮ್ಮ ವಸ್ತುಗಳನ್ನು ಅಗತ್ಯದಲ್ಲಿರುವವರೊಂದಿಗೆ ಹಂಚಿಕೊಳ್ಳಬೇಕು (ಯಾಕೋಬ 2:14-16).

**12-13** ಸುಂಕದವರು[16] ಸಹ ನಾವೇನು ಮಾಡಬೇಕೆಂದು ಕೇಳಿದರು. ಸುಂಕದವರಲ್ಲಿ ಅನೇಕರು ಜನರನ್ನು ವಂಚಿಸುತ್ತಿದ್ದರು, ಅದರ ಫಲಿತವಾಗಿ ಜನರು ಅವರನ್ನು ದ್ವೇಷಿಸಿ ಪಾಪಿಗಳೆಂದು ಕರೆಯುತ್ತಿದ್ದರು.
ಯೋಹಾನನು ಸುಂಕವಸೂಲಿಯನ್ನು ನಿಲ್ಲಿಸಬೇಕೆಂದು ಅವರಿಗೆ ಹೇಳಲಿಲ್ಲ. ಸುಂಕ ವಸೂಲಿಮಾಡುವದು ಒಂದು ಪಾಪವಾಗಿರಲಿಲ್ಲ (ಮಾರ್ಕ 12:17 ನೋಡಿರಿ.) ಆದರೆ ಆತನು ಅವರು ಪ್ರಮಾಣಿಕರಾಗಿರಬೇಕೆಂದು ಹೇಳಿದನು.

**14** ಯೋಹಾನನು ಸಿಪಾಯಿಗಳಿಗೂ ಅದೇ ರೀತಿಯ ಸಲಿಹೆಯನ್ನು ನೀಡಿದನು. ಈ ಸಿಪಾಯಿಗಳು ಗಲಿಲಾಯದ ಉಪರಾಜನಾದ ಹೆರೋದನ ಸೇವೆಯಲ್ಲಿದ್ದ ಯೆಹೂದ್ಯ ಸಿಪಾಯಿಗಳಾಗಿದ್ದರು. ಯೋಹಾನನು ಅವರಿಗೆ ಹೇಳಿದಮೂರು ಸಂಗತಿಗಳನ್ನು ಗಮನಿಸಿರಿ: ಮೊದಲನೆಯದು,"ಯಾರ ಮೇಲೆಯೂ ಸುಳ್ಳುದೂರು ಮಾಡದಿರಿ" ಎರಡನೆಯದು, "ದುಡ್ಡನ್ನು ಕಸಕೊಳ್ಳಬೇಡಿರಿ", ಮೂರನೆಯದಾಗಿ "ನಿಮ್ಮ ಸಂಬಳದಲ್ಲಿ ತೃಪ್ತರಾಗಿರಿ" ಎಂದು. ಅಂದರೆ ನಿನಗಾಗಿ "ಹೆಚ್ಚಿನ ಲಾಭಗಳಿಗಾಗಿ ದೂರು ಮಾಡದಿರು ಅಥವಾ ಹುಡುಕದಿರು" ಎಂದು ಹೇಳಿದನು. ಯೋಹಾನನ ಮಾತು ಸಿಪಾಯಿಗಳಿಗೆ ಮಾತ್ರವಲ್ಲ, ಆದರೆ ನಮ್ಮೆಲ್ಲರಿಗೂ ಅನ್ವಯಿಸುತ್ತವೆ.

**15** ಯೋಹಾನನು ಮೆಸ್ಸಿಯನೇ ಆಗಿದ್ದಾನೆಂದು ಅನೇಕ ಯೆಹೂದ್ಯರು ಯೋಚಿಸಲಾರಂಭಿಸಿದರು. ಆದರೆ ತಾನು ಮೆಸ್ಸಿಯನಲ್ಲ ವೆಂದು ಆತನು ತಕ್ಷಣವೇ ತಿಳಿಸಿದನು (ಯೋಹಾನ 1:19-20). "..ನನಗಿಂತ ಶಕ್ತನು ಬರುತ್ತಾನೆ" ಎಂದು ಯೋಹಾನನು ಹೇಳಿದನು (ವಚನ. 16).

**16** ಮಾರ್ಕ 1:7-8 ಮತ್ತು ವ್ಯಾಖ್ಯಾನ ನೋಡಿರಿ.

**17-18** ಮತ್ತಾಯ 3:12 ಮತ್ತು ವ್ಯಾಖ್ಯಾನ ನೋಡಿರಿ.

**19-20** ಮಾರ್ಕ 6:1718 ಮತ್ತು ವ್ಯಾಖ್ಯಾನ ನೋಡಿರಿ. ಯೇಸುವಿನ ದೀಕ್ಷಾಸ್ನಾನ (3:21-22) (ಮತ್ತಾಯ 3:13-17, ಮಾರ್ಕ 1:9-11.)

**21-22** ಮಾರ್ಕ 1:9-11 ಮತ್ತು ವ್ಯಾಖ್ಯಾನ ನೋಡಿ.ರಿ ಯೇಸುವಿನ ವಂಶಾವಳಿ (3:23-38). (ಮತ್ತಾಯ 1:1-17).

**23-38** ಮತ್ತಾಯ 1:1-17 ಮತ್ತು ವ್ಯಾಖ್ಯಾನ ನೋಡಿರಿ

## ಅಧ್ಯಾಯ – 4

### ಯೇಸುವಿನ ಶೋಧನೆ (4:1-13)

(ಮತ್ತಾಯ 4:1-17)

**1-13** ಮತ್ತಾಯ 4:1-17 ಮತ್ತು ವ್ಯಾಖ್ಯಾನ ನೋಡಿರಿ.

### ಯೇಸು ನಜರೇತಿನಲ್ಲಿ ತಿರಸ್ಕರಿಸಲ್ಪಟ್ಟದ್ದು (4:14-30)

**14-15** ಯೇಸು ದೀಕ್ಷಾಸ್ನಾನ ಹೊಂದಿದಾಗ ಪವಿತ್ರಾತ್ಮನು ಅವನ ಮೇಲೆ ಇಳಿದು ಬಂದನು (ಲೂಕ 3:22). ಆತನು ಪವಿತ್ರಾತ್ಮನಿಂದ ತುಂಬಿದವನಾದನು (ವಚನ 1). ಆತ್ಮದಿಂದ ತುಂಬಿಸಲ್ಪಟ್ಟವನಾಗಿ ಯೇಸು ತನಗೆ ಸೈತಾನನು ತಂದ ಶೋಧನೆಯನ್ನು ಎದುರಿಸಲು ಸಿದ್ದನಾದನು (ವಚನ 3:13). ಬಳಿಕ ಆತನು ಸೈತಾನನನ್ನು ಎದುರಿಸಿ ಆತನ ಮೇಲೆ ಜಯಹೊಂದಿದ ನಂತರ ಪವಿತ್ರಾತ್ಮನ ಶಕ್ತಿಯಿಂದ ಕೂಡಿದವನಾಗಿ ಗಲಿಲಾಯಕ್ಕೆ ಹಿಂದಿರುಗಿದನು (ವಚನ 14).

ನಾವು ಸೈತಾನನನ್ನು ಎದುರಿಸಿದಾಗ (ಪಾಪ ಮತ್ತು ಪಾಪಮಯ ಇಚ್ಚೆಗಳಿಂದ ತಿರಿಗಿಕೊಳ್ಳುವಾಗ) ಪವಿತ್ರಾತ್ಮನ ಶಕ್ತಿಯು ನಮ್ಮಲ್ಲಿ ಪೂರ್ಣವಾಗಿ ಬಿಡುಗಡೆ ಮಾಡಲ್ಪಡುತ್ತದೆ. ಆದರೆ ಒಂದು ಅಂಶದಲ್ಲಿ ನಾವು ಸೈತಾನನಿಗೆ ಒಳಗಾಗುವದಾದರೆ ಆ ಬಲವನ್ನು ಕಳೆದು ಕೊಳ್ಳುತ್ತೇವೆ. ಯೇಸು ಪವಿತ್ರಾತ್ಮನ ಶಕ್ತಿಯ ಮೂಲಕ ಮಹತ್ಕಾರ್ಯಗಳನ್ನು ಮಾಡಿದನು. ಆತನು ತನ್ನ ಶಿಷ್ಯರಿಗೆ ಪವಿತ್ರಾತ್ಮನು ಬಂದು ನಿಮಗೆ ಬಲವನ್ನು ಕೊಡುವ ತನಕ ಕಾದುಕೊಂಡಿರಿ ಎಂದು ಹೇಳಿದನು (ಲೂಕ 24:49, ಅ.ಕೃತ್ಯ 1:8 ಮತ್ತು ವ್ಯಾಖ್ಯಾನ ನೋಡಿರಿ) ಅದರ ಬಳಿಕ ಮಾತ್ರವೇ ಅವರು ಆತನಿಗಾಗಿ ಬಲವಾದ ಸಾಕ್ಷಿಗಳಾಗಿರಲು ಸಾದ್ಯವಾಯಿತು. ಪವಿತ್ರಾತ್ಮನ ಶಕ್ತಿಯಿಲ್ಲದೆ ಕ್ರಿಸ್ತನ ಹಿಂಬಾಲಕನು ದೇವರಿಗಾಗಿ ಪರಿಣಾಮಕಾರಿಯಾಗಿ ಕೆಲಸ ಮಾಡಲಾಗುವದಿಲ್ಲ. ಪವಿತ್ರಾತ್ಮನಿಲ್ಲದೆ ನಮ್ಮ ಬೋಧನೆ ಮತ್ತು ಉಪದೇಶ ಬಲವಿಲ್ಲದ್ದಾಗಿರುತ್ತದೆ. ಈ ಕಾರಣದಿಂದಲೇ ಯೇಸು ಜನರಿಗೆ ಉಪದೇಶಿಸಿದಾಗ ಅವರು ಆಶ್ಚರ್ಯಗೊಂಡರು. ಮತ್ತು ಆತನ ಸುದ್ದಿಯ ಎಲ್ಲೆಡೆಯೂ ಹರಡಿತು ( ಮತ್ತಾಯ 7:28-29 ಮತ್ತು ವ್ಯಾಖ್ಯಾನ ನೋಡಿರಿ).

**16-17** ಈ 16-30 ವಚನಗಳ ಭಾಗದಲ್ಲಿ ಬಣ್ಣಿಸಲಾಗಿರುವ ನಜರೇತಿನ ಬೇಟಿ ಮತ್ತು ಮತ್ತಾಯ 13:58 ಹಾಗು ಮಾರ್ಕ 6:1-6 ರಲ್ಲಿ [17] ಬಣ್ಣಿಸಲ್ಪಟ್ಟಿರುವ ನಜರೇತಿನ ಬೇಟಿ ಎರಡೂ ಒಂದೇ ಆಗಿದೆ ಎಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ. ಈ ಕಥೆಯು ಯೇಸುವಿನ ಸೇವೆಯ ಉದ್ದೇಶವನ್ನು ಸ್ಪಷ್ಟವಾಗಿ ವಿವರಿಸುವದರಿಂದ ಲೂಕನು ಇದನ್ನು ಸುವಾರ್ತೆಯ ಪ್ರಕಾರವಾಗಿ ಯೇಸು ಮೊದಲು ಕೆಪೆರ್ನ್ನಾಮಿನಂತಹ ಇತರ ಪಟ್ಟಣಗಳಿಗೆ ಹೋಗಿ ನಂತರ ನಜರೇತಿಗೆ ಬಂದನು.

ಯೆಹೂದ್ಯರು ಪ್ರತಿ ಊರಿನಲ್ಲಿಯೂ ಸಭಾ ಮಂದಿರಗಳಲ್ಲಿ ಧಾರ್ಮಿಕ ಆರಾಧನೆಗಳನ್ನು ನಡೆಸಿದರು. ಆರಾಧನೆಯು ಪ್ರತಿ ಶನಿವಾರದಂದು (ಸಬ್ಬತ್ತಿನಂದು) ನಡೆಯುತ್ತಿತ್ತು. ಆರಾಧನೆಯ ವೇಳೆ ಹಳೆ ಒಡಂಬಡಿಕೆಯ ಸುರುಳಿಯೊಂದನ್ನು[18] ಓದುವ ಪದ್ದತಿಯಿತ್ತು. ಹಲವಾರು ವೇಳೆಗಳಲ್ಲಿ ಸಭಾಮಂದಿರಕ್ಕೆ ಹೊಸದಾಗಿ ಬಂದ ಸಂದರ್ಶಕರನ್ನು ಓದಿ ಅದರ ಬಗ್ಗೆ ಏನಾದರೂ ಹೇಳುವಂತೆ ಆಮಂತ್ರಿಸಲಾಗುತಿತ್ತು (ಅ.ಕೃತ್ಯ 114-15, 42, 17:1-4).

**18-19** ಯೇಶಾಯ ಪ್ರವಾದಿಯ ಸುರುಳಿಯನ್ನು ಓದುವಂತೆ ಯೇಸುವಿನ ಕೈಯಲ್ಲಿ ಕೊಡಲಾಯಿತು. ಆತನು ಯೇಶಾಯ 61:1-2 ರಿಂದ ಓದಿದನು, ಅದು ಯೇಶಾಯನು ಮೆಸ್ಸಿಯನ ಕುರಿತುಮಾಡಿದ ಪ್ರವಾದನೆಯಾಗಿತ್ತು. ಹೀಗೆ ಯೇಸು ಅದನ್ನು ಓದುವಾಗ ನಿಜವಾಗಿಯೂ ತನ್ನ ಕುರಿತಾಗಿಯೇ ಮಾತನಾಡುತ್ತಿದ್ದನು.

ದೇವರ ಆತ್ಮನು ನನ್ನ ಮೇಲಿದ್ದಾನೆ (ವಚನ 18) ಯೇಸು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟು ಬಲಹೊಂದಿದವನಾಗಿದ್ದನು (1,14 ವಚನಗಳು). ಆತನಿಗೆ ಪವಿತ್ರಾತ್ಮನನ್ನು ಅಳತೆ ಮಾಡದೆ ನೀಡಲಾಗಿತ್ತು (ಯೋಹಾನ 3:34). ಆತನು ನನ್ನನ್ನು ಬಡವರಿಗೆ ಶುಭ ವರ್ತಮಾನವನ್ನು ಸಾರುವದಕ್ಕೆ ಅಭಿಷೇಕಿಸಿದನು. ಯೇಸು "ಅಭಿಷೀಕ್ತ"ನಾಗಿದ್ದನು ಅಂದರೆ ಮೆಸ್ಸಿಯನು, ಕ್ರಿಸ್ತನು (ಲೂಕ2 :25). ಇಲ್ಲಿ ಬಡವರು ಎಂದರೆ ಸ್ವತ್ತುಗಳಲ್ಲಿ ಬಡವರು ಮಾತ್ರವೇ ಅಲ್ಲ, ಆದರೆ ಆತ್ಮದಲ್ಲಿಯೂ ಬಡವರು (ಮತ್ತಾಯ 5:3). ಆತ್ಮದಲ್ಲಿ ಬಡವರಾಗಿರುವವರೇ ರಕ್ಷಣೆಯ ಸುವಾರ್ತೆಯನ್ನು ಸಂತೋಷವಾಗಿ ಸ್ವೀಕರಿಸುತ್ತಾರೆ. ಆತನು ನನ್ನನ್ನು ಸೆರೆಯವರಿಗೆ ಬಿಡುಗಡೆಯನ್ನು ಸಾರುವದಕ್ಕೆ ನನ್ನನ್ನು ಕಳುಹಿಸಿದ್ದಾನೆ. ಇವರು ನಿಜವಾಗಿಯೂ ಸೆರೆಮನೆಯಲ್ಲಿ ರುವ ಸೆರೆಯಾಳುಗಳು ಮಾತ್ರವೇ ಅಲ್ಲ ಆದರೆ ಅವರು ಆತ್ಮೀಕವಾಗಿ ಪಾಪದ, ಸೈತಾನನ ಸೆರೆಯಾಳುಗಳೂ ಸಹ ಆಗಿದ್ದಾರೆ. ಕ್ರಿಸ್ತನು ಅವರನ್ನು ಬಿಡುಗಡೆಗೊಳಿಸಲು ಅಂದರೆ ಅವರ ಪಾಪಗಳನ್ನು ಕ್ಷಮಿಸಲು ಬಂದನು (ಮಾರ್ಕ2:5, 10-12). ಕ್ರಿಸ್ತನು ಕುರುಡರಿಗೆ ಕಣ್ಣು ದೃಷ್ಟಿಯನ್ನು ಒದಗಿಸಲು ಕಳುಹಿಸಲ್ಪಟ್ಟನು. ಆತನು ಮಾನವರ ದೈಹೀಕ ಕಣ್ಣುಗಳನ್ನು ತೆರೆಯುವದು ಮಾತ್ರವಲ್ಲದೆ ಅವರ ಆತ್ಮಿಕ ಕಣ್ಣುಗಳನ್ನು ಸಹ ತೆರೆಯುತ್ತಾನೆ. ಆತನು ಮನಮುರಿದವರನ್ನು [19] ಬಿಡಿಸುವದಕ್ಕೆ ಕಳುಹಿಸಲ್ಪಟ್ಟನು. ಜನರು ಅವರನ್ನು ಆಳುತ್ತಿದ್ದ ರೋಮಾಯರಿಂದಲೂ, ಅವರ ಸ್ವಂತ ಕಪಟಿಗಳಾದ ಧಾರ್ಮಿಕ ನಾಯಕರಿಂದಲೂ

ಶ್ರೀಮಂತ ಮತ್ತು ಬಲಿಷ್ಠರಿಂದಲೂ ದಬ್ಬಾಳಿಕೆಗೆ ಒಳಗಾಗಿದ್ದರು. ಆದರೆ ಅವರು ಭಯ ಮತ್ತು ಸಂಶಯ ಹಾಗು ಪಾಪಮಯ ಇಚ್ಛೆಗಳಿಂದಲೂ ಸಹ ಮನಮುರಿದವರಾಗಿದ್ದರು. ಕ್ರಿಸ್ತನು ಅವರಿಗೆ ಬಿಡುಗಡೆ, ಸಮಾಧಾನ, ಆನಂದವನ್ನು ನೀಡುವವನಾಗಿದ್ದಾನೆ. ಅಂತಿಮವಾಗಿ ಕ್ರಿಸ್ತನು, ಕರ್ತನು ನೇಮಿಸಿರುವ ಶುಭವರ್ಷವನ್ನು ಪ್ರಚುರಪಡಿಸುವದಕ್ಕೆ ಕಳುಹಿಸಲ್ಪಟ್ಟನು. ಅಂದರೆ ಇಸ್ರಾಯೇಲ ಜನವನ್ನು ಸಂತೈಸುವವನಾದ ಮೆಸ್ಸಿಯನ ಬರೋಣವನ್ನು ಪ್ರಚುರಪಡಿಸಲು (ಲೂಕ 2:25).

**25** ಸಭಾಮಂದಿರದಲ್ಲಿದ್ದ ಪ್ರತಿಯೊಬ್ಬರು ಯೇಸು ಈ ಮಾತುಗಳನ್ನು ಓದುವ ರೀತಿಗೆ ಆಶ್ಚರ್ಯಪಟ್ಟರು. ಯೇಶಾಯನ ಗ್ರಂಥದ ಈ ವಾಕ್ಯಗಳನ್ನು ಓದುವು ದನ್ನು ಇದಕ್ಕೆ ಮುಂಚೆ ಅನೇಕಸಾರಿ ಕೇಳಿದ್ದರು. ಆದರೆ ಆ ವಾಕ್ಯಗಳನ್ನು ಈ ವಿಧದಲ್ಲಿ ಓದಿದ್ದನ್ನು ಎಂದಿಗೂ ಕೇಳಿರಲಿಲ್ಲ! ಅವು ಗಳನ್ನು ಸ್ವತ: ಪ್ರವಾದಿಯಾದ ಯೇಶಾಯನೇ ಮಾತಾಡುತ್ತಿದ್ದಾನೇನೊ ಎಂಬಂತಿತ್ತು (ಇಲ್ಲ, ಆವನಿಗಿಂತಲೂ ಹೆಚ್ಚಿನವನಾದ ಸ್ವತಃ ಮೆಸ್ಸಿಯನೇ). ಅನ್ಯಜನಾಂಗದ ವಿಧವೆ ಬಳಿಗೆ ಹೋಗಿ ವಾಸಿಸಿದನು ಎಂಬದನ್ನು ಯೇಸು ಅವರಿಗೆ ಜ್ಞಾಪಕಕ್ಕೆ ತಂದನು (1 ಅರಸು 17:7-16).

**27** ಅದೇ ರೀತಿಯಲ್ಲಿ ಯೆಹೂದ್ಯರು ಪ್ರವಾದಿಯಾದ ಎಲೀಷನನ್ನು ನಂಬಲಿಲ್ಲ, ಆದ್ದರಿಂದ ಅವನು ಇಸ್ರಾಯೇಲರಿಗೆ ತನ್ನ ಆಶಿರ್ವಾದವನ್ನು ತಡೆಹಿಡಿದು ಬದಲಾಗಿ ಆತನು ಅನ್ಯಜನಾಂಗದವನಾದ ಕುಷ್ಟರೋಗಿಯೊಬ್ಬನನ್ನು ಗುಣಪಡಿಸಿದನು (2 ಅರಸು 5:1-15). ಯೇಸುವಿನ ಮಾತಿನ ಅರ್ಥವು ಏನಾಗಿತ್ತೆಂದರೆ: ಒಂದು ವೇಳೆ ಯೆಹೂದ್ಯರು ಎಲೀಯ ಮತ್ತು ಎಲೀಷರನ್ನು ತಿರಸ್ಕರಿಸಿದ ಹಾಗೆ ತನ್ನನ್ನು ಸ್ವೀಕರಿಸದೇ ಹೋದರೆ ಆತನು ಸಹ ಅವರನ್ನು ತಿರಸ್ಕರಿಸಿ ಅನ್ಯ ಜನಾಂಗದೆಡೆಗೆ ತಿರಿಗಿಕೊಳ್ಳುವನು ಎಂಬದಾಗಿತ್ತು (ಮತ್ತಾಯ 21:43 ನೋಡಿರಿ). ನಿಜವಾಗಿಯೂ, ಯೇಸು ಹಲವಾರು ವೇಳೆ ಯೆಹೂದ್ಯರಿಗಿಂತಲೂ ಅನ್ಯಜನರ ಮದ್ಯದಲ್ಲಿಯೇ ಹೆಚ್ಚು ನಂಬಿಕೆಯನ್ನು ಕಂಡುಕೊಂಡನು (ಮತ್ತಾಯ 8:8-10).

**28-30** ನಜರೇತಿನ ಜನರಿಗೆ ಇನ್ನು ಯೇಸುವಿನ ಮಾತುಗಳನ್ನು ಸಹಿಸಿಕೊಳ್ಳಲಾಗಲಿಲ್ಲ. ಅವರು, ಅವನನ್ನು ಊರಿನ ಹತ್ತಿರದಲ್ಲಿದ್ದ ಒಂದು ಗುಡ್ಡದ ತುದಿಯಿಂದ ನೂಕಿ ಕೊಲ್ಲಲು ಪ್ರಯತ್ನಿಸಿದರು. ಆದರೆ ಆತನು ಅದ್ಭುತಕರವಾಗಿ ಅವರಿಂದ ಪಾರಾದನು (ಯೋಹಾನ 8:59, 10:39). ಆತನು ಸಾಯಲು ಅದು ದೇವರ ಸಮಯವಾಗಿರಲಿಲ್ಲ.

## ಯೇಸು ದುರಾತ್ಮವನ್ನು ಹೊರಡಿಸಿದ್ದು (4:31-37) (ಮಾರ್ಕ 1:21-28)

**31-37** ಮಾರ್ಕ 1:21-28 ಮತ್ತು ವ್ಯಾಖ್ಯಾನ ನೋಡಿ.

## ರಿ ಯೇಸು ಅನೇಕರನ್ನು ಗುಣಪಡಿಸಿದ್ದು (4:38-44)

(ಮತ್ತಾಯ 8:14-17, ಮಾರ್ಕ 1:29-39)

**38-44** ಮಾರ್ಕ 1:29-39 ಮತ್ತು ವ್ಯಾಖ್ಯಾನ ನೋಡಿರಿ.

# ಅಧ್ಯಾಯ - 5

## ಪ್ರಥಮ ಶಿಷ್ಯರನ್ನು ಕರೆಯುವಿಕೆ (5:1-11)

(ಮತ್ತಾಯ 4:18-22, ಮಾರ್ಕ 16-20)

**1-3** ಈ ವಚನಗಳಲ್ಲಿ ಯೇಸು ತನ್ನ ಪ್ರಥಮ ನಾಲ್ವರು ಶಿಷ್ಯರನ್ನು ಹೇಗೆ ಕರೆದನೆಂಬುದನ್ನು ಲೂಕನು ಬಣ್ಣಿಸುತ್ತಾನೆ. ಮಾರ್ಕನ ಬಣ್ಣನೆಯು ಕ್ಲುಪ್ತವಾಗಿದೆ (ಮಾರ್ಕ 1:16-20 ನೋಡಿರಿ).

ಯೇಸು ಗೆನೆಜರೇತ ಕೆರೆಯ ಅಂಚಿಗೆ ಬಂದನು. ಅದು ಗಲಿಲಾಯ ಸಮುದ್ರವಾಗಿದೆ. ಮೊದಲು ಯೇಸು ಸಿಮೋನನ (ಪೇತ್ರನ) ದೋಣಿಯಲ್ಲಿ ಕುಳಿತು ಜನರಿಗೆ ಬೋಧಿಸಿದನು. ಪೇತ್ರ ಮತ್ತು ಆತನೊಂದಿಗಿದ್ದ ಇತರರು ಯೇಸುವಿನ ಬೋಧನೆಯನ್ನು ಕೇಳಿ ಎಲ್ಲರಂತೆಯೇ ಸಹಜವಾಗಿ ಸಂಶಯವಿಲ್ಲದೆ ಆಶ್ಚರ್ಯಗೊಂಡರು.

**4-5** ಆದುದರಿಂದ, ಯೇಸು ಪೇತ್ರನಿಗೆ ಒಂದು ಅಸಹಜವಾದ ಮತ್ತು ನಿಷ್ಪ್ರಯೋಜಕದಂತೆ ತೋರುತ್ತಿದ್ದ ಆಜ್ಞೆಯನ್ನು ನೀಡಿದಾಗ, ಪೇತ್ರನು ವಿಧೇಯನಾಗಲು ಸಿದ್ದನಾಗಿದ್ದನು. ಯೇಸು "....ನಿಮ್ಮ ಬಲೆಗಳನ್ನು ಹಾಕಿರಿ"ಎಂದನು. ಆದರೆ ತಾವು ಏನನ್ನು ಹಿಡಿಯಲಾಗಲಿಲ್ಲವಾಂದು ಪೇತ್ರನಿಗೆ ತಿಳಿದಿತ್ತು. ಆತನು ಮತ್ತು ಅವನ ಸಹ ಪಾರಿಗಳು ರಾತ್ರಿಯೆಲ್ಲಾ ಪ್ರಯಾಸ ಪಟ್ಟರೂ ಅವರಿಗೆ ಒಂದು ಮೀನು ಸಿಕ್ಕಿರಲಿಲ್ಲ. ಮತ್ತು ಯೇಸು ಒಬ್ಬ ಬೇಸ್ತನೂ ಸಹ ಆಗಿರಲಿಲ್ಲ, ಅವನೊಬ್ಬ ಬಡಗಿಯವನಾಗಿದ್ದನು.

ಸಭಾಪಾಲಕರು ಮತ್ತು ಬೋಧಕರಲ್ಲಿ ದೀರ್ಘಕಾಲ ಮತ್ತು ಪರಿಶ್ರಮದಿದ ಕೆಲಸ ಮಾಡಿದರೂ ಏನನ್ನೂ "ಹಿಡಿಯದವರು" ಅನೇಕರಿದ್ದಾರೆ. ಆದರೆ ಎಡೆಬಿಡದೆ "ನಿಮ್ಮ ಬಲೆಗಳನ್ನು ಹಾಕಿರಿ" ಎಂದು ಹೇಳುತ್ತಾನೆ. ಒಂದು ಮೀನು ಸಿಕ್ಕುವದು.

**6-7** ತರುವಾಯ ಯೇಸು ಒಂದು ಅದ್ಭುತವನ್ನು ಮಾಡಿದನು. ಅವರು ತಮ್ಮ ಬಲೆಗಳನ್ನು ಎಳೆದಾಗ ಅವರ ಹಲೆಯು ಹರಿದು ಹೋಗುವಷ್ಟು ಮೀನುಗಳು ತುಂಬಿದ್ದವು.

**8** ಆಗ ಪೇತ್ರನು ಯೇಸು ಪ್ರಕೃತಿಯ ಮೇಲೆ ಅಧಿಕಾರ, ದೇವರ ಅಧಿಕಾರವನ್ನು ಹೊಂದಿದ್ದಾನೆಂದು ಗ್ರಹಿಸಿಕೊಂಡನು. ಆತನು ಕರ್ತನಾಗಿದ್ದನು. ಮತ್ತು ಪೇತ್ರನು ತಾನು ಅಯೋಗ್ಯನೂ, ಪಾಪಿಯೂ ಎಂಬುದನ್ನು ಯೇಸುವಿನಂತಹ ವ್ಯಕ್ತಿಯ ಮುಂಭಾಗದಲ್ಲಿ ಅರಿತುಕೊಂಡನು (ಯೇಶಾಯ 6:5).

ಪೇತ್ರನು ಯೇಸುವಿಗೆ "ಕರ್ತನೇ ನಾನು ಪಾಪಾಪತ್ಮನು, ನನ್ನನ್ನು ಬಿಟ್ಟು ಹೋಗಬೇಕು, ನಿನ್ನ ಪ್ರಸನ್ನತೆಯಲ್ಲಿರಲು ನಾನು ಯೋಗ್ಯನಲ್ಲ"... ಎಂದನು.

ಪೇತ್ರನು ಇತರರಿಗಿಂತಲೂ ಹೆಚ್ಚು ಪಾಪಿಯೇನಾಗಿರಲಿಲ್ಲ. ಪಾಪರಹಿತನಾದ ಯೇಸುವಿನೊಂದಿಗೆ ಹೋಲಿಸಿದರೆ ನಾವೆಲ್ಲರೂ ಪಾಪಿಗಳಾಗಿದ್ದು ಆತನ ಪ್ರಸನ್ನತೆಯೊಳಗೆ ಬರಲು ಅಯೋಗ್ಯರಾಗಿದ್ದೇವೆ. ಈ ಅಯೋಗ್ಯತೆಯನ್ನು ಪಾಪಮಯತೆಯನ್ನು ಅನುಭವಿಸದಿರುವ ಯಾವನಾದರೂ ಇರುವದಾದರೆ ಆವ್ಯಕ್ತಿಯು ಯೇಸುವನ್ನು ತಿಳಿದಿಲ್ಲದವನಾಗಿದ್ದಾನೆ.

**9-11** ಮಾರ್ಕ 1:17-20 ಮತ್ತು ವ್ಯಾಖ್ಯಾನ ನೋಡಿರಿ.

### ಒಬ್ಬ ಕುಷ್ಟರೋಗಿಯಾದ ವ್ಯಕ್ತಿ (5:12-16)

(ಮತ್ತಾಯ 8:1-4, ಮಾರ್ಕ 1:40-45)

12-16 ಮಾರ್ಕ 1:40-45 ಮತ್ತು ವ್ಯಾಖ್ಯಾನ ನೋಡಿ.ರಿ

### ಯೇಸು ಪಾರ್ಶ್ವವಾಯು ರೋಗಿಯನ್ನು ಗುಣಪಡಿಸಿದ್ದು (5:17-26)

(ಮತ್ತಾಯ 9:1-8, ಮಾರ್ಕ 2:1-12).

**17-26** ಮಾರ್ಕ 2:1-12 ಮತ್ತು ವ್ಯಾಖ್ಯಾನ ನೋಡಿ.ರಿ

### ಲೇವಿಯನ ಕರೆಯುವಿಕೆ (5:27-32)

(ಮತ್ತಾಯ 9:9-13, ಮಾರ್ಕ 2:13-17.)

**27-32** ಮಾರ್ಕ 2:13-17 ಮತ್ತು ವ್ಯಾಖ್ಯಾನ ನೋಡಿ.ರಿ

### ಯೇಸುವನ್ನು ಉಪವಾಸದ ಕುರಿತು ಪ್ರಶ್ನಿಸಿದ್ದು (5:33-39)

(ಮತ್ತಾಯ 9:14-17, ಮಾರ್ಕ 2:18-22).

**33-39** ಮಾರ್ಕ 2:18-22 ಮತ್ತು ವ್ಯಾಖ್ಯಾನ ನೋಡಿರಿ.

---

## ಅಧ್ಯಾಯ - 6

### ಸಬ್ಬತ್ ದಿನದ ಒಡೆಯನು (6:1-5)

(ಮತ್ತಾಯ 12:1-8, ಮಾರ್ಕ 2:23-28.)

**1-5** ಮಾರ್ಕ 2:23-28 ಮತ್ತು ವ್ಯಾಖ್ಯಾನ ನೋಡಿರಿ.

### ಒಬ್ಬ ಕೈಬತ್ತಿ ಹೋಗಿದ್ದ ವ್ಯಕ್ತಿ (6:6-11)

(ಮತ್ತಾಯ 12:9-14, ಮಾರ್ಕ 3:1-6).

**6-11** ಮಾರ್ಕ 3:1-6 ಮತ್ತು ವ್ಯಾಖ್ಯಾನ ನೋಡಿ.ರಿ

### ಹನ್ನೆರಡು ಮಂದಿ ಅಪೊಸ್ತಲರು (6:12-16)

(ಮತ್ತಾಯ 10:14, ಮಾರ್ಕ 3:13-19.)

**12-16** ಮಾರ್ಕ 3:13-19 ಮತ್ತು ವ್ಯಾಖ್ಯಾನ ನೋಡಿ.ರಿ

## ಯೇಸು ಅನೇಕರನ್ನು ಗುಣಪಡಿಸಿದ್ದು (6:17-19)

(ಮತ್ತಾಯ 12:15-16, ಮಾರ್ಕ 3:7-12

**17-19** ಮಾರ್ಕ 3:7-12 ಮತ್ತು ವ್ಯಾಖ್ಯಾನ ನೋಡಿರಿ

## ಆಶೀರ್ವಾದಗಳು ಮತ್ತು ಅಳಲುಗಳು (6:20-26)

(ಮತ್ತಾಯ 5:1-12).

**20** ಮತ್ತಾಯ 5:3 ಮತ್ತು ವ್ಯಾಖ್ಯಾನ ನೋಡಿರಿ.

**21** ಮತ್ತಾಯ 5:4,6 ಮತ್ತು ವ್ಯಾಖ್ಯಾನ ನೋಡಿರಿ.

**22-23** ಮತ್ತಾಯ 5:10-12 ಮತ್ತು ವ್ಯಾಖ್ಯಾನ ನೋಡಿರಿ.

**24** ವಚನ 24-26ರಲ್ಲಿ ಯೇಸು ಮೇಲಿನ 20-22 ವಚನಗಳಲ್ಲಿ ಬರೆಯಲ್ಪಟ್ಟಿರುವ ಆಶೀರ್ವಾದಗಳಿಗೆ ತದ್ದಿರುದ್ದವಾದದ್ದನ್ನು ಪ್ರಸ್ತಾಪಿಸುತ್ತಾನೆ.

ಬಡವರಾಗಿರುವದು ಒಂದು ಧನ್ಯತೆ ಯಾಗಿರುವದಾದರೆ (ವಚನ 20) ಐಶ್ವರ್ಯವಂತರಾಗಿರುವದು ಧನ್ಯತೆಯಾಗಿರಲು ಸಾಧ್ಯವಿಲ್ಲ. ಹೌದು, ತಮಗಾಗಿ ಐಶ್ವರ್ಯವನ್ನು ಕೊಡಿಸಿಟ್ಟುಕೊಳ್ಳುವವರು ಈ ಜೀವಿತದಲ್ಲಿ ತಾತ್ಕಾಲಿಕ ಆಶೀರ್ವಾದ ಹೊಂದಿರುತ್ತಾರೆ, ಆದರೆ ಅದು ಸದಾಕಾಲ ಉಳಿಯುವದಿಲ್ಲ. ಅವರು ತಮ್ಮ ಐಶ್ವರ್ಯದಿಂದ ಪಡೆಯುವ ಆದರಣೆಯು ಅವರ ಮರಣದೊಂದಿಗೆ ಅಂತ್ಯಗೊಳ್ಳುವದು, ಮತ್ತು ಆ ಸುಖವೇ ಹೊರತು ಇನ್ನಾವ ಸುಖ ಅವರಿಗಿರುವದಿಲ್ಲ (ಮಾರ್ಕ 10:25, ಲೂಕ 12:16-21, 16-26 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ಯೇಸುವಿನ ಬೋಧನೆಯನ್ನು ಅರ್ಥ ಮಾಡಿಕೊಳ್ಳಬೇಕು. ಶ್ರೀಮಂತರಾಗಿರುವದು ಪಾಪವೇನಲ್ಲ, ಆದರೆ ಐಶ್ವರ್ಯವನ್ನು ಪ್ರೀತಿಸಿ, ನಮಗಾಗಿಯೇ ಇಟ್ಟುಕೊಳ್ಳುವದು ಒಂದು ಪಾಪವಾಗಿದೆ. ನಾವು ನಮ್ಮ ಸ್ವತ್ತು ದೇವರ ಸೇವೆಗಾಗಿ ಉಪಯೋಗಿಸದೆ ಹೋದರೆ ಅವು ಶಾಪವಾಗಿಮಾರ್ಪಡುವವು (ಯಾಕೋಬ 5:15 ಮತ್ತು ವ್ಯಾಖ್ಯಾನ ನೋಡಿರಿ). ಆದುದರಿಂದ ನಾವು ಉದಾರತೆ ಹಾಗು ಸತ್ಕಾರ್ಯಗಳಲ್ಲಿ ಐಶ್ವರ್ಯವಂತರಾಗಿರೋಣ (1 ತಿಮೊ 6:17-19 ಮತ್ತು ವ್ಯಾಖ್ಯಾನ ನೋಡಿರಿ).

**25** ನೀತಿಗಾಗಿ ಹಸಿದು ಬಾಯಾರಿದವರು ತೃಪ್ತಿಹೊಂದುವರು (ವಚನ 21). ತಾವು ಹೊಟ್ಟೆತುಂಬಿದವರೆಂದು ಎಣಿಸಿ ಕೊಳ್ಳುವವರು ಅಂದರೆ ನೀತಿವಂತರೆಂದು ಪರಿಗಣಿಸುವವರು ಶೀಘ್ರವೇ ತಮ್ಮ ತಟ್ಟೆಯಲ್ಲಿ ಆಹಾರವಿಲ್ಲದವರಾಗುತ್ತಾರೆ. ಹೊಟ್ಟೆ ತುಂಬಿದವರು ಹಸಿವೆಗೊಳ್ಳುವದಿಲ್ಲ. ಯಾರು ತಮ್ಮೊಂದಿಗೂ, ಈ ಜೀವಿತದ ಸಂಗತಿಗಳೊಂದಿಗೂ ತೃಪ್ತರಾಗಿದ್ದಾರೋ ಅವರು ಮುಂದಿನ ಜೀವಿತದ ಸಂಗತಿಗಳಿಗಾಗಿ ಹಸಿವೆಗೊಳ್ಳುವು ದಿಲ್ಲ. ಮತ್ತು ಮುಂದಿನ ಜೀವನ ಬಂದಾಗ ಅವರಂತೂ ಹಸಿವೆಗೊಳ್ಳುವರಷ್ಟೇ ! ಯೇಸು ಮಾತ್ರವೇ ಶಾಶ್ವತವಾಗಿ ಉಳಿಯುವಂತ ಆಹಾರವನ್ನು ಕೊಡಬಲ್ಲನು (ಯೋಹಾನ 6:35, 48-51 ಮತ್ತು ವ್ಯಾಖ್ಯಾನ ನೋಡಿರಿ). ತಮ್ಮ ಪಾಪಗಳಿಗಾಗಿ ದುಃಖಿಸಿ ಗೋಳಾಡುವವರು ಆದರಿಸಲ್ಪಡುವರು (ವಚನ 21). ಈಗ ನಗುವವರು ಅಂದರೆ, ತಮ್ಮ ಪಾಪಗಳ ಕುರಿತು ಚಿಂತೆಯಿಲ್ಲದವರು ನ್ಯಾಯತೀರ್ಪಿನ ದಿನದಲ್ಲಿ ದೇವರ ಮುಂಬಾಗದಲ್ಲಿ ನಿಂತುಕೊಳ್ಳುವಾಗ ಖಂಡಿತವಾಗಿಯೂ ಅಳುತ್ತಾಗೋಳಾಡುವರು.

**26** ಜನರೆಲ್ಲಾ ನಿಮ್ಮನ್ನು ಹೊಗಳಿದರೆ. ನಿಮ್ಮ ಗತಿಯನ್ನು ಏನು ಹೇಳಲಿ ಎಂತಹ ಒಂದು ಆಶ್ಚರ್ಯಕರ ಸಂಗತಿ! ನಾವೆಲ್ಲರೂ ಸಹ ಇತರರು ನಮ್ಮನ್ನು ಹೊಗಳಬೇಕೆಂದು ಇಚ್ಚಿಸುತ್ತೇವೆ. ಆದಾಗ್ಯು, ಯೇಸು ಇಲ್ಲಿ ಅವರು ನಮ್ಮನ್ನು ಹೊಗಳಿದರೆ ನಾವು ಆಶೀರ್ವದಿಸಲ್ಪಡುವದಿಲ್ಲ ಎಂದು ಹೇಳುತ್ತಾನೆ. ಯಾಕೆ? ಯಾಕೆಂದರೆ ಲೋಕದ ಜನರು ನಿಜವಾಗಿಯೂ ಕ್ರಿಸ್ತನಿಗೆ ಸೇರಿದ, ಪರಲೋಕ ರಾಜ್ಯಕ್ಕೆ ಸೇರಿದವರನ್ನು ಹೊಗಳುವದಿಲ್ಲ. ಕತ್ತಲೆಯು ಬೆಳಕನ್ನು ದ್ವೇಷಿಸುತ್ತದೆ (ಯೋಹಾನ 3:19-20). ಲೋಕವು ಅಂದರೆ ಲೋಕದ ಜನರು ಯೇಸುವನ್ನು ದ್ವೇಷಿಸಿತು. ಆದುದರಿಂದ ಲೋಕವು ಆತನ ಶಿಷ್ಯರನ್ನು ಸಹ ದ್ವೇಷಿಸುವದು (ಯೋಹಾನ 15:18-19 ಮತ್ತು ವ್ಯಾಖ್ಯಾನ ನೋಡಿರಿ). ಆದುದರಿಂದ ಲೋಕವು ನಮ್ಮನ್ನು ಹೊಗಳುವದಾದರೆ ನಾವು ನಿಜವಾಗಿಯೂ ಕ್ರಿಸ್ತನ ಹೆಜ್ಜೆಯ ಜಾಡುಗಳಲ್ಲಿ[20] ನಡೆಯುತ್ತಿಲ್ಲ ವೇನೋ ಎಂದು ನಾವು ಚಿಂತಿಸಬೇಕಾಗುತ್ತದೆ. ನಾವು ನಮ್ಮನ್ನು ಪರೀಕ್ಷಿಸಿಕೊಳ್ಳಬೇಕು. ಲೋಕವು ಮಿಥ್ಯ ಪ್ರವಾದಿಗಳನ್ನು ಹಿಂಬಾಲಿಸಿ ಹೊಗಳುತ್ತದೆ. ಲೋಕದ ಜನರು ತಮ್ಮ ಪಾಪಗಳನ್ನು ಖಂಡಿಸದ ಹಾಗು ಅವರನ್ನು ಪಶ್ಚಾತಾಪಕ್ಕೆ ಕರೆಯದೆ ಇರುವವರನ್ನು ಪ್ರಶಂಸಿಸುತ್ತಾರೆ. ಲೋಕದ ಜನರು ತಾವು ಜೀವಿಸುವ ರೀತಿಯಲ್ಲಿಯೇ ಜೀವಿಸುವವರನ್ನು ಹೊಗಳುತ್ತಾರೆ. ಲೋಕದ ಹೊಗಳಿಕೆಯಿಂದ ನಾವು ಎಚ್ಚರಿಕೆಯಾಗಿರೋಣ!

## ವೈರಿಗಳನ್ನು ಪ್ರೀತಿಸಿ (6:27-36)

(ಮತ್ತಾಯ 5:38-48, 7:12).

**27-28** ಮತ್ತಾಯ 5:43-44 ಮತ್ತು ವ್ಯಾಖ್ಯಾನ ನೋಡಿರಿ.

**29-30** ಮತ್ತಾಯ 5:38-42 ಮತ್ತು ವ್ಯಾಖ್ಯಾನ ನೋಡಿರಿ.

**31** ಮತ್ತಾಯ 7:12 ಮತ್ತು ವ್ಯಾಖ್ಯಾನ ನೋಡಿರಿ.
**32-35** ಮತ್ತಾಯ 5:44-47 ಮತ್ತು ವ್ಯಾಖ್ಯಾನ ನೋಡಿರಿ.
**36** ಮತ್ತಾಯ 5:48 ಮತ್ತು ವ್ಯಾಖ್ಯಾನ ನೋಡಿರಿ.

### ಇತರರಿಗೆ ತೀರ್ಪು ಮಾಡುವದು (6:37-42)

(ಮತ್ತಾಯ 6:14, 7:1-5)

**37-38** ಮತ್ತಾಯ 6:14, 7:1-2 ಮತ್ತು ವ್ಯಾಖ್ಯಾನ ನೋಡಿರಿ.
**39** ಮತ್ತಾಯ 15:14, ಮಾರ್ಕ 7:14-16 ಮತ್ತು ವ್ಯಾಖ್ಯಾನ ನೋಡಿರಿ.
**40** ಮತ್ತಾಯ 10:24-25, ಯೋಹಾನ 13:13-16 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.
**41-42** ಮತ್ತಾಯ 7:3-5 ಮತ್ತು ವ್ಯಾಖ್ಯಾನ ನೋಡಿರಿ.

### ಮರ ಮತ್ತು ಅದರ ಫಲ (6:43-45)

(ಮತ್ತಾಯ 7:24-27)

**46-49** ಮತ್ತಾಯ 7:24-27 ಮತ್ತು ವ್ಯಾಖ್ಯಾನ ನೋಡಿರಿ.

---

## ಅಧ್ಯಾಯ - 7

### ಶತಾಧಿಪತಿಯ ನಂಬಿಕೆ (7:1-10)

(ಮತ್ತಾಯ 8:5-13)

**1-10** ಮತ್ತಾಯ 8:5-13 ಮತ್ತು ವ್ಯಾಖ್ಯಾನ ನೋಡಿರಿ.

### ಯೇಸು ವಿಧವೆಯ ಮಗನನ್ನು ಬದುಕಿಸಿದ್ದು (7:11-17)

**11-17** ಯೇಸು ಮತ್ತು ತನ್ನ ಶಿಷ್ಯರು ಒಬ್ಬ ವಿಧವೆಯನ್ನು ಸಂಧಿಸುತ್ತಾರೆ ಆಕೆಯ ಒಬ್ಬನೇ ಮಗನು ಈಗಷ್ಟೇ ಸತ್ತುಹೋಗಿರುತ್ತಾನೆ. ಯೇಸು ಆಕೆಯ ಮೇಲೆ ವಿಶೇಷ ಕರುಣೆಯನ್ನು ಹೊಂದಿದನು, ಯಾಕೆಂದರೆ ಈ ಮಗನೊಬ್ಬನೇ ಆಕೆಗೆ ಸಹಾಯವು ಆದರಣೆಯು ಆಗಿದ್ದನು (ವಚನ 3). ಆದುದರಿಂದ ಆತನು ಸತ್ತ ಯುವಕನನ್ನು ಸತ್ತವರೊಳಗಿಂದ ಎಬ್ಬಿಸಿ ಆತನ ತಾಯಿಗೆ ಒಪ್ಪಿಸಿದನು. ಯೇಸು ಒಬ್ಬ ಶ್ರೇಷ್ಠ ಪ್ರವಾದಿಯಾಗಿದ್ದಾನೆಂದು ಜನರು ಗುರುತಿಸಿದರು. ಈತನು ಹಳೆ ಒಡಂಬಡಿಕೆಯ ಪ್ರವಾದಿಗಳಾದ ಎಲೀಯ ಮತ್ತು ಎಲೀಷರಂತಿದ್ದನು, ಅವರು ಸಹ ಸತ್ತವರನ್ನು ಬದುಕಿಸಿದರು (1 ಅರಸು 17:17-24, 2 ಅರಸು 4:18-37). ಯೇಸು ಸತ್ತವರನ್ನು ಬದುಕಿಸಿದವರಲ್ಲಿ ಇತನೊಬ್ಬನೇ ಆಗಿರಲಿಲ್ಲ. ಆತನು ತನ್ನ ಸ್ನೇಹಿತನಾದ ಲಾಜರನನ್ನು ಸಹ, ಅವನು ಸತ್ತು ನಾಲ್ಕು ದಿನಗಳಾದ ನಂತರ ಬದುಕಿಸಿದನು (ಯೋಹಾನ 11:38-44). ಅಲ್ಲದೆ, ಆತನು ಇನ್ನು ಅನೇಕರನ್ನು ಸತ್ತವರೊಳಗಿಂದ ಎಬ್ಬಿಸಿದನು ಕಾರಣ ಆತನು ಯೋಹಾನನ ಶಿಷ್ಯರಿಗೆ "......ಸತ್ತವರು ಜೀವವನ್ನುಹೊಂದುತ್ತಾರೆ...ನೀವು ಕಂಡು ಕೇಳುವವು ಗಳನ್ನು ಯೋಹಾನನಿಗೆ ತಿಳಿಸಿರಿ" ಅಂದನು (ಮತ್ತಾಯ 11:4-5).

ಯೇಸು ಸತ್ತವರನ್ನು ಬದುಕಿಸುವಂತಹ ಅನೇಕ ಮಹತ್ಕಾರ್ಯಗಳ ಕಾರಣದಿಂದಲೇ ಅನೇಕ ಯೆಹೂದ್ಯರು ಯೇಸುವನ್ನು ಒಬ್ಬ ಶ್ರೇಷ್ಠ ಪ್ರವಾದಿಯೆಂದು ಪರಿಗಣಿಸಿದ್ದರು (ಮತ್ತಾಯ 21:11, ಲೂಕ 24:19, ಯೋಹಾನ 6:14). ಆದರೆ ಸ್ವತಃ ಆತನೇ ಸತ್ತವರೊಳಗಿಂದ ಎದ್ದು ಬಂದ ಮೇಲೆ ಮಾತ್ರವೇ ಜನರು ಆತನನ್ನು ಪ್ರವಾದಿಗಿಂತಲೂ ಹೆಚ್ಚಿನವನು ದೇವಕುಮಾರನಾದ ಮೆಸ್ಸಿಯನೇ ಆಗಿದ್ದಾನೆ – ಎಂಬದನ್ನು ಗ್ರಹಿಸಲು ಪ್ರಾರಂಭಿಸಿದರು.

### ಯೇಸು ಮತ್ತು ಸ್ನಾನಿಕನಾದ ಯೋಹಾನ (7:18-35)

(ಮತ್ತಾಯ 11:1-11, 16-19)

**18-28** ಮತ್ತಾಯ 11:1-11 ಮತ್ತು ವ್ಯಾಖ್ಯಾನ ನೋಡಿರಿ.
**29-30** ಮತ್ತಾಯ 21:32 ಮತ್ತು ವ್ಯಾಖ್ಯಾನ ನೋಡಿರಿ.
**31-35** ಮತ್ತಾಯ 11:16-19 ಮತ್ತು ವ್ಯಾಖ್ಯಾನ ನೋಡಿರಿ.

## ಯೇಸು ಒಬ್ಬ ದುರಾಚಾರಿ ಸ್ತ್ರೀಯಿಂದ ಅಭಿಷೇಕಿಸಲ್ಪಟ್ಟಿದ್ದು (7:36-50)

**36-38** ಲೂಕನು ಇಲ್ಲಿ ಬಣ್ಣಿಸಿರುವ ಅಭಿಷೇಕವು ಮಾರ್ಕ 14:1-9ರಲ್ಲಿ ಬರೆಯಲ್ಪಟ್ಟಿರುವ ಅಭಿಷೇಕವನ್ನು ಹೋಲುತ್ತದೆ. ಆದರೆ ಘಟನೆಗಳು ಬೇರೆ ಬೇರೆಯಾಗಿವೆ. ಇಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಸ್ತ್ರೀಯು ಒಬ್ಬ ಪಾಪಿ ಅಥವಾ ದುರಾಚಾರಿಯಾಗಿದ್ದಾಳೆ ಮತ್ತು ಅಭಿಷೇಕವು ಫರಿಸಾಯನಾದ ಸಿಮೋನನ ಮನೆಯಲ್ಲಿ ಜರುಗಿತು (ಮಾರ್ಕ 14:1-9 ಮತ್ತು ವ್ಯಾಖ್ಯಾನ ನೋಡಿರಿ).

**39** ಪಾಪಿಯಾದ ಸ್ತ್ರೀಯು ಯೇಸುವನ್ನು ಮುಟ್ಟುವುದನ್ನು ನೋಡಿದ ಸಿಮೋನನು ಯೇಸು ನಿಜವಾದ ಪ್ರವಾದಿಯಾಗಿರಲಾರನು ಎಂದು ತಿರ್ಮಾನಿಸಿಕೊಂಡನು. ನಿಜವಾದ ಪ್ರವಾದಿಯು ಆ ಸ್ತ್ರೀ ಪಾಪಿಯೆಂಬದನ್ನು ಖಂಡಿತವಾಗಿಯೂ ತಿಳಿದುಕೊಳ್ಳುತ್ತಿದ್ದನು ಮತ್ತು ಆಕೆಯು ತನ್ನನ್ನು ಮುಟ್ಟಲು ಅನುಮತಿಸುತ್ತಿರಲಿಲ್ಲ. ಯೆಹೂದ್ಯರು ವಿಶೇಷವಾಗಿ ಫರಿಸಾಯರು ತಾವು ಪಾಪಿಗಳೊಂದಿಗೆ ಸೇರಿಕೊಂಡರೆ ಅಶುದ್ದರಾಗುತ್ತೇವೆ ಎಂದು ನಂಬುತ್ತಿದ್ದರು (ಮಾರ್ಕ 2:15-7 ಮತ್ತು ವ್ಯಾಖ್ಯಾನ ನೋಡಿರಿ).

**40** ಆದರೆ ಆ ಸ್ತ್ರೀಯು ದುರಾಚಾರಿಯೆಂದು ಯೇಸುವಿಗೆ ಗೊತ್ತಿತ್ತು ಮತ್ತು ಆತನಿಗೆ ಸಿಮೋನನ ಯೋಚನೆಗಳನ್ನು ಸಹ ಬಲ್ಲವನಾಗಿದ್ದನು. ಆದುದರಿಂದ ಆತನು ಸಿಮೋನನಿಗೆ ಒಂದು ಸಾಮ್ಯವನ್ನು ಹೇಳಿದನು.

**41-43** ಈ ಸಾಮ್ಯದಲ್ಲಿ ಒಬ್ಬನು ದೇವರಿಂದ ಪಡೆದುಕೊಂಡ ಕರುಣೆಗನುಸಾರವಾಗಿ ದೇವರನ್ನು ಪ್ರೀತಿಸಿ ಸ್ತುತಿಸುವನು ಎಂಬದನ್ನು ಯೇಸು ಕಲಿಸುತ್ತಾನೆ. ದೇವರು ಹೆಚ್ಚಾಗಿ ಪಾಪಗಳನ್ನು ಕ್ಷಮಿಸುವಾಗ ಪಾಪಿಯ ಪ್ರೀತಿಯು ದೇವರೆಡೆಗೆ ಅಷ್ಟೇ ಹೆಚ್ಚಾಗಿರುತ್ತದೆ. ಪಾಪವು ಸಾಲವಿದ್ದಂತೆ. ಒಬ್ಬನು ತನ್ನ ಪಾಪಗಳು ಅಪಾರವಾಗಿವೆಯೆಂಬದನ್ನು ತಿಳಿಯುವದಾದರೆ ಆತನು ಹಂದರ ಕ್ಷಮಾಪಣೆಗೆ ಹೆಚ್ಚು ಕೃತಜ್ಞತೆಯಾಗಿರುವನು ಒಂದು ವೇಳೆ ಒಬ್ಬನು ತನ್ನ ಪಾಪಗಳನ್ನು ಅಲ್ಲವೆಂದು ಪರಿಗಣಿಸುವದಾದರೆ ಆತನು ಕ್ಷಮಾಪಣೆಗಾಗಿ ಕಡಿಮೆ ಕೃತಜ್ಞತೆಯುಳ್ಳವನಾಗಿರುವನು. ಇಲ್ಲಿ ಗಮನಿಸತಕ್ಕದ್ದೇನೆಂದರೆ ಮನುಷ್ಯನ ಕೃತಜ್ಞತೆಯು ಆತನು ನಿಜವಾಗಿಯೂ ಎಷ್ಟು ಪಾಪಿಯೆಂಬದರ ಮೇಲೆ ಆಧಾರವಾಗಿರುವದಿಲ್ಲ. ಆದರೆ ತಾನು ಎಷ್ಟು ಪಾಪಿಯಾಗಿದ್ದೇನೆಂಬ ಆತನ ಯೋಚನೆಯ ಮೇಲೆಯೇ ಆಧಾರವಾಗಿರುತ್ತದೆ. ನಮ್ಮ ಪಾಪಗಳು ಹೆಚ್ಚೋ ಅಥವಾ ಕಡಿಮೆಯೇ ಆಗಿರಲಿ ನಾವು ಸ್ವನೀತಿಯಿಂದ ದೇವರಿಗೆ ನಮ್ಮ ಸಾಲವನ್ನು ಹಿಂದಿರುಗಿಸಲು ಸಾದ್ಯವಿಲ್ಲ ಎಂಬದನ್ನು ನಾವು ಇಲ್ಲಿಗಮನಿಸುತ್ತೇವೆ. ಅವರಿಬ್ಬರಿಗೂ ತೀರಿಸುವದಕ್ಕೆ ಗತಿಯಿರಲಿಲ್ಲ (ವಚನ 42) ದೇವರ ಕರುಣೆಯಿಂದ ಮಾತ್ರವೇ ನಮ್ಮ ಪಾಪಗಳು ಕ್ಷಮಿಸಲ್ಪಡಬಹುದು.

ಮನುಷ್ಯನು ತನ್ನ ಪಾಪಗಳು ಅತಿ ಹೆಚ್ಚೆಂದು ಪರಿಗಣಿಸುವದು ಉತ್ತಮ, ಯಾಕೆಂದರೆ ದೇವರು ಅವುಗಳನ್ನು ಹಾಗೆಯೇ ಪರಿಗಣಿಸುತ್ತಾನೆ.

**44-47** ನಂತರ ಯೇಸು ಫರಿಸಾಯನಾದ ಸಿಮೋನನ ಕಡೆಗೆ ತಿರಿಗಿಕೊಂಡು ಆತನು ತಿರಸ್ಕರಿಸಿದ ದುರಾಚಾರಿ ಸ್ತ್ರೀಯೊಂದಿಗೆ ಹೋಲಿಸಿ ಅವಳು ಅವನಿಗಿಂತಲೂ ಹೆಚ್ಚಿನದನ್ನು ಮಾಡಿದ್ದಾಳೆಂದು ಹೇಳಿದನು. ಫರಿಸಾಯರು ತಮ್ಮನ್ನು ಪಾಪಿಗಳೆಂದು ಪರಿಗಣಿಸಿಕೊಳ್ಳಲಿಲ್ಲ. ಆದುದರಿಂದ ದೇವರ ಕರುಣೆ ಮತ್ತು ಕ್ಷಮಾಪಣೆಯು ಅವರಿಗೆ ಯಾವ ಅರ್ಥವನ್ನು ನೀಡಿಲಿಲ್ಲ. ಅವರ ಮನಸ್ಸಿನಲ್ಲಿ ದೇವರಿಗೆ ಕೃತಜ್ಞತೆಯುಳ್ಳವರಾಗಿರಲು, ಆತನನ್ನು ಪ್ರೀತಿಸಲು ಯಾವಕಾರಣವೂ ಇರಲಿಲ್ಲ. ಅವರು ತಮ್ಮ ತುಟಿಗಳಿಂದ ಮಾತ್ರವೇ ದೇವರನ್ನು ಪ್ರೀತಿಸಿದರು.

ಆದರೆ ಯೇಸು ಸಿಮೋನನಿಗೆ "ಈ ದುರಾಚಾರಿ ಸ್ತ್ರೀಯಾದರೋ ನನ್ನನ್ನು ತನ್ನ ಹೃದಯಂತರಾಳದಿಂದ ಪ್ರೀತಿಸುತ್ತಾಳೆ. ಅವಳು ತನ್ನ ಪ್ರೀತಿಯನ್ನು ನನಗೆ ತೋರಿಸಿದ್ದಾಳೆ. ಆದುದರಿಂದ ಅವಳ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂಬದಕ್ಕೆ ಇದು ಆಧಾರವಾಗಿದೆ ಅವಳು ಪಾಪಗಳಿಂದ ತೊಳೆಯಲ್ಪಟ್ಟು ದೇವರಿಂದ ಸ್ವೀಕರಿಸಲ್ಪಟ್ಟಿದ್ದಾಳೆಂಬುದಕ್ಕೆ ಅವಳ ಪ್ರೀತಿಯೇ ಆಧಾರವಾಗಿದೆ. ಆದರೆ ಸಿಮೋನನೇ, ನೀನು ನನಗೆ ಪ್ರೀತಿಯನ್ನು ತೋರಲಿಲ್ಲ. ಆದುದರಿಂದ ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿಲ್ಲದ ಹಾಗೆ ತೋರುತ್ತದೆ. ಇಲ್ಲವಾದರೆ, ಈ "ಸ್ತ್ರೀಯು ನನ್ನನ್ನು ಪ್ರೀತಿಸಿದಂತೆಯೇ ನೀನೂ ನನ್ನನ್ನು ಪ್ರೀತಿಸಿರುತ್ತಿದ್ದೀ" ಎಂದು ಹೇಳಿದನು.

**48-49** ಆಗ ಯೇಸು ಆ ಸ್ತ್ರೀಗೆ "ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ" ಅಂದನು. ಯೇಸು ಅಲ್ಲಿರುವ ಇತರರು ಕೇಳಿಸಿಕೊಳ್ಳುವಂತೆ ಇದನ್ನು ಹೇಳಿದನು. ಸ್ತ್ರೀಯು ಈಗಾಗಲೇ ಕ್ಷಮಿಸಲ್ಪಟ್ಟಿದ್ದಳು, ಈಗ ಯೇಸು ಇತರರಿಗು ಸಹ ತಿಳಿಯುವಂತೆ ದೃಡ ಪಡಿಸುತ್ತಿದ್ದಾನಷ್ಟೇ (ಮಾರ್ಕ 2:5-11 ನೋಡಿರಿ).

**50** ಬಳಿಕ ಯೇಸು ಆ ಸ್ತ್ರೀಗೆ "ನಿನ್ನ ನಂಬಿಕೆಯೇ ನಿನ್ನನ್ನು ರಕ್ಷಿಸಿದೆ" ಎಂದನು. ಆ ಸ್ತ್ರೀಯು ಯೇಸುವಿಗಾಗಿ ಹೊಂದಿದ್ದ ಪ್ರೀತಿಯು ಅವಳನ್ನು ರಕ್ಷಸಲಿಲ್ಲ, ಅವಳ ನಂಬಿಕೆಯೇ ರಕ್ಷಿಸಿತು. ಯೇಸು ಆಕೆಯ ರಕ್ಷಕನೆಂಬುದಾಗಿಯೂ, ಆಕೆಯ ಪಾಪಗಳನ್ನು

ಕ್ಷಮಿಸಬಲ್ಲನೆಂಬದಾಗಿಯೂ ನಂಬಿಕೆ ಹೊಂದಿದ್ದರಿಂದಲೇ ಆಕೆಯು ರಕ್ಷಣೆಯನ್ನು ಪಡೆದುಕೊಂಡಳು. ದೇವರು ಪಾಪಿ ಮಾನವನಿಗೆ ಕೃಪೆಯಿಂದ ಅನುಗ್ರಹಿಸುವ ಕ್ಷಮಾಪಣೆ, ಸ್ವಸ್ಥತೆ, ರಕ್ಷಣೆಗಳನ್ನು ನಂಬಿಕೆಯ ಮೂಲಕ ಮಾತ್ರವೇ ನಾವು ಪಡೆದುಕೊಳ್ಳಲು ಸಾದ್ಯ (ಮಾರ್ಕ 5:34, 10:52 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

# ಅಧ್ಯಾಯ - 8

## ಶುವಾರ್ತೆಯನ್ನು ಸಾರುವದು (8:1-3)

**1** ಯೇಸು ಒಬ್ಬ ಸಂಚಾರಿ ಸುವಾರ್ತಿಕನಾಗಿದ್ದನು. ಆತನು ಒಂದು ಊರಿನಲ್ಲಿ ಉಳಿಯಲಿಲ್ಲ. ಆತನು ಒಬ್ಬ ಸಭೆಯ ಸಭಾಪಾಲಕನಾಗಿರಲಿಲ್ಲ. ಆತನು ದೇವರ ರಾಜ್ಯದ ಸುವಾರ್ತೆಯನ್ನು ಸಾರುತ್ತಾ ಊರಿನಿಂದ ಊರಿಗೆ ಸಂಚರಿಸಿದನು (ಮಾರ್ಕ 1:14-15 ಮತ್ತು ವ್ಯಾಖ್ಯಾನ ನೋಡಿರಿ). ಆತನು ಹೋದನಂತರ ಕೆಲಸವನ್ನು ವಹಿಸಿಕೊಳ್ಳುವದಕ್ಕಾಗಿ ತರಬೇತಿಗೊಳಿಸಲು ಆತನ ಶಿಷ್ಯರನ್ನು ತನ್ನೊಂದಿಗೆ ಕರೆದುಕೊಂಡು ಹೋಗುತ್ತಿದ್ದನು. ಆತನ ಹನ್ನೆರಡು ಮಂದಿ ಶಿಷ್ಯರ ಜೊತೆಗೆ ಇನ್ನು ಅನೇಕರು ಯೇಸುವನ್ನು ಹಿಂಬಾಲಿಸಿದರು (ಲೂಕ 10:1).

**2-3** ಆತನ ಶಿಷ್ಯರೊಂದಿಗೆ ಜೊತೆಯಾಗಿ ಅನೇಕ ಸ್ತ್ರೀಯರು ಯೇಸುವಿನ ಜೊತೆ ಹೋದರು. ಈ ಸ್ತ್ರೀಯರು, ಯೇಸು ಮತ್ತು ಆತನ ಶಿಷ್ಯರ ಪ್ರಯಾಣಗಳಲ್ಲಿ ಸೇವೆ ಮಾಡಲು ಸಹಾಯಮಾಡಿದರು. ಈ ಸ್ತ್ರೀಯರಲ್ಲಿ ಅನೇಕರು ದೆವ್ವಪೀಡಿತರು, ರೋಗಿಗಳು ಆಗಿದ್ದು ಯೇಸುವಿನಿಂದ ಗುಣ ಹೊಂದಿದ್ದರು. ಅವರು ತಮ್ಮ ಮನೆಗಳನ್ನು ತೊರೆದು ಯೇಸು ಮತ್ತು ಆತನ ಶಿಷ್ಯರು ಹೋದಲೆಲ್ಲಾ ಅವರಿಗೆ ಸಹಾಯ ಮಾಡುವದರ ಮೂಲಕ ತಮ್ಮ ಕೃತಜ್ಞತಾಭಾವವನ್ನು ವ್ಯಕ್ತಪಡಿಸಿದರು (ಮಾರ್ಕ 15:40-41 ಮತ್ತು ವ್ಯಾಖ್ಯಾನ ನೋಡಿರಿ). ಅವರಲ್ಲಿ ಮಗ್ದಲಿನ ಮರಿಯಳು ಒಬ್ಬಳಾಗಿದ್ದು, ಬಳಿಕ ಯೇಸು ಪು ನರುಥ್ಥಾನಗೊಂಡಾಗ ಇವಳೇ ಮೊದಲು ನೋಡುತ್ತಾಳೆ (ಮಾರ್ಕ 16:9). ಯೋಹಾನಳು ಸಹ ಮಗ್ದಲಿನ ಮರಿಯಳೊಂದಿಗೆ ಯೇಸುವಿನ ಪು ನರುಥ್ಥಾನದ ಕುರಿತು ಶಿಷ್ಯರಿಗೆ ತಿಳಿಸಲು ಹೋದಳು (ಲೂಕ 24:10).

## ಬಿತ್ತುವವನ ಸಾಮ್ಯ (8:4-15)

(ಮತ್ತಾಯ 13:1-23, ಮಾರ್ಕ 4:1-20.)

**4-15** ಮಾರ್ಕ 4:1-20 ಮತ್ತು ವ್ಯಾಖ್ಯಾನ ನೋಡಿರಿ.

## ಸ್ತಂಬದ ಮೇಲಿನ ದೀಪ (8:16-18)

(ಮತ್ತಾಯ 5:15, 10:26, 13:12, ಮಾರ್ಕ 4:21-25.)

**16-18** ಮತ್ತಾಯ 5:15, ಮಾರ್ಕ 4:21-25 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

## ಯೇಸುವಿನ ತಾಯಿ ಮತ್ತು ತಮ್ಮಂದಿರು (8:19-21)

(ಮತ್ತಾಯ 12:46-56, ಮಾರ್ಕ 3:31-35.)

**19-21** ಮಾರ್ಕ 3:31-35 ಮತ್ತು ವ್ಯಾಖ್ಯಾನ ನೋಡಿ.ರಿ

## ಯೇಸು ಬಿರುಗಾಳಿಯನ್ನು ಶಾಂತಪಡಿಸಿದ್ದು (8:22-25)

(ಮತ್ತಾಯ 8:23-27, ಮಾರ್ಕ 4:35-41.)

**22-25** ಮಾರ್ಕ 4:35-41 ಮತ್ತು ವ್ಯಾಖ್ಯಾನ ನೋಡಿರಿ.

## ಒಬ್ಬ ದೆವ್ವ ಪೀಡಿತ ವ್ಯಕ್ತಿಯನ್ನು ಗುಣಪಡಿಸಿದ್ದು (8:26-39)

(ಮತ್ತಾಯ 8:28-34, ಮಾರ್ಕ 5:1-20.)

**26-39** ಮಾರ್ಕ 5:1-20 ಮತ್ತು ವ್ಯಾಖ್ಯಾನ ನೋಡಿರಿ.

## ಒಬ್ಬ ಸತ್ತ ಹುಡುಗಿ ಮತ್ತು ಒಬ್ಬ ಅಸ್ವಸ್ಥ ಸ್ತ್ರೀ (8:40-56)

(ಮತ್ತಾಯ 9:18-26, ಮಾರ್ಕ 5:21-43.)

**40-56** ಮಾರ್ಕ 5:21-43 ಮತ್ತು ವ್ಯಾಖ್ಯಾನ ನೋಡಿರಿ.

# ಅಧ್ಯಾಯ - 9

## ಯೇಸು ಹನ್ನೆರಡು ಮಂದಿ ಶಿಷ್ಯರನ್ನು ಕಳುಹಿಸಿದ್ದು (9:1-6)

(ಮತ್ತಾಯ 10:9-15, ಮಾರ್ಕ 6:7-13.)

**1-6** ಮಾರ್ಕ 6:7-13 ಮತ್ತು ವ್ಯಾಖ್ಯಾನ ನೋಡಿರಿ.

## ಹೆರೋದನ ಕಳವಳ (9:7-9)

(ಮತ್ತಾಯ 14:1-2, ಮಾರ್ಕ 6:14-16).

**7-9** ಮಾರ್ಕ 6:14-16 ಮತ್ತು ವ್ಯಾಖ್ಯಾನ ನೋಡಿರಿ.

## ಯೇಸು ಐದು ಸಾವಿರ ಜನರಿಗೆ ಊಟ ಮಾಡಿಸಿದ್ದು (9:10-17)

(ಮತ್ತಾಯ 14:13-21, ಮಾರ್ಕ 6:30-44, ಯೋಹಾನ 6:1-15.)

**10-17** ಮಾರ್ಕ 6:30-44 ಮತ್ತು ವ್ಯಾಖ್ಯಾನ ನೋಡಿರಿ.

## ಕ್ರಿಸ್ತನ ಕುರಿತ ಪೇತ್ರನ ಅರಿಕೆ (9:18-22)

(ಮತ್ತಾಯ 16:13-21, ಮಾರ್ಕ 8:27-31)

**18-21** ಮಾರ್ಕ 8:27-30 ಮತ್ತು ವ್ಯಾಖ್ಯಾನ ನೋಡಿರಿ.
**22** ಮಾರ್ಕ 8:31 ಮತ್ತು ವ್ಯಾಖ್ಯಾನ ನೋಡಿರಿ.

## ಸ್ವ: ನಿರಾಕರಣೆಯ ಕುರಿತಾದ ಬೋಧನೆ (9:23-27)

(ಮತ್ತಾಯ 16:24-26, ಮಾರ್ಕ 8:34-38 9:1).

**23-26** ಮಾರ್ಕ 8:34-38 ಮತ್ತು ವ್ಯಾಖ್ಯಾನ ನೋಡಿರಿ.
**27** ಮಾರ್ಕ 9:1 ಮತ್ತು ವ್ಯಾಖ್ಯಾನ ನೋಡಿರಿ.

## ಯೇಸುವಿನ ರೂಪಾಂತರ (9:28-36)

(ಮತ್ತಾಯ 17:1-13, ಮಾರ್ಕ 9:2-12).

**28-36** ಮಾರ್ಕ 9:2-13 ಮತ್ತು ವ್ಯಾಖ್ಯಾನ ನೋಡಿರಿ.

## ಒಬ್ಬ ದುರಾತ್ಮ ಪೀಡಿತ ಬಾಲಕ (9:37-45)

(ಮತ್ತಾಯ 17:14-23, ಮಾರ್ಕ 9:14-32).

**37-45** ಮಾರ್ಕ 9:14-32 ಮತ್ತು ವ್ಯಾಖ್ಯಾನ ನೋಡಿರಿ.

## ಯಾರು ಹೆಚ್ಚಿನವನಾಗುವನು (9:46-50)

(ಮಾರ್ಕ 9:33-40)

**46-50** ಮಾರ್ಕ 9:33-40 ಮತ್ತು ವ್ಯಾಖ್ಯಾನ ನೋಡಿರಿ.

## ಸಮಾರ್ಯದ ವಿರೋಧ (9:51-56)

**51** ಯೇಸು ತಾನು ಯೆರೂಸಲೇಮಿನಲ್ಲಿನ ಯೆಹೂದ್ಯನಾಯಕರ ಕೈಗಳಲ್ಲಿ ಬಾಧೆಪಟ್ಟು ಸಾಯಬೇಕೆಂಬದನ್ನು ಬಲ್ಲವನಾಗಿದ್ದನು (ಮಾರ್ಕ 8:31). ಆದುದರಿಂದ ಆತನ ಮರಣದಗಳಿಗೆಯು ಹತ್ತಿರವಾದಾಗ ಆತನು ತನ್ನ ಶಿಷ್ಯರೊಂದಿಗೆ ಇಸ್ರಾಯೇಲಿನ ಉತ್ತರಕ್ಕಿರುವ ಗಲಿಲಾಯದಿಂದ ರಾಜಧಾನಿಯಾದ ಯೆರೂಸಲೇಮಿಗೆ ಹೋದನು.

**52** ಅವರು ಪ್ರಯಾಣದಲ್ಲಿ ಸಮಾರ್ಯ ಸೀಮೆಯ ಮೂಲಕ ಹಾದು ಹೋಗುತ್ತಿದ್ದರು. ಸಮಾರ್ಯರು ಅನ್ಯ ಸ್ತ್ರೀಯರನ್ನು ವಿವಾಹವಾಗಿದ್ದ ಯೆಹೂದ್ಯರಾಗಿದ್ದರು. ಅವರು ಅರೆಯೆಹೂದ್ಯರಾಗಿದ್ದರು. ಆದುದರಿಂದ ಸಾಮಾನ್ಯ ಯೆಹೂದ್ಯರು ಅವರನ್ನು ತಿರಸ್ಕರಿಸಿದರು (ಮತ್ತಾಯ 10:5, ಯೋಹಾನ 4:4-9, ಅ.ಕೃತ್ಯ 8:4-5 ನೋಡಿರಿ).

**53** ಸಮಾರ್ಯರು ಸಹ ಯೆಹೂದ್ಯರನ್ನು ದ್ವೇಷಿಸುತ್ತಿದ್ದರು. ಯೇಸು ಮತ್ತು ಆತನ ಶಿಷ್ಯರು ಯೆಹೂದ್ಯರ ರಾಜಧಾನಿಯಾದ ಯೆರೂಸಲೇಮಿಗೆ ಹೋಗುತ್ತಿದ್ದಾರೆಂಬದು ಅವರಿಗೆ ತಿಳಿದು ಬರಲು ಅವರು ಅವರಿಗೆ ಯಾವ ಉಪಚಾರವನ್ನೂ ನೀಡಲಿಲ್ಲ ಯೇಸುವಿನ ಶಿಷ್ಯರಲ್ಲಿ ಇಬ್ಬರಾದ ಯಾಕೋಬ ಮತ್ತು ಯೋಹಾನರು (ಮಾರ್ಕ 3:17) ಸಮಾರ್ಯದವರನ್ನು ಶಿಕ್ಷಿಸಲು ಇಚ್ಛಿಸಿದ್ದರು (ಮಾರ್ಕ 6:11). ಪ್ರವಾದಿಯಾದ ಎಲೀಯನ ಉದಾಹರಣೆಯನ್ನು ತೆಗೆದುಕೊಂಡು (2 ಅರಸು 1:9-12) ಆಕಾಶದಿಂದ ಬೆಂಕಿಯನ್ನು ಬೀಳಿಸಿ ಅವರನ್ನು ನಾಶ ಮಾಡುವ ಸಲಹೆಯನ್ನು ನೀಡಿದರು.

**55** ಆದರೆ ಯೇಸು ಯಾಕೋಬ ಮತ್ತು ಯೋಹಾನರನ್ನು ಗದರಿಸಿದನು ಅವರು ಆಕಾಶದಿಂದ ಕೃಪೆಯನ್ನು ಬೀಳಿಸಿರಬೇಕಿತ್ತೇ ಹೊರತು ಬೆಂಕಿಯನ್ನಲ್ಲ. ಅವರ ಸಲಹೆಯು ಕ್ರಿಸ್ತನ ಆತ್ಮನಿಂದ ಉದ್ಭವಿಸಲಿಲ್ಲ. ಅವರ ಸಲಹೆಯು ಸೇಡು ಮತ್ತು ಕೋಪದ ಆತ್ಮದಿಂದ ಬಂದಿತ್ತೇಹೊರತು ಪ್ರೀತಿ ಮತ್ತು ಕ್ಷಮಾಪಣೆಯ ಆತ್ಮದಿಂದ ಅಲ್ಲ. ಲೂಕನ ಕೆಲವು ಪುರಾತನ ಹಸ್ತಪ್ರತಿಗಳಿಗನುಸಾರವಾಗಿ ಈ ಸಂದರ್ಭದಲ್ಲಿ ಯೇಸು ಅವರಿಗೆ ಹೀಗೆಂದನು:" ನೀವು ಯಾವ ರೀತಿಯ ಆತ್ಮದವರೋ ನಿಮಗೆ ತಿಳಿಯದು, ಕಾರಣ ದೇವಕುಮಾರನು ಮನುಷ್ಯರ ಜೀವಗಳನ್ನು ನಾಶ ಮಾಡಲು ಬರಲಿಲ್ಲ ಆದರೆ ಅವರನ್ನು ರಕ್ಷಿಸಲು ಬಂದನು".

**56** ಹೇಗಿದ್ದರೂ ಯೇಸು ಮತ್ತು ಆತನ ಶಿಷ್ಯರು ಆ ಸಮಾರ್ಯದ ಗ್ರಾಮಕ್ಕೆ ಹೋಗದೇ ಬೇರೆ ಮಾರ್ಗವಾಗಿ ಹೋದರು.

### ಯೇಸುವನ್ನು ಹಿಂಬಾಲಿಸುವದರ ವೆಚ್ಚ (9:57-62)

(ಮತ್ತಾಯ 8:18-22).

**57-62** ಮತ್ತಾಯ 8:18-12 ಮತ್ತು ವ್ಯಾಖ್ಯಾನ ನೋಡಿರಿ.

---

## ಅಧ್ಯಾಯ - 10

### ಯೇಸು ಎಪ್ಪತ್ತೆರಡು ಮಂದಿಯನ್ನು ಕಳುಹಿಸಿದ್ದು (10:1-20)

(ಮತ್ತಾಯ 9:37-38, 10:9-15, 11:20-24, ಮಾರ್ಕ 6:7-13).

**1** ಯೇಸುವಿನ ಹನ್ನೆರಡು ಪ್ರಧಾನ ಶಿಷ್ಯರ ಹೊರತಾಗಿ ಇನ್ನು ಅನೇಕರು ಯೇಸುವನ್ನು ಹಿಂಬಾಲಿಸಿ ಆತನ ಶಿಷ್ಯರಾದರು. ಯೇಸು ಈಗಾಗಲೇ ಹನ್ನೆರಡು ಶಿಷ್ಯರನ್ನು ಬೋಧಿಸಲು ಮತ್ತು ಗುಣಪಡಿಸಲು ಕಳುಹಿಸಿದ್ದನು (ಮಾರ್ಕ 6:7, ಲೂಕ 9:1-2 ಮತ್ತು ವ್ಯಾಖ್ಯಾನ ನೋಡಿರಿ). ಈಗ ಈ ಭಾಗದಲ್ಲಿ ಯೇಸು ಹೇಗೆ ಇತರ ಎಪ್ಪತ್ತೆರಡು[21] ಶಿಷ್ಯರನ್ನು ಅದೇ ರೀತಿಯ ಸಲಹೆಗಳನ್ನು ಕಳುಹಿಸುತ್ತಾನೆಂಬದನ್ನು ಲೂಕನು ವರ್ಣಿಸುತ್ತಾನೆ.

**2** ಮತ್ತಾಯ 9:37-38 ಮತ್ತು ವ್ಯಾಖ್ಯಾನ ನೋಡಿರಿ.

**3** ಮತ್ತಾಯ 10:16 ಮತ್ತು ವ್ಯಾಖ್ಯಾನ ನೋಡಿರಿ.

**4** ಮತ್ತಾಯ 10:9-10, ಮಾರ್ಕ 6:8-9 ಮತ್ತು ವ್ಯಾಖ್ಯಾನ ನೋಡಿರಿ.

**5-12** ಮತ್ತಾಯ 10:11-15, ಮಾರ್ಕ 6:10-11 ಮತ್ತು ವ್ಯಾಖ್ಯಾನ ನೋಡಿರಿ.

**13-15** ಮತ್ತಾಯ 10:20-24 ಮತ್ತು ವ್ಯಾಖ್ಯಾನ ನೋಡಿರಿ.

**16** ಮತ್ತಾಯ 10:40 ಮತ್ತು ವ್ಯಾಖ್ಯಾನ ನೋಡಿರಿ.

**17** ಆ ಎಪ್ಪತ್ತೆರಡು ಮಂದಿ ಶಿಷ್ಯರು ತಮ್ಮ ಪ್ರಯಾಣಗಳಿಂದ ಹಿಂದಿರುಗಿದಾಗ ತಾವು ಮಾಡಿದ್ದನ್ನು ಯೇಸುವಿಗೆ ತಿಳಿಸುತ್ತಾರೆ. ಪ್ರಥಮ ಹನ್ನೆರಡು ಮಂದಿ ಶಿಷ್ಯರು ಮಹತ್ಕಾರ್ಯಗಳನ್ನು ಮಾಡಿದಂತೆಯೇ ಈ ಎಪ್ಪತ್ತೆರಡು ಮಂದಿಶಿಷ್ಯರು ಅದೇ ರೀತಿಯ ಕಾರ್ಯಗಳನ್ನು ಮಾಡಿದರು (ಮಾರ್ಕ6:12-13 ಮತ್ತು ವ್ಯಾಖ್ಯಾನ ನೋಡಿರಿ). ಅವರು ಯೇಸುವಿನ ನಾಮದಲ್ಲಿಯೂ, ಆತನ ಶಕ್ತಿಯ ಮೂಲಕವೂ ಆ ಕಾರ್ಯಗಳನ್ನು ಮಾಡಿದರು. ದೆವ್ವಗಳು ಸಹ ಶಿಷ್ಯರಿಗೆ ಅಧೀನವಾದವು, ಯಾಕೆಂದರೆ ಕ್ರಿಸ್ತನು ತನ್ನ ಅಧಿಕಾರವನ್ನು ಶಿಷ್ಯರಿಗೆ ಕೊಟ್ಟಿದ್ದನು (ವಚನ 19).

**18** ಬಳಿಕ ಯೇಸು ತನ್ನ ಶಿಷ್ಯರಿಗೆ ದೆವ್ವಗಳು ಏಕೆ ಅಧೀನವಾದವು ಎಂಬದನ್ನು ತಿಳಿಸುತ್ತಾನೆ. ಕಾರಣವೇನೆಂದರೆ ಸೈತಾನನ ಬಲವು ಸೋಲಿಸಲ್ಪಟ್ಟಿದ್ದೇ ಆಗಿದೆ (ಯೋಹಾನ 12:31). ಕ್ರಿಸ್ತನು ಆಗಲೇ ಮರುಭೂಮಿಯಲ್ಲಿ ಆತನ ಶೋಧನೆಯ

ಕಾಲದಲ್ಲಿ ಸೈತಾನನನ್ನು ಸೋಲಿಸಿದ್ದನು (ಮತ್ತಾಯ 4:10-11). ಶಿಷ್ಯರು ಇನ್ನು ಪ್ರಯಾಣದಲ್ಲಿರುವಾಗಲೇ ಸೈತಾನನು ಪರಲೋಕದಿಂದ ಬೀಳುವ ದರ್ಶನವನ್ನು ಯೇಸು ಕಂಡಿದ್ದನು (ಪ್ರಕ 12:9).

ಈಗ ಕ್ರಿಸ್ತನು ಸೈತಾನನಮೇಲೆ ಜಯಹೊಂದಿದ್ದು ಮಾತ್ರವೇ ಅಲ್ಲ, ಆದರೆ ಆತನ ಶಿಷ್ಯರೂ ಜಯಹೊಂದಿದ್ದರು.

19 ಯೇಸು ಶಿಷ್ಯರಿಗೆ ತನ್ನ ಸ್ವಂತ ಅಧಿಕಾರವನ್ನು ಕೊಟ್ಟಿದ್ದನು. ಆ ಅಧಿಕಾರವು ಅತಿ ಶ್ರೇಷ್ಠವಾದದ್ದಾಗಿತ್ತು, ಯಾಕೆಂದರೆ ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ಯೇಸುವಿಗೆ ಸೇರಿದ್ದಾಗಿದೆ (ಮತ್ತಾಯ 28:18). ಮತ್ತು ಯೇಸುವಿನಲ್ಲಿ ನಂಬಿಕೆಯಿಟ್ಟು ಆತನ ಚಿತ್ತವನ್ನು ಮಾಡುವ ಎಲ್ಲರಿಗೂ ಅದೇ ಅಧಿಕಾರವು ಕೊಡಲ್ಪಟ್ಟಿರುತ್ತದೆ.

ಹಾವು ಗಳು ಮತ್ತು ಚೇಳುಗಳು ಎಲ್ಲಾ ರೀತಿಗಳ ಕೆಟ್ಟತನವನ್ನು ಪ್ರತಿನಿಧಿಸುತ್ತವೆ ಯೇಸು ಶಿಷ್ಯರಿಗೆ ಅವರು ಆತನ ಅಧಿಕಾರವನ್ನು ಪಡೆದವರಾಗಿ ಸೈತಾನನು ಅವರಿಗೆ ಉಂಟು ಮಾಡಲು ಬಯಸುವ ಎಲ್ಲಾ ಆತ್ಮೀಕ ಹಾನಿಗಳಿಂದ ಕಾಪಾಡಲ್ಪಡುವರು ಎಂದು ಹೇಳಿದನು.[22] ಅವರು ವೈರಿಯ ಎಲ್ಲಾ ಬಲಗಳ ಮೇಲೆ ಜಯ ಹೊಂದುವರು (ಮಾರ್ಕ 16:17-18 ನೋಡಿರಿ.) ಸೈತಾನನು ಅವರ ದೇಹಗಳ ಮೇಲೆ ಆಕ್ರಮಣ ಮಾಡಬಹುದು ಆದರೆ ಆತನು ಅವರ ಆತ್ಮಗಳಿಗೆ ಹಾನಿಯನ್ನು ಮಾಡಲಾಗುವದಿಲ್ಲ (ಮತ್ತಾಯ 10:28).

20 ಬಳಿಕ ಯೇಸು ತನ್ನ ಶಿಷ್ಯರಿಗೆ "....ದೆವ್ವಗಳು ನಮಗೆ ಅಧೀನವಾಗಿವೆಯೆಂದು ಸಂತೋಷಪಡದಿರಿ" ಅದು ಅತಿ ಪ್ರಾಮುಕ್ಯವಾದ ಸಂಗತಿಯಾಗಿರುವದಿಲ್ಲ. ಅತಿ ಪ್ರಾಮುಖ್ಯವಾದ ಸಂಗತಿಯೇನೆಂದರೆ ನೀವು ನನ್ನಲ್ಲಿ ನಂಬಿಕೆಯಿಟ್ಟು, ನನ್ನವರಾಗಿರುವದು ದೇವರ ರಾಜ್ಯಕ್ಕೆ ಭಾದ್ಯಸ್ಥರಾಗುವದು ಆಗಿದೆ. ನಿಮ್ಮ ಹೆಸರುಗಳು ಪರಲೋಕದಲ್ಲಿ ಬರೆದಿವೆ ಎಂಬದಕ್ಕಾಗಿ "ಸಂತೋಷಪಡಿರಿ" ಎಂದು ಹೇಳಿದನು. ಅದ್ಭುತಗಳನ್ನು ಮಾಡುವ ಶಕ್ತಿಗಿಂತಲೂ ದೇವರ ಮಕ್ಕಳಾಗುವ ಶಕ್ತಿಯು ಹೆಚ್ಚು ಪ್ರಾಮುಖ್ಯವಾಗಿದೆ (ಯೋಹಾನ 1:112). ಕ್ರೈಸ್ತರಲ್ಲದವರಾಗಿ ಅದ್ಭುತಕಾರ್ಯಗಳನ್ನು ಮಾಡುವವರು ಅನೇಕ ಜನರಿದ್ದಾರೆ. ಯೇಸುವಿನ ಹೆಸರಿನಲ್ಲಿ ಮಹತ್ಕಾರ್ಯಗಳನ್ನು ಮಾಡುವವರೂ ಇದ್ದಾರೆ ಆದಾಗ್ಯು ಅವರು ಪರಲೋಕವನ್ನು ಪ್ರವೇಶಿಸಲಾರರು. ಯೇಸುವಿನಲ್ಲಿ ನಿಜವಾಗಿಯೂ ನಂಬಿಕೆಯಿಟ್ಟು ಆತನನ್ನು ಪ್ರೀತಿಸಿ ವಿಧೇಯರಾಗುವವರು ಮಾತ್ರವೇ ತಮ್ಮ ಹೆಸರುಗಳನ್ನು ಪರಲೋಕದಲ್ಲಿ ಬರೆಸಿಕೊಳ್ಳುವರು (ಮತ್ತಾಯ 7:21-23 ಮತ್ತು ವ್ಯಾಖ್ಯಾನ ನೋಡಿರಿ).

## ಯೇಸು ತಂದೆಯನ್ನು ಕೊಂಡಾಡುತ್ತಾನೆ (10:21-24)

(ಮತ್ತಾಯ 11:25-27, 13:16-17).

**21-22** ಮತ್ತಾಯ 11:25-27 ಮತ್ತು ವ್ಯಾಖ್ಯಾನ ನೋಡಿರಿ.

**23-24** ಮತ್ತಾಯ 13:16-17, ಮಾರ್ಕ 4:12 ಮತ್ತು ವ್ಯಾಖ್ಯಾನ ನೋಡಿರಿ.

## ಒಳ್ಳೇ ಸಮಾರ್ಯದವನ ಸಾಮ್ಯ (10:25-37).

25 ಒಬ್ಬ ಧರ್ಮೋಪದೇಶಕನು ಯೇಸುವಿಗೆ " ನಾನು ನಿತ್ಯಜೀವಕ್ಕೆ ಬಾಧ್ಯನಾಗುವಂತೆ ಏನು ಮಾಡಬೇಕು?" ಎಂದು ಕೇಳಿದನು. ಆತನು ಯಥಾರ್ಥವಾಗಿ ಕೇಳದೆ ಯೇಸುವನ್ನು ಪರೀಕ್ಷಿಸಬೇಕೆಂದು ಕೇಳಿದನು.

26 ಧರ್ಮೋಪದೇಶಕನು ತನ್ನ ಪ್ರಶ್ನೆಗೆ ಉತ್ತರವನ್ನು ತಿಳಿದಿರಬೇಕಿತ್ತು, ಯಾಕೆಂದರೆ ಅದು ಯೆಹೂದ್ಯರ ಧರ್ಮಶಾಸ್ತ್ರದಲ್ಲಿಯೇ ಬರೆದಿದೆ. ನನ್ನ ಆಜ್ಞಾವಿಧಿಗಳ ಪ್ರಕಾರ ನಡೆದು ಕೊಳ್ಳುವವರು ಆ ಆಜ್ಞಾವಿಧಿಗಳ ಮೂಲಕ ಬದುಕುವರು (ಯಾಜಕಕಾಂಡ 18:5, ಗಲಾತ್ಯ 3:12). ಅಂದರೆ ದೇವರ ಪ್ರತಿಯೊಂದು ಆಜ್ಞಾವಿಧಿಗಳನ್ನು ಎಲ್ಲಾ ವೇಳೆಗಳಲ್ಲಿ ವಿಧೇಯನಾಗುವವನು ನಿತ್ಯಜೀವವನ್ನು ಪಡೆಯುವನು. ಆದುದರಿಂದ ಯೇಸು ಆತನ ಪ್ರಶ್ನೆಗೆ ನೇರವಾಗಿ ಉತ್ತರಿಸುವದಕ್ಕೆ ಬದಲಾಗಿ ಅವನಂತೆಯೇ "ಶಾಸ್ತ್ರದಲ್ಲಿ ಏನು ಬರದದೆ?[23]" ಎಂದು ಕೇಳುತ್ತಾನೆ.

27 ಧರ್ಮೋಪದೇಶಕನು ಯೇಸುವಿನ ಪ್ರಶ್ನೆಗೆ ಸರಿಯಾಗಿ ಉತ್ತರಿಸುತ್ತಾನೆ. ಯೇಸು ಎಲ್ಲಾ ಧರ್ಮಶಾಸ್ತ್ರವನ್ನೂ ಸಾರಾಂಶಿಸಿ ಎರಡು ಶ್ರೇಷ್ಠ ಆಜ್ಞೆಗಳಾಗಿ ಉಲ್ಲೇಖಿಸುತ್ತಾನೆ (ಮತ್ತಾಯ 22:40, ಮಾರ್ಕ 12:30-31 ಮತ್ತು ವ್ಯಾಖ್ಯಾನ ನೋಡಿರಿ).

28 ಬಳಿಕ ಯೇಸು "ಇದರಂತೆ ಮಾಡು, ಮಾಡಿದರೆ ಜೀವಿಸುವೆ ಅಂದರೆ ಈ ಎರಡು ಆಜ್ಞೆಗಳಿಗೆ ಸಂಪೂರ್ಣವಾಗಿ ವಿಧೇಯನಾಗು, ಆಗ ಜೀವಿಸುವಿ" ಎಂದನು. ಒಬ್ಬ ಮನುಷ್ಯನು ನಿಯಮಗಳಿಗೆ ವಿಧೇಯನಾಗುವದರಿಂದ ರಕ್ಷಣೆ ಹೊಂದುವನೆಂದು ಯೇಸುವಿನ ಮಾತಿನ ಅರ್ಥವಲ್ಲ ಯಾಕೆಂದರೆ ಮನುಷ್ಯನು ನಂಬಿಕೆಯಿಂದಲೇ ರಕ್ಷಿಸಲ್ಪಡುವನು (ಗಲಾತ್ಯ 2:15-16 ಮತ್ತು ವ್ಯಾಖ್ಯಾನ ನೋಡಿರಿ). ಮನುಷ್ಯನು ಧರ್ಮಶಾಸ್ತ್ರಕ್ಕೆ ವಿಧೇಯನಾಗುವದರ ಮೂಲಕ ರಕ್ಷಣೆ ಹೊಂದುವದಿಲ್ಲ ಎಂಬದಕ್ಕೆ ಕಾರಣವೇನೆಂದರೆ ಯಾವನೂ (ಕ್ರಿಸ್ತನನ್ನು ಹೊರತು ಪಡಿಸಿ) ಇದುವರೆಗೂ ಧರ್ಮಶಾಸ್ತ್ರಕ್ಕೆ ಪರಿಪೂರ್ಣವಾಗಿ ವಿಧೇಯನಾಗಲು ಸಾದ್ಯವಾಗಿರುವದಿಲ್ಲ (ಗಲಾತ್ಯ 3:10, ಯಾಕೋಬ 2:10 ಮತ್ತು ವ್ಯಾಖ್ಯಾನ ನೋಡಿರಿ). ಯಾರು ಎರಡು ಶ್ರೇಷ್ಠ ಆಜ್ಞೆಗಳಿಗೆ ಎಲ್ಲಾ ಸಮಯಗಳಲ್ಲಿ ವಿಧೇಯರಾಗಲು ಸಾದ್ಯ? ಯಾರೂ ಇಲ್ಲ. ನಾವು ಕ್ರಿಸ್ತನನ್ನು ನಂಬುವಾಗ ಮತ್ತು ಆತನ ಪ್ರೀತಿಯು ನಮ್ಮ ಹೃದಯಗಳಲ್ಲಿ ಸುರಿಸಲ್ಪಡುವಾಗ ಮಾತ್ರವೇ (ರೋಮಾ 5:5). ನಾವು ಈ ಎರಡು

ಆಜ್ಞೆಗಳಿಗೆ ವಿಧೇಯರಾಗಬಲ್ಲೆವು. ನಂಬಿಕೆಯಿಲ್ಲದೆ ನಿಜ ಪ್ರೀತಿಯು ಇರಲಾರದು. ಪ್ರೀತಿಯಿಂದ ಕೆಲಸ ನಡೆಸುವ ನಂಬಿಕೆಯಿಂದ ಮಾತ್ರವೇ ನಾವು ಸತ್ಯ ಜೀವವನ್ನು ಪಡೆದುಕೊಳ್ಳಬಲ್ಲೆವು.

**29** ಧರ್ಮೋಪದೇಶಕನಿಗೆ ಯೇಸುವಿನ ಉತ್ತರದಿಂದ ಸಂತೋಷವಾಗಲಿಲ್ಲ. ತಾನು ದೇವರನ್ನು ಪ್ರೀತಿಸಿರಬೇಕಾದ ವಿಧದಲ್ಲಿ ಪ್ರೀತಿಸಿರಲಿಲ್ಲ ಎಂದು ಅವನಿಗೆ ತಿಳಿದಿತ್ತು. ತಾನು ಎಲ್ಲರನ್ನು ಪ್ರೀತಿಸಲಿಲ್ಲವೆಂದು ಅವನಿಗೆ ಗೊತ್ತಿತ್ತು. ಉದಾಹರಣೆ, ಆತನು ಅನ್ಯಜನರನ್ನು ಪ್ರೀತಿಸಿರಲಿಲ್ಲ. ಯೆಹೂದ್ಯರಲ್ಲಿ ಹೆಚ್ಚಿನವರು ಅನ್ಯ ಜನರನ್ನು ತಮ್ಮ "ನೆರೆಯವರು" ಎಂದು ಪರಿಗಣಿಸುತ್ತಿರಲಿಲ್ಲ. ನೆರೆಯವನನ್ನು ಪ್ರೀತಿಸಬೇಕೆಂಬ ಎರಡನೆಯ ಆಜ್ಞೆಯಲ್ಲಿ ಅನ್ಯಜನರನ್ನು ಪ್ರೀತಿಸುವದು ಸೇರಿರುವದಿಲ್ಲ ಎಂದು ಹೇಳಿಕೊಂಡರು. "ನೆರೆಯವರಲ್ಲಿ" ಅನ್ಯಜನರು ಸೇರಿಲ್ಲ ಎಂಬದಕ್ಕೆ ಯೇಸು ಒಪ್ಪುವನು, ಆಗ ಅವರನ್ನು ಪ್ರೀತಿಸದಿರುವ ಅಪರಾಧ ನನಗೆ ಬರುವದಿಲ್ಲ ಎಂದು ಧರ್ಮೋಪದೇಶಕನು ನಿರೀಕ್ಷಿಸಿದನು. ಆತನು ತಾನು ಮಾಡಿದ್ದು ಸರಿಯೆಂದು ನಿರೂಪಿಸಲು ಪ್ರಯತ್ನಿಸುತ್ತಿದ್ದನು. ಆತನು ತಾನೆಷ್ಟು ಕೆಟ್ಟವನೆಂಬದನ್ನು ತಿಳಿದು ಕೊಳ್ಳುವದಕ್ಕಿಂತಲೂ ತಾನು ಎಷ್ಟು ಒಳ್ಳೇಯವನು ಎಂಬದನ್ನು ತೋರಿಸಲು ಹೆಚ್ಚು ಇಷ್ಟಪಟ್ಟನು.

ಆಗ ಯೇಸು ತನ್ನ ಒಳ್ಳೇ ಸಮಾರ್ಯದವನ [24]ಸಾಮ್ಯದ ಮೂಲಕವಾಗಿ ಧರ್ಮೋಪದೇಶಕನಿಗೆ ಯೆಹೂದ್ಯರು ಮತ್ತು ಅನ್ಯಜನರಿಬ್ಬರನ್ನೂ ಒಳಗೊಂಡು ಎಲ್ಲಾ ಮನುಷ್ಯರು ಆತನ ನೆರೆಯವರೆಂದು, ಮತ್ತು ಆದುದರಿಂದ ಆತನು ತನ್ನ ಸ್ನೇಹಿತರನ್ನಷ್ಟೇ ಅಲ್ಲದೆ ಎಲ್ಲರನ್ನೂ ಪ್ರೀತಿಸಬೇಕೆಂದು ಹೇಳಿದನು(ಮತ್ತಾಯ 15:44). ಸಾಮ್ಯದಲ್ಲಿ ಧರ್ಮಶಾಸ್ತ್ರಕ್ಕೆ ವಿಧೇಯನಾದವನು ಯೆಹೂದ್ಯೇತರನಾದ ಸಮಾರ್ಯದವನೇ ಹೊರತು ಇಬ್ಬರು ಗರ್ವಿಷ್ಠರಾದ ಕುರುಣಾರಹಿತಯೆಹೂದ್ಯರು ವಿಧೇಯರಾಗಲಿಲ್ಲ. ಯೆಹೂದ್ಯ ಯಾಜಕ ಮತ್ತು ಲೇವಿಯನಿಗಿಂತಲೂ ಈ ಸಮಾರ್ಯದವನೇ ಪರಲೋಕರಾಜ್ಯಕ್ಕೆ ಹತ್ತಿರದವನಾಗಿದ್ದನು (ವಚನ 31-32).

**30** ಯೆರೀಕೊ ಪಟ್ಟಣವು ಯೆರೂಸಲೇಮಿನ ಪೂರ್ವಕ್ಕೆ ಹದಿನೆಂಟು ಮೈಲುಗಳಷ್ಟು ದೂರವೂ ಮತ್ತು ಎತ್ತರದಲ್ಲಿ 3300 ಅಡಿಗಳಷ್ಟು ಕೆಳಮಟ್ಟದಲ್ಲಿಯೂ ಇತ್ತು. ಯೆರಿಕೋ ಮತ್ತು ಯೆರೂಸಲೇಮಿನ ನಡುವಿನ ಮಾರ್ಗವು ದಟ್ಟವಾಗಿಯೂ, ಕಲ್ಲುಗಳಿಂದಲೂ ಕೂಡಿತ್ತು. ಆಸ್ಥಳವು ಕಳ್ಳರಿಗೆ ಅಡಗು ತಾನವಾಗಿತ್ತು ಮತ್ತು ಮಾರ್ಗ ಮಧ್ಯದಲ್ಲಿ ಹಲವಾರು ವೇಳೆ ಜನರು ದೋಚಿಕೊಳ್ಳಲ್ಪಟ್ಟಿದ್ದರು. ಸಾಮ್ಯವು ನಿಜವಾದ ಘಟನೆಯ ಮೇಲೆ ಆಧಾರವಾಗಿದ್ದಿರಬಹುದು.

**31-32** ಯಾಜಕ ಮತ್ತು ಲೇವಿಯರು[25] ಯೆಹೂದ್ಯರಲ್ಲಿ ಅತಿನೀತಿವಂತರೆಂದು ಪರಿಗಣಿಸಲ್ಪಟ್ಟಿದ್ದರು. ಆದಾಗ್ಯು ಅವರು ಕಳ್ಳರಿಂದ ಹೊಡೆಯಲ್ಪಟ್ಟ ತಮ್ಮ ಜೊತೆ ಯೆಹೂದ್ಯರಿಗೆ ಪ್ರೀತಿ ತೋರಿಸಲಿಕ್ಕೆ ಆಗದಷ್ಟು ಹೆಚ್ಚು ಕಾರ್ಯಮಗ್ನರಾಗಿದ್ದರು. ಬಹುಶ ದೇವಾಲಯದಲ್ಲಿ ಅವರಿಗೆ ಒಂದು ಪ್ರಾಮುಖ್ಯ ಕೆಲಸವಿತ್ತು ಮತ್ತು ಹೀಗೆ ತಮ್ಮ ನೆರೆಯವರಿಗೆ ಸಹಾಯ ಮಾಡಲು ಅವರಿಗೆ ಸಮಯ ನೀಡಲಾಗಲಿಲ್ಲ.

**33-35** ಆದರೆ ಸಮಾರ್ಯದವನು ನಿಂತುಕೊಂಡನು. ಸಮಾರ್ಯದವರು ಪೂರ್ಣ ಯೆಹೂದ್ಯರಲ್ಲದಿದ್ದಾಗ್ಯೂ, ಯೆಹೂದ್ಯರು ಮತ್ತು ಸಮಾರ್ಯದವರು ಹಲವಾರು ವೇಳೆ ಒಬ್ಬರನ್ನೊಬ್ಬರು ದ್ವೇಷಿಸಿದರೂ ಈ ಸಮಾರ್ಯದವನು ದೋಚಿಕೊಳ್ಳಲ್ಪಟ್ಟಿದ್ದ ಯೆಹೂದ್ಯನಿಗೆ ಕರುಣೆತೋರಿಸಿದನು.

ಆತನು ಕೇವಲ ಮರುಗಲಿಲ್ಲ. ಆತನು ಗಾಯಗೊಂಡ ವ್ಯಕ್ತಿಯ ಸಂಪೂರ್ಣ ಹೊಣೆ ಹೊತ್ತಕೊಂಡನು ಆತನ ಗಾಯಗಳಿಗೆ ಚಿಕಿತ್ಸೆಮಾಡಿದನು. ಆತನನ್ನು ಛತ್ರಕ್ಕೆ ಕರೆದುಕೊಂಡು ಹೋದನು. ಆತನ ಎಲ್ಲಾ ವೆಚ್ಚಗಳನ್ನು ಭರಿಸಿದನು. ನಿನ್ನ ನೆರೆಯವನನ್ನು

ಪ್ರೀತಿಸು ಎಂಬದರಅರ್ಥ ಇದೆಯಾಗಿದೆ. ಆದುದರಿಂದ ನಾವು ಬರೀಮಾತಿನಿಂದಾಗಲಿ, ಬಾಯುಪಚಾರದಿಂದಾಗಲಿ ಪ್ರೀತಿಸುವರಾಗಿರದೆ ಸತ್ಯದಲ್ಲಿಯೂ, ಕೃತ್ಯದಲ್ಲಿಯೂ ಪ್ರೀತಿಸುವವರಾಗಿರೋಣ (1 ಯೋಹಾನ 3:18).

**36-37** ಧರ್ಮೋಪದೇಶಕನು "ನನ್ನ ನೆರೆಯವನು ಯಾರು?" ಎಂದು ಕೇಳಿದ್ದನು (ವಚನ 29). ಆದಕ್ಕೆ ಉತ್ತರ:ಎಲ್ಲಾ ಮಾನವರು, ವಿಶೇಷವಾಗಿ ಅಗತ್ಯತೆಯಲ್ಲಿರುವವರೆಲ್ಲರೂ ನಮ್ಮ ನೆರೆಯವರು.

ಆದರೆ ಸಾಮ್ಯವು ಇನ್ನೊಂದು ಪ್ರಶ್ನೆಯನ್ನು ಕೇಳುತ್ತದೆಃ ನಾನು ಒಬ್ಬ ನೆರೆಯವನೋ? ನಾನು ನೆರೆಯವನಂತೆ ನಡೆದು ಕೊಳ್ಳುತ್ತಿರುವೆನೋ? ನಮ್ಮ ನೆರೆಯವನು ಯಾರು ಎಂದು ಕೇಳುವದಕ್ಕಿಂತಲೂ ಮೇಲಿನ ಪ್ರಶ್ನೆಯನ್ನು ಕೇಳಿಕೊಳ್ಳುವದು ಹೆಚ್ಚು ಪ್ರಾಮುಖ್ಯವಾದದ್ದು. ಜನರಿಂದ ತಿರಸ್ಕರಿಸಲ್ಪಟ್ಟ "ಅಶುದ್ಧ" ಸಮಾರ್ಯದವನೇ ನಿಜ ನೆರೆಯವನಾಗಿದ್ದನು, ಆದುದರಿಂದ ಆತನೇ ನಿತ್ಯ ಜೀವಕ್ಕೆ ಬಾಧ್ಯನಾಗುವನು.

ಯೇಸು ಧರ್ಮೋಪದೇಶಕನಿಗೆ "ಹೋಗಿ, ಆದರಂತೆಮಾಡು" ಆ ಸಮಾರ್ಯದವನು ಗಾಯಗೊಂಡ ಯೆಹೂದ್ಯನಿಗೆ ಮಾಡಿದಂತೆಯೇ, ನೀನು ಹೋಗಿ ನಿನ್ನ ಸಹಾಯದ ಅಗತ್ಯವಿರುವವನಿಗೆ – ಸಮಾರ್ಯದವನಿಗೂ ಸಹ – ಮಾಡು ಎಂದು ಹೇಳಿದನು.

## ಮಾರ್ಥಳು ಮತ್ತು ಮರಿಯಳರ ಮನೆಯಲ್ಲಿ (10:38-42)

**38-39** ಮಾರ್ಥ ಮತ್ತು ಮರಿಯಳರು ಯೆರೂಸಲೇಮಿನ ಹತ್ತಿರದ ಬೇಥಾನ್ಯದಲ್ಲಿ ವಾಸಿಸುತ್ತಿದ್ದರು (ಯೋಹಾನ 11:1-2). ಯೇಸು ಅವರ ಮನೆಗೆ ಬಂದಾಗ ಮಾರ್ಥಳು ಅಡುಗೆ ಸಿದ್ಧ ಮಾಡುವದರಲ್ಲಿ ತನ್ನನ್ನು ತೊಡಗಿಸಿಕೊಂಡಳು.

ಆದರೆ ಮರಿಯಳು ತನ್ನ ಅಕ್ಕನಿಗೆ ಸಹಾಯಮಾಡುವದರ ಬದಲಾಗಿ ಯೇಸುವಿನ ಬಳಿಯಲ್ಲಿದ್ದು ಕೊಂಡು ಆತನ ಮಾತುಗಳನ್ನು ಕೇಳುತ್ತಿದ್ದಳು. ಇನ್ನೊಂದು ಸಂದರ್ಭದಲ್ಲಿ ಯೇಸುವನ್ನು ಅಮೂಲ್ಯವಾದ ಸುಗಂಧ ತೈಲದಿಂದ ಅಭಿಷೇಕಿಸಿದ ಮರಿಯಳು ಇವಳೇ ಆಗಿದ್ದಾಳೆ (ಮಾರ್ಕ 14:3, ಯೋಹಾನ 12:1-3).

**40** ಮಾರ್ಥಳಿಗೆ ಬೇಸರವು ಂಟಾಯಿತು. ಅವಳು ಕರ್ತನಿಗಾಗಿ ಒಂದು ಉತ್ತಮ ಊಟವನ್ನು ಸಿದ್ಧ ಮಾಡಲಿಚ್ಛಿಸಿದಳು, ಆದರೆ ಅವಳು ಇದರ ಬಗ್ಗೆ ಚಿಂತೆಗೊಳಗಾಗಿದ್ದಳು. ಅವಳು ತನ್ನ ತಂಗಿಯ ಬಗ್ಗೆ ದೂರು ಹೇಳಿದಳು. ಅವಳು ಕ್ರಿಸ್ತನನ್ನು ಗದರಿಸಿದಳು. ನಿನಗೆ ಚಿಂತೆಯಿಲ್ಲವೋ? ನಾನು ಇಷ್ಟೆಲ್ಲಾ ಕೆಲಸಮಾಡಬೇಕು, ಮತ್ತು ನನ್ನ ತಂಗಿ ನನಗೆ "ನೆರವಾಗುವದಿಲ್ಲ" ಎಂದು ಆತನಿಗೆ ಹೇಳಿದಳು.

**41-42** ಆಗ ಯೇಸು ಮಾರ್ಥಳಿಗೆ ಅವಳು ಚಿಂತೆಗೊಳಗಾಗಬಾರದು ಎಂದು ಮೃದುವಾಗಿ ಹೇಳಿದನು. ಅವಳು ತನ್ನ ಸಹೋದರಿಯನ್ನು ಗದರಿಸಕೂಡದು "ಮರಿಯಳು ಉತ್ತಮವಾದದ್ದನ್ನೇ ಆರಿಸಿಕೊಂಡಿದ್ದಾಳೆ" ಮರಿಯಳು ಜೀವದ ವಾಕ್ಯಗಳನ್ನು ಕೇಳಿಸಿಕೊಳ್ಳುವದಕ್ಕೆ ಮನಸ್ಸು ಕೊಟ್ಟಿದ್ದಾಳೆ. ಯೇಸುವನ್ನು ಆಲಿಸುವದರ ಮೂಲಕ, ಆತನೊಂದಿಗಿರುವದಕ್ಕೆ ಬಯಸುವದರ ಮೂಲಕ ಅವಳು ಆತನಿಗೆ ಗೌರವವನ್ನು ತೋರಿಸುತ್ತಿದ್ದಾಳೆ. ಅಲ್ಲದೆ ಅವಳು ಆತನ ಅನ್ಯೋನ್ಯತೆಯ ಆಶೀರ್ವಾದವನ್ನು ಸಹ ಪಡೆಯುತ್ತಿದ್ದಾಳೆ, ಮಾರ್ಥಳಾದರೋ ಚಿಂತೆ ಮತ್ತು ದೂರು ಹೇಳುವ ಸ್ವಭಾವದ ಕಾರಣದಿಂದಾಗಿ ಆ ಆಶೀರ್ವಾದವನ್ನು ಆನಂದಿಸಲಾಗಲಿಲ್ಲ.

ಅಡುಗೆ ಸಿದ್ಧ ಮಾಡುವದರಲ್ಲಿ ಮಾರ್ಥಳು ಉತ್ತಮ ಸಂಗತಿಯನ್ನೇ ಮಾಡುತ್ತಿದ್ದಾಳೆ. ಅವಳು ಸಹ ತನ್ನ ಸೇವೆಯ ಮೂಲಕವಾಗಿ ಯೇಸುವಿಗೆ ಪ್ರೀತಿಯನ್ನು ತೋರಿಸುತ್ತಿದ್ದಾಳೆ (1ಯೋಹಾನ 3:18). ಆದರೆ ಅವಳು ಚಿಂತೆ ಮತ್ತು ಗಡಿಬಿಡಿ ಮಾಡಿದ್ದು ತಪ್ಪಾಗಿರುತ್ತದೆ. ಸೇವೆಮಾಡುವದರಲ್ಲಿ ಹೆಚ್ಚು ಕಾರ್ಯಮಗ್ನರಾಗಿರುವದು ತಪ್ಪಲ್ಲ, ಸೇವೆಯಲ್ಲಿ ಬೇಸರಗೊಳ್ಳುವದು ತಪ್ಪಾಗಿರುತ್ತದೆ. ಅಲ್ಲದೆ ಅವಳು ತನ್ನ ಸಹೋದರಿಯ ಮೇಲೆ ದೂರು ಹೇಳುವದರಲ್ಲಿಯೂ ತಪ್ಪು ಮಾಡಿದ್ದಳು. ಅಪೊಸ್ತಲನಾದ ಪೌಲನು ಹೀಗೆ ಬರೆದನು: ಗುಣುಗುಟ್ಟದೆಯೂ, ವಿವಾದವಿಲ್ಲದೆಯೂ ಎಲ್ಲವನ್ನೂ ಮಾಡಿರಿ (ಫಿಲಿಪ್ಪಿ 2:14).

ಯೇಸು ಮಾರ್ಥಳಿಗೆ ಕುಳಿತುಕೊಂಡು ಆಲಿಸು ಎಂದು ಹೇಳಲಿಲ್ಲ ಎಂಬದನ್ನು ನಾವು ಗಮನಿಸತಕ್ಕದ್ದು. ಅಲ್ಲದೆ ಮರಿಯಳಿಗೆ ನೀನು ಎದ್ದು ಆಕೆಗೆ ಸಹಾಯಮಾಡೆಂದೂ ಹೇಳಲಿಲ್ಲ. ಇಬ್ಬರು ಸಹೋದರಿಯರೂ ಕರ್ತನಿಗೆ ಮೆಚ್ಚಿಕೆಯಾದದ್ದನ್ನೇ ಮಾಡುತ್ತಿದ್ದಾರೆ, ಒಬ್ಬಳು ಸೇವೆಮಾಡುತ್ತಿದ್ದಾಳೆ, ಇನ್ನೊಬ್ಬಳು ಆಲಿಸುತ್ತಿದ್ದಾಳೆ. ಎರಡೂ ಸಂಗತಿಗಳೂ ಅವಶ್ಯಕ ಮತ್ತು ಉತ್ತಮವಾಗಿವೆ. ಕೆಲವು ಕ್ರೈಸ್ತರು ಸೇವೆಯಲ್ಲಿ ಮತ್ತು ವಿವಿಧ ರೀತಿಯ ಕಾರ್ಯಗಳನ್ನು ಮಾಡುವದರಲ್ಲಿ ಹೆಚ್ಚು ಸಮಯ ಕಳೆಯುತ್ತಾರೆ, ಅದೇ ವೇಳೆಯಲ್ಲಿ ಇತರ ಕ್ರೈಸ್ತರು ಪ್ರಾರ್ಥನೆ, ಧ್ಯಾನ ಮತ್ತು ಆರಾಧನೆಗಳಲ್ಲಿ ಹೆಚ್ಚು ಸಮಯಕಳೆಯುತ್ತಾರೆ. ಅವರು ಒಬ್ಬರನ್ನೊಬ್ಬರು ಟೀಕಿಸದಿರಲಿ. ಅವರು ಮಾಡುವದೆಲ್ಲವೂ ಕ್ರಿಸ್ತನ ಮೇಲಿನ ಪ್ರೀತಿಯಿಂದ ಮಾಡಲ್ಪಡಲಿ, ಆಗ ಕರ್ತನು ಸಂತೋಷಪಡುವನು. ನಮ್ಮ ವಯುಕ್ತಿಕ ಕ್ರೈಸ್ತೀಯ ಜೀವಿತಗಳಲ್ಲಿ ನಾವು ಸೇವೆಯಲ್ಲಿ ಕಳೆಯುವ ಸಮಯ ಮತ್ತು ಪ್ರಾರ್ಥನೆ, ಆರಾಧನೆಗಳಲ್ಲಿ ಕಳೆಯುವ ಸಮಯಗಳ ನಡುವೆ ಸ್ವಲ್ಪ ಸಮತೋಲನ ಇರಬೇಕು. ನಾವು ಪ್ರಾರ್ಥನೆ ಮತ್ತು ಆರಾಧನೆ ಮಾಡದಿರುವದಾದರೆ ನಮ್ಮ ಸೇವೆಯು ಬಲವಿಲ್ಲದ್ದು, ಒಣಗಿ ಹೋದದ್ದು ಆಗಿರುತ್ತದೆ. ಇನ್ನೊಂದು ಕಡೆಯಲ್ಲಿ ನಾವು ಸೇವಾಕಾರ್ಯಗಳನ್ನು ಮಾಡದೆ ಹೋಗುವದಾದರೆ ನಮ್ಮ ಧರ್ಮವು ಸತ್ತದ್ದಾಗಿರುತ್ತದೆ (ಯಾಕೋಬ 2:17). ಆದ್ದರಿಂದ ಸೇವೆಯಲ್ಲಿ ನಾವು ಎಷ್ಟು ಸಮಯ ಕಳೆಯಬೇಕು ಮತ್ತು ಪ್ರಾರ್ಥನೆ, ಆರಾಧನೆಗಳಲ್ಲಿ ಎಷ್ಟು ಸಮಯ ಕಳೆಯಬೇಕೆಂಬುದರ ವಿಷಯದಲ್ಲಿ ನಾವೆಲ್ಲರೂ ದೇವರ ಮಾರ್ಗದರ್ಶನವನ್ನು ಹುಡುಕೋಣ.

ಹೇಗೂ, ಯೇಸು ಮಾರ್ಥಳಿಗೆ ಹೇಳಿದ್ದನ್ನು ಮರೆಯದಿರೋಣಃ"ಬೇಕಾದದ್ದು ಒಂದೇ" (ವಚನ 22). ಆ ಸಂಗತಿಯು ಕ್ರಿಸ್ತನೊಂದಿಗಿನ ಆತ್ಮೀಕ ಅನ್ಯೋನ್ಯತೆ ಆಗಿದೆ "ಒಬ್ಬನು ನನ್ನಲ್ಲಿಯೂ, ನಾನು ಅವನಲ್ಲಿಯೂ ನೆಲೆಗೊಂಡಿರುವದಾದರೆ ಅವನು ಹೆಚ್ಚು ಫಲ ಕೊಡುವನು, ನನ್ನನ್ನು ಬಿಟ್ಟು ನೀವು ಏನೂ ಮಾಡಲಾರಿರಿ " (ಯೋಹಾನ 15:5). ಮರಿಯಳಿಗೆ ಇದು ಗೊತ್ತಿತ್ತು. ಅವಳು ಉತ್ತಮವಾದದ್ದನ್ನೇ ಆರಿಸಿಕೊಂಡಿದ್ದಳು. ಕ್ರಿಸ್ತನೊಂದಿಗಿನ ಅನ್ಯೋನ್ಯತೆಯು ಖಂಡಿತವಾಗಿ ಅಂತ್ಯಗೊಳ್ಳುತ್ತದೆ. ಮರಿಯಳು ಕ್ರಿಸ್ತನೊಂದಿಗೆ ಹೊಂದಿದ್ದ ಅನ್ಯೋನ್ಯತೆಯನ್ನು ಅವಳಿಂದ ತೆಗೆಯಲ್ಪಡುವದಿಲ್ಲ. ಕ್ರಿಸ್ತಯೇಸುವಿನಲ್ಲಿ ತೋರಿಬರುವ ದೇವರ ಪ್ರೀತಿಯಿಂದ ನಮ್ಮನ್ನು ಯಾವದೂ ಅಗಲಿಸಲಾರದು (ರೋಮ 8:38-39).

ಕ್ರಿಸ್ತನಿಗೆ ಮಾರ್ಥ ಮತ್ತು ಮರಿಯಳರು ನಿಜವಾಗಿಯೂ ಮಾಡುತ್ತಿದ್ದ ಸಂಗತಿಗಳು ಪ್ರಾಮುಖ್ಯವಾಗಿರಲಿಲ್ಲ, ಅವರ ಮನೋಭಾವಗಳೇ ಆತನಿಗೆ ಪ್ರಾಮುಖ್ಯವಾಗಿದ್ದವು . ಮಾರ್ಥಳು ತಪ್ಪಾದ ಮನೋಭಾವ ಹೊಂದಿದ್ದಳು. ಮತ್ತು ಮರಿಯಳು ಸರಿಯಾದದ್ದನ್ನು ಹೊಂದಿದ್ದಳು. ಮಾರ್ಥಳು ಸರಿಯಾದ ಮನೋಭಾವ ಹೊಂದಿದ್ದರೆ ತನ್ನಕೆಲಸ ಕಾರ್ಯಗಳ ಮದ್ಯದಲ್ಲಿಯೂ ಕ್ರಿಸ್ತನೊಂದಿಗೆ ಅನ್ಯೋನ್ಯತೆಯನ್ನು ಅನಂದಿಸಿರುತ್ತಿದ್ದಳು. ಇನ್ನೊಂದು ಕಡೆಯಲ್ಲಿ ಮರಿಯಳು ಸೋಮಾರಿತನ ದಂತಹ ತಪ್ಪಾದ ಕಾರಣಕ್ಕಾಗಿ ಯೇಸುವಿನ ಪಾದಗಳ ಬಳಿ ಕುಳಿತಿರಬಹುದು. ನಾವು ಏನು ಮಾಡುತ್ತೇವೆ ಎಂಬುದು ಪ್ರಾಮುಖ್ಯವಲ್ಲ, ಆದರೆ ನಾವು ಯಾಕೆ ಮಾಡುತ್ತೇವೆ ಎಂಬದೇ ಅತಿ ಪ್ರಾಮುಖ್ಯವಾಗಿದೆ. ಮಾರ್ಥಳು ತನ್ನ ಪ್ರಾಪಂಚಿಕ ಚಿಂತೆಗಾಗಿ ಗದರಿಸಲ್ಪಟ್ಟಳು ಹೊರತು ಆಕೆಯ ಸೇವೆಗಾಗಿಯಲ್ಲ. ಮರಿಯಳು ಯೇಸುವಿಗಾಗಿನ ಪ್ರೀತಿಗಾಗಿ ಪ್ರಶಂಸಿಸಲ್ಪಟ್ಟಳು ಹೊರತು ಕುಳಿತು ಕೊಂಡದ್ದಕ್ಕಾಗಿಯಲ್ಲ. ನಾವು ಏನೇ ಮಾಡುತ್ತಿದ್ದರೂ ನಮಗೆ ಬೇಕಾದದ್ದು ಒಂದೇ ಸಂಗತಿ: ಕ್ರಿಸ್ತನೊಂದಿಗೆ ಅನ್ಯೋನ್ಯತೆ ಎಂಬದನ್ನು ನಾವೆಲ್ಲರೂ ಜ್ಞಾಪಕದಲ್ಲಿಟ್ಟು ಕೊಳ್ಳೋಣ. ಅದು ನಮ್ಮಿಂದ ಎಂದಿಗೂ ತೆಗೆಯಲ್ಪಡುವದಿಲ್ಲ.

## ಅಧ್ಯಾಯ - 11

### ಪ್ರಾರ್ಥನೆಯ ಕುರಿತು ಯೇಸುವಿನ ಬೋಧನೆ (11:1-4)

(ಮತ್ತಾಯ 6:9-13).

**1-4** ಮತ್ತಾಯ 6:9-13 ಮತ್ತು ವ್ಯಾಖ್ಯಾನ ನೋಡಿರಿ.

### ಎಡೆಬಿಡದ ಪ್ರಾರ್ಥನೆ (11:5-8)

**5-8** ಮನುಷ್ಯರು ಹೇಗೆ ಪ್ರಾರ್ಥಿಸ ಬೇಕೆಂಬದರ ಕುರಿತು ಯೇಸು ಒಂದು ಸಾಮ್ಯವನ್ನು ಹೇಳುತ್ತಾನೆ. ನಾವು ಛಲದಿಂದ ಪ್ರಾರ್ಥಿಸಬೇಕು (ವಚನ 8).

ಈ ಸಾಮ್ಯದಲ್ಲಿ ಸ್ನೇಹಿತನು ಮೊದಲು ಮೊದಲನೆಯವನ ಮನವಿಯನ್ನು ನಿರಾಕರಿಸುತ್ತಾನೆ. ಆದಾಗ್ಯು ಕೊನೆಗೆ ಅವನು ಮೊದಲನೆಯವನ ಛಲದ ಕಾರಣದಿಂದ ರೊಟ್ಟಿಯನ್ನು ಕೊಟ್ಟು ಬಿಡುತ್ತಾನೆ. ಮಾನವರು ನಮ್ಮ ಕಾಟದಿಂದ ಬೇಸತ್ತು ಕೊಳ್ಳುವದರಿಂದ ನಮ್ಮ ಮನವಿಯನ್ನು ಪೂರೈಸುತ್ತಾರೆ. ಹೇಗೂ, ದೇವರು ನಮ್ಮ ಛಲಕ್ಕಾಗಿ ಮೆಚ್ಚಿಕೊಂಡು ನಮ್ಮ ಬೇಡಿಕೆಗಳನ್ನು ನೀಡುತ್ತಾನೆ. ಈ ಸಾಮ್ಯದ ಪ್ರಕಾರವಾಗಿ ನಾವು ದೇವರ ಬಳಿಗೆ ಒಬ್ಬ ಸ್ನೇಹಿತನಂತೆ ಹೋಗಬೇಕು. ಆತನು ನಮ್ಮ ಬೇಡಿಕೆಗಳನ್ನು ಕೇಳುತ್ತಾನೆಂಬ ನಿರೀಕ್ಷೆಯೊಂದಿಗೆ ಹೋಗಬೇಕು. ನಾವು ಧೈರ್ಯದಿಂದ ಆತನ ಬಳಿಗೆ ಹೋಗಬೇಕು (ಇಬ್ರಿಯ 4:16). ಇಲ್ಲಿ ಗಮನಿಸತಕ್ಕದ್ದೇನೆಂದರೆ ಮೊದಲನೆಯ ಮನುಷ್ಯನು ತನಗಾಗಿ ಬೇಡಿಕೊಳ್ಳದೆ ಇನ್ನೊಬ್ಬನಿಗಾಗಿ, ಆಕಸ್ಮೀಕವಾಗಿ ಬಂದ ಅಥಿತಿಗೋಸ್ಕರ ಬೇಡಿಕೊಂಡನು. ಈ ಮನವಿಯು ಸ್ವಾರ್ಥದಿಂದ ಕೂಡಿದ್ದಾಗಿರುವದಿಲ್ಲ. ನಾವು ಇತರರಿಗೋಸ್ಕರ ಅಥವಾ ಕ್ರಿಸ್ತನಿಗೋಸ್ಕರ ಬೇಡಿಕೊಳ್ಳುವಾಗ ದೇವರು ಕಿವಿಗೊಡುವದಕ್ಕೆ ಹೆಚ್ಚು ಸಿದ್ದನಾಗಿರುತ್ತಾನೆ. ದೇವರು ನಮಗೆ ಆಶೀರ್ವಾದ ಕೊಡಲು ಹೆಚ್ಚು ಇಚ್ಚೆಯವನಾಗಿರುವನು ಆದರೆ ನಮ್ಮ ಮೂಲಕ ಮತ್ತು ನಮ್ಮ ಪ್ರಾರ್ಥನೆಗಳ ಮೂಲಕ ಇತರರನ್ನು ಆಶಿರ್ವಧಿಸಲು ಇನ್ನೂ ಎಷ್ಟೋ ಇಚ್ಚೆಯುಳ್ಳವನಾಗಿರುತ್ತಾನೆ. ನೀವು ಯಾರಿಗಾದರೂ ಪ್ರಾರ್ಥಿಸುತ್ತೀರುವಿರೋ? ನೀವು ಕ್ರಿಸ್ತನ ಬಳಿಗೆ ತರಲು ಬಯಸುವ ಯಾರಾದರೂ ಇದ್ದಾರೆಯೋ? ಆತ್ಮೀಕ ರೊಟ್ಟಿಯ ಅಗತ್ಯತೆಯಲ್ಲಿರುವ ನೆರೆಯವನೊಬ್ಬನು ನಿಮಗಿದ್ದಾನೋ? ಕೇಳಿಕೊಳ್ಳಿರಿ. ಮದ್ಯರಾತ್ರಿಯಲ್ಲಿಯೂಸಹ ಬೇಡಿಕೊಳ್ಳಿರಿ. ಎಡಬಿಡದೆಯೂ, ಧೈರ್ಯದಿಂದಲೂ ಬೇಡಿಕೊಳ್ಳಿರಿ. ಮಾನವ ಸ್ನೇಹಿತನೊಬ್ಬನು ಮದ್ಯರಾತ್ರಿಯಲ್ಲಿ ಎದ್ದು ರೊಟ್ಟಿಯನ್ನ ಕೊಡಬಲ್ಲವನಾದರೆ ದೇವರು ಇನ್ನು ಎಷ್ಟೋ ಹೆಚ್ಚಾಗಿ ನೀವು ಕೇಳುವದನ್ನು ಕೊಡುವನು! (ಮತ್ತಾಯ 7:11, ಲೂಕ 11:13 ಮತ್ತು ವ್ಯಾಖ್ಯಾನ ನೋಡಿರಿ). ದೇವರು ತಕ್ಷಣವೇ ಉತ್ತರಿಸದಿರಬಹುದು, ಆದರೆ ನಾವು ಎಡೆಬಿಡದೆ ಪ್ರಾರ್ಥಿಸುವದಾದರೆ ನಿಶ್ಚಯವಾಗಿಯೂ ಉತ್ತರಿಸುವನು. ನಮ್ಮನ್ನು ನಾವೇ ಕೇಳಿಕೊಳ್ಳೋಣ: ಅಗತ್ಯತೆಯಲ್ಲಿರುವ ಸ್ನೇಹಿತನಿಗಾಗಿ ನಾವು ಮದ್ಯ ರಾತ್ರಿಯಲ್ಲಿ ಎದ್ದೇಳಲು ಇಚ್ಚೆಯುಳ್ಳ-ವರಾಗಿದ್ದೇವೋ? ನಾವು ಇಚ್ಚೆಯುಳ್ಳವರಾಗಿದ್ದರೆ ದೇವರು ಸಹ ನಮ್ಮ ಮನವಿಗೆ ಉತ್ತರಿಸಲು ಇಚ್ಚೆಯುಳ್ಳವನಾಗಿರುವನು.

### ಕೇಳಿರಿ, ಹುಡುಕಿರಿ, ತಟ್ಟಿರಿ (11:9-13)

(ಮತ್ತಾಯ 7:7-11)

**9-13** ಮತ್ತಾಯ 7:7-11 ಮತ್ತು ವ್ಯಾಖ್ಯಾನ ನೋಡಿರಿ.

### ಯೇಸು ಮತ್ತು ಬೆಲ್ಜೆಬೂಬ (11:14-28)

(ಮತ್ತಾಯ 12:22-30, 43-45, ಮಾರ್ಕ 3:20-27).

**14-23** ಮಾರ್ಕ 3:20-27 ಮತ್ತು ವ್ಯಾಖ್ಯಾನ ನೋಡಿರಿ.

**24-26** ಮತ್ತಾಯ 12:43-45 ಮತ್ತು ವ್ಯಾಖ್ಯಾನ ನೋಡಿರಿ.

**27-28** ಒಬ್ಬ ಸ್ತ್ರೀಯು ಯೇಸುವಿನ ಬೋಧನೆಯನ್ನು ಕೇಳಿ "ನಿನ್ನನ್ನು ಹೆತ್ತ ತಾಯಿಯುಧನ್ಯಳು" ಎಂದು ಕೂಗಿದಳು. ಅವಳು ಸಹ ಯೇಸುವಿನ ಹಾಗೆ ಮಗನನ್ನು ಹೊಂದಿದ್ದರೆ ಚೆನ್ನಾಗಿತ್ತೆಂದು ಹಾರೈಸಿದಳು. ಆದರೆ ಯೇಸು ಉತ್ತರಿಸಿ ಆಕೆ ಆಶಿರ್ವದಿಸಲ್ಪಟ್ಟವಳಾಗಿರಲು ಆತನ ತಾಯಿ ಆಗಬೇಕಾಗಿಲ್ಲ ಎಂದು ತಿಳಿಸುತ್ತಾನೆ. ದೇವರ ವಾಕ್ಯಕ್ಕೆ ವಿಧೇಯರಾಗುವವರು ಯಾರೇ ಆಗಲಿ, ಯೇಸುವಿನ ತಾಯಿಯಂತೆಯೇ ಧನ್ಯರಾಗುವರು (ಮಾರ್ಕ 3:33-35, ಮತ್ತು ವ್ಯಾಖ್ಯಾನ ನೋಡಿರಿ).

### ಯೋನನ ಸೂಚಕಕಾರ್ಯ (11:29-32)

(ಮತ್ತಾಯ 12:38-45, ಮಾರ್ಕ 8:11-12).

**29-32** ಮತ್ತಾಯ 12:38-45 ಮತ್ತು ಮಾರ್ಕ 8:11-12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

## ದೇಹದ ದೀಪ (11:33-36)

(ಮತ್ತಾಯ 5:15, 6:22-23, ಮಾರ್ಕ 4:21, ಲೂಕ 8:16).

**33** ಮತ್ತಾಯ 5:15 ಮತ್ತು ಮಾರ್ಕ 4:21 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

**34-36** ಮತ್ತಾಯ 6:22-23 ಮತ್ತು ವ್ಯಾಖ್ಯಾನ ನೋಡಿರಿ.

## ಆರು ಆಳಲುಗಳು (11:37-54)

(ಮತ್ತಾಯ 23:4, 23-26, 29-31, 34-38).

**37-38** ಮಾರ್ಕ 7:1-5 ಮತ್ತು ವ್ಯಾಖ್ಯಾನ ನೋಡಿರಿ

**39** ಮತ್ತಾಯ 23:25-26 ಮತ್ತು ವ್ಯಾಖ್ಯಾನ ನೋಡಿರಿ.

**40** ಮನುಷ್ಯರು ಬಟ್ಟಲುಗಳ ಹಾಗಿರುತ್ತಾರೆ. ದೇವರು ಬಟ್ಟಲಿನ ಹೊರಭಾಗವನ್ನು ಮಾತ್ರವೇ ಮಾಡಲಿಲ್ಲ, ಆದರೆ ಒಳಭಾಗವನ್ನು ಸಹ ನಿರ್ಮಿಸಿದನು. ಆತನು ದೇಹದ ಹೊರಭಾಗ ಮತ್ತು ಒಳಭಾಗ, ಹೃದಯಗಳೆರಡನ್ನು ನಿರ್ಮಿಸಿದನು. ಒಳ ಭಾಗವು ಹೊಲಸಾಗಿ ಉಳಿಯುವದಾದರೆ ಹೊರಭಾಗವನ್ನು ಸ್ವಚ್ಛವಾಗಿಟ್ಟುಕೊಳ್ಳುವದರಿಂದ ಪ್ರಯೋಜನವೇನು? ಇದು ಹೊರಗೆ ಸ್ವಚ್ಛವಾಗಿದ್ದು ಒಳಗೆ ಕೇವಲ ಕೊಳೆಯು ತುಂಬಿದ ಬಟ್ಟಲನ್ನು ದೇವರಿಗೆ ಅರ್ಪಿಸಿದ ಹಾಗಿರುತ್ತದೆ.

**41** ಬಟ್ಟಲಿನ ಒಳ ಭಾಗವು ನಮ್ಮ ಹೃದಯ, ನಮ್ಮ ಪ್ರೀತಿಯಾಗಿರುತ್ತದೆ. ಅದು ನಮ್ಮ ಂಸ್ವತ್ತುಗಳೆಂದೂ ಆಗಬಹುದು. ನಾವು ನಮ್ಮ ಪ್ರೀತಿಯನ್ನು ಬಡವರಿಗೆ ನೀಡಬೇಕೆಂದು, ನಮ್ಮ ಸ್ವತ್ತುಗಳನ್ನು ಅವರೊಂದಿಗೆ ಹಂಚಿಕೊಳ್ಳಬೇಕೆಂದು ಕ್ರಿಸ್ತನು ನಮಗೆ ಹೇಳುತ್ತಾನೆ. ಆಗ ನಾವು ನಿಜವಾಗಿಯೂ ಶುದ್ಧರಾಗುವೆವು . ಒಂದು ವೇಳೆ ಬಟ್ಟಲಿನ ಒಳಭಾಗವು ಸ್ವಚ್ಛವಾಗಿರುವದಾದರೆ ಅಂದರೆ ನಮ್ಮ ಹೃದಯವು ಉದಾರಿಯಾಗಿರುವದಾದರೆ, ನಮ್ಮ ಸ್ವತ್ತುಗಳು ಬಡವರೊಂದಿಗೆ ಹಂಚಿಕೊಳ್ಳಲ್ಪಡುವದಾದರೆ ನಮ್ಮ ಸ್ವತ್ತುಗಳನ್ನೊಳಗೊಂಡು ಇಡೀ ಜೀವಿತವು ದೇವರ ದೃಷ್ಟಿಯಲ್ಲಿ ಪರಿಶುದ್ಧವಾಗಿರುತ್ತದೆ (ತೀತನು 1:15 ನೋಡಿರಿ).

**42** ಮತ್ತಾಯ 23:23-24 ಮತ್ತು ವ್ಯಾಖ್ಯಾನ ನೋಡಿರಿ.

**43** ಮಾರ್ಕ 12:38-39 ಮತ್ತು ವ್ಯಾಖ್ಯಾನ ನೋಡಿರಿ.

**44** ಸಮಾಧಿಯನ್ನು ಮುಟ್ಟಿದರೆ ಅಪವಿತ್ರಗೊಳ್ಳುವೆವೆಂದು ಯೆಹೂದ್ಯರು ನಂಬುತ್ತಿದ್ದರು (ಅರಣ್ಯಕಾಂಡ 19:16). ಆದುದರಿಂದ ಅವು ಗಳು ಸುಲಭವಾಗಿ ಕಾಣಿಸುವಂತಾಗಲು ಯೆಹೂದ್ಯರು ಅವು ಗಳನ್ನು ಸುಣ್ಣ ಹಚ್ಚುತ್ತಿದ್ದರು. ಇಲ್ಲವಾದರೆ ಯೆಹೂದ್ಯನೊಬ್ಬನು ತಿಳಿಯದೇ ಸಮಾಧಿಯ ಮೇಲೆ ನಡೆದು ಅದರಿಂದ ಅಶುದ್ಧಗೊಳ್ಳಬಹುದಾಗಿತ್ತು. ಫರಿಸಾಯರು ನೆಲಸಮವಾದ ಸಮಾಧಿಗಳಾಗಿದ್ದರು. ಜನರು ತಮ್ಮ ಅರಿವಿಲ್ಲದೆಯೇ ಫರಿಸಾಯರ ಮಿಥ್ಯಬೋಧನೆ ಮತ್ತು ಕೆಟ್ಟ ಮಾದರಿಯ ಮೂಲಕ ಅಪವಿತ್ರಗೊಳ್ಳುತ್ತಿದ್ದರು.

**45** ಧರ್ಮೋಪದೇಶಕರಿಗೆ ಅವಮಾನವೆನಿಸಿತು ಯಾಕೆಂದರೆ ಅವರು ಸಹ ಫರಿಸಾಯರು ಬೋಧಿಸಿದ ಸಂಗತಿಗಳನ್ನೇ ಬೋಧಿಸಿದರು. ಹೀಗೆ, ವಚನ 46ರಲ್ಲಿ ಯೇಸು ಧರ್ಮೋಪದೇಶಕರನ್ನು ಖಂಡಿಸಲು ಪ್ರಾರಂಬಿಸುತ್ತಾನೆ.

**46** ಮತ್ತಾಯ 23:4 ಮತ್ತು ವ್ಯಾಖ್ಯಾನ ನೋಡಿರಿ.

**47-48** ಯೇಸುವಿನ ಕಾಲದ ಯೆಹೂದ್ಯರು ಅವರ ಪೂರ್ವಜರು ಸಾಯಿಸಿದ್ದ ಪ್ರವಾದಿಗಳಿಗೆ ಸಮಾಧಿಗಳನ್ನು ಕಟ್ಟಿದರು. ಅವರು ಪ್ರವಾದಿಗಳಿಗೆ ಗೌರವಕೊಡುವವರೆಂದು ತೋರ್ಪಡಿಸಿಕೊಂಡರು. ಆದರೆ ಅವರ ಹೃದಯದೊಳಗೆ ಅವರು ತಮ್ಮ ಪೂರ್ವಜರಂತೆಯೇ ಇದ್ದರು. ಒಂದು ರೀತಿಯಲ್ಲಿ ಅವರು ತಮ್ಮ ಪಿತೃಗಳು ಹತ್ಯೆಗೈದ ಪ್ರವಾದಿಗಳಿಗೆ ಸಮಾಧಿಗಳನ್ನು ನಿರ್ಮಿಸುವದರ ಮೂಲಕ ಅವರ ಕೃತ್ಯಗಳಿಗೆ ಸಮ್ಮತಿ ತೋರಿಸಿದರು (ಮತ್ತಾಯ 23:29-32 ಮತ್ತು ವ್ಯಾಖ್ಯಾನ ನೋಡಿರಿ).

**49-51** ಮತ್ತಾಯ 23:34-36 ಮತ್ತು ವ್ಯಾಖ್ಯಾನ ನೋಡಿರಿ.

**52** ಧರ್ಮೋಪದೇಶಕರು ಜ್ಞಾನಕ್ಕೆ ಸಾಧನವಾದ ಬೀಗದಕೈಯನ್ನು ಅಂದರೆ ಕ್ರಿಸ್ತನ ಜ್ಞಾನವನ್ನು ರಕ್ಷಣೆಯ ಜ್ಞಾನವನ್ನು ತೆಗೆದು ಬಿಟ್ಟಿದ್ದರು. ಕ್ರಿಸ್ತನಲ್ಲಿ ನಂಬಿಕೆಯಿಡುವದೇ ರಕ್ಷಣೆಗೆ ಬೀಗದಕೈಯಾಗಿದೆ. ಧರ್ಮೋಪದೇಶಕರು ಮಾನವನು ತನ್ನ ಕಾರ್ಯಗಳಿಂದಲೇ ರಕ್ಷಣೆ ಹೊಂದುವನೆಂದು ಮಿಥ್ಯವಾಗಿ ಬೋಧಿಸುತ್ತಿದ್ದರು. ಕ್ರಿಸ್ತನು ಮೆಸ್ಸಿಯನಾಗಿದ್ದ ನೆಂಬದನ್ನು ಅವರು ನಿರಾಕರಿಸಿದರು. ಹೀಗೆ ಅವರು ತಮ್ಮ ಮಿಥ್ಯಬೋಧನೆಗಳಿಂದ ಮಾನವರ ರಕ್ಷಣೆಯ ನಿಜವಾದ ಬೀಗದಕೈಯನ್ನು ಬಚ್ಚಿಟ್ಟಿದ್ದರು. ಅವರು ಸ್ವತಃ ತಾವೇ ಕ್ರಿಸ್ತನಲ್ಲಿ ನಂಬಿಕೆಯಿಡಲು ನಿರಾಕರಿಸಿದರಷ್ಟೇ ಅಲ್ಲದೆ ಅದಕ್ಕಿಂತಲೂ ಘೋರವಾದದ್ದೇನೆಂದರೆ ಇತರರು ಸಹ ಆತನಲ್ಲಿ ನಂಬಿಕೆಯಿಡದಂತೆ ಅಡ್ಡಿಪಡಿಸಿದರು. (ಮತ್ತಾಯ 23:13 ಮತ್ತು ವ್ಯಾಖ್ಯಾನ ನೋಡಿರಿ).

**53-54** ಯೇಸುವಿನ ಮಾತನ್ನು ಕೇಳಿ ಫರಿಸಾಯರು ಮತ್ತು ಧರ್ಮೋಪದೇಶಕರು ಸಹಜವಾಗಿ ಕೋಪಗೊಂಡರು. ಆದುದರಿಂದ ಆತನ ಬಾಯಿಮಾತಿನಲ್ಲಿ ಏನಾದರೂ ತಪ್ಪು ಕಂಡು ಹಿಡಿದು ಆತನ ವಿರುದ್ಧ ಆರೋಪ ತರುವದಕ್ಕೆ ಪ್ರಯತ್ನಿಸಿದರು. ಆತನನ್ನು ಕೊಲ್ಲ ಬೇಕೆಂಬದು ಅವರ ಇಚ್ಛೆಯಾಗಿತ್ತು (ಮಾರ್ಕ 3:6, 11:18,12:12-13 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

## ಅಧ್ಯಾಯ - 12

### ಎಚ್ಚರಿಕೆಗಳು ಮತ್ತು ಉತ್ತೇಜನಗಳು (12:1-12)

(ಮತ್ತಾಯ 10:19-20, 26-33, 12:31-32, ಮಾರ್ಕ 3:28-29, 4:22, 13:11).

**1** ಮಾರ್ಕ 8:15 ಮತ್ತು ವ್ಯಾಖ್ಯಾನ ನೋಡಿರಿ.

**2-3** ಮತ್ತಾಯ 10:26-27, ಮಾರ್ಕ 22 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

**4-9** ಮತ್ತಾಯ 10:28-33 ಮತ್ತು ವ್ಯಾಖ್ಯಾನ ನೋಡಿರಿ.

**10** ಮಾರ್ಕ 3:28-29 ಮತ್ತು ವ್ಯಾಖ್ಯಾನ ನೋಡಿರಿ.

**11-12** ಮಾರ್ಕ 13:11 ಮತ್ತು ವ್ಯಾಖ್ಯಾನ ನೋಡಿರಿ.

### ಬುದ್ಧಿಯಿಲ್ಲದ ಐಶ್ವರ್ಯವಂತನ ಸಾಮ್ಯ (12:13-21)

**13** ಕೆಲವು ಸಾಮಾನ್ಯ ಜನರು ಯೇಸುವನ್ನು ಒಬ್ಬ ಶ್ರೇಷ್ಠ ಬೋಧಕ ಮತ್ತು ಪ್ರಾವಾದಿಯಾಗಿದ್ದಾನೆಂದು ತಿಳಿದಿದ್ದರು. ಆದುದರಂದ ಅವರಲ್ಲೊಬ್ಬನು ತನ್ನ ಸಹೋದರನೊಂದಿಗಿದ್ದ ಆಸ್ತಿಯ ಕುರಿತು ವ್ಯಾಜ್ಯವನ್ನು ಪರಿಹರಿಸಬೇಕೆಂದು ಯೇಸುವನ್ನು ಕೇಳಿಕೊಂಡನು. ಆ ವ್ಯಕ್ತಿಯು ತನಗೆ ಬರಬೇಕಾಗಿದ್ದ ಆಸ್ತಿಯನ್ನು ಬಯಸಿದರೆ ಆತನ ಅಣ್ಣನು ಅದಕ್ಕೆ ಒಪ್ಪುವದಿಲ್ಲ.

**14** ಯೇಸು ಆತನ ಮನವಿಯನ್ನು ನಿರಾಕರಿಸಿದನು. ಯೇಸು ನ್ಯಾಯಾಲಯದಲ್ಲಿ ಕುಳಿತುಕೊಳ್ಳುವ ಒಬ್ಬ ಸ್ವಾಭಾವಿಕ ನ್ಯಾಯಮೂರ್ತಿಯಾಗಿರಲಿಲ್ಲ. ಆತನು ಈ ರೀತಿಯ ವ್ಯಾಜ್ಯಗಳನ್ನು ಇತ್ಯರ್ಥಗೊಳಿಸಲು ಈ ಲೋಕಕ್ಕೆ ಬಂದಿರಲಿಲ್ಲ. ಆತನು ಆತ್ಮೀಕ ಸಂಗತಿಗಳ ನ್ಯಾಯಾಧಿಪತಿಯಾಗಿದ್ದನು. ಮಾನವನು ತನಗೆ ಯಾವದಾದರೂ ಪ್ರಾಪಂಚಿಕ ಲಾಭವು ಂಟಾಗಬೇಕೆಂದು ಕ್ರಿಸ್ತನ ಬಳಿಗೆ ಬರಕೂಡದು. ಆತನ ರಾಜ್ಯವು ಇಹಲೋಕದ್ದಲ್ಲ[26] (ಯೋಹಾನ 18:36).

**15** ಆದಕ್ಕಿಂತ ಹೆಚ್ಚಾಗಿ, ಯೇಸು ಆ ವ್ಯಕ್ತಿಯ ಹೃದಯವನ್ನು ತಿಳಿದಿದ್ದನು. ಆತನು ಸ್ವತ್ತುಗಳಿಗೆ ದುರಾಶೆ ಪಟ್ಟಿದ್ದರಿಂದಲೇ ತನ್ನ ಆಸ್ತಿಯ ಪಾಲನ್ನು ಕೇಳಿದ್ದನು. ಆತನು ಅತಿಯಾಸೆಯುಳ್ಳವನಾಗಿದ್ದನು. "ಆಶೆಪಡುವದು" ಎಂದರೆ ಕೇವಲ ಇನ್ನೊಬ್ಬರ ಆಸ್ತಿಯನ್ನು ಬಯಸುವದೆಂದು ಮಾತ್ರವೇ ಅರ್ಥವಲ್ಲ. ಆಶೆಪಡುವದು ಎಂದರೆ ಒಂದು ಸಂಗತಿಯನ್ನು ಪ್ರೀತಿಸುವದು ಎಂಬದಾಗಿ. ನಾವು ಈ ಲೋಕಕ್ಕೆ ಸಂಬಂಧಿಸಿದ ಯಾವದನ್ನೂ ಪ್ರೀತಿಸಬಾರದೆಂದು ಹೊಸ ಒಡಂಬಡಿಕೆಯು ಬೋಧಿಸುತ್ತದೆ. (ಮತ್ತಾಯ 6:19-21, 1 ಯೋಹಾನ 2:15 ನೋಡಿರಿ). "ಒಬ್ಬನಿಗೆ ಎಷ್ಟು ಆಸ್ತಿಯಿದ್ದರೂ ಅದು ಅವನಿಗೆ ಜೀವಾಧಾರವಾಗುವದಿಲ್ಲ" ಎಂದು ಯೇಸು ಹೇಳಿದನು. ಆಸ್ತಿಗಳು ನಮಗೆ ನಿತ್ಯಜೀವವನ್ನು ಕೊಡುವದಕ್ಕೆ ಸಾಧ್ಯವಿಲ್ಲ. ಆಸ್ತಿಗಳು ನಮಗೆ ಈ ಜೀವನದಲ್ಲಿ ಆನಂದ ಮತ್ತು ಸಮಾಧಾನ ನೀಡಲಾರವು. ಅದಕ್ಕೆ ಬದಲಾಗಿ ಅವು ಗಳು ನಮಗೆ ಚಿಂತೆಯನ್ನು ತರುತ್ತವೆ. ವಾಸ್ತವದಲ್ಲಿ, ನಾವು ನಮಗಾಗಿ ಹೆಚ್ಚು ಕೂಡಿಸಿಡುವಾಗ, ನಾವು ಆತ್ಮೀಕವಾಗಿ ಹೆಚ್ಚು ಬಡವರಾಗುತ್ತೇವೆ. ನಾವು ದೇವರಿಗೆ ಬದಲಾಗಿ ನಮ್ಮ ಆಸ್ತಿಗಳ ಮೇಲೆ ಆತುಕೊಳ್ಳುತ್ತೇವೆ. ನಾವು ಶೀಘ್ರವೇ ದೇವರಲ್ಲಿ ವಿಶ್ವಾಸಿಸುವದನ್ನೇ ನಿಲ್ಲಿಸಿಬಿಡುತ್ತೇವೆ, ಮತ್ತು ಅದು ಸಂಭವಿಸುವದಾದರೆ ನಾವು ನಮ್ಮ ಆತ್ಮವನ್ನು ಕಳೆದುಕೊಳ್ಳುತ್ತೇವೆ (ಮತ್ತಾಯ 6:24, ಮಾರ್ಕ 8:35-37, 10:21-25, 1 ತಿಮೊಥೆ 6:6-10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**16-21** ಆಗ ಯೇಸು ತನಗಾಗಿ ಐಶ್ವರ್ಯವನ್ನು ಕೂಡಿಸಿಟ್ಟುಕೊಂಡ ಒಬ್ಬ ವ್ಯಕ್ತಿಯ ಕುರಿತಾದ ಈ ಸಾಮ್ಯವನ್ನು ಹೇಳಿದನು. ಅವನು ತಾನು ಸುರಕ್ಷಿತನೆಂದು ಯೋಚಿಸಿಕೊಂಡನು. ಆದರೆ ದೇವರು ಅವನಿಗೆ "ಈ ಹೊತ್ತು ನಿನ್ನ ಪ್ರಾಣವನ್ನು ನಿನ್ನ ಕಡೆಯಿಂದ ಕೇಳುವರು" ಅಂದನು. ಈ ರಾತ್ರಿ ನೀನು ಸಾಯುವಿ. ಆಗ, ನೀನು ಕೂಡಿಸಿಟ್ಟಿದ್ದು ಯಾರಿಗಾಗುವದು? ಎಂದು ಹೇಳಿದನು (ಯೋಬ 27:8). ನಾವು ಈ ಲೋಕಕ್ಕೆ ಬೆತ್ತಲೆಯಾಗಿ ಬಂದಿದ್ದೇವೆ, ಮತ್ತು ಬೆತ್ತಲೆಯಾಗಿಯೇ ಹೋಗುವೆವು (ಯೋಬ 1:21). ನಾವು ಸಾಯುವಾಗ ನಮ್ಮ ಐಶ್ವರ್ಯವನ್ನು ನಮ್ಮೊಂದಿಗೆ ತೆಗೆದು ಕೊಂಡು ಹೋಗಲಾರೆವು (1 ತಿಮೊಥೆ 6:7) ತನಗಾಗಿ ಪರಲೋಕದಲ್ಲಿ ಐಶ್ವರ್ಯವನ್ನು ಕೂಡಿಸಿಟ್ಟು ಕೊಳ್ಳದವನು ನಿಜವಾಗಿಯೂ ಮೂರ್ಕನೇ ಆಗಿದ್ದಾನೆ. ಹಾಗಾದರೆ ಕೆಲವು ವರ್ಷಗಳ ವರೆಗೆ ಮಾತ್ರ ಉಳಿಯುವ ಲೌಕಿಕ ಸಂಪತ್ತಿಗಾಗಿ ನಮ್ಮ ಶಾಶ್ವತವಾದ ಆಸ್ತಿಯನ್ನು ಕಳೆದುಕೊಳ್ಳುವ ಗಂಡಾಂತರವನ್ನು ತೆಗೆದು ಕೊಳ್ಳುವದೇಕೆ?

### ಚಿಂತಿಸಬೇಡಿರಿ (12:22-34)

(ಮತ್ತಾಯ 6:19-21, 25-33)

**22-32** ಮತ್ತಾಯ 6:25-33 ಮತ್ತು ವ್ಯಾಖ್ಯಾನ ನೋಡಿರಿ.

**33-34** ಮತ್ತಾಯ 6:19-21 ಮತ್ತು ವ್ಯಾಖ್ಯಾನ ನೋಡಿರಿ.

**ಎಚ್ಚರವಾಗಿರುವಿಕೆ (12:35-48)**

(ಮತ್ತಾಯ 24:43-51)

**35-37** ಯೇಸು ಇಲ್ಲಿ ತನ್ನ ಎರಡನೆಯ ಬರೋಣದ ಒಂದು ಕ್ಲುಪ್ತ ಸಾಮ್ಯವನ್ನು ಹೇಳುತ್ತಾನೆ. ಅದು ಮತ್ತಾಯನ ಸುವಾರ್ತೆಯಲ್ಲಿರುವ ಹತ್ತು ಮಂದಿ ಕನ್ಯೆಯರ ಸಾಮ್ಯವನ್ನು ಹೊಲುತ್ತದೆ (ಮತ್ತಾಯ 25:1-13 ಮತ್ತು ವ್ಯಾಖ್ಯಾನ ನೋಡಿರಿ). ಮದಲಿಂಗ ಮತ್ತು ಕನ್ಯೆಯರ ಬದಲಾಗಿ ಈ ಸಾಮ್ಯವು ಯಜಮಾನ ಮತ್ತು ಆಳುಗಳ ಕುರಿತಾಗಿದೆ, ಆದರೆ ಭೋದನೆಯು ಒಂದೇಆಗಿದೆ. ಈ ಸಾಮ್ಯದಲ್ಲಿ ಯಜಮಾನನು ತನ್ನ ಆಳುಗಳ ಎಚ್ಚರತನಕ್ಕಾಗಿ ಅವರನ್ನು ಪ್ರಶಂಸಿಸಿದ್ದು ಮಾತ್ರವೇ ಅಲ್ಲದೆ ವಾಸ್ತವದಲ್ಲಿ ಅವರು ಯಜಮಾನರು, ತಾನು ಆಳು ಎಂಬಂತೆ ಅವರ ಸೇವೆ ಮಾಡುತ್ತಾನೆ. ಕ್ರಿಸ್ತನು ಹೀಗೆಂದನು "ಮನುಷ್ಯಕುಮಾರನು ಸೇವೆ ಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ ಆದರೆ ಸೇವೆ ಮಾಡುವದಕ್ಕೆ ಬಂದನು". (ಮಾರ್ಕ 10:45) ನಾವು ಎಚ್ಚರವಾಗಿದ್ದು ಕ್ರಿಸ್ತನಿಗಾಗಿ ನಮ್ಮ ಹೃದಯಗಳನ್ನು ತೆರೆಯಲು ಸಿದ್ದರಾಗಿರುವದಾದರೆ ಆತನು, ನಮಗೆ ಆತ್ಮೀಕ ಆಹಾರ, ನೀರು ಮತ್ತು ಅಪ್ರತಿಯೊಂದು ಆತ್ಮೀಕ ಆಶೀರ್ವಾದವನ್ನು ನಮಗೆ ಬಡಿಸುವನು. (ಯೋಹಾನ 4:13, 6:27, 51, ಎಫೆಸ 1:3, ಪ್ರಕಟಣೆ 3:20).

**38** ಆದ್ದರಿಂದ ಎಚ್ಚರವಾಗಿದ್ದು ಸಿದ್ದರಾಗಿರಿ. ಯೇಸು ಯಾವದೇ ಗಳಿಗೆಯಲ್ಲಾದರೂ ಬರಬಹುದು (ಮಾರ್ಕ 13:35-37 ಮತ್ತು ವ್ಯಾಖ್ಯಾನ ನೋಡಿರಿ).

**39-40** ಮತ್ತಾಯ 24:43-44 ಮತ್ತು ವ್ಯಾಖ್ಯಾನ ನೋಡಿರಿ.

**41** ಪೇತ್ರನು ಯೇಸುವಿಗೆ ಈ ಸಾಮ್ಯವು ಆತನು ಶಿಷ್ಯರಿಗೆ ಮಾತ್ರವೇ ಹೇಳಿದನೋ ಅಥವಾ ಅವಿಶ್ವಾಸಿಗಳಿಗಾಗಿಯೂ ಸಹ ಹೇಳಿದನೋ ಎಂದು ಕೇಳುತ್ತಾನೆ. ಯೇಸು ಪೇತ್ರನ ಪ್ರಶ್ನೆಗೆ ನೇರವಾಗಿ ಉತ್ತರಿಸಲಿಲ್ಲ. ಬದಲಾಗಿ ಆತನು ಇನ್ನೊಂದು ಸಾಮ್ಯವನ್ನು ಹೇಳುತ್ತಾನೆ (ವಚನ 42:46). ಆದರೆ ಮುಂದಿನ ಸಾಮ್ಯವು ಸಹ ಯಜಮಾನ ಮತ್ತು ಆಳುಗಳ ಕುರಿತಾಗಿತ್ತು. ಆದುದರಿಂದ ಇದು ಶಿಷ್ಯರ ಕುರಿತಾಗಿ, ಅದರಲ್ಲಿಯೂ ವಿಶೇಷವಾಗಿ ಸಭೆಯಲ್ಲಿ ನಾಯಕರಾಗಲಿರುವವರ ಕುರಿತು ಇದಾಗಿದೆ. ಹಾಗಾದರೆ ಇದು ಪೇತ್ರನ ಪ್ರಶ್ನೆಗೆ ಉತ್ತರವಾಗಿತ್ತುಃ ಎಚ್ಚರಿಕೆಯಾಗಿರುವದರ ಕುರಿತಾದ ಮೊದಲ ಸಾಮ್ಯವು ಅವಿಶ್ವಾಸಿಗಳಿಗಾಗಿಯಲ್ಲ ಆದರೆ ವಿಶ್ವಾಸಿಗಳಿಗಾಗಿ (ಶಿಷ್ಯರಿಗಾಗಿ) ಆಗಿತ್ತು.

**42-46** ಮತ್ತಾಯ 24:45-51 ಮತ್ತು ವ್ಯಾಖ್ಯಾನ ನೋಡಿರಿ.

**47-48** ಈ ವಚನಗಳಲ್ಲಿ ಯೇಸು ಒಂದು ಪ್ರಾಮುಖ್ಯವಾದ ಆತ್ಮೀಕ ಸತ್ಯವನ್ನು ಕಲಿಸುತ್ತಾನೆ. ಆದೇನೆಂದರೆ: ಅಜ್ಞಾನದಿಂದ ಪಾಪಮಾಡುವವರು ಅಲ್ಪವಾಗಿ ದಂಡನೆ ಹೊಂದುವರು. ಆದರೆ ಅದೇ ಪಾಪವನ್ನು ಗೊತ್ತಿದ್ದು ಮಾಡುವವರಿಗೆ ಮಹಾದಂಡನೆಯಾಗುವದು. ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದ ಪ್ರಕಾರ ಗೊತ್ತಿದ್ದು ಮಾಡಿದ ಪಾಪಗಳಿಗೆ ಕ್ಷಮಾಪಣೆಯೇ ಇರುವದಿಲ್ಲ (ಅರಣ್ಯಕಾಂಡ 15:27-31).

ಇದರ ಮೂಲಕವಾಗಿ ನರಕದಲ್ಲಿ ವಿವಿಧ ಮಟ್ಟಗಳ ದಂಡನೆಯಿರುತ್ತದೆಂದು ನಾವು ತಿಳಿದುಕೊಳ್ಳಬಹುದು. ಯೇಸುವಿನ ಸುವಾರ್ತೆಯನ್ನು ಕೇಳಿಯೂ ಇಚ್ಛಾಪೂರ್ವಕವಾಗಿ ಅದನ್ನು ತಿರಸ್ಕರಿಸಿದವರು ಹೆಚ್ಚು ದಂಡನೆಯನ್ನು ಅನುಭವಿಸುವರು. (ವಚನ 49 ಮತ್ತು ವ್ಯಾಖ್ಯಾನ ನೋಡಿರಿ). ಸುವಾರ್ತೆಯನ್ನು ಕೇಳಿಯೇ ಇಲ್ಲದವರು ಅಲ್ಪ ದಂಡನೆಯನ್ನು ಅನುಭವಿಸುವರು.[27] ಅದೇ ರೀತಿಯಾಗಿ ಪರಲೋಕದಲ್ಲಿಯೂ ವಿವಿಧ ಬಹುಮಾನಗಳು ಇರುವವು. ಕ್ರಿಸ್ತನನ್ನು ಉತ್ತಮವಾಗಿಯೂ ನಂಬಿಗಸ್ಥರಾಗಿಯೂ ಸೇವಿಸಿದವರು ಒಂದು ಮಹಾ ಪ್ರತಿಫಲವನ್ನು ಹೊಂದುವರು. ಯಾರು ಕ್ರಿಸ್ತನ ವರಗಳನ್ನು ಉತ್ತಮವಾಗಿ ಮತ್ತು ನಂಬಿಗಸ್ಥರಾಗಿ ಉಪಯೋಗಿಸಲಿಲ್ಲವೋ ಅವರು ಕಡಿಮೆ ಪ್ರತಿಫಲವನ್ನು ಹೊಂದುವರು (ಮತ್ತಾಯ 16:27, 2 ಕೊರಿಂಥ 5:10). ನಂತರ ಯೇಸು "ಬಹಳವಾಗಿ ಕೊಡಲ್ಪಟ್ಟವನಿಂದ ಬಹಳವಾಗಿ ನಿರೀಕ್ಷಿಸಲ್ಪಡುವದು" ಅಂದನು (ವಚನ 48). ನಮಗೆ ಕೊಡಲ್ಪಟ್ಟಿರುವ ಆತ್ಮೀಕ ಜ್ಞಾನ ಮತ್ತು ವರಗಳಿಗೆ ಅನುಸಾರವಾಗಿ ದೇವರು ನಮ್ಮೊಬ್ಬೊಬ್ಬರಿಗೆ ನ್ಯಾಯತೀರ್ಪು ಮತ್ತು ಪ್ರತಿಫಲವನ್ನು ಕೊಡುವನು. ತಲಂತುಗಳು ಸಾಮ್ಯದಲ್ಲಿ ಒಬ್ಬನಿಗೆ ಐದು ತಲಾಂತುಗಳು ಕೊಡಲ್ಪಟ್ಟಿದ್ದರಿಂದ ಅವನು ಇನ್ನೂ ಐದು ತಲಾಂತುಗಳನ್ನು ಸಂಪಾದಿಸಬೇಕಾಗಿತ್ತು (ಮತ್ತಾಯ 25:19-21). ಆದರೆ ಎರಡು ತಲಾಂತುಗಳನ್ನು ಸಂಪಾದಿಸಲು ನಿರೀಕ್ಷಿಸಲಾಗಿತ್ತು. (ಮತ್ತಾಯ 25:22-23). ಈ ಇಬ್ಬರು ವ್ಯಕ್ತಿಗಳು ಒಂದೇ ರೀತಿಯಾದ ಬಹುಮಾನವನ್ನು ಪಡೆದರೆಂಬದನ್ನ ಗಮನಿಸಿರಿ. ಅವರಿಬ್ಬರೂ ತಮಗೆ ಕೊಡಲ್ಪಟ್ಟ ತಲಾಂತುಗಳ ಪ್ರಕಾರವಾಗಿ ಒಂದೇ ರೀತಿಯಾಗಿ (ತಮ್ಮ ತಲಾಂತುಗಳನ್ನು ದ್ವಿಗುಣಗಳಾಗಿಸಿದ್ದರು). ಉಪಯೋಗಿಸಿದ್ದರಿಂದ ಏಕ ರೀತಿಯಾಗಿ ಪ್ರತಿಫಲವನ್ನು ಸ್ವೀಕರಿಸಿದರು

ಹತ್ತು ಮೊಹರಿಗಳ ಸಾಮ್ಯದಲ್ಲಿ ಯೇಸು ಇದೇ ಸತ್ಯವನ್ನು ಕುರಿತು, ಆದರೆ ಒಂದು ವ್ಯತ್ಯಾಸಕರವಾದ ರೀತಿಯಲ್ಲಿ ಬೋಧಿಸಿದನು. (ಲೂಕ 19:11-26 ನೋಡಿರಿ). ಹತ್ತು ಮೊಹರಿಗಳ ಸಾಮ್ಯದಲ್ಲಿ ವರಗಳು ಏಕರೀತಿಯಾಗಿದ್ದವು. ಪ್ರತಿಯೊಬ್ಬನು ಒಂದೊಂದು ಮೊಹರಿಯನ್ನು ಪಡೆದರು. ಆದರೆ ಪ್ರತಿಯೊಬ್ಬನು ತನ್ನ ಮೊಹರಿಯನ್ನು ವ್ಯತ್ಯಾಸವಾಗಿ ಉಪಯೋಗಿಸಿದನು. ಕೆಲವರು ಇತರರಿಗಿಂತ ಉತ್ತಮವಾಗಿ ಉಪಯೋಗಿಸಿದರು. ಒಬ್ಬ ಇನ್ನು ಹತ್ತು ಮೊಹರಿಗಳನ್ನು ಹೆಚ್ಚಾಗಿ ಮಾಡಿದನು (ಲೂಕ 19:16). ಈ ವ್ಯಕ್ತಿಗಳು ಬಳಿಕ ವಿವಿಧ ಪ್ರತಿಫಲಗಳನ್ನು ಪಡೆದು ಕೊಂಡರು (ಲೂಕ 19:17, 19). ಎಲ್ಲಾ ಆಳುಗಳು ಹೆಚ್ಚಾಗಿ ಪಡೆದುಕೊಂಡರು, ಆದರೆ ಅವರಲ್ಲಿ ಎಲ್ಲರೂ ಹೆಚ್ಚನ್ನು ಹಿಂದಕ್ಕೆ ಕೊಡಲಿಲ್ಲ.

ಹೆಚ್ಚಾಗಿ ಹಿಂದಕ್ಕೆ ಕೊಡದವರು ಕಡಿಮೆ ಪ್ರತಿಫಲವನ್ನು ಪಡೆದರು. ಸ್ನೇಹಿತರೇ, ನಮ್ಮ ವರಗಳನ್ನು ದುರುಪಯೋಗಪಡಿಸಿಕೊಳ್ಳದಿರೋಣ, ದೇವರು ನಮಗೆ ಕೊಟ್ಟಿರುವದನ್ನು ವ್ಯರ್ಥಮಾಡಿಕೊಳ್ಳ-ದಿರೋಣ. ಆತ್ಮನು ನಮಗೆ ಆತ್ಮೀಕ ವರಗಳನ್ನು ಮತ್ತು ಇಹಲೋಕದ ಆಶೀರ್ವಾದಗಳನ್ನು (ಆರೋಗ್ಯ,ವಿಧ್ಯಾಭ್ಯಾಸ, ಐಶ್ವರ್ಯ) ಕೊಟ್ಟಿದ್ದಾನೆ. ನಾವು ನಮಗೆ ಸಾಧ್ಯವಾದಷ್ಟರ ವರಗೆ ಈ ಎಲ್ಲಾ ವರಗಳನ್ನು ಆತನ ಸೇವೆಯಲ್ಲಿ ಉಪಯೋಗಿಸುವಂತೆ ನೋಡಿಕೊಳ್ಳೋಣ. ಈ ವಚನಗಳಿಂದ ನಾವು ಕಲಿಯಬಹುದಾದ ಇನ್ನೊಂದು ಸಂಗತಿ ಇರುತ್ತದೆ. ಕ್ರೈಸ್ತರಾಗಿರುವವರು ಕ್ರೈಸ್ತೇತರ ರೀತಿಯಲ್ಲಿ ಜೀವಿಸಲು ಸಾಧ್ಯವಿಲ್ಲ, ಅವರು ಉತ್ತಮ ಜೀವಿತಗಳನ್ನು ಜೀವಿಸಬೇಕು. ಪವಿತ್ರಾತ್ಮನನ್ನು ಕೊಡಲ್ಪಟ್ಟಿರುವವರು ಪವಿತ್ರಾತ್ಮನನ್ನು ಕೊಡಲ್ಪಟ್ಟಿರುವವರು ಪವಿತ್ರಾತ್ಮ ಇಲ್ಲದವರಂತೆ ಜೀವಿಸಲಾಗದು. ಅವರು ಇನ್ನೂ ಉತ್ತಮವಾಗಿ ಅಂದರೆ ಹೆಚ್ಚು ಪವಿತ್ರರಾಗಿ ಜೀವಿಸಬೇಕು. ಹೆಚ್ಚಾಗಿ ಪವಿತ್ರಾತ್ಮನನ್ನು ಕೊಡಲ್ಪಟ್ಟಿರುವವರು ಪವಿತ್ರಾತ್ಮನನ್ನು ಸ್ವಲ್ಪವಾಗಿ ಹೊಂದಿದವರಿಗಿಂತ ಹೆಚ್ಚು ಉತ್ತಮವಾಗಿ ಜೀವಿಸಬೇಕು. ಪರಿಪಕ್ವಗೊಂಡ ಕ್ರೈಸ್ತರು ಹೊಸದಾಗಿ, ಅಪರಿಪಕ್ವ ಕ್ರೈಸ್ತರಿಗಿಂತ ಉತ್ತಮ ಜೀವಿತಗಳನ್ನು ಜೀವಿಸಬೇಕು. ನೂತನ ಕ್ರೈಸ್ತರಿಗೆ ಚಿಕ್ಕದಾಗಿರುವ ಪಾಪವು ಹಿರಿಯ ಕ್ರೈಸ್ತರಿಗೆ ಆದೊಂದುದೊಡ್ಡ ಪಾಪವಾಗಿರಬೇಕು. ಜವಾಬ್ದಾರಿಯನ್ನು ಕೊಡಲ್ಪಟ್ಟವರು ಜವಾಬ್ದಾರಿ ಇಲ್ಲದವರಿಗಿಂತ ಹೆಚ್ಚು ಕಠಿಣವಾಗಿ ನ್ಯಾಯತೀರ್ಪಿಗೆ ಗುರಿಯಾಗುವರು (ಯಾಕೋಬ 3:1 ನೋಡಿರಿ). ಯಾವನಿಗೆ ಬಹಳವಾಗಿ ಕೊಟ್ಟಿದೆಯೋ ಅವನ ಕಡೆಯಿಂದ ಬಹಳವಾಗಿ ನಿರೀಕ್ಷಿಸಲ್ಪಡುವದು, ಇದಲ್ಲದೆ ಯಾವನ ವಶಕ್ಕೆ ಬಹಳವಾಗಿ ಒಪ್ಪಿಸಿದೆಯೋ ಅವನ ಕಡೆಯಿಂದ ಇನ್ನೂ ಹೆಚ್ಚಾಗಿ ಕೇಳುವರು

## ಸಮಾಧಾನವಲ್ಲ ಆದರೆ ಬೇಧ (12:59-59)

(ಮತ್ತಾಯ 5:23-26, 10:34-36, 16:1-4, ಮಾರ್ಕ 8:11-13)

**49** ನಾನು ಬೆಂಕಿಯನ್ನು ಭೂಮಿಯ ಮೇಲೆ ಹಾಕಬೇಕೆಂದು ಬಂದೆನು. ಯೇಸುವಿನ ಬರೋಣವು ಜನರನ್ನು ಗುಂಪಾಗಿ ವಿಭಾಗಿಸುತ್ತದೆ: ಆತನನ್ನು ತಿರಸ್ಕರಿಸುವವರು ಮತ್ತು ಆತನನ್ನು ಅಂಗೀಕರಿಸಿಕೊಳ್ಳುವವರು. ಆತನನ್ನು ತಿರಸ್ಕರಿಸಿದವರಿಗೆ ಬೆಂಕಿಯು ನ್ಯಾಯತೀರ್ಪಿನ ಬೆಂಕಿಯಾಗಿದೆ. ಇದು ಒಂದು ಅರ್ಥದಲ್ಲಿ ನರಕದ ಬೆಂಕಿಯಾಗಿದೆ. ಆದರೆ ಆತನನ್ನು ಅಂಗೀಕರಿಸಿಕೊಂಡವರಿಗೆ ಆ ಬೆಂಕಿಯು ಶುದ್ಧೀಕರಣದ, ಬಲಗೊಳಿಸುವ ಬೆಂಕಿಯಾಗಿದೆ (1 ಪೇತ್ರ 1:6-7 ನೋಡಿರಿ). ಇದು ಪವಿತ್ರಾತ್ಮನ ಬೆಂಕಿಯಾಗಿದೆ (ಮತ್ತಾಯ 3:11, ಮಾರ್ಕ 1:8 ಮತ್ತು ವ್ಯಾಖ್ಯಾನ ನೋಡಿರಿ).

ಕ್ರಿಸ್ತನು ಅದು ಇಷ್ಟರೊಳಗೆ ಹತ್ತಿಕೊಂಡಿದ್ದರೆ ಎಷ್ಟೋ ಸಂತೋಷ! ಎಂದು ಹೇಳುತ್ತಾನೆ. ಆತನು ತನ್ನ ಸುವಾರ್ತೆಯು "ಬೆಂಕಿಯ" ಹಾಗೆ ಹರಡುವದನ್ನು ಹಾರೈಸಿದನು. ಆತನ ರಕ್ಷಣಾ ಕಾರ್ಯವು ಶೀಘ್ರವೇ ಜಗತ್ತಿನಲೆಲ್ಲಾ ಪ್ರಸರಿಸಬೇಕೆಂದು ಹಾರೈಸಿದನು. ಬೆಂಕಿಯನ್ನು ಪ್ರಜ್ವಲಿಸುವಂತೆ ಮಾಡುವಾಗ ಅದು ತನ್ನಷ್ಟಕ್ಕೆ ತಾನೇ ಹರಡಿಕೊಳ್ಳುತ್ತದೆ. ಬೆಂಕಿಯು ಕ್ರಿಸ್ತನ ಮರಣಕ್ಕೆ ಮುಂಚೆ ಹತ್ತಿಕೊಳ್ಳಬೇಕು. ಇಲ್ಲವಾದರೆ ಅದು ಆರಿಹೋಗಬಹುದು. ಬೆಂಕಿಯು ಬೇಗನೇ ಆತನ ಶಿಷ್ಯರ ಹೃದಯಗಳಲ್ಲಿ ಹತ್ತಿಸಲ್ಪಟ್ಟು ಅಂದಿನಿಂದ ಪ್ರತಿಯೊಂದು ಪೀಳಿಗೆಯ ಶಿಷ್ಯರ ಹೃದಯಗಳಲ್ಲಿ ಉರಿಯುತ್ತಾಯಿದೆ.

**50** ಕ್ರಿಸ್ತನು ಹೊಂದತಕ್ಕ ದೀಕ್ಷಾಸ್ನಾನ ಒಂದಿತ್ತು. ಇಲ್ಲಿ "ದೀಕ್ಷಾಸ್ನಾನ" ಎಂದರೆ ಬಾಧೆ ಮತ್ತು ಮರಣ (ಮಾರ್ಕ 10:38 ಮತ್ತು ವ್ಯಾಖ್ಯಾನ ನೋಡಿರಿ). ಪವಿತ್ರಾತ್ಮನ ಬೆಂಕಿಯು ಬರುವದಕ್ಕೆ ಮುಂಚೆ ಕ್ರಿಸ್ತನು ಬಾಧೆ ಪಟ್ಟು ಸಾಯಬೇಕು. ಈ "ದೀಕ್ಷಾಸ್ನಾನವು " ಶೀಘ್ರವೇ ಮುಗಿಯಬೇಕೆಂದು ಹಂಬಲಿಸಿದನು.

**53** ಮತ್ತಾಯ 10:34-36 ಮತ್ತು ವ್ಯಾಖ್ಯಾನ ನೋಡಿರಿ.

**54-56** ಮಾರ್ಕ 8:11-13 ಮತ್ತು ವ್ಯಾಖ್ಯಾನ ನೋಡಿರಿ.

**57-59** ಮತ್ತಾಯ 5:23-26 ಮತ್ತು ವ್ಯಾಖ್ಯಾನ ನೋಡಿರಿ.

---

# ಅಧ್ಯಾಯ - 13

## ದೇವರ ಕಡೆಗೆ ತಿರಿಗಿಕೊಳ್ಳಿರಿ ಇಲ್ಲವೇ ನಾಶವಾಗಿರಿ (13:1-9)

**1** ಲೂಕ 12:49-59 ರಲ್ಲಿ ಯೇಸು ಲೋಕಾಂತ್ಯದ ಕುರಿತಾದ ಸೂಚನೆಗಳ ಕುರಿತು ಜನರಿಗೆ ಬೋಧಿಸುತ್ತಿದ್ದಾನೆ. ಈ ಭಾಗದಲ್ಲಿ ಯೇಸು ಪ್ರತಿ ಪುರುಷ ಮತ್ತು ಸ್ತ್ರೀಯರನ್ನು ತಡವಾಗಿ ಹೋಗುವದಕ್ಕೆ ಮುನ್ನ ಪಶ್ಚಾತಾಪ ಪಡಬೇಕೆಂದು ಬೇಡಿಕೊಳ್ಳುತ್ತಾನೆ.

ಕೆಲ ಸಮಯದ ಮುಂಚೆಯಷ್ಟೇ ಗಲಿಲಾಯದ ಕೆಲವು ಯೆಹೂದ್ಯರು ಯೆರೂಸಲೇಮಿನ ದೇವಾಲಯದಲ್ಲಿ ಯಜ್ಞಗಳನ್ನು ಅರ್ಪಿಸುತ್ತಿದ್ದರು, ಮತ್ತು ರೋಮಾಯ ದೇಶಾಧಿಪತಿಯಾದ ಪಿಲಾತನು ಅವರನ್ನು ಕೊಲ್ಲಲು ಅಜ್ಞಾಪಿಸಿದ್ದನು. ಆತನು ಅವರ ರಕ್ತವನ್ನು ಅವರು ಕೊಟ್ಟ ಯಜ್ಞಗಳೊಂದಿಗೆ ಬೆರಸಿದ್ದನು. ಪಿಲಾತನು ಇದನ್ನು ಏಕೆ ಮಾಡಿದನೆಂಬುದು ತಿಳಿದು ಬಂದಿಲ್ಲ. ಪಿಲಾತನು ಕ್ರೂರ ವ್ಯಕ್ತಿಯೆಂದು ಪರಿಚಿತನಾಗಿದ್ದನು.

**2-3** ಈ ಘಟನೆಯ ಕುರಿತು ಯೇಸುವಿಗೆ ವರದಿಮಾಡಲಾಯಿತು. ಯೇಸುವಿನ ಕಾಲದ ಯೆಹೂದ್ಯರಲ್ಲಿ ಅನೇಕರು ಒಬ್ಬ ವ್ಯಕ್ತಿಯ ಮೇಲೆ ಅಂತಹ ನಾಶನ ಬರುವದಾದರೆ ಆತನು ಅತೀ ಪಾಪಿಯೆಂಬುದಾಗಿಯೂ, ಆ ವಿನಾಶತೆಯು ದೇವರಿಂದ ಬಂದ ದಂಡನೆಯಾಗಿದೆ ಎಂಬದಾಗಿಯೂ ಊಹಿಸಿಕೊಂಡರು. ಆದರೆ ಯೇಸು ಅದು ಹಾಗಲ್ಲವೆಂದು ಹೇಳಿದನು.[28] ಈ ಗಲಿಲಾಯದವರು ಇತರ ಯಾವದೇ ಯೆಹೂದ್ಯನಿಗಿಂತ ಘೋರ ಪಾಪಿಗಳೇನಲ್ಲ. ವಾಸ್ತವದಲ್ಲಿ, ಗಲಿಲಾಯದವರ ಮೇಲೆ ಬಂದ ವಿನಾಶತೆಯು ಇತರ ಎಲ್ಲಾ ಯೆಹೂದ್ಯರಿಗೆ ಒಂದು ಎಚ್ಚರಿಕೆಯಾಗಿದ್ದು ಅವರು ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ಅದೇ ರೀತಿಯ ನಾಶನವು ಅವರ ಮೇಲೆ ಬೀಳುವದು. (ಯೆಹೂದ್ಯರು ದೇವರ ಕಡೆಗೆ ತಿರುಗಿಕೊಳ್ಳಲಿಲ್ಲ ಮತ್ತು ನಾಲ್ವತ್ತು ವರ್ಷಗಳ ನಂತರ ಯೆರೂಸಲೇಮಿನಲ್ಲಿದ್ದ ಎಲ್ಲಾ ಯೆಹೂದ್ಯರು ರೋಮಾಯ ಸೈನ್ಯದವರಿಂದ ಕೊಲ್ಲಲ್ಪಟ್ಟಿರೆಂಬದು ಈಗ ನಮಗೆ ಗೊತ್ತಿದೆ).

**4-5** ಬಳಿಕ ಯೇಸು, ತಾನೇ ಹದಿನೆಂಟು ಜನರನ್ನು ಹತ್ಯಗೈದ ಇನ್ನೊಂದು ವಿನಾಶತೆಯ ಉದಾಹರಣೆಯನ್ನು ನಿಡುತ್ತಾನೆ. ಅದೇನೆಂದರೆ ಒಂದು ಬುರುಜು ಅವರ ಮೇಲೆ ಬಿದ್ದಿತು. ಆದರೆ ಹದಿನೆಂಟು ಜನರು ದೇವರ ದೃಷ್ಟಿಯಲ್ಲಿ ಯೆರೂಸಲೇಮಿನಲ್ಲಿದ್ದ ಇತರ ಎಲ್ಲಾ ವಿಶ್ವಾಸ ರಹಿತ ಯೆಹೂದ್ಯರಿಗಿಂತಲೂ ಹೆಚ್ಚು ಅಪರಾಧಿಗಳೇನಾಗಿರಲಿಲ್ಲ. ಆ ಇತರ ಯೆಹೂದ್ಯರೆಲ್ಲರೂ ಸಹ ನಾಶವಾಗುವರು.

**6-7** ಆದರೆ ದೇವರು ಯೆಹೂದ್ಯ ಜನಾಂಗಕ್ಕೆ ಪಶ್ಚಾತಾಪಕ್ಕಾಗಿ ಹೆಚ್ಚು ಸಮಯವನ್ನು ಕೊಡುತ್ತಲಿದ್ದಾನೆ. ಆತನು ಅವರ ಮೇಲೆ ಬರಲಿದ್ದ ನಾಶನವನ್ನು ತಡೆಯುತ್ತಿದ್ದಾನೆ. ಇದನ್ನು ತೋರಿಸಲು ಯೇಸು ಅಂಜೂರ ಮರವನ್ನು ನೆಟ್ಟ ಒಬ್ಬ ಮನುಷ್ಯನ ಸಾಮ್ಯವನ್ನು ಹೇಳುತ್ತಾನೆ. ಆ ಮನುಷ್ಯನು ದೇವರನ್ನು ಪ್ರತಿನಿಧಿಸಿದರೆ ಅಂಜೂರದ ಮರವು ಯೆಹೂದ್ಯ ಜನಾಂಗವನ್ನು ಪ್ರತಿನಿಧಿಸುತ್ತದೆ.[29] ಸಾಮ್ಯದಲ್ಲಿನ ಫಲರಹಿತ ಅಂಜೂರದ ಮರದಂತೆ ಯೆಹೂದ್ಯ ಜನಾಂಗವು ಪಶ್ಚಾತಾಪ ಮತ್ತು ನೀತಿಯ ಫಲಗಳನ್ನು ಬಿಟ್ಟಿರಲಿಲ್ಲ. ಆದುದರಿಂದ ಆ ಮನುಷ್ಯನು ತೋಟಗಾರನಿಗೆ "ಇದನ್ನು ಕಡಿದು ಹಾಕು" ಎಂದನು (ಮತ್ತಾಯ 3:10, 7:19 ನೋಡಿರಿ). ಮರದಿಂದ ಯಾವ ಪ್ರಯೋಜನ ಇಲ್ಲದಿರುವದು ಮಾತ್ರವಲ್ಲ, ಅದರಿಂದ ಹಾನಿಯೂ ಉಂಟಾಗುತ್ತಿತ್ತು. ಇದು ನೆಲವನ್ನೆಲ್ಲಾ ಅಕ್ರಮಿಸಿದ್ದುದರಿಂದ ಇತರ ಸಂಗತಿಗಳು ಬೆಳೆಯದಂತೆ ಇದು ಅಡ್ಡಿ ಪಡಿಸುತ್ತಿತ್ತು. ಮರಗಳಂತೆಯೇ ಮನುಷ್ಯರ ಸಂಗತಿಯೂ ಆಗಿದೆ. ಒಳ್ಳೆಯದನ್ನು ಮಾಡದ ಮನುಷ್ಯರು ಸಾಮಾನ್ಯವಾಗಿ ತಮ್ಮ ಕೆಟ್ಟ ಮಾದರಿಯಿಂದ ಇತರರಿಗೆ ಹಾನಿಯನ್ನುಂಟುಮಾಡುತ್ತಾರೆ. ಜನರು ಒಳ್ಳೆಯದನ್ನು ಮಾಡುತ್ತಾರೆ ಇಲ್ಲವೆ ಅವರು ಕೆಟ್ಟದ್ದನ್ನು ಮಾಡುತ್ತಾರೆ.

**8-9** ಆದರೆ ತೋಟಗಾರನು ಅವ್ಯಕ್ತಿಗೆ "ಮರಕ್ಕೆ ಇನ್ನು ಸ್ವಲ್ಪ ಕಾಲಾವಕಾಶ ಕೊಡು, ಅದಕ್ಕೆ ಇನ್ನೊಂದು ವರ್ಷ ಸಮಯ ನೀಡು"ಎಂದು ಕೇಳಿದನು. ಆ ತೋಟಗಾರನು ಕ್ರಿಸ್ತನನ್ನು ಪ್ರತಿನಿಧಿಸುತ್ತಾನೆ. ಆ ಸಂದರ್ಭದಲ್ಲಿ ಯೆಹೂದ್ಯ ಜನಾಂಗಕ್ಕೆ ಪಸ್ಚಾತಾಪಕ್ಕಾಗಿ ಸಮಯವನ್ನು ನೀಡಲು ಅವರ ದಂಡನೆಯನ್ನು ತಡಮಾಡು ಎಂದು ಕ್ರಿಸ್ತನು ತಂದೆಯನ್ನು ಕೇಳುತ್ತಿದ್ದನು ಎಂದು ಕೆಲವು ಬೈಬಲ್ ಪಂಡಿತರು ಯೋಚಿಸುತ್ತಾರೆ.

ಅದೇ ರೀತಿಯಲ್ಲಿ ಈ ದಿನವೂ ದೇವರು ಮನುಷ್ಯರಿಗೆ ಕರುಣೆಯನ್ನು ತೋರುತ್ತಿದ್ದಾನೆ. ಆತನು ಪ್ರತಿಯೊಬ್ಬ ಪುರುಷ ಮತ್ತು ಸ್ತ್ರೀಗೆ ಪಶ್ಚಾತಾಪಕ್ಕಾಗಿ ಹೆಚ್ಚು ಕಾಲಾವಕಾಶವನ್ನು ನೀಡುತ್ತಿದ್ದಾನೆ. ಆದರೆ ಆತನು ಸದಾಕಾಲವೂ ತಡಮಾಡುವದಿಲ್ಲ (2 ಪೇತ್ರ 3:3-4, 9-10 ಮತ್ತು ವ್ಯಾಖ್ಯಾನ ನೋಡಿರಿ). ಇಂದು ಎಲ್ಲಾ ಜನರಿಗೆ ನಮ್ಮ ಎಚ್ಚರಿಕೆಯು ಯೇಸುವಿನ ಸಮಯದಲ್ಲಿದ್ದ ಎಚ್ಚರಿಕೆಯೇ ಆಗಿದೆ: ದೇವರ ಕಡೆಗೆ ತಿರುಗಿಕೊಳ್ಳಿರಿ (ಪಶ್ಚಾತಾಪಪಡಿರಿ) – ಹೆಚ್ಚು ಸಮಯ ಉಳಿದಿರುವದಿಲ್ಲ. ಕ್ರಿಸ್ತನು ತಿರುಗಿ – ಬರುವಾಗ ಅದು ಬಹಳ ತಡವಾಗಿರುತ್ತದೆ.

ನಾವು ಸಹ ತೋಟಗಾರನಂತೆಯೇ ಮನುಷ್ಯರಿಗೆ ಪಶ್ಚಾತಾಪಕ್ಕಾಗಿ ಹೆಚ್ಚು ಕಾಲಾವಕಾಶ ನೀಡುವಂತೆ ದೇವರನ್ನು ಪ್ರಾರ್ಥಿಸಬಹುದು. ನಾವು ಕ್ರಿಸ್ತನು ಶೀಘ್ರ್ರವೇ ಬರುವಂತೆ ಪ್ರಾರ್ಥಿಸಬೇಕೆಂದು ನಮಗೆ ಅಜ್ಞಾಸಿಲ್ಪಟ್ಟಿಲ್ಲ ಆದರೆ ಆತನು ಬರಲಿ ಎಂಬುದಕ್ಕಾಗಿಯಷ್ಟೇ (ಪ್ರಕಟಣೆ 22:20).

ಆದರೆ ಅದರ ಮದ್ಯದಲ್ಲಿ ತೋಟಗಾರನು ಏನು ಮಾಡಬೇಕೆಂಬದನ್ನು ಗಮನಿಸಿರಿ. ಆತನು ಬಂಜೆಯಾದ ಮರದ ಸುತ್ತಲು ಅಗೆದು ಗೊಬ್ಬರ ಹಾಕಿ ಫಲವತ್ತಾಗಿ ಮಾಡಬೇಕು. ಇದರರ್ಥ ವೇನೆಂದರೆ ನಾವು ಇತರ ಜನರು ದೇವರ ಕಡೆಗೆ ತಿರುಗಿಕೊಳ್ಳಬೇಕೆಂದು ಪ್ರಾರ್ಥಿಸುವದು ಮಾತ್ರವೇ ಅಲ್ಲ ಆದರೆ ಅದೇ ವೇಳೆಯಲ್ಲಿ ನಾವು ಅವರೊಂದಿಗೆ ಕ್ರಿಸ್ತನ ಸುವಾರ್ತೆಯನ್ನು ಸಾರಬೇಕು ಮತ್ತು ಅವರನ್ನು ದೇವರ ಕಡೆಗೆ ತಿರುಗಿಕೊಳ್ಳುವಂತೆ ಕ್ರಿಯಾತ್ಮಕವಾಗಿ ಪ್ರೋತ್ಸಾಹಿಸಬೇಕು.

## ಸಬ್ಬತ್ ದಿನದಲ್ಲಿ ಒಬ್ಬ ಸ್ತ್ರೀಯನ್ನು ಗುಣಪಡಿಸಿದ್ದು (13:10-17)

**10-14** ಯೇಸು ನಡುಬೊಗ್ಗಿದ್ದ ಈ ಸ್ತ್ರೀಯನ್ನು ಸಬ್ಬತ್ ದಿನದಲ್ಲಿ ಸ್ವಸ್ಥಮಾಡಿದ ಕಥೆಯು ಕೈಬತ್ತಿಹೋದವನನ್ನು ಸ್ವಸ್ಥಮಾಡಿದ್ದ ಘಟನೆಯನ್ನು ಹೋಲುತ್ತದೆ. (ಮಾರ್ಕ 3:1 -3 ಮತ್ತು ವ್ಯಾಖ್ಯಾನ ನೋಡಿರಿ). ಈ ಸ್ತ್ರೀಯು ಅಬ್ರಹಾಮನ ವಂಶದವಳಾಗಿದ್ದಳು (ವಚನ 16). ಅಂದರೆ ಯೆಹೂದ್ಯಳಾಗಿದ್ದಳು ಮತ್ತು ಹದಿನೆಂಟು ವರ್ಷಗಳಿಂದಲೂ ಆತ್ಮವೊಂದರಿಂದ ನಡು ಬೊಗ್ಗಿದವಳಾಗಿ ಅಸ್ವಸ್ಥಳಾಗಿದ್ದಳು. ಸೈತಾನನು ಆಕೆಯ ದೇಹದಲ್ಲಿ ಏರು ಪೇರು[30] ಉಂಟುಮಾಡಿದ್ದನು.

**15-17** ಯೇಸು ಸ್ತ್ರೀಯೊಬ್ಬಳನ್ನು ಸಬ್ಬತ್ ದಿನದಲ್ಲಿ ಸ್ವಸ್ಥ ಮಾಡಿದ್ದಕ್ಕೆ ಯೆಹೂದ್ಯರು ವಿರೋಧಿಸಿದಾಗ ಯೇಸು ಅವರನ್ನು "ಕಪಟಿಗಳು" ಅಂದನು. ಸಬ್ಬತ್ ದಿನದಲ್ಲಿ ಕುರಿಯೊಂದು ಹಳ್ಳದಲ್ಲಿ ಬೀಳುವದಾದರೆ ಅವರು ಅದನ್ನು ಮೇಲೆತ್ತುವರು. ಕುರಿ ಮತ್ತು ಇತರ ಪ್ರಾಣಿಗಳು ಮಾನವರಿಗಿಂತಲೂ ಹೆಚ್ಚು ಅಮೂಲ್ಯವಾದವು ಗಳೋ? (ಮತ್ತಾಯ 12:11-12, ಮಾರ್ಕ 3:4-6, ಲೂಕ 14:1-6 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಸಬ್ಬತ್ ದಿನದಲ್ಲಿ ಪ್ರಾಣಿಗಳನ್ನು ಗೋದಲಿಯಿಂದ ಬಿಚ್ಚಿ ನೀರು ಕುಡಿಸುವದಕ್ಕೆ ಹಿಡುಕೊಂಡು ಹೋಗುವದು ಪರವಾಗಿಲ್ಲವಾದರೆ, ಸಬ್ಬತದಿನದಲ್ಲಿ ಒಬ್ಬ ವ್ಯಕ್ತಿಯನ್ನು ಸೈತಾನನ ಕಟ್ಟುಗಳಿಂದ ಬಿಡಿಸುವದರಲ್ಲಿ ಸಹ ತಪ್ಪೇನಿಲ್ಲ.

## ಸಾಸಿವೆ ಕಾಳು ಮತ್ತು ಹುಳಿ ಹಿಟ್ಟಿನ ಸಾಮ್ಯ (13:18-21)

(ಮತ್ತಾಯ 13:31-33, ಮಾರ್ಕ 4:30-32)

**18-19** ಮಾರ್ಕ 4:30-32 ಮತ್ತು ವ್ಯಾಖ್ಯಾನ ನೋಡಿರಿ.
**20-21** ಮತ್ತಾಯ 13-33 ಮತ್ತು ವ್ಯಾಖ್ಯಾನ ನೋಡಿರಿ.

## ಇಕ್ಕಟ್ಟಾದ ಬಾಗಿಲು (13:22-30)

**22-23** ಅನೇಕ ಜನರು ಯೇಸು ಒಬ್ಬ ಪ್ರವಾದಿ ಮತ್ತು ಅದ್ಭುತಗಾರ ಎಂದು ನಂಬಿದ್ದರೂ ಹೆಚ್ಚು ಜನರು ರಕ್ಷಕನು ಮೆಸ್ಸಿಯನು ಎಂಬದನ್ನು ನಂಬಲಿಲ್ಲ. ಹೆಚ್ಚು ಪಾಲು ಜನರು ಪಶ್ಚಾತಾಪ ಪಟ್ಟು ಆತನಲ್ಲಿ ನಂಬಿಕೆಯಿಡಲಿಲ್ಲ. ಯಾರೋ ಒಬ್ಬನು ಕೆಲವು ಜನರು ಮಾತ್ರವೇ ಯೇಸುವನ್ನು ಹಿಂಬಾಲಿಸುವದನ್ನು ಗಮನಿಸಿ ಆತನು ಯೇಸುವಿಗೆ "ಕರ್ತನೇ, ರಕ್ಷಣೆ ಹೊಂದುವವರು ಸ್ವಲ್ಪ ಜನರೋ" [31] ಎಂದು ಕೇಳುತ್ತಾನೆ.

**24** ಯೇಸು ಪ್ರಶ್ನೆಗೆ ನೇರವಾಗಿ ಉತ್ತರಿಸಲಿಲ್ಲ. ಬದಲಾಗಿ ಆತನು ಇಕ್ಕಟ್ಟಾದ ಬಾಗಿಲಿನಿಂದ ಒಳಕ್ಕೆ ಹೋಗುವದಕ್ಕೆ ಹೆಣಗಾಡಿರಿ. ಬಹು ಜನರು ಒಳಕ್ಕೆ ಹೋಗುವದಕ್ಕೆ ಪ್ರಯತ್ನಿಸುವರು ಆದರೆ ಅವರಿಂದಾಗುವದಿಲ್ಲ. ಎಷ್ಟು ಜನರು ರಕ್ಷಣೆ ಹೊಂದಲಿದ್ದಾರೆ ಎಂದು ಕೇಳಬೇಡ. ನೀನು ಸ್ವತಃ ರಕ್ಷಣೆ ಹೊಂದುವಿಯೋ ಎಂದು ಕೇಳಿಕೋ, ನೀವು, ಇನ್ನೊಬ್ಬರ ಕುರಿತು ಚಿಂತಿಸುವದಕ್ಕೆ ಮುಂಚಿತವಾಗಿ ಸ್ವತಃ "ನೀವು ಇಕ್ಕಟ್ಟಾದ ಬಾಗಿಲ ಮೂಲಕ ಪರಲೋಕವನ್ನು ಪ್ರವೇಶಿಸಿದ್ದೀರೋ? ಎಂಬದನ್ನು ಖಚಿತಪಡಿಸಿಕೊಳ್ಳಿರಿ" ಎಂದು ಹೇಳಿದನು (ಮತ್ತಾಯ 7:13-14 ಮತ್ತು ವ್ಯಾಖ್ಯಾನ ನೋಡಿರಿ).

**25** ಯೇಸುವಿನ ಮಾತಿನ ಅರ್ಥವೇನೆಂದರೆ: ಪರಲೋಕಕ್ಕೆ ಹೋಗಬೇಕಾದರೆ ನಾವೆಲ್ಲರೂ "ಇಕ್ಕಟ್ಟಾದ ದ್ವಾರದ" ಮೂಲಕ ಪ್ರವೇಸಿಸಬೇಕು. ಆದರೊಳಗೆ ಪ್ರವೇಶಿಸುವದು ಅಷ್ಟು ಸುಲಭವಲ್ಲ. ನಾವು ಪ್ರವೇಶಿಸುವದಕ್ಕೆ ಎಲ್ಲಾ ರೀತಿಯ ಪ್ರಯತ್ನವನ್ನೂ ಮಾಡಬೇಕು. ಮತ್ತು ನಾವು ತಡಮಾಡಕೂಡದು. ಒಮ್ಮೆ ಬಾಗಿಲು ಮುಚ್ಚಲ್ಪಟ್ಟಿತೆಂದರೆ ಆದರೊಳಗೆ ಪ್ರವೇಶಿಸಲು ಇನ್ನು ಸಮಯವಿರದು. ಬಾಗಿಲು ಇನ್ನೂ ತೆರೆದಿರುವಾಗಲೇ ನಾವು ಆದರೊಳಗೆ ಪ್ರವೇಶಿಸಬೇಕು. ಯಾಕೆಂದರೆ ಯೇಸು ತಿರಿಗಿ ಬಂದು ಬಾಗಿಲನ್ನು ಮುಚ್ಚಿಬಿಡುವ ಕಾಲ ಬರುತ್ತದೆ. ಆಗ ನಾವು ಅವಕಾಶವನ್ನು ಕಳೆದುಕೊಳ್ಳುವವರಾಗುತ್ತೇವೆ. (ಮತ್ತಾಯ 25:6-13 ಮತ್ತು ವ್ಯಾಖ್ಯಾನ ನೋಡಿರಿ).

ಯೇಸು ಪುನಃ ಬರುವ ತನಕವೂ ಎಲ್ಲಾ ಮಾನವರಿಗೆ ಇಕ್ಕಟ್ಟಾದ ಬಾಗಿಲಿನೊಳಗೆ ಪ್ರವೇಶಿಸುವ ಅವಕಾಶವು ಇನ್ನೂ ಇರುತ್ತದೆ. ಅದು ಪಶ್ಚಾತಾಪ ಪಟ್ಟು ನಂಬಿಕೆಯಿಡುವ ಎಲ್ಲರಿಗೂ ತೆರೆದಿರುತ್ತದೆ—ತಟ್ಟಿರಿ, ನಿಮಗೆ ತೆರೆಯಲ್ಪಡುವದು (ಮತ್ತಾಯ 7:7) ಆದರೆ ತಡಮಾಡಬೇಡವಷ್ಟೆ ಇನ್ನು ಸಮಯ ವಿರುವಾಗಲೇ ಆದರೂಳಗೆ ಪ್ರವೇಶಿಸಲು ಹೆಣಗಾಡಿರಿ. ಯೇಸು ಬಲದೊಂದಿಗೂ ಮಹಿಮೆಯೊಂದಿಗೂ ಹಿಂದಿರುಗಿ ಬರುವ ಆ ಸಮಯದಲ್ಲಿ ಅನೇಕರು ಬಾಗಿಲಿನೊಳಗೆ ಪ್ರವೇಶಿಸಲು ಪ್ರಯತ್ನಿಸುವರು. ಆತನು ನಿಜವಾಗಿಯೂ ರಕ್ಷಕನೇ, ದೇವಕುಮಾರನು ಎಂಬದನ್ನು ಗ್ರಹಿಸಿಕೊಳ್ಳುವರು ಆದರೆ ಆಗ ಸಮಯ ಮೀರಿ ಹೋಗಿರುತ್ತದೆ. ಆತನು ನಾನು ನಿಮ್ಮನ್ನು ಅರಿಯೆನು—ಎಂದು ಉತ್ತರಿಸುವನು.

**26-27** ಆ ಸಮಯದಲ್ಲಿ ಜನರು ಯೇಸುವಿಗೆ "ನಾವು ನಿಮ್ಮೊಂದಿಗೆ ಊಟ ಮಾಡಿದೆವು, ಕುಡಿದೆವು" ನಾವು ಚರ್ಚಿಗೆ ಹೋದೆವು. ನಾವು ನಿನ್ನ ವಾಕ್ಯಗಳನ್ನು ಕೇಳಿದೆವು. ನಾವು ನಿನ್ನನ್ನು "ಕರ್ತನು, ಕರ್ತನು ಎಂದು ಕರೆದವಲ್ಲಾ"ಅನ್ನುವರು (ಮತ್ತಾಯ 7:21-23 ಮತ್ತು ವ್ಯಾಖ್ಯಾನನೋಡಿರಿ). ಆ ಸಮಯದಲ್ಲಿ ಯೇಸುವಿನ ಕಾಲದ ಯೋಹೂದ್ಯರು ಸಹ "ನಾವೂ ನಿನ್ನ ಹಾಗೆಯೇ ಯೆಹೂದ್ಯರು. ನಾವು ಅಬ್ರಹಾಮನ ಸಂತತಿಯವರು. ನಾವು ದೇವರು ಆರಿಸಿಕೊಂಡ ಜನಾಂಗ, ನಿಶ್ಚಯನಾಗಿಯೂ ಪರಲೋಕ ರಾಜ್ಯದಲ್ಲಿ ನಮಗೆ ಸ್ಥಳವುಂಟು"ಎಂದು ಹೇಳುವರು. ಆದರೆ ಯೇಸು ಅವರೆಲ್ಲರಿಗೂ "ನೀವು ನಿಜವಾಗಿಯೂ ನನ್ನಲ್ಲಿ ನಂಬಿಕೆಯಿಡಲಿಲ್ಲ. ನಾನು ನಿಮ್ಮನ್ನು ಅರಿಯೆನು" ಎಂದು ಹೇಳುತ್ತಾನೆ.

**28-30** ಬಳಿಕ ಯೇಸು ತನ್ನ ಸುತ್ತಲಿದ್ದು ಆಲಿಸುತ್ತಿದ್ದ ಯೆಹೂದ್ಯರಿಗೆ, "ನೀವು ಆ ದಿನದಲ್ಲಿ ಗೋಳಾಡುವಿರಿ". ನೀವು ನನ್ನನ್ನು ನಂಬಲಿಲ್ಲವಾದ್ದರಿಂದ ಪೂರ್ವ ಮತ್ತು ಪಶ್ಚಿಮ, ಮತ್ತು ಉತ್ತರ, ದಕ್ಷಿಣ ದಿಕ್ಕುಗಳ ಜನರಿಗೆ (ಅನ್ಯಜನರು) ದೇವರ ರಾಜ್ಯದಲ್ಲಿನ ನಿಮ್ಮ ಸ್ಥಾನವನ್ನು ಕೊಡಲಾಗುವದು (ಮತ್ತಾಯ 8:11-12 ಮತ್ತು ವ್ಯಾಖ್ಯಾನ ನೋಡಿರಿ). ನೀವು ಮೊದಲನೆಯವರು ಎಂದುಕೊಂಡಿರಿ, ಆದರೆ ಕೊನೆಯಲ್ಲಿ ನೀವೇ ಕಡೆಯವರಾಗುವಿರಿ. ನೀವು ರಕ್ಷಣೆ ಹೊಂದಿದ್ದೀರೆಂದು ಅಂದು ಕೊಂಡಿರಿ ಆದರೆ ಕೊನೆಗೆ ನೀವು "ನಾಶವಾಗುವಿರಿ" ಎಂದು ಹೇಳಿದನು. (ಮಾರ್ಕ 10:31 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

## ಯೆರೂಸಲೇಮಿಗಾಗಿ ಯೇಸುವಿನ ವೇದನೆ (13:31-35)

**31** ಯೇಸು ಇನ್ನೂ ಗಲಿಲಾಯದಲ್ಲಿಯೇ ಇರುವಾಗ ಫರಿಸಾಯರಲ್ಲಿ ಕೆಲವರು ಬಂದು ಯೇಸುವಿಗೆ ಗಲಿಲಾಯವನ್ನು ಆಳುತ್ತಿದ್ದ ಹೆರೋದನು ನಿನ್ನನ್ನು ಕೊಲ್ಲ ಬೇಕೆಂದಿದ್ದಾನೆ ಎಂದು ಹೇಳಿದರು.

**32** ಆದರೆ ಯೇಸು ಹೆರೋದನನ್ನು ಲೆಕ್ಕಿಲಿಲ್ಲ. ಹೆರೋದನು ಸ್ನಾನಿಕನಾದ ಯೋಹಾನನನ್ನು ಕೊಲ್ಲಿಸಿದ್ದನು. ಆತನಿಗೆ ಅಧಿಕಾರವಿತ್ತು ಮತ್ತು ಆತನು ನರಿಯಂತೆ ಕುತಂತ್ರಿಯಾಗಿದ್ದನು. ಆದರೆ ಆತನಿಗೆ ಯೇಸುವನ್ನು ತಡೆಯಲು ಯಾವ ಅಧಿಕಾರವು ಇರಲಿಲ್ಲ. ಯೇಸು ತಾನು ಸಾಯುವದಕ್ಕಿಂತ ಮುಂಚೆ ಮಾಡಬೇಕಾದ ಕಾರ್ಯವನ್ನು ಹೊಂದಿದ್ದನು "ಈ ಹೊತ್ತು ನಾಳೆ ಅಂದರೆ ಉಳಿದಿರುವ ಸಮಯದಲ್ಲಿ ನಾನು ಕಾರ್ಯ ಮಾಡುತ್ತೇನೆ ಮತ್ತು ಮೂರನೆಯ ದಿನದಲ್ಲಿ ಸಿದ್ಧಿಗೆ ಬರುತ್ತೇನೆ" ಎಂದು ಹೇಳಿದನು. ಯೇಸುವಿನ ಗುರಿಯು ಸತ್ತು ಪು ನರುಥ್ಥಾನಗೊಳ್ಳುವದೇ ಆಗಿತ್ತು. ಆತನ ಮರಣದ ಮೂಲಕವೇ ಮಾನವರನ್ನು ಅವರ ಪಾಪಗಳಿಂದ ರಕ್ಷಿಸುವ ಲಕ್ಷ್ಯೆಯು ಸಾಧಿಸಲ್ಪಡುವದು (ಮಾರ್ಕ 10:45 ಮತ್ತು ವ್ಯಾಖ್ಯಾನ ನೋಡಿರಿ).

**33** ಯಾವ ಬೆದರಿಕೆಯೇ ಆಗಲಿ ಯೇಸು ದೇವರ ಚಿತ್ತವನ್ನು ಮಾಡುವದರಿಂದ ತಡೆಯಲಾಗಲಿಲ್ಲ. ತಾನು ಕೊಲ್ಲಲ್ಪಡಬೇಕು ಆದರೆ ಅದು ಗಲಿಲಾಯದಲ್ಲಿ ಹೆರೋದನ ಮೂಲಕ ಅಲ್ಲ ಎಂಬದು ಆತನಿಗೆ ತಿಳಿದಿತ್ತು. ಪ್ರವಾದಿಗಳು ಯೆರೂಸಲೇಮಿನಲ್ಲಿ ಕೊಲ್ಲಲ್ಪಟ್ಟರು. ಯೆರೂಸಲೇಮಿನಲ್ಲಿನ ಹಿರೀಸಭೆಯೇ ಪ್ರವಾಧಿಗಳಿಗೆ ಮರಣವನ್ನು ವಿಧಿಸಬಹುದಾಗಿತ್ತು. ಮತ್ತು ಯೆರೂಸಲೇಮು ಹೆರೋದನ ನ್ಯಾಯಾಂಗದ ಅಡಿಯಲ್ಲಿತ್ತು.

**34-35** ಮತ್ತಾಯ 23:37-39 ಮತ್ತು ವ್ಯಾಖ್ಯಾನ ನೋಡಿರಿ.

---

# ಅಧ್ಯಾಯ - 14

## ಯೇಸು ಸಬ್ಬತ್ ದಿನದಲ್ಲಿ ಒಬ್ಬನನ್ನು ಸ್ವಸ್ಥ ಮಾಡಿದ್ದು (14:1-6)

**1** ಯೇಸು ಹೋದ ಕಡೆಯಲೆಲ್ಲಾ ಆತನ ಮೇಲೆ ನಿಗಾ ಇಡಲಾಗುತ್ತಿತ್ತು. ಆತನ ವೈರಿಗಳಾದ ಕೆಲವು ಫರಿಸಾಯರು ಯಾವದಾದರೂ ತಪ್ಪು ಸಿಗುತ್ತದೇನೊ ಎಂದು ನಿರೀಕ್ಷಿಸುತ್ತಿದ್ದರು. ಸಬ್ಬತ್ ದಿನದಲ್ಲಿ ಒಬ್ಬನನ್ನು ಗುಣಪಡಿಸುವದು ಯೆಹೂದ್ಯ ಧರ್ಮಶಾಸ್ತ್ರವನ್ನು ಉಲ್ಲಂಘಿಸಿದಂತೆ ಎಂದು ಯೆಹೂದ್ಯರು ಪರಿಗಣಿಸುತ್ತಿದ್ದರು (ಮಾರ್ಕ 3:1-3 ಮತ್ತು ವ್ಯಾಖ್ಯಾನ ನೋಡಿರಿ).

**2** ಯೇಸು ಸಬ್ಬತ್ ದಿನದಲ್ಲಿ ಫರಿಸಾಯರ ಮುಖ್ಯಸ್ಥರಲ್ಲಿ ಒಬ್ಬನ ಮನೆಗೆ ಊಟಕ್ಕೆ ಹೋದಾಗ ಒಬ್ಬ ಜಲೋದರವುಳ್ಳ ಮನುಷ್ಯನನ್ನು ಅವನ ಬಳಿಗೆ ತರಲಾಯಿತು. ಯೇಸು ಏನು ಮಾಡುವನೋ ಎಂದು ಫರಿಸಾಯರು ಹೊಂಚಿ ನೋಡುತ್ತಿದ್ದರು.

**3** ಆದರೆ ಯೇಸು ಫರಿಸಾಯರನ್ನು ಧರ್ಮೋಪದೇಶಕರನ್ನು "ಸಬ್ಬತ್ ದಿನದಲ್ಲಿ ಸ್ವಸ್ಥಮಾಡುವದು ಸರಿಯೋ? ಸರಿಯಲ್ಲವೊ?ಠಎಂದು ಕೇಳಿದನು. ಅವರು "ಹೌದು" ಎಂದು ಉತ್ತರಿಸುವದಾದರೆ ಆತನ ವಿರುದ್ಧ ಅವರಿಗೆ ಯಾವ ಆರೋಪ ಸಿಕ್ಕುವದಿಲ್ಲ. ಒಂದು ವೇಳೆ ಅವರು "ಸರಿಯಲ್ಲ" ಅನ್ನುವದಾದರೆ ಅವರಿಗೆ ಅಸ್ವಸ್ಥನಾದ ವ್ಯಕ್ತಿಯ ಕಡೆಗೆ ಕರುಣೆಯಿಲ್ಲದಿರುವದಕ್ಕಾಗಿ ಜನರು ಅವರ ಮೇಲೆ ಕೋಪಗೊಳ್ಳುವರು. ಆದುದರಿಂದ ಅವರು ಮೌನವಾಗಿದ್ದರು.

**4-6** ಯೇಸು ಜಲೋದರವುಳ್ಳ ವ್ಯಕ್ತಿಯನ್ನು ಸ್ವಸ್ಥ ಮಾಡಿದನು. ಸಬ್ಬತ್‌ದಿನದಲ್ಲಿ ಪ್ರಾಣಿಯೊಂದು ಬಾವಿಯಲ್ಲಿ ಬಿದ್ದರೆ ಅದನ್ನು ಮೇಲೆತ್ತುವದು ಸರಿಯೆಂದು ಯೆಹೂದ್ಯರು ಪರಿಗಣಿಸುತ್ತಿದ್ದರು. ಆದುದರಿಂದ ಸಬ್ಬತ್ ದಿನದಲ್ಲಿ ಮನುಷ್ಯನನ್ನು ಆತನ ದುರ್ಗತಿಯಿಂದ ಬಿಡಿಸುವದು ದೇವರ ದೃಷ್ಟಿಯಲ್ಲಿ ಖಂಡಿತವಾಗಿಯೂ ಸರಿಯಾದದ್ದಾಗಿರುತ್ತದೆ (ಮತ್ತಾಯ 12:10-12, ಮಾರ್ಕ 3:4-6, ಲೂಕ 13:15-17 ಮತ್ತು ವ್ಯಾಖ್ಯಾನ ನೋಡಿರಿ).

## ದೀನತೆಯ ಕುರಿತಾದ ಬೋಧನೆ (14:7-14)

**7** ಯೇಸು ಫರಿಸಾಯನ ಮನೆಯಲ್ಲಿರುವಾಗ ಇತರ ಅತಿಥಿಗಳು ಬಂದರು. ಅವರು ಬರುತ್ತಿದ್ದಂತೆ ಅತಿ ಉತ್ತಮ ಆಸನಗಳನ್ನು ಆರಿಸಿಕೊಂಡರು (ಮಾರ್ಕ 12:38-39 ಮತ್ತು ವ್ಯಾಖ್ಯಾನ ನೋಡಿರಿ). ಅವರ ಗರ್ವವನ್ನು ಮತ್ತು ಮನುಷ್ಯರ ಮುಂದೆ ಹೆಚ್ಚಿಸಿಕೊಳ್ಳುವ ಬಯಕೆಯನ್ನು ನೋಡಿ ಯೇಸು ಒಂದು ಸಾಮ್ಯವನ್ನು ಹೇಳಿದನು.

**8-10** ಈ ಸಾಮ್ಯವು ವಿವಾಹ ಔತಣಕ್ಕೆ ಆಮಂತ್ರಿಸಲ್ಪಡುವದರ ಕುರಿತಾಗಿರುತ್ತದೆ. ವಿವಾಹ ಔತಣಗಳಲ್ಲಿ ಕೆಲವು ಅಸನಗಳು ಪ್ರಾಮುಖ್ಯ ಜನರಿಗೂ, ಇತರ ಆಸನಗಳು ಅಲ್ಪ ಪ್ರಾಮುಖ್ಯರಾದವರಿಗೂ ಕಾದಿರಿಸಲ್ಪಟ್ಟಿರುತ್ತವೆ. ಸಾಮ್ಯಾನವಾಗಿ ಅತಿ ಪ್ರಾಮುಖ್ಯ ಅತಿಥಿಗಳು ಯಾವಾಗಲೂ ಕೊನೆಯಲ್ಲಿ ಬರುತ್ತಾರೆ. ಕಡಿಮೆ ಪ್ರಾಮುಖ್ಯನಾದ ಅಥಿತಿಯು ಒಂದು ಪ್ರಾಮುಖ್ಯವಾದ ಅಥಿತಿಯ ಆಸನದಲ್ಲಿ ಕುಳಿತು ಕೊಳ್ಳುವದಾದರೆ ಔತಣದ ಯಜಮಾನನು ಬಂದು ಆ ವ್ಯಕ್ತಿಗೆ ಕಡಿಮೆ ಗೌರವದ ಆಸನಕ್ಕೆ ಹೋಗುವಂತೆ ಹೇಳುತ್ತಾನೆ. ಎಂತಹ ಒಂದು ನಾಚಿಕೆಯುಂಟು ಮಾಡುವ ವಿಷಯ ಮೊದಲೇ ಕಡೆಯ ಆಸದಲ್ಲಿ ಕುಳಿತು ಕೊಳ್ಳುವದು ಉತ್ತಮ (ಜ್ಞಾನೋಕ್ತಿ 25:6-7). ನಾವು ಮಿಥ್ಯ ರೀತಿಯ ದೀನತೆಯನ್ನು ತೋರಿಸಬೇಕೆಂದು ಯೇಸುವಿನ ಅರ್ಥವಲ್ಲ. ಕೆಲವು ಜನರು ತಾವು ಮೊದಲನೆಯ ಆಸನಕ್ಕೆ ಕರೆಯಲ್ಪಡುತ್ತಾರೆ. ತಿಳಿದವರಾಗಿ ಬೇಕೆಂದೇ

ಕಡೆಯಸ್ಥಾನವನ್ನು ಆರಿಸಿಕೊಳ್ಳುತ್ತಾರೆ. ಅವರು ದೀನತೆಯುಳ್ಳವರಂತೆ ನಾಟಕವಾಡುತ್ತಾರೆ. ಆದರೆ ನಿಜವಾಗಿಯೂ ಅವರು ಗೌರವವನ್ನು ಹುಡುಕುವರಾಗಿರುತ್ತಾರೆ. ಅಂತಹ ಜನರು ದೀನತೆಯ ಮುಖವಾಡವನ್ನು ಧರಿಸಿಕೊಳ್ಳುತ್ತಾರೆ. ಆದರೆ ಅವರು ನಿಜವಾಗಿಯೂ ಗರ್ವಿಷ್ಠರಾಗಿದ್ದಾರೆ.

ಈ ಸಾಮ್ಯವು ಒಂದು ಆತ್ಮೀಕವನ್ನು ಹೊಂದಿರುತ್ತದೆ, ದೇವರು ಒಂದು "ಮದುವೆ ಔತಣ" ವನ್ನು ಸಿದ್ಧಮಾಡಿ ಪ್ರತಿಯೊಬ್ಬ ಅಥಿತಿಗೂ ಒಂದೊಂದು ಆಸನ ಕೊಟ್ಟಿರುತ್ತಾನೆ. ನಾವು ಆತನ ಮುಂಭಾಗದಲ್ಲಿ ಬರುವಾಗ ನಾವು ಉತ್ತಮ ಆಸನವನ್ನು ಆರಿಸಿಕೊಳ್ಳದಿರೋಣ. ಆತನು ನಮ್ಮ ಹೃದಯಗಳನ್ನು ಅರಿತವನಾಗಿದ್ದಾನೆ. ನಾವು ಯಾವ ಆಸನದಲ್ಲಿ ಕುಳಿತುಕೊಳ್ಳಲು ಯೋಗ್ಯರು ಎಂಬದನ್ನು ಆತನು ಬಲ್ಲವನಾಗಿದ್ದಾನೆ. ಆದುದರಿಂದ ನಾವು ಆತನ ಮುಂಭಾಗದಲ್ಲಿ ನಮ್ಮನ್ನು ತಗ್ಗಿಸಿಕೊಂಡು ಕಡೆಯ ಆಸನವನ್ನು ತೆಗೆದುಕೊಳ್ಳೋಣ. ಯಾಕೆಂದರೆ ತಮ್ಮನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವವರನ್ನು ದೇವರು ತಗ್ಗಿಸುವನು (ವಚನ 11).

**11** ಮತ್ತಾಯ 23:12, 1 ಪೇತ್ರ 5:5-6 ಮತ್ತು ವ್ಯಾಖ್ಯಾನ ನೋಡಿರಿ.

**12** ಯೇಸು ಫರಿಸಾಯರಲ್ಲಿ ಮುಖ್ಯಸ್ಥನೊಬ್ಬನ ಮನೆಯಲ್ಲಿ ಕುಳಿತಿರುವಾಗ (ವಚನ 1) ಯಜಮಾನನು ಕೇವಲ ಶ್ರೀಮಂತ ಸ್ನೇಹಿತರನ್ನು ಹಾಗು ಸಂಬಂಧಿಗಳನ್ನು ಮಾತ್ರವೇ ಆಮಂತ್ರಿಸಿದ್ದನ್ನು ಕಂಡನು. ಆ ಅಥಿತಿಗಳಿಗೆ ಊಟ ಹಾಕುವದು ದುಬಾರಿಯಾಗಿತ್ತು. ಆದರೆ ಅಂತ್ಯದಲ್ಲಿ ಯಜಮಾನನಿಗೆ ನಷ್ಟವಂತೂ ಆಗುತ್ತಿರಲಿಲ್ಲ, ಯಾಕೆಂದರೆ ಆ ಅಥಿತಿಗಳೆಲ್ಲರೂ ಆನಂತರ ಆತನನ್ನು ತಮ್ಮ ಮನೆಗಳಿಗೆ ಅಮಂತ್ರಿಸುವರು ಮತ್ತು ಆತನಿಗೆ ಋಣ ತೀರಿಸುತ್ತಿದ್ದರು.
ಯೇಸು ಫರಿಸಾಯರಿಗೆ "ನಿನ್ನ ಸ್ನೇಹಿತರನ್ನಾಗಲಿ, ನಿನ್ನ ಅಣ್ಣ ತಮ್ಮಂದಿರನ್ನಾಗಲಿ, ನಿನ್ನ ಬಂಧು ಬಾಂಧವರನ್ನಾಗಲಿ ಐಶ್ವರ್ಯವಂತರಾದ ನೆರೆಯವರನ್ನಾಗಲಿ, ಕರೆಯಬೇಡ" ಎಂದು ಹೇಳಿದನು. ಯೇಸುವಿನ ಅರ್ಥವೇನೆಂದರೆ: ಅಂತಹ ಅಥಿತಿಗಳನ್ನು ಮಾತ್ರವೇ ಕರೆಯಬೇಡ, ನಿನಗೆ ಮುಯ್ಯಿಗೆ ಮುಯ್ಯಿ ತೀರಿಸಲು ಆಗದವರನ್ನು ಸಹ ಆಮಂತ್ರಿಸು.

**13-14** ಫರಿಸಾಯನು ಒಂದಿಲ್ಲಾ ಒಂದು ರೀತಿಯಲ್ಲಿ ತಾನು ಮಾಡಿದ್ದಕ್ಕೆ ಪ್ರತಿಯಾಗಿ ಮಾಡಬಲ್ಲವರಾದ ಅಥಿತಿಗಳನ್ನು ಮಾತ್ರವೇ ಆಮಂತ್ರಿಸಿದ್ದನೆಂದು ಯೇಸುವಿಗೆ ತಿಳಿದಿತ್ತು. ಆತನು ಜನರು ಅಮಂತ್ರಿಸುವದರ ಉದ್ದೇಶವು ಯಾವದಾದರೂ ಉಪಕಾರ ಅಥವಾ ಪ್ರಯೋಜನವನ್ನು ಪಡೆದುಕೊಳ್ಳುವದಾಗಿತ್ತು. ಆದರೆ ಯೇಸು ಅವನಿಗೆ, ನೀನು ದೇವರಿಂದ ಆಶಿರ್ವಾದ ಹೊಂದಲು ಬಯಸುವದಾದರೆ ನಿನಗೆ ಪ್ರತಿಯಾಗಿ ಮಾಡಲು ಅಶಕ್ತರಾದವರನ್ನು ಅಮಂತ್ರಿಸು. ನೀನು ಹಾಗೆ ಮಾಡುವದಾದರೆ ನೀತಿವಂತರ ಪು ನರುಥ್ಥಾನದಲ್ಲಿ [32] ದೇವರೇ ನಿನಗೆ ಪ್ರತಿಯಾಗಿ ಮಾಡುವನು.

ಯೇಸುವಿನ ಅರ್ಥವೇನೆಂದರೆ: ನಾವು ಈ ಜೀವನದಲ್ಲಿ ಪ್ರತಿಫಲ ಹೊಂದಬೇಕು ಅಥವಾ ಪ್ರತಿಯಾಗಿ ಮಾಡಲ್ಪಡಬೇಕೆಂಬದಕ್ಕಾಗಿ ಕಾರ್ಯಗಳನ್ನು ಮಾಡುವದಾದರೆ ನಾವು ಪ್ರತಿಫಲವನ್ನು ಹೊಂದಿಯೇ ಇದ್ದವೇ. ಪರಲೋಕದಲ್ಲಿ ದೇವರಿಂದ ನಾವು ಯಾವ ಪ್ರತಿಫಲವನ್ನು ಹೊಂದುವದಿಲ್ಲ (ಮತ್ತಾಯ 6:1-4 ಮತ್ತು ವ್ಯಾಖ್ಯಾನ ನೋಡಿರಿ). ಮನುಷ್ಯನಿಂದ ಪ್ರತಿಫಲವನ್ನು ಸ್ವೀಕರಿಸುವದಕ್ಕಿಂತಲೂ ದೇವರಿಂದ ಸ್ವೀಕರಿಸುವದು ಎಷ್ಟೋ ಉತ್ತಮವಾದದ್ದು. ಈ ಲೋಕದ ಪ್ರತಿಫಲಗಳು ಇಲ್ಲದಾಗುವವು . ಆದರೆ ದೇವರಿಂದ ಬರುವ ಪ್ರತಿಫಲವು ಸದಾಕಾಲ ಇರುವದು. ನಾವು ಮಾಡುವ ಪ್ರತಿಯೊಂದು ಒಳ್ಳೆಯ ಕಾರ್ಯವು ಪರಲೋಕದಲ್ಲಿ ದಾಖಲಾಗುತ್ತದೆ. ನಾವು ಅದಕ್ಕೆ ಪ್ರತಿಫಲ ಹೊಂದುವೆವು (ಮತ್ತಾಯ 16:27). ನಾವು ಬಡವರನ್ನು, ಊನವಾದವರು, ಕುಂಟರು, ಕುರುಡರು ಇಂಥವರನ್ನು ಅಮಂತ್ರಿಸುವಾಗ, ನಾವು ಸ್ವತಃ ಕ್ರಿಸ್ತನನ್ನೇ ಆಮಂತ್ರಿಸುವವರಾಗಿರುತ್ತೇವೆ (ಮತ್ತಾಯ 25:40). ಮತ್ತು ಆತನು ನಮಗೆ ಪ್ರತಿಫಲ ಕೊಡದಿರನು. ಇನ್ನು ಎರಡು ಸಂಗತಿಗಳನ್ನು ಕುರಿತು ಪ್ರಸ್ತಾಪಿಸುವದು ಅವಶ್ಯವಾದದ್ದು. ಮೊದಲನೆಯದಾಗಿ, ಶ್ರೀಮಂತ ಸ್ನೇಹಿತರನ್ನು ಮತ್ತು ನೆರೆಯವರನ್ನು ಅಮಂತ್ರಿಸುವದರಲ್ಲಿ ತಪ್ಪೇನಿಲ್ಲ. ಐಶ್ವರ್ಯ ವಂತರಿಗೆ ಸಹ ರಕ್ಷಣೆ ಆಗತ್ಯವಿದೆ. ಅವರಿಗೆ ಪ್ರೀತಿಯ ಅಗತ್ಯವಿರುತ್ತದೆ. ಆದರೆ ನಾವು ಅವರಿಂದ ಯಾವ ಲಾಭ ಪಡೆದುಕೊಳ್ಳಬಹುದೆಂಬದಕ್ಕಾಗಿ ಅಲ್ಲ ಆದರೆ ನಾವು ಅವರನ್ನು ಪ್ರೀತಿಸುತ್ತೇವೆಂಬ ಕಾರಣಕ್ಕಾಗಿ ಅವರನ್ನು ಅಮಂತ್ರಿಸಬೇಕು. ಎರಡನೆಯದಾಗಿ, ನಾವು ಪರಲೋಕದಲ್ಲಿ ಪ್ರತಿಫಲ ಹೊಂದುತ್ತೇವೆ ಎಂಬುದಕ್ಕಾಗಿ ಮಾತ್ರ ನಾವು ಬಡವರನ್ನು ಅಮಂತ್ರಿಸಬಾರದು. ಅದು ಸ್ವಾರ್ಥವಾಗಿದೆ. ನಾವು ದೇವರನ್ನು ಪ್ರೀತಿಸುವೆವೆಂಬ ಕಾರಣಕ್ಕಾಗಿ ಅವರನ್ನು ಅಮಂತ್ರಿಸಬೇಕು. ಕ್ರಿಸ್ತನು ನಮ್ಮನ್ನು ಹೇಗೆ ಆಮಂತ್ರಿಸಿದನು, ಕರೆದನು, ನಮ್ಮನ್ನು ಕ್ಷಮಿಸಿದನು, ಪ್ರೀತಿಸಿದನು ಎಂಬದನ್ನು ನಾವು ಜ್ಞಾಪಿಸಿಕೊಂಡು ಅಲ್ಪರಾದ ಆತನ ಸಹೋದರರಿಗೆ ಅದನ್ನೇ ಮಾಡುವವರಾಗಿರಬೇಕು. ಪ್ರಿಯರೇ, ದೇವರು ನಮ್ಮನ್ನು ಎಷ್ಟೋ ಪ್ರೀತಿಸಿದ್ದರಿಂದ ನಾವು ಸಹ ಒಬ್ಬರನ್ನೊಬ್ಬರು ಪ್ರೀತಿಸುವ ಹಂಗಿನಲ್ಲಿದ್ದೇವೆ (1 ಯೋಹಾನ 4:11).

## ದೊಡ್ಡ ಔತಣದ ಸಾಮ್ಯ (14:15-24)

**15** ಯೆಹೂದ್ಯರು ಹಲವಾರು ವೇಳೆ ದೇವರ ರಾಜ್ಯವನ್ನು ಒಂದು ದೊಡ್ಡ, ಆನಂದದಾಯಕ ಔತಣಕ್ಕೆ ಹೋಲಿಸಿದರು (ಮತ್ತಾಯ 22:1-2) ಯೇಸು ಊಟಕ್ಕೆ ಯಾರನ್ನು ಅಮಂತ್ರಿಸಬೇಕು ಎಂಬುದರ ವಿಷಯವಾಗಿ ಮಾತನಾಡುವದನ್ನು ಮುಗಿಸಿದ ಮೇಲೆ (ವಚನ 12-13). ಆಲಿಸುತ್ತಿದ್ದವರಲ್ಲಿ ಒಬ್ಬನು "ದೇವರ ರಾಜ್ಯದಲ್ಲಿ ಊಟ ಮಾಡುವವನೇ ಧನ್ಯನು" ಎಂದು ಹೇಳಿದನು. ಆತನ ಮಾತಿನ ತಾತ್ಪರ್ಯವೇನಾಗಿತ್ತೆಂದರೆ: ಯೆಹೂದ್ಯರಾದ ನಾವು ಧನ್ಯರು ಯಾಕೆಂದರೆ ನಾವು ಮಾತ್ರವೇ ಆ ಊಟಕ್ಕೆ ಅಮಂತ್ರಿಸಲ್ಪಡುತ್ತೇವೆ.

**16-17** ಆ ವ್ಯಕ್ತಿಗೆ ಉತ್ತರಿಸುವದಕ್ಕಾಗಿ ಯೇಸು ಇನ್ನೊಂದು ಸಾಮ್ಯವನ್ನು ಹೇಳುತ್ತಾನೆ. ಯೆಹೂದ್ಯರು ದೇವರ ಊಟದಲ್ಲಿ ತನ್ನ ಸ್ಥಾನಗಳನ್ನು ಕಳೆದುಕೊಳ್ಳಲಿದ್ದರೆಂಬದನ್ನು ಯೆಹೂದ್ಯರಿಗೆ ತೋರಿಸಿಕೊಡಲು ಯೇಸು ಈ ಸಾಮ್ಯಾವನ್ನು ಹೇಳಿದನು (ಮತ್ತಾಯ 22:1-14 ಮತ್ತು ವ್ಯಾಖ್ಯಾನ ನೋಡಿರಿ). ಒಬ್ಬಾನೊಬ್ಬ ಮನುಷ್ಯನು–ಅನೇಕರನ್ನು ಊಟಕ್ಕೆ ಕರೆಸಿದನು. ಆ ಮನುಷ್ಯನು ದೇವರಾಗಿದ್ದಾನೆ ಮತ್ತು ಅಥಿತಿಗಳು ಯೆಹೂದ್ಯರಾಗಿದ್ದಾರೆ. ದೇವರು ಹಳೆ ಒಡಂಬಡಿಕೆಯ ಪ್ರವಾದಿಗಳ ಮೂಲಕ ಮೊದಲು ಯೆಹೂದ್ಯರನ್ನು ಆಮಂತ್ರಿಸಿದ್ದನು. ನಂತರ ಅವನು ಅವರನ್ನು ಅಂತಿಮವಾಗಿ ಇನ್ನೊಂದು ಸಾರಿ ಕರೆದನು. ಊಟವು ಈಗ ಪ್ರಾರಂಭವಾಗಲು ಸಿದ್ಧವಿದೆ ಎಂದು ಯೆಹೂದ್ಯರಿಗೆ ಹೇಳಲು ದೇವರು ತನ್ನ ಸೇವಕನಾದ ಕ್ರಿಸ್ತನನ್ನು ಕಳುಹಿಸಿದನು.

**18-20** ಆದರೆ ಆತನು ಹೇಳಿಕಳುಹಿಸಿದ ಎಲ್ಲಾ ಅಥಿತಿಗಳಿಗೂ ಬರಲಿಕ್ಕೆ ಆಗಲಿಲ್ಲ. ಅವರು ಬೇರೆ ಬೇರೆ ಕಾರಣಗಳನ್ನು ನೀಡಿದರು. ಈ ಕಾರಣಗಳು ನಿಜವಾದವುಗಳು, ಸುಳ್ಳಾಗಿರುವದಿಲ್ಲ, ಆದರೆ ಅವುಗಳು ಉತ್ತಮ ಕಾರಣಗಳಾಗಿರಲಿಲ್ಲ. ಪ್ರತಿಯೊಂದು ಸಂದರ್ಭದಲ್ಲು ಆ ಅಥಿತಿಗಳು ಇಷ್ಟಪಟ್ಟಿದ್ದರೆ ಬರಬಹುದಿತ್ತು. ಆದರೆ ಅದಕ್ಕೆ ಬದಲಾಗಿ ಅವರು ದೇವರ ಆಮಂತ್ರಣಕ್ಕಿಂತಲೂ ಮುಂಚೆ ತಮ್ಮ ಇತರ ಸಂಗತಿಗಳಿಗೆ ಪ್ರಾಮುಖ್ಯಕೊಟ್ಟರು.

**21-23** ಆದುದರಿಂದ ಯೆಹೂದ್ಯರು ಊಟಕ್ಕೆ ಬರುವದಿಲ್ಲಾ ಮತ್ತು ಅವರು ಸೇವಕನಾದ ಕ್ರಿಸ್ತನ ಅಂತಿಮ ಕರೆಯನ್ನು ಕೇಳುವದಿಲ್ಲವಾದ್ದರಿಂದ ದೇವರು ಅವರ ಸ್ಥಾನದಲ್ಲಿ ಅನ್ಯಜನರನ್ನು ಆಮಂತ್ರಿಸಿದನು (ಮತ್ತಾಯ 21:43 ನೋಡಿರಿ). ಆತನು ಅವರನ್ನು "ಮನೆ ತುಂಬಲಿ" ಎಂಬದಕ್ಕಾಗಿ ಆಮಂತ್ರಿಸಿದನು (ವಚನ 23). ಬರಲು ನಿರಾಕರಿಸಿದವರನ್ನು ಹೊರತುಪಡಿಸಿ ದೇವರ ಊಟದಿಂದ ಯಾರೊಬ್ಬರು ಕೈಬಿಡಲ್ಪಟ್ಟಿರುವದಿಲ್ಲ.

**24** ನಂತರ ಯೇಸು ಸಾಮ್ಯವನ್ನು ಆಲಿಸುತ್ತಿದ್ದ ಯೆಹೂದ್ಯರಿಗೆ "ಊಟಕ್ಕೆ ಹೇಳಿಸಿಕೊಂಡವರಲ್ಲಿ ಒಬ್ಬನಾದರೂ ನಾನು ಮಾಡಿಸಿದ ಅಡಿಗೆಯ ಸವಿಯನ್ನು ನೋಡಬಾರದು ಎಂದು ನಿಮಗೆ ಹೇಳುತ್ತೇನೆ" ಎಂದನು. ಊಟವು ಯೇಸುವಿನ ಊಟವಾಗಿತ್ತು. ಅದು ಆತನ ಗೌರವಕ್ಕೆ ಮಾಡಲ್ಪಟ್ಟದ್ದಾಗಿತ್ತು. ಅದು ಆತನ ಮದುವೆಯ ಊಟವಾಗಿತ್ತು (ಪ್ರಕ 19:7-9 ಮತ್ತು ವ್ಯಾಖ್ಯಾನ ನೋಡಿರಿ).

"ದೇವರ ರಾಜ್ಯದಲ್ಲಿ ಊಟ ಮಾಡುವವನೇ ಧನ್ಯನು" ಎಂದು ಈ ಮುಂಚೆ ಯೆಹೂದ್ಯನೊಬ್ಬನು ಸರಿಯಾಗಿಯೇ ಹೇಳಿದ್ದನು (ವಚನ 15). ಆದರೆ ಆ ಕ್ಷಣದಲ್ಲಿಯೇ ಅವನು ಆಮಂತ್ರಣವನ್ನು ನಿರಾಕರಿಸುತ್ತಿದ್ದಾನೆ ಆತನು ಯೇಸುವನ್ನು ತಿರಸ್ಕರಿಸುತ್ತಿದ್ದನಾದ್ದರಿಂದ ಊಟದಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಕಳೆದುಕೊಳ್ಳುತ್ತಿದ್ದಾನೆ. ಯೇಸು ಮೊದಲು ಈ ಸಾಮ್ಯವನ್ನು ಫರಿಸಾಯನ ಮನೆಯಲ್ಲಿದ್ದ ಯೆಹೂದ್ಯರಿಗೆ ಹೇಳಿದನಾದರೂ, ಇದು ನಮಗಾಗಿ ಸಹ ಬರೆಯಲ್ಪಟ್ಟಿದೆ ಎಂಬದನ್ನು ನಾವು ನೆನಪಿನಲ್ಲಿಟ್ಟಕೊಳ್ಳಬೇಕು. ಇದು ಯೆಹೂದ್ಯನಾಗಲಿ ಅಥವಾ ಅನ್ಯಜನರಾಗಲಿ ಕ್ರಿಸ್ತನಿಂದ ಊಟಕ್ಕೆ ಆಮಂತ್ರಿಸಲ್ಪಟ್ಟ ಪ್ರತಿಯೊಬ್ಬರಿಗಾಗಿಯೂ ಬರೆಯಲ್ಪಟ್ಟಿದೆ. ಕ್ರಿಸ್ತನ ಮಾತುಗಳನ್ನು ಆಲಿಸುವ ಎಲ್ಲರೂ ಆಮಂತ್ರಿಸಲ್ಪಟ್ಟಿದ್ದಾರೆ. ಕ್ರಿಸ್ತನು ಈ ದಿನ ನಮಗೆ ಹೇಳುತ್ತಿರುವದೇನೆಂದರೆ: "ನನ್ನ ಔತಣಕ್ಕೆ ಬಾ" ನಮ್ಮ ಉತ್ತರವೇನು? ನಾನು ಸಹ ಯೆಹೂದ್ಯರಂತಿದ್ದು ಇತರ ಸಂಗತಿಗಳಿಗೆ ಮೊದಲು ಪ್ರಾಮುಖ್ಯತೆ ನೀಡಿತ್ತಿದ್ದೇವೊ? ಒಂದು ವೇಳೆ ನಾವು ಹಾಗಿರುವದಾದರೆ ನಾವು ಸಹ ಊಟದಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಕಳೆದುಕೊಳ್ಳುತ್ತೇವೆ. ಸ್ನೇಹಿತರೇ, ನಮ್ಮ ಪ್ರಾಪಂಚಿಕ ಚಿಂತೆಗಳನ್ನು ಬಿಟ್ಟು ಬಿಡೋಣ. ನಮ್ಮ ಹೊಲಗಳನ್ನು, ನಮ್ಮ ಎತ್ತುಗಳು, ನಮ್ಮ ಹೆಂಡತಿಯರನ್ನು ಬಿಟ್ಟಬಿಡೋಣ (ಮತ್ತಾಯ 10:37, ಮಾರ್ಕ 10:29-31 ಮತ್ತು ವ್ಯಾಖ್ಯಾನ ನೋಡಿರಿ). ನಾವು ಇನ್ನೊಂದು ದಿನ ಅವುಗಳನ್ನು ನೋಡಿಕೊಳ್ಳಬಹುದು. ಕ್ರಿಸ್ತನು ನಮ್ಮನ್ನು ಈಗ ಕರೆಯುತ್ತಾನೆ. ನಮ್ಮ ಉತ್ತರ ಏನಾಗಿರಬಹುದು. ದೇವರು ಆಮಂತ್ರಿಸದೇಯೇ ಯಾವನೂ ಪರಲೋಕವನ್ನು ಪ್ರವೇಶಿಸಲಾರನು. ಆದರೆ ಮನುಷ್ಯನು ಆಮಂತ್ರಣವನ್ನು ನಿರಾಕರಿಸಬಹುದು. ಯಾವ ಮನುಷ್ಯನು ತನ್ನನ್ನು ರಕ್ಷಿಸಿಕೊಳ್ಳಲಾರನು, ಆದರೆ ಮನುಷ್ಯನು ತನ್ನನ್ನು ದಂಡನೆಗೊಳಪಡಿಸಿಕೊಳ್ಳಲು ಸಾಧ್ಯವಿದೆ. ಕ್ರಿಸ್ತನು ಪ್ರಾರಂಭದಲ್ಲಿ ನಮ್ಮನ್ನು ತಿರಸ್ಕರಿಸುವದಿಲ್ಲ. ನಾವೇ ಕ್ರಿಸ್ತನನ್ನು ತಿರಸ್ಕರಿಸುತ್ತೇವೆ. ಯೇಸು "——**ನನ್ನ ಬಳಿಗೆ ಬರುವವನನ್ನು ನಾನು ಎಂದಿಗೂ ತಳ್ಳಿಬಿಡುವದೇ ಇಲ್ಲ**" ಎಂದನು (ಯೋಹಾನ 6:37). ಯಾವನು ಮಗನಲ್ಲಿ ನಂಬಿಕೆಯಿಡುತ್ತಾನೋ ಅವನು ನಿತ್ಯಜೀವ ಹೊಂದಿದ್ದಾನೆ. ಆದರೆ ಮಗನನ್ನು ತಿರಸ್ಕರಿಸುವವನು ಜೀವವನ್ನು ಕಾಣುವದೇ ಇಲ್ಲ. ದೇವರ ಕೋಪವು ಅವನ ಮೇಲೆ ನೆಲೆಯಾಗಿರುವದು (ಯೋಹಾನ 3:36).

ದೇವರು ತನ್ನ ಔತಣಕ್ಕಾಗಿ ಪುರುಷ ಮತ್ತು ಸ್ತ್ರೀಯರನ್ನು ಕರೆಯುವದಕ್ಕೆ ಕ್ರಿಸ್ತನನ್ನು ಲೋಕಕ್ಕೆ ಕಳುಹಿಸಿದಂತೆಯೇ ಕ್ರಿಸ್ತನು ನಮ್ಮನ್ನು ಸಹ ಆತನ ಔತಣಕ್ಕೆ ಇನ್ನು ಇತರರನ್ನು ಕರೆಯುವದಕ್ಕೆ ಲೋಕದೊಳಗೆ ಕಳುಹಿಸುತ್ತಾನೆ (ಯೋಹಾನ 17:18). ನಾವು ಕೊನೆಯ ಬಾರಿಗೆ ಯಾರನ್ನಾದರೂ ಕ್ರಿಸ್ತನ ಊಟಕ್ಕೆ ಆಮಂತ್ರಿಸಿದ್ದು ಯಾವಾಗ?

## ಒಬ್ಬ ಶಿಷ್ಯನಾಗಿರುವದರ ವೆಚ್ಚ (14:25-35)

(ಮತ್ತಾಯ 5:13, 10:37, 16:24, ಮಾರ್ಕ 8:34, 9:50)

**25-26** ಮತ್ತಾಯ 10:37, ಯೋಹಾನ 12:25 ಮತ್ತು ವ್ಯಾಖ್ಯಾನ ನೋಡಿರಿ.

**27** ಮಾರ್ಕ 8:34 ಮತ್ತು ವ್ಯಾಖ್ಯಾನ ನೋಡಿರಿ.

**28-30** ಯೇಸು ನಮ್ಮನ್ನು ತನ್ನ ಔತಣಕ್ಕೆ ಕರೆದಿರುತ್ತಾನೆ. ಆತನು ತನ್ನನ್ನು ಹಿಂಬಾಲಿಸಲು ನಮ್ಮನ್ನು ಕರೆದಿರುತ್ತಾನೆ. ಆದರೆ ಆತನು ನಮಗೊಂದು ಎಚ್ಚರಿಕೆಯನ್ನು ಕೊಡುತ್ತಾನೆ. ಒಬ್ಬ ಶಿಷ್ಯನಾಗಿರುವದು ಅಷ್ಟು ಸುಲಭವಾಗಿರುವದಿಲ್ಲ ಎಂಬದನ್ನು ಆತನು ನಮಗೆ ಜ್ಞಾಪಕ ಪಡಿಸುತ್ತಾನೆ. ಅನೇಕ ಜನರು ಶೀಘ್ರವೇ ಯೇಸುವಿಗೆ "ನಾನು ನಿನ್ನನ್ನು ಹಿಂಬಾಲಿಸುತ್ತೇನೆ" ಎಂದು ಹೇಳುತ್ತಾರೆ, ಆದರೆ ತಾವು ಏನು ಹೇಳುತ್ತಿದ್ದಾರೆಂದು ಅವರಿಗೆ ತಿಳಿಯದು (ಮತ್ತಾಯ 18-19–20, ಲೂಕ 9:57-58 ಮತ್ತು ವ್ಯಾಖ್ಯಾನ ನೋಡಿರಿ). ಅವರು ಕ್ರಿಸ್ತನ್ನು ಹಿಂಬಾಲಿಸುವದರ ಸಮಸ್ಯೆ ಮತ್ತು ಪರಿಶ್ರಮಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿರುವದಿಲ್ಲ.

ನಾವು ಜಿಗಿದು ಯೇಸುವನ್ನು ಹಿಂಬಾಲಿಸುವದಕ್ಕೆ ಮುಂಚೆ ಒಬ್ಬ ಶಿಷ್ಯನಾಗಿರುವದರ ವೆಚ್ಚವನ್ನು ಲೆಕ್ಕ ಮಾಡಬೇಕೆಂಬದನ್ನು ತೋರಿಸಲು ಯೇಸು ಎಂಡು ಉದಾಹರಣೆಗಳನ್ನು ಕೊಡುತ್ತಾನೆ. ಮೊದಲನೆಯ ಉದಾಹರಣೆಯು ಒಂದು ಬುರುಜನ್ನು ಕಟ್ಟುವ ವ್ಯಕ್ತಿಯ ಕುರಿತಾದದ್ದು. ಆತನು ಕಟ್ಟಲು ಪ್ರಾರಂಭಿಸುವದಕ್ಕೆ ಮುಂಚೆ ಅದರ ಖರ್ಚನ್ನು ತಾನು ತೀರಿಸುವದಕ್ಕೆ ಆಗುತ್ತದೆಂಬುದನ್ನು ಖಚಿತಪಡಿಸಿಕೊಳ್ಳುತ್ತಾನೆ. ಯಾಕೆಂದರೆ ಆತನು ಕಾರ್ಯವನ್ನು ಪ್ರಾರಂಬಿಸುವದಾದರೆ ಆತನು ಅದನ್ನು ಪೂರ್ಣಗೊಳಿಸಬೇಕು. ಇಲ್ಲವಾದರೆ ಆತನು ಹಾಸ್ಯಕ್ಕೆ ಗುರಿಯಾಗುವನು. ಅದೇ ರೀತಿಯಲ್ಲಿ, ಒಮ್ಮೆ ನಾವು ಯೇಸುವನ್ನು ಹಿಂಬಾಲಿಸಲು ಪ್ರಾರಂಭಿಸಿದರೆ ಇನ್ನು ತಿರಿಗಿನೋಡುವದಾಗಲಿ, ನಿಂತುಕೊಳ್ಳುವದಾಗಲಿ ಸಾದ್ಯವಿಲ್ಲ (ಮತ್ತಾಯ 8:21-22, ಲೂಕ 9:61-62 ಮತ್ತು ವ್ಯಾಖ್ಯಾನ ನೋಡಿರಿ).

**31-32** ಎರಡನೆಯ ಉದಾಹರಣೆಯು ಯುದ್ದಕ್ಕೆ ಹೊರಡಲಿದ್ದ ಅರಸನ ಕುರಿತಾಗಿದೆ. ಆತನು ದಾಳಿ ಮಾಡುವದಕ್ಕೆ ಮುಂಚೆ ಆತನು ತನ್ನ ಸ್ವಂತ ಸೈನಿಕರನ್ನು ಮತ್ತು ವೈರಿಯ ಸೈನಿಕರನ್ನೂ ಲೆಕ್ಕಿಸಬೇಕು. ಆತನ ಬಳಿಯಲ್ಲಿ ಯುದ್ದವನ್ನು ಜಯಿಸುವಷ್ಟು ಸೈನಿಕರು ಇಲ್ಲದಿದ್ದರೆ ಅವನು ದಾಳಿಮಾಡದಿರುವದೇ ಉತ್ತಮ! ಕ್ರಿಸ್ತನ ಶಿಷ್ಯರ ವಿಷಯದಲ್ಲಿಯೂ ಇದು ಅಷ್ಟೇ ಅನ್ವಯವಾಗುತ್ತದೆ. ನಾವು ಕ್ರಿಸ್ತನನ್ನು ಹಿಂಬಾಲಿಸುವಾಗ ನಾವು ಪಾಪದ ವಿರುದ್ಧದ, ಶೋಧನೆಯ ವಿರುದ್ಧ ಮತ್ತು ಸೈತಾನನ ವಿರುದ್ಧದ ಯುದ್ದದಲ್ಲಿ ಪ್ರವೇಶಿಸುವವರಾಗಿದ್ದೇವೆ. ನಾವು ಬಹಳ ಕಡಿಮೆ ಸೈನಿಕರೊಂದಿಗೆ ಹೋಗದಿರೋಣ! ಅಲ್ಲದೆ ಯುದ್ದದ ಸಂಕಷ್ಟಗಳನ್ನು ಅನುಭವಿಸಲು ಸಿದ್ದರಾಗಿರಬೇಕು ಇಲ್ಲವಾದರೆ ನಾವು ಸೋಲಿಸಲ್ಪಡುವೆವು.

**33** ಕ್ರಿಸ್ತನ ಶಿಷ್ಯನಾಗಿರಬೇಕಾದರೆ ನಾವು ವೆಚ್ಚವನ್ನು ಲೆಕ್ಕಿಸುವದು ಮಾತ್ರವೇ ಅಲ್ಲ. ನಾವು ಅದನ್ನು ಭರಿಸುವವರೂ ಆಗಿರಬೇಕು. ನಾವು ಕ್ರಿಸ್ತನಿಗೋಸ್ಕರ ಎಲ್ಲವನ್ನೂ ಸಂತೋಷವಾಗಿ ಕೊಡುವದಕ್ಕೆ ಸಿದ್ದರಾಗಿರಬೇಕು: ಐಶ್ವರ್ಯ, ಸುಖ, ಕುಟುಂಬ, ಜೀವನವನ್ನು ಸಹ ನೀಡುವದಕ್ಕೆ ಸಿದ್ದರಿರಬೇಕು. ಇಲ್ಲವಾದರೆ ನಾವು ಕ್ರಿಸ್ತನ ಶಿಷ್ಯರಾಗಿರಲು ಸಾದ್ಯವಿಲ್ಲ (ಮತ್ತಾಯ 19:37, ಮಾರ್ಕ 8:34, ಲೂಕ 14:26-27 ನೋಡಿರಿ).

**34-35** ಮತ್ತಾಯ 13, ಮಾರ್ಕ 9:50 ಮತ್ತು ವ್ಯಾಖ್ಯಾನ ನೋಡಿರಿ.

---

## ಅಧ್ಯಾಯ - 15

### ಕಳೆದುಹೋದ ಕುರಿಯ ಸಾಮ್ಯ (15-17)

(ಮತ್ತಾಯ 18-12-14)

**1** ಯೇಸು ಎಲ್ಲೆಡೆಯೂ ಭೋಧಿಸುತ್ತಾ ಸಂಚರಿಸುತ್ತಿದ್ದಂತೆ ಆತನು ಮಾರ್ಗತಪ್ಪಿದವರಿಗೂ, ಪಾಪದ ಬಂಧನದಲ್ಲಿ ಬಿದ್ದಿರುವವರಿಗೂ ನಿರೀಕ್ಷೆ ಮತ್ತು ಕ್ಷಮಾಪಣೆಯನ್ನು ಉಂಟು ಮಾಡಿದನು. "ದೇವರ ಕಡೆಗೆ ತಿರಿಗಿಕೊಂಡು, ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ನನ್ನಲ್ಲಿ ನಂಬಿಕೆಯಿಡಿರಿ, ಆಗ ನೀವು ರಕ್ಷಣೆ ಹೊಂದುವಿರಿ" ಎಂದು ಆತನು ಅವರಿಗೆ ಹೇಳಿದನು (ಅ.ಕೃತ್ಯ 2:38 ಮತ್ತು ವ್ಯಾಖ್ಯಾನ ನೋಡಿರಿ). ಮತ್ತು ಹೀಗೆ ಆತನು ಹೋದಲೆಲ್ಲಾ ಸುಂಕದವರು ಮತ್ತು ಪಾಪಿಗಳು ಆತನ ಮಾತುಗಳನ್ನು ಕೇಳಲು ಸೇರಿ ಬರುತ್ತಿದ್ದರು (ಮಾರ್ಕ 2:15 ಮತ್ತು ವ್ಯಾಖ್ಯಾನ ನೋಡಿರಿ).

**2** ಆದರೆ ಫರಿಸಾಯರು ಮತ್ತು ಶಾಸ್ತ್ರಿಗಳು ಆತನು ಅಂತಹ ಪಾಪಿಗಳೊಂದಿಗೆ ಸೇರಿಕೊಳ್ಳುತ್ತಾ–ನೆಂಬದಕ್ಕಾಗಿ ಆತನ ವಿರುದ್ಧವಾಗಿ ಗುಣಗುಟ್ಟಿದರು (ಮಾರ್ಕ 2:16-17 ಮತ್ತು ವ್ಯಾಖ್ಯಾನ ನೋಡಿರಿ). ಆದುದರಿಂದ ಯೇಸು ಪಾಪಿಗಳನ್ನು ತನ್ನ ಬಳಿಗೆ ಬರುವದಕ್ಕೆ ಏಕೆ ಸ್ವಾಗತಿಸಿದನೆಂಬುದನ್ನು ಅವರಿಗೆ ತೋರಿಸಲು ಆತನು ಮೂರು ಸಾಮ್ಯಗಳನ್ನು ಹೇಳುತ್ತಾನೆ: ಕಳೆದು ಹೋದ ಕುರಿಯ ಸಾಮ್ಯ(3-7), ಕಳೆದು ಹೋದ ನಾಣ್ಯದ ಸಾಮ್ಯ(8-10) ಮತ್ತು ತಪ್ಪಿಹೋದ ಮಗನ ಸಾಮ್ಯ (ವಚನ 11-32).

**3-7** ಮತ್ತಾಯ 18:12-14 ಮತ್ತು ವ್ಯಾಖ್ಯಾನ ನೋಡಿರಿ.

### ಕಳೆದು ಹೋದ ನಾಣ್ಯದ ಸಾಮ್ಯ (15:8-10)

**8-10** ಈ ಸಾಮ್ಯವು ಮತ್ತು ಕಳೆದು ಹೋದ ಕುರಿಯ ಸಾಮ್ಯದ ಭೋಧನೆಯು ಒಂದೇ ಆಗಿದೆ (ವಚನ 3-7) ಇದು ಮಾರ್ಗವನ್ನು ಕಳೆದುಕೊಂಡಿರುವ ವಿಶ್ವಾಸಿಗಳಿಗೂ ಮತ್ತು ಇನ್ನು ಮಾರ್ಗವನ್ನು ಕಂಡುಕೊಳ್ಳುವ ಅವಿಶ್ವಾಸಿಗಳಿಗೂ

ಅನ್ವಯವಾಗುತ್ತದೆ. ಈ ಎರಡು ಸಾಮ್ಯಗಳು ದೇವರು ಕಳೆದು ಹೋಗಿರುವವರನ್ನು ಹುಡುಕುವ ಪ್ರೀತಿವುಳ್ಳ ತಂದೆಯಾಗಿದ್ದಾನೆಂದು ಕಲಿಸುತ್ತದೆ. ಪ್ರಪಂಚದಲ್ಲಿರುವ ಬೇರೆ ಯಾವ ಧರ್ಮವು ಸಹ ಮನುಷ್ಯರನ್ನು ಹುಡುಕುವ ದೇವರ ಕುರಿತು ಬೋಧಿಸುವದಿಲ್ಲ. ದೇವರು ನಮ್ಮನ್ನು ಹುಡುಕಲು ತನ್ನ ಸ್ವಂತ ಮಗನನ್ನು ಭೂಮಿಗೆ ಕಳುಹಿಸಿ ಕೊಟ್ಟನು (ಲೂಕ 19-10). ಕ್ರಿಸ್ತನು ಕಳೆದು ಹೋದ ಕುರಿಯನ್ನು ಕಂಡುಕೊಳ್ಳಲು ತನ್ನ ಪ್ರಾಣವನ್ನು ನೀಡಿದ ಕುರುಬನಂತಿದ್ದಾನೆ (ಯೋಹಾನ 10-11). ನಮ್ಮನ್ನು ಹುಡುಕಿ ರಕ್ಷಿಸುವದಕ್ಕಾಗಿ ದೇವರು ತನ್ನ ಸ್ವಂತ ಮಗನ ರಕ್ತವನ್ನು ಸುರಿಸಿದನು (ಮಾರ್ಕ 10:45, 14-24, ಎಫೆಸ 2:13) ನಾವು ಕ್ರಯಕ್ಕೆ ಕೊಂಡುಕೊಳ್ಳಲ್ಪಟ್ಟವರು. ಆ ಕ್ರಯವು ಕ್ರಿಸ್ತನ ರಕ್ತವೇ ಆಗಿದೆ (ಕೊರಿಂಥ 6:20). ದೇವರು ಆ ಬೃಹತ್ ಕ್ರಯವನ್ನು ನೀಡಲು ಮನಸ್ಸುಳ್ಳವನಾಗಿರುವದಾದರೆ ಆತನ ದೃಷ್ಟಿಯಲ್ಲಿ ಪ್ರತಿಯೊಬ್ಬ ಮಾನವರು ಎಷ್ಟು ಅಮೂಲ್ಯರೆಂಬುದನ್ನು ಯೋಚಿಸಿರಿ. ಈ ಕಾರಣದಿಂದಲೇ ಒಬ್ಬ ಪಾಪಿಯು ದೇವರ ಕಡೆಗೆ ತಿರಿಗಿಕೊಳ್ಳುವಾಗ ಪರಲೋಕದಲ್ಲಿ ಅಂತಹ ಸಂಭ್ರಮ ಇರುತ್ತದೆ (ವಚನ 7).

## ತಪ್ಪಿಹೋದ ಮಗನ ಸಾಮ್ಯ (15:11-32)

**11-16** ಬಳಿಕ ಯೇಸು, ತನ್ನ ಆಸ್ತಿಯನ್ನು ತೆಗೆದುಕೊಂಡು ದೂರದ ದೇಶಕ್ಕೆ ಹೋಗಿ ವೆಚ್ಚಮಾಡಿದ ಕಿರಿಯ ಮಗನ ಕುರಿತಾದ ಮೂರನೆಯ ಸಾಮ್ಯವನ್ನು ಹೇಳಿದನು. ಆ ಮಗನು ತನ್ನೊಳಗೆ "ಈಗ, ನಾನು ಸ್ವತಂತ್ರನು, ನನಗೆ ಇಷ್ಟವಾದದ್ದನ್ನು ಮಾಡುತ್ತೇನೆ. ಇನ್ನು ನಾನು ನನ್ನ ತಂದೆಗೆ ವಿಧೇಯನಾಗಬೇಕಿಲ್ಲ" ಅಂದುಕೊಂಡನು. ಇಲ್ಲಿ ನಾವು ದೇವರವಿರುದ್ಧ ಮಾನವನ ಪ್ರಾಥಮಿಕ ಪಾಪವನ್ನು ನೋಡುತ್ತೇವೆ: ಅವಿಧೇಯತೆ ಮತ್ತು ಮೊಂಡುತನ, ಮಾನವನು ತನಗೆ ಇಷ್ಟವಾದದ್ದನ್ನು ಮಾಡಲಿಚ್ಛಿಸುತ್ತಾನೆ. ಆದುದರಿಂದ ಆತನು ದೇವರನ್ನು ತೊರೆಯುತ್ತಾನೆ. ಅವನು ದೂರದ ದೇಶಕ್ಕೆ ಹೋಗಿ ತನ್ನ ಜೀವಿತವನ್ನು ಪಾಪದಲ್ಲಿ ಕಳೆಯುತ್ತಾನೆ.

ಆದರೆ ಆ ಕಿರಿಯ ಮಗನಿಗೆ ಆದದ್ದೇನು? ಆತನ ತಂದೆಯು ಅವನಿಗೆ ಕೊಟ್ಟಿದ್ದ ಎಲ್ಲಾ ಆಶೀರ್ವಾದ, ಆಸ್ತಿಯೆಲ್ಲವೂ ವ್ಯರ್ಥವಾಯಿತು, ಕಳೆದು ಹೋಯಿತು. ಅವನು ತಾನು ಸ್ವತಂತ್ರನಾಗಿದ್ದೇನೆಂದು ಯೋಚಿಸಿದನು, ಆದರೆ ಬದಲಾಗಿ ಅವನು ಅದನ್ನು ಕಳೆದುಕೊಂಡನು. ಆತನು ಪಾಪಕ್ಕೆ ದಾಸನಾದನು. ಆತನು ತಂದೆಯೊಂದಿಗೆ ಜೀವನವನ್ನು ಈಗಿನ ಹಂದಿಗಳೊಂದಿಗಿನ ಜೀವಿತಕ್ಕೆ ಹೋಲಿಸಿದರೆ ಅದು ಎಷ್ಟೋ ಸ್ವತಂತ್ರವೂ, ಆನಂದಕರವೂ ಆಗಿತ್ತು!

**17** ಆಗ ಕಿರಿಯ ಮಗನಿಗೆ ಬುದ್ಧಿ ಬಂದಿತು. ಆತನ ಪರಿಸ್ಥಿತಿಯು ಅಸಂತೋಷಕರ ಮತ್ತು ತಾನು ಎಷ್ಟು ಬುದ್ಧಿಹೀನನಾಗಿದ್ದೇನೆಂಬದನ್ನು ಅವನು ಗ್ರಹಿಸಿಕೊಳ್ಳುತ್ತಾನೆ. ನಮ್ಮ ಕೆಟ್ಟ ಸ್ಥಿತಿಯನ್ನು ಗ್ರಹಿಸಿಕೊಳ್ಳುವಿಕೆಯು ಪಶ್ಚಾತಾಪಕ್ಕೆ ನಡಿಸುವ ಪ್ರಥಮ ಹೆಜ್ಜೆಯಾಗಿದೆ.

**18-19** ಬಳಿಕ ಮಗನು ತನ್ನ ಪಾಪವನ್ನು ಅರಿಕೆಮಾಡಿದನು "ನಾನು ಪರಲೋಕಕ್ಕೆ ವಿರುದ್ಧವಾಗಿ ಪಾಪಮಾಡಿದ್ದೇನೆ:". ಆಗ ಆತನು ತನ್ನ ಪಾಪದಿಂದ ವಿಮುಖನಾಗಿ ತಂದೆಯ ಬಳಿಗೆ ಹಿಂದಿರುಗಲು ನಿಶ್ಚಯಸಿದನು. ಮಗನ ಪಶ್ಚಾತಾಪವು ಈಗ ಪೂರ್ಣಗೊಂಡಿತ್ತು: ಅವನು ತನ್ನ ಪಾಪವನ್ನು ಗ್ರಹಿಸಿಕೊಂಡನು. ಅವನು ತನ್ನ ಪಾಪವನ್ನು ಒಪ್ಪಿಕೊಂಡನು, ಮತ್ತು ಅವನು ತನ್ನ ಪಾಪದಿಂದ ವಿಮುಖನಾದನು. ನಿಜವಾದ ಪಶ್ಚಾತಾಪವು ಈ ಮೂರು ಸಂಗತಿಗಳನ್ನು ಒಳಗೊಂಡಿರುವದು ಆಗತ್ಯ. ನಿಜವಾದ ಪಶ್ಚಾತಾಪವು ದೀನತೆಯನ್ನು ಒಳಗೊಂಡಿರುತ್ತದೆ. ಮಗನು ಹೀಗೆಂದನು "ಇನ್ನು ನಾನು ನಿನ್ನ ಮಗನೆನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ", ನಾನು ನಿನ್ನ ಕೂಲಿಯಾಳುಗಳಲ್ಲಿ ಒಬ್ಬನಾಗಿರುವೆನು (ವಚನ 19). ಮಗನು ತನ್ನ ತಂದೆಗೆ ಏನು ಹೇಳಲಿದ್ದಾನೆಂಬದನ್ನು ಸರಿಯಾಗಿಸಿದ್ದ ಮಾಡಿಕೊಂಡನೆಂಬ ಅಂಶವನ್ನು ಗಮನಿಸಿರಿ. ನಾವು ದೇವರ ವಿರುಧ್ಧವಾಗಿ ಅಥವಾ ಇನ್ನೊಬ್ಬ ವ್ಯಕ್ತಿಯ ವಿರುದ್ದವಾಗಿ ಪಾಪಮಾಡಿದವರಾಗಿ ಒಂದು ವೇಳೆ ಆ ಪಾಪಕ್ಕೆ ಪಶ್ಚಾತಾಪ ಪಡಲು ಇಚ್ಛಿಸುವದಾದರೆ ನಾವು ಹೇಳಬಯಸುವದನ್ನು ಸಿದ್ಧಪಡಿಸಿಕೊಳ್ಳುವದು ಉತ್ತಮವಾದದ್ದು. ನಾವು ನೆಪಗಳನ್ನು ಹೇಳದಿರೋಣ. ನಮ್ಮ ಪಾಪಗಳನ್ನು ಬಚ್ಚಿಟ್ಟು ಕೊಳ್ಳಲು ಪ್ರಯತ್ನಿಸದಿರೋಣ. ನಮ್ಮ ಅಪರಾಧವನ್ನು ಯಥಾರ್ಥವಾಗಿ ಒಪ್ಪಿಕೊಳ್ಳೋಣ. ಆಗ ಮಾತ್ರವೇ ನಾವು ಕ್ಷಮಾಪಣೆಯನ್ನು ಹೊಂದುತ್ತೇವೆ (ಕೀರ್ತನೆಗಳು 32:5; 1ಯೋಹಾನ 1:9ಮತ್ತು ವ್ಯಾಖ್ಯಾನ ನೋಡಿರಿ). ನಾವು ಕ್ಷಮಾಪಣೆಯನ್ನು ಅಪೇಕ್ಷಿಸಲು ಸಾಧ್ಯವಿಲ್ಲ. ಕ್ಷಮಾಪಣೆಯು ನಾವು ಪಾಪಮಾಡಿದ ವ್ಯಕ್ತಿಯ ಕೃಪೆ ಮತ್ತು ದಯೆಯಿಂದಲೇ ಬರುತ್ತದೆ. ಮಗನು "ನಾನು ಪರಲೋಕಕ್ಕೆ ವಿರುದ್ಧವಾಗಿಯೂ, ನಿನ್ನ ವಿರುದ್ಧವಾಗಿಯೂ ಪಾಪಮಾಡಿದ್ದೇನೆ" ಅರಿಕೆ ಮಾಡುವದನ್ನು ಗಮನಿಸಿರಿ. ನಾವು ಇನ್ನೊಬ್ಬವ್ಯಕ್ತಿಯ ವಿರುದ್ಧ ಪಾಪಮಾಡಿದಾಗಲೆಲ್ಲಾ ನಾವು ದೇವರ ವಿರುದ್ದವಾಗಿಯೂ, ಸಹ ಪಾಪಮಾಡುತ್ತೇವೆ. ನಿಜ ಹೇಳಬೇಕಾದರೆ ಎಲ್ಲಾ ಪಾಪಗಳು ದೇವರ ವಿರುದ್ಧವಾಗಿಯೇ ಆಗಿವೆ.

**20** ತಂದೆಯು ತನ್ನ ತಪ್ಪಿಹೋದ ಮಗನಿಗಾಗಿ ಕಾಯುತ್ತಾ ಎದುರುನೋಡುತ್ತಾ ಇದ್ದನು. ಅವನು ಎಂದಿಗೂ ತನ್ನ ನಿರೀಕ್ಷೆಯನ್ನು ಬಿಟ್ಟುಬಿಡಲಿಲ್ಲ. ಅವನ ಮಗನು ಅವನನ್ನು ಪ್ರೀತಿಸುವದನ್ನು ನಿಲ್ಲಿಸಿದ್ದರೂ ಸಹ ತಾನು ಮಗನ ಮೇಲಿನ ಪ್ರೀತಿಯನ್ನು ನಿಲ್ಲಿಸಲಿಲ್ಲ ಮತ್ತು ಮಗನು "ಇನ್ನೂ ದೂರದಲ್ಲಿರುವಾಗ ಅವನ ತಂದೆಯು ಅವನನ್ನು ಕಂಡು ಕನಿಕರಪಟ್ಟು ಓಡಿಬಂದನು".

**21-24** ಮಗನು ತಾನು ಸಿದ್ಧಪಡಿಸಿಕೊಂಡ ಪಾಪದ ಅರಿಕೆಯನ್ನು ಹೇಳಿ ಮುಗಿಸುವದಕ್ಕೆ ಮುಂಚೆಯೇ ತಂದೆಯು ಅವನನ್ನು ಕ್ಷಮಿಸಿ ಅವನ ಪೂರ್ಣ ಪುತ್ರಹಕ್ಕನ್ನು ಪುನಃ ಒದಗಿಸಿದನು. ಮಗನು ಅವನ ಮಗನೆನಿಸಿಕೊಳ್ಳುವದಕ್ಕೆ

ಯೋಗ್ಯನಾಗಿರಲಿಲ್ಲ. ಆದರೆ ತಂದೆಯು ತನ್ನ ಮಗನನ್ನು ಆತನ ಯೋಗ್ಯತೆಗನುಸಾರ ನೋಡದೆ ಪ್ರೀತಿ, ಕೃಪೆಗೆ ತಕ್ಕಂತೆ ನಡೆಸಿಕೊಂಡನು. ನಿಜವಾಗಿಯೂ ಪಶ್ಚಾತಾಪ ಪಡುವವರನ್ನು ದೇವರು ಇದೇ ರೀತಿ ಕಾಣುತ್ತಾನೆ. ಕುರುಬನು ತನ್ನ ಕಳೆದು ಹೋದ ಕುರಿಯು ಸಿಕ್ಕಾಗ ಸಂಭ್ರಮ ಪಟ್ಟ ಹಾಗೆಯೇ (ವಚನ 6) ತಂದೆಯು ಸಹ ತನ್ನ ಕಳೆದು ಹೋದ ಮಗನು ಸಿಕ್ಕಾಗ ಬಹುಸಂಭ್ರಮ ಪಟ್ಟನು. ಯಾಕೆಂದರೆ ಆತನ ಮಗನು ಸತ್ತವನಾಗಿದ್ದನು, ಈಗ ಪುನಃ ಬದುಕಿದ್ದಾನೆ (ಎಫೆಸ 2:1). ಈ ಸಾಮ್ಯದಲ್ಲಿ ಪಶ್ಚಾತಾಪದ ಹೃದಯಗಳೊಂದಿಗೆ ತನ್ನ ಬಳಿಗೆ ಬರುವ ಎಲ್ಲರಿಗೂ ದೇವರು ತೋರುವ ಪ್ರೀತಿ ಮತ್ತು ಕರುಣೆಗಳನ್ನು ಕಾಣುತ್ತೇವೆ. ಆತನು ನಮ್ಮನ್ನು ಗದರಿಸಿ ದಂಡಿಸುವದಿಲ್ಲ. ನಾವು ಎಂದಿಗೂ ಪಾಪವನ್ನೇ ಮಾಡಲಿಲ್ಲವೇನೋ ಎಂಬಂತೆ ಆತನು ನಮ್ಮನ್ನು ಸ್ವೀಕರಿಸಿಕೊಳ್ಳುವನು. ಆತನು ಇನ್ನೆಂದಿಗೂ ನಮ್ಮ ಪಾಪಗಳನ್ನು ನೆನಪಿಸಿಕೊಳ್ಳುವದಿಲ್ಲ (ಯೇಶಾಯ 1:18, 43:25).

**25-30** ಹಿರಿಯ ಮಗನು ತನ್ನ ತಮ್ಮನು ಮಾನಹೊಂದಿರುವದನ್ನು ಕಂಡು ಂಕೋಪಗೊಂಡನು (ವಚನ 28). ಅವನಿಗೆ ಅಸೂಯೆ ಯುಂಟಾಯಿತು. ಆತನು ತನ್ನ ತಂದೆಗೆ "–ನೀನು ನನಗೆ ಒಂದು ಆಡನ್ನಾದರೂ ಕೊಡಲಿಲ್ಲ, ಆದರೆ —ಅವನಿಗೆ ಕೊಬ್ಬಿದ ಕರುವನ್ನು ಕೊಯ್ಸಿದಿ" ಅಂದನು (ವಚನ 29:30).

ಹಿರಿಯ ಮಗನು ಫರಿಸಾಯರಂತಿದ್ದಾನೆ. ಯೇಸು ಪಾಪಿಗಳೊಂದಿಗೆ ಸಹವಾಸ ಇಟ್ಟುಕೊಂಡದ್ದಕ್ಕಾಗಿ ಫರಿಸಾಯರು ಆತನ ಮೇಲೆ ಕೋಪಗೊಂಡರು. ಪಶ್ಚಾತಾಪ ಪಟ್ಟ ಪಾಪಗಳು ಪರಲೋಕರಾಜ್ಯದ ಊಟದಲ್ಲಿ ಪಾಲ್ಗೊಳ್ಳುವರೆಂದು ಯೇಸು ಹೇಳಿದಾಗ ಅವರು ಕೋಪಗೊಂಡರು. ಯೆಹೂದ್ಯರು ತಾವೇ ಭಾಧ್ಯಸ್ಥಿಕೆಯ ಹಕ್ಕುದಾರರೆಂದು ಅಂದುಕೊಂಡರು, ಈಪಾಪಿಗಳು, ಈ ಅನ್ಯಜನರು ಏಕೆ ತಮ್ಮಸ್ವಸ್ತ್ಯದಲ್ಲಿ "ಪಾಲುಗಾರರಾಗಬೇಕು" ಎಂದು ಯೋಚಿಸಿಕೊಂಡರು. ಫರಿಸಾಯರಂತೆ ಹಿರಿಯ ಮಗನು ತನ್ನನ್ನು ನೀತಿವಂತನೆಂದು ಪರಿಗಣಿಸಿ ಕೊಂಡನು. "ಇಷ್ಟು ವರ್ಷವೆಲ್ಲಾ ನಾನು ನಿನ್ನ ಅಪ್ಪಣೆಗಳಲ್ಲಿ ಒಂದನ್ನಾದರೂ ಎಂದೂ ಮೀರಲಿ"ಲ್ಲ ಎಂದು ಹೇಳಿದನು. ಆದರೆ ಈಗ ಆತನು ತನ್ನ ಸಹೋದರನನ್ನು ಕ್ಷಮಿಸಿ, ಪ್ರೀತಿಸಲು ನಿರಾಕರಿಸಿದನು. ಅವನು ತನ್ನ ತಂದೆಯ ಮೇಲೆ ಕೋಪಗೊಂಡನು. ಅವನ ಹೃದಯ ತಣ್ಣಗಾಗಿತ್ತು. ಈಗ ದೇವರಿಂದ ದೂರನಾಗಿದ್ದ ಈತನೇ ಪಾಪಿಯಾಗಿದ್ದನು. ದೇವರ ದೃಷ್ಟಿಯಲ್ಲಿ ಹೊಟ್ಟೆಕಿಚ್ಚು ಒಂದು ಪಾಪವಾಗಿದೆ ಎಂಬದನ್ನು ನಾವು ಅರ್ಥಮಾಡಿಕೊಳ್ಳಬೇಕು (ರೋಮ 13:13, 1 ಕೊರಿಂಥ 3:3, 2 ಕೊರಿಂಥ 12:20, ಗಲಾತ್ಯ 5:21, ಯಾಕೋಬ 3:14-16).

ತನ್ನ ಸಹೋದರನ ಮೇಲೆ ಹೊಟ್ಟೆಕಿಚ್ಚು ಪಡುವವನು ತನ್ನ ಸಹೋದರನ ಉತ್ತಮ ಭಾಗ್ಯದ ವಿಷಯದಲ್ಲಿ ಅಸಂತುಷ್ಠನಾಗಿರುವನು. ಅಸೂಯೆ ಪಡುವವನು ತನ್ನ ಸಹೋದರನನ್ನು ಪ್ರೀತಿಸುವದಿಲ್ಲ. ಪ್ರೀತಿಯು ಹೊಟ್ಟೆಕಿಚ್ಚು ಪಡುವದಿಲ್ಲ ( ಕೊರಿಂಥ 13:4). ಹೀಗೆ ನಾವು ನಮ್ಮ ಸಹೋದರನ ಮೇಲೆ ಹೊಟ್ಟೆಕಿಚ್ಚು ಪಡುವದಾದರೆ ನಾವು ಆತನ ವಿರುದ್ಧ ಪಾಪಮಾಡುವವರಾಗಿದ್ದೇವೆ.

**31-32** ತಂದೆಯು ತನ್ನ ಹಿರಿಯ ಮಗನನ್ನು ಸಹ ಪ್ರೀತಿಸಿದನು. ಆತನು ಹಿರಿಯ ಮಗನಿಗೆ "ನನಗಿರುವದೆಲ್ಲವೂ ನಿನ್ನದೇ" ಎಂದು ಜ್ಞಾಪಕಪಡಿಸಿದ್ದನು. ಹಿರಿಯ ಮಗನು ತನ್ನ ಸಹೋದರನು ಹಿಂದಿರುಗಿ ಬಂದ ಕಾರಣದಿಂದ ಏನನ್ನೂ ಕಳೆದುಕೊಂಡಿರಲಿಲ್ಲ. ತಂದೆಯು ಇಬ್ಬರು ಮಕ್ಕಳನ್ನು ಅತೀಯಾಗಿ ಪ್ರೀತಿಸಿದನು. ಒಂದು ವೇಳೆ ಪ್ರತಿಯೊಬ್ಬರು ನಮ್ಮೊಂದಿಗೆ ಸೂರ್ಯನ ಬೆಳಕನ್ನೂ, ಬಿಸಿಯನ್ನು ಹಂಚಿಕೊಂಡರೆ ಆ ಕಾರಣದಿಂದ ನಾವು ಕಡಿಮೆ ಬೆಳಕನ್ನು, ಬಿಸಿಯನ್ನು ಅನುಭವಿಸುವದಿಲ್ಲವಷ್ಟೇ. ದೇವರ ಕೃಪೆಯು ಅಪರಿಮಿತವಾಗಿದೆ. ದೇವರ ಸ್ವಾಸ್ತ್ಯವು ಅಪರಿಮಿತವಾಗಿದೆ. ನಾವು ಹೊಟ್ಟೆಕಿಚ್ಚು ಪಡಬೇಕಾದರೆ ಯಾವ ಕಾರಣವೂ ಇರುವದಿಲ್ಲ.

ತಂದೆಯು ತನ್ನ ಹಿರಿಯ ಮಗನಿಗೆ ತಾನು ಏಕೆ ಸಂತೋಷವನ್ನು ಆಚರಿಸುತ್ತಿದ್ದೇನೆಂಬದನ್ನು ವಿವರಿಸಿದನು. ಹಿರಿಯ ಮಗನಿಗಿಂತ ಮೇಲಾಗಿ ಕಿರಿಯ ಮಗನಿಗೆ ವಿಶೇಷ ಗೌರವವನ್ನು ನೀಡಬೇಕೆಂಬುದಕ್ಕಾಗಿಯಲ್ಲ. ಅದು ಕಿರಿಯ ಮಗನು ತಿರಿಗಿ ಬಂದಿದ್ದಾನೆಂಬದಕ್ಕೆ ಸಂತೋಷವನ್ನು ವ್ಯಕ್ತ ಪಡಿಸುವದಕ್ಕಾಗಿಯೇ ಆಗಿತ್ತು.

ಪುನಃ ಇಲ್ಲಿ ಹಿರಿಯ ಮಗನೆಡೆಗೆ ತಂದೆಯು ತೋರಿದ ತಾಳ್ಮೆ ಮತ್ತು ದಯೆಯನ್ನು ಗಮನಿಸಿರಿ. ತಂದೆಯು ಅವನಿಗೆ ತಿಳಿಸಿ ಹೇಳಲು ಪ್ರಯತ್ನಿಸಿದನು. ಹಾಗಾದರೆ ಅಧಿಕಾರದಲ್ಲಿರುವವರೆಲ್ಲರೂ ತಮ್ಮ ಕೈಕೆಳಗಿರುವವರೊಂದಿಗೆ ಅದೇ ರೀತಿ ಮೃದುವಾಗಿ ವರ್ತಿಸುವದು ಅಗತ್ಯವಿರುತ್ತದೆ. ಒತ್ತಾಯ ಪಡಿಸುವದಕ್ಕಿಂತಲೂ ಮೃದುವಾಗಿ ಮನವೊಲಿಸುವದರ ಮೂಲಕ ನಡಿಸಿಕೊಂಡು ಹೋಗುವದು ಉತ್ತಮವಾದದ್ದು (ಎಫೆಸ 6:4, 9 ಮತ್ತು ವ್ಯಾಖ್ಯಾನ ನೋಡಿರಿ).

ಈ ಸಾಮ್ಯದ ಮುಖಾಂತರವಾಗಿ ನಾವು ಕ್ರಿಸ್ತತ್ವ ಮತ್ತು ಇತರ ಎಲ್ಲಾ ಧರ್ಮಗಳ ನಡುವಿನ ವ್ಯತ್ಯಾಸವನ್ನು ಕಾಣುತ್ತೇವೆ. ಕ್ರೈಸ್ತತ್ವವು ಒಂದು ಕೃಪೆಯ, ಕರುಣೆಯ ಮತ್ತು ಪ್ರೀತಿಯ ಧರ್ಮವಾಗಿದೆ. ನಾವು ನಮ್ಮ ಕ್ಷಮಾಪಣೆಯನ್ನು ಸಂಪಾದಿಸಿಕೊಳ್ಳುವದಿಲ್ಲ. ದೇವರು ನಮ್ಮನ್ನು ಉಚಿತವಾಗಿಯೂ, ಸಂಪೂರ್ಣವಾಗಿಯೂ ಕ್ಷಮಿಸುತ್ತಾನೆ. ನಾವು ಮಾಡಬೇಕಾದದ್ದೇನೆಂದರೆ ಪಶ್ಚಾತಾಪ ಪಟ್ಟು ನಂಬಿಕೆಯ ಮೂಲಕ ಕ್ರಿಸ್ತನ ಕ್ಷಮಾಪಣೆಯನ್ನು ಪಡೆದುಕೊಳ್ಳಬೇಕಷ್ಟೇ.

ಹಿರಿಯ ಮಗನು ಇತರ ಎಲ್ಲಾ ಧರ್ಮಗಳನ್ನು ಪ್ರತಿನಿಧಿಸುತ್ತಾನೆ. ಹಿರಿಯ ಸಹೋದರನು ಹೀಗೆನ್ನುತ್ತಾನೆಃ" ಪಾಪಿಗಳು ಉಚಿತವಾಗಿ ಕ್ಷಮಿಸಲ್ಪಡಕೂಡದು. ಅವರು ಮೊದಲು ಕ್ಷಮಾಪಣೆಯನ್ನು ಸಂಪಾದಿಸಿಕೊಳ್ಳಬೇಕು ಅವರು ಅದಕ್ಕೆ ಯೋಗ್ಯರಾಗಬೇಕು".

ಆದರೆ ಇದು ಮಿಥ್ಯ ಭೋಧನೆಯಾಗಿದೆ. ಯಾವನೂ ಸಹ ದೇವರಿಂದ ಏನನ್ನಾದರೂ ಪಡೆದುಕೊಳ್ಳಲು ಯೋಗ್ಯತೆಯನ್ನು ಹೊಂದಿರುವದಿಲ್ಲ. ನಮ್ಮಲ್ಲಿ ಯಾರೊಬ್ಬನೂ ನಾನು ದೇವರಿಗೆ ಎಲ್ಲದರಲ್ಲಿಯೂ ವಿಧೇಯನಾಗಿದ್ದೇನೆಂದು ಹೇಳಲಾರನು. ನಾವೆಲ್ಲರೂ ದೇವರ ಕರುಣೆಯಲ್ಲಿಯೇ ಆತುಕೊಳ್ಳಬೇಕು. ನಮ್ಮಲ್ಲಿ ಪ್ರತಿಯೊಬ್ಬನೂ "ಕಳೆದು ಹೋದ ಮಗ" ಆಗಿದ್ದಾನೆ (ಹಿರಿಯ ಸಹೋದರನೂ ಸಹ).

---

## ಅಧ್ಯಾಯ - 16

### ಚಾಣಾಕ್ಷ ಮನೆವಾರ್ತೆಯವನ ಸಾಮ್ಯ (16:1-9)

**1-7** ಈ ಸಾಮ್ಯದಲ್ಲಿ ಯೇಸು ತನ್ನ ಉದ್ಯೋಗವನ್ನು ಕಳೆದುಕೊಳ್ಳುವದಕ್ಕಿದ್ದ ಅಪ್ರಾಮಾಣಿಕ ಪಾರುಪತ್ಯಗಾರನ ವಿಷಯದಲ್ಲಿ ಬಣ್ಣಿಸುತ್ತಾನೆ. ಈ ಪಾರುಪತ್ಯಗಾರನು ತನ್ನ ಯಜಮಾನನ ಆಸ್ತಿಯನ್ನು ಹಾಳು ಮಾಡುತ್ತಿದ್ದಾನೆಂಬ ದೂರು ಬಂದದ್ದರಿಂದ ಯಜಮಾನನು ಇವನನ್ನು ಉದ್ಯೋಗದಿಂದ ತೆಗೆದು ಬಿಡುವದಕ್ಕೆ ತೀರ್ಮಾನಿಸಿ–ಕೊಂಡಿದ್ದನು(ವಚನ 2).

ಪಾರುಪತ್ಯಗಾರನು ಹೇಗೂ ತಾನು ಮಾಡಲ್ಪಡುವ ಮುಂಚೆ ಒಂದು ಚಾಣಾಕ್ಷ ಕೆಲಸವನ್ನು ಮಾಡಿದನು. ಅವನು ತನ್ನ ಯಜಮಾನನ ಸಾಲಗಾರರನ್ನು ಕರೆದು ಸಾಲಗಳನ್ನು ಕಡಿಮೆ ಮಾಡಿದನು. ಅವನು ತನ್ನೊಳಗೆ ಹೀಗೆಂದುಕೊಂಡನು. "ನಾನು ಅವರಿಗೆ ಈ ಉಪಕಾರವನ್ನು ಮಾಡಿದ್ದೇನಾದ್ದರಿಂದ ನಾನು ನನ್ನ ಉದ್ಯೋಗವನ್ನು ಕಳೆದು ಕೊಂಡಾಗ ಅವರು ನನಗೆ ಸಹಾಯ ಮಾಡುವರು" ಎಂಬದಾಗಿ. ಈ ರೀತಿಯಾಗಿ ಪಾರುಪತ್ಯಗಾರನು ತನಗೆ ಲಾಭತಂದು ಕೊಳ್ಳುವದಕ್ಕಾಗಿ ಯಜಮಾನನನ್ನು ವಂಚಿಸಿದನು.

ಯಜಮಾನನು ಇದನ್ನು ಕೇಳಿ ಅನ್ಯಯಗಾರನಾದ ಮನೆವಾರ್ತೆಯವನನ್ನು ಜಾಣತನ ಮಾಡಿದನೆಂದು ಹೊಗಳಿದನು. ಯಾಜಮಾನನು ಅವನ ಅಪ್ರಮಾಣಿಕತೆಗಾಗಿ ಹೊಗಳಲಿಲ್ಲ ಆದರೆ ಆತನ ಜಾಣತನಕ್ಕಾಗಿ ಹೊಗಳಿದನು. ಈ ಸಾಮ್ಯದ ಒಂದು ಅರ್ಥವೇನಂದರೆ ಮಾನವರು ಬುದ್ದಿಯಿಂದಲೂ ಮತ್ತು ಜಾಣತನ ದಿಂದಲೂ ನಡೆದು ಕೊಳ್ಳಬೇಕು ಹೊರತು ಅಪ್ರಾಮಾಣಿಕತೆಯಿಂದಲ್ಲ. ಬೆಳಕಿನ ರಾಜ್ಯದವರು ಅಂದರೆ ಕ್ರೈಸ್ತರು ಇತರ ರೊಂದಿಗಿನ ತಮ್ಮ ವ್ಯವಹಾರಗಳಲ್ಲಿ ಬುದ್ದಿವಂತಿಕೆ ಮತ್ತು ಜಾಣತನವನ್ನು ತೋರಿಸುವದಿಲ್ಲ. ಅವರು ಕೆಲವು ಸಮಯಗಳಲ್ಲಿ ಶೀಘ್ರವೇ ಸ್ನೇಹಿತರನ್ನು ಮಾಡಿಕೊಳ್ಳುವದಿಲ್ಲ. ಹಲವಾರು ವೇಳೆ ಅವರು ಅನಾವಶ್ಯಕವಾಗಿ ಸರಿಯಾದ ಸಿದ್ದತೆಯನ್ನು ಮಾಡಿಕೊಳ್ಳುವದಿಲ್ಲ. ಅವರು ಸುಲಭವಾಗಿ ತಪ್ಪಿನಲ್ಲಿ ಬೀಳುತ್ತಾರೆ. ಅವರು "ಜಾಣರಾಗಿರಲಿ" ಎಂದು ಕ್ರಿಸ್ತನು ಹೇಳುತ್ತಾನೆ. ನಾವು ಸರ್ಪದಂತೆ ಜಾಣರಾಗಿರಬೇಕೆಂದು ಯೇಸು ಹೇಳಿದನು, ಆದರೆ ಆತನು ನಾವು ಪಾರಿವಾಳಗಳಂತೆ ನಿಷ್ಕಪಟಿಗಳು ಆಗಿರಬೇಕೆಂದು ಸಹ ಹೇಳಿದನು. (ಮತ್ತಾಯ 10:16 ಮತ್ತು ವ್ಯಾಖ್ಯಾನ ನೋಡಿರಿ).

ಲೌಕಿಕರು ಲೌಕಿಕ ಲಾಭವನ್ನು ಪಡೆದುಕೊಳ್ಳಲು ಬುದ್ದಿವಂತಿಕೆ ಮತ್ತು ಜಾಣತನವನ್ನು ತೋರಿಸುವಂತೆಯೇ ಕ್ರೈಸ್ತರು ಆತ್ಮೀಕ ಲಾಭವನ್ನು ಪಡೆದುಕೊಳ್ಳಲು ಬುದ್ಧಿವಂತರೂ, ಜಾಣರೂ ಆಗಿರಬೇಕೆಂದು ಸಹ ಈ ಸಾಮ್ಯದ ಅರ್ಥವಾಗಿದೆ.

**9** ನಂತರ ಯೇಸು ಈ ಸಾಮ್ಯದ ಇನ್ನೊಂದು ಅರ್ಥವನ್ನು ತಿಳಿಸಿದನು. ನಾವು ಲೋಕದಲ್ಲಿರುವಾಗ ನಮಗೆ ದೇವರ ಸ್ನೇಹತ್ವವನ್ನು ಗಳಿಸಿ ಕೊಡುವ ರೀತಿಯಲ್ಲಿ ನಮ್ಮ ಸ್ಥಾನ ಮತ್ತು ಐಶ್ವರ್ಯವನ್ನು ಉಪಯೋಗಿಸಬೇಕು. ಅಪ್ರಾಮಾಣಿಕ ಮನೆವಾರ್ತೆಯವನು ಲೌಕಿಕ ಸ್ನೇಹಿತರನ್ನು ಸಂಪಾದಿಸಿಕೊಳ್ಳಲು ತನ್ನ ಸ್ಥಾನವನ್ನು ಉಪಯೋಗಿಸಿಕೊಂಡನು. ನಾವು ದೇವರ ಸ್ನೇಹವನ್ನು ಗಳಿಸಿಕೊಳ್ಳುವದರಲ್ಲಿ "ಜಾಣವಂತರಾಗಿ" ಇರಬೇಕು. ಯಾಕೆಂದರೆ ನಾವು ಈ ಜೀವನದಲ್ಲಿ ನಮ್ಮ ಸ್ಥಾನ ಮತ್ತು ಐಶ್ವರ್ಯವನ್ನು ಶೀಘ್ರವಾಗಿ ಕಳೆದುಕೊಳ್ಳುತ್ತೇವೆ. ಆದುದರಿಂದ ನಮ್ಮನ್ನು ತಮ್ಮ ನಿತ್ಯ ವಾಸಸ್ಥಳಕ್ಕೆ ಸ್ವಾಗತಿಸುವಂತಹ ಪರಲೋಕದ ಸ್ನೇಹಿತರು (ದೇವರು ಮತ್ತು ಆತನ ದೂತರು) ನಮಗೆ ಅವಶ್ಯಕವಾಗಿದ್ದಾರೆ. ನಾವು ಈ ಲೋಕದಲ್ಲಿ ನಮ್ಮ ಐಶ್ವರ್ಯವನ್ನು ಬಡವರೊಂದಿಗೆ ಹಂಚಿಕೊಳ್ಳಬೇಕೆಂಬುದು ಸಹ ಯೇಸುವಿನ ಅರ್ಥವಾಗಿದೆಯೆಂದು ಕೆಲವು ಬೈಬಲ್ ಪಂಡಿತರು ಯೋಚಿಸುತ್ತಾರೆ. ಆಗ ನಾವು ಹಂಚಿಕೊಂಡ ಬಡವರು ಪರಲೋಕಕ್ಕೆ ಹೋಗುವಾಗ ಅಲ್ಲಿ ಅವರು ನಮ್ಮ ಸ್ನೇಹಿತರಾಗಿದ್ದು ನಮ್ಮ ಪರವಾಗಿ ದೇವರ ಮುಂದೆ ಸಾಕ್ಷಿ ನೀಡುವರು. ಇದು ಕೂಡಾ ಸಾಮ್ಯದ 33 ಒಂದು ಅರ್ಥವಾಗಿರಬಲ್ಲದು.

### ಐಶ್ವರ್ಯದ ಸಮಂಜಸ ಉಪಯೋಗ (16:10-18)

(ಮತ್ತಾಯ 6:24, 19:9, ಮಾರ್ಕ 10:11-12)

**10** ಈ ಭಾಗದಲ್ಲಿ ಯೇಸು ನಮ್ಮ ಇಹಲೋಕದ ಐಶ್ವರ್ಯವನ್ನು ಉಪಯೋಗಿಸುವದರ ಕುರಿತು ಕೆಲವು ಸೂತ್ರಗಳನ್ನು ಕೊಡುತ್ತಾನೆ. ಲೋಕದ ಎಲ್ಲಾ ಐಶ್ವರ್ಯವು ದೇವರಿಗೆ ಸೇರಿರುತ್ತದೆ ಮತ್ತು ಮಾನವರು ಅದರ ಮೇಲೆ ಪಾರುಪತ್ಯಗಾರರು

ಮಾತ್ರವೇ ಆಗಿದ್ದಾರೆ. ಒಬ್ಬನು ತನ್ನ ಸ್ವಲ್ಪ ಐಶ್ವರ್ಯವನ್ನು ಉಪಯೋಗಿಸುವ ರೀತಿಯು ಅವನು ಹೆಚ್ಚು ಐಶ್ವರ್ಯವನ್ನು ಹೇಗೆ ಉಪಯೋಗಿಸುವನೆಂಬದನ್ನು ತೋರಿಸುತ್ತದೆ. (ಒಂದು ಸಾವಿರ ರೂಪಾಯಿಗಳನ್ನು ಕದಿಯುವವನು) ಸ್ವಲ್ಪವಾದದ್ದರಲ್ಲಿ ನಂಬಿಗಸ್ಥನಾದವನನ್ನು ದೊಡ್ಡ ಕೆಲಸದಲ್ಲಿ ಇಡಲಾಗುವದು (ಮತ್ತಾಯ 25:21).

**11** ದೇವರು ನಮ್ಮನ್ನು ನೋಡುತ್ತಾನೆ. ನಾವು ನಮ್ಮ ಲೌಕಿಕ ವರಗಳನ್ನು ಮತ್ತು ಐಶ್ವರ್ಯಗಳನ್ನು ಜಾಣತನದಿಂದಲೂ, ಪ್ರಾಮಾಣಿಕವಾಗಿಯೂ ಉಪಯೋಗಿಸುವದಾದರೆ ಆತನು ನಮಗೆ ಆತ್ಮೀಕ ವರಗಳನ್ನೂ, ಐಶ್ವರ್ಯವನ್ನೂ ಕೊಡುತ್ತಾನೆ. ಒಂದು ವೇಳೆ ಈ ಜೀವನದಲ್ಲಿ ನಮ್ಮ ವರಗಳನ್ನು ದುರುಪಯೋಗ ಮಾಡಿ ಕೊಳ್ಳುವದಾದರೆ ಮುಂದಿನ ಜೀವನದಲ್ಲಿ ನಾವು ಯಾವದನ್ನೂ ಪಡೆದು ಕೊಳ್ಳುವದಿಲ್ಲ (ಮಾರ್ಕ 8:36 ಮತ್ತು ವ್ಯಾಖ್ಯಾನ ನೋಡಿರಿ).

**12** ನಾವು ಇನ್ನೊಬ್ಬರ ಆಸ್ತಿಯ ವಿಷಯದಲ್ಲಿ ನಂಬಿಗಸ್ತರಲ್ಲದಿದ್ದರೆ ನಮಗೆ ನಮ್ಮದನ್ನು ಅಂದರೆ ದೇವರಿಗೆ ನಂಬಿಗಸ್ಥರಾಗಿ ಉಳಿಯುವ ಎಲ್ಲರಿಗೂ ಕೂಡಿಸಿಡಲಾಗಿರುವ ಪರಲೋಕದಲ್ಲಿ ನಮ್ಮ ಸ್ವಂತ ಸ್ವಾಸ್ಥ್ಯಯವನ್ನು ನಮ್ಮ ವಶಕ್ಕೆ ಕೊಡಲಾಗುವದಿಲ್ಲ. ಒಬ್ಬನು ಮತ್ತೊಬ್ಬನ ಆಸ್ತಿಯನ್ನು ಸ್ವೇಚ್ಛೆಯಾಗಿ ಉಪಯೋಗಿಸುವದಾದರೆ ಅವನು ತನ್ನ ಆಸ್ತಿಯನ್ನು ಸಹ ಜವಾಬ್ದಾರಿರಹಿತನಾಗಿ ಉಪಯೋಗಿಸುವನು. ಆದುದರಿಂದ ದೇವರು ಅಂತಹ ಮನುಷ್ಯನ ಆಸ್ತಿಯನ್ನು ತಡೆಹಿಡಿಯುವನು.

**13** ಮತ್ತಾಯ 6:24 ಮತ್ತು ವ್ಯಾಖ್ಯಾನ ನೋಡಿರಿ.

**14** ಫರಿಸಾಯರು ಹಣದ ವಿಷಯದಲ್ಲಿ ಯೇಸು ಬೋಧನೆಯನ್ನು ಇಷ್ಟಪಡಲಿಲ್ಲ ಯಾಕೆಂದರೆ ಅವರು ತಮಗಾಗಿ ಹಣವನ್ನು ಕೂಡಿಸಿಟ್ಟುಕೊಳ್ಳುವದನ್ನು ಪ್ರೀತಿಸಿದರು. ಫರಿಸಾಯರು ಐಶ್ವರ್ಯವಂತರಾಗಿದ್ದು ಆ ಐಶ್ವರ್ಯವು ತಾವು ಯೆಹೂದ್ಯರಾಗಿರುವದರ ಪ್ರತಿಫಲವೆಂದು ಅವರು ಪರಿಗಣಿಸಿದರು. ಯೇಸು ಬಡವನಾಗಿದ್ದನು, ಆ ಕಾರಣದಿಂದ ಫರಿಸಾಯರು ಅವನನ್ನು ಹಾಸ್ಯಮಾಡಿದರು. ಫರಿಸಾಯರ ಮನಸ್ಸಿನಲ್ಲಿ ಯೇಸುವಿನ ಬಡತನವು ಆತನು ಒಬ್ಬ ಒಳ್ಳೆಯ ಯೆಹೂದ್ಯನಲ್ಲ ಎಂಬದಕ್ಕೆ ಒಂದು ಆಧಾರವಾಗಿತ್ತು.

**15** ಆದರೆ ಯೇಸು ಇದನ್ನು ತಿಳಿದವನಾಗಿ ಫರಿಸಾಯರನ್ನು ಗದರಿಸುತ್ತಾನೆ. ಅವರು ಮನುಷ್ಯರ ಮುಂದೆ ನೀತಿವಂತರೆಂದು ತೋರಿಸಿಕೊಳ್ಳುವದಕ್ಕೆ ಅಂದರೆ ಮನುಷ್ಯರ ಮುಂದೆ ಧಾರ್ಮಿಕರಾಗಿ ಕಾಣಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಅವರ ಹೃದಯಗಳೆಲ್ಲಾ ಹಣದಾಶೆಯಿಂದ ತುಂಬಿದ್ದವು . ಮನುಷ್ಯರು ಫರಿಸಾಯರ ಐಸ್ವರ್ಯ ಮತ್ತು ಬಹಿರಂಗದ ವೈರಾಗ್ಯಕ್ಕಾಗಿ ಅವರನ್ನು ಗೌರವಿಸಿದರು. ಆದರೆ ಮನುಷ್ಯರು ಶ್ರೇಷ್ಠವೆನಿಸುವದನ್ನು ದೇವರು ಅಸಹ್ಯಿಸುತ್ತಾನೆ. ದೇವರು ಹೃದಯವನ್ನು ನೋಡುತ್ತಾನೆ ಮತ್ತು ದೇವರು ಫರಿಸಾಯರ ಹೃದಯಗಳಲ್ಲಿ ಕಂಡ ದುರಾಶೆಯನ್ನು ಇಷ್ಯಪಡಲಿಲ್ಲ (1 ಸಮುವೇಲ 16:7).

ಮನುಷ್ಯರ ಅಭಿಪ್ರಾಯಗಳಿಗೆ ಪ್ರಾಮುಖ್ಯತೆ ನೀಡುವದು ಒಂದು ದೊಡ್ಡ ತಪ್ಪಾಗಿರುತ್ತದೆ. ಮನುಷ್ಯರಿಂದ ಅತ್ಯಂತ ಅಮೂಲ್ಯವೆಂದು ಅನಿಸಿಕೊಳ್ಳುವಂತದ್ದು ಹಲವಾರು ವೇಳೆ ಸಂಗತಿಗಳನ್ನು ನಿಜವಾದ ಸ್ಥಿತಿಯಲ್ಲಿ ನೋಡುವ ದೇವರಿಗೆ ಅಸಹ್ಯವಾಗಿರುತ್ತದೆ. ಅದೇ ಸಮಯದಲ್ಲಿ ಮನುಷ್ಯರು ತಿರಸ್ಕರಿಸುವ ಸಂಗತಿಗಳನ್ನು ಅನೇಕ ವೇಳೆ ದೇವರು ಮನ್ನನೆ ಮಾಡುತ್ತಾನೆ (1 ಕೊರಿಂಥ 1:26-29 ಮತ್ತು ವ್ಯಾಖ್ಯಾನ ನೋಡಿರಿ).

**16** ಸ್ನಾನಿಕನಾದ ಯೋಹಾನನು ಬಂದಾಗ ದೇವರು ಮತ್ತು ಇಸ್ರಾಯೇಲರ ನಡುವಿನ ಹಳೆ ಒಡಂಬಡಿಕೆಯು ಅಂತ್ಯಗೊಂಡಿತು ಮತ್ತು ಹೊಸ ಒಡಂಬಡಿಕೆಯು ಪ್ರಾರಂಭವಾಯಿತು (ಇಬ್ರಿಯ 8:7-13 ಮತ್ತು ವ್ಯಾಖ್ಯಾನ ನೋಡಿರಿ). ಧರ್ಮಶಾಸ್ತ್ರವೂ ಪ್ರವಾದಿಗಳೂ ಅಂದರೆ ಹಳೆ ಒಡಂಬಡಿಕೆಯು ಯೋಹಾನನ ತನಕವೇ ಸಾರಲ್ಪಡುತ್ತಿದ್ದವು . ಆದರೆ ಯೋಹಾನನ ನಂತರ ದೇವರ ಸುವಾರ್ತೆಯು ಅಂದರೆ ಕ್ರಿಸ್ತನ ಸುವಾರ್ತೆಯ ನೂತನ ಬೋಧನೆಯು ಪ್ರಾರಂಭಗೊಂಡಿತು. ಮನುಷ್ಯನು ಯಾವದೇ ಧರ್ಮಶಾಸ್ತ್ರವನ್ನು ಅನುಸರಿಸುವದರಿಂದಲ್ಲ ಆದರೆ ದೇವರ ಕೃಪೆಯಿಂದ ನಂಬಿಕೆಯ ಮೂಲಕವೇ ರಕ್ಷಣೆ ಹೊಂದುವನೆಂದು ಕ್ರಿಸ್ತನು ಸಾರಿದನು (ಎಫಸ 2:8-9 ಮತ್ತು ವ್ಯಾಖ್ಯಾನ ನೋಡಿರಿ).

ಸಾಮಾನ್ಯ ಯೆಹೂದ್ಯರು, ಮತ್ತು ಪಾಪಿಗಲು, ಸುಂಕದವರಂತಹ ಇತರ ಜನರು ಈ ಕೃಪೆಯ ಮೂಲಕ ದೊರೆಯುವ ರಕ್ಷಣೆಯ ಕುರಿತು ಕೇಳಿಸಿಕೊಂಡು ಬಹು ಸಂಖ್ಯೆಯಲ್ಲಿ ಯೇಸುವಿನ ಬಳಿಗೆ ಬಂದರು. ಅವರಿಗೆ ಕ್ಷಮಾಪಣೆ ಮತ್ತು ನೂತನ ಜೀವಿತ ಬೇಕಾಗಿತ್ತು. ಅವರು ದೇವರ ರಾಜ್ಯದಲ್ಲಿ ಪ್ರವೇಶಿಸಲು ಇಚ್ಚಿಸಿದ್ದರು. ಅವರು ಒಂದು ವಿಧದಲ್ಲಿ ಅದರೊಳಗೆ ಬಲಾತ್ಕರವಾಗಿ ನುಗ್ಗುತ್ತಿದ್ದರು(ಮತ್ತಾಯ 11:12-13 ನೋಡಿರಿ). ಮತ್ತು ಫರಿಸಾಯರು ಇದರ ಕುರಿತು ಅಸಂತುಷ್ಟರಾಗಿದ್ದರು.

**17** ಆದುದರಿಂದ ಫರಿಸಾಯರು ಮತ್ತು ಇತರ ಯೆಹೂದ್ಯ ನಾಯಕರು ಯೇಸು ಮತ್ತು ಆತನ ಶಿಷ್ಯರ ಮೇಲೆ ಹಳೆಯ ಯೆಹೂದ್ಯ ಧರ್ಮಶಾಸ್ತ್ರವನ್ನು ಉಲ್ಲಂಘಿಸಿದ ಆರೋಪವನ್ನು ಹೊರಿಸಲು ಪ್ರಾರಂಭಿಸಿದರು (ಮಾರ್ಕ 2:23-24,3:1-5, 7:5). ಅವರು "ಈ ಕ್ರೈಸ್ತರು ಯಾವ ನಿಯಮವನ್ನು ಪಾಲಿಸುವದಿಲ್ಲ" ಎಂದು ಹೇಳಿದರು. ಆದರೆ ಯೇಸು ಅದನ್ನು ನಿರಾಕರಿಸಿದನು. ಆತನು ಹಳೆ ಒಡಂಬಡಿಕೆಯ ನೈತಿಕ ಧರ್ಮಶಾಸ್ತ್ರವನ್ನು ತಿರಸ್ಕಾರ ಅಥವಾ ಶೂನ್ಯವನ್ನಾಗಲಿ ಮಾಡಲಿಲ್ಲ (ಮತ್ತಾಯ 5: 17-19 ಮತ್ತು ವ್ಯಾಖ್ಯಾನ ನೋಡಿರಿ).

**18** ಮಾರ್ಕ 10:11-12 ಮತ್ತು ವ್ಯಾಖ್ಯಾನ ನೋಡಿರಿ.

## ಐಶ್ವರ್ಯವಂತನು ಮತ್ತು ಲಾಜರನು (16:19-31)

**19-21** ಇಲ್ಲಿ ಯೇಸು ಯೆಹೂದ್ಯ ನಾಯಕರಿಗೆ ಅತ್ಯಂತ ಭಯಾನಕ ಎಚ್ಚರಿಕೆಯನ್ನು ನೀಡುತ್ತಾನೆ. ಮತ್ತು ಸುಖದಲ್ಲಿ ಜೀವಿಸಿ ತಮ್ಮ ಬಾಗಿಲಿನಲ್ಲಿರುವ ಬಡವರನ್ನು ಅಲಕ್ಷಿಸುವವರೆಲ್ಲರಿಗೂ ಇದೊಂದು ಎಚ್ಚರಿಕೆಯಾಗಿದೆ. ಯೇಸು ಇಬ್ಬರು ವ್ಯಕ್ತಿಗಳನ್ನು ಬಣ್ಣಿಸುತ್ತಾನೆ. ಐಶ್ವರ್ಯವಂತನಾದ ಯೆಹೂದ್ಯನು ಮತ್ತು ಒಬ್ಬ ಬಿಕ್ಷುಕನು. ಒಬ್ಬನು ಸಂತೋಷ ಮತ್ತು ಸಂತೃಪ್ತಿಯಲ್ಲಿ ಜೀವಿಸಿದನು, ಮತ್ತು ಇನ್ನೊಬ್ಬನು ನಿರ್ಗತಿಕನಾಗಿ ಜೀವಿಸಿದನು. ಒಬ್ಬನು ಮನುಷ್ಯರಿಂದ ಹೊಗಳಲ್ಪಟ್ಟವನು; ಇನ್ನೊಬ್ಬನು ಜನರಿಂದ ತಿರಸ್ಕರಿಸಲ್ಪಟ್ಟವನಾಗಿದ್ದನು. ನಾಯಿಗಳು ಮಾತ್ರವೇ ಭಿಕ್ಷುಕನಾದ ಲಾಜರನ ಬಗ್ಗೆ ಚಿಂತಿಸಿದವು.

ಐಶ್ವರ್ಯವಂತನು ತಾನು ಒಬ್ಬ ನೀತಿವಂತನೂ ಒಳ್ಳೆಯ ಯೆಹೂದ್ಯನು ಎಂದು ಯೋಚಿಸಿಕೊಂಡನು. ಯೇಸು ಅವನೊಬ್ಬ ಕೆಟ್ಟವ್ಯಕ್ತಿಯೆಂದಾಗಲಿ, ಅಥವಾ ಕೆಟ್ಟದ್ದನ್ನು ಮಾಡಿದನೆಂದಾಗಲಿ ಹೇಳಲಿಲ್ಲ. ಲೋಕದ ದೃಷ್ಟಿಯಲ್ಲಿ ಅವನೊಬ್ಬ ಒಳ್ಳೆಯ ಮನುಷ್ಯನಾಗಿದ್ದನು. ಬಹುಶಃ ಅವನು ಒಬ್ಬ ಫರಿಸಾಯನೂ, ಜನರ ನಾಯಕನೂ ಆಗಿದ್ದನು. ಅವನು ಎಲ್ಲರಿಂದಲೂ ಗೌರವಿಸಲ್ಪಟ್ಟವನಾಗಿದ್ದನು.

**22-24** ಹೇಗೂ, ಮನುಷ್ಯರು ಗೌರವಿಸುವದನ್ನು ದೇವರು ಅಸಹ್ಯಿಸುತ್ತಾನೆ (ವಚನ 15). ದೇವರು ಗರ್ವಿಷ್ಟರನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ (1 ಪೇತ್ರ 5:5). ಆದುದರಿಂದ, ಲಾಜರನು ಸತ್ತು ಹೋದಾಗ ದೇವದೂತರು ಬಂದು ಅವನ ಆತ್ಮವನ್ನು ಪರಲೋಕಕ್ಕೆ ತೆಗೆದುಕೊಂಡು ಹೋಗಿ ಅಬ್ರಹಾಮನ ಎದೆಗೆ ಒರಗಿಸಿದರು. ಆದರೆ ಐಶ್ವರ್ಯವಂತನನ್ನು ನರಕಕ್ಕೆ ತಳ್ಳಲಾಯಿತು.

ಐಶ್ವರ್ಯವಂತನನ್ನು ಅವನ ಐಶ್ವರ್ಯದ ಕಾರಣದಿಂದ 40 ನರಕಕ್ಕೆ ತಳ್ಳಲ್ಪಡಲಿಲ್ಲ. ಅವನು ಐಶ್ವರ್ಯವನ್ನು ಪ್ರೀತಿಸಿದನಾದ್ದರಿಂದಲೇ ನರಕಕ್ಕೆ ತಳ್ಳಲ್ಪಟ್ಟನು (1 ತಿಮೊಥೆ 6:10). ಅವನು ತನ್ನ ಐಶ್ವರ್ಯವನ್ನು ಬಡವರ ಸಹಾಯಕ್ಕೆ ಉಪಯೋಗಿಸಲಿಲ್ಲ, ಅವನು ಕರುಣೆಯಿಲ್ಲದವನಾಗಿದ್ದನು (ಮತ್ತಾಯ 25:41-46 ಮತ್ತು ವ್ಯಾಖ್ಯಾನ ನೋಡಿರಿ).

ಐಶ್ವರ್ಯವಂತನು ನರಕವನ್ನು ತಲುಪಿದಾಗ ಆತನ ಮನಸ್ಸು ತಕ್ಷಣವೇ ತೆರೆಯಲ್ಪಟ್ಟಿತು. ಆ ಕ್ಷಣದಲ್ಲಿ ಅವನು ತಾನು ಎಂತಹ ಭಯಂಕರ ತಪ್ಪನ್ನು ಮಾಡಿದನೆಂದು ಗ್ರಹಿಸಿಕೊಂಡನು. ಅವನು ದೇವರಿಗಾಗಿ ಜೀವಿಸುವದಕ್ಕೆ ಬದಲಾಗಿ ತನ್ನ ಹಣಕ್ಕಾಗಿಯೂ, ಗರ್ವಕ್ಕಾಗಿಯೂ, ತನಗಾಗಿಯೂ ಜೀವಿಸಿದ್ದನು. ಅದು ಅವನು ಮಾಡಿದ ತಪ್ಪಾಗಿತ್ತು. ಐಶ್ವರ್ಯವಂತನು ಅಬ್ರಹಾಮನಿಗೆ ಕುರುಣೆ ತೋರುವಂತೆ ಕೇಳಿದನು. ಅವನು ಭೂಲೋಕದಲ್ಲಿರುವಾಗ ಯಾವ ಕರುಣೆಯನ್ನು ತೋರಿಸಿರಲಿಲ್ಲ; ಈಗ ನರಕದಲ್ಲಿ ಆತನು ಕರುಣೆಗಾಗಿ ಕೇಳುತ್ತಿದ್ದಾನೆ. ಆತನು ಅಬ್ರಹಾಮನನ್ನು ತಂದೆಯೆಂದು ಕರೆದನು, ಯಾಕೆಂದರೆ ಎಲ್ಲಾ ಯೆಹೂದ್ಯರ ತಂದೆಯಾಗಿದ್ದಾನೆ ಅವನು ತನ್ನ ನಾಲಿಗೆಯನ್ನು ಒಂದು ಹನಿ ನೀರಿನಿಂದ [35] ತಣ್ಣಗೆ ಮಾಡಬೇಕೆಂದು ಮಾತ್ರವೇ ಕೇಳಿಕೊಂಡನು.

**25-26** ಆದರೆ ಐಶ್ವರ್ಯವಂತನಿಗೆ ಅಲ್ಲಿ ಯಾವ ಪರಹಾರದ ಸಾಧ್ಯತೆಯೂ ಇರಲಿಲ್ಲ. ಪರಲೋಕ ಮತ್ತು ನರಕದ ನಡುವೆ ಒಂದು ದೊಡ್ಡ ಡೊಂಗರ ಸ್ಥಾಪಿಸಿಯದೆ. ಯಾವನೂ ಕೂಡಾ ಒಂದು ಕಡೆಯಿಂದ ಇನ್ನೊಂದು ಕಡೆಗೆ ದಾಟಲು ಸಾಧ್ಯವಿಲ್ಲ. ದೇವರ ನ್ಯಾಯತಿರ್ಪು ಅಂತಿಮವಾದದ್ದು. ಒಬ್ಬನು ತನ್ನ ಜೀವಿತದಲ್ಲಿ ದೇವರು ಮತ್ತು ನೆರೆಯವರನ್ನು ಧಿಕ್ಕರಿಸುವದಾದರೆ ದೇವರು ಮುಂದಿನ ಜೀವಿತದಲ್ಲಿ ಅವನನ್ನು ದಿಕ್ಕರಿಸಿ ನಿತ್ಯ ನಿತ್ಯಕ್ಕೆ ನರಕದಲ್ಲಿ ದೊಬ್ಬುವನು. ದೇವರ ನ್ಯಾಯತಿರ್ಪು ಒಮ್ಮೆ ಪ್ರಕಟಿಸಲ್ಪಟ್ಟಮೇಲೆ ಪುನಃ ಬದಲಾಯಿಸಲು ಸಾಧ್ಯವಿಲ್ಲ. ಐಶ್ವರ್ಯವಂತನು ಲೋಕದಲ್ಲಿ ತನ್ನ ಆದರಣೆಯನ್ನು ಪಡೆದಿದ್ದನು. ಆದರೆ ಈಗ ಇನ್ನೆಂದಿಗೂ ಅದು ಇಲ್ಲದಾಗಿತ್ತು (ಲೂಕ 6:24).

ಆದುದರಿಂದ, ಸ್ನೇಹಿತರೇ, ನೀವು ಸಾಯುವದಕ್ಕೆ ಮುಂಚೆ ಇನ್ನು ಸಮಯವಿರುವಾಗಲೇ ದೇವರೊಂದಿಗೆ ಸಂಧಾನ ಮಾಡಿಕೊಳ್ಳಿರಿ. ಪಾಪಗಳಿಗಾಗಿ ಪಶ್ಚಾತಾಪ ಪಟ್ಟು ಯೇಸುವಿನೆಡೆಗೆ ತಿರಿಗಿಕೊಳ್ಳಿರಿ. ಯಾಕೆಂದರೆ ಮರಣದ ನಂತರ ನಿಮಗೆ ಇನ್ನೊಂದು ಅವಕಾಶವು ಸಿಕ್ಕುವದಿಲ್ಲ.

ಇಂದೇ ಪಶ್ಚಾತಾಪ ಪಡಿರಿ. ನಾಳೆಯ ವರೆಗೂ ಕಾಯಬೇಡಿರಿ. ಯಾಕೆಂದರೆ ನೀವು ಈ ರಾತ್ರಿಯೇ ಸಾಯಬಹುದು (ಲೂಕ 12:20 ನೋಡಿರಿ). ಒಂದು ವೇಳೆ ನೀವು ಸಾಯುವದಾದರೆ ನಿತ್ಯತ್ವವನ್ನು ನರಕದಲ್ಲಿ ಕಳೆಯುವಿರಿ.

ನಿತ್ಯತ್ವವು ಎಷ್ಟು ಕಾಲವಿರುತ್ತದೆಂದು ಯೋಚಿಸಿರಿ. ಮನುಷ್ಯರು ಒಂದು ವರ್ಷ, ಐದು ವರ್ಷ, ಇಪ್ಪತ್ತು ವರ್ಷಗಳು ಸೆರೆಮನೆಗೆ ಹಾಕಲ್ಪಡುತ್ತಾರೆ ಮತ್ತು ಅದು ಬಹಳ ದಿರ್ಘ ಅವದಿ ಎಂದು ಯೋಚಿಸುತ್ತಾರೆ. ಆದರೆ ನರಕದಲ್ಲಿನ ನಿತ್ಯತ್ವವು ಹಾಗಿರುವದಿಲ್ಲ. ಅದು ಎಂದಿಗೂ ಅಂತ್ಯವಿಲ್ಲದ್ದಾಗಿದೆ. ಯಾರೂ ಕೂಡಾ "ನಾನು ಶ್ರೀಮಂತನಲ್ಲ, ಆದ್ದರಿಂದ ಈ ಸಾಮ್ಯವು ನನಗೆ ಅನ್ವಯಿಸುವದಿಲ್ಲ" ಎಂದು ಹೇಳದಿರಲಿ. ಯಾಕೆಂದರೆ ಇದು ಶ್ರೀಮಂತರಾಗಲಿ, ಬಡವರಾಗಲಿ ತನಗಾಗಿ ಆಸ್ತಿಯನ್ನು ಬಯಸುವ ತನ್ನ ನೆರೆಯವರಿಗೆ ಸಹಾಯ ಮಾಡದಿರುವ ಮತ್ತು ದೇವರ ವಿಷಯದಲ್ಲಿ ಐಶ್ವರ್ಯವಂತನಾಗಿರದ ಪ್ರತಿಯೊಬ್ಬನಿಗೂ ಅನ್ವಯಿಸುತ್ತದೆ (ಲೂಕ 12:21). ಆದುದರಿಂದ ಪ್ರತಿವ್ಯಕ್ತಿಯು ತನ್ನನ್ನು "ನಾನು ಏನನ್ನು ಹುಡುಕುತ್ತಿದ್ದೇನೆ? ನಾನು ಯಾವ ರೀತಿಯ ಸಂಪತ್ತನ್ನು ಕೂಡಿಸಿಟ್ಟು ಕೊಳ್ಳುತ್ತಿದ್ದೇನೆ – ಆತ್ಮೀಕ ಸಂಪತ್ತೋ ಅಥವಾ ಲೌಕಿಕ ಸಂಪತ್ತೊ? ನಾನು ದೇವರನ್ನು ಸೇವಿಸುತ್ತಿದ್ದೇನೊ ಅಥವಾ ನಿಜವಾಗಿಯೂ ನನ್ನ ಆಸ್ತಿಯನ್ನು ಸೇವಿಸುತ್ತಿರುವೇನೋ?" ಎಂದು ಕೇಳಿಕೊಳ್ಳಲಿ. ಬಡವನು ಸಹ ಹಣವನ್ನು ತನ್ನ "ದೇವರಾಗಿ" ಮಾಡಿ ಕೊಳ್ಳುತ್ತಾನೆ. ಈ ಸಾಮ್ಯವು ಪ್ರತಿಯೊಬ್ಬರಿಗೂ ಅನ್ವಯವಾಗುತ್ತದೆ.

**27-28** ಐಶ್ವರ್ಯವಂತನು ಇನ್ನು ತನಗೆ ಯಾವ ನಿರೀಕ್ಷೆಯಾಗಲಿ, ಪರಿಹಾರವನ್ನು ಕಂಡುಕೊಳ್ಳಲು ಯಾವ ಮಾರ್ಗವಾಗಲಿ ಇರುವದಿಲ್ಲ ಎಂದು ಕಂಡುಕೊಂಡಾಗ. ಆತನು ಇನ್ನು ಜೀವಿಸುತ್ತಿದ್ದ ತನ್ನ ಐದು ಮಂದಿ ಸಹೋದರರ ಕುರಿತಾಗಿ ಜ್ಞಾಪಿಸಿಕೊಂಡನು. ಅವನು ಅಬ್ರಹಾಮನಿಗೆ ಲಾಜರನನ್ನು ಕಳುಹಿಸಿ ಅವರನ್ನು ಎಚ್ಚರಿಸಬೇಕೆಂದು ಬೇಡಿಕೊಂಡನು. "ನಾನು ಯಾವ ಸ್ಥಿತಿಯಲ್ಲಿದ್ದೇನೆಂದು ಅವರಿಗೆ ಹೇಳಿರಿ. ಅವರಿಗೆ ನರಕ ಹೇಗೆ ಇರುತ್ತದೆಂದು ತಿಳಿಸಿರಿ, ಆಗ ಅವರು ದೇವರಕಡೆಗೆ ತಿರಿಗಿಕೊಂಡು ಈ ಭಯಂಕರ ಸ್ಥಳಕ್ಕೆ ಬರದಂತೆ ಇರುವರು" ಎಂದು ಆತನು ಹೇಳಿದನು.

**29** ಅಬ್ರಹಾಮನು ಉತ್ತರಿಸುತ್ತಾ "ಅವರಿಗೆ ಯಾವದೇ ಹೊಸ ಎಚ್ಚರಿಕೆಯ ಅಗತ್ಯವಿಲ್ಲ. ಅವರ ಮೋಶೆಯ. ಧರ್ಮಶಾಸ್ತ್ರವೂ ಪ್ರವಾದಿಗಳ ಗ್ರಂಥಗಳೂ [36] ಇವೆ. ಅವರು ಹಳೆ ಒಡಂಬಡಿಕೆಯನ್ನು ಓದಿ ವಿಧೇಯರಾಗಲಿ. ಅವರು ಹಳೆ ಒಡಂಬಡಿಕೆಯನ್ನು ನಂಬಲಿಲ್ಲವಾದರೆ ಅವರು ಲಾಜರನನ್ನು ನಂಬುವದಿಲ್ಲ" ಎಂದು ಹೇಳಿದನು.

**30** ಆದರೆ ಐಶ್ವರ್ಯವಂತನು "ಸತ್ತವರ ಕಡೆಯಿಂದ ಒಬ್ಬನು ಅವರ ಬಳಿಗೆ ಹೋದರೆ ಅವರು ನಂಬಿ ದೇವರ ಕಡೆಗೆ ತಿರಿಗಿಕೊಳ್ಳುವರು" ಅಂದನು.

**31** ಆದರೆ ಅಬ್ರಹಾಮನು "ಅವರು ಈಗಾಗಲೇ ನಂಬಲಿಲ್ಲವಾದರೆ ಸತ್ತವರೊಳಗಿಂದ ಒಬ್ಬನು ಜೀವಿತನಾಗಿ ಎದ್ದರೂ ಅವರು ನಂಬುವದಿಲ್ಲ" ಎಂದು ಹೇಳಿದನು. ಮತ್ತು ಅದು ನಿಜವೇ ಆಗಿತ್ತು. ಕ್ರಿಸ್ತನು ಮರಣದಿಂದ ಎದ್ದುಬಂದಿದ್ದರೂ ಹೆಚ್ಚು ಮಂದಿ ಯೆಹೂದ್ಯರು ನಂಬಲು ನಿರಾಕರಿಸಿದರು. ಆತನ ದೇಹವು . ಕದ್ದುಕೊಳ್ಳಲ್ಪಟ್ಟಿದೆಯೆಂದು ಅವರು ಹೇಳಿದರು. ಎಲ್ಲಾ ಶ್ರೀಮಂತರು ನರಕಕ್ಕೆ ಹೋಗುವರು ಮತ್ತು ಬಡವರೆಲ್ಲಾ ಪರಲೋಕಕ್ಕೆ ಹೋಗುವರೆಂಬದಾಗಿ ಈ ಸಾಮ್ಯವು ಬೋಧಿಸುವದಿಲ್ಲ ಮತ್ತು ಕೆಲವು ಶ್ರೀಮಂತರು ಪರಲೋಕಕ್ಕೆ ಹೋಗುವರು ಹಾಗು ಬಹಳಷ್ಟು ಬಡವರು ಹೋಗುವದಿಲ್ಲ ಎಂದಾಗಲಿ ಇದು ಬೋಧಿಸುವದಿಲ್ಲ. ಶ್ರೀಮಂತರಾಗಲಿ ಅಥವಾ ಬಡವರೇ ಆಗಲಿ ಪರಲೋಕಕ್ಕೆ ಹೋಗಲು ಒಂದೇ ಬೀಗದ ಕೈ ಇರುತ್ತದೆ, ಅದಾವದೆಂದರೆ ನಂಬಿಕೆಯೇ. ಒಂದು ವೇಳೆ ಐಶ್ವರ್ಯವಂತನು ದೇವರ ಕಡೆಗೆ ತಿರಿಗಿಕೊಂಡು ನಂಬಿದರೆ ಅವನು ಬಡವನ ಮೇಲೆ ದಯೆ ಹೊಂದಿರುತ್ತಿದ್ದನು. ಅವನು ತನ್ನ ಐಶ್ವರ್ಯವನ್ನು ತನ್ನ ನೆರೆಯವನ ಸಹಾಯಕ್ಕಾಗಿ ಉಪಯೋಗಿಸಿರುತ್ತಿದ್ದನು ಮತ್ತು ಅವನು ಪರಲೋಕಕ್ಕೆ ಹೋಗಿರುತ್ತಿದ್ದನು. ಅದೇ ರೀತಿಯಲ್ಲಿ ಆ ಭಿಕ್ಷುಕನು ಪರಲೋಕಕ್ಕೆ ಹೋಗದೆ ಇರಬಹುದಿತ್ತು. ಅವನು ದೇವರ ಮೇಲೆ ಕೋಪವನ್ನೂ, ಕಹಿಮನಸ್ಸನ್ನೂ ಹೊಂದಿರಬಹುದಾಗಿತ್ತು. ಅವನು ನಂಬಿಕೆಯಿಡಲು ನಿರಾಕರಿಸಿರಬಹುದಿತ್ತು. ಹಾಗಿದ್ದದ್ದೇ ಆಗಿದ್ದರೆ ಅವನು ನರಕಕ್ಕೆ ಹೋಗಬಹುದಿತ್ತು.

ಆದುದರಿಂದ ಶ್ರೀಮಂತರಿಗೂ ಬಡವರಿಗೂ ಪರಲೋಕಕ್ಕೆ ಹೋಗಲು ಒಂದೇ ಮಾರ್ಗವಿರುತ್ತದೆ. ಅದು ಇಕ್ಕಟ್ಟಾದ ಮಾರ್ಗ ಮತ್ತು ಅದನ್ನು ಕಂಡು ಹಿಡಿಯುವವರು ಸ್ವಲ್ಪ ಜನ (ಮತ್ತಾಯ 7:14) ಇದು ಪಶ್ಚಾತಾಪ ಮತ್ತು ಕ್ರಿಸ್ತನಲ್ಲಿ ನಂಬಿಕೆಯಿಡುವ ಮಾರ್ಗವಾಗಿದೆ.

---

## ಅಧ್ಯಾಯ - 17

### ಪಾಪ, ನಂಬಿಕೆ, ಕರ್ತವ್ಯ (17:1-10)

(ಮತ್ತಾಯ 17:20, 18:6-7, 15, 21-22, ಮಾರ್ಕ 9:42).

**1-2** ಮಾರ್ಕ 9:42 ಮತ್ತು ವ್ಯಾಖ್ಯಾನ ನೋಡಿರಿ.

**3-4** ಮತ್ತಾಯ 18:15, 21-22 ಮತ್ತು ವ್ಯಾಖ್ಯಾನ ನೋಡಿರಿ.

**5-6** ಮತ್ತಾಯ 17:20, ಮಾರ್ಕ 9:24-29 ಮತ್ತು ವ್ಯಾಖ್ಯಾನ ನೋಡಿರಿ.

**7-8** ಇಲ್ಲಿ ಯೇಸು ಯಜಮಾನ ಮತ್ತು ಆಳಿನ ನಡುವೆ ಇರುವ ಸಂಬಂಧದ ಬಗ್ಗೆ ಬೋಧಿಸುತ್ತಾನೆ. ಒಬ್ಬ ಯಜಮಾನನು ತನ್ನ ಆಳನ್ನು ಹೊಲ ಉಳುವದಕ್ಕಾಗಲಿ ಅಥವಾ ಕುರಿಗಳನ್ನು ಮೇಯಿಸಲು ಕಳುಹಿಸುತ್ತಾನೆ. ದಿನದ ಅಂತ್ಯದಲ್ಲಿ ಆಳು ಮನೆಗೆ ಹಿಂದಿರುಗಿದಾಗ ಆತನು ಯಜಮಾನನಿಗೆ ಅಡುಗೆಯನ್ನು ಸಿದ್ದಪಡಿಸಬೇಕು. ಯಜಮಾನನು ಆಳಿಗೆ ಸೇವೆ ಮಾಡುವದಿಲ್ಲ. ಆಳು ಇಡೀ ದಿನವೆಲ್ಲಾ ಕೆಲಸ ಮಾಡಿ ಬಳಲಿದ್ದರೂ ಸಹ ಆತನು ಆಗಲೂ ತನ್ನ ಯಜಮಾನನ ಸೇವೆ ಮಾಡುತ್ತಲಿರಬೇಕು.

**9** ಯಜಮಾನನು ಆಳಿಗೆ "ನಿನ್ನಿಂದ ಉಪಕಾರವಾಯಿತು" ಎಂದು ಹೇಳುವದಿಲ್ಲ. ಯಜಮಾನನು ಆಳಿಗೆ ಯಾವ ಋಣವನ್ನು ಹೊಂದಿರುವದಿಲ್ಲ. ಯಾಕೆಂದರೆ ಆಳು ತನ್ನ ಕರ್ತವ್ಯವನ್ನು ಮಾಡುತ್ತಿದ್ದಾನಷ್ಟೇ. ಆಳು ನಿರಂತರವಾಗಿ ತನ್ನ ಯಜಮಾನನ ಸೇವೆ ಮಾಡುವದು ಆತನ ಹೊಣೆಯಾಗಿರುತ್ತದೆ. ಮತ್ತು ಆದುದರಿಂದ ಅವನು ಯಾವ ವಿಶೇಷ ಕೃತಜ್ಞತೆ ಅಥವಾ ವಂದನೆಗಳಿಗೆ ಯೋಗ್ಯನಾಗಿರುವದಿಲ್ಲ. ಒಬ್ಬ ಯಜಮಾನನು ತನ್ನ ಆಜ್ಞೆ ಪಾಲಿಸುವ ಆಳಿಗೆ ನಿನ್ನಿಂದ ಉಪಕಾರವಾಯಿತೆಂದು ಎಂದಿಗೂ ಹೇಳುವದಿಲ್ಲ.

**10** ಅದೇ ರೀತಿಯಲ್ಲಿ ನಾವು ಕ್ರಿಸ್ತನ ದಾಸರಾಗಿದ್ದೇವೆ. ನಾವು ದೇವರ ಸ್ವತ್ತು ಮತ್ತು ಆತನ ಆಳುಗಳಾಗಿದ್ದೇವೆ (ರೋಮ 1:1 ಮತ್ತು ವ್ಯಾಖ್ಯಾನ ನೋಡಿರಿ). ಯೇಸುವಿನ ಕಾಲದಲ್ಲಿ ಆಳುಗಳಿಗೆ ಯಾವ ಹಕ್ಕುಗಳು ಇರುತ್ತಿದ್ದಿಲ್ಲ. ಆತನ

ಒಡೆಯನು ಅವನನ್ನು ಕೊಂಡುಕೊಂಡಿರುತ್ತಾನೆ. ಆಳು ತನ್ನ ಒಡೆಯನು ಆಜ್ಞಾಪಿಸುವದಕ್ಕೆಲ್ಲಾ ವಿಧೇಯನಾಗ ಬೇಕಿತ್ತು. ಹಾಗೆ ನಾವು ಸಹ ಕ್ರಿಸ್ತನಿಂದ ಕೊಂಡುಕೊಳ್ಳಲ್ಪಟ್ಟವರಾಗಿದ್ದೇವೆ. ಆತನು ತನ್ನ ಸ್ವಂತ ರಕ್ತದಿಂದ ನಮ್ಮನ್ನು ಕೊಂಡುಕೊಂಡನು. (1 ಕೊರಿಂಥ 6:20, 1 ಪೇತ್ರ 1:18-19 ಹಾಗು ವ್ಯಾಖ್ಯಾನಗಳನ್ನು ನೋಡಿರಿ). ಆದುದರಿಂದ ನಮ್ಮ ಜೀವಿತ ಕಾಲವೆಲ್ಲಾ ನಾವು ಕ್ರಿಸ್ತನಿಗೆ ವಿಧೇಯರಾಗಿರಬೇಕು. ಮತ್ತು ಆತನು ಹೇಳಿದ್ದನ್ನೆಲ್ಲಾ ನಾವು ಮಾಡಿಮುಗಿಸಿದ ಮೇಲೆ ನಾವು ಆತನಿಗೆ "ನಾವು ಆಳುಗಳು, ಪ್ರಯೋಜನವಿಲ್ಲದವರು, ಮಾಡಬೇಕಾದದ್ದನ್ನೇ ಮಾಡಿದ್ದೇವೆ" ಎಂದು ಹೇಳಬೇಕು. ಎಂತಹ ಒಂದು ಆಳವಾದ ಬೋಧನೆ! ನಾವು ಎಲ್ಲದರಲ್ಲಿಯೂ ಕ್ರಿಸ್ತನಿಗೆ ವಿಧೇಯರಾದರೂ ಸಹ ನಾವು ಇನ್ನೂ ಅಯೋಗ್ಯರೇ ಆಗಿರುತ್ತೇವೆ. ನಮ್ಮನ್ನು ದೇವರ ದೃಷ್ಟಿಯಲ್ಲಿ "ಯೋಗ್ಯರನ್ನಾಗಿ" ಮಾಡಲು ನಮಗೆ ಸಾಧ್ಯವಾಗುವ ಒಂದು ಕಾರ್ಯವೂ ಇರುವದಿಲ್ಲ. ನಾವು ಎಂದಿಗೂ ಸಹ ದೇವರಿಂದ ಕೃತಜ್ಞತೆ ಹೊಂದುವದಕ್ಕೆ ಯೋಗ್ಯರಾಗಲು ಸಾಧ್ಯವಿಲ್ಲ. ದೇವರು ನಮಗೆ ಮಾಡಬೇಕೆಂದು ಹೇಳಿದ್ದೆಲ್ಲವನ್ನೂ ನಾವು ಮಾಡಿದ ಮೇಲೆಯೂ ನಾವು ಆತನ ಕೃಪೆ ಮತ್ತು ರಕ್ಷಣೆಯನ್ನು ಸ್ವೀಕರಿಸಲು ಯೋಗ್ಯರಾಗುವದಿಲ್ಲ. ದೇವರು ನಮಗೆ ಆಶಿರ್ವಾದವೊಂದನ್ನು ನೀಡುವದಾದರೆ ಅದು ಎಂದಿಗೂ ಸಹ ನಾವು ಅದಕ್ಕೆ ಯೋಗ್ಯರೆಂಬದಕ್ಕಾಗಿಯಲ್ಲ; ಅದು ಕೇವಲ ಆತನ ಕೃಪೆ ಮತ್ತು ಕರುಣೆಗಳ ಕಾರಣದಿಂದ ಮಾತ್ರವೇ ಆಗಿದೆ.

ಇನ್ನೂ ಒಂದು ಪ್ರಶ್ನೆಯು ಉಳಿದುಕೊಳ್ಳುತ್ತದೆ: ದೇವರು ಮಾಡಬೇಕೆಂದು ಹೇಳಿದ ಎಲ್ಲವನ್ನೂ ಮಾಡಿದ್ದೇನೆ. ಎನ್ನುವವರು ನಮ್ಮಲ್ಲಿ ಯಾರಾದರೂ ಇರುವಿರೋ! ಇಲ್ಲ, ಒಬ್ಬನಾದರೂ ಇಲ್ಲ. ಆದುದರಿಂದ ಒಬ್ಬನು ಎಲ್ಲವನ್ನೂ ಮಾಡಿದ ಮೇಲೆ ಸಹ ಅಯೋಗ್ಯನಾಗಿರುವದಾದರೆ ಎಲ್ಲವನ್ನು ಮಾಡಿಲ್ಲದ ನಾವು ಅದಕ್ಕಿಂತಲೂ ಕೀಳಾಗಿರಬೇಕು. ದೇವರೇ, ನಮ್ಮ ಮೇಲೆ ಕರುಣೆ ತೋರು!.

## ಸ್ವಸ್ಥರಾದ ಹತ್ತು ಮಂದಿ ಕುಷ್ಟರೋಗಿಗಳು (17:11-19)

**11** ಯೆರೂಸಲೇಮಿಗೆ ಪ್ರಯಾಣ ಮಾಡುವಾಗ ಯೇಸು ಗಲಿಲಾಯ ಮತ್ತು ಸಮಾರ್ಯದ ನಡುವೆ ಹಾದು ಹೋದನು (ಲೂಕ 9:51, 13:22). ಸಮಾರ್ಯದಲ್ಲಿ ಆತನಿಗೆ ಸ್ವಾಗತ ಸಿಗಲಿಲ್ಲ (ಲೂಕ:9:51-52). ಆದ್ದರಿಂದ ಆತನು ಸಮಾರ್ಯದ ಸುತ್ತಲಿನಿಂದ ಪ್ರಯಾಣಿಸುತ್ತಿದ್ದನು.37

**12-13** ಮಾರ್ಗ ಮಧ್ಯದಲ್ಲಿ ಯೇಸು ಹತ್ತು ಮಂದಿ ಕುಷ್ಟರೋಗಿಗಳನ್ನು ಸಂಧಿಸಿದನು. ಯೆಹೂದ್ಯ ಧರ್ಮಶಾಸ್ತ್ರದ ಅನುಸಾರವಾಗಿ ಅವರು ದೂರದಲ್ಲಿ ನಿಂತರು. ಕುಷ್ಟ ರೋಗ ಹೊಂದಿದ ವ್ಯಕ್ತಿಯು ಜನರಿಗೆ ಹತ್ತಿರವಾಗಿ ಬರಕೂಡದಾಗಿತ್ತು; ಯಾರಾದರೂ ಬಹಳ ಸಮೀಪವಾಗಿ 38 ಬಂದರೆ ಆ ವ್ಯಕ್ತಿಯು ಅಶುದ್ಧ! ಅಶುದ್ಧ! ಎಂದು ಕೂಗಬೇಕಾಗಿತ್ತು (ಯಾಜಕ ಕಾಂಡ 13:45-46). ಈ ಹತ್ತು ಜನರು ಯೇಸುವಿಗೆ ಬಗ್ಗೆ ಕೇಳಿದ್ದರು, ಆದ್ದರಿಂದ ಈಗ ತಮಗೆ ದಯೆ ತೋರಬೇಕೆಂದು ಆತನಿಗೆ ಕೂಗಿ ಹೇಳಿದರು.

**14** ಯೇಸು ಅವರನ್ನು ದೂರದಿಂದಲೇ ಗುಣಪಡಿಸಿದನು. ಆತನು ಕೇವಲ "ನೀವು ಹೋಗಿ ಯಾಜಕರಿಗೆ ಮೈ ತೋರಿಸಿಕೊಳ್ಳಿರಿ" ಎಂದು ಮಾತ್ರವೇ ಹೇಳಿದನು (ಮಾರ್ಕ 1:44 ಮತ್ತು ವ್ಯಾಖ್ಯಾನ ನೋಡಿರಿ). ಮತ್ತು ಅವರು ಯಾಜಕರ ಬಳಿಗೆ ಹೋಗುತ್ತಿರುವಾಗಲೇ ಸ್ವಸ್ಥರಾದರು. ಅವರು ದೊಡ್ಡ ನಂಬಿಕೆಯನ್ನು ಹೊಂದಿದ್ದರು, ಕಾರಣ ತಾವು ಸ್ವಸ್ಥರಾದದ್ದನ್ನು ನೋಡುವದಕ್ಕೆ ಮುಂಚೆಯೇ ಅವರು ಕ್ರಿಸ್ತನ ಆಜ್ಞೆಗೆ ವಿಧೇಯರಾದರು. ಅವರು ತಮ್ಮ ಪಾತ್ರವನ್ನು ಮಾಡಿದರು – ನಂಬಿದರು, ಮತ್ತು ಯೇಸು ತಾನು ಮಾಡಬೇಕಾದದ್ದನ್ನು ಮಾಡಿದನು.

**15-18** ಕುಷ್ಟರೋಗಿಗಳಾದ ಹತ್ತು ಜನರಲ್ಲಿ ಒಂಬತ್ತು ಮಂದಿ ಯೆಹೂದ್ಯರಾಗಿದ್ದರು ಮತ್ತು ಅವರು ಯೇಸುವಿಗೆ ಕೃತಜ್ಞತೆಸಲ್ಲಿಸಲು ತಿರಿಗಿ ಬರಲಿಲ್ಲ. ಆದರೆ ಅನ್ಯ ದೇಶದವನಾದ ಸಮಾರ್ಯನು ಮಾತ್ರವೇ ಯೇಸುವಿಗೆ ಉಪಕಾರ ಸ್ತುತಿ ಮಾಡಿದನು.

**19** ಯೇಸು ಸಮಾರ್ಯದವನಿಗೆ "ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿಯ" ಎಂದು ಹೇಳಿದನು (ಮಾರ್ಕ 5:34 ಮತ್ತು ವ್ಯಾಖ್ಯಾನ ನೋಡಿರಿ). ಯೇಸು ಅವನ ಶರೀರ ಗುಣ ಹೊಂದಿದ್ದರ ಕುರಿತು ಮಾತ್ರವೇ ಹೇಳದೆ ಆತನ ಆತ್ಮವು ಸಹ ಗುಣ ಹೊಂದಿದೆ ಎಂದು ಹೇಳಿದ್ದನು. ಅವನು ರಕ್ಷಣೆಯನ್ನು ಪಡೆದುಕೊಡಿದ್ದನು.

ಇತರ ಒಂಬತ್ತು ಮಂದಿ ಕುಷ್ಟರೋಗಿಗಳು ಕೇವಲ ಶಾರೀರಿಕ ಸ್ವಸ್ಥತೆಯನ್ನು ಮಾತ್ರವೇ ಹೊಂದಿಕೊಂಡರು. ಈ ಜೀವನದಲ್ಲಿ ನಾವು ಪಡೆದುಕೊಂಡಿರುವ ಆಶೀರ್ವಾದಗಳಿಗಾಗಿ ನಾವು ದೇವರನ್ನು ಸ್ತುತಿಸಲು ಬರದೆ ಹೋಗುವದಾದರೆ ಮುಂದಿನ ಜೀವನದಲ್ಲಿ ಯಾವ ಆಶಿರ್ವಾದಗಳನ್ನೂ ಸ್ವೀಕರಿಸುವದಿಲ್ಲ.

## ದೇವರ ರಾಜ್ಯದ ಆಗಮನ (17:20-37)

(ಮತ್ತಾಯ 16:25, 24:17-18, 26:28, 37-41, ಮಾರ್ಕ 8:35, 13:15-16, 21,23)

**20-21** ಯೆಹೂದ್ಯನಾಯಕರು ದೇವರ ರಾಜ್ಯವು ಯಾವಾಗ ಬರುವದೆಂದು ಹಗಲಿರುಳು ಹುಡುಕುವವರಾಗಿದ್ದರು. ಮೆಸ್ಸಿಯನು ಒಬ್ಬ ಬಲಿಷ್ಠ ಲೌಕಿಕ ರಾಜನಂತೆ ಬರುವನು. ರೋಮಾಯರನ್ನು ವಜಾಮಾಡಿ ತಿರಿಗೊಮ್ಮೆ ಇಸ್ರಾಯೇಲ

ರಾಜ್ಯವನ್ನು ಸ್ಥಾಪಿಸುವನೆಂದು ಅವರು ನಿರೀಕ್ಷಿಸಿದ್ದರು. ಮತ್ತು ಖಂಡಿತವಾಗಿಯೂ ಈ ನೂತನ ಯೆಹೂದ್ಯ ರಾಜ್ಯದಲ್ಲಿ ನಾವು ಪ್ರಮುಖ ಅಧಿಕಾರಿಗಳಾಗಿರುವೆವೆಂದು ಅವರು ಊಹಿಸಿಕೊಂಡರು.

ಆದುದರಿಂದ ಯೇಸು ಒಬ್ಬ ಪ್ರವಾದಿಯೆಂದು ಆಲೋಚಿಸಿಕೊಂಡ ಅವರು ಆತನಿಗೆ ದೇವರ ರಾಜ್ಯವು ಯಾವಾಗ ಬರುವದೆಂದು ಕೇಳಿದರು. ಆತನು ಅವರಿಗೆ – "ದೇವರ ರಾಜ್ಯವು ಪ್ರತ್ಯಕ್ಷವಾಗಿ ಬರುವಂಥದಲ್ಲ" ಎಂದು ಉತ್ತರಿಸಿದನು. ಜನರು "ಅಗೋ ಅದು ಅಲ್ಲಿದೆ" ಎಂದು ಹೇಳಲು ಶಕ್ತರಾಗಬೇಕೆಂದು ಇಚ್ಛಿಸುತ್ತಾರೆ. ಆದರೆ ದೇವರ ರಾಜ್ಯವು ಆತ್ಮೀಕವಾದದ್ದು; ಅದು ಇಹಲೋಕದ ರಾಜ್ಯವಲ್ಲ. ನಿಜವಾಗಿಯೂ ದೇವರ ರಾಜ್ಯವು ಮನುಷ್ಯರ ಹೃದಯಗಳಲ್ಲಿ ದೇವರ ಆಳಿಕೆಯೇ ಆಗಿದೆ (ಮತ್ತಾಯ 12:19 ಮತ್ತು ವ್ಯಾಖ್ಯಾನ ನೋಡಿರಿ). ಅದು ಮಾತ್ರವೇ ಅಲ್ಲದೆ ದೇವರ ರಾಜ್ಯವು ಈಗಾಗಲೇ ಬಂದಿರುತ್ತದೆ. ಯೇಸು ತನ್ನೊಂದಿಗೆ ದೇವರ ರಾಜ್ಯವನ್ನು ತಂದನು. ಮಾನವರು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವಾಗ ಅವರು ದೇವರ ರಾಜ್ಯವನ್ನು ಪ್ರವೇಶಿಸುತ್ತಾರೆ. ಮತ್ತು ದೇವರ ರಾಜ್ಯವು ಅವರನ್ನು ಪ್ರವೇಶಿಸುತ್ತದೆ. "ದೇವರ ರಾಜ್ಯವು ನಿಮ್ಮಲ್ಲಿಯೇ ಅದೆ"[39] ಎಂದು ಯೇಸು ಹೇಳಿದನು. ಫರಿಸಾಯರು ದೇವರ ರಾಜ್ಯವು ಯಾವಾಗ ಬರುವದೆಂದು ತಿಳಿಯಲಿಚ್ಛಿಸಿದರು. ಆದರೆ ಅವರ ಆತ್ಮೀಕ ಕಣ್ಣುಗಳು ತೆರೆದಿದ್ದರೆ ದೇವರ ರಾಜ್ಯವು ಈಗಾಗಲೇ ಬಂದಿದೆಯೆಂಬದನ್ನು ಅವರು ತಿಳಿದಿರಬಹುದಿತ್ತು.

**22** ವಚನಗಳು 20-21ರಲ್ಲಿ ಯೇಸು ದೇವರ ರಾಜ್ಯದ ಅಂದರೆ ಮೊದಲನೆಯ ಬರೋಣದ ಕುರಿತಾಗಿ ಫರಿಸಾಯರೊಂದಿಗೆ ಮಾತನಾಡುತ್ತಾನೆ. ಈಗ 22ನೇ ವಚನದಲ್ಲಿ ಯೇಸು ತನ್ನ ಎರಡನೆಯ ಬರೋಣ, ಲೋಕಾಂತ್ಯದಲ್ಲಿ ಸಂಭವಿಸುವ ಮನುಷ್ಯಕುಮಾರನ [40] ದಿನಗಳ ಕುರಿತಾಗಿ ತನ್ನ ಶಿಷ್ಯರೊಂದಿಗೆ ಮಾತನಾಡುತ್ತಾನೆ. ಯೇಸು ಅವರಿಗೆ "ಒಂದು ಕಾಲ ಬರುತ್ತದೆ, ಅದರಲ್ಲಿ ನೀವು ಮನುಷ್ಯಕುಮಾರನ ದಿನಗಳೊಳಗೆ ಒಂದು ದಿನವನ್ನು ನೋಡಬೇಕೆಂದು ಅಪೇಕ್ಷಿಸುವಿರಿ" ಎಂದು ಹೇಳಿದನು. ಯೇಸುವಿನ ಮಾತುಗಳ ಅರ್ಥವು ಈ ರೀತಿಯಾಗಿದೆ. ಏನೆಂದರೆ, ಯೇಸು ಮರಣ ಹೊಂದಿ, ನಂತರ ಪರಲೋಕಕ್ಕೆ ಏರಿ ಹೋದ ನಂತರ ಶಿಷ್ಯರು ಕಠಿಣವಾದ ಹಿಂಸೆಗೆ ಗುರಿಯಾಗುವರು. ವಾಸ್ತವದಲ್ಲಿ, ಶಿಷ್ಯರಲ್ಲಿ ಅನೇಕರು ಕೊಲ್ಲಲ್ಪಡುವರು. ಆ ಕಗ್ಗತ್ತಲೆಯ ದಿನಗಳಲ್ಲಿ ಯೇಸು ಪುನಃ ಬಲ ಮತ್ತು ಮಹಿಮೆಯೊಂದಿಗೆ ಇಳಿದು ಬರುವದನ್ನು ನೋಡಲು ಹಂಬಲಿಸುವವರಾಗಿರುತ್ತಾರೆ (ಮಾರ್ಕ 13:26). ಆದರೆ ಯೇಸು "ನೀವು ಅದನ್ನು ನೋಡದೆ ಇರುವಿರಿ, ನೀವು ಸಾಯುವದಕ್ಕೆ ಮುಂಚೆ ನಾನು ಬರುವದಿಲ್ಲ" ಎಂದು ಹೇಳಿದನು.

**23-24** ಮತ್ತಾಯ 24:26-27, ಮಾರ್ಕ 13:21 ಮತ್ತು ವ್ಯಾಖ್ಯಾನ ನೋಡಿರಿ.

**25** ಪುನಃ ಯೇಸು ಇಲ್ಲಿ ತನ್ನ ಶಿಷ್ಯರಿಗೆ ತಾನು ತಿರಿಗಿ ಮಹಿಮೆಯಲ್ಲಿ ಬರುವದಕ್ಕೆ ಮುಂಚೆ ಸ್ವತಃ ಬಾಧೆಯನ್ನು ಹೊಂದಿ ಮರಣಿಸಬೇಕೆಂಬದನ್ನು ತಿಳಿಸುತ್ತಾನೆ (ಮಾರ್ಕ 8:31 ಮತ್ತು ವ್ಯಾಖ್ಯಾನ ನೋಡಿರಿ).

**26-27** ಇಲ್ಲಿ ಯೇಸು ಮನುಷ್ಯ ಕುಮಾರನಾದ ತಾನು ಹೇಗೆ ಬರುವನೆಂಬದನ್ನು ಬಣ್ಣಿಸುತ್ತಾನೆ. ಆತನು ಅನಿರೀಕ್ಷಿತವಾಗಿ ಬರುವನು. ಆತನು ನ್ಯಾಯಾಧಿಪತಿಯಾಗಿ ಬರುವನು. ಮತ್ತು ನೋಹನನ ದಿನಗಳಲ್ಲಿ ಜನರು ಜಲ ಪ್ರಳಯದಲ್ಲಿ ಸತ್ತ ಹಾಗೆಯೇ ಕ್ರಿಸ್ತನ ಎರಡನೆಯ ಬರುವಿಕೆಯಲ್ಲಿ ದುಷ್ಟರು ದಂಡಿಸಲ್ಪಟ್ಟು ನಾಶವಾಗುವರು (ಮತ್ತಾಯ 24:37-39 ಮತ್ತು ವ್ಯಾಖ್ಯಾನ ನೋಡಿರಿ).

**28-29** ಲೋಟನ ದಿನಗಳಲ್ಲಿ ತಕ್ಷಣವೇ ಆಕಾಶದಿಂದ ಬೆಂಕಿ ಮತ್ತು ಗಂಧಕಗಳು ಬಿದ್ದು ಕೆಟ್ಟ ಸೋದೋಮ ಪಟ್ಟಣವನ್ನು ನಾಶಮಾಡಿದ ಹಾಗೆಯೇ ಮನುಷ್ಯಕುಮಾರನ ಬರುವಿಕೆಯಲ್ಲಿಯೂ ಸಹ ಇರುವದು. ಜನರು ದೇವರ ನ್ಯಾಯ ತಿರ್ಪನ್ನು ನಿರೀಕ್ಷಿಸಿದ್ದಿಲ್ಲ. ಅವರು ತಿನ್ನುತ್ತಾ, ಕುಡಿಯುತ್ತಾ, ಮೋಜುಮಾಡಿಕೊಳ್ಳುತ್ತಾ ಇದ್ದರು. ಅವರು ತಾವು ಸುರಕ್ಷಿತವಾಗಿದ್ದೇವೆಂದು ನಂಬಿದರು. ಆದರೆ ದೇವರು ಲೋಟ ಮತ್ತು ಆತನ ಹೆಣ್ಣು ಮಕ್ಕಳನ್ನು ತಪ್ಪಿಸಿಕಾಪಾಡಿದ ತಕ್ಷಣವೇ ಆತನು ಪಟ್ಟಣವನ್ನೂ, ಅದರಲ್ಲಿದ್ದ ಜನರೆಲ್ಲರನ್ನೂ ನಾಶಮಾಡಿದನು (ಆದಿಕಾಂಡ 19:1-29; ಮತ್ತಾಯ 11:23-24 ನೋಡಿರಿ).

**30-31** ಮಾರ್ಕ 13:15-16 ಮತ್ತು ವ್ಯಾಖ್ಯಾನ ನೋಡಿರಿ.

**32** ಲೋಟನ ಹೆಂಡತಿಯನ್ನು ನೆನಪಿಗೆ ತಂದು ಕೊಳ್ಳಿರಿ! ಲೋಟನ ಹೆಂಡತಿಯು ಮೊದಲು ಸೋದೋಮ ನಾಶನಗೊಳ್ಳುವದಕ್ಕೆ ಮುಂಚೆ ಅದರಿಂದ ಪಾರಾಗಿದ್ದಳು. ಆದರೆ ಅವಳು ಹಿಂದಿರುಗಿ ನೋಡಿದಳು. ಅವಳಿಗೆ ಆ ಕೆಟ್ಟ ಪಟ್ಟಣವನ್ನು ಬಿಡಲು ಇಷ್ಟವಿರಲಿಲ್ಲ. ಆಕೆಗೆ ಅದನ್ನು ಮರೆಯಲು ಇಷ್ಟವಾಗಲಿಲ್ಲ. ಅವಳ ಹೃದಯವು ಆ ಪಟ್ಟಣದಲ್ಲಿತ್ತೇ ಹೊರತು ದೇವರೊಂದಿಗಿರಲಿಲ್ಲ. ಆದುದರಿಂದ ಅವಳು ಒಂದು ಉಪ್ಪಿನ ಕಂಬವಾಗಿ ಹೋದಳು (ಆದಿಕಾಂಡ 19:16-17, 26).

ಲೋಟನ ಹೆಂಡತಿಯನ್ನು ನೆನಪಿಗೆ ತಂದುಕೊಳ್ಳಿರಿ! ಸೋದೋಮ" ನಿಂದ ತಪ್ಪಿಸಿಕೊಂಡಿರುವವರಾದ ನಾವು ಇದನ್ನು ಗಮನಕ್ಕೆ ತಂದುಕೊಂಡು ನಮ್ಮ ಹಳೆಯ ಜೀವಿತಕ್ಕೆ ತಿರುಗದಿರೋಣ. ಒಂದು ವೇಳೆ ತಿರಿಗಿಕೊಳ್ಳುವದಾದರೆ ನಾವು ಸಹ ಲೋಟನ ಹೆಂಡತಿಯ ಹಾಗೆ ಆತ್ಮೀಕವಾಗಿ "ಉಪ್ಪಿನ ಕಂಬವಾಗಿ ಮಾರ್ಪಡುವೆವು.

**33** ಮಾರ್ಕ 8:35 ಮತ್ತು ವ್ಯಾಖ್ಯಾನ ನೋಡಿರಿ.

**34-36** ಮತ್ತಾಯ 24:40-41 ಮತ್ತು ವ್ಯಾಖ್ಯಾನ ನೋಡಿರಿ.[41]

**37** ಮತ್ತಾಯ 24:28, ಮಾರ್ಕ 13:23 ಮತ್ತು ವ್ಯಾಖ್ಯಾನ ನೋಡಿರಿ.

# ಅಧ್ಯಾಯ - 18

## ಛಲವುಳ್ಳ ವಿಧವೆಯ ಸಾಮ್ಯ (18:1-8)

**1-5** ಇಲ್ಲಿ ಯೇಸು ಅನ್ಯಾಯಗಾರನಾದ ನ್ಯಾಯಾಧಿಪತಿಗೆ ನ್ಯಾಯವನ್ನು ಒದಗಿಸುವಂತೆ ಬೇಡಿಕೊಂಡ ಒಬ್ಬ ವಿಧವೆಯ ಕುರಿತಾಗಿ ಹೇಳುತ್ತಾನೆ. ಈ ನ್ಯಾಯಾಧಿಪತಿಯು ದೇವರಿಗೆ ಹೆದರದೇ ಮನುಷ್ಯರನ್ನು ಲಕ್ಷ್ಯ ಮಾಡದೆ ಇದ್ದವನಾಗಿದ್ದನು (ವಚನ 2). ಇವನೊಬ್ಬ ದುಷ್ಟ ನ್ಯಾಯಾಧಿಪತಿಯಾಗಿದ್ದು ಜನರೊಂದಿಗೆ ಅನ್ಯಾಯವಾಗಿ ಅಥವಾ ದಯೆಯಿಲ್ಲದವನಾಗಿ ನಡೆದುಕೊಂಡನು. ಅವನು ವಿಧವೆಯೊಬ್ಬಳಿಂದ ಲಂಚಕ್ಕಾಗಿ ಕಾಯುತ್ತಿದ್ದಾನೆ ಆದರೆ ಅವಳು ಬಹಳ ಬಡವಳಾಗಿದ್ದಳು. ಅವಳು ನ್ಯಾಯವನ್ನು ಪಡೆಯಲು ಇದ್ದ ಒಂದೇ ಮಾರ್ಗವೆಂದರೆ ಛಲಬಿಡದೇ ಬೇಡುವದು. ಕೊನೆಗೆ ಅವಳು ತನ್ನ ಛಲದಿಂದ ಮಾತ್ರವೇ ನ್ಯಾಯವನ್ನು ಪಡೆದುಕೊಂಡಳು.

ನಾವು ವಿಧವೆಯ ಮಾದರಿಯನ್ನು ಅನುಸರಿಸಿ ಪ್ರಾರ್ಥನೆಯಲ್ಲಿ ಛಲಹಿಡಿದು ನಿರಾಶರಾಗಿ ಬಿಟ್ಟು ಬಿಡದಂತೆ ಇರುವವರಾಗಿರಬೇಕು ಎಂಬುದಕ್ಕಾಗಿ ಯೇಸು ಈ ಸಾಮ್ಯವನ್ನು ಹೇಳಿದನು (ವಚನ 1).

**6-8** ಬಳಿಕ ಯೇಸು ಅನ್ಯಾಯಗಾರನಾದ ನ್ಯಾಯಾಧಿಪತಿಯನ್ನು ದೇವರೊಂದಿಗೆ ಹೋಲಿಸುತ್ತಾನೆ. ಒಂದು ವೇಳೆ ಒಬ್ಬ ದುಷ್ಟ ಮತ್ತು ಅನ್ಯಾಯಗಾರನಾದ ನ್ಯಾಯಾಧಿಪತಿಯು ವಿಧವೆಗೆ ನ್ಯಾಯವನ್ನು ಒದಗಿಸುವದಾದರೆ ಕರುಣೆಯುಳ್ಳವನು, ನ್ಯಾಯವಂತನೂ ಆದ ದೇವರು ತನಗೆ ಮೊರೆಯಿಡುವ ತಾನು ಆದುಕೊಂಡವರಿಗೆ[42] ಇನ್ನು ಎಷ್ಟೋ ಹೆಚ್ಚಾಗಿ ನ್ಯಾಯ ಒದಗಿಸುವನಲ್ಲವೇ? ನಾವು ಸಂಶಯ ಪಡದಿರೋಣ. ಅವರಿಗೆ ಆತನು ಬೇಗನೆ ನ್ಯಾಯತೀರಿಸುವನು.

ಈ ಸಾಮ್ಯದ ಮೂಲಕ ನಾವು ಎರಡು ಮುಖ್ಯ ಸಂಗತಿಗಳನ್ನು ಕಲಿಯಬಹುದು. ಮೊದಲನೆಯದಾಗಿ ಅನ್ಯಾಯಗಾರನಾದ ನ್ಯಾಯಾಧಿಪತಿಯ ಹಾಗೆ ದೇವರು ಸಹ ನಮ್ಮ ಪ್ರಾರ್ಥನೆಗಳಿಗೆ ತಕ್ಷಣವೆ ಉತ್ತರಿಸದಿರಬಹುದು. ನಮ್ಮ ನಂಬಿಕೆಯು ಪರೀಕ್ಷಿಸಲ್ಪಡುವಂತಾಗಲು ನಾವೆಲ್ಲರೂ ಒಂದಿಲ್ಲಾ ಒಂದು ರೀತಿಯಾದ ಅನ್ಯಾಯ ಮತ್ತು ಹಿಂಸೆಯನ್ನು ಅನುಭವಿಸಬೇಕೆಂದು ದೇವರು ಬಯಸುತ್ತಾನೆ (ರೋಮಾ 5:3-4, ಯಾಕೋಬ 1:3-4, 1 ಪೇತ್ರ 1:6-7 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಅಲ್ಲದೆ ಈ ಜೀವನದಲ್ಲಿ ನಾವು ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರರಾಗುವದರ ಮೂಲಕ ಮುಂದಿನ ಜೀವಿತದಲ್ಲಿ ಆತನ ಮಹಿಮೆಯಲ್ಲಿ ಪಾಲುಗಾರರಾಗಬೇಕೆಂದು ದೇವರು ಇಚ್ಛಿಸುತ್ತಾನೆ (ರೋಮಾ 8:17, 1 ಪೇತ್ರ 4:12-13 ಮತ್ತು ವ್ಯಾಖ್ಯಾನ ನೋಡಿರಿ). ಆದುದರಿಂದ ಸ್ವಲ್ಪ ಕಾಲದ ತನಕ ನಾವು ಅನ್ಯಾಯವನ್ನು ಅನುಭವಿಸುವಂತೆ ದೇವರು ನಮ್ಮನ್ನು ಬಿಡುವದಾದರೆ ಅದು ನಮ್ಮ ಒಳ್ಳೆಯದಕ್ಕಾಗಿಯೇ ಆಗಿದೆ (ರೋಮಾ 8:28 ಮತ್ತು ವ್ಯಾಖ್ಯಾನ ನೋಡಿರಿ). ಆದ್ದರಿಂದ, ದೇವರು ತಾನು ಆದುಕೊಂಡವರಿಗೆ ಬೇಗ ನ್ಯಾಯ ತೀರಿಸುವನೆಂದು ಯೇಸು ಏಕೆ ಹೇಳಿದನು? ದೇವರ ಸಮಯ ಮತ್ತು ನಮ್ಮ ಸಮಯ ಒಂದೇ ಆಗಿರುವದಿಲ್ಲ. ದೇವರಿಗೆ ಸಾವಿರವರ್ಷಗಳು ಒಂದು ದಿನದ ಹಾಗಿವೆ (2 ಪೇತ್ರ 3:8). ಇಲ್ಲಿ "ಬೇಗ" ಎಂಬ ಪದದ ಅರ್ಥವು "ಸರಿಯಾದ ಸಮಯದಲ್ಲಿ" ಎಂಬದಾಗಿದೆ. ದೇವರು ಅನಾವಶ್ಯಕವಾಗಿ ತಡಮಾಡುವದಿಲ್ಲ. ಈ ಸಾಮ್ಯದಿಂದ ನಾವು ಕಲಿಯಬೇಕಾದ ಸಂಗತಿಯೇನೆಂದರೆ ನಾವು ಎಡಬಿಡದೆ ಯಾವಾಗಲೂ ಪ್ರಾರ್ಥಿಸುವವರಾಗಿರಬೇಕು. ನಮ್ಮ ಪ್ರಾರ್ಥನೆಗೆ ಉತ್ತರವು ತಕ್ಷಣವೇ ಬರದೇ ಇರುವಾಗಲೂ ಸಹ ನಾವು ಪ್ರಾರ್ಥನೆಯಲ್ಲಿ ಮುಂದುವರೆಯಬೇಕೆಂದು ದೇವರು ಬಯಸುತ್ತಾನೆ. ನಾವು ಎಡೆಬಿಡದೆ ಪ್ರಾರ್ಥಿಸಬೇಕೆಂದು ಆತನ ಚಿತ್ತವಾಗಿದೆ. (ಲೂಕ 1:5-8 ಮತ್ತು ವ್ಯಾಖ್ಯಾನ ನೋಡಿರಿ). ನಾವು ಛಲಹಿಡಿದು ಪ್ರಾರ್ಥಿಸಬೇಕೆಂದು ದೇವರು ಏಕೆ ಬಯಸುತ್ತಾನೆ? ಉತ್ತರವೇನೆಂದರೆ: ನಮ್ಮ ನಂಬಿಕೆಯನ್ನು ತೋರ್ಪಡಿಸುವದಕ್ಕಾಗಿಯೇ. ವಿಶೇಷವಾಗಿ ಹಿಂಸೆಯ ಸಮಯಗಳಲ್ಲಿ ನಾವು ಎಡೆಬಿಡದೆ ಪ್ರಾರ್ಥಿಸುವವರಾಗಿರಬೇಕು. ಅಂದರೆ ನಮ್ಮ ನಂಬಿಕೆಯು ಪರೀಕ್ಷೆಗೊಳಪಡುವಾಗ ಛಲಹಿಡಿದು ಪ್ರಾರ್ಥಿಸಬೇಕು. ಯೇಸು ಹೀಗೆನ್ನುತ್ತಾನೆ "—ಕಡೆಯವರೆಗೂ ತಾಳುವವನು ರಕ್ಷಣೆ ಹೊಂದುವನು" (ಮಾರ್ಕ 13:13).

ದೇವರು ಕೊನೆಯಲ್ಲಿ ನಮಗೆ ನ್ಯಾಯವನ್ನು ಒದಗಿಸುತ್ತಾನೆಂಬದನ್ನು ನಾವು ಎಂದಿಗೂ ಸಂಶಯಿಸದೆ ನಂಬಿಕೆಯೊಂದಿಗೆ ದೇವರನ್ನು ನಿರಂತರವಾಗಿ ಬೇಡಿಕೊಳ್ಳುವವರಾಗಿರಬೇಕು. ಆತನು ಅದನ್ನು ಈ ಜೀವಿತದಲ್ಲಿ ಅನುಗ್ರಹಿಸಿದೇ ಇರಬಹುದು ಆದರೆ ಮುಂದಿನ ಜೀವಿತದಲ್ಲಿ ಖಂಡಿವಾಗಿಯೂ ಅನುಗ್ರಹಿಸುವನು. ಆದರೆ ಈ ಬೋಧನೆಯು ಹಿಂಸೆಯ ಸಮಯಗಳಿಗಾಗಿ ಮಾತ್ರವೇ ಆಗಿರುವದಿಲ್ಲ. ಇತರ ಸಮಯಗಳಲ್ಲೂ ಸಹ ನಾವು ಛಲಹಿಡಿದು ಪ್ರಾರ್ಥಿಸಬೇಕು. ನೀವು ನಿಮ್ಮ ಸ್ನೇಹಿತ ಅಥವಾ ಸಂಬಂಧಿಯೊಬ್ಬನಿಗಾಗಿ ಪ್ರಾರ್ಥಿಸುತ್ತಿರುವಿರೋ? ನಿಮಗೆ ಯಾವ ಉತ್ತರವು

ಕಾಣಿಸುತ್ತಿಲ್ಲವೋ? ಎಡೆಬಿಡದೆ ಪ್ರಾರ್ಥಿಸಿರಿ. ನೀವು ನಿಮ್ಮ ಜೀವಿತದಲ್ಲಿ ಜಯ ಸಾಧಿಸಲಾಗದಂಥ ಯಾವದಾದರೂ ಪಾಪ ಅಥವಾ ಕೆಟ್ಟಚಟವು ಇರುವದೋ? ನಿರಂತರವಾಗಿ ಪ್ರಾರ್ಥಿಸಿರಿ. ಎದೆಗುಂದಬೇಡಿರಿ ಮತ್ತು ಅಂತ್ಯದಲ್ಲಿ ದೇವರು ಸರಿಯಾದ ಸಮಯದಲ್ಲಿ ನಿಮ್ಮ ಪ್ರಾರ್ಥನೆಗೆ ಉತ್ತರಿಸುವನು. ಹೀಗಿದ್ದರೂ ಮನುಷ್ಯಕುಮಾರನು ಬಂದಾಗ ಭೂಮಿಯಮೇಲೆ ನಂಬಿಕೆಯನ್ನು ಕಾಣುವನೋ? (ವಚನ 8). ಆತನು ಬಂದಾಗ ತಾವು ಹಿಂಸೆ ಮತ್ತು ಮರಣ ಹೊಂದಿದಾಗ್ಯು ಛಲ ಹಿಡಿದು ಪ್ರಾರ್ಥಿಸುವಂಥ ಜನರನ್ನು ಕಾಣುವನೋ? ಕಡೆಯ ದಿವಸಗಳಲ್ಲಿ ಕ್ರಿಸ್ತನು ತಿರಿಗಿ ಬರುವದಕ್ಕೆ ಮುಂಚೆ ಮಾನವರ ಮೇಲೆ ಸಮಸ್ಯೆ ಮತ್ತು ವೇದನೆಗಳು ಬರುವವು. ಆ ಸಮಯದಲ್ಲಿ ಅನೇಕರು ನಂಬಿಕೆಯಿಂದ ತೊಲಗಿ ಹೋಗುವರು (ಮತ್ತಾಯ 24:10) ಕ್ರಿಸ್ತನು ನಂಬಿಗಸ್ಥರಾಗಿ ಉಳಿದ ಯಾರನ್ನಾಗಲಿ ಕಾಣುವನೋ?

## ಫರಿಸಾಯ ಮತ್ತು ಸುಂಕದವನು (18:9-14)

**9** ಯೇಸು ತಾವೇ ನೀತಿವಂತರೆಂದು ತಮ್ಮಲ್ಲಿ ಭರವಸೆವಿಟ್ಟು ಕೊಂಡು ಉಳಿದವರನ್ನು ಉದಾಸೀನ ಮಾಡುವಂಥ ಕೆಲವರಿಗೆ ಒಂದು ಸಾಮ್ಯವನ್ನು ಹೇಳಿದನು. ಯೇಸುವಿನ ಕಾಲದಲ್ಲಿ ಯೆಹೂದ್ಯರಲ್ಲಿ ಹೆಚ್ಚಿನ ಪಾಲುಜನರು, ವಿಶೇಷವಾಗಿ ಫರಿಸಾಯರು ಆ ರೀತಿಯಲ್ಲಿದ್ದರು: ಅವರು ತಮ್ಮ ಸ್ವನೀತಿಯನ್ನು ನಂಬಿಕೊಂಡು ತಮ್ಮನ್ನು ಇತರರಿಗಿಂತ ಉತ್ತಮರೆಂದು ಪರಿಗಣಿಸಿಕೊಳ್ಳುತ್ತಿದ್ದರು. ಆದರೆ ಯೇಸು ಇತರ ಸಾಮ್ಯಗಳಂತೆ ಈ ಸಾಮ್ಯವು ಸಹ ಯೆಹೂದ್ಯರಿಗೆ ಮಾತ್ರ ಹೇಳಲ್ಪಡದೆ ನಮ್ಮೆಲ್ಲರಿಗಾಗಿಯೂ ಹೇಳಲ್ಪಟ್ಟಿದೆ. ನಮ್ಮಲ್ಲಿ ಯಾರಾದರೂ "ನಾನು ಯೋಗ್ಯನು, ನಾನು ನೀತಿವಂತನು" ಎಂದು ಹೇಳುವವರಿದ್ದಾರೆಯೋ? ಹಾಗಿರುವದಾದರೆ ಈ ಸಾಮ್ಯವು ಅವರಿಗಾಗಿಯೇ ಇರುತ್ತದೆ.

**10-12** ಈ ಸಾಮ್ಯವು ಇಬ್ಬರು ವ್ಯಕ್ತಿಗಳ ಕುರಿತಾಗಿದೆ. ಒಬ್ಬನು ಫರಿಸಾಯನು, ಇವನು ಕಟ್ಟು ನಿಟ್ಟಿನ ಯೆಹೂದ್ಯನಾಗಿದ್ದು ದೇವರನ್ನು ನಂಬಿ ತಾನು ಅರ್ಥಮಾಡಿಕೊಂಡ ರೀತಿಯಲ್ಲಿ ಧರ್ಮಶಾಸ್ತ್ರಕ್ಕೆ ವಿಧೇಯನಾಗುವವನಾಗಿದ್ದನು. ಲೂಕ 16:19ರ ಐಶ್ವರ್ಯವಂತನ ಹಾಗೆ ಈ ಸಾಮ್ಯದಲ್ಲಿನ ಫರಿಸಾಯನು ಒಬ್ಬ ನೀತಿವಂತನಾಗಿದ್ದನು. ಅವನು ಕೆಟ್ಟವನಾಗಿರಲಿಲ್ಲ. ಅವನು ಯೆಹೂದ್ಯ ಧರ್ಮಶಾಸ್ತ್ರಕ್ಕೆ ವಿಧೇಯನಾದದ್ದು ಮಾತ್ರವೇ ಅಲ್ಲದೆ ಧರ್ಮಶಾಸ್ತ್ರದ ಬೇಡಿಕೆಗಿಂತ ಹೆಚ್ಚಾಗಿ ಮಾಡಿದನು. ಧರ್ಮಶಾಸ್ತ್ರ– ಕ್ಕನುಸಾರವಾಗಿ ಒಬ್ಬನು ವರ್ಷಕ್ಕೆ ವಂದಾವರ್ತಿ ಮಾತ್ರವೇ ಉಪವಾಸ ಮಾಡಬೇಕಾಗಿತ್ತು, ಈ ವ್ಯಕ್ತಿಯು ವಾರಕ್ಕೆ ಎರಡಾವರ್ತಿ ಉಪವಾಸ ಮಾಡುತ್ತಿದ್ದನು. ಧರ್ಮಶಾಸ್ತ್ರಕ್ಕನುಸಾರವಾಗಿ ಒಬ್ಬನು ತನ್ನ ಕೆಲವೊಂದು ರೀತಿಯ ಆದಾಯಗಳಿಂದ ದಶಮಾಂಶವನ್ನು ಮಾತ್ರವೇ ಕೊಡಬೇಕಾಗಿತ್ತು; ಈ ವ್ಯಕ್ತಿಯು ತನ್ನ ಎಲ್ಲಾ ಆದಾಯದ ಹತ್ತನೆಯ ಭಾಗವನ್ನು ನೀಡಿದನು (ವಚನ 12). ಹೀಗಿರುವದರಿಂದ, ಈ ಫರಿಸಾಯನ ಪಾಪ ಏನಾಗಿತ್ತು? ಆತನು ತನ್ನನ್ನು ನೀತಿವಂತನೆಂದು ಪರಿಗಣಿಸಿಕೊಂಡಿದ್ದೇ ಅವನ ಪಾಪವಾಗಿತ್ತು. ಆತನು ತನಗೆ ದೇವರ ಕ್ಷಮಾಪಣೆ ಮತ್ತು ಕರುಣೆಗಳ ಅವಶ್ಯಕತೆಯಿದೆ ಎಂದು ಯೋಚಿಸಿಕೊಳ್ಳಲಿಲ್ಲ. ಅವನು ತನ್ನ ಒಳ್ಳೆಯ ಕಾರ್ಯಗಳ ಕಾರಣದಿಂದಾಗಿ ದೇವ ರಕ್ಷಣೆಯನ್ನು ಸ್ವೀಕರಿಸಿಕೊಳ್ಳಲು ಯೋಗ್ಯನೆಂದು ಪರಿಗಣಿಸಿಕೊಂಡನು. ದೇವರ ದೃಷ್ಟಿಯಲ್ಲಿ ಇದೊಂದು ಪಾಪಮಯ ಮನೋಭಾವವಾಗಿತ್ತು. ಈ ಫರಿಸಾಯನು ಗರ್ವಿಷ್ಠನಾಗಿದ್ದನು.

ಅದುಮಾತ್ರವಲ್ಲದೆ ಈ ಫರಿಸಾಯನು ಹೃದಯದಲ್ಲಿ ನಿಜವಾಗಿಯೂ ನೀತಿವಂತನಾಗಿರಲಿಲ್ಲ. ಆತನು ಇತರರನ್ನು ಉದಾಸೀನ ಮಾಡಿದನು. ಆತನು ಅವರನ್ನು ಪ್ರೀತಿಸಲಿಲ್ಲ. ಆತನು ಅವರಿಗೆ ತೀರ್ಪುಮಾಡುತ್ತಿದ್ದನು (ಮತ್ತಾಯ 7:1-2). ಇದನ್ನು ಮಾಡುವದರ ಮೂಲಕ ಅವನು ದೇವರಿಗೆ ಅವಿಧೇಯನಾದನು (ಮತ್ತಾಯ 23:23 ಮತ್ತು ವ್ಯಾಖ್ಯಾನ ನೋಡಿರಿ). ಫರಿಸಾಯನು ಪ್ರಾರ್ಥನೆ ಮಾಡುವದಕ್ಕೆ ದೇವಾಲಯಕ್ಕೆ ಹೋದನು. ಈ ದಿನ ದೇವಾಲಯ ಮತ್ತು ಚರ್ಚಗಳಲ್ಲಿ ಪ್ರಾರ್ಥಿಸುವ ಅನೇಕರನ್ನು ಕಾಣಬಹುದು, ಅವರು ದೇವರ ರಾಜ್ಯದಲ್ಲಿ ಕಂಡು ಬಾರದವರಾಗಿದ್ದಾರೆ!.

**13** ಆದರೆ ಸುಂಕದವನಾದ ಎರಡನೆಯ ವ್ಯಕ್ತಿಯ ಮನೋಭಾವವು ಸಂಪೂರ್ಣ ವ್ಯತ್ಯಾಸವಾಗಿದೆ (ಮಾರ್ಕ 2:14 ಮತ್ತು ವ್ಯಾಖ್ಯಾನ ನೋಡಿರಿ). ಆತನು ತಾನು ಪಾಪಿಯೆಂದು ಬಲ್ಲವನಾಗಿದ್ದನು. ತಾನು ತನ್ನ ಪಾಪಗಳಿಗಾಗಿ ದೇವರಿಂದ ದಂಡನೆ ಹೊಂದಲು ಮಾತ್ರವೇ ಯೋಗ್ಯನೆಂದು ತಿಳಿದವನಾಗಿದ್ದನು. ಅವನು ಆತ್ಮದಲ್ಲಿ ಬಡವನಾಗಿದ್ದು ತನ್ನ ಪಾಪಗಳಿಗಾಗಿ ಗೋಳಾಡಿದನು (ಮತ್ತಾಯ 5:3-4 ಮತ್ತು ವ್ಯಾಖ್ಯಾನ ನೋಡಿರಿ). ಅವನು ದೇವರಿಂದ ಕರುಣೆಯನ್ನು ಮಾತ್ರವೇ ಕೇಳಿಕೊಳ್ಳುವ ಧೈರ್ಯ ಹೊಂದಿದ್ದನು.

**14** ಸುಂಕದವನು ನೀತಿವಂತನೆಂದು ನಿರ್ಣಯಿಸಲ್ಪಟ್ಟವನಾಗಿ ಹೋದನು. ಹೇಗಿದ್ದರೂ, ಫರಿಸಾಯನು ದೇವರ ದೃಷ್ಟಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡಲಿಲ್ಲ. ಸುಂಕದವನು ಪಾಪಗಳ ಕ್ಷಮಾಪಣೆಯನ್ನು ಹೊಂದಿ ತೊಳೆಯಲ್ಪಟ್ಟವನಾಗಿ ದೇವರಿಂದ ಅಂಗೀಕರಿಸಲ್ಪಟ್ಟನು. ಇನ್ನೊಂದು ಕಡೆಯಲ್ಲಿ ಫರಿಸಾಯನು ತನ್ನ ಗರ್ವ ಮತ್ತು ಪ್ರೀತಿಯ ಕೊರತೆಗಳ ಕಾರಣದಿಂದ ದೇವರ ಖಂಡನೆಗೆ ಗುರಿಯಾದನು. ಈ ಪ್ರಾಮುಖ್ಯವಾದ ಸಾಮ್ಯದಿಂದ ನಾವು ಕಲಿತುಕೊಳ್ಳುವ ದೇನೆಂದರೆ ನಾವು ದೇವರಿಂದ ಸ್ವೀಕರಿಸಲ್ಪಟ್ಟು ನೀತಿವಂತರೆಂದು ನಿರ್ಣಯಿಸಲ್ಪಡಬೇಕಾದರೆ ಮೊದಲು ನಾವು ನಮ್ಮನ್ನು ತಗ್ಗಿಸಿಕೊಂಡು. ಪಾಪಗಳಿಗಾಗಿ ಪಶ್ಚಾತಾಪಪಟ್ಟು ದೇವರಿಂದ ಕರುಣೆಯನ್ನು ಬೇಡಿಕೊಳ್ಳಬೇಕು. ದಾವಿದನು ಹೀಗೆ ಬರೆದನು: ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟಯಜ್ಞ; ದೇವರೇ, ಪಶ್ಚಾತಾಪದಿಂದ ಜಜ್ಜಿ ಹೋದ ಮನಸ್ಸನ್ನು ನೀನು ತಿರಸ್ಕರಿಸುವದಿಲ್ಲ (ಕೀರ್ತನೆಗಳು 51:17). ದೇವರ ಮುಂಭಾಗದಲ್ಲಿ ನಮ್ಮನ್ನು ತಗ್ಗಿಸಿಕೊಂಡಾಗ ಮಾತ್ರವೇ ಆತನು ನಮ್ಮ ಬಳಿಗೆ ಬಂದು ನಮ್ಮನ್ನು ಮೇಲಕ್ಕೆತ್ತಿ ಕ್ರಿಸ್ತನ ನೀತಿಯೆಂಬ ವಸ್ತ್ರದಿಂದ ನಮ್ಮಬೆತ್ತಲೆಯನ್ನು ಮುಚ್ಚುವನು.

ಆದರೆ ಫರಿಸಾಯರಂತೆ ತಮ್ಮನ್ನು ಹೆಚ್ಚಿಸಿಕೊಳ್ಳುವವರನ್ನು ದೇವರು ತಗ್ಗಿಸುವನು. ಅಂತಹ ಜನರಿಗೆ ದೇವರ ರಾಜ್ಯದೊಳಗೆ ಪ್ರವೇಶವಿರುವದಿಲ್ಲ. ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು, ಮತ್ತು ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು (ಮತ್ತಾಯ 23:12 ಮತ್ತು ವ್ಯಾಖ್ಯಾನ ನೋಡಿರಿ).

## ಚಿಕ್ಕ ಮಕ್ಕಳು ಮತ್ತು ಯೇಸು (18:15-17)

(ಮತ್ತಾಯ 19:13-15, ಮಾರ್ಕ 10:13-16)

**15-17** ಮಾರ್ಕ 10:13-16 ಮತ್ತು ವ್ಯಾಖ್ಯಾನ ನೋಡಿರಿ.

## ಒಬ್ಬ ಐಶ್ವರ್ಯವಂತ ಅಧಿಕಾರಿ (18:18-30)

(ಮತ್ತಾಯ 19:16-30, ಮಾರ್ಕ 10:17-31).

**18-30** ಮಾರ್ಕ 10:17-31 ಮತ್ತು ವ್ಯಾಖ್ಯಾನ ನೋಡಿರಿ.

## ಯೇಸು ಪುನಃ ತನ್ನ ಮರಣವನ್ನು ಮುಂತಿಳಿಸಿದ್ದು (18:31-34)

(ಮತ್ತಾಯ 20:17-19, ಮಾರ್ಕ 10:32-34)

**31-34** ಮಾರ್ಕ 10:32-34 ಮತ್ತು ವ್ಯಾಖ್ಯಾನ ನೋಡಿರಿ

## ಒಬ್ಬ ಕುರುಡನಾದ ಬಿಕ್ಷುಕನು ತನ್ನ ದೃಷ್ಟಿಯನ್ನು ಪಡೆದುಕೊಂಡಿದ್ದು (18:35-43)

(ಮತ್ತಾಯ 20:29-34, ಮಾರ್ಕ 10:46-52)

**35-43** ಮಾರ್ಕ 10:46-52 ಮತ್ತು ವ್ಯಾಖ್ಯಾನ ನೋಡಿರಿ.

---

# ಅಧ್ಯಾಯ - 19

## ಸುಂಕದವನಾದ ಜಕ್ಕಾಯ (19:1-10)

**1** ಯೋರ್ದಾನ್ ನದಿಯ ಪೂರ್ವಕ್ಕೆ ಪ್ರಯಾಣಿಸಿ ಯೇಸು ಯೆರೂಸಲೇಮಿನ ಪೂರ್ವಕ್ಕೆ ಹದಿನಾರು ಮೈಲುಗಳಷ್ಟು ದೂರವಿದ್ದ ಯೆರಿಕೋಪಟ್ಟಣದ ಒಳಿ ನದಿಯನ್ನು ದಾಟಿದನು (ಲೂಕ 10:30,17:11).

**2-4** ಜಕ್ಕಾಯನೆಂಬ ಪ್ರಧಾನ ಸುಂಕದವನು ಯೇಸು ಬಂದಿರುವ ಸುದ್ದಿಯನ್ನು ಕೇಳಿದನು. ಯೇಸು "ಸುಂಕದವರು ಮತ್ತು ಪಾಪಿಗಳ " ಸ್ನೇಹಿತನೆಂಬದಾಗಿ ಪ್ರಸಿದ್ಧನಾಗಿದ್ದನು (ಮತ್ತಾಯ 11:9). ಮತ್ತು ಜಕ್ಕಾಯನು ಅವನನ್ನು ನೋಡಬೇಕೆಂದು ಕಾತುರನಾಗಿದ್ದನು. ಜಕ್ಕಾಯನು ಶ್ರೀಮಂತನಾಗಿದ್ದನು. ರೋಮಾಯರು ತಮ್ಮ ಪ್ರಾಂತ್ಯಗಳಲ್ಲಿ ಸುಂಕ ವಸೂಲಿ ಮಾಡುವ ಕೆಲಸವನ್ನು ಆ ಉದ್ಯೋಗ ಪಡೆಯುವದಕ್ಕೆ ಹೆಚ್ಚು ಹಣವನ್ನು ನೀಡಿದವರಿಗೆ ಕೊಡುತ್ತಿದ್ದರು. ಸುಂಕದಾರರು ರೋಮಾಯರಿಂದ ಯಾವದೇ ನೇತನವನ್ನು ಪಡೆಯುತ್ತಿರಲಿಲ್ಲ. ಬದಲಾಗಿ ಜನರಿಂದ ಸಾಧ್ಯವಾದಷ್ಟು ಹಣವನ್ನು ವಸೂಲಿ ಮಾಡುತ್ತಿದ್ದರು. ರೋಮಾಯರಿಗೆ ಸಲ್ಲತಕ್ಕ ಹಣವನ್ನು ಸಲ್ಲಿಸಿದ ನಂತರ ತಾನು ಅನ್ಯಾಯವಾಗಿ ವಸೂಲಿ ಮಾಡಿದಂಥ ಉಳಿದ ಎಲ್ಲಾ ಹಣವನ್ನು ತನಗಾಗಿ ಇಟ್ಟುಕೊಳ್ಳಬ-ಹುದಾಗಿತ್ತು. ಹೀಗೆ ಹೆಚ್ಚು ಕಡಿಮೆ ಎಲ್ಲಾ ಸುಂಕ ವಸೂಲಿಗಾರರೂ ಸಹ ಜನರನ್ನು ವಂಚಿಸಿ ಐಶ್ವರ್ಯವಂತರಾದರು. ಅದರ ಫಲಿತವಾಗಿ ಪ್ರತಿಯೊಬ್ಬರು ಅವರನ್ನು ದ್ವೇಷಿಸುತ್ತಿದ್ದರು (ಮಾರ್ಕ 2:13-14 ಮತ್ತು ವ್ಯಾಖ್ಯಾನ ನೋಡಿರಿ).

**5-6** ಜಕ್ಕಾಯನು ದುಷ್ಟನೂ, ದುರಾಸೆಯುಳ್ಳವನು ಆಗಿದ್ದರೂ ಸಹ ಯೇಸು ಅವನನ್ನು ಕರೆದನು. ಆ ದಿನ ತಾನು ಅವನ ಮನೆಯಲ್ಲಿ ಇಳಿದುಕೊಳ್ಳುವನೆಂದು ಯೇಸು ಜಕ್ಕಾಯನಿಗೆ ಹೇಳಿದನು.

ಜಕ್ಕಾಯನು ಆತನನ್ನು ಸಂತೋಷದಿಂದ ಸೇರಿಸಿಕೊಂಡನು. ಜಕ್ಕಾಯನು ತನಗೆ ಯೇಸು ನೀಡಿದ ಗೌರವವನ್ನು ಕಂಡು ಆತನ ಹೃದಯವು ಕರಗಿತು. ಯೇಸು ತನ್ನನ್ನು ಕ್ಷಮಿಸಲು ಸಿದ್ಧನಾಗಿದ್ದಾನೆಂಬದನ್ನು ಜಕ್ಕಾಯನು ತಿಳಿದುಕೊಂಡನು. ಆದುದರಿಂದ ಅವನು ಯೇಸುವನ್ನು ಸಂತೋಷದಿಂದ ತನ್ನ ಮನೆಗೆ ಕರೆದುಕೊಂಡು ಹೋದನು.

**7** ಆದರೆ ಇದನ್ನು ನೋಡುತ್ತಲಿದ್ದ ಇತರರು ಯೇಸುವಿನ ವಿರುದ್ಧ ಗುಣುಗುಟ್ಟಿದರು "ಯಾವ" ನಿಜವಾದ ಯೆಹೂದ್ಯನೂ ಸಹ ವಿಶೇಷವಾಗಿ ಒಬ್ಬ ಬೋಧಕ ಅಥವಾ ಪ್ರವಾದಿಯು ಸುಂಕದವನಂತಹ ಪಾಪಿಯ ಮನೆಗೆ ಎಂದಿಗೂ ಹೋಗುವದಿಲ್ಲ ಎಂದು ಹೇಳಿಕೊಂಡರು (ಮಾರ್ಕ 2:15-17, ಲೂಕ 15:1-2 ಮತ್ತು ವ್ಯಾಖ್ಯಾನ ನೋಡಿರಿ).

**8** ಅವರು ಆತನ ಮನೆಯನ್ನು ತಲುಪಿದಾಗ ಜಕ್ಕಾಯನು ತಾನು ಮಾಡಿದ ಕೆಟ್ಟತನಕ್ಕಾಗಿ ಸಂಪೂರ್ಣ ಪಶ್ಚಾತಾಪ ಪಟ್ಟನು. ಅವನು ತಾನು ಜನರನ್ನು ವಂಚಿಸಿದ್ದಾನೆಂಬದನ್ನು ಒಪ್ಪಿಕೊಂಡು ಇನ್ನು ತನ್ನ ಹಳೆಯ ಪಾಪಮಯ ಮಾರ್ಗಗಳನ್ನು ಬಿಟ್ಟು ವಿಮುಖನಾಗುತ್ತೇನೆಂದು ಯೇಸುವಿನ ಮುಂದೆ ಮಾತುಕೊಟ್ಟನು. "ಕರ್ತನೇ, ನೋಡು ನನ್ನ ಆಸ್ತಿಯಲ್ಲಿ ಅರ್ಧವನ್ನು ಬಡವರಿಗೆ ಕೊಡುತ್ತೇನೆ." ಎಂದು ಯೇಸುವಿಗೆ ವಾಗ್ದಾನ ಮಾಡಿದನು. ಅಲ್ಲದೆ ತಾನು ವಂಚಿಸಿದ ಪ್ರತಿಯೊಬ್ಬನಿಗೂ ನಾಲ್ಕರಷ್ಟು[43] ಹಿಂದಕ್ಕೆ ಕೊಡುತ್ತೇನೆಂದು ಸಹ ಮಾತುಕೊಟ್ಟನು. ಅನೇಕ ಅಪ್ರಮಾಣಿಕ ಜನರು ಧರ್ಮಶಾಸ್ತ್ರದಿಂದ ಒತ್ತಾಯಿಸಲ್ಪಟ್ಟವರಾಗಿ ಪ್ರಾಮಾಣಿಕರಾಗಿರುತ್ತಾರೆ, ಆದರೆ ಅದಕ್ಕಾಗಿ ಅವರು ದೇವರಿಂದ ಯಾವ ಪ್ರಶಂಸೆಯನ್ನು ಹೊಂದುವದಿಲ್ಲ. ಆದರೆ ಜಕ್ಕಾಯನು ತನ್ನ ಸ್ವ ನಿರ್ಧಾರದಿಂದ ಪ್ರಾಮಾಣಿಕನಾಗಿ ಮಾರ್ಪಟ್ಟನು. ಹೀಗೆ ಯೇಸು ಆತನು ನಿಜವಾಗಿಯೂಪಶ್ಚಾತಾಪ ಹೊಂದಿದ್ದಾನೆಂದು ತಿಳಿದುಕೊಂಡಿದ್ದನು.

ಆ ದಿನ ಜಕ್ಕಾಯನ ಜೀವಿತದಲ್ಲಿ ಸಂಪೂರ್ಣ ಬದಲಾವಣೆಯು ಉಂಟಾಯಿತು. ಯೇಸು ಆತನ ಮನೆಯಲ್ಲಿಯೂ ಮತ್ತು ಆತನ ಮನದಲ್ಲಿಯೂ ಬಂದದ್ದರಿಂದಲೇ ಆ ಬದಲಾವಣೆ ಉಂಟಾಯಿತು. ನಾವು ಯೇಸುವನ್ನು ನಮ್ಮ ಜೀವಿತದಲ್ಲಿ ಆಹ್ವಾನಿಸುವಾಗಲೆಲ್ಲಾ ನಾವು ಇನ್ನೆಂದಿಗೂ ಇದ್ದ ಹಾಗೆಯೇ ಇರಲಾರೆವು . ನಾವು ನೂತನ ಸೃಷ್ಟಿಯಾಗುತ್ತೇವೆ (2 ಕೊರಿಂಥ 5:17 ಮತ್ತು ವ್ಯಾಖ್ಯಾನ ನೋಡಿರಿ).

**9-10** ಯೇಸು ಜಕ್ಕಾಯನ ಪಶ್ಚಾತಾಪದ ಮಾತುಗಳನ್ನು ಕೇಳಿದಾಗ ಆತನಿಗೆ "ಆ ಹೊತ್ತು ಈ ಮನೆಗೆ ರಕ್ಷಣೆಯಾಯಿತು" ಎಂದು ಹೇಳಿದನು. ಜಕ್ಕಾಯನು ಪಾಪ ಮತ್ತು ಅಪನಂಬಿಕೆಯಲ್ಲಿ ಕಳೆದು ಹೋಗಿದ್ದನು. ಈಗ ಅವನು ರಕ್ಷಿಸಲ್ಪಟ್ಟನು. ಈ ಕಾರಣಕ್ಕಾಗಿಯೇ ಯೇಸು ಭೂಮಿಗೆ ಬಂದನು. ಈ ಕಾರಣಕ್ಕಾಗಿಯೇ ಆತನು ಸುಂಕದವನ ಮನೆಗೆ ಹೋದನು. ಜಕ್ಕಾಯನಿಗೆ ಪಶ್ಚಾತಾಪದ ಅವಕಾಶವೊಂದನ್ನು ಕೊಡಬಾರದೇಕೆ? ಇವನು ಇತರ ಯಾವದೇ ಯೆಹೂದ್ಯನಂತೆ ಶರೀರಭಾವಕ್ಕನುಸಾರವಾಗಿ ಅಬ್ರಹಾಮನ ಮಗನಾಗಿದ್ದನು. ಈಗ ನಂಬಿಕೆಗನುಸಾರವಾಗಿ ಆತನು ಒಬ್ಬ ನಿಜವಾದ "ಅಬ್ರಹಾಮನ ಮಗ" ಆಗಿರುವನು (ಗಲಾತ್ಯ 3:7). ಜಕ್ಕಾಯನಂತಹ ಕಳೆದುಹೋದ ಪಾಪಿಯನ್ನು ರಕ್ಷಿಸುವದಕ್ಕಾಗಿಯೇ ಯೇಸು ಬಂದನು (ಮತ್ತಾಯ 18:12, ಮಾರ್ಕ 2:17 ನೋಡಿರಿ). ಒಂದು ವೇಳೆ ಈ ಯೇಸು ನಿಜವಾಗಿಯೂ ನಮ್ಮನ್ನು ರಕ್ಷಿಸಿ, ನಮ್ಮಲ್ಲಿ ವಾಸಿಸುತ್ತಿರುವದಾದರೆ ನಾವು ಖಂಡಿತವಾಗಿಯೂ ಕಳೆದು ಹೋದ ಇತರ ಪಾಪಿಗಳಿಗೆ ಶುಭವಾರ್ತೆಯನ್ನು ಹೇಳಲು ಹಂಬಲಿಸುವವ–ರಾಗಿರುತ್ತೇವೆ.

## ಹತ್ತು ಮೊಹರಿಗಳ ಸಾಮ್ಯ (19:11-27)

(ಮತ್ತಾಯ 25:14-30)

**11-25** ಮತ್ತಾಯ 25:14-28 ಮತ್ತು ವ್ಯಾಖ್ಯಾನ ನೋಡಿರಿ.

**26** ಮತ್ತಾಯ 25:29, ಮಾರ್ಕ 4:25 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

## ಜಯೋತ್ಸಾಹದ ಪ್ರವೇಶ (19:28-40)

(ಮತ್ತಾಯ 21:1-11, ಮಾರ್ಕ 11:1-11)

**28-40** ಮಾರ್ಕ 11:1-11 ಮತ್ತು ವ್ಯಾಖ್ಯಾನ ನೋಡಿರಿ.

## ಯೇಸು ಯೆರೂಸಲೇಮಿಗಾಗಿ ಪ್ರಲಾಪಿಸುತ್ತಾನೆ (19:41-44)

**41-42** ಯೇಸು ಎಣ್ಣೆ ಮರಗಳ ಗುಡ್ಡದಿಂದ ಯೆರೂಸಲೇಮನ್ನು ಪ್ರವೇಶಿಸಿದನು (ವಚನ 37). ಎಣ್ಣೆ ಮರಗಳ ಗುಡ್ಡದಿಂದ ಇಡೀ ಪಟ್ಟಣವು ತನ್ನ ಮುಂದೆ ಇರುವದನ್ನು ಆತನು ನೋಡಬಹುದಾಗಿತ್ತು. ಯೆಹೂದ್ಯನಾಯಕರು ತನ್ನನ್ನು ತಿರಸ್ಕರಿಸಿದ್ದಾರೆಂದು ಅವನು ಬಲ್ಲವನಾಗಿದ್ದನು. ಅಲ್ಲದೆ ಯೆರೂಸಲೇಮಿನ ಜನರು ಶೀಘ್ರವೇ ಆತನ ಮರಣಕ್ಕಾಗಿ ಕೂಗಿಕೊಳ್ಳಲಿದ್ದಾರೆಂದು ಅವನಿಗೆ ತಿಳಿದಿತ್ತು (ಮಾರ್ಕ 15:12-15). ಮತ್ತು ದೇವಕುಮಾರನನ್ನು ಕೊಂದದ್ದಕ್ಕಾಗಿ ಪಟ್ಟಣದ ಮೇಲೆಯೂ ಅದರ ಎಲ್ಲಾ ಜನರ ಮೇಲೆಯೂ ಬೇಗನೆ ಒಂದು ದೊಡ್ಡ ವಿನಾಶವು ಬರಲಿದೆಯೆಂಬದನ್ನು ಸಹ ಆತನು ಬಲ್ಲವನಾಗಿದ್ದನು. ಆದುದರಿಂದ ಅವನು ಪಟ್ಟಣಕ್ಕಾಗಿ ಅತ್ತನು (ವಚನ 41). ಅವನು "ನೀನಾದರೂ ಸಮಾಧಾನಕ್ಕೆ ಬೇಕಾದದ್ದನ್ನು ಇದೇ ದಿನದಲ್ಲಿ ತಿಳಿದುಕೊಂಡರೆ ಎಷ್ಟೋ ಒಳ್ಳೆಯದು" ಎಂದು ಹೇಳಿದನು. ಒಂದು ವೇಳೆ ಯೆರೂಸಲೇಮಿನ ಜನರು ಪಶ್ಚಾತಾಪ ಪಟ್ಟು ಕ್ರಿಸ್ತನನ್ನು [44] ಸ್ವಾಗತಿಸಿದ್ದೇ ಆಗಿದ್ದರೆ ಪಟ್ಟಣವು ಉಳಿಸಲ್ಪಡುತ್ತಿತ್ತು. ಯೆರೂಸಲೇಮಿನ [45] ಜನರಿಗೆ ಸಮಾಧಾನ ಇರುತ್ತಿತ್ತು. "ಆದರೆ ಈಗ ಸಮಾಧಾನವು ನಿನ್ನ ಕಣ್ಣಿಗೆ ಮರೆಯಾಗಿದೆ" ಎಂದು ಯೇಸು ಹೇಳಿದನು. ಅವರ ಪಶ್ಚಾತಾಪ ಪಡುವ ಅವಕಾಶವು ಕಳೆದುಹೋಗಿತ್ತು. ಅವರ ಹೃದಯಗಳು ಕಠಿಣಗೊಂಡಿದ್ದವು , ಅವರ ಕಣ್ಣುಗಳು ಕುರುಡಾಗಿದ್ದವು ಅವರು ದೇವರ ಬರೋಣದ ಸಮಯವನ್ನು (ವಚನ 44) ಅಂದರೆ ದೇವಕುಮಾರನಾದ ಯೇಸುವಿನ ಬರೋಣವನ್ನು ಗುರುತಿಸಲಿಲ್ಲ (ಮತ್ತಾಯ 23:37-39, ಮತ್ತು ವ್ಯಾಖ್ಯಾನ ನೋಡಿರಿ).

**43-44** ನಂತರ ಯೇಸು ಯೆರೂಸಲೇಮಿಗೆ ಸಮಾಧಾನದ ಬದಲಾಗಿ ಕತ್ತಿಯು ಬರುವದೆಂದು ಪ್ರವಾದಿಸಿದನು. ವೈರಿಗಳ ಸೈನ್ಯವು ಪಟ್ಟಣವನ್ನು ಸುತ್ತುವರೆದು ಸಂಪೂರ್ಣವಾಗಿ ನಾಶಮಾಡಿ ಆದರ ನಿವಾಸಿಗಳನ್ನೆಲ್ಲಾ ಕೊಂದು ಬಿಡುವರು (ಯೆರೆಮೀಯ 6:6, ಲೂಕ 21:6, 20-24). ಈ ಪ್ರವಾದನೆಯು ೪೦ ವರ್ಷಗಳನಂತರ ಕ್ರಿ.ಶ.೭೦ರಲ್ಲಿ ನೆರವೇರಿತು, ಆಗ ರೋಮಾಯ ಸೈನ್ಯವು ಬಂದು ಯೆರೂಸಲೇಮನ್ನು ಸರ್ವನಾಶಮಾಡಿದರು.

ದೇವರು ಪ್ರೀತಿಸ್ವರೂಪನು. ಆತನು ಜನರನ್ನು, ಪಟ್ಟಣಗಳನ್ನು ಮತ್ತು ರಾಷ್ಟ್ರಗಳನ್ನು ಪಶ್ಚಾತಾಪಕ್ಕೆ ಕರೆಯುತ್ತಾನೆ.ಅವನು ಬಹಳ ತಾಳ್ಮೆಯನ್ನು ಹೊಂದಿದ್ದಾನೆ. ಎಲ್ಲಾ ಮನುಷ್ಯರು ರಕ್ಷಣೆ ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬದು ದೇವರ ಚಿತ್ತವಾಗಿದೆ (1 ತಿಮೊಥೆ 2:4). ಯಾರೊಬ್ಬರೂ ನಾಶವಾಗದೆ ಎಲ್ಲರೂ ಆತನ ಕಡೆಗೆ ತಿರಿಗಿ ಕೊಳ್ಳಬೇಕೆಂದು ಆತನ ಇಚ್ಛೆಯಾಗಿದೆ (2 ಪೇತ್ರ 3:9). ಆದರೆ ಕೊನೆಗೂ ಮಾನವನು ದೇವರ ಕಡೆಗೆ ತಿರಿಗಿಕೊಳ್ಳದಿರುವದಾದರೆ ಆತನು

ನ್ಯಾಯಾಧಿಪತಿಯಾಗಿ ಬಂದು ಅವರನ್ನು ನಾಶಮಾಡುವನು. ನಿನವೆಯ ಜನರು ಪಶ್ಚಾತಾಪ ಪಟ್ಟದ್ದರಿಂದಲೇ ದೇವರು ಆ ಪಟ್ಟಣವನ್ನು ನಾಶಮಾಡದೆ ಉಳಿಸಿದನು (ಯೋನ 3:3-10) ಆದರೆ ಆತನು ಸೊದೋಮನ್ನು ಉಳಿಸಲಿಲ್ಲ. ದೇವರು ಅಬ್ರಹಾಮನಿಗೆ ಆತನು ಸೊದೋಮಿನಲ್ಲಿ ನೀತಿವಂತರಾದ ಹತ್ತು ಜನರನ್ನು ಕಂಡುಕೊಳ್ಳುವದಾದರೆ ಅದನ್ನು ನಾಶ ಮಾಡದೆ ಉಳಿಸುವೆನೆಂದು ಹೇಳಿದನು. ಆದರೆ ಆತನಿಗೆ ಪಶ್ಚಾತಾಪಪಡುವ ಹತ್ತು ಜನರು ಸಿಕ್ಕಲಿಲ್ಲ. ಆದ್ದರಿಂದ ಆತನು ಪಟ್ಟಣವನ್ನು ನಾಶಮಾಡಿದನು (ಆದಿಕಾಂಡ 120-23). ದೇವರು ತಿರಸ್ಕಾರ ಸಹಿಸುವವನಲ್ಲ ನಾವು ಬಿತ್ತಿದ್ದನ್ನೇ ಕೊಯ್ಯಬೇಕು (ಗಲಾತ್ಯ 6:7-8). ನಾವು ಪಶ್ಚಾತಾಪ ಪಡದೆ ಹೋದರೆ ನಾಶವಾಗುವೆವು. ದೇವರ ಬರೋಣದ ಸಮಯ ಇದಾಗಿದೆ "ಈಗಲೇ ದೇವರ ಆ ಸುಪ್ರಸನ್ನತೆಯ ಕಾಲ, ಇದೇ ಆರಕ್ಷಣೆಯ ದಿನ" (2 ಕೊರಿಂಥ 6:2). ನಾಳೆಯು ಬಹು ತಡವಾಗಬಹುದು.

### ದೇವಾಲಯದ ಬಳಿ ಯೇಸು (19:45-48)

ಮತ್ತಾಯ 21:12-19, ಮಾರ್ಕ 11:15-19)

**45-48** ಮಾರ್ಕ 11:15-19 ಮತ್ತು ವ್ಯಾಖ್ಯಾನ ನೋಡಿರಿ.

---

## ಅಧ್ಯಾಯ - 20

### ಯೇಸುವಿನ ಅಧಿಕಾರವು ಪ್ರಶ್ನಿಸಲ್ಪಟ್ಟಿದ್ದು (20:1-8)

(ಮತ್ತಾಯ 21:23-27, ಮಾರ್ಕ 11:27-33)

**1-8** ಮಾರ್ಕ 11:27-33 ಮತ್ತು ವ್ಯಾಖ್ಯಾನ ನೋಡಿರಿ.

### ಹಿಡುವಳಿದಾರರ ಸಾಮ್ಯ (20:9-19)

(ಮತ್ತಾಯ 21:33-46, ಮಾರ್ಕ 12:1-12)

**9-19** ಮಾರ್ಕ 12:1-12 ಮತ್ತು ವ್ಯಾಖ್ಯಾನ ನೋಡಿರಿ.

### ಕೈಸರನಿಗೆ ತೆರಿಗೆ ಸಲ್ಲಿಸುವದು (20:20-26)

(ಮತ್ತಾಯ 22:15-22, ಮಾರ್ಕ 12:13-17)

**20-26** ಮಾರ್ಕ 12:13-17 ಮತ್ತು ವ್ಯಾಖ್ಯಾನ ನೋಡಿರಿ.

### ಪುನರುತ್ಥಾನ ಮತ್ತು ಮದುವೆ (20:27-40)

(ಮತ್ತಾಯ 22:23-33, ಮಾರ್ಕ 12:18-27)

**27-40** ಮಾರ್ಕ 12:18-27 ಮತ್ತು ವ್ಯಾಖ್ಯಾನ ನೋಡಿರಿ.

### ಕ್ರಿಸ್ತನು ಯಾರ ಮಗನು? (20:41-47)

(ಮತ್ತಾಯ 22:41-46, ಮಾರ್ಕ 12:35-40)

**41-47** ಮಾರ್ಕ 12:35-40 ಮತ್ತು ವ್ಯಾಖ್ಯಾನ ನೋಡಿರಿ.

---

## ಅಧ್ಯಾಯ - 21

### ವಿಧವೆಯ ಕಾಣಿಕೆ (21:1-4)

(ಮಾರ್ಕ 12:41-44)

**1-4** ಮಾರ್ಕ 12:41-44 ಮತ್ತು ವ್ಯಾಖ್ಯಾನ ನೋಡಿರಿ.

## ಯುಗಾಂತ್ಯದ ಸೂಚನೆಗಳು (21:5-19)

(ಮತ್ತಾಯ 117-22, 24:1-14, ಮಾರ್ಕ 11-13)

**5-19** ಮಾರ್ಕ 13:1-13 ಮತ್ತು ವ್ಯಾಖ್ಯಾನ ನೋಡಿರಿ.

## ಯೆರೂಸಲೇಮಿನ ನಾಶನ (21:20-24)

(ಮತ್ತಾಯ 24:15-28, ಮಾರ್ಕ 13:14-23)

**20-24** ಮಾರ್ಕ 13:14-23 ಮತ್ತು ವ್ಯಾಖ್ಯಾನ ನೋಡಿರಿ.

## ಲೋಕದ ಅಂತ್ಯ (21:25-28)

(ಮತ್ತಾಯ 24:29-31, ಮಾರ್ಕ 13:24-27)

**25-28** ಮಾರ್ಕ 13:24-27 ಮತ್ತು ವ್ಯಾಖ್ಯಾನ ನೋಡಿರಿ.

## ಯೆರೂಸಲೇಮಿನ ಅಂತ್ಯ (21:29-33)

(ಮತ್ತಾಯ 24:32-35, ಮಾರ್ಕ 13:28-31)

**29-33** ಮಾರ್ಕ 13:28-31 ಮತ್ತು ವ್ಯಾಖ್ಯಾನ ನೋಡಿರಿ.

## ಜಾಗರೂಕರಾಗಿರುವಂತೆ ಎಚ್ಚರಿಸಿದ್ದು (21:34-38)

**34** ಯೇಸು ಈ ಅಧ್ಯಾಯದಲ್ಲಿ ಲೋಕದ ಅಂತ್ಯಕ್ಕೆ ಮುಂಚೆ ಸಂಭವಿಸುವ ಸೂಚನೆಗಳನ್ನು ಬಣ್ಣಿಸುತ್ತಾನೆ. ಆ ಸಮಯದಲ್ಲಿಯೇ ಯೇಸು ತಿರಿಗಿ ಬರುವವನಾಗಿದ್ದಾನೆ. ಈ ಭಾಗದಲ್ಲಿ ಯೇಸು ಜಾಗರೂಕರಾಗಿರುವಂತೆ ನಮ್ಮನ್ನು ಎಚ್ಚರಿಸುತ್ತಾನೆ. ಆತನು ಯಾವಾಗ ಬರುವನೆಂದು ನಾವು ಸರಿಯಾಗಿ ತಿಳಿಯಲು ಸಾಧ್ಯವಿಲ್ಲ ಆದರೆ ನಾವು ಆತನಿಗಾಗಿ ಸಿದ್ಧರಾಗಿರಬೇಕು (ಮಾರ್ಕ 13:32-33 ಮತ್ತು ವ್ಯಾಖ್ಯಾನ ನೋಡಿರಿ).

ಆದುದರಿಂದ, ನಾವು "ಜಾಗರೂಕರಾಗಿರ್ರಿ" ಎಂದು ಯೇಸು ಎಚ್ಚರಿಸುತ್ತಾನೆ, ಅತಿಬೋಜನದ ಮದಡಿನಿಂದಲೂ ಅಮಲಿನಿಂದಲೂ ಪ್ರಪಂಚದ ಚಿಂತೆಗಳಿಂದಲೂ ನಮ್ಮ ಹೃದಯಗಳು ಭಾರವಾಗದಿರಲಿ ಎಂದು ಯೇಸು ಹೇಳುತ್ತಾನೆ. ಯೇಸುವಿನ ಎರಡನೆಯ ಬರೋಣವು ಪ್ರವಾಸಕ್ಕಾಗಿ ಹೋದ ಯಜಮಾನನು ಅನಿರೀಕ್ಷಿತವಾಗಿ ಹಿಂದಿರಿಗಿ ಬರುವ ರೀತಿಯಲ್ಲಿರುತ್ತದೆ. ಅವನು ಬಂದಾಗ ಅವನ ಆಳುಗಳು ಏನು ಮಾಡುವದನ್ನು ಕಾಣುತ್ತಾನೆ? ಆದ್ದರಿಂದ ನಾವು ನಿದ್ರಿಸುವವರಾಗಿರದೆ ಎಚ್ಚರವಾಗಿರೋಣ, ಯೇಸು ನಮಗೆ ಕೊಟ್ಟಿರುವ ಕೆಲಸವನ್ನು ಪರಿಶ್ರಮವಹಿಸಿ ಮಾಡುವವರಾಗಿರೋಣ. ಆತನು ಯಾವ ಗಳಿಗೆಯಲ್ಲಾದರೂ ಹಿಂದಿರುಗಿ ಬರುವನು (ಮತ್ತಾಯ 24:48-51, ಮಾರ್ಕ 13:34–37, 1ಥೆಸಲೋನಿಕ 5:4-8 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಯೇಸು ಯಾವಾಗ ಬರುತ್ತಿದ್ದಾನೆಂಬದನ್ನು ತಿಳಿಯುವದು ಪ್ರಾಮುಖ್ಯವಾಗಿರುವದಿಲ್ಲ. ವಾಸ್ತವದಲ್ಲಿ ಅದನ್ನು ತಿಳಿಯುವದು ನಮ್ಮ ಕೆಲಸವಲ್ಲ (ಅ.ಕೃತ್ಯ 1:7). ನಾವು ಎಲ್ಲಾ ಸಮಯದಲ್ಲಿಯೂ ಸಿದ್ಧರಾಗಿರುವದು ಮಾತ್ರವೇ ಪ್ರಾಮುಖ್ಯವಾದದ್ದಾಗಿದೆ. ನಾವು ಯಾವಾಗಲೂ ಸಿದ್ಧರಾಗಿರುವದಾದರೆ ಮತ್ತು ಜಾಗರೂಕರಾಗಿರುವದಾದರೆ ಆ ದಿನವು ನಮ್ಮ ಮೇಲೆ ಒಂದು ಉರ್ಲಿನಂತೆ ಬರುವದಿಲ್ಲ.

**35** ಕ್ರಿಸ್ತನು ನ್ಯಾಯತೀರ್ಪಿನಲ್ಲಿ ತಿರಿಗಿ ಬರುವಿಕೆಯ ಆ ದಿನವು ವಿಶ್ವಾಸಿಗಳು ಮತ್ತು ಅವಿಶ್ವಾಸಿಗಳು, ಯೆಹೂದ್ಯರು ಮತ್ತು ಅನ್ಯ ಜನರು ಅಂತೂ ಎಲ್ಲಾ ಜನರ ಮೇಲೆಯೂ ಬರುವದು.

**36** ಆದಿನಗಳಲ್ಲಿ ಭಯಂಕರವಾದ ಹಿಂಸೆಯು ಇರುವದು ಮತ್ತು ಅನೇಕರು ಹಿಂಜರಿದು ಬಿದ್ದು ಹೋಗುವರು (ಮತ್ತಾಯ 24:10-12). ನಾವು ಹಿಂಜರಿದು ಬಿದ್ದು ಹೋಗುವ, ನಂಬಿಕೆಯನ್ನು ಕಳೆದುಕೊಳ್ಳುವ, ಕ್ರಿಸ್ತನನ್ನು ಅಲ್ಲಗಳೆಯುವ ಶೋಧನೆಯಿಂದ ತಪ್ಪಿಸಿಕೊಳ್ಳುವಂತೆ ಪ್ರಾರ್ಥಿಸುವವರಾಗಿರಬೇಕು. ಕಾರಣ ಕಡೆಯ ವರೆಗೂ ಸ್ಥಿರವಾಗಿ ನಿಲ್ಲುವವನು ರಕ್ಷಣೆ ಹೊಂದುವನು (ಮಾರ್ಕ 13:13). ಯಾರ ನಂಬಿಕೆಯು ಸ್ಥಿರವಾಗಿ ಉಳಿಯುವದೋ ಅವರು ಮಾತ್ರವೇ ನ್ಯಾಯತೀರ್ಪಿನ ದಿನದಲ್ಲಿ ಮನುಷ್ಯಕುಮಾರನ ಮುಂದೆ ನಿಂತುಕೊಳ್ಳಲು ಶಕ್ತರಾಗುವರು (ಇಬ್ರಿಯ 10:35-39 ಮತ್ತು ವ್ಯಾಖ್ಯಾನ ನೋಡಿರಿ).

**37-38** ಯೆರೂಸಲೇಮಿನಲ್ಲಿನ ಆ ಕಡೆಯ ವಾರದಲ್ಲಿ ಯೇಸು ಪ್ರತಿ ದಿನ ದೇವಾಲಯದಲ್ಲಿ ಬೋಧಿಸುತ್ತಿದ್ದನು. ಮತ್ತು ಪ್ರತಿ ಸಾಯಂಕಾಲ ಪಟ್ಟಣದಿಂದ ಹೊರಟು ಯೆರೂಸಲೇಮಿನ ಹೊರಬಾಗದಲ್ಲಿದ್ದ ಎಣ್ಣೆ ಮರಗಳ ಗುಡ್ಡದ ಬಳಿಯಲ್ಲಿರುವ ಬೇಥಾನ್ಯ ಪಟ್ಟಣದಲ್ಲಿ ರಾತ್ರಿಯನ್ನು ಕಳೆಯುತ್ತಿದ್ದನು (ಮಾರ್ಕ 11:1,11).

# ಅಧ್ಯಾಯ - 22

## ಯೂದನು ಯೇಸುವನ್ನು ಹಿಡುಕೊಡಲು ಒಪ್ಪುತ್ತಾನೆ (22:1-6)

(ಮತ್ತಾಯ 26;1-5, 14-16, ಮಾರ್ಕ 14:1-2, 10-11)

**1-2** ಮಾರ್ಕ 14:1-2 ಮತ್ತು ವ್ಯಾಖ್ಯಾನ ನೋಡಿರಿ.

**3-6** ಮಾರ್ಕ 14:10-11 ಮತ್ತು ವ್ಯಾಖ್ಯಾನ ನೋಡಿರಿ.

## ಕರ್ತನ ಬೋಜನ (22:7-23)

(ಮತ್ತಾಯ 26:17-30, ಮಾರ್ಕ 14:12-16)

**7-23** ಮಾರ್ಕ 14:12-16 ಮತ್ತು ವ್ಯಾಖ್ಯಾನ ನೋಡಿರಿ.

## ಯಾರು ದೊಡ್ಡವರು ಎಂಬದರ ಕುರಿತು ಬೋಧನೆ (22:24-27)

(ಮತ್ತಾಯ 20:25-28, ಮಾರ್ಕ 10:42-45)

**24-27** ಮಾರ್ಕ 10:42-45 ಮತ್ತು ವ್ಯಾಖ್ಯಾನ ನೋಡಿರಿ.

## ಯೇಸು ಮತ್ತು ಆತನ ಶಿಷ್ಯರು (22:28-38)

**28-30** ವಚನಗಳು 24-27ರಲ್ಲಿ ಯೇಸು ತನ್ನ ಶಿಷ್ಯರನ್ನು ಹೆಚ್ಚಿನವರಾಗಬೇಕೆಂದು ತವಕ ಪಟ್ಟದ್ದಕ್ಕಾಗಿ ಗದರಿಸಿದನು. ಈಗ ಆತನು ಅವರಿಗೆ ಕೆಲವು ಪ್ರಶಂಸೆಗಳನ್ನು ನೀಡುತ್ತಾನೆ. ಆ ಸಮಯದ ತನಕವೂ ಅವರೆಲ್ಲರೂ ಆತನ ಕಷ್ಟಗಳಲ್ಲಿ ಆತನೊಂದಿಗಿದ್ದರು. ಆದುದರಿಂದ ಯೇಸು ಅವರಿಗೆ "ನನ್ನ ತಂದೆಯು ನನಗೆ ರಾಜ್ಯವನ್ನು ನೇಮಿಸಿದ ಪ್ರಕಾರ ನಾನು ನಿಮಗೂ ರಾಜ್ಯವನ್ನು ಅಂದರೆ ಆಳಿಕೆ ಅಥವಾ ಅಧಿಕಾರವನ್ನು ನೇಮಿಸುತ್ತೇನೆ" ಎಂದು ಹೇಳಿದನು (ವಚನ 29). ಅವರು ಯೇಸುವಿನ ಮೇಜಿನ ಮೇಲೆ ಊಟಮಾಡುವರು ಅಂದರೆ ಅವರು ಪರಲೋಕ ರಾಜ್ಯದ ಸಂಭ್ರಮದಲ್ಲಿ ಪಾಲ್ಗೊಳ್ಳುವರು. ತಂದೆಯು ಯೇಸುವಿಗೆ ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವನ್ನು ಕೊಟ್ಟ ಹಾಗೆಯೇ ಕ್ರಿಸ್ತನು ತನ್ನ ಅಧಿಕಾರವನ್ನು ತನ್ನ ಶಿಷ್ಯರೊಂದಿಗೆ ಹಂಚಿಕೊಳ್ಳುವನು. ಅವರು ಇಸ್ರಾಯೇಲಿನ [46] ಹನ್ನೆರಡು ಕುಲಗಳಿಗೆ ನ್ಯಾಯತೀರಿಸುವ ಕಾರ್ಯದಲ್ಲಿ ಅವರು ಪಾಲುಗಾರರಾಗುವರು (ಮತ್ತಾಯ 19:28 ಮತ್ತು ವ್ಯಾಖ್ಯಾನ ನೋಡಿರಿ). ಕೆಲವು ಬೈಬಲ್ ಪಂಡಿತರು ನಂಬುವಂತೆ ಶಿಷ್ಯರು ಪರಲೋಕದಲ್ಲಿ "ನೂತನ ಯೆರೂಸಲೇಮ" ಅಂದರೆ ಸಭೆಯ ಮೇಲೆ ನಾಯಕತ್ವವನ್ನು ಹೊಂದುವರೆಂಬದು ಇದರರ್ಥವಾಗಿದೆ. ಶಿಷ್ಯರು ಈ ಜೀವಿತದಲ್ಲಿ ಯೇಸುವನ್ನು ಘನ ಪಡಿಸಿದಂತೆಯೇ ಮುಂದಿನ ಜೀವಿತದಲ್ಲಿ ಯೇಸು ಅವರನ್ನು ಘನಪಡಿಸುವನು (ಮತ್ತಾಯ 25:21). ಆದರೆ ಅವರು ತಮಗಾಗಿ ಘನತೆಯನ್ನು ಹುಡುಕಬಾರದು; ಕ್ರಿಸ್ತನು ಸ್ವತಃ ಅವರನ್ನು ಘನಪಡಿಸುವನು.

**31** ಬಳಿಕ ಯೇಸು ಸಿಮೋನ ಪೇತ್ರನೆಡೆಗೆ ತಿರಿಗಿಕೊಂಡು "ಸಿಮೋನನೇ ಸಿಮೋನನೇ," ಸೈತಾನನು ನಿಮ್ಮನ್ನು ಗೋದಿಯಂತೆ ಒನೆಯ ಬೇಕೆಂದು ಅಪ್ಪಣೆ ಕೇಳಿಕೊಂಡನು[47]ಎಂದು ಹೇಳಿದನು. ಸೈತಾನನು ಯೋಬನನ್ನು ಶೋದಿಸಲು ಕೇಳಿಕೊಂಡ ಪ್ರಕಾರವೇ (ಯೋಬ 1:6-12, 2:3-10). ಈಗ ಆತನು ಶಿಷ್ಯರನ್ನು ಶೋಧಿಸಬೇಕೆಂದು ಕೇಳಿಕೊಂಡನು. ಶಿಷ್ಯರೆಲ್ಲರೂ ಹೊಟ್ಟೆನಂತೆ ಹಾರಿಹೋಗುವರೆಂದು ಸೈತಾನನು ನಿರೀಕ್ಷಿಸಿಕೊಂಡನು. ವಾಸ್ತವದಲ್ಲಿ, ಯೇಸು ಬಂಧಿಸಲ್ಪಟ್ಟಾಗ ಶಿಷ್ಯರೆಲ್ಲರೂ ಪಲಾಯನ ಮಾಡಿದರಷ್ಟೇ (ಮಾರ್ಕ 14:50). ಸೈತಾನನು ವಿಜಯಿಯಾದನೋ ಎಂಬಂತೆ ತೋರಿತು.

**32** ಆಗ ಯೇಸು ಸಿಮೋನ ಪೇತ್ರನಿಗಾಗಿಯೇ ಪ್ರಾರ್ಥಿಸಿದನು, ಯಾಕೆಂದರೆ ಅವನು ಶಿಷ್ಯರ ನಾಯಕನಾಗಿದ್ದನು. ಆತನು ವಿಶೇಷವಾಗಿ ಪೇತ್ರನ ನಂಬಿಕೆ ವಿಫಲವಾಗ ಬಾರದೆಂದು ಪ್ರಾರ್ಥಿಸಿದನು. ಪ್ರೇತ್ರನು ತನ್ನನ್ನು ಅಲ್ಲಗಳೆಯುವನೆಂದು (ವಚನ 33-34), ಆದರೆ ಅದು ಕೇವಲ ಸ್ವಲ್ಪ ಕಾಲದ ವರೆಗೆ ಮಾತ್ರವೇ ಇರುವದೆಂದು ಯೇಸುವಿಗೆ ಗೊತ್ತಿತ್ತು. ಅನಂತರ ಪೇತ್ರನು ಹಿಂದಿರುಗಿ ಬಂದು ಇತರ ಶಿಷ್ಯರನ್ನು ಬಲಪಡಿಸಿ ಮುನ್ನಡೆಸ ಬೇಕಾಗಿತ್ತು. ಮತ್ತು ಯೇಸುವಿನ ಪ್ರಾರ್ಥನೆಗಳ ಕಾರಣದಿಂದಲೇ ಪೇತ್ರನು ತಿರಿಗಿ ಬಂದನೆಂಬದನ್ನು ನಿಶ್ಚಯವಾಗಿ ತಿಳಿಯಬಹುದು. ಕ್ರಿಸ್ತನು ನಮಗಾಗಿ ಪ್ರಾರ್ಥಿಸುತ್ತಿರುವದಾದರೆ ನಮ್ಮ ನಂಬಿಕೆಯು ನಿಲ್ಲುವದು (ರೋಮಾ 8:34-37).

**33-34** ಮಾರ್ಕ 14:27-31 ಮತ್ತು ವ್ಯಾಖ್ಯಾನ ನೋಡಿರಿ.

**35-36** ಶಿಷ್ಯರು ಮೊದಲನೆಯ ಸಾರಿ ಕಳುಹಿಸಲ್ಪಟ್ಟಾಗ ಅವರು ತಮ್ಮೊಂದಿಗೆ ಹಣವನ್ನಾಗಲಿ, ಹಸಿಬೆ ಅಥವಾ ಕೆರಗಳನ್ನಾಗಲಿ ಕೊಂಡೊಯ್ಯಲಿಲ್ಲ (ಮಾರ್ಕ 6:8-10 ನೋಡಿರಿ). ಆ ಸಮಯದಲ್ಲಿ ಅವರು ಹೋದ ಕಡೆಯಲ್ಲೆಲ್ಲಾ ಜನರು ಅವರಿಗೆ ಉಪಚಾರಮಾಡಿದರು, ಹೀಗೆ ಅವರಿಗೆ ಯಾವ ಕೊರತೆಯು ಆಗಲಿಲ್ಲ. ಆದರೆ ಈಗ ಪರಿಸ್ಥಿತಿಯು

ಸಂಪೂರ್ಣ ಬದಲಾಗಿತ್ತು. ಯೇಸು ಇನ್ನೇನು ಕೊಲ್ಲಲ್ಪಡುವದರಲ್ಲಿದ್ದನಷ್ಟೇ. ಶಿಷ್ಯರು ಈಗ ಹಿಂಸೆಗೊಳಗಾಗುವರು. ಉಪಚಾರವನ್ನು ಸ್ವೀಕರಿಸುವದರ ಬದಲಾಗಿ ಅವರು ಈಗ ಊರಿನಿಂದ ಊರಿಗೆ ಪಲಾಯನ ಮಾಡಬೇಕಾಗುವದು. ಆದುದರಿಂದ ಅವರಿಗೆ ಹಣದ ಚೀಲ ಮತ್ತು ಹಸಿಬೆಗಳ ಅಗತ್ಯವಿರುತ್ತದೆ.

ಅಷ್ಟು ಮಾತ್ರವೇ ಅಲ್ಲ, ಅವರಿಗೆ ಕತ್ತಿಯು ಸಹ ಅಗತ್ಯವೆಂದು ಯೇಸು ಹೇಳಿದನು. ಹೋರಾಡುವದಕ್ಕಾಗಿ ಕತ್ತಿ ಅಗತ್ಯವೆಂಬದಾಗಿ ಯೇಸು ಹೇಳಲಿಲ್ಲ ಆದರೆ ಒಂದು ಆತ್ಮೀಕ ಕತ್ತಿಯೇ ಆದಾಗಿದೆ. ಶಿಷ್ಯರಿಗೆ ಆತ್ಮನ ಕತ್ತಿಯಾದ ದೇವರ ವಾಕ್ಯವು ಅಗತ್ಯವಿರುತ್ತದೆ (ಎಫೆಸ 6:17). ಅವರು ಯಾವಾಗಲೂ ಆತ್ಮೀಕ ಹೋರಾಟಕ್ಕಾಗಿ ಸಿದ್ಧರಾಗಿರಬೇಕು. ಅವರು ಸಾಮಾನ್ಯ ಬಟ್ಟೆಗಳಿಗಿಂತಲೂ ಅವರ ಆತ್ಮೀಕ ಆಯುಧಗಳು ಎಷ್ಟೋ ಹೆಚ್ಚು ಪ್ರಾಮುಖ್ಯವಾಗಿವೆ.

**37** ಬಳಿಕ ಯೇಸು ಪು ನಃ ತನ್ನ ಬಾಧೆಯ ಬಗ್ಗೆ ಮುಂತಿಳಿಸುತ್ತಾನೆ. ಯೇಶಾಯನು ಹೇಳಿದಂತೆ ಕ್ರಿಸ್ತನು ಅಪರಾಧಿಗಳಲ್ಲಿ ಒಬ್ಬನಾಗಿ ಎಣಿಸಲ್ಪಡುವನು (ಯೇಶಾಯ 53:12). ಮತ್ತು ಅದೇ ರೀತಿಯಾಗಿ ಆತನ ಶಿಷ್ಯರಿಗೂ ಆಗುವದು. ಆದುದರಿಂದ ಅವರು ಆತ್ಮೀಕವಾಗಿ ಆಯುಧಧಾರಿಗಳಾಗಿರಬೇಕು.

**38** ಶಿಷ್ಯರು ಯೇಸುವಿನ ಮಾತುಗಳ ಅರ್ಥವನ್ನು ತಿಳಿಯಲು ವಿಫಲರಾದರು. ಈಗಲೂ ಸಹ ಅವರು ಯೇಸು ಸಾಮಾನ್ಯ ಆಯುಧಗಳ ಮೂಲಕ ತನ್ನ ವೈರಿಗನ್ನು ಜಯಿಸಲಿದ್ದಾನೆಂದು ಯೋಚಿಸಿದರು. ಅವರು ಚೆನ್ನಾಗಿ ಬಲ್ಲವರಾಗಿರಬೇಕಿತ್ತು. ಯೇಸುವಿನ ಮಾರ್ಗವು ಪ್ರೀತಿಯ ಮಾರ್ಗವೇ ಹೊರತು ಹಿಂಸೆಯ ಮಾರ್ಗವಲ್ಲ. ಅನಂತರ ಪೇತ್ರನು ತನ್ನ ಕತ್ತಿಯನ್ನು ಎತ್ತಿದಾಗ ಯೇಸು ಅವನನ್ನು ಗದರಿಸಿದನು (ಲೂಕ 22:49-51, ಯೋಹಾನ 18:10-11).

ಶಿಷ್ಯರು ತಮ್ಮ ಬಳಿಯಲ್ಲಿದ್ದ ಎರಡು ಕತ್ತಿಗಳನ್ನು ಯೇಸುವಿಗೆ ತೋರಿಸಿದರು. ಯೇಸು ತಾನು ಯಾವ ರೀತಿಯ ಕತ್ತಿಯ ಕುರಿತಾಗಿ ಮಾತನಾಡುತ್ತಿದ್ದಾನೆಂಬದನ್ನು ಶಿಷ್ಯರು ಅರ್ಥ ಮಾಡಿಕೊಳ್ಳದಿರುವದಕ್ಕೆ ನಿರಾಶೆಗೊಂಡನು. ಆಗ ಆತನ" ಅಷ್ಟು ಸಾಕು"[48] ಅಂದನು. ಅದರರ್ಥವೇನೆಂದರೆ "ಸಾಕು, ಆ ವಿಷಯವು ಮುಗಿಯಿತು" ಎಂಬದಾಗಿ ಹೇಳಿದನು.

## ಗೆತ್ಸೇಮನೆ (22:39-46)

(ಮತ್ತಾಯ 26:36-36, ಮಾರ್ಕ 14:32-42)

**39-46** ಮಾರ್ಕ 14:43-52 ಮತ್ತು ವ್ಯಾಖ್ಯಾನ ನೋಡಿರಿ.

## ಪೇತ್ರನು ಯೇಸುವನ್ನು ನಿರಾಕರಿಸುತ್ತಾನೆ (22:54-62)

(ಮತ್ತಾಯ 26:69-75, ಮಾರ್ಕ 14:66-72, ಯೋಹಾನ 18:15-18, 25-27)

**54-62** ಮಾರ್ಕ 14:66-72 ಮತ್ತು ವ್ಯಾಖ್ಯಾನ ನೋಡಿರಿ.

## ಮಹಾಯಾಜಕರ ಮುಂದೆ ಯೇಸು (22:63-71)

(ಮತ್ತಾಯ 26:57-68, ಮಾರ್ಕ 14:53-65)

**63-71** ಮಾರ್ಕ 14:53-65 ಮತ್ತು ವ್ಯಾಖ್ಯಾನ ನೋಡಿರಿ.

---

# ಅಧ್ಯಾಯ - 23

## ಪಿಲಾತನ ಮುಂದೆ ಯೇಸು (23:1-5)

(ಮತ್ತಾಯ 27:1-2, 11-14, ಮಾರ್ಕ 15:1-2)

**1-3** ಮಾರ್ಕ 15:1-2 ಮತ್ತು ವ್ಯಾಖ್ಯಾನ ನೋಡಿರಿ.

**4-5** ರೋಮಾಯ ದೇಶಾಧಿಪತಿಯಾದ ಪಿಲಾತನು ಯೇಸುವಿನಲ್ಲಿ ಯಾವ ಅಪರಾಧವನ್ನೂ ಕಾಣಲಿಲ್ಲ. ಯೆಹೂದ್ಯ ನಾಯಕರ ಆರೋಪಗಳು ಕೇವಲ ಸ್ಥಳಿಯ ಯೆಹೂದ್ಯರ ವಿಷಯಕ್ಕೆ ಸಂಬಂಧಿಸಿದ್ದೆಂದು ಅವನು ಪರಿಗಣಿಸಿದನು (ಯೋಹಾನ 18:33-38 ಮತ್ತು ವ್ಯಾಖ್ಯಾನ ನೋಡಿರಿ). ಅಷ್ಟು ಮಾತ್ರವಲ್ಲದೆ ಪಿಲಾತನಂತಹ ರೋಮಾಯ ಅಧಿಕಾರಿಗಳು ತಮ್ಮ ಪ್ರಾಂತ್ಯಗಳಲ್ಲಿನ ಜನರ ಮದ್ಯದಲ್ಲಿ ತಲೆದೋರುವ ಧಾರ್ಮಿಕ ಜಗಳಗಳಲ್ಲಿ ಕೈ ಹಾಕುತ್ತಿರಲಿಲ್ಲ (ಅ.ಕೃತ್ಯ 18:12-16 ನೋಡಿರಿ). ಆದರೆ ಯೆಹೂದ್ಯ ನ್ಯಾಯಕರು ಪಟ್ಟು ಹಿಡಿದರು. ಅವರು ಯೇಸುವಿನ ಮೇಲೆ ದೇವ ದೂಷಣೆಯ ಆರೋಪವನ್ನು ಹೊರಿಸ-ಬಾರದು, ಪಿಲಾತನು ಖಂಡಿತವಾಗಿಯೂ ಅದನ್ನು ಧಾರ್ಮಿಕ ವಿಷಯವೆಂದು ಪರಿಗಣಿಸುತ್ತಾನೆಂದು ಯೆಹೂದ್ಯ ನಾಯಕರು ಚಾಣಾಕ್ಷತನದಿಂದ ತಿರ್ಮಾನಿಸಿಕೊಂಡರು. ಅದಕ್ಕೆ ಬದಲಾಗಿ ಅವರು "ಇವನು ಜನರ ಮನಸ್ಸನ್ನು ಕದಲಿಸುತ್ತಾನೆ" ಎಂದು ಹೇಳಿದರು (ವಚನ 5).

ಬೇರೆ ಮಾತುಗಳಲ್ಲಿ ಹೇಳುವದಾದರೆ ಯೇಸು ರೋಮಚಕ್ರವರ್ತಿಯಾದ ಕೈಸರನಿಗೆ ವಿರುದ್ಧವಾಗಿ ದಂಗೆಯನ್ನೆಬ್ಬಿಸಲು ಪ್ರಯತ್ನಿಸಿದನೆಂದು ಅವರು ಹೇಳಿದರು. ಯೇಸು ತನ್ನನ್ನು ಅರಸನನ್ನಾಗಿ ಮಾಡಿಕೊಳ್ಳಲು ಯತ್ನಿಸಿದನೆಂದು ಅವರು ಹೇಳಿದರು (ವಚನ 2). ಅಂತಹ ಆರೋಪವು ಖಂಡಿತವಾಗಿಯೂ ಪಿಲಾತನು ಜಾಗೃತೆಗೊಂಡು ಯೇಸುವಿನ ವಿರುದ್ಧ ಕಠಿಣ ಕ್ರಮವನ್ನು ತೆಗೆದುಕೊಳ್ಳುವಂತೆ ಮಾಡುವದೆಂದು ಅವರು ಯೋಜನೆ ಹಾಕಿಕೊಂಡರು.

## ಹೆರೋದನ ಮುಂಭಾಗದಲ್ಲಿ ಯೇಸು (23:6-16)

**6-7** ಯೇಸು ತನ್ನ ಬೋಧನೆಯನ್ನು ಗಲಿಲಾಯದಲ್ಲಿ ಪ್ರಾರಂಭಿಸಿದ ನೆಂಬದನ್ನು ಪಿಲಾತನು ಕೇಳಿದಾಗ (ವಚನ 5). ಯೇಸು ಗಲಿಲಾಯದವನಾಗಿರುವನೋ ಎಂದು ಕೇಳಿದನು. ಅವನು ಗಲಿಲಾಯದವನೆಂದು ಕಂಡುಕೊಂಡಾಗ ಪಿಲಾತನು ತಕ್ಷಣವೇ ಅವನನ್ನು ಕೈಗೊಂಬೆಯ ಆಡಳಿತಗಾರನಾದ ಹೆರೋದ[49] ಅರಸನ ಬಳಿಗೆ ಕಳುಹಿಸಿದನು, ಅವನು ಗಲಿಲಾಯ ಪ್ರಾಂತದ ಮೇಲೆ ಅಧಿಕಾರ ಹೊಂದಿದ್ದನು.

**8** ಹೆರೋದನು ಯೇಸು ಮಾಡಿದ ಅದ್ಭುತಗಳ ಬಗ್ಗೆ ಬಹಳವಾಗಿ ಕೇಳಿದ್ದನು. ಆತನು ಯೇಸು ಮಾಡುವ ಅದ್ಭುತವೊಂದನ್ನು ನೋಡುತ್ತೇನೆಂದು ನಿರೀಕ್ಷಿಸಿದನು. ಆದರೆ ಯೇಸು ನಿಜವಾಗಿಯೂ ಯಾರಾಗಿದ್ದಾನೆಂಬದನ್ನು ಕಂಡುಕೊಳ್ಳಲು ಹೆರೋದನು ಆಸಕ್ತನಾಗಿರಲಿಲ್ಲ. ಅವನಿಗೆ ಕೇವಲ ಮನರಂಜನೆ ಬೇಕಾಗಿತ್ತು.

**9** ಆದರೆ ಯೇಸು ಹೆರೋದನಿಗಾಗಿ ಏನನ್ನೂ ಮಾಡಲಿಲ್ಲ. ಅವನು ಆತನೊಂದಿಗೆ ಮಾತನ್ನೂ ಆಡಲಿಲ್ಲ. ಕಾರಣ ಯೇಸು ಬಡವರಿಗಾಗಿಯೂ, ಮತ್ತು ಅತೀ ದರೀದ್ರರಿಗಾಗಿಯೂ ಅದ್ಭುತಗಳನ್ನು ಮಾಡಿದನು. ಆದರೆ ಗರ್ವಿಷ್ಠರೂ, ಅವಿಶ್ವಾಸಿಗಳೂ ಆದ ಅರಸರಿಗಾಗಿ ಮಾಡಲಿಲ್ಲ.

**10** ಯೇಸುವಿನ ಮೇಲೆ ಮತ್ತಷ್ಟು ಆರೋಪಗಳನ್ನು ಹೇಳುವದಕ್ಕಾಗಿ ಯೆಹೂದ್ಯನಾಯಕರು ಸಹ ಯೇಸುವಿನೊಂದಿಗೆ ಹೆರೋದನ ಬಳಿಗೆ ಹೋದರು. ಹೆರೋದನು ಯೇಸುವಿನ ಮೇಲೆ ಮರಣದಂಡನೆ ಹೊರಡಿಸಲು ಒಪ್ಪುವನೆಂದು ಯೆಹೂದ್ಯರು ನಿರೀಕ್ಷಿಸಿದರು.

**11-12** ಯೇಸು ತನ್ನೊಂದಿಗೆ ಮಾತನಾಡಲು ನಿರಾಕರಿಸಿದಾಗ ಹೆರೋದನಿಗೆ ಕೋಪವುಂಟಾಯಿತು. ಆದ್ದರಿಂದ ಅವನು ಮತ್ತು ಆತನ ಸೈನಿಕರು ಯೇಸುವಿಗೆ ಹಾಸ್ಯಮಾಡಿದರು. ಯೇಸು ಮೌನವಾಗಿದ್ದ ಕಾರಣದಿಂದ ಹೆರೋದನು ಆತನ ಮೇಲೆ ಯಾವದೇ ತಿರ್ಪನ್ನು ಹೊರಡಿಸಲು ಅಶಕ್ತನಾದನು ಮತ್ತು ಯೇಸುವನ್ನು ಪುನಃ ಪಿಲಾತನ ಬಳಿಗೆ ಕಳುಹಿಸಿದನು.

**13-16** ತಿರಿಗಿ ಪಿಲಾತನು ಯೆಹೂದ್ಯರಿಗೆ ಯೇಸು ಮರಣದಂಡನೆಗೆ ಯೋಗ್ಯವಾದ ಯಾವ ಅಪರಾಧವನ್ನು ಮಾಡಲಿಲ್ಲ ಎಂದು ಹೇಳಿದನು (ವಚನಗಳು 14-15) ಆದರೆ ಯೆಹೂದ್ಯರನ್ನು ತೃಪ್ತಿ ಪಡಿಸುವದಕ್ಕಾಗಿ ಪಿಲಾತನು ಯೇಸುವನ್ನು ಕೊರಡೆಗಳಿಂದ ಹೊಡೆಸಲು ಒಪ್ಪಿದನು. ಇದನ್ನು ಮಾಡುವದರ ಮೂಲಕ ಯೆಹೂದ್ಯರು ಯೇಸುವನ್ನು ಮರಣದಂಡನೆಗೆ ಗುರಿಮಾಡಬೇಕೆಂಬ ಬೇಡಿಕೆಯನ್ನು ಕೈಬಿಡುವರೆಂದು ಪಿಲಾತನು ನಿರೀಕ್ಷಿಸಿದನು (ಮಾರ್ಕ 15:3–5).

## ಯೇಸು ಮತ್ತು ಬರಬ್ಬನು (23:17-25)

(ಮತ್ತಾಯ 27:15-26, ಮಾರ್ಕ 15:6-15)

**17-25** ಮಾರ್ಕ 15:6-15 ಮತ್ತು ವ್ಯಾಖ್ಯಾನ ನೋಡಿರಿ.

## ಶಿಲುಬೆಗೇರಿಸುವಿಕೆ (23:26-43)

(ಮತ್ತಾಯ 27:32-44, ಮಾರ್ಕ 15:21-32, ಯೋಹಾನ 19:17-24)

**26-38** ಮಾರ್ಕ 15:21-31 ಮತ್ತು ವ್ಯಾಖ್ಯಾನ ನೋಡಿರಿ.

**39-43** ಮಾರ್ಕ 15:32 ಮತ್ತು ವ್ಯಾಖ್ಯಾನ ನೋಡಿರಿ.

## ಯೇಸುವಿನ ಮರಣ (23:44-49)

(ಮತ್ತಾಯ 27:45-56, ಮಾರ್ಕ 15:33-41, ಯೋಹಾನ 19:28-30)

**44-49** ಮಾರ್ಕ 15:33-41 ಮತ್ತು ವ್ಯಾಖ್ಯಾನ ನೋಡಿರಿ.

## ಯೇಸುವಿನ ಹೂಣಲ್ಪಡುವಿಕೆ (23:50-56)

(ಮತ್ತಾಯ 27:57-61, ಮಾರ್ಕ 15:42-47, ಯೋಹಾನ 19:38-42)

**50-56** ಮಾರ್ಕ 15:42-47 ಮತ್ತು ವ್ಯಾಖ್ಯಾನ ನೋಡಿರಿ.

## ಅಧ್ಯಾಯ - 24

### ಪುನರುತ್ಥಾನ (24:1-8)

(ಮತ್ತಾಯ 28:1-8 ಮತ್ತು ವ್ಯಾಖ್ಯಾನ ನೋಡಿರಿ.

### ಪೇತ್ರನು ಬರಿದಾದ ಸಮಾಧಿಯನ್ನು ನೋಡುತ್ತಾನೆ (24:9-12)

**9-11** ಸಮಾಧಿಯು ಬರಿದಾಗಿರುವದನ್ನೂ, ಇಬ್ಬರು ದೇವದೂತರನ್ನು ನೋಡಿದ ಬಳಿಕ ಸ್ತ್ರೀಯರು ಮಾಡಿದ ಮೊದಲ ಕೆಲಸವೇನೆಂದರೆ ಯೇಸುವಿನ ಹನ್ನೊಂದು [50] ಶಿಷ್ಯರ ಬಳಿಗೆ ಓಡಿಹೋಗಿ ಆ ದೇಹವು ಕಾಣೆಯಾಗಿದೆ ಎಂದು ಹೇಳಿದರು (ಯೋಹಾನ 20:2). ಮೊದ ಮೊದಲು ಸ್ತ್ರೀಯರು ಹೇಳಿದ್ದನ್ನು ಶಿಷ್ಯರು ನಂಬಿಲಿಲ್ಲ.

**12** ಆದರೆ ಪೇತ್ರನು ತಾನೇ ಹೋಗಿ ಸಮಾಧಿಯನ್ನು ನೋಡಲು ತಿರ್ಮಾನಿಸಿದನು. ಅವನು ತನ್ನೊಂದಿಗೆ ಯೋಹಾನನನ್ನು ಕರೆದುಕೊಂಡು ಹೋದನು (ಯೋಹಾನ 20:3-8 ನೋಡಿರಿ). ಅವರು ಯೇಸುವಿನ ದೇಹಕ್ಕೆ ಸುತ್ತಲಾಗಿದ್ದ ಬಿಳಿ ನಾರು ಮಡಿಯ ಬಟ್ಟೆಯನ್ನು ಅಲ್ಲಿ ಕಂಡರು. ಆದರೆ ಅಲ್ಲಿ ದೇಹವು ಇರಲಿಲ್ಲ. ಪೇತ್ರನಿಗೆ ಗಲಿಬಿಲಿಯಾಯಿತು. ಆತನಿಗೆ ಏನು ನಡೆದಿದೆಯೆಂದುಅರ್ಥವಾಗಲಿಲ್ಲ. ಯೇಸು ಸತ್ತವರೊಳಗಿಂದ ಎದ್ದೇಳಬೇಕೆಂಬದನ್ನು ಆತನು ಇನ್ನೂಅರ್ಥಮಾಡಿಕೊಳ್ಳಲಿಲ್ಲ (ಯೋಹಾನ 20:9). ತರುವಾಯ ಇಬ್ಬರು ಶಿಷ್ಯರು ತಮ್ಮ ಮನೆಗಳಿಗೆ ಹಿಂದಿರುಗಿದರು. (ಯೋಹಾನ 20:10) ಈ ಮದ್ಯದಲ್ಲಿ ಆ ಸ್ತ್ರೀಯರು ಪೇತ್ರ ಯೋಹಾನರ ಹಿಂದೆ ಪುನಃ ಸಮಾಧಿಗೆ ಬಂದಿದ್ದರು. ಇಬ್ಬರು ಶಿಷ್ಯರು ಮನೆಗೆ ಹೋದ ನಂತರ ಯೇಸು ಸ್ವತಃ ಆ ಸ್ತ್ರೀಯರಿಗೆ ಕಾಣಿಸಿಕೊಂಡನು!( ಮತ್ತಾಯ 28:9-10, ಯೋಹಾನ 20:11-18 ಮತ್ತು ವ್ಯಾಖ್ಯಾನ ಗಳನ್ನು ನೋಡಿರಿ). ಆ ಬಳಿಕ ಯೇಸುವಿನ ಅಪ್ಪಣೆಯಪ್ರಕಾರ "ಯೇಸು ಜೀವಿತನಾಗಿದ್ದಾನೆ! ನಾವು ಅವನನ್ನು ನೋಡಿದೆವು !ಠ ಎಂಬ ವಾರ್ತೆಯನ್ನು ಶಿಷ್ಯರಿಗೆ ತಿಳಿಸುವದಕ್ಕಾಗಿ ತಿರಿಗೊಮ್ಮೆ ಓಡಿ ಹೋದರು.

ಹೇಗಿದ್ದರೂ, ಮಾರ್ಕ 16:11 ರ ಪ್ರಕಾರವಾಗಿ ಯೋಹಾನನನ್ನು [51] ಹೊರತು ಪಡಿಸಿ ಪುನಃ ಶಿಷ್ಯರು ಸ್ತ್ರೀಯರ ಮಾತನ್ನು ನಂಬಲಿಲ್ಲ. ಕರ್ತನು ಸ್ವತಃ ಪೇತ್ರನಿಗೆ ಕಾಣಿಸಿಕೊಂಡ ನಂತರ ವಷ್ಟೇ (1 ಕೊರಿಂಥ 15:5) ಇತರ ಶಿಷ್ಯರು ಸಹ ಯೇಸು ನಿಜವಾಗಿಯೂ ಜೀವಿತನಾಗಿ [52] ಎದ್ದಿದ್ದಾನೆ ಎಂಬದನ್ನು ನಂಬಲು ಪ್ರಾರಂಭಿಸಿದರು (ವಚನಗಳು 33-34 ನೋಡಿರಿ).

### ಎಮ್ಮಾಹುವಿನ ಮಾರ್ಗದಲ್ಲಿ (24:13-35)

**13-14** ಯೇಸು ಪುನರುತ್ಥಾನಗೊಂಡ ಅದೇ ಭಾನುವಾರದಂದು ಆತನ ಇಬ್ಬರು ಹಿಂಬಾಲಕರು ಎಮ್ಮಾಹುವಿನಲ್ಲಿದ್ದ ತಮ್ಮ ಮನೆಗಳಿಗೆ ಹೊರಟಿದ್ದರು. ಅವರು ಹುಳಿಯಿಲ್ಲದ ರೊಟ್ಟಿಯ ಹಬ್ಬಕ್ಕಾಗಿ ಯೆರೂಸಲೇಮಿಗೆ ಬಂದಿದ್ದರು (ಮಾರ್ಕ 14:1 ನೋಡಿರಿ). ಮತ್ತು ಈಗ ಅವರು ಮನೆಗೆ ಹಿಂದಿರುಗಿ ಹೋಗುತ್ತಿದ್ದರು. ಯೇಸುವಿಗೆ ಸಂಭವಿಸಿದ್ದನ್ನೆಲ್ಲಾ ಕೇಳಿದವರಾಗಿ ಅದರ ಕುರಿತು ಮಾತಾಡಿಕೊಳ್ಳುತ್ತಾ ನಡೆದು ಹೊರಟಿದ್ದರು.

**15-16** ಆಗ ಒಬ್ಬ ಮೂರನೆಯ ವ್ಯಕ್ತಿ ಅವರನ್ನು ಸೇರಿಕೊಂಡನು. ಆ ವ್ಯಕ್ತಿಯು ಯೇಸುವೇ ಆಗಿದ್ದನು. ಆದರೆ ಆತನ ದೇಹವು ಈಗ ನಿತ್ಯವಾದ ಆತ್ಮೀಕ ದೇಹವಾಗಿ ಮಾರ್ಪಟ್ಟಿದ್ದರಿಂದ ಪ್ರಾರಂಭದಲ್ಲಿ ಆತನಾರೆಂದು ಗುರುತಿಸಲು ಅವರಿಗೆ ಆಗಲಿಲ್ಲ. ಆತನು ಅವರಿಗೆ ಸಹಜ ಮನುಷ್ಯನಂತೆ ಕಾಣಿಸಿದನು. ಆದರೆ ಆತನು ಯೇಸುವೇ ಎಂಬದನ್ನು ಹೇಳಲು ಅವರಿಗಾಗಲಿಲ್ಲ (ಯೋಹಾನ 20:14). ಅವರ ಆತ್ಮೀಕ ಕಣ್ಣುಗಳು ಮುಚ್ಚಿದ್ದವು . ಯೇಸು ನಿಜವಾಗಿಯೂ ಸತ್ತವರೊಳಗಿಂದ ಎದ್ದಿದ್ದಾನೆಂಬದನ್ನು ಅವರು ಇನ್ನೂ ನಂಬಲಿಲ್ಲ.

**17** ಯೇಸು ಮಾರ್ಗಮದ್ಯದಲ್ಲಿ ಅವರು ಏನನ್ನು ಕುರಿತು ಮಾತನಾಡುತ್ತಿದ್ದರೆಂದು ಅವರನ್ನು ಕೇಳಿದನು. ಆತನಿಗೆ ಉತ್ತರವು ತಿಳಿದಿತ್ತು ಆದರೆ ಅವರ ಬಾಯಿಂದಲೇ ಅದನ್ನು ಕೇಳಲಿಚ್ಚಿಸಿದನು. ಯೇಸು ಅನೇಕ ವೇಳೆ ಶಿಷ್ಯರಿಗೆ ಪ್ರಶ್ನೆಗಳನ್ನು ಕೇಳುವದರ ಮೂಲಕ ಕಲಿಸಿಕೊಟ್ಟನು.

**18** ಶಿಷ್ಯರಲ್ಲಿ ಒಬ್ಬನಾದ "ಕ್ಲೆಯೊಫ"[53] ನೆಂಬವನು ಯೇಸುವಿಗೆ "ನಾವು ಏನು ಚರ್ಚಿಸುತ್ತಿದ್ದೇವೆಂಬದು ನಿನಗೆ ಗೊತ್ತಿಲ್ಲವೊ? ಕಳೆದ ಮೂರು ದಿನಗಳಿಂದ ಯೆರೂಸಲೇಮಿನಲ್ಲಿ ಸಂಭವಿಸಿದ ಸಂಗತಿಗಳನ್ನು ನೀನು ಕೇಳಲಿಲ್ಲವೋ?" ಎಂದು ಕೇಳಿದನು.

**19** ಯೇಸು "ಯಾವ ಸಂಗತಿಗಳು" ಎಂದು ಕೇಳಿದನು. ಆಗ ಅವರು ಆತನಿಗೆ ತಮ್ಮ ನಾಯಕನಾದ ಯೇಸುವಿನ ಕುರಿತಾಗಿ ಆತನು "ದೇವರ ಮುಂದೆ ಮತ್ತು ಮನುಷ್ಯರ ಮುಂದೆ ಕೃತ್ಯದಲ್ಲಿಯೂ ಮಾತಿನಲ್ಲಿಯೂ ಸಮರ್ಥನಾದ ಪ್ರವಾದಿಯಾಗಿದ್ದನು"ಎಂದು ಹೇಳಿದರು.

ಯೇಸು ಕ್ರಿಸ್ತನು ಮರಣದಿಂದ ಎದ್ದಿರುತ್ತಾನೆಂದು ನಂಬದವರು ಆತನನ್ನು "ಕೃತ್ಯದಲ್ಲಿಯೂ, ಮಾತಿನಲ್ಲಿಯೂ ಸಮರ್ಥನಾದ ಪ್ರವಾದಿ" ಎಂಬದಕ್ಕಿಂತಲೂ ಹೆಚ್ಚಾಗಿ ಪರಿಗಣಿಸುವದಿಲ್ಲ (ಮತ್ತಾಯ 21:11, ಲೂಕ 7:16 ನೋಡಿರಿ). ಅವರಿಗೆ ಆತನು ಕೇವಲ ಒಬ್ಬ ಶ್ರೇಷ್ಠ ಮನುಷ್ಯ, ಒಬ್ಬ ಜ್ಞಾನಿ, ಒಬ್ಬ ಒಳ್ಳೆಯ ವ್ಯಕ್ತಿ ಮಾತ್ರವೇ ಆಗಿರುತ್ತಾನೆ. ಆದರೆ

ಪು ನರುಥ್ಥಾನಗೊಂಡ ಕ್ರಿಸ್ತನನ್ನು ಸಂಧಿಸಿ ಆತನನ್ನು ನಂಬಿಕೆಯ ಮೂಲಕ ತಮ್ಮ ಹೃದಯಗಳಲ್ಲಿ ಸ್ವಾಗತಿಸಿರುವವರಿಗೆ ಆತನು ರಕ್ಷಕನೂ, ಕರ್ತರ ಕರ್ತನೂ, ರಾಜಾಧಿ ರಾಜನು (1 ತಿಮೊಥೆ 6:15, ಪ್ರಕಟಣೆ 17:14). ದೇವಕುಮಾರನೂ ಆಗಿರುತ್ತಾನೆ. ಆತನು ಸ್ವತಃ ದೇವರೇ ಆಗಿದ್ದಾನೆ.

**20-21** ಇಬ್ಬರು ಶಿಷ್ಯರು ಯೇಸು ಸತ್ತದ್ದಕ್ಕಾಗಿ ತಾವು ನಿರಾಶೆಗೊಂಡಿದ್ದೇವೆಂದು ಹೇಳಿದರು. ಆತನು ಇಸ್ರಾಯೇಲರ ಮೆಸ್ಸಿಯನೂ, ಅರಸನೂ ಆಗಿರುವನೆಂದು ಅವರು ನಿರೀಕ್ಷಿಸಿದರು ಆದರೆ ಈಗ ಅವರ ನಿರೀಕ್ಷೆಗಳೆಲ್ಲಾ ಚೂರೂ ಚೂರಾಗಿದ್ದವು. ಈ ಯೇಸು ಈಗ ಮರಣಿಸಿ ಮೂರು ದಿನಗಳಾಗಿದ್ದವು. ಯೆಹೂದ್ಯರೆಲ್ಲರೂ ಯೇಸು ಇಸ್ರಾಯೇಲನ್ನು ಅದರ ವೈರಿಗಳ ಮೇಲೆ ಜಯಕೆ ನಡಿಸುವನೆಂದು ನಂಬಿದ್ದರು. ಅವರು ಶಿಲುಬೆಯ ಮೇಲೆ ಕೊಲ್ಲಲ್ಪಡುವಂಥ ಮೆಸ್ಸಿಯನಲ್ಲಿ ನಂಬಿಕೆಯಿಡಲಿಲ್ಲ.

**22-24** ಆ ಇಬ್ಬರು ಶಿಷ್ಯರು "ಆದರೆ ಆ ದಿನ ನಾವು ಆಶ್ಚರ್ಯಕರ ಸುದ್ದಿಯನ್ನು ಕೇಳಿದೆವು. ಈ ಹೊತ್ತು ಮುಂಜಾನೆಯಲ್ಲಿ ಯೇಸುವಿನ ದೇಹವನ್ನು ಇಟ್ಟಿದ್ದ ಸ್ಥಳವು ಬರಿದಾಗಿತ್ತು" ಎಂದು ಹೇಳಿದರು. ಮತ್ತು ಸ್ತ್ರೀಯರು, ಪೇತ್ರ ಮತ್ತು ಯೋಹಾನರಿಂದ ತಿಳಿಸಲ್ಪಟ್ಟ ವಿಷಯವನ್ನೆಲ್ಲಾ ಅವರು ಯೇಸುವಿಗೆ ವಿವರಿಸಿದರು (ವಚನ 12). ಹೇಗಿದ್ದರೂ, ಯೇಸು ಜೀವಿತನಾಗಿದ್ದನೆಂಬದಕ್ಕೆ ಬರಿದಾದ ಸಮಾಧಿಯೇ ಒಂದು ಆಧಾರವಾಗಿರುವದಿಲ್ಲ. ಶಿಷ್ಯರಲ್ಲಿ ಯಾರೊಬ್ಬರೂ ಇನ್ನೂ ಯೇಸುವನ್ನು ನೋಡಿರಲಿಲ್ಲ. ಆತನ ದೇಹವು ಕಾಣೆಯಾಗಿದೆ ಎಂಬ ಸಂಗತಿಯನ್ನು ಮಾತ್ರವೇ ಅವರು ತಿಳಿದವರಾಗಿದ್ದರು.

**25-27** ಆಗ ಯೇಸು ಅವರಿಗೆ ಮೋಶೆ ಮತ್ತು ಪ್ರವಾದಿಗಳ ಗ್ರಂಥಗಳಲ್ಲಿ ಅಂದರೆ ಹಳೆ ಒಡಂಬಡಿಕೆಯಲ್ಲಿ ತನ್ನ ಕುರಿತಾಗಿ ಬರೆದಿರುವದೆಲ್ಲದರ ಕುರಿತಾಗಿ ಬೋಧಿಸಲು ಪ್ರಾರಂಭಿಸಿದನು. ಹಳೆ ಒಡಂಬಡಿಕೆಯ ಅನೇಕ ಪ್ರವಾದನೆಗಳಿಗನುಸಾರವಾಗಿ ಮೆಸ್ಸಿಯನು ಬಾಧೆ ಪಟ್ಟು ಸಾಯ ಬೇಕಾಗಿತ್ತು (ಕೀರ್ತನೆಗಳು 22:1-31, 69:1-36, ಯೇಶಾಯ 52:13-15, 53:1-12) ಬಾಧೆಯನ್ನು ಅನುಭವಿಸಿದ ನಂತರ ಮಾತ್ರವೇ ಮೆಸ್ಸಿಯನಾದ ಕ್ರಿಸ್ತನು ತನ್ನ ಮಹಿಮೆಯನ್ನು ಪ್ರವೇಶಿಸುವವನು. ಬಾಧೆಯನ್ನು ಹೊಂದಿದ ನಂತರವಷ್ಟೆ ಆತನು ನಿತ್ಯಕ್ಕೆ ಇರುವಂಥ ತನ್ನ ಒಂದು ಆತ್ಮೀಕ ರಾಜ್ಯವನ್ನು ಸ್ಥಾಪಿಸುವನು. ಹಳೆ ಒಡಂಬಡಿಕೆಯಲ್ಲಿ ಬಣ್ಣಿಸಲಾಗಿರುವ "ಬಾಧೆಯನ್ನನು ಭವಿಸುವ ಸೇವಕ"ನ ಕುರಿತಾಗಿ ಯೆಹೂದ್ಯರು ಬಲ್ಲವರಾಗಿದ್ದರು. ಆದರೆ ಆತನು ಮೆಸ್ಸಿಯನೇ ಆಗಿದ್ದಾನೆಂಬದನ್ನು ಅವರು ಯೋಚಿಸಲಿಲ್ಲ. ಶ್ರಮಗಳನ್ನು ಭಾವಿಸುವ ಸೇವಕ ಮತ್ತು ಮೆಸ್ಸಿಯನು ಇಬ್ಬರೂ ಬೇರೆ ಬೇರೆ ವ್ಯಕ್ತಿಗಳಾಗಿದ್ದಾರೆಂದು ಅವರು ಯೋಚಿಸಿಕೊಂಡರು. ಆ ಶ್ರಮಗಳನ್ನು ಅನುಭವಿಸುವ ಸೇವಕನು ಮೆಸ್ಸಿಯನೇ ಎಂಬುದನ್ನು ಸ್ವತಃ ಯೇಸುವೇ ಬೋಧಿಸಿದನು. ಯೇಸು ತಾನು ಶ್ರಮೆಯನ್ನು ಅನುಭವಿಸಿ ಸಾಯಬೇಕು ಎಂಬದನ್ನು ತನ್ನ ಶಿಷ್ಯರಿಗೆ ಪದೇ ಪದೇ ಬೋಧಿಸಿದ್ದನು, ಆದರೆ ಅವರು ಆದನ್ನು ಸ್ವೀಕರಿಸಲು ವಿಫಲರಾಗಿದ್ದರು (ಮಾರ್ಕ 8:31-32, 9:31-32, ಲೂಕ 18:31-34).

ಇಬ್ಬರು ಶಿಷ್ಯರು ಲಕ್ಷ್ಯಗೊಟ್ಟು ಕೇಳುತ್ತಿದ್ದರು. ಅವರು ಯೇಸುವಿನ ಮಾತುಗಳನ್ನು ಕೇಳುತ್ತಿದ್ದಂತೆ ಅವರ ಹೃದಯಗಳು ಅವರಲ್ಲಿ ಕುದಿಯುತ್ತಿದ್ದವು (ವಚನ 32).

**28-29** ಅವರು ಯೇಸುವನ್ನು ತಮ್ಮ ಮನೆಗೆ ಆಮಂತ್ರಿಸಿದರು. ಅವರು ಒಂದು ವೇಳೆ ಆತನನ್ನು ಕರೆಯದೆ ಇದ್ದಿದ್ದರೆ ಆತನು ಅವರನ್ನು ದಾಟಿಕೊಂಡು ಹೋಗುತ್ತಿದ್ದನು ಮತ್ತು ಎಮ್ಮಾ ಹುವಿನ ಮಾರ್ಗದಲ್ಲೆಲ್ಲಾ ತಮ್ಮೊಂದಿಗೆ ಯಾರು ಬಂದರೆಂಬದನ್ನು ಅವರು ಎಂದಿಗೂ ತಿಳಿದುಕೊಳ್ಳುತ್ತಿರಲಿಲ್ಲ. ನಮ್ಮನು ನಾವು ಕೇಳಿಕೊಳ್ಳೋಣ: "ಎಷ್ಟು ಸಮಯಗಳಲ್ಲಿ ಯೇಸು ನಮ್ಮೊಂದಿಗೆ ಮಾರ್ಗದಲ್ಲಿ ಮಾತಾನಾಡುತ್ತಾನೆ ಮತ್ತು ನಾವು ಆತನನ್ನು ಒಳಗೆ ಆಮಂತ್ರಿಸಿರುತ್ತೇವೋ?" (ಪ್ರಕಟಣೆ 3:20).

**30-32** ಅವರು ಮನೆಯನ್ನು ತಲುಪಿ ಊಟಮಾಡಲು ಸಿದ್ದರಾಗಿರುವಾಗ ಯೇಸು ರೊಟ್ಟಿಯನ್ನು ತೆಗೆದು ಕೊಂಡು ಸ್ತ್ರೋತ್ರಮಾಡಿದನು ಮತ್ತು ಅದನ್ನು ಮುರಿದು ಅವರಿಗೆ ಕೊಡಲು ಪ್ರಾರಂಭಿಸಿದನು. ಆತನ ಮರಣಕ್ಕೆ ಮುಂಚೆ ಅನೇಕ ಸಾರಿ ಯೇಸು ಹೀಗೆ ಮಾಡಿದ್ದನ್ನು ಆತನ ಶಿಷ್ಯರು ನೋಡಿದ್ದರು (ಮಾರ್ಕ 6:41, 8:6, 14:22) ಮತ್ತು ತಕ್ಷಣವೇ ಅವರ ಆತ್ಮೀಕ ಕಣ್ಣುಗಳು ತೆರೆದವು ಮತ್ತು ಅವರು ಯೇಸುವಿನ ಗುರುತು ಹಿಡಿದರು ಮತ್ತು ಆಕ್ಷಣದಲ್ಲಿಯೇ ಆತನು ಅವರಿಗೆ ಮರೆಯಾದನು.

**33-35** ಆಗ ಕತ್ತಲೆಯಾಗಿದ್ದರೂ ಈ ಇಬ್ಬರು ಶಿಷ್ಯರು ತಾವು ಯೇಸುವನ್ನು ಸಂಧಿಸಿದ ವಿಷಯದ ಕುರಿತು ಇತರ ಶಿಷ್ಯರಿಗೆ ತಿಳಿಸಲು ಅವಸರವಾಗಿ ಯೆರೂಸಲೇಮಿಗೆ ಹಿಂದಿರುಗಿದರು. ಆ ಹೊತ್ತಿಗಾಗಲೇ ಯೇಸು ಪೇತ್ರನಿಗೆ ಸಹ ಕಾಣಿಸಿಕೊಂಡಿದ್ದನು. ಶಿಷ್ಯರಲ್ಲಿ ಕೆಲವರು ಈಗ ಯೇಸು ನಿಜವಾಗಿಯೂ ಜೀವಿತನಾಗಿದ್ದಾನೆ, ಸತ್ತವರೊಳಗಿಂದ ಎದ್ದಿದ್ದಾನೆಂಬದನ್ನು ನಂಬಲಿಕ್ಕೆ ಪ್ರಾರಂಭಿಸಿದ್ದರು. ಆದರೆ ಇತರರು ಇನ್ನೂ ನಂಬದವರಾಗಿದ್ದರು (ಮಾರ್ಕ 16:13 ನೋಡಿರಿ). ಮತ್ತು ಅಷ್ಟು ಮಾತ್ರವಲ್ಲದೆ ಕೆಲವು ನಿಮಿಷಗಳ ನಂತರವಷ್ಟೇ ಯೇಸು ಒಂದೇ ಸಾರಿಎಲ್ಲಾ ಶಿಷ್ಯರಿಗೆ ಕಾಣಿಸಿಕೊಂಡಾಗ್ಯು ಅವರು ಆತನನ್ನು ಸಂಶಯಿಸಿದರು ಮತ್ತು ಭೂತವನ್ನು ನೋಡುತ್ತಿದ್ದೇವೆಂದು ಅಂದುಕೊಂಡರು (ವಚನಗಳು 37–38).

## ಯೇಸು ಶಿಷ್ಯರಿಗೆ ಕಾಣಿಸಿಕೊಳ್ಳುತ್ತಾನೆ (24:36-43)

(ಯೋಹಾನ 20:19-20)

**36-40** ಎಮ್ಮಾ ಹುವಿನಿಂದ ಬಂದ ಇಬ್ಬರು ಶಿಷ್ಯರು ಇನ್ನೂ ಇತರ ಶಿಷ್ಯರೊಂದಿಗೆ ಮಾತಾಡುತ್ತಿರುವಾಗಲೇ ಯೇಸು ತಾನೇ ಅವರೆಲ್ಲರ ಮುಂದೆ ಕಾಣಿಸಿಕೊಂಡನು. ಯೇಸು ಅವರು ಸೇರಿಬಂದಿದ್ದ ಕೋಣೆಯ ಬಾಗಿಲು ಭದ್ರವಾಗಿದ್ದರೂ

ಅದ್ಭುತವಾಗಿ ಅದನ್ನು ತೂರಿಕೊಂಡು ಬಂದಿದ್ದನು (ಯೋಹಾನ 20:19-20 ಮತ್ತು ವ್ಯಾಕ್ಯಾನ ನೋಡಿರಿ). ಶಿಷ್ಯರು ತಾವು ಒಂದು ಭೂತವನ್ನೂ ದೇಹರಹಿತ ಆತ್ಮವೊಂದನ್ನು ನೋಡುತ್ತಿದ್ದೇವೆಂದು ಅಂದುಕೊಂಡರು. ಆದರೆ ಆಗ ಯೇಸು ಅವರಿಗೆ ಆತನ ಕೈ ಮತ್ತು ಪಾದಗಳಲ್ಲಿದ್ದ [54] ಮೊಳೆಯ ಗಾಯಗಳನ್ನು ತೋರಿಸಿದನು. ತಾನು ನಿಜವಾಗಿಯೂ ಇರುವಾತನೆಂಬದನ್ನು ಅವರು ತಿಳಿದುಕೊಳ್ಳುವಂತೆ ಹತ್ತಿರಬಂದು ಆತನ ದೇಹವನ್ನು ಮುಟ್ಟುವಂತೆ ಅವರಿಗೆ ಹೇಳಿದನು (1 ಯೋಹಾನ 1:1). ಯೇಸು ಒಂದು ಭೂತವಾಗಿರಲಿಲ್ಲ. ಆತನಿಗೆ ರಕ್ತ ಮಾಂಸ ಮೂಳೆಗಳ ದೇಹವಿತ್ತು. ಆತನು ಪು ನರುಥ್ಥಾನಗೊಂಡ ದೇಹವನ್ನು ಮಹಿಮೆಗೊಂಡ ಪರಲೋಕ ದೇಹವನ್ನು ಹೊಂದಿದ್ದನು (1 ಕೊರಿಂಥ 15:35-37 ಮತ್ತು ವ್ಯಾಖ್ಯಾನ ನೋಡಿರಿ).

**41-43** ಶಿಷ್ಯರಿಗೆ ಎಷ್ಟು ಆಶ್ಚರ್ಯ ಮತ್ತು ಆನಂದ ಉಂಟಾಯಿತೆಂದರೆ ಅವರಿಗೆ ಏನು ಯೋಚಿಸಬೇಕೆಂಬದೇ ತಿಳಿಯದಾಯಿತು. ಅದೆಲ್ಲವೂ ಒಂದು ಕನಸಿನಂತಿತ್ತು. ಅದು ನಿಜವಾಗಿಯೂ ನಡೆಯುತ್ತಿದೆ ಎಂಬುದನ್ನು ಇನ್ನು ಅವರಿಗೆ ನಂಬಲಾಗಲಿಲ್ಲ. ಯೇಸು ಅವರ ಅಲ್ಪ ವಿಶ್ವಾಸವನ್ನು ತಿಳಿದವನಾಗಿ ತಿನ್ನುವದಕ್ಕೆ ಏನಾದರೂ ಕೊಡುವಂತೆ ಕೇಳಿ ಅದನ್ನು ಅವರ ಎದುರಿನಲ್ಲಿ ತಿಂದನು. ಅದರ ನಂತರವಷ್ಟೇ ಅವರ ಸಂಶಯವು ಅಂತ್ಯಗೊಂಡಿತು. ಆಗ ಅವರು ಆತನು ನಿಜವಾಗಿಯೂ ಜೀವಿತನಾಗಿದ್ದಾನೆಂಬದನ್ನು ತಿಳಿದುಕೊಂಡರು. ಒಂದು ವಾರದ ನಂತರ ಯೇಸು ಪು ನಃ ತನ್ನ ಶಿಷ್ಯರಿಗೆ ಯೆರೂಸಲೇಮಿನಲ್ಲಿ ಕಾಣಿಸಿಕೊಂಡನು (ಯೋಹಾನ 20:24-29 ನೋಡಿರಿ). ಅನಂತರ ಆತನು ತನ್ನ ಶಿಷ್ಯರಿಗೆ ಗಲಿಲಾಯದಲ್ಲಿ ಕಾಣಿಸಿಕೊಂಡನು (ಮತ್ತಾಯ 28:16) ತರುವಾಯ ಆತನು ಒಂದೇ ಸಾರಿ ಸಹೋದರರಲ್ಲಿ ಐನೂರು ಜನರಿಗೆ ಕಾಣಿಸಿಕೊಂಡನು (1 ಕೊರಿಂಥ 15:6). ಆ ಬಳಿಕ ಆತನು ತನ್ನ ಸಹೋದರನಾದ ಯಾಕೋಬನಿಗೆ ಕಾಣಿಸಿಕೊಂಡನು (1 ಕೊರಿಂಥ 15:7). ಈ ಎಲ್ಲಾ ಘಟನೆಗಳು ಯೇಸುವಿನ ಪು ನರುಥ್ಥಾನ ಮತ್ತು ಪರಲೋಕಾರೋಹಣ ನಡುವಿನ ನಾಲ್ವತ್ತು ದಿನಗಳ ಅವಧಿಯಲ್ಲಿ ಸಂಭವಿಸಿದವು (ಅ.ಕೃತ್ಯ. 1:3).

## ಅಂತಿಮ ಬೋಧನೆ (22:44-49)

**44** ಮುಂದಿನ ನಾಲ್ವತ್ತು ದಿನಗಳ ಸಮಯದಲ್ಲಿ ಯೇಸು ತನ್ನ ಶಿಷ್ಯರಿಗೆ ಅನೇಕ ಬೋಧನೆಗಳನ್ನು ನೀಡಿದನು. ಲೂಕನು ಈ ಭಾಗದಲ್ಲಿ ಅವು ಗಳಲ್ಲಿ ಕೆಲವು ಸಂಗತಿಗಳನ್ನು ಮಾತ್ರವೇ ಪ್ರಸ್ತಾಪಿಸುತ್ತಾನೆ. ಯೇಸು ತನ್ನ ಶಿಷ್ಯರು ದೇವರ ವಾಕ್ಯಗಳನ್ನುಅರ್ಥಮಾಡಿಕೊಳ್ಳಬೇಕೆಂದು ಇಚ್ಚಿಸಿದನು. ಹಳೆ ಒಡಂಬಡಿಕೆಯಲ್ಲಿ ತನ್ನ ಕುರಿತಾಗಿ ಬರೆದಿರುವದೆಲ್ಲವು ಈಗ ನೆರವೇರಿರುತ್ತದೆಂಬದನ್ನು ಅವರು ತಿಳಿಯಬೇಕೆಂದು ಬಯಸಿದನು. ಈ ಎಲ್ಲಾ ವಿಷಯಗಳನ್ನು ಆತನು ಎಮ್ಮಾಹುವಿನ ಮಾರ್ಗದಲ್ಲಿ ತನ್ನ ಇಬ್ಬರು ಶಿಷ್ಯರಿಗೆ ತಿಳಿಸಿದ್ದನು (ವಚನಗಳು 25-27 ಮತ್ತು ವ್ಯಾಖ್ಯಾನ ನೋಡಿರಿ). ಈಗ ಆತನು ಈ ಎಲ್ಲಾ ಸಂಗತಿಗಳನ್ನು ತನ್ನ ಶಿಷ್ಯರೆಲ್ಲರಿಗೂ ಬೋಧಿಸಲು ಪ್ರಾರಂಭಿಸುತ್ತಾನೆ.

**45-46** ಆತನು ಈ ಮುಂಚೆ ಅವರಿಗೆ ಹಲವಾರು ಬಾರಿ ಹೇಳಿದ್ದ ಸಂಗತಿಗಳನ್ನೇ ಈಗ ಅವರಿಗೆ ಹೇಳುತ್ತಾನೆ, ಉದಾಹರಣೆಗೆ,: ಕ್ರಿಸ್ತನು ಬಾಧೆಪಟ್ಟು ಸತ್ತು ಮೂರನೆಯ ದಿನದಲ್ಲಿ ಸತ್ತವರೊಳಗಿಂದ ಎದ್ದು ಬರುವನು (ಮಾರ್ಕ 8:31, 9:31, 1 ಕೊರಿಂಥ 15:3-4 ನೋಡಿರಿ). ಅವರು ಶಾಸ್ತ್ರಗಳ ವಚನಗಳನ್ನು ಅರ್ಥ ಮಾಡಿಕೊಳ್ಳುವಂತೆ ಅವರ ಬುದ್ಧಿಗಳನ್ನು ತೆರೆದನು (ವಚನ 45). ನಮ್ಮ ಬುದ್ಧಿಗಳು ಪವಿತ್ರಾತ್ಮನಿಂದ ತೆರೆಯಲ್ಪಟ್ಟಾಗ ಮಾತ್ರವೇ ನಾವು ಬೈಬಲ್‌ನ್ನು ಮತ್ತು ದೇವರ ವಾಕ್ಯದ ಬೋಧನೆಯನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಬಲ್ಲೆವು .

**47** ಅಲ್ಲದೆ ಯೇಸು ಪಾಪ ಪರಿಹಾರಕ್ಕಾಗಿ ದೇವರ ಕಡೆಗೆ ತಿರಿಗಿಕೊಳ್ಳಬೇಕೆಂಬದು ಯೆಹೂದ್ಯರಿಗೆ ಮಾತ್ರವಲ್ಲ ಆದರೆ ಅನ್ಯ ಜನರಿಗೂ, ಅಂತೂ ಎಲ್ಲಾ ಜನರಿಗೂ ಸಾರಲ್ಪಡುವದೆಂದು ಹಳೆ ಒಡಂಬಡಿಕೆಯ ಮೂಲಕ ತನ್ನ ಶಿಷ್ಯರಿಗೆ ಕಲಿಸಿಕೊಟ್ಟನು (ಯೆಶಾಯ 2:2-3, 49:6, 51:4-6, ಮತ್ತಾಯ 28:19, ರೋಮಾಯ 15:9-12) ಮಾನವನ ರಕ್ಷಣೆಯಲ್ಲಿ ದೇವರ ಕಡೆಗೆ ತಿರಿಗುವದು ಮತ್ತು ಪಾಪಗಳ ಕ್ಷಮಾಪಣೆಗಳು ಪ್ರಥಮ ಹೆಜ್ಜೆಗಳಾಗಿವೆ. ದೇವರ ಕಡೆಗೆ ತಿರಿಗಿ ಕೊಳ್ಳದ ಹೊರತು ಕ್ಷಮಾಪಣೆಯು ಇರಲಾರದು. ಕ್ಷಮಾಪಣೆಯಿಲ್ಲದೆ ರಕ್ಷಣೆಯು ಇರುವದಿಲ್ಲ (ಸಾಮಾನ್ಯ ಬರಹ: ರಕ್ಷಣೆಯ ಮಾರ್ಗ ನೋಡಿರಿ).

**48** ನಂತರ ಯೇಸು " ಇವು ಗಳ ವಿಷಯದಲ್ಲಿ ನೀವೇ ಸಾಕ್ಷಿ ಹೇಳುವವರಾಗಿದ್ದೀರಿ" ಎಂದು ಹೇಳಿದನು. ಶಿಷ್ಯರು ತಾವೇ ಈ ಸಂಗತಿಗಳನ್ನು ಕಂಡಿದ್ದರು ಮತ್ತು ಈಗ ಅವರು ಹೊರಟು ಹೋಗಿ ಜಗತ್ತಿಗೆಲ್ಲಾ ಈ ಸಂಗತಿಗಳನ್ನು ಸಾರಬೇಕಾಗಿತ್ತು (ಅ.ಕೃತ್ಯ 1:8 ಮತ್ತು ವ್ಯಾಖ್ಯಾನ ನೋಡಿರಿ).

**49** ಬಳಿಕ ಯೇಸು "ಇಗೋ ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿ ಕೊಡುತ್ತೇನೆ". ಅಂದರೆ ಪವಿತ್ರಾತ್ಮನನ್ನು ಕಳುಹಿಸಿಕೊಡುತ್ತೇನೆಂದು ಹೇಳಿದನು (ಯೋಹಾನ 15:16-17, 26 ನೋಡಿರಿ). ಆಗ ಯೇಸು ಅವರಿಗೆ ಪವಿತ್ರಾತ್ಮ ಬಂದು ಆತನ ಸಾಕ್ಷಿಗಳಾಗಿರಲು ಬಲವನ್ನು ಕೊಡುವ ತನಕ ಯೆರೂಸಲೇಮಿನ [55] ಲ್ಲಿ ಕಾಯ್ದುಕೊಳ್ಳುವಂತೆ ಹೇಳಿದನು (ಅ.ಕೃ. 1:4-5, 8, 2:1-4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಪವಿತ್ರಾತ್ಮನಿಲ್ಲದೆ ಅವರು ಕ್ರಿಸ್ತನಿಗಾಗಿ ಏನನ್ನೂ ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ (ಯೋಹಾನ 15:5) ನಿಶ್ಚಯವಾಗಿಯೂ, ಪವಿತ್ರಾತ್ಮನ ಹೊರತಾಗಿ ಶಿಷ್ಯರು ಕ್ರಿಸ್ತನ ಸಭೆಯನ್ನು ಎಂದಿಗೂ ಸ್ಥಾಪಿಸಲಾಗುತ್ತಿರಲಿಲ್ಲ.

## ಯೇಸುವಿನ ಆರೋಹಣ (24:50-53)

**50-51** ಯೇಸು ಸತ್ತವರೊಳಗಿಂದ ಪುನರುತ್ಥಾನವಾಗಿ ನಾಲ್ವತ್ತು ದಿನಗಳ ನಂತರ ಆತನು ತನ್ನ ಶಿಷ್ಯರೊಂದಿಗೆ ಯೆರೂಸಲೇಮಿನ ಹೊರ ಭಾಗದಲ್ಲಿದ್ದ ಬೇಥಾನ್ಯಕ್ಕೆ ಹೋದನು (ಮಾರ್ಕ 11:1,11). ಅವರನ್ನು ಆಶಿರ್ವಧಿಸಿದ ನಂತರ ಅವರ ಕಣ್ಣುಗಳ ಮುಂದೆಯೇ ಪರಲೋಕಕ್ಕೆ ಏರಿ ಹೋದನು (ಅ.ಕೃತ್ಯ 1:9) ಅವರು ಹಾಗೆಯೇ ಮೇಲಕ್ಕೆ ನೋಡುತ್ತಲಿರಲಾಗಿ ಇಬ್ಬರು ದೇವದೂತರು ಇಳಿದು ಬಂದು :ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿಸಲ್ಪಟ್ಟಿರುವ ಈ ಯೇಸು ಯಾವ ರೀತಿಯಲ್ಲಿ ಆಕಾಶದೊಳಕ್ಕೆ ಹೋಗಿರುವದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು" ಎಂದು ಹೇಳಿದರು (ಅ.ಕೃತ್ಯ 1:10-11).. 52-53 ಅನಂತರ ಶಿಷ್ಯರು ಬಹು ಸಂತೋಷವುಳ್ಳವರಾದರು. ಯೇಸು ಕರ್ತನು, ಮೆಸ್ಸಿಯನು, ದೇವಕುಮಾರನು ಆಗಿದ್ದಾನೆಂಬದಕ್ಕೆಲ್ಲ ಇನ್ನು ಅವರ ಹೃದಯಗಳಲ್ಲಿ ಯಾವ ಸಂಶಯವು ಇರಲಿಲ್ಲ. ತರುವಾಯ ಅವರು ಪವಿತ್ರಾತ್ಮನ ಬರೋಣಕ್ಕಾಗಿ ಕಾಯ್ದುಕೊಳ್ಳಲು ಯೆರೂಸಲೇಮಿಗೆ ಹಿಂದಿರುಗಿದರು. ಆ ವೇಳೆಯಲ್ಲಿ ಅವರು ನಿರಂತರವಾಗಿ ದೇವಾಲಯದಲ್ಲಿದ್ದು ಕೊಂಡು ಪ್ರಾರ್ಥನೆಯಲ್ಲಿಯೂ, ದೇವರ ಸ್ತೋತ್ರದಲ್ಲಿಯೂ ಸಮಯ ಕಳೆದರು. ಪವಿತ್ರಾತ್ಮನು ಸ್ತುತಿ ಮತ್ತು ಪ್ರಾರ್ಥನೆಯಲ್ಲಿ ಹೆಚ್ಚು ಸಮಯ ಕಳೆಯುವವರ ಮೇಲೆ ಬರುತ್ತಾನೆ.

---

## ಟಿಪ್ಪಣಿ

1 ಒಬ್ಬ ಗ್ರೀಕನು ದಕ್ಷಿಣ ಯುರೋಪಿನ ಒಂದು ಪ್ರಾಮುಖ್ಯ ರಾಷ್ಟ್ರವಾದ ಗ್ರೀಸ್‌ನ ನಿವಾಸಿಯಾಗಿದ್ದಾನೆ. ಅಲ್ಲದೆ ಹೊಸ ಒಡಂಬಡಿಕೆಯು ಮೂಲವಾಗಿ ಬರೆಯಲ್ಪಟ್ಟ ಭಾಷೆಯು ಸಹ ಗ್ರೀಕ ಆಗಿದೆ.

2 ಬೈಬಲ್‌ನಲ್ಲಿ ಯೆಹೂದ್ಯರಲ್ಲದ ಎಲ್ಲಾ ಜನರನ್ನು ಅನ್ಯ ಜನರೆಂದು ಕರೆಯಲಾಗಿದೆ. ಹೀಗೆ ಗ್ರೀಕರು ಸಹ ಅನ್ಯ ಜನರಾಗಿದ್ದಾರೆ.

3 ಅರಸನಾದ ಹೆರೋದನು ಮತ್ತಾಯ 2:1 ಮತ್ತು ವ್ಯಾಖ್ಯಾನದಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾನೆ.

4 ಆರೋನನು ಯೆಹೂದ್ಯರನ್ನು ಐಗುಪ್ತ್ಯದಿಂದ ಕರೆತಂದ ಮೋಶೆಯ ಸಹೋದರನಾಗಿದ್ದನು. ಯೆಹೂದ್ಯರ ಎಲ್ಲಾ ಯಾಜಕರು ಆರೋನನ ವಂಶಸ್ಥರಾಗಿದ್ದರು.

5 "ಮೆಸ್ಸಿಯ" ಎಂಬದು "ದೇವರಿಂದ ಅಭಿಷೇಕಿಸಲ್ಪಟ್ಟವನು" ಎಂಬಅರ್ಥವನ್ನು ಕೊಡುವ ಇಬ್ರಿಯ ಪದವಾಗಿದೆ. "ಮೆಸ್ಸಿಯ" ಎಂಬದು "ಕ್ರಿಸ್ತನು" ಎಂಬದಕ್ಕೆ ಇನ್ನೊಂದು ಹೆಸರಾಗಿದೆ (ಯೋಹಾನ 1:41, 4:25 ನೋಡಿರಿ).

6 ಯಾಕೋಬನು ಪ್ರಥಮ ಯೆಹೂದ್ಯನಾದ ಅಬ್ರಹಾಮನ ಮೊಮ್ಮಗನಾಗಿದ್ದನು. ಯಾಕೋಬನ ಇನ್ನೊಂದು ಹೆಸರು ಇಸ್ರಾಯೇಲ. ಆತನಿಗೆ ಹನ್ನೆರಡು ಮಂದಿ ಗಂಡು ಮಕ್ಕಳು ಇದ್ದು ಅವರಿಂದ ಇಸ್ರಾಯೇಲಿನ ಹನ್ನೆರಡು ಕುಲಗಳು ಬಂದಿರುತ್ತವೆ.

7 ಜಕರೀಯನು ಮಾತನಾಡಲಾಗದಿದ್ದರೂ ದೇವದೂತನು ತನಗೆ ಹೇಳಿದ ಮಾತುಗಳನ್ನೆಲ್ಲಾ ಖಂಡಿತವಾಗಿಯೂ ಎಲಿಸ್‌ಬೇಥಳಿಗೆ ಬರೆದು ತಿಳಿಸಿರುತ್ತಾನೆಂಬದರಲ್ಲಿ ಸಂಶಯವಿಲ್ಲ.

8 ಒಂದು ಕೊಂಬು ಬಲದ ಸಂಕೇತವಾಗಿದೆ.

9 "ಕೈಸರ" ಅಂದರೆ ಚಕ್ರವರ್ತಿ

10 ಕುರೇನ್ಯನು ಯೇಸುವಿನ ಜನನದ ಸಮಯದಲ್ಲಿಯೂ ಸಹ ಸಿರಿಯಾಕ್ಕೆ ಅಧಿಪತಿಯಾಗಿದ್ದನೆಂಬದಕ್ಕೆ ಸಾಕಷ್ಟು ಐತಿಹಾಸಿಕ ಆಧಾರಗಳಿರುತ್ತವೆ. ಸಿರಿಯಾವು ಇಸ್ರಾಯೇಲನ ಉತ್ತರ ಪೂರ್ವಾತ್ಯಕ್ಕೆ ಇರುತ್ತದೆ. ಯೇಸುವಿನ ಸಮಯದಲ್ಲಿ ಯೂದಾಯವು (ಇದು ಇಸ್ರಾಯೇಲಿನ ದಕ್ಷಿಣ ಪ್ರಾಂತ್ಯವಾಗಿದ್ದು, ಯೆರೂಸಲೇಮ ಅದರ ರಾಜಧಾನಿಯಾಗಿದೆ) ಸಿರಿಯಾದ ಭಾಗವಾಗಿತ್ತು.

11 ಯೆರೂಸಲೇಮ ಇಸ್ರಾಯೇಲಿನ ದಕ್ಷಿಣ ಪ್ರಾಂತ್ಯವಾದ ಯೂದಾಯದ ರಾಜಧಾನಿಯಾಗಿತ್ತು. ಯೆರೂಸಲೇಮು ಯೆಹೂದ್ಯರ ಮುಖ್ಯ ಪಟ್ಟಣವಾಗಿತ್ತು. ಅಲ್ಲಿ ಯೆಹೂದ್ಯರ ದೇವಾಲಯವು ಇತ್ತು.

12 ಗ್ರೀಕ ಭಾಷೆಯಲ್ಲಿ ಕ್ರಿಸ್ತನು ಎಂದರೆ "ಅಭಿಷೀಕ್ತನು" ಎಂದರ್ಥವಾಗಿದೆ. "ಮೆಸ್ಸಿಯ" ಎಂಬದು ಇಬ್ರಿಯ ಭಾಷೆಯಲ್ಲಿ ಅದೇ ಅರ್ಥವನ್ನು ಹೊಂದಿದೆ.

13 ಆಸೇರ ಅಬ್ರಹಾಮನ ಮೊಮ್ಮಗನಾದ ಯಾಕೋಬನ ಹನ್ನೆರಡು ಗಂಡು ಮಕ್ಕಳಲ್ಲಿ ಒಬ್ಬನಾಗಿದ್ದನು. ಇಸ್ರಾಯೇಲಿನ ಹನ್ನೆರಡು ಕುಲಗಳು ಯಾಕೋಬನ ಹನ್ನೆರಡು ಗಂಡು ಮಕ್ಕಳಿಂದ ಬಂದಿರುತ್ತವೆ.

14 ರೋಮಾಯ ಚಕ್ರವರ್ತಿಯು ಹೆರೋದ ಮತ್ತು ಫಿಲಿಪ್ಪರಂತಹ ಸ್ಥಳೀಯ ಅಧಿಕಾರಿಗಳು ರೋಮ ಸಾಮ್ರಾಜ್ಯದ ಚಿಕ್ಕ ಭಾಗಗಳಲ್ಲಿ ಆಡಳಿತನಡೆಸಲು ಅನುಮತಿಸುತ್ತಿದ್ದನು.

15 ಯೆಹೂದ್ಯರು ಯಜ್ಞಗಳನ್ನು ಅರ್ಪಿಸುವದರ ಮೂಲಕ ಪಾಪಕ್ಕೆ ಪ್ರಾಯಶ್ಚಿತಮಾಡುತ್ತಿದ್ದರು.

16 ಸುಂಕದವರ ವಿಷಯವಾಗಿ ಮಾರ್ಕ 14 ಮತ್ತು ವ್ಯಾಖ್ಯಾನದಲ್ಲಿ ಚರ್ಚಿಸಲಾಗಿದೆ.

17 ಮಾರ್ಕ 6:1 ಮೇಲಿನ ವ್ಯಾಖ್ಯಾನ ಮತ್ತು ವ್ಯಾಖ್ಯಾನದ ಅಡಿಟಿಪ್ಪಣಿಗಳನ್ನು ನೋಡಿರಿ.

18 ಹೊಸ ಒಡಂಬಡಿಕೆಯ ಕಾಲದಲ್ಲಿ ಪುಸ್ತಕಗಳು ಕಾಗದ ಅಥವಾ Parchment ನ ಉದ್ದವಾದ ಪಟ್ಟಿಗಳ ಮೇಲೆ ಬರೆಯಲ್ಪಟ್ಟು ಸುರುಳಿಯಾಗಿ ಸುತ್ತಲ್ಪಡುತ್ತಿದ್ದವು (ಇಬ್ರಿಯ 10:7).

19 ಯೇಸು ಈ ಮಾತುಗಳನ್ನು ಯೆಶಾಯ 58:6 ರಿಂದ ತೆಗೆದುಕೊಂಡನು.

[20] ಈ ವಚನದಲ್ಲಿ ಯೇಸು ನಮ್ಮನ್ನು ಹೊಗಳುವ ಎಲ್ಲಾ ಜನರ ಕುರಿತಾಗಿ ಮಾತಾಡುತ್ತಿದ್ದಾನೆಂಬದನ್ನು ಗಮನಿಸಿರಿ. ಅದು ಸಂಭವಿಸುವಾಗ ನಾವು ಚಿಂತಿಸಬೇಕು! ಕಠಿಣ ಹೃದಯಗಳುಳ್ಳ ಲೋಕದ ಜನರು ನಮ್ಮನ್ನು ಹೊಗಳುವವರಾಗಿರ ಬಾರದು, ಒಂದು ವೇಳೆ ಅವರು ಹೊಗಳುತ್ತಿರುವದಾದರೆ ನಾವು ಹೆಚ್ಚಾಗಿ ಅವರಂತಾಗಿದ್ದೇವೆ ಎಂಬದೇ ಅದರಅರ್ಥವಾಗಿರುತ್ತದೆ. ಹೇಗೂ, ಇನ್ನೊಂದು ಅರ್ಥವಿದ್ದು, ಸಾಮಾನ್ಯ ಅವಿಶ್ವಾಸಿಗಳು ಕ್ರೈಸ್ತರ ಕುರಿತಾಗಿ ಉತ್ತಮವಾಗಿ ಮಾತಾಡಬೇಕು. ಅವರು ನಮ್ಮಲ್ಲಿ ಕ್ರಿಸ್ತನನ್ನು ಕಾಣವಂತಾಗಬೇಕು. ನಮ್ಮ ಉತ್ತಮ ನಡವಳಿಕೆಯಿಂದ ಅವರು ಕ್ರಿಸ್ತನೆಡೆಗೆ ಸೆಳೆಯಲ್ಪಡಬೇಕು (ಅ.ಕೃತ್ಯ 5:12-14, 1 ತಿಮೊಥೆ 3:7 ನೋಡಿರಿ).

[21] ಕೆಲವೊಂದು ಪ್ರಾಚೀನ ಹಸ್ತ ಪ್ರತಿಗಳು "ಎಪ್ಪತ್ತೆರಡು" ಎಂಬುದಕ್ಕೆ ಬದಲಾಗಿ "ಎಪ್ಪತ್ತು" ಎಂದು ಹೇಳುತ್ತವೆ.

[22] ಕೆಲವೊಂದು ಸಮಯಗಳಲ್ಲಿ ದೇವರ ಉದ್ದೇಶಗಳಿಗೆ ಅನುಸಾರವಾಗಿ ಕ್ರೈಸ್ತರು ಶಾರೀರಿಕ ಹಾನಿಯಿಂದ ಸಹ ಕಾಪಾಡಲ್ಪಡುತ್ತಾರೆ (ಅ.ಕೃತ್ಯ 12:5-11, 28:3-6 ನೋಡಿರಿ).

[23] ಇಲ್ಲಿ ಧರ್ಮಶಾಸ್ತ್ರ ಎಂದರೆ ಹಳೆ ಒಡಂಬಡಿಕೆಯ ಐದು ಪುಸ್ತಕಗಳು ಎಂದರ್ಥವಾಗಿದೆ.

[24] ಸಮಾರ್ಯರ ಬಗ್ಗೆ ಲೂಕ 9:52 ಮತ್ತು ವ್ಯಾಖ್ಯಾನದಲ್ಲಿ ಉಲ್ಲೇಖಿಸಲಾಗಿದೆ.

[25] ಲೇವಿಯರು ಯಾಕೋಬನ ಹನ್ನೆರಡು ಗಂಡುಮಕ್ಕಳಲ್ಲಿ ಒಬ್ಬನಾದ ಲೇವಿಯನ ವಂಶಕ್ಕೆ ಸೇರಿದವರಾಗಿದ್ದರು. ಅವರು ಯೆಹೂದ್ಯ ದೇವಾಲಯದ ಸೇವೆಯ ಜವಾಬ್ದಾರಿಯನ್ನು ಹೊಂದಿದ್ದರು. ಇನ್ನೊಂದೆಡೆಯಲ್ಲಿ, ಯಾಜಕರು ಲೇವಿಯನ ಮರಿಮೊಮ್ಮಗನಾದ ಮೋಶೆಯ ಸಹೋದರ ಆರೋನನ ವಂಶಸ್ಥರಾಗಿದ್ದರು. ಆರೋನನವಂಶಸ್ಥರು ಮಾತ್ರವೇ ಯಾಜಕರಾಗಿರಬಹುದಿತ್ತು.

[26] ಈ ಲೋಕದಲ್ಲಿ ಕಂಡು ಬರುವ ಅನ್ಯಾಯ ಮತ್ತು ಅಸಮಾನತೆಯನ್ನು ಯೇಸು ಸಹಿಸಿಕೊಳ್ಳುವದಿಲ್ಲ. ಆತನು ಒಂದು ದಿನ ತಮ್ಮ ಸಹೋದರನನ್ನು ವಂಚಿಸಿದವರನ್ನು ಅಥವಾ ಬಡವರಿಗೆ ಅನ್ಯಾಯಮಾಡಿದವರನ್ನು ನ್ಯಾಯತೀರ್ಪಿಗೆ ಗುರಿಮಾಡುವನು. ಹೇಗಿದ್ದರೂ, ಯೇಸು ಭೂಮಿಗೆ ಬಂದ ಮುಖ್ಯ ಉದ್ದೇಶವು ಅನ್ಯಾಯ ಅಥವಾ ಸರಿತಪ್ಪುಗಳ ಕುರಿತು ಇನ್ನೊಂದಅರ್ಥವನ್ನು ನೀಡಲಿಲ್ಲ. ಯೇಸು ಮಾನವರಿಗೆ ಪರಲೋಕದ ಮಾರ್ಗವನ್ನು ತೋರಿಸುವದಕ್ಕಾಗಿಯೇ ಈ ಭೂಮಿಗೆ ಬಂದನು.

[27] ಒಬ್ಬ ವ್ಯಕ್ತಿಯು ಕ್ರಿಸ್ತನ ಕುರಿತಾಗಿ ಎಂದಿಗೂ ಕೇಳಿರದೆ ಇದ್ದರೂ ವ್ಯಕ್ತಿಯು ಸಹ ಮುಂದಿನ ಜೀವನದಲ್ಲಿ ಅವನು ದಂಡಿಸಲ್ಪಡುವನು, ಯಾಕೆಂದರೆ ಎಲ್ಲಾ ಮಾನವರು ಒಂದಿಲ್ಲಾ ಒಂದು ರೀತಿಯಲ್ಲಿ ದೇವರ ವಿರುದ್ಧವಾಗಿ ಪಾಪ ಮಾಡಿದ್ದಾರೆ, ಎಲ್ಲಾ ಮಾನವರೂ ದೇವರ ಚಿತ್ತವೇನೆಂಬದನ್ನು ಸ್ವಲ್ಪವಾದರೂ ತಿಳಿದಿರುತ್ತಾರೆ. ಆದುದರಿಂದ ಎಲ್ಲಾ ಮಾನವರು ಉತ್ತರ (ನೆಪ) ವಿಲ್ಲದವರಾಗಿದ್ದಾರೆ (ರೋಮಾ 1:18-20, 3:10-12 ಮತ್ತು ವ್ಯಾಕ್ಯಾನಗಳನ್ನು ನೋಡಿರಿ).

[28] ಕೆಲವು ವೇಳೆಗಳಲ್ಲಿ ಜನರು ಪಾಪ ಮಾಡಿದ್ದರ ಕಾರಣದಿಂದ ಅವರ ಮೇಲೆ ವಿನಾಶಗಳು ಬರುತ್ತವೆಂಬದು ಸಹ ಸತ್ಯವಾಗಿದೆ. ಆದರೆ ಹಲವಾರು ವೇಳೆ ವಿನಾಶಗಳು ಪಾಪದ ಕಾರಣದಿಂದ ಉಂಟಾಗುವದಿಲ್ಲ. ವಿನಾಶಗಳು ವಿವಿಧ ಕಾರಣಗಳಿಂದ ಮಾನವರ ಮೇಲೆ ಬರುತ್ತವೆ. ಈ ಕಾರಣಗಳ ಕೆಲವು ಉದಾಹರಣೆಗಳಿಗಾಗಿ, (ಯೋಹಾನ 9:1-3, ಯಾಕೋಬ 1:2-3, 1ಪೇತ್ರ, 1:6-7, 4:12-13 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ಒಬ್ಬ ವ್ಯಕ್ತಿಗೆ ಸಂಭವಿಸುವ ಬಾಧೆಗಳಿಂದ ಅವನ ಪಾಪಗಳ ಬಗ್ಗೆ ತೀರ್ಪು ಮಾಡಲು ಸಾದ್ಯವಿಲ್ಲ.

[29] ಅಂಜೂರ ಮರವು ಹಲವಾರು ವೇಳೆ ಯೆಹೂದ್ಯ ಜನಾಂಗದ ಸಂಕೇತವಾಗಿ ಉಪಯೋಗಿಸಲ್ಪಟ್ಟಿದೆ (ಹೋಶೆಯ 9:10, ಯೋವೆಲ 1:7, ಮಾರ್ಕ 11:12-14, 21).

[30] ಎಲ್ಲಾ ರೋಗಗಳು ಸೈತಾನನಿಂದ ಬರುತ್ತವೆಂದು ಹೇಳಬಹುದು. ಆದಾಮ ಮತ್ತು ಹವ್ವಳರು ಎದೇನ್ ತೋಟದಲ್ಲಿ ಪಾಪ ಮಾಡಿದಂದಿನಿಂದ ಮಾನವ ಜನಾಂಗವು ಮರಣ ಮತ್ತು ವ್ಯಾಧಿಯ ಶಾಪದಡಿಯಲ್ಲಿರುತ್ತದೆ. ಇದು ಸೈತಾನನ ಕೆಲಸವಾಗಿದೆ (ಆದಿಕಾಂಡ 3:1-6, 17-19)

[31] ಯೆಹೂದ್ಯರೆಲ್ಲರೂ ರಕ್ಷಣೆ ಹೊಂದುವರೆಂದು ಯೆಹೂದ್ಯರು ಅಂದು ಕೊಂಡಿದ್ದರು, ಆದರೆ ಯೇಸು ತನ್ನಲ್ಲಿ ನಂಬಿಕೆಯಿಡುವವರು ಮಾತ್ರವೇ ರಕ್ಷಿಸಲ್ಪಡುವರು ಎಂದು ಬೋಧಿಸಿದನು.

[32] ನೀತಿವಂತರಾಗಲಿ ಇಲ್ಲವೆ ಅನೀತಿವಂತರಾಗಲಿ, ಅಂತೂ ಸತ್ತವರೆಲ್ಲರೂ ಲೋಕಾಂತ್ಯದಲ್ಲಿ ಪುನರುಥ್ಥಾನ ಹೊಂದಿ ನೂತನ ದೇಹವನ್ನು ಪಡೆಯುವರು (ಯೋಹಾನ 5:28-29, ಅ.ಕೃತ್ಯ 24:15, ರೋಮ 8:23 ಮತ್ತು ವ್ಯಾಕ್ಯಾನಗಳನ್ನು ನೋಡಿರಿ). ನೀತಿವಂತರ ಪುನರುಥ್ಥಾನವು ಪರಲೋಕದಲ್ಲಿ ಆಗುವದು. (ಹೆಚ್ಚಿನ ಚರ್ಚೆಗಾಗಿ ಪದಪಟ್ಟಿ: ಪುನರುಥ್ಥಾನ ನೋಡಿರಿ).

[33] ಯೇಸುವಿನ ಸಾಮ್ಯಗಳು ಕೆಲವು ವೇಳೆಗಳಲ್ಲಿ ಒಂದು ನಿಜ ಅರ್ಥಕ್ಕಿಂತಲೂ ಹೆಚ್ಚು ಅರ್ಥಗಳನ್ನು ಹೊಂದಿರುತ್ತವೆ.

[34] "ನರಕ" ಎಂಬ ಸ್ಥಾನದಲ್ಲಿ ಕೆಲವು ಬೈಬಲ್ ಭಾಷಾಂತರಗಳು "ಹೆಡೆಸ್" ಎಂದು ಹೇಳುತ್ತವೆ. "ಹೆಡೆಸ್"ವು ರಕ್ಷಣೆ ಹೊಂದದೆ ಸತ್ತವರ ಅಂತಿಮ ನ್ಯಾಯತೀರ್ಪಿನ ತನಕ ಕಾಯ್ದುಕೊಳ್ಳಲು ಅಲ್ಲಿಗೆ ಹೋಗುತ್ತವೆ.

[35] ಇದು ಒಂದು ಸಾಮ್ಯ ಎಂಬದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಆದುದರಿಂದ ಇದು ಮರಣಾ ನಂತರ ಜೀವನದ ಬಗ್ಗೆ ಸಂಪೂರ್ಣ ಬೋಧನೆಯನ್ನು ನೀಡುವದಿಲ್ಲ. ಉದಾಹರಣೆಗೆ, ಸತ್ತವರ ಆತ್ಮಗಳು ದೇಹಗಳು, ಬೆರಳುಗಳು ಮತ್ತು ನಾಲಿಗೆಗಳನ್ನು ಹೊಂದಿರುವದಿಲ್ಲ. ಲೋಕಾಂತ್ಯದಲ್ಲಿ ಸಂಭವಿಸುವ ಸತ್ತವರ ಸಾಮಾನ್ಯ ಪುನರುಥ್ಥಾನದ ನಂತರ ಮಾತ್ರವೇ ಸತ್ತವರು ನೂತನ ದೇಹಗಳನ್ನು ಪಡೆಯುವರು. ಐಶ್ವರ್ಯವಂತನು ನನ್ನ ನಾಲಿಗೆಯನ್ನು ತಣ್ಣಗೆ ಮಾಡಬೇಕೆಂಬ ಮನವಿಯು ಆತನು ಅನುಭವಿಸುತ್ತಿದ್ದ ಸಂಕಟವನ್ನು ಸೂಚಿಸುವದಕ್ಕಾಗಿ ಮಾತ್ರವೇ ಆಗಿದೆ.

[36] ಇಲ್ಲಿ ಮೋಶೆ ಎಂಬ ಪದವು ಮೋಶೆಯು ಬರೆದ ಹಳೆ ಒಡಂಬಡಿಕೆಯ ಮೊದಲಿನ ಐದು ಪುಸ್ತಕಗಳನ್ನು ಸೂಚಿಸುತ್ತದೆ. ಆದುದರಿಂದ ಮೋಶೆ ಮತ್ತು ಪ್ರವಾದಿಗಳು ಎಂಬದು ಇಡೀ ಹಳೆ ಒಡಂಬಡಿಕೆ ಎಂಬಅರ್ಥವಾಗಿದೆ. ಹಳೆ ಒಡಂಬಡಿಕೆಯು ಕೆಲವು ಸಮಯಗಳಲ್ಲಿ "ಧರ್ಮಶಾಸ್ತ್ರ ಮತ್ತು ಪ್ರವಾದಿಗಳ ಗ್ರಂಥಗಳು" ಎಂದು ಸಹ ಕರೆಯಲ್ಪಟ್ಟಿದೆ (ವಚನ 16).

37 ಇದಕ್ಕಾಗಿ ಯೇಸು ಯೊರ್ದಾನ ನದಿಯ ಪೂರ್ವದುದ್ದಕ್ಕು ಪ್ರಯಾಣಿಸಬೇಕಾಯಿತು, ಯಾಕೆಂದರೆ ಸಮಾರ್ಯವು ಗಲಿಲಾಯ ಮತ್ತು ಯೆರೂಸಲೇಮ ನಡುವಿನ ಜಿಲ್ಲಾ ಮಾರ್ಗದಲ್ಲಿರುತ್ತದೆ. ಯೆರಿಕೋ ಪಟ್ಟಣದ ಬಳಿಯಲ್ಲಿ ಆತನು ಪು ನಃ ಯೊರ್ದಾನ್ ನದಿಯ ಪಶ್ಚಿಮ ಭಾಗಕ್ಕೆ ದಾಟಿ ಹೋದನು (ಲೂಕ 1:1).

38 ಕುಷ್ಟವು ಒಂದು ಹರಡುರೋಗವಾಗಿತ್ತು. ಯೇಸುವಿನ ದಿನಗಳಲ್ಲಿ ಈಗ ಇರುವಂತೆ ಕುಷ್ಟಕ್ಕೆ ಯಾವ ಔಷದವೂ ಇರಲಿಲ್ಲ.

39 ಲೂಕನು ಉಪಯೋಗಿಸಿದ ಗ್ರೀಕ ಭಾಷೆಯಲ್ಲಿ "ನಿಮ್ಮಲ್ಲಿ" ಎಂಬ ಈ ವಚನದಲ್ಲಿನ ಪದವು "ಮದ್ಯದಲ್ಲಿ" ಎಂಬದಾಗಿಯೂ ಸಹ ಆಗಿರಬಹುದು. ಎರಡೂ ಅರ್ಥಗಳು ನಿಜವಾದವು ಗಳಾಗಿವೆ. ದೇವರ ರಾಜ್ಯವು ನಮ್ಮ"ಮದ್ಯದಲ್ಲಿ" ಇದೆ ಯಾಕೆಂದರೆ ಯೇಸು ತನ್ನ ಆತ್ಮೀನ ಮೂಲಕ ನಮ್ಮ ಮದ್ಯದಲ್ಲಿರುತ್ತಾನೆ. ದೇವರ ರಾಜ್ಯವು "ನಮ್ಮಲ್ಲಿ" ಇದೆ ಯಾಕೆಂದರೆ ಯೇಸುವಿನ ಆತ್ಮವು ನಮ್ಮಲ್ಲಿದೆ. ದೇವರ ರಾಜ್ಯವು ಅವಿಶ್ವಾಸಿಗಳಾದ ಫರಿಸಾಯರಲ್ಲಿ ಇದೆಯೆಂದು ಯೇಸು ಹೇಳಲಿಲ್ಲ. ಆತನು ಸಾಮಾನ್ಯವಾದ ರೀತಿಯಲ್ಲಿ ದೇವರ ರಾಜ್ಯವು ನಂಬುವ ಯಾರೇ ಆಗಲಿ ಅವರೊಳಗೆ ಇರುತ್ತದೆಂದು ಹೇಳುತ್ತಿದ್ದಾನೆ. ಹೇಗಿದ್ದರೂ ದೇವರ ರಾಜ್ಯವು ಫರಿಸಾಯರ ಮದ್ಯದಲ್ಲಿ ಇದ್ದದ್ದು ನಿಜವಾಗಿತ್ತು, ಯಾಕೆಂದರೆ ಯೇಸು ಆ ಸಮಯದಲ್ಲಿ ಅವರ ಮದ್ಯದಲ್ಲಿ ಇದ್ದನು.

40 ಯೇಸು ಸಹಜವಾಗಿ ತನ್ನನ್ನು ಮನುಷ್ಯಕುಮಾರ ನೆಂದು ಸೂಚಿಸಿದನು (ಮಾರ್ಕ 2:10 ಮತ್ತು ವ್ಯಾಖ್ಯಾನ ನೋಡಿರಿ).

41 ಲೂಕನ ಎಲ್ಲಾಪು ರಾತನ ಹಸ್ತ ಪ್ರತಿಗಳೆಲ್ಲವೂ ವಚನ 36ನ್ನು ಒಳಗೊಂಡಿರುವದಿಲ್ಲ. ಇದೇ ವಚನವು ಮತ್ತಾಯ 24:40 ರಲ್ಲಿ ಕಂಡುಬರುತ್ತದೆ.

42 ಆದುಕೊಂಡವರು ಎಂದರೆ ದೇವರಿಂದ ಆದುಕೊಳ್ಳಲ್ಪಟ್ಟವರು, ಅಂದರೆ ಕ್ರಿಸ್ತನಲ್ಲಿ ವಿಶ್ವಾಸಿಗಳು.

43 ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರವಾಗಿ ಇನ್ನೊಬ್ಬರ ಸ್ವತ್ತುಗಳನ್ನು ತೆಗೆದುಕೊಳ್ಳುವವನು ಎರಡರಷ್ಟಾಗಿ ಹಿಂದಕ್ಕೆ ಕೊಡಬೇಕು (ವಿಮೋಚನಕಾಂಡ 22:9).

44 ಯೇಸು ಜಯೋತ್ಸಾಹದಿಂದ ಯೆರೂಸಲೇಮನ್ನು ಪ್ರವೇಶಿಸಿದ ವೇಳೆಯಲ್ಲಿ ಆತನನ್ನು ಸ್ವಾಗತಿಸಿದವರು ಆತನ ಹಿಂಬಾಲಕರೇ ಆಗಿರುವ ಸಾಧ್ಯತೆಯಿದೆ (ವಚನ 37).

45 ಯೆರೂಸಸಲೇಮ ಎಂಬ ಪದದ ಅರ್ಥವು "ಸಮಾಧಾನದ ನಗೆ"

46 ಇಸ್ರಾಯೇಲಿನ ಹನ್ನೆರಡು ಕುಲಗಳು ಅಬ್ರಹಾಮನ ಮೊಮ್ಮಗನಾದ ಯಾಕೋಬನ ಹನ್ನೆರಡು ಗಂಡು ಮಕ್ಕಳ ವಂಶಗಳಾಗಿವೆ. ಆದುದರಿಂದ "ಇಸ್ರಾಯೇಲನ ಹನ್ನೆರಡು ಕುಲಗಳು" ಒಟ್ಟಾಗಿ ಇಸ್ರಾಯೇಲ ಜನಾಂಗವಾಗಿದೆ.

47 ಈ ವಚನದ ಗ್ರೀಕ ವಾಕ್ಯದಲ್ಲಿ, ನೀನು ಎಂಬದು ಬಹುವಚನವಾಗಿದೆ.

48 ಅಷ್ಟು ಸಾಕು ಎಂಬದು ಯೆಹೂದ್ಯ ಹೇಳಿಕೆಯಾಗಿದ್ದು "ವಿಷಯವು ಮುಗಿಯಿತು" ಎಂದು ಆದರರ್ಥವಾಗಿದೆ.

49 ಈ ಮುಂಚೆ ಸ್ನಾನನಿಕನಾದ ಯೋಹಾನನನ್ನು ಕೊಲ್ಲಿಸಿದ ಹೆರೋದನೇ ಅನಂತರ ಯೇಸು ಸತ್ತವರೊಳಗಿಂದ ಎದ್ದು ಬಂದ ಸ್ನಾನಿಕನಾದ ಯೋಹಾನನಾಗಿದ್ದಾನೆಂದು ಯೋಚಿಸಲು ಪ್ರಾರಂಭಿಸಿದನು (ಮಾರ್ಕ 6:14-16 ನೋಡಿರಿ).

50 ಇಸ್ಕರಿಯೋತ ಯೂದನು ಇನ್ನೆಂದಿಗೂ ಶಿಷ್ಯರಲ್ಲಿ ಒಬ್ಬನಾಗಿರಲಿಲ್ಲ ಆದ್ದರಿಂದ ಅವರು ಹನ್ನೊಂದು ಜನರಾಗಿದ್ದರು.

51 ಯೋಹಾನನು ಮೊದಲು ಬರಿದಾದ ಸಮಾಧಿಯನ್ನು ಕಂಡಾಗ ನಂಬಿದ್ದನು (ಯೋಹಾನ 20:8).

52 ನಾಲ್ಕು ಸುವಾರ್ತೆಗಳ ಬರಹಗಾರರು ಯೇಸು ಪು ನರುತ್ಥಾನ ಹೊಂದಿದ ನಂತರ ಆತನು ಕಾಣಿಸಿಕೊಳ್ಳುವ ದಾಖಲೆಯ ಸ್ವಲ್ಪ ಭಾಗವನ್ನು ಮಾತ್ರವೇ ನೀಡುತ್ತಾರೆ. ಶ್ರೇಷ್ಠ ಘಟನೆಯನ್ನು ಕಣ್ಣಾರೆ ಕಂಡ ಯಾವದೇ ನಾಲ್ವರು ವ್ಯಕ್ತಿಗಳನ್ನು ಊಹಿಸಿಕೊಳ್ಳಿರಿ. ಪ್ರತಿಯೊಬ್ಬರು ಆ ಘಟನೆಯನ್ನು ತಮ್ಮದೇ ಆದ ದೃಷ್ಟಿಕೋನದಿಂದ ವರ್ಣಿಸುತ್ತಾರೆ. ಒಬ್ಬನು ಒಂದು ಸಂಗತಿಯನ್ನು ತಿಳಿಸಿದರೆ ಇನ್ನೊಬ್ಬನು ಮತ್ತೊಂದು ಸಂಗತಿಯನ್ನು ತಿಳಿಸುತ್ತಾನೆ. ನಾಲ್ಕು ದಾಖಲೆಗಳನ್ನು ಒಟ್ಟಾಗಿ ಸೇರಿಸುವದಾದರೆ ಮಾತ್ರ ಒಬ್ಬನು ಆ ಘಟನೆಯ ಪೂರ್ಣ ಚಿತ್ರಣವನ್ನು ಹೊಂದ ಬಹುದು. ನಾಲ್ಕು ಸುವಾರ್ತೆಗಳು ಅದೇ ರೀತಿಯಾಗಿವೆ. ಪ್ರತಿಯೊಬ್ಬ ಸುವಾರ್ತೆ ಬರಹಾಗಾರನು ಬರೆದಿರುವದೆಲ್ಲವೂ ಸತ್ಯ ಆದರೆ ಪ್ರತಿಯೊಬ್ಬ ಬರಹಗಾರನು ತನ್ನ ಸುವಾರ್ತೆಯಲ್ಲಿ ಪ್ರತಿಯೊಂದು ವಿವರವನ್ನು ಸೇರಿಸಿರುವದಿಲ್ಲ. ಆದುದರಿಂದ ಯೇಸುವಿನ ಜೀವನದ ಮತ್ತು ವಿಶೇಷವಾಗಿ ಆತನ ಪು ನರುತ್ಥಾನದನಂತರದ ಘಟನೆಗಳ ಪೂರ್ಣ ಚಿತ್ರಣಕ್ಕಾಗಿ ನಾವು ನಾಲ್ಕು ಸುವಾರ್ತೆಗಳ ದಾಖಲೆಗಳನ್ನು ಒಟ್ಟಾಗಿ ಅಭ್ಯಾಸಿಸಬೇಕು. ಹೇಗಿದ್ದರೂ, ನಾವು ಇದನ್ನು ಮಾಡುವಾಗಲೂ, ಯೇಸುವಿನ ಜೀವಿತದ ಕುರಿತಾಗಿ ನಾವು ಎಂದಿಗೂ ತಿಳಿಯಲಾಗದ ಇನ್ನೂ ಅನೇಕ ವಿವರಗಳು ಇರುತ್ತವೆ ಯಾಕೆಂದರೆ ಅವು ಗಳು ಬರೆಯಲ್ಪಟ್ಟಿರುವದಿಲ್ಲ (ಯೋಹಾನ 21:25 ನೋಡಿರಿ).

53 ಕ್ಲೆಯೋಪನು ಯೋಹಾನ 19:25 ರಲ್ಲಿ ಪ್ರಸ್ತಾಪಿಸಲ್ಪಟ್ಟ ಕ್ಲೋಪ ಒಂದೇ ಆಗಿರಬಹುದು, ಆದರೆ ಆತನ ಹೆಸರಿನ ಪದಗಳಲ್ಲಿ ಸ್ವಲ್ಪ ವ್ಯತ್ಯಾಸವಿರುತ್ತದೆ.

54 ಸಾಮಾನ್ಯವಾಗಿ ರೋಮಾಯರು ಅಪರಾಧಿಗಳನ್ನು ಅವರ ಕೈ ಮತ್ತು ಕಾಲುಗಳಿಗೆ ದೊಡ್ಡ ಮೊಳೆಗಳನ್ನು ಹೊಡೆಯುವದರ ಮೂಲಕ ಶಿಲುಬೆಗೆ ನೇತಾಡಿಸುತ್ತಿದ್ದರು.

55 ಅವರು ಗಲಿಲಾಯದಿಂದ ಯೆರೂಸಲೇಮಿಗೆ ಹಿಂದಿರುಗಿದ ನಂತರ ಯೇಸು ಈ ಆಜ್ಞೆಯನ್ನು ಶಿಷ್ಯರಿಗೆ ನೀಡಿದನು.

# ಯೋಹಾನ

## ಪರಿಚಯ

ಯೋಹಾನನ ಸುವಾರ್ತೆಯು ಜೆಬದಾಯನ ಮಗನೂ ಅಪೊಸ್ತಲನೂ ಆದ ಯೋಹಾನನಿಂದ ಬರೆಯಲ್ಪಟ್ಟಿತು (ಮಾರ್ಕ 1:19). ಇದು ಕ್ರಿ.ಶ 70 ಮತ್ತು 90 ರ ನಡುವೆ ಬರೆಯಲ್ಪಟ್ಟಿತ್ತೆಂದು ಬಹುಪಾಲು ಬೈಬಲ್ ಪಂಡಿತರು ನಂಬುತ್ತಾರೆ. ಆದರೆ ನಿಖರವಾದ ಕಾಲವು ತಿಳಿದು ಬಂದಿರುವದಿಲ್ಲ (ಯೋಹಾನ 5:2 ಮತ್ತು ವ್ಯಾಖ್ಯಾನ ನೋಡಿರಿ). ಯೇಸುವಿನ ಮೂಲ ಹನ್ನೆರಡು ಶಿಷ್ಯರುಗಳಲ್ಲಿ ಯೋಹಾನನು ಆತ್ಮೀಕ ಅನ್ಯೋನ್ಯತೆಯಲ್ಲಿ ಅತ್ಯಂತ ಆಪ್ತನಾಗಿದ್ದನು. ಯೋಹಾನನು ಯೇಸುವಿನ ಮನಸ್ಸನ್ನು ಬೇರೆ ಇನ್ನಾರಿಗಿಂತಲೂ ಚೆನ್ನಾಗಿ ಬಲ್ಲವನಾಗಿದ್ದನು. ಹೀಗಿರುವದರಿಂದ ಈ ಸುವಾರ್ತೆಯಲ್ಲಿ ಯೋಹಾನನು ಯೇಸುವಿನ ಕೆಲವೊಂದು ಅತಿ ಆಳವಾದ ಯೋಚನೆಗಳು ಮತ್ತು ಹೇಳಿಕೆಗಳನ್ನು ನಮಗಾಗಿ ಬರೆದಿರುತ್ತಾನೆ.

ಯೋಹಾನನು ಅತಿ ವೃದ್ದನಾಗುವವರೆಗೂ ಜೀವಿಸಿದನು. ಅವನು ಎಫೆಸದಲ್ಲಿ ಅನೇಕ ವರ್ಷಗಳವರೆಗೆ ಜೀವಿಸಿದನು. ಈ ವಾರ್ತೆಯು ಅಲ್ಲಿಯೇ ಬರೆಯಲ್ಪಟ್ಟಿದೆ ಎಂದು ಹೇಳಲಾಗುತ್ತದೆ. ಹೊಸ ಒಡಂಬಡಿಕೆಯ ಯೋಹಾನನ ಮೂರು ಪತ್ರಿಕೆಗಳು ಜೆಬದಾಯನ ಮಗನಾದ ಈ ಅಪೊಸ್ತಲ ಯೋಹಾನನಿಂದಲೇ ಬರೆಯಲ್ಪಟ್ಟಿದೆ. ಯೋಹಾನನ ಜೀವಿತದ ಅಂತ್ಯದಲ್ಲಿ ಅವನನ್ನು ಮೆಡಿಟರನಿಯನ್ ಸಮುದ್ರದಲ್ಲಿರುವ ಪತ್ಮೋಸ ದ್ವೀಪಕ್ಕೆ ಗಡಿಪಾರು ಮಾಡಲಾಯಿತು, ಅಲ್ಲಿ ಆತನು ಕ್ರಿಸ್ತನ ಪ್ರಕಟಣೆಯನ್ನು ಸ್ವೀಕರಿಸಿದನು. ಯೋಹಾನನ ಈ ಪ್ರಕಟಣೆಯ ಬಣ್ಣನೆಯು ಹೊಸ ಒಡಂಬಡಿಕೆಯ ಕೊನೆಯ ಪು ಸ್ತಕವಾದ ಪ್ರಕಟಣೆ ಪು ಸ್ತಕದಲ್ಲಿ ಬರೆಯಲ್ಪಟ್ಟಿದೆ.ಯೋಹಾನನ ಸುವಾರ್ತೆಯು ಮತ್ತಾಯ ಮಾರ್ಕ ಮತ್ತು ಲೂಕನ ಸುವಾರ್ತೆಗಳಿಗಿಂತ ವ್ಯತ್ಯಾಸವಾಗಿದೆ. ಯೋಹಾನನ ಸುವಾರ್ತೆಯಲ್ಲಿ ನಾವು ಕ್ರಿಸ್ತನ ಮನಸ್ಸು ಮತ್ತು ಆತ್ಮದ ಹೆಚ್ಚು ಅಂತರಾಳವನ್ನು ಕಾಣುತ್ತೇವೆ. ಯೋಹಾನನು ಯೇಸುವಿನ ಸ್ವಭಾವವನ್ನು ಶ್ರೇಷ್ಠ ವಿವರತೆಯನ್ನು ವರ್ಣಿಸಿರುತ್ತಾನೆ. ಆತನು ಯೇಸು ತನ್ನ ಕುರಿತಾಗಿ ಹೇಳಿದ ಬೋಧನೆಗಳನ್ನು ದಾಖಲಿಸಿರುತ್ತಾನೆ: "ನಾನೇ ಜೀವದ ರೊಟ್ಟಿ" (ಯೋಹಾನ 35), "ನಾನೇ ಲೋಕಕ್ಕೆ ಬೆಳಕಾಗಿದ್ದೇನೆ" (ಯೋಹಾನ 8:12), "ನಾನೇ ಒಳ್ಳೆಯ ಕುರುಬನು" (ಯೋಹಾನ 10:11), "ನಾನೇ ಬಾಗಿಲು" (ಯೋಹಾನ 10:9) ನಿಜವಾದ ದ್ರಾಕ್ಷೆ ಬಳ್ಳಿ (ಯೋಹಾನ 15:1), ಮಾರ್ಗವೂ, ಸತ್ಯವೂ, ಜೀವವೂ (ಯೋಹಾನ 14:6).

ಯೋಹಾನನು ಯೇಸು ತನ್ನ ಶಿಷ್ಯರೊಂದಿಗೆ ಮಾಡದ ಅತಿ ಆಳವಾದ ಸಂಭಾಷಣೆಗಳನ್ನು ದಾಖಲಿಸಿರುತ್ತಾನೆ, ವಿಶೇಷವಾಗಿ ಯೇಸುವಿನ ಕಡೆಯ ರಾತ್ರಿ ಬೋಜನದ ವೇಳೆಯಲ್ಲಿ ನಡೆದ ದೀರ್ಘವಾದ ಸಂಭಾಷಣೆಯು 14-17 ಅದ್ಯಾಯಗಳಲ್ಲಿ ದಾಖಲಾಗಿರುತ್ತದೆ. ಯೋಹಾನನ ಸುವಾರ್ತೆಯಿಂದ ಪವಿತ್ರಾತ್ಮನ ಕುರಿತಾಗಿ ನಾವು ಅತಿ ವಿಸ್ತಾರವಾಗಿ ಕಲಿಯುತ್ತೇವೆ. ಕ್ರಿಸ್ತನ ಆತ್ಮವು ನಮ್ಮಲ್ಲಿ ವಾಸಿಸದ ಹೊರತು ನಾವು ಏನನ್ನು ಮಾಡಲಾರೆವು ಎಂಬದನ್ನು ಕಲಿಯುತ್ತೇವೆ (ಯೋಹಾನ 15:5). ಕ್ರಿಸ್ತನ ಕಾರ್ಯವು ವಿಶ್ವಾಸಿಗಳಲ್ಲಿ ಪವಿತ್ರಾತ್ಮನ ಬಲವು ತುಂಬಿಸಲ್ಪಡುವಿಕೆಯ ಮೂಲಕ ಮಾತ್ರವೇ ಮುಂದುವರೆಯಬಲ್ಲದು.

ಹೀಗೆ, ನಾವು ಮೊದಲ ಮೂರು ಸುವಾರ್ತೆಗಳನ್ನು ಯೋಹಾನನ ಸುವಾರ್ತೆಯೊಂದಿಗೆ ಒಟ್ಟುಗೂಡಿಸುವಾಗ ಯೇಸುವಿನ ಜೀವನ ಮತ್ತು ಕಾರ್ಯದ ಪೂರ್ಣ ಚಿತ್ರಣವನ್ನು ಪಡೆಯುತ್ತೇವೆ. ಆದರೆ ಎಲ್ಲಕ್ಕಿಂತಲೂ ಮುಖ್ಯವಾಗಿ ನಾವು ಈ ಸುವಾರ್ತೆಯನ್ನು ಅಭ್ಯಾಸಿಸುತ್ತಿರುವ ಹಾಗೆ ಯೋಹಾನನು ಇದನ್ನು ಬರೆದ ಉದ್ದೇಶವನ್ನು ನೆನಪಿಗೆ ತಂದುಕೊಳ್ಳೋಣ: ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡ ಕೊಳ್ಳುವಂತೆಯು ಇಷ್ಟೆಲ್ಲಾ ಬರದದೆ (ಯೋಹಾನ 20:31)

## ಹೊರ ರೇಖೆ

ಅ. ಪೀಠಿಕೆ (1:1-18)
   1. ವಾಕ್ಯ (1:1-5)
   2. ಸ್ನಾನಿಕನಾದ ಯೋಹಾನನ ಸಾಕ್ಷಿ (1:6-18)

ಆ. ಲೋಕದಲ್ಲಿ ಯೇಸು ಕ್ರಿಸ್ತನ ಸೇವೆ (1:19-12:50)
   1. ಸ್ನಾನಿಕನಾದ ಯೋಹಾನನ ಸಾಕ್ಷಿ (1:19-34)
   2. ಪ್ರಥಮ ಶಿಷ್ಯರ ಕರೆಯುವಿಕೆ (1:35-51)
   3. ಕಾನಾ ಊರಿನಲ್ಲಿ ಮದುವೆ (2:1-11)
   4. ಯೆರೂಸಲೇಮ ಮತ್ತು ಯೂದಾಯಕ್ಕೆ ಮೊದಲ ಬೇಟಿ (2:12, 3:36)
   5. ಸಮಾರ್ಯಕ್ಕೆ ಸೇವಾಕಾರ್ಯ (4:1-42)
   6. ಅದ್ಭುತಗಳು ಮತ್ತು ಬೋಧನೆಗಳು (4:43, 6"7)
   7. ಪರ್ಣಶಾಲೆಗಳ ಹಬ್ಬದಂದು ಯೇಸು (7:1-53)
   8. ಯೇಸು ತನ್ನನ್ನು ಬಯಲುಪಡಿಸಿಕೊಂಡಿದ್ದು (8:1-59)
   9. ಹುಟ್ಟು ಕುರುಡನಾಗಿದ್ದ ವ್ಯಕ್ತಿಯನ್ನು ಸ್ವಸ್ಥಮಾಡಿದ್ದು (9:1-41)
   10. ಯೇಸು ಒಳ್ಳೆಯ ಕುರುಬನು (10:1-42)
   11. ಲಾಜರನನ್ನು ಬದುಕಿಸಿದ್ದು (11:1-57)
   12. ಬೇಥಾನ್ಯ ಮತ್ತು ಯೆರೂಸಲೇಮಿನಲ್ಲಿ ಯೇಸು (12:1-50)

ಇ. ಯೇಸು ತನ್ನ ಶಿಷ್ಯರಿಗೆ ಮಾಡಿದ ಸೇವೆ (13:1, 17:26)
   1. ಪಾದ ತೊಳೆಯುವಿಕೆ (13:1-17)
   2. ಹಿಡು ಕೊಡುವಿಕೆಯ ಪ್ರಕಟಣೆ (13:18-30)
   3. ಮೇಲಂತಸ್ತಿನ ಕೋಣೆಯಲ್ಲಿನ ಸಂಭಾಷಣೆ (13:31, 16:33)

ಈ. ಯೇಸು ಕ್ರಿಸ್ತನ ಬಾಧೆ ಮತ್ತು ಪುನರುತ್ಥಾನ (18:1, 21:25)
   1. ಯೇಸುವನ್ನು ಹಿಡುಕೊಟ್ಟದ್ದು (18:1-14)
   2. ಯೇಸು ನ್ಯಾಯ ವಿಚಾರಣೆಗಾಗಿ ಯೆಹೂದ್ಯರ ಮುಂದೆ (18:15-27)
   3. ಯೇಸು ಪಿಲಾತನ ಎದುರು ನ್ಯಾಯ ವಿಚಾರಣೆಗೊಳಗಾಗಿದ್ದು (18:28, 19:16)
   4. ಯೇಸುವಿನ ಮರಣ (19:17-42)
   5. ಬರಿದಾದ ಸಮಾಧಿಯ ಅನ್ವೇಷಣೆ (20:1-10)
   6. ಯೇಸುವಿನ ಪುನರುತ್ಥಾನದ ಪ್ರತ್ಯಕ್ಷತೆಗಳು (20:11, 21:25)

# ಅಧ್ಯಾಯ - 1

## ವಾಕ್ಯವು ನರಾವತಾರ ಎತ್ತಿದ್ದು (1:1-5)

**1-2** "ಆದಿಯಲ್ಲಿ ವಾಕ್ಯವಿತ್ತು ಆ ವಾಕ್ಯವು ಕ್ರಿಸ್ತನೇ. ಯೋಹಾನನು ಹೀಗೆ ಬರೆಯುತ್ತಾನೆ: ಆ ವಾಕ್ಯವು ನರಾವತಾರವೆತ್ತಿ ನಮ್ಮ ಮಧ್ಯದಲ್ಲಿ ವಾಸ ಮಾಡಿದನು (ವಚನ 14). ಯೋಹಾನನು ತನ್ನ ಸುವಾರ್ತೆಯ ಪ್ರಾರಂಭದಲ್ಲಿಯೇ ಹೇಳುತ್ತಿದ್ದುದೇನೆಂದರೆ ಯೇಸು ಕ್ರಿಸ್ತನು ಒಬ್ಬ ಸಾಮಾನ್ಯ ಮಾನವನಾಗಿರಲಿಲ್ಲ. ಆತನು ದೇವರ "ವಾಕ್ಯ" ಆಗಿದ್ದನು,ಜಗದುತ್ಪತ್ತಿಗೆ ಮುಂಚೆಯೇ ಆತನು ದೇವರೊಂದಿಗಿರುತ್ತಾನೆ. ವಾಕ್ಯವು ಅಂದರೆ ಕ್ರಿಸ್ತನು ಆದಿಯಲ್ಲಿಯೇ ಅಸ್ತಿತ್ವದಲ್ಲಿದ್ದನು, ಲೋಕವು ಉತ್ಪತ್ತಿಯಾಗುವ ಮುಂಚೆಯೇ ಕ್ರಿಸ್ತನು ಅಸ್ಥಿತ್ವದಲ್ಲಿ ದ್ದನು. (ಯೋಹಾನ 17:5). ಬೈಬಲ್ಲಿನಲ್ಲಿ ಮೊದಲನೆಯ ವಚನವು ಹೀಗೆ ಹೇಳುತ್ತದೆ. "ಆದಿಯಲ್ಲಿ ದೇವರು ಆಕಾಶವನ್ನು ಭೂಮಿಯನ್ನು ಉಂಟು ಮಾಡಿದನು" (ಆದಿಕಾಂಡ 1:1) ಆದರೆ ಕ್ರಿಸ್ತನು ಆದಿಗಿಂತಲೂ ಮುಂಚೆಯೇ ದೇವರೊಂದಿಗಿದ್ದನು. ದೇವರಿಗೆ ಆದಿಯೆಂಬುದಿಲ್ಲ, ಆತನು ಯಾವಾಗಲೂ ಅಸ್ತಿತ್ವದಲ್ಲಿದ್ದನು ಮತ್ತು ದೇವರೊಂದಿಗೆ ಯಾವಾಗಲೂ ಆತನ ವಾಕ್ಯವು ಇತ್ತು ದೇವರು ತನ್ನ ವಾಖ್ಯ ಇಲ್ಲದೆ ಎಂದಿಗೂ ಇರಲಿಲ್ಲ.

ವಾಕ್ಯವು ದೇವರ ಬಳಿಯಲ್ಲಿತ್ತು ಇದರರ್ಥವೇನೆಂದರೆ ದೇವರು ಮತ್ತು ವಾಕ್ಯದ ನಡುವೆ ಒಂದು ವಿಧದಲ್ಲಿ ವ್ಯತ್ಯಾಸ ಪೊಂದಿರುತ್ತದೆ, ಅವರು ವಿಭಿನ್ನರಾಗಿದ್ದಾರೆ, ತಂದೆ ಮತ್ತು ಮಗ ವಿಭಿನ್ನರಾಗಿರುವಂತೆಯೇ ಅವರೂ ವಿಭಿನ್ನರಾಗಿದ್ದಾರೆ. ಆದರೆ ನಂತರ ಯೋಹಾನನು ಆ ವಾಕ್ಯವು ದೇವರಾಗಿತ್ತು ಎಂದು ಹೇಳುತ್ತಾನೆ (ವಚನ 1). ಕ್ರಿಸ್ತನು ದೇವಕುಮಾರನಷ್ಟೇ ಅಲ್ಲ, ಆತನು ಸ್ವತ: ದೇವರೇ ಆಗಿದ್ದಾನೆ. ಕ್ರಿಸ್ತನು ಮನುಷ್ಯ ರೂಪದಲ್ಲಿರುವ ದೇವರೇ ಆಗಿದ್ದಾನೆ. ಇತನು 2000 ವರ್ಷಗಳ ಹಿಂದೆ ಭೂಮಿಗೆ ಬಂದ ಜೀವಸ್ವರೂಪನಾದ ದೇವರ ಏಕೈಕ ನಿಜ ನರಾವತಾರವಾಗಿದ್ದಾನೆ. ದೇವರು ಕ್ರಿಸ್ತನಲ್ಲಿ ಮತ್ತು ಕ್ರಿಸ್ತನು ದೇವರಲ್ಲಿ ಇದ್ದನು. ಯೇಸು ತನ್ನ ಶಿಷ್ಯರಿಗೆ – "ನನ್ನನ್ನು ನೋಡಿದವನು ತಂದೆಯನ್ನು ನೋಡಿದವನಾಗಿದ್ದಾನೆ" (ಯೋಹಾನ 14:9) "ನಾನು ತಂದೆಯಲ್ಲಿದ್ದೇನೆ ಮತ್ತು..ತಂದೆಯು ನನ್ನಲ್ಲಿದ್ದಾನೆ (ಯೋಹಾನ 14:11)" ನಾನೂ ತಂದೆಯೂ ಒಂದಾಗಿದ್ದೇವೆ (ಯೋಹಾನ 10:30)

**3** ಆತನ (ಕ್ರಿಸ್ತನ) ಮೂಲಕ ಸಮಸ್ತವು ಉಂಟಾಯಿತು. ದೇವರ ವಾಕ್ಯವು ಮನುಷ್ಯನ ವಾಕ್ಯದಂತಲ್ಲ. ದೇವರು ಮಾತನಾಡುವಾಗ, ದೇವರು ಕಾರ್ಯ ಮಾಡುತ್ತಾನೆ. ಮನುಷ್ಯನು ಹಲವಾರು ವೇಳೆ ಮಾತಾಡುತ್ತಾನೆ ಆದರೆ ಏನನ್ನೂ ಮಾಡುವದಿಲ್ಲ. ಆದರೆ ದೇವರು ಮಾತಾಡುವಾಗ ಏನಾದರೂ ಜರಗುತ್ತದೆ. ದೇವರ ವಾಕ್ಯವು ಬಲವುಳ್ಳದ್ದು. ದೇವರು "ಬೆಳಕಾಗಲಿ" ಅಂದನು ಮತ್ತು ಬೆಳಕು ಉಂಟಾಯಿತು (ಆದಿಕಾಂಡ 1:3) ಮತ್ತು ಈ ಬಲದ ವಾಕ್ಯವು ಯೇಸುವಿನೊಂದಿಗಿತ್ತು ಯೇಸು ಕುಷ್ಟರೋಗಿಯಾದ ವ್ಯಕ್ತಿಗೆ "ಶುದ್ಧನಾಗು!" ಎಂದನು ಮತ್ತು ಆತನು ತಕ್ಷಣವೇ ಶುದ್ಧನಾದನು (ಮಾರ್ಕ 1:41). ಯೇಸು ಮಾತಾಡಲು ದೆವ್ವಗಳು ಜನರೊಳಗಿಂದ ಹೊರಬಂದವು (ಮಾರ್ಕ 1:25) ಆತನ ಮಾತಿನ ಮೂಲಕ ಬಿರುಗಾಳಿಯು ಶಾಂತವಾಯಿತು (ಮಾರ್ಕ 4:39) ಮತ್ತು ಸತ್ತವರು ಎಬ್ಬಿಸಲ್ಪಟ್ಟರು (ಲೂಕ 7:14-15, ಯೋಹಾನ 11:43-44) ಮತ್ತು ಈ 3 ನೇ ವಚನದಲ್ಲಿ ಯೋಹಾನನು ಇನ್ನು ಹೆಚ್ಚು ಆಶ್ಚರ್ಯಕರವಾದ ಸಂಗತಿಯೊಂದನ್ನು ಹೇಳುತ್ತಾನೆ: ಕ್ರಿಸ್ತನ ಮೂಲಕ ಸಮಸ್ತವೂ ಉಂಟಾಯಿತು. ದೇವರು ಆಕಾಶವನ್ನು, ಭೂಮಿಯನ್ನು ಉಂಟುಮಾಡುವಾಗ ತನ್ನ ವಾಕ್ಯದ ಮೂಲಕ ಅಂದರೆ ಕ್ರಿಸ್ತನ ಮೂಲಕ ಮಾಡಿದನು. ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ. ಅಪೊಸ್ತಲನಾದ ಪೌಲನು "ಎಲ್ಲಾ ಸಂಗತಿಗಳು ಆತನ ಮುಖಾಂತರವಾಗಿಯೂ ಆತನಿಗೋಸ್ಕರವೂ ಸೃಷ್ಟಿಸಲ್ಪಟ್ಟವು " ಎಂದು ಹೇಳುತ್ತಾನೆ (ಕೊಲೊಸ್ಸೆ 1:15-17). ಕ್ರಿಸ್ತನು ದೇವರ ಬಲವುಳ ವಾಕ್ಯವಾಗಿದ್ದಾನೆ. ದೇವರು ನಮ್ಮೊಂದಿಗೆ ತನ್ನ ಮಗನ ಮೂಲಕ ಮಾತಾಡಿದ್ದಾನೆ (ಇಬ್ರೀಯ 1:1-3 ಮತ್ತು ವ್ಯಾಖ್ಯಾನ ನೋಡಿರಿ).

**4** ಆದುದರಿಂದ ಯೋಹಾನನು "ಆತನಲ್ಲಿ ಜೀವವಿತ್ತು" ಎಂದು ಹೇಳುತ್ತಾನೆ. ದೇವರು ಜೀವವನ್ನು ಕ್ರಿಸ್ತನ ಮೂಲಕ ಉಂಟುಮಾಡಿದನು. ಆತನು ಶಾರೀರಿಕ ಜೀವವನ್ನು ಮಾತ್ರವೇ ಉಂಟು ಮಾಡಲಿಲ್ಲ ಆದರೆ ಆತ್ಮೀಕವಾದ ನಿತ್ಯ ಜೀವವನ್ನು ಉಂಟು ಮಾಡಿದನು. ಯೋಹಾನನು ಹೀಗೆ ಬರೆದನು : ದೇವರು ನಮಗೆ ನಿತ್ಯ ಜೀವವನ್ನು ಅನುಗ್ರಹಿಸಿದನು ಆ ಜೀವವು ಆತನ ಮಗನಲ್ಲಿ ಅದೇ ಎಂಬದೇ (1 ಯೋಹಾನ 5:11) ಯೇಸು ಹೇಳಿದ್ದು : "ನಾನು ಅವರಿಗೆ ಜೀವವಿರಬೇಕೆಂತಲೂ, ಅದು ಸಮೃದ್ಧಿಯಾಗಿರಬೇಕಂತಲೂ ಬಂದೇನು" (ಯೋಹಾನ 10:10) "ನಾನೇ ಪುನರುತ್ಥಾನವು ಜೀವವೂ ಆಗಿದ್ದೇನೆ (ಯೋಹಾನ 11:25) "ನಾನೇ ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ" (ಯೋಹಾನ 14:6). ಜೀವದೊಂದಿಗೆ ಯಾವಾಗಲೂ ಬೆಳಕಿರುತ್ತದೆ. ವಾಸ್ತವದಲ್ಲಿ ಜೀವವು ಬೆಳಕಿನ ಮೇಲೆ ಆಧಾರವಾಗಿರುತ್ತದೆ. ದೇವರು ಮೊದಲು ಬೆಳಕನ್ನು ಉಂಟು ಮಾಡಿದನು, ಅನಂತರವಷ್ಟೇ ಆತನು ಜೀವವನ್ನು ಉಂಟು ಮಾಡಿದನು. (ಆದಿಕಾಂಡ 1:3,11). ನಾವು ಕ್ರಿಸ್ತನ ಮೂಲಕ ಬೆಳಕನ್ನು ಸ್ವೀಕರಿಸಿದಾಗ ನಾವು ಆತನ ಬೆಳಕನ್ನೂ ಸ್ವೀಕರಿಸುತ್ತೇವೆ. ಆತನ ಬೆಳಕು ಪ್ರತಿಯೊಬ್ಬ ಮಾನವನಲ್ಲಿರುವ ಮನಃಸಾಕ್ಷಿ ಮತ್ತು ತರ್ಕದ ಬೆಳಕಾಗಿದೆ. ಅಲ್ಲದೆ ಅದು ಆತ್ಮೀಕ ಬೆಳಕು ಸಹ ಆಗಿದೆ (ಯೋಹಾನ 12:46) ಕತ್ತಲೆಯಲ್ಲಿ ನಾವು ಏನನ್ನು ನೊಡಲಾಗದು. ಆದರೆ ಬೆಳಕಿನಲ್ಲಿ ನಾವು ನೋಡಬಹುದು. ಎಲ್ಲಕ್ಕಿಂತಲೂ ಮುಖ್ಯವಾಗಿ ಕ್ರಿಸ್ತನ ಬೆಳಕಿನ ಮುಖಾಂತರ ನಾವು ದೇವರನ್ನು ಕಾಣಬಹುದು ಮತ್ತು ಅರ್ಥಮಾಡಿಕೊಳ್ಳಬಹುದು. ಯೇಸು ಹೇಳಿದ್ದು: ನಾನೇ ಲೋಕಕ್ಕೆ

ಬೆಳಕಾಗಿದ್ದೇನೆ. ನನ್ನನ್ನು ಹಿಂಬಾಲಿಸುವವನು ಎಂದಿಗೂ ಕತ್ತಲೆಯಲ್ಲಿ ನಡೆಯದೇ ಜೀವಕೊಡುವ ಬೆಳಕಿನಲ್ಲಿ ಹೊಂದಿದವನಾಗಿರುವನು" (ಯೋಹಾನ 8:12)

5 ಚಿಕ್ಕ ಮೇಣದ ಬತ್ತಿಯು ಕೋಣೆಯೊಂದರಲ್ಲಿನ ಕತ್ತಲೆಯನ್ನು ಓಡಿಸುವಂತೆಯೇ ಕ್ರಿಸ್ತನ ಬೆಳಕು ಲೋಕದ ಕತ್ತಲೆಯನ್ನು ಜಯಿಸುತ್ತದೆ. ಕತ್ತಲೆಯು ಎಂದಿಗೂ ಬೆಳಕನ್ನು ಸೋಲಿಸಲಾರದು. ಹೀಗೆ ಕ್ರಿಸ್ತನ ಬೆಳಕು ಪಾಪ ಮತ್ತು ಅವಿಶ್ವಾಸದ ಕತ್ತಲೆಯಲ್ಲಿ ಪ್ರಕಾಶಿಸುತ್ತದೆ, ಆದರೆ ಕತ್ತಲೆಯು ಅದನ್ನು ಅರಿಯುಲಿಲ್ಲ.[1] ಕತ್ತಲೆಯು ದೇವರನ್ನಾಗಲಿ ಅಥವಾ ಕ್ರಿಸ್ತನನ್ನಾಗಲಿ ಅರ್ಥಮಾಡಿಕೊಳ್ಳಲಿಲ್ಲ. ಪಾಪ ಮತ್ತು ಅವಿಶ್ವಾಸದ ಯಾರ ಮನಸ್ಸು ಕತ್ತಲೆಯಿಂದಲೂ, ಕುರುಡುತನದಿಂದಲೂ ತುಂಬಿದೆಯೋ ಅವರು ದೇವರ ಬೆಳಕನ್ನು ಕಾಣಲಾರರು. ಅವರು ಅದನ್ನು ನೋಡಲು ನಿರಾಕರಿಸುತ್ತಾರೆ ಯಾಕೆಂದರೆ ಅವರಿಗೆ ಕತ್ತಲೆಯಲ್ಲಿಯೇ ಜೀವಿಸಲು ಬಯಸುತ್ತಾರೆ. (ಯೋಹಾನ 3:19-21ಮತ್ತು ವ್ಯಾಖ್ಯಾನ ನೋಡಿರಿ.

## ಸ್ನಾನಿಕನಾದ ಯೋಹಾನನ ಸಾಕ್ಷಿ (1:6-18)

6-8 ಇಲ್ಲಿ ಯೋಹಾನನು ಸ್ನಾನಿಕನಾದ ಯೋಹಾನನ ಬರುವಿಕೆಯನ್ನು ಕುರಿತು ಬಣ್ಣಿಸುತ್ತಾನೆ. ಸ್ನಾನಿಕನಾದ ಯೋಹಾನನು ದೇವರಿಂದ ಕಳುಹಿಸಲ್ಪಟ್ಟವನಾಗಿದ್ದಾನೆ. ಆತನ ಜನನವು ಅದ್ಭುತವಾಗಿತ್ತು (ಲೂಕ 1:5-25, 57-66). ಅವನು ಒಂದು ನಿರ್ದಿಷ್ಟವಾದ ಉದ್ದೇಶಕ್ಕಾಗಿ ಕಳುಹಿಸಲ್ಪಟ್ಟನು: ಉದಾಹರಣೆಗೆ, ಬೆಳಕಿನ ವಿಷಯದಲ್ಲಿ ಸಾಕ್ಷಿ ಕೊಡುವದಕ್ಕೆ ಬಂದನು ಅಂದರೆ ಕ್ರಿಸ್ತನ ಬೆಳಕು. ಯೋಹಾನನ ಬೆಳಕನ್ನು ಸ್ವೀಕರಿಸಿಕೊಳ್ಳುವಂತೆ ಜನರ ಹೃದಯಗಳನ್ನು ಸಿದ್ಧಪಡಿಸಲು ಬಂದನು (ಮಾರ್ಕ 1:2-4, ಮತ್ತು ವ್ಯಾಖ್ಯಾನ ನೋಡಿರಿ). ಯೋಹಾನನು ತನ್ನ ಮೂಲಕವಾಗಿ ಎಲ್ಲರು (ಕ್ರಿಸ್ತನನ್ನು) ನಂಬುವಂತಾಗಲು ಸಾಕ್ಷಿನೀಡಿದನು. "ಎಲ್ಲರು" ಎಂದರೆ ಯೆಹೂದ್ಯರು ಮತ್ತು ಅನ್ಯಜನ ಇಬ್ಬರೂ ಎಂದರ್ಥ. ಕ್ರಿಸ್ತನು ತನ್ನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬ ಪು ರುಷ ಮತ್ತು ಸ್ತ್ರೀಗೆ ರಕ್ಷಣೆಯನ್ನು ತರುತ್ತಾನೆ.

9 ನಿಜವಾದ ಬೆಳಕು ಲೋಕಕ್ಕೆ ಬರುವದಾಗಿತ್ತು. ಸ್ನಾನಿಕನಾದ ಯೋಹಾನನು ಆ ಬೆಳಕಿನ ವಿಷಯದಲ್ಲಿ ಸಾಕ್ಷಿ ನೀಡಿದನು. ಆತನು ಜನರಿಗೆ ಮೆಸ್ಸಿಯನಾದ 2 ಕ್ರಿಸ್ತನು ಪ್ರತ್ಯಕ್ಷನಾಗಲಿದ್ದಾನೆದು ಹೇಳಿದನು (ಮಾರ್ಕ 1:7-8 ಮತ್ತು ವ್ಯಾಖ್ಯಾನ ನೋಡಿರಿ).

ನಿಜವಾದ ಬೆಳಕು (ಕ್ರಿಸ್ತನು) ಪ್ರತಿಯೊಬ್ಬನಿಗೂ ಬೆಳಕನ್ನು ಕೊಡುತ್ತದೆ. ನಾವು ಇಲ್ಲಿ ಯೋಹಾನನ ಅರ್ಥವನ್ನು ತಿಳಿದುಕೊಳ್ಳಬೇಕು. ದೇವರು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ, "ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆ ಸುರಿಸುತ್ತಾನೆ" (ಮತ್ತಾಯ 5:45) ಅಪೊಸ್ತಲನಾದ ಪೌಲನು ಹೀಗೆಂದನು: ದೇವರು ತನ್ನ ವಿಷಯದಲ್ಲಿ ಸಾಕ್ಷಿ ಕೊಡದೆ ಇರಲಿಲ್ಲ. ಆತನು ನಮಗೆ ಮಳೆಯನ್ನೂ.

ಸುಗ್ಗೀಕಾಲಗಳನ್ನು...ಆಹಾರ.. ಆನಂದ ನೀಡಿರುತ್ತಾನೆ (ಅ.ಕೃತ್ಯ 14:17)ಅಲ್ಲದೆ ಪೌಲನು "ಹೇಗಂದರೆ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತ್ತಿ, ಮೊದಲುಗೊಂಡು ಆತನುಮಾಡಿದ ಸೃಷ್ಟಿಗಳ ಮೂಲಕ ಬುದ್ದಿಗೆ ಗೊತ್ತಾಗಿ ಕಾಣಬರುತ್ತವೆ" ಎಂದು ಬರೆಯತ್ತಾನೆ (ರೋಮ 1:20) ಆದ್ದರಿಂದ ಸೃಷ್ಟಿ ಮತ್ತು ದೇವರ ಎಲ್ಲಾ ಸ್ವಾಭಾವಿಕ ಆಶೀರ್ವಾದಗಳೇ ದೇವರ ಬಗ್ಗೆ ಸಾಕ್ಷಿ ನೀಡುತ್ತವೆ. ಅವು ಗಳು ಪ್ರತಿ ಮನುಷ್ಯನಿಗೆ ಸ್ವಲ್ಪವಾದರೂ ಬೆಳಕನ್ನೂ, ತಿಳುವಳಿಕೆಯನ್ನೂ ಕೊಡುತ್ತವೆ.

ಆದರೆ ಹೆಚ್ಚು ಪಾಲು ಜನರು ಪೂರ್ಣ ಬೆಳಕನ್ನು ಸ್ವೀಕರಿಸುವದಿಲ್ಲ. ವಾಕ್ಯವಾದ ಕ್ರಿಸ್ತನು ನಂಬುವವರಿಗೆ ಮಾತ್ರವೇ ಪೂರ್ಣ ಬೆಳಕನ್ನು ಕೊಡಬಲ್ಲನು. ನಂಬದೆ ಹೋಗುವವರು ಆತ್ಮೀಕ ಕತ್ತಲೆಯಲ್ಲಿ ಉಳಿಯುವರು. ಅವರು ಬೆಳಕನ್ನು ನಿರಾಕರಿಸುತ್ತಾರೆ. ಅವರು ಕ್ರಿಸ್ತನನ್ನು ತಿರಸ್ಕರಿಸುತ್ತಾರೆ. ಕ್ರಿಸ್ತನನ್ನು ತಿರಸ್ಕರಿಸುವವರು ಜೀವವನ್ನು ಕಾಣುವದೇ ಇಲ್ಲ (ಯೋಹಾನ 3:36). ಆದ್ದರಿಂದ ಯೋಹಾನನು ತನ್ನ ಮೂಲಕವಾಗಿ ಎಲ್ಲರು ನಂಬುವಂತಾಗುವದಕ್ಕಾಗಿಯೇ ಬಂದನು (ವಚನ 7). ಈ ಕಾರಣಕ್ಕಾಗಿಯೇ ಯೋಹಾನನು ಈ ಸುವಾರ್ತೆಯನ್ನು ಬರೆದನು, ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದದೆ (ಯೋಹಾನ 20:31). ನಂಬುತ್ತೇವೋ ಅಥವಾ ಬಿಡುತ್ತೇವೋ ಅದುನಮಗೆ ಸೇರಿದ್ದು.

10 ಯೇಸು ಲೋಕದೊಳಗೆ ಬಂದನು, ಲೋಕವು ಆತನನ್ನು ಅರಿಯಲಿಲ್ಲ, ಅಂದರೆ ಲೋಕದ ಜನರು[3] ಯೇಸುವನ್ನು ಅರಿಯಲಿಲ್ಲ. ಹೆಚ್ಚು ಜನರು ಯೇಸುವೇ ಮೆಸ್ಸಿಯನಾಗಿದ್ದನೆಂದು ಗುರುತಿಸಲಿಲ್ಲ. ಅದಕ್ಕೆ ಬದಲಾಗಿ ಅವರು ಆತನನ್ನು ಒಬ್ಬ ಅಪರಾಧಿ, ದೇವದೂಷಕನು, ಎಂದು ಪರಿಗಣಿಸಿ ಆತನನ್ನು ಕೊಂದರು.

11 ಅವನು ತನ್ನ ಸ್ವಾಸ್ಥ್ಯಕ್ಕೆ ಬಂದನು. ಕ್ರಿಸ್ತನು ಸ್ವತ: ತಾನೇ ಸೃಷ್ಟಿಸಿದ [4] ಲೋಕಕ್ಕೆ ಬಂದನು (ವಚನ 3) ಅವನು ತನ್ನ ಸ್ವಜನಾಂಗವಾದ ಇಸ್ರಾಯೇಲ ಬಳಿಗೂ, ಸ್ವಂತ ಜನರ ಬಳಿಗೂ ಬಂದನು. ಅವನು ಒಬ್ಬ ಅಪರಿಚಿತನಾಗಿರಲಿಲ್ಲ. ಅವನು ಒಬ್ಬ ಯೆಹೂದ್ಯನಾಗಿದ್ದು ಯೆಹೂದ್ಯರ ಬಳಿಗೆ ಬಂದನು. ಹಾಗಿದ್ದರೂ ಅವರು ಅವನನ್ನು ಅಂಗಿಕರಿಸಲಿಲ್ಲ. ಅವರು ಆತನನ್ನು ತಿರಸ್ಕರಿಸಿದರು. ಅವನ ಸ್ವಂತ ಊರಿನ ಜನರೇ ಅವನನ್ನು ಗುಡ್ಡದಿಂದ ಕೆಳಗೆ ದೊಬ್ಬಲು ಪ್ರಯತ್ನಿಸಿದರು (ಲೂಕ 4:28-30) ಅಂತಿಮವಾಗಿ ಯೆಹೂದ್ಯನಾಯಕರು ಅವನ ಮರಣದಂಡನೆಗೆ ಕಾರಣರಾದರು.

12 ಆದಾಗ್ಯು, ಕೆಲವರು ಆತನನ್ನು ಅಂಗೀಕರಿಸಿದರು, ಅಂದರೆ ಕ್ರಿಸ್ತನಲ್ಲಿ ನಂಬಿಕೆಯಿಟ್ಟರು. ಅವರು ಆತನ ಹೆಸರಿನಲ್ಲಿ[5] ನಂಬಿಕೆ ಯಿಟ್ಟರು. ಮತ್ತು ಈ ವಿಶ್ವಾಸಿಗಳಿಗೆ ಕ್ರಿಸ್ತನು ದೇವರ ಮಕ್ಕಳಾಗುವ ಹಕ್ಕನ್ನು ಕೊಟ್ಟನು. ಎಲ್ಲಾ ಮಾನವರು ದೇವರಿಂದ ಸೃಷ್ಟಿಸಲ್ಪಟ್ಟಿದ್ದಾರೆ ಆದರೆ ಎಲ್ಲರೂ ಆತನ ಮಕ್ಕಳಲ್ಲ. ದೇವರ ಮಕ್ಕಳಾಗುವ ಹಕ್ಕನ್ನು ಪಡೆಯಬೇಕಾದರೆ ನಾವು ಆತನ ಮಗನಾದ ಯೇಸುವಿನಲ್ಲಿ ನಂಬಿಕೆಯಿಡಬೇಕು. ನಾವು ನಂಬಿಕೆಯ ಮೂಲಕ ಯೇಸುವನ್ನು ನಮ್ಮ ಹೃದಯಗಳಲ್ಲಿ ಅಂಗೀಕರಿಸಿಕೊಳ್ಳಬೇಕು (ಗಲಾತ್ಯ 3:26 ಮತ್ತು ವ್ಯಾಖ್ಯಾನ ನೋಡಿರಿ). ಯೇಸುವನ್ನು ಅಂಗೀಕರಿಸುವದರ ಅರ್ಥವು ಇದೇ ಆಗಿದೆ. ನಾವು ದೇವಕುಮಾರನಾದ ಯೇಸುವನ್ನು ಅಂಗಿಕರಿಸುವಾಗ ದೇವರು ನಮ್ಮನ್ನು ಅಂಗೀಕರಿಸುತ್ತಾನೆ ಮತ್ತು ನಾವು ದೇವರ ಕುಟುಂಬದ ಸದಸ್ಯರಾಗುತ್ತೇವೆ. ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ! (1 ಯೋಹಾನ 3:1)

13 ದೇವರ ಮಕ್ಕಳು ರಕ್ತಸಂಬಂಧದಿಂದ[6] ಹುಟ್ಟಿದವರಲ್ಲ, ಅವರು ಆತ್ಮೀಕವಾಗಿ ಹುಟ್ಟಿದವರಾಗಿದ್ದಾರೆ. ಅವರು ದೇವರಿಂದಲೇ ಹುಟ್ಟಿದವರು. ಒಬ್ಬನು ಕ್ರೈಸ್ತನಾಗಿರಲು, ದೇವರ ಕುಟುಂಬದ ಸದಸ್ಯನಾಗಿರಲು ಹೊಸದಾಗಿ ಹುಟ್ಟಲೇಬೇಕು (ಯೋಹಾನ 3:3, 5 ಮತ್ತು ವ್ಯಾಖ್ಯಾನ ನೋಡಿರಿ). ನಾವು ನಮ್ಮ ಸ್ವಶಕ್ತಿ ಅಥವಾ ಇಚ್ಚೆಯಿಂದ ದೇವರ ಮಕ್ಕಳಾಗುವದಿಲ್ಲ, ಇದು ದೇವರ ಕೃಪೆಯಿಂದ ಮಾತ್ರವೇ ಆಗಿದೆ. ಆತನು ಮೊದಲು ನಮ್ಮನ್ನು ಆರಿಸಿಕೊಳ್ಳುತ್ತಾನೆ (ಯೋಹಾನ 15:16) ಮಾನವ ಮಕ್ಕಳು ಒಬ್ಬ ಗಂಡ ಮತ್ತು ಹೆಂಡತಿಯ ಚಿತ್ತಕ್ಕೆ ಅನುಸಾರವಾಗಿ ಹುಟ್ಟುತ್ತಾರೆ. ದೇವರ ಮಕ್ಕಳು ಆತನ ಚಿತ್ತಕ್ಕನುಗುಣವಾಗಿ ಜನಿಸುತ್ತಾರೆ.

ನಾವು ಕ್ರಿಸ್ತನನ್ನು ನಮ್ಮ ಸ್ವಂತ ಕರ್ತನನ್ನಾಗಿಯೂ, ರಕ್ಷಕನನ್ನಾಗಿಯೂ ಸ್ವೀಕರಿಸಿದಾಗ ನಾವು ದೇವರ ಕುಟುಂಬದಲ್ಲಿ ಹುಟ್ಟಿದವರಾಗುತ್ತೇವೆ. ನಾವು ಆತನ ಕುಟುಂಬದಲ್ಲಿ ಹುಟ್ಟಿದಾಗ ಆತನ ಮಕ್ಕಳಾಗುತ್ತೇವೆ. ನಾವು ಆತನ ಮಕ್ಕಳಾಗುವಾಗ, ಬಾಧ್ಯಸ್ಥರೂ ಆಗುತ್ತೇವೆ (ರೋಮ 8:16-17 ಗಲಾತ್ಯ 4:7).

ನಾವು ಸ್ವಾಸ್ಥ್ಯವನ್ನು ಸ್ವೀಕರಿಸ ಬೇಕಾದರೆ ಮೊದಲು ನಾವು ಮಕ್ಕಳಾಗಿರಬೇಕು. ಮಕ್ಕಳಾಗಿರಬೇಕಾದರೆ ನಾವು ಹುಟ್ಟಬೇಕು.

ದೇವರ ಕುಟುಂಬದಲ್ಲಿ ಹುಟ್ಟುವದಕ್ಕಾಗಿ ನಾವು ಕ್ರಿಸ್ತನನ್ನು ನಮ್ಮ ಸ್ವಂತ ಕರ್ತನನ್ನಾಗಿಯೂ, ರಕ್ಷಕನನ್ನಾಗಿಯೂ ಅಂಗೀಕರಿಸಿ

ಕೊಳ್ಳಬೇಕು. ನಾವು ನಮ್ಮ ಸ್ವಂತ ಪ್ರಯತ್ನ ಅಥವಾ ಒಳ್ಳೆಯ ಕಾರ್ಯಗಳಿಂದಾಗಲಿ ದೇವರ ಮಕ್ಕಳಾಗುವದಿಲ್ಲ. ಒಂದು ವೇಳೆ ದಾಸನೊಬ್ಬನು ಒಬ್ಬರ ಮನೆಯಲ್ಲಿ ನಂಬಿಗಸ್ಥಕನಾಗಿ ಅನೇಕ ವರ್ಷಗಳವರೆಗೆ ಕೆಲಸಮಾಡಿದರೂ ಆ ದಾಸನು ಎಂದಿಗೂ ಮಗನಾಗುವದಿಲ್ಲ ಮತ್ತು ಎಂದೆಂದಿಗೂ ದಾಸನಾಗಿಯೇ ಉಳಿಯುವನು. ನಾವು ದೇವರ ಮಕ್ಕಳು, ನಮ್ಮ ಕಾರ್ಯಗಳಿಂದಲ್ಲ ಆದರೆ ಜನ್ಮದಿಂದ ಅಂದರೆ ಆತ್ಮೀಕ ಜನ್ಮದಿಂದ ಮಕ್ಕಳಾಗಿದ್ದೇವೆ.

14 ಈ ವಚನದಲ್ಲಿ ಯೇಸು ಕ್ರಿಸ್ತನು ದೇವರ ನರಾವತಾರವಾಗಿದ್ದಾನೆ ಎಂಬದನ್ನು ಓದುತ್ತೇವೆ. ಆ ವಾಕ್ಯವೆಂಬವನು ಮನುಷ್ಯನಾಗಿ ನಮ್ಮ ಮದ್ಯದಲ್ಲಿ ವಾಸಮಾಡಿದನು. ದೇವರು ಕ್ರಿಸ್ತನಲ್ಲಿ ಮಾನವನಾದನು. ಆತನು ಎಂದಿಗೂ ಪಾಪ ಮಾಡಲಿಲ್ಲ ಎಂಬದನ್ನು ಹೊರತು ಪಡಿಸಿ ಪೂರ್ಣವಾಗಿಯೂ ಎಲ್ಲಾ ವಿಧದಲ್ಲಿಯೂ ನಮ್ಮ ಹಾಗೆಯೇ ಒಬ್ಬ ಮನುಷ್ಯನಾಗಿದ್ದನು (ಇಬ್ರಿಯ 4:5). ಆದರೆ ಅದೇ ಸಮಯದಲ್ಲಿ ಆತನು ಸಂಪೂರ್ಣವಾಗಿ ದೇವರಾಗಿದ್ದನು. ಆ ವಾಕ್ಯವು ದೇವರಾಗಿತ್ತು (ವಚನ 1) ಕ್ರಿಸ್ತನು ಯಾರೆಂದು ಅರ್ಥಮಾಡಿಕೊಳ್ಳಬೇಕಾದರೆ ಆತನು ದೇವರ ಮತ್ತು ಮನುಷ್ಯ ಎರಡೂ ಆಗಿದ್ದಾನೆಂಬದನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು (ಸಾಮಾನ್ಯ ಬರಹ:ಯೇಸುಕ್ರಿಸ್ತ ನೋಡಿರಿ) ಯೇಸುವಿನೊಂದಿಗೆ ಜೀವಿಸಿದ ಅನೇಕರಲ್ಲಿ ಅಪೊಸ್ತಲನಾದ ಯೋಹಾನನು ಒಬ್ಬನಾಗಿದ್ದು ಆತನು ಯೇಸುವಿಗೆ ಬಹಳ ಅಪ್ತವಾದವನಾಗಿ ಆತನನ್ನು ಚೆನ್ನಾಗಿ ತಿಳಿದವನಾಗಿದ್ದನು. ಯೋಹಾನನು ಇಲ್ಲಿ "ನಾವು ಆತನ ಮಹಿಮೆಯನ್ನು ನೋಡಿದೆವು " ಎಂದು ಬರೆಯುತ್ತಾನೆ. ಯೋಹಾನನು ಮತ್ತೊಬ್ಬರ ಅಭಿಪ್ರಾಯವನ್ನು ಬರೆಯುತ್ತಿಲ್ಲ. ಆತನು ಸ್ವತ: ತಾನು ಕಣ್ಣಾರೆ ಕಂಡದ್ದನ್ನೇ ಬರೆಯುತ್ತಿದ್ದಾನೆ (ಯೋಹಾನ 1:1-3).

ಯೋಹಾನನು ಕ್ರಿಸ್ತನ ಮಹಿಮೆ, ಆತನ ಪಾಪರಹಿತತೆ, ಆತನ ಪ್ರೀತಿ, ಆತನ ಬೆಳಕು, ಆತನ ಸತ್ಯ, ಆತನ ಕೃಪೆ, ಆತನ ದೀನತೆ, ಆತನ ಶಕ್ತಿಗಳನ್ನು ನೋಡಿದನು. ಆ ಎಲ್ಲಾ ಗುಣಗಳು ಕ್ರಿಸ್ತನ ಮಹಿಮೆಯಲ್ಲಿ ಅಡಕವಾಗಿವೆ. ದೇವರ ಏಕೈಕ ಕುಮಾರನು ಈ ರೀತಿಯಲ್ಲಿದ್ದನು. ವಿಶ್ವಾಸಿಗಳಾದ ನಾವು ಸಹ ದೇವರ ಮಕ್ಕಳು. ಆದರೆ ನಾವು ಯೇಸುವಿನಂತಲ್ಲ ಯಾವ ಮನುಷ್ಯ ತಂದೆಯಿಂದ ಹುಟ್ಟದೇ ದೇವರ ಸ್ವಂತ ಪವಿತ್ರಾತ್ಮನಿಂದಲೇ[7] ಹುಟ್ಟಿದ ಯೇಸುವಿನಂತಹ ಮಗನು ಮತ್ತೊಬ್ಬನಿರುವದಿಲ್ಲ (ಮತ್ತಾಯ 1:18,20-23, ಲೂಕ 1:29-35 ಮತ್ತು ವ್ಯಾಖ್ಯಾನಗಳನ್ನು ನೋಡಿರಿ) ಯೇಸು ಕ್ರಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು. ಕ್ರಪೆಯು ಮನುಷ್ಯರೆಡೆಗೆ ಇರುವ ದೇವರ ಕರುಣೆ ಮತ್ತು ಪ್ರೀತಿಯೇ ಆಗಿದೆ (ಎಪೆಸ 1:2 ಮತ್ತು ವ್ಯಾಖ್ಯಾನ ನೋಡಿರಿ) ದೇವರು ತನ್ನ ಒಬ್ಬನೆ ಮಗನನ್ನು ನಮ್ಮ ಪಾಪಗಳಿಗಾಗಿ ಸಾಯಲು ಲೋಕಕ್ಕೆ ಕಳುಹಿಸಿಕೊಡುವದರಲ್ಲಿ ಆತನ ಕ್ರಪೆಯು ಅತಿ ಸ್ಪಷ್ಟವಾಗಿ ತೋರಿಬಂದಿತು. (ಮಾರ್ಕ 10:45 ಮತ್ತು ವ್ಯಾಖ್ಯಾನ ನೋಡಿರಿ). ಮನುಷ್ಯರಿಗೆ ದೇವರ ಎಲ್ಲಾ ಆಶೀರ್ವಾದಗಳು ಆತನ ಕ್ರಪೆಯಿಂದಲೇ ಬರುತ್ತದೆ. (ವಚನ 16) ನಮ್ಮ ರಕ್ಷಣೆಯು ದೇವರ ಕ್ರಪೆಯಿಂದ ಬರುತ್ತದೆ.(ಎಫೆಸ 2:8ಮತ್ತು ವ್ಯಾಖ್ಯಾನ ನೋಡಿರಿ) ಮತ್ತು ಈ ಕ್ರಪೆಯು ಕ್ರಿಸ್ತನಲ್ಲಿ ಅನುಗ್ರಹಿಸಿದ್ದಾನೆ

(ಎಫೆಸ 3:1). ಆದರೆ ದೇವರು ಕ್ರಿಸ್ತನಲ್ಲಿ ತನ್ನ ಕೃಪೆ ಮಾತ್ರಕ್ಕಿಂತಲೂ ಹೆಚ್ಚಾದದ್ದನ್ನು ಪ್ರಕಟಿಸಿದ್ದಾನೆ. ಆತನು ಕ್ರಿಸ್ತನಲ್ಲಿ ತನ್ನ ಸತ್ಯವನ್ನು ಬಯಲುಪಡಿಸಿದ್ದಾನೆ. ದೇವರಲ್ಲಿ ಯಾವ ಮಿಥ್ಯವಾಗಲಿ ಅಥವಾ ದೋಷವಾಗಲಿ ಇರುವದಿಲ್ಲ. ದೇವರ ನ್ಯಾಯ ತೀರ್ಪುಗಳು ಸತ್ಯವಾದವು . ಆತನು ಒಳ್ಳೆಯದನ್ನು ಕೆಟ್ಟದ್ದರಿಂದಲೂ,ನೀತಿಯನ್ನು ಅನೀತಿಯಿಂದಲೂ ಬೇರ್ಪಡಿಸುತ್ತಾನೆ. ಆತನು ಸತ್ಯವಾಗಿರುವದರಿಂದ ಆತನ ಸತ್ಯ ಮತ್ತು ಆತನ ನೀತಿಯನ್ನು ವಿರೋಧಿಸುವ ಪ್ರತಿಯೊಬ್ಬರನ್ನು ದಂಡಿಸುವನು ದೇವರ ಸತ್ಯವು ಕ್ರಿಸ್ತನಲ್ಲಿ ಸಂಪೂರ್ಣವಾಗಿ ಸಿದ್ದಾಂತಪಡಿಸಲ್ಪಟ್ಟಿದೆ. ಕ್ರಿಸ್ತನು ದೇವರ ಸತ್ಯವಾಕ್ಯವಾಗಿದ್ದಾನೆ ಯೇಸು "ನಾನೇ ಸತ್ಯವು " ಎಂದು ಹೇಳಿದನು (ಯೋಹಾನ 14:6).

ಆದುದರಿಂದ, ನಾವು ಕೃಪೆಯಿಂದಲೂ, ಸತ್ಯದಿಂದಲೂ ತುಂಬಿರುವ ಕ್ರಿಸ್ತನ್ನು ನೊಡುವಾಗ ನಾವು ದೇವರನ್ನು ನೋಡುತ್ತೇವೆ (ಯೋಹಾನ 14:9) ದೇವರು ಪರಿಪೂರ್ಣವಾಗಿ ಕ್ರಿಸ್ತನಲ್ಲಿ ಪ್ರಕಟಗೊಂಡನು. ಹೇಗಿದ್ದರೂ, ಕ್ರಿಸ್ತನಲ್ಲಿ ನಂಬಿಕೆಯಿಡದವರು ದೇವರನ್ನು ಸಂಪೂರ್ಣವಾಗಿ ತಿಳಿಯಲಾರರು. ಅವರು ಆತ್ಮೀಕ ಕತ್ತಲೆಯಲ್ಲಿ ಉಳಿಯುತ್ತಾರೆ.

15 ಸ್ನಾನಿಕನಾದ ಯೋಹಾನನು ಕ್ರಿಸ್ತನ ವಿಷಯದಲ್ಲಿ ಸಾಕ್ಷಿ ಕೊಡುತ್ತಾನೆ. ಈ ದಿನವೂ ಸಹ ಯೋಹಾನನ ಸಾಕ್ಷಿಯು ಹೊಸ ಒಡಂಬಡಿಕೆಯವಾಕ್ಯಗಳ ಮೂಲಕ ಮುಂದುವರೆಯುತ್ತದೆ: "ನಾನು ಅದನ್ನು ನೋಡಿ ಈತನೇದೇವಕುಮಾರನೆಂದು ಸಾಕ್ಷಿ ಕೊಟ್ಟಿದ್ದೇನೆ" (ವಚನ 34) ಸ್ನಾನಿಕನಾದ ಯೋಹಾನನು "ನನ್ನ ಹಿಂದೆ ಬರುವವನು ನನಗಿಂತಲೂ ಶಕ್ತನು" ಎಂದು ಹೇಳಿದ್ದನು (ಮಾರ್ಕ 1:7). ಯೋಹಾನನು ಯೇಸುವಿಗಿಂತಲೂ ಕೆಲವು ತಿಂಗಳು ಮುಂಚೆ ಬಂದನು ಮತ್ತು ಆತನ ಕಾರ್ಯವು ಯೇಸುವಿನ ಕಾರ್ಯಗಿಂತ ಮುಂಚೆ ಪ್ರಾರಂಬಗೊಂಡಿತು. ಆದರೆ ತಾನು ಕೇವಲ ತನಗಿಂತಲೂ ದೊಡ್ಡವನೊಬ್ಬನಿಗಾಗಿ ಮಾರ್ಗವನ್ನು ಸಿದ್ಧ ಮಾಡಲು ಮಾತ್ರವೇ ಕಳುಹಿಸಲ್ಪಟ್ಟಿದ್ದಾನೆಂಬದನ್ನು ಸ್ನಾನಿಕನಾದ ಯೋಹಾನನು ಬಲ್ಲವನಾಗಿದ್ದನು (ಯೋಹಾನ 3:30 ನೋಡಿರಿ) ಈ ವಚನದಲ್ಲಿ ಸ್ನಾನಿಕನಾದ ಯೋಹಾನನು "ಕ್ರಿಸ್ತನು ನನಗಿಂತ ಮೊದಲೇ ಇದ್ದದರಿಂದ ನನಗೆ ಮುಂದಿನವನಾದನು" ಎಂದು ಹೇಳುತ್ತಾನೆ. ಕ್ರಿಸ್ತನು ಯೋಹಾನನಿಗಿಂತಲೂ ಶ್ರೇಷ್ಠನಾಗಿದ್ದಾನೆ ಯಾಕೆಂದರೆ ಜಗದುತ್ಪತ್ತಿಗೆ ಮುಂಚಿನಿಂದಲೇ ಕ್ರಿಸ್ತನು ದೇವರೊಂದಿಗೆ ಇದ್ದನು. ಯೋಹಾನನು ಒಬ್ಬ ಸಾಮಾನ್ಯ ಮನುಷ್ಯನಾಗಿದ್ದನು. ಕ್ರಿಸ್ತನು ನಿತ್ಯನಾದ ದೇವಕುಮಾರನು.

16 ಕ್ರಿಸ್ತನು ಕೃಪೆಯಿಂದ ತುಂಬಿದವನಾಗಿದ್ದನು (ವಚನ 14) ಮತ್ತು ಆತನ ಕೃಪೆಯ ಪರಿಪೂರ್ಣತೆಯೊಳಗಿಂದ ವಿಶ್ವಾಸಿಗಳೆಲ್ಲರೂ ಆಶೀರ್ವಾದದ ಮೇಲೆ ಆಶೀರ್ವಾದವನ್ನು [8] ಸ್ವೀಕರಿಸಿದರು. ನಮ್ಮ ಆಶೀರ್ವಾದಗಳಿಗೆ ಕ್ರಿಸ್ತನೆ ಮೂಲಕಾರಣನಾಗಿದ್ದಾನೆ. ಕ್ರಿಸ್ತನ ಪೂರ್ಣತೆಯು ಮಿತಿಯಿಲ್ಲದ್ದಾಗಿದೆ ಯಾಕೆಂದರೆ ದೇವರು ಆತನಲ್ಲಿ ತನ್ನ ಸರ್ವಸಂಪೂರ್ಣತೆಯು ವಾಸವಾಗಿರಬೇಕೆಂದು ನಿಷ್ಕರ್ಷೆ ಮಾಡಿಕೊಂಡನು (ಕೊಲೊಸ್ಸೆ 1:19) ಕ್ರಿಸ್ತನಲ್ಲಿಯೇ ದೇವರ ಸರ್ವ ಸಂಪೂರ್ಣತೆಯು ಅವತರಿಸಿ ವಾಸ ಮಾಡುತ್ತದೆ (ಕೊಲೊಸ್ಸೆ 2:9)

17 ದೇವರು ಹಳೆ ಒಡಂಬಡಿಕೆಯಲ್ಲಿ ಇಸ್ರಾಯೇಲರಿಗೆ ಕೆಲವು ಆಶೀರ್ವಾದಗಳನ್ನು ಅನುಗ್ರಹಿಸಿದನು. ದೇವರು ಯಹೂದ್ಯರಿಗೆ ತನ್ನ ಧರ್ಮಶಾಸ್ತ್ರವನ್ನು[9] ಮೊದಲು ಆತನು ಧರ್ಮಶಾಸ್ತ್ರವನ್ನು ಸೀನಾಯ ಪರ್ವತದ ತುದಿಯಲ್ಲಿ ಮೋಶೆಗೆ ಕೊಟ್ಟನು ಮತ್ತು ಮೋಶೆಯು ಅದನ್ನು ಜನರಿಗೆ (ವಿ.ಕಾಂಡ 24:15-18,31:18) ಆದರೆ ಧರ್ಮಶಾಸ್ತ್ರವು ಜನರನ್ನು ರಕ್ಷಿಸಲಾಗಲಿಲ್ಲ ಬದಲಾಗಿ ಅವರನ್ನು ದಂಡಿಸಿತು, ಯಾಕಂದರೆ ಅವರು ಅದಕ್ಕೆ ಪರಿಪೂರ್ಣವಾಗಿ ವಿಧೇಯರಾಗಲು ಆಗಲಿಲ್ಲ (ಗಲಾತ್ಯ. 2:15-16 ಮತ್ತು ವ್ಯಾಖ್ಯಾನ ನೋಡಿರಿ). ಧರ್ಮಶಾಸ್ತ್ರವು ನೀತಿ ಮತ್ತು ಸತ್ಯವುಳ್ಳದ್ದಾಗಿತ್ತು ಆದರೆ ಅದು ಮಾನವರಿಗೆ ನಿತ್ಯಜೀವವನ್ನು ಕೊಡಲಾಗಲಿಲ್ಲ.

ಆದರೆ ಕೃಪೆಯು ಸತ್ಯವೂ ಯೇಸುಕ್ರಿಸ್ತನ ಮುಖಾಂತರ ಬಂದವು . ಕ್ರಿಸ್ತನಲ್ಲಿ ಮಾನವರಿಗೆ ದೇವರ ಕೃಪೆ ಮಾತ್ರವಲ್ಲ ಆದರೆ ಆತನ ಸತ್ಯವೂ ಸಹ ಕೊಡಲ್ಪಟ್ಟಿರುತ್ತದೆ. ಕ್ರಿಸ್ತನ ಮೂಲಕವಾಗಿ ಮಾನವನು ಧರ್ಮ ಶಾಸ್ತ್ರದ ದಂಡನೆಯಿಂದ ಮುಕ್ತರಾಗಿದ್ದಾರೆ (ರೋಮ 8:1-4 ಮತ್ತು ವ್ಯಾಖ್ಯಾನ ನೋಡಿರಿ) ದೇವರು ತನ್ನ ಕೃಪೆಯಿಂದ ನಮ್ಮನ್ನು ದಂಡೆನೆಯಿಂದ ರಕ್ಷಿಸುವದಕ್ಕಾಗಿಯೂ, ನಮಗೆ ನಿತ್ಯ ಜೀವವನ್ನು ಕೊಡುವದಕ್ಕಾಗಿಯೂ ಯೇಸುವನ್ನು ಕಳುಹಿಸಿರುತ್ತಾನೆ (ಯೋಹಾನ 3:16)

ಈ ವಚನದಲ್ಲಿ ಅಪೊಸ್ತಲನಾದ ಯೋಹಾನನು ಯೇಸುವಿನ ಪೂರ್ಣ ಹೆಸರನ್ನು ಉಪಯೋಗಿಸುವದನ್ನು ಗಮನಿಸಿರಿ: ಯೇಸು ಕ್ರಿಸ್ತನು. ಯೇಸು ಆತನ ಮಾನವ ಹೆಸರಾಗಿತ್ತು. ಕ್ರಿಸ್ತನು[10] ಆತನ ದೈವಿಕ ಹೆಸರಾಗಿತ್ತು.

18 ದೇವರನ್ನು ಯಾರೂ ಎಂದೂ ಕಂಡಿಲ್ಲ. ಸ್ವತ: ಮೋಶೆಯೇ ದೇವರನ್ನು ಎಂದಿಗೂ ಪೂರ್ಣವಾಗಿ ನೋಡಲಿಲ್ಲ. ದೇವರು ಮೋಶೆಗೆ – "ನೀನು ನನ್ನ ಮುಖವನ್ನು ನೋಡುವದಕ್ಕಾಗದು, ಮನುಷ್ಯರಲ್ಲಿ ಯಾವನೂ ನನ್ನನ್ನು ನೋಡಿ ಜೀವಿಸಲಾರನು" ಎಂದು ಹೇಳಿದನು (ವಿಮೋಚನಕಾಂಡ 33:19-20). ಪ್ರಪಂಚದಲ್ಲೆಲ್ಲಾ ಮಾನವರು ದೇವರನ್ನು ಹುಡುಕುತ್ತಾರೆ ಮತ್ತು ವಿವಿಧ ಧರ್ಮಗಳ ಬೋದನೆಗಳ ಮೂಲಕ ಆತನ ಬಗ್ಗೆ ಅಲ್ಪ ಅಲ್ಪವಾಗಿ ತಿಳಿದುಕೊಳ್ಳುತ್ತಾರೆ. ಅವರ ದೇವರ ಕುರಿತ ಅವರ ಜ್ಞಾನವು ಎಂದಿಗೂ ಯಥೋಚಿತವಲ್ಲ. ದೇವರ ಬಳಿಯಿಂದ ಬಂದವನು, ಸ್ವತ: ದೇವರೂ ಆಗಿರುವ ಕ್ರಿಸ್ತನು ಮಾತ್ರವೇ ತಂದೆಯನ್ನು ಪೂರ್ಣವಾಗಿ ತಿಳಿದಿದ್ದಾನೆ ಮತ್ತು ನೋಡಿದ್ದಾನೆ. ಮತ್ತು ಈ ಕಾರಣದಿಂದ ಕ್ರಿಸ್ತನು ಮಾತ್ರವೇ ಮಾನವರಿಗೆ ದೇವರನ್ನು ಪೂರ್ಣವಾಗಿ ತಿಳಿಯಪಡಿಸಲು ಸಾದ್ಯವಾಗುತ್ತದೆ. ಕ್ರಿಸ್ತನು ಇಲ್ಲಿ ಏಕ ಪು ತ್ರನೂ ಸ್ವತ: ದೇವರೂ[11] ಎಂದು ಕರೆಯಲ್ಪಟ್ಟಿದ್ದಾನೆ. ಕ್ರಿಸ್ತನು ದೇವವಕುಮಾರನು ಮಾತ್ರವೇ ಅಲ್ಲ, ಆತನು ಸ್ವತ: ದೇವರೂ ಆಗಿದ್ದಾನೆ. ದೇವರ ಎಲ್ಲಾ ಸತ್ಯ ಜ್ಞಾನವು ಕ್ರಿಸ್ತನಿಂದಲೇ ಬರುತ್ತದೆ.

## ಕ್ರಿಸ್ತನು ಮತ್ತು ಸ್ನಾನಿಕನಾದ ಯೋಹಾನ (1:19-28)

**19** ಸ್ನಾನಿಕನಾದ ಯೋಹಾನನು ಬೋಧಿಸಲು ಪ್ರಾರಂಭಿಸಿದಾಗ ಅನೇಕ ಜನರು ಆತನ ಮಾತನ್ನು ಕೇಳುವದಕ್ಕೂ, ದೀಕ್ಷಾಸ್ನಾನ ಮಾಡಿಸಿಕೊಳ್ಳವದಕ್ಕೂ ಬಂದರು (ಮಾರ್ಕ 1:4-5 ಮತ್ತು ವ್ಯಾಖ್ಯಾನ ನೋಡಿರಿ). ಯೆಹೂದ್ಯನಾಯಕರು ಯೋಹಾನನ ಕುರಿತು ಕೇಳಿದಾಗ ಅವರು ಈ ಹೊಸ ಪ್ರವಾದಿಯನ್ನು ತಿಳಿದುಕೊಳ್ಳಲು ಬಯಸಿದರು. ಆದುದರಿಂದ, ಅವರು ಯೋಹಾನನು ಯಾರೆಂಬದನ್ನು ವಿಚಾರಿಸಲು ಯೆರುಸಲೇಮಿನಿಂದ [12] ಯಾಜಕರು ಮತ್ತು ಲೇವಿಯರನ್ನು[13] ಕಳುಹಿಸಿದರು.

**20** ಯೆಹೂದ್ಯನಾಯಕರು ತನ್ನನ್ನೇ ಕ್ರಿಸ್ತನಿರಬೇಕೆಂದು ಯೋಚಿಸಿಕೊಂಡಿದ್ದಾರೆಂದು ಯೋಹಾನನಿಗೆ ತಿಳಿದಿತ್ತು. ಯೆಹೂದ್ಯರೆಲ್ಲರೂ ಮೆಸ್ಸಿಯನಾದ ಕ್ರಿಸ್ತನು ಬಂದು ತಮ್ಮನ್ನು ರೋಮಾಯರ ಹಿಡಿತದಿಂದ ವಿಮೋಚಿಸಿ ಇಸ್ರಾಯೇಲನ್ನು ಸ್ವತಂತ್ರ ರಾಜ್ಯವನ್ನು ಸ್ಥಾಪಿಸುವನೆಂದು ನಿರೀಕ್ಷಿಸುತ್ತಿದ್ದರು. ಆದರೆ ಯೋಹಾನನು ಶೀಘ್ರವೇ ತಾನು ಕ್ರಿಸ್ತನಲ್ಲ ಎಂದು ಅವರಿಗೆ ತಿಳಿಸಿದನು.

**21** ಆಗ ಯೆಹೂದ್ಯ ನಾಯಕರು ಸ್ನಾನಿಕನಾದ ಯೋಹಾನನನ್ನು ಆತನು ಎಲೀಯನಾಗಿರುವನೋ ಎಂದು ಕೇಳಿದರು. ಎಲೀಯನು ಹಳೆ ಒಡಂಬಡಿಕೆ ಪ್ರವಾದಿಗಳಲ್ಲಿ ಅತಿ ಶ್ರೇಷ್ಠನಾಗಿದ್ದನು. ಆತನು ಸಾಮಾನ್ಯ ರೀತಿಯಲ್ಲಿ ಸಾಯಲಿಲ್ಲ, ಆದರೆ ಆತನು ಪರಲೋಕದವರೆಗೂ ರಥದಲ್ಲಿ ಒಯ್ಯಲ್ಪಟ್ಟನು (2 ಅರಸು 2:11) ಪ್ರವಾದಿಯಾದ ಮಲಾಕಿಯನು ಕರ್ತನ ಮಹಾಭಯಂಕರವಾದ ದಿನವು ಬರುವದಕ್ಕೆ ಮುಂಚೆ ಎಲೀಯನು ತಿರಿಗಿ ಬರುವನು ಎಂದು ಪ್ರವಾದಿಸಿದನು (ಮಲಾಕಿಯ 4:5)[14]

ಯೆಹೂದ್ಯರು ಈ ಪ್ರವಾದನೆಯನ್ನು ಮೆಸ್ಸಿಯನು ಬರುವದಕ್ಕೆ ಮುಂಚೆ ಎಲೀಯನೇ ತಿರಿಗಿ ಬರುವನೆಂಬ ಅರ್ಥದಲ್ಲಿ ವ್ಯಾಖ್ಯಾನಿಸಿದರು. ಆದರೆ ಯೋಹಾನನು ಅವರಿಗೆ ತಾನು ಹಳೆ ಒಡಂಬಡಿಕೆಯ 14 ಎಲೀಯನಲ್ಲ ಎಂದು ತಿಳಿಸಿದನು.

ಬಳಿಕ ಯೆಹೂದ್ಯನಾಯಕರು ಯೋಹಾನನಿಗೆ ಆತನು ಪ್ರವಾದಿಯೋ? ಎಂದು ಕೇಳಿದರು. ಮೋಶೆಯು ತನ್ನ ಹಾಗೆಯೇ ಒಬ್ಬ ಪ್ರವಾದಿಯು ಯೆಹೂದ್ಯರೊಳಗಿಂದ ಬರುವನು ಎಂದು ಪ್ರವಾದಿಸಿದ್ದನು (ಧರ್ಮೋಪದೇಶಕಾಂಡ 18:15). ಈ ಪ್ರವಾದಿಯು ಎಲೀಯ ಮತ್ತು ಮೆಸ್ಸಿಯರಿಗಿಂತ ವ್ಯತ್ಯಾಸವಾಗಿರುವನೆಂದು ಯೆಹೂದ್ಯರ ಯೋಚನೆಯಾಗಿತ್ತು. ತಿರಿಗಿ ಸ್ನಾನಿಕನಾದ ಯೋಹಾನನು ತಾನು ಆ ಪ್ರವಾದಿಯಲ್ಲ ಎಂದು ತಿಳಿಸಿದನು.

**22-23** ಅಂತಿಮವಾಗಿ ಯಾಜಕರು ಮತ್ತು ಲೇವಿಯರು ಯೋಹಾನನಿಗೆ "ನೀನು ಯಾರು?" ಎಂದು ಕೇಳಿದರು. ಆಗ ಯೋಹಾನನು ಪ್ರವಾದಿಯಾದ ಯೆಶಾಯನ ಮಾತುಗಳಲ್ಲಿ ತಾನು ಅಡವಿಯಲ್ಲಿ ಕೂಗುವವನ ಶಬ್ದ ಎಂದು ತಿಳಿಸಿದನು (ಯೇಶಾಯ 40:3) ಆತನು ನಿಜವಾದ ಮೆಸ್ಸಿಯನಾದ ಯೇಸು ಕ್ರಿಸ್ತನ ಬರುವಿಕೆಯನ್ನು ಪ್ರಕಟಿಸಲು ನೇಮಿಸಲ್ಪಟ್ಟಿದ್ದನು. (ಮಾರ್ಕ 1:2-3 ಮತ್ತು ವ್ಯಾಖ್ಯಾನ ನೋಡಿರಿ)

**24-25** ಯೋಹಾನನನ್ನು ಪ್ರಶ್ನಿಸುತ್ತಿದ್ದವರಲ್ಲಿ ಕೆಲವರು ಯೆಹೂದ್ಯರ ಕಟ್ಟು ನಿಟ್ಟಿನ ಪಂಗಡವಾದ ಫರಿಸಾಯರಾಗಿದ್ದರು. ಯೋಹಾನನು ದೀಕ್ಷಾಸ್ನಾನಮಾಡಿಸುವ ಅಧಿಕಾರವನ್ನು ಎಲ್ಲಿಂದ ಪಡೆದನೆಂಬದನ್ನು ಅವರು ತಿಳಿಯಲಪೇಕ್ಷಿಸಿದರು. ಯೆಹೂದ್ಯರಾಗಲು ಇಚ್ಚೆಪಡುವ ಅನ್ಯಜನರನ್ನು ದೀಕ್ಷಾಸ್ನಾನವದು ಯೆಹೂದ್ಯರಲ್ಲಿನ ಒಂದು ಸಾಮಾನ್ಯ ಪದ್ಧತಿಯಾಗಿತ್ತು ಆದರೆ ಯೆಹೂದ್ಯರನ್ನು ಯಾರೂ ದೀಕ್ಷಾಸ್ನಾನ ಮಾಡಿಸುತ್ತಿರಲಿಲ್ಲ. "ನಮಗೆ ದೀಕ್ಷಾಸ್ನಾನದ ಅಗತ್ಯವಿಲ್ಲ, ನಾವು ಅನ್ಯಜನರಂತೆ[15] ಪಾಪಿಗಳಲ್ಲ" ಎಂದು ಯೆಹೂದ್ಯರು ಅಂದುಕೊಳ್ಳುತ್ತಿದ್ದರು. ಆದುದರಿಂದ ಯೆಹೂದ್ಯರಿಗೆ ದೀಕ್ಷಾಸ್ನಾನ ಮಾಡಿಸುತ್ತಿರುವ ಯೋಹಾನನು ಯಾರೆಂದು ತಿಳಿಯಬೇಕೆಂದು ಇಚ್ಚಿಸಿದರು.

**26-27** ಯೋಹಾನನು ಅವರ ಪ್ರಶ್ನೆಗೆ ನೇರವಾಗಿ ಉತ್ತರಿಸಲಿಲ್ಲ. ಆತನು ಅವರಿಗೆ "ನಾನು ನಿಮಗೆ ನೀರಿನಿಂದ ದೀಕ್ಷಾಸ್ನಾನ ಮಾಡಿಸುತ್ತೇನೆ." ನನ್ನ ದೀಕ್ಷಾಸ್ನಾನವು ಸಾಮಾನ್ಯ ದೀಕ್ಷಾಸ್ನಾನವಾಗಿದೆ. ಆದರೆ ನಿಮ್ಮ ಮಧ್ಯದಲ್ಲಿ ಇರುವ ಒಬ್ಬಾತನು ನಿಮಗೆ "ಪವಿತ್ರಾತ್ಮದ ಸ್ನಾನ ಮಾಡಿಸುವನು" ಎಂದು ಹೇಳಿದನು (ಮಾರ್ಕ 1:7-8 ಮತ್ತು ವ್ಯಾಖ್ಯಾನ ನೋಡಿರಿ). ಯೋಹಾನನ ಮಾತಿನ ಅರ್ಥವೇನೆಂದರೆ: ಯೆಹೂದ್ಯನಾಯಕರು ಯೋಹಾನನ ಅಧಿಕಾರವನ್ನು ಪ್ರಶ್ನಿಸಕೂಡದು. ಅವನು ತನಗಿಂತಲೂ ಶ್ರೇಷ್ಠ ಅಧಿಕಾರವನ್ನು ಹೊಂದಿದವನ ಬರೋಣವನ್ನು ಸಾರುವವನು ಮಾತ್ರವೇ ಆಗಿದ್ದಾನೆ.

**28** ಯೋಹಾನನು ದೀಕ್ಷಾಸ್ನಾನ ಮಾಡಿಸುತ್ತಿದ್ದ ಯೊರ್ದಾನ್ ನದಿಯು ಇಸ್ರಾಯೇಲಿನ ಪೂರ್ವದ ಗಡಿರೇಖೆಯನ್ನು ರೂಪಿಸಿತ್ತು, ಅದು ಯೆರೂಸಲೇಮಿನಿಂದ ಹದಿನೆಂಟು ಮೈಲುಗಳಷ್ಟು ದೂರವಿತ್ತು. ಇಲ್ಲಿ ಪ್ರಸ್ತಾಪಿಸಿರುವ ಬೇಥಾನ್ಯವು ಮರಿಯಳು ಮತ್ತು ಮಾರ್ಥಳು ವಾಸಿಸಿದ ಬೇಥನ್ಯವಾಗಿರುವದಿಲ್ಲ, ಅದು ಯೆರೂಸಲೇಮಿಗೆ ಹೆಚ್ಚು ಹತ್ತಿರದಲ್ಲಿರುತ್ತದೆ (ಯೋಹಾನ 11:1).

## ದೇವರ ಕುರಿಮರಿ ಯೇಸು (1:29-34)

**29** ಯೆಹೂದ್ಯನಾಯಕರು ಯೋಹಾನನನ್ನು ಪ್ರಶ್ನಿಸಿದ ಮರುದಿನದಲ್ಲಿ ಯೋಹಾನನು ಯೇಸು ಬರುತ್ತಿರುವದನ್ನು[16] ಕಂಡು ಜನರ ಗುಂಪಿಗೆ "ಆಗೋ, ಲೋಕದ ಪಾಪವನ್ನು ಪರಿಹರಿಸುವ ದೇವರ ಕುರಿಮರಿ"ಎಂದು ಹೇಳಿದನು. ಯೇಹೂದ್ಯರೆಲ್ಲರಿಗೂ"ದೇವರ ಕುರಿಮರಿ" ಎಂಬ ಪದದ ಅರ್ಥವೇನೆಂದು ತಿಳಿದಿತ್ತು. ಅದು ದೇವರಿಗೆ ಅರ್ಪಿಸುವ

ಯಜ್ಞವಾಗಿತ್ತು. ಯೆರೂಸಲೇಮಿನಲ್ಲಿರುವ ಯೆಹೂದ್ಯ ದೇವಾಲಯದಲ್ಲಿ ಪ್ರತಿದಿನ ಮುಂಜಾನೆ ಮತ್ತು ಸಾಯಂಕಾಲಗಳಲ್ಲಿ ಒಂದು ಯಜ್ಞವು ಅರ್ಪಿಸಲ್ಪಡುತ್ತಿತ್ತು (ವಿಮೋಚನ ಕಾಂಡ 2:38-46) ಯೆಹೂದ್ಯರ ಅತೀಶ್ರೇಷ್ಠವಾದ ಪಸ್ಕ ಹಬ್ಬದ ವೇಳೆ ದೇವರು ಯೆಹೂದ್ಯರನ್ನು ಐಗುಪ್ತ್ಯದ ದಾಸತ್ವದೊಳಗಿಂದ ವಿಮೋಚಿಸಿದ ಆ ಸಮಯವನ್ನು ಜ್ಞಾಪಿಸಿಕೊಳ್ಳುವದಕ್ಕಾಗಿ ಒಂದು ಕುರಿಮರಿಯನ್ನು ಯಜ್ಞವಾಗಿ ಅರ್ಪಿಸುತ್ತಿದ್ದರು (ವಿಮೋಚನ ಕಾಂಡ 12:1-30) ವಾಸ್ತವದಲ್ಲಿ ಅಪೊಸ್ತಲರಾದ ಪೌಲ ಮತ್ತು ಯೋಹಾನರು ಯೇಸುವನ್ನು ಪಸ್ಕದ ಕುರಿಮರಿಯಾಗಿ ಪರಿಗಣಿಸಿದರು (ಯೋಹಾನ 19:36, 1 ಕೊರಿಂಥ 5:7 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಯೆಹೂದ್ಯರು ತಮ್ಮ ಪಾಪಗಳ ಪರಿಹಾರಕ್ಕಾಗಿ ದೇವರಿಗೆ ಪ್ರಾಣಿಗಳ ಯಜ್ಞಮಾಡುತ್ತಿದ್ದರು. ಪ್ರಾಣಿಯು ಪಾಪಕ್ಕಾಗಿ ಪ್ರಾಯಶ್ಚಿತ್ತವಾಗಿ ಇರುತ್ತಿತ್ತು. ಪ್ರಾಣಿಯಜ್ಞಗಳ ಮುಖಾಂತರವಾಗಿ ಜನರ ಅಪರಾಧವು ತೊಲಗಲ್ಪಟ್ಟು ದೇವರಿಂದ ಕ್ಷಮಾಪಣೆಯನ್ನು ಪಡೆಯುತ್ತಿದ್ದರು (ಯಾಜಕ ಕಾಂಡ 5:5, 6:14-19) ಪಾಪಿಯಾದ ವ್ಯಕ್ತಿಯ ಮೇಲೆ ಬೀಳಬಹುದಾಗಿದ್ದ ಶಿಕ್ಷೆಯು ಆತನ ಬದಲಾಗಿ ಯಜ್ಞವಾದ ಪ್ರಾಣಿಯ ಮೇಲೆ ಬೀಳುತ್ತಿತ್ತು. ಆದುದರಿಂದ ಯಜ್ಞವಾದ ಪ್ರಾಣಿಯು ವ್ಯಕ್ತಿಯ ಪಾಪವನ್ನು "ನಿವಾರಿಣೆಮಾಡುತ್ತದೆ" ಎಂದು ಹೇಳಬಹುದು.

ಅದೇ ರೀತಿಯಲ್ಲಿ ಕ್ರಿಸ್ತನು ಲೋಕದ ಪಾಪವನ್ನು –ಅಂದರೆ, ಆತನಲ್ಲಿ ನಂಬಿಕೆಯಿಡುವವರೆಲ್ಲರ ಪಾಪಗಳನ್ನು "ನಿವಾರಣಮಾಡಲು" ಯಜ್ಞವಾಗಲ್ಪಟ್ಟನು (1ಯೋಹಾನ 2:2 ಮತ್ತು ವ್ಯಾಖ್ಯಾನ ನೋಡಿರಿ) ಆತನು ಯೇಶಾಯನು ಪ್ರವಾದಿಸಿದ ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಮರಿಯಾಗಿದ್ದನು (ಯೇಶಾಯ 53:7, ಅ.ಕೃತ್ಯ 8:32) ಆತನು ದೋಷಪರಿಹಾರಕ ಯಜ್ಞವಾಗಿದ್ದನು (ಯೇಶಾಯ 53:10) ಮತ್ತು ಆತನ ಯಜ್ಞದಮೂಲಕ ವಿಶ್ವಾಸಿಗಳೆಲ್ಲರು ಒಂದೇ ಸಾರಿ ಅವರ ಪಾಪಗಳಿಂದ ತೊಳೆಯಲ್ಪಡುತ್ತಾರೆ (ಇಬ್ರಿಯ 13:15, 10:10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.) ಯೇಸು ಕೇವಲ ಮೆಸ್ಸಿಯನೂ, ಕ್ರಿಸ್ತನೂ ಮಾತ್ರವೇ ಅಲ್ಲ ಆದರೆ ಆತನು ದೇವರ ಕುರಿಮರಿಯೂ ಆಗಿದ್ದು ಆತನ ಮೂಲಕವಾಗಿ ಲೋಕದ ಪಾಪಗಳು ತೊಳೆಯಲ್ಪಡಬಹುದು. ಕ್ರಿಸ್ತನ ಯಜ್ಞವು ಎಲ್ಲಾ ಜನರೂ ಆದರಿಂದ ತೊಳೆಯಲ್ಪಡಲು ಸಾಕಾಗುವದಾಗಿತ್ತು.

ಅದು ಸಾಕಷ್ಟು ದೊಡ್ಡದಾಗಿತ್ತು ಯಾಕಂದರೆ ಕ್ರಿಸ್ತನು ದೇವರ ಸ್ವಂತ ಮಗನಾಗಿದ್ದಾನೆ, ಕ್ರಿಸ್ತನು ಮಾನವರಿಗೆ ರಕ್ಷಣೆಯನ್ನು ಉಂಟಮಾಡಲು ರಕ್ಷಕನಾಗಿ ಬಂದನು. ಆದರೆ ಆತನು ಒಬ್ಬ ಲೌಕಿಕ ರಾಜನಾಗಿ ಜನರನ್ನು ಸೈನ್ಯದ ಮೂಲಕ ರಕ್ಷಿಸಲು "ಕುರಿಮರಿ" ಯಾಗಿ ಬಂದನು. ವಧಿತನಾದ ಕುರಿಯಾದಾತನು ಬಲ, ಐಶ್ವರ್ಯ, ಜ್ಞಾನ, ಸಾಮರ್ಥ್ಯ, ಮಾನ ಪ್ರಭಾವ, ಸ್ತೋತ್ರಗಳನ್ನು ಹೊಂದುವದಕ್ಕೆ ಯೋಗ್ಯನು . ಸಿಂಹಾಸನಾದೀಶನನಿಗು ಯಜ್ಞದ ಕುರಿಯಾದಾತನಿಗೂ ಸ್ತೋತ್ರಮಾನ ಪ್ರಭಾವ ಅಧಿಪತ್ಯಗಳು ಯುಗಯುಗಾಂತರಗಳಲ್ಲಿಯು ಇರಲಿ (ಪ್ರಕಟಣೆ 5:6.12-13).

**30-31** ಯೇಸು ದಿಕ್ಷಾಸ್ನಾನ ಹೊಂದಲು ಬರುವದಕ್ಕೆ ಮುಂಚೆ ಯೇಸು ಮತ್ತು ಸ್ನಾನಿಕನಾದ ಯೋಹಾನರು ಒಬ್ಬರಿಗೊಬ್ಬರು ಬೇಟಿಯಾಗಿರಲಿಲ್ಲ. "ನನಗೂ ಅವನ ಗುರುತಿರಲಿಲ್ಲ" ಎಂದು ಯೋಹಾನನು ಹೇಳಿದನು (ವಚನ 31). ಆದರೆ ಯೋಹಾನನು ಯೇಸುವನ್ನು ನೋಡಿದ ಕೂಡಲೇ ಅವನಲ್ಲಿ ಏನೋ ಅಸಹಜತೆಯಿತ್ತೆಂಬದನ್ನು ಯೋಹಾನನು ಬಲ್ಲವನಾಗಿದ್ದನು. ಯೇಸು ಮೆಸ್ಸಿಯನೇ ಎಂಬದರ ಸ್ವಲ್ಪ ಮಾಹಿತಿಯು ಯೋಹಾನನಿಗಿತ್ತು.ಯಾಕೆಂದರೆ ಮತ್ತಾಯ ೩:೧೪ ರ ಪ್ರಕಾರವಾಗಿ ಯೋಹಾನನು ಯೇಸುವಿಗೆ "ನಾನು ನಿನ್ನಿಂದ ಸ್ನಾನ ಮಾಡಿಸಿಕೊಳ್ಳತಕ್ಕವನಾಗಿರುವಲ್ಲಿ ನೀನು ನನ್ನ ಬಳಿಗೆ ಬರುವದೇನು?" ಎಂದು ಕೇಳಿದನು. ಸ್ನಾನಿಕನಾದ ಯೋಹಾನನ ಕೆಲಸದ ಉದ್ದೇಶವೆಲ್ಲವೂ ಯೆಹೂದ್ಯ ರಾಷ್ಟ್ರವಾದ ಇಸ್ರಾಯೇಲರನ್ನು ಅವರ ಮೆಸ್ಸಿಯನಾದ ಯೇಸು ಕ್ರಿಸ್ತನನ್ನು ಅಂಗೀಕರಿಸುವದಕ್ಕಾಗಿ ಸಿದ್ಧಗೊಳಿಸುವದೇ ಆಗಿತ್ತು. ಕ್ರಿಸ್ತನನ್ನು ಇಸ್ರಾಯೇಲರಿಗೆ ತಿಳಿಯ ಪಡಿಸುವದಕ್ಕೋಸ್ಕರ ಯೋಹಾನನು ಬಂದನು.

**32-34** ಯೋಹಾನನು ಯೇಸುವಿಗೆ ದೀಕ್ಷಾಸ್ನಾನ ಮಾಡಿಸುವದಕ್ಕೆ ಮುಂಚೆಯೇ ಅವನನ್ನು ಗುರುತಿಸಿದನಾದರೂ ದೀಕ್ಷಾಸ್ನಾನದ ನಂತರವಷ್ಟೇ ಅವನು ಯೇಸು ದೇವಕುಮಾರನೇ ಆಗಿದ್ದಾನೆಂಬದನ್ನು ಪೂರ್ಣವಾಗಿ ತಿಳಿದುಕೊಂಡನು. ಪವಿತ್ರಾತ್ಮನು ಪಾರಿವಾಳದ ರೂಪದಲ್ಲಿ ಯೇಸುವಿನ ಮೇಲೆ ಇಳಿಯುವದನ್ನು ನೋಡಿದಾಗಲೇ ಯೋಹಾನನು ಅದನ್ನು ತಿಳುಕೊಂಡನು (ಮಾರ್ಕ 1:9-11, ಲೂಕ 3:21-22 ಮತ್ತು ವ್ಯಾಖ್ಯಾನ ನೋಡಿರಿ). ದೇವರು ಯೋಹಾನನಿಗೆ ಯಾರ ಮೇಲೆ ಪವಿತ್ರಾತ್ಮನು ಇಳಿದು ಬರುವನೋ ಅವನೇ ಪವಿತ್ರಾತ್ಮನಿಂದ ದೀಕ್ಷಾಸ್ನಾನ ಮಾಡಿಸುವವನಾಗಿದ್ದಾನೆಂದು ಹೇಳಿದ್ದನು (ಮಾರ್ಕ 1:8 ಮತ್ತು ವ್ಯಾಖ್ಯಾನ ನೋಡಿರಿ). ಹೀಗೆ, ಯೋಹಾನನು ಈಗ ಸಂಪೂರ್ಣ ದೃಡವಾಗಿ "ನಾನು ಅದನ್ನು ನೋಡಿ ಈತನೇ ದೇವಕುಮಾರನೆಂದು ಸಾಕ್ಷಿ ಕೊಟ್ಟಿದ್ದೇನೆ " ಎಂದು ಹೇಳಬಲ್ಲವನಾಗಿದ್ದನು (ವಚನ 34).

ಕ್ರಮೇಣವಾಗಿ ಇತರ ಶಿಷ್ಯರು ಸಹ ಯೇಸು ಯಾರೆಂಬದನ್ನು ಅರ್ಥ ಮಾಡಿಕೊಂಡರು (ವಚನಗಳು 41,49) ಆದರೆ ಶಿಷ್ಯರಲ್ಲಿ ಮುಖ್ಯನಾದ ಪೇತ್ರನು "ನೀನು ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು" ಎಂದು ಯೇಸುವಿಗೆ ಅರಿಕೆ ಮಾಡುವ ಅತಿಶ್ರೇಷ್ಠ ಕ್ಷಣವೊಂದು ಬಂದಿತು (ಮತ್ತಾಯ 16:16, ಮಾರ್ಕ 8:29 ಮತ್ತು ವ್ಯಾಖ್ಯಾನ ನೋಡಿರಿ).

## ಯೇಸುವಿನ ಪ್ರಥಮ ಶಿಷ್ಯರು (1:35-42)

**35-39** ಮರುದಿನ ಸ್ನಾನಿಕನಾದ ಯೋಹಾನನು ತನ್ನ ಶಿಷ್ಯರಲ್ಲಿ ಇಬ್ಬರಿಗೆ ಯೇಸುವನ್ನು ತೋರಿಸಿದನು. ಆದ್ದರಿಂದ ಆ ಇಬ್ಬರು ಶಿಷ್ಯರುಯೇಸುವಿನೊಂದಿಗೆ ಹೋಗಿ ದಿನವೆಲ್ಲಾ ಆತನ ಜೊತೆ ಕಳೆದರು. ಅವರು ಯೇಸುವಿನೊಂದಿಗೆ ಹತ್ತನೆಯ

ತಾಸಿನಲ್ಲಿ ಅಂದರೆ ಸಾಯಂಕಾಲ ನಾಲ್ಕು ಗಂಟೆಗೆ ಹೋದರು. ಆದುದರಿಂದ ಬಹುಶಃ ಅವರು ರಾತ್ರಿಯೆಲ್ಲಾ ಯೇಸುವಿನೊಂದಿಗೆ ಕಳೆದರು.

**40-41** ಸ್ನಾನಿಕನಾದ ಯೋಹಾನನು ಈ ಇಬ್ಬರು ಶಿಷ್ಯರಲ್ಲಿ ಆಂದ್ರೆಯನು ಒಬ್ಬನಾಗಿದ್ದು, ಅನಂತರ ಈತನು ಯೇಸುವಿನ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾದನು. ಮರುದಿನ ಆಂದ್ರೆಯನು ತನ್ನ ಸಹೋದರನಾದ ಪೇತ್ರನ ಬಳಿಗೆ ಹೋಗಿ ತಾನು ಮೆಸ್ಸಿಯನನ್ನು[17] ಅಂದರೆ ಕ್ರಿಸ್ತನನ್ನು ಕಂಡುಕೊಂಡಿದ್ದೇನೆಂದು ಹೇಳಿದನು. (ವಚನ 17 ಮತ್ತು ವ್ಯಾಖ್ಯಾನ ನೋಡಿರಿ) 42 ಪೇತ್ರನ ಸಾಮಾನ್ಯಯೆಹೂದ್ಯ ಹೆಸರು ಸಿಮೋನ ಎಂದಾಗಿತ್ತು. ಯೇಸು ಅವನನ್ನು ನೋಡಿದಾಗ ಆತನು ಪೇತ್ರನಿಗೆ ಕೇಫ ಎಂಬ ಹೊಸ ಹೆಸರನ್ನು ನೀಡಿದನು, ಆರಾಮಿಕ[18] ಭಾಷೆಯಲ್ಲಿ ಅದರ ಅರ್ಥವು "ಬಂಡೆ" ಎಂದಾಗಿದೆ. ಗ್ರೀಕ[19] ಭಾಷೆಯಲ್ಲಿ "ಬಂಡೆ" ಎಂಬ ಪದಕ್ಕೆ "ಪೇತ್ರ"ಎಂದಿರುತ್ತದೆ.

ಹೊಸ ಒಡಂಬಡಿಕೆಯ ಕಾಲದಲ್ಲಿ ಒಬ್ಬ ವ್ಯಕ್ತಿಯ ಹೆಸರಿನ ಅರ್ಥವು ಅತಿ ಪ್ರಾಮುಖ್ಯವೆಂದು ಪರಿಗಣಿಸ್ಪಡುತ್ತಿತ್ತು. ಹೆಸರು ಒಬ್ಬ ವ್ಯಕ್ತಿಯ ಗುಣನಡತೆ ಮತ್ತು ಅಧಿಕಾರದ ಸಂಕೇತವಾಗಿತ್ತು. ಆದರೆ ಯೇಸು ಪೇತ್ರನಿಗೆ "ಬಂಡೆ" ಎಂದು ಹೆಸರಿಟ್ಟನು? ಸುವಾರ್ತೆಗಳಲ್ಲಿ ಪೇತ್ರನು ಎಂದಿಗೂ ಬಂಡೆಯಂತೆ ವರ್ತಿಸಿರುವದಿಲ್ಲ. ಒಂದು ಬಂಡೆಯು ಸ್ಥಿರ ಮತ್ತು ಬಲಿಷ್ಠವಾಗಿರುತ್ತದೆ.

ಪೇತ್ರನು ಅಸ್ಥಿರನೂ ಮತ್ತು ಆತನ ನಂಬಿಕೆ ಬಲಹೀನವಾದರೂ ಆಗಿತ್ತು. ಆದರೆ ದೇವರು ಅಂತ್ಯದಲ್ಲಿ ಪವಿತ್ರಾತ್ಮನ ಶಕ್ತಿಯ ಮೂಲಕವಾಗಿ ಪೇತ್ರನನ್ನು ಒಂದು "ಬಂಡೆ" ಯನ್ನಾಗಿ ಬದಲಾಯಿಸಿದನು. ಅನಂತರ ಯೇಸು ಪೇತ್ರನನ್ನು ತನ್ನ ಮುಖ್ಯಶಿಷ್ಯನನ್ನಾಗಿ ಮಾಡಿದನು. ಯೇಸು ಪೇತ್ರನಿಗೆ ನೀನು ಬಂಡೆಯಾಗಿದ್ದು ನಿನ್ನ ಮೇಲೆ ನನ್ನ ಸಭೆಯನ್ನು ಕಟ್ಟುವೆನೆಂದು ಹೇಳಿದನು (ಮತ್ತಾಯ 16:17-18, ಮಾರ್ಕ 8:29 ಮತ್ತು ವ್ಯಾಖ್ಯಾನ ನೋಡಿರಿ).

ಈ ಭಾಗದಲ್ಲಿ ಬಣ್ಣಿಸಲ್ಪಟ್ಟಿರುವ ಯೇಸು ಪೇತ್ರ ಮತ್ತು ಆಂದ್ರೇಯನನ್ನು ಬೇಟಿಮಾಡುವ ಘಟನೆ ನಿಜವಾಗಿಯೂ ಯೇಸು ಅವರನ್ನು ಎಲ್ಲವನ್ನೂ ಬಿಟ್ಟು ತನ್ನ ಶಿಷ್ಯರಾಗುವಂತೆ ಕರೆಯುವದಕ್ಕೆ ಮುಂಚಿನ ಸಮಯದಲ್ಲಿ ಯಾವಾಗಲೋ ಸಂಭವಿಸಿರುತ್ತದೆ (ಮಾರ್ಕ 1:16-18 ಮತ್ತು ವ್ಯಾಖ್ಯಾನ ನೋಡಿರಿ). ಯೇಸು ಮೆಸ್ಸಿಯನಾದ ಕ್ರಿಸ್ತನು ಎಂಬದನ್ನು ಅವರು ಗುರುತಿಸಿದರಾದರೂ ಮೆಸ್ಸಿಯನು ಏನು ಮಾಡಬೇಕಾಗಿತ್ತೆಂಬದರ ಉತ್ತಮ ತಿಳುವಳಿಕೆ ಅವರಿಗಿರಲಿಲ್ಲ. ಯೆಹೂದ್ಯರಲ್ಲಿ ಹೆಚ್ಚುಪಾಲು ಜನರಂತೆ ಅವರೂ ಸಹ ಮೆಸ್ಸಿಯನು ಭೂಲೋಕದ ಅರಸನಂತೆ ನಡೆದುಕೊಂಡು ಇಸ್ರಾಯೇಲ ರಾಜ್ಯವನ್ನು ಪುನ: ಸ್ಥಾಪಿಸುವನೆಂದು ಯೋಚಿಸಿದರು. ವಾಸ್ತವದಲ್ಲಿ ಯೇಸು ದೇವರ ಕುರಿಮರಿಯಾಗಿ ಬಾಧೆ ಪಟ್ಟು ಸಾಯಲು ಬಂದಿದ್ದಾನೆಂಬದನ್ನು ಇವರು ಅರ್ಥಮಾಡಿಕೊಳ್ಳಲಿಲ್ಲ. ಆತನು ಈ ಲೋಕಕ್ಕೆ ಸಂಬಂಧಪಡದ ಆತ್ಮೀಕ ರಾಜ್ಯವೊಂದನ್ನು ಸ್ಥಾಪಿಸಲು ಬಂದಿದ್ದಾನೆಂಬದನ್ನು ಗುರುತಿಸುವಲ್ಲಿ ಅವರು ವಿಫಲರಾಗಿದ್ದರು.

ಅಂದ್ರೇಯನು ಸಿಮೋನನನ್ನು ಯೇಸುವಿನ ಬಳಿಗೆ ಕರಕೊಂಡುಬಂದನು. ಅಂದ್ರೇಯನು ಸಿಮೋನನನ್ನು ಯೇಸುವಿನ ಬಳಿಗೆ ಕರಕೊಂಡು ಬಂದದ್ದು ಕ್ರಿಸ್ತನ ಸಭೆಗೆ ಮಾಡಿದ ಅತೀ ಶ್ರೇಷ್ಠ ಸೇವೆಯಾಗಿದೆ ಎಂದು ಹೇಳಲಾಗುತ್ತದೆ. ಆದರ ಬಗ್ಗೆ ಆಲೋಚಿಸಿರಿ! ಆದಿನದಲ್ಲಿ ಅಂದ್ರೇಯನು "ಬಂಡೆ" ಯನ್ನು ಕರೆತಂದನು, ಅದರ ಮೇಲೆಯೇ ಯೇಸು ತನ್ನ ಸಭೆಯನ್ನು ಕಟ್ಟಲಿದ್ದನು.

ಯೋಹಾನನ ಸುವಾರ್ತೆಯಲ್ಲಿ ಅಂದ್ರೇಯನ ಬಗ್ಗೆ ಮೂರು ಸಾರಿ ಉಲ್ಲೇಖವಿರುತ್ತದೆ, ಮತ್ತು ಪ್ರತಿಯೊಂದು ಸಾರಿಯೂ ಆತನು ಯಾರನ್ನಾದರೂ ಯೇಸುವಿನ ಬಳಿಗೆ ಕರಕೊಂಡು ಬರುವದನ್ನು ಕಾಣುತ್ತೇವೆ (ಯೋಹಾನ 6:8, 12:22) ನಮ್ಮನ್ನು

ನಾವೇ ಕೇಳಿಕೊಳ್ಳೋಣ. ನಾವು ಕೊನೆಯ ಬಾರಿಗೆ ಯಾರನ್ನಾದರೂ ಕ್ರಿಸ್ತನ ಬಳಿಗೆ ಕರಕೊಂಡು ಬಂದದ್ದು ಯಾವಾಗ?

## ಯೇಸು ಫಿಲಿಪ್ಪ ಮತ್ತು ನತಾನಿಯೇಲರನ್ನು ಕರೆದದ್ದು (1:43-51)

**43-44** ಯೇಸುವಿನ ಮನೆಯು ಉತ್ತರ ಇಸ್ರಾಯೇಲಿನ ಗಲಿಲಾಯ ಪ್ರಾಂತ್ಯದಲ್ಲಿನ ನಜರೇತ ಊರಿನಲ್ಲಿತ್ತು. ಆತನು ದೀಕ್ಷಾಸ್ನಾನ ಮಾಡಿಸಿಕೊಳ್ಳುವದಕ್ಕಾಗಿ ಗಲಿಲಾಯದಿಂದ ಇಸ್ರಾಯೇಲಿನ ದಕ್ಷಿಣ ಭಾಗಕ್ಕೆ ಬಂದಿದ್ದನು. ಈಗ ಆತನು ಗಲಿಲಾಯಕ್ಕೆ ಹಿಂದಿರುಗಿ ಹೋಗಲು ತೀರ್ಮಾನಿಸಿದನು.

ಆಗ ಆತನು ಫಿಲಿಪ್ಪನನ್ನು ಕಂಡುಕೊಂಡನು. (ಮಾರ್ಕ 3:18) ಫಿಲಿಪ್ಪನು ಒಬ್ಬ ಸಾಮಾನ್ಯಮನುಷ್ಯನಾಗಿದ್ದನು. ಯೋಹಾನನು ಆತನ ಕುರಿತು ಉಲ್ಲೇಖಿಸುವ ಇತರ ಕಡೆಗಳಲ್ಲಿ ಆತನು ಪರಿಣಾಮಕಾರಿ ಶಿಷ್ಯನಾಗಿರುವಂತೆ ತೋರುವದಿಲ್ಲ. (ಯೋಹಾನ 6:5-7, 12:21-22, 14:8-9 ನೋಡಿರಿ). ಆದರೆ ಆತನು ಕರೆಯಲ್ಪಟ್ಟಾಗ ಯೇಸುವನ್ನು ಹಿಂಬಾಲಿಸಿದನು. ಮತ್ತು ತರುವಾಯ ಆತನು ಪವಿತ್ರಾತ್ಮನ ಬಲದ ಮೂಲಕವಾಗಿ ಒಬ್ಬ ಶ್ರೇಷ್ಟ ಅಪೊಸ್ತಲನಾಗಿ ಮಾರ್ಪಟ್ಟನು. (ಅ.ಕ್ರ. 8:4-8, 26-40 ನೋಡಿರಿ)

ಫಿಲಿಪ್ಪ, ಪೇತ್ರ ಮತ್ತು ಆಂದ್ರೇಯರೆಲ್ಲರು ಗಲಿಲಾಯದಲ್ಲಿನ ಬೇತ್ಸಾಯಿದ ಊರಿನವರಾಗಿದ್ದರು. ಪೇತ್ರ ಮತ್ತು ಆಂದ್ರೇಯರಿಗೆ ಕೆಪೆರ್ನೌಮಿನಲ್ಲಿ ಸಹ ಒಂದು ಮನೆಯಿತ್ತು. (ಮಾರ್ಕ1:21-29) ಯೇಸು ಬೇತ್ಸಾಯಿದ ಮತ್ತು ಕೆಪೆರ್ನೌಮ

ಎರಡೂ ಊರಿನಲ್ಲಿಯು ಮಹತ್ಕಾರ್ಯಗಳನ್ನುಮಾಡಿದನು, ಆದರೆ ಕೊನೆಯಲ್ಲಿ ಆ ಊರುಗಳ ನಿವಾಸಿಗಳಲ್ಲಿ ಕೆಲವರು ಮಾತ್ರವೇ ಆತನಲ್ಲಿ ನಂಬಿಕೆಯಟ್ಟರು. (ಮತ್ತಾಯ 11:21-23)

**45** ಫಿಲಿಪ್ಪನು ನತಾನಯೇಲನ್ನು ಕಂಡುಕೊಂಡನು. ನತಾನಿಯೇಲನೇ ಯೇಸುವಿನ ಹನ್ನೆರಡುಮಂದಿ ಶಿಷ್ಯರಲ್ಲಿ ಒಬ್ಬನಾದ ಬಾರ್ತಲೋಮಾಯನಾಗಿದ್ದಾನೆಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ (ಮಾರ್ಕ 3:18) ಬಾರ್ತಲೋಮಾಯನ ಎರಡನೆಯ ಹೆಸರೇ "ನತಾನಿಯೇಲ " ಎಂದು ಅವರು ಹೇಳುತ್ತಾರೆ.

ಫಿಲಿಪ್ಪನು ನತಾನಿಯೇಲನಿಗೆ, ಯಾವನ ವಿಷಯವಾಗಿ ಮೋಶೆಯು ಧರ್ಮ ಶಾಸ್ತ್ರದಲ್ಲಿ [20] ಬರೆದನೋ ಆತನೇ ಯೇಸು ಎಂದು ಹೇಳಿದನು. ಈತನು ಹಳೆ ಒಡಂಬಡಿಕೆಯ ಪ್ರವಾದಿಗಳು ಯಾವ ಮೆಸ್ಸಿಯನ ಕುರಿತಾಗಿ ಬರೆದರೋ ಆಮೆಸ್ಸೀಯನೇ ಆಗಿದ್ದಾನೆ ಎಂದು ತಿಳಿಸಿದನು. ನಂತರ ಫಿಲಿಪ್ಪನು ಯೇಸುವನ್ನು ಯೋಸೇಫನ ಮಗನೆಂದು ಕರೆದನು. ಯೋಸೇಫನು ಯೇಸುವಿನ ಸ್ವಾಭಾವಿಕ ತಂದೆ ಎಂಬ ಅರ್ಥದಲ್ಲಿ ಆತನು ಹೇಳಲಿಲ್ಲ. ಆದರೆ ಆತನು ಯೇಸುವಿನ ಕಾನೂನುಬದ್ಧ ತಂದೆಯಾಗಿದ್ದನು ಎಂಬ ಅರ್ಥದಲ್ಲಿ ಹೇಳಿದನು. ಯೇಸುವಿನ ನಿಜವಾದ ತಂದೆಯು ಪವಿತ್ರಾತ್ಮನೇ ಆಗಿದ್ದನು (ಮತ್ತಾಯ 1:18, 24:25).

ಮೆಸ್ಸಿಯನು ಅಂತಹ ಮಹತ್ವವಿಲ್ಲದ ನಜರೇತಿನಿಂದ ಬರುವನೆಂಬದನ್ನು ನತಾನಯೇಲನಿಗೆ ನಂಬಲಾಗಲಿಲ್ಲ. ನಜರೇತ ಯಾವದಕ್ಕೂ ಪ್ರಸಿದ್ದಿಯಾಗಿರಲಿಲ್ಲ. ಇದು ಗಲಿಲಾಯದಲ್ಲಿನ ಸಾಮಾನ್ಯವಾದ ಒಂದು ಚಿಕ್ಕ ಊರಾಗಿತ್ತು. ವಾಸ್ತವದಲ್ಲಿ ನಜರೇತಿನ ಜನರು ಯೇಸುವನ್ನು ಪರ್ವತದಿಂದ ಕೆಳಕ್ಕೆ ದೊಬ್ಬಲು ಪ್ರಯತ್ನಿಸಿದ್ದಕ್ಕಾಗಿ ಇಂದಿಗೂ ಹೆಚ್ಚು ನೆನಪಿಸಿಕೊಳ್ಳಲ್ಪಡುತ್ತಾರೆ (ಲೂಕ 4:28-29)

**47** ಯೇಸು ನತಾನಯೇಲನನ್ನು ಈ ಮುಂಚೆ ಎಂದಿಗೂ ಬೇಟಿ ಮಾಡಿರದಿದ್ದರೂ ತನ್ನ ದೈವೀಕ ಜ್ಞಾನದ ಮುಖಾಂತರ ಯೇಸು ನತಾನಯೇಲನ ಬಗ್ಗೆ ಈಗಾಗಲೇ ಎಲ್ಲವನ್ನೂ ಅರಿತುಕೊಂಡಿದ್ದನು. ನತಾನಯೇಲನು ಇತರ ಯೆಹೂದ್ಯನಾಯಕರಂತೆ ಕಪಟಿಯಲ್ಲ ಆದರೆ ಭಕ್ತಿವಂತ ಮತ್ತು ನಿಜವಾದ ಇಸ್ರಾಯೇಲನು ಅಂದರೆ ನಿಜ ಯೆಹೂದ್ಯನು ಎಂದು ಆತನಿಗೆ ಗೊತ್ತಿತ್ತು (ರೋಮ 2:28-29 ಮತ್ತು ವ್ಯಾಖ್ಯಾನ ನೋಡಿರಿ).

**48-49** ನತಾನಯೇಲನು ಯೇಸುವಿಗೆ ತನ್ನ ಬಗ್ಗೆ ತಿಳಿದಿರುವದನ್ನು ಕಂಡು ಆಶ್ಚರ್ಯಪಟ್ಟನು. ಫಿಲಿಪ್ಪನು ಅವನನ್ನು ಬೇಟಿಮಾಡುವದಕ್ಕೆ ಮುಂಚೆ ಅವನು ಅಂಜೂರ ಮರದ ಕೆಳಗೆ ಕುಳಿತಿದ್ದನೆಂಬದನ್ನು ಯೇಸು ಹೇಳಿದಾಗ ಅವನು ಮತ್ತಷ್ಟು ಆಶ್ಚರ್ಯಗೊಂಡನು. ಆಗ ನತಾನಯೇಲನು ಯೇಸುವೇ ನಿಜವಾಗಿಯೂ ದೇವಕುಮಾರನೆಂದು ನಂಬಿ ಅರಿಕೆಮಾಡಿದನು. ಅಲ್ಲದೆ ಅವನು ಯೇಸುವನ್ನು ಇಸ್ರಾಯೇಲರ ಅರಸನೆಂದು ಸಹ ಕರೆದನು ಯಾಕೆಂದರೆ ಮೆಸ್ಸಿಯನು ಲೌಕಿಕ ಅರಸನಾಗಿರುವನೆಂದು ಅವನು ಯೇಚಿಸಿಕೊಂಡನು (ಮಾರ್ಕ 15:32, ಯೋಹಾನ 12:13 ನೋಡಿರಿ) ವಾಸ್ತವದಲ್ಲಿ ಯೇಸು ಯಾವದೇ ಭೂಲೋಕದ ಅರಸನಿಗಿಂತಲೂ ಶ್ರೇಷ್ಠನೂ, ಅವನು ರಾಜಧಿಕಾಜನಾಗಿದ್ದಾನೆ. ಆತನು ಇಸ್ರಾಯೇಲರ ನಿಜವಾದ ಆತ್ಮೀಕ ರಾಜನಾಗಿದ್ದಾನೆ, ಮತ್ತು ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ.

**50-51** ಯೇಸು ನತಾನಯೇಲನಿಗೆ ಆತನು ಇನ್ನೂ ಹೆಚ್ಚಿನ ಕಾರ್ಯಗಳನ್ನು ನೋಡುವಿ ಎಂದು ಹೇಳಿದನು. ನತಾನಯೇಲನು ಪರಲೋಕವು ತೆರೆದಿರುವದನ್ನೂ ಮನುಷ್ಯಕುಮಾರನ ಮೇಲೆ ದೇವದೂತರು ಏರಿಹೋಗುತ್ತಾ ಇಳಿದು ಬರುತ್ತಾ ಇರುವದನ್ನು ನೋಡುವನು. ಅಂದರೆ, ಇನ್ನು ಮೇಲೆ ಪರಲೋಕ ಮತ್ತು ಭೂಲೋಕಗಳ ನಡುವೆ ನಿರಂತರವಾಗಿ ಸಂಪರ್ಕವಿರುವದು. ಯೇಸು ಮಾನವರಿಗೆ ತಂದೆಯ ಬಳಿಗೆ ಮಾರ್ಗವನ್ನು ತೋರಿಸಲು ಪರಲೋಕದಿಂದ ಇಳಿದು ಬಂದಿದ್ದನು ಪರಲೋಕವು ಈಗ ತೆರೆಯಲ್ಪಟ್ಟಿದೆ. ಮತ್ತು ಸ್ವತಃ ಯೇಸುವೇ ಪರಲೋಕ ಮತ್ತು ಭೂಲೋಕಗಳ ನಡುವಿನ ಮಾರ್ಗವಾಗಿದ್ದಾನೆ. (ಯೋಹಾನ 14:6).

ಯೇಸು ತನ್ನನ್ನು ಮನುಷ್ಯಕುಮಾರ ಎಂದು ಕರೆದದ್ದನ್ನು ಗಮನಿಸಿರಿ. ಯೇಸು ದೇವಕುಮಾರ ಮತ್ತು ಮನುಷ್ಯಕುಮಾರ ಎರಡೂ ಆಗಿದ್ದಾನೆ. ಆತನು ಸಂಪೂರ್ಣ ದೇವರು ಮತ್ತು ಸಂಪೂರ್ಣವಾಗಿ ಮಾನವನೂ ಆಗಿದ್ದಾನೆ. (ಮಾರ್ಕ2:10 ಮತ್ತು ವ್ಯಾಖ್ಯಾನ ನೋಡಿರಿ) ಇತನು ದೊರೆತನವೂ ಘನತೆಯು ರಾಜ್ಯವೂ ಕೊಡಲ್ಪಟ್ಟ ಮನುಷ್ಯ ಕುಮಾರನಾಗಿದ್ದಾನೆ. ಆತನ ಆಳಿಕೆಯು ಅಂತ್ಯವಿಲ್ಲದ್ದು, ಶಾಶ್ವತವಾದದ್ದು, ಅವನ ರಾಜ್ಯವು ಎಂದಿಗೂ ಅಳಿಯದು. (ದಾನಿಯೇಲ 7:13-14).

ಅಧ್ಯಾಯ 1 ರಲ್ಲಿ ಅಪೊಸ್ತಲನಾದ ಯೋಹಾನನು ಯೇಸುವನ್ನು ಅನೇಕ ಹೆಸರುಗಳಿಂದ ಕರೆದಿರುತ್ತಾನೆಃ ವಾಕ್ಯ (ವಚನ1) ಮನುಷ್ಯರ ಬೆಳಕು (ವಚನ 4) ನಿಜವಾದ ಬೆಳಕು (ವಚನ9), ಒಬ್ಬನೇ ಮಗನು (ವಚನ 14) ಯೇಸು ಕ್ರಿಸ್ತನು (ವಚನ 17), ಕರ್ತನು (ವಚನ 23) ದೇವರ ಕುರಿಮರಿ (ವಚನ 29), ಮೆಸ್ಸಿಯನು (ವಚನ 41), ದೇವಕುಮಾರನು (ವಚನ 49), ಇತರ ಜನರು ಯೇಸುವಿಗೆ ಸಂಭೋದಿಸಿದ ಹೆಸರುಗಳು ಇವಾಗಿವೆ. ಆದರೆ ಯೇಸು ತನ್ನನ್ನು ಕೇವಲ ಮನುಷ್ಯಕುಮಾರ[21] ಎಂದಷ್ಟೇ ಕರೆದನು. ಇದಕ್ಕೆ ಕಾರಣವೇನಂದರೆ, ಯೇಸು ಭೂಮಿಗೆ ಬಂದು "ಮನುಷ್ಯಕುಮಾರ" ನಾಗಿ ಸ್ತ್ರೀಯರಲ್ಲಿ ಹುಟ್ಟಿದವನಾದನು. ಹೀಗೆ ಅವನು ಪರಲೋಕದ ಬಾಗಿಲನ್ನು ತೆರೆದು ಮನುಷ್ಯರಿಗೆ ನಿತ್ಯಜೀವದ ಮಾರ್ಗವನ್ನು ತೋರಿಸಲು ಶಕ್ತನಾಗಿದ್ದಾನೆ.

ಹಾಗಾದರೆ ಇದು "ಶುಭವಾರ್ತೆ", ಕ್ರಿಸ್ತನ ಸುವಾರ್ತೆ ಆಗಿದೆ: ದೇವರು ಮನುಷ್ಯನ ರೂಪದಲ್ಲಿ ಭೂಮಿಗೆ ಬಂದನು ಮತ್ತು ನಮ್ಮ ಸ್ಥಾನದಲ್ಲಿ ತನ್ನನ್ನು ಯಜ್ಞವಾಗಿ ಅರ್ಪಿಸುವದರ ಮೂಲಕ ಆತನು ನಮ್ಮ ಪಾಪಗಳ ದಂಡನೆಯನ್ನು ಹೊತ್ತುಕೊಂಡನು. ಮತ್ತು ಆತನಲ್ಲಿ ನಂಬಿಕೆಯಿಡುವ ಎಲ್ಲರಿಗೂ ನಿತ್ಯಜೀವವನ್ನು ಕೊಡುವ ವಾಗ್ದನಮಾಡುತ್ತಾನೆ.

## ಅಧ್ಯಾಯ - 2

### ಯೇಸು ನೀರನ್ನು ದ್ರಾಕ್ಷಾರಸವಾಗಿ ಮಾರ್ಪಡಿಸಿದ್ದು (2:1-11)

**1-2** ಯೇಸು ಮತ್ತು ನತಾನಯೇಲರ ಬೇಟಿಯ ಮೂರು ದಿನಗಳ ನಂತರ (ಯೋಹಾನ 1:47-57) ಯೇಸು ಮತ್ತು ಆತನ ಶಿಷ್ಯರು[22] ಗಲಿಲಾಯಕ್ಕೆ ಬಂದರು. ಅಲ್ಲಿ ಅವರು ಕಾನಾ ಎಂಬ ಚಿಕ್ಕ ಊರಿನಲ್ಲಿನ ಮದುವೆಗೆ ಆಮಂತ್ರಣ ಪಡೆದರು, ಅದು ನತಾನಯೇಲನ ಊರಾಗಿತ್ತು (ಯೋಹಾನ 21:2)

**3** ಮದುವೆಯ ಔತಣದ ಮಧ್ಯದಲ್ಲಿ ದ್ರಾಕ್ಷಾರಸವು ಮುಗಿದು ಹೋಯಿತು. ಔತಣಕ್ಕೆ ಜವಾಬ್ದಾರನಾದ ಮದಲಿಂಗನಿಗೆ ಇದೊಂದು ದೊಡ್ಡ ಅವಮಾನಕರ ಸಂಗತಿಯಾಗಿತ್ತು. ಯೇಸುವಿನ ತಾಯಿಯಾದ ಮರಿಯಳು ತನ್ನ ಮಗನು ಮೆಸ್ಸಿಯನಾದ ದೇವಕುಮಾರನೆಂದು ಬಲ್ಲವಳಾಗಿದ್ದಳು (ಲೂಕ 1:30-32) ಆದುದರಿಂದ ಆತನು ಅದ್ಭುತವಮಾಡಿ ಇನ್ನಷ್ಟು ದ್ರಾಕ್ಷಾರಸವನ್ನು ಒದಗಿಸುವನೆಂದು ಆವಳು ಊಹಿಸಿಕೊಂಡಳು.

**4** ಆದರೆ ಯೇಸು ತನ್ನ ತಾಯಿಗೆ ಅವಳು ಅಂತಹ ಮನವಿಯನ್ನು ಆತನಿಗೆ ಮಾಡುವದು ಸರಿಯಾದದ್ದಲ್ಲ ಎಂದು ಹೇಳಿದನು. ಆತನು ತನ್ನ ಪರಲೋಕತಂದೆಯ ಸೂಚನೆಗಳನ್ನು ಅನುಸರಿಸಬೇಕು ಹೊರತು ತನ್ನ ತಾಯಿಯ ಸೂಚನೆಯನ್ನಲ್ಲ. ಆತನು ತನ್ನ ಮನೆಯನ್ನು ತೊರೆದಿದ್ದನು ಮತ್ತು ಈಗ ಆತನ ಮತ್ತು ಅವಳ ಮಧ್ಯದಲ್ಲಿ ಒಂದು ನೂತನ ಸಂಬಂಧವಿತ್ತು.

ಮೇಲಾಗಿ ಯೇಸುವಿನ ಸಮಯ ಇನ್ನು ಬಂದಿರಲಿಲ್ಲ. ಅಂದರೆ, ಯೇಸು ತನ್ನನ್ನು ಜನರೆದುರಿಗೆ ಮೆಸ್ಸಿಯನೆಂದು ಬಯಲು ಪಡಿಸಲು ಅದು ಸೂಕ್ತ ಸಮಯವಾಗಿರಲಿಲ್ಲ. ಒಂದು ವೇಳೆ ಅವನು ಬಯಲು ಪಡಿಸಿದರೆ ಜನರು ಆತನನ್ನು ಅರಸನನ್ನಾಗಿ ಮಾಡಲು ಪ್ರಯತ್ನಿಸುವರೆಂದು ಮತ್ತು ತಾನು ಬಾದೆ ಪಟ್ಟು ಸಾಯಬೇಕೆಂಬ ದೇವರ ಯೋಜನೆಯು ನಿರರ್ಥಕವಾಗುವದೆಂದು ಆತನಿಗೆ ಗೊತ್ತಿತ್ತು (ಮಾರ್ಕ 6:45 ಮತ್ತು ವ್ಯಾಖ್ಯಾನ ನೋಡಿರಿ).

**5** ಹೇಗಿದ್ದರೂ, ಯೇಸು ಮದಲಿಂಗನಿಗೆ ಸಹಾಯಕ್ಕಾಗಿ ಏನನ್ನಾದರೂ ಮಾಡುವನೆಂಬ ನಿಶ್ಚಯ ಮರಿಯಳಿಗಿತ್ತು. ಆದುದರಿಂದ ಅವಳು ಆಳುಗಳಿಗೆ "ಯೇಸು ನಿಮಗೆ ಏನಾದರೂ ಹೇಳುವದಾದರೆ ಆದನ್ನು ಮಾಡಿರಿ" ಎಂದು ಹೇಳಿದನು.

**6-8** ನಂತರ ಯೇಸು ದೊಡ್ಡದಾದ ಆರು ಬಾನೆಗಳಲ್ಲಿ ನೀರನ್ನು ತುಂಬಿಸುವಂತೆ ಆಳುಗಳಿಗೆ ಹೇಳಿದನು. ಒಂದೊಂದು ಬಾನೆಯು 100 ರಿಂದ 150 ಲೀಟರುಗಳಷ್ಟು ನೀರು ಹಿಡಿಯುತ್ತಿತ್ತು. ಇಂತಹ ಬಾನೆಗಳನ್ನು ಯೆಹೂದ್ಯರು ಊಟದ ಮುಂಚೆ ಕೈಗಳನ್ನು ತೊಳೆಯಲು ಹಾಗು ವಿವಿಧ ಬಟ್ಟಲು ಮತ್ತು ಪಾತ್ರೆಗಳನ್ನು ತೊಳೆಯಲು ನೀರನ್ನು ಶೇಖರಿಸಿಡುವದಕ್ಕೆ ಉಪಯೋಗಿಸುತ್ತಿದ್ದರು. (ಮಾರ್ಕ 7:1-4).

**9-10** ಆಳುಗಳು ನೀರನ್ನು ಮೇಲೆತ್ತಿದಾಗ ಅದು ದ್ರಾಕ್ಷಾರಸವಾಗಿ[23] ಬದಲಾಗಿರುವದನ್ನು ಕಂಡುಕೊಂಡರು. ಔತಣದ ಪಾರು ಪತ್ಯಗಾರನು ಅಂದರೆ ಮುಖ್ಯ ಮನೆವಾರ್ತೆಯವನು ವಿಸ್ಮಯಗೊಂಡನು. ಆತನಿಗೆ ಒಂದು ಅದ್ಭುತವು ನಡೆದಿರುವ ಬಗ್ಗೆ ಗೊತ್ತಿರಲಿಲ್ಲ. ಮದಲಿಂಗನು ಉತ್ತಮ ದ್ರಾಕ್ಷಾರಸವನ್ನು ಕೊನೆಯಲ್ಲಿ ಉಳಿಸಿ ಕೊಂಡಿದ್ದಾನಲ್ಲಾ ಎಂದು ಅವನು ಆಶ್ಚರ್ಯಪಟ್ಟನು! ಯೇಸು ನೀರನ್ನು ದ್ರಾಕ್ಷಾರಸವಾಗಿ ಮಾಡಿದಾಗ ಅದನ್ನು ಉತ್ತಮ ದ್ರಾಕ್ಷಾರಸವಾಗಿಯೇ ಬದಲಾಯಿಸಿದ್ದನು!ಮಾನವನ ಅಗತ್ಯತೆಯು ದೇವರಬಲವು ಕಾರ್ಯಮಾಡಲು ಹೇಗೆ ಒಂದು ಸದಾವಕಾಶವಾಗುತ್ತೆಂಬದನ್ನು ಗಮನಿಸಿರಿ. ನಾವು ದಿಕ್ಕುಕಾಣದವರಾಗಿಯೂ, ಯಾವ ಮಾನವ ಪರಿಹಾರಗಳು ಕಾಣದೇ ಇರವಾಗಲೋ ದೇವರು ತನ್ನ ಅತೀಶ್ರೇಷ್ಠ ಕಾರ್ಯವನ್ನು ಮಾಡಲು ಸಂತೋಷಿಸುತ್ತಾನೆ.

**11** ಇದು ಯೇಸು ಮಾಡಿದ ಮೊದಲನೆಯ ಅದ್ಭುತ ಕಾರ್ಯವಾಗಿತ್ತು. ಯೋಹಾನನು ಅದನ್ನು ಸೂಚಕಕಾರ್ಯ ಎಂದು ಕರೆಯುತ್ತಾನೆ. ಯೇಸುವಿನ ಅದ್ಭುತಗಳು ಆತನು ನಿಜವಾಗಿಯೂ ದೇವಕುಮಾರನೇ ಎಂಬದಕ್ಕೆ ಸೂಚಕ ಕಾರ್ಯಗಳಾಗಿದ್ದವು. ಈ ಸೂಚಕ ಕಾರ್ಯಗಳು ಯೇಸುವಿನ ಮಹಿಮೆಯನ್ನು ಬಯಲುಪಡಿಸಿದವು. ಯೇಸುವೇ ನಿಜವಾಗಿಯೂ ಕ್ರಿಸ್ತನೆಂಬದನ್ನು ನಾವು ನಂಬುವದಕ್ಕಾಗಿಯೇ ಯೋಹಾನನು ಇಂತಹ ಅದ್ಬುತಕಾರ್ಯಗಳನ್ನು ಬಣ್ಣಿಸುತ್ತಾನೆ (ಯೋಹಾನ 20:31 ನೋಡಿರಿ).

ಕಾನಾ ಊರಿನ ಮದುವೆಯಲ್ಲಿನ ಈ ಅದ್ಭುತದ ನಂತರ ಆತನ ಶಿಷ್ಯರು ಆತನಲ್ಲಿ ನಂಬಿಕೆಯಿಟ್ಟರು. ಅಂದರೆ ಶಿಷ್ಯರು ಯೇಸುವಿನಲ್ಲಿ ನಿಜವಾದ ನಂಬಿಕೆಯಿಡಲು ಪ್ರಾರಂಭಿಸಿದರು. ಈ ಮುಂಚೆ ನತಾನಯೇಲನು ಮಾತ್ರವೇ ನಂಬಿದ್ದನು (ಯೋಹಾನ 1:49) ಈಗ ಇತರರು ಸಹ ನಂಬಿದರು.

ಯೋಹಾನನು ಬೇರೆ ಇನ್ನಾರಾದರೂ ಉದಾಹರಣೆ ಯೇಸು ನೀರನ್ನು ದ್ರಾಕ್ಷಾರಸವಾಗಿ ಮಾರ್ಪಡಿಸಿದ್ದನ್ನು ನೋಡಿದ್ದ ಆಳುಗಳಂತವರು ನಂಬಿದರೆಂಬುನ್ನು ಹೇಳುವದಿಲ್ಲ (ವಚನ 9). ಯಾರ ಮನಸ್ಸುಗಳು ಮುಚ್ಚಲ್ಪಟ್ಟಿವೆಯೋ ಅವರಲ್ಲಿ ಅದ್ಭುತಗಳು ಸಹ ನಂಬಿಕೆಯನ್ನುಂಟು ಮಾಡಲಾರವು. ಯೇಸುವಿನ ಮಹಿಮೆಯು ಕೆಲವರಿಗೆ ತೋರ್ಪಟ್ಟಿತು. ಆದರೆ ಇತರರಿಗೆ ತೋರ್ಪಡಲಿಲ್ಲ.

ನಾವು ಯೇಸುವೇ ಕ್ರಿಸ್ತನು, ದೇವಕುಮಾರನೆಂದು ನಂಬಬೇಕಾದರೆ ನಾವು ಆತನ ಬಳಿಗೆ ದೀನತೆಯಿಂದಲೂ, ತೆರೆದ ಮನಸ್ಸುಗಳಿಂದಲೂ ಬರಬೇಕು.

## ಯೇಸು ದೇವಾಲಯವನ್ನು ಶುದ್ದೀಕರಿಸುತ್ತಾನೆ (2:12-25)

12 ಯೇಸು ಕಾನಾ ಊರಿನಿಂದ ಗಲಿಲಾಯ ಸಮುದ್ರದ ಉತ್ತರ ದಿಕ್ಕಿಗಿರುವ ಕೆಪೆರ್ನೌಮಿಗೆ ಹೋದನು. ಅಲ್ಲಿ ಪೇತ್ರ ಮತ್ತು ಅಂದ್ರೇಯರಿಗೆ ಒಂದು ಮನೆಯಿತ್ತು. (ಮಾರ್ಕ 1:21-29), ಯೇಸುವಿನ ತಾಯಿ ಮತ್ತು ಸಹೋದರರು ಆತನೊಂದಿಗಿದ್ದರು. ಈ ಸಹೋದರರು ಯೋಸೆಫ ಮತ್ತು ಮರಿಯಳರ ಮಕ್ಕಳೆಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ. ಈ ಸಹೋದರರಲ್ಲಿ ಒಬ್ಬನು ಯಾಕೋಬನಾಗಿದ್ದು, ತರುವಾಯ ಈತನು ಯೆರೂಸಲೇಮಿನಲ್ಲಿನ ಸಭೆಯ ನಾಯಕನಾದನು. ಮತ್ತು ಹೊಸ ಒಡಂಬಡಿಕೆಯ "ಯಾಕೋಬ" ಎಂಬ ಪತ್ರಿಕೆಯನ್ನು ಬರೆದನು. (ಮಾರ್ಕ 3:31-32,6:3,1;ಯೋಹಾನ 7:3-5 ಮತ್ತು ವ್ಯಾಖ್ಯಾವ ನೋಡಿರಿ).

13 ಪ್ರತಿವರ್ಷವು ಭಕ್ತಿಯುಳ್ಳ ಯೆಹೂದ್ಯರಲ್ಲಿ ಹೆಚ್ಚುಮಂದಿ ಪಸ್ಕಹಬ್ಬವನ್ನಾಚರಿಸಲು ಯೆರೂಸಲೇಮಿಗೆ ಹೋಗುತ್ತಿದ್ದರು (ಲೂಕ 2:41). ಆತನು ದೀಕ್ಷಾಸ್ನಾನ ಹೊಂದಿದ ನಂತರದ ಈ ಪ್ರಥಮ ವರ್ಷದಲ್ಲಿ ಯೇಸು ಸಹ ತನ್ನ ಶಿಷ್ಯರೊಂದಿಗೆ ಪಸ್ಕಬಹ್ಬಕ್ಕಾಗಿ ಯೆರೂಸಲೇಮಿಗೆ ಹೋದನು.

14-16 ಯೇಸು ಯೆರೂಸಲೇಮಿನ ದೇವಾಲಯಕ್ಕೆ ಬಂದಾಗ ದೇವಾಲಯದ ಆವರಣದೊಳಗೆ ಯಜ್ಞಕ್ಕಾಗಿ ಪ್ರಾಣಿಗಳನ್ನು ಮಾರಾಟಮಾಡುವ ವ್ಯಾಪಾರಸ್ಥರನ್ನು ಕಂಡನು. ಆರಾಧನೆಗಾಗಿ ಬರುವವರು ದೇವಾಲಯದಲ್ಲಿ ಬಳಕೆಯಲಿದ್ದ ವಿಶೇಷ ಹಣಚಲಾವಣೆಯನ್ನು ಪಡೆಯಲು ಚಿನಿವಾರರೊಂದಿಗೆ ತಮ್ಮ ಹಣವನ್ನು ಬದಲಾಯಿಸಿಕೊಳ್ಳುತ್ತಿದ್ದರು (ಪ್ರತಿಯೊಬ್ಬನೂ ದೇವಾಲಯದ ವಿಶೇಷ ನಾಣ್ಯಗಳಿಂದ ದೇವಾಲಯದ ತೆರಿಗೆಯನ್ನು ಸಂದಾಯ ಮಾಡಬೇಕಿತ್ತು). ವ್ಯಾಪಾರಿಗಳು ದೇವಾಲಯದಲ್ಲಿ ವ್ಯಾಪಾರವನ್ನು, ಲಾಭ ಮಾಡಿಕೊಳ್ಳುತ್ತಿರುವದನ್ನು ಕಂಡು ಕೋಪಗೊಂಡು ಅವರೆಲ್ಲರನ್ನೂ ಹೊರಡಿಸಿಬಿಟ್ಟನು. ಎರಡು ವರ್ಷಗಳ ಬಳಿಕ ತಾನು ಯೆರೂಸಲೇಮಿಗೆ ಮಾಡಿದ ಅಂತಿಮ ಯಾತ್ರೆಯಲ್ಲಿ ಯೇಸು ಎರಡನೆಯ ಸಾರಿ ದೇವಾಲಯವನ್ನು ಶುಧ್ಧೀಕರಿಸಿದನು (ಮಾರ್ಕ 11:15-17 ಮತ್ತು ವ್ಯಾಖ್ಯಾನ ನೋಡಿರಿ).

ಯೇಸು ದೇವಾಲಯವನ್ನು ನನ್ನ ತಂದೆಯ ಮನೆ ಎಂದು ಕರೆದನು (ವಚನ 16). ದೇವರು ಒಂದು ವಿಶೇಷ ರೀತಿಯಲ್ಲಿ ಯೇಸುವಿನ ತಂದೆಯಾಗಿದ್ದನು. ವಿಶ್ವಾಸಿಗಳಾದ ನಾವು ದತ್ತಿನ ಮೂಲಕ ದೇವರ ಮಕ್ಕಳಾಗುತ್ತೇವೆ (ಎಫೇಸ 1:5) ಆದರೆ ಯೇಸು ಜನ್ಮದಿಂದ ದೇವರ ಮಗನಾಗಿದ್ದನು (ಮತ್ತಾಯ 1:18).

17 ಯೇಸುವಿನ ಶಿಷ್ಯರಿಗಾದರೋ, ದೇವಾಲಯದ ಶುದ್ಧೀಕರಣವು ಯೇಸು ನಿಜವಾಗಿಯೂ ಮೆಸ್ಸಿಯನಾಗಿದ್ದಾನೆ ಎಂಬದಕ್ಕೆ ಇನ್ನೊಂದು ಸೂಚಕಕಾರ್ಯವಾಗಿತ್ತು. ಮೆಸ್ಸಿಯನಿಗೆ ಮಾತ್ರವೇ ಎಲ್ಲಾ ವ್ಯಾಪಾರಿಗಳನ್ನು ಪ್ರಾಣಿಗಳನ್ನು ಹೊರಡಿಸಿ ಬಿಡುವ ಧೈರ್ಯವಿರುತ್ತದೆ. ಇದು ಪ್ರವಾದನೆಯ ಒಂದು ನೆರವೇರಿಕೆಯಾಗಿತ್ತು, ಕಾರಣ ಕೀರ್ತನೆಗಳು 69:9 ರಲ್ಲಿ ಮೆಸ್ಸಿಯನು ".....ನಿನ್ನ ಆಲಯದ ಅಭಿಮಾನವು ನನ್ನನ್ನು ಬೆಂಕಿಯಂತೆ ಧಹಿಸುತ್ತದೆ" ಎಂದು ಹೇಳುತ್ತಾನೆ . ಮೆಸ್ಸಿಯನು ದೇವರ ಆಲಯವನ್ನು ಸಂರಕ್ಷಿಸಲು ಮತ್ತು ಗೌರವಿಸಲು ಚಿಂತೆ ಮತ್ತು ಕಾತರತೆಯುಳ್ಳವನಾಗಿದ್ದಾನೆಂದು ಕೀರ್ತನೆಗಾರನು ಹೇಳುತ್ತಿದ್ದಾನೆ. ಯೇಸು ದೇವರ ಗೌರವದ ಬಗ್ಗೆ ಚಿಂತೆಯುಳ್ಳವನಾಗಿದ್ದನು. ದೇವರ ಆಲಯವನ್ನು ಸಂತೆಯನ್ನಾಗಿ ಮಾರ್ಪಡಿಸುವದು ದೇವರನ್ನು ಅವಮಾನಿಸಿದಂತೆಯೇ. ದೇವರ ಆಲಯವು ಆರಾಧನೆ ಮತ್ತು ಪ್ರಾರ್ಥನೆಗಾಗಿಯೇ ಹೊರತು ಹಣ ಸಂಪಾದನೆಗಾಗಿ ಇರಲಿಲ್ಲ (ಮಾರ್ಕ 11:17).

18 ಯೇಸು ದೇವಾಲಯವನ್ನು ಶುಧ್ಧೀಕರಿಸುವದರ ಮೂಲಕ ತನ್ನನ್ನು ಮೆಸ್ಸಿಯನೆಂದು ಹೇಳಿಕೊಳ್ಳುತ್ತಿದ್ದಾನೆಂದು ಯೆಹೂದ್ಯರು ಸಹ ಅರ್ಥಮಾಡುಕೊಂಡರು. ಆದುದರಿಂದ ಅವರು ಆತನಿಗೆ ಇದನ್ನೆಲ್ಲಾ ಮಾಡುವದಕ್ಕೆ ಅಧಿಕಾರ ಉಂಟೆಂಬದಕ್ಕೆ ಒಂದು ಸೂಚಕ ಕಾರ್ಯ, ಒಂದು ಅದ್ಭುತವನ್ನು ಮಾಡಿ ತೋರಿಸುವಂತೆ ಕೇಳಿದರು. ಯೆಹೂದ್ಯರು ಯಾವಾಗಲೂ ಸೂಚಕ ಕಾರ್ಯಗಳನ್ನು ಹುಡುಕುತ್ತಿದ್ದರು. ಒಂದು ಅದ್ಭುತವಾದ ಸೂಚಕ ಕಾರ್ಯವಿಲ್ಲದೆ ಯೇಸುವೇ ಕ್ರಿಸ್ತನು, ಮೆಸ್ಸಿಯನೂ ಆಗಿದ್ದಾನೆಂಬದನ್ನು ಅವರು ನಂಬುವದಿಲ್ಲ (ಮಾರ್ಕ 8:11-13, 1 ಕೊರಿಂಥ 1:22 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಸೂಚಕಕಾರ್ಯವಿಲ್ಲದೆ ಅವರು ಆತನನ್ನು ಕೇವಲ ಒಬ್ಬ ಗಲಭೆಕೋರನೂ, ನಿಯಮ ಉಲ್ಲಂಘಿಸುವವನೂ ಆಗಿದ್ದಾನೆಂದು ಪರಿಗಣಿಸುವವರಾಗಿದ್ದರು.

19 ಯೇಸು ಅವರಿಗೆ "ಹಾಗಾದರೆ, ನಾನು ನಿಮಗೆ ಒಂದು ಸೂಚಕ ಕಾರ್ಯ ತೋರಿಸುತ್ತೇನೆ, ಈ ಆಲಯವನ್ನು ಕೆಡವಿರಿ ನಾನು ಮೂರು ದಿನದಲ್ಲಿ ಅದನ್ನು ಎಬ್ಬಿಸುವೆನು" ಎಂದು ಹೇಳಿದನು.

20 ಖಂಡಿತವಾಗಿಯೂ, ಯೆಹೂದ್ಯರಿಗೆ ಯೇಸುವಿನ ಮಾತಿನ ಅರ್ಥವು ತಿಳಿಯಲಿಲ್ಲ. ಈಗಾಗಲೇ ಆ ದೇವಾಲಯವನ್ನು ಕಟ್ಟಲು ನಾಲ್ವತ್ತಾರು ವರ್ಷಗಳು ಹಿಡಿದಿತ್ತು. ಆದರೂ ದೇವಾಲಯವು ಇನ್ನೂ ಸಂಪೂರ್ಣವಾಗಿರಲಿಲ್ಲ (ಅಂತಿಮವಾಗಿ ದೇವಾಲಯವು ಕ್ರಿಶ 64 ರಲ್ಲಿ ಪೂರ್ಣಗೊಂಡಿತು). ನೂರಾರು ಕೆಲಸಗಾರರು ನಾಲ್ವತ್ತಾರು ವರ್ಷಳಲ್ಲಿ ಕಟ್ಟಿಮುಗಿಸಲಾಗದೆ ಇರುವಾಗ ಯೇಸು ಹೇಗೆ ಇಂತಹ ಬೃಹತ್ ದೇವಾಲಯವನ್ನು ಮೂರು ದಿನಗಳಲ್ಲಿ ಕಟ್ಟಬಲ್ಲನು?

ಅನಂತರ ಯೆಹೂದ್ಯರು ಇದೇ ಹೇಳಿಕೆಯನ್ನು ತೆಗೆದುಕೊಂಡು ಯೇಸು ಮೋಶೆಯ ಧರ್ಮಶಾಸ್ತ್ರ ಮತ್ತು ಯೆಹೂದ್ಯ ಧರ್ಮವನ್ನು ವಿರೋಧಿಸಿದ್ದಾನೆಂದು ಆರೋಪಿಸಲು ಉಪಯೋಗಿಸಿಕೊಂಡರು (ಮಾರ್ಕ 14:57-59) ಯೇಸು ದೇವಾಲಯವನ್ನು ಕೆಡವು ತ್ತೇನೆಂದು ಹೇಳಿದ ಎಂಬದಾಗಿ ಯೆಹೂದ್ಯರು ಹೇಳಿದರು, ಆದರೆ ವಾಸ್ತವದಲ್ಲಿ, ಅವರೇ ಸ್ವತ: "ದೇವಾಲಯ" ವನ್ನು ಅಂದರೆ "ಯೇಸುವಿನ ದೇಹ" ವನ್ನು ಮರಣಕ್ಕೆ ಒಪ್ಪಿಸಿ ಕೆಡವಿಬಿಟ್ಟರು. ಅವರು ಆತನ ಅಧಿಕಾರಕ್ಕೆ

ಒಂದು ಸೂಚಕ ಕಾರ್ಯವನ್ನು ತೋರಿಸುವಂತೆ ಕೇಳಿದ್ದರು. ಮತ್ತು ಆತನು ಅವರಿಗೆ ನೀಡಿದ ಸೂಚಕ ಕಾರ್ಯವೇನೆಂದರೆ ಅವರು ನಾಶಮಾಡಿದ ದೇಹವನ್ನು ಸತ್ತವರೊಳಗಿಂದ ಎಬ್ಬಿಸುವದೇ ಆಗಿತ್ತು.

**21** ಯೋಹಾನನುಯೇಸುವಿನ ಮಾತುಗಳ ಅರ್ಥವನ್ನು ನೀಡುತ್ತಾನೆ. ಯೇಸು ಯೆರೂಸಲೇಮಿನಲ್ಲಿದ್ದ ಯೆಹೂದ್ಯರ ದೇವಾಲಯದ ಬಗ್ಗೆ ಮಾತನಾಡುತ್ತಿಲ್ಲ, ಆತನು ತನ್ನ ಸ್ವಂತ ದೇಹದ ವಿಷಯವಾಗಿ ಮಾತಾಡುತ್ತಿದ್ದನು. ಆತನು "ನಾನು ಅದನ್ನು ಮೂರು ದಿನದಲ್ಲಿ ಎಬ್ಬಿಸುವೆನು" ಎಂದು ಹೇಳಿದಾಗ ಆತನ ಅರ್ಥವೇನೆಂದರೆಃ "ನನ್ನ ಮರಣದ ಮೂರು ದಿನಗಳ ನಂತರ ನನ್ನ ದೇಹವು ಪು ನರುಥ್ಥಾನಗೊಳ್ಳುವದು" ಎಂದಾಗಿತ್ತು. ಯೇಸು ಯೆಹೂದ್ಯರಿಗೆ ನೀಡಲು ಇಚ್ಚಿಸಿದ ಏಕೈಕ ಸೂಚಕ ಕಾರ್ಯವೇನೆಂದರೆ ಆತನ ಪು ನರುಥ್ಥಾನದ ಸೂಚಕಕಾರ್ಯವಾಗಿದೆ (ಮತ್ತಾಯ 12:39-40 ಮತ್ತು ವ್ಯಾಖ್ಯಾನ ನೋಡಿರಿ). ಆತನು ಮೆಸ್ಸಿಯನೂ, ದೇವಕುಮಾರನೂ ಎಂಬದಕ್ಕೆ ಆತನ ಪು ನರುಥ್ಥಾನವೇ ಅಂತಿಮ ಸಾಕ್ಷಿಯಾಗಿದೆ.

ಯೋಹಾನನು ಇಲ್ಲಿ ದೇವಾಲಯವು ಯೇಸುವಿನ ದೇಹವೇ ಎಂದು ತಿಳಿಸುತ್ತಾನೆ. ದೇವರು ಯೆಹೂದ್ಯದೇವಾಲಯದಲ್ಲಿ ವಾಸಿಸಿದನು, ದೇವರು ಯೇಸುವಿನ ದೇಹದಲ್ಲಿಯೂ ನೆಲೆಸಿದನು (ಕೊಲೊಸ್ಸಿ 2:9) ಆದರೆ ಈಗ ಸಭೆಯು ಸಹ ಯೇಸುವಿನ ದೇಹವಾಗಿದೆ (ಎಫೆಸ 1:22-23, ಕೊಲೋಸೆ; 1:18 ಮತ್ತು ವ್ಯಾಖ್ಯಾನಗಳನ್ನು ನೋಡಿರಿ) ಯೆಹೂದ್ಯರ ಹಳೆಯ ಆಲಯವು ತನ್ನ ಯಜ್ಞಗಳ ಜೊತೆಯಲ್ಲಿ ಅಳಿದು ಹೋಗುವದು, ಮತ್ತು ಒಂದು ನೂತನ ಆತ್ಮೀಕ ದೇವಾಲಯ ಅಥವಾ ದೇಹ ಅಂದರೆ ಸಭೆಯು ಎಬ್ಬಿಸಲ್ಪಡುವದೆಂದು ಯೋಹಾನನು ಇಲ್ಲಿ ಹೇಳುತ್ತಿರುವನು. ದೇವರು ಮನುಷ್ಯರ ಕೈಯಿಂದ ಕಟ್ಟಿದ ದೇವಾಲಯಗಳಲ್ಲಿ ಮಾತ್ರವೇ ಇರುವದಿಲ್ಲ (ಅ.ಕೃತ್ಯ 7:48-49, 17:24 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆತನು ಪ್ರತಿಯೊಬ್ಬವಿಶ್ವಾಸಿಯ ಹೃದಯದಲ್ಲಿ ಜೀವಿಸುತ್ತಾನೆ.

**22** ಆ ಸಮಯದಲ್ಲಿ ಯೇಸುವಿನ ಸ್ವಂತ ಶಿಷ್ಯರೇ ಆತನ ಮಾತನ್ನು ಅರ್ಥಮಾಡಿಕೊಳ್ಳಲಿಲ್ಲ. ಆತನ ಪು ನರುಥ್ಥಾನದ ನಂತರವಷ್ಟೇ ಆತನು ದೇವಾಲಯವನ್ನು ಮೂರು ದಿನದಲ್ಲಿ ತಿರಿಗಿ ಕಟ್ಟುವೆನೆಂದರ ಕುರಿತು ಏನು ಹೇಳಿದ್ದನೆಂಬದನ್ನು ಅವರು ಜ್ಞಾಪಕಕ್ಕೆ ತಂದುಕೊಂಡರು. ಅಲ್ಲದೆ ಆತನು ಅವರಿಗೆ ತಾನು ಕೊಲ್ಲಲ್ಪಟ್ಟು ಮೂರು ದಿನಗಳ ನಂತರ ಎಬ್ಬಿಸಲ್ಪಡುವೆನು ಎಂದು ಕಲಿಸಿದ್ದನ್ನುಸಹ ಅವರು ನೆನಪಿಗೆ ತಂದುಕೊಂಡರು (ಮಾರ್ಕ 8:31, 9:31) ಅವರು ಆತನು ಸತ್ತವರೊಳಗಿಂದ ಎದ್ದು ಬಂದದ್ದನ್ನು ನೋಡಿದ ನಂತರವಷ್ಟೇ ಶಾಸ್ತ್ರಗಳು ಯೇಸುವಿನ ಕುರಿತು ಹೇಳಿದ್ದೆಲ್ಲವನ್ನು ಮತ್ತು ಯೇಸು ಸ್ವತ: ತನ್ನ ಕುರಿತಾಗಿ ಹೇಳಿದ್ದೆಲ್ಲವನ್ನು ಅರ್ಥಮಾಡಿಕೊಂಡರು ಮತ್ತು ನಂಬಿದರು (ಯೋಹಾನ 12:16). ಯೇಸು ತನ್ನ ಶಿಷ್ಯರಿಗೆ"...ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು" ಎಂದು ಹೇಳಿದನು (ಯೋಹಾನ 1:26). ಶಿಷ್ಯರಿಗಾದರೋ ಈ ವಾಗ್ದಾನವು ನೆರವೇರಿತು, ಮತ್ತು ಇಂದಿಗೂ ಸಹ ಪ್ರತಿಯೊಬ್ಬ ನಿಜ ವಿಶ್ವಾಸಿಯ ಜೀವಿತದಲ್ಲಿ ಇದು ನೆರವೇರುತ್ತಾ ಇದೆ.

**23-24** ಅನೇಕ ಜನರು ಯೇಸುವಿನ ಅದ್ಭುತಕಾರ್ಯಗಳನ್ನು ನೋಡಿ ಆತನಲ್ಲಿ ನಂಬಿಕೆಯಿಟ್ಟರು (ಯೋಹಾನ 6:2 ನೋಡಿರಿ). ಆದರೆ ಅವರ ನಂಬಿಕೆಯು ಆಳವಾಗಿರಲಿಲ್ಲ. ಅವರು ಆತನನ್ನು ಅದ್ಭುತಗಾರನು ನಾಯಕನು, ಬಹುಶ: ಒಬ್ಬ ಅರಸನೆಂದು ಸಹ ಪರಿಗಣಿಸಿದ್ದರು. ಆದರೆ ಅವರಿಗೆ ಆತನು ನಿಜವಾಗಿಯೂ ದೇವಕುಮಾರನೇ ಎಂಬದರ ಆತ್ಮೀಕ ತಿಳುವಳಿಕೆಯು ಇರಲಿಲ್ಲ.

ಈ ಜನರು ಕ್ರಿಸ್ತನನ್ನು ಒಂದು ದಿನ ನಂಬಿದರು ಆದರೆ ಮರುದಿನ ಅವನನ್ನು ಮರಣ ದಂಡನೆಗೆ ಗುರಿಮಾಡಲು ಸಿದ್ಧರಾಗಿದ್ದರು. ಅವರ ನಂಬಿಕೆಯು ನಿಜವಾದ ನಂಬಿಕೆಯಾಗಿರಲಿಲ್ಲ. ಅವರು ನಂಬಿಕೆಯು ಕೇವಲ ಅದ್ಭುತಗಳಲ್ಲಿಯೇ ಇತ್ತು. ಅಂತಹ ಜನರು ಒಂದು ದಿನ ನಂಬುತ್ತಾರೆ ಮತ್ತು ಮರುದಿನ ಮರೆತು ಹೋಗುತ್ತಾರೆ.

ಆದುದರಿಂದ, ಯೇಸು ಜನರ ಗುಂಪು ತನ್ನನ್ನು ಹೊಗಳುವದನ್ನು ಮತ್ತು ಹಿಂಬಾಲಿಸುವದನ್ನು ಕಂಡಾಗ ಆತನು ಅವರಿಗೆ ವಶವಾಗಲಿಲ್ಲ (ವಚನ 24) ಅಂದರೆ ಆತನು ಅವರ ಬೆಂಬಲದ ಮೇಲೆ ಆಧಾರವಾಗಲಿಲ್ಲ. ಆತನು ಅವರ ನಾಯಕನಾಗಿರಲು ಆಶೆಪಡಲಿಲ್ಲ. ಆತನು ಅವರ ಮನ್ನಣೆಯನ್ನಾಗಲಿ, ಹೊಗಳಿಕೆಯನ್ನಾಗಲಿ ಹುಡುಕಲಿಲ್ಲ. ಅವರು ಮುಖ್ಯವಾಗಿ ತಮ್ಮ ತುಟಿಗಳಿಂದಲೇ ಆತನನ್ನು ಸ್ತುತಿಸುತ್ತಿದ್ದಾರೆಂದು ಆತನು ಬಲ್ಲವನಾಗಿದ್ದನು. ಅವರ ನಂಬಿಕೆಯು ಪೊಳ್ಳಾಗಿದೆ ಎಂದು ಅವನಿಗೆ ತಿಳಿದಿತ್ತು.

ಈ ದಿನಗಳಲ್ಲೂ ಸಹ ಅನೇಕರು ನಿಜವಾದ ನಂಬಿಕೆಯಿಲ್ಲದೆಯೇ ಯೇಸುವನ್ನು ಹಿಂಬಾಲಿಸುವವರಾಗಿದ್ದಾರೆ. ಅವರು ತಮಗೆ ಏನಾದರೂ ಪ್ರಯೋಜನ ಅಥವಾ ಸಹಾಯ (ವಿಧ್ಯಾರ್ಥಿ ವೇತನ, ಉದ್ಯೋಗ, ಆಹಾರ, ಹಣ) ದೊರೆಯುತ್ತದೆಂಬ ನಿರೀಕ್ಷೆಯಲ್ಲಿ ನಂಬಿಕೆಯಿದೆಯೆಂದು ಹೇಳಿಕೊಳ್ಳುತ್ತಾರೆ. ಕೆಲವರು ತಾವು ಸ್ವಸ್ಥತೆ ಹೊಂದಿದ ಕಾರಣದಿಂದಾಗಿ ಯೇಸುವಿನ ಬಳಿಗೆ ಬಂದರು, ಆದರೆ ಅವರ ನಂಬಿಕೆ ಹಲವಾರು ವೇಳೆ ಬಲಹೀನವಾಗಿತ್ತು. ಅವರು ಮುಖ್ಯವಾಗಿ ಕ್ರಿಸ್ತನಿಂದ ತಮಗೆ ಏನು ದೊರೆಯುವದೆಂದು ನೋಡುತ್ತಾರೆ ಹೊರತು ಅವರು ಕ್ರಿಸ್ತನಿಗೆ ಕೊಡಬಹುದು ಎಂಬದನ್ನಲ್ಲ. ಅಂತಹ ಜನರು ತಾವು ಹುಡುಕುತ್ತಿದ್ದ ಪ್ರಯೋಜನಗಳು ಅಂತ್ಯಗೊಳ್ಳುವಾಗ ಶೀಘ್ರ್ರವೇ ವಿಮುಖರಾಗುತ್ತಾರೆ.

ಕ್ರಿಸ್ತನ ಬಳಿಗೆ ಬರುವ ಪ್ರತಿಯೊಬ್ಬನೂ ಮೊದಲು ಒಂದು ರೀತಿಯ ಸ್ವಾರ್ಥಕಾರಣಕ್ಕಾಗಿ ಅಂದರೆ ಯಾವದೋ ಒಂದು ಅಗತ್ಯತೆಯ ಕಾರಣದಿಂದ ಬರುತ್ತಾನೆಂಬದು ಸತ್ಯವೇ.ಆದರೆ ಕ್ರಿಸ್ತನನ್ನು ಸಂಧಿಸಿ ಆತನಲ್ಲಿ ನಂಬಿಕೆಯಿಟ್ಟ ನಂತರ ನಾವು ಸ್ವಾರ್ಥತೆಯನ್ನು ಬಿಟ್ಟು ಬಿಟ್ಟವರಾಗಿ ಆತನನ್ನು ಹಿಂಬಾಲಿಸಬೇಕು, ನಮಗೋಸ್ಕರವಾಗಿಯಲ್ಲ ಆದರೆ ಆತನಿಗೋಸ್ಕರವಾಗಿಯೇ.

25 ಯಾವನೂ ಯಾವ ಮನುಷ್ಯನ ವಿಷಯದಲ್ಲಿಯೂ ಯೇಸುವಿಗೆ ಸಾಕ್ಷಿನೀಡುವದು ಅವಶ್ಯವಿರಲಿಲ್ಲ. ಅಂದರೆ ಮಾನವನ ಹೃದಯ ಹೇಗಿರುತ್ತದೆಂದು ಯಾರೂ ಆತನಿಗೆ ಹೇಳಬೇಕಾದ ಅಗತ್ಯವಿರಲಿಲ್ಲ ಯಾಕೆಂದರೆ ಆತನು ತನ್ನ ಸ್ವಾಭಾವಿಕ ಜ್ಞಾನದಿಂದ ಪ್ರತಿಯೊಬ್ಬನ ಹೃದಯವನ್ನೂ ತಿಳಿದವನಾಗಿದ್ದನು...ನೀನೊಬ್ಬನೇ ಎಲ್ಲಾ ಮನುಷ್ಯರ ಹೃದಯಗಳನ್ನು ಬಲ್ಲವನಾಗಿರುವಿ..(1 ಅರಸು 8:39). ಆದುದರಿಂದ, ಕ್ರಿಸ್ತನು ನಮ್ಮ ಕುರಿತಾಗಿ ಸಮಸ್ತವನ್ನು ಅರಿತವನಾಗಿರುವದರಿಂದ ಆತನು ನಮ್ಮ ಆತ್ಮಗಳಿಗೆ ವೈದ್ಯನಾಗಿರುವದಕ್ಕೆ ಪರಿಪೂರ್ಣವಾದ ರೀತಿಯಲ್ಲಿ ಅರ್ಹನಾಗಿದ್ದಾನೆ (ಯೋಹಾನ 4:29). ಅಲ್ಲದೆ ಆತನು ಅದೇ ಕಾರಣದಿಂದಲೇ ನಮ್ಮ ನ್ಯಾಯಾಧಿಪತಿ ಸಹ ಆಗಿರಲು ಪರಿಪೂರ್ಣವಾಗಿ ಅರ್ಹನಾಗಿರುವನು!

---

## ಅಧ್ಯಾಯ - 3

### ಆತ್ಮದಿಂದ ಹೊಸದಾಗಿ ಹುಟ್ಟುವದು (3:1-15)

1 ನಿಕೊದೇಮನು ಒಬ್ಬ ಫರಿಸಾಯನೂ, ಯೆಹೂದ್ಯರ ಅಧಿಕಾರಿಯೂ ಅಂದರೆ ಯೆಹೂದ್ಯಧರ್ಮದ ಮುಖ್ಯ ಸಮಿತಿಯಾದ ಹಿರೀ ಸಭೆಯ ಸದಸ್ಯನೂ ಆಗಿದ್ದನು. ಈ ಸಭೆಯಲ್ಲಿ ಒಟ್ಟು ಎಪ್ಪತ್ತು ಸದಸ್ಯರಿದ್ದು ಅವರು ಎಲ್ಲಾ ನಾಗರೀಕ ವಿಷಯಗಳಲ್ಲಿಯೂ ರೋಮಾಯ ದೇಶಾಧಿಪತಿಗೆ ಅಧಿಕಾರವಿತ್ತು ಆದರೆ ಯೆಹೂದ್ಯರು ರೋಮಾಯ ಸರ್ಕಾರವನ್ನು ವಿರೋಧಿಸದೇ ಇದ್ದರೆ ಸಾಕೆಂದು ತಮ್ಮ ಎಲ್ಲಾ ಧಾರ್ಮಿಕ ವಿಷಯಗಳನ್ನು ನೋಡಿಕೊಳ್ಳುವಂತೆ ಯೆಹೂದ್ಯರಗೆ ರೋಮಾಯರು ಅನುಮತಿಸಿದ್ದರು.

2 ನಿಕೊದೇಮನು ಕ್ರಮವಾದ ವ್ಯಾಸಂಗ ಹೊಂದಿದ್ದ ಯೆಹೂದ್ಯನಾಗಿದ್ದನು. ಅವನು ಸ್ವತ: ಒಬ್ಬ ಬೋಧಕನಾಗಿದ್ದನು (ವಚನ 10). ತಾನು ಯೇಸುವಿನ ಜೊತೆಯಲ್ಲಿ ಮಾತಾಡಲು ಹೋಗಿದ್ದನ್ನು ಯಾರು ನೋಡಬಾರದೆಂದು ಇಚ್ಚಿಸಿ ನಿಕೊದೇಮನು ರಾತ್ರಿಯಲ್ಲಿ ಯೇಸುವಿನ ಬಳಿಗೆ ಬಂದನು, ಯೇಸು ಯೆಹೂದ್ಯರ ದೃಷ್ಟಿಯಲ್ಲಿ ಧರ್ಮಸಮ್ಮತ ಬೋಧಕನಾಗಿರಲಿಲ್ಲ. ಆದರೆ ನಿಕೊದೇಮನು ಯೇಸುವಿನ ಅದ್ಭುತಗಳನ್ನು ನೋಡಿದ್ದನು. ಯೇಸು ದೇವರ ಕಡೆಯಿಂದ ಬಂದ ಒಬ್ಬ ವಿಶೇಷ ಬೋಧಕನು ಅಥವಾ ರಬ್ಬಿ (ಯೆಹೂದ್ಯರಧಾರ್ಮಿಕ ಬೋಧಕ) ಎಂದು ಅವನಿಗೆ ಗೊತ್ತಿತ್ತು ಮತ್ತು ಆತನಿಂದ ಇನ್ನು ಹೆಚ್ಚಾಗಿ ಕಲಿಯಲು ಬಯಸಿದನು.

ಇತರ ಫರಿಸಾಯರ ಹಾಗೆ ನಿಕೊದೇಮನು ಯೇಸುವನ್ನು ವಿರೋಧಿಸಿದ್ದಿಲ್ಲ. ಇತರ ಯೆಹೂದ್ಯ ನಾಯಕರು ಮಾಡಿದಂತೆ ನಿಕೊದೇಮನು ಯೇಸುವನ್ನು ಮಾತಿನಲ್ಲಿ ಸಿಕ್ಕಿಸಲು ಪ್ರಯತ್ನಿಸಲಿಲ್ಲ (ಮತ್ತಾಯ 22:15) ಅನಂತರ ಆತನು ಹಿರೀ ಸಭೆಯಲ್ಲಿ ಯೇಸುವಿನ ಪಕ್ಷದಲ್ಲಿ ಮಾತನಾಡಿದನು (ಯೋಹಾನ 7:50-52) ಮತ್ತು ಯೇಸುವಿನ ಮರಣಿಸಿದ ನಂತರ ಶಿಷ್ಯರೆಲ್ಲರೂ ಪಲಾಯನ ಮಾಡಿದಾಗ ನಿಕೊದೇಮನೇ ಯೇಸುವಿನ ದೇಹವನ್ನು ಹೂಣಿಡಲು ಸಹಾಯ ಮಾಡಿದನು (ಯೋಹಾನ 19:39) ಪ್ರಾರಂಬದಲ್ಲಿ ನಿಕೊದೇಮನು ಯೇಸುವನ್ನು ಅಂಜಿಕೆ ಪಡುತ್ತಾ ಹಿಂಬಾಲಿಸುವವನಾಗಿದ್ದರೂ ಅಂತ್ಯದಲ್ಲಿ ಯೇಸುವಿನ ಹನ್ನೆರಡು ಶಿಷ್ಯರಿಗಿಂತಲೂ ಹೆಚ್ಚು ನಂಬಿಗಸ್ಥನೆಂದು ನಿರೂಪಿಸಿದನು.

3 ಒಬ್ಬ ಫರಿಸಾಯನಾಗಿ ನಿಕೊದೇಮನು ಒಬ್ಬ ಮನುಷ್ಯನು ಯೆಹೂದ್ಯ ಧರ್ಮಶಾಸ್ತ್ರ ಮತ್ತು ಹಿರಿಯರ ಸಂಪ್ರದಾಯಗಳನ್ನು ಶ್ರಧ್ಧೆಯಿಂದ ಪಾಲಿಸಿದರೆ ರಕ್ಷಣೆಯನ್ನು ಹೊಂದುವನೆಂದು ನಂಬಿದ್ದನು. ಅಂದರೆ ರಕ್ಷಣೆಯ ಧರ್ಮಶಾಸ್ತ್ರದ ಕಾರ್ಯಗಳಿಂದ ಬರುತ್ತದೆಂದು ಇತರ ಯೆಹೂದ್ಯರಹಾಗೆ ನಿಕೊದೇಮನೂ ನಂಬಿದನು. ನಿಕೊದೇಮನು ಪ್ರಾಮಾಣಿಕನಾಗಿ ದೇವರಿಗೆ ವಿಧೇಯನಾಗಲು ಮತ್ತು ಪರಲೋಕ ರಾಜ್ಯವನ್ನು [24] ಪ್ರವೇಶಿಸಲು ತವಕ ಪಡುತ್ತಿದ್ದಾನೆಂದು ಯೇಸುವಿಗೆ ಗೊತ್ತಿತ್ತು. ಆದುದರಿಂದ ಯೇಸು ತಕ್ಷಣವೇ ನಿಕೊದೇಮನು ತಿಳಿಯಲಿಚ್ಚಿಸಿದ್ದನ್ನೇ ಅಂದರೆ ಒಬ್ಬನು ಹೊಸದಾಗಿ ಹುಟ್ಟುವದರಿಂದ ಮಾತ್ರವೇ ಪರಲೋಕ ರಾಜ್ಯವನ್ನು ಪ್ರವೇಶಿಸಲು ಸಾದ್ಯ ಎಂಬದನ್ನು ಅವನಿಗೆ ತಿಳಿಸಿದನು.

ಈ ಒಂದು ಹೇಳಿಕೆಯಲ್ಲಿಯೇ ಯೇಸು ನಿಕೊದೇಮನಿಗೆ ಆತನು ಧರ್ಮಶಾಸ್ತ್ರದ ಕಾರ್ಯಗಳಿಂದ ಎಂದಿಗೂ ರಕ್ಷಣೆ ಹೊಂದಲಾರನೆಂದು ಹೇಳಿದನು. ಮಾನವನು ತನ್ನ ಸ್ವಭಾವರಲ್ಲಿ ಎಷ್ಟು ಪಾಪಮಯವಾಗಿರುವನೆಂದರೆ ಆತನು ನೂತನವಾಗದ ಹೊರತು ದೇವರು ಅವನನ್ನು ಪರಲೋಕದಲ್ಲಿ ಸ್ವೀಕರಿಸುವದೇ ಇಲ್ಲ, ನಿಕೊದೇಮನಿಗೆ ಅಗತ್ಯವಿದ್ದದ್ದು ನೂತನ ಧರ್ಮ ಶಾಸ್ತ್ರವಲ್ಲ ಆದರೆ ಒಂದು ನೂತನ ಹೃದಯವೇ ಬೇಕಾಗಿತ್ತು. ಆತನ ಅಂತರ್ಯವನ್ನು ಬದಲಾಯಿಸಿ ಅವನನ್ನು ದೇವರ ಮುಂಭಾಗದಲ್ಲಿ ಸ್ವೀಕರಿಸಲ್ಪಡುವವನಾಗಿ ಮಾಡುವಂತಹ ಒಂದು ಹೊಸ ಆತ್ಮೀಕ ಬಲದ ಅಗತ್ಯತೆ ಅವನಿಗಿತ್ತು. ಯೇಸು ಅವನಿಗೆ "ನೀನು ಮೇಲಿನಿಂದ ಹೊಸದಾಗಿ ಹುಟ್ಟಬೇಕು, ಒಬ್ಬನು ಹೊಸದಾಗಿ[25] ಹುಟ್ಟದಿದ್ದರೆ ದೇವರ ರಾಜ್ಯವನ್ನು ಕಾಣಲಾರನು"[26] ಎಂದು ಹೇಳಿದನು. ಮನುಷ್ಯನು ತನ್ನ ಸ್ವಂತ ಪ್ರಯತ್ನದಿಂದ ಪರಲೋಕವನ್ನು ಪ್ರವೇಶಿಸಲಾರನು, ಅವನು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ನೂತನ ಜೀವವನ್ನು ಪಡೆಯುವದರಿಂದ ಮಾತ್ರವೇ ಪರಲೋಕವನ್ನು ಪ್ರವೇಶಿಸಬಲ್ಲನು (ಗಲಾತ್ಯ 2:15-16, ಎಫೇಸ 2:8-9 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ದೇವರ ರಾಜ್ಯವೆಂದರೆ ಪರಲೋಕ ಮತ್ತು ಭೂಲೋಕಗಳೆರಡಲ್ಲಿಯೂ ದೇವರ ಆಳಿಕೆ ಎಂದರ್ಥವಾಗಿದೆ. ಒಬ್ಬ ವ್ಯಕ್ತಿಯು ಕ್ರಿಸ್ತನಲ್ಲಿ ನಂಬಿಕೆಯಿಟ್ಟು ಅವನ ಅಥವಾ ಅವಳ ಜೀವಿತವನ್ನು ದೇವರಿಗೆ ನೀಡುವಾಗ ಆ ವ್ಯಕ್ತಿಯು "ದೇವರ

ರಾಜ್ಯ" ವನ್ನು ಪ್ರವೇಶಿಸುತ್ತಾನೆ. ಬೇರೆ ಮಾತುಗಳಲ್ಲಿ ಹೇಳಬೇಕಾದರೆ ನಾವು ಕ್ರಿಸ್ತನಲ್ಲಿ ನಿಜವಾದ ನಂಬಿಕೆಯನ್ನು ಇಟ್ಟ ಕೂಡಲೇ ನಾವು ದೇವರ ರಾಜ್ಯದೊಳಗೆ ಹೊಸದಾಗಿ ಹುಟ್ಟಿದವರಾಗುತ್ತೇವೆ. ದೇವರರಾಜ್ಯವು ಒಂದು ಆತ್ಮೀಕ ರಾಜ್ಯವಾಗಿದೆ. ಆದುದರಿಂದ ನಮ್ಮ ದೇಹಗಳು ಸತ್ತರೂ ನಮ್ಮ ಆತ್ಮಗಳು ಆತನ ರಾಜ್ಯದಲ್ಲಿ ನಿರಂತರವಾಗಿ ಜೀವಿಸುತ್ತವೆ "ಹೊಸದಾಗಿ ಹುಟ್ಟಿರುವ" ವ್ಯಕ್ತಿಯು ಎಂದಿಗೂ ಸಾಯುವದಿಲ್ಲ. ದೇವರ ರಾಜ್ಯವನ್ನು ಪ್ರವೇಶಿಸುವದು ಎಂದರೆ ನಿತ್ಯಜೀವವನ್ನು ಪಡೆಯುವದೇ ಆಗಿದೆ (ವಚನ 15) ಈ ನಿತ್ಯಜೀವವು ನಾವು ಯೇಸುವನ್ನು ನಂಬಿದ ಕ್ಷಣದಿಂದಲೇ ಪ್ರಾರಂಭವಾಗುತ್ತದೆ ಮತ್ತು ಎಂದಿಗೂ ಅಂತ್ಯಗೊಳ್ಳುವದಿಲ್ಲ (1ಪೇತ್ರ 1:23 ಮತ್ತು ವ್ಯಾಖ್ಯಾನ ನೋಡಿರಿ).

4 "ಒಬ್ಬ ಮನುಷ್ಯನು ಹೊಸದಾಗಿ ಹುಟ್ಟುವದು ಹೇಗೆ?" ಎಂದು ನಿಕೊದೇಮನ ಕೇಳಿದನು. ಯಾವನೂ ಸಹ ತಿರಿಗಿ ತನ್ನ ತಾಯಿ ಗರ್ಭವನ್ನು ಸೇರಲಾರನು. ಆದುದರಿಂದ ದೈಹಿಕವಾಗಿ ಹೊಸ ಹುಟ್ಟು ಸಾದ್ಯವಿಲ್ಲವಾದ್ದರಿಂದ ಹೇಗೆ ಒಬ್ಬನು ನೂತನ ಹೃದಯ ಮತ್ತು ಸ್ವಭಾವವನ್ನು ಪಡೆಯಲು ಸಾದ್ಯ? ನಿಕೊದೇಮನಿಗೆ ಅದು ಅಸಾದ್ಯವಾಗಿ ತೋರಿತು.

5 ಆಗ ಯೇಸು ವಚನ ೩ ರಲ್ಲಿ ತಾನು ಹೇಳಿದ್ದನ್ನೇ ಪು ನರಾವರ್ತಿಸುತ್ತಾನೆ (ವಚನ ಮತ್ತು ವ್ಯಾಖ್ಯಾನ ನೋಡಿರಿ) ಈ ಸಾರಿ ದೇವರ ರಾಜ್ಯಕ್ಕೆ ಸೇರಬೇಕಾದರೆ ಒಬ್ಬನು ನೀರಿನಿಂದಲೂ, ಆತ್ಮನಿಂದಲೂ ಹುಟ್ಟಬೇಕು ಎಂದು ಹೆಚ್ಚಿಗೆ ಸೇರಿಸುತ್ತಾನೆ.

ನೀರು ಪವಿತ್ರಗೊಳಿಸುವಿಕೆಯ ಮತ್ತು ದೀಕ್ಸಾಸ್ನಾನದ ಒಂದು ಸಂಕೇತವಾಗಿದೆ. ದೀಕ್ಸಾಸ್ನಾನವು ನಮ್ಮ ಪಾಪವು ತೊಳೆಯಲ್ಪಡುವಿಕೆಯ ಒಂದು ಗುರುತಾಗಿರುತ್ತದೆ. ಒಬ್ಬ ವ್ಯಕ್ತಿಯ ಪಾಪವು ತೊಳೆಯಲ್ಪಡಬೇಕಾದರೆ ಆತನು ಮೊದಲು ಪಸ್ಚಾತಾಪ ಪಡಬೇಕು (ದೇವರ ಕಡೆಗೆ ತಿರಿಗಿಕೊಳ್ಳಬೇಕು) ಈ ಕಾರಣದಿಂದಲೇ ಸ್ನಾನಿಕನಾದ ಯೋಹಾನ ಮತ್ತು ಯೇಸು ಇಬ್ಬರೂ ಪಾಪಪರಿಹಾರಕ್ಕಾಗಿ ದೇವರ ಕಡೆಗೆ ತಿರಿಗಿಕೊಂಡು ದೀಕ್ಸಾಸ್ನಾನ ಮಾಡಿಸಿಕೊಳ್ಳಬೇಕೆಂದು ಬೋಧಿಸಿದರು (ಮಾರ್ಕ 1:4, 14-15 ಮತ್ತು ವ್ಯಾಖ್ಯಾನ ನೋಡಿರಿ).

ಆದುದರಿಂದ ಒಬ್ಬನು ಹೊಸದಾಗಿ ಹುಟ್ಟಬೇಕಾದರೆ ಮೊದಲು ಆತನು ದೇವರ ಕಡೆಗೆ ತಿರಿಗಿಕೊಂಡು ತನ್ನ ಪಾಪಗಳಿಗಾಗಿ ಕ್ಷಮಾಪಣೆಯನ್ನು ಪಡೆದುಕೊಳ್ಳಬೇಕು. ಅಂದರೆ ತನ್ನ ಪಾಪಗಳನ್ನು ತೊಳೆದುಕೊಂಡವನಾಗಿರಬೇಕು. ಇದಕ್ಕೆ ನೀರಿನಿಂದ ದೀಕ್ಸಾಸ್ನಾನವೇ ಗುರುತಾಗಿರುತ್ತದೆ (ಸಾಮಾನ್ಯ ಬರಹಃ ನೀರಿನ ದೀಕ್ಸಾಸ್ನಾನ ನೋಡಿರಿ) ಹೀಗೆ, ನಾವು ಹೊಸದಾಗಿ ಹುಟ್ಟಿದವರಾಗಲು ಮೊದಲು ನಾವು ತೊಳೆಯಲ್ಪಟ್ಟವರೂ, ದೀಕ್ಸಾಸ್ನಾನ ಹೊಂದಿದವರೂ ಪವಿತ್ರಗೊಳಿಸಲ್ಪಟ್ಟವರೂ ಆಗಿರಬೇಕು. ಆಗ ನಾವು ಎರಡನೆಯ ಹೆಜ್ಜೆಗೆ ಸಿದ್ದರಾಗುತ್ತೇವೆ: ಆತ್ಮನಿಂದ ಹೊಸದಾಗಿ ಹುಟ್ಟುವದು.

ಆತ್ಮವು ದೇವರ ಪವಿತ್ರಾತ್ಮನೇ ಆಗಿದ್ದಾನೆ ಯೋಹಾನ 14:16 ಮತ್ತು ವ್ಯಾಖ್ಯಾನ ನೋಡಿರಿ) ಅದು ಸ್ವತ: ದೇವರೇ ಆಗಿರುತ್ತಾನೆ. ಯಾವಾಗ ಒಬ್ಬ ವ್ಯಕ್ತಿಯು ದೇವರ ಕಡೆಗೆ ತಿರಿಗಿಕೊಂಡು ಕ್ರಿಸ್ತನಲ್ಲಿ ನಂಬಿಕೆಯಿಡುವಾಗ ದೇವರು ಅವ್ಯಕ್ತಿಯನ್ನು ಪ್ರವೇಶಿಸಿ ಅವನಿಗೆ ನೂತನವಾದ ಆತ್ಮೀಕ ಜೀವವನ್ನು ಕೊಡುತ್ತಾನೆ. ಆಗ ಆ ವ್ಯಕ್ತಿಯು ಆತ್ಮನಿಂದ ಹೊಸದಾಗಿ ಹುಟ್ಟಿದವನಾಗುತ್ತಾನೆ. ಈ ನೂತವಾದ ಆತ್ಮೀಕ ಜೀವವು ನಿಜ ಜೀವವೂ, ನಿತ್ಯ ಜೀವವೂ, ದೇವರ ರಾಜ್ಯದೊಳಗಿನ ಜೀವವೂ ಆಗಿದೆ. ಒಬ್ಬ ಸ್ತ್ರೀಯಿಂದ ಹುಟ್ಟದೆ ಶಾರೀರಿಕ ಜೀವವು ಅಸಾಧ್ಯವಾಗಿರುವ ಪ್ರಕಾರವೇ ಆತ್ಮನಿಂದ ಹುಟ್ಟದ ಹೊರತು ಆತ್ಮೀಕ ಜೀವವೂ ಅಸಾದ್ಯವಾಗಿದೆ.

ನಾವು ಆತ್ಮನಿಂದ ಹೊಸದಾಗಿ ಹುಟ್ಟಿದಾಗ ಮಾತ್ರವೇ ನಮ್ಮ ಜೀವಿತಗಳು ದೇವರಿಂದ ಸ್ವೀಕೃತವಾಗುತ್ತವೆ. ಪವಿತ್ರಾತ್ಮನ ಬಲದ ಮೂಲಕವಾಗಿ ಮಾತ್ರವೇ ನಾವು ನಮ್ಮ ಜೀವಿತದಲ್ಲಿ ದೇವರ ಆಜ್ಞೆಗಳಿಗೆ ವಿಧೇಯರಾಗಿ ಆತನಿಗೆ ಮೆಚ್ಚಿಕೆಯಾದ ಜೀವಿತವನ್ನು ನಡೆಸಲು ಸಾದ್ಯವಾಗುವದು (ಯೆಹೆಜ್ಜೇಲ 36:25-27) ನಿಕೊದೇಮನು ಯೆಸುವಿನ ಈ ಮಾತುಗಳನ್ನು ಕೇಳಿದಾಗ ಏನು ಯೋಚನೆ ಮಾಡಿದನೆಂದು ಊಹಿಸಿಕೊಳ್ಳಿರಿ. ನಿಕೊದೇಮನು ಒಬ್ಬ ಅನುಭವಸ್ಥನೂ, ಆತನು ಕಟ್ಟು ನಿಟ್ಟಿನ ಯೆಹೂದ್ಯನಾಗಿದ್ದು ತನ್ನ ನೀತಿವಂತನೆಂದು ಪರಿಗಣಿಸಿಕೊಂಡಿದ್ದನು. ಆತನು ದೇವರನ್ನು ಘನಪಡಿಸುತ್ತಿದ್ದನು. ಆದರೆ ಪರಿಗಣಿಸಿಕೊಂಡಿದ್ದನು. ಆತನು ದೇವರನ್ನು ಘನಪಡಿಸುತ್ತಿದ್ದನು. ಆದರೆ ಯೇಸು ಅವನಿಗೆ "ನೀನು ಇರುವಂಥ ರೀತಿಯಲ್ಲಿಯೇ ದೇವರ ರಾಜ್ಯವನ್ನು ನೀನು ಪ್ರವೇಶಿಸಲಾರಿ".

ನೀನು ಇನ್ನೂ ನಿನ್ನ ಪಾಪಮಯ ಸ್ವಭಾವದ ಹತೋಟಿಯಲ್ಲಿರುವಿ. ನೀನು ಪಸ್ಚಾತಾಪಪಟ್ಟು, ತೊಳೆಯಲ್ಪಡಬೇಕು ಮತ್ತು ಸಾಯಬೇಕಾಗಿರುತ್ತದೆ ಮತ್ತು ನಂತರ ನೀನು ದೇವರ ಪವಿತ್ರಾತ್ಮನ ಬಲದ ಮೂಲಕ ಆತ್ಮೀಕವಾಗಿ ಸಂಪೂರ್ಣ ಹೊಸದಾಗಿ ಹುಟ್ಟಬೇಕು. ನೀನು ಸಂಪೂರ್ಣವಾಗಿ ಬದಲಾಗಬೇಕು – "ನಿನ್ನ ತಾಯಿಯ ಗರ್ಭದಿಂದ ಎರಡನೆಯ ಸಾರಿ ಹುಟ್ಟುವಂತೆಯೇ ಹೊಸದಾಗಿಹುಟ್ಟಬೇಕು" ಎಂದು ಹೇಳಿದನು.

ಈ ದಿನವೂ ಯೇಸು ಪ್ರತಿಯೊಬ್ಬ ಪು ರುಷ ಮತ್ತು ಸ್ತ್ರೀಗೆ ಇದೇ ಸಂಗತಿಯನ್ನು ಹೇಳುತ್ತಾನೆ. ಯಾವನೂ ಸಹ ಹುಟ್ಟಿನಿಂದಲೇ ಕ್ರೈಸ್ತನಲ್ಲ. ಯಾವನೂ ಸಹ ಆತನ ತಂದೆ ತಾಯಿಗಳೂ, ಅಜ್ಜ ಅಜ್ಜಿಯರು ಕ್ರೈಸ್ತರೆಂಬ ಕಾರಣಕ್ಕಾಗಿ ಕ್ರೈಸ್ತನಾಗುವದಿಲ್ಲ. ಪ್ರತಿಯೊಬ್ಬ ಪು ರುಷ ಮತ್ತು ಸ್ತ್ರೀಯು ಹೊಸದಾಗಿ ಹುಟ್ಟಲೇಬೇಕು ಮತ್ತು ಅದು ಯಾವದೇ ವ್ಯಕ್ತಿಯ ಜೀವಿತದಲ್ಲಿ ಎಂದೆಂದೂ ಸಂಭವಿಸುವ ಒಂದು ಅತೀ ಶ್ರೇಷ್ಠವಾದ ಮತ್ತು ಬಹು ಆಶ್ಚರ್ಯಕರ ಸಂಗತಿಯಾಗಿದೆ.

ಇನ್ನೊಂದು ಕೊನೆಯ ಪ್ರಶ್ನೆಯಿರುತ್ತದೆ: ನಾವು ಈ ರೀತಿಯಲ್ಲಿ ಹೇಗೆ ಹೊಸದಾಗಿ ಹುಟ್ಟಿದವರಾಗಬಹುದು? ಒಂದೇ ಒಂದು ಉತ್ತರವೇನಂದರೆ: ನಂಬಿಕೆಯ ಮೂಲಕವೇ ನಾವು ನಮ್ಮ ಸ್ವಪ್ರಯತ್ನಗಳಿಂದ ಶಾರೀರಿಕವಾಗಿ ಹೇಗೆ ಹುಟ್ಟಲಿಲ್ಲವೋ ಅದೇರೀತಿ ನಮ್ಮ ಸ್ವಪ್ರಯತ್ನಗಳಿಂದ ಆತ್ಮೀಕವಾಗಿ ಪು ನ: ಹುಟ್ಟಲು ಸಾದ್ಯವಿಲ್ಲ. ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ಆತ್ಮೀಕವಾಗಿ ಪು ನ: ಹುಟ್ಟಬಲ್ಲೆವು . ಈ ಕಾರಣಕ್ಕಾಗಿಯೇ ಯೇಸು ಭೂಮಿಗೆ

ಬಂದನು ಮತ್ತು ನಮ್ಮ ಪಾಪಗಳನ್ನು ತೊಳೆದು ಪವಿತ್ರಾತ್ಮನ ಮೂಲಕವಾಗಿ ನಮಗೆ ನೂತನ ಜೀವನವನ್ನು ನೀಡುವದಕ್ಕಾಗಿ ಮರಣಿಸಿದನು (ಯೋಹಾನ 1:4 ಮತ್ತು ವ್ಯಾಖ್ಯಾನ ನೋಡಿರಿ). ಆತನು ನಮಗೆ ನಿತ್ಯ ಜೀವವನ್ನು ಕೊಡುವದಕ್ಕೆ ಬಂದನು. ಆತನು ಲೋಕವನ್ನು ರಕ್ಷಿಸಲು ಬಂದನು (ವಚನ 17) ಆದುದರಿಂದ ಆತನಲ್ಲಿ ನಂಬಿಕೆಯಿಡುವ ಯಾವನಾದರೂ ದಂಡನೆಗೆ ಗುರಿಯಾಗುವದಿಲ್ಲ (ವಚನ 18) ಆದರೆ ನಿತ್ಯ ಜೀವವನ್ನು ಹೊಂದಿದವನಾಗಿದ್ದಾನೆ (ವಚನ 36).

ಯೇಸು ಲೋಕದ ರಕ್ಷಕನಾಗಿದ್ದಾನೆ. ಆತನು ಕರ್ತನು, ಆತನು ಸ್ವತ: ದೇವರೇ ಆಗಿದ್ದಾನೆ. ನಾವು ನಮ್ಮ ಪಾಪಗಳಿಂದ ತೊಳೆಯಲ್ಪಟ್ಟವರಾಗಿ ಮೇಲಿನಿಂದ ನೂತನ ಜೀವವನ್ನು ಪಡೆದುಕೊಳ್ಳುವವರಾಗುವಂತೆ ನಂಬಿಕೆಯೊಂದಿಗೆ ಆತನ ಬಳಿಗೆ ಬರೋಣ. ಈ ರೀತಿಯಾಗಿ ನಾವು ದೇವರ ರಾಜ್ಯವನ್ನು ಪ್ರವೇಶಿಸಲು ಶಕ್ತರಾಗುವೆವು.

**6-7** ನಾವು ನಮ್ಮ ತಾಯಿಯರಿಂದ ಜನಿಸುವಾಗ ದೇಹವಾಗಿ ಜನಿಸುತ್ತೇವೆ. ನಾವು ಆತ್ಮದಿಂದ ಹುಟ್ಟದ ಹೊರತಾಗಿ ಆತ್ಮೀಕವಾಗಲು ಸಾಧ್ಯವಿಲ್ಲ ನಮಗೆ ಜನ್ಮ ನೀಡುವಂಥದ್ದರ ಮೇಲೆಯೇ ನಮ್ಮ ಸ್ವಭಾವವು ಆಧಾರವಾಗಿರುತ್ತದೆ. ನಾವು ಪಾಪಮಯ ಪ್ರಪಂಚದ ಪ್ರಜೆಗಳಾಗಿ ಹುಟ್ಟಿದವರಾಗಿದ್ದೇವೆ. ದೇವರ ರಾಜ್ಯದ ಪ್ರಜೆಗಳಾಗಬೇಕಾದರೆ ನಮ್ಮ ಪಾಪಸ್ವಭಾವವು ಸಾಯಬೇಕು ಮತ್ತು ನಾವು ಆತ್ಮೀಕವಾಗಿ ಹೊಸದಾಗಿ ಹುಟ್ಟಬೇಕು...ರಕ್ತವೂ, ಮಾಂಸವೂ ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು (1 ಕೊರಿಂಥ 15:50) ನಿಕೊದೇಮನೇ ಇದಕ್ಕೆ ಆಶ್ಚರ್ಯ ಪಡಬೇಡ.

**8** ಆತ್ಮದಿಂದ ಹುಟ್ಟಿದ ವ್ಯಕ್ತಿಯು ಗಾಳಿ ಇದ್ದಂತೆ ನಾವು ಗಾಳಿಯ ಸಪ್ಪಳವನ್ನು ಕೇಳಬಹುದು ಆದರೆ ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ ಎಂದು ಹೇಳಲಾರೆವು. ಅದೇ ರೀತಿಯಲ್ಲಿ ಪ್ರಾಕೃತ ಲೌಕಿಕ ಜನರು[27] ಆತ್ಮನಿಂದ ಹುಟ್ಟಿದ ವ್ಯಕ್ತಿಯನ್ನು ನೋಡಬಲ್ಲರು, ಮತ್ತು ಆಲಿಸಬಲ್ಲರು ಆದರೆ ಆತನ ಆತ್ಮೀಕ ಜೀವನ ಮತ್ತು ಬಲ ಎಲ್ಲಿಂದ ಬಂದಿರುತ್ತವೆಂಬುದು ಅವರಿಗೆ ತಿಳಿಯುವದಿಲ್ಲ. ಆತ್ಮದಿಂದ ಹುಟ್ಟದವನನ್ನು ಹುರದುಂಭಿಸುವ ಸಂಗತಿಯಾವದೆಂದು ಅವರು ತಿಳಿಯಲಾರರು. ಮತ್ತು ಆತ್ಮದಿಂದ ಹುಟ್ಟಿದ ವ್ಯಕ್ತಿಯ ಗುರಿ ಮತ್ತು ತಲುಪುವ ಸ್ಥಳ ಯಾವದೆಂದು ಅವರು ಅರ್ಥಮಾಡಿಕೊಳ್ಳಲಾರರು.

**9-10** ನಿಕೊದೇಮನಿಗೆ ಈಗಲೂ ಯೇಸು ಏನು ಹೇಳುತ್ತಿದ್ದಾನೆಂಬದು ಪೂರ್ತಿಯಾಗಿ ಅರ್ಥವಾಗಲಿಲ್ಲ. ಯೇಸು ಅವನಿಗೆ "ನಿನಗೆ ಇದು ತಿಳಿಯುವದಿಲ್ಲವೋ? ನಿನಗೆ ದೇವರ ಕುರಿತು ಗೊತ್ತಿದೆಯೆಂದು ಹೇಳುತ್ತಿ. ನೀನು ದೇವರ ಬಳಿಗೆ ನಿನ್ನ ಸ್ವಶಕ್ತಿಯಿಂದ ಬರಲಾರಿಯೆಂಬದನ್ನು ನೀನು ತಿಳಿಯಬೇಕು" ಎಂದು ಹೇಳಿದನು.

**11** ಯೇಸು ನಿಕೊದೇಮನಿಗೆ "ನೀನು ದೇವರ ಕುರಿತು ಯೋಚಿಸುವದನ್ನು ಮಾತ್ರವೇ ಹೇಳುತ್ತಿ. ಆದರೆ ನಾವು[28] ನಮಗೆ ತಿಳಿದದ್ದನ್ನು ಹೇಳುತ್ತೇವೆ. ನಾವು ಈ ಆತ್ಮೀಕ ಸಂಗತಿಗಳನ್ನು ನೋಡಿದ್ದೇವೆ ಮತ್ತು ಅನುಭವಿಸಿದ್ದೇವೆ. ನಾವು ಕೇವಲ ಈ ಸಂಗತಿಗಳ ಬಗ್ಗೆ ಅಭಿಪ್ರಾಯಗಳನ್ನು ಮಾತ್ರವೇ ಹೊಂದಿಲ್ಲ, ನಮಗೆ ನಿಖರವಾದ ತಿಳುವಳಿಕೆಯಿರುತ್ತದೆ" ಎಂದು ಹೇಳಿದನು (ಯೋಹಾನ 1:18, 8:26 ನೋಡಿರಿ).

**12** ಯೇಸು ನಿಕೊದೇಮನೊಂದಿಗೆ ಜನನ, ದೇಹ, ಗಾಳಿಯಂತಹ ಭೂಲೋಕದ ಸಂಗತಿಗಳ ಕುರಿತಾಗಿಮಾತಾಡಿದನು. ಒಂದು ವೇಳೆ ನಿಕೊದೇಮನು ಇಂತಹ ಭೂಲೋಕದ ದೃಷ್ಟಾಂತಗಳನ್ನು ಅರ್ಥಮಾಡಿಕೊಳ್ಳದಿರುವದಾದರೆ ಆತನು ಪರಲೋಕದ ಕಾರ್ಯಗಳನ್ನು ಅಂದರೆ ಪೂರ್ಣ ಆತ್ಮೀಕ ಬೋಧನೆಯನ್ನು ಹೇಗೆ ಅರ್ಥಮಾಡಿಕೊಂಡಾನು?

**13** ಯೇಸು ಮಾತ್ರವೆ ಪರಲೋಕ ಕಾರ್ಯಗಳ ಬಗ್ಗೆ ಮಾತನಾಡಬಲ್ಲನು ಯಾಕೆಂದರೆ ಆತನೊಬ್ಬನೆ ಪರಲೋಕದಿಂದ ಭೂಮಿಗೆ ಇಳಿದು ಬಂದವನಾಗಿದ್ದಾನೆ (ಜ್ಞಾನೋಕ್ತಿ 30:4) ಆತನಿಗೆ ಮಾತ್ರವೇ ಪರಲೋಕ ಸಂಗತಿಗಳ ನಿಜಜ್ಞಾನವು ಇರುತ್ತದೆ.

ಜನರು ನಂಬಿಕೆಯಮೂಲಕ ಆತ್ಮೀಕವಾಗಿ ಹೊಸಜನ್ಮಪಡೆಯುವದಾದರೆ ಅವರು ದೇವರ ರಾಜ್ಯವನ್ನು ಅಂದರೆ ಪರಲೋಕರಾಜ್ಯವನ್ನು ಪ್ರವೇಶಿಸುವವರು. ಆದರೆ ಅವರು ಪರಲೋಕವನ್ನೇ ಪ್ರವೇಶಿಸುವದಿಲ್ಲ. ನಾವು "ಪರಲೋಕ" ಮತ್ತು "ಪರಲೋಕ ರಾಜ್ಯ" ಇವುಗಳ ನಡುವೆ ವ್ಯತ್ಯಾಸ ವಿದೆಯೆಂಬದನ್ನು ಅರ್ಥಮಾಡಿಕೊಳ್ಳಬೇಕು. ನಾವು ಕ್ರಿಸ್ತನಲ್ಲಿ ನಂಬಿಕೆಯಿಟ್ಟ ಕ್ಷಣದಲ್ಲಿಯೇ ಪರಲೋಕರಾಜ್ಯವನ್ನು ಪ್ರವೇಸಿಸುತ್ತೇವೆ. ನಾವು ಸ್ವತ: ಪರಲೋಕವನ್ನು ಮರಣಾನಂತರ ಸೇರುತ್ತೇವೆ ಆದುದರಿಂದ "ಯಾರೂ ಎಂದೂ ಪರಲೋಕಕ್ಕೆ ಏರಿ ಹೋದವರಲ್ಲ" ಎಂದು ಯೇಸು ಹೇಳಿದಾಗ ಆತನು ಜೀವಿಂತ ಜನರ ಬಗ್ಗೆ ಹೇಳುತ್ತಿದ್ದಾನೆ. ಯೇಸು ಒಬ್ಬನೆ ಪರಲೋಕ ನೋಡಿದ ಸಜೀವವ್ಯಕ್ತಿಯಾಗಿದ್ದನು.

**14** ಅರಣ್ಯಕಾಂಡ 21:4-9ರ ಪ್ರಕಾರವಾಗಿ ದೇವರು ಯೆಹೂದ್ಯರ ಮಧ್ಯದೊಳಗೆ ವಿಷಕಾರಿ ಸರ್ಪಗಳನ್ನು ಕಳುಹಿಸಿದನು, ಯಾಕೆಂದರೆ ಅವರು ಆತನ ವಿರುದ್ಧವಾಗಿ ಗುಣುಗುಟ್ಟುತ್ತಿದ್ದರು. ಆಗ ಯೆಹೂದ್ಯರು ಪಶ್ಚಾತಾಪ ಪಟ್ಟರು. ಆದುದರಿಂದ ದೇವರು ಮೋಶೆಗೆ ಒಂದು ತಾಮ್ರದ ಹಾವನ್ನು ಜನರೆಲ್ಲರೂ ನೋಡುವಂತೆ ಮಾಡಿ ಕಂಬದ ಮೇಲಿಡು ಎಂದು ಹೇಳಿದನು. ಆ ತಾಮ್ರದ ಹಾವನ್ನು ನೋಡಿದವರೆಲ್ಲರೂ ವಿಷಕಾರಿಹಾವುಗಳಿಂದ ಹಾನಿಗೊಳಗಾಗಲಿಲ್ಲ.

ಆದುದರಿದ ಮೋಶೆಯು ತಾಮ್ರದ ಸರ್ಪವನ್ನು ಎತ್ತರದಲ್ಲಿಟ್ಟ ಹಾಗೆಯೇ ಮನುಷ್ಯಕುಮಾರನು (ಕ್ರಿಸ್ತನು) ಎತ್ತರದಲ್ಲಿಡಲ್ಪಡಬೇಕು ಇದಕ್ಕೆ ಎರಡು ಅರ್ಥಗಳಿರುತ್ತದೆ. ಮೊದಲನೆಯದಾಗಿ, ಯೇಸು ಸಿಲುಬೆಯ ಮೇಲೆ ಎತ್ತರದಲ್ಲಿಡಲ್ಪಡಬೇಕು. ಅಂದರೆ ಯೇಸು ಸಾಯಬೇಕು (ಯೋಹಾನ 12:32-33). ಎರಡನೆಯದಾಗಿ, ಯೇಸು ಪರಲೋಕದೊಳಕ್ಕೆ ಎತ್ತಲ್ಪಡಬೇಕು. ಅಂದರೆ ಆತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟು ದೇವರ ಬಲಪಾರ್ಶ್ವಕ್ಕೆ ಎತ್ತಲ್ಪಡಬೇಕು (ಎಫೆಸ 1:20-21, ಫಿಲಿಪ್ಪಿ 2:9-11). ಹೀಗೆ, ಯೇಸು ತನ್ನ ಮರಣ, ಪುನರುತ್ಥಾನ ಮತ್ತು ಆರೋಹಣದ ಮೂಲಕವಾಗಿ

ಮರಣ ಹಾಗು ಸೈತಾನನ ಮೇಲೆ ಸಂಪರ್ಣ ಜಯವನ್ನು ಹೊಂದಿರುತ್ತಾನೆ. ಆದುದರಿಂದ, ತನ್ನಲ್ಲಿ ನಂಬಿಕೆಯಿಡುವ ಎಲ್ಲರಿಗೂ ನಿತ್ಯಜೀವವನ್ನು ಕೊಡಲು ಶಕ್ತನಾಗಿದ್ದಾನೆ (ಇಬ್ರಿಯ 2:14-15 ನೋಡಿರಿ).

ಕ್ರಿಸ್ತನು ಪರಲೋಕಕ್ಕೆ ಎತ್ತಲ್ಪಡಬೇಕಾದರೆ ಮೊದಲು ಆತನು ಶಿಲುಬೆಯ ಮೇಲೆ ಎತ್ತಲ್ಪಡಬೇಕು. ಪರಲೋಕದಲ್ಲಿ ಮಹಿಮೆ ಹೊಂದಲು ಯೇಸು ಮೊದಲು ಭೂಮಿಯಲ್ಲಿ ಸಾಯಬೇಕಾಯಿತು. ಯೇಸುವಿನ ವಿಷಯದಲ್ಲಿ ಹಾಗಿರುವದಾದರೆ ಪ್ರತಿಯೊಬ್ಬ ವಿಶ್ವಾಸಿಯ ವಿಷಯದಲ್ಲಿಯೂ ಅದು ಅಷ್ಟೇ ಸತ್ಯವಾಗಿದೆ. ನಮ್ಮೆಲ್ಲರಿಗೂ ಪರಲೋಕದ ಮಾರ್ಗವೂ ಶಿಲುಬೆಯ ಮಾರ್ಗಮೂಲಕವೇ ಹಾದು ಹೋಗುತ್ತದೆ (ಮಾರ್ಕ 8:34-35).

**15** ಯೇಸುವಿನ ಮರಣದ ಉದ್ದೇಶವು ನಾವು ಜೀವವನ್ನು ನಿತ್ಯಜೀವವನ್ನು ಪಡೆಯಬೇಕೆಂಬದಕ್ಕಾಗಿಯೇ ಆಗಿತ್ತು. ನಾವು ಇನ್ನೂ ಪಾಪಿಗಳಾಗಿರುವಾಗಲೇ ಕ್ರಿಸ್ತನು ನಮಗಾಗಿ ಸತ್ತನು (ರೋಮಾಯ 5:8) ಆತನು ಬಹುಜನರಿಗಾಗಿ ತನ್ನ ಪ್ರಾಣವನ್ನು ಈಡು ಕೊಡುವದಕ್ಕೆ ಬಂದನು (ಮಾರ್ಕ 10:45 ಮತ್ತು ವ್ಯಾಖ್ಯಾನ ನೋಡಿರಿ). ನಾವು ಜೀವಿಸಬೇಕೆಂದು ಕ್ರಿಸ್ತನು ಸತ್ತನು.

ಕ್ರಿಸ್ತನು ಯಾರಿಗಾಗಿ ಪ್ರಾಣಕೊಟ್ಟನು? ಆತನಲ್ಲಿ ನಂಬಿಕೆಯಿಡುವ ಎಲ್ಲರಿಗಾಗಿಯೂ ಪ್ರಾಣಕೊಟ್ಟನು "ನಂಬುವದು" ಎಂದರೆ ಆಳವಾದ ಅರ್ಥವಿರುತ್ತದೆ. ಇದರರ್ಥವೇನೆಂದರೆ ಸಂಪೂರ್ಣವಾಗಿಯೂ, ಆಳವಾಗಿಯೂ ನಂಬುವದೇ. ಸಂಪೂರ್ಣವಾಗಿ ಕ್ರಿಸ್ತನ ಮೇಲೆಯೇ ಆತುಕೊಳ್ಳುವದು, ಆತನನ್ನೇ ವಿಶ್ವಾಸಿಸಬೇಕು, ಹೊರತು ನಮ್ಮ ಮೇಲೆ ವಿಶ್ವಾಸಿಸಿಕೊಳ್ಳುವದಲ್ಲ. ಎಲ್ಲಕ್ಕಿಂತ ಮೇಲಾಗಿ ನಂಬುವದೆಂದರೆ ಕ್ರಿಸ್ತನಿಗೆ ವಿಧೇಯರಾಗಿ, ಆತನನ್ನು ಪ್ರೀತಿಸುವದೇ ಆಗಿದೆ. ನಮ್ಮ ನಂಬಿಕೆಯು ಕ್ರಿಸ್ತನಿಗೆ ವಿಧೇಯರಾಗುವದರಲ್ಲಿ ಫಲಿತಗೊಳ್ಳದಿದ್ದರೆ ಅದು ಮಿಥ್ಯನಂಬಿಕೆಯಾಗಿದೆ (ಮತ್ತಾಯ 7:21, ಗಲಾತ್ಯ 5:6, ಯಾಕೋಬ 2:14-17 ಮತ್ತು ವ್ಯಾಖ್ಯಾನ ನೋಡಿರಿ) ಕ್ರಿಸ್ತನು ಯಾವ ರೀತಿ ಜೀವವನ್ನು ಕೊಟ್ಟನು? ಆತನು ನಿತ್ಯಜೀವವನ್ನು ಕೊಡುತ್ತಾನೆ. ನಿತ್ಯಜೀವವು ಕೇವಲ ಸದಾಕಾಲ ಬೆಳೆಯುವಂತದ್ದು ಮಾತ್ರವೇ ಅಲ್ಲ. ಇದು ದೇವರೊಂದಿಗಿನ ಜೀವಿತವಾಗಿದೆ. ಅದು ಸಂತೋಷ, ಸಮಾಧಾನ, ನೀತಿಯ ಒಂದು ಜೀವನವಾಗಿದೆ. ಇದು ಕಣ್ಣೀರು, ದುಃಖ ಅಥವಾ ನೋವುಗಳಿಲ್ಲದ ಜೀವನವಾಗಿದೆ (ಪ್ರಕಟಣೆ 21:1-4 ನೋಡಿರಿ) ಇದು ಯೇಸುವಿನಲ್ಲಿ ನಂಬಿಕೆಯಿಡುವ ಎಲ್ಲರಿಗೂ ದೊರೆಯುವ ಪ್ರತಿಫಲವೂ ಪರಲೋಕಬಾಧ್ಯತೆಯೂ ಆಗಿದೆ. ಇದು ನಮ್ಮರಕ್ಷಣೆಯಾಗಿದೆ.

## ದೇವರ ಲೋಕದ ಮೇಲಿಟ್ಟ ಪ್ರೀತಿ (3:16-21)

**16** ಈ ವಚನದಲ್ಲಿ ಯೋಹಾನನು ಇಡೀ ಕ್ರಿಸ್ತನ ಸುವಾರ್ತೆಯನ್ನು ಕ್ಲುಪ್ತವಾಗಿ ತಿಳಿಸುತ್ತಾನೆ [29] ಸಮಸ್ತವು ದೇವರು ಲೋಕದ ಮೇಲಿಟ್ಟ ಪ್ರೀತಿಯಿಂದಲೇ ಪ್ರಾರಂಬವಾಗುತ್ತದೆ. ದೇವರು ಪ್ರೀತಿಸ್ವರೂಪಿ (1 ಯೋಹಾನ 4:8) ದೇವರು ಇಡೀ ಲೋಕವನ್ನು ಪ್ರೀತಿಸುತ್ತಾನೆ. ಆತನು ಕೇವಲ ಯೆಹೂದ್ಯರನ್ನು ಪ್ರೀತಿಸುವದಿಲ್ಲ (ಯೆಹೂದ್ಯರು ಯೋಚಿಸಿಕೊಂಡ ಹಾಗೆ) ಆದರೆ ಆತನು ಮೇಲ್ಜಾತಿ, ಕೀಳುಜಾತಿ, ಶ್ರೀಮಂತರು ಮತ್ತು ಬಡವರು, ಕಪ್ಪು ಮತ್ತು ಬಿಳಿಯರನ್ನು ಅಂತೂ ಎಲ್ಲರನ್ನೂ ಪ್ರೀತಿಸುತ್ತಾನೆ. ಮತ್ತು ಆತನು ನನ್ನನ್ನು ಎಷ್ಟೋ ಪ್ರೀತಿಸಿ ತನ್ನ ಎಕೈಕ ಮಗನನ್ನು ನಮ್ಮ ರಕ್ಷಣೆಗಾಗಿ ಕೊಟ್ಟುಬಿಟ್ಟನು (1 ಯೋಹಾನ 4:9-10 ಮತ್ತು ವ್ಯಾಖ್ಯಾನ ನೋಡಿರಿ).

ಕ್ರಿಸ್ತನು ಒಂದು ಅತೀಶ್ರೇಷ್ಠ ವರವಾಗಿದ್ದಾನೆ. ದೇವರು ತನಗೆ ಅತಿ ಪ್ರಿಯವಾದದ್ದನ್ನು ನಮಗೆ ಕೊಟ್ಟನು. ಯಾರೊಬ್ಬರೂ ನಾಶವಾಗುವದು ದೇವರಿಗೆ ಇಷ್ಟವಿಲ್ಲ (2ಪೇತ್ರ 3:9) ಆದುದರಿಂದ, ಪ್ರತಿಯೊಬ್ಬರಿಗೂ ರಕ್ಷಣೆ ಹೊಂದುವ ಅವಕಾಶವನ್ನು ನೀಡುವದಕ್ಕಾಗಿ ಆತನು ತನ್ನ ಮಗನನ್ನು ಕೊಟ್ಟನು.

ಆದರೆ ನಂಬಿಕೆಯ ಮೂಲಕ ಮಾತ್ರವೇ ಒಬ್ಬನು ಈ ರಕ್ಷಣೆಯನ್ನು ಅಂದರೆ ನಿತ್ಯಜೀವವನ್ನು ಪಡೆಯಬಲ್ಲನು (ವಚನ 15 ಮತ್ತು ವ್ಯಾಖ್ಯಾನ ನೋಡಿರಿ). ಒಬ್ಬ ಮನುಷ್ಯನು ಯೇಸುವನ್ನು ನಂಬುವದಾದರೆ ಆತನು ನಾಶವಾಗದೆ ನಿತ್ಯ ಜೀವವನ್ನು ಪಡೆಯುತ್ತಾನೆ. ಒಂದು ವೇಳೆ ಒಬ್ಬನು ಯೇಸುವನ್ನು ನಂಬದೆಹೋದರೆ ನಾಶವಾಗುವನು. ನಾಶವಾಗುವದು ಅಂದರೆ ದೇವರಿಂದ ಅಗಲಲ್ಪಡುವದು, ಸದಾಕಾಲವೂ ನರಕದಲ್ಲಿ ಬಾಧೆಪಡುವದು ಎಂದರ್ಥ, ಅಲ್ಲಿ ಗೋಳಾಟವೂ ಕಟಕಟನೆ ಹಲ್ಲುಕಡಿಯೋಣವೂ ಇರುವದು (ಮತ್ತಾಯ 8:12, 25:30,41).

ಮಾನವರಿಗೆ ಎರಡು ಮಾರ್ಗಗಳು ಮಾತ್ರ ಇರುತ್ತವೆ: ಒಂದು ಜೀವಕ್ಕೆ ನಡಿಸುತ್ತದೆ ಮತ್ತು ಇನ್ನೊಂದು ನಾಶನಕ್ಕೆ ನಡೆಸುವಮಾರ್ಗವಾಗಿದೆ (ಮತ್ತಾಯ 7:13-14). ಹೇಗೆ ಮಾನವನಿಗೆ ಎರಡು ಅಂತ್ಯಗಳು ಮಾತ್ರ ಇರುತ್ತವೆ: ಒಂದು ನಿತ್ಯ ಜೀವವನ್ನು ಪಡೆಯುವದು, ಇನ್ನೊಂದು ನಾಶವಾಗುವದು. ಕ್ರಿಸ್ತನು ನಮಗೆ ಸರಿಯಾದ ಮಾರ್ಗವನ್ನು ತೋರಿಸಲು ಬಂದನು, ನಿತ್ಯಜೀವಕ್ಕೆ ನಡೆಸುವ ಮಾರ್ಗವನ್ನು ತೋರಿಸಲು ಬಂದನು. ಕ್ರಿಸ್ತನು ಮಾರ್ಗವೂ, ಸತ್ಯವೂ ಜೀವವೂ ಆಗಿದ್ದಾನೆ (ಯೋಹಾನ 14:6). ಕ್ರಿಸ್ತನನ್ನು ನಂಬದಿರಲು ಇಚ್ಚಿಸುವದೆಂದರೆ ನಾಶನವನ್ನು ಆರಿಸಿಕೊಳ್ಳುವದೇ ಆಗಿತ್ತು.

**17** ಯೇಸು ಲೋಕಕ್ಕೆ ತಿರ್ಪು ಮಾಡಲು ಬರಲಿಲ್ಲ ಆದರೆ ಲೋಕವನ್ನು ರಕ್ಷಿಸಲು ಬಂದನು (ಲೂಕ 19:10) ಆತನು ಬರುವ ಉದ್ದೇಶವು ನಮ್ಮನ್ನು ರಕ್ಷಿಸುವದಾಗಿತ್ತು. ಆತನು ಬಂದಿರದಿದ್ದರೆ ಎಲ್ಲಾ ಮಾನವರು ದಂಡನೆಗೆ ಗುರಿಯಾಗುತ್ತಿದ್ದರು. ಈಗ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವವರಿಗೆ ದಂಡನೆಯಿರುವದಿಲ್ಲ (ರೋಮ 8:1 ಮತ್ತು ವ್ಯಾಖ್ಯಾನ ನೋಡಿರಿ).

ಆದರೆ ನಾವು ಇನ್ನೊಂದು ಸತ್ಯವನ್ನು ಅರ್ಥಮಾಡಿಕೊಳ್ಳಬೇಕು. ಕ್ರಿಸ್ತನು ಲೋಕದೊಳಗೆ ಬಂದಾಗ ಕೆಲವು ಜನರು ನಂಬಿದರು ಮತ್ತು ಇನ್ನು ಕೆಲವರು ನಂಬಲಿಲ್ಲ. ನಂಬಿದವರು ರಕ್ಷಣೆ ಹೊಂದಿದರು, ನಂಬದವರು ದಂಡನೆಗೊಳಗಾದರು ಮತ್ತು ಇಂದಿಗೂ ಅದು ಅಷ್ಟೇ ಸತ್ಯವಾಗಿದೆ.

ಆದುದರಿಂದ, ಯೇಸು ಲೋಕಕ್ಕೆ ಬಂದಾಗ ಕೆಲವರು ಆತನ ಮಾತುಗಳನ್ನು ನಂಬಲಿಲ್ಲವಾದ್ದರಿಂದ ದಂಡನೆಗೆ ಗುರಿಯಾದರು. ಅವರು ತಮ್ಮಮೇಲೆ ದಂಡನೆಯನ್ನು ಬರಮಾಡಿಕೊಂಡರು (ವಚನ 18 ನೋಡಿರಿ) ಯೇಸುವಿನ ಬರೋಣವು ವಿಶ್ವಾಸಿಗಳನ್ನು ಅವಿಶ್ವಾಸಿಗಳಿಂದ ಪ್ರತ್ಯೇಕಿಸಿತು.

ಯೇಸುವಿನ ಮುಖ್ಯ ಉದ್ದೇಶವು ಮಾನವರನ್ನು ರಕ್ಷಿಸುವದಾಗಿದ್ದರೂ ಆತನು ತನ್ನ ವಾಕ್ಯದ ಮುಖಾಂತರವಾಗಿ ನಂಬಲು ನಿರಾಕರಿಸಿದವರ ಮೇಲೆ ನ್ಯಾಯತೀರ್ಪನ್ನು ಸಹ ಬರಮಾಡುತ್ತಾನೆ (ಯೋಹಾನ 12:47-48) ಸೂರ್ಯನು ಬೆಳಕನ್ನು ಕೊಡುವದಕ್ಕಾಗಿ ಪ್ರಕಾಶಿಸುತ್ತಾನೆ ಆದರೆ ಅದೇ ವೇಳೆಯಲ್ಲಿ ಅದು ನೆರಳನ್ನು ಸಹ ಉಂಟುಮಾಡುತ್ತದೆ. ಬೆಳಕು ನೆರಳನ್ನು ಕಾಣಿಸುವಂತೆ ಮಾಡುವ ಹಾಗೆಯೇ ಕ್ರಿಸ್ತನ ಬೆಳಕು ಅವಿಶ್ವಾಸ ಮತ್ತು ಪಾಪಗಳನ್ನು ಬಯಲುಪಡಿಸಿ ದಂಡನೆಗೆ ಗುರಿಮಾಡುತ್ತದೆ (ವಚನಗಳು 19-20)

ಕ್ರಿಸ್ತನು ಮಾನವನ ರಕ್ಷಕನಾಗಿದ್ದಾನೆ (1 ಯೋಹಾನ 4:14) ಆದರೆ ನ್ಯಾಯತೀರ್ಪಿನ ದಿನದಲ್ಲಿ ಆತನು ಮಾನವನ ನ್ಯಾಯಾಧಿ ಪತಿಯೂ ಸಹ ಆಗಿರುತ್ತಾನೆಂಬದು ಸಹ ಸತ್ಯವಾಗಿದೆ. ದೇವರು ತಿಪು್ರ ಮಾಡುವ ಅಧಿಕಾರವನ್ನೆಲ್ಲಾ ಮಗನಿಗೆ ಕೊಟ್ಟಿರುತ್ತಾನೆ (ಯೋಹಾನ 5:22,27) ಇಂದು ನಾವು ಯೇಸುವನ್ನು ನಮ್ಮ ರಕ್ಷಕನನ್ನಾಗಿ ಸ್ವೀಕರಿಸದೇಹೋದರೆ ನಾಳೆನಾವು ಆತನನ್ನು ತಮ್ಮ ನ್ಯಾಯಧಿಪತಿಯಾಗಿ ಸ್ವೀಕರಿಸಬೇಕಾಗುತ್ತದೆ.

**18** ಯೋಹಾನನು ಇಲ್ಲಿ ಪು ನ: ನಂಬಿಕೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತಾನೆ (ವಚನ 15 ನೋಡಿರಿ) ನಾವು ನಮ್ಮ ನಂಬಿಕೆಯ ಪ್ರಕಾರವಾಗಿ ತೀರ್ಪಿಗೊಳಗಾಗುತ್ತೇವೆ. ನಂಬುವವರು ತೀರ್ಪಿಗೆ ಗುರಿಯಾಗುವದಿಲ್ಲ ಆದರೆ ನಂಬದೆ ಹೋಗುವವರು ತೀರ್ಪಿಗೆ ಗುರಿಯಾಗುವರು. ಯೋಹಾನನು ಇಲ್ಲಿ ಸಾಯುವ ತನಕವೂ ಅಪನಂಬಿಕೆಯಲ್ಲಿ ಮುಂದುವರೆಯುವವರನ್ನು ಕುರಿತು ಮಾತನಾಡುತ್ತಿದ್ದಾನೆ. ಅಂತಹ ಜನರು ಆಗಲೇ ತೀಪು್ರ ಹೊಂದಿದವರಾಗಿದ್ದಾರೆ.

**19-20** ಬೆಳಕು– ಅಂದರೆ, ಕ್ರಿಸ್ತನು– ಲೋಕಕ್ಕೆ ಬಂದಿತು (ಯೋಹಾನ 1:4-5, 9) ಆದರೆ ಮನುಷ್ಯರಿಗೆ ಬೆಳಕು ಇಷ್ಟವಾಗಲಿಲ್ಲ ಯಾಕೆಂದರೆ ಅದು ಅವರ ದುಷ್ಕೃತ್ಯಗಳನ್ನು ಬಯಲು ಪಡಿಸುತ್ತದೆ (ಎಫೇಸ 5 :13) ಬದಲಾಗಿ, ಮನುಷ್ಯರು ಕತ್ತಲೆಯನ್ನು ಅಂದರೆ ಕೆಟ್ಟದ್ದನ್ನು ಪ್ರೀತಿಸಿದರು. ಈ ವಿಧದಲ್ಲಿ ಅವರು ತಮಗೆ ತಿಪು್ರ ಮಾಡಿಕೊಂಡರು.

ಜನರು ಯೇಸುವನ್ನು ನಂಬಲು ನಿರಾಕರಿಸುವದಕ್ಕೆ ಮುಖ್ಯ ಕಾರಣವೇನು? ಈ ವಚನಗಳಲ್ಲಿ ಯೋಹಾನನು ನಮಗೆ ಉತ್ತರವನ್ನು ಕೊಟ್ಟಿರುತ್ತಾನೆ. ಅವರು ತಮ್ಮ ದುಷ್ಟ ಹಾಗು ಸ್ವಾರ್ಥ ಮಾರ್ಗಗಳನ್ನು ಬಿಟ್ಟು ಬಿಡಲು ಇಚ್ಚಿಸದಿರುವರಿಂದ ಅವರು ನಂಬುವದಿಲ್ಲ. ಅವರು ಕತ್ತಲೆಯನ್ನು ಪ್ರೀತಿಸುತ್ತಾರೆ ಯಾಕೆಂದರೆ ಕತ್ತಲೆಯಲ್ಲಿ ಅವರ ಕೆಟ್ಟತನವು ಮರೆಯಾಗಿರುತ್ತದೆ (ದೇವರಿಗಂತೂ ಮರೆಯಾಗಿರುವದಿಲ್ಲ!).

ಆ ಕಾರಣದಿಂದಲೇ ದೇವರಿಗೆ ನಂಬಿಕೆಯು ಬಹಳ ಪ್ರಾಮುಖ್ಯವಾಗಿರುತ್ತದೆ. ನಾವು ನಂಬುವಾಗ ನಿಜವಾಗಿಯೂ ನಾವು ಕತ್ತಲೆಯನ್ನು ತೊರೆದು ಕ್ರಿಸ್ತನ ಬೆಳಕಿನೊಳಗೆ ಬರಲಿಚ್ಚಿಸುತ್ತೇವೆ ಎಂಬರ್ಥವಾಗುತ್ತದೆ. ಹೀಗೆ, ದೇವರದೃಷ್ಟಿಯಲ್ಲಿ ಅಪನಂಬಿಕೆಯು ಅನೀತಿಯಂತೆಯೇಇರುತ್ತದೆ ಆದೆ ರೀತಿಯಾರಿ ನಂಬಿಕೆಯು ನೀತಿಯಂತಿರುತ್ತದೆ, ನಾವು ನಂಬಿಕೆಯ ಮೂಲಕ ನೀತಿಕರಣಗೊಂಡವರು – ಅಂದರೆ ನೀತಿವಂತರೆಂಬ ನಿರ್ಣಯ ಹೊಂದಿದವರು (ರೋಮಾ 5:1, ಗಲಾತ್ಯ 2:15-16 ಮತ್ತು ವ್ಯಾಖ್ಯಾನ ನೋಡಿರಿ)

**21** ಸತ್ಯವನ್ನು ಅನುಸರಿಸುವವನು...ಬೆಳಕಿಗೆ ಬರುತ್ತಾನೆ. ಸತ್ಯವನ್ನು ಅನುಸರಿಸಿ ನಡೆಯುವದೆಂದರೆ ಒಬ್ಬನು ತನ್ನ ಪಾಪಗಳಿಗಾಗಿ ಪಶ್ಚಾತಾಪಪಟ್ಟು ಕ್ರಿಸ್ತನನ್ನು ಸ್ವೀಕರಿಸಲು ಹೃದಯವನ್ನು ತೆರೆಯುವದೇ ಆಗಿದೆ. ಇದರರ್ಥವೇನಂದರೆ ಕತ್ತಲೆಯಿಂದ ತಿರಿಗಿಕೊಂಡು ಕೆಟ್ಟದ್ದನ್ನು ದ್ವೇಷಿಸುವದಾಗಿದೆ. ಅಂತಹ ಜನರು ಬೆಳಕಿಗೆ ಭಯಪಡಬೇಕಾದ ಅಗತ್ಯವಿಲ್ಲ. ಬೆಳಕಿಗೆ ಬರುವವರು ಅತ್ಮನಿಂದ ಹೊಸದಾಗಿ ಹುಟ್ಟಿದವರಾಗಿದ್ದಾರೆ (ವಚನ 5) ಅವರ ನೂತನ ಜೀವನ ಮತ್ತು ಹೃದಯ ದೇವರಿಂದಲೇ ಬಂದಿರುತ್ತದೆ. ಅವರು "ಇವು ಗಳು ನನ್ನ ಒಳ್ಳೇಕಾರ್ಯಗಳು" ಎಂದು ಹೇಳಲು ಸಾದ್ಯವಿಲ್ಲ. ಎಲ್ಲಾ ಒಳ್ಳೆ ಕೃತ್ಯಗಳು ದೇವರ ಮೂಲಕವೇ ಮಾಡಲ್ಪಡುತ್ತವೆ. ಮಾನವನು ತನ್ನ ಒಳ್ಳೇ ಕೃತ್ಯಗಳಿಗಾಗಿ ಹೊಗಳಿಕೊಳ್ಳಲು ಆಸ್ಪದವಿಲ್ಲ (ಎಫೆಸ 2:8-9 ನೋಡಿರಿ) ನಮ್ಮ ಎಲ್ಲಾ ನೀತಿಯು ನಂಬುವಂತಹ ನಮ್ಮಲ್ಲಿ ವಾಸಿಸುವ ಪವಿತ್ರಾತ್ಮನ ಮೂಲಕವೇ ಬರುತ್ತದೆ.

## ಯೇಸುವಿನ ಕುರಿತು ಸ್ನಾನಿಕನಾದ ಯೋಹಾನನ ಸಾಕ್ಷಿ (3:22-36)

**22** ಪಸ್ಕ ಹಬ್ಬ (ಯೋಹಾನ 2:13) ಮತ್ತು ನಿಕೊದೇಮನೊಂದಿಗೆ ಸಂಭಾಷಣೆಯ ನಂತರ ಯೇಸು ಯೂದಾಯ ದೇಶಕ್ಕೆ – ಯೂದಾಯದ 30 ಸುತ್ತಲಿನ ಪ್ರಾಂತಗಳಿಗೆ – ಹೋದನು. ಆತನು ಮತ್ತು ಆತನ ಶಿಷ್ಯರು ದೀಕ್ಷಾಸ್ನಾನ ಮಾಡಿಸಲು ಪ್ರಾರಂಭಿಸಿ ಜನರಿಗೆ ಪಶ್ಚಾತಾಪ ಪಟ್ಟು ದೇವರ ಕಡೆಗೆ ತಿರಿಗಿಕೊಳ್ಳಿರಿ ಎಂದು ಸಾರಿ ಹೇಳುತ್ತಿದ್ದರು. (ಮಾರ್ಕ 1:15) ನಿಜವಾದ ದೀಕ್ಷಾಸ್ನಾನವು ಯೇಸುವಿನ ನಿರ್ದೇಶನದಡಿಯಲ್ಲಿ ಆತನ ಶಿಷ್ಯರಿಂದಲೇ ಮಾಡಲ್ಪಡುತ್ತಿತ್ತು (ಯೋಹಾನ 4:2).

**23-24** ಯೋಹಾನನು ಸಹ ಹತ್ತಿರದ ಸ್ಥಳದಲ್ಲಿಯೇ ದೀಕ್ಷಾಸ್ನಾನ ಮಾಡಿಸುತ್ತಿದ್ದನು. ಯೋಹಾನನನ್ನು ಇನ್ನೂ ಸೆರೆಮನೆಗೆ ಹಾಕಿರಲಿಲ್ಲ (ಮಾರ್ಕ 6:17-19). ಇದರ ಮೂಲಕ ನಾವು ಅರ್ಥಮಾಡಿಕೊಳ್ಳುವದೇನೆಂದರೆ ಮಾರ್ಕ 1:14ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಯೇಸುವಿನ ಗಲಿಲಾಯದಲ್ಲಿನ ಸೇವೆಯು ಇನ್ನೂ ಪ್ರಾರಂಬಗೊಂಡಿರಲಿಲ್ಲ. ಇದರ ಪ್ರಕಾರವಾಗಿ ಯೇಸು ಇನ್ನೂ ಪೇತ್ರ, ಆಂದ್ರೇಯ, ಯೋಹಾನ ಮತ್ತು ಯಾಕೋಬರನ್ನು ಅಂತಿಮವಾಗಿ ಕರೆದಿರಲಿಲ್ಲ (ಮಾರ್ಕ 1:16-20) ಆತನು ಗಲೀಲಾಯಕ್ಕೆ ಹಿಂದಿರುಗಿದ ಮೇಲೆ ಮಾತ್ರವೇ (ಯೋಹಾನ 4:43) ಆ ನಾಲ್ವರು ಶಿಷ್ಯರನ್ನು ಅಂತಿಮವಾಗಿ ಕರೆದನು.

**25** ಸ್ನಾನಿಕನಾದ ಯೋಹಾನನ ಶಿಷ್ಯರಲ್ಲಿ ಕೆಲವರು ಯೆಹೂದ್ಯ ಶುದ್ಧಾಚಾರದ ಕುರಿತಾಗಿ ಒಬ್ಬ ಯೆಹೂದ್ಯನೊಂದಿಗೆ ವಾಗ್ವಾದ ಮಾಡಲು ಪ್ರಾಂರಬಿಸಿದರು. ಬಹುಶಃ ಆ ಯೆಹೂದ್ಯನು ಯೇಸುವಿನ ಶಿಷ್ಯರಲ್ಲಿ ಒಬ್ಬನಾಗಿದ್ದನು. ಬಹುಶಃ ಅವನು ಶುದ್ಧಾಚಾರದ ನಿಯಮಗಳನ್ನು ಅನುಸರಿಸುವ ಅವಶ್ಯಕತೆ ಇಲ್ಲ ಎಂದು ಹೇಳಿದನು.(ಮಾರ್ಕ 7:1-2,5)

**26** ಶುದ್ಧಾಚಾರದ ವಿಷಯದಲ್ಲಿ ವಾಗ್ವಾದಮಾಡುತ್ತಿರುವ ವೇಳೆಯಲ್ಲಿ ಜನರು ಬಹು ಸಂಖ್ಯೆಯಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಯೇಸುವಿನ ಬಳಿಗೆ ಹೋಗುತ್ತಿರುವರೆಂಬದನ್ನು ಯೋಹಾನನ ಶಿಷ್ಯರು ತಿಳಿದುಕೊಂಡರು.ಇಈಗ ಯೋಹಾನನಿಗಿಂತಲೂಯೇಸುವಿನ ಬಳಿಗೆ ಹೆಚ್ಚುಜನರು ಹೋಗುತ್ತಿದ್ದರು. ಯೋಹಾನನ ಶಿಷ್ಯರು ಇದಕ್ಕೆ ಬೇಸರ ಪಟ್ಟುಕೊಂಡರು. ಈಗ ಅವರಿಗೆ ಪ್ರತಿಯೊಬ್ಬರೂ ಯೇಸುವಿನ ಬಳಿಗೆ ಹೋಗುತ್ತಿರುವಂತೆ ಕಂಡಿತು. ಅವರಲ್ಲಿ ಅಸೂಯೆ ಉಂಟಾಯಿತು.

**27** ಯೇಸುವಿನ ಯಶಸ್ಸಿನ ವಿಷಯವಾಗಿ ದೂರು ಹೇಳದಂತೆ ಯೋಹಾನನು ತನ್ನ ಶಿಷ್ಯರಿಗೆ ಪ್ರಬೋಧಿಸಿದನು. ಪ್ರತಿ ಮನುಷ್ಯನು ಒಂದು ನಿರ್ದಿಷ್ಟವಾದ ಉದ್ದೇಶಕ್ಕಾಗಿ ದೇವರಿಂದ ನೇಮಿಸಲ್ಪಟ್ಟಿದ್ದಾನೆ. ಪ್ರತಿಯೊಬ್ಬನಿಗೂ ಆ ಉದ್ದೇಶವನ್ನು ನೆರವೇರಿಸಲು ಶಕ್ತನಾಗುವಂತೆ ವಿವಿಧ ವರಗಳು ಕೊಡಲ್ಪಟ್ಟಿವೆ. ಪರಲೋಕದಿಂದ ಅನುಗ್ರಹಿಸೋಣವಾದದ್ದನ್ನೇ ಹೊರತು ಮನುಷ್ಯನು ಹೆಚ್ಚೇನು ಹೊಂದಲಾರನು. ಯೋಹಾನನು ಕೇವಲ ಯೇಸುವಿಗೆ ದಾರಿಯನ್ನು ಸಿದ್ಧ ಮಾಡಲು ಮಾತ್ರವೇ ನೇಮಿಸಲ್ಪಟ್ಟಿದ್ದನು. ಆದುದರಿಂದ, ಈಗ ಜನರು ಯೇಸುವಿನ ಕಡೆಗೆ ತಿರುಗಿಕೊಳ್ಳಲು ಪ್ರಾರಂಭಿಸಿದ್ದು ದೇವರ ಚಿತ್ತಕ್ಕೆ ಅನುಸಾರವಾಗಿತ್ತು.

ನಮಗಿಂತಲೂ ಹೆಚ್ಚಿನ ಕೆಲಸವನ್ನಾಗಲಿ ಅಥವಾ ವರವನ್ನಾಗಲಿ ದೇವರಿಂದ ಪಡೆದುಕೊಂಡಿರುವವರ ಮೇಲೆ ನಾವು ಹೊಟ್ಟೆಕಿಚ್ಚು ಪಡದಿರೋಣ. ಹೊಟ್ಟೆಕಿಚ್ಚು ಕ್ರೈಸ್ತರ ಮಧ್ಯದಲ್ಲಿ ಕಂಡುಬರುವ ಅತ್ಯಂತ ಸಾಮಾನ್ಯ ಹಾಗು ಅತೀ ಹಾನಿಕಾರಕ ಪಾಪಗಳಲ್ಲಿ ಒಂದಾಗಿದೆ. ಸಭೆಯಲ್ಲಿ ಒಡಕಿಗೆ ಹೊಟ್ಟೆಕಿಚ್ಚು ಒಂದು ದೊಡ್ಡ ಕಾರಣವಾಗಿರುತ್ತದೆ. ದೇವರು ನಮಗೆ ಅನುಗ್ರಹಿಸಿರುವ ವರಗಳಿಗಾಗಿ ಕೃತಜ್ಞತೆಯುಳ್ಳವರಾಗಿರೋಣ ಮತ್ತು ಅವು ಗಳನ್ನು ಜಾಗರೂಕತೆಯಿಂದ ಅತನ ಸೇವೆಯಲ್ಲಿ ಉಪಯೋಗಿಸೋಣ (ಕೊರಿಂಥ 4:7).

**28** ಸ್ನಾನಿಕನಾದ ಯೋಹಾನನೇ ಸ್ವತ: "ನಾನು ಕ್ರಿಸ್ತನಲ್ಲ" ಎಂದು ಹೇಳಿದನು (ಯೋಹಾನ 1:20) ಯೋಹಾನನು ತನ್ನನ್ನು ಹೆಚ್ಚಿಸಿಕೊಳ್ಳಲು ಎಂದಿಗೂ ಪ್ರಯತ್ನಿಸಲಿಲ್ಲ. ಜನರು ಆತನಿಗೆ ಯೋಗ್ಯತೆಗಿಂತಲೂ ಹೆಚ್ಚು ಗೌರವವನ್ನು ಕೊಡಲು ಪ್ರಾರಂಭಿಸಿದಾಗ ಅವನು ಅದನ್ನು ಸ್ವೀಕರಿಸಲಿಲ್ಲ. ನಮ್ಮಲ್ಲಿ ಎಷ್ಟು ಜನರು ಅರೀತಿಯಾಗಿ ಮಾಡುತ್ತೇವೆ? ನಾವು .ಯೋಹಾನನ ಮಾದರಿಯನ್ನು ಅನುಸರಿಸಲು ಹಂಬಲಿಸೋಣ. ಯೋಹಾನನ ಏಕೈಕ ಗುರಿಯು ಪು ರುಷ ಮತ್ತು ಸ್ತ್ರೀಯರನ್ನು ಯೇಸುವಿನ ಬಳಿಗೆ ನಡೆಸುವದೇ ಆಗಿತ್ತು ಹೊರತು ತನ್ನಕಡೆಗೆ ಅಲ್ಲ. ಅದು ನಮ್ಮ ಏಕೈಕ ಗುರಿಯು ಸಹ ಆಗಿರಲಿ.

**29** ಯೋಹಾನನು ಮದಲಿಂಗನ ಸ್ನೇಹಿತನು ಮಾತ್ರವೇ ಆಗಿದ್ದನು. ಮದಲಿಂಗನು ಕ್ರಿಸ್ತನೇ. ಸಭೆ ಅಂದರೆ ಎಲ್ಲಾ ವಿಶ್ವಾಸಿಗಳು ಮದಲಗಿತ್ತಿಯಾಗಿದ್ದಾರೆ (ಎಫೆಸ 5:23, 31-32, ಪ್ರಕಟಣೆ 19:7-8) ಮದಲಗಿತ್ತಿಯು ಮದಲಿಂಗನಿಗೆ ಸೇರಿದವಳು ಹೊರತು ಮದಲಿಂಗನ ಸ್ನೇಹಿತನಿಗೆ ಸೇರಿದವಳಲ್ಲ.

ಬದಲಾಗಿ, ಸ್ನೇಹಿತನು ಮದಲಿಂಗನ ಸಂತೋಷದಲ್ಲಿ ತಾನೂ ಸಂತೋಷ ಪಡುತ್ತಾನೆ. ಅದೇ ರೀತಿಯಲ್ಲಿ ಜನರು ಯೇಸುವಿನ ಬಳಿಗೆ ಬರುತ್ತಿರುವದಕ್ಕೆ ಯೋಹಾನನು ಸಂತೋಷಿಸಿದನು.

**30** ಮುಂಜಾನೆಯ ಬೆಳಕು ಹೆಚ್ಚಾದಂತೆ ಉದಯ ನಕ್ಷತ್ರದ ಬೆಳಕು ಕಡಿಮೆಯಾಗುತ್ತಾ ಹೋಗುತ್ತದೆ. ಸ್ನಾನಿಕನಾದ ಯೋಹಾನನು ಬರಲಿರುವ ಕ್ರಿಸ್ತನ ಅರಣೋದಯವನ್ನು ಪ್ರಕಟಿಸಲು ಬಂದ ಉದಯ ನಕ್ಷತ್ರವಾಗಿದ್ದಾನೆ.

ಯೋಹಾನನು ತನ್ನ ಸ್ಥಾನವನ್ನು ಅರಿತಿದ್ದನು. ಅವನ ಇಡೀ ಗುರಿಯು ಯೇಸುವನ್ನು ಘನ ಪಡಿಸುವದಾಗಿತ್ತು. ಕ್ರಿಸ್ತನ ಎಲ್ಲಾ ಶಿಷ್ಯರ ಉದ್ದೇಶವು ಅದೇ ಆಗಿದೆ. ನಮ್ಮ ಕೆಲಸವು ಕ್ರಿಸ್ತನ ಬೆಳಕನ್ನು ಜನರ ಮಧ್ಯದಲ್ಲಿ ಪ್ರಕಾಶಗೊಳಿಸುವದೇ ಹೊರತು ನಮ್ಮ ಸ್ವಂತ ಬೆಳಕನ್ನಲ್ಲ. ಕ್ರಿಸ್ತನು ಸಮಸ್ತವೂ ಆಗಿರುವಂತಾಗಲು ನಾವು ಶೂನ್ಯವಾಗಿ ಉಳಿಯಬೇಕು.

ಒಂದು ವೇಳೆ ಸಬೆಯ ನಾಯಕರು ಕ್ರಿಸ್ತನನ್ನು ಘನಪಡಿಸುವದರಲ್ಲಿ ಮನಸ್ಸನ್ನು ಕೇಂದ್ರೀಕರಿಸುವದಾದರೆ ಅವರು ಶೀಘ್ರ್ರವೇ ಒಬ್ಬರಿಗಿಂತ ಒಬ್ಬರ ಮೇಲೆ ತಮ್ಮನ್ನು ಹೆಚ್ಚಿಸಿಕೊಳ್ಳುವದನ್ನು ನಿಲ್ಲಿಸುವರು. ಪ್ರತಿಯೊಬ್ಬ ಸಭಾನಾಯಕನು ಯೋಹಾನನು ಹೇಳಿದಂತೆಯೇ ನಿರಂತರವೂ ಹೇಳುತ್ತಿರಲಿ:" ನಾನು ತಗ್ಗಿಸಲ್ಪಡಬೇಕು" ಪೌಲನು ಇದಕ್ಕೆ ನಿಯಮವನ್ನು ನೀಡುತ್ತಾನೆ: ಮಾನಮರ್ಯಾದೆಯನ್ನು ತೋರಿಸುವದರಲ್ಲಿ ಒಬ್ಬರಿಗಿಂತ ಒಬ್ಬರು ಮುಂದಾಗಿರ್ರಿ. (ರೋಮ 12:10) ಮತ್ತು ನಿಶ್ಚಯವಾಗಿಯೂ, ನಾವು ಎಲ್ಲರಿಗಿಂತಲೂ ಮೇಲಾಗಿ ಕ್ರಿಸ್ತನನ್ನು ಘನ ಪಡಿಸಬೇಕು (ವಚನ 31).

**31** ಮೇಲಿನಿಂದ ಬರುವವನು ಅಂದರೆ ಕ್ರಿಸ್ತನು ಎಲ್ಲರ ಮೇಲೆ[31] ಇದ್ದಾನೆ. ಸ್ನಾನಿಕನಾದ ಯೋಹಾನನು ಭೂಲೋಕದಿಂದ ಬಂದವನು. ಯೇಸು ಮಾತ್ರವೇ ಪರಲೋಕದಿಂದ ಬಂದನು (ಯೋಹಾನ 3:13, 8:23). ಆದುದರಿಂದ, ಯೇಸು ಯೋಹಾನನಿಗಿಂತಲೂ ಶ್ರೇಷ್ಠನು, ದೊಡ್ಡವನು. ಆತನು ಎಲ್ಲರ ಮೇಲೆ ಇದ್ದಾನೆ.

**32** ಯೇಸು ಪರಲೋಕದಲ್ಲಿ ತಾನು ನೋಡಿ ಕೇಳಿದ್ದಕ್ಕೆ ಸಾಕ್ಷಿ ಕೊಟ್ಟನು. ಹಾಗಾದರೆ ಆತನ ಸಾಕ್ಷಿಯು ಸಂಪೂರ್ಣ ನಿಶ್ಚಿತ ಮತ್ತು ಸತ್ಯವಾಗಿತ್ತು (ವಚನ 11 ಮತ್ತು ವ್ಯಾಖ್ಯಾನ ನೋಡಿರಿ) ಹಳೆ ಒಡಂಬಡಿಕೆಯ ಪ್ರವಾದಿಗಳು ದರ್ಶನ ಮತ್ತು ಕನಸುಗಳಲ್ಲಿ ಸಂಗತಿಗಳನ್ನು ಕಂಡರು. ಆದರೆ ಯೇಸು ದೇವರ ಸಂಗತಿಗಳನ್ನು ನೇರವಾಗಿ ದೇವರಿಂದಲೇ ಪಡೆದನು.

ಹಾಗಿದ್ದರೂ, ಯಾರೂ ಯೇಸುವಿನ ಸಾಕ್ಷಿಯನ್ನು ಒಪ್ಪುವದಿಲ್ಲ. ಅಂದರೆ ಪ್ರಾಪಂಚಿಕ ಜನರು ಯೇಸುವಿನ ಸಾಕ್ಷಿಯನ್ನು ಸ್ವೀಕರಿಸಲಿಲ್ಲ. ಅವರು ನಂಬಲು ನಿರಾಕರಿಸಿದರು. ಅವರು ಬೆಳಕನ್ನು ತಿರಸ್ಕರಿಸಿದರು...ಸ್ವಾಭಾವಿಕವಾದ ಪ್ರಾಪಂಚಿಕ ಜನರು ಯೇಸುವನ್ನು ಅಂಗೀಕರಿಸುವದಿಲ್ಲ. ಮನುಷ್ಯನ ಹೃದಯವು ದೀನತೆಯುಳ್ಳದ್ದಾಗಿ ಪವಿತ್ರಾತ್ಮನಿಗಾಗಿ ತೆರೆಯಲ್ಪಟ್ಟಿರುತ್ತದೊ ಆಗ ಮಾತ್ರವೇ ಅವನು ಯೇಸುವಿನ ಸಾಕ್ಷಿಯನ್ನೂ, ಬೋಧನೆಯನ್ನೂ ಒಪ್ಪಲು ಸಾದ್ಯವಿರುತ್ತದೆ.

**33** ನಾವು ಯಾರದಾದರೂ ಸಾಕ್ಷಿಯನ್ನು "ಸಮರ್ಥನೆ" ಮಾಡುವಾಗಲೆಲ್ಲಾ ನಾವು ಆವ್ಯಕ್ತಿಯ ಸಾಕ್ಷಿಯು ಸಂಪೂರ್ಣಸತ್ಯವೂ, ಅಂಗೀಕಾರಕ್ಕೆ ಯೋಗ್ಯವೂ ಎಂದು ಒಪ್ಪುವರಾಗಿದ್ದೇವೆ, ಸಮರ್ಥನೆ ಮಾಡುವದರ ಅರ್ಥವು ಅದೇ ಆಗಿದೆ. ಯಾವನು ಕ್ರಿಸ್ತನಿಗಾಗಿ ತನ್ನ ಹೃದಯವನ್ನು ತೆರೆದು ಆತನ ಸಾಕ್ಷಿಯನ್ನು ಅಂಗೀಕರಿಸಿದ್ದಾನೋ ಆತನು ದೇವರು ಸತ್ಯವಂತನೂ ಎಂಬದನ್ನು ಸಹ ಸಮರ್ಥನೆ ಮಾಡಿದವನಾಗಿದ್ದಾನೆ. ಕ್ರಿಸ್ತನು ದೇವರ ವಾಕ್ಯ (ಯೋಹಾನ 1:1). ಕ್ರಿಸ್ತನು ಸತ್ಯವಾಗಿರುವದಾದರೆ ದೇವರು ಸಹ ಸತ್ಯವಾಗಿದ್ದಾನೆ. ಆದರೆ, ಒಬ್ಬನು ಕ್ರಿಸ್ತನನ್ನು ತಿರಸ್ಕರಿಸುವದಾದರೆ ದೇವರನ್ನು ತಿರಸ್ಕರಿಸುತ್ತಾನೆ. ಕ್ರಿಸ್ತನ ಸಾಕ್ಷಿಯನ್ನು ಅಂಗೀಕರಿಸದ ಮನುಷ್ಯನು ದೇವರನ್ನು ಸುಳ್ಳುಗಾರನೆಂದು ಕರೆಯುವವನಾಗಿದ್ದಾನೆ (1 ಯೋಹಾನ 5:9-10).

**34** ಯೇಸು ದೇವರ ಮಾತುಗಳನ್ನೇ ಆಡುತ್ತಾನೆ. ಯೇಸು ಮೇಲಿನಿಂದ ಬಂದಿರುತ್ತಾನೆ. ಆತನು ತಂದೆಯ ಮನಸ್ಸನ್ನು ಸಂಪೂರ್ಣವಾಗಿ ಬಲ್ಲವನಾಗಿದ್ದಾನೆ. ಆತನು ದೇವರ ಆತ್ಮನ್ನು ಅಳತೆಯಿಲ್ಲದೆ ಹೊಂದಿದ್ದಾನೆ.ಅಂದರೆ ಸಂಪೂರ್ಣ ಅಳತೆಯಲ್ಲಿ ಹೊಂದಿದ್ದಾನೆ. ವಿಶ್ವಾಸಿಗಳಾದ ನಾವು ಅಳತೆಗನುಗುಣವಾಗಿ ಪವಿತ್ರಾತ್ಮನನ್ನು ಪಡೆಯುತ್ತೇವೆ...ಕ್ರಿಸ್ತನು ನಮ್ಮಲ್ಲಿ ಒಬ್ಬೊಬ್ಬನಿಗೆ ಅನುಗ್ರಹಿಸಿದ ಪ್ರಕಾರವೇ ಕೃಪಾವರವು ದೊರಕಿದೆ (ಎಫೆಸ 4:7) ಆದರೆ ಕ್ರಿಸ್ತನಿಗೆ ಅಳತೆ ಮಾಡದೆ ಕೃಪೆಯು ಕೊಡಲ್ಪಟ್ಟಿದೆ. ಕ್ರಿಸ್ತನಿಗೆ ಪವಿತ್ರಾತ್ಮನು ಪೂರ್ಣಅಳತೆಯಲ್ಲಿ ಕೊಡಲ್ಪಟ್ಟಿದ್ದಾನೆ. ಆತನು ದೇವರ ಸರ್ವ ಸಂಪೂರ್ಣತೆಯಿಂದ ತುಂಬಿದವನಾಗಿದ್ದನು. ದೇವರು ಆತನಲ್ಲಿ ತನ್ನ ಸರ್ವಸಂಪೂರ್ಣತೆಯು ವಾಸವಾಗಿರಬೇಕೆಂದು ನಿಷ್ಕರ್ಷೆ ಮಾಡಿದನು (ಕೊಲೊಸ್ಸೆ 1:19)

**35** ನಾವು ಕ್ರಿಸ್ತನನ್ನು ಸಂಪೂರ್ಣವಾಗಿ ವಿಶ್ವಾಸಿಸಬಹುದು ಯಾಕೆಂದರೆ ತಂದೆಯಾದ ದೇವರು ಸಮಸ್ತವನ್ನೂ ಆತನ ಕೈಗಳಲ್ಲಿ ನೀಡಿರುತ್ತಾನೆ (ಯೋಹಾನ 13:3) ತಂದೆಯು ಕ್ರಿಸ್ತನಿಗೆ ಪವಿತ್ರಾತ್ಮನನ್ನು ಅಳತೆಯಿಲ್ಲದೆ ಕೊಟ್ಟಿದ್ದಾವೆ (ವಚನ 34) ಯೇಸು "ನನ್ನ ತಂದೆಯು ಎಲ್ಲವನ್ನೂ ನನಗೆ ಒಪ್ಪಿಸಿದ್ದಾನೆ" (ಮತ್ತಾಯ 11:27) ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ" ಎಂದು ಹೇಳಿದನು. (ಮತ್ತಾಯ 28:18)

ಮನುಷ್ಯರು ದೇವರ ಬಳಿಗೆ ಬರುವಂತೆಯೇ ಕ್ರಿಸ್ತನ ಬಳಿಗೆ ಬರಬಹುದು. ದೇವರ ಎಲ್ಲಾ ಆತ್ಮೀಕ ಆಶಿರ್ವಾದಗಳು ನಮಗೆ ಕ್ರಿಸ್ತನಲ್ಲಿ ದೊರೆಯುತ್ತದೆ (ಎಫೆಸ 1:3) ದೇವರು ಕ್ರಿಸ್ತನಿಗೆ[32]ಪವಿತ್ರಾತ್ಮನನ್ನು ನೀಡಿರುವಂತೆಯೇ ಕ್ರಿಸ್ತನು ಸಹ ತನ್ನಲ್ಲಿ ನಂಬಿಕೆಯಿಡುವವರಿಗೆ ಪವಿತ್ರಾತ್ಮನನ್ನು ನೀಡುತ್ತಾನೆ. ಮತ್ತು ಆತನು ಪವಿತ್ರಾತ್ಮನನ್ನು ಕೊಡುವಾಗ ಆತನು ತನ್ನ ಜ್ಞಾನವನ್ನು (ಯೋಹಾನ 15:5) ಆತನ ಅಧಿಕಾರ (ಯೋಹಾನ 17:2), ಸಂತೋಷ(ಯೋಹಾನ 17:13), ಮತ್ತು ಆತನ ಮಹಿಮೆಯನ್ನು ಸಹ ಕೊಡುತ್ತಾನೆ (ಯೋಹಾನ 17:22).

**36** ಎಲ್ಲಕ್ಕಿಂತ ಮೇಲಾಗಿ ಯೇಸು ನಮಗೆ ನಿತ್ಯಜೀವವನ್ನು ಕೊಡುತ್ತಾನೆ. ಆತನ ಎಲ್ಲಾ ಆಶೀರ್ವಾದಗಳ ತಿರುಳು ಇದಾಗಿದೆ. ಯೇಸುವಿನಲ್ಲಿ ನಂಬಿಕೆಯಿಡುವದೆಂದರೆ ನಿತ್ಯಜೀವವನ್ನು ಹೊಂದುವದೇ ಆಗಿದೆ. "ಯೇಸು ಹೀಗೆನ್ನುತ್ತಾನೆ: ಒಬ್ಬನೇ ಸತ್ಯದೇವ ರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸು ಕ್ರಿಸ್ತನನ್ನೂ ತಿಳಿಯುವದೇ ನಿತ್ಯಜೀವವು" (ಯೋಹಾನ 17:3) ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವಾಗ "ಮೇಲಿನಿಂದ" (ಪರಲೋಕದಿಂದ) ಹೊಸದಾಗಿ ಹುಟ್ಟುವರಾಗಿದ್ದೇವೆ ಮತ್ತು ನೂತನ ಆತ್ಮೀಕ ಜೀವವನ್ನು ಪಡೆಯುತ್ತೇವೆ. ಈ ಜೀವಿತವು ನಾವು ನಂಬಿದಾಕ್ಷಣದಿಂದಲೇ ಪ್ರಾರಂಭಗೊಳ್ಳುತ್ತದೆ ಮತ್ತು ಎಂದಿಗೂ ಅಂತ್ಯಗೊಳ್ಳುವದಿಲ್ಲ. ನಮ್ಮ ದೇಹಗಳು ಸಾಯುವವು ಆದರೆ ನಮ್ಮ ಆತ್ಮಗಳು ಎಂದಿಗೂ ಸಾಯುವದಿಲ್ಲ.

ಆದರೆ ಈ ನಿತ್ಯ ಜೀವಕ್ಕಿಂತಲೂ ಶ್ರೇಷ್ಠವಾದ ವರವೊಂದಿರುತ್ತದೆ. ಮತ್ತು ಆ ವರವು ಸ್ವತ: ಕ್ರಿಸ್ತನೇ, ಎಲ್ಲಾ ವರಗಳೂ ಕ್ರಿಸ್ತನಲ್ಲಿ ಅಡಕವಾಗಿವೆ. ನಾವು ಕ್ರಿಸ್ತನನ್ನು ನಮ್ಮ ರಕ್ಷಕನನ್ನಾಗಿಯೂ, ಕರ್ತನನ್ನಾಗಿಯೂ ಸ್ವೀಕರಿಸುವಾಗ ನಾವು ಪರಲೋಕದ ಸಕಲ ಐಶ್ವರ್ಯವನ್ನೂ ಸ್ವೀಕರಿಸುತ್ತೇವೆ. ಮಗನನ್ನು ಹೊಂದಿರುವವನು ಜೀವವನ್ನು ಹೊಂದಿದ್ದಾನೆ (1 ಯೋಹಾನ 5:12) ಮಗನನ್ನು ಹೊಂದಿರುವವನು ಸಮಸ್ತವನ್ನು ಹೊಂದಿದ್ದಾನೆ (ರೋಮಾ 8:32 ಮತ್ತು ವ್ಯಾಖ್ಯಾನ ನೋಡಿರಿ).

ಆದರೆ ಕ್ರಿಸ್ತನನ್ನು ತಿರಸ್ಕರಿಸುವ [33] ವ್ಯಕ್ತಿಗೆ ಏನು ಸಂಭವಿಸುತ್ತದೆ ಎಂಬದನ್ನು ನಾವು ಎಂದಿಗೂ ಮರೆಯಬಾರದು. ಅವನು ಜೀವವನ್ನು ಕಾಣುವದೇ ಇಲ್ಲ, ದೇವರ ಕೋಪವು ಅವನ ಮೇಲೆ ನೆಲೆಯಾಗಿರುವದು (ವಚನಗಳು 16-17

ಮತ್ತು ವ್ಯಾಖ್ಯಾನ ನೋಡಿರಿ). ನಂಬದವನಿಗೆ ದೇವರ ಒಬ್ಬನೇ ಮಗನ ಹೆಸರನ್ನು ನಂಬದೇ ಹೋದದರಿಂದ ಆಗಲೇ ತೀರ್ಪು ಆಗಿ ಹೋಯಿತು. (ವಚನ : 18)

ಕ್ರೈಸ್ತರಾದ ನಾವು ದೇವರ ಪ್ರೀತಿಯ ಕುರಿತು ಹೆಚ್ಚಾಗಿ ಮಾತಾಡುತ್ತೇವೆ ಆದರೆ ನಾವು ದೇವರ ಕೋಪದ ಕುರಿತಾಗಿ ಮಾತಾಡುವದನ್ನು ಅಲಕ್ಷಿಸಬಾರದು. ದೇವರು ತನ್ನನ್ನು ವಿರೋಧಿಸುವ ಎಲ್ಲರನ್ನೂ ವಿರೋಧಿಸುತ್ತಾನೆ. ಕ್ರಿಸ್ತನನ್ನು ನಂಬುವದಕ್ಕೆ ನಿರಾಕರಿಸುವದೆಂದರೆ ದೇವರನ್ನು ವಿರೋಧಿಸಿದಂತೆಯೇ. ಅದು ದೇವರಿಗೆ ಅವಿಧೇಯರಾದಂತಾಗುತ್ತದೆ. ಮಾನವನು ನಂಬಿ ರಕ್ಷಣೆ ಹೊಂದಬೇಕು ಇಲ್ಲವೆ ನಂಬದವನಾಗಿ ದಂಡನೆಗೆ ಗುರಿಯಾಗಬೇಕು. ಮಾನವನು ಈ ಎರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕು, ಬೇರಿನ್ನಾವ ಆಯ್ಕೆಯು ಇರುವದಿಲ್ಲ.

---

## ಅಧ್ಯಾಯ - 4

### ಯೇಸು ಸಮಾರ್ಯದ ಸ್ತ್ರೀಯೊಂದಿಗೆ ಮಾತಾಡಿದ್ದು (4:1-26)

**1-3** ಫರಿಸಾಯರು ಸ್ನಾನಿಕನಾದ ಯೋಹಾನನ ವಿಷಯದಲ್ಲಿ ಸೂಕ್ಷ್ಮವಾದ ಆಸಕ್ತಿಯನ್ನು ತೆಗೆದುಕೊಂಡಿದ್ದಂತೆಯೇ ಈಗ ಅವರು ಯೇಸುವಿನ ಮೇಲೆ ನಿಗಾಯಿಡಲು ಪ್ರಾರಂಭಿಸಿದರು. ಈ ವ್ಯಕ್ತಿಗಳು ಜನರೊಂದಿಗೆ ಬಹಳ ಪ್ರಸಿದ್ಧರಾಗಿರುವದು ಅವರಿಗೆ ಸಂತೋಷವನ್ನುಂಟುಮಾಡಲಿಲ್ಲ. ಒಂದುವೇಳೆ ಪ್ರತಿಯೊಬ್ಬರು ಯೋಹಾನ ಮತ್ತು ಯೇಸುವನ್ನು ಹಿಂಬಾಲಿಸುವದಾದರೆ ಫರಿಸಾಯರು ಜನರ ಮೇಲಿನ ತಮ್ಮ ಅಧಿಕಾರ ಮತ್ತು ಪ್ರಭಾವವನ್ನು ಕಳೆದುಕೊಳ್ಳುವರು (ಮಾರ್ಕ 3:6 ಮತ್ತು ವ್ಯಾಖ್ಯಾನ ನೋಡಿರಿ).

ಆದುದರಿಂದ, ಫರಿಸಾಯರೊಂದಿಗೆ ಅನಾವಶ್ಯಕ ವಿವಾದವು ಬರಬಾರದೆಂದು ಯೇಸು ಯೂದಾಯವನ್ನು ಬಿಟ್ಟು ತಿರಿಗಿ ಗಲಿಲಾಯಕ್ಕೆ ಹೋದನು. ಫರಿಸಾರಿಯರು ಮತ್ತು ಇತರ ಯೆಹೂದ್ಯರು ನಾಯಕರಿಗೆ ಕೋಪ ಎಬ್ಬಿಸುವದು ಆತನಿಗೆ ಇಷ್ಟವಿರಲಿಲ್ಲ.

ಆತನು ಇನ್ನು ಎಷ್ಟೋ ಬೋಧಿಸುವದು ಮತ್ತು ಸುವಾರ್ತೆಸಾರುವದು ಇತ್ತು ಆತನು ಅವರ ಕೈಯಲ್ಲಿ ಬಾಧೆ ಪಟ್ಟು ಸಾಯುವ ಸಮಯವು ಇನ್ನೂ ಬಂದಿರಲಿಲ್ಲ.

**4-5** ಯೇಸು ಗಲಿಲಾಯವನ್ನು ತಲುಪುವದಕ್ಕೆ ಸಮಾರ್ಯ ಸೀಮೆಯನ್ನು ಹಾದು ಹೋಗಬೇಕಾಯಿತು, ಅದು ಯುದಾಯ ಮತ್ತು ಗಲಿಲಾಯಗಳ ನಡುವೆ ಇರುತ್ತದೆ. ಯೇಸು ಅಬ್ರಹಾಮನ ಮೊಮ್ಮಗನಾದ ಯಾಕೋಬನು ತನ್ನ ಮಗನಾದ ಯೋಸೇಫನಿಗೆ [34] ಕೊಟ್ಟ ಭೂಮಿಯ ಬಳಿಯಲ್ಲಿ ವಿಶ್ರಮಿಸಿಕೊಳ್ಳಲು ನಿಂತುಕೊಂಡನು (ಆದಿಕಾಂಡ 33:19, 48:22).

ಯೇಸು ಅನಂತರದಲ್ಲಿ ತನ್ನ ಶಿಷ್ಯರಿಗೆ ಅನ್ಯ ಜನಗಳ ಕಡೆಗೆ ಹೋಗಬೇಡಿರಿ, ಸಮಾರ್ಯರ ಊರೊಳಗೆ ಕಾಲಿಡಬೇಡಿರಿ ಎಂದು ಹೇಳಿದನು (ಮತ್ತಾಯ 10:5 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ಈ ಸಮಯದಲ್ಲಿ ಆತನು ಗಲಿಲಾಯಕ್ಕೆ ಹೋಗುವಾಗ ಸಮಾರ್ಯದ ಊರೊಂದರಲ್ಲಿ ಎರಡು ದಿನಗಳವರೆಗೆ ಉಳಿದುಕೊಂಡು ಆ ಊರಿಗೆ ದೊಡ್ಡ ಆಶೀರ್ವಾದವನ್ನು ತಂದನು (ವಚನ 40-41)

**6** ಯಾಕೋಬನು ಸಮಾರ್ಯರ ವಿಶೇಷ ಗೌರವಕ್ಕೆ ಪಾತ್ರನಾಗಿದ್ದನು. ಆತನು ಆಸ್ಥಳದಲ್ಲಿ ಒಂದು ಬಾವಿಯನ್ನು ಅಗೆಯಿಸಿದ್ದನು ಹೀಗೆ ಅದು ಯಾಕೋಬನ ಬಾವಿಯೆಂದು ಕರೆಯಲ್ಪಡುತ್ತಿತ್ತು. ಯೇಸು ಬಳಲಿದ್ದನು. ಆತನು ನಮ್ಮ ಹಾಗೆಯೇ ಒಬ್ಬ ಮನುಷ್ಯನಾಗಿದ್ದನು. ಆರನೆಯ ತಾಸಿನಲ್ಲಿ ಅಂದರೆ ಮಧ್ಯಾಹ್ನದ ವೇಳೆಯಲ್ಲಿ ಆತನು ಬಾವಿಯ ಬಳಿಯಲ್ಲಿ ಹೋಗಿ ಕೂತುಕೊಂಡನು.

**7** ಆಗ ಒಬ್ಬ ಸ್ತ್ರೀಯು ಬಾವಿಗೆ ಬಂದಳು, ಯೇಸು ಆಕೆಗೆ ಕುಡಿಯಲು ಸ್ವಲ್ಪ ನೀರು ಕೊಡುವಂತೆ ಕೇಳಿದನು. ಆತನ ಉದ್ದೇಶವು ಆಕೆಯ ಆತ್ಮೀಕ ಅಗತ್ಯತೆಯನ್ನು ತೃಪ್ತಿ ಪಡಿಸುವದೇ ಆಗಿತ್ತು. ಆದರೆ ಆತನು ತನ್ನ ಶಾರೀರಿಕ ಅಗತ್ಯತೆಯನ್ನು ತೃಪ್ತಿಪಡಿಸೆಂದು ಕೇಳುವದರ ಮೂಲಕ ಪ್ರಾರಂಭಿಸಿದನು. ಅನೇಕ ಕ್ರೈಸ್ತರು ತಾವು ಸ್ವತ: ಕೆಲವು ಶಾರೀರಿಕ ಅಗತ್ಯತೆಗಳಲ್ಲಿ ಇರುವಾಗ ಸಾಮಾನ್ಯವಾಗಿ ಇತರರು ಅವರ ಆತ್ಮೀಕ ಸಾಕ್ಷಿಯನ್ನು ಕೇಳಲು ಮನಸ್ಸುಳ್ಳವರಾಗಿರುತ್ತಾರೆಂಬದನ್ನು ಕಂಡುಕೊಂಡಿದ್ದಾರೆ.

**8-9** ಯೇಸು ನೀರು ಕೊಡುವಂತೆ ಸಮಾರ್ಯ ಸ್ತ್ರೀಗೆ ಮಾಡಿದ ಮನವಿಯು ಎರಡು ಕಾರಣಗಳಿಗಾಗಿ ಅಸಹಜವಾಗಿದೆ. ಮೊದಲನೆಯದಾಗಿ ಒಬ್ಬ ಯೆಹೂದ್ಯನು, ವಿಶೇಷವಾಗಿ ಒಬ್ಬ ಬೋಧಕನು ಎಂದಿಗೂ ಸಹ ಒಬ್ಬಂಟಿಗನಾಗಿ ಯಾವದೇ ಸ್ತ್ರೀಯೊಂದಿಗೆ ಮಾತಾಡುತ್ತಿರಲಿಲ್ಲ. ಎರಡನೆಯದಾಗಿ ಈ ಸ್ತ್ರೀಯು ಒಬ್ಬ ಸಮಾರ್ಯದವಳಾಗಿದ್ದಳು. ಯೆಹೂದ್ಯ.ರು ಮತ್ತು ಸಮಾರ್ಯರು ಒಬ್ಬರನ್ನೊಬ್ಬರು ದ್ವೇಷಿಸುತ್ತಿದ್ದರು.

ಅನೇಕ ವರ್ಷಗಳ ಹಿಂದೆ ಸಮಾರ್ಯರು ಸಾಮಾನ್ಯ ಯೆಹೂದ್ಯರಾಗಿದ್ದರು. ನಂತರ ಅಶ್ಯೂರ್ಯರು ಅವರನ್ನು ಗೆದ್ದುಕೊಂಡರು. ಅಶ್ಯೂರ್ಯರು ಅನ್ಯದೇಶವರನ್ನು ಕರೆತಂದು ಸಮಾರ್ಯರು ಅವರೊಂದಿಗೆ ಅಂತರವಿವಾಹಮಾಡಿಕೊಂಡು

ಅವರ ದೇವರುಗಳನ್ನು ಆರಾದಿಸಲು ಪ್ರಾರಂಭಿಸಿದರು (2 ಅರಸುಗಳು 17:22-23). ಹೀಗೆ ಸಮಾರ್ಯರು ಅರೆಯೆಹೂದ್ಯರಾದರು. ಯೇಸುವಿನ ಕಾಲದಲ್ಲಿ ಅವರು ಪು ನ: ಏಕ ಸತ್ಯ ದೇವರನ್ನು ಆರಾಧಿಸಲು ಪ್ರಾರಂಭಿಸಿದ್ದರಾದರೂ ಅವರು ಯೆರೂಸಲೇಮಿನಲ್ಲಿರುವ ಯೆಹೂದ್ಯ ದೇವಾಲಯದಲ್ಲಿ ಆರಾಧಿಸಲು ತಮ್ಮದೇ ಆದ ದೇವಾಲಯವನ್ನು ಕಟ್ಟಿಕೊಂಡಿದ್ದರು (ವಚನ 20 ನೋಡಿರಿ), ಆದರೆ ಅನಂತರ ಯೆಹೂದ್ಯರು ಅದನ್ನು ಸುಟ್ಟು ಹಾಕಿದ್ದರು. ಹೀಗೆ ಈ ಎರಡು ಜನಾಂಗಗಳ ನಡುವೆ ಒಂದು ದೊಡ್ಡವೈರತ್ವವಿತ್ತು. ಈ ಕಾರಣದಿಂದಲೇ ಯೋಹಾನನು 9ನೇ ವಚನದಲ್ಲಿ "ಯೆಹೂದ್ಯರಿಗೂ ಸಮಾರ್ಯರಿಗೂ ಬಳಕೆಯಿರಲಿಲ್ಲ" ಎಂದು ಹೇಳುತ್ತಾನೆ.

**10** ಯೇಸು ಯೆಹೂದ್ಯರ ಮತ್ತು ಸಮಾರ್ಯರ ನಡುವಿನ ಭಿನ್ನಾಭಿಪ್ರಾಯಗಳ ಕುರಿತು ಮಾತಾಡಲಿಚ್ಚಿಸಲಿಲ್ಲ. ಆತನು ಆ ಸ್ತ್ರೀಗೆ ದೇವರ ವರದ ಕುರಿತಾಗಿ, ಅಂದರೆ ಆತನು ಕೊಡುವ ನೂತನ ಜೀವದ ವರದಕುರಿತಾಗಿ ಹೇಳಲು ಬಯಸಿದನು. ಯೇಸು ಅದನ್ನು ಜೀವಕರವಾದ ನೀರು ಎಂದು ಕರೆದನು. ದೇವರ ವರ ಎಂದರೆ ಸ್ವತ: ಕ್ರಿಸ್ತನೇ ಎಂಬದಾಗಿಯೂ ಸಹ ನಾವು ಅರ್ಥಮಾಡಿಕೊಳ್ಳಬಹುದು. ಯೇಸುವಿನ ಕಾಲದಲ್ಲಿ ಹರಿಯುವಂತ ಯಾವದೇ ನೀರು "ಜೀವಕರ ನೀರು" ಎಂದು ಕರೆಯಲ್ಪಡುತ್ತಿತ್ತು. ಒಬ್ಬನ ಕೈಗಳನ್ನು ಮತ್ತು ಕುಡಿಯುವ ಬಟ್ಟಲುಗಳನ್ನು ತೊಳೆಯಲು ಇದು ಉತ್ತಮ ನೀರು ಎಂಬದಾಗಿ ಪರಿಗಣಿಸಲ್ಪಡುತ್ತಿತ್ತು ಆದರೆ ಯೇಸು ಇಲ್ಲಿ "ಜೀವಕರವಾದ ನೀರು" ಎಂಬ ಪದಕ್ಕೆ ಒಂದು ಹೆಚ್ಚು ಆಳವಾದ ಅರ್ಥವನ್ನು ಕೊಡುತ್ತಾನೆ. "ಜೀವಕರವಾದ ನೀರು" ಪವಿತ್ರಾತ್ಮನಿಂದ ಬರುವ ನೂತನ ಆತ್ಮೀಕ ಜೀವವಾಗಿದೆ (ಯೋಹಾನ 3:5). ಇದು ಒಬ್ಬ ವ್ಯಕ್ತಿಯೊಳಗೆ ಹರಿಯುವದು ಮಾತ್ರವಲ್ಲ ಆವ್ಯಕ್ತಿಯಿಂದ ಹೊರಗೂ ಹರಿಯುತ್ತದೆ (ಯೋಹಾನ 7:38-39) ಪವಿತ್ರಾತ್ಮನು ಉಕ್ಕುವ ಒರತೆಯಾಗಿದ್ದು ಎಂದಿಗೂ ಒಣಗಿ ಹೋಗುವದಿಲ್ಲ [35] (ವಚನ 14).

ಆ ಸ್ತ್ರೀಗೆ ಯೇಸು ಯಾರೆಂಬದು ತಿಳಿದಿದ್ದರೆ ಆತನ ಬದಲಾಗಿ ಅವಳೇ ಅವನಿಂದ ನೀರನ್ನು ಕೇಳಿರುತ್ತಿದ್ದಳು! ಯೇಸು ಮಾತ್ರವೇ ಜೀವಕರವಾದ ನೀರಿನ ವರವನ್ನು ಕೊಡಬಲ್ಲನು (ಪ್ರಕ 21:6).

**11-12** ಇತರರ ಹಾಗೆಯೇ (ಯೋಹಾನ 2:20, 3:4) ಈ ಸ್ತ್ರೀಯು ಯೇಸುವಿನ ಆತ್ಮೀಕ ಅರ್ಥವನ್ನು ತಿಳಿದುಕೊಳ್ಳಲಿಲ್ಲ. ಆತನು ಸಾಮಾನ್ಯವಾದ ಕುಡಿಯುವ ನೀರಿನ ಬಗ್ಗೆ ಮಾತಾಡುತ್ತಿರುವನೆಂದು ಅವಳು ಯೋಚಿಸಿದಳು. "ನೀನು ಈ ಬಾವಿಯನ್ನು ಮಾಡಿಸಿದ ನಮ್ಮ ಮೂಲಪಿತೃವಾದ ಯಾಕೋಬನಿಗಿಂತಲೂ ಉತ್ತಮವಾದ ನೀರನ್ನು ನಮಗೆ ಕೊಡಬಲ್ಲೆಯೋ?".

**13-14** ಆಗ ಯೇಸು ಆ ಸ್ತ್ರೀಗೆ ತಾನು ಕೊಡುವ ನೀರು ಸಾಮಾನ್ಯ ನೀರಿಗಿಂತವ್ಯತ್ಯಾಸವಾದದ್ದೆಂದು ವಿವರಿಸಿದನು. ಯೇಸುವಿನ ನೀರನ್ನು ಕುಡಿಯುವವರು ತಿರಿಗಿ ನೀರಡಿಕೆಗೊಳ್ಳುವದಿಲ್ಲ. ಯೇಸುವಿನ ನೀರು ಒಬ್ಬ ವ್ಯಕ್ತಿಯಲ್ಲಿ ನಿರಂತರವೂ ಉಕ್ಕುವ ಒರತೆಯೂಗಿರುತ್ತದೆ. ಇದು ನಿರಂತರವಾಗಿ ಜೀವವನ್ನು, ನಿತ್ಯಜೀವವನ್ನು ಕೊಡುತ್ತದೆ.

ಒಬ್ಬ ವ್ಯಕ್ತಿಯು ತನ್ನಲ್ಲಿ ನಂಬಕೆಯಿಡುವಾಗ ಆತನು ಇನ್ನೆಂದಿಗೂ ಆತ್ಮೀಕ ಸಂಗತಿಗಳಿಗಾಗಿ ಬಾಯಾರಿಕೆಗೊಳ್ಳುವದಿಲ್ಲ ಎಂದು ಯೇಸು ಹೇಳುತ್ತಿಲ್ಲ. ನಾವು ಸದಾಕಾಲವು ನೀತಿಗಾಗಿ ಹಸಿವೆ ಮತ್ತು ಬಾಯಾರಿಕೆಯುಳ್ಳವರಾಗಿರಬೇಕು (ಮತ್ತಾಯ 5:6) ನಾವು ದೇವರ ಅನ್ಯೋನ್ಯತೆಗಾಗಿ, ಆತನ ಆಶೀರ್ವಾದ, ಕೃಪೆಗಾಗಿ ಹಸಿವೆಗೊಳ್ಳಬೇಕು. ಆದರೆ ನಾವು ಹಸಿವೆಗೊಳ್ಳುವಾಗ ತಕ್ಷಣವೇ ತೃಪ್ತಿಹೊಂದುತ್ತೇವೆ. ನಾವು ಎಂದಿಗೂ ಬಾಯಾರಿದವರಾಗಿ ಉಳಿಯುದಿಲ್ಲ. ನಾವು ಎಷ್ಟಾಗಿ ದೇವರ ಕೃಪೆಗೋಸ್ಕರ ಬಾಯಾರಿಕೆಗೊಳ್ಳುತ್ತೇವೊ ಆತನ ನಮ್ಮನ್ನು ತುಂಬಿಸುತ್ತಾನೆ. ಆತನ ಜೀವಕರವಾದ ನೀರು ಎಂದಿಗೂ ಒಣಗಿ ಹೋಗುವದಿಲ್ಲ.

**15** ಆ ಸ್ತ್ರೀಯು ಈಗಲೂ ಯೇಸು ಯಾವರೀತಿಯ ನೀರಿನ ಬಗ್ಗೆ ಮಾತಾಡುತ್ತಿರುವನೆಂಬದನ್ನು ಅಪಾರ್ಥಮಾಡಿಕೊಂಡಳು. ಅವಳು ತನ್ನೊಳಗೆ "ನಾನು ಅತನು ಕೊಡುವ ನೀರನ್ನು ಕುಡಿಯುವದಾದರೆ ನಾನು ಇನ್ನೆಂದಿಗೂ ಮತ್ತೆಷ್ಟು ನೀರಿಗಾಗಿ ಆ ಬಾವಿಗೆ ಬರುವ ಅಗತ್ಯವಿರುವದಿಲ್ಲ.ನಾನು ಮತ್ತೆ ಇನ್ನೆಂದೂ ಕುಡಿಯಬೇಕಾಗಿಲ್ಲ" ಅಂದುಕೊಂಡಳು.

**16** ಯೇಸು ಆ ಸ್ತ್ರೀಯ ಆಳವಾದ ಆತ್ಮೀಕ ಅಗತ್ಯತೆಯನ್ನು ತಿಳಿದವನಾಗಿದ್ದನು. ಅಕೆಯು ತನ್ನ ಗಂಡನಲ್ಲದ ವ್ಯಕ್ತಿಯೊಂದಿಗೆ ಪಾಪದಲ್ಲಿ ಜೀವಿಸುತ್ತಿದ್ದಳ್ಳೆಂದು ಆತನಿಗೆ ಗೊತ್ತಿತ್ತು. ಅವಳು ಆತನ ಆತ್ಮೀಕ ನೀರಿನ ಕುರಿತು ಅರ್ಥವಾಡಿಕೊಳ್ಳಲಿಲ್ಲ. ಆದುದರಿಂದ, ಆತನು ವಿಷಯವನ್ನು ಬದಲಾಯಿಸಿ ಅಕೆಯ ಪಾಪದ ಕುರಿತಾಗಿ ಮಾತಾಡಲಾರಂಭಿಸಿದನು "ಹೋಗಿ ನಿನ್ನ ಗಂಡನನ್ನು ಕರಕೊಂಡು ಬಾ" ಎಂದು ಅಕೆಗೆ ಹೇಳಿದನು. ಇದನ್ನು ಹೇಳುವದರಲ್ಲಿ ಆತನ ಉದ್ದೇಶವು ಆಕೆಯ ಪಾಪದ ಮನಃಸಾಕ್ಷಿಯನ್ನು ಎಚ್ಚರಗೊಳಿಸುವದೇ ಆಗಿತ್ತು.

**17-18** ಸ್ತ್ರೀಯು ಆಕೆಯ ಗಂಡ ಅಥವಾ ಮುಂಚಿನ ಗಂಡಂದಿರ ಕುರಿತಾಗಿ ಮಾತಾಡಲು ಇಷ್ಟಪಡಲಿಲ್ಲ. ಆದ್ದರಿಂದ ಅವಳು ಸುಳ್ಳಾಡಿದಳು. ಅವಳು "ನನಗೆ ಗಂಡನಿಲ್ಲ" ಎಂದಳು. ಅವಳ ಅರ್ಥವೇನೆಂದರೆ: ನಾನು ಯಾವದೇ ಪು ರುಷನೊಂದಿಗೆ ಜೀವಿಸುತ್ತಿಲ್ಲ! ಎಂದಾಗಿತ್ತು.

ಆದರೆ ಸ್ತ್ರೀಯು ಯೇಸುವನ್ನು ವಂಚಿಸಲು ಪ್ರಯತ್ನಿಸಿದಳಾದರೂ ಒಂದು ವಿಧದಲ್ಲಿ ಆಕೆಯ ಉತ್ತರವು ನಿಜವಾಗಿತ್ತು. ಆಕೆಯು ತನ್ನ ಗಂಡನಲ್ಲದ ವ್ಯಕ್ತಿಯೊಂದಿಗೆ ಜೀವಿಸುತ್ತಿದ್ದಳು.ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರವಾಗಿ ಒಬ್ಬ ಸ್ತ್ರೀಯ ಮೊದಲ ಗಂಡನು ಇನ್ನೂ ಜೀವಿಸಿರುವಾಗಲೇ ಆಕೆಯೊಂದಿಗೆ ಬೇರೆ ಯಾವದೇ ಪುರುಷನು ಜೀವಿಸಿದರೂ ಆತನನ್ನು ಆಕೆಯ ಗಂಡನೆಂದು ಪರಿಗಣಿಸಲ್ಪಡುತ್ತಿರಲಿಲ್ಲ. ಬೇರೆಮಾತುಗಳಲ್ಲಿ ಹೇಳುವದಾದರೆ ಈ ಸಮಾರ್ಯ ಸ್ತ್ರೀಯು ವ್ಯಭಿಚಾರದಲ್ಲಿ ಜೀವಿಸುತ್ತಿದ್ದಳು (ಮಾರ್ಕ 10:12).

ನಾವು ಎಂದಿಗೂ ದೇವರನ್ನು ವಂಚಿಸಲು ಸಾಧ್ಯವಿಲ್ಲ. ಯೇಸು ದೇವರ ಜ್ಞಾನವನ್ನು ಹೊಂದಿದ್ದನಾದ್ದರಿಂದ ಆತನು ಈ ಸ್ತ್ರೀಯ ಬಗ್ಗೆ ಎಲ್ಲವನ್ನು ಬಲ್ಲವನಾಗಿದ್ದನು. ಆಕೆಯು ಆತನನ್ನು ವಂಚಿಸಲಾಗಲಿಲ್ಲ.

19 ಆ ಸ್ತ್ರೀಯು ಯೇಸುವಿಗೆ ತನ್ನ ಹಿಂದಿನ ಜೀವಿತದ ಬಗ್ಗೆ ತಿಳಿದಿರುವದಕ್ಕೆ ಆಶ್ಚರ್ಯಪಟ್ಟಳು. ಅಕ್ಷಣದಲ್ಲಿಯೇ ಅವಳು ಆತನೊಬ್ಬ ಪ್ರವಾದಿಯಾಗಿದ್ದಾನೆಂದು ಅರಿತು ಕೊಂಡಳು.

ಸಮಾರ್ಯರು ಹಳೆ ಒಡಂಬಡಿಕೆಯ ಮೊದಲು ಐದು ಪು ಸ್ತಕಗಳನ್ನು ಮಾತ್ರವೇ ನಂಬುತ್ತಿದ್ದರು. ಆದುದರಿಂದ ಅವರು ಗುರುತಿಸಿದ ಒಬ್ಬನೇ ಪ್ರವಾದಿಯೆಂದರೆ ಮೋಶೆಯು ಧರ್ಮೋಪದೇಶಕಾಂಡ ಪು ಸ್ತಕದಲ್ಲಿ ತಿಳಿಸಿದ ಪ್ರವಾದಿಯೇ ಆಗಿದ್ದನು. ದೇವರು ಒಬ್ಬ ಪ್ರವಾದಿಯನ್ನು ಎಬ್ಬಿಸುವನೆಂದು ಮೋಶೆಯು ಹೇಳಿದನು (ಧರ್ಮೋಪದೇಶಕಾಂಡ 18:15) ಮತ್ತು ಆ ಪ್ರವಾದಿಯು ಮೆಸ್ಸಿಯನಾಗಿರುವನೆಂದು ಸಮಾರ್ಯರು ಯೋಚಿಸಿಕೊಂಡರು.

ಹೀಗಿರುವದರಿಂದ, ಸ್ತ್ರೀಯು ಯೇಸುವನ್ನು ಒಬ್ಬ "ಪ್ರವಾದಿ" ಎಂದು ಕರೆದಾಗ ಈತನು ಮೆಸ್ಸೀಯನೇ ಆಗಿರಬೇಕೆಂಬದು ಆಕೆಯ ಯೋಚನೆಯಾಗಿತ್ತು (ವಚನ 25)

20 ಆದರೆ ಪು ನ: ಆಕೆಯು ವಿಷಯವನ್ನು ಬದಲಾಯಿಸಲು ಪ್ರಯತ್ನಿಸಿದಳು. ಯೆಹೂದ್ಯರ ನಂಬಿಕೆಯ ಪ್ರಕಾರ ದೇವರು ಯೆರೂಸಲೇಮಿನಲ್ಲಿ ಆರಾಧಿಸಲ್ಪಡಬೇಕು ಎಂಬದು ಆಕೆಗೆ ಗೊತ್ತಿತ್ತು (2 ಪೂ ಕಾಲವೃತ್ತಾಂತ 6:6, 7:12 ಮತ್ತು ಕೀರ್ತನೆಗಳು 18:68). ಆದರೆ ಈ ವಾಕ್ಯಭಾಗಗಳು ಹಳೆ ಒಡಂಬಡಿಕೆಯ ಮೊದಲಿನ ಐದು ಪುಸ್ತಕಗಳಲ್ಲಿ ಇಲ್ಲದ್ದರಿಂದ ಸಮಾರ್ಯರು ಅವು ಗಳನ್ನು ಸ್ವೀಕರಿಸಲಿಲ್ಲ, ಸಮಾರ್ಯರು ಸಮಾರ್ಯದಲ್ಲಿನ ಗೆರಿಜೀಮ ಬೆಟ್ಟದ ಮೇಲೆ ಆರಾಧಿಸುತ್ತಿದ್ದರು,

ಅಲ್ಲಿ "ಅವರ ಮೂಲಪಿತೃಗಳು ಅಂದರೆ ಅಬ್ರಹಾಮ, ಯಾಕೋಬರು ಆರಾಧಿಸಿದರು" (ಆದಿಕಾಂಡ 12:7, 33:20, ಧರ್ಮೋಪದೇಶಕಾಂಡ 11:29).

ಯೇಸು ಒಬ್ಬ ಪ್ರವಾದಿಯಾಗಿದ್ದನಾದ್ದರಿಂದ ಸಮಾರ್ಯರು ಸರಿಯೋ ಅಥವಾ ಯೆಹೂದ್ಯರು ಸರಿಯೋ ಎಂದು ಆತನು ತನಗೆ ಹೇಳುವನೆಂದು ಆ ಸ್ತ್ರೀಯು ಊಹಿಸಿಕೊಂಡಳು.

21 ಯೇಸು ಆಕೆಗೆ ಒಂದು ಕಾಲ ಬರುತ್ತದೆ ಆಗ ಜನರು ಯೆರೂಸಲೇಮಿನಲ್ಲಿಯಾಗಲಿ ಅಥವಾ ಗೇರಿಜೀಮ ಬೆಟ್ಟದಲ್ಲಿಯಾಗಲಿ ಸಹ ಆರಾಧಿಸುವದಿಲ್ಲ. ನಾಲ್ವತ್ತು ವರ್ಷಗಳಲ್ಲಿ ಯೆರೂಸಲೇಮು ರೋಮಾಯರಿಂದ ನಾಶವಾಗುವದು. ಆಗ ಜನರು ಕೈಯಿಂದ ಕಟ್ಟಿದ ದೇವಾಲಯಗಳಲ್ಲಿ ದೇವರು ವಾಸಿಸುವದಿಲ್ಲ ಎಂಬದನ್ನು ಗ್ರಹಿಸಿಕೊಳ್ಳುವರು (ಅ.ಕೃತ್ಯ 7:48-49, 17:24) ಆತನು ಕೇವಲ ಬೆಟ್ಟದ ತುದಿಯಲ್ಲಿಯೂ ಸಹ ವಾಸಿಸುವದಿಲ್ಲ. ದೇವರನ್ನು ಎಲ್ಲಿಯಾದರೂ ಆರಾಧಿಸಬಹುದು ಯಾಕೆಂದರೆ ದೇವರು ಆತ್ಮಸ್ವರೂಪನು (ವಚನ 24).

22 ಸಮಾರ್ಯರಿಗೆ ತಾವು ಏನನ್ನು ಆರಾಧಿಸುತ್ತಿದ್ದೇವೆಂದು ತಿಳಿದಿರಲಿಲ್ಲ (ಅ.ಕೃತ್ಯ 17:23) ಅವರಿಗೆ ದೇವರ ಕುರಿತಾದ ಪೂರ್ಣ ತಿಳುವಳಿಕೆ ಇರಲಿಲ್ಲ, ಯಾಕೆಂದರೆ ಹೆಚ್ಚು ಕಡಿಮೆ ಹಳೆ ಒಡಂಬಡಿಕೆಯನ್ನೆಲ್ಲಾ ಅವರು ತಿರಸ್ಕರಿಸಿದ್ದರು. ಆದರೆ ಯೆಹೂದ್ಯರು ದೇವರ ಕುರಿತಾಗಿ ಹೆಚ್ಚು ತಿಳುವಳಿಕೆ ಹೊಂದಿದ್ದರು. ಕಾರಣ ಅವರ ಹಳೆ ಒಡಂಬಡಿಕೆಯ ವಾಕ್ಯಗಳನ್ನೆಲ್ಲಾ ಸಂಪೂರ್ಣವಾಗಿ ನಂಬುತ್ತಿದ್ದರು. ಅದು ಮಾತ್ರವೇ ಅಲ್ಲದೆ ರಕ್ಷಣೆಯು ಅಂದರೆ ರಕ್ಷಣೆಯನ್ನು ಹೊಂದುವ ಮಾರ್ಗವು ಯೆಹೂದ್ಯರೊಳಗಿಂದ ಬರುತ್ತದೆ. ಯೇಸುವಿನ ಅರ್ಥವು ಈ ರೀತಿಯಾಗಿತ್ತು: ರಕ್ಷಣೆಯನ್ನು ಪಡೆಯುವ ಮಾರ್ಗವು ಮೆಸ್ಸಿಯನಾದ ಕ್ರಿಸ್ತನೇ ಆಗಿದ್ದನು ಮತ್ತು ಕ್ರಿಸ್ತನು ಒಬ್ಬ ಯೆಹೂದ್ಯನಾಗಿದ್ದನು.

23 "ಯೇಸು" ಆತ್ಮೀಕ ರೀತಿಯಲ್ಲಿ ಸತ್ಯಕ್ಕೆ ತಕ್ಕಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ, ಅದು ಈಗಲೇ ಬಂದಿದೆ" ಎಂದು ಹೇಳಿದನು. ಸತ್ಯಭಾವದಿಂದ ಆರಾಧಿಸುವವರು ದೇವರು ಆತ್ಮಸ್ವರೂಪಿ ಎಂಬದನ್ನು ಅರ್ಥ ಮಾಡಿಕೊಳ್ಳುತ್ತಾರೆ (ವಚನ 24).

ದೇವರನ್ನ ಬಹಿರಂಗವಾಗಿ ಆಗಲಿ ಅಥವಾ ವಿಶೇಷ ಸ್ಥಳಗಳಲ್ಲಿಯಾಗಲಿ ವಿಶೇಷ ಆಚಾರಗಳಿಂದ ಆರಾಧಿಸಲು ಸಾಧ್ಯವಿಲ್ಲ. ದೇವರು ಆತ್ಮದಲ್ಲಿಯೂ, ಸತ್ಯಕ್ಕೆ ತಕ್ಕಹಾಗೆಯೂ ಮಾತ್ರವೇ ಆರಾಧಿಸಲ್ಪಡಬಲ್ಲನು. ಇದರರ್ಥ ವೇನೆಂದರೆ ಮಾನವನು ತನ್ನ ಆತ್ಮದಿಂದ ಆರಾಧಿಸಬೇಕು[36] ಮತ್ತು ಆತನು ಸತ್ಯಕ್ಕೆ ತಕ್ಕಹಾಗೆ ಆರಾಧಿಸ ಬೇಕು, ಅಂದರೆ ತನ್ನ ಹೃದಯ ಮತ್ತು ಆತ್ಮಗಳಿಂದ ಸತ್ಯವಾಗಿಯೂ, ಯಥಾರ್ಥವಾಗಿಯೂ ಆರಾಧಿಸಬೇಕು.

ದೇವರು ತನ್ನನ್ನು ಆತ್ಮೀಕವಾಗಿ ತಮ್ಮ ಹೃದಯಗಳಿಂದ ಆರಾಧಿಸುವವರಿಗಾಗಿ ಹುಡುಕುತ್ತಾನೆ. ಮಾನವರು ಕಲ್ಲುಗಳನ್ನು ವಿಗ್ರಹಗಳನ್ನು ಒಂದು ರೀತಿಯಲ್ಲಿ ಆರಾಧಿಸುತ್ತಾರೆ. ಆದರೆ ದೇವರು ಇನ್ನೊಂದು ರೀತಿಯಲ್ಲಿ ಆರಾಧಿಸಲ್ಪಡಬೇಕು. ಆತನನ್ನು ಆತ್ಮೀಕ ರೀತಿಯಲ್ಲಿ ಸತ್ಯಕ್ಕೆ ತಕ್ಕಹಾಗೆ ಆರಾಧಿಸಬೇಕು.

24 ದೇವರು ಆತ್ಮಸ್ವರೂಪನು, ದೇವರ ಸ್ವಭಾವವು ಆತ್ಮವಾಗಿದೆ. ಆತನು ಜೀವಕೊಡುವ ಆತ್ಮ. ದೇವರು ಕಲ್ಲಲ್ಲ, ಆತನು ಶರೀರವಲ್ಲ, ಆತನು ಭೂಮಿಯಲ್ಲ, ಆತನು ಗಾಳಿಯಲ್ಲ, ಆತನು ಆತ್ಮವಾಗಿದ್ದಾನೆ. ಆದ್ದರಿಂದ ಆತನು ಆತ್ಮೀಕವಾಗಿಯೇ ಆರಾಧಿಸಲ್ಪಡಬೇಕು. ನಮ್ಮ ಆತ್ಮಗಳಿಂದ ಮಾತ್ರವೇ ನಾವು ದೇವರನ್ನು ಸತ್ಯವಾಗಿ ಆರಾಧಿಸಬಹುದು.

25 ಸ್ತ್ರೀಯು ಯೇಸು ಆಕೆಗೆ ಹೇಳುತ್ತಿದ್ದ ಆತ್ಮೀಕ ಸಂಗತಿಗಳನ್ನು ಅರ್ಥಮಾಡಿಕೊಳ್ಳಲಾಗಲಿಲ್ಲ. ಆಕೆಯು ಮೆಸ್ಸೀಯ[37] ಬಂದಾಗ ನಮಗೆ ಆತನು ಎಲ್ಲವನ್ನು ವಿವರಿಸುವನೆಂದು ಅವಳು ಹೇಳಿದಳು. ಬಹುಶ: ಅವಳು ಯೇಸುವೇ ಮೆಸ್ಸಿಯನಾಗಿರಬೇಕೆಂದು ಚಿಂತನೆಗೊಂಡಳು.

26 "ನಾನೇ ಆ ಮೆಸ್ಸಿಯನು" ಎಂದು ಯೇಸು ಆಕೆಗೆ ಹೇಳಿದನು. ಅನೇಕ ವೇಳೆ ಯೇಸು ಯೆಹೂದ್ಯರಿಗೆ ತಾನು ಮೆಸ್ಸಿಯ ನೆಂಬದನ್ನು ಬಯಲು ಪಡಿಸಲಿಲ್ಲ ಯಾಕೆಂದರೆ ಅವರು ಆತನನ್ನು ಅರಸನಾಗಿ ಮಾಡಲು ಪ್ರಯತ್ನಿಸುತ್ತಿದ್ದರು (ಮಾರ್ಕ 5:43, 8:30 ಮತ್ತು ವ್ಯಾಖ್ಯಾನ ನೋಡಿರಿ) ಆದರೆ ಸಮಾರ್ಯರ ಮದ್ಯದಲ್ಲಿ ಆತನು ತನ್ನ ಗುರುತನ್ನು ಗುಟ್ಟಾಗಿಡಲು ಪ್ರಯತ್ನಿಸಲಿಲ್ಲ.

## ಯೇಸು ತನ್ನ ಶಿಷ್ಯರೊಂದಿಗೆ ಮಾತಾಡಿದ್ದು (4:27-42)

27 ಈ ಮುಂಚೆ ಶಿಷ್ಯರು ಆಹಾರವನ್ನು ಕೊಂಡುಕೊಳ್ಳಲು ಪಟ್ಟಣಕ್ಕೆ ಹೋಗಿದ್ದರು (ವಚನ 8). ಅವರು ತಿರಿಗಿ ಬಂದಾಗ ಯೇಸು ಸ್ತ್ರೀಯೊಬ್ಬಳೊಂದಿಗೆ ಮಾತಾಡುತ್ತಿರುವದನ್ನು ಕಂಡು ಆಶ್ಚರ್ಯಪಟ್ಟರು. ಯೆಹೂದ್ಯರ ದೃಷ್ಟಿಯಲ್ಲಿ ಒಬ್ಬ ರಬ್ಬೀ (ಬೋಧಕನು) ಸ್ತ್ರೀಯೊಂದಿಗೆ ಸಂಭಾಷಣೆ ಮಾಡುವದು ಸಮಂಜಸವಾಗಿರಲಿಲ್ಲ. ಆದರೆ ಯೇಸು ಆಕೆಯೊಂದಿಗೆ ಏಕೆ ಮಾತಾಡುತ್ತಿದ್ದನೆಂದು ಕೇಳುವದಕ್ಕೆ ಅವರು ಮುಜುಗರ ಪಟ್ಟುಕೊಂಡರು.

28-30 ಸ್ತ್ರೀಯು ಈಗ ಯೇಸು ಮೆಸ್ಸಿಯನಾಗಿದ್ದಾನೆಂಬದನ್ನು ಯೋಚಿಸಲು ಪ್ರಾರಂಭಿಸಿದನು. ಆಕೆಯ ಸ್ವಂತ ಜೀವನದಕುರಿತಾದ ಆತನ ಜ್ಞಾನವು ಆಕೆಯಲ್ಲಿ ಆಶ್ಚರ್ಯವನ್ನುಂಟು ಮಾಡಿತ್ತು. ಯೇಸು ಕೇವಲ ಆಕೆಯ "ಐದು ಮಂದಿ ಗಂಡಂದಿರ"ಬಗ್ಗೆ ಹೇಳಿದ್ದನಾದರೂ ಆತನು ಆಕೆಯು ಇದುವರೆಗೂ ಮಾಡಿದ್ದೆಲ್ಲವನ್ನೂ ಹೇಳಬಲ್ಲವನಾಗಿದ್ದನೆಂಬದನ್ನು ಆಕೆಯು ಬಲ್ಲವಳಾಗಿದ್ದಳು.

ಆ ಸ್ತ್ರೀಗೆ ಈ ಸಂಗತಿಗಳನ್ನು ತನ್ನಲ್ಲಿ ಇಟ್ಟು ಕೊಳ್ಳಲಾಗಲಿಲ್ಲ. ಅವಳು ಹೋಗಿ ತನ್ನ ಊರಿನವರಿಗೆಲ್ಲಾ ಹೇಳಿದಳು. ಕ್ರಿಸ್ತನು ತನ್ನನ್ನು ಆಕೆಗೆ ತಿಳಿಯಪಡಿಸಿದ್ದನು. ಈಗ ಅವಳು ಆತನನ್ನು ಇತರರಿಗೆ ತಿಳಿಯಪಡಿಸಲು ಹೋದಳು. ನಾವು ಸ್ವೀಕರಿಸುವ ಆಶೀರ್ವಾದಗಳು ಹಂಚಿಕೊಳ್ಳಲ್ಪಡಬೇಕು. ನಾವು ದೀಪವನ್ನು ಕೊಳಗದೊಳಗೆ ಇಟ್ಟರೆ ಅದು ಆರಿಹೋಗುವದು (ಮತ್ತಾಯ 5:15).

31-33 ಆ ಸ್ತ್ರೀಯು ತನ್ನ ಊರಿನವರನ್ನು ಕ್ರಿಸ್ತನ ದರ್ಶನ ಕ್ಕಾಗಿ ಕರೆದುಕೊಂಡು ಬರಲು ಹೋದ ಮೇಲೆ ಶಿಷ್ಯರು ತಾವು ಪಟ್ಟಣದಿಂದ ಕೊಂಡುತಂದಿದ್ದ ಆಹಾರವನ್ನು ಸೇವಿಸುವಂತೆ ಯೇಸುವಿಗೆ ಹೇಳುತ್ತಾರೆ. ಆದರೆ ಆತನು ಅವರಿಗೆ ತಿಳಿಯದಂಥ ಆಹಾರವನ್ನು ಸೇವಿಸಿದ್ದಾನೆಂದು ಹೇಳಿದನು. ಆತನು ಆತ್ಮೀಕ ಆಹಾರದ ಕುರಿತಾಗಿ ಮಾತಾಡುತ್ತಿದ್ದಾನೆಂಬದು ಅವರಿಗೆ ಅರ್ಥವಾಗಲಿಲ್ಲ (ಮತ್ತಾಯ 4:4 ನೋಡಿರಿ).

34 ದೇವರ ಚಿತ್ತವನ್ನು ಮಾಡುವದೇ ಯೇಸುವಿನ ಆಹಾರವಾಗಿತ್ತು. ಒಬ್ಬ ಹಸಿದ ಮನುಷ್ಯನು ಊಟಕ್ಕಾಗಿ ಎಷ್ಟು ಹಂಬಲಿಸುತ್ತಾನೋ? ಯೇಸು ಸಹ ದೇವರ ಚಿತ್ತವನ್ನು ಮಾಡಲು ಅಷ್ಟೇ ಹಂಬಲಿಸುತ್ತಿದ್ದನು. ಯೇಸು ದೇವರಿಗೆ ವಿಧೇಯನಾಗುವದರಿಂದ ತೃಪ್ತಿಹೊಂದಿಕೊಳ್ಳುತ್ತಿದ್ದನು. ಆತನು ದೇವರಿಗೆ ವಿಧೇಯನಾದಾಗ ಆತ್ಮೀಕ ಬಲ ಮತ್ತು ಪೋಷಣೆಯನ್ನು ಸ್ವೀಕರಿಸಿದನು. ದೇವರಿಗೆ ವಿಧೇಯರಾಗುವವರೆಲ್ಲರ ವಿಷಯದಲ್ಲಿಯೂ ಇದು ಅಷ್ಟೇ ಸತ್ಯವಾಗಿದೆ.

ದೇವರು ಲೋಕವನ್ನು, ಪಾಪಿಗಳನ್ನು ರಕ್ಷಿಸಲು ಯೇಸುವನ್ನು ಕಳುಹಿಸಿದ್ದನು (1 ತಿಮೊಥೆ 1:15). ಅದನ್ನು ಮಾಡಲು ಯೇಸು ಮರಣಿಸಬೇಕಾಗಿತ್ತು (ಮಾರ್ಕ 10:45 ಮತ್ತು ವ್ಯಾಖ್ಯಾನ ನೋಡಿರಿ). ಯೇಸು ಪ್ರತಿಕ್ಷಣವೂ ದೇವರ ಚಿತ್ತವನ್ನು ಮಾಡಬೇಕಾಗಿದ್ದು ಮಾತ್ರವಲ್ಲ ಆದರೆ ಆತನು ತನ್ನ ಕೆಲಸವನ್ನು ಪೂರೈಸಬೇಕಾಗಿತ್ತು. ಆತನು ಅದನ್ನು ಪೂರೈಸುವ ತನಕ ಪೂರ್ಣವಾಗಿತೃಪ್ತಿಗೊಳ್ಳಲಾರನು. ಯೇಸು ಶಿಲುಬೆಯ ಮೇಲೆ ಮರಣಿಸಿ ದೇವರ ಕೆಲಸವನ್ನು ಮಾಡಿ ಮುಗಿಸಿದನು.

35 ಒಬ್ಬ ರೈತನು ಬಿತ್ತಿದಾಗ ಸುಗ್ಗಿಗಾಗಿ ಕೆಲವು ತಿಂಗಳುಗಳು ಕಾಯಬೇಕು. ಆದರೆ ಯೇಸುವಿನ ಶಿಷ್ಯರು ರೈತರಂತಿರಲಿಲ್ಲ. ಆತ್ಮೀಕ ಬೀಜವನ್ನು ಬಿತ್ತುವವರು ಕೊಯ್ಯುವದಕ್ಕಾಗಿ ನಾಲ್ಕು ತಿಂಗಳು ಕಾಯಬೇಕಾಗಿಲ್ಲ. ಅವರು ಒಮ್ಮೆಲೆ ಜನರನ್ನು ದೇವರ ರಾಜ್ಯದೊಳಗೆ ಕರೆಯಲು ಪ್ರಾರಂಭಿಸಬಹುದು.

ಯೇಸುವಿನ ಕೆಲಸವು ಕೊಯ್ಯುವದಾಗಿತ್ತು. ಇದು ಶಿಷ್ಯರ ಕೆಲಸವೂ ಸಹ ಆಗಿತ್ತು (ಮಾರ್ಕ 1:17 ನೋಡಿರಿ) ಬಹುಶ: ಯೇಸು ಮಾತಾಡುತ್ತಿರುವಾಗಲೇ ಸಮಾರ್ಯ ಸ್ತ್ರೀಯಳ ಊರಿನಿಂದ ಜನರು ಆತನೆಡೆಗೆ ಬರುತ್ತಿದ್ದರು. ಅವರೇ ಸುಗ್ಗಿಯ ಪೈರಾಗಿದ್ದರು! ಬೀಜವು ಆ ಸ್ತ್ರೀಯ ಮನಸ್ಸಿನಲ್ಲಿ ಬಿತ್ತಲ್ಪಟ್ಟಿತ್ತು ಮತ್ತು ಈಗ ಸುಗ್ಗಿಯ ಪೈರು ಆಗಲೇ ಬಂದಿತ್ತು! ಯೇಸುವಿನ ಮುಖ್ಯ ಅರ್ಥವು ಈ ರೀತಿಯಾಗಿತ್ತು. ಸುಗ್ಗಿಯ ಕಾಲವು ಒಂದು ಸದಾ ಕೆಲಸವಿರುವ ಸಮಯವಾಗಿರುತ್ತದೆ. ಅಲ್ಲದೆ ಅದು ಒಂದು ಕ್ಲುಪ್ತ ಕಾಲವೂ ಸಹ ಆಗಿರುತ್ತದೆ. ಒಂದು ವೇಳೆ ಬೆಳೆಯು ಶ್ರೀಘ್ರವೇ ಕೊಯ್ಯಲ್ಪಡದಿದ್ದರೆ ಅದು ಹಾಳಾಗಿ ಹೋಗುತ್ತದೆ. ಆದುದರಿಂದ ಕ್ರಿಸ್ತನ ಶಿಷ್ಯರು ಶೀಘ್ರವಾಗಿಯೂ, ಜಾಗರೂಕರಾಗಿಯೂ ಕೆಲಸಮಾಡಬೇಕು. ಕೊಯ್ಲಿನ ಕಾಲವು ತುರ್ತು ಕೆಲಸದ್ದಾಗಿದೆ (ಮತ್ತಾಯ 9:37-38 ಮತ್ತು ವ್ಯಾಖ್ಯಾನ ನೋಡಿರಿ).

36 ಕ್ರಿಸ್ತನ ಶಿಷ್ಯರಿಗೆ ಬಿತ್ತುವದು ಮತ್ತು ಕೊಯ್ಯುವದು ಒಟ್ಟಾಗಿ ಸಾಗುತ್ತವೆ. ಶಿಷ್ಯರು ವಾಕ್ಯವನ್ನು ಬಿತ್ತುತ್ತಾರೆ (ಮಾರ್ಕ 4:14 ನೋಡಿರಿ). ಅಲ್ಲದೆ ಅವನು ಕೊಯ್ಯುತ್ತಾನೆ ಕೂಡಾ ಅಂದರೆ ಅತನು ಜನರನ್ನು ನಂಬಿ ದೇವರ ರಾಜ್ಯವನ್ನು ಪ್ರವೇಶಿಸುವಂತೆ ಕರೆಯುತ್ತಾನೆ. ಸಮಾರ್ಯರು ಆತನ ಕಡೆಗೆ ಬರುತ್ತಿದ್ದರು. ಕ್ರಿಸ್ತನು ಬಿತ್ತಿದ್ದನು, ಈಗ ಆತನು ಇನ್ನೇನು ಕೊಯ್ಯುವದರಲ್ಲಿದ್ದನು.

ಆತನು ಈಗಾಗಲೇ ತನ್ನ ಸಂಬಳವನ್ನು ಪಡೆಯುತ್ತಿದ್ದಾನೆ. ಕೊಯ್ಯುವವನು ಸಂಬಳವನ್ನು ಪ್ರತಿಫಲವೊಂದನ್ನು ಪಡೆಯುತ್ತಾನೆ ನಾವೆಲ್ಲರೂ ಸಹ ಕೆಲಸಕ್ಕನುಗುಣವಾಗಿ ಪ್ರತಿಫಲವನ್ನು ಪಡೆಯುವೆವು (ಮತ್ತಾಯ 16:27) ಆದರೆ,

ಕೊಯ್ಯುವವನಿಗೆ ಮಾತ್ರವೇ ಲಾಭವಾಗುವದಿಲ್ಲ, ಆತನ ಕೆಲಸದಿಂದ ಇತರರಿಗೂ ಲಾಭವಾಗುತ್ತದೆ. ಆತನು ಸಂಪಾದಿಸಿ ಕೊಂಡ ಆತ್ಮಗಳು ನಿತ್ಯಜೀವವನ್ನು ಪಡೆಯುವವು. ಹೀಗೆ ಕೊಯ್ಯುವವನ ಕೆಲಸವು ನಿತ್ಯನಿತ್ಯಕ್ಕೂ ಉಳಿಯುವದು.

**37** ರೈತರಲ್ಲಿ ನೋಡುವದಾದರೆ ಬಿತ್ತವವನೇ ತನ್ನ ಸ್ವಂತ ಬೆಳೆಯನ್ನು ಕೊಯ್ಯುವವನಾಗಿರುತ್ತಾನೆ. ಆದರೆ ಆತ್ಮೀಕವಾದ ಬಿತ್ತುವಿಕೆ ಮತ್ತು ಕೊಯ್ಯುವಿಕೆಗಳಲ್ಲಿ ಸಾಮಾನ್ಯವಾಗಿ ಒಬ್ಬನು ಬಿತ್ತುತ್ತಾನೆ, ಅದನ್ನು ಮತ್ತೊಬ್ಬನು ಕೊಯ್ಯುತ್ತಾನೆ. ಆತ್ಮೀಕವಾದ ಬಿತ್ತುವಿಕೆ ಮತ್ತು ಕೊಯ್ಯುವಿಕೆಗಳು ಒಟ್ಟಾಗಿ ಸಾಗುತ್ತವಾದ್ದರಿಂದ ಬಿತ್ತುವವನಿಗೂ ಕೊಯ್ಯುವವನಿಗೂ ಕೂಡಾ ಸಂತೋಷವಾಗುತ್ತದೆ (ವಚನ 36)

**38** ನಂತರ ಯೇಸು ತನ್ನ ಶಿಷ್ಯರಿಗೆ ಅವರಿಗಿಂತ ಮುಂಚೆ ಇತರರು, ವಿಶೇವಾಗಿ ಸ್ನಾನಿಕನಾದ ಯೋಹಾನ ಮತ್ತು ಆತನ ಶಿಷ್ಯರು ಕೆಲಸ ಮಾಡಿದ್ದಾರೆಂದು ಜ್ಞಾಪಕಪಡಿಸುತ್ತಾನೆ. ಈ ಮುಂಚಿನ ಕೆಲಸಗಾರರು ಭೂಮಿಯನ್ನು ಸಿದ್ದಗೊಳಿಸಿ ಬೀಜವನ್ನು ಬಿತ್ತಿದರು. ಅವರು ಕಷ್ಟಪಟ್ಟರು. ಆದರೆ ಸುಗ್ಗಿಯನ್ನು ನೋಡಲಾಗಲಿಲ್ಲ. ಈಗ ಯೇಸು ಮತ್ತು ಆತನ ಶಿಷ್ಯರು ಅವರ ಪರಿಶ್ರಮದ ಪ್ರಯೋಜನಗಳನ್ನು ಕೊಯ್ಯುವು ದರಲ್ಲಿದ್ದರು.

ಯೇಸು ಇಲ್ಲಿ ಎಲ್ಲಾ ಕ್ರೈಸ್ತೀಯ ಕೆಲಸಕ್ಕೂ ಅನ್ವಯಿಸುವ ಸೂತ್ರವೊಂದನ್ನು ತಿಳಿಸುತ್ತಾನೆ. ನಾವು ಯಾವದೇ ಆತ್ಮೀಕ ಕಾರ್ಯದ ಯಶಸ್ಸಿನ ಹೆಗ್ಗಳಿಕೆಯನ್ನು ತೆಗೆದುಕೊಳ್ಳಲು ಪ್ರಯತ್ನಿಸಬಾರದು, ಸಾಮಾನ್ಯವಾಗಿ ಬೇರೊಬ್ಬರು ನಮಗಿಂತ ಮುಂಚೆ ಹೋಗಿ ಮೈದಾನವನ್ನು ಸಿದ್ದಮಾಡಿರುತ್ತಾರೆ. ಆದರೆ ಅದೇ ಎಲ್ಲವೂ ಆಗಿರುವದಿಲ್ಲ. ದೇವರು ಮಾತ್ರವೇ ಬೀಜವು ಬೆಳೆಯುವಂತೆ ಮಾಡುತ್ತಾನೆ. ಪೌಲನು ಕೊರಿಂಥದವರಿಗೆ ಹೀಗೆ ಬರೆದನು: ನಾನು ಸಸಿಯನ್ನು ನೆಟ್ಟೆನು, ಅಪೊಲ್ಲೋಸನು ನೀರು ಹೊಯ್ದನು, ಆದರೆ ಬೆಳೆಸುತ್ತಾ ಬಂದವನು ದೇವರು. ಹೀಗಿರಲಾಗಿ ನೆಡುವವನಾಗಲಿ ನೀರು ಹೊಯ್ಯುವವನಾಗಲಿ ವಿಶೇಷವಾದವನಲ್ಲ, ಬೆಳೆಸುವ ದೇವರೇ ವಿಶೇಷವಾದವನು (1 ಕೊರಿಂಥ 3:6-7)

**39-41** ಇಲ್ಲಿ ನಾವು ಹೇಗೆ ಕ್ರಿಸ್ತನ ಚಿಕ್ಕ ಕೆಲಸವು ಒಂದು ಮಹಾ ಕಾರ್ಯಕ್ಕೆ ದಾರಿ ಮಾಡಿತೆಂಬದನ್ನು ನೋಡುತ್ತೇವೆ. ಯೇಸು ಒಬ್ಬ ಸ್ತ್ರೀಗೆ ಬೋಧಿಸುವದರೊಂದಿಗೆ ಪ್ರಾರಂಭಿಸಿದನು. ಆತನು ಅಂತ್ಯದಲ್ಲಿ ಇದೇ ಊರಿಗೆ ಬೋಧಿಸುವವನಾದನು. ನಮ್ಮಲ್ಲಿ ಯಾರೂ ಸಹ ಚಿಕ್ಕ ಕೆಲಸವನ್ನು ಕಡೆಗಣಿಸದಿರೋಣ, ಅನೇಕ ವೇಳೆ ಅದು ದೊಡ್ಡ ಕೆಲಸಕ್ಕೆ ಎಡೆಮಾಡಿಕೊಡುತ್ತದೆ.

ಸಮಾರ್ಯ ಸ್ತ್ರೀಯಳ ಸಾಕ್ಷಿಯು ಊರಿನ ಅನೇಕ ಜನರು ನಂಬುವಂತೆ ಮಾಡಿತು. ಒಬ್ಬ ಸಾಮಾನ್ಯ ಪಾಪಿಯಾದ ಸ್ತ್ರೀಯ ಸಾಕ್ಷಿಯ ಫಲಿತವಾಗಿ ಎಷ್ಟೊಂದು ಫಲವು ಒಟಾಯಿತೆಂದು ನೋಡಿರಿ! ಅದೇವಿಧದಲ್ಲಿ ಕ್ರಿಸ್ತನು ನಮ್ಮ ಜೀವಿತದಲ್ಲಿ ಏನು ಮಾಡಿದ್ದಾನೆಂಬದರ ಕುರಿತಾದ ನಮ್ಮ ಸ್ವಂತ ಸಾಕ್ಷಿಯು ಬಹಳ ಪರಿಣಾಮ ಕಾರಿಯಾಗಿರಬಲ್ಲದು.ಆದುದರಿಂದ ನಾವು ಇತರರೊಂದಿಗೆ ನಮ್ಮ ಸಾಕ್ಷಿಯನ್ನು ಹಂಚಿಕೊಳ್ಳಲು ಹಿಂಜರಿಯದಿರೋಣ.

**42** ಹೇಗಿದ್ದರೂ, ತಂದೆ ತಾಯಿಗಳು, ಭೋಧಕರು ಮತ್ತು ಸ್ನೇಹಿತರಂತಹ ಇತರರ ಸಾಕ್ಷಿಯ ಮುಖಾಂತರ ಸ್ತ್ರೀಪು ರುಷರು ಕ್ರಿಸ್ತನಲ್ಲಿ ನಂಬಿಕೆಯಿಡ ಬಹುದಾದರೂ ಅವರು ಸ್ವತಃ ಕ್ರಿಸ್ತನನ್ನು ಸಂಧಿಸಿದಾಗ ಮಾತ್ರವೇ ಅವರ ನಂಬಿಕೆಯು ಬಲಗೊಳ್ಳುವದು. ನಾವು ಇತರರಿಗೆ ಸಾಕ್ಷಿ ಹೇಳಬಹುದು, ಆದರೆ ಅವರು ಕ್ರಿಸ್ತನನ್ನು ತಮ್ಮ ಹೃದಯದೊಳಗೆ ಆಹ್ವಾನಿಸಬೇಕು. ನಮ್ಮ ಬುದ್ದಿಯ ಮೂಲಕ ಕ್ರಿಸ್ತನ ಕುರಿತಾಗಿ ತಿಳಿದುಕೊಂಡರೆ ಸಾಲದು. ನಾವು ನಿಜವಾದ ನಂಬಿಕೆಯನ್ನು ಹೊಂದಬೇಕಾದರೆ ನಾವು ಯೇಸುವನ್ನು ನಮ್ಮ ಆತ್ಮಗಳಿಂದ ಸಂಧಿಸಬೇಕು. ಆ ಸಮಾರ್ಯದ ಊರಿನವರಿಗೆ ಇದೇ ಸಂಭವಿಸಿತು. ಅವರು ಸ್ವತಃ ಕ್ರಿಸ್ತನ ಮಾತುಗಳನ್ನು ಕೇಳಿದಾಗ ಅವರ ಹೃದಯ ಮತ್ತು ಆತ್ಮಗಳು ತೆರೆದವು. ಮತ್ತು ಆಗ ಅವರು ಯೇಸುವೇ ಮೆಸ್ಸಿಯನೂ, ಲೋಕದ ರಕ್ಷಕನೂ ಆಗಿದ್ದಾನೆಂದು ತಿಳಿದುಕೊಂಡರು (1 ಯೋಹಾನ 4:14 ನೋಡಿರಿ) ಆತನು ಯೆಹೂದ್ಯರಿಗೆ ಮಾತ್ರವಲ್ಲ, ಆದರೆ ಸಮಾರ್ಯರಿಗೂ ರಕ್ಷಕನಾಗಿದ್ದನು.

## ಯೇಸು ಅಧಿಕಾರಿಯ ಮಗನನ್ನು ಸ್ವಸ್ಥಪಡಿಸಿದ್ದು (4:43-54)

**43-44** ಬಳಿಕ ಯೇಸು ಸಮಾರ್ಯದಿಂದ ಗಲಿಲಾಯಕ್ಕೆ ಹೋದನು, ಅದು ಆತನು ಹುಟ್ಟಿ ಬೆಳೆದ ಸ್ಥಳವಾಗಿತ್ತು (ಲೂಕ 2:39-40). ಒಬ್ಬ ಪ್ರವಾದಿಗೆ ಸ್ವಂತ ಊರಿನಲ್ಲಿ ಮಾನವಿಲ್ಲ. ಅವನಿಗೆ ತಿಳಿದಿತ್ತು (ಮಾರ್ಕ 6:4 ಮತ್ತು ವ್ಯಾಖ್ಯಾನ ನೋಡಿರಿ). ಯೇಸು ತಾನು ಗಲಿಲಾಯದಲ್ಲಿ ತಿರಸ್ಕರಿಸಲ್ಪಡುವನೆಂದು ಗೊತ್ತಿದ್ದವನಾಗಿಯೇ ಹೋದನು (ಮಾರ್ಕ 6:1-6, ಲೂಕ 4:28-30).

**45** ಹೇಗಿದ್ದರೂ, ಪ್ರಾರಂಭದಲ್ಲಿ ಗಲಿಲಾಯದವರು ಯೇಸುವನ್ನು ಸ್ವಾಗತಿಸಿದರು. ಅವರಲ್ಲಿ ಅನೇಕರು ಪಸ್ಕ ಹಬ್ಬಕ್ಕಾಗಿ ಯೆರೂಸಲೇಮಿಗೆ ಹೋಗಿದ್ದರು. ಮತ್ತು ಆತನು ಅಲ್ಲಿ ಮಾಡಿದ ಸೂಚಕ ಕಾರ್ಯಗಳನ್ನು ನೋಡಿದ್ದರು, (ಯೋಹಾನ 2:23) ಆದರೆ ಅವರಲ್ಲಿ ಹೆಚ್ಚು ಜನರು ಯೇಸು ಮೆಸ್ಸಿಯನೂ, ಕ್ರಿಸ್ತನೂ ಎಂದು ನಿಜವಾಗಿಯೂ ನಂಬಲಿಲ್ಲ (ಯೋಹಾನ 2:23-24 ಹಾಗು ವ್ಯಾಖ್ಯಾನ ನೋಡಿರಿ).

**46-47** ಕಾನಾ ಊರಿನಲ್ಲಿ ಅರಮನೆಯ ಅಧಿಕಾರಿಯೊಬ್ಬನು ತನ್ನ ಮಗನನ್ನು ಸ್ವಸ್ಥ ಮಾಡಬೇಕೆಂದು ಯೇಸುವನ್ನು ಕೇಳಿದನು. ಈ ಸ್ವಸ್ಥತೆಯು ಮತ್ತಾಯ 8:5-13 ರಲ್ಲಿ ವರ್ಣಿಸಿರುವ ಸ್ವಸ್ಥತೆಗೆ ಹೋಲುತ್ತದೆ, ಆದರೆ ಇಲ್ಲಿ ಬಣ್ಣಿಸಲಾಗಿರುವ ಘಟನೆಯು ವ್ಯತ್ಯಾಸವಾದದ್ದು.

**48** ಅಧಿಕಾರಿಯು ನಿಜವಾದ ನಂಬಿಕೆಯನ್ನು ಹೊಂದಿರಲಿಲ್ಲ ಎಂಬದನ್ನು ಯೇಸು ಬಲ್ಲವನಾಗಿದ್ದನು. ಆತನು ಕೇವಲ ಯೇಸು ಮಾಡಿದ್ದ ಅದ್ಭುಗಳ ಕುರಿತು ಕೇಳಿದವನಾಗಿ ಮಾತ್ರವೇ ಆತನ ಬಳಿಗೆ ಬಂದಿದ್ದನು. ಯೇಸು ಆತನಿಗೂ ಮತ್ತು ಅಲ್ಲಿ

ನಿಂತಿದ್ದವರಿಗೂ "ನೀವು ಕೇವಲ ಅದ್ಭುತಕಾರ್ಯವನ್ನು ನೋಡಿ ನಂಬುತ್ತೀರಿ. ಅದು ನಿಜವಾದ ನಂಬಿಕೆಯಲ್ಲ" ಎಂದು ಹೇಳಿದನು (ಯೋಹಾನ 2:18 ಮತ್ತು ವ್ಯಾಖ್ಯಾನ ನೋಡಿರಿ).
ಹೇಗಿದ್ದರೂ, ಅದ್ಭುತಗಳಲ್ಲಿ ನಂಬುವದು ಹಲವಾರುವೇಳೆ ನಂಬಿಕೆಗೆ ಪ್ರಥಮ ಹೆಜ್ಜೆಯಾಗಿದೆ. ಕ್ರಿಸ್ತನು ತನ್ನ ಅದ್ಭುತಗಳಲ್ಲಿ ನಂಬಿಕೆಯಿಟ್ಟ ಜನರನ್ನು ತಿರಸ್ಕರಿಸಲಿಲ್ಲ. ಆತನ ಅದ್ಭುತಗಳು ನಿಜವಾಗಿಯೂ ಆತನು ಮೆಸ್ಸಿಯನೆಂಬದಕ್ಕೆ ಸೂಚಕಕಾರ್ಯಗಳಾಗಿದ್ದವು (ಯೋಹಾನ 14:11 ಮತ್ತು ವ್ಯಾಖ್ಯಾನ ನೋಡಿರಿ)

**49-50** ತರುವಾಯ ಯೇಸು ಅಧಿಕಾರಿಯ ಮಗನನ್ನು ಆಗಲೇ ಮತ್ತು ಅಲ್ಲಿಯೇ ವಾಸಿಮಾಡಿದನು. ಸ್ವಸ್ಥತೆಯು ಶೀಘ್ರ ಹಾಗು ಸಂಪೂರ್ಣವಾಗಿತ್ತು. ಯೇಸು ಆ ಬಾಲಕನು ಇದ್ದ ಊರಿಗೆ ಸಹ ಹೋಗಲಿಲ್ಲ. ಯೇಸು ಕಾನಾ ಊರಿನಲ್ಲಿದ್ದನು ಮತ್ತು ಬಾಲಕನು ಅಲ್ಲಿಂದ ಹದಿನಾರು ಮೈಲಿಗಳಷ್ಟು ದೂರದ ಕೆಪೆರ್ನೌಮಿನಲ್ಲಿದ್ದನು (ಮತ್ತಾಯ 8:13)

ತಂದೆಯು ಯೇಸುವಿನ ಮಾತುಗಳನ್ನು ನಂಬಿದವನಾಗಿ ಮನೆಗೆ ಹೊರಟನು. ಆತನು ಯಾವದೇ ಅದ್ಭುತ ಅಥವಾ ಸೂಚಕಕಾರ್ಯವನ್ನು ನೋಡದೆಯೇ ನಂಬಿದನು. ಆತನಿಗೆ ಯೇಸು 48ನೇ ವಚನದಲ್ಲಿ ನೀಡಿದ ಗದರಿಕೆಯನ್ನು ಆತನು ಸ್ವೀಕರಿಸಿದ್ದನು.

**51-53** ಅಧಿಕಾರಿಯು ಮನೆಗೆ ಹೋಗುತ್ತಿರುವಾಗ ಆತನ ಮಗನು ಸರಿಯಾಗಿ ಯೇಸು "ನಿನ್ನ ಮಗನು ಬದುಕುತ್ತಾನೆ" ಎಂದು ಹೇಳಿದ ಅದೇ ಗಳಿಗೆಯಲ್ಲಿಯೇ ಸ್ವಸ್ಥನಾದನೆಂಬದನ್ನು ತಿಳಿದುಕೊಂಡನು (ವಚನ 50) ಆದರೆ ಫಲಿತವಾಗಿ ಅಧಿಕಾರಿ ಮತ್ತು ಆತನ ಕುಟುಂಬವು ಯೇಸುವಿನಲ್ಲಿ ಸಂಪೂರ್ಣ ನಂಬಿಕೆಯಿಟ್ಟರು, ಆದರೆ ಅವರು ಕ್ರೈಸ್ತರಾದರು..ಅದ್ಭುತವು ನಿಜವಾದ ನಂಬಿಕೆಯನ್ನುಂಟು ಮಾಡಿತ್ತು.

ಬಾಲಕನ ರೋಗವು ಕೊನೆಯಲ್ಲಿ ಆತನ ತಂದೆತಾಯಿಗಳ ಮನೆಗೆ ಒಂದು ದೊಡ್ಡ ಆಶೀರ್ವಾದವನ್ನು ತಂದಿತ್ತು. ದೇವರನ್ನು ಪ್ರೀತಿಸಿ, ನಂಬುವವರಿಗೆ ದೇವರು ಅವರ ಸಂಕಷ್ಟಗಳಿಂದ ಒಳ್ಳೆಯದನ್ನು ಬರಮಾಡುತ್ತಾನೆ (ರೋಮ 28 ಮತ್ತು ವ್ಯಾಖ್ಯಾನ ನೋಡಿರಿ).

**54** ಯೇಸು ಗಲಿಲಾಯದಲ್ಲಿ ಮಾಡಿದ ಎರಡನೆಯ ಅದ್ಭುತ ಇದಾಗಿತ್ತು ಮೊದಲನೆಯ ಅದ್ಭುತವು ನೀರನ್ನು ದ್ರಾಕ್ಷಾರಸವಾಗಿ ಮಾರ್ಪಡಿಸಿದ್ದು, (ಯೋಹಾನ 2:11). ಎರಡೂ ಸಂದರ್ಭಗಳಲ್ಲಿಯೂ ಯೇಸು ಯೂದಾಯದ ಪ್ರವಾಸದಿಂದ ಹಿಂದಿರುಗಿದ್ದನು, ಅಲ್ಲಿ ಆತನು ಇತರ ಅದ್ಭುತಗಳನ್ನೂ ಮಾಡಿದ್ದು ಯೋಹಾನನು ಅವು ಗಳನ್ನೂ ದಾಖಲಿಸಿರುವದಿಲ್ಲ. (ಯೋಹಾನ 2:23, 4:45 ನೋಡಿರಿ).

---

## ಅಧ್ಯಾಯ - 5

### ಕೊಳದ ಬಳಿಯಲ್ಲಿ ಸ್ವಸ್ಥತೆ (5:1-5)

**1-2** 2ನೇ ವಚನದಲ್ಲಿ ಯೋಹಾನನು ಇಬ್ರಿಯ (ಅಥವಾ ಅರಾಮಿಕ 38) ಭಾಷೆಯಲ್ಲಿ "ಬೇತ್ಸಥಾ" ಎಂದು ಕರೆಯಲ್ಪಡುವ ಕೊಳವನ್ನು ಬಣ್ಣಿಸುತ್ತಾನೆ. ಆತನು ಯೆರೂಸಲೇಮಿನಲ್ಲಿ...ಒಂದು ಕೊಳವಿದೆ ಎಂದು ಬರೆಯುತ್ತಾನೆ. ಯೋಹಾನನು ಇಲ್ಲಿ ವರ್ತಮಾನ ಕಾಲವನ್ನು ಉಪಯೋಗಿಸಿದ ಕಾರಣದಿಂದ ಈ ಸುವಾರ್ತೆಯು ಕ್ರಿ.ಶಕ 70ರಲ್ಲಿ ನಾಶನಕ್ಕೆಮುಂಚೆಯೇ ಬರೆಯಲ್ಪಟ್ಟಿದೆ. ಒಂದು ವೇಳೆ ಈ ಸುವಾರ್ತೆಯು ಕ್ರಿ.ಶಕ 70 ರ ನಂತರ ಬರೆಯಲ್ಪಟ್ಟಿದ್ದರೆ ಯೋಹಾನನು ಒಂದು ಕೊಳ "ಇತ್ತು" ಎಂಬದಾಗಿ ಬರೆಯುತ್ತಿದ್ದನು ಎಂದು ಕೆಲವು ಬೈಬಲ್ ಪಂಡಿತರು ಅಭಿಪ್ರಾಯಪಡುತ್ತಾರೆ.

**3-4** ಯೇಸುವಿನ ಕಾಲದಲ್ಲಿದ್ದ ಅನೇಕ ಜನರು ಈ ಕೊಳದಲ್ಲಿ ಸ್ವಸ್ಥತೆಯ ಶಕ್ತಿಯಿದೆ ಎಂದು ನಂಬಿದ್ದರು. ಒಬ್ಬ ದೇವದೂತನು ಆಗಾಗ ಆ ಕೊಳಗದಲ್ಲಿನ ನೀರನ್ನು ಉಕ್ಕಿಸುತ್ತಿದ್ದನು. ಮತ್ತು ಆತನು ಉಕ್ಕಿಸಿದತಕ್ಷಣವೇ ಕೊಳದ ಹತ್ತಿರದಲ್ಲಿ ಕಾಯುತ್ತಿದ್ದರೋಗಿಗಳು ವೇಗವಾಗಿ ನೀರಿನೊಳಗೆ ಇಳಿಯುತ್ತಿದ್ದರೆಂದು ಹೇಳಲಾಗುತ್ತದೆ. ದೇವದೂತನು ನೀರನ್ನು ಹೇಗೆ ಉಕ್ಕಿಸುತ್ತಿದ್ದನೆಂಬದನ್ನು ಯೋಹಾನನು ವಿವರಿಸುವದಿಲ್ಲ, ಆದರೆ ಅದು ಉಕ್ಕಿಸಲ್ಪಟ್ಟ ನಂತರ ಮೊದಲು ನೀರಿನೊಳಗೆ ಹೋಗುವವನು ಸ್ವಸ್ಥನಾಗುತ್ತಿದ್ದನೆಂದು [39] ನಂಬಲಾಗುತ್ತಿತ್ತು.

**5-6** ಆಕೊಳದ ಬಳಿಯಲ್ಲಿ ನಡೆಯಲಾಗದ, ಕಾಲಿಲ್ಲದವ್ಯಕ್ತಿಯೊಬ್ಬನು ಮೂವತ್ತೆಂಟು ವರ್ಷಗಳಿಂದ ಬಿದ್ದು ಕೊಂಡಿದ್ದನೆಂಬದನ್ನು ಯೇಸು ಬಲ್ಲವನಾಗಿದ್ದನು. ಯೇಸು ಅವನಿಗೆ – ನನಗೆ ಸ್ವಸ್ಥವಾಗಲಿಕ್ಕೆ ಮನಸ್ಸುಂಟೋ?ಎಂದು ಕೇಳಿದನು. ಆ ವ್ಯಕ್ತಿಯು ಯೇಸುವಿನ ಬಳಿಗೆ ಹೋಗಲಿಲ್ಲ, ಯೇಸುವೇ ಅವನ ಬಳಿಗೆ ಹೋದನು. ಎಂಬದನ್ನು ಗಮನಿಸಿರಿ. ಯೇಸು ಸ್ವಸ್ಥಮಾಡುವವನಾಗಿದ್ದಾನೆ ಎಂಬದು ಆವ್ಯಕ್ತಿಗೆ ತಿಳಿದಿರಲಿಲ್ಲ.

**7** ಆ ವ್ಯಕ್ತಿಯು ತಾನು ಏಕೆ ಸ್ವಸ್ಥನಾಗಿರಲಿಲ್ಲ ಎಂಬದನ್ನು ವಿವರಿಸುತ್ತಾನೆ: ಆತನು ತಕ್ಕ ಸಮಯದೊಳಗೆ ನೀರಿನಲ್ಲಿ ಇಳಿಯಲಾಗಲಿಲ್ಲ. ಅವನ ಯೋಚನೆಗಳೆಲ್ಲಾ ನೀರಿನ ಊಹಿಕೆಯ ಬಲದ ಮೇಲೆಯೇ ಹೊರತು ಯೇಸುವಿನ ಬಲದ ಮೇಲಿರಲಿಲ್ಲ.

**8-9** ಯೇಸು ಆ ಮನುಷ್ಯನನ್ನು ಶೀಘ್ರ ಹಾಗು ಸಂಪೂರ್ಣವಾಗಿ ಸ್ವಸ್ಥ ಪಡಿಸಿದನು (ಮಾರ್ಕ 2:11 ನೋಡಿರಿ) ಆ ವ್ಯಕ್ತಿ ಸ್ವತ: ನಂಬಿಕೆಯನ್ನು ಹೊಂದಿರದಿದ್ದರೂ ಸಹ ಯೇಸು ಅವನನ್ನು ಸ್ವಸ್ಥ ಪಡಿಸಿದನು. ಆ ವ್ಯಕ್ತಿಯು ತನ್ನನ್ನು ಸ್ವಸ್ಥ ಮಾಡುವಂತೆ ಕೇಳಿರಲಿಲ್ಲ. ಅಲ್ಲದೆ ಆತನಿಗೆ ಯೇಸುವಿನ ಪರಿಚಯ ಸಹ ಇರಲಿಲ್ಲ.

ಈ ಅದ್ಭುತವು ಸಬ್ಬತ್ತ ದಿನದಂದು ಅಂದರೆ ಶನಿವಾರದಂದು ನಡೆಯಿತು. ಯೆಹೂದ್ಯರ ಧರ್ಮಶಾಸ್ತ್ರದ ಪ್ರಕಾರವಾಗಿ ಒಬ್ಬನು ಸಬ್ಬತ್ತದಿನದಂದು ಯಾವ ರೀತಿಯ "ಕೆಲಸ" ವನ್ನೂ ಮಾಡಬಾರದಾಗಿತ್ತು (ವಿಮೋಚನ ಕಾಂಡ 20:8-11)

**10** ಯೆಹೂದ್ಯರು ಅಂದರೆ ಯೆಹೂದ್ಯ ನಾಯಕರು. ಆ ವ್ಯಕ್ತಿಯು ಸಬ್ಬತ್ತಿನ ನಿಯಮಕ್ಕೆ ಅವಿಧೇಯವಾಗಿದ್ದಕ್ಕೆ ಅವನನ್ನು ಗದರಿಸಿದರು. ಸಬ್ಬತ್ತಿನ ನಿಯಮದ ಪ್ರಕಾರವಾಗಿ ಸಬ್ಬತ್ ದಿನದಲ್ಲಿ ಹಾಸಿಗೆ ಅಥವಾ ಚಾಪೆಯನ್ನಾಗಲಿ ಹೊತ್ತುಕೊಂಡು ಹೋಗುವದು ಅಪರಾಧವಾಗಿತ್ತು. ಅದನ್ನೂ "ಕೆಲಸ"[40] ವೆಂದು ಪರಿಗಣಿಸಲಾಗಿತ್ತು (ಯೆರೆಮೀಯ 17:21-22)

ಫರಿಸಾಯರು ಮತ್ತು ಶಾಸ್ತ್ರೀಗಳು ಯಾವದು "ಕೆಲಸ" ಮತ್ತು ಯಾವದು "ಕೆಲಸ" ಅಲ್ಲವೆಂಬುದರ ವಿಷಯದಲ್ಲಿ ಇನ್ನು ಅನೇಕ ರೀತಿಯ ನೇಮಗಳನ್ನು ಸೇರಿಸಿದ್ದರು. ಈ ನೇಮಗಳೆಲ್ಲವೂ ಹಳೆ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿರಲಿಲ್ಲ. ಸಬ್ಬತ್ ದಿನವನ್ನು ಪರಿಶುದ್ಧವಾಗಿ ಕಾಪಾಡಲ್ಪಡುವದಕ್ಕಾಗಿಯೇ ಕೆಲಸವನ್ನು ನಿಷೇಧಿಸುವ ನಿಯಮಗಳು ಮಾಡಲ್ಪಟ್ಟವು : ಈ ದಿನವನ್ನು ಆರಾಧನೆ, ಪ್ರಾರ್ಥನೆ ಮತ್ತು ವಿಶ್ರಾಂತಿಗಾಗಿ ಮೀಸಲಿಡಬೇಕಾಗಿತ್ತು. ಆದರೆ ಯೆಹೂದ್ಯನಾಯಕರು ಎಷ್ಟೋ ಚಿಕ್ಕಪುಟ್ಟ ನಿಯಮಗಳನ್ನು ಸೇರಿಸಿದ್ದರಿಂದ ಸಬ್ಬತ್ತಿನ ಮೂಲ ಅರ್ಥವೇ ಮರೆಯಾಗಿತ್ತು. ಈ ಎಲ್ಲಾ ನಿಯಮಗಳ ಕಾರಣದಿಂದ ಸಬ್ಬತ್ತ ದಿನದಲ್ಲಿ ಯಾವದೇ ಸ್ವಸ್ಥತೆ ಅಥವಾ ಇತರ ಒಳ್ಳೆಯ ಕಾರ್ಯಗಳನ್ನು ಮಾಡುವದು ಇನ್ನು ಅಸಾದ್ಯವಾಗಿತ್ತು.

ಆದರೆ ಯೇಸುವಿನ ಬೋಧನೆಯ ಪ್ರಕಾರವಾಗಿ ಸಬ್ಬತ್ತದಿನದಲ್ಲಿ "ಒಳ್ಳೆಯದನ್ನು ಮಾಡುವದು" ಯಾವಾಗಲೂ ನ್ಯಾಯವಾದದ್ದಾಗಿತ್ತು (ಮಾರ್ಕ 2:23-28, 3:1-5, ಲೂಕ 13:10-17 ಮತ್ತು ವ್ಯಾಖ್ಯಾನ ನೋಡಿರಿ)

**11-13** ಸ್ವಸ್ಥತೆಗೊಂಡ ಮನುಷ್ಯನು ಸಬ್ಬತ್ತಿನ ನಿಯಮವನ್ನು ಉಲ್ಲಂಘಿಸಿದ "ಆರೋಪವನ್ನು ಯೇಸುವಿನ ಮೇಲೆ ಹಾಕಿದನು. ಆತನು ಯೆಹೂದ್ಯನಾಯಕರಿಗೆ" ನನ್ನನ್ನು ಸ್ವಸ್ಥ ಮಾಡಿದವನೇ (ಯೇಸು) "ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ ಎಂದು ನನಗೆ ಹೇಳಿದನು" ಅಂದನು.

ಈಗ ಯೆಹೂದ್ಯರು ಯೇಸುವನ್ನು ಹುಡುಕಾಡಿದರು, ಆದರೆ ಆತನು ಅವರಿಗೆ ಸಿಕ್ಕಲಿಲ್ಲ. ಆತನು ಸೇರಿ ಬಂದಿದ್ದ ಜನರ ಗುಂಪಿನೊಳಗಿಂದ ಕಣ್ಮರೆಯಾಗಿದ್ದನು. ಅಲ್ಲಿ ನಡೆದ ಅದ್ಭುತದ ಕಾರಣದಿಂದ ಜನರು ಗುಂಪಾಗಿ ಕೂಡಿ ಬಂದಿದ್ದರು.

**14** ಬಳಿಕ ಯೇಸು ಸ್ವಸ್ಥನಾದ ಆವ್ಯಕ್ತಿಯನ್ನು ಪುನಃ ಬೇಟಿಯಾದನು. ಯೇಸು ಅವನಿಗೆ "ಇನ್ನು ಮೇಲೆ ಪಾಪಮಾಡಬೇಡ, ನಿನಗೆ ಹೆಚ್ಚಿನ ಕೇಡು ಬಂದೀತು" ಅಂದನು. ಆ ವ್ಯಕ್ತಿಗೆ ಅನಾರೋಗ್ಯವು ಂಟಾದದ್ದಕ್ಕೆ ಕಾರಣ ಆತನ ಪಾಪವೇ[41] ಎಂಬದನ್ನು ನಾವು ಇದರ ಮೂಲಕ ತಿಳಿದುಕೊಳ್ಳಬಹುದು. ಅವನು ಇನ್ನು ಮುಂದೆಯೂ ಪಾಪಮಾಡುವವನಾಗಿ ಮುಂದುವರೆದರೆ ಹೆಚ್ಚಿನ ಕೇಡು ಬಂದೀತೆಂದು ಯೇಸು ಅವನಿಗೆ ಹೇಳುತ್ತಾನೆ. ಅಂದರೆ ಅವನು ಅಂತಿಮ ನ್ಯಾಯತೀರ್ಪಿನ ದಿನದಲ್ಲಿ ತೀರ್ಪಿಗೊಳಗಾಗಿ ನಿತ್ಯದಂಡನೆಗೆ ಗುರಿಯಾಗುವನೆಂದು ಹೇಳಿದನು.

ಮಗನ ಮುಖಾಂತರ ಜೀವ (5:16-30)

**15** ಸ್ವಸ್ಥಹೊಂದಿದವಮನು ಕೃತಜ್ಞತೆಯಲ್ಲದೆ ಯೇಸುವೆ ಗುಣಪಡಿಸಿದನೆಂದು ಹುಹೂದನಾಯಕರಿಗೆ ತಿಳಿಸಿದನು

**16** ಸಬ್ಬತ್ ದಿನದಲ್ಲಿ ವಾಸಿಮಾಡಿದವನು ಯೇಸುವೇ ಎಂಬದು ಯೆಹೂದ್ಯನಾಯಕರಿಗೆ ತಿಳಿದು ಬಂದಾಗ ಅವರು ಆತನನ್ನು ಹಿಂಸಿಸುವವರಾದರು. ಯೆಹೂದ್ಯರು ಭಕ್ತಿಯ ವೇಷಕ್ಕಾಗಿ ಅಭಿಮಾನವುಳ್ಳವರಾಗಿದ್ದರು, ಆದರೆ ಭಕ್ತಿಯ ಶಕ್ತಿಯನ್ನು ಅವರು ನಿರಾಕರಿಸಿದರು (2 ತಿಮೊಥೆ 3:5)

**17** ದೇವರು ನಿರಂತರವೂ ಕೆಲಸ ಮಾಡುತ್ತಿರುವನೆಂದು ಯೇಸು ಯೆಹೂದ್ಯ ನಾಯಕರಿಗೆ ಜ್ಞಾಪಕ ಪಡಿಸುತ್ತಾನೆ. ಹೌದು, ಅವನು ಆರು ದಿನಗಳಲ್ಲಿ ಪ್ರಪಂಚವನ್ನು ಸೃಷ್ಟಿಸಿ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು (ಆದಿಕಾಂಡ 2:2-3) ಆದರೆ ದೇವರು ಇಂದಿನ ವರೆಗೂ ಕೆಲಸಮಾಡುತ್ತಾನೆಂಬದು ಕೂಡ ಸತ್ಯವಾದದ್ದೇ ಆಗಿದೆ.

ಆತನು ಒಂದು ಕ್ಷಣ "ಕೆಲಸಮಾಡುವದನ್ನು" ನಿಲ್ಲಿಸುವ ದಾದರೆ ಪ್ರಪಂಚ ಹಾಗು ಎಲ್ಲಾ ಜೀವವು ಅಂತ್ಯಗೊಳ್ಳುವದು. ಆತನೇ ಎಲ್ಲರಿಗೂ ಜೀವ ಶ್ವಾಸ ಮುಂತಾದದ್ದೆಲ್ಲವನ್ನೂ ಕೊಡುವವನಾಗಿರುತ್ತಾನೆ (ಅ.ಕೃತ್ಯ 17:5). ದೇವರು ವಾರದ ಏಳು ದಿನಗಳಲ್ಲಿ "ಕೆಲಸಮಾಡುತ್ತಿರುವನು" ಹಾಗೆಯೇ ಕ್ರಿಸ್ತನೂ ವಾರದ ಏಳು ದಿನಗಳಲ್ಲಿ ಕೆಲಸ ಮಾಡುತ್ತಿರಬೇಕು. ಕಾರಣ ದೇವರು ಪರಲೋಕ ಮತ್ತು ಭೂಲೋಕಗಳನ್ನು ಕ್ರಿಸ್ತನ ಮುಖಾಂತರ ಸೃಷ್ಟಿಸಿದಂತೆಯೇ (ಯೋಹಾನ 1:3), ದೇವರು, ಪರಲೋಕ ಮತ್ತು ಭೂಲೋಕಗಳನ್ನು ಆತನ ಮೂಲಕವಾಗಿಯೇ ಪೋಷಿಸುತ್ತಾನೆ (ಕೊಲೆಸ್ಸೆ 1:17). ಕ್ರಿಸ್ತನ ಕೆಲಸಗಳು ಮತ್ತು ತಂದೆಯ ಕೆಲಸಗಳು ಒಂದೇ ಆಗಿರುವದರಿಂದ, ಯೇಸು ಕೆಲಸಗಳು ನಿರಂತರವಾಗಿ – ಸಬ್ಬತದಿನದಲ್ಲಿಯೂ ಸಹ ನಡೆಯುತ್ತಿರಬೇಕು.

**18** ಯೇಸು ದೇವರನ್ನು ತನ್ನ ತಂದೆಯೆಂದು ಕರೆದನು (ವಚನ 17) ಇದು ಯೆಹೂದ್ಯರಿಗೆ ಬೇರಿನ್ನಾವದಕ್ಕಿಂತಲೂ ಹೆಚ್ಚು ಕೋಪವನ್ನುಂಟುಮಾಡಿತು. ದೇವರು ತನಗೆ ಒಂದು ವಿಶೇಷವಾದ ರೀತಿಯಲ್ಲಿ ತಂದೆಯಾಗಿದ್ದಾನೆ ಅಂದರೆ ದೇವರು ಮತ್ತು ಆತನು ಒಂದೇ ಸ್ವಭಾವದವರೆಂಬದಾಗಿ ಯೇಸು ಹೇಳಿಕೊಳ್ಳುತ್ತಿದ್ದಾನೆಂದು ಯೆಹೂದ್ಯರಿಗೆ ಗೊತ್ತಿತ್ತು. ಯೇಸು ತನ್ನನ್ನು ದೇವರೊಂದಿಗೆ ಸಮಾನಮಾಡಿಕೊಳ್ಳುತ್ತಿದ್ದಾನೆಂದು ಅವರು ಬಲ್ಲವರಾಗಿದ್ದರು. ಯೆಹೂದ್ಯರ ಮನಸ್ಸಿನಲ್ಲಿ ಇದು

ದೇವರ ವಿರುದ್ದವಾಗಿ ಒಂದು ಭಯಂಕರ ದೂಷಣೆಯಾಗಿತ್ತು. ಯೆಹೂದ್ಯರು ಯಾವದೇ ಮಾನವ ಜೀವಿಗಿಂತಲೂ ಅಪರಿಮಿತವಾಗಿ ಶ್ರೇಷ್ಠನಾದ ಏಕೈಕ ಸತ್ಯದೇವರಲ್ಲಿ[42] ನಂಬಿಕೆಯಿಡುತ್ತಿದ್ದರು. ಹೀಗಿರುವದರಿಂದ ಯಾವದೇ ವ್ಯಕ್ತಿಯು ತನ್ನನ್ನು ದೇವರೆಂದಾಗಲಿ ಅಥವಾ ದೇವರಂತಾಗಲಿ ಮಾಡಿಕೊಳ್ಳುವದು, ಈ ಒಬ್ಬನೇ ಸತ್ಯದೇವರಿಗೆ ದೊಡ್ಡ ಅವಮಾನಮಾಡಿದಂತಾಗುತ್ತಿತ್ತು. ಯೆಹೂದ್ಯ ಧರ್ಮ ಶಾಸ್ತ್ರದ ಪ್ರಕಾರವಾಗಿ ಅಂತಹ ದೈವದೂಷಣೆಗೆ ಮರಣದಂಡನೆಯೇ ಶಿಕ್ಷೆಯಾಗಿದೆ (ಯಾಜಕಕಾಂಡ 24:16) ಆದುದರಿಂದ ಯೆಹೂದ್ಯನಾಯಕರು ಆತನನ್ನು ಕೊಲ್ಲುವದಕ್ಕೆ ಮತ್ತಷ್ಟು ಪ್ರಯತ್ನಮಾಡಿದರು (ಮಾರ್ಕ 3:6, ಯೋಹಾನ 10:33 ನೋಡಿರಿ).

ಆದರೆ 19-30 ವಚನಗಳಲ್ಲಿ ಯೇಸು ನಿಜವಾಗಿಯೂ ತಾನು ದೇವರಿಗೆ ಸಮಾನನೆಂಬದನ್ನು ಯೆಹೂದ್ಯರಿಗೆ ತೋರಿಸಿಕೊಟ್ಟನು. ಅವರ ದೈವ ದೂಷಣೆಯ ಆರೋಪಗಳು ಸುಳ್ಳಾಗಿದ್ದವು.

**19** ಎಲ್ಲದರಲ್ಲಿಯೂ ಯೇಸು ತನ್ನ ತಂದೆಯಾದ ದೇವರ ಮೇಲೆ ಆಧಾರವಾಗಿದ್ದನು. ಮತ್ತು ಆತನಿಗೆ ವಿಧೇಯನಾಗಿದ್ದನು. ಮಗನು ತನ್ನಷ್ಟಕ್ಕೆತಾನೇ ಏನು ಮಾಡಲಾರನು. ಅದೇ ಸಮಯದಲ್ಲಿ ಯೇಸು ತನ್ನ ತಂದೆಯ ಎಲ್ಲಾ ಅಧಿಕಾರ ಮತ್ತು ಬಲವನ್ನು ಹೊಂದಿದ್ದನು...ತಂದೆಯು ಮಾಡುವದನ್ನು ಕಂಡು ಮಗನು ಮಾಡುತ್ತಾನೆ (ಮತ್ತಾಯ 11:25, ಯೋಹಾನ 13:3, 14:10 ನೋಡಿರಿ).

**20** ತಂದೆಯು ಮಗನನ್ನು ಪ್ರೀತಿಸುತ್ತಾನೆ, ಅಂದರೆ ಆತನು ನಿರಂತರವಾಗಿ ಯೇಸುವಿನ ಮೇಲೆ ಮಮತೆಯಿಟ್ಟಿರುತ್ತಾನೆ. ದೇವರು ಮತ್ತು ಯೇಸುವಿನ ನಡುವಿನ ಐಕ್ಯತೆ ಹಾಗು ಆಪ್ತತೆಗಳು ದೇವರು ಯೇಸುವಿಗಾಗಿ ಹೊಂದಿರುವ ಪ್ರೀತಿಯ ಫಲಿತವಾಗಿವೆ. ಆದ್ದರಿಂದಲೇ ದೇವರು ತಾನು ಮಾಡುವದನ್ನೆಲ್ಲಾ ಮಗನಿಗೆ ತೋರಿಸುತ್ತಾನೆ (ಯೋಹಾನ 3:35).

ಯೇಸು ಯೆಹೂದ್ಯರಿಗೆ ಅವರು ಇದುವರೆಗೂ ನೋಡಿದ ಸಂಗತಿಗಳಿಗಿಂತಲೂ ದೊಡ್ಡ ಕಾರ್ಯಗಳನ್ನು ನಾನು ಮಾಡುತ್ತೇನೆಂದು ಹೇಳಿದನು. ಯಾಕೆಂದರೆ ದೇವರು ಇವುಗಳಿಗಿಂತ ದೊಡ್ಡಕೆಲಸಗಳನ್ನು ಅವನಿಗೆ ತೋರಿಸುವನು. ಈ ದೊಡ್ಡ ಕೆಲಸಗಳು ಯಾವವೆಂದರೆ ಯೇಸು ಪ್ರಾಣವನ್ನು ನೀಡುವದು (ವಚನ 21) ಮತ್ತು ನ್ಯಾಯತಿರ್ಪು ನೀಡುವದು (ವಚನ 22).

**21** ದೇವರು ಸತ್ತವರನ್ನು ಎಬ್ಬಿಸಿ ಬದುಕಿಸುತ್ತಾನೆ ಎಂದು ಹಳೆ ಒಡಂಬಡಿಕೆಯು ಬೋಧಿಸುತ್ತದೆ (1 ಸಮುವೇಲ 2:6). ಆದರೆ ಯೇಸು ಇಲ್ಲಿ ತಾನು ಸಹ ಜೀವಕೊಡುವನು...ತಂದೆಯು ಮಾಡುವುದನ್ನೇ ಮಗನು ಮಾಡುತ್ತಾನೆಂದು ಹೇಳುತ್ತಾನೆ (ವಚನ 19) ಯೇಸು ಕೊಡುವ ಜೀವವು ನೂತನವಾದ ಆತ್ಮೀಕ ಜೀವವಾಗಿದೆ ಮಾನವರೆಲ್ಲರೂ ತಾವು ನಂಬುವದಕ್ಕೆ ಮುಂಚೆ ತಮ್ಮ ಅಪರಾಧಗಳಲ್ಲಿ ಆತ್ಮೀಕವಾಗಿ ಸತ್ತವರಾಗಿರುತ್ತಾರೆ (ಎಫೆಸ 2:1 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ಅವರನ್ನು ಬದುಕಿಸಲು ಕ್ರಿಸ್ತನಿಗೆ ಬಲವಿರುತ್ತದೆ. ಯೇಸು ಕೊಡುವ ಜೀವವು ನಿತ್ಯಜೀವವಾಗಿದೆ. ಇದು ಒಬ್ಬ ವ್ಯಕ್ತಿಯು ಯೇಸುವಿನಲ್ಲಿ ನಂಬಿಕೆಯಿಟ್ಟ ಕ್ಷಣದಿಂದಲೇ ಪ್ರಾರಂಭವಾಗಿ ಸದಾಕಾಲವೂ ಇರುತ್ತದೆ. (ಯೋಹಾನ 1:4, 3:15, 36 ಮತ್ತು ವ್ಯಾಖ್ಯಾನ ನೋಡಿರಿ) ಮತ್ತು ಯೇಸು ಈ ಜೀವವನ್ನು ತನಗೆ ಬೇಕಾದವರಿಗೆ ಕೊಡುತ್ತಾನೆ. ನಾವು ಇದನ್ನು ಹಕ್ಕಿನಿಂದ ಕೇಳಲಿಕ್ಕಾಗಲಿ ಅಥವಾ ಸಂಪಾದಿಸಿಕೊಳ್ಳಲಿಕ್ಕಾಗಲಿ ಸಾದ್ಯವಿಲ್ಲ. ನಾವು ಅದಕ್ಕೆ ಯೋಗ್ಯರಲ್ಲ. ನಾವು ಇದನ್ನು ತಂದೆ ಮತ್ತು ಮಗ ಪ್ರೀತಿ ಹಾಗು ಕೃಪೆಗಳಿಂದ ಮಾತ್ರವೇ ಸ್ವೀಕರಿಸುತ್ತೇವೆ.

**22** ತಿರ್ಪು ಮಾಡುವ ಅಧಿಕಾರವು ದೇವರಿಗೆ ಸೇರಿದ್ದು. ಆದರೆ ಆತನು ಈ ಅಧಿಕಾರವನ್ನು ಮಗನಿಗೆ ವಹಿಸಿರುತ್ತಾನೆ. ಆದುದರಿಂದ ಲೋಕಾಂತ್ಯದ ವೇಳೆ ಬರುವ ನ್ಯಾಯತೀರ್ಪಿನ ದಿನದಲ್ಲಿ ಸ್ವತಃ ಕ್ರಿಸ್ತನೇ ನಮ್ಮ ನ್ಯಾಯಾಧಿಪತಿಯಾಗಿರುತ್ತಾನೆ (ಅ.ಕೃತ್ಯ 17:31, 2 ಕೊರಿಂಥ 5:10)

**23** ಎಲ್ಲರು ತನಗೆ ಮಾನ ಕೊಡುವ ಪ್ರಕಾರವೇ ಮಗನಿಗೂ ಮಾನಕೊಡಬೇಕೆಂಬದಕ್ಕಾಗಿ ದೇವರು ಅಧಿಕಾರವನ್ನು ಕ್ರಿಸ್ತನಿಗೆ ಕೊಟ್ಟಿರುತ್ತಾನೆ. ದೇವರು ಹೊಂದುವ ಮಾನವನ್ನೇ ಕ್ರಿಸ್ತನು ಹೊಂದಬೇಕು. ಯೆಹೂದ್ಯರ ದೃಷ್ಟಿಯಲ್ಲಿ ಅಂತಹ ಮಾತನ್ನು ಹೇಳುವದು

ದೈವ ದೂಷಣೆಯಾಗಿತ್ತು (ವಚನ 18 ನೋಡಿರಿ). ಆದರೆ ವಾಸ್ತವದಲ್ಲಿ ಅವರು ಕುರುಡರಾಗಿದ್ದರು. ಕ್ರಿಸ್ತನು ನಿಜವಾಗಿಯೂ ದೇವರೊಂದಿಗೆ ಸರಿಸಮಾನನಾಗಿದ್ದಾನೆಂಬದನ್ನು ಅವರು ಗ್ರಹಿಸಿಕೊಳ್ಳಲಿಲ್ಲ. ಆದುದರಿಂದ ಅವರು ಕ್ರಿಸ್ತನಿಗೆ ಮಾನಸಲ್ಲಿಸಲು ನಿರಾಕರಿಸಿದರು. ಅವರು "ನಾವು ದೇವರಿಗೆ ಮಾತ್ರವೇ ಮಾನ ಕೊಡುತ್ತೇವೆ" ಎಂದರು. ಆದರೆ ಯೇಸು ಅವರಿಗೆ "ಮಗನಿಗೆ ಮಾನ ಕೊಡದವನು ಅವನನ್ನು ಕಳುಹಿಸಿದ ತಂದೆಗೂ ಮಾನ ಕೊಡದವನಾಗಿದ್ದಾನೆ" ಎಂದು ಹೇಳಿದನು. ಮಾನವರ ಮದ್ಯದಲ್ಲಿಯೂ ನಾವು ಇದನ್ನು ಕಾಣುತ್ತೇವೆ: ನಾವು ಒಬ್ಬ ವ್ಯಕ್ತಿಯ ಮಗನನ್ನು ಅವಮಾನ ಪಡಿಸುವಾಗಲೆಲ್ಲಾ ಅವ್ಯಕ್ತಿಯನ್ನೇ ಅವಮಾನಪಡಿಸುವವರಾಗಿದ್ದೇವೆ.

ಇಲ್ಲಿ ಒಂದು ಆಳವಾದ ಹಾಗು ಪ್ರಾಮುಖ್ಯವಾದ ಸತ್ಯವಿದೆ. ಅನೇಕ ಜನರು "ನಾನು ದೇವರಲ್ಲಿ ನಂಬಿಕೆಯಿಟ್ಟಿದ್ದೇನೆ. ಕ್ರಿಸ್ತನನ್ನು ಸಹ ನಂಬುವ ಅವಶ್ಯಕತೆಯೇಕೆ?" ಎನ್ನುತ್ತಾರೆ. ಇದು ಅವಶ್ಯಕವಾದದ್ದು ಯಾಕೆಂದರೆ ನಾವು ಕ್ರಿಸ್ತನಲ್ಲಿ ನಂಬಿಕೆಯಿಟ್ಟಾಗ ಮಾತ್ರವೇ ನಿಜವಾಗಿಯೂ ದೇವರಲ್ಲಿ ನಂಬಿಕೆಯಿಡುವವರಾಗುತ್ತೇವೆ. ಕ್ರಿಸ್ತನನ್ನು ಅರಿಯದ ವ್ಯಕ್ತಿಯು ದೇವರನ್ನು ಸಂಪೂರ್ಣವಾಗಿ ತಿಳಿಯಲು ಸಾದ್ಯವಿಲ್ಲ. ಕ್ರಿಸ್ತನಿಗೆ ಮಾನ ಸಲ್ಲಿಸದವನು ದೇವರಿಗೆ ಸಹ ಮಾನ ಸಲ್ಲಿಸದವನಾಗಿದ್ದಾನೆ (ಲೂಕ 10:16, ಯೋಹಾನ 12:44-45, 14:9, 15:23 ನೋಡಿರಿ).

24 ಯೇಸು ಇಲ್ಲಿ ಯೋಹಾನ 3:15, 36ರಲ್ಲಿ ಬರೆಯಲ್ಪಟ್ಟಿದ್ದನ್ನು ಪುನರಾವರ್ತಿಸುತ್ತಾನೆ. ಇಲ್ಲಿ ಆತನು ಒಬ್ಬ ವ್ಯಕ್ತಿಯು ಕ್ರಿಸ್ತನನ್ನು ಮಾತ್ರವೇ ನಂಬದೇ ಆತನನ್ನು ಕಳುಹಿಸಿ ಕೊಟ್ಟವನನ್ನು (ದೇವರನ್ನು) ನಂಬಬೇಕೆಂದು ಹೆಚ್ಚಿಗೆ ಸೇರಿಸಿ ಹೇಳುತ್ತಾನೆ. ಕ್ರಿಸ್ತನು ಮತ್ತು ದೇವರು ಬೇರ್ಪಡಲಾರರು: ಅವರು ಒಂದೇ ಆಗಿದ್ದಾರೆ (ಯೆಹಾನ 10:30).

ಕ್ರಿಸ್ತನು ದೇವರಿಂದ ಕಲುಹಿಸಲ್ಪಟ್ಟವನೂ, ಆತನು ತಂದೆಯೊಂದಿಗೆ ಒಂದೇ ಆಗಿದ್ದಾನೆಂಬದನ್ನು ಗುರುತಿಸುವನು. ಕ್ರಿಸ್ತನಲ್ಲಿ ನಂಬಿಕೆಯನ್ನಿಡುವಂತೆ ನಡೆಸುತ್ತದೆ ಆತನ ಮಾತುಗಳು ದೇವರ ಮಾತುಗಳಾಗಿವೆ. (ಯೋಹಾನ 3:24). ಕ್ರಿಸ್ತನ ವಾಕ್ಯವನ್ನು ಅಂದರೆ ಸುವಾರ್ತೆಯನ್ನು ಕೇಳುವದು ಸ್ವತಃ ದೇವರಲ್ಲಿ ನಂಬಿಕೆಯಿಡುವಂತೆ ನಡೆಸುತ್ತದೆ (ರೋಮ 10:14, 1 ಪೇತ್ರ 1:21). ಕ್ರಿಸ್ತನ ಉದ್ದೇಶವು ನಮ್ಮನ್ನು ದೇವರ ಬಳಿಗೆ ತರುವದೇ ಆಗಿದೆ (1 ಪೇತ್ರ 3:18).

ನಿತ್ಯ ಜೀವವನ್ನು ಪಡೆದಿರುವ ವ್ಯಕ್ತಿಯು ಮರಣದಿಂದ ಪಾರಾಗಿ ಜೀವಕ್ಕೆ ಸೇರಿದವನಾಗಿದ್ದಾನೆ. ಮಾನವನಿಗೆ ಕೇವಲ ಎರಡು ಸ್ಥಿತಿಗಳ ಸಾಧ್ಯತೆಯಿದೆ: ಜೀವ ಅಥವಾ ಮರಣ. ಒಬ್ಬ ವ್ಯಕ್ತಿಯು ಆತ್ಮೀಕವಾಗಿ ಜೀವಂತನಾಗಿದ್ದಾನೆ ಇಲ್ಲವೆ ಆತನು ಆತ್ಮೀಕವಾಗಿ ಸತ್ತವನು. ಆತನು ಸೈತಾನನ ರಾಜ್ಯದೊಳಗಿದ್ದಾನೆ ಅಥವಾ ದೇವರ ರಾಜ್ಯದೊಳಗೆ ಇದ್ದಾನೆ. ಕ್ರಿಸ್ತನಲ್ಲಿ ಮತ್ತು ದೇವರಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ಒಬ್ಬನು ಸೈತಾನನ ರಾಜ್ಯದಿಂದ ಪಾರಾಗಿ ದೇವರ ರಾಜ್ಯವನ್ನು ಸೇರಬಹುದು.

25 ಸತ್ತವರು – ಅಂದರೆ ಆತ್ಮೀಕವಾಗಿ ಸತ್ತವರು – ಮನುಷ್ಯ ಕುಮಾರನ ಧ್ವನಿಯನ್ನು ಕೇಳುವರು. ಕತ್ತಲೆಯಲ್ಲಿ ಅಂದರೆ ಅಪರಾಧ ಮತ್ತು ಪಾಪಗಳಲ್ಲಿ ಜೀವಿಸುವವರೊಳಗೆ (ಎಫೆಸ 2:1) ಕೆಲವರಾದರೂ ಈ ಜೀವಿತದಲ್ಲಿ ಕ್ರಿಸ್ತನ ಧ್ವನಿಯನ್ನು ಕೇಳಿ ನಂಬುವರಾಗಿರುತ್ತಾರೆ. ಕೇಳಿ ನಂಬುವವರು ಬದುಕುವರು (ವಚನ 21 ಮತ್ತು ವ್ಯಾಖ್ಯಾನ ನೋಡಿರಿ). ಯೇಸು "ಇದು ಸಂಭವಿಸುವ ಕಾಲ ಬರುತ್ತದೆ, ಈಗಲೇ ಬಂದಿದೆ ಸತ್ತವರು ಬದುಕಲು ಪ್ರಾರಂಭಿಸುವರು" ಎಂದು ಹೇಳಿದನು.

26 ತಂದೆಯು ಎಲ್ಲಾ ಜೀವದ ಮೂಲವಾಗಿರುವ ಪ್ರಕಾರವೇ ಮಗನು (ಕ್ರಿಸ್ತನು) ಸಹ ಶಾರೀರಿಕ ಮತ್ತು ಆತ್ಮೀಕ ಜೀವದ ಮೂಲವಾಗಿದ್ದಾನೆ. ದೇವರು ತನ್ನ ಸ್ವಂತ ಜೀವವನ್ನು ಕ್ರಿಸ್ತನಿಗೆ ಕೊಟ್ಟಿರುತ್ತಾನೆ (ಯೋಹಾನ 1:4, 3:35, 1 ಯೋಹಾನ 5:11 ನೋಡಿರಿ). ಈ ಕಾರಣದಿಂದಲೇ ಮರಣವು ಕ್ರಿಸ್ತನನ್ನು ಜಯಿಸಲಾಗಲಿಲ್ಲ. ಆತನಲ್ಲಿದ್ದ ದೇವರ ಜೀವದ ಕಾರಣದಿಂದಾಗಿ ಕ್ರಿಸ್ತನು ಸ್ವತಃ ಸತ್ತವರೊಳಗಿಂದ ಎದ್ದುಬಂದನು. ಮತ್ತು ತನ್ನಲ್ಲಿರುವ ದೇವರ ಜೀವದ ಕಾರಣದಿಂದಾಗಿ ಕ್ರಿಸ್ತನು ಸಹ ಪಾಪದಲ್ಲಿ ಸತ್ತವರಿಗೆ ಜೀವವನ್ನು ಕೊಡಲು ಶಕ್ತನಾಗಿದ್ದಾನೆ. (ವಚನ 25).

27 ಯೇಸು ಮೆಸ್ಸಿಯನಾಗಿಯೂ, ಮನುಷ್ಯಕುಮಾರನಾಗಿಯೂ ಇರುವದರಿಂದ ದೇವರು ಅವನಿಗೆ ತೀರ್ಪು ನೀಡುವ ಅಧಿಕಾರವನ್ನು ಕೊಟ್ಟಿರುತ್ತಾನೆ (ಮತ್ತಾಯ 28:18, ಯೋಹಾನ 5:22, 17:2 ಮತ್ತು ವ್ಯಾಖ್ಯಾನ ನೋಡಿರಿ). ಮನುಷ್ಯಕುಮಾರನಾಗಿರುವ ಯೇಸು ಮನುಷ್ಯರ ಹೃದಯಗಳನ್ನು ಬಲ್ಲವನಾಗಿದ್ದಾನೆ, ಆದಕಾರಣ ಆತನು ತೀರ್ಪು ನೀಡಲು ಯೋಗ್ಯನು (ಯೋಹಾನ 2:24-25 ನೋಡಿರಿ) ಮನುಷ್ಯಕುಮಾರನಾಗಿರುವ ಯೇಸು ಎಲ್ಲಾಮಾನವರ ಮೇಲೆ ನ್ಯಾಯತೀರ್ಪು ಬರಮಾಡಲು ಘನತೆ ಮತ್ತು ಆದಿಪತ್ಯಗಳನ್ನು ಹೊಂದಿದ್ದಾನೆ (ದಾನಿಯೇಲ 7:13-14).

28-29 ಈ ವಚನಗಳಲ್ಲಿ ಯೇಸು ಪ್ರಸ್ತುತ ಜೀವಿತದ ಬಗ್ಗೆ ಮಾತನಾಡದೇ, ಆತನು ಲೋಕದ ಅಂತ್ಯದಲ್ಲಿ ಸಂಭವಿಸುವ ಅಂತಿಮ ನ್ಯಾಯತೀರ್ಪಿನ ಕುರಿತಾಗಿ ಮಾತನಾಡುತ್ತಿದ್ದಾನೆ. ಆತನು ಆತ್ಮೀಕ ಅರ್ಥದಲ್ಲಿ ಮಾತಾಡುತ್ತಿರುವದು ಮಾತ್ರವಲ್ಲದೆ ಶಾರೀರಿಕ ಅರ್ಥದಲ್ಲಿಯೂ ಮಾತಾಡುತ್ತಿದ್ದಾನೆ. ಸತ್ತು ಹೂಣಲ್ಪಟ್ಟಿರುವವರೆಲ್ಲರೂ ಲೋಕದ ಅಂತ್ಯದಲ್ಲಿ ಎಬ್ಬಿಸಲ್ಪಡುವರು. ಆ ದಿನದಲ್ಲಿ ಒಳ್ಳೆಯವರು ಮತ್ತು ಕೆಟ್ಟವರು, ಅಂತೂ ಎಲ್ಲರ ದೇಹಗಳು ಪುನರುತ್ಥಾನಗೊಳ್ಳುವವು (ಅ.ಕೃತ್ಯ 24:15 ಮತ್ತು ವ್ಯಾಖ್ಯಾನ ನೋಡಿರಿ) ನೀತಿವಂತರು ಪರಲೋಕದಲ್ಲಿ ನೂತನ ದೇಹಗಳನ್ನು ಪಡೆಯುವರು. ಅನೀತಿವಂತರು ನರಕದಲ್ಲಿ ನೂತನ ದೇಹಗಳನ್ನು ಪಡೆಯುವರು.

ಮನುಷ್ಯಕುಮಾರನ ದ್ವನಿಯನ್ನು ಕೇಳಿ ಸತ್ತವರೆಲ್ಲರು ಸಮಾಧಿಗಳಿಂದ ಎದ್ದು ಬರುವರು. ಆ ಸಮಯದಲ್ಲಿ ಮಗನು ಎಲ್ಲಾ ಜನರಿಗೂ ಅವರವರ ಕ್ರತ್ಯಗಳಿಗೆ ತಕ್ಕ ಹಾಗೆ ನ್ಯಾಯ ತೀರಿಸುವನು. (2 ಕೊರಿಂಥ 5:10) ಒಳ್ಳೆಯದನ್ನು ಮಾಡಿರುವವರು ಪರಲೋಕದಲ್ಲಿ ನಿತ್ಯ ಜೀವವನ್ನು ಪಡೆಯುವರು. ಕೆಟ್ಟದ್ದನ್ನು ಮಾಡಿರುವವರು ನರಕದಲ್ಲಿ ನಿತ್ಯ ಶಿಕ್ಷೆಗೆ ಗುರಿಯಾಗುವರು.

ನಾವು ಎರಡು ಸತ್ಯಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಮೊದಲನೆಯದಾಗಿ ನಂಬಿಕೆಯ ಮೂಲಕ ಮಾತ್ರವೇ ರಕ್ಷಣೆ ಬರುತ್ತದೆ. ಎರಡನೆಯದಾಗಿ ನಾವು ನಮ್ಮ ಕ್ರತ್ಯಗಳಿಗೆ ತಕ್ಕ ಹಾಗೆ ಪ್ರತಿಫಲ ಅಥವಾ ದಂಡನೆಯನ್ನು ಹೊಂದುತ್ತೇವೆ. (ಮತ್ತಾಯ 16:27 ಮತ್ತು ವ್ಯಾಖ್ಯಾನ ನೋಡಿರಿ). ಕ್ರತ್ಯಗಳೇ ನಮ್ಮ ನಂಬಿಕೆಯ ಸಾಕ್ಷಿಯಾಗಿವೆ.

ಒಂದು ಅರ್ಥದಲ್ಲಿ ನಮ್ಮ ನ್ಯಾಯ ತೀರ್ಪು ಈಗಲೇ ಭೂಮಿಯ ಮೇಲೆ ಜರಗುತ್ತಿದೆ, ಯಾಕಂದರೆ ಈ ಜೀವಿತದಲ್ಲಿ ಮಾಡುವಂತಹದ್ದು ಕ್ರಿಸ್ತನು ಕಡೇ ನ್ಯಾಯತೀರ್ಪಿನ ದಿನದಲ್ಲಿ ನಮಗೆ ಹೇಗೆ ನ್ಯಾಯ ತೀರಿಸುವನೆಂಬದನ್ನು ನಿರ್ಧರಿಸುತ್ತಾನೆ.

30 ಕ್ರಿಸ್ತನು ನ್ಯಾಯತೀರಿಸುವಾಗ ಆತನ ನ್ಯಾಯತೀರ್ಪು ದೇವರ ನ್ಯಾಯತೀರ್ಪಿನ ಅಡಿಯಲ್ಲಿರುತ್ತದೆ. ಕ್ರಿಸ್ತನು ತನ್ನಷ್ಟಕ್ಕೆ ತಾನೇ ಏನೂ ಮಾಡುವದಿಲ್ಲ (ವಚನ 19) "ತಂದೆ ಹೇಳಿದ್ದನ್ನು ಕೇಳಿ ನ್ಯಾಯತೀರಿಸುತ್ತೇನೆ" ಎಂದು ಯೇಸು ಹೇಳಿದನು. ಕ್ರಿಸ್ತನು ಚಿತ್ತವು ದೇವರ ಚಿತ್ತದಂತೆಯೇ ಇರುತ್ತದೆ. ಈ ಕಾರಣಕ್ಕಾಗಿ ಕ್ರಿಸ್ತನ ನ್ಯಾಯತೀರ್ಪು ಯಾವಾಗಲೂ ನ್ಯಾಯವಾದದ್ದು ಮತ್ತು ಸತ್ಯವಾದದ್ದು. (ಯೋಹಾನ 6:38, 8:16).

ಕ್ರಿಸ್ತನಂತೆಯೇ ನಮ್ಮ ಜೀವಿತದಲ್ಲಿಯೂ ಅದು ಅಷ್ಟೇ ಸತ್ಯವಾಗಿದೆ. ನಾವು ದೇವರ ಚಿತ್ತದಲ್ಲಿ ನೆಲೆಗೊಳ್ಳುವಾಗ ನಮ್ಮ ಜೀವಿತವು ನೀತಿಯುಳ್ಳದ್ದಾಗಿರುತ್ತದೆ. ಆದರೆ ನಾವು ಸ್ವಂತ ಚಿತ್ತವನ್ನು ಅನುಸರಿಸಿ ನಮ್ಮನ್ನೆ ಮೆಚ್ಚಿಸಿಕೊಳ್ಳಲು ತವಕ ಪಡುವಾಗ ನಮ್ಮ ಜೀವಿತ ಅನೀತಿಯುಳ್ಳದ್ದಾಗಿರುತ್ತದೆ. ಎಲ್ಲಾದರಲ್ಲಿಯೂ ನಾವು ಕ್ರಿಸ್ತನು ಪ್ರಾರ್ಥಿಸಿದಂತೆ ಪ್ರಾರ್ಥಿಸೋಣ: "ಆದರೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ". (ಮಾರ್ಕ 14:36).

## ಯೇಸುವಿನ ಕುರಿತ ಸಾಕ್ಷಿಗಳು (5:31-47)

**31** ಒಂದು ವೇಳೆ ಯೇಸು ತನ್ನ ಕುರಿತು ತಾನೊಬ್ಬನೇ ಸಾಕ್ಷಿ ಹೇಳಿಕೊಂಡಿದ್ದರೆ ಆತನ ಸಾಕ್ಷಿಯು ನಿಜವಾಗಿರುತ್ತಿದ್ದಿಲ್ಲ,[43] ಅಂದರೆ ಕಾನೂನು ಬದ್ಧವಾಗಿ ಸ್ವೀಕೃತವಾಗುತ್ತಿದ್ದಿಲ್ಲಿ. ಬೈಬಲ್ಲಿನ ಪ್ರಕಾರವಾಗಿ ಇಬ್ಬರು ಅಥವಾ ಮೂವರು ಸಾಕ್ಷಿಗಳ ಆಧಾರದ ಮೇಲೆ ಎಲ್ಲವೂ ನಿರ್ಧರಿಸಲ್ಪಡಬೇಕು (ಧರ್ಮೋಪದೇಶಕಾಂಡ 19:15, ಮತ್ತಾಯ 18:16, 2 ಕೊರಿಂಥ 13:1). ಆದುದರಿಂದ ಕ್ರಿಸ್ತನು ತಾನೊಬ್ಬನೇ ತನ್ನ ಕುರಿತು ನ್ಯಾಯಸಮ್ಮತ ಸಾಕ್ಷಿಯನ್ನು ಕೊಡಲಾಗದು, ಇನ್ನೊಬ್ಬ ಸಾಕ್ಷಿಯ ಅವಶ್ಯಕತೆಯಿರುತ್ತದೆ.

**32** ಆದರೆ ಆತನಿಗೆ ಇನ್ನೊಬ್ಬ ಸಾಕ್ಷಿಯಿರುತ್ತಾನೆ, ಆ ಸಾಕ್ಷಿಯು ಸ್ವತಃ ದೇವರು (ಯೋಹಾನ 8:17-18) ದೇವರು ಪರಲೋಕದಿಂದ ಮಾತನಾಡಿ "ನೀನು ನನ್ನ ಮಗನು" ಎಂದು ಹೇಳಿದನು (ಮಾರ್ಕ 1:11, 9:7).

**33-35** ಅದನ್ನು ಹೇಳಿದ ಬಳಿಕ ದೇವರು ಆತನ ಮುಖ್ಯ ಸಾಕ್ಷಿ, ಯೇಸು ಇಲ್ಲಿ ಸ್ನಾನಿಕನಾದ ಯೋಹಾನನ ಸಾಕ್ಷಿಯಾಗಿರುತ್ತಾನೆ. ಯೆಹೂದ್ಯರು ಯೋಹಾನನ ಬಳಿಗೆ ಹೋಗಿದ್ದರು (ಯೋಹಾನ 1:19). ಯೆಹೂದ್ಯರಲ್ಲಿ ಕೆಲವರು ಯೋಹಾನನ ಬೋಧನೆಗೆ ಆಕರ್ಷಿತರಾಗಿದ್ದರು. ಯೋಹಾನನು ಸತ್ಯಕ್ಕೆ ಸಾಕ್ಷಿ ಹೇಳಿದನು (ವಚನ 33). ಅವನು ರಕ್ಷಣೆಯ ಮಾರ್ಗವನ್ನು ತೋರಿಸುವ ದೀಪವಾಗಿದ್ದನು. ಒಂದು ವೇಳೆ ಯೆಹೂದ್ಯರು ಯೋಹಾನನನ್ನು ಪೂರ್ಣವಾಗಿ ನಂಬಿದ್ದರೆ ಅವರು ಯೇಸುವನ್ನು ಸಹ ನಂಬಿ ರಕ್ಷಣೆಯನ್ನು ಕಂಡುಕೊಂಡಿರುತ್ತಿದ್ದರು.

ಯೆಹೂದ್ಯರು ದೇವರಿಂದ ನೇರವಾಗಿ ಬಂದ ಸಾಕ್ಷಿಯನ್ನು ನಂಬಲಾಗಲಿಲ್ಲ (ವಚನಗಳು 37-38). ಆದರೆ ಅವರು ಅದೇಸತ್ಯ ಸಾಕ್ಷಿಯನ್ನೇ ನೀಡಿದ ಯೋಹಾನನ್ನು ನಂಬಿರಬಹುದಿತ್ತು. ಯೇಸು ತನ್ನನ್ನು ಮೆಸ್ಸೀಯನೆಂದು ನಿರೂಪಿಸಲು ಆತನಿಗೆ ಯೋಹಾನನ ಸಾಕ್ಷಿಯ ಅಗತ್ಯವಿರಲಿಲ್ಲ. ಯೇಸು ಮನುಷ್ಯರ ಸಾಕ್ಷಿಯನ್ನು ಅಂಗೀಕರಿಸುವದಿಲ್ಲ (ವಚನ 34). ದೇವರ ಸಾಕ್ಷಿಯು ಸಾಕಾಗಿರುತ್ತದೆ. ಸ್ನಾನಿಕನಾದ ಯೋಹಾನನು ಯೆಹೂದ್ಯರಿಗೆ ನಿಜವಾಗಿಯೂ ರಕ್ಷಣೆಯ ಮಾರ್ಗವನ್ನು ತೋರಿಸಿದ್ದಾನೆಂಬದನ್ನು ಅವರಿಗೆ ಜ್ಞಾಪಕಕ್ಕೆತರಲು ಮಾತ್ರವೇ ಯೋಹಾನನ ಹೆಸರನ್ನು ಪ್ರಸ್ತಾಪಿಸುತ್ತಾನೆ.

**36** ದೇವರು ಯೇಸುವಿನ ಶ್ರೇಷ್ಠ ಸಾಕ್ಷಿಯಾಗಿದ್ದನು (ವಚನ 32). ಆದರೆ ಯೆಹೂದ್ಯರು ದೇವರ ಸಾಕ್ಷಿಯನ್ನು ಒಪ್ಪಲಿಲ್ಲ. ಆದುದರಿಂದ ಯೇಸು ಇನ್ನು ಒಂದು "ಸಾಕ್ಷಿಯ"ನ್ನು ಪ್ರಸ್ತಾಪಿಸುತ್ತಾನೆ. ಅದು ಆತನ "ಕೆಲಸಗಳೇ" ಯೆಹೂದ್ಯರು ಯೇಸುವಿನ ಕೆಲಸವನ್ನು ನೋಡಬಹುದಾಗಿತ್ತು. ಕ್ರಿಸ್ತನ ಕೆಲಸ ಮತ್ತು ದೇವರ ಕೆಲಸ ಒಂದೇ ಆಗಿದೆ (ವಚನ 19) ಆದುದರಿಂದ ಕ್ರಿಸ್ತನ ಕೆಲಸವು ಆತನು ದೇವರಿಂದ ಕಳುಹಿಸಲ್ಪಟ್ಟವನೆಂಬದಕ್ಕೆ ಸಾಕ್ಷಿನೀಡುತ್ತವೆ ಅಥವಾ ಅದನ್ನು ನಿರೂಪಿಸುತ್ತದೆ (ಮತ್ತಾಯ 11:2-5). ನಿಶ್ಚಯವಾಗಿಯೂ ಯೆಹೂದ್ಯರು ಕ್ರಿಸ್ತನ ಕೆಲಸಗಳ ಸಾಕ್ಷಿಯನ್ನು ಅಂಗೀಕರಿಸಿರ ಬೇಕಿತ್ತು (ಯೋಹಾನ 1:11) ಮತ್ತು ಖಂಡಿತವಾಗಿಯೂ ಈದಿನ ಸಹ ಜನರು ಅದನ್ನು ಸ್ವೀಕರಿಸಬೇಕಿತ್ತು.

**37-38** ಯೇಸು ಇಲ್ಲಿ ಪುನಃ "ತಂದೆಯು ನನ್ನ ವಿಷಯವಾಗಿ ಸಾಕ್ಷಿ ಹೇಳಿದ್ದಾನೆ"ಎಂದು ಹೇಳುತ್ತಾನೆ. ಸ್ವತಃ ದೇವರು ಪರಲೋಕದಿಂದ ಮಾತಾಡಿದ್ದನು (ವಚನ 32). ಆತನು ಪ್ರವಾದಿಗಳ ಮೂಲಕ, ಹಳೆ ಒಡಂಬಡಿಕೆ ಮೂಲಕವಾಗಿಯೂ, ಸ್ನಾನಿಕನಾದ ಯೋಹಾನನ ಮೂಲಕವಾಗಿಯೂ ಸಾಕ್ಷಿ ನೀಡಿದ್ದನು. ಆದರೆ ಯೆಹೂದ್ಯರು ಆತನ ಸ್ವರವನ್ನು ಕೇಳಲಿಲ್ಲ ಅಥವಾ ಆತನ ಮಾತನ್ನು ಅಂಗೀಕರಿಸಲಿಲ್ಲ ಅವರು ದೇವರ ಸಾಕ್ಷಿಯನ್ನು ನಂಬಲು ನಿರಾಕರಿಸಿದ್ದರು. ಅಪನಂಬಿತೆಯ ಕಾರಣದಿಂದ ದೇವರ ವಾಕ್ಯವು ಅವರಲ್ಲಿ ನೆಲೆಗೊಳ್ಳಲಿಲ್ಲ. ಅವರು ತಮ್ಮ ಕಿವಿಗಳಿಂದ ದೇವರ ವಾಕ್ಯವನ್ನು ಕೇಳಿದರು. ಆದರೆ ಅವರ ಹೃದಯಗಳಲ್ಲಿ ಅದನ್ನು ನಂಬಲಿಲ್ಲ.

ಈ ವಚನಗಳ ಅರ್ಥವೇನೆಂದರೆ: ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವಾಗ ಮಾತ್ರವೇ ದೇವರ ಸಾಕ್ಷಿಯನ್ನು ಸ್ವೀಕರಿಸುವವರಾಗಿದ್ದೇವೆ. ದೇವರು ಕ್ರಿಸ್ತನ ರೂಪದಲ್ಲಿ ಭೂಮಿಗೆ ಬಂದನು. ಮಾನವನು ಕ್ರಿಸ್ತನನ್ನು ತಿರಸ್ಕರಿಸುವದಾದರೆ ಆತನು ದೇವರನ್ನು ತಿರಸ್ಕರಿಸುತ್ತಾನೆ (ವಚನ 23) ಮತ್ತು ಆತನು ದೇವರನ್ನು ತಿರಸ್ಕರಿಸುವದಾದರೆ ದೇವರ ಸಾಕ್ಷಿಯನ್ನೂ ತಿರಸ್ಕರಿಸಿದಂತಾಗುತ್ತದೆ.

**39-40** ಯೆಹೂದ್ಯರು ತಮ್ಮ ಶಾಸ್ತ್ರಗಳ ಅಂದರೆ ಹಳೆ ಒಡಂಬಡಿಕೆಯ ಜ್ಞಾನದಕುರಿತಾಗಿ ಗರ್ವ ಪಟ್ಟಕೊಳ್ಳುತ್ತಿದ್ದರು. ಆದಾಗ್ಯು ಅವರು ಶಾಸ್ತ್ರಗಳ ಸಾಕ್ಷಿಯನ್ನು ನಂಬಲಿಲ್ಲ. ಹಳೆ ಒಡಂಬಡಿಕೆಯ ಕ್ರಿಸ್ತನ ಕುರಿತು ಸ್ಪಷ್ಟವಾಗಿ ಮಾತಾಡಿತು, ಆದರೆ ಸ್ವತಃ ಕ್ರಿಸ್ತನು ಬಂದಾಗ ಯೆಹೂದ್ಯರು ಆತನನ್ನು ತಿರಸ್ಕರಿಸಿದರು (ಯೋಹಾನ 1:11).

ಯೆಹೂದ್ಯರು ಒಂದು ಭಯಂಕರ ತಪ್ಪನ್ನು ಮಾಡಿದರು. ಹಳೆ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿರುವ ಯೆಹೂದ್ಯ ಧರ್ಮಶಾಸ್ತ್ರವನ್ನು ಅನುಸರಿಸುವದರ ಮೂಲಕ ತಾವು ನಿತ್ಯಜೀವವನ್ನು ಪಡೆದುಕೊಳ್ಳಬಹುದೆಂದು ಅವರು ಊಹಿಸಿಕೊಂಡರು. ಆದರೆ ಅವರ ಊಹಿಕೆ ತಪ್ಪಾಗಿತ್ತು. ನಿತ್ಯಜೀವವು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ಬರುತ್ತದೆ (ಯೋಹಾನ 3:15). ಅವರು ಕ್ರಿಸ್ತನನ್ನು ತಿರಸ್ಕರಿಸಿದಾಗ ಜೀವವನ್ನೇ ತಿರಸ್ಕರಿಸಿದರು (ಯೋಹಾನ 3:36).

ಯೇಸು ಹೇಳುವದನ್ನು ಗಮನಿಸಿರಿ: "ನನ್ನ ಬಳಿಗೆ ಬರುವದಕ್ಕೆ ನಿಮಗೆ ಮನಸ್ಸಿಲ್ಲ". ಮನುಷ್ಯರು ಯೇಸುವಿನ ಬಳಿಗೆ ಬರದಿರುವದಕ್ಕೆ ಅಜ್ಞಾನವಾಗಲಿ ಅತವಾ ಅಲ್ಪತಿಳುವಳಿಕೆಯಾಗಲಿ ಕಾರಣವಾಗಿರುವದಿಲ್ಲ. ನಿಜಕಾರಣ ವೇನೆಂದರೆ ಅವರಿಗೆ ಬರುವದಕ್ಕೆ ಮನಸ್ಸಿರುವದಿಲ್ಲ. ಅವರು ಕತ್ತಲೆಯನ್ನು ಪ್ರೀತಿಸುತ್ತಾರೆ. ಅವರು ತಮ್ಮ ಪಾಪವನ್ನು ಬಿಟ್ಟು ಬಿಡುವದಕ್ಕೆ ಇಚ್ಛಿಸುವದಿಲ್ಲ (ಯೋಹಾನ 3:19-20). ಕ್ರಿಸ್ತನನ್ನು ನಂಬದಿರುವದಕ್ಕೆ ಅಜ್ಞಾನವು ಒಂದು ನೆಪವಾಗಿರುವದಿಲ್ಲ.

**41** ಯೇಸು ಮನುಷ್ಯರಿಂದಾಗುವ ಮಾನವನ್ನು ಅಂಗೀಕರಿಸಲಿಲ್ಲ. ಅಂದರೆ ಆತನು ಮನುಷ್ಯರಿಂದ ಹೊಗಳಿಕೆ ಮತ್ತು ಮಾನವನ್ನು ಹುಡುಕಲಿಲ್ಲ. ಆತನು ಮನುಷ್ಯರಿಂದ ಮಾನವನ್ನು ಪಡೆಯಬೇಕೆಂದು ಅವರನ್ನು ಮೆಚ್ಚಿಸಲು ಪ್ರಯತ್ನಿಸಲಿಲ್ಲ. ಆತನು ದೇವರನ್ನು ಮಾತ್ರವೇ ಮೆಚ್ಚಿಸಲು ಹಂಬಲಿಸಿದನು. ಮನುಷ್ಯರು ಆತನಿಗೆ ಮಾನವನ್ನು ಸಲ್ಲಿಸಿದರೋ ಅಥವಾ ಇಲ್ಲವೋ ಆತನು ಚಿಂತಿಸಲಿಲ್ಲ.

**42** ಯೇಸು ಯೆಹೂದ್ಯರಿಂದ ಮಾನವನ್ನು ಬಯಸಲಿಲ್ಲ, ಯಾಕೆಂದರೆ ಅವರು ದೇವರನ್ನು ನಿಜವಾಗಿಯೂ ಪ್ರೀತಿಸಲಿಲ್ಲ. ದೇವರ ಪ್ರೀತಿಯು ಅವರಲ್ಲಿ ಇರಲಿಲ್ಲ (ಯೋಹಾನ 2:24 ಮತ್ತು ವ್ಯಾಖ್ಯಾನ ನೋಡಿರಿ).

**43** ಯೇಸು ಯೆಹೂದ್ಯರಿಗೆ "ಮತ್ತೊಬ್ಬನು ತನ್ನ ಸ್ವಂತ ಹೆಸರಿನಲ್ಲಿ ಮೇಲೆ ಬಂದರೆ ಅವನನ್ನು ಒಪ್ಪಿಕೊಳ್ಳುವಿರಿ"ಎಂದು ಹೇಳಿದನು. ಯೆಹೂದ್ಯರು ಮನುಷ್ಯರಿಂದ ಮಾನವನ್ನು ಪಡೆದುಕೊಳ್ಳಲು ಇಷ್ಟಪಡುತ್ತಿದ್ದರು. ತಾವು ಇತರರಿಂದ ಮಾನವನ್ನು ಪಡೆಯುತ್ತೇವೆಂಬ ನಿರೀಕ್ಷೆಯಲ್ಲಿ ಅವರಿಗೆ ಮಾನವನ್ನು ಕೊಡುತ್ತಿದ್ದರು. ಇತರರು ತಮ್ಮನ್ನು ಒಪ್ಪಿಕೊಳ್ಳುವರೆಂಬ ನಿರೀಕ್ಷೆಯಲ್ಲಿ ಅವರು ಇತರರನ್ನು ತಕ್ಷಣವೇ ಒಪ್ಪಿಕೊಳ್ಳುತ್ತಿದ್ದರು.

ತಮ್ಮ ಸ್ವಂತ ಹೆಸರಿನ ಮೇಲೆ ಬರುವವರು ಮಿಥ್ಯ ಪ್ರವಾದಿಗಳು ಅವರು ಲೋಕದವರಾಗಿದ್ದಾರೆ. ಆದುದರಿಂದ ಯೆಹೂದ್ಯರು ಅವರನ್ನು ಒಪ್ಪಿಕೊಂಡರು. ಆದರೆ ದೇವರ ಹೆಸರಿನಲ್ಲಿ ಬಂದವನನ್ನು ಅಂದರೆ ಯೇಸುವನ್ನು ಅವರು ಒಪ್ಪಿಕೊಳ್ಳಲಾಗಲಿಲ್ಲ. ಅವರು ಆತನನ್ನುಒಪ್ಪಿಕೊಳ್ಳಲಿಲ್ಲ. ಯಾಕೆಂದರೆ ಆತನು ಬೇರೆ ಲೋಕವೊಂದರಿಂದ ಬಂದವನಾಗಿದ್ದನು.

**44** ಯೆಹೂದ್ಯರು ಕೇವಲ ಮನುಷ್ಯರಿಂದ ಬರುವ ಮಾನದ ಬಗ್ಗೆ ಮಾತ್ರವೇ ಯೋಚಿಸಿದ್ದರಿಂದ ಅವರು ಒಬ್ಬನೇ ದೇವರಿಂದ ಬರುವ ಮಾನವನ್ನು ಪಡೆಯುವ ಅಪೇಕ್ಷೆಯನ್ನು ಹೊಂದಿರಲಿಲ್ಲ. ಅವರು ಒಬ್ಬರಿಂದೊಬ್ಬರು ತಾತ್ಕಾಲಿಕ ಮಾನವನ್ನು ಹೊಂದಲಪೇಕ್ಷಿಸಿದರೆ ಹೊರತು ಸ್ವತಃ ದೇವರಿಂದ ದೊರೆಯುವ ಶಾಸ್ವತವಾದ ಮಾನವನ್ನು ಕೋರಲಿಲ್ಲ.

ದೇವರನ್ನು ಪ್ರೀತಿಸುವವರು ಆತನಿಗೆ ಮಾನ ಸಲ್ಲಿಸಲು ತವಕಪಡುತ್ತಾರೆ. ದೇವರನ್ನು ಪ್ರೀತಿಸದ ಈ ಯೆಹೂದ್ಯರಂತವರು (ವಚನ 42) ತಮ್ಮ ಸ್ವಂತ ಮಾನವನ್ನೇ ಹುಡುಕುತ್ತಾರೆ. ಒಂದೇ ಸಮಯದಲ್ಲಿ ಒಬ್ಬನು ಸ್ವಂತಮಾನವನ್ನೂ, ದೇವರ ಮಾನವನ್ನು ಹುಡುಕುವದು ಅಸಾಧ್ಯವಾದದ್ದು. (ಮತ್ತಾಯ 6:24 ಮತ್ತು ವ್ಯಾಖ್ಯಾನ ನೋಡಿರಿ)

**45** ನ್ಯಾಯತೀರ್ಪಿನ ದಿನದಲ್ಲಿ ಕ್ರಿಸ್ತನು ಯೆಹೂದ್ಯರ ಮೇಲೆ ದೂರು ಹೇಳಬೇಕಾಗುವದಿಲ್ಲ ಯಾಕಂದರೆ ಮೋಶೆಯು ಅವರ ಮೇಲೆ ದೂರು ಹೇಳುವನು ಮೋಶೆಯ ಬರಹಗಳು ಅವರ ಮೇಲೆ ದೂರು ಹೇಳುವವು [44].

ಯೆಹೂದ್ಯರು ಅವರ ಪುರಾತನ ನಾಯಕನಾದ ಮೋಶೆಯ ಮೇಲೆ ನಿರೀಕ್ಷೆ ಇಡುತ್ತಾರೆ. ಮೋಶೆಯು ಅವರಿಗೆ ಯೆಹೂದ್ಯ ಧರ್ಮಶಾಸ್ತ್ರವನ್ನು ನೀಡಿದನು. ಅವರು ಆ ಧರ್ಮ ಶಾಸ್ತ್ರಕ್ಕೆ ವಿಧೇಯರಾಗುವದರಿಂದ ರಕ್ಷಣೆಯನ್ನು ಪಡೆಯುವರೆಂದು ಯೋಚಿಸಿಕೊಂಡರು. (ವಚನ 39) ಆದರೆ ಅವರು ಧರ್ಮಶಾಸ್ತ್ರವನ್ನು ಅರ್ಥಮಾಡಿಕೊಳ್ಳಲಿಲ್ಲ. ಯಾರೂ ಸಹ ಧರ್ಮಶಾಸ್ತ್ರವನ್ನು ಪರಿಪೂರ್ಣವಾಗಿ ಅನುಸರಿಸಲಾಗಲಿಲ್ಲ, ಬದಲಾಗಿ ಧರ್ಮಶಾಸ್ತ್ರವು ಅವರಿಗೆ ಅವರ ಪಾಪವನ್ನು ತೋರ್ಪಡಿಸಿತು, (ರೋಮ 7:7-11 ಮತ್ತು ವ್ಯಾಖ್ಯಾನ ನೋಡಿರಿ). ಧರ್ಮ ಶಾಸ್ತ್ರವು ಅವರನ್ನು ದಂಡನೆಗೆ ಗುರಿಮಾಡಿತು (ರೋಮ 8:1-2 ಮತ್ತು ವ್ಯಾಖ್ಯಾನ ನೋಡಿರಿ). ಎಲ್ಲಕ್ಕಿಂತ ಮೇಲಾಗಿ ಧರ್ಮ ಶಾಸ್ತ್ರವು ಅವರಿಗೆ ರಕ್ಷಕನ ಅಗತ್ಯವಿದೆಯೆಂಬದನ್ನು ತೋರಿಸಿತು. ರಕ್ಷಕನು ಬರುವನು ಎಂಬದಾಗಿ ಮೋಶೆಯು ಪ್ರವಾದಿಸಿದನು (ಧರ್ಮೋಪದೇಶಕಾಂಡ 1:15, 1 ಯೋಹಾನ 1:45).

**46-47** ಆದುದರಿಂದ ಯೆಹೂದ್ಯರು ನಿಜವಾಗಿಯೂ ಮೋಶೆಯನ್ನು ನಂಬಲಿಲ್ಲ ಯಾಕೆಂದರೆ ಮೋಶೆಯು ಯಾವ ರಕ್ಷಕನ ಕುರಿತಾಗಿ ಬರೆದನೋ ಆರಕ್ಷಕನು ಬಂದಾಗ ಅವರು ಆತನನ್ನು ತಿರಸ್ಕರಿಸಿದರು. ಈ ಕಾರಣದಿಂದಲೇ ಮೋಶೆಯು ಅವರ ಮೇಲೆ ದೂರು ಹೇಳುವವನಾಗಿರುವನು.

ಯೆಹೂದ್ಯರು ತಾವು ಗೌರವಿಸಿದ ಮೋಶೆಯನ್ನು ನಂಬಲಿಲ್ಲವಾದರೆ ಅವರು ದ್ವೇಷಿಸುವ ಕ್ರಿಸ್ತನನ್ನು ಹೇಗೆ ನಂಬುವರು?

---

## ಅಧ್ಯಾಯ , 5

### ಯೇಸು ಐದು ಸಾವಿರ ಜನರಿಗೆ ಊಟ ಮಾಡಿಸಿದ್ದು (6:1-15)

(ಮತ್ತಾಯ 14:13-21, ಮಾರ್ಕ 6:30-44, ಲೂಕ 9:10-17)

**1-15** ಮಾರ್ಕ 6:30-44 ಮತ್ತು ವ್ಯಾಖ್ಯಾನ ನೋಡಿರಿ.

## ಯೇಸು ನೀರಿನ ಮೇಲೆ ನಡೆದದ್ದು (6:16-24)

(ಮತ್ತಾಯ 14:22-36, ಮಾರ್ಕ 6:45-46)

**16-24** ಮಾರ್ಕ 6:45-56 ಮತ್ತು ವ್ಯಾಖ್ಯಾನ ನೋಡಿರಿ

## ಯೇಸು ಜೀವದ ರೊಟ್ಟಿ (6:25-59)

**25** ಯೇಸು ಅದ್ಭುತಕರವಾಗಿ ಐದುಸಾವಿರ ಜನರಿಗೆ ಊಟ ಮಾಡಿಸಿದ ನಂತರ (ವಚನಗಳು 1-15) ನೀರಿನ ಮೇಲೆ ನಡೆದು ಗಲಿಲಾಯ ಸಮುದ್ರವನ್ನು ದಾಟಿದನು (ವಚನಗಳು 16-24). ಐದು ರೊಟ್ಟಿ ಮತ್ತು ಎರಡು ಮೀನುಗಳಿಂದ ಊಟ ಮಾಡಿಸಿಲ್ಪಟ್ಟ ಜನರಗುಂಪು ಮರುದಿನ ಯೇಸುವನ್ನು ಹುಡುಕಾಡುತ್ತಾ ದಡಕ್ಕೆ ಬಂದರು.

**26** ಆದರೆ ಜನರು ಅತನನ್ನು ಕಂಡು ಕೊಂಡಾಗ ಯೇಸು ಅವರನ್ನು ಗದರಿಸಿದನು. ಅವರು ಕೇವಲ ಹೆಚ್ಚು ಆಹಾರ, ಹೆಚ್ಚು ಸ್ವಸ್ಥತೆಗಾಗಿ ಹಂಬಲಿಸುತ್ತಿದ್ದರು. ಯೇಸು ಮಾಡಿದ ಅದ್ಭುತಗಳು ಜನರನ್ನು ಆತನಲ್ಲಿ ನಂಬಿಕೆಯಿಡುವಂತೆ ನಡೆಸಿರಲಿಲ್ಲ, ಅವು ಗಳಿಂದ ಕೇವಲ ಅವರಲ್ಲಿ ಹೆಚ್ಚು ಅದ್ಭುತಗಳಿಗಾಗಿ ಬಯಕೆಗೆ ಉಂಟಾಗಿತಷ್ಟೇ. ಜನರ ಮನಸ್ಸಿನಲ್ಲಿ ಯೇಸುವಿನ ಅದ್ಭುತಗಳು ಆತನು ದೇವಕುಮಾರನೆಂಬದಕ್ಕೆ ಸೂಚಕಕಾರ್ಯಗಳಾಗಿರಲಿಲ್ಲ, ಅವು ಗಳು ಅವರಿಗೆ ಕೇವಲ ಹೆಚ್ಚು ಆಹಾರದಂತಹ ದೈಹೀಕ ಅಗತ್ಯತೆಗಳನ್ನು ಹೊಂದಿಕೊಳ್ಳುವ ಸಾಧನದಂತಿದ್ದವು .

**27** ಯೇಸು ಅವರಿಗೆ "ಕೆಟ್ಟು ಹೋಗುವ ಆಹಾರಕ್ಕಾಗಿ ದುಡಿಯಬೇಡಿರಿ" ಎಂದು ಹೇಳಿದನು. ಬದಲಾಗಿ ಅವರು ಯೇಸು ಮಾತ್ರವೇ ಕೊಡಬಲ್ಲಂಥ ಆತ್ಮೀಕ ಆಹಾರಕ್ಕಾಗಿ ದುಡಿಯಬೇಕು. ಅಂತಹ ಆಹಾರವು ಸದಾಕಾಲ ಇರುವದು ಮತ್ತು ಅದು ನಿತ್ಯಕ್ಕೂ ಉಳಿಯುವ ಜೀವವನ್ನು ಕೊಡುತ್ತದೆ. ಆತ್ಮೀಕ ಆಹಾರಕ್ಕಾಗಿ ದುಡಿಯುವದೆಂದರೆ ಪ್ರಾರ್ಥಿಸುವದು, ಬೈಬಲ್ ಓದುವದು ಮತ್ತು ಕ್ರಿಸ್ತನಿಗೆ ವಿಧೇಯರಾಗುವದು. ಒಬ್ಬನು ಇದಕ್ಕಾಗಿ ದುಡಿಯಬೇಕಾದಾಗ್ಯು ಇದು ಯಾವಾಗಲೂ ಒಂದು ವರವಾಗಿರುತ್ತದೆ. ಮನುಷ್ಯ ಕುಮಾರನಾದ ಕ್ರಿಸ್ತನು ಈ ಆತ್ಮೀಕ ಆಹಾರವನ್ನು ತನಗೆ ಬೇಕಾದವರಿಗೆ ಕೊಡುವನು. (ಯೋಹಾನ 5:21). ಮನುಷ್ಯನು ಎಂದಿಗೂ ಅದನ್ನು ಸಂಪಾದಿಸಲಾಗಲಿ, ಇಲ್ಲವೆ ಅದನ್ನು ಸ್ವೀಕರಿಸಲು ಸ್ವಂತ ಪ್ರಯತ್ನಗಳಿಂದ ತನ್ನ ಯೋಗ್ಯನನ್ನಾಗಿ ಮಾಡಿಕೊಳ್ಳಲಾಗಲಿ ಸಾದ್ಯವಿಲ್ಲ.

"ಕೆಟ್ಟು ಹೋಗುವ ಆಹಾರ" ವು ತಿನ್ನುವ ಸಾಮಾನ್ಯ ಆಹಾರವನ್ನು ಮಾತ್ರವಲ್ಲದೆ ಐಶ್ವರ್ಯ, ಮಾನ ಮತ್ತು ಸುಖಗಳಂತಹ ಪ್ರಾಪಂಚಿಕ ಸಂಗತಿಗಳನ್ನು ಪ್ರತಿನಿದಿಸುತ್ತದೆ (ಮತ್ತಾಯ 6:19-20 ಮತ್ತು ವ್ಯಾಖ್ಯಾನ ನೋಡಿರಿ).

ಮನುಷ್ಯಕುಮಾರನ ಆಹಾರವು ನಿಜವಾದದ್ದೇ, ಯಾಕೆಂದರೆ ದೇವರು ಮಗನನ್ನು ನೇಮಿಸಿ ಮುದ್ರೆ ಹಾಕಿದ್ದಾನೆ. ಹೊಸ ಒಡಂಬಡಿಕೆಯ ಕಾಲದಲ್ಲಿ ಪ್ರಾಮುಖ್ಯಜನರು ತಮ್ಮ ಪತ್ರಗಳ ಮೇಲೆ ಅವರ ಮುದ್ರೆ ಹಾಕುತ್ತಿದ್ದರು. ಆ ಪತ್ರವು ನಿಜವಾಗಿಯೂ ಮುದ್ರೆಯ ಯಜಮಾನನಿಂದಲೇ ಬರೆಯಲ್ಪಟ್ಟಿದೆ ಹೊರತು ಬೇರಿನ್ನಾರಿಂದಲ್ಲ ಎಂಬದನ್ನು ಮುದ್ರೆಯು ನಿರೂಪಿಸುತ್ತಿತ್ತು. ಹೀಗೆ ಯೇಸು ದೇವರ ಕಡೆಯಿಂದ ಬಂದವನೆಂಬದನ್ನು ದೇವರ "ಮುದ್ರೆ" ನಿರೂಪಿಸುತ್ತದೆ. ಯೇಸು ಮನುಷ್ಯಕುಮಾರನು ಮಾತ್ರವೇ ಅಲ್ಲ (ಯೋಹಾನ 1:51). ಅತನು ದೇವಕುಮಾರನು ಸಹ ಆಗಿದ್ದಾನೆ.

**28-29** ಜನರು ಈ ಆತ್ಮೀಕ ಆಹಾರವನ್ನು ಸಂಪಾಧಿಸಿಕೊಳ್ಳಲು ಯಾವದಾದರೂ ಒಳ್ಳೇ ಕಾರ್ಯವನ್ನು ಮಾಡಬೇಕೆಂದು ಅಂದುಕೊಂಡರು. ಆದರೆ ಯೇಸು ಅವರಿಗೆ ಒಂದೇ ಒಂದು ಕೆಲಸದ ಅವಶ್ಯವಿದೆ ಎಂದು ಹೇಳಿದನು, ಅದೇನೆಂದರೆ ಆತನು (ದೇವರು)ಕಳುಹಿಸಿಕೊಟ್ಟವನನ್ನು ನಂಬುವದೇ[45] (ವಚನ 29)

ಒಂದು ರೀತಿಯಲ್ಲಿ, ನಂಬುವದೆಂದರೆ "ಕೆಲಸ"ವಾಗಿದೆ. ಇನ್ನೊಂದು ರೀತಿಯಲ್ಲಿ, ನಂಬಿಕೆಯು ದೇವರ ವರವಾಗಿದೆ (ಯೋಹಾನ 6:44, ರೋಮ 12:3 ಮತ್ತು ವ್ಯಾಖ್ಯಾನ ನೋಡಿರಿ). ಪ್ರಪ್ರಥಮವಾಗಿ ನಂಬಕೆಯು ಒಂದು ವರವಾಗಿದೆ, ಆದರೆ ವರವನ್ನು ಹೊಂದಿದವರಾಗಿ ನಾವು ಅದನ್ನು ಉಪಯೋಗಿಸಬೇಕು.

**30** ಯೆಹೂದ್ಯರು ಪು ನಃ ಸೂಚಕಕಾರ್ಯವನ್ನು ಕೇಳಿದರು (ಮಾರ್ಕ 8:11, ಯೋಹಾನ 2:18 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಯೇಸು ಆಗಷ್ಟೇ ಐದು ಸಾವಿರ ಜನರಿಗೆ ಊಟಮಾಡಿಸಿದ್ದನು, ಆದರೆ ಅವರಿಗೆ ಅದಕ್ಕಿಂತಲೂ ದೊಡ್ಡ ಸೂಚಕ ಕಾರ್ಯವೊಂದು ಬೇಕಾಗಿತ್ತು. ಅವರು ನಿರಂತರವಾಗಿ ಆಹಾರದಿಂದ ತುಂಬಿರಲು ಇಚ್ಚಿಸಿದರು.

**31** ತರುವಾಯ ಅವರು ಆತನಿಗೆ ಒಂದು ಸೂಚಕಕಾರ್ಯದ ಸಲಹೆಯನ್ನು ಕೊಟ್ಟರು: ದೇವರು ಮೋಶೆಯ ಕಾಲದಲ್ಲಿ ಪರಲೋಕದಿಂದ ಮನ್ನಾ ಸುರಿಸಿದ ಹಾಗೆಯೇ ಆತನು ಮನ್ನಾವನ್ನು ಬರಮಾಡಲಿ. ಯೆಹೂದ್ಯರು ಐಗುಪ್ತ್ಯದಿಂದ ಪಾರಾಗಿ ಸಿನಾಯ್ ಮರು ಭೂಮಿಯಲ್ಲಿರುವಾಗ ದೇವರು ನಾಲ್ವತ್ತು ವರ್ಷಗಳ ವರೆಗೆ ಪ್ರತಿದಿನವು ಅವರ ಹಸಿವು ನೀಗಿಸಲು ಪರಲೋಕದಿಂದ ಒಂದು ರೀತಿಯ "ಆಹಾರ"ವನ್ನು ಕಳುಹಿಸಿದನು. (ವಿಮೋಚನಾಕಾಂಡ 16:1-4, 14-15, 31, ಕೀರ್ತನೆಗಳ 78:24).

ಹೊಸ ಒಡಂಬಡಿಕೆಯ ಕಾಲದಲ್ಲಿ ಮೆಸ್ಸೀಯನು ಬಂದಾಗ ಆತನು ಸಹ ಪರಲೋಕದಿಂದ "ಮನ್ನಾ"ವನ್ನು ಕಳುಹಿಸುವನೆಂದು ಯೆಹೂದ್ಯರು ನಂಬಿದ್ದರು. ಅದು ಮೆಸ್ಸಿಯನ ಸೂಚಕಕಾರ್ಯಗಳಲ್ಲಿ ಒಂದಾಗಿರುತ್ತದೆಂದು ಅವರ ನಂಬಿಕೆಯಾಗಿತ್ತು.

ಆದುದರಿಂದ ಯೇಸು ತನ್ನನ್ನು ಮೆಸ್ಸೀಯನೆಂದು ಹೇಳಿಕೊಳ್ಳುವದಾದರೆ ಆತನು ಆ ಸೂಚಕಕಾರ್ಯವನ್ನು ಮಾಡಿತೋರಿಸಲಿ. ಆಗ ಅವರು ಅವನಲ್ಲಿ ನಂಬಿಕೆಯಿಡುವರು.

ಈ ದಿನಗಳಲ್ಲೂ ಸಹ ಜನರು ಸೂಚಕಕಾಯಗಳನ್ನು ಕೇಳುತ್ತಾರೆ. "ಯೇಸು ದೇವಕುಮಾರನೆಂದು ನೀವು ನಿರೂಪಿಸುವದಾದರೆ ನಾವು ನಂಬುತ್ತೇನೆ" ಎಂದು ಅವರು ಹೇಳುವರು. ಆದರೆ ಅಂತಹ ಜನರು ದೇವರನ್ನು ಪರೀಕ್ಷಿಸುತ್ತಿದ್ದಾರಷ್ಟೇ (ಮತ್ತಾಯ 4:7). ಅವರು ದೃಢವಾದ ಸಾಕ್ಷಿಯನ್ನು ಕೇಳುವದು ನಂಬದಿರುವದಕ್ಕೆ ಒಂದು ನೆಪ ಮಾತ್ರವೇ ಆಗಿದೆ. ಅವರಿಗೆ ಯಾವ ಆಧಾರವನ್ನು ಕೊಟ್ಟರೂ ಸಹ ಅವರು ನಂಬುವದಿಲ್ಲ (ಲೂಕ 16:27-31 ಮತ್ತು ವ್ಯಾಖ್ಯಾನ ನೋಡಿರಿ).

**32** ಮನ್ನಾವನ್ನು ಮೋಶೆಯು ಕೊಡಲಿಲ್ಲ. ಆದರೆ ದೇವರೇ ಅದನ್ನು ಕೊಟ್ಟನೆಂದು ಯೇಸು ಅವರಿಗೆ ಹೇಳಿದನು. ಅದುಮಾತ್ರವಲ್ಲದೆ ಮನ್ನಾ ಪರಲೋಕದಿಂದ ಬಂದ ನಿಜವಾದ ರೊಟ್ಟಿಯಾಗಿರಲಿಲ್ಲ. ಮನ್ನಾ ಆಕಾಶದಿಂದ ಬಿದ್ದ ಭೂಲೋಕದ ರೊಟ್ಟಿಯಾಗಿತ್ತು. ಪರಲೋಕದಿಂದ ಬಂದ ನಿಜವಾದ ರೊಟ್ಟಿಯು [46] ಆತ್ಮೀಕವಾದದ್ದೂ, ದೇವರು ಕೊಡುವ ರೊಟ್ಟಿಯೂ ಆಗಿದೆ (ವಚನ 33).

**33** ದೇವರು ಕೊಡುವ ಈ ರೊಟ್ಟಿಯು ಪರಲೋಕದಿಂದ ಇಳಿದು ಬಂದು ಲೋಕಕ್ಕೆ ಜೀವವನ್ನು ಉಂಟು ಮಾಡುವಂಥದೇ. ಯೇಸು ಕೊಡುವರೊಟ್ಟಿಯು ಆತ್ಮೀಕ ರೊಟ್ಟಿಯಾಗಿದ್ದು, ಅದು ಮಾನವರಿಗೆ ಆತ್ಮೀಕ ಹಾಗು ನಿತ್ಯಜೀವವನ್ನು ಕೊಡುತ್ತದೆ.

**34** ಸಮಾರ್ಯ ಸ್ತ್ರೀಯಂತೆ (ಯೋಹಾನ 4:15), ಜವರು ಯೇಸುವಿನ ಆತ್ಮೀಕ ಅರ್ಥವನ್ನು ತಿಳಿದುಕೊಳ್ಳಲಿಲ್ಲ.

**35** ಬಳಿಕ ಯೇಸು ಅವರಿಗೆ "ನಾನೇ ಆ ರೊಟ್ಟಿ, ನಾನು ಜೀವಕೊಡುವ ರೊಟ್ಟಿ" ಎಂದನು (ಯೋಹಾನ 1:4, 3:36,1ಯೋಹಾನ 5:11-12). ಯೇಸುವಿನ ಬಳಿಗೆ ಬಂದು ಈ ರೊಟ್ಟಿಯನ್ನು ತಿನ್ನುವವನು ಎಂದಿಗೂ ಹಸಿವೆಯಾಗುವದಿಲ್ಲ (ಯೋಹಾನ 14 ಮತ್ತು ವ್ಯಾಖ್ಯಾನ ನೋಡಿರಿ).

ನಂತರ ಯೇಸು "ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ" ಎಂದು ಹೇಳುತ್ತಾನೆ. ಜೀವದ ರೊಟ್ಟಿ ಮತ್ತು ಯೋಹಾನ 10-11ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಜೀವಕರವಾದ ನೀರು ಎರಡೂ ಒಂದೇ ಎಂಬದನ್ನು ನಾವು ಅರ್ಥಮಾಡಿಕೊಳ್ಳತಕ್ಕದ್ದು. ಅಲ್ಲದೆ ಈ ರೊಟ್ಟಿಯನ್ನು ತಿಂದು, ಈ ನೀರನ್ನು ಕುಡಿಯುವದೆಂದರೆ ಯೇಸುವಿನಲ್ಲಿ ನಂಬಿಕೆಯಿಡುವದು ಎಂಬದನ್ನು ಸಹ ನಾವು ಅರ್ಥ ಮಾಡಿಕೊಳ್ಳಬೇಕು. ಇದರರ್ಥವೇನೆಂದರೆ ಯೇಸುವನ್ನು ನಮ್ಮಜೀವಿತದಲ್ಲಿ ಅಂಗೀಕರಿಸಿಕೊಳ್ಳಬೇಕು. ನಾವು ಆಹಾರ ಮತ್ತು ನೀರನ್ನು ನಮ್ಮ ಹೊಟ್ಟೆಯೊಳಕ್ಕೆ ತೆಗೆದುಕೊಳ್ಳುವಂತೆಯೇ ನಂಬಿಕೆಯು ಮೂಲಕ ಕ್ರಿಸ್ತನನ್ನು ನಮ್ಮ ಹೃದಯದೊಳಕ್ಕೆ ತೆಗೆದುಕೊಳ್ಳಬೇಕು.

ಯೇಸು ಹೀಗೆನ್ನುತ್ತಾನೆ: "ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆ ಯಾಗುವದಿಲ್ಲ". ಯೇಸುವಿನ [47] ಬಳಿಗೆ ಬರುವದೆಂದರೆ ಆತನಲ್ಲಿ ನಂಬಿಕೆಯಿಡುವದೇ ಆಗಿದೆ. ಯೇಸು ಎಲ್ಲಾಮಾನವರಿಗೂ "ನನ್ನ ಬಳಿಗೆ ಬನ್ನಿರಿ" ಎಂದು ಹೇಳುತ್ತಾನೆ (ಮತ್ತಾಯ 11:28).

**36** ಯೆಹೂದ್ಯರು ತಮ್ಮ ಕಣ್ಣಾರೆ ಯೇಸುವನ್ನೂ, ಆತನ ಅದ್ಭುತಕಾರ್ಯಗಳನ್ನೂ ನೋಡಿದಾಗ್ಯು ಆತನನ್ನು ನಂಬಲಿಲ್ಲ. ಮೊದಲು ಅವರು ಪರಲೋಕದಿಂದ ರೊಟ್ಟಿಯನ್ನು ಕೇಳಿದ್ದರು. (ವಚನ 34). ಅದು ರುಚಿಕರವೂ, ಇಷ್ಟಕರವೂ ಆಗಿರುತ್ತದೆಂದು ಅವರು ಯೋಚಿಸಿದರು. ಅವರು ಕ್ರಿಸ್ತನಿಂದ ಆಶಿರ್ವಾದಗಳನ್ನು ಪಡೆದುಕೊಳ್ಳುವದಕ್ಕಾಗಿ ಮಾತ್ರವೇ ಬಂದರು. ಆದರೆ ಆ "ರೊಟ್ಟಿಯು" ಸ್ವತಃ ಕ್ರಿಸ್ತನೇ ಎಂಬದನ್ನು ಅವರು ಕಂಡುಕೊಂಡಾಗ ಆತನಿಂದ ವಿಮುಖರಾದರು.

**37** "ತಂದೆಯು ನನಗೆ ಕೊಡುವಂತವರೆಲ್ಲರು ನನ್ನ ಬಳಿಗೆ ಬರುವರು." ಎಂದು ಯೇಸು ಹೇಳಿದನು. ಯೆಹೂದ್ಯರಲ್ಲಿ ಹೆಚ್ಚು ಮಂದಿ ನಂಬಲಿಲ್ಲ. ಯಾಕಂದರೆ ತಂದೆಯು ಅವರನ್ನು ಕ್ರಿಸ್ತನಿಗೆ ಕೊಟ್ಟಿರಲಿಲ್ಲ, ದೇವರು ಅವರಿಗೆ ನಂಬಿಕೆಯ ವರವನ್ನು ನೀಡಿರಲಿಲ್ಲ. ಒಂದು ವೇಳೆ ದೇವರು ಒಬ್ಬ ವ್ಯಕ್ತಿಯನ್ನು ಸೆಳೆಯದಿದ್ದರೆ ಆ ವ್ಯಕ್ತಿಯು ಕ್ರಿಸ್ತನ ಬಳಿಗೆ ಬರಲು ಸಾಧ್ಯವಿಲ್ಲ. (ವಚನ 44) ಮನುಷ್ಯರು ನಂಬಬೇಕೆಂದು ಮೊದಲು ತೀರ್ಮಾನಿಸುವದಿಲ್ಲ,ಮೊದಲು ದೇವರು ಅವರನ್ನು ಕರೆಯುತ್ತಾನೆ. (ಯೋಹಾನ 15:16)

ಇಲ್ಲಿ ಒಂದು ಕಷ್ಟಕರ ಪ್ರಶ್ನೆಯು ಉದ್ಭವಿಸುತ್ತದೆ: ನಂಬದಿರುವದು ಒಂದು ಪಾಪವೇಕೆ? ಒಂದು ವೇಳೆ ನಂಬಿಕೆಯು ದೇವರ ಒಂದು ವರವಾಗಿರುವದಾದರೆ ಅದನ್ನು ಸ್ವೀಕರಿಸದಿರುವದು ಒಂದು ಪಾಪವಾಗಿರಲು ಹೇಗೆ ಸಾಧ್ಯ? ಉತ್ತರವು ಈ ರೀತಿಯಾಗಿದೆ, ದೇವರು ಯಾರ ಹೃದಯಗಳು ತೆರೆಯಲ್ಪಟ್ಟು ದೀನತೆಯಿಂದ ತುಂಬಿರುವವೋ ಅವರಿಗೆ ಮಾತ್ರವೇ ನಂಬಿಕೆಯನ್ನು ಅನುಗ್ರಹಿಸುವನು. ಹೀಗೆ, ಒಂದು ವೇಳೆ ನಾವು ನಂಬಿಕೆಯ ವರವನ್ನು ಪಡೆದುಕೊಂಡಿಲ್ಲವಾದರೆ ಅದಕ್ಕೆ ನಮ್ಮ ಹೃದಯಗಳು ದೇವರ ವಿರುದ್ಧ ಕಠಿಣವಾಗಿರುವದೇ ಕಾರಣವಾಗಿದೆ. ಹೌದು, ನಂಬಿಕೆ ಒಂದು ವರವಾಗಿದೆ. ಆದರೆ ಅದನ್ನು ಪಡೆಯಬೇಕಾದರೆ ಮೊದಲು ನಾವು ನಮ್ಮ ಪಾಪಕ್ಕಾಗಿ ಪಶ್ಚಾತಾಪ ಪಟ್ಟು ದೇವರ ಕಡೆಗೆ ತಿರುಗಿಕೊಳ್ಳಬೇಕು. ಆಗ ದೇವರು ನಮಗೆ ನಂಬಿಕೆಯನ್ನು ಕೊಡುತ್ತಾನೆ (ರೋಮ 9:14-21 ಮತ್ತು ವ್ಯಾಖ್ಯಾನ, ಸಾಮಾನ್ಯ ಬರಹ: ದೇವರ ಆಯ್ಕೆಯೋ ಅಥವಾ ಮಾನವನ ಆಯ್ಕೆಯೋ? ನೋಡಿರಿ).

ಕ್ರಿಸ್ತನು ತನ್ನ ಬಳಿಗೆ ನಂಬಿಕೆಯಿಂದ ಬರುವವರನ್ನು ಎಂದಿಗೂ ತಳ್ಳಿಬಿಡುವದೇ ಇಲ್ಲ. ನಾವು ಅಯೋಗ್ಯರಾಗಿದ್ದರೂ ಆತನು ನಮ್ಮನ್ನು ಸ್ವೀಕರಿಸುವನು. ನಾವು ಕ್ರಿಸ್ತನ ಬಳಿಗೆ ಬರುವದಕ್ಕಾಗಿ ಪರಿಪೂರ್ಣರೂ, ಪವಿತ್ರರೂ ಆಗಿರಬೇಕಾಗಿಲ್ಲ, ನಾವು ಇದ್ದಂತೆಯೇ ಆತನು ನಮ್ಮನ್ನು ಸ್ವೀಕರಿಸುವನು. ಆದರೆ ನಾವು ಆತನ ಬಳಿಗೆ ಬರಬೇಕು. ಅದು ನಮ್ಮ ಕೆಲಸವಾಗಿದೆ.

ಒಂದು ಕಡೆಯಲ್ಲಿ ದೇವರು ನಮ್ಮನ್ನು ಸೆಳೆಯದ ಹೊರತು ನಾವು ಕ್ರಿಸ್ತನ ಬಳಿಗೆ ಬರಲು ಸಚಾಧ್ಯವಿಲ್ಲ. ಆದರೆ ಇನ್ನೊಂದು ಕಡೆಯಲ್ಲಿ, ನಾವು ಬರಲು ನಿರಾಕರಿಸುವದಾದರೆ ದೇವರು ನಮ್ಮನ್ನು ಸೆಳೆಯಲು ಸಾಧ್ಯವಿಲ್ಲ.

**38-39** ಕ್ರಿಸ್ತನು ದೇವರ ಚಿತ್ತವನ್ನು ತನಗೆ ದೇವರು ಕೊಡಲ್ಪಟ್ಟವರಲ್ಲಿ ಒಬ್ಬನನ್ನೂ ಕಳೆದುಕೊಳ್ಳಬಾರದೆಂಬುದೇ (ವಚನ 39), ಅಂದರೆ ದೇವರು ಕ್ರಿಸ್ತನಿಗೆ ಕೊಟ್ಟಿರುವ ಜನರಲ್ಲಿ ಒಬ್ಬನನ್ನೂ ಕಳಕೊಳ್ಳಬಾರದು, ಆದರರ್ಥವೇನೆಂದರೆ ಎಲ್ಲಾ ನಿಜಕ್ರೈಸ್ತರು (ಯೋಹಾನ 10:28-29). ಕ್ರಿಸ್ತನು ಲೋಕದಲ್ಲಿರುವಾಗ ದೇವರ ಈ ಚಿತ್ತವನ್ನು ನೆರವೇರಿಸಿದನು. (ಯೋಹಾನ 17:12).

ಕ್ರಿಸ್ತನು ಒಬ್ಬನನ್ನೂ ಕಳೆದು ಕೊಳ್ಳಬಾರದೆಂಬದು ಮಾತ್ರವೇ ದೇವರ ಚಿತ್ತವಾಗಿರದೇ, ಕ್ರಿಸ್ತನು ಅವರನ್ನು (ವಿಶ್ವಾಸಿಗಳನ್ನು) ಕಡೇ ದಿನದಲ್ಲಿ ಎಬ್ಬಿಸಬೇಕೆಂಬದು; ಅಂದರೆ, ಅವರಿಗೆ ರಕ್ಷಣೆ, ನಿತ್ಯಜೀವವನ್ನು ನೀಡಬೇಕೆಂಬದು ಸಹ ಆತನ ಚಿತ್ತವಾಗಿದೆ. ಕಡೇ ದಿನವು ಲೋಕದ ಅಂತ್ಯದಲ್ಲಿರುವ ನ್ಯಾಯತೀರ್ಪಿನ ದಿನವಾಗಿದೆ, ಆಗ ಎಲ್ಲಾ ಮನುಷ್ಯರೂ ಎಬ್ಬಿಸಲ್ಪಟ್ಟು ಪರಲೋಕ ಅಥವಾ ನರಕಕ್ಕೆ ಕಳುಹಿಸಲ್ಪಡುತ್ತಾರೆ (ಯೋಹಾನ 5:28-29)

**40** ಇಲ್ಲಿ ಯೇಸು ವಚನ 39ರ ವಿಚಾರವನ್ನು ಪುನರಾವರ್ತಿಸುತ್ತಾನೆ. ಯೇಸು ತನ್ನಲ್ಲಿ ವಿಶ್ವಾಸವಿಡುವವರಿಗೆಲ್ಲಾ ನೂತನ ಆತ್ಮೀಕ ಜೀವವನ್ನು ಕೊಡುತ್ತಾನೆ. ಈ ಲೋಕದಲ್ಲಿ ಆತನು ಯಾರಿಗೆ ಆತ್ಮೀಕ ಜೀವವನ್ನು ನೀಡಿರುತ್ತಾನೋ ನಿಶ್ಚಯವಾಗಿಯೂ ಅವರನ್ನು ಆ ಕಡೇ ದಿನದಲ್ಲಿ ಪರಲೋಕದಲ್ಲಿನ ನಿತ್ಯಜೀವಕ್ಕಾಗಿ ಎಬ್ಬಿಸುವನು.

ಮಗನನ್ನು ನೋಡಿ ಆತನನ್ನು ನಂಬುವ ಪ್ರತಿಯೊಬ್ಬನಿಗೆ ನಿತ್ಯಜೀವವು ಸಿಕ್ಕುವದು. ನಾವು ನಂಬಿಕೆಯ ಕಣ್ಣುಗಳೊಂದಿಗೆ ಮಗನನ್ನು ದೃಷ್ಟಿಸಬೇಕು. ನಾವು ಯೇಸುವನ್ನು[48] ದೃಷ್ಟಿಸುತ್ತೇವೆ ಮತ್ತು ನಂತರ ನಂಬುತ್ತೇವೆ.

**41-42** ಯೆಹೂದ್ಯರು ಯೇಸುವಿನ ಮಾತುಗಳನ್ನು ಕೇಳಿ ಬೇಸರಗೊಂಡರು."ಇವನು ಯೋಸೇಫ ಮತ್ತು ಮರಿಯಳ ಮಗನಾದ ಯೇಸು ಅಲ್ಲವೇ. ಇವನು ನಮ್ಮಹಾಗೆ ಲೋಕದಿಂದ ಇಳಿದು ಬಂದಿದ್ದೇನೆಂದು ಹೇಳುವದು ಹೇಗೆ?" ಎಂದು ಗುಣಗುಟ್ಟಿದರು. (ಮಾರ್ಕ 6:2-3 ಮತ್ತು ವ್ಯಾಖ್ಯಾನ ನೋಡಿರಿ).

**43-44** ತಂದೆಯು ಎಳೆದ ಹೊರತು ಯಾವನೂ ನಮ್ಮ ಬಳಿಗೆ ಬರಲಾರನು. ಇಲ್ಲಿ ಯೇಸು ವಚನ 37ರ ವಿಚಾರವನ್ನು ಪುನರಾವರ್ತಿಸುತ್ತಾನೆ. ಯಾವನು ಸಹ ತಾನು ತನ್ನ ಸ್ವಂತ ಆಲೋಚನೆ ಅಥವಾ ಬಯಕೆಯಿಂದ ಕ್ರಿಸ್ತನ ಬಳಿಗೆ ಬರಬಹುದೆಂದು ಯೋಚಿಸದಿರಲಿ. ಆತನು ಮೊದಲು ತಂದೆಯಿಂದ ಎಳೆಯಲ್ಪಡಬೇಕು (ವಚನಗಳು 37,65 ಮತ್ತು ವ್ಯಾಖ್ಯಾನ ನೋಡಿರಿ).

**45** ಯೇಸು ಇಲ್ಲಿ ಅದೇ ಸತ್ಯವನ್ನು ಬೇರೆ ಮಾತುಗಳಲ್ಲಿ ಪುನರಾವರ್ತಿಸುತ್ತಾನೆ. ದೇವರು ಮಾನವರನ್ನು ಕಲಿಸುವದರ ಮೂಲಕ ಎಳೆಯುತ್ತಾನೆ. ದೇವರಿಂದ ಶಿಕ್ಷಿತರಾಗುವ ಮತ್ತು ಕಲಿತುಕೊಳ್ಳುವ ಪ್ರತಿಯೊಬ್ಬನು ಕ್ರಿಸ್ತನ ಬಳಿಗೆ ಬರುತ್ತಾನೆ. ನಮ್ಮ ಮನಸ್ಸುಗಳು ದೇವರ ಆತ್ಮನ ಮೂಲಕ ಜ್ಞಾನಪ್ರಕಾಶಕ್ಕೊಳಗಾಗದೇ ಇರುವದಾದರೇ ನಾವು ಕ್ರಿಸ್ತನ ಬಳಿಗೆ ಬರಲಾರೆವು (ವಚನ 65 ಮತ್ತು ವ್ಯಾಖ್ಯಾನ ನೋಡಿರಿ). ಕಲಿಸುವವನು ದೇವರು ಆದರೆ ಕಲಿತುಕೊಳ್ಳುವದು ನಮ್ಮ ಕೆಲಸವಾಗಿದೆ!

ಯೇಸು ಪ್ರವಾದಿಗಳ ಗ್ರಂಥ ಅಂದರೆ ಪ್ರವಾದಿಗಳ ಬರಹಗಳನ್ನೊಳಗೊಂಡಿರುವ ಹಳೆ ಒಡಂಬಡಿಕೆಯಿಂದ ಉಲ್ಲೇಖಿಸುತ್ತಾನೆ. ಆತನು ಯೇಶಾಯ 54:13ರಿಂದ ಉಲ್ಲೇಖಿಸುತ್ತಾನೆ.

**46** ದೇವರು ಮಾನವರಿಗೆ ಕಲಿಸುತ್ತಾನೆ. ಆದರೆ ಆತನು ಮಗನಾದ ಯೇಸುವಿಗೆ ಕಲಿಸುವ ಅಗತ್ಯವಿಲ್ಲ, ಯಾಕೆಂದರೆ ಯೇಸು ದೇವರನ್ನು ಕಂಡವನೂ, ದೇವರ ಕಡೆಯಿಂದ ಬಂದವನೂ ಆಗಿದ್ದಾನೆ. (ಯೋಹಾನ 1:18 ಮತ್ತು ವ್ಯಾಖ್ಯಾನ ನೋಡಿರಿ). ಯೇಸು ದೇವರ ಎಲ್ಲಾ ಸಂಗತಿಗಳನ್ನು ಹೊಂದಿಕೊಂಡಿದ್ದಾನೆ, ಆದುದರಿಂದ ಆತನು ಮಾನವರಿಗೆ ಆ ಸಂಗತಿಗಳನ್ನು ಕಲಿಸಲುಶಕ್ತನಾಗಿದ್ದಾನೆ. ಯಾವ ಮನುಷ್ಯನು ದೇವರನ್ನು ಎಂದಿಗೂ ಕಂಡಿಲ್ಲ. ಆದುದರಿಂದ ನಾವು ದೇವರಿಂದ ಏನೇ ಕಲಿತರೂ ಮುಖ್ಯವಾಗಿ ಕ್ರಿಸ್ತನ ಮೂಲಕ ಕಲಿಯುತ್ತೇವೆ. ನಾವು ಕ್ರಿಸ್ತನಿಂದ ಕಲಿಯುವ ಬೋಧನೆಯೆಲ್ಲವೂ ದೇವರಿಂದ ಬಂದಿರುತ್ತದೆಂಬ ನಿಶ್ಚಯವನ್ನು ನಾವು ಹೊಂದಿರಬಹುದು.

**47** ನಿತ್ಯಜೀವವನ್ನು ಪಡೆಯಲು ಅವಶ್ಯಕವಿರುವ ಒಂದೇ ಸಂಗತಿಯೇನೆಂದರೆ ಯೇಸುವಿನಲ್ಲಿ ನಂಬಿಕೆಯಿಡುವದೇ ಆಗಿದೆ (ಯೋಹಾನ 3:15, 36 ಮತ್ತು ವ್ಯಾಖ್ಯಾನ ನೋಡಿರಿ).

**48-50** ಇಲ್ಲಿ ಯೇಸು ತಾನು ಮನ್ನಾಗಿಂತಲೂ ಉತ್ತಮವಾದ ಜೀವಕರರೊಟ್ಟಿಯೆಂಬದಾಗಿ ಪುನಃ ಹೇಳುತ್ತಾನೆ. ಯೆಹೂದ್ಯರ ಅಭಿಪ್ರಾಯದಲ್ಲಿ ಎಲ್ಲಾ ಆಹಾರಗಳಲ್ಲಿಯೂ ಮನ್ನಾ ಅತ್ಯುತ್ತಮವಾಗಿತ್ತು. ಆದರೆ ಹಳೆ ಒಡಂಬಡಿಕೆಯ ಯೆಹೂದ್ಯರು ಮನ್ನಾವನ್ನು ತಿಂದರು. ಆದರೆ ಅವರು ಕ್ರಮೇಣವಾಗಿ ಗತಿಸಿಹೋದರು. ಆದರೆ ಜೀವಕರವಾದ ರೊಟ್ಟಿಯನ್ನು ತಿನ್ನುವವರು ಅಂದರೆ ಯೇಸುವಿನಲ್ಲಿ ನಂಬಿಕೆಯಿಡುವವರು ಎಂದಿಗೂ ಸಾಯುವದಿಲ್ಲ. ಅಂದರೆ ಅವರ ಆತ್ಮಗಳು [49] ಎಂದಿಗೂ ಸಾಯುವದಿಲ್ಲ. ಅವರು ನಿತ್ಯಜೀವವನ್ನು ಹೊಂದುವರು.

**51** ಯೇಸು ಜೀವವುಳ್ಳ ರೊಟ್ಟಿಯಾಗಿದ್ದಾನೆ. ಯೇಸು ತನ್ನೊಳಗೆ ದೇವರ ನಿತ್ಯಜೀವವನ್ನು ಹೊಂದಿರುವದು ಮಾತ್ರವೇ ಅಲ್ಲ (ಯೋಹಾನ 5:26), ಆದರೆಯೇಸುವನ್ನು ಸೇವಿಸುವವರೆಲ್ಲರೂ ಸಹ ನಿತ್ಯಜೀವವನ್ನು ಪಡೆದುಕೊಳ್ಳುವರು. "ಈ ರೊಟ್ಟಿಯನ್ನು ಯಾವನಾದರೂ ತಿಂದರೆ ಅವನು ಸದಾಕಾಲ ಬದುಕುವನು". ಒಬ್ಬ ವ್ಯಕ್ತಿಯ ಶರೀರವು ಸಾಯುತ್ತದಾದರೂ ಆತನ ಆತ್ಮವು ಸಾಯುವದಿಲ್ಲ.

ಇಲ್ಲಿ ಯೇಸು ನೂತನ ಭೋಧನೆಯನ್ನು ನೀಡುತ್ತಾನೆ. "ನಾನು ಕೊಡುವ ರೊಟ್ಟಿ ನನ್ನ ಮಾಂಸವೇ, ಅದನ್ನು ಲೋಕದ ಜೀವಕ್ಕೋಸ್ಕರ ಕೊಡುವೆನು" ಎಂದು ಹೇಳುತ್ತಾನೆ. ಆದರರ್ಥವೇನೆಂದರೆ ಯೇಸು ಮಾನವರನ್ನು ರಕ್ಷಿಸಲು

ತನ್ನ ಮಾಂಸ, ತನ್ನ ದೇಹವನ್ನು ಕೊಡುವನು. ನಾವು ಜೀವಿಸುವಂತಾಗಲು ಆತನು ತನ್ನ ಪ್ರಾಣವನ್ನು ಯಜ್ಞವಾಗಿ ನೀಡುವನು. ಯೇಸು ಇಲ್ಲಿ ಶಿಲುಬೆಯಮೇಲಿನ ತನ್ನ ಮರಣದ ಕುರಿತಾಗಿ ಮಾತನಾಡುತ್ತಿದ್ದಾನೆ (ಮಾರ್ಕ 10:45, ಯೋಹಾನ 3:14-16 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

52 ಯೆಹೂದ್ಯರು ಯೇಸುವಿನ ಹೇಳಿಕೆಯ ವಿಷಯದಲ್ಲಿ ತಮ್ಮತಮ್ಮೊಳಗೆ ವಾಗ್ವಾದ ಮಾಡಿಕೊಳ್ಳುತ್ತಿದ್ದರು. ಅವರಿಗೆ ಮಾತುಗಳನ್ನು ಅರ್ಥಮಾಡಿಕೊಳ್ಳಲಾಗಲಿಲ್ಲ. "ನಾವು ಆತನ ಮಾಂಸವನ್ನು ಹೇಗೆ ತಿನ್ನುವದಕ್ಕೆ ಸಾದ್ಯ" ಎಂದು ಅವರು ವಿಸ್ಮಯಗೊಂಡರು.

53 ಯೇಸು ಅವರಿಗೆ ಉತ್ತರಿಸುವದಕ್ಕಾಗಿ ಒಬ್ಬ ಮನುಷ್ಯನು ಆತನ (ಯೇಸು) ಮಾಂಸವನ್ನು ತಿಂದು ರಕ್ತವನ್ನು ಕುಡಿಯದೆ ಹೋದರೆ ನಿತ್ಯ ಜೀವವನ್ನು ಪಡೆಯಲಾರನು ಎಂದು ಇನ್ನು ಸ್ಪಷ್ಟವಾಗಿ ಪುನರುಚ್ಚರಿಸಿದನು. ಅಂದರೆ ಒಬ್ಬನು ರಕ್ಷಣೆಯನ್ನು ಪಡೆದು ಕೊಳ್ಳಲು ಆತನು ನಂಬಿಕೆಯ ಮೂಲಕ ಕ್ರಿಸ್ತನನ್ನು ತನ್ನ ಹೃದಯದೊಳಗೆ ಸ್ವೀಕರಿಸಿಕೊಳ್ಳಬೇಕು (ವಚನ 35 ಮತ್ತು ವ್ಯಾಖ್ಯಾನ ನೋಡಿರಿ) ನಮ್ಮ ದೇಹಗಳು ಆಹಾರ ಮತ್ತು ನೀರಿಲ್ಲದೆ ಹೇಗೆ ಬದುಕಲಾರವೋ ಹಾಗೆಯೇ ಕ್ರಿಸ್ತನಿಲ್ಲದೆ 50 ನಮ್ಮ ಆತ್ಮಗಳು ಬದುಕಲಾರವು.

ರಕ್ತವನ್ನು ಕುಡಿಯುವದು ಯೆಹೂದ್ಯರೊಳಗೆ ಒಂದು ಅತ್ಯಂತ ಅಪರಾಧಕರ ಸಂಗತಿಯಾಗಿತ್ತು. ಹಳೆ ಒಡಂಬಡಿಕೆಯ ಪ್ರಕಾರವಾಗಿ ಯೆಹೂದ್ಯರು ಯಾವದೇ ರೀತಿಯ ರಕ್ತವನ್ನು ಸೇವಿಸುವದು ನಿಷೇಧಿಸಲ್ಪಟ್ಟಿತ್ತು (ಆಧಿಕಾಂಡ 9:4).

54 ಯೇಸು ಇಲ್ಲಿ 47 ಮತ್ತು 53 ವಚನಗಳ ವಿಚಾರವನ್ನೇ ಪುನರಾವರ್ತಿಸುತ್ತಾನೆ.

55 ಯೆಹೂದ್ಯರು ಕೆಟ್ಟು ಹೋಗುವ ಆಹಾರಕ್ಕಾಗಿ ದುಡಿದರು (ವಚನ 27). ಆದರೆ ಯೇಸು ನಿತ್ಯಜೀವಕ್ಕೆ ಉಳಿಯುವ ಆಹಾರವನ್ನು ಅಂದರೆ ಆತನ ಮಾಂಸ ಮತ್ತು ರಕ್ತವನ್ನು ಕೊಡುವನು. ಅದು ನಿಜವಾದ ಆಹಾರ ಮತ್ತು ನಿಜವಾದ ಪಾನವಾಗಿರುತ್ತದೆ.

ಯೆಹೂದ್ಯರು ಮಾತ್ರವೇ ಕೆಟ್ಟು ಹೋಗುವ ಆಹಾರಕ್ಕಾಗಿ ದುಡಿಯುತ್ತಿಲ್ಲ ಎಂಬದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳೋಣ. ಯೇಸುವಿನ ಈ ಎಲ್ಲಾ ಮಾತುಗಳು ಯೆಹೂದ್ಯರಿಗಾಗಿ ಮಾತ್ರವಿರದೇ ನಮ್ಮೆಲ್ಲರಿಗೂ ಸಹ ಅನ್ವಯವಾಗುತ್ತದೆ.

56 ನಾವು ಆತ್ಮೀಕ ರೀತಿಯಲ್ಲಿ ಕ್ರಿಸ್ತನ ಮಾಂಸವನ್ನು ಸೇವಿಸಿ, ಆತನ ರಕ್ತವನ್ನು ಪಾನ ಮಾಡಿದಾಗ ಆತನು ನಮ್ಮಲ್ಲಿ ಆತ್ಮೀಕವಾಗಿ[51] ನೆಲೆಗೊಳ್ಳುತ್ತಾನೆ. ಆತನ ಜೀವ ಆತ್ಮೀಕವಾಗಿ ಕ್ರಿಸ್ತನ ಅಂಗವಾಗುತ್ತೇವೆ. ನಾವು ಆತನ ದೇಹದ ಅಂಗಗಳಾಗುತ್ತೇವೆ (1 ಕೊರಿಂಥ 12:27). ಅನಂತರ ಯೇಸು ಶಿಷ್ಯರಿಗೆ "ನೀವು ನನ್ನಲ್ಲಿ ನೆಲೆಗೊಂಡಿರಿ, ನಾನು ನಿಮ್ಮಲ್ಲಿ ನೆಲೆಗೊಂಡಿರುವೆನು...ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲ ಕೊಡುವನು. ನೀವು ನನ್ನನ್ನು ಬಿಟ್ಟುಏನು ಮಾಡಲಾರಿರಿ" ಎಂದು ಹೇಳಿದನು (ಯೋಹಾನ 15:4-5) ಕ್ರಿಸ್ತನಲ್ಲಿ ನೆಲೆಗೊಂಡಿರುವವರು ದೇವರಲ್ಲಿಯೂ ನೆಲೆಗೊಂಡಿರುವವರು. (1 ಯೋಹಾನ 4:15).

57 ಇಲ್ಲಿ ನಾವು ಕ್ರೈಸ್ತೀಯ ಜೀವನದಕುರಿತು ಒಂದು ಪ್ರಾಮುಖ್ಯ ಸತ್ಯವನ್ನು ನೋಡುತ್ತೇವೆ: ವಿಶ್ವಾಸಿಗಳು ಕ್ರಿಸ್ತನೊಂದಿಗೆ ಒಂದಾಗಿದ್ದಾರೆ. ನಾವು ಕ್ರಿಸ್ತನಲ್ಲಿ ನೆಲೆಗೊಂಡಿರಬೇಕು. ಅಂದರೆ ನಾವು ಆತನ ಪ್ರೀತಿ, ಬಲ, ಸಮಾಧಾನ ಮತ್ತು ಆನಂದಗಳಲ್ಲಿ ನೆಲೆಗೊಂಡಿರಬೇಕು. ನಾವು ಆತನಿಗೆ ವಿಧೇಯರಾಗುವದರಲ್ಲಿ ನೆಲೆಗೊಂಡಿರಬೇಕು. ನಾವು ಆತನ ರಾಜ್ಯದಲ್ಲಿ ನೆಲೆಗೊಂಡಿರಬೇಕು ಮತ್ತು ಕ್ರಿಸ್ತನು ನಮ್ಮಲ್ಲಿ ನೆಲೆಗೊಂಡಿದ್ದ ತನ್ನ ಪಾತ್ರವನ್ನು ನಿರ್ವಹಿಸುತ್ತಾನೆ. ಅಂದರೆ ಆತನ ಜೀವ, ಆತನ "ಜೀವಕರವಾದ ನೀರು" ಆತನ "ಜೀವವುಳ್ಳ ರೊಟ್ಟಿ" ಆತನ ಪವಿತ್ರಾತ್ಮನು ಇದೆಲ್ಲವೂ ನಮ್ಮಲ್ಲಿ ನೆಲೆಗೊಂಡಿರುವವು. ಮತ್ತು ನಮ್ಮ ಇಡೀ ಜೀವಿತವೆಲ್ಲಾ ಕ್ರಿಸ್ತನಲ್ಲಿಯೂ, ಕ್ರಿಸ್ತನ ಮೂಲಕವೂ, ಕ್ರಿಸ್ತನಿಗಾಗಿಯೂ ಇರುವದು.

58 ವಚನಗಳು 49-50 ಮತ್ತು ವ್ಯಾಖ್ಯಾನ ನೋಡಿರಿ.

59 ಈ ಎಲ್ಲಾ ಸಂಗತಿಗಳನ್ನು ಯೇಸು ಕಪೆರ್ನೌಮಿನ ಸಭಾಮಂದಿರದಲ್ಲಿ ಬೋಧಿಸಿದನು (ವಚನಗಳು 17,24)

## ಅನೇಕ ಶಿಷ್ಯರು ಯೇಸುವನ್ನು ತೊರೆದದ್ದು (6:60-71)

60 ಹನ್ನೆರಡು ಮಂದಿ ಶಿಷ್ಯರನ್ನು ಹೊರತು ಪಡಿಸಿ (ಮಾರ್ಕ 3:13-19) ಯೇಸುವಿಗೆ ಇನ್ನು ಅನೇಕ ಮಂದಿ ಶಿಷ್ಯರಿದ್ದರು. ಇವರು ಸ್ವಲ್ಪಮಟ್ಟಿಗೆ ಯೇಸುವಿನ ಮಾತುಗಳನ್ನು ನಂಬಿದ್ದರು. ಆದರೆ ಅವರ ನಂಬಿಕೆಯು ಬಲಹೀನವೂ, ಪೊಳ್ಳಾದದ್ದು ಆಗಿತ್ತು. ಇವರಲ್ಲಿ ಕೆಲವು ಶಿಷ್ಯರುಗಳೇ" ಇದು ಕಠಿಣವಾದ ಮಾತು" ಎಂದು ಹೇಳಲಾರಂಭಿಸಿದರು.

ಅಂದರೆ ಯೇಸುವಿನ ಮಾಂಸ ತಿನ್ನುವದು ನಮಗೆ ಒಪ್ಪಿಕೊಳ್ಳಲಾಗದ "ಕಠಿಣ ಮಾತಾಗಿದೆ" ಎಂದು ಹೇಳಿದರು.

61 ಪ್ರಾರಂಭದಲ್ಲಿ ಯೆಹೂದ್ಯರು ಯೇಸುವಿಗೆ ಬೋಧನೆಯ ಕುರಿತು ಗುಣಗುಟ್ಟಿದರು (ವಚನ 41). ಈಗ ಸ್ವತಃ ಯೇಸುವಿನ ಶಿಷ್ಯರು ಗುಣಗುಟ್ಟಲು ಪ್ರಾರಂಭಿಸಿದರು. ಯೇಸು ಅವರ ಆಲೋಚನೆಗಳನ್ನು ಬಲ್ಲವನಾಗಿದ್ದನು. ಆತನು ನಮ್ಮ ಒಬ್ಬೊಬ್ಬರ ಆಲೋಚನೆಗಳನ್ನು ತಿಳಿದವನಾಗಿದ್ದಾನೆ. ನಾವು ಏನು ಹೇಳುತ್ತೇವೆಂಬದರ ಕುರಿತು ಜಾಗೃತೆಯಿಂದಿರುವದು ಮಾತ್ರವಲ್ಲ, ನಾವು ಏನು ಯೋಚಿಸುತ್ತೇವೆಂಬದರ ಬಗ್ಗೆಯೂ ಎಚ್ಚರಿಕೆಯಾಗಿರಬೇಕು! ಶಿಷ್ಯರು ತಾವು ಯೇಸುವನ್ನು

ಅರ್ಥಮಾಡಿಕೊಳ್ಳಲಿಲ್ಲ ಎಂಬ ಕಾರಣಕ್ಕಾಗಿ ಗುಣಗುಟ್ಟಲಿಲ್ಲ. ಆದರೆ ಅವರು ತನ್ನೊಂದಿಗೆ ಐಕ್ಯವಾಗಿರಬೇಕೆಂದು ಯೇಸು ಅಪೇಕ್ಷಿಸುತ್ತಿದ್ದದ್ದಕ್ಕಾಗಿ ಗುಣಗುಟ್ಟಿದರು. ಅವರು ತಮ್ಮ ಪೂರ್ಣ ಹೃದಯದಿಂದ ತನ್ನ ಹಿಂಬಾಲಿಸಬೇಕೆಂದು ಯೇಸುವಿನ ಅಪೇಕ್ಷೆಯಾಗಿತ್ತು. ಅವರು ಅದಕ್ಕೆ ಸಿದ್ಧರಾಗಿರಲಿಲ್ಲ.

**62** ಯೇಸು ಅವರಿಗೆ ಉತ್ತರ ನೀಡುತ್ತಾ "ಹಾಗಾದರೆ ಮನುಷ್ಯಕುಮಾರನು ತಾನು ಇದ್ದಲ್ಲಿಗೆ ಏರಿ ಹೋಗುವದನ್ನು ನೀವು ನೋಡಿದರೆ ಏನನ್ನುವಿರಿ?" ಎಂದು ಹೇಳಿದನು. ಯೇಸು ಹೇಳಿದ ಮಾತಿನ ಅರ್ಥವೇನೆಂದರೆ ಯೇಸುವಿನ ಬೋಧನೆಗಳನ್ನು ಸ್ವೀಕರಿಸಿಕೊಳ್ಳಲು ಈಗ ಅವರಿಗೆ ಕಷ್ಟಕರವಾಗಿರುವದಾದರೆ ಆತನು ಮೊದಲು ಇದ್ದಲ್ಲಿಗೆ ಅಂದರೆ ಪರಲೋಕಕ್ಕೆ ಏರಿ ಹೋಗುವಾಗ ಅವರಿಗೆ ಅದು ಇನ್ನು ಕಷ್ಟಕರವಾಗಿರುವದು. ಯಾಕೆಂದರೆ ಪರಲೋಕಕ್ಕೆ ಏರಿ ಹೋಗುವ ಮುಂಚೆ ಆತನು ಕೊಲ್ಲಲ್ಪಡಬೇಕು. ಆತನ ಶಿಷ್ಯರು ಚದುರಿಹೋಗುವರು. ಯೆಹೂದ್ಯರು ಅವರನ್ನು ಹಿಂಸಿಸುವರು. ಮತ್ತು ಯೇಸು ಪರಲೋಕಕ್ಕೆ ಏರಿಹೋದ ಮೇಲೆ ಒಂದು ವಿಧದಲ್ಲಿ ಒಬ್ಬಂಟಿಗರಾಗುವರು. ಆತನು ಅವರಿಂದ ಹೊರಟು ಹೋಗುವನು. ಆತನು ಪವಿತ್ರಾತ್ಮನ ರೂಪದಲ್ಲಿ ಅವರೊಂದಿಗಿರುತ್ತಾನೆಂಬದು ನಿಜವೇ ಆದರೂ ಈಗ ಅವರು ಯೇಸುವನ್ನು ಆತ್ಮೀಕ ಬೋಧನೆಗಳನ್ನು ಸ್ವೀಕರಿಸದೆ ಹೋದರೆ ಪವಿತ್ರಾತ್ಮನ ಬೋಧನೆಗಳನ್ನು ಆಗ ಅವರು ಹೇಗೆ ಸ್ವೀಕರಿಸುವರು?

**63** ಆತ್ಮನು ಅಂದರೆ ಪವಿತ್ರಾತ್ಮನು ಜೀವವನ್ನು ಕೊಡುವನು. ಮಾನವರು ಯೇಸುವಿನ "ಮಾಂಸ"ವನ್ನು ತಿನ್ನುವಾಗ ಅವರು ಮಾಂಸವನ್ನು ತಿನ್ನುವವರಾಗಿರದೆ ಪವಿತ್ರಾತ್ಮನನ್ನೇ ಸೇವಿಸುವವರಾಗಿರುತ್ತಾರೆ. ಮಾಂಸವು ಯಾವದಕ್ಕು ಬರುವದಿಲ್ಲ.

ನಾವು ಯೇಸುವಿನ ಮಾತುಗಳ ಆತ್ಮೀಕ ಅರ್ಥವನ್ನು ಗ್ರಹಿಸಿಕೊಳ್ಳುವಂತೆ ಆತನು ನಮಗೆ ಕಲಿಸುತ್ತಿರುವನು. ಆತನ ಮಾತುಗಳು ಆತ್ಮವಾಗಿವೆ. ದೇವರು ಆತ್ಮಸ್ವರೂಪನಾಗಿರುವ ಪ್ರಕಾರವೇ (ಯೋಹಾನ 4:24) ಯೇಸುವಿನ ಮಾತುಗಳೂ ಆತ್ಮವಾಗಿವೆ. ಆತನ ಮಾತುಗಳು ದೇವರಿಂದ ಬಂದವು ಗಳಾಗಿವೆ (ಯೋಹಾನ 7:16, 12:49-50). ಅವು ಗಳು ಮಾನವನ ಮಾಂಸೀಕ ಮಾತುಗಳಾಗಿರುವದಿಲ್ಲ. ಯೇಸುವಿನ ಮಾತುಗಳನ್ನು ನಮ್ಮ ಆತ್ಮಗಳು ಮಾತ್ರವೇ ದೇವರ ಪವಿತ್ರಾತ್ಮನ ಸಹಾಯದಿಂದ ಅರ್ಥಮಾಡಿಕೊಳ್ಳಬಲ್ಲವು . (೧ ಕೊರಿಂಥ 2:12-14 ಮತ್ತು ವ್ಯಾಖ್ಯಾನ ನೋಡಿರಿ).

ಯೇಸುವಿನ ಮಾತುಗಳು ಜೀವವೂ ಸಹ ಆಗಿವೆ, ಅಂದರೆ ಆತನ ಮಾತುಗಳು ಜೀವವನ್ನು ಕೊಡುತ್ತವೆ (ಯೋಹಾನ 5:24 ನೋಡಿರಿ). ದೇವರ ಮಾತುಗಳು ಪರಲೋಕ ಮತ್ತು ಭೂಲೋಕಗಳನ್ನು ಸೃಷ್ಟಿಸಿದ ಹಾಗೆಯೇ (ಯೋಹಾನ 1:1-4) ಯೇಸುವಿನ ಮಾತುಗಳು ಸಹ ಕಿವಿಗೊಡುವವರಿಗೆ ನಿರಂತರವಾಗಿ ಜೀವವನ್ನು ನೀಡುತ್ತಿರುತ್ತವೆ.

**64** ಯಾರು ತನಗೆ ನಂಬಿಗಸ್ಥರಾಗಿ ಉಳಿಯುವರು ಹಾಗು ಯಾರು ಬಿದ್ದು ಹೋಗುವರೆಂಬದನ್ನು ಯೇಸು ಮೊದಲಿನಿಂದಲೇ ತಿಳಿದಿದ್ದನು. ಆತನು ನಮ್ಮೆಲ್ಲರ ವಿಷಯದಲ್ಲಿಯೂ ಬಲ್ಲವನಾಗಿದ್ದಾನೆ. ಶಿಷ್ಯರು ಯೇಸುವಿನ ಮಾತುಗಳನ್ನು ಕೇಳಿದ್ದರೂ ಸಹ ಅವರಲ್ಲಿ ಅನೇಕರು ಆ ಮಾತುಗಳನ್ನೂ ಕೇವಲ ಶಾರೀರಿಕ ರೀತಿಯಲ್ಲಿ ಅರ್ಥ ಮಾಡಕೊಂಡಿದ್ದರು. ಅವರು ಕೇವಲ ಅದ್ಭುತಗಳನ್ನು ನೋಡಿ ಯೇಸುವನ್ನು ಹಿಂಬಾಲಿಸಿದ್ದರು, ಆದರೆ ಅವರು ಒಂದು ಆಳವಾದ ಆತ್ಮೀಕರೀತಿಯಲ್ಲಿ ಯೇಸುವಿನಲ್ಲಿ ನಂಬಿಕೆಯಿಡಲಿಲ್ಲ. ಈಗ ಯೇಸುವಿನ ಬೋಧನೆಯು ಕಠಿಣವಾದ ಕೂಡಲೇ ಅವರು ಹಿಂಜರಿದರು (ಮಾರ್ಕ 4:5-6, 16-17 ನೋಡಿರಿ).

**65** ಆಗ ಯೇಸು ಅವರಿಗೆ ತಂದೆಯ ಅನುಗ್ರಹವಿಲ್ಲದೆ ಯಾರೂ ನನ್ನ ಬಳಿಗೆ ಬರಲಾರರು ಎಂಬದನ್ನು ಜ್ಞಾಪಕಪಡಿಸಿದನು (ವಚನ 37, 44 ಮತ್ತು ವ್ಯಾಖ್ಯಾನ ನೋಡಿರಿ). ಒಂದು ವೇಳೆ ದೇವರು ಮೊದಲು ಒಬ್ಬನನ್ನು ಕತ್ತಲೆ ಮತ್ತು ಪಾಪದೊಳಗಿಂದ ಎಳೆಯದಿದ್ದರೆ ಅವನು ದೇವರ ಬಳಿಗೆ ಬರಲು ಸಾಧ್ಯವಿಲ್ಲ. ಒಬ್ಬ ಪಾಪಿಯು ತನ್ನ ಸ್ವಂತ ಇಚ್ಛೆಯಿಂದ ದೇವರ ಕಡೆಗೆ ತಿರಿಗಿಕೊಳ್ಳಲಾರನು, ಆತನು ಯಾವಾಗಲೂ ತನ್ನ ಪಾಪದಲ್ಲಿಯೇ ನಲೆಗೊಳ್ಳಲು ಬಯಸುತ್ತಾನೆ (ಯೋಹಾನ 3:19). ಆದುದರಿಂದ ಯಾವನಾದರೂ ದೇವರ ಮತ್ತು ಯೇಸುವಿನ ಬಳಿಗೆ ಬರುವದಾದರೆ ಅದು ಯಾವಾಗಲೂ ದೇವರ ಕೃಪೆಯ ಫಲಿತವೇ ಆಗಿರುತ್ತದೆ. ಆತನು ಬರುವಂತೆ ತಂದೆಯು ಅನುಗ್ರಹಿಸಿರುತ್ತಾನೆ.

ಆತನ ಶಿಷ್ಯರಲ್ಲಿ ಕೆಲವರು ನಿಜವಾಗಿಯೂ ದೇವರಿಂದ ಎಳೆಯಲ್ಪಡದ ಕಾರಣ ಹಿಂಜರಿದು ಹೋಗುವರೆಂದು ಯೇಸು ತಿಳಿದವನಾಗಿದ್ದನು. ಅವರ ನಂಬಿಕೆ ನಿಜವಾಗಿರಲಿಲ್ಲ. ಅಲ್ಲದೆ ಯೇಸುವಿನ ವಿಶೇಷವಾದ ಹನ್ನೆರಡು ಮಂದಿ ಶಿಷ್ಯರಲ್ಲಿಯೇ ಒಬ್ಬನು ಅಂತ್ಯದಲ್ಲಿ ಆತನನ್ನು ಹಿಡುಕೊಡಲಿದ್ದನು (ವಚನಗಳ 70-71 ನೋಡಿರಿ).

**66** ಆದುದರಿಂದ ಯೇಸು ಹೇಳಿದಂತೆಯೇ ಆತನ ಶಿಷ್ಯರಲ್ಲಿ ಅನೇಕರು ಆತನನ್ನು ತೊರೆದರು. ಮೆಸ್ಸಿಯನು ಒಬ್ಬ ಭೂಲೋಕದಅರಸನಂತಿರುವನೆಂದು ಅವರು ಯೋಚಿಸಿಕೊಂಡಿದ್ದರು. ಬಹುಶಃ ಅವರು ತಾವು ಯೇಸುವನ್ನು ಹಿಂಬಾಲಿಸುವದರಿಂದ ಏನಾದರೂ ಪ್ರಾಪಂಚಿಕ ಲಾಭವನ್ನು ಪಡೆಯುವೆವು ಎಂದುಕೊಂಡಿದ್ದರು. ಯೇಸುವಿನ ಶಿಷ್ಯನಾಗಿರುವದು ತಾವು ನಿರೀಕ್ಷಿಸಿದ್ದಕ್ಕಿಂತಲೂ ವ್ಯತ್ಯಾಸವಾಗಿರುವದನ್ನು ಈಗ ಅವರು ಕಂಡುಕೊಂಡರು. ಆದುದರಿಂದ ಅವರು ಆತನನ್ನು ತೊರೆದುಬಿಟ್ಟರು.

**67-69** ಆಗ ಯೇಸು ತನ್ನ ಹನ್ನೆರಡು ಮಂದಿ ಶಿಷ್ಯರ ಕಡೆಗೆ ತಿರಿಗಿಕೊಂಡು ನೀವು ಸಹ ಹೋಗಬೇಕೆಂದಿದ್ದೀರಾ? ಎಂದು ಕೇಳಿದನು. ಆದರೆ ಪೇತ್ರನು ಹನ್ನೆರಡು ಮಂದಿ ಶಿಷ್ಯರ ಪರವಾಗಿ ಉತ್ತರಿಸುತ್ತಾ "ಕರ್ತನೇ ನಿನ್ನನ್ನು ಬಿಟ್ಟು ನಾವು ಇನ್ನಾರ ಬಳಿಗೆ ಹೋಗೋಣ? ನಿನ್ನಲ್ಲಿ ನಿತ್ಯ ಜೀವವನ್ನು ಉಂಟು ಮಾಡುವ ವಾಕ್ಯಗಳುಂಟು" ಎಂದು ಹೇಳಿದನು (ವಚನ 68). ಯೇಸು 63ನೇ ವಚನದಲ್ಲಿ ಹೇಳಿದ್ದನು, ಆತನು ಅರ್ಥಮಾಡಿಕೊಂಡನು. ನಿತ್ಯಜೀವದ ವಾಕ್ಯಗಳನ್ನು ಹೊಂದಿರುವದೆಂದರೆ

ನಿತ್ಯಜೀವವನ್ನು ಕೊಡುವ ಶಕ್ತಿಯನ್ನು ಹೊಂದಿರುವದೆಂದರ್ಥವಾಗಿದೆ. ಒಂದುವೇಳೆ ಯೇಸು ನಿತ್ಯಜೀವವನ್ನು ಕೊಡುವ ಬಲ ಹೊಂದಿರುವದಾದರೆ ಹನ್ನೆರಡು ಶಿಷ್ಯರು ಬೇರೆ ಕಡೆಗೆ ಯಾಕೆ ಹೋಗುಬೇಕು?

ಬಳಿಕ ಪೇತ್ರನು "ನೀನು ದೇವರು ಪ್ರತಿಷ್ಠಿಸಿದವನೇ "(ಮೆಸ್ಸಿಯನೇ) ಎಂದು ಹೇಳಿದನು (ಮಾರ್ಕ 8:29 ಮತ್ತು ವ್ಯಾಖ್ಯಾನ ನೋಡಿರಿ). ಹನ್ನೆರಡು ಮಂದಿ ಶಿಷ್ಯರೆಲ್ಲರೂ (ಯೂದನನ್ನು ಬಿಟ್ಟು) ನಿಜವಾಗಿಯೂ ನಂಬಿದರು. ಹೌದು ಅನಂತರ ಅವರು ಸಹ ಕ್ಲುಪ್ತಕಾಲದವರೆಗೆ ಹಿಂಜರಿಯುವರು (ಮಾರ್ಕ 14:50) ಆದರೆ ಅವರ ನಂಬಿಕೆಯು ಸಂಪೂರ್ಣವಾಗಿ ಅವರನ್ನು ಬಿಟ್ಟು ಹೋಗಲಿಲ್ಲ.

**70-71** ಆ ಮೇಲೆ ಯೇಸು ತನ್ನ ಶಿಷ್ಯರಿಗೆ ಅವರಲ್ಲೊಬ್ಬನು ತನ್ನನ್ನು ಹಿಡುಕೊಡುವನೆಂದು ಹೇಳಿದನು. ಆದರೆ ಆತನು ಅದು ಯಾರೆಂಬದನ್ನು ತಿಳಿಸಲಿಲ್ಲ. ಆತನು ಸಿಮೋನನ ಮಗನಾದ ಇಸ್ಕರಿಯೋತ ಯೂದನೆಂದು ಯೋಹಾನನು ನಮಗೆ ತಿಳಿಸುತ್ತಾನೆ (ಮಾರ್ಕ 14:10-11, 17-20, 44-46).
ಯೇಸು ಯೂದನನ್ನು ದುಷ್ಟನೆಂದು ಕರೆದನು, ಯಾಕೆಂದರೆ ಆತನು ಸೈತಾನನ ಸೇವಕನಾದನು, ಸೈತಾನನು ಅವನೊಳಗೆ ಪ್ರವೇಶಿಸಿದನು. (ಯೋಹಾನ 13:2, 27 ನೋಡಿರಿ).

---

## ಅಧ್ಯಾಯ - 7

### ಯೇಸು ಪರ್ಣಶಾಲೆಗಳ ಹಬ್ಬಕ್ಕೆ ಹೋಗಿದ್ದು (7:1-13)

**1** ಯೆರೂಸಲೇಮ ಮತ್ತು ಯೂದಾಯದ ಸುತ್ತಲಿನ ಪ್ರಾಂತ್ಯಗಳಲ್ಲಿನ ಯೆಹೂದ್ಯನಾಯಕರು ಯೇಸುವನ್ನು ಕೊಲ್ಲಲು ಹೊಂಚು ಹಾಕುತ್ತಿದ್ದರು. (ಯೋಹಾನ 5:16,18). ಆದುದರಿಂದ ಯೇಸು ಗಲಿಲಾಯದಲ್ಲಿಯೇ ಉಳಿದು ಸುವಾರ್ತೆ ಸಾರುತ್ತಿದ್ದನು. ಆತನು ಯೆಹೂದ್ಯ ನಾಯಕರಿಗೆ ಭಯಪಟ್ಟದ್ದರಿಂದ ಗಲಿಲಾಯದಲ್ಲಿ ಉಳಿದುಕೊಳ್ಳಲಿಲ್ಲ. ಆದರೆ ಆತನು ಸಾಯಬೇಕೆಂದು ದೇವರು ನೇಮಿಸಿದ ಸಮಯವು ಇನ್ನೂ ಬಂದಿರಲಿಲ್ಲ.

**2** ಪ್ರತಿವರ್ಷವು ಸುಗ್ಗಿಗೋಸ್ಕರ ದೇವರಿಗೆ ಕೃತಜ್ಞತಾ ಸ್ತುತಿಯನ್ನು ಮಾಡುವದಕ್ಕಾಗಿ ಯೆಹೂದ್ಯರು ಪರ್ಣಶಾಲೆಗಳ ಹಬ್ಬವನ್ನು ಆಚರಿಸುತ್ತಿದ್ದರು (ಯಾಜಕ ಕಾಂಡ 23:33-34, ಧರ್ಮೋಪದೇಶಕಾಂಡ 16:13-15).

**3** ಯೇಸುವಿನ ಸಹೋದರರು ಆತನಿಗೆ – ನೀನು ಮಾಡುವ ಅದ್ಭುತಕಾರ್ಯಗಳನ್ನು ನಿನ್ನ ಶಿಷ್ಯರು ಸಹ (ಯೂದಾಯದಲ್ಲಿ ವಾಸಿಸಿದ ಶಿಷ್ಯರು) ನೋಡುವಂತೆ ಇಲ್ಲಿಂದ ಯೂದಾಯಕ್ಕೆ (ಅಥವಾ ಯೂದಾಯದ ರಾಜಧಾನಿಯಾದ ಯೆರೂಸಲೇಮಿಗೆ) ಹೋಗುವಂತೆ ಸಲಹೆಮಾಡಿದರು. ಈ ಯೂದಾಯದ ಶಿಷ್ಯರಲ್ಲಿ ಅನೇಕರು ಈಗಾಗಲೇ ಯೇಸುವನ್ನು ತೊರೆದಿದ್ದರು (ಯೋಹಾನ 6:66).

**4** ಯೇಸು ಒಬ್ಬ ಪ್ರಸಿದ್ಧ ವ್ಯಕ್ತಿಯಾಗಬೇಕೆಂದು ಬಯಸಿದ್ದಾನೆಂದು ಆತನ ಸಹೋದರರು ಅಂದುಕೊಂಡಿದ್ದರು. ಯೇಸು ಮೆಸ್ಸಿಯನು ಮಾಡಬೇಕಾಗಿದ್ದ ರೀತಿಯಲ್ಲಿ ಅದ್ಭುತಗಳನ್ನು ಮಾಡುತ್ತಿದ್ದನು. ಆದರೆ ಅವು ಗಳನ್ನು ಗಲಿಲಾಯದ ಗುಡ್ಡಗಾಡುಗಳ ಉತ್ತರ ಪ್ರಾಂತದಲ್ಲಿ ಮಾಡುವದೇಕೆ? ಅದು ಒಂದು ರೀತಿ ಮರೆಯಲ್ಲಿ ಅದ್ಭುತಗಳೆನ್ನು ಮಾಡಿದ ಹಾಗಿತ್ತು. ಅವರ ಬದಲಾಗಿ ಯೇಸು ಯೆರೂಸಲೇಮಿನ ರಾಜಧಾನಿಗೆ ಹೋಗಿ ತನ್ನನ್ನು ಲೋಕಕ್ಕೆ [52]ತೋರಿಸಿಕೊಳ್ಳ ಬೇಕೆಂದು ಆತನ ಸಹೋದರರು ಹೇಳಿದರು.

**5** ಯೇಸುವಿನ ಸಹೋದರರು ಮೆಸ್ಸಿಯನ ಕೆಲಸಗಳನ್ನು ಅರ್ಥಮಾಡಿಕೊಳ್ಳಲಿಲ್ಲ. ಅವರು ಯೇಸುವಿನ ಯೋಜನೆಯನ್ನು ಗ್ರಹಿಸಿಕೊಳ್ಳಲಿಲ್ಲ. ಯೇಸು ತನ್ನನ್ನು ಅರಸನನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವನೆಂದು ಅವರು ಅಂದುಕೊಂಡರು (ಮಾರ್ಕ 5:43, 6:44-45, 8:30 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಅವರು ನಂಬಲಿಲ್ಲವಾದ್ದರಿಂದ ಅವರು ಅರ್ಥಮಾಡಿಕೊಳ್ಳಲಿಲ್ಲ. ಅವರು ಶಾರೀರಿಕವಾಗಿ ಆತನ ಸಹೋದರರಾಗಿದ್ದರು ಹೊರತು ಆತ್ಮೀಕವಾಗಿ ಅಲ್ಲ. ಕ್ರಿಸ್ತನಲ್ಲಿ ನಂಬಿಕೆಯಿಡುವವರು ಮಾತ್ರವೇ ಆತನನ್ನು ಅರ್ಥ ಮಾಡಿಕೊಳ್ಳಬಲ್ಲರು. ಕ್ರಿಸ್ತನಲ್ಲಿ ನಂಬಿಕೆಯಿಡುವವರು ಮಾತ್ರವೇ ಆತನ ನಿಜ ಸಹೋದರರಾಗಿರುವರು. (ಮಾರ್ಕ 3:31-35 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ಲೋಕದ ಅವಿಶ್ವಾಸಿಗಳಾದ ಜನರು ಯೇಸುವನ್ನು ಹಗೆಮಾಡುತ್ತಾರೆ. ಯಾಕೆಂದರೆ ಯೇಸು ಅವರ ಪಾಪವನ್ನು ಬಯಲು ಪಡಿಸುತ್ತಾನೆ. ಈ ಕಾರಣದಿಂದಲೇ ಯೆಹೂದ್ಯನಾಯಕರು ಯೇಸುವನ್ನು ಕಠಿಣವಾಗಿ ವಿರೋಧಿಸಿದರು.

**8-9** ಯೇಸು "ನಾನು ಈ ಜಾತ್ರೆಗೆ ಈಗ [53] ಹೋಗುವದಿಲ್ಲ. [54] ಎಂದು ಹೇಳಿದನು. ಅವನ ಮಾತಿನ ಅರ್ಥವೇನೆಂದರೆ ಆತನ ಸಹೋದರರ ಕೋರಿಕೆಯಂತೆ ಅವರೊಂದಿರೆ ಆತನು ಹಬ್ಬಕ್ಕೆ ಹೋಗುವದಿಲ್ಲ. ಅವನು ಅನಂತರ ಆತನಿಗೆ ಸರಿಯಾದ ಸಮಯ ಬಂದಾಗ ಹೋಗುವನು. ಜನರಿಗೆ ಉಪದೇಶಿಸುವದಕ್ಕಾಗಿ ಯೇಸು ಜಾತ್ರೆಗೆ ಹೋಗಲು ಬಯಸಿದ್ದನು. ಇದಕ್ಕಾಗಿ ಆತನು ಜಾತ್ರೆಯ ಮುಕ್ತಾಯದ ಸಮೀಪದಲ್ಲಿ ಹೋಗುವದು ಉತ್ತಮವಾಗಿತ್ತು, ಆಗ ಜನರು ದೊಡ್ಡ ಪ್ರಮಾಣದಲ್ಲಿರುತ್ತಾರೆ.

**10** ಕೆಲವು ದಿನಗಳ ನಂತರ ಯೇಸು ಸಹ ಯೆರೂಸಲೇಮಿಗೆ ಹೋದನು. ಆತನು ರಹಸ್ಯವಾಗಿ ಹೋದನು, ಅಂದರೆ ದೊಡ್ಡಜನ ಸಮೂಹದೊಂದಿಗಲ್ಲ, ಆದರೆ ಬಹುಶಃ ಆತನು ಮತ್ತು ಆತನ ಅತೀ ಆಪ್ತ ಶಿಷ್ಯರು ಮಾತ್ರವೇ ಹೋದರು.

ಆತನು ಯೆರೂಸಲೇಮನ್ನು ತಲುಪು ವ ಮುಂಚೆಯೇ ಯೆಹೂದ್ಯರು ಅವನನ್ನು ಕಂಡುಕೊಂಡು ಬಂಧಿಸಿ ಬಿಟ್ಟಾರೆಂದು ಆತನು ಜನರ ಗಮನವನ್ನು ಸೆಳೆಯಲು ಇಚ್ಚಿಸಿಲಿಲ್ಲ.

**11** ಯೆಹೂದ್ಯರು ಅಂದರೆ ಯೆಹೂದ್ಯನಾಯಕರು ಮತ್ತು ಯೆಹೂದ್ಯರೊಳಗಿನ ಯೇಸುವಿನ ವೈರಿಗಳು ಆತನನ್ನು ಹುಡುಕುತ್ತಿದ್ದರು.ಅವರು ಆತನನ್ನು ಬಂಧಿಸಲು ಅವಕಾಶಕ್ಕಾಗಿ ಕಾಯುತ್ತಿದ್ದರು (ವಚನ 32).

**12-13** ಜನರ ಗುಂಪು ಗಳು ಸಹ ಯೇಸುವಿನ ಕುರಿತಾಗಿ ಗುಜುಗಜು ಮಾತಾಡುತ್ತಿದ್ದರು. ಆ ಜನರ ಗುಂಪು ಗಳು ಸಹ ಯೆಹೂದ್ಯರೇ ಆದರೂ ಸಾಮಾನ್ಯ ಜನರಾಗಿದ್ದರು. ಯೇಸುವನ್ನು ಏನೆಂದು ತಿಳಿದುಕೊಳ್ಳಬೇಕೆಂಬದು ಅವರಿಗೆ ಗೊತ್ತಿರಲಿಲ್ಲ. ಒಬ್ಬರು ಒಂದು ಹೇಳಿದರೆ ಇನ್ನೊಬ್ಬರು ಇನ್ನೊಂದು ರೀತಿಯಲ್ಲಿ ಹೇಳುತ್ತಿದ್ದರು. (ವಚನ 42-43). ಆದರೆ ಯೆಹೂದ್ಯರ ಅಂದರೆ ಯೆಹೂದ್ಯನಾಯಕರ ಭಯದಿಂದಾಗಿ ಜನರು ಧಾರಾಳವಾಗಿ ಮಾತಾಡದೆ ಪಿಸುಗುಟ್ಟುತ್ತಿದ್ದರು.

## ಯೇಸು ಜಾತ್ರೆಯಲ್ಲಿ ಬೋಧಿಸಿದ್ದು (7:14-24)

**14-15** ಜಾತ್ರೆಯ ಮದ್ಯಕಾಲದಲ್ಲಿ55 ಯೇಸು ದೇವಾಲಯದ ಅವರಣದಲ್ಲಿ ಜನರಿಗೆ ಬೋಧಿಸಲಾರಂಭಿಸಿದನು. ಯೆಹೂದ್ಯರು ಅಂದರೆ ಯೆಹೂದ್ಯನಾಯಕರು ಯೇಸುವಿನ ವಾಕ್ಯ ಜ್ಞಾನಕ್ಕೆ ಆಶ್ಚರ್ಯಪಟ್ಟರು. ಅವರು ಫರಿಸಾಯರು ಮತ್ತು ಶಾಸ್ತ್ರಿಗಳಾಗಿದ್ದರು. ಅವರು ಕ್ರಮವಾದ ವಿದ್ಯಾಭ್ಯಾಸಮಾಡಿದ್ದರು. ಆದರೆ ಈ ಯೇಸು ಅವರಿಗಿಂತಲೂ ಹೆಚ್ಚು ತಿಳಿದವನಾಗಿದ್ದನು! (ಮತ್ತಾಯ 7:28-29, ಮಾರ್ಕ 6:2-3 ಮತ್ತು ವ್ಯಾಖ್ಯಾನ ನೋಡಿರಿ).

**16** ಯೇಸುವಿನ ಜ್ಞಾನವು ದೇವರಿಂದ ಬಂದದ್ದಾಗಿತ್ತು, ಜನರು ಯೇಸುವಿನ ಭೋದನೆಯನ್ನು ಕೇಳುವಾಗ ಅವರು ದೇವರು ಹೇಳುವದನ್ನೆ ಕೇಳುವವರಾಗಿದ್ದಾರೆ.

**17** ಯೇಹೂದ್ಯರು ಯೇಸುವಿನ ಅಧಿಕಾರವನ್ನು, ಆತನ ಬೋಧನೆಯ ಸತ್ಯವನ್ನು ಪ್ರಶ್ನಿಸಿದರು ಆದರೆ ಆಗ ಯೇಸು ಸತ್ಯವನ್ನು ಕೇಳುವ ಅವರ ಸಾಮಾಥ್ರ್ಯವನ್ನು ಪ್ರಶ್ನಿಸಿದನು. ದೇವರ ಚಿತ್ತವನ್ನು ಮಾಡಲಿಚ್ಚಿಸುವವರು ಯೇಸುವಿನ ಬೋಧನೆಯ ಸತ್ಯ ಎಂಬುದನ್ನು ಸಂಶಯಿಸುವದಿಲ್ಲ ಆದರೆ ಈ ಯೆಹೂದ್ಯನಾಯಕರಿಗೆ ದೇವರ ಚಿತ್ತವನ್ನು ಮಾಡಲು ಮನಸ್ಸಿರಲಿಲ್ಲ, ಆದುದರಿಂದ ಅವರು ಯೇಸುವಿನ ಬೋಧನೆಯು ಸತ್ಯವೋ, ಅಥವಾ ಅಲ್ಲವೋ ಎಂಬದನ್ನು ಹೇಳಲು ಅಸಮರ್ಥರಾಗಿದ್ದರು. ಇಲ್ಲಿ ಯೇಸು ನಮಗೆ ಅತಿ ಪ್ರಾಮುಖ್ಯವಾದ ಸತ್ಯವನ್ನು ತಿಳಿಸುತ್ತಾನೆ. ದೇವರ ಚಿತ್ತದಂತೆ ನಡೆಯುವದಕ್ಕೆ ಯಾರಿಗೆ ಮನಸ್ಸಿದೆಯೋ ಅವರು ಯೇಸುವಿನ ದೇವರ ಚಿತ್ತದಂತೆ ನಡೆಯಲು ನಿಶ್ಚಯಿಸಿಕೊಳ್ಳುವದಾದರೆ ದೇವರುನಮಗೆ ತನ್ನ ಚಿತ್ತವನ್ನು ಬಯಲುಪಡಿಸುವನು. ಆತನು ನಮ್ಮ ಆತ್ಮೀಕ ಕಣ್ಣುಗಳನ್ನು ತೆರೆಯ ಮಾಡುವನು. ಯೇಸುವಿನ ಬೋಧನೆಯು ಸತ್ಯವೆಂಬದನ್ನು ನಾವು ತಿಳಿಯುವೆವು . ಅನೇಕ ಜನರು "ಯೇಸುವಿನ ಬೋಧನೆಯು ಸತ್ಯವಾಗಿತ್ತೆಂದು ನಾನು ತಿಳಿದಿದ್ದರೆ ನಾನು ಆತನನ್ನು ಹಿಂಬಾಲಿಸುತ್ತಿದ್ದೆನು. ದೇವರ ಚಿತ್ತವನ್ನು ನಾನು ನಿಶ್ಚಯವಾಗಿ ತಿಳಿದಿದ್ದರೆ ಅದಕ್ಕೆ ವಿಧೇಯನಾಗುತ್ತಿದ್ದೆನು" ಎಂಬದಾಗಿ ಹೇಳುತ್ತಾರೆ. ಆದರೆ ಅಂತಹ ಜನರು ತಮ್ಮನ್ನೆ ಮೋಸ ಪಡಿಸಿಕೊಳ್ಳುತ್ತಿರುವರು. ಅವರು ತಮ್ಮ ಹೃದಯಗಳಲ್ಲಿ ದೇವರ ಚಿತ್ತಕ್ಕೆ ವಿಧೇಯರಾಗಲು ಒಪ್ಪದಿರುವ ಕಾರಣದಿಂದಲೇ ಅವರು ದೇವರ ಚಿತ್ತ ಏನೆಂಬದನ್ನು ಧೃಡವಾಗಿ ತಿಳಿದಿರುವದಿಲ್ಲ. ಅವರು ದೇವರ ಚಿತ್ತದ ಕುರಿತಾದ ಅವರ ಅನಿಶ್ಚಿತೆಯನ್ನು ದೇವರ ಚಿತ್ತಕ್ಕೆ ವಿಧೇಯರಾಗದಿರಲು ಒಂದು ನೆಪವಾಗಿ ಉಪಯೋಗಿಸುತ್ತಿದ್ದಾರೆ. ದೇವರು ಹೇಳುವದೇನೆಂದರೆ:

ಮೊದಲು ನನಗೆ ವಿಧೇಯರಾಗಲು ಒಪ್ಪಿಕೊಳ್ಳಿರಿ. ಆಗ ನಾನು ನಿಮಗಾಗಿ ನನ್ನ ಚಿತ್ತವೇನೆಂಬದನ್ನು ತೋರಿಸುವೆನು! ಎಂಬದೇ[56] ಕ್ರಿಸ್ತನು ಹೇಳುವದೇನೆಂದರೆ: "ಮೊದಲು ನನ್ನಲ್ಲಿ ನಂಬಿಕೆಯಿಡಿರಿ, ಆಗ ನೀವು ನನ್ನ ಬೋಧನೆಯು ಸತ್ಯವಾದದ್ದೂ, ದೇವರಿಂದ ಬಂದದ್ದೂ ಎಂಬದನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳವಿರಿ" ಎಂಬದೇ.

**18** ಯೇಸು ತನ್ನ ಬೋಧನೆಯು ದೇವರಿಂದ ಬಂದದ್ದೋ ಎಂಬದನ್ನು ತಿಳಿಯುವ ಇನ್ನೊಂದು ಮಾರ್ಗವು ಂಟೆಂದು ಹೇಳುತ್ತಾನೆ. ತನಗೆ ಮಾನ ಬರಬೇಕೆಂದು ಆಪೇಕ್ಷಿಸುವವನು ಕಲ್ಪಿಸಿಹೇಳುತ್ತಾನೆ. ಆದರೆ ದೇವರಿಗೆ ಮಾನ ಬರಬೇಕೆಂದು ಆಪೇಕ್ಷಿಸುವವನು ಸತ್ಯವಂತನಾಗಿದ್ದಾನೆ. ಆದುದರಿಂದ ಯೇಸುವಿನ ಬೋಧನೆಯು ಸತ್ಯವೂ, ದೇವರಿಂದ ಬಂದದ್ದೂ ಆಗಿದೆ, ಯಾಕೆಂದರೆ ಆತನು ದೇವರಿಗೆ ಮಾತ್ರವೇ ಮಾನಬರಬೇಕೆಂದು ದುಡಿದನು.

ನಾವು ಒಬ್ಬನ ಬೋಧನೆಯನ್ನು ಕೇಳುವಾಗ "ಈ ಬೋಧನೆಯು ದೇವರಿಗೆ ಮಾನವನ್ನು ತರುತ್ತದೋ? "ಇದು ಕ್ರಿಸ್ತನಿಗೆ ಮಾನವನ್ನು ತರುತ್ತದೋ? ಎಂದು ನಮ್ಮನ್ನು ಕೇಳಿಕೊಳ್ಳೋಣ. ಒಂದು ವೇಳೆ ಅದು ಕ್ರಿಸ್ತನಿಗೆ ಮಾನವನ್ನು ತರುವದಾದರೆ ಆ ವ್ಯಕ್ತಿಯ ಬೋಧನೆಯು ನಿಜವಾದದ್ದು ಮತ್ತು ವಿಶ್ವಾಸರ್ಹವಾದದ್ದು [57], ಆದರೆ ಆ ವ್ಯಕ್ತಿಯು ತನ್ನನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವದಾದರೆ ಆತನ ಬೋಧನೆಯು ವಿಶ್ವಾಸರ್ಹವಾದದ್ದಲ್ಲ. ಅದು ಸ್ವಲ್ಪ ಮಟ್ಟಿಗೆ ಮಿಥ್ಯವಾಗಿಯಾದರೂ ಇರುತ್ತದೆ.

**19** ದೇವರಿಗೆ ಮಾನ ಬರಬೇಕೆಂದು ಶ್ರಮಿಸುವವನಲ್ಲಿ ಧರ್ಮವು [58] (ಮಿಥ್ಯವು) ಇರುವದಿಲ್ಲ ಎಂದು ಯೇಸು ಹೇಳಿ೦ದನು (ವಚನ 18). ಆದರೆ ಯೆಹೂದ್ಯನಾಯಕರಲ್ಲಿ ಕೇವಲ ಅಧರ್ಮ (ಮಿಥ್ಯ) ಅನೀತಿಯು ಹೆಚ್ಚಾಗಿ ಇತ್ತು. ಯೇಸು ಅವರಿಗೆ "ನಿಮ್ಮಲ್ಲಿ ಒಬ್ಬನಾದರೂ ಧರ್ಮಶಾಸ್ತ್ರದಂತೆ ನಡೆಯುವದಿಲ್ಲ. ನೀವೆಲ್ಲರೂ ಬಂದಿಲ್ಲಾ ಒಂದು ಸಂಗತಿಯಲ್ಲಿ ಧರ್ಮಶಾಸ್ತ್ರಕ್ಕೆ ಅವಿಧೇಯರಾಗುತ್ತಿರಿ"ಎಂದು ಹೇಳಿದನು (ಯಾಕೋಬ 2:10) ಯೇಸು ಧರ್ಮಶಾಸ್ತ್ರಕ್ಕೆ ಅವಿಧೇಯನಾಗಿದ್ದಾನೆಂದು ಅವರು ಸುಳ್ಳಾಗಿ ಆರೋಪಿಸುತ್ತಿದ್ದರು (ಯೋಹಾನ 5:18), ಆದರೆ ಅವನನ್ನು ಕೊಲ್ಲಲು ಪ್ರಯತ್ನಿಸುವದರ ಮೂಲಕ ಸ್ವತಃ ಅವರೇ ಧರ್ಮಶಾಸ್ತ್ರವನ್ನು ಉಲ್ಲಂಘಿಸುವವರಾಗಿದ್ದರು (ವಿಮೋಚನಕೊಂಡ 20:13).

ಸಾಮಾನ್ಯವಾಗಿ ಕಂಡುಬರುವ ಸಂಗತಿ ಏನೆಂದರೆ ಯಾರು ಸ್ವತಃ ತಪ್ಪನ್ನು ಮಾಡಿದ ಅಪರಾಧಿಗಳಾಗಿರುತ್ತಾರೋ ಅದೇ ತಪ್ಪಿಗಾಗಿ ಇನ್ನೊಬ್ಬರನ್ನು ದೂರುವದಕ್ಕೆ ಶೀಘ್ರವಾಗಿರುತ್ತಾರೆ!(ರೋಮಾ 2:1 ಮತ್ತು ವ್ಯಾಖ್ಯಾನ ನೋಡಿರಿ).

**20** ಯೇಸುವಿನ ಬೋಧನೆಯನ್ನು ಆಲಿಸಿದ ಜನರಿಗೆ ಯೆಹೂದ್ಯನಾಯಕರು ಯೇಸುವನ್ನು ಕೊಲ್ಲಬೇಕೆಂದು ಮಾಡಿದ ಹೊಂಚಿನ ಬಗ್ಗೆ ಸ್ವಲ್ಪವೂ ಗೊತ್ತಿರಲಿಲ್ಲ. ಅವರಲ್ಲಿ ಕೆಲವರು ಯೇಸುವಿಗೆ ದೆವ್ವ ಹಿಡಿದಿರಬೇಕೆಂದು ಅಂದುಕೊಂಡರು. (ಮಾರ್ಕ 3:22 ನೋಡಿರಿ).

**21** ತರುವಾಯ ಯೇಸು ಬೇತ್ಸಥಾ ಕೊಳದ ಬಳಿಯಲ್ಲಿ ತಾನು ಸ್ವಸ್ಥಮಾಡಿದ ವ್ಯಕ್ತಿಯ ಬಗ್ಗೆ ಪ್ರಸ್ತಾಪ ಮಾಡುತ್ತಾನೆ (ಯೋಹಾನ 5:2-9) ಈ ಅದ್ಭುತಕಾರ್ಯವನ್ನು ನೋಡಿ ಎಲ್ಲರೂ ಬೆರಗಾಗಿದ್ದರು. ಆದಾಗ್ಯು ಯೆಹೂದ್ಯರು ಸಬ್ಬತ್ ದಿನದಲ್ಲಿ ಯೇಸು ಆ ವ್ಯಕ್ತಿಯನ್ನು ಸ್ವಸ್ಥಮಾಡಿದ ಎಂಬ ಕಾರಣಕ್ಕಾಗಿ ವಿರೋಧಿಸಿದರು (ಯೋಹಾನ 5:16).

**22-23** ಆದರೆ ಯೆಹೂದ್ಯರು ದೇವರ ಆಜ್ಞೆಗೆ ಅನುಸಾರವಾಗಿ ಗಂಡುಮಕ್ಕಳಿಗೆ ಸಬ್ಬತ್ ದಿನದಲ್ಲಿ ಸುನ್ನತಿ 59 ಮಾಡಿಸುತ್ತಿದ್ದರು. (ಆದಿಕಾಂಡ 17:9-12). ಹಾಗಾದರೆ ಯೇಸು ಒಬ್ಬ ವ್ಯಕ್ತಿಯನ್ನು ಸಬ್ಬತ್ ದಿನದಲ್ಲಿ ಸ್ವಸ್ಥಮಾಡಬಾರದೇಕೆ? ದೇವರು ಯೆಹೂದ್ಯರಿಗೆ ಅವರ ಗಂಡುಮಕ್ಕಳಿಗೆ ಸುನ್ನತಿಮಾಡಬೇಕೆಂದು ಆಜ್ಞಾಪಿಸುವದು ಮಾತ್ರವಲ್ಲದೆ ಅವರ ನೆರೆಯವರಿಗೆ ಒಳ್ಳೆಯದನ್ನು ಮತ್ತು ದಯೆ ತೋರಿಸಬೇಕು ಎಂಬವು ಗಳೆರಡೂ ಸಹ ಧರ್ಮ ಶಾಸ್ತ್ರದಲ್ಲಿ ಬರೆಯಲ್ಪಟ್ಟ ದೇವರ ಆಜ್ಞೆಗಳಾಗಿವೆ. ಆದುದರಿಂದ, ಸುನ್ನತಿ ಮಾಡಿಸುವದು ಮಾತ್ರವೇ ಅಲ್ಲದೆ ಎರಡೂ ಆಜ್ಞೆಗಳು ಸಹ ಸಬ್ಬತ್ ದಿನದಲ್ಲಿ ಕೈಕೊಂಡು ನಡೆಯಲ್ಪಡಬೇಕು.

ಅಷ್ಟು ಮಾತ್ರವಲ್ಲದೆ ಸುನ್ನತಿ ಮಾಡಿಸಬೇಕೆಂಬ ಆಜ್ಞೆಯು ದೇಹದ ಒಂದು ಭಾಗವನ್ನು ಮಾತ್ರವೇ ಒಳಗೊಂಡಿದೆ. ಆದರೆ ಒಬ್ಬನ ನೆರೆಯವನನ್ನು ಪ್ರೀತಿಸಿ ಅವನಿಗೆ ಕರುಣೆ ತೋರುವದು ಆತನ ಇಡೀ ದೇಹವನ್ನು ಒಳಗೊಂಡಿರುತ್ತದೆ.ಯೇಸು ಜನರ ಇಡೀ ದೇಹವನ್ನು ಸ್ವಸ್ಥಮಾಡಿದನು, ಮತ್ತು ಆತನು ಅವರ ಆತ್ಮಗಳನ್ನು ಸಹ ಸ್ವಸ್ಥಮಾಡಿದನು. ಒಂದು ವೇಳೆ ಸಬ್ಬತ್ ದಿನದಲ್ಲಿ ದೇಹದ ಒಂದು ಭಾಗಕ್ಕೆ ಸಂಬಂಧಿಸಿದ ಸುನ್ನತಿಯ ಸಂಸ್ಕಾರವನ್ನು ನಡೆಸುವದು ಸರಿಯಾದದ್ದಾಗಿರುವದಾದರೆ ಅದೇ ಸಬ್ಬತ್ ದಿನದಲ್ಲಿ ಇಡೀ ದೇಹವನ್ನು ಸ್ವಸ್ಥಮಾಡುವದು ಖಂಡಿತವಾಗಿಯೂ ನ್ಯಾಯವಾದದ್ದೇ ಆಗಿದೆ (ಮಾರ್ಕ 3:1-5, ಲೂಕ 13:10-16, 14:1-6, ಯೋಹಾನ 5:10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**24** ಬಳಿಕ ಯೇಸು ಯೆಹೂದ್ಯರ ಕೇವಲ ಬಹಿರಂಗದ ಆಚಾರಕ್ಕಾಗಿ ಅವರನ್ನು ಗದರಿಸುತ್ತಾನೆ. ಅವರು ಕೇವಲ ಮನುಷ್ಯರ ದೃಷ್ಟಿಯಲ್ಲಿ ನೀತಿವಂತರಾಗಿ ಕಾಣಿಸಿಕೊಳ್ಳಲು ಚಿಂತಿಸುತ್ತಿದ್ದರು. ಅವರು ಕರುಣೆಯನ್ನು ತೋರಿಸುವಂತಹ ಹೆಚ್ಚು ಪ್ರಾಮುಖ್ಯವಾದ ಆಜ್ಞೆಗಳನ್ನು ಅಲಕ್ಷಿಸಿದರು (ಮತ್ತಾಯ 23:23-28 ಮತ್ತು ವ್ಯಾಖ್ಯಾನ ನೋಡಿರಿ). ಅವರು ಕೇವಲ ಹೊರಗಿನ ತೋರಿಕೆಯ ಪ್ರಕಾರವಾಗಿ ತೀರ್ಪುಮಾಡಿದರು. ಹೊರತು ಮಾನವನ ಹೃದಯದ ಪ್ರಕಾರವಾಗಿ ಅಲ್ಲ, ಆದುದರಿಂದ ಅವರ ತೀರ್ಪು ನ್ಯಾಯವಾದದ್ದಾಗಿರಲಿಲ್ಲ. ಅವರ ತೀರ್ಪುಗಳು ದೇವರ ತೀರ್ಪುಗಳಿಗನುಸಾರವಾಗಿ ಇರಲಿಲ್ಲ, ಯಾಕೆಂದರೆ ದೇವರು ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುವವನಾಗಿದ್ದಾನೆ (1 ಸಮುವೇಲ 16:7).

## ಯೇಸುವು ಕ್ರಿಸ್ತನೋ? (7:25-44)

**25-26** ಯೆಹೂದ್ಯನಾಯಕರು ಯೇಸುವನ್ನು ಕೊಲ್ಲಲು ಪ್ರಯತ್ನಿಸುತ್ತಿರುವರೆಂದು ಜನರ ಗುಂಪಿನಲ್ಲಿ ಕೆಲವರಿಗೆ ಗೊತ್ತಿತ್ತು. ಆದುದರಿಂದ ಯೇಸು ದೇವಾಲಯದಲ್ಲಿ ಮುಕ್ತವಾಗಿ ಬೋಧಿಸುತ್ತಿರುವದನ್ನು ಅವರು ನೋಡಿದಾಗ ಬಹುಶಃ ಯೆಹೂದ್ಯನಾಯಕರು ಯೇಸುವಿನ ಬಗ್ಗೆ ತಮ್ಮ ಮನಸ್ಸನ್ನು ಬದಲಾಯಿಸಿಕೊಂಡಿರಬೇಕೆಂದು ಅಂದುಕೊಂಡರು. ಇಲ್ಲವಾದರೆ ಅವರು ಆತನನ್ನು ಬಂಧಿಸಿರಬಹುದಿತ್ತು. ಬಹುಶಃ ಯೇಸು ಮೆಸ್ಸಿಯನೂ, ಕ್ರಿಸ್ತನೂ ಆಗಿರಬೇಕೆಂದು ಯೆಹೂದ್ಯನಾಯಕರು ತೀರ್ಮಾನಿಸಿಕೊಂಡಿರಬೇಕು.

**27** ಆದರೆ ಕೆಲವರು "ಇಲ್ಲ, ಯೇಸುವು ಕ್ರಿಸ್ತನಾಗಿರಲು ಸಾಧ್ಯವಿಲ್ಲ, ನಿಜವಾದ ಕ್ರಿಸ್ತನು ಬರುವಾಗ ಅವನು ಎಲ್ಲಿಯವನೋ[60]. ಒಬ್ಬರಿಗೂ ತಿಳಿಯುವದಿಲ್ಲ. ಆದರೆ ಈ ಯೇಸು ನಜರೇತಿನ ಯೋಸೇಫ ಮತ್ತು ಮರಿಯಳರ ಮಗನೆಂದು ನಾವು ಬಲ್ಲೆವು, ಆದ್ದರಿಂದ ಆತನು ಕ್ರಿಸ್ತನಾಗಿರಲಾರನು" ಎಂದು ಹೇಳಿದರು.

**28-29** ಯೇಸು ಆ ಜನರಿಗೆ "ಹೌದು, ನೀವು ನನ್ನ ಹೆಸರು ಮತ್ತು ಊರನ್ನು ಬಲ್ಲಿರಿ. ಆದರೆ ನನ್ನ ನಿಜವಾದ ತಂದೆಯಾರೆಂಬದು ನಿಮಗೆ ಗೊತ್ತಿರುವದಿಲ್ಲ. ನಾನು ನಿಜವಾಗಿಯೂ ಎಲ್ಲಿಂದ ಬಂದಿರುವೆನೆಂದು ನಿಮಗೆ ತಿಳಿಯದು. ನಾನು ದೇವರ ಕಡೆಯಿಂದ ಬಂದವನು. ನಾನು ನನ್ನಷ್ಟಕ್ಕೆ ಬಂದವನಲ್ಲ (ಯೋಹಾನ 6:38). ನೀವು ದೇವರನ್ನು ತಿಳಿದವರಲ್ಲ ಆದರೆ ನಾನು ಆತನ ಕಡೆಯಿಂದ ಬಂದವನಾದ್ದರಿಂದ ಆತನನ್ನು ಬಲ್ಲೆನು" ಎಂದು ಹೇಳಿದನು (ಯೋಹಾನ 6:46 ನೋಡಿರಿ). ಯೇಹೂದ್ಯರು ದೇವರನ್ನು ತಿಳಿಯದಿದ್ದದರಿಂದ ಯೇಸು ಎಲ್ಲಿಯವನೆಂದು ಅವರಿಗೆ ಗೊತ್ತಿರಲಿಲ್ಲ.

**30** ಆಗ ಯೆಹೂದ್ಯರು ಯೇಸುವನ್ನು ಹಿಡಿಯುವದಕ್ಕೆ ಪ್ರಯತ್ನಿಸಿದರು. ಆದರೆ ಆವರಿಗೆ ಆಗಲಿಲ್ಲ (ವಚನ 44 ನೋಡಿರಿ). ಅವರು ಯೇಸುವನ್ನು ಬಂಧಿಸಲು ಹೇಗೆ ತಡೆಯಲ್ಪಟ್ಟರೆಂಬದನ್ನು ಯೋಹಾನನು ವಿವರಿಸುವದಿಲ್ಲ ಆದರೆ ಅವರು ಏಕೆ ಬಂಧಿಸಲಾಗಲಿಲ್ಲ ಎಂಬದಕ್ಕೆ ಕಾರಣವನ್ನು ಮಾತ್ರ ಕೊಡುತ್ತಾನೆ: ಆತನು ಸಾಯಬೇಕಾದ ಸಮಯ ಇನ್ನೂ ಬಂದಿರಲಿಲ್ಲ. ಆತನ ಕಾಲವು ಇನ್ನೂ ಬಂದಿರಲಿಲ್ಲ. ದುಷ್ಟ ಜನರು ದೇವರ ಯೋಜನೆಯನ್ನು ಬದಲಾಯಿಸಲು ಸಾಧ್ಯವಿಲ್ಲ.

**31** ಆದರೆ ಜನರ ಗುಂಪಿನಲ್ಲಿ ಕೆಲವರು ಯೇಸು ಮಾಡಿದ ಅದ್ಭುತಕರವಾದ ಸೂಚಕಕಾರ್ಯಗಳ ಕಾರಣದಿಂದಾಗಿ ಆತನಲ್ಲಿ ನಂಬಿಕೆಯಿಟ್ಟರು. (ಯೋಹಾನ 2:23-24 ಮತ್ತು ವ್ಯಾಖ್ಯಾನ ನೋಡಿರಿ). ಸೂಚಕಕಾರ್ಯಗಳ ಮೇಲೆ ಆಧಾರವಾದ ಅಂತಹ ನಂಬಿಕೆ ಸಾಮಾನ್ಯವಾಗಿ ಬಲಹೀನವಾಗಿರುತ್ತದೆ. ಆದರೆ ಅದು ನಿಜವಾದ ನಂಬಿಕೆಯ ಒಂದು ಪ್ರಾರಂಭವು ಸಹ ಆಗಿರ ಬಲ್ಲದು. ಕ್ರಿಸ್ತನು ಅಂತಹ ನಂಬಿಕೆಯನ್ನು ತಿರಸ್ಕರಿಸುವದಿಲ್ಲ. ನಂಬದೆ ಇರುವದಕ್ಕಿಂತಲೂ ಸೂಚಕಕಾರ್ಯಗಳ ಕಾರಣದಿಂದಾಗಿ ನಂಬುವದು ಉತ್ತಮವಾದದ್ದಷ್ಟೇ!

**32** ಜನರ ಗುಂಪಿನಲ್ಲಿ ಅನೇಕರು ಯೇಸುವಿನಲ್ಲಿ ನಂಬಿಕೆಯಿಟ್ಟರೆಂದು ಫರಿಸಾಯರು ಕೇಳಿ ಮತ್ತಷ್ಟು ಬೇಸರಗೊಂಡರು. ಜನರು ಯೇಸುವನ್ನು ಹೆಚ್ಚು ಗೌರವಿಸಲು ಪ್ರಾರಂಭಿಸಿದಂತೆ ಅವರು ಫರಿಸಾಯರು ಮತ್ತು ಇತರ ಯೆಹೂದ್ಯನಾಯಕರನ್ನು ಗೌರವಿಸುವದು ಕಡಿಮೆಯಾಗುತ್ತದೆ. ಫರಿಸಾಯರು ಮಹಾಯಾಜಕರೊಂದಿಗೆ[61] ಸೇರಿ ಯೇಸುವನ್ನು ಬಂಧಿಸಲು ಓಲೇಕಾರರನ್ನು (ದೇವಾಲಯದ ಆರಕ್ಷಕರನ್ನು) ಕಳುಹಿಸಿದರು.

**33** ಯೇಸು ತನ್ನನ್ನು ಬಂಧಿಸುವ ಹೊಂಚಿನ ಬಗ್ಗೆ ಚಿಂತಿಸಲಿಲ್ಲ. ಆತನು ಅದರ ಕುರಿತು ತಿಳಿದಿದ್ದನು. ಯೇಸು ಯೆಹೂದ್ಯರಿಗೆ "ಇನ್ನು ಸ್ವಲ್ಪಕಾಲ ನಾನು ನಿಮ್ಮಲ್ಲಿ ಇರುತ್ತೇನೆ. ನೀವು ಏನೇ ಮಾಡಿದರೂ ಆ ಸಮಯವನ್ನು ಬದಲಾಯಿಸಲಾಗದು. ನಾನು ದೇವರ ಕೈಗಳಲ್ಲಿದ್ದೇನೆ. ನಾನು ಬೇಗನೆ ಆತನ ಬಳಿಗೆ ಹೋಗುವೆನು" ಎಂದು ಹೇಳಿದನು.

**34** ಯೇಸು ಅವರಿಗೆ "ನಾನು ಹೊರಟು ಹೋದಮೇಲೆ ನೀವು ನನ್ನನ್ನು ಹುಡುಕುವಿರಿ. ಆದರೆ ನನ್ನನ್ನು ಕಂಡು ಕೊಳ್ಳದೆ ಹೋಗುವಿರಿ" ಎಂದನು. ಯೇಸು ಹೋದ ಮೇಲೆ ಆತನ ಹಿಂಸಕರಿಗೆ ಆತನನ್ನು ಹಿಂಸಿಸಲು ಅವಕಾಶವಿರುವದಿಲ್ಲ. ಅವರು ಸ್ವತಃ ಪರಲೋಕವನ್ನು ಪ್ರವೇಶಿಸಲೂ ಸಾದ್ಯವಿಲ್ಲ. ಯೇಸುವಿನ ವೈರಿಗಳಿಗಾಗಿ ಬಾಗಿಲು ಮುಚ್ಚಲ್ಪಡುವದು (ಯೋಹಾನ 8:21 ನೋಡಿರಿ).

**35-36** ಯಥಾಃ ಪ್ರಕಾರದಂತೆ ಯೆಹೂದ್ಯರು ಯೇಸುವಿನ ಅರ್ಥವನ್ನು ಗ್ರಹಿಸಿಕೊಳ್ಳಲಿಲ್ಲ. ಆತನು ತನ್ನ ಮರಣ ಮತ್ತು ತನ್ನ ಪರಲೋಕಾರೋಹಣದ ಕುರಿತಾಗಿ ಮಾತಾಡುತ್ತಿದ್ದಾನೆಂಬದನ್ನು ಅವರು ಅರ್ಥಮಾಡಿಕೊಳ್ಳಲಿಲ್ಲ. ಆತನು ಗ್ರೀಕರ [62] ಬಳಿಗೆ ಅಂದರೆ ಅನೇಕ ಯೆಹೂದ್ಯರು ಸಹ ವಾಸಿಸಿದ ಇತರ ಅನ್ಯದೇಶಗಳೆಡೆಗೆ ಹೋಗುವನೆಂದು ಅವರು ಯೋಚಿಸಿಕೊಂಡರು.

**37** ಜಾತ್ರೆಯ ಕಡೇ ದಿವಸದಲ್ಲಿ ಯೇಸು ನಿಂತುಕೊಂಡು ಜನರಿಗೆ ಒಂದು ಅಸ್ವಾಭಾವಿಕ ಆಮಂತ್ರಣವನ್ನು ನೀಡಿದನುಃ "ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ " ಯೇಸು ಜೀವಕರವಾದ ನೀರನ್ನು ಹೊಂದಿದ್ದು ಆತನ ಬಳಿಗೆ ಬರುವವರಿಗೆ ಕೊಡುವನು. (ಯೋಹಾನ 4:10,14, 1 ಕೊರಿಂಥ 10:4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಆದರೆ ಆ "ಜೀವಕರವಾದ ನೀರನ್ನು" ಪಡೆಯಬೇಕಾದರೇ ನಾವು ಮೊದಲು ಅದಕ್ಕಾಗಿ ದಾಹ ವು ಳ್ಳವರಾಗಿರಬೇಕು (ಮತ್ತಾಯ 5:6 ಮತ್ತು ವ್ಯಾಖ್ಯಾನ ನೋಡಿರಿ). ನಾವು ದೇವರನ್ನು ಹುಡುಕದಿರುವದಾದರೆ ಆತನನ್ನು ಕಂಡುಕೊಳ್ಳಲಾರೆವು (ಯೆರೆಮಿಯ 29:13, ಮತ್ತಾಯ 7:7-8). ನಾವು ನೀತಿಗಾಗಿಯೂ, ಆತ್ಮೀಕ ಜೀವಿತಕ್ಕಾಗಿಯೂ ದಾಹವುಳ್ಳವರಾಗಿಲ್ಲವಾದರೆ ನಾವು ತೃಪ್ತಿಗೊಳಿಸಲ್ಪಡುವದಿಲ್ಲ. ಕ್ರಿಸ್ತನಿಂದ ಕುಡಿಯುವದೆಂದರೆ ಆತನಲ್ಲಿ ನಂಬಿಕೆಯಿಟ್ಟು ಆತನಿಂದ ನೂತನ ಆತ್ಮೀಕ ಜೀವವನ್ನು ಪಡೆದುಕೊಳ್ಳುವದಾಗಿದೆ. ಇಲ್ಲಿ ಯೇಸು ಹಳೆ ಒಡಂಬಡಿಕೆಯಿಂದ ಬೋಧಿಸುತ್ತಾ ನಾವು ಈ ಜೀವಕರವಾದ ನೀರನ್ನು ಪಡೆದ ನಂತರ ಅದು ನಮ್ಮೊಳಗಿಂದ ಇತರರಿಗೆ ಹರಿದು ಹೋಗುವದು (ಯೇಶಾಯ 58:11, ಜಕರ್ಯ 14:8).

ನಾವು ಕೊಳವೆಗಳಂತೆ ಇದ್ದೇವೆ. ಒಳಗೆ ಎಷ್ಟೆಲ್ಲಾ ನೀರು ಹರಿಯುತ್ತದೋ ಅಷ್ಟೇ ನೀರು ಹೊರ ಹರಿಯುತ್ತದೆ., ನಾವು ಎಷ್ಟು ಹೆಚ್ಚಾಗಿ ಕ್ರಿಸ್ತನ ಬಳಿಗೆ ಬಂದು ಕುಡಿಯುತ್ತೇವೋ ಅಷ್ಟು ಹೆಚ್ಚು ಆಶಿರ್ವಾದಗಳು ಇತರರಿಗೆ ನೀಡಲು ನಮ್ಮಲ್ಲಿರುತ್ತವೆ. ಆದರೆ ಕ್ರಿಸ್ತನ ಆಶಿರ್ವಾದಗಳು ನಮ್ಮಿಂದ ಇತರರಿಗೆ ಹರಿಯಲು ನಾವು ಅನುಮತಿಸದೆ ಹೋಗುವದಾದರೆ ಇನ್ನಾವ ಆಶೀರ್ವಾದಗಳು ನಮ್ಮ ಜೀವಿತದೊಳಗೆ ಹರಿಯಲಾರವು . ಇತರರಿಗೆ ಹೆಚ್ಚು ಆಶಿರ್ವಾದಗಳನ್ನು ನೀಡುವವನು ಹೆಚ್ಚು ಆಶಿರ್ವಾದಗಳನ್ನು ಪಡೆಯುವನು (ಜ್ಞಾನೋಕ್ತಿ 11:24-25). ನಮ್ಮ ಸುತ್ತಲಿನ ಪ್ರಪಂಚವು ಆತ್ಮೀಕವಾಗಿ ಮರುಭೂಮಿಯಂತಿದೆ. ಅದು ಒಣಗಿ ಹೋಗಿ ಆತ್ಮೀಕ ಜೀವವಿಲ್ಲದ್ದಾಗಿದೆ. ಮರಭೂಮಿಯಲ್ಲಿ ಜೀವವು ಉತ್ಪತ್ತಿಯಾಗಬೇಕಾದರೆ ನೀರು ಅವಶ್ಯಕ ಮತ್ತು ಆ ನೀರು ಕ್ರಿಸ್ತನ ಶಿಷ್ಯರಿಂದ, ಕ್ರಿಸ್ತನ ಸಭೆಯಿಂದ ಬರತಕ್ಕದ್ದು. ನೀರಿನ ಹನಿಗಳು ಸಾಕಾಗುವದಿಲ್ಲ. ನೀರಿನ ಸಣ್ಣ ತೊಟ್ಟಿಕ್ಕುವಿಕೆಗಳು ಸಾಲವು . ಲೋಕಕ್ಕೆ ಜೀವಕರವಾದ ನೀರಿನ ಬುಗ್ಗೆಗಳು, ನದಿಗಳ ಅಗತ್ಯವಿದೆ (ಯೆಶಾಯ 44:3, ಯೋವೇಲ 3:18).

**39** ಜೀವಕರವಾದ ನೀರು ಪವಿತ್ರಾತ್ಮನೇ ಎಂಬದಾಗಿ ಯೇಸು ಇಲ್ಲಿ ತಿಳಿಸುತ್ತಾನೆ. ನಾವು ನಂಬಿಕೆಯಿಂದ ಕ್ರಿಸ್ತನ ಬಳಿಗೆ ಬರುವಾಗ ಆತನು ನಮಗೆ ಪವಿತ್ರಾತ್ಮನನ್ನು ಅನುಗ್ರಹಿಸುತ್ತಾನೆ. ಪವಿತ್ರಾತ್ಮನು ದೇವರ ಆತ್ಮ ಮತ್ತು ಕ್ರಿಸ್ತನ ಆತ್ಮಗಳೆರಡೂ ಆಗಿದ್ದಾನೆ. ನಾವು ತಂದೆಯಾದ ದೇವರನ್ನು ಹಾಗು ಮಗನಾದ ಯೇಸುವನ್ನು ನಾವು ನಮ್ಮ ದೈಹಿಕ ಕಣ್ಣುಗಳಿಂದ ನೋಡಲಾಗುವದಿಲ್ಲ ಆದರೆ ಅವರು ಪವಿತ್ರಾತ್ಮನ ರೂಪದಲ್ಲಿ ನಮ್ಮೊಳಗೆ ಪ್ರಸನ್ನನಾಗಿರುವದರಿಂದ ನಾವು ಅವರನ್ನು ತಿಳಿಯಬಹುದು ಮತ್ತು ಅನ್ಯೋನ್ಯತೆ ಹೊಂದಬಹುದು. ತಂದೆಯಾದ ದೇವರು, ಮಗನಾದ ದೇವರು ಮತ್ತು ಪವಿತ್ರಾತ್ಮನಾದ ದೇವರು ಎಲ್ಲರೂ ಒಬ್ಬನೇ ದೇವರಾಗಿದ್ದಾರೆ. ಅವರು ಒಬ್ಬನೇ ದೇವರು ಮೂರು ರೂಪಗಳು (ಅಥವಾ ಅಸ್ತಿತ್ವದ ರೀತಿಗಳು) ಆಗಿವೆ.

ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವಾಗ ದೇವರು ಮತ್ತು ಕ್ರಿಸ್ತನು ಇಬ್ಬರೂ ನಮಗೆ ಜೀವಕರವಾದ ನೀರನ್ನು ಅಂದರೆ ಪವಿತ್ರಾತ್ಮನನ್ನು ಕೊಡುತ್ತಾರೆ (ಯೋಹಾನ 14:16, 26, 15:26, 16:13 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆದರೆ ಯೇಸು ಭೂಮಿಯ ಮೇಲಿರುವಾಗ ಪವಿತ್ರಾತ್ಮನು ಇನ್ನೂ ಪೂರ್ತಿಯಾಗಿ ಕೊಡಲ್ಪಟ್ಟಿರಲಿಲ್ಲ. ಹಳೆ ಒಡಂಬಡಿಕೆಯ ಪ್ರವಾದಿಗಳು ವಿಶೇಷ ಕಾರ್ಯಕ್ಕಾಗಿ) ಕಾಲಕಾಲಕ್ಕೆ ಪವಿತ್ರಾತ್ಮನನ್ನು ಸ್ವೀಕರಿಸಿದ್ದರು, ಆದರೆ ಪವಿತ್ರಾತ್ಮನು ನಿರಂತರವಾಗಿ ಅವರಲ್ಲಿ ವಾಸವಾಗಿರಲಿಲ್ಲ. ಕ್ರಿಸ್ತನು ಮಹಿಮೆಹೊಂದಿದ ನಂತರವಷ್ಟೇ ಪವಿತ್ರಾತ್ಮನು ಒಂದು ಶಾಶ್ವತ ವರವಾಗಿ ಸ್ತ್ರೀಪುರುಷರಿಗೆ ಕೊಡಲ್ಪಟ್ಟನು (ಯೋಹಾನ 16:7, 20:22 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).ಮತ್ತು ಕ್ರಿಸ್ತನು ಪರಲೋಕಕ್ಕೆ ಏರಿ ಹೋದಮೇಲೆ ಮಾತ್ರವೇ ಪವಿತ್ರಾತ್ಮನು ಅಪೊಸ್ತಲರ ಜೀವಿತಗಳನ್ನು ತುಂಬಿಸಿ ಕ್ರಿಸ್ತನಿಗಾಗಿ ಸಾಕ್ಷಿಗಳಿಗಾಗಿ ಬಲವನ್ನು ಕೊಟ್ಟನು (ಅ.ಕೃತ್ಯ 1:8-9, 2:1-4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಎಲ್ಲಾ ವಿಶ್ವಾಸಿಗಳು ಸಂಪೂರ್ಣವಾಗಿ ವವಿತ್ರಾತ್ಮನ ಮೇಲೆ ಆತು ಕೊಂಡಿರುವರು. ನಾವು ಕ್ರಿಸ್ತನಿಗಾಗಿ ಮಾಡುವದೆಲ್ಲವನ್ನು ಪವಿತ್ರಾತ್ಮನ ಬಲದ ಮೂಲಕವೇ ಮಾಡುತ್ತೇವೆ. ನಾವು ಒಂದು ಗಳಿಗೆಯಾದರೂ ಸಹ ಪವಿತ್ರಾತ್ಮನ ಅನುಗ್ರಹವಿಲ್ಲದೆ ಕ್ರೈಸ್ತೀಯ ಜೀವಿತವನ್ನು ಜೀವಿಸಲಾಗದು. ನಮ್ಮ ದೇಹಗಳಿಗೆ ಹೇಗೆ ನಿರಂತರವಾಗಿ ನೀರಿನ ಅಗತ್ಯವಿದೆಯೋ ಹಾಗೆಯೇ ನಮ್ಮ ಆತ್ಮಗಳಿಗೆ ನಿರಂತರವಾಗಿ ಪವಿತ್ರಾತ್ಮನ ಅಗತ್ಯತೆಯಿರುತ್ತದೆ.

**40** ಜನರು ಯೇಸುವಿನ ಮಾತುಗಳನ್ನು ಕೇಳಿದ ಮೇಲೆ ಧರ್ಮೋಪದೇಶಕಾಂಡ 18:15ರಲ್ಲಿ ಮೋಶೆಯು ಯಾವ ಪ್ರವಾದಿಯ ಕುರಿತಾಗಿ ಬರೆದನೋ ಆ ಪ್ರವಾದಿಯು ಈತನೇ ಎಂದು ಯೋಚಿಸಿಕೊಂಡರು, (ಯೋಹಾನ 1:21, 6:14 ನೋಡಿರಿ).

**41-42** ಜನರ ಗುಂಪಿನಲ್ಲಿ ಕೆಲವರು ಯೇಸುವು ಕ್ರಿಸ್ತನು, ಮೆಸ್ಸಿಯನೂ ಅಂದರೆ "ಅಭಿಷೀಕ್ತನು" [63] ಆಗಿದ್ದಾನೆಂದು ಅಂದು ಕೊಂಡರು. ಆದರೆ ಇತರರು ಅದಕ್ಕೆ ಒಪ್ಪಲಿಲ್ಲ. ಹಳೆ ಒಡಂಬಡಿಕೆಯ ಪ್ರಕಾರವಾಗಿ ಮೆಸ್ಸಿಯನು ದಾವಿದನ ವಂಶದಿಂದಲೂ ಮತ್ತು ಅರಸನಾದ ದಾವಿದನು ಜನಿಸಿದ ಬೇತ್ಲೆಹೇಮಿನೊಳಗಿಂದ ಬರಬೇಕಾಗಿತ್ತು (2ಸಮುವೇಲ 7:12-14, ಕೀರ್ತನೆಗಳು 89:3-4, ಮೀಕ 2) ಆದರೆ ಜನರು ನಿಜವಾಗಿಯೂ ಯೇಸು ದಾವಿದನ ವಂಶದವನು ಮತ್ತು ಬೇತ್ಲೆಹೇಮಿನಲ್ಲಿ ಜನಿಸಿರುವನೆಂಬದನ್ನು ಅರ್ಥಮಾಡಿಕೊಳ್ಳಲಿಲ್ಲ (ಮತ್ತಾಯ 1:1,2:1-6, ಲೂಕ 2:4-7, 11 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಯೇಸು ಗಲಿಲಾಯದಲ್ಲಿ ಹುಟ್ಟಿರುವನೆಂದು ಅವರು ಯೋಚಿಸಿಕೊಂಡರು!. ಯೇಸು ಮೆಸ್ಸಿಯನಲ್ಲವೆಂದು ನಿರೂಪಿಸುವದಕ್ಕಾಗಿ ಜನರು ಉಪಯೋಗಿಸುತ್ತಿದ್ದ ಹಳೆ ಒಡಂಬಡಿಕೆಯ ವಾಕ್ಯಭಾಗಗಳು ವಾಸ್ತವದಲ್ಲಿ ಆತನು ಮೆಸ್ಸೀಯನೆಂದೇ ನಿರೂಪಿಸುವಂತಹ ವಾಕ್ಯಭಾಗಗಳಾಗಿವೆ!.

**43** ಜನರಲ್ಲಿ ಯೇಸುವನ್ನು ಕುರಿತು ಭೇದ ಉಂಟಾಯಿತು. ಎಲ್ಲಕಾಲದಲ್ಲಿಯೂ ಯೇಸುವಿನ ವಿಷಯವಾಗಿ ಜನರಲ್ಲಿ ಭೇದಗಳಿರುತ್ತವೆ (ಮತ್ತಾಯ 10:34, ಲೂಕ 12:51 ನೋಡಿರಿ). ಕೆಲವರು ಆತನನ್ನು ಮೆಸ್ಸೀಯನೇ ಎಂದು ನಂಬಿದರೆ ಇನ್ನು ಕೆಲವರು ಆತನು ಮೆಸ್ಸಿಯನಲ್ಲ ಎಂದರು. ಪ್ರತಿಯೊಬ್ಬ ವ್ಯಕ್ತಿಯು ಯೇಸು ಯಾರು? ಎಂಬದನ್ನು ತೀರ್ಮಾನಿಸಬೇಕು.

ಆದರೆ ಯೇಸುವಿನ ಕುರಿತಾಗಿ ಕೇವಲ ಎರಡು ಮುಖ್ಯ ಅಭಿಪ್ರಾಯಗಳಿರಬಲ್ಲವು . ಆತನು ತಾನು ಹೇಳಿಕೊಂಡ ಪ್ರಕಾರವೇ ಮೆಸ್ಸಿಯನೂ, ದೇವಕುಮಾರನೂ ಆಗಿರುತ್ತಾನೆ (ಮಾರ್ಕ 14:62, ಯೋಹಾನ 4:26) ಅಥವಾ ಆತನು ಸುಳ್ಳುಗಾರನು, ಅಥವಾ ಕೆಟ್ಟ ಭ್ರಾಂತಿಗೊಳಗಾದವನು ಇಲ್ಲವೆ ದೆವ್ವ ಹಿಡಿದವನಾಗಿದ್ದಾನೆ. ಒಬ್ಬನು ಕ್ರಿಸ್ತನ ಎಲ್ಲಾ ಬೋಧನೆಗಳನ್ನು ಸ್ವೀಕರಿಸಬೇಕು ಇಲ್ಲವೆ ಯಾವದನ್ನೂ ಸ್ವೀಕರಿಸಬಾರದು.

ಒಬ್ಬ ಸುಳ್ಳುಗಾರ ಅಥವಾ ಹುಚ್ಚನು ಕ್ರಿಸ್ತನ ಹಾಗೆ ಬೋಧಿಸಿರಬಲ್ಲನೋ? ಉತ್ತರವು ಇಲ್ಲ ಎಂದಾಗಿದೆ. ಆದುದರಿಂದ ಯೇಸು ತನ್ನ ಕುರಿತಾಗಿ ಹೇಳಿದ್ದು ಸತ್ಯವಾಗಿರಬೇಕು., ಆತನು ದೇವಕುಮಾರನು ಲೋಕರಕ್ಷಕನು ಆಗಿರಬೇಕು (ಯೋಹಾನ 10:19-21) ಆದರೆ "ಆತನು ಕ್ರಿಸ್ತನು" ಎಂದು ಹೇಳುವದು ಸಾಕಾಗುವದಿಲ್ಲ (ವಚನ 41) ಅದು ಮೊದಲ ಹೆಜ್ಜೆ ಮಾತ್ರವೇ ಆಗಿದೆ. ಒಬ್ಬ ವ್ಯಕ್ತಿಯು ನಂತರ ತನ್ನ ಹೃದಯದಲ್ಲಿ ನಂಬಿ ಆತನಿಗೆ ವಿಧೇಯನಾಗಬೇಕು (ಮತ್ತಾಯ 7:21 ಮತ್ತು ವ್ಯಾಖ್ಯಾನ ನೋಡಿರಿ)

**44** ಯೆಹೂದ್ಯರೊಳಗಿನ ಯೇಸುವಿನ ವೈರಿಗಳು ಆತನನ್ನು ಹಿಡಿಯಬೇಕೆಂದಿದ್ದರು. ಆದರೆ ದೇವರು ಪುನಃ ಅವರನ್ನು ತಡೆದನು. ಯೇಸುವಿನ ಜೀವನವು ದೇವರ ಕೈಗಳಲ್ಲಿಯೂ ಮತ್ತು ದೇವರ ಹತೋಟಿಯಲ್ಲಿಯೂ ಇತ್ತು (ವಚನ 30 ಮತ್ತು ವ್ಯಾಖ್ಯಾನ ನೋಡಿರಿ).

## ಯೆಹೂದ್ಯ ನಾಯಕರ ಅವಿಶ್ವಾಸ (7:45-53)

**45** ಓಲೇಕಾರರು ಯೇಸುವನ್ನು ಬಂದಿಸಲು ಸರಿಯಾದ ಸಮಯಕ್ಕಾಗಿ ಕಾಯುತ್ತಿದ್ದರು (ವಚನ 32) ಅವರು ಜನರ ಮುಂಭಾಗದಲ್ಲಿ ಯೇಸುವನ್ನು ಬಂಧಿಸಲು ಬಯಸಲಿಲ್ಲ (ವಚನ 31). ಅವರು ಒಂದು ವೇಳೆ ಯೇಸುವನ್ನು ಎಲ್ಲರ ಎದುರಿಗೆ ಬಂದಿಸಿದರೆ ಒಂದು ದೊಡ್ಡ ಗಲಭೆಯಾಗಬಹುದು, ಮತ್ತು ಗಲಭೆಯೇನಾದರೂ ಉಂಟಾದರೆ ರೋಮಾಯ ದೇಶಾಧಿಪತಿಯು ಕೋಪಗೊಳ್ಳುತ್ತಿದ್ದನು. ಯಾಕೆಂದರೆ ಶಾಂತಿಯನ್ನು ಕಾಯ್ದುಕೊಂಡು ಹೋಗುವದು ಆತನ ಕೆಲಸವಾಗಿರುತ್ತದೆ.

**46** ಆದರೆ ಓಲೇಕಾರರು ಅಂದರೆ ದೇವಾಲಯದ ಸಿಪಾಯಿಗಳು ಯೇಸುವನ್ನು ಬಂಧಿಸಲು ಅವಕಾಶಕ್ಕಾಗಿ ಕಾಯುತ್ತಿರುವಾಗ ಆತನ ಮಾತುಗಳನ್ನು ಆಲಿಸಿದರು, ಮತ್ತು ಆತನ ಮಾತುಗಳ ಕಾರಣದಿಂದಾಗಿ ಅವರು ಆತನನ್ನು ಬಂಧಿಸಲಾಗಲಿಲ್ಲ. ಅವರು "ಈ ಮನುಷ್ಯನು ಮಾತಾಡುವ ರೀತಿಯಲ್ಲಿ ಯಾರೂ ಎಂದೂ ಮಾತಾಡಿದ್ದಿಲ್ಲ". ಎಂದು ಹೇಳಿದರು.

**47-49** ಯೆಹೂದ್ಯನಾಯಕರು ಓಲೇಕಾರರನ್ನು ಗದರಿಸಿದರು. "ನೀವೂ ಆತನಿಗೆ ಮರುಳಾದಿರಾ?"ಎಂದು ಅವರು ವ್ಯಂಗವಾಗಿ ಕೇಳಿದರು. ಯೆಹೂದ್ಯರಲ್ಲಿ ಮುಖ್ಯವಾದವರೊಳಗೆ ಒಬ್ಬರೂ ಯೇಸುವನ್ನು ಹಿಂಬಾಲಿಸುತ್ತಿಲ್ಲ ಎಂಬದನ್ನು ಅವರು ಓಲೇಕಾರರ ಗಮನಕ್ಕೆ ತಂದರು. ಕೇವಲ ಅಜ್ಞಾನಿಗಳಾದವರು ಮಾತ್ರವೇ ಆತನನ್ನು ಹಿಂಬಾಲಿಸುತ್ತಿದ್ದಾರೆ. ಆ ಜನರಿಗೆ ಧರ್ಮಶಾಸ್ತ್ರದ ವಿಷಯದಲ್ಲಿ ಒಂದು ಉತ್ತಮವಾದ ತಿಳಿವಳಿಕೆಯು ಇರುವದಿಲ್ಲ. ಅವರು ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯಲಿಲ್ಲ. ಅವರು ಪಾಪಿಗಳಾಗಿದ್ದರು".. ಧರ್ಮಶಾಸ್ತ್ರವನ್ನರಿಯದಂಥ ಈ ಹಿಂಡು ಶಾಪಗ್ರಸ್ತವಾದದ್ದೇ" ಎಂದು ಯೆಹೂದ್ಯನಾಯಕರು ಹೇಳಿದರು (ವಚನ 49) ಹಳೆ ಒಡಂಬಡಿಕೆಯಲ್ಲಿ "ಈ ಧರ್ಮಶಾಸ್ತ್ರ ವಾಕ್ಯಗಳಿಗೆ ಒಡಂಬಟ್ಟು ಕೈಕೊಳ್ಳದೆ ಇರುವವನು ಶಾಪಗ್ರಸ್ತ" (ಧರ್ಮೋಪದೇಶಕಾಂಡ 27:26) ಎಂದು ಬರೆಯಟ್ಟಿರುವದರಿಂದ ಅವರು ಈ ರೀತಿಯಾಗಿ ಹೇಳಿದರು. ಯೆಹೂದ್ಯನಾಯಕರು ಗರ್ವಿಷ್ಠರಾಗಿದ್ದರು. ಅವರು ಸಾಮಾನ್ಯಜನರನ್ನು ಉದಾಸೀನ ಮಾಡುತ್ತಿದ್ದರು. ಆದರೆ ವಾಸ್ತವದಲ್ಲಿ ಸಾಮಾನ್ಯ ಜನರು ಯೆಹೂದ್ಯನಾಯಕರಲ್ಲಿ ಹೆಚ್ಚು ಪಾಲು ಜನರಿಗಿಂತಲೂ ಉತ್ತಮವಾಗಿ ಧರ್ಮಶಾಸ್ತ್ರದ ಅರ್ಥವನ್ನು ಮತ್ತು ತಾತ್ಪರ್ಯವನ್ನು ಕೈಕೊಂಡು ನಡೆಯುತ್ತಿದ್ದರು.

**50-51** ಹೇಗಿದ್ದರೂ, ಯೇಸುವನ್ನು ರಹಷ್ಯವಾಗಿ ವಿಶ್ವಾಸಿಸುತ್ತಿದ್ದ ಕೆಲವು ಯೆಹೂದ್ಯನಾಯಕರು ಇದ್ದರು (ಯೋಹಾನ 12:42-43) ಅವರಲ್ಲಿ ಫರಿಸಾಯನು ಮತ್ತು ಹಿರೀ ಸಭೆಯ ಸಧಸ್ಯನೂ ಆದ ನಿಕೊದೇಮನು ಒಬ್ಬನಾಗಿದ್ದನು. (ಯೋಹಾನ 3:1, 19:39).

ನಿಕೊದೇಮನು ಯೆಹೂದ್ಯನಾಯಕರಿಗೆ – ಧರ್ಮಶಾಸ್ತ್ರದ ಪ್ರಕಾರವಾಗಿ ಒಬ್ಬನನ್ನು ನ್ಯಾಯವಾಗಿ ವಿಚಾರಿಸದೆಯೇ ತಿರ್ಪು ಮಾಡಬಾರದು, ಎಂದು ಹೇಳಿದನು, ಯೆಹೂದ್ಯನಾಯಕರು ಧರ್ಮಶಾಸ್ತ್ರಕ್ಕೆ ಕಿವಿಗೊಡಲಿಲ್ಲ ಎಂದು ಜನರ ಗುಂಪನ್ನು ತೀರ್ಪಿಗೊಳಪಡಿಸಿದ್ದರು. ಈಗ ಸ್ವತಃ ಅವರೇ ಧರ್ಮಶಾಸ್ತ್ರಕ್ಕೆ ಕಿವಿಗೊಡದವರಾಗಿದ್ದಾರೆ. ಅವರು ಯೇಸುವನ್ನು ಧರ್ಮ ಶಾಸ್ತ್ರಕ್ಕೆ ಅವಿಧೇಯನೆಂದು ಕರೆದರು. ಆದರೆ ಯೇಸುವನ್ನು ದಂಡಿಸಬೇಕೆಂಬ ಪ್ರಯತ್ನದಲ್ಲಿ ಸ್ವತಃ ಅವರೇ ಧರ್ಮಶಾಸ್ತ್ರವನ್ನು ಉಲ್ಲಂಘಿಸುವವರಾಗಿದ್ದರು.

**52-53** ಇತರ ಯೆಹೂದ್ಯನಾಯಕರು ನಿಕೊದೇಮನಿಗೆ ಹಾಸ್ಯ ಮಾಡಿದರು. ನೀನೂ ಗಲಿಲಾಯದವನೋ? ಎಂದು ಆತನನ್ನು ಕೇಳಿದರು. ಅಂದರೆ ನೀನೂ ಸಹ ಆತನ ಹಿಂಬಾಲಕರಲ್ಲೊಬ್ಬನೋ? ಎಂಬ ಅರ್ಥದಲ್ಲಿ ಕೇಳಿದರು. ಬಳಿಕ ಯೆಹೂದ್ಯರು ಯಾವ ಪ್ರವಾದಿಯೂ ಗಲಿಲಾಯದಿಂದ ಬಂದಿರುವದಿಲ್ಲ ಎಂದು ಹೇಳಿದರು. ಆದರೆ ಈ ವಿಷಯದಲ್ಲಿ ಅವರ ಎಣಿಕೆ ತಪ್ಪಾಗಿತ್ತು ಪ್ರವಾದಿಯಾದ ಯೋನನು ಗಲಿಲಾಯದವನಾಗಿದ್ದನು (2 ಅರಸು 14:25), ಮತ್ತು ಬಹುಶ: ಇತರ ಕೆಲವು ಪ್ರವಾದಿಗಳು ಸಹ ಗಲಿಲಾಯದಿಂದ ಬಂದವರಾಗಿದ್ದರು. ದೇವರು ಯಾವ ಸ್ಥಳದಿಂದಾದರೂ ಪ್ರವಾದಿಗಳನ್ನು ಎಬ್ಬಿಸಬಲ್ಲನು.

---

## ಅಧ್ಯಾಯ - 8

### ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಒಬ್ಬ ಹೆಂಗಸು (8:11)

**1** ಯೇಸು ದೇವಾಲಯದಲ್ಲಿ ಬೋಧಿಸುವದನ್ನು ಮುಗಿಸಿದ ಬಳಿಕ ಆ ರಾತ್ರಿಗಾಗಿ ಯೆರೂಸಲೇಮ ಬಳಿಯ ಎಣ್ಣೇಮರಗಳ ಗುಡ್ಡಕ್ಕೆಹೋದನು. ಆತನು ಯೆರೂಲೇಮಿನಲ್ಲಿರುವಾಗ ಇದು ಆತನ ಸಹಜ ಪದ್ಧತಿಯಾಗಿತ್ತು (ಲೂಕ 21:37)[64].

**2-6** ಮರುದಿನ ಯೆಹೂದ್ಯನಾಯಕರು ವ್ಯಭಿಚಾರದಲ್ಲಿ ಸಿಕ್ಕಿದ ಒಬ್ಬ ಹೆಂಗಸನ್ನು ಯೇಸುವಿನ ಬಳಿಗೆ ಕರೆತಂದರು. ಯೆಹೂದಿಯ ಧರ್ಮಶಾಸ್ತ್ರದ ಪ್ರಕಾರವಾಗಿ ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಪು ರುಷ ಮತ್ತು ಸ್ತ್ರೀ ಇಬ್ಬರಿಗೂ ದಂಡನೆಯಾಗಬೇಕೆಂದು ಮೋಶೆಯು – ಆಜ್ಞಾಪಿಸಿದ್ದಾನೆ.[65] (ಯಾಜಕಕಾಂಡ 20:10 ಧರ್ಮೋಪದೇಶಕಾಂಡ 22:22-23). ಆದ್ದರಿಂದ ಯೆಹೂದ್ಯನಾಯಕರು ಈ ಹೆಂಗಸಿಗೆ ಏನು ಮಾಡಬೇಕೆಂದು ಹೇಳುತ್ತಿ ಎಂಬದಾಗಿ ಯೇಸುವನ್ನು ಕೇಳಿದರು. ಆತನನ್ನು ತಪ್ಪಿನಲ್ಲಿ ಸಿಕ್ಕಿಸುವದಕ್ಕಾಗಿ ಅವರು ಇದನ್ನು ಕೇಳಿದರು. (ಮಾರ್ಕ 12:13-17 ಮತ್ತು ವ್ಯಾಖ್ಯಾನ ನೋಡಿರಿ). ಅವಳಿಗೆ ಕಲ್ಲೆಸೆಯಿರಿ, ಎಂದು ಯೇಸು ಹೇಳುವದಾದರೆ ಆತನು ಕ್ರೂರಿಯಾಗಿ ಕಂಡು ಬರುವನು. ಅಲ್ಲದೆ ರೋಮಾಯ ಸರ್ಕಾರವೂ ಅದನ್ನು ವಿರೋದಿಸುವದು, ಯಾಕೆಂದರೆ ಯೆಹೂದ್ಯರು ಮರಣದಂಡನೆ ವಿಧಿಸುವದು ರೋಮಾಯ ಕಾನೂನಿಗೆ ವಿರುದ್ಧವಾಗಿತ್ತು. ಒಂದು ವೇಳೆ ಅವಳಿಗೆ ಕಲ್ಲೆಸೆಯಬೇಡಿರಿ ಎಂದು ಯೇಸು ಹೇಳಿದರೆ ಆತನು ಯೆಹೂದ್ಯ ಧರ್ಮಶಾಸ್ತ್ರಕ್ಕೆ ಅವಿಧೇಯನಾದ ಹಾಗಿರುತ್ತಿತ್ತು, ಮತ್ತು ಹೀಗೆ ಯೆಹೂದ್ಯರು ಆತನ ಮೇಲೆ ಧರ್ಮಶಾಸ್ತ್ರವನ್ನು ಉಲ್ಲಂಘಿಸಿದ, ಆರೋಪವನ್ನು

ಹೊರಿಸಲು ಶಕ್ತರಾಗುತ್ತಿದ್ದರು. ಹೀಗಿರುವದರಿಂದ ಯೇಸು ಏನೇ ಉತ್ತರ ಕೊಟ್ಟರು ಅದು ಎರಡರಲ್ಲಿ ಒಂದು ಕಾನೂನಿಗೆ ವಿರುದ್ಧವಾಗಿರುವದು ಮತ್ತು ಹೀಗೆ ತನಗೆ ಅವಮಾನವನ್ನು ತಂದುಕೊಳ್ಳುತ್ತಿದ್ದನು.

ಯೇಸು ಒಮ್ಮೆಲೇ ಉತ್ತರ ನೀಡಲಿಲ್ಲ. ಆತನು ಬೊಗ್ಗಿಕೊಂಡು ಬೆರಳಿನಿಂದ ನೆಲದ ಮೇಲೆ ಬರೆಯುತ್ತಾ ಇದ್ದನು. ಆತನು ಏನು ಬರೆದನೆಂಬದು ತಿಳಿದು ಬಂದಿರುವದಿಲ್ಲ.

**7-8** ಯೇಸು ಅವರ ಬಲೆಯಲ್ಲಿ ಬೀಳಲಿಲ್ಲ. ಯೇಸು ಪ್ರತ್ಯುತ್ತರವಾಗಿ "ಅವಳಿಗೆ ಕಲ್ಲೆಸೆಯಲ್ಪಡಲಿ, ಅವಳು ಪಾಪ ಮಾಡಿದ್ದಾಳೆ, ಆದರೆ ಕಲ್ಲನ್ನು ಎಸೆಯುವವರು ಸ್ವತಃ ತಾವೇ [66] ಪಾಪವಿಲ್ಲದವರಾಗಿರಬೇಕು" ಎಂದು ಹೇಳಿದನು.

ಯೇಸುವಿನ ತಾತ್ಪರ್ಯವೇನಾಗಿತ್ತೆಂದರೆ, ಆ ಹೆಂಗಸಿಗೆ ಕಲ್ಲೆಸೆಯುವದರಲ್ಲಿನ ಅವರಗುರಿಗಳು, ಅವರ ಉದ್ದೇಶ ಸಂಪೂರ್ಣ, ಪವಿತ್ರವಾಗಿರಬೇಕು ಎಂಬುದೇ. ಯಾವ ನ್ಯಾಯಾಧಿಪತಿಯೇ ಆಗಲಿ ಪಾಪರಹಿತನಾಗಿರುವದಿಲ್ಲ, ಆದಾಗ್ಯು ಅವನು ನ್ಯಾಯ ತೀರಿಸಬೇಕು. ಆದರೆ ಆತನು ಪವಿತ್ರವಾದ ಉದ್ದೇಶಗಳಿಂದ ತೀರ್ಪು ನೀಡಬೇಕು. ಆತನು ನ್ಯಾಯವಾಗಿಯೂ, ಧರ್ಮಶಾಸ್ತ್ರಕ್ಕೆ ಅನುಸಾರವಾಗಿಯೂ ತೀರ್ಪು ಮಾಡಬೇಕು. ಈ ಯೆಹೂದ್ಯನಾಯಕರು ದುಷ್ಟಕಾರಣಗಳಿಗಾಗಿ ಆ ಹೆಂಗಸಿನ ಮೇಲೆ ಆರೋಪಮಾಡುತ್ತಿದ್ದರು. ಆ ಹೆಂಗಸು ಕಾನೂನು ಬಾಹಿರವಾಗಿ ಬಂಧಿಸಲ್ಪಟ್ಟಿರುವ ಸಾಧ್ಯತೆಯೂ ಇರುತ್ತದೆ. ಒಂದು ವೇಳೆ ಯೆಹೂದ್ಯರು ಕಾನೂನಿಗೆ ವಿರುದ್ಧವಾಗಿ ಆಕೆಗೆ ಕಲ್ಲೆಸೆಯುವದಾದರೆ ಅವರು ಸಹ ಕೊಲೆಗಾಗಿ ದಂಡಿಸಲ್ಪಡ ಬಹುದು.

**9-10** ಹೆಂಗಸಿನ ಮೇಲೆ ತಪ್ಪು ಹೊರಿಸಿದವರೆಲ್ಲರೂ ಹೊರಟು ಹೋದರು. ಹಿರಿಯರು ಮೊದಲು ಹೋದರು ಯಾಕೆಂದರೆ ಯೇಸುವಿನ ತಾತ್ಪರ್ಯವನ್ನು ಅವರು ಶೀಘ್ರವಾಗಿ ಅರ್ಥಮಾಡಿಕೊಂಡರು. ಆದರೆ ಪ್ರತಿಯೊಬ್ಬನು ಸಹ ತಾನು ಆ ಹೆಂಗಸಿಗೆ ಕಲ್ಲೆಸೆಯಲು ಅಯೋಗ್ಯನು ಎಂಬದನ್ನು ಹೃದಯದಲ್ಲಿ ಅರಿತಿದ್ದನು.

ನಾವೆಲ್ಲರೂ ಕಲಿಯಬೇಕಾದ ಒಂದು ಶ್ರೇಷ್ಠ ಪಾಠವು ಈ ಕಥೆಯಲ್ಲಿ ಇರುತ್ತದೆ. ನಮ್ಮ ಸಹೋದರ ಅಥವಾ ಸಹೋದರಿಗೆ ಕಲ್ಲೆಸೆಯಲು ಎಷ್ಟು ಶೀಘ್ರವೇ ಮುಂದಾಗುತ್ತೇವೆ! ಆ ಕಲ್ಲುಗಳು ಕೆಟ್ಟ ಮಾತು, ಚಾಡಿ ಹೇಳುವದು, ಸುಳ್ಳು ಸಾಕ್ಷಿ, ಗುಣಗುಟ್ಟುವಿಕೆಗಳಂತಹ ಕಲ್ಲುಗಳೇ. ನಾವು ಮೊದಲು ನಮ್ಮನ್ನೇ ದೃಷ್ಟಿಸಿಕೊಳ್ಳೋಣ, ಆಗ ನಾವು ಯಾರ ಮೇಲೆಯೂ "ಕಲ್ಲುಗಳನ್ನು" ಎಸೆಯಲು ಯೋಗ್ಯರಲ್ಲ, ಆದರೆ ನಮ್ಮ ಮೇಲೆ ಎಸೆದುಕೊಳ್ಳಬೇಕೆಂಬದನ್ನು ಕಂಡುಕೊಳ್ಳುವೆವು (ಮತ್ತಾಯ 7:1-5, ರೋಮ 2:1,2, 2 ಕೊರಿಂಥ 11:31 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**11** ಯೇಸು ಆ ಹೆಂಗಸನ್ನು ಖಂಡಿಸಲಿಲ್ಲ. ಆದರೆ ಆತನು ಆಕೆಯ ಪಾಪವನ್ನು ಖಂಡಿಸಿದನು. "ಹೋಗು ಇನ್ನುಮೇಲೆ ಪಾಪ ಮಾಡಬೇಡ " ಎಂದು ಹೇಳಿದನು. ಈ ಕಥೆಯ ಮೂಲಕ ಯೇಸು ನಮ್ಮ ಪಾಪಗಳನ್ನು ಲಕ್ಷಕ್ಕೆ ತಂದುಕೊಳ್ಳುವದಿಲ್ಲ, ಎಂದು ನಾವು ಯೋಚಿಸಬಾರದು. ಆತನು ಪಾಪವನ್ನು ಎಂದಿಗೂ ಅಲಕ್ಷಮಾಡುವದಿಲ್ಲ. ನ್ಯಾಯ ತೀರ್ಪಿನ ಕಡೇದಿನದಲ್ಲಿ ನಾವು ಕರುಣೆಯನ್ನು ಸ್ವೀಕರಿಸುವದಿಲ್ಲ. ನಮ್ಮ ಕೃತ್ಯಗಳಿಗೆ ತಕ್ಕ ಹಾಗೆ ನ್ಯಾಯತೀರ್ಪಿಗೊಳಗಾಗುತ್ತೇವೆ, ಆದರೆ ಜೀವನದಲ್ಲಿ ಒಬ್ಬ ವ್ಯಕ್ತಿಯು ನಿಜವಾಗಿಯೂ ಪಶ್ಚಾತಾಪಪಡುವದಾದರೆ ಆತನು ಕರುಣೆ ಮತ್ತು ಕ್ಷಮೆಗಳನ್ನು ಪಡೆದುಕೊಳ್ಳುವ ಅವಕಾಶವಿರುತ್ತದೆ.

ಇಲ್ಲಿ ಬರೆಯಲ್ಪಟ್ಟಿರುವ ಪ್ರಕಾರ ಯೇಸು ಆ ಹೆಂಗಸಿನ ಪಾಪಗಳನ್ನು ಕ್ಷಮಿಸಲಿಲ್ಲ. ಆದಕ್ಕೆ ಕಾರಣವೇನೆಂದರೆ ಆಕೆಯು ಇನ್ನೂ ಪಶ್ಚಾತಾಪ ಪಟ್ಟಿರಲಿಲ್ಲ. ಆಕೆಯು ಇನ್ನೂ ಕ್ಷಮಾಪಣೆಯನ್ನು ಪಡೆದಿರಲಿಲ್ಲ. ಕ್ಷಮೆಯನ್ನು ಹೊಂದಬೇಕಾದರೆ ಒಬ್ಬನು ಪಶ್ಚಾತಾಪಪಡಬೇಕು ಎಂಬದನ್ನು ಗಮನಿಸಬಹುದು.

## ಲೋಕದ ಬೆಳಕು (8:12-20)

**12** ಯೇಸು ಅಲ್ಲಿದ್ದ ಜನರಿಗೆ "ನಾನೇ ಲೋಕಕ್ಕೆ ಬೆಳಕು" ಅಂದನು (ಯೋಹಾನ 9:5, 12:46 ನೋಡಿರಿ). ಯೇಸುವಿನ ಬೆಳಕು ದೇವರ ಬೆಳಕಾಗಿರುತ್ತದೆ. ದೇವರು ಬೆಳಕಾಗಿದ್ದಾನೆ (೧ಯೋಹಾನ 1:5). ಬೆಳಕು ನೀತಿ, ಸತ್ಯ ಮತ್ತು ಜ್ಞಾನದ ಒಂದು ಸಂಕೇತವಾಗಿದೆ. ಅಲ್ಲದೆ ಇದು ಜೀವದ ಸಂಕೇತವೂ ಆಗಿದೆ. ಆತನಲ್ಲಿ (ಯೇಸುವಿನಲ್ಲಿ) ಜೀವವಿತ್ತು, ಮತ್ತು ಆ ಜೀವವು ಮನುಷ್ಯರಿಗೆ ಬೆಳಕಾಗಿತ್ತು (ಯೋಹಾನ 1:4 ಮತ್ತು ವ್ಯಾಖ್ಯಾನ ನೋಡಿರಿ). ಯೇಸು ಒಬ್ಬ ಮನುಷ್ಯನ ಇಡೀ ಜೀವಿತವನ್ನು ಬೆಳಕಿನಿಂದ ತುಂಬಿಸುತ್ತಾನೆ. ಸೂರ್ಯನು ಎಲ್ಲಾ ಮನುಷ್ಯರಿಗೂ ಬೆಳಕನ್ನು ನೀಡುವಂತೆಯೇ ಯೇಸು ಎಲ್ಲಾ ಮನುಷ್ಯರಿಗೂ ಬೆಳಕನ್ನು ನೀಡುತ್ತಾನೆ (ಯೋಹಾನ 1:9). ಕೆಲವು ಕುರುಡು ವ್ಯಕ್ತಿಗಳು ಸೂರ್ಯವನ್ನು ನೋಡಲಾರರು. ಕೆಲವರು ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡು ಸೂರ್ಯನನ್ನು ನೋಡಲು ನಿರಾಕರಿಸುತ್ತಾರೆ. ಆದರೆ ಸೂರ್ಯನು ಇನ್ನೂ ಇದ್ದಾನೆ. ಮನುಷ್ಯರು ನೋಡಲಿ ಅಥವಾ ನೋಡದಿರಲಿ ಅದು ಬೆಳಗುತ್ತದೆ. ಕ್ರಿಸ್ತನ ವಿಷಯದಲ್ಲಿಯೂ ಇದು ಅಷ್ಟೇಸತ್ಯವಾಗಿದೆ.

ನನ್ನನ್ನು ಅನುಸರಿಸುವವನು....ಜೀವ ಕೊಡುವ ಬೆಳಕನ್ನು ಹೊಂದುವವನಾಗಿರುವನು. ಯೇಸುವಿನಲ್ಲಿ ನಂಬಿಕೆಯಿಟ್ಟು ಆತನನ್ನುಅನುಸರಿಸುವವರು ಮಾತ್ರವೇ ಆತನ ಬೆಳಕನ್ನು ಪಡದುಕೊಳ್ಳುವರು. ಯೇಸುವನ್ನು ಅನುಸರಿಸುವವರು ಮಾತ್ರವೇ ಲೋಕದ ಕತ್ತಲೆಯಿಂದ ವಿಮೋಚಿಸಲ್ಪಡುವರು. ಇಲ್ಲಿ "ಕತ್ತಲೆ"ಯು ಪಾಪದ, ಆತ್ಮೀಕ ಅಜ್ಞಾನ, ಆತ್ಮೀಕ ಮರಣದ ಒಂದು ಸಂಕೇತವಾಗಿದೆ. ಕ್ರಿಸ್ತನನ್ನು ಅನುಸರಿಸುವವರು ಎಂದಿಗೂ ಕತ್ತಲೆಯಲ್ಲಿ ನಡೆಯುವದಿಲ್ಲ. ಅವರು ಕತ್ತಲೆಯಲ್ಲಿ ತಮ್ಮ ಮುಂದುಗಡೆ ಒಂದು ಪ್ರಕಾಶಮಾನವಾದ ದೀಪವನ್ನು ಹೊತ್ತುಕೊಂಡು ನಡೆಯುವ ಮನುಷ್ಯರಂತಿದ್ದಾರೆ.

ಅಲ್ಲದೆ ಯೇಸುವನ್ನು ಹಿಂಬಾಲಿಸುವವರು ಸ್ವತಃ ತಾವೇ ಬೆಳಕಾಗುತ್ತಾರೆ (ಮತ್ತಾಯ 5:14 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ಅವರ ಬೆಳಕು ಅವರ ಸ್ವಂತದ್ದಲ್ಲ, ಅದು ಅದರಲ್ಲಿ ಬೆಳಗುವ ಯೇಸುವಿನ ಬೆಳಕಾಗಿರುತ್ತದೆ. ಯೇಸು ಲೋಕದೊಳಗೆ ಬರುವ ಎಲ್ಲಾ ಬೆಳಕಿಗೂ ಮೂಲನಾಗಿದ್ದಾನೆ [68](ಯೋಹಾನ 1:9 ಮತ್ತು ವ್ಯಾಖ್ಯಾನ ನೋಡಿರಿ).

13 ಯೇಸು ತನ್ನ ಕುರಿತು ಹೇಳಿಕೊಂಡ ಸಾಕ್ಷಿಯನ್ನು ಫರಿಸಾಯರು ಒಪ್ಪಿಕೊಳ್ಳಲಿಲ್ಲ. ನ್ಯಾಯಾಲಯದಲ್ಲಿ ನ್ಯಾಯಮೂರ್ತಿಯು ಒಬ್ಬನು ತನ್ನ ಕುರಿತಾಗಿಹೇಳುವ ಸಾಕ್ಷಿಯನ್ನು ಪೂರ್ಣವಾಗಿ ವಿಸ್ವಾಸಿಸುವದಿಲ್ಲ, ಯಾಕೆಂದರೆ ಒಬ್ಬ ವ್ಯಕ್ತಿಯು ಸಾಮಾನ್ಯವಾಗಿ ತನ್ನ ಕುರಿತಾಗಿ ಕೇವಲ ಒಳ್ಳೆಯದನ್ನೇ ಹೇಳಿಕೊಳ್ಳುತ್ತಾನೆ, ಹೊರತು ಪೂರ್ಣ ಸತ್ಯವನ್ನು ಮಾತನಾಡುವದಿಲ್ಲ. ಆದುದರಿಂದ ಹಳೆ ಒಡಂಬಡಿಕೆಯ ಪ್ರಕಾರವಾಗಿ ಒಬ್ಬ ಹೇಳುವ ಮಾತುಗಳು ಸತ್ಯವೆಂದು ಸ್ಥಾಪಿಸಲ್ಪಡಬೇಕಾದರೆ ಇಬ್ಬರು ಸಾಕ್ಷಿಗಳಾದರೂ ಅಗತ್ಯವಿರುತ್ತಿದ್ದರು (ಧರ್ಮೋಪದೇಶಕಾಂಡ 19:15, ಯೋಹಾನ 8:17). ಆದರೆ ಯೇಸು ಒಬ್ಬನೇ ಸಾಕ್ಷಿಯಾಗಿದ್ದನು. ಆದುದರಿಂದ, ಯೆಹೂದ್ಯರ ಅಭಿಪ್ರಾಯದಲ್ಲಿ ಯೇಸುವಿನ ಸಾಕ್ಷಿಯು ನಿಜವಾಗದ ಅಥವಾ ವಿಶ್ವಾಸರ್ಹವಲ್ಲದ್ದಾಗಿ ಪರಿಗಣಿಸಲಾಗಿತ್ತು (ಯೋಹಾನ 5:31 ಮತ್ತು ವ್ಯಾಖ್ಯಾನ ನೋಡಿರಿ).

ಫರಿಸಾಯರು ಯೇಸುವಿನ ಬೆಳಕನ್ನು ನೋಡಲು ನಿರಾಕರಿಸಿದರು. ಅವರು :ನಿನ್ನ ಇತರ ಸಾಕ್ಷಿ ಎಲ್ಲಿ? ನಾವು ನಿನ್ನನ್ನು ನಂಬುವದಿಲ್ಲ: ಎಂದು ಹೇಳಿದರು.ಆದರೆ ಬೆಳಕಿಗೆ ಯಾವ ಸಾಕ್ಷಿಯ ಅವಶ್ಯಕತೆಯಿಲ್ಲ. ಅದು ಬೆಳಗುವದರ ಮೂಲಕ ತನ್ನಕುರಿತು ತಾನೇ ಸಾಕ್ಷಿ ನೀಡುತ್ತದೆ. "ಬೆಳಕೇ ಇಲ್ಲ" ಎಂದು ಹೇಳುವವನು ಬೆಳಕನ್ನು ಖಂಡಿಸದೆ ತನ್ನನ್ನು ತಾನೇ ಖಂಡಿಸಿಕೊಳ್ಳುವವನಾಗಿದ್ದಾನೆ! ಆತನು ಕುರುಡನಾಗಿದ್ದಾನೆ!

14 ಯೇಸು "ನನ್ನ ಸಾಕ್ಷಿಯು ನಿಜವಾಗಿರುವದು" ಅದು ಒಂಟಿಯಾಗಿ ನಿಲ್ಲುವದಿಲ್ಲ, ದೇವರು ನನ್ನ ಕುರಿತು ಸಾಕ್ಷಿ ಹೇಳುತ್ತಾನೆ, ಎಂದು ಹೇಳಿದನು. (ವಚನ 18). ಅಲ್ಲದೆ ಯೇಸು ತನ್ನ ಕುರಿತು ಸಾಕ್ಷಿ ಹೇಳಿಕೊಳ್ಳಲು ಅರ್ಹನಾಗಿದ್ದಾನೆಂದು ಹೇಳಿಕೊಂಡನು. ತಾನು ಯಾರೆಂದು ಆತನಿಗೆ ಗೊತ್ತಿತ್ತು. ತಾನು ದೇವರ ಕಡೆಯಿಂದ ಬಂದವನೆಂದು ಮತ್ತು ತಿರಿಗಿ ದೇವರಬಳಿಗೆ ಹೋಗುವನೆಂದು ಆತನಿಗೆ ತಿಳಿದಿತ್ತು. ಆದರೆ ಯೇಸು ಯಾರೆಂಬದು ಫರಿಸಾಯರಿಗೆ ತಿಳಿದಿರಲಿಲ್ಲ. ಹಾಗಾದರೆ ಅವರು ಹೇಗೆ ಯೇಸುವಿನ ಸಾಕ್ಷಿಯನ್ನು ಎದುರಿಸಲು ಸಾಧ್ಯ?

15 ಫರಿಸಾಯರು ಕೇವಲ ಹೊರಗಿನ ತೋರಿಕೆಯ ಪ್ರಕಾರ ತೀರ್ಪು ಮಾಡುತ್ತಿದ್ದರು. ಅವರು ಕೇವಲ ಕಣ್ಣಿಗೆ ಕಾಣುವದನ್ನು ಮತ್ತು ಕಿವಿಗಳಿಂದ ಕೇಳುವದನ್ನು ಮಾತ್ರವೇ ಬಲ್ಲವರಾಗಿದ್ದರು. ಹೊರತು ಆತ್ಮೀಕ ಸಂಗತಿಗಳಬಗ್ಗೆ ಏನನ್ನೂ ತಿಳಿದವರಾಗಿರಲಿಲ್ಲ. ಯೇಸು ಫರಿಸಾಯರ ಹಾಗೆ ತೀರ್ಪು ಮಾಡಲಿಲ್ಲ. ಆತನು ತೀರ್ಪು ನೀಡುವದಕ್ಕಾಗಿಲೋಕಕ್ಕೆ ಬರಲಿಲ್ಲ, ಆತನ ಬರೋಣಕ್ಕೆ ಅದು ಮುಖ್ಯ ಉದ್ದೇಶವಾಗಿರಲಿಲ್ಲ. ಯೇಸು ಲೋಕದಲ್ಲಿದ್ದಾಗ ತನ್ನನ್ನು ಮನುಷ್ಯರ ಮೇಲೆ ನ್ಯಾಯಾಧಿಪತಿಯಾಗಿ ಮಾಡಿಕೊಳ್ಳಲಿಲ್ಲ (ಲೂಕ 12:13-4, ಯೋಹಾನ 8:11).

16 ಆದರೆ ಯೇಸು ಇನ್ನೊಂದು ವಿಧದಲ್ಲಿ ಒಬ್ಬ ನ್ಯಾಯಾಧಿಪತಿಯಾಗಿದ್ದನು. (ಯೋಹಾನ 13:17 ಮತ್ತು ವ್ಯಾಖ್ಯಾನ ನೋಡಿರಿ) ಆತನು ಈಗ ನಮ್ಮ ನ್ಯಾಯಾಧಿಪತಿಯಾಗಿದ್ದಾನೆ, ಮತ್ತು ಲೋಕದಅಂತ್ಯದಲ್ಲಿ ಆತನು ನಮ್ಮ ನ್ಯಾಯಾಧಿಪತಿಯಾಗಿ ಇರುವನು (ಯೋಹಾನ 5:22,27) ಮತ್ತು ಒಂದು ವೇಳೆ ಯೇಸು ನಮಗೆ ತೀರ್ಪು ಮಾಡುವದಾದರೆ ಆತನ ತೀರ್ಪು ಸರಿಯಾದದ್ದೇ ಎಂಬ ನಿಶ್ಚಯ ನಮಗಿರುವದು. ಯಾಕೆಂದರೆ ಯೇಸು ಒಂಟಿಗನಲ್ಲ, ಆತನು ದೇವರಿಂದ ಏನು ಕೇಳಿಸಿಕೊಳ್ಳುತ್ತಾನೋ ಅದರ ಪ್ರಕಾರವಾಗಿ ಮಾತ್ರವೇ ನ್ಯಾಯತೀರಿಸುವನು (ಯೋಹಾನ 5:30 ಮತ್ತು ವ್ಯಾಖ್ಯಾನ ನೋಡಿರಿ). ಆತನು ಹೊರಗಿನತೋರಿಕೆಯ ಪ್ರಕಾರವಾಗಿ ತೀರ್ಪು ಮಾಡುವದಿಲ್ಲ.

ಫರಿಸಾಯರ ದೃಷ್ಟಿಗೆ ಯೇಸು ಲೋಕದಲ್ಲಿ ಒಂಟಿಗನಾಗಿ ಕಂಡು ಬಂದನು. ಆದರೆ ದೇವರು ಆತನೊಂದಿಗೆ ಇದ್ದನು. ಯೇಸು ದೇವರು ಮತ್ತು ಆತನ ಮಗನ ಸಾಕ್ಷಿಯು ನಿಜವಾಗಿರುವದು (ಯೋಹಾನ 8:13-14 ನೋಡಿರಿ).

19 ಯೇಸು ಆಗಷ್ಟೇ ತಂದೆಯು ಆತನ ವಿಷಯವಾಗಿ ಸಾಕ್ಷಿಯಾಗಿದ್ದಾನೆಂದು ಫರಿಸಾಯರಿಗೆ ಹೇಳಿದ್ದನು (ವಚನ 18). ಆಗ ಫರಿಸಾಯರು ಹಾಸ್ಯ ಮಾಡುತ್ತಾ "ನಿನ್ನ ತಂದೆ ಎಲ್ಲಿದ್ದಾನೆ?ಠ ಎಂದು ಕೇಳಿದರು. ಅವರು ಯೇಸುವಿನ ಮಾನವ ತಂದೆಯ ವಿಷಯವಾಗಿ ಮಾತಾಡುತ್ತಿದ್ದರು.

ಆದರೆ ಯೇಸುವಿನ ಉತ್ತರವು ಆತನ ಪರಲೋಕದ ತಂದೆಯ ಕುರಿತಾಗಿದ್ದು, ಫರಿಸಾಯರು ಆತನನ್ನು ಅರಿಯದವರಾಗಿದ್ದರು. ಯೇಸು ಅವರಿಗೆ "ನೀವು ...ನನ್ನನ್ನು ತಿಳಿದಿದ್ದರೆ ನನ್ನ ತಂದೆಯನ್ನೂ ತಿಳಿದಿರುವಿರಿ" ಎಂದು ಹೇಳಿದನು. ಕ್ರಿಸ್ತನನ್ನು ಅರಿಯದ ವ್ಯಕ್ತಿಯು ದೇವರ ವಿಷಯವಾಗಿ ಪೂರ್ಣ ಹಾಗು ಸತ್ಯಜ್ಞಾನವನ್ನು ಹೊಂದಿರಲು ಸಾಧ್ಯವಿಲ್ಲ (ಯೋಹಾನ 1:18 ಮತ್ತು ವ್ಯಾಖ್ಯಾನ ನೋಡಿರಿ).

20 ಯೋಹಾನ 7:30, 44 ಮತ್ತು ವ್ಯಾಖ್ಯಾನ ನೋಡಿರಿ.

## ಬರಲಿರುವ ನ್ಯಾಯತೀರ್ಪಿನ ಕುರಿತು ಎಚ್ಚರಿಕೆ (8:21-30)

21 ಯೇಸು ಇಲ್ಲಿ ಯೋಹಾನ 7:33-34 ರಲ್ಲಿನ ವಿಚಾರವನ್ನು ಪು ನರುಚ್ಚರಿಸುತ್ತಾನೆ. ಆದರೆ ಆತನು ಇಲ್ಲಿ ಇನ್ನು ಹೆಚ್ಚನ್ನು ಸೇರಿಸುತ್ತಾನೆ, "ನೀವು ನಿಮ್ಮ ಪಾಪದಲ್ಲೇ ಸಾಯುವಿರಿ." ಯೇಸುವನ್ನು ವಿರೋಧಿಸಿದ ಯೆಹೂದ್ಯರು ಯೇಸುವಿನೊಂದಿಗೆ ಪರಲೋಕಕ್ಕೆ ಹೋಗಲು ಅಸಮರ್ಥರಾಗಿರುವರು, ಯಾಕೆಂದರೆ ಅವರು ತಮ್ಮ ಪಾಪಗಳಿಗಾಗಿ ಪಶ್ಚಾತಾಪ ಪಡಲು ನಿರಾಕರಿಸುವವರಾಗಿದ್ದಾರೆ.

ಈ ಯೆಹೂದ್ಯರು ಯೇಸುವಿನ ನಂತರ ಆತನಿಗಾಗಿ ಹುಡುಕಾಡುವರು. ಆತನು ಸತ್ತವರೊಳಗಿಂದ ಎದ್ದೇಳಲಿಲ್ಲ ಎಂಬದನ್ನು ನಿರೂಪಿಸುವದಕ್ಕಾಗಿ ಕೆಲವರು ಆತನ ದೇಹಕ್ಕಾಗಿ ಹುಡುಕಾಡುವರು (ಮತ್ತಾಯ 27:64, 28:12-13 ನೋಡಿರಿ). ಇತರ ಕೆಲವರು ಯೇಸುವಿನ ಮರಣಾನಂತರ ಆತನು ಯಾರೆಂಬದನ್ನು ಗ್ರಹಿಸಿಕೊಳ್ಳುವರು (ವಚನ 28) ಆದರೆ ಅಪ್ಪೊತ್ತಿಗೆ ಬಹಳ ತಡವಾಗಿರುತ್ತದೆ, ಅವರ ಹೃದಯಗಳು ಕಠಿಣವಾಗಿ ಹೋಗಿರುತ್ತವೆ. ಅವರಿಗೆ ಪಶ್ಚಾತಾಪ ಪಟ್ಟು ಯೇಸುವನ್ನು ಹಿಂಬಾಲಿಸಲಿಕ್ಕೆ ಅವಕಾಶವು ಕೊಡಲ್ಪಟ್ಟಿರುತ್ತದೆ, ಆದರೆ ಅವರು ಅವಕಾಶವನ್ನು ತಿರಸ್ಕರಿಸಿದರು. ಮತ್ತು ಆತನು ಮರಣಿಸುವಾಗ ಆ ಅವಕಾಶವು ಸದಾಕಾಲವೂ ಹೊರಟು ಹೋಗಿರುವದು. ಅವರು ಆತನನ್ನು ಹುಡುಕುವ ವ್ಯರ್ಥ ಪ್ರಯತ್ನವನ್ನು ಮಾಡಿದರು[69] (ಯೋಹಾನ 7:33-34 ಮತ್ತು ವ್ಯಾಖ್ಯಾನ ನೋಡಿರಿ) ಆದುದರಿಂದ ಅವರು ಇನ್ನೂ ಸಮಯ ವಿರುವಾಗಲೇ ಪಶ್ಚಾತಾಪಪಟ್ಟು ಯೇಸುವನ್ನು ಹಿಂಬಾಲಿಸಲಿ (ವಚನ 24 ನೋಡಿರಿ).

**22** ಯೇಸು ತನ್ನ ಮರಣದ ಕುರಿತಾಗಿ ಮಾತಾಡುತ್ತಿದ್ದಾನೆಂದು ಯೆಹೂದ್ಯನಾಯಕರಿಗೆ ಮನವರಿಕೆಯಾಯಿತು. ಆದರೆ ಸ್ವತಃ ಅವರೇ ಆತನನ್ನು ಕೊಲ್ಲುವ ಹೊಂಚನ್ನು ಮಾಡುತ್ತಿದ್ದರೂ, ಯೇಸು ತನ್ನನ್ನು ತಾನೇ ಸಾಯಿಸಿಕೊಳ್ಳುವ ಬಗ್ಗೆ ಮಾತಾಡುತ್ತಿದ್ದಾನೆ ಎಂದು ಅವರು ಯೋಚಿಸಿಕೊಂಡರು!.

**23** ಯೆಹೂದ್ಯರು ಕೆಳಗಿನವರು ಅಂದರೆ ಲೋಕದವರಾಗಿದ್ದರು. ಯೇಸು ಮೇಲಿನವನು ಅಂದರೆ ಪರಲೋಕದವನು (ಯೋಹಾನ 3:31 ಮತ್ತು ವ್ಯಾಖ್ಯಾನ ನೋಡಿರಿ).

**24** ಯೆಹೂದ್ಯರು ತನ್ನಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ಈ ಪಾಪದ ಮತ್ತು ಕತ್ತಲೆಯ ಲೋಕದಿಂದ ತಪ್ಪಿಸಿಕೊಂಡು ಪರಲೋಕ ರಾಜ್ಯವನ್ನು ಪ್ರವೇಶಿಸಬಲ್ಲರು, ಎಂದು ಯೇಸು ಅವರಿಗೆ ಹೇಳಿದನು. ಯೇಸು ತಾನು ಹೇಳಿಕೊಂಡಂತೆಯೇ ದೇವಕುಮಾರನೂ, ಮೆಸ್ಸಿಯನೂ ಆಗಿದ್ದಾನೆಂದು ಅವರು ನಂಬಬೇಕು. ಇಲ್ಲವಾದರೆ ನಿಶ್ಚಯವಾಗಿಯೂ ಅವರು ತಮ್ಮ ಪಾಪಗಳಲ್ಲಿಯೇ ಅಂದರೆ ಪಶ್ಚಾತಾಪವಿಲ್ಲದೆ ಪಾಪಕ್ಷಮಾಪಣೆಯನ್ನು ಪಡೆಯದೇ ಸಾಯುವರು. ಒಬ್ಬನು ತನ್ನ "ಪಾಪಗಳಲ್ಲಿಯೇ" ಸಾಯುವದೆಂದರೆ ನಿತ್ಯತ್ವವನ್ನು ನರಕದಲ್ಲಿ ಕಳೆಯುವದೇ ಆಗಿದೆ.

ನಾವು ಯೇಸುವನ್ನು ಕೇವಲ ಒಬ್ಬ ಶ್ರೇಷ್ಠವ್ಯಕ್ತಿ, ಶ್ರೇಷ್ಠಬೋಧಕ, ಒಬ್ಬ ಶ್ರೇಷ್ಠ ಪ್ರವಾದಿಯೆಂದು ನಂಬಿದರೆ ಸಾಕಾಗುವದಿಲ್ಲ.ಆತನು ದೇವಕುಮಾರನೂ, ಲೋಕರಕ್ಷಕನೂ ಎಂಬದಾಗಿ ನಾವು ನಂಬಬೇಕು. ಆತನು ನಮ್ಮ ಕರ್ತನು ಹಾಗು ರಕ್ಷಕನು ಎಂಬದಾಗಿ ನಾವು ನಂಬದಿರುವದಾದರೆ ಆತನು ನಮ್ಮನ್ನು ರಕ್ಷಿಸಲಾರನು.
ಯೇಸು ಪ್ರತಿಯೊಬ್ಬರಿಗೂ ಹೇಳುವದೇನೆಂದರೆ "..ನನ್ನನ್ನು ಆತನೆಂದು (ದೇವಕುಮಾರನೆಂದು) ನೀವು ನಂಬದೆ ಹೋದರೆ [70]ನಿಮ್ಮ ಪಾಪಗಳಲ್ಲಿಯೇ ಸಾಯುವಿರಿ".

**25** "ನನ್ನನ್ನು ಆತನೆಂದು" ನೀವು ನಂಬಬೇಕೆಂದು ಯೇಸು ಯೆಹೂದ್ಯರಿಗೆ ಹೇಳಿದಾಗ ಅವರು ಆತನಮಾತನ್ನು ಅರ್ಥಮಾಡಿಕೊಳ್ಳಲಿಲ್ಲ. ಅದಕ್ಕೆ ಅವರು "ನೀನು ಯಾರು?" ಎಂದು ಕೇಳಿದರು.

ಯೇಸು ಉತ್ತರಿಸಿ "ನಾನು ಮೊದಲಿನಿಂದಲೂ ನಿಮಗೆ ಹೇಳಿದಂಥದೇ" ಎಂದನು. ಅಂದರೆ ನಾನು ಯಾರೆಂದು ಹೇಳಿಕೊಂಡೆನೋ ಆತನೇ ನಾನಾಗಿದ್ದೇನೆ. ನಾನು ಜೀವದರೊಟ್ಟಿ (ಯೋಹಾನ 6:35). ನಾನು ಲೋಕಕ್ಕೆ ಬೆಳಕಾಗಿದ್ದೇನೆ (ವಚನ 12) "ನಾನು ಮೆಸ್ಸೀಯನಾಗಿದ್ದೇನೆ" (ಯೋಹಾನ 4:25-26).

**26** ಈ ವಚನದಲ್ಲಿ ಯೇಸು ತಾನು ಇದಕ್ಕೆ ಮುಂಚೆ 24ನೇ ವಚನದಲ್ಲಿ ಪ್ರಸ್ತಾಪಿಸಿದ ನ್ಯಾಯತಿರ್ಪಿನ ವಿಷಯಕ್ಕೆ ಹಿಂದಿರುಗುತ್ತಾನೆ. ಈಗಾಗಲೇ ಎರಡು ಬಾರಿ ಆತನು ಯೆಹೂದ್ಯರಿಗೆ ಅವರು ತಮ್ಮ ಪಾಪಗಳಲ್ಲಿಯೇ ಸಾಯುವರೆಂದು ಹೇಳಿದ್ದನು. ಈಗ ಆತನು ಅವರ ವಿಷಯವಾಗಿ ತಿರ್ಪು ಮಾಡುವದಕ್ಕೆ ಅನೇಕ ಸಂಗತಿಗಳು ನನಗುಂಟು ಎಂದು ಹೇಳುತ್ತಾನೆ. ಅವರು ಆತನ ನ್ಯಾಯತಿರ್ಪು ಮತ್ತು ಅಧಿಕಾರವನ್ನು ಪ್ರಶ್ನಿಸಬಹುದು. ಆದರೆ ದೇವರು ಅವನನ್ನು ಲೋಕಕ್ಕೆ ಕಳುಹಿಸಿದ್ದಾನೆ ಮತ್ತು ಆತನು ಮಾತಾಡುವ ಮಾತುಗಳು ಸತ್ಯವಾದವುಗಳು. ಯಾಕೆಂದರೆ ಅವುಗಳು ಸ್ವತಃ ದೇವರಿಂದ ಬಂದಿರುತ್ತವೆ. (ಯೋಹಾನ 5:20, 8:16 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**27-30** ಯೆಹೂದ್ಯನಾಯಕರು ಮನುಷ್ಯಕುಮಾರನನ್ನು ಎತ್ತರದಲ್ಲಿಟ್ಟಾಗ – ಅಂದರೆ ಅವರು ಯೇಸುವನ್ನು ಕೊಲ್ಲುವದಕ್ಕಾಗಿ ಶಿಲುಬೆಯ ಮೇಲಿಟ್ಟಾಗ ಆತನು ಯಾರೆಂದು ಅವರಿಗೆ ಗೊತ್ತಾಗುವದು. ಯಾಕೆಂದರೆ ಆತನು ಸತ್ತವರೊಳಗಿಂದ ಎದ್ದು ಬರುವನು. ಮತ್ತು ನ್ಯಾಯತಿರ್ಪಿನ ದಿನದಲ್ಲಿ ಅವರೆಲ್ಲರೂ ಆತನ ನ್ಯಾಯತಿರ್ಪಿನ ಸಿಂಹಾಸನ ಮುಂದೆ ನಿಂತುಕೊಳ್ಳಬೇಕಾಗುವದು (2 ಕೊರಿಂಥ 5:10).

28ನೇ ವಚನದ ಎರಡನೆ ಭಾಗದಲ್ಲಿ ಹಾಗು 29ನೇ ವಚನದಲ್ಲಿ ಯೇಸು ಯೋಹಾನ 5:30, 8:16, 26ರಲ್ಲಿನ ವಿಚಾರಗಳನ್ನು ಪುನರಾವರ್ತಿಸುತ್ತಾನೆ.

## ಯೆಹೂದ್ಯರೊಂದಿಗೆ ಹೆಚ್ಚಿನ ಚರ್ಚೆ (8:31-47)

**31** ಸಾಮಾನ್ಯ ಯೆಹೂದ್ಯರಲ್ಲಿ ಅನೇಕರು ಯೇಸುವಿನಲ್ಲಿ ನಂಬಿಕೆಯಿಟ್ಟರು (ವಚನ 30). ಆಗ ಯೇಸು ಇವರಿಗೆ "ನೀವು ನನ್ನ ಬೋಧನೆಯಲ್ಲಿ ನೆಲೆಗೊಂಡವರಾದರೆ ನಿಜವಾಗಿ ನನ್ನ ಶಿಷ್ಯರಾಗಿರುವಿರಿ" ಅಂದನು. ಅವರ ನಂಬಿಕೆಯು ಬಲಹೀನವಾಗಿತ್ತೆಂದು ಯೇಸುವಿಗೆ ತಿಳಿದಿತ್ತು. ನಿಜವಾದ ನಂಬಿಕೆಯೆಂದರೆ "ನನ್ನ ವಾಕ್ಯಗಳಲ್ಲಿ ನೆಲೆಗೊಂಡಿರುವದೇ" ಅಂದರೆ

ಅದಕ್ಕೆ ಕಿವಿಗೊಡುವದು, ವಿಧೇಯರಾಗುವದೇ ಆಗಿದೆ ಎಂದು ಅವರಿಗೆ ಕಲಿಸಿದನು. ಅವರು ಆತನ ಬೋಧನೆಯಲ್ಲಿ ಮುಂದೆ ಸಾಗಬೇಕು (ಮತ್ತಾಯ 7:21, ಮಾರ್ಕ 4:16-17, 13:13, ಲೂಕ 9:62, ಯೋಹಾನ 15:7, 2 ಯೋಹಾನ 9 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಅವರು ಇದನ್ನು ಮಾಡುವಾಗ ಮಾತ್ರವೇ ನಿಜ ಶಿಷ್ಯರಾಗಿರುವರು.

**32** ಕ್ರಿಸ್ತನ ಬೋಧನೆಯಲ್ಲಿ ನೆಲೆಗೊಂಡಿರುವವನು ಸತ್ಯವನ್ನು ತಿಳಿದುಕೊಳ್ಳುವನು. ಕ್ರಿಸ್ತನ ಬೋಧನೆಗಳು ಸತ್ಯವಾದವುಗಳು ಕೃಪೆಯೂ, ಸತ್ಯವೂ ಯೇಸು ಕ್ರಿಸ್ತನ ಮೂಲಕ ಬಂದವು (ಯೋಹಾನ 1:17). ಆದರೆ ಅಷ್ಟುಮಾತ್ರವೇ ಅಲ್ಲ ಕ್ರಿಸ್ತನ ಬೋಧನೆಯಲ್ಲಿ ನೆಲೆಗೊಂಡಿರುವ ವ್ಯಕ್ತಿಯು ಬಿಡುಗೆಹೊಂದುವನು. ಕ್ರಿಸ್ತನ ಸತ್ಯವು ಅವನನ್ನು ಅಜ್ಞಾನ ಹಾಗು ಪಾಪದ ದಾಸತ್ವದಿಂದ ಬಿಡುಗಡೆ ಮಾಡುವದು. ದೇವರು ಯೇಸುವನ್ನು ಸೆರೆಯವರಿಗೆ ಬಿಡುಗಡೆಯನ್ನು ಸಾರುವದಕ್ಕಾಗಿ ಲೋಕಕ್ಕೆ ಕಳುಹಿಸಿದನು (ಲೂಕ 4:18). ಪಾಪದಿಂದ ಬಿಡುಗಡೆ ಹೊಂದುವದೆಂದರೆ ರಕ್ಷಿಸಲ್ಪಟ್ಟರಾಗಿರುವದೇ ಆಗಿದೆ.

ಬಹಳಷ್ಟು ಜನರು ತಾವು ಆತ್ಮೀಕವಾಗಿ ದಾಸತ್ವದೊಳಗೆ ಇದ್ದಾರೆಂಬದನ್ನು ತಿಳಿಯದವರಾಗಿದ್ದಾರೆ. ಯೆಹೂದ್ಯರು ತಾವು ಸ್ವತಂತ್ರರು ಎಂದು ಊಹಿಸಿಕೊಂಡಿದ್ದರು (ವಚನ 33). ಆದರೆ ವಾಸ್ತವದಲ್ಲಿ ಅವರು ಪಾಪದ ದಾಸತ್ವದೊಳಗೆ ಇದ್ದರು. ಅವರು ತಮ್ಮ ಧರ್ಮಶಾಸ್ತ್ರದ ದಾಸತ್ವದಲ್ಲಿದ್ದರು. ಅವರುತಮ್ಮ ಧರ್ಮಶಾಸ್ತ್ರದಿಂದ ಮರಣದಂಡನೆಗೆ ಗುರಿಯಾಗಿದ್ದರು. ಯೇಸುವಿನ ಸತ್ಯಮಾತ್ರವೇ ಅವರನ್ನು ಬಿಡುಗಡೆ ಮಾಡಬಲ್ಲದ್ದಾಗಿತ್ತು (ರೋಮ 8:1-2, ಗಲಾತ್ಯ 5:1 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**33** ನಂಬಿಕೆಯನ್ನಿಟ್ಟ ಯೆಹೂದ್ಯರ ಜೊತೆಯಲ್ಲಿ ಯೇಸುವನ್ನು ನಂಬದೇ ಇದ್ದ ಇತರ ಯೆಹೂದ್ಯರು ಅಲ್ಲಿ ಹಾಜರಿದ್ದರು. ಈ ಯೆಹೂದ್ಯರಲ್ಲಿ ಕೆಲವರು :ನಾವು ಅಬ್ರಹಾಮನ [71] ಸಂತತಿಯವರು" ಎಂದು ಹೇಳಿದರು. ಅನೀತಿವಂತ ಮಕ್ಕಳು ತಮ್ಮ ಹೆತ್ತವರ ನೀತಿವಂತಿಕೆಯ ವಿಷಯದಲ್ಲಿ ಜಂಭಪಟ್ಟುಕೊಳ್ಳುವದು ಅತಿ ಸಾಮಾನ್ಯವಾದದ್ದು. ಅವರು ಕುಟುಂಬದ ಹೆಸರಿನ ಮೇಲೆ ಆತುಕೊಳ್ಳುತ್ತಾರೆ. ಆದರೆ ಅದೇ ಸಮಯದಲ್ಲಿ ಅವರು ಅದಕ್ಕೆ ಅವಮಾನವನ್ನೂ ತರುತ್ತಾರೆ. ಅವಿಶ್ವಾಸಿಗಳಾದ ಯೆಹೂದ್ಯರು ಹಾಗೆಯೇ ಇದ್ದರು.

**34** ಅವರು ಪಾಪದಲ್ಲಿ ಜೀವಿಸಿದ್ದರಿಂದ ಪಾಪಕ್ಕೆ ದಾಸರಾಗಿದ್ದರು. ಯೇಸು ಅವರಿಗೆ– "..ಪಾಪಮಾಡುವವರೆಲ್ಲರು[72] ಪಾಪಕ್ಕೆ ದಾಸರಾಗಿದ್ದಾರೆ" ಎಂದು ಹೇಳಿದನು. ಪಾಪಕ್ಕೆ ದಾಸನಾದವನು ತನ್ನಷ್ಟಕ್ಕೆ ತಾನೇ ಪಾಪದಿಂದ ಬಿಡುಗಡೆ ಹೊಂದಲಾರನು. ಪಾಪಮಾಡದಂತೆ ತಡೆಯಲು ಅವನಲ್ಲಿ ಯಾವ ಬಲವು ಇರುವದಿಲ್ಲ. ಅವನಿಗೆ ಸ್ವಂತ ಬಲಕ್ಕಿಂತಲೂ ಹೆಚ್ಚು ಶ್ರೇಷ್ಠವಾದ ಒಂದು ಬಲದ ಅಗತ್ಯವಿರುತ್ತದೆ. (ರೋಮ 6:16, 2 ಪೇತ್ರ 2:19 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**35** ಯೆಹೂದ್ಯರು ತಾವು ಅಬ್ರಹಾಮನ ಸಂತತಿಯವರೆಂದು ಮತ್ತು ಮಕ್ಕಳ ಹಕ್ಕುಗಳನ್ನು ಹೊಂದಿರುವರೆಂದು ಅಂದುಕೊಂಡರು. ಆದರೆ ಆತ್ಮೀಕವಾಗಿ ಯೆಹೂದ್ಯರು ಅಬ್ರಹಾಮನ ನಿಜಮಕ್ಕಳಾಗಿರಲಿಲ್ಲ (ರೋಮ 2:28-29) ಬದಲಾಗಿ ಅವರು ದಾಸರಂತಿದ್ದರು.

ಯೇಸು ಇಲ್ಲಿ "ದಾಸನು ಮನೆಯಲ್ಲಿ ಶಾಶ್ವತವಾಗಿ ಇರುವದಿಲ್ಲ, ಆದರೆ ಮಗನು ಶಾಶ್ವತವಾಗಿ ಇರುವನು" ಎಂದು ಹೇಳುತ್ತಾನೆ. ಒಬ್ಬ ಮಗನು ಮಗನಾಗಿಯೇ ಉಳಿಯುತ್ತಾನೆ. ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಸ್ವತಃ ದೇವರ ಮಕ್ಕಳಾಗಿದ್ದೇವೆ. (ಯೋಹಾನ 1:12, ಗಲಾತ್ಯ 4:4-7 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆದರೆ ಯೇಸು ಇಲ್ಲಿ ನಿರ್ದಿಷ್ಟವಾಗಿ ತನ್ನ ಕುರಿತು ಮಾತಾಡುತ್ತಿದ್ದಾನೆ. ಆತನು ಶಾಶ್ವತವಾಗಿ ಮಗನೇ ಆಗಿದ್ದಾನೆ (1 ಪೂ.ಕಾಲವೃತ್ತಾಂತ 17:13-14).

**36** ಯೇಸು ಶಾಸ್ವತವಾಗಿ ದೇವರ ಮಗನೂ, ಬಾಧ್ಯಸ್ಥನೂ ಆಗಿರುವದರಿಂದ ನಮ್ಮನ್ನು ಬಿಡುಗಡೆಗೊಳಿಸಲು ಬಲ ಮತ್ತು ಅಧಿಕಾರಗಳನ್ನು ಹೊಂದಿದ್ದಾನೆ (ಗಲಾತ್ಯ 5:1 ನೋಡಿರಿ). ನಾವು ನಮ್ಮನ್ನು ಪಾಪದ ದಾಸತ್ವದೊಳಗಿಂದ ಬಿಡಿಸಿಕೊಳ್ಳಲಾಗದು.

ಆದರೆ ಆತನು ನಮ್ಮನ್ನು ಬಿಡುಗಡೆಗೊಳಿಸಬಲ್ಲನು. ಆತನು ನಮ್ಮನ್ನು ಪಾಪದ ಬಲದೊಳಗಿಂದ ಬಿಡಿಸುವದು ಮಾತ್ರವಲ್ಲ ಪಾಪದ ಶಿಕ್ಷೆಯಿಂದಲೂ ನಮ್ಮನ್ನು ಬಿಡುಗಡೆಗೊಳಿಸುತ್ತಾನೆ. ಆತನು ಶಿಲುಬೆಯ ಮೇಲೆ ನಮ್ಮ ದಂಡನೆಯನ್ನು ಹೊತ್ತುಕೊಂಡಾಗ ಒಂದೇ ಸಾರಿ ಮತ್ತು ಎಲ್ಲರಿಗೂ ಆತನು ಪಾಪದ ದಂಡನೆಯಿಂದ ಬಿಡುಗಡೆಯನ್ನು ತಂದನು. (ಮಾರ್ಕ 10:45 ಮತ್ತು ವ್ಯಾಖ್ಯಾನ ನೋಡಿರಿ).

**37** ಯೆಹೂದ್ಯರು ಅಬ್ರಹಾಮನ ಶಾರೀರಿಕ ಸಂತಾನದವರೆಂಬದನ್ನು ಯೇಸು ಒಪ್ಪಿಕೊಂಡನು. ಆದರೆ ಅವರು ಅಬ್ರಹಾಮನು ನಡೆದುಕೊಳ್ಳುತ್ತಿದ್ದ ರೀತಿಯಲ್ಲಿ ನಡೆದುಕೊಳ್ಳಲಿಲ್ಲ (ವಚನಗಳು 39-40). ಅವರು ಯೇಸುವನ್ನು ಕೊಲ್ಲಲು ಪ್ರಯತ್ನಿಸುತ್ತಿದ್ದರು. ಯೇಸುವಿನ ವಾಕ್ಯಗಳಿಗೆ ಅವರಲ್ಲಿ ಯಾವ ಸ್ಥಳವೂ ಇರಲಿಲ್ಲವಾದ್ದರಿಂದಲೇ ಅವರು ಆತನನ್ನು ಕೊಲ್ಲಲು ಪ್ರಯತ್ನಿಸಿದರು. ಅಂದರೆ ಆತನ ವಾಕ್ಯಕ್ಕೆ ಅವರು ಸ್ಥಳ ನೀಡಲಿಲ್ಲ, ಅವರು ಆತನ ಬೋಧನೆಯನ್ನು ಒಪ್ಪಿಕೊಳ್ಳಲು ನಿರಾಕರಿಸಿದರು. ಯೇಸುವಿನ ಮಾತುಗಳನ್ನು ತಿರಸ್ಕರಿಸುವದೆಂದರೆ ಯೇಸುವನ್ನು ತಿರಸ್ಕರಿಸಿದಂತೆಯೇ ಆಗಿದೆ.

**38** ಬಳಿಕ ಯೇಸು ಯೆಹೂದ್ಯರಿಗೆ – "ನಾನು ತಂದೆಯಿಂದ ಕೇಳಿದ್ದನ್ನು ಮಾಡುತ್ತೇನೆ, ಆದರೆ ನಿಮ್ಮ ತಂದೆಯಿಂದ ಕೇಳಿದ್ದನ್ನು ಮಾಡಿರಿ" ಅಂದನು. ಅವರ ತಂದೆಯು ಸೈತಾನನು ಎಂಬದು ಯೇಸುವಿನ ತಾತ್ಪರ್ಯವಾಗಿತ್ತು (ವಚನ 44).

**39-40** ಅಬ್ರಹಾಮನು ನಮ್ಮ ತಂದೆಯೆಂದು ಯೆಹೂದ್ಯರು ಹೇಳಿದರು, ಆದರೆ ಅವರು ನಿಜವಾಗಿಯೂ ಅಬ್ರಹಾಮನ ಸಂತಾನದವರಲ್ಲ, ಯಾಕೆಂದರೆ ಅವರು ಅಬ್ರಹಾಮನಂತೆ ನಡೆದುಕೊಳ್ಳಲಿಲ್ಲ ಎಂದು ಯೇಸು ಹೇಳಿದನು. ಅಬ್ರಹಾಮನು

ನೀತಿವಂತನಾಗಿದ್ದನು. ಆದರೆ ಈ ಯೆಹೂದ್ಯರು ಅನೀತಿವಂತರಾಗಿದ್ದರು. ಅವರು ಯೇಸುವನ್ನು ಕೊಲ್ಲಲು ಪ್ರಯತ್ನಿಸುತ್ತಿದ್ದರು. (ಮತ್ತಾಯ 3:9 ಮತ್ತು ವ್ಯಾಖ್ಯಾನ ನೋಡಿರಿ).

**41** ಯೆಹೂದ್ಯರು ತಮ್ಮ ತಂದೆಯಾದ ಸೈತಾನನು ಮಾಡಿದ ಸಂಗತಿಗಳನ್ನೇ ಮಾಡುತ್ತಿದ್ದರು (ವಚನ 44 ನೋಡಿರಿ). ಆಗ ಯೆಹೂದ್ಯರು "ನಾವು ಹಾದರಕ್ಕೆ ಹುಟ್ಟಿದವರಲ್ಲ" ಎಂದರು. ಈ ಹೇಳಿಕೆಯಲ್ಲಿ ಎರಡು ಅರ್ಥಗಳನ್ನು ಹೊಂದಿರುತ್ತದೆ. ಮೊದಲನೆಯದಾಗಿ ಯೇಸು ಸ್ವತಃ ಹಾದರಕ್ಕೆ ಹುಟ್ಟಿದವನೆಂದು ಯೆಹೂದ್ಯರು ಯೋಚಿಸುತ್ತಿದ್ದಿರಬಹುದು. ಮರಿಯಳು ವಿವಾಹಕ್ಕೆ ಮುನ್ನವೇ ಗರ್ಭಿಣಿಯಾಗುವದರ ಬಗ್ಗೆ ಅವರಿಗೆ ಗೊತ್ತಿದ್ದಿರಬಹುದು (ಮತ್ತಾಯ 1:18). ಹೀಗೆ ಅವರು ಆತನಿಗೆ "ನಾವು ನಿನ್ನ ಹಾಗೆ ಹಾದರಕ್ಕೆ ಹುಟ್ಟಿದವರಲ್ಲ" ಎಂಬ ಅರ್ಥದಲ್ಲಿ ಹಾಗೆ ಹೇಳಿರುವ ಸಾದ್ಯತೆಯಿದೆ.

ಅಥವಾ ಎರಡನೆಯದಾಗಿ ಅವರು "ನಾವು ದೇವರಿಗೆ ನಂಬಿಗಸ್ಥರಾಗಿ ಉಳಿದಿದ್ದೇವೆ" ಎಂದು ಸರಳವಾಗಿ ಹೇಳುತ್ತಿದ್ದಿರಬಹುದು. ಹಳೆ ಒಡಂಬಡಿಕೆಯಲ್ಲಿ ದೇವರನ್ನು ತೊರೆದವರಿಗೆ ವ್ಯಭಿಚಾರಿಗಳೆನ್ನುತ್ತಿದ್ದರು, ಇವರ ಮಕ್ಕಳು "ಹಾದರಕ್ಕೆ" ಹುಟ್ಟಿದವರಾಗಿರಬಹುದು. ಹಾಗಾದರೆ ಯೆಹೂದ್ಯರ ಮಾತಿನ ತಾತ್ಪರ್ಯವು "ನಾವು ಆ ರೀತಿಯಾಗಿರುವದಿಲ್ಲ" ಎಂಬದಾಗಿ ಇರಬಹುದು.

**42-43** ಯೆಹೂದ್ಯರು "ನಮಗೆ ಒಬ್ಬನೇ ತಂದೆ, ಆತನು ದೇವರೇ" ಅಂದರು (ವಚನ 41) ಆದರೆ ಯೇಸು ಅದನ್ನು ಒಪ್ಪಲಿಲ್ಲ. ದೇವರು ಅವರ ತಂದೆಯಾಗಿರಲಿಲ್ಲ. ಒಂದು ವೇಳೆ ದೇವರು ಅವರ ತಂದೆಯಾಗಿದ್ದರೆ ಅವರು ಕ್ರಿಸ್ತನನ್ನು ಪ್ರೀತಿಸಿರುತ್ತಿದ್ದರು ಯಾಕೆಂದರೆ ಕ್ರಿಸ್ತನು ದೇವಕುಮಾರನಾಗಿದ್ದನು. ಕ್ರಿಸ್ತನನ್ನು ಪ್ರೀತಿಸುವವರು ಮಾತ್ರವೇ ದೇವರನ್ನು ತಮ್ಮ ತಂದೆಯೆಂದು ಕರೆಯಬಹುದು.

**44** ಆದರೆ ಈ ಯೆಹೂದ್ಯರು ಯೇಸುವನ್ನು ಕೊಲ್ಲಲು ಪ್ರಯತ್ನಿಸುತ್ತಿದ್ದರು. ಆದುದರಿಂದ ಅವರ ತಂದೆಯು ಸೈತಾನನು, ಆತನು ಆಧಿಯಿಂದಲೂ ಕೊಲೆಗಾರನಾಗಿದ್ದಾನೆ. ಕಾಯಿನನು ತನ್ನ ತಮ್ಮನಾದ ಹೆಬೇಲನನ್ನು ಕೊಲ್ಲುವಂತೆ ಸೈತಾನನು ಅವನನ್ನು ಪ್ರೇರೇಪಿಸಿದನು, ಇದು ಇತಿಹಾಸದಲ್ಲಿಯೇ ಪ್ರಥಮ ಹತ್ಯೆಯಾಗಿದೆ (ಆದಿಕಾಂಡ 4:4-8, 1 ಯೋಹಾನ 3:12).

ಆದರೆ ಅದಕ್ಕಿಂತಲೂ ಹೆಚ್ಚಾಗಿ ಮಾನವ ಜನಾಂಗದೊಳಗೆ ಪಾಪವು ಪ್ರವೇಶಿಸುವದಕ್ಕೆ ಸೈತಾನನು ಕಾರಣನಾದವನು, ಮತ್ತು ಅವನು ಈ ಕಾರ್ಯದಿಂದ ಎಲ್ಲಾ ಮನುಷ್ಯರು ಮರಣಕ್ಕೆ ಒಳಗಾದರು (ರೋಮ 5:12 ಮತ್ತು ವ್ಯಾಖ್ಯಾನ ನೋಡಿರಿ). ಹೀಗೆ ಒಂದು ಆತ್ಮೀಕ ಅರ್ಥದಲ್ಲಿ ಸೈತಾನನನ್ನು ಎಲ್ಲಾ ಮಾನವರ "ಕೊಲೆಗಾರ" ಎಂದು ಕರೆಯಬಹುದು. ಸೈತಾನನು ಒಬ್ಬ ಕೊಲೆಗಾರನು ಮಾತ್ರವಲ್ಲ, ಆತನು ಒಬ್ಬ ಸುಳ್ಳುಗಾರನೂ ಆಗಿದ್ದಾನೆ (ನಾವು ಕೊಲೆಯಂತಹ ಒಂದು ಪಾಪವು ನಮ್ಮ ಮೇಲೆ ಹಿಡಿತ ಸಾಧಿಸಲು ಬಿಟ್ಟರೆ ಸುಳ್ಳು ಹೇಳುವಿಕೆಯಂತಹ ಇತರ ಪಾಪಗಳು ಅದರೊಂದಿಗೆ ಸೇರಿಕೊಳ್ಳಲು ಯಾವಾಗಲೂ ಕಾದಿರುತ್ತವೆ! ಎಂಬದನ್ನು ಗಮನಿಸಿರಿ) ಎಲ್ಲಾ ಸುಳ್ಳುಗಳು, ಒಂದು ಅತಿಚಿಕ್ಕ ಮಿಥ್ಯವೂ ಸಹ ಸೈತಾನನಿಂದಲೇ ಬರುತ್ತವೆ. ಆತನು ಸುಳ್ಳುಗಳಿಗೆ ಮೂಲ ಪುರುಷನು ಮತ್ತು ಸುಳ್ಳುಗಾರರ ತಂದೆಯೂ ಆಗಿದ್ದಾನೆ. ದೇವರಲ್ಲಿ ಯಾವ ಮಿಥ್ಯವು ಇಲ್ಲದಿರುವ ಹಾಗೆಯೇ ಸೈತಾನನಲ್ಲಿ ಯಾವ ಸತ್ಯವೂ ಇರುವದಿಲ್ಲ. ಸೈತಾನನು ಮನುಷ್ಯರ ಮೇಲೆ ಆಕ್ರಮಣಮಾಡಲು ಉಪಯೋಗಿಸುವ ಮುಖ್ಯವಿಧಾನ ವೇನೆಂದರೆ ಅವರನ್ನು ವಂಚಿಸುವದೇ ಆಗಿದೆ (ಆದಿಕಾಂಡ 3:4-5). ಆತನು ಒಳ್ಳೆಯದನ್ನು ಕೆಟ್ಟದ್ದೆಂದು ಮತ್ತು ಕೆಟ್ಟದ್ದನ್ನು ಒಳ್ಳೆಯದೆಂದು ಕರೆಯುತ್ತಾನೆ. ಆತನು ಸತ್ಯವನ್ನು ಮಿಥ್ಯವೆಂದು ಹಾಗು ಮಿಥ್ಯವನ್ನು ಸತ್ಯವೆಂದು ಕರೆಯುತ್ತಾನೆ. ಅವನು ಮನುಷ್ಯರನ್ನು ದಾಸರನ್ನಾಗಿಸುತ್ತಾನೆ ಆದರೆ ಅವರು ಮುಕ್ತರು ಎಂದು ಹೇಳುತ್ತಾನೆ!

**45** ಯೆಹೂದ್ಯರು ಯೇಸುವನ್ನು ನಂಬಲಿಲ್ಲ ಯಾಕೆಂದರೆ ಅವರು ಅದಕ್ಕೆ ಬದಲಾಗಿ ಸೈತಾನನ ಸುಳ್ಳುಗಳನ್ನೇ ನಂಬಿದರು. ಯೇಸು ಸತ್ಯವನ್ನು ಮಾತಾಡಿದನು, ಆದರೆ ಅವರು ಕೇವಲ ಸುಳ್ಳುಗಳನ್ನೇ ನಂಬಿದರು. ಸೈತಾನನು ಅವರ ಬುದ್ಧಿಗಳನ್ನು ಮಂಕು ಮಾಡಿ ಹೃದಯಗಳನ್ನು ಕಠಿಣಗೊಳಿಸಿದ್ದನು. ಕ್ರಿಸ್ತನ ಬೆಳಕು ಪ್ರಕಾಶಿಸುತ್ತಿತ್ತು ಆದರೆ ಅವರು ಅದನ್ನು ನೋಡಲಾಗಲಿಲ್ಲ. ಸೈತಾನನು ಮನುಷ್ಯರ ಮೇಲೆ ಬೀರುವ ಪರಿಣಾಮವು ಇಂತಹದೇ.

**46** ಯೇಸು ಯೆಹೂದ್ಯರಿಗೆ "ನನ್ನಲ್ಲಿ ಒಂದು ಪಾಪವನ್ನಾದರೂ ತೋರಿಸಿಕೊಡಿರಿ" ಎಂದನು. ಈ ರೀತಿ ಹೇಳುವದಕ್ಕೆ ಯಾವನಾದರೂ ಎಂದಾದರೂ ಧೈರ್ಯ ಮಾಡುವನೋ? ಯೇಸು ಮಾತ್ರವೇ ಅದನ್ನು ಹೇಳಲು ಶಕ್ತನಾಗಿದ್ದನು. ಯಾಕೆಂದರೆ ಆತನು ಮಾತ್ರವೇ ಪಾಪರಹೀತನಾಗಿದ್ದನು (ಇಬ್ರಿಯ 4:15, 1 ಯೋಹಾನ 3:5).

ಒಂದು ವೇಳೆ ಯೆಹೂದ್ಯರು ಯೇಸುವನ್ನು ಪಾಪಿಯೆಂದು ನಿರೂಪಿಸುವದಾದರೆ ಅವರು ಆತನ ಮಾತುಗಳನ್ನು ನಂಬದಿರಲಿ. ಆದರೆ ಆತನು ನಿಜವಾಗಿಯೂ ಪಾಪರಹಿತನಾಗಿದ್ದರೆ, ಮತ್ತು ಆತನು ಅವರಿಗೆ ಸತ್ಯವನ್ನು ಹೇಳುತ್ತಿರುವದಾದರೆ ಅವರು ಆತನನ್ನು ನಂಬಲಿ.

ಆದರೆ ವಾಸ್ತವದಲ್ಲಿ ಯೇಸು ಪಾಪವನ್ನು ಮಾಡಿದ್ದಾನೆಂದು ಯೆಹೂದ್ಯರಿಗೆ ನಿರೂಪಿಸಲಾಗಲಿಲ್ಲ. ಆದಾಗ್ಯು ಅವರು ಆಗಲೂ ಆತನನ್ನು ನಂಬಲಿಲ್ಲ. ಯೆಹೂದ್ಯರು ಯೇಸುವಿನಲ್ಲಿ ನಂಬಿಕೆಯಿಡಲು ನಿರಾಕರಿಸಿದ್ದಕ್ಕೆ ಯೇಸುವಿನ ಯಾವದೇ ಪಾಪವು ಕಾರಣವಲ್ಲ ಆದರೆ ಸ್ವತಃ ಅವರ ಪಾಪವೇ ಕಾರಣವಾಗಿತ್ತು (ಯೋಹಾನ 3:19-20).

**47** ದೇವರಿಂದ ಹುಟ್ಟಿದವನು ದೇವರ ಮಾತುಗಳನ್ನು ಕೇಳುತ್ತಾನೆ. ದೇವರಿಗೆ ಸಂಬಂಧಪಡದವರು ದೇವರನ್ನು ಅರ್ಥಮಾಡಿಕೊಳ್ಳಲಾರರು (ಯೋಹಾನ 8:23, 1 ಕೊರಿಂಥ 2:12, 14, 1ಯೋಹಾನ 4:6). ದೇವರಿಗೆ ಸೇರಿದವರು ಪವಿತ್ರಾತ್ಮನಿಂದ ಹೊಸದಾಗಿ ಹುಟ್ಟಿದವರೇ ಆಗಿದ್ದಾರೆ. ಅವರು ಆತ್ಮೀಕ ಸಂಗತಿಗಳನ್ನು ಅರ್ಥಮಾಡಿಕೊಳ್ಳುವರು.

ಪಶ್ಚಾತಾಪಪಡದ ಜನರಿಗೆ ಆತ್ಮೀಕ ಸಂಗತಿಗಳನ್ನು ಬೋಧಿಸುವದೆಂದರೆ ಹುಟ್ಟು ಕುರುಡನಿಗೆ ಬಣ್ಣದ ಕುರಿತು ವರ್ಣಿಸಲು ಪ್ರಯತ್ನಿಸಿದ ಹಾಗಿರುತ್ತದೆ ಅಥವಾ ಕಿವುಡನಾಗಿ ಹುಟ್ಟಿದ ವ್ಯಕ್ತಿಯೊಬ್ಬನಿಗೆ ಸಂಗೀತ ಕಲಿಸಲು ಪ್ರಯತ್ನಿಸಿದಂತಿರುತ್ತದೆ.

ಯೇಸು ತಾನು ಯಾರೆಂದು ಹೇಳಿಕೊಂಡದ್ದು (8:48-59)

**48** ಯೆಹೂದ್ಯರು ಯೇಸುವಿಗೆ ನೀಡಲಾದ ಒಂದೇ ಉತ್ತರವೇನೆಂದರೆ ಆತನನ್ನು ಬೈಯುವದು. ಅವರು ಆತನನ್ನು ಒಬ್ಬ ಸಮಾರ್ಯನೆಂದರು, ಅದು ಯೆಹೂದ್ಯರ ಮನಸ್ಸಿನಲ್ಲಿ ಒಂದು ದೊಡ್ಡ ಅವಮಾನವಾಗಿತ್ತು. ಯೆಹೂದ್ಯರು ಮಾತ್ರವೇ ಅಬ್ರಹಾಮನ ಮಕ್ಕಳಲ್ಲವೆಂದು ಸಮಾರ್ಯರು ಹೇಳುತ್ತಿದ್ದರು. ಹಾಗು ಸಮಾರ್ಯರು ತಮ್ಮನ್ನು ಅಬ್ರಹಾಮನ ಮಕ್ಕಳೆಂದು ಪರಿಗಣಿಸುತ್ತಿದ್ದರು. (ಯೋಹಾನ 4:8-9 ಮತ್ತು ವ್ಯಾಖ್ಯಾನ ನೋಡಿರಿ).

ಅಲ್ಲದೆ ಯೆಹೂದ್ಯರು ಯೇಸುವನ್ನು ದೆವ್ವಹಿಡಿದವನೆಂದು ಸಹ ಕರೆದರು (ಮಾರ್ಕ 3:22, 30, ಯೋಹಾನ 7:20, 8:52 ನೋಡಿರಿ). ಒಬ್ಬ ವ್ಯಕ್ತಿಯ ತರ್ಕಗಳಿಗೆ ಉತ್ತರಿಸುವದಕ್ಕಿಂತಲೂ ಆತನನ್ನು ಅನೇಕ ಹೆಸರುಗಳಿಂದ ಹೀಯಾಳಿಸುವದು ಸುಲಭ.

**49** ಯೇಸು ದೆವ್ವ ಹಿಡಿದವನಾಗಿರಲಿಲ್ಲ, ಯಾಕೆಂದರೆ ಆತನು ದೇವರನ್ನು ಸನ್ಮಾನಿಸುವವನಾಗಿದ್ದನು. ದೆವ್ವಹಿಡಿಯಲ್ಪಟ್ಟವರು ಎಂದಿಗೂ ದೇವರನ್ನು ಸನ್ಮಾನಿಸುವದಿಲ್ಲ, ಅವರು ಸೈತಾನನ ಹತೋಟಿಯಲ್ಲಿ ಇರುತ್ತಾರೆ.

ಯೇಸು ದೇವರನ್ನು ಸನ್ಮಾನಿಸಿದನು. ಆದರೆ ಆತನು ಮನುಷ್ಯರಿಂದ ಅವಮಾನಕ್ಕೊಳಗಾದನು. ದೇವರು ತಾನೇ ತನ್ನನ್ನು ಸನ್ಮಾನಿಸುವವರನ್ನು ಸನ್ಮಾನಿಸುತ್ತೇನೆಂದು ವಾಗ್ದಾನ ಮಾಡಿದ್ದಾನೆ, ಆದರೆ ಅವರು ಇತರ ಜನರಿಂದ ಸನ್ಮಾನಿಸಲ್ಪಡುವರೆಂದು ಆತನು ಎಂದಿಗೂ ವಾಗ್ದಾನಮಾಡಿರುವದಿಲ್ಲ.

**50** ಜನರು ತನ್ನನ್ನು ಅವಮಾನಿಸಿದರೆ ಯೇಸು ಅದಕ್ಕಾಗಿ ಚಿಂತಿಸಲಿಲ್ಲ. ಆತನು ತನಗೆ ಮಾನ ಬರಬೇಕೆಂದು ಎದುರು ನೋಡುತ್ತಿದ್ದಿಲ್ಲ. ಆದರೆ ನನಗೆ ಮಾನಬರಬೇಕೆಂದು ಅಪೇಕ್ಷಿಸುವವನು ಒಬ್ಬನಿದ್ದಾನೆ, ಆತನು ದೇವರು, ಆತನು ಅಂತ್ಯದಲ್ಲಿ ಮಗನಾದ ಕ್ರಿಸ್ತನನ್ನು ಮಹಿಮೆ ಪಡಿಸುವನು ಯಾಕೆಂದರೆ ಕ್ರಿಸ್ತನು ಮಹಿಮೆಹೊಂದಿದರೆ ದೇವರು ಸಹ ಮಹಿಮೆಗೊಳ್ಳುವನು (ಯೋಹಾನ 17:1 ನೋಡಿರಿ).

ದೇವರು ನ್ಯಾಯ ತೀರಿಸುವವನು ಸಹ ಆಗಿದ್ದಾನೆ. ದೇವರು ನ್ಯಾಯ ತೀರಿಸುವ ಕಾರ್ಯವನ್ನು ಕ್ರಿಸ್ತನಿಗೆ ವಹಿಸುವನು, ಆಗ ಎಲ್ಲಾ ಮಾನವರು ಕ್ರಿಸ್ತನನ್ನು ಸನ್ಮಾನಿಸುವಂತಾಗುತ್ತದೆ (.ಯೋಹಾನ 5:22-23). ಈ ರೀತಿಯಾಗಿ ದೇವರು ತನಗೂ, ತನ್ನ ಮಗನಿಗೂ ಮಹಿಮೆಯನ್ನು ತಂದುಕೊಳ್ಳುವನು. ಮತ್ತು ಕ್ರಿಸ್ತನನ್ನು ಅವಮಾನಿಸುವವರೆಲ್ಲರ ಮೇಲೆಯು ಆತನು ಕ್ರಿಸ್ತನ ಮೂಲಕವೇ ನ್ಯಾಯ ತೀರ್ಪನ್ನು ಬರಮಾಡುವನು (ವಚನ 49).

ಯೇಸು ಯೆಹೂದ್ಯರೊಂದಿಗೆ ಪ್ರತಿದಾಳಿ ಮಾಡಬೇಕಾಗಿದ್ದಿಲ್ಲ. ಆತನು ತನ್ನ ಮಹಿಮೆಯನ್ನು ಕಾಪಾಡಿಕೊಳ್ಳಲು ಹೋರಾಡಬೇಕಾಗಿರಲಿಲ್ಲ, ಅದಕ್ಕೆ ಬದಲಾಗಿ ಆತನು ನ್ಯಾಯವಾಗಿ ತೀರ್ಪು ಮಾಡುವಾತನಿಗೆ ತನ್ನನ್ನು ಒಪ್ಪಿಸಿದನು. (1ಪೇತ್ರ 2:23-24ಮತ್ತು ವ್ಯಾಖ್ಯಾನ ನೋಡಿರಿ).

**51** ಆದರೆ ಯೇಸುವಿನ ವಾಕ್ಯವನ್ನು ಕೈಕೊಂಡು ನಡೆಯುವವನು (ವಚನ 31) ಎಂದಿಗೂ ಸಾವನ್ನು ಕಾಣುವದಿಲ್ಲ. ಅಂದರೆ ಆತನ ಆತ್ಮವು ಎಂದಿಗೂ ಸಾಯುವದಿಲ್ಲ, ಅವನು ನಿತ್ಯದಂಡನೆಯಿಂದ ರಕ್ಷಿಸಲ್ಪಡುವನು, ನಿತ್ಯದಂಡನೆಯೆಂದರೆ ಶಾಶ್ವತವಾಗಿ ದೇವರಿಂದ ಅಗಲಿಸಲ್ಪಟ್ಟು ನರಕದಲ್ಲಿರುವದು. ಇದು ಆತ್ಮಿಕವಾಗಿ ಸಾಯುವದೆಂದರ್ಥವಾಗಿದೆ. ಇದು ನಿತ್ಯ ಜೀವಕ್ಕೆ ತದ್ವಿರುದ್ಧವಾದದ್ದಾಗಿದೆ.

**52-53** ಯೇಸು ತನ್ನ ವಾಕ್ಯಗಳನ್ನು ಕೈಕೊಂಡು ನಡೆದವರು ಮರಣವನ್ನು ಕಾಣುವದಿಲ್ಲ ಎಂದು ಹೇಳಿದ್ದಕ್ಕೆ ಯೆಹೂದ್ಯರಿಗೆ ಬೇಸರವಾಯಿತು "ನಿನ್ನನ್ನು ಯಾರೆಂತ ಮಾಡಿಕೊಳ್ಳುತ್ತೀ "ಎಂದು ದ್ವೇಷಗೊಂಡವರಾಗಿ ಕೇಳಿದರು. "ಎಲ್ಲರೂ ಸಾಯುತ್ತಾರೆ. ಅಬ್ರಹಾಮನು ಸತ್ತನು, ಪ್ರವಾದಿಗಳು ಸತ್ತರು, ಇತಿಹಾಸದ ಎಲ್ಲಾ ಶ್ರೇಷ್ಠ ವ್ಯಕ್ತಿಗಳು ಸತ್ತು ಹೋಗಿದ್ದಾರೆ. ನೀನು ಅವರೆಲ್ಲರಿಗಿಂತಲೂ ದೊಡ್ಡವನೋ? ಆ ಶ್ರೇಷ್ಠ ವ್ಯಕ್ತಿಗಳಿಗೆ ತಮ್ಮ ಮರಣವನ್ನು ತಿಳಿಯಲಾಗದೆ ಹೋಗಿರುವಾಗ ನೀನು ಇತರರಿಗೆ ಮರಣವಾಗದಂತೆ ತಡೆಯುವಿಯೋ?" ಎಂದು ಕೋಪದಿಂದ ಕೇಳಿದರು.

ಯೆಹೂದ್ಯರು ಯೋಚಿಸುವದು ಎರಡು ವಿಧಗಳಲ್ಲಿ ತಪ್ಪಾಗಿತ್ತು. ಮೊದಲನೆಯದಾಗಿ ಅಬ್ರಹಾಮ ಹಾಗು ಪ್ರವಾದಿಗಳು ಸತ್ತಿರಲಿಲ್ಲ, ಅವರ ಆತ್ಮಗಳು ಜೀವಂತವಾಗಿದ್ದವು (ಮಾರ್ಕ 12:26-27 ಮತ್ತು ವ್ಯಾಖ್ಯಾನ ನೋಡಿರಿ). ಅವರು ಮಾಡಿದ ಎರಡನೆಯ ತಪ್ಪು ಏನೆಂದರೆ, ಅಬ್ರಹಾಮ ಮತ್ತು ಪ್ರವಾದಿಗಳಿಗಿಂತಲೂ ಶ್ರೇಷ್ಠನಾದ ಒಬ್ಬನು ಬರುವನು ಮತ್ತು ಆತನು ಮೆಸ್ಸಿಯನಾಗಿರುವನೆಂದು ಹಳೆ ಒಡಂಬಡಿಕೆಯು ಸ್ಪಷ್ಟವಾಗಿ ಬೋಧಿಸಿತ್ತು. ಆದುದರಿಂದ ಕ್ರಿಸ್ತನು ತಾನು ಅಬ್ರಹಾಮನಿಗಿಂತ ಹೆಚ್ಚಿನವನೆಂದು ಅವರಿಗೆ ತೋರಿಸಿಕೊಂಡಾಗ (ವಚನ 58) ಅವರು ಆತನನ್ನು ಮೆಸ್ಸಿಯನೇ ಎಂದು ತೀರ್ಮಾನಿಸಿರಬಹುದಿತ್ತು. ಅದಕ್ಕೆ ಬದಲಾಗಿ ಅವರು ಆತನಿಗೆ ದೆವ್ವಹಿಡದಿದೆ ಎಂಬ ತೀರ್ಮಾನಕ್ಕೆ ಬಂದರು!

**54** "ನಿನ್ನನ್ನು ಯಾರೆಂತ ಮಾಡಿಕೊಳ್ಳುತ್ತಿ?" ಎಂಬ ಪ್ರಶ್ನೆಗೆ ಯೇಸು ಹೀಗೆ ಉತ್ತರಿಸಿದನು: "ನಾನು ಆ ಪ್ರಶ್ನೆಗೆ ಉತ್ತರ ನೀಡಬೇಕಾದ ಅಗತ್ಯವಿಲ್ಲ. ದೇವರು ಅದಕ್ಕೆ ಉತ್ತರಿಸುತ್ತಾನೆ. ನಾನು ನನ್ನನ್ನು ಮಹಿಮೆ ಪಡಿಸಿಕೊಳ್ಳಬೇಕಾಗಿಲ್ಲ (ವಚನ 50). ನನ್ನನ್ನು ಮಹಿಮೆಪಡಿಸುವವನು ತಂದೆಯೇ. ಆತನು ನಿಮ್ಮ ದೇವರು ಆದರೆ ನನಗೆ ಆತನು ತಂದೆಯಾಗಿದ್ದಾನೆ".

ಯೆಹೂದ್ಯರು ತಮ್ಮನ್ನು ದೇವರ ಮಕ್ಕಳೆಂದು ಹೇಳಿಕೊಳ್ಳಲಾಗಲಿಲ್ಲ, ಯಾಕೆಂದರೆ ಅವರು ದೇವರ ಏಕೈಕ ನಿಜ ಕುಮಾರನಾದ

ಕ್ರಿಸ್ತನನ್ನು ತಿರಸ್ಕರಿಸಿದ್ದರು. ಕ್ರಿಸ್ತನನ್ನು ಅಂಗೀಕರಿಸಿಕೊಂಡಿರುವವರಿಗೆ ಮಾತ್ರವೇ ದೇವರ ಮಕ್ಕಳಾಗುವ ಹಾಗು ದೇವರನ್ನು "ತಂದೆ" ಯೆಂದು ಕರೆಯುವ ಅಧಿಕಾರವನ್ನು ಕೊಡಲಾಗುತ್ತದೆ (ಯೋಹಾನ 1:12).

**55** ಆದರೆ ಯೆಹೂದ್ಯರು ಆತನನ್ನು ಸರಿಯಾಗಿ "ದೇವರು" ಎಂದು ಕರೆಯಲಾಗಲಿಲ್ಲ, ಯಾಕೆಂದರೆ ಅವರು ಆತನನ್ನು ತಿಳಿದಿರಲಿಲ್ಲ. ಕ್ರಿಸ್ತನು ಹಾಗು, ಕ್ರಿಸ್ತನಲ್ಲಿ ನಂಬಿಕೆಯಿಟ್ಟವರು ಮಾತ್ರವೇ ನಿಜವಾಗಿಯೂ ದೇವರನ್ನು ತಿಳಿದವರಾಗಿರುತ್ತಾರೆ (ಯೋಹಾನ 1:18, 7:28-29, 8:19).

**56** ಆನಂತರ ಯೇಸು ಅವರಿಗೆ "ನಿಮ್ಮ ಮೂಲ ಪುರುಷನಾದ ಅಬ್ರಹಾಮನು ನನ್ನ ದಿನವನ್ನು [73] ತಾನು ನೋಡುವನೆಂದು ಉಲ್ಲಾಸಪಟ್ಟನು, ಅದನ್ನು ನೋಡಿ ಸಂತೋಷಗೊಂಡನು" ಎಂದು ಹೇಳಿದನು. ನನ್ನ ದಿನ ಅಂದರೆ ಕ್ರಿಸ್ತನು ಭೂಮಿಗೆ ಬರುವ ದಿನ ಎಂದರ್ಥವಾಗಿದೆ. ಅಬ್ರಹಾಮನ ಮೂಲಕ ಲೋಕದ ಎಲ್ಲಾ ಜನರು ಆಶೀರ್ವದಿಸಲ್ಪಡುವರೆಂದು ದೇವರು ಅವನಿಗೆ ವಾಗ್ದಾನಮಾಡಿದ್ದನು (ಆದಿಕಾಂಡ 12:3). ಈ ವಾಗ್ದಾನವು ಕ್ರಿಸ್ತನಲ್ಲಿ ನೆರವೇರಿತ್ತು. ಕ್ರಿಸ್ತನ ಮುಖಾಂತರವೇ ಲೋಕದ ಎಲ್ಲಾ ಜನರು ಆಶೀರ್ವಧಿಸಲ್ಪಟ್ಟಿರುತ್ತಾರೆ. ಅಬ್ರಹಾಮ ಅದನ್ನು (ಕ್ರಿಸ್ತನ ದಿನ) ನಂಬಿಕೆಯ ಕಣ್ಣುಗಳ ಮೂಲಕ ನೋಡಿ ಸಂತೋಷಗೊಂಡನು.

**57** ಅಬ್ರಹಾಮನು ನಿಜವಾಗಿಯೂ ಅವನ ಸ್ವಂತ ಕಣ್ಣುಗಳಿಂದ ತನ್ನನ್ನು ನೋಡಿದ್ದಾನೆಂಬದಾಗಿ ಯೇಸು ಹೇಳುತ್ತಿರುವನೆಂದು ಯೆಹೂದ್ಯರು ಅಂದುಕೊಂಡರು. ಅವರು ಯೇಸುವಿಗೆ "ಅಬ್ರಹಾಮನು ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಜೀವಂತವಿದ್ದಾಗ ನೀನೂ ಜೀವಂತವಾಗಿದ್ದಿಯೋ? ನಿನಗೆ ಇನ್ನೂ ಐವತ್ತು ವರ್ಷವಾಗಿಲ್ಲ"[74] ಎಂದು ಹಾಸ್ಯಮಾಡುತ್ತಾ ಕೇಳಿದರು.

**58** ಆದರೆ ಯೇಸು ತನ್ನ ಕುರಿತು ಹೇಳಿಕೊಳ್ಳಲಿಕ್ಕಿದ್ದ ಸಂಗತಿಯು ಅವರು ಊಹಿಸಿದ್ದಕ್ಕಿಂತಲೂ ಇನ್ನು ಹೆಚ್ಚು ಶ್ರೇಷ್ಠವಾಗಿತ್ತು. ಯೇಸು ತಾನು ಅಬ್ರಹಾಮನ ಜೀವಿತ ಕಾಲದಲ್ಲಿ ಮಾತ್ರವೇ ಅಲ್ಲ, ಅಬ್ರಹಾಮನು ಅಸ್ತಿತ್ವದಲ್ಲಿರುವದಕ್ಕೆ ಮುಂಚೆಯೇ ಇದ್ದೇನೆ ಎಂದು ಉತ್ತರಿಸಿದನು! ಯೇಸು ಸದಾಕಾಲವೂ ಜೀವಿಸಿದ್ದನು. ಆತನು ಆದಿಯಿಂದಲೂ ದೇವರ ಜೊತೆಯಲ್ಲಿದ್ದಾನೆ (ಯೋಹಾನ 1:1-2).

"ಅಬ್ರಹಾಮನು ಹುಟ್ಟುವದಕ್ಕಿಂತ ಮುಂಚಿನಿಂದಲೂ ನಾನು ಇದ್ದೇನೆ" ಎಂದು ಯೇಸು ಹೇಳಿದನು. ನಾನು ಇರುವಾತನು ಎಂಬ ಹೆಸರನ್ನು ದೇವರು ಮಾತ್ರವೇ ಉಪಯೋಗಿಸಬಹುದು. ವಾಸ್ತವದಲ್ಲಿ "ಇರುವಾತನು" ಎಂಬದು ದೇವರು ತನಗೆ ನೀಡಿದ ಹೆಸರಾಗಿದೆ, ಮತ್ತು ಯೆಹೂದ್ಯರು ತನ್ನನ್ನು ಈ ಹೆಸರಿನಿಂದ ಕರೆಯ ಬೇಕೆಂದು ಹೇಳಿದನು (ವಿಮೋಚನಕಾಂಡ 3:14).

"ಇರುವಾತನು" ಎಂದರೆ "ನಾನು ಯಾವಾಗಲೂ ಇದ್ದೇನೆ, ಹಾಗು ಯಾವಾಗಲೂ ಇರುತ್ತೇನೆ. ನನಗೆ ಆದಿಯೂ, ಅಂತ್ಯವೂ ಇರುವದಿಲ್ಲ" ಎಂದರ್ಥವಾಗಿದೆ. ಆದುದರಿಂದ ಯೇಸು ನಾನು ಇದ್ದೇನೆ, ಎಂಬ ಪದಗಳನ್ನು ಉಪಯೋಗಿಸಿದಾಗ ಆತನು "ನಾನು ದೇವರು" ಎಂದು ಹೇಳುತ್ತಿರುವನು.

**59** ಯೇಸು "ನಾನು ದೇವರು" ಎಂದು ಹೇಳಿದನೆಂಬದಾಗಿ ಯೆಹೂದ್ಯರಿಗೆ ಶೀಘ್ರವೇ ಅರ್ಥವಾಯಿತು. ಯಾವದೇ ಮನುಷ್ಯನು ತನ್ನನ್ನು ದೇವರೆಂದು ಕರೆದುಕೊಂಡರೆ ದೈವದೂಷಣೆ ಮಾಡಿದ ಹಾಗಿರುತ್ತಿತ್ತು. (ಯೋಹಾನ 5:18 ಮತ್ತು ವ್ಯಾಖ್ಯಾನ ನೋಡಿರಿ). ಆದ್ದರಿಂದ ಆವ್ಯಕ್ತಿಯನ್ನು ಸಾಯಿಸಲು ಅವರು ತಕ್ಷಣವೇ ಕಲ್ಲುಗಳನ್ನು ಎತ್ತಿಕೊಳ್ಳುತ್ತಿದ್ದರು. ಯಾಕೆಂದರೆ ಧರ್ಮ ಶಾಸ್ತ್ರದ ಅನುಸಾರವಾಗಿ ದೈವ ದೂಷಣೆಗೆ ಶಿಕ್ಷೆಯು ಮರಣವೇಆ ಆಗಿತ್ತು (ಯಾಜಕಕಾಂಡ 24:16).

ಆದರೆ ಯೇಸು ಅವರ ಕಣ್ಣಿಗೆ ಮರೆಯಾಗಿ ಹೊರಟು ಹೋದನು. ದೇವರು ಆತನನ್ನು ಅಡಗಿಸಿಟ್ಟನು. ಯಾಕೆಂದರೆ ಅದು ಇನ್ನೂ ಆತನ ಮರಣದ ಸಮಯವಾಗಿರಲಿಲ್ಲ (ಯೋಹಾನ 7:30 ನೋಡಿರಿ).

---

## ಅಧ್ಯಾಯ - 9

### ಯೇಸು ಹುಟ್ಟು ಕುರುಡನಿಗೆ ಕಣ್ಣುಕೊಟ್ಟದ್ದು (9:1-12)

**1** ಯೇಸು ಅನೇಕ ಕುರುಡರನ್ನು ಗುಣಪಡಿಸಿದನು, ಆದರೆ ಹುಟ್ಟುಕುರುಡನಾದ ಒಬ್ಬ ವ್ಯಕ್ತಿಗೆ ಕಣ್ಣು ಕೊಟ್ಟದ್ದು ಇದೇ ಮೊದಲ ಸಾರಿ ದಾಖಲಾಗಿರುತ್ತದೆ. ಯೇಸು ಯಾವದೇ ರೋಗವನ್ನು, ಸಾಮಾನ್ಯ ವೈದ್ಯರು ಗುಣಪಡಿಸಲಾಗದ ದೀರ್ಘಕಾಲದ ರೋಗಗಳನ್ನು ಸಹ ಸ್ವಸ್ಥಮಾಡಬಲ್ಲವನಾಗಿದ್ದಾನೆ (ಮಾರ್ಕ 5:25-29, ಯೋಹಾನ 5:5-9 ನೋಡಿರಿ).

**2** ಕುರುಡತನದಂತಹ ರೋಗಗಳು ಯಾವದೋ ಪಾಪದ ಒಂದು ಶಿಕ್ಷೆಯಾಗಿರುತ್ತದೆಂದು ಯೆಹೂದ್ಯರು ಮತ್ತು ಯೇಸುವಿನ ಶಿಷ್ಯರು ಸಹ ಯೋಚಿಸಿಕೊಂಡಿದ್ದರು. ಆದರೆ ಕುರುಡನಾಗಿ ಹುಟ್ಟಿರುವ ವ್ಯಕ್ತಿಯು ತಾನು ಹುಟ್ಟುವದಕ್ಕೆ ಮುಂಚೆ ಪಾಪವನ್ನು ಮಾಡಿರಲು ಸಾಧ್ಯ? ಆದುದರಿಂದ, ಆತನ ತಂದೆತಾಯಿಗಳು ಪಾಪ ಮಾಡಿರಬಹುದೆಂದು ಶಿಷ್ಯರು ಯೋಚಿಸಿಕೊಂಡರು. ತಂದೆತಾಯಿಗಳು ಮಾಡಿದ ಪಾಪಕ್ಕಾಗಿ ಅವರ ಮಕ್ಕಳನ್ನು ದೇವರು ಮೂರ್ನಾಲ್ಕು ತಲೆಮಾರುಗಳ[76] ವರೆಗೆ ದಂಡಿಸುವನೆಂದು ಹಳೆ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿದೆ (ವಿ.ಮೋಚನ ಕಾಂಡ 20:5).

**3** ಆದರೆ ಯೇಸು ತನ್ನ ಶಿಷ್ಯರಿಗೆ ಆ ಎರಡು ವಿಚಾರಗಳೂ ಸರಿಯಲ್ಲ ಎಂದು ಹೇಳಿದನು. ದೇವರ ಕ್ರಿಯೆಗಳು ಇವನಲ್ಲಿ ತೋರಿಬರುವದಕ್ಕಾಗಿ ಆ ಮನುಷ್ಯನಿಗೆ ಕುರುಡುತನ ಇರುತ್ತದೆ ಎಂದನು. ಅನೇಕ ವೇಳೆಗಳಲ್ಲಿ ದೇವರು ಮನುಷ್ಯರ ಜೀವಿತಗಳಲ್ಲಿ ಸಂಕಷ್ಟಗಳು, ವಿಪತ್ತುಗಳು ಬರುವಂತೆ ಅನುಮತಿಸುತ್ತಾನೆ, ಯಾಕೆಂದರೆ ಆ ಸಮಯಗಳಲ್ಲಿಯೇ ದೇವರು ಮಾನವರಿಗೆ ತನ್ನ ಬಲವನ್ನೂ, ಮಹಿಮೆಯನ್ನೂ ತೋರ್ಪಡಿಸುವ ಅವಕಾಶ ಇರುತ್ತದೆ. (ಯೋಹಾನ 11:4, ರೋಮ 8:28 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಈ ವ್ಯಕ್ತಿಯು ಒಂದು ವೇಳೆ ಕುರುಡನಾಗಿ ಇರುತ್ತಿಲ್ಲವಾದರೆ ಆತನಿಗೆ ಕ್ರಿಸ್ತನನ್ನು ತಿಳಿಯುವ ಹಾಗು ಆತನಲ್ಲಿ ನಂಬಿಕೆಯಿಡುವ ಅವಕಾಶವು ದೊರೆಯುತ್ತಿದ್ದಿಲ್ಲ.

ಇನ್ನೊಬ್ಬ ವ್ಯಕ್ತಿಗೆ ಸಮಸ್ಯೆಯು ಬರುವಾಗ "ಆತನು ಪಾಪ ಮಾಡಿರಬಹುದು" ಎಂಬದಾಗಿ ನಾವು ಎಂದಿಗೂ ಯೋಚಿಸದಿರೋಣ. ಪ್ರಥಮವಾಗಿ ನಾವೆಲ್ಲರೂ ಪಾಪ ಮಾಡಿದವರಾಗಿದ್ದು ಶಿಕ್ಷೆಗೆ ಅರ್ಹರಾಗಿದ್ದೇವೆ. ಎರಡನೆಯದಾಗಿ, ಒಬ್ಬ ನಿರ್ದಿಷ್ಟವಾದ ವ್ಯಕ್ತಿಗೆ ಒಂದು ನಿರ್ದಿಷ್ಟವಾದ ಸಮಯದಲ್ಲಿ ಯಾಕೆ ಸಮಸ್ಯೆ ಬರುತ್ತದೆಂಬದನ್ನು ನಾವು ತಿಳಿಯಲಾಗುವದಿಲ್ಲ. ನಾವು ಅದನ್ನು ತಿಳಿಯುವದು ಅವಶ್ಯವಿಲ್ಲ. ದೇವರು ಮಾತ್ರವೇ ಅದನ್ನು ಬಲ್ಲನು. ಆದರೆ ಈ ವಚನದ ಮೂಲಕ ಜನರಿಗೆ ಸಮಸ್ಯೆಯು ಬರುವದಕ್ಕೆ ಪಾಪವೊಂದೇ ಕಾರಣವಾಗಿರುವದಿಲ್ಲ, ಎಂಬದನ್ನು ನಾವು ಅರ್ಥಮಾಡಿಕೊಳ್ಳಬಹುದು. (ಲೂಕ 13:25, ಅ.ಕೃತ್ಯ 28;4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**4** ಯೇಸು ತನ್ನ ಶಿಷ್ಯರ ಪ್ರಶ್ನೆಗೆ ಉತ್ತರಿಸಿದ ಮೇಲೆ, ಆತನು ಅವರಿಗೆ "ನ್ನನ್ನನ್ನು ಕಳುಹಿಸಿದಾತನ (ದೇವರ) ಕಾರ್ಯಗಳನ್ನು ನಾವು ಹಗಲಿರುವಾಗಲೇ – ಅಂದರೆ ಅವಕಾಶವು ಇರುವಾಗಲೇ ಮಾಡಬೇಕು" ಎಂದು ಹೇಳಿದನು. ದೇವರ ಕಾರ್ಯವು ತೋರಿಬರುವದಕ್ಕಾಗಿ ಈ ಮನುಷ್ಯನು ಕುರುಡನಾಗಿ ಹುಟ್ಟಿದ್ದನು. ಆದುದರಿಂದ ಆ ಸಂದರ್ಭದಲ್ಲಿ ದೇವರ ಕಾರ್ಯವೇನೆಂದರೆ ಕುರುಡನಿಗೆ ದೃಷ್ಟಿಯನ್ನು ನೀಡುವದೇ ಆಗಿತ್ತು.

ದೇವರ ಕೆಸದ ಬಗ್ಗೆ ಒಂದು ಅವಸರತೆ ಇರುತ್ತದೆ, ಅವಕಾಶಗಳು ಬರುತ್ತವೆ ಮತ್ತು ಬಳಿಕ ಶೀಘ್ರ್ರವೇ ಹೊರಟು ಹೋಗುತ್ತವೆ. ದೇವರಿಗಾಗಿ ಒಳ್ಳೇ ಕಾರ್ಯವನ್ನು ಮಾಡಲು ಅವಕಾಶವು ಇಂದು ಬರಬಹುದು ಆದರೆ ನಾಳೆ ಬರದೇ ಇರಬಹುದು. ಒಂದು ಒಳ್ಳೆ ಕಾರ್ಯಕ್ಕೆ ತಾಮಸಪಡುವದಾದರೆ ಅದು ಇನ್ನೆಂದಿಗೂ ಮಾಡಲ್ಪಡದ್ದಾಗುತ್ತದೆ.

ರಾತ್ರಿಯು ಬಂದ ಮೇಲೆ ಯಾರೂ ಕೆಲಸ ಮಾಡಲಾರರು.

ಇಲ್ಲಿ "ರಾತ್ರಿ" ಎಂದರೆ ದೈಹೀಕ ಮರಣ ಎಂಬದೇ. ಪ್ರತಿ ಮನುಷ್ಯನಿಗೂ ದೈಹೀಕ ಮರಣವು ಬರುತ್ತದೆ. ಆಗ ನಾವು ಇನ್ನೆಂದಿಗೂ ಕೆಲಸಮಾಡಲಾಗದು. ನಾವು ಜೀವಂತವಾಗಿದ್ದಾಗ ಇನ್ನೂ ಹಗಲಿರುವಾಗಲೇ ನಾವು ಮಾಡಿದ ಕಾರ್ಯಗಳಿಗೆ ತಕ್ಕ ಹಾಗೆ ನಮಗೆ ತೀರ್ಪಾಗುವದು (2 ಕೊರಿಂಥ 5:10). ಆದುದರಿಂದ ದೇವರು ನಮಗೆ ಮಾಡಲು ಕೊಟ್ಟಿರುವದನ್ನು ಎಂದಿಗೂ ಬಿಟ್ಟು ಬಿಡದಿರೋಣ.

**5** ಯೋಹಾನ 1:4, 8:12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

**6-7** ಯೇಸು ಜನರನ್ನು ಗುಣಪಡಿಸಲು ವಿವಿಧ ವಿಧಾನಗಳನ್ನು ಉಪಯೋಗಿಸಿದನು (ಮಾರ್ಕ 8:22-25 ನೋಡಿರಿ) ಸಾಮಾನ್ಯವಾಗಿ ಆತನು ತನ್ನ ಒಂದು ಮಾತಿನ ಮೂಲಕ ಮಾತ್ರವೇ ಜನರನ್ನು ಸ್ವಸ್ಥಮಾಡಿದನು.ಸಿಲೋವ ಎಂಬ ಕೊಳದ ಹೆಸರಿಗೆ "ಕಳುಹಿಸಲ್ಪಟ್ಟವನು" ಎಂದರ್ಥ. ಅದು ಸಮಂಜಸವಾದದ್ದು ಯಾಕೆಂದರೆ ಯೇಸು ಸ್ವತಃ ದೇವರಿಂದ ಕಳುಹಿಸಲ್ಪಟ್ಟವನಾಗಿದ್ದನು.

**8-12** ಹುಟ್ಟು ಕುರುಡನು ಸ್ವಸ್ಥ ತೆಯಾದದ್ದು ಆತನ ನೆರೆಹೊರೆಯವರಲ್ಲಿ ಹೆಚ್ಚು ಚರ್ಚೆಯೂ, ಆಶ್ಚರ್ಯವೂ ಉಂಟಾಗುವಂತೆ ಮಾಡಿತ್ತು. ಅವರು ಆತನನ್ನು ತಾನು ಹೇಗೆ ಸ್ವಸ್ಥನಾದನೆಂದು ಕೇಳಿದಾಗ, ಆತನು "ಯೇಸು ಎಂಬವವನಿದ್ದಾನಲ್ಲಾ ಆತನು ಕೆಸರು ಮಾಡಿ ನನ್ನ ಕಣ್ಣಿಗೆ ಹಚ್ಚಿದನು" ಎಂದನು (ವಚನ 11). ಕುರುಡು ವ್ಯಕ್ತಿಯ ಮನಸ್ಸಿಗೆ ಯೇಸು ಒಬ್ಬ ಮಾನವನಂತೆಯೂ, ಬಹುಶಃ ಒಬ್ಬ ಪರಿಣಿತ ವೈದ್ಯನಂತೆಯೂ ಮಾತ್ರವೇ ತೋರಿಬಂದನು. ಆತನು ಎಲ್ಲಿ ವಾಸಿಸಿದನೆಂಬದು ಸಹ ಆತನಿಗೆ ತಿಳಿದಿರಲಿಲ್ಲ.

## ಫರಿಸಾಯರು ಸ್ವಸ್ಥತೆಯನ್ನು ತನಿಖೆ ಮಾಡುತ್ತಾರೆ (9:13-14)

**13-15** ಕುರುಡ ವ್ಯಕ್ತಿಯನ್ನು ನೆರೆಯವರು ಆತನನ್ನು ಫರಿಸಾಯರ ಒಂದು ಗುಂಪಿನ ಬಳಿಗೆ ಕರೆತಂದನು. ಆ ಫರಿಸಾಯರು ಸಬ್ಬತ್ ದಿನದಲ್ಲಿ ನಡೆದ ಕುರುಡ ವ್ಯಕ್ತಿಯ ಸ್ವಸ್ಥತೆಯನ್ನು ತನಿಖೆ ಮಾಡುವದಕ್ಕಾಗಿ ಯೆಹೂದ್ಯ ಹಿರೀಸಭೆಯವರು ನೇಮಿಸಿದ ಸಮಿತಿಯಾಗಿರಲಿಕ್ಕೆ ಸಾದ್ಯವಿದೆ (ವಚನ 16 ಮತ್ತು ವ್ಯಾಖ್ಯಾನ ನೋಡಿರಿ).

**16** ಫರಿಸಾಯರಲ್ಲಿ ಯೇಸುವಿನ ಕುರಿತಾಗಿ ಬಿನ್ನಾಭಿಪ್ರಾಯ ಉಂಟಾಯಿತು (ಯೋಹಾನ 7:43 ಮತ್ತು ವ್ಯಾಖ್ಯಾನ ನೋಡಿರಿ). ಕೆಲವರು ಈತನು ಸಬ್ಬತ್ ದಿವಸವನ್ನು ಅಲಕ್ಷ್ಯ ಮಾಡುತ್ತಾ ನಾದ್ದರಿಂದ ಈತನು ದೇವರಿಂದ ಬಂದವನಲ್ಲ ಅಂದರು. ಇನ್ನು ಕೆಲವರು – ದೇವರ ಕಡೆಯಿಂದ ಬಂದವನು ಮಾತ್ರವೇ ಅಂತಹ ಅದ್ಭುತವನ್ನು [77] ಮಾಡ ಬಲ್ಲನು ಎಂದು ಹೇಳಿದರು. (ವಚನಗಳು 31-33 ನೋಡಿರಿ). ಆದರೆ ಯೇಸುವಿನ ಪರವಾಗಿದ್ದ ಗುಂಪು ಚಿಕ್ಕದಾಗಿದ್ದಿರಬಹುದು, ಯಾಕೆಂದರೆ ಅವರ ಕುರಿತು ಪು ನಃ ಪ್ರಸ್ತಾಪಿಸಲಾಗಿರುವದಿಲ್ಲ.

ಯೇಸು ಸಬ್ಬತ್ ದಿನವನ್ನು ಉಲ್ಲಂಘಿಸಿದ್ದಾನೆಂಬ ಆರೋಪವು ಸುಳ್ಳಾಗಿತ್ತು. ನಿಜ, ಆತನು ಯೆಹೂದ್ಯನಾಯಕರ ಸಂಪ್ರದಾಯಗಳಿಗೆ ವಿಧೇಯನಾಗಿರಲಿಲ್ಲ. ಆದರೆ ಆತನು ದೇವರ ಆಜ್ಞೆಗೆ ಅನುಸಾರವಾಗಿ ವಿಧೇಯನಾದನು (ಮಾರ್ಕ 3:1-5, ಲೂಕ 13:10-17, ಯೋಹಾನ 5:8-10 ಮತ್ತು ವ್ಯಾಖ್ಯಾವಗಳನ್ನು ನೋಡಿರಿ)

**17** ಫರಿಸಾಯರಲ್ಲಿ ಭೇದವು ಂಟಾದದ್ದರಿಂದ ಸ್ವತಃ ಕುರುಡನು ಏನು ಹೇಳುತ್ತಾನೋ ಎಂದು ಕೇಳಿದನು. ಅವನು ಸ್ವತಃ ಸ್ವಸ್ಥನಾದ ವ್ಯಕ್ತಿಯಾಗಿರುವದರಿಂದ ಅವನಿಗೆ ಸ್ವಲ್ಪವಿಚಾರವಾದರು ತಿಳಿದಿರುತ್ತದೆ. "ಆತನು ಒಬ್ಬ ಪ್ರವಾದಿ" ಅನ್ನುತ್ತೇನೆ, ಎಂದು ಆವ್ಯಕ್ತಿ ಹೇಳಿದನು. ಕುರುಡನಿಗೆ ಈಗ ಸಂಶಯವೂ ಇರಲಿಲ್ಲ, ಯೇಸು ಒಬ್ಬ ಮನುಷ್ಯನಿಗಿಂತಲೂ ಹೆಚ್ಚಿನವನಾಗಿದ್ದನು.(ವಚನ 11) ಆತನು ಪ್ರವಾದಿಯಾಗಿದ್ದನು. ಒಬ್ಬ ಪ್ರವಾದಿಯು ಮನುಷ್ಯನು ಯೋಚಿಸಬಹುದಾದ ಅತ್ಯುನ್ನತ ಸಂಗತಿಯಾಗಿದ್ದನು.

**18-19** ಫರಿಸಾಯರು ಕುರುಡನ ಅಭಿಪ್ರಾಯವನ್ನು ಒಪ್ಪಲಿಕ್ಕೆ ಇಚ್ಛಿಸಲಿಲ್ಲ. ಯೇಸು ಒಬ್ಬ ಪಾಪಿಯೂ ಧರ್ಮಶಾಸ್ತ್ರವನ್ನು ಉಲ್ಲಂಘಿಸಿದನು ಎಂಬುವದನ್ನು ನಿರೂಪಿಸಲು ಪ್ರಯತ್ನಿಸುತ್ತಿದ್ದರು. ಆದ್ದರಿಂದ ಅವರು ಈ ಕುರುಡನು ಸುಳ್ಳಾಡುತ್ತಿದ್ದಾನೆಂದು ಈ ಮುಂಚೆ ಅವನು ಕುರುಡನಾಗಿರಲೇಯಿಲ್ಲವೆಂದು ನಿಶ್ಚಯಿಸಿಕೊಂಡರು. ಅವರು ಇದನ್ನು ಸಾಭೀತುಪಡಿಸಲು ಕುರುಡನ ತಂದೆ ತಾಯಿಗಳನ್ನು ಕರೆಯಿಸಿದರು. ಆತನ ತಂದೆ ತಾಯಿಗಳು ತಮ್ಮ ಮಗನು ಕುರುಡನಾಗಿ ಹುಟ್ಟಿರಲೇಯಿಲ್ಲ, ಎಂದು ನಿರೂಪಿಸುವರೆಂದು ಫರಿಸಾಯರು ನಿರೀಕ್ಷಿಸಿದರು.

**20-21** ಹೇಗಿದ್ದರು ಆತನ ತಂದೆ ತಾಯಗಳಾದರೋ ಆತನು ನಿಜವಾಗಿಯೂ ಕುರುಡನಾಗಿ ಹುಟ್ಟಿದನೆಂದು ಹೇಳಿದರು. ಆದರೆ ಆತನು ಹೇಗೆ ಸ್ವಸ್ಥನಾದನೆಂಬುದ ಬಗ್ಗೆ ಏನನ್ನು ಮಾತಾಡಲಿಚ್ಛಿಸಲಿಲ್ಲ. ಅದು ನಡೆದಾಗ ಅವರು ಅಲ್ಲಿರಲಿಲ್ಲ, ಫರಿಸಾಯರೇ ನೇರವಾಗಿ ತಮ್ಮ ಮಗನನ್ನು ಕೇಳುವಂತೆ ಹೇಳಿದರು.

**22-23** ತಂದೆ ತಾಯಿಗಳು ಯೇಸುವಿನ ಕುರಿತು ಒಳ್ಳೆದೇನನ್ನೂ ಹೇಳಲು ಧೈರ್ಯಗೊಳ್ಳಲಿಲ್ಲ. ಯೇಸುವನ್ನು ಮೆಸ್ಸಿಯನೆಂದು ಕರೆಯುವವರು ಸಭಾಮಂದಿರಗಳಿಂದ ಬಹಿಷ್ಕರಿಸಲ್ಪಟ್ಟಿರುವದನ್ನು ಅವರು ಬಲ್ಲವರಾಗಿದ್ದರು. ಅವರು ಯೆಹೂದ್ಯರಾಗಿ ತಮ್ಮ ಹಕ್ಕುಗಳನ್ನು ಕಳೆದುಕೊಳ್ಳುತ್ತಿದ್ದರು. ತಂದೆತಾಯಿಗಳು ತಮ್ಮ ಮಗನನ್ನು ಯೇಸು ಗುಣಪಡಿಸಿದ್ದಾನೆಂದು ಒಪ್ಪಿಕೊಳ್ಳುವದಾದರೆ ಸ್ವತಃ ಅವರೇ ಸಭಾಮಂದಿರ ದಿಂದ ಬಹಿಷ್ಕರಿಸಲ್ಪಡುವರೆಂದು ಹೆದರಿದರು (ಲೂಕ 6:22, ಯೋಹಾನ 12:42 ನೋಡಿರಿ).

ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ: ಫರಿಸಾಯರು ಯೇಸುವನ್ನು ಮತ್ತು ಆತನ ಹಿಂಬಾಲಕರನ್ನು ಅಷ್ಟೊಂದು ವಿರೋಧಿಸಲು ಕಾರಣವೇನು? ಆತನು ಮೆಸ್ಸಿಯನೆಂದು ನಂಬಲು ಅವರು ಏಕೆ ನಿರಾಕರಿಸಿದರು? ಅದಕ್ಕೆ ಎರಡು ಮುಖ್ಯ ಕಾರಣಗಳಿವೆ ಮೊದಲನೆಯದಾಗಿ, ಯೇಸುವಿನ ಬೋಧನೆಯು ಫರಿಸಾಯರ ಹಾಗು ಇತರ ಯೆಹೂದ್ಯನಾಯಕರ ಬೋಧನೆಯನ್ನು ವಿರೋಧಿಸಿತು. ಅವರು ಯೆಹೂದ್ಯ. ಧರ್ಮ ಶಾಸ್ತ್ರವನ್ನು ಬಹಿರಂಗವಾಗಿ ಅನುಸರಿಸಿದರು, ಆದರೆ ಧರ್ಮಶಾಸ್ತ್ರವನ್ನು ಹೃದಯದಿಂದ ಅಂತರ್ಯದಲ್ಲಿ ಅನುಸರಿಸಬೇಕೆಂದು ಯೇಸು ಹೇಳಿದನು. ಯೆಹೂದ್ಯನಾಯಕರು ಕಪಟಿಗಳೆಂಬದನ್ನು ಯೇಸು ಬಯಲು ಪಡಿಸಿದನು, ಇದರಿಂದ ಅವರಿಗೆ ಕೋಪವು ಂಟಾಯಿತು (ಮತ್ತಾಯ 23:1-32 ನೋಡಿರಿ).

ಯೆಹೂದ್ಯ ನಾಯಕರು ಯೇಸುವನ್ನು ವಿರೋಧಿಸಿದ್ದಕ್ಕೆ ಎರಡನೆಯ ಮುಖ್ಯ ಕಾರಣವೇನೆಂದರೆ, ಯೆಹೂದ್ಯರು ತಮ್ಮ ಮೆಸ್ಸಿಯನು ಬರಬೇಕೆಂದು ನಿರೀಕ್ಷಿಸಿದಂತಹ ರೀತಿಯಲ್ಲಿ ಯೇಸು ಬಂದಿರಲಿಲ್ಲ. ಯೇಸು ದೀನನಾಗಿ ಬಂದನು. ಯೇಸು ತನ್ನ ಹಿಂಬಾಲಕರು ಲೋಕದಲ್ಲಿ ಹಿಂಸೆಯನ್ನು ತಾಳಬೇಕೆಂದು ಕಲಿಸಿದನು. ಯೆಹೂದ್ಯರು ತಮ್ಮ ಮೆಸ್ಸಿಯನು ಜಯಶಾಲಿ ಅರಸನಂತೆ ಬರುವನೆಂದು ಅಂದು ಕೊಂಡಿದ್ದರು. ಯೇಸುವಿನಂತಹ ಯಾರೇ ಆಗಲಿ ಅವರ ಮೆಸ್ಸಿಯನಾಗಿರುವದನ್ನು ಅವರು ಇಷ್ಟಪಡಲಿಲ್ಲ!

**24** ಫರಿಸಾಯರು ಕುರುಡನ ತಂದೆತಾಯಿಗಳೊಂದಿಗೆ ಮಾತಾಡಿದ ನಂತರ ಆತನನ್ನು ಎರಡನೆಯ ಸಾರಿ ಕರೆದರು. ಅವರು ಆ ವಿಷಯವನ್ನು ಅಲ್ಲಿಗೆ ಮುಗಿಸಲಿಲ್ಲ. ಅವರು ಆತನಿಗೆ "ದೇವರಿಗೆ ಮಾನ ಬರುವಂತೆ ಹೇಳು" ಅಂದರು. ಇದು ಎರಡು ಅರ್ಥಗಳನ್ನು ಹೊಂದಿರಬಲ್ಲದು. ಮೊದಲನೆಯದಾಗಿ ಇದರರ್ಥವು: "ಸತ್ಯವನ್ನು ಹೇಳಿ ದೇವರಿಗೆ ಮಹಿಮೆಯಾಗುವಂತೆ ಮಾಡು" (ಯೆಹೋಶುವ 7:19) ಎರಡನೆಯದಾಗಿ ಇದು "ಈ ಸ್ವಸ್ಥತೆಗಾಗಿ ದೇವರನ್ನು ಮಹಿಮೆಪಡಿಸು ಹೊರತು ಕ್ರಿಸ್ತನನ್ನಲ್ಲ" ಎಂಬ ಅರ್ಥವನ್ನು ನೀಡಬಲ್ಲದು. ಈ ಎರಡೂ ಅರ್ಥಗಳಿರುವ ಸಾಧ್ಯತೆಯಿದೆ.

ಈ ಸ್ವಸ್ಥತೆಯು ಯೇಸುವಿನಿಂದಾಗಲಿಲ್ಲ ಎಂದು ಹೇಳುವಂತೆ ಫರಿಸಾಯರು ಕುರುಡನ ಮನವೊಲಿಸಲು ಪ್ರಯತ್ನಿಸಿದರು. "ಈ ಮನುಷ್ಯನು (ಯೇಸು) ಭಕ್ತಿಹೀನನೆಂಬುದು ನಾವು ಬಲ್ಲೆವು" ಎಂದು ಅವರು ಹೇಳಿದರು.

**25** ಫರಿಸಾಯರು ಏನು ಯೋಚಿಸುವರೆಂಬದರ ಕುರಿತು ಕುರುಡನು ಚಿಂತಿಸಲಿಲ್ಲ. ಯೇಸು ಭಕ್ತಿಹೀನನೋ ಅಲ್ಲವೋ ಆತನು ಲೆಕ್ಕಿಸಲಿಲ್ಲ. ಅದು ಆತನ ಚಿಂತೆಯಾಗಿರಲಿಲ್ಲ. ಆತನಿಗೆ ಒಂದು ಸಂಗತಿಯು ಖಚಿತವಾಗಿ ತಿಳಿದಿತ್ತು ಮತ್ತು ಫರಿಸಾಯರೆಲ್ಲರೂ ಒಂದಾದರೂ ಆತನ ನಿರ್ಧಾರವನ್ನು ಬದಲಾಯಿಸಲಾರದವರಾಗಿದ್ದರು. "ಒಂದು ಮಾತ್ರ ಬಲ್ಲೆ, ಕುರುಡನಾಗಿದ್ದೇನು, ಈಗ ಕಣ್ಣು ಕಾಣುತ್ತದೆ."

ಪ್ರತಿಯೊಬ್ಬ ನಿಜಕ್ರೈಸ್ತನ ಸಾಕ್ಷಿಯು ಇದಾಗಿದೆ: "ಒಮ್ಮೆ ನಾನು ಆತ್ಮೀಕವಾಗಿ ಕುರುಡನಾಗಿದ್ದೆನು, ಆದರೆ ಈಗ ನನಗೆ ಕಣ್ಣು ಕಾಣಿಸುತ್ತವೆ. ಒಮ್ಮೆ ನಾನು ಪಾಪದಲ್ಲಿ ಸತ್ತವನಾಗಿದ್ದೆನು, ಆದರೆ ಈಗ ನಾನು ಕ್ರಿಸ್ತನಲ್ಲಿ ಜೀವಿಸುತ್ತೇನೆ. ಒಮ್ಮೆ

ನಾನು ದಾಸತ್ವದಲ್ಲಿದ್ದೆನು, ಆದರೆ ಈಗ ನಾನು ಸ್ವತಂತ್ರನು". ಕ್ರೈಸ್ತನಿಗೆ ಯಾವ ಸಂಶಯವೂ ಇಲ್ಲ. ಆತನು ಸ್ವತಃ ಈ ಸಂಗತಿಗಳನ್ನು ಅನುಭವಿಸಿದವನಾಗಿದ್ದಾನೆ.

**26** ಫರಿಸಾಯರು ಆ ಮನುಷ್ಯನಿಗೆ ಪು ನ: ಅದೇ ಪ್ರಶ್ನೆಯನ್ನು ಕೇಳುತ್ತಾರೆ ಆತನು ತಿಳಿಯದೇ ತಾನು ಮೊದಲು ಹೇಳಿದ್ದಕ್ಕೆ ತದ್ವಿರುದ್ಧವಾದ ಸಂಗತಿಯನ್ನೇನಾದರೂ ಹೇಳುವನೆಂದು ಅವರು ನಿರೀಕ್ಷಿಸಿದ್ದರು. ಆಗ ಅವರು ಅವನ ಮೇಲೆ ಸುಳ್ಳಿನ ಆರೋಪಹೊರಿಸಬಹುದು.

**27** ಫರಿಸಾಯರು ಅದೇ ಪ್ರಶ್ನೆಯನ್ನು ಪು ನರಾವರ್ತಿಸಿ ಕೇಳಿದಾಗ ಆ ವ್ಯಕ್ತಿಯು ಬೇಸರಗೊಂಡನು. ಆತನು ಅವರಿಗೆ "ಯಾಕೆ ನೀವು ತಿರಿಗಿ ಅದೇ ವಿಷಯವನ್ನು ಕೇಳುತ್ತೀರಿ? ಆತನ ಶಿಷ್ಯರಾಗುವದಕ್ಕೆ ನಿಮಗೂ ಮನಸ್ಸಿದೆಯೋ?" ಎಂದು ಕೇಳಿದನು.

ಅವರಿಗೆ ಇಷ್ಟವಿಲ್ಲವೆಂದು ಆತನಿಗೆ ಗೊತ್ತಿದ್ದರೂ ಅವರಿಗೆ ಹಾಸ್ಯಮಾಡಲು ಹಾಗೆ ಕೇಳಿದನು.

ಇಲ್ಲಿ ಕುರುಡನು "ನಿಮಗೂ" ಎಂದು ಹೇಳಿದ್ದನ್ನು ಗಮನಿಸಿರಿ. ಆತನು ಈಗ ತನ್ನನ್ನು ಯೇಸುವಿನ ಶಿಷ್ಯನೆಂದು ಪರಿಗಣಿಸಿದ್ದನು ಎಂಬದು ಇದರಿಂದ ಅರ್ಥವಾಗುತ್ತದೆ.

**28-29** ಆಗ ಫರಿಸಾಯರು ಕುರುಡನನ್ನು ಬೈದರು. ಅವರು ತಾವು ಶ್ರೇಷ್ಠನಾದ ಮೋಶೆಯ ಶಿಷ್ಯರೆಂದು ಹೇಳಿದರು. ದೇವರು ಮೋಶೆಗೆ ಕೊಟ್ಟ ಧರ್ಮಶಾಸ್ತ್ರಕ್ಕೆ ವಿಧೇಯರಾದರು. ದೇವರು ಸ್ವತಃ ಮೋಶೆಯೊಂದಿಗೆ ಅನೇಕ ಸಾರಿ ಮಾತನಾಡಿದನು.

ಆದರೆ ಯೇಸುವೆಂಬ ಈ ಮನುಷ್ಯನು ಯಾರು? ಇವನು ಎಲ್ಲಿಯವನೋ ಅರಿಯೆವು ! ಎಂದರು. ಹೀಗೆ ಹೇಳುವದರ ಮೂಲಕ ಯೇಸು ಏನೂ ಅಲ್ಲ ಎಂಬದನ್ನು ತೋರಿಸಬಲ್ಲರೆಂದು ಯೋಚಿಸಿಕೊಂಡರು. ಆದರೆ ವಾಸ್ತವದಲ್ಲಿ ಅವರು ಅದಕ್ಕೆ ತದ್ವಿರುದ್ಧವಾದದ್ದನ್ನು ಮಾಡುತ್ತಿದ್ದರು. ಮೆಸ್ಸಿಯನು ಬಂದಾಗ ಆತನು ಎಲ್ಲಿಯವನೊ ಎಂದು ಯಾರಿಗೂ ತಿಳಿಯದು ಎಂಬದಾಗಿ ಪ್ರತಿಯೊಬ್ಬರೂ ನಂಬಿದ್ದರು (ಯೋಹಾನ 7:27 ಮತ್ತು ವ್ಯಾಖ್ಯಾನ ನೋಡಿರಿ). ಯೇಸು ನಿಜವಾಗಿಯೂ ಮೆಸ್ಸಿಯನೆಂದು ಫರಿಸಾಯರು ಮಾತಿಲ್ಲದ ಆಧಾರಗಳನ್ನು ನೀಡುತ್ತಿದ್ದರು.

**30** ಫರಿಸಾಯರ ಆತ್ಮೀಕ ಕುರುಡುತನಕ್ಕೆ ಕುರುಡನು ಆಶ್ಚರ್ಯಪಟ್ಟನು. ಯೇಸು ಎಲ್ಲಿಯವನೆಂದು ಅವರು ತಿಳಿದಿರಬೇಕಿತ್ತು. ಈ ರೀತಿಯಲ್ಲಿ ಗುಣಪಡಿಸಲು ಶಕ್ತನಾದ ಯಾವದೇ ವ್ಯಕ್ತಿಯು ದೇವರಿಂದಲೇ ಬಂದವನಾಗಿರಬೇಕಿತ್ತು (ವಚನ 33). ಫರಿಸಾಯರಿಗೆ ಅದು ತಿಳಿಯದಿರಲು ಹೇಗೆ ಸಾಧ್ಯ?

**31** ದೇವರು ಭಕ್ತಿಹೀನರ (ಪಾಪಿಗಳ) ಅಂದರೆ ಪಾಪದಲ್ಲಿ ಮುಂದುವರೆದು ಪಶ್ಚಾತಾಪ ಪಡದವರ ಪ್ರಾರ್ಥನೆಯನ್ನು ಕೇಳಲಿಲ್ಲ (ಕೀರ್ತನೆಗಳು 66:18 ಜ್ಞಾನೋಕ್ತಿಗಳು 15:29). ಯಾವನು ಭಕ್ತನಾಗಿದ್ದು ಆತನ ಚಿತ್ತದಂತೆ ನಡೆಯುತ್ತಾನೋ ಅವನ ಪ್ರಾರ್ಥನೆಯನ್ನು ದೇವರು ಕೇಳುತ್ತಾನೆ ಎಂಬದಕ್ಕೆ ಕುರುಡನು ಒಪ್ಪಿಕೊಂಡನು. ಇದನ್ನು ಹೇಳುವದರಲ್ಲಿ ಕುರುಡನು ಸತ್ಯವನ್ನೇ ಮಾತಾಡಿದನು.

**32** ಈ ಕಾರಣಕ್ಕಾಗಿಯೇ ಯೇಸು ಒಬ್ಬ ಭಕ್ತನು ಹೊರತು ಪಾಪಿಯಲ್ಲ ಎಂದು ತಿಳಿಯಬೇಕಾಗುತ್ತದೆ. ಯೇಸು ಆ ಕುರುಡನನ್ನು ಸ್ವಸ್ಥ ಮಾಡಬೇಕಾದರೆ ದೇವರು ಯೇಸುವಿನ ಪ್ರಾರ್ಥನೆಯನ್ನು ಕೇಳುತ್ತಿದ್ದಿರಬೇಕು. ಮತ್ತು ದೇವರು ಯೇಸುವಿನ ಪ್ರಾರ್ಥನೆಗೆ ಉತ್ತರಿಸಿದಂತೆ ತೋರುತ್ತದೆ. ಎಲ್ಲಾ ಹಳೆ ಒಡಂಬಡಿಕೆ, ಇಡೀ ಇತಿಹಾಸದಲ್ಲಿಯೇ ಆಗಲಿ ಹುಟ್ಟು ಕುರುಡನೊಬ್ಬನಿಗೆ ಕಣ್ಣು ಕೊಟ್ಟ ಉದಾಹರಣೆಯು ಎಂದಿಗೂ ಇರಲಿಲ್ಲ. ಯಾವ "ಭಕ್ತಿಹೀನನೂ" ಇಂತಹ ಒಂದು ಅದ್ಭುತವನ್ನು ಮಾಡಿರಲು ಸಾಧ್ಯವಿಲ್ಲ.

**33** ಆದುದರಿಂದ ಯೇಸು ದೇವರ ಕಡೆಯಿಂದ ಬಂದಿರಲೇಬೇಕಿತ್ತು, ಇಲ್ಲವಾದರೆ ಏನು ಮಾಡಲಾರದೆ ಇರುತ್ತಿದ್ದನು.

**34** ಆ ಅವಿದ್ಯಾವಂತ ಕುರುಡನು ತಮಗೆ ಉಪದೇಶ ಮಾಡುತ್ತಿದ್ದಾನೆಂಬ ಕಾರಣಕ್ಕಾಗಿ ಫರಿಸಾಯರು ಇನ್ನು ಹೆಚ್ಚು ಕೋಪಗೊಂಡರು! ಅವರು ಆತನನ್ನು ಅವಮಾನಿಸುತ್ತಾ" ನೀನು ಕೇವಲ ಪಾಪದಲ್ಲಿಯೇ ಹುಟ್ಟಿದ್ದವನು" ಅಂದರೆ "ನೀನು ಪಾಪದಲ್ಲಿ ಹುಟ್ಟಿದ್ದೀ, ಪ್ರಾರಂಬದಲ್ಲಯೇ ನಿನ್ನ ಪಾಪವು ನಿನ್ನ ಕುರುಡತನಕ್ಕೆ ಕಾರಣವಾಗಿದೆ!! ಎಂದು ಹೇಳಿದರು. ಆತನು ಇನ್ನೆಂದಿಗೂ ಕುರುಡನಲ್ಲ ಎಂಬದನ್ನು ಅವರು ಲಕ್ಷಿಸಲಿಲ್ಲ! ಬಳಿಕ ಅವರು ಆತನನ್ನು ಸಭಾಮಂದಿರದಿಂದ ಬಹಿಷ್ಕರಿಸಿದರು.

## ಆತ್ಮೀಕ ಕುರುಡತನ (9:35-41)

**35-36** ಫರಿಸಾಯರು ಕುರುಡನನ್ನು ಸಭಾಮಂದಿರದಿಂದ ಬಹಿಷ್ಕರಿಸಿದರೆಂಬದನ್ನು ಯೇಸು ಕೇಳಿ ಅವನನ್ನು ಕಂಡುಕೊಳ್ಳಲು ಹೊರಟನು. ಕುರುಡನು ಇನ್ನೂ ತನ್ನ ಸ್ವಂತ ಕಣ್ಣುಗಳಿಂದ ಯೇಸುವನ್ನು ನೋಡಿರಲಿಲ್ಲ. ಆದರೆ ಬಹುಶ:ಅವನು ಯೇಸುವಿನ ಸ್ವರವನ್ನು ಗುರುತಿಸಿದನು. ಅವನು ನಂಬಲು ಸಿದ್ದನಾಗಿದ್ದನು, ಆದರೆ ಅವನು ಯಾರನ್ನು ನಂಬಬೇಕೆಂದು ಇನ್ನೂ ಆತನಿಗೆ ನಿಖರವಾಗಿ ತಿಳಿದಿರಲಿಲ್ಲ. ಯೇಸು ಅವರಿಗೆ "ನೀನು ಮನುಷ್ಯಕುಮಾರನನ್ನು [78] ನಂಬುತ್ತಿಯೋ" ಎಂದು ಕೇಳಿದನು. ಅದಕ್ಕೆ ಆವ್ಯಕ್ತಿಯು ಆತನು ಯಾರು ಸ್ವಾಮೀ? ಅಂದನು.

**37** ಯೇಸು ಅವನಿಗೆ "ನಾನೇ ಅವನು" ಅಂದನು (ಯೋಹಾನ 4:26). ಯೇಸುವನ್ನು ತಿಳಿಯಲು ತವಕ ಪಡುವವರು ಹಲವಾರು ವೇಳೆ ಆತನು ಅವರು ಊಹಿಸಿದ ರೀತಿಯಲ್ಲಿ ಅವರ ಹತ್ತಿರದಲ್ಲೇ ಇರುವದನ್ನು ಕಂಡುಕೊಳ್ಳುತ್ತಾರೆ.!

38 ಈಗ ಯೇಸು ಯಾರೆಂಬದನ್ನು ಕುರುಡನು ಸಂಪೂರ್ಣವಾಗಿ ಅರಿತು ಕೊಂಡನು. ಮೊದಲು ಅವನು ಯೇಸುವನ್ನು ಒಬ್ಬ ಮನುಷ್ಯನೆಂದು ತಿಳಿದಿದ್ದನು (ವಚನ 11). ಅನಂತರ ಆತನನ್ನು ಒಬ್ಬ ಪ್ರವಾದಿಯೆಂದು ಅಂದುಕೊಂಡನು (ವಚನ 17). ಈಗ ಆತನು ಯೇಸುವನ್ನು ಒಬ್ಬ ಪ್ರವಾದಿಗಿಂತಲೂ ಹೆಚ್ಚಿನವನು, ದೇವಕುಮಾರನೂ, ಮೆಸ್ಸಿಯನೂ, ಕ್ರಿಸ್ತನೂ ಎಂಬದಾಗಿ ತಿಳಿದುಕೊಂಡಿದ್ದನು. ಅವನ ನಂಬಿಕೆಯು ಪರಿಪೂರ್ಣವಾಗಿತ್ತು. "ನಂಬುತ್ತೇನೆ, ಕರ್ತನೆ" (ಯೋಹಾನ 20:28).
39 ತರುವಾಯ ಯೇಸು "ನಾನು ನ್ಯಾಯತೀರ್ಪಿಗಾಗಿ ಈ ಲೋಕಕ್ಕೆ ಬಂದಿದ್ದೇನೆ" ಅಂದನು.ಯೇಸುವಿನ ಬರೋಣಕ್ಕೆ ನ್ಯಾಯತಿರ್ಪು ಮುಖ್ಯಕಾರಣವಾಗಿರಲಿಲ್ಲ (ಯೋಹಾನ 3:17, 12:47 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಹೇಗಿದ್ದರೂ, ಯೇಸು ಮಾನವರನ್ನು ರಕ್ಷಿಸಲು ಬಂದಾಗ ಆತನು ಅದೇ ಸಮಯದಲ್ಲಿ ತನ್ನೊಂದಿಗೆ ನ್ಯಾಯತಿರ್ಪನ್ನು ಸಹ ತಂದನು. ಯೇಸು ರಕ್ಷಣೆ ಮತ್ತು ನ್ಯಾಯತಿರ್ಪು ಎರಡನ್ನೂ ತರುತ್ತಾನೆ: ಆತನಲ್ಲಿ ನಂಬಿಕೆ ಯಿಡುವವರು ರಕ್ಷಣೆಯನ್ನು ಪಡೆಯುವರು, ಆತನಲ್ಲಿ ನಂಬಿಕೆಯಿಡದವರು ದಂಡನೆಗೊಳಗಾಗಿ ನ್ಯಾಯತಿರ್ಪನ್ನು ಹೊಂದುವರು (ಯೋಹಾನ 3:18 ಮತ್ತು ವ್ಯಾಖ್ಯಾನ ನೋಡಿರಿ).

ಯೇಸು ಬರುವಾಗ ಆತನು ನಮ್ಮ ಪಾಪಗಳನ್ನು ಬೆಳಕಿಗೆ, ಆತನ ಬೆಳಕಿನೊಳಗೆ ತರುವನು. ನಮ್ಮ ಅಂತರ್ಯದ ಆಲೋಚನೆಗಳು ಹಾಗು ಉದ್ದೇಶಗಳು ಬಯಲಾಗುತ್ತವೆ. ಆತನ ಬೆಳಕಿನಲ್ಲಿ ಎಲ್ಲಾ ಮಾನವರು ದಂಡಿಸಲ್ಪಟ್ಟವರಾಗಿ ನಿಲ್ಲುವರು. ಆತನಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ನಮ್ಮ ದಂಡನೆಯು ತೆಗೆದು ಹಾಕಲ್ಪಡುವದು (ರೋಮ 8:1 ಮತ್ತು ವ್ಯಾಖ್ಯಾನ ನೋಡಿರಿ).

ಯೇಸು ಕುರುಡರಿಗೆ ಕಣ್ಣು ಬರುವದಕ್ಕಾಗಿ ಬಂದನು: ಇಲ್ಲಿ ಮುಖ್ಯವಾಗಿ ಯೇಸು ಆತ್ಮೀಕವಾಗಿ ಕುರುಡರಾದವರನ್ನು ಕುರಿತು ಮಾತಾಡುತ್ತಿದ್ದಾನೆ. ಈ ಕಥೆಯಲ್ಲಿರುವ ಹುಟ್ಟುಕುರುಡನ ಹಾಗೆಯೇ ಎಲ್ಲಾ ಮಾನವರು ಹುಟ್ಟಿನಿಂದಲೇ ಆತ್ಮೀಕವಾಗಿ ಕುರುಡರಾಗಿರುತ್ತಾರೆ. ಎಲ್ಲಾ ಮಾನವರಿಗೂ ಆತ್ಮೀಕ ದೃಷ್ಟಿಯುಂಟಾಗುವ ಅವಕಾಶ ದೊರೆಯಲೆಂದು ಯೇಸು ಬಂದನು.

ಅದೇ ಸಮಯದಲ್ಲಿ ಆತನು ಕಣ್ಣಿದ್ದವರು ಕುರುಡರಾಗುವದಕ್ಕಾಗಿ ಬಂದನು (ಮಾರ್ಕ 4:10-12 ಮತ್ತು ವ್ಯಾಖ್ಯಾನ ನೋಡಿರಿ). ಯೇಸುವಿನ ತಾತ್ಪರ್ಯವೇನೆಂದರೆ: ತಮಗೆ ಕಣ್ಣು ಕಾಣಿಸುತ್ತದೆ ಎಂದು ಹೇಳಿಕೊಳ್ಳುವ ಫರಿಸಾಯರಂತಹ ಜನರು ಕುರುಡರೆಂಬದಾಗಿ ತೋರಲ್ಪಡುವಂತಾಗಲು ಆತನು ಬಂದನು. ಫರಿಸಾಯರು ತಮ್ಮ ಮಾತುಗಳು ಹಾಗು ಕ್ರಿಯೆಗಳ ಮೂಲಕ ತಾವೇ ಕುರುಡರೆಂಬದನ್ನು ನಿರೂಪಿಸಿದರು. ಯೇಸುವನ್ನು ಸ್ವೀಕರಿಸುವವರು ಆತ್ಮೀಕ ದೃಷ್ಟಿಯನ್ನು ಸ್ವೀಕರಿಸಿಕೊಳ್ಳುವರು. ಯೇಸುವನ್ನು ತಿರಸ್ಕರಿಸುವವರು ಆತ್ಮೀಕವಾಗಿ ಕುರುಡರಂತೆ ಉಳಿಯುತ್ತಾರೆ.
40 ಇದನ್ನು ಕೇಳಿಸಿಕೊಳ್ಳುತ್ತಿದ್ದ ಫರಿಸಾಯರು "ನೀನು ನಮ್ಮನ್ನು ಕುರುಡರೆಂದು ಹೇಳುತ್ತಿರುವಿಯೋ?ಠ ಎಂದು ಕೇಳಿದರು. ಅವರು ತಮ್ಮ ಕುರುಡರೆಂದು ತಿಳಿದುಕೊಳ್ಳಲಿಲ್ಲ. ಅವರು ತಮ್ಮನ್ನು ಜನರ ಮಾರ್ಗದರ್ಶಕರು ಹಾಗು ನಾಯಕರು ಎಂದು ಪರಿಗಣಿಸಿಕೊಂಡರು.
41 ಯೇಸು ಉತ್ತರಿಸಿ "ಇಲ್ಲ, ನೀವು ಸಂಪೂರ್ಣ ಕುರುಡರೆಂದು ನಾನು ಹೇಳುತ್ತಿಲ್ಲ.ಒಂದು ವೇಳೆ ನೀವು ಸಂಪೂರ್ಣವಾಗಿ ಕುರುಡರಾಗಿದ್ದರೆ ನಿಮ್ಮ ಪಾಪಕ್ಕೆ ನೆಪವು ದೊರೆಯುತ್ತಿತ್ತು (ಯೋಹಾನ 15:22) ನಿಮಗೆ ಪಾಪವು ಇರುತ್ತಿರಲಿಲ್ಲ. ಆದರೆ ನಮಗೆ ಕಣ್ಣು ಕಾಣುತ್ತದೆಂದು ನೀವು ಹೇಳುತ್ತಿರಿ ಮತ್ತು ನಿಜವಾಗಿಯೂ ನಿಮಗೆ ಸ್ವಲ್ಪ ಆತ್ಮೀಕ ದೃಷ್ಟಿಯು ಇರುತ್ತದೆ. ನೀವು ನನ್ನನ್ನು ನಂಬುವದಕ್ಕೆ ಸಾಕಾಗುವಷ್ಟು ಆತ್ಮೀಕ ಜ್ಞಾನವನ್ನು ಹೊಂದಿರುವಿರಿ, ಆದರೆ ಬಲವಾಗಿ ನೀವು ನಂಬಲು ನಿರಾಕರಿಸುತ್ತೀರಿ. ಆದ್ದರಿಂದ ನಿಮ್ಮ ಪಾಪವು ಉಳಿದದೆ" ಎಂದು ಹೇಳಿದನು. ಫರಿಸಾಯರು ಸ್ವಲ್ಪ ಆತ್ಮೀಕ ತಿಳುವಳಿಕೆಯನ್ನು ಹೊಂದಿದ್ದರು. ಆದರೆ ಅವರು ತಮಗೆ ಹೆಚ್ಚು ತಿಳವಳಿಕೆಯಿದೆ ಎಂದು ಹೆಚ್ಚಳ ಪಟ್ಟರು. ಅವರು ಗರ್ವಿಷ್ಠರಾಗಿದ್ದರು. ನಾವು ಕಲಿಯ ಬೇಕಾದದ್ದು ಏನು ಇರುವದಿಲ್ಲ ಎಂದು ಯೋಚಿಸುವವರು ಏನನ್ನೂ ಕಲಿಯುವದಿಲ್ಲ. ಮೆಸ್ಸಿಯನು ಬರುವನೆಂದು ಫರಿಸಾಯರಿಗೆ ಗೊತ್ತಿತ್ತು, ಆದರೆ ಯೇಸು ಬಂದು ಅವರ ಮುಂದೆ ನಿಂತಾಗ ಅವರು ಆತನನ್ನು ಗುರುತಿಸಲಿಲ್ಲ. ಯೇಸುವನ್ನು ಗುರುತಿಸಲು ನಾವು ಮಾಡಬೇಕಾದ ಮೊದಲ ಸಂಗತಿಯೇನೆಂದರೆ ನಾವು ನಮ್ಮ ಸ್ವಂತ ಆತ್ಮೀಕ ಬಲಹೀನತೆ ಮತ್ತು ಕುರುಡತನವನ್ನು ಒಪ್ಪಿಕೊಳ್ಳಬೇಕು (ಮತ್ತಾಯ 5:3 ಮತ್ತು ವ್ಯಾಖ್ಯಾನ ನೋಡಿರಿ). ಆಗ ಮಾತ್ರವೇ ಯೇಸು ನಮಗೆ ಪೂರ್ಣ ಆತ್ಮೀಕ ದೃಷ್ಟಿಯನ್ನು ನೀಡುವನು.

---

## ಅಧ್ಯಾಯ - 10

### ಕುರುಬನು ಮತ್ತು ಆತನ ಕುರಿಹಿಂಡು (10:1-21)

1 ಯೇಸು ಫರಿಸಾಯರಿಗೆ ಅವರ ಕುರುಡತನ ಬಗ್ಗೆ ಹೇಳುವದನ್ನು ಮುಗಿಸಿದ ಕೂಡಲೇ (ಯೋಹಾನ 9:39-41) ಆತನು ಒಳ್ಳೇ ಕುರುಬನ ಕುರಿತಾಗಿ ಬೋಧಿಸಲು ಪ್ರಾರಂಭಿಸಿದನು. ಹಳೆ ಒಡಂಬಕೆಯ ಪ್ರಕಾರವಾಗಿ ಯೆಹೂದ್ಯನಾಯಕರು ಇಸ್ರಾಯೆಲರ ಕಾವಲುಗಾರರು ಮತ್ತು ಕುರುಬರು ಆಗಿರಬೇಕಾಗಿತ್ತು. ಆದರೆ ಅವರು ತಮ್ಮ ಕರ್ತವ್ಯವನ್ನು ಮಾಡಲು ವಿಫಲರಾಗಿದ್ದರು. ಅವರು ಕುರುಡರಾಗಿ ಹೋಗಿದ್ದರು, ಅವರಿಗೆ ತಿಳುವಳಿಕೆಯ ಕೊರತೆಯಿತ್ತು

(ಯೇಶಾಯ 56:9-11) ಅವರು ಸುಳ್ಳು ಕುರುಬರಾಗಿ ಹೋಗಿದ್ದರು. ಅವರು ಕಳ್ಳರಂತೆಯೂ, ದರೋಡೆಕೋರರಂತೆಯೂ ಆಗಿದ್ದರು, ಅವರು ಕುರಿಯ ಹಟ್ಟಿಯನ್ನು ಬಾಗಿಲಿನಿಂದ ಪ್ರವೇಶಿಸ ದವರಾಗಿದ್ದರು.

**2-3** ನಿಜವಾದ ಕುರುಬನು (ಕ್ರಿಸ್ತನು) ಯಾವಾಗಲೂ ಬಾಗಿಲಿನಿಂದ ಪ್ರವೇಶಿಸುತ್ತಾನೆ. ಆತನು ಸತ್ಯದಲ್ಲಿ ಮುಕ್ತವಾಗಿ ಬರುತ್ತಾನೆ. ಆತನು ತನ್ನ ಕುರಿಗಳನ್ನು ಕರೆಯಲು ಅವು ಗಳು ಆತನನ್ನು[79] ಗುರುತಿಸುವವು.

**4-6** ಕುರಿಗಳು ತಾವು ಯಾವ ಕುರುಬನ ಸ್ವರವನ್ನು ಗುರುತಿಸುತ್ತವೋ ಆತನನ್ನು ಹಿಂಬಾಲಿಸುತ್ತವೆ. ಅವು ಗಳು ಮಿಥ್ಯಕುರುಬನ ಸ್ವರವನ್ನು ಗುರುತಿಸುವದಿಲ್ಲ.

ಹಳೆ ಒಡಂಬಡಿಕೆಯಲ್ಲಿ ದೇವರು ಸ್ವತಃ ಇಸ್ರಾಯೇಲರ ಕುರುಬನಾಗಿದ್ದನು (ಕೀರ್ತನೆಗಳ 23:1, ಯೆಹೆಜ್ಕೇಲ 34:15-16) ಆದರೆ ಈಗ ಆತನು ಯೇಸುವನ್ನು ನಮ್ಮ ಕುರುಬನನ್ನಾಗಿ ನೇಮಿಸಿದ್ದಾನೆ, ಹಾಗು ಸಭೆಗಾಗಿ ಅಡಿಕುರುಬರನ್ನು ಅಂದರೆ ಸಭಾಪಾಲಕರು ಮತ್ತು ಬೋಧಕರನ್ನು ಸಹ ನೇಮಿಸಿದ್ದಾನೆ (ಅ.ಕೃತ್ಯ 20:28-31 ನೋಡಿರಿ). ಅಪೊಸ್ತಲನಾದ ಪೇತ್ರನು ಯೇಸುವಿನ ಪ್ರಧಾನ "ಅಡಿ-ಕುರುಬ" ಆಗಿದ್ದಾನೆ. (ಯೋಹಾನ 21:15-17 ನೋಡಿರಿ.) ಮತ್ತು ಪೇತ್ರನು ತನ್ನ ಮೊದಲ ಪತ್ರಿಕೆಯಲ್ಲಿ ನಿಜವಾದ ಅಡಿ ಕುರುಬರು ಹೇಗೆನಡೆದುಕೊಳ್ಳಬೇಕೆಂದು ಬರೆದಿರುತ್ತಾನೆ (1 ಪೇತ್ರ 5:1-4 ಹಾಗು ವ್ಯಾಖ್ಯಾನ ನೋಡಿರಿ).

**7** ಯೇಸು ಕುರಿಗಳಿಗೆ ಬಾಗಲಾಗಿದ್ದಾನೆ. ಕುರಿಗಳು ಹಟ್ಟಿಯೊಳಗೆ ಪ್ರವೇಶಿಸಿ ಸುರಕ್ಷಿತೆಯನ್ನು ಕಂಡುಕೊಳ್ಳುವ ಬಾಗಲು ಆತನಾಗಿದ್ದಾನೆ. ಅದೇ ರೀತಿಯಲ್ಲಿ ವಿಶ್ವಾಸಿಗಳು ಆತನ ಮೂಲಕ ಪರಲೋಕವನ್ನು ಪ್ರವೇಶಿಸಿ ನಿತ್ಯಜೀವವನ್ನು ಕಂಡುಕೊಳ್ಳುವ "ಬಾಗಲು" – ಮಾರ್ಗ–ಆತನಾಗಿದ್ದಾನೆ, (ಯೋಹಾನ 14:6).

**8** ನನಗಿಂತ ಮುಂಚೆ ಬಂದವರೆಲ್ಲರೂ ಕಳ್ಳರೂ ಸುಲುಕೊಳ್ಳುವವರೂ ಆಗಿದ್ದಾರೆ ಎಂದು ಯೇಸು ಹೇಳಿದನು.[80] ಮುಂಜಾನೆ ಬೆಳಕಾಗುವದಕ್ಕೆ ಮುಂಚೆ ಬರುವವರು ನಿಜವಾದ ಕುರುಬರಲ್ಲ ಎಂಬದು ಇದರರ್ಥವಾಗಿದೆ. ನಿಜವಾದ ಕುರುಬನು ಬೆಳಗಾದ ನಂತರ ತನ್ನ ಕುರಿಗಳನ್ನು ಮೇಯಿಸಲು ಬರುತ್ತಾನೆ, ಅದಕ್ಕಿಂತ ಮುಂಚೆ ಬರುವ ಯಾವನೇ ಆಗಲಿ ಆತನು ಕಳ್ಳ ನಾಗಿದ್ದಾನೆ.

ಕಳ್ಳನು ಬಾಗಲಿನ ಮೂಲಕ ಒಳಗೆ ಹೋಗುವದಿಲ್ಲ, ಯಾವನಾದರೂ ನಿಜವಾದ ಕುರುಬನಾಗಿರಲು ಇಚ್ಛಿಸುವದಾದರೆ ಬಾಗಲಾಗಿರುವ ಕ್ರಿಸ್ತನ ಮೂಲಕವೇ ಹೋಗಬೇಕು. ನಾವು ಇತರರನ್ನು ರಕ್ಷಿಸಲು ಬಯಸುವದಾದರೆ ಮೊದಲು ಸ್ವತಃ ನಾವು ರಕ್ಷಣೆ ಹೊಂದಿದವರಾಗಿರಬೇಕು.

**9** ನಾನೇ ಆ ಬಾಗಿಲು, ಯಾವನೂ ಸಹ ಮೊದಲು ಕ್ರಿಸ್ತನ ಮಾರ್ಗದ ಮುಖಾಂತರ ಪ್ರವೇಶಿಸಿದ ಹೊರತು ಪರಲೋಕವನ್ನು ಪ್ರವೇಶಿಸಲಾರನು (ಯೋಹಾನ 14:6). ಅಂದರೆ ಕ್ರಿಸ್ತನ ಹೊರತು ಪಡಿಸಿ ಯಾವನೂ ರಕ್ಷಣೆ ಹೊಂದಲು ಸಾಧ್ಯವಿಲ್ಲ (ಅ.ಕೃತ್ಯ 4:12). ಒಂದೇ ಒಂದು ಬಾಗಿಲು ಇರುತ್ತದೆ.

**10** ಮಿಥ್ಯ ಕುರುಬನು, ಕಳ್ಳನು ಹಾನಿಮಾಡುವದಕ್ಕೆ ಬರುವನು. ಅವನು ಕುರಿಯ ವೇಷದಲ್ಲಿರುವ ತೋಳದಂತಿರುತ್ತಾನೆ (ಮತ್ತಾಯ 7:15, ಅ.ಕೃತ್ಯ 20:29).

ಆದರೆ ನಿಜವಾದ ಕುರುಬನಾದ ಯೇಸು ತನ್ನ ಕುರಿಗಳಿಗೆ – ವಿಶ್ವಾಸಿಗಳಿಗೆ – ಜೀವವಿರಬೇಕೆಂತಲೂ, ಆ ಜೀವವು ಸಮೃದ್ಧಿಯಾಗಿರಬೇಕೆಂತಲು ಬರುತ್ತಾನೆ. ಸುಳ್ಳುಕುರುಬರು ಮರಣವನ್ನುಂಟು ಮಾಡುತ್ತಾರೆ.ನಿಜ ಕುರುಬನು ಜೀವವನ್ನುಂಟು ಮಾಡುವನು. ಈ ಜೀವವು ನಿತ್ಯಜೀವವೇ (ವಚನ 28). ಇದು ಒಬ್ಬನು ವಿಶ್ವಾಸಿಸಿದಾಗ ಪ್ರಾರಂಬಗೊಂಡು ಎಂದಿಗೂ ಅಂತ್ಯಗೊಳ್ಳುವದಿಲ್ಲ (ಯೋಹಾನ 3:15, 8:51 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಯೇಸು ನಮಗೆ ನೀಡುವ ಜೀವವು ನಿತ್ಯಜೀವವಾಗಿದ್ದು, ದೇವರ ಸರ್ವಸಂಪೂರ್ಣತೆಯಿಂದ ತುಂಬಿರುತ್ತದೆ (ಎಫೆಸ 3:19) ಇದು ಆನಂದ, ಸಮಾಧಾನ, ಬಲದ ಜೀವವಾಗಿದೆ ಮತ್ತು ಇದು ಸದಾಕಾಲವು ಇರುತ್ತದೆ.

**11** "ನಾನೇ ಒಳ್ಳೇ ಕುರುಬನು" ಒಳ್ಳೇ ಕುರುಬನು ತನ್ನ ಹಿಂಡನ್ನು ಪ್ರೀತಿಸುತ್ತಾನೆ. ಬೈಬಲ್ ಕಾಲಗಳಲ್ಲಿ ಒಳ್ಳೇ ಕುರುಬರು ಸಹ ತಮ್ಮ ಕುರಿಗಳಿಗೋಸ್ಕರ ತಮ್ಮ ಪ್ರಾಣವನ್ನು ಕೊಡಲಿಲ್ಲ. ಆದರೆ ಒಬ್ಬ ಒಳ್ಳೇ ಕುರುಬನಾದ ಯೇಸು ತನ್ನಸ್ವಪ್ರಾಣವನ್ನು ಕೊಟ್ಟನು (ಮಾರ್ಕ 10:45). ಆತನು ಅದನ್ನು ತನ್ನಷ್ಟಕ್ಕೆ ತಾನೇ ಕೊಟ್ಟನು (ವಚನ 18).

**12-13** ನಿಜವಾದ ಕುರುಬನು ಕುರಿಗಳ ಯಜಮಾನನಾಗಿದ್ದಾನೆ. ಆತನು ತನ್ನ ಕುರಿಗಳನ್ನು ಒಬ್ಬ ಕೂಲಿಯಾಳಿಗಿಂತ ಹೆಚ್ಚಾಗಿ ಆರೈಕೆ ಮಾಡುತ್ತಾನೆ. ತೋಳಗಳು ಬರುವಾಗ ಕೂಲಿಯಾಳು ಓಡಿಹೋಗುತ್ತಾನೆ ಮತ್ತು ಕುರಿಗಳು ಚದುರಿಸಲ್ಪಟ್ಟು ನಾಶವಾಗುತ್ತವೆ.

ಪ್ರತಿಯೊಂದು ಪೀಳಿಗೆಯಲ್ಲಿಯೂ ಸಭೆಯ ನಾಯಕರುಗಳಲ್ಲಿ ಕೆಲವರು ಕೇವಲ "ಕೂಲಿಯಾಳುಗಳ" ಹಾಗಿರುವವರು ಇದ್ದೇ ಇದ್ದಾರೆ. ಅವರು ತಮ್ಮ ಕುರಿ ಹಿಂಡಿಗೆ ಪ್ರಾಧಾನ್ಯತೆ ನೀಡುವದಿಲ್ಲ. ಅವರು ಕ್ರಿಸ್ತನ ಸಭೆಯ ಒಳಿತನ್ನು ಪ್ರಾಮುಖ್ಯವಾಗಿ ಎಣಿಸುವದಿಲ್ಲ. ಅವರು ಸಮಸ್ಯೆಯು ಬಂದಾಗ ಓಡಿ ಹೋಗುತ್ತಾರೆ. ಅವರಿಗೆ ಸಭಾನಾಯಕನಾಗಿರುವದು ಬದುಕುವದಕ್ಕೆ ಒಂದು ಮಾರ್ಗವಿದ್ದಂತೆ ಆಗಿರುತ್ತದೆ. ನಮ್ಮಲ್ಲಿ ಒಬ್ಬೊಬ್ಬರೂ ನಮ್ಮ ಹೃದಯಗಳನ್ನು ಪರೀಕ್ಷಿಸಿಕೊಳ್ಳೋಣ. ನಾವು ಕ್ರಿಸ್ತನನ್ನು ಪ್ರೀತಿಗಾಗಿ ಸೇವಿಸುತ್ತಿದ್ದೇವೊ ಅಥವಾ ನಾವು ಕ್ರಿಸ್ತನನ್ನು ಹಣಕ್ಕಾಗಿ ಸೇವಿಸುತ್ತಿದ್ದೇವೊ? (ಮತ್ತಾಯ 6:24, 1 ತಿಮೊಥೆ 6:3-5, 9-11, 1 ಪೇತ್ರ 5:2 ಹಾಗು ವ್ಯಾಖ್ಯಾನಗಳನ್ನು ನೋಡಿರಿ).

**14** "ಒಳ್ಳೇ ಕುರುಬನು" ತನ್ನ ಕುರಿಗಳನ್ನು ಬಲ್ಲನು, ಮತ್ತು ಕುರಿಗಳು ತಮ್ಮ ಕುರುಬನನ್ನು ಬಲ್ಲವು (ವಚನ 4). ಕರ್ತನು ತನ್ನವರು ಯಾರೆಂದು ತಿಳಿದವನಾಗಿದ್ದಾನೆ (2 ತಿಮೊಥೆ 2:19), ಮತ್ತು ವಿಶ್ವಾಸಿಗಳು ತಾವು ನಂಬಿರುವಾತನನ್ನು ಬಲ್ಲವರಾಗಿದ್ದಾರೆ (2 ತಿಮೊಥೆ 1:12).

**15** ಕುರಿಗಳು ಮತ್ತು ಅವು ಗಳ ಕುರುಬನ ನಡುವಿನ ಸಂಬಧವು ಸಹ ದೇವರು ಹಾಗು ಕ್ರಿಸ್ತನ ನಡುವಿನ ಸಂಬಂಧದ ಹಾಗೆ ಆಪ್ತವೂ ಆಳವಾದದ್ದೂ ಆಗಿರುತ್ತದೆ. ಯೇಸು ತನ್ನ ಕುರಿಗಳನ್ನು ಬಲ್ಲನು ಮತ್ತು ಪ್ರೀತಿಸುತ್ತಾನೆ, ಅಲ್ಲದೆ ಅವು ಗಳಿಗಾಗಿ ತನ್ನ ಪ್ರಾಣವನ್ನು ಕೊಡಲು ಸಿದ್ಧನಾಗಿದ್ದಾನೆ.

**16** ಈ ಕುರಿಯ ಹಟ್ಟಿಯೊಳಗೆ ಸೇರದಿರುವ ಇತರ ಕುರಿಗಳು ಯೇಸುವಿಗೆ ಇರುತ್ತವೆ. ಇವರು ಅನ್ಯಜನಾಂಗದ (ಯೆಹೂದ್ಯೇತರ) ವಿಶ್ವಾಸಿಗಳು ಈಗಾಗಲೇ ಕ್ರಿಸ್ತನಲ್ಲಿ ವಿಶ್ವಾಸವಿಡುವ ಜನರನ್ನು ದೇವರು ಆರಿಸಿಕೊಂಡಿರುತ್ತಾನೆ. ಅವರು ಇನ್ನೂ ಕರೆಯಲ್ಪಟ್ಟಿರಲಿಲ್ಲ, ಅವರನ್ನು ಇನ್ನೂ ನಂಬಿಕೆಗೆ ತರಲ್ಪಟ್ಟಿರುವದಿಲ್ಲ. ಅವರನ್ನು ಕುರಿ ಹಟ್ಟಿಗೆ ಸಭೆಯೊಳಗೆತರುವ ಅಗತ್ಯತೆ ಇರುತ್ತದೆ. ಈ ಅನ್ಯಜನರು ಯೇಸುವಿನ ಸ್ವರವನ್ನು ಕೇಳಿ ಆತನ ಬಳಿಗೆ ಬರುವವರು. ಆಗ ಒಂದೇ ಹಿಂಡು ಒಂದೇ ಸಭೆ ಆಗುವದು, ಅದರಲ್ಲಿ ಯೆಹೂದ್ಯರು ಹಾಗು ಅನ್ಯಜನರೂ ಅಂತೂ ಎಲ್ಲಾ ವಿಶ್ವಾಸಿಗಳು ಸೇರಿರುತ್ತಾರೆ.

ಅನ್ಯ ಜನಾಂಗದವರನ್ನು ಸಭೆಯೊಳಗೆ ಕರೆಯುವ ಕೆಲಸವನ್ನು ಯೇಸು ತನ್ನ ಶಿಷ್ಯರಿಗೆ – ನಮಗೆ – ವಹಿಸಿರುತ್ತಾನೆ. ಪ್ರತಿಯೊಂದು ಪೀಳಿಗೆಯಲ್ಲಿಯೂ ದೇವರು ಕ್ರಿಸ್ತನಿಗಾಗಿ ಕುರಿಗಳನ್ನು ಪ್ರತ್ಯೇಕಿಸಿಟ್ಟಿರುತ್ತಾನೆ. ಆದರೆ ನಾವು ಅವರನ್ನು ಕರೆಯಬೇಕು. ಆಗ ಒಂದೇ ಹಿಂಡು ಆಗುವದು. ಕ್ರಿಸ್ತನಿಗೆ ಅನೇಕ ಹಿಂಡುಗಳಿರುವದಿಲ್ಲ, ಆತನಿಗೆ ಒಂದೇ ಹಿಂಡು ಇರುತ್ತದೆ. ನಾವು ಎಂದಿಗೂ ಕ್ರಿಸ್ತನ ಹಿಂಡಿನಲ್ಲಿ ಒಡಕು ಉಂಟಾಗಲು ಕಾರಣರಾಗದಿರೋಣ.

**17-18** ಕ್ರಿಸ್ತನು ದೇವರಿಗೆ ಸಂಪೂರ್ಣವಾಗಿ ವಿಧೇಯನಾಗಿದ್ದದರಿಂದ ದೇವರು ಕ್ರಿಸ್ತನನ್ನು ಪ್ರೀತಿಸಿದನು. ಕ್ರಿಸ್ತನು ಕುರಿಗಳಿಗಾಗಿ ತನ್ನ ಪ್ರಾಣವನ್ನು ನೀಡಬೇಕೆಂಬುದು ದೇವರ ಚಿತ್ತವೂ, ಉದ್ದೇಶವು ಆಗಿತ್ತು ಮತ್ತು ಕ್ರಿಸ್ತನು ವಿಧೇಯನಾದನು.

ಆದರೆ ಕ್ರಿಸ್ತನು ತಿರಿಗಿ ತನ್ನ ಜೀವವನ್ನು ಪಡೆದುಕೊಂಡನು. ತಂದೆಯ ಆಜ್ಞೆಯ ಮೇರೆಗೆ ಯೇಸು ತನ್ನ ಪ್ರಾಣವನ್ನು ತಿರಿಗಿ ಪಡಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಅರ್ಪಿಸಿದನು. ಮರಣವಿಲ್ಲದೆ ಪು ನರುಥ್ಥಾನವು ಇರಲು ಸಾದ್ಯವಿಲ್ಲ. ಮರಣವನ್ನು ಜಯಿಸುವ ದಕ್ಕಾಗಿಯು, ನಮ್ಮನ್ನು ಮರಣ ದಂಡನೆಯಿಂದ ಬಿಡಿಸುವದಕ್ಕಾಗಿಯೂ ಯೇಸು ತನ್ನನ್ನು ಮರಣಕ್ಕೆ ಒಪ್ಪಸಬೇಕಾಗಿತ್ತು.

ಯೇಸು ತನ್ನ ಪ್ರಾಣವನ್ನು ಕೊಟ್ಟನು ಮತ್ತು ಅದನ್ನು ತಿರಿಗಿ ಪಡಕೊಂಡನು. ಕ್ರಿಸ್ತನು ತನ್ನನ್ನು ಮರಣದಿಂದ ಎಬ್ಬಿಸಿಕೊಂಡನು ಹಾಗು ದೇವರು ಸಹ ಆತನನ್ನ ಎಬ್ಬಿಸಿದನು. ಕ್ರಿಸ್ತನು ಮತ್ತು ದೇವರುಯಾವಾಗಲೂ ಒಟ್ಟಾಗಿ ಕಾರ್ಯಮಾಡುತ್ತಾರೆ. ಅವರು ಮಾಡುವಂತದ್ದೆಲ್ಲವೂ ಅವರಿಬ್ಬರಿಂದಲೇ ಮಾಡಲ್ಪಡುತ್ತದೆ (ವಚನ ೩೦ ನೋಡಿರಿ).

**19-21** ಯೇಸುವಿನ ದೆಸೆಯಿಂದ ತಿರಿಗಿ ಜನರಲ್ಲಿ ಬೇಧವಾಯಿತು (ಯೋಹಾನ 7:20, 43, 8:48, 9:16 ಹಾಗು ವ್ಯಾಖ್ಯಾನ ನೋಡಿರಿ).

ಅವರಲ್ಲಿ ಕೆಲವರು "ಇವರಿಗೆ ದೆವ್ವಹಿಡಿದದೆ, ಹುಚ್ಚು ಹಿಡಿದದೆ" ಎಂದರು (ವಚನ 20). ದೆವ್ವಹಿಡಿಯುವಿಕೆ ಮತ್ತು ಹುಚ್ಚುತನಗಳು ಎರಡು ಬೇರೆ ಬೇರೆ ಸಂಗತಿಗಳಾಗಿವೆ. ಆದರೆ ಅನೇಕ ವೇಳೆ ಒಬ್ಬ ದೆವ್ವಹಿಡಿದಿರುವ ವ್ಯಕ್ತಿಯು ಹುಚ್ಚನಂತೆ ಕಾಣುತ್ತಾನೆ.

## ಯೆರೂಸಲೇಮಿನ ದೇವಾಲಯದಲ್ಲಿ ಯೇಸು (10:22-30)

**22-24** ಕೆಲಕಾಲದನಂತರ ದೇವಾಲಯ ಪ್ರತಿಷ್ಠೆಯ[81] ಹಬ್ಬವು ಬಂದಿತು. ಯೇಸು ದೇವಾಲಯದೊಳಗೆ ಸೊಲೊಮೋನನ ಮಂಟಪದಲ್ಲಿ ತಿರುಗಾಡುತ್ತಾ ಇರುವಾಗ (ಅ.ಕೃತ್ಯ 3:11, 5:12). ಯೆಹೂದ್ಯರು ಯೇಸುವಿಗೆ ಆತನು ಕ್ರಿಸ್ತನು ಹೌದೋ ಅಥವಾ ಅಲ್ಲವೋ ಎಂಬದನ್ನು ತಮಗೆ ನೇರವಾಗಿ ಹೇಳುವಂತೆ ಕೇಳಿದರು. ಬಹುಶಃ ಕೆಲವರು ನಂಬಲಿಕ್ಕೆ ಸಿದ್ದರಿದ್ದರು. ಇತರರು ಕೇವಲ ಆತನನ್ನು ತಪ್ಪಿನಲ್ಲಿ ಸಿಕ್ಕಿಸಬೇಕೆಂದು ಪ್ರಯತ್ನಿಸುತ್ತಿದ್ದಿರಬೇಕು. ಒಂದು ವೇಳೆ ಆತನು ತಾನು ಕ್ರಿಸ್ತನು (ಮೆಸ್ಸಿಯನು) ಎಂದು ಹೇಳಿದರೆ ತನ್ನನ್ನು ಒಬ್ಬ ಅರಸನನ್ನಾಗಿ ಮಾಡಿಕೊಂಡದ್ದಕ್ಕಾಗಿ ರೋಮಾಯರು ಆತನನ್ನು ಬಂಧಿಸುತ್ತಿದ್ದರು. ಒಂದು ವೇಳೆ ಯೇಸುತಾನು ಮೆಸ್ಸಿಯನಲ್ಲ ಎಂದು ಹೇಳಿದರೆ ಜನರು ಆಗ ಆತನನ್ನು ಹಿಂಬಾಲಿಸುವದನ್ನು ನಿಲ್ಲಿಸುತ್ತಾರೆ.ಹೀಗೆ ಯೇಸು ಯಾವ ಉತ್ತರ ನೀಡಿದರೂ ಅದು ಆತನ ವೈರಿಗಳಿಗೆ ಪ್ರಯೋಜನಕರವಾಗುತ್ತಿತ್ತು.

**25** ಯೇಸು ಅವರಿಗೆ –"ನಿಮಗೆ ಹೇಳಿದೆನು. ನಾನು ಯಾರೆಂದು ನಿಮಗೆ ಹೇಳಿದ್ದೇನೆ" ಎಂದು ಉತ್ತರಿಸಿದನು. ಯೇಸು ತಾನು ಯಾರೆಂಬದನ್ನು ಸಮಾರ್ಯದ ಸ್ತ್ರೀಗೆ ಹೇಳಿದ್ದಾನೆ (ಯೋಹಾನ 4:26) ಅಲ್ಲದೆ ಕುರುಡ ಮನುಷ್ಯನಿಗೂ ಸಹ ತಾನು ಯಾರೆಂಬದನ್ನು ಹೇಳಿದ್ದಾನೆ (ಯೋಹಾನ 9:35-37). ಆಸಮಯದಲ್ಲಿ ಬಹುಶಃ ಕೆಲವು ಯೆಹೂದ್ಯರು ಆತನ ಮಾತುಗಳನ್ನು ಕೇಳಿಸಿಕೊಂಡು. ಆತನು ಯೆಹೂದ್ಯರಿಗೆ ಸಹ "ಅಬ್ರಹಾಮನು ಹುಟ್ಟುವದಕ್ಕೆ ಮುಂಚೆ ನಾನು ಇದ್ದೇನೆ" ಎಂದು ಹೇಳಿದನು. (ಯೋಹಾನ 8:58 ಮತ್ತು ವ್ಯಾಖ್ಯಾನ ನೋಡಿರಿ). ಆತನು ತನ್ನನ್ನು ಸುಲಭವಾಗಿ ಕಾಣಬಹುದಾಗಿದ್ದ ಯೇಸುವಿನ ಅದ್ಭುತಗಳನ್ನು ಸಹ ಅವರು ನಂಬಲಿಲ್ಲ. ಅದ್ಭುತಗಳು ಯೇಸುವೇ ಕ್ರಿಸ್ತನೆಂದು

ಕಲುಹಿಸಲ್ಪಟ್ಟನೆಂಬದಕ್ಕೆ ಅದ್ಭುತಗಳುಸಾಕ್ಷಿನೀಡಿದವು (ಯೋಹಾನ 5:36) ಆದರೆ ಯೆಹೂದ್ಯರು ಅವು ಗಳೆಲ್ಲವಕ್ಕೂ ಆತ್ಮೀಕವಾಗ ಕುರುಡರಾಗಿದ್ದರು.

26 ಯೆಹೂದ್ಯರು ಯೇಸುವಿನ ಕುರಿಗಳಾಗಿರಲಿಲ್ಲ ಆದಕಾರಣದಿಂದ ಅವರು ನಂಬಲಿಲ್ಲ. ಅವರು ಯೇಸುವನ್ನು ತಿಳಿದಿರಲಿಲ್ಲ. ಅವರು ನಂಬಿಕೆಯ ವರವನ್ನು ಪಡೆದುಕೊಳ್ಳಲು ದೇವರಿಂದ ಆರಿಸಿಕೊಳ್ಳಲ್ಪಟ್ಟಿರಲಿಲ್ಲ (ಯೋಹಾನ 6:37, 44, 8:47 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಯೆಹೂದ್ಯರು ಯೇಸುವಿನ ಕುರಿಗಳಲ್ಲವಾದರೆ ಅವರು ಇನ್ಯಾರ ಕುರಿಗಳಾಗಿದ್ದರು? ಅವರು ಸೈತಾನನ ಕುರಿಗಳಾಗಿದ್ದರು. ಎರಡು ಹಿಂಡುಗಳು ಮಾತ್ರವೇ ಇರುತ್ತವೆ: ಕ್ರಿಸ್ತನ ಹಿಂಡು ಹಾಗು ಸೈತಾನನ ಹಿಂಡು. ಪ್ರತಿಯೊಬ್ಬನು ತನ್ನನ್ನು ಕೇಳಿಕೊಳ್ಳಬೇಕಾದದ್ದೇನಂದರೆ: ನಾನು ಯಾರ ಹಿಂಡಿಗೆ ಸೇರಿದವನು? ನಾವು ಕ್ರಿಸ್ತನ ಹಿಂಡಿಗೆ ಸೇರಿದವನಾಗಿರುವದಾದರೆ ನಾವು ಆತನ ಸ್ವರವನ್ನು ಕೇಳುತ್ತೇವೆ.

27 ಯೇಸು ತನ್ನ ಕುರಿಗಳನ್ನು ಬಲ್ಲನು ಮತ್ತು ಆತನ ಕುರಿಗಳು ಅವನನ್ನು ಬಲ್ಲವು (ವಚನ 15 ಮತ್ತು ವ್ಯಾಖ್ಯಾನ ನೋಡಿರಿ). ಅಂದರೆ ಕುರಿಗಳು ತಮ್ಮ ಕುರುಬನಲ್ಲಿ ಪೂರ್ಣ ನಂಬಿಕೆಯನ್ನು ಹೊಂದಿರುತ್ತವೆ.

28 ಯೇಸು ತನ್ನ ಕುರಿಗಳಿಗೆ ನಿತ್ಯಜೀವಕೊಡುತ್ತಾನೆ. ಆತನು ಅದನ್ನು ಭವಿಷ್ಯತ್ತಿನಲ್ಲಿ ಮಾತ್ರವೇ ಕೊಡದೆ ಈಗಲೂ ಕೊಡುತ್ತಾನೆ (ಯೋಹಾನ 3:15-16, 8:51). ಆತನು ತನ್ನ ಕುರಿಗಳಿಗೆ ಸಂಪೂರ್ಣ ಸುರಕ್ಷತೆಯನ್ನು ಒದಗಿಸುತ್ತಾನೆ. ಹಾಗೆಂದ ಮಾತ್ರಕ್ಕೆ ಆತನು ನಮ್ಮನ್ನು ಈ ಜೀವಿತದಲ್ಲಿನ ಎಲ್ಲಾ ಸಮಸ್ಯೆ ಹಾಗು ವಿಪತ್ತುಗಳಿಂದ ರಕ್ಷಿಸುತ್ತಾನೆಂಬದು ಇದರ ಅರ್ಥವಾಗಿರುವದಿಲ್ಲ. ಬದಲಾಗಿ ಲೋಕದ ಯಾವ ಸಮಸ್ಯೆಗಳು ನಮ್ಮ ಮೇಲೆ ಬಂದರೂ ಆತನು ನಮ್ಮ ಆತ್ಮ ಹಾಗು ಪ್ರಾಣಗಳನ್ನು ಸಂರಕ್ಷಿಸುವವನು ಎಂದರ್ಥವಾಗಿದೆ.

ಯೇಸು ಹೇಳಿದ್ದು "ಅವು ಗಳನ್ನು ಯಾರೂ ನನ್ನ ಕೈಯೊಳಗಿಂದ ಕಸಕೊಳ್ಳರು". ಶ್ರೇಷ್ಠ ಕುರುಬನಾದ ಬಲವಾದ ಹಸ್ತವು ನಮ್ಮನ್ನು ಹಿಡಿದಿರುತ್ತದೆ. ಸೈತಾನನು ನಮ್ಮನ್ನು ಎಳೆದುಕೊಳ್ಳಲು ಪ್ರಯತ್ನಿಸುತ್ತಾನೆ ಆದರೆ ಕ್ರಿಸ್ತನ ಹಿಡಿತವು ಬಲವಾಗಿರುತ್ತದೆ (1 ಯೋಹಾನ 4:4 ಹಾಗು ವ್ಯಾಖ್ಯಾನ ನೋಡಿರಿ). ನಮ್ಮ ರಕ್ಷಣೆಯು ಕ್ರಿಸ್ತನ ಮೇಲಿರುವ ನಮ್ಮ ಬಲಹೀನ ಹಿಡಿತದ ಮೇಲೇ ಆಧಾರವಾಗಿರುವದಿಲ್ಲ, ಅದು ನಮ್ಮ ಮೇಲೆ ಇರುವ ಆತನ ಬಲವಾದ ಹಿಡಿತವನ್ನು ಅವಲಂಬಿಸಿರುತ್ತದೆ.

ನಾವು ಕ್ರಿಸ್ತನ ಸುರಕ್ಷತೆಯನ್ನು ಕಳೆದುಕೊಳ್ಳಬಹುದಾದ ಒಂದು ಮಾರ್ಗ ಇರುತ್ತದೆ: ನಾವು ಸ್ವತಃ ಆತನ ಕೈಯೊಳಗಿಂದ ಜಿಗಿಯ ಬಹುದು. ಅಂದರೆ, ನಾವು ತಿಳಿದೂ ಪಾಪದಲ್ಲಿ ಮುಂದೆ ಸಾಗಬಹುದು, ನಾವು ದೇವರಿಂದ ನಮ್ಮನ್ನು ಬೇರ್ಪಡಿಸಿಕೊಳ್ಳಬಹುದು, ನಾವು ನಂಬದಿರಲು ತಿರ್ಮಾನಿಸಬಹುದು. ಒಬ್ಬನು ನಂಬಿಕೆಯನ್ನೆ ತೊರೆಯುವದಾದರೆ ಅವನು ನಿಜವಾದ ನಂಬಿಕೆಯನ್ನು ಹೊಂದಿರಲಿಲ್ಲ ಎಂದು ಕೆಲವರು ಹೇಳುವರು. ಅವರು ಕ್ರಿಸ್ತನ ಕೈಯೊಳಗೆ ಇರಲೇ ಇಲ್ಲ ಎಂದು ಅವರು ಹೇಳುತ್ತಾರೆ. ಮತ್ತು ಒಂದು ವಿಧದಲ್ಲಿ ಅವರು ಹೇಳುವದು ಸರಿಯಾಗಿರಬಹುದಾಗಿದೆ. ಆದರೆ ಹೊಸ ಒಡಂಬಡಿಕೆಯ ಇತರ ವಚನಗಳು ಒಮ್ಮೆ ನಿಜವಾಗಿಯೂ ನಂಬಿಕೆಯಿಟ್ಟವರೂ ಸಹ ಅನಂತರ ಕ್ರಿಸ್ತನಿಂದ ವಿಮುಖರಾಗುವ ಸಾಧ್ಯತೆಯಿದೆ, ಎಂದು ಹೇಳುತ್ತವೆ (ಇಬ್ರಿಯ 6:4-6, 10:26-29 ಮತ್ತು ವ್ಯಾಖ್ಯಾನಗಳು, ಸಾಮಾನ್ಯ ಬರಹಃ ನಾವು ನಮ್ಮ ರಕ್ಷಣೆಯನ್ನು ಕಳೆದುಕೊಳ್ಳಬಹುದೋ ನೋಡಿರಿ.)

29 ಇಲ್ಲಿ ಯೇಸು 28ನೇ ವಚನದಲ್ಲಿನ ವಿಚಾರವನ್ನು ಪು ನರಾವರ್ತಿಸುತ್ತಾನೆ. ಯಾವ ದುಷ್ಟ ಶಕ್ತಿಯುನಮ್ಮನ್ನು ಕ್ರಿಸ್ತನ ಕೈಯೊಳಗಿಂದ ಕಸಕೊಳ್ಳಲಾರದು, ಯಾಕೆಂದರೆ ದೇವರು ನಮ್ಮನ್ನು ಕ್ರಿಸ್ತನಿಗೆ ಕೊಟ್ಟಿರುತ್ತಾನೆ. (ಯೋಹಾನ 6:37),ಹಾಗು ದೇವರು ಎಲ್ಲಾ ದುಷ್ಟ ಶಕ್ತಿಗಳಿಗಿಂತಲೂ ಬಲಿಷ್ಟನಾಗಿರುತ್ತಾನೆ. ಆತನ ಕುರಿಗಳಲ್ಲಿ ಒಂದಾದರೂ ನಾಶವಾಗಬಾರದೆಂಬುದು ಆತನ ಚಿತ್ತವಾಗಿದೆ, (ಯೋಹಾನ 6:39).

30 ಅನಂತರ ಯೇಸು ಯೆಹೂದ್ಯರು ತನಗೆ ಕೇಳಿದ್ದ ಪ್ರಶ್ನೆಗೆ ತನ್ನ ಅಂತಿಮ ಉತ್ತರವನ್ನು ನೀಡುತ್ತಾನೆ. ಯೇಹೂದ್ಯರು ಆತನಿಗೆ "ನೀನು ಕ್ರಿಸ್ತನೋ" ಎಂದು ಕೇಳಿದ್ದರು (ವಚನ 24). ಆದರೆ ಕ್ರಿಸ್ತನು ತಾನು ಮೆಸ್ಸಿಯನು ಮಾತ್ರವಲ್ಲ, ತಾನು ಸ್ವತಃ ದೇವರಾಗಿದ್ದಾನೆಂದು ಹೇಳಿದನು. (ಯೋಹಾನ 1:1 ಹಾಗು ವ್ಯಾಖ್ಯಾನ ನೋಡಿರಿ). ನಿಜವಾದ ಮೆಸ್ಸೀಯನು ದೇವರಾಗಿದ್ದಾನೆ, "ನಾನೂ ತಂದೆಯು ಒಂದಾಗಿದ್ದೇವೆ."

ಈ ಶ್ರೇಷ್ಟ ಹೇಳಿಕೆಯು ಕ್ರಿಸ್ತನ ಈ ಸುವಾರ್ತೆಯಲ್ಲಿಯ ಮತ್ತು ಇತರ ಮೂರು ಸುವಾರ್ತೆಗಳಲ್ಲಿಯೂ ನೀಡಿರುವ ಎಲ್ಲಾ ಭೋಧನೆಯಗಳಿಗೂ ಅಸ್ತಿವಾರವಾಗಿದೆ. ಯೆಹೂದ್ಯರು ಯೇಸುವನ್ನು ಕೇವಲ ಬಡ ಹಾಗು ದೀನ ಮನುಷ್ಯನಾಗಿಯೂ ಗಲಿಲಾಯದ ಗುಡ್ಡುಗಾಡುಗಳ ಪ್ರದೇಶದವನಾದ ಬಡಗಿಯವನ ಮಗನಾಗಿಯೂ ಮಾತ್ರವೇ ಕಂಡದ್ದರಿಂದ ಆತನನ್ನು ಅವರು ನಂಬಲಿಲ್ಲ. ಆದರೆ ಈ ಯೇಸು ಕೇವಲ ಮನುಷ್ಯನು ಮಾತ್ರವೇ ಅಲ್ಲ, ಆತನು ಸ್ವತಃ ದೇವರ ನಿಜವಾದ ಹಾಗು ಏಕೈಕ ನರಾವತಾರವಾಗಿದ್ದನು.

ನಾವು ಯೇಸುವನ್ನು ದೃಷ್ಟಿಸುವಾಗ ಅವಿಶ್ವಾಸಿಗಳಾದ ಯೆಹೂದ್ಯರು ಆತನನ್ನು ದೇವರನ್ನಾಗಿ ಕಾಣದೆ ಕೇವಲ ಮಾನವನಾಗಿ ಮಾತ್ರವೇ ಕಂಡಂತೆ ನಾವು ಆ ತಪ್ಪನ್ನು ಮಾಡದಿರೋಣ. ನಾವು ಯೆಹೂದ್ಯರ ಹಾಗೆ ಆತ್ಮೀಕವಾಗಿ ಕುರುಡರಂತೆ ಇದ್ದು ಆದರ ಮೂಲಕ ನಿತ್ಯಜೀವವನ್ನು ಪಡೆಯುವ ಅವಕಾಶವನ್ನು ಕಳೆದುಕೊಳ್ಳದಿರೋಣ.

## ಯೆಹೂದ್ಯರ ಹಗೆತನ (10:31-42).

**31** ಯೇಸು ತನ್ನನ್ನು ದೇವರೆಂದು ಹೇಳಿಕೊಳ್ಳುತ್ತಿದ್ದಾನೆಂದು ಆತನು 30ನೇ ವಚನದಲ್ಲಿ ಹೇಳಿದ ಸಂಗತಿಯಿಂದ ಯೆಹೂದ್ಯರು ತಕ್ಷಣವೇ ಅರ್ಥಮಾಡಿಕೊಂಡರು. (ವಚನ 33). ಆ ಹೇಳಿಕೊಳ್ಳುವದು ಅವರ ದೃಷ್ಟಿಯಲ್ಲಿ ದೇವದೂಷಣೆಯಾಗಿತ್ತು. (ಮಾರ್ಕ14:64, ಯೋಹಾನ 5:18,8:59 ಮತ್ತು ವ್ಯಾಖ್ಯಾನ ನೋಡಿರಿ).

**32** ಯೇಹೂದ್ಯರು ಕಲ್ಲುಗಳನ್ನು ಎತ್ತಿಕೊಳ್ಳುವಾಗ ಯೇಸು ಪಲಾಯನ ಮಾಡಲಿಲ್ಲ. ಆತನು ಅವರಿಗೆಯಾವ ವಿಸ್ಮಯಕ್ಕಾಗಿ ನನಗೆ ಕಲ್ಲೆಸೆಯುತ್ತಿರುವಿರಿ? ನಾನು ದೇವರ ಕಾರ್ಯವನ್ನೇ ಹೊರತು ಇನ್ನೇನೂ ಮಾಡಲಿಲ್ಲ. ನಾನು ಮಾಡಿದ ಯಾವ ಅದ್ಭುತಕಾರ್ಯಕ್ಕಾಗಿ ನೀವು ನನಗೆ ಕಲ್ಲೆಸೆಯಲು ನೋಡುತ್ತೀರಿ? ಎಂದು ಮಾತ್ರವೇ ಹೇಳಿದನು.

"ನೀನು ಮಾಡಿದ ಯಾವದೇ ಅದ್ಭುತಕಾರ್ಯಕ್ಕಾಗಿ ನಾವು ನಿನಗೆ ಕಲ್ಲೆಸೆಯುತ್ತಿಲ್ಲ. ನೀನು ಮನುಷ್ಯನಾಗಿದ್ದು ನಿನ್ನನ್ನು ನೀನೇ ದೇವರನ್ನು ಮಾಡಿಕೊಳ್ಳುವದರ ದೆಸೆಯಿಂದ ನಿನ್ನ ಮೇಲೆ ಕಲ್ಲೆಸೆಯುತ್ತೇವೆ" ಎಂದು ಯೆಹೂದ್ಯರು ಹೇಳಿದರು.

ಯೇಸು ಹೇಳಿಕೊಂಡನೆಂದು ಯೆಹೂದ್ಯರು ಹೇಳಿದ ಸಂಗತಿಯುಸರಿಯಾದದ್ದೇ ಆಗಿತ್ತು. ಆತನು ತನ್ನನ್ನು ದೇವರೆಂದು ಹೇಳಿಕೊಂಡನು. ಆದರೆ ಆತನು ಹೇಳಿಕೊಂಡದ್ದು ಸತ್ಯವೇ ಆಗಿತ್ತೆಂಬದನ್ನು ಯೆಹೂದ್ಯರು ಯೋಚಿಸಿ ನೋಡಲಿಲ್ಲ.

**34** ನಂತರ ಯೇಸು ಕೀರ್ತನೆಗಳು ೮೨:೬ರಲ್ಲಿನ ಮಾತುಗಳನ್ನು ಉಲ್ಲೇಖಿಸುತ್ತಾನೆ: "ನೀವು ದೇವರುಗಳೇ ಎಂದು ನಾನು ಹೇಳಿದೆನು"[82] ಈ ವಚನದಲ್ಲಿ ದೇವರು ಇಸ್ರಾಯೇಲಿನ ನ್ಯಾಯಸ್ಥಾಪಕರನ್ನು "ದೇವರುಗಳು" ಎಂದು ಕರೆಯುತ್ತಿದ್ದಾನೆ. ಯಾಕೆಂದರೆ ಅವರಿಗೆ ಸ್ವತಃ ದೇವರೇ ಉನ್ನತ ಉಧ್ಯೋಗವನ್ನು ನೀಡಿದ್ದನು.

**35-36** ಆದುದರಿಂದ, ಹಳೆ ಒಡಂಬಡಿಕೆಯಲ್ಲಿ ಮಾನವ ಮಾತ್ರದವರನ್ನು ದೇವರೆಂದು ಕರೆದಿರುವದಾದರೆ ಯೇಸು ತನ್ನನ್ನು ದೇವಕುಮಾರನೆಂದು ಕರೆದುಕೊಂಡರೆ ತಪ್ಪೇಕೆ? ಬೈಬಲಿನಲ್ಲಿ ಮಾನವನು ದೇವರೆಂದು ಕರೆಯಲ್ಪಡಬಹುದಾಗಿದ್ದರೆ ತಂದೆಯ ಪ್ರತಿಷ್ಠೆ ಮಾಡಿ ಲೋಕಕ್ಕೆ ಕಳುಹಿಸಿಕೊಟ್ಟವನಾದ ನಿಜದೇವಕುಮಾರನನ್ನು ನಿಶ್ಚಯವಾಗಿಯೂ "ದೇವರೆಂದು"ಕರೆಯಬಹುದು. ಯೇಸು ತಾನೇನಾಗಿದ್ದಾನೆಂಬದಕ್ಕಿಂತಲೂ ಹೆಚ್ಚೇನನ್ನು ಹೇಳಿಕೊಳ್ಳಲಿಲ್ಲ!

35ನೇ ವಚನದಲ್ಲಿ ಯೇಸು "ಶಾಸ್ತ್ರವು ಸುಳ್ಳಾಗಲಾರದಷ್ಟೇ" ಎಂದು ಹೇಳುವದನ್ನು ಗಮನಿಸಿರಿ. ಶಾಸ್ತ್ರಗಳ ಪ್ರತಿಯೊಂದು ವಾಕ್ಯವು ಸತ್ಯವಾಗಿದೆ. ಯೇಸು ಉಲ್ಲೇಖಿಸಿದ ವಚನವು ಹೆಚ್ಚು ಪ್ರಾಮುಖ್ಯವಾದದ್ದೇನಾಗಿರಲಿಲ್ಲ. ಹಾಗಿದ್ದರೂ ಅವರ ಪ್ರತಿಯೊಂದು ಪದವು ಸಂಪೂರ್ಣ ಸತ್ಯವಾಗಿತ್ತು. ನಾವು ಬೈಬಲ್‌ನ ಯಾವದೇ ವಚನವನ್ನು ೮೩ ನಿರಾಕರಿಸಬಾರದು ಅಥವಾ ಅರ್ಥವನ್ನು ಬದಲಾಯಿಸಬಾರದು.

**37-38** ಯೇಸು ಯೆಹೂದ್ಯರಿಗೆ ತನ್ನ ಕ್ರಿಯೆಗಳನ್ನು ಪರೀಕ್ಷಿಸುವಂತೆ ಹೇಳಿದನು. ಅವು ಗಳು ದೇವರ ಕಾರ್ಯಗಳೋ? ಹಾಗಿರುವದಾದರೆ ದೇವರು ಯೇಸುವಿನಲ್ಲಿಯೂ, ಯೇಸು ದೇವರಲ್ಲಿಯೂ ಇದ್ದಾನೆಂಬದನ್ನು ಯೆಹೂದ್ಯರು ನಂಬಬೇಕು (ಯೋಹಾನ 10:30, 17:21 ನೋಡಿರಿ). ಕಾರ್ಯಗಳು ಇದನ್ನು ಸತ್ಯವೆಂಬದಾಗಿ ನಿರೂಪಿಸುತ್ತವೆ. ಯಾವ ಮನುಷ್ಯನೂ ದೇವರ ಕಡೆಯಿಂದ ಬರದ ಹೊರತು ಇಂತಹ ಕಾರ್ಯಗಳನ್ನು ಮಾಡಿರಲು ಸಾದ್ಯವಿರುತ್ತಿರಲಿಲ್ಲ (ಯೋಹಾನ 9:32-33 ನೋಡಿರಿ).

**39** ಆದರೆ ಯೆಹೂದ್ಯರು ಕಿವಿಗೊಡಲಿಲ್ಲ. ಅವರು ತಿರಿಗಿ ಆತನನ್ನು ಹಿಡಿಯುವದಕ್ಕೆ ಪ್ರಯತ್ನಿಸಿ ವಿಫಲರಾದರು (ಯೋಹಾನ 7:30, 44 ನೋಡಿರಿ).

**40-42** ಆಮೇಲೆ ಯೇಸು ಯೆರೂಸಲೇಮನ್ನು ಬಿಟ್ಟು ಯೊರ್ದನ್ ನದಿಯ ಪೂರ್ವ ದಡಕ್ಕೆ ಹೋದನು, ಸ್ನಾನಿಕನಾದ ಯೋಹಾನನು ಮೊದಲು ಅಲ್ಲಿ ಜನರಿಗೆ ದೀಕ್ಷಾಸ್ನಾನ ಮಾಡಿಸುತ್ತಿದ್ದನು (ಯೋಹಾನ 1:28 ನೋಡಿರಿ).
ಕ್ರಿಸ್ತನ ವಿಷಯವಾಗಿ ಯೋಹಾನನು ಕೊಟ್ಟ ಸಾಕ್ಷಿಯು ಇನ್ನೂ ಜ್ಞಾಪಕದಲ್ಲಿತ್ತು. ಜನರ ಮಧ್ಯದಲ್ಲಿ ಆತನು ಬೀರಿದ ಪ್ರಭಾವವು ಇನ್ನು ಹಸಿರಾಗಿತ್ತು. ಜನರು ಸ್ವತಃ ಯೇಸುವನ್ನು ನೋಡಿದಾಗ ಯೋಹಾನನ ಯೇಸುವಿನ ಕುರಿತಾಗಿ ಹೇಳಿದ ಸಾಕ್ಷಿಯು ನಿಜವೇ ಎಂಬದನ್ನು ಅವರು ಕಂಡುಕೊಂಡರು. ಆದಾಗ್ಯು ಯೋಹಾನನು ಕೇವಲ ಸಾಕ್ಷಿ ಹೇಳಲು ಬಂದವನಾಗಿದ್ದನು. ಆತನು ಸ್ವತಃ ಯಾವ ಅದ್ಭುತ ಕಾರ್ಯಗಳನ್ನು ಮಾಡಲಿಲ್ಲ. ಆತನ ಕೆಲಸವು ಯೇಸುವನ್ನು ಸಂಧಿಸುವದಕ್ಕಾಗಿ ಜನರನ್ನು ಸಿದ್ದ ಪಡಿಸುವದಾಗಿತ್ತು, ಮತ್ತು ಅವರು ಆತನನ್ನು ನಿಂದಿಸಿದಾಗ ಆತನಲ್ಲಿ ನಂಬಿಕೆಯಿಟ್ಟರು (ವಚನ 42).

---

# ಅಧ್ಯಾಯ - 11

## ಲಾಜರನ ಮರಣ (11:1-16)

**1** ಲಾಜರನು ಮರಿಯಳ ಹಾಗು ಮಾರ್ಥಳರ ಸಹೋದರನಾಗಿದ್ದನು, ಅವರ ಕುರಿತಾಗಿ ಲೂಕ 10:38-42 ರಲ್ಲಿ ಪ್ರಸ್ತಾಪಿಸಲಾಗಿದೆ. ಅವರು ಯೆರೂಸಲೇಮಿನಿಂದ [84] ಎರಡು ಮೈಲುಗಳಿಗಿಂತಲೂ ಹತ್ತಿರದಲ್ಲಿದ್ದ ಬೇಥಾನ್ಯದಲ್ಲಿ ವಾಸಿಸುತ್ತಿದ್ದರು.

**2** ಅನಂತರ ಯೇಸುವಿಗೆ ಬೆಲೆಯುಳ್ಳ ಸುಗಂಧ ತೈಲದಿಂದ ಅಬಿಷೇಕಿಸಿದ ಸ್ತ್ರೀಯು ಈ ಮರಿಯಳೇ (ಮಾರ್ಕ 14:3-9, ಯೋಹಾನ 12:1-8).

**3** ಲಾಜರನು ಅಸ್ವಸ್ಥನಾದಾಗ (ವಚನ 1), ಆತನ ಸಹೋದರಿಯರು ಯೇಸುವಿಗೆ ಹೇಳಿಕಳುಹಿಸಿದರು. ಯೇಸು ಅಲ್ಲಿಂದ ಸುಮಾರು ಹದಿನೈದು ಮೈಲುಗಳಷ್ಟು ದೂರದ ಯೋರ್ದಾನ್ ನದಿಯ ಆಚೆ ದಡದಲ್ಲಿದ್ದನು (ಯೋಹಾನ 10:40). ಸುದ್ದಿಯನ್ನು ತಂದವರು ಯೇಸುವಿಗೆ – "ನಿನ್ನ ಪ್ರಿಯ ಮಿತ್ರನು ಅಸ್ವಸ್ಥನಾಗಿದ್ದಾನೆ" ಎಂದರು. ಯೇಸು ಲಾಜರನನ್ನು ಮತ್ತು ಆತನ ಸಹೋದರಿಯರನ್ನು ಚೆನ್ನಾಗಿ ಬಲ್ಲವನಾಗಿದ್ದನು. ಮತ್ತು ಅವರಿಗಾಗಿ ಬಹಳ ಪ್ರೀತಿಯನ್ನಿಟ್ಟಿದ್ದನು (ವಚನ 5).

**4** ಯೇಸು "ಈ ರೋಗವು ಮರಣಕ್ಕಾಗಿ ಬಂದದ್ದಲ್ಲ – ಅಂದರೆ ಲಾಜರನು ಕೊನೆಗೆ ಬದುಕುವನು" ಎಂದು ಹೇಳಿದನು. ಲಾಜರನ ರೋಗವು ದೇವರಿಗೂ ಮತ್ತು ದೇವಕುಮಾರನಾದ ಯೇಸುವಿಗೂ ಮಹಿಮೆಯನ್ನು ಉಂಟು ಮಾಡುವ ಉದ್ದೇಶದಿಂದ ಬಂದಿತ್ತು (ಯೋಹಾನ 9:3 ನೋಡಿರಿ).

**5-6** ಲಾಜರನು ಈಗಾಗಲೇ ಸತ್ತಿದ್ದಾನೆಂದು ಯೇಸುವಿಗೆ ಗೊತ್ತಿದ್ದದರಿಂದ ಆತನು ತಕ್ಷಣವೇ ಹೋಗಲಿಲ್ಲ. ಆತನು ಎರಡು ದಿನ ತಾನಿದ್ದ ಸ್ಥಳದಲ್ಲೇ ನಿಂತನು. ತಾನು ಲಾಜರನನ್ನು ಸತ್ತವರೊಳಗಿಂದ ಎಬ್ಬಿಸುವನೆಂದು ಆತನಿಗೆ ಗೊತ್ತಿತ್ತು, ಮತ್ತು ಆತನು ಆಕಾರ್ಯವನ್ನು ಎರಡು ದಿನಗಳ ನಂತರ ಮಾಡಲಿ ಅಥವಾ ನಾಲ್ಕು ದಿನಗಳ ನಂತರ ಮಾಡಲಿ, ಯಾವ ವ್ಯತ್ಯಾಸವಿರದು. ಆತನು ತಾನ ಹೋಗಲು ಸರಿಯಾದ ಸಮಯಕ್ಕಾಗಿ ಕಾಯುತ್ತಿದ್ದನು.

ಯೇಸು ಇದನ್ನು ಹೇಳುತ್ತಿರುವಾಗಲೂ ಸಹ ಲಾಜರನು ಈಗಾಗಲೇ ಸತ್ತಿದ್ದಾನೆಂದು ಆತನು ಬಲ್ಲವನಾಗಿದ್ದನು (ವಚನ 14). ಈ ಸುದ್ದಿಯನ್ನು ತಿಳಿಸಲು ವ್ಯಕ್ತಿಗಳನ್ನು ಕಳುಹಿಸಿದ ಸ್ವಲ್ಪ ಸಮಯದ ನಂತರವಷ್ಟೆ ಲಾಜರನು ಸತ್ತನು.

**7-8** ಬೇಥಾನ್ಯವು ಯೂದಾಯ ಪ್ರಾಂತ್ಯದಲ್ಲಿ ಯೆರೂಸಲೇಮಿನ ಹತ್ತಿರದಲ್ಲಿತ್ತು, ಯೆಹೂದ್ಯರು ಇಲ್ಲಿಯೇ ಅನೇಕ ಸಾರಿ ಯೇಸುವನ್ನು ಸಾಯಿಸುವದಕ್ಕೆ ಪ್ರಯತ್ನಿಸಿದ್ದನು (ಯೋಹಾನ 8:59, 10:31, 39). ಪು ನಃ ಯೂದಾಯಕ್ಕೆ ಹೋಗುವರು ಅತಿ ಅಪಾಯಕರ ವೆಂಬದನ್ನು ಆತನ ಶಿಷ್ಯರು ಬಲ್ಲವರಾಗಿದ್ದರು.

**9** ಯೇಸು ಅವರಿಗೆ – "ಹಗಲಿಗೆ ಹನ್ನೆರಡು ತಾಸು [85] ಉಂಟಲ್ಲವೇ?" ಎಂದನು. ಹೊಸ ಒಡಂಬಡಿಕೆ ಕಾಲಗಳಲ್ಲಿ ಯಾರ ಬಳಿಯಲ್ಲಿಯೂ ಕೈಗಡಿಯಾರಗಳು ಇರಲಿಲ್ಲ. ಹಗಲು ಹನ್ನೆರಡು ತಾಸುಗಳಷ್ಟೆಂದು ಪರಿಗಣಿಸಲಾಗಿತ್ತು (ಚಳಿಗಾಲದ ತಿಂಗಳುಗಳಲ್ಲಿ "ಹನ್ನೆರಡು ತಾಸುಗಳು" ಕ್ಲುಪ್ತವಾಗುವವು ). ಆದುದರಿಂದ, ಯೇಸು ಇಲ್ಲಿ ಒಬ್ಬನು ಕೆಲಸ ಮಾಡಲು ಹಾಗು ಎಡವು ದೇ ತಿರುಗಾಡಲು ದಿನಕ್ಕೆ ಹನ್ನೆರಡು ತಾಸುಗಳು ಮಾತ್ರವೇ ಇರುತ್ತವೆ ಎಂದು ಹೇಳುತ್ತಿದ್ದಾನೆ. ಆ ಹನ್ನೆರಡು ತಾಸುಗಳಲ್ಲಿ ಆತನು ಈ ಲೋಕದ ಬೆಳಕು ಅಂದರೆ ಸೂರ್ಯನ ಬೆಳಕಿನಿಂದ ಸುಲಭವಾಗಿ ನೋಡಬಹುದು. ಆದುದರಿಂದ, ಒಬ್ಬನು ತನಗೆ ಅವಕಾಶವಿರುವಾಗಲೇ ಕೆಲಸ ಮಾಡಬೇಕು (ಯೋಹಾನ 9:4 ಮತ್ತು ವ್ಯಾಖ್ಯಾನ ನೋಡಿರಿ).

ಒಬ್ಬ ಮನುಷ್ಯನ ಜೀವಿತವು ಹಗಲಿನ ಹನ್ನೆರಡು ತಾಸುಗಳಂತಿದೆ. ಒಬ್ಬನು ತಾನು ಸಾಯುವದಕ್ಕಿಂತ ಮುಂಚೆಯೇ ತನ್ನ ಕೆಲಸವನ್ನು ಮುಗಿಸಬೇಕು. ಯೂದಾಯದಲ್ಲಿ ಅಪಾಯವಿದ್ದರೂ ಸಹ ಯೇಸು ತಾನು ಭೂಮಿಯಲ್ಲಿರುವಾಗಲೇ ಅಂದರೆ ಇನ್ನೂ ಬೆಳಕಿರುವಾಗಲೇ ಅಲ್ಲಿ ಮಾಡಬೇಕಾದ ಒಂದು ಕಾರ್ಯವಿತ್ತು. ಅವನ ಜೀವಿತದಲ್ಲಿ ಇನ್ನು ಹಗಲಿನ ಒಂದು ಅಥವಾ ಎರಡು ತಾಸುಗಳು ಮಾತ್ರವೇ ಉಳಿದಿದ್ದವು ಮತ್ತು ಆತನು ತನ್ನ ಕಾರ್ಯವನ್ನು ಮಾಡಿ ಮುಗಿಸುವ ತನಕ ಯೆಹೂದ್ಯರು ಅವನನ್ನು ಸಾಯಿಸಲಾರರು.

**10** ಒಬ್ಬನು ರಾತ್ರಿಯಲ್ಲಿ ತಿರುಗಾಡುವದು ಕಷ್ಟವಾಗುತ್ತದೆ. ಯಾಕೆಂದರೆ ಅವನಿಗೆ ಬೆಳಕಿರುವದಿಲ್ಲ. ಇದಕ್ಕೆ ಒಂದು ಆತ್ಮೀಕ ಅರ್ಥವಿರುತ್ತದೆ. ಕ್ರಿಸ್ತನು ನಮ್ಮೊಂದಿಗಿರುವಾಗ ಆತ್ಮೀಕ ಬೆಳಕು ಇರುತ್ತದೆ. ಆದರೆ ನಾವು ಕ್ರಿಸ್ತನಿಲ್ಲದೆ ನಡೆಯುವದಾದರೆ ನಮ್ಮಲ್ಲಿಯೂ, ನಮ್ಮ ಆತ್ಮಗಳಲ್ಲಿಯೂ ಬೆಳಕಿರುವದಿಲ್ಲ. ಒಬ್ಬ ಮನುಷ್ಯನ ಆತ್ಮದಲ್ಲಿ ಕ್ರಿಸ್ತನ ಬೆಳಕಿಲ್ಲವಾದರೆ ಅವನು ಖಂಡಿತವಾಗಿಯೂ ಎಡವು ವನು (ಯೋಹಾನ 8:12, 12;35 ಹಾಗು ವ್ಯಾಖ್ಯಾನಗಳನ್ನು ನೋಡಿರಿ).

**11** ಬಳಿಕ ಯೇಸು ತನ್ನ ಶಿಷ್ಯರಿಗೆ ಲಾಜರನು ನಿದ್ರೆ ಮಾಡುತ್ತಿದ್ದಾನೆಂದು ಹೇಳಿದನು. ಅಂದರೆ ಲಾಜರನು ಸತ್ತಿದ್ದಾನೆಂದು ಅವನ ಅರ್ಥವಾಗಿತ್ತು. ಹಲವಾರು ವೇಳೆ ಬೈಬಲ್‌ನಲ್ಲಿ ನಿದ್ರೆ ಮಾಡುವದು" ಮರಣಿಸುವದು" ಎಂಬ ಅರ್ಥವನ್ನು ನೀಡುತ್ತದೆ (ಅ.ಕೃತ್ಯ 7:60, 1 ಕೊರಿಂಥ 15:20, 1 ಥೆಸಲೋನಿಕ 4:13-15).

ಕ್ರಿಸ್ತನಲ್ಲಿ ವಿಶ್ವಾಸಿಸುವವರಿಗೆ ಮರಣವು ನಿದ್ರೆಯಂತಿರುತ್ತದೆ. ಕ್ರೈಸ್ತರು ಎಂದಿಗೂ ಸಂಪೂರ್ಣವಾಗಿ ಸಾಯುವದಿಲ್ಲ. ಶೀಘ್ರ್ರವೇ ಅವರು ಪರಲೋಕದಲ್ಲಿ ಎಚ್ಚರಗೊಳ್ಳುವರು.

**12-13** ಲಾಜರನು ಸತ್ತಿದ್ದಾನೆಂಬದನ್ನು ತಿಳಿಯದ ಶಿಷ್ಯರು, ಅವನು ಸಾಮಾನ್ಯ ರೀತಿಯಲ್ಲಿ ನಿದ್ರಿಸುತ್ತಿದ್ದಾನೆಂದು ಮಾತ್ರವೇ ಯೇಸು ಹೇಳಿದನೆಂದು ನೆನಸಿದರು. ಹಾಗಿದ್ದರೆ ಅವನು ಪು ನಃ ಚೇತರಿಸಿಕೊಳ್ಳವನು ಎಂದು ಅವರು ಯೋಚಿಸಿದರು.

**14-15** ವಾಸ್ತವದಲ್ಲಿ ಲಾಜರನು ಸತ್ತಿದ್ದಾನೆಂದು ಯೇಸು ತನ್ನ ಶಿಷ್ಯರಿಗೆ ಸ್ಪಷ್ಟವಾಗಿ ಹೇಳಿದನು. ಆತನಿಗೆ ಇದನ್ನು ಯಾರು ಹೇಳಿರಲಿಲ್ಲ. ಅವನು ಅಸ್ವಾಭಾವಿಕ ರೀತಿಯಲ್ಲಿ ಇದನ್ನು ಅರಿತುಕೊಂಡಿದ್ದನು. ನಂತರ ಆತನು "....ನಿಮ್ಮ ನಿಮಿತ್ತವಾಗಿ ಸಂತೋಷ ಪಡುತ್ತೇನೆ, ಯಾಕೆಂದರೆ ಅದರಿಂದ ನೀವು ನಂಬುವದಕ್ಕೆ ಮಾರ್ಗವಾಯಿತು". ಅಂದನು.

ಒಂದು ವೇಳೆ ಯೇಸು ಅಲ್ಲಿದ್ದಿದ್ದರೆ ಲಾಜರನನ್ನು ಸಾಯುವದಕ್ಕೆ ಮುನ್ನವೇ ಸ್ವಸ್ಥಮಾಡಿರುತ್ತಿದ್ದನು. ಅದು ಒಂದು ಕಡಿಮೆ ಅದ್ಭುತವಾಗುತ್ತಿತ್ತು. ಆದರೆ ಸತ್ತವ್ಯಕ್ತಿಯನ್ನು, ಅದರಲ್ಲೂ ವಿಶೇಷವಾಗಿ ಸತ್ತ ನಾಲ್ಕು ದಿವಸಗಳಾದವನನ್ನು

ಸಜೀವಗೊಳಿಸುವದು (ವಚನ 17) ಒಂದು ಅತಿದೊಡ್ಡ ಅದ್ಭುತವೇ ಆಗಿದೆ. ಅಂತಹ ಅದ್ಭುತವು ಶಿಷ್ಯರ ನಂಬಿಕೆಯನ್ನು ಹೆಚ್ಚಿಸಿ ಬಲಗೊಳಿಸುವದು (ಲೂಕ 17;5 ನೋಡಿರಿ).

16 ಹನ್ನೆರಡು ಮಂದಿ ಶಿಷ್ಯರಲ್ಲೊಬ್ಬನಾದ ದಿದುಮನೆಂಬ ತೋಮನುಲ್ಟ (ಮಾರ್ಕ 3;18) ನಾವು ಸಹ ಹೋಗಿ ಆತನೊಡನೆ ಸಾಯೋಣ ಎಂದು ಜೊತೆ ಶಿಷ್ಯರಿಗೆ ಯೇಸುವಿನೊಂದಿಗೆ ಯೂದಾಯಕ್ಕೆ ಹೊರಡುವಂತೆ ಬೇಡಿಕೊಂಡನು. ತೋಮನು ಯೇಸುವಿಗಾಗಿ ಸಾಯಲು ಸಿದ್ದನಿದ್ದನು. ಮತ್ತು ಉಳಿದ ಶಿಷ್ಯರೂ ಸಹ ಸಿದ್ದರಾಗಿದ್ದರು. ಆದರೆ ಕೊನೆಯಲ್ಲಿ ಯೇಸು ಬಂಧಿಸಲ್ಪಟ್ಟಾಗ ಅವರೆಲ್ಲರೂ ಆತನನ್ನು ತೊರೆದು ಪಲಾಯನಗೈದರು (ಮಾರ್ಕ 14:50). ಶಿಷ್ಯರ ನಂಬಿಕೆಯು ಬಲಹೀನವಾಗಿತ್ತು.

## ಯೇಸು ಸಹೋದರಿಯರನ್ನು ಸಂತೈಸುತ್ತಾನೆ (11:17-37)

17 ಯೇಸು ಲಾಜರನ ಮನೆಯನ್ನು ತಲುಪುವಷ್ಟರಲ್ಲಿ ಆತನು ಸತ್ತು ನಾಲ್ಕು ದಿನಗಳಾಗಿದ್ದವು. ಆಸುದ್ದಿಯನ್ನು ತೆಗೆದುಕೊಂಡು ಹೋದವರು ಯೇಸುವನ್ನು ತಲುಪಲು ಒಂದು ದಿನ ಹಿಡಿದಿತ್ತು. ಯೇಸು ಎರಡು ದಿನಗಳ ತನಕ ಅಲ್ಲಿಯೇ ಕಾಯ್ದುಕೊಂಡನು. ನಂತರ ಯೇಸು ಬೇಥನ್ಯವನ್ನು ತಲುಪುವದಕ್ಕೆ ಒಂದು ದಿನ ಹಿಡಿದಿತ್ತು.

18-20 ಆ ಕುಟುಂಬದ ಅನೇಕ ಯೆಹೂದ್ಯ ಮಿತ್ರರು ಮರಿಯಳನ್ನು ಹಾಗು ಮಾರ್ಥಳನ್ನು ಸಂತೈಸಲು ಬಂದಿದ್ದರು. ಹೇಗಿದ್ದರೂ, ಯೇಸು ಬರುತ್ತಿದ್ದಾನೆಂದು ಕೇಳಿದ ಕೂಡಲೇ ಮಾರ್ಥಳು ಮರಿಯಳನ್ನು ಹಾಗು ತನ್ನ ಯೆಹೂದ್ಯ ಮಿತ್ರರನ್ನು ಬಿಟ್ಟು ಯೇಸುವನ್ನು ಸಂಧಿಸಲು ಓಡಿಹೋದಳು.

21 ಯೇಸು ತಡಮಾಡಿದ್ದಕ್ಕಾಗಿ ಮಾರ್ಥಳು ಬೇಸರ ಪಟ್ಟು ಕೊಳ್ಳಲಿಲ್ಲ. ಯೇಸು ಮುಂಚೆಯೇ ಇಲ್ಲಿ ಇರುತ್ತಿದ್ದರೆ ಲಾಜರನನ್ನು ಸ್ವಸ್ಥ ಮಾಡಿರಬಹುದಿತ್ತು ಎಂದು ಮಾತ್ರವೇ ಹೇಳಿದಳು. ಯೇಸು ದೂರದಿಂದಲೇ ಜನರನ್ನು ಗುಣಪಡಿಸಬಲ್ಲನೆಂಬದನ್ನು ಬಹುಶಃ ಮಾರ್ಥಳು ತಿಳಿದಿರಲಿಕ್ಕಿಲ್ಲ (ಮತ್ತಾಯ 8:5-13, ಮಾರ್ಕ 7:24-30 ನೋಡಿರಿ).

22 ಯೇಸು ಏನೇ ಬೇಡಿಕೊಂಡರೂ ದೇವರು ಅನುಗ್ರಹಿಸುವನೆಂಬ ತನ್ನ ನಂಬಿಕೆಯನ್ನು ಮಾರ್ಥಳು ವ್ಯಕ್ತಿ ಪಡಿಸುತ್ತಾಳೆ. ಬಹುಶ: ಅವಳು ಯೇಸುವಿಗೆ ತನ್ನ ತಮ್ಮನನ್ನು ಸತ್ತವರೊಳಗಿಂದ ಎಬ್ಬಿಸುವ ಸಲಹೆ ನೀಡುತ್ತಿದ್ದಿರಬೇಕು. ಆದರೆ ನಂತರ ಯೇಸು ನಿಜವಾಗಿಯೂ ಲಾಜರನನ್ನು ಎಬ್ಬಿಸಲು ಹೊರಟಾಗ ಅದು ಸಾದ್ಯವೆಂಬದಾಗಿ ಮಾರ್ಥಳು ನೆನಸಲಿಲ್ಲ (ವಚನ 39). ಶಿಷ್ಯರ ಹಾಗೆಯೇ ಮಾರ್ಥಳು ಸಹ ಅಲ್ಪನಂಬಿಕೆಯನ್ನು ಹೊಂದಿದ್ದಳು. ಆದರೆ ಅವಳ ನಂಬಿಕೆಯು ನಿಜ ಪರೀಕ್ಷೆಗೊಳಗಾದಾಗ ಅದು ವಿಫಲವಾಯಿತು.

23-24 ಆಗ ಯೇಸು ಲಾಜರನು ಎದ್ದು ಬರುವನು ಎಂದು ಮಾರ್ಥಳಿಗೆ ಹೇಳಿದನು. ಲಾಜರನು ಲೋಕದ ಅಂತ್ಯದಲ್ಲಿ ಕಡೇದಿನ ದೊಳಗೆ ಎಲ್ಲಾ ದೇಹಗಳ ಪುನರುತ್ಥಾನವಾದಾಗ ಎದ್ದು ಬರುವನೆಂದು ಯೇಸು ಹೇಳಿದನೆಂಬದಾಗಿ ಮಾರ್ಥಳು ಯೋಚಿಸಿಕೊಂಡಳು. (ಯೋಹಾನ 5:28-29, ಅ.ಕೃತ್ಯ 24:15).

25 ಆದರೆ ಕೇವಲ ಲೋಕಾಂತ್ಯದ ಬಗ್ಗೆ ಮಾತ್ರವೇ ಮಾತಾಡಲಿಲ್ಲ. ಆತನು ಈ ಜೀವಿತದಲ್ಲಿಯೂ ಸಹ ಮಾರ್ಥ ಹಾಗು ಲಾಜರನಿಗೆ ಸತ್ತವರೊಳಗಿಂದ ಎದ್ದು ಬರುವ ಬಲವನ್ನು ಕೊಡುತ್ತಿದ್ದನು.

ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ. ಯೇಸು ನಮ್ಮದೇಹಗಳಿಗೆ ಪುನರುತ್ಥಾನ ಹಾಗು ನಮ್ಮ ಆತ್ಮಗಳಿಗೆ ನಿತ್ಯ ಜೀವವನ್ನು ಕೊಡುತ್ತಾನೆ. ಯೇಸು ಜೀವವನ್ನು ಕೊಡುವದು ಮಾತ್ರವಲ್ಲ, ಆತನೇ ಜೀವವಾಗಿದ್ದಾನೆ. ಆತನಲ್ಲಿ ಜೀವವಿತ್ತು (ಯೋಹಾನ 1:4, 5:26). ಆ ಜೀವವು ನಿತ್ಯ ಹಾಗು ಆತ್ಮೀಕ ಜೀವವಾಗಿದೆ, ಅಂತಹ ಆತ್ಮೀಕ ಜೀವವನ್ನು ಪಡೆಯಬೇಕಾದರೆ ಒಬ್ಬನು ಮೊದಲು ಸಾಯಬೇಕು, ಹಾಗು ನಂತರ ಪುನರುತ್ಥಾನಗೊಳ್ಳಬೇಕು ಅಥವಾ ಹೊಸದಾಗಿ ಹುಟ್ಟಬೇಕು. ಮೊದಲು ಹಳೆಯ ಪಾಪಸ್ವಭಾವಕ್ಕೆ ಮರಣ, ನಂತರ ಪುನರುತ್ಥಾನ, ಆದರ ನಂತರ ಜೀವ, ಉಂಟಾಗುತ್ತದೆ (ಯೋಹಾನ 3:3, 12:24, ರೋಮ 6:3-5 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಯೇಸು ತನಗೆ ನೂತನ ಆತ್ಮೀಕ ಜೀವವನ್ನು ನೀಡುವ ಬಲವುಂಟೆಂಬದನ್ನು ತೋರಿಸಲು ಆತನು ಲಾಜರನಿಗೆ ನೂತನ ಶಾರೀರಿಕ ಜೀವವನ್ನು ಕೊಟ್ಟನು. ತಾನು ಮಾನವರನ್ನು• ಆತ್ಮೀಕ ಮರಣದಿಂದ ಆತ್ಮೀಕ ಜೀವಕ್ಕೆ ಎಬ್ಬಿಸಬಲ್ಲನೆಂಬದನ್ನು ತೋರ್ಪಡಿಸಲು ಯೇಸು ಲಾಜರನನ್ನು ಶಾರೀರಿಕಮರಣದಿಂದ ಶಾರೀರಿಕ ಜೀವಕ್ಕೆ[87] ಎಬ್ಬಿಸಿದನು. ಬಳಿಕ ಯೇಸು ಮಾರ್ಥಳಿಗೆ ತನ್ನನ್ನು ನಂಬವವನು ಸತ್ತರೂ ಬದುಕುವನು ಎಂದು ಹೇಳಿದನು. ವಿಶ್ವಾಸಿಗಳ ದೇಹವು ಸಾಯುತ್ತದೆ, ಆದರೆ ಆತನ ಆತ್ಮ ಮತ್ತು ಪ್ರಾಣಗಳು ಸಾಯುವದಿಲ್ಲ. ಶಾರೀರಿಕ ಮರಣವು ನಿತ್ಯಜೀವಕ್ಕೆ ಒಂದು ಮಾರ್ಗವಾಗಿದೆ. ವಿಶ್ವಾಸಿಗಳಿಗೆ ಮರಣದ ಯಾವ ಭಯವೂ ಇರಬೇಕಾಗಿಲ್ಲ ಮರಣವು ನಮ್ಮ ಆತ್ಮಕ್ಕೆ ಹಾನಿಮಾಡಲಾರದು.

26 ಯಾರು ಆತ್ಮೀಕವಾಗಿ ಜೀವಂತವಾಗಿದ್ದು ಯೇಸುವನ್ನು ನಂಬುತ್ತಾರೋ ಅವರು ಎಂದಿಗೂ ಸಾಯುವದಿಲ್ಲ (ಯೋಹಾನ 3:15, 8:51 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಇದು ಕೇವಲ ಒಂದು ವಿಚಾರ ಅಥವಾ ಸೂತ್ರವಷ್ಟೇ ಆಗಿರುವದಿಲ್ಲ. ನಾವು ನಂಬಿ ಕೈಕೊಂಡು ನಡೆಯಬೇಕಾದ ಒಂದು ಸತ್ಯ ಇದಾಗಿದೆ. ನಂಬಿಕೆಯ ಮೂಲಕವೇ ನಿತ್ಯ ಜೀವವು ಬರುತ್ತದೆ. ಯೇಸು ಮಾರ್ಥಳಿಗೆ "ನೀನು ಇದನ್ನು ನಂಬುತ್ತೀಯಾ?" ಎಂದು ಕೇಳಿದನು.

**27** ಮಾರ್ಥಳು ನಂಬಿದಳು. ವಿಶೇವಾಗಿ ಅವಳು ಕ್ರಿಸ್ತನನ್ನು ನಂಬಿದಳು. ಆತನು ನಿಜವಾಗಿಯೂ ಮೆಸ್ಸೀಯನೂ, ದೇವಕುಮಾರನೂ, ಲೋಕರಕ್ಷಕನೂ, ಎಂಬದಾಗಿ ನಂಬಿದಳು. ಇದಕ್ಕಿಂತಲೂ ಕಡಿಮೆಯಾಗಿ ಯೇಸುವನ್ನು ನಂಬಿದರೆ ಅದು ಸಾಕಾಗುವದಿಲ್ಲ, ಅದು ನಮ್ಮನ್ನು ರಕ್ಷಿಸಲಾರದು.

**28-32** ತರವಾಯ ಮರಿಯಳು ಯೇಸುವನ್ನು ಸಂಧಿಸಲು ಹೋದಳು. ಅವಳು ಯೇಸುವಿಗೆ ಈ ಮುಂಚೆ ಮಾರ್ಥಳು ಹೇಳಿದ ಮಾತುಗಳನ್ನೇ ಪು ನರುಚ್ಚರಿಸಿದಳು (ವಚನ 21).

**33** ಯೇಸು ಮರಿಯಳ ಹಾಗು ಆಕೆಯ ಯೆಹೂದೀ ಮಿತ್ರರ ಗೋಳಾಟವನ್ನು ಕಂಡು ಸ್ವತಃ ಆತನೇ ತನ್ನ ಆತ್ಮದಲ್ಲಿ ಅಂದರೆ ಆತನ ಮಾನವ ಆತ್ಮದಲ್ಲಿ, ಹೃದಯದಲ್ಲಿ ನೊಂದುಕೊಂಡನು..ಯೇಸು ಯಾಕೆ ನೊಂದುಕೊಂಡನೆಂಬುದು ಸ್ಪಷ್ಟವಾಗಿ ತಿಳಿದಿರುವದಿಲ್ಲ. ಅವನು ಇನ್ನೇನೂ ಲಾಜರನನ್ನು ಸತ್ತವರೊಳಗಿಂದ ಎಬ್ಬಿಸಲಿದ್ದನು, ಆದ್ದರಿಂದ ಅವನು ತನ್ನೊಳಗೆ ನೊಂದುಕೊಳ್ಳಲು ಯಾವ ಕಾರಣವಿರುವದಿಲ್ಲ. ಆತನು ಮರಿಯಳ ಸಂಗಡಿವಿದ್ದ ಯೆಹೂದ್ಯರ ಅಪನಂಬಿಕೆಗಾಗಿ ಕೋಪಗೊಂಡಿದ್ದನೆಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಆತನು ತಾನು ಲಾಜರನನ್ನು ಎಬ್ಬಿಸಿದ ಮೇಲೆ ಯೆಹೂದ್ಯನಾಯಕರು ಆತನನ್ನು ಬಂಧಿಸಿ ಮರಣಕ್ಕೆ ಒಪ್ಪಿಸುವರೆಂಬದನ್ನು ಬಲ್ಲವನಾಗಿದ್ದರಿಂದ ನೊಂದುಕೊಂಡನೆಂದು ಹೇಳುತ್ತಾರೆ. ಹೇಗಿದ್ದರೂ, ಬಹುಶ: ಅವನು ನಾಲ್ಕು ದಿನಗಳ ವರೆಗೂ ಮರಿಯಳು ಹಾಗು ಮಾರ್ಥಳರು ಅನುಭವಿಸಬೇಕಾಗಿ ಬಂದಿದ್ದ ದುಃಖವನ್ನು ನೋಡಿ ನೊಂದಿರಬೇಕಷ್ಟೆ.

**34-37** ಯೇಸುಕಣ್ಣೀರು ಬಿಟ್ಟನು (ವಚನ 35). ಯೇಸು ನಮ್ಮ ಹಾಗೆಯೇ ಒಬ್ಬ ಮನುಷ್ಯನಾಗಿದ್ದು ದುಃಖವನ್ನು ಅನುಭವಿಸಬಲ್ಲವನಾಗಿದ್ದನು. ಆತನು ಏಕೆ ಅತ್ತನೆಂಬದು ಯೆಹೂದ್ಯರಿಗೆ ಅರ್ಥವಾಗಲಿಲ್ಲ. ಲಾಜರನು ಸತ್ತಿದ್ದಕ್ಕಾಗಿಯೂ ಮತ್ತು ತಾನು ಏನನ್ನೂ ಮಾಡಲಾಗಲಿಲ್ಲ ಎಂಬದಕ್ಕಾಗಿಯೂ ಯೇಸು ಕಣ್ಣೀರು ಬಿಟ್ಟನೆಂದು ಅವರು ನೆನಸಿದರು. ಯೆಹೂದ್ಯರು ತಮ್ಮತಮ್ಮೊಳಗೆ, "ಯೇಸುವಿಗೆ ಲಾಜರನನ್ನು ಸಾಯದಂತೆ ಕಾಪಾಡಲು ಆಗಲಿಲ್ಲವೇಕೆ? ಆತನ ಶಕ್ತಿಗೆ ಏನಾಯಿತು? ಅವನು ಕುರುಡನನ್ನು ಗುಣಪಡಿಸಿದನಲ್ಲಾ (ಯೋಹಾನ 9:6-7). ಅವನು ಲಾಜರನಿಗೆ ಸಹಾಯ ಮಾಡಲಾಗಲಿಲ್ಲವೇಕೆ?" ಎಂದು ಮಾತಾಡಿಕೊಂಡರು.

## ಯೇಸು ಲಾಜರನನ್ನು ಸತ್ತವರೊಳಗಿಂದ ಎಬ್ಬಿಸಿದ್ದು (11:38-44)

**38-39** ಯೇಸು ಲಾಜರನನ್ನು ಎಬ್ಬಿಸಲಿದ್ದಾನೆಂಬದನ್ನು ಮಾರ್ಥಳು ಕಂಡಾಗ ಆಕೆಯ ನಂಬಿಕೆ ಅನುಮಾನಕ್ಕೆ ತಿರಿಗಿತ್ತು. "ಸ್ವಾಮಿ ಲಾಜರನು ಸತ್ತು ನಾಲ್ಕು ದಿವಸಗಳಾದದ್ದು ತಿಳಿಯದೊ?" ಎಂದು ಯೇಸುವಿಗೆ ಹೇಳಿದಳು.

**40** ಯೇಸು ಆಕೆಯ ಅಪನಂಬಿಕೆಗಾಗಿ ಮಾರ್ಥಳನ್ನು ಮೃದುವಾಗಿ ಗದರಿಸಿದನು. ಯೇಸು ದೇವಕುಮಾರನು (ವಚನ 27) ಹಾಗು ಆತನು ಬೇಡಿಕೊಳ್ಳುವದನ್ನೆಲ್ಲಾ ದೇವರು ಅನುಗ್ರಹಿಸುವನು (ವಚನ 22) ಎಂಬದಾಗಿ ಅವಳು ನಂಬಿದಳು. ಯೇಸು ತನ್ನ ಶಿಷ್ಯರಿಗೆ ಹೇಳಿದ ಹಾಗೆಯೇ ಮಾರ್ಥಳಿಗೂ ಸಹ, ಅವಳು ನಂಬಿದರೆ ದೇವರ ಮಹಿಮೆಯನ್ನು ಕಾಣುವಳೆಂದು ಹೇಳಿದ್ದನು (ವಚನ 4) ಆಕೆಯ ನಂಬಿಕೆಯು ಚಂಚಲಗೊಳ್ಳದಿರಲಿ! ಮಾರ್ಥಳು ದೇವರ ಮಹಿಮೆಯನ್ನು ಕಾಣಬೇಕಾದರೆ ನಂಬಿಕೆಯು ಅವಶ್ಯಕವಾಗಿತ್ತೆಂಬದನ್ನು ಗಮನಿಸಿರಿ. ನಂಬಿಕೆಯಿಲ್ಲದವರು ಕೇವಲ ಒಂದು ಅದ್ಭುತವನ್ನು ನೋಡುವರು (ಒಬ್ಬ ಸತ್ತವರೊಳಗಿಂದ ಎದ್ದುಬರುವದು) ಆದರೆ ಇನ್ನೊಂದು ಕಡೆಯಲ್ಲಿ ನಂಬಿಕೆಯನ್ನು ಹೊಂದಿದವರು ಆ ಅದ್ಭುತದ ಮಹತ್ವವನ್ನು ಅಂದರೆ ದೇವರ ಮಹಿಮೆಯನ್ನು ಕಾಣುವರು.

**41** ದೇವರು ತನ್ನ ಮನವಿಯನ್ನು ಆಲಿಸಿ ಲಾಜರನನ್ನು ಎಬ್ಬಿಸುವನೆಂದು ಯೇಸುವಿಗೆ ಗೊತ್ತಿತ್ತು. ಆದುದರಿಂದ ಮೊದಲು ಆತನು ತನ್ನ ಮನವಿಯನ್ನು ಕೇಳಿದ್ದಕ್ಕಾಗಿ ದೇವರನ್ನು ವಂದಿಸುತ್ತಾನೆ. ಯೇಸು ತನ್ನ ಪ್ರಾರ್ಥನೆಗೆ ಉತ್ತರವನ್ನು ಪಡೆಯುವದಕ್ಕೆ ಮುಂಚೆಯೇ ತಾನು ಅದನ್ನು ಹೊಂದಿಕೊಂಡಿದ್ದಾನೆಂದು ಬಲ್ಲವನಾಗಿದ್ದನು (1 ಯೋಹಾನ 5:14-15 ನೋಡಿರಿ).

**42** ಯೇಸು ತನ್ನ ಸುತ್ತಲಿನ ಜನರು ಕೇಳಿಸಿಕೊಳ್ಳುವಂತೆ ಗಟ್ಟಿಯಾದ ಸ್ವರದಲ್ಲಿ ದೇವರನ್ನು ಕೊಂಡಾಡಿದನು. ತಾನು ಲಾಜರನನ್ನು ದೇವರ ಬಲದಿಂದಲೇ ಎಬ್ಬಿಸುತ್ತಿದ್ದಾನೆಂದು ಅವರಿಗೆ ತಿಳಿಯಬೇಕೆಂದು ಆತನ ಬಯಕೆಯಾಗಿತ್ತು. ಯೇಸು ತನ್ನಷ್ಟಕ್ಕೆ ತಾನೇ ಏನೂ ಮಾಡಲಿಲ್ಲ (ಯೋಹಾನ 5:19 ನೋಡಿರಿ). ಆತನು ದೇವರ ಕಾರ್ಯಗಳನ್ನು ಮಾಡಲು ದೇವರಿಂದಲೇ ಕಳುಹಿಸಲ್ಪಟ್ಟಿದ್ದನು. ಎಂಬದನ್ನು ಜನರು ತಿಳಿಯಬೇಕಾಗಿತ್ತು.

ಸಾಮಾನ್ಯ ಅದ್ಭುತಗಾರರು ಯಾವಾಗಲೂ ತಮ್ಮನ್ನೇ ಮಹಿಮೆಪಡಿಸಿಕೊಳ್ಳಲು ಪ್ರಯತ್ನಿಸುವರು. ಹೇಗಿದ್ದರೂ, ಯೇಸು ಯಾವಾಗಲೂ ದೇವರಿಗೆ ಮಹಿಮೆ ಸಲ್ಲಿಸಿದನು.

**43-44** ಬಳಿಕ ಯೇಸು ಲಾಜರನನ್ನು ಕೂಗಿ ಕರೆದನು ಮತ್ತು ಆಗ ಅವನು ಸಮಾಧಿಯಿಂದ ಹೊರಗೆ ಬಂದನು. ಅವನನ್ನು ನಾರು ಮಡಿಗಳಿಂದ ಸುತ್ತಲಾಗಿತ್ತು. ಸತ್ತವರನ್ನು ಹೂಣಿಡುವದಕ್ಕೆ ಮುಂಚೆ ಅವರನ್ನು ಬಟ್ಟೆಯಿಂದ ಸುತ್ತುವದು ಯೆಹೂದ್ಯರ ಪದ್ಧತಿಯಾಗಿತ್ತು (ಯೋಹಾನ 19:40). ಲಾಜರನ ಕಾಲುಗಳನ್ನು ಬಿಡಿ ಬಿಡಿಯಾಗಿ ಸುತ್ತಲಾಗಿತ್ತಾದ್ದರಿಂದ ಅವನು ನಡೆಯಲು ಶಕ್ತನಾದನು. ಅದೊಂದು ಅಸ್ವಾಭಾವಿಕವಾದ ದೃಶ್ಯವಾಗಿತ್ತು! ಒಬ್ಬನು ಅಂತಹ ಒಂದು ಅದ್ಭುತವನ್ನು ನೋಡಿದ ಮೇಲೆಯೂ ಯೇಸುವನ್ನು ನಂಬದಿರಲು ಹೇಗೆ ಸಾಧ್ಯ?

## ಯೇಸುವನ್ನು ಕೊಲ್ಲುವ ಸಂಚು (11:45-47)

**45** ಮರಿಯಳು ಹಾಗು ಮಾರ್ಥಳರನ್ನು ಸಂತೈಸಲು ಬಂದಿದ್ದ ಯೆಹೂದ್ಯರಲ್ಲಿ [88] ಅನೇಕರು ಲಾಜರನ ಪು ನರುತ್ಥಾನದ ಕಾರಣದಿಂದ ಯೇಸುವಿನಲ್ಲಿ ನಂಬಿಕೆಯಿಡುತ್ತಾರೆ.

**46** ಆದರೆ ಅವರಲ್ಲಿ ಇತರರು ನಂಬಲಿಲ್ಲ. ಬದಲಾಗಿ ಯೇಸು ಮಾಡಿದ ಕಾರ್ಯವನ್ನು ಅವರು ವೈರಿಗಳಾದ ಫರಿಸಾಯರಿಗೆ ವರದಿಮಾಡುತ್ತಾರೆ.

**47** ಫರಿಸಾಯರು ಹಾಗು ಯೆಹೂದ್ಯ ಪ್ರಧಾನ ಯಾಜಕರು ಹಿರೀಸಭೆಯನ್ನು [89] ಕೂಡಿಸಿದರು. "ನಾವು ಮಾಡುವದು ಇದೇನು?" ಎಂದು ಅವರು ಒಬ್ಬರಿಗೊಬ್ಬರು ಕೇಳಿಕೊಂಡರು. ಅವರಲ್ಲಿ ಕೆಲವರು ಯೇಸುವನ್ನು ಬಂಧಿಸಲು ಪ್ರಯತ್ನಿಸುತ್ತಿದ್ದರು. ಆದರೆ ಯಶಸ್ವಿಯಾಗಿರಲಿಲ್ಲ (ಯೋಹಾನ 7:30, 10:39) ಕೆಲವರು ಅವನ್ನು ಕೊಲ್ಲಲು ಸಹ ಪ್ರಯತ್ನಿಸಿದ್ದರು (ಯೋಹಾನ 8:59, 10:31). ಆದರೆ ಯೇಸು ಎಡೆಬಿಡದೆ ಅದ್ಭುತಗಳನ್ನು ಮಾಡುತ್ತಿದ್ದನು. ಹಾಗು ಹೆಚ್ಚು ಹೆಚ್ಚು ಜನರು ಆತನಲ್ಲಿ ನಂಬಿಕೆಯಿಡುತ್ತಾ ಇದ್ದರು. "ನಾವು ಅವನ್ನು ತಡೆಯಲು ಏನಾದರೂ ಮಾಡಲೇಬೇಕು: ಎಂದು ಅವರು ಹೇಳಿಕೊಂಡರು.

ಜನರ ಹೃದಯಗಳು ಕಠಿಣವಾಗಿರುವಾಗ ಅದ್ಭುತಗಳು ಸಹ ಅವರ ಮನಸ್ಸನ್ನು ಬದಲಾಯಿಸುವದಿಲ್ಲ.

**48** ಹೆಚ್ಚು ಜನರು ಯೇಸುವನ್ನು ನಂಬಲು ಪ್ರಾರಂಭಿಸುವದಾದರೆ ಅವರು ಅವನನ್ನು ತಮ್ಮ ರಾಜನನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುವರು ಎಂಬದು ವಿಶೇಷವಾಗಿ ಯೆಹೂದಿ ನಾಯಕರ ಭಯವಾಗಿತ್ತು. ಹಾಗಾಗುವದಾದರೆ ರೋಮಾಯರು [90] ಅತನ್ನು ತಮ್ಮ ಅಧಿಕಾರದ ವಿರುದ್ಧ ಒಂದು ದಂಗೆ ಎಂದು ಪರಿಗಣಿಸಿ ಯೆಹೂದ್ಯರ ಸ್ಥಾನವನ್ನೂ (ಅವರ ದೇವಾಲಯ) ಮತ್ತು ಅವರ ಜನಾಂಗವನ್ನೂ ನಿಶ್ಚಯವಾಗಿಯೂ ವಶಮಾಡಿಕೊಳ್ಳುವರು. ಅಂದರೆ ರೋಮಾಯರು ದೇವಾಲಯ ಮತ್ತು ಯೆಹೂದ್ಯರ ಎಲ್ಲಾ ವಿಷಯಗಳ ಮೇಲೆಯೂ ಸಂಪೂರ್ಣ ಹತೋಟಿಯನ್ನು ತೆಗೆದುಕೊಳ್ಳುವರು ಹಾಗು ಯೆಹೂದ್ಯರು ತಮ್ಮ ಧಾರ್ಮಿಕ ಸ್ವಾತಂತ್ರವನ್ನು ಕಳೆದುಕೊಳ್ಳುವರು. ಅಲ್ಲದೆ ಯೆಹೂದಿ ನಾಯಕರು ತಮ್ಮ ಸ್ಥಾನ ಹಾಗು ಅಧಿಕಾರವನ್ನು ಸಹ ಕಳೆದುಕೊಳ್ಳುವರು.

**49-50** ಕಾಯಫನು ಆ ವರ್ಷಕ್ಕೆ[91] ಮಹಾಯಾಜಕನಾಗಿದ್ದನು. ಆತನು ಹಿರೀಸಭೆಗೆ – "ನಮ್ಮ ಇಡೀ ಜನಾಂಗವೆಲ್ಲಾ ನಾಶವಾಗುವದಕ್ಕಿಂತ ಯೇಸು ಸಾಯುವದು ಹಿತವಾದದ್ದು. ನಮ್ಮ ಜನಾಂಗವನ್ನು ಕಳೆದು ಕೊಳ್ಳುವದಕ್ಕಿಂತ ಒಬ್ಬ ನಿರಪರಾಧಿಯನ್ನು ಕೊಲ್ಲುವದು ಉತ್ತಮ. ನಾವು ಯೇಸುವನ್ನು ನಾಶಮಾಡದಿದ್ದರೆ ರೋಮಾಯರು ನಮ್ಮನ್ನು ನಾಶಮಾಡುವರು" ಎಂದು ಹೇಳಿದನು.

ಈ ಕಾರಣದಿಂದಲೇ ಯೇಸು ಜನರಿಗಾಗಿ ಸಾಯಬೇಕೆಂದು ಕಾಯಫನು ಹೇಳಿದನು (ವಚನ 50). ಯೇಸುವಿನ ಮರಣದಿಂದಾಗಿ ಯೆಹೂದ್ಯರು ರೋಮಾಯರಿಂದ ರಕ್ಷಿಸಲ್ಪಡುವರೆಂದು ಅವನು ಯೋಚಿಸಿದನು.
ಕಾಯಫನು ಒಂದು ಲೋಕದ ದೃಷ್ಟಿ ಕೋನದಿಂದ ಮಾತಾಡುತ್ತಿದ್ದನು. ಆದರೆ ಇದಕ್ಕೆ ಒಂದು ಆತ್ಮೀಕ ಅರ್ಥವೂ ಇತ್ತು, ಅದು ಕಾಯಫನ ಇಂಗಿತವಾಗಿರಲಿಲ್ಲ. ಆತ್ಮೀಕ ಅರ್ಥದಲ್ಲಿ ನೋಡುವದಾದರೆ ಯೇಸು ಜನರಿಗೋಸ್ಕರವೇ ಮರಣಿಸಿದನು. ಜನರನ್ನು ಆತ್ಮೀಕವಾಗಿ ರಕ್ಷಿಸಿ ಅವರಿಗೆ ನಿತ್ಯಜೀವ ಕೊಡುವದಕ್ಕಾಗಿ ಆತನು ಮರಣಿಸಿದನು. ಹೀಗೆ, ಕಾಯಫನು ಇದನ್ನು ಗ್ರಹಿಸದವನಾಗಿ ವಾಸ್ತವದಲ್ಲಿ ಯೇಸುವಿನ ಮರಣದ ಮೂಲಕ ಆನೇಕ ಜನರು ರಕ್ಷಿಸಲ್ಪಡುವರು ಎಂದು ಪ್ರವಾದಿಸುತ್ತಿದ್ದಾನೆ – ಶೀಘ್ರವೇ ನೆರ ವೇರಿದ ಮತ್ತು ನೆರವೇರುತ್ತಿರುವ ಒಂದು ಪ್ರವಾದನೆ ಇದಾಗಿದೆ!

**51** ಕಾಯಫನು ಈ ಮಾತುಗಳನ್ನು ತನಷ್ಟಕ್ಕೆ ತಾನೇ ಹೇಳಲಿಲ್ಲ. ಆತನು ನಿಜವಾಗಿಯೂ ದೇವರ ಮಾತುಗಳನ್ನೇ ಆಡಿದನು. ಅವನು ಆ ಸಮಯದಲ್ಲಿ ಮಹಾಯಾಜಕನಾಗಿದ್ದ ಕಾರಣ ದೇವರು ಅವನ ಮೂಲಕ ಮಾತಾಡಿದನು. ಆದರೆ ಕಾಯಫನಂತೂ ತಾನು ದೇವರ ಪರವಾಗಿ ಪ್ರವಾದನೆಯನ್ನು ನುಡಿಯುತ್ತಿದ್ದಾನೆಂದು ಗ್ರಹಿಸಿಕೊಳ್ಳಲಿಲ್ಲ.

**52** ಯೋಹಾನನು ಇಲ್ಲಿ ಯೇಸು ಕೇವಲ ಯೆಹೂದ್ಯ ಜನಕ್ಕೋಸ್ಕರ ಮಾತ್ರವಲ್ಲ (ವಚನ 51) ಆದರೆ ಚದುರಿರುವ ದೇವರ ಮಕ್ಕಳಿಗಾಗಿ ಅಂದರೆ ಅನ್ಯಜನರಿಗೋಸ್ಕರ ಸಹ ಸತ್ತನೆಂಬದನ್ನು ಸೇರಿಸುತ್ತಾನೆ. ಯೇಸು ತನ್ನ ಹಿಂಡಿನೊಳಗೆ ತರಲಿಕ್ಕಿದ್ದ ಇತರ ಕುರಿಗಳು ಇವರಾಗಿದ್ದರು (ಯೋಹಾನ 10:16 ಮತ್ತು ವ್ಯಾಖ್ಯಾನ ನೋಡಿರಿ). ಯೇಸು ಭೂಮಿಯ ಮೇಲಿರುವಾಗ ಅನ್ಯಜನರ ಮಧ್ಯದಲ್ಲಿ ಹೆಚ್ಚು ಬೋಧನೆಯನ್ನು ಮಾಡಲಿಲ್ಲ. ಆತನು ಯೆಹೂದ್ಯರಿಗೆ ಬೋಧಿಸುವದರಲ್ಲಿಯೂ ಹಾಗು ತನ್ನ ಶಿಷ್ಯರನ್ನು ತರಬೇತಿಗೊಳಿಸುವದರ ಮೇಲೆಯೂ ಹೆಚ್ಚು ಗಮನ ಹರಿಸಿದನು, ಆದರೆ ಆತನ ಮರಣದ ನಂತರ ಆತನ ಶಿಷ್ಯರು ಹೊರಟು ಹೋಗಿ ಜಗತ್ತಿಗೆಲ್ಲಾ ಸುವಾರ್ತೆ ಸಾರಿದರು. (ಅ.ಕೃತ್ಯ 1:8). ಈ ರೀತಿಯಲ್ಲಿ ಯೇಸು ತನ್ನ ಶಿಷ್ಯರ ಮೂಲಕವಾಗಿ ಜಗತ್ತಿನ ಎಲ್ಲಾ ಜನರನ್ನೂ ಸಭೆಯೊಳಗೆ ಸೇರಿಸಿರುತ್ತಾನೆ. ಆತನು ಯೆಹೂದ್ಯರಿಗಾಗಿ ಮಾತ್ರವಲ್ಲ ಇಡೀ ಲೋಕಕ್ಕಾಗಿ ಮರಣಿಸಿದನು.

**53** ಅಂದಿನಿಂದ ಯೆಹೂದಿ ನಾಯಕರೆಲ್ಲರೂ ಒಟ್ಟಾಗಿ ಯೇಸುವಿನ ಪ್ರಾಣವನ್ನು ತೆಗೆಯಲು ಸಂಚು ಹೂಡಿದರು. ಹಿರೀಸಭೆಯು ಯೇಸುವನ್ನು ಮರಣಕ್ಕೆ ಒಪ್ಪಿಸಬೇಕೆಂಬ ಔಪಚಾರಿಕ ತಿರ್ಮಾನವನ್ನು ಮಾಡಿತು. ಯೇಸುವನ್ನು ಸಾಯಿಸುವದರ ಮೂಲಕ ತಮ್ಮ ಜನಾಂಗವು ರಕ್ಷಿಸಲ್ಪಡುವದೆಂದು ಅವರು ನೆನಸಿದರು. ಆದರೆ ಅವರು ಎಂತಹ ತಪ್ಪನ್ನು ಮಾಡಿದರು! ಅವರು ಯೇಸುವನ್ನು ಸಾಯಿಸಿದ್ದಕ್ಕಾಗಿ ಅವರ ಜನಾಂಗವು ರಕ್ಷಿಸಲ್ಪಡುವದಕ್ಕೆ ಬದಲಾಗಿ ಸರ್ವನಾಶವಾಯಿತು, ನಾಲ್ವತ್ತು ವರ್ಷಗಳ ನಂತರ ವಷ್ಟೇ ರೋಮಾಯ ಸೈನ್ಯವು ಯೆಹೂದ್ಯರ ದೇವಾಲಯವನ್ನು ನಾಶಮಾಡಿದ್ದು ಮಾತ್ರವಲ್ಲದೆ ಇಡೀ

ಯೆರೂಸಲೇಮ ಪಟ್ಟಣವನ್ನೂ, ಅದರ ನಿವಾಸಿಗಳೆಲ್ಲರನ್ನೂ ನಾಶಮಾಡಿತು. ಯೆಹೂದ್ಯರು ಕೊನೆಗೂ ತಮ್ಮ ಸ್ಥಾನವನ್ನೂ ಜನವನ್ನೂ ಕಳೆದುಕೊಂಡರು (ವಚನ 48). ಅವರು ಭೂಮಿಯ ಮೇಲಿನ ತಮ್ಮ ಜನಾಂಗವನ್ನು ಕಳೆದು ಕೊಂಡದ್ದಷ್ಟೇ ಅಲ್ಲ, ಪರಲೋಕದಲ್ಲಿ ತಮ್ಮ ರಕ್ಷಣೆಯನ್ನು ಅವರು ಕಳೆದುಕೊಂಡರು.

**54** ಯೇಸುವಿನ ಮರಣದ ಸಮಯವು ಪಸ್ಕಹಬ್ಬದ ವೇಳೆಯಲ್ಲಿ ನೇಮಕವಾಗಿತ್ತು (ವಚನ 55). ಅದಕ್ಕೆ ಮುನ್ನ ಯೇಸು ಯೆಹೂದ್ಯರಿಂದ ದೂರವಿದ್ದನು. ಅವನು ಅಸಮಯವನ್ನು ತನ್ನ ಶಿಷ್ಯರ ಜೊತೆಯಲ್ಲಿ ಕಳೆದನು.

**55-56** ಪಸ್ಕ[92] ಹಬ್ಬವು ಹತ್ತಿರವಾಗಿರಲಾಗಿ ಅನೇಕಯೆಹೂದ್ಯ ಯಾತ್ರಿಕರು ತಮ್ಮನ್ನು ಶುದ್ಧಿ ಮಾಡಿಕೊಳ್ಳುವದಕ್ಕಾಗಿ ಪದ್ಧತಿಯಂತೆ ಹಬ್ಬ ಕ್ಕಿಂತ ಮುಂಚೆಯ ಯೆರೂಸಲೇಮಿಗೆ ಹೋದರು. ಈ ಯಾತ್ರಿಗಳು ಯೇಸುವನ್ನು[93] ಹುಡುಕುತ್ತಾ ಇದ್ದರು. ಯೇಸು ಹಬ್ಬಕ್ಕೆ ಬರುವನೋ ಎಂದು ಅವರು ವಿಸ್ಮಯಗೊಂಡಿದ್ದರು. ಯೆಹೂದ್ಯನಾಯಕರು ಯೇಸುವನ್ನು ಕೊಲ್ಲಬೇಕೆಂದಿದ್ದಾರೆಂದು ಅವರಿಗೆ ತಿಳಿದಿತ್ತು (ವಚನ 57). "ಅವನು ಬಾರದೆ ಇದ್ದಾನೋ?" ಎಂದು ಮಾತಾಡಿಕೊಂಡನು.

57. ಯಾರಾದರೂ ಯೇಸುವನ್ನು ಕಂಡುಕೊಂಡರೆ ತಮಗೆ ಹೇಳಬೇಕೆಂದು ಯೆಹೂದಿನಾಯಕರು ಜನರಿಗೆ ಅಪ್ಪಣೆ ಮಾಡಿದ್ದರು. ಯಾವನಾದರೂ ಗೊತ್ತಿದ್ದೂ ವರದಿಮಾಡದೆಹೋದರೆ ನಾಯಕರಿಗೆ ಅವಿಧೇಯನಾದ ಅಪರಾಧಕ್ಕೆ ಒಳಗಾಗುತ್ತಿದ್ದನು. ಹೀಗೆ, ಯೇಸು ಯೆರೂಸಲೇಮಿಗೆ ಬರುವದಾದರೆ ತನ್ನನ್ನು ಬಚ್ಚಿಟ್ಟು ಕೊಳ್ಳಲಾರನು, ಯಾಕೆಂದರೆ ಅನೇಕ ಜನರು ಭಯದಿಂದಾಗಿ ನಿಶ್ಚಯವಾಗಿಯೂ ಆತನಿರುವ ಸ್ಥಳದ ಬಗ್ಗೆ ವರದಿಮಾಡುವರು.

---

## ಅಧ್ಯಾಯ - 12

### ಯೇಸು ಬೇಥಾನ್ಯದಲ್ಲಿ ಅಭಿಷೇಕಿಸಲ್ಪಟ್ಟಿದ್ದು (12:1-11)

(ಮತ್ತಾಯ 26:6-13, ಮಾರ್ಕ 14:3-9)

**1-8** ಮಾರ್ಕ 14:3-9 ಮತ್ತು ವ್ಯಾಖ್ಯಾನ ನೋಡಿರಿ.

**9** ಪಸ್ಕ ಹಬ್ಬಕ್ಕೆ ಆರು ದಿನಗಳ ಮುಂಚೆ ಯೇಸು ಲಾಜರನ ಮನೆಯಿರುವ ಬೇಥಾನ್ಯಕ್ಕೆ ಪು ನಃ ಬಂದನು (ವಚನ 1) .ಯೆರೂಸಲೇಮಿನ ಜನರಿಗೆ ಇದು ಗೊತ್ತಾಗಲು ಅವರು ಯೇಸುವನ್ನು ನೋಡುವದಕ್ಕೆ ಬಂದರು. ಅಲ್ಲದೆ ಯೇಸು ಅದ್ಭುತಕರವಾಗಿ ಸತ್ತವರೊಳಗಿಂದ ಎಬ್ಬಿಸಿದ ಲಾಜರನನ್ನು ನೋಡಲು ಸಹ ಬಂದರು.

**10-11** ಲಾಜರನ ನಿಮಿತ್ತವಾಗಿ ಬಹು ಜನರು ಯೇಸುವನ್ನು ನಂಬುವವರಾದರು. ಆದುದರಿಂದ ಯೆಹೂದಿನಾಯಕರು ಲಾಜರನನ್ನು ಸಹ ಕೊಲ್ಲಲು ತಿರ್ಮಾನಿಸಿದರು. ಲಾಜರನು ಜೀವಂತವಾಗಿರುವ ತನಕ ಯೇಸುವಿನ ಶಕ್ತಿಗೆ ಸದೃಶ್ಯ ಸಾಕ್ಷಿಯಾಗಿದ್ದನು, ಅವನನ್ನು ಕೊಂದರೆ ಜನರು ಬೇಗನೇ ಆತನನ್ನು ಮರೆತು ಹೋಗುವರು.
ಜನಕ್ಕೋಸ್ಕರ ಒಬ್ಬನು ಸಾಯಬೇಕು, ಎಂಬದಾಗಿ ಮಹಾಯಾಜಕನಾದ ಕಾಯಫನು ಹೇಳಿದ್ದನು (ಯೋಹಾನ 11:50). ಈಗ ಯೆಹೂದ್ಯರು ಇಬ್ಬರು ಸಾಯಬೇಕೆಂದು ಹೇಳಿದರು: ಯೇಸು ಮತ್ತು ಲಾಜರನು, ದುಷ್ಟತನವು ಹೀಗೆಯೇ ಬೆಳೆಯುತ್ತದೆ!

### ಜಯೋತ್ಸಾಹದ ಪ್ರವೇಶ (12:12-16)

(ಮತ್ತಾಯ 21:1-11, ಮಾರ್ಕ11:1-11,ಲೂಕ 19:28-40)

**12-16** ಮಾರ್ಕ 11:1-11 ಮತ್ತು ವ್ಯಾಖ್ಯಾನ ನೋಡಿರಿ.

**17-19** ಯೇಸು ಲಾಜರನನ್ನು ಸತ್ತವರೊಳಗಿಂದ ಎಬ್ಬಿಸಿದನೆಂಬದಕ್ಕಾಗಿ ಜನಸಮೂಹವು ಯೇಸುವನ್ನು ನೋಡುವದಕ್ಕಾಗಿ ಬರುತ್ತಲಿದ್ದರು. ಯೆಹೂದ್ಯನಾಯಕರ ಚಿಂತೆಯು ದ್ವಿಗುಣಗೊಂಡಿತು. ಇಡೀ ಲೋಕವೇ ಯೇಸುವಿನ ಹಿಂದೆ ಹೋಗುತ್ತಿರುವದೋ ಎಂಬಂತೆ ಅವರಿಗೆ ತೋರಿತು (ಯೋಹಾನ 11:47-48 ಮತ್ತು ವ್ಯಾಖ್ಯಾನ ನೋಡಿರಿ). ಯೇಸುವಿನ ಪ್ರಶಂಸಕರು ಹೆಚ್ಚಾದ ಕಾರಣದಿಂದ ಯೇಸುವನ್ನು ಕೊಲ್ಲುವದು ಎಂದಿಗಿಂತಲೂ ಹೆಚ್ಚು ಕಷ್ಟಕರವಾಯಿತು.

### ಯೇಸು ತನ್ನ ಮರಣವನ್ನು ಮುಂತಿಳಿಸಿದ್ದು (12:20-36)

**20** ಕೆಲವು ಮಂದಿ ಗ್ರೀಕರು[94] ಸಹ ದೇವರ ಆರಾಧನೆಗಾಗಿ ಯೆರೂಸಲೇಮಿಗೆ ಬಂದಿದ್ದರು. ಈ ಗ್ರೀಕರು ಅನ್ಯಜನರಾಗಿದ್ದಾಗ್ಯು ಯೆಹೂದಿಧರ್ಮವನ್ನು ಅನುಸರಿಸುತ್ತಿದ್ದರು. ಆದರೆ ಅವರಿಗೆ ಸುನ್ನತಿಯಾಗಿದ್ದಿಲ್ಲವಾದ ಕಾರಣ ಅವರು ನಿಜ ಯೆಹೂದ್ಯರಾಗಿರಲಿಲ್ಲಃ.

**21-22** ಈ ಗ್ರೀಕರು ಯೇಸುವಿನ ಹನ್ನೆರಡು ಮಂದಿ ಶಿಷ್ಯರಲ್ಲೊಬ್ಬನಾದ ಫಿಲಿಪ್ಪನ ಬಳಿಗೆ ಬಂದು (ಯೋಹಾನ 1:43-44) ಯೇಸುವನ್ನು ನೋಡಬೇಕೆಂದಿದ್ದೇವೆ ಎಂದು ಬೇಡಿಕೊಂಡರು. ಅವರು ಆತನ ಬಗ್ಗೆ ಕೇಳಿದ್ದರು ಮತ್ತು ಈಗ ಆತನನ್ನು ಬೇಟಿಯಾಗಬೇಕೆಂದಿದ್ದರು. ಫಿಲಿಪ್ಪನಿಗೆ ಏನು ಮಾಡಬೇಕೆಂದು ತೋಚದೆ ಪೇತ್ರನ ತಮ್ಮನಾದ ಅಂದ್ರೆಯನಿಗೆ ತಿಳಿಸಿದನು (ಯೋಹಾನ 1:40).

23 ಕೆಲವು ಮಂದಿ ಗ್ರೀಕ ಅನ್ಯಜನರು ತನ್ನನ್ನು ನೋಡಬೇಕೆಂದಿದ್ದಾರೆಂಬದನ್ನು ಯೇಸು ಕೇಳಿದಾಗ ತಾನು ಮಹಿಮೆಯ ಪದವಿಯನ್ನು ಹೊಂದುವ ಗಳಿಗೆಯು ಅಂದರೆ ಶಿಲುಬೆಯ [96] ಮೇಲೆ ಸಾಯುವ ಸಮಯವು ಬಂದಿದೆ ಎಂಬದಕ್ಕೆ ಇದು ಒಂದು ಸಂಕೇತವೆಂದು ತಿಳುಕೊಂಡಿದ್ದನು. (ಯೋಹಾನ 17:1 ನೋಡಿರಿ). ಈಗ ಅನ್ಯ ಜನರು ಆತನನ್ನು ನಂಬುವದಕ್ಕೆ ಪ್ರಾರಂಭಿಸಿದ್ದರು ಮತ್ತು ಈಗ ಆತನ ಶಿಷ್ಯರ ಮೂಲಕವಾಗಿ ಆತನ ಸಾಕ್ಷಿಯು ಇಸ್ರಾಯೇಲಿನ ಹೊರಗಡೆಯೂ ಹರಡಲು ಪ್ರಾರಂಭಿಸುತ್ತದೆ. ಆತನು ಯೆಹೂದ್ಯರಿಗೆ ಮಾತ್ರವಲ್ಲ ಆದರೆ ಇಡೀ ಲೋಕಕ್ಕೆ ರಕ್ಷಕನೆಂಬದು ಈಗ ತೋರಿ ಬರುವದು. ಈಗ ಆತನು ಸ್ವತಃ ಭೂಮಿಯ ಮೇಲೆ ಮಾಡುವ ಕೆಲಸವು ಅಂತ್ಯಕ್ಕೆ ಬಂದಿತ್ತು. ಆತನು ಸಾಯುವ ಗಳಿಗೆಯು ಬಂದಿತ್ತು.

24 ಬಳಿಕ ಯೇಸು ತನ್ನ ಮರಣಕ್ಕೆ ಅದು ಸರಿಯಾದ ಸಮಯ, ಏಕೆಂಬದಕ್ಕೆ ಕಾರಣವನ್ನು ಕೊಡುತ್ತಾನೆ. ಆತನ ಮರಣದ ನಂತರವಷ್ಟೇ ಪವಿತ್ರಾತ್ಮನನ್ನು ಶಿಷ್ಯರಲ್ಲಿ ವಾಸಿಸಲು ಕಳುಹಿಸಬೇಕೆಂಬದು ದೇವರ ಯೋಜನೆಯಾಗಿತ್ತು (ಯೋಹಾನ 14:16-17, 16:7). ಆಗ ಶಿಷ್ಯರು ಪವಿತ್ರಾತ್ಮನ ಬಲದ ಮುಖಾಂತರವಾಗಿ ಜನತ್ತಿನಲ್ಲೆಲ್ಲಾ ಸುವಾರ್ತೆಯನ್ನು ಹರಡುವರು. ಅವರು ಯೇಸು ಮಾಡಿದ ಕಾರ್ಯಗಳಿಗಿಂತಲೂ ದೊಡ್ಡ ಕಾರ್ಯಗಳನ್ನು ಮಾಡುವರು (ಯೋಹಾನ 14:12 ಮತ್ತು ವ್ಯಾಖ್ಯಾನ ನೋಡಿರಿ).

ಬಳಿಕ ಯೇಸು ತಾನು ಸಾಯುವದು ಏಕೆ ಅವಶ್ಯವೆಂಬುದನ್ನು ತೋರಿಸಲು ಒಂದು ವ್ಯವಸಾಯಿಕದೃಷ್ಟಾಂತವನ್ನು ನೀಡುತ್ತಾನೆ. ಬಿತ್ತಲ್ಪಟ್ಟ ಯಾವದೇ ಬೀಜವು ಒಂದು ವಿಧದಲ್ಲಿ ಅದು ಪುನಃ ಜೀವಕ್ಕೆ ಬರುವ "ಮುಂಚೆ ಸಾಯಲೇಬೇಕು" (1 ಕೊರಿಂಥ 15:36). ಯೇಸು ಒಂದು ಗೋಧಿಯ ಕಾಳಿನಂತಿದ್ದನು. ಆತನು ಸಾಯುವದರ ಮೂಲಕ ಬಹಳ ಫಲಕೊಟ್ಟನು – ಅಂದರೆ ಹನ್ನೆರಡು ಮಂದಿ ಶಿಷ್ಯರು [97] ಮತ್ತು ಹನ್ನೆರಡು ಶಿಷ್ಯರಿಂದ ಇನ್ನು ಅನೇಕ ಬೀಜಗಳು ಚಿಗುರೊಡೆದಿವೆ, ಮತ್ತು ಇಂದಿಗೂ ಸಹ ಇನ್ನು ಹೆಚ್ಚು ಸಂಖ್ಯೆಯಲ್ಲಿ ಫಲವು ಚಿಗುರುತ್ತಲಿದೆ.

25 ಯೇಸು ವಿಶೇಷವಾಗಿ ತನ್ನನ್ನೇ ಗೋಧಿಯ ಕಾಳಿಗೆ ಹೋಲಿಸಿ ಕೊಂಡನಾದಾಗ್ಯು (ವಚನ 24) ಯೇಸುವಿನ ಹಿಂಬಾಲಕರೆಲ್ಲರ ವಿಷಯದಲ್ಲಿಯೂ ಹೋಲಿಕೆಯು ಅಷ್ಟೇ ಸತ್ಯವಾಗಿದೆ. ಸಾಯುವದರ ಮೂಲಕ ನಾವು ಸಹ ಕ್ರಿಸ್ತನಿಗಾಗಿ ಹೆಚ್ಚು ಫಲವನ್ನಂಟು ಮಾಡಬೇಕು. ನಾವೆಲ್ಲರೂ ಫಲವನ್ನು ಕೊಡುವದಕ್ಕಾಗಿ, ಶಾರೀರಿಕವಾಗಿ ಸಾಯಬೇಕೆಂಬದು ಇದರರ್ಥವಲ್ಲ, ಕೆಲವು ಕ್ರೈಸ್ತರು ಮಾತ್ರವೇ ರಕ್ತ ಸಾಕ್ಷಿಗಳಾಗಲು ಕರೆಯಲ್ಪಟ್ಟಿದ್ದಾರೆ. ಆದರೆ ನಾವೆಲ್ಲರೂ ನಮ್ಮ ಸ್ವಾರ್ಥಕ್ಕಾಗಿ ಸಾಯಬೇಕು. ನಮ್ಮ ಹಳೆಯ ಪಾಪದ ಸ್ವಭಾವವು ಸಾಯಬೇಕು ಇಲ್ಲವಾದರೆ ನಾವು ಕ್ರಿಸ್ತನಿಗಾಗಿ ಫಲವನ್ನು ಕೊಡಲು ಅಸಾದ್ಯವಾಗುತ್ತದೆ (ಮಾರ್ಕ 8:34-35, ರೋಮಾ 6:2-6, ಗಲಾತ್ಯ 5:2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಇಹಲೋಕದಲ್ಲಿ [98] ತನ್ನ ಪ್ರಾಣವನ್ನು ಹಗೆ ಮಾಡುವವನು – ನಿತ್ಯಜೀವವನ್ನು ಪಡೆದುಕೊಳ್ಳುವನೆಂದು ಯೇಸು ಹೇಳಿದನು. ನಾವು ನಿಜವಾಗಿಯೂ ನಮ್ಮನ್ನು "ಹಗೆ" ಮಾಡಿಕೊಳ್ಳಬೇಕೆಂಬುದು ಯೇಸುವಿನ ತಾತ್ಪರ್ಯವಲ್ಲ. ಬದಲಾಗಿ ಆತನ ತಾತ್ಪರ್ಯವೇನೆಂದರೆ ಆತನಿಗಾಗಿ ನಮ್ಮ ಪ್ರೀತಿಯು ಎಷ್ಟು ಶ್ರೇಷ್ಠವಾಗಿರಬೇಕೆಂದರೆ ಅದಕ್ಕೆ ಹೋಲಿಸುವಾಗ ನಮ್ಮ ಸ್ವಾರ್ಥಕ್ಕಾಗಿನ ಪ್ರೀತಿಯು ಹಗೆಯಾಗಿ ಕಾಣಲ್ಪಡಬೇಕು (ಲೂಕ 14:26 ಮತ್ತು ವ್ಯಾಖ್ಯಾನ ನೋಡಿರಿ). ಹೇಗೂ, ಏಕ ಕಾಲದಲ್ಲಿ ನಾವು ನಮ್ಮ ಸ್ವಾರ್ಥವನ್ನೂ, ಕ್ರಿಸ್ತನನ್ನೂ ಪ್ರೀತಿಸಲಾರೆವು (ಮತ್ತಾಯ 6:24).

26 ಯಾವನಾದರೂ ನನ್ನ ಸೇವೆಯನ್ನು ಮಾಡುವವನಾದರೆ ನನ್ನ ಹಿಂದೆ ಬರಲಿ. ಗ್ರೀಕರು ಯೇಸುವನ್ನು ಹುಡುಕಿದರು (ವಚನಗಳು 20-21) ಆದರೆ ಯೇಸುವನ್ನು ಹುಡುಕುವು ದಷ್ಟೇ ಸಾಕಾಗುವದಿಲ್ಲ. ಯೇಸುವನ್ನು ಹುಡುಕುವದು ಪ್ರಥಮ ಹೆಜ್ಜೆಯಷ್ಟೇ ಆಗಿದೆ. ಅನಂತರ ನಾವು ಆತನನ್ನು ನಂಬಬೇಕು ಹಾಗು ಅದರ ನಂತರ ನಾವು ಆತನ ಸೇವೆಮಾಡಬೇಕು, ನಾವು ಯೇಸುವನ್ನು ಪ್ರೀತಿಸಿ ಆತನ ಸೇವೆಯನ್ನು ಮಾಡಲಿಚ್ಚಿಸುವದಾದರೆ ನಾವು ಆತನ ಹಿಂದೆ ಹೋಗ ಬೇಕು. ಯೇಸು ಹೋಗುವಲ್ಲಿಗೆ ನಾವು ಹೋಗಬೇಕು.ಅದರರ್ಥವೇನೆಂದರೆ ನಾವು ಆತನೊಂದಿಗೆ ಬಾಧೆಪಟ್ಟು ಸಾಯುವದಕ್ಕೂ ಸಿದ್ದರಿರಬೇಕು.

ಯೇಸುವನ್ನು ಹಿಂಬಾಲಿಸುವ ವ್ಯಕ್ತಿಯು ಲೋಕದಲ್ಲಿ ತನ್ನ ಪ್ರಾಣವನ್ನು ಕಳೆದುಕೊಳ್ಳಬಹುದು. ಅವನು ತನ್ನ ಆಸ್ತಿಗಳನ್ನು ಕಳೆದು ಕೊಳ್ಳಬಹುದು. ಆತನು ಮನುಷ್ಯರ ದಷ್ಟಿಯಲ್ಲಿ ತನ್ನ ಗೌರವವನ್ನು ಕಳೆದುಕೊಳ್ಳಲೂ ಬಹುದು. ಆದರೆ ಅವು ಗಳಿಗೆ ಬದಲಾಗಿ ಆತನು ಸದಾಕಾಲವೂ ಕ್ರಿಸ್ತನೊಂದಿಗೆ ಜೀವಿಸುವವನಾಗುತ್ತಾನೆ. ಅಂದರೆ ಆತನು ಪರಲೋಕದಲ್ಲಿ ನಿತ್ಯಜೀವವನ್ನು ಪಡೆಯುವನು. ಅವನು ದೇವರಿಂದ ಗೌರವವನ್ನು ಸಹ ಪಡೆಯುವನು. ಯಾರು ಕ್ರಿಸ್ತನನ್ನು ಗೌರವಿಸುತ್ತಾರೋ ದೇವರು ಅವರನ್ನೂ, ಗೌರವಿಸುತ್ತಾನೆ (ಯೋಹಾನ 5:23) – ಯಾಕೆಂದರೆ ಕ್ರಿಸ್ತನನ್ನು ಗೌರವಿಸುವವರು ದೇವರನ್ನೇ ಗೌರವಿಸುತ್ತಾರೆ.

27 ತರುವಾಯ ಯೇಸು ತನ್ನ ಸುತ್ತಲಿದ್ದವರಿಗೆ "ಈಗ ನನ್ನ ಪ್ರಾಣವು ತತ್ತರಿಸುತ್ತದೆ" ಎಂದನು. ಆತನು ತಾನು ಸಾಯಲಿಕ್ಕಿದ್ದದರಿಂದ ನೊಂದುಕೊಂಡನು. ಆತನು ಒಬ್ಬ ಮನುಷ್ಯನಾಗಿದ್ದನು ಮತ್ತು ಸಾಮಾನ್ಯವಾಗಿ ಮಾನವರು ಸಾಯಲಿಕ್ಕೆ ಇಷ್ಟಪಡುವದಿಲ್ಲ. ಆದರೆ ಯೇಸು ಸಾಯುವದರ ಕುರಿತು ಮಾತ್ರವೇ ನೊಂದುಕೊಳ್ಳಲಿಲ್ಲ, ಆತನು ಎಲ್ಲಾ ಮಾನವರ ಪಾಪಗಳನ್ನು ತನ್ನ ಮೇಲೆ ಹೊತ್ತು ಕೊಳ್ಳಲಿದ್ದನಾದ್ದರಿಂದ ಆತನ ಪ್ರಾಣವು ತತ್ತರಿಸಿತು (ಮಾರ್ಕ 14:32-34 ಮತ್ತು ವ್ಯಾಖ್ಯಾನ ನೋಡಿರಿ). ಆತನು ಮಾನವರಿಗೋಸ್ಕರ ಪಾಪವಾಗ ಮಾಡಲ್ಪಡಲಿಕ್ಕಿದ್ದನು (2 ಕೊರಿಂಥ 5:21) ಆತನು ತನ್ನ ಶಿಷ್ಯರಿಂದಲೂ, ದೇವರಿಂದಲೂ ಕೈಬಿಡಲ್ಪಡಲಿಕ್ಕಿದ್ದನು, ಈ ಕಾರಣಗಳಿಂದಾಗಿ ಆತನು ನೊಂದುಕೊಂಡನು. (ಮಾರ್ಕ 14:50, 15:34).

ಯೇಸು ಒಂದು ಕ್ಷಣ ತನ್ನ ಮನಸ್ಸಿನಲ್ಲಿ ಇಂತಹ ಗಳಿಗೆಯನ್ನು ಅಂದರೆ ಇಂತಹ ಒಂದು ಮರಣವನ್ನು ತಪ್ಪಿಸಲು ಸಾಧ್ಯವಿದೆಯೇ ಎಂಬ ಚಿಂತೆಯಲ್ಲಿ ಮಗ್ನನಾದನು. ಆತನು ತನ್ನಲ್ಲಿಯೇ "ನಾನು ತಂದೆಯೇ, ನನ್ನನ್ನು ಈ ಗಳಿಗೆಯಿಂದ ರಕ್ಷಿಸು ಎಂದು ಪ್ರಾರ್ಥಿಸಲೇ?"ಎಂದು ಕೊಂಡನು. ಆದರೆ ತಕ್ಷಣವೇ ಆತನು "ಇಲ್ಲ, ಅಂತಹ ಪ್ರಾರ್ಥನೆಯು ತಂದೆಯ ಚಿತ್ತಕ್ಕೆ ವಿರುಧ್ಧವಾಗುತ್ತದೆ. ಮಾನು ಸಾಯುವದಕ್ಕಾಗಿಯೇ ಲೋಕಕ್ಕೆ ಬಂದೆನು. ಮಾನವರ ದಂಡನೆಯನ್ನು ಹೊತ್ತು ಕೊಳ್ಳುವದಕ್ಕಾಗಿಯೇ ನಾನು ಈ ಮರಣದ ಸಮಯಕ್ಕೆ ಬಂದಿದ್ದೇನೆ" ಎಂದು ಯೋಚಿಸಿಕೊಂಡನು (ಮಾರ್ಕ 14;35-36 ಮತ್ತು ವ್ಯಾಖ್ಯಾನ ನೋಡಿರಿ).

**28** ಯೇಸು "ತಂದೆಯೇ, ನಿನ್ನ ಹೆಸರನ್ನು ಮಹಿಮೆ ಪಡಿಸಿಕೋ" ಅಂದನು. ಅಂದರೆ "ನನ್ನ ಮರಣದ ಮೂಲಕ ನಿನ್ನ ಹೆಸರು ಮಹಿಮೆಹೊಂದಲಿ" ಎಂದನು (ಯೋಹಾನ 17:1-4). ಆಗ ದೇವರು ಆಕಾಶದೊಳಗಿಂದ "ಮಹಿಮೆ ಪಡಿಸಿದ್ದೇನೆ, ತಿರಿಗಿ ಮಹಿಮೆಪಡಿಸುವೆನು" ಎಂದು ಹೇಳಿದನು. ದೇವರು ಯೇಸುವಿನ ದೀಕ್ಷಾಸ್ನಾನದ ವೇಳೆ ಮಾತಾಡುವದರ ಮೂಲಕ ಆತನನ್ನು ಮಹಿಮೆ ಪಡಿಸಿದ್ದನು (ಮಾರ್ಕ 1:9-11) ಮತ್ತು ಆತನ ರೂಪಾಂತರದ ವೇಳೆಯೂ ಮಹಿಮೆಪಡಿಸಿದ್ದನು (ಮಾರ್ಕ 9:2-7). ದೇವರು ಯೇಸುವಿಗೆ ಅಳತೆಯಿಲ್ಲದೆ ಪವಿತ್ರಾತ್ಮನನ್ನು ಕೊಡುವದರ ಮೂಲಕ ಆತನನ್ನು ಮಹಿಮೆ ಪಡಿಸಿದ್ದನು. (ಯೋಹಾನ 3:34). ದೇವರು ಯೇಸುವನ್ನು ಈ ವಿಧದಲ್ಲಿ ಮಹಿಮೆ ಪಡಿಸುವದರ ಮೂಲಕ ತನ್ನ ಹೆಸರನ್ನೂ ಮಹಿಮೆ ಪಡಿಸಿಕೊಂಡಿದ್ದನು. ಮತ್ತು ಈಗ ದೇವರು ಯೇಸುವಿನ ಮರಣ ಹಾಗು ಪುನರುತ್ಥಾನದಮೂಲಕ ಇನ್ನೊಂದಾವರ್ತಿ ತನ್ನ ಹೆಸರನ್ನು ಮಹಿಮೆ ಪಡಿಸಲಿದ್ದನು.

**29** ಜನರು ಆಕಾಶವಾಣಿಯಾಗುವದನ್ನು ಕೇಳಿದರು, ಆದರೆ ಅವರಲ್ಲಿ ಎಲ್ಲರೂ ಅದನ್ನು ಅರ್ಥಮಾಡಿಕೊಳ್ಳಲಿಲ್ಲ. (ಅ.ಕೃತ್ಯ 22:6-9 ನೋಡಿರಿ). ಕೆಲವರಿಗೆ ಅದು ಗುಡುಗಿನಂತಿತ್ತು, ಇನ್ನು ಕೆಲವರಿಗೆ ಅದು ದೇವದೂತನು ಮಾತಾಡಿದಂತಿತ್ತು.

**30** ಯೇಸು ದೇವರ ಕಡೆಯಿಂದ ಬಂದವನೆಂಬದನ್ನು ಜನರು ತಿಳಿಯುವದಕ್ಕಾಗಿ ಆಕಾಶವಾಣಿಯು ಆಯಿತು. ವಿಶೇಷವಾಗಿ ಜನರ ಗುಂಪಿನಲ್ಲಿದ್ದ ವಿಶ್ವಾಸಿಗಳಿಗೆ ಇದೊಂದು ಉತ್ತೇಜನವಾಗಿತ್ತು. ಯೇಸುವಿನ ಜೀವಿತವು ದೇವರ ಕೈಗಳಲ್ಲಿತ್ತೆಂಬದನ್ನು ಅವರು ಈ ಆಕಾಶವಾಣಿಯಿಂದ ಅರ್ಥಮಾಡಿಕೊಳ್ಳಬಹುದಿತ್ತು.

**31** ಯೇಸು "ಈಗ ಲೋಕಕ್ಕೆ ತೀರ್ಪು ಆಗುತ್ತಿದೆ" ಎಂದನು. ಅಂದರೆ ಇಹಲೋಕದ ಜನರು ಒಂದು ಅರ್ಥದಲ್ಲಿ ಯೇಸುವಿನ ಶಿಲುಬೆಯಿಂದ ತೀರ್ಪಿಗೊಳಗಾಗುವರು. ಜನರು ಯೇಸುವನ್ನು ಶಿಲುಬೆಗೆ ಹಾಕುವದರ ಮೂಲಕ ತಮ್ಮನ್ನು ತಾವೇ ತೀರ್ಪಿಗೆ ಒಳಪಡಿಸಿಕೊಳ್ಳುತ್ತಾರೆ. (ಯೋಹಾನ 3:18-19 ನೋಡಿರಿ). ಹೀಗೆ ಕ್ರಿಸ್ತನ ಶಿಲುಬೆಯು ಲೋಕದ ಮೇಲಿನ ತೀರ್ಪಿಗೆ ಸಂಕೇತವಾಗಿದೆ.

ಶಿಲುಬೆಯು ನ್ಯಾಯತೀರ್ಪಿನ ಸಂಕೇತ ಮಾತ್ರವೇ ಅಲ್ಲ, ಇದು ಸೈತಾನನ ಅದೋಗತಿಯ ಸಂಕೇತವು ಸಹ ಆಗಿದೆ. ಯೇಸು ಶಿಲುಬೆಯಲ್ಲಿ ಸೈತಾನನ ಮೇಲೆ ಅಂತಿಮ ಜಯವನ್ನು ಸಾಧಿಸಿದನು. ಸೈತಾನನು ಜಯಶಾಲಿಯಾದಂತೆ ಕಂಡಿತು, ಆದರೆ ವಾಸ್ತವದಲ್ಲಿ ಆತನು ಸೋತು ಹೋಗಿದ್ದನು.

ಸೈತಾನನು ಇಹಲೋಕಾಧಿಪತಿಯೆಂದು ಕರೆಯಲ್ಪಟ್ಟಿದ್ದಾನೆ, ಯಾಕೆಂದರೆ ಆತನು ವಿಶ್ವಾಸವಿಲ್ಲದ ಜನರ ಹೃದಯಗಳನ್ನು ಆಳುತ್ತಾನೆ (ಯೋಹಾನ 14:30, 16:11 ನೋಡಿರಿ). ಆದರೆ ಯೇಸು ಎಂದಿಗೂ ಸೈತಾನನ ಶೋಧನೆಯಲ್ಲಿ ಬೀಳಲಿಲ್ಲ (ಮತ್ತಾಯ 4:1-11). ಯೇಸು ಶಿಲುಬೆಯನ್ನು ತಪ್ಪಿಸಿಕೊಳ್ಳುವಂತೆ ಮಾಡಲು ಸೈತಾನನು ಕೊನೆಯ ವರೆಗೂ ಪ್ರಯತ್ನಿಸಿದನು, ಆದರೆ ಯೇಸು ಕಿವಿಗೊಡಲಿಲ್ಲ (ವಚನ 27). ಯೇಸುವಿನ ಮರಣದ ಮೂಲಕ ಅನೇಕ ಜನರು ತನ್ನ ಹಿಡಿತದಿಂದ ಬಿಡುಗಡೆಗೊಳ್ಳುವರೆಂಬದು ಸೈತಾನನಿಗೆ ಗೊತ್ತಿತ್ತು, ಆದುದರಿಂದ ಯೇಸು ಶಿಲುಬೆಯ ಮೇಲೆ ಮರಣಿಸುವದು ಆತನಿಗೆ ಇಷ್ಟವಿರಲಿಲ್ಲ.

ಆದುದರಿಂದಲೇ ಯೇಸುವು "ಈಗ ಲೋಕಾಧಿಪತಿಯು ಹೊರಗೆ ನೂಕಲ್ಪಡುವನು, ಅವನು ಹೊರಗೆ ಕತ್ತಲೆಯಲ್ಲಿ ಬಿಸಾಕಲ್ಪಡುವನು (ಮತ್ತಾಯ 22:13, 25:30). ನನ್ನ ಶಿಲುಬೆಯ ಮರಣದ ಮೂಲಕ ವಿಶ್ವಾಸಿಗಳ ಮೇಲಿರುವ ಸೈತಾನನ ಬಲವು ಮುರಿಯಲ್ಪಡುವದು ಮತ್ತು ಲೋಕದ ಅಂತ್ಯದಲ್ಲಿ ಅವನು ಸರ್ವನಾಶನಗೊಳ್ಳುವನು" ಎಂದು ಹೇಳಿದನು (ಪ್ರಕ 20:10).

**32** "ಆದರೆ ನಾನು ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು" ಅಂದರೆ ಯೇಸು ಶಿಲುಬೆಯ ಮೇಲೆ ಎತ್ತಲ್ಪಟ್ಟಾಗ ಮತ್ತು ಆನಂತರ ಆತನು ಪರಲೋಕದೊಳಗೆ ಎತ್ತಲ್ಪಡುವಾಗ (ಅ.ಕೃತ್ಯ1:9). ಆತನು ಮನುಷ್ಯರನ್ನು ತನ್ನ ಪರಲೋಕ ರಾಜ್ಯದೊಳಕ್ಕೆ ಎಳೆದುಕೊಳ್ಳುವನು (ಯೋಹಾನ 6:44 ಹಾಗು ವ್ಯಾಖ್ಯಾನ ನೋಡಿರಿ). ಆತನು ಜನರನ್ನು ಸೈತಾನನ ದಾಸತ್ವದೊಳಗಿಂದ ಬಿಡಿಸಲು ಪ್ರಾರಂಭಿಸುವನು. ಯೇಸು ಇಲ್ಲಿ "ನಾನು....ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು" ಎಂದು ಹೇಳುತ್ತಾನೆ. ಅದರರ್ಥವೇನೆಂದರೆ ಆತನು ಎಲ್ಲಾ ರಾಷ್ಟ್ರಗಳಿಂದ ವಿಶ್ವಾಸಿಗಳನ್ನು ಎಳಕೊಳ್ಳುವನು ಹೊರತು ಕೇವಲ ಇಸ್ರಾಯೇಲರೊಳಗಿಂದಲ್ಲ (ಯೋಹಾನ 3:14-15, ಹಾಗು ವ್ಯಾಖ್ಯಾನ ನೋಡಿರಿ).

**33** ಯೇಸು ತನ್ನ ಮರಣದ ಕುರಿತಾಗಿ ಮಾತಾಡುತ್ತಿದ್ದಾನೆಂದು ಜನರಿಗೆ ತಿಳಿಯಿತು. ಅವರು ಧರ್ಮಶಾಸ್ತ್ರವನ್ನು ಅಂದರೆ ಹಳೆ ಒಡಂಬಡಿಕೆಯನ್ನು ಓದಿದ್ದರಿಂದ (ಯೋಹಾನ 10:34), ಮೆಸ್ಸೀಯನು ಎಂದಿಗೂ ಸಾಯುವದಿಲ್ಲ ಎಂದು ಊಹಿಸಿಕೊಂಡಿದ್ದರು (ಯೆಶಾಯ 9:7, ದಾನಿಯೇಲ 7:14). ಈಗ ಯೇಸು ಮನುಷ್ಯಕುಮಾರನಾದ ಆತನು ಶಿಲುಬೆಯ

ಮೇಲೆ ಎತ್ತಲ್ಪಡಬೇಕೆಂದು ಹೇಳಿದ್ದನು. ಜನರಿಗೆ ಗೊಂದಲವಾಯಿತು. ಅವರಲ್ಲಿ ಅನೇಕರು ಯೇಸುವೇ ಮೆಸ್ಸೀಯನೆಂದು ಯೋಚಿಸಿದ್ದರು, ಆದರೆ ಮೆಸ್ಸೀಯನು ಸಾಯಬಾರದಾಗಿತ್ತು. ಆದಾಗ್ಯು ಯೇಸು ಮನುಷ್ಯಕುಮಾರನು ಸಾಯಲೇಬೇಕೆಂದುಹೇಳಿದನು. ಆದ್ದರಿಂದ ಜನರು "ಈ ಮನುಷ್ಯಕುಮಾರನು ಯಾರು?, ಈತನೇ ಆ ಮೆಸ್ಸೀಯನೋ?" ಎಂದು ಕೇಳಿದರು.ಜನರು ಹಳೆ ಒಡಂಬಡಿಕೆಯ ಸ್ವಲ್ಪ ಭಾಗವನ್ನು ಮಾತ್ರವೆ ಅರ್ಥಮಾಡಿಕೊಂಡಿದ್ದರು. ಮೆಸ್ಸೀಯನೂ, ಕ್ರಿಸ್ತನು ಎಂದಿಗೂ ಸಾಯುವದಿಲ್ಲ ಎಂಬದು ನಿಜವೇ ಆಗಿದೆ. ಆದರೆ ಕ್ರಿಸ್ತನು ಶಾರೀರಿಕ ರೂಪದಲ್ಲಿ ತನ್ನ ಪ್ರಾಣವನ್ನು ಧಾರೆಯೆರೆದು ಮರಣ ಹೊಂದುವನೆಂದು ಸಹ ಹಳೆ ಒಡಂಬಡಿಕೆಯು ಕಲಿಸುತ್ತದೆ (ಯೆಶಾಯ 53:12). ಕ್ರಿಸ್ತನು ಯಾರೆಂಬದನ್ನು ಅರ್ಥಮಾಡಿಕೊಳ್ಳಬೇಕಾದರೆ ಒಬ್ಬನು ದೇವರವಾಕ್ಯವನ್ನು ಒಂದು ಭಾಗವನ್ನು ಮಾತ್ರವೇ ಓದದೇ ಪೂರ್ತಿಯಾಗಿ ಓದಬೇಕು.

**35** ಯೇಸು ಅವರ ಪ್ರಶ್ನೆಗೆ ನೇರವಾಗಿ ಉತ್ತರಿಸಲಿಲ್ಲ, ಆದರೆ ಆತನು ಅವರಿಗೆ "ಇನ್ನು ಸ್ವಲ್ಪಕಾಲವೇ ಬೆಳಕು ನಿಮ್ಮಲ್ಲಿ ಇರುತ್ತದೆ" ಎಂದು ಹೇಳಿದನು. ಆ ಬೆಳಕು ಸ್ವತಃ ಕ್ರಿಸ್ತನೇ ಜನರು ತಮಗೆ ಅವಕಾಶವಿರುಗಾಗಲೇ ಆತನ ಮಾತುಗಳನ್ನು ಆಲಿಸಿ ಆತನಲ್ಲಿ ನಂಬಿಕೆಯಿಡಲಿ.

ಪ್ರತಿಯೊಬ್ಬ ಮನುಷ್ಯನು ದೇರಿಂದ ಸ್ವಲ್ಪವಾದರೂ ಆತ್ಮೀಕ ಬೆಳಕನ್ನು ಪಡೆಯುತ್ತಾನೆ. ಒಂದು ವೇಳೆ ಆತನು ಆ ಬೆಳಕನ್ನು ತಿರಸ್ಕರಿಸಿ ಆದರಿಂದ ವಿಮುಖನಾಗುವದಾದರೆ ಅವನು ಶೀಘ್ರವೇ ಆತ್ಮೀಕ ಕತ್ತಲೆಯೊಳಗೆ ಬೀಳುವನು. ಆತನಿಂದ ಬೆಳಕು ಹಿಂತೆಗೆಯಲ್ಪಡುವದು. ಅವನು ತಾನು ಪಡೆದುಕೊಂಡ ಬೆಳಕಿಗನುಸಾರವಾಗಿ ನಡೆಯಬೇಕು.

ಈ ದಿನ ಒಬ್ಬ ಮನುಷ್ಯನ ಹೃದಯವು ಬಹುಶಃ ಮೃದುವಾಗಿಯೂ ಹಾಗು ಅವನು ಮನಸ್ಸು ತೆರೆಯಲ್ಪಟ್ಟದ್ದಾಗಿಯೂ ಇದೆ. ನಾಳೆ ಆತನ ಹೃದಯವು ಕಠಿಣವಾಗಿಯೂ ಹಾಗು ಅವನ ಮನಸ್ಸು ಮುಚ್ಚಲ್ಪಟ್ಟದ್ದು ಆಗಿರಬಹುದು. ಈದಿನ ಬಹುಶಃ ಒಬ್ಬ ಮನುಷ್ಯನು ನಂಬಲಿಕ್ಕೆ ಸಿದ್ದನಾಗಿರುವನು ಆದರೆ ನಾಳೆ ತಡವಾಗಿ ಹೋಗಬಹುದು ಹಾಗು ಆತನು ರಕ್ಷಣೆಯನ್ನು ಪಡೆಯುವ ಅವಕಾಶವನ್ನು ಕಳೆದುಕೊಂಡವನಾಗಬಹುದು. ಈಗಲೇ ಆ (ದೇವರ) ಸುಪ್ರಸನ್ನತೆಯ ಕಾಲ, ರಕ್ಷಣೆಯ ದಿನವು (2 ಕೊರಿಂಥ 6:2).

ಯೇಸುವಿನ ಕಾಲದಲ್ಲಿದ್ದ ಯೆಹೂದ್ಯರು ಒಂದು ಶ್ರೇಷ್ಠಬೆಳಕನ್ನು ಸ್ವತಃ ಕ್ರಿಸ್ತನನ್ನು ಸ್ವೀಕರಿಸಿದರು. ಆದರೆ ಅವರು ಬೆಳಕನ್ನು ತಿರಸ್ಕರಿಸಿದರು, ಮತ್ತು ಅಂದಿನಿಂದ ಅವರು ಕೇವಲ ಕತ್ತಲೆಯಲ್ಲಿ ನಡೆದರು. ಅವರು ತಮ್ಮ ಜನಾಂಗವನ್ನು ಕಳಕೊಂಡರು ಮತ್ತು ಅವರು ತಮ್ಮ ಆತ್ಮಗಳನ್ನು ಕಳೆದುಕೊಂಡರು (ಯೋಹಾನ 1:4-5, 8:12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**36** ಯೇಸು 35ನೇ ವಚನದಲ್ಲಿ "ಬೆಳಕು ನಿಮಗೆ ಇರುವಾಗಲೇ ಸಂಚಾರ ಮಾಡಿರಿ" ಎಂದುಹೇಳಿದನು. ಇಲ್ಲಿ 36ವೇ ವಚನದಲ್ಲಿ ಆತನು "ನಿಮಗೆ ಬೆಳಕು ಇರುವಾಗಲೇ ಬೆಳಕನ್ನು ನಂಬಿರಿ" ಎಂದು ಹೇಳುತ್ತಾನೆ. ಬೆಳಕಿನಲ್ಲಿ ನಡೆಯುವದು ಹಾಗು ಬೆಳಕನ್ನು ನಂಬುವದು ಎರಡೂ ಒಂದೇ ಆಗಿದೆ. ಆ ಬೆಳಕು ಕ್ರಿಸ್ತನೇ ಆಗಿದ್ದಾನೆ. ಬೆಳಕನ್ನು ಕೇವಲ ನೋಡಿದರೆ ಸಾಲದು, ನಾವು ಅದನ್ನು ನಂಬಬೇಕು. ದೀಪದ ಹುಳುಗಳು ಬೆಳಕನ್ನು ನೋಡಿ ಅದರ ಬಳಿಗೆ ಬರುತ್ತವೆ. ಆದರೆ ನಾವು ಬೆಳಕನ್ನು ನೋಡುವಾಗ ಅದರಲ್ಲಿ ನಂಬಿಕೆಯಿಡಬೇಕು ಅಂದರೆ ನಾವು ಯೇಸುವನ್ನು ನೋಡುವಾಗ ಆತನನ್ನು ನಂಬಿ ಹಿಂಬಾಲಿಸಬೇಕು.

ಕ್ರಿಸ್ತನನ್ನು ನಂಬುವಾಗ ನಾವು ಬೆಳಕಿನ ಮಕ್ಕಳಾಗುತ್ತೇವೆ (ಎಫೆ 5:8, 1 ಥೆಸಲೋನಿಕ ೫:೫ ನೋಡಿರಿ). ಅಂದರೆ ನಾವು ದೇವರ ಮಕ್ಕಳಾಗುವೆವು (ಯೋಹಾನ 1:12). ದೇವರು ಬೆಳಕಾಗಿದ್ದಾನೆ (1 ಯೋಹಾನ 1:5) ಮಕ್ಕಳು ತಮ್ಮ ತಂದೆಯ ಸ್ವಭಾವ ಹಾಗು ಗುಣಗಳನ್ನು ಪಡೆದುಕೊಳ್ಳುತ್ತಾರೆ. ಹೀಗೆ, ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವಾಗ ಸ್ವತಃ ದೇವರ ಗುಣ ಸ್ವಭಾವವಗಳನ್ನು ಪಡೆದುಕೊಳ್ಳುತ್ತೇವೆ.

ಯೇಸು ತಾನು ಮಾತಾಡುವದನ್ನು ಮುಗಿಸಿದ ಮೇಲೆ ಅವರನ್ನು ಬಿಟ್ಟು ಹೋಗಿ ಅಡಗಿಕೊಂಡನು. ಆತನು ತಾನು ಮನುಷ್ಯರ ಕೈಗಳಲ್ಲಿ ಸಾಯಲಿದ್ದಾನೆಂಬದನ್ನು ಬಲ್ಲವನಾಗಿದ್ದಾನೆ. ಆದರೆ ಆತನು ನೇಮಕವಾದ ಸಮಯಕ್ಕೆ ಮುಂಚೆ ಸಾಯಲಾಗದು.

## ಯೆಹೂದ್ಯರು ತಮ್ಮ ಅಪನಂಬಿಕೆಯಲ್ಲಿ ಮುಂದುವರೆಯುತ್ತಾರೆ (12:37-50)

**37-38** ಒಬ್ಬ ಯೆಹೂದ್ಯನಾದ ಯೇಸು ಇಸ್ರಾಯೇಲರ ಮೆಸ್ಸೀಯನಾಗಿರಲು ಬಂದಿದ್ದನು. ಆದಾಗ್ಯು ಸ್ವತಃ ಯೆಹೂದ್ಯರೇ ಆತನನ್ನು ತಿರಸ್ಕರಿಸಿದ್ದರು. ಇದು ಹೇಗೆ ಸಾಧ್ಯ? ಹಳೆ ಒಡಂಬಡಿಕೆಯ ಪ್ರವಾದನೆಗಳು ನೆರವೇರುವದಕ್ಕಾಗಿ ಇದೆಲ್ಲಾ ನಡೆಯಿತೆಂದು ಯೋಹಾನನು ತಿಳಿಸುತ್ತಾನೆ. ಪ್ರವಾದಿಯಾದ ಯೆಶಾಯನು ಹೀಗೆ ಬರೆದನು. ನಮ್ಮ ಉಪದೇಶವನ್ನು ಯಾರು ನಂಬಿದರು? ಯಾರೂ ಇಲ್ಲ. ಕರ್ತನ ಬಾಹುವು (ಅಂದರೆ ಕ್ರಿಸ್ತನ ಮಹತ್ಕಾರ್ಯಗಳು) ಯಾರಿಗೆ ಗೋಚರವಾಯಿತು? (ಯೆಶಾಯ 53:1). ಕ್ರಿಸ್ತನು ಮಹತ್ಕಾರ್ಯಗಳನ್ನು ಮಾಡಿದನು, ಆದರೆ ಯೆಹೂದ್ಯರು ಅವು ಗಳಲ್ಲಿ ಕರ್ತನ ಬಾಹುವನ್ನು ಕಾಣಲಿಲ್ಲ. ಕ್ರಿಸ್ತನು ಗೋಚರವಾದನು, ಆದರೆ ಅವರು ಆತನನ್ನು ಗುರುತಿಸಲಿಲ್ಲ.

**39-40** ದೇವರು ಯೆಹೂದ್ಯರ ಕಣ್ಣುಗಳನ್ನು ಕುರುಡುಮಾಡಿ ಅವರ ಹೃದಯಗಳನ್ನು ಕಠಿಣಮಾಡಿದ್ದರಿಂದ ಅವರು ನಂಬಲಾಗಲಿಲ್ಲ ಎಂದು ಯೋಹಾನನು ಹೇಳುತ್ತಾನೆ. ಆದರೆ ಪ್ರಾರಂಭದಲ್ಲಿ ದೇವರು ಅವರನ್ನು ಕುರುಡು ಮಾಡಲಿಲ್ಲ. ಅವರು ಮೊದಲು ದೇವರ ಪ್ರವಾದಿಗಳನ್ನು ತಿರಸ್ಕರಿಸುವವರಾದರು. ದೇವರಿಂದ ವಿಮುಖರಾಗಲಿಚ್ಚಿಸಿದರು. ದೇವರು ಅವರನ್ನು ಹೃದಯದ ಕಾಠಿಣ್ಯತೆ ಹಾಗು ಅಪನಂಬಿಕೆಗಳಿಗೆ ಒಪ್ಪಿಸಿಕೊಟ್ಟದ್ದು ಅವರ ಪಾಪ ಹಾಗು ಅವಿಧೇಯತೆಗಳ ಫಲಿತವೇ ಆಗಿದೆ. ಆದರ ನಂತರ ಅವರು ನಂಬಲಾಗಲಿಲ್ಲ. ಯಾವ ವ್ಯಕ್ತಿಯು ದೇವರಿಗೆ "ನಾನು ನಂಬುವದಿಲ್ಲ" ಎಂದು ಹೇಳುವನೋ ಶೀಘ್ರವೇ ಅವನು ತಾನು ನಂಬಲು ಅಸಮರ್ಥನೆಂಬದನ್ನು ಕಂಡುಕೊಳ್ಳುತ್ತಾನೆ (ರೋಮ 1:24, 26, 28 ಮತ್ತು ವ್ಯಾಖ್ಯಾನ ನೋಡಿರಿ).

ಯೋಹಾನನು ಇಲ್ಲಿ ಯೆಶಾಯ 6:10 ರಿಂದ ಉಲ್ಲೇಖಿಸುತ್ತಾನೆ. ಇದೇ ವಾಕ್ಯಭಾಗವನ್ನು ಮತ್ತಾಯ, ಮಾರ್ಕ ಹಾಗು ಲೂಕರು ಸ್ವಲ್ಪ ವ್ಯಾತ್ಯಾಸವಾದ ರೂಪದಲ್ಲಿ ಉಲ್ಲೇಖಿಸಿರುತ್ತಾರೆ ಆದರೆ ಅರ್ಥವು ಒಂದೇ ಆಗಿದೆ (ಮತ್ತಾಯ 13:14-15, ಮಾರ್ಕ 4:12, ಅ.ಕೃತ್ಯ 28:26-27 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಯೆಹೂದ್ಯರು ಯೇಸುವನ್ನು ತಿರಸ್ಕರಿಸುವರೆಂಬದು ದೇವರಿಗೆ ಗೊತ್ತಿತ್ತು. ಭವಿಷ್ಯತ್ತಿನಲ್ಲಿ ನಡೆಯುವ ಎಲ್ಲವನ್ನೂ ಆತನು ಬಲ್ಲವನಾಗಿದ್ದಾನೆ. ಯಾರು ಕ್ರಿಸ್ತನನ್ನು ಅಂಗೀಕರಿಸುವರು ಹಾಗು ಯಾರ್ಯಾರು ಕ್ರಿಸ್ತನನ್ನು ತಿರಸ್ಕರಿಸುವರು ಎಂಬದನ್ನು ಬಲ್ಲವನಾಗಿದ್ದಾನೆ. ದೇವರು ಮುಂಚಿತವಾಗಿಯೇ ಪ್ರತಿಯೊಬ್ಬ ವ್ಯಕ್ತಿಯು ಏನು ಮಾಡುವನೆಂಬದನ್ನು ತಿಳಿದಿದ್ದನಾದರೂ ಪ್ರತಿಯೊಬ್ಬನು ತನ್ನ ಇಷ್ಟದಂತೆ ಮಾಡುವ ಸ್ವಾತಂತ್ರ ಆಗಲೂ ಇರುತ್ತದೆ. ಒಬ್ಬನು ಕ್ರಿಸ್ತನನ್ನು ತಿರಸ್ಕರಿಸುವದಾದರೆ ಅವನು ತನ್ನ ಸ್ವಂತ ಆಯ್ಕೆಯ ಮೇರೆಗೆ ಅದನ್ನು ಮಾಡುತ್ತಾನೆ. ಅದಕ್ಕೆ ಅತನೇ ಜವಾಬ್ದಾರನಾಗಿದ್ದಾನೆ. ಅವನು ದೇವರ ಮೇಲೆ ತಪ್ಪು ಹೊರಿಸಲುಸಾಧ್ಯವಿಲ್ಲ (ರೋಮ 9:14-21 ಹಾಗು ವ್ಯಾಖ್ಯಾನ , ಸಾಮಾನ್ಯಬರಹ) ರಕ್ಷಣೆ – ದೇವರ ಆಯ್ಕೆಯೋ ಅಥವಾ ಮಾನವನ ಆಯ್ಕೆಯೋ? ನೋಡಿರಿ).

**41** ಯೆಶಾಯನು ಈ ಪ್ರವಾದನೆಯನ್ನು ಬರೆದಾಗ ಆತನು ಮೆಸ್ಸೀಯನ ಮಹಿಮೆಯ ಕುರಿತಾಗಿ ಬರೆಯುತ್ತಿದ್ದನು. ಆತ್ಮೀಕ ರೀತಿಯಲ್ಲಿ ಆತನು ಭವಿಷ್ಯತ್ತಿನಲ್ಲಿ ಕ್ರಿಸ್ತನ ಮಹಿಮೆಯನ್ನು ಕಂಡನು, ಹಾಗು ಯೆಹೂದ್ಯರು ಆ ಮಹಿಮೆಯನ್ನು ತಿರಸ್ಕರಿಸುವರೆಂದು ಬಲ್ಲವನಾಗಿದ್ದನು.

**42-43** ಆದರೆ ಕೆಲವು ಯೆಹೂದಿ ನಾಯಕರನ್ನೊಳಗೊಂಡು ಯೆಹೂದ್ಯರಲ್ಲಿ ಅನೇಕರು ಕ್ರಿಸ್ತನ ಮಹಿಮೆಯನ್ನು ತಿರಸ್ಕರಿಸಲಿಲ್ಲ. ಯೆಹೂದ್ಯ ನಾಯಕರಲ್ಲಿ ಯಾರೂ ಯೇಸುವನ್ನು ನಂಬಲಿಲ್ಲವೆಂದು ಫರಿಸಾಯರು ನೆನಸಿದರು (ಯೋಹಾನ 7:48). ಆದರೆ ಅನೇಕರು ರಹಷ್ಯವಾಗಿ ಆತನಲ್ಲಿ ನಂಬಿಕೆಯಿಟ್ಟರೆಂದು ಯೋಹಾನನು ಇಲ್ಲಿ ತಿಳಿಸುತ್ತಾನೆ. ಹೊಸ ಒಡಂಬಡಿಕೆಯಲ್ಲಿ ಅವರೊಳಗೆ ಇಬ್ಬರ ಹೆಸರುಗಳನ್ನು ಮಾತ್ರವೇ ಪ್ರಸ್ತಾಪಿಸಲಾಗಿದೆ, ನಿಕೊದೇಮ ಹಾಗು ಅರಿಮತ್ತಾಯದ ಯೋಸೇಫ (ಯೋಹಾನ 3:1, 19:38-39). ಇತರ ಯೆಹೂದ್ಯನಾಯಕರು ನಿಜವಾದ ನಂಬಿಕೆಯನ್ನು ಹೊಂದಿದ್ದರೋ ಎಂಬದು ಸಂಶಯಾತ್ಮಕವಾಗಿದೆ. ಯಾಕೆಂದರೆ ಅವರು ತಮ್ಮ ನಂಬಿಕೆಯನ್ನು ಜನರ ಮುಂದೆ ಹೇಳಲಿಲ್ಲ ಎಂದು ಯೋಹಾನನು ಹೇಳುತ್ತಾನೆ. ಮನುಷ್ಯರು ಏನಂದು ಕೊಳ್ಳವರೋ ಎಂಬ ಹೆದರಿಕೆಯಿಂದ ಕ್ರಿಸ್ತನನ್ನು ಅರಿಕೆಮಾಡಲು ನಿರಾಕರಿಸುವ ವ್ಯಕ್ತಿಯು ಸಾಮಾನ್ಯವಾಗಿ ನಿಜ ನಂಬಿಕೆಯನ್ನು ಹೊಂದಿರುವದಿಲ್ಲ (ಮತ್ತಾಯ 10:32-33 ಹಾಗು ವ್ಯಾಖ್ಯಾನ ನೋಡಿರಿ).

ನಂತರ 43ನೇ ವಚನದಲ್ಲಿ ಅವರು ತಮ್ಮ ನಂಬಕೆಯನ್ನು ಏಕೆ ಅರಿಕೆ ಮಾಡಲಿಲ್ಲ ಎಂಬುದಕ್ಕೆ ಯೋಹಾನನು ಕಾರಣವನ್ನು ಕೊಡುತ್ತಾನೆ : ದೇವರಿಂದ ಬರುವ ಮಾನಕ್ಕಿಂತ ಮನುಷ್ಯರಿಂದ ಬರುವ ಮಾನವೇ ಅವರಿಗೆ ಇಷ್ಟವಾಗಿತ್ತು. ಅವರು ತಾವು ಕ್ರಿಸ್ತನನ್ನು ನಂಬಿ ಆತನ ಸೇವೆಮಾಡುವದಾದರೆ ದೇವರಿಂದ ಮಾನವನ್ನೂ, ಪ್ರಶಂಸೆಯನ್ನು ಸ್ವೀಕರಿಸುವರೆಂಬದು ಅವರಿಗೆ ಗೊತ್ತಿತ್ತು (ವಚನ 26). ಹಾಗಿದ್ದರೂ, ಅವರು ದೇವರಿಂದಾಗುವ ಮಾನಕ್ಕಿಂತ ಮನುಷ್ಯರಿಂದ ಬರುವ ಮಾನವನ್ನೇ ಇಷ್ಟಪಟ್ಟರು (ಯೋಹಾನ 44 ನೋಡಿರಿ). ಅವರು ಸಭಾಮಂದಿರದಿಂದ ಬಹಿಷ್ಕಾರಕ್ಕೊಳಗಾಗುವ ಗಂಡಾಂತರವನ್ನು ಎದುರಿಸಲು ಬಯಸಲಿಲ್ಲ ಯಾಕೆಂದರೆ ಯೆಹೂದ್ಯನೊಬ್ಬನಿಗೆ ಸಭಾಮಂದಿರದಿಂದ ಬಹಿಷ್ಕಾರ ಹೊಂದುವದು ಒಂದು ದೊಡ್ಡ ಅವಮಾನವಾಗಿತ್ತು (ಯೋಹಾನ 9:22 ನೋಡಿರಿ).

**44** ಯೋಹಾನನು 44-50 ವಚನಗಳಲ್ಲಿ ದಾಖಲಿಸಿರುವ ಯೇಸುವಿನ ಈ ಮಾತುಗಳು ಸಾರ್ವಜನಿಕರಿಗೆ ಆತನು ಹೇಳಿದ ಕೊನೆಯ ಮಾತುಗಳಾಗಿವೆ. ಈ ವಚನಗಳಲ್ಲಿ ಯೇಸು ಎಲ್ಲಾ ಜನರಿಗೆ ತನ್ನಲ್ಲಿ ನಂಬಿಕೆಯಿಡುವಂತೆ ಅಂತಿಮ ಕರೆಯನ್ನು ಕೊಡುತ್ತಾನೆ.

ಯೋಹಾನನ ಸುವಾರ್ತೆಯುದ್ದಕ್ಕೂ ಯೇಸು ದೇವರೊಂದಿಗಿನ ತನ್ನ ಐಕ್ಯತೆಯ ಬಗ್ಗೆ ಮಾತಾಡಿದ್ದಾನೆ. ಯೇಸುವನ್ನು ಘನಪಡಿಸುವವನು ದೇವರನ್ನೇ ಘನಪಡಿಸುತ್ತಾನೆ (ಯೋಹಾನ 5:23). ಯೇಸುವನ್ನು ನೋಡಿದವನು ದೇವರನ್ನೇ ನೋಡಿದವನಾಗಿದ್ದಾನೆ (ಯೋಹಾನ 14:9). ಯೇಸುವನ್ನು ಹಗೆ ಮಾಡುವವನು ದೇವರನ್ನೇ ಹಗೆ ಮಾಡುವವನಾಗಿದ್ದಾನೆ. (ಯೋಹಾನ 15:23) ಯೇಸುವನ್ನು ಸ್ವೀಕರಿಸುವವನು ದೇವರನ್ನೇ ಸ್ವೀಕರಿಸುವನು (ಮತ್ತಾಯ 10:40, ಮಾಕ 9:37, ಯೋಹಾನ 13:20) ಮತ್ತು ಯೇಸು ಇಲ್ಲಿ ನನ್ನನ್ನು ನಂಬಿದವನು ದೇವರನ್ನು ಸಹ ನಂಬಿದವನಾಗಿದ್ದಾನೆಂದು ಹೇಳುತ್ತಾನೆ.

**45** ಇಲ್ಲಿ ಯೇಸು ೪೪ನೇ ವಚನದ ವಿಚಾರವನ್ನು ಪುನರಾವರ್ತಿಸುತ್ತಾನೆ. ನಾವು ನಂಬಿಕೆಯ ಕಣ್ಣುಗಳ ಮೂಲಕ ಯೇಸುವನ್ನು ದೃಷ್ಠಿಸುವಾಗ ನಾವು ಕೇವಲ ಒಬ್ಬ ಮನುಷ್ಯನನ್ನು ನೋಡದೆ ಸ್ವತಃ ದೇವರನ್ನೇ ನೋಡುವವರಾಗಿದ್ದೇವೆ.

**46** (ಯೋಹಾನ 8:12 ಮತ್ತು ವ್ಯಾಖ್ಯಾನ ನೋಡಿರಿ).

**47** ಯೇಸುವಿನ ಮಾತುಗಳನ್ನು ಕೇಳಿಯೂ ಅವುಗಳನ್ನು ತಿರಸ್ಕರಿಸುವವನು ತೀರ್ಪಿಗೆ ಗುರಿಯಾಗುವನು. ಈ ಜೀವನದಲ್ಲಿ ಸ್ವತಃ ಯೇಸು ಮಾನವರಿಗೆ ತೀರ್ಪು ಮಾಡುವದಿಲ್ಲ. ಆತನು ಲೋಕಕ್ಕೆ ತೀರ್ಪು ಮಾಡುವದಕ್ಕಾಗಿ ಬರಲಿಲ್ಲ. ಆದರೆ ರಕ್ಷಿಸಲು ಬಂದನು (ಯೋಹಾನ 3:17-18 ಹಾಗು ವ್ಯಾಖ್ಯಾನ ನೋಡಿರಿ).

**48** ಹೇಗಿದ್ದರೂ, ಕಡೇ ದಿನದಲ್ಲಿ ಅಂದರೆ ಲೋಕದ ಅಂತ್ಯದಲ್ಲಿ ಯೇಸು ನಮ್ಮ ನ್ಯಾಯಾಧಿಪತಿಯಾಗಿರುತ್ತಾನೆ (ಯೋಹಾನ 5:22,27 ನೋಡಿರಿ). ಆದರೆ ಆಗಲೂ ಸಹ ಯೇಸು ತಾನೇ ಆತನ ಮಾತುಗಳನ್ನು ತಿರಸ್ಕರಿಸುವವನಿಗೆ ತೀರ್ಪು ಮಾಡುವವು. ಮತ್ತು ಕಡೇ ದಿನದಲ್ಲಿ ನ್ಯಾಯಾಧಿಪತಿಯು (ಯೇಸುವಿನ ಮಾತುಗಳು) ಆವ್ಯಕ್ತಿಗೆ ಹೇಳುವದೇನೆಂದರೆಃ ರಕ್ಷಣೆಯ ಮಾತುಗಳು ನಿನ್ನ ಬಳಿಗೆ ಬಂದಾಗ್ಯು ನೀನು ಅದನ್ನು ತಿರಸ್ಕರಿಸಿದ್ದಿ, "ನೀನು ಪರಲೋಕವನ್ನು ಪ್ರವೇಶಿಸಲಾರಿ".

ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆಃ ತನ್ನ ಜೀವಿತ ಕಾಲದಲ್ಲೆಲ್ಲಾ ದೇವರವಾಕ್ಯವನ್ನು ಎಂದಿಗೂ ಕೇಳಿರದ ವ್ಯಕ್ತಿಗೆ ಏನಾಗುತ್ತದೆ? ಆ ವ್ಯಕ್ತಿಯು ದೇವರ ವಾಕ್ಯಕನುಸಾರವಾಗಿ ತೀರ್ಪು ಹೊಂದುವದಿಲ್ಲ. ಅದಕ್ಕೆ ಬದಲಾಗಿ ಅವನು ದೇವರಿಂದ ಸ್ವೀಕರಿಸಿದ ಆತ್ಮೀಕ ಬೆಳಕು ಮತ್ತು ತಿಳುವಳಿಕೆಗೆ ಅನುಸಾರವಾಗಿ ಅವನಿಗೆ ನ್ಯಾಯತೀರ್ಪಾಗುವದು (ಲೂಕ 12:47-48, ರೋಮ 1:18-20 ಹಾಗು ವ್ಯಾಖ್ಯಾನಗಳನ್ನು ನೋಡಿರಿ).

**49** ಯೇಸುವಿನ ಮಾತು ಅರ್ಹವಾದ "ನ್ಯಾಯಾಧಿಪತಿ: ಆಗಿದೆ. ಯಾಕೆಂದರೆ ವಾಸ್ತವದಲ್ಲಿ ಅದು ದೇವರ ವಾಕ್ಯವೇ ಆಗಿದೆ. ಯೇಸು ಮಾತಾಡಿದ್ದೆಲ್ಲವೂ ಸರಿಯಾಗಿ ತಂದೆಯು ಆಜ್ಞಾಪಿಸಿದ್ದೇ ಆಗಿತ್ತು. ಒಬ್ಬ ವ್ಯಕ್ತಿಯು ಯೇಸುವಿನ ಮಾತಿನಿಂದ ತೀರ್ಪು ಮಾಡುವಾಗ ಸ್ವತಃ ದೇವರಿಂದ ತೀರ್ಪು ಹೊಂದಿದ ಹಾಗೆಯೇ ಆಗಿರುತ್ತದೆ. (ಯೋಹಾನ 5:30, 8:16 ಮತ್ತು ವ್ಯಾಖ್ಯಾನ ನೋಡಿರಿ).

**50** ಯೇಸು ದೇವರ ಆಜ್ಞೆಗನುಸಾರವಾಗಿಯೇ ಮಾತಾಡಿದನು (ವಚನ 49). ದೇವರ ಆಜ್ಞೆಯು ಕಠೋರವಲ್ಲ. ಅದು ತನ್ನನ್ನು ನಂಬಿ ವಿಧೇಯರಾಗುವವರಿಗೆಲ್ಲಾ ನಿತ್ಯಜೀವದ ವಾಗ್ದಾನ ಮಾಡುತ್ತದೆ. ಮೋಶೆಯು ತನ್ನ ಅವಸಾನ ಕಾಲದಲ್ಲಿ ಯೆಹೂದ್ಯರಿಗೆ ಹೀಗೆ ಹೇಳುತ್ತಾನೆ:ನಾನು ಜೀವಮರಣಗಳನ್ನು... ಈಗ ನಿಮ್ಮ ಮುಂದೆ ಇಟ್ಟಿದ್ದೇನೆ. ನೀವೂ ನಿಮ್ಮ ಸಂತತಿಯವರೂ ಬದುಕಿಕೊಳ್ಳುವಂತೆ ಜೀವವನ್ನೇ ಆದುಕೊಳ್ಳಿರಿ (ಧರ್ಮೋಪದೇಶಕಾಂಡ 30:19). ಈ ದಿನ ಯೇಸು ಪ್ರತಿಯೊಬ್ಬ ಸ್ತ್ರೀ ಹಾಗು ಪುರುಷನಿಗೆ ಇದನ್ನೇ ಹೇಳುತ್ತಾನೆ.

---

## ಅಧ್ಯಾಯ - 13

### ಯೇಸು ತನ್ನ ಶಿಷ್ಯರ ಪಾದಗಳನ್ನು ತೊಳೆದದ್ದು (13:1-17)

1 ಯೋಹಾನನು 13ರಿಂದ 17 ಅಧ್ಯಾಯಗಳಲ್ಲಿ ಯೇಸು ತನ್ನ ಶಿಷ್ಯರೊಂದಿಗೆ ಮಾಡಿದ ಕೊನೆಯ ಭೋಜನ ಹಾಗು ಊಟಕ್ಕೆ ಮುಂಚೆ ಮತ್ತು ಅನಂತರ ಯೇಸು ಅವರಿಗೆ ನೀಡಿದ ಬೋಧನೆಗಳನ್ನು ಬಣ್ಣಿಸುತ್ತಾನೆ. ಇದು ಪಸ್ಕ ಹಬ್ಬದ ಊಟವಾಗಿದ್ದು ಮಾರ್ಕ 14:12-26 ರಲ್ಲಿ ವರ್ಣಿಸಲ್ಪಟ್ಟಿದೆ.

13ನೇ ಅಧ್ಯಾಯದ ಮೊದಲನೆಯ ವಚನದಲ್ಲಿ ಯೇಸು ತಾನು ಸಾಯಬೇಕಾದ ಸಮಯ ಬಂದಿದೆ ಮತ್ತು ಶೀಘ್ರವೇ ತಾನು ಪುನ: ತಂದೆಯ ಬಳಿಗೆ ಹಿಂದಿರುಗುವವನೆಂದು ಬಲ್ಲವನಾಗಿದ್ದನೆಂಬದಾಗಿ ಯೋಹಾನನು ನಮಗೆ ತಿಳಿಸುತ್ತಾನೆ (ವಚನ 3).ಆತನು ಲೋಕದಲ್ಲಿರುವ ತನ್ನವರನ್ನು ಅಂದರೆ ಆತನ ಶಿಷ್ಯರನ್ನು ಪ್ರೀತಿಸಿದ್ದನು. ಈಗ ಅವನು ತನ್ನ ಮರಣದ ಮೂಲಕವಾಗಿ ತನ್ನ ಪರಿಪೂರ್ಣ ಪ್ರೀತಿಯನ್ನು [99] ತೋರಿಸಲಿದ್ದನು. ಅಂದರೆ ತಾನು ಅವರನ್ನು ಪರಿಪೂರ್ಣವಾಗಿ (ಮಿತಿಯಿಲ್ಲದೆ) ಪೀತಿಸಿದನೆಂಬದನ್ನು ಅವರಿಗೆ ತೋರಿಸಲಿಕ್ಕಿದ್ದನು.

**2** ಯೂದನು ಈಗಾಗಲೇ ಯೆಹೂದ್ಯನಾಯಕರೊಂದಿಗೆ ಯೇಸುವನ್ನು ಹಿಡುಕೊಡುತ್ತೇನೆಂಬ ಒಪ್ಪಂದ ಮಾಡಿಕೊಂಡಿದ್ದನು. ಆದುದರಿಂದ ಅವನು ಯೇಸುವನ್ನು ಅವರ ಕೈಗೊಪ್ಪಿಸಲು ಅವಕಾಶವನ್ನು ಹುಡುಕುತ್ತಿದ್ದನು (ಮಾರ್ಕ 14:10-11).

**3** ಯೇಸು ಹಿಡುಕೊಡಲ್ಪಟ್ಟು ಕೊಲ್ಲಲ್ಪಡುವದರಲ್ಲಿದ್ದಾಗ್ಯು, ದೇವರು ಎಲ್ಲವನ್ನೂ ಆತನ ಅಧಿಕಾರಕ್ಕೆ ಒಪ್ಪಿಸಿದ್ದಾನೆಂಬದನ್ನು ಆತನು ಬಲ್ಲವನಾಗಿದ್ದನು (ಯೋಹಾನ 3:35, 17:2 ಹಾಗು ವ್ಯಾಖ್ಯಾನಗಳನ್ನು ನೋಡಿರಿ). ಆತನು ದೇವರ ಮಗನಾಗಿದ್ದನು, ಆತನು ದೇವರ ಬಳಿಯಿಂದ ಬಂದವನು ಮತ್ತು ಪುನಃ ದೇವರ ಬಳಿಗೆ ಹೋಗುವವನಾಗಿದ್ದನು (ಯೋಹಾನ 16:28). ಆತನು ದೇವರ ಪೂರ್ಣ ಅಧಿಕಾರವನ್ನು ಹೊಂದಿದ್ದನು. ಅದಾಗ್ಯು ಆತನು ಈಗ ಒಬ್ಬ ದಾಸನ ಕೆಲಸವನ್ನು ಮಾಡಲಿಕ್ಕಿದ್ದನು : ಆತನು ತನ್ನ ಶಿಷ್ಯರ ಪಾದಗಳನ್ನು ತೊಳೆಯಲಿದ್ದನು.

**4-5** ಕಡೆಯ ರಾತ್ರಿಭೋಜನದ ವೇಳೆಯಲ್ಲಿ ಯೇಸುವಿನ ಶಿಷ್ಯರು ತಮ್ಮೊಳಗೆ ಯಾರು ಹೆಚ್ಚಿನವರೆಂಬದರ ಬಗ್ಗೆ ವಾಗ್ವಾದ ಮಾಡುತ್ತಿದ್ದರೆಂದು ಲೂಕನು ಬರೆದಿರುತ್ತಾನೆ. (ಲೂಕ 22:24) ಆದ್ದರಿಂದ ಯೇಸು ತಾನೇ ಮಾದರಿಯಾಗಿ

ಅವರು ಒಡೆಯನಾಗಬೇಕೆಂದು ಬಯಸುವದರ ಬದಲಾಗಿ ಸೇವಕರಾಗಿರಲು ಅಪೇಕ್ಷಿಸಬೇಕೆಂದು ಅವರಿಗೆ ತೋರಿಸಿಕೊಟ್ಟನು. ಆತನು ಅವರಿಗೆ "ನಾನು ನಿಮ್ಮಲ್ಲಿ ಸೇವೆಮಾಡುವವನಂತಿದ್ದೇನೆ."(ಲೂಕ 22:27).

ಬಳಿಕ ತಾನು ಸೇವೆ ಮಾಡಿಸಿಕೊಳ್ಳುವದಕ್ಕೆ ಬರದೆ ಸೇವೆಮಾಡುವದಕ್ಕೆ ಬಂದಿದ್ದಾನೆಂಬದನ್ನು ಅವರಿಗೆ ತೋರಿಸಲು (ಮಾರ್ಕ 10:45), ಆತನು ಅವರ ಪಾದಗಳನ್ನು ತೊಳೆದನು. ಆತನು ಒಬ್ಬ ದಾಸನರೂಪವನ್ನು ಧರಿಸಿದನು. (ಪಿಲಿಪ್ಪಿ 2:5-7 ಮತ್ತು ವ್ಯಾಖ್ಯಾನ ನೋಡಿರಿ.).

ಯೇಹೂದ್ಯರ ಪದ್ಧತಿಯ ಪ್ರಕಾರವಾಗಿ ಅತಿ ಕೀಳಾದ ಸೇವಕನು ಸಹ ತನ್ನ ಯಜಮಾನನ ಕೆರಗಳನ್ನು ಬಿಚ್ಚುತ್ತಿರಲಿಲ್ಲ, ಹೀಗೆ ಯೇಸು ತನ್ನ ಶಿಷ್ಯರಿಗೆ ಅತಿ ತುಚ್ಚ ರೀತಿಯ ಸೇವೆಯನ್ನು ಮಾಡುತ್ತಿದ್ದಾನೆ.

**6-7** ಯೇಸು ಶಿಷ್ಯರ ಪಾದಗಳನ್ನು ತೊಳೆಯುತ್ತಿದ್ದಾನೆಂಬದಕಾರಣವನ್ನು ಪೇತ್ರನು ನಿಜವಾಗಿಯೂ ಅರ್ಥಮಾಡಿಕೊಳ್ಳಲಿಲ್ಲ. ಪೇತ್ರನು ಅನಂತರ ಅದನ್ನು ಅರ್ಥ ಮಾಡಿಕೊಳ್ಳುವನೆಂದು ಅಂದರೆ ತಾನು ಕಾರಣವನ್ನು ವಿವರಿಸಿದ ನಂತರ ಅರ್ಥಮಾಡಿಕೊಳ್ಳುವನೆಂದು ಯೇಸು ಅವನಿಗೆ ಹೇಳುತ್ತಾನೆ (ವಚನಗಳು 14-15). ಅನಂತರ ಎಂಬದು "ಯೇಸುವಿನ ಮರಣ ಹಾಗು ಪು ನರುತ್ಥಾನದ ನಂತರ" ಎಂಬ ಅರ್ಥವನ್ನು ಸಹ ಕೊಡಬಲ್ಲದು. ಕಾರಣ ಆ ಸಮಯದಲ್ಲಿ ಪವಿತ್ರಾತ್ಮನು ಶಿಷ್ಯರಿಗೆ ಎಲ್ಲಾ ಸಂಗತಿಗಳನ್ನು ಬೋಧಿಸಿ ಸತ್ಯಕ್ಕೆ ನಡಿಸುವನು (ಯೋಹಾನ 14:26, 16:13). ಆಗ ಶಿಷ್ಯರು ಯೇಸುವಿನ ಎಲ್ಲಾ ಕ್ರಿಯ ಹಾಗು ಬೋಧನೆಗಳ ಅರ್ಥವನ್ನು ಗ್ರಹಿಸಿಕೊಳ್ಳುವರು.

**8** ಯೇಸು ಪೇತ್ರನ ಪಾದಗಳನ್ನು ತೊಳೆಯಬೇಕೆಂದಿದ್ದಾಗ ಪೇತ್ರನು ನಿರಾಕರಿಸಿದನು. ತನ್ನ ಒಡೆಯನೂ ಹಾಗು ಬೋಧಕನು ಒಬ್ಬ ದಾಸನಾಗಿ ವರ್ತಿಸುವದು ತಪ್ಪೆಂದು ಪೇತ್ರನಿಗೆ ಅನಿಸಿತು. ಅದಕ್ಕೆ ಬದಲಾಗಿ ಪೇತ್ರನು ಸ್ವತಃ ಯೇಸುವಿನ ಪಾದಗಳನ್ನು ಸಂತೋಷವಾಗಿ ತೊಳೆದಿರುತ್ತಿದ್ದನು.

ಆದರೆ ಯೇಸು ಪೇತ್ರನಿಗೆ "ನಾನು ನಿನ್ನನ್ನು ತೊಳೆಯದಿದ್ದರೆ ನನ್ನ ಸಂಗಡ ನಿನಗೆ ಪಾಲಿಲ್ಲ "ಎಂದು ಹೇಳಿದನು.ಯೇಸು ತನ್ನ ಶಿಷ್ಯರ ಪಾದಗಳನ್ನು ತೊಳೆಯುವದು ಆತನು ಅವರ ಪಾಪಗಳನ್ನು ತೊಳೆಯುವ ಸಂಕೇತವಾಗಿತ್ತು, ಯಾರ್‍ಯಾರು ತಮ್ಮ ಪಾಪಗಳಿಗೆ ಕ್ಷಮೆಹೊಂದಿ ತೊಳೆಯಲ್ಪಟ್ಟಿರುತ್ತಾರೋ ಅವರು ಮಾತ್ರವೇ ಯೇಸುವಿನೊಂದಿಗೆ ಅಂದರೆ ಆತನ ರಾಜ್ಯದಲ್ಲಿ ಪಾಲನ್ನು ಹೊಂದಬಲ್ಲರು.

**9** ಪೇತ್ರನು ತಕ್ಷಣವೇ ತನ್ನ ಮನಸ್ಸನ್ನು ಬದಲಾಯಿಸಿಕೊಂಡನು. ಆತನು ಕ್ರಿಸ್ತನ ರಾಜ್ಯದಿಂದ ಹೊರಗೆ ಉಳಿಯಲು ಬಯಸಲಿಲ್ಲ. ಆದ್ದರಿಂದ ಅವನು ತನ್ನ ಕೈಗಳನ್ನೂ ತಲೆಯನ್ನು ಸಹ ತೊಳೆಯಬೇಕೆಂದು ಯೇಸುವಿಗೆ ಕೇಳಿಕೊಂಡನು.

**10** ಆಗ ಯೇಸು ಪೇತ್ರನಿಗೆ ಅವನ ಪಾದಗಳು ಮಾತ್ರವೇ ತೊಳೆಯಲ್ಪಡುವ ಅಗತ್ಯವಿದೆಯೆಂಬದಾಗಿ ಹೇಳುತ್ತಾನೆ. ಪೇತ್ರನು ಈಗಾಗಲೆ ಸ್ನಾನ ಮಾಡಿದ್ದನು. ಪೇತ್ರನು ಈಗಾಗಲೇ ದೀಕ್ಷಾಸ್ನಾನ ಹೊಂದಿದ್ದಾನೆ ಹಾಗು ಅವನ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂಬದು ಯೇಸುವಿನ ಮಾತುಗಳ ತಾತ್ಪರ್ಯವಾಗಿತ್ತು. ಅವನ ಶರೀರವೆಲ್ಲಾ ಶುದ್ಧವಾಗಿತ್ತು. ಅಂದರೆ ಆತನ ಹೃದಯ, ಮನಸ್ಸು ಹಾಗು ಆತ್ಮಗಳೆಲ್ಲವೂ ಶುದ್ದ ವಾಗಿದ್ದವು . ಒಮ್ಮೆ ಒಬ್ಬ ವ್ಯಕ್ತಿಯು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಪಾಪಗಳಿಂದ ತೊಳೆಯಲ್ಪಟ್ಟ ಮೇಲೆ ಅವನು ಪು ನಃ ಅದೇ ಪಾಪಗಳಿಂದ ತೊಳೆಯಲ್ಪಡುವ ಅಗತ್ಯವಿಲ್ಲ (ಯೋಹಾನ 15:3 ನೋಡಿರಿ).

ಬೈಬಲ್ ಕಾಲದಲ್ಲಿ ಮದ್ಯಪೂರ್ವಾತ್ಯದ ಜನಾಂಗಗಲ್ಲಿ ಒಬ್ಬ ವ್ಯಕ್ತಿಯು ಭೋಜನಕ್ಕಾಗಿ ತನ್ನ ನೆರೆಯವನ ಮನೆಗೆ ಆಮಂತ್ರಿಸುವದಾದರೆ ಅವನು ನೆರೆಯವನ ಮನೆಗೆ ನಡೆದು ಹೋಗುವದರಿಂದ ಅವನ ಪಾದಗಳು ಹೊಲಸಾಗುತ್ತಿದ್ದವು . ಆದ್ದರಿಂದ ಬೋಜನಕ್ಕೆ ಮುಂಚೆ ಅವನು ತನ್ನ ಪಾದಗಳನ್ನು ತೊಳೆದು ಕೊಳ್ಳುವದಕ್ಕೆ ಅವನ ನೆರೆಯವನು ನೀರನ್ನು ಒದಗಿಸುತ್ತಿದ್ದನು.

ಕ್ರೈಸ್ತರ ವಿಷಯದಲ್ಲಿಯೂ ಇದು ಅನ್ವಯವಾಗುತ್ತದೆ. ನಾವೆಲ್ಲರೂ ಸಹ ಆತ್ಮೀಕ "ಸ್ನಾನ"ವನ್ನು ಹೊಂದಿದ್ದೇವೆ. ಆದರೆ ನಾವು ಲೋಕದೊಳಗೆ ನಡೆದಾಡುತ್ತಿರುವಾಗ ಶೋಧನೆಗಳಲ್ಲಿ ಬೀಳುತ್ತೇವೆ. ನಾವು ಪಾಪ ಮಾಡುತ್ತೇವೆ, ನಾವು ಬಳಲಿದವರಾಗಿ ನಿರಾಶೆಗೊಳ್ಳುತ್ತೇವೆ. ಬೇರೆ ಮಾತುಗಳಲ್ಲಿ ಹೇಳುವದಾದರೆ ನಮ್ಮ ಪಾದಗಳು ಹೊಲಸಾಗುತ್ತವೆ. ಆದುದರಿಂದ, ನಾವು ದಿನನಿತ್ಯವೂ ನಮ್ಮ ಪಾಪಗಳನ್ನು ಅರಿಕೆಮಾಡುವದರ ಮೂಲಕ ಕ್ರಮವಾಗಿ ನಮ್ಮ "ಪಾದಗಳನ್ನು ತೊಳೆದುಕೊಳ್ಳುವದು" ಅಗತ್ಯವಿರುತ್ತದೆ (1 ಯೋಹಾನ 1:9 ಹಾಗು ವ್ಯಾಖ್ಯಾನ ನೋಡಿರಿ). ನಾವು ನಮ್ಮ ಕಾಲುಗಳನ್ನು ಮಾತ್ರವೇ ಅಲ್ಲದೆ ಯೇಸುವಿನ ಮಾದರಿಯನ್ನು ಅನುಸರಿಸಿ ಒಬ್ಬರೊಬ್ಬರ ಪಾದಗಳನ್ನು ಸಹ ತೊಳೆಯಬೇಕು (ವಚನ 14). ನಾವು ಸ್ವತಃ ನಮ್ಮ ಸಹೋದರರನ್ನು ಪವಿತ್ರಗೊಳಿಸಲು ಸಾಧ್ಯವಿಲ್ಲ. ಕ್ರಿಸ್ತನು ಮಾತ್ರವೇ ಪವಿತ್ರಗೊಳಿಸಬಲ್ಲನು. ಆದರೆ ನಾವು ಒಬ್ಬರಿಗೊಬ್ಬರು ಪ್ರಬೋಧಿಸಿ, ಪ್ರೋತ್ಸಾಹ ಮಾಡಬಹುದು ಹಾಗು ಒಬ್ಬರನ್ನೊಬ್ಬರು ಚೇತನ ಗೊಳಿಸಬಹುದು. ಇದು ಪಾದತೊಳೆಯುವದರ ಅರ್ಥವಾಗಿದೆ.

ನಾವು ನೆನಪಿನಲ್ಲಿ ಟ್ಟುಕೊಳ್ಳಬೇಕಾದ ಇನ್ನೊಂದು ಸಂಗತಿಯಿರುತ್ತದೆಃ ಒಬ್ಬ ಸಹೋದರನು ನಮ್ಮ ಪಾದಗಳನ್ನು ತೊಳೆಯಲು ಅನುಮತಿಸುವದಕ್ಕೆ ನಾವು ಸಿದ್ದರಾಗಿರಬೇಕು. ನಾವು ಪೇತ್ರನ ಹಾಗೆ ನಿರಾಕರಿಸಿದಿರೋಣ ನಾವು ದೀನರಾಗಿ ಸೇವೆಯನ್ನು ಪಡೆದುಕೊಳ್ಳಲು ಹಾಗು ನೀಡಲು ಮನಸ್ಸುಳ್ಳವರಾಗಿರಬೇಕು.

11 ಬಳಿಕ ಯೇಸು ತನ್ನ ಶಿಷ್ಯರಿಗೆ "ನಿಮ್ಮಲ್ಲಿ ಒಬ್ಬನನ್ನು ಹೊರತು ಪಡಿಸಿ ಎಲ್ಲರೂ ಶುದ್ದರು" ಎಂದು ಹೇಳಿದನು (ವಚನ 10). ಅವನು ಯೂದನ ಕುರಿತಾಗಿ ಮಾತಾಡುತ್ತಿದ್ದನು. ಯೂದನು ತನ್ನನ್ನು ಹಿಡುಕೊಡುವನೆಂದು ಯೇಸುವಿಗೆ ಗೊತ್ತಿತ್ತು. ಆದರೆ ಯೇಸು ಆ ಸಮಯದಲ್ಲಿ ತನ್ನ ಶಿಷ್ಯರಿಗೆ ತಿಳಿಸಲಿಲ್ಲ. ಆತನು "ನಿಮ್ಮಲ್ಲಿ ಒಬ್ಬನು ಶುದ್ಧನಲ್ಲ" ಎಂದು ಮಾತ್ರವೇ ಹೇಳಿದನು.

12 ತನ್ನ ಎಲ್ಲಾ ಶಿಷ್ಯರ – ಯೂದನ ಪಾದಗಳನ್ನು ಸಹ – ಪಾದಗಳನ್ನು ತೊಳೆದ ನಂತರ ಯೇಸು ತಾನು ಮಾಡಿದ ಕಾರ್ಯದ ಅರ್ಥವನ್ನು ವಿವರಿಸಿದನು.

13-15 ಎಲ್ಲಾ ಒಳ್ಳೇ ಬೋದಕರ ಹಾಗೆ ಯೇಸು ಕೇವಲ ಮಾತಿನಿಂದ ಕಲಿಸದೆ ಮಾದರಿಯ ಮೂಲಕ ಸಹ ಕಲಿಸಿದನು. ಅವರ ಪಾದಗಳನ್ನು ತೊಳೆಯುವ ಮಾದರಿಯ ಮೂಲಕ ಅವರು ಪ್ರೀತಿ ಹಾಗು ದೀನತೆಯಲ್ಲಿ ಒಬ್ಬರಿಗೊಬ್ಬರು ಸೇವೆ ಸಹಾಯ ಮಾಡಬೇಕು ಹಾಗು ಒಬ್ಬರೊಬ್ಬರನ್ನು ಪ್ರೋತ್ಸಾಹಿಸಿಕೊಳ್ಳಬೇಕು. ಪ್ರತಿಯೊಬ್ಬನು ತನ್ನ ಸಹೋದರನನ್ನು ತನಗಿಂತ ಉತ್ತಮನೆಂದು ಎಣಿಸಬೇಕು. (ಫಿಲಿಪ್ಪಿ 2:3 ನೋಡಿರಿ).

ಯೇಸುವಿನ ಕಾಲದಲ್ಲಿ ಒಬ್ಬ ದೀನನನ್ನು ಉದಾಸೀನ ಮಾಡಲಾಗುತ್ತಿತ್ತು. ಅವನನ್ನು ಬಲಹೀನನೆಂದು ಪರಿಗಣಿಸಲಾಗಿತ್ತು,. ಆದರೆ ಯೇಸು ದೀನ ಮನುಷ್ಯನು ವಾಸ್ತವದಲ್ಲಿ ಆತ್ಮೀಕವಾಗಿ ಬಹಳ ಬಲಿಷ್ಟನಾಗಿದ್ದಾನೆಂದು ಕಲಿಸಿದನು. ಅವನು ಮನುಷ್ಯರಿಂದ ಉದಾಸೀನ ಮಾಡಲ್ಪಟ್ಟಿರಬಹುದು, ಆದರೆ ಆತನು ದೇವರ ಗೌರವಕ್ಕೆ ಪಾತ್ರನಾಗುತ್ತಾನೆ.

ಕೆಲವು ಕ್ರೈಸ್ತರು ಯೇಸುವಿನ ಈ ಮಾತುಗಳಿಂದ ನಾವು ನಿಜವಾಗಿಯೂ ಅಕ್ಷರಃ ಸಹ ಆದ ರೀತಿಯಲ್ಲಿ ಒಬ್ಬರೊಬ್ಬರ ಪಾದಗಳನ್ನು ತೊಳೆಯಬೇಕೆಂದು ಅರ್ಥಮಾಡಿಕೊಳ್ಳುತ್ತಾರೆ. ಅವರು ಆಗಾಗ ಪಾದತೊಳೆಯುವ ಆಚಾರಗಳನ್ನು ಏರ್ಪಡಿಸುತ್ತಾರೆ. ಅವರು ತಮ್ಮ ಸಹೋದರನಿಗೆ ಯಾವದೇ ರೀತಿಯ ದೀನ ಸೇವೆಯನ್ನು ಮಾಡಲು ಸಿದ್ದರಾಗಿದ್ದಾರೆಂಬದಕ್ಕೆ ಸಾಕ್ಷಿಯಾಗಿ ಇದನ್ನು ಮಾಡುತ್ತಾರೆ.

16 ಅವರ ಕರ್ತನು ತನ್ನನ್ನು ತಗ್ಗಿಸಿಕೊಂಡಿರುವದಾದರೆ ಶಿಷ್ಯರು ಹಾಗೆಯೇ ಮಾಡಬೇಕು. ಅವರು ಕ್ರಿಸ್ತನಿಗಿಂತ ಉನ್ನತರು ಅಥವಾ ಉತ್ತಮರೇನಲ್ಲ. ಅವರು "ನಾನು ಅಂತಹ ಒಂದು ಗುಲಾಮ ಕೆಲಸವನ್ನು ಮಾಡುವದಿಲ್ಲ " ಎಂದು ಹೇಳಿಕೊಳ್ಳದಿರಲಿ ಕ್ರಿಸ್ತನು ಅದನ್ನು ಮಾಡಿರುವದಾದರೆ ಅವರೂ ಅದನ್ನು ಮಾಡಬಲ್ಲರು. ಶಿಷ್ಯರು ತಮ್ಮ ಕರ್ತನಂತೆ ಹಿಂಸೆ ಪಡಬೇಕಾಗಿರುವ ಹಾಗೆಯೇ ಅವರು ತಮ್ಮ ಕರ್ತನಂತೆ ತಮ್ಮನ್ನು ತಗ್ಗಿಸಿಕೊಳ್ಳಬೇಕಾಗಿರುತ್ತದೆ......ದಣಿಗಿಂತ ಆಳು ದೊಡ್ಡವನಲ್ಲ (ಮತ್ತಾಯ 10:24, ಯೋಹಾನ 15:20, ನೋಡಿರಿ). ದಣಿಯು ಮಾಡುವ ಹಾಗೆಯೇ ಆಳು ಸಹ ಮಾಡಬೇಕು.

ಶಿಷ್ಯರು ತಮ್ಮ ಕರ್ತನಿಂದ ಕಳುಹಿಸಲ್ಪಟ್ಟ ಸಂದೇಶಕರಾಗಿದ್ದರು. ದೇವಕುಮಾರನ ಸಂದೇಷಕರಾಗಿ ನೇಮಕಗೊಳ್ಳುವದು, ಒಂದು ಶ್ರೇಷ್ಟ ಘನತೆಯಾಗಿತ್ತು. ಆದರೆ ಅದು ಮನುಷ್ಯರ ದೃಷ್ಟಿಯಲ್ಲಿ ದೀನತನಕ್ಕೆ ಸಹ ನಡೆಸುತ್ತದೆ.

17 ದೇವರ ಚಿತ್ತವನ್ನು ತಿಳಿಯುವದು ಸಾಕಾಗುವದಿಲ್ಲ. ದೇವರ ಚಿತ್ತವನ್ನು ಮಾಡುವವರು ಮಾತ್ರವೇ ಧನ್ಯರಾಗುವರು (ಲೂಕ 11:28,ಯಾಕೋಬ 1:22,4:17 ನೋಡಿರಿ). ಉದಾಹರಣೆಗೆ ದೀನರಾಗಿರುವದು ಸರಿಯಾದದ್ದು ಎಂದು ನಾವೆಲ್ಲರು ಬಲ್ಲೆವು. ಆದರೆ ಎಷ್ಟು ಸಾರಿ ನಾವು ನಿಜವಾಗಿಯೂ ನಮ್ಮನ್ನು ತಗ್ಗಿಸಿಕೊಳ್ಳುತ್ತೇವೆ?

## ಯೇಸು ತನ್ನನ್ನು ಹಿಡುಕೊಡುವಿಕೆಯನ್ನು ಮುಂತಿಳಿಸಿದ್ದು (13:18-30).

18 ಯೇಸು ತನ್ನ ಶಿಷ್ಯರಿಗೆ ಅವರಲ್ಲಿ ಎಲ್ಲರೂ ಶುದ್ಧರಲ್ಲ ಎಂದು ಹೇಳಿದ್ದಾನೆ (ವಚನ 10).ಅವರಲ್ಲಿ ಪ್ರತಿಯೊಬ್ಬರನ್ನು ಆತನು ಬಲ್ಲವನಾಗಿದ್ದನು. ಯೂದನು ತನ್ನನ್ನು ಹಿಡುಕೊಡುವನೆಂಬದನ್ನು ತಿಳಿದಿದ್ದರು ಆತನು ಅವರೆಲ್ಲರನ್ನು ಆದುಕೊಂಡಿದ್ದನು. ಕೀರ್ತನೆಗಳು 41:9 ರಲ್ಲಿ ಸಂಗಡ ಊಟ ಮಾಡಿದವನೇ ಅಂದರೆ ಯೇಸುವಿನ ನಿಕಟ ಸಹಪಾಠಿಯೊಬ್ಬನು ಆತನನ್ನು ಹಿಡಕೊಡುವನು ಎಂದು ಪ್ರವಾದಿಸಲಾಗಿತ್ತು. ಕುದುರೆಯು ಒದೆಯುವದಕ್ಕಿಂತ ಮುಂಚೆ ತನ್ನ ಹಿಮ್ಮಡಿಯನ್ನು ಮೇಲೆತ್ತುವ ರೀತಿಯಲ್ಲಿಯೇ ಅವನು ಯೇಸುವಿಗೆ "ತನ್ನ ಕಾಲನ್ನು ಅಡ್ಡಗೊಟ್ಟವನು".

ಒಂದು ಪ್ರಶ್ನೆಯು ಉದ್ಭವವಾಗುತ್ತದೆಃ ಯೂದನು ತನ್ನನ್ನು ಹಿಡುಕೊಡುವನೆಂಬುದನ್ನು ಯೇಸು ಪ್ರಾರಂಬದಿಂದಲೇ ತಿಳಿದಿದ್ದಿರುವದಾದರೆ ಯೂದನು ಅಫರಾದಿಯೆಂದು ಹೇಗೆ ಪರಿಗಣಿಸಲ್ಪಡಬಹುದು, ಯೇಸುವನ್ನು ನಂಬದೆ ಹೋದ ಯೆಹೂದ್ಯರ ವಿಷಯದಲ್ಲಿಯೂ ಇದೇ ಪ್ರಶ್ನೆಯು ಉದ್ಭವವಾಯಿತು. (ಯೋಹಾನ 12:37-40 ಮತ್ತು ವ್ಯಾಖ್ಯಾನ ನೋಡಿರಿ). ಯೂದನು ತನ್ನನ್ನು ಹಿಡುಕೊಡುವನೆಂದು ಯೇಸುವಿಗೆ ಗೊತ್ತಿತ್ತಾದರೂ ಅವಿಶ್ವಾಸಿಗಳಾದ ಯೆಹೂದ್ಯರಂತೆ ಯೂದನು ಅಪರಾಧಿಯೆಂದು ಪರಿಗಣಿಸಲ್ಪಟ್ಟನು. ಅವನು ತನ್ನ ನಡಾವಳಿಕೆಗೆ ತಾನೆ ಜವಾಬ್ದಾರನಾಗಿದ್ದನು. ದೇವರ ಮಹಿಮೆ ಹಾಗೂ ಬಲಗಳು ತೋರಿಬರುವಂತೆ ಪರೋಹನ ಹೃದಯವು ಕಠಿಣಗೊಂಡ ಹಾಗೆಯೇ ಯೂದನ ವಿಷಯದಲ್ಲಿಯೂ ಆಯಿತು (ರೋಮಾ 9:14-21 ಹಾಗು ವ್ಯಾಖ್ಯಾನ ನೋಡಿರಿ).

19 ಶಿಷ್ಯರಲ್ಲೊಬ್ಬನು ತನ್ನನ್ನು ಹಿಡುಕೊಡುವನೆಂದು ಯೇಸು ಹಲವಾರು ವೇಳೆ ಅವರನ್ನು ಎಚ್ಚರಿಸಿದನು. ಒಂದು ವೇಳೆ ಆತನು ಅವರಿಗೆ ಮುಂಚಿತವಾಗಿಯೇ ಹೇಳದೇ ಹೋಗಿದ್ದರೆ ತಮ್ಮಲ್ಲಿಯೇ ಒಬ್ಬ ಶಿಷ್ಯನಾದ ಯೂದನು ಯೇಸುವನ್ನು ಬಂದಿಸಲು ಸಿಪಾಯಿಗಳೊಂದಿಗೆ ಬರುವದನ್ನು ನೋಡಿದಾಗ ಅವರ ನಂಬಿಕೆಯು ಸಂಪೂರ್ಣವಾಗಿ ಚೂರು ಚೂರಾಗುತ್ತಿತ್ತು. ಶಿಷ್ಯರು ಎಚ್ಚರಿಸಲ್ಪಟ್ಟವರಾಗಿದ್ದರಿಂದ ಇದೆಲ್ಲವೂ ಪ್ರಾರಂಭದಿಂದಲೇ ದೇವರ ಚಿತ್ತಕ್ಕನುಸಾರವಾಗಿದೆ ಎಂಬುದನ್ನಾದರೂ ತಿಳಿದುಕೊಂಡರು(ಯೋಹಾನ 14:29 ಹಾಗು ವ್ಯಾಖ್ಯಾನ ನೋಡಿರಿ).

**20** ಮತ್ತಾಯ 10:40, ಮಾರ್ಕ 9:37, ಯೋಹಾನ 12:44-45 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

**21** ತನ್ನ ಸ್ವಂತ ಶಿಷ್ಯರೊಲ್ಲೊಬ್ಬನು ತನಗೆ ದ್ರೋಹ ಮಾಡಲಿದ್ದಾನೆಂಬುದನ್ನು ತಿಳಿದು ಯೇಸು ಆತ್ಮದಲ್ಲಿ ತತ್ತರಗೊಂಡನು. ಯೇಸು ತನ್ನ ಹಿಡುಕೊಡುವಿಕೆಯ ಬಗ್ಗೆ ಪು ನಃ ತನ್ನ ಶಿಷ್ಯರಿಗೆ ಹೇಳುತ್ತಾನೆ. ಇದುವರೆಗೂ ಆತನು ಒಬ್ಬ ಆಪ್ತ ಸಹಪಾಠಿಯೊಬ್ಬನು ಹಿಡುಕೊಡುವವನೆಂದು ಮಾತ್ರವೇ ಹೇಳಿದ್ದನು (ವಚನ 18). ಈಗ ಆತನು ಆ ವ್ಯಕ್ತಿಯು ಹನ್ನೆರಡು ಮಂದಿ ಶಿಷ್ಯರಲ್ಲೊಬ್ಬನು. ಎಂದು ಹೇಳಿದನು.

**22** ಶಿಷ್ಯರು ಇದನ್ನು ಕೇಳಿ ಬಹಳ ವಿಸ್ಮಯಗೊಂಡರು. ಅವರಲ್ಲಿ ಯಾರೂ ಇಚ್ಛಾಪೂರ್ವಕವಾಗಿ ಯೇಸುವನ್ನು ಹಿಡುಕೊಡುವವರಲ್ಲ! ಅವರಲ್ಲಿ ಒಬ್ಬನು ಆಕಸ್ಮೀಕವಾಗಿ ತಿಳಿಯದೆಯೇ ಆತನನ್ನು ಹಿಡುಕೊಡುವವನೆಂದು ಯೇಸು ಹೇಳುತ್ತಿರಬಹುದು ಎಂಬದಾಗಿ ಊಹಿಸಿಕೊಂಡರು "ನಾನಲ್ಲ ವಲ್ಲಾ?ಠಎಂದು ಪ್ರತಿಯೊಬ್ಬರು ಕೇಳಿದರು. (ಮಾರ್ಕ 14:18-19).

**23-26** ಯೇಸುವಿಗೆ ಪ್ರಿಯನಾದ ಶಿಷ್ಯನು ಈ ಸುವಾರ್ತೆಯನ್ನು ಬರೆದ ಯೋಹಾನನೇ ಆಗಿದ್ದಾನೆ (ಯೋಹಾನ 21:20,24). ಯೇಸು ಯೋಹಾನನ ಮೇಲೆ ಒಂದು ವಿಶೇಷವಾದ ಪ್ರೀತಿಯನ್ನು ಇಟ್ಟಿದ್ದನು. ಎಲ್ಲಾ ಶಿಷ್ಯರಲ್ಲಿಯೂ ಯೋಹಾನನು ಯೇಸುವಿನೊಂದಿಗೆ ಆಪ್ತವಾದ ಭಾಂದವ್ಯವನ್ನು ಹೊಂದಿದ್ದನು. ಆದುದರಿಂದ ಪೇತ್ರನು ಯೋಹಾನನಿಗೆ ಯೇಸು ಯಾರನ್ನು ಕುರಿತು ಹೇಳಿದನೆಂಬದನ್ನು ಕೇಳಬೇಕೆಂದು ಹೇಳಿದನು. ಯೇಸು ಯೋಹಾನನಿಗೆ ನಾನು ಈ ತುತ್ತನ್ನು ಬಟ್ಟಲಲ್ಲಿ ಅದ್ದಿ ನನ್ನನ್ನು ಹಿಡುಕೊಡುವವನಿಗೆ ನೀಡುತ್ತೇನೆಂದು ಹೇಳಿದನು. ಆ ಮೇಲೆ ಯೇಸು ರೊಟ್ಟಿಯ ತುಂಡನ್ನು ಅದ್ದಿಯೂದನಿಗೆ ಕೊಟ್ಟನು (ಮಾರ್ಕ 120-21 ನೋಡಿರಿ).

**27-28** ಯೇಸು ತನ್ನನ್ನು ಹಿಡುಕೊಡುವವನು ಯಾರೆಂಬದನ್ನು ಎಲ್ಲರಿಗೂ ಹೇಳಲಿಚ್ಚಿಸಲಿಲ್ಲ. ಆದಕಾರಣವೇ ಆತನು ಯೋಹಾನನಿಗೆ ಸನ್ನೆಯ ಮೂಲಕ (ತುತ್ತನ್ನು ಅದ್ದಿ) ಹೇಳಿದನು. ಆದರೆ ಯೋಹಾನನು ಸಹ ಆ ಸನ್ನೆಯನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲಿಲ್ಲ. ಯೂದನು ಹಿಡುಕೊಡುವವನಾಗುವನೆಂದು ಅವನು ಅರ್ಥಮಾಡಿಕೊಂಡನು, ಆದರೆ ಯೂದನು ಅದೇ ರಾತ್ರಿಯಲ್ಲಿಯೇ ಹಿಡಕೊಡಲಿದ್ದಾನೆಂಬದನ್ನು ಅವನು ಗ್ರಹಿಸಲಿಲ್ಲ! ಇಲ್ಲವಾದರೆ, ಖಂಡಿತವಾಗಿಯೂ ಅವನು ಯೂದನನ್ನು ತಡೆಯಲು ಪ್ರಯತ್ನಿಸಿರುತ್ತಿದ್ದನು.

**29-30** ಆದುದರಿಂದ, ಯೂದನು ಹೊರಗೆ ಹೋದಾಗ ಯೋಹಾನ ಹಾಗು ಇತರ ಶಿಷ್ಯರು ಯೇಸುವಿಗಾಗಿ ಅವನು ಮಾಡಬೇಕಾದ ಕೆಲಸವೇನಾದರೂ ಇರಬೇಕೆಂದಷ್ಟೇ ನೆನಸಿಕೊಂಡರು. ಅವನು ಶಿಷ್ಯರ ವೃಂದದ ಖಜಾಂಚಿಯಾಗಿದ್ದನು (ಯೋಹಾನ 12:6). ಯೂದನು ಕತ್ತಲೆಯಲ್ಲಿ ಹೊರಟು ಹೋದನು. ಯೂದನಿಗೆ ನಿಜವಾಗಿಯೂ ಆತ್ಮೀಕ ಕತ್ತಲು ಆವರಿಸಿಕೊಂಡಿತ್ತು.

## ಯೇಸು ಪೇತ್ರನ ಅಲ್ಲಗಳೆಯುವಿಕೆಯನ್ನು ಮುಂತಿಳಿಸಿದ್ದು (13:31-38)

**31** ಯೂದನು ಹೊರಗೆ ಹೋದ ಬಳಿಕ ಯೇಸು ತನ್ನ ಶಿಷ್ಯರಿಗೆ ಇನ್ನೂ ಕೆಲವೊಂದು ಪ್ರಾಮುಖ್ಯ ಸಂಗತಿಗಳನ್ನು ಬೋಧಿಸಲು ಪ್ರಾಂಭಿಸಿದನು. ಆ ಬೋಧನೆಗಳನ್ನು ಯೋಹಾನನು ಈಗ ನಮಗೆ ೩ಿಂನೇ ವಚನದಿಂದ 17 ನೇ ಅಧ್ಯಾಯಗಳಲ್ಲಿ ತಿಳಿಸುವವನಾಗಿದ್ದಾನೆ.

ಯೂದನು ಯೇಸುವಿನ ಬಂಧನಕ್ಕಾಗಿ ಯೆಹೂದಿ ನಾಯಕರನ್ನು ಬೇಟಿ ಮಾಡಲು ಹೋಗಿದ್ದನು. ಯೇಸುವಿನ ಮರಣವು ಸಂಭವಿಸಲಿಕ್ಕಿತ್ತು. ಆದುದರಿಂದ ಯೇಸು "ಈಗ ಮನುಷ್ಯಕುಮಾರನು ಮಹಿಮೆಪಟ್ಟಿದ್ದಾನೆ" ಎಂದು ಹೇಳಿದನು. ಯೇಸು ತನ್ನ ಮರಣದ ಮೂಲಕ ಮಹಿಮೆ ಪಟ್ಟನು. ಹಾಗಾದರೆ ಆತನ ಮಹಿಮಾಕರಣವು ಈಗ ಪ್ರಾರಂಬಗೊಂಡಿತ್ತು.

ಅಲ್ಲದೆ ದೇವರು ಸಹ ಆತನಲ್ಲಿ–ಅಂದರೆ ಯೇಸುವಿನ ಮರಣದಲ್ಲಿ – ಮಹಿಮೆಪಟ್ಟನು ಯಾಕೆಂದರೆ ಯೇಸು ದೇವರ ಚಿತ್ತಕ್ಕನಸಾರವಾಗಿ ಮರಣಿಸಿದನು. ಯೇಸು ಸಂಪೂರ್ಣವಿಧೇಯತೆಯಿಂದ ದೇವರ ಚಿತ್ತವನ್ನು ಕೈಕೊಂಡು ನಡೆಯುವದರಮೂಲಕ ದೇವರನ್ನು ಮಹಿಮೆಪಡಿಸಿದನು.

**32** ದೇವರು ಕ್ರಿಸ್ತನಿಂದ ಮಹಿಮೆ ಪಡೆದುಕೊಂಡನು. ಆದುದರಿಂದ ದೇವರು ಯೇಸುವನ್ನು ಮಹಿಮೆಪಡಿಸಲಿದ್ದನು. ದೇವರು ತನ್ನಲ್ಲಿ ಮಗನನ್ನು ಮಹಿಮೆಪಡಿಸುವನು. "ತನ್ನಲ್ಲಿ" ಎಂಬ ಪದಗಳು "ದೇವಶಲ್ಲಿ" ಅಥವಾ "ಪರಲೋಕದಲ್ಲಿ" ಎಂಬ ಅರ್ಥವನ್ನು ನೀಡಬಹುದು. ಆದರರ್ಥವೇನೆಂದರೆ ದೇವರು ಯೇಸುವಿಗೆ ತನ್ನ ಸ್ವಂತ ಮಹಿಮೆಯನ್ನು ಕೊಡುವನು. ಆದರರ್ಥವು ಏನೇ ಆಗಿದ್ದರೂ ಯೇಸು ಇಲ್ಲಿ ತನ್ನ ಪು ನರುತ್ಥಾನದ ವಿಷಯವಾಗಿ ಮಾತಾಡುತ್ತಿದ್ದನು. ದೇವರು ನಿಜವಾಗಿಯೂ ತನ್ನ ಮಗನನ್ನು ಮಹಿಮೆ ಪಡಿಸಿದ್ದಾನೆಂಬುದಕ್ಕೆ ಪು ನರುತ್ಥಾನವು ಸಂಕೇತವಾಗಿತ್ತು. ಇದು ಕೂಡಲೇ ಸಂಭವಿಸಲಿಕ್ಕಿತ್ತು. ಇನ್ನು ವಿಳಂಭವಾಗುವದಿಲ್ಲ. ಯೇಸುವಿನ ಗಳಿಗೆಯು ಬಂದಿತ್ತು.

**33** ಆ ಮೇಲೆ ಯೇಸು ತಾನು ಶೀಘ್ರ್ರದಲ್ಲಿಯೇ ಸಾಯಲಿರುವನೆಂದು ತನ್ನ ಶಿಷ್ಯರಿಗೆ ಹೇಳಿದನು. ಅವರು ಆತನೊಂದಿಗೆ ಬರಲಾರರು ಯಾಕೆಂದರೆ ಅವರು ಸಾಯಬೇಕಾದ ಸಮಯ ಇನ್ನು ಬಂದಿರಲಿಲ್ಲ. "ನಾನು ಹೋಗುವಲ್ಲಿಗೆ ನೀವು ಬರಲಾರಿರಿ" ಎಂದು ಆತನು ಅವರಿಗೆ ಹೇಳಿದನು. ಅವರು ಅನಂತರ ಬರುವರು ಆದರೆ ಆಗಲೇ ಅಲ್ಲ (ವಚನ 36).

ಯೇಸು ಇದೇ ಮಾತುಗಳನ್ನು ಅವಿಶ್ವಾಸಿಗಳಾದ ಯೆಹೂದ್ಯರಿಗೆ ಹೇಳಿದ್ದನು. ಹೇಗಿದ್ದರೂ, ಯೇಸು ಯೆಹೂದ್ಯರಿಗೆ "ನೀವು ನನ್ನನ್ನು ಹುಡುಕುವಿರಿ ಆದರೆ ನನ್ನನ್ನು ಕಂಡುಕೊಳ್ಳಲಾರಿರಿ" ಎಂದು ಸಹ ಹೇಳಿದ್ದನು. ಆತನು ಇದನ್ನು ತನ್ನ

ಶಿಷ್ಯರಿಗೆ ಹೇಳಲಿಲ್ಲ. ಈ ಜೀವನದಲ್ಲಿ ಯೇಸುವನ್ನು ನಂಬದಿರುವವರು ಮುಂದಿನ ಜೀವನದಲ್ಲಿ ಯೇಸುವನ್ನು ಕಂಡುಕೊಳ್ಳಲಾರರು. ಅವರು ಯೇಸುವಿನೊಂದಿಗೆ ಪರಲೋಕದಲ್ಲಿ ಜೀವಿಸುವದಿಲ್ಲ (ಯೋಹಾನ 7:33-34, 8:21 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**34-35** ಅನಂತರ ಯೇಸು ತನ್ನ ಶಿಷ್ಯರಿಗೆ ಒಂದು ಹೊಸ ಅಜ್ಞೆಯನ್ನು ಕೊಟ್ಟನು. ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು (ಮಾರ್ಕ 12:31 ಮತ್ತು ವ್ಯಾಖ್ಯಾನ ನೋಡಿರಿಃ). ಈ ಮೂರನೆಯ ಆಜ್ಞೆಯು ಹೇಳುವದೇನೆಂದರೆಃ ನಿನ್ನ ಕ್ರೈಸ್ತ ಸಹೋದರನನ್ನು ಯೇಸು ನಿನ್ನನ್ನು ಪ್ರೀತಿಸಿದಂತೆಯೇ ಪ್ರೀತಿಸು ಎಂಬದೇ.

ಕ್ರೈಸ್ತರು ಒಬ್ಬರಿಗೊಬ್ಬರು ಒಂದು ವಿಶೇಷ ಪ್ರೀತಿಯನ್ನು, ಸಹೋದರ ಪ್ರೀತಿಯನ್ನು ಹೊಂದಿರಬೇಕು. ಈ ಪ್ರೀತಿಯು ಉತ್ಸಾಹವುಳ್ಳದ್ದಾಗಿರಬೇಕು (1 ಪೇತ್ರ 1:22). ಇದು ಇತರರಿಗೆ ಗೋಚರವಾಗಬೇಕು, ಯಾಕೆಂದರೆ ಇತರರು ಪ್ರೀತಿಯಿಂದಲೇ ನಮ್ಮನ್ನು .ಯೇಸುವಿನ ಶಿಷ್ಯರೆಂದು ತಿಳಿಯುವದು. ನಾವು ಆತನ ಶಿಷ್ಯರೆಂಬದಕ್ಕೆ ಇದು ಆಧಾರವಾಗಿರುತ್ತದೆ. ನಾವು ಶಿಷ್ಯರೆಂಬದನ್ನು ಜನರು ನಮ್ಮ ಮಹಾ ಕಾರ್ಯಗಳಿಂದ ತಿಳಿಯುವದಿಲ್ಲ, ಅವರು ನಮ್ಮ ಪ್ರೀತಿಯಿಂದ ಮಾತ್ರವೇ ಅದನ್ನು ತಿಳಿಯುವರು (1 ಕೊರಿಂಥ 13:1-3 ನೋಡಿರಿ).

ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು. ಯೇಸು ನಮ್ಮನ್ನು ಹೇಗೆ ಪ್ರೀತಿಸಿದನು? ಆತನು ನಮಗಾಗಿ ತನ್ನ ಪ್ರಾಣವನ್ನು ಕೊಟ್ಟನು (ಯೋಹಾನ 15:12-13 ನೋಡಿರಿ). ಹಾಗಾದರೆ ಇಷ್ಟರ ವರೆಗೆ ನಾವು ನಮ್ಮ ಸಹೋದರನನ್ನು ಪ್ರೀತಿಸಬೇಕು. ಇದು ನಿಜಕ್ರೈಸ್ತ ಅನ್ಯೋನ್ಯತೆಯ ಅರ್ಥವಾಗಿದೆ. ಆದರೆ ಒಬ್ಬನು ಕ್ರಿಸ್ತನನ್ನು ತನ್ನ ಕರ್ತನನ್ನಾಗಿ ಅಂಗೀಕರಿಸದ ಹೊರತು ಈ ಅನ್ಯೋನ್ಯತೆಯಲ್ಲಿ ಪಾಲುಗಾರನಾಗಲು ಸಾದ್ಯವಿಲ್ಲ.

ನಾವು ಒಬ್ಬರೊಬ್ಬರ ಮೇಲೆ ಇಟ್ಟಿರುವ ಪ್ರೀತಿಯನ್ನು ಇತರರು ನೋಡುವಾಗ ಅವರು ನಮ್ಮ ಅನ್ಯೋನ್ಯತೆಗೆ ಆಕರ್ಷಿತರಾಗುವರು. ಅವರಿಗೆ ನಮ್ಮ ಅನ್ಯೋನ್ಯತೆಯಲ್ಲಿ ಪಾಲುಗಾರರಾಗಬೇಕೆಂಬ ಬಯಕೆಯುಂಟಾಗುವದು. ಅವರು ನಮ್ಮ ಪ್ರೀತಿಯನ್ನು ನೋಡುವಾಗ ಅವರೆಡೆಗಿದ್ದ ಯೇಸುವಿನ ಪ್ರೀತಿಯು ಎಷ್ಟು ಎಂಬದನ್ನು ಅವರು ಅರ್ಥಮಾಡಿಕೊಳ್ಳುವರು. ಆದುದರಿಂದಲೇ ನಾವು ಯೇಸು ನಮ್ಮನ್ನು ಪ್ರೀತಿಸಿದ ರೀತಿಯಲ್ಲಿಯೇ ಒಬ್ಬರನ್ನೊಬ್ಬರು ಪ್ರೀತಿಸಬೇಕು. ಈ ರೀತಿಯಾಗಿ ಒಬ್ಬರನ್ನೊಬ್ಬರು ಪ್ರೀತಿಸುವದರ ಮೂಲಕ ನಮ್ಮ ಪ್ರೀತಿಯು ಆಗ ಯೇಸುವಿನ ಪ್ರೀತಿಗೆ ಸಾಕ್ಷಿಯಾಗಿರುವದು (1 ಯೊಹಾನ 3:23, 4:7, 11-12, 21 ಹಾಗು ವ್ಯಾಖ್ಯಾನಗಳನ್ನು ನೋಡಿರಿ).

**36** ಪ್ರೇತ್ರನು ಇನ್ನೂ "ನಾನು ಹೋಗುವಲ್ಲಿಗೆ ನೀವು ಬರಲಾರಿರಿ" ಎಂಬ ಯೇಸುವಿನ ಮಾತುಗಳ ಬಗ್ಗೆಯೇ ಆಲೋಚಿಸುತ್ತಿದ್ದನು (ವಚನ 33). ಆತನು ಯೇಸುವಿಗೆ "ಸ್ವಾಮೀ, ಎಲ್ಲಿಗೆ ಹೋಗುತ್ತೀ?ಠ ಎಂದು ಕೇಳಿದನು. ಆದರೆ ಪೇತ್ರನು ಆ ಸಮಯದಲ್ಲಿ ನನ್ನನ್ನು ಹಿಂಬಾಲಿಸಲಾರನೆಂದು ಮಾತ್ರವೇ ಯೇಸು ಉತ್ತರಿಸಿದನು.

**37** ಯೇಸು ತನ್ನ ಮರಣದ ಕುರಿತಾಗಿ ಮಾತಾಡುತ್ತಿದ್ದನೆಂದು ಪೇತ್ರನು ಅರಿತುಕೊಂಡನು. ಆದ್ದರಿಂದ ಪೇತ್ರನು ಯೇಸುವಿನೊಂದಿಗೆ ಎಲ್ಲಿಯಾದರೂ ಬರುವೆನೆಂದು ಯೇಸುವಿಗೆ ಹೇಳಿದನು. ಅವನು ಯೇಸುವಿನೊಂದಿಗೆ ಸಾಯಲು ಸಹ ಸಿದ್ದನಾಗಿದ್ದನು.

**38** ಪೇತ್ರನು ತಾನು ನೆರವೇರಿಸುವದಕ್ಕೆ ಸಾದ್ಯವಾಗುವದಕ್ಕಿಂತಲೂ ಹೆಚ್ಚಿನ ಸಂಗತಿಯನ್ನು ವಾಗ್ದಾನ ಮಾಡುತ್ತಿದ್ದಾನೆ. ಇತನು ಯೇಸುವಿಗಾಗಿ ಸಾಯಲು ಸಿದ್ದನಾಗಿರಲಿಲ್ಲ. ಆತನು ಯೇಸುವನ್ನೆ ನಿರಾಕರಿಸುವದರಲ್ಲಿದ್ದನು (ಮಾರ್ಕ 14:27-31,66-72 ಹಾಗು ವ್ಯಾಖ್ಯಾನಗಳನ್ನು ನೋಡಿರಿ). ಬದಲಾಗಿ ಯೇಸುವೇ ಪೇತ್ರನಿಗೋಸ್ಕರ ಮರಣಿಸಲಿದ್ದನು.

ಪೇತ್ರನು ಗರ್ವಿಷ್ಟನಾಗಿದ್ದನು. ಅವನು ತನ್ನ ಸ್ವಂತ ಸಾಮರ್ಥ್ಯದಲ್ಲಿ ಭರವಸೆ ಹೊಂದಿದ್ದನು. ಆತನು ಹೆಚ್ಚು ದೀನತೆಯುಳ್ಳವನಾಗಿರಬೇಕಿತ್ತು. ತಾವು ತಮ್ಮಲ್ಲಿ ಬಲಿಷ್ಟರೆಂದು ಯೋಚಿಸಿಕೊಳ್ಳುವವರು ಶೀಘ್ರವೇ ತಾವು ನಿಜವಾಗಿಯೂ ಬಲಹೀನರೆಂಬುವದನ್ನು ಕಂಡುಕೊಳ್ಳುವರು. (1ಕೊರಿಂಥ 10:12 ನೋಡಿರಿ).

---

## ಅಧ್ಯಾಯ - 14

### ಯೇಸು ತಂದೆಯ ಬಳಿಗೆ ಮಾರ್ಗವಾಗಿದ್ದಾನೆ (14:1-14).

1 ಶಿಷ್ಯರ ಹೃದಯಗಳು ಖಂಡಿತವಾಗಿಯೂ ಕಳವಳಗೊಂಡಿದ್ದವು. ಮತ್ತು ಅವರು ಶೀಘ್ರವೇ ಇನ್ನು ಹೆಚ್ಚು ಕಳವಳಗೊಳ್ಳಲಿದ್ದರು. ಯೇಸು ತಾನು ಹೊರಟು ಹೋಗಲಿದ್ದಾನೆಂದು ಈಗಷ್ಟೇ ಹೇಳಿದ್ದನು (ಯೋಹಾನ 13:33). ಅವರಲ್ಲೊಬ್ಬನು ನನ್ನನ್ನು ಹಿಡುಕೊಡುವನೆಂದು ಆತನು ಅವರಿಗೆ ಹೇಳಿದ್ದನು (ಯೋಹಾನ 13:21). ಆತನ ಶಿಷ್ಯರಲ್ಲಿ ಮುಖ್ಯನಾದ ಪೇತ್ರನು ಆತನನ್ನು ಮೂರುಸಾರಿ ಅಲ್ಲಗಳೆಯುವನೆಂದು ಹೇಳಿದ್ದನು (ಯೋಹಾನ 13:38). ಒಂದು ಭಯಂಕರ ಸಮಸ್ಯೆಯು ನಿಶ್ಚಯವಾಗಿಯೂ ಬರುವದಿತ್ತೆಂಬುದು ಇದರರ್ಥವಾಗಿದೆ! ಅವರು ಯೇಸುವಿಗಾಗಿ ಎಲ್ಲವನ್ನೂ ತೊರೆದಿದ್ದರು. ಈಗ ಅವರು ಒಬ್ಬಂಟಿಗರಾಗಿ ಬಿಡಲ್ಪಡಲಿದ್ದರು. ಬಹುಶ: ಅವರು ಸಹ ಬಂದಿಸಲ್ಪಡುವರು, ಹಿಂಸಿಸಲ್ಪಟ್ಟು ಕೊಲ್ಲಲ್ಪಡುವರು. ನಿಶ್ಚಯವಾಗಿಯೂ ಶಿಷ್ಯರು ಕಳವಳಗೊಂಡಿದ್ದರು! ಆದರೆ ಇದೆಲ್ಲದರ ಹೊರತಾಗಿಯೂ ಯೇಸು ಆಗಲೂ ಅವರಿಗೆ "ನಿಮ್ಮ

ಹೃದಯಗಳು ಕಳಗೊಳ್ಳದಿರಲಿ" ಎಂದು ಹೇಳಿದನು. ಆತನ ತಾತ್ಪರ್ಯವೇನಾಗಿತ್ತೆಂದರೆ: "ಕಳವಳಗೊಳ್ಳುವದನ್ನು ನಿಲ್ಲಿಸಿರಿ, ಚಿಂತೆ ಮಾಡುವದನ್ನು ಬಿಡಿರಿ" ಎಂಬದೇ.

ನಮ್ಮ ಹೃದಯಗಳಿಂದ ಕಳವಳ ಹಾಗು ಚಿಂತೆಯನ್ನು ತೆಗೆದು ಹಾಕುವ ಮಾರ್ಗ ಯಾವದು? ನಂಬುದರ ಮೂಲಕ ಹಾಗು ಭರವಸವಿಡುವದರ ಮೂಲಕವೇ. ಆದ್ದರಿಂದ ಯೇಸು ಹೇಳಿದ್ದೇನೆಂದರೆ: ದೇವರನ್ನು [100] ನಂಬಿರಿ, ನನ್ನನ್ನೂ ನಂಬಿರಿ!! ಯೆಹೂದ್ಯರೆಲ್ಲರೂ ದೇವರನ್ನು ನಂಬಿದ್ದರು, ಶಿಷ್ಯರು ಸಹ ಯೆಹೂದ್ಯರಾಗಿ ದೇವರನ್ನು ನಂಬಿದವರಾಗಿದ್ದರು. ಆದರೆ ಇಲ್ಲಿ ಯೇಸು ಇನ್ನು ಒಂದನ್ನು ಸೇರಿಸುತ್ತಾನೆ".....ನನ್ನನ್ನೂ ನಂಬಿರಿ" ದೇವರನ್ನು ನಂಬುವದು ಮತ್ತು ಕ್ರಿಸ್ತನನ್ನು ನಂಬುವದು ಎರಡು ಸಮಾನವಾಗಿ ಸಾಗುತ್ತದೆ. ಒಂದು ವೇಳೆ ಒಬ್ಬ ವ್ಯಕ್ತಿಯು ಒಬ್ಬನಲ್ಲಿ ನಿಜವಾಗಿಯೂ ನಂಬಿಕೆಯಿಟ್ಟರೆ, ಆತನು ಇನ್ನೊಬ್ಬನನ್ನು ಸಹನಂಬುವನು.

ಯೇಸು ತನ್ನ ಶಿಷ್ಯರು ಮಾಡಬೇಕೆಂದು ಅಪೇಕ್ಷಿಸಿದ ಸಂಗತಿಯು ಸಣ್ಣ ವಿಷಯವೇನಾಗಿರಲಿಲ್ಲ. ಅವನು ಇನ್ನೇನು ಒಬ್ಬ ಅಪರಾಧಿಯಂತೆ ಶಿಲುಬೆಯ ಮೇಲೆ ಸಾಯುವದರಲ್ಲಿದ್ದನು. ಇಸ್ರಾಯೇಲಿನ ಸರ್ವಶಕ್ತ ದೇವರನ್ನು ನಂಬುವದು ಒಂದು ಬೇರೆ ವಿಷಯವಾಗಿತ್ತು.

ಆದರೆ ಶಿಷ್ಯರ ಮನಸ್ಸಿನಲ್ಲಿ ಈಗಷ್ಟೇ ಒಬ್ಬ ಸೇವಕನಂತೆ ಅವರ ಪಾದಗಳನ್ನು ತೊಳೆದವನು ಮತ್ತು ಒಬ್ಬ ಅಪರಾಧಿಯಂತೆ ಕೊಲ್ಲಲ್ಪಡಲಿಕ್ಕಿದ್ದ ಈ ವ್ಯಕ್ತಿಯನ್ನು ನಂಬುವದು ಒಂದು ಕಷ್ಟಕರ ವಿಷಯವೇ ಆಗಿತ್ತು. ಹಾಗಿದ್ದರೂ ಯೇಸು ಅವರಿಗೆ "...ನನ್ನನ್ನೂ ನಂಬಿರಿ" ಇದು ದೇವರನ್ನು ನಂಬುವದಕ್ಕೆ ಸಮಾನವಾಗಿದೆ" ಎಂದು ಹೇಳಿದನು.

**2** ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಅವೆ. ತಂದೆಯ ಮನೆಯು ಪರಲೋಕದಲ್ಲಿದೆ. ಅನೇಕ ಬಿಡಾರಗಳು ವಿಶ್ವಾಸಿಗಳ ವಿಶ್ರಾಂತಿ ಸ್ಥಳಗಳಾಗಿವೆ. ಪರಲೋಕದಲ್ಲಿ ಪ್ರತಿಯೊಬ್ಬ ವಿಶ್ವಾಸಿಗೂ ಸ್ಥಳವಿರುತ್ತದೆ. ಆದಕಾರಣವೇ ಶಿಷ್ಯರು ಕಳವಳಗೊಳ್ಳುವ ಅಗತ್ಯವಿರುವದಿಲ್ಲ. ಅವರು ಒಂದು ವೇಳೆ ನಂಬುವದಾದರೆ ನಿಶ್ಚಯವಾಗಿಯೂ ಅವರಿಗೆ ಪರಲೋಕದಲ್ಲಿ ಒಂದು ಸ್ಥಳವಿರುವದು. ಯೇಸು ಈಗ ತಾನು ಅವರಿಗಾಗಿ ಕೋಣೆಗಳನ್ನು ಸಿದ್ಧಪಡಿಸುವದಕ್ಕಾಗಿ ತನ್ನ ತಂದೆಯ ಮನೆಗೆ ಹೋಗುತ್ತಿರುವೆನೆಂದು ಅವರಿಗೆ ಹೇಳಿದನು.

ಕ್ರೈಸ್ತನೇ, ನೀನು ಕಳವಳಗೊಂಡಿರುವೆಯೋ? ಅಥವಾ ಭಯದಿಂದಿರುವಿಯೋ? ನೀವು ಹಿಂಸೆಗೆ ಅಥವಾ ವಿನಾಶತೆಗೆ ಒಳಗಾಗಿರುವಿರೋ? ಹಾಗಿರುವದಾದರೆ ಇದನ್ನು ನೆನಪಿನಲ್ಲಿಟ್ಟುಕೊಳ್ಳಿರಿ: ಯೇಸು ಪರಲೋಕದಲ್ಲಿ ನಿಮ್ಮ ಸ್ಥಳವನ್ನು ಸಿದ್ಧಮಾಡುವದಕ್ಕಾಗಿ ಹೋಗಿರುತ್ತಾನೆ. ಆತನನ್ನು ನಂಬಿರಿ.

**3** ನಂತರ ಯೇಸು ತನ್ನ ಶಿಷ್ಯರಿಗೆ "ನಾನು ...ತಿರಿಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು" ಎಂದು ವಾಗ್ದಾನ ಮಾಡಿದನು. ಆತನು ಲೋಕಾಂತ್ಯದ ವೇಳೆಯಲ್ಲಿ ತನ್ನ ಎರಡನೆಯ ಬರೋಣವನ್ನು ಸೂಚಿಸಿ ಇದನ್ನು ಹೇಳಿದನು(ಮಾರ್ಕ 13:26-27, 1 ಥೆಸಲೋನಿಕ 4:16-18 ಹಾಗು ವ್ಯಾಖ್ಯಾನಗಳನ್ನು ನೋಡಿರಿ).

ತನ್ನ ತಂದೆಯ ಮನೆಯು ಯಾವ ರೀತಿಯಲ್ಲಿದೆಯೆಂಬುದನ್ನು ಯೇಸು ನಿಖರವಾಗಿ ಹೇಳಲಿಲ್ಲ. ನಾವು ಆತನೊಂದಿಗೆ ಇರುತ್ತೇವೆ ಎಂದು ಮಾತ್ರವೇ ಆತನು ಹೇಳಿದನು. ಒಂದು ವೇಳೆ ನಾವು ನಮ್ಮ ಕರ್ತನೊಂದಿಗೆ ಇರುವದಾದರೆ ಬೇರೆ ಇನ್ನಾವು ದರ ಕುರಿತಾಗಿಯೂ ನಾವು ಯೋಚಿಸಬೇಕಾಗಿಲ್ಲ. ಒಬ್ಬ ಚಿಕ್ಕ ಮಗುವು ತನ್ನ ಮನೆ ಹೇಗಿದೆ ಎಂಬದರ ಬಗ್ಗೆ ಚಿಂತಿಸದೇ ತನ್ನ ತಂದೆತಾಯಿಗಳು ಅಲ್ಲಿ ಇರುವರೋ ಇಲ್ಲವೋ ಎಂಬದನ್ನು ಮಾತ್ರವೇ ಚಿಂತಿಸುತ್ತಾನೆ.

**4** ಬಳಿಕ ಯೇಸು ತನ್ನ ಶಿಷ್ಯರಿಗೆ "ನಾನು ಹೋಗುವ ಸ್ಥಳದ ಮಾರ್ಗವು ನಿಮಗೆ ತಿಳಿದದೆ" ಎಂದನು. ಆತನು ಅವರಿಗೆ ಮಾರ್ಗ ವನ್ನು ತೋರಿಸಿದ್ದನು. ಆ ಮಾರ್ಗವು ಆತನ ಬೋಧನೆ ಹಾಗು ಮಾದರಿಗಳೇ ಆಗಿದೆ. ಆತನ ಬೋಧನೆ ಹಾಗು ಮಾದರಿಗಳನ್ನು ಅನುಸರಿಸಿದರೆ ಅವರು ಪರಲೋಕಕ್ಕೆ ಹೋಗುವರು.

**5** ಆದರೆ ಶಿಷ್ಯರು ಗೊಂದಲಕ್ಕೊಳಗಾಗಿದ್ದರು. ಯೇಸು ತಾನು ತನ್ನ ತಂದೆಯ ಮನೆಗೆ ಹೋಗುತ್ತಿರುವನೆಂದು ಹೇಳಿದ್ದರ ತಾತ್ಪರ್ಯವೇನು? ಆತನು ಈಗಷ್ಟೇ ಅವರಿಗೆ ನಾನು ಹೋಗುವಲ್ಲಿಗೆ ನೀವು ಬರಲಾರಿರಿ ಎಂದು ಹೇಳಿದ್ದಾನೆ (ಯೋಹಾನ 13:33). ಆದುದರಿಂದ ಅವರಿಗೆ ಮಾರ್ಗವು ತಿಳಿಯುವದಾದರೂ ಹೇಗೆ? "ಸ್ವಾಮೀ, ನೀನು ಎಲ್ಲಿಗೆ ಹೋಗುತ್ತೀಯೋ ನಮಗೆ ತಿಳಿಯದು" ಎಂದು ತೋಮನು ಹೇಳಿದನು.

ತೋಮನು ಒಬ್ಬ ಯಥಾರ್ಥ ಮನುಷ್ಯನಾಗಿದ್ದಾನೆಂಬದನ್ನು ಗಮನಿಸ ಬಹುದು ಅವನ ಮನಸ್ಸಿನಲ್ಲಿ ಸಂಶಯ ಹೊಂದಿದಾಗ ಅವನು ಮುಕ್ತವಾಗಿ ಅದರ ಬಗ್ಗೆ ಮಾತಾಡಿದನು (ಯೋಹಾನ 20:24-25). ಕೊನೆಯಲ್ಲಿ ಆತನ ಸಂಶಯದ ಸ್ಥಾನವನ್ನು ನಂಬಿಕೆಯ ಆಕ್ರಮಿಸಿಕೊಂಡಿತು (ಯೋಹಾನ 20:27-28).

**6** ಶಿಷ್ಯರು ತಮಗೆ ಮಾರ್ಗವು ತಿಳಿಯದೆಂದು ಹೇಳಿದಾಗ ಯೇಸು ಅವರಿಗೆ "ನಾನೇ ಮಾರ್ಗವು." ಎಂದು ಹೇಳಿದನು. ಯೇಸು ಮಾನವರಿಗೆ ಪರಲೋಕದ ಮಾರ್ಗವನ್ನು ತೋರಿಸುವದು ಮಾತ್ರವಲ್ಲ. ಸ್ವತಃ ಆತನೇ ಮಾರ್ಗವಾಗಿದ್ದಾನೆ. ಆತನು ಮಾರ್ಗವಾಗಿದ್ದಾನೆ ಯಾಕೆಂದರೆ ಆತನ ಮೂಲಕವೇ ನಾವು ಪರಲೋಕವನ್ನು ಪ್ರವೇಶಿಸುವವರಾಗಿದ್ದೇವೆ. ಆತನ ಯಜ್ಞ, ಆತನ ಮರಣದ ಮೂಲಕವಾಗಿಯೇ ನಮ್ಮ ಪಾಪಗಳು ಕ್ಷಮಿಸಲ್ಪಟ್ಟು ದೇವರ ದೃಷ್ಟಿಯಲ್ಲಿ ನಾವು ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ (ಮಾರ್ಕ 10:45 ಹಾಗು ವ್ಯಾಖ್ಯಾನ ನೋಡಿರಿ) ನಾವು ನಂಬಿಕೆಯ ಮೂಲಕ ಪಡೆದುಕೊಳ್ಳುವ ಯೇಸುವಿನ ನೀತಿಯು ಪರಲೋಕಕ್ಕೆ ನಮ್ಮ ರಹದಾರಿಪತ್ರ (ಪಾಸ್ ಪೋರ್ಟ್) ಆಗಿದೆ.

ನಾನೇ....ಸತ್ಯವೂ..ಆಗಿದ್ದೇನೆ. ಯೇಸು ಸತ್ಯವನ್ನು ಬೋಧಿಸುವದು ಮಾತ್ರವಲ್ಲ. ಆತನು ಸ್ವತಃ ಸತ್ಯವಾಗಿದ್ದಾನೆ. ಅವನು ಸಂಪೂರ್ಣ ನಂಬಿಕೆಗೆ ಯೋಗ್ಯನಾಗಿದ್ದಾನೆ. ಆತನ ಸುವಾರ್ತೆಯು ಸತ್ಯವಾಗಿದೆ. ನಾವು ಯೇಸುವಿನ ಸತ್ಯದಲ್ಲಿ ನಂಬಿಕೆಯಿಡುವಾಗ, ನಾವು ಆತನ ಬೋಧನೆಯನ್ನು ಸ್ವೀಕರಿಸಿಕೊಳ್ಳುವಾಗ ರಕ್ಷಣೆಯನ್ನು ಪಡೆದುಕೊಳ್ಳುವವರಾಗಿದ್ದೇವೆ. ನಾವು ಅಜ್ಞಾನ ಹಾಗು ಪಾಪಗಳಿಂದ ಬಿಡುಗಡೆಗೊಳ್ಳುವವರಾಗಿದ್ದೇವೆ (ಯೋಹಾನ 8:31-32 ನೋಡಿರಿ).

ನಾನೇ....ಜೀವವೂ ಆಗಿದ್ದೇನೆ. ಯೇಸು ಜೀವವನ್ನು ಕೊಡುವದು ಮಾತ್ರವೇ ಅಲ್ಲ, ಸ್ವತಃ ಆತನೇ ಜೀವವಾಗಿದ್ದಾನೆ. ಆತನಲ್ಲಿ ಜೀವವಿತ್ತು (ಯೋಹಾನ 1:4, 5:26 ಮತ್ತು ವ್ಯಾಖ್ಯಾನ ನೋಡಿರಿ). ಯೇಸುವನ್ನು ತಿಳಿಯುವದೆಂದರೆ ನಿತ್ಯಜೀವವನ್ನು ಹೊಂದುವದೇ ಆಗಿದೆ (ಯೋಹಾನ 17:3).

ಮಾರ್ಗವನ್ನು ತೋರಿಸುವದು, ಸತ್ಯವನ್ನು ಬೋಧಿಸುವದು ಹಾಗು ಜೀವವನ್ನು ಕೊಡುವದು ಇವೆಲ್ಲವುಗಳು ಮಾನವರನ್ನು ರಕ್ಷಿಸುವ ಯೇಸುವಿನ ಮಹಾಕಾರ್ಯದ ವಿವಿಧ ಭಾಗಗಳಾಗಿವೆ. ಯೇಸು ಮಾತ್ರವೇ ಮಾನವರನ್ನು ರಕ್ಷಿಸಬಲ್ಲನು. ಯೇಸುವೇ ಜಗತ್ತಿನ ಏಕೈಕ ರಕ್ಷಕ. ಯೇಸುವಿನಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ನಾವು ತಂದೆಯ ಬಳಿಗೆ ಬಂದು ಆತನ ಮನೆಯಲ್ಲಿ ವಾಸಿಸಬಹುದುಜ್ಞ (ವಚನ 2).

ಈ ಮಾತುಗಳನ್ನು ಆಲೋಚಿಸಿರಿ. ಯೇಸು ಅಸಹಾಯಕನಾಗಿ ಶಿಲುಬೆಯ ಮೇಲೆ ನೇತಾಡಲಿದ್ದನು. ಆದಾಗ್ಯು ಆತನು "ನಾನೇ ಮಾರ್ಗವಾಗಿದ್ದೇನೆ" ಎಂದು ಹೇಳಿದನು. ಅವನು ಜನರ ಸುಳ್ಳು ಸಾಕ್ಷಿಯ ನಿಮಿತ್ತ ದಂಡನೆಗೆ ಗುರಿಯಾಗಲಿದ್ದನು. ಆದಾಗ್ಯು ಆತನು "ನಾನೇ ಸತ್ಯವೂ ಆಗಿದ್ದೇನೆ" ಎಂದನು. ಅವನ ಶವವೇ ಇನ್ನೇನು ಶೀಘ್ರದಲ್ಲೇ ಸಮಾಧಿಯಲ್ಲಿಡಲ್ಪಡಲಿಕ್ಕಿತ್ತು. ಆದರೂ ಆತನು "ನಾನೇ...ಜೀವವೂ ಆಗಿದ್ದೇನೆ" ಎಂದು ಹೇಳಿದನು.
ಇಹ ಲೋಕದ ಜನರು ಅನೇಕ ರೀತಿಯ ದೇವರುಗಳು ಹಾಗು ಅವತಾರಗಳಲ್ಲಿ ನಂಬಿಕೆಯಿಡುತ್ತಾರೆ. ಆದರೆ ಯೇಸು ಕ್ರಿಸ್ತನು ಮಾತ್ರವೇ "ನಾನೇ ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ" ಎಂದು ಹೇಳಬಲ್ಲವನಾಗಿದ್ದಾನೆ. ಆತನು ಮಾತ್ರವೇ ಮಾನವರಿಗೆ ರಕ್ಷಣೆಯನ್ನು,ನಿತ್ಯಜೀವವನ್ನೂ ಕೊಡಲು ಶಕ್ತನಾಗಿದ್ದಾನೆ. ಯೇಸುವನ್ನು ಬಿಟ್ಟು ಪರಲೋಕಕ್ಕೆ ಬೇರಿನ್ನಾವ ಮಾರ್ಗವೂ ಇರುವದಿಲ್ಲ. ಇತರ ಧರ್ಮಗಳು ಹಾಗು ಧಾರ್ಮಿಕನಾಯಕರು ಜನರಿಗೆ ಪರಲೋಕದ ಬಗ್ಗೆ ಹೇಳಬಹುದು ಆದರೆ ಕ್ರಿಸನು ಮಾತ್ರವೇ ಅವರನ್ನು ಪರಲೋಕಕ್ಕೆ ನಡೆಸ ಬಲ್ಲನು.

ಇಲ್ಲಿ ಒಂದು ಪ್ರಶ್ನೆಯು ಉದ್ಭವಿಸುತ್ತದೆ : ಕ್ರಿಸ್ತನ ಕುರಿತಾಗಿ ಎಂದಿಗೂ ಕೇಳಿಯೇ ಇಲ್ಲದ ವ್ಯಕ್ತಿಗೆ ಏನಾಗುವದು, ಅವನು ತಂದೆಯ ಬಳಿಗೆ ಬರಲಿಕ್ಕೆ – ಅಂದರೆ ಪರಲೋಕಕ್ಕೆ ಸೇರಲು – ಆಗುವದೇ ಇಲ್ಲವೋ? ಅವನು ಸೇರುವದಿಲ್ಲ ಎಂದು ಬೈಬಲ್ ಸೂಚಿಸುತ್ತದೆ. ಎಲ್ಲಾ ಮಾನವರು ಪಾಪಿಗಳಾಗಿದ್ದಾರೆ (ರೋಮ 3:10-12), ಅವರೆಲ್ಲರೂ ದೇವರ ಕೋಪಾಗ್ನಿಗೆ ಪಾತ್ರರು (ರೋಮ 1:18-20 ಮತ್ತು ವ್ಯಾಖ್ಯಾನ ನೋಡಿರಿ). ಇನ್ನೊಂದು ಕಡೆಯಲ್ಲಿ ದೇವರು ಮಾನವರಿಗೆ ಅವರ ತಿಳುವಳಿಕೆಗೆ ತಕ್ಕಂತೆ ನ್ಯಾಯ ತೀರಿಸುತ್ತಾನೆ. ಹೀಗೆ, ಯೇಸುವಿನ ಬಗ್ಗೆ ಕೇಳಿಯೂ ಬಳಿಕ ಆತನನ್ನು ತಿರಸ್ಕರಿಸಿದ ವ್ಯಕ್ತಿಗಿಂತಲೂ ಯೇಸುವಿನ ಬಗ್ಗೆ ಎಂದಿಗೂ ಕೇಳಿಯೇ ಇಲ್ಲದವ್ಯಕ್ತಿಯು ಕಡಿಮೆ ಕಠಿಣವಾಗಿ ತೀರ್ಪಿಗೆ ಗುರಿಯಾಗುವನು (ಲೂಕ 12:47-48 ಮತ್ತು ವ್ಯಾಖ್ಯಾನ ನೋಡಿರಿ). ದೇವರು ಅಂತಿಮ ನ್ಯಾಯಾಧಿಪತಿಯಾಗಿದ್ದಾನೆ. ಆತನು ತಾನು ಇಚ್ಛಿಸಿದವರಿಗೆ ಕರುಣೆಯನ್ನು ತೋರಿಸುವನು (ರೋಮ 9:15). ತೀರ್ಪು ಮಾಡುವದು ನಮ್ಮ ಕೆಲಸವಲ್ಲ. ಹೇಗಿದ್ದರೂ ಎಲ್ಲಾ ಜನರಿಗೂ ಪರಲೋಕದ ಏಕೈಕ ನಿಶ್ಚಿತ ಮಾರ್ಗವಾದ ಯೇಸು ಕ್ರಿಸ್ತನನ್ನು [104] ತೋರಿಸುವದೇ ಆಗಿದೆ.

**7** ಶಿಷ್ಯರು ಈಗಲೂ ಯೇಸುವನ್ನು ಪೂರ್ಣವಾಗಿ ತಿಳಿದಿರಲಿಲ್ಲ. ಪುನರುತ್ಥಾನದ ತನಕ ಅವರು ಪೂರ್ತಿಯಾಗಿ ತಿಳಿದು ಕೊಳ್ಳಲಾರದವರಾಗಿದ್ದರು. ಒಂದು ವೇಳೆ ಅವರು ಯೇಸು ಯಾರಾಗಿದ್ದಾನೆಂಬದನ್ನು ನಿಜವಾಗಿಯೂ ತಿಳಿದವರಾಗಿದ್ದರೆ ಅಸಮಯದಲ್ಲಿ ಅವರು ಅಷ್ಟೊಂದು ಗೊಂದಲಕ್ಕೊಳಗಾಗುತ್ತಿರಲಿಲ್ಲ. ಆತನು ಎಲ್ಲಿಗೆ ಹೋಗುತ್ತಿರುವನೆಂಬದನ್ನು ಅವರು ತಿಳಿದಿರುತ್ತಿದ್ದರು. ಅವರು ತಂದೆಯನ್ನು ತಿಳಿದಿರುತ್ತಿದ್ದರು. "ನೀವು ನನ್ನನ್ನು ಅರಿತಿದ್ದರೆ ನನ್ನ ತಂದೆಯನ್ನು ಅರಿಯುತ್ತಿದ್ದೀರಿ" ಯೇಸುವನ್ನು ತಿಳಿದಿರುವವರು ತಂದೆಯನ್ನೂ ತಿಳಿದವರಾಗಿದ್ದಾರೆ. ಆತನನ್ನು ನೋಡಿದರೆ ತಂದೆಯನ್ನು ನೋಡಿದಂತೆಯೇ ಆಗಿದೆ (ಯೋಹಾನ 8:19, 12:44-45 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**8** ಫಿಲಿಪ್ಪನಿಗೆ ಇನ್ನು ಅರ್ಥವಾಗಲಿಲ್ಲ. ಹಳೆ ಒಡಂಬಡಿಕೆಯ ಪ್ರಕಾರವಾಗಿ ಯಾವನೂ ಎಂದೂ ದೇವರನ್ನು ಮುಖಾಮುಖಿಯಾಗಿ ನೋಡಿರಲಿಲ್ಲ. ಆದರೆ ಈಗಷ್ಟೇ ಯೇಸು "ನೀವು ಆತನನ್ನು ನೋಡಿದ್ದೀರಲ್ಲಾ" ಎಂದು ಹೇಳಿದ್ದನು (ವಚನ 7) ಆದುದರಿಂದ ಫಿಲಿಪ್ಪನು "ನಮಗೆ ತಂದೆಯನ್ನು ತೋರಿಸು ನಾವು ನಂಬುವೆವು" ಎಂದು ಉತ್ತರಿಸಿದನು. ಫಿಲಿಪ್ಪನ ಮನಸ್ಸಿಗೆ ಯೇಸು ಸ್ವತಃ ದೇವರೇ ಆಗಿದ್ದಾನೆಂಬದನ್ನು ಫಿಲಿಪ್ಪನು ಇನ್ನು ಅರ್ಥಮಾಡಿಕೊಂಡಿರಲಿಲ್ಲ.

**9** ಯೇಸು ನಯವಾಗಿ ಫಿಲಿಪ್ಪನನ್ನು ಗದರಿಸಿದನು. ಆತನು ಫಿಲಿಪ್ಪನಿಗೆ "ನೀನು ಇನ್ನೂ ನಾನು ಯಾರೆಂಬದನ್ನು ಅರಿತು ಕೊಳ್ಳಲಿಲ್ಲವೋ?" ಎಂದು ಕೇಳಿದನು. ಫಿಲಿಪ್ಪನು ಯೇಸುವನ್ನು ಸಂಧಿಸಿದ ಪ್ರಥಮ ದಿನದಿಂದಲೇ ಯೇಸು ಮೆಸ್ಸೀಯನಾಗಿದ್ದಾನೆಂಬದನ್ನು ಬಲ್ಲವನಾಗಿದ್ದನು (ಯೋಹಾನ 1:45). ಆದರೆ ಆತನು ಎಂದಿಗೂ ಸಹ ಯೇಸುವಿನಲ್ಲಿ ನಿಜವಾಗಿಯೂ ದೇವರನ್ನು ನೋಡಿರಲಿಲ್ಲ.

ಆ ಮೇಲೆ ಯೇಸು "ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ" ಎಂದು ಹೇಳಿದನು. ಯೇಸು ತಂದೆಯ ಪ್ರಕಟಣೆಯಾಗಿದ್ದನು. ಕ್ರಿಸ್ತನನ್ನು ನಂಬಿಕೆಯಿಲ್ಲದೆಯೇ ನೋಡುವವರು ಕೇವಲ ಒಬ್ಬ ಮಾನವನನ್ನು ಕಾಣುತ್ತಾರೆ. ನಂಬಿಕೆಯಿಂದ ದೃಷ್ಟಿಸುವವರು ದೇವರನ್ನು ಕಾಣುವರು.

ಯೇಸು ದೈಹೀಕ ರೂಪದಲ್ಲಿ ಇನ್ನೆಂದಿಗೂ ನಮ್ಮೊಂದಿಗೆ ಇಲ್ಲದಿರುವಾಗ್ಯು ಈ ದಿನವೂ ನಮಗೆ ಆತನು ದೇವರ ಪ್ರಕಟಣೆಯಾಗಿ ಉಳಿಯುತ್ತಾನೆ. ಪವಿತ್ರಾತ್ಮನ ಸಹಾಯದೊಂದಿಗೆ ಹೊಸ ಒಡಂಬಡಿಕೆಯನ್ನು ಓದುವದರ ಮೂಲಕವಾಗಿ ನಾವು ಸಹ ಯೇಸುವನ್ನು ನೋಡಬಲ್ಲೆವು ಮತ್ತು ನಾವು ಯೇಸುವನ್ನು ನೋಡುವಾಗ ತಂದೆಯನ್ನು ಸಹ ನೋಡುವವರಾಗಿದ್ದೇವೆ (ಯೋಹಾನ 12:44-45).

10 ಯೇಸು ತಂದೆಯಲ್ಲಿದ್ದಾನೆ, ತಂದೆಯು ಯೇಸುವಿನಲ್ಲಿದ್ದಾನೆ ಎಂಬದನ್ನು ಫಿಲಿಪ್ಪನು ತಿಳಿದಿರಬೇಕಿತ್ತು. ಸಾಮಾನ್ಯ ಯೆಹೂದ್ಯರು ಸಹ ಯೇಸುವಿನ ಕಾರ್ಯಗಳನ್ನು ನೋಡಿದಾಗ ಅದನ್ನು ತಿಳಿಯಬೇಕಾಗಿತ್ತು (ಯೋಹಾನ 10:37-38). ತಂದೆಯು ಯೇಸುವಿನಲ್ಲಿ ನೆಲಿಸಿದ್ದಾನೆಂಬದನ್ನು ಫಿಲಿಪ್ಪನು ತಿಳಿದಿರಬೇಕಾಗಿತ್ತು, ಯಾಕೆಂದರೆ ಯೇಸುವಿನ ಕಾರ್ಯಗಳು ಹಾಗು ಮಾತುಗಳು ಸ್ಪಷ್ಟವಾಗಿ ತಂದೆಯಿಂದಲೇ ಬಂದವು (ಯೋಹಾನ 7:19) ಆತನು "ಮಗನು ತನ್ನಷ್ಟಕ್ಕೆ ತಾನೇ ಏನನ್ನೂ ಮಾಡುವದಿಲ್ಲ" ಎಂದು ಹೇಳಿದ್ದನು (ಯೋಹಾನ 5:19).

ನಾವು ಯೇಸುವಿನ ಕಾರ್ಯಗಳನ್ನು ನೋಡುವಾಗ ಹಾಗು ಆತನ ಮಾತುಗಳನ್ನು ಕೇಳುವಾಗ ನಾವು ನಿಜವಾಗಿಯೂ ದೇವರ ಕಾರ್ಯಗಳನ್ನು ನೋಡುವವರು ಮತ್ತು ದೇವರ ಮಾತುಗಳನ್ನು ಕೇಳುವವರು ಆಗಿದ್ದೇವೆ. ಇದರ ಮೂಲಕವಾಗಿ ಯೇಸು ದೇವರಲ್ಲಿ ಮತ್ತು ದೇವರು ಯೇಸುವಿನಲ್ಲಿ ಇದ್ದಾನೆಂಬದನ್ನು ಅಥವಾ ಬೇರೆಮಾತುಗಳಲ್ಲಿ ಹೇಳುವದಾದರೆ ಯೇಸು ಹಾಗು ದೇವರು ಒಂದೇ ಆಗಿದ್ದಾರೆಂಬದನ್ನು ನಾವು ತಿಳಿಯಬಹುದು (ಯೋಹಾನ 10:30 ನೋಡಿರಿ).

11 ಬಳಿಕ ಯೇಸು ತನ್ನ ಶಿಷ್ಯರಿಗೆ "ನನ್ನ ಮಾತನ್ನು ನಂಬಿರಿ. ನನ್ನನ್ನು ಮಾತ್ರವಲ್ಲ ಆದರೆ ನಾನು ಹೇಳುವದನ್ನೂ ನಂಬಿರಿ" ಎಂದು ಹೇಳಿದನು. ಒಬ್ಬ ಕ್ರೈಸ್ತನ ನಂಬಿಕೆಯು ಎರಡು ಭಾಗಗಳನ್ನು ಹೊಂದಿವೆ. ಮೊದಲನೆಯದಾಗಿ ನಾವು ಸ್ವತಃ ಕ್ರಿಸ್ತನಲ್ಲಿಯೇ ವಯಕ್ತಿಕವಾಗಿ ನಂಬಿಕೆಯಿಡಬೇಕು. ಎರಡನೆಯದಾಗಿ, ಆತನು ಹೇಳಿರುವದೆಲ್ಲಾ ಸತ್ಯವೆಂದು ನಾವು ನಂಬಬೇಕು. ಯೇಸುವಿನ ಮಾತುಗಳ ಸತ್ಯದಲ್ಲಿ ನಂಬಿಕೆಯಿಡದೆ ಯೇಸುವಿನಲ್ಲಿ ನಂಬಿಕೆಯಿಡುವದು ಕೇವಲ ಕುರುಡ ನಂಬಿಕೆಯಷ್ಟೇ ಆಗಿದೆ. ಆದರೆ ಶಿಷ್ಯರ ನಂಬಿಕೆಯು ಬಲಹೀನವಾಗತ್ತೆಂಬದು ಯೇಸುವಿಗೆ ಗೊತ್ತಿತ್ತು. ಆದ್ದರಿಂದ ಯೇಸು ಅವರಿಗೆ "ನೀವು ಈಗ ನನ್ನ ಮಾತನ್ನು ನಂಬಲಾಗದಿದ್ದರೆ ನಾನು ಮಾಡಿದ ಅದ್ಭುತಗಳನ್ನಾದರೂ ನಂಬಿರಿ. ನಾನು ಮಾಡಿದ ಅದ್ಭುತಗಳೇ ನಾನು ಯಾರೆಂಬದನ್ನು ತೋರಿಸುವವು " ಎಂದನು. (ಯೋಹಾನ 5:36, 10:25 ನೋಡಿರಿ) ಅದ್ಭುತಗಳನ್ನು ಆಧರಿಸಿದ ನಂಬಿಕೆಯು ಬಲಹೀನವಾದದ್ದು ಆದರೆ ಇದು ನಂಬಿಕೆಯಿಲ್ಲದೆ ಇರುವದಕ್ಕಿಂತಲೂ ಉತ್ತಮವಾಗಿದೆ. ಯೇಸು ಎಂದಿಗೂ ಸಹ ಬಲಹೀನ ನಂಬಿಕೆಯನ್ನು ಉದಾಸೀನಮಾಡಲಿಲ್ಲ. ಒಟ್ಟಾಗಿ ಹೇಳುವದಾದರೆ ಹೆಚ್ಚು ಕ್ರೈಸ್ತರು ಪ್ರಾರಂಬದಲ್ಲಿ ಬಲಹೀನ ನಂಬಿಕೆಯಿಂದಲೇ ಪ್ರಾರಂಬಿಸುತ್ತಾರೆ. ಆದರೆ ನಂಬಿಕೆಯು ಬಲಗೊಳಿಸಲ್ಪಡಬೇಕು, ಇಲ್ಲವಾದರೆ ಶೋಧನೆಗಳು ಬರುವಾಗ ಅದಕ್ಕೆ ತಾಳಿಕೊಳ್ಳಲಾಗುವದಿಲ್ಲ.

ಸೈತಾನನು ಮತ್ತು ಆತನ ಸೇವಕರು ಸಹ ಅದ್ಭುತಗಳನ್ನು ಮಾಡಬಲ್ಲರು (ಮಾರ್ಕ 13:22-23). ನಾವು ಯೇಸುವಿನ ಅದ್ಭುತಗಳನ್ನು ದೃಷ್ಟಿಸುವದು ಮಾತ್ರವಲ್ಲ ಆದರೆ ನಾವು ಆತನ ಗುಣ ಸ್ವಭಾವಗಳು ಹಾಗು ಆತನ ಅಂತರ್ಯದ ಗುಣಗಳನ್ನು ಸಹ ದೃಷ್ಟಿಸಬೇಕು. ನಾವು ಆತನ ಉದ್ದೇಶಗಳನ್ನು ದೃಷ್ಟಿಸಬೇಕು. ಸುಳ್ಳು ಕ್ರಿಸ್ತರು ಹಾಗು ಸುಳ್ಳು ಪ್ರವಾದಿಗಳು ತಮ್ಮನ್ನು ಮಹಿಮೆ ಪಡಿಸಿಕೊಳ್ಳಲು ಅದ್ಭುತಗಳನ್ನು ಮಾಡುತ್ತಾರೆ. ಕ್ರಿಸ್ತನು ದೇವರಿಗೆ ಮಹಿಮೆ ತರುವದಕ್ಕಾಗಿ ಅದ್ಭುತಗಳನ್ನು ಮಾಡಿದನು. ಕ್ರಿಸ್ತನ ಅದ್ಭುತಗಳು ಮಾನವರನ್ನು ದೇವರೆಡೆಗೆ ನಡಿಸುವ ಸೂಚಕ ಕಾರ್ಯಗಳಾಗಿವೆ.

12 ಅನಂತರ ಯೇಸು ತನ್ನ ಶಿಷ್ಯರಿಗೆ ಒಂದು ಶ್ರೇಷ್ಠವಾಗ್ದಾನವನ್ನು ಕೊಡುತ್ತಾನೆ: ಆತನು ಮಾಡಿದ ಕಾರ್ಯಗಳಿಗಿಂತ ಮಹತ್ತಾದ ಕಾರ್ಯಗಳನ್ನು ಅವರು ಮಾಡುವರು. ನಿಜವಾಗಿಯೂ ಅಪೊಸ್ತಲರು ಯೇಸುವಿನ ಹಾಗೆಯೇ ಅನೇಕ ಮಹಾ ಅದ್ಭುತಗಳನ್ನು ಮಾಡಿದರು. ಅವು ಗಳಲ್ಲಿ ಕೆಲವು ಅದ್ಭುತಗಳನ್ನು ಅಪೊಸ್ತಲರ ಕೃತ್ಯಗಳು ಪು ಸ್ತಕದಲ್ಲಿ ಬಣ್ಣಿಸಲಾಗಿದೆ. ಪೇತ್ರನು ಒಬ್ಬ ಸತ್ತ ಸ್ತ್ರೀಯನ್ನು ಸಹ ಬದುಕಿಸಿದನು (ಅ.ಕೃತ್ಯ 9:36-42). ಆದರೆ ಯೇಸು ತನ್ನ ಶಿಷ್ಯರು ಮಹತ್ತಾದ ಕಾರ್ಯಗಳನ್ನು ಮಾಡುವರೆಂದು ಹೇಳಿದ್ದರ ತಾತ್ಪರ್ಯವೇನೆಂದರೆ ಅವರು ಆತನಿಗಿಂತಲೂ ಹೆಚ್ಚು ಜನರನ್ನು ದೇವರ ಬಳಿಗೆ ತರುವರು ಎಂಬದೇ. ಈ ಮಹತ್ತಾದ ಕಾರ್ಯಗಳು ಜನರನ್ನು ಮಾನಸಾಂತರಕ್ಕೆ ನಡೆಸುವ ಕಾರ್ಯಗಳಾಗಿರುತ್ತವೆ. ಪಂಚಾಶತ್ತಮದ ದಿನದಂದು ಅಪೊಸ್ತಲರ ಬೋಧನೆಯಿಂದ ಸುಮಾರು ಮೂರು ಸಾವಿರ ಜನರು ನಂಬಿದರು (ಅ.ಕೃತ್ಯ 2:21). ಯೇಸುವಿನ ಮೂರು ವರ್ಷಗಳ ಕಾಲದ ಸಾರ್ವಜನಿಕ ಸೇವೆಯಲ್ಲಿ ನಂಬಿದವರಿಗಿಂತಲೂ ಅದು ಅತ್ಯಧಿಕವಾಗಿತ್ತು.

ಯೇಸು ತಾನು ತಂದೆಯ ಬಳಿಗೆ ಹೋಗುತ್ತಾನಾದ್ದರಿಂದ ಶಿಷ್ಯರು ಮಹತ್ತಾದ ಕಾರ್ಯಗಳನ್ನು ಮಾಡುವರೆಂದು ಯೇಸು ಹೇಳಿದನು. ಈ ಮಹತ್ತಾದ ಕಾರ್ಯಗಳನ್ನು ಮಾಡುವದಕ್ಕೆ ಶಿಷ್ಯರಿಗೆ ಪವಿತ್ರಾತ್ಮನ ಅಗತ್ಯವಿತ್ತು ಆದರೆ ಯೇಸು ಮರಣಹೊಂದಿ, ಅನಂತರ ತಂದೆಯ ಬಳಿಗೆ ಹೋಗುವ ತನಕವೂ ಪವಿತ್ರಾತ್ಮನು ಬರಲಾಗಲಿಲ್ಲ (ಯೋಹಾನ 16:7) ಆದ್ದರಿಂದಲೇ ಯೇಸು "ನಾನು ತಂದೆಯ ಬಳಿಗೆ ಹೋಗುತ್ತೇನಾದ್ದರಿಂದ ನೀವು ಈ ಮಹತ್ತಾದ ಕಾರ್ಯಗಳನ್ನು ಮಾಡುವಿರಿ" ಎಂದನು.

ಈ ದಿನವು ಸಹ ಯೇಸುವಿನ ಶಿಷ್ಯರು ಪವಿತ್ರಾತ್ಮನ ಬಲದ ಮೂಲಕ ಯೇಸು ಮಾಡಿದ ಕಾರ್ಯಗಳಿಂತಲೂ ಮಹತ್ತಾದ ಕಾರ್ಯಗಳನ್ನು ಮಾಡುತ್ತಲಿದ್ದಾರೆ. ಯೇಸುವಿನ ವಾಗ್ದಾನವು ನಮಗೂ ಸಹ ಆಗಿರುತ್ತದೆ.

13 ಮಹತ್ತಾದ ಕಾರ್ಯಗಳನ್ನು ಮಾಡುವದಕ್ಕಾಗಿ ಶಿಷ್ಯರು ಪ್ರಾರ್ಥಿಸಬೇಕಾಗಿರುತ್ತದೆ. ಪವಿತ್ರಾತ್ಮನ ಬಲವನ್ನು ಪಡೆಯಬೇಕಾದರೆ ನಾವು ಅದಕ್ಕಾಗಿ ಪ್ರಾರ್ಥಿಸುವ ಅಗತ್ಯವಿರುತ್ತದೆ. ನಾವು ಅದಕ್ಕಾಗಿ ಮೃತ್ಯುಂಜಯನಾದ ಕ್ರಿಸ್ತನ ಹೆಸರಿನಲ್ಲಿ

ಪ್ರಾರ್ಥಿಸಬೇಕು, ಕಾರಣ ಆತನಿಗೆ ಪರಲೋಕ ಭೂಲೋಕಗಳಲ್ಲಿ ಸಕಲ ಅಧಿಕಾರ ಹಾಗು ಪ್ರಭುತ್ವಗಳು ಸಲ್ಲುತ್ತವೆ. "ನೀವು ನನ್ನ ಹೆಸರಿನಲ್ಲಿ ನನ್ನನ್ನು ಏನಾದರೂ ಬೇಡಿಕೊಂಡರೆ ಅದನ್ನು ನೆರವೇರಿಸುವೆನು" ನಾವು ಯೇಸುವಿನ ಹೆಸರಿನಲ್ಲಿ "ಏನಾದರೂ" ಬೇಡಿಕೊಂಡರೆ ಆತನು ಅದನ್ನು ಮಾಡುವನು! ಪ್ರಾರ್ಥನೆಯ ಬಲಕ್ಕೆ ಯಾವ ಮೇರೆಗಳೂ ಇರುವದಿಲ್ಲ.
ನಾವು ಸಾಮಾನ್ಯವಾಗಿ ಯೇಸುವಿನಿಂದ ಚಿಕ್ಕ ಸಂಗತಿಗಳನ್ನು ಕೇಳುತ್ತೇವೆ. ಆದರೆ ಆತನು ಸಮಸ್ತವನ್ನು ಮಾಡಬಲ್ಲವನಾಗಿದ್ದಾನೆ.

ನಾವು ಕೇಳುವದಕ್ಕಿಂತಲೂ, ಊಹಿಸಿಕೊಳ್ಳುವದಕ್ಕಿಂತಲೂ ಹೆಚ್ಚಾಗಿ ಆತನು ಮಾಡಬಲ್ಲನು (ಎಫೆಸ 3:20-21). ನಾವು ನಮ್ಮ ಚಿಕ್ಕ ಪ್ರಾರ್ಥನೆಗಳ ಮೂಲಕ ಕ್ರಿಸ್ತನ ಮೇಲೆ ಮಿತಿಗಳನ್ನು ಹಾಕದಿರೋಣ!

ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸುವದೆಂದರೆಭೂಲೋಕದಲ್ಲಿ ಆತನ ಸ್ಥಾನದಲ್ಲಿ ಆತನ ಪ್ರತಿನಿಧಿಗಳಾಗಿ ಪ್ರಾರ್ಥಿಸುವದಾಗಿದೆ. ನಾವು ಕ್ರಿಸ್ತನ ರಾಯಭಾರಿಗಳಾಗಿದ್ದೇವೆ (2 ಕೊರಿಂಥ 5:20). ನಾವು ಆತನ ಹೆಸರಿನಲ್ಲಿ ಪ್ರಾರ್ಥಿಸುವಾಗ ಆತನ ಅಧಿಕಾರದೊಂದಿಗೆ ಬೇಡುವವರಾಗಿರುತ್ತೇವೆ, ನಾವು ಆತನಿಗೋಸ್ಕರ ಪ್ರಾರ್ಥಿಸುತ್ತೇವೆ. ನಾವು ಆತನ ಚಿತ್ತಕ್ಕನುಸಾರವಾಗಿ ಪ್ರಾರ್ಥಿಸುತ್ತೇವೆ. ನಾವು ಈ ವಿಧವಾಗಿ ಪ್ರಾರ್ಥಿಸುವಾಗ ಯೇಸು ನಾವು ಏನಾದರೂ ಬೇಡಿಕೊಂಡರೂ ನೆರವೇರಿಸುವನು (ಮತ್ತಾಯ 7:7-8, ಮಾರ್ಕ 11:22-24, ಯೋಹಾನ 15:7,16 ಹಾಗು ವ್ಯಾಖ್ಯಾನಗಳನ್ನು ನೋಡಿರಿ).

ಸ್ವತಃ ಯೇಸುವೇ ನಮ್ಮ ಪ್ರಾರ್ಥನೆಗಳಿಗೆ ಉತ್ತರಿಸುತ್ತಾನೆಂಬದನ್ನು ಇಲ್ಲಿ ಗಮನಿಸಿರಿ. ದೇವರು ಅವು ಗಳಿಗೆ ಉತ್ತರಿಸುವನು, ಯೇಸು ಅವು ಗಳಿಗೆ ಉತ್ತರಿಸುವನು. ದೇವರು ಮತ್ತು ಯೇಸು ಸಮಸ್ತವನ್ನು ಒಟ್ಟಾಗಿ ಮಾಡುವರು, ಯಾವ ವ್ಯತ್ಯಾಸವೂ ಇರುವದಿಲ್ಲ. ನಾವು ದೇವರಿಗೆ ಪ್ರಾರ್ಥಿಸುತ್ತೇವೋ ಅಥವಾ ಯೇಸುವಿಗೆ ಪ್ರಾರ್ಥಿಸುತ್ತೇವೋ, ಎಂಬದು ಮುಖ್ಯವಾಗಿರುವದಿಲ್ಲ, ಅವರಿಬ್ಬರೂ ಆಲಿಸುತ್ತಾರೆ ಹಾಗು ಒಟ್ಟಾಗಿ ಪ್ರತ್ಯುತ್ತರ ಕೊಡುವರು.

ಮಗನ ಮೂಲಕವಾಗಿ ತಂದೆಗೆ ಮಹಿಮೆ ಉಂಟಾಗುವದಕ್ಕಾಗಿ ಯೇಸು ಪ್ರಾರ್ಥನೆಗಳಿಗೆ ಉತ್ತರಿಸುತ್ತಾನೆ. ಯೇಸು ಭೂಮಿಯಲ್ಲಿರುವಾಗ ಮಾಡಿದ್ದೆಲ್ಲವೂ ತಂದೆಯನ್ನು ಮಹಿಮೆಪಡಿಸುವದಕ್ಕಾಗಿಯೇ ಆಗಿತ್ತು ಆದುದರಿಂದ ನಮ್ಮ ಪ್ರಾರ್ಥನೆ ಹಾಗು ಬೇಡಿಕೆಗಳ ಉದ್ದೇಶವು ದೇವರಿಗೆ ಮಹಿಮೆಯನ್ನು ಉಂಟು ಮಾಡುವದೇ ಆಗಿರಬೇಕು. ಒಂದು ವೇಳೆ ನಾವು ಬೇಡಿಕೊಳ್ಳುವ ಸಂಗತಿಯು ದೇವರಿಗೆ ಮಹಿಮೆಯನ್ನು ತರುವದಿಲ್ಲವಾದರೆ ಯೇಸು ಅದನ್ನು ನೆರವೇರಿಸುವದಿಲ್ಲ.

ನಮ್ಮನ್ನು ನಾವು ಪರೀಕ್ಷಿಸಿಕೊಳ್ಳೋಣ. ನಾವು ಯೇಸುವಿನ ಹಾಗೆ "ನಾನು ನನಗೆ ಮಾನಬರಬೇಕೆಂದು ಅಪೇಕ್ಷಿಸುವದಿಲ್ಲ" ಎಂದು ಹೇಳಬಲ್ಲೆವೋ? (ಯೋಹಾನ 8:50). ನಾವು ಯಾತಕ್ಕಾಗಿ ಪ್ರಾರ್ಥಿಸುತ್ತೇವೆ? ದೇವರ ಪ್ರಯೋಜನಕ್ಕಾಗಿಯೋ ಅಥವಾ ನಮ್ಮ ಸ್ವಂತಕ್ಕಾಗಿಯೋ?

ಮತ್ತು ನಮ್ಮ ಪ್ರಾರ್ಥನಾವೇಳೆಗಳ ಮಧ್ಯದಲ್ಲಿ ನಾವು ಹೇಗೆ ಜೀವಿಸುತ್ತೇವೆ? ದೇವರ ಮಹಿಮೆಗಾಗಿಯೋ ಅಥವಾ ನಮ್ಮ ಸ್ವಂತದ್ದಕ್ಕಾಗಿಯೋ? ದೇವರು ನಮ್ಮ ಪ್ರಾರ್ಥನೆಗಳನ್ನು ಆಲಿಸುವದು ಮಾತ್ರವಲ್ಲದೆ ನಮ್ಮ ಇಡೀ ಜೀವಿತವನ್ನು ದೃಷ್ಟಿಸುತ್ತಾನೆ. ನಾವು ನಮ್ಮ ಜೀವಿತಗಳನ್ನು ಆತನ ಮಹಿಮೆಗಾಗಿ ಜೀವಿಸದಿರುವದಾದರೆ ನಾವು ಆತನ ಮಹಮೆಗಾಗಿ ಪ್ರಾರ್ಥಿಸುವಾಗ ಆತನು ನಮ್ಮನ್ನು ನಂಬುವದಿಲ್ಲ. ಹೀಗಿರುವಾಗಿ ನೀವು ಉಂಡರೂ, ಕುಡಿದರೂ ಇನ್ನೇನು ಮಾಡಿದರೂ ಎಲ್ಲವನ್ನೂ ದೇವರ ಘನತೆಗಾಗಿ ಮಾಡಿರಿ (1 ಕೊರಿಂಥ 10:31).

ಆದರೆ ನಾವು ಅಂದುಕೊಳ್ಳುವದೇನೆಂದರೆ: ಇಡೀ ದಿನವೆಲ್ಲಾ ದೇವರ ಮಹಿಮೆಗಾಗಿ ಮಾತ್ರವೇ ಯಾರು ಜೀವಿಸಬಲ್ಲರು? ನಾವು ಅದನ್ನು ಮಾಡಲಾರೆವು ಎಂದೆನ್ನುತ್ತೇವೆ. ನಿಜ, ನಮ್ಮ ಸ್ವಶಕ್ತಿಯಲ್ಲಿ ನಮಗೆ ಸಾಧ್ಯವಿಲ್ಲ. ಆದರೆ ನಾವು ನೆಪ ಹೇಳಲಾಗದು, ಯಾಕೆಂದರೆ ಪವಿತ್ರಾತ್ಮನ ಬಲವು ನಮಗೆ ವಾಗ್ದಾನ ಮಾಡಲ್ಪಟ್ಟಿದೆ. ಆದರೆ ನಾವು ಅದಕ್ಕಾಗಿ ಪ್ರಾರ್ಥಿಸಬೇಕು. ಪವಿತ್ರಾತ್ಮನ ಬಲದ ಮೂಲಕವಾಗಿ ನಾವು ದೇವರ ಮಹಿಮೆಗೋಸ್ಕರ ನಮ್ಮ ಜೀವಿತಗಳನ್ನು ಜೀವಿಸಲು ಶಕ್ತರಾಗುವೆವು.

## ಯೇಸು ಪವಿತ್ರಾತ್ಮನ ವಾಗ್ದಾನ ಮಾಡಿದ್ದು (14:51-31)

15 ವಿಧೇಯತೆಯು ಹೇಗೆ ನಂಬಿಕೆಗೆ ಆಧಾರವೋ ಹಾಗೆಯೇ ಪ್ರೀತಿಗೆ ಆಧಾರವು ಸಹ ವಿಧೇಯತೆಯೇ ಆಗಿದೆ. ಯೇಸುವಿಗೆ "ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು ಹೇಳುವದು ಸುಲಭವಾದ್ದದು, ಆದರೆ ನಾವು ಅದನ್ನು ನಮ್ಮಕ್ರಿಯೆಗಳ ಮೂಲಕ ಸಾಭಿತು ಪಡಿಸಬೇಕು. ವಿಧೇಯತೆಯಿಲ್ಲದ ಪ್ರೀತಿಯು ಮಿಥ್ಯಪ್ರೀತಿಯಾಗಿದೆ. ನಿಜಕ್ರೈಸ್ತರು ವಿಧೇಯರಾಗಬೇಕೆಂಬ ನಿರ್ಭಂದದಿಂದ ಕ್ರಿಸ್ತನಿಗೆ ವಿಧೇಯರಾಗುವದಿಲ್ಲ ಆದರೆ ತಾವು ಇಚ್ಛಿಸುವದರಿಂದಲೇ ವಿಧೇಯರಾಗುತ್ತಾರೆ. ಒಂದು ವೇಳೆ ಒಬ್ಬ ವ್ಯಕ್ತಿಯು ಕ್ರಿಸ್ತನಿಗೆ ವಿಧೇಯನಾಗದಿರುವದಾದರೆ ಅವನು ಕ್ರಿಸ್ತನನ್ನು ಪ್ರೀತಿಸುವದಿಲ್ಲ ಎಂದು ಅದರರ್ಥವಾಗಿದೆ (ವಚನ 24). ದೇವರ ಮೇಲಿನ ಪ್ರೀತಿ ಏನೆಂದರೆ: ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ (1 ಯೋಹಾನ 5:3).

16 ನಾವು ಕ್ರಿಸ್ತನನ್ನು ಪ್ರೀತಿಸಿ ವಿಧೇಯರಾಗುವದಾದರೆ ಆತನು ನಮಗೆ ಬೇರೊಬ್ಬ ಸಹಾಯಕನನ್ನು ಅಂದರೆ ಪವಿತ್ರಾತ್ಮನನ್ನು ಕಳುಹಿಸಿಕೊಡುವನು (ವಚನ 26). ಕ್ರಿಸ್ತನು ತನ್ನನ್ನು ಪ್ರೀತಿಸಿ ವಿಧೇಯರಾಗುವವರಿಗೆ ಮಾತ್ರವೇ ಪವಿತ್ರಾತ್ಮನನ್ನು ಕಳುಹಿಸಿಕೊಡುವನು. ಒಂದು ವೇಳೆ ನಾವು ನಮ್ಮ ಜೀವಿತಗಳಲ್ಲಿ ಪವಿತ್ರಾತ್ಮನ ಬಲವನ್ನು ಅನುಭವಿಸುತ್ತಿಲ್ಲವಾದರೆ ನಮ್ಮ ಜೀವಿತದ ಯಾವದೋ ಕ್ಷೇತ್ರದಲ್ಲಿ ಆತನಿಗೆ ನಾವು ವಿಧೇಯರಾಗದಿರುವದೇ ಕಾರಣವಾಗಿದೆ.

ಈ ಆದರಿಕನು (ಸಹಾಯಕನು) ಯಾರು? ಈ ಪವಿತ್ರಾತ್ಮನು ಯಾರು? ಪವಿತ್ರಾತ್ಮನು ದೇವರ ಹಾಗು ಕ್ರಿಸ್ತನ ಆತ್ಮನೆ ಆಗಿದ್ದಾನೆ. ದೇವರು ಹಾಗು ಕ್ರಿಸ್ತನು ಪರಲೋಕದಲ್ಲಿದ್ದಾರೆ ಆದರೆ ಪವಿತ್ರಾತ್ಮನು ಭೂಲೋಕದಲ್ಲಿ ನಮ್ಮೊಂದಿಗೆ ಇರುವರು. ಪವಿತ್ರಾತ್ಮನು ನಮ್ಮೊಳಗಿದ್ದಾನೆ (ವಚನ 17).

ನಮ್ಮ ಎಲ್ಲಾ ಆತ್ಮೀಕ ಜ್ಞಾನ, ಆತ್ಮೀಕ ಬಲ, ನಮ್ಮ ಆತ್ಮೀಕ ಆನಂದ ಸಮಾಧಾನ ಹಾಗು ಪ್ರೀತಿಗಳು ಪವಿತ್ರಾತ್ಮನಿಂದಲೇ ಬರುತ್ತವೆ (ಗಲಾತ್ಯ 5:22-23 ನೋಡಿರಿ). ನಮ್ಮ ನೂತನ ಜನನ, ನಮ್ಮ ನೂತನ ಆತ್ಮೀಕ ಜೀವನ ಪವಿತ್ರಾತ್ಮನಿಂದ ಬರುತ್ತವೆ (ಯೋಹಾನ 3:5 ಮತ್ತು ವ್ಯಾಖ್ಯಾನ ನೋಡಿರಿ).

ದೇವರು ಮೂರು ರೂಪ ಅಥವಾ ರೀತಿಗಳ ಅಸ್ತಿತ್ವಗಳನ್ನು ಹೊಂದಿದ್ದಾನೆಃ ತಂದೆ, ಮಗ ಮತ್ತು ಪವಿತ್ರಾತ್ಮನು. ಇವರೆಲ್ಲರೂ ಒಬ್ಬನೇ ದೇವರು . ಆದರೆ ಈ ಭೂಮಿಯಲ್ಲಿ ನಮ್ಮನ್ನು ಸ್ಪರ್ಶಿಸುವ ಹಾಗು ಪ್ರವೇಶಿಸುವ ದೇವರ ರೂಪವೆಂದರೆ ಪವಿತ್ರಾತ್ಮನೇ. ತಂದೆಯಾದ ದೇವರು ಅಗೋಚರನಾಗಿದ್ದಾನೆ. ಮಗನಾದ ದೇವರು ಪರಲೋಕಕ್ಕೆ ಹಿಂದಿರುಗಿದ್ದಾನೆ : ಆದರೆ ಪವಿತ್ರಾತ್ಮ ದೇವರು ನಂಬುವವರಾದ ನಮ್ಮೊಂದಿಗಿದ್ದಾನೆ. ಪವಿತ್ರಾತ್ಮನು ಸದಾಕಾಲವೂ ನಮ್ಮೊಂದಿಗೆ ಇರುವನೆಂದು ಯೇಸುವಾಗ್ದಾನ ಮಾಡಿದ್ದಾನೆ.

ಶಿಷ್ಯರು ಅನಾಥರಾಗಿ ಕೈ ಬಿಡಲ್ಪಡಕೂಡದಂತೆ ಯೇಸು ತನ್ನ ಮರಣ ಹೊಂದಿದ ನಂತರ ಪವಿತ್ರಾತ್ಮನನ್ನು ಕಳುಹಿಸಿದನು. ಆದುದರಿಂದ ಯೇಸು ಭೂಮಿಯ ಮೇಲೆ ಮಾಡಿದ ಕಾರ್ಯಗಳನ್ನೇ ಮಾಡುವದಕ್ಕಾಗಿ ಪವಿತ್ರಾತ್ಮನು ಕಳುಹಿಸಲ್ಪಟ್ಟನು. ನಾವು ಪವಿತ್ರಾತ್ಮನ ಬಗ್ಗೆ ಯೋಚಿಸುವಾಗ ಯೇಸುವಿನ ಪ್ರಸನ್ನತೆಯೇ ನಮ್ಮೊಂದಿಗಿದೆ, ಎಂಬದಾಗಿ ತಿಳಿಯಬೇಕು. ಕ್ರಿಸ್ತನು ಏನು ಮಾಡಿದನೋ ಅದನ್ನೇ ಪವಿತ್ರಾತ್ಮನು ಈಗಲೂ ಮಾಡುತ್ತಿದ್ದಾನೆ. ಪವಿತ್ರಾತ್ಮನ ಕಾರ್ಯವು ಏನೆಂದರೆ ಭೂಲೋಕದಲ್ಲಿ ಕ್ರಿಸ್ತನ ಕಾರ್ಯವನ್ನು ಮುಂದುವರೆಸುವದೇ ಆಗಿದೆ.

ಕ್ರಿಸ್ತನು ತನ್ನ ಶಿಷ್ಯರೊಂದಿಗೆ ಇದ್ದನು, ಹಾಗೆಯೇ ಪವಿತ್ರಾತ್ಮನು ನಮ್ಮ ಜೊತೆಯಲ್ಲಿದ್ದಾನೆ (ವಚನ 16). ಕ್ರಿಸ್ತನು ಅವರ ಬೋಧಕನಾಗಿದ್ದನು, ಹಾಗೆಯೇ ಪವಿತ್ರಾತ್ಮನು ನಮ್ಮ ಬೋಧಕನಾಗಿದ್ದಾನೆ (ವಚನ 26). ಕ್ರಿಸ್ತನು ಸ್ವತಃ ತನ್ನ ಕುರಿತು ಸಾಕ್ಷಿಹೊತ್ತನು, ಹಾಗೆಯೇ ಪವಿತ್ರಾತ್ಮನು ಕ್ರಿಸ್ತನಿಗಾಗಿ ಸಾಕ್ಷಿಯನ್ನು ನೀಡುವನು (ಯೋಹಾನ 15:26). ಕ್ರಿಸ್ತನು ತನ್ನ ಶಿಷ್ಯರನ್ನು ಬಲಪಡಿಸಿದನು, ಪ್ರಬೋಧಿಸಿದನು ಹಾಗು ಪ್ರೋತ್ಸಾಹಿಸುತ್ತಾನೆ. ಕ್ರಿಸ್ತನು ತನ್ನ ಶಿಷ್ಯರಿಗೆ ಮಾಡಿದ್ದೆಲ್ಲವನ್ನೂ ಪವಿತ್ರಾತ್ಮನು ನಮಗೆ ಮಾಡುವನು, ಈ ಕಾರಣದಿಂದಲೇ ಯೇಸು ಪವಿತ್ರಾತ್ಮನನ್ನು ಬೇರೊಬ್ಬ ಸಹಾಯಕನೆಂದು (ಆದರಿಕನೆಂದು) ಕರೆದನು. ಯೇಸು "ಮೊದಲ ಆದರಿಕ" ನಾಗಿದ್ದನು, ಈಗ ಪವಿತ್ರಾತ್ಮನು ಆತನ ಸ್ಥಾನದಲ್ಲಿ ಬಂದಿರುತ್ತಾನೆ.

**17** ಪವಿತ್ರಾತ್ಮನು ಸತ್ಯದ ಆತ್ಮವಾಗಿದ್ದಾನೆ (ಯೋಹಾನ 15:26). ಕ್ರಿಸ್ತನು ಸತ್ಯವಾಗಿದ್ದಾನೆ (ವಚನ 6). ಆದುದರಿಂದ ಆತನ ಆತ್ಮವು ಸತ್ಯದ ಆತ್ಮವೇ ಆಗಿರಬೇಕು. ಆತ್ಮನು ವಿಶ್ವಾಸಿಗಳನ್ನು ಎಲ್ಲಾ ವಿಷಯಗಳಲ್ಲಿಯೂ ಸತ್ಯಕ್ಕೆ ನಡೆಸುವನು(ಯೋಹಾನ 16:13). ಲೋಕವು ಅಂದರೆ ಅವಿಶ್ವಾಸಿಗಳ ಲೋಕವು ಆತ್ಮನನ್ನು ಸ್ವೀಕರಿಸಲಾರದು (1ಕೊರಿಂಥ 2:14 ನೋಡಿರಿ).

ಕ್ರಿಸ್ತನನ್ನು ಒಪ್ಪಿಕೊಳ್ಳದವರು ಆತನನ್ನೂ ಒಪ್ಪಿಕೊಳ್ಳುವದಿಲ್ಲ. ಆದರೆ ಆತನಲ್ಲಿ ನಂಬಿಕೆಯಿಡುವವರಿಗಾಗಿ ಯೇಸು ತನ್ನ ಆತ್ಮನನ್ನು ಕಳುಹಿಸಿರುತ್ತಾನೆ. ಪವಿತ್ರಾತ್ಮನು ವಿಶ್ವಾಸಿಯೊಂದಿಗೆ ಮಾತ್ರವಲ್ಲದೆ ವಿಶ್ವಾಸಿಯೊಳಗೆ ಜೀವಿಸುತ್ತಾನೆ.

**18** "ನಾನು ನಿಮ್ಮನ್ನು ಅನಾಥರಾಗಿ ಬಿಡುವದಿಲ್ಲ, ನಿಮ್ಮ ಬಳಿಗೆ ಬರುತ್ತೇನೆ" ಎಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು. ಇದು ಎರಡು ಅರ್ಥಗಳನ್ನು ಕೊಡಬಹುದು. ಮೊದಲನೆಯದಾಗಿ, ಯೇಸು ಪವಿತ್ರಾತ್ಮನ ರೂಪದಲ್ಲಿ ಪು ನಃ ತನ್ನ ಶಿಷ್ಯರ ಬಳಿಗೆ ಬರುವನು ಎಂದರ್ಥವಾಗಿರಬಲ್ಲದು. ಎರಡನೆಯದಾಗಿ ಆತನು ತನ್ನ ಪು ನರುತ್ಥಾನದ ಬಳಿಕ ದೈಹೀಕ ರೂಪದಲ್ಲಿ ಅವರಿಗೆ ಕಾಣಿಸಿಕೊಳ್ಳುವನು ಎಂಬ ಅರ್ಥವನ್ನು ಕೊಡಬಹುದು. ಈ ಎರಡೂ ಅರ್ಥಗಳೂ ಸತ್ಯ.

**19** ಇನ್ನು ಸ್ವಲ್ಪ ಕಾಲವಾದ ಮೇಲೆ ಲೋಕವು ನನ್ನನ್ನು ನೋಡುವದಿಲ್ಲ. ಮರುದಿನ ಯೇಸು ಸಾಯಲಿದ್ದನು. ಅನಂತರ ಆತನು ಇನ್ನು ಮೇಲೆ ಲೋಕದ ಅವಿಶ್ವಾಸಿ ಜನರಿಗೆ ಕಾಣಿಸಿಕೊಳ್ಳುವದಿಲ್ಲ. ಆದರೆ ಆತನು ತನ್ನ ಶಿಷ್ಯರಿಗೆ ಕಾಣಿಸಿಕೊಳ್ಳುವನು. ಆದರೆ ನೀವು ನನ್ನನ್ನು ನೋಡುವಿರಿ (ಯೋಹಾನ 20:19,26 ನೋಡಿರಿ). ಯೇಸು ಸತ್ತವರೊಳಗಿಂದ ಎದ್ದು ಬಂದು ತನ್ನಲ್ಲಿ ವಿಶ್ವಾಸವಿಟ್ಟವರಿಗೆ ಕಾಣಿಸಿಕೊಂಡನು (1 ಕೊರಿಂಥ 15:3-8 ನೋಡಿರಿ). ಆತನು ಮರಣವನ್ನು ಜಯಿಸಿದ್ದನು. ಅವನ ಭೌತಿಕ ದೇಹವು ಕೊಲ್ಲಲ್ಪಟ್ಟಿದ್ದರೂ ಸಹ ಆತನು ಸದಾ ಜೀವಿಸುವವನಾದನು. ಆತನು ಮರಣವನ್ನು ಜಯಿಸಿರುವ ಕಾರಣದಿಂದ ಆತನ ಶಿಷ್ಯರಾದ ನಾವೂ ಮರಣವನ್ನು ಜಯಿಸುವೆವು . ಆತನ ಪು ನರುತ್ಥಾನದ ಕಾರಣದಿಂದಾಗಿ ನಾವು ಸಹ ಸದಾಕಾಲವೂ ಜೀವಿಸುವೆವು . ಮರಣವು ನುಂಗಿಯೇಹೋಯಿತು, ಜಯವಾಯಿತು (1 ಕೊರಿಂಥ 15:54).

**20** ಆ ದಿನದಲ್ಲಿ ಅಂದರೆ ಯೇಸುವಿನ ಪು ನರುತ್ಥಾನದ ದಿನದಲ್ಲಿ ಶಿಷ್ಯರಿಗೆ ಕ್ರಿಸ್ತನ ಆತ್ಮೀಕ ಸ್ವಭಾವದ ಬಗ್ಗೆ ಮನವರಿಕೆಯಾಗುವದು.ಆ ದಿನದಲ್ಲಿ ಯೇಸು ಅವರ ಮೇಲೆ ಊದಿ "ಪವಿತ್ರಾತ್ಮವರವನ್ನು ತಕ್ಕೊಳ್ಳಿರಿ" ಎಂದು ಹೇಳಿದನು (ಯೋಹಾನ 20:22). ಅವರು ಪವಿತ್ರಾತ್ಮನನ್ನು ಪಡೆದ ತಕ್ಷಣವೇ ಯೇಸು ನಿಜವಾಗಿಯೂ (ತನ್ನ) ತಂದೆಯಲ್ಲಿ ಇದ್ದಾನೆಂಬದನ್ನು ಅವರು ಪೂರ್ಣವಾಗಿ ಗ್ರಹಿಸಿಕೊಂಡರು. ಅಲ್ಲದೆ ಈಗ ಅವರು ತಾವು ಯೇಸುವಿನಲ್ಲಿಯೂ ಮತ್ತು ಯೇಸು ಪವಿತ್ರಾತ್ಮನ ಮೂಲಕವಾಗಿ ಅವರಲ್ಲಿಯೂ ಇದ್ದಾನೆಂಬದನ್ನು ಸಹ ಗ್ರಹಿಸಿಕೊಂಡರು.

**21** ಈ ವಚನದ ಮೊದಲ ಭಾಗದಲ್ಲಿ 15 ನೇ ವಚನದ ವಿಚಾರವು ಪು ನರಾವರ್ತಿಸಲ್ಪಟ್ಟಿದೆ.

ಬಳಿಕ ಯೇಸು ಅವರಿಗೆ ತನ್ನನ್ನು ಪ್ರೀತಿಸುವವನನ್ನು ತಾನು ಹಾಗು ಆತನ ತಂದೆ ಇಬ್ಬರೂ ಪ್ರೀತಿಸುವರೆಂದು ಹೇಳಿದನು. ನಾವು ದೇವರನ್ನು ಪ್ರೀತಿಸುವದರಿಂದ ಆತನು ನಮ್ಮನ್ನು ಪ್ರೀತಿಸುತ್ತಾನೆಂದು ಯೇಸು ಇಲ್ಲಿ ಹೇಳಲಿಲ್ಲ. ಅದು ಹಾಗಿರುವದಿಲ್ಲ ಬದಲಾಗಿ ದೇವರು ನಮ್ಮನ್ನು ಪ್ರೀತಿಸುತ್ತಾನಾದ್ದರಿಂದ ನಾವು ಆತನನ್ನು ಪ್ರೀತಿಸುತ್ತೇವೆ.

ದೇವರು ಮೊದಲು ನಮ್ಮನ್ನು ಪ್ರೀತಿಸಿದನು (1 ಯೋಹಾನ 4:10, 19 ನೋಡಿರಿ). ನಾವು ಇನ್ನು ಪಾಪಿಗಳಾಗಿರುವಾಗಲೇ ದೇವರು ನಮ್ಮನ್ನು ಪ್ರೀತಿಸಿದನು (ರೋಮ 5:8).

ಹೇಗಿದ್ದರೂ, ನಾವು ದೇವರ ಪ್ರೀತಿಯನ್ನು ಪಡೆದ ಮೇಲೆ ಅದಕ್ಕೆ ಪ್ರತಿಯಾಗಿ ನಾವು ಆತನನ್ನು ಪ್ರೀತಿಸಬೇಕು. ಪವಿತ್ರಾತ್ಮನ ಮುಖಾಂತರವಾಗಿ ದೇವರ ಪ್ರೀತಿಯು ನಮ್ಮಲ್ಲಿ ಹರಿಯುತ್ತದೆ (ರೋಮ 5:5) ಮತ್ತು ಅದೇ ಪ್ರೀತಿಯು ನಮ್ಮೊಳಗಿಂದ ದೇವರು ಹಾಗು ಇತರ ಮಾನವರೆಡೆಗೆ, ಹರಿಯಬಲ್ಲದು ನಮ್ಮೊಳಗಿಂದ ಪ್ರೀತಿಯು ಹೆಚ್ಚೆಚ್ಚಾಗಿ ದೇವರೆಡೆಗೂ ಇತರ ಮಾನವರೆಡೆಗೂ ಹರಿದಂತೆ ಆತನ ಪ್ರೀತಿಯು ಇನ್ನು ಹೆಚ್ಚಾಗಿ ನಮ್ಮೊಳಗೆ ಹರಿಯುತ್ತದೆ. ಪ್ರೀತಿಯು ಪ್ರೀತಿಗೆ ಜನ್ಮ ನೀಡುತ್ತದೆ.

ತನ್ನನ್ನು ಪ್ರೀತಿಸುವ ವಿಶ್ವಾಸಿಯನ್ನು ದೇವರು ಮಾತ್ರವಲ್ಲದೆ ಕ್ರಿಸ್ತನು ಸಹ ಆ ವಿಶ್ವಾಸಿಯನ್ನು ಪ್ರೀತಿಸುತ್ತಾನೆ. ಮತ್ತು ಕ್ರಿಸ್ತನು ಪವಿತ್ರಾತ್ಮನ ಮೂಲಕವಾಗಿ ತನ್ನನ್ನು ವಿಶ್ವಾಸಿಗೆ ತೋರ್ಪಡಿಸಿಕೊಳ್ಳುವನು. "ನನ್ನನ್ನು ಪ್ರೀತಿಸುವವನಿಗೆ ನಾನು...ಕಾಣಿಸಿಕೊಳ್ಳುವೆನು" ಎಂದು ಹೇಳುತ್ತಾನೆ.

**22** ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾದ ಯೂದನು [102] (ಆದರೆ ಇಸ್ಕರಿಯೋತ ಯೂದನಲ್ಲ) ಇನ್ನು ಸಹ ಯೇಸು ಲೋಕಕ್ಕೆಲ್ಲಾ ತನ್ನನ್ನು ಒಬ್ಬ ಜಯಭರಿತ ಮೆಸ್ಸೀಯನಾಗಿ ತೋರ್ಪಡಿಸಿಕೊಳ್ಳುವನೆಂದೇ ಯೋಚಿಸುತ್ತಿದ್ದನು. ಈಗ ಯೇಸು ತನ್ನ ಹಿಂಬಾಲಕರಿಗೆ ಮಾತ್ರವೇ ಕಾಣಿಸಿಕೊಳ್ಳಲಿದ್ದಾನೆಂಬಂತೆ ತೋರಿತು. "ಹಾಗೇಕೆ?" ಎಂದು ಯೂದನು ತಿಳಿಯಲಿಚ್ಚಿಸಿದ್ದನು.

**23** ಯೇಸು ಯೂದನಿಗೆ ನೇರವಾಗಿ ಉತ್ತರಿಸಲಿಲ್ಲ. ಆತನು ಕೇವಲ 21ನೇ ವಚನದಲ್ಲಿ ಈಗಾಗಲೇ ತಾನು ಹೇಳಿದ್ದನ್ನೇ ಪು ನರಾವರ್ತಿಸುತ್ತಾನಷ್ಟೆ ಅಂದರೆ ಯೇಸು ತನ್ನನ್ನು ಪ್ರೀತಿಸುವವರಿಗೆ ತೋರ್ಪಡಿಸಿಕೊಳ್ಳುವನು. ಅದು ಮಾತ್ರವಲ್ಲದೆ ಆತನನ್ನು ಪ್ರೀತಿಸುವವರ ಬಳಿಯಲ್ಲಿ ಆತನು ಹಾಗು ತಂದೆ ಇಬ್ಬರೂ ಬಿಡಾರ ಮಾಡಿಕೊಳ್ಳುವರು (ನೆಲೆಸುವರು) ಇದನ್ನು ಯೋಚಿಸಿರಿ!

ಸರ್ವಶಕ್ತವಾದ ದೇವರು ಪವಿತ್ರಾತ್ಮನ ರೂಪದಲ್ಲಿ ಪ್ರತಿಯೊಬ್ಬ ವಿಶ್ವಾಸಿಯಲ್ಲಿ ಜೀವಿಸುವನು (ವಚನ 17).

**24** ಯೇಸುವಿಗಾಗಿ ಪ್ರೀತಿ ಮತ್ತು ಆತನ ಬೋಧನೆಗೆ ವಿಧೇಯತೆಗಳು ಯಾವಾಗಲೂ ಒಟ್ಟಾಗಿ ಸಾಗತಕ್ಕದ್ದು (ವಚನ 15). ಒಂದು ವೇಳೆ ಪ್ರೀತಿ ಇಲ್ಲದಿರುವದಾದರೆ ವಿಧೇಯತೆಯೂ ಇರುವದಿಲ್ಲ. ಕ್ರಿಸ್ತನ ವಾಕ್ಯಗಳಿಗೆ ಅವಿಧೇಯರಾಗುವದೆಂದರೆ ದೇವರಿಗೆ ಅವಿಧೇಯರಾದಂತೆಯೇ ಯಾಕೆಂದರೆ ಕ್ರಿಸ್ತನು ಮಾತಾಡುವ ವಾಕ್ಯಗಳು ನಿಜವಾಗಿಯೂ ದೇವರ ವಾಕ್ಯಗಳೇ ಆಗಿವೆ (ಯೋಹಾನ 7:16, 12:49).

**25-26** ಆದರಿಕನು, ಅಂದರೆ ಪವಿತ್ರಾತ್ಮನು (ವಚನ 16), ಮಗನ ಹೆಸರಿನಲ್ಲಿ ತಂದೆಯಿಂದ ಕಳುಹಿಸಲ್ಪಟ್ಟವನಾಗಿದ್ದಾನೆ. ಪವಿತ್ರಾತ್ಮನು ಒಟ್ಟಾಗಿ ತಂದೆ ಹಾಗು ಮಗ ಇಬ್ಬರಿಂದಲೂ ಬರುತ್ತಾನೆ (ಯೋಹಾನ 15:26 ನೋಡಿರಿಃ).

ಯೇಸು ಭೂಮಿಯ ಮೇಲೆ ಶಿಷ್ಯರೊಂದಿಗಿರುವಾಗ ಆತನ ಬೋಧನೆಗಳಲ್ಲಿ ಅವರು ಪೂರ್ತಿಯಾಗಿ ಅರ್ಥ ಮಾಡಿಕೊಳ್ಳಲಾಗದ ಅನೇಕ ಸಂಗತಿಗಳಿದ್ದವು. ಆದರೆ ಆತನ ಮರಣದ ನಂತರ ಪವಿತ್ರಾತ್ಮನು ಶಿಷ್ಯರಿಗೆ ಯೇಸುವಿನ ಮಾತುಗಳು ಹಾಗು ಕ್ರಿಯೆಗಳ ಬಗ್ಗೆ ಜ್ಞಾಪಕಕ್ಕೆ ತಂದದ್ದಷ್ಟೇ ಅಲ್ಲ, ಆದರೆ ಆತನು ಆ ಮಾತುಗಳ ಹಾಗು ಕ್ರಿಯೆಗಳ ಅರ್ಥವನ್ನು ಸಹ ಅವರಿಗೆ ಕಲಿಸಿಕೊಟ್ಟನು.

ಈ ದಿನವು ಸಹ ಪವಿತ್ರಾತ್ಮನು ನಮಗೂ ಅದನ್ನೇ ಮಾಡುತ್ತಾನೆ. ಈಗ ನಮಗೆ ಬರಹ ರೂಪದಲ್ಲಿ[103] ಹೊಸ ಒಡಂಬಡಿಕೆಯಿದೆ ಆದರೂ, ಅದನ್ನು ಪೂರ್ತಿಯಾಗಿ ಅರ್ಥಮಾಡಿಕೊಂಡು ನಮ್ಮ ದೈನಂದಿನ ಜೀವಿತಕ್ಕೆ ಅನ್ವಯಿಸಿಕೊಳ್ಳಲು ಈಗಲೂ ನಮಗೆ ಪವಿತ್ರಾತ್ಮನ ಸಹಾಯದ ಅಗತ್ಯವಿರುತ್ತದೆ. ಈ ದಿನದ ವರೆಗೂ ಸಹ ಪವಿತ್ರಾತ್ಮನು ಸಭೆಯು ಪ್ರಧಾನ ಮಾರ್ಗದರ್ಶಕನೂ, ಬೋಧಕನೂ ಆಗಿದ್ದಾನೆ. ಆದರೆ ನೆನಪಿರಲಿ, ಪವಿತ್ರಾತ್ಮನ ಮಾರ್ಗದರ್ಶನವೂ ಎಂದಿಗೂ ಯಾವ ರೀತಿಯಲ್ಲಿಯೂ ಬೈಬಲಿನ ಬೋಧನೆಗೆ ಅಸಂಬದ್ಧ ಅಥವಾ ವಿರೋಧವಾಗಿ ಇರುವದಿಲ್ಲ. ಒಂದು ವೇಳೆ ಯಾವನಾದರೂ ಬೈಬಲಿನ ಬೋಧನೆಗೆ ವಿರುದ್ಧವಾದ ಬೋಧನೆಯನ್ನು ಪಡೆದುಕೊಳ್ಳುವದಾದರೆ ಅಂತಹ ಬೋಧನೆಯು ಪವಿತ್ರಾತ್ಮನಿಂದ ಬಂದದ್ದಲ್ಲ ಎಂಬದನ್ನು ಆತನು ತಿಳಿದುಕೊಳ್ಳಲಿ.

**27** ಯೇಸು ತನ್ನ ಶಿಷ್ಯರೊಂದಿಗೆ ಬಿಟ್ಟುಹೋದ ಅತಿ ಶ್ರೇಷ್ಠವರಗಳಲ್ಲಿ ಒಂದೆಂದರೆ ಸಮಾಧಾನ. ಇದು ಲೋಕವು ಕೊಡುವಂತ ರೀತಿಯ ಸಮಾಧಾನವಾಗಿರಲಿಲ್ಲ. ಲೋಕದ ಸಮಾಧಾನವು ಹೊರಗಿನ ಪರಿಸ್ಥಿತಿಗಳ ಮೇಲೆ ಆಧಾರವಾಗಿರುತ್ತದೆ. ಅದು ಮಿಥ್ಯ ಸಮಾಧಾನವಾಗಿದೆ. ಅದು ಸ್ಥಿರವಾಗಿ ಉಳಿಯದು. ಲೋಕದ ಸಮಾಧಾನವು ಎಲ್ಲಿಯವರೆಗೆ ಸಮಸ್ಯೆ ಅಥವಾ ಸಂಕಷ್ಟ ಅಥವಾ ಕಾದಾಟ ಇರುವದಿಲ್ಲವೋ ಅಲ್ಲಿಯವರೆಗೆ ಮಾತ್ರವೇ ಇರುತ್ತದೆ. ಯಾವದೇ ರೀತಿಯ ಕಷ್ಟವು ಬಂದ ಕೂಡಲೇ ಲೋಕದ ಸಮಾಧಾನವು ಅಳಿದು ಹೋಗುತ್ತದೆ. ಆದರೆ ಕ್ರಿಸ್ತನ ಪ್ರೀತಿಯು ಆತ್ಮೀಕ ಸಮಾಧಾನವಾಗಿದೆ. ಮೊದಲನೆಯದಾಗಿ, ಇದು ದೇವರೊಂದಿಗೆ ಸಮಾಧಾನ (ರೋಮ 5:1 ಮತ್ತು ವ್ಯಾಖ್ಯಾನ ನೋಡಿರಿ). ಎರಡನೆಯದಾಗಿ, ಇದು ನಮ್ಮ ಹೃದಯ ಹಾಗು ಮನಸ್ಸುಗಳಲ್ಲಿರುವ ಅಂತರ್ಯದ ಸಮಾಧಾನವಾಗಿದೆ. ಬಹಿರಂಗವಾಗಿ ಕಷ್ಟಗಳು ಬರುತ್ತವಾದರೂ

ಕ್ರಿಸ್ತನ ಸಮಾಧಾನವು ನಮ್ಮಲ್ಲಿ ನೆಲೆಯಾಗಿರುತ್ತದೆ. ಮೂರನೆಯದಾಗಿ, ಕ್ರಿಸ್ತನ ಸಮಾಧಾನವು ಪವಿತ್ರಾತ್ಮನ ಫಲಗಳಲ್ಲಿ ಒಂದಾಗಿರುತ್ತದೆ (ಗಲಾತ್ಯ 5:22-23). ಪವಿತ್ರಾತ್ಮನು ನಮ್ಮಲ್ಲಿ ಇರುವ ತನಕ ಆತ್ಮನ ಫಲಗಳು ಸಹ ನಮ್ಮಲ್ಲಿರುತ್ತವೆ.

ಆದುದರಿಂದ, ಯೇಸು ತನ್ನ ಶಿಷ್ಯರಿಗೆ "ನೀವು ಕಳವಳ ಅಥವಾ ಅಂಜಿಕೆ ಪಡಬೇಕಾಗಿಲ್ಲ (ವಚನ 1). ನೀವು ಎಲ್ಲಿ ಹೋದರೂ, ಏನೇ ಸಂಭವಿಸಿದರೂ ನನ್ನ ಸಮಾಧಾನವು ನಿಮ್ಮಲ್ಲಿ ಇರುವದು" ಎಂದು ಹೇಳಿದನು (ಯೋಹಾನ 16:33, ಫಿಲಿಪ್ಪಿ 4:7 ನೋಡಿರಿ).

**28** ಯೇಸು ಅವರನ್ನು ಬಿಟ್ಟು ಹೋಗುತ್ತಿರುವನೆಂದು ಹೇಳಿದ್ದಕ್ಕಾಗಿ ಶಿಷ್ಯರಿಗೆ ಕಳವಳವೂ, ದುಃಖವೂ ಉಂಟಾಗಿತ್ತು. ಆದರೆ ಅವರು ಕೇವಲ ತಮ್ಮ ಬಗ್ಗೆಯೂ, ಹಾಗು ತಮ್ಮ ಅಂಜಿಕೆ, ನಿರಾಶೆಗಳ ಬಗ್ಗೆಯೂ ಮಾತ್ರವೇ ಯೋಚಿಸುತ್ತಿದ್ದರು. ಅವರು ನಿಜವಾಗಿಯೂ ಯೇಸುವನ್ನು ಪ್ರೀತಿಸಿದ್ದಾಗಿದ್ದರೆ ಯೇಸು ತನ್ನ ತಂದೆಯೊಂದಿಗೆ ಇರುವದಕ್ಕಾಗಿ ಪರಲೋಕಕ್ಕೆ ಹೋಗುತ್ತಿದ್ದಾನೆಂಬದಕ್ಕಾಗಿ ಅವರು ಉಲ್ಲಾಸ ಪಟ್ಟಿರುತ್ತಿದ್ದರು. ತಂದೆಯು ಯೇಸುವನ್ನು ಮಹಿಮೆಗೊಳಿಸಿ ಘನಪಡಿಸಲಿದ್ದನು. ಶಿಷ್ಯರು ಉಲ್ಲಾಸಪಟ್ಟಿರಬೇಕಾಗಿತ್ತು!

ಯೇಸು ತನ್ನ ಶಿಷ್ಯರಿಗೆ "ನಾನು ತಂದೆಯ ಬಳಿಗೆ ಹೋಗುವೆನೆಂಬದಕ್ಕಾಗಿ ನೀವು ಸಂತೋಷ ಪಡಬೇಕು ಯಾಕೆಂದರ ತಂದೆಯು ನನಗಿಂತ ದೊಡ್ಡವನು. ಆದುದರಿಂದಲೇಆತನು ನನ್ನನ್ನು ಮಹಿಮೆ ಪಡಿಸಲು ಶಕ್ತನಾಗಿದ್ದಾನೆ. ಆತನು ನನ್ನನ್ನು ಸತ್ತವರೊಳಗಿಂದ ಎಬ್ಬಿಸಿ ಪರಲೋಕದಲ್ಲಿ ತನ್ನ ಬಲಗಡೆಯಲ್ಲಿ ಕೂಡ್ರಿಸುವದಕ್ಕೆ ಶಕ್ತನಾಗಿರುತ್ತಾನೆ!" ಎಂದು ಹೇಳಿದನು (ಎಫೆಸ 1:20-22).

ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ. ದೇವರು ಹಾಗು ಕ್ರಿಸ್ತನು ಸಮಾನರು, ಒಂದೇ ಆಗಿದ್ದಾರೆಂದು ಅನೇಕ ಸಾರಿ ನಾವು ಕೇಳಿದ್ದೇವೆ ಮತ್ತು ಅದು ಸತ್ಯವೇ ಆದಾಗ್ಯು ಇಲ್ಲಿ ಯೇಸು "...ತಂದೆಯು ನನಗಿಂತ ದೊಡ್ಡವನು" ಎಂದು ಹೇಳುತ್ತಾನೆ. ಆತನ ತಾತ್ಪರ್ಯವೇನಾಗಿತ್ತು?

ಆತನ ತಾತ್ಪರ್ಯವೇನೆಂದರೆ: ಯೇಸು ಭೂಮಿಗೆ ಬಂದಾಗ ಆತನು ಆದಿಯಿಂದಲೂ ದೇವರೊಂದಿಗೆ ಹೊಂದಿದ್ದ ತನ್ನ ಕೆಲ ಮಹಿಮೆಯನ್ನು ತೊರೆದು ಬಿಟ್ಟನು. ಅವನು ದೇವರೊಂದಿಗೆ ಸರಿಸಮಾನನಾಗಿದ್ದನು, ಆದರೆ ಆತನು ಭೂಮಿಗೆ ಬಂದಾಗ ಕೆಲಕಾಲದವರೆಗೆ ಆ ಸಮಾನತೆಯನ್ನು ಸ್ವಯಿಚ್ಛೆಯಿಂದ ತೊರೆದು ಬಿಟ್ಟು ಮಾನವ ರೂಪವನ್ನು ಧರಿಸಿಕೊಂಡನು (ಫಿಲಿಪ್ಪಿ 2:6-8 ನೋಡಿರಿ). ಆದುದರಿಂದ ಯೇಸು ಭೂಮಿಯ ಮೇಲಿರುವಾಗ ತಂದೆಯು ಅವನಿಗಿಂತಲೂ ದೊಡ್ಡವನಾಗಿದ್ದನು. ತರುವಾಯ ಪುನರುತ್ಥಾನದ ಮುಖಾಂತರವಾಗಿ ತಂದೆಯು ಯೇಸುವಿಗೆ ಆತನು ಸೃಷ್ಟಿಯ ಪ್ರಾರಂಬದಿಂದಲೂ ಹೊಂದಿದ್ದ ಮಹಿಮೆಯನ್ನು ಹಿಂದಕ್ಕೆ ನೀಡಿದನು (ಯೋಹಾನ 17:5 ನೋಡಿರಿ).

**29** ಯೇಸು ತನ್ನ ಮರಣ ಬಂದಾಗ ಶಿಷ್ಯರ ನಂಬಿಕೆಯು ನಾಶಗೊಳ್ಳ ಬಾರದೆಂದು ಈ ಎಲ್ಲಾ ಸಂಗತಿಗಳನ್ನು ಮುಂದಾಗಿಯೇ ಅವರಿಗೆ ಹೇಳಿದನು (ಯೋಹಾನ 13:19 ಹಾಗು ವ್ಯಾಖ್ಯಾನ ನೋಡಿರಿ). ನಿಜವಾಗಿಯೂ ಯೇಸು ಹೇಳಿದ ಮಾತುಗಳು ನೆರವೇರುವದನ್ನ ನೋಡಿದಾಗ ಅವರ ನಂಬಿಕೆಯು ಬಲಗೊಂಡಿತು.

**30** ಇಹಲೋಕಾಧಿಪತಿಯು (ಯೋಹಾನ 12:31), ಅಂದರೆ ಸೈತಾನನು ಯೂದ ಹಾಗು ಸಿಪಾಯಿಗಳ ರೂಪದಲ್ಲಿ ಬರಲಿದ್ದನು. ಅಲ್ಲದೆ ಆಕ್ಷಣದಲ್ಲಿ ಅವರು ಯೇಸುವನ್ನು ಬಂಧಿಸಲು ಸಿದ್ಧ ಮಾಡಿಕೊಳ್ಳುತ್ತಿದ್ದರು. ಆದರೆ ಸೈತಾನನು ಯೇಸುವಿನ ಬಂಧನಕ್ಕೆ ಕಾರಣನಾದರೂ ಆತನು ಯೇಸುವಿನ ಮೇಲೆ ಯಾವ ಹಿಡಿತವನ್ನು ಹೊಂದಿರಲಿಲ್ಲ. ಸೈತಾನನು ಮಾನವರ ಜೀವಿತಗಳಲ್ಲಿನ ಪಾಪಗಳ ಮುಖಾಂತರವಾಗಿ ಅವರ ಮೇಲೆ ಹಿಡಿತ ಹೊಂದಿರುತ್ತಾನೆ. ಆದರೆ ಯೇಸುವಿನಲ್ಲಿ ಯಾವ ಪಾಪವೂ ಇರಲಿಲ್ಲ, ಆದ್ದರಿಂದ ಸೈತಾನನು ಯೇಸುವಿನ ಮೇಲೆ ಜಯ ಸಾಧಿಸಲು ಯಾವ ಮಾರ್ಗವು ಇರಲಿಲ್ಲ. ನಿಜ, ಸೈತಾನನು ಮೂರು ದಿವಸಗಳ ತನಕ ಯೇಸುವನ್ನು ಸಮಾಧಿಯಲ್ಲಿಟ್ಟನು. ಆದರೆ ಅದಕ್ಕಿಂತಲೂ ಹೆಚ್ಚಾಗಿ ಸೈತಾನನು ಆತನ ಮೇಲೆ ಹಿಡಿತ ಸಾಧಿಸಲಾಗಲಿಲ್ಲ.

**31** ಯೇಸು ತನ್ನ ಸ್ವಯಿಚ್ಛೆಯಿಂದ ದುಷ್ಟ ಮಾನವರು ತನ್ನನ್ನು ಕೊಂದು ಸಮಾಧಿಯಲ್ಲಿಡುವದಕ್ಕೆ ಅನುಮತಿಸಿದನು. ಆತನು ತಂದೆಯನ್ನು ಪ್ರೀತಿಸಿ ಆತನಿಗೆ ವಿಧೇಯ ನಾದನೆಂಬದನ್ನು ಲೋಕಕ್ಕೆ ತೋರಿಸುವದಕ್ಕಾಗಿಯೇ ಇದಾಗಿತ್ತು (ಯೋಹಾನ 10:18 ನೋಡಿರಿ). ಈ ಕಾರಣದಿಂದಲೇ ಯೇಸು ಹೇಳಿದ್ದೇನೆಂದರೆ:" ಅವನಿಗೆ (ಸೈತಾನ) ಸಂಬಂಧಪಟ್ಟದ್ದು ಯಾವುದೊಂದು ನನ್ನಲ್ಲಿಲ್ಲ; ಆದರೂ ನಾನು ತಂದೆಯನ್ನು ಪ್ರೀತಿಸುತ್ತೇನೆಂಬುದು ಲೋಕಕ್ಕೆ ತಿಳಿದಿರಬೇಕು (ವಚನ 30). ದೇವರ ಚಿತ್ತವು ನಾನು ಸತ್ತು ಪುನಃ ಎದ್ದು ಬರಬೇಕೆಂಬದೇ. ಆದುದರಿಂದ ಸೈತಾನನು ನನ್ನ ದೇಹವನ್ನು ಕೊಂದು ಮೂರು ದಿನಗಳ ವರೆಗೆ ಸಮಾಧಿಯಲ್ಲಿಡುವದಕ್ಕೆ ವಿಧೇಯನಾಗಿದ್ದೇನೆ ಎಂಬುದು ಲೋಕಕ್ಕೆ ತಿಳದು ಬರಬೇಕು" ಎಂದು ಹೇಳಿದನು (ಯೋಹಾನ 10:17-18 ನೋಡಿರಿ).

ಅನಂತರ ಯೇಸು "ಏಳಿರಿ, ಇಲ್ಲಿಂದ ಹೋಗೋಣ, ಹಾಗಾದರೆ ಹೋಗಿ ಸೈತಾನನನ್ನು ಸಂಧಿಸೋಣ" ಎಂದನು ಬಹುಶಃ ಅವರು ಶೀಘ್ರವೇ ಮೇಲೆದ್ದು ಆ ಕೋಣೆಯನ್ನು ಬಿಡಬೇಕೆಂದು ಯೇಸುವಿನ ಹೇಳಿಕೆಯಾಗಿರಲಿಲ್ಲ. ಆದರೆ ಆತನು ಅವರೊಂದಿಗೆ ಮಾತಾಡುವದನ್ನು ಮುಗಿಸಿದ ನಂತರ ಅವರು ಹಾಗೆ ಮಾಡಬೇಕೆಂದು ಯೇಸು ಹೇಳಿದನು. [104]

# ಅಧ್ಯಾಯ - 15

## ದ್ರಾಕ್ಷಿ ಬಳ್ಳಿ ಹಾಗು ಕೊಂಬೆಗಳು (15:1-17)

1 ನಾನೇ ನಿಜವಾದ ದ್ರಾಕ್ಷೆ ಬಳ್ಳಿ ಮತ್ತು ನನ್ನ ತಂದೆ (ದೇವರು) ತೋಟಗಾರನು. ಕ್ರೈಸ್ತ ಜೀವನ ಯಾವ ರೀತಿಯದ್ದಾಗಿದೆ ಎಂಬದನ್ನು ತೋರಿಸಲು ಯೇಸು ಇಲ್ಲಿ ಒಂದು ದ್ರಾಕ್ಷೆ ಬಳ್ಳಿ ಹಾಗು ಅದರ ಕೊಂಬೆಗಳ ದೃಷ್ಟಾಂತವನ್ನು ನೀಡುತ್ತಾನೆ. ಹಳೆ ಒಡಂಬಡಿಕೆಯಲ್ಲಿ ಇಸ್ರಾಯೇಲನ್ನು ಒಂದು ದ್ರಾಕ್ಷೆ ಬಳ್ಳಿ ಎಂಬದಾಗಿ ಕರೆಯಲಾಗಿದೆ. ಆದರೆ ಅದು ಒಂದು ಫಲರಹಿತ ಕೆಟ್ಟ ದ್ರಾಕ್ಷೆ ಬಳ್ಳಿಯಾಯಿತು (ಕೀರ್ತನೆಗಳು 80:8-16, ಯೇಶಾಯ 5:1-7, ಯೆರಮಿಯ 2:21). ದೇವರ ನಿಜವಾದ ದ್ರಾಕ್ಷೆ ಬಳ್ಳಿಯು ಸ್ವತಃ ಯೇಸುವೇ ಆಗಿದ್ದಾನೆ.

2 ಕ್ರೈಸ್ತರು ಕೊಂಬೆಗಳಾಗಿದ್ದಾರೆ (ವಚನ 5). ದ್ರಾಕ್ಷೆ ಬಳ್ಳಿಯ ಸತ್ವವು ಕೊಂಬೆಯೊಳಗೆ ಹರಿಯ ಹೊರತು ಹೇಗೆ ಅದು ಜೀವಿಸಲಾರದೋ ಹಾಗೆಯೇ ಕ್ರೈಸ್ತನೊಬ್ಬನೊಳಗೆ ಕ್ರಿಸ್ತನ ಪವಿತ್ರಾತ್ಮನು ಹರಿಯದ ಹೊರತು ಅವನು ಜೀವಿಸಲು ಸಾದ್ಯವಿಲ್ಲ. ಕ್ರಿಸ್ತನ ಆತ್ಮನಿಲ್ಲದೆ ನಾವು ಶೀಘ್ರವೇ ಆತ್ಮೀಕವಾಗಿ ಸತ್ತು ಹೋಗುತ್ತೇವೆ. ನಾವು ಫಲವನ್ನು ಬಿಡದಿದ್ದರೆ ಕ್ರಿಸ್ತನ ಆತ್ಮನು ನಮ್ಮಲ್ಲಿಲ್ಲ ಎಂಬದಕ್ಕೆ ಅದು ಒಂದು ಗುರುತಾಗಿದೆ. ಅಂತಹ ಕೊಂಬೆಯನ್ನು ದೇವರು ಕತ್ತರಿಸುತ್ತಾನೆ. ಫಲರಹಿತ ಕೊಂಬೆಯು ದೇವರಿಗೆ ಅಪ್ರಯೋಜಕವಾಗಿದೆ (ಮತ್ತಾಯ 3:10 ನೋಡಿರಿ).

ಹೇಗಿದ್ದರೂ, ಫಲಕೊಡುವ ಕೊಂಬೆಯು ಹೆಚ್ಚು ಫಲ ಕೊಡುವ ಹಾಗೆ ಅದನ್ನು ಶುದ್ಧಿ ಮಾಡುತ್ತಾನೆ[105] ದೇವರು ಕೆಟ್ಟ ಟೊಂಗೆಗಳನ್ನು ಅಂದರೆ ನಮ್ಮ ಕೆಟ್ಟ ಚಟಗಳು ಹಾಗು ಪಾಪಗಳನ್ನು ಕತ್ತರಿಸಿ ಹಾಕುತ್ತಾನೆ. ಶುಧ್ಧಿ ಮಾಡಲ್ಪಡುವದು ಬಹಳ ನೋವು ದಾಯಕವಾಗಿರಬಲ್ಲದು. ಹಲವಾರು ವೇಳೆ ದೇವರು ಕ್ರೈಸ್ತರನ್ನು "ಶುದ್ಧಿ ಮಾಡುವದಕ್ಕಾಗಿ" ಕಷ್ಟಕರ ಅನುಭವಗಳ ಮೂಲಕ ಹಾದು ಹೋಗುವಂತೆ ಮಾಡುತ್ತಾನೆ (ಯಾಕೋಬ 1:2-4 ಹಾಗು ವ್ಯಾಖ್ಯಾನ ನೋಡಿರಿ). ವಿಶೇಷವಾಗಿ, ನಮ್ಮ ಗರ್ವವನ್ನು ತೊಲಗಿಸುವದಕ್ಕಾಗಿ ಆತನು ನಮ್ಮನ್ನು ಹೀನ ಅನುಭವಗಳಿಗೆ ನಡೆಸುತ್ತಾನೆ. ಕೊಂಬೆಯು ಶುದ್ದಿ ಮಾಡಲ್ಪಟ್ಟ ಮೇಲೆ ಹೆಚ್ಚು ಫಲವನ್ನು ಕೊಡುವ ಹಾಗೆಯೇ ನಾವು ಸಹ ಹೆಚ್ಚು ಫಲವನ್ನು ಕೊಡುತ್ತೇವೆ.

ಪಾಪ ಹಾಗು ಗರ್ವಗಳಿಂದ ಶುದ್ಧಿಮಾಡಲ್ಪಟ್ಟಿರುವ ಕ್ರೈಸ್ತರು ಮಾತ್ರವೇ ದೇವರಿಗಾಗಿ ಫಲವನ್ನು ಕೊಡಲು ಸಾದ್ಯ. ದೇವರು ಎದುರು ನೋಡುವ ಫಲವು ಎರಡು ರೀತಿಯದ್ದಾಗಿದೆ, ಮೊದಲನೆಯದಾಗಿ, ಆತನು ಪವಿತ್ರಾತ್ಮನ ಫಲಗಳಿಗಾಗಿ ಎದುರು ನೋಡುತ್ತಾನೆ (ಗಲಾತ್ಯ 5: 22-23), ಅವು ಗಳು ಕ್ರಿಸ್ತನ ಜೀವಿತದಲ್ಲಿ ತೋರಿಬಂದ ಗುಣ ಸ್ವಭಾವಗಳನ್ನು ಹೋಲುತ್ತದೆ (ಮತ್ತಾಯ 5:3-10 ನೋಡಿರಿ). ಎರಡನೆಯದಾಗಿ, ಇನ್ನೊಂದು ವಿಧದ "ಫಲ"ಕ್ಕಾಗಿ ಅಪೇಕ್ಷಿಸುತ್ತಾನೆ, ಅದೆಂದರೆ, ನಮ್ಮ ಸಾಕ್ಷಿಯ ಮೂಲಕವಾಗಿ ಕ್ರಿಸ್ತನ ಬಳಿಗೆ ಬಂದ ನೂತನ ವಿಶ್ವಾಸಿಗಳೇ. ನೂತನ ಕ್ರೈಸ್ತರು ಸಹ ದೇವರಿಗೆ ಮೆಚ್ಚಿಕೆಯುಂಟು ಮಾಡುವ "ಫಲ" ಆಗಿದ್ದಾರೆ.

3 ಇಸ್ಕರಿಯೋತ ಯೂದನನ್ನು ಹೊರತು ಪಡಿಸಿ ಉಳಿದ ಶಿಷ್ಯರೆಲ್ಲರೂ ಶುದ್ದರೆಂದು ಯೇಸು ಅರಿಗೆ ನಿಶ್ಚಯ ಪಡಿಸುತ್ತಾನೆ. (ಯೋಹಾನ 13:10 ಮತ್ತು ವ್ಯಾಖ್ಯಾನ ನೋಡಿರಿ). ಶಿಷ್ಯರು ಫಲ ಬಿಡುವದಕ್ಕೆ ಸಿದ್ದವಾದ ಸಜೀವ ಕೊಂಬೆಗಳಾಗಿದ್ದರು. ಹೌದು, ಕಾಲಕಾಲಕ್ಕೆ ಅವರಿಗೆ ಶುಧ್ಧ ಮಾಡುವಿಕೆಯ ಅಗತ್ಯವಾಗಬಹುದು ಆದರೆ ಅವರು ಈಗಾಗಲೇ ಕ್ರಿಸ್ತನ ವಾಕ್ಯದಲ್ಲಿ, ಕ್ರಿಸ್ತನ ಬೋಧನೆಯಲ್ಲಿ ನಂಬಿಕೆಯಿಡುವದರ ಮೂಲಕ ಪಾಪದಿಂದ ಶುದ್ಧಗೊಂಡಿದ್ದರು.

4 ನೀವು ನನ್ನಲ್ಲಿ ನೆಲೆಗೊಂಡಿರಿ. ನಾನೂ ನಿಮ್ಮಲ್ಲಿ ನೆಲೆಗೊಂಡಿರುವೆನು. ಕ್ರಿಸ್ತನಲ್ಲಿ ನೆಲೆಗೊಂಡಿರುವದೆಂದರೆ ಆತನನ್ನು ಪ್ರೀತಿಸುವದು, ಆತನಿಗೆ ವಿಧೇಯರಾಗುವದು, ಆತನನ್ನು ಪ್ರಾರ್ಥಿಸುವದು, ಆರಾಧಿಸುವದು ಎಂದರ್ಥವಾಗಿದೆ. ಬೇರೆ ಮಾತುಗಳಲ್ಲಿ ಹೇಳಬೇಕಾದರೆ ಕ್ರಿಸ್ತನಲ್ಲಿ ನೆಲೆಗೊಳ್ಳುವದೆಂದರೆ ಒಂದು ಕೊಂಬೆಯು ದ್ರಾಕ್ಷೆಬಳ್ಳಿಗೆ ಜೊತೆಯಾಗಿ ಇರುವ ಪ್ರಕಾರವೇ ನಾವು ಆತ್ಮೀಕವಾಗಿ ಕ್ರಿಸ್ತನಿಗೆ ಅಂಟಿಕೊಂಡು ಉಳಿಯಬೇಕು. ನಾವು ಈ ರೀತಿಯಾಗಿ ಕ್ರಿಸ್ತನೊಂದಿಗೆ ಜೊತೆಯಾಗಿ ನೆಲೆಗೊಳ್ಳುವದಾದರೆ ನಾವು ಜೀವಿಸುವ ಬಳ್ಳಿಗಳ ಹಾಗೆ ಇರುತ್ತೇವೆ. ಮತ್ತು ದ್ರಾಕ್ಷೆ ಬಳ್ಳಿಯ ಸತ್ವವು ಕೊಂಬೆಗಳೊಳಗೆ ಹರಿದು ಜೀವವನ್ನು ಒದಗಿಸುವ ಪ್ರಕಾರವೇ ಕ್ರಿಸ್ತನ ಆತ್ಮವು ನಮ್ಮಲ್ಲಿ ಹರಿದು ನಮಗೆ ಆತ್ಮೀಕ ಜೀವವನ್ನು ಕೊಡುತ್ತದೆ.

ನಾವು ಫಲವನ್ನು ಕೊಡುವದಕ್ಕಾಗಿ ಕ್ರಿಸ್ತನಲ್ಲಿ ನೆಲೆಗೊಂಡಿರಬೇಕು. ಕ್ರಿಸ್ತನಲ್ಲಿ ನೆಲೆಗೊಳ್ಳದಿರುವದಾದರೆ, ನಾವು ಫಲವನ್ನು ಕೊಡುವವರಾಗುವದಿಲ್ಲ. ಅದು ಮಾತ್ರವಲ್ಲದೆ, ನಾವು ಒಣಗಿ ಸತ್ತು ಹೋಗುವೆವು (ವಚನ 6).

5 ಈ ವಚನವು ಒನೇ ವಚನದ ವಿಚಾರವನ್ನು ಪುನರಾವರ್ತಿಸುತ್ತದೆ. ದ್ರಾಕ್ಷೆ ಬಳ್ಳಿ ಹಾಗು ಅದರ ಕೊಂಬೆಗಳ ಈ ಬೋಧನೆಯು ಪೌಲನು ದೇಹ ಮತ್ತು ಅದರ ಅಂಗಾಂಗಗಳ ಕುರಿತಾಗಿ ಮಾಡಿದ ಬೋಧನೆಗೆ ಹೋಲಿಕೆಯಾಗಿದೆ (1 ಕೊರಿಂಥ 12:27). ಇಲ್ಲಿ ನಾವು ಕ್ರಿಸ್ತನ ದ್ರಾಕ್ಷೆ ಬಳ್ಳಿಯಲ್ಲಿ ಕೊಂಬೆಗಳಾಗಿದ್ದೇವೆ. ಪೌಲನ ದೃಷ್ಟಾಂತದಲ್ಲಿ ನಾವು ಕ್ರಿಸ್ತನ ದೇಹದ ಅಂಗಾಂಗಗಳಾಗಿದ್ದೇವೆ. ಆದರೆ ಎರಡರ ಬೋಧನೆಯು ಒಂದೇ ಆಗಿದೆ. ನಾವು ಕ್ರಿಸ್ತನಿಗೆ ಹೊಂದಿಕೊಂಡು ನೆಲೆಗೊಂಡಿರಬೇಕು, ಇಲ್ಲವಾದರೆ ನಾವು ಸಾಯುವೆವು.

ಯೇಸು "ನನ್ನನ್ನು ಬಿಟ್ಟು ನೀವು ಏನೂ ಮಾಡಲಾರಿರಿ" ಎಂದನು, ಕ್ರಿಸ್ತನನ್ನು ಬಿಟ್ಟು ನಾವು ಯಾವ ಆತ್ಮೀಕ ಕಾರ್ಯವನ್ನು ಮಾಡಲಾರೆವು, ಕ್ರಿಸ್ತನನ್ನು ಹೊಥಿಂಟಜಿರತು ಪಡಿಸಿ ನಾವು ದೇವರಿಗೆ ಮೆಚ್ಚಿಕೆಯಾಗುವ ಯಾವದನ್ನೂ

ಮಾಡಲಾಗುವದಿಲ್ಲ ಆದರೆ ಕ್ರಿಸ್ತನೊಂದಿಗೆ ಕೂಡಿದವರಾಗಿ ಆತನಲ್ಲಿ ನಾವು ಎಲ್ಲವನ್ನೂ ಮಾಡಬಲ್ಲೆವು. ಪೌಲನು ಹೇಳಿದ್ದು: ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ (ಫಿಲಿಪ್ಪಿ 4:13). ಆದರೆ ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾದದ್ದೇನೆಂದರೆ ನಾವು ಏನೆಲ್ಲಾ ಫಲಕೊಟ್ಟರೂ ಅದು ನಮ್ಮ ಫಲವಲ್ಲ, ಅದು ಕ್ರಿಸ್ತನ ಫಲವೇ ಆಗಿದೆ. ದ್ರಾಕ್ಷೆ ಬಳ್ಳಿಯೇ ಫಲ ಬಿಡುತ್ತದೆ ಹೊರತು ಕೊಂಬೆಗಳಲ್ಲ. ಕೊಂಬೆಗಳು ದ್ರಾಕ್ಷೆ ಬಳ್ಳಿಯ ಫಲವನ್ನು ಹೊತ್ತು ಕೊಳ್ಳುತ್ತವಷ್ಟೇ.

6 ದ್ರಾಕ್ಷೆ ಬಳ್ಳಿಯಿಂದ ಬೇರ್ಪಡುವ ಕೊಂಬೆಗಳಿಗೆ ಆಗುವ ಪರಿಸ್ಥಿತಿಯನ್ನು ನಾವು ಎಂದಿಗೂ ಮರೆಯದಿರೋಣ., ಅವುಗಳು ಸತ್ತು ಹೋಗಿ ಬೆಂಕಿಗೆ ಹಾಕಲ್ಪಡುವವು. ಕ್ರಿಸ್ತನೊಂದಿಗಿನ ನಮ್ಮ ಐಕ್ಯತೆಗೆ ತಡೆಯುಂಟು ಮಾಡಲು ನಾವು ಯಾವದಕ್ಕೂ ಅನುಮತಿಸದಿರೋಣ.

ನಮ್ಮನ್ನು ಕ್ರಿಸ್ತನಿಂದ ಅಗಲಿಸುವ ಏಕೈಕ ಸಂಗತಿಯು ಪಾಪವೇ ಆಗಿದೆ. ಪಾಪವು ಕೊಂಬೆಯ ಅಡಿಭಾಗವನ್ನೇ ತಿಂದು ಹಾಕುವ ಒಂದು ರೋಗದಂತಿದೆ. ನಾವು ಪಶ್ಚಾತಾಪಪಡದ ನಮಗೆ ಗೊತ್ತಿರುವ ಯಾವದೇ ಪಾಪವು ನಮ್ಮಲ್ಲಿ ಉಳಿಯುವದಾದರೆ ನಾವು ಕ್ರಿಸ್ತನೊಂದಿಗೆ ನಮ್ಮ ಐಕ್ಯತೆಯನ್ನು ಕಳೆದುಕೊಳ್ಳುತ್ತೇವೆ.

7 ನಾವು ಕ್ರಿಸ್ತನಲ್ಲಿ ನೆಲೆಗೊಳ್ಳುವದಾದರೆ ಆತನು ನಮ್ಮಲ್ಲಿ ನೆಲೆಗೊಳ್ಳುವನು. ಆತನು ನಮ್ಮಲ್ಲಿ ನೆಲೆಗೊಳ್ಳುವದಾದರೆ ಆತನ ವಾಕ್ಯಗಳು ಸಹ ನಮ್ಮಲ್ಲಿ ನೆಲೆಗೊಳ್ಳುವವು. ನಾವು ಕ್ರಿಸ್ತನನ್ನು ಮತ್ತು ಆತನ ಬೋಧನೆಯನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಆದರೆ ಯಾರು ಕ್ರಿಸ್ತನ ವಾಕ್ಯಗಳಿಗೆ ವಿಧೇಯರಾಗುವರೋ ಅವರಲ್ಲಿ ಮಾತ್ರವೇ ಆತನ ವಾಕ್ಯಗಳು ನೆಲೆಗೊಳ್ಳುವವು.

ಇಂದು ನಮಗೆ ಕ್ರಿಸ್ತನ ವಾಕ್ಯಗಳು ವಿಶೇಷವಾಗಿ ಹೊಸ ಒಡಂಬಡಿಕೆಯು ವೇದವಾಕ್ಯವಾಗಿದೆ. ಹೀಗೆ, ನಮ್ಮ ಕ್ರೈಸ್ತೀಯ ಜೀವಿತಗಳಲ್ಲಿ ಎರಡು ಮುಖ್ಯ ಸಂಗತಿಗಳು ಅವಶ್ಯಕವೆಂದು ಹೇಳಬಹುದು: ಮೊದಲನೆಯದಾಗಿ, ಕ್ರಿಸ್ತನು ಪವಿತ್ರಾತ್ಮನ ಮೂಲಕವಾಗಿ ನಮ್ಮಲ್ಲಿ ನೆಲೆಗೊಂಡಿರಬೇಕು, ಮತ್ತು ಎರಡನೆಯದಾಗಿ, ಕ್ರಿಸ್ತನ ವಾಕ್ಯಗಳು ಅಂದರೆ ಬೈಬಲಿನ ವಾಕ್ಯಗಳು ನಮ್ಮ ಹೃದಯಗಳಲ್ಲಿ ನೆಲೆಗೊಳ್ಳಬೇಕು.

ನಾವು ಕ್ರಿಸ್ತನಲ್ಲಿಯೂ ಮತ್ತು ಆತನು ನಮ್ಮಲ್ಲಿಯೂ ನೆಲೆಗೊಂಡಿರುವದಾದರೆ ನಾವು ಏನು ಬೇಕಾದರೂ ಬೇಡಿಕೊಂಡರೆ ಆತನು ಅದನ್ನು ನೆರವೇರಿಸುವನು.

ಯೋಹಾನ 14:13ರಲ್ಲಿ ನಾವು ಯೇಸುವಿನ ಹೆಸರಿನಲ್ಲಿ ಏನಾದರೂ ಬೇಡಿಕೊಂಡರೆ ಆತನು ಅದನ್ನು ನೆರವೇರಿಸುವೆನೆಂದು ಬೋಧಿಸಿದನು. ಈ ಎರಡು ಹೇಳಿಕೆಗಳೂ ವಾಸ್ತವವಾಗಿ ಒಂದೇ ಆಗಿವೆ. ಕ್ರಿಸ್ತನಲ್ಲಿ ನೆಲೆಗೊಂಡ ಯಾವನಾದರೂ ಖಂಡಿತವಾಗಿಯೂ ಆತನ ಹೆಸರಿನಲ್ಲಿ ಪ್ರಾರ್ಥಿಸುವನು. ಅದು ಮಾತ್ರವಲ್ಲದೆ ನಾವು ಕ್ರಿಸ್ತನಲ್ಲಿ ನೆಲೆಗೊಂಡು ಆತನ ವಾಕ್ಯಗಳನ್ನು ನಮ್ಮ ಹೃದಯಗಳಲ್ಲಿಟ್ಟುಕೊಳ್ಳುವದಾದರೆ ಯಾವಾಗಲೂ ನಾವು ಕ್ರಿಸ್ತನ ಚಿತ್ತಕ್ಕನುಸಾರವಾಗಿ ಪ್ರಾರ್ಥಿಸುವೆವು. ನಾವು ಏನೇ ಕೇಳಿಕೊಂಡರೂ ದೇವರು ಸಂತೋಷದಿಂದ ಕೊಡುತ್ತಾನೆ. ಆದಕಾರಣವೇ ಕ್ರಿಸ್ತನಲ್ಲಿ ನೆಲೆಗೊಳ್ಳುವವರು ತಾವು ಏನು ಬೇಡಿಕೊಂಡರೂ ಪಡೆದು ಕೊಳ್ಳುವರು (ಯೋಹಾನ 14:13 ಹಾಗು ವ್ಯಾಖ್ಯಾನ ನೋಡಿರಿ).

ಕ್ರೈಸ್ತ ಜೀವಿತದಲ್ಲಿ ನಾವು ಎರಡು ಸಂಗತಿಗಳು ಜೊತೆಜೊತೆಯಾಗಿ ಕಾಣಿಸಿಕೊಳ್ಳುವದನ್ನು ನೋಡುತ್ತೇವೆ: ವಾಗ್ದಾನಗಳು ಹಾಗು ಶರತ್ತುಗಳು. ನಾವು ಶರತ್ತನ್ನು ನೆರವೇರಿಸುವದಾದರೆ ದೇವರು ತನ್ನ ವಾಗ್ದಾನವನ್ನು ನೆರವೇರಿಸುವನು. ವಾಗ್ದಾನದೊಂದಿಗೆ ಒಂದು ಶರತ್ತನ್ನು (ನಿರ್ಬಂಧ) ತಿಳಿಸದೆ ದೇವರು ಎಂದೂ ಯಾವ ವಾಗ್ದಾನವನ್ನು ಮಾಡಲಿಲ್ಲ.

ಈ ಕೆಲವು ವಾಗ್ದಾನಗಳು ಮತ್ತು ಅವುಗಳೊಂದಿಗಿನ ಶರತ್ತುಗಳು ಯಾವವು? ಒಂದು ಉದಾಹರಣೆ ಯೇನೆಂದರೆ: ಒಬ್ಬನಿಗೆ ನಂಬಿಕೆಯಿರುವದಾದರೆ ದೇವರು ಆತನ ಬೇಡಿಕೆಯನ್ನು ನೆರವೇರಿಸುವನು (ಮಾರ್ಕ 11:24). ಒಬ್ಬನು ನಂಬಿಕೆಯನ್ನು ಹೊಂದಿರಬೇಕೆಂದು ಶರತ್ತಾಗಿದೆ; ಪ್ರಾರ್ಥನೆಯು ನೆರವೇರಿಸಲ್ಪಡುವದು ಎಂಬದು ವಾಗ್ದಾನವಾಗಿದೆ. ಎರಡನೆಯ ಉದಾಹರಣೆಯು ಏನೆಂದರೆ: ಒಬ್ಬನು ಇತರರನ್ನು ಕ್ಷಮಿಸುವದಾದರೆ ದೇವರು ಅವನನ್ನು ಕ್ಷಮಿಸುವನು (ಮತ್ತಾಯ 6:14). ಮೂರನೆಯ ಉದಾಹರಣೆ ಏನೆಂದರೆ: ಒಬ್ಬನು ದೇವರಿಗೆ ಸಮೀಪಕ್ಕೆ ಬರುವದಾದರೆ ದೇವರು ಆತನ ಸಮೀಪಕ್ಕೆ ಬರುವನು (ಯಾಕೋಬ 4:8) ಮತ್ತು ನಾಲ್ಕನೆಯ ವಾಗ್ದಾನವು ಈ ವಚನದಲ್ಲಿ ಕಂಡು ಬರುತ್ತದೆ: ನೀವು ನನ್ನಲ್ಲಿಯೂ ಮತ್ತು ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿರುವದಾದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವದು.

ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳಬೇಕಾದದ್ದೇನೆಂದರೆ: ನಾವು ದೇವರಿಂದ ಏನು ಕೇಳುತ್ತೇವೊ ಅದನ್ನು ಯಾವಾಗಲೂ ಪಡೆಯುತ್ತೇವೆಯೋ? ಬಹುಶ: ಅನೇಕ ವೇಳೆ ನಾವು ಸ್ವೀಕರಿಸುವದಿಲ್ಲ ಯಾಕೆ? ಯಾಕೆಂದರೆ ನಾವು ಶರತ್ತನ್ನು ಪೂರೈಸಿರುವದಿಲ್ಲ.

ದೇವರು ನಮ್ಮ ಬೇಡಿಕೆಗಳನ್ನು ಅನುಗ್ರಹಿಸದಿರುವಾಗ ಸಾಮಾನ್ಯವಾಗಿ ನಾವು ಏನು ಹೇಳುತ್ತೇವೆ? ಏನೆಂದರೆ "ಅದನ್ನು ಅನುಗ್ರಹಿಸುವದು ದೇವರ ಚಿತ್ತವಾಗಿರಲಿಲ್ಲ!! ಆದರೆ ನಮ್ಮ ಪ್ರಾರ್ಥನೆಗೆ ಉತ್ತರ ದೊರೆಯದಿದ್ದಕ್ಕೆ ಅದು ನಿಜವಾದ ಕಾರಣವಾಗಿರುವದಿಲ್ಲ. ಅದು ದೇವರ ಚಿತ್ತವಾಗಿರಲಿಲ್ಲ ಎಂದು ಹೇಳುವಾಗ ನಮ್ಮ ಭಯಕೆಗಳನ್ನು ನೆರವೇರಿಸಿರುವದಕ್ಕೆ ನಾವು ದೇವರನ್ನು ಆರೋಪಿಸಿದಂತಾಗುತ್ತದೆ. ಪ್ರಾರ್ಥನೆಯಲ್ಲಿ ನಾವು ಯಶಸ್ವಿಯಾಗದಿರುವಾಗ ದೇವರ ಮೇಲೆ ಆರೋಪ ಹಾಕದಿರೋಣ!

ಅದಕ್ಕೆ ಬದಲಾಗ್ಗಿ ನಮ್ಮನ್ನೇ ಆರೋಪಿಸಿಕೊಳ್ಳೋಣ. ನಮ್ಮ ಪ್ರಾರ್ಥನೆಗಳು ಯಶಸ್ವಿಗೊಳ್ಳದಿರುವದಕ್ಕೆ ಒಂದೇ ಒಂದು ಕಾರಣವಿರುತ್ತದೆ: ನಾವು ಸರಿಯಾದ ರೀತಿಯಲ್ಲಿ ಪ್ರಾರ್ಥಿಸಿರುವದಿಲ್ಲ (ಯಾಕೋಬ 4:3 ನೋಡಿರಿ). ನಾವು ಶರತ್ತುಗಳನ್ನು ನೆರವೇರಿಸಿರುವದಿಲ್ಲ.

ಸಾಮಾನ್ಯವಾಗಿ ಸರಿಹೊಂದದ ಇನ್ನೊಂದು ಹವ್ಯಾಸ ನಮಗಿರುತ್ತದೆ. ನಾವು ನಮ್ಮ ಪ್ರಾರ್ಥನೆಯನ್ನು ಮುಗಿಸಿದನಂತರ ಹಲವಾರು ವೇಳೆ ದೇವರಿಗೆ "ದಯವಿಟ್ಟು ನಿನ್ನ ಚಿತ್ತವಾದರೆ ನಮ್ಮ ಬೇಡಿಕೆಯನ್ನು ಅನುಗ್ರಹಿಸು" ಎಂದು ಹೇಳಿತ್ತೇವೆ. ನಾವು "ನಿನ್ನ ಚಿತ್ತವಾದರೆ" ಎಂಬ ಈ ಮಾತುಗಳನ್ನು ಸೇರಿಸಿದಾಗ ನಾವು ದೇವರ ಚಿತ್ತವೇನೆಂಬದನ್ನು ತಿಳಿಯದೆಯೇ ಪ್ರಾರ್ಥಿಸಿದ್ದೇವೆಂಬದನ್ನು ಒಪ್ಪಿಕೊಂಡಂತಾಗುತ್ತದೆ. ಅಂತಹ ಪ್ರಾರ್ಥನೆಗಳು ಸಾಮಾನ್ಯವಾಗಿ ಉತ್ತರಿಸಲ್ಪಡುವದಿಲ್ಲ. ಈ ವಚನವು ನಮಗೆ ಒಂದು ಸತ್ಯವನ್ನು ಕಲಿಸುತ್ತದೆ: ನಾವು ಕ್ರಿಸ್ತನಲ್ಲಿಯೂ ಮತ್ತು ಆತನ ವಾಕ್ಯಗಳು ನಮ್ಮಲ್ಲಿಯೂ ನೆಲೆಗೊಂಡಿರುವದಾದರೆ ದೇವರ ಚಿತ್ತವೇನೆಂಬದನ್ನು ತಿಳಿದುಕೊಳ್ಳುವೆವು ಮತ್ತು ಆಗ ನಮ್ಮ ಪ್ರಾರ್ಥನೆಯು ಆತನ ಚಿತ್ತಕ್ಕನುಸಾರವಾಗಿರುತ್ತವೆ. ಮತ್ತು ಯಾವಾಗ ನಮ್ಮ ಪ್ರಾರ್ಥನೆಯು ಆತನ ಚಿತ್ತದ ಪ್ರಕಾರವಾಗಿರುವಾಗ ಆತನು ನಮ್ಮ ಪ್ರಾರ್ಥನೆಯನ್ನು ಅನುಗ್ರಹಿಸುವನು.

ದೇವರ ಚಿತ್ತವನ್ನು ನಾವು ತಿಳಿಯುವದು ಹೇಗೆ ಸಾಧ್ಯ? ಹೆಚ್ಚಾಗಿ ನಾವು ಬೈಬಲನ್ನು ಓದುವದರ ಮೂಲಕ ಸರಳವಾಗಿ ದೇವರ ಚಿತ್ತವನ್ನು ನಾವು ಕಂಡುಕೊಳ್ಳಬಹುದು. ಒಂದು ನಾಣ್ಣುಡಿಯಿರುತ್ತದೆ: ನಾನು ಪ್ರಾರ್ಥಿಸುವಾಗ ದೇವರೊಂದಿಗೆ ಮಾತಾಡುತ್ತೇನೆ, ನಾನು ಬೈಬಲನ್ನು (ದೇವರ ವಾಕ್ಯವನ್ನು) ಓದುವಾಗ ಆತನು ನನ್ನೊಂದಿಗೆ ಮಾತಾಡುತ್ತಾನೆ. ನಿಜವಾದ ಪ್ರಾರ್ಥನೆಯು ದೇವರೊಂದಿಗೆ ಮಾತಾಡುವದು ಮಾತ್ರವಲ್ಲ. ದೇವರ ಸ್ವರವನ್ನು ಆಲಿಸುವದೂ ಆಗಿದೆ. ಪ್ರಾರ್ಥನೆಯು ಇಬ್ಬರೂ ಮಾತಾಡುವ ಹಾಗು ಆಲಿಸುವ ಸಂಭಾಷಣೆಯಂತಿರುತ್ತದೆ. ಮೊದಲು ದೇವರ ವಾಕ್ಯವನ್ನು ಓದಿದ ಮೇಲೆ ನಾವು ದೇವರ ಚಿತ್ತವನ್ನು ಅರ್ಥಮಾಡಿಕೊಳ್ಳುವೆವು. ಅನಂತರ ಆತನ ಚಿತ್ತಕ್ಕನುಸಾರವಾಗಿ ನಾವು ಪ್ರಾರ್ಥಿಸುವೆವು.

ಕ್ರಿಸ್ತನು ನಮ್ಮಲ್ಲಿರುವಾಗ, ಆತನ ವಾಕ್ಯಗಳು ಸಹ ನಮ್ಮಲ್ಲಿರುವವು. ಆದರೆ ಈ ಹೇಳಿಕೆಯು ತದ್ವಿರುದ್ಧವಾಗಿಯೂ ಅಷ್ಟೇ ಸತ್ಯವಾಗಿದೆ: ಕ್ರಿಸ್ತನ ವಾಕ್ಯಗಳು ನಮ್ಮಲ್ಲಿರುವಾಗ ಕ್ರಿಸ್ತನು ಸ್ವತಃ ನಮ್ಮಲ್ಲಿ ಇರುತ್ತಾನೆ, ಯಾಕೆಂದರೆ ಕ್ರಿಸ್ತನು ಮತ್ತು ಆತನ ವಾಕ್ಯಗಳು ಒಂದು ಅರ್ಥದಲ್ಲಿ ಒಂದೇ ಆಗಿವೆ. ಕ್ರಿಸ್ತನು ದೇವರ ಜೀವವುಳ್ಳ ವಾಕ್ಯವಾಗಿದ್ದಾನೆ (ಯೋಹಾನ 1:1-2, 14 ನೋಡಿರಿ). ಆದುದರಿಂದ, ಕ್ರಿಸ್ತನ ವಾಕ್ಯಗಳು ಬೈಬಲಿನಿಂದ ಮಾತ್ರವೇ ಬರದೇ ಪವಿತ್ರಾತ್ಮನ ರೂಪದಲ್ಲಿ ನಮ್ಮೊಳಗೆ ವಾಸಿಸುವ ಸ್ವತಃ ಕ್ರಿಸ್ತನಿಂದಲೇ ನೇರವಾಗಿ ಬರುತ್ತವೆ. ಹಾಗೆ, ಕ್ರಿಸ್ತನ ವಾಕ್ಯಗಳ ಎರಡು ಮೂಲಗಳಾದ ಬೈಬಲ್ ಹಾಗು ಪವಿತ್ರಾತ್ಮನ ಮೂಲಕ ದೇವರ ಚಿತ್ತವೇನೆಂಬದನ್ನು ನಾವು ನಿಶ್ಚಯವಾಗಿ ಅರ್ಥಮಾಡಿಕೊಳ್ಳಬಲ್ಲೆವು.

ಹಾಗಾದರೆ ದೇವರ ಚಿತ್ತವನ್ನು ಹೇಗೆ ಕ್ರಿಸ್ತನ ವಾಕ್ಯಗಳಿಂದ ತಿಳಿದುಕೊಳ್ಳಬಲ್ಲೆವು? ಮೊದಲನೆಯದಾಗಿ, ನಾವು ಕ್ರಿಸ್ತನ ವಾಕ್ಯಗಳನ್ನು ಸ್ವೀಕರಿಸಿಕೊಳ್ಳುವದರ ಮೂಲಕ ಬೈಬಲನ್ನು ಒಪ್ಪಿಕೊಂಡು ಅಭ್ಯಾಸಿಸುವದರ ಮೂಲಕವೂ, ಆತನ ವಾಕ್ಯಗಳು ನಮ್ಮ ಹೃದಯಗಳಲ್ಲಿ ಬರೆಯಲ್ಪಡುವಂತೆ ಅನುಮತಿಸುವದರ ಮೂಲಕವೂ ನಾವು ದೇವರ "ಸಾಮಾನ್ಯ ಚಿತ್ತ" ಏನೆಂಬದನ್ನು ತಿಳಿದುಕೊಳ್ಳುವೆವು (ಇಬ್ರಿಯ 8:10). ಎರಡನೆಯದಾಗಿ, ಪವಿತ್ರಾತ್ಮನ ನಡೆಸುವಿಕೆಯ ಮುಖಾಂತರವಾಗಿ ದೇವರ "ನಿರ್ದಿಷ್ಟವಾದ ಚಿತ್ತ" (ಅಂದರೆ ನಿರ್ದಿಷ್ಟವಾದ ಪರಿಸ್ಥಿತಿಗಳಲ್ಲಿ ಆತನ ಚಿತ್ತ) ಏನೆಂಬದನ್ನು ನಾವು ಕಲಿತುಕೊಳ್ಳುವೆವು. ನಮ್ಮ ಜೀವಿತದಲ್ಲಿ ನಾವು ಎದುರ್ಗೊಳ್ಳುವ ಅನೇಕ ಪರಿಸ್ಥಿತಿಗಳ ಕುರಿತಾಗಿ ಬೈಬಲ್ ನಮಗೆ ನಿಜಜಖರವಾದ ಸೂಚನೆಗಳನ್ನು ನೀಡುವದಿಲ್ಲ. ಉದಾಹರಣೆಗೆ, ನಾವು ಯಾರನ್ನು ವಿವಾಹವಾಗಬೇಕು, ನಾವು ಯಾವ ರೀತಿಯ ಕೆಲಸವನ್ನು ಮಾಡಬೇಕು ಅಥವಾ ನಾವು ಶಾಲೆಯಲ್ಲಿ ಯಾವ ವಿಷಯಗಳನ್ನು ಅಭ್ಯಾಸಿಸಬೇಕು ಎಂಬುದರ ಬಗ್ಗೆ ಬೈಬಲ್ ನಿರ್ದಿಷ್ಟವಾಗಿ ಹೇಳುವದಿಲ್ಲ. ಈ ವಿಷಯಗಳಲ್ಲಿ ದೇವರ ಚಿತ್ತವೇನೆಂಬದನ್ನು ನಿರ್ಧರಿಸಬೇಕಾದರೆ ಪವಿತ್ರಾತ್ಮನ ಮಾರ್ಗದರ್ಶನವು ಅವಶ್ಯಕವಾಗಿರುತ್ತದೆ.

ಆದರೆ ಯಾವದೇ ನಿಖರವಾದ ಪರಿಸ್ಥಿತಿಯಲ್ಲಿ ದೇವರ "ನಿರ್ದಿಷ್ಟವಾದ ಚಿತ್ತ" ಏನೆಂಬದನ್ನು ತಿಳಿಯುವದಕ್ಕೆ ಮುಂಚೆ ಮೂರನೆಯ ಸಂಗತಿಯ ಅವಶ್ಯಕವಾಗಿರುತ್ತದೆ: ನಾವು ದೇವರು ಬಯಸುವದು ಏನೇ ಆಗಲಿ ಅದನ್ನು ಮಾಡಲು ಮನಸ್ಸುಳ್ಳವರಾಗಿರಬೇಕು. ದೇವರು ಹೇಳುವದಕ್ಕೆ ನಾವು ವಿಧೇಯರಾಗಲು ನಮಗೆ ಮನಸ್ಸಿಲ್ಲವಾದರೆ (ಅದೇನೆ ಆಗಿರಲಿ) ಆತನು ತನ್ನ ಚಿತ್ತವನ್ನು ನಮಗೆ ಬಯಲು ಪಡಿಸುವದಿಲ್ಲ. ನಮ್ಮ ಸ್ವಾರ್ಥ ಬಯಕೆಗಳು ಆತನ ಚಿತ್ತವೇನೆಂಬದನ್ನು ತಿಳಿಯಲು ಅಡ್ಡಿಯಾಗುತ್ತವೆ. ನಾವು ದೇವರ ಚಿತ್ತಕ್ಕೆ ಬದಲಾಗಿ ನಮ್ಮ ಸ್ವಂತ ಚಿತ್ತಕೆ ಸೆಳೆಯಲ್ಪಡುವೆವು. ಹೀಗಾಗುವಾಗ ಆ ನಿರ್ದಿಷ್ಟವಾದ ಸನ್ನಿವೇಶಕ್ಕಾಗಿ ದೇವರ ನಿಖರವಾದ್ದಡಿ ಚಿತ್ತವೇನೆಂಬದನ್ನು ನಾವು ತಿಳಿಯಲಾಗುವದಿಲ್ಲ.

ಆದುದರಿಂದ, ಕ್ಲುಪ್ತವಾಗಿ ಹೇಳುವದಾದರೆ, ದೇವರು ನಮ್ಮ ಪ್ರಾರ್ಥನೆಯನ್ನು ಕೇಳಲಿಲ್ಲವಾದರೆ ಆ ವಿಷಯದಲ್ಲಿ ಆತನ ಚಿತ್ತವೇನೆಂಬದನ್ನು ತಿಳಿಯಲು ನಾವು ವಿಫಲರಾಗಿರುವದೇ ಕಾರಣವಾಗಿದೆ; ಆತನ ಚಿತ್ತವು ನಮ್ಮ ಹೃದಯವನ್ನು ಪ್ರವೇಶಿಸಿರುವದಿಲ್ಲ; ಆತನ ಚಿತ್ತವನ್ನು ಮಾಡಲು ನಾವು ನಮ್ಮನ್ನು ಸಮರ್ಪಿಸಿಕೊಂಡಿಲ್ಲ. ಅಂದರೆ ನಮ್ಮ ಬೇಡಿಕೆಯನ್ನು ಪಡೆದುಕೊಳ್ಳುವದಕ್ಕೆ ಅವಶ್ಯಕವಾದ ಶರತ್ತನ್ನು ನಾವು ನೇರವೇರಿಸಿರುವದಿಲ್ಲ. ನಮ್ಮ ಸ್ವಂತ ಬಲಹೀನತೆ, ಅವಿಧೇಯತೆ ಹಾಗು ಪಾಪದ ಕಾರಣದಿಂದಾಗಿ ನಮ್ಮ ಪ್ರಾರ್ಥನೆಯು ಅನುಗ್ರಹಿಸಲ್ಪಟ್ಟಿರುವದಿಲ್ಲ.

ನಮ್ಮಲ್ಲಿ ಯಾರು ಈ ವಚನದ ಪೂರ್ಣ ಅರ್ಥವನ್ನು ಅನುಭವಿಸಿದ್ದಾರೆ? ಯೇಸು ದ್ರಾಕ್ಷೆ ಬಳ್ಳಿ, ಮತ್ತು ನಾವು ಕೊಂಬೆಗಳು. ಒಂದು ಬಳ್ಳಿ ಹಾಗು ಅದರ ಕೊಂಬೆಗಳು ಬೆಳೆಯುವ ಪ್ರಕಾರವೇ ನಾವು ಕ್ರೈಸ್ತೀಯ ಜೀವನದಲ್ಲಿ ಬೆಳೆಯಬೇಕು. ಕ್ರಿಸ್ತನಲ್ಲಿನ ನಮ್ಮ ಜೀವಿತ ಎಂದೆಂದೂ ಪರಿಪೂರ್ಣವಾಗಿಯೂ, ಆಳವಾಗಿಯೂ ಬೆಳೆಯಬೇಕು. ನನ್ನಲ್ಲಿ ನೆಲೆಗೊಳ್ಳಿರಿ

(ವಚನ 4). ಈಗ ನಾವು ಈ ಮಾತುಗಳ ಪೂರ್ಣ ಅರ್ಥವನ್ನು ತಿಳಿದು ಕೊಳ್ಳಬಹುದು: ನಮ್ಮ ಆತ್ಮವು ಕ್ರಿಸ್ತನ ಆತ್ಮವು ಒಂದೇ ಆಗಿರಬೇಕು, ನಮ್ಮ ಮನಸ್ಸು ಹಾಗು ಚಿತ್ತಗಳು ಕ್ರಿಸ್ತನ ಮನಸ್ಸು ಹಾಗು ಚಿತ್ತಗಳಂತೆಯೇ ಇರತಕ್ಕದ್ದು. ನಾವು ನಮಗೋಸ್ಕರ ಜೀವಿಸದೆ ಕ್ರಿಸ್ತನಿಗಾಗಿ ಜೀವಿಸಬೇಕು, ನಾವು ನಮ್ಮ ಸ್ವಂತ ಸ್ವತ್ತಲ್ಲ, ನಾವು ಕ್ರಿಸ್ತನವರಾಗಿದ್ದೇವೆ! ಮತ್ತು ಈ ವಿಧವಾಗಿ ಕ್ರಿಸ್ತನಲ್ಲಿ ನೆಲೆಗೊಳ್ಳುವವರಿಗೆ ಈ ವಚನದ ವಾಗ್ದಾನವೇನೆಂದರೆ:....ನಿಮಗೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವದು.

8 ದೇವರಿಗೆ ಮಹಿಮೆ ತರುವ ಸಂಗತಿಯಾವದು? ನಮ್ಮ ಫಲವೇ ದೇವರಿಗೆ ಮಹಿಮೆಯನ್ನು ತರುತ್ತದೆ. ಕ್ರಿಸ್ತನಲ್ಲಿ ದೇವರು ಮಹಿಮೆ ಹೊಂದಿದ ಪ್ರಕಾರವೇ (ಯೋಹಾನ 13:31), ನಮ್ಮಲ್ಲಿಯೂ ಸಹ ಅಂದರೆ ನಮ್ಮ ಫಲದಿಂದ ದೇವರು ಮಹಿಮೆ ಹೊಂದುತ್ತಾನೆ (ಮತ್ತಾಯ 5:16, ಯೋಹಾನ 15:2 ನೋಡಿರಿ). ನಮ್ಮ ಫಲದ ಮೂಲಕ – ವಿಶೇಷವಾಗಿ ನಮ್ಮ ಪ್ರೀತಿಯ ಮೂಲಕ – ಜನರು ನಮ್ಮನ್ನು ಕ್ರಿಸ್ತನ ಶಿಷ್ಯರೆಂದು ತಿಳಿಯುವರು (ಯೋಹಾನ 13:35).

9 ನಮ್ಮ ಪ್ರೀತಿಯಲ್ಲಿ ನೆಲೆಗೊಂಡಿರಿ. ಕ್ರಿಸ್ತನ ಪ್ರೀತಿಯಲ್ಲಿ ನೆಲೆಗೊಂಡಿರುವದೆಂದರೆ ಕ್ರಿಸ್ತನಲ್ಲಿ ನೆಲೆಗೊಂಡಿರುವದು ಎಂದರ್ಥವಾಗಿದೆ (ವಚನ 4 ನೋಡಿರಿ). ಕ್ರಿಸ್ತನು ನಮ್ಮನ್ನು ಎಷ್ಟಾಗಿ ಪ್ರೀತಿಸುತ್ತಾನೆಂಬದನ್ನು ನಾವು ಮರೆಯದಿರೋಣ. ದೇವರು ಆತನನ್ನು ಎಷ್ಟು ಪ್ರೀತಿಸಿದನೋ ಆತನು ನಮ್ಮನ್ನು ಅಷ್ಟೇ ಪ್ರೀತಿಸುತ್ತಾನೆ. ನಾವು ಕ್ರಿಸ್ತನ ಪ್ರೀತಿಯಲ್ಲಿ ನೆಲೆಗೊಳ್ಳುವಾಗ ದೇವರ ಪ್ರೀತಿಯಲ್ಲಿಯೂ ಸಹ ನಾವು ನೆಲೆಗೊಳ್ಳುತ್ತೇವೆ.

10 ಕ್ರಿಸ್ತನ ಪ್ರೀತಿಯಲ್ಲಿ ನೆಲೆಗೊಳ್ಳಲು ನಾವು ಆತನನ್ನು ಪ್ರೀತಿಸಬೇಕು. ಆತನನ್ನು ಪ್ರೀತಿಸಬೇಕಾದೆ ನಾವು ಆತನಿಗೆ ವಿಧೇಯರಾಗ ಬೇಕು (ಯೋಹಾನ 14:15 ಮತ್ತು ವ್ಯಾಖ್ಯಾನ ನೋಡಿರಿ). ಎಲ್ಲಿಯ ತನಕ ನಾವು ಕ್ರಿಸ್ತನಿಗೆ ವಿಧೇಯರಾಗುತ್ತಾ ಸಾಗುವೆವೋ ಅಲ್ಲಿಯತನಕ ನಾವು ಆತನ ಪ್ರೀತಿಯಲ್ಲಿ ನೆಲೆಗೊಳ್ಳುವೆವು , ಹಾಗು ಆತನು ಮತ್ತು ತಂದೆ ನಮ್ಮಲ್ಲಿ ವಾಸಿಸುವವರು (ಯೋಹಾನ 14:21 ನೋಡಿರಿ).

11 ತನ್ನಲ್ಲಿರುವ ಆನಂದವು ಶಿಷ್ಯರಲ್ಲಿಯೂ ಇರಬೇಕೆಂದು ಅಂದರೆ – ತಾನು ಸ್ವತಃ ಯಾವಾಗಲೂ ಅನುಭವಿಸದ ಆನಂದವನ್ನು ಅವರೂ ಅನುಭವಿಸಬೇಕೆಂದು ಯೇಸು ಈ ಎಲ್ಲಾ ಸಂಗತಿಗಳನನ್ನು ಅವರಿಗೆ ಹೇಳಿದನು. ಈ ಆನಂದವು ಒಂದು ಆತ್ಮೀಕ, ಅಂತರ್ಯದ ಆನಂದವಾಗಿದೆ ಮತ್ತು ಯೇಸು ಅವರಿಗೆ ವಾಗ್ದಾನ ಮಾಡಿದ ಸಮಾಧಾನದ ಹಾಗೆಯೇ (ಯೋಹಾನ 14:27), ಈ ಆನಂದವು ಕಷ್ಟ ಹಾಗು ಹಿಂಸೆಯವೇಳೆಯಲ್ಲಿಯೂ ಅವರಲ್ಲಿ ನೆಲೆಗೊಳ್ಳುವದು. ಅಂತಹ ಆನಂದವು ಪವಿತ್ರಾತ್ಮನ ಫಲವಾಗಿದೆ (ಗಲಾತ್ಯ5:22). ಹೀಗೆ ಯಾರಲ್ಲಿ ಪವಿತ್ರಾತ್ಮನು ವಾಸಿಸುತ್ತಾನೋ ಅವರೆಲ್ಲರೂ ಇದನ್ನು ಅನುಭವಿಸುತ್ತಾರೆ.

ಲೋಕದ ಜನರೆಲ್ಲಾ ಎಲ್ಲಕ್ಕಿಂತಲೂ ಮೇಲಾಗಿ ಸಂತೋಷ ಹಾಗು ಆನಂದಗಳನ್ನು ಹುಡುಕುತ್ತಾರೆ. ಆದರೆ ಅವರು ವ್ಯರ್ಥವಾಗಿ ಹುಡುಕುತ್ತಾರೆ. ಒಬ್ಬನು ಕ್ರಿಸ್ತನನ್ನು ಹುಡುಕುವಾಗ ಮಾತ್ರವೆ ನಿಜವಾದ ಆನಂದವನ್ನು ಕಂಡುಕೊಳ್ಳುತ್ತಾನೆ.

12 ಇಲ್ಲಿ ಯೇಸು ಯೋಹಾನ 13:34ರಲ್ಲಿ ತನ್ನ ಶಿಷ್ಯರಿಗೆ ನೀಡಿದ ಹೊಸ ಆಜ್ಞೆಯನ್ನು ಪು ನರಾವರ್ತಿಸುತ್ತಾನೆ: ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು.

13 ನಂತರ ಯೇಸು ತನ್ನ ಶಿಷ್ಯರಿಗೆ ಅವರು ಒಬ್ಬರಿಗೋಸ್ಕರ ಒಬ್ಬರು ತಮ್ಮ ಪ್ರಾಣವನ್ನು ನೀಡುವದೇ ಅವರು ಪರಸ್ಪರರಿಗೆ ತೋರಿಸುವ ಅತಿಶ್ರೇಷ್ಠವಾದ ಪ್ರೀತಿಯಾಗಿದೆಯೆಂದು ಹೇಳಿದನು. ಯೇಸು ಅವರನ್ನು ಹಾಗೆಯೇ ಪ್ರೀತಿಸಿದನು. ಮತ್ತು ಅವರಿಗಾಗಿ ಶಿಲುಬೆಯ ಮೇಲೆ ತನ್ನ ಪ್ರಾಣವನ್ನು ಅರ್ಪಿಸುವದರ ಮೂಲಕ ಅದನ್ನು ನಿರೂಪಿಸಿದನು. ಅದಕ್ಕಿಂತಲೂ ಶ್ರೇಷ್ಠವಾದ ಪ್ರೀತಿಯು ಇನ್ನೊಂದಿರಲಾರದು.

ಯೇಸು ತಾನು ನಮ್ಮನ್ನು ಪ್ರೀತಿಸಿದ ಪ್ರಕಾರವೇ ನಾವು ಒಬ್ಬರೊಬ್ಬರನ್ನು ಪ್ರೀತಿಸಬೇಕೆಂದು ನಮಗೆ ಸಹ ಆಜ್ಞಾಪಿಸುತ್ತಾನೆ. ಅದರರ್ಥವೇನೆಂದರೆ ನಾವು ಸಹ ಪರಸ್ಪರರಿಗೋಸ್ಕರ ನಮ್ಮ ಪ್ರಾಣವನ್ನು – ಕ್ರಿಸ್ತನಿಗಾಗಿ ಮಾತ್ರವಲ್ಲ ಆದರೆ ಇತರರಿಗಾಗಿಯೂ ಸಹ – ಕೊಡುವದಕ್ಕೆ ಸಿದ್ಧರಾಗಿರಬೇಕು! ಯೇಸುವಿನ ಶಿಷ್ಯರು ಇಹಲೋಕದಲ್ಲಿ ಏಕೆ ತಮ್ಮ ಪ್ರಾಣಗಳನ್ನು ಹಗೆ ಮಾಡಬೇಕೆಂಬದಕ್ಕೆ ಇದು ಸಹ ಒಂದು ಕಾರಣವಾಗಿರುತ್ತದೆ (ಯೋಹಾನ 12:25 ಮತ್ತು ವ್ಯಾಖ್ಯಾನ ನೋಡಿರಿ). ತನ್ನ ಪ್ರಾಣವನ್ನು ಪ್ರೀತಿಸುವ ವ್ಯಕ್ತಿಯು ಎಂದಿಗೂ ಅದನ್ನು ಕ್ರಿಸ್ತನಿಗಾಗಿಯಾಗಲಿ ಇಲ್ಲವೆ ಇತರರಿಗಾಗಿ ಆಗಲಿ ಕೊಡುವದಕ್ಕೆ ಇಷ್ಟಪಡುವದಿಲ್ಲ.

ಯೇಸು ತನ್ನ ಪ್ರಾಣವನ್ನು ಆತನ ಸ್ನೇಹಿತರಿಗಾಗಿ ಮಾತ್ರವಲ್ಲ ಆದರೆ ಆತನ ವೈರಿಗಳಿಗಾಗಿ ಸಹ ಅರ್ಪಿಸಿದನೆಂಬದನ್ನು ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು (ರೋಮ 5:6, 8 ನೋಡಿರಿ). ನಮ್ಮ ವೈರಿಗಳನ್ನು ಪ್ರೀತಿಸಬೇಕೆಂದು ಆತನು ಆಜ್ಞಾಪಿಸುತ್ತಾನೆ (ಮತ್ತಾಯ 5:44). ನಮ್ಮ ವೈರಿಗಳಿಗಾಗಿ ಪ್ರಾಣವನ್ನು ನೀಡಬೇಕೆಂದು ಆತನು ನೇರವಾಗಿ ಆಜ್ಞಾಪಿಸಿರುವದಿಲ್ಲ ಎಂಬುದು ಸತ್ಯವೇ. ಹೇಗಿದ್ದರೂ, ನಿಜವಾದ ಪ್ರೀತಿಯು "ನನ್ನ ಸ್ನೇಹಿತನಾರು ಹಾಗು ನನ್ನ ವೈರಿಯಾರು?ಠ ಎಂದು ಕೇಳುವದಿಲ್ಲ. ಪ್ರೀತಿಯು ಯಾವಾಗಲೂ ಲೆಕ್ಕ ಹಾಕದೆ ಕೊಡುತ್ತದೆ. ಯೇಸು ಎಲ್ಲಾ ಮಾನವರಿಗೆ ಎಲ್ಲವನ್ನೂ ಕೊಡುತ್ತಾನೆ. ಆತನ ಶಿಷ್ಯರು ಅದರಂತೆಯೇ ಮಾಡಲು ಸಂತೋಷಿಸಬೇಕು.

14 ಯೇಸು ತನ್ನ ಶಿಷ್ಯರನ್ನು ಸ್ನೇಹಿತರೆಂದು ಕರೆದನು, ಮತ್ತು ಈದಿನ ಆತನು ನಮ್ಮನ್ನು ಸ್ನೇಹಿತರು ಎಂದು ಕರೆಯುತ್ತಾನೆ. ಆದರೆ ಒಬ್ಬನು ಯೇಸುವಿನ "ಸ್ನೇಹಿತ" ನಾಗಿರಬೇಕಾದರೆ ಆತನ ಆಜ್ಞೆಗಳಿಗೆ ವಿಧೇಯನಾಗಬೇಕು.

15 ಯೇಸು ತನ್ನ ಶಿಷ್ಯರನ್ನು ಸ್ನೇಹಿತರು ಎಂದು ಕರೆದನು. ಯಾಕೆಂದರೆ ಆತನು ತಾನು ತಂದೆಯಿಂದ ತಿಳಿದುಕೊಂಡ ಎಲ್ಲವನ್ನೂ ಅವರಿಗೆ ತಿಳಿಯಪಡಿಸಿದ್ದನು. ಅವರಿಗೆ ಆತನು ಹೇಳಬೇಕಾದದ್ದು ಇನ್ನೂ ಬಹಳವಿತ್ತು, ಆದರೆ ಅವರಿಗೆ ಹೊರಲಾಗುತ್ತಿರಲಿಲ್ಲ (ಯೋಹಾನ 16:12). ಆನಂತರ ಆತನು ಪವಿತ್ರಾತ್ಮನ ಮೂಲಕವಾಗಿ ಅವರಿಗೆ ಹೇಳುವನು (ಯೋಹಾನ 16:13).

ಶಿಷ್ಯರು ಇನ್ನೆಂದಿಗೂ ಆಳುಗಳಾಗಿರುವದಿಲ್ಲ. ಒಬ್ಬ ಆಳು ತನ್ನ ಯಜಮಾನನಿಂದ ಅಪ್ಪಣೆಗಳನ್ನು ಮಾತ್ರ ಪಡೆಯುತ್ತಾನೆ ಆದರೆ ಯೇಸು ನಮ್ಮನ್ನು ಸ್ನೇಹಿತರಂತೆ ಕಾಣುತ್ತಾನೆ. ಆತನು ನಮ್ಮ ಮೇಲೆ ಭರವಸೆಯನ್ನು ಹೊಂದುತ್ತಾನೆ. ಪವಿತ್ರಾತ್ಮನ ಮುಖಾಂತರವಾಗಿ ನಾವು ತಿಳಿಯಬೇಕಾದ [106] ಎಲ್ಲವನ್ನೂ ಆತನು ನಮಗೆ ಬಯಲುಪಡಿಸುತ್ತಾನೆ.

16 ಮನುಷ್ಯರು ಯೇಸುವನ್ನು ಹಿಂಬಾಲಿಸಬೇಕೆಂದು ಮೊದಲು ಅವರೇ ತಿರ್ಮಾನಿಸುವದಿಲ್ಲ. ಬದಲಾಗಿ ತನ್ನನ್ನು ಹಿಂಬಾಲಿಸಲು ಜನರನ್ನು ಯೇಸುವೇ ಆದುಕೊಳ್ಳುತ್ತಾನೆ . ಮೊದಲು ಯೇಸು ಕರೆಯುತ್ತಾನೆ. ಆ ಮೇಲೆ ಜನರು ಆತನನ್ನು ಹಿಂಬಾಲಿಸುವ ಅಥವಾ ಹಿಂಬಾಲಿಸದಿರುವ ಸ್ವಾತಂತ್ಯವನ್ನು ಹೊಂದಿರುತ್ತಾರೆ. ಆದರೆ ಯಾವ ಮನುಷ್ಯನೂ ತಾನು ನೊದಲು ಕರೆಯಲ್ಪಟ್ಟವನಾಗಿರದ ಹೊರತು ಕ್ರಿಸ್ತನನ್ನು ಹಿಂಬಾಲಿಸಲು ಸಾಧ್ಯವಿಲ್ಲ (ಯೋಹಾನ 5:37, 44 ಮತ್ತು ವ್ಯಾಖ್ಯಾನ ನೋಡಿರಿ).

ಯೇಸು ತನ್ನ ಶಿಷ್ಯರನ್ನು ಆದುಕೊಂಡದ್ದು ಮಾತ್ರವಲ್ಲದೆ ಆತನು ಅವರಿಗೆ ನೇಮಕಾತಿಯನ್ನು ಒದಗಿಸಿದನು. ಆ ನೇಮಕಾತಿ ಏನೆಂದರೆ ಹೊರಟು ಹೋಗುವದು, ಅಂದರೆ ಸಾಕ್ಷಿಯಾಗಿರುವದು ಮತ್ತು ಅವರ ಕೆಲಸವು ಫಲವನ್ನು ಕೊಡುವದಾಗಿದೆ. ಯೇಸು ಅವರಿಗೆ "ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡಿದ್ದೇನೆ...ನೀವು ಹೊರಟು ಹೋಗಿ ಫಲಕೊಡಬೇಕು" ಎಂದು ಹೇಳಿದನು. ಯೇಸುವಿನ ಶಿಷ್ಯರು ಕೊಂಬೆಗಳ ಹಾಗಿದ್ದರು. ಒಂದು ಕೊಂಬೆಯ ಕೆಲಸವು ಫಲವನ್ನು ಬಿಡುವದೇ ಆಗಿರುತ್ತದೆ. ಈ ವಚನದ ಸಂದರ್ಭದಲ್ಲಿ "ಫಲ ಕೊಡುವದು" ಎಂದರೆ ಪ್ರಾಥಮಿಕವಾಗಿ ಇತರರನ್ನು ಕ್ರಿಸ್ತನ ನಂಬಿಕೆಗೆ ತರುವದು ಎಂದರ್ಥವಾಗಿದೆ (ವಚನ 2 ಹಾಗು ವ್ಯಾಖ್ಯಾನ ನೋಡಿರಿ)

ಪ್ರತಿಯೊಬ್ಬ ಕ್ರಿಸ್ತನು ಹೊರಟು ಹೋಗಿ ಫಲವನ್ನು ಕೊಡಬೇಕೆಂದು ನೇಮಿಸಲ್ಪಟ್ಟಿದ್ದಾನೆ. ನಾವು ದೂರದ ಸ್ಥಳಕ್ಕೆ ಹೋಗುವದಕ್ಕಾಗಿ ಕರೆಯಲ್ಪಡದಿರಬಹುದು, ಆದರೆ ನಾವು ಹೊರಟು ಹೋಗಲು ಕರೆಯಲ್ಪಟ್ಟಿದ್ದೇವೆ. ನಾವು ನಮ್ಮ ಸ್ವಂತ ಕುಟುಂಬ ಹಾಗು ನೆರೆಯವರ ಬಳಿಗಾದರೂ ಹೋಗಲು ಕರೆಯಲ್ಪಟ್ಟಿದ್ದೇವೆ. ಯಾವ ಕ್ರೈಸ್ತನು ಸಹ ತಾನು ಹೊರಟು ಹೋಗಿ ಫಲಕೊಡಬೇಕಾಗಿಲ್ಲ ಎಂದು ಯೋಚಿಸದಿರಲಿ. ಪ್ರತಿಯೊಬ್ಬ ಕ್ರೈಸ್ತನು ಒಬ್ಬ ಶಿಷ್ಯನಾಗಿರುವ ಪ್ರಕಾರವೇ ಪ್ರತಿಯೊಬ್ಬ ಕ್ರೈಸ್ತನು ಒಬ್ಬ ಸೇವಾಕಾರ್ಯಕರ್ತನೂ ಆಗಿದ್ದಾನೆ.

ದೇವರು ಪ್ರತಿಯೊಬ್ಬ ಕ್ರೈಸ್ತನಿಗೆ ಕೊಡುವ ಕೆಲಸವು ಒಂದು ನಿಲ್ಲುವಂತ ಕೆಲಸವಾಗಿದೆ. ನಾವು ನಿಜವಾಗಿಯೂದೇವರ ಕೆಲಸವನ್ನು ಮಾಡುತ್ತಿರುವದಾದರೆ, ಆ ಕೆಲಸವು ಸ್ಥಿರವಾಗಿ ನಿಲ್ಲುವದು. ನಾವು ದೇವರ ಫಲವನ್ನು ಕೊಡುತ್ತಿರುವದಾದರೆ ಆ ಫಲವು ನಿಲ್ಲುವದು. ನಾವು ಮಾಡುತ್ತಿರುವದು ದೇವರ ಕೆಲಸ ಎಂಬ ನಿಶ್ಚಯವನ್ನು ನಾವೆಲ್ಲರು ಹೊಂದಿಕೊಳ್ಳೋಣ

ನಾವು ದೇವರ ಫಲವನ್ನು ಹೊತ್ತಿದ್ದೇವೆ ಹೊರತು ನಮ್ಮ ಸ್ವಂತದ್ದಲ್ಲ. ಒಂದು ವೇಳೆ ನಾವು ನಿಜವಾಗಿಯೂ ಆತನ ಚಿತ್ತಕ್ಕನುಸಾರವಾಗಿ ಆತನ ಕೆಲಸವನ್ನು ಮಾಡುತ್ತಿರುವದಾದರೆ ನಾವು ಯೇಸುವಿನ ಹೆಸರಿನಲ್ಲಿ ಏನು ಬೇಕಾದರೂ ಕೇಳಿಕೊಂಡರೆ ದೇವರು ಕೊಡುವನು. ದೇವರು ಹೇಳುವದನ್ನು ನಾವು ಮಾಡುವದಾದರೆ ಆತನು ನಾವು ಬೇಡುವದನ್ನು ಮಾಡುವನು(ಯೋಹಾನ 14:13, 15:7 ಹಾಗು ವ್ಯಾಖ್ಯಾನಗಳನ್ನು ನೋಡಿರಿ)

ಎಷ್ಟು ಸಾರಿ ನಾವು ಫಲ ಕೊಡುವದಕ್ಕೆ ಕೃಪೆ ಹಾಗು ಬಲವನ್ನು ನೀಡಬೇಕೆಂದು ಪ್ರಾರ್ಥಿಸಿದ್ದೇವೆ, ಆದರೆ ಏನು ಸಂಭವಿಸಿದಂತೆ ತೋರಲಿಲ್ಲ. ನಮ್ಮ ಪ್ರಾರ್ಥನೆಗೆ ಉತ್ತರವೂ ದೊರೆಯಲಿಲ್ಲ. ಮತ್ತು ನಾವು "ಯಾಕೆ ಯಾವ ಉತ್ತರವೂ ಬರಲಿಲ್ಲ "ಎಂದು ಕೇಳುತ್ತೇವೆ. ಅದಕ್ಕೆ ಕಾರಣವೇನೆಂದರೆಃ ಯೇಸು ಈ ವಚನದಲ್ಲಿ ನೀಡಿದ ಆಜ್ಞೆಯನ್ನು ನಾವು ತದ್ವಿರುದ್ಧಗೊಳಿಸಿದ್ದೇವೆ. ನಾವು ಹೊರಟು ಹೋಗಿ ಸರಳವಾಗಿ ಫಲಕೊಡುವದಕ್ಕೆ ಸಾಧ್ಯವಾಗುವಂತೆ ಮೊದಲು ನಾವು ಕೃಪೆ ಹಾಗು ಬಲಕ್ಕಾಗಿ ಬೇಡಿದೆವು . ಆದರೆ ಯೇಸು ಇಲ್ಲಿ "....ಹೊರಟು ಹೋಗಿ ಫಲಕೊಡಿರಿ. ಆಗ ದೇವರು ಕೃಪೆ ಹಾಗು ಬಲಕ್ಕಾಗಿ ನೀವು ಮಾಡಿದ ಪ್ರಾರ್ಥನೆಗೆ ಉತ್ತರಿಸುವನು."ಎಂದು ಹೇಳುತ್ತಾನೆ. ನಾವು ವಿಧೇಯರಾಗುವದಕ್ಕೆ ಮನಸುಳ್ಳವರಾಗಿದ್ದೇವೆ ಎಂಬದನ್ನು ನೋಡಿದ ನಂತರವಷ್ಟೆ ದೇವರು ನಾವು ಫಲಕೊಡಲು ನಮಗೆ ಬೇಕಾದ ಕೃಪೆ ಮತ್ತು ಬಲವನ್ನು ಅನುಗ್ರಹಿಸುವನು.

ಇಲ್ಲಿ ನಾವು ಒಂದು ಪ್ರಾಮುಖ್ಯ ಸತ್ಯವನ್ನು ಕಾಣಬಹುದುಃ. ನಾವು ದೇವರಿಗೆ ಮಹಿಮೆಯನ್ನು ತರುವದಕ್ಕು ಹಾಗು ಆ ಮಹಿಮೆಯಲ್ಲಿ ನಾವು ಪಾಲುಗಾರರಾಗುವದಕ್ಕೂ ಒಂದೆ ಮಾರ್ಗವಿರುತ್ತದೆ, ಅದಾವದೆಂದರೆ, ವಿಧೇಯತೆಯ ಮಾರ್ಗವೇ. ನಾವು ವಿಧೇಯರಾಗಿರುವಾಗ ಮಾತ್ರವೇ ಪವಿತ್ರಾತ್ಮನನ್ನು ಪಡೆಯುವೆವು (ಯೋಹಾನ 14:15-16). ನಾವು ವಿಧೇಯರಾಗಿರುವಾಗ ಮಾತ್ರವೇ ಯೇಸು ನಮ್ಮ ಜೀವಿತಗಳಲ್ಲಿ ತೋರಲ್ಪಡುವನು (ಯೋಹಾನ 14:21). ನಾವು ವಿಧೇಯರಾಗಿರುವಾಗ ಮಾತ್ರವೇ ದೇವರು ಬಂದು ನಮ್ಮಲ್ಲಿ ನೆಲೆಸುವನು. (ಯೋಹಾನ 14:23). ವಿಧೇಯತೆಯ ಮೂಲಕ ಮಾತ್ರವೇ ನಾವು ಕ್ರಿಸ್ತನ ಪ್ರೀತಿಯಲ್ಲಿ ನೆಲೆಗೊಂಡಿರಬಲ್ಲೆವು .(ಯೋಹಾನ 15:10). ವಿಧೇಯತೆಯ ಮೂಲಕ ಮಾತ್ರವೇ ನಾವು ಕ್ರಿಸ್ತನ ಸ್ನೇಹವನ್ನು ಗಳಿಸಬಹುದು (ಯೋಹಾನ 15:14). ಮತ್ತು ನಾವು ವಿಧೇಯರಾಗಿರುವಾಗ ಮಾತ್ರವೇ ನಮ್ಮ ಪ್ರಾರ್ಥನೆಗಳಿಗೆ ಉತ್ತರವನ್ನು ಪಡೆಯುವೆವು .

ಈ ಎಲ್ಲಾ ಶ್ರೇಷ್ಠ ಆಶೀರ್ವಾದಗಳು ನಾವು ಯೇಸುವಿಗೆ ವಿಧೇಯರಾದಾಗ ಮಾತ್ರವೇ ನಮಗೆ ದೊರೆಯುತ್ತವೆ.

ಈ ವಚನದ ವಿಷಯವಾಗಿ ಪ್ರಸ್ತಾಪಿಸಲ್ಪಡಬೇಕಾದ ಇನ್ನೊಂದು ಸಂಗತಿಯು ಇರುತ್ತದೆ. ಇಲ್ಲಿ ಎರಡು ಚಿಕ್ಕ ಪದಗಳಿರುತ್ತವೆ. ನನ್ನ ಹೆಸರಿನಲ್ಲಿ (ಯೋಹಾನ 14:13 ರ ಮೇಲಿನ ವ್ಯಾಖ್ಯಾನದಲ್ಲಿ "ಕ್ರಿಸ್ತನ ಹೆಸರಿನಲ್ಲಿ" ಎಂಬದು "ಕ್ರಿಸ್ತನ ಸ್ಥಾನದಲ್ಲಿ "

ಎಂಬರ್ಥವನ್ನು ಕೊಡುತ್ತದೆಂದು ಹೇಳಲಾಯಿತು. ನಾವು ಪ್ರಾರ್ಥಿಸುವಾಗ ಕ್ರಿಸ್ತನ ಸ್ಥಾನದಲ್ಲಿ ಪ್ರಾರ್ಥಿಸಬೇಕು.

ಈ ಕೆಳಗಿನ ದೃಷ್ಟಾಂತವು ಈ ಸತ್ಯವನ್ನು ನಮಗೆ ಸ್ಪಷ್ಟವಾಗಿ ತೋರಿಸುತ್ತದೆ. ಯೇಸು ದೂರದೇಶದ ಪ್ರವಾಸಕ್ಕೆ ಹೋದ ಒಬ್ಬ ವ್ಯಾಪಾರಿಯಂತಿದ್ದಾನೆ. ವ್ಯಾಪಾರಿಯು ತಾನು ಹೊರಡುವದಕ್ಕೆ ಮುಂಚೆ ತನ್ನ ವ್ಯಾಪಾರವನ್ನು ಸೇವಕನ ಕೈಗೆ ಒಪ್ಪಿಸುತ್ತಾನೆ. ತನ್ನ ಗೈರು ಹಾಜರಿಯಲ್ಲಿ ವ್ಯಾಪಾರವನ್ನು ನಿಭಾಯಿಸಲು ಸಂಪೂರ್ಣ ಅಧಿಕಾರವನ್ನು ವ್ಯಾಪಾರಿಯು ಸೇವಕನಿಗೆ ನೀಡಿದನು. ಅಲ್ಲದೆ ವ್ಯಾಪಾರಿಯು ತನ್ನ ಸೇವಕನಿಗೆ ಆತನ (ವ್ಯಾಪಾರಿಯ) ಹೆಸರನ್ನು ಉಪಯೋಗಿಸುವ ಅಧಿಕಾರವನ್ನು ಸಹ ನೀಡಿದನು.

ಈಗ ಒಬ್ಬ ಸೇವಕನು ಅಂತಹ ಪರಿಸ್ಥಿತಿಯಲ್ಲಿ ತನ್ನ ಸ್ವಂತ ಅಧಿಕಾರದಿಂದ ಏನನ್ನೂ ಮಾಡುವದಿಲ್ಲ. ಆತನು ತನ್ನ ಸ್ವಂತ ಹೆಸರಿನಲ್ಲಿ ಯಾವದನ್ನೂ ಮಾಡುವದಿಲ್ಲ. ಒಂದು ವೇಳೆ ಅವನು ಯಜಮಾನನ ಹಣವನ್ನು ಬ್ಯಾಂಕಿನಿಂದ ತನ್ನ ಸ್ವಂತ ಹೆಸರಿನಲ್ಲಿ ತೆಗೆದುಕೊಳ್ಳುವದಕ್ಕೆ ಪ್ರಯತ್ನಿಸುವದಾದರೆ ಆತನ ಯಜಮಾನನು ಖಂಡಿತವಾಗಿಯೂ ಅವನನ್ನು ಶಿಕ್ಷಿಸುವನು. ವ್ಯಾಪಾರಿಯು ತನ್ನ ಸೇವಕನನ್ನು ಏಕೆ ವಿಶ್ವಾಸಿಸಿದನು? ಯಾಕೆಂದರೆ ಆತನ ಸೇವಕನು ವಿಧೇಯತೆಯುಳ್ಳವನೂ ವಿಶ್ವಾಸರ್ಹನೂ ಆಗಿದ್ದನು. ಸೇವಕನು ವಿಧೇಯನೂ, ವಿಶ್ವಾಸರ್ಹನೂ ಆಗಿದ್ದರಿಂದಲೇ ವ್ಯಾಪಾರಿಯು ತನ್ನ ವ್ಯಾಪಾರದ ಸಂಪೂರ್ಣ ಅಧಿಕಾರವನ್ನು (ಆತನ ಹೆಸರನ್ನು ಉಪಯೋಗಿಸುವ ಹಕ್ಕನ್ನು ಸಹ) ನೀಡುವದಕ್ಕೆ ಶಕ್ತನಾಗಿದ್ದನು.

ಅದೇ ರೀತಿಯಲ್ಲಿ ಯೇಸು ಈ ಲೋಕವನ್ನು ಬಿಟ್ಟು ಪರಲೋಕಕ್ಕೆ ಹೋದಾಗ ಆತನು ತನ್ನಎಲ್ಲಾ ಕೆಲಸ, ತನ್ನ "ವ್ಯಾಪಾರ" ವನ್ನು ನಮ್ಮಕೈಗಳಲ್ಲಿ ಕೊಟ್ಟನು ಆತನು ತನ್ನ ಹೆಸರನ್ನು ಉಪಯೋಗಿಸುವ ಪೂರ್ಣ ಅಧಿಕಾರವನ್ನು ಕೊಟ್ಟನು, ಹೀಗೆ ನಾವು ಆತನ "ಬ್ಯಾಂಕ್ ಖಾತೆ" ಯಿಂದ ಪರಲೋಕದ ಸಕಲ ಐಶ್ವರ್ಯ ಹಾಗು ಆಶೀರ್ವಾದಗಳನ್ನು ತೆಗೆದುಕೊಳ್ಳುವದಕ್ಕೆ ಸಾದ್ಯವಾಗಬೇಕೆಂದು

ಆತನ ಇಚ್ಚೆಯಾಗಿದೆ. ಕ್ರಿಸ್ತನ ಸೇವಕನೆ! ಆತನ ಹೆಸರನ್ನು ಸರಿಯಾಗಿ ಉಪಯೋಗಿಸಲು ಕಲಿಯಿರಿ! ಆತನ ಹೆಸರು ನಿನ್ನ ಜೀವಿತದಲ್ಲಿ ಆಳಲಿ. ಆತನು ನಿನಗೆ ಕೊಟ್ಟ ಕೆಲಸದಲ್ಲಿ ಗಮನಹರಿಸು. ಯೇಸು ನಮಗೆ ಹೇಳುವದೇನೆಂದರೆ: "ನೀವು ಹೊರಟು ಹೋಗಿ ಫಲ ಕೊಡ ಬೇಕೆಂದು ನಿಮ್ಮನ್ನು ನೇಮಿಸಿದ್ದೇನೆ." ನೀವು ಲೋಕದ ಕಟ್ಟಕಡೆಯ ವರೆಗೂ ನನ್ನ ಸಾಕ್ಷಿಗಳಾಗಿರಬೇಕೆಂದು ನಾನು ನಿಮ್ಮನ್ನು ನೇಮಿಸಿದ್ದೇನೆ (ಅ.ಕೃತ್ಯ 1:8) ನೀವು ಜೀವಕರವಾದ ನೀರಿನ ಬುಗ್ಗೆಗಳಾಗಿರಲು ನಿಮ್ಮನ್ನು ನೇಮಿಸಿದ್ದೇನೆ (ಯೋಹಾನ 7:38). ಕರಕಲಾಗಿ ಹಿಂಸೆಪಡುತ್ತಿರುವ ಲೋಕಕ್ಕೆ ಪರಲೋಕದ ಎಲ್ಲಾ ಐಶ್ವರ್ಯ ಹಾಗು ಆಶೀರ್ವಾದಗಳನ್ನು ಸುರಿಸುವದಕ್ಕಾಗಿ ನಿಮ್ಮನ್ನು ನೇಮಿಸಿದ್ದೇನೆ" ಎಂಬದೇ.

ನಾವು ನಮ್ಮ ನೇಮಕದ ಕುರಿತು ಏನು ಮಾಡಿರುತ್ತೇವೆ? ನಾವು ಅದರ ಕುರಿತಾಗಿ ಈಗ ಏನು ಮಾಡುತ್ತಿರುವೆವು. ಈಗಿನಿಂದ ನಾವು ನಮಗಾಗಿ ಅನಂದ, ಸಮಾಧಾನ, ಸುಖಗಳಂತಹ ಆಶೀರ್ವಾದಗಳನ್ನು ಕೇಳಿಕೊಳ್ಳುವದನ್ನು ನಾವು ನಿಲ್ಲಿಸೋಣ. ಬದಲಾಗಿ ನಮ್ಮ ಮನಸ್ಸುಗಳಲ್ಲಿ ಈ ಒಂದು ಯೋಚನೆ ಮಾತ್ರವೇ ಇರಲಿ: ನಾನು ನನ್ನ ಸ್ವಂತ ಸ್ವತ್ತಲ್ಲ, ನಾನು ಆತನ ಸ್ವತ್ತಾಗಿದ್ದೇನೆ. ನಾನು ಆತನ ಸೇವಕನು. ನನ್ನ ಜೀವಿತಕ್ಕೆ ಒಂದೇ ಒಂದು ಅರ್ಥ" ಹಾಗು ಉದ್ದೇಶ ವಿರುತ್ತದೆ, ಅದೇನೆಂದರೆ ಆತನ ಚಿತ್ತವನ್ನು ಮಾಡುವದೇ.ಮತ್ತು ಯಾವಾಗ ನಾವು ಆತನ ಚಿತ್ತ ಮಾಡುವದನ್ನೇ ನಮ್ಮ ಜೀವಿತಗಳ ಏಕೈಕ ಬಯಕೆಯನ್ನಾಗಿ ಮಾಡುತ್ತೇವೋ ಆಗ ಆತನು ನಮ್ಮ ಬಳಿಗೆ ಬಂದು ನಮ್ಮನ್ನು ಮೇಲಕ್ಕೆತ್ತಿ "ಇನ್ನು ಮೇಲೆ ನಾನು ನಿಮ್ಮನ್ನು ಆಳುಗಳೆನ್ನುವದಿಲ್ಲ,.... ಬದಲಾಗಿ ನಿಮ್ಮನ್ನು ಸ್ನೇಹಿತರೆಂದು ಹೇಳಿದ್ದೇನೆ" ಎಂದೆನ್ನುವನು (ವಚನ 15).

ಕ್ರಿಸ್ತನ ಸೇವಕರೇ! ನಿಮ್ಮ ನೇಮಕವನ್ನು ವಹಿಸಿಕೊಂಡು ವಿಧೇಯತೆಯಿಂದ ಹೊರಟು ಹೋಗಿ ಆತನ ಮಹಿಮೆಗಾಗಿ ಫಲವನ್ನು ಕೊಡವವರಾಗಿರ್ರಿ.

**17** ಯೋಹಾನ 13:34 ಮತ್ತು ವ್ಯಾಖ್ಯಾನ ನೋಡಿರಿ.

## ಲೋಕವು ಶಿಷ್ಯರನ್ನು ಹಗೆ ಮಾಡುತ್ತದೆ (15:18-27)

**18** ಲೋಕವು [107] ನಿಮ್ಮ ಮೇಲೆ ದ್ವೇಷ ಮಾಡುವದಾದರೆ ಅದು ಮೊದಲು ನನ್ನ ಮೇಲೆ ದ್ವೇಷ ಮಾಡಿತೆಂದು ತಿಳುಕೊಳ್ಳಿರಿ. ಯೇಸುವಿನ ತಾತ್ಪರ್ಯವೇನೆಂದರೆ: ಲೋಕವು ಖಂಡಿತವಾಗಿಯೂ ನಿಮ್ಮನ್ನು ದ್ವೇಷಿಸುತ್ತದೆ ಯಾಕೆಂದರೆ ಅದು ಮೊದಲು ನನ್ನನ್ನು ದ್ವೇಷಿಸಿತು" ಶಿಷ್ಯರು ವಿಸ್ಮಯ ಪಟ್ಟು ಕೊಳ್ಳದಿರಲಿ. ಲೋಕವು ಯೇಸುವನ್ನು ದ್ವೇಷಿಸಿರುವದಾದರೆ ನಿಶ್ಚಯವಾಗಿಯೂ ಅದು ಆತನ ಹಿಂಬಾಲಕರನ್ನು ಸಹ ದ್ವೇಷಿಸುವದು (ಮತ್ತಾಯ 10:24- 25 ನೋಡಿರಿ).

ಯೇಸುವಿನ ಶಿಷ್ಯರು ಅವರ ಪ್ರೀತಿಯಿಂದಲೇ ಗುರುತಿಸಲ್ಪಡುತ್ತಾರೆ ಎಂಬದನ್ನು ಗಮನಿಸಿರಿ. ಲೋಕದ ಜನರನ್ನು ಅವರ ದ್ವೇಷದಿಂದ ತಿಳಿಯಬಹುದು

**19** ಯೇಸುವಿನ ಹಿಂಬಾಲಕರು ಲೋಕದವರಲ್ಲವಾದ್ದರಿಂದ ಲೋಕವು ಅವರನ್ನು ದ್ವೇಷಿಸುತ್ತದೆ. ಅವರು ಕ್ರಿಸ್ತನ ರಾಜ್ಯದೊಳಗೆ ಪ್ರವೇಶಿಸುವದಕ್ಕೆ ಲೋಕದೊಳಗಿಂದ ಕರೆಯಲ್ಪಟ್ಟಿದ್ದಾರೆ. ಈ ಜೀವನದಲ್ಲಿಯೂ ಸಹ ಕ್ರೈಸ್ತರು ಕತ್ತಲೆಯ ರಾಜ್ಯವನ್ನು ತೊರೆದು ದೇವರ ರಾಜ್ಯದ ಪ್ರಜೆಗಳಾಗಿರುತ್ತಾರೆ. ಈ ಕಾರಣದಿಂದಲೇ ಇಹ ಲೋಕಾಧಿಪತಿಯು (ಯೋಹಾನ 14:30). ಬಹು ಕೋಪಗೊಂಡಿರುತ್ತಾನೆ. ಕ್ರೈಸ್ತರು ಆತನ ರಾಜ್ಯವನ್ನು ತೊರೆದಿರುತ್ತಾರೆ. ಆತನು ಅವರನ್ನು ದ್ವೇಷಿಸುತ್ತಾನೆ ಮತ್ತು ಸೈತಾನನ ಹತೋಟಿಯಲ್ಲಿರುವವರೆಲ್ಲರೂ ಅಂದರೆ ಲೋಕದವರೆಲ್ಲರೂ ಸಹ ಕ್ರೈಸ್ತರನ್ನು ದ್ವೇಷಿಸುತ್ತಾರೆ. ಕ್ರೈಸ್ತರು ಹಾಗು ಲೋಕದ (ಸೈತಾನನರಾಜ್ಯದ) ನಡುವೆ ಯಾವಾಗಲೂ ಹಗೆತನ ವಿರುತ್ತದೆ. ಒಳ್ಳೆಯ ಹಾಗು ಕೆಟ್ಟದ್ದರ ನಡುವೆಯೂ ಸತ್ಯ ಹಾಗು ಅಸತ್ಯಗಳ ನಡುವೆಯೂ, ಬೆಳಕು ಮತ್ತು ಕತ್ತಲುಗಳ ನಡುವೆಯೂ ಯಾವ ಸಂಧಾನವೂ ಇಲ್ಲದಿರುವ ಪ್ರಕಾರವೇ ಕ್ರೈಸ್ತರು ಹಾಗು ಲೋಕದ ಮದ್ಯದಲ್ಲಿ ಯಾವ ಸಂಧಾನವೂ ಇರಲು ಸಾದ್ಯವಿಲ್ಲ.

**20** ಸೇವಕರು ಸಾಮಾನ್ಯವಾಗಿ ಅವರ ಯಜಮಾನನು ನಡೆಸಿಕೊಳ್ಳಲ್ಪಟ್ಟ ರೀತಿಯಲ್ಲಿಯೇ ನಡೆಸಿಕೊಳ್ಳಲ್ಪಡುವರು. ಯೇಸುವನ್ನು ಹಿಂಸಿಸಿದವರು ಆತನ ಶಿಷ್ಯರನ್ನು ಸಹ ಹಿಂಸಿಸುವರು ಯಾಕೆಂದರೆ ಶಿಷ್ಯರು ಸಹ ಯೇಸು ಮಾಡಿದ ಕಾರ್ಯಗಳನ್ನೇ ಮಾಡುವರು. ಅವರು ಕತ್ತಲೆಯಲ್ಲಿ ಬೆಳಕಾಗಿರುವರು. ಲೋಕದ ಜನರು ಬೆಳಕನ್ನು ದ್ವೇಷಿಸುತ್ತಾರೆ ಯಾಕೆಂದರೆ ಬೆಳಕು ಅವರ ಕೆಟ್ಟಕಾರ್ಯಗಳನ್ನು ಬಯಲು ಪಡಿಸುತ್ತದೆ (ಯೋಹಾನ 3:19-20 ಮತ್ತು ವ್ಯಾಖ್ಯಾನ ನೋಡಿರಿ). ಈ ಕಾರಣದಿಂದಲೇ ಲೋಕವು ಕ್ರಿಸ್ತನನ್ನು ಹಿಂಸಿಸಿತು ಮತ್ತು ಲೋಕವು ಕ್ರಿಸ್ತನ ಶಿಷ್ಯರನ್ನು ಹಿಂಸಿಸುವದಕ್ಕೆ ಇದೇ ಕಾರಣವಾಗಿದೆ.

ಅದೇ ರೀತಿಯಾಗಿ ಯೇಸುವಿನ ಬೋಧನೆಗೆ ವಿಧೇಯರಾದವರು ಶಿಷ್ಯರ ಬೋಧನೆಗೆ ಸಹ ವಿಧೇಯರಾಗುವರು. ಆದರೆ ಶಿಷ್ಯರಿಗೆ ವಿಧೇಯರಾಗುವವರಿಗಿಂತಲೂ ಅವರನ್ನು ಹಿಂಸಿಸುವವರ ಸಂಖ್ಯೆಯು ಹೆಚ್ಚಾಗಿರುತ್ತದೆ. ಪ್ರತಿಯೊಂದು ಪೀಳಿಗೆಯಲ್ಲಿಯೂ ಯೇಸುವಿನ ಶಿಷ್ಯರಿಗೆ ಇದೇ ಸಂಭವಿಸಿರುತ್ತದೆ (ಮತ್ತಾಯ 10:24-25, ಯೋಹಾನ 13:16 ಹಾಗು ವ್ಯಾಖ್ಯಾನಗಳನ್ನು ನೋಡಿರಿ).

ಎಲ್ಲಾ ನಂಬಿಗಸ್ಥ ಕ್ರೈಸ್ತರು ಹಿಂಸೆಯನ್ನು ಅನುಭವಿಸುವರು (2 ತಿಮೊಥೆ 3:12). ಯೇಸು ನಮ್ಮನ್ನು ತೋಳಗಳ ಮದ್ಯ ಕುರಿಗಳಹಾಗೆ ಕಳುಹಿಸುತ್ತಾನೆ (ಮತ್ತಾಯ 10:16) ಆದರೆ ಕ್ರಿಸ್ತನ ಬಾಧೆಯಲ್ಲಿ ಪಾಲುಗಾರರಾಗುವವರು ಆತನ ಮಹಿಮೆಯಲ್ಲಿ ಸಹ ಲುಗಾರರಾಗುವರೆಂಬದನ್ನು ನಾವು ನೆನಪಿನಲ್ಲಿಟ್ಟುಕೊಳ್ಳೋಣ (ಮತ್ತಾಯ 5:10-12, ರೋಮ 8:17, 1 ಪೇತ್ರನು 4:13-14 ನೋಡಿರಿ).

**21** ಯೇಸು ತನ್ನ ಶಿಷ್ಯರಿಗೆ "ಅವರು...ಇದನ್ನೆಲ್ಲಾ ನನ್ನ ಹೆಸರಿನ ನಿಮಿತ್ತವಾಗಿ ಅಂದರೆ ನನ್ನ ನಿಮಿತ್ತವಾಗಿ ನಿಮಗೆ ಮಾಡುವರು "ಎಂದು ಹೇಳಿದನು. ಲೋಕವು ದೇವರನ್ನು ತಿಳಿದಿಲ್ಲವಾದ ಕಾರಣ ಅದು ಯೇಸುವಿನ ಶಿಷ್ಯರೊಂದಿಗೆ ಕೆಟ್ಟದ್ದಾಗಿ ವರ್ತಿಸುತ್ತದೆ ಮತ್ತು ಲೋಕವು ದೇವರ ಪ್ರಕಟಣೆಯಾದ ಯೇಸುವನ್ನು ಗುರುತಿಸದೆ ಆತನನ್ನು ಅಂಗೀಕರಿಸದೇ ಇರುವದರಿಂದ ದೇವರನ್ನು ತಿಳಿಯುವದಿಲ್ಲ!

**22** ಒಂದು ವೇಳೆ ಯೇಸು ಭೂಮಿಗೆ ಬಂದಿರದಿರುವದಾದರೆ ಯೆಹೂದ್ಯರು ದೇವರ ಮಗನನ್ನು ತಿರಸ್ಕರಿಸಿದ ಅಪರಾಧಕ್ಕೆ ಒಳಗಾಗುತ್ತಿರಲಿಲ್ಲ. ಯೇಸು ತಾನು ಬರದೆ ಹೋಗಿದ್ದರೆ ಯೆಹೂದ್ಯರು ಸಂಪೂರ್ಣವಾಗಿ ಅಪರಾಧ ರಹಿತರೂ, ಪಾಪವಿಲ್ಲದವರೂ ಆಗಿರುತ್ತಿದ್ದರೆಂದು ಯೇಸು ಹೇಳಲಿಲ್ಲ. ಉತ್ತಮ ಯೆಹೂದ್ಯರು ಸಹ ಉಳಿದೆಲ್ಲಾ ಮಾನವರಂತೆಯೇ ಪಾಪಿಗಳಾಗಿದ್ದರು (ರೋಮ 3:9-10). ಅವರು ದೇವರ ನಿಜವಾದ ಪ್ರಕಟಣೆಯನ್ನು ತಿರಸ್ಕರಿಸಿದ ಅಪರಾಧಕ್ಕೆ ಒಳಗಾಗುತ್ತಿರಲಿಲ್ಲ ಎಂದಷ್ಟೇ ಯೇಸುವಿನ ತಾತ್ಪರ್ಯವಾಗಿತ್ತು. ಯೆಹೂದ್ಯರು ಕ್ರಿಸ್ತನನ್ನು ತಿರಸ್ಕರಿಸಿದಾಗ, ಅವರು ದೇವರನ್ನೇ ತಿರಸ್ಕರಿಸಿದರು, ಇದು ಅವರ ಅತಿ ದೊಡ್ಡ ಪಾಪವಾಗಿತ್ತು. ಒಂದು ಕ್ರಿಸ್ತನು ಬಂದಿರದಿದ್ದರೆ ಅವರು ಆ ಪಾಪಕ್ಕೊಳಗಾಗುತ್ತಿರಲಿಲ್ಲ. ಕ್ರಿಸ್ತನು ಲೋಕಕ್ಕೆ ಬಂದದ್ದರಿಂದ ಆತನನ್ನು ತಿರಸ್ಕರಿಸಿದವರೆಲ್ಲರೂ ದಂಡನೆಯನ್ನು ಹೊಂದುವಂತಾಯಿತು (ಯೋಹಾನ 3:18 ಮತ್ತು ವ್ಯಾಖ್ಯಾನ ನೋಡಿರಿ).

**23** ನನ್ನ ಮೇಲೆ ದ್ವೇಷ ಮಾಡುವವನು ನನ್ನ ತಂದೆಯ ಮೇಲೆಯೂ ದ್ವೇಷ ಮಾಡುವವನಾಗಿದ್ದಾನೆ. ಇತರ ಧರ್ಮಗಳ ಹಿಂಬಾಲಕರು ಹೇಳುವದೇನೆಂದರೆ: "ನಾನು ದೇವರನ್ನು ನಂಬುತ್ತೇನೆ ಆದರೆ ಕ್ರಿಸ್ತನನ್ನಲ್ಲ". ಆದರೆ ಕ್ರಿಸ್ತನನ್ನು ನಂಬದೆಯೇ ನಿಜವಾದ ದೇವರನ್ನು ಸಂಪೂರ್ಣವಾಗಿ ನಂಬುವದು ಅಸಾದ್ಯವಾಗಿರುತ್ತದೆ. ಕ್ರಿಸ್ತನನ್ನು ತಿರಸ್ಕರಿಸುವವನು ದೇವರನ್ನೂ ತಿರಸ್ಕರಿಸುವವನಾಗಿದ್ದಾನೆ (ಯೋಹಾನ 12:44-45 ಮತ್ತು ವ್ಯಾಖ್ಯಾನ ನೋಡಿರಿ). ಮತ್ತು ಕ್ರಿಸ್ತನನ್ನು ತಿರಸ್ಕರಿಸುವದೆಂದರೆ ಆತನನ್ನು "ದ್ವೇಷ" ಮಾಡಿದಂತೆಯೇ ಆಗಿದೆ. ಆದುದರಿಂದ ಕ್ರಿಸ್ತನನ್ನು ತಿರಸ್ಕರಿಸುವವನು ಕ್ರಿಸ್ತನು ಹಾಗು ದೇವರು ಇಬ್ಬರನ್ನೂ ದ್ವೇಷಿಸುವವನಾಗಿದ್ದಾನೆ. ಕೆಲವು ಜನರು ಹೀಗೆ ಹೇಳುತ್ತಾರೆ: ನಾನು ಕ್ರಿಸ್ತನನ್ನು ಸ್ವೀಕರಿಸಿಕೊಳ್ಳುತ್ತೇನೆ ಆದರೆ ನನ್ನ ಜೀವಿತದ ಮೇಲೆ ಆತನ ಒಡೆತನವನ್ನು ಒಪ್ಪಿ ಕೊಳ್ಳುವದಿಲ್ಲ.. ಇದು ಸಹ ಅಸಾದ್ಯವೇ ಆಗಿದೆ. ಕ್ರಿಸ್ತನ ಒಡೆತನವನ್ನು ಅಂಗಿಕರಿಸದವರು ನಿಜವಾಗಿಯೂ ಕ್ರಿಸ್ತನನ್ನು ಅಂಗೀಕರಿಸುವದಿಲ್ಲ. ಮನುಷ್ಯರು ಕ್ರಿಸ್ತನನ್ನು ತಮ್ಮ ಕರ್ತನು ಮತ್ತು ರಕ್ಷಕನನ್ನಾಗಿ(ದೇವಕುಮಾರನಾಗಿ) ಅಂಗೀಕರಿಸಬೇಕು ಇಲ್ಲವಾದರೆ ಅವರು ಅದರ ಪರಿಣಾಮವಾಗಿ ಆತನನ್ನು ತಿರಸ್ಕರಿಸುವವರಾಗಿರುತ್ತಾರೆ.

**24** ಈ ವಚನವು 22ನೇ ವಚನದ ವಿಚಾರವನ್ನು ಕೂಡಿಸುತ್ತದೆ. ಯೆಹೂದ್ಯರು ಕ್ರಿಸ್ತನ ಬೋಧನೆಯನ್ನು ತಿರಸ್ಕರಿಸಿದ್ದು ಮಾತ್ರವಲ್ಲ; ಅವರು ಆತನ ಕ್ರಿಯೆಗಳನ್ನು, ಆತನ ಅದ್ಭುತಗಳನ್ನು ಸಹ ತಿರಸ್ಕರಿಸಿದರು. ಕ್ರಿಸ್ತನನ್ನು ವಿಶ್ವಾಸಿಸಲು ನಿರಾಕರಿಸಿದ್ದೇ ಕೆಟ್ಟದ್ದಾಗಿತ್ತು, ಆದರೆ ಆತನ ಅದ್ಭುತಗಳನ್ನು ನಂಬದಿರುವದು ಇನ್ನು ಹೆಚ್ಚು ಕೆಟ್ಟದೇ ಆಗಿತ್ತು. ಇದು ಯೆಹೂದ್ಯರು ಹೊಂದಿದ್ದ ಹೃದಯದ ಅತಿಭಯಂಕರವಾದ ಕಾಠಿಣ್ಯತೆಯನ್ನು ತೋರಿಸುತ್ತದೆ. ಯೇಸು ಮಾಡಿದ ದೇವರ ಕ್ರಿಯೆಗಳ ಹೊರತಾಗಿಯೂ

ಯೆಹೂದ್ಯರು ಆತನ ಮೇಲೆ ದ್ವೇಷ ಮಾಡುವದನ್ನು ಮುಂದುವರೆಸಿದರು, ಮತ್ತು ಅವರು ಕ್ರಿಸ್ತನನ್ನು ದ್ವೇಷಿಸಿದ ಕಾರಣದಿಂದ ತಂದೆಯನ್ನೂ ಸಹ ಅವರು ದ್ವೇಷಿಸಿದರು (ವಚನ 23).

ಯೇಸು ತಂದೆಯಿಂದ ಕಳುಹಿಸಲ್ಪಟ್ಟಿದ್ದಾನೆಂಬದಕ್ಕೆ ಆತನ ಅದ್ಭುತಗಳು ಸಾಕ್ಷಿ ನೀಡಿದವು (ಯೋಹಾನ 5:36, 10:25). ಯೆಹೂದ್ಯರು ಕ್ರಿಸ್ತನ ಅದ್ಭುತಗಳನ್ನು ತಿರಸ್ಕರಿಸಿದಾಗ ಅವರು ದೇವರನ್ನೇ ತಿರಸ್ಕರಿಸಿದರು, ಯಾಕೆಂದರೆ ಅದ್ಭುತಗಳು ದೇವರ ಬಲದಿಂದ ಮಾಡಲ್ಪಟ್ಟವು. ಹೀಗೆ ಯೆಹೂದ್ಯರು ನೆಪವಿಲ್ಲದವರಾಗಿದ್ದರು. ದೇವರು ತನ್ನ ಕರುಣೆಯಲ್ಲಿ ಅವರಿಗೆ ಸೂಚಕಕಾರ್ಯಗಳನ್ನು ನೀಡಿದ್ದನು, ಆ ಸೂಚಕಕಾರ್ಯಗಳು ಸ್ವತಃ ಅದ್ಭುತಗಳೇ ಆಗಿದ್ದವು. ಅವರು ಈ ಅದ್ಭುತಗಳನ್ನು ನೋಡಿದ್ದರು. ಅವರು ಕ್ರಿಸ್ತನನ್ನು ನೋಡಿದ್ದರು. ಮತ್ತು ಕ್ರಿಸ್ತನನ್ನು ನೋಡುವದರಲ್ಲಿ ಅವರು ತಂದೆಯನ್ನು ನೋಡಿದ್ದರು (ಯೋಹಾನ 12:45). ಆದರೆ ಕ್ರಿಸ್ತನು ಮತ್ತು ತಂದೆ ಇಬ್ಬರನ್ನು ತಿರಸ್ಕರಿಸಿದರು. ಅವರ ಅಪರಾಧವು ನಿಜವಾಗಿಯೂ ಅಪಾರವಾಗಿತ್ತು (ಮತ್ತಾಯ 11:20-24 ಮತ್ತು ವ್ಯಾಖ್ಯಾನ ನೋಡಿರಿ).

25 ಯೆಹೂದ್ಯರು ಕ್ರಿಸ್ತನನ್ನು ತಿರಸ್ಕರಿಸುವರೆಂದು ಧರ್ಮ ಶಾಸ್ತ್ರವು ಅಂದರೆ ಹಳೆ ಒಡಂಬಡಿಕೆಯು ಪ್ರವಾದಿಸಿತು. ಇಲ್ಲಿ ಯೇಸು ಕೀರ್ತನೆಗಳು 35:19 ಮತ್ತು 69:4 ರಲ್ಲಿನ ವಿಷಯವನ್ನು ಉಲ್ಲೇಖಿಸುತ್ತಾನೆ.

26 ನಂತರ ಯೇಸು ಪು ನ: ಆದರಿಕನಾದ ಪವಿತ್ರಾತ್ಮನ ಬಗ್ಗೆ ಪ್ರಸ್ತಾಪಿಸುತ್ತಾನೆ (ಯೋಹಾನ 14:16-17,26 ಮತ್ತು ವ್ಯಾಖ್ಯಾನ ನೋಡಿರಿ). ಇದಕ್ಕೆ ಮುಂಚೆ ದೇವರು ಆತ್ಮನನ್ನು ಕಳುಹಿಸುವನೆಂದು ಆತನು ಹೇಳಿದ್ದನು. ಆದರೆ ಈ ಸಮಯದಲ್ಲಿ ಯೇಸು ಸ್ವತಃ ತಾನೇ ಆತ್ಮನನ್ನು ಕಳುಹಿಸುವೆನೆಂದು ಹೇಳುತ್ತಾನೆ. ಈ ಎರಡು ಹೇಳಿಕೆಗಳೂ ಒಂದೇ ಆಗಿವೆ: ಯೇಸು ಮತ್ತು ದೇವರು ಯಾವಾಗಲೂ ಒಟ್ಟಾಗಿ ಕಾರ್ಯಮಾಡುತ್ತಾರೆ.

ಪವಿತ್ರಾತ್ಮನು ಯೇಸುವಿನ ಕುರಿತಾಗಿ ಸಾಕ್ಷಿ ನೀಡುತ್ತಾನೆ. ಜನರು ಕ್ರಿಸ್ತನ ಸುವಾರ್ತೆಯನ್ನು ಕೇಳಿ ನಂಬುವಾಗ ಅದಕ್ಕೆ ಕಾರಣ ಪವಿತ್ರಾತ್ಮ ನು ಅವರ ಹೃದಯಗಳಲ್ಲಿ ಯೇಸುವಿನ ಕುರಿತಾಗಿ ಸಾಕ್ಷಿ ನೀಡಿರುತ್ತಾನೆ. ಮನುಷ್ಯರ ಸಾಕ್ಷಿಯೊಂದೆ ಎಂದಿಗೂ ಸಾಲದು, ಯಾವನೇ ಆಗಲಿ ಕ್ರಿಸ್ತನನ್ನು ನಂಬಬೇಕಾದರೆ ಪವಿತ್ರಾತ್ಮನ ಸಾಕ್ಷಿಯು ಅತ್ಯವಶ್ಯಕವಾಗಿರುತ್ತದೆ. ಕ್ರೈಸ್ತರು ಇತರ ಜನರನ್ನು ಮಾನಸಾಂತರ (ಮತಾಂತರ) ಮಾಡುವದಿಲ್ಲ; ಜನರು ಪವಿತ್ರಾತ್ಮನಿಂದಲೇ ಮಾನಸಾಂತರ ಹೊಂದುತ್ತಾರೆ.

27 ಹೇಗಿದ್ದರೂ, ಶಿಷ್ಯರ ಸಾಕ್ಷಿಯು ಸಹ ಪ್ರಾಮುಖ್ಯವಾಗಿತ್ತು. ಅವರು ಯೇಸುವಿನೊಂದಿಗೆ ಪ್ರಾರಂಭದಿಂದಲೂ ಇದ್ದರು. ಅವರು ಪ್ರತ್ಯಕ್ಷಸಾಕ್ಷಿಗಳಾಗಿದ್ದಾರೆ.

ಆದೇ ರೀತಿಯಲ್ಲಿ, ಇಂದು ಕ್ರೈಸ್ತರ ಸಾಕ್ಷಿಯು ಸಹ ಅವಶ್ಯಕವಾಗಿರುತ್ತದೆ. ಪವಿತ್ರಾತ್ಮನು ಕೇಳಿಸುವಂತಹ ಸ್ವರವನ್ನು ಹೊಂದಿರುವದಿಲ್ಲ. ನಾವೇ ಪವಿತ್ರಾತ್ಮನ ಸ್ವರವಾಗಿದ್ದೇವೆ. ನಾವು ಇತರರಿಗೆ ಕ್ರಿಸ್ತನ ಕುರಿತಾಗಿ ಸಾಕ್ಷಿ ನೀಡಬೇಕು, ಇಲ್ಲವಾದರೆ ಅವರು ಎಂದಿಗೂ ಕ್ರಿಸ್ತನ ಬಗ್ಗೆ ಕೇಳುವದಿಲ್ಲ (ರೋಮ 10:14 ನೋಡಿರಿ). ನಮ್ಮ ಸಾಕ್ಷಿಯು ಅವರ ಕಿವಿಗಳನ್ನು ತಲುಪಬೇಕು, ಆಗ ಪವಿತ್ರಾತ್ಮನು ಅದನ್ನು ಅವರ ಹೃದಯಗಳಿಗೆ ಒಯ್ಯುತ್ತಾನೆ.

---

# ಅಧ್ಯಾಯ– 16

## ಪವಿತ್ರಾತ್ಮನ ಕಾರ್ಯ (16:1-15)

1 ಅವರು ಒಟ್ಟಾಗಿ ಮಾಡಿದ ಕೊನೆಯ ಭೋಜನದ ವೇಳೆ ಯೇಸು ಈ ಬೋಧನೆಗಳನ್ನು ತನ್ನ ಶಿಷ್ಯರಿಗೆ ಕೊಟ್ಟನು (14-16 ಅಧ್ಯಾಯಗಳು). ಕಾರಣ ಅವರು ಧೈರ್ಯಗೆಟ್ಟು ಹಿಂಜರಿಯಬಾರದು ಅಂದರೆ ಅವರ ನಂಬಿಕೆಯು ವಿಫಲವಾಗಬಾರದೆಂಬದು ಆತನ ಉದ್ದೇಶವಾಗಿತ್ತು. ದೊಡ್ಡ ಹಿಂಸೆಯು ಅವರ ಮೇಲೆ ಬರುವದರಲ್ಲಿತ್ತು. ಒಂದು ವೇಳೆ ಮುಂಚಿತವಾಗಿ ಬರಲಿರುವ ಲೋಕದ ಹಗೆತನ ಹಾಗು ಸಮಸ್ಯೆಗಳ ಕುರಿತಾಗಿ ಅವರಿಗೆ ಎಚ್ಚರಿಸದೆ ಹೋಗಿದ್ದರೆ ಅವರು ಕ್ರಿಸ್ತನಲ್ಲಿನ ತಮ್ಮ ನಂಬಿಕೆಯನ್ನು ತೊರೆದು ಬಿಟ್ಟಿರುತ್ತಿದ್ದರು (ವಚನ 4).

2 ಶಿಷ್ಯರು ವಿಶೇಷವಾಗಿ ಯೆಹೂದ್ಯ ಧಾರ್ಮಿಕ ನಾಯಕರುಗಳಿಂದ ಹಿಂಸೆಗೆ ಗುರಿಯಾಗುವರೆಂದು ಯೇಸು ಅವರಿಗೆ ಹೇಳಿದನು. ಅವರು ಸಭಾಮಂದಿರದಿಂದ ಬಹಿಷ್ಕಾರಕ್ಕೊಳಗಾಗುವರು ಬಹುಶ: ಅವರು ತಮ್ಮ ಉದ್ಯೋಗಗಳಿಂದಲೂ, ಮನೆಗಳಿಂದಲೂ ಬಹಿಷ್ಕಾರ ಹೊಂದುವರು. ಪ್ರತಿಯೊಂದು ಪೀಳಿಗೆಯಲ್ಲಿಯೂ, ಮನೆಗಳಿಂದಲೂ ಬಹಿಷ್ಕಾರ ಹೊಂದುವರು. ಪ್ರತಿಯೊಂದು ಪೀಳಿಗೆಯಲ್ಲಿಯೂ ಅಂತಹದ್ದು ಅನೇಕ ಕ್ರೈಸ್ತರಿಗೆ ಸಂಭವಿಸಿದೆ. ಕೆಲವು ಧಾರ್ಮಿಕ ನಾಯಕರು ಎಷ್ಟೋ ಮಂಕುತನ ಹಾಗು ದುಷ್ಟತನವುಳ್ಳುವರಾಗಿ ಮುಗ್ಧ ಕ್ರೈಸ್ತರನ್ನೇಕೊಂದು ಹಾಕಿ ತಾವು ದೇವರಿಗಾಗಿ ಅದನ್ನು ಮಾಡುತ್ತಿದ್ದೇವೆಂದು ಯೋಚಿಸಿರುವವರು ಇದ್ದಾರೆ (ಅ.ಕೃತ್ಯ 8:1-3, 26:9-11 ನೋಡಿರಿ).

ವಾಸ್ತವದಲ್ಲಿ, ಅಪೊಸ್ತಲನಾದ ಯೋಹಾನನನ್ನು ಹೊರತು ಪಡಿಸಿ ಉಳಿದ ಯೇಸುವಿನ ಹನ್ನೊಂದು ಮಂದಿ ಶಿಷ್ಯರು ತಮ್ಮ ನಂಬಿಕೆಯ ಕಾರಣದಿಂದ ಕೊಲ್ಲಲ್ಪಟ್ಟರು. ಇತಿಹಾಸದುದ್ದಕ್ಕೂ ಕ್ರೈಸ್ತರು ಕೇವಲ ಯೇಹೂದ್ಯರಿಂದ ಮಾತ್ರವಲ್ಲ

ಆದರೆ ಇತರ ಧರ್ಮದವರಿಂದಲೂ ಹಿಂಸಿಸಲ್ಪಟ್ಟಿರುತ್ತಾರೆ. ಆದರೆ ಎಲ್ಲಕ್ಕಿಂತ ಘೋರವಾದದ್ದೇನೆಂದರೆ ಕೆಲವು ಕ್ರೈಸ್ತರು ವಾಸ್ತವದಲ್ಲಿ ಇತರ ಕ್ರೈಸ್ತರನ್ನು ಹಿಂಸಿಸಿದ ಸಂದರ್ಭಗಳು ಇರುತ್ತವೆ. ಸೈತಾನನ ಬಲವು ವಿಶ್ವಾಸಿಗಳನ್ನು ಸಹ ವಂಚಿಸಿ ಅವರ ಇತರ ಸಹೋದರರನ್ನು ವಿರೋಧಿಸುವಂತೆ ನಡೆಸುವಷ್ಟು ದೊಡ್ಡದಾಗಿದೆ.

**3** ಜನರು ಕ್ರಿಸ್ತನ ಮೂಲಕ ಪ್ರಕಟಣೆಗೊಂಡ ನಿಜದೇವರನ್ನು ಅರಿಯದಾದ್ದರಿಂದ ಅವರು ನಿಜಕ್ರೈಸ್ತರನ್ನು ವಿರೋಧಿಸುತ್ತಾರೆ (ಯೋಹಾನ 15:21 ಹಾಗು ವ್ಯಾಖ್ಯಾನ ನೋಡಿರಿ). ಸಾಮಾನ್ಯವಾಗಿ ಜನರು ದೇವರನ್ನು ತಿಳಿಯದಿರುವದು ಅವರ ತಪ್ಪೇ ಆಗಿರುತ್ತದೆ. ದೇವರು ಅವರಿಗೆ ಕ್ರಿಸ್ತನ ಮೂಲಕ ಸೂಚಕ ಕಾರ್ಯಗಳನ್ನು ನೀಡಿರುತ್ತಾನೆ ಆದರೆ ಅವರು ಅವುಗಳಿಂದ ಕಲಿತುಕೊಳ್ಳಲು ಇಷ್ಟಪಡಲಿಲ್ಲ. ಇದು ಯೆಹೂದ್ಯರ ವಿಷಯದಲ್ಲಿ ಅಷ್ಟೇ ಸತ್ಯವಾಗಿದೆ. ಮತ್ತು ಎಲ್ಲಾ ಪೀಳಿಗೆಗಳಲ್ಲಿಯೂ ಅವಿಶ್ವಾಸಿಗಳಾದ ಜನರ ವಿಷಯದಲ್ಲಿಯೂ ಅಷ್ಟೇ ಸತ್ಯವಾಗಿದೆ.

**4** ಯೇಸು ತನ್ನ ಶಿಷ್ಯರೊಂದಿಗಿರುವಾಗ ಅವರ ಮೇಲೆ ಬರಲಿದ್ದ ಕಷ್ಟಗಳವಿಷಯವಾಗಿ ಹೆಚ್ಚು ಮಾತಾಡಲಿಲ್ಲ. ಅದು ಅವಶ್ಯಕವಾಗಿರಲಿಲ್ಲ ಯಾಕೆಂದರೆ ಹೆಚ್ಚು ಹಿಂಸೆಯು ಶಿಷ್ಯರಿಗೆ ಬರದೇ ಯೇಸುವಿನ ಮೇಲೆ ಬಂದಿತು. ಆದರೆ ಈಗ, ಯೇಸು ಅವರನ್ನು ಬಿಟ್ಟು ಹೋಗಲಿದ್ದನು ಮತ್ತು ಆಗ ಲೋಕದ ಹಗೆತನವೆಲ್ಲಾ ಅವರ ಮೇಲೆ ಬೀಳುವದು. ಆದುದರಿಂದ ಅವರನ್ನು ಆ ಗಳಿಗೆಗಾಗಿ ಸಿದ್ಧಗೊಳಿಸುವದು ಅವಶ್ಯಕವಾಗಿತ್ತು.

**5** ತಾನು ಹೊರಟು ಹೋಗಲಿದ್ದಾನೆಂದು ಯೇಸು ತನ್ನ ಶಿಷ್ಯರಿಗೆ ಹೇಳಿದ್ದನು, ಆದರೆ ಆತನು ಎಲ್ಲಿಗೆ ಹೋಗುವನೆಂದು ನಿಜವಾಗಿಯೂ ಅವರು ಕೇಳಿರಲಿಲ್ಲ. ನಿಜ ಪೇತ್ರನು ಒಮ್ಮೆ ಕೇಳಿದ್ದನು (ಯೋಹಾನ 13:36). ಆದರೆ ಪೇತ್ರನು ಯೇಸುವಿನ ಆಗಮ್ಯ (ಪ್ರಾರಬ್ಧ) ಸ್ಥಾನವನ್ನು ಕುರಿತು ಯೋಚಿಸುತ್ತಿದ್ದಿಲ್ಲ; ಅವನು ಕೇವಲ ಯೇಸು ಹೋಗುವಲ್ಲೆಲ್ಲಾ ತಾನೂ ಹೋಗುವದರ ಕುರಿತಾಗಿ ಯೋಚಿಸುತ್ತಿದ್ದನು. ಯೇಸು ಬೇರೆ ಯಾವದಾದರೂ ಪಟ್ಟಣ ಅಥವಾ ದೇಶಕ್ಕೆ ಹೋಗುತ್ತಿದ್ದಾನೆಂದು ಅವನು ಯೋಚಿಸಿದ್ದನು.

**6** ಆದರೆ ಯೇಸು ತಾನು ಅವರನ್ನು ಬಿಟ್ಟು ಹೋಗುತ್ತೇನೆಂದು ಹೇಳಿದಾಗ ಶಿಷ್ಯರು ದುಃಖದಿಂದ ತುಂಬಿದ್ದರು. ಆದರೆ ಆತನು ತನ್ನ ಮರಣದ ಕುರಿತಾಗಿ ಮಾತಾಡುತ್ತಿರುವನೆಂಬದನ್ನು ಅವರು ಇನ್ನು ಅರ್ಥಮಾಡಿಕೊಂಡಿರಲಿಲ್ಲ.

**7** ಯೇಸು ತಾನು ಹೊರಟು ಹೋಗುವದು ಅವರ ನಷ್ಟಕ್ಕಾಗಿ ಅಲ್ಲ ಆದರೆ ಅವರ ಪ್ರಯೋಜನಕ್ಕಾಗಿಯೇ ಎಂದು ಹೇಳಿದನು. ಯಾಕೆಂದರೆ ಅವನು ಹೊರಟು ಹೋದ ಮೇಲೆ ಮಾತ್ರವೇ ಆದರಿಕನು ಪವಿತ್ರಾತ್ಮನು ಅವರ ಬಳಿಗೆ ಬರುವನು (ಯೋಹಾನ 14:16). ಯೇಸು ಸ್ವತಃ ತಾನು ಒಂದು ಸಮಯದಲ್ಲಿ ಒಂದೇ ಸ್ಥಳದೊಳಗೆ ಇರುವವನಾಗಿದ್ದನು. ಆದರೆ ಪವಿತ್ರಾತ್ಮನು ಏಕ ಕಾಲದಲ್ಲಿ ಎಲ್ಲಾ ಕಡೆಗಳಲ್ಲಿ ಇರುವವನಾಗಿದ್ದನು!.

ಯೇಸು ಮಾತಾಡುವದೇನೆಂಬದನ್ನು ಆಸಮಯದಲ್ಲಿ ಶಿಷ್ಯರು ಅರ್ಥ ಮಾಡಿಕೊಳ್ಳಲಿಲ್ಲ ಆದರೆ ಅನಂತರ ಅವರು ಅರ್ಥಮಾಡಿಕೊಂಡರು. ನಿಜವಾಗಿಯೂ, ಅವರೊಂದಿಗೆಯೇಸುವನ್ನು ಹೊಂದಿರುವದಕ್ಕಿಂತಲೂ ಅವರೊಳಗೆ ಪವಿತ್ರಾತ್ಮನನ್ನು ಹೊಂದಿರುವದು ಉತ್ತಮವೆಂಬದು ನಿರೂಪಿಸಲ್ಪಟ್ಟಿತು. ಯೇಸುವಿನ ಮರಣಕ್ಕೆ ಮುಂಚೆ ಅವರು ಬಲಹೀನರು, ಚಂಚಲರೂ ಮತ್ತು ಅಂಜಿಕೆಯುಳ್ಳ ವ್ಯಕ್ತಿಗಳಾಗಿದ್ದರು. ಯೇಸುವಿನ ಮರಣದ ನಂತರ ಪವಿತ್ರಾತ್ಮನು ಅವರ ಮೇಲೆ ಬಂದು ಅವರನ್ನು ರೂಪಾಂತರಗೊಳಿಸಿದನು, ಆಗ ಅವರು ಬಲವುಳ್ಳವರು, ಸ್ಥಿರತೆಯುಳ್ಳವರು ಹಾಗು ಧೈರ್ಯವಂತರಾದರು. ಆದ್ದರಿಂದಲೇ ತಾನು ಹೋಗುವದು ಅವರ ಪ್ರಯೋಜನಕ್ಕಾಗಿಯೇ ಎಂದು ಯೇಸು ಹೇಳಿದನು.

**8** ಯೇಸು ಈಗಾಗಲೇ ಪವಿತ್ರಾತ್ಮನ ಕುರಿತಾಗಿ ಕೆಲವು ವಿಷಯಗಳನ್ನು ವಿವರಿಸಿದ್ದನು (ಯೋಹಾನ 14:16-17, 26, 15:26 ನೋಡಿರಿ). ಆತನು ಇಲ್ಲಿ ಪವಿತ್ರಾತ್ಮನು ಪಾಪ, ನೀತಿ, ನ್ಯಾಯ ತೀರ್ಪಿಕೆ ವಿಷಯಗಳಲ್ಲಿ ಲೋಕದ ಜನರಿಗೆ ಅರುಹನ್ನು ಹುಟ್ಟಿಸುವನೆಂದು ಹೇಳುತ್ತಾನೆ.

**9** ಪವಿತ್ರಾತ್ಮನು ಮೊದಲು ಪಾಪದ ವಿಷಯದಲ್ಲಿ ಜನರು ಪಾಪಿಗಳೆಂಬದನ್ನು ಅವರಿಗೆ ತೋರಿಸುವನು ಯಾಕೆಂದರೆ ಅವರು ಕ್ರಿಸ್ತನಲ್ಲಿ ನಂಬಿಕೆಯಿಂಡಲು ನಿರಾಕರಿಸಿದ್ದಾರೆ. ಮಾನವನ ಪ್ರಾಥಮಿಕ ಪಾಪವು ಯಾವದೆಂದರೆ ಅವನು ತನ್ನನ್ನೇ ತನ್ನಸ್ವಜೀವನದ ಒಡೆಯನನ್ನಾಗಿ ಮಾಡಿಕೊಳ್ಳುವದು. ಇದು ಸ್ವಾರ್ಥ ಅಥವಾ ಸ್ವಕೇಂದ್ರಿಕೃತ ಜೀವನವಾಗಿದೆ. ಪಾಕೃತ ಮನುಷ್ಯನು ಮಾಡುವದೆಲ್ಲವೂ ಕೊನೆಗೆ ತನಗೋಸ್ಕರವೇ ಆಗಿರುತ್ತದೆ. ಈ ಸ್ವಾರ್ಥದ ಕಾರಣದಿಂದಾಗಿ ಮಾನವನು ತನ್ನ ಹೊರತಾಗಿ ಬೇರೆಯಾರನ್ನೇ ಆಗಲಿ (ಉದಾ:–ದೇವರು ಅಥವಾ ಕ್ರಿಸ್ತನು) ತನ್ನ ಒಡೆಯನನ್ನಾಗಿ ಒಪ್ಪಿಕೊಳ್ಳಲು ನಿರಾಕರಿಸುತ್ತಾನೆ. ಯೇಸು ಹೇಳುವದೇನೆಂದರೆ: "ನನ್ನನ್ನು ಸೇವಿಸು" ಮಾನವನು "ಇಲ್ಲ, ನಾನು ನನ್ನನ್ನೇ ಸೇವಿಸುತ್ತೇನೆ. ನಾನು ನಿನ್ನನ್ನು ನಂಬುವದಿಲ್ಲ" ಎಂದು ಹೇಳುತ್ತಾನೆ. ಮಾನವರಈ ಸ್ವಾರ್ಥ ಹಾಗು ಅಪನಂಬಿಕೆಯ ಮನೋಭಾವದ ಅರುಹನ್ನು ಉಂಟುಮಾಡಲು ಪವಿತ್ರಾತ್ಮನು ಬರುತ್ತಾನೆ. ಯಾಕೆಂದರೆ ಪವಿತ್ರಾತ್ಮನು ಒಬ್ಬನ ಮನಸಾಕ್ಷಿಗೆ ಅರುಹನ್ನು ಉಂಟು ಮಾಡಿದಾಗ ಮಾತ್ರವೇ ಆ ವ್ಯಕ್ತಿಯು ತನ್ನ ಸ್ವಾರ್ಥತೆಯನ್ನು ಪೂರ್ಣವಾಗಿ ಗ್ರಹಿಸಿಕೊಂಡು ಪಶ್ಚಾತಾಪದೊಂದಿಗೆ ದೇವರ ಕಡೆಗೆ ತಿರಿಗಿಕೊಳ್ಳುವನು.

**10** ಎರಡನೆಯದಾಗಿ, ನೀತಿಯ ವಿಷಯದಲ್ಲಿ ಪವಿತ್ರಾತ್ಮನು ಜನರಿಗೆ ಕ್ರಿಸ್ತನು ನೀತಿವಂತನೆಂಬದನ್ನು ತೋರ್ಪಡಿಸುವನು. ಲೋಕವು ಯೇಸುವನ್ನು "ಪಾಪಿ"ಎಂದು ಕರೆಯಿತು (ಯೋಹಾನ 9:24). ಆದರೆ ಯೇಸು ನೀತಿವಂತನೆಂದು ತೋರ್ಪಟ್ಟನು, ಯಾಕೆಂದರೆ ಆತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟು ಪರಲೋಕದಲ್ಲಿನ ತನ್ನ ತಂದೆಯ ಬಳಿಗೆ ಹೋದನು.

ಅಷ್ಟು ಮಾತ್ರವಲ್ಲದೆ, ಜನರು ತಮ್ಮ ನೀತಿಯನ್ನು ಹೊಂದಿರುವದಿಲ್ಲ ಎಂಬದನ್ನು ಪವಿತ್ರಾತ್ಮನು ಅವರಿಗೆ ತೋರ್ಪಡಿಸುವನು. ಕ್ರಿಸ್ತನು ಮಾತ್ರವೇ ನೀತಿವಂತನು ಮತ್ತು ಕ್ರಿಸ್ತನು ಶಿಲುಬೆಯ ಮೇಲೆ ಹೊಂದಿದ ಮರಣದ ಮೂಲಕ ಮಾತ್ರವೇ ಮಾನವರು ತಮ್ಮ ಪಾಪಗಳಿಂದ ತೊಳೆಯಲ್ಪಟ್ಟು ದೇವರ ದೃಷ್ಠಿಯಲ್ಲಿ ನೀತಿವಂತರಾಗಿ ಮಾಡಲ್ಪಡುವರು (ಮಾರ್ಕ 10:45 ಹಾಗು ವ್ಯಾಖ್ಯಾನ ನೋಡಿರಿ). ಮಾನವರು ತಮ್ಮ ಸ್ವಪ್ರಯತ್ನಗಳಿಂದ ಎಂದಿಗೂ ನೀತಿವಂತರಾಗಲು ಸಾದ್ಯವಿಲ್ಲ ಎಂಬದನ್ನು ಪವಿತ್ರಾತ್ಮನು ಅವರಿಗೆ ಗೋಚರ ಪಡಿಸುವನು. ಪವಿತ್ರಾತ್ಮನು ಮಾತ್ರವೇ ಇದನ್ನು ಒಬ್ಬ ವ್ಯಕ್ತಿ ತೋರಿಸಬಲ್ಲನು; ಇಲ್ಲವಾದರೆ ಅವನು ಅದನ್ನು ಎಂದಿಗೂ ನಂಬುವದಿಲ್ಲ.

11 ಮೂರನೆಯದಾಗಿ, ನ್ಯಾಯತೀರ್ಪಿನ ವಿಷಯದಲ್ಲಿ ಪವಿತ್ರಾತ್ಮನು ನ್ಯಾಯತೀರ್ಪು ಈಗಾಗಲೇ ಇಹಲೋಕಾಧಿಪತಿಯಾದ ಸೈತಾನನ ಮೇಲೆ ಬಿದ್ದಿರುತ್ತದೆಂಬದನ್ನು ಜನರಿಗೆ ತೋರ್ಪಡಿಸುವನು. ಯೇಸು ಸೈತಾನನನ್ನು ಶಿಲುಬೆಯ ಮೇಲೆ ಸೋಲಿಸಿದನು (ಯೋಹಾನ 12:31 ಮತ್ತು ವ್ಯಾಖ್ಯಾನ ನೋಡಿರಿ). ಸೈತಾನನಿಗೆ ನ್ಯಾಯ ತೀರ್ಪಾಗಿರುತ್ತದೆ ಮತ್ತು ಅಂತ್ಯದಲ್ಲಿ ನಾಶಹೊಂದುವನು.

12 ಯೇಸು ತನ್ನ ಶಿಷ್ಯರಿಂದ ಏನನ್ನೂ ಮರೆ ಮಾಡಲಿಲ್ಲವಾದರೂ (ಯೋಹಾನ 15:15), ಆತನು ಸಾಯುವ ಮುಂಚೆ ಅವರಿಗೆ ಎಲ್ಲವನ್ನೂ ವಿವರಿಸಲಾಗಲಿಲ್ಲ. ಅವರು ಅದನ್ನು ಕೇಳಲು ಸಿದ್ದರಾಗಿರಲಿಲ್ಲ. ಅವರು ಅದನ್ನು ಅರ್ಥಮಾಡಿಕೊಳ್ಳಲಾಗಲಿ ಅಥವಾ ಸ್ವೀಕರಿಸಿಕೊಳ್ಳಲಾಗಲಿ ಆಗುತ್ತಿರಲಿಲ್ಲ. ಅವರು ಇನ್ನೂ ಕಲಿಯಬೇಕಾಗಿದ್ದ ಆಳವಾದ ಪಾಠಗಳನ್ನು ಅರ್ಥಮಾಡಿಕೊಳ್ಳಲು ಅವರಿಗೆ ಪವಿತ್ರಾತ್ಮನ ಸಹಾಯದ ಅಗತ್ಯವಿತ್ತು.

13 ಆದುದರಿಂದ, ಪವಿತ್ರಾತ್ಮನು ಬಂದು ಅವರು ಕಲಿಯಬೇಕಾಗಿದ್ದ ಸಂಗತಿಗಳನ್ನು ಬೋಧಿಸುವನೆಂದು ಯೇಸು ಅವರಿಗೆ ಹೇಳಿದನು. ಪವಿತ್ರಾತ್ಮನು ಅವರನ್ನು ನಡಿಸಿಕೊಂಡು ಹೋಗಿ ಸಕಲ ವಿಷಯಗಳಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತ್ಮನು ಮುಂದಾಗುವ ಸಂಗತಿಗಳನ್ನು ಅವರಿಗೆ ತಿಳಿಸುವನು ಅಂದರೆ ಅವರನ್ನು ಭವಿಷ್ಯತ್ತಿಗಾಗಿ ಸಿದ್ದಪಡಿಸುವನು. ಜಗತ್ತಿನಲ್ಲೆಲ್ಲಾ ಕ್ರಿಸ್ತನ ಸಭೆಯನ್ನು ಸ್ಥಾಪಿಸುವ ಮಹಾಕಾರ್ಯಕ್ಕಾಗಿ ಅತ್ಮನು ಅವರನ್ನು ಸಿದ್ದಗೊಳಿಸುವನು. ಅಲ್ಲದೆ ಆತ್ಮನು ಅವರನ್ನು ಹಿಂಸೆ ಮತ್ತು ಮರಣಗಳನ್ನು ಎದುರಿಸಲು ಸಹ ಸಿದ್ದಗೊಳಿಸುವನು. ಈ ಎಲ್ಲಾ ಸಂಗತಿಗಳನ್ನು ಪವಿತ್ರಾತ್ಮನು ಆ ಪ್ರಥಮ ಶಿಷ್ಯರಿಗೆ ಮಾಡಿದನು ಮತ್ತು ಅಂದಿನಿಂದ ಅದೇ ಸಂಗತಿಗಳನ್ನು ಪ್ರತಿಯೊಬ್ಬ ನಿಜಕ್ರೈಸ್ತನಿಗೆ ಮಾಡುವನು.

ಪವಿತ್ರಾತ್ಮನು ಶಿಷ್ಯರಿಗೆ ಇನ್ನೊಂದು ಕಾರ್ಯವನ್ನು ಮಾಡಲು ಸಹಾಯಮಾಡಿದನು: ಅವರು ಹೊಸ ಒಡಂಬಡಿಕೆಯನ್ನು ಬರೆಯುವಂತೆ ಆತನು ಸಹಾಯ ಮಾಡಿದನು. ಸತ್ಯದ ಆತ್ಮನು, ಪವಿತ್ರಾತ್ಮನು ಅವರ ಮನಸ್ಸು ಮತ್ತು ಲೇಖನಿಗಳಿಗೆ ಮಾರ್ಗದರ್ಶನ ಮಾಡಿದನು. ವಾಸ್ತವವಾಗಿ ನಮ್ಮ ಬೈಬಲನಲ್ಲಿ ಬರೆದಿರುವದೆಲ್ಲವೂ ಪವಿತ್ರಾತ್ಮನಿಂದಲೇ ಬರೆಯಲ್ಪಟ್ಟಿದೆ. ಆದುದರಿಂದ, ನಾವು ಬೈಬಲನ್ನು ಸಂಪೂರ್ಣವಾಗಿ ವಿಶ್ವಾಸಿಸಬಹುದು; ಅದರ ಪ್ರತಿಯೊಂದು ಪದವು ಸತ್ಯವಾಗಿದೆ. ಅದು ನಿಜವಾಗಿಯೂ ದೇವರ ವಾಕ್ಯವೇ.

ಪವಿತ್ರಾತ್ಮನು ತನ್ನಷ್ಟಕ್ಕೆ ತಾನೇ ಮಾತಾಡುವದಿಲ್ಲ. ಆತನು ದೇವರಿಂದ ಕೇಳಿದ ಮಾತುಗಳನ್ನೇ ಆಡುವನು. ಪವಿತ್ರಾತ್ಮನು ದೇವರ ಆತ್ಮನೇ; ಆದುದರಿಂದ ಆತನು ದೇವರ ಮಾತುಗಳನ್ನೇ ಆಡುವನು.

14 ಪವಿತ್ರಾತ್ಮನು ಯಾವಾಗಲೂ ಕ್ರಿಸ್ತನನ್ನು ಮಹಿಮೆ ಪಡಿಸುತ್ತಾನೆ. ಪವಿತ್ರಾತ್ಮನು ಯಾವ ರೀತಿಯ ಕಾರ್ಯ ಮಾಡಲಿ ಅಥವಾ ಯಾವ ರೀತಿಯ ಮಾರ್ಗದರ್ಶನವನ್ನು ಆತನು ನೀಡಲಿ ಅದು ಯಾವಾಗಲೂ ಕ್ರಿಸ್ತನನ್ನು ಮಹಿಮೆಪಡಿಸುವದಕ್ಕಾಗಿಯೇ ಆಗಿರುತ್ತದೆ.

ಯಾವದೇ ನಿರ್ದಿಷ್ಠವಾದ ಕೆಲಸದಲ್ಲಿ ನಾವು ನಿಜವಾಗಿಯೂ ಪವಿತ್ರಾತ್ಮನಿಂದ ನಡಿಸಲ್ಪಟ್ಟಿದ್ದೇವೋ ಇಲ್ಲವೋ ಎಂಬದನ್ನು ಪರೀಕ್ಷಿಸಲು ಇದೊಂದು ಪ್ರಾಮುಖ್ಯ ಮಾರ್ಗವಾಗಿದೆ: ನಾವು ಮಾಡುತ್ತಿರುವ ಸಂಗತಿಯು ಕ್ರಿಸ್ತನಿಗೆ ಮಹಿಮೆಯನ್ನು ತರುತ್ತದೋ? ಹಾಗಿರುವದಾದರೆ, ನಮ್ಮನ್ನು ನಡಿಸುತ್ತಿರುವಾತನು ಪವಿತ್ರಾತ್ಮನೆ ಎಂಬ ನಿಶ್ಚಯವನ್ನು ನಾವು ಹೊಂದಬಹುದು. ಹೇಗಿದ್ದರೂ, ನಾವು ಮಾಡುವಂತದ್ದು ಕ್ರಿಸ್ತನಿಗೆ ಮಹಿಮೆ ತರದ್ದಾಗಿದ್ದರೆ ಅದು ಪವಿತ್ರಾತ್ಮನಿಂದಲ್ಲ ಎಂದರ್ಥವಾಗುತ್ತದೆ.

15 ಯೇಸು ಒಂದು ಭೂಮಿಯಲ್ಲಿ ಉಳಿದಿದ್ದರೆ ನಮಗೆ ಏನು ಮಾಡಿರುತ್ತಿದ್ದನೋ ಆದನ್ನೇ ಆತ್ಮನು ನಮಗಾಗಿ ಮಾಡುವನು.

ಯೇಸು"ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುವಾಗ ನನ್ನನ್ನೇ ಮಹಿಮೆಪಡಿಸುವನು "ಎಂದು ಹೇಳಿದನು (ವಚನ 14). ಪವಿತ್ರಾತ್ಮನು ಕ್ರಿಸ್ತನ ನೀತಿ ಆತನ ಅಧಿಕಾರ, ಆತನ ಬಲ ಮತ್ತು ಆತನ ಮಹಿಮೆಯನ್ನು ತೆಗೆದುಕೊಂಡು ನಮಗೆ ತಿಳಿಯಪಡಿಸುತ್ತಾನೆ. ಇವೆಲ್ಲವೂ ಕ್ರಿಸ್ತನಿಗೂ ಸೇರಿದವು ಗಳಾಗಿವೆ. ದೇವರಿಗೆ ಸಂಬಂಧಪಟ್ಟದ್ದೆಲ್ಲವೂ ಕ್ರಿಸ್ತನಿಗೂ ಸಂಬಂಧಪಟ್ಟದ್ದಾಗಿದೆ.

ಮತ್ತು ಈ ಸಂಗತಿಗಳು ಪವಿತ್ರಾತ್ಮನ ಮೂಲಕ ನಮಗೆ ಪ್ರಕಟಗೊಳಿಸಲ್ಪಡುತ್ತವೆ. ನಾವು ಕ್ರಿಸ್ತನ ನೀತಿ, ಬಲ ಹಾಗು ಮಹಿಮೆಗಳನ್ನು ತಿಳಿಯುವದು ಮಾತ್ರವಲ್ಲ, ನಾವು ಅವು ಗಳಲ್ಲಿ ಪಾಲುಗಾರರಾಗುತ್ತೇವೆ.

## ಶಿಷ್ಯರ ದುಃಖವು ಸಂತೋಷವಾಗಿ ಮಾರ್ಪಡುವದು (16:16-33).

16 ನಂತರ ಯೇಸು ಶಿಷ್ಯರಿಗೆ ಗೊಂದಲವನ್ನುಂಟು ಮಾಡಿದ ಸಂಗತಿಯೊಂದನ್ನು ಹೇಳಿದನು. "ಸ್ವಲ್ಪಕಾಲವಾದ ಮೇಲೆ ನಾನು ನಿಮಗೆ ಕಾಣುವದಿಲ್ಲ, ಅನಂತರ ಸ್ವಲ್ಪ ಕಾಲವಾದ ಮೇಲೆ ನನ್ನನ್ನು ನೋಡುವಿರಿ". ಅವನು ಇದರ ಮೂಲಕ

ತಾನು ಶೀಘ್ರವೇ ಸಾಯಲಿದ್ದಾನೆ ಮತ್ತು ಮೂರು ದಿನಗಳ ನಂತರ ಸತ್ತವರೊಳಗಿಂದ ತಿರಿಗಿ ಎದ್ದು ಬರಲಿರುವನೆಂಬುದನ್ನು ತಿಳಿಸಿದನು. ಆತನು ಅವರಿಗೆ ಇದನ್ನು ಅನೇಕ ಸಾರಿ ಹೇಳಿದ್ದನು ಆದರೆ ಅದನ್ನು ಅರ್ಥಮಾಡಿಕೊಂಡಿರಲಿಲ್ಲ (ಮಾರ್ಕ 8:31, 9:31-32, 10:32-34).

**17-18** ಶಿಷ್ಯರು ಏಕೆ ಅಷ್ಟೊಂದು ಗೊಂದಲಕ್ಕಿಡಾಗಿದ್ದರು? ಯಾಕೆಂದರೆ ಅವರು ಇನ್ನೂ ಇತರ ಯೆಹೂದ್ಯರಂತೆಯೇ ಯೇಸು ಲೌಕೀಕ ರಾಜ್ಯವನ್ನು ಸ್ಥಾಪಿಸಲಿದ್ದಾನೆಂದು ಯೋಚಿಸಿದರು. ಒಂದು ವೇಳೆ ಅದು ನಿಜವಾಗಿದ್ದರೆ ಆತನು ಏಕೆ ಹೊರಟು ಹೋಗಲಿದ್ದನು? ಒಂದು ವೇಳೆ ಅದು ನಿಜವಲ್ಲದಿದ್ದರೆ ಆತನು ಯಾಕೆ ಹಿಂದಿರುಗಬೇಕು? ಶಿಷ್ಯರಿಗೆ ಇದ್ಯಾವುದು ಅರ್ಥವಾಗಲಿಲ್ಲ.

**19** ಯೇಸು ಅವರ ಗಲಿಬಿಲಿಯನ್ನು ಕಂಡು ಆತನು ಪ್ರಸವ ವೇದನೆ ಪಡುವ ಸ್ತ್ರೀಯು ಉದಾಹರಣೆಯನ್ನು ಉಪಯೋಗಿಸಿ ತನ್ನ ತಾತ್ಪರ್ಯವನ್ನು ಅವರಿಗೆ ವಿವರಿಸಲಾರಭಿಸಿದನು.

**20** ಶಿಷ್ಯರು ಸ್ವಲ್ಪಕಾಲ ಅಳುತ್ತಾಗೋಳಾಡುವರೆಂದು ಆತನು ಅವರಿಗೆ ಹೇಳಿದನು. ಅವರು ಆತನ ಮರಣದ ಕಾರಣದಿಂದಾಗಿ ಅಳುತ್ತಾ ಗೋಳಾಡುವರು. ಅದೇ ವೇಳೆಯಲ್ಲಿ ಲೋಕವು, ಅಂದರೆ ಲೋಕದ ಅವಿಶ್ವಾಸಿಗಳಾದ ಜನರು ಯೇಸು ಸತ್ತದ್ದಕ್ಕಾಗಿ ಸಂತೋಷಿಸುವರು.

ಆದರೆ ನಂತರ ಯೇಸು "ನಿಮ್ಮ ದುಃಖವು ಹೋಗಿ ಆನಂದ ಬರುವದು" ಎಂದು ಹೇಳಿದನು. ಯೇಸುವಿನ ಮರಣ ಅವರಿಗೆ ದುಃಖವನ್ನು ತರುವದು. ಆತನ ಪುನರುತ್ಥಾನವು ಅವರಿಗೆ ಆನಂದವನ್ನು ತರುವದು.

**21** ಶಿಷ್ಯರ ದುಃಖವು ಪ್ರಸವ ವೇದನೆಪಡುವ ಸ್ತ್ರೀಯ ಬೇನೆಯಂತಿದೆ. ಪ್ರಸವವೇದನೆಯು ಶೀಘ್ರವೇ ಮುಗಿದುಹೋಗಿ ಅದರ ಬದಲಿಗೆ ನೂತನ ಮಗುವೊಂದು ಜನಿಸಿದ ಆನಂದವು ಇರುವದು.

**22** ಅದೇ ರೀತಿಯಲ್ಲಿ ಶಿಷ್ಯರು ಮೂರು ದಿವಸಗಳವರೆಗೆ ದುಃಖಿಸುವರು. ಅನಂತರ ಯೇಸು ಸತ್ತವರೊಳಗಿಂದ ಎದ್ದು ಅವರ ಬಳಿಗೆ ಬರುವನು. ಆತನು ಅವರ ಮೇಲೆ ಪವಿತ್ರಾತ್ಮವರವನ್ನು ಊದುವನು (ಯೋಹಾನ 20:22) ಮತ್ತು ಪವಿತ್ರಾತ್ಮನು ಸದಾಕಾಲವೂ ಅವರೊಂದಿಗೆ ನೆಲೆಯಾಗಿರುವನು (ಯೋಹಾನ 14:16) ಮತ್ತು ಲೋಕವು ಎಂದಿಗೂ ಅವರಿಂದ ಕಿತ್ತುಕೊಳ್ಳಲಾರದ ಆನಂದವನ್ನು ಅವರಿಗೆ ನೀಡುವನು (ಯೋಹಾನ 15:11, ಗಲಾತ್ಯ 5:22 ನೋಡಿರಿ).

**23** ಆ ದಿನದಲ್ಲಿ – ಅಂದರೆ ಯೇಸು ಸತ್ತವರೊಳಗಿಂದ ಎದ್ದಮೇಲೆ – ಶಿಷ್ಯರು ಇನ್ನೆಂದಿಗೂ ಆತನು ಎಲ್ಲಿಗೆ ಹೋಗುತ್ತಿರುವನೆಂಬ ಪ್ರಶ್ನೆಗಳನ್ನು ಯೇಸುವಿಗೆ ಕೇಳಬೇಕಾಗುವದಿಲ್ಲ. ಅವರು ಅರ್ಥಮಾಡಿಕೊಳ್ಳುವರು. ಅವರು ತಿಳಿಯ ಬೇಕಾದದ್ದು ಇನ್ನೇನಾದರೂ ಇದ್ದರೆ ಪವಿತ್ರಾತ್ಮನೇ ಅವರಿಗೆ ಕಲಿಸುವನು ಹೊರತು ಸ್ವತಃ ಕ್ರಿಸ್ತನಲ್ಲ (ವಚನ 13).

ಅಷ್ಟು ಮಾತ್ರವಲ್ಲದೆ, ಆ ಸಮಯದಿಂದ ಶಿಷ್ಯರು ಮುಖ್ಯವಾಗಿ ತಂದೆಗೆ [108] ಪ್ರಾರ್ಥಿಸುವರು. ಆದರೆ ಅವರು ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸಬೇಕು. ಅವರು ಹಾಗೆ ಮಾಡುವದಾದರೆ ತಂದೆಯು ಅವರ ಬೇಡಿಕೆ ಏನೇ ಆಗಿದ್ದರೂ ಒದಗಿಸುವನು (ಯೋಹಾನ 14:13-14 ಮತ್ತು ವ್ಯಾಖ್ಯಾನ ನೋಡಿರಿ). ಮತ್ತು ಈ ವಾಗ್ದಾನವು ಆ ಪ್ರಥಮ ಶಿಷ್ಯರಿಗೆ ಮಾತ್ರವೇ ಅಲ್ಲ; ಅದು ಪ್ರತಿಯೊಬ್ಬ ವಿಶ್ವಾಸಿಗಾಗಿಯೂ ಇರುತ್ತದೆ.

**24** ಅದುವರೆಗೆ ಶಿಷ್ಯರು ಯೇಸುವಿನ ಹೆಸರನ್ನು ಉಪಯೋಗಿಸಿ ನಿಜವಾಗಿಯೂ ದೇವರಿಗೆ ಯಾವದೊಂದನ್ನೂ ಬೇಡಿಕೊಂಡಿರಲಿಲ್ಲ. ಅವರು ನೇರವಾಗಿ ಯೇಸುವನ್ನು ಬೇಡಿಕೊಂಡರು ಇಲ್ಲವೆ ನೇರವಾಗಿ ದೇವರಿಗೆ ಬೇಡಿಕೊಂಡರು. ಈಗ ಅವರು ಎಲ್ಲದ್ದಕ್ಕಾಗಿಯೂ ಯೇಸುವಿನ ಹೆಸರಿನಲ್ಲಿ ದೇವರನ್ನು ಬೇಡಿಕೊಳ್ಳಲಿ. ಎಲ್ಲಕ್ಕಿಂತ ಮೇಲಾಗಿ ಅವರು ತಮ್ಮನ್ನು ತುಂಬಿಸುವಂತೆ ಪವಿತ್ರಾತ್ಮನನ್ನು ಬೇಡಿಕೊಳ್ಳಲಿ. ಆಗ ಅವರು ಆನಂದವು ಪರಿಪೂರ್ಣವಾಗುವದು (ಯೋಹಾನ 15:11).

**25** ಅದುವರೆಗೂ ಯೇಸು ಪರಲೋಕ ಸಂಗತಿಗಳ ಕುರಿತಾಗಿ ಶಿಷ್ಯರೊಂದಿಗೆ ಸ್ಪಷ್ಟವಾಗಿ ಮಾತಾಡಿರಲಿಲ್ಲ. ಅದು ಅವರಿಗೆ ರಹಸ್ಯವಾಗಿತ್ತು. ಆದರೆ ತನ್ನ ಪುನರುತ್ಥಾನದ ಬಳಿಕ ಯೇಸು ಅವರಿಗೆ ಹೆಚ್ಚು ಸ್ಪಷ್ಟವಾಗಿ ಎಲ್ಲವನ್ನೂ ತಿಳಿಸಿದನು ಮತ್ತು ಆಗ ಅವರು ಅರ್ಥಮಾಡಿಕೊಳ್ಳಲು ಶಕ್ತರಾದರು (ಲೂಕ 24:27, 45-46 ನೋಡಿರಿ).

**26** ಯೇಸುವಿನ ಪುನರುತ್ಥಾನ ಹಾಗು ಪರಲೋಕಾರೋಹಣದ ನಂತರ ಶಿಷ್ಯರು ಸಂಗತಿಗಳಿಗಾಗಿ ನೇರವಾಗಿ ತಂದೆಯನ್ನೇ ಬೇಡಿಕೊಳ್ಳಲು ಪ್ರಾರಂಭಿಸುವರು. ಯೇಸು ಭೂಮಿಯಲ್ಲಿರುವಾಗ ಹಲವಾರು ವೇಳೆ ಆತನು ಶಿಷ್ಯರ ಪರವಾಗಿ ತಂದೆಯನ್ನು ಪ್ರಾರ್ಥಿಸಿದನು. ಈಗ ಅವರು ತಮ್ಮಷ್ಟಕ್ಕೆ ತಾವೇ ಮಾಡಬೇಕಾಗುವದು; ಯೇಸು ವ್ಯಕ್ತಿಯಾಗಿ ಅವರಿಗೋಸ್ಕರ ಪ್ರಾರ್ಥಿಸಬೇಕಾಗಿರುವದಿಲ್ಲ. ಪವಿತ್ರಾತ್ಮನ ಮೂಲಕವಾಗಿ ಅವರು ನೇರವಾಗಿ ದೇವರ ಬಳಿಗೆ ಬರಲು ಶಕ್ತರಾಗುವರು.

ಪವಿತ್ರಾತ್ಮನ ಬರೋಣದ ಕಾರಣದಿಂದ ಎಲ್ಲಾಕ್ರೈಸ್ತರು ತಮ್ಮ ಪ್ರಾರ್ಥನೆಗಳನ್ನು ನೇರವಾಗಿ ದೇವರಿಗೆ ಮಾಡಬಹುದು. ಆದರೆ ನಾವು ಎಲ್ಲವನ್ನೂ ಯೇಸುವಿನ ಹೆಸರಿನಲ್ಲಿ ಬೇಡಿಕೊಳ್ಳಬೇಕು. ಕ್ರಿಸ್ತನಲ್ಲಿ ಇಟ್ಟ ನಂಬಿಕೆಯ ಕಾರಣದಿಂದಲೇ ನಾವು ದೇವರ ಪ್ರಸನ್ನತೆಯೊಳಗೆ ಬರಲು ಯೋಗ್ಯರಾಗಿದ್ದೇವೆ. ನಾವು ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸುವಾಗ ಮಾತ್ರವೇ ದೇವರು ಆತನಿಗಾಗಿ ನಮ್ಮ ಪ್ರಾರ್ಥನೆಗಳನ್ನು ಕೇಳುವನು.

ಯೇಸು ಇಲ್ಲಿ ತಾನು ಇನ್ನೆಂದಿಗೂ ತನ್ನ ಶಿಷ್ಯರ ಪರವಾಗಿ ತಂದೆಯನ್ನು ಬೇಡಿಕೊಳ್ಳುವದಿಲ್ಲ ಎಂದು ಹೇಳುತ್ತಾನೆ. ಅಂದರೆ ಆತನು ಭೂಮಿಯ ಮೇಲೆ ದೈಹಿಕ ರೂಪದಲ್ಲಿ ಇರುವಾಗ ಇನ್ನೆಂದಿಗೂ ಬೇಡಿಕೊಳ್ಳುವದಿಲ್ಲ ಎಂಬದು ಆತನ ತಾತ್ಪರ್ಯವಾಗಿದೆ. ಆದರೆ ಯೇಸು ಈ ಪರಲೋಕದಲ್ಲಿ ದೇವರ ಸಿಂಹಾಸನದ ಮುಂಭಾಗದಲ್ಲಿ ವಿಶ್ವಾಸಿಗಳಿಗೋಸ್ಕರ ಬೇಡಿಕೊಳ್ಳುತ್ತಿದ್ದಾನೆಂಬದನ್ನು ನಾವು ಹೊಸ ಒಡಂಬಡಿಕೆಯ ವಚನಗಳಿಂದ ತಿಳಿದಿರುತ್ತೇವೆ (ರೋಮ 8:34; ಇಬ್ರೀಯ

7:25 ಮತ್ತು ವ್ಯಾಖ್ಯಾನ ನೋಡಿರಿ). ಇದರರ್ಥವೇನೆಂದರೆ ಯೇಸುವಿನ ಮರಣವು – ಯೇಸುವಿನ ಯಜ್ಞವು – ನಮಗೋಸ್ಕರ ಪ್ರಾರ್ಥಿಸುತ್ತಿರುವದು ಎಂಬದೇ. ಯೇಸು ತಂದೆಯ ಮುಂಭಾಗದಲ್ಲಿ ಪ್ರಸನ್ನನಾಗಿರುವದೇ ಆತನು ನಮ್ಮ ಪಾಪಗಳಿಗಾಗಿ ಸತ್ತನು ಹಾಗು ನಾವು ಇನ್ನೆಂದಿಗೂ ಪಾಪದ ಅಪರಾಧ ಹೊಂದಿರುವದಿಲ್ಲ ಎಂಬುದಕ್ಕೆ ಸಾಕ್ಷಿಯಾಗಿರುತ್ತದೆ. ಯೇಸು ನಮ್ಮನ್ನು ರಕ್ಷಿಸಬೇಕೆಂದು ತಂದೆಯನ್ನು ಬೇಡಿಕೊಳ್ಳಬೇಕಾಗಿಲ್ಲ, ಆತನು ಶಿಲುಬೆಯ ಮೇಲೆ ಸಾಯುವದರ ಮೂಲಕ ನಮ್ಮ ರಕ್ಷಣೆಯನ್ನು ಈಗಾಗಲೇ ಸಂಪಾದಿಸಿಕೊಂಡಿರುತ್ತಾನೆ. ನಮ್ಮನ್ನು ಆಶೀರ್ವದಿಸುವಂತೆ ಯೇಸು ದೇವರನ್ನು ಬೇಡಿಕೊಳ್ಳಬೇಕಾಗಿಲ್ಲ, ಪವಿತ್ರಾತ್ಮನನ್ನು ನಮಗೆ ಕಳುಹಿಸಿ ಕೊಡುವದರ ಮೂಲಕ ಆತನು ಆಗಲೇ ನಮ್ಮನ್ನು ಆಶೀರ್ವದಿಸಿರುತ್ತಾನೆ. ಯೇಸು ಭೂಲೋಕದಲ್ಲಿ ಮಾಡಬೇಕಾಗಿದ್ದ ಕಾರ್ಯವು ಮುಗಿಯಿತು. ಈಗ ನಾವು ಮಾಡಬೇಕಾದದ್ದೇನೆಂದರೆ ದೇವರನ್ನು ಯೇಸುವಿನ ಹೆಸರಿನಲ್ಲಿ ನೇರವಾಗಿ ಬೇಡಿಕೊಳ್ಳುವದು ಮತ್ತು ದೇವರು ತನ್ನ ಮಗನಾದ ಯೇಸುವಿಗೋಸ್ಕರ ನಮ್ಮ ಪ್ರಾರ್ಥನೆಗೆ ಸದುತ್ತರ ನೀಡುವನು.

**27** ಹೀಗಿರುವದರಿಂದ, ಯೇಸು ಇನ್ನು ಮೇಲೆ ತನ್ನ ಶಿಷ್ಯರಿಗಾಗಿ ಪ್ರಾರ್ಥಿಸಬೇಕಾಗಿರುವದಿಲ್ಲ. ಶಿಷ್ಯರು ನೇರವಾಗಿ ದೇವರನ್ನು ಬೇಡಿಕೊಳ್ಳಬಹುದು, ಯಾಕೆಂದರೆ ದೇವರು ಅವರನ್ನು ಪ್ರೀತಿಸುತ್ತಾನೆ. ಅವರ ಮೇಲೆ ಆತನ ಪ್ರೀತಿಯು ವಿಶೇಷವಾದ ರೀತಿಯಲ್ಲಿ ಹೆಚ್ಚಾಗಿರುತ್ತದೆ ಯಾಕೆಂದರೆ ಅವರು ಆತನ ಮಗನನ್ನು ಪ್ರೀತಿಸಿ ಆತನಲ್ಲಿ ನಂಬಿಕೆಯಿಟ್ಟಿರುತ್ತಾರೆ. ದೇವರು ಎಲ್ಲಾ ಮಾನವರನ್ನು ಪ್ರೀತಿಸುತ್ತಾನೆ (ಯೋಹಾನ 3:16), ಆದರೆ ಆತನು ತನ್ನ ಮಕ್ಕಳನ್ನು ಅಂದರೆ ಯೇಸುವಿನಲ್ಲಿ ನಂಬಿಕೆಯಿಟ್ಟವರನ್ನು ವಿಶೇಷವಾಗಿ ಪ್ರೀತಿಸುತ್ತಾನೆ (ಯೋಹಾನ 14:21 ಮತ್ತು ವ್ಯಾಖ್ಯಾನ ನೋಡಿರಿ).

**28** ನಂತರ ಯೇಸು ತನ್ನ ಶಿಷ್ಯರಿಗೆ ತಾನು ಪರಲೋಕದ ತಂದೆಯ ಬಳಿಯಿಂದ ಬಂದವನು ಮತ್ತು ಈಗ ತಿರಿಗಿ ತನ್ನ ತಂದೆಯ ಬಳಿಗೆ ಹೋಗಲಿದ್ದಾನೆಂದು ಹೇಳಿದನು. ಶಿಷ್ಯರು 17-18 ವಚನಗಳಲ್ಲಿ ತಮ್ಮ ತಮ್ಮೊಳಗೆ ಕೇಳಿಕೊಂಡ ಪ್ರಶ್ನೆಗೆ ಇದು ಉತ್ತರವಾಗಿತ್ತು. ಆದರೆ ಅವರು ಇನ್ನು ಸ್ವತಃ ಯೇಸುವನ್ನು ಕೇಳಿರಲಿಲ್ಲ. ಹಾಗಿದ್ದರೂ, ಯೇಸು ಅವರ ಮನಸ್ಸಿನಲ್ಲಿರುವದನ್ನು ಬಲ್ಲವನಾಗಿದ್ದನು (ವಚನ 19) ಮತ್ತು ಅವರು ಎದುರು ನೋಡುತ್ತಿದ್ದ ಉತ್ತರವನ್ನು ಅವರಿಗೆ ನೀಡಿದನು

**29-30** ಅವರು ಕೇಳುವದಕ್ಕಿಂತ ಮುಂಚೆಯೇ ಯೇಸು ಅವರ ಪ್ರಶ್ನೆಗೆ ಉತ್ತರಿಸಿದ ಕಾರಣದಿಂದ ಆತನು ಅಸ್ವಾಭಾವಿಕ ಜ್ಞಾನವನ್ನು ಹೊಂದಿರುವನು; ತಮ್ಮ ಮನಸ್ಸಿಲ್ಲಿರುವದನ್ನು ಆತನು ಬಲ್ಲವನಾಗಿದ್ದನು ಎಂಬದನ್ನು ಅವರು ಗ್ರಹಿಸಿಕೊಂಡರು. ಆದ್ದರಿಂದಲೇ ಅವರು "ನೀನು ಹೇಳುವ ಸಂಗತಿಯನ್ನು ಈಗ ಗೂಢಾರ್ಥವಾಗಿ ಹೇಳದೆ ಸ್ಪಷ್ಟವಾಗಿ ಮಾತಾಡುತ್ತೀಯಲ್ಲಾ; ನೀನು ಸಮಸ್ತವನ್ನು ತಿಳಿದವನೆಂದೂ ನಿನಗೆ ಪ್ರಶ್ನೆ ಮಾಡಬೇಕಾದ ಅವಶ್ಯವಿಲ್ಲವೆಂದೂ ಈಗ ತಿಳಿಯಿತು. ನಾವು ಕೇಳುವದಕ್ಕೆ ಮುಂಚೆಯೇ ಉತ್ತರ ಕೊಡಬಲ್ಲೆ" ಎಂದು ಹೇಳಿದರು. ಯೇಸು ಅವರ ಆಲೋಚನೆಗಳ ಬಗ್ಗೆ ಹೊಂದಿದ್ದ ಜ್ಞಾನದ ಕಾರಣದಿಂದ ಆತನು ನಿಜವಾಗಿಯೂ ದೇವರ ಬಳಿಯಿಂದ ಬಂದವನೆಂದು ಅವರು ಇನ್ನು ಹೆಚ್ಚು ಬಲವಾಗಿ ನಂಬಿದರು.

**31** ಯೇಸು ಅವರಿಗೆ "ಈಗ ನಂಬುತ್ತೀರೋ?" ಎಂದು ಬೈಬಲಿನ ಕೆಲವು ಆಂಗ್ಲಪ್ರತಿಗಳಲ್ಲಿ ಯೇಸುವಿನ ಮಾತುಗಳನ್ನು ಹೀಗೆ ಭಾಷಾಂತರಿಸುತ್ತವೆ: "ಕೊನೆಗೂ ನಂಬಿದಿರಲ್ಲಾ!" ಶಿಷ್ಯರು ತಾವು ನಂಬಿದ್ದಾರೆಂದು ಯೋಚಿಸಿದರು ಆದರೆ ಅವರ ನಂಬಿಕೆ ಎಷ್ಟು ಬಲಹೀನಾಗಿತ್ತೆಂದು ಯೇಸು ಬಲ್ಲವನಾಗಿದ್ದನು.

**32** ಶಿಷ್ಯಟರು ಈಗಷ್ಟೇ ಯೇಸುವಿನಲ್ಲಿ ತಮ್ಮ ನಂಬಿಕೆಯನ್ನು ಅರಿಕೆ ಮಾಡಿದ್ದರು, ಆದರೆ ಇನ್ನು ಕೆಲವು ತಾಸುಗಳಲ್ಲಿ ಅವರೆಲ್ಲರೂ ಮನೆಗಳಿಗೆ ಪಲಾಯನ ಮಾಡಲಿದ್ದರು (ಮಾರ್ಕ 14:27,50).

"ನಾನು ಬಲವಾದ ನಂಬಿಕೆ ಹೊಂದಿರುವೆನು" ಎಂದು ನಾವು ದೃಢವಾಗಿ ಹೇಳುವದಕ್ಕೆ ಮುಂಚೆ ದೀನತೆಯಿಂದ ನಾವು ಆ ಹನ್ನೊಂದು ಮಂದಿ ಶಿಷ್ಯರನ್ನು ಜ್ಞಾಪಿಸಿಕೊಳ್ಳೋಣ. ಅವರು ಸಹ ಬಲಿಷ್ಠ ನಂಬಿಕೆ ಹೊಂದಿದ್ದೇವೆ ಎಂಬ ನಿಶ್ಚಯದೊಂಧಿಗಿದ್ದರು ಆದರೆ ಅವರು ಹೊಂದಿರಲಿಲ್ಲ.

**33** ಯೇಸು ತನ್ನ ಹೋಗಲಿರುವದನ್ನು ಮತ್ತು ಶಿಷ್ಯರ ಮೇಲೆ ಶೀಘ್ರವೇ ಬರಲಿದ್ದ ಸಂಕಷ್ಟಗಳ ವಿಷಯವಾಗಿ ಅವರಿಗೆ ಹೇಳಿದನು, ಹೀಗೆ ಅವರು ಆತನಲ್ಲಿದ್ದು ಸಮಾಧಾನ (ಮನಶ್ಶಾಂತಿ) ವನ್ನು ಹೊಂದಬೇಕೆಂದು ಆತನ ಉದ್ದೇಶವಾಗಿತ್ತು. ಆತನು ಅವರಿಗೆ "ನೀವು ನನ್ನಲ್ಲಿದ್ದು ಮನಃಶ್ಶಾಂತಿಯನ್ನು ಹೊಂದಿದವರಾಗಿರಬೇಕೆಂದು ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ" ಎಂದನು. ಲೋಕದಲ್ಲಿ ಸಮಾಧಾನವನ್ನು ಹುಡುಕಬಾರದು; ಅವರ ಮನಶ್ಶಾಂತಿಯು ಆತನಿಂದಲೇ ಬರುವದೆಂದು ಆತನು ಅವರಿಗೆ ಹೇಳಿದನು (ಯೋಹಾನ 14:27 ಮತ್ತು ವ್ಯಾಖ್ಯಾನ ನೋಡಿರಿ). ನಮ್ಮ ಸಮಾಧಾನವು ಯೇಸುವಿನಲ್ಲಿದೆ. ನಮ್ಮ ಕಷ್ಟವು ಲೋಕದಲ್ಲಿರುತ್ತದೆ. ಆದರೆ ಲೋಕದ ಕಷ್ಟವು ನಮ್ಮ ಸಮಾಧಾನವನ್ನು ನಾಶಮಾಡಲಾರದು ಯಾಕೆಂದರೆ ಯೇಸು ಲೋಕವನ್ನು ಅಂದರೆ ಸೈತಾನನ ಆಳ್ವಿಕೆ ಹಾಗು ಬಲಗಳನ್ನು ಜಯಿಸಿರುತ್ತಾನೆ.

ನಾನು ಲೋಕವನ್ನು ಜಯಿಸಿದ್ದೇನೆ. ಎಂತಹ ಒಂದು ಆಶ್ಚರ್ಯಕರ ಹೇಳಿಕೆ! ಲೋಕದ ದುಷ್ಟಜನರು ಆರಾತ್ರಿಯೇ ತನ್ನನ್ನು ಬಂಧಿಸಲು ಬರುವರೆಂದು ಯೇಸು ಬಲ್ಲವನಾಗಿದ್ದನು. ಮರುದಿನ ಅವರು ತನ್ನನ್ನು ಶಿಲುಬೆಗೆ ಹಾಕುವರೆಂದೂ ತಿಳಿದವನಾಗಿದ್ದನು. ಆದಾಗ್ಯೂ "ಲೋಕವು " ಅವನನ್ನು ಸೋಲಿಸಲಾಗಲಿಲ್ಲ. ಬದಲಾಗಿ, ಆತನೇ ಲೋಕವನ್ನು ಜಯಿಸಿದನು, ಶಿಲುಬೆಯು ಒಂದು ಸೋಲಿನ ಸಂಕೇತವಾಗಿರಲಿಲ್ಲ, ಅದು ಸೈತಾನನ ಮೇಲೆ ಪಡೆದ ಜಯಕ್ಕೆಗುರುತಾಗಿತ್ತು.

ಆದುದರಿಂದ ನಮಗೆ ಕಷ್ಟವು ಬರುವಾಗ ಧೈರ್ಯದಿಂದಿರೋಣ. ನಮ್ಮಲ್ಲಿರುವ ಪವಿತ್ರಾತ್ಮನ ಬಲದ ಮೂಲಕವಾಗಿ ನಾವು ಸಹ ಸೈತಾನನ ಮೇಲೆಯೂ, ಭಯ ಸಂಶಯ, ಪಾಪಗಳ ಮೇಲೆಯೂ ಜಯವನ್ನು ಹೊಂದಬಲ್ಲೆವು . ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ (ರೋಮ 8:37).

## ಅಧ್ಯಾಯ - 17

### ಯೇಸು ತನಗೋಸ್ಕರ ಪ್ರಾರ್ಥಿಸಿದ್ದು (17:1-5)

1 ಯೇಸು ಪ್ರಾರ್ಥಿಸಿದ್ದು: "ತಂದೆಯೇ, ಕಾಲ ಬಂದದೆ, ಅಂದರೆ ನನ್ನ ಮರಣದ ಸಮಯ ಬಂದದೆ. ನಿನ್ನ ಮಗನನ್ನು ಮಹಿಮೆಪಡಿಸು, ಆಗ ಮಗನು ನಿನ್ನನ್ನು ಮಹಿಮೆ ಪಡಿಸುವದಕ್ಕಾಗುವದು" ಯೇಸು ವನ್ನು ಶಿಲುಬೆಗೇರಿಸಲ್ಪಡುವಂತೆ ಅನುಮತಿಸಿ, ನಂತರ ಸತ್ತವರೊಳಗಿಂದ ಎಬ್ಬಿಸುವದರ ಮೂಲಕ ದೇವರು ಆತನನ್ನು ಮಹಿಮೆಪಡಿಸಿದನು. ಯೇಸು ತನ್ನ ಮರಣ ಹಾಗು ಶಿಲುಬೆಯಲ್ಲಿ ಸೈತಾನನ ಮೇಲೆ ಹೊಂದಿದ ಜಯದ ಮುಖಾಂತರವಾಗಿ ದೇವರನ್ನು ಮಹಿಮೆಪಡಿಸಿದನು (ಯೋಹಾನ 12:31, 13:31 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಯಾವದು ಕ್ರಿಸ್ತನಿಗೆ ಮಹಿಮೆ ತರುತ್ತದೋ ಅದು ದೇವರಿಗೆ ಸಹ ಮಹಿಮೆಯನ್ನು ತರುತ್ತದೆ. ಕ್ರಿಸ್ತನು ದೇವರಿಗೆ ಮಹಿಮೆ ತರುವದಕ್ಕಾಗಿ ಮಾತ್ರವೇ ತಾನು ಮಹಿಮೆ ಪಡಿಸಲ್ಪಡಬೇಕೆಂದು ಪ್ರಾರ್ಥಿಸಿದನು.

ಇದರಲ್ಲಿ ಯೇಸು ನಮಗೊಂದು ಮಾದರಿಯನ್ನು ತೋರಿದ್ದಾನೆ. ನಾವು ಯಾವು ದನ್ನು ಬೇಡಿಕೊಂಡರೂ ಅದು ದೇವರ ಮಹಿಮೆಗಾಗಿಯೇ ಆಗಿರಬೇಕು ಹೊರತು ನಮಗಾಗಿಯಲ್ಲ. ನಾವು ಐಶ್ವರ್ಯಕ್ಕಾಗಿ ಬೇಡಿಕೊಳ್ಳುವದಾದರೂ ಅದು ದೇವರ ಮಹಿಮೆಗಾಗಿಯೇ ಆಗಿರಲಿ. ನಾವು ಕೇಳುವಂತದ್ದು ದೇವರ ಮಹಿಮೆಗಾಗಿ ಆಗಿರುವದಾದರೆ ಏನು ಬೇಕಾದರೂ ಕೇಳಿಕೊಳ್ಳಬಹುದು, ದೇವರು ಅದನ್ನು ಅನುಗ್ರಹಿಸುವನು. [109]

2 ಯೇಸುವಿಗೆ ಎಲ್ಲಾ ಮನುಷ್ಯರ ಮೇಲೆ ಅಧಿಕಾರವನ್ನು ಕೊಡವದರ ಮೂಲಕ ದೇವರು ಆತನನ್ನು ಈಗಾಗಲೇ ಮಹಿಮೆಪಡಿಸಿದ್ದನು (ಮತ್ತಾಯ 28:18, ಯೋಹಾನ 3:35, 5:27 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ದೇವರು ತನಗೆ ಕೊಟ್ಟಿದ್ದ ಎಲ್ಲರಿಗೂ ನಿತ್ಯಜೀವವನ್ನು ನೀಡುವದಕ್ಕಾಗಿ ಯೇಸುವಿಗೆ ಈ ಅಧಿಕಾರವು ಕೊಡಲ್ಪಟ್ಟಿತ್ತು(ಯೋಹಾನ 3:15, 6:37-40 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

3 ದೇವರನ್ನೂ, ಕ್ರಿಸ್ತನನ್ನೂ ತಿಳಿಯುವದೇ ನಿತ್ಯಜೀವವು. ನಾವೆಲ್ಲರೂ ನಮ್ಮ ಜೀವಿತದಲ್ಲಿ ದೊಡ್ಡ ಆಶೀರ್ವಾದ ಹಾಗು ಪ್ರೇರಣೆಯನ್ನು ನೀಡಿದ ವ್ಯಕ್ತಿಯೊಬ್ಬರನ್ನು ತಿಳಿದ ಅನುಭವವನ್ನು ಹೊಂದಿದ್ದೇವೆ.ಆ ವ್ಯಕ್ತಿಯು ನಮ್ಮ ಹೆಂಡತಿ, ಗಂಡ, ತಂದೆ ಅಥವಾ ತಾಯಿ, ಶಿಕ್ಷಕರು, ಇಲ್ಲವೇ ಸ್ನೇಹಿತ ಇವರಲ್ಲಿ ಯಾರಾದರೂ ಆಗಿರಬಹುದು. ಆವ್ಯಕ್ತಿಯ ಕಾರಣದಿಂದಾಗಿ ನಮ್ಮ ಜೀವಿತವು ಬದಲಾಗಿದೆ – ಅದು ಹೆಚ್ಚು ಶ್ರೀಮಂತ ಅಥವಾ ಆನಂದದಾಯಕಗೊಂಡಿದೆ.

ದೇವರನ್ನು ತಿಳಿಯುವದು ಅದರಂತೆಯೇ, ಆದರೆ ಅದಕ್ಕಿಂತಲೂ ಹೆಚ್ಚಿನದು ದೇವರನ್ನು ತಿಳಿಯುವದೆಂದರೆ ಜೀವವನ್ನು ಪಡೆಯುವದೇ. ದೇವರನ್ನು ತಿಳಿಯುವದೆಂದರೆ ನಿತ್ಯ ಜೀವದಲ್ಲಿ ಪ್ರವೇಶಿಸುವದೇ ಆಗಿದೆ. ನಿತ್ಯ ಜೀವವೆಂದ ಯಾವ ದೇವರನ್ನಾದರೂ ತಿಳಿಯುವದೆಂದು ಯೇಸು ಹೇಳಲಿಲ್ಲ. ಒಬ್ಬನೇ ಸತ್ಯದೇವರನ್ನೂ ಮತ್ತು ಆತನ ಏಕೈಕ ಮಗನಾದ ಯೇಸು ಕ್ರಿಸ್ತನನ್ನು ತಿಳಿಯುವದೇ ನಿತ್ಯಜೀವವೆಂಬದಾಗಿ ಆತನು ಹೇಳಿದನು. ಒಬ್ಬನು ಯೇಸು ಕ್ರಿಸ್ತನನ್ನು ತಿಳಿಯದೆಯೇ ನಿಜವಾಗಿಯೂ ದೇವರನ್ನು ತಿಳಿಯಲು ಸಾದ್ಯವಿಲ್ಲ.

4 ಯೇಸು ತನಗೆ ಭೂಮಿಯಲ್ಲಿ ಮಾಡುವದಕ್ಕಾಗಿ ದೇವರು ಕೊಟ್ಟಿದ್ದ ಕೆಲಸವನ್ನು ಪೂರ್ತಿಯಾಗಿ ಮಾಡಿ ಮುಗಿಸಿದನು. ಆದರೆ ದೇವರು ಕ್ರಿಸ್ತನಿಗೆ ಕೊಟ್ಟ ಮುಖ್ಯ ಕೆಲಸವೇನೆಂದರೆ ಸ್ತ್ರೀಪು ರುಷರನ್ನು ರಕ್ಷಿಸುವದಕ್ಕಾಗಿ ಶಿಲುಬೆಯ ಮೇಲೆ ಸಾಯುವದಾಗಿತ್ತು. ತಾನು ಮರುದಿನ ಶಿಲುಬೆಗೆ ಹಾಕಲ್ಪಡುವನೆಂಬದನ್ನು ತಿಳಿದವನಾಗಿ ಯೇಸು ಆ ಕೆಲಸವು ಪೂರ್ತಿಯಾಗಿದೆಯೇನೋ ಎಂಬಂತೆ ಪ್ರಾರ್ಥಿಸಿದನು. ಆ "ಕೆಲಸ'ವೇ ಅಂದರೆ ಶಿಲುಬೆಯ ಮೇಲಿನ ಆತನ ಮರಣವೇ ದೇವರಿಗೆ ಅತ್ಯಂತ ಮಹಿಮೆಯನ್ನು ತಂದಿತು (ವಚನ 1).

5 ಯೇಸು ತಾನು ಲೋಕ ಉಂಟಾಗುವದಕ್ಕಿಂತ ಮುಂಚೆ ಹೊಂದಿದ್ದ ಮಹಿಮೆಯನ್ನು ಪು ನ: ಒದಗಿಸಬೇಕೆಂದು ದೇವರನ್ನು ಪ್ರಾರ್ಥಿಸುತ್ತಾನೆ. ಯೇಸು ಇಲ್ಲಿ ತಾನು ಆದಿಯಲ್ಲಿಯೇ ದೇವರೊಂದಿಗಿದ್ದನೆಂಬದನ್ನು ಸ್ಪಷ್ಟವಾಗಿ ಹೇಳುತ್ತಾನೆ (ಯೋಹಾನ 1;1 ಮತ್ತು ವ್ಯಾಖ್ಯಾನ ನೋಡಿರಿ). ಕ್ರಿಸ್ತನು ಪು ನರುತ್ಥಾನಗೊಂಡು ನಾಲ್ವತ್ತು ದಿನಗಳಾದ ಬಳಿಕ ದೇವರು ಆತನನ್ನು ಪರಲೋಕಕ್ಕೆ ಎತ್ತಿಕೊಳ್ಳುವದರ ಮೂಲಕ ಈ ಪ್ರಾರ್ಥನೆಗೆ ಉತ್ತರಿಸಿದನು (ಅ.ಕೃತ್ಯ 1:9).

### ಯೇಸು ತನ್ನ ಶಿಷ್ಯರಿಗಾಗಿ ಪ್ರಾರ್ಥಿಸಿದ್ದು (17:6-19)

6 ಯೇಸು "ನೀನು ಲೋಕದೊಳಗಿಂದ ನನಗೆ ಕೊಟ್ಟ ಮನುಷ್ಯರಿಗೆ(ಆತನ ಶಿಷ್ಯರಿಗೆ) ನಿನ್ನನ್ನು 110 ತಿಳಿಯಪಡಿಸಿದೆನು" ಎಂದು ಪ್ರಾರ್ಥಿಸಿದನು. ಯೇಸು ತನ್ನ ಶಿಷ್ಯರಿಗೆ 111 ದೇವರನ್ನು ತಿಳಿಯಪಡಿಸಿದ್ದನು. ಈ ಶಿಷ್ಯರು ಆದಿಯಲ್ಲಿಯೇ ದೇವರಿಂದ ಆದುಕೊಳ್ಳಲ್ಪಟ್ಟವರಾಗಿದ್ದಾರೆ (ಎಫೆಸ 1:4). ಅವರು ದೇವರಿಗೆ ಸೇರಿದವರಾಗಿದ್ದಾರೆ. ದೇವರು ಅವರನ್ನು ಯೇಸುವಿಗೆ ಕೊಟ್ಟನು (ಯೋಹಾನ 6:37 ನೋಡಿರಿ) ದೇವರು ಅವರನ್ನು ಲೋಕದೊಳಗಿಂದ ಅಂದರೆ ಸೈತಾನನ ಕೈಗಳೊಳಗಿಂದ ತೆಗೆದುಕೊಂಡು ಅವರನ್ನು ಯೇಸುವಿನ ಕೈಗಳಲ್ಲಿ ಕೊಟ್ಟನು.

7 ಯೇಸು ದೇವರ ಬಳಿಯಿಂದ ಬಂದವನೆಂಬದನ್ನು (ಯೋಹಾನ 16:30), ಮತ್ತು ಯೇಸು ಮಾತಾಡಿದ ಎಲ್ಲಾ ಮಾತುಗಳು ಮತ್ತು ಆತನು ಮಾಡಿದ ಎಲ್ಲಾ ಕಾರ್ಯಗಳು ನಿಜವಾಗಿಯೂ ದೇವರ ಮಾತುಗಳು ಹಾಗು ದೇವರ ಕಾರ್ಯಗಳೇ ಎಂಬದನ್ನು ಕೊನೆಗೂ ಶಿಷ್ಯರು ಗ್ರಹಿಸಿಕೊಂಡರು.

8 ಯೇಸು ದೇವರ ಮಾತುಗಳನ್ನು ತನ್ನ ಶಿಷ್ಯರಿಗೆ ಕೊಟ್ಟಿದ್ದನು ಮತ್ತು ಅವರು ಅವು ಗಳನ್ನು ಒಪ್ಪಿಕೊಂಡಿದ್ದರು. ಆದರ ಫಲಿತವಾಗಿ, ಅವರು ಈಗ ಯೇಸು ದೇವರಿಂದ ಕಳುಹಿಸಲ್ಪಟ್ಟವನು ಎಂದು ತಿಳಿದಿದ್ದರು. ಹಾಗು ಆತನು ಮೆಸ್ಸೀಯನೂ, ಲೋಕ ರಕ್ಷಕನೂ ಆಗಿರುವದಕ್ಕಾಗಿ ದೇವರಿಂದ ಕಳುಹಿಸಲ್ಪಟ್ಟವನೆಂದು ಅವರು ನಂಬಿದರು.

ಈ ವಚನದಲ್ಲಿ ಒಬ್ಬನು ಕ್ರೈಸ್ತನಾಗುವದಕ್ಕೆ ಬೇಕಾದ ಮೂರು ಹೆಜ್ಜೆಗಳನ್ನು ನೋಡುತ್ತೇವೆ. ಮೊದಲನೆಯದಾಗಿ, ಒಬ್ಬ ವ್ಯಕ್ತಿಯು ದೇವರ ಮಾತುಗಳನ್ನು ಮತ್ತು ಕ್ರಿಸ್ತನನ್ನು ಒಂದು ಮುಕ್ತವಾದ ಹಾಗು ಪಶ್ಚಾತಾಪವು ಳ್ಳ ಮನಸ್ಸಿನಿಂದ "ಅಂಗೀಕರಿಸಿಕೊಳ್ಳಬೇಕು" ಎರಡನೆಯದಾಗಿ, ಆತನು ಯೇಸು ಯಾರೆಂಬದನ್ನು "ತಿಳಿಯಬೇಕು" ಅಂದರೆ ಮೂರನೆಯದಾಗಿ, ಆತನು ಯೇಸುವಿನಲ್ಲಿ" ನಂಬಿಕೆ" ಇಟ್ಟು ಆತನನ್ನು ಹಿಂಬಾಲಿಸಬೇಕು. ಒಬ್ಬ ನಿಜ ಕ್ರೈಸ್ತನ ನಂಬಿಕೆಯು ಕುರುಡು ನಂಬಿಕೆಯಾಗಿರುವದಿಲ್ಲ. ನಾವು ನಂಬಿರುವಾತನನ್ನು ಬಲ್ಲೆವು (2 ತಿಮೊಥೆ 1:12 ನೋಡಿರಿ).

9 ಯೇಸು "ನಾನು ...ಲೋಕಕ್ಕೋಸ್ಕರ ಕೇಳಿಕೊಳ್ಳುತ್ತಿಲ್ಲ" ಎಂದನು. ಆತನು ತನ್ನ ಶಿಷ್ಯರಿಗೋಸ್ಕರವೂ, ಅವರ ಸಂದೇಶಕ್ಕೆ ಕಿವಿಗೊಡುವ ಪ್ರತಿಯೊಬ್ಬರಿಗಾಗಿಯೂ ಪ್ರಾರ್ಥಿಸುತ್ತಿದ್ದಾನೆ (ವಚನ 20).

ಯೇಸು ಲೋಕವನ್ನು ಪ್ರೀತಿಸುವದಿಲ್ಲ ಎಂದು ಇದರರ್ಥವಲ್ಲ. ಆತನು ಲೋಕದ ರಕ್ಷಕನಾಗಿರಲು ಕಳುಹಿಸಲ್ಪಟ್ಟನು (ಯೋಹಾನ 3:16), ಮತ್ತು ಈಗ ಆತನ ಶಿಷ್ಯರು ರಕ್ಷಣೆಯ ಸುವಾರ್ತೆಯನ್ನು ಹರಡಬೇಕಾಗಿತ್ತು. ಆದರೆ ಯೇಸು ತನ್ನ ಶಿಷ್ಯರಿಗಾಗಿ ಪ್ರಾರ್ಥಿಸಿದ ರೀತಿಯಲ್ಲಿಯೇ ಲೋಕಕ್ಕಾಗಿ ಪ್ರಾರ್ಥಿಸಲಾಗಲಿಲ್ಲ. "ಲೋಕವು " – ಅಂದರೆ ಅವಿಶ್ವಾಸಿಗಳಾದ ಮಾನವರು ದೇವರನ್ನು ವಿರೋಧಿಸಿತು. ಲೋಕದ ಜನರಿಗಾಗಿಯಾದರೋ ಯೇಸುವಿನ ಪ್ರಾರ್ಥನೆಯು ಅವರು ನಂಬುವವರಾಗಬೇಕು (ವಚನ 21), ಅವರು ಲೋಕದೊಳಗಿಂದ ಹೊರಟು ಬರಬೇಕೆಂಬದಾಗಿತ್ತು ಎಲ್ಲಾ ಮಾನವರು ರಕ್ಷಣೆ ಹೊಂದಬೇಕೆಂಬುದು ದೇವರ ಇಚ್ಚೆಯಾಗಿದೆ (1 ತಿಮೊಥೆ 2:4) ಆದರೆ ಕ್ರಿಸ್ತನ ಮೂಲಕ ದೊರೆಯುವ ರಕ್ಷಣೆಯನ್ನು ಸ್ವೀಕರಿಸಲು ನಿರಾಕರಿಸುವವರಿಗಾದರೋ ಇನ್ನಾವ ನಿರೀಕ್ಷೆಯಾಗಲಿ, ರಕ್ಷಣೆಯ ಬೇರೆ ಮಾರ್ಗವಾಗಲಿ ಇರುವದಿಲ್ಲ. ಆದುದರಿಂದ, ಯೇಸು ದೇವರ ಕರುಣೆ ಹಾಗು ಕ್ಷಮಾಪಣೆಯನ್ನು ಅಂಗೀಕರಿಸಿಕೊಳ್ಳದವರಿಗಾಗಿಯೂ, ದೇವರ ಮಗನ ಮೂಲಕವಾಗಿ ದೊರೆಯುವ ಆತನ ರಕ್ಷಣೆಯನ್ನು ಸ್ವೀಕರಿಸಿಕೊಳ್ಳದವರಿಗಾಗಿಯೂ ಪ್ರಾರ್ಥಿಸಲಿಲ್ಲ. ಅಂತಹ ಜನರು ತಮಗೆ ತಾವೇ[112] ತೀರ್ಪು ಮಾಡಿಕೊಂಡವರಾಗಿದ್ದಾರೆ (ಯೋಹಾನ 3:18).

10 ಯೇಸು, "ನನ್ನದೆಲ್ಲಾ ನಿನ್ನದೇ (ದೇವರದೇ)" ಎಂದು ಹೇಳಿದನು. ಎಲ್ಲಾ ಮಾನವರು ನಿಜವಾಗಿಯೂ ದೇವರಿಗೆ ಇದನ್ನು ಹೇಳಬಹುದು. ನಾವು ಹೊಂದಿರುವದೆಲ್ಲವೂ ದೇವರಿಂದ ಬಂದದ್ದು ಮತ್ತು ಅಂತಿಮವಾಗಿ ಆತನಿಗೇ ಸೇರಿದ್ದಾಗಿದೆ. ಆದರೆ ನಂತರ ಯೇಸು "......ನಿನ್ನದೆಲ್ಲಾ ನನ್ನದೇ" ಎಂದು ಹೇಳಿದನು. ಯಾವ ಸಾಮಾನ್ಯ ಮಾನವನೂ ಅದನ್ನು ಹೇಳಲಾರನು! ದೇವಕುಮಾರನು ಮಾತ್ರವೇ ಅದನ್ನು ಹೇಳಬಲ್ಲನು (ಯೋಹಾನ 3:35). ತನ್ನ ಶಿಷ್ಯರ ಮೂಲಕ ಆತನಿಗೆ ಮಹಿಮೆ ಉಂಟಾಗಿದೆಯೆಂದು ಯೇಸು ಹೇಳಿದನು. ಇದನ್ನು ಹೇಳುವದರಲ್ಲಿ ಆತನು ಭವಿಷ್ಯತ್ತಿನ ಕುರಿತಾಗಿ ಯೋಚಿಸುತ್ತಿದ್ದನು. ಶಿಷ್ಯರು ಆತನ ಹೆಸರಿನಲ್ಲಿ ಎಂತಹ ದೊಡ್ಡ ಕಾರ್ಯಗಳನ್ನು ಮಾಡಲಿದ್ದಾರೆಂದು ಆತನು ಬಲ್ಲವನಾಗಿದ್ದನು.

ಆದಾಗ್ಯು, ಅವರು ಇನ್ನು ಬಲಹೀನರು ಹಾಗು ಅಪ್ರಯೋಜಕರೂ ಆಗಿರುವಾಗಲೂ ಅವರು ತನಗೆ ತಂದ ಮಹಿಮೆಯ ಬಗ್ಗೆ ಮಾತಾಡಿದನು. ಶಿಷ್ಯರು ಯೇಸುವಿನಲ್ಲಿ ಇಟ್ಟ ನಂಬಿಕೆಗಿಂತಲೂ ಹೆಚ್ಚಾಗಿ ಆತನು ತನ್ನ ಶಿಷ್ಯರಲ್ಲಿ ನಂಬಿಕೆಯಿಟ್ಟಿದ್ದನು!.

11 ಶಿಷ್ಯರು ಲೋಕದಲ್ಲಿ ಉಳಿಯುವವರಾಗಿದ್ದರು. ಆದುದರಿಂದ ದೇವರು ಅವರನ್ನು ಕೆಟ್ಟದ್ದರಿಂದ ಕಾಯಬೇಕೆಂದು ಯೇಸು ಅವರಿಗಾಗಿ ಪ್ರಾರ್ಥಿಸಿದನು. ಅವರು ಕಷ್ಟದಿಂದ ಕಾಪಾಡಲ್ಪಡಬೇಕೆಂದು ಯೇಸು ಪ್ರಾರ್ಥಿಸಲಿಲ್ಲ. ಆದರೆ ಕೆಟ್ಟದ್ದರಿಂದ ಮಾತ್ರವೇ ಕಾಯಬೇಕೆಂದು ಬೇಡಿಕೊಂಡನು. ನಮಗಾಗಿಯೂ ಸಹ ಆತನ ಪ್ರಾರ್ಥನೆ ಇದೇ ಆಗಿದೆ.

ನಿನ್ನ ಹೆಸರಿನಲ್ಲಿ [113] (ಹೆಸರಿನ ಬಲದಲ್ಲಿ) ಇವರನ್ನು ಕಾಯಬೇಕು" ಆಹೆಸರು ದೇವರು ತನ್ನ ಮಗನಿಗೆ ಕೊಟ್ಟ "ನೀನು ನನಗೆ ಕೊಟ್ಟಿರುವ" – ಹೆಸರಾಗಿತ್ತು, ಅದು "ಯೇಸು" ಎಂಬ ಹೆಸರು. ದೇವರು ಯೇಸುವಿಗೆ ಎಲ್ಲಾ ಬಲ ಹಾಗು ಅಧಿಕಾರವನ್ನು ಕೊಟ್ಟಿದ್ದನು. ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸುವದೆಂದರೆ ದೇವರ ಹೆಸರಿನಲ್ಲಿ ಪ್ರಾರ್ಥಿಸುವಂತೆಯೇ ಆಗಿದೆ.

ಯೇಸುವಿನ ಈ ಪ್ರಾರ್ಥನೆಯು ಆ ಪ್ರಥಮ ಶಿಷ್ಯರಿಗಾಗಿ ಮಾತ್ರವಲ್ಲ, ಆದರೆ ಇಲ್ಲಿಯ ವರೆಗೂ ಇರುವ ಎಲ್ಲಾ ವಿಶ್ವಾಸಿಗಳಿಗೂ ಎಷ್ಟೋ ಪ್ರಾಮುಖ್ಯವಾಗಿದೆ! ಈ ಪ್ರಾರ್ಥನೆಯು ನಮ್ಮನ್ನು ದೇವರ ಸಂರಕ್ಷಣೆಯ ಅಡಿಯಲ್ಲಿ ಇಟ್ಟಿರುತ್ತದೆ.

ಶಿಷ್ಯರು ಒಂದಾಗಿರಬೇಕೆಂಬದಕ್ಕಾಗಿ ದೇವರು ಅವರನ್ನು ಕಾಪಾಡಬೇಕೆಂದು ಯೇಸು ಪ್ರಾರ್ಥಿಸಿದನು. ತಾನು ಹೊರಟು ಹೋದ ಮೇಲೆ ಸೈತಾನನು ಅವರ ಮೇಲೆ ಆಕ್ರಮಣ ಮಾಡುವನೆಂದು ಯೇಸುವಿಗೆ ತಿಳಿದಿತ್ತು. ಅವರನ್ನು ನಾಶಮಾಡಲು ಸೈತಾನನು ಉಪಯೋಗಿಸುವ ಮುಖ್ಯ ವಿಧಾನವೆಂದರೆ ಅವರನ್ನು ಇಬ್ಭಾಗಿಸುವದು. ಸ್ವತಃ ಯೇಸುವೇ, ಒಂದು ಮನೆಯಲ್ಲಿ ಭೇದ ಹುಟ್ಟಿದರೆ ಆ ಮನೆಯು ನಿಲ್ಲಲಾರದು ಎಂದು ಹೇಳಿದನು (ಮಾರ್ಕ 3:25).

ಈ ಕಾರಣದಿಂದಲೇ ಯೇಸು ತನ್ನ ಶಿಷ್ಯರಿಗೆ ಅವರು "ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬ "ಹೊಸ ಆಜ್ಞೆಯನ್ನು ಕೊಟ್ಟನು (ಯೋಹಾನ 13:34). ಈ ವಿಧದಲ್ಲಿ ಮಾತ್ರವೇ ಶಿಷ್ಯರು ಸೈತಾನನ ಮೇಲೆ ಜಯ ಹೊಂದಿ ಐಕ್ಯತೆಯಿಂದ ಉಳಿಯಬಹುದಾಗಿತ್ತು. ಅವರೊಳಗಿನ ಐಕ್ಯತೆಯು ತಂದೆ ಮತ್ತು ಮಗನ ಮಧ್ಯದಲ್ಲಿರುವ ಐಕ್ಯತೆಯಂತಿರಬೇಕು. ಈ ಐಕ್ಯತೆಯು ತಂದೆ ಮತ್ತು ಮಗನ ನಡುವಿನ ಪ್ರೀತಿಯ ಮೇಲೆ ಆಧಾರವಾಗಿರುತ್ತದೆ. ವಿಶ್ವಾಸಿಗಳ ಮಧ್ಯದಲ್ಲಿನ ನಿಜ ಐಕ್ಯತೆಯು ನಮಗೆ ಪವಿತ್ರಾತ್ಮನ ಮೂಲಕವಾಗಿ ಕೊಡಲ್ಪಟ್ಟಿರುವ ಈ ದೈವಿಕ ಪ್ರೀತಿಯ ಮೇಲೆ ಆಧಾರವಾಗಿರಬೇಕು.. (ರೋಮ 5:5).

12 ಯೇಸು ತನ್ನ ಶಿಷ್ಯರೊಂದಿಗಿರುವಾಗ ಆತನು ಅವರನ್ನು ಕೆಟ್ಟದ್ದರಿಂದ ಕಾಪಾಡಿದ್ದನು. ಆತನು ಅವರನ್ನು ಆ ಹೆಸರಿನಲ್ಲಿ – ಅಂದರೆ ದೇವರು ಯೇಸುವಿಗೆ ಕೊಟ್ಟಿದ್ದ ಬಲ ಹಾಗು ಅಧಿಕಾರದಿಂದ ಕಾಪಾಡಿದ್ದನು. ಶಾಸ್ತ್ರದ (ಹಳೆ ಒಡಂಬಡಿಕೆಯ ಪ್ರವಾದನೆಯು) ಮಾತು ನೆರವೇರುವಂತೆ ಇಸ್ಕರಿಯೋತ ಯೂದನು ಮಾತ್ರವೇ ನಾಶವಾಗಿದ್ದನು (ಯೋಹಾನ 13:18 ಮತ್ತು ವ್ಯಾಖ್ಯಾನ ನೋಡಿರಿ).

ನಾವು ಯೂದನ ಭಯಾನಕ ಉದಾಹರಣೆಯನ್ನು ಎಂದಿಗೂ ಮರೆಯದಿರೋಣ. ಅವನು ಹನ್ನೆರಡು ಮಂದಿಯಲ್ಲಿ ಒಬ್ಬನಾಗಿ ಎಣಿಸಲ್ಪಟ್ಟಿದ್ದನು, ಆದರೆ ಅವನು ಕ್ರಿಸ್ತನಿಗೆ ಸೇರಿದವನಾಗಿರಲಿಲ್ಲ. ಅದೇ ರೀತಿಯಲ್ಲಿ, ಪ್ರತಿಯೊಂದು ಸಭೆಯಲ್ಲಿಯೂ ಸದಸ್ಯರಾಗಿ ಎಣಿಸಲ್ಪಟ್ಟಿರುವ, ಆದರೆ ಕ್ರಿಸ್ತನಿಗೆ ಸೇರಿದವರಲ್ಲದ ಅನೇಕ ಜನರಿದ್ದಾರೆ.

13 ಯೋಹಾನ 5:11 ಮತ್ತು ವ್ಯಾಖ್ಯಾನ ನೋಡಿರಿ.

14 ಯೇಸು ತನ್ನ ಶಿಷ್ಯರಿಗೆ ದೇವರ ವಾಕ್ಯವನ್ನು ಅಂದರೆ ದೇವರ ಸಂಪೂರ್ಣ ಬೋಧನೆಯನ್ನು ಕೊಟ್ಟಿದ್ದನು. ಶಿಷ್ಯರು ಈ ಲೋಕದವರಾಗಿರಲಿಲ್ಲ, ಯಾಕೆಂದರೆ ಅವರು ಲೋಕದೊಳಗಿಂದ ಕರೆಯಲ್ಪಟ್ಟವರಾಗಿದ್ದರು. ಈ ಕಾರಣದಿಂದಲೇ ಲೋಕವು ಅವರನ್ನು ದ್ವೇಷಮಾಡಿತು. ಯೇಸುವನ್ನು ಹಿಂಬಾಲಿಸುವವರೆಲ್ಲರ ವಿಷಯದಲ್ಲಿಯೂ ಇದು ಅಷ್ಟೇ ಸತ್ಯವಾಗಿದೆ (ಯೋಹಾನ 15:18-19 ಮತ್ತು ವ್ಯಾಖ್ಯಾನ ನೋಡಿರಿ).

15 ಯೇಸುವಿನ ಶಿಷ್ಯರ ಸ್ಥಾನವು ಲೋಕದಲ್ಲಿತ್ತು. ಅವರು ಲೋಕದಲ್ಲಿ ಸಭೆಯನ್ನು ಸ್ಥಾಪಿಸಬೇಕಾಗಿತ್ತು (ವಚನ 18 ನೋಡಿರಿ). ಅವರು ಲೋಕದಲ್ಲಿ ಇರಬೇಕಾಗಿತ್ತು ಆದರೆ ಲೋಕದವರಾಗಿರಲಿಲ್ಲ. ಅವರು ಕೆಡುಕನಿಂದ ಅಂದರೆ ಇಹಲೋಕಾಧಿಪತಿಯಾದ ಸೈತಾನನಿಂದ ಕಾಪಾಡಲ್ಪಡಬೇಕೆಂಬದು ಯೇಸುವಿನ ಮುಖ್ಯ ಚಿಂತೆಯಾಗಿತ್ತು (ಮತ್ತಾಯ 6:13, ಯೋಹಾನ 12:31, 1 ಯೋಹಾನ 5:19).

16 ವಚನ 14 ಮತ್ತು ವ್ಯಾಖ್ಯಾನ ನೋಡಿರಿ.

17 ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆ ಪಡಿಸು. "ಪ್ರತಿಷ್ಠೆ" ಪಡಿಸುವದು ಎಂದರೆ "ಪ್ರತ್ಯೇಕಿಸುವದು" "ಪವಿತ್ರಗೊಳಿಸುದು" ಎಂದರ್ಥವಾಗಿದೆ. ಇದು ದೇವರ ಸತ್ಯದಿಂದ, ಅಂದರೆ ದೇವರ ವಾಕ್ಯದಿಂದ ಮಾಡಲ್ಪಡುತ್ತದೆ..ನಿನ್ನ ವಾಕ್ಯವೇ ಸತ್ಯವು.. ವಿಶ್ವಾಸಿಗಳೆಲ್ಲರೂ ದೇವರ ವಾಕ್ಯದಿಂದ ಪ್ರತಿಷ್ಠಿಸಲ್ಪಟ್ಟವರಾಗಿದ್ದಾರೆ, ಅಂದರೆ ಅವರು ಪವಿತ್ರವಾದ ಉದ್ದೇಶಕ್ಕಾಗಿ ಪ್ರತ್ಯೇಕಿಸಲ್ಪಟ್ಟವರಾಗಿದ್ದಾರೆ. ವಿಶ್ವಾಸಿಗಳೆಲ್ಲರೂ ಕ್ರಿಸ್ತನಲ್ಲಿನ ನಂಬಿಕೆಯ ಮೂಲಕ ಪ್ರತಿಷ್ಠಿಸಲ್ಪಟ್ಟಿದ್ದಾರೆಂದು ಸಹ ಹೇಳಬಹುದು. ಕ್ರಿಸ್ತನು ದೇವರ ವಾಕ್ಯವಾಗಿದ್ದಾನೆ; ಆತನು ಕೃಪೆ ಹಾಗು ಸತ್ಯದಿಂದ ತುಂಬಿದವನಾಗಿದ್ದನು (ಯೋಹಾನ 1:1,14).

ನಾವು ಪ್ರತಿಷ್ಠಿಸಲ್ಪಟ್ಟಾಗ ಮಾತ್ರವೇ ಈ ಲೋಕದಲ್ಲಿ ದೇವರ ಸೇವೆಗೆ ಅರ್ಹರಾಗುತ್ತೇವೆ. ಆದರೆ ಪ್ರತಿಷ್ಠಿಸಲ್ಪಡಬೇಕಾದರೆ ನಾವು ದೇವರ ವಾಕ್ಯಕ್ಕೆ, ದೇವರ ಸತ್ಯಕ್ಕೆ ವಿಧೇಯರಾಗಬೇಕು. ದೇವರ ವಾಕ್ಯವು ತನ್ನಷ್ಟಕ್ಕೆ ತಾನೇ ನಮ್ಮನ್ನು ಪ್ರತಿಷ್ಠೆಪಡಿಸುವದಿಲ್ಲ, ನಾವು ಅದಕ್ಕೆ ವಿಧೇಯರಾಗಬೇಕು.

18 ದೇವರು ಯೇಸುವನ್ನು ಲೋಕಕ್ಕೆ ಕಳುಹಿಸಿದ ಪ್ರಕಾರವೇ ಯೇಸು ನಮ್ಮನ್ನು ಲೋಕಕ್ಕೆ ಕಳುಹಿಸುತ್ತಾನೆ. ನಾವು ಕ್ರಿಸ್ತನ ಸಾಕ್ಷಿಗಳಾಗಿರುವ ಒಂದು ಅವಕಾಶವನ್ನು ಆತನಿಂದಲೇ ಪಡೆದಿರುತ್ತೇವೆ. ಕ್ರಿಸ್ತನು ದೇವರಿಗೆ ಸಾಕ್ಷಿಯಾಗಿರುವದಕ್ಕಾಗಿ ಬಂದ ಪ್ರಕಾರವೇ ನಾವು ಕ್ರಿಸ್ತನಿಗೆ ಸಾಕ್ಷಿಗಳಾಗಿರುವದಕ್ಕೆ ಕರೆಯಲ್ಪಟ್ಟಿದ್ದೇವೆ (ಅ.ಕೃತ್ಯ 1:8).

19 ಇವರಿಗೋಸ್ಕರ (ಶಿಷ್ಯರು) ನಾನು ನನ್ನನ್ನು ಪ್ರತಿಷ್ಠೆ ಪಡಿಸಿಕೊಳ್ಳುತ್ತೇನೆ. ಯೇಸು ಶಿಲುಬೆಯ ಮೇಲಿನ ತನ್ನ ಮರಣದ ತನ್ನನ್ನು ಪ್ರತಿಷ್ಠೆಪಡಿಸಿಕೊಂಡನು. ಆತನು ಇವರಿಗೋಸ್ಕರ ಸತ್ತನು. ಆತನ ಮರಣದ ಮೂಲಕ ಶಿಷ್ಯರು ದೇವರ ದೃಷ್ಟಿಯಲ್ಲಿ ಪರಿಶುದ್ಧರಾಗಿ ಮಾಡಲ್ಪಟ್ಟರು. ಯೇಸು ಅವರ ಪಾಪಗಳನ್ನು ತಾನು ಹೊತ್ತುಕೊಂಡನು ಮತ್ತು ಅವರು ಶುದ್ಧರಾದರು. ಅದೇ ರೀತಿಯಲ್ಲಿ, ಯೇಸುವಿನಲ್ಲಿ ನಂಬಿಕೆಯಿಡುವದರ ಮೂಲಕ ಮತ್ತು ಆತನು ನಮಗಾಗಿ ಹೊಂದಿದ ಮರಣದ ಮೂಲಕ ನಾವು ಸಹ ಪ್ರತಿಷ್ಠಿತರಾಗಿ ದೇವರ ಸೇವೆಗೆ ಅರ್ಹರಾಗಿದ್ದೇವೆ.

## ಯೇಸು ವಿಶ್ವಾಸಿಗಳಿಗಾಗಿ ಪ್ರಾರ್ಥಿಸಿದ್ದು (1:20-26)

20 ಯೇಸು ಇಲ್ಲಿ ತನ್ನ ಹನ್ನೊಂದು ಮಂದಿ ಶಿಷ್ಯರಿಗಾಗಿ ಮಾತ್ರವೇ ಅಲ್ಲ, ಆದರೆ ಅದುವರೆಗೂ ಕ್ರಿಸ್ತನ ಸುವಾರ್ತೆಯಲ್ಲಿ ವಿಶ್ವಾಸಿಸಿರುವ (ಇನ್ನು ಮುಂದೆ ವಿಶ್ವಾಸಿಸುವ) ಎಲ್ಲರಿಗಾಗಿಯೂ ಪ್ರಾರ್ಥಿಸುತ್ತಿದ್ದಾನೆಂಬದನ್ನ ನಾವು ನೋಡುತ್ತೇವೆ. ಈಗ ಯೇಸುವಿನ ಪ್ರಾರ್ಥನೆಯ ಈ ಮೂರನೆಯ ಭಾಗದಲ್ಲಿ ಆತನು ವಿಶೇಷವಾಗಿ ನಮಗೋಸ್ಕರ ಪ್ರಾರ್ಥಿಸುತ್ತಾನೆ.

21 ಆತನು ನಮಗಾಗಿ ಎಲ್ಲಕ್ಕಿಂತಲೂ ಮುಖ್ಯವಾಗಿ ಪ್ರಾರ್ಥಿಸಿದ ವಿಷಯವೇನು? ನಾವು ಒಂದಾಗಿರಬೇಕೆಂದು ಆತನು ಪ್ರಾರ್ಥಿಸುತ್ತಾನೆ. ವಿಶ್ವಾಸಿಗಳೆಲ್ಲರೂ ಮನಸ್ಸು ಮತ್ತು ಹೃದಯಗಳಲ್ಲಿ ಒಂದಾಗಿರಬೇಕು. ನಾವು ಪ್ರೀತಿಯಲ್ಲಿ ಒಂದಾಗಿರಬೇಕು. ದೇವರು ಮತ್ತು ಕ್ರಿಸ್ತನು ಪರಸ್ಪರ ಒಂದಾಗಿರುವಂತೆಯೇ ನಾವು ಕ್ರಿಸ್ತನಲ್ಲಿಯೂ, ದೇವರಲ್ಲಿಯೂ ಒಂದಾಗಿರಬೇಕು (ಯೋಹಾನ 10:30). ಈ ಏಕತೆಯು ಆತ್ಮೀಕ ಏಕತೆಯಾಗಿದೆ. ಇದು ಪವಿತ್ರಾತ್ಮನಿಂದ ತರಲ್ಪಟ್ಟ ಒಂದು ಐಕ್ಯತೆಯಾಗಿದೆ (ಎಫೆಸ 4:3-4 ಮತ್ತು ವ್ಯಾಖ್ಯಾನ ನೋಡಿರಿ).

ಅದರ ನಂತರ, ನಾವು ಆತನಲ್ಲಿಯೂ, ದೇವರಲ್ಲಿಯೂ ಇರಬೇಕೆಂದು ಯೇಸು ಪ್ರಾರ್ಥಿಸುತ್ತಾನೆ (ಯೋಹಾನ 15:4-5,8 ನೋಡಿರಿ). ದೇವರು ಹಾಗು ಕ್ರಿಸ್ತನಲ್ಲಿ ಐಕ್ಯವಾಗಿರುವಾಗ ಮಾತ್ರವೇ ನಾವು ಒಬ್ಬರೊಂದಿಗೊಬ್ಬರು ಐಕ್ಯವಾಗಿರಬಲ್ಲೆವು . ದೇವರಲ್ಲಿಯೂ, ಕಿಸ್ತನಲ್ಲಿಯೂ ನೆಲೆಗೊಂಡಿರುವಾಗ ನಾವು ಫಲವನ್ನು ಕೊಡುತ್ತೇವೆ. ನಾವು ಕ್ರಿಸ್ತನ ಕೆಲಸವನ್ನು ಮುಂದುವರೆಸುವದನ್ನು ಜನರು ನೋಡುವರು. ಅನಂತರ ಕ್ರಿಸ್ತನ ಹೆಸರಿನಲ್ಲಿ ನಾವು ಕೊಡುತ್ತಿರುವ ಫಲದ ಕಾರಣದಿಂದ ದೇವರು ನಿಜವಾಗಿಯೂ ಕ್ರಿಸ್ತನನ್ನು ಲೋಕಕ್ಕೆ ಕಳುಹಿಸಿ ಕೊಟ್ಟನೆಂಬದನ್ನು ಜನರು ನಂಬುವರು. ಲೋಕವು ಸುಲಭವಾಗಿ ನೋಡಬಹುದಾದ ಎರಡು ಫಲಗಳೆಂದರೆ ನಮ್ಮ ಐಕ್ಯತೆ ಮತ್ತು ನಮ್ಮ ಪ್ರೀತಿ. ಒಂದು ವೇಳೆ ಕ್ರಿಸ್ತನ ಹಿಂಬಾಲಕರು ಈ ಫಲಗಳನ್ನು ತೋರ್ಪಡಿಸುವದಾದರೆ, ಲೋಕವು ಆಗ ಕ್ರಿಸ್ತನು ನಿಶ್ಚಯವಾಗಿಯೂ ದೇವರಿಂದ ಕಳುಹಿಸಲ್ಪಟ್ಟವನೆಂದು ತಿಳಿಯುವದು.

22 ಕ್ರಿಸ್ತನು ತಾನು ತಂದೆಯಿಂದ ಪಡೆದುಕೊಂಡ ಸ್ವಂತ ಮಹಿಮೆಯನ್ನೇ ತನ್ನ ಶಿಷ್ಯರಿಗೆ ಕೊಟ್ಟನು. ಈ ಮಹಿಮೆಯು ಆತ್ಮೀಕ ಜೀವಿತ ಮತ್ತು ಪ್ರೀತಿಯೇ ಆಗಿದೆ. ಇದು ಶುದ್ಧೀಕರಣದ ಮಹಿಮೆಯಾಗಿದೆ. ತಾನು ಮತ್ತು ತಂದೆಯು ಒಂದಾಗಿರುವ ಪ್ರಕಾರ ಅವರೆಲ್ಲರೂ ಒಂದಾಗಿರಬೇಕೆಂದು ಯೇಸು ಅವರಿಗೆ ತನ್ನ ಮಹಿಮೆಯನ್ನು ಕೊಟ್ಟನು. (ವಚನ 11 ಮತ್ತು ವ್ಯಾಖ್ಯಾನ ನೋಡಿರಿ).

23 ಈ ವಚನವು 21 ನೇ ವಚನದ ವಿಚಾರವನ್ನು ಪು ನರಾವರ್ತಿಸುತ್ತದೆ. ನಮ್ಮ ಪರಸ್ಪರರೊಂದಿಗಿನ ಐಕ್ಯತೆಯು ನಾವು ದೇವರು ಹಾಗು ಕ್ರಿಸ್ತನೊಂದಿಗೆ ಹೊಂದಿರುವ ಐಕ್ಯತೆಯ ಫಲಿತವಾಗಿದೆ. ನಾವು ಅವರಲ್ಲಿ ಇರುತ್ತೇವೆ. ಅವರು ಪಸ್ಪರರಲ್ಲಿದ್ದಾರೆ. ನಾವು ಒಂದೇ ದ್ರಾಕ್ಷೆ ಬಳ್ಳಿಯ ಕೊಂಬೆಗಳಾಗಿದ್ದೇವೆ. ಲೋಕವು ನಮ್ಮ ಐಕ್ಯತೆಯನ್ನು ನೋಡುವಾಗ ದೇವರು ಕ್ರಿಸ್ತನನ್ನು ಕಳುಹಿಸಿದನೆಂಬದನ್ನೂ ಮತ್ತು ಆತನು ಕ್ರಿಸ್ತನನ್ನು ಪ್ರೀತಿಸುವ ಪ್ರಕಾರ ನಮ್ಮನ್ನು ಪ್ರೀತಿಸುತ್ತಾನೆಂಬದನ್ನು ಅದು ತಿಳಿದುಕೊಳ್ಳುವದು [114] (ಯೋಹಾನ 15:9 ನೋಡಿರಿ). ನಮ್ಮ ಐಕ್ಯತೆಯು ಮಾನವ ಪ್ರೀತಿಯನ್ನಲ್ಲ ಆದರೆ ದೈವೀಕ ಪ್ರೀತಿಯ ಮೇಲೆ ಆಧಾರವಾಗಿದೆಯೆಂಬದನ್ನು ಲೋಕವು ತಿಳಿಯುವದು.

ಅದನ್ನು ಯೋಚಿಸಿ ನೋಡಿರಿ ದೇವರು ತನ್ನ ಸ್ವಂತ ಮಗನಾದ ಯೇಸುವನ್ನು ಪ್ರೀತಿಸುವಷ್ಟೇ ನಮ್ಮನ್ನೂ ಪ್ರೀತಿಸುತ್ತಾನೆ. ನಾವು ಯೇಸುವಿನಲ್ಲಿ ನಂಬಿಕೆಯಿಟ್ಟಿದ್ದರಿಂದ ಆತನು ನಮ್ಮನ್ನು ತನ್ನ ಮಕ್ಕಳನ್ನಾಗಿ ಸಹ ಮಾಡಿರುತ್ತಾನೆ (ಯೋಹಾನ 1:12 ಮತ್ತು ವ್ಯಾಖ್ಯಾನ ನೋಡಿರಿ).

ಆದರೆ ನಮ್ಮನ್ನೂ ನಾವು ಒಂದು ವಿಷಯವನ್ನು ಕೇಳಿಕೊಳ್ಳೋಣ. ಲೋಕವು ಕ್ರೈಸ್ತರ ಮದ್ಯದಲ್ಲಿ ಐಕ್ಯತೆಯನ್ನು ಕಾಣುತ್ತದೋ? ಲೋಕವು ಕ್ರೈಸ್ತರ ಮದ್ಯದಲ್ಲಿ ಪ್ರೀತಿಯನ್ನು ಕಾಣುತ್ತದೋ? ಸೈತಾನನು ನಮ್ಮನ್ನು ಇಬ್ಭಾಗಿಸುವಲ್ಲಿ ಎಷ್ಟು ಯಶಸ್ವಿಯಾಗಿದ್ದಾನೆ ನೋಡಿರಿ! ನಾವು ಆತನ ಸಭೆಯ ಐಕ್ಯತೆಯನ್ನು ಕಾಪಾಡಿಕೊಳ್ಳಲು ವಿಫಲರಾಗಿರುವದಕ್ಕೆ ದೇವರು ನಮ್ಮನ್ನು ಕ್ಷಮಿಸಲಿ.

24 ಯೇಸು ತಾನು ಶಿಷ್ಯರನ್ನು ಕರೆದುಕೊಂಡು ಹೋಗಲು ತಿರಿಗಿ ಬರುವನೆಂದು ಅವರಿಗೆ ಈಗಾಗಲೇ ಹೇಳಿದ್ದನು (ಯೋಹಾನ 14:3). ಇಲ್ಲಿ ಆತನು ಅದೇ ಇಂಗಿತವನ್ನು ದೇವರ ಮುಂದೆ ಹೇಳುತ್ತಾನೆ. ತಾನು ಲೋಕವು ಹುಟ್ಟುವದಕ್ಕಿಂತ ಮುಂಚೆ ಹೊಂದಿದ್ದ ಮಹಿಮೆಯನ್ನು ತನ್ನ ಶಿಷ್ಯರು ನೋಡಬೇಕೆಂಬುದು ಆತನ ಬಯಕೆಯಾಗಿತ್ತು (ವಚನ 5 ನೋಡಿರಿ).

25 ಲೋಕವು ದೇವರನ್ನು ತಿಳಿದಿಲ್ಲ, ಆದರೆ ಕ್ರಿಸ್ತನು ಆತನನ್ನು ಬಲ್ಲವನಾಗಿದ್ದಾನೆ (ಯೋಹಾನ ೮:೫೫). ಮಾನವರಿಗೆ ದೇವರನ್ನು ಪ್ರಕಟಗೊಳಿಸಲು ಕ್ರಿಸ್ತನು ದೇವರ ಬಳಿಯಿಂದ ಬಂದನು (ಮತ್ತಾಯ 11:27, ಯೋಹಾನ 1:18 ಮತ್ತು ವ್ಯಾಖ್ಯಾನ ನೋಡಿರಿ).

ಆತನು ವಿಶೇಷವಾಗಿ ತನ್ನ ಆಪ್ತ ಶಿಷ್ಯರಿಗೆ ದೇವರನ್ನು ಪ್ರಕಟಪಡಿಸಿದನು. ಆದುದರಿಂದ ಆತನು ದೇವರಿಗೆ "ಇವರು ನೀನೇ ನನ್ನನ್ನು ಕಳುಹಿಸಿಕೊಟ್ಟಿರುವದಾಗಿ ತಿಳುಕೊಂಡಿದ್ದಾರೆ" ಎಂದು ಹೇಳಿದನು.

26 ಯೇಸು "ನಾನು ಅವರಿಗೆ ನಿನ್ನ ಹೆಸರನ್ನು ತಿಳಿಸಿದ್ದೇನೆ, ಇನ್ನೂ ತಿಳಿಸುವೆನು" ಎಂದನು. ಯೇಸು ಪವಿತ್ರಾತ್ಮನ ಮುಖಾಂತರವಾಗಿ ತನ್ನ ಶಿಷ್ಯರಿಗೆ ದೇವರು ತಿಳಿಯಪಡಿಸುವದನ್ನು ಮುಂದುವರೆಸಿದನು ಮತ್ತು ಆತನು ಈ ದಿನವು ಸಹ ಅದನ್ನು ಮಾಡುತ್ತಿದ್ದಾನೆ. ದೇವರ ಪ್ರೀತಿಯೂ ಮತ್ತು ಸ್ವತಃ ಯೇಸುವು ನಮ್ಮಲ್ಲಿರಬೇಕೆಂಬದಕ್ಕಾಗಿ ಯೇಸು ಪವಿತ್ರಾತ್ಮನ ಮೂಲಕವಾಗಿ ನಮಗೆ ದೇವರನ್ನು ಪ್ರಕಟಪಡಿಸುತ್ತಾನೆ. ಪವಿತ್ರಾತ್ಮನ ಮುಖಾಂತರವಾಗಿ ನಾವು ದೇವರನ್ನೂ ಆತನ ಪ್ರೀತಿಯನ್ನೂ ಬಲ್ಲೆವು (ರೋಮ 5:5). ಮತ್ತು ಯೇಸು ನಮ್ಮಲ್ಲಿ ಜೀವಿಸುವವನಾಗಿದ್ದಾನೆ. ಇದೆಲ್ಲವೂ ಪವಿತ್ರಾತ್ಮನ ಕಾರ್ಯವಾಗಿದೆ ಮತ್ತು ಇಂದು ಪವಿತ್ರಾತ್ಮನು ಈ ಕಾರ್ಯವನ್ನು ಪ್ರತಿಯೊಬ್ಬ ವಿಶ್ವಾಸಿಯ ಜೀವಿತದಲ್ಲಿಯೂ ನಿರಂತರವಾಗಿ ಮಾಡುತ್ತಿದ್ದಾನೆ.

# ಅಧ್ಯಾಯ - 18

## ಯೇಸುವಿನ ಬಂಧನ (18:1-14)

(ಮತ್ತಾಯ 26:47-56, ಮಾರ್ಕ 14:43-52, ಲೂಕ 22:47-53)

**1-11** (ಮಾರ್ಕ 14:43-52 ಮತ್ತು ವ್ಯಾಖ್ಯಾನ ನೋಡಿರಿ).

**12-13** ಯೇಸು ರೋಮಾಯ ಸಿಪಾಯಿಗಳ ಮತ್ತು ಕೆಲವು ಯೆಹೂದ್ಯ ಅಧಿಕಾರಿಗಳಿಂದ ಕೂಡಿದ್ದ ದಳದಿಂದ ಬಂಧಿಸಲ್ಪಟ್ಟನು. ಅಲ್ಲದೆ ಅವರೊಂದಿಗೆ ಯೆಹೂದಿನಾಯಕರು ಕಳುಹಿಸಿದ್ದ ಒಂದು ಜನಸಮೂಹವೂ ಇತ್ತು (ಮಾರ್ಕ 14:43). ಯೇಸುವನ್ನು ಬಂಧಿಸಿದ ನಂತರ ಆತನನ್ನು ಅನೌಪಚಾರಿಕ ವಿಚಾರಣೆಗಾಗಿ ಮಾಜಿ ಮಹಾಯಾಜಕನಾಗಿದ್ದ ಅನ್ನನ ಬಳಿಗೆ ಕರೆದುಕೊಂಡು ಹೋದರು. ಅನ್ನನು ಆ ವರ್ಷದಲ್ಲಿ ಮಹಾಯಾಜಕನಾಗಿದ್ದ ಕಾಯಫನ ಮಾವನಾಗಿದ್ದನು.

**14** ಯೋಹಾನ 11:49-52 ಮತ್ತು ವ್ಯಾಖ್ಯಾನ ನೋಡಿರಿ.

## ಅನ್ನನ ಮುಂಭಾಗದಲ್ಲಿ ಯೇಸು ಮತ್ತು ಪೇತ್ರನ ನಿರಾಕರಣೆ (18:15-27)

(ಮತ್ತಾಯ 26:69-75, ಮಾರ್ಕ 14:66-72, ಲೂಕ 22:54-62)

**15-18** ಮಾರ್ಕ 14:66-68 ಮತ್ತು ವ್ಯಾಖ್ಯಾನ ನೋಡಿರಿ.

**19** ಸುವಾರ್ತಾ ಬರಹಗಾರರಲ್ಲಿ ಯೋಹಾನನು ಮಾತ್ರವೇ ಯೇಸು ಅನ್ನನಿಂದ ಪ್ರಶ್ನಿಸಲ್ಪಡುವದನ್ನು ವರ್ಣಿಸಿರುತ್ತಾನೆ. ಯೋಹಾನನು 19ನೇ ವಚನದಲ್ಲಿ ಅನ್ನನನ್ನು ಮಹಾಯಾಜಕ ಎಂದು ಕರೆಯುತ್ತಾನೆ. ಆತನು ಈ ಮುಂಚೆ ಮಹಾಯಾಜಕನಾಗಿದ್ದನು ಮತ್ತು ಅನಂತರ ರೋಮಾಯದಿಂದ ವಜಾ ಮಾಡಲ್ಪಟ್ಟಿದ್ದನು. ಹೇಗಿದ್ದರೂ, ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರವಾಗಿ ಮಹಾಯಾಜಕನು ಜೀವಿತಕಾಲವೆಲ್ಲಾ ಆ ಪದವಿಯನ್ನು ಹೊಂದಿರುತ್ತಿದ್ದನು. ಆದುದರಿಂದ, ಅನೇಕ ಯೆಹೂದ್ಯರು ಅನ್ನನನ್ನು ಇನ್ನು "ಮಹಾ ಯಾಜಕ" ಎಂದೇ ಕರೆದರು.

ಯೆಹೂದಿ ನಾಯಕರು ಯೇಸುವನ್ನು ಮೊದಲು ಅನ್ನನ ಬಳಿಗೆ ಕರೆದುಕೊಂಡು ಬಂದರು, ಯಾಕೆಂದರೆ ಯೆಹೂದ್ಯರ ನಿಯಮದ ಪ್ರಕಾರ ಒಬ್ಬ ವ್ಯಕ್ತಿಯನ್ನು ಒಂದೇ ದಿನದಲ್ಲಿ ವಿಚಾರಣೆ ಮಾಡಿ ತೀರ್ಪು ನೀಡುವದು ನ್ಯಾಯವಾದದ್ದಾಗಿರಲಿಲ್ಲ. ಒಬ್ಬನಿಗೆ ತೀರ್ಪು ಮಾಡಬೇಕಾದರೆ ನ್ಯಾಯವಿಚಾರಣೆಯಾದ ಮೇಲೆ ಮರುದಿನದ ವರೆಗೂ ಕಾಯುವದು ಅಗತ್ಯವಾಗಿತ್ತು. ಆದುದರಿಂದ, ಯೆಹೂದ್ಯರು ಮರುದಿನದ ತನಕ ಕಾಯಲು ಇಷ್ಟಪಡದ್ದರಿಂದ ಅವರು ಯೇಸುವನ್ನು ಅದೇ ರಾತ್ರಿಯಲ್ಲಿ ಅನ್ನನ ಬಳಿಗೆ ಕರೆತಂದರು. ಹೀಗೆ ಮಾಡುವದರ ಮೂಲಕ ಅವರು ಮರುದಿನ ಸುಲಭವಾಗಿ ಆತನನ್ನು ಹಿರೀ ಸಭೆಯ ಮುಂದೆ ತೆಗೆದುಕೊಂಡು ಹೋಗಿ ತೀರ್ಪು ನೀಡಬಹುದಾಗಿತ್ತು (ವಚನ 24 ನೋಡಿರಿ). ಅನ್ನನು ಯೇಸುವನ್ನು ಪ್ರಶ್ನಿಸಿದನೆಂದು ಯೋಹಾನನು ತಿಳಿಸುತ್ತಾನೆ. ಇದು ಸ್ವತಃ ಕಾನೂನಿಗೆ ವಿರುದ್ಧವಾಗಿತ್ತು. ಯೆಹೂದ್ಯನಿಯಮದ ಪ್ರಕಾರ ನ್ಯಾಯಾಧಿಪತಿಯಾಗಲಿ ನ್ಯಾಯಸ್ಥಾನದ ಮುಖ್ಯ ಅಧಿಕಾರಿಯೇ ಆಗಲಿ ಬಂಧಿತನನ್ನು ನೇರವಾಗಿ ವಿಚಾರಿಸುವಂತಿರಲಿಲ್ಲ. ಅಲ್ಲಿ ಕೆಲವು ಸಾಕ್ಷಿಗಾರರನ್ನು ಕರೆಸಬೇಕಾಗಿತ್ತು, ಕೆಲವರು ಬಂಧಿತನ ಪರವಾಗಿಯೂ, ಮತ್ತು ಇನ್ನು ಕೆಲವರು ಆತನ ವಿರುದ್ಧವಾಗಿಯೂ ಸಾಕ್ಷಿಹೇಳುತ್ತಿದ್ದರು.

**20-21** ಅನ್ನನು ಕಾನೂನುಬಾಹಿರವಾಗಿ ವಿಚಾರಣೆ ನಡೆಸಿರುವ ಕಾರಣದಿಂದಾಗಿ ಯೇಸು ಆತನ ಪ್ರಶ್ನೆಗಳಿಗೆ ನೇರವಾಗಿ ಉತ್ತರಿಸಲಿಲ್ಲ. ಬದಲಾಗಿ ಆತನು ತನ್ನ ಎಲ್ಲಾ ಬೋಧನೆಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಮಾಡಿದನೆಂದಷ್ಟೆ ಹೇಳಿದನು. ಅನೇಕರು ಆತನ ಮಾತುಗಳನ್ನು ಕೇಳಿದ್ದರು. ಆದುದರಿಂದ, ಯಾರ್ಯಾರು ಕೇಳಿದ್ದಾರೋ ಅವರನ್ನೇ ಸಾಕ್ಷಿಗಾರರಾಗಿ ಕರೆಯಲಿ. "ನಾನು ಮರೆಯಾಗಿ 116 ಯಾವದನ್ನೂ ಮಾತಾಡಲಿಲ್ಲ. ನನ್ನನ್ನು ಯಾಕೆ ವಿಚಾರಿಸುತ್ತೀ?" ಎಂದು ಯೇಸು ಹೇಳಿದನು.

**22** ಆಗ ಯೇಸುವಿನ ಮಾತುಗಳಿಂದ ಕೋಪಗೊಂಡ ಅಧಿಕಾರಿಯೊಬ್ಬನು ಯೇಸುವಿಗೆ ಹೊಡೆದನು.

**23** ಯೇಸು ತನ್ನ ಮಾತುಗಳನ್ನು ಅಧಿಕಾರಿಯು ಇಷ್ಟಪಡಲಿಲ್ಲವಾದರೆ ಆತನು ಅದಕ್ಕೆ ವಿರುದ್ಧವಾಗಿ ಸಾಕ್ಷಿಹೇಳಬೇಕಾಗಿತ್ತೆಂದು ಅವನಿಗೆ ಹೇಳಿದನು. ಬಂಧಿತನನ್ನು ಹೊಡೆಯುವದು ಕಾನೂನಿನ ದೃಷ್ಟಿಯಲ್ಲಿ ಇನ್ನು ದೊಡ್ಡ ತಪ್ಪಾಗಿತ್ತು.

**24** ಇನ್ನೂ ಯೇಸುವನ್ನು ವಿಚಾರಿಸುವದರಲ್ಲಿ ಯಾವ ಪ್ರಯೋಜನವಿಲ್ಲವೆಂದು ತಿಳಿದುಕೊಂಡ ಅನ್ನನು ಆತನನ್ನು ಪ್ರಸ್ತುತ ಮಹಾಯಾಜಕನಾಗಿದ್ದ ಕಾಯಫನ ಬಳಿಗೆ ಕಳುಹಿಸಿಕೊಟ್ಟನು. ಅನ್ನ ಹಾಗು ಕಾಯಫನ ಮುಂಭಾಗದಲ್ಲಿನ ಈ ಎರಡೂ ವಿಚಾರಣೆಗಳು ಯೆಹೂದ್ಯ ದೇವಾಲಯದ ಬೇರೆ ಬೇರೆ ಕಟ್ಟಡಗಳಲ್ಲಿ ನಡೆದಿರುವ ಸಾಧ್ಯತೆಯಿರುತ್ತದೆ. ಎರಡನೆಯ ವಿಚಾರಣೆಯು ಯೆಹೂದ್ಯ ಹಿರೀಸಭೆಯ ಔಪಚಾರೀಕ ವಿಚಾರಣೆಯಾಗಿತ್ತು, ಅದು ಮಹಾಯಾಜಕನಾಗಿದ್ದ ಕಾಯಫನಿಂದ ನಡೆಸಲ್ಪಟ್ಟಿತು. ಈ ಸಭೆಯು ಮಾರ್ಕ 14:53-65ರಲ್ಲಿ ಬಣ್ಣಿಸಲ್ಪಟ್ಟಿದೆ.

**25-27** ಮಾರ್ಕ 14:69-72 ಮತ್ತು ವ್ಯಾಖ್ಯಾನ ನೋಡಿರಿ.

## ಪಿಲಾತನು ಯೇಸುವನ್ನು ವಿಚಾರಿಸಿದ್ದು (18:28-40)

28 ಹಿರೀ ಸಭೆಯು ದೂಷಣೆಯ ಆರೋಪಕ್ಕಾಗಿ ಯೇಸುವಿಗೆ ಮರಣದಂಡನೆಯನ್ನು ನೀಡಿದ ಬಳಿಕ (ಮಾರ್ಕ 14:63-64 ಮತ್ತು ವ್ಯಾಖ್ಯಾನ ನೋಡಿರಿ), ಯೇಸುವನ್ನು ರೋಮಾಯ ದೇಶಾಧಿಪತಿಯಾದ ಪಿಲಾತ ಎಂಬವನ ಅರಮನೆಗೆ ಕರೆದುಕೊಂಡು ಹೋದರು (ಮಾರ್ಕ 15:1 ಮತ್ತು ವ್ಯಾಖ್ಯಾನ ನೋಡಿರಿ).

ಅದು ಪಸ್ಕ ಹಬ್ಬದ ವಾರವಾಗಿತ್ತಾದ್ದರಿಂದ ಯೆಹೂದ್ಯರು ಪಿಲಾತನ ಅರಮನೆಯನ್ನು ಪ್ರವೇಶಿಸಲು ಇಷ್ಟಪಡಲಿಲ್ಲ, ಯಾಕೆಂದರೆ ಅವನೊಬ್ಬ ಅನ್ಯಜನಾಂಗದವನಾಗಿದ್ದನು. ಒಂದು ವೇಳೆ ಯೆಹೂದ್ಯನೊಬ್ಬನು ಒಬ್ಬ ಅನ್ಯಜನಾಂಗದವನ ಮನೆಯನ್ನು ಪ್ರವೇಶಿಸುವದಾದರೆ ಏಳು ದಿನಗಳ ವರೆಗೆ ಅಶುದ್ಧನಾಗುತ್ತಿದ್ದನು ಮತ್ತು ಆಸಮಯದಲ್ಲಿ ಆತನು ಯಾವದೇ ಧಾರ್ಮಿಕ ಹಬ್ಬದಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿರಲಿಲ್ಲ. ಆದುದರಿಂದ ಯೆಹೂದ್ಯರು ಪಿಲಾತನ ಅರಮನೆಯೊಳಗೆ ಪ್ರವೇಶಿಸಿದ್ದಾದರೆ ಅವರು ಪಸ್ಕದ ಊಟವನ್ನು ಮಾಡಲು ಅಡ್ಡಿಯಾಗುತ್ತಿತ್ತು; ಅಂದರೆ ಪಸ್ಕದ ವಾರದಲ್ಲಿರುತ್ತಿದ್ದ ಯಾವದೇ ಪ್ರಮುಖ ಊಟಗಳನ್ನು ಮಾಡಲು ಅಡ್ಡಿಯಾಗುತ್ತಿತ್ತು (ಮಾರ್ಕ 14:12 ಮತ್ತು ವ್ಯಾಖ್ಯಾನ ನೋಡಿರಿ).

ಯೆಹೂದ್ಯರು ತಾವು ಒಬ್ಬ ನಿರಪರಾಧಿಯನ್ನು ಕೊಲ್ಲುವದಕ್ಕೆ ಕಾರಣವಾಗುವದನ್ನು ತಡೆಯುವದಕ್ಕಿಂತಲೂ ಆಚಾರದ ಮೈಲಿಗೆ ಆಗದಂತೆ ನೋಡುಕೊಳ್ಳುವದನ್ನು ಪ್ರಾಮುಖ್ಯವೆಂದೆಣಿಸಿದರೆಂಬದನ್ನು ಇಲ್ಲಿ ಗಮನಿಸಿರಿ! ಅವರು ತಮ್ಮ ದೇಹಗಳನ್ನು ಶುಭ್ರವಾಗಿ ಕಾಪಾಡಿಕೊಂಡರು, ಆದರೆ ಅವರ ಹೃದಯಗಳು ಹೊಲಸಾಗಿದ್ದವು! (ಮತ್ತಾಯ 23:28 ನೋಡಿರಿ).

29 ಯೆಹೂದ್ಯನಾಯಕರು ಪಿಲಾತನ ಅರಮನೆಯೊಳಗೆ ಹೋಗುವದಿಲ್ಲವಾದ್ದರಿಂದ ಪಿಲಾತನು ಸ್ವತಃ ಹೊರಕ್ಕೆ ಬಂದನು. ಆತನು ಯೆಹೂದ್ಯರನ್ನು ಸಂತೋಷದಿಂದಿರಿಸಲೂ, ತಾನು ದೇಶಾಧಿಪತಿಯಾಗಿದ್ದ ಪ್ರಾಂತ್ಯದಲ್ಲಿ ಶಾಂತಿಯನ್ನು ಕಾಪಾಡಿಕೊಳ್ಳಲೂ ಬಯಸಿದನು. ಆತನು ಯೆಹೂದ್ಯರಿಗೆ ಯೇಸುವಿನ ಮೇಲೆ ಅವರು ದೂರು ಏನಾಗಿದೆಯೆಂದು ಕೇಳಿದನು.

30 ಯೆಹೂದ್ಯರು ಯೇಸುವಿಗೆ ದೇವದೂಷಣೆಯ, ಆರೋಪಕ್ಕಾಗಿ ತೀರ್ಪು ಮಾಡಿದ್ದರು (ಮಾರ್ಕ 14:64). ಆದರೆ ಪಿಲಾತನಿಗೆ ಅದು ಯಾವ ಅರ್ಥವೂ ಇಲ್ಲದ ಆರೋಪವಾಗಿತ್ತು. ಅದೊಂದು ಸ್ಥಳೀಯ ಯೆಹೂದಿಧಾರ್ಮಿಕ ವಿಷಯವಾಗಿತ್ತು. ಸಾಮಾನ್ಯವಾಗಿ ರೋಮಾಯರು ಅವರ ಪ್ರಾಂತ್ಯಗಳ ಧಾರ್ಮಿಕ ವ್ಯವಹಾರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿರಲಿಲ್ಲ. ಅವರು ಕೇವಲ ರಾಜಕೀಯ, ಯುದ್ಧದ ವಿಷಯಗಳ ಕುರಿತಾಗಿಯೂ ಶಾಂತಿಯನ್ನು ಕಾಪಾಡುವದರ ಕುರಿತಾಗಿಯೂ ಚಿಂತಿಸುತ್ತಿದ್ದರು (ಅ.ಕೃತ್ಯ 18:12-16 ನೋಡಿರಿ). ಆದುದರಿಂದ, ಯೆಹೂದ್ಯರು ಮೊದಲು ಪಿಲಾತನಿಗೆ ನೇರವಾಗಿ ಉತ್ತರಿಸಲಿಲ್ಲ. ರೋಮಾಯ ಕಾನೂನಿನ ಪ್ರಕಾರವಾಗಿ ಯೇಸುವನ್ನು ಮರಣದಂಡನೆಗೆ ಅರ್ಹನನ್ನಾಗಿ ಮಾಡುವ ಯಾವದೇ ದೂರನ್ನು ಆತನವಿರುದ್ಧವಾಗಿ ನಿರೂಪಿಸಲು ಅವರು ವಿಫಲರಾದರು.ಆದಾಗ್ಯು, ಪಿಲಾತನು ಯೇಸುವಿಗೆ ಮರಣದಂಡನೆಯನ್ನು ವಿಧಿಸುವಂತೆ ಮಾಡುವದೇ ಅವರ ಪ್ರಧಾನ ಬಯಕೆಯಾಗಿತ್ತು. ಆದ್ದರಿಂದ ಅವರು ಪಿಲಾತನಿಗೆ "ನೀನು ದೂರುಗಳು ಯಾವವೆಂದು ಕೇಳುವ ಅಗತ್ಯವಿಲ್ಲ. ಇವನು ಅಪರಾಧಿಯೆಂಬುದರಲ್ಲಿ ನೀನು ಯಾವ ಸಂಶಯ ಪಡಬೇಕಾಗಿಲ್ಲ. ಇಲ್ಲವಾದರೆ ನಾವು ಇತನನ್ನು ನಿನ್ನ ಬಳಿಗೆ ಕರೆತರುತ್ತಿರಲಿಲ್ಲ. ನಮ್ಮ ತೀರ್ಪನ್ನು ಒಪ್ಪಿಕೋ ಸಾಕು" ಎಂದು ಹೇಳಿದರು. ಯೆಹೂದ್ಯರ ಮನವಿಯ ಮೇರೆಗೆ ಪಿಲಾತನ ಸಿಪಾಯಿಗಳು ಯೇಸುವನ್ನು ಬಂಧಿಸಲು ಸಹಾಯಮಾಡಿದ್ದರು (ವಚನ 12). ಈಗ ಪಿಲಾತನೇ ತಮ್ಮ ಇಚ್ಛೆಗಳಿಗನುಸಾರವಾಗಿ ತೀರ್ಪೊಂದನ್ನು ನೀಡಬೇಕೆಂದು ಯೆಹೂದ್ಯರು ಬಯಸಿದರು.

31 ಆದರೆ ಯೇಸುವಿನ ವಿರುಧ್ಧದ ದೂರು ಧಾರ್ಮಿಕ ವಿಷಯಗಳನ್ನೊಳಗೊಂಡಿದೆಯೆಂದು ಪಿಲಾತನಿಗೆ ಗೊತ್ತಿತ್ತು, ಆದ್ದರಿಂದಲೇ ಮೊದಲು ಆತನು ಈ ವಿಷಯದ ಮೇಲೆ ತೀರ್ಪನ್ನು ನೀಡಲು ನಿರಾಕರಿಸಿದನು.

ಆದರೆ ಯೆಹೂದ್ಯರು ಯೇಸುವಿಗ ಮರಣದಂಡನೆಯಾಗಬೇಕೆಂದು ಇಚ್ಛಿಸಿದರು ಮತ್ತು ರೋಮಾಯ ಕಾನೂನಿನ ಪ್ರಕಾರ ರೋಮಾಯ ಅಧಿಕಾರಿಗಳು ಮಾತ್ರವೇ ಅಪರಾಧಿಗಳಿಗೆ [117] ಮರಣ ದಂಡನೆಯನ್ನು ಜಾರಿಗೆ ತರುವ ಅಧಿಕಾರವನ್ನು ಹೊಂದಿದ್ದರು.

32 ಯೆಹೂದ್ಯರು ಯೇಸುವನ್ನು ಪಿಲಾತನ ಬಳಿಗೆ ಕರೆತರಲು ಇನ್ನೊಂದು ಉದ್ದೇಶವಿತ್ತು. ಯೇಸು ಶಿಲುಬೆಗೇರಿಸಲ್ಪಡುವದರ ಮೂಲಕ (ರೋಮಾಯರ ಪದ್ಧತಿ), ಕೊಲ್ಲಲ್ಪಡಬೇಕು ಹೊರತು ಕಲ್ಲೆಸೆಯುವದರ ಮೂಲಕವಾಗಿ (ಯೆಹೂದ್ಯ ಪದ್ಧತಿ) ಅಲ್ಲ ಎಂಬುದು ಅವರ ಇಚ್ಛೆಯಾಗಿತ್ತು. ಹಳೆ ಒಡಂಬಡಿಕೆಯಲ್ಲಿ ಹೀಗೆ ಬರೆದದೆ:...ಮರಕ್ಕೆ ತೂಗು ಹಾಕಲ್ಪಟ್ಟವನು ದೇವರ ಶಾಪವನ್ನು ಹೊಂದಿದವನು. (ಧರ್ಮೋಪದೇಶಕಾಂಡ 21:23). ಅಪರಾಧಿಗಳಿಗೆ ಮರಣದಂಡನೆ ವಿಧಿಸಿದ ನಂತರ ಜನರೆಲ್ಲರೂ ಅವರ ಭಯಂಕರ ದುರ್ಗತಿಯನ್ನು ನೋಡಬೇಕೆಂಬದಾಗಿಯೂ, ಅದು ಅವರಿಗೆ ಒಂದು ಎಚ್ಚರಿಕೆಯಾಗಿರಬೇಕೆಂಬದಾಗಿಯೂ ಅವರ ದೇಹಗಳನ್ನು ಮರಕ್ಕೆ ತೂಗು ಹಾಕುತ್ತಿದ್ದರೆಂಬದನ್ನು ಇದು ಸೂಚಿಸುತ್ತದೆ. ಯೇಸು ಯೆಹೂದ್ಯ ಜನರ ದೃಷ್ಟಿಯಲ್ಲಿ ಸಂಪೂರ್ಣ ಅವಮಾನಕ್ಕೆ ಗುರಿಯಾಬೇಕೆಂಬುದಕ್ಕಾಗಿ ಯೆಹೂದ್ಯರು ಆತನನ್ನು ಶಿಲುಬೆಯ ಮೇಲೆ ತೂಗು ಹಾಕುವದರ ಮೂಲಕ ಸಾಯಿಸಲಿಚ್ಚೆಸಿದರು. ಆದರೆ ರೋಮಾಯರು ಮಾತ್ರವೇ ಅಪರಾಧಿಗಳಿಗೆ ಶಿಲುಬೆಗೇರಿಸಲು ಸಾಧ್ಯವಿತ್ತು ಮತ್ತು ಯೆಹೂದ್ಯರು ಯೇಸುವನ್ನು ಪಿಲಾತನ ಬಳಿಗೆ ಕರೆತಂದದ್ದಕ್ಕೆ ಇದು ಇನ್ನೊಂದು ಕಾರಣವಾಗಿತ್ತು.

ಯೇಸು ಏಕೆ ಶಿಲುಬೆಗೇರಿಸಲ್ಪಡಬೇಕಾಗಿತ್ತೆಂಬದಕ್ಕೆ ಯೋಹಾನನು ಇನ್ನೊಂದು ಕಾರಣ – ದೇವರ ಕಾರಣ – ವನ್ನು ನಮಗೆ ಕೊಡುತ್ತಾನೆ. ಯೇಸು ತಾನು ಯಾವ ರೀತಿಯ ಸಾವನ್ನು ಹೊಂದಲಿದ್ದಾನೆಂಬದರ ವಿಷಯದಲ್ಲಿ ಸ್ವತಃ

ಆತನೇ ತಿಳಿಸಿದ ಪ್ರವಾದನೆಯ ನೆರವೇರಿಕೆಯಿದಾಗಿದೆ (ಮತ್ತಾಯ 20:19, ಯೋಹಾನ 12:32 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಆದುದರಿಂದ ಈ ಸಂದರ್ಭದಲ್ಲಿ ಯೆಹೂದ್ಯರು ತಾವು ಯೇಸುವಿನ ವಿರುದ್ಧ ನೀಡಲು ತಿರ್ಮಾನಿಸಿಕೊಂಡಿದ್ದ "ವಿಶೇಷ ಆರೋಪ"ವನ್ನು ಪಿಲಾತನ ಮುಂದೆ ಹೇಳಿದರು: ಅದ್ಯಾವು ದೆಂದರೆ; ಯೇಸು ತನ್ನನ್ನು ಯೆಹೂದ್ಯರ ಅರಸನನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿದನೆಂಬ ಆರೋಪವು . ಅಂತಹ ಆರೋಪವನ್ನು ಪಿಲಾತನು ಕೂಲಂಕುಶವಾಗಿ ವಿಚಾರಿಸಬೇಕಿತ್ತು, ಯಾಕೆಂದರೆ, ಯಾವದೇ ವ್ಯಕ್ತಿಯು ತನ್ನನ್ನು ಅರಸನನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುವದು ರೋಮಾಯ ಚಕ್ರವರ್ತಿಯ ವಿರುದ್ಧದ ಅಪರಾಧವಾಗಿತ್ತು (ಮಾರ್ಕ 15:1, ಯೋಹಾನ 19:12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ರೋಮಾಯರ ದೃಷ್ಟಿಯಲ್ಲಿ ಒಬ್ಬನೇ ಒಬ್ಬ ಅರಸನಿರಬಹುದಿತ್ತು, ಆತನು ರೋಮಾಯ ಚಕ್ರವರ್ತಿಯೇ. ತನ್ನನ್ನು ಅರಸನನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿದ ಯಾವದೇ ವ್ಯಕ್ತಿಯು ರೋಮಾಯರ ದೃಷ್ಠಿಯಲ್ಲಿ ಒಬ್ಬ ಬಂಡಾಯ ಗಾರನೆಂತಲೂ ಚಕ್ರವರ್ತಿಯ ವೈರಿಯೆಂತಲೂ ಪರಿಗಣಿಸಲ್ಪಡುತ್ತಿದ್ದನು.

33 ಪಿಲಾತನು ಈ ಅರೋಪವನ್ನು ಕೇಳಿದ ಕೂಡಲೆ ಯೇಸುವನ್ನು ಪಕ್ಕಕ್ಕೆ ಕರೆದುಕೊಂಡು ಹೋಗಿ ಆತನನ್ನು "ಈ ಆರೋಪವು ನಿಜವೋ? ನೀನು ಯೆಹೂದ್ಯರ ಅರಸನು ಹೌದೋ?" ಎಂದು ಕೇಳಿದನು (ಮಾರ್ಕ 15:2 ನೋಡಿರಿ). ಯೇಸು ನಿಶ್ಚಯವಾಗಿಯೂ ತನ್ನನ್ನು ಒಬ್ಬ ಅರಸನನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿದ ವ್ಯಕ್ತಿಯಂತೆ ಕಾಣಿಸಲಿಲ್ಲ! ಪಿಲಾತನು ಈ ಆರೋಪವನ್ನು ಅರ್ಥಹೀನವೆಂದು ಯೋಚಿಸಿರಬೇಕು.

34 ಯೇಸು ತಾನು ಅರಸನಾಗಿರುವದರ ಕುರಿತಾದ ಆಲೋಚನೆಯು ಅವನ ಸ್ವಂತದ್ದೋ ಅಥವಾ ಯೆಹೂದ್ಯನಾಯಕರು ಅದನ್ನು ಆತನ ಮನಸ್ಸಿನಲ್ಲಿ ತುಂಬಿದ್ದಾರೋ ಎಂದು ಪಿಲಾತನನ್ನು ಕೇಳಿದನು. ಒಂದು ಆ ವಿಚಾರವು ಪಿಲಾತನದ್ದಾಗಿದ್ದರೆ, ಪಿಲಾತನು ಒಬ್ಬ ರಾಜಕೀಯ ಅರಸನ ಬಗ್ಗೆ ಯೋಚಿಸುತ್ತಿದ್ದಿರಬಹುದು. ಯೇಸು ಆ ವಿಧದ ಅರಸನಾಗಿರಲಿಲ್ಲ. ಒಂದು ವೇಳೆ ಈ ವಿಚಾರವು ಯೆಹೂದ್ಯರಾಗಿದ್ದರೆ ಅವರು ಬಹುಶ : ಒಬ್ಬ ಧಾರ್ಮಿಕ "ಅರಸ", ಮೆಸ್ಸೀಯನ ಬಗ್ಗೆ ಯೋಚಿಸುತ್ತಿರಬಹುದು ಮತ್ತು ಯೇಸು ನಿಜವಾಗಿಯೂ ಮೆಸ್ಸೀಯನೇ ಆಗಿದ್ದನು. ಆದುದರಿಂದ ಯೇಸು ಪಿಲಾತನು ಕೇಳಿದ "ನೀನು ಯೆಹೂದ್ಯ ಅರಸನು ಹೌದೋ?" ಎಂಬ ಪ್ರಶ್ನೆಗೆ "ಹೌದು" ಅಥವಾ "ಇಲ್ಲ" ಎಂಬ ಸರಳವಾದ ಒಂದು ಉತ್ತರವನ್ನು ಕೊಡಲು ಆಗಲಿಲ್ಲ ಯಾಕೆಂದರೆ, ಪಿಲಾತನು ಯಾವ ರೀತಿಯ ಅರಸನ ಬಗ್ಗೆ ಮಾತಾಡುತ್ತಿದ್ದಾನೆಂಬದರ ಮೇಲೆ ಉತ್ತರವು ಆಧಾರವಾಗಿತ್ತು.

35 ಪಿಲಾತನು ಯೇಸುವಿಗೆ ಉತ್ತರಿಸಿ, "ನೀನೇನು ಯೆಹೂದ್ಯನೇ? ನೀನು ಏಕೆ ಈ ರೀತಿಯಾಗಿ ಯೋಚಿಸುತ್ತಿ? ಈ ವಿಚಾರವು ನಿನ್ನ ಸ್ವಂತ ನಾಯಕರುಗಳಿಂದಲೇ ಬಂದದ್ದು" ಎಂದು ಹೇಳಿದನು.

ಯೇಸು ಯೆಹೂದ್ಯ ನಾಯಕರ ಕೋಪಕ್ಕೆ ಗುರಿಯಾಗುವಂತ ಯಾವ ಕಾರ್ಯವನ್ನು ಮಾಡಿರುವನೆಂದು ಪಿಲಾತನಿಗೆ ತಿಳಿಯದಾಗಿತ್ತು. ಯೇಸು ರೋಮಾಯ ನಿಯಮವನ್ನು ಉಲ್ಲಂಘಿಸಿಲ್ಲವೆಂಬದನ್ನು ಪಿಲಾತನು ಖಚಿತ ಪಡಿಸಿಕೊಳ್ಳಬೇಕಾಗಿತ್ತು. ಆತನು ಯೇಸುವನ್ನು "ನೀನು ಏನು ಮಾಡಿದ್ದೀ" ಎಂದು ಕೇಳಿದನು.

36 ಯೇಸು "ನನ್ನ ರಾಜ್ಯವು ಈ ಲೋಕದ್ದಲ್ಲ" ಎಂದು ಹೇಳಿದನು. ಯೇಸು ತಾನು ಒಬ್ಬ ಅರಸನೆಂಬದು ನಿಜವೇ, ಆದರೆ ಪಿಲಾತನು ಯೋಚಿಸುವಂತ ರೀತಿಯ ಅರಸನಲ್ಲ ಎಂಬುದನ್ನು ಒಪ್ಪಿಕೊಂಡನು. ಒಂದು ವೇಳೆ ಅವನು ಈ ಲೋಕದ ಅರಸನಾಗಿದ್ದರೆ ಲೌಕೀಕ ಅರಸರ ರೀತಿಯಲ್ಲಿಯೇ ರೋಮಾಯರ ವಿರುದ್ಧವಾಗಿ ಸೈನ್ಯದ ಮೂಲಕ ಹೋರಾಡಿರುತ್ತಿದ್ದನು. ಆದರೆ ಆತನ ರಾಜ್ಯವು ಒಂದು ಆತ್ಮೀಕ ರಾಜ್ಯವಾಗಿತ್ತೇ ಹೊರತು ಇಹ ಲೋಕದ ರಾಜ್ಯವಾಗಿರಲಿಲ್ಲ. ಅವನು ಲೌಕೀಕ ಆಯುಧಗಳ ಮೂಲಕ ಹೋರಾಡಬೇಕಾದ ಅಗತ್ಯವಿರಲಿಲ್ಲ. ಯೇಸುವಿನ ರಾಜ್ಯವು ದೇವರ ರಾಜ್ಯವಾಗಿದೆ (ಮಾರ್ಕ 1:15 ಮತ್ತು ವ್ಯಾಖ್ಯಾನ ನೋಡಿರಿ).

ಪಿಲಾತನು ಯೇಸುವನ್ನು ಯೆಹೂದ್ಯರ ಲೌಕೀಕ ಅರಸನೆಂದು ಊಹಿಸಿಕೊಂಡಿದ್ದು ಎಷ್ಟು ಕ್ಷುಲ್ಲಕವಾದ ಸಂಗತಿಯಾಗಿದೆ. ಯೆಹೂದ್ಯರು ತಮ್ಮ ಸ್ವಂತ ಅರಸನನ್ನು ಬಂಧಿಸಿ ಕೊಲ್ಲಲು ಪ್ರಯತ್ನಿಸುತ್ತಿದ್ದರೋ? ಖಂಡಿತವಾಗಿಯೂ ಇಲ್ಲ.

37 ಆಗ ಪಿಲಾತನು "ಹಾಗಾದರೆ ನೀನು ಅರಸನು ಹೌದಲ್ಲವೇ [118]!" ಎಂದನು. ಯೇಸು ಅದಕ್ಕೆ "ನಾನು ಅರಸನೆಂದು ನೀನು ಸರಿಯಾಗಿಯೇ ಹೇಳಿದ್ದೀ[119]" ಎಂದು ಉತ್ತರಿಸಿದನು. ಯೇಸು ನಿಜವಾಗಿಯೂ ಅರಸನೇ ಆಗಿದ್ದನು. ರೋಮಾಯ ಸಾಮ್ರಾಜ್ಯಕ್ಕಿಂತಲೂ ಅತ್ಯುನ್ನತವಾದ ಒಂದು ರಾಜ್ಯದ ಅರಸನಾಗಿದ್ದನು!.

ವಾಸ್ತವದಲ್ಲಿ ಈ ರಾಜ್ಯದ ವಿಷಯವಾಗಿ ಸಾಕ್ಷಿಹೇಳುವದಕ್ಕಾಗಿಯೇ ಯೇಸು ಈ ಲೋಕಕ್ಕೆ ದೇವರಿಂದ ಕಳುಹಿಸಲ್ಪಟ್ಟಿದ್ದನು. ದೇವರ ರಾಜ್ಯವೇ ನಿಜವಾದ ರಾಜ್ಯವಾಗಿದೆ. ಸದಾಕಾಲವೂ ಉಳಿಯುವ ರಾಜ್ಯವು ಇದೊಂದೇ ಆಗಿರುತ್ತದೆ. ಈ ಸತ್ಯದ ವಿಷಯವಾಗಿಯೇ ಯೇಸು ಸಾಕ್ಷಿ ನೀಡುವದಕ್ಕೆ ಬಂದನು. ಸತ್ಯಕ್ಕೆ ಸೇರಿದವರು ಅಂದರೆ ಸತ್ಯದ ಪರವಾಗಿರುವವರು – ಯೇಸುವಿನ ಮಾತುಗಳಿಗೆ ಕಿವಿಗೊಟ್ಟು ಆತನನ್ನು ನಂಬುವರು (1 ಯೋಹಾನ 4:6 ನೋಡಿರಿ).

38 "ಸತ್ಯವೆಂದರೇನು? ಒಬ್ಬನು ಸತ್ಯವನ್ನು ಹೇಗೆ ತಿಳಿಯಬಲ್ಲನು?"ಎಂಬದನ್ನು ಪಿಲಾತನು ತಿಳಿಯಲಿಚ್ಚಿಸಿದನು.

ಒಬ್ಬನು ಒಂದು ಸಂಗತಿಯನ್ನು ಹೇಳುತ್ತಾನೆ. ಮತ್ತೊಬ್ಬನು ಇನ್ನೊಂದು ಸಂಗತಿಯನ್ನು ಹೇಳುತ್ತಾನೆ. "ಸತ್ಯ" ಅಂದರೇನೆಂಬದನ್ನು ಯಾರು ಹೇಳಬಲ್ಲರು.

ಸತ್ಯಎಂದರೇನೆಂಬದನ್ನು ಯೇಸು ಹೇಳಬಲ್ಲವನಾಗಿದ್ದನು! ಸ್ವತಃ ಯೇಸುವೇ ಸತ್ಯವು (ಯೋಹಾನ 14:6). ಅವನು ಕೃಪೆಯಿಂದಲೂ, ಸತ್ಯದಿಂದಲೂ ತುಂಬಿದವನಾಗಿದ್ದನು (ಯೋಹಾನ 1:14) ಮತ್ತು ಆತನು ಸತ್ಯವಾದ ದೇವರ ವಾಕ್ಯವನ್ನು ಮಾತಾಡಿದನು (ಯೋಹಾನ 17:17). ಅವಿಶ್ವಾಸಿಯು ಹೀಗೆನ್ನುತ್ತಾನೆ :"ನಾನು ದೇವರ ವಾಕ್ಯವನ್ನು ಒಪ್ಪಿಕೊಳ್ಳಲಾಗದು ಯಾಕೆಂದರೆ ನಾನು ಸತ್ಯವನ್ನು ತಿಳಿಯಲು ಸಾಧ್ಯವಿಲ್ಲ". ಯೇಸು ಹೇಳುವದೇನೆಂದರೆ : ನನ್ನನ್ನು ನಂಬಿರಿ ಆಗ ನೀವು ಸತ್ಯವನ್ನು ತಿಳಿಯುವಿರಿ" (ಯೋಹಾನ 8:32).

ಪಿಲಾತನು ತಾನು ಯೇಸುವನ್ನು ವಿಚಾರಿಸುವದರಿಂದ ಸತ್ಯವನ್ನು ತಿಳಿಯಬಲ್ಲನೆಂದು ಅವನಿಗನ್ನಿಸಲಿಲ್ಲ, ಆದ್ದರಿಂದ ಆತನು ವಿಚಾರಣೆಯನ್ನು ಮುಕ್ತಾಯಗೊಳಿಸಿದನು. ಆದರೆ ಯೇಸು ಯಾವ ಅಪರಾಧವನ್ನು ಮಾಡದ ನಿರಪರಾಧಿಯೆಂಬದನ್ನು ಆತನು ತೀರ್ಮಾನಿಸಿಕೊಂಡಿದ್ದನು. "ನನಗೆ ಅವನಲ್ಲಿ ಯಾವ ಅಪರಾಧವೂ ಕಾಣಿಸುವದಿಲ್ಲ" ಎಂದು ಆತನು ತನ್ನ ಅರಮನೆಯ ಹೊರಗಡೆಯಿದ್ದ ಯೆಹೂದ್ಯ ಜನಸಮೂಹಕ್ಕೆ ತಿಳಿಸಿದನು.

**39-40** ಆನಂತರ ಆತನು ಯೇಸುವನ್ನು ಬಿಡುಗಡೆ ಮಾಡುವ ಸಲಹೆಯನ್ನು ಕೊಟ್ಟನು. ಪ್ರತಿ ವರ್ಷ ಪಸ್ಕಹಬ್ಬದಂದು ಯೆಹೂದ್ಯರೆಡೆಗಿನ ಸ್ನೇಹದ ಸಂಕೇತವಾಗಿ ರೋಮಾಯ ದೇಶಾಧಿಪತಿಯು ಯೆಹೂದ್ಯ ಕೈದಿಯೊಬ್ಬನನ್ನು ಬಿಡುಗಡೆಗೊಳಿಸುವ ಪದ್ಧತಿಯಿತ್ತು. ಆದರೆ ಮಹಾಯಾಜಕರ ಪ್ರಭಾವಕ್ಕೊಳಗಾದ ಜನರ ಗುಂಪು (ಮಾರ್ಕ 15:11), ಯೇಸುವಿಗೆ ಬದಲಾಗಿ ಇನ್ನೊಬ್ಬ ಕೈದಿಯಾದ ಬರಬ್ಬನನ್ನು ಬಿಡುಗಡೆಗೊಳಿಸಬೇಕೆಂದು ಕೇಳಿಕೊಂಡರು. ಬರಬ್ಬನು ಒಂದು ದಂಗೆಯಲ್ಲಿ[120] ಪಾಲುಗಾರನಾಗಿದ್ದನು ಎಂದು ಯೋಹಾನನು ನಮಗೆ ತಿಳಿಸುತ್ತಾನೆ. ಬರಬ್ಬನು ರೋಮಾಯರ ವಿರುದ್ಧವಾಗಿ ಒಂದು ಬಂಡಾಯ ಎಬ್ಬಿಸಿದ್ದನು. ಬಹುಶ: ಅವನು ಯೆಹೂದ್ಯರಲ್ಲಿ ಪ್ರಸಿದ್ಧನಾಗಿದ್ದನು. ಬರಬ್ಬನು ಬಿಡುಗಡೆಹೊಂದಲಿ, ಪಿಲಾತನು ಯೇಸುವನ್ನು ಶಿಲುಬೆಗೆ ಹಾಕಲಿ! ಯೆಹೂದ್ಯರು ದೇವಕುಮಾರನಿಗಾಗಿ ಕಾನೂನನ್ನು ಮೀರಿಸಲು ಇಚ್ಚಿಸಿದರು!(ಮಾರ್ಕ 15:6-14 ಮತ್ತು ವ್ಯಾಖ್ಯಾನ ನೋಡಿರಿ).

ಯೆಹೂದ್ಯರು ಎಷ್ಟುಸುಳ್ಳುಗಾರರೂ, ಕಪಟಿಗಳೂ ಆಗಿದ್ದರೆಂದು ಯೋಚಿಸಿರಿ. ಅವರು ಯೇಸುವಿನ ಮೇಲೆ ಹೊರಿಸಿದ ಅಪರಾಧವನ್ನೇ ರೋಮಾಯ ಚಕ್ರವರ್ತಿಯ ವಿರುದ್ಧ ಬಂಡಾಯವೇಳುವ ಅಪರಾಧ – ಮಾಡಿದ್ದ ಒಬ್ಬ ವ್ಯಕ್ತಿಯನ್ನು ಬಿಡುಗಡೆಮಾಡ ಬೇಕೆಂದು ಒತ್ತಾಯಪಡಿಸಿದರು!.

---

# ಅಧ್ಯಾಯ–19

## ಯೇಸುವಿಗೆ ಶಿಲುಬೆಗೇರಿಸಲ್ಪಡುವ ತೀರ್ಪಾದದ್ದು (19:1-16)

**1-3** ಯೇಸುವನ್ನು ಕೊರಡೆಗಳಿಂದ ಹೊಡೆಯುವ ಮತ್ತು ಸಿಪಾಯಿಗಳು ಆತನನ್ನು ಹಾಸ್ಯ ಮಾಡುವ ಘಟನೆಯು ಮಾರ್ಕನ ಸುವಾರ್ತೆಯಲ್ಲಿ ಸವಿಸ್ತಾರವಾಗಿ ವರ್ಣಿಸಲ್ಪಟ್ಟಿದೆ (ಮಾರ್ಕ 15:15-19 ಮತ್ತು ವ್ಯಾಖ್ಯಾನ ನೋಡಿರಿ).

**4-5** ಯೋಹಾನನು ಈ 4-15 ವಚನಗಳಲ್ಲಿ ಪಿಲಾತನು ಯೇಸುವನ್ನು ಬಿಡಿಸಲು ಮಾಡಿದ ಅಂತಿಮ ಪ್ರಯತ್ನವನ್ನು ಕುರಿತು ಬಣ್ಣಿಸುತ್ತಾನೆ. ಇದು ಇತರ ಮೂರು ಮಂದಿ ಸುವಾರ್ತಾ ಬರಹಗಾರರಿಂದ ಪ್ರಸ್ತಾಪಿಸಲ್ಪಟ್ಟಿರುವದಿಲ್ಲ.

ಪಿಲಾತನು ಯೇಸುವನ್ನು ಕೊರಡೆಯಿಂದ ಹೊಡೆಸಿದ ಬಳಿಕ ಜನರ ಮುಂಭಾಗದಲ್ಲಿ ಕರೆತಂದನು. ಸಿಪಾಯಿಗಳು ಆತನನ್ನು ಒಬ್ಬ ಅರಸನಂತೆ ಶೃಂಗಾರ ಮಾಡಿದ್ದರು. ಜನ ಸಮೂಹವು ಈ ಕರುಣಾಜನಕ ವ್ಯಕ್ತಿಯು ಯಾವದೇ ರೀತಿಯ ಅರಸನಾಗಿರಲಾರನೆಂಬದನ್ನು ತಿಳಿದುಕೊಳ್ಳುವರೆಂದು ಪಿಲಾತನು ನಿರೀಕ್ಷಿಸಿದನು.

**6** ಆದರೆ ಪಿಲಾತನ ಯೋಜನೆಯು ವಿಫಲವಾಯಿತು. ಮಹಾಯಾಜಕರೂ ಓಲೇಕಾರರೂ "ಶಿಲುಬೆಗೆ ಹಾಕಿಸು! ಶಿಲುಬೆಗೆ ಹಾಕಿಸು!" ಎಂದು ಕೂಗಿದರು. ಯೆಹೂದ್ಯನಾಯಕರುಗಳೇ ಮುಖ್ಯವಾಗಿ ಯೇಸುವಿನ ಮರಣವನ್ನು ಕೋರಿದರು. ಸಾಮಾನ್ಯ ಯೆಹೂದ್ಯರ ಜನಸಮೂಹವು ಅವರ ನಾಯಕರು ಹೇಳಿದ್ದನ್ನು ಅನುಸರಿಸಿದರು (ಮಾರ್ಕ 15:11).

ಪಿಲಾತನು ಯೆಹೂದ್ಯರ ವಿಷಯದಲ್ಲಿ ಅಸಮಾಧಾನಗೊಂಡನು. ಪಿಲಾತನು ಅವರಿಗೆ "ಬೇಕಾದರೆ ನೀವು ಅವನನ್ನು ತಕೊಂಡು ಹೋಗಿ ಶಿಲುಬೆಗೆ ಹಾಕಿಸಿರಿ" ಎಂದನು. ಯೆಹೂದ್ಯರು ಅಪರಾಧಿಗಳನ್ನು ಶಿಲುಬೆಗೇರಿಸಲು ಸಾಧ್ಯವಿಲ್ಲವೆಂಬದನ್ನು ಪಿಲಾತನು ಬಲ್ಲವನಾಗಿದ್ದನು. ಅವನ ತಾತ್ಪರ್ಯವೇನಾಗಿತ್ತೆಂದರೆ : ನನಗೂ ಈ ಮನುಷ್ಯನಿಗೂ ಯಾವ ಸಂಬಂಧವೂ ಇಲ್ಲ. ಅವನು ಶಿಲುಬೆಗೆ ಹಾಕಲ್ಪಡಬೇಕೆಂದು ನೀವು ಒತ್ತಾಯಿಸುವದಾದರೆ ನೀವೇ ಅದನ್ನು ಮಾಡಬೇಕಾಗುವದು. ಆದರೆ ನೀವು ಹಾಗೆ ಮಾಡುವದಾದರೆ, ರೋಮಾಯ ಕಾನೂನನ್ನು ಉಲ್ಲಂಘಿಸಿದಂತಾಗುತ್ತದಷ್ಟೇ".

**7** ಬಳಿಕ ಯೆಹೂದ್ಯರು ಪಿಲಾತನಿಗೆ, ಯೇಸು ತನ್ನನ್ನು ದೇವಕುಮಾರನೆಂದು ಹೇಳಿಕೊಳ್ಳುತ್ತಾನೆಂಬದಾಗಿ ಹೇಳಿದರು. ಯೆಹೂದ್ಯ ಧರ್ಮ ಶಾಸ್ತ್ರದ ಪ್ರಕಾರವಾಗಿ ತನ್ನನ್ನು ದೇವರೊಂದಿಗೆ ಸಮಾನಮಾಡಿಕೊಂಡ ವ್ಯಕ್ತಿಗೆ ಮರಣದಂಡನೆಯಾಗಬೇಕಿತ್ತು (ಯಾಜಕ ಕಾಂಡ 24:16, ಯೋಹಾನ 5:18 ಮತ್ತು ವ್ಯಾಖ್ಯಾನ ನೋಡಿರಿ).

**8-9** ಪಿಲಾತನು ಮೂಢನಂಬಿಕೆಯುಳ್ಳವನಾಗಿದ್ದನು. ಯೇಸು ತನ್ನನ್ನು ದೇವಕುಮಾರನೆಂದು ಹೇಳಿಕೊಂಡನೆಂಬದನ್ನು ಕೇಳಿದಾಗ ಪಿಲಾತನು ಭಯಗೊಂಡನು. ರೋಮಾಯರಿಗೆ ಅನೇಕ ದೇವರುಗಳಿದ್ದವು , ಮತ್ತು ಆ ದೇವರುಗಳು ಹಲವಾರು

ವೇಳೆ ಪು ರುಷರಂತೆ ಕಾಣಿಸಿಕೊಂಡು ಭೂಮಿಗೆ ಬಂದು ಭೂಲೋಕದ ಸ್ತ್ರೀಯರಿಂದ ಮಕ್ಕಳನ್ನು ಪಡೆಯುತ್ತಿದ್ದರೆಂದು ರೋಮಾಯರು ನಂಬುತ್ತಿದ್ದರು. ಹೀಗಿರುವದರಿಂದ ಪಿಲಾತನು ತಾನು ತಿಳಿಯದೆಯೇ ಯಾವದಾದರೂ ರೋಮಾಯ ದೇವರ "ಮಗ" ನನ್ನು ಮರಣಕ್ಕೆ ಒಪ್ಪಿಸುವೆನೇನೋ, ಆಗ ದೇವರು ನಿಶ್ಚಯವಾಗಿಯೂ ಆತನ ಮೇಲೆ ಸೇಡು ತೀರಿಸಿಕೊಳ್ಳುವದೆಂದು ಭಯಪಟ್ಟನು. ಅಲ್ಲದೆ ಪಿಲಾತನ ಹೆಂಡತಿಯು ಸಹ ಯೇಸುವಿನ ಕನಸ್ಸನ್ನು ಕಂಡಿದ್ದಳು ಮತ್ತು ಆ ಮನುಷ್ಯನ ಗೊಡವೆಗೆ ಹೋಗಬೇಡವೆಂದು ಆಕೆಯು ತನ್ನ ಗಂಡನನ್ನು ಎಚ್ಚರಿಸಿದ್ದಳು (ಮತ್ತಾಯ 27:19).

ಆದುದರಿಂದ, ಪಿಲಾತನು ತಿರಿಗಿ ಯೇಸುವನ್ನು ಒಳಗೆ ಕರೆಕೊಂಡು ಹೋಗಿ" ನೀನು ಎಲ್ಲಿಂದ ಬಂದವನು" ನೀನು ಭೂಲೋಕದಿಂದ ಬಂದಿರುವಿಯೋ ಅಥವಾ ಪರಲೋಕದಿಂದ ಬಂದಿರುವೆಯೋ? ಎಂದು ಕೇಳಿದನು. ಆದರೆ ಯೇಸು ಉತ್ತರಿಸಲಿಲ್ಲ. ಈ ಅಂಶದಲ್ಲಿ ಯೇಸು ಯಾಕೆ ಮೌನವಾಗಿ ಉಳಿದನೆಂಬುದು ತಿಳಿದು ಬಂದಿರುವದಿಲ್ಲ. ಪಿಲಾತನು ಇದಕ್ಕೆ ಮುಂಚೆ ಕೇಳಿದ ಕೆಲವು ಪ್ರಶ್ನೆಗಳಿಗೆ ಆತನು ಉತ್ತರಿಸಲು ನಿರಾಕರಿಸಿದ್ದನು (ಮಾರ್ಕ 15:3-5 ನೋಡಿರಿ). ಬಹುಶಃ ಪಿಲಾತನು ತನ್ನ ಉತ್ತರವನ್ನು ನಂಬುವದಿಲ್ಲ ಎಂಬದು ಯೇಸುವಿಗೆ ಗೊತ್ತಿತ್ತು. ಅಲ್ಲದೆ ಆ ಪ್ರಶ್ನೆಗೆ ಯೇಸು ಈಗಾಗಲೇ ಉತ್ತರಿಸಿದ್ದನು (ಯೋಹಾನ 18:36-37) ಅದಕ್ಕೆ ಪು ನಃ ಉತ್ತರಿಸುವದರಲ್ಲಿ ಯಾವ ಪ್ರಯೋಜನವೂ ಇರಲಿಲ್ಲ.

**10** ಪಿಲಾತನು ಕೋಪಗೊಂಡನು. ಆತನು ಇಡೀ ಪ್ರಾಂತ್ಯಕ್ಕೆ ಮುಖ್ಯ ಅಧಿಕಾರಿಯಾಗಿದ್ದನು. ಅವನು ಪ್ರಶ್ನೆಕೇಳುವದಾದರೆ ಉತ್ತರವೊಂದನ್ನು ನಿರೀಕ್ಷಿಸುತ್ತಿದ್ದನು. ಅವನು ಜನರಿಂದ ಮಾನವನ್ನು ಅಪೇಕ್ಷಿಸಿದನು. ಖಂಡಿತವಾಗಿಯೂ ಆತನು ಯೇಸುವಿನಿಂದ ಮಾನವನ್ನು ನಿರೀಕ್ಷಿಸಿದ್ದನು. "ನಿನ್ನನ್ನು ಬಿಡಿಸುವ ಅಧಿಕಾರವೂ ನಿನ್ನನ್ನು ಶಿಲುಬೆಗೆ ಹಾಕಿಸುವ ಅಧಿಕಾರವೂ ನನಗೆ ಉಂಟೆಂಬದು ನಿನಗೆ ಗೊತ್ತಿಲ್ಲವೋ?" ಎಂದು ಪಿಲಾತನು ಕೇಳಿದನು.

**11** ಯೇಸು ಪಿಲಾತನಿಗೆ ಆತನು ಹೊಂದಿದ್ದ ಯಾವದೇ ಅಧಿಕಾರವಾಗಲಿ, ಅದು ಮೇಲಿಣಿಂದ ಅಂದರೆ ದೇವರಿಂದ ಕೊಡಲ್ಪಟ್ಟದ್ದಾಗಿದೆಯೆಂದು ಹೇಳಿದನು. ಸಮಸ್ತ ಅಧಿಕಾರವು ದೇವರಿಗೆ ಸೇರಿದ್ದಾಗಿದೆ (ರೋಮಾ 13:1). ಇದರಿಂದ ಆದರಣೆಯನ್ನು ಹೊಂದಿಕೊಳ್ಳಬಹುದು. ನಾವು ಹಿಂಸೆಗೆ ಒಳಗಾಗುವಾಗ ನಮ್ಮನ್ನು ಹಿಂಸಿಸುವವರು ನಮಗೆ ದೇವರು ಅನುಮತಿಸುವದಕ್ಕಿಂತಲೂ ಹೆಚ್ಚಾಗಿ ಏನನ್ನೂ ಮಾಡಲಾರರು.

ಅಷ್ಟು ಮಾತ್ರವಲ್ಲದೆ, ಈ ವಿಷಯದಲ್ಲಿ ಪಿಲಾತನು ಮಾತ್ರವೇ ಜವಾಬ್ದಾರನಾಗಿರಲಿಲ್ಲ. ಒಂದು ವೇಳೆ ಅವನು ಯೇಸುವನ್ನು ಶಿಲುಬೆಗೇರಿಸಿದರೆ, ಆ ಅಪರಾಧವೆಲ್ಲವೂ ಪೂರ್ಣವಾಗಿ ಪಿಲಾತನ ಮೇಲೆ ಬರುವದಿಲ್ಲ. ವಾಸ್ತವದಲ್ಲಿ, ಯೇಸುವನ್ನು ಪಿಲಾತನಿಗೆ ಒಪ್ಪಿಸಿಕೊಟ್ಟ ಮಹಾಯಾಜಕನಾದ ಕಾಯಫನ ಮೇಲೆಯೇ ಅತಿ ಹೆಚ್ಚು ಅಪರಾಧದ ಹೊಣೆಯು ಬರಲಿತ್ತು (ಯೋಹಾನ 18:28).

**12** ಪಿಲಾತನು ಪು ನಃ ಯೇಸು ಬಿಡುಗಡೆ ಮಾಡಲ್ಪಡಬೇಕೆಂದು ಯೆಹೂದ್ಯರ ಮನವೊಲಿಸಲು ಪ್ರಯತ್ನಿಸಿದನು. ಯೇಸುವನ್ನು ಬಿಡಿಸುವ ಅಧಿಕಾರವು ಪಿಲಾತನಿಗಿತ್ತು ಆದರೆ ಆತನು ಯೆಹೂದ್ಯ ನಾಯಕರ ಇಚ್ಛೆಗಳನ್ನು ವಿರೋಧಿಸಲು ಬಯಸಲಿಲ್ಲ. ಅವನು ತನ್ನ ಯೂದಾಯ ಪ್ರಾಂತ್ಯದಲ್ಲಿ ಶಾಂತಿ ಇರಬೇಕೆಂದು ಇಚ್ಛಿಸಿದನು. ಅವನು ಯೆಹೂದ್ಯ ನಾಯಕರನ್ನು ಸಂತೋಷಗೊಳಿಸಲು ಬಯಸಿದನು.

ಆದರೆ ಯೆಹೂದ್ಯರು ಪಿಲಾತನ ಮಾತನ್ನು ಕೇಳದವರಾಗಿದ್ದರು. ಯೇಸು ತನ್ನನ್ನು ಅರಸನಾಗಿ ಮಾಡಿಕೊಳ್ಳಲು ಪ್ರಯತ್ನಿಸಿದನೆಂಬ ತಮ್ಮ ಆರೋಪವನ್ನು : ಅವರು ಪು ನಃ ಕೂಗಿ ಹೇಳಿದರು. ರೋಮಾಯ ಸಾಮ್ರಾಜ್ಯದಲ್ಲಿ ಒಬ್ಬನೇ ನಿಜ ಅರಸನಿದ್ದನು, ಆತನು ರೋಮಾಯ ಚಕ್ರವರ್ತಿಯಾದ ಕೈಸರನೆಂದು೧೨೧ ಅವರು ಹೇಳಿದರು. ಆದುದರಿಂದ, ಯೇಸು ಕೈಸರನ[121] ವಿರೋಧಿಯಾಗಿದ್ದನು.

ಆಗ ಯೆಹೂದ್ಯರು ಪಿಲಾತನಿಗೆ "ನೀನು ಈ ಯೇಸುವನ್ನು ಶಿಲುಬೆಗೇರಿಸದಿದ್ದರೆ, ನೀನು ಕೈಸರಿನಿಗೆ ಮಿತ್ರನಲ್ಲ. ಅವನನ್ನು ಬಿಡಿಸಿದರೆ ನೀನು ಕೈಸರನನ್ನು ವಿರೋಧಿಸುವವನಾಗುತ್ತೀ" ಎಂದು ಹೇಳಿದರು.

**13** ಪಿಲಾತನಿಗೆ ಮತ್ತಷ್ಟು ಹೆದರಿಕೆಯುಂಟಾಯಿತು. ಯೆಹೂದ್ಯರು ತನ್ನ ಕುರಿತಾಗಿ ಚಕ್ರವರ್ತಿಗೆ ಕೆಟ್ಟದ್ದಾದ ವರದಿಯನ್ನು ಕಳುಹಿಸ ಬಹುದೆಂದು ಪಿಲಾತನಿಗೆ ಗೊತ್ತಿತ್ತು. ಪಿಲಾತನು ಒಬ್ಬ ಬಂಡಾಯಗಾರನನ್ನೂ, ರಾಜದ್ರೋಹಿಯನ್ನೂ ಕಾಪಾಡಿದ್ದಾನೆಂಬುದು ಚಕ್ರವರ್ತಿಗೆ ತಿಳಿದು ಬರುವದಾದರೆ ಆತನನ್ನು ಖಂಡಿತವಾಗಿಯಾ, ಶಿಕ್ಷಿಸುವನು. ಆದುದರಿಂದ, ತನ್ನ ಸುರಕ್ಷತೆಗೋಸ್ಕರವಾಗಿ ಪಿಲಾತನು ಯೇಸುವನ್ನು ಶಿಲುಬೆಗೇರಿಸಲು ತಿರ್ಮಾನಿಸಿದನು.

**14** ಅದು ಪಸ್ಕಹಬ್ಬದ ಸೌರಣೆಯ ದಿವಸವಾಗಿತ್ತು. ಇದರರ್ಥವೇನೆಂದರೆ ಪಸ್ಕವಾರದ ಸಬ್ಬತ್ತದಿನಕ್ಕಾಗಿ (ಶನಿವಾರ) ಸಿದ್ದತೆಮಾಡಿಕೊಳ್ಳುವ ದಿನವಾಗಿತ್ತು. ಅಂದರೆ ಅದು ಶುಕ್ರವಾರವಾಗಿತ್ತು (ಮಾರ್ಕ 14:21 ಮತ್ತು ವ್ಯಾಖ್ಯಾನ ನೋಡಿರಿ).

ಯೋಹಾನನು ಆಗ ಬೆಳಗ್ಗೆ ಆರು ಘಂಟೆಯಾಗಿತ್ತೆಂದು ಹೇಳುತ್ತಾನೆ. ಯೆಹೂದ್ಯರು ಅದನ್ನು ಮದ್ಯಾಹ್ನದ ಹನ್ನೆರಡು ಘಂಟೆ ಎಂದು ಗುರುತಿಸುತ್ತಿದ್ದರು. ಹೇಗಿದ್ದರೂ, ಯೇಸು ಬೆಳಗ್ಗೆ ಒಂಭತ್ತು ಘಂಟೆಗೆ ಶಿಲುಬೆಗೇರಿಸಲ್ಪಟ್ಟನೆಂದು ಮಾರ್ಕನು ಬರೆಯುತ್ತಾನೆ. ಅನೇಕ ಬೈಬಲ್ ಪಂಡಿತರು ನಂಬುವದೇನೆಂದರೆ, ಯೋಹಾನನು ಇಲ್ಲಿ ರೋಮಾಯ ಪದ್ಧತಿಯಿಂದ ಸಮಯವನ್ನು ಗುರುತಿಸುತ್ತಾನೆ, ಅದರ ಪ್ರಕಾರವಾಗಿ "ಆರು ಘಂಟೆ"ಯು ಬೆಳಿಗ್ಗೆ 6 ಘಂಟೆಯಿಂದಾಗುತ್ತದೆ (ಮಾರ್ಕ 15:25 ಮ್ಮತು ವ್ಯಾಖ್ಯಾನ ನೋಡಿರಿ).

**15-16** ಪಿಲಾತನು ಯೇಸುವನ್ನು ಶಿಲುಬೆಗೇರಿಸ ಬೇಕೆಂದು ತೀರ್ಪು ನೀಡಿದ ಬಳಿಕ, ಆತನು ಯೆಹೂದ್ಯರಿಗೆ "ನಿಮ್ಮ ಅರಸನನ್ನು ಶಿಲುಬೆಗೆ ಹಾಕಿಸಲೋ? ಎಂದು ಕೇಳಿದನು. ಅವನು ಅವರಿಗೆ ಹಾಸ್ಯಮಾಡುತ್ತಿದ್ದಾನೆ.

ಆಗ ಮಹಾಯಾಜಕರು –" ಕೈಸರನೇ ಹೊರತು ನಮಗೆ ಬೇರೆ ಅರಸನಿಲ್ಲ. "ಎಂದರು. ಅವರು ಸಂಪೂರ್ಣವಾಗಿ ಕಪಟಿಗಳೇ ಆಗಿದ್ದರು. ಅವರು ಕೈಸರನನ್ನು ಹಗೆ ಮಾಡುತ್ತಿದ್ದರು. ಅವರು ಪಿಲಾತನನ್ನು ಮೆಚ್ಚಿಸಬೇಕೆಂದು ಮಾತ್ರವೇ ಇದನ್ನು ಹೇಳಿದರು. ಆದರೆ ಹೀಗೆ ಹೇಳುವದರ ಮೂಲಕ ಅವರು ದೇವರಿಗೆ ದ್ರೋಹಮಾಡಿದರು, ಯಾಕೆಂದರೆ ಹಳೆ ಒಡಂಬಡಿಕೆಯ ಪ್ರಕಾರವಾಗಿ ಸ್ವತಃ ದೇವರು ಮಾತ್ರವೇ ಅವರ ಏಕೈಕ ಅರಸನಾಗಿದ್ದನು (ನ್ಯಾಯ ಸ್ಥಾಪಕರು 8:23, ಸಮುವೇಲ 8:7).

ಹೀಗೆ, ಕೊನೆಗೂ ಯೆಹೂದಿ ನಾಯಕರು ತಾವು ಇಚ್ಚಿಸಿದ್ದನ್ನು ಸಾಧಿಸಿದರು. ಪಿಲಾತನು ಯೇಸುವನ್ನು ಶಿಲುಬೆಗೆ ಹಾಕಲು ಅವರ ವಶಕ್ಕೆ – ಅಂದರೆ ರೋಮಾಯ ಸಿಪಾಯಿಗಳ ವಶಕ್ಕೆ – ಕೊಟ್ಟನು.

## ಶಿಲುಬೆಗೇರಿಸುವಿಕೆ (19:17-27)

(ಮತ್ತಾಯ 27:32-44, ಮಾರ್ಕ 15:21-32, ಲೂಕ 23:26-43)

**17-24** ಮಾರ್ಕ 15:21-32 ಮತ್ತು ವ್ಯಾಖ್ಯಾನ ನೋಡಿರಿ.

**25** ಯೇಸು ಶಿಲುಬೆಗೆ ಹಾಕಲ್ಪಡುವ ವೇಳೆಯಲ್ಲಿ ನಾಲ್ವರು ಸ್ತ್ರೀಯರು ನೋಡುತ್ತಾ ನಿಂತಿದ್ದರು. ಅವರಲ್ಲಿ ಯೇಸುವಿನ ತಾಯಿಯಾದ ಮರಿಯಳು ಒಬ್ಬಳಾಗಿದ್ದಳು. ತನ್ನ ಮಗನು ಶಿಲುಬೆಯ ಮೇಲೆ ಸಾಯುವದನ್ನು ನೋಡಲು ಮರಿಯಳು ಪಟ್ಟಿರಬಹುದಾದ ವೇದನೆಯನ್ನು ಕುರಿತು ಯೋಚಿಸಿರಿ. ಸಿಮೆಯೋನನ ಪ್ರವಾದನೆಯು ನಿಜವಾಗಿಯೂ ನೆರವೇರಿತ್ತು: ಇದಲ್ಲದೆ ನಿನ್ನ ಪ್ರಾಣಕ್ಕಂತೂ ಅಲಗು ನಾಟಿದಂತಾಗುವದು (ಲೂಕ 2:35).

ಶಿಲುಬೆಯ ಬಳಿಯಲ್ಲಿದ್ದ ಎರಡನೆಯ ಸ್ತ್ರೀಯು ಯೇಸುವಿನ ತಾಯಿಯ ಸಹೋದರಿಯಾಗಿದ್ದಳು. ಈ ಸಹೋದರಿಯು ಸಲೋಮಿ ಎಂಬದಾಗಿ ಕೆಲವು ಬೈಬಲ್ ಪಂಡಿತರು ನಂಬುತ್ತಾರೆ (ಮಾರ್ಕ 15:40). ಅವಳು ಜೆಬದಾಯನ ಮಕ್ಕಳಾದ ಯಾಕೋಬ ಮತ್ತು ಯೋಹಾನರ [122] ತಾಯಿಯಾಗಿದ್ದಳು (ಮತ್ತಾಯ 27:56). ಒಂದು ವೇಳೆ ಇದು ನಿಜವಾದರೆ ಯೋಹಾನನು ಯೇಸುವಿನ ಸಂಬಂಧಿಯಾಗುತ್ತಾನೆ. ಶಿಲುಬೆಯ ಬಳಿಯಲ್ಲಿದ್ದ ಮೂರನೆಯ ಕ್ಲೋಪನ ಹೆಂಡತಿಯಾದ ಮರಿಯಳು. ಈ ಕ್ಲೋಪನು ಮತ್ತು ಲೂಕ 24:18ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಕ್ಲೆಯೊಪನು ಇಬ್ಬರೂ ಒಂದೆಯಾಗಿದ್ದಾರೆಂದು ಕೆಲವರು ಅಭಿಪ್ರಾಯ ಪಡುತ್ತಾರೆ.

ಅಲ್ಲಿದ್ದ ನಾಲ್ಕನೆಯ ಸ್ತ್ರೀಯು ಮಗ್ದಲದ ಮರಿಯಳು (ಮಾರ್ಕ 15:46,47, ಲೂಕ 8:2, ಯೋಹಾನ 20:1, 11 ನೋಡಿರಿ).

**26** ಯೇಸು ತಾನು ಸಾಯುತ್ತಿರುವಾಗಲೂ ತನ್ನ ತಾಯಿಯ ಬಗ್ಗೆ ಯೋಚಿಸಿದನು. ಅವಳು ಅಲ್ಲಿ ಆತನ ಪ್ರೀತಿಯ ಶಿಷ್ಯ, ಅಂದರೆ ಈ ಸುವಾರ್ತೆಯನ್ನು ಬರೆದ ಯೋಹಾನನ – ಬಳಿಯಲ್ಲಿ ನಿಂತಿದ್ದಳು. ಆದ್ದರಿಂದ, ಆತನು ತನ್ನ ತಾಯಿಗೆ, "ಸ್ತ್ರೀಯೇ, ಇಗೋ ನಿನ್ನ ಮಗನು, ಅಂದರೆ ಇಂದಿನಿಂದ ಯೋಹಾನನು ನಿನ್ನ ಸ್ವಂತ ಮಗನಾಗಿದ್ದು ನಿನ್ನನ್ನು ಪರಾಂಭರಿಸುವನು" ಎಂದನು. ಇದರ ಮೂಲಕ ಯೇಸುವಿನ ತಂದೆ ಯೋಸೇಫನು ಕೆಲ ಕಾಲಕ್ಕೆ ಮುಂಚೆ ಸತ್ತಿದ್ದನು, ಇಲ್ಲವಾದರೆ, ಯೇಸುವಿನ ತಾಯಿಯನ್ನು ನೋಡಿಕೊಳ್ಳುವದಕ್ಕೆ ಆತನೇ ಜವಾಬ್ದಾರನಾಗಿರುತ್ತಿದ್ದನೆಂದು ನಾವು ತಿಳಿಯಬಹುದು. ಯೇಸು ತನ್ನ ತಾಯಿಯನ್ನು ಆರೈಕೆ ಮಾಡಲು ಸ್ವಂತ ಸಹೋದರರ (ಮರಿಯಳ ಇತರ ಮಕ್ಕಳ) ವಶಕ್ಕೆ ಒಪ್ಪಿಸಲಿಲ್ಲ, ಯಾಕೆಂದರೆ ಅವರು ಇನ್ನೂ ವಿಶ್ವಾಸಿಗಳಾಗಿರಲಿಲ್ಲ (ಯೋಹಾನ 7:5). ಯೇಸು ಪು ನರುತ್ಥಾನಗೊಂಡು ಪರಲೋಕಕ್ಕೆ ಏರಿ ಹೋದ ಮೇಲೆಯಷ್ಟೇ ಆತನ ಸಹೋದರರು ಆತನಲ್ಲಿ ನಂಬಿಕೆಯಿಟ್ಟರು (ಅ.ಕೃತ್ಯ 1:14).

**27** ನಂತರ ಯೇಸು ಯೋಹಾನನಿಗೆ, "ಇಗೋ, ನಿನ್ನ ತಾಯಿ" ಎಂದು ಹೇಳಿದನು. ಈ ರೀತಿಯಾಗಿ ಯೇಸು ತನ್ನ ತಾಯಿಯನ್ನು ಯೋಹಾನನ ವಶಕ್ಕೆ ಕೊಟ್ಟನು, ಮತ್ತು ಅಂದಿನಿಂದ ಯೋಹಾನನು ಆಕೆಯ ಸ್ವಂತ ಮಗನೋ ಎಂಬಂತೆ ಆಕೆಯನ್ನು ನೋಡಿಕೊಂಡನು.

## ಯೇಸುವಿನ ಮರಣ (19:28-37)

**28-30** ಮಾರ್ಕ 15:36-37 ಮತ್ತು ವ್ಯಾಖ್ಯಾನ ನೋಡಿರಿ.

**31** ಯೇಸು ಸೌರಣೆಯ ದಿವಸದಲ್ಲಿ ಅಂದರೆ ಶುಕ್ರವಾರ ದಿನದಂದು ಸತ್ತನು (ವಚನ 14 ನೋಡಿರಿ). ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರ ಮರಣದಂಡನೆ ಹೊಂದಿದ ಅಪರಾಧಿಯ ದೇಹವು ರಾತ್ರಿಯೆಲ್ಲಾ ಮರ ಅಥವಾ ಶಿಲುಬೆಯೊಂದರ ಮೇಲೆ ಇರಬಾರದಾಗಿತ್ತು. ಹಾಗೆ ಮಾಡುವದು ದೇಶವನ್ನು "ಅಶುಧ್ಧ" ಗೊಳಿಸಿದಂತಾಗುತ್ತಿತ್ತು (ಧರ್ಮೋಪದೇಶಕಾಂಡ 21:22-23). ಯೇಸುವಿನ ವಿಷಯದಲ್ಲಿ ಈ ನಿಯಮವನ್ನು ಪಾಲಿಸುವದು ಇನ್ನೂ ವಿಶೇಷವಾಗಿ ಪ್ರಾಮುಖ್ಯವಾಗಿತ್ತು, ಯಾಕೆಂದರೆ ಮರುದಿನ ಪಸ್ಕಹಬ್ಬದ ಸಬ್ಬತ್ ದಿನವಾಗಿತ್ತು. ಆದಕಾರಣ, ಯೆಹೂದ್ಯರು ಯೇಸುವಿನ ಹಾಗು ಆತನೊಂದಿಗೆ

ಶಿಲುಬೆಗೆ ಹಾಕಲ್ಪಟ್ಟ ಇಬ್ಬರು ಕಳ್ಳರ ಕಾಲುಗಳು ಮುರಿಯಲ್ಪಡಬೇಕೆಂದು ಅನುಮತಿ [123]ಕೇಳಿದರು, ಹೀಗೆ ಮಾಡುವದಾದರೆ ಅವರೆಲ್ಲರೂ ಅದೇ ದೀನ ಶೀಘ್ರವಾಗಿ ಸಾಯುವರು ಮತ್ತು ಸೂರ್ಯಾಸ್ತಮಾನದೊಳಗೆ [124]ದೇಹಗಳನ್ನು ಹೂಣಿಡಲು ಸಾಧ್ಯವಾಗುತ್ತಿತ್ತು.

**32-33** ಹೇಗಿದ್ದರೂ, ಯೇಸು ಈಗಾಗಲೇ ಸತ್ತಿರುವನೆಂಬದನ್ನು ಸಿಪಾಯಿಗಳು ತಿಳಿದುಕೊಂಡಿದ್ದರಿಂದ ಆತನ ಕಾಲುಗಳನ್ನುಮುರಿಯುವದು ಅವಶ್ಯಕವಾಗಿರಲಿಲ್ಲ.

**34** ಸಿಪಾಯಿಗಳಲ್ಲೊಬ್ಬನು ಈಟಿಯಿಂದ ಯೇಸುವಿನ ಪಕ್ಕೆಯನ್ನು ತಿವಿದನು. ಬಹುಶ: ಯೇಸು ಸತ್ತಿದ್ದಾನೆಂಬದನ್ನು ಆತನು ಖಚಿತ ಪಡಿಸಿಕೊಳ್ಳಲಿಚ್ಚಿಸಿದನು. ತಿವಿದ ಕೊಡಲೇ ರಕ್ತವೂ ನೀರೂ ಹೊರಟಿತು. ಸಿಪಾಯಿಯು ಯೇಸುವಿನ ಹೊಟ್ಟೆಗೆ ತಿವಿದಿರುವ ಸಾದ್ಯತೆಯಿದೆ, ಏಕೆ ರಕ್ತ ಮತ್ತು ನೀರು ಒಟ್ಟಿಗೆ ಬಂದವೆಂಬದನ್ನು ಇದರಿಂದ ತಿಳಿಯಬಹುದು.

**35** ಅದನ್ನು ಕಂಡವನು ಈ ಸುವಾರ್ತೆಯನ್ನು ಬರೆದ ಅಪೊಸ್ತಲನಾದ ಯೋಹಾನನು. ಯೇಸು ನಿಜವಾದ ಮಾನವ ದೇಹವನ್ನು ಹೊಂದಿದ್ದನು ಮತ್ತು ನಿಜವಾಗಿಯೂ ಸತ್ತನೆಂಬದನ್ನು ತೋರಿಸುವದಕ್ಕಾಗಿ ಆತನು ಇದನ್ನು ತಿಳಿಸುತ್ತಾನೆ. ಅಲ್ಲದೆ ಆತನು ನೀವು ಸಹ ನಂಬಬೇಕೆಂದು ಈ ಸಂಗತಿಗಳ ಬಗ್ಗೆ ಸಾಕ್ಷಿ ನೀಡುತ್ತಾನೆ (ಯೋಹಾನ 20:31 ನೋಡಿರಿ) ಮತ್ತು ಅವನ ಸಾಕ್ಷಿ ಸತ್ಯವೇ (ಯೋಹಾನ 21:24 ನೋಡಿರಿ).

**36** ಯೇಸುವಿನ ಎಲುಬಗಳಲ್ಲಿ ಒಂದಾದರೂ ಮುರಿಯಲ್ಪಡದಿರುವ ಸತ್ಯಾಂಶವು ಹಳೆ ಒಡಂಬಡಿಕೆಯ ಪ್ರವಾದನೆಯೊಂದರ ನೆರವೇರುವಿಕೆಯಾಗಿದೆ. ವಿಮೋಚನಕಾಂಡ 12:46 ಮತ್ತು ಅರಣ್ಯಕಾಂಡ 9:12 ರ ಪ್ರಕಾರವಾಗಿ ಪಸ್ಕಹಬ್ಬದಂದು ಯಜ್ಞವರ್ಪಿಸುವ ಪ್ರಾಣಿಯ ಒಂದು ಎಲುಬನ್ನಾದರೂ ಮುರಿಯ ಬಾರದಾಗಿತ್ತು. ಯೋಹಾನನು ಯೇಸುವನ್ನೇ ಪಸ್ಕಹಬ್ಬದ ನಿಜವಾದ ಯಜ್ಞ ಎಂದು ಪರಿಗಣಿಸಿದ್ದನು (ಯೋಹಾನ 1:29, 1 ಕೊರಿಂಥ 5:7 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆದುದರಿಂದ, ಆತನ ಎಲುಬುಗಳನ್ನು ಒಂದಾದರೂ ಮುರಿಯಲ್ಪಡದಿರುವದು ಯೋಗ್ಯವೇ ಆಗಿತ್ತು. ಹೀಗೆ ಸಿಪಾಯಿಗಳು ಯೇಸುವಿನ ಒಂದು ಎಲುಬನ್ನಾದರೂ ಮುರಿಯುವದರ ಮೂಲಕ ಕೀರ್ತನೆಗಳು 34:20 ರಲ್ಲಿನ ಪ್ರವಾದನೆಯನ್ನು ನೆರವೇರಿಸಿದ್ದರು, ಅದೇನೆಂದರೆ...ಆತನು ಅವನ ಎಲುಬುಗಳನ್ನೆಲ್ಲಾ ಕಾಪಾಡುತ್ತಾನೆ, ಅವು ಗಳಲ್ಲಿ ಒಂದಾದರೂ ಮುರಿದು ಹೋಗುವದಿಲ್ಲ.

**37** ಯೇಸುವಿನ ಪಕ್ಕೆಯನ್ನು ತಿವಿಯುವದು ಸಹ ಜೆಕರ್ಯನ ಪ್ರವಾದನೆಯನ್ನು ನೆರವೇರಿಸಿತು: ತಾವು ಇರಿದವನನ್ನು ದಿಟ್ಟಿಸಿನೊಡುವರು (ಜೆಕರ್ಯ 12:10).

## ಯೇಸುವಿನ ಹೂಣಲ್ಪಡುವಿಕೆ (19:38-42)

(ಮತ್ತಾಯ 27:57-61, ಮಾರ್ಕ 15:42-47, ಲೂಕ 23:50-56)

**38-40** ಮಾರ್ಕ 15 :42-47 ಮತ್ತು ವ್ಯಾಖ್ಯಾನ ನೋಡಿರಿ.

---

# ಅಧ್ಯಾಯ - 20

## ಬರಿದಾದ ಸಮಾಧಿ (20:1-16)

**1** ವಾರದ ಮೊದಲನೆಯ ದಿನದಲ್ಲಿ ಅಂದರೆ ಭಾನುವಾರದಂದು ಮಗ್ದಲದ ಮರಿಯಳು ಮುಂಜಾನೆ ಇನ್ನು ಕತ್ತಲೆ ಇರುವಾಗಲೇ ತನ್ನ ಸ್ಥಳದಿಂದ ಹೊರಟಳು ಮಾರ್ಕ 16:2 ರ ಪ್ರಕಾರವಾಗಿ ಅವಳೊಂದಿಗೆ ಇನ್ನು ಇಬ್ಬರು ಸ್ತ್ರೀಯರು ಸೂರ್ಯೋದಯಕ್ಕೆ ಸ್ವಲ್ಪ ಮುಂಚೆ ಸಮಾಧಿಯನ್ನು ತಲುಪಿದರು. ಸಮಾಧಿಗೆ ಮುಚ್ಚಿದ್ದ ಬಂಡೆಯು ಉರುಳಿಸಲ್ಪಟ್ಟಿರುವದನ್ನು ಅವರು ಕಂಡರು (ಮಾರ್ಕ 16:1-8 ಮತ್ತು ವ್ಯಾಖ್ಯಾನ ನೋಡಿರಿ).

**2** ಮಾರ್ಕ 16:1-8 ರಲ್ಲಿ ಬಣ್ಣಿಸಲ್ಪಟ್ಟಿರುವ ಘಟನೆಗಳೆಲ್ಲವೂ ಜರುಗಿದ ಬಳಿಕ ಮಗ್ದಲದ ಮರಿಯಳು ಪೇತ್ರನ ಬಳಿಗೂ ಯೇಸುವಿಗೆ ಪ್ರಿಯನಾಗಿದ್ದ ಆ ಮತ್ತೊಬ್ಬ ಶಿಷ್ಯನ ಬಳಿಗೂ – ಅಂದರೆ ಯೋಹಾನನ ಬಳಿಗೆ – ಓಡಿ ಹೋಗಿ ಯೇಸುವಿನ ದೇಹವು ಕಾಣಿಸುತ್ತಿಲ್ಲವೆಂದು ಅವರಿಗೆ ಹೇಳಿದಳು. ಯೇಸು ಸತ್ತವರೊಳಗಿಂದ ಎದ್ದಿದ್ದಾನೆಂಬ ವಿಚಾರವು ಅವಳ ಮನಸ್ಸಿನಲ್ಲಿ ಹೊಳೆಯಲಿಲ್ಲ (ಲೂಕ 24:9-11 ನೋಡಿರಿ).

**3-7** ಪೇತ್ರ ಮತ್ತು ಯೋಹಾನರು ಮರಿಯಳ ವರದಿಯನ್ನು ಕೇಳಿದ ಕೂಡಲೇ ಸಮಾಧಿಗೆ ಓಡಿ ಹೋದರು. ಯೋಹಾನನು ಇಲ್ಲಿ ನೆನಪಿಸಿಕೊಳ್ಳುವ ಚಿಕ್ಕ ವಿವರಗಳನ್ನು ಗಮನಿಸಿರಿ. ಖಂಡಿತವಾಗಿಯೂ, ಇದು ಆತನ ಜೀವಿತದಲ್ಲಿ ಅತ್ಯಂತ ಪ್ರಾಮುಖ್ಯವಾಗಿತ್ತು ವಾಸ್ತವದಲ್ಲಿ, ಜಗತ್ತಿನ ಇತಿಹಾಸದಲ್ಲಿಯೇ ಇದು ಅತಿ ಪ್ರಾಮುಖ್ಯವಾದ ದಿನವಾಗಿತ್ತು! ಹೂಣಿಡುವ ಬಟ್ಟೆಗಳು ನೀಟಾಗಿ ಜೋಡಿಸಿಟ್ಟಿರುವದನ್ನು ಗಮನಿಸಿರಿ. ಒಂದು ವೇಳೆ ದೇಹವು ಕಳುವಾಗಿದ್ದರೆ ದೇಹದೊಂದಿಗೆ ಬಟ್ಟೆಗಳು ತೆಗೆದುಕೊಂಡು ಹೋಗಲ್ಪಟ್ಟಿರುತ್ತಿದ್ದವು, ಅಥವಾ ಅವು ಗಳು ಚಲ್ಲಾಪಿಲ್ಲಿಯಾಗಿರುತ್ತಿದ್ದವು. ಆದರೆ ಯೇಸುವಿನ ದೇಹವು ಕದ್ದು ಕೊಳ್ಳಲ್ಪಟ್ಟಿರಲಿಲ್ಲ. ಆತನು ಜೀವಿತನಾಗಿ ಎದ್ದಿದ್ದನು!.

**8** ಪೇತ್ರನು ಸಮಾಧಿಯನ್ನು ಪ್ರವೇಶಿಸಿದ ಬಳಿಕ ಯೋಹಾನನು ಸಹ ಒಳಗೆ ಹೋದನು. ಯೋಹಾನನು ಸಮಾಧಿಯು ಬರಿದಾಗಿರುವದನ್ನು ನೋಡಿ ನಂಬಿದನು. ಯೇಸು ನಿಜವಾಗಿಯೂ ಸತ್ತವರೊಳಗಿಂದ ಎದ್ದು ಬಂದಿದ್ದಾನೆಂಬದನ್ನು ಆತನು

ನಂಬಿದನು. ಯೇಸು ತಾನು ಮೂರು ದಿನಗಳಾದ ಬಳಿಕ ಸತ್ತವರೊಳಗಿಂದ ಎದ್ದೇಳುವೆನೆಂದು ಅವರಿಗೆ ಹೇಳಿದ್ದನು (ಮಾರ್ಕ 8:31, 9:31, 10:34). ಇಲ್ಲಿ, ಈಗ ಮೂರನೆಯ ದಿನದಲ್ಲಿ ಯೇಸು ಹೇಳಿದ್ದಂತೆಯೇ ಅದು ನೆರವೇರಿತ್ತು.

ಆದರೆ ಪ್ರಾರಂಭದಲ್ಲಿ ಪೇತ್ರನು ನಂಬಲಿಲ್ಲ. ಆತನು ನಡೆದ ಸಂಗತಿಗೆ ತನ್ನಲ್ಲಿ ಆಶ್ಚರ್ಯ ಪಡುತ್ತಾ ಹೊರಟು ಹೋದನು (ಲೂಕ 24:12)

**9-10** ಯೇಸು ಸತ್ತವರೊಳಗಿಂದ ಎದ್ದು ಬರುವನೆಂಬದು ಹಳೆ ಒಡಂಬಡಿಕೆಯಲ್ಲಿಯೂ ಸಹ ಪ್ರವಾದಿಸಲ್ಪಟ್ಟಿತ್ತು, ಆದರೆ ಪೇತ್ರ, ಯೋಹಾನರು ಪ್ರವಾದನೆಗಳನ್ನು ಇನ್ನೂ ಪೂರ್ತಿಯಾಗಿ ಅರ್ಥ ಮಾಡಿಕೊಂಡಿರಲಿಲ್ಲ. ಯೋಹಾನನು ಯೇಸುವಿನ ಪು ನರುತ್ಥಾನದಲ್ಲಿಟ್ಟ ನಂಬಿಕೆಯು ಮೊದಲು ಸ್ವತಃ ಆತನ ಕಣ್ಣುಗಳಿಂದ ಬಂದಿತ್ತು, ಹೊರತು ಹಳೆ ಒಡಂಬಡಿಕೆಯಿಂದಲ್ಲ. ಯೇಸುವಿನ ಪು ನರುತ್ಥಾನದ ಪ್ರವಾದನೆಗಳನ್ನು ಈ ಕೆಳಗಿನ ಪು ಸ್ತಕಗಳಲ್ಲಿ ಕಾಣಬಹುದು: ಕೀರ್ತನೆಗಳು 16:10, ಯೇಶಾಯ 53:10-12, ಹೋಶೆಯ 6:2 ಮತ್ತು ಯೋನ 1:17.

## ಯೇಸು ಮಗ್ದಲದ ಮರಿಯಳಿಗೆ ಕಾಣಿಸಿಕೊಂಡಿದ್ದು (20:11-18)

**11** ಪೇತ್ರನು ಮತ್ತು ಯೋಹಾನರು ಸಮಾಧಿಯನ್ನು ನೋಡಲು ಓಡಿಹೋದಾಗ ಅವರ ಹಿಂದೆ ಸ್ತ್ರೀಯರು ಬಂದಿದ್ದರು. ಶಿಷ್ಯರಿಬ್ಬರು ಮನೆಗೆ ಹೋದ ಮೇಲೆ (ವಚನ 10), ಮರಿಯಳು ಸಮಾಧಿಯ ಬಳಿಯಲ್ಲಿಯೇ ನಿಂತುಕೊಂಡಿದ್ದಳು.

**12-13** ಅವಳು ಇಬ್ಬರು ದೇವದೂತರನ್ನು ಕಂಡಳು. ಇದಕ್ಕೆ ಮುಂಚೆ ಮರಿಯಳು ಮತ್ತು ಇತರ ಸ್ತ್ರೀಯರು ಮೊದಲನೆಯ ಸಾರಿ ಸಮಾಧಿಗೆ ಬಂದಾಗ ದೇವದೂತರನ್ನು ನೋಡಿದ್ದರು (ಮಾರ್ಕ 16:5, ಲೂಕ 24:4). ಅನಂತರ ಮರಿಯಳು ಪು ನಃ ಇಬ್ಬರು ದೇವದೂತರನ್ನು ಕಂಡಳು. ಅವರು ಆಕೆಯನ್ನು ಯಾಕೆ ಅಳುತ್ತೀ ಎಂದು ಕೇಳಿದರು.

**14-15** ಆಕೆಯು ಅವರಿಗೆ ಉತ್ತರಿಸಿದ ನಂತರ ಒಬ್ಬ ವ್ಯಕ್ತಿಯು ನಿಂತಿರುವದನ್ನು ಕಂಡಳು, ಆಕೆಯು ಆತನನ್ನು ತೋಟಗಾರನೆಂದು[125] ನೆನಸಿದಳು. ಆದರೆ ಆವ್ಯಕ್ತಿಯು ಯೇಸುವೇ ಆಗಿದ್ದನು. ಆತನ ಪು ನರುತ್ಥಾನಗೊಂಡ ದೇಹವು ಸ್ವಲ್ಪ ವಿಭಿನ್ನವಾಗಿತ್ತು. ಅದರ ಫಲಿತವಾಗಿ ಅವಳು ಪ್ರಾರಂಭದಲ್ಲಿ ಆತನನ್ನು ಗುರುತಿಸಲು ಆಗಲಿಲ್ಲ (ಲೂಕ 24:15-16 ನೋಡಿರಿ). ಬಹುಶ: ಈ "ತೋಟಗಾರನು" ಯೇಸುವಿನ ದೇಹವನ್ನು ತೆಗೆದು ಕೊಂಡು ಹೋಗಿರಬೇಕೆಂದು ಅವಳು ಯೋಚಿಸಿಕೊಂಡಳು.

**16** ಆ ಮೇಲೆ ಯೇಸು ಆಕೆಯ ಹೆಸರನ್ನು ಕರೆಯಲು ಕೂಡಲೇ ಅವಳು ಆತನನ್ನು ಗುರುತಿಸಿದಳು (ಲೂಕ 24:30-31 ನೋಡಿರಿ). ಯೇಸುವಿನ ಕುರಿಗಳು ಆತನ ಸ್ವರವನ್ನು ತಿಳಿದಿರುತ್ತವೆ (ಯೋಹಾನ 10:14). ಮರಿಯಳು ಕೇವಲ ಯೇಸುವಿನ ಸತ್ತದೇಹವನ್ನು ಹುಡುಕುತ್ತಿದ್ದಳು, ಆದರೆ ಬದಲಾಗಿ ಅವಳು ಆತನ ಸಜೀವ ದೇಹವನ್ನು ಕಂಡುಕೊಂಡಳು!

**17** ಬಹುಶ: ಮರಿಯಳು ಮೊಣಕಾಲೂರಿ ಯೇಸುವಿನ ಪಾದಕ್ಕೆ ನಮಸ್ಕರಿಸಿದಳು (ಮತ್ತಾಯ 28:9). ಯೇಸು ಆಕೆಗೆ "ನನ್ನನ್ನು ಹಿಡಿಯಬೇಡ" ಅಂದನು. ಆತನ ತಾತ್ಪರ್ಯವೇನೆಂದರೆ "ನನ್ನನ್ನು ಹಿಡಿದು ಕೊಂಡೇ ಇರಬೇಡ" ಎಂಬದೇ. ಯೇಸು ಮರಿಯಳಿಗೆ 'ನನ್ನನ್ನು ಹಿಡಿಯ ಬೇಡ, ಯಾಕೆಂದರೆ ನಾನು ಇನ್ನೂ ತಂದೆಯ ಬಳಿಗೆ ಏರಿಹೋದವನಲ್ಲ" ಅಂದನು. ಯೇಸುವಿನ ಈ ಮಾತುಗಳ ತಾತ್ಪರ್ಯವೇನೆಂದು ಖಚಿತವಾಗಿರುವದಿಲ್ಲ. ಕೆಲವು ಬೈಬಲ್ ಪಂಡಿತರು ನಂಬುವದೇನೆಂದರೆ, ಮರುಯಳು ಆತನನ್ನು ಅಂಟಿಕೊಂಡು ಇರುವದು ಅಗತ್ಯವಿಲ್ಲ, ಯಾಕೆಂದರೆ ಆತನು ಶೀಘ್ರವೇ ಪರಲೋಕಕ್ಕೆ ಏರಿಹೋಗುವವನಾಗಿರಲಿಲ್ಲ. ಆತನು ಭೂಲೋಕವನ್ನು ಬಿಡುವ ಮುಂಚೆ ಆಕೆಯು ಆತನನ್ನು ನೋಡುವ ಆವಕಾಶಗಳು ಇರುತ್ತವೆ ಎಂಬುದು ಆತನ ತಾತ್ಪರ್ಯವಾಗಿತ್ತು.

ಇನ್ನು ಕೆಲವು ಬೈಬಲ್ ಪಂಡಿತರು ನಂಬುವದೇನೆಂದರೆ, ಯೇಸು ಮರಿಯಳಿಗೆ ಈ ಕೆಳಗಿನ ವಿಷಯಗಳನ್ನು ಅರ್ಥ ಮಾಡಿಸಲು ಪ್ರಯತ್ನಿಸಿದನು, ಏನೆಂದರೆ: ಈಗ ಸಂಗತಿಗಳು ಬದಲಾಗಿವೆ, ಆತನು ಮೊದಲಿನ ರೀತಿಯಲ್ಲಿ ಇರುವದಿಲ್ಲ, ಮೊದಲಿನ ಹಾಗೆ ಯಾರೂ ಈಗ ಆತನ ದೇಹವನ್ನು ಹಿಡಿದು ಕೊಂಡಿರಲಾಗದು. ಲಾಜರನು ಸಹ ಸತ್ತವರೊಳಗಿಂದ ಎದ್ದು ಬಂದಿದ್ದನು, ಆದರೆ ಆತನು ತನ್ನ ಹಳೆಯ ಭೌತೀಕ ದೇಹವನ್ನು ತಿರಿಗಿ ಪಡೆದುಕೊಂಡಿದ್ದನು. ಅವನು ಪು ನ: ಸಾಯುವವನಾಗಿದ್ದನು (ಯೋಹಾನ 11:43-44, 12:2). ಆದರೆ ಯೇಸು ಸಂಪೂರ್ಣ ಹೊಸದಾದ ದೇಹವೊಂದನ್ನು (ಒಂದು ಆತ್ಮೀಕ ದೇಹವನ್ನು) ಪಡೆದುಕೊಂಡಿದ್ದನು, ಅದು ಎಂದಿಗೂ ಮರಣಿಸದ ದೇಹವಾಗಿದೆ ಎಂಬದೇ.

ಅನಂತರ ಯೇಸು ಮರಿಯಳಿಗೆ ತಾನು ತನ್ನ ತಂದೆಯ ಬಳಿಗೆ ಹಿಂದಿರುಗಲಿರುವೆನು; ಅಂದರೆ ಆತನು ಪರಲೋಕಕ್ಕೆ ಏರಿ ಹೋಗಲಿರುವನೆಂಬದನ್ನು ಶಿಷ್ಯರಿಗೆ ತಿಳಿಯಪಡಿಸಬೇಕೆಂದು ಹೇಳಿದನು. ಆತನು ಅವರಿಗಾಗಿ ಸ್ಥಳವನ್ನು ಸಿದ್ಧ ಮಾಡಲು ಹೋಗುವವನಾಗಿದ್ದನು. (ಯೋಹಾನ 12). ಯೇಸು ಇಲ್ಲಿ ದೇವರನ್ನು ನನ್ನ ತಂದೆಯೂ ನಿಮ್ಮತಂದೆಯೂ ನನ್ನ ದೇವರೂ ನಿಮ್ಮ ದೇವರೂ ಎಂದು ಕರೆಯುವದನ್ನು ಗಮನಿಸಿರಿ. ದೇವರು ವಿಶೇಷವಾದ ರೀತಿಯಲ್ಲಿ ಯೇಸುವಿನ ತಂದೆಯಾಗಿದ್ದನು. ಯೇಸು ಸ್ವಾಭಾವಿಕವಾಗಿ ಆದಿಯಿಂದಲೇ ದೇವರ ಮಗನಾಗಿದ್ದಾನೆ. ನಾವು ಕೃಪೆಯ ಮೂಲಕ ದೇವರ ದತ್ತು ಮಕ್ಕಳಾಗಿದ್ದೇವೆ, ಹೊರತು ಸ್ವಾಭಾವಿಕವಾಗಿಯಲ್ಲ.

ಮತ್ತಾಯ 28:10 ರ ಪ್ರಕಾರವಾಗಿ ಯೇಸು ತನ್ನ ಶಿಷ್ಯರಿಗೆ ಗಲಿಲಾಯಕ್ಕೆ ಹೋಗಬೇಕೆಂದೂ, ಆತನು ಅವರನ್ನು ಅಲ್ಲಿ ಸಂಧಿಸುವನೆಂಬದಾಗಿಯೂ ತಿಳಿಸಬೇಕೆಂದು ಸಹ ಮರಿಯಳು ಮತ್ತು ಇತರ ಸ್ತ್ರೀಯರಿಗೆ ಹೇಳುತ್ತಾನೆ. ಮತ್ತಾಯ 28:10 ಹಾಗು ಈ ವಚನ ಎರಡರಲ್ಲಿಯೂ ಯೇಸು ತನ್ನ ಶಿಷ್ಯರಿಗೆ ಸಹೋದರರೆಂದು ಕರೆಯುತ್ತಾನೆ. ಆತನು ಪು ನರುತ್ಥಾನಕ್ಕೆ

ಮುಂಚೆ ಅವರನ್ನು ಸ್ನೇಹಿತರೆಂದು ಕರೆದಿದ್ದನು (ಯೋಹಾನ 15:14). ಈಗ ಅವರು ಆತನ ಸಹೋದರರಾಗಿರುತ್ತಾರೆ ಮತ್ತು ನಂಬುವವರಾದ ನಾವೆಲ್ಲರೂ ಸಹ ಯೇಸುವಿನ ಸಹೋದರರಾಗಿ ಲೆಕ್ಕಿಸಲ್ಪಡುತ್ತೇವೆ. ಯೇಸು ಬಹು ಮಂದಿ ಸಹೋದರರಲ್ಲಿ ಜೇಷ್ಠ ಪುತ್ರನಾಗಿದ್ದಾನೆ (ರೋಮ 8:29).

18 ಮತ್ತಾಯ 28:9-10 ರ ಪ್ರಕಾರವಾಗಿ ಮರಿಯಳು ಮಾತ್ರವೇ ಅಲ್ಲ ಆದರೆ ಆಕೆಯೊಂದಿಗಿದ್ದ ಇತರ ಸ್ತ್ರೀಯರು ಸಹ ಈ ಸಮಯದಲ್ಲಿ ಯೇಸುವನ್ನು ನೋಡಿದರು. ಮೊಧಲು ಮರಿಯಳು ಆತನನ್ನು ಸಂಧಿಸಿದಳು (ಮಾರ್ಕ 16:9). ಅನಂತರ ಬಹುಶ: ಅವಳು ಕೂಡಲೇ ಇತರ ಸ್ತ್ರೀಯರನ್ನು ಕರೆದಿರಬಹುದು. ಅಥವಾ ಸ್ವಲ್ಪ ಕಾಲದ ನಂತರ ಯೇಸು ಇತರ ಸ್ತ್ರೀಯರಿಗೂ ಕಾಣಿಸಿ ಕೊಂಡನು. ಏನೇ ಸಂಭವಿಸಿದ್ದರೂ, ಸ್ತ್ರೀಯರು ಈ ಹೊಸ ವಾರ್ತೆಯನ್ನು ಶಿಷ್ಯರಿಗೆ ತಿಳಿಸಲು ಎರಡನೆಯ ಸಾರಿ ಹೊರಟರು: ಅವರು ನಿಜವಾಗಿಯೂ ಪುನರುಥ್ಥಾನಗೊಂಡ ಕರ್ತನನ್ನು ನೋಡಿದ್ದಾರೆ! (ಮತ್ತಾಯ 28:9-10, ಲೂಕ 24:12ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

## ಯೇಸು ತನ್ನ ಶಿಷ್ಯರಿಗೆ ಕಾಣಿಸಿಕೊಂಡಿದ್ದು (20:19-31)

19 ಈ ಪುನರುಥ್ಥಾನದ ಅದೇ ದಿನದ ಸಾಯಂಕಾಲದಲ್ಲಿ ಯೇಸುವಿನ ಶಿಷ್ಯರು ಒಂದು ಮನೆಯಲ್ಲಿ ಒಟ್ಟಾಗಿ ಸೇರಿಬಂದಿದ್ದರು. ಅದು ಪ್ರಪಂಚದ ಇತಿಹಾಸದಲ್ಲಿಯೇ ಒಂದು ಅತ್ಯಂತ ಆನಂದಾಯಕ ಹಾಗು ಅತ್ಯಂತ ಜಯಕರವಾದ ದಿನವಾಗಿತ್ತು – ಆದರೆ ಶಿಷ್ಯರು ಎಲ್ಲಿದ್ದರು? ಅವರು ಹೆದರಿಕೆಯಿಂದ ಅಡಿಗಿಕೊಂಡಿದ್ದರು. ಅವರು ಯೆಹೂದ್ಯರ ಭಯದಿಂದ ತಾವು ಇದ್ದ ಮನೆಯ ಬಾಗಲುಗಳನ್ನು ಮುಚ್ಚಿಕೊಂಡಿದ್ದರು. ಯೇಸುವಿನ ದೇಹವು ಕಾಣುತ್ತಿಲ್ಲ ಎಂಬ ಸುದ್ದಿಯನ್ನು ಕೇಳಿದ್ದ ಯೆಹೂದ್ಯ ನಾಯಕರು ಅದನ್ನು ಶಿಷ್ಯರು ಕದ್ದುಕೊಂಡಿದ್ದಾರೆಂದು ಆರೋಪಿಸಿದ್ದರು (ಮತ್ತಾಯ 28:11-13). ನಿಶ್ಚಯವಾಗಿಯೂ ಅವರು ಶಿಷ್ಯರಿಗಾಗಿ ಹುಡುಕಾಡುತ್ತಿದ್ದಿರಬಹುದು. ಪಕ್ಕನೇ, ಒಂದು ಅದ್ಭುತವಾದ ರೀತಿಯಲ್ಲಿ ಯೇಸು ಬಂದು ನಡುವೆ ನಿಂತುಕೊಂಡನು. ಬಾಗಲುಗಳು ತೆರೆಯಲ್ಪಟ್ಟಿರಲಿಲ್ಲ. ಯೇಸು ಶಿಷ್ಯರಿದ್ದ ಕೋಣೆಯನ್ನು ಹೇಗೆ ಪ್ರವೇಶಿಸಿದನೆಂದು ಯೋಹಾನನು ಹೇಳುವದಿಲ್ಲ ಆದರೆ ಆತನು ತೆರೆದ ಬಾಗಿಲಿನಿಂದಂತೂ ಬಂದಿರಲಿಲ್ಲ. ಆತನು ಅವರಿಗೆ "ನಿಮಗೆ ಸಮಾಧಾನವಾಗಲಿ!" ಅಂದನು. ಇದು ಯೆಹೂದ್ಯರು ವಂದಿಸುವ ಸಾಮಾನ್ಯ ಪದ್ದತಿಯಾಗಿತ್ತು, ಆದರೆ ಆತನ ಮಾತುಗಳು ಒಂದು ಆಳವಾದ ಅರ್ಥವನ್ನು ಹೊಂದಿದ್ದವು.

"ಸಮಾಧಾನ" ಎನ್ನುವದರ ಮೂಲಕ ಆತನು ಈ ಮುಂಚೆ ಅವರಿಗೆ ವಾಗ್ದಾನ ಮಾಡಿದ್ದ ಆತ್ಮೀಕ ಸಮಾಧಾನವನ್ನು ಸೂಚಿಸಿದನು (ಯೋಹಾನ 14:27 ಮತ್ತು ವ್ಯಾಖ್ಯಾನ ನೋಡಿರಿ).

ಶಿಷ್ಯರು ತನ್ನನ್ನು ತೊರೆದು ಹೋಗಿದ್ದಕ್ಕೆ ಯೇಸು ಅವರನ್ನು ಗದರಿಸಲಿಲ್ಲ. ಆತನು ಅವರನ್ನು ತನ್ನ ಸ್ನೇಹಿತರು ಹಾಗು ಸಹೋದರರು ಎಂಬಂತೆ ವಂದಿಸಿದನು. ಶಿಷ್ಯರು ಯೇಸುವನ್ನು ಕೈಬಿಟ್ಟಿದ್ದರು ಆದರೆ ಯೇಸು ಅವರನ್ನು ಕೈಬಿಡಲಿಲ್ಲ. ಆತನು ಅವರ ಬಳಿಗೆ ಬಂದು ತನ್ನ ಸಮಾಧಾನವನ್ನು ಅವರಿಗೆ ನೀಡಿದನು. ಶಿಲುಬೆಯ ಮೇಲಿನ ತನ್ನ ಮರಣದ ಮೂಲಕ ಅವರ ಮತ್ತು ದೇವರ ನಡುವೆ ಸಮಾಧಾನವನ್ನುಂಟು ಮಾಡಿದ್ದನು (ರೋಮ 5:1 ಮತ್ತು ವ್ಯಾಖ್ಯಾನ ನೋಡಿರಿ).

20 ಪ್ರಾರಂಭದಲ್ಲಿ ಶಿಷ್ಯರು ದಿಗಿಲು ಬಿದ್ದು ಭಯ ಹಿಡಿದವರಾದರು, ಯಾಕೆಂದರೆ ಅವರು ತಾವು ಕಂಡದ್ದನ್ನು ಭೂತವೆಂದು ಭಾವಿಸಿದ್ದರು (ಲೂಕ 24:37). ಆದರೆ ಅವರು ಯೇಸುವಿನ ಗಾಯಗಳನ್ನು ನೋಡಿದ ಕೂಡಲೇ ಆತನನ್ನು ಗುರುತಿಸಿ ಸಂತೋಷಪಟ್ಟರು. ಅವರ ದುಃಖವು ಸಂತೋಷವಾಗಿ ಮಾರ್ಪಟ್ಟಿತು (ಯೋಹಾನ 16:2022).

ಯೇಸು ಮೊದಲನೆಯ ಸಾರಿ ತನ್ನ ಎಲ್ಲಾ ಶಿಷ್ಯರು ಒಟ್ಟಾಗಿರುವಾಗ ಕಾಣಿಸಿಕೊಂಡ ಈ ಘಟನೆಯನ್ನು ಲೂಕನು ಸಹ ಬಣ್ಣಿಸಿರುತ್ತಾನೆ (ಲೂಕ 24:36-40 ಮತ್ತು ವ್ಯಾಖ್ಯಾನ ನೋಡಿರಿ) ತೋಮನು ಮಾತ್ರವೆ ಅಲ್ಲಿರಲಿಲ್ಲ (ವಚನ 24).

21 ಆ ಮೇಲೆ ಯೇಸು ಅವರಿಗೆ "ತಂದೆ ನನ್ನನ್ನು ಕಳುಹಿಸಿಕೊಟ್ಟ ಹಾಗೆಯೇ ನಾನೂ ನಿಮ್ಮನ್ನು ಕಳುಹಿಸಿಕೊಡುತ್ತೇನೆ" ಎಂದನು. ಈ ಸಂದರ್ಭದಲ್ಲಿಯೇ ಯೇಸು ಅವರನ್ನು ಅಪೊಸ್ತಲರನ್ನಾಗಿ ನೇಮಿಸಿದನು, ಅಂದರೆ "ಕಳುಹಿಸಲ್ಪಟ್ಟವರು" ಎಂದರ್ಥವಾಗಿದೆ. ಆದರೆ ಯೇಸು ಇದನ್ನು ತನ್ನ ಪ್ರಥಮ ಶಿಷ್ಯರಿಗೆ ಮಾತ್ರವೇ ಹೇಳಲಿಲ್ಲ, ಆತನು ಪ್ರತಿಯೊಂದು ಪೀಳಿಗೆಯಲ್ಲಿನ ತನ್ನ ಶಿಷ್ಯರಿಗೂ ಹೇಳುತ್ತಾನೆ : "ನಾನು ನಿಮ್ಮನ್ನು ಕಳುಹಿಸಿಕೊಡುತ್ತೇನೆ" ಸುವಾರ್ತೆಯನ್ನು ಹರಡುವ ಮತ್ತು ಮಾನವರಿಗೆ ದೇವರ ಪ್ರೀತಿಯನ್ನು ತೋರ್ಪಡಿಸುವ ನಮ್ಮ ಕೆಲಸವು ಯೇಸು ಭೂಮಿಯ ಮೇಲೆ ಮಾಡಿದ ಕೆಲಸದ ಮುಂದುವರೆಯುವಿಕೆಯಾಗಿದೆ. ದೇವರು ಯೇಸುವನ್ನು ಸುವಾರ್ತೆ ಸಾರಲು ಹಾಗು ಸತ್ಕಾರ್ಯಗಳನ್ನು ಮಾಡಲು ಕಳುಹಿಸಿದ ಹಾಗೆಯೇ ದೇವರು ನಮ್ಮನ್ನು ಸಹ ಅದೇ ಕಾರ್ಯಕ್ಕೆ ನೇಮಿಸಿರುತ್ತಾನೆ (ಮತ್ತಾಯ 28:19-20, ಯೋಹಾನ 17:18 ಮತ್ತು ವ್ಯಾಖ್ಯಾನಗಳು, ಸಾಮಾನ್ಯ ಬರಹ: ಸಭೆಯ ಉದ್ದೇಶ ನೋಡಿರಿ).

22 ಅನಂತರ ಯೇಸು ತನ್ನ ಶಿಷ್ಯರ ಮೇಲೆ ಊದಿ ಆತನು ಮುಂಚೆ ಅವರಿಗೆ ವಾಗ್ದಾನ ಮಾಡಿದ್ದ ಪವಿತ್ರಾತ್ಮವರವನ್ನು ಕೊಟ್ಟನು (ಯೋಹಾನ 14:16 ಮತ್ತು ವ್ಯಾಖ್ಯಾನ ನೋಡಿರಿ). ಆತನು ಯಾವ ಕಾರ್ಯವನ್ನು ಮಾಡಲು ಶಿಷ್ಯರನ್ನು ಕಳುಹಿಸುತ್ತಾನೋ ಆಕಾರ್ಯವನ್ನು ಮಾಡಲು ಅವರಿಗೆ ಪವಿತ್ರಾತ್ಮನ ಅಗತ್ಯತೆಯಿರುತ್ತದೆ. ಕ್ರಿಸ್ತನು ಎಂದಿಗೂ ಸಹ ನಮಗೆ ಕೆಲಸ ಮಾಡಲು ದಾರಿಯನ್ನು ಒದಗಿಸದೆ ಯಾವ ಕೆಲಸವನ್ನೂ ಕೊಡುವದಿಲ್ಲ. ಆದರೆ, ಆದಕ್ಕಿಂತಲೂ ಹೆಚ್ಚಾಗಿ, ಪವಿತ್ರಾತ್ಮನನ್ನು ಕೊಡುವಿಕೆಯು ಶಿಷ್ಯರ ಜೀವಿತಗಳಲ್ಲಿ ಅತಿ ಪ್ರಾಮುಖ್ಯವಾದ ಘಟನೆಯಾಗಿರುತ್ತದೆ, ಯಾಕೆಂದರೆ ಆವಾಗಲೇ ಅವರು

ಆತ್ಮದಿಂದ ಹೊಸದಾಗಿ ಹುಟ್ಟಿದವರಾಗಿದ್ದರು (ಯೋಹಾನ 3:3, 5 ಮತ್ತು ವ್ಯಾಖ್ಯಾನ ನೋಡಿರಿ). ಈ ಸಂದರ್ಭದಲ್ಲಿಯೇ ಅವರು ನಿಜವಾದ ಹಾಗು ಪೂರ್ಣವಾದ ನಂಬಿಕೆಯನ್ನು ಪಡೆದುಕೊಂಡರು. ಅವರು ಆತ್ಮೀಕ ಜೀವಿತವನ್ನು ಪಡೆದದ್ದು ಇದೇ ಸಂದರ್ಭದಲ್ಲಿಯೇ ಆಗಿದೆ. ಕ್ರಿಸ್ತನ ಪವಿತ್ರಾತ್ಮನನ್ನು ಪಡೆಯದ ಹೊರತು ಯಾವನೂ ಸಹ ಒಬ್ಬ ನಿಜ ಕ್ರೈಸ್ತನಾಗಿರಲಾರನು. ......ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ (ರೋಮ 8:9).

ಕ್ರಿಸ್ತನು ಪರಲೋಕಾರೋಹಣಗೊಂಡ ಹತ್ತು ದಿನಗಳ ನಂತರ ಪಂಚಾಶತ್ತಮದಿನದಲ್ಲಿ ಶಿಷ್ಯರು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟರು (ಅ.ಕೃತ್ಯ 2:1-4 ಮತ್ತು ವ್ಯಾಖ್ಯಾನ ನೋಡಿರಿ). ಶಿಷ್ಯರು ಈಗಾಗಲೇ ಈ ಪುನರುತ್ಥಾನದ ಭಾನುವಾರದಂದು ಪವಿತ್ರಾತ್ಮನನ್ನು ಹೊಂದಿಕೊಂಡಿದ್ದರು, ಆದರೆ ಪಂಚಾಶತ್ತಮ ದಿನದಂದು ಅವರು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟು ಪವಿತ್ರಾತ್ಮನ ವರಗಳನ್ನು ಮತ್ತು ಬಲವನ್ನು ಪಡೆದುಕೊಳ್ಳಬೇಕಾಗಿತ್ತು. ಆದುದರಿಂದ, ಕ್ರೈಸ್ತರು ತಮ್ಮಲ್ಲಿ ಪವಿತ್ರಾತ್ಮನು ಹೊಂದಿಕೊಂಡು ಮಾತ್ರವೇ ಇರಬಾರದು, ಅವರು ಪವಿತ್ರಾತ್ಮನಿಂದ ತುಂಬಿಸಲ್ಪಡುವಂತೆ ಸಹ ಪ್ರಾರ್ಥಿಸಬೇಕು. ನಾವೆಲ್ಲರೂ ಸಹ ನಮ್ಮ ಜೀವಿತಗಳಲ್ಲಿ ಪವಿತ್ರಾತ್ಮನ ಫಲಗಳನ್ನು ತೋರ್ಪಡಿಸಬೇಕು (ಗಲಾತ್ಯ 5:22-23 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ದೇವರು ನಮಗೆ ಪವಿತ್ರಾತ್ಮನ ವರಗಳು ಮತ್ತು ಬಲವನ್ನು ಸಹ ಕೊಡಲಿಚ್ಛಿಸುತ್ತಾನೆ (1ಕೊರಿಂಥ 12:7-11 ಮತ್ತು ವ್ಯಾಖ್ಯಾನ ನೋಡಿರಿ). ಪವಿತ್ರಾತ್ಮನಿಂದ ತುಂಬಿಸಲ್ಪಟ್ಟಿರುವದೆಂದರೆ ಆತನ ಫಲಗಳನ್ನು ಹೊಂದಿರುವದೆಂದು ಮಾತ್ರವೇ ಅರ್ಥವಲ್ಲ ಆದರೆ ಆತನ ಬಲವನ್ನು ಸಹ ಹೊಂದಿರುವದಾಗಿದೆ.

ಯೇಸು ಅವರ ಮೇಲೆ ಊದಿದನು. ಯೆಹೆಜ್ಕೇಲ 37:1-10 ರಲ್ಲಿ ಪ್ರವಾದಿಯಾದ ಯೆಹೆಜ್ಕೇಲನು ಒಂದು ಎಲುಬುಗಳಿಂದ ತುಂಬಿದ್ದ ತಗ್ಗಿನ ಬಗ್ಗೆ ವರ್ಣಿಸುತ್ತಾನೆ. ಆ ಸತ್ತ ಎಲುಬುಗಳಿಗೆ ಪ್ರವಾದಿಸಬೇಕೆಂದು ಕರ್ತನು ಯೆಹೆಜ್ಕೇಲನಿಗೆ ಹೇಳಿದನು. ಮತ್ತು ಯೆಹೆಜ್ಕೇಲನು ಆ ಎಲುಬುಗಳಿಗೆ ದೇವರ ವಾಕ್ಯವನ್ನು ನುಡಿಯಲು ಅವುಗಳು ಒಂದಕ್ಕೊಂದು ಕೂಡಿಕೊಂಡು ಮಾಂಸ ಮತ್ತು ಚರ್ಮದಿಂದ ಆವರಿಸಲ್ಪಟ್ಟವುಗಳಾದವು. ಅವುಗಳು ಮನುಷ್ಯರಾದವು ಆದರೆ ಅವರು ಇನ್ನೂ ಸತ್ತವರಾಗಿದ್ದರು..ಅವರಲ್ಲಿ ಶ್ವಾಸವು ಇರಲಿಲ್ಲ (ಯೆಹೆಜ್ಕೇಲ 37:8). ಅನಂತರ ದೇವರ ಶ್ವಾಸವು ಆ ಸತ್ತ ಮನುಷ್ಯರನ್ನು ಪ್ರವೇಶಿಸಲು ಅವರು ಬದುಕುವವರಾಗಿ ನಿಂತುಕೊಂಡರು – ಅದು ಅತ್ಯಂತ ದೊಡ್ಡ ಸೈನ್ಯವಾಯಿತು (ಯೆಹೆಜ್ಕೇಲ 37:10).

ನಮ್ಮ ಮೇಲೆಯೂ ಸಹ ದೇವರ ಶ್ವಾಸವಾದ ಪವಿತ್ರಾತ್ಮನು ಊದಲ್ಪಟ್ಟಿರುತ್ತಾನೆ. ನಾವು ಸಹ – ಎಲ್ಲಾ ಕ್ರೈಸ್ತರು – ಒಂದು ದೊಡ್ಡ ಸೈನ್ಯವಾಗಿರುತ್ತೇವೆ. ನಾವು ಕೇವಲ ವೀಕ್ಷಕರಲ್ಲ, ನಾವು ಬರೀ ಸಭೆ ಸದಸ್ಯರು ಮಾತ್ರವಾಗಿರುವದಿಲ್ಲ. ನಾವು ಒಂದು ಸೈನ್ಯವಾಗಿದ್ದೇವೆ ಮತ್ತು ನಮ್ಮ ಸೈನ್ಯಾಧಿಪತಿ, ನಮ್ಮ ರಾಜನು ಕ್ರಿಸ್ತನೇ.

**23** ಯೇಸು ತನ್ನ ಶಿಷ್ಯರಿಗೆ ಪವಿತ್ರಾತ್ಮನನ್ನು ನೀಡಿದ ಬಳಿಕ ಪಾಪಕ್ಷಮಾಪಣೆಯ ವಾರ್ತೆಯನ್ನು ಸಾರುವ ಅಧಿಕಾರವನ್ನು ಅವರಿಗೆ ಕೊಟ್ಟನು. ಇದು ಅರ್ಥಮಾಡಿಕೊಳ್ಳಲು ಕಷ್ಟಕರವಾದ ಒಂದು ವಚನವಾಗಿದೆ. ಯಾವ ಮನುಷ್ಯನೂ ಸ್ವತಃ ಇನ್ನೊಬ್ಬ ವ್ಯಕ್ತಿಯ ಪಾಪಗಳನ್ನು ಕ್ಷಮಿಸಲು ಸಾಧ್ಯವಿಲ್ಲ, ದೇವರು ಮತ್ತು ಕ್ರಿಸ್ತನು ಮಾತ್ರವೇ ಪಾಪಗಳನ್ನು ಕ್ಷಮಿಸಬಲ್ಲರು. ಆದರೆ ಕ್ರೈಸ್ತರು ಕ್ರಿಸ್ತನ ರಾಯಭಾರಿಗಳಾಗಿದ್ದಾರೆ (2 ಕೊರಿಂಥ 5:20). ಪವಿತ್ರಾತ್ಮನ ಮಾರ್ಗದರ್ಶನದ ಮುಖಾಂತರವಾಗಿ ನಾವು ಒಬ್ಬ ವ್ಯಕ್ತಿಗೆ ಶಿಲುಬೆಯ ಮೇಲೆ ಕ್ರಿಸ್ತನು ಹೊಂದಿದ ಮರಣದ ಕಾರಣದಿಂದ ಆತನ ಪಾಪಗಳು ಕ್ಷಮಿಸಲ್ಪಟ್ಟಿವೆಯೆಂದು ಹೇಳಬಹುದು. ಯಾವನಾದರೂ ಯೇಸುವಿನಲ್ಲಿ ನಂಬಿಕೆಯಿಟ್ಟು ತನ್ನ ಪಾಪಗಳಿಗಾಗಿ ಪಶ್ಚಾತಾಪ ಪಡುವದಾದರೆ ಆ ವ್ಯಕ್ತಿಗೆ "ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ" ನಾವು ಯೇಸುವಿನ ಪೂರ್ಣ ಅಧಿಕಾರದಿಂದ ಹೇಳಬಹುದು.

ಹೇಗಿದ್ದರೂ, ಒಬ್ಬ ವ್ಯಕ್ತಿಯು ಪಶ್ಚಾತಾಪಪಟ್ಟು ನಂಬದೆ ಹೋಗುವದಾದರೆ ನಾವು ಆ ವ್ಯಕ್ತಿಗೆ ಆತನ ಪಾಪಗಳು ಕ್ಷಮಿಸಲ್ಪಟ್ಟಿರುವದಿಲ್ಲ ಅವುಗಳು ಉಳಿದಿವೆ [126].ಎಂದು ನಾವು ತಿಳಿಸಬಹುದು. ಈ ಅಧಿಕಾರವನ್ನು ಯೇಸು ಇಡೀ ಸಭೆಗೆ ಅದರಲ್ಲೂ ವಿಶೇಷವಾಗಿ ಸಭೆಯ ನಾಯಕರಿಗೆ ಕೊಟ್ಟಿರುತ್ತಾನೆ (ಮತ್ತಾಯ 16:19,18; 18-19 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**24-25** ಯೇಸು ಶಿಷ್ಯರಿಗೆ ಕಾಣಿಸಿಕೊಂಡಾಗ ದಿದುಮನೆನಸಿಕೊಳ್ಳುವ ತೋಮನು (ಯೋಹಾನ 11:16), ಅಲ್ಲಿ ಹಾಜರಿರಲಿಲ್ಲ. ಇತನು ತಾನು ಯೇಸುವಿನ ಗಾಯಗಳನ್ನು ನೋಡಿ ಮುಟ್ಟಿದ ಹೊರತು ಆತನು ಪುನರುತ್ಥಾನಗೊಂಡಿದ್ದಾನೆಂದು ನಂಬುವದಿಲ್ಲ ಎಂದನು. ತೋಮನು "ಸಂಶಯಿಸುವ ತೋಮ" ಎಂದು ಕರೆಯಲ್ಪಟ್ಟಿದ್ದಾನೆ. ಆದರೆ ಯೋಹಾನನನ್ನು ಹೊರತು ಪಡಿಸಿ (ವಚನ 8), ಉಳಿದ ಶಿಷ್ಯರೆಲ್ಲರೂ ಸಹ ಯೇಸುವನ್ನು ನೋಡುವವರೆಗೆ ಆತನನ್ನು ನಂಬಲಿಲ್ಲ ಎಂಬದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಅವರೆಲ್ಲರೂ ಸಹ ಪ್ರಾರಂಭದಲ್ಲಿ ಸಂಶಯಪಟ್ಟರು (ಮಾರ್ಕ 16:11, ಲೂಕ 24:10-12).

**26-27** ಒಂದು ವಾರದ ನಂತರ ಯೇಸು ಅದೇ ಮನೆಯಲ್ಲಿ ಮತ್ತು ಅದೇ ರೀತಿಯಲ್ಲಿ ತಿರಿಗಿ ತನ್ನ ಶಿಷ್ಯರಿಗೆ ಕಾಣಿಸಿಕೊಂಡನು (ವಚನ 19).ಈ ಸಾರಿ ತೋಮನು ಅಲ್ಲಿದ್ದನು. ಯೇಸು ಅವನಿಗೆ, "ನನ್ನನ್ನು ಮುಟ್ಟು, ನನ್ನ ಘಾಯಗಳನ್ನು ಮುಟ್ಟಿ ನೋಡು. ನಿನ್ನ ಸಂಶಯಗಳನ್ನು ತೆಗೆದು ಹಾಕಿ ನಂಬಿಕೆಯಿಡು" ಎಂದು ಹೇಳಿದನು. ತೋಮನು ಈ ಮುಂಚೆ ಮಾತಾಡಿದ್ದ ಸಂಗತಿಯೇನೆಂಬದನ್ನು ಯೇಸು ಬಲ್ಲವನಾಗಿದ್ದನು (ವಚನ 25). ನಾವು ಯೋಚಿಸುವ ಪ್ರತಿಯೊಂದು ಸಂಶಯಾತ್ಮಕವಿಚಾರಗಳನ್ನು ಯೇಸು ಬಲ್ಲವನಾಗಿರುತ್ತಾನೆ.

**28** ತೋಮನು ವಾಸ್ತವವಾಗಿ ಯೇಸುವಿನ ಘಾಯಗಳನ್ನು ಸ್ಪರ್ಶಿಸಿದನೆಂದು ಯೋಹಾನನು ಹೇಳುವದಿಲ್ಲ. ಆದರೆ ತೋಮನು ಯೇಸುವನ್ನು ನೋಡಿದನು ಹಾಗು ಆತನ ಸ್ವರವನ್ನು ಆಲಿಸಿದನು. ಅದಷ್ಟೇ ಸಾಕಾಗಿತ್ತು. ಆತನು ಯೇಸುವಿಗೆ,

"ನನ್ನ ಕರ್ತನೇ, ನನ್ನ ದೇವರು!" ಎಂದನು. ಯೇಸುವಿನ ಶಿಷ್ಯರಲ್ಲಿ ಈ ಮುಂಚೆ ಒಬ್ಬರಾದರೂ ಸಹ ಯೇಸುವನ್ನು "ದೇವರು" ಎಂದು ಕರೆದಿರಲಿಲ್ಲ. ಯೇಸುವಿನಲ್ಲಿ ನಂಬಿಕೆಯಿಟ್ಟ ಶಿಷ್ಯರಲ್ಲಿ ತೋಮನೇ ಕಡೆಯವನು. ಆದರೆ ಯೇಸು ಒಬ್ಬ ಕರ್ತನಿಗಿಂತಲೂ, ಒಬ್ಬ ಮೆಸ್ಸೀಯನಿಗಿಂತಲೂ ಹೆಚ್ಚಿನವನು, ಆತನು ಸ್ವತ: ಸರ್ವಶಕ್ತ ದೇವರು ಎಂಬದನ್ನು ಗ್ರಹಿಸಿಕೊಂಡವರಲ್ಲಿ ತೋಮನು ಮೊದಲನೆಯವನಾಗಿದ್ದಾನೆ!

**29** ತೋಮನು ನಂಬುವದರಲ್ಲಿ ನಿಧಾನವಾಗಿದ್ದದಕ್ಕಾಗಿ ಯೇಸು ಅವನನ್ನು ಗದರಿಸಲಿಲ್ಲ. ಆದರೆ ಆತನು ಭವಿಷ್ಯತ್ತಿನ ಕಡೆಗೆ ದೃಷ್ಟಿಸಿದನು, ಆತನು ಇನ್ನು ಮೇಲೆ ಭೂಮಿಯಲ್ಲಿ ಇರಲಾರನು. ಇನ್ನು ಸ್ವಲ್ಪ ಕಾಲದಲ್ಲಿ ಮನುಷ್ಯರು ತೋಮನ ಹಾಗೆ ಆತನನ್ನು ನೋಡಲಾಗಲಿ, ಆತನ ಸ್ವರವನ್ನು ಕೇಳುವದಕ್ಕಾಗಲಿ ಆಗುವದಿಲ್ಲ. ಅವರು ನೋಡದೆಯೇ ನಂಬಬೇಕಾಗುತ್ತದೆ. ಅವರು ಇತರ ಸಾಕ್ಷಿಯನ್ನು ನಂಬಬೇಕಾಗುತ್ತದೆ. ಆದರೆ ಅವರು ನಂಬಿದರೆ ನಿಜವಾಗಿಯೂ ಧನ್ಯರಾಗುವರು. (1 ಪೇತ್ರ 1:8 ನೋಡಿರಿ).

**30-31** ಯೇಸು ಮಾಡಿದ ಸಮಸ್ತ ಕಾರ್ಯಗಳನ್ನು ಯೋಹಾನನಾಗಲಿ, ಇತರ ಸುವಾರ್ತಾ ಬರಹಗಾರರಾಗಲಿ ಬರೆದಿರುವದಿಲ್ಲ (ಯೋಹಾನ 21:25 ನೋಡಿರಿ). ಆದರೆ ಯೋಹಾನನು ತನ್ನ ಸುವಾರ್ತೆಯನ್ನು ಒಂದು ಮುಖ್ಯ ಉದ್ದೇಶದಿಂದ ಬರೆದನು: ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವದಕ್ಕಾಗಿಯೇ. ಕೇವಲ ನಂಬಿದರೆ ಸಾಕಾಗುವದಿಲ್ಲ, ನಾವು ಯಾವುದನ್ನಾದರೂ ನಂಬಬೇಕು. ನಾವು ನಮ್ಮ ಕರ್ತನು, ದೇವರು ಆಗಿರುವ ಯೇಸುವಿನಲ್ಲಿ ನಂಬಿಕೆಯಿಡಬೇಕು.

ನಾವು ಯಾಕೆ ನಂಬಬೇಕು? ನಾವು ಆತನ ಹೆಸರಿನಲ್ಲಿ ಜೀವವನ್ನು, ನಿತ್ಯ ಜೀವವನ್ನು ಹೊಂದಿಕೊಳ್ಳಲು ನಂಬಬೇಕು. ನಂಬಿಕೆಯಿಲ್ಲದೆ ಜೀವವಿಲ್ಲ. ಮನುಷ್ಯನು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ನಿತ್ಯ ಜೀವವನ್ನು ಪಡೆಯಲು ಸಾದ್ಯವಾಗುತ್ತದೆ (ಯೋಹಾನ 3:15, 18, 26 ಮತ್ತು ವ್ಯಾಖ್ಯಾನ ನೋಡಿರಿ).

---

## ಅಧ್ಯಾಯ–21

### ಯೇಸು ಮತ್ತು ಮೀನಿನ ಅದ್ಭುತವಾದ ಬೇಟೆ (21:1-14)

**1** ಯೇಸು ಎರಡನೆಯ ಸಾರಿ ತನ್ನ ಶಿಷ್ಯರಿಗೆ ಕಾಣಿಸಿಕೊಂಡ ನಂತರ (ಯೋಹಾನ 20:26), ಆತನು ಗಲಿಲಾಯಕ್ಕೆ ಹೋದನು. ಅಲ್ಲಿ ಆತನು ತನ್ನ ಶಿಷ್ಯರನ್ನು ಸಂಧಿಸುವದಾಗಿ ಹೇಳಿದ್ದನು (ಮತ್ತಾಯ 28:10,16).

ತಿಬೇರಿಯ ಸಮುದ್ರ ಎಂಬದು ಗಲಿಲಾಯ ಸಮುದ್ರಕ್ಕೆ ನೀಡಲಾದ ರೋಮಾಯ ಹೆಸರಾಗಿತ್ತು (ಯೇಹಾನ 6:1). ತಿಬೇರಿಯನು ಯೇಸುವಿನ ಜೀವಿತ ಕಾಲದಲ್ಲಿ ಆಳಿಕೆಯಲ್ಲಿದ್ದ ರೋಮಾಯ ಚಕ್ರವರ್ತಿಗಳಲ್ಲಿ ಒಬ್ಬನಾಗಿದ್ದನು, ಅವನು ಕ್ರಿ.ಶಕ 14 ರಿಂದ 37 ರ ವರೆಗೆ ಆಳಿದನು. ಯೋಹಾನನು ತನ್ನ ಸುವಾರ್ತೆಯನ್ನು ಬರೆಯುವ ವೇಳೆಗೆ ಗಲಿಲಾಯ ಸಮುದ್ರವು ಈ ಚಕ್ರವರ್ತಿಯ ಗೌರವಾರ್ಥವಾಗಿ" ತಿಬೇರಿಯ ಸಮುದ್ರ," ಎಂದು ಬದಲಾವಣೆ ಗೊಂಡಿತ್ತು.

**2** ಪೇತ್ರ, ತೋಮ (ಯೋಹಾನ 11:16, 20:24-28), ನತಾನಿಯೇಲ (ಯೋಹಾನ 1:45), ಮತ್ತು ಜೆಬದಾಯನ ಮಕ್ಕಳು (ಮಾರ್ಕ 1:19-20), ಮತ್ತು ಹೆಸರನ್ನು ತಿಳಿಸದ ಇತರ ಇಬ್ಬರು ಶಿಷ್ಯರು, ಇವರೆಲ್ಲರೂ ಒಟ್ಟಾಗಿ ಗಲಿಲಾಯ ಸಮುದ್ರದ ಬಳಿಯಲ್ಲಿದ್ದರು. ಕರ್ತನು ತಾನು ಹೇಳಿದ ಪ್ರಕಾರವೇ ಕಾಣಿಸುವನೇನೋ ಎಂದು ಅವರು ಕಾಯುತ್ತಿದ್ದರು.

**3** ಅವರು ಕಾಯುತ್ತಿರುವ ವೇಳೆ ಎಲ್ಲರೂ ಮೀನು ಹಿಡಿಯುವದಕ್ಕಾಗಿ ಸಮುದ್ರಕ್ಕೆ ಹೋದರು. ಆದರೆ ಅವರು ರಾತ್ರಿಯೆಲ್ಲಾ ಪ್ರಯಾಸಪಟ್ಟರೂ ಏನೂ ಸಿಕ್ಕಿರಲಿಲ್ಲ.

**4** ಆಗ ಯೇಸು ದಡದಲ್ಲಿ ಕಾಣಿಸಿಕೊಂಡನು. ಆದರೆ, ಮಗ್ದಲದ ಮರಿಯಳ ಹಾಗೆ ಅವರು ಸಹ ಯೇಸುವನ್ನು ಪ್ರಾರಂಭದಲ್ಲಿ ಗುರುತಿಸಲಿಲ್ಲ (ಯೋಹಾನ 20:14 ಮತ್ತು ವ್ಯಾಖ್ಯಾನ ನೋಡಿರಿ).

**5** ಯೇಸು ಶಿಷ್ಯರಿಗೆ, "ಸ್ನೇಹಿತರೇ, ನಿಮಗೆ ಮೀನು ಇಲ್ಲವೋ?" ಎಂದನು. ಆತನ ತಾತ್ಪರ್ಯವೇನಂದರೆ:ಃನಿಮಗೆ ಮೀನು ಸಿಕ್ಕಲಿಲ್ಲವೇ?" ಎಂದಾಗಿತ್ತು. ಅವರು ಒಂದು ಮೀನನ್ನೂ ಹಿಡಿಯಲಾಗಿಲ್ಲ ಎಂಬದು ಯೇಸುವಿಗೆ ಗೊತ್ತಿತ್ತು, ಆದರೆ ಶಿಷ್ಯರು ಸ್ವತ: ಅದನ್ನು ಹೇಳಬೇಕೆಂದು ಆತನ ಇಚ್ಚೆಯಾಗಿತ್ತು. ನಾವು ನಮ್ಮ ಸಮರ್ಥತೆ ಮತ್ತು ಬಲಗಳ ಕೊರತೆಯನ್ನು ಕ್ರಿಸ್ತನಿಗೆ ಅರಿಕೆ ಮಾಡಿದಾಗ ಆತನು ನಮ್ಮ ಅಗತ್ಯತೆಗಳನ್ನು ಒದಗಿಸುವನು.

**6** ಶಿಷ್ಯರು "ಇಲ್ಲ" ಎಂದು ಹೇಳಿದಾಗ, ಆತನು ಅವರಿಗೆ ದೋಣಿಯ ಇನ್ನೊಂದು ಬದಿಯಲ್ಲಿ ಬಲೆಯನ್ನು ಆಳವಾಗಿ ಹಾಕುವಂತೆ ಹೇಳಿದನು. ಆಗ ಅವರು ಬಲೆಯನ್ನು ದೋಣಿಯ ಬಳಿಗೆ ಎಳಕೊಂಡು ಬರಲಾಗದಷ್ಟು ಮೀನುಗಳನ್ನು ಹಿಡಿದರು.

ಅನೇಕ ಶಿಷ್ಯರು ರಾತ್ರಿಯೆಲ್ಲಾ ದೋಣಿಯ ತಪ್ಪಾದ ಬದಿಯಲ್ಲಿ ಮೀನು ಹಿಡಿಯಲು ಪ್ರಯಾಸಪಟ್ಟು ಏನನ್ನೂ ಹಿಡಿದಿರಲಿಲ್ಲ. ನಾವು ನಮ್ಮ ಬಲೆಗಳನ್ನು ಯಾವ ಕಡೆಯಲ್ಲಿ ಹಾಕಬೇಕೆಂದು ಯೇಸುವೇ ನಮಗೆ ಹೇಳಬೇಕು ಮೀನುಗಳನ್ನು ನಮ್ಮ ಬಲೆಗಳೊಳಗೆ ಸೆಳೆದು ಕೊಳ್ಳುವವನು ಯೇಸುವೇ ಆಗಿದ್ದಾನೆ (ಲೂಕ 5:4-6 ನೋಡಿರಿ).

7 ಯೇಸುವಿಗೆ ಪ್ರಿಯನಾಗಿದ್ದ ಶಿಷ್ಯನಾದ ಯೋಹಾನನು (ಯೋಹಾನ 13:23), ಅದ್ಭುತವಾದ ರೀತಿಯಲ್ಲಿ ಮೀನುಗಳು ಸಿಕ್ಕದ್ದನ್ನು ನೋಡಿದ ಕೂಡಲೇ ದಡದಲ್ಲಿರುವ ವ್ಯಕ್ತಿಯು ಯಾರೆಂಬದನ್ನು ತಿಳಿದುಕೊಂಡಿದ್ದನು." ಅವರು ಕರ್ತರು!"

ಪೇತ್ರನು ಅದನ್ನು ಕೇಳಿದ ತಕ್ಷಣವೇ ನೀರಿನೊಳಗೆ ಜಿಗಿದನು. ಪೇತ್ರನು ಕಾರ್ಯದಲ್ಲಿ ಯಾವಾಗಲೂ ಶೀಘ್ರಗತಿಯುಳ್ಳವನಾಗಿದ್ದನು (ಮತ್ತಾಯ 14:28-29, ಯೋಹಾನ 18:10). ಪೇತ್ರನು ಮುಂದೇನು ಮಾಡಿದನೆಂದು ಯೋಹಾನನು ಹೇಳುವದಿಲ್ಲ, ಆದರೆ ಪೇತ್ರನು ಯೇಸುವನ್ನು ಸಂಧಿಸಲು ದಡಕ್ಕೆ ಹೋದನೆಂದು ತೋರುತ್ತದೆ. ಪೇತ್ರನು ತನ್ನ ಮೇಲ್ಹೊದಿಕೆಯನ್ನು ಸುತ್ತಿಕೊಂಡನು, ಯಾಕೆಂದರೆ ಅವನು ಕೆಲಸಕ್ಕಾಗಿ ಮೈಮೇಲೆ ಬಟ್ಟೆಯಿಲ್ಲದೆ ಕೇವಲ ಒಳ ಉಡುಪುಗಳನ್ನು ಮಾತ್ರವೇ ತೊಟ್ಟಿದ್ದನು.

8-9 ಇತರ ಶಿಷ್ಯರು ಮೀನುಗಳಿಂದ ತುಂಬಿದ್ದ ಬಲೆಯನ್ನು ದಡದ ತನಕ ಎಳೆದು ಕೊಂಡು ಬಂದರು. ದಡದಲ್ಲಿ ಕೆಲವು ಮೀನುಗಳು ಬೆಂಕಿಯಲ್ಲಿ ಬೇಯಿಸಲ್ಪಡುವದನ್ನು ಕಂಡರು.

10 ಅಲ್ಲಿ ಇರುವ ಮೀನುಗಳು ಶಿಷ್ಯರೆಲ್ಲರಿಗೂ ತೃಪ್ತಿಯಾಗಿ ತಿನ್ನುವಷ್ಟು ಇಲ್ಲದಿರುವದಾಗಿ ತೋರಿದ್ದರಿಂದ ಯೇಸು ಈಗಷ್ಟೇ ಹಿಡಿದಿರುವ ಮೀನುಗಳಲ್ಲಿ ಕೆಲವನ್ನು ತರುವಂತೆ ಅವರಿಗೆ ಹೇಳಿದನು.

11 ಅಂತಿಮವಾಗಿ ಅವರು ಬಲೆಯನ್ನು ದಡಕ್ಕೆ ಎಳೆದು ತಂದು ಲೆಕ್ಕಿಸಿದಾಗ 153 ದೊಡ್ಡ ಮೀನುಗಳಿದ್ದವು !

12 ದಡದಲ್ಲಿದ್ದ ವ್ಯಕ್ತಿಯು ಯೇಸುವೇ ಎಂಬದು ಶಿಷ್ಯರೆಲ್ಲರಿಗೂ ಗೊತ್ತಿತ್ತಾದರೂ ಆ ವ್ಯಕ್ತಿಯಲ್ಲಿ ಏನೋ ವಿಭಿನ್ನತೆಯಿತ್ತು. "ನೀನು ನಿಜವಾಗಿಯೂ ಕರ್ತನೋ?" ಎಂದು ಅವರು ಕೇಳಬೇಕೆಂದಿದ್ದರು. ಆದರೆ ಅವರು ಧೈರ್ಯಗೊಳ್ಳಲಿಲ್ಲ. ನಮಗೆ ಪರಿಚಯವಿರುವ ಒಬ್ಬರನ್ನು "ನೀನು ಯಾರು?" ಎಂದು ನಾವು ಎಂದಿಗೂ ಕೇಳಲಿಚ್ಛಿಸುವದಿಲ್ಲ.

13-14 ಯೇಸು ತನ್ನ ಶಿಷ್ಯರಿಗೆ ಒಟ್ಟಾಗಿ ಕಾಣಿಸಿಕೊಂಡಿದ್ದು, ಇದು ಮೂರನೆಯ ಸಾರಿ (ಯೋಹಾನ 20:19,26). ಅದಕ್ಕೆ ಮುಂಚೆ ಆತನು ಮಗ್ದಲದ ಮರಿಯಳಿಗೂ (ಯೋಹಾನ 20:14), ಕೆಲವು ಸ್ತ್ರೀಯರಿಗೂ (ಮತ್ತಾಯ 28:8-9), ಮತ್ತು ಪೇತ್ರನಿಗೂ (ಲೂಕ 24:33-34) ಕಾಣಿಸಿಕೊಂಡಿದ್ದನು.

## ಯೇಸು ಪೇತ್ರನನ್ನು ಪೂರ್ವಸ್ಥಾನಕ್ಕೆ ಪುನ: ತಂದದ್ದು (21:15-25)

15 ಅವರು ಊಟಮಾಡಿದ ಮೇಲೆ ಯೇಸು ಪೇತ್ರನಿಗೆ "ಯೋಹಾನನ[127] ಮಗನಾದ ಸೀಮೋನನೇ, ನೀನು ಇವರಿಗಿಂತ ಹೆಚ್ಚಾಗಿ ನನ್ನ ಮೇಲೆ ಪ್ರೀತಿ ಇಟ್ಟಿದ್ದೀಯೋ?" ಎಂದು ಕೇಳಿದನು. "ಇವರಿಗಿಂತ" ಅಂದರೆ "ಈ ಇತರ ಶಿಷ್ಯರಿಗಿಂತ" ಎಂಬದಾಗಿ. ಯೇಸು ಪೇತ್ರನಿಗೆ, "ಈ ಇತರ ಶಿಷ್ಯರು ಪ್ರೀತಿಸುವದಕ್ಕಿಂತಲೂ ಹೆಚ್ಚಾಗಿ ನೀನು ನನ್ನನ್ನು ಪ್ರೀತಿಸುತ್ತೀಯೋ? [128] ಎಂದು ಕೇಳುತ್ತಿದ್ದಾನೆ. ಪೇತ್ರನು ಈ ಮುಂಚೆ ಯೇಸುವಿಗೆ "ಎಲ್ಲರೂ ದಿಗಿಲುಪಟ್ಟು ಹಿಂಜರಿದರೂ ನಾನು ಹಿಂಜರಿಯುವದಿಲ್ಲ" ಎಂದು ಹೇಳಿದ್ದನು (ಮಾರ್ಕ 14:29). ಆದಾಗ್ಯು ಸ್ವತಃ ಪೇತ್ರನು ಹಿಂಜರಿದಿದ್ದನು, ಅವನು ಯೇಸುವನ್ನು ಅಲ್ಲಗಳೆದಿದ್ದನು (ಮಾರ್ಕ 14:16-72). ಆದುದರಿಂದ, ಯೇಸು ಈಗ ಪೇತ್ರನಿಗೆ "ನೀನು ನಿಜವಾಗಿಯೂ ಇವರಿಗಿಂತ ಹೆಚ್ಚಾಗಿ ನನ್ನ ಮೇಲೆ ಪ್ರೀತಿ ಇಟ್ಟಿದ್ದೀಯೋ? ನೀನು ಅದನ್ನು ನಿನ್ನ ಕಾರ್ಯಗಳಿಂದ ತೋರಿಸಿಲ್ಲ" ಎಂದು ಕೇಳುತ್ತಿದ್ದಾನೆ.

ಪೇತ್ರನು ತಾನು ಯೇಸು ಎಷ್ಟು ಪ್ರೀತಿಸುತ್ತಾನೆಂಬದನ್ನು ನಿರೂಪಿಸಲು ಪ್ರಯತ್ನಿಸಲಿಲ್ಲ. ತಾನು ವಿಫಲನಾಗಿದ್ದಾನೆಂಬದನ್ನು ಅವನು ತಿಳಿದವನಾಗಿದ್ದನು. ಅವನ ಪ್ರೀತಿಯು ಬಲಹೀನವಾಗಿತ್ತೆಂದು ಅವನಿಗೆ ಗೊತ್ತಿತ್ತು. ತಾನು ಯೇಸುವನ್ನು ಇತರ ಶಿಷ್ಯರಿಗಿಂತ ಹೆಚ್ಚಾಗಿ ಪ್ರೀತಿಸಲಿಲ್ಲ ಎಂಬದು ಅವನಿಗೆ ಗೊತ್ತಿತ್ತು. ಅವರು ತಮ್ಮ ಕರ್ತನನ್ನು ನಿರಾಕರಿಸಿರಲಿಲ್ಲ. ಆದರೆ ತನ್ನ ಹೃದಯದಲ್ಲಿ ಪೇತ್ರನು ಖಂಡಿತವಾಗಿಯೂ ಯೇಸುವನ್ನು ಪ್ರೀತಿಸುತ್ತಿದ್ದನು ಮತ್ತು ಯೇಸು ಪೇತ್ರನ ಹೃದಯವನ್ನು ಬಲ್ಲವನಾಗಿದ್ದನು. ಪೇತ್ರನು ಯೇಸುವಿಗೆ "ಕರ್ತನೇ, ನಾನು ನಿನ್ನ ಮೇಲೆ ಪ್ರೀತಿಯಿಟ್ಟಿದ್ದೇನೆಂಬದನ್ನು ನೀನೇ ಬಲ್ಲೆ" ಎಂದಷ್ಟೇ ಹೇಳಿದನು. ಆಗ ಯೇಸು ಅವನಿಗೆ " ಸರಿ, ನೀನು ನನ್ನನ್ನು ಪ್ರೀತಿಸುವದಾದರೆ ಇದನ್ನು ಮಾಡು: ನನ್ನ ಕುರಿಗಳನ್ನು ಮೇಯಿಸು" ಈಗಿನಿಂದ ನೀನು ನನಗೆ ವಿಧೇಯನಾಗುವದರ ಮೂಲಕ ನಿನ್ನ ಪ್ರೀತಿಯನ್ನು ನಿರೂಪಿಸು. ನಾನು ಒಳ್ಳೇ ಕುರುಬನು, ನಾನು ಕುರಿಗಳಿಗಾಗಿ ನನ್ನ ಪ್ರಾಣವನ್ನು ನೀಡಲು ಬಂದೆನು (ಯೋಹಾನ 10:11). ಆದ್ದರಿಂದ, ನಾನು ನನ್ನ ಕುರಿಗಳನ್ನು ನಿನಗೆ ಒಪ್ಪಿಸುತ್ತಿದ್ದೇನೆ. ಅವುಗಳನ್ನು ಮೇಯಿಸು. ಅವುಗಳನ್ನು ಪರಾಂಬರಿಸು. ಅವರಿಗೆ ಒಂದು ಮಾದರಿಯನ್ನು ತೋರಿಸು (1 ಪೇತ್ರ 5:2-3) ಅವುಗಳಿಗಾಗಿ ಮರಣಿಸು." ಎಂದು ಹೇಳಿದನು.

16-17 ಯೇಸು ಇನ್ನು ಎರಡು ಸಾರಿ ಪೇತ್ರನಿಗೆ, "ನೀನು ನನ್ನ ಮೇಲೆ ಪ್ರೀತಿ ಇಟ್ಟಿದ್ದೀಯೋ?" ಎಂದು ಕೇಳಿದನು. ಯೇಸು ಮೂರನೆಯ ಸಾರಿ ಕೇಳಿದಾಗ ಪೇತ್ರನಿಗೆ ದುಃಖವಾಯಿತು. ಬಹುಶ: ತಾನು ಯೇಸುವನ್ನು ಮೂರು ಸಾರಿ ಅಲ್ಲಗಳೆದದ್ದನ್ನು ಆತನ ನೆನಪಿಗೆ ತಂದಿರಬಹುದು. ಪೇತ್ರನು ಮೂರು ಸಾರಿ ಯೇಸುವನ್ನು ಅಲ್ಲಗಳೆದದ್ದರಿಂದ ಈಗ ಆತನು ಯೇಸುವಿಗೆ ತಾನು ಆತನನ್ನು ಪ್ರೀತಿಸುತ್ತಾನೆಂದು ಮೂರು ಸಾರಿ ಹೇಳಬೇಕಾಗಿತ್ತು, ಮತ್ತು ಪೇತ್ರನು ಉತ್ತರಿಸಿದಾಗ ಪ್ರತಿಸಾರಿಯೂ ಯೇಸು ಅವನಿಗೆ ಹಿಂಡಿಗೆ ಕುರುಬನಾಗಿರು ಎಂದು ಹೇಳಿದನು. ಇದನ್ನು ಹೇಳುವದರ ಮೂಲಕ ಸಭೆಯಲ್ಲಿ ನಾಯಕನಾಗಿರುವ ಪೇತ್ರನ ಅಧಿಕಾರವನ್ನು ಯೇಸು ಅವನಿಗೆ ಪುನ: ಸ್ಥಾಪಿಸಿದನು. ಪೇತ್ರನು ಯೇಸುವನ್ನು ಅಲ್ಲಗಳೆಯುವ ಪಾಪಮಾಡಿದ್ದರ ಕಾರಣದಿಂದ ಇತರ ಶಿಷ್ಯರು ಆತನನ್ನು ಒಪ್ಪಿಕೊಳ್ಳದೇ ಇದ್ದಿರಬೇಕು. ಆದರೆ ಯೇಸು ಇಲ್ಲಿ ಪೇತ್ರನನ್ನು

ಮೂರು ಸಾರಿ ತನ್ನ ಸಭೆಯಲ್ಲಿ ಕುರುಬನಾಗಿರಬೇಕೆಂದು ನೇಮಿಸುತ್ತಾನೆ. ಪೇತ್ರನು ಕ್ಷಮಿಸಲ್ಪಟ್ಟಿದ್ದನು, ಪೇತ್ರನು ಪೂರ್ವಸ್ಥಾನವನ್ನು ಪುನಃ ಹೊಂದಿದ್ದನು.

ಯೇಸು ಪೇತ್ರನಿಗೆ ಕೇವಲ ಆತನ ಪ್ರೀತಿಯ ಬಗ್ಗೆ ಮಾತ್ರವೇ ಕೇಳಿದನೆಂಬದನ್ನು ಗಮನಿಸಿರಿ. ಕುರುಬನಾಗಿರುವದಕ್ಕೆ ಒಂದೇ ಒಂದು ಸಂಗತಿಯು ಅವಶ್ಯವಾಗಿರುತ್ತದೆ, ಅದೇನೆಂದರೆ ಯೇಸುವಿನ ಮೇಲೆ ಪ್ರೀತಿ. ಯೇಸುವಿಗಾಗಿ ಪ್ರೀತಿಯಿಲ್ಲದ ಹೊರತು ಯಾವ ಮನುಷ್ಯನು ಹಿಂಡನ್ನು ಪ್ರೀತಿಸಲಾರನು ಮತ್ತು ಹಿಂಡಿಗಾಗಿ ಪ್ರೀತಿಯಿಲ್ಲದೆ ಯಾವನೂ ಒಬ್ಬ ಕುರುಬನಾಗಿರಲಾರನು. ಯೇಸುವನ್ನು ಪ್ರೀತಿಸದ ವ್ಯಕ್ತಿಗಳು ಜನರನ್ನು ನಿಜವಾಗಿಯೂ ಪ್ರೀತಿಸುವದಿಲ್ಲ.

ಯೇಸು ಪೇತ್ರನಿಗೆ ಹೇಳಿದ್ದನ್ನೇ ಪ್ರತಿಯೊಬ್ಬ ಶಿಷ್ಯನಿಗೂ ಹೇಳುತ್ತಾನೆ: "ನನ್ನ ಕುರಿಗಳನ್ನು ಮೇಯಿಸು" (ವಚನ 17). ನಾವು ಮನುಷ್ಯರನ್ನು ಹಿಡಿಯುವ ಬೇಸ್ತರಾಗಿ ಮಾತ್ರವೇ ಕರೆಯಲ್ಪಟ್ಟಿಲ್ಲ (ಮಾರ್ಕ 1:17). ನಾವು ಕುರಿಗಳನ್ನು ಮೇಯಿಸುವವರಾಗಿ ಇರುವದಕ್ಕೂ ಸಹ ಕರೆಯಲ್ಪಟ್ಟಿದ್ದೇವೆ. ಹೌದು, ನಾವೆಲ್ಲರೂ ನಾಯಕರಾಗಿರಲು ಕರೆಯಲ್ಪಟ್ಟಿಲ್ಲ ಎಂಬದು ನಿಜವೇ. ಆದರೆ ನಾವೆಲ್ಲರೂ ಸಹ ನಮ್ಮ ಸಹೋದರ ಹಾಗು ಸಹೋದರಿಯರಿಗೆ ಪ್ರೋತ್ಸಾಹ ಮತ್ತು ಜೀವದ ಮಾತುಗಳಿಂದ "ಮೇಯಿಸುವ" ಅವಕಾಶಗಳನ್ನು ಹೊಂದಿರುತ್ತೇವೆ, ಮತ್ತು ನಾವು ಹಾಗೆಯೇ ಮಾಡತಕ್ಕದ್ದು.

**18** ನಂತರ ಯೇಸು ಪೇತ್ರನಿಗೆ "ಅನಂತರ ನೀನು ಮುದುಕನಾದಾಗ ನಿನ್ನ ಕೈಗಳನ್ನು ಚಾಚುವಿ "ಎಂದನು. ಅಂದರೆ ಯೇಸುವಿನ ಹಾಗೆಯೇಪೇತ್ರನು ಶಿಲುಬೆಯ ಮೇಲೆ ತನ್ನ ಕೈಗಳನ್ನು ಚಾಚುವವನೆಂದು ಯೇಸುವಿನ ತಾತ್ಪರ್ಯವಾಗಿತ್ತು. ಆಮೇಲೆ ಅವನು ಶಿಲುಬೆಯ ಸ್ಥಳಕ್ಕೆ ನಡೆಸಲ್ಪಡುವನು–"ನಿನಗೆ ಇಷ್ಟವಿಲ್ಲದ ಕಡೆಗೆ" ಮೊದಲು ಒಬ್ಬ ಅಪರಾಧಿಯ ಕೈಗಳನ್ನು ಚಾಚಿ ಶಿಲುಬೆಗೆ ಕಟ್ಟಿದ ನಂತರ ದಂಡನೆಯ ಸ್ಥಳದ ವರೆಗೆ ಶಿಲುಬೆಯನ್ನು ಹೊತ್ತುಕೊಂಡು ಹೋಗುವಂತೆ ಮಾಡುವದು ರೋಮಾಯರ ಪದ್ಧತಿಯಾಗಿತ್ತು.

**19** ಯೇಸು ಇದನ್ನು ಹೇಳುವದರ ಮೂಲಕ ಪೇತ್ರನು ಎಂಥಾ ಸಾವಿನಿಂದ ದೇವರನ್ನು ಮಹಿಮೆಪಡಿಸುವನೆಂದು ಸೂಚಿಸಿದನು ಎಂಬದಾಗಿ ಯೋಹಾನನು ವಿವರಿಸುತ್ತಾನೆ. ಯೇಸು ಶಿಲುಬೆಯ ಮೇಲಿನ ತನ್ನ ಮರಣದ ಮೂಲಕ ದೇವರನ್ನು ಮಹಿಮೆ ಪಡಿಸಿದನು. (ಯೋಹಾನ 12:23, 17:1 ನೋಡಿರಿ). ಅದೇ ರೀತಿಯಾಗಿ ವಿಧೇಯತೆ, ಹಿಂಸೆ ಮತ್ತು ಮರಣದ ಮುಖಾಂತರವಾಗಿ ಪೇತ್ರನು ಸಹ ದೇವರನ್ನು ಮಹಿಮೆಪಡಿಸುವವನಾಗಿದ್ದನು. ಅದೇ ರೀತಿಯಲ್ಲಿ ನಾವು ಹೇಗೆ ಸತ್ತರು ನಮ್ಮ ಮರಣವು ದೇವರಿಗೆ ಮಹಿಮೆ ತರಬೇಕು. ಎಂಬುದು ನಮ್ಮೊಬ್ಬೊಬ್ಬರ ಚಿಂತನೆ ಸಹ ಆಗಿರಬೇಕು. ನಾವು ಅಂತ್ಯದ ವರೆಗೂ ತಾಳ್ಮೆ, ನಂಬಿಗಸ್ಥಿಕೆ ಮತ್ತು ಪ್ರೀತಿಯುಳ್ಳವರಾಗಿ ನೆಲೆಗೊಳ್ಳುವದಾದರೆ ದೇವರು ಮಹಿಮೆ ಹೊಂದುವನು.

ಆದಿ ಸಭಾ ಚರಿತ್ರಕಾರರ ಬರಹಗಳ ಪ್ರಕಾರವಾಗಿ ಪೇತ್ರನು ನಿಜವಾಗಿಯೂ ಶಿಲುಬೆಯೊಂದರ ಮೇಲೆ ಮರಣಿಸಿದನು.

ಆತನು ತಾನು ತನ್ನ ಕರ್ತನ ಹಾಗೆ ಉದ್ದವಾಗಿ ಶಿಲುಬೆಗೆ ಹಾಕಿಸಿಕೊಳ್ಳಲು ಯೋಗ್ಯನಲ್ಲವೆಂದು ಯೋಚಿಸಿಕೊಂಡಿದ್ದರಿಂದ
ತನ್ನನ್ನು ತಲೆಕೆಳಗಾಗಿ ಶಿಲುಬೆಗೇರಿಸಲು ಆಗುತ್ತದೋ ಎಂದು ಆತನು ರೋಮಾಯ ಸಿಪಾಯಿಗಳನ್ನು ಕೇಳಿಕೊಂಡನೆಂದು ಪ್ರತೀತಿಯಿರುತ್ತದೆ.

ಅಂತಿಮವಾಗಿ ಯೇಸು ಪೇತ್ರನಿಗೆ, "ನನ್ನನ್ನು ಹಿಂಬಾಲಿಸು [129]"ಎಂದನು. ಯೇಸು ಮೂರು ವರ್ಷಗಳ ಹಿಂದೆ ಅವರು ಈಗ ನಿಂತುಕೊಂಡಿದ್ದ ಅದೇ ಗಲಿಲಾಯ ಸಮುದ್ರದ ದಡದಲ್ಲಿ ಇದೇ ಮಾತುಗಳನ್ನು ಪೇತ್ರನಿಗೆ ಹೇಳಿದ್ದನು (ಮಾರ್ಕ 1:16-17). ಆದರೆ ಪೇತ್ರನು ಉತ್ತಮವಾಗಿ ಹಿಂಬಾಲಿಸಿರಲಿಲ್ಲ. ಈಗ ಯೇಸು ಅವನಿಗೆ ಇನ್ನೊಂದು ಅವಕಾಶವನ್ನು ಕೊಡುತ್ತಿದ್ದಾನೆ. ಪೇತ್ರನು ಇನ್ನೆಂದಿಗೂ ಪುನಃ ತನ್ನ ಕರ್ತನನ್ನು ಅಲ್ಲಗಳೆಯದವನಾಗಿದ್ದಾನೆ.

ನನ್ನನ್ನು ಹಿಂಬಾಲಿಸು. ಈ ಮಾತುಗಳನ್ನು ತಲೆಮಾರುಗಳಿಂದ ನಾವು ಕೇಳುತ್ತಲಿದ್ದೇವೆ. ಯೇಸು ಈ ದಿನವು ಸಹ ನಮಗೆ "ನನ್ನನ್ನು ಹಿಂಬಾಲಿಸು" ಎಂದು ಹೇಳುತ್ತಿರುವನು. ಯೇಸು ಈ ಭೂಮಿಯ ಮೇಲಿರುವಾಗ ಜನರನ್ನು ಕರೆದಾಗ ಸಾಮಾನ್ಯವಾಗಿ ಆತನು "ನನ್ನನ್ನು ಸ್ವೀಕರಿಸಿಕೊಳ್ಳಿರಿ" ಅಥವಾ "ನನ್ನಲ್ಲಿ ನಂಬಿಕೆಯಿಡಿರಿ " ಎಂದು ಹೇಳಲಿಲ್ಲ. ಆತನು "ನನ್ನನ್ನು ಹಿಂಬಾಲಿಸು" ಎಂದು ಹೇಳಿದನು. ಯೇಸುವನ್ನು ಸ್ವೀಕರಿಸಿಕೊಳ್ಳುವದು, ಆತನಲ್ಲಿ ನಂಬಿಕೆಯಿಡುವದು ಎಂದರೆ ಆತನನ್ನು ಹಿಂಬಾಲಿಸುವದೆಂದರ್ಥವಾಗಿದೆ. ಹಲವಾರು ವೇಳೆ ನಾವು ಕ್ರೈಸ್ತರಾಗಿರಬೇಕಾದರೆ ಯೇಸುವನ್ನೂ, ಆತನ ಆಶೀರ್ವಾದಗಳನ್ನು ಸ್ವೀಕರಿಸಿಕೊಂಡು ಸಭೆಯೊಂದರಲ್ಲಿ ಸದಸ್ಯರಾಗಿದ್ದರೆ ಸಾಕು ಎಂದು ಯೋಚಿಸಿಕೊಳ್ಳುತ್ತೇವೆ. ಆದರೆ ಕ್ರೈಸ್ತ ಜೀವನವು ಅದಕ್ಕಿಂತಲೂ ಹೆಚ್ಚಿನ ಅರ್ಥಹೊಂದಿದೆ. ಅದರರ್ಥವು ಯೇಸುವನ್ನು ಹಿಂಬಾಲಿಸುವದಾಗಿದೆ. ನಾವು ಮೇಲೆದ್ದು ಆತನು ಹೋದಕಡೆಗೆ ಹೋಗುವದು ಇದರರ್ಥವಾಗಿದೆ ಮತ್ತು ಯೇಸು ಎಲ್ಲಿಗೆ ಹೋದನು? ಆತನು ಶಿಲುಬೆಗೆ ಹೋದನು ಮತ್ತು ನಾವು ನಿಜವಾಗಿಯೂ ಆತನ ಶಿಷ್ಯರಾಗಿರುವದಾದರೆ, ನಾವು ಸಹ ಅಲ್ಲಿಯೇ ಹೋಗುವೆವು (ಮಾರ್ಕ 8:34 ಮತ್ತು ವ್ಯಾಖ್ಯಾನ ನೋಡಿರಿ).

**20-21** ಅನಂತರ ಪೇತ್ರನು ಯೇಸುವಿಗೆ ಪ್ರಿಯನಾಗಿದ್ದ ಶಿಷ್ಯನಾದ ಯೋಹಾನನ್ನು ಕಂಡನು (ಯೋಹಾನ 13:23-35). ಪೇತ್ರನು ಯೇಸುವಿಗೆ "ಕರ್ತನೇ, ಇವನ ವಿಷಯವೇನು?"ಎಂದನು. ಅಂದರೆ "ಈತನಿಗೆ (ಯೋಹಾನನಿಗೆ) ಏನು ಸಂಭವಿಸುವದು" ಎಂಬದು ಪೇತ್ರನ ತಾತ್ಪರ್ಯವಾಗಿತ್ತು. ಪೇತ್ರನು ಯೋಹಾನನ ಭವಿಷ್ಯದ ಬಗ್ಗೆ ಕುತೂಹಲವುಳ್ಳವನಾಗಿದ್ದನು.

ಬಹುಶ: ಯೋಹಾನ ಹಾಗು ಆತನ ಸಹೋದರನಾದ ಯಾಕೋಬ ಒಮ್ಮೆ ಯೇಸುವಿನ ರಾಜ್ಯದಲ್ಲಿ ಹೆಚ್ಚಿನ ಸ್ಥಾನವನ್ನು ಕೇಳಿದ ಘಟನೆಯನ್ನು ಪೇತ್ರನು ನೆನಪಿಸಿಕೊಂಡನು. (ಮಾರ್ಕ 10:35-37). ಬಹುಶಃ ಯೋಹಾನನು ತನಗಿಂತ ಹೆಚ್ಚಿನ ಸ್ಥಾನವನ್ನು ಹೊಂದುವನೆಂದು ಪೇತ್ರನು ಚಿಂತನೆಗೊಂಡಿರಬೇಕು. ಯೋಹಾನನು ರಕ್ತ ಸಾಕ್ಷಿಯಾಗಿ ಸಾಯಲಿರುವನೋ?

22 ಆದರೆ ಯೋಹಾನನ ವಿಷಯವಾಗಿ ಕೇಳಿದ್ದಕ್ಕಾಗಿ ಯೇಸು ಪೇತ್ರನನ್ನು ಗದರಿಸಿದನು."ಯೋಹಾನನಿಗೆ ಏನು ಸಂಭವಿಸಿದರೂ ನಿನಗೇನು?" ಅವನು ರಕ್ತಸಾಕ್ಷಿಯಾಗಿ ಸಾಯಬೇಕೆಂದು ನನ್ನ ಇಷ್ಟವಾಗಿದ್ದರೆ ಅವನು ರಕ್ತ ಸಾಕ್ಷಿಯಾಗಿಯೇ ಸಾಯುವನು. ನಾನು ಬರುವ ತನಕ ಇವನು ಇರಬೇಕೆಂದು ನನಗೆ ಮನಸ್ಸಿದ್ದರೆ. ಅವನು ನಾನು ಬರುವವರೆಗೂ ಅವನು ಜೀವಂತವಾಗಿರುವನು, ನಿನಗೇನು? ನೀನು ಯೋಚಿಸಬೇಕಾದದ್ದು ಒಂದೇ ಸಂಗತಿ: "ನನ್ನನ್ನು ಹಿಂಬಾಲಿಸಬೇಕು" ಎಂದು ಹೇಳಿದನು.

23 ಯೇಸು ಪೇತ್ರನಿಗೆ "ನಾನು ಬರುವ ತನಕ ಇವನು ಇರಬೇಕೆಂದು ನನಗೆ ಮನಸ್ಸಿದ್ದರೆ ಅದು ನಿನಗೇನು?" ಎಂದು ಹೇಳಿದ್ದನ್ನು ಇತರ ಶಿಷ್ಯರೂ ಕೇಳಿಸಿಕೊಂಡಿರುವಂತೆ ತೋರುತ್ತದೆ. ಯೋಹಾನನು ಸಾಯುವದಿಲ್ಲ ಎಂದು ಯೇಸು ಹೇಳಿರಬೇಕೆಂದು ಅವರು ನೆನಸಿಕೊಂಡರು. ಆದರೆ ಯೇಸು ಹಾಗೆ ಹೇಳಿರಲಿಲ್ಲ..

ಹಾಗಿದ್ದರೂ, ಯೇಸು ಬರುವ ತನಕವೂ ಯೋಹಾನನು ಸಾಯುವದಿಲ್ಲ ಎಂಬ ವದಂತಿಯು ಹರಡಿತು. ಈ ಸುಳ್ಳು ವದಂತಿಯನ್ನು ಸರಿಪಡಿಸುವದು ಯೋಹಾನನಿಗೆ ಪ್ರಾಮುಖ್ಯವಾಗಿತ್ತು, ಯಾಕೆಂದರೆ ಯೇಸು ಬರುವದಕ್ಕೆ ಮುಂಚೆ ಯೋಹಾನನು ಸಾಯುವದಾದರೆ ಜನರು ಯೇಸುವಿನ ಮಾತುಗಳಲ್ಲಿ ಇಟ್ಟ ನಂಬಿಕೆಯು ಅಲುಗಾಡುವದು. ಆದುದರಿಂದ ಯೋಹಾನನು ತಾನು ಯೇಸು ಬರುವತನಕ ಜೀವಂತವಾಗಿರುವದಿಲ್ಲ ಎಂಬದನ್ನು ಇಲ್ಲಿ ಸ್ಪಷ್ಟವಾಗಿ ತಿಳಿಯಪಡಿಸುತ್ತಾನೆ.

24 ಯೋಹಾನನು ಈ ಸುವಾರ್ತೆಯಲ್ಲಿ ಎಲ್ಲಿಯೂ ತನ್ನ ಸ್ವಂತ ಹೆಸರನ್ನು ಪ್ರಸ್ತಾಪಿಸುವದಿಲ್ಲ. ಅವನಿಗೆ ಯಾವ ಪ್ರಶಂಸೆಗಳ ಅಗತ್ಯವಿರಲಿಲ್ಲ. ತಾನು ಬರೆದದ್ದೆಲ್ಲವೂ ಸತ್ಯ ಎಂಬದನ್ನು ಆತನು ಬಲ್ಲವನಾಗಿದ್ದನು, ಯಾಕೆಂದರೆ ಆತನು ಈ ಎಲ್ಲಾ ಸಂಗತಿಗಳನ್ನು ತನ್ನ ಸ್ವಂತ ಕಣ್ಣುಗಳಿಂದ ನೋಡಿದ್ದನು ಮತ್ತು ಸ್ವಂತ ಕಿವಿಗಳಿಂದ ಕೇಳಿದ್ದನು (ಯೋಹಾನ 19:35, 1 ಯೋಹಾನ 1:1 ನೋಡಿರಿ).

25 ಯೋಹಾನನು ಯೇಸು ಹೇಳಿದ ಹಾಗು ಮಾಡಿದವು ಗಳಲ್ಲಿ ಒಂದು ಚಿಕ್ಕ ಭಾಗವನ್ನು ಮಾತ್ರವೇ ಬರೆದಿರುತ್ತಾನೆ (ಯೋಹಾನ 20:30). ನಾವು ನಾಲ್ಕು ಸುವಾರ್ತೆಗಳಲ್ಲಿ ಬರೆದಿರುವದನ್ನೆಲ್ಲಾ ಒಟ್ಟುಗೂಡಿಸಿದರೂ ಸಹ ನಾವು ಯೇಸುವಿನ ಜೀವಿತದ ಸ್ವಲ್ಪ ಭಾಗವನ್ನು ಮಾತ್ರವೇ ತಿಳಿದವರಾಗಿದ್ದೇವೆ. "ಒಂದು ವೇಳೆ ಎಲ್ಲವನ್ನೂ ಬರೆದಿದ್ದರೆ ಬರೆಯಬೇಕಾದ ಪುಸ್ತಕಗಳನ್ನು ಲೋಕವೇ ಹಿಡಿಸದೆ ಹೋದೀತೆಂದು ನಾನು ನೆನಸುತ್ತೇನೆ" ಎಂದು ಯೋಹಾನನು ಹೇಳುತ್ತಾನೆ. ಇದು ಅನೇಕ, ಅನೇಕ ಪುಸ್ತಕಗಳಿರುತ್ತಿದ್ದವೆಂದು ಹೇಳುವ ಯೆಹೂದ್ಯರ ಮಾತಿನ ಶೈಲಿಯಾಗಿತ್ತು!.

---

## ಟಿಪ್ಪಣಿ

1 ಅರ್ಥಮಾಡಿಕೊಳ್ಳಲಿಲ್ಲ ಎಂಬ ಪದದ ಸ್ಥಾನದಲ್ಲಿ ಅನೇಕ ಬೈಬಲ್ ಭಾಷಾಂತರಗಳು"ಮುಸುಕಲಿಲ್ಲ" ಎಂದು ಹೇಳುತ್ತವೆ. ಗ್ರೀಕ ಪದವು ಎರಡೂ ಅರ್ಥಗಳನ್ನು ಹೊಂದಿರಬಲ್ಲದು.

2 ಯಾವ ಅರ್ಥವನ್ನು ಉಪಯೋಗಿಸಿದ್ದರೂ ಹೇಳಿಕೆಯ ಸತ್ಯವಾಗಿರುತ್ತದೆ. "ಮೆಸ್ಸೀಯ" ಎಂಬ ಪದದ ಅರ್ಥಕ್ಕಾಗಿ ಯೋಹಾನ 1:41ರ ವ್ಯಾಖ್ಯಾನದ ಅಡಿಟಿಪ್ಪಣಿಯನ್ನು ನೋಡಿರಿ.

3 ಹೊಸ ಒಡಂಬಡಿಕೆಯಲ್ಲಿ "ಲೋಕ" ಎಂಬ ಪದವು ಹಲವಾರು ವೇಳೆ "ಅವಿಶ್ವಾಸಿಗಳಾದ ಜನರ"ನ್ನು ಅಂದರೆ, ದೇವರ ಕೃಪೆ ಹಾಗು ಸತ್ಯವನ್ನು ತಿರಸ್ಕರಿಸುವ ಜನರನ್ನು ಸೂಚಿಸಲು ಉಪಯೋಗಿಸಲ್ಪಟ್ಟಿದೆ.

4 ಇಸ್ರಾಯೇಲವು ಯೆಹೂದ್ಯ ರಾಷ್ಟ್ರದ ಹೆಸರಾಗಿದೆ.

5 ಯೇಸುವಿನ ಹೆಸರಿನಲ್ಲಿ ನಂಬಿಕೆಯಿಡುವದು ಹಾಗು ಯೇಸುವಿನಲ್ಲಿ ನಂಬಿಕೆಯಿಡುವದು ಎರಡೂ ಒಂದೇ ಆಗಿದೆ. "ಯೇಸು" ಎಂಬ ಹೆಸರು ಸ್ವತಃ ಯೇಸುವನ್ನು ಪ್ರತಿನಿಧಿಸುತ್ತದೆ.

6 ಸ್ವಾಭಾವಿಕ ವಂಶದಿಂದ ಎಂಬ ಪದಗಳ ಬದಲಿಗೆ ಕೆಲವು ಬೈಬಲ್ ಆವೃತ್ತಿಗಳು" ರಕ್ತ ಸಂಬಂಧದಿಂದ" ಅಥವಾ" ರಕ್ತ ಸಂಬಂಧಗಳಿಂದ' ಎಂದು ಹೇಳುತ್ತವೆ, ಅದು ಮೂಲ ಗ್ರೀಕ ಪ್ರತಿಯ ಅಕ್ಷರಶ: ಭಾಷಾಂತರವಾಗಿದೆ. ಅರ್ಥವು ಒಂದೆ ಆಗಿದೆ.

7 ಯೇಸು ದೇವರ ಮಗನೆಂದು ಕರೆಯಲ್ಪಟ್ಟಿದ್ದಾನೆ ಯಾಕೆಂದರೆ ಆತನು ದೇವರ ಪವಿತ್ರಾತ್ಮ ಹಾಗು ಒಬ್ಬ ಮಾನವ ತಾಯಿಯಿಂದ ಜನಿಸಿದನು. ಹೇಗಿದ್ದರೂ, ಯೇಸು ಒಬ್ಬ ಮಾನವ ಮಗುವಾದಾಗ ಮಾತ್ರವೇ ದೇವಕುಮಾರನಾಗಲಿಲ್ಲ. ಯೇಸು ಯಾವಾಗಲೂ ದೇವರ ಮಗನಾಗಿದ್ದಾನೆ (ಯೋಹಾನ 1:1-2, ಇಬ್ರಿಯ 1:2 ನೋಡಿರಿ).

8 ಕೃಪೆಯ ಮೇಲೆ ಕೃಪೆಯನ್ನು ಎಂಬ ಪದಗಳ ಬದಲಾಗಿ ಕೆಲವು ಬೈಬಲ್ ಭಾಷಾಂತರಗಳು" ಆಶೀರ್ವಾದದ ಮೇಲೆ ಆಶೀರ್ವಾದವನ್ನು" ಎಂದು ಹೇಳುತ್ತವೆ. ಈ ಸಂದರ್ಭದಲ್ಲಿ, "ಕೃಪೆ" ಎಂದರೆ "ಆಶೀರ್ವಾದ" ಎಂದರ್ಥವಾಗಿದೆ.

9 ಇಲ್ಲಿ "ಧರ್ಮಶಾಸ್ತ್ರ" ಎಂಬ ಪದಕ್ಕೆ ಎರಡು ಅರ್ಥಗಳಿರುತ್ತವೆ. ಇದು ಮೋಶೆಯು ಸೀನಾಯ್ ಪರ್ವತದಿಂದ ತಂದ ಕಲ್ಲಿನ ಹಲಿಗೆಗಳ ಮೇಲೆ ಬರೆಯಲ್ಪಟ್ಟ ದಶಾಜ್ಞೆಗಳೆಂಬ ಅರ್ಥವನ್ನು ಕೊಡುತ್ತದೆ. ಅಲ್ಲದೆ ಇದು ಮೋಶೆಯ ಅನಂತರ ಬರೆದ ಹಳೆ ಒಡಂಬಡಿಕೆಯ ಮೊದಲ ಐದು ಪುಸ್ತಕಗಳೆಂದೂ ಸಹ ಆಗುತ್ತದೆ. ಹೆಚ್ಚಿನ ಚರ್ಚೆಗಾಗಿ ಪದಪಟ್ಟಿ: ಧರ್ಮಶಾಸ್ತ್ರ ನೋಡಿರಿ).

10 ಕ್ರಿಸ್ತನು ಎಂಬದು ಗ್ರೀಕ ಪದವಾಗಿದ್ದು "ಅಭಿಷೀಕ್ತನು" ಅಂದರೆ, ದೇವರಿಂದ ಆರಿಸಿಕೊಳ್ಳಲ್ಪಟ್ಟವನೂ, ಹಾಗು ಬಲದಿಂದ ತುಂಬಿಸಲ್ಪಟ್ಟವನೂ ಎಂಬ ಅರ್ಥವನ್ನು ಕೊಡುತ್ತದೆ. "ಮೆಸ್ಸೀಯ" ಎಂಬದು ಅದಕ್ಕೆ ಸಮಾನವಾದ ಇಬ್ರಿಯ ಪದವಾಗಿದೆ.

11 "ಏಕ ಪು ತ್ರನು" ಎಂಬದಕ್ಕೆ ಬದಲಾಗಿ ಕೆಲವು ಬೈಬಲ್ ಭಾಷಾಂತರಗಳು "ಒಬ್ಬನೇ ಮಗ" ಎಂದು ಹೇಳುತ್ತವೆ. ಅರ್ಥವು ಒಂದೇ ಆಗಿದೆ.

12 ಯಾಜಕರು ಮೋಶೆಯ ಅಣ್ಣನೂ, ಪ್ರಥಮ ಮಹಾ ಯಾಜಕನೂ ಆದ ಆರೋನನ ವಂಶಸ್ಥರಾಗಿದ್ದರು. ಲೇವಿಯರು ಅಬ್ರಹಾಮನ ಮೊಮ್ಮನಾದ ಯಾಕೋಬನ ಹನ್ನೆರಡು ಮಕ್ಕಳಲ್ಲಿ ಒಬ್ಬನಾದ ಲೇವಿಯನ ವಂಶದವರಾಗಿದ್ದರು. ಸ್ವತಃ ಆರೋನನ ಲೇವಿವಂಶಕ್ಕೆ ಸೇರಿದವನಾಗಿದ್ದನು. ಲೇವಿಯರು ಯೆಹೂದಿ ದೇವಾಲಯದಲ್ಲಿನ ಸೇವೆಗಳನ್ನು ನೋಡಿಕೊಳ್ಳುವವರಾಗಿದ್ದರು.

13 ಹೊಸ ಒಡಂಬಡಿಕೆಯ ಕಾಲದಲ್ಲಿ ಯೆರೂಸಲೇಮು ಯೆಹೂದ್ಯ ಜನಾಂಗದ ರಾಜಧಾನಿಯೂ, ಯೆಹೂದಿಧಾರ್ಮಿಕ ಜೀವಿತದ ಕೇಂದ್ರ ಸ್ಥಾನವೂ ಆಗಿತ್ತು. ಇಂದು ಇದು ಆಧುನಿಕ ಇಸ್ರಾಯೇಲಿನ ಪ್ರಮುಖ ಪಟ್ಟಣಗಳಲ್ಲಿ ಒಂದಾಗಿದೆ.

14 ಮತ್ತಾಯ 11:13-14 ಮತ್ತು 17:12-13ರಲ್ಲಿ ಮಲಾಕಿಯನು ಯಾವ ಎಲೀಯನ ಕುರಿತು ಪ್ರವಾದಿಸಿದನೋ ಆ ಎಲೀಯನು ಸ್ನಾನಿಕನಾದ ಯೋಹಾನನೇ ಎಂದು ಯೇಸು ಹೇಳಿದನು. ಯೋಹಾನನು ಎಲೀಯನ ಸ್ಥಾನದಲ್ಲಿ ಅಂದರೆ ಎಲೀಯನ ಗುಣಶಕ್ತಿಗಳಿಂದ ಬಂದಿದ್ದನೆಂಬುದು ಯೇಸುವಿನ ತಾತ್ಪರ್ಯವಾಗಿತ್ತು (ಲೂಕ 17). ಒಂದು ಆತ್ಮೀಕ ಅರ್ಥದಲ್ಲಿ ಸ್ನಾನಿಕನಾದ ಯೋಹಾನನು ಎಲೀಯನಂತಿದ್ದನು. ಯೋಹಾನನೇ ಸ್ವತಃ ಎಲೀಯನಲ್ಲದಿದ್ದಾಗ್ಯು ಅವನು ಮಲಾಕಿಯನ ಪ್ರವಾದನೆಯ ನೆರವೇರಿಕೆಯಾಗಿದ್ದನು.

15 ಅನ್ಯ ಜನರು ಯೆಹೂದ್ಯರ ಧರ್ಮಶಾಸ್ತ್ರವನ್ನು ಅನುಸರಿಸಲಿಲ್ಲ ಎಂಬ ಕಾರಣಕ್ಕಾಗಿ ಯೆಹೂದ್ಯರು ಅವರನ್ನು "ಪಾಪಿಗಳು" ಎಂದು ಪರಿಗಣಿಸಿದ್ದರು.

16 ಕೆಲವು ವಾರಗಳ ಹಿಂದೆ ಯೋಹಾನನು ಈಗಾಗಲೇ ಯೇಸುವಿನ ದೀಕ್ಷಾಸ್ನಾನ ಮಾಡಿಸಿದ್ದನು. ಯೇಸು ದೀಕ್ಷಾಸ್ನಾನ ಹೊಂದಿದ ನಂತರ ಸೈತಾನನಿಂದ ಶೋಧಿಸಲ್ಪಡುವದಕ್ಕಾಗಿ ಮರುಭೂಮಿಗೆ ನಡೆಸಲ್ಪಟ್ಟನು (ಮತ್ತಾಯ 4:1-11). ಈ ಭಾಗದಲ್ಲಿನ ಘಟನೆಯು ಯೇಸು ಮರುಭೂಮಿಯಿಂದ ಹಿಂದಿರುಗಿ ಬಂದ ಮೇಲೆ ಸಂಭವಿಸಿತು.

17 ಮೆಸ್ಸೀಯ ಎಂಬದು ಇಬ್ರಿಯ ಪದವಾಗಿದ್ದು "ಅಭಿಷೀಕ್ತನು" ಎಂದರ್ಥ ಕೊಡುತ್ತದೆ. ಗ್ರೀಕನಲ್ಲಿ "ಕ್ರಿಸ್ತನು" ಎಂಬದು ಅದಕ್ಕೆ ಸಮಾನವಾದ ಪದವಾಗಿದ್ದು. ಅದೇ ಅರ್ಥ ಕೊಡುತ್ತದೆ."ಮೆಸ್ಸೀಯ" ಮತ್ತು "ಕ್ರಿಸ್ತನು" ಒಂದೇ ಅರ್ಥ ಹೊಂದಿವೆ. ಹೊಸ ಒಡಂಬಡಿಕೆಯಲ್ಲಿ ಮೆಸ್ಸೀಯ ಎಂಬದು ಈ ವಚನ ಹಾಗು ಯೋಹಾನ 4:25 ರಲ್ಲಿ ಮಾತ್ರವೇ ಕಂಡುಬರುತ್ತದೆ.

18 ಹೊಸ ಒಡಂಬಡಿಕೆಯ ಸಮಯಗಳಲ್ಲಿ ಯೇಸು ಅರಾಮಿಕ ಭಾಷೆಯನ್ನು ಮಾತಾಡಿದನು ಮತ್ತು ಮಧ್ಯ ಪೂರ್ವದ ಹೆಚ್ಚಿನ ಪಾಲು ನಿವಾಸಿಗಳು ಇದೇ ಭಾಷೆಯನ್ನು ಮಾತಾಡಿದರು.

19 ಯೋಹಾನನು ತನ್ನ ಸುವಾರ್ತೆಯನ್ನು ಗ್ರೀಕ ಭಾಷೆಯಲ್ಲಿ ಮಾತಾಡಿದನು. ಹೊಸ ಒಡಂಡಿಕೆಯ ಹೆಚ್ಚಿನ ಪಾಲು ಪು ಸ್ತಕಗಳು ಮೂಲತಃ ಗ್ರೀಕ ಭಾಷೆಯಲ್ಲಿ ಬರೆಯಲ್ಪಟ್ಟವು . ಗ್ರೀಕ ಭಾಷೆಯು ದಕ್ಷಿಣ ಯುರೋಪದ ಒಂದು ಪ್ರಮುಖ ರಾಷ್ಟ್ರವಾದ ಗ್ರೀಸ್ ಜನರ ಭಾಷೆಯಾಗಿತ್ತು. ಹೊಸ ಒಡಂಬಡಿಕೆಯ ಸಮಯಗಳಲ್ಲಿ ಮಧ್ಯಪೂರ್ವದ ಬಹುತೇಕ ವಿಧ್ಯಾವಂತರು ಸಾಮಾನ್ಯವಾಗಿ ಗ್ರೀಕ ಭಾಷೆಯನ್ನು ಉಪಯೋಗಿಸುತ್ತಿದ್ದರು.

20 ಇಲ್ಲಿ ಧರ್ಮಶಾಸ್ತ್ರವೆಂದರೆ ಹಳೆ ಒಡಂಬಡಿಕೆಯಲ್ಲಿ ಮೋಶೆಯು ಬರೆದ ಮೊದಲಿನ ಐದು ಪು ಸ್ತಕಗಳು ಎಂದರ್ಥವಾಗುತ್ತದೆ. ಮೆಸ್ಸೀಯನ ವಿಷಯವಾದ ವಾಕ್ಯಭಾಗಗಳಲ್ಲಿ ಆದಿಕಾಂಡ 3:15, 49:10, ಧರ್ಮೋಪದೇಶ ಕಾಂಡ 18:15 ಸಹ ಒಳಪಟ್ಟಿರುತ್ತವೆ.

21 ಹೇಗಿದ್ದರೂ, ಯೆಹೂದ್ಯರಿಗೆ ಮನುಷ್ಯಕುಮಾರನೆಂಬ ಬಿರುದು ಒಂದು ಸಾಮಾನ್ಯ ಹೆಸರಾಗಿರಲಿಲ್ಲ, ಅದು ಪ್ರವಾದಿಯಾದ ದಾನಿಯೇಲನು ಪ್ರವಾದಿಸಿದ ಮನುಷ್ಯಕುಮಾರನನ್ನು ಸೂಚಿಸುತ್ತದೆ, ಆತನ ರಾಜ್ಯವು ಸದಾ ಕಾಲ ಇರುವದು (ದಾನಿಯೇಲ 7: 13, ಮಾರ್ಕ 13:26-27 ಮತ್ತು ವ್ಯಾಖ್ಯಾನ ನೋಡಿರಿ).

22 ಪೇತ್ರ, ಅಂದ್ರೇಯ, ಫಿಲಿಪ್ಪ ಹಾಗು ನತಾನಯೇಲರ ಜೊತೆಯಲ್ಲಿ ಜೆಬದಾಯನ ಮಕ್ಕಳಾದ ಯಾಕೋಬ ಮತ್ತು ಯೋಹಾನರು ಸಹ ಇದ್ದರು (ಮಾರ್ಕ 1:19-20 ನೋಡಿರಿ). ಜೆಬದಾಯನ ಮಗನಾದ ಯೋಹಾನನೇ ಈ ಸುವಾರ್ತೆಯನ್ನು ಬರೆದವನಾಗಿದ್ದಾನೆ.

23 ಬಾನೆಗಳಲ್ಲಿದ್ದ ನೀರೆಲ್ಲವೂ ದ್ರಾಕ್ಷಾರಸವಾಯಿತೋ ಅಥವಾ ಬಾನೆಯಿಂದ ಹೊರಕ್ಕೆ ತೆಗೆದುಕೊಂಡ ನೀರು ಮಾತ್ರವೇ ದ್ರಾಕ್ಷಾರಸವಾಗಿ ಮಾರ್ಪಟ್ಟಿತೋ ಎಂಬದನ್ನು ಯೋಹಾನನು ತಿಳಿಸುವದಿಲ್ಲ. ಅದೇನೇ ಆಗಿದ್ದರೂ ಅದು ಒಂದು ಅಸ್ವಾಭಾವಿಕವಾದ ಅದ್ಭುತವಾಗಿತ್ತು.

24 "ಪರಲೋಕ ರಾಜ್ಯ" ಮತ್ತು ದೇವರ ರಾಜ್ಯ ಎರಡೂ ಒಂದೇ ಆಗಿದೆ (ಮತ್ತಾಯ 4:17, ಮಾರ್ಕ 1:14-15 ಮತ್ತು ವ್ಯಾಖ್ಯಾನ ನೋಡಿರಿ). ಹೆಚ್ಚಿನ ಚರ್ಚೆಗಾಗಿ ಪದಪಟ್ಟಿ: ದೇವರ ರಾಜ್ಯ ನೋಡಿರಿ.

25 ಹೊಸದಾಗಿ ಎಂಬದಕ್ಕೆ ಬದಲಾಗಿ ಯೋಹಾನನ ಸುವಾರ್ತೆಯ ಕೆಲವು ಪು ರಾತನ ಹಸ್ತಪ್ರತಿಗಳಲ್ಲಿ "ಮೇಲಿನಿಂದ" ಎಂದು ಹೇಳಲ್ಪಟ್ಟಿದೆ. ಅರ್ಥವು ಒಂದೇ ಆಗಿದೆ.

26 ದೇವರ ರಾಜ್ಯವನ್ನು ಕಾಣುವು ದು ಮತ್ತು ಅದನ್ನು ಪ್ರವೇಶಿಸುವದು ಒಂದೇ ಆಗಿದೆ.

27 ಪವಿತ್ರಾತ್ಮನಿಂದ ಹೊಸದಾಗಿ ಹುಟ್ಟದೇ ಇರುವವರು "ಪ್ರಾಕೃತ" ಅಥವಾ "ಲೌಕೀಕ" ಜನರಾಗಿದ್ದಾರೆ.

28 ಯೇಸು ನಾವು ಎಂದು ಹೇಳುತ್ತಾನೆ, ಹೊರತು "ನಾನು" ಎಂದಲ್ಲ. ಆತನು ತನ್ನನ್ನು ಹಾಗು ತನ್ನ ಶಿಷ್ಯರನ್ನು ಸೂಚಿಸಿ ಹೇಳಿದನೆಂದು ಕೆಲವು ಬೈಬಲ್ ಪಂಡಿತರು ನಂಬುತ್ತಾರೆ. ಇನ್ನು ಕೆಲವು ಪಂಡಿತರು ಇಲ್ಲಿ ಯೇಸು ತನ್ನನ್ನು, ತಂದೆಯನ್ನು ಮತ್ತು ಪವಿತ್ರಾತ್ಮನನ್ನು – ತ್ರೈಯೇಕ್ ದೇವರನ್ನು ಸೂಚಿಸಿ ಮಾತಾಡಿದನೆಂದು ಅಭಿಪ್ರಾಯ ಪಡುತ್ತಾರೆ. ಈ ಎರಡೂ ಅರ್ಥಗಳ ಸಾಧ್ಯತೆಯಿದೆ.

29 16-21 ವಚನಗಳು ಕ್ರಿಸ್ತನು ನಿಕೊದೇಮನಿಗೆ ಹೇಳಿದ ಮಾತುಗಳೋ ಅಥವಾ ಅವು ಈ ಸುವಾರ್ತೆಯ ಬರಹಗಾರನಾದ ಯೋಹಾನನ ಹೇಳಿಕೆಗಳೋ ಎಂಬದು ಖಚಿತವಾಗಿರುವದಿಲ್ಲ. ಮೂಲ ಗ್ರೀಕ ಹಸ್ತ ಪ್ರತಿಗಳಲ್ಲಿ ಯಾವದೇ ವಿರಾಮಚಿಹ್ನೆಗಳು

ಉಪಯೋಗಿಸಲ್ಪಟ್ಟಿಲ್ಲ, ಆದ್ದರಿಂದ ಉಲ್ಲೇಖಚಿಹ್ನೆ ಎಲ್ಲಿ ಇಡಲ್ಪಡಬೇಕೆಂಬದು ತಿಳಿದು ಬಂದಿಲ್ಲ. ಹೇಗಿದ್ದರೂ ಸರಿಯೇ, ಸತ್ಯವು ಒಂದೇ ಆಗಿದೆ.

30 ಯೂದಾಯವು ಇಸ್ರಾಯೇಲಿನ ದಕ್ಷಿಣ ಪ್ರಾಂತ್ಯವಾಗಿದೆ. ಹೊಸ ಒಡಂಬಡಿಕೆಯ ಕಾಲದಲ್ಲಿ ಯೆರೂಸಲೇಮು ಅದರ ರಾಜಧಾನಿಯಾಗಿತ್ತು.

31 ಈ 31-36 ವಚನಗಳು ಸ್ನಾನಿಕನಾದಯೋಹಾನನ ಮಾತುಗಳೋ ಅಥವಾ ಈ ಸುವಾರ್ತೆಯ ಬರಹಗಾರನಾದ ಯೋಹಾನನ ಹೇಳಿಕೆಗಳೋ ಎಂಬದು ಖಚಿತವಾಗಿರುವದಿಲ್ಲ. ಹೆಚ್ಚಿನ ಚರ್ಚೆಗಾಗಿ ಯೋಹಾನ 3:16 ರ ವ್ಯಾಖ್ಯಾನಕ್ಕಿರುವ ಅಡಿಟಿಪ್ಪಣಿಯನ್ನು ನೋಡಿರಿ.

32 ದೇವರ ಪವಿತ್ರಾತ್ಮನು ಕ್ರಿಸ್ತನ ಆತ್ಮನು ಸಹ; ಅವರು ಒಂದೇ ಆಗಿದ್ದಾರೆ. ಒಂದೇ ಆತ್ಮನಿರುವನು (ಎಫೆಸ 4:4).

33 "ತಿರಸ್ಕರಿಸು" ಎಂಬ ಸ್ಥಾನದಲ್ಲಿ ಯೋಹಾನನ ಸುವಾರ್ತೆಯ ಕೆಲವು ಪುರಾತನ ಹಸ್ತ ಪ್ರತಿಗಳು "ಅವಿಧೇಯನಾಗು" ಎಂದು ಹೇಳುತ್ತವೆ. ಆದರೆ ಅರ್ಥವು ಒಂದೇ ಆಗಿದೆ. ನಾವು ಕ್ರಿಸ್ತನನ್ನು ತಿರಸ್ಕರಿಸಿದಾಗ ಆತನಿಗೆ ಅವಿಧೇಯರಾದಂತೆಯೇ. ನಾವು ನಮ್ಮ ಪಾಪಗಳನ್ನು ತೊರೆದು ಬೆಳಕಿಗೆ ಬರಲು ನಿರಾಕರಿಸುವವರಾಗಿದ್ದೇವೆ. ನಂಬದಿರುವದೆಂದರೆ ದೇವರಿಗೆ ಅವಿಧೇಯರಾಗುವದಾಗಿದೆ. ಅದು ಅನೀತಿವಂತರಾಗಿರುವದಾಗಿದೆ. ಈ ಕಾರಣದಿಂದಲೇ, ನಂಬಿಕೆಯಿಲ್ಲದೆ ಯಾವನೂ ದೇವರ ದೃಷ್ಟಿಯಲ್ಲಿ ನೀತಿವಂತನೆಂದು ಗುರುತಿಸಲ್ಪಡುವದಿಲ್ಲ...ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸಲು ಸಾಧ್ಯವಿಲ್ಲ (ಇಬ್ರಿ 11:6).

34 ಯಾಕೋಬನ ಹನ್ನೆರಡು ಮಂದಿ ಗಂಡು ಮಕ್ಕಳಲ್ಲಿ ಯೋಸೇಫನು ಹನ್ನೊಂದನೆಯವನು.

35 ಹಳೆ ಒಡಂಬಡಿಕೆಯಲ್ಲಿ ಸ್ವತಃ ದೇವರು ಜೀವ ಜಲದ ಬುಗ್ಗೆ ಎಂದು ಕರೆಯಲ್ಪಟ್ಟಿದ್ದಾನೆ (ಯೆರೆ 2:13, 7:13).

36 ಪ್ರತಿಯೊಬ್ಬ ವ್ಯಕ್ತಿಯು ಅವನ ಅಥವಾ ಅವಳ ಆತ್ಮವನ್ನು ಹೊಂದಿರುತ್ತಾನೆ. ಒಬ್ಬ ವ್ಯಕ್ತಿಯ ಆತ್ಮವು (ಪ್ರಾಣವನ್ನೊಳಗೊಂಡಂತೆ) ದೇಹದ ಮರಣದಿಂದ ಅಳಿದುಹೋಗುವದಿಲ್ಲ.

37 ಮೆಸ್ಸೀಯ ಎಂಬದು ಕ್ರಿಸ್ತನೆಂಬುದಕ್ಕೆ ಇಬ್ರಿಯ ಪದವಾಗಿದ್ದು, ಕ್ರಿಸ್ತನು ಎಂದರೆ "ಅಭಿಷೀಕ್ತನು". ಹೆಚ್ಚಿನ ಚರ್ಚೆಗಾಗಿ ಯೋಹಾನ 1:41ರ ಮೇಲಿನ ವ್ಯಾಖ್ಯಾನದ ಅಡಿಟಿಪ್ಪಣಿ ನೋಡಿರಿ.

38 ಅರಾಮಿಕ ಭಾಷೆಯು ಹೊಸ ಒಡಂಬಡಿಕೆಯ ಕಾಲದಲ್ಲಿ ಮಧ್ಯ ಪೂರ್ವಾತ್ಯದ ಹೆಚ್ಚಿನ ಪಾಲು ಜನರು ಸಾಮಾನ್ಯವಾಗಿ ಮಾತಾಡುತ್ತಿದ್ದ ಭಾಷೆಯಾಗಿತ್ತು. ಈ ವಚನದಲ್ಲಿ ಅರಾಮಿಕ್ ಭಾಷೆಯ ಬದಲಾಗಿ ಕೆಲವು ಬೈಬಲ್ ಭಾಷಾಂತರಗಳು "ಇಬ್ರಿಯ" ಭಾಷೆ ಎಂದು ಹೇಳುತ್ತವೆ. ಇಬ್ರಿಯ ಭಾಷೆಯು ಅರಾಮಿಕದೊಂದಿಗೆ ನಿಕಟ ಸಂಬಂಧ ಹೊಂದಿದೆ. ಇದು ಯೆಹೂದ್ಯರ ಭಾಷೆಯಾಗಿದೆ. ಹಾಗಿದ್ದರೂ, ಯೇಸುವಿನ ಕಾಲದಲ್ಲಿದ್ದ ಹೆಚ್ಚಿನ ಪಾಲು ಯೆಹೂದ್ಯರು ಅದರ ಬದಲಾಗಿ ಅರಾಮಿಕ ಭಾಷೆಯನ್ನು ಮಾತಾಡುತ್ತಿದ್ದರು.

39 ಯೋಹಾನನ ಸುವಾರ್ತೆಯ ಪುರಾತನ ಎಲ್ಲಾ ಹಸ್ತ ಪ್ರತಿಗಳಲ್ಲೂ 4 ನೇ ವಚನವು ಇರುವದಿಲ್ಲ.

40 ಹೇಗಿದ್ದರೂ, ಒಬ್ಬನು ಹಾಸಿಗೆಯ ಮೇಲೆ ಮಲಗಿರುವದಾದರೆ ಅದನ್ನು ಹೊತ್ತೊಯ್ಯುವದು ನ್ಯಾಯವಾದದ್ದಾಗಿತ್ತು. ಅದನ್ನು "ಕೆಲಸವೆಂದು" ಪರಿಗಣಿಸಲ್ಪಟ್ಟಿರಲಿಲ್ಲ.

41 ಕೆಲವು ವ್ಯಾಧಿಗಳು ಪಾಪದ ಕಾರಣದಿಂದ ಸಂಭವಿಸುತ್ತವೆ (ಮಾರ್ಕ 2:5 ಮತ್ತು ವ್ಯಾಖ್ಯಾನ ನೋಡಿರಿ) ಆದರೆ ಪಾಪದ ಕಾರಣದಿಂದಲ್ಲದೆಯೇ ಇತರ ವ್ಯಾಧಿಗಳು ಉಂಟಾಗುತ್ತವೆ (ಯೋಹಾನ 9:1-3 ಮತ್ತು ವ್ಯಾಖ್ಯಾನ ನೋಡಿರಿ).

42 ಹಳೆ ಒಡಂಬಡಿಕೆಯ ಕಾಲದಲ್ಲಿ ಜಗತ್ತಿನ ಎಲ್ಲಾ ಜನಾಂಗಗಳಲ್ಲಿಯೂ ಯೆಹೂದ್ಯರು ಮಾತ್ರವೇ ಏಕೈಕ ಜೀವಿಸುವ ಸತ್ಯ ದೇವರಲ್ಲಿ ನಂಬಿಕೆಯಿಟ್ಟವರಾಗಿದ್ದರು. ಇತರ ರಾಷ್ಟ್ರಗಳ ಜನರು ಅನೇಕ ವಿಭಿನ್ನ ದೇವರುಗಳನ್ನು ನಂಬುತ್ತಿದ್ದರು. ಯೆಹೂದ್ಯರು ಮತ್ತು ಇತರ ಎಲ್ಲಾ ಜನಾಂಗಗಳ ನಡುವಿನ ಪ್ರಮುಖ ವ್ಯತ್ಯಾಸವಿದಾಗಿದೆ.

43 ಆತನ ಸಾಕ್ಷಿಯು ನಿಜವಾಗಿರುವದು, ಆದರೆ ಕಾನೂನು ಬದ್ಧವಾಗಿ ಅದು ನಿಜವೆಂದು ಪರಿಗಣಿಸಲ್ಪಡುತ್ತಿರಲಿಲ್ಲ

44 ಹಳೆ ಒಡಂಬಡಿಕೆಯ ಮೊದಲಿನ ಐದು ಪುಸ್ತಕಗಳೇ ಮೋಶೆಯ ಬರಹಗಳಾಗಿವೆ. ಈ ಐದು ಪುಸ್ತಕಗಳು ಧರ್ಮ ಶಾಸ್ತ್ರವೆಂದು ಕರೆಯಲ್ಪಡುತ್ತವೆ.

45 ಗ್ರೀಕ ಪ್ರತಿಯಲ್ಲಿ ನಂಬುವದು ಎಂಬ ಪದವು " ನಂಬುವದನ್ನು ಮುಂದುವರೆಸು" ಎಂಬ ಅರ್ಥವನ್ನು ಕೊಡುತ್ತದೆ.

46 ರೊಟ್ಟಿಯು ಮಧ್ಯಪೂರ್ವಾತ್ಯ ಜನರ ಪ್ರಮುಖ ಆಹಾರವಾಗಿದೆ ಆದುದರಿಂದ ಈ ಅಧ್ಯಾಯದಲ್ಲಿ ರೊಟ್ಟಿ ಎಂಬದು "ಆಹಾರ" ಎಂಬ ಅರ್ಥವನ್ನು ನೀಡುತ್ತದೆ.

47 ಯೇಸು ಒಂದೇ ಆತ್ಮೀಕ ಸತ್ಯವನ್ನು ವಿವರಿಸಲು ವಿವಿಧ ಪದಗಳನ್ನು ಹಾಗು ವಿವಿಧ ದೃಷ್ಟಾಂತಗಳನ್ನು ಉಪಯೋಗಿಸುತ್ತಾನೆ.

48 "ಯೇಸುವನ್ನು" ದೃಷ್ಟಿಸಲು ಒಬ್ಬನು ತೆರೆದ ಹಾಗು ದೀನ ಹೃದಯದಿಂದ ಸುವಾರ್ತೆಗೆ ಕಿವಿಗೊಟ್ಟು ಬೈಬಲನ್ನು ಓದ ಬೇಕು.

49 ಒಬ್ಬ ಮನುಷ್ಯನ ಪ್ರಾಣವು ಆತನ ಮನಸ್ಸು, ಭಾವನೆಗಳು ಹಾಗು ಭಯಕೆಗಳನ್ನು ಒಳಗೊಂಡಿರುತ್ತದೆ. ಒಬ್ಬನ ಪ್ರಾಣವು ಆತನ ಗುಣಸ್ವಭಾವ ಹಾಗು ವ್ಯಕ್ತಿತ್ವವನ್ನು ನಿರ್ಧರಿಸುತ್ತದೆ. ಪ್ರಾಣವು ಒಬ್ಬನ ನಿಜವಾದ ಅಹಂ ಆಗಿದೆ. ಒಬ್ಬ ಕ್ರೈಸ್ತನ ಪ್ರಾಣವು, ಅಲ್ಲದೆ ಆತ್ಮವು ಮರಣದಿಂದ ನಾಶವಾಗುವದಿಲ್ಲ.

50 (ಕ್ರಿಸ್ತನ) ಮಾಂಸವನ್ನು ತಿಂದು, ಆತನ ರಕ್ತವನ್ನು ಕುಡಿಯುವದು ಎಂಬ ಪದಗಳ ಅರ್ಥವು "ಕ್ರಿಸ್ತನಲ್ಲಿ ನಂಬಿಕೆಯಿಡುವದು" ಎಂದು ಮಾತ್ರವೇ ಆಗಿದೆ ಎಂಬದಾಗಿ ಕೆಲವು ಕ್ರೈಸ್ತರು ನಂಬುತ್ತಾರೆ. ಆದರೆ ಇತರ ಕೆಲವು ಕ್ರೈಸ್ತರು ನಂಬುವದೇನೆಂದರೆ, ಈ ಪದಗಳು ಕರ್ತನ ಭೋಜನವನ್ನು ಸಹ ಸೂಚಿಸುತ್ತವೆ. ಕ್ರೈಸ್ತರ ಎರಡನೆಯ ಗುಂಪು ನಾವು ಕೇವಲ ಕರ್ತನ ಭೋಜನದಲ್ಲಿ ಪಾಲುಗಾರರಾಗುವದರ ಮೂಲಕ ಮಾತ್ರವೇ ನಿತ್ಯ ಜೀವವನ್ನು ಪಡೆಯುತ್ತೇವೆಂದು ಹೇಳುತ್ತಿಲ್ಲ. ಅದಕ್ಕೆ ಬದಲಾಗಿ ಅವರು ಹೇಳುವದೇನೆಂದರೆ ನಾವು ನಂಬಿಕೆಯ ಮೂಲಕ ಆತ್ಮೀಕ ಆಶೀರ್ವಾದವನ್ನು ಪಡೆಯುವ ಮಾರ್ಗಗಳಲ್ಲಿ ಕರ್ತನ ಭೋಜನವೂ ಒಂದು ಮಾರ್ಗವಾಗಿದೆ. ಹೆಚ್ಚಿನ ಚರ್ಚೆಗಾಗಿ ಸಾಮಾನ್ಯ ಬರಹ: ಕರ್ತನ ಭೋಜನ ನೋಡಿರಿ.

51 ಕರ್ತನ ಭೋಜನದ ರೊಟ್ಟಿಯನ್ನು ತಿಂದು ದ್ರಾಕ್ಷಾರಸವನ್ನು ಕುಡಿಯುವಾಗ ನಾವು ನಂಬಿಕೆಯ ಮೂಲಕ ಒಂದು ವಿಶೇಷವಾದ ರೀತಿಯಲ್ಲಿ ಕ್ರಿಸ್ತನ ಪ್ರಸನ್ನತೆಯನ್ನು ಪಡೆಯುತ್ತೇವೆ ಅಥವಾ ಅನುಭವಿಸುತ್ತೇವೆ ಎಂದು ಸಹ ಕೆಲವು ಕ್ರೈಸ್ತರು ನಂಬುತ್ತಾರೆ.

52 ಪರ್ಣಶಾಲೆಗಳ ಹಬ್ಬ ಪ್ರತಿವರ್ಷವೂ ಯೆಹೂದ್ಯರು ಆಚರಿಸಲು ಯೆರೂಸಲೇಮಿಗೆ ಬರುತ್ತಿದ್ದ ಯೆಹೂದ್ಯರ ಮೂರು ಪ್ರಮುಖ ಹಬ್ಬಗಳಲ್ಲಿ ಒಂದಾಗಿತ್ತು (ಧರ್ಮೋಪದೇಶಕಾಂಡ 16:16). ಆದುದರಿಂದ ಆ ಸಮಯದಲ್ಲಿ ಲೋಕದ ಎಲ್ಲಾ ಭಾಗಗಳಿಂದ ಯೆಹೂದ್ಯರು ಈ ಹಬ್ಬವನ್ನಾಚರಿಸಲು ಯೆರೂಸಲೇಮಿಗೆ ಬರುತ್ತಿದ್ದರು. ಈ ಕಾರಣದಿಂದ, ಯೇಸು ತನ್ನನ್ನು ಲೋಕಕ್ಕೆ ತೋರಿಸಿಕೊಳ್ಳಲಿ ಎಂದು ಯೇಸುವಿನ ಸಹೋದರರು ಸಲಹೆ ನೀಡಿದರು.

53 ಯೋಹಾನನ ಸುವಾರ್ತೆಯ ಕೆಲವು ಪುರಾತನ ಹಸ್ತ ಪ್ರತಿಗಳಲ್ಲಿ ಈಗ ಎಂಬ ಪದ ಇರುವದಿಲ್ಲ.

54 ಯೆರೂಸಲೇಮು ಗಲಿಲಾಯಕ್ಕಿಂತಲೂ ಮೇಲ್ಮಟ್ಟದಲ್ಲಿದೆ, ಆದುದರಿಂದ ಗಲಿಲಾಯದಿಂದ ಯೆರೂಸಲೇಮಿಗೆ ಹೋಗಬೇಕಾದರೆ ಹತ್ತಿ ಹೋಗುವದು ಅವಶ್ಯವಾಗಿತ್ತು.

55 ಪರ್ಣಶಾಲೆಗಳ ಹಬ್ಬವು ಒಂದು ವಾರದ ತನಕ ಇರುತ್ತಿತ್ತು.

56 ದೇವರು ಎಲ್ಲಾ ಮಾನವರಿಗಾಗಿ ತನ್ನ ಸಾಮಾನ್ಯ ಚಿತ್ತವೇನೆಂಬದನ್ನು ಈಗಾಗಲೇ ತೋರ್ಪಡಿಸಿದ್ದಾನೆ: ಬೈಬಲಿನುದ್ದಕ್ಕೂ ಇದು ಸ್ಪಷ್ಟವಾಗಿ ಬರೆಯಲ್ಪಟ್ಟಿರುತ್ತದೆ.

57 ಒಬ್ಬ ವ್ಯಕ್ತಿಯ ಬೋಧನೆಯು ಸತ್ಯವಾಗಿರಬೇಕಾದರೆ ಅದುಬೈಬಲನಲ್ಲಿ ಬರೆದಿರುವ ಸಂಗತಿಗಳಿಗೆ ಸರಿಹೊಂದುವದಾಗಿರಬೇಕು.

58 ಅಧರ್ಮವಿಲ್ಲ ಎಂಬ ಶಬ್ದಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು" ಯಾವ ಸುಳ್ಳಿಲ್ಲ" ಎಂದು ಹೇಳುತ್ತವೆ. ಆದರೆ ತಾತ್ಪರ್ಯದ ಅರ್ಥವು ಒಂದೇ ಆಗಿದೆ.

59 ಶಿಶ್ನದ ಹೆಚ್ಚಿನ ಚರ್ಮವನ್ನು ಕತ್ತರಿಸುವದೇ ಸುನ್ನತಿಯಾಗಿದೆ. ಆದಿಕಾಂಡ 17:12 ರ ಪ್ರಕಾರವಾಗಿ ಮಗು ಹುಟ್ಟಿದ ಎಂಟನೆಯ ದಿನದಲ್ಲಿ, ಅದು ಸಬ್ಬತ್ ದಿನವಾಗಿದ್ದರೂ ಸುನ್ನತಿ ಮಾಡಲ್ಪಡಬೇಕಿತ್ತು. ಹೆಚ್ಚಿನ ಚರ್ಚೆಗಾಗಿ ಪದಪಟ್ಟಿ: ಸುನ್ನತಿ ನೋಡಿರಿ. "ಮೋಶೆಯು ನಿಮಗೆ ಸುನ್ನತಿಯೆಂಬ ಸಂಸ್ಕಾರವನ್ನು ನೇಮಿಸಿದನು" ಎಂದು ಯೇಸು ಹೇಳಿದನು (ವಚನ 22). ಈ ಆಜ್ಞೆಯು ಮೋಶೆಯು ಬರೆದ ಆದಿಕಾಂಡ ಪುಸ್ತಕದಲ್ಲಿ ಬರೆದದೆ, ಆದ್ದರಿಂದ ಆತನು ಹೀಗೆ ಹೇಳಿದನು. ಆದರೆ ಈ ಆಜ್ಞೆಯು ಮೋಶೆಯ ಮೂಲಕ ಬರಲಿಲ್ಲ. ದೇವರು ನೇರವಾಗಿ ಅಬ್ರಹಾಮನಿಗೆ ನೀಡಿದ ಆಜ್ಞೆ ಇದಾಗಿದೆ. ಅಬ್ರಹಾಮನ ಸಂತತಿಯೆಲ್ಲವೂ ಸುನ್ನತಿ ಮಾಡಲ್ಪಡಬೇಕೆಂದು ಸ್ವತಃ ದೇವರು ಅವನಿಗೆ ಹೇಳಿದನು (ಆದಿಕಾಂಡ 17:10).

60 ಮೆಸ್ಸೀಯನು ಬೆತ್ಲೆಹೇಮಿನಲ್ಲಿ ಹುಟ್ಟುವನೆಂದು ನಂಬಲಾಗಿತ್ತು (ಮತ್ತಾಯ 2:3-6, ಯೋಹಾನ 7:41-42 ನೋಡಿರಿ). ಆದರೆ ಆತನ ತಂದೆ ತಾಯಿಗಳು ಯಾರಾಗುವರೆಂಬಗು ತಿಳಿದಿರಲಿಲ್ಲ.

61 ಯಾವದೇ ಒಂದು ಸಮಯದಲ್ಲಿ ಒಬ್ಬನೇ ಒಬ್ಬ ಯೆಹೂದಿ :ಮಹಾಯಾಜಕ" ಇದ್ದನು. ಆದರೆ ಆತನ ಕೆಳಗೆ ಅನೇಕ ಪ್ರಧಾನ ಯಾಜಕರು ಇದ್ದರು. ನಂತರ ಈ ಪ್ರಧಾನ ಯಾಜಕರ ಕೆಳಗೆ ಸಾಮಾನ್ಯ ಯಾಜಕರಿದ್ದರು.

62 ಗ್ರೀಕರು ಗ್ರೀಸ್ ರಾಷ್ಟ್ರದಲ್ಲಿ ಮಾತ್ರವೇ ವಾಸಿಸಲಿಲ್ಲ, ಆದರೆ ಯೆಹೂದ್ಯರಂತೆ ಅವರೂ ಮೆಡಿಟರನಿಯನ್ ಸಮುದ್ರದ ಸುತ್ತಲಿನ ರಾಷ್ಟ್ರಗಳಲೆಲ್ಲಾ ಚದುರಿದ್ದರು. ವಾಸ್ತವದಲ್ಲಿ ಹೊಸ ಒಡಂಬಡಿಕೆಯ ಅನೇಕ ವಚನಗಳಲ್ಲಿ (35ನೇ ವಚನವೂ ಸೇರಿದಂತೆ) ಗ್ರೀಕರು ಎಂಬ ಪದವು ಗ್ರೀಕ ಅನ್ಯ ಜನರು ಮಾತ್ರವಲ್ಲ ಎಲ್ಲಾ ಅನ್ಯಜನಾಂಗದವರನ್ನು ಸೂಚಿಸಲು ಉಪಯೋಗಿಸಲ್ಪಟ್ಟಿತು.

63 ಕ್ರಿಸ್ತನು ಮತ್ತು ಮೆಸ್ಸೀಯಗಳೆರಡರ ಅರ್ಥವೂ "ಅಭಿಷಿಕ್ತನು" ಎಂದಾಗಿದೆ. ಕ್ರಿಸ್ತನು ಲೋಕ ರಕ್ಷಕನಾಗಿರುವದಕ್ಕೆ ಅಭಿಷೇಕಿಸಲ್ಪಟ್ಟಿದ್ದನು (ಯೋಹಾನ 1:41, 4:25 ನೋಡಿರಿ).

64 ಯೋಹಾನನ ಸುವಾರ್ತೆಯ ಎಲ್ಲಾ ಪುರಾತನ ಹಸ್ತ ಪ್ರತಿಗಳಲ್ಲೂ 1:11 ವಚನಗಳಲ್ಲಿ ಇರುವದಿಲ್ಲ.

65 ಮೋಶೆಯು ದೇವರಿಂದ ಪಡೆದನು ಮತ್ತು ಅದನ್ನು ಯೆಹೂದ್ಯಜನರಿಗೆ ನೀಡಿದನು.

66 ಯೆಹೂದ್ಯ ಧರ್ಮ ಶಾಸ್ತ್ರದ ಪ್ರಕಾರವಾಗಿ ಅಪರಾಧಕ್ಕೆ ಸಾಕ್ಷಿಯಾಗಿರುವವರು ಮೊದಲು ಕಲ್ಲನ್ನು ಎಸೆಯ ಬೇಕಾಗಿತ್ತು (ಧರ್ಮೋಪದೇಶಕಾಂಡ 17:7, ಅ.ಕೃತ್ಯ 7:57-58 ಮತ್ತು ವ್ಯಾಖ್ಯಾನ ನೋಡಿರಿ).

67 ವಚನ 12-59ರಲ್ಲಿ ದಾಖಲಿಸಲ್ಪಟ್ಟಿರುವ ಸಂಭಾಷಣೆಯು ಯಾವಾಗ ಜರುಗಿತೆಂದು ಖಚಿತವಾಗಿರುವದಿಲ್ಲ. ಇದು ಯೋಹಾನ 7:37-44ರಲ್ಲಿ ದಾಖಲಿಸಲ್ಪಟ್ಟಿರುವ ಸಂಭಾಷಣೆಯ ನಂತರ ಜರುಗಿತು, ಹೀಗೆ ಪರ್ಣ ಶಾಲೆಗಳ ಹಬ್ಬದ ಕೊನೆಯ ದಿನದಲ್ಲಿ ಸಂಭವಿಸಿತೆಂದು ಕೆಲವು ಬೈಬಲ್ ಪಂಡಿತರು ಅಭಿಪ್ರಾಯ ಪಡುತ್ತಾರೆ (ಯೋಹಾನ 7:2). ಇನ್ನು ಕೆಲವರು ಇದು ಹಬ್ಬವು ಮುಗಿದ ನಂತರ ಸಂಭವಿಸಿತು, ಆ ವೇಳೆಯಲ್ಲಿ ಹಬ್ಬವನ್ನಾಚರಿಸಲು ಬಂದಿದ್ದ ಬಹುತೇಕ ಯೆಹೂದ್ಯರು ತಮ್ಮ ಮನೆಗಳಿಗೆ ಹಿಂದಿರುಗಿದ್ದರು (ಯೋಹಾನ 7:53).

68 ನಿಜವಾಗುವದು ಎಂಬದರ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಮಹತ್ವ" ಎಂದು ಹೇಳುತ್ತವೆ. ಅರ್ಥವು ಒಂದೇ ಆಗಿದೆ. ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರವಾಗಿ ಒಬ್ಬನ ಸಾಕ್ಷಿಯು ಕಾನೂನು ಬದ್ಧವಾಗಿ "ಸತ್ಯ" ಎಂದು ಪರಿಗಣಿಸಲ್ಪಡುವದಿಲ್ಲ. ವಾಸ್ತವದಲ್ಲಿ ಅದು ಸತ್ಯವಾಗಿರಬಹುದು, ಆದರೆ ನ್ಯಾಯಾಲಯದಲ್ಲಿ ಅದು ಸತ್ಯವಾಗಿ ಸ್ವೀಕರಿಸಲ್ಪಡಲಾರದು. ಸತ್ಯವನ್ನು ಸ್ಥಾಪಿಸಲು ಇಬ್ಬರು ಸಾಕ್ಷಿಗಳ ಅಗತ್ಯವಿರುತ್ತದೆ.

69 ಕೆಲವು ಯೆಹೂದ್ಯರು ಯೇಸುವಿನ ಮರಣದ ನಂತರ ಪಶ್ಚಾತಾಪಪಟ್ಟದ್ದು ನಿಜವೇ, ಆದರೆ ಯೇಸು ಇಲ್ಲಿ ಅವರನ್ನು ಸೂಚಿಸಿ ಹೇಳುತ್ತಿಲ್ಲ. ಆತನು ತಮ್ಮ ಹೆಚ್ಚು ಹೆಚ್ಚು ಕಠಿಣ ಮಾಡಿಕೊಳ್ಳುತ್ತಿದ್ದ ಯೆಹೂದ್ಯರ, ವಿಶೇಷವಾಗಿ ನಾಯಕರ ಬಗ್ಗೆ ಮಾತಾಡುತ್ತಿದ್ದಾನೆ. ಯಾರ ಹೃದಯಗಳು ಸಂಪೂರ್ಣವಾಗಿ ಕಠಿಣಗೊಂಡಿವೆಯೋ ಅವರು ಇನ್ನೆಂದಿಗೂ ಪಶ್ಚಾತಾಪಪಡುವ ಸಾಮರ್ಥ್ಯ ಹೊಂದಿರುವದಿಲ್ಲ. ಹೇಗಿದ್ದರೂ, ಅನೇಕರು (ಕಠಿಣ ಹೃದಯಳಿಲ್ಲದವರು)) ಪಶ್ಚಾತಾಪ ಪಟ್ಟು ಆತನಲ್ಲಿ ನಂಬಿಕೆಯಿಟ್ಟರೆಂಬದನ್ನು ಗಮನಿಸಿರಿ.

70 "ನನ್ನನ್ನು ಆತನೆಂದು" ಎಂಬ ಶಬ್ದಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ನಾನು ಹೇಳಿಕೊಂಡ ಪ್ರಕಾರವೇ ನಾನಾಗಿದ್ದೇನೆ" ಎಂದು ಹೇಳುತ್ತವೆ. ಅರ್ಥವು ಒಂದೇ ಆಗಿದೆ: ಯೇಸು ದೇವಕುಮಾರನೆಂದ ನಾವು ನಂಬದೆ ಹೋದರೆ ನಾವು ನಮ್ಮ ಪಾಪಗಳಲ್ಲಿಯೇ ಸಾಯುವೆವು .

71 ಅಬ್ರಹಾಮನು ಮೊದಲು ಯೆಹೂದ್ಯನೂ, ಯೆಹೂದ್ಯರೆಲ್ಲರ ಮೂಲ ಪಿತ್ರವೂ ಆಗಿದ್ದನು.

72 ಗ್ರೀಕ್ ಪ್ರತಿಯಲ್ಲಿ ಪಾಪ ಮಾಡುವವನು ಎಂಬ ಪದವು "ಪಾಪದಲ್ಲಿ ಮುನ್ನಡೆಯುವವನು" ಎಂಬರ್ಥ ಕೊಡುತ್ತದೆ. ಯೇಸು ಇಲ್ಲಿ ಆಗಾಗ ಪಾಪವನ್ನು ಮಾಡಿ ಅನಂತರ ನಿಜವಾಗಿಯೂ ಪಶ್ಚಾತಾಪ ಪಡುವ ವ್ಯಕ್ತಿಯ ಕುರಿತು ಮಾತಾಡುತ್ತಿಲ್ಲ (1 ಯೋಹಾನ 3:6 ಮತ್ತು ವ್ಯಾಖ್ಯಾನ ನೋಡಿರಿ).

73 ಅಬ್ರಹಾಮನು ನನ್ನ ದಿನವನ್ನು ನೋಡೇನೆಂದು ಉಲ್ಲಾಸಪಟ್ಟನು ಎಂಬವಾಕ್ಯಗಳ ಬದಲಿಗೆ ಬೈಬಲಿನ ಕೆಲವು ಭಾಷಾಂತರಗಳು "ನನ್ನ ದಿನವನ್ನು ನೋಡುವದಕ್ಕೆ ಉಲ್ಲಾಸ ಪಟ್ಟನು" ಎಂದು ಹೇಳುತ್ತವೆ. ಗ್ರೀಕ ಭಾಷೆಯಲ್ಲಿ ಅರ್ಥವು ಒಂದೇ ಆಗಿದೆ.

74 ಯೇಸು ಆ ಸಮಯದಲ್ಲಿ ಸುಮಾರು ಮೂವತ್ತೆರಡು ಅತವಾ ಮೂವತ್ಮೂರು ವರ್ಷ ವಯಸ್ಸಿನವನಾಗಿದ್ದನು (ಲೂಕ 3:23).

75 ಸರಿಯಾದ ನ್ಯಾಯವಿಚಾರಣೆಯಿಲ್ಲದೆ ಯಾರನ್ನಾದರೂ ಮರಣಕ್ಕೊಳಪಡಿಸುವದು ಯೆಹೂದ್ಯ ಧರ್ಮ ಶಾಸ್ತ್ರಕ್ಕೆ ವಿರುದ್ಧವಾಗಿತ್ತು. ಹೇಗಿದ್ದರೂ ಯೆಹೂದ್ಯರು ಯೇಸುವನ್ನು ಕೊಲ್ಲುವದಕ್ಕೆ ಬಹಳ ಕಾತುರರಾಗಿದ್ದು ನ್ಯಾಯವಿಚಾರಣೆ ಜರುಗಿಸಲು ಇವರಿಗೆ ಇಷ್ಟವಿರಲಿಲ್ಲ.

76 ಈ ದಿನಗಳಲ್ಲಿ ಮಕ್ಕಳು ಹುಟ್ಟುವದಕ್ಕಿಂತ ಮುಂಚೆಯೇ ಅವರಿಗೆ ತಂದೆ ತಾಯಿಗಳಿಂದ ವರ್ಗಾಯಿಸಲ್ಪಟ್ಟ ಅನೇಕ ರೋಗಗಳ ಕುರಿತಾಗಿ ವೈದ್ಯರು ತಿಳಿದವರಾಗಿರುತ್ತಾರೆ.

77 ಸೈತಾನನು ಅದ್ಭುತಗಳನ್ನು ಜರುಗಿಸುವ ಶಕ್ತಿಹೊಂದಿದ್ದಾನೆಂಬುದು ಮತ್ತು ಆತನು ಆ ಶಕ್ತಿಯನ್ನು ದುಷ್ಟಕರಿಗೆ ನೀಡುತ್ತಾನೆಂಬದು ಸಹ ಸತ್ಯವಾಗಿದೆ. ಆದರೆ ಬಹು ಪಾಲು ಅದ್ಭುತಗಳು ಕ್ರಿಸ್ತನಿಗಾಗಲಿ ಅಥವಾ ದೇವರಿಗಾಗಲಿ ಮಹಿಮೆ ತರುವದಿಲ್ಲ. ಅವು ಗಳು ಸೈತಾನನಿಗೂ, ಆತನ ಸೇವಕರಿಗೂ ಮಾತ್ರವೇ ಮಹಿಮೆಯನ್ನುಂಟು ಮಾಡುತ್ತವೆ (ಮಾರ್ಕ 13:22 ಮತ್ತು ವ್ಯಾಖ್ಯಾನ ನೋಡಿರಿ).

78 ಮನುಷ್ಯಕುಮಾರನು ಎಂಬ ಪದದ ಅರ್ಥದ ಚರ್ಚೆಗಾಗಿ ಮಾರ್ಕ 2:10, ಯೋಹಾನ 1:51 ಮತ್ತು ವ್ಯಾಖ್ಯಾನಗಳನ್ನು ನೋಡಿರಿ. ಯೋಹಾನನ ಸುವಾರ್ತೆಯ ಕೆಲವು ಪು ರಾತನ ಪ್ರತಿಗಳಲ್ಲಿ ಮನುಷ್ಯಕುಮಾರನು ಎಂಬದರ ಬದಲಾಗಿ "ದೇವಕುಮಾರ" ಎಂದು ಹೇಳಲ್ಪಟ್ಟಿರುತ್ತದೆ.

79 ಮಧ್ಯಪೂರ್ವದಲ್ಲಿ ಅನೇಕ ಕುರುಬರ ಕುರಿಗಳನ್ನು ಒಂದೇ ಹಟ್ಟಿಯೊಳಗೆ ಇಡಲಾಗುತ್ತಿತ್ತು. ಪ್ರತಿಯೊಬ್ಬ ಕುರುಬನು ತನ್ನ ಕುರಿಗಳು ಗುರುತಿಸಬಲ್ಲಂಥ ಒಂದು ವಿಶೇಷ ಕೂಗು ನೀಡುತ್ತಿದ್ದನು.

80 ಯೇಸು ಇಲ್ಲಿ ಹಳೆ ಒಡಂಬಡಿಕೆಯ ಪ್ರವಾದಿಗಳ ಬಗ್ಗೆ ಹೇಳಿರಲು ಸಾಧ್ಯವಿಲ್ಲ. ಆತನು ಅವರನ್ನು ಕಳ್ಳರು ಸುಲುಕೊಳ್ಳುವವರೂ ಎಂದು ಕರೆದಿರಲಾರನು. ಆದರೆ ಬಹುಶ: ಆತನು ಕಳ್ಳರು ಹಾಗು ಸುಲುಕೊಳ್ಳುವವರಂತೆ ವರ್ತಿಸುತ್ತಿದ್ದ ಇಸ್ರಾಯೇಲಿನ ಮಿಥ್ಯ ಯಾಜಕರು ಮತ್ತು ನಾಯಕರ ಕುರಿತಾಗಿ ಹೇಳಿರಬಲ್ಲನು (ಯೆರೆಮೀಯ 23:1-4, ಯೆಹೆಜ್ಕೇಲ 34:1-10, 15-16).

81 ಯೆಹೂದ್ಯ ದೇವಾಲಯವು ಒಬ್ಬ ಅನ್ಯ ರಾಜನಿಂದ ಹೊಲೆಮಾಡಲ್ಪಟ್ಟ ನಂತರ ಕ್ರಿಪೂರ್ವ 165ರಲ್ಲಿ ಅದು ಪು ನಃ ಪ್ರತಿಷ್ಠಿಸಲ್ಪಟ್ಟಿದ್ದರ ಜ್ಞಾಪಕಾರ್ಥವಾಗಿ ಯೆರೂಸಲೇಮಿನಲ್ಲಿ ಪ್ರತಿವರ್ಷವೂ "ಪ್ರತಿಷ್ಠೆಯ ಹಬ್ಬವು" ಆಚರಿಸಲ್ಪಡುತ್ತಿತ್ತು.

82 ಯೇಸು ತಾನು ಧರ್ಮ ಶಾಸ್ತ್ರದಲ್ಲಿ ಬರೆದದ್ದನ್ನು ಹೇಳುತ್ತಿದ್ದೇನೆ ಎಂದನು. ಸಾಮಾನ್ಯವಾಗಿ ಧರ್ಮಶಾಸ್ತ್ರ ಎಂದರೆ ಹಳೆ ಒಡಂಬಡಿಕೆಯ ಮೊದಲ ಐದು ಪು ಸ್ತಕಗಳೆಂದರ್ಥವಾಗಿದೆ. ಆದರೆ ಕೆಲವೇಳೆ ಇಡೀ ಹಳೆ ಒಡಂಬಡಿಕೆಯು ಸಹ "ಧರ್ಮ ಶಾಸ್ತ್ರ" ಎಂದು ಕರೆಯಲ್ಪಟ್ಟಿದೆ.

83 ಕೆಲವು ವಚನಗಳಲ್ಲಿ ಮೂಲವಾಗಿ ಏನು ಬರೆಯಲ್ಪಟ್ಟಿತ್ತೆಂಬದು ಸಂಪೂರ್ಣ ಖಚಿತವಾಗಿರುವದಿಲ್ಲ ಎಂಬದನ್ನು ನಾವು ನೆನಪಿನಲ್ಲಿಟ್ಟು ಕೊಳ್ಳಬೇಕು. ಇದಕ್ಕೆ ಕಾರಣವೇನಂದರೆ ಮೂಲ ಹಸ್ತ ಪ್ರತಿಗಳು ಮತ್ತು ಹೊಸ ಒಡಂಬಡಿಕೆಯ ಪ್ರಾಚೀನ ಪ್ರತಿಗಳು ಕಳೆದುಹೋಗಿರುತ್ತವೆ ಅಥವಾ ನಾಶವಾಗಿರುತ್ತವೆ. ಇಂದು ಅನಂತರದ ಪ್ರತಿಗಳು ಮಾತ್ರವೇ ಅಸ್ತಿತ್ವದಲ್ಲಿರುತ್ತವೆ. ಹೀಗೆ, ಈ ಇತ್ತೀಚಿನ ಪ್ರತಿಗಳನ್ನು ಹೋಲಿಸಿನೋಡುವಾಗ ಕೆಲವು ವಚನಗಳು ಬರೆಯಲ್ಪಟ್ಟಿರುವ ವಿಧದಲ್ಲಿ ಕೆಲವೊಂದು ಸಣ್ಣ ವ್ಯತ್ಯಾಸಗಳು ಕಾಣಬರುತ್ತವೆ. ಹೇಗಿದ್ದರೂ, ಈ ಯಾವದೇ ವ್ಯತ್ಯಾಸಗಳೇ ಆಗಲಿ ಯಾವದೇ ಕ್ರೈಸ್ತೀಯ ಪ್ರಾಮುಖ್ಯ ಬೋಧನೆಯ ಅರ್ಥಕ್ಕೆ ದಕ್ಕೆಯನ್ನುಂಟು ಮಾಡುವದಿಲ್ಲ. ಅಷ್ಟು ಮಾತ್ರವಲ್ಲದೆ, ಅಂಥಹ ವಚನಗಳು ಅತಿ ಸ್ವಲ್ಪ ಸಂಖ್ಯೆಯಲ್ಲಿರುತ್ತವೆ. ಹೆಚ್ಚಿನ ಚರ್ಚೆಗಾಗಿ, ಸಾಮಾನ್ಯ ಲೇಖನ: ನಮಗೆ ಬೈಬಲ್ ಹೇಗೆ ದೊರಕಿತು? ನೋಡಿರಿ.

84 ಲಾಜರನನ್ನು ಸತ್ತವರೊಳಗಿಂದ ಎಬ್ಬಿಸುವ ಕಥೆಯು ಮತ್ತಾಯ, ಮಾರ್ಕ ಮತ್ತು ಲೂಕನ ಸುವಾರ್ತೆಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವದಿಲ್ಲ. ಮೊದಲಿನ ಮೂರು ಸುವಾರ್ತೆಗಳ ಬರಹಗಾರರು, ಯೇಸು ಯೆರೂಸಲೇಮಿನಲ್ಲಿ ಮಾಡಿದ ಅದ್ಭುತಗಳ ಬಗ್ಗೆ ಬರೆಯುವದಿಲ್ಲ, ಅವರು ಮುಖ್ಯವಾಗಿ ಗಲಿಲಾಯದಲ್ಲಿ ನಡೆದ ಅದ್ಭುತಗಳನ್ನು ಬಣ್ಣಿಸುತ್ತಾರೆ. ಯೋಹಾನನು ಹೆಚ್ಚಾಗಿ ಯೇಸು ಯೆರೂಸಲೇಮ ಹಾಗು ಯೂದಾಯದಲ್ಲಿ ಮಾಡಿದ ಅದ್ಭುತಗಳನ್ನು ವರ್ಣಿಸುತ್ತಾನೆ.

ಆದರೆ ಮತ್ತಾಯ, ಮಾರ್ಕ ಮತ್ತು ಲೂಕರು ಯಾಯಿರನಮಗಳು ಸತ್ತವರೊಳಗಿಂದ ಎಬ್ಬಿಸಲ್ಪಟ್ಟದ್ದನ್ನು ವರ್ಣಿಸಿರುತ್ತಾರೆ (ಮತ್ತಾಯ 9:18-26, ಮಾರ್ಕ5:21-43, ಲೂಕ 8:40-56). ಅಲ್ಲದೆ ಲೂಕನು ನಾಯಿನೆಂಬ ಊರಿನ ವಿಧವೆಯ ಮಗನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟದ್ದನ್ನು ಸಹ ವರ್ಣಿಸುತ್ತಾನೆ (ಲೂಕ 7:11-15).

85 ಹಗಲಿಗೆ ಹನ್ನೆರಡು ತಾಸುಗಳು ಎಂಬ ವಾಕ್ಯಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು, "ಒಂದು ಹಗಲಲ್ಲಿ ಹನ್ನೆರಡು ತಾಸುಗಳು" ಎಂದು ಹೇಳುತ್ತವೆ. ಹೇಗಿದ್ದರೂ, ಮೊದಲ ಭಾಷಾಂತರವು ನಿಜ ಅರ್ಥವನ್ನು ಕೊಡುತ್ತದೆ.

86 ತೋಮ ಎಂಬ ಪದಕ್ಕೆ ಇಬ್ರಿಯ ಭಾಷೆಯಲ್ಲಿ "ಅವಳಿ" ಎಂದರ್ಥ ಗ್ರೀಕ ಭಾಷೆಯಲ್ಲಿ ದಿದುಮನು ಎಂಬ ಪದವು ಸಹ "ಅವಳಿ" ಎಂಬ ಅರ್ಥವನ್ನು ಹೊಂದಿದೆ.

87 ಅದೇ ರೀತಿಯಲ್ಲಿ, ತನಗೆ ಪಾಪಗಳನ್ನು ಕ್ಷಮಿಸಲು ಆತ್ಮೀಕ ಅಧಿಕಾರವಿರುತ್ತದೆಂಬದನ್ನು ನಿರೂಪಿಸಲು ಯೇಸು ಒಬ್ಬ ಪಾರ್ಶ್ವವಾಯು ರೋಗಿಯನ್ನು ಸಂಪೂರ್ಣವಾಗಿ ಗುಣಪಡಿಸುತ್ತಾನೆ (ಮಾರ್ಕ 2:3-12 ಮತ್ತು ವ್ಯಾಖ್ಯಾನ ನೋಡಿರಿ).

88 ಯೋಹಾನನು ಕೇವಲ ಮರಿಯಳ ಬಳಿಗೆ ಬಂದ ಯೆಹೂದ್ಯರನ್ನು ಮಾತ್ರವೇ ಪ್ರಸ್ತಾಪಿಸುತ್ತಾನೆ. ಬಹುಶ: ಮರಿಯಳು ಮೃದು ಹೃದಯಿಯಾಗಿದ್ದರಿಂದ ಆಕೆಗೆ ಅಧಿಕ ಸಂತೈಸುವಿಕೆಯ ಅಗತ್ಯವಿದ್ದಿತ್ತು, ಆದರೆ ಯೆಹೂದ್ಯರು ಇಬ್ಬರೂ ಸಹೋದರಿಯರನ್ನು ಸಂತೈಸಲು ಬಂದಿದ್ದರೆಂಬದನ್ನು ನಾವು ಅರ್ಥಮಾಡಿಕೊಳ್ಳಬೇಕು.

89 ಹಿರೀ ಸಭೆಯು ಯೆಹೂದ್ಯರ ಆಳಿಕೆಯ ಸಮತಿಯಾಗಿತ್ತು, ಆ ಸಭೆಗೆ ಎಲ್ಲಾ ಯೆಹೂದ್ಯ ಧಾರ್ಮಿಕ ವಿಷಯಗಳಲ್ಲಿ ಅಂತಿಮ ಅಧಿಕಾರ ಮತ್ತು ಹೆಚ್ಚಿನ ಚರ್ಚೆಗಾಗಿ ಯೋಹಾನ 3:1 ಮತ್ತು ವ್ಯಾಖ್ಯಾನ, ಪದಪಟ್ಟಿ: ಹಿರೀಸಭೆ ನೋಡಿರಿ.

90 ರೋಮಾಯರು ಇಸ್ರಾಯೇಲನಂತಹ ತಮ್ಮ ವಸಾಹತುಗಳ ಮೇಲೆ ಸಂಪೂರ್ಣವಾಗಿ ರಾಜಕೀಯ ಅಧಿಕಾರವನ್ನು ಚಲಾಯಿಸುತ್ತಿದ್ದರು. ಆದರೆ ಸಾಮಾನ್ಯವಾಗಿ ಧಾರ್ಮಿಕ ಸ್ವಾತಂತ್ರ್ಯವನ್ನು ಆಯಾ ವಸಾಹತಿನ ಜನರಿಗೆ ನೀಡುತ್ತಿದ್ದರು. ಹೇಗಿದ್ದರೂ, ಯೆಹೂದ್ಯರು ದಂಗೆ ಏಳುತ್ತಿರುವರೆಂದು ರೋಮಾಯರು ಯೋಚಿಸುವದಾದರೆ ಅವರ ಧಾರ್ಮಿಕ ಸ್ವಾತಂತ್ರವನ್ನು ಸಹ ಅವರು ಕಿತ್ತುಕೊಳ್ಳಬಹುದಾಗಿತ್ತು.

91 ಕಾಯಫನು ಕ್ರಿ.ಶಕ 18-36 ರವರೆಗೆ ಮಹಾ ಯಾಜಕನಾಗಿದ್ದನು. ಇತನು ಆ ವರುಷದ ಮಹಾಯಾಜಕನೆಂದು ಯೋಹಾನನು ಹೇಳುವಾಗ, ಆತನು ಯೇಸುವಿನ ಮರಣ ಮತ್ತು ಪುನರುತ್ಥಾನಗಳ ಆ ಪ್ರಾಮುಖ್ಯವರುಷದಲ್ಲಿ ಮಹಾಯಾಜಕನಾಗಿದ್ದನೆಂಬದಾಗಿ ಹೇಳುವವನಾಗಿದ್ದಾನೆ. ಕಾಯಫನ ಬಗ್ಗೆ ಮತ್ತಾಯ 26:3 ರಲ್ಲಿ ಸಹ ಪ್ರಸ್ತಾಪಿಸಲಾಗಿದೆ.

92 ಪಸ್ಕ ಹಬ್ಬದ ಕುರಿತಾದ ಹೆಚ್ಚಿನ ಚರ್ಚೆಗಾಗಿ ಮಾರ್ಕ 14:1 ಮತ್ತು ವ್ಯಾಖ್ಯಾನ, ಪದಪಟ್ಟಿ: ಪಸ್ಕ ಹಬ್ಬ ನೋಡಿರಿ.

93 ಯೆಹೂದ್ಯರ ಮಧ್ಯದಲ್ಲಿದ್ದ ಯೇಸುವಿನ ವೈರಿಗಳು ಸಹ ಆತನನ್ನು ಹಿಡಿಯಬೇಕೆಂದು ಹುಡುಕಾಡುತ್ತಿದ್ದರು.

94 ಈ ಗ್ರೀಕರು ಬಹುಶ: ಗ್ರೀಸ್ ರಾಷ್ಟ್ರದವರಾಗಿರಲಿಲ್ಲ, ಆದರೆ ಮಧ್ಯ ಪೂರ್ವಾತ್ಯದ ವಿಭಿನ್ನ ಪಟ್ಟಣಗಳಿಗೆ ಸೇರಿದ್ದ ಗ್ರೀಕ ಭಾಷೆ ಮಾತಾಡುವ ಜನರಾಗಿದ್ದರು (ಯೋಹಾನ 7:35 ಮತ್ತು ವ್ಯಾಖ್ಯಾನ ನೋಡಿರಿ).

95 ಒಂದು ವೇಳೆ ಅವರು ನಿಜವಾದ ಯೆಹೂದ್ಯರಾಗಿದ್ದರೆ ಯೋಹಾನನು ಅವರನ್ನು ಗ್ರೀಕರೆಂದು ಕರೆದಿರುತ್ತಿದ್ದಿಲ್ಲ. ಯೆಹೂದ್ಯರು ಅನ್ಯ ಜನರನ್ನೂ ಸಾಮಾನ್ಯವಾಗಿ "ಗ್ರೀಕರು" ಎಂದು ಕರೆಯುತ್ತಿದ್ದರು.

96 ಯೇಸುವಿಗಾದರೋ ಮರಣಿಸುವದೆಂದರೆ ಮಹಿಮೆ ಹೊಂದುವದಾಗಿತ್ತು. ತನ್ನ ಮರಣದ ನಂತರ ಮೂರನೆಯ ದಿನದಲ್ಲಿ ಅವನು ಮಹಿಮೆಯೊಂದಿಗೆ ಸತ್ತವರೊಳಗಿಂದ ಎದ್ದು ಬರುವನೆಂಬದು ಅವನಿಗೆ ಗೊತ್ತಿತ್ತು. ಆದುದರಿಂದ, ಅವನು ಹಲವಾರು ವೇಳೆ ತನ್ನ ಮರಣ ಮತ್ತು ಪುನರುತ್ಥಾನದ ಕುರಿತು ಅವುಗಳು ಒಂದೇ ಘಟನೆಯೋ ಎಂಬಂತೆ ಒಟ್ಟಾಗಿ ಮಾತನಾಡಿದನು, ಅದರ ಮೂಲಕ ಆತನು ಮಹಿಮೆಯನ್ನು ಹೊಂದಲಿದ್ದನು.

97 ಯೇಸುವಿನ ಮರಣದ ನಂತರ ಹನ್ನೆರಡು ಮಂದಿ ಶಿಷ್ಯರು "ಅಪೊಸ್ತಲರು" ಎಂದು ಕರೆಯಲ್ಪಟ್ಟರು.

98 ಇಲ್ಲಿ ಪ್ರಾಣ ಎಂದರೆ ದೇಹಮಾತ್ರವಲ್ಲ, ಆದರೆ ಇಹಲೋಕದಲ್ಲಿನ ಎಲ್ಲಾ ಸುಖಭೋಗ ಮತ್ತು ಅನುಕೂಲತೆಗಳು ಹಾಗು ಘನತೆಗಳು ಸಹ ಎಂದರ್ಥವಾಗಿದೆ.

99 ಆತನು ಪರಿಪೂರ್ಣವಾಗಿ ಅವರನ್ನು ಪ್ರೀತಿಸುತ್ತಾ ಬಂದನು ಎಂಬ ವಾಕ್ಯಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಆತನು ಅವರನ್ನು ಅಂತ್ಯದವರೆಗೂ ಪ್ರೀತಿಸಿದನು" ಎಂದು ಹೇಳುತ್ತವೆ. ಇದು ಮೂಲ ಗ್ರೀಕ ಪ್ರತಿಯ ಅಕ್ಷರಶ: ಭಾಷಾಂತರವಾಗಿದೆ. ಆದರೆ ಅರ್ಥವು ಒಂದೇ ಆಗಿದೆ.

100 ಗ್ರೀಕ ಭಾಷೆಯಲ್ಲಿ ನೀವು ದೇವರನ್ನು ನಂಬಿರಿ (ಒಂದು ಹೇಳಿಕೆ) ಎಂಬ ಮಾತುಗಳ ಬದಲಾಗಿ "ನೀವು ದೇವರನ್ನು ನಂಬಬೇಕು" (ಒಂದು ಅಪ್ಪಣೆ) ಎಂದು ಸಹ ಭಾಷಾಂತರಿಸಲ್ಪಡಬಹುದು.

101 ಯೇಸುವಿನ ಬಗ್ಗೆ ಕೇಳುವದಕ್ಕೆ ಮುನ್ನವೇ ಸಾಯುವ ಚಿಕ್ಕ ಮಕ್ಕಳಿಗೆ ಏನು ಸಂಭವಿಸುತ್ತದೆಂಬದರ ಹೆಚ್ಚಿನ ಚರ್ಚೆಗಾಗಿ ಸಾಮಾನ್ಯ ಲೇಖನ: ಮಕ್ಕಳು ಮತ್ತು ದೇವರರಾಜ್ಯ ನೋಡಿರಿ.

102 ಯೂದನ ಬಗ್ಗೆ ಲೂಕ 6:16 ಮತ್ತು ಅ.ಕೃತ್ಯ 1:13ರಲ್ಲಿ ಪ್ರಸ್ತಾಪಿಸಲಾಗಿದೆ. ಯೂದನು ಮಾರ್ಕ 3:18 ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ತದ್ದಾಯನೇ ಆಗಿದ್ದಾನೆಂದು ಅನೇಕ ಬೈಬಲ್ ಪಂಡಿತರು ಅಭಿಪ್ರಾಯ ಪಡುತ್ತಾರೆ.

103 ಶಿಷ್ಯರು ಹೊಂದಿದ್ದ ಏಕೈಕ ಶಾಸ್ತ್ರವೆಂದರೆ ಹಳೆ ಒಡಂಬಡಿಕೆಯ ಬರಹಗಳು. ಹೊಸ ಒಡಂಬಡಿಕೆಯ ಬಹುತೇಕ ಭಾಗವು ಯೇಸುವಿನ ಮರಣದ ನಂತರ ಇಪ್ಪತ್ತರಿಂದ ನಾಲ್ವತ್ತು ವರ್ಷಗಳ ತನಕವೂ ಬರೆಯಲ್ಪಟ್ಟಿರಲಿಲ್ಲ.
ಈ ವಚನದಲ್ಲಿ ಕೊಡಲ್ಪಟ್ಟ ವಾಗ್ದಾನದ ಕಾರಣದಿಂದಲೇ ಅನಂತರ ಶಿಷ್ಯರು ಹೊಸ ಒಡಂಬಡಿಕೆಯ ವಾಕ್ಯಭಾಗಗಳನ್ನು ಬರೆಯಲು ಶಕ್ತರಾದರೆಂಬದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳತಕ್ಕದ್ದು. ಹೊಸ ಒಡಂಬಡಿಕೆಯು (ಹಳೆ ಒಡಂಬಡಿಕೆ ಸಹ) ಸಂಪೂರ್ಣವಾಗಿ ಪವಿತ್ರಾತ್ಮನ ಸಹಾಯ ಮತ್ತು ಪ್ರೇರೇಪನೆಯಿಂದ ಬರೆಯಲ್ಪಟ್ಟಿದೆ (2 ತಿಮೋಥೆ 3:16, 2 ಪೇತ್ರ 1:20-21 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

104 ಯೇಸು ಮತ್ತು ಆತನ ಶಿಷ್ಯರು ಈ ಸಂದರ್ಭದಲ್ಲಿ ಮೇಲೆದ್ದು ಆ ಕೋಣೆಯಿಂದ ಹೊರಟದ್ದು ನಿಜವೇ ಎಂದು ಕೆಲವು ಬೈಬಲ್ ಪಂಡಿತರು ಅಭಿಪ್ರಾಯಪಡುತ್ತಾರೆ. ಯೇಸು 15-17 ಅಧ್ಯಾಯಗಳಲ್ಲಿನ ಬೋಧನೆಗಳನ್ನು ಗೇತ್ಸೆಮನೆ ತೋಟಕ್ಕೆ ಹೊರಡುವ ಮಾರ್ಗದಲ್ಲಿ ನೀಡಿದನೆಂದು ಈ ಪಂಡಿತರು ನಂಬುತ್ತಾರೆ.

105 ಶುದ್ಧಿಮಾಡುತ್ತಾನೆ ಎಂಬ ಪದಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಕತ್ತರಿಸಿ ಸಮಮಾಡಿ ಶುದ್ಧೀಕರಿಸುತ್ತಾನೆ" ಎಂಬದಾಗಿ ಹೇಳುತ್ತವೆ, ಇದು ಗ್ರೀಕ ಪ್ರತಿಯ ಅಕ್ಷರಶ: ಭಾಷಾಂತರವಾಗಿದೆ. ಅರ್ಥವು ಒಂದೇ ಆಗಿದೆ.

106 ಬಹುತೇಕ ಧಾರ್ಮಿಕ ನಾಯಕರು ತಮ್ಮ ಶಿಷ್ಯರನ್ನು ಆಳುಗಳಂತೆ ನಡೆಸಿಕೊಳ್ಳುತ್ತಾರೆ. ಆದರೆ ನಾಯಕನಾದ ಯೇಸು ಆ ರೀತಿಯಾಗಿ ವರ್ತಿಸುವದಿಲ್ಲ. ಬದಲಾಗಿ, ಆತನು ತನ್ನನ್ನೇ ನಮ್ಮ ಸೇವಕನಾಗಿ ಮಾಡಿಕೊಂಡಿದ್ದಾನೆ. ಉದಾಹರಣೆಗೆ ಬೇರೆ ಯಾವ ನಾಯಕನು ತಮ್ಮ ಶಿಷ್ಯರ ಪಾದಗಳನ್ನು ತೊಳೆದಿದ್ದಾನೆ? (ಯೋಹಾನ 13:5).

107 ಈ ಸನ್ನಿವೇಶದಲ್ಲಿ ಲೋಕ ಎಂಬ ಪದವು "ಲೋಕದ ಅವಿಶ್ವಾಸಿ ಜನರು" ಎಂಬ ಅರ್ಥವನ್ನು ಕೊಡುತ್ತದೆ. ಇದು "ಲೌಕೀಕ ಜನರು" ಅಂದರೆ ದೇವರಿಗಿಂತಲೂ ಹೆಚ್ಚಾಗಿ ಲೋಕದ ಸಂಗತಿಗಳನ್ನು ಪ್ರೀತಿಸುವ ಜನರು ಎಂಬ ಅರ್ಥವನ್ನು ಸಹ ಕೊಡಬಹುದು.

108 ಬಹುತೇಕ ಕ್ರೈಸ್ತರು ದೇವರನ್ನು ಪ್ರಾರ್ಥಿಸುವ ಹಾಗು ಯೇಸುವನ್ನು ಪ್ರಾರ್ಥಿಸುವದರ ನಡುವೆ ಯಾವ ಪ್ರತ್ಯೇಕತೆಯನ್ನು ಮಾಡುವದಿಲ್ಲ. ಎರಡು ಸಹ ಒಂದೇ ಆಗಿದೆ.

109 ದೇವರು ತನ್ನ ಮಹಿಮೆಗಾಗಿ ಮಾತ್ರವೇ ಪ್ರಾರ್ಥನೆಯನ್ನು ಕೇಳುವದಿಲ್ಲ. ಅನೇಕ ವೇಳೆಗಳಲ್ಲಿ ಕ್ರೈಸ್ತರು ತಮ್ಮ ನೋವು ಅಥವಾ ಹಿಂಸೆ ಇಲ್ಲವೆ ಭಯದಲ್ಲಿ ಕರುಣೆ ಮತ್ತು ಪರಿಹಾರ ಒದಗಿಸುವಂತೆ ದೇವರಿಗೆ ಮೊರೆಯಿಡುತ್ತಾರೆ, ಮತ್ತು ದೇವರು ಖಂಡಿತವಾಗಿಯೂ ಅವರ ಪ್ರಾರ್ಥನೆಯನ್ನು ಕೇಳುತ್ತಾನೆ ಹಾಗು ಹಲವಾರು ವೇಳೆ ಪ್ರತ್ಯುತ್ತರವನ್ನೂ ನೀಡುತ್ತಾನೆ. ಆದರೆ ದೇವರು ಅವರ ಪ್ರಾರ್ಥನೆಗಳನ್ನು ನೆರವೇರಿಸದಿರಬಹುದು, ಒಬ್ಬ ವ್ಯಕ್ತಿಯು ಹಿಂಸೆಯನ್ನನುಭವಿಸುವಂತೆ ಅನುಮತಿಸುವದರಲ್ಲಿ ದೇವರು ಒಂದು ವಿಶೇಷ ಹಾಗು ನಿತ್ಯವಾದ ಉದ್ದೇಶವನ್ನು ಹೊಂದಿರಬಹುದು. ಹೇಗಿದ್ದರೂ, ಆತನ ಮಹಿಮೆಗೋಸ್ಕರವಾಗಿರುವ ಪ್ರಾರ್ಥನೆಗೆ ಆತನು ಸದಾಕಾಲವೂ ಸಕಾರಾತ್ಮಕವಾಗಿ ಉತ್ತರಿಸಲು ಸಿದ್ಧನಿರುತ್ತಾನೆ.

110 ನಿನ್ನ ಹೆಸರನ್ನು ಎಂಬ ಪದಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ನಿನ್ನನ್ನು" ಎಂದು ಹೇಳುತ್ತವೆ, ಇದು ಮೂಲ ಗ್ರೀಕ ಪ್ರತಿಯ ಅಕ್ಷರಶ: ಭಾಷಾಂತರವಾಗಿದೆ. ಅರ್ಥವೂ ಒಂದೇ ಆಗಿದೆ, ದೇವರ ಹೆಸರನ್ನು ತಿಳಿಯ ಪಡಿಸುವದೆಂದರೆ ಸ್ವತಃ ದೇವರನ್ನೇ ತಿಳಿಯಪಡಿಸಿದಂತೆಯೇ ಆಗಿದೆ.

111 ಯೇಸು ಮುಖ್ಯವಾಗಿ ಇಲ್ಲಿ ಶೀಘ್ರವೇ ಅಪೊಸ್ತಲರಾಗಲಿದ್ದ ತನ್ನ ಹನ್ನೊಂದು ಮಂದಿ ಆಪ್ತ ಶಿಷ್ಯರನ್ನು ಸೂಚಿಸುತ್ತಿದ್ದಾನೆ. ಆದರೆ ಆತನು ಅಲ್ಲಿಯ ತನಕ ತನ್ನಲ್ಲಿ ನಿಜವಾಗಿಯೂ ನಂಬಿಕೆಯಿಟ್ಟವರೆಲ್ಲರನ್ನೂ ಸೂಚಿಸಿ ಸಹ ಹೇಳಿರ ಬಲ್ಲನು.

112 ಯೇಸು ತಾನು ದೇವರಾಗಿರುವದರಿಂದ ಯಾರು ತನ್ನನ್ನು ಅಂಗೀಕರಿಸುವದಿಲ್ಲ ಎಂಬದನ್ನು ಬಲ್ಲವನಾಗಿದ್ದಾನೆ. ಆದರೆ ವಿಶ್ವಾಸಿಗಳಾದ ನಮಗೆ ಆ ಜ್ಞಾನವು ಇರುವದಿಲ್ಲ. ಆದುದರಿಂದ ನಾವು ಎಲ್ಲಾ ಜನರಿಗಾಗಿ ಪೌಲನ ಸಲಹೆ ಯಂತೆ ನಿರಂತರವಾಗಿ ಪ್ರಾರ್ಥಿಸುವವರಾಗಿರಬೇಕು (1 ತಿಮೊಥೆ 2:1).

113 ನಿನ್ನ ಹೆಸರಿನಲ್ಲಿ ಇವರನ್ನು ಕಾಯಬೇಕು ಎಂಬ ವಾಕ್ಯಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳನ್ನು "ನಿನ್ನ ಹೆಸರಿನ ಬಲದಿಂದ ಅವರನ್ನು ಕಾಪಾಡು" ಎಂದು ಹೇಳುತ್ತವೆ. ಈ ಎರಡನೆಯ ಭಾಷಾಂತರವು ಗ್ರೀಕ ಪ್ರತಿಯ ಅರ್ಥವನ್ನು ಹೆಚ್ಚು ಸ್ಪಷ್ಟವಾಗಿ ನೀಡುತ್ತದೆ.

114 ಈ ವಚನದಲ್ಲಿ ತಿಳಿದು ಬರುವದು ಎಂಬುದರ ಅರ್ಥವು "ಮನವರಿಕೆ" ಹೊಂದುವದು ಅಥವಾ "ಬಲವಾಗಿ ನಂಬುವದು" ಎಂಬದಾಗಿದೆ.

115 ನಿನ್ನ ಹೆಸರನ್ನು ಎಂಬದರ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ನಿನ್ನನ್ನು" ಎಂದು ಹೇಳುತ್ತವೆ. ಅರ್ಥವು ಒಂದೇ ಆಗಿದೆ, ದೇವರ ಹೆಸರನ್ನು ತಿಳಿಸುವದೆಂದರೆ ದೇವರನ್ನೇ ತಿಳಿಯಪಡಿಸುವದಾಗಿದೆ (ವಚನ 6 ಮತ್ತು ವ್ಯಾಖ್ಯಾನ ನೋಡಿರಿ).

116 ಯೇಸು ಆಗಾಗ ತನ್ನ ಶಿಷ್ಯರಿಗೆ ಪ್ರತ್ಯೇಕವಾಗಿ ಬೋಧಿಸಿದ್ದನು. ಆದರೆ ಈ ವಚನದಲ್ಲಿ ಯೇಸುವಿನ ತಾತ್ಪರ್ಯವೇನೆಂದರೆ ಯೇಸು ತನ್ನ ಶಿಷ್ಯರಿಗೆ ವಯುಕ್ತಿಕವಾಗಿ ಹೇಳಿದ್ದೆಲ್ಲವನ್ನೂ ಬಹಿರಂಗವಾಗಿ ಇತರರಿಗೆ ಸಹ ಹೇಳಿದ್ದನು. ಆತನು ಜನರಿಂದ ಯಾವುದನ್ನೂ ಮರೆಯಾಗಿಡಲಿಲ್ಲ.

117 ಯೆಹೂದ್ಯರು ಆಗಾಗ ಯೆಹೂದಿಧರ್ಮಶಾಸ್ತ್ರವನ್ನು ಉಲ್ಲಂಘಿಸಿದ್ದಕ್ಕಾಗಿ ಜನರನ್ನು ಕಲ್ಲೆಸೆದು ಸಾಯಿಸಿದ್ದು ನಿಜವೇ (ಅ.ಕೃತ್ಯ 7:57-60 ನೋಡಿರಿ). ಆದರೆ ರೋಮಾಯ ಕಾನೂನಿನ ಪ್ರಕಾರ ಅವರು ಹಾಗೆ ಮಾಡುವದು ಕಾನೂನು ಬಾಹಿರವಾಗಿತ್ತು.

118 "ಹಾಗಾದರೆ ನೀನು ಅರಸನು ಹೌದಲ್ಲವೇ" ಎಂಬ ಪಿಲಾತನ ಮಾತುಗಳು ಒಂದು ಹೇಳಿಕೆಯೋ ಅಥವಾ ಪ್ರಶ್ನೆಯೋ ಎಂಬುದು ಖಚಿತವಾಗಿರುವದಿಲ್ಲ. ಬೈಬಲಿನ ಕೆಲಭಾಷಾಂತರಗಳಲ್ಲಿ ಈ ಮಾತುಗಳು ಒಂದು ಪ್ರಶ್ನೆಯಂತೆ ಬರೆಯಲ್ಪಟ್ಟಿವೆ. ಹೊಸ ಒಡಂಬಡಿಕೆಯ ಮೂಲ ಗ್ರೀಕ ಹಸ್ತಪ್ರತಿಗಳಲ್ಲಿ ಯಾವ ವಿರಾಮ ಚಿಹ್ನೆಗಳು ಇರುವದಿಲ್ಲ, ಆದ್ದರಿಂದ ಇದು ಪ್ರಶ್ನೆ ಯಾಗಿರುವದು ಯೋಹಾನನ ಇಂಗಿತವಾಗಿತ್ತೋ ಅಥವಾ ಇಲ್ಲವೋ ಎಂಬದನ್ನು ಹೇಳುವದು ಅಸಾಧ್ಯವಾಗಿರುತ್ತದೆ. ಹೇಗಿದ್ದರೂ, ಈ ಮಾತುಗಳನ್ನು ಒಂದು ಹೇಳಿಕೆಯಂತೆ ತೆಗೆದುಕೊಳ್ಳುವದಾದರೆ ಅರ್ಥವು ಸ್ಪಷ್ಟವಾಗಿ ತೋರುತ್ತದೆ.

119 ನನ್ನನ್ನು ಅರಸನೆಂದು ನೀನೇ ಹೇಳಿದ್ದೀ ಎಂಬ ಪದಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ನನ್ನನ್ನು ಅರಸನೆಂದು ನೀನು ಸರಿಯಾಗಿಯೇ ಹೇಳಿದ್ದೀ" ಎಂದು ಹೇಳುತ್ತವೆ, ಮೊದಲಿನ ಭಾಷಾಂತರವು ಮೂಲ ಗ್ರೀಕ ಪ್ರತಿಯ ಅಕ್ಷರಶ: ಭಾಷಾಂತರವಾಗಿದೆ. ಅರ್ಥವು ಒಂದೇ ಆಗಿದೆ. ಹೇಗಿದ್ದರೂ, ಎರಡನೆಯ ಭಾಷಾಂತರವು ನಿಜವಾದ ಅರ್ಥವಾಗಿ ನೀಡುತ್ತದೆ. ಯೇಸುವಿನ ಕಾಲದಲ್ಲಿನ ಯೆಹೂದ್ಯರು "ನಾನು ಅರಸನೆಂದು ನೀನು ಹೇಳುವಿ" ಎಂದು ಹೇಳುವಾಗ ಅವರು ವಾಸ್ತವದಲ್ಲಿ "ಹೌದು, ನಾನು ಅರಸನು" ಎನ್ನುತ್ತಿ ಎಂದು ಹೇಳುವವರಾಗಿದ್ದರು (ಮಾರ್ಕ 15:2 ಮತ್ತು ವ್ಯಾಖ್ಯಾನ ನೋಡಿರಿ).

120 ಈ ಬರಬ್ಬನು ಒಬ್ಬ ಕಳ್ಳನಾಗಿದ್ದನು ಎಂಬ ಪದಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಬರಬ್ಬನು ದಂಗೆಯಲ್ಲಿ ಪಾಲುಗಾರನಾಗಿದ್ದನು" ಎಂದು ಹೇಳುತ್ತವೆ, ಅಂದರೆ ಅವನೊಬ್ಬ "ಬಂಡಾಯಗಾರ"ನಾಗಿದ್ದನೆಂದು ಅರ್ಥವಾಗಿದೆ.

121 ಎಲ್ಲಾ ರೋಮಾಯ ಚಕ್ರವರ್ತಿಗಳನ್ನು "ಕೈಸರ"ಎನ್ನುತ್ತಿದ್ದರು "ಕೈಸರ" ಎಂಬದು ರೋಮಾಯರು ಚಕ್ರವರ್ತಿ ಎಂದು ಕರೆಯಲು ಉಪಯೋಗಿಸುವ ಪದವಾಗಿತ್ತು.

122 ಈ ಯೋಹಾನನು "ಪ್ರಿಯ ಶಿಷ್ಯನಾದ" ಅಪೊಸ್ತಲ ಯೋಹಾನನು (ವಚನ 26), ಆತನೇ ಈ ಸುವಾರ್ತೆಯನ್ನು ಬರೆದಿರುತ್ತಾನೆ.

123 ರೋಮಾಯರು ತಮ್ಮ ಕಾನೂನನ್ನು ಮೀರದಂತೆ ಇತರರಿಗೆ ಒಂದು ಎಚ್ಚರಿಯಾಗಿರುವದಕ್ಕಾಗಿ ಅವರು ಶಿಲುಬೆಗೇರಿಸಿದ ಅಪರಾಧಿಗಳ ದೇಹಗಳನ್ನು ಕೆಲದಿನಗಳ ವರೆಗೆ ನೇತಾಡಲು ಬಿಡುತ್ತಿದ್ದರು. ಆದುದರಿಂದ, ದೇಹಗಳನ್ನು ಕೆಳಗಿಳಿಸಲು ಯೆಹೂದ್ಯರು ಅಪ್ಪಣೆ ಪಡೆಯುವದು ಅವಶ್ಯಕವಾಗಿತ್ತು.

124 ಯೆಹೂದ್ಯರ ದಿನವು ಸೂರ್ಯಾಸ್ತಮದಿಂದ ಪ್ರಾರಂಭವಾಗುತ್ತಿತ್ತು. ಆದುದರಿಂದ, ವಾಸ್ತವವಾಗಿ ಸಬ್ಬತ್ ದಿನವು ಶುಕ್ರವಾರ ಸಾಯಂಕಾಲ ಆರು ಘಂಟೆಗೆ ಪ್ರಾರಂಭಗೊಂಡಿತು. ಈ ಕಾರಣಕ್ಕಾಗಿ, ಅವರು ಶಿಲುಬೆಗೇರಿಸಿದ ಆದೇ ಶುಕ್ರವಾರ ಸಾಯಂಕಾಲ 6 ಘಂಟೆಯೊಳಗೆ ದೇಹಗಳನ್ನು ಕೆಳಗಿಳಿಸಿ ಹೂಣುವದು ಅವಶ್ಯವಾಗಿತ್ತು.

125 ಸಮಾಧಿಯು ತೋಟವೊಂದರಲ್ಲಿತ್ತು (ಯೋಹಾನ 19:41).

126 ಅವರಿಗೆ ಅವು ಗಳು ಉಳಿಯುವವು ಎಂಬ ಪದಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಅವು ಗಳು ಕ್ಷಮಿಸಲ್ಪಡುವದಿಲ್ಲ" ಎಂದು ಹೇಳುತ್ತವೆ. ಎರಡರ ಅರ್ಥವು ಒಂದೇ ಆಗಿದೆ.

127 ಪೇತ್ರನ ತಂದೆಯ ಹೆಸರು ಯೋಹಾನ 1:42 ರಲ್ಲಿ ಸಹ ಪ್ರಸ್ತಾಪಿಸಲ್ಪಟ್ಟಿದೆ. ಈ ಯೋಹಾನನ ಬಗ್ಗೆ ಬೇರಿನ್ನೇನೂ ತಿಳಿದು ಬಂದಿರುವದಿಲ್ಲ.

128 ಹೇಗಿದ್ದರೂ, ಕೆಲವು ಬೈಬಲ್ ಪಂಡಿತರ ನಂಬಿಕೆಯ ಪ್ರಕಾರ ಯೇಸುವಿನ ತಾತ್ಪರ್ಯವೇನೆಂದರೆ: "ನೀನು ಈ ಶಿಷ್ಯರನ್ನು ಪ್ರೀತಿಸುವದಕ್ಕಿಂತಲೂ ಹೆಚ್ಚಾಗಿ ನನ್ನನ್ನು ಪ್ರೀತಿಸುತ್ತೀಯಾ?" ಗ್ರೀಕ ಪ್ರತಿಯ ಪ್ರಕಾರವಾಗಿ ಈ ಅರ್ಥದ ಸಾಧ್ಯತೆಯೂ ಇರುತ್ತದೆ ಆದರೆ ಯೇಸುವಿನ ತಾತ್ಪರ್ಯಕ್ಕೆ ಇದು ಅಷ್ಟಾಗಿ ಹೊಂದುವದಿಲ್ಲ.

129 ಗ್ರೀಕನಲ್ಲಿ ಇದರ ಅರ್ಥವು "ನನ್ನನ್ನು ಎಡೆಬಿಡದೆ ಹಿಂಬಾಲಿಸು" ಎಂಬದಾಗಿರುತ್ತದೆ.

# ಅಪೊಸ್ತಲರ ಕೃತ್ಯಗಳು

## ಪರಿಚಯ

ಅಪೊಸ್ತಲರ ಕೃತ್ಯಗಳ' ಪುಸ್ತಕವು ಲೂಕನಿಂದ ಬರೆಯಲ್ಪಟ್ಟ ಚರಿತ್ರೆಯ ಎರಡನೆಯ ಭಾಗವಾಗಿದೆ, ಲೂಕನ ಸುವಾರ್ತೆಯು ಮೊದಲನೆಯ ಭಾಗವಾಗಿತ್ತು. ಈ ಸುವಾರ್ತೆಯಲ್ಲಿ ಲೂಕನು ಮುಖ್ಯವಾಗಿ ಯೇಸು ಕ್ರಿಸ್ತನ ಕಾರ್ಯದ ಬಗ್ಗೆ ಬರೆದಿದ್ದಾನೆ. ಹೇಗಿದ್ದರೂ, ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ಮುಖ್ಯವಾಗಿ ಲೂಕನು ಯೇಸುವಿನ ಶಿಷ್ಯರ (ಅಪೊಸ್ತಲರು) ಹಾಗು ಅಪೊಸ್ತಲನಾದ ಪೌಲನ ಕಾರ್ಯಗಳ ಬಗ್ಗೆ ಬರೆದಿರುತ್ತಾನೆ.

ಅ.ಕೃತ್ಯಗಳ ಪುಸ್ತಕವು ಕ್ರಿ.ಶಕ 60 ಮತ್ತು 65ರ ನಡುವೆ ಬರೆಯಲ್ಪಟ್ಟಿತೆಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ. ಆ ಸಮಯದಲ್ಲಿ ಅಪೊಸ್ತಲನಾದ ಪೌಲನು ನ್ಯಾಯಾವಿಚಾರಣೆಗಾಗಿ ರೋಮಾಪುರದಲ್ಲಿ ಗೃಹಬಂಧನದಲ್ಲಿದ್ದನು. ಪೌಲನು ಬೋಧಿಸುತ್ತಿದ್ದ ಈ ನೂತನ ಧರ್ಮ, ಕ್ರೈಸ್ತತ್ವದ ಕುರಿತಾಗಿ ಅನೇಕ ಪ್ರಮುಖ ರೋಮಾಯರು ವಿಸ್ಮಯಗೊಂಡಿದ್ದರು. ಆದುದರಿಂದ, ಲೂಕನು ಕ್ರೈಸ್ತತ್ವದ ಪ್ರಾರಂಭಗಳ ಕುರಿತಾಗಿಯೂ, ಯೇಸು ಕ್ರಿಸ್ತನು ಯಾರೆಂಬುದರ ಕುರಿತಾಗಿಯೂ, ಮತ್ತು ಹೇಗೆ ಈ ನೂತನ ಧರ್ಮವು ಯೆರೂಸಲೇಮಿನಿಂದ ರೋಮಾಯ ಸಾಮ್ರಾಜ್ಯದ ವರೆಗೆ ಹರಡಿಕೊಂಡಿತ್ತೆಂಬದರ ಕುರಿತಾಗಿಯೂ ಎರಡು ಭಾಗದ ಒಂದು ಕ್ರಮವಾದ ಚರಿತ್ರೆಯನ್ನು ಬರೆಯಬೇಕೆಂದು ತೀರ್ಮಾನಿಸಿಕೊಂಡನು. ಲೂಕನು ಈ ಚರಿತ್ರೆಯನ್ನು ಬರೆದನಂತರ ಆ ಎರಡು ಭಾಗಗಳನ್ನು (ಲೂಕನ ಸುವಾರ್ತೆ ಮತ್ತು ಅ. ಕೃತ್ಯಗಳು) ಒಬ್ಬ ರೋಮಾಯ ಅಧಿಕಾರಿಗೆ ಕಳುಹಿಸುತ್ತಾನೆ, ಲೂಕನು ಅವನನ್ನು ಶ್ರೀಮತ್ ಥೆಯೊಫಿಲ ಎಂದು ಕರೆಯುತ್ತಾನೆ (ಲೂಕ 1:1-4, ಅ.ಕೃತ್ಯ 1:1). ಈ ಥೆಯೊಫಿಲನ ಬಗ್ಗೆ ಇನ್ನಾವ ಹೆಚ್ಚಿನ ಮಾಹಿತಿಯೂ ಇರುವದಿಲ್ಲ.

ಅಪೊಸ್ತಲನಾದ ಪೌಲನು ಲೂಕನನ್ನು "ಪ್ರಿಯ ವೈದ್ಯನಾಗಿರುವ ಲೂಕನು" ಎಂದು ಕರೆಯುತ್ತಾನೆ (ಕೊಲೊಸ್ಸೆ 4:14). ಲೂಕನು ಮಧ್ಯಪೂರ್ವದ ಸಿರಿಯಾ ರಾಷ್ಟ್ರದಲ್ಲಿನ ಒಂದು ಪ್ರಮುಖ ಪಟ್ಟಣವಾದ ಅಂತಿಯೋಕ್ಯದವನಾಗಿದ್ದನು. ಪೌಲನು ಅಂತಿಯೋಕ್ಯದಲ್ಲಿದ್ದಾಗ ಲೂಕನು ಅವನನ್ನು ಬೇಟಿಯಾಗಿರುವ ಸಾಧ್ಯತೆಯಿರುತ್ತದೆ. ಅನಂತರ ಲೂಕನು ಪೌಲನ ಎರಡನೆಯ ಸುವಾರ್ತಾ ಪ್ರಯಾಣದಲ್ಲಿ ಸ್ವಲ್ಪ ಕಾಲ ಅವನ ಜೊತೆಯಲ್ಲಿದ್ದನು ಮತ್ತು ಪುನಃ ಪೌಲನು ರೋಮಾಯಕ್ಕೆ ಮಾಡಿದ ಅಂತಿಮ ಸಮುದ್ರಯಾನದಲ್ಲಿ ಲೂಕನು ಅವನ ಜೊತೆಯಲ್ಲಿದ್ದನು (ಅ.ಕೃತ್ಯ 27:1, 28:16). ಲೂಕನು ಪೌಲನನ್ನು ಚೆನ್ನಾಗಿ ಬಲ್ಲವನಾಗಿದ್ದನು, ಆದುದರಿಂದ ಅವನು ಪೌಲನ ಜೀವಿತ ಬಗ್ಗೆ ಬರೆಯಲು ಅರ್ಹನಾಗಿದ್ದಾನೆ.

ಅಪೊಸ್ತಲರ ಕೃತ್ಯಗಳ ಪುಸ್ತಕವು "ಅಪೊಸ್ತಲರು ಮಾಡಿದ ಕಾರ್ಯಗಳು" ಎಂದು ಕರೆಯಲ್ಪಟ್ಟಿದೆಯಾದರೂ ಇದನ್ನು "ಪವಿತ್ರಾತ್ಮನ ಕೃತ್ಯಗಳು" ಎಂದು ಕರೆದರೆ ತಪ್ಪಾಗಲಾರದು, ಯಾಕೆಂದರೆ ಅಪೊಸ್ತಲರು ಸಮಸ್ತವನ್ನೂ ಪವಿತ್ರಾತ್ಮನ ಬಲ ಹಾಗು ಮಾರ್ಗದರ್ಶನಗಳ ಮೂಲಕವಾಗಿ ಮಾಡಿದರು. ಹಾಗಾದರೆ ಅ.ಕೃತ್ಯಗಳ ಪುಸ್ತಕವು ಮಾನವರ ಕೃತ್ಯಗಳ ಬಗ್ಗೆ ಮಾತ್ರವೇ ಬರೆಯಲ್ಪಟ್ಟಿಲ್ಲ; ಅವರೊಳಗೆ ವಾಸಿಸಿದ ದೇವರ ಪವಿತ್ರಾತ್ಮನ ಕೃತ್ಯಗಳ ಕುರಿತಾಗಿ ಸಹ ಬರೆಯಲ್ಪಟ್ಟಿದೆ.

## ಹೊರ ರೇಖೆ

ಅ. ಸಭೆಯ ಅನಾದಿಗಳು (1:1-2:47)

1. ಪುನರುಥ್ಥಾನ ನಂತರದ ಸೇವೆ ಮತ್ತು ಯೇಸುವಿನ ಆರೋಹಣ (1:1-11)
2. ಮತ್ತೀಯನ ಆಯ್ಕೆ (1:12-26)

3. ಪವಿತ್ರಾತ್ಮನ ಬರೋಣ (2:1-41)
4. ಆದಿ ಸಭೆಯಲ್ಲಿನ ಜೀವಿತ (2:42-47)

ಆ. ಯೆರೂಸಲೇಮಿನಲ್ಲಿ ಸಭೆ (3:1, 5:42)
1. ಒಂದು ಅದ್ಭುತ ಮತ್ತು ಸಂದೇಶ (3:1-26)
2. ಯೆಹೂದಿ ನಾಯಕರಿಂದ ಮೊದಲ ವಿರೋಧ (4:1-37)
3. ಅನನೀಯ ಮತ್ತು ಸಪ್ಫೈರಳ ಮರಣ (5:1-16)
4. ಯೆಹೂದಿ ನಾಯಕರ ಎರಡನೆಯ ವಿರೋಧ (5:17-42)

ಇ. ಇಸ್ರಾಯೇಲಿನುದ್ದಕ್ಕೂ ಸಭೆಯ ವಿಸ್ತರಣೆ (6:1, 12:25)
1. ಏಳು ಮಂದಿಯ ನೇಮಕಾತಿ (6:1-7)
2. ಸ್ತೆಫನನ ಸೇವೆ ಮತ್ತು ಮರಣ (6:8, 7:60)
3. ಸಮಾರ್ಯದಲ್ಲಿ ಸುವಾರ್ತೆ (8:1-25)
4. ಇತಿಯೋಪ್ಯದ ಕಂಚುಕಿಯ ಪರಿವರ್ತನೆ (8:26-40)
5. ಸೌಲನ ಪರಿವರ್ತನೆ (9:1-31)
6. ಇಸ್ರಾಯೇಲಿನಲ್ಲಿ ಪೇತ್ರನ ಸೇವೆ ಮತ್ತು ಪ್ರಥಮ ಅನ್ಯಜನಾಂಗದ ವಿಶ್ವಾಸಿಗಳು (9:32,11:18)
7. ಅಂತಿಯೋಕ್ಯದಲ್ಲಿ ಒಂದು ಅನ್ಯಜನಾಂಗದ ಸಭೆಯ ಸ್ಥಾಪನೆ (11:19-30)
8. ಹೆರೋದನಿಂದಾದ ಹಿಂಸೆ (12:1-25)

ಈ. ಟರ್ಕಿ ಮತ್ತು ಗ್ರೀಸ್‌ಗಳಲ್ಲಿ ಸಭೆಯು ವಿಸ್ತರಿಸಲ್ಪಟ್ಟಿದ್ದು (13:1, 21:16)
1. ಪೌಲನ ಮೊದಲನೆಯ ಸುವಾರ್ತಾ ಪ್ರಯಾಣ (13:1, 14:28)
2. ಯೆರೂಸಲೇಮಿನ ಸಮಾಲೋಚನಾ ಸಭೆ (15:1-35)
3. ಪೌಲನ ಎರಡನೆಯ ಸುವಾರ್ತಾ ಪ್ರಯಾಣ (15:36, 18:23)
4. ಪೌಲನ ಮೂರನೆಯ ಸುವಾರ್ತಾ ಪ್ರಯಾಣ (18:24, 21:16).

ಉ. ಸಭೆಯು ರೋಮದ ವರೆಗೂ ವಿಸ್ತರಿಸಲ್ಪಟ್ಟಿದ್ದು (21:17, 28:31)
1. ಯೆರೂಸಲೇಮಿನಲ್ಲಿ ಸುವಾರ್ತೆಯ ತಿರಸ್ಕಾರ (21:17, 26:32)
2. ರೋಮಾಪುರದಲ್ಲಿ ಸುವಾರ್ತೆಯ ಸ್ವೀಕಾರ (27:1, 28:31).

## ಅಧ್ಯಾಯ - 1

### ಪೀಠಿಕೆ (1:1-5)

**1-2** ಲೂಕನು ಥೆಯೊ ಫಿಲನಿಗೆ ಬರೆದ ತನ್ನ ಮೊದಲನೆಯ ಪುಸ್ತಕದಲ್ಲಿ (ಲೂಕನ ಸುವಾರ್ತೆ), ಯೇಸು ಮಾಡುವದಕ್ಕೂ ಉಪದೇಶಿಸುವದಕ್ಕೂ ಪ್ರಾರಂಭಿಸಿದ್ದೆಲ್ಲವನ್ನು ಹೇಳಿ ತಾನು ಆರಿಸಿಕೊಂಡಿದ್ದ ಅಪೊಸ್ತಲರಿಗೆ ಪವಿತ್ರಾತ್ಮನ ಮೂಲಕ ಆಜ್ಞೆ ಕೊಟ್ಟು ಮೇಲಣ ಲೋಕವನ್ನೇರಿದ ದಿನದ ವರೆಗೆ ವಿವರಿಸಿದ್ದನು (ಲೂಕ 1:1-4, 24:51 ನೋಡಿರಿ). ಆದರೆ ಯೇಸು ಪರಲೋಕಕ್ಕೆ ಏರಿಹೋದ ನಂತರ ತಾನು ಕಾರ್ಯಮಾಡುವದನ್ನೂ ಉಪದೇಶಿಸುವದನ್ನೂ ನಿಲ್ಲಿಸಲಿಲ್ಲ. ಅವನು ತನ್ನ ಸ್ಥಾನದಲ್ಲಿ ತನ್ನ ಸ್ವ ಆತ್ಮನಾದ ಪವಿತ್ರಾತ್ಮನನ್ನು ಶಿಷ್ಯರೊಳಗೆ ನೆಲೆಸಲು ಕಳುಹಿಸಿದನು (ಯೋಹಾನ 20:22). ಈ ರೀತಿಯಲ್ಲಿ ಶಿಷ್ಯರೊಳಗೆ ವಾಸವಾಗಿರುವದರ ಮೂಲಕವಾಗಿ ಯೇಸು ತನ್ನ ಕಾರ್ಯವನ್ನು ಮತ್ತು ಬೋಧಿಸುವದನ್ನು ಮುಂದುವರೆಸಿದನು. ಕ್ರಿಸ್ತನ ಪವಿತ್ರಾತ್ಮನ ಮೂಲಕವಾಗಿ ಶಿಷ್ಯರು ಲೋಕದಲ್ಲಿ ಸಾಕ್ಷಿಗಳಾಗಿರಲು ಬಲವನ್ನು ಹೊಂದಿಕೊಂಡರು (ವಚನ 8). ಅವರು ಇನ್ನೆಂದಿಗೂ ಕೇವಲ "ಶಿಷ್ಯರು" ಮಾತ್ರವೇ ಆಗಿರಲಿಲ್ಲ, ಅವರು "ಅಪೊಸ್ತಲರು" ಅಂದರೆ ಪವಿತ್ರಾತ್ಮನಿಂದ ಪ್ರೇರಿಸಲ್ಪಟ್ಟು ಕಳುಹಿಸಲ್ಪಟ್ಟವರಾಗಿದ್ದರು. ಅವರು ಇನ್ನೆಂದಿಗೂ ವೈರಿಗಳಿಗೆ ಭಯಪಡುವವರು, ಅಡಗಿಕೊಳ್ಳುವವರು ಮತ್ತು ಪಲಾಯನ ಗೈಯುವವರು ಆಗಿರಲಿಲ್ಲ, ಈಗ ಅವರು ಕ್ರಿಸ್ತನ ಆತ್ಮ ಧೈ.ರ್ಯಗಳಿಂದ ತುಂಬಿದ್ದ ನೂತನ ಮನುಷ್ಯರಾಗಿದ್ದರು. ನಾವು ಈ ಪುಸ್ತಕವನ್ನು ಅಭ್ಯಾಸಿಸುತ್ತಿರುವ ಹಾಗೆ ಒಂದು ಸಂಗತಿಯನ್ನು ನೆನಪಿನಲ್ಲಿಟ್ಟುಕೊಳ್ಳಬೇಕು, ಏನೆಂದರೆ ದೇವರು ಹೊಸ ಒಡಂಬಡಿಕೆಯ ಕಾಲದಲ್ಲಿ, ಈ ಅಪೊಸ್ತಲರ ಮೂಲಕವಾಗಿ ಕಾರ್ಯ ಮಾಡಿದ ಹಾಗೆಯೇ ಈ ದಿನ ಆತನು ನಮ್ಮ ಮೂಲಕವಾಗಿಯೂ ಕಾರ್ಯವನ್ನು ಮಾಡಲು ಬಯಸುತ್ತಾನೆ. ದೇವರು ಅಪೊಸ್ತಲರನ್ನು ತನ್ನ ಪವಿತ್ರಾತಾಮನಿಂದ ತುಂಬಿಸಿದ ಪ್ರಕಾರವೇ ಇಂದು ನಮ್ಮನ್ನ ಸಹ ಆತನು ತುಂಬಿಸಲು ಇಚ್ಚಿಸುತ್ತಾನೆ.

**3** ಯೇಸು ಬಂಧಿಸಲ್ಪಟ್ಟಾಗ ಶಿಷ್ಯರು ಎಲ್ಲಾ ನಿರೀಕ್ಷೆಯನ್ನು ಕಳೆದುಕೊಂಡರು (ಮಾರ್ಕ 14:50). ಶಿಷ್ಯರಲ್ಲಿ ಪ್ರಮುಖನಾದ ಪೇತ್ರನು ಯೇಸುವನ್ನು ಮೂರು ಸಾರಿ ಅಲ್ಲಗಳೆದನು (ಮಾರ್ಕ 14:66-72). ಅವರು ಮನಸ್ಸಿನಲ್ಲಿ ತಮ್ಮ ನಾಯಕನ ಜೀವನ ಮತ್ತು ಕಾರ್ಯಗಳು ಅವನತಿಗೆ ಬಂದವು ಎಂದು ನೆನಸಿದರು. ಈ ನೂತನ ಕ್ರೈಸ್ತ ಧರ್ಮವು ಪ್ರಾರಂಭಗೊಳ್ಳುವ ಮುನ್ನವೇ ಮುಗಿದು ಹೋಗಿತ್ತು! ಈ ಶಿಷ್ಯರು ಯೇಸುವನ್ನು ಹಿಂಬಾಲಿಸಲು ಸಮಸ್ತವನ್ನೂ ತೊರೆದಿದ್ದರು (ಮಾರ್ಕ 10:28), ಈಗ ಎಲ್ಲವೂ ಕಳೆದು ಹೋದಂತಾಗಿತ್ತು! ಆದರೆ ತರುವಾಯ ಶಿಷ್ಯರು ಪುನರುತ್ಥಾನಗೊಂಡ ಯೇಸುವನ್ನು ಕಂಡರು. ಅವನಂತೂ ಸತ್ತಿರಲೇ ಇಲ್ಲವಷ್ಟೆ! ಅವನು ಸತ್ತವರೊಳಗಿಂದ ಎದ್ದಿದ್ದನು! ಮತ್ತು ಆತನ ಪುನರುತ್ಥಾನದ ನಂತರ ನಾಲ್ವತ್ತು ದಿವಸಗಳವರೆಗೆ ಅನೇಕ ವೇಳೆಗಳಲ್ಲಿ ತನ್ನ ಹನ್ನೊಂದು ಮಂದಿ ಶಿಷ್ಯರಿಗೂ ಮತ್ತು ಇನ್ನು ಅನೇಕ ವಿಶ್ವಾಸಿಗಳಿಗೆ ಸಹ ಕಾಣಿಸಿಕೊಂಡನು (1 ಕೊರಿಂಥ 15:3-7). ಶಿಷ್ಯರ ನಿರೀಕ್ಷೆಯು ಹಿಂದಿರುಗಿತು.. ಯೇಸು ನಿಜವಾಗಿಯೂ ದೇವಕುಮಾರನೆಂಬ ಅವರ ನಂಬಿಕೆಯು ಹಿಂದಿರುಗಿತು. ಈ ಕಾರಣದಿಂದಲೇ ಕ್ರಿಸ್ತನ ಪುನರುತ್ಥಾನವು ಅಪೊಸ್ತಲರ ಬೋಧನೆಯಲ್ಲಿ ಅಷ್ಟೊಂದು ಪ್ರಾಮುಖ್ಯ ಹಾಗು ಕೇಂದ್ರ ವಿಷಯವಾಗಿತ್ತು– ಯಾಕೆಂದರೆ ಎಲ್ಲಕ್ಕಿಂತಲೂ ಹೆಚ್ಚಾಗಿ ಪುನರುತ್ಥಾನವೇ ಕ್ರಿಸ್ತನ ಸುವಾರ್ತೆಯು ಸತ್ಯವೆಂಬದನ್ನು ನಿರೂಪಿಸಿತು. ಯೇಸು ತಾನು ಸಾಯುವದಕ್ಕೆ ಮುಂಚೆ ಮತ್ತು ಅವನು ತಿರಿಗಿ ಎದ್ದು ಬಂದ ಮೇಲೆ ಸಹ ತನ್ನ ಹಿಂಬಾಲಕರಿಗೆ ದೇವರ ರಾಜ್ಯದ ಕುರಿತು ಬಹಳವಾಗಿ ಬೋಧಿಸಿದನು (ಮಾರ್ಕ 1:14-15). "ದೇವರ ರಾಜ್ಯವು " ಒಂದು ರೀತಿಯ ಲೌಕೀಕ ರಾಜ್ಯದಂತಿರುತ್ತದೆಂದು ಯೆಹೂದ್ಯರು ಯೋಚಿಸಿದರು. ಆದರೆ ನಿಜವಾದ ದೇವರ ರಾಜ್ಯವು ಒಂದು ಆತ್ಮೀಕ ರಾಜ್ಯವಾಗಿದ್ದು, ಅದು ಯೇಸು ಈ ಭೂಮಿಯ ಮೇಲಿರುವಾಗ ಪ್ರಾರಂಭವಾಯಿತು. ದೇವರ ರಾಜ್ಯವು ಜನರ ಹೃದಯಗಳಲ್ಲಿ ತೋರಿಬಂದಿತು (ಲೂಕ 17:21) ಮತ್ತು ಇಂದು ಯೇಸುವನ್ನು ನಂಬುವವರೆಲ್ಲರ ಹೃದಯಗಳಲ್ಲಿಯೂ ದೇವರ ರಾಜ್ಯವು ಪ್ರಸ್ತುತವಿರುತ್ತದೆ ಮತ್ತು ಯೇಸು ತಿರಿಗಿ ಬರುವಾಗ ಈಗಿನ ರಾಜ್ಯವು – ಕತ್ತಲೆಯ ರಾಜ್ಯವು – ಅಂತ್ಯವಾಗುವದು ಮತ್ತು ದೇವರರಾಜ್ಯವು ಪೂರ್ಣವಾಗಿ ತೋರಿಬರುತ್ತದೆ. ಆಗ ಸ್ವರ್ಗ, ಮರ್ತ್ಯ ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆ ಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು (ಫಿಲಿಪ್ಪಿ 2:10-11).

**4** ಯೇಸು ಸತ್ತವರೊಳಗಿಂದ ಎದ್ದು ಬಂದಮೇಲೆ ಆತನು ತನ್ನ ಶಿಷ್ಯರಿಗೆ ಯೆರೂಸಲೇಮಿನಲ್ಲಿ[2] ಕಾಯ್ದುಕೊಳ್ಳಲು ಹೇಳಿದನು. ಅವರು ಬೋಧಿಸಲು ಪ್ರಾರಂಭಿಸುವ ಮುಂಚೆ, ಅವರು ಕ್ರಿಸ್ತನ ಸಾಕ್ಷಿಗಳಾಗುವದಕ್ಕೆ ಮುನ್ನ ಒಂದು ಸಂಗತಿಯು ಅವರಿಗೆ ಅಗತ್ಯವಾಗಿತ್ತು. ಅವರಿಗೆ ತಂದೆಯು ವಾಗ್ದಾನ ಮಾಡಿದ ವರದ ಅಗತ್ಯತೆಯಿತ್ತು (ಲೂಕ 24:29). ಆ ವರವು ಪವಿತ್ರಾತ್ಮನೇ ಆಗಿದ್ದನು (ಯೋಹಾನ 14:16,26). ಒಂದು ವಿಧದಲ್ಲಿ, ಅವರು ಈಗಾಗಲೇ ಪವಿತ್ರಾತ್ಮನನ್ನು ಪಡೆದುಕೊಂಡಿದ್ದರು (ಯೋಹಾನ 20:22). ಆದರೆ ಈಗ ಅವರಿಗೆ ಆತ್ಮನ ವಿಶೇಷ ಅಭಿಷೇಕದ, ಅಂದರೆ, ಆತ್ಮನ ಬಲ ಮತ್ತು ಅಧಿಕಾರಗಳ ಅಗತ್ಯತೆಯಿತ್ತು. ಅವರು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಹೊಂದಬೇಕಾಗಿತ್ತು (ವಚನ 5). ಈ :ದೀಕ್ಷಾಸ್ನಾನ"ವು ಕೆಲವು ದಿವಸಗಳ ನಂತರ ಪಂಚಾಶತ್ತಮ ದಿನದಲ್ಲಿ ಜರುಗಲಿತ್ತು (ಅ.ಕೃತ್ಯ 2:1-4). ಈ ಕಾರಣಕ್ಕಾಗಿ ಯೇಸು ಶಿಷ್ಯರಿಗೆ ಜ್ಞಾಪಿಸಿದ್ದೇನೆಂದರೆ: "ಆದಕಾರಣ ನೀವು ಯೆರೂಸಲೇಮನ್ನು ಬಿಟ್ಟು ಹೋಗದೆ ತಂದೆ ಮಾಡಿದಂಥ. ವಾಗ್ದಾನಕ್ಕೆ ಕಾದುಕೊಂಡಿರ್ರಿ" – ಅಂದರೆ ಪವಿತ್ರಾತ್ಮನ ದೀಕ್ಷಾಸ್ನಾನ, ಬಲಗೊಳ್ಳುವಿಕೆಗಾಗಿ ಕಾದುಕೊಳ್ಳುವದು.

ಈ ದಿನ ನಾವು ಸಹ ತಂದೆಯು ವಾಗ್ದಾನಮಾಡಿದ ಪವಿತ್ರಾತ್ಮನ ವರಕ್ಕಾಗಿ ಕಾಯ್ದುಕೊಳ್ಳಬೇಕಾದ ಅಗತ್ಯವಿರುತ್ತದೆ. ನಾವು ನಮ್ಮ ಸ್ವಂತ ಶಕ್ತಿಯಲ್ಲಿ ದೇವರಿಗಾಗಿ ಕಾರ್ಯಗಳನ್ನು ಮಾಡಲು ಪ್ರಯತ್ನಿಸಬಾರದು. ಯೇಸು ಭೂಮಿಯಲ್ಲಿ ತನ್ನ ಶಿಷ್ಯರೊಂದಿಗಿದ್ದಾಗ ಆತನು ಅವರಿಗೆ ಹೇಳಿದ್ದೇನೆಂದರೆ "...ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ" (ಯೋಹಾನ 15:5). ಅದೇ ರೀತಿಯಲ್ಲಿ ಯೇಸು ಭೂಮಿಯನ್ನ ಬಿಟ್ಟು ಮೇಲೆ ಈ ಶಿಷ್ಯರು (ಅಪೊಸ್ತಲರು) ಪವಿತ್ರಾತ್ಮನನ್ನು ಬಿಟ್ಟು ಏನನ್ನೂ ಮಾಡಲಾಗಲಿಲ್ಲ.

ಕ್ರಿಸ್ತನಲ್ಲಿ ನಂಬಿಕೆಯಿಟ್ಟ ನಿಜವಿಶ್ವಾಸಿಗಳೆಲ್ಲರೂ ಪವಿತ್ರಾತ್ಮನನ್ನು ಪಡೆದುಕೊಂಡಿದ್ದಾರೆಂಬದನ್ನು ನಾವು ನೆನಪಿನಲ್ಲಿಟ್ಟುಕೊಳ್ಳೋಣ. ದೇವರ ಚಿತ್ತವನ್ನು ನೆರವೇರಿಸಲು ಬೇಕಾದ ಬಲವೆಲ್ಲವೂ ನಮಗೆ ಪವಿತ್ರಾತ್ಮನ ಮೂಲಕವಾಗಿ ದೊರೆಯುವದಾಗಿದೆ.ನಾವು ಎಂದಿಗೂ ಸಹ "ದೇವರ ಚಿತ್ತವನ್ನು ಮಾಡಲು ನನಗೆ ಬಲವಾಗಲಿ ಅಥವಾ ಮಾರ್ಗವಾಗಲಿ ಇರುವದಿಲ್ಲ "ಎಂದು ಹೇಳಿದಿರೋಣ. ಅದರ ಬದಲಾಗಿ, ನಾವು ಮೇಲೆದ್ದು ಅದನ್ನು ಮಾಡುವವರಾಗಿರೋಣ. ಪೌಲನೊಂದಿಗೆ ನಾವು ಸಹ "ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು (ಯೇಸುವಿನಲ್ಲಿ) ಎಲ್ಲಕ್ಕೂ ಶಕ್ತನಾಗಿದ್ದೇನೆ" ಎಂದು ಹೇಳೋಣ (ಫಿಲಿಪ್ಪಿ4: 13), ಯಾಕೆಂದರೆ ಯೇಸು "ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮಸಂಗಡ ಇರುತ್ತೇನೆ" ಎಂದು ವಾಗ್ದಾನ ಮಾಡಿರುತ್ತಾನೆ (ಮತ್ತಾಯ 28:20).

5 ಸ್ನಾನಿಕನಾದ ಯೋಹಾನನು ತನ್ನ ಬಳಿಗೆ ದೀಕ್ಷಾಸ್ನಾನಕ್ಕಾಗಿ ಬಂದವರಿಗೆ ಹೇಳಿದ್ದೇನೆಂದರೆ: "ನಾನು ನಿಮಗೆ ನೀರಿನ ದೀಕ್ಷಾಸ್ನಾನ ಮಾಡಿಸಿದೆನು. ಆತನಾದರೋ (ಕ್ರಿಸ್ತನು ) ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಮಾಡಿಸುವನು" (ಮಾರ್ಕ 1:8). ಇಲ್ಲಿ ಈ ವಚನದಲ್ಲಿ ಯೇಸು ತನ್ನ ಶಿಷ್ಯರಿಗೆ "...ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ ಪವಿತ್ರಾತ್ಮನಲ್ಲಿ ಸ್ನಾನವಾಗುವದು ಎಂದು ಹೇಳಿದನು. ಅವರು ಈ ವರಕ್ಕಾಗಿ ಕಾಯಬೇಕಾಗಿತ್ತು. ಕ್ರಿಸ್ತನ ಕಾರ್ಯವನ್ನು ಮಾಡುವದಕ್ಕಾಗಿ ಪವಿತ್ರಾತ್ಮನಿಂದ ತುಂಬಿಸಲ್ಪಟ್ಟು, ಬಲವನ್ನು ಹೊಂದಿ, ಅಭಿಷೇಕಿಸಲ್ಪಡುವದೇ ಆತ್ಮನ ದೀಕ್ಷಾಸ್ನಾನವಾಗಿದೆ (1 ಕೊರಿಂಥ 12:13 ಮತ್ತು ವ್ಯಾಖ್ಯಾನ, ಸಾಮಾನ್ಯ ಲೇಖನ: ಪವಿತ್ರಾತ್ಮನು ನೋಡಿರಿ).

## ಯೇಸು ಪರಲೋಕಕ್ಕೆ ಎತ್ತಲ್ಪಟ್ಟದ್ದು (1:6-11)

6-7 ಯೇಸುವಿನ ಶಿಷ್ಯರು ಯೆಹೂದ್ಯರಾಗಿದ್ದರಿಂದ ಯೇಸು ಈಗಲೂ ಇಸ್ರಾಯೇಲಿನ ಸ್ವತಂತ್ರ ರಾಜ್ಯವನ್ನು ಸ್ಥಾಪಿಸುವನೆಂದು ಅಂದರೆ ಇಸ್ರಾಯೇಲರಾಜ್ಯವನ್ನು ತಿರಿಗಿ ಸ್ಥಾಪಿಸಿಕೊಡುವನೆಂದು ನಿರೀಕ್ಷಿಸುತ್ತಿದ್ದರು (ವಚನ 6). ಇಸ್ರಾಯೇಲ ಎಂಬದು ಯೆಹೂದಿ ರಾಷ್ಟ್ರದ ಹೆಸರಾಗಿತ್ತು. ಯೇಸುವಿನ ಕಾಲದಲ್ಲಿ ಇಸ್ರಾಯೇಲವು ರೋಮ ಸಾಮ್ರಾಜ್ಯದ ಹತೋಟಿಯಲ್ಲಿ ಇತ್ತು. ಯೆಹೂದ್ಯರು ಅವರ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದರು. ಆದುದರಿಂದ ಯೇಸು "ದೇವರ ರಾಜ್ಯವು ಸಮೀಪವಾಯಿತು" (ಮಾರ್ಕ 1:15), ಎಂದು ಬೋಧಿಸಿದಾಗಲೆಲ್ಲಾ ಆತನು ಲೌಕೀಕ ರಾಜ್ಯವನ್ನು ಕುರಿತಾಗಿ ಮಾತಾಡುತ್ತಿದ್ದಾನೆಂದು ಅವರು ನೆನಸಿದರು. ಯೇಸು ತನ್ನ ಶಿಷ್ಯರಿಗೆ "ನೀವು ನನ್ನ ರಾಜ್ಯದಲ್ಲಿ....ಸಿಂಹಾಸನಗಳ ಮೇಲೆ ಕೂತುಕೊಳ್ಳುವಿರಿ" ಎಂದು ಹೇಳಿದನು (ಲೂಕ 22:29-30) ಇಲ್ಲಿ ಶಿಷ್ಯರು ತಾವು ಒಮ್ಮೆಲೆ ಸಿಂಹಾಸನಗಳ ಮೇಲೆ ಕೂತುಕೊಳ್ಳುವರೆಂದು ನಿರೀಕ್ಷಿಸುತ್ತಿದ್ದರು!

ಆದರೆ ಯೇಸು ಅಂತಹ ಒಂದು ಲೌಕೀಕ ರಾಜ್ಯವನ್ನು ಸ್ಥಾಪಿಸಲು ಬರಲಿಲ್ಲ. ಆತನು ಒಂದು ಆತ್ಮೀಕ ರಾಜ್ಯವನ್ನು ಸ್ಥಾಪಿಸುವದಕ್ಕೆ ಬಂದನು, ಮತ್ತು ಆ ರಾಜ್ಯವು ಆತನು ತಿರಿಗಿ ಭೂಲೋಕಕ್ಕೆ ಬರುವಾಗ ಪರಿಪೂರ್ಣವಾಗಿ ಸ್ಥಾಪಿಸಲ್ಪಡುವದು (ಮಾರ್ಕ 13:26). ಆ ದಿನವು ಯಾವಾಗ ಬರುವದೆಂಬದು ಯಾರಿಗೂ ತಿಳಿದಿಲ್ಲ (ಮಾರ್ಕ 13:32).

8 ಅವರು ಪಡೆಯುವ ಬಲ ಮತ್ತು ಅಧಿಕಾರಗಳು ಲೌಕೀಕ ಅಥವಾ ರಾಜಕೀಯ ಬಲ ಮತ್ತು ಅಧಿಕಾರಗಳಲ್ಲ ಎಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು. ಬದಲಾಗಿ ಇದು ಅದಕ್ಕಿಂತಲೂ ಹೆಚ್ಚು ಉತ್ತಮವಾದದ್ದಾಗಿರುವದು: ಇದು ಪವಿತ್ರಾತ್ಮನ ಬಲ ಮತ್ತು ಅಧಿಕಾರವಾಗಿದೆ. ಇದು ತಂದೆಯ ವಾಗ್ದಾನ ಮಾಡಲ್ಪಟ್ಟ ವರವಾಗಿದ್ದು ಶಿಷ್ಯರು ಇದಕ್ಕಾಗಿ ಕಾಯಬೇಕಾಗಿತ್ತು (ವಚನಗಳು 4-5).

ನಂತರ ಯೇಸು ತನ್ನ ಶಿಷ್ಯರಿಗೆ ಒಂದು ಆಶ್ಚರ್ಯಕರ ಸಂಗತಿಯನ್ನು ಹೇಳಿದನು: "ನೀವು ಲೋಕದ ಕಟ್ಟಕಡೆಯವರೆಗೆ...ನನ್ನ ಸಾಕ್ಷಿಗಳಾಗಿರುವಿರಿ". ಈ ಅವಿದ್ಯಾವಂತರು, ಬಡವರು, ಮತ್ತು ಸಾಮಾನ್ಯ ವ್ಯಕ್ತಿಗಳು ಈಗ ದೇವಕುಮಾರನ ಸಾಕ್ಷಿಗಳು – ಪ್ರತಿನಿಧಿಗಳು ಮತ್ತು ರಾಯಭಾರಿಗಳು ಆಗಿರುವರು! (2 ಕೊರಿಂಥ 5:20). ಆದರ ಜೊತೆಯಲ್ಲಿ ಅವರು ಬಾಧೆಯನ್ನು ಸಹ ಹೊಂದಿ ಕೊನೆಯಲ್ಲಿ ಎಲ್ಲರೂ (ಯೋಹಾನನ ಹೊರತಾಗಿ) ಆತನಿಗಾಗಿ ಕೊಲ್ಲಲ್ಪಡುವರು. ಶಿಷ್ಯರು ಯೆರೂಸಲೇಮಿನಲ್ಲಿ ಸಾಕ್ಷಿಗಳಾಗಿರಬೇಕೆಂದು ಯೇಸು ಹೇಳಿದನು. ಅಲ್ಲದೆ ಅವರು ಎಲ್ಲಾ ಯೂದಾಯ ಸಮಾರ್ಯಗಳಲ್ಲಿಯೂ[3] ಆತನ ಸಾಕ್ಷಿಗಳಾಗಿರಬೇಕಾಗಿತ್ತು ಮತ್ತು ಅವರು ಲೋಕದ ಕಟ್ಟಕಡೆಯ ವರೆಗೂ ಕ್ರಿಸ್ತನ ಸಂದೇಶವನ್ನು ಸಾರಬೇಕಿತ್ತು. ದೇವರ ರಾಜ್ಯವು ಸಮೀಪವಾಯಿತೆಂಬದೂ, ಯೇಸು ಕ್ರಿಸ್ತನು ಸ್ತ್ರೀಪುರುಷರನ್ನು ಅವರ ಪಾಪದ ದಂಡನೆಯಿಂದ ಬಿಡುಗಡೆಗೊಳಿಸಿ ಅವರನ್ನು ದೇವರೊಂದಿಗೆ ಸಂಧಾನಮಾಡಲು ಬಂದನೆಂಬದು ಆವರ ಸಂದೇಶವಾಗಿತ್ತು (2 ಕೊರಿಂಥ 5:18-19). ಕ್ರೈಸ್ತರೆಲ್ಲರೂ ಬೋಧಕರಾಗಿರಲು ಕರೆಯಲ್ಪಟ್ಟಿರುವದಿಲ್ಲ. ಆದರೆ ಎಲ್ಲಾ ಕ್ರೈಸ್ತರು ಸಾಕ್ಷಿಗಳಾಗಿ ಕರೆಯಲ್ಪಟ್ಟಿರುವದಿಲ್ಲ. ನಾವು ಕ್ರಿಸ್ತನಿಗೆ ಸಾಕ್ಷಿಗಳಾಗಿರಬೇಕೆಂದು ಪವಿತ್ರಾತ್ಮನು ನಮಗೆ ಕಳುಹಿಸಲ್ಪಟ್ಟಿದ್ದಾನೆ.

ಹೇಗಿದ್ದರೂ, ಈದಿನಗಳಲ್ಲಿ" ನಾನು ಪವಿತ್ರಾತ್ಮನನ್ನು ಹೊಂದಿಕೊಂಡಿದ್ದೇನೆ:ಎಂದು ಹೇಳಿಯೂ ಸಾಕ್ಷಿಯನ್ನು ನೀಡದ ಕ್ರೈಸ್ತರು ಅನೇಕರಿದ್ದಾರೆ. ಇದು ಅಸಾಧ್ಯವಾದದ್ದು. ಪವಿತ್ರಾತ್ಮನಿಂದ ತುಂಬಿದ ವ್ಯಕ್ತಿಯು ಯಾವಾಗಲೂ ಕ್ರಿಸ್ತನಿಗಾಗಿ ಸಾಕ್ಷಿ ನೀಡುತ್ತಾನೆ. ಒಂದು ವೇಳೆ ಒಬ್ಬ ವ್ಯಕ್ತಿಯು ಸಾಕ್ಷಿ ನೀಡದಿದ್ದರೆ ಆತನು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟಿಲ್ಲ ಎಂದು ಹೇಳಬೇಕಾಗುವದು.

**9** ಯೇಸು ತನ್ನ ಪುನರುತ್ಥಾನದ ನಂತರ ವಿಶ್ವಾಸಿಗಳ ವಿವಿಧ ಗುಂಪುಗಳಿಗೆ ಅನೇಕ ಸಂದರ್ಭಗಳಲ್ಲಿ ಕಾಣಿಸಿಕೊಂಡನು. ಅನಂತರ ಆತನು ನಾಲ್ವತ್ತು ದಿನಗಳಾದ ಮೇಲೆ ಪರಲೋಕಕ್ಕೆ ಆರೋಹಣಗೊಂಡನು (ಲೂಕ 24:50-51 ನೋಡಿರಿ).

**10-11** ಯೇಸು ಪರಲೋಕಕ್ಕೆ ಏರಿಹೋಗುವದನ್ನು ಶಿಷ್ಯರು ತಮ್ಮ ಸ್ವಂತಕಣ್ಣಾರೆ ನೋಡಿದರು. ಆಗ ಶುಭ್ರವಸ್ತ್ರಧಾರಿಗಳು – ಅಂದರೆ ಇಬ್ಬರು ದೇವದೂತರು ಶಿಷ್ಯರಿಗೆ ಕಾಣಿಸಿಕೊಂಡರು. ಈ ದೇವದೂತರು ಶಿಷ್ಯರಿಗೆ "ನೀವು ಯೇಸುವಿಗಾಗಿ ಪರಲೋಕದೆಡೆಗೆ ನೋಡುತ್ತಿರುವ ಅವಶ್ಯಕತೆಯಿಲ್ಲ. ಅವನು ತನ್ನ ತಂದೆಯೊಂದಿಗಿರಲು ಪರಲೋಕಕ್ಕೆ ಹೋಗಿರುತ್ತಾನೆ. ಆಕಾಶವನ್ನು ನೋಡುತ್ತಾ ನಿಂತುಕೊಳ್ಳದಿರಿ. ನೀವು ಮಾಡಬೇಕಾದ ಕಾರ್ಯವು ಸಾಕಷ್ಟಿರುತ್ತದೆ. ಯೇಸು ತಾನು ಹೊರಟು ಹೋದ ರೀತಿಯಲ್ಲಿಯೇ ನೇಮಕವಾದ ಸಮಯದಲ್ಲಿ ತಿರಿಗಿ ಭೂಮಿಗೆ ಬರುವನು" ಎಂದು ಹೇಳಿದರು (ಮಾರ್ಕ 14:61-62). ಇಬ್ಬರು ದೇವದೂತರು ಶಿಷ್ಯರನ್ನು "ಗಲಿಲಾಯದವರೇ" ಎಂದು ಕರೆದರು. ಗಲಿಲಾಯವು ಇಸ್ರಾಯೇಲಿನ ಉತ್ತರ ಪ್ರಾಂತ್ಯವಾಗಿತ್ತು. ಯೇಸು ಮತ್ತು ಆತನ ಶಿಷ್ಯರು ಮೊದಲು ಗಲಿಲಾಯದಿಂದ ಬಂದವರಾಗಿದ್ದರು.

## ಯೂದನ ಸ್ಥಾನಕ್ಕೆ ಮತ್ತೀಯನು ಆಯ್ಕೆಗೊಂಡಿದ್ದು (1:12-26)

**12** ಯೇಸು ಪರಲೋಕಕ್ಕೆ ಏರಿಹೋದ ಸ್ಥಳವು ಎಣ್ಣೆಮರಗಳ ಗುಡ್ಡವಾಗಿತ್ತು. ಆ ಗುಡ್ಡವು ಯೆರೂಸಲೇಮಿನಿಂದ ಸಬ್ಬತ್ ದಿನದಲ್ಲಿ ಪ್ರಯಾಣ ಮಾಡುವಷ್ಟು ದೂರವಾಗಿತ್ತು, ಆದರೆ ಅದು ಯೆರೂಸಲೇಮಿನಿಂದ ಮೂಕ್ಕಾಲು ಮೈಲಿನಷ್ಟು ದೂರವಿತ್ತು. ಯೆಹೂದ್ಯಧರ್ಮ ಶಾಸ್ತ್ರದ ಪ್ರಕಾರವಾಗಿ ಯೆಹೂದ್ಯರು ಸಬ್ಬತ್[4] ದಿನದಲ್ಲಿ (ಶನಿವಾರ) ಮೂಕ್ಕಾಲು ಮೈಲಿಗಳಿಗಿಂತಲೂ ಹೆಚ್ಚು ದೂರ ನಡೆಯಬಾರದಾಗಿತ್ತು.

**13** ಇಲ್ಲಿ ಲೂಕನು ಯೇಸುವನ್ನು ಹಿಡುಕೊಟ್ಟ ಇಸ್ಕರಿಯೋತ ಯೂದನ ಹೊರತಾಗಿ ಯೇಸುವಿನ ಎಲ್ಲಾ ಶಿಷ್ಯರ ಹೆಸರುಗಳನ್ನು ನೀಡುತ್ತಾನೆ. ಶಿಷ್ಯರ ಪಟ್ಟಿಯನ್ನು ಮಾರ್ಕ 3:16-19 ರಲ್ಲಿನ ಪಟ್ಟಿಗೆ ಹೋಲಿಸಿದಾಗ ಒಂದು ಹೆಸರು ವ್ಯತ್ಯಾಸವಾಗಿರುವದು ಕಾಣಿಸಬಹುದು. ಇಲ್ಲಿ ತದ್ದಾಯನ ಸ್ಥಾನದಲ್ಲಿ ಯಾಕೋಬನ ಮಗನಾದ ಯೂದನು ಎಂದು ಬರೆದದೆ. ಹೇಗಿದ್ದರೂ, ಆತನು ಒಬ್ಬನೇ ವ್ಯಕ್ತಿ, ಆತನಿಗೆ ಎರಡು ಬೇರೆ ಬೇರೆ ಹೆಸರುಗಳಿದ್ದವು.

**14** ಯೇಸುವಿನ ಶಿಷ್ಯರು ಪವಿತ್ರಾತ್ಮನ ವರಕ್ಕಾಗಿ ಕಾಯುವ ವೇಳೆಯಲ್ಲಿ ಅವರೆಲ್ಲರೂ ಏಕಮನಸ್ಸಾಗಿ ಪ್ರಾರ್ಥನೆಯಲ್ಲಿ ನಿರತರಾಗಿದ್ದರು. ಮುಖ್ಯವಾಗಿ ನಾವು ಪ್ರಾರ್ಥನೆಯ ಮೂಲಕವೇ ಪವಿತ್ರಾತ್ಮನನ್ನು ಪಡೆಯುವವರಾಗಿದ್ದೇವೆ (ಲೂಕ 11:13). ಶಿಷ್ಯರು ಏಕಮನಸ್ಸಾಗಿ ಪ್ರಾರ್ಥಿಸುತ್ತಿದ್ದರು. ನಾವು ನಮ್ಮ ವಯುಕ್ತಿಕ ಬೇಡಿಕೆಯು ಅನುಗ್ರಹಿಸಲ್ಪಡಬೇಕೆಂದು ಬಯಸುವದಾದರೆ ನಾವು ಒಟ್ಟಾಗಿ ಸೇರಿ ಪ್ರಾರ್ಥಿಸುವ ವಿಷಯದಲ್ಲಿ ಏಕ ಮನಸ್ಸುಳ್ಳವರಾಗಬೇಕು (ಮತ್ತಾಯ 18:19 ನೋಡಿರಿ). ವಿಶ್ವಾಸಿಗಳ ಮದ್ಯದಲ್ಲಿ ಒಂದೇ ಮನಸ್ಸು ಇಲ್ಲದಿರುವ ಕಡೆಯಲ್ಲಿ ಪವಿತ್ರಾತ್ಮನ ಶಕ್ತಿಯು ತೋರಲ್ಪಡುವದಿಲ್ಲ. ಶಿಷ್ಯರೊಂದಿಗೆ ಯೇಸುವಿನ ತಾಯಿಯಾದ ಮರಿಯಳು, ಇತರ ಕೆಲವು ಸ್ತ್ರೀಯರು ಮತ್ತು ಯೋಸೇಫ ಮತ್ತು ಮರಿಯಳರ ಮಕ್ಕಳಾದ ಯೇಸುವಿನ ತಮ್ಮಂದಿರು ಇದ್ದರು. ಯೇಸುವಿನ ತಮ್ಮಂದಿರಲ್ಲಿ ಯಾಕೋಬನು ಪ್ರಸಿದ್ಧನಾಗಿದ್ದು ಹೊಸ ಒಡಂಬಡಿಕೆಯಲ್ಲಿ "ಯಾಕೋಬ" ಎಂಬ ಪತ್ರಿಕೆಯನ್ನು ಬರೆದವನಾಗಿರುತ್ತಾನೆ. ಯೋಸೆ,ಯೂದ, ಸಿಮೋನರು ಆತನು ಇತರ ಮೂರು ಜನ ತಮ್ಮಂದಿರಾಗಿದ್ದಾರೆ (ಮಾರ್ಕ 6:3). ಯೇಸು ಪುನರುತ್ಥಾನಗೊಳ್ಳುವ ಮುಂಚೆ ತಮ್ಮಂದಿರು ಆತನನ್ನು ನಂಬಲಿಲ್ಲ (ಯೋಹಾನ 7:5). ಆದರೆ ಈಗ ಅವರು ಆತನನ್ನು ದೇವಕುಮಾರನೆಂಬದಾಗಿ ಒಪ್ಪಿಕೊಂಡಿದ್ದರು. ಯೇಸು ಪುನರುತ್ಥಾನಗೊಂಡ ಮೇಲೆ ಸ್ವತಃ ಯಾಕೋಬನು ಆತನನ್ನು ಕಂಡನು (1 ಕೊರಿಂಥ 15:7), ತರುವಾಯ ಆತನು ಮುಂದುವರೆದು ಯೆರೂಸಲೇಮಿನಲ್ಲಿನ ಸಭೆಯ ಮುಖ್ಯ ನಾಯಕನಾದನು (ಗಲಾತ್ಯ 1:19, 2:9).

**15** ಯೇಸುವಿನ ಮುಖ್ಯ ಶಿಷ್ಯರ ಹೊರತಾಗಿ ಆ ಸಮಯದಲ್ಲಿ ಇತರ ಸುಮಾರು ನೂರಿಪ್ಪತ್ತು ವಿಶ್ವಾಸಿಗಳು ಯೆರೂಸಲೇಮಿನಲ್ಲಿದ್ದರು. ಬಹುಶ: ಅವರ ಮದ್ಯದಲ್ಲಿ ಯೇಸು ತನಗಿಂತ ಮುಂದೆ ಹೋಗಿ ದೇವರ ರಾಜ್ಯದ ಬರೋಣವನ್ನು ಪ್ರಕಟಿಸಲು ಕಳುಹಿಸಿದ ಎಪ್ಪತ್ತೆರಡು ಮಂದಿ ವಿಶ್ವಾಸಿಗಳಿದ್ದರು.(ಲೂಕ 10:1-11) ಯೇಸು ಭೂಮಿಯ ಮೇಲೆ ಇದ್ದಾಗ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ತನ್ನಲ್ಲಿ ನಂಬಿಕೆಯಿಡುವಂತೆ ನಡೆಸಲಿಲ್ಲ ಎಂಬದನ್ನು ಇದರ ಮೂಲಕ ನಾವು ಅರ್ಥಮಾಡಿಕೊಳ್ಳಬಹುದು. ಯೇಸು ಭೂಮಿಯ ಮೇಲಿದ್ದಾಗ ಶಿಷ್ಯರ ಚಿಕ್ಕಗುಂಪನ್ನು ತರಬೇತಿಗೊಳಿಸಿ ಆತ್ಮೀಕವಾಗಿ ಅಭಿವೃದ್ಧಿ ಪಡಿಸುವದೇ ಆತನ ಮುಖ್ಯ ಗುರಿಯಾಗಿತ್ತು. ಹಾಗಾದರೆ ಯೇಸು ಈ ಶಿಷ್ಯರಿಗೆ ಸುವಾರ್ತೆಯನ್ನು ಸಾರಿ ಜಗತ್ತಿನಲ್ಲೆಲ್ಲಾ ಆತನ ಸಭೆಯನ್ನು ಸ್ಥಾಪಿಸುವ ಕೆಲಸವನ್ನು ಕೊಟ್ಟನು.

**16-17** ಪೇತ್ರನು ಈ ವಿಶ್ವಾಸಿಗಳ ಗುಂಪಿನ ಮುಖ್ಯ ನಾಯಕನಂತೆ ತೋರುತ್ತದೆ. ಇಲ್ಲಿ ಪೇತ್ರನು ಯೆಹೂದ್ಯರ ಶ್ರೇಷ್ಠ ಅರಸನಾದ ದಾವೀದನ ಪ್ರವಾದನೆಯನ್ನು ಸೂಚಿಸಿ ಮಾತನಾಡುತ್ತಾನೆ. ಯೇಸುವಿನ ಆಪ್ತ ಮಿತ್ರರಲ್ಲೊಬ್ಬನು ಆತನನ್ನು ಹಿಡುಕೊಡುವನೆಂದು ದಾವೀದನು ಹಳೆ ಒಡಂಬಡಿಕೆಯಲ್ಲಿ ಪ್ರವಾದಿಸಿದ್ದನು (ಕೀರ್ತನೆಗಳು 41:9, ಯೋಹಾನ 13:18, 17:12 ನೋಡಿರಿ).

**18-19** ಈ ವಚನಗಳಲ್ಲಿ, ಯೂದನು ಯೇಸುವನ್ನು ಹಿಡುಕೊಟ್ಟ ನಂತರ ಆತನಿಗೆ ಏನು ಸಂಭವಿಸಿತೆಂಬದನ್ನು ಲೂಕನು ಬಣ್ಣಿಸುತ್ತಾನೆ. ಮತ್ತಾಯ 27:3-8 ರ ಪ್ರಕಾರವಾಗಿ ಯೂದನು ಯೇಸುವನ್ನು ಯೆಹೂದ್ಯ ನಾಯಕರು ಮತ್ತು ಮಹಾಯಾಜಕರಿಗೆ ಹಿಡುಕೊಡಲು ಅವರಿಂದ ತೆಗೆದು ಕೊಂಡ ಹಣವನ್ನು ತಿರಿಗಿ ಕೊಟ್ಟಿದ್ದನು, ಅನಂತರ ಯೂದನಲ್ಲ ಆದರೆ ಮಹಾಯಾಜಕರು ಆಹಣದಿಂದ ಹೊಲವನ್ನು ಕೊಂಡುಕೊಂಡರು. ಆದರೆ ಇದು ನಿಜವಾಗಿಯೂ ಯೂದನ ಹಣವಾಗಿತ್ತಾದ್ದರಿಂದ ಅವರು ಯೂದನ ಹೆಸರಿನಲ್ಲಿ ಹೊಲವನ್ನು ಕೊಂಡರು. ಆದರೆ ಯೂದನು ಆ ಹೊಲದಿಂದ ಯಾವ ಪ್ರಯೋಜನವನ್ನೂ ಪಡೆಯಲೇ ಇಲ್ಲ. ಯೂದನು ತಾನು ಮಾಡಿದ ಕಾರ್ಯಕ್ಕಾಗಿ ಮನಸಾಕ್ಷಿಯ ಪರಿತಾಪವನ್ನು ತಾಳಲಾರದೆ ತನ್ನನ್ನು ನೇಣು ಹಾಕಿಕೊಂಡನು ಮತ್ತು ಆತನ ದೇಹ ಉಬ್ಬಿಕೊಂಡು ಒಡೆದುಹೋಯಿತು. ಯೆಹೂದ್ಯರು ಯೇಸುವನ್ನು ಕೊಲ್ಲಲು ಪ್ರಯತ್ನಿಸುತ್ತಿರುವರೆಂದು ಯೂದನಿಗೆ ಗೊತ್ತಿತ್ತು. ಬಹುಶ: ಆತನು ಉಳಿದ ಶಿಷ್ಯರನ್ನು ಸಹ ಅವರು ಕೊಲ್ಲುವರೇನೋ ಎಂದು ಹೆದರಿದ್ದನು. ಆದ್ದರಿಂದ ಆತನು ತನ್ನಲ್ಲೆ ಯೋಚಿಸಿಕೊಂಡಿದ್ದೇನೆಂದರೆ: ಒಂದು ವೇಳೆ ನಾನು ಈ ಯೆಹೂದ್ಯ ನಾಯಕರೊಂದಿಗೆ ಸಹಕರಿಸಿ ಯೇಸುವನ್ನು ಅವರ ಕೈಗಳಲ್ಲಿ ಒಪ್ಪಿಸುವದಾದರೆ ನಾನು ನನ್ನ ಸ್ವಂತ ಪ್ರಾಣವನ್ನು ಉಳಿಸಿಕೊಳ್ಳಬಹುದು". ಆದರೆ ಆತನ ಯೋಜನೆಯು ಸಫಲವಾಗಲಿಲ್ಲ, ಕೊನೆಯಲ್ಲಿ ಆತನು ತನ್ನ ಪ್ರಾಣವನ್ನು ಕಳೆದುಕೊಂಡನು (ಮಾರ್ಕ 8:35 ನೋಡಿರಿ).

**20** ಇಲ್ಲಿ ಪೇತ್ರನು ಕೀರ್ತನೆಗಳು 69:25 ರಲ್ಲಿನ ವಿಷಯವನ್ನು ಉಲ್ಲೇಖಿಸುತ್ತಾನೆ. ಯೂದನ ಮನೆ, ಅಂದರೆ, ಆತನ ಹೊಲವು ಹಾಳು ಬಿದ್ದಿತು. ಅದು ಯಾರಿಗೂ ಬೇಕಾಗಿರಲಿಲ್ಲ. ಆದ್ದರಿಂದ, ಅದನ್ನು ಯೆರೂಸಲೇಮಿನಲ್ಲಿ ಸಾಯುವ ಅನ್ಯ ದೇಶಿಯರನ್ನು ಹೊಣಿಡುವದಕ್ಕಾಗಿ ಉಪಯೋಗಿಸಲಾಯಿತು (ಮತ್ತಾಯ 27:7) ಬಳಿಕ ಪೇತ್ರನು ಯೂದನ ಸ್ಥಾನವನ್ನು ವಹಿಸಿಕೊಳ್ಳಲು ಮತ್ತೊಬ್ಬ ಶಿಷ್ಯನನ್ನು ಆರಿಸಿಕೊಳ್ಳುವದು ಅಗತ್ಯ ಎಂಬದನ್ನು ತೋರಿಸಲು ಕೀರ್ತನೆಗಳು 109:8 ರಲ್ಲಿನ ವಿಷಯವನ್ನು ಉಲ್ಲೇಖಿಸುತ್ತಾನೆ. ಇಸ್ರಾಯೇಲಿನ[5] ಹನ್ನೆರಡು ಗೋತ್ರಗಳಿಗೆ ನ್ಯಾಯತೀರಿಸಲು ಯೇಸು ಹನ್ನೆರಡು ಪ್ರಮುಖ ಶಿಷ್ಯರನ್ನು ಆರಿಸಿ ಕೊಂಡಿದ್ದನು (ಮತ್ತಾಯ 19:28), ಆದುದರಿಂದ ಕೇವಲ ಹನ್ನೊಂದು ಮಂದಿ ಶಿಷ್ಯರು ಮಾತ್ರವೇ ಉಳಿಯುವದು ಸರಿಯಾದದ್ದಾಗಿರಲಿಲ್ಲ.

**21-22** ಹನ್ನೆರಡು ಮಂದಿ ಶಿಷ್ಯರೊಳಗೆ ಯೂದನ ಸ್ಥಾನವನ್ನು ತೆಗೆದುಕೊಳ್ಳಲು ಇರಬೇಕಾದ ಅರ್ಹತೆಯೇನೆಂದರೆ ಒಬ್ಬನು ಯೇಸುವಿನ ಸೇವೆಯ ಪ್ರಾರಂಭದಿಂದಲೂ ಆತನೊಂದಿಗೆ ಇದ್ದವನು ಮತ್ತು ಆತನು ಸತ್ತವರೊಳಗಿಂದ ಎದ್ದು ಬಂದ ನಂತರ ಆತನನ್ನು ನೋಡಿದವನೂ ಆಗಿರಬೇಕು.

**23-24** ಮೊದಲು ಶಿಷ್ಯರು ಹನ್ನೆರಡನೆಯ ಶಿಷ್ಯನಾಗಿರಲು ಸಮಾನ ಅರ್ಹತೆಯನ್ನು ಹೊಂದಿದ ಇಬ್ಬರನ್ನು ಆಯ್ಕೆ ಮಾಡಿದರು. ಅನಂತರ, ಕರ್ತನು ಈ ಇಬ್ಬರಲ್ಲಿ ಯಾರನ್ನು ಆರಿಸಿಕೊಂಡಿದ್ದಾನೆಂಬದನ್ನು ತೋರಿಸುವಂತೆ ಆತನನ್ನು ಕೇಳಿಕೊಂಡರು. ಆಮೇಲೆ ಅವರು ಚೀಟು ಹಾಕಿದರು. ಚೀಟು ದೇವರು ಆರಿಸಿಕೊಂಡ ವ್ಯಕ್ತಿಗೆ ಬೀಳುವದೆಂದು ಅವರು ನಂಬಿದರು, ಯಾಕೆಂದರೆ ಚೀಟು ಹಾಕುವದು ದೇವರ ಹತೋಟಿಯಲ್ಲಿತ್ತೆಂಬದು ಅವರಿಗೆ ಗೊತ್ತಿತ್ತು (ಜ್ಞಾನೋಕ್ತಿ 16:33).

ದೇವರ ಚಿತ್ತವನ್ನು ತಿಳಿದು ಕೊಳ್ಳುವದಕ್ಕಾಗಿ ಚೀಟು ಹಾಕುವದನ್ನು ಹೊಸ ಒಡಂಬಡಿಕೆಯಲ್ಲಿ ಈ ಸ್ಥಳದಲ್ಲಿ ಮಾತ್ರವೇ ಕಾಣುತ್ತೇವೆ. ಬಹುಪಾಲು ಕ್ರೈಸ್ತರು ನಂಬುವದೇನೆಂದರೆ ಪಂಚಾಶತ್ತಮ ದಿನದಲ್ಲಿ ಪವಿತ್ರಾತ್ಮನು ಶಿಷ್ಯರ ಮೇಲೆ ಬಂದ ದಿನದಿಂದ (ಅ.ಕೃತ್ಯ 2:1-4), ದೇವರ ಚಿತ್ತವನ್ನು ತಿಳಿಯಲು ಚೀಟುಹಾಕುವ ಆವಶ್ಯಕತೆಯಿರುವದಿಲ್ಲ. ಅವರು ಹಾಗೆ ಹೇಳುವದಕ್ಕೆ ಕಾರಣವೇನೆಂದರೆ ಪವಿತ್ರಾತ್ಮನು ಈಗ ಎಲ್ಲಾ ವಿಶ್ವಾಸಿಗಳಿಗೆ ದೊರೆಯುವವನಾಗಿದ್ದಾನೆ, ಮತ್ತು ನಿರ್ಧಿಷ್ಟವಾದ ಪರಿಸ್ಥಿತಿಗಳಲ್ಲಿ ದೇವರ ಚಿತ್ತವೇನೆಂಬದನ್ನು ಆತನು ಸಂಪೂರ್ಣವಾಗಿ ತೋರಿಸುವನು!

---

## ಅಧ್ಯಾಯ - 2

### ಪಂಚಾಶತ್ತಮ ದಿನದಂದು ಪವಿತ್ರಾತ್ಮನು ಬಂದದ್ದು (2:1-13)

**1** ಪಂಚಾಶತ್ತಮವು ಯೇಸುವಿನ ಪುನರುಥ್ಥಾನ ನಂತರದ ಐವತ್ತನೆಯ ದಿನದಲ್ಲಿ ಬಂದಿತು. ಗ್ರೀಕ್[6] ಭಾಷೆಯಲ್ಲಿ ಪಂಚಾಶತ್ತಮ ಎಂದರೆ "ಐವತ್ತು" ಎಂದರ್ಥವಾಗಿದೆ. ಹಳೆ ಒಡಂಬಡಿಕೆಯ ಪ್ರಕಾರವಾಗಿ ಯೆಹೂದ್ಯರ ಪಸ್ಕ ಹಬ್ಬದ ನಂತರದ ಭಾನುವಾರದ ತರುವಾಯ ಐವತ್ತನೆಯ ದಿನದಂದು ಬರುತ್ತಿತ್ತು (ಯಾಜಕಕಾಂಡ 23:15), ಕ್ರೈಸ್ತರಿಗೆ ಅದು ಈಸ್ಟರ್ (ಪುನರುಥ್ಥಾನ ಹಬ್ಬದ) ನಂತರದ ಐವತ್ತನೆಯ ದಿನವಾಗಿರುತ್ತದೆ. ಆದರೆ ಯೆಹೂದ್ಯರು ಪಂಚಾಶತ್ತಮ ದಿನದಂದು ವಾರಗಳ ಹಬ್ಬವನ್ನು ಆಚರಿಸುತ್ತಿದ್ದರು (ವಿಮೋಚನಕಾಂಡ 34:22, ಧರ್ಮೋಪದೇಶಕಾಂಡ 16:9-10). ಯೆಹೂದ್ಯರು ಪಂಚಾಶತ್ತಮವನ್ನು ಇನ್ನೊಂದು ಕಾರಣಕ್ಕಾಗಿ ಆಚರಿಸುತ್ತಿದ್ದರು: "ಆ ದಿನದಂದು ದೇವರು ಅವರಿಗೆ ಯೆಹೂದ್ಯ ಧರ್ಮಶಾಸ್ತ್ರವನ್ನು ಕೊಟ್ಟನೆಂದು ಅವರು ನಂಬುತ್ತಾರೆ. ಆದುದರಿಂದ, ಆದಿನದಂದು ದೇವರು ಶಿಷ್ಯರಿಗೆ ಪ್ರಥಮ ಸಾರಿ ಪವತ್ರಾತ್ಮನ ದೀಕ್ಷಾಸ್ನಾನವನ್ನು ನೀಡುವದು ತಕ್ಕದ್ದಾಗಿತ್ತು.

2-3 ಇಡೀ ಮಾನವ ಚರಿತ್ರೆಯಲ್ಲಿ ಬೇರೆ ಇನ್ನಾವದಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾದ ಮೂರು ಘಟನೆಗಳಿರುತ್ತವೆ:ಯೇಸುವಿನ ಜನನ, ಯೇಸುವಿನ ಮರಣ ಮತ್ತು ಪುನರುತ್ಥಾನ, ಹಾಗು ಯೇಸುವಿನ ಪುನರುತ್ಥಾನದ ನಂತರ ಪಂಚಾಶತ್ತಮದ ಮೊದಲನೆಯ ದಿನದಂದು ಪವಿತ್ರಾತ್ಮನು ಪೂರ್ಣ ಬಲದಲ್ಲಿ ಬಂದದ್ದು. ಚರಿತ್ರೆಯಲ್ಲಿ ಬೇರೆ ಇನ್ನಾವದೇ ಘಟನೆಯನ್ನು ಈ ಮೂರು "ಘಟನೆಗಳ ಪ್ರಾಮುಖ್ಯತೆಗೆ ಹೋಲಿಸಲು "ಸಾದ್ಯವಿಲ್ಲ. ಈ ವಚನಗಳಲ್ಲಿ ಲೂಕನು ನಮಗೆ ಈ ಮೂರು ಶ್ರೇಷ್ಠ ಘಟನೆಗಳಲ್ಲಿ ಮೂರನೆಯ ಘಟನೆಯ ಬಣ್ಣನೆಯನ್ನು ನೀಡುತ್ತಾನೆ. ಯೇಸುವಿನ ಶಿಷ್ಯರು ಯೆರೂಸಲೇಮಿನ[7] ಒಂದು ಮನೆಯಲ್ಲಿ ಒಟ್ಟಾಗಿ ಸೇರಿದ್ದರು. ಆಗ ಅವರು ಪಕ್ಕನೆ ಬಿರುಗಾಳಿ ಬೀಸುತ್ತದೋ ಎಂಬಂತೆ ಶಬ್ದವನ್ನು ಕೇಳಿದರು (ಯೋಹಾನ 3:8 ನೋಡಿರಿ). ಮತ್ತು ಅವರು ಉರಿಯಂತಿದ್ದ ನಾಲಿಗೆಗಳನ್ನು ಕಂಡರು. ಯೇಸು ಪವಿತ್ರಾತ್ಮನಿಂದಲೂ, ಬೆಂಕಿಯಿಂದಲೂ ಸ್ನಾನಮಾಡಿಸುವನೆಂದು ಸ್ನಾನಿಕನಾದ ಯೋಹಾನನು ಹೇಳಿದ್ದನು (ಮತ್ತಾಯ 3:11). ಬೆಂಕಿಯು ದೇವರ ಪ್ರಸನ್ನತೆಯ ಒಂದು ಸಂಕೇತವಾಗಿದೆ. ದೇವರು ಯೆಹೂದ್ಯರ ಮಹಾ ನಾಯಕನಾದ ಮೋಶೆಗೆ ಉರಿಯುವ ಬೆಂಕಿಯ ಪೊದೆಯಲ್ಲಿ ಕಾಣಿಸಿಕೊಂಡನು (ವಿಮೋಚನಕಾಂಡ 3:2). ಯೆಹೂದ್ಯರು ಐಗುಪ್ತ್ಯದ ದಾಸತ್ವದೊಳಗಿಂದ ತಪ್ಪಿಸಿಕೊಂಡು ಹೊರಟಾಗ ಅವರಿಗೆ ಮಾರ್ಗ ತೋರಿಸಲು ದೇವರು ಅಗ್ನಿಯಸ್ತಂಭವಾಗಿ ಅವರ ಮುಂದೆ ಹೊರಟನು (ವಿಮೋಚನ ಕಾಂಡ 13:21-22). ಮತ್ತು ಇಂದು ವಿಶ್ವಾಸಿಗಳು ಪವಿತ್ರಾತ್ಮನ ಬಲ ಮತ್ತು ಪ್ರಸನ್ನತೆಯನ್ನು ಅನುಭವಿಸುವಾಗ ಹಲವಾರು ವೇಳೆ ಅವರು ಅದು ಒಂದು ರೀತಿ ಅವರ ಹೃದಯಗಳಲ್ಲಿ ಬೆಂಕಿಯು ಉರಿದಂತಿರುತ್ತದೆಂದು ಹೇಳುತ್ತಾರೆ. ಆ ಬೆಂಕಿಯು ಎಂದಿಗೂ ನಂದದಿರಲಿ!

4 ಶಿಷ್ಯರು ಏನೇ ಕಂಡಿರಲಿ ಅಥವಾ ಕೇಳಿರಲಿ, ಪ್ರಾಮುಖ್ಯವಾದ ಸಂಗತಿಯೇನಂದರೆ: ಅವರೆಲ್ಲರೂ ಪವಿತ್ರಾತ್ಮಭರಿತರಾದರು. ಆ ದಿನದಿಂದ ಅವರ ಜೀವಿತಗಳು ಬದಲಾದವು. ಆ ದಿನದಿಂದ ಅವರು ಪುನರುತ್ಥಾನಗೊಂಡ ಕ್ರಿಸ್ತನ ಬಲವನ್ನು ತಮ್ಮ ಜೀವಿತಗಳಲ್ಲಿ ಹೊಂದಿದವರಾಗಿದ್ದರು. ಅವರ ಭಯ ಮತ್ತು ಸಂಶಯಗಳು ಹೊರಟು ಹೋಗಿದ್ದವು. ಆದಿನ ಮೊದಲುಗೊಂಡು ಅವರು ಮಾತಾಡಿದಾಗಲೆಲ್ಲಾ ಪವಿತ್ರಾತ್ಮನ ಬಲ ಮತ್ತು ಅಧಿಕಾರದೊಂದಿಗೆ ಮಾತನಾಡಿದರು. ಅವರು ಸ್ವಸ್ಥ ಮಾಡಿದಾಗ ಅವರು ಪವಿತ್ರಾತ್ಮನ ಬಲದ ಮೂಲಕವಗಿ ಮಾಡಿದರು. ಅಂಧಿನಿಂದ ಅವರ ಜೀವಿತಗಳು ಸಂಪೂರ್ಣವಾಗಿ ಪವಿತ್ರಾತ್ಮನ ಮೇಲೆ ಆತು ಕೊಂಡು ಆತನ ಅಧಿನದಲ್ಲಿದ್ದವು. ಈ ದಿನ ನಾವು ಸಹ ಆ ಬಲವನ್ನು ಪಡೆದು ಕೊಳ್ಳಬಹುದೆಂಬದನ್ನು ನೆನಪಿನಲ್ಲಿ ಇಟ್ಟುಕೊಳ್ಳೋಣ. ಆ ಬಲವು ಕೇವಲ ಆ ಪ್ರಥಮ ಶಿಷ್ಯರುಗಳಿಗೆ ಮಾತ್ರವಾಗಿರಲಿಲ್ಲ, ಅದು ಎಲ್ಲಾ ವಿಶ್ವಾಸಿಗಳಿಗಾಗಿಯೂ ಇರುತ್ತದೆ. ನಾವೆಲ್ಲರೂ ಪವಿತ್ರಾತ್ಮನಿಂದ ತುಂಬಿದವರಾಗಿರಬೇಕೆಂಬದು ಮತ್ತು ಆತನ ಬೆಂಕಿಯು ನಮ್ಮ ಹೃದಯಗಳಲ್ಲಿ ಪ್ರಕಾಶಮಾನವಾಗಿ ಉರಿಯುತ್ತಿರಲೆಂಬದು ನಮ್ಮ ಎಡೆಬಿಡದ ಪ್ರಾರ್ಥನೆಯಾಗಿರಲಿ. ಪವಿತ್ರಾತ್ಮನ ತುಂಬಿಸಲ್ಪಡುವಿಕೆಯು ಒಂದು ಸಾರಿಯ ಅನುಭವವಲ್ಲ. ಇದು ಒಂದು ನಿರಂತರ ಅನುಭವವಾಗಿದೆ, ಇದು ಎಡೆಬಿಡದೆ ವಿನೂತನಗೊಳಿಸಿಕೊಳ್ಳುವದಾಗಿದೆ (ಅ.ಕೃತ್ಯ 4:31 ನೋಡಿರಿ). ಕಾಲ ಕಾಲಕ್ಕೆ ಒಬ್ಬ ವಿಶ್ವಾಸಿಯ ಜೀವಿತದಲ್ಲಿ ಪವಿತ್ರಾತ್ಮನ ತುಂಬಿಸಲ್ಪಡುವಿಕೆಯು ಒಂದು ನೂತನ ಹಾಗು ವಿಶೇಷ ಮಾರ್ಗಗಳಲ್ಲಿ ಸಂಭವಿಸಬಹುದು. ಆದರೆ ಆ ಪಂಚಾಶತ್ತಮದ ಮೊದಲನೆಯ ದಿನದಲ್ಲಿ ಆದೇ ಪ್ರಥಮ ಬಾರಿಗೆ ಪವಿತ್ರಾತ್ಮನು ವಿಶ್ವಾಸಿಗಳ ಮೇಲೆ ಬಲದೊಂದಿಗೆ ಇಳಿದು ಬಂದನು, ಮತ್ತು ಅಂದಿನಿಂದ ಈ ತನಕ ಪವಿತ್ರಾತ್ಮನು ವಿಶ್ವಾಸಿಗಳ ಜೀವಿತಗಳನ್ನು ತುಂಬಿಸುತ್ತಿದ್ದಾನೆ. ಪವಿತ್ರಾತ್ಮನ "ತುಂಬಿಸಲ್ಪಡುವಿಕೆ" ಮತ್ತು "ದೀಕ್ಷಾಸ್ನಾನ" ಎರಡು ಬೇರೆ ಬೇರೆ ಸಂಗತಿಗಳೆಂದು ಕೆಲವು ಕ್ರೈಸ್ತರು ನಂಬುತ್ತಾರೆ. ಆದರೆ ಅಪೊಸ್ತಲರ ಕೃತ್ಯಗಳ ಪುಸ್ತಕದ ಪ್ರಕಾರವಾಗಿ ಪಂಚಾಶತ್ತಮ ದಿನದ ಘಟನೆಯು "ದೀಕ್ಷಾಸ್ನಾನಠ (ಅ.ಕೃತ್ಯ 1:5) ಮತ್ತು "ತುಂಬಿಸಲ್ಪಡುವಿಕೆ" ಎಂಬ ಎರಡೂ ರೀತಿಯಲ್ಲಿ ಕರೆಯಲ್ಪಟ್ಟಿದೆ. ಆದುದರಿಂದ ಈ ಎರಡೂ ವಚನಗಳಿಂದ ಪವಿತ್ರಾತ್ಮನ "ದೀಕ್ಷಾಸ್ನಾನ" ಮತ್ತು "ತುಂಬಿಸಲ್ಪಡುವಿಕೆ" ಇವುಗಳ ನಡುವೆ ಯಾವದೇ ಸ್ಪಷ್ಟ ವ್ಯತ್ಯಾಸವನ್ನು ನಾವು ಕಾಣುವದಿಲ್ಲ (1 ಕೊರಿಂಥ 12:13 ಮತ್ತು ವ್ಯಾಖ್ಯಾನ, ಸಾಮಾನ್ಯಲೇಖನ: ಪವಿತ್ರಾತ್ಮನ ದೀಕ್ಷಾಸ್ನಾನ ನೋಡಿರಿ). ಒಬ್ಬ ವ್ಯಕ್ತಿಯು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟಿರುವನೋ ಎಂದು ನಾವು ಹೇಗೆ ಹೇಳಬಲ್ಲೆವು? ಮೊದಲನೆಯದಾಗಿ, ನಾವು ಆತನ ಜೀವಿತದಲ್ಲಿ ಪ್ರೀತಿ, ಸಂತೋಷ, ಸಮಾಧಾನಗಳಂತಹ ಆತ್ಮನ ಫಲಗಳನ್ನು ಕಾಣುವೆವು (ಗಲಾತ್ಯ 5:22-23). ಎರಡನೆಯದಾಗಿ, ನಾವು ಆತನ ಜೀವಿತದಲ್ಲಿ ಸ್ವಸ್ಥತೆ, ಪ್ರವಾದನೆ,ವಿವಿಧ ಭಾಷೆಗಳನ್ನಾಡುವಂತಹ ಮುಂತಾದ ಆತ್ಮನ ವರಗಳನ್ನು ಕಾಣುತ್ತೇವೆ (1 ಕೊರಿಂಥ 12:7-11 ನೋಡಿರಿ). ಈ ವರಗಳಲ್ಲಿ ವಿವಿಧ ಭಾಷೆಗಳನ್ನಾಡುವ ವರವು ಪಂಚಾಶತ್ತಮ ದಿನದಂದು ಶಿಷ್ಯರ ಜೀವಿತಗಳಲ್ಲಿ ಕಂಡು ಬಂದಿತು.

ಸಾಮಾನ್ಯವಾಗಿ "ವಾಣಿಗಳನ್ನಾಡುವ" ವರವು ಕಾರ್ಯಶೀಲವಾಗುವಾಗ ಮಾತಾನಾಡುವ ಭಾಷೆಯು ಲೌಕೀಕ ಭಾಷೆಯಾಗಿರದೇ ಒಂದು ಆತ್ಮೀಕ ಭಾಷೆಯಾಗಿರುತ್ತದೆ. ಈ ಆತ್ಮೀಕ ಭಾಷೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ವಾಣಿಗಳ ಅರ್ಥವನ್ನು ಹೇಳುವ ಇನ್ನೊಂದು ವರವು ಅಗತ್ಯವಾಗಿರುತ್ತದೆ (1 ಕೊರಿಂಥ 12:10, 14:2, 13, 27-28 ನೋಡಿರಿ). ಹೇಗಿದ್ದರೂ, ಪಂಚಾಶತ್ತಮ ದಿನದಲ್ಲಿ ಈ ಶಿಷ್ಯರು ಆಯಾ ರಾಷ್ಟ್ರಗಳ ಸ್ವಾಭಾವಿಕವಾದ ಲೌಕೀಕ ಭಾಷೆಗಳನ್ನು ಮಾತನಾಡಿದರು, ಆ ಭಾಷೆಗಳನ್ನು ಆಯಾ ರಾಷ್ಟ್ರಗಳ ಜನರು ಸಹಜವಾಗಿ[8] ಅರ್ಥಮಾಡುಕೊಳ್ಳಲು ಶಕ್ತರಾದರು (ವಚನ 6).

ಯೇಸು ತನ್ನ ಶಿಷ್ಯರಿಗೆ ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ ಎಂದು ಆಜ್ಞಾಪಿಸಿದ್ದನು (ಮತ್ತಾಯ 28:19). ಈಗ, ಶಿಷ್ಯರು ಇತರ ಭಾಷೆಗಳನ್ನಾಡುವ ಪವಿತ್ರಾತ್ಮನ ವರದ ಮೂಲಕವಾಗಿ ವಿವಿಧ ದೇಶಗಳ ಜನರೊಂದಿಗೆ ಅವರ ಭಾಷೆಗಳಲ್ಲಿಯೇ ಮಾತಾಡಲು ಶಕ್ತರಾಗಿದ್ದರು. ಹೇಗಿದ್ದರೂ, ಹೊಸ ಒಡಂಬಡಿಕೆಯ ಕಾಲದಲ್ಲಿ

ಸುವಾರ್ತೆಯನ್ನು ಪ್ರಸರಿಸಲು ಈ ವರವನ್ನು ಉಪಯೋಗಿಸುವ ಅವಶ್ಯಕತೆಯು ಇರಲಿಲ್ಲ, ಯಾಕೆಂದರೆ ಮದ್ಯ ಪೂರ್ವದಲ್ಲಿ ವಾಸಿಸುತ್ತಿದ್ದ ಬಹುಪಾಲು ಜನರು ಗ್ರೀಕ [9] ಅಥವಾ ಆರಾಮಿಕ [10] ಭಾಷೆಯನ್ನು ಮಾತಾಡುತ್ತಿದ್ದರು, ಆ ಎರಡು ಭಾಷೆಗಳನ್ನು ಸ್ವತಃ ಶಿಷ್ಯರು ಮಾತಾಡಬಲ್ಲವರಾಗಿದ್ದರು. ಅನ್ಯ ಭಾಷೆಗಳನ್ನಾಡುವ ಸಾಮರ್ಥ್ಯವು ಪವಿತ್ರಾತ್ಮನ ದೀಕ್ಷಾಸ್ನಾನದ ಮುಖ್ಯ ಗುರುತಾಗಿರುತ್ತದೆಂದು ಕೆಲವು ಕ್ರೈಸ್ತರು ನಂಬಿತ್ತಾರೆ (ಅ.ಕೃತ್ಯ 10:44-46, 19:6 ನೋಡಿರಿ). ಯಾರಾರು ಅನ್ಯ ಭಾಷೆಗಳನ್ನು ಮಾತಾಡುವದಿಲ್ಲವೋ ಅವರು ಆತ್ಮನ ದೀಕ್ಷಾಸ್ನಾನವನ್ನು ಹೊಂದಿರುವದಿಲ್ಲ ಎಂದು ಈ ಕ್ರೈಸ್ತರು ಹೇಳುತ್ತಾರೆ. ಆದರೆ ಬಹುತೇಕ ಕ್ರೈಸ್ತರು ಈ ಅಭಿಪ್ರಾಯವನ್ನು ಒಪ್ಪಿಕೊಳ್ಳುವದಿಲ್ಲ, ಬದಲಾಗಿ, ಅವರು ಪವಿತ್ರಾತ್ಮನ ವರಗಳು ಮತ್ತು ಕ್ರಿಯೆಗಳು ಆನೇಕ ವಿಧಗಳದ್ದಾಗಿದ್ದು, ಅನ್ಯಭಾಷೆಗಳನ್ನಾಡುವ ಸಾಮರ್ಥ್ಯ ಆ ಪವಿತ್ರಾತ್ಮನ ಕಾರ್ಯಗಳಲ್ಲಿ ಒಂದು ಮಾತ್ರವೇ ಆಗಿದೆಯೆಂದು ನಂಬುತ್ತಾರೆ. ಇನ್ನೊಂದು ಸಂಗತಿಯನ್ನು ನಾವು ನೆನಪಿನಲ್ಲಿಟ್ಟು ಕೊಳ್ಳುವದು ಪ್ರಾಮುಖ್ಯವಾಗಿದೆ: ಮಿಥ್ಯ ಆತ್ಮಗಳು ಮತ್ತು ಮಿಥ್ಯ ಪ್ರವಾದಿಗಳು ಸಹ ಅನ್ಯ ಭಾಷೆಗಳನ್ನಾಡಬಹುದು. ಇತರ ಧರ್ಮದ ಅನುಯಾಯಿಗಳು ಸಹ ಅನ್ಯ ಭಾಷೆಗಳನ್ನು ಆಡಿದ್ದಾರೆ. ಆದುದರಿಂದ, ಅನ್ಯ ಭಾಷೆಗಳಲ್ಲಿ ಹೇಳಿದ್ದರ ಅರ್ಥವೇನೆಂಬದನ್ನು ಅರ್ಥಮಾಡಿಕೊಳ್ಳುವದರ ಮೂಲಕ ಯಾವಾಗಲೂ ಪರೀಕ್ಷೆಮಾಡುವದು ಅವಶ್ಯಕವಾಗಿರುತ್ತದೆ. ಸುಮ್ಮನೆ ಯಾವದಾದರೂ ಅನ್ಯ ಭಾಷೆಯಲ್ಲಿ ಮಾತಾಡುವದು ಅಥವಾ ವಿಚಿತ್ರ ಶಬ್ದವನ್ನು ಮಾಡುವದು ಪವಿತ್ರಾತ್ಮನ ಒಂದು ಸಂಕೇತವಾಗಿರಬೇಕೆಂದೇನಿಲ್ಲ. ಹೇಳಲ್ಪಟ್ಟಿರುವದನ್ನು ಅರ್ಥಮಾಡಿಕೊಳ್ಳುವದೇ ಮುಖ್ಯ ಸಂಗತಿಯಾಗಿದೆ. ಒಂದು ವೇಳೆ ಹೇಳಲ್ಪಟ್ಟಿರುವದು ದೇವರ ವಾಕ್ಯದ ಪ್ರಕಾರವಾಗಿರುವದಾದರೆ, ಮತ್ತು ಕ್ರಿಸ್ತನಿಗೆ ಮಹಿಮೆಯನ್ನುಂಟು ಮಾಡುವದಾಗಿದ್ದರೆ ಅದು ಪವಿತ್ರಾತ್ಮನಿಂದ ಬಂದದ್ದಾಗಿದೆ. ಒಂದು ವೇಳೆ ಹೇಳಿರುವ ಸಂಗತಿಯು ವಾಕ್ಯಕ್ಕೆ ವಿರೋಧವಾಗಿರುವದಾದರೆ ಅಥವಾ ಕ್ರಿಸ್ತನಿಗೆ ಅವಮಾನವುಂಟು ಮಾಡುವದಾಗಿದ್ದರೆ ಅದು ಖಂಡಿತವಾಗಿಯೂ ಪವಿತ್ರಾತ್ಮನಿಂದ ಬಂದದ್ದಲ್ಲ (ಯೋಹಾನ 16:13-14, 1 ಕೋರಿಂಥ 12:3, 1 ಯೋಹಾನ 4:1-3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**5-6** ಹೊಸ ಒಡಂಬಡಿಕೆಯ ಕಾಲದಲ್ಲಿ ಯಹೂದ್ಯರು ಅನೇಕ ದೇಶಗಳಲ್ಲಿ ಚದುರಿದವರಾಗಿ ಜೀವಿಸುತ್ತಿದ್ದರು. ಈ ಯೆಹೂದ್ಯರಲ್ಲಿ ಅನೇಕರು ಪ್ರತಿವರ್ಷವು ಯೆಹೂದ್ಯರ ಪ್ರಮುಖ ಹಬ್ಬಗಳನ್ನು ಆಚರಿಸಲು ಯೆರೂಸಲೇಮಿಗೆ ಬರುತ್ತಿದ್ದರು. ಈ ಹಬ್ಬಗಳಲ್ಲಿ ವಾರಗಳನ್ನು ಆಚರಿಸಲು ಯೆರೂಸಲೇಮಿಗೆ ಬರುತ್ತಿದ್ದರು. ಈ ಹಬ್ಬಗಳಲ್ಲಿ ವಾರಗಳ ಹಬ್ಬ, ಅಂದರೆ, ಪಂಚಾಶತ್ತಮ ದಿನವು ಒಂದಾಗಿತ್ತು (ವಿಮೋಚನಕಾಂಡ 34:22, ಧರ್ಮೋಪದೇಶಕಾಂಡ 16:9-10) ಆದುದರಿಂದ, ಯೇಸುವಿನ ಶಿಷ್ಯರು ಮೇಲೆದ್ದು ಅನ್ಯ ಭಾಷೆಗಳನ್ನು ಮಾತಾಡಲು ಪ್ರಾರಂಭಿಸಿದಾಗ ಇತರ ದೇಶಗಳಿಂದ ಬಂದಿದ್ದ ಈ ಯೆಹೂದ್ಯ ಯಾತ್ರಿಗಳಲ್ಲಿ ಅನೇಕರು ಸಪ್ಪಳವನ್ನು ಕೇಳಿ ಏನು ನಡೆಯುತ್ತಿದೆ ಯೆಂಬದನ್ನು ನೋಡಲು ಸೇರಿಬಂದರು. ಗಲಿಲಾಯ ಪ್ರಾಂತ್ಯದ ಈ ಅವಿಧ್ಯಾವಂತರು ತಮ್ಮ ಸ್ವಂತ ಭಾಷೆಗಳಲ್ಲಿ ಮಾತಾಡುತ್ತಿರುವದನ್ನು ಕೇಳಿ ಈ ಜನರಿಗೆ ಆಶ್ಚರ್ಯವಾಯಿತು. ಬಹುಶ: ಒಬ್ಬ ಶಿಷ್ಯನು ಒಂದು ಭಾಷೆಯಲ್ಲಿ ಮಾತಾಡುತ್ತಿದ್ದರೆ ಇನ್ನೊಬ್ಬ ಶಿಷ್ಯನು ಇನ್ನೊಂದು ಭಾಷೆಯಲ್ಲಿ ಮಾತಾಡಿದನು. ಬಹುಶ: ಅವರೆಲ್ಲರೂ ಒಂದೇ ಸಾರಿ ಮಾತಾಡಿರಬಹುದು ಇಲ್ಲವೆ ಒಬ್ಬರ ನಂತರ ಒಬ್ಬರು ಮಾತಾಡಿರಬೇಕು. ಆದರೆ ಅವರು ಹೇಗೆ ಮಾತಾಡಿದ್ದರೂ ಕೇಳಿದವರು ವಿಸ್ಮಯಪಟ್ಟರು. "ಇಗೋ ಮಾತಾಡುತ್ತಿರುವ ಇವರೆಲ್ಲರು ಗಲಿಲಾಯದವರಲ್ಲವೇ?" ಎಂದು ಅವರು ಮಾತಾಡಿಕೊಂಡರು (ವಚನ 7). ಪವಿತ್ರಾತ್ಮನ ಬಲದ ಮೂಲಕ ಈ ಶಿಷ್ಯರು ತಾವು ಹಿಂದೆ ಎಂದಿಗೂ ಮಾತಾಡಿರದ, ಅಥವಾ ಕಲಿತುಕೊಂಡಿರದ ಅನ್ಯಭಾಷೆಗಳನ್ನು ಮಾತಾಡುತ್ತಿದ್ದರು ಮತ್ತು ಅವರು ಆ ಭಾಷೆಗಳನ್ನು ಪರಿಪೂರ್ಣವಾಗಿ ಮಾತಾಡುತ್ತಿದ್ದರು!

**7-12** ಈ ವಚನಗಳಲ್ಲಿ ಲೂಕನು ಈ ಯೆಹೂದ್ಯ ಯಾತ್ರಿಗಳು ಯಾವ್ಯಾವದೇಶಗಳಿಂದ ಬಂದಿದ್ದರೋ ಆ ದೇಶಗಳ ಹಾಗು ವಿಭಿನ್ನ ಪ್ರಾಂತ್ಯಗಳ ಹೆಸರುಗಳನ್ನು ಪ್ರಸ್ತಾಪಿಸುತ್ತಾರೆ. ಆ ಸಮಯದಲ್ಲಿ ಬಹುಪಾಲು ಸ್ಥಳಗಳು ರೋಮಾಯ ಸಾಮ್ರಾಜ್ಯದ[11] ಪ್ರಾಂತಗಳಾಗಿದ್ದವು .

**13** ಶಿಷ್ಯರು ಮಧ್ಯ ಪಾನಮಾಡಿ ಮತ್ತರಾಗಿದ್ದಾರೆಂದು ಕೇಳಿಸಿಕೊಳ್ಳುತ್ತಿದ್ದ ಕೆಲವರು ಅಂದುಕೊಂಡರು. ಈ ರೀತಿಯಾಗಿ ಯೋಚಿಸಿಕೊಂಡ ಜನರಿಗೆ ಶಿಷ್ಯರು ಮಾತಾಡುತ್ತಿದ್ದ ಯಾವ ಬಾಷೆಯೂ ಅರ್ಥವಾಗಲಿಲ್ಲ, ಶಿಷ್ಯರು ಕೇವಲ ಅರ್ಥವಿಲ್ಲದ ಸಂಗತಿಗಳನ್ನು ಮಾತಾಡುತ್ತಿದ್ದಾರೆಂದು ಅವರಿಗೆ ತೋರಿತು ( 1 ಕೋರಿಂಥ 14:23 ನೋಡಿರಿ).

## ಪೇತ್ರನು ಜನರನ್ನು ಉದ್ದೇಶಿಸಿ ಮಾತಾಡಿದ್ದು (2:14-36).

**14-15** ಶಿಷ್ಯರು ಅನ್ಯ ಭಾಷೆಗಳಲ್ಲಿ ಮಾತಾಡುವದನ್ನು ಮುಗಿಸಿದ ನಂತರ ಅವರ ಮುಖ್ಯ ವಕ್ತಾರನಾದ ಪೇತ್ರನು ಮೇಲೆದ್ದು ಜನರನ್ನು ದ್ದೇಶಿಸಿ ಮಾತಾಡಿದನು. ಮೊದಲನೆಯದಾಗಿ, ಶಿಷ್ಯರು ಅಮಲೇರಿದವರಲ್ಲ ಎಂಬದನ್ನು ಹೇಳಿದನು, ಯಾಕೆಂದರೆ ಆಗ ಬೆಳಿಗ್ಗೆ ಒಂಭತ್ತು ಘಂಟೆಯಾಗಿತ್ತು. [12]ಸಾಮಾನ್ಯವಾಗಿ ಜನರು ಅಷ್ಟು ಮುಂಜಾನೆಯಲ್ಲಿ ಮದ್ಯಪಾನ ಮಾಡುವದಿಲ್ಲ!

**16-21** ಅನಂತರ, ಯೆಹೂದ್ಯರು ಇದು ವರೆಗೆ ಕೇಳಿಸಿಕೊಳ್ಳುತ್ತಿದ್ದ ಸಂಗತಿಗಳ ಮಹತ್ವವನ್ನು ಅವರಿಗೆ ವಿವರಿಸಲು ಪೇತ್ರನು ಹಳೆ ಒಡಂಬಡಿಕೆಯ ಪ್ರವಾದಿಯಾದ ಯೋವೇಲನು ಹೇಳಿದ ಮಾತುಗಳನ್ನು ಉಲ್ಲೇಖಿಸುತ್ತಾನೆ (ಯೋವೆಲ 2:28-32). ಕಡೇ ದಿವಸಗಳು (ವಚನ 17) ಎಂದರೆ ಕ್ರಿಸ್ತನ ಮೊದಲನೆಯ ಬರೋಣ ಮತ್ತು ಲೋಕಾಂತ್ಯದಲ್ಲಿ

ಸಂಭವಿಸಲಿರುವ ಆತನ ಎರಡನೆಯ ಬರೋಣಗಳ ನಡುವಿನ ಕಾಲ, ಅಂದರೆ ಈಗಿನ ಕಾಲ ಎಂದರ್ಥವಾಗಿದೆ. ದೇವರು ಪ್ರವಾದಿಯಾದ ಯೋವೇಲನ ಮುಖಾಂತರವಾಗಿ "ನಾನು ಎಲ್ಲಾ ಮನುಷ್ಯರ ಮೇಲೆ (ಅಂದರೆ, ಕ್ರಿಸ್ತನಲ್ಲಿ ವಿಶ್ವಾಸಿಸುವವರೆಲ್ಲರ ಮೇಲೆ, ಯೆಹೂದ್ಯ ಹಾಗು ಅನ್ಯ ಜನಾಂಗದ ವಿಶ್ವಾಸಿಗಳ ಮೇಲೆಯೂ, ಅವರ ಗಂಡು ಮತ್ತು ಹೆಣ್ಣು ಮಕ್ಕಳ ಮೇಲೆಯೂ ಮತ್ತು ನಂಬುವ ಎಲ್ಲಾ ದಾಸ ದಾಸಿಯರ ಮೇಲೆಯೂ ನನ್ನ ಆತ್ಮನನ್ನು ಸುರಿಸುವೆನು" ಎಂದು ಹೇಳಿದನು (ವಚನ 18). ಅಲ್ಲದೆ ಯೋವೇಲನು ಪವಿತ್ರಾತ್ಮನ ಬರೋಣದ ಜೊತೆಗೆ ಪ್ರವಾದನೆಗಳು, ದರ್ಶನಗಳು, ಕನಸುಗಳಂತಹ ಇತರ ಸೂಚಕಕಾರ್ಯಗಳು ಇರುವವೆಂದು ಸಹ ಪ್ರವಾದಿಸಿದನು (ವಚನ 17). ವಾಣಿಗಳನ್ನಾಡುವದು ಮತ್ತು ಅದರೊಂದಿಗೆ ಅದರ ಅರ್ಥವನ್ನು ಹೇಳುವದು ಒಂದು ವಿಧದ ಪ್ರವಾದನೆಯಾಗಿದೆ (1 ಕೊರಿಂಥ 14:5 ನೋಡಿರಿ). ಅಲ್ಲದೆ ಕೆಲವು ಸ್ವಾಭಾವಿಕ ಸೂಚಕಕಾರ್ಯಗಳು ಸಹ ಉಂಟಾಗುವವು:ಮೇಲೆ ಆಕಾಶದಲ್ಲಿ ಅದ್ಭುತಕಾರ್ಯಗಳೂ ಕೆಳಗೆ ಭೂಮಿಯಲ್ಲಿ ಸೂಚಕಕಾರ್ಯಗಳು (ವಚನ 19). ಯೋವೆಲನು ಹೀಗೆ ಬರೆದನು: ಸೂರ್ಯನು ಕತ್ತಲಾಗುವನು (ವಚನ 20) ಮತ್ತು ಕ್ರಿಸ್ತನು ಸತ್ತದಿನದಂದು ಮದ್ಯಾಹ್ನದಿಂದ ಸಾಯಂಕಾಲ ೩ ಘಂಟೆಯ ವರೆಗೆ ದೇಶದಲ್ಲೆಲ್ಲಾ ಕತ್ತಲೆ ಕವಿಯಿತು (ಮಾರ್ಕ 15:33). ಅಂತಹ ಕತ್ತಲೆಯಲ್ಲಿ ಚಂದ್ರನು (ಕ್ರಿಸ್ತನು ಸತ್ತದಿನದಲ್ಲಿ ಪೂರ್ಣ ಚಂದ್ರನಿದ್ದನು) ರಕ್ತ ದಂತೆ ಕೆಂಪಾಗಿ ಕಾಣುವನು.

ಆದರೆ 19 ಮತ್ತು 20 ವಚನಗಳಲ್ಲಿ ದೇವರು ಪ್ರವಾದಿಯಾದ ಯೋವೆಲನ ಮೂಲಕ ಲೋಕದ ಅಂತ್ಯದ ಕುರಿತಾಗಿಯೂ, ಕರ್ತನ ಗಂಭೀರವಾದ ಮಹಾದಿನದ ಕುರಿತಾಗಿಯಾ ಮಾತಾಡುತ್ತಿದ್ದಾನೆ, ಆಗ ಕ್ರಿಸ್ತನು ಎಲ್ಲಾ ಜನರಿಗೆ ನ್ಯಾಯ ತೀರಿಸಲು ತಿರಿಗಿ ಬರುವನು. ಆ ದಿನವು ನ್ಯಾಯತೀರ್ಪಿನ ದಿನವಾಗಿರುತ್ತದೆಂಬದು ಖಚಿತವಾದದ್ದು, ಆದರೆ ಈ ಕಡೇ ದಿವಸಗಳು – ಅಂದರೆ. ಈ ಪ್ರಸ್ತುತ ದಿನಗಳು – ಕರ್ತನ ನಾಮವನ್ನು ಹೇಳಿಕೊಳ್ಳುವವರಿಗೆಲ್ಲಾ ರಕ್ಷಣೆಯ ದಿನಗಳಾಗಿವೆ. (ವಚನ 21)

**22** ನಜರೇತಿನ[13] ಯೇಸು ತನ್ನ ಮೂರು ವರ್ಷಗಳ ಕಾಲದ ಸಾರ್ವಜನಿಕ ಸೇವೆಯಲ್ಲಿ ಮಾಡಿದ ಮಹತ್ತಗಳನ್ನೂ, ಅದ್ಭುತಗಳನ್ನೂ, ಸೂಚಕಕಾರ್ಯಗಳನ್ನೂ ಹೆಚ್ಚುಕಡಿಮೆ ಇಸ್ರಾಯೇಲಿನಲ್ಲಿದ್ದವರೆಲ್ಲರೂ ಬಲ್ಲವರಾಗಿದ್ದರು (ಮಾರ್ಕ 1:28, ಲೂಕ 7:14-17).

**23** ಪೇತ್ರನು ಯೆಹೂದ್ಯರಿಗೆ "ಹಾಗಿದ್ದರೂ, ನೀವು ....ಆತನನ್ನು ಶಿಲುಬೆಗೆ [14] ಹಾಕಿಸಿಕೊಂದಿರಿ" ಎಂದು ಹೇಳಿದನು. ಯೆಹೂದ್ಯ ನಾಯಕರು ಯೇಸುವನ್ನು ಬಂಧಿಸಿ ಆತನನ್ನು ಮರಣದಂಡನೆಯ[15] ತೀರ್ಪಿಗೆ ಗುರಿಮಾಡುವದಕ್ಕಾಗಿ ರೋಮಾಯ ದೇಶಾಧಿಪತಿಯಾದ ಪಿಲಾತನ ಕೈಗಳಿಗೆ ಒಪ್ಪಿಸಿದರು (ಮಾರ್ಕ 15:1, 9:15 ನೋಡಿರಿ). ಯೆಹೂದ್ಯರು ಯೇಸುವನ್ನು ಅನ್ಯಜನರ ಸಹಾಯದಿಂದ – ಅಂದರೆ, ರೋಮಾಯರಿಂದ –ಸಾಯಿಸಿದರು, ಯೆಹೂದ್ಯರು ಅವರನ್ನು ದುಷ್ಟರು, ಅನೀತಿವಂತರೆಂದು ಪರಿಗಣಿಸಿದರು, ಯಾಕೆಂದರೆ ಅವರು ಏಕ ಸತ್ಯ ದೇವರನ್ನು ಆರಾಧಿಸದೆ ಆತನ ಧರ್ಮಶಾಸ್ತ್ರವನ್ನು ಅನುಸರಿಸದವರಾಗಿದ್ದರು. ಹೇಗಿದ್ದರೂ, ಯೇಸು ಸುಮ್ಮನೆ ಬಾಧೆಪಟ್ಟು ಸಾಯಲಿಲ್ಲ, ಆತನು ದೇವರ ಸ್ಥಿರಸಂಕಲ್ಪಕ್ಕೂ, ಭವಿಷ್ಯದಜ್ಞಾನಕ್ಕೂ ಅನುಸಾರವಾಗಿ ಮರಣಿಸಿದನು. ಯೇಸು ಮಾನವ ಜನಾಂಗಕ್ಕಾಗಿ ಸಾಯಬೇಕೆಂಬದು ದೇವರ ಉದ್ದೇಶವಾಗಿತ್ತು (ಲೂಕ 24:25-26, 46 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ಯೇಸು ಸಾಯಬೇಕೆಂಬದನ್ನು ದೇವರು ಮುಂಚಿತವಾಗಿಯೇ ನಿರ್ಧರಿಸಿದ್ದನಾದರೂ ಯೇಸುವನ್ನು ಕೊಂದವರ ಮೇಲೆ ಆತನ ಮರಣದ ಅಪರಾಧವು ಪು ರ್ಣವಾಗಿ ಇತ್ತು.

**24** ದುಷ್ಟ ಜನರು ಯೇಸುವಿಗೆ ಮರಣದಂಡನೆ ವಿಧಿಸಿದರು. ಆದರೆ ಕೊನೆಯಲ್ಲಿ ದೇವರು ಯೇಸುವನ್ನು ಸತ್ತ ವರೊಳಗಿಂದ ಎಬ್ಬಿಸುವದರ ಮೂಲಕ ಅವರ ತೀರ್ಪನ್ನು ಬುಡಮೇಲು ಮಾಡಿದನು.

**25-28** ಅನಂತರ, ದಾವಿದನು ಬರೆದ ಕೀರ್ತನೆ 16:8-11 ರಲ್ಲಿನ ವಿಷಯವನ್ನು ಪೇತ್ರನು ಉಲ್ಲೇಖಿಸುತ್ತಾನೆ. ಪೇತ್ರನು ಪ್ರಸ್ತಾಪಿಸಲಿಚ್ಚಿಸಿದ ಮುಖ್ಯ ಭಾಗವು 27 ನೇ ವಚನದಲ್ಲಿರುತ್ತದೆ...ನೀನು ನನ್ನ ಜೀವಾತ್ಮವನ್ನು ಪಾತಾಳದಲ್ಲಿ ಬಿಡುವದಿಲ್ಲ, ನಿನ್ನ ಪ್ರಿಯನಿಗೆ ಕೊಳೆಯುವ ಅವಸ್ಥೆಯನ್ನು ನೋಡಗೊಡಿಸುವದಿಲ್ಲ (ಅ.ಕೃತ್ಯ 13:35-37 ನೋಡಿರಿ). ದಾವಿದನು ಈ ಕೀರ್ತನೆಯಲ್ಲಿ ತನ್ನ ಕುರಿತಾಗಿ ಬರೆಯಲಿಲ್ಲ, ಆದರೆ ಆತನು ಕ್ರಿಸ್ತನ ವಿಷಯದಲ್ಲಿ ಪ್ರವಾದನೆಯೊಂದನ್ನು ನುಡಿಯುತ್ತಿದ್ದಾನೆ. ವಾಸ್ತವದಲ್ಲಿ ಸ್ವತಃ ಕ್ರಿಸ್ತನು ಮಾತಾಡುತ್ತಿದ್ದಾನೆ. ಇಲ್ಲಿ ನಾವು ಕ್ರಿಸ್ತನ ಮನಸ್ಸನ್ನು ನೋಡಬಹುದು. ಆತನು ಕೀರ್ತನೆಯಲ್ಲಿ ಹೀಗನ್ನುತ್ತಾನೆ......ನನ್ನ ಹೃದಯವು ಹರ್ಷಿಸಿತು; ನನ್ನ ನಾಲಿಗೆಯು ಉಲ್ಲಾಸ ದ್ವನಿಯನ್ನು ಮಾಡಿತು (ವಚನ 26), ನಿನ್ನ ಸಮ್ಮುಖದಲ್ಲಿ ನನ್ನನ್ನು ಆನಂದ ಭರಿತನಾಗ ಮಾಡುವಿ (ವಚನ 28) ನಿಶ್ಚಯವಾಗಿಯೂ, ಯೇಸುವಿನ ಬಾಧೆಯು ಆನಂದವಾಗಿಯೂ, ಆತನ ಅವಮಾನವು ಮಹಿಮೆಯಾಗಿಯೂ ಮಾರ್ಪಟ್ಟಿವು (ಇಬ್ರಿಯ 12:2 ನೋಡಿರಿ).

**29-30** ಈ ಕೀರ್ತನೆಯಲ್ಲಿ ದಾವೀದನು ತನ್ನ ಕುರಿತಾಗಿ ಮಾತಾಡುತ್ತಿಲ್ಲ, ಯಾಕೆಂದರೆ ಅನಂತರ ದಾವೀದನು ಸತ್ತನು ಮತ್ತು ಆತನು ಪಾತಾಳದಲ್ಲಿ ಬಿಡಲ್ಪಟ್ಟು ಅವನ ಶರೀರವು ಕೊಳೆಯಿತು ಎಂದು ಪೇತ್ರನು ಸೂಚಿಸುತ್ತಾನೆ (ವಚನ 27). ಅದಕ್ಕೆ ಬದಲಾಗಿ, ದಾವೀದನು ಈ ಕೀರ್ತನೆಯನ್ನು ಬರೆಯುತ್ತಿರುವಾಗ್ಗೆ ಸಮಾಧಿಯಲ್ಲಿ ಉಳಿಯದ ಹಾಗು ಅವನ ಶರೀರವು ಕೊಳೆತು ಹೋಗದ ತನ್ನ ಸಂತತಿಯವನೊಬ್ಬನ ಕುರಿತಾಗಿ ದೇವರು ದಾವೀದನ ಸಿಂಹಾಸನದಲ್ಲಿ ಕೂಡ್ರಿಸುವೆನೆಂದು ವಾಗ್ದಾನ ಮಾಡಿದ ಸಂತತಿಯವನೊಬ್ಬನ ವಿಷಯವಾಗಿ ಯೋಚಿಸುತ್ತಿದ್ದನು (ಕೀರ್ತನೆಗಳು 132:11). ಆ ಸಂತತಿಯವನು ಕ್ರಿಸ್ತನೇ (ಲೂಕ 1:30-33 ನೋಡಿರಿ).

**31-32** ದೇವರು ಯೇಸುವನ್ನು ಪಾತಾಳದಲ್ಲಿ ಕೈಬಿಡಲೂ ಇಲ್ಲ, ಆತನ ದೇಹವು ಕೊಳೆಯುವ ಅವಸ್ಥೆಯನ್ನು ನೋಡಗೊಡಲಿಲ್ಲ. ಹಾಗಾದರೆ, ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಇದರರ್ಥವಾಗುತ್ತದೆ. ಇದನ್ನು ಹೇಳುವದರ ಮೂಲಕ ಸ್ವತಃ ಯೆಹೂದ್ಯರ ಶಾಸ್ತ್ರಗಳೇ[16] ಕ್ರಿಸ್ತನ[17] ಪುನರುತ್ಥಾನದ ವಿಷಯದಲ್ಲಿ ಪ್ರವಾದಿಸಿದವೆಂಬದನ್ನು ಅವರಿಗೆ ತೋರಿಸಲು ಪ್ರಯತ್ನಿಸುತ್ತಿದ್ದಾನೆ (ವಚನ 31). ಆದರೆ ಹಳೆ ಒಡಂಬಡಿಕೆ ಮಾತ್ರವೇ ಕ್ರಿಸ್ತ ಪುನರುತ್ಥಾನದ ಬಗ್ಗೆ ಪ್ರವಾದಿಸಲಿಲ್ಲ, ಪೇತ್ರ ಮತ್ತು ಇತರ ಶಿಷ್ಯರು ಪುನರುತ್ಥಾನಗೊಂಡ ಕ್ರಿಸ್ತನನ್ನು ತಮ್ಮ ಕಣ್ಣಾರೆ ಕಂಡಿದ್ದರು! ಈ ಹಳೆ ಒಡಂಬಡಿಕೆಯ ಪ್ರವಾದನೆಯು ನಿಜವಾಗಿಯೂ ನೆರವೇರಿತ್ತು.

**33** ದೇವರು ಕ್ರಿಸ್ತನನ್ನು ಸಜೀವಗೊಳಿಸಿದ್ದಷ್ಟೆಯಲ್ಲ, ಆದರೆ ಆತನನ್ನು ತನ್ನ ಬಲಪಾರ್ಶ್ವದಲ್ಲಿ ಕುಳ್ಳಿರಿಸಿಕೊಂಡನು (ಲೂಕ 22:69). ದೇವರು ತನ್ನ ಪವಿತ್ರಾತ್ಮನನ್ನು ಕ್ರಿಸ್ತನಿಗೆ ಅನುಗ್ರಹಿಸಿದ್ದನು, ಮತ್ತು ಈಗ ಕ್ರಿಸ್ತನು ಅದೇ ಆತ್ಮನನ್ನು ತನ್ನ ಶಿಷ್ಯರ ಮೇಲೆ ಸುರಿಸಿದ್ದನು. ಹೇಗಿದ್ದರೂ, ನಾವು ಇಲ್ಲಿ ಒಬ್ಬನೇ ದೇವರು– ತಂದೆ, ಮಗ, ಪವಿತ್ರಾತ್ಮರು – ಯಾವಾಗಲೂ ಒಟ್ಟಾಗಿ ಕಾರ್ಯಮಾಡುವದರ ಬಗ್ಗೆ ಮಾತಾಡುತ್ತಿದ್ದೇವೆಂಬದನ್ನು ನೆನಪಿನಲ್ಲಿಟ್ಟು–ಕೊಳ್ಳೋಣ.

**34-35** ದೇವರು ಯೇಸುವನ್ನು ಎಬ್ಬಿಸಿ ತನ್ನ ಬಲಗಡೆಯಲ್ಲಿ ಕುಳ್ಳಿರಿಸಿಕೊಂಡಾಗ ಪೇತ್ರನು ಇಲ್ಲಿ ಉಲ್ಲೇಖಿಸಿದ ಕೀರ್ತನೆಗಳು 110:1 ರ ಪ್ರವಾದನೆಯು ನೆರವೇರಿತು...ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ಕರ್ತನು (ದೇವರು) ನನ್ನ ಒಡೆಯನಿಗೆ (ಕ್ರಿಸ್ತನಿಗೆ) ನುಡಿದನು (ವಚನ 34) .ಪುನಃ ದಾವೀದನು ಈ ಕೀರ್ತನೆಯಲ್ಲಿ ಕ್ರಿಸ್ತನ ಬಗ್ಗೆ ಮಾತಾಡುತ್ತಿದ್ದಾನೆ (ಮಾರ್ಕ 12:35-36 ನೋಡಿರಿ).

**36** ಅಂತಿಮವಾಗಿ, ನಾವು ಪೇತ್ರನ ಸಂದೇಶದ ಮುಖ್ಯ ವಿಷಯಕ್ಕೆ ಬರುತ್ತೇವೆ: ಆದುದರಿಂದ – ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ, ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬದು ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ!. ಯೇಸುವು ಕೇವಲ ಕ್ರಿಸ್ತನು ಮಾತ್ರವಲ್ಲ ಆದರೆ ಕರ್ತನು, ಅಂದರೆ ದೇವರು ಸಹ ಆಗಿದ್ದಾನೆಂಬದನ್ನು ನಿರೂಪಿಸಲು ಪೇತ್ರನು ಯೋವೇಲನ ಹಾಗು ದಾವೀದನ ಪ್ರವಾದನೆಗಳನ್ನು ಉಲ್ಲೇಖಿಸತ್ತಾನೆ. ಯೆಹೂದ್ಯರು ದೇವರನ್ನು ಮಾತ್ರವೇ ಕರ್ತನೆಂದು ಕರೆಯುತ್ತಿದ್ದರು. ಈಗ ಪೇತ್ರನು ಈ ವಚನದಲ್ಲಿ ಯೇಸುವಿಗೆ ಸಹ "ಕರ್ತನು" ಎನ್ನುತ್ತಾನೆ. ಎಲ್ಲಕ್ಕಿಂತ ಮೇಲಾಗಿ, ಯೇಸು ಕರ್ತನೂ, ಹಾಗು ಕ್ರಿಸ್ತನೂ ಆಗಿದ್ದಾನೆಂಬದಕ್ಕೆ ಆತನ ಪುನರುತ್ಥಾನವೇ ಅಂತಿಮ ಆಧಾರವನ್ನು ಒದಗಿಸಿತು (ರೋಮ 1:4 ನೋಡಿರಿ). ಯೇಸು ಕ್ರಿಸ್ತನು ಶ್ರೇಷ್ಠ ಬೊಧಕನು ಮಾತ್ರವಲ್ಲ, ಆತನು ಅತಿಶ್ರೇಷ್ಠ ಪ್ರವಾದಿ ಮಾತ್ರವೇ ಅಲ್ಲ, ಆತನು ಕೇವಲ ಅತಿ ಶ್ರೇಷ್ಠ ನರಾವತಾರವಷ್ಟೇ ಆಗಿರುವದಿಲ್ಲ. ಆತನು ಸ್ವತಃ ದೇವರು, ಯೇಸು ಕರ್ತನಾಗಿದ್ದಾನೆ (ರೋಮ 10:9, ಫಿಲಿಪ್ಪಿ 2:11 ನೋಡಿರಿ).

ಮೂರು ಸಾವಿರ ಜನರು ದೀಕ್ಷಾಸ್ನಾನ ಹೊಂದಿದ್ದು (2:37-41).

**37** ಪೇತ್ರನ ಮಾತುಗಳಿಂದ ಜನರ ಹೃದಯಕ್ಕೆ ಅಲಗು ನೆಟ್ಟಂತಾಯಿತು. ಯಾಕೆ? ಯಾಕೆಂದರೆ ಪೇತ್ರನು ಪವಿತ್ರಾತ್ಮನ ಬಲದಲ್ಲಿ ದೇವರ ವಾಕ್ಯವನ್ನು ಮಾತಾಡಿದ್ದನು. ದೇವರ ವಾಕ್ಯವು ಕತ್ತಿಯಂತಿರುತ್ತದೆ (ಎಫೆಸ 6:17), ಅದು ಪ್ರಾಣ ಆತ್ಮಗಳನ್ನೂ ಕೀಲು ಮಜ್ಜೆಗಳನ್ನೂ ವಿಭಾಗಿಸುವಷ್ಟರ ಮಟ್ಟಿಗೆ ತೂರಿಹೋಗುವಂಥದು, ಹೃದಯದ ಆಲೋಚನೆಗಳನ್ನೂ ಉದ್ದೇಷಗಳನ್ನೂ ವಿವೇಚಿಸುವಂಥದ್ದೂ ಆಗಿದೆ (ಇಬ್ರಿಯ 4:12). ನಾವು ದೇವರ ವಾಕ್ಯವನ್ನು ಪವಿತ್ರಾತ್ಮನ ಬಲದ ಮೂಲಕ ಮಾತಾಡುವದಾದರೆ ನಮ್ಮ ಶ್ರೋತ್ರಗಳ ಹೃದಯಕ್ಕೂ ಸಹ ಅಲಗು ನೆಟ್ಟಂತಾಗುವದು. ಆದುದರಿಂದ, ನಾವು ಮೊದಲು ದೇವರ ಆತ್ಮನ ಬಲವನ್ನು ಕೇಳದ ಹೊರತು ಆತನ ವಾಕ್ಯವನ್ನು ಬೋಧಿಸುವ ಧೈರ್ಯ ಮಾಡದಿರೋಣ.

**38** ಆಗ, ಪೇತ್ರನ ಸಂದೇಶವನ್ನು ಕೇಳಿಸಿಕೊಳ್ಳುತ್ತಿದ್ದವರು ಶಿಷ್ಯರ ಬಳಿಗೆ ಬಂದು "ಸಹೋದರರೇ, ನಾವೇನು ಮಾಡಬೇಕು?" ಎಂದು ಕೇಳಿದರು (ವಚನ 37) ಪೇತ್ರನು ಉತ್ತರಿಸಿ ಹೇಳಿದ್ದೇನೆಂದರೆ : " ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ" ಅಷ್ಟು ಮಾತ್ರವೇ. ಈ ಜನರು ಅಷ್ಟು ಮಾತ್ರವನ್ನೇ ಮಾಡಬೇಕಿತ್ತು (ಸ್ವಲ್ಪ ಕಾಲದ ಹಿಂದಷ್ಟೇ ದೇವಕುಮಾರನನ್ನು ಕೊಂದಿದ್ದ ಜನರು!.

ಆದರೆ, ಇಲ್ಲಿ ಏನು ಹೇಳುತ್ತಾನೆಂಬದನ್ನು ನಾವು ಪರೀಕ್ಷಿಸೋಣ. ಪಶ್ಚಾತಾಪ ಪಡಿರಿ (ದೇವರ ಕಡೆಗೆ ತಿರುಗಿಕೊಳ್ಳಿರಿ). ಪಶ್ಚಾತಾಪ ಪಡುವದೆಂದರೆ ನಮ್ಮ ಪಾಪಗಳನ್ನು ಒಪ್ಪಿಕೊಂಡು ಅವುಗಳಿಂದ ವಿಮುಖರಾಗುವದೇ. ಅನೇಕರು ತಮ್ಮ ಪಾಪಗಳ ಕುರಿತು ವ್ಯಥೆ ಪಡುತ್ತಾರೆ, ಆದರೆ ಅವರು ಆ ಪಾಪಗಳಲ್ಲಿಯೇ ಮುಂದುವರೆಯುತ್ತಾರೆ. ಈ ವಿಧವಾದ ದುಃಖವು ಪಶ್ಚಾತಾಪವಲ್ಲ. ಪಾಪವೊಂದಕ್ಕೆ ಪಶ್ಚಾತಾಪಪಡುವದೆಂದರೆ ಆ ಪಾಪವನ್ನು ಬಿಟ್ಟು ಬಿಡಬೇಕೆಂಬದೇ ಅದರರ್ಥವಾಗಿದೆ. ಪೇತ್ರನು ಹೇಳುವ ಎರಡನೆಯ ಸಂಗತಿಯೇನೆಂದರೆ, ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವದು. ಆದರೆ ದೀಕ್ಷಾಸ್ನಾನ ಎಂದರೆ ಕೇವಲ ನೀರಿನಲ್ಲಿ ಮುಳುಗುವದು ಅಥವಾ ಒಬ್ಬನ ತಲೆಯ ಮೇಲೆ ನೀರನ್ನು ಚಿಮುಕಿಸಿಕೊಳ್ಳುವದೆಂದು ಮಾತ್ರವೇ ಅರ್ಥವಲ್ಲ. ನಿಜವಾಗಿಯೂ ದೀಕ್ಷಾಸ್ನಾನ ಹೊಂದಬೇಕಾದರೆ ಒಬ್ಬನು ಯೇಸು ಕ್ರಿಸ್ತನಲ್ಲಿ[18] ನಂಬಿಕೆಯಿಡಬೇಕು. ನಾವು ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳ ಬೇಕೆಂದರೆ ಪೇತ್ರನು ಹೇಳುತ್ತಾನೆ. ನಾವು ದೀಕ್ಷಾಸ್ನಾನವನ್ನು ತೆಗೆದುಕೊಳ್ಳುವದರ ಮೂಲಕ ಲೋಕಕ್ಕೆ ಹೇಳುವದೇನೆಂದರೆ: "ಈಗ ನಾನು ಯೇಸುವಿನ ಜೊತೆಯಲ್ಲಿ ನಿಲ್ಲುತ್ತೇನೆ, ನಾನು ಆತನನ್ನು ಹಿಂಬಾಲಿಸುವೆನು, ನಾನು ನನ್ನ ಶಿಲುಬೆಯನ್ನು ಹೊತ್ತು ಕೊಂಡು ಆತನಿಗೋಸ್ಕರ ಬಾಧೆ ಹೊಂದುವೆನು" (ಮಾರ್ಕ 8:34). ಒಂದು ವೇಳೆ ನಾವು ಇದನ್ನು ಮಾಡಲು ಸಿದ್ಧರಾಗಿಲ್ಲವಾದರೆ ದೀಕ್ಷಾಸ್ನಾನ[19] ಹೊಂದಲೂ ನಾವು ಸಿದ್ಧರಲ್ಲ ಎಂದಾಗುತ್ತದೆ. ಯಾಕೆಂದರೆ ನಾವು ನಮ್ಮ ಶಿಲುಬೆಯನ್ನು ಹೊತ್ತುಕೊಂಡು ಯೇಸುವನ್ನು ಹಿಂಬಾಲಿಸಲು ಸಿದ್ಧರಾಗಿಲ್ಲವಾದರೆ

ನಾವು ನಿಜವಾಗಿಯೂ ಆತನಲ್ಲಿ ನಂಬಿಕೆಯಿಟ್ಟವರಲ್ಲ. ನಮ್ಮಅಂತರ್ಯದ ನಂಬಿಕೆಯನ್ನು ಬಹಿರಂಗವಾಗಿ ಪ್ರದರ್ಶಿಸುವದೇ ದೀಕ್ಷಾಸ್ನಾನವಾಗಿದೆ. ನಮ್ಮ ಹೃದಯಗಳಲ್ಲಿ ನಂಬಿಕೆಯಿಲ್ಲದೆ ದೀಕ್ಷಾಸ್ನಾನವು ಅರ್ಥಹೀನವಾಗಿರುತ್ತದೆ.[20]

ಪೇತ್ರನು ಜನರಿಗೆ ಪಶ್ಚಾತಾಪಪಟ್ಟು ದೀಕ್ಷಾಸ್ನಾನ ಹೊಂದಬೇಕೆಂದು ಹೇಳಿದ ನಂತರ ಇನ್ನು ಎರಡು ಸಂಗತಿಗಳನ್ನೂ ಅವರಿಗೆ ತಿಳಿಸಿದನು. ಮೊದಲನೆಯದಾಗಿ, ಪಶ್ಚಾತಾಪಪಟ್ಟು ದೀಕ್ಷಾಸ್ನಾನ ಹೊಂದಿದ ನಂತರ ಅವರು ತಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಪಡೆಯುವರು. ದೀಕ್ಷಾಸ್ನಾನವು ನಮ್ಮ ಪಾಪಗಳು ತೊಳೆಯಲ್ಪಟ್ಟು, ಈಗ ದೇವರ ದೃಷ್ಟಿಯಲ್ಲಿ ನಾವು ಶುದ್ಧಗೊಂಡವರು, ಪವಿತ್ರರೂ ಆಗಿದ್ದೇವೆಂಬುದಕ್ಕೆ "ಒಂದು ಗುರುತಾಗಿದೆ" (ಮಾರ್ಕ 1:4 ಮತ್ತು ವ್ಯಾಖ್ಯಾನ ನೋಡಿರಿ). ತರುವಾಯ, ನಾವು ಕ್ರೈಸ್ತರಾದ ಮೇಲೆ ನಾವು ಪಾಪಮಾಡಿದಾಗಲೆಲ್ಲಾ ಪಶ್ಚಾತಾಪ ಪಡುತ್ತಲಿರಬೇಕು ಮತ್ತು ಪ್ರತಿಸಾರಿಯೂ ದೇವರು ನಮ್ಮನ್ನು ಕ್ಷಮಿಸಿ ನೂತನವಾಗಿ ಶುದ್ಧಗೊಳಿಸುವನು (1 ಯೋಹಾನ 1:9 ಹಾಗು ವ್ಯಾಖ್ಯಾನ ನೋಡಿರಿ). ಪೇತ್ರನು ಅವರಿಗೆ ಪಶ್ಚಾತಾಪಪಟ್ಟು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಹೇಳಿದ ನಂತರ ತಿಳಿಸಿದ ಎರಡನೆಯ ಸಂಗತಿಯೇನೆಂದರೆ ಅವರು ಪವಿತ್ರಾತ್ಮ ವರವನ್ನು ಹೊಂದುವರು ಎಂಬದೇ. ಪೇತ್ರನು ಸ್ವಸ್ಥತೆಯವರು ಅಥವಾ ಪ್ರವಾದನೆಯ ವರಗಳಂತಹ ಪವಿತ್ರಾತ್ಮನ "ವರಗಳು" ಎಂದು ಹೇಳಲಿಲ್ಲ. ಬದಲಾಗಿ, ಆತನು ಪವಿತ್ರಾತ್ಮ ವರ ಅಂದರೆ ಸ್ವತಃ ಪವಿತ್ರಾತ್ಮನನ್ನೇ ಎಂದು ಹೇಳಿದನು. ಒಬ್ಬನು ಕ್ರೈಸ್ತನಾದ ತಕ್ಷಣವೇ ಪವಿತ್ರಾತ್ಮನನ್ನು ಪಡೆದುಕೊಳ್ಳುತ್ತಾನೆ. ಪವಿತ್ರಾತ್ಮನಿಲ್ಲದೆ ಒಬ್ಬನು ನಿಜ ಕ್ರೈಸ್ತನಾಗಿರಲು ಸಾಧ್ಯವಿಲ್ಲ (ರೋಮ 8:9, 1 ಕೊರಿಂಥ 6:19). ಅನೇಕ ಕ್ರೈಸ್ತರು ತಾವು ಕ್ರಿಸ್ತನನ್ನು ನಂಬಿ, ಮೊದಲ ಬಾರಿಗೆ ಪವಿತ್ರಾತ್ಮನನ್ನು ಹೊಂದಿದ ನಂತರ ಕೆಲ ಸಮಯದಲ್ಲಿ ಒಂದು ನೂತನವಾದ ಪವಿತ್ರಾತ್ಮನ ತುಂಬಿಸಲ್ಪಡುವಿಕೆಯನ್ನು ಹೊಂದಿದರೆಂದು ಹೇಳುತ್ತಾರೆ. ಈ ಕ್ರೈಸ್ತರು ಈ ನೂತನವಾದ ಆತ್ಮನ ಅನುಭವವನ್ನು ಒಂದು "ಎರಡನೆಯ ಆಶೀರ್ವಾದ" ಅಥವಾ ಆತ್ಮನ "ದೀಕ್ಷಾಸ್ನಾನ"[21] ಎಂದು ಕರೆಯುತ್ತಾರೆ. ಅವರೆಲ್ಲರೂ ಒಂದು ನೂತನ ಹಾಗು ಆಳವಾದ ರೀತಿಯಲ್ಲಿ ಆತ್ಮನನ್ನು ಹೊಂದಿದವರು ಹಾಗು ಕ್ರಿಸ್ತನ ಸೇವೆ ಮಾಡಲು ಅವರು ಒಂದು ಹೊಸ ಬಲ ಹಾಗು ವೈರಾಗ್ಯವನ್ನು ಪಡೆಯುವರು. ಆದರೆ ಇತರ ಕ್ರೈಸ್ತರು ತಾವು ಕ್ರೈಸ್ತರಾದ ಕ್ಷಣದಿಂದಲೇ ಆ ವಿಧದ ಬಲ ಹಾಗು ವೈರಾಗ್ಯವನ್ನು ಅನುಭವಿಸಿದ್ದೇವೆಂದು ಹೇಳುತ್ತಾರೆ. ನಿಶ್ಚಯವಾಗಿಯೂ, ಪವಿತ್ರಾತ್ಮನು ವಿವಿಧ ಜನರ ಜೀವಿತಗಳಲ್ಲಿ ವಿಭಿನ್ನ ರೀತಿಯಾಗಿ ಕಾರ್ಯಮಾಡಬಲ್ಲನು. ಪವಿತ್ರಾತ್ಮನ ಕಾರ್ಯವನ್ನು ನಾವು ಯಾವ ವಿಧದಲ್ಲಿಯೇ ವಿವರಿಸಿದರೂ ಅಥವಾ ಅದಕ್ಕೆ ಯಾವ ಹೆಸರನ್ನೇ ನೀಡಿದರೂ ಪ್ರತಿ ಯೊಬ್ಬನ ಜೀವಿತದಲ್ಲಿಯೂ ಕಾರ್ಯಮಾಡುವವನು ಆತ್ಮನೇ ಆಗಿದ್ದಾನೆ. ನಾವು ಹೊಂದಿದ ಆತ್ಮನ ಸ್ವ ಅನುಭವವನ್ನು ಇತರರ ಅನುಭವಗಳಿಗೆ ಹೋಲಿಸುವ ಅವಶ್ಯಕತೆಯಿಲ್ಲ.ಅದಕ್ಕೆ ಬದಲಾಗಿ, ದೇವರು ನಮಗೆ ನೀಡಿರುವ ಆತ್ಮನ ಯಾವದೇ ಆಶೀರ್ವಾದಗಳಿಗೆ ನಾವು ಆತನಿಗೆ ಕೃತಜ್ಞತೆಯುಳ್ಳವರಾಗಿರೋಣ, ಮತ್ತು ಆತನು ಇನ್ನು ಹೆಚ್ಚು ಹೆಚ್ಚಾಗಿ ತನ್ನ ಆತ್ಮನಿಂದ ನಮ್ಮನ್ನು ತುಂಬಿಸುವಂತೆ ಪ್ರತಿದಿನವು ಪ್ರಾರ್ಥಿಸೋಣ (1 ಕೊರಿಂಥ 12:13 ಮತ್ತು ವ್ಯಾಖ್ಯಾನ, ಸಾಮಾನ್ಯ ಲೇಖನ : ಪವಿತ್ರಾತ್ಮ ನೋಡಿರಿ).

**39** ಪೇತ್ರನು ಸ್ವತಃ ಒಬ್ಬ ಯೆಹೂದ್ಯನಾಗಿದ್ದು ಮುಖ್ಯವಾಗಿ ಯೆಹೂದ್ಯರೇ ತುಂಬಿದ್ದ ಜನಸಮೂಹವನ್ನು ಉದ್ದೇಶಿಸಿ ಮಾತಾಡುತ್ತಿದ್ದರೂ ಆತನು ಅವರಿಗೆ ಆ ವಾಗ್ದಾನವು (ಪವಿತ್ರಾತ್ಮನ) ಯೆಹೂದ್ಯರಿಗೆ ಮಾತ್ರವಲ್ಲ, ಆದರೆ ದೂರವಾಗಿರುವವರೆಲ್ಲರಿಗೂ – ಅಂದರೆ, ಅನ್ಯಜನರಿಗೂ ಸಹ ಎಂದು ಹೇಳಿದನು (ಎಫೆಸ 2:11-13 ನೋಡಿರಿ). ಪವಿತ್ರಾತ್ಮನ ವಾಗ್ದಾನವು ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ. ದೇವರು ಜಗದುತ್ಪತ್ತಿಗೆ ಮುಂಚೆಯೇ ನಮ್ಮನ್ನು ಆದುಕೊಂಡು ಕರೆದಿರುತ್ತಾನೆ (ಎಫೆಸ 1:4). ಯಾರು ಕ್ರಿಸ್ತನನ್ನು ನಂಬುತ್ತಾರೆ ಮತ್ತು ಯಾರು ನಂಬುವದಿಲ್ಲ ಎಂಬದನ್ನು ದೇವರು ಮುಂಚೆಯೇ ತಿಳಿದಿರುತ್ತಾನೆ. ಯಾರಾರು ಕ್ರಿಸ್ತನನ್ನು ನಂಬುತ್ತಾರೋ ಅವರು ರಕ್ಷಣೆ ಹೊಂದುವರು (ವಚನ 20, ಮತ್ತು ಪವಿತ್ರಾತ್ಮನ ವಾಗ್ದಾನವನ್ನು ಪಡೆದು ಕೊಳ್ಳುವರು.

**40-41** ಪೇತ್ರನು ತನ್ನ ಪೀಳಿಗೆಯನ್ನು ಒಂದು ವಕ್ರ ಬುಧ್ಧಿಯುಳ್ಳ ಸಂತತಿ ಎಂದು ಕರೆದನು, ಯಾಕೆಂದರೆ ಆ ಪೀಳಿಗೆಯ ಜನರು ದೇವಕುಮಾರನಾದ ಕ್ರಿಸ್ತನನ್ನು ಶಿಲುಬೆಗೇರಿಸಿದ್ದರು. ಆದರೆ ಮಾನವರ ಪ್ರತಿಯೊಂದು ಪೀಳಿಗೆಯೂ "ಕೆಟ್ಟದ್ದು" ಎಂಬದನ್ನು ನಾವು ಅರ್ಥಮಾಡಿಕೊಳ್ಳಬೇಕು, ಯಾಕೆಂದರೆ ಪ್ರತಿಯೊಂದು ಪೀಳಿಗೆಯಲ್ಲಿಯೂ ಬಹುಪಾಲು ಜನರು ಕ್ರಿಸ್ತನನ್ನು ನಂಬಲು ನಿರಾಕರಿಸುತ್ತಾರೆ. ಅವರು ಸಹ ಪೇತ್ರನ ಪೀಳಿಗೆಯಂತೆಯೇ ತೀರ್ಪಿಗೆ ಗುರಿಯಾಗುವರು. ಪಂಚಾಶತ್ತಮದ ಆ ದಿನದಂದು ಸುಮಾರು ಮೂರು ಸಾವಿರ ಜನರು ಪೇತ್ರನ ಸಂದೇಶವನ್ನು ಅಂಗೀಕರಿಸಿಕೊಂಡರು, ಅಂದರೆ, ಅವರು ಕ್ರಿಸ್ತನಲ್ಲಿ ನಂಬಿಕೆಯಿಟ್ಟು ದೀಕ್ಷಾಸ್ನಾನ ಹೊಂದಿದರು. ವಾಕ್ಯವನ್ನು ಕೇಳುವದು ಮಾತ್ರವೇ ಸಾಕಾಗುವದಿಲ್ಲ, ನಾವು ಅದನ್ನು ಸ್ವೀಕರಿಸಿಕೊಂಡು ಅದಕ್ಕೆ ವಿಧೇಯರೂ ಸಹ ಆಗಬೇಕು. ಇಲ್ಲಿ ಈ ಒಂದು ದಿನದಲ್ಲಿ ಕ್ರಿಸ್ತನನ್ನು ನಂಬಿದವರಸಂಖ್ಯೆಯು ಕ್ರಿಸ್ತನು ಇಡೀ ಮೂರು ವರ್ಷಗಳ ಕಾಲ ಮಾಡಿದ ಸಾರ್ವಜನಿಕ ಸೇವೆಯಲ್ಲಿ ನಂಬಿದವರ ಸಂಖ್ಯೆಗಿಂತಲೂ ಅಧಿಕವಾಗಿತ್ತು (ಯೋಹಾನ 14:2 ನೋಡಿರಿ). ನಿಜವಾಗಿಯೂ ಪವಿತ್ರಾತ್ಮನು ಬಲದೊಂದಿಗೆ ಶಿಷ್ಯರ ಮೇಲೆ ಬಂದಿದ್ದನು. ಇಂದಿನಿಂದ ಅವರು ಕೇವಲ ಶಿಷ್ಯರು ಮಾತ್ರವಲ್ಲ – ಅವರು ಅಪೊಸ್ತಲರಾಗಿರುವರು.

## ವಿಶ್ವಾಸಿಗಳ ಅನ್ಯೋನ್ಯತೆ (2:42-47)

**42** ಈ ಭಾಗದಲ್ಲಿ ಲೂಕನು ಪ್ರಥಮ ಸಭೆಯ ಚಿತ್ರಣವನ್ನು ನೀಡುತ್ತಾನೆ. ವಿಶ್ವಾಸಿಗಳು ನಾಲ್ಕು ಮುಖ್ಯ ಸಂಗತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಮೊದಲನೆಯದಾಗಿ, ಅವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿ ನಿರತರಾಗಿದ್ದರು.

ಆ ವಿಶ್ವಾಸಿಗಳಿಗೆ ನಮ್ಮ ಹಾಗೆ ಹೊಸ ಒಡಂಬಡಿಕೆ ಇರಲಿಲ್ಲ, ಅವರು ಕೇವಲ ಹಳೆ ಒಡಂಬಡಿಕೆಯನ್ನು ಹೊಂದಿದ್ದರು. ಆದುದರಿಂದ, ಅವರು ತಮ್ಮನ್ನು ಅಪೊಸ್ತಲರ ಬೋಧನೆಗೆ ತಮ್ಮನ್ನು ಸಮರ್ಪಿಸಿಕೊಳ್ಳುವದು ಅವಶ್ಯಕವಾಗಿತ್ತು, ಯಾಕೆಂದರೆ ಆ ಬೋಧನೆಯ ಮೂಲಕವೇ ಅವರು ಕ್ರಿಸ್ತನ ಕುರಿತಾಗಿಯೂ, ಆತನನ್ನು ಹೇಗೆ ಹಿಂಬಾಲಿಸ ಬೇಕೆಂಬುದರ ಕುರಿತಾಗಿಯೂ ಕಲಿಯುವವರಾಗಿದ್ದರು. ಮತ್ತು, ನಿಜ ಹೇಳುವದಾದರೆ, ಅಪೊಸ್ತಲರು ಮಾಡಿದ ಆ ಬೋಧನೆಯೇ ಅನಂತರ ಬರೆಯಲ್ಪಟ್ಟು ಹೊಸ ಒಡಂಬಡಿಕೆಯಾಯಿತು. ಹೀಗಿರುವದರಿಂದ, ಆದಿ ಕ್ರೈಸ್ತರು ತಮ್ಮನ್ನು ಅಪೊಸ್ತಲರ ಬೋಧನೆಗೆ ಸಮರ್ಪಿಸಿಕೊಂಡ ಪ್ರಕಾರವೇ ನಾವು ಸಹ ಹೊಸ ಒಡಂಬಡಿಕೆಯ ಅಭ್ಯಾಸಕ್ಕೆ ನಮ್ಮನ್ನು ಸಮರ್ಪಿಸಿಕೊಳ್ಳಬೇಕು. ಎರಡನೆಯದಾಗಿ ಆದಿ ವಿಶ್ವಾಸಿಗಳು ತಮ್ಮನ್ನು ಅನ್ಯೋನ್ಯತೆಗೆ ಸಮರ್ಪಿಸಿಕೊಂಡಿದ್ದರು. ಮೂರನೆಯದಾಗಿ ಅವರು ರೊಟ್ಟಿಮುರಿಯುವದರಲ್ಲಿ ತಮ್ಮನ್ನು ಸಮರ್ಪಿಸಿಕೊಂಡಿದ್ದರು, ಅಂದರೆ ಕರ್ತನ ಭೋಜನದಲ್ಲಿ ನಿರತರಾಗಿದ್ದರು (ಲೂಕ 22:19, 1 ಕೊರಿಂಥ 11:23-25 ನೋಡಿರಿ). ಮತ್ತು ನಾಲ್ಕನೆಯದಾಗಿ, ಅವರು ಪ್ರಾರ್ಥನೆ ಮಾಡುವದರಲ್ಲಿ ನಿರತರಾಗಿದ್ದರು. ನಾವು ನಮ್ಮ ಸ್ವಸಭೆಯನ್ನು ಆ ಸಭೆಯೊಂದಿಗೆ ಹೋಲಿಸುವಾಗ ನಮಗೆ ಏನು ಕಾಣಿಸುತ್ತದೆ?

**43** ಪವಿತ್ರಾತ್ಮನು ಆ ಅಪೊಸ್ತಲರ ಮೂಲಕ ಕಾರ್ಯ ಮಾಡುವದನ್ನು ಎಂದಿಗೂ ನಿಲ್ಲಿಸಲಿಲ್ಲ. ಅವರು ಎಡಬಿಡದೆ ಅನೇಕ ಅದ್ಭುತಗಳನ್ನೂ, ಸೂಚಕ ಕಾರ್ಯಗಳನ್ನು ಮಾಡುತ್ತಿದ್ದರು. (ಅ. ಕೃತ್ಯ. 3:6-7 ನೋಡಿರಿ).

**44-45** ಆ ಪ್ರಥಮ ವಿಶ್ವಾಸಿಗಳು ಇಡೀ ಸಭೆಯ ಉಪಯೋಗಕ್ಕಾಗಿ ತಮ್ಮ ಎಲ್ಲಾ ಸ್ವತ್ತುಗಳನ್ನು ಅಪೊಸ್ತಲರಿಗೆ ನೀಡಿದರು. ಅವರು ತಮಗೋಸ್ಕರವಾಗಿ [22] ಏನನ್ನು ಇಟ್ಟುಕೊಳ್ಳಲಿಲ್ಲ. ಅವರು ಯಾವದನ್ನೇ ಆಗಲಿ "ಇದು ನನ್ನದು"ಎಂದು ಹೇಳಲಿಲ್ಲ. ಬದಲಾಗಿ ಅವರು ಯಾವಾಗಲೂ ಇತರರ ಅಗತ್ಯತೆಗಳ ಬಗ್ಗೆ ಯೋಚಿಸುತ್ತಿದ್ದರು (ಅ.ಕೃತ್ಯ 4:32-35 ನೋಡಿರಿ).

ಇತ್ತಿಚಿನ ದಿನಗಳಲ್ಲಿ ಬಹುತೇಕ ಕ್ರೈಸ್ತರು ತಮ್ಮ ಸ್ವತ್ತುಗಳನ್ನು ಮಾರುವದಿಲ್ಲ, ಅವರು ತಮ್ಮದೆಲ್ಲವನ್ನೂ ಹುದುವಾಗಿ ಅನುಭವಿಸುವದಿಲ್ಲ (ವಚನ 44). ಬಹುಶ: ಈವಿಷಯದಲ್ಲಿ ಆದಿ ಸಭೆಯು ಮಾಡಿದಂತೆಯೇ ಸರಿಯಾಗಿ ನಾವೂ ಅದನ್ನೇ ಮಾಡಬೇಕಾದ ಅವಶ್ಯಕತೆಯಿರುವದಿಲ್ಲ. ನಾವು ಅವರು ಮಾಡಿದ ಹಾಗೆಯೇ ಮಾಡಬೇಕೆಂದು ಹೇಳುವ ಯಾವ ಆಜ್ಞೆಯೂ ಇರುವದಿಲ್ಲ.[23] ಹೇಗಿದ್ದರೂ, ನಾವು ಮಾಡಬೇಕಾದ ಎರಡು ಸಂಗತಿಗಳಿರುತ್ತವೆ: ಒಂದು, ನಾವು ನಮ್ಮ ಸ್ವಂತ ದೇಹಗಳನ್ನೂ ಒಳಗೊಂಡಂತೆ ನಮಗಿರುವದೆಲ್ಲವು ದೇವರಿಗೆ ಸೇರಿದ್ದೆಂದು ಪರಿಗಣಿಸಬೇಕು (ರೋಮ 12:1,1 ಕೊರಿಂಥ 6:19-20), ಮತ್ತು ಎರಡು, ನಾವು ನಮ್ಮ ನೆರೆಯವರನ್ನು ನಮ್ಮಂತೆಯೇ ಪ್ರೀತಿಸ ಬೇಕು (ಮಾರ್ಕ 12:31). ಈ ಎರಡು ಸಂಗತಿಗಳನ್ನು ಮಾಡುವಾಗ ನಾವೂ ಸಹ ದೇವರ ದೃಷ್ಟಿಯಲ್ಲಿ ಆ ಪ್ರಥಮ ವಿಶ್ವಾಸಿಗಳು ಮಾಡಿದ್ದನ್ನೇ ಮಾಡುವವರಾಗಿರುತ್ತೇವೆ.

**46-47** ಆ ಪ್ರಥಮ ವಿಶ್ವಾಸಿಗಳು ಎಲ್ಲವನ್ನೂ ಒಗ್ಗಟ್ಟಾಗಿ ಮಾಡಿದರು. ಅವರು ಒಬ್ಬರೊಬ್ಬರ ಮನೆಯಲ್ಲಿ ರೊಟ್ಟಿಯನ್ನು ಮುರಿದರು, ಅಂದರೆ ಒಟ್ಟಾಗಿ ಕರ್ತನ ಭೋಜನವನ್ನು ಆಚರಿಸಿದರು, ಒಮ್ಮೆ ಒಬ್ಬರ ಮನೆಯಲ್ಲಿಯೂ, ಇನ್ನೊಮ್ಮೆ ಮತ್ತೊಬ್ಬರ ಮನೆಯಲ್ಲಿಯೂ ಆಚರಿಸಿದರು. ಅವರು ಕರ್ತನ ಭೋಜನದೊಂದಿಗೆ ಸಾಮಾನ್ಯ ಊಟವನ್ನು ಸಹ ಮಾಡಿದರು. ಆ ಪ್ರಥಮ ಸಭೆಯು ಎಂತಹ ಒಂದು ದೈವೀಕ, ಸಂತೋಷಭರಿತ ಹಾಗು ಐಕ್ಯತೆಯ ಸಭೆಯಾಗಿತ್ತು! ಇತರ ಜನರು ಆ ಪ್ರಥಮ ವಿಶ್ವಾಸಿಗಳ ಜೀವಿತಗಳನ್ನು ನೋಡಿದಾಗ ಅವರು ಸಹ ಆ ಅನ್ಯೋನ್ಯತೆಗೆ ಸೇರಲು ಬಂದರು. ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು.

---

## ಅಧ್ಯಾಯ - 3

### ಪೇತ್ರನು ಕುಂಟ ಬಿಕ್ಷುಕನನ್ನು ಗುಣಪಡಿಸಿದ್ದು (3:1-10)

**1** ಅಪೊಸ್ತಲರು ಆರಾಧನೆಗಾಗಿ ಯೆರೂಸಲೇಮಿನಲ್ಲಿದ್ದ ದೇವಾಲಯಕ್ಕೆ ಹೋಗುವದನ್ನು ಮುಂದುವರೆಸಿದರು. ಅವರು ಕ್ರಿಸ್ತನನ್ನು ನಂಬಿದವರಾಗಿದ್ದರೂ ಯೆಹೂದಿ ಧರ್ಮವನ್ನು ಅನುಸರಿಸುವವರಾಗಿದ್ದರು. ಕ್ರಿಸ್ತನು ಹಾಗು ಆತನ ಶಿಷ್ಯರು ಯೆಹೂದ್ಯರಾಗಿದ್ದರು. ಕ್ರೈಸ್ತಧರ್ಮವು ಯೆಹೂದಿಮತದಿಂದ ಉದ್ಭವಿಸಿತು. ಆದುದರಿಂದ, ಅವರು ತಮ್ಮ ಹಳೆಯ ಧರ್ಮವನ್ನು ಅನುಸರಿಸುವದನ್ನು ನಿಲ್ಲಿಸುವ ಅವಶ್ಯಕತೆಯಿರಲಿಲ್ಲ. ಕ್ರೈಸ್ತೀಯ ಧರ್ಮ ಗ್ರಂಥವು ಹಳೆ ಒಡಂಬಡಿಕೆಯನ್ನೊಳಗೊಂಡಿರುವ ಪ್ರಕಾರವೇ ಕ್ರೈಸ್ತತ್ವವು ಯೆಹೂದಿಯತೆಯನ್ನು ಒಳಗೊಂಡಿದೆ.

ಒಂದು ದಿನ ಮದ್ಯಾಹ್ನದ[24] ಮೂರು ಘಂಟೆಗೆ ನಡೆಯತಕ್ಕ ಪ್ರಾರ್ಥನೆಗಾಗಿ ಪೇತ್ರ ಯೋಹಾನರು ಯೆಹೂದಿ ದೇವಾಲಯಕ್ಕೆ ಹೊರಟರು.

**2-5** ಅಲ್ಲಿ ಅವರು ಹುಟ್ಟುಕುಂಟನೊಬ್ಬನನ್ನು ಬೇಟಿಯಾದರು. ಹುಟ್ಟಿದಂದಿನಿಂದಲೇ ಕುಂಟನಾದ ಯಾವದೇ ವ್ಯಕ್ತಿಯ ಹರಡುಗಳು ಯಾವಾಗಲೂ ಮುದುಡಿಹೋಗಿ ಕುರೂಪಗೊಂಡಿರುತ್ತವೆ, ಆದ್ದರಿಂದ ಈ ವ್ಯಕ್ತಿಯ ಕಾಲುಗಳು ನಿಶ್ಚಯವಾಗಿಯೂ ಬಹಳ ವಿರೂಪಗೊಂಡಿರುತ್ತವೆ. ಅಂತಹ ಒಂದು ವಿರೂಪತೆಯನ್ನು ಯಾವ ಔಷದವಾಗಲಿ ಅಥವಾ ಚಿಕಿತ್ಸೆಯಾಗಲಿ ಎಂದಿಗೂ ಸರಿಪಡಿಸಲಾರದು. ಕುಂಟನು ಪೇತ್ರ ಯೋಹಾನರಿಂದ ಸ್ವಲ್ಪ ಹಣ ಸಿಗುತ್ತದೆಂದು ನಿರೀಕ್ಷಿಸಿದನು, ಆತನು ಎದುರು ನೋಡಿದ್ದು ಅಷ್ಟು ಮಾತ್ರವೇ ಆಗಿತ್ತು. ಅವನು ತನ್ನ ಕೈಯನ್ನು ಅವರೆಡೆಗೆ ಚಾಚಿದನು.

**6-7** ಆದರೆ ಆತನಿಗೆ ಕೊಡುವದಕ್ಕೆ ಪೇತ್ರ ಯೋಹಾನರಲ್ಲಿ ಹಣವಿರಲಿಲ್ಲ. ಅವರು ಸಹ ಬಡವರೇ ಆಗಿದ್ದರು! ಅವರು ಮೂಲತಃ ಬೇಸ್ತರಾಗಿದ್ದರು, ಮತ್ತು ಯೇಸುವನ್ನು ಹಿಂಬಾಲಿಸಲು ಅವರು ಎಲ್ಲವನ್ನೂ ತೊರೆದಿದ್ದರು. ಆದರೆ, ಅವರ ಬಳಿಯಲ್ಲಿ ಹಣಕ್ಕಿಂತಲೂ ಎಷ್ಟೋ ಉತ್ತಮವಾದದ್ದು ಒಂದಿತ್ತು.. ಅವರ ಬಳಿಯಲ್ಲಿ ಕರ್ತನಾದ ಯೇಸು ಕ್ರಿಸ್ತನ [25] ಬಲವಿತ್ತು. ಪೇತ್ರನು ಕುಂಟನಿಗೆ, "ನಜರೇತಿನ ಯೇಸು ಕ್ರಿಸ್ತನ ಹೆಸರಿನಲ್ಲಿ ಎದ್ದು ನಡೆ " ಎಂದನು. ಆಗ ಪೇತ್ರನಲ್ಲಿ ನೆಲೆಸಿದ್ದ ಪವಿತ್ರಾತ್ಮನ ಶಕ್ತಿಯ ಮೂಲಕ ಯೇಸು ಆ ವ್ಯಕ್ತಿಯನ್ನು ಗುಣಪಡಿಸಿದನು. ಸ್ವಸ್ಥತೆಯು ತಕ್ಷಣ ಹಾಗು ಸಂಪೂರ್ಣವಾಗಿತ್ತೆಂಬದನ್ನು ಗಮನಿಸಿರಿ.

**8-10** ಎಂತಹ ಆನಂದ! ಕುಂಟನು ಕೆಲವು ಪೈಸೆಗಳಿಗಾಗಿ ಬೇಡಿದ್ದನು. ಈಗ ಆತನು ನಡೆಯುತ್ತಾ, ಜಿಗಿಯುತ್ತಾ ದೇವರನ್ನು ಕೊಂಡಾಡುತ್ತಿದ್ದನು! ಇದಕ್ಕಿಂತ ಮುಂಚೆ ಆತನು ತನ್ನ ಜೀವಿತದಲ್ಲಿ ಎಂದಿಗೂ ನಡೆದಾಡಿರಲಿಲ್ಲ. ಅದ್ಭುತವನ್ನು ನೋಡಿದ ಜನರು ವಿಸ್ಮಯ ಪಟ್ಟರು. ಈ ಮನುಷ್ಯನು ಅನೇಕ ವರ್ಷಗಳಿಂದಲೂ ದೇವಾಲಯದ ದ್ವಾರಗಳೊಂದರ [26] ಬಳಿಯಲ್ಲಿ ಕುಳಿತಿದ್ದನ್ನು ಇವರು ಕಂಡಿದ್ದರು. "ಏನು ನಡೆದಿದೆ? ಇದು ಹೇಗಾಯಿತು?" ಎಂದು ಜನರು ಬೆರಗಾದರು. ಬರಲಿರುವ ಮೆಸ್ಸೀಯನ ಕಾಲದ ಬಗ್ಗೆ ಯೆಶಾಯನು ನುಡಿದ ಪ್ರವಾದನೆಯು ನೆರವೇರಿತ್ತು : ಕುಂಟನು ಜಿಂಕೆಯಂತೆ ಹಾರುವನು (ಯೆಶಾಯ 35:6).

ನಮ್ಮಲ್ಲಿ ಯಾರಾದರೂ ಕುಂಟರು, ಬಲಹೀನರು, ತಳ್ಳಲ್ಪಟ್ಟವರು ಇದ್ದಾರೋ? ನಿರೀಕ್ಷೆ, ಸಮಾಧಾನ, ಉದ್ದೇಶಗಳಿಲ್ಲದೆ ಯಾರಾದರೂ ಇದ್ದಿರೋ? ಅಂತಹ ವ್ಯಕ್ತಿಯು ತನ್ನ ಕಣ್ಣುಗಳನ್ನು ಯೇಸುವಿನೆಡೆಗೆ ಎತ್ತಿ ಆತನನ್ನು ನಂಬಲಿ. ಯಾಕೆಂದರೆ ಯೇಸು ಸ್ವಸ್ಥಮಾಡಲು, ಬಲನೀಡಲು, ಜೀವ-ನಿತ್ಯಜೀವನೀಡಲು ಸಂಪೂರ್ಣ ಅಧಿಕಾರವನ್ನು ಹೊಂದಿದ್ದಾನೆ.

## ಪೇತ್ರನು ಜನಸಮೂಹವನ್ನು ಉದ್ದೇಶಿಸಿ ಮಾತಾಡಿದ್ದು (3:11-26)

**11** ಪೇತ್ರ ಯೋಹಾನರು ಹಾಗು ಹೊಸದಾಗಿ ಗುಣ ಹೊಂದಿದ ವ್ಯಕ್ತಿಯು ಸೊಲೊಮೋನನ ಮಂಟಪವೆಂಬ ದೇವಾಲಯದ ಇನ್ನೊಂದು ಬದಿಗೆ ಹೊರಟರು. ಅಲ್ಲಿ ಪುನಃ ಜನರು ಶೀಘ್ರವಾಗಿ ಗುಂಪು ಗುಂಪಾಗಿ ಅವರ ಸುತ್ತಲು ಸೇರಿಬಂದರು.

**12** ಪೇತ್ರನು ಜನರ ಗುಂಪಿಗೆ, "ನಮ್ಮನ್ನು ಅಂತಹ ಒಂದು ಆಶ್ಚರ್ಯದಿಂದ ನೋಡಬೇಡಿರಿ. ನಮ್ಮ ಸ್ವಂತ ಬಲದಿಂದ ಈ ವ್ಯಕ್ತಿಯನ್ನು ನಡೆದಾಡುವಂತೆ ಮಾಡಲಿಲ್ಲ. ನಾವು ನಿಮ್ಮ ಹಾಗೆಯೇ ಸಾಮಾನ್ಯ ಮನುಷ್ಯರು. ಈ ವ್ಯಕ್ತಿಯನ್ನು ಸ್ವಸ್ಥಪಡಿಸಿದವನು ಸ್ವತಃ ಕರ್ತನಾದ ಯೇಸು ಕ್ರಿಸ್ತನೇ." ಎಂದು ಹೇಳಿದನು.

ಪೇತ್ರನು ಈಗಷ್ಟೇ ಒಂದು ದೊಡ್ಡ ಅದ್ಭುತವನ್ನು ಮಾಡಿದ್ದನು, ಆದರೆ ಆತನು ಯಾವದೇ ಘನತೆ ಅಥವಾ ಪ್ರಶಂಸೆಯನ್ನು ತನಗಾಗಿ ತೆಗೆದುಕೊಳ್ಳಲಿಲ್ಲ. ಆತನು ಸಂಪೂರ್ಣ ಸ್ತುತಿಯನ್ನು ಕ್ರಿಸ್ತನಿಗೆ ನೀಡಿದನು. ಅದೇ ರೀತಿಯಲ್ಲಿ ನಾವು ಮಾಡುವಂತದ್ದೆಲ್ಲದರಲ್ಲಿಯೂ ಪೇತ್ರನ ಮಾದರಿಯನ್ನು ಅನುಸರಿಸೋಣ. ಕ್ರಿಸ್ತನನ್ನು ಬಿಟ್ಟು ನಾವು ಏನೂ ಮಾಡಲಾರೆವು (ಯೋಹಾನ 15:5), ಆದುದರಿಂದ ನಾವು ಏನೇ ಒಳ್ಳೇ ಕಾರ್ಯಮಾಡಿದರೂ ಎಲ್ಲಾ ಘನತೆಯನ್ನು ನಾವು ಆತನಿಗೆ ಸಲ್ಲಿಸಬೇಕು. ನಾವು ನಮ್ಮ ಪಾಪಗಳಿಗಾಗಿ ಮಾತ್ರವೇ ನಮಗೆ ಘನತೆಯನ್ನು ತೆಗೆದುಕೊಳ್ಳಬಹುದು!

**13** ಇಲ್ಲಿ ಪೇತ್ರನು ಈ ಅದ್ಭುತದ ಮುಖಾಂತರವಾಗಿ ದೇವರು ತನ್ನ ಸೇವಕನಾದ ಯೇಸುವನ್ನು ಮಹಿಮೆ ಪಡಿಸಿದ್ದಾನೆ ಎಂದು ಹೇಳುತ್ತಾನೆ. ದೇವರು ನಿಜವಾಗಿಯೂ ಯೇಸುವಿಗೆ ಮಹಿಮೆಯನ್ನುಂಟು ಮಾಡುತ್ತಿದ್ದಾನೆಂಬದಕ್ಕೆ ಅದ್ಭುತವು ಒಂದು ಗುರುತಾಗಿತ್ತು. ಪೇತ್ರನು ದೇವರನ್ನು ಅಬ್ರಹಾಮ, ಇಸಾಕ ಯಾಕೋಬರ ದೇವರೆಂದು ಕರೆಯುತ್ತಾನೆ. ಅಬ್ರಹಾಮ, ಇಸಾಕ ಮತ್ತು ಯಾಕೋಬರು ಯೆಹೂದ್ಯ ಜನರ ಮೂರು ಪ್ರಮುಖ ಮೂಲ ಪಿತೃಗಳಾಗಿದ್ದರು. ಅಬ್ರಹಾಮನು ಮೊದಲು, ನಂತರ ಅಬ್ರಹಾಮನ ಮಗನಾದ ಇಸಾಕ ಮತ್ತು ಅನಂತರ ಇಸಾಕನ ಮಗನಾದ ಯಾಕೋಬನು. ಎಲ್ಲಾ ಯೆಹೂದ್ಯರು ಈ ಮೂವರ ಸಂತತಿಯಾಗಿದ್ದರು. ಯೇಸು ದೇವಕುಮಾರನಾಗಿದ್ದನಾದರೂ ಯೆಹೂದ್ಯರು ಅವರನ್ನು ಕೊಲ್ಲಲು ಒಪ್ಪಿಸಿದರು. ಅವರು ಯೇಸುವನ್ನು ರೋಮಾಯ ದೇಶಾಧಿಪತಿಯಾದ ಪಿಲಾತನಿಗೆ ಒಪ್ಪಿಸಿದರು. ಯಾಕೆಂದರೆ ರೋಮಾಯ ಕಾನೂನಿನ ಪ್ರಕಾರ ರೋಮಾಯ ದೇಶಾಧಿಪತಿ ಮಾತ್ರವೇ ಅಪರಾಧಿಗಳಿಗೆ ಮರಣದಂಡನೆ ವಿಧಿಸಬಹುದಾಗಿತ್ತು. ಯೇಸುವನ್ನು ಪರೀಕ್ಷಿಸಿದ ಬಳಿಕ ಪಿಲಾತನು ಆತನಲ್ಲಿ ಯಾವ ಅಪರಾಧವೂ ಇಲ್ಲದಿರುವದನ್ನು ತಿಳಿದುಕೊಂಡು ಆತನನ್ನು ಬಿಡಿಸಬೇಕೆಂದಿದ್ದನು, ಆದರೆ ಯೆಹೂದ್ಯರು ಪಿಲಾತನ ತೀರ್ಪನ್ನು ತಿರಸ್ಕರಿಸಿ ಅವನನ್ನು ಸಾಯಿಸಬೇಕೆಂದು ಕೋರಿದರು. (ಅ.ಕೃತ್ಯ 2:23 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**14** ಯೆಹೂದ್ಯರು ಪರಿಶುದ್ಧನೂ ನೀತಿವಂತನೂ ಆದ ಪುರುಷನನ್ನು ಅಂದರೆ, ಕ್ರಿಸ್ತನನ್ನು ತಿರಸ್ಕರಿಸಿದರು. ಕ್ರಿಸ್ತನು ಸಂಪೂರ್ಣವಾಗಿ ಪಾಪರಹಿತನೂ, ಪವಿತ್ರನೂ ಆಗಿದ್ದನು (ಇಬ್ರಿಯ 4:15). ಯೆಹೂದ್ಯರು ಸಂಪೂರ್ಣವಾಗಿ ಪರಿಶುದ್ಧನೂ, ನೀತಿವಂತನೂ ಆಗಿರುವಾತನನ್ನು ತಿರಸ್ಕರಿಸಿ ಕೊಲೆ ಮಾಡಿದ್ದರಿಂದ ಅವರ ಅಪರಾಧವು ಅತಿಘೋರವಾಗಿತ್ತು. ಯೆಹೂದ್ಯರ ಪಸ್ಕ ಹಬ್ಬದ ವೇಳೆಯಲ್ಲಿ ರೋಮಾಯ ದೇಶಾದಿಪತಿಯು ಒಳ್ಳೆ ಮನಸ್ಸಿನ ಸಂಕೇತವಾಗಿ ಯೆಹೂದಿ ಕೈದಿಯೊಬ್ಬನನ್ನು ಬಿಡುಗಡೆಗೊಳಿಸುವ ಪದ್ಧತಿಯಿತ್ತು. ಪಿಲಾತನು ಯೇಸುವನ್ನು ಬಿಡಿಸಬೇಕೆಂದು ಬಯಸಿದ್ದನು ಆದರೆ ಯೆಹೂದ್ಯರು ಆತನಿಗೆ ಬದಲಾಗಿ ಕೊಲೆ ಗಾರನಾದ ಬರಬ್ಬನೆಂಬವನನ್ನು ಬಿಡುಗಡೆಮಾಡಬೇಕೆಂದು ಪಿಲಾತನನ್ನು ಕೇಳಿಕೊಂಡರು (ಮಾರ್ಕ 15:6-11 ನೋಡಿರಿ).

**15** ಪೇತ್ರನು ಯೇಸುವನ್ನು ಇಲ್ಲಿ ಜೀವನಾಯಕ ಎಂದು ಕರೆಯುತ್ತಾನೆ. ಆತನು ಭೂಮಿಯಲ್ಲಿದ್ದಾಗ, ಯೇಸು ಸತ್ತವರನ್ನು ಜೀವಕ್ಕೆ ಎಬ್ಬಿಸಿದನು (ಲೂಕ 7:14-15, ಯೋಹಾನ 11:21-25, 38:44). ಆದರೆ ಅದ್ಕಕಿಂತ ಹೆಚ್ಚಾಗಿ ತಮ್ಮಲ್ಲಿ ವಿಶ್ವಾಸಿಸುವ ಎಲ್ಲರಿಗೂ ಆತನು ನಿತ್ಯಜೀವವನ್ನು ಕೊಡುತ್ತಾನೆ (ಯೋಹಾನ 3:16). ಹಾಗಿದ್ದರೂ, ಯೆಹೂದ್ಯರು ಆತನನ್ನು ಮರಣಕ್ಕೊಳಗಾಗುವಂತೆ ಮಾಡಿದ್ದರು. ಅವರು ಕೊಲೆಗಾರನಾದ ಬರಬ್ಬನನ್ನು ಜೀವ ತೆಗೆಯುವವನನ್ನು ಉಳಿಸಿದರು, ಆದರೆ ಜೀವದಾಯಕ ಯೇಸುವನ್ನು ಹತ್ಯೆಗೈದರು! ಆದರೆ ಅಂತ್ಯದಲ್ಲಿ, ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು, ಮತ್ತು ಪೇತ್ರನು "ಈ ವಿಷಯದಲ್ಲಿ ನಾವೇ ಸಾಕ್ಷಿಗಳು" ಎಂದು ಹೇಳುತ್ತಾನೆ (ಅ.ಕೃತ್ಯ 2:24, 32 ನೋಡಿರಿ).

**16** ಕುಂಟ ಮನುಷ್ಯನು ಯೇಸುವಿನ ಹೆಸರಿನಲ್ಲಿ ಇಟ್ಟ ನಂಬಿಕೆಯಿಂದ ಸ್ವಸ್ಥನಾದನೆಂದು ಪೇತ್ರನು ಹೇಳುತ್ತಾನೆ. ಯೇಸುವಿನ ಹೆಸರಿನಲ್ಲಿ ನಂಬಿಕೆಯಿಡುವದು ಮತ್ತು ಯೇಸುವಿನಲ್ಲಿ ನಂಬಿಕೆಯಿಡುವದು ಒಂದೇ ಆಗಿದೆ. ಯೇಸುವಿನ ಹಸರಿನಿಂದಲೇ ಆತನು ಯಾರೆಂದು ನಾವು ಹೇಳಬಹುದು. ಆತನು ಕರ್ತನೂ, ಕ್ರಿಸ್ತನೂ ಆಗಿದ್ದಾನೆ (ಅ.ಕೃತ್ಯ 2:36 ಮತ್ತು ವ್ಯಾಖ್ಯಾನ ನೋಡಿರಿ). ಪೇತ್ರನು ಹೇಳುವದೇನೆಂದರೆ : "ಯೇಸುವಿನ ಹೆಸರೇ ಇವನನ್ನು (ಕುಂಟನನ್ನು) ಗುಣಪಡಿಸಿತು....ಪೂರ್ಣ ಕ್ಷೇಮವನ್ನು ಕೊಟ್ಟಿತು". ಇಲ್ಲಿ ಯೇಸುವಿನ ಎಂದರೆ ಸ್ವತಃ ಯೇಸುವೇ ಎಂಬದನ್ನು ನಾವು ಅರ್ಥಮಾಡಿಕೊಳ್ಳಬೇಕು.

ಕುಂಟನು ಸ್ವಸ್ಥನಾಗಲು ಎರಡು ಸಂಗತಿಗಳ ಅವಶ್ಯಕತೆಯಿತ್ತು: ಮೊದಲನೆಯದಾಗಿ, ಯೇಸುವಿನ ಬಲ, ಮತ್ತು ಎರಡನೆಯದಾಗಿ ಮನುಷ್ಯನ ನಂಬಿಕೆ – ಪೇತ್ರನ ನಂಬಿಕೆ ಅಥವಾ ಕುಂಟನ ನಂಬಿಕೆ ಯಾವದೇ ಆತ್ಮೀಕಕಾರ್ಯವು ಸಾಧಿಸಲ್ಪಡಬೇಕಾದರೆ ಯಾವಾಗಲೂ ಎರಡು ಸಂಗತಿಗಳು – ಯೇಸುವಿನ ಬಲ ಮತ್ತು ಮನುಷ್ಯನ ನಂಬಿಕೆ – ಅವಶ್ಯಕವಾಗಿವೆ.

**17** ಯೆಹೂದ್ಯರು ಯೇಸುವನ್ನು ತಿಳಿಯದೆ ಸಾಯಿಸಿದ್ದರು. ದೇವರು ಅಜ್ಞಾನದಲ್ಲಿ ಮಾಡಿದವರನ್ನು ಕ್ಷಮಿಸಲು ಯಾವಾಗಲೂ ಸಿದ್ದನಾಗಿರುತ್ತಾನೆ (ಲೂಕ 23:34, 1 ತಿಮೊಥೆ 1:13 ನೋಡಿರಿ). ಪೇತ್ರನು ಇಲ್ಲಿ ಯೆಹೂದ್ಯರೆಡೆಗೆ ಸ್ವಲ್ಪ ದಯೆಯನ್ನು ತೋರುವದು ಸರಿಯಾದದ್ದೇ, ಯಾಕೆಂದರೆ ಕೆಲವಾರಗಳ ಹಿಂದೆಯಷ್ಟೇ ಪೇತ್ರ ಸ್ವತಃ ತಿಳಿದವನಾಗಿಯೇ ತನ್ನ ಕರ್ತನನ್ನು ಮೂರು ಸಾರಿ ಅಲ್ಲಗಳೆದನು (ಮಾರ್ಕ 14:66-72).

**18** ಹೇಗಿದ್ದರೂ, ಯೇಸು ಬಾಧೆಪಟ್ಟು ಮರಣಿಸಿದ್ದು ಆಕಸ್ಮೀಕವಾಗಿರಲಿಲ್ಲ. ಹಳೆ ಒಡಂಬಡಿಕೆಯ ಪ್ರವಾದಿಗಳು ವಿಶೇಷವಾಗಿ ಯೆಶಾಯನು ಕ್ರಿಸ್ತನು ಭಾಧೆಪಡುವದು ಅವಶ್ಯವೆಂಬದನ್ನು ಬರೆದಿದ್ದನು (ಯೆಶಾಯ 53:3-12).

**19** ಈ ವಚನದಲ್ಲಿ ನಾವು ದೇವರ ಅಪರಿಮಿತ ಕೃಪೆ ಮತ್ತು ಕರುಣೆಗಳನ್ನು ನೋಡುತ್ತೇವೆ. ಈ ಯೆಹೂದ್ಯರು ದೇವರ ಒಬ್ಬನೇ ಮಗನನ್ನು ಸಾಯಿಸಿದ್ದರು. ಆದರೆ ಈಗ ಅವರು ಪಶ್ಚಾತಾಪ ಪಟ್ಟು ದೇವರ ಕಡೆಗೆ ತಿರಿಗಿಕೊಳ್ಳುವದಾದರೆ ಆತನು ಅವರ ಪಾಪಗಳನ್ನು ಕ್ಷಮಿಸಿ ತೊಳೆದು ಹಾಕುವವನಾಗಿದ್ದಾನೆ (ಅ.ಕೃತ್ಯ 2:38 ಮತ್ತು ವ್ಯಾಖ್ಯಾನ ನೋಡಿರಿ). ಅವರು ಕ್ರಿಸ್ತನ ಜೀವವನ್ನೇ ತೆಗೆದಿದ್ದಾರೆ, ಆದರೆ ಅವರು ಪಶ್ಚಾತಾಪ ಪಡುವದಾದರೆ ದೇವರು ಅವರಿಗೆ ಜೀವವನ್ನು ನೀಡಲು ಸಿದ್ಧನಿದ್ದಾನೆ.

**20-21** ಯೆಹೂದ್ಯರು ಪಶ್ಚಾತಾಪ ಪಡುವದಾದರೆ ಕ್ರಿಸ್ತನು ಅವರ ಬಳಿಗೆ ಬಂದು ಸಮಸ್ತವನ್ನು [27] ಸರಿಮಾಡುವನು (ವಚನ 21). ಕ್ರಿಸ್ತನು ಯೆಹೂದ್ಯರಿಗಾಗಿ ನೇಮಕವಾಗಿದ್ದನು, ಅಂದರೆ, ಆತನು ಅವರ ರಕ್ಷಕನಾಗಿ ನೇಮಕವಾಗಿದ್ದನು. ಯೇಸು ಹೇಳಿದ್ದೇನೆಂದರೆ: "ತಪ್ಪಿಸಿಕೊಂಡಕುರಿಗಳಂತಿರುವ ಇಸ್ರಾಯೇಲರ ಬಳಿಗೇ ಕಳುಹಿಸಲ್ಪಟ್ಟಿದ್ದೇನೆ" (ಮತ್ತಾಯ 15:24). ಕೆಲವು ಯೆಹೂದ್ಯರು ಯೇಸುವನ್ನು ಸ್ವೀಕರಿಸಿಕೊಂಡರು, ಆದರೆ ಬಹು ಪಾಲು ಮಂದಿ ಸ್ವೀಕರಿಸಿಕೊಳ್ಳಲಿಲ್ಲ.

ಯೇಸು ಭೂಮಿಗೆ ತಿರಿಗಿ ಬರುವದಕ್ಕೆ ದೇವರು ನೇಮಿಸಿರುವ ಕಾಲವು ಬರುವತನಕ ಆತನು ಪರಲೋಕದಲ್ಲಿಯೇ ಉಳಿಯ ಬೇಕೆಂದು ಪೇತ್ರನು ಹೇಳುತ್ತಾನೆ. ಆಗ ಆತನು ನಿಜವಾಗಿಯೂ ಸಮಸ್ತವನ್ನು ಪುನಃ ಸ್ಥಾಪಿಸುವನು. ಆಗ ಆತನು ದೇವರ ರಾಜ್ಯವನ್ನು ಸಂಪೂರ್ಣವಾಗಿ ಸ್ಥಾಪಿಸುವನು. ನಿಜವಾಗಿಯೂ, ಆತನು ಎಲ್ಲಾ ಸೃಷ್ಟಿಯನ್ನು ವಿಮೋಚಿಸುವನು (ರೋಮ 8:19-21).

**22-23** ಮೋಶೆಯು ಧರ್ಮೋಪದೇಶಕಾಂಡ 18:15ರಲ್ಲಿ ಹೇಳಿದ ವಿಷಯವನ್ನು ಪೇತ್ರನು ಇಲ್ಲಿ ಉಲ್ಲೇಖಿಸುತ್ತಾನೆ. ಮೋಶೆಯು ಇಲ್ಲಿ "ನನ್ನಂತಹ" – ಅಂದರೆ, ಕ್ರಿಸ್ತನ – ಕುರಿತಾಗಿ ಮಾತಾಡುತ್ತಾನೆ, ಆತನ ಮಾತುಗಳನ್ನು ಯೆಹೂದ್ಯರು ಆಲಿಸಬೇಕಾಗಿತ್ತು (ಇಬ್ರಿಯ 3:3, 5-6 ನೋಡಿರಿ). ಯೇಸುವಿನ ಮಾತುಗಳನ್ನು ಯಾರು ಕೇಳುವದಿಲ್ಲವೋ ಅವರು ದೇವರಿಂದ ದಂಡನೆಯನ್ನು ಅನುಭವಿಸುವರು.

**24** ಮೋಶೆಯನ್ನು ಬಿಟ್ಟರೆ, ಹಳೆ ಒಡಂಬಡಿಕೆಯ ಸಾಮಾನ್ಯ ಪ್ರವಾದಿಗಳಲ್ಲಿ ಸಮುವೇಲನು ಪ್ರಥಮನು ಎಲ್ಲಾ ಪ್ರವಾದಿಗಳೂ ಈಗಿನ ದಿನಗಳ – ಅಂದರೆ ಕ್ರಿಸ್ತನ ದಿನಗಳ – ಬಗ್ಗೆ ಮುಂತಿಳಿಸಿದರು.

**25** ಹಳೆ ಒಡಂಬಡಿಕೆಯ ಪ್ರವಾದಿಗಳು ಕ್ರಿಸ್ತನ ಬರೋಣದ ವಿಷಯದಲ್ಲಿ ಪ್ರವಾದಿಸಿದರು. ಅಲ್ಲದೆ ದೇವರು ಯೆಹೂದ್ಯರ ಪಿತೃವಾದ ಅಬ್ರಹಾಮನೊಂದಿಗೆ ಒಡಂಬಡಿಕೆಯನ್ನು ಮಾಡಿದ್ದನು, ಅದರಲ್ಲಿ ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದ್ದೇನೆಂದರೆ : "ನಿನ್ನ ಸಂತತಿಯ ಮೂಲಕ ಭೂಲೋಕದ ಎಲ್ಲಾ ಜನಾಂಗದವರಿಗೂ ಆಶೀರ್ವಾದವುಂಟಾಗುವದು" (ಆದಿಕಾಂಡ 22:18, 26:4). ಆ ಸಂತತಿಯು ಕ್ರಿಸ್ತನೇ. ಕ್ರಿಸ್ತನಲ್ಲಿ ಭೂಲೋಕದ ಎಲ್ಲಾ ರಾಷ್ಟ್ರಗಳು, ಯೆಹೂದ್ಯರು ಮತ್ತು ಅನ್ಯಜನರು – ರಕ್ಷಣೆ ಹೊಂದುವರು. ಪೇತ್ರನು ಯೆಹೂದ್ಯರಿಗೆ ಹೇಳುವದೇನೆಂದರೆ : " ನೀವು ...ಒಡಂಬಡಿಕೆಗೆ

ಬಾಧ್ಯರಾಗಿದ್ದೀರಿ" ಅನ್ಯಜನರು ಒಡಂಬಡಿಕೆಯ ವಾಗ್ದನವನ್ನು ಸ್ವೀಕರಿಸುವದಾದರೆ ಮೂಲ ಬಾಧ್ಯಸ್ಥರಾದ ಯೆಹೂದ್ಯರು ಸಹ ನಿಶ್ಚಯವಾಗಿಯೂ ಸ್ವೀಕರಿಸತಕ್ಕದ್ದು.

**26** ಯೆಹೂದ್ಯಯರೇ ಪ್ರವಾದಿಗಳ ಹಾಗು ಒಡಂಬಡಿಕೆಯ ಮೂಲಭಾಧ್ಯಸ್ಥರಾಗಿದ್ದರಾದ್ದರಿಂದ ದೇವರು ಕ್ರಿಸ್ತನನ್ನು ಮೊದಲು ಅವರ ಬಳಿಗೆ ಕಳುಹಿಸಿದನು. ರಕ್ಷಣೆಯನ್ನು ಪಡೆದುಕೊಳ್ಳುವ ಅವಕಾಶವು ಮೊದಲು ಯೆಹೂದ್ಯರಿಗೆ ಕೊಡಲ್ಪಟ್ಟಿತ್ತು (ಮತ್ತಾಯ 10:5-6, ಲೂಕ 24:47, ಅ.ಕೃತ್ಯ 13:45-46, ರೋಮ 1:16 ನೋಡಿರಿ). ಆದುದರಿಂದ, ಅವರು ತಮಗೆ ದೇವಕುಮಾರನಾದ ಯೇಸು ಕ್ರಿಸ್ತನ ಮುಖಾಂತರವಾಗಿ ಬಂದ ರಕ್ಷಣೆಯ ಅವಕಾಶವನ್ನು ಕಳೆದು ಕೊಳ್ಳದಂತೆ ಪಶ್ಚಾತಾಪಪಟ್ಟು ತಮ್ಮ ಕೆಟ್ಟ ನಡತೆಗಳನ್ನು ತೊರೆಯಬೇಕೆಂದು ಪೇತ್ರನು ಯೆಹೂದ್ಯರನ್ನು ಪ್ರಬೋಧಿಸುತ್ತಾನೆ.

---

# ಅಧ್ಯಾಯ - 4

## ಹಿರೀಸಭೆಯ ಮುಂಭಾಗದಲ್ಲಿ ಪೇತ್ರ ಯೋಹಾನರು (4:1-22)

**1-2** ಪೇತ್ರ ಯೋಹಾನರು ಕುಂಟನನ್ನು ಸ್ವಸ್ಥ ಮಾಡಿದ್ದರಿಂದ ಜನರ ಮದ್ಯದಲ್ಲಿ ಉದ್ಭವವಾಗಿರುವ ವದಂತಿಗಳಿಗಾಗಿ ಯೆಹೂದಿ ಯಾಜಕರು ಹಾಗು ಸದ್ದುಕಾಯರು[28] ಅಸಮಾಧಾನಗೊಂಡಿದ್ದರು. ಆದಕ್ಕಿಂತಲೂ ಕೆಟ್ಟದ್ದೇನೆಂದರೆ, ಯೆಹೂದಿನಾಯಕರು ಕೆಲತಿಂಗಳ ಹಿಂದೆಯಷ್ಟೇ ಯೇಸು ಒಬ್ಬ ಅಪರಾಧಿಯಂತೆ ಸಾಯಿಸಲ್ಪಡುವದಕ್ಕೆ ಕಾರಣವಾಗಿದ್ದರು, ಆದರೆ ಈಗ ಆತನ ಶಿಷ್ಯರಾದರೋ ಯೇಸು ಸತ್ತವರೊಳಗಿಂದ ಎದ್ದಿದ್ದಾನೆಂದ ಎಲ್ಲರಿಗೂ ಹೇಳುತ್ತಿದ್ದರು!

**3-4** ಆದ್ದರಿಂದ ಯಾಜಕರು ಮತ್ತು ಸದ್ದುಕಾಯರು ಪೇತ್ರ ಯೋಹಾನರನ್ನು ಬಂದಿಸಿದರು, ಆದರೆ ಆಗಾಗಲೇ ಸಾಯಂಕಾಲವಾಗಿದ್ದರಿಂದ ಹಿರೀ ಸಭೆಯ (ಉನ್ನತ ಯೆಹೂದಿ ಸಭೆ) ಮುಂದೆ ತರುವದಕ್ಕೆ ಸಾಕಷ್ಟು ಸಮಯವಿರಲಿಲ್ಲ (ವಚನ 15). ಆದುದರಿಂದ, ಅವರು ಪೇತ್ರ ಯೋಹಾನರನ್ನು ಆ ರಾತ್ರಿಸೆರೆಮನೆಯಲ್ಲಿಟ್ಟರು.

ಆದರೆ ಯೆಹೂದಿ ನಾಯಕರು ಅಪೊಸ್ತಲರ ಬೋಧನೆಯ ಪ್ರಭಾವವನ್ನು ತಡೆಯುವಷ್ಟರಲ್ಲಿ ಬಹಳ ತಡವಾಗಿ ಹೋಗಿತ್ತು. ಅದೇ ದಿನದಲ್ಲಿಯೇ ಕುಂಟನು ಸ್ವಸ್ಥನಾದದ್ದನ್ನು ನೋಡಿ, ಪೇತ್ರನ ಸಂದೇಶವನ್ನು ಕೇಳಿದ ನಂತರ ಅನೇಕರು ಯೇಸುವನ್ನು ನಂಬಿದ್ದರು. ಈಗ ನಂಬಿದ ಗಂಡಸರ[29]ಸಂಖ್ಯೆಯು ಐದು ಸಾವಿರಕ್ಕೆ ಮುಟ್ಟಿತ್ತು. ಕ್ರೈಸ್ತರ ಮೇಲೆ ಸಮಸ್ಯೆ ಹಾಗು ಹಿಂಸೆಗಳು ಬಂದಾಗಲೆಲ್ಲಾ ಸಾಮಾನ್ಯವಾಗಿ ಅವರ ಸಂಖ್ಯೆಯು ತೀವ್ರವಾಗಿ ಬೆಳೆಯಿತು. ಆದುದರಿಂದ, ಕ್ರಿಸ್ತನಿಗಾಗಿ ಹಿಂಸೆತಾಳುವ ಅವಕಾಶವು ನಮಗೆ ದೊರೆತಾಗಲೆಲ್ಲಾ ಸಂತೋಷ ಪಡೋಣ (ಮತ್ತಾಯ 11-12, ಯಾಕೋಬ 1:2, 1 ಪೇತ್ರ 4:12-14 ಮತ್ತು ವ್ಯಾಖ್ಯಾನಗಳು).

**5-6** ಅನ್ನನು ಮಾಜಿ ಮಹಾಯಾಜಕನು, ಅವನ ಅಳಿಯನಾದ ಕಾಯಫನು ಪ್ರಸ್ತತಕಾಲದ ಮಹಾಯಾಜಕನಾಗಿದ್ದನು. ಈ ಇಬ್ಬರು ವ್ಯಕ್ತಿಗಳು ಇನ್ನು ಕೆಲವು ಯೆಹೂದ್ಯ ಹಿರಿಯರು ಹಾಗು ಶಾಸ್ತ್ರೀಗಳೊಂದುಗೆ ಸೇರಿ ಕೊಂಡು ಯೇಸುವನ್ನು ಮರಣಕ್ಕೊಳಪಡಿಸುವ ತಿರ್ಮಾನವನ್ನು ಮಾಡಿದ್ದರು (ಮಾರ್ಕ 15:1, ಯೋಹಾನ 18:13-14, 24). ಯೇಸುವಿನ ಮರಣದ ನಂತರ ಈ ಹೊಸ ಧರ್ಮವು ಶೀಘ್ರವಾಗಿ ಅಳಿದುಹೋಗುವದು ಎಂದು ನೆನಸಿಕೊಂಡಿದ್ದರು. ಅವರು ಎಂತಹ ತಪ್ಪನ್ನು ಮಾಡಿದರು! ಈ ಹೊಸ ಧರ್ಮವು ಹತೋಟಿಯನ್ನು ಮೀರಿ ಹರಡಲಾರಂಭಿಸಿತ್ತು!

**7** ಯೆಹೂದ್ಯ ಅಧಿಕಾರಿಗಳೂ, ಹಿರಿಯರೂ ಮತ್ತು ಶಾಸ್ತ್ರಿಗಳು ಕುಂಟನ ಸ್ವಸ್ಥತೆಯ ವಿಷಯದಲ್ಲಿ ಚಿಂತೆಗೊಂಡಿದ್ದರು. ಯೆರೂಸಲೇಮಿನಲ್ಲಿ ಪ್ರತಿಯೊಬ್ಬರು ಆದರ ವಿಷಯವಾಗಿ ಮಾತಾಡುತ್ತಿದ್ದರು. ಆದುದರಿಂದ ಅವರು ಪೇತ್ರ ಯೋಹಾನರನ್ನು," ನೀವು ಎಂಥಾ ಶಕ್ತಿಯಿಂದ ಅಥವಾ ಎಂಥಾ ಹೆಸರಿನಿಂದ ಇದನ್ನು ಮಾಡಿದಿರಿ?" ಎಂದು ಕೇಳಿದರು.

**8-10** ಆಗ, ಗಲಿಲಾಯದ ಬಡ, ಅವಿಧ್ಯಾವಂತನಾದ ಪೇತ್ರನು ಈ ಎಲ್ಲಾ ಯೆಹೂದ್ಯನಾಯಕರು ಹಾಗು ಯೆಹೂದಿ ಜನಾಂಗದ ಮುಖ್ಯವ್ಯಕ್ತಿಗಳ ಎದುರಿನಲ್ಲಿ ಎದ್ದು ನಿಂತುಕೊಂಡನು. ಆತನು ಹೇಗೆ ಅಂತಹ ಒಂದು ಸಮೂಹವನ್ನುದ್ದೇಶಿಸಿ ಮಾತಾಡಲು ಸಾಧ್ಯವಾಯಿತು ? ಆತನು ಪವಿತ್ರಾತ್ಮ ಭರಿತನಾದನು (ವಚನ 8). ಯೇಸು ಸ್ವತಃ ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆ: ಅವರು ನಿಮ್ಮನ್ನು ಒಪ್ಪಿಸಿ ಕೊಡುವಾಗ ಹೇಗೆ ಮಾತಾಡಬೇಕು ಏನು ಹೇಳಬೇಕು ಎಂದು ಚಿಂತೆಮಾಡಬೇಡಿರಿ, ಅಡತಕ್ಕ ಮಾತು ಆ ಗಳಿಗೆಯಲ್ಲಿ ನಿಮಗೆ ಸೂಚನೆಯಾಗುವದು. ಮಾತಾಡುವದು ನೀವಲ್ಲ, ನಿಮ್ಮ ತಂದೆಯ ಆತ್ಮನೆ ನಿಮ್ಮ ಮುಖಾಂತರವಾಗಿ" ಮಾತಾಡುವನು". (ಮತ್ತಾಯ 10:19-20).

ಪೇತ್ರನು ಅವರ ಪ್ರಶ್ನೆಗೆ ಅತಿ ಧೈರ್ಯದಿಂದ ಉತ್ತರಿಸಿ ಹೇಳದ್ದೇನೆಂದರೆ: ನಿಮ್ಮೆಲ್ಲರಿಗೂ ಇಸ್ರಾಯೇಲ್ ಜನರೆಲ್ಲರಿಗೂ ತಿಳಿಯ ಬೇಕಾದದ್ದೇನೆಂದರೆ – ನಂಜರೇತಿನ ಯೇಸು ಕ್ರಿಸ್ತನ ಹೆಸರಿನಿಂದಲೇ ಈ ಮನುಷ್ಯನು ನಿಮ್ಮೆದುರಿನಲ್ಲಿ ಸ್ವಸ್ಥನಾಗಿ ನಿಂತಿರುತ್ತಾನೆ (ವಚನ 10). ನೀವು ಶಿಲುಬೆಗೆ ಹಾಕಿದ ಯೇಸುವೇ ಈತನು, ಆದರೆ ದೇವರು ಅವನನ್ನು ಮೂರು ದಿನಗಳ ನಂತರ ಸತ್ತವರೊಳಗಿಂದ ಎಬ್ಬಿಸಿದನು. ಈ ಪುನರುತ್ಥಾನಗೊಂಡ ಕ್ರಿಸ್ತನ ಶಕ್ತಿಯಿಂದಲೇ ಈ ಮನುಷ್ಯನು ಸ್ವಸ್ಥನಾಗಿರುತ್ತಾನೆ." (ಅ.ಕೃತ್ಯ 3:16 ಮತ್ತು ವ್ಯಾಖ್ಯಾನ ನೋಡಿರಿ). ಪುನಃ ಪೇತ್ರನು ಕುಂಟನ ಸ್ವಸ್ಥತೆಗಾಗಿ ತನ್ನನ್ನು ಘನಪಡಿಸಿಕೊಳ್ಳದೆ ಎಲ್ಲಾ ಮಹಿಮೆಯನ್ನು ಕ್ರಿಸ್ತನಿಗೆ ಸಲ್ಲಿಸಿದನು.

**11** ಇಲ್ಲಿ ಪೇತ್ರನು ಕೀರ್ತನೆಗಳು 118:22 ರಲ್ಲಿನ ವಿಷಯವನ್ನು ಉಲ್ಲೇಖಿಸುತ್ತಾನೆ. ಮನೆಕಟ್ಟುವವರು (ಯೆಹೂದ್ಯನಾಯಕರು) ಹೀನೈಸಿದ ಕಲ್ಲು (ಕ್ರಿಸ್ತನು) ಮುಖ್ಯವಾದ ಮೂಲೆಗಲ್ಲಾದನು (ಅ. 1 ಪೇತ್ರ 2:4, 6-8 ನೋಡಿರಿ).

**12** ಯೇಸುವಿನ ಹೆಸರಿನಲ್ಲಿ ಮನುಷ್ಯರು ದೇಹಗಳು ಶಾರೀರಿಕವಾಗಿ ಸ್ವಸ್ಥವಾಗುವದು ಮಾತ್ರವಲ್ಲ, ಅದಕ್ಕಿಂತಲೂ ಪ್ರಾಮುಖ್ಯವಾಗಿ, ಅವರ ಆತ್ಮಗಳು ಸಹ ಆತ್ಮೀಕ ವ್ಯಾಧಿಯಿಂದ-ಅಂದರೆ, ಪಾಪದಿಂದ ರಕ್ಷಿಸಲ್ಪಡುವವು . ಒಂದು ವೇಳೆ ಯೆಹೂದ್ಯ ನಾಯಕರು ಹೀಗೆಯೇ ಯೇಸುವನ್ನು ತಿರಸ್ಕರಿಸುತ್ತಾ ಮುಂದುವರೆಯುವದಾದರೆ ಅವರು ಪರಲೋಕದ ಏಕೈಕ ಮಾರ್ಗವನ್ನು ತಿರಸ್ಕರಿಸಿದವರಾಗುವರೆಂದು ಪೇತ್ರನು ಹೇಳುತ್ತಾನೆ." ಕಾರಣ ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ, ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ". ಕೆಲವು ಜನರು ಕೇಳುವದೇನೆಂದರೆ : ಕ್ರೈಸ್ತರು ಕ್ರಿಸ್ತನ ಬಗ್ಗೆ ಸಾರುವದೇಕೆ? ಇತರರು ತಮ್ಮ ತಮ್ಮ ಧರ್ಮಗಳನ್ನು ಅನುಸಿರಿಸುವಂತೆ ಅವರ ಪಾಡಿಗೆ ಅವರನ್ನು ಕ್ರೈಸ್ತರು ಬಿಡುವದಿಲ್ಲ ಏಕೆ? ಈ ವಚನವು ನಮಗೆ ಉತ್ತರವನ್ನು ನೀಡುತ್ತದೆ. ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ಒಬ್ಬ ಸ್ತ್ರೀ ಅಥವಾ ಪು ರುಷನು ರಕ್ಷಿ ಸಲ್ಪಡಬಹುದು (ಯೋಹಾನ 14:6 ಮತ್ತು ವ್ಯಾಖ್ಯಾನ ನೋಡಿರಿ). ಮತ್ತು ಈ ವಾರ್ತೆಯನ್ನು ಇತರರೊಂದಿಗೆ ಹಂಚಿಕೊಳ್ಳಬೇಕೆಂಬದಾಗಿ ಕ್ರೈಸ್ತರು ಆಜ್ಞಾಪಿಸಲ್ಪಟ್ಟಿದ್ದಾರೆ (ಮತ್ತಾಯ 28:19, ರೋಮ 10:13-15, 1 ಪೇತ್ರ 3:15 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**13** ಪೇತ್ರನ ಉತ್ತರಕ್ಕೆ ಯೆಹೂದ್ಯ ನಾಯಕರು ಆಶ್ಚರ್ಯಪಟ್ಟರು ಹಾಗು ಇವರುಯೇಸುವಿನ ಸಂಗಡ ಇದ್ದವರೆಂದು ಗುರುತು ಹಿಡಿದರು. ಜನರು ಯೇಸುವಿನ ಬೋಧನೆಗೆ ಸಹ ಆಶ್ಚರ್ಯಪಟ್ಟಿರುತ್ತಾರೆ (ಮತ್ತಾಯ 7:28-29, ಯೋಹಾನ 7:15 ನೋಡಿರಿ). ನಾವು ಯೇಸುವಿನಲ್ಲಿಯೂ ಆತನ ವಾಕ್ಯಗಳು ನಮ್ಮಲ್ಲಿಯೂ ನೆಲೆಗೊಳ್ಳುವದಾದರೆ ಜನರು ನಮ್ಮ ಬೋಧನೆಗೂ ಸಹ ಆಶ್ಚರ್ಯ ಪಡುವರು, ಅವರು ನಮ್ಮನ್ನು ನೋಡಿ ನಾವು ಸಹ ಯೇಸುವಿನ ಸಂಗಡ ಇದ್ದವರು ಎಂದು ಗುರುತು ಹಿಡಿಯುವರು.

**14** ಪೇತ್ರನು ಹಿರೀಸಭೆಯ ಮುಂದೆ ಅತಿ ಧೈರ್ಯದಿಂದಲೂ, ಅಧಿಕಾರದಿಂದಲೂ ಮಾತಾಡಿದನು. ಆದರೆ ಅದು ಮಾತ್ರವಲ್ಲದೆ, ಸ್ವಸ್ಥ ನಾಗಿದ್ದ ಕುಂಟನು ಸಹ ಅವರ ಮುಂಭಾಗದಲ್ಲಿ ನಿಂತುಕೊಂಡಿದ್ದನು. ಸ್ವಸ್ಥನಾದ ಮನುಷ್ಯನು ಅಲ್ಲಿರುವದು ಪೇತ್ರನ ಮಾತುಗಳು ಸತ್ಯವೆಂಬದಕ್ಕೆ ಆಧಾರವಾಗಿತ್ತು.ಕುಂಟ ಮನುಷ್ಯನು ಯೇಸುವಿನ ಹೆಸರಿನಲ್ಲಿಟ್ಟ ನಂಬಿಕೆಯ ಮೂಲಕ ಸ್ವಸ್ಥನಾಗಿದ್ದಾನೆಂದು ಪೇತ್ರನು ಹೇಳಿದ್ದನು (ಅ.ಕೃತ್ಯ. 3: 16) ಮತ್ತು ಯೆಹೂದ್ಯ ನಾಯಕರು ಆದಕ್ಕೆ ವಿರುಧ ್ಧವಾಗಿ ಏನನ್ನೂ ಹೇಳಲಾಗಲಿಲ್ಲ.

**15-17** ಯೆಹೂದ್ಯ ನಾಯಕರು ಗೊಂದಲಕ್ಕೀಡಾಗಿದ್ದರು. ಅಪೊಸ್ತಲರು ಒಂದು ಮಹಾ ಅದ್ಭುತವನ್ನು ಮಾಡಿದ್ದರಿಂದ ಸಾವಿರಾರು ಜನರು ಅವರನ್ನು ಹಿಂಬಾಲಿಸಲಾರಂಭಿಸಿದ್ದರು. ಎಲ್ಲಾ ಜನರು ದೇವರನ್ನು ಕೊಂಡಾಡುತ್ತಾ ಅಪೊಸ್ತಲರು ಮಾಡಿದ ಅದ್ಭುತಕ್ಕಾಗಿ ಅವರನ್ನು ಪ್ರಶಂಸಿಸುತ್ತಾ ಇದ್ದರು. ಅದು ಮಾತ್ರವಲ್ಲದೆ, ಪೇತ್ರ ಯೋಹಾನರು ಯಾವ ಅಪರಾಧವನ್ನೂ ಮಾಡಿರಲಿಲ್ಲ. ಒಂದು ವೇಳೆ ಯೆಹೂದ್ಯ ನಾಯಕರು ಯಾವದೇ ವಿಧದಲ್ಲಿ ಯಾದರೂ ಅಪೊಸ್ತಲರನ್ನು ಶಿಕ್ಷಿಸಿದ್ದಾದರೆ ಜನರು ಅವರ ನಾಯಕರ ವಿರುದ್ಧ ನಿಲ್ಲುವವರಾಗಿದ್ದರು. ಆದುದರಿಂದ, ನಾಯಕರು ಅಪೊಸ್ತಲರ ವಿರುದ್ಧವಾಗಿ ಯಾವದೇ ಕ್ರಮತೆಗೆದುಕೊಳ್ಳಲು ಅಂಜಿದರು.

ಇನ್ನೊಂದದೆಯಲ್ಲಿ, ಯೆಹೂದ್ಯ ನಾಯಕರು ಅಪೊಸ್ತಲರನ್ನು ಯೇಸುವಿನ ಹೆಸರಿನಲ್ಲಿ ಬೋಧಿಸುವದಕ್ಕೆ ಬಿಡಲು ಇಚ್ಚಿಸಲಿಲ್ಲ. ಒಂದು ವೇಳೆ ಇನ್ನು ಹೆಚ್ಚು ಹೆಚ್ಚಾಗಿ ಜನರು ಯೇಸುವನ್ನು ನಂಬಲು ಪ್ರಾರಂಭಿಸಿದ್ದಾದರೆ ಯೆಹೂದ್ಯನಾಯಕರು ಜನರ ಮೇಲಿನ ತನ್ನ ಸ್ವಂತ ಅಧಿಕಾರವನ್ನು, ಪ್ರಭಾವವನ್ನೂ ಕ್ರಮೇಣವಾಗಿ ಕಳೆದುಕೊಳ್ಳುವರು. ಜನರು ಅವರಿಂದ ವಿಮುಖರಾಗಿ ಈ ಹೊಸ ಧರ್ಮವನ್ನು ಹಿಂಬಾಲಿಸಲಾರಂಬಿಸುವರೆಂಬುದು ಯೆಹೂದ್ಯನಾಯಕರ ಅತ್ಯಂತ ದೊಡ್ಡ ಹೆದರಿಕೆಯಾಗಿತ್ತು. ಕೊನೆಯಲ್ಲಿ, ನಾಯಕರು ಅಪೊಸ್ತಲರನ್ನು ಬೆದರಿಸಿ ಯೇಸುವಿನ ಹೆಸರಿನಲ್ಲಿ ಬೋಧಿಸಬಾರದೆಂದು ಅಪ್ಪಣೆಯನ್ನು ಮಾತ್ರವೇ ನೀಡಿ ಬಿಟ್ಟು ಬಿಡಲು ತೀರ್ಮಾನಿಸಿದರು.

**18-20** ಪೇತ್ರ ಯೋಹಾನರು ಯೆಹೂದ್ಯ ನಾಯಕರ ಅಪ್ಪಣೆಯನ್ನು ಒಪ್ಪಿಕೊಳ್ಳಲಿಲ್ಲ. ಯೇಸು ಅವರಿಗೆ ಅದಕ್ಕೆ ತದ್ವಿರುದ್ಧವಾದ ಅಪ್ಪಣೆಯನ್ನು ಕೊಟ್ಟಿದ್ದನು: "..ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ...ನಾನು ನಿಮಗೆ ಆಜ್ಞಾಪಿಸಿದಕ್ಕೆಲ್ಲಾ ವಿಧೇಯರಾಗುವದಕ್ಕೆ ಅವರಿಗೆ ಉಪದೇಶಮಾಡಿರಿ" (ಮತ್ತಾಯ 28:19-20). ಆದುದರಿಂದ ಪೇತ್ರ ಯೋಹಾನರು ನಾಯಕರಿಗೆ "ನಾವು ನಿಮಗೆ ವಿಧೇಯರಾಗಲಾರೆವು, ನಾವು ಮನುಷ್ಯರಿಗೆ ಬದಲಾಗಿ ದೇವರಿಗೆ ವಿಧೇಯರಾಗಬೇಕು" ಎಂದು ಹೇಳಿದರು (ಅ.ಕೃತ್ಯ 5:29 ನೋಡಿರಿ). ಹೊಸ ಒಡಂಬಡಿಕೆಯ ಇತರ ವಚನಗಳಲ್ಲಿ ನಾವು ನಮ್ಮ ಅಧಿಕಾರಿಗಳಿಗೆ ವಿಧೇಯರಾಗಬೇಕೆಂದು ಆಜ್ಞಾಪಿಸಲ್ಪಟ್ಟಿದ್ದೇವೆ (ರೋಮಾ 13:1-2, 1 ಪೇತ್ರ 2:13-14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಹೇಗಿದ್ದರೂ, ಅಧಿಕಾರದಲ್ಲಿರುವವರು ಸ್ವತಃ ದೇವರು ಆಜ್ಞಾಪಿಸಿದ ಸಂಗತಿಯೊಂದನ್ನು ವಿರೋಧಿಸುವದಾದರೆ ನಾವು ಆ ವಿಷಯದಲ್ಲಿ ಅವರಿಗೆ ವಿಧೇಯರಾಗಬಾರದು. ನಾವು ಯಾವಾಗಲೂ ಮನುಷ್ಯರಿಗಿಂತ ದೇವರಿಗೆ ವಿಧೇಯರಾಗಬೇಕು. ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಕ್ರೈಸ್ತರು ಮುಕ್ತವಾಗಿ ಯೇಸುವಿನ ಕುರಿತು ಮಾತಾಡುವದನ್ನು ನಿಷೇಧಿಸಲಾಗಿರುತ್ತದೆ. ಈ ಕ್ರೈಸ್ತರು ಯಾರಿಗೆ ವಿಧೇಯರಾಗುವರು ದೇವರಿಗೋ, ಅಥವಾ ಮನುಷ್ಯರಿಗೋ? ಅವರು ಪೇತ್ರ ಯೋಹಾನರ ಉದಾಹರಣೆಯನ್ನು ಕುರಿತು ಯೋಚಿಸಲಿ?

**21-22** ಪೇತ್ರ ಯೋಹಾನರು ಯೆಹೂದ್ಯ ನಾಯಕರನ್ನು ದಿಕ್ಕರಿಸಿದ್ದರೂ ಅವರು ಪೇತ್ರ ಯೋಹಾನರನ್ನು ಬೆದರಿಸುವದರ ಹೊರತಾಗಿ ಬೇರೆ ಕ್ರಮವನ್ನು ತೆಗೆದುಕೊಳ್ಳಲು ಧೈರ್ಯಗೊಳ್ಳಲಿಲ್ಲ. ಆದಾದ ಮೇಲೆ ಅವರು ಪೇತ್ರ ಯೋಹಾನರನ್ನು ಬಿಟ್ಟುಬಿಟ್ಟರು. ಅಪೊಸ್ತಲರು ಜನರೊಳಗೆ ಪ್ರಸಿದ್ಧರಾಗಿದ್ದರು ಮತ್ತು ಯೆಹೂದ್ಯ ನಾಯಕರು ಜನರಿಗೆ ಭಯ ಪಟ್ಟರು. ನಾಲ್ವತ್ತು ವರ್ಷಕ್ಕಿಂತ ಹೆಚ್ಚು ಕಾಲದಿಂದ ಕುಂಟನಾಗಿದ್ದ ವ್ಯಕ್ತಿಯನ್ನು ಸ್ವಸ್ಥಮಾಡುವಂತ ಆಶ್ಚರ್ಯಕರ ಕಾರ್ಯವನ್ನು ಮಾಡಿದ್ದ ವ್ಯಕ್ತಿಗಳನ್ನು ಅವರು ವಿರೋಧಿಸಲಿಚ್ಚಿಸಲಿಲ್ಲ. ಹೇಗಿದ್ದರೂ, ಯೆಹೂದ್ಯನಾಯಕರು ಬಹಳವಾಗಿ ಹೆದರಿದ ಸಂಗತಿಯೇನೆಂದರೆ ಯೇಸು ಸತ್ತವರೊಳಗಿಂದ ಎದ್ದು ಬರಲಿಲ್ಲ ಎಂಬುದನ್ನು ಅವರು ನಿರೂಪಿಸಲು ಶಕ್ತರಾಗಿದ್ದರೆ ಈ ಹೊಸಧರ್ಮವು ಶೀಘ್ರವೇ ನಶಿಸಿ ಹೋಗುತ್ತಿತ್ತು. ಆದರೆ, ಯೇಸು ಎದ್ದು ಬರಲಿಲ್ಲ ಎಂಬದನ್ನು ನಿರೂಪಿಸಲು ಅವರು ವಿಫಲರಾಗಿದ್ದರು, ಆತನ ದೇಹವು[30] ಅವರಿಗೆ ಸಿಕ್ಕಲಿಲ್ಲ. ಅವರು ಎಷ್ಟೇ ಶ್ರಮವಹಿಸಿ ಹುಡುಕಿದರೂ ಅದು ಅವರಿಗೆ ದೊರೆಯಲಿಲ್ಲ ಮತ್ತು ಸತ್ತವನಾಗಿರಬೇಕಿದ್ದ ಈ ಯೇಸು ಈಗ ಕುಂಟನನ್ನು ಸ್ವಸ್ಥಪಡಿಸಿದ್ದನು.[31] ಈಗ ನಡೆದಾಡುತ್ತಾ ಜಿಗಿಯುತ್ತಾ ಇದ್ದ ಈಕುಂಟ ಮನುಷ್ಯನೇ ಯೇಸು ನಿಜವಾಗಿಯೂ ಸಜೀವನಾಗಿ ತನ್ನ ಅಪೊಸ್ತಲರ ಮೂಲಕ ಕಾರ್ಯ ಮಾಡುತ್ತಿದ್ದಾನೆಂಬದಕ್ಕೆ ಸ್ಪಷ್ಟ ಸಾಕ್ಷಿಯಾಗಿದ್ದನು. ಈ ವಿಚಾರವು ಬೇರೆ ಇನ್ನಾವದಕ್ಕಿಂತಲೂ ಹೆಚ್ಚಾಗಿ ಯೆಹೂದ್ಯನಾಯಕರನ್ನು ಅಸಮಾಧಾನಗೊಳಿಸಿತ್ತು.

## ವಿಶ್ವಾಸಿಗಳ ಪ್ರಾರ್ಥನೆ (4:23-31)

**23-24** ವಿಶ್ವಾಸಿಗಳು ಪೇತ್ರ ಯೋಹಾನರ ವರದಿಯನ್ನು ಕೇಳಿದ ಕೂಡಲೇ ಒಟ್ಟಾಗಿ ಪ್ರಾರ್ಥನೆಯಲ್ಲಿ ತಮ್ಮ ಸ್ವರಗಳನ್ನು ಎತ್ತಿದರು.

**25-26** ಆ ಮೇಲೆ ವಿಶ್ವಾಸಿಗಳು ಕೀರ್ತನೆ 2:1-2ರಲ್ಲಿ ಮಾತುಗಳನ್ನು ಪು ನರುಚ್ಚರಿಸಿದರು. ಅನ್ಯ ಜನಗಳು ಜನಾಂಗಗಳವರು ಭೂಪತಿಗಳೂ, ಅಧಿಕಾರಿಗಳೂ, ಕರ್ತನಿಗೂ ಆತನು ಅಭಿಷೇಕಿಸಿದವನಿಗೂ [32] (ಕ್ರಿಸ್ತನೂ) ವಿರೋಧವಾಗಿ ಏಕವಾಗಿ ಕೂಡಿಕೊಂಡರು ಎಂಬದಾಗಿ ದಾವೀದನು ಪ್ರವಾದಿಸಿದ್ದನು. ಈಗ ದಾವೀದನ ಈ ಪ್ರವಾದನೆಯು ನಿಜವಾಗಿಯೂ ನೆರವೇರಿತ್ತು.

**27** ಈ ವಚನದಲ್ಲಿ ವಿಶ್ವಾಸಿಗಳು ತಾವು ಈಗಲೇ ಉಲ್ಲೇಖಿಸಿದ ಕೀರ್ತನೆಯ ಅರ್ಥವನ್ನು ತಮ್ಮ ಪ್ರಾರ್ಥನೆಯಲ್ಲಿಯೇ ಹೇಳುತ್ತಾರೆ. ರೇಗಿದ ಅನ್ಯಜನಗಳು (ವಚನ 25) ರೋಮಾಯರಾಗಿದ್ದಾರೆ. ವ್ಯರ್ಥಕಾರ್ಯಗಳನ್ನು ಯೋಚಿಸಿದ ಜನಾಂಗಗಳವರು (ವಚನ 26) ಇಸ್ರಾಯೇಲ್ ಜನರಾಗಿದ್ದಾರೆ. ಹೆರೋದನು ಸ್ಥಳೀಯ ಅರಸರಲ್ಲಿ ಒಬ್ಬನಾಗಿದ್ದು, ರೋಮಾಯ ಸಾಮ್ರಾಜ್ಯದಲ್ಲಿನ[33] ಚಿಕ್ಕ ಪ್ರಾಂತ್ಯವೊಂದನ್ನು ಆಳುವದಕ್ಕೆ ರೋಮಾಯರಿಂದ ನೇಮಿಸಲ್ಪಟ್ಟವನಾಗಿದ್ದನು. ಪೊಂತ್ಯ ಪಿಲಾತನು ಯೆರೂಸಲೇಮಿನಲ್ಲಿದ್ದ ರೋಮಾಯ ದೇಶಾಧಿಪತಿಯಾಗಿದ್ದು, ಇವನು ಕೀರ್ತನೆಯಲ್ಲಿ ಸೂಚಿಸಿರುವ ಅಧಿಕಾರಿಗಳಲ್ಲಿ ಒಬ್ಬನು (ವಚನ 26).

ಇವರು ಕರ್ತನ ಅಭೀಷಿಕ್ತನ ವಿರುದ್ಧವಾಗಿ ನಿಂತುಕೊಂಡ ಅಧಿಕಾರಿಗಳೂ, ಅರಸರುಗಳೂ ಆಗಿದ್ದಾರೆ. ವಿಶ್ವಾಸಿಗಳು ಇಲ್ಲಿ ಯೇಸುವನ್ನು "ದೇವರ ಪವಿತ್ರಸೇವಕ" ಎಂದು ಕರೆಯುವದನ್ನು ಗಮನಿಸಿರಿ (ಅ.ಕೃತ್ಯ 3:26). ಇಲ್ಲಿ "ಸೇವಕನು" ಎಂಬದಕ್ಕೆ ಉಪಯೋಗಿಸಿರುವ ಗ್ರೀಕ ಪದಕ್ಕೆ "ಮಗ" ಎಂಬ ಅರ್ಥವೂ ಸಹ ಇರುತ್ತದೆ. ಆತನು ಒಬ್ಬ ವಿಧೇಯ ಸೇವಕನಾಗಿ ಮರಣವನ್ನು ಅನುಭವಿಸಿದನು (ಯೆಶಾಯ 42:1, 52:13-14, 53:11-12), ಮತ್ತು ಆತನು ದೇವರ ಏಕೈಕ ಮಗನಾಗಿದ್ದು (ಕೀರ್ತನೆಗಳು 2:7, ಮಾರ್ಕ 1:11), ಲೋಕದ ರಕ್ಷಕನಾದ ಮೆಸ್ಸೀಯನಾಗಿರಲು (ಕ್ರಿಸ್ತನು) ನೇಮಕಗೊಂಡವನು ಹಾಗು ಅಭಿಷೇಕಿಸಲ್ಪಟ್ಟವನೂ ಆಗಿದ್ದನು.

**28** ಕ್ರಿಸ್ತನ ವೈರಿಗಳು ತಾವು ಅವನನ್ನು ತಮ್ಮ ಸ್ವಂತ ತಿರ್ಮಾನ ಹಾಗು ಅಧಿಕಾರದಿಂದ ಸಾಯಿಸಿದ್ದರೆಂದು ಅಂದು ಕೊಂಡರು, ಆದರೆ ವಾಸ್ತವದಲ್ಲಿ, ಅವರು ದೇವರ ಯೋಜನೆ ಹಾಗು ಉದ್ದೇಶವನ್ನು ನೆರವೇರಿಸಿದ್ದರಷ್ಟೇ. ದೇವರು ಬಹು ಕಾಲದ ಹಿಂದೆಯೇ ತನ್ನ ಮಗನಾದ ಕ್ರಿಸ್ತನು ಬಾಧೆಪಟ್ಟು ಸಾಯಬೇಕೆಂದು ನಿರ್ಧರಿಸಿದ್ದನು (ಅ.ಕೃತ್ಯ 2:23, 3:17-18). ಕ್ರಿಸ್ತನು ಮಾನವರ ರಕ್ಷಕನಾಗಿ ನೇಮಿಸಲ್ಪಟ್ಟಿದ್ದನು, ಮತ್ತು ಮಾನವರನ್ನು ಅವರ ಪಾಪಗಳಿಂದ ರಕ್ಷಿಸಬೇಕಾದರೆ ಆತನು ಅವರ ಪಾಪಗಳ ದಂಡನೆಯಾದ ಮರಣವನ್ನು ಹೊಂದುವದು ಅವಶ್ಯಕವಾಗಿತ್ತು (ಮಾರ್ಕ 10:45 ಮತ್ತು ವ್ಯಾಖ್ಯಾನ ನೋಡಿರಿ). ದೇವರು ಹೇಗೆ ಮಾನವರ ದುಷ್ಟ ಕಾರ್ಯಗಳನ್ನು ಒಂದು ಮಹಾ ಒಳ್ಳೆಯ ಸಂಗತಿಯು ಉಂಟಾಗುವಂತೆ ಉಪಯೋಗಿಸಲು ಶಕ್ತನಾಗಿದ್ದಾನೆಂಬದನ್ನು ಗಮನಿಸಿರಿ. ಮಾನವರು ದೇವರನ್ನು ವಿರೋಧಿಸುವರು, ಆದರೆ ಆತನು ಒಳ್ಳೆಯದರಿಂದ ಅವರ ಕೆಟ್ಟದ್ದನ್ನು ಜಯಿಸುತ್ತಾನೆ (ರೋಮ 12:21). ದುಷ್ಟ ಜನರು ನಿರಪರಾಧಿ ಯೇಸುವನ್ನು ಹತ್ಯೆಗೈದರು, ಆದರೆ ಈ ಹತ್ಯೆಯ ಮೂಲಕವೇ ದೇವರು ಕ್ರಿಸ್ತನನ್ನು ಪಾಪಗಳ ಕ್ಷಮಾಪಣೆಯ ಯಜ್ಞವಾಗಿ ಮಾಡಿದನು – ಅಂದರೆ, ಆತನು ಕ್ರಿಸ್ತನನ್ನು ನಮ್ಮ ರಕ್ಷಕನನ್ನಾಗಿ ಮಾಡಿದನು.

**29-30** ಬಳಿಕ ವಿಶ್ವಾಸಿಗಳ ಧೈರ್ಯಕ್ಕಾಗಿ ಬೇಡಿಕೊಂಡರು. ಯೆಹೂದ್ಯ ನಾಯಕರ ಬೆದರಿಸುವಿಕೆಗಳ ಹೊರತಾಗಿಯೂ ಅಪೊಸ್ತಲರು ಅತಿ ಧೈರ್ಯದಿಂದ ದೇವರ ವಾಕ್ಯ ಸಾರುವದನ್ನು ಮುಂದುವರೆಸುವಂತಾಗಬೇಕೆಂದು ಅವರು ಪ್ರಾರ್ಥಿಸಿದರು. ಅಲ್ಲದೆ ಅಪೊಸ್ತಲರ ಮೂಲಕವಾಗಿ ರೋಗಪರಿಹಾರವೂ, ಸೂಚಕಕಾರ್ಯಗಳೂ ಅದ್ಭುತಕಾರ್ಯಗಳೂ ಉಂಟಾಗುವಂತೆ ದೇವರು ತನ್ನ ಕಾರ್ಯವನ್ನು ಎಡೆಬಿಡದೆ ಮಾಡಬೇಕೆಂದು ಸಹ ಅವರು ಪ್ರಾರ್ಥಿಸಿದರು.

**31** ಅವರು ಪ್ರಾರ್ಥಿಸುವದನ್ನು ಮುಗಿಸಿದ ಬಳಿಕ ತಿರಿಗಿ ಪವಿತ್ರಾತ್ಮನು ಬಲವಾಗಿ ಅವರ ಮೇಲೆ ಇಳಿದು ಬಂದನು. ಅವರು ಕೂಡಿ ಬಂದಿದ್ದ ಕೋಣೆಯಲ್ಲಿ ಭೂಕಂಪವು ಂಟಾಯಿತು, ಮತ್ತು ಅವರೆಲ್ಲರು ಪವಿತ್ರಾತ್ಮ ಭರಿತರಾದರು. ಇದರ ಮೂಲಕವಾಗಿ, ವಿಶ್ವಾಸಿಗಳು ತಮ್ಮ ಕ್ರೈಸ್ತೀಯ ಜೀವಿತಗಳ ಪ್ರಾರಂಭದಲ್ಲಿ ಒಂದು ಸಾರಿ ಮಾತ್ರವೇ ತುಂಬಸಲ್ಪಡುವದಿಲ್ಲ, ಅವರು ಅನೇಕ ಸಾರಿ ಆತ್ಮನಿಂದ ತುಂಬಿಸಲ್ಪಡಬಹುದೆಂಬದನ್ನು ನಾವು ಅರ್ಥ ಮಾಡಿಕೊಳ್ಳಬಹುದು (ವಚನ 8). ವಾಸ್ತವದಲ್ಲಿ, ನಾವು ಎಡೆಬಿಡದೆ ಪವಿತ್ರಾತ್ಮನಿಂದ ಪುನಃ ಪುನಃ ತುಂಬಿಸಲ್ಪಡುವವರಾಗಿರುವ ಅವಶ್ಯಕತೆಯಿರುತ್ತದೆ (ಎಫೆಸ 5:18 ಮತ್ತು ವ್ಯಾಖ್ಯಾನ ನೋಡಿರಿ). ಯಾವಾಗ ನಾವು ಪವಿತ್ರಾತ್ಮನಿಂದ ತುಂಬಿಸಲ್ಪಡುತ್ತೇವೋ ಆಗ ನಾವು ದೇವರ ವಾಕ್ಯವನ್ನು ಧೈರ್ಯದಿಂದ ಮಾತಾಡುವೆವು. ವಿಶ್ವಾಸಿಗಳು ತಮ್ಮ ಆಸ್ತಿಗಳನ್ನು ಹಂಚಿಕೊಳ್ಳುವದು (4:32-37)

**32-35** ನಾವು ಪುನಃ ಈ ಆದಿ ಸಭೆಯನ್ನು ದೃಷ್ಟಿಸೋಣ. ವಿಶ್ವಾಸಿಗಳೆಲ್ಲರ ಹೃದಯವೂ, ಪ್ರಾಣವೂ ಒಂದೇ ಆಗಿತ್ತು. ಅವರು ಎಲ್ಲವನ್ನೂ ಹಂಚಿಕೊಳ್ಳುವವರಾಗಿದ್ದರು (ವಚನ 32), ಅಂದರೆ, ಅವರ ಸ್ವತ್ತುಗಳು ಪ್ರತಿಯೊಬ್ಬರಿಗೂ ಸಾಮಾನ್ಯವಾಗಿ ಸೇರಿದ್ದೇನೋ ಎಂಬಂತೆ ಇತರರು ತಮ್ಮ ಸ್ವತ್ತುಗಳನ್ನು ಉಪಯೋಗಿಸಲು ಅನುಮತಿಸುತ್ತಿದ್ದರು (ಅ.ಕೃತ್ಯ 2:44-45 ಮತ್ತು ವ್ಯಾಖ್ಯಾನ ನೋಡಿರಿ). ಅಪೊಸ್ತಲರು ಬಹು ಬಲವಾಗಿ ಸಾಕ್ಷಿ ಹೇಳುತ್ತಿದ್ದರು. ಬಹಳ ದಯೆಯು ಅವರೆಲ್ಲರ ಮೇಲೆ ಇತ್ತು (ವಚನ 33). ಅವರಲ್ಲಿ ಕೊರತೆ ಪಡುವವನು ಒಬ್ಬನೂ ಇರಲಿಲ್ಲ (ವಚನ 34). ಯಾಕೆಂದರೆ ಪ್ರತಿಯೊಬ್ಬನ ಸ್ವತ್ತುಗಳನ್ನು ಅವನವನ ಅವಶ್ಯದಂತೆ ಹಂಚಿಕೊಡುತ್ತಿದ್ದರು (ವಚನ 35).

ಈ ಸಂಗತಿಗಳು ಇಂದು ನಮಗೆ ಮಾದರಿಯಾಗಿ ಬರೆಯಲ್ಪಟ್ಟಿವೆ, ಹೀಗೆ ನಮ್ಮ ಸಭೆಗಳು ಸಹ ಯೆರೂಸಲೇಮಿನಲ್ಲಿನ ಈ ಆದಿಸಭೆಯಂತೆ ಇರಬೇಕೆಂಬುದು ಇದರ ಉದ್ದೇಶವಾಗಿದೆ. ಒಂದು ವೇಳೆ ಅಂದಿನ ನಮ್ಮ ಸಭೆ ಆ ಆದಿಸಭೆಯಂತಿಲ್ಲವಾದರೆ, ಅದು ಶೀಘ್ರವೇ ಆ ರೀತಿಯಾಗಿ ಮಾರ್ಪಡುವಂತೆ ನಾವು ತುರ್ತಾಗಿ ಪ್ರಾರ್ಥಿಸಬೇಕಾಗಿರುತ್ತದೆ (ಅ.ಕೃತ್ಯ 2:42-47).

**36-37** ಲೂಕನು ಇಲ್ಲಿ ಹೊಲವೊಂದನ್ನು ಮಾರಿ ಬಂದ ಹಣವನ್ನು ಸಭೆಗೆ ನೀಡಿದ ಬಾರ್ನಬನ ಉದಾಹರಣೆಯನ್ನು ನೀಡುತ್ತಾನೆ. ಈ ಬಾರ್ನಬನೇ ಅನಂತರದಲ್ಲಿ ಒಬ್ಬ ಪ್ರಸಿದ್ಧ ಬೋಧಕನೂ, ಅಪೊಸ್ತಲನಾದ ಪೌಲನ ಸಹ ಪಾಲಿಯೂ ಆದನು (ಅ.ಕೃತ್ಯ 9:26-27, 11:25-26, 13:2-3 ನೋಡಿರಿ).

---

# ಅಧ್ಯಾಯ - 5

## ಅನನೀಯ ಮತ್ತು ಸಪ್ಫೈರಳು (5:1-11)

**1-2** ಅನನೀಯ ಮತ್ತು ಸಪ್ಫೈರಳು ಮಾಡಿದ ಪಾಪವೇನಾಗಿತ್ತು? ಅವರು ತಾವು ಮಾರಿದ ಹೊಲದಿಂದ ಬಂದ ಹಣದಲ್ಲಿ ಸ್ವಲ್ಪವನ್ನು ಮಾತ್ರವೇ ನೀಡಿ ಬಂದ ಹಣವೆಲ್ಲಾ ಅಷ್ಟೇ ಎಂದು ಹೇಳಿದರು. ಅವರು ಸುಳ್ಳು ಹೇಳಿದ್ದು ಪಾಪವಾಗಿತ್ತು. ಅವರು ತಾವು ಇಚ್ಛಿಸಿದಷ್ಟು ಹಣವನ್ನು ಇಟ್ಟು ಕೊಳ್ಳುವ ಹಕ್ಕನ್ನು ಹೊಂದಿದ್ದರು; ಆದರಲ್ಲಿ ಯಾವ ತಪ್ಪಿರಲಿಲ್ಲ. ಅವರು ಆ ಹಣದಿಂದ ಸ್ವಲ್ಪನ್ನಾಗಲಿ ನೀಡಬೇಕೆಂಬ ನಿರ್ಬಂಧವಿರಲಿಲ್ಲ. ಅವರು ಅದರ(ಶ್ರೀ) ವಿಷಯದಲ್ಲಿ ಸುಳ್ಳು ಹೇಳಿದ್ದೇ ಅವರ ತಪ್ಪಾಗಿತ್ತು. ಸುಳ್ಳುಗಾರನಾದ ಸೈತಾನನು ಅವರ ಹೃದಯಗಳನ್ನು ತುಂಬಿದ್ದನು (ವಚನ 3)

**3-4** ಅನನೀಯನು ಸುಳ್ಳು ಹೇಳಿದ್ದಾನೆಂಬದನ್ನು ಪೇತ್ರನು ಹೇಗೆ ತಿಳಿದುಕೊಂಡಿದ್ದನು? ಆತನು ಪವಿತ್ರಾತ್ಮನ ಮುಖಾಂತರವಾಗಿ ತಿಳಿದುಕೊಂಡಿದ್ದನು. ಪವಿತ್ರಾತ್ಮನು ಪೇತ್ರನಿಗೆ ಜ್ಞಾನವಾಕ್ಯವನ್ನು ನೀಡಿದ್ದನು (1 ಕೊರಿಂಥ 12:8). ಅನನೀಯ ಹಣದಲ್ಲಿ ಸ್ವಲ್ಪವನ್ನಾಗಲಿ ಸಹ ಪೇತ್ರನಿಗೆ ಕೊಡಬೇಕಾಗಿರಲಿಲ್ಲ; ಮೊದಲು ಆತನು ತನ್ನ ಹೊಲವನ್ನು ಮಾರುವ ಅವಶ್ಯಕತೆಯೇ ಇರಲಿಲ್ಲ. ಹಾಗಾದರೆ ಅನನೀಯನು ತಾನು ತೆಗೆದಿಟ್ಟು ಕೊಂಡಿದ್ದ ಹಣದ ಕುರಿತಾಗಿ ಏಕೆ ಸುಳ್ಳು ಹೇಳಿದನು? ಯಾಕೆಂದರೆ ಆತನು ಪೇತ್ರನಿಗೂ ಮತ್ತು ಇತರರಿಗೂ ತಾನು ಬಹಳ ದಾರಾಳಿಯೂ, ಭಕ್ತಿವಂತನೂ ಆಗಿದ್ದೇನೆಂಬದನ್ನೂ ತೋರಿಸಲಿಚ್ಛಿಸಿದ್ದನು. ಆತನು ತಾನು ಕ್ರಿಸ್ತನಿಗಾಗಿ ಸಮಸ್ತವನ್ನೂ ತ್ಯಾಗ ಮಾಡಲು ಸಿದ್ಧನಾಗಿರುವ ಒಬ್ಬ ಅತಿ ಒಳ್ಳೆ ಕ್ರೈಸ್ತನಾಗಿ ಕಾಣಿಸಿಕೊಳ್ಳಲು ಬಯಸಿದ್ದನು. ಆದರೆ ಆತನು ಮನುಷ್ಯರನ್ನು ಮಾತ್ರವೇ ಅಲ್ಲದೆ ದೇವರ ಆತ್ಮನನ್ನೇ ವಂಚಿಸಲು ಪ್ರಯತ್ನಿಸಿದ್ದನು.

ನಮ್ಮೊಬ್ಬೊಬ್ಬರನ್ನು ಪರೀಕ್ಷಿಸಿಕೊಳ್ಳೋಣ. ನಾವು ನಿಜವಾಗಿಯೂ ಇರುವದಕ್ಕಿಂತಲೂ ಹೆಚ್ಚಾಗಿ ಉತ್ತಮರಾಗಿಯೂ ಅಥವಾ ಹೆಚ್ಚು ಯೋಗ್ಯರಾಗಿಯೂ ಕಾಣಿಸಿಕೊಳ್ಳುವದಕ್ಕೆ ಆಗಾಗ ಪ್ರಯತ್ನ ಮಾಡಿದ್ದೇವೋ? ನಾವು ಮಾಡದೆ ಇರುವ ಒಳ್ಳೇ ಕಾರ್ಯವೊಂದಕ್ಕಾಗಿ ಪ್ರಶಂಸೆಯನ್ನು ಪಡೆದುಕೊಳ್ಳಲು ಎಂದಾದರೂ ಪ್ರಯತ್ನಿಸಿದ್ದೇವೋ? ಅಥವಾ ನಾವು ಮಾಡಿದ ಕೆಟ್ಟ ಕಾರ್ಯದ ಆರೋಪವನ್ನು ತಪ್ಪಿಸಿಕೊಳ್ಳಲು ಎಂದಾದರೂ ಪ್ರಯತ್ನಿಸಿದ್ದೇವೋ? ಒಂದು ವೇಳೆ ಉತ್ತರವು ಈ ಯಾವದೇ ಪ್ರಶ್ನೆಗಳಿಗೆ ಹೌದೆಂದಾಗಿರುವದಾದರೆ ನಾವು ಅನನೀಯನ ಹಾಗೆ ನಡೆದುಕೊಂಡಿದ್ದೇವೆಂದಾಗುತ್ತದೆ. ನಾವು ಪವಿತ್ರಾತ್ಮನನ್ನು ವಂಚಿಸಲು ಪ್ರಯತ್ನಿಸಿದ್ದೇವೆ.

**5-6** ಅನನೀಯನ ಅಪರಾಧವು ಬಯಲುಗೊಂಡಿತು. ಅವನು ಭಯದಿಂದ ತುಂಬಿದ್ದನು. ಬಹುಶ: ಭಯದ ಕಾರಣದಿಂದಾಗಿ ಅವನ ಹೃದಯ ಬಡಿತವು ನಿಂತು ಹೋಯಿತು. ಏನೇ ಸಂಭವಿಸಿದ್ದರೂ, ಆತನನ್ನು ಪೇತ್ರನು ಕೊಲ್ಲಲಿಲ್ಲ.

ದೇವರ ನ್ಯಾಯತೀರ್ಪು ಅವನ ಮೇಲೆ ಬಂದಿತ್ತು. ಅನನೀಯನು ಪವಿತ್ರಾತ್ಮನಿಗೆ ಸುಳ್ಳು ನುಡಿದಿದ್ದನು; ಆದುದರಿಂದ, ಪವಿತ್ರಾತ್ಮನು ಆತನನ್ನು ದಂಡಿಸಿದನು.

**7-11** ಸಪ್ಫೈರಳು ಸಹ ಪೇತ್ರನಿಗೆ ಸುಳ್ಳು ಹೇಳಿದಳು. ಪೇತ್ರನು ಆಕೆಗೆ ಸತ್ಯವನ್ನು ಹೇಳುವ ಅವಕಾಶವೊಂದನ್ನು ಕೊಟ್ಟನು. ಅವಳು ಮತ್ತು ಆಕೆಯ ಗಂಡನು ಕರ್ತನ ಆತ್ಮನನ್ನು ಪರೀಕ್ಷಿಸುವದಕ್ಕೆ ಒಡಂಬಟ್ಟಿದ್ದರು (ವಚನ 9). ಅಂದರೆ, ಅವರು ಗೊತ್ತಿದ್ದೂ ಸಹ ದೇವರು ನೋಡುವದಿಲ್ಲ ಅಥವಾ ಲೆಕ್ಕಿಸುವದಿಲ್ಲ ಎಂಬ ಯೋಚನೆಯಲ್ಲಿ ಪಾಪ ಮಾಡಿದರು. ಅವರು ಎಷ್ಟು ತಪ್ಪಾಗಿ ಯೋಚಿಸಿದರು! ಸಪ್ಫೈರಳು ಸಹ ತನ್ನ ಗಂಡನ ಹಾಗೆಯೇ ಸಾಯುವಳೆಂಬದನ್ನು ಪೇತ್ರನು ಪವಿತ್ರಾತ್ಮನ ಮುಖಾಂತರವಾಗಿ ತಿಳಿದವನಾಗಿದ್ದನು. ಆತನು ಆಕೆಗೆ – ನಿನ್ನ ಗಂಡನನ್ನು ಹೂಣಿಟ್ಟವರು ಇಲ್ಲಿದ್ದಾರೆ," ನಿನ್ನನ್ನೂ ಹೊತ್ತು ಕೊಂಡು ಹೋಗುವರು" ಎಂದು ಹೇಳಿದನು.. ಮತ್ತು ಕೂಡಲೆ ಆಕೆಯು ಪೇತ್ರನ ಪಾದಗಳ ಮುಂದೆ ಬಿದ್ದು ಪ್ರಾಣಬಿಟ್ಟಳು. ಅನನೀಯ ಮತ್ತು ಸಪ್ಫೈರಳರು ನಿಜ ವಿಶ್ವಾಸಿಗಳಾಗಿದ್ದರೋ? ದೇವರಿಗೆ ಮಾತ್ರವೇ ಗೊತ್ತು. ಬಹುಶಃ ಅವರ ಆತ್ಮಗಳು ಕರ್ತನ ದಿನಂದು ರಕ್ಷಿಸಲ್ಪಡಬೇಕೆಂದು ದೇವರು ಪಾಪಾಧೀನ ಸ್ವಭಾವವನ್ನು ನಾಶಮಾಡಿರಬೇಕು (1 ಕೊರಿಂಥ 5:5 ಮತ್ತು ವ್ಯಾಖ್ಯಾನ ನೋಡಿರಿ). ನಮಗೆ ಗೊತ್ತಿಲ್ಲ. ಆದರೆ ಒಂದು ಮಾತ್ರ ನಮಗೆ ಗೊತ್ತೇನೆಂದರೆ : ದೇವರ ವಿರುದ್ಧವಾಗಿ ಇಚ್ಛಾಪೂರ್ವಕವಾಗಿ ಪಾಪ ಮಾಡುವದು ಒಂದು ಅತಿ ಅಪಾಯಕಾರಿ ಸಂಗತಿಯಾಗಿರುತ್ತದೆ (ಇಬ್ರಿಯ 10:26ಮತ್ತು ವ್ಯಾಖ್ಯಾನ ನೋಡಿರಿ). ಈ ಕಾರಣದಿಂದಲೇ ಸರ್ವಸಭೆಗೂ ಭಯ ಹಿಡಿಯಿತು (ವಚನ 11). ಇತರ ವಿಶ್ವಾಸಿಗಳು ತಮ್ಮೊಳಗೆ ಮಾತಾಡಿಕೊಂಡಿದ್ದೇನೆಂದರೆ : "ನಾನು ದೇವರನ್ನು ಈ ರೀತಿಯಾಗಿ ವಂಚಿಸಲು ಪ್ರಯತ್ನಿಸಿದ್ದೇನೋ? ದೇವರು ನನ್ನನ್ನೂ ಸಹ ಈ ರೀತಿಯಲ್ಲಿ ದಂಡಿಸುವನೋ?" ಒಂದು ವೇಳೆ ಯಾವನಿಗಾದರೂ ಈ ವಿಷಯದಲ್ಲ ಸಂಶಯ ಹೊಂದಿರುವದಾದರೆ ಆತನು ಅಪೊಸ್ತಲನಾದ ಪೌಲನ ಮಾತುಗಳನ್ನು ಜ್ಞಾಪಿಸಿಕೊಳ್ಳಲಿ: ತನ್ನವರು ಯಾರೆಂಬದನ್ನು ಕರ್ತನು ತಿಳಿದಿದ್ದಾನೆ...ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರು ದುರ್ಮಾರ್ಗತನವನ್ನು ಬಿಟ್ಟು ಬಿಡಬೇಕು. (2 ತಿಮೊಥೆ 2:19). ಅಪೊಸ್ತಲರು ಅನೇಕರನ್ನು ಸ್ವಸ್ಥಪಡಿಸಿದ್ದು (5:12-16)

**12-14** ವಿಶ್ವಾಸಿಗಳೆಲ್ಲರೂ ಒಗ್ಗಟ್ಟಾಗಿ ಸೊಲಮೋನನ ಮಂಟಪದಲ್ಲಿ ಸಭೆ ಸೇರುತ್ತಲಿದ್ದರು (ಅ.ಕೃತ್ಯ 3:11) – ಅಂದರೆ, ನಿಜವಿಶ್ವಾಸಿಗಳಲ್ಲದ ಯಾರೊಬ್ಬರೂ ಅವರ ಜೊತೆಯಲ್ಲಿ ಸೇರಲು ಧೈರ್ಯ ಮಾಡಲಿಲ್ಲ – ಯಾಕೆಂದರೆ ಪ್ರತಿಯೊಬ್ಬರು ಅನನೀಯ ಮತ್ತು ಸಪ್ಫೈರಳಿಗೆ ಜರುಗಿದ್ದನ್ನು ಕೇಳಿದ್ದರು. ಆದುದರಿಂದ, ನಿಜವಾದ ನಂಬಿಕೆಯುಳ್ಳವರು ಮಾತ್ರವೇ ಗಂಡಸರೂ, ಹೆಂಗಸರೂ ಕರ್ತನಲ್ಲಿ ನಂಬಿಕೆಯಿಡುವವರಾಗಿ ಅವರ ಮಂಡಲಿಯಲ್ಲಿ ಸೇರಿಕೊಳ್ಳುತ್ತಿದ್ದರು.

**15-16** ಪವಿತ್ರಾತ್ಮನು ಅಪೊಸ್ತಲರ ಮುಖಾಂತರವಾಗಿ ಸೂಚಕ ಕಾರ್ಯಗಳನ್ನೂ ಅದ್ಭುತಗಳನ್ನೂ ಎಡೆಬಿಡದೆ ಮಾಡುತ್ತಿದ್ದನು. ಈ ವಚನಗಳಿಂದ ಪೇತ್ರನ ನೆರಳು ಅವರ ಮೇಲೆ ಬಿದ್ದದರಿಂದ ಮಾತ್ರವೇ ಅನೇಕರು ಗುಣಹೊಂದಿದರೆಂಬದನ್ನು ನಾವು ತಿಳಿದು ಕೊಳ್ಳಬಹುದು (ಅ.ಕೃತ್ಯ 19:11-12 ನೋಡಿರಿ). ಯೇಸು ಭೂಲೋಕದಲ್ಲಿದ್ದಾಗ ಮಾಡಿದ ಸಂಗಚತಿಗಳನ್ನೇ ಅಪೊಸ್ತಲರು ಮಾಡುತ್ತಿದ್ದರು (ಮಾರ್ಕ 1:32-34, 5:27-29).

## ಅಪೊಸ್ತಲರು ಹಿಂಸೆಗೊಳಗಾದದ್ದು (5:17-32)

**17-18** ಪೇತ್ರ ಯೋಹಾನರು ನಾಲ್ವತ್ತು ವರ್ಷಕ್ಕಿಂತಲೂ ಹೆಚ್ಚು ಕಾಲದಿಂದ ಕುಂಟನಾಗಿದ್ದವನನ್ನು ಸ್ವಸ್ಥಪಡಿಸಿದಾಗ (ಅ.ಕೃತ್ಯ 3:1-7). ಅನೇಕ ಜನರು ಅವೇಳೆಯಲ್ಲಿ ಈ ಹೊಸ ಕ್ರೈಸ್ತ ಧರ್ಮವನ್ನು ಹಿಂಬಾಲಿಸಲು ಪ್ರಾರಂಭಿಸಿದರು. ಆದರೆ ಈಗ ಅಪೊಸ್ತಲರ ಪ್ರತಿದಿನವು ಅನೇಕ ರೋಗಿಗಳನ್ನು ಸ್ವಸ್ಥಮಾಡುತ್ತಿದ್ದರು, ಮತ್ತು ಮುಂಚೆಗಿಂತಲೂ, ಹೆಚ್ಚು ಜನರು ಅಪೊಸ್ತಲರನ್ನು ಹಿಂಬಾಲಿಸಲಾರಂಬಿಸಿದ್ದರು. ಆದುದರಿಂದ ಮಹಾ ಯಾಜಕನೂ ಹಾಗು ಯೆಹೂದ್ಯನಾಯಕರು ಅಸೂಯೆಗೊಂಡವರಾಗಿ (ವಚನ 17), ಅಪೊಸ್ತಲರನ್ನು ಸೆರೆಮನೆಯಲ್ಲಿಟ್ಟರು.

**19-20** ಆಗ ದೇವರು ಸೆರಮನೆಯ ಬಾಗಲುಗಳನ್ನು ತೆರೆಯಲು ದೇವದೂತನನ್ನು ಕಳುಹಿಸಿದನು (ಅ.ಕೃತ್ಯ 12:5-10 ನೋಡಿರಿ). ದೇವದೂತನು ಅಪೊಸ್ತಲರಿಗೆ "ಈಗ, ನೀವು ಓಡಿ ಹೋಗಿ ಬಚ್ಚಿಟ್ಟುಕೊಳ್ಳಿರಿ" ಎಂದು ಹೇಳಲಿಲ್ಲ. ಬದಲಾಗಿ ದೂತನು ಅವರಿಗೆ, "ನೀವು ಪು ನ: ದೇವಾಲಯಕ್ಕೆ ಹೋಗಿ ಬೋಧಿಸುವದನ್ನು ಮುಂದುವರೆಸಿರಿ. ನೂತನ ಜೀವದ ಪೂರ್ಣ ಸಂದೇಶವನ್ನು – ಅಂದರೆ, ರಕ್ಷಣೆಯ[34] ಪೂರ್ಣ ಸಂದೇಶವನ್ನು ಜನರಿಗೆ ಹೇಳಿರಿ" ಅಂದನು.

**21-26** ಮರುದಿನ ಮಹಾಯಾಜಕನು ಹಿರೀಸಬೇಯನ್ನು, ಅಂದರೆ, ಇಸ್ರಾಯೇಲ್ಯರ ಯಜಮಾನರ ಸಭೆಯೆಲ್ಲವನ್ನೂ ಕೂಡಿಸಿದನು (ಅ.ಕೃತ್ಯ 4:5). ಅಪೊಸ್ತಲರು ಇನ್ನೂ ಸೆರೆಮನೆಯಲ್ಲಿಯೇ ಇದ್ದಾರೆಂದು ಅವರೆಲ್ಲರು ನೆನಸಿದರು. ಆದರೆ ಅಪೊಸ್ತಲರನ್ನು ಹಿರೀಸಭೆಯ ಮುಂದೆ ಕರೆತರುವದಕ್ಕೆ ಓಲೇಕಾರರನ್ನು ಕಳುಹಿಸಿದಾಗ, ಅಪೊಸ್ತಲರು ಅಲ್ಲಿರಲಿಲ್ಲ! ಅವರು ಹೊರಟು ಹೋಗಿದ್ದರು, ಅವರು ಪಾರುಮಾಡಿದ ದೇವದೂತನು ಬಾಗಲುಗಳನ್ನು ಪು ನಃ ಭದ್ರಪಡಿಸಿದ್ದನು! (ವಚನ 23) ಬಹುಶ: ದೇವದೂತನು ಅಪೊಸ್ತಲರನ್ನು ಬಿಡುಗಡೆಗೊಳಿಸುವ ವೇಳೆಯಲ್ಲಿ ಕಾವಲುಗಾರರು ಆಳವಾದ ನಿದ್ರೆಗೊಳಗಾಗುವಂತೆ ಮಾಡಿರಬೇಕು.

**27-28** ಅಪೊಸ್ತಲರು ಕ್ರಿಸ್ತನ ಕುರಿತಾಗಿ ಬೋಧಿಸುವದನ್ನು ಮುಂದುವರೆಸಿರುವದು ಮಾತ್ರವಲ್ಲ, ಆದರೆ ಆತನ ಮರಣಕ್ಕೆ ಯೆಹೂದಿನಾಯಕರೇ ಕಾರಣವೆಂದು ಹೇಳುತ್ತಿರುವರೆಂಬದಾಗಿಯೂ ಮಹಾಯಾಜಕನು ಅವರ ಮೇಲೆ

ಆರೋಪಹೊರಿಸಿದನು. ಹೀಗೆ ಯೆಹೂದ್ಯರು ಅಪೊಸ್ತಲರ ವಿಷಯದಲ್ಲಿ ಅಸಮಾಧಾನಗೊಳ್ಳುವದಕ್ಕೆ ಎರಡು ಕಾರಣಗಳನ್ನು ಹೊಂದಿದ್ದರು.

**29-32** ಪು ನಃ ಪೇತ್ರ ಇತರ ಅಪೊಸ್ತಲರು ಹಿರೀಸಭೆಯ ಮುಂಭಾಗದಲ್ಲಿ ಧೈರ್ಯದಿಂದ ಮಾತಾಡಿದರು. ವಾಸ್ತವದಲ್ಲಿ, ಪೇತ್ರನು ಯೆಹೂದ್ಯ ನಾಯಕರಿಗೆ ಆ ಸಭೆಯಲ್ಲಿಯೇ ಕ್ರಿಸ್ತನ ವಿಷಯವಾಗಿ ಬೋಧಿಸಿದನು. ಅಪೊಸ್ತಲರು ಯೆಹೂದ್ಯರನ್ನು "ಕ್ರಿಸ್ತನ ಕೊಲೆಗಾರರು" ಎಂದು ಅವರ ಮುಖದೆದುರಿಗೇ ಕರೆದರು! "..ನೀವು ಮರದ[35] ಕಂಭಕ್ಕೆ (ಶಿಲುಬೆಗೆ) ತೂಗ ಹಾಕಿ ಯೇಸುವನ್ನು ಕೊಂದಿರಿ" ಎಂದು ಪೇತ್ರನು ಹೇಳಿದನು (ವಚನ 30). ಪೇತ್ರನು ಮುಂದುವರೆಸಿ 31 ನೇ ವಚನದಲ್ಲಿ, "ಆದರೆ, ಆಮೇಲೆ ದೇವರು ಕ್ರಿಸ್ತನನ್ನು ಎಬ್ಬಿಸಿದನು ಮತ್ತು ತನ್ನ ಬಲಗೈಯಿಂದ ಉನ್ನತ ಸ್ಥಾನಕ್ಕೆ ಏರಿಸಿದನು" ಎಂದು ಹೇಳಿದನು (ಅ.ಕೃತ್ಯ 2:23, 32-33, 4:10; ಎಫೆಸ 1:20-21).

"ಈ ಕಾರ್ಯಗಳಿಗೆ ನಾವು ಸಾಕ್ಷಿ; ನಾವು ಮೌನವಾಗಿರಲು ಸಾಧ್ಯವಿಲ್ಲ; ಈ ಸಂಗತಿಗಳನ್ನು ಇತರರಿಗೆ ತಿಳಿಸಬೇಕೆಂದು ನಾವು ಆಜ್ಞಾಪಿಸಲ್ಪಟ್ಟಿದ್ದೇವೆ. ನಾವು ಮನುಷ್ಯರಿಗಿಂತಲೂ ದೇವರಿಗೆ ಹೆಚ್ಚಾಗಿ ವಿಧೇಯರಾಗಿರಬೇಕಲ್ಲಾ!" ಎಂದು ಪೇತ್ರನು ಹೇಳುತ್ತಾನೆ (ವಚನ 29). ಅಪೊಸ್ತಲರು ಈಗಾಗಲೇ ಒಮ್ಮೆ ಯೆಹೂದ್ಯ ನಾಯಕರಿಗೆ ಈ ಮಾತನ್ನು ಹೇಳಿದ್ದರು (ಅ.ಕೃತ್ಯ 4:18-20). ಅಪೊಸ್ತಲರು ಮಾತ್ರವೇ ಈ ಕಾರ್ಯಗಳಿಗೆ ಸಾಕ್ಷಿಗಳಾಗಿರಲಿಲ್ಲ, ಆದರೆ ಸ್ವತಃ ಪವಿತ್ರಾತ್ಮನ ಸಹ ವಿಶ್ವಾಸಿಗಳ ಮೂಲಕವಾಗಿ ಸಾಕ್ಷಿ ನೀಡುತ್ತಿದ್ದನು. ಅವರು ಮಾತಾಡುವಾಗ, ಪವಿತ್ರಾತ್ಮನು ಸಹ ಮಾತಾಡುತ್ತಿದ್ದನು; ಯಾಕೆಂದರೆ ಪ್ರತಿಯೊಬ್ಬ ವಿಶ್ವಾಸಿಗೆ – ಅಂದರೆ, ದೇವರಿಗೆ ವಿಧೇಯನಾಗುವ ಪ್ರತಿಯೊಬ್ಬನಿಗೂ – ಪವಿತ್ರಾತ್ಮನು ಕೊಡಲ್ಪಟ್ಟಿರುತ್ತಾನೆ (ವಚನ 32).

ದೇವರು—(ಕ್ರಿಸ್ತನನ್ನು ) ರಾಜನೆಂತಲೂ ರಕ್ಷಕನೆಂತಲೂ ಉನ್ನತಕ್ಕೆ ಏರಿಸಿದನು (ವಚನ 31). ಈ ವಚನದಲ್ಲಿ ಉಪಯೋಗಿಸಿರುವ "ರಾಜ' (ನಾಯಕ) ಎಂಬ ಪದಕ್ಕೆ "ಕರ್ತನು" ಎಂಬ ಅರ್ಥವಿರುತ್ತದೆ. ನಾವು ಕ್ರಿಸ್ತನನ್ನು ನಮ್ಮ ರಾಜ ಅಥವಾ ಕರ್ತನು ಎಂಬದಾಗ್ಯು ಸ್ವೀಕರಿಸಿಕೊಳ್ಳದೆ

ಹೋದರೆ ಆತನು ನಮ್ಮ ರಕ್ಷಕನಾಗಿರಲಾರನು. ಯೇಸು ನಮ್ಮ ಕರ್ತನೂ, ರಕ್ಷಕನೂ ಆಗಿದ್ದಾನೆ (ಅ.ಕೃತ್ಯ 2:36). ಆತನು ನಮ್ಮನ್ನು ರಕ್ಷಿಸಬೇಕೆಂದು ನಾವು ಬಯಸುವದಾದರೆ, ನಾವು ಆತನಿಗೆ ವಿಧೇಯರಾಗಲು ಸಿದ್ಧರಿರಬೇಕು. ದೇವರು ಕ್ರಿಸ್ತನನ್ನು ಇಸ್ರಾಯೇಲರಿಗೆ ಮಾನಸಾಂತರವನ್ನೂ ಪಾಪಪರಿಹಾರವನ್ನೂ ದಯಪಾಲಿಸುವದಕ್ಕಾಗಿ ಉನ್ನತ ಸ್ಥಾನಕ್ಕೆ ಏರಿಸಿದನು. ಕ್ರಿಸ್ತನು ನಮಗೆ ನೂತನ ಹೃದಯವನ್ನು ಕೊಡುತ್ತಾನೆ, ಪಶ್ಚಾತಾಪ ಪಡಲು ಆತನು ನಮಗೆ ಕೃಪೆಯನ್ನು ನೀಡುತ್ತಾನೆ. ಆದರೆ ಪಶ್ಚಾತಾಪ ಪಡುವದು ಸ್ವತಃ ನಾವೇ ಮಾಡಬೇಕಾದ ಕಾರ್ಯವಾಗಿದೆ. ಪಶ್ಚಾತಾಪ (ಮಾನಸಾಂತರ) ಇಲ್ಲದೆ ರಕ್ಷಣೆಯು ಇರುವದಿಲ್ಲ.

## ಗಮಲಿಯೇಲನ ಸಲಹೆ (5:33-42)

**33-34** ಯಹೂದ್ಯನಾಯಕರು, ವಿಶೇಷವಾಗಿ ಮಹಾಯಾಜಕರು ಮತ್ತು ಸದ್ದುಕಾಯಕರು ಅಪೊಸ್ತಲರನ್ನು ಕೊಲ್ಲಿಸಬೇಕೆಂದು ಬಯಸಿದ್ದರು. ಆದರೆ ಹಿರೀ ಸಭೆಯ ಸದಸ್ಯರುಗಳಾದ ಫರಿಸಾಯರ[36] ಒಪ್ಪಿಗೆಯನ್ನು ಪಡೆಯದೇ ಅದನ್ನು ಮಾಡಲು ಆಗಲಿಲ್ಲ. ಗಮಲಿಯೇಲನು ಫರಿಸಾಯರ ನಾಯಕನಾಗಿದ್ದನು; ಅಷ್ಟು ಮಾತ್ರವಲ್ಲದೆ, ಧರ್ಮೋಪದೇಶಕನಾಗಿ ಯೆಹೂದ್ಯರೆಲ್ಲರಿಂದಲೂ ಬಹು ಗೌರವಕ್ಕೆ ಪಾತ್ರನಾಗಿದ್ದನು.

**35-37** ಗಮಲಿಯೇಲನು ಇಬ್ಬರು ವ್ಯಕ್ತಿಗಳ ಉದಾಹರಣೆಗಳನ್ನು ಕೊಡುತ್ತಾನೆ, ಥೈದನು (ವಚನ 36) ಮತ್ತು ಗಲಿಲಾಯದ ಯೂದನು (ವಚನ 37), ಇವರು ಕೆಲಕಾಲದ ಹಿಂದೆ ರೋಮಾಯ ಸಾಮ್ರಾಜ್ಯದ ವಿರುದ್ಧ ದಂಗೆಯೆದ್ದಿದ್ದರು. ಆ ಇಬ್ಬರು ವ್ಯಕ್ತಿಗಳು ಕೊಲ್ಲಲ್ಪಟ್ಟು ಅವರ ಹಿಂಬಾಲಕರೆಲ್ಲರೂ ಚದುರಿಸಲ್ಪಟ್ಟು ಕಾಣೆಯಾಗಿದ್ದರು. ಬಹುಶ: ಗಮಲಿಯೇಲನು ಅಪೊಸ್ತಲರ ನಾಯಕನಾದ ಯೇಸು ಸತ್ತಿರುತ್ತಾನೆ, ಈ ಅಪೊಸ್ತಲರು ಸಹ, ಶೀಘ್ರವೇ ಚದುರಿಸಲ್ಪಟ್ಟು ಇಲ್ಲವಾಗುವರೆಂಬದಾಗಿ ಸಲಹೆ ನೀಡಿರಬೇಕು.

**38-39** ಆದುದರಿಂದ, ಅಪೊಸ್ತಲರನ್ನು ಹೋಗಗೊಡಬೇಕೆಂದು ಗಮಲಿಯೇಲನು ಯೆಹೂದ್ಯ ನಾಯಕರಿಗೆ ಸಲಹೆ ಮಾಡಿದನು. ಅವರ ಬೋಧನೆಯು ದೇವರಿಂದಲ್ಲವಾದರೆ ಅದು ವ್ಯರ್ಥವಾಗುವದು. ಆದರೆ ನಾವು ಅದು ದೇವರಿಂದಾಗಿದ್ದರೆ ಅದನ್ನು ವಿರೋಧಿಸುವದು ದೇವರನ್ನೇ ವಿರೋಧಿಸಿದಂತಿರುತ್ತದೆ. ಅಲ್ಲದೆ, ಈ ಹೊಸಧರ್ಮವು ನಿಜವಾಗಿಯೂ ದೇವರಿಂದ ಬಂದದ್ದಾಗಿದ್ದರೆ ಅದನ್ನು ಕೆಡಿಸುವದಕ್ಕೆ ನಮ್ಮಿಂದ ಅಸಾಧ್ಯವಾಗುವದು! ಇದು ಗಮಲಿಯೇಲನ ಬುದ್ಧಿವಂತಿಕೆಯ ಸಲಹೆಯಾಗಿತ್ತು.

**40** ಯೆಹೂದ್ಯ ನಾಯಕರು ಗಮಲಿಯೇಲನ ಸಲಹೆಗೆ ಒಪ್ಪಿದರು. ಅವರು ಅಪೊಸ್ತಲರಿಗೆ ಕೊರಡೆಗಳಿಂದ ಹೊಡೆಯುವ ಚಿಕ್ಕ ಶಿಕ್ಷೆಯನ್ನು ನೀಡಿ ಅವರನ್ನು ಬಿಟ್ಟು ಬಿಟ್ಟರು. ಅಲ್ಲದೆ ನಾಯಕರು ಇನ್ನು ಮೇಲೆ ಯೇಸುವಿನ ಹೆಸರನ್ನು ಹೇಳಿ ಮಾತಾಡಬಾರದೆಂದು ಅವರಿಗೆ ಅಪ್ಪಣೆಕೊಟ್ಟರು. ಆದರೆ ತಾವು ಈ ಅಪ್ಪಣೆ ಕೊಡುತ್ತಿರುವಾಗಲೇ ಅಪೊಸ್ತಲರು ಅದಕ್ಕೆ ವಿಧೇಯರಾಗುವದಿಲ್ಲ ಎಂಬದನ್ನು ಅವರು ಬಲ್ಲವರಾಗಿದ್ದರು.

**41-42** ನಾವು ಆ ಹೆಸರಿಗಾಗಿ – ಅಂದರೆ, ಕ್ರಿಸ್ತನ ನಿಮಿತ್ತವಾಗಿ – ಹಿಂಸೆಯನ್ನು ಅನುಭವಿಸುವದಾದರೆ ನಾವು ನಿಜವಾಗಿಯೂ ಆತನ ಶಿಷ್ಯರೂ, ಆತನ ಸ್ನೇಹಿತರೂ, ಆತನ ಸಹೋದರರೂ ಆಗಿರುತ್ತೇವೆ. ಇದು ಅಪೊಸ್ತಲರ ಅನುಭವವಾಗಿತ್ತು, ಮತ್ತು ಈ ಕಾರಣದಿಂದಲೇ ಅವರು ಹಿರೀಸಭೆಯಿಂದ ಸಂತೋಷಿಸುತ್ತಾ ಹೊರಟುಹೋದರು. ನಾವು ಕ್ರಿಸ್ತನ ನಿಮಿತ್ತವಾಗಿ ಅವಮಾನವನ್ನು ತಾಳಬೇಕೆಂದು ದೇವರು ನೇಮಿಸುವದಾದರೆ ನಾವು ಸಹ ಸಂತೋಷಿಸಬೇಕು. ಕ್ರಿಸ್ತನ ನಿಮಿತ್ತವಾಗಿ ಲೋಕದಿಂದ ಅವಮಾನಕ್ಕೊಳಗಾಗುವದೆಂದರೆ ದೇವರಿಂದ ಮಾನವನ್ನು ಪಡೆಯುವದಾಗಿದೆ (ಇಬ್ರಿಯ 11:24, 26 ನೋಡಿರಿ). ಅಪೊಸ್ತಲರು ತಾವು ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರರಾಗುವದಕ್ಕೆ ಅವಮಾನಕ್ಕೊಳಗಾಗುವದಕ್ಕಿಂತಲೂ ಹೆಚ್ಚಿನ ಮಾನವು ಇನ್ನೊಂದಿರುವದಿಲ್ಲ. ಶಿಷ್ಯರು ತನಗೋಸ್ಕರ ಬಾಧೆಪಡಬೇಕಾಗಬಹುದು ಎಂಬದಾಗಿ ಯೇಸು ಅವರನ್ನು ಎಚ್ಚರಿಸಿದ್ದನು : "ನಿಮ್ಮನ್ನು ನ್ಯಾಯ ವಿಚಾರಣೆಯ ಸಭೆಗಳಿಗೆ ಎಳಕೊಂಡು ಹೋಗುವರು; ಸಭಾಮಂದಿರಗಳಲ್ಲಿ ನಿಮ್ಮನ್ನು ಹೊಡೆಯುವರು (ಮಾರ್ಕ 13:9). ಆತನ ಮಾತುಗಳು ಈಗ ನೆರವೇರಿದ್ದವು. ಅಲ್ಲದೆ ಯೇಸು "ದಣಿಗಿಂತ ಆಳು ದೊಡ್ಡವನಲ್ಲ. ಅವರು ನನ್ನನ್ನು ಹಿಂಸೆ ಪಡಿಸಿದರೆ ನಿಮ್ಮನ್ನು ಸಹ ಹಿಂಸೆಪಡಿಸುವರು" ಎಂದು ಸಹ ಹೇಳಿದ್ದನು (ಯೋಹಾನ 15:20). ಆದರೆ ಯೇಸು ತನಗಾಗಿ ಹಿಂಸೆತಾಳುವವರಿಗೆ ಸಮೃದ್ಧಿಯಾದ ಪ್ರತಿಫಲದೊರೆಯುವದೆಂದು ಸಹ ವಾಗ್ದಾನ ಮಾಡಿದನು. "ನನ್ನ ನಿಮಿತ್ತವಾಗಿ ಜನರು ನಿಮ್ಮನ್ನು ನಿಂದಿಸಿ ಹಿಂಸೆಪಡಿಸಿ ನಿಮ್ಮ ಮೇಲೆ ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿದರೆ ನೀವು ಧನ್ಯರು. ಸಂತೋಷ ಪಡಿರಿ, ಉಲ್ಲಾಸ ಪಡಿರಿ, ಪರಲೋಕದಲ್ಲಿ ನಿಮಗೆ ಬಹಳ ಫಲ ಸಿಕ್ಕುವದು." ಎಂದನು (ಮತ್ತಾಯ 5:11-12)ಮತ್ತು ಅಂದಿನಿಂದಲೂ ಕ್ರೈಸ್ತರು ಆ ವಾಗ್ದಾನವನ್ನು ಹಿಡಿದುಕೊಂಡಿರುತ್ತಾರೆ (ರೋಮ 8:18, 2 ಕೊರಿಂಥ 4:16-17 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

---

## ಅಧ್ಯಾಯ - 6

### ಏಳು ಮಂದಿಯ ಆರಿಸಿಕೊಳ್ಳುವಿಕೆ (6:1-7)

**1** ಈ ಭಾಗದಲ್ಲಿ ವಿಶ್ವಾಸಿಗಳೆಲ್ಲರನ್ನು ಶಿಷ್ಯರು ಎಂದು ಕರೆಯಲಾಗಿದೆ (1-2, 7 ವಚನಗಳು). ಮೂಲ ಹನ್ನೆರಡು ಮಂದಿ ಶಿಷ್ಯರು ಈಗ "ಅಪೊಸ್ತಲರು" ಆಗಿದ್ದಾರೆ. ಇಲ್ಲಿ ಒಂದು ಪ್ರಾಮುಖ್ಯವಾದ ಸತ್ಯವು ಕಾಣಿಸುತ್ತದೆ. ಕ್ರೈಸ್ತರೆಲ್ಲರೂ ಶಿಷ್ಯರಾಗಿದ್ದಾರೆ. ಎರಡು ವಿಧವಾದ ಕ್ರೈಸ್ತರು ಇರುವದಿಲ್ಲ – ಸಾಮಾನ್ಯ ವಿಶ್ವಾಸಿಗಳಂತಿರುವವರು ಹಾಗು "ಶಿಷ್ಯರಾಗಿರಲು" ವಿಶೇಷವಾಗಿ ಆರಿಸಿಕೊಳ್ಳಲ್ಪಟ್ಟವರು. ಇದು ಒಂದು ಮಿಥ್ಯ ವಿಚಾರವಾಗಿದೆ; ನಾವೆಲ್ಲರೂ ಶಿಷ್ಯರಾಗಿರುವದಕ್ಕಾಗಿ ಕರೆಯಲ್ಪಟ್ಟಿದ್ದೇವೆ. ಬಹುಪಾಲು ಕ್ರೈಸ್ತರಿಗೆ ಜೀವನದ ದಾರಿಯು ಸ್ವಲ್ಪ ಸರಳವಾಗಿರುತ್ತದೆ, ಮತ್ತು "ಶಿಷ್ಯರು" ಎಂದು ಕರೆಯಲ್ಪಡುವ ಕೆಲವರಿಗೆ ಮಾತ್ರವೇ ಜೀವದ ದಾರಿಯೂ ಕಠಿಣವಾಗಿರುತ್ತದೆ ಎಂಬದಾಗಿ ಕೆಲವರು ಯೋಚಿಸುತ್ತಾರೆ. ಆದರೆ ಅದು ಹಾಗಿರುವದಿಲ್ಲ. ಪ್ರತಿಯೊಬ್ಬ ಕ್ರೈಸ್ತನು ಇಕ್ಕಟ್ಟಾದ ಬಾಗಲಿನ ಮೂಲಕ ಹಾದು ಹೋಗಲು ಮತ್ತು ಶಿಷ್ಯತ್ವದ ಇಕ್ಕಟ್ಟಾದ ದಾರಿಯಲ್ಲಿ ನಡೆಯಲು ಕರೆಯಲ್ಪಟ್ಟಿದ್ದಾನೆ (ಮಾರ್ಕ 8:34; ಲೂಕ 14:26-27 ಮತ್ತು ವ್ಯಾಖ್ಯಾನ ನೋಡಿರಿ). ವಿಶ್ವಾಸಿಗಳೊಳಗೆ ಗ್ರೀಕ ಭಾಷೆಯ ಯೆಹೂದ್ಯರು ಹಾಗು ಇಬ್ರಿಯ ಭಾಷೆಯ ಸಮುದಾಯದ ನಡುವೆ ಭಿನ್ನಾಭಿಪ್ರಾಯ ವು ಂಟಾಯಿತು.. ಯೇಸು ಭೂಲೋಕದಲ್ಲಿರುವಾಗ ಆತನ ಹಿಂಬಾಲಕರಲ್ಲಿ ಆರಾಮಿಕ ಬಾಷೆಯನ್ನಾಡುವ ಯೆಹೂದ್ಯರು ಮಾತ್ರವೇ ಇದ್ದರು. ಆ ಸಮಯದಲ್ಲಿ ಅನ್ಯ ಜನರು ಮತ್ತು ಇತರ ರಾಷ್ಟ್ರಗಳ ಗ್ರೀಕಭಾಷೆಯನ್ನಾಡುವ ಯೆಹೂದ್ಯರು ಇನ್ನೂ ಯೇಸುವನ್ನು ನಂಬುವದಕ್ಕೆ ಪ್ರಾರಂಭಿಸಿರಲಿಲ್ಲ. ಹೊಸ ಒಡಂಬಡಿಕೆಯ ಕಾಲದಲ್ಲಿ ಯೆಹೂದ್ಯರ ಎರಡು ಪ್ರಮುಖ ಗುಂಪು ಗಳಿದ್ದವು : ಮೊದಲನೆಯದಾಗಿ ಇಬ್ರಿಯ ಅಥವಾ ಆರಾಮಿಕ[37] ಭಾಷೆಯನ್ನಾಡುವವರು ಹಾಗು ಇಸ್ರಾಯೇಲಿನಲ್ಲಿ ನೆಲೆಸಿದ್ದವರು; ಮತ್ತು ಎರಡನೆಯದಾಗಿ, ಗ್ರೀಕ[38] ಭಾಷೆಯನ್ನಾಡುವವರೂ, ರೋಮಾಯ ಸಾಮ್ರಾಜ್ಯದ ಇತರ ದೇಶಗಳಲ್ಲಿ ವಾಸಿಸುತ್ತಿದ್ದವರು.

ಯೇಸುವಿನ ಸಮಯದಲ್ಲಿ, ಕೆಲವು ಗ್ರೀಕ್ ಭಾಷೆಯ ಯೆಹೂದ್ಯರು ಸಹ ಯೆರೂಸಲೇಮಿನಲ್ಲಿ ವಾಸಿಸಿದ್ದರು, ಮತ್ತು ಯೇಸುವಿನ ಪು ನರುತ್ಥಾನದನಂತರ ಅವರಲ್ಲಿ ಕೆಲವರು ಆತನನ್ನು ನಂಬಿದರು. ಅವರಲ್ಲಿ ಕೆಲವರು ವಿಧವೆಯರಾಗಿದ್ದರು. ಕೆಲ ಸಮಯದ ಬಳಿಕ, ಅಪೊಸ್ತಲರು ಪ್ರತಿದಿನ ಸಭೆಯಲ್ಲಿ ಕೊರತೆಯಲ್ಲಿರುವವರಿಗೆ ವಿತರಿಸುತ್ತಿದ್ದ ಆಹಾರದಲ್ಲಿ ತಮ್ಮ ವಿಧವೆಯರಿಗೆ ಬರತಕ್ಕ ನ್ಯಾಯವಾದ ಪಾಲು ಸಿಗುತ್ತಿಲ್ಲವೆಂದು ಗ್ರೀಕ್ ಭಾಷೆಯ ಯೆಹೂದ್ಯ ವಿಶ್ವಾಸಿಗಳು ದೂರು ಹೇಳಿದರು. ಅನೇಕ ವಿಶ್ವಾಸಿಗಳು ತಮ್ಮ ಆಸ್ತಿಗಳನ್ನು ಮಾರಿ ಬಂದ ಹಣವನ್ನು ಕೊರತೆಯಲ್ಲಿದ್ದವರಿಗೆ ವಿತರಿಸಲು (ಅವರಲ್ಲಿ ವಿಧವೆಯರು ಯಾವಾಗಲು ಇದ್ದರು). ಅಪೊಸ್ತಲರಿಗೆ ನೀಡಿದರೆಂಬದನ್ನು ಜ್ಞಾಪಿಸಿಕೊಳ್ಳಿರಿ (ಅ.ಕೃತ್ಯ 4:34-35). ಅಪೊಸ್ತಲರು ಇತರ ಕೆಲಸಗಳಲ್ಲಿ ಬಹಳ ತಲ್ಲೀನರಾಗಿದ್ದು ಎಲ್ಲರಿಗೂ ಆಹಾರವು ಸಮಾನವಾಗಿ ವಿತರಿಸಲ್ಪಡುವಂತೆ ನೋಡಿಕೊಳ್ಳಲು ಅವರಿಗೆ ಸಮಯ ಇಲ್ಲದಿರುವ ಸಾಧ್ಯತೆಯಿರುತ್ತದೆ. ಆ ಆದಿ ಸಭೆಯಲ್ಲಿ ಎಷ್ಟು ಶೀಘ್ರವಾಗಿ ಗುಣುಗುಟ್ಟುವಿಕೆ ಹಾಗು ಪಂಗಡಗಳು ಉದ್ಭವವಾಯಿತೆಂಬದನ್ನು ಗಮನಿಸಿರಿ! ಮತ್ತು ಪ್ರಪ್ರಥಮ ವಾಗ್ವಾದವು ಪ್ರಾಥಮಿಕವಾಗಿ ಹಣದ ವಿಷಯದಲ್ಲಾಗಿತ್ತು –

ಸಭೆಯ ಹಣವು ಹೇಗೆ ವ್ಯಯಮಾಡಲ್ಪಡಬೇಕು ಹಾಗು ಸ್ವತ್ತುಗಳು ಹೇಗೆ ವಿತರಿಸಲ್ಪಡಬೇಕು. ಶಿಷ್ಯರ ಸಂಖ್ಯೆಯು ತೀವ್ರವಾಗಿ ಬೆಳೆಯುತ್ತಿದ್ದರೂ, ಸೈತಾನನು ಅಲ್ಲಿ ಪಂಗಡ, ಅತೃಪ್ತಿ ಹಾಗು ಹೊಟ್ಟೆಕಿಚ್ಚುಗಳನ್ನುಂಟು ಮಾಡಲು ಪ್ರಯತ್ನಿಸುತ್ತಿದ್ದನು.

2-4 ಸಭೆಯಲ್ಲಿ ವಿವಿಧ ಕ್ರೈಸ್ತರು, ವಿವಿಧ ಗುರಿಗಳನ್ನು ಹೊಂದಿರುತ್ತಾರೆ. ಅಪೊಸ್ತಲರು ವಿಶೇಷವಾಗಿ ದೇವರ ವಾಕ್ಯವನ್ನು ಬೋಧಿಸಲು ಹಾಗು ಸಾರಲು ಮತ್ತು ಪ್ರಾರ್ಥಿಸುವದಕ್ಕಾಗಿ ನೇಮಿಸಲ್ಪಟ್ಟಿದ್ದರು. ಆದುದರಿಂದ ಆಹಾರವನ್ನು ವಿತರಿಸಲು ಅವರು ಇತರ ಏಳು ಮಂದಿಯನ್ನು ನೇಮಕ ಮಾಡಿದ್ದರು. ಅನಂತರದಲ್ಲಿ ಸಭೆಯಲ್ಲಿದ್ದವರಾಗಿ ಈ ರೀತಿಯ ಸೇವಾ ಕೆಲಸಗಳನ್ನು ನಡಿಸಿದವರನ್ನು ಸಭಾಧ್ಯಕ್ಷರು ಎಂದು ಕರೆಯಲಾಯಿತು (1 ತಿಮೊಥೆ 3:8-10).

ಈ ಕಾರ್ಯಕ್ಕಾಗಿ ಆರಿಸಿಕೊಳ್ಳಲು ಏಳು ಜನರು ಪವಿತ್ರಾತ್ಮಭರಿತರೂ, ಜ್ಞಾನಸಂಪನ್ನರೂ ಆಗಿರಬೇಕೆಂದು ಅಪೊಸ್ತಲರು ತಿರ್ಮಾನಿಸಿದರು. ಅದೇರೀತಿಯಲ್ಲಿ, ಇಂದು ನಮ್ಮ ಸಭೆಗಳಲ್ಲಿ ಪವಿತ್ರಾತ್ಮಭರಿತರೂ, ಜ್ಞಾನಸಂಪನ್ನರೂ ಆಗಿರುವ ಸಭಾಪಾಲಕರನ್ನೂ, ಹಿರಿಯರನ್ನೂ ಮತ್ತು ಸಭಾಧ್ಯಕ್ಷರನ್ನೂ ಮಾತ್ರವೇ ಆದುಕೊಳ್ಳಬೇಕು.

ಅಪೊಸ್ತಲರು ಇಲ್ಲಿ ನಮಗೆ ಅನುಸರಿಸಲು ಒಂದು ಒಳ್ಳೆಯ ಮಾದರಿಯನ್ನು ನೀಡಿರುತ್ತಾರೆ. ಯಾವದೇ ನಾಯಕನು ತನ್ನ ಎಲ್ಲಾ ಜವಾಬ್ದಾರಿಗಳು ಹಾಗು ಕರ್ತವ್ಯಗಳನ್ನು ತೃಪ್ತಿಕರವಾಗಿ ನೆರವೇರಿಸಲಾರದಷ್ಟು ಇತರ ಕೆಲಸಗಳಲ್ಲಿ ತಲ್ಲೀನನಾಗುವದಾದರೆ ಅತನು ತನ್ನ ಕೆಲವು ಕರ್ತವ್ಯಗಳನ್ನು ಸಭೆಯಲ್ಲಿ ಅರ್ಹನಾದ ಇತರ ವ್ಯಕ್ತಿಗೆ ವಹಿಸಿಕೊಡಬೇಕು. ಹೇಗಿದ್ದರೂ, ೦ಎಲ್ಲಾ ಅಧಿಕಾರವನ್ನು ತಮಗಾಗಿಯೇ ಇಟ್ಟುಕೊಂಡು ಅದನ್ನು ಇತರರಿಗೆ ಹಂಚಿಕೊಳ್ಳದಿರುವ ನಾಯಕರೂ ಅನೇಕರಿದ್ದಾರೆ. ಇದು ಸರಿಯಾದದ್ದಲ್ಲ. ಉದಾಹರಣೆಗೆ, ಸಭಾ ಪಾಲಕರು ಹಾಗು ಬೋಧಕರು ಸಭೆಯ ಹಣಕಾಸಿನ ವಿಷಯಗಳ ಜವಾಬ್ದಾರಿಯನ್ನು ವಹಿಸಿಕೊಳ್ಳದಿರುವದು ಉತ್ತಮವಾದದ್ದು. ಅವರು ತಮ್ಮ ಸಮಯವನ್ನು ಪ್ರಾರ್ಥನೆ ಹಾಗು ವಾಕ್ಯೋಪದೇಶಗಳಿಗೆ ಸಮರ್ಪಿಸಿಕೊಂಡರೆ ಒಳ್ಳೆಯದು (ವಚನ 4).

5-6 ಆದುಕೊಳ್ಳಲ್ಪಟ್ಟ ಏಳು ಜನರು ಗ್ರೀಕ್ ಹೆಸರುಗಳನ್ನು ಹೊಂದಿದ್ದಾರೆ;ಆದುದರಿಂದ, ಅವರೆಲ್ಲರೂ ಗ್ರೀಕ್ ಭಾಷೆಯ ಯೆಹೂದ್ಯರು ಎಂಬದನ್ನು ನಾವು ಸ್ಪಷ್ಟವಾಗಿ ತಿಳಿಯಬಹುದು. ಸ್ತೆಫನನು ಮೊಟ್ಟ ಮೊದಲು ಪ್ರಸ್ತಾಪಿಸಲ್ಪಟ್ಟವನಾಗಿದ್ದು, 8-15 ವಚನಗಳು ಹಾಗು ಅ.ಕೃತ್ಯದ 7 ನೇ ಅದ್ಯಾಯದಲ್ಲೆಲ್ಲಾ ಆತನ ವಿಷಯವಾಗಿಯೇ ಇರುತ್ತದೆ. ಎರಡನೆಯದಾಗಿ, ಫಿಲಿಪ್ಪನು ಅ.ಕೃತ್ಯಗಳ 8 ನೇ ಅದ್ಯಾಯದಲ್ಲಿ ವಿಸ್ತಾರವಾಗಿ ಕಾಣಿಸಿಕೊಳ್ಳುತ್ತಾನೆ. ಇತರ ಐದು ಮಂದಿಯ ಕುರಿತು ಯಾವ ಮಾಹಿತಿಯೂ ಇರುವದಿಲ್ಲ. ಮೊದಲು ಎಲ್ಲಾ ಶಿಷ್ಯರು – ಅಂದರೆ ಸಭೆಯ ಸದಸ್ಯರೆಲ್ಲರೂ – ಏಳು ಮಂದಿಯನ್ನು ಆರಿಸಿಕೊಂಡರೆಂಬದನ್ನು ಗಮನಿಸಿರಿ. ಆಗ, ಆದರ ನಂತರವಷ್ಟೇ ಅಪೊಸ್ತಲರು ಅವರ ಮೇಲೆ ಕೈಗಳನ್ನಿಟ್ಟು ಅವರ ಕೆಲಸಕ್ಕಾಗಿ ನೇಮಿಸಿದರು. ಕೈಗಳನ್ನಿಡುವದರ ಮೂಲಕ ಜನರನ್ನು ನೇಮಿಸುವದು ಯೆಹೂದ್ಯರ ಪದ್ಧತಿಯಾಗಿತ್ತು (ಅರಣ್ಯಕಾಂಡ 27:22-23). ಆ ಪದ್ದತಿಯು ಬಹು ಬೇಗನೆ ಕ್ರೈಸ್ತರ ಮದ್ಯದಲ್ಲಿ ಸಾಮಾನ್ಯವಾಯಿತು. ಒಬ್ಬ ವ್ಯಕ್ತಿಯು ಪವಿತ್ರಾತ್ಮನ ಪೂರ್ಣ ಆಶಿರ್ವಾದವನ್ನು ಪಡೆದು ಕೊಳ್ಳಬೇಕಾದರೆ ಸಭಾಪಾಲಕರು ಅಥವಾ ಹಿರಿಯರು ಅವನ ಮೇಲೆ ಕೈಗಳನ್ನಿಡುವದು ಅವಶ್ಯಕ ಎಂದು ಕೆಲವು ಕ್ರೈಸ್ತರು ನಂಬುತ್ತಾರೆ (ಅ.ಕೃತ್ಯ 8:17; 9:17; 19:6). ಹೇಗಿದ್ದರೂ, ಈ ವಾಕ್ಯಭಾಗದಲ್ಲಿ ಅದು ಸತ್ಯವಾಗಿ ತೋರುವದಿಲ್ಲ, ಯಾಕೆಂದರೆ ಈ ಏಳು ಜನರು ಯಾವದೇ ವ್ಯಕ್ತಿಯು ಅವರ ಮೇಲೆ ಕೈಗಳನ್ನಿಡುವದಕ್ಕೆ ಮುಂಚೆಯೇ ಪವಿತ್ರಾತ್ಮ ಭರಿತರಾಗಿದ್ದರು (ವಚನ 3).

7 ಒಂದು ಬೆಳೆಯುವ ಸಭೆಯು ಸಜೀವ ಸಭೆಯಾಗಿದೆ. ಬೆಳೆಯದ ಸಭೆಯು ಒಂದು ನಿರ್ಜೀವ ಸಭೆಯಾಗಿದೆ. ಆ ಆದಿ ಸಭೆಯು ಖಂಡಿತವಾಗಿಯೂ ಜೀವಂತವಾಗಿತ್ತು, ಯೆಹೂದ್ಯ ಯಾಜಕರಲ್ಲಿ ಸಹ ಆನೇಕರು ಕ್ರಿಸ್ತನನ್ನು ನಂಬಿದವರಾಗಿ ಬಂದು ಸಭೆಗೆ ಸೇರಿಕೊಂಡರು.

## ಸ್ತೆಫನನು ಬಂದಿಸಲ್ಪಟ್ಟದ್ದು (6:8-15)

8-10 ಸ್ತೆಫನನು ಪವಿತ್ರಾತ್ಮಭರಿತನೂ ನಂಬಿಕೆಯಿಂದ ತುಂಬಿದವನೂ ಆಗಿದ್ದನು (ವಚನ 5). ಈ ಕಾರಣಕ್ಕಾಗಿ ಆತನು ದೇವರ ಕೃಪೆಯಿಂದಲೂ, ಬಲದಿಂದಲೂ ತುಂಬಿದವನು ಸಹ ಆಗಿದ್ದನು (ವಚನ 8) ಅಂತರ್ಯದಲ್ಲಿ ನಂಬಿಕೆ ಮತ್ತು ಆತ್ಮನಿಂದ ತುಂಬಿರುವ ಯಾವದೇ ವ್ಯಕ್ತಿಯು ಬಹಿರಂಗವಾಗಿ ದೇವರ ಕೃಪೆ ಮತ್ತು ಬಲವನ್ನು ತೋರ್ಪಡಿಸುವವನಾಗಿದ್ದಾನೆ. ಯೆರೂಸಲೇಮಿನಲ್ಲಿ ಅನೇಕ ಯೆಹೂದ್ಯ ಸಭಾಮಂದಿರಗಳಿದ್ದವು . ಅವು ಗಳಲ್ಲಿ ಮುಕ್ತ ಜನರ ಸಭಾಮಂದಿರ (ಲಿಬೆರ್ತೀನರೆಂಬ ಸಭಾಮಂದಿರ) ಎಂದು ಕರೆಯಲ್ಪಡುವ ಸಭಾಮಂದಿರವೊಂದಿತ್ತು. ಆ ಸಭಾಮಂದಿರದ ಯೆಹೂದ್ಯರು ಸ್ತೆಫನನನ್ನು ವಿರೋಧಿಸಲು ಪ್ರಾರಂಭಿಸಿದರು. ಆದರೆ ಅವರು ಸ್ತೆಫನನ ಮಾತಿನಲ್ಲಿ ಕಂಡುಬಂದ ಜ್ಞಾನವನ್ನೂ ಪವಿತ್ರಾತ್ಮ ಶಕ್ತಿಯನ್ನೂ ಅವರು ಎದುರಿಸಲಾಗಲಿಲ್ಲ (ವಚನ 10) ಆದುದರಿಂದ ಅವರು ಆತನ ಹಿಂದುಗಡೆಯಲ್ಲಿ ಆತನ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಲು ಪ್ರಾರಂಭಿಸಿದರು.

11 ಸ್ತೆಫನನ ವಿರುದ್ಧವಾಗಿ ಸುಳ್ಳು ಸಾಕ್ಷಿಯನ್ನು ಹೇಳುವಂತೆ ಅವರು ಗುಪ್ತವಾಗಿ ಕೆಲವು ಮನುಷ್ಯರ ಮನವೊಲಿಸಿದರು. ಬಹುಶಃ ಇವರು ಇದಕ್ಕಾಗಿ ಆ ಮನುಷ್ಯರಿಗೆ ಹಣವನ್ನು ನೀಡಿರಬೇಕು. ಅವರ ಸುಳ್ಳು ಆರೋಪವು ಹೀಗಿತ್ತು: ಸ್ತೆಫನನು ಮೋಶೆಯ ವಿರುದ್ಧವಾಗಿ (ಅಂದರೆ, ಮೋಶೆಯ. ದೇವರಿಂದ ಪಡೆದುಕೊಂಡ ಯೆಹೂದ್ಯ ಧರ್ಮಶಾಸ್ತ್ರದ ವಿರುದ್ಧವಾಗಿ ಮತ್ತು ದೇವರಿಗೆ ವಿರುದ್ಧವಾಗಿ ದೂಷಣೆಯ ಮಾತುಗಳನ್ನಾಡಿದ್ದಾನೆ. ಇದಕ್ಕೆ ಮುಂಚೆ ಸ್ವತಃ ಯೇಸುವಿನ ವಿರುದ್ಧವಾಗಿಯೂ ಇದೆ ರೀತಿಯಾಗಿ ದೂಷಣೆಯ ಆರೋಪವನ್ನು ತರಲಾಗಿತ್ತು (ಮಾರ್ಕ 14:61-64).

**12-14** ಯೆಹೂದ್ಯರು ಸ್ತೆಫನನನ್ನು ಬಂಧಿಸಿ ಹಿರೀಸಭೆಯ ಮುಂದೆ ತಂದರು. ಆಮೇಲೆ ಅವರು ಸುಳ್ಳು ಸಾಕ್ಷಿಗಳನ್ನು ಕರೆದರು. ಸ್ತೆಫನನು ಪರಿಶುದ್ಧವಾದ ಸ್ಥಳಕ್ಕೆ ವಿರೋಧವಾಗಿಯೂ (ಅಂದರೆ, ಯೆರೂಸಲೇಮಿನಲ್ಲಿನ ಯೆಹೂದ್ಯ ದೇವಾಲಯ) ಮತ್ತು ಧರ್ಮಶಾಸ್ತ್ರಕ್ಕೆ ವಿರೋಧವಾಗಿಯೂ ಮಾತಾಡಿದನೆಂದು ಈ ಸಾಕ್ಷಿಗಾರರು ಸುಳ್ಳಾಗಿ ಆರೋಪಿಸಿದರು (ವಚನ 13). ಯೇಸು ತನ್ನ ದೇಹವೆಂಬ "ದೇವಾಲಯ" ದ ನಾಶನ ಬಗ್ಗೆ ಮಾತಾಡಿದ್ದನು (ಯೋಹಾನ 2:19-21), ಮತ್ತು ಸ್ತೆಫನನು ಯೇಸುವಿನ ಮಾತುಗಳನ್ನೇ ಪುನರುಚ್ಚರಿಸಿದಂತೆ ತೋರುತ್ತದೆ. ಆದರೆ ಸ್ವತಃ ಯೇಸುವಿನ ಮಾತುಗಳು ಸುಳ್ಳು ಸಾಕ್ಷಿಗಾರರಿಂದ ತಿರುಚಿ ಹೇಳಲ್ಪಟ್ಟಹಾಗೆಯೇ ಸ್ತೆಫನನ ಮಾತುಗಳು ಸಹ ಈ ಸುಳ್ಳು ಸಾಕ್ಷಿಗಾರರಿಂದ ಅದೇ ರೀತಿಯಲ್ಲಿ ತಿರುಚಿ ಹೇಳಲ್ಪಟ್ಟಿದ್ದವು [39]. ಯೇಸುವಿನ ವಿಷಯದಲ್ಲಾದರೋ ಸಾಕ್ಷಿಗಾರರು, ಆತನು "ಕೈಯಿಂದ ಕಟ್ಟಿರುವ ಈ ದೇವಾಲಯವನ್ನು ಕೆಡವಿಬಿಡುವೇನು" ಎಂದು ಹೇಳಿದನೆಂದು ಅಂದರು (ಮಾರ್ಕ 14:57-58 ನೋಡಿರಿ). ಇಲ್ಲಿ ಈ ಸುಳ್ಳು ಸಾಕ್ಷಿಗಾರರು ಸ್ತೆಫನನೂ ಸಹ ಇದೇ ಮಾತುಗಳನ್ನು ಹೇಳಿದನೆಂದು ಆರೋಪಿಸುತ್ತಿದ್ದಾರೆ.

ಯೇಸು ಒಮ್ಮೆ ತನ್ನ ಕುರಿತಾಗಿ ಹೇಳಿದ್ದೇನೆಂದರೆ : ದೇವಾಲಯ ಕ್ಕಿಂತಲೂ ಹೆಚ್ಚಿನವನು ಇಲ್ಲಿದ್ದಾನೆ" (ಮತ್ತಾಯ 12:6).ಸ್ತೆಫನನು ಯೇಸುವಿನ ತಾತ್ಪರ್ಯವನ್ನು ಚೆನ್ನಾಗಿ ಅರ್ಥಮಾಡಿಕೊಂಡನುಃ ಈಗ ಮೆಸ್ಸೀಯನು ಬಂದಿರುವದರಿಂದ ಯೆಹೂದ್ಯರ ದೇವಾಲಯ ಮತ್ತು ಯೆಹೂದ್ಯರ ಎಲ್ಲಾ ಯಜ್ಞಗಳ ಹಾಗು ಸಂಪ್ರದಾಯಿಕ ಆಚಾರಗಳು ಇನ್ನೆಂದಿಗೂ ಅವಶ್ಯಕವಾಗಿರುವದಿಲ್ಲ (ಇಬ್ರಿಯ 7:18-19; 8:7,13 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಸ್ತೆಫನನು ಯೆಹೂದ್ಯರಿಗೆ ಇದನ್ನು ಹೇಳಿದ್ದ ನೆಂಬದರಲ್ಲಿ ಸಂಶಯವಿಲ್ಲ, ಮತ್ತು ಈ ಸಂಗತಿಯು ಅವರಲ್ಲಿ ಬಹಳ ಕೋಪವನ್ನುಂಟು ಮಾಡಿತ್ತು.

---

## ಅಧಾಯ - 7

### ಸ್ತೆಫನನ ಸಂದೇಶ – ಯಹೂದ್ಯ ಮೂಲ ಪಿತೃಗಳು (7:1-16).

**1** " ಈ ಮಾತುಗಳು ಹೌದೋ? ನೀನು ನಮ್ಮ ದೇವಾಲಯ ಹಾಗು ಯೆಹೂದ್ಯ ಧರ್ಮಶಾಸ್ತ್ರದ ವಿರುದ್ಧವಾಗಿ ಈ ಮಾತುಗಳನ್ನು ಹೇಳಿದ್ದಿಯೋ?." ಎಂದು ಮಹಾ ಯಾಜಕನು ಸ್ತೆಫನನ್ನು ಕೇಳಿದನು. ಸ್ತೆಫನನು ಪ್ರತ್ಯುತ್ತರ ನೀಡುತ್ತಾ ತನ್ನ ರಕ್ಷಣಾ ವಿಷಯದಲ್ಲಿ ಮಾತಾಡದೆ ಕ್ರಿಸ್ತನ ಸುವಾರ್ತೆಯ ರಕ್ಷಣಾ ವಿಷಯದಲ್ಲಿ – ಅಂದರೆ, ಯೆಹೂದ್ಯರಿಂದ ವಿರೋಧಕ್ಕೊಳಗಾಗಿದ್ದ ತನ್ನ ನೂತನ ಕ್ರೈಸ್ತಧರ್ಮದ ರಕ್ಷಣಾರ್ಥವಾಗಿ ಮಾತಾಡಿದನು. ದೇವರು ತಾನು ಮನುಷ್ಯರೊಳಗೆ ಒಂದೇ ರಾಷ್ಟ್ರ ಹಾಗು ಒಂದೇ ಆಲಯದಲ್ಲಿ ನೆಲೆಸುವದು ಎಂದಿಗೂ ಆತನ ಇಂಗಿತವಾಗಿರಲಿಲ್ಲ ಎಂಬುದನ್ನು ಸ್ತೆಫನನು ತನ್ನ ಭಾಷಣದಲ್ಲಿ ತೋರಿಸಲು ತವಕಪಡುತ್ತಾನೆ. ದೇವರ ನಿಜ ಜನರು ಅಂದರೆ, ಯೇಸು ಕ್ರಿಸ್ತನಲ್ಲಿ ನಿಜವಾಗಿಯೂ ನಂಬಿಕೆಯಿಡುವವರು ಯಾವದೇ ಕುಲ ಅಥವಾ ಯಾವದೇ ದೇಶದವರೂ ಆಗಿರಬಲ್ಲರು. ಇದನ್ನು ತೋರಿಸುವದಕ್ಕಾಗಿ ಸ್ತೆಫನನು ಈ ಅಧ್ಯಾಯದಲ್ಲಿ ಮೊದಲ ಯೆಹೂದ್ಯನಾದ ಅಬ್ರಹಾಮನಿಂದ ಪ್ರಾರಂಬಗೊಂಡು ಕ್ರಿಸ್ತನ ಸಮಯದ ತನಕವೂ ಮುಂದುವರೆದ ಯೆಹೂದ್ಯರ ಕ್ಲುಪ್ತ ಚರಿತ್ರೆಯನ್ನು ನೀಡುತ್ತಾನೆ. ಈ ನೂತನ ಕ್ರೈಸ್ತ ಧರ್ಮವು ಈಗ ದೇವರ ನಿಜವಾದ ಧರ್ಮ ಎಂಬದನ್ನು ಸ್ತೆಫನನು ಯೆಹೂದ್ಯರ ಧರ್ಮ ಗ್ರಂಥದಿಂದಲೇ (ಹಳೆ ಒಡಂಬಡಿಕೆ) ತೋರಿಸಿಕೊಡುತ್ತದೆ.

**2-3** ಅಬ್ರಹಾಮನು ಪ್ರಥಮ ಯೆಹೂದ್ಯನಾಗಿದ್ದನು. ಅಬ್ರಹಾಮನು ಮೊದಲು ಮೆಸೊಪೊ ತಾಮ್ಯದಲ್ಲಿ ವಾಸವಾಗಿದ್ದನು, ಅದನ್ನು ಕಸ್ದೇಯರ ದೇಶ ಎಂದು ಸಹ ಕರೆಯುತ್ತಾರೆ (ವಚನ 4), ಮತ್ತು ಅದು ಈಗ ಆಧುನಿಕ ಮಧ್ಯಪೂರ್ವದ ಇರಾಕ ರಾಷ್ಟ್ರವಾಗಿದೆ. ಅಬ್ರಹಾಮನು ಅಲ್ಲಿ ನೆಲೆಸಿದ್ದಾಗ ದೇವರು ಅವನೊಂದಿಗೆ ಮಾತಾಡಿ, "ನಿನ್ನ ಸ್ವದೇಶವನ್ನು——ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟು ಹೋಗು." ಎಂದು ಹೇಳಿದನು. ಹೀಗೆ ಅಬ್ರಹಾಮನು ತನ್ನ ಸ್ವದೇಶವನ್ನು ಬಿಟ್ಟು ದೇವರು ಅವನನ್ನು ನಡೆಸಿದ ಸ್ಥಳಕ್ಕೆ ಹೋದನು. ಇದನ್ನು ಮಾಡುವದರ ಮೂಲಕ ಅಬ್ರಹಾಮನು ನಮ್ಮೆಲ್ಲರಿಗೂ ಅನುಸರಿಸಲು ವಿಧೇಯತೆಯ ಮಾದರಿಯೊಂದನ್ನು ನೀಡಿರುತ್ತಾನೆ (ಇಬ್ರಿಯ 11:8 ಮತ್ತು ವ್ಯಾಖ್ಯಾನ ನೋಡಿರಿ).

**4** ಅಬ್ರಹಾಮನು ಮೊದಲು ಖಾರಾನೆಂಬ ಪಟ್ಟಣಕ್ಕೆ ಹೋದನು, ಅದು ಆಧುನಿಕ ಇಸ್ರಾಯೇಲಿನ ಉತ್ತರಕ್ಕಿರುವ ಟರ್ಕಿ ದೇಶವಾಗಿದೆ. ಅಬ್ರಹಾಮನು ಕೆಲವು ವರ್ಷಗಳವರೆಗೆ ಖಾರಾನಿನಲ್ಲಿ ವಾಸವಾಗಿದ್ದ ಮೇಲೆ, ದೇವರು ಪುನಃ ಅವನೊಂದಿಗೆ ಮಾತಾಡಿ, "ನಿನ್ನ ಸ್ವದೇಶವನ್ನು ಬಿಟ್ಟು——ನಾನು ತೋರಿಸುವ ದೇಶಕ್ಕೆ ಹೊರಟು ಹೋಗು" ಎಂದು ಹೇಳಿದನು (ಆದಿಕಾಂಡ 12:1). ಆದ್ದರಿಂದ ಅಬ್ರಹಾಮನು ಖಾರಾನನ್ನು ಬಿಟ್ಟು ಕಾನಾನ ದೇಶಕ್ಕೆ ಪ್ರಯಾಣಿಸಿದನು (ಆದಿಕಾಂಡ 12:4-5), ಅಂದರೆ – ನೀವು ಈಗ ವಾಸವಾಗಿರುವ ಈ ದೇಶ ಎಂದು ಸ್ತೆಫನನು ಯೆಹೂದ್ಯರಿಗೆ ಹೇಳುತ್ತಾನೆ.

**5** ಕಾನಾನ (ಇಸ್ರಾಯೇಲ) ದೇಶವು ದೇವರು ಅಬ್ರಹಾಮನಿಗೂ, ಆತನ ಸಂತತಿಯವರಿಗೂ ಕೊಡುತ್ತೇನೆಂದು ವಾಗ್ದಾನ ಮಾಡಿದ ದೇಶವಾಗಿತ್ತು (ಆದಿಕಾಂಡ 17:8) ಆದರೆ ಅಬ್ರಹಾಮನು ಸ್ವತಃ ಆದೇಶವನ್ನು – ಕಾಲಿಡುವಷ್ಟು ಭೂಮಿಯನ್ನು ಸಹ ಸ್ವಾಸ್ತ್ಯವಾಗಿ ಪಡೆಯಲಿಲ್ಲ. ಅಬ್ರಹಾಮನ ನಿಜವಾದ ಸ್ವಾಸ್ತ್ಯವು ಪರಲೋಕದಲ್ಲಿತ್ತು (ಇಬ್ರಿಯ 11:9-10 ನೋಡಿರಿ). ದೇವರು ಅಬ್ರಹಾಮನಿಗೂ – ಆತನ ಸಂತತಿಯವರಿಗೂ ಕಾನಾನ ದೇಶವನ್ನು ಕೊಡುತ್ತೇನೆಂದು

ವಾಗ್ದಾನ ಮಾಡಿದಾಗ ಅಬ್ರಹಾಮನು ಒಬ್ಬ ವೃದ್ಧನಾಗಿದ್ದನು ಮತ್ತು ಅವನಿಗೆ ಮಕ್ಕಳಿರಲಿಲ್ಲ. ಹಾಗಿದ್ದರೂ, ಅಬ್ರಹಾಮನು ದೇವರ ವಾಗ್ದಾನವನ್ನು ನಂಬಿದನು.

**6-7** ದೇವರು ಅಬ್ರಹಾಮನಿಗೆ – "ನಿನ್ನ ಸಂತಾನದವರು ಅನ್ಯದೇಶದಲ್ಲಿ (ಐಗುಪ್ತ್ಯ) ಪ್ರವಾಸಿಗಳಾಗಿರುವರು" ಎಂದು ಹೇಳಿದನು. ಅಲ್ಲದೆ ದೇವರು ಅಬ್ರಹಾಮನಿಗೆ ಆತನ ಸಂತತಿಯವರು (ಯೆಹೂದ್ಯರು) ಐಗುಪ್ತ್ಯದಲ್ಲಿ ನಾನೂರು ವರ್ಷಗಳವರೆಗೆ ದಾಸರಾಗಿದ್ದ ನಂತರ ದೇವರು ತಾನು ಅವರಿಗೆ ನ್ಯಾಯ ತೀರಿಸುವೆನು ಮತ್ತು ಯೆಹೂದ್ಯರನ್ನು ಪುನಃ ಕಾನಾನ ದೇಶಕ್ಕೆ ನಡೆಸುವೆನು ಎಂದು ಸಹ ಹೇಳಿದನು (ಆದಿಕಾಂಡ 15:13-16; ವಿಮೋಚನ ಕಾಂಡ 12:29-36).

ಅಬ್ರಹಾಮನ ಸಂತಾನದವರು (ಯೆಹೂದ್ಯರು) ದೇವರು ಹೇಳಿದಂತೆಯೇ ಐಗುಪ್ತ್ಯದಲ್ಲಿ ನಾನೂರು ವರ್ಷಗಳ ಕಾಲ ಉಳಿದರು. ಆ ದೀರ್ಘಕಾಲದ ವೇಳೆಯಲ್ಲಿ ಅವರಿಗೆ ಕಾನಾನ ದೇಶವನ್ನು ಕೊಡುತ್ತೇನೆಂಬ ದೇವರವಾಗ್ದಾನವು ನೆರವೇರದೆ ಉಳಿಯಿತು. ದೇವರು ಯಾವಾಗಲೂ ತನ್ನವಾಗ್ದಾನವನ್ನು ತಕ್ಷಣವೇ ನೆರವೇರಿಸುವದಿಲ್ಲ; ನಾವು ತಾಳ್ಮೆಯಿಂದ ಕಾಯುವದನ್ನು ಕಲಿಯಬೇಕು (2 ಪೇತ್ರ 3:8-9).

**8** ನಂತರ ದೇವರು ಅಬ್ರಹಾಮನಿಗೆ ಸುನ್ನತಿಯ ಒಡಂಬಡಿಕೆಯನ್ನು ನೀಡಿದನು. ಶಿಶ್ನದ ತುದಿಯಲ್ಲಿರುವ ಹೆಚ್ಚಿನ ಚರ್ಮವನ್ನು ಕತ್ತರಿಸಿಹಾಕುವದೇ ಸುನ್ನತಿಯಾಗಿದೆ. ಅಬ್ರಹಾಮನು ಮತ್ತು ಆತನ ಸಂತಾನದವರೆಲ್ಲರೂ ಸುನ್ನತಿ ಮಾಡಿಸಿಕೊಳ್ಳಬೇಕು; ಇದು ಒಬ್ಬನು ಯೆಹೂದ್ಯನೆಂಬದಕ್ಕೆ ಬಹಿರಂಗದ ಒಂದು ಗುರುತಾಗಿರಬೇಕು ಎಂದು ದೇವರು ಅಜ್ಞಾಪಿಸಿದನು (ಆದಿಕಾಂಡ 17:10-13). ದೇವರು ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಗೆ ಒಂದು ಗುರುತಾಗಿತ್ತು ಮತ್ತು ದೇವರು ಅಬ್ರಹಾಮನೊಂದಿಗೆ ಈ ಒಡಂಬಡಿಕೆಯನ್ನು ಮಾಡಿಕೊಂಡನು: ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡುವೆನು ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು" (ಆದಿಕಾಂಡ 12:2-3).

ಅಬ್ರಹಾಮನು ನೂರು ವರ್ಷದವನಾಗಿದ್ದಾಗ ಇಸಾಕನ ತಂದೆಯಾದನು (ಆದಿಕಾಂಡ 21:2-5). ನಂತರ ಇಸಾಕನು ಯಾಕೋಬನ ತಂದೆಯಾದನು (ಆದಿಕಾಂಡ 25:26). ಆಮೇಲೆ ಯಾಕೋಬನಿಗೆ ಹನ್ನೆರಡು ಮಂದಿ ಗಂಡುಮಕ್ಕಳಿದ್ದರು. ಇವರು ಯೆಹೂದ್ಯ ರಾಷ್ಟ್ರವಾದ ಇಸ್ರಾಯೇಲಿನ ಹನ್ನೆರಡು ಕುಲಗಳ ಮೂಲ ಪಿತೃಗಳಾದರು (ಆದಿಕಾಂಡ 35:23-26).

**9** ಇಲ್ಲಿ 9-15 ವಚನಗಳಲ್ಲಿ ಸ್ತೆಫನನು ಯೆಹೂದ್ಯರು ಮೊದಲು ಹೇಗೆ ಐಗುಪ್ತ್ಯಕ್ಕೆ ಬಂದರೆಂಬದನ್ನು ವಿವರಿಸುತ್ತಾನೆ. ಯೋಸೇಫನು ಯಾಕೋಬನ ಹನ್ನೊಂದನೆಯ ಮಗನಾಗಿದ್ದನು. ಯಾಕೋಬನು ತನ್ನ ಹಿರಿಯ ಮಕ್ಕಳಿಗಿಂತಲೂ ಹೆಚ್ಚಾಗಿ ಯೋಸೇಫನನ್ನು ಪ್ರೀತಿಸಿದನು; ಆದುದರಿಂದ ಯೋಸೇಫನ ಅಣ್ಣಂದಿರು ಅವನ ಮೇಲೆ ಹೊಟ್ಟೆ ಕಿಚ್ಚು ಪಟ್ಟು ಅವನನ್ನು ಐಗುಪ್ತ್ಯಕ್ಕೆ ಹೊರಟಿದ್ದ ಪ್ರಯಾಣಿಕರಿಗೆ ಮಾರಿಬಿಟ್ಟರು. (ಆದಿಕಾಂಡ 37:3-4, 25-28, 36). ಯೋಸೇಫನ ಅಣ್ಣಂದಿರು ಅವನ ಮೇಲೆ ಹೊಟ್ಟೆಕಿಚ್ಚು ಹೊಂದಿದ್ದಂತೆಯೇ ಪ್ರಸ್ತುತ ಯೆಹೂದ್ಯರೂ ಯೇಸುವಿನ ಮೇಲೆ ಹೊಟ್ಟೆಕಿಚ್ಚು ಹೊಂದಿದ್ದರು. ದುಷ್ಟರು ಯಾವಾಗಲೂ ಒಳ್ಳೆಯವರ ಮೇಲೆ ಹೊಟ್ಟೆಕಿಚ್ಚು ಪಡುತ್ತಾರೆ.

**10** ದೇವರು ಯೋಸೇಫನಿಗೆ ಐಗುಪ್ತ್ಯದ [40] ಅರಸನಾದ ಪರೋಹನ ಸಮ್ಮುಖದಲ್ಲಿ ದಯಾಪಾತ್ರನೂ ಜ್ಞಾನವುಳ್ಳವನೂ ಆಗಿರುವಂತೆ ಅನುಗ್ರಹಿಸಿದನು. ವಿಶೇಷವಾಗಿ, ದೇವರು ಯೋಸೇಫನಿಗೆ ಕನಸುಗಳ ಅರ್ಥವನ್ನು ಹೇಳುವ ಸಾಮರ್ಥ್ಯವನ್ನು ಕೊಟ್ಟನು. ಯೋಸೇಫನು ಪರೋಹನ ಕನಸುಗಳಲ್ಲೊಂದಕ್ಕೆ ಅರ್ಥವನ್ನು ಹೇಳಿದ್ದರಿಂದ ಪರೋಹನು ಯೋಸೇಫನ ಜ್ಞಾನಕ್ಕೆ ಪ್ರಭಾವಿತನಾಗಿ ಆತನನ್ನು ಐಗುಪ್ತ್ಯದ ಮೇಲೆ ಅಧಿಕಾರಿಯಾಗಿ ಇಟ್ಟನು (ಆದಿಕಾಂಡ 41:15-43).

**11** ಯೋಸೇಫನ ವ್ಯಾಖ್ಯಾನದ ಪ್ರಕಾರ ಐಗುಪ್ತ್ಯ ಹಾಗು ಕಾನಾನಿನ (ಇಸ್ರಾಯೇಲ) ಮೇಲೆ ಏಳು ವರ್ಷಗಳ ಕಾಲ ಘೋರ ಕ್ಷಾಮವು ಬರಲಿದೆ ಎಂಬದನ್ನು ಫರೋಹನ ಕನಸು ಸೂಚಿಸಿತು. ಯೋಸೇಫನು ಹೇಳಿದಂತೆಯೇ ಇದು ನೆರವೇರಿತು. ಕ್ಷಾಮವು ಬಂದಾಗ ಇಸ್ರಾಯೇಲಿನಲ್ಲಿ ವಾಸವಾಗಿದ್ದ ಯೋಸೇಫನ ತಂದೆ ಹಾಗು ಸಹೋದರರು ಆಹಾರದ ಕೊರತೆಯಿಂದ ಕಷ್ಟಪಡಲಾರಂಭಿಸಿದರು. ಆದರೆ ಯೋಸೇಫನು ಐಗುಪ್ತ್ಯದಲ್ಲಿ ಜಾಣತನದಿಂದ ಮುಂಚಿತವಾಗಿಯೇ ಬಹಳ ಧಾನ್ಯವನ್ನು ಶೇಖರಿಸಿಟ್ಟಿದ್ದನು ಮತ್ತು ಯಾರೊಬ್ಬರು ಹಸಿವೆಯಿಂದ ಬಳಲಲಿಲ್ಲ (ಆದಿಕಾಂಡ 41:54-57).

**12** ಐಗುಪ್ತ್ಯದಲ್ಲಿ ಸಮೃದ್ಧಿಯಾದ ಧಾನ್ಯವಿರುವದರ ಬಗ್ಗೆ ಕೇಳಿದ ಯಾಕೋಬನು ಧಾನ್ಯವನ್ನು ತರುವದಕ್ಕೆ ತನ್ನ ಮಕ್ಕಳನ್ನು ಅಲ್ಲಿಗೆ ಕಳುಹಿಸಿದನು. ಅವರು ತಾವು ಈ ಮುಂಚೆ ದಾಸತ್ವಕ್ಕೆ ಮಾರಿದ್ದ ಕಿರಿಯ ಸಹೋದರನಾದ ಯೋಸೇಫನನ್ನು ಗುರುತಿಸಲಿಲ್ಲ. ಈಗ ಅವನು ಪರೋಹನ ಅಡಿಯಲ್ಲಿ ಐಗುಪ್ತ್ಯವನ್ನು ಆಳುವವನಾಗಿದ್ದನು! (ಆದಿಕಾಂಡ 42:1-3, 6-8).

**13-14** ಯೋಸೇಫನ ಅಣ್ಣಂದಿರು ಎರಡನೆಯ ಸಾರಿ ಧಾನ್ಯವನ್ನು ಒಯ್ಯಲು ಐಗುಪ್ತ್ಯಕ್ಕೆ ಬಂದಾಗ ಯೋಸೇಫನು ತಾನು ಯಾರೆಂಬದನ್ನು ಅವರಿಗೆ ಬಯಲು ಪಡಿಸಿದನು. ತರುವಾಯ ಯೋಸೇಫನು ತನ್ನ ತಂದೆಯಾದ ಯಾಕೋಬ ಮತ್ತು ಇಡೀ ಕುಟುಂಬವನ್ನು ಐಗುಪ್ತ್ಯದಲ್ಲಿ ವಾಸಿಸಲು ಕರೆಯಿಸಿಕೊಂಡನು (ಆದಿಕಾಂಡ 43:1-2; 45:1-10).

**15-16** ಕಾಲಕ್ರಮೇಣವಾಗಿ ಯಾಕೋಬ ಮತ್ತು ಆತನ ಹನ್ನೆರಡು ಮಂದಿ ಮಕ್ಕಳು ಐಗುಪ್ತ್ಯದಲ್ಲಿ ಮರಣಿಸಿದರು. ಆದರೆ ತರುವಾಯ ಅವರ ಮೂಳೆಗಳನ್ನು ಹೊಣಿಡಲು ಇಸ್ರಾಯೇಲಿಗೆ ಒಯ್ಯಲಾಯಿತು (ಆದಿಕಾಂಡ 50:4-9; ಯೆಹೋಶುವ 24:32). ಸ್ತೆಫನನ ಭಾಷಣ – ಮೋಶೆ (7;17-43)

**17** ಯೆಹೂದ್ಯರ ಪಿತೃಗಳು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಸಂಚರಿಸುವ ವೇಳೆಯಲ್ಲಿ ದೇವರು ತಾನು ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ನು ಮರೆಯಲಿಲ್ಲ. ದೇವರು ಯಾವಾಗಲೂ ತನ್ನ ವಾಗ್ದಾನವನ್ನು ತಕ್ಕಸಮಯದಲ್ಲಿ ನೆರವೇರಿಸುತ್ತಾನೆ. ಅಬ್ರಹಾಮನ ಸಂತತಿಯವರು ಕಾನಾನ (ಇಸ್ರಾಯೇಲ) ದೇಶವನ್ನು ಬಾಧ್ಯವಾಗಿ ಹೊಂದುವರೆಂದು ದೇವರು ಅವನಿಗೆ ವಾಗ್ದಾನ ಮಾಡಿದ್ದನು. ವಾಗ್ದಾನವು ನೆರವೇರುವದಕ್ಕೆ ಕಾಲವು ಬಂದಾಗ ನಮ್ಮ ಜನರು – ಅಂದರೆ, ಯೆಹೂದ್ಯರು – ಐಗುಪ್ತ್ಯ ದೇಶದಲ್ಲಿ ಹೆಚ್ಚಿ ಬಹಳವಾದರು.

**18-19** ಆ ಕಾಲದಲ್ಲಿ ಐಗುಪ್ತ್ಯವನ್ನು ಒಬ್ಬ ನೂತನ ಅರಸನು ಆಳುತ್ತಿದ್ದನು. ಯೆಹೂದ್ಯರ ಸಂಖ್ಯೆಯು ಬಹಳವಾಗಿ ಹೆಚ್ಚಿದೆಯೆಂದು ಈ ನೂತನ ಪರೋಹನು, ಯೆಹೂದ್ಯರಿಗೆ ಹುಟ್ಟುವ ಕೂಸುಗಳನ್ನು ನದಿಯಲ್ಲಿ ಹಾಕಬೇಕೆಂದು ಅಪ್ಪಣೆ ಮಾಡಿದನು (ವಿಮೋಚನ ಕಾಂಡ 1:7-9, 22). ಒಂದು ವೇಳೆ ಯೆಹೂದ್ಯರಿಗೆ ಅಂತಹ ಭಯಂಕರ ಹಿಂಸೆಯುಂಟಾಗಿರದಿದ್ದರೆ ಯೆಹೂದ್ಯರು ಐಗುಪ್ತ್ಯವನ್ನು ಬಿಟ್ಟು ದೇವರು ಅವರಿಗೆ ವಾಗ್ದಾನ ಮಾಡಿದ ದೇಶಕ್ಕೆ ಹೋಗಲು ಎಂದಿಗೂ ಒಪ್ಪುತ್ತಿರಲಿಲ್ಲ. ದೇವರು ತನ್ನ ಉದ್ದೇಶಗಳನ್ನು ನೆರವೇರಿಸಲು ಅವಶ್ಯಕವಾದಷ್ಟು ಹಿಂಸೆಯನ್ನು ನೇಮಕವಾದ ಕಾಲದಲ್ಲಿ ತನ್ನ ಜನರ ಮೇಲೆ ಬರಮಾಡಿದನು.

**20-22** ಮೋಶೆಯ ಈ ಕಾಲದಲ್ಲಿಯೇ ಜನಿಸಿದನು. ಮೂರು ತಿಂಗಳುಗಳ ವರೆಗೆ ಮೋಶೆಯ ಯೆಹೂದಿ ತಂದೆತಾಯಿಗಳು ಮಗುವನ್ನು ನದಿಯಲ್ಲಿ ಬಿಸಾಡಬೇಕೆಂಬ ನೂತನ ಪರೋಹನ ಅಪ್ಪಣೆಗೆ ವಿಧೇಯರಾಗಲು ನಿರಾಕರಿಸಿದರು. ಬದಲಾಗಿ ಅವರು ತಮ್ಮ ಮಗುವನ್ನು ಮನೆಯಲ್ಲಿ ಬಚ್ಚಿಟ್ಟರು, ಯಾಕೆಂದರೆ ಆತನು ಸಾಮಾನ್ಯವಾದ ಮಗುವಲ್ಲ ಎಂಬದನ್ನು ಅವರು ತಿಳಿದುಕೊಂಡಿದ್ದರು (ವಚನ 20). ಅವರು ರಾಜಾಜ್ಞೆಗೆ ಹೆದರಲಿಲ್ಲ (ಇಬ್ರಿಯ 11:23 ನೋಡಿರಿ). ಅಂತಿಮವಾಗಿ, ಅವರು ಇನ್ನು ಮಗುವನ್ನು ಮನೆಯಲ್ಲಿ ಬಚ್ಚಿಡಲು ಕಷ್ಟವಾದಾಗ ಅವರು ಆತನನ್ನು ಪರೋಹನ ಮಗಳು ಸ್ನಾನಕ್ಕೆ ಬಂದ ನದಿಯ ಬದಿಯಲ್ಲಿಟ್ಟರು. ಅವನ ದಿವ್ಯ ಸೌಂದರ್ಯವನ್ನು ಕಂಡು ಅವಳು ಆತನನ್ನು ಕಂಡುಕೊಂಡು ಪರಾಂಬರಿಸುವಳೆಂದು ಅವರು ನಿರೀಕ್ಷಿಸಿದರು. ಮತ್ತು ನಿಜವಾಗಿಯೂ, ಅವಳು ಮೋಶೆಯನ್ನು ಕಂಡುಕೊಂಡಳು ಮತ್ತು ಅವನನ್ನು ಮನೆಗೆ ತೆಗೆದುಕೊಂಡು ಹೋಗಿ ತನ್ನ ಮಗನನ್ನಾಗಿ ಮಾಡಿಕೊಂಡಳು (ವಿಮೋಚನ ಕಾಂಡ 2:1-10). ಹೀಗೆ, ಮುಂಚಿನ ಪೀಳಿಗೆಯಲ್ಲಿ ಯೋಸೇಫನಿಗಾದಂತೆಯೇ ಮೋಶೆಯು ಸಹ ಐಗುಪ್ತ್ಯದಲ್ಲಿ ಬಲಾಢ್ಯನಾದನು.

**23-29** ನಾಲ್ವತ್ತು ವರ್ಷಗಳ ವರೆಗೆ ಮೋಶೆಯು ನಿಜವಾಗಿಯೂ ಒಬ್ಬ ಇಸ್ರಾಯೇಲನು ಅಂದರೆ, ಯೆಹೂದ್ಯನು ಎಂಬುದು ಪರೋಹನ ಮಗಳ ಹೊರತಾಗಿ ಇನ್ನಾರಿಗೂ ತಿಳಿದಿರಲಿಲ್ಲ. ಅಷ್ಟು ಕಾಲದ ತನಕವೂ ಆತನು ತನ್ನ ಜೊತೆ ಇಸ್ರಾಯೇಲರಿಂದ ದೂರವಾಗಿ ಉಳಿದಿದ್ದನು. ಆದರೆ ಅಂತಿಮವಾಗಿ, ಒಂದು ದಿನ ಆತನು ಅವರನ್ನು ಬೇಟಿಯಾಗಲು ತಿರ್ಮಾನಿಸಿದನು (ವಚನ 23).

ಒಬ್ಬ ಐಗುಪ್ತ್ಯನು ಯೆಹೂದ್ಯರಲ್ಲೊಬ್ಬನೊಂದಿಗೆ ಅನ್ಯಾಯವಾಗಿ ವರ್ತಿಸುತ್ತಿರುವದನ್ನು ಮೋಶೆಯು ಕಂಡು ಬಹಳ ಕೋಪಗೊಂಡವನಾಗಿ ಐಗುಪ್ತ್ಯದವನನ್ನು ಕೊಂದು ಬಿಟ್ಟನು. ಮೋಶೆಯು ತಾನು ಯೆಹೂದ್ಯರನ್ನು ಹಿಂಸೆಯಿಂದ ವಿಮೋಚಿಸಲು ದೇವರಿಂದ ನೇಮಿಸಲ್ಪಟ್ಟಿದ್ದನೆಂಬದನ್ನು ಹೇಗೂ ತಿಳಿದುಕೊಂಡಿದ್ದನು. ಆದರೆ ಆತನ ಜೊತೆ ಯೆಹೂದ್ಯರು ಅವನನ್ನು ಸ್ವೀಕರಿಸಿಕೊಳ್ಳಲಿಲ್ಲ (ವಿಮೋಚನ ಕಾಂಡ 2:11-14). ಅದು ಮಾತ್ರವಲ್ಲದೆ, ಮೋಶೆಯು ಒಬ್ಬ ಯೆಹೂದ್ಯನು ಮತ್ತು ಅವನು ಒಬ್ಬ ಐಗುಪ್ತ್ಯನನ್ನು ಸಾಯಿಸಿದ್ದಾನೆಂಬ ಸುದ್ಧಿಯು ಶೀಘ್ರವಾಗಿ ಹರಡಿತು.. ಆದುದರಿಂದ, ಮೋಶೆಯು ಐಗುಪ್ತ್ಯದಿಂದ ಓಡಿ ಹೋಗಿ ಸಿನಾಯ ಮರುಭೂಮಿಯ ಪೂರ್ವಕ್ಕಿರುವ ಮಿದ್ಯಾನ್ ದೇಶದಲ್ಲಿ ಸೇರಿಕೊಂಡನು (ವಿಮೋಚನ ಕಾಂಡ 2:15) ಯೋಸೇಫನು ತನ್ನ ಅಣ್ಣಂದಿರ ಒತ್ತಾಯದಿಂದ ಸ್ವಂತದೇಶವನ್ನು ಬಿಟ್ಟು ಅನ್ಯದೇಶದಲ್ಲಿ ಪ್ರವಾಸಿಯಾದಂತೆಯೇ ಈಗ ಮೋಶೆಯು ಐಗುಪ್ತ್ಯವನ್ನು ಬಿಟ್ಟು ಮಿದ್ಯಾನ್ ಎಂಬ ಅನ್ಯದೇಶದಲ್ಲಿ ಪ್ರವಾಸಿಯಾಗಬೇಕಾಯಿತು.

**30-34** ಮೋಶೆಯು ಮಿದ್ಯಾನ್‌ದಲ್ಲಿ ನಾಲ್ವತ್ತು ವರ್ಷಗಳ ವರೆಗೆ ಇದ್ದನು. ಆ ಕಾಲದ ಕೊನೆಯಲ್ಲಿ ಅವನು ಎಂಬತ್ತು ವಯಸ್ಸಿನವನಾಗಿದ್ದನು. ದೇವರು ತಾನು ಮೋಶೆಯನ್ನು ಕರೆದ ಕೆಲಸಕ್ಕಾಗಿ ಸಿದ್ಧಗೊಳಿಸಲು ಅಷ್ಟು ದಿರ್ಘವಾದ ಕಾಲವು ಹಿಡಿಯಿತು! ನಾಲ್ವತ್ತು ವರ್ಷಗಳ ಕೊನೆಯಲ್ಲಿ ದೇವದೂತನೊಬ್ಬನು [41] ಉರಿಯುವ ಪೊದೆಯೊಂದರಲ್ಲಿ ಮೋಶೆಗೆ ಕಾಣಿಸಿಕೊಂಡನು (ವಚನ 30). ದೇವರು ಮೋಶೆಗೆ ಆತನು ನಿಂತಿರುವ ಸ್ಥಳವು ಪರಿಶುದ್ಧ ಭೂಮಿಯಾಗಿದೆ ಎಂದನು (ವಚನ 33).. ಯೆಹೂದ್ಯರು ಒಂದೇ "ಪರಿಶುದ್ಧಭೂಮಿ" ಇರುತ್ತದೆ, ಅದು ಯೆರೂಸಲೇಮಿನಲ್ಲಿರುವ ಅವರ ದೇವಾಲಯದ ಸ್ಥಳವು ಎಂಬದಾಗಿ ನಂಬುತ್ತಿದ್ದರು. ಸ್ತೆಫನನ ತಾತ್ಪರ್ಯವೇನಾಗಿತ್ತೆಂದರೆ ದೇವರು ಯಾವ ಸ್ಥಳದಲ್ಲಿರುತ್ತಾನೋ ಆ ಸ್ಥಳವು "ಪರಿಶುದ್ಧ". ದೇವರು ಅಬ್ರಹಾಮನಿಗೆ ಮೆಸೊಪೊತಾಮ್ಯದಲ್ಲಿ ಕಾಣಿಸಿಕೊಂಡನು (ವಚನ 2). ಈಗ ದೇವರು ಮೋಶೆಗೆ ಸಿನಾಯ್ ಅಡವಿಯಲ್ಲಿ ಕಾಣಿಸಿ ಕೊಂಡಿದ್ದನು (ವಿಮೋಚನಕಾಂಡ 3:1-109).

**35** ಇಲ್ಲಿ ಸ್ತೆಫನನು ಕ್ರಿಸ್ತನ ಹೆಸರನ್ನು ಪ್ರಸ್ತಾಪಿಸದಿದ್ದಾಗ್ಯು ಮೋಶೆಯನ್ನು ಕ್ರಿಸ್ತನೊಂದಿಗೆ ಹೋಲಿಸಲು ಪ್ರಾರಂಭಿಸುತ್ತಾನೆ. ಯೆಹೂದ್ಯರು ಪ್ರಾರಂಭದಲ್ಲಿ ಮೋಶೆಯನ್ನು ತಿರಸ್ಕರಿಸಿದರು. ಹಾಗಿದ್ದರೂ, ದೇವರು ಅದೇ ಮೋಶೆಯನ್ನು ಅವರ ಅಧಿಕಾರಿಯನ್ನಾಗಿಯೂ ಬಿಡುಗಡೆ ಮಾಡುವವನನ್ನಾಗಿಯೂ ಕಳುಹಿಸಿದನು. ಅದೇ ರೀತಿಯಲ್ಲಿ, ಯೆಹೂದ್ಯರು ಕ್ರಿಸ್ತನನ್ನು ತಿರಸ್ಕರಿಸಿದರು, ದೇವರು ಆತನನ್ನೇ ಅವರ ಕರ್ತನನ್ನಾಗಿಯೂ ರಕ್ಷಕನನ್ನಾಗಿಯೂ ಕಳುಹಿಸಿದನು.

**36** ಮೋಶೆಯು ಐಗುಪ್ತ್ಯಕ್ಕೆ ತಿರಿಗಿ ಬಂದು ಅದ್ಭುತ ಕಾರ್ಯಗಳು, ಹಾಗು ಸೂಚಕ ಕಾರ್ಯಗಳ ಮೂಲಕವಾಗಿ ಯೆಹೂದ್ಯರನ್ನು ವಿಮೋಚಿಸಿದನು. ಯೆಹೂದ್ಯರು ಐಗುಪ್ತ್ಯದಿಂದ ಪಾರಾದ ಚರಿತ್ರೆಯು ವಿಮೋಚನ ಕಾಂಡ 8-12

ಅದ್ಯಾಯಗಳಲ್ಲಿ ಹೇಳಲ್ಪಟ್ಟಿರುತ್ತದೆ. ಯೆಹೂದ್ಯರು ಐಗುಪ್ತ್ಯದಿಂದ ಹೊರಟ ಕೂಡಲೆ ಪರೋಹ ಮತ್ತು ಆತನ ಸೈನ್ಯವು ಅವರನ್ನು ಬೆನ್ನಟ್ಟಿದರು. ಯೆಹೂದ್ಯರು ಕೆಂಪು ಸಮುದ್ರವನ್ನು ತಲುಪಿದರು, ಆದರೆ ಅವರ ಹಿಂದೆ ಐಗುಪ್ತ್ಯದ ಸೈನ್ಯವು ಸಮೀಪವಾಗುತ್ತಿತ್ತು. ಆಗ ದೇವರು ಮೋಶೆಯ ಮೂಲಕ ಸಮುದ್ರದ ನೀರನ್ನು ಎಡ ಮತ್ತು ಬಲಕ್ಕೆ ಇಬ್ಭಾಗಿಸಿದನು, ಹೀಗೆ ಯೆಹೂದ್ಯರು ಒಣನೆಲದಲ್ಲಿ ನಡೆದುಕೊಂಡು ದಾಟುವದಕ್ಕೆ ಶಕ್ತರಾದರು. ಈ ರೀತಿಯಾಗಿ ಯೆಹೂದ್ಯರು ಸುರಕ್ಷಿತವಾಗಿ ಆಚೆದಡವನ್ನು ತಲುಪಿದರು. ಆದರೆ ಐಗುಪ್ತ್ಯದ ಸೈನ್ಯವು ಅವರನ್ನು ಹಿಂಬಾಲಿಸಿ ದಾಟುವದಕ್ಕೆ ಪ್ರಯತ್ನಿಸಿದಾಗ ಸಮುದ್ರದ ನೀರು ಪು ನಃ ಅವರ ಮೇಲೆ ಬಿಳುವಂತೆ ಅನುಮತಿಸಿದನು, ಮತ್ತು ಅವರೆಲ್ಲರೂ ಮುಳುಗಿಹೋದರು. (ವಿಮೋಚನಕಾಂಡ 14:5-28). ಅದರ ನಂತರ ಮೋಶೆಯು ನಾಲ್ವತ್ತು ವರ್ಷಗಳವರೆಗೆ ಯೆಹೂದ್ಯರನ್ನು ಅಡವಿಯಲ್ಲಿ ನಡೆಸಿಕೊಂಡು ಬಂದನು.

**37** ಇಲ್ಲಿ ಸ್ತೆಫನನು ಇಸ್ರಾಯೇಲರಿಗೆ (ಯೆಹೂದ್ಯರು) ಮೋಶೆಯು ಹೇಳಿದ ಮಾತುಗಳನ್ನು ಉಲ್ಲೇಖಿಸುತ್ತಾನೆ: ನಿಮ್ಮ ದೇವರಾದ ಕರ್ತನು ನಿಮ್ಮ ಸಹೋದರರಲ್ಲಿ ನನ್ನಂಥ ಪ್ರವಾದಿಯನ್ನು ಏರ್ಪಡಿಸುವನು" (ಧರ್ಮೋಪದೇಶಕಾಂಡ 18:15). ಮೋಶೆಯು ಯಾವ ಪ್ರವಾದಿಯ ವಿಷಯದಲ್ಲಿ ಮಾತಾಡಿದನೋ ಆ ಪ್ರವಾದಿಯೇ ಯೇಸು ಎಂಬದಾಗಿ ಪೇತ್ರನು ಈ ಮುಂಚೆ ಯೆಹೂದ್ಯರಿಗೆ ಈಗಾಗಲೇ ಹೇಳಿದ್ದನು (ಅ.ಕೃತ್ಯ 3:22-23).

ಸ್ತೆಫನನು ಮೋಶೆಯ ಕುರಿತಾಗಿ ಈ ಎಲ್ಲಾ ಸಂಗತಿಗಳನ್ನು ಹಿರೀಸಭೆಯ ಯೆಹೂದ್ಯ ನಾಯಕರಿಗೆ ಏಕೆ ಹೇಳಿದನೆಂಬದನ್ನು ನಾವು ಈಗ ತಿಳಿದುಕೊಳ್ಳಬಹುದು: ಯಾಕೆಂದರೆ ನನ್ನಂಥ ಪ್ರವಾದಿಯೆಂದು ಮೋಶೆಯು ಹೇಳಿದ ವ್ಯಕ್ತಿಯು ಕ್ರಿಸ್ತನೇ ಆಗಿದ್ದಮ. ಯೆಹೂದ್ಯರು ಮೊದಲು ಮೋಶೆಯನ್ನು ತಿರಸ್ಕರಿಸಿ ಅರಣ್ಯದಲ್ಲಿ ನಿರಂತರವಾಗಿ ಆತನಿಗೆ ಅವಿಧೇಯರಾದ ಪ್ರಕಾರವೇ ಪ್ರಸ್ತುತ ಕಾಲದ ಯೆಹೂದ್ಯರು ಕ್ರಿಸ್ತನನ್ನು ತಿರಸ್ಕರಿಸಿ ಅವಿಧೇಯರಾಗಿರುತ್ತಾರೆ.ಸ್ವತಃ ಯೇಸುವು ಯೆಹೂದ್ಯರಿಗೆ ಹೇಳಿದ್ದೇನೆಂದರೆ : "ನೀವು ಮೋಶೆಯ ಮಾತನ್ನು ನಂಬುವವರಾಗಿದ್ದರೆ ನನ್ನ ಮಾತನ್ನೂ ನಂಬುತ್ತಿದ್ದಿರಿ, ಕಾರಣ ಆತನು ನನ್ನ ವಿಷಯವಾಗಿ ಬರೆದನು" (ಯೋಹಾನ 5:46-47). ಅದರ ಫಲಿತವಾಗಿ ಸ್ತೆಫನನು ಹೇಳುವದೇನೆಂದರೆ: ಯೆಹೂದ್ಯ ಹಿರೀಸಭೆಯು ಕ್ರಿಸ್ತನನ್ನು ಗುರುತಿಸಲಿ! ಮೋಶೆಯು ತಿಳಿಸಿದ ಪ್ರವಾದಿಯು ಯೇಸುವೇ ಆಗಿದ್ದಾನೆ. ಮೋಶೆಯು ಯೆಹೂದ್ಯರ ಪಿತೃಗಳನ್ನು ಐಗುಪ್ತ್ಯದ ದಾಸತ್ವದೊಳಗಿಂದ ವಿಮೋಚಿಸಿದ ಪ್ರಕಾರವೇ ಯೇಸು ಅವರನ್ನು ಪಾಪದ ದಾಸತ್ವದೊಳಗಿಂದ ಬಿಡಿಸುವದಕ್ಕಾಗಿ ಅವರ ರಕ್ಷಕನಾಗಿಯೂ, ವಿಮೋಚಕನಾಗಿಯೂ ದೇವರಿಂದ ಆರಿಸಿಕೊಳ್ಳಲ್ಪಟ್ಟು ಅಭಿಷೇಕಿಸಲ್ಪಟ್ಟಿರುತ್ತಾನೆ. ನೆಂಬದನ್ನು ಯೆಹೂದ್ಯರು ತಿಳಿಯಲಿ.

**38** ಮೋಶೆಯು (ಸಿನಾಯ್) ಅಡಿವಿಯೊಳಗಿನ ಸಭೆಯಲ್ಲಿದ್ದನು. ಆ ಅಡವಿಯಲ್ಲಿ ದೇವ ಜನರು, ಆತನ "ಸಭೆ" ಇತ್ತು. ಅಲ್ಲದೆ ಅವರೊಂದಿಗೆ ಒಬ್ಬ ದೇವದೂತನು, ಅಂದರೆ, ಸ್ವತ: ದೇವರು ಅವರೊಂದಿಗೆ ದೂತನೊಬ್ಬನ ರೂಪದಲ್ಲಿ ಇದ್ದನು (ವಚನಗಳು 30-34 ಮತ್ತು ವ್ಯಾಖ್ಯಾನ ನೋಡಿರಿ). ದೇವರು ಯೆಹೂದ್ಯರಿಗೆ – "ನನ್ನ ಪ್ರಸನ್ನತೆಯು, ನಿಮ್ಮ ಜೊತೆಯಲ್ಲಿ ಹೋಗುವದು" ಎಂದು ಹೇಳಿದ್ದನು (ವಿಮೋಚನಕಾಂಡ 33:14). ಆದುದರಿಂದ ಆ ದೇವದೂತನು ದೇವರ ಪ್ರಸನ್ನತೆಯಾಗಿದ್ದನು. ದೇವದೂತನ ಮುಖಾಂತರವಾಗಿ ದೇವರು ಸಿನಾಯ್ ಪರ್ವತದಲ್ಲಿ ಮೋಶೆಯ ಸಂಗಡ ಮಾತಾಡಿ ತಾನು ಸ್ವತಃ ಕೈಯಿಂದ ಶಿಲಾಶಾಸನಗಳ ಮೇಲೆ ಬರೆದಿದ್ದ ಧರ್ಮಶಾಸ್ತ್ರವನ್ನು ನೀಡಿದನು – ಅವನೇ ಸ್ತೆಫನನು ಇಲ್ಲಿ ಜೀವಕರವಾದ ದೈವೋಕ್ತಿಗಳು ಎಂದು ಕರೆಯುತ್ತಾನೆ (ವಿಮೋಚನಕಾಂಡ 24:12, 31:18, 32:15-16).

**39-41** ದೇವರ ಧರ್ಮಶಾಸ್ತ್ರವನ್ನು ಪಡೆದುಕೊಳ್ಳಲು ಮೋಶೆಯು ನಾಲ್ವತ್ತು ದಿವಸಗಳ ತನಕ ಸಿನಾಯ್ ಬೆಟ್ಟದ ತುದಿಯಲ್ಲಿದ್ದನು. ಮೋಶೆಯು ಬೆಟ್ಟದಲ್ಲಿ ಇರುವ ವೇಳೆಯೊಳು ಯೆಹೂದ್ಯರು ತಾಳ್ಮೆಯನ್ನು ಕಳೆದುಕೊಂಡು ದೇವರಿಂದ ವಿಮುಖರಾದರು. ಅವರು ಬಂಗಾರದ ಬಸವನ ಮೂರ್ತಿಯನ್ನು ನಿರ್ಮಿಸಿ ಅದನ್ನು ಆರಾಧಿಸಲಾರಂಭಿಸಿದರು (ವಿಮೋಚನಕಾಂಡ 32:1-6).

**42-43** ಯೆಹೂದ್ಯರು ಬೇಕೆಂದೆ ದೇವರಿಗೆ ಅವಿಧೇಯರಾಗಿ ದೇವರ ಸ್ಥಾನದಲ್ಲಿ ವಿಗ್ರಹವೊಂದನ್ನು ನಿರ್ಮಿಸಿ ಆರಾಧಿಸಿದ್ದರಿಂದ ದೇವರು ಅವರನ್ನು ನಕ್ಷತ್ರ ಗಣಗಳನ್ನು [42] ಪೂಜಿಸುವದಕ್ಕೆ ಒಪ್ಪಿಸಿ ಬಿಟ್ಟನು. ಈ ಅವಿಧೇಯರಾದ ಯೆಹೂದ್ಯರು ತಮ್ಮ ಕೈಯಿಂದ ನಿರ್ಮಿಸಿದ ವಿಗ್ರಹಗಳನ್ನು ಮಾತ್ರವೇ ಆರಾಧಿಸಲಿಲ್ಲ; ಅವರು ನಕ್ಷತ್ರಗಳನ್ನೂ, ಗ್ರಹಗಳನ್ನೂ ಪೂಜಿಸಿದರು. ಇಲ್ಲಿ ಸ್ತೆಫನನು ಆಮೋಸ 5:25-27 ರಲ್ಲಿ ಆಮೋಸನು ನುಡಿದ ಪ್ರವಾದನೆಯಿಂದ ಉಲ್ಲೇಖಿಸುತ್ತಾನೆ. ಈ ಪ್ರವಾದನೆಯಲ್ಲಿ ದೇವರು ಯೆಹೂದ್ಯರಿಗೆ – "ನನ್ನನ್ನು ಆರಾಧಿಸುವದಕ್ಕೆ ಬದಲಾಗಿ ನೀವು ಮೊಲೋಖ ಮತ್ತು ರೊಂಫಾ ದೇವತೆಗಳ ವಿಗ್ರಹಗಳನ್ನು ಆರಾಧಿಸಿದ್ದೀರಿ. ನೀವು ಇದನ್ನು ಮಾಡಿರುವ ಕಾರಣದಿಂದ ನಾನು ನಿಮ್ಮನ್ನು ಬಾಬೇಲಿನ ಆಚೆಗೆ ಗಡೀಪಾರು ಮಾಡುವೆನು" ಎಂದು ಹೇಳಿದನು (ವಚನ 43). ಮತ್ತು ನಿಜವಾಗಿಯೂ, ದೇವರು ಅನಂತರ ಯೆಹೂದ್ಯರನ್ನು ಇಸ್ರಾಯೇಲಿನಿಂದ ಹೊರಡಿಸಿ ಬಾಬೇಲಿಗೆ [43] ಸೆರೆಯಾಳುಗಳಾಗಿ ಕಳುಹಿಸಿದನು.

## ಸ್ತೆಫನನ ಸಂದೇಶ – ದೇವರ ನಿವಾಸ (7:44-53)

**44** ಸಿನಾಯ್ ಅಡವಿಯೊಳಗೆ ದೇವದರ್ಶನ ಗುಡಾರವು ಯೆಹೂದ್ಯರ ಬಳಿಯಲ್ಲಿ ಇತ್ತು. ಅದು ದೇವರ ಸಾಕ್ಷಿಯಾಗಿತ್ತು – ಅಂದರೆ, ದೇವರು ತನ್ನ ಧರ್ಮಶಾಸ್ತ್ರವನ್ನು ಬರೆದಿದ್ದ ಎರಡು ಶಿಲಾಶಾಸನಗಳಾಗಿದ್ದವು (ವಿಮೋಚನ ಕಾಂಡ 31:18; ಪ್ರಕಟಣೆ 15:5-6 ಮತ್ತು ವ್ಯಾಖ್ಯಾನ ನೋಡಿರಿ). ದೇವದರ್ಶನ ಗುಡಾರವನ್ನು ಹೇಗೆ ಮಾಡಬೇಕೆಂಬ ಮಾದರಿಯನ್ನು

ದೇವರು ಮೋಶೆಗೆ ತಿಳಿಸಿದ್ದನು (ವಿಮೋಚನಕಾಂಡ 25:8-9). ಯೆಹೂದ್ಯರು ಅಡವಿಯೊಳಗಿದ್ದಾಗ ಅವರಿಗೆ ಅನಂತರ ಯೆರೂಸಲೇಮಿನಲ್ಲಿ ಕಟ್ಟಿದ ದೊಡ್ಡ ಸ್ಥಿರವಾದ ದೇವಾಲಯದಂತಹ ಕಟ್ಟಡವು ಇರಲಿಲ್ಲ. ಅವರು ಕೇವಲ ಗುಡಾರವನ್ನು ಹೊಂದಿದ್ದರು ಮತ್ತು ಅವರು ಹೋದಲ್ಲೆಲ್ಲಾ ಆ ದೇವದರ್ಶನ ಗುಡಾರವನ್ನು ಹೊತ್ತೊಯ್ದರು.

**45** ನಾಲ್ವತ್ತು ವರ್ಷಗಳ ವರೆಗೆ ಯೆಹೂದ್ಯರು ಅರಣ್ಯದೊಳಗೆ ಅಲೆದಾಡಿದರು. ಆ ಕಾಲದ ಅಂತ್ಯದಲ್ಲಿ ನೂತನ ನಾಯಕನಾದ ಯೆಹೋಶುವನು ಅವರನ್ನು ದೇವರು ಅಬ್ರಹಾಮನ ಸಂತಾನದವರಿಗೆ ಕೊಡುತ್ತೇನೆಂದು ಪ್ರಾರಂಭದಲ್ಲಿ ವಾಗ್ದಾನ ಮಾಡಿದ್ದ ಇಸ್ರಾಯೇಲ್ ದೇಶದೊಳಗೆ ನಡೆಸಿದನು. ಆ ಸಮಯದಲ್ಲಿ ಕೆಲವು ಅನ್ಯಜನಾಂಗದ ಕುಲಗಳವರು ಇಸ್ರಾಯೇಲಿನಲ್ಲಿ ವಾಸಿಸುತ್ತಿದ್ದರು, ಮತ್ತು ಯೆಹೂದ್ಯರು ದೇವರ ಸಹಾಯದಿಂದ ಅವರನ್ನು ಅಲ್ಲಿಂದ ಹೊರಡಿಸಿ ಬಿಟ್ಟರು. ಅಂತಿಮವಾಗಿ, ಅರಸನಾದ ದಾವೀದನ ಕಾಲದಲ್ಲಿ ಅನೇಕ ಯುದ್ಧಗಳ ತರುವಾಯ ಯೆಹೂದ್ಯರು ಇಡೀ ದೇಶವನ್ನು ಬಾಧ್ಯವಾಗಿ ಪಡೆದುಕೊಂಡರು. ಯೆಹೂದ್ಯರು ದೇವದರ್ಶನ ಗುಡಾರವನ್ನು ತಮ್ಮೊಂದಿಗೆ ಇಸ್ರಾಯೇಲಿಗೆ ತೆಗೆದುಕೊಂಡು ಹೋದರು, ಮತ್ತು ಅನೇಕವರ್ಷಗಳು, ದಾವೀದನ ಕಾಲದಲ್ಲಿ ಮುಖ್ಯ ಯೆಹೂದಿ ದೇವಾಲಯವು ಕಟ್ಟಲ್ಪಡುವವರೆಗೂ ಯೆಹೂದ್ಯರು ದೇವರನ್ನು ಆ ಗುಡಾರದಲ್ಲಿ ಆರಾಧಿಸಿದರು.

**46** ಅರಸನಾದ ದಾವೀದನು ದೇವರಿಗಾಗಿ ಒಂದು ಸರಿಯಾದ ಆಲಯವನ್ನು ಕಟ್ಟಲು ಬಯಸಿದನು (2 ಸಮುವೇಲ 7:1-2). ಆದರೆ, ದೇವರು ತಾನು ದೊಡ್ಡ ಆಲಯದಲ್ಲಿ ವಾಸಿಸ ಬೇಕಾದ ಅಗತ್ಯವಿಲ್ಲ ಎಂದು ಪ್ರವಾದಿಯಾದ ನಾತಾನನ ಮೂಲಕವಾಗಿ ದಾವೀದನಿಗೆ ಹೇಳಿದನು. ಕಾರಣ ಈ ಎಲ್ಲಾ ವರ್ಷಗಳು ಆತನು ಯೆಹೂದ್ಯರೊಂದಿಗಿದ್ದನು, ಆತನು ದೇವದರ್ಶನ ಗುಡಾರದಲ್ಲಿ ವಾಸಿಸುತ್ತಿದ್ದನು. ಈಗ ಆತನಿಗೆ ದೊಡ್ಡ ಆಲಯದ ಅಗತ್ಯವೇಕೆ? (2 ಸಮುವೇಲ 7:5-7). ಬಳಿಕ ದೇವರು ದಾವೀದನಿಗೆ ಹೇಳಿದ್ದೇನೆಂದರೆ: "ನಿನ್ನಿಂದ ಹುಟ್ಟುವವನನ್ನು (ಕ್ರಿಸ್ತನು) ನೆಲೆಗೊಳಿಸಿ ಅವನ ರಾಜ್ಯವನ್ನು ಸ್ಥಿರಪಡಿಸುವೆನು. ಅವನು ನನ್ನ ಹೆಸರಿಗಾಗಿ ಒಂದು ಮನೆಯನ್ನು ಕಟ್ಟುವನು, "ನಾನು ಅವನ ರಾಜ್ಯ ಸಿಂಹಾಸನವನ್ನು ನಿರಂತರವಾಗಿ ಸ್ಥಿರಪಡಿಸುವೆನು. ನಾನು ಅವನಿಗೆ ತಂದೆಯಾಗಿರುವೆನು, ಅವನು ನನಗೆ ಮಗನಾಗಿರುವನು" (2 ಸಮುವೇಲ 7:12-14).

**47** ಕೊನೆಗೆ, ದಾವೀದನು ಯೆಹೂದ್ಯ ದೇವಾಲಯವನ್ನು ಕಟ್ಟಲಿಲ್ಲ, ಆತನ ಮಗನಾದ ಸೊಲೊಮೋನನು ಕಟ್ಟಿಸಿದನು. ಯೆರೂಸಲೇಮಿನಲ್ಲಿ ಮಹಾ ದೇವಾಲಯವನ್ನು ಕಟ್ಟಿದವನು ಸೊಲೋಮೋನನೇ ಆಗಿದ್ದು, ಅಲ್ಲಿಯೇ ಯೆಹೂದ್ಯರು ಹೊಸ ಒಡಂಬಡಿಕೆಯಕಾಲದ ತನಕ ಆರಾಧನೆ ಮಾಡಿದರು (ಈ ದೇವಾಲಯವು ಕ್ರಿ.ಶಕ 70 ರಲ್ಲಿ ರೋಮಾಯದಿಂದ ನಾಶ ಮಾಡಲ್ಪಟ್ಟಿತು). ಒಂದು ವಿಧದಲ್ಲಿ, ಸೊಲೋಮೋನನು ದೇವಾಲಯವನ್ನು ಕಟ್ಟಿದ್ದು ದೇವರು ದಾವೀದನಿಗೆ ಆತನಿಂದ ಹುಟ್ಟುವವನು ನನ್ನ ಹೆಸರಿಗಾಗಿ ಒಂದು ಮನೆಯನ್ನು ಕಟ್ಟುವನೆಂದು ಹೇಳಿದ್ದ ವಾಗ್ದಾನದ ನೆರವೇರಿಕೆಯಾಗಿತ್ತು. (2 ಸಮುವೇಲ 7:13).ಆದರೆ ಇನ್ನೊಂದು ವಿಧದಲ್ಲಿ, ಈ ವಾಗ್ದಾನವು ಕ್ರಿಸ್ತನು ಬಂದಾಗ ಮಾತ್ರವೇ ನೆರವೇರಿತ್ತು, ಯಾಕೆಂದರೆ ಆತನೇ ದೇವರ ನಿಜವಾದ "ಆಲಯ"ವನ್ನು ಕಟ್ಟಿದನು. ಕ್ರಿಸ್ತನ ಸಿಂಹಾಸನವು ಆತ್ಮೀಕ "ಸಿಂಹಾಸನ" ಆಗಿದ್ದು ಸದಾಕಾಲವೂ ಇರುವದಾಗಿದೆ (ಲೂಕ 1:30-33). ಕ್ರಿಸ್ತನು ಕಟ್ಟಿದ "ಮನೆ"ಯು ಒಂದು ಆತ್ಮೀಕ "ಮನೆ"ಯಾಗಿರುತ್ತದೆ. ದೇವರ ನಿಜವಾದ ಮನೆ ಅಥವಾ ಆಲಯವು ಒಂದು ಕಟ್ಟಡವಾಗಿರುವದಿಲ್ಲ; ಜನರು – ವಿಶ್ವಾಸಿಗಳೇ ಆತನ ಆಲಯವಾಗಿದ್ದಾರೆ. ವಿಶ್ವಾಸಿಗಳಿಂದಲೇ ದೇವರ ನಿಜವಾದ ಆತ್ಮೀಕ ದೇವಾಲಯವು ನಿರ್ಮಿತವಾಗುತ್ತದೆ. ದೇವರು ವಾಸಿಸುವ ಆಲಯವು ಇದೇ ಆಗಿರುತ್ತದೆ. ಕ್ರಿಸ್ತನನ್ನು ವಿಶ್ವಾಸಿಸುವ ವರೆಲ್ಲರ ಹೃದಯಗಳಲ್ಲಿ ದೇವರ ವಾಸಸ್ಥಾನವಿರುತ್ತದೆ. ಮತ್ತು ದೇವರ ಆತ್ಮೀಕ ದೇವಾಲಯದ ಮುಖ್ಯವಾದ ಮೂಲೆಗಲ್ಲು ಸ್ವತಃ ಕ್ರಿಸ್ತನೇ ಆಗಿದ್ದಾನೆ (ಎಫೆಸ 2:19-22 ಮತ್ತು ವ್ಯಾಖ್ಯಾನ ನೋಡಿರಿ).

**48-50** ಸೊಲೊಮೋನನು ದೇವಾಲಯವನ್ನು ನಿರ್ಮಿಸಿದ ನಂತರ ಹೇಳಿದ್ದೇನೆಂದರೆ: ದೇವರು ನಿಜವಾಗಿ ಭೂಲೋಕದಲ್ಲಿ ವಾಸಿಸುವನೋ? ಆಕಾಶವೂ ಉನ್ನತೋನ್ನತವಾದ ಆಕಾಶವೂ ವಾಸಕ್ಕೆ ಸಾಲವು; ಹೀಗಿರುವಲ್ಲಿ ನಾನು ಕಟ್ಟಿಸಿದ ಈ ಮಂದಿರವು ಹೇಗೆ ಸಾಕಾದೀತು!" ( 1 ಅರಸುಗಳು 8:27). ಸ್ತೆಫನನು ಇಲ್ಲಿ ಪರಾತ್ಪರನಾದ (ದೇವರು) ಕೈಯಿಂದ ಕಟ್ಟಿದ ಮನೆಗಳಲ್ಲಿ ವಾಸಮಾಡುವವನಲ್ಲ (ವಚನ 48) ಎಂದು ಹೇಳಿದನು. ಬಳಿಕ ಸ್ತೆಫನನು ಯೆಶಾಯ 66:1-2 ರಲ್ಲಿನ ವಿಷಯವನ್ನು ಉಲ್ಲೇಖಿಸುತ್ತಾನೆ, ಅಲ್ಲಿ ಪ್ರವಾದಿಯಾದ ಯೆಶಾಯನು ಸಹ ಅದೇ ವಿಷಯವನ್ನು ಹೇಳುತ್ತಾನೆ. ಆದುದರಿಂದ, ಈ ಹಳೆ ಒಡಂಬಡಿಕೆಯ ಪ್ರವಾದಿಗಳು – ದೇವಾಲಯವನ್ನು ಕಟ್ಟಿದ ಸೊಲೊಮೋನನೂ ಸೇರಿದಂತೆ – ಎಲ್ಲರೂ ಸಹ ದೇವರಿಗೆ ವಾಸಿಸಲು ದೇವಾಲಯದ ಅಗತ್ಯವಿಲ್ಲ ಎಂದು ಹೇಳಿದ್ದಾರೆ. ಹಿರೀ ಸಭೆಯು ಸ್ತೆಫನನ ವಿರುದ್ಧ ದೇವಾಲಯಕ್ಕೆ ವಿರೋಧವಾಗಿ ಮಾತಾಡಿದ ಆರೋಪವನ್ನು ಹೊರಿಸದಿರಲಿ; ಯೆಹೂದ್ಯರ ಶಾಸ್ತ್ರಗಳೇ (ಹಳೆ ಒಡಂಬಡಿಕೆ) ಅದಕ್ಕೆ ವಿರೋಧವಾಗಿ ಮಾತಾಡಿವೆ! ನಿಜದೇವಾಲಯವು ದೇವರ ನಂಬಿಗಸ್ಥ ಹಾಗು ವಿಧೇಯತೆಯುಳ್ಳ ಜನರನ್ನೊಳಗೊಂಡಿದೆ ಎಂದು ಹಳೆ ಒಡಂಬಡಿಕೆಯು ಬೋಧಿಸುತ್ತದೆ.

**51** ಇಲ್ಲಿ ಸ್ತೆಫನನು ಎಲ್ಲರ ಎದುರಿನಲ್ಲಿಯೇ ಹಿರೀಸಭೆಯನ್ನು ವಿರೋಧಿಸಲಾರಂಭಿಸುತ್ತಾನೆ. ಸ್ತೆಫನನು ದೇವರಿಗೆ ವಿರೋಧವಾಗಿ ಮಾತಾಡಿದನೆಂದು ಈ ಯೆಹೂದ್ಯರು ಆರೋಪಿಸಿದ್ದರು. ಈಗ ಸ್ತೆಫನನು ಸ್ವತಃ ಯೆಹೂದ್ಯರ ಮೇಲೆಯೇ ಅವರು ದೇವರನ್ನೂ, ಮತ್ತು ಯಾವ ಪವಿತ್ರಾತ್ಮನ ಮೂಲಕವಾಗಿ ವಿರೋಧಿಸುತ್ತಿದ್ದಾರೆಂಬ ಆರೋಪವನ್ನು ಮಾಡಿದನು. ಅವರು ಸತತವಾಗಿ ಮೋಶೆಗೂ, ಇತರ ಹಳೆ ಒಡಂಬಡಿಕೆಯ ಪ್ರವಾದಿಗಳಿಗೂ ಅವಿಧೇಯರಾದ ಅವರ ಪೂರ್ವಿಕರಂತೆಯೇ ಇದ್ದಾರೆ. ಅವರು ಬಹಿರಂಗವಾಗಿ ಸುನ್ನತಿ ಹೊಂದಿದವರು, ಆದರೆ ಅವರ ಹೃದಯ ಮತ್ತು ಕಿವಿಗಳು ಎಂದಿಗೂ ಸುನ್ನತಿ

"ಹೊಂದದ ಯೆಹೂದ್ಯರಾಗಿದ್ದಾರೆ. ಅಂದರೆ, ಅವರು ದೇವರನ್ನು ಪ್ರೀತಿಸದ ಅಥವಾ ವಿಧೇಯರೂ ಆಗದ ಸುನ್ನತಿಯಿಲ್ಲದ ಅನ್ಯಜನರಂತೆಯೇ ಇದ್ದಾರೆ ಎಂದು ಸ್ತೆಫನನು ಹೇಳುತ್ತಾನೆ! (ರೋಮ 2:28-29 ಮತ್ತು ವ್ಯಾಖ್ಯಾನ ನೋಡಿರಿ).

**52** ಹಳೆ ಒಡಂಬಡಿಕೆಯ ಸಮಯದುದ್ದಕ್ಕೂ ದೇವರು ಮೊಂಡರೂ ಅವಿಧೇಯವರೂ ಆದ ಯೆಹೂದ್ಯರನ್ನು ಎಚ್ಚರಿಸಿ ಪಶ್ಚಾತಾಪಕ್ಕೆ ನಡೆಸುವದಕ್ಕಾಗಿ ಅನೇಕ ಪ್ರವಾದಿಗಳನ್ನು ಕಳುಹಿಸಿದನು. ಆದರೆ ಯೆಹೂದ್ಯರು ಯಾವಾಗಲೂ ದೇವರ ಪ್ರವಾದಿಗಳನ್ನು ತಿರಸ್ಕರಿಸಿ ಹಿಂಸಿಸಿದರು (ಮತ್ತಾಯ 23:29-31) ಈ ಪ್ರವಾದಿಗಳಲ್ಲಿ ಅನೇಕರು ಕ್ರಿಸ್ತನ ಬರೋಣದ ಬಗ್ಗೆ ಪ್ರವಾದಿಸಿದರು. ಮತ್ತು ಯೆಹೂದ್ಯರು ಅವರನ್ನು ಕೊಂದರು ಆದರೆ ಎಲ್ಲಕ್ಕಿಂತಲೂ ಘೋರವಾದದ್ದೇನೆಂದರೆ, ಈಗ ಸ್ತೆಫನನ ಮೇಲೆ ಆರೋಪ ಹೊರಿಸಿರುವ ಈ ಯೆಹೂದ್ಯರೇ ನೀತಿವಂತನಾದ ಕ್ರಿಸ್ತನನ್ನೇ ದ್ರೋಹದಿಂದ ಹತ್ಯೆಗೈದಿದ್ದರು (ಅ.ಕೃತ್ಯ 2:23; 3:13-15 ನೋಡಿರಿ).

**53** ಸ್ತೆಫನನು ಯೆಹೂದ್ಯರಿಗೆ ಹೇಳುವದೇನೆಂದರೆ : "—ಧರ್ಮಶಾಸ್ತ್ರವನ್ನು ನೀವು ಹೊಂದಿದವರಾದರೂ ಅದನ್ನು ಅನುಸರಿಸುವದಿಲ್ಲ". ಯಾಕೆಂದರೆ ನೀವು ಯೇಸುವನ್ನು ಹಿಡುಕೊಟ್ಟು ಕೊಂದವರಾಗಿದ್ದೀರಿ". ಯೆಹೂದ್ಯರು ತಾವು ಧರ್ಮಶಾಸ್ತ್ರವನ್ನು ಹೊಂದಿದ್ದರಿಂದ ನೀತಿವಂತರೆಂದು ನೆನಸಿದರು . ಆದರೆ, ವಾಸ್ತವದಲ್ಲಿ ಅವರ ಧರ್ಮಶಾಸ್ತ್ರವನ್ನೇ ಅವರು ಉಲ್ಲಂಘಿಸಿದರು. ಅವರು ಮೋಶೆಗೂ, ಪ್ರವಾದಿಗಳಿಗೂ ಅವಿಧೇಯರಾಗಿದ್ದರು. ಈಗ ಅವರು ಕ್ರಿಸ್ತನಿಗೆ ಸಹ ಅವಿಧೇಯರಾಗಿದ್ದರು. ಧರ್ಮಶಾಸ್ತ್ರವು ದೇವದೂತರ ಮೂಲಕ ನೇಮಕವಾಯಿತೆಂದು ಸ್ತೆಫನನು ಹೇಳುತ್ತಾನೆ. ದೇವರು ಸಿನಾಯ್ ಬೆಟ್ಟದ ತುದಿಯಲ್ಲಿ ಮೋಶೆಗೆ ಧರ್ಮಶಾಸ್ತ್ರವನ್ನು ಕೊಟ್ಟಾಗ ಅಲ್ಲಿ ದೇವರ ಅನೇಕ ದೂತರು ಹಾಜರಿದ್ದರು (ಧರ್ಮೋಪದೇಶಕಾಂಡ 33:2, ಗಲಾತ್ಯ 3:19, ಇಬ್ರಿಯ 2:2 ನೋಡಿರಿ).

## ಸ್ತೆಫನನಿಗೆ ಕಲ್ಲೆಸೆದದ್ದು (7:54-60)

**54-56** ಒಂದು ಬದಿಯಲ್ಲಿ, ಸ್ತೆಫನನ ಮೇಲೆ ಹಲ್ಲು ಕಡಿಯುತ್ತಿದ್ದ ಯೆಹೂದ್ಯನಾಯಕರು ನಿಂತಿದ್ದರು. ಇನ್ನೊಂದು ಬದಿಯಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ನಿಂತಿರುತ್ತಾನೆ. ಕೆಲವು ವರ್ಷಗಳ ಮುಂಚೆಯಷ್ಟೇ ಸ್ವತಃ ಯೇಸು ಇದೇ ಹಿರೀಸಭೆಯ ಮುಂದೆ ನಿಂತಿದ್ದನು. ಆ ಸಮಯದಲ್ಲಿ ಮಹಾಯಾಜಕನು ಯೇಸುವಿಗೆ, "ಭಗವಂತನ ಕುಮಾರನಾದ ಕ್ರಿಸ್ತನೋ ನೀನು?" ಎಂದು ಕೇಳಿದ್ದನು, ಮತ್ತು ಯೇಸು ಉತ್ತರಿಸಿ, "ನಾನೇ, ಇದಲ್ಲದೆ ಮನುಷ್ಯಕುಮಾರನು ಸರ್ವಶಕ್ತನ ಬಲಗಡೆಯಲ್ಲಿ ಆಸೀನನಾಗಿರುವದನ್ನೂ ಆಕಾಶದ ಮೇಘಗಳೊಂದಿಗೆ ಬರುವದನ್ನೂ ನೋಡುವಿರಿ" ಎಂದನು (ಮಾರ್ಕ 14:61-62). ಈಗ ಸ್ತೆಫನನು ಯೆಹೂದ್ಯ ಹಿರೀಸಭೆಗೆ – "ಆಗೋ, ಆಕಾಶವು ತೆರೆದಿರುವದನ್ನೂ ಮನುಷ್ಯ ಕುಮಾರನು ದೇವರ ಬಲಗಡೆಯಲ್ಲಿ ನಿಂತಿರುವದನ್ನೂ ನೋಡುತ್ತೇನೆ" ಎಂದು ಹೇಳಿದನು (ವಚನ 56).

ಯೇಸು ದೇವರ ಬಲಗಡೆಯಲ್ಲಿರುತ್ತಾನೆ. ನಮಗೆ ದೇವಾಯದ ಅಗತ್ಯವಿರುವದಿಲ್ಲ. ನಾವು ಬಹಳಷ್ಟು ಧಾರ್ಮಿಕ ಆಚಾರಗಳನ್ನು ಪಾಲಿಸಬೇಕಾಗಿಲ್ಲ. ಯೇಸು ಕ್ರಿಸ್ತನು ಪರಲೋಕದ ಕರ್ತನಾಗಿದ್ದು ದೇವರ ಬಲಗಡೆಯಲ್ಲಿ ನಿಂತುಕೊಂಡು ನಮಗಾಗಿ ಪ್ರಾರ್ಥಿಸುವವನಾಗಿದ್ದಾನೆ. ಕ್ರಿಸ್ತನು ನಮಗಿಂತ ಮುಂಚೆ ಪರಲೋಕಕ್ಕೆ ಹೋಗಿರುವದರಿಂದ ಆತನನ್ನು ನಂಬುವ ನಾವು ಈಗ ಧೈರ್ಯದಿಂದ ನೇರವಾಗಿ ದೇವರ ಸನ್ನಿಧಿಯೊಳಗೆ ಬರಬಹುದು (ಇಬ್ರಿಯ 7:24-26, 8:1-2 ನೋಡಿರಿ).

**57-58** ಅಲ್ಲಿದ್ದ ಯೆಹೂದ್ಯರೆಲ್ಲರೂ ಒಮ್ಮೆಲೇ ಸ್ತೆಫನನ್ನು ಕೊಲ್ಲುವದಕ್ಕೆ ನಿಶ್ಚಯಿಸಿಕೊಂಡರು. ಅವರು ರೋಮಾಯ ದೇಶಾಧಿಪತಿಯಿಂದ ಅಪ್ಪಣೆಯನ್ನು ಪಡೆದು ಕೊಳ್ಳಲು ಸಹ ಕಾಯಲಾರದಷ್ಟು ರೋಷಗೊಂಡಿದ್ದರು. ವಾಸ್ತವದಲ್ಲಿ, ಸ್ತೆಫನನು ಮರಣದಂಡನೆಗೆ ಅರ್ಹವಾದ ಯಾವ ಸಂಗತಿಯನ್ನು ಮಾತಾಡಿರಲಿಲ್ಲ. ಹಾಗಿದ್ದರೂ, ಆತನು ದೇವದೂಷಣೆ ಮಾಡಿದ್ದಾನೆಂದು ಅವರು ಪರಿಗಣಿಸಿದರು. (ಯಾಜಕ ಕಾಂಡ 24:13-16). ಆದುದರಿಂದ, ಅವರು ವೇಗವಾಗಿ ಅವನನ್ನು ಅಪರಾಧಿಗಳಿಗೆ ಕಲ್ಲೆಸುವ ಸ್ಥಳಕ್ಕೆ ನೂಕಿಕೊಂಡು ಹೋಗಿ ಕಲ್ಲೆಸೆಯಲು ಪ್ರಾರಂಭಿಸಿದರು. ಯೆಹೂದ್ಯರು ಅಪರಾಧಿಗಳಿಗೆ ಕಲ್ಲೆಸೆದು ಕೊಲ್ಲುವದರ ಮೂಲಕ ದಂಡನೆ ವಿಧಿಸುತ್ತಿದ್ದರು. ದಂಡನೆಗೊಳಗಾಗಲಿದ್ದ ವ್ಯಕ್ತಿಯನ್ನು ಆಳವಾದ ಕಂದಕದಲ್ಲಿಟ್ಟ ನಂತರ ಅವನ ಮೇಲೆ ಭಾರವಾದ ಕಲ್ಲುಗಳನ್ನು ಎಸೆಯಲಾಗುತ್ತಿತ್ತು. ಆ ವ್ಯಕ್ತಿಯ ವಿರುದ್ಧ ಸಾಕ್ಷಿ ಹೇಳಿದವರು ಮೊದಲು ಆತನ ಮೇಲೆ ಕಲ್ಲು ಎಸೆಯಬೇಕಾಗಿತ್ತು (ಧರ್ಮೋಪದೇಶಕಾಂಡ 17:7). ಸ್ತೆಫನನ ವಿಷಯದಲ್ಲಾದರೋ, ಹಿರೀ ಸಭೆಯ ಯೆಹೂದ್ಯರೆಲ್ಲರೂ ಆತನ ವಿರುದ್ಧ ಸಾಕ್ಷಿಗಳಾಗಿದ್ದರು; ಆದುದರಿಂದ ಅವರೆಲ್ಲರೂ ಮೊದಲು ಕಲ್ಲೆಸೆಯಲು ಅರ್ಹರಾಗಿದ್ದರು. ಅವರೆಲ್ಲರೂ ಕಲ್ಲುಗಳನ್ನು ಹೆಚ್ಚು ಸುಲಭವಾಗಿ ಎಸೆಯಲು ಸಾದ್ಯವಾಗುವಂತೆ ತಮ್ಮ ಹೊರ ಉಡುಪನ್ನು ತೆಗೆದುಬಿಟ್ಟರು. ಅವರು ತಮ್ಮ ಬಟ್ಟೆಗಳನ್ನು ತೆಗೆದು ಸೌಲನೆಂಬ ಒಬ್ಬ ಯೌವನಸ್ಥನ ಕಾಲುಗಳ ಬಳಿಯಲ್ಲಿ ಇಟ್ಟರು (ವಚನ 58). ಈ ಸೌಲನು ತರುವಾಯ ಅಪೊಸ್ತಲನಾದ ಪೌಲನಾದನು. ಪೌಲನು ತಾನು ಹೇಗೆ ಸ್ತೆಫನನ ಕೊಲೆಗೆ ಸಮ್ಮತಿಸಿದನೆಂಬದನ್ನು ಎಂದಿಗೂ ಮರೆಯಲಿಲ್ಲ (ಅ.ಕೃತ್ಯ 22:20).

**59-60** ಸ್ತೆಫನನು ಸಾಯುತ್ತಿದ್ದರೂ ಸಹ ತನ್ನ ಕರ್ತನ ಮಾದರಿಯನ್ನು ಅನುಸರಿಸಿದನು. ಯೇಸು ಶಿಲುಬೆಯ ಮೇಲಿದ್ದಾಗ ತನ್ನನ್ನು ಶಿಲುಬೆಗೇರಿಸುತ್ತಿದ್ದವರಿಗಾಗಿ – " ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬದನ್ನು ಅರಿಯರು" ಎಂದು ಪ್ರಾರ್ಥಿಸಿದ್ದನು (ಲೂಕ 23:34). ಅದೇ ರೀತಿಯಲ್ಲಿ ಸ್ತೆಫನನು – "ಕರ್ತನೇ, ಈ ಪಾಪವನ್ನು ಅವರ ಮೇಲೆ ಹೊರಿಸಬೇಡ" ಎಂದು ಪ್ರಾರ್ಥಿಸಿದನು (ವಚನ 60).

ಸ್ತೆಫನನು ತೀವ್ರವಾದ ಹಿಂಸೆಯ ಮದ್ಯದಲ್ಲಿಯೂ ತನ್ನ ಹಿಂಸಕರನ್ನು ನೋಡಲಿಲ್ಲ, ಆತನು ದೇವರನ್ನು ದೃಷ್ಟಿಸಿದನು. ನಮ್ಮ ಮೇಲೆ ಸಮಸ್ಯೆಗಳು ಬರುವಾಗ ನಾವು ಕೆಟ್ಟ ಪರಿಸ್ಥಿತಿಗಳನ್ನು ದೃಷ್ಟಿಸುತ್ತೇವೋ? ಅಥವಾ ಸ್ತೆಫನನ ಹಾಗೆ ನಾವು ದೇವರನ್ನು ದೃಷ್ಟಿಸುತ್ತೇವೋ? ಸ್ತೆಫನನು ಕ್ರಿಸ್ತನ ನಿಮಿತ್ತವಾಗಿ ಸತ್ತವರಲ್ಲಿ ಮೊದಲ ಕ್ರೈಸ್ತನಾಗಿದ್ದಾನೆ; ಆತನು ಮೊದಲ ಕ್ರೈಸ್ತ ರಕ್ತ ಸಾಕ್ಷಿಯಾಗಿದ್ದನು. ಅಂದಿನಿಂದ ಸ್ತೆಫನನು ಶತಶತಮಾನಗಳುದ್ದಕ್ಕೂ ಅಸಂಖ್ಯಾತ ವಿಶ್ವಾಸಿಗಳಿಗೆ ಬಲಿಷ್ಠವಾದ ನಂಬಿಕೆ ಹಾಗು ದೃಢತೆಗಳಿಗೆ ಒಂದು ಮಾದರಿಯಾಗಿರುತ್ತಾನೆ. ನಮ್ಮ ಮೇಲೆ ದೊಡ್ಡ ಸಮಸ್ಯೆ ಅಥವಾ ಹಿಂಸೆಯು ಬರುವಾಗ ನಾವು ಸಹ ಸ್ತೆಫನನ ಹಾಗೆ ನಮ್ಮ ಕಣ್ಣುಗಳನ್ನು ಪರಲೋಕದೆಡೆಗೆ ಎತ್ತಿ ಕ್ರಿಸ್ತನನ್ನು ನೋಡ ಬಲ್ಲೆವೋ? ಕ್ರಿಸ್ತನು ದೇವರ ಬಲಗಡೆಯಲ್ಲಿ ನಿಂತಿರುವದನ್ನು ನೋಡುವಾಗ ನಾವು ಭಯಪಡುವ ಅಗತ್ಯವಿರುವದಿಲ್ಲ. ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು? (ರೋಮ 8:31) ಅಪರಾಧಿಗಳೆಂದು ನಿರ್ಣಯಿಸುವವರು ಯಾರು? ಕ್ರಿಸ್ತ ಯೇಸು ಮರಣವನ್ನು ಹೊಂದಿದ್ದಲ್ಲದೆ ಜೀವಿತನಾಗಿ ಎದ್ದು ದೇವರ ಬಲಗಡೆಯಲ್ಲಿದ್ದು ನಮಗೋಸ್ಕರ ಬೇಡುವವನಾಗಿದ್ದಾನೆ. ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು? (ರೋಮ 8:34-38 ಮತ್ತು ವ್ಯಾಖ್ಯಾನ ನೋಡಿರಿ).

---

# ಅಧ್ಯಾಯ - 8

## ಸಭೆಯು ಹಿಂಸೆ ಹೊಂದಿ ಚದುರಿಸಲ್ಪಟ್ಟಿತ್ತು (8:1-8)

**1-2** ಸ್ತೆಫನನನ್ನು ಕೊಂದ ಮೇಲೆ ಯೆಹೂದ್ಯ ನಾಯಕರು ಬಹಳ ಧೈರ್ಯಗೊಂಡು ಇತರ ಕ್ರೈಸ್ತರನ್ನು ಸಹ ಬಂಧಿಸಲು ತಿರ್ಮಾನಿಸಿದರು. ಆದುದರಿಂದ, ಬಹುತೇಕ ವಿಶ್ವಾಸಿಗಳು ಯೆರೂಸಲೇಮನ್ನು ತೊರೆದು ಇಸ್ರಾಯೇಲಿನ ಎರಡು ದಕ್ಷಿಣ ಪ್ರಾಂತ್ಯಗಳಾದ ಯೂದಾಯ ಮತ್ತು ಸಮಾರ್ಯ ಸೀಮೆಗಳಲ್ಲಿ ಚದುರಿ ಹೋದರು. ಅವರು ಯೇಸುವಿನ ಮಾತಿನಂತೆಯೇ ಮಾಡಿದರು: " ಒಂದು ಊರಲ್ಲಿ ನಿಮ್ಮನ್ನು ಹಿಂಸೆ ಪಡಿಸಿದರೆ ಇನ್ನೊಂದು ಊರಿಗೆ ಓಡಿಹೋಗಿರಿ" (ಮತ್ತಾಯ 10:23). ಅಲ್ಲದೆ ಯೇಸು ತನ್ನ ಶಿಷ್ಯರಿಗೆ : "——ನೀವು ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನ್ನ ಸಾಕ್ಷಿಗಳಾಗಿರಬೇಕು " ಎಂದು ಸಹ ಹೇಳಿದ್ದನು (ಅ.ಕೃತ್ಯ 1:8). ಈ ಹಿಂಸೆಯ ವಿಶ್ವಾಸಿಗಳ ಚದರಿಸಲ್ಪಡುವಿಕೆಯ ಮೂಲಕವಾಗಿ ದೇವರು ಯೂದಾಯ ಹಾಗು ಸಮಾರ್ಯ ಸೀಮೆಗಳಲ್ಲಿ ಸುವಾರ್ತೆಯು ಹರಡುವಂತೆ ಮಾಡಿದನು (ವಚನ 4 ನೋಡಿರಿ).

**3** ಸೌಲನೆಂಬ ಯೆಹೂದ್ಯನು ಕ್ರೈಸ್ತರ ಅತಿ ಘೋರ ಹಿಂಸಕನಾಗಿದ್ದನು (ಅನಂತರ ಈತನು ಅಪೊಸ್ತಲ ಪೌಲನಾದನು). ಸ್ತೆಫನನು ಹಿರೀಸಭೆಯ ಮುಂದೆ ಮಾಡಿದ ಭಾಷಣವನ್ನು ಸೌಲನು ಕೇಳಿದ್ದನು. ಸ್ತೆಫನನ ಮಾತುಗಳನ್ನು ಕೇಳಿದ ನಂತರ ನೂತನ ಕ್ರೈಸ್ತಧರ್ಮವು ಅನೇಕ ಯೆಹೂದ್ಯ ಸಂಪ್ರದಾಯಗಳನ್ನು ಕಡುವಾಗಿ ವಿರೋಧಿಸುತ್ತದೆಂಬದನ್ನು ಸೌಲನು (ಗ್ರಹಿಸಿಕೊಂಡನು). ಈ ನೂತನ ಧರ್ಮವು ಹೀಗೆಯೇ ಹರಡು ತ್ತಿದ್ದರೆ ಯೆಹೂದ್ಯನಾಯಕರ ಬಲ ಮತ್ತು ಪ್ರಭಾವಗಳು ಕುಂದಿಹೋಗುವದೆಂಬದನ್ನು ಸೌಲನು ಕಂಡನು. ಆದುದರಿಂದ, ಈ ನೂತನ ಧರ್ಮವು ಅಳಿಸಿಹಾಕಲ್ಪಡಬೇಕೆಂದು ಸೌಲನು ದೃಢನಿಶ್ಚಯ ಮಾಡಿಕೊಂಡನು. ಕ್ರೈಸ್ತರನ್ನು ಅವರ ಪಾಡಿಗೆ ಬಿಟ್ಟು ಬಿಡಬೇಕು ಎಂಬ ತನ್ನ ಹಳೆಯ ಗುರುವಾದ ಗಮಲಿಯೇಲನ ಸಲಹೆಯನ್ನು ಸೌಲನು ಇನ್ನು ಒಪ್ಪದಾದನು (ಅ.ಕೃತ್ಯ 5;38-39), ಆದುದರಿಂದ, ಸೌಲನು ಸಭೆಯನ್ನು ಹಾಳು ಮಾಡಲಾರಂಭಿಸಿದನು. ಅವನು ಗಂಡಸರನ್ನೂ ಹೆಂಗಸರನ್ನೂ ಎಳಕೊಂಡು ಬಂದು ಸೆರೆಮನೆಗೆ ಹಾಕಿದನು.

**4-5** ಸಭೆಯ ಅತಿ ಬಡ ಸದಸ್ಯರಿಗಾಗಿ ಅಹಾರವನ್ನು ವಿತರಿಸಲು ಅಪೊಸ್ತಲರು ನೇಮಕ ಮಾಡಿದ್ದ ಏಳು ಮಂದಿ ಸೇವಕರು ಅಥವಾ ಸಭಾಧ್ಯಕ್ಷರಲ್ಲಿ ಫಿಲಿಪ್ಪನು ಒಬ್ಬನಾಗಿದ್ದನು (ಅ.ಕೃತ್ಯ 6:3-5). ಹಿಂಸೆಯುಂಟಾದಾಗ ಫಿಲಿಪ್ಪನು ಯೆರೂಸಲೇಮನ್ನು ತೊರೆದು ಉತ್ತರಕ್ಕಿರುವ ಸಮಾರ್ಯ ಪ್ರಾಂತ್ಯಕ್ಕೆ ಹೋದನು. ಸಮಾರ್ಯರು ಪರಿಪೂರ್ಣವಾಗಿ ಯೆಹೂದ್ಯರಲ್ಲ ಎಂಬ ಕಾರಣಕ್ಕಾಗಿ ಯೆಹೂದ್ಯರು ಸಮಾರ್ಯರನ್ನು ತುಚ್ಛವಾಗಿ ಕಾಣುತ್ತಿದ್ದರು. ಮೂಲತಃ ಸಮಾರ್ಯರು ಯೆಹೂದ್ಯರಾಗಿದ್ದರು, ಆದರೆ ಅನಂತರದಲ್ಲಿ ಅನ್ಯದೇಶದವರು ಸಮಾರ್ಯದ ಮೇಲೆ ಆಕ್ರಮಣಮಾಡಿದ್ದರು. ಮತ್ತು ಅವರು ಸ್ಥಳೀಯ ಸಮಾರ್ಯ ಸ್ತ್ರೀಯರೊಂದಿಗೆ ವಿವಾಹ ಮಾಡಿಕೊಂಡರು. ಹೀಗಿರುವದರಿಂದ ಹೊಸ ಒಡಂಬಡಿಕೆಯ ಕಾಲದಲ್ಲಿದ್ದ ಸಮಾರ್ಯರು ಅರೆಯೆಹೂದ್ಯರಾಗಿದ್ದರು. ಆದರ ಫಲಿತವಾಗಿ ಯೆಹೂದ್ಯರು ಮತ್ತು ಸಮಾರ್ಯರ ನಡುವೆ ಬಹಳ ವೈಮನಸ್ಸಿತ್ತು. ಹಾಗಿದ್ದರೂ, ಫಿಲಿಪ್ಪನು ಸ್ವತಃ ಯೆಹೂದ್ಯನಾಗಿ ಸಮಾರ್ಯಕ್ಕೆ ಹೋಗಿ ಸುವಾರ್ತೆಯನ್ನು ಸಾರಲು ತೊಡಗಿದನು. ನಿಜ ಯೆಹೂದ್ಯರಲ್ಲದವರಿಗೆ ಶಿಷ್ಯ.ರಲ್ಲಿ ಒಬ್ಬರು ಸುವಾರ್ತೆ ಸಾರಿದ್ದು ಇದೇ ಮೊದಲ ಬಾರಿಯಾಗಿತ್ತು.6-8 ಈ ವಚನಗಳಲ್ಲಿ ನಾವು ಪು ನಃ ಪವಿತ್ರಾತ್ಮನು ಆ ಪ್ರಥಮ ಕ್ರೈಸ್ತನಾಯಕರ ಮುಂಖಾಂತರವಾಗಿ ಹೇಗೆ ಕಾರ್ಯ ಮಾಡಿದನೆಂಬದನ್ನು ನೋಡುತ್ತೇವೆ (ಅ.ಕೃತ್ಯ 6:8) ಫಿಲಿಪ್ಪನು ಸಹ ಅದ್ಭುತಗಳನ್ನೂ, ಸೂಚಕಕಾರ್ಯಗಳನ್ನೂ ಮಾಡಿದನು. ಕ್ರಿಸ್ತನು ಮಾಡಿದಂತೆಯೇ ಫಿಲಿಪ್ಪನು ಸಹ ದೆವ್ವಗಳನ್ನು ಹೊರಡಿಸಿದನು. ಈ ಕಾರಣದಿಂದಾಗಿ ಎಲ್ಲರೂ ಅವನು ಹೇಳಿದ ಮಾತುಗಳನ್ನು ಏಕ ಮನಸ್ಸಾಗಿ ಲಕ್ಷ್ಯಕೊಟ್ಟರು (ವಚನ 6).

## ಸೀಮೋನನೆಂಬ ಮಂತ್ರವಾದಿ (8:9-25)

**9-11** ಪ್ರತಿಯೊಂದು ಸಂತತಿಯಲ್ಲಿಯೂ ಮಂತ್ರ ತಂತ್ರಗಳಿಂದ ಜನರನ್ನು ಮಾರ್ಗತಪ್ಪಿಸುವ ಸೀಮೋನನಂತಹ ಜನರು ಇದ್ದೇ ಇದ್ದಾರೆ ಸಿಮೋನನು ತಾನು ಯಾವದೋ ಒಂದು ರೀತಿಯ ದೈವೀಕ ಶಕ್ತಿಯನ್ನು ಹೊಂದಿದ್ದಾನೆಂದು ಜನರು ಯೋಚಿಸಿಕೊಳ್ಳುವಂತೆ ಮಾಡಿ ಅವರನ್ನು ವಂಚಿಸಿದನು (ವಚನ 10) ತಾನು ಏನೋ ಒಬ್ಬ ಮಹಾತ್ಮನೆಂದು ಕೊಚ್ಚಿಕೊಂಡನು. ಅಂತಹ ಸುಳ್ಳು ಬೋಧಕರು ಅಥವಾ ಪ್ರವಾದಿಗಳು ಸಾಮಾನ್ಯವಾಗಿ ಗರ್ವದಿಂದ ಕೂಡಿದವರಾಗಿರುತ್ತಾರೆ. ಎಲ್ಲಕ್ಕಿಂತ ಕೆಟ್ಟದ್ದೇನೆಂದರೆ, ಅನೇಕ ಜನರು ಈ ಸುಳ್ಳು ಬೋಧಕರನ್ನು ನಂಬಿ ಅವರ ಅನುಯಾಯಿಗಳಾಗುತ್ತಾರೆ.

**12-13** ಫಿಲಿಪ್ಪನಲ್ಲಿದ್ದ ಶಕ್ತಿಯು ಸೀಮೋನನ ಶಕ್ತಿಗಿಂತಲೂ ದೊಡ್ಡದಾಗಿತ್ತು. ಆದುದರಿಂದ ಜನರು ಫಿಲಿಪ್ಪನ ಮಾತುಗಳನ್ನು ನಂಬಿ ದೀಕ್ಷಾಸ್ನಾನ ಹೊಂದಿದರು. ಸ್ವತಃ ಸೀಮೋನನು ಫಿಲಿಪ್ಪನ ಶಕ್ತಿಯು ತನ್ನ ಶಕ್ತಿಗಿಂತಲೂ ದೊಡ್ಡದೆಂದು ಗುರುತಿಸಿದನು. ಆದುದರಿಂದ ಅವನು ಸಹ ನಂಬಿಕೆಯಿಟ್ಟನು. ಸೀಮೋನನು ನಂಬುವದರ ಮೂಲಕ ಫಿಲಿಪ್ಪನ ಶಕ್ತಿಯಲ್ಲಿ ಸ್ವಲ್ಪನ್ನು ತಾನೂ ಪಡೆದುಕೊಳ್ಳಬಹುದೆಂದು ನಿರೀಕ್ಷಿಸಿದನು. ಸೀಮೋನನ ನಂಬಿಕೆ ಎಷ್ಟರ ಮಟ್ಟಿಗೆ ನಿಜವಾಗಿತ್ತೆಂಬದನ್ನು ನಾವು ಖಚಿತವಾಗಿ ತಿಳಿಯಲಾರೆವು , ಹೇಗಿದ್ದರೂ, ನಿಶ್ಚಯವಾಗಿ ಅದು ಆಳವಾದ ನಂಬಿಕೆಯಂತೂ ಆಗಿರಲಿಲ್ಲ. ಫಿಲಿಪ್ಪನು ಮಾಡಿದ ಸೂಚಕ ಕಾರ್ಯಗಳನ್ನೂ ಮಹತ್ಕಾರ್ಯಗಳನ್ನೂ ನೋಡಿದ್ದರಿಂದ ಮಾತ್ರವೇ ಸಿಮೋನನು ನಂಬಿದನು. ಸ್ವತಃ ಯೇಸುವೇ ಮುಖ್ಯವಾಗಿ ಅದ್ಭುತಗಳ ಮೇಲೆ ಆಧಾರವಾದ ನಂಬಿಕೆಯಲ್ಲಿ ಅಷ್ಟೊಂದು ಭರವಸೆ ಹೊಂದಿರಲಿಲ್ಲ (ಯೋಹಾನ 2:23-24 ನೋಡಿರಿ). ನಂಬಿಕೆಯು ಅದಕ್ಕಿಂತಲೂ ಆಳವಾಗಿರತಕ್ಕದ್ದು.

**14** ಫಿಲಿಪ್ಪನು ಸಮಾರ್ಯದಲ್ಲಿ ಮಾಡುತ್ತಿದ್ದ ಕಾರ್ಯದ ಸುದ್ಧಿಯು ಯೆರೂಸಲೇಮಿನಲ್ಲಿದ್ದ ಅಪೊಸ್ತಲರಿಗೆ ಮುಟ್ಟಿದಾಗ ಪೇತ್ರ ಯೋಹಾನರು ಅಲ್ಲಿನಡೆಯುತ್ತಿರುವದನ್ನು ಕಣ್ಣಾರೆ ನೋಡಲು ಸಮಾರ್ಯಕ್ಕೆ ಹೋದರು. ಕೆಲವು ದಿವಸಗಳ ಮುಂಚೆ ಆಕಾಶದಿಂದ ಬೆಂಕಿ ಬೀಳುವಂತೆ ಕೇಳಿಕೊಳ್ಳುವದರ ಮೂಲಕ ಸಮಾರ್ಯವನ್ನು ನಾಶಮಾಡಬೇಕೆಂದು ಬಯಸಿದ್ದ ಯೋಹಾನನು ಈತನೇ (ಲೂಕ 9:51-56).

**15-16** ಸಮಾರ್ಯರು ನಿಜವಾಗಿಯೂ ನಂಬಿದವರಾಗಿ ದೀಕ್ಷಾಸ್ನಾನ ಹೊಂದಿದ್ದರು, ಆದರೆ ಪವಿತ್ರಾತ್ಮ ವರವು ಅವರಲ್ಲಿ ಒಬ್ಬನ ಮೇಲಾದರೂ ಇನ್ನೂ ಬಂದಿರಲಿಲ್ಲ ಎಂಬದನ್ನು ಪೇತ್ರ ಯೋಹಾನರು ಕಂಡುಕೊಂಡರು (ವಚನ 16) – ಅಂದರೆ ಪವಿತ್ರಾತ್ಮನು ಪಂಚಾಶತ್ತಮ ದಿನದಂದು ಶಿಷ್ಯರ ಮೇಲೆ ಬಲದಿಂದ ಇಳಿದು ಬಂದ ಪ್ರಕಾರ ಅವರ ಮೇಲೆ ಬಂದಿರಲಿಲ್ಲ (ಅ.ಕೃತ್ಯ 2:1-4 ನೋಡಿರಿ). ಕ್ರಿಸ್ತನನ್ನು ನಂಬಿ ದೀಕ್ಷಾಸ್ನಾನವನ್ನು ಸಹ ಮಾಡಿಸಿಕೊಂಡಿರುವ ಪ್ರತಿಯೊಬ್ಬನು ಪವಿತ್ರಾತ್ಮನನ್ನು ಪಡೆದು ಕೊಳ್ಳುತ್ತಾನೆಂದು ಹೊಸ ಒಡಂಬಡಿಕೆಯು ಬೋಧಿಸುತ್ತದೆ (ರೋಮ 5:5, 8:9, 1 ಕೊರಿಂಥ 6:19, 12:13, ಎಫೆಸ 1:13 ನೋಡಿರಿ). ಆದುದರಿಂದ ಈ ಸಮಾರ್ಯರು ನಂಬಿದಾಗ ನಿಶ್ಚಯವಾಗಿಯೂ ಪವಿತ್ರಾತ್ಮನನ್ನು ಪಡೆದುಕೊಂಡರು. ಆತ್ಮನು ಅವರಲ್ಲಿ ವಾಸಿಸಲು ಪ್ರಾರಂಭಿಸಿದ್ದನು. ಆದರೆ ಪಂಚಾಶತ್ತಮದಿನದಂದು ತೋರಿಬಂದಂತಹ ಬಲವನ್ನು ಸಮಾರ್ಯರು ಅನುಭವಿಸಿರಲಿಲ್ಲ. ಅವರು ಪವಿತ್ರಾತ್ಮನ ತುಂಬಿಸಲ್ಪಡುವಿಕೆಯನ್ನು, ಅಥವಾ ಕೆಲವರು ಕರೆಯುವ ಪ್ರಕಾರ ಎರಡನೆಯ ಆಶೀರ್ವಾದ "ವನ್ನು ಪಡೆದುಕೊಂಡಿರಲಿಲ್ಲ (ಅ.ಕೃತ್ಯ 2:4, 1 ಕೊರಿಂಥ 12:13 ಮತ್ತು ವ್ಯಾಖ್ಯಾನಗಳು; ಸಾಮಾನ್ಯ ಲೇಖನ: ಪವಿತ್ರಾತ್ಮನ ದೀಕ್ಷಾಸ್ನಾನ ನೋಡಿರಿ).

**17** ಪೇತ್ರ ಯೋಹಾನರು ಈ ನೂತನ ಸಮಾರ್ಯ ವಿಶ್ವಾಸಿಗಳ ಮೇಲೆ ತಮ್ಮ ಕೈಗಳನ್ನಿಡಲು ಅವರು ಪವಿತ್ರಾತ್ಮವರವನ್ನು ಹೊಂದಿದರು – ಅಂದರೆ, ಪವಿತ್ರಾತ್ಮನು ಅವರ ಮೇಲೆ ಬಲ ಹಾಗು ಸದೃಶ್ಯ ಗುರುತುಗಳೊಂದಿಗೆ ಇಳಿದು ಬಂದನು. ಅಲ್ಲಿ ನಿಂತಿದ್ದ ಇತರರಿಗೆ ಕಾಣುವಂತಹ ಅಥವಾ ಕೇಳುವಂತಹ ಸಂಗತಿಯೊಂದು ಜರುಗಿತ್ತು, ಯಾಕೆಂದರೆ 18ನೇ ವಚನದ ಪ್ರಕಾರವಾಗಿ ಪವಿತ್ರಾತ್ಮದಾನವಾಗುವದನ್ನು ಸೀಮೋನನು ನೋಡಿದನು. ಪಂಚಾಶತ್ತಮ ದಿನದಂದು ಶಿಷ್ಯರು ಅನ್ಯಭಾಷೆಗಳನ್ನಾಡಿದಂತೆಯೇ ಈ ಸಮಾರ್ಯರು ಸಹ ಅನ್ಯಭಾಷೆಗಳನ್ನಾಡಲು ಪ್ರಾರಂಭಿಸಿರುವದು ಬಹಳ ಮಟ್ಟಗೆ ಸಾಧ್ಯವಿರುತ್ತದೆ. ಯಾವನಾದರೂ ಪವಿತ್ರಾತ್ಮನ ತುಂಬಿಸಲ್ಪಡುವ ಅಥವಾ ಪವಿತ್ರಾತ್ಮನಿಂದ ಅಭಿಷೇಕಿಸಲ್ಪಡುವ ಮುಂಚೆ ವಿಶೇಷವಾಗಿ ನೇಮಕಗೊಂಡ ಸಭಾನಾಯಕರು ಅವನ ಮೇಲೆ ಕೈಗಳನ್ನಿಡುವದು ಅವಶ್ಯಕವಾದದ್ದು ಎಂಬುದಾಗಿ ಕೆಲವು ಕ್ರೈಸ್ತರು ನಂಬುತ್ತಾರೆ (ಅ.ಕೃತ್ಯ 19:1-7 ನೋಡಿರಿ). ಆದರೆ ಸಾಮಾನ್ಯವಾಗಿ ಹೊಸ ಒಡಂಬಡಿಕೆಯಲ್ಲಿ ಜನರು ಪವಿತ್ರಾತ್ಮನನ್ನು ಹೊಂದುವ ವೇಳೆ ಕೈಗಳನ್ನಿಡುವದರ ಬಗ್ಗೆ ಯಾವ ಉಲ್ಲೇಖವೂ ಇರುವದಿಲ್ಲ (ಅ.ಕೃತ್ಯ 2:38, 41, 8:38-39, 10:44-48, 16:30-33) ಒಂದು ವೇಳೆ ಕೈಗಳನ್ನಿಡುವದು ಅವಶ್ಯಕವಾಗಿದ್ದರೆ ನಿಶ್ಚಯವಾಗಿಯೂ ಹೊಸ ಒಡಂಬಡಿಕೆಯಲ್ಲಿ ಎಲ್ಲಿಯಾದರೂ ದೇವರು ಸ್ಪಷ್ಟವಾಗಿ ಅದನ್ನು ತಿಳಿಸಿರುತ್ತಿದ್ದನು. ಕೈಗಳನ್ನಿಡುವದು ಯೆಹೂದ್ಯರ ಪದ್ಧತಿಯಾಗಿದ್ದು ಯಾವನಿಗಾದರೂ ವಿಶೇಷ ಆಶೀರ್ವಾದಗಳನ್ನು ನೀಡಲು ಅಥವಾ ಒಂದು ವಿಶೇಷ ಕೆಲಸಕ್ಕಾಗಿ ಯಾರನ್ನಾದರೂ ನೇಮಿಸುವಾಗ ಉಪಯೋಗಿಸಲಾಗುತ್ತಿತ್ತು (ಅ.ಕೃತ್ಯ 6:6 ಮತ್ತು ವ್ಯಾಖ್ಯಾನ ನೋಡಿರಿ). ಈ ಪದ್ಧತಿಯನ್ನು ಹಾಗೇಯೇ ನೂತನ ಕ್ರೈಸ್ತ ಸಭೆಯೊಳಗೆ ತರಲಾಗಿತ್ತು, ಮತ್ತು ಆಗಿನಿಂದ ಇದು ಸಾಮಾನ್ಯವಾಗಿ ಅಭ್ಯಾಸಿಸಲ್ಪಡುತ್ತಿದೆ (ಅ.ಕೃತ್ಯ 13:3; 1ತಿಮೊಥೆ 5:22; ಇಬ್ರಿಯ 6:2).

**18-19** ಪೇತ್ರ ಯೋಹಾನರ ಶಕ್ತಿಯು ಫಿಲಿಪ್ಪನ ಶಕ್ತಿಗಿಂತಲೂ ಅಧಿಕವಾಗಿರುವದನ್ನು ಸೀಮೋನನು ಕಂಡನು. ಪೇತ್ರ ಯೋಹಾನರು ಇತರರ ಮೇಲೆ ಕೈಗಳನ್ನಿಡುವದರ ಮೂಲಕ ಅವರಿಗೆ ಪವಿತ್ರಾತ್ಮನನ್ನು ಕೊಡಬಲ್ಲರೆಂದು ಸೀಮೋನನು ಊಹಿಸಿಕೊಂಡನು. ಸೀಮೋನನಿಗೂ ಈ ಶಕ್ತಿಯು ಬೇಕಾಗಿತ್ತು, ಮತ್ತು ಅವನು ಅದಕ್ಕಾಗಿ ಹಣವನ್ನು ನೀಡಲು ಸಿದ್ಧನಾಗಿದ್ದನು!.

**20-23** ಸೀಮೋನನ ಹೃದಯವು ಸರಿಯಾಗಿರಲಿಲ್ಲ. ಅವನು ಕೇವಲ ತನ್ನ ಸ್ವಂತ ಘನತೆ ಹಾಗು ಪ್ರಸಿದ್ಧಿಗಳ ಬಗ್ಗೆ ಯೋಚಿಸುತ್ತಿದ್ದನು. ಪವಿತ್ರಾತ್ಮನ ಬಲವನ್ನು ಹಣದಿಂದ ಕೊಂಡುಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಅವನು ಗ್ರಹಿಸಿಕೊಳ್ಳಲಿಲ್ಲ. ಮನುಷ್ಯನು ತನ್ನ ಸ್ವಪ್ರಯೋಜನಕ್ಕಾಗಿ ಪವಿತ್ರಾತ್ಮನನ್ನು ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲ. ಸೀಮೋನನು ತನ್ನ ಸ್ವಂತ ಲಾಭವನ್ನು ಮಾತ್ರವೇ ನೋಡುತ್ತಿದ್ದಾನೆ. ಆತನು ಪವಿತ್ರಾತ್ಮನ ಬಲವನ್ನು ದೇವರ ಸೇವೆ ಹಾಗು ಮಹಿಮೆಗಾಗಿ ಉಪಯೋಗಿಸುವದರ ಕುರಿತು ಯೋಚಿಸುತ್ತಿದ್ದಿಲ್ಲ, ಸೀಮೋನನ ಹೃದಯವು ವಿಷದಿಂದ ತುಂಬಿತ್ತು (ವಚನ 23) – ಅಂದರೆ, ಹೊಟ್ಟೆಕಿಚ್ಚಿನಿಂದ ತುಂಬಿತ್ತು, ಯಾಕೆಂದರೆ ಪೇತ್ರ ಯೋಹಾನ ಮತ್ತು ಫಿಲಿಪ್ಪರು ಅವನಿಗಿಂತಲೂ ಅಧಿಕವಾದ ಶಕ್ತಿಯನ್ನು ಹೊಂದಿದ್ದರು. ಸೀಮೋನನು ದೇವರನ್ನು ಮಹಿಮೆ ಪಡಿಸುವದರ ಕುರಿತು ಯೋಚಿಸದೆ ತನ್ನ ಸ್ವಮಹಿಮೆಗಾಗಿ ತವಕ ಪಟ್ಟಿದ್ದರಿಂದ ಅವನು ಪಾಪದ ಬಂಧನಕ್ಕೊಳಗಾಗಿದ್ದನು. ಸೀಮೋನನು ಏನು ಮಾಡಬೇಕಾಗಿತ್ತು? ಆತನು ಏನು ಮಾಡ ಬೇಕೆಂಬದನ್ನು ಪೇತ್ರನು ಅವನಿಗೆ ಹೇಳುತ್ತಾನೆ: ನಿನ್ನ ಕೆಟ್ಟತನವನ್ನು ಬಿಟ್ಟು ದೇವರ ಕಡೆಗೆ ತಿರಿಗಿಕೊ" (ವಚನ 22). ಪೇತ್ರನು ಅವನಿಗೆ, "ನಿನ್ನ ತಪ್ಪಿಗಾಗಿ ಪಶ್ಚಾತಾಪಪಡು" ಎಂದು ಹೇಳಲಿಲ್ಲ. ಬದಲಾಗಿ "ನಿನ್ನ ಕೆಟ್ಟತನಕ್ಕಾಗಿ ಪಶ್ಚಾತಾಪಪಡು" ಎಂದನು. ನಾವು ನಮ್ಮ ಪಾಪವನ್ನು ಕೇವಲ ಒಂದು "ತಪ್ಪು" ಎಂದು ಎಂದಿಗೂ ಕರೆಯಬಾರದು, ದೇವರ ದೃಷ್ಟಿಯಲ್ಲಿ ಇದು ಕೆಟ್ಟತನವಾಗಿದೆ. ಬಳಿಕ ಪೇತ್ರನು "ಕರ್ತನು ನಿನ್ನ ಮನಸ್ಸಿನ ಆಲೋಚನೆಯನ್ನು ಕ್ಷಮಿಸುವನು ಏನೋ ಆತನನ್ನು ಬೇಡಿಕೋ" ಎಂದನು. ಸೀಮೋನನು ಕ್ಷಮಿಸಲ್ಪಡುವನೋ ಅಥವಾ ಇಲ್ಲವೋ ಎಂಬ ನಿಶ್ಚಯತೆಯು ಪೇತ್ರನಿಗಿರಲಿಲ್ಲ, ಯಾಕೆಂದರ ಸೀಮೋನನು ನಿಜವಾಗಿಯೂ ಪಶ್ಚಾತಾಪ ಪಡುವನೋ ಎಂಬ ಸಂಶಯ ಅವನಿಗಿತ್ತು. ಸೀಮೋನನು ನಿಜವಾಗಿಯೂ ಪಶ್ಚಾತಾಪಪಡುವದಾದರೆ ಮಾತ್ರವೇ ಅವನು ಕ್ಷಮಿಸಲ್ಪಡುವನು. ತಮ್ಮ ಪಾಪಗಳಿಗಾಗಿ ನಿಜವಾಗಿಯು ಪಶ್ಚಾತಾಪ ಪಡುವವರೆಲ್ಲರೂ ಕ್ಷಮಿಸಲ್ಪಡುವರು (1 ಯೋಹಾನ 1:9).

**24-25** ಸೀಮೋನನು ಪೇತ್ರನ ಮಾತುಗಳನ್ನು ಕೇಳಿಭಯದಿಂದ ತುಂಬಿದನು. ಸೀಮೋನನು ಪೇತ್ರನ ಮಹಾಶಕ್ತಿಯನ್ನು ನೋಡಿದ್ದನು ಮತ್ತು ಈಗ ಅಂತಹ ಶಕ್ತಿವಂತನಾದವನ ಮಾತುಗಳು ನಿಜವಾಗುವವು ಎಂದು ಹೆದರಿದನು. ಆದುದರಿಂದ, ದೇವರ ನ್ಯಾಯ ತೀರ್ಪು ತನ್ನ ಮೇಲೆ ಬಾರದಂತೆ ಪ್ರಾರ್ಥಿಸಬೇಕೆಂದು ಅವನು ಪೇತ್ರನನ್ನು ಕೇಳಿಕೊಂಡನು. ಸೀಮೋನನು ನಿಜವಾಗಿಯೂ ಪಶ್ಚಾತಾಪಪಟ್ಟನೋ ಅಥವಾ ಇಲ್ಲವೋ ಎಂಬುದು ಯಾರಿಗೂ ತಿಳಿದಿಲ್ಲ. ಹೊಸ ಒಡಂಬಡಿಕೆಯಲ್ಲಿ ಇನ್ನೆಲ್ಲಿಯೂ ಅವನ ಬಗ್ಗೆ ಪ್ರಸ್ತಾಪವಿರುವದಿಲ್ಲ.

ಆಸ್ಥಳದಲ್ಲಿ ದೇವರ ವಾಕ್ಯವನ್ನು ಸಾರಿದ ಮೇಲೆ ಪೇತ್ರ ಯೋಹಾನರು ಯೆರೂಸಲೇಮಿಗೆ ಹಿಂದಿರುಗಿ ಮಾರ್ಗದಲ್ಲಿ ಅನೇಕ ಊರುಗಳಿಗೆ ಸುವಾರ್ತೆ ಸಾರಿದರು.

## ಫಿಲಿಪ್ಪನು ಮತ್ತು ಐಥಿಯೋಫ್ಯದವನು (8:26-40)

**26** ಸ್ವಲ್ಪ ಕಾಲದ ಬಳಿಕ ಕರ್ತನ ದೂತನೊಬ್ಬನು ಫಿಲಿಪ್ಪನಿಗೆ ಯೆರೂಸಲೇಮಿನಿಂದ ದಕ್ಷಿಣಕಡೆಗೆ ಗಾಜಕ್ಕೆ ಹೋಗುವದಾರಿಯಲ್ಲಿ ಹೋಗಬೇಕೆಂದು ಹೇಳಿದನು (ಗಾಜವು ಯೆರೂಸಲೇಮಿನ ದಕ್ಷಿಣಕ್ಕಿರುವ ಪಟ್ಟಣವಾಗಿತ್ತು). ದೇವರು ಹೇಗೆ ಫಿಲಿಪ್ಪನನ್ನು ನಡೆಸಿದನೆಂಬದನ್ನು ಗಮನಿಸಿರಿ. ಈ ವಚನದಲ್ಲಿ ಕರ್ತನ ದೂತನೊಬ್ಬನು ಅವನೊಂದಿಗೆ ಮಾತಾಡಿದನು. 29ನೇ ವಚನದಲ್ಲಿ ಪವಿತ್ರಾತ್ಮನು ಅವನೊಂದಿಗೆ ಮಾತಾಡಿದನು. ದೇವದೂತನ ಸ್ವರವು ವಾಸ್ತವದಲ್ಲಿ ಪವಿತ್ರಾತ್ಮನ ಸ್ವರವೇ ಆಗಿತ್ತೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಆದರೆ ಯಾರ ಸ್ವರವನ್ನು ಉಪಯೋಗಿಸಿದ್ದರೂ ದೇವರು ಫಿಲಿಪ್ಪನೊಟ್ಟಿಗೆ ಮಾತಾಡಿದನು ಮತ್ತು ಫಿಲಿಪ್ಪನು ತಕ್ಷಣವೇ ದೇವರು ಆಜ್ಞಾಪಿಸಿದ್ದನ್ನು ಮಾಡಿದನು.

**27** ಗಾಜಕ್ಕೆ ಹೋಗುವ ದಾರಿಯಲ್ಲಿ ಫಿಲಿಪ್ಪನು ಕಂಚುಕಿಯನ್ನು [44] ಬೇಟಿಯಾದನು, ಇವನು ಐಥಿಯೋಪ್ಯದವರ[45] ರಾಣಿಯಾಗಿದ್ದ ಕಂದಾಕೆಯ ಎಲ್ಲಾ ಖಜಾನೆಯ ಮೇಲ್ವಿಚಾರಕನಾಗಿದ್ದನು.

**28** ಕಂಚುಕಿಯು ಒಬ್ಬ ನಿಜಯೆಹೂದ್ಯನಲ್ಲದಿದ್ದಾಗ್ಯು ಬಹುಶಃ ಅವನು ಯೆಹೂದ್ಯ ಧರ್ಮದ ಅನುಯಾಯಿಯಾಗಿದ್ದನು. ಅವನು ಯೆರೂಸಲೇಮಿನಲ್ಲಿ ತನ್ನ ರಥದಲ್ಲಿ [46] ಸ್ವದೇಶಕ್ಕೆ ಹಿಂದಿರುಗಿ ಹೊರಟಿದ್ದನು. ಅವನು ಪ್ರಯಾಣಿಸುತ್ತಿರುವಾಗಲೇ ಹಳೆ ಒಡಂಬಡಿಕೆಯ ಪ್ರವಾದಿಯಾದ ಯೆಶಾಯನ ಪುಸ್ತಕವನ್ನು ಓದುತ್ತಿದ್ದನು.

**29-31** ಕಂಚುಕಿಯು ತಾನು ಓದಿತ್ತಿರುವದನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಅವನಿಗೆ ಯೆಶಾಯನ ಪ್ರವಾದನೆಯ ಅರ್ಥವನ್ನು ವಿವರಿಸಿ ಹೇಳಲು ಫಿಲಿಪ್ಪನಿಗಿಂತಲೂ ಉತ್ತಮ ಬೋಧಕನು ಇನ್ನೆಲ್ಲಿ ಸಿಕ್ಕಾನು! ಯಾಕೆಂದರೆ ಕಂಚುಕಿಯು ಓದುತ್ತಿದ್ದ ಯೆಶಾಯನ ಪುಸ್ತಕದಲ್ಲಿನ ವಚನಗಳು ನಿರ್ದಿಷ್ಟವಾಗಿ ಯೇಸು ಕ್ರಿಸ್ತನ ವಿಷಯದಲ್ಲಿ ಬರೆಯಲ್ಪಟ್ಟಿದ್ದವು.

**32-33** ಕಂಚುಕಿಯು ಯೆಶಾಯ 53:7-8, [47] ವಚನಗಳಿಂದ ಓದುತಿದ್ದನು. ಈ ವಚನಗಳಲ್ಲಿ ಕ್ರಿಸ್ತನು ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆ ಒಯಲ್ಪಡುವನೆಂಬದಾಗಿ ಯೆಶಾಯನು ಪ್ರವಾದಿಸುತ್ತಾನೆ. ಹಳೆ ಒಡಂಬಡಿಕೆಯ ಪ್ರವಾದಿಗಳಲ್ಲಿ ಬಹುಪಾಲು ಪ್ರವಾದಿಗಳು ಕ್ರಿಸ್ತನು ಒಬ್ಬ ಅರಸನಾಗಿ ಅಥವಾ ಒಬ್ಬ "ಅಭಿಷೀಕ್ತನ" ಹಾಗೆ (ಮೆಸ್ಸೀಯ), ಅಥವಾ ಒಬ್ಬ ರಕ್ಷಕನಾಗಿ ಬರುವನೆಂದು ಪ್ರವಾದಿಸಿದರು. ಆದರೆ ಯೆಶಾಯ 53 ನೇ ಅಧ್ಯಾಯದಲ್ಲಿ ಬರಲಿರುವ ಕ್ರಿಸ್ತನು ಒಬ್ಬ "ಬಾಧೆಹೊಂದುವ ಸೇವಕ" ಅಗಿ ಬರುವನು, ಆತನು ಮಾನವ ಜನಾಂಗದ ಪಾಪಗಳಿಗಾಗಿ ತನ್ನ ಪ್ರಾಣವನ್ನು ಪ್ರಾಯಶ್ಚಿತ್ತ

ಯಜ್ಞವಾಗಿ ಅರ್ಪಿಸುವನು ಎಂಬದಾಗಿ ಯೆಶಾಯನು ಬರೆಯುತ್ತಾನೆ. ಯೆಹೂದ್ಯರು ತಾವು ನಿರೀಕ್ಷಿಸುತ್ತಿದ್ದ ಅರಸ ಅಥವಾ ರಕ್ಷಕನು ವಾಸ್ತವದಲ್ಲಿ ಯೆಶಾಯನಿಂದ ಬಣ್ಣಿಸಲ್ಪಟ್ಟಿರುವ ಈ "ಬಾಧೆ ಹೊಂದುವ ಸೇವಕ" ಹೊರತು ಬೇರಿನ್ನಾರಲ್ಲ ಎಂಬದನ್ನು ನಂಬಲಾಗಲಿಲ್ಲ. ಆದರೆ ಕ್ರಿಸ್ತನು ತನ್ನ ವಿಷಯದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆಂದರೆ:——ಮನುಷ್ಯಕುಮಾರನು ಸೇವೆ ಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ, ಆದರೆ ಸೇವೆ ಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡು ಕೊಡುವದಕ್ಕೂ ಬಂದನು" (ಮಾರ್ಕ 10:45). ಅಲ್ಲದೆ ಇನ್ನೂ ಹೇಳಿದ್ದೇನೆಂದರೆ: ಮನುಷ್ಯಕುಮಾರನ ವಿಷಯವಾಗಿ – ಅವನು ಬಹು ಕಷ್ಟಗಳನ್ನನುಭವಿಸಿ ಹೀನೈಸಲ್ಪಡಬೇಕೆಂಬದಾಗಿ ಬರೆದದೆ, ಇದು ಹೇಗೆ?" (ಮಾರ್ಕ 9:12). ಆದುದರಿಂದ, ತನ್ನ ಕುರಿತಾಗಿ ಸ್ವತಃ ಯೇಸು ಹೇಳಿದ ಮಾತುಗಳಿಂದ ಇಲ್ಲಿ ಉಲ್ಲೇಖಿಸಿರುವ ಯೆಶಾಯನ ಪ್ರವಾದನೆಯು ನಿಜವಾಗಿಯೂ ಕ್ರಿಸ್ತನ ಕುರಿತಾಗಿಯೇ ಎಂಬದನ್ನು ನಾವು ಅರ್ಥಮಾಡಿಕೊಳ್ಳಬಹುದು.

**34-35** ಫಿಲಿಪ್ಪನು ಕಂಚು ಕಿಯನ್ನು ಸಂಧಿಸಿದ ಕಾಲದಲ್ಲಿ ಹೊಸ ಒಡಂಬಡಿಕೆಯು ಇನ್ನೂ ಬರೆಯಲ್ಪಟ್ಟಿರಲಿಲ್ಲ. ಆಗ ಕೇವಲ ಹಳೆ ಒಡಂಬಡಿಕೆ ಮಾತ್ರವೇ ಇತ್ತು. ಹೀಗೆ ಹಳೆ ಒಡಂಬಡಿಕೆಯ ಪ್ರವಾದನೆಗಳನ್ನು ಹೊರತು ಪಡಿಸಿ ಕ್ರಿಸ್ತನ ಕುರಿತಾಗಿ ಇನ್ನಾವು ದೂ ಬರೆಯಲ್ಪಟ್ಟಿರಲಿಲ್ಲ. ಕಂಚುಕಿಯು ಓದುತ್ತಿದ್ದ ಈ ಯೆಶಾಯ ೫೩ರ ವಾಕ್ಯಭಾಗವು ಕ್ರಿಸ್ತನ ಬಣ್ಣನೆಯನ್ನು ಹಳೆ ಒಡಂಬಡಿಕೆಯ ಬೇರೆ ಇನ್ನಾವದೇ ವಾಕ್ಯಭಾಗಕ್ಕಿಂತಲೂ ಸ್ಪಷ್ಟವಾಗಿ ನೀಡುತ್ತದೆಂಬದು ಅಶ್ಚರ್ಯವಾದದ್ದು. ಆದುದರಿಂದ ಪ್ರವಾದಿಯು ಯಾರ ವಿಷಯವಾಗಿ ಮಾತಾಡುತ್ತಿದ್ದಾನೆಂದು ಕಂಚುಕಿಯು ಫಿಲಿಪ್ಪನನ್ನು ಕೇಳಿದಾಗ ಆತನು ಶೀಘ್ರ್ರವೇ ಉತ್ತರಿಸಲು ಶಕ್ತನಾದನು: "ಯೇಸು ಕ್ರಿಸ್ತನು" ಫಿಲಿಪ್ಪನು ಉಪದೇಶಿಸುವದಕ್ಕೆ ತೊಡಗಿ ಅದೇ ವಚನವನ್ನು ಆಧಾರಮಾಡಿಕೊಂಡು ಅವನಿಗೆ ಯೇಸುವಿನ ವಿಷಯವಾದ ಸುವಾರ್ತೆಯನ್ನು ತಿಳಿಸಿದನು" (ವಚನ 35).

**36-38** ಫಿಲಿಪ್ಪನು ಕಂಚುಕಿಗೆ ಯೇಸು ಕ್ರಿಸ್ತನ ವಿಷಯವಾಗಿ ಹೇಳಿ ಮುಗಿಸಿದ ನಂತರ ಅವನಿಗೆ ದೀಕ್ಷಾಸ್ನಾನ ಮಾಡಿಸಿದನು.[48] ಕಂಚುಕಿಯು ದೀರ್ಘಕಾಲ ಕಾಯಬೇಕಾಗಿರಲಿಲ್ಲ. ಫಿಲಿಪ್ಪನು ಅವನಿಗೆ "ನಾನು ಈಗ ನಿನ್ನನ್ನು ದೀಕ್ಷಾಸ್ನಾನ ಮಾಡಿಸಲಾಗುವದಿಲ್ಲ. ನಿನಗೆ ಇನ್ನು ಹೆಚ್ಚು ಬೋಧನೆಯ ಅಗ್ಯತ್ಯವಿರುತ್ತದೆ. ಇನ್ನೊಂದು ಸಮಯದಲ್ಲಿ ಬಾ" ಎಂದು ಹೇಳಲಿಲ್ಲ. ಅಲ್ಲದೆ ಫಿಲಿಪ್ಪನು, "ನಾನು ನಿನಗೆ ದೀಕ್ಷಾಸ್ನಾನ ಮಾಡಿಸುವದಕ್ಕೆ ಮುಂಚೆ ನಿನ್ನ ನಂಬಿಕೆಯು ನಿಜವಾದದ್ದೋ ಎಂಬದಕ್ಕೆ ಆಧಾರ ಬೇಕು" ಎಂದೂ ಹೇಳಲಿಲ್ಲ. ಇಲ್ಲ, ಫಿಲಿಪ್ಪನು ಈ ಸಂಗತಿಗಳನ್ನು ಮಾತಾಡಲಿಲ್ಲ. ಬದಲಾಗಿ, ಫಿಲಿಪ್ಪನು ಸುವಾರ್ತೆಯನ್ನು ಹೇಳಿ ಮುಗಿಸಿ ಕುಂಚುಕಿಯು ನಂಬಿದ ಕೂಡಲೇ ಫಿಲಿಪ್ಪನು ಅವನಿಗೆ ದೀಕ್ಷಾಸ್ನಾನ ಮಾಡಿಸಿದನು. ಹೊಸ ಒಡಂಬಡಿಕೆಯಲ್ಲಿ ಎಲ್ಲಿಯೂ ಸಹ ಒಬ್ಬ ವ್ಯಕ್ತಿಯು ದೀಕ್ಷಾಸ್ನಾನ ಹೊಂದುವದಕ್ಕೆ ಮುಂಚೆ ದೀರ್ಘಕಾಲ ಕಾಯ್ದುಕೊಳ್ಳಬೇಕು ಮತ್ತು ಆಳವಾದ ಬೋಧನೆಯನ್ನು ಪಡೆದುಕೊಳ್ಳಬೇಕು ಎಂಬದಾಗಿ ಬರೆಯಲ್ಪಟ್ಟಿರುವದಿಲ್ಲ. ಒಬ್ಬ ವ್ಯಕ್ತಿಯು ದೀಕ್ಷಾಸ್ನಾನ ಹೊಂದುವದಕ್ಕೆ ಮುಂಚೆ ತನ್ನ ನಂಬಿಕೆಯು ನಿಜವಾದ್ದೆಂದು ನಿರೂಪಿಸಬೇಕೆಂದು ಎಲ್ಲಿಯೂ ಬರೆಯಲ್ಪಟ್ಟಿಲ್ಲ. ಈ ವಿಚಾರಗಳು ಹೊಸ ಒಡಂಬಡಿಕೆಯಿಂದ ಬಂದಿರುವದಿಲ್ಲ. ಯಾವದೇ ವ್ಯಕ್ತಿಯು ಸುವಾರ್ತೆಯನ್ನು ಕೇಳಿದ ನಂತರ ಯೇಸು ಕ್ರಿಸ್ತನನ್ನು ನಂಬಿ ದೀಕ್ಷಾಸ್ನಾನವನ್ನು ಕೋರುವದಾದರೆ ಆತನು ಮೊದಲನೆಯ ಅರ್ಹ ಸಂದರ್ಭದಲ್ಲಿ ದೀಕ್ಷಾಸ್ನಾನ ಹೊಂದಲ್ಪಡಬೇಕು ಹೊರತು ತಡಮಾಡಬಾರದು.ಒಬ್ಬ ವ್ಯಕ್ತಿಯು ನಿಜವಾಗಿಯೂ ತನ್ನ ಹೃದಯದಿಂದ ನಂಬಿದ್ದಾನೋ ಅಥವಾ ಇಲ್ಲವೋ ಎಂಬದನ್ನು ದೇವರು ಮಾತ್ರವೇ ಬಲ್ಲನು. ಮಾನವರಾದ ನಾವು ಖಚಿತವಾಗಿ ತಿಳಿಯಲಾರೆವು . ಆದುದರಿಂದ, ನಾವು ಒಬ್ಬ ವ್ಯಕ್ತಿಯ ನಂಬಿಕೆ ವಿಷಯದಲ್ಲಿ ಸಂಪೂರ್ಣ ನಿಶ್ಚಯವನ್ನು ಹೊಂದಿರಲು ಸಾಧ್ಯವಿಲ್ಲವಾದಾಗ್ಯು ಅವನು ದೀಕ್ಷಾಸ್ನಾನವನ್ನು ಕೋರುವದಾದರೆ ನಾವು ನಿರಾಕರಿಸಬಾರದು. ಇಲ್ಲವಾದರೆ ನಾವು ಹೊಸ ಒಡಂಬಡಿಕೆಗೆ ಅವಿಧೇಯರಾಗುವಂತಾಗುತ್ತದೆ. ಹೌದು, ಕೆಲವರು ನಿಜನಂಬಿಕೆಯನ್ನು ಹೊಂದಿರದೆಯೇ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಸಾಧ್ಯತೆಯುಂಟು, ಆದರೆ ಅವರಿಗೆ ನ್ಯಾಯ ತೀರ್ಪು ನೀಡುವದು ದೇವರ ಕೆಲಸವೇ ಹೊರತು ನಮ್ಮ ಕೆಲಸವಲ್ಲ. ಫಿಲಿಪ್ಪನು, ಒಬ್ಬ ಅಪೊಸ್ತಲನಾಗಿರಲಿಲ್ಲ, ಆದಾಗ್ಯು, ದೀಕ್ಷಾಸ್ನಾನ ಮಾಡಿಸುವ ಅಧಿಕಾರ ಅವನಿಗಿತ್ತೆಂಬದನ್ನು ಗಮನಿಸಿರಿ (ವಚನ 12).ಇದರ ಮೂಲಕವಾಗಿ ಸಭೆಯ ಹಿರಿಯರು ಮತ್ತು ಸಭಾಧ್ಯಕ್ಷರುಗಳು ಸಹ ದೀಕ್ಷಾಸ್ನಾನ ಮಾಡಿಸುವ ಅಧಿಕಾರವನ್ನು ಹೊಂದಿದ್ದಾರೆಂಬದನ್ನು ನಾವು ಅರ್ಥಮಾಡಿಕೊಳ್ಳಬಹುದು.

**39** ಕರ್ತನ ಆತ್ಮನು ಫಿಲಿಪ್ಪನನ್ನು ಮೆಡಿಟರನಿಯನ್ ಕರಾವಳಿಯಲ್ಲಿರುವ ಕಂಚುಕಿಯು ಅವನನ್ನು ಕಾಣಲೇ ಇಲ್ಲ (2 ಅರಸುಗಳು 2:16; ಯೆಹೆಜ್ಕೇಲ 3:14; 8:3).

**40** ದೇವರಾತ್ಮನು ಫಿಲಿಪ್ಪನನ್ನು ಮೆಡಿಟರನಿಯನ್ ಕರಾವಳಿಯಲ್ಲಿರುವ ಗಾಜ ಪಟ್ಟಣದ ಉತ್ತರಕ್ಕಿರುವ ಅಜೋತಿಗೆ ಕರೆತಂದನು. ಅದರ ನಂತರ ಫಿಲಿಪ್ಪನು ಕೈಸರ್ಯದ ಉತ್ತರೆಡೆಗೆ ಪ್ರಯಾಣ ಪ್ರಾರಂಬಿಸಿ ಸುವಾರ್ತೆಯನ್ನು ಸಾರುತ್ತಾ ಹೋದನು. ಅವನು ಕೈಸರ್ಯದಲ್ಲಿಯೇ ವಾಸ್ತವ್ಯ ಹೂಡಲು ತಿರ್ಮಾನಿಸಿದ್ದಂತೆ ತೋರುತ್ತದೆ, ಯಾಕೆಂದರೆ ಪು ನಃ ಫಿಲಿಪ್ಪನು ಅಪೊಸ್ತಲರ ಕೃತ್ಯಗಳ ಪು ಸ್ತಕದಲ್ಲಿ ಪ್ರಸ್ತಾಪಿಸಲ್ಪಟ್ಟಾಗ ಅವನು ಪ್ರವಾದಿನಿಯರಾದ ತನ್ನ ನಾಲ್ಕು ಮಂದಿ ಹೆಣ್ಣು ಮಕ್ಕಳೊಂದಿಗೆ ಕೈಸರ್ಯದಲ್ಲಿ ವಾಸಿಸುತ್ತಿದ್ದಾನೆ (ಅ.ಕೃತ್ಯ 21:8-9).

# ಅಧ್ಯಾಯ - 9

## ಸೌಲನ ಮಾನಸಾಂತರ (9:1-9)

**1-2** ಸೌಲನು (ಇವನು ನಂತರ ತನ್ನ ಹೆಸರನ್ನು ಪೌಲನೆಂದು ಬದಲಾಯಿಸಿಕೊಂಡನು) ಯೆರೂಸಲೇಮಿನಲ್ಲಿದ್ದ ಕ್ರೈಸ್ತರನ್ನು ಮಾತ್ರವೇ ಹಿಂಸಿಸುವದರಲ್ಲಿ ತೃಪ್ತನಾಗಲಿಲ್ಲ (ಅ.ಕೃತ್ಯ 8:1,3 ನೋಡಿರಿ). ಅವರು ಓಡಿ ಹೋದ ಕಡೆಯಲೆಲ್ಲಾ ಆತನು ಅವರನ್ನು ಕಾಡಿದನು. ವಿಶ್ವಾಸಿಗಳು ಸಿರಿಯಾದ ರಾಜಧಾನಿಯಾದ ದಮಸ್ಕಕ್ಕೆ ಪಲಾಯನ ಮಾಡಿದ್ದರು. ಇನ್ನು ಕೆಲವರು ಅಲ್ಲಿದ್ದ ಯೆಹೂದ್ಯ ಸಭಾಮಂದಿರಗಳಿಗೆ ಹೋಗಿದ್ದರು. (ಅಲ್ಲಿಯ ವರೆಗೂ ಕ್ರೈಸ್ತರಾಗಿ ಮಾರ್ಪಟ್ಟವರೆಲ್ಲರೂ ಯೆಹೂದ್ಯರೇ ಆಗಿದ್ದರು; ಆದ್ದರಿಂದ ಅವರು ಆಗಲೂ ಆರಾಧನೆಗಾಗಿ ಸಭಾಮಂದಿರಗಳಿಗೆ ಹೋಗುತ್ತಿದ್ದರು. ಯೆರೂಸಲೇಮಿನಲ್ಲಿದ್ದ ಯೆಹೂದ್ಯ ಮಹಾಯಾಜಕನು ಈ ಸಭಾಮಂದಿರಗಳ ಮೇಲೆ ಅಧಿಕಾರ ಹೊಂದಿದ್ದನು, ಆದುದರಿಂದ ಸೌಲನು ಅಲ್ಲಿರುವ ಕ್ರೈಸ್ತರನ್ನು ಬಂಧಿಸಿ ಯೆರೂಸಲೇಮಿಗೆ ತರುವಂತೆ ಅಧಿಕಾರ ಕೊಡಬೇಕೆಂದು ಮಹಾಯಾಜಕನಿಂದ ಪತ್ರವೊಂದನ್ನು ಪಡೆದು ಕೊಂಡನು (ಅ.ಕೃತ್ಯ 22:4-5, 26:9-11). ವಚನ 2ರಲ್ಲಿ ಕ್ರೈಸ್ತಧರ್ಮವು ಮಾರ್ಗ ಎಂದು ಕರೆಯಲ್ಪಟ್ಟಿದೆ. ಆದಿಕ್ರೈಸ್ತರು ಸಾಮಾನ್ಯವಾಗಿ ಈ ಹೆಸರನ್ನು ಉಪಯೋಗಿಸಿದರು (ಅ.ಕೃತ್ಯ 19:9, 23; 22:4; 24:14). ಮಾರ್ಗ ಎಂಬುದು ಸರಿಯಾದದ್ದು, ಯಾಕೆಂದರೆ ಕ್ರೈಸ್ತಧರ್ಮವು ವಾಸ್ತವದಲ್ಲಿ ರಕ್ಷಣೆಗೆ ಮಾರ್ಗವಾಗಿದೆ, ನಿತ್ಯ ಜೀವಕ್ಕೆ ಮಾರ್ಗವಾಗಿದೆ. ಸ್ವತಃ ಕ್ರಿಸ್ತನು ನಮ್ಮ ಸತ್ಯ ಮಾರ್ಗವಾಗಿದ್ದಾನೆ (ಯೋಹಾನ 14:6).

**3** ಸುಮಾರು ಮದ್ಯಾಹ್ನದ ಹೊತ್ತಿಗೆ ಸೌಲನು ದಮಸ್ಕಕ್ಕೆ ಹತ್ತಿರವಾಗುತ್ತಿದ್ದಂತೆ ಸೂರ್ಯನಿಗಿಂತಲೂ ಪ್ರಕಾಶಮಾನವಾದ ಬೆಳಕೊಂದು ಅವನ ಸುತ್ತಲೂ ಮಿಂಚಿತು (ಅ.ಕೃತ್ಯ 22:6; 26:13).

**4** ಆಗ ಸೌಲನಿಗೆ ಒಂದು ಸ್ವರವು ಕೇಳಿಸಿತು. ಅವನ ಜೊತೆಯಲ್ಲಿದ್ದವರು ಶಬ್ದವನ್ನು ಕೇಳಿದರು. ಆದರೆ ಅವರು ಮಾತುಗಳನ್ನು ಅರ್ಥಮಾಡಿಕೊಳ್ಳಲಾಗಲಿಲ್ಲ (ಅ.ಕೃತ್ಯ 22:7,9; 26:14). ಆ ಸ್ವರವು ಯೇಸುವಿನ ಸ್ವರವಾಗಿತ್ತು. ಯೇಸು ತಾನೇ ಸೌಲನೊಂದಿಗೆ ವಯುಕ್ತಿಕವಾಗಿ ಮಾತಾಡುತ್ತಿದ್ದನು. "ಸೌಲನೇ, ಸೌಲನೇ, ನನ್ನನ್ನು ಯಾಕೆ ಹಿಂಸೆಪಡಿಸುತ್ತೀ"? ಎಂದು ಯೇಸು ಕೇಳಿದನು. ಸೌಲನು ತಾನು ಮನುಷ್ಯರನ್ನಷ್ಟೇ ಹಿಂಸಿಸುತ್ತಿದ್ದಾನೆಂದು ನೆನಸಿದನು, ಆದರೆ ಈಗ ಆತನು ತಾನು ಇದುವರೆಗೂ ಸ್ವತಃ ಕರ್ತನನ್ನೇ ಹಿಂಸೆ ಪಡಿಸುತ್ತಿದ್ದನೆಂಬದನ್ನು ತಿಳಿದುಕೊಂಡನು..

**5-6** ತನ್ನೊಂದಿಗೆ ಮಾತಾಡುತ್ತಿದ್ದವನು ಕರ್ತನೇ ಎಂದು ಸೌಲನು ಗುರುತಿಸಿದನು. ಬೆಳಕು ಎಷ್ಟೊಂದು ಮಹಾ ಮತ್ತು ಭಯಾನಕವಾಗಿತ್ತೆಂದರೆ ಸೌಲನು ತಕ್ಷಣವೇ ತಾನು ದೇವರ ಪ್ರಸನ್ನತೆಯಲ್ಲಿದ್ದೇನೆಂದು ತಿಳುಕೊಂಡಿದ್ದನು. ಲೋಕಕ್ಕೆ ಬೆಳಕಾದ ಯೇಸು ಅವನಿಗೆ ಕಾಣಿಸಿಕೊಂಡಿದ್ದನು (ಯೋಹಾನ 8:12). ಆದರೆ ಆ ಬೆಳಕು "ಕರ್ತನು" ಎಂಬದು ಸೌಲನಿಗೆ ಗೊತ್ತಿತ್ತಾದರೂ ಅವನು ಅಲ್ಲಿಯ ತನಕವೂ ವಾಸ್ತವದಲ್ಲಿ ಆ ಕರ್ತನು ಸ್ವತಃ ಪುವರುಥ್ಥಾನಗೊಂಡ ಕ್ರಿಸ್ತನೇ ಎಂಬದನ್ನು ತಿಳಿದಿರಲಿಲ್ಲ. ಆದುದರಿಂದ, ಸೌಲನು, "ಕರ್ತನೇ, ನೀನಾರು?" ಎಂದು ಕೇಳಿದನು. ಮತ್ತು ಕರ್ತನು ಉತ್ತರಿಸಿ," ನಾನು ಯೇಸುವೇ?" ಎಂದನು. (ವಚನ 5).

ನಂತರ, ಅ.ಕೃತ್ಯ 22:10 ರ ಪ್ರಕಾರವಾಗಿ ಸೌಲನು ಯೇಸುವಿಗೆ, "ಕರ್ತನೇ, ನಾನೇನು ಮಾಡಬೇಕು?" ಎಂದು ಕೇಳಿದನು. ಇಲ್ಲಿ ನಾವು ಸೌಲನ ಮಾನಸಾಂತರದ ಮೊದಲ ಹೆಜ್ಜೆಯನ್ನು ಕಾಣುತ್ತೇವೆ. ಸೌಲನು ಈಗ ಕರ್ತನು ಬಯಸುವದನ್ನು ಮಾಡಲು ಸಿದ್ದನಾಗಿದ್ದನು. ಅವನು ತನ್ನ ಸ್ವಂತ ಆಶೆಗಳನ್ನೂ, ಉದ್ದೇಶಗಳನ್ನು ತೊರೆದು ಬಿಟ್ಟಿದ್ದನು. ನಿಜ ಮಾನಸಾಂತರವೆಂದರೆ ಯಾವಾಗಲೂ ಒಬ್ಬ ವ್ಯಕ್ತಿ. ಮನಸ್ಸು ಮತ್ತು ಚಿತ್ತಗಳ ಬದಲಾವಣೆ ಎಂದರ್ಥವನ್ನು ನೀಡುತ್ತದೆ. (ರೋಮ 12:2 ನೋಡಿರಿ). ಸೌಲನು ಕರ್ತನನ್ನು ನಾನೇನು ಮಾಡಲಿ ಎಂದು ಕೇಳಿದ ನಂತರ ಕರ್ತನು ಉತ್ತರಿಸಿ," ನೀನೆದ್ದು ಊರೊಳಕ್ಕೆ ಹೋಗು" ಅಂದನು (ಅ.ಕೃತ್ಯ 22:8, 10; 26:15). ಅಪೊಸ್ತಲರ ಕೃತ್ಯಗಳು 26:16-18ರ ಪ್ರಕಾರವಾಗಿ ಕರ್ತನು ಇನ್ನು ಕೆಲವು ಮಾತುಗಳನ್ನು ಸಹ ಸೌಲನಿಗೆ ಹೇಳಿದನು. ಆತನು ಸೌಲನಿಗೆ:"ನಿನ್ನನ್ನು ನನ್ನ ಸೇವಕನಾಗಿಯೂ ಸಾಕ್ಷಿಯಾಗಿಯೂ ನೇಮಿಸುವದಕೋಸ್ಕರ ನಿನಗೆ ಕಾಣಿಸಿಕೊಡಿದ್ದೇನೆ. ನಾನು ಈಗಲೂ ಮುಂದೆ ನಿನಗೆ ಕೊಡಲಿಕ್ಕಿರುವ ದರ್ಶನಗಳಲ್ಲಿಯೂ ನಿನಗೆ ಕಾಣಿಸಿಕೊಂಡದ್ದನ್ನು ಕುರಿತು ನೀನು ಸಾಕ್ಷಿಯಾಗಿರಬೇಕು" ಎಂದನು ಅ.ಕೃತ್ಯ 26:16). ಯೇಸು ಪ್ರಥಮ ಬಾರಿಗೆ ಸೌಲನನ್ನು ಒಬ್ಬ ಅಪೊಸ್ತಲನನ್ನಾಗಿ ಇಲ್ಲಿಯೇ ನೇಮಕಮಾಡಿದ್ದು.

**7** ಸೌಲನ ಸಂಗಡ ಪ್ರಯಾಣಿಸುತ್ತಿದ್ದವರು ಸಹ ವಿಸ್ಮಯಗೊಂಡರು. ಪ್ರಾರಂಭದಲ್ಲಿ ಅವರೆಲ್ಲರೂ ಸಹ ಸೌಲನೊಂದಿಗೆ ನೆಲಕ್ಕೆ ಬಿದ್ದರು (ಅ.ಕೃತ್ಯ 16:4). ಬಳಿಕ ಸೌಲನು ಇನ್ನು ನೆಲದ ಮೇಲೆ ಬಿದ್ದಿರುವಾಗಲೇ ಅವರು ಮೇಲೆದ್ದು ಮೂಕರಂತೆ ನಿಂತರು. ಈ ಮನುಷ್ಯರು ಆಕಾಶದಿಂದ ಶಬ್ದವನ್ನು ಕೇಳಿದರೆಂದು ಇಲ್ಲಿ ಬರೆದದೆ. ಅ.ಕೃತ್ಯಗಳು 22:9ರಲ್ಲಿ ಅವರು ಸ್ವರವನ್ನು ಕೇಳಲಿಲ್ಲ ಎಂದು ಬರೆಯಲ್ಪಟ್ಟಿದೆ. ಅಂದರೆ, ಅವರು ಸ್ವರವನ್ನು ಕೇಳಿದರು, ಆದರೆ ಮಾತಾಡಲ್ಪಟ್ಟ ಮಾತುಗಳೇನೆಂಬದನ್ನು ಅವರಿಗೆ ತಿಳಿಯಲಾಗಲಿಲ್ಲ. ಸೌಲನ ಸಂಗಡಿಗರಲ್ಲಿ ಯಾರಾದರೂ ಮಾನಸಾಂತರ ಹೊಂದಿದರೋ ಎಂಬದು ಪ್ರಸ್ತಾಪಿಸಲ್ಪಟ್ಟಿರುವದಿಲ್ಲ. ಅವರು ಬೆಳಕನ್ನು ಕಂಡರು ಹಾಗು ಸ್ವರವನ್ನು ಆಲಿಸಿದರು. ಆದರೆ ದೇವರ ಆತ್ಮನು ಅವರ ಹೃದಯಗಳನ್ನು ಪ್ರವೇಶಿಸಲಿಲ್ಲ. ಮನುಷ್ಯನು ಕೇವಲ ಬಹಿರಂಗದ ಚಿಹ್ನೆಗಳಿಂದ ಮಾನಸಾಂತ ಹೊಂದುವದಿಲ್ಲ; ದೇವರ ಕೃಪೆ ಹಾಗು ದೇವರಾತ್ಮನು ಒಬ್ಬ ಮನುಷ್ಯನೊಳಗೆ ಪ್ರವೇಶಿಸಿದಾಗ ಮಾತ್ರವೇ ಅವನು ಮಾನಸಾಂತರ ಹೊಂದುವನು.

**8-9** ಮಹಾ ಬೆಳಕು ಸೌಲನನ್ನು ಕುರುಡುಗೊಳಿಸಿತು (ಅ.ಕೃತ್ಯ 22:11) ಮತ್ತು ಆತನು ಮೂರು ದಿನಗಳ ವರೆಗೂ ಕುರುಡನಾಗಿದ್ದನು. ಆ ವೇಳೆಯಲ್ಲಿ ಆತನು ಆಹಾರವನ್ನಾಗಲಿ, ನೀರನ್ನಾಗಲಿ ಸೇವಿಸದೆ ದಮಸ್ಕದಲ್ಲಿದ್ದನು.

ಸೌಲ ಮತ್ತು ಅನನೀಯ (9:10-19)

**10-11** ಅನನೀಯನು ದಮಸ್ಕದ ಒಬ್ಬ ಕ್ರೈಸ್ತನಾಗಿದ್ದು, ಅವನು ಧರ್ಮಶಾಸ್ತ್ರಕ್ಕೆ ಸರಿಯಾಗಿ ನಡೆಯುವ ಸದ್ಭಕ್ತನೂ ಆಸ್ಥಳದ ಯೆಹೂದ್ಯರೆಲ್ಲರಿಂದ ಒಳ್ಳೆಯವನೆಂದು ಹೆಸರು ಹೊಂದಿದವನೂ ಆಗಿದ್ದನು" (ಅ.ಕೃತ್ಯ 22:12) ಅನನೀಯನು ದರ್ಶನವೊಂದರಲ್ಲಿ ಕರ್ತನು ತನಗೆ ಸೌಲನಿರುವ ಸ್ಥಳಕ್ಕೆ ಹೋಗು ಎಂದು ಹೇಳುವದನ್ನು ಕಂಡನು.

**12** ಸೌಲನು ಸಹ ಅನನೀಯನೆಂಬ ಒಬ್ಬ ಮನುಷ್ಯನು ಬಂದು ತನ್ನ ಮೇಲೆ ಕೈಗಳನ್ನಿಡುವ ದರ್ಶನವನ್ನು ಕಂಡಿದ್ದಾನೆಂದು ಕರ್ತನು ಅನನೀಯನಿಗೆ ಹೇಳಿದನು. ಆದುದರಿಂದ, ಅನನೀಯನು ಸೌಲನಿಗೆ ಹೆದರಬೇಕಾದ ಅಗತ್ಯವಿರಲಿಲ್ಲ. ಸೌಲನು ಆತನನ್ನು ಗುರುತಿಸಿ ಸ್ವೀಕರಿಸಿಕೊಳ್ಳುವನು.

**13-14** ಕರ್ತನು ಅನನೀಯನಿಗೆ ಸೌಲನು ಆತನನ್ನು ಸ್ವೀಕರಿಸಿಕೊಳ್ಳುವನೆಂದು ಹೇಳಿದಾಗ್ಯು ಸಹ ಅನನೀಯನು ಇನ್ನು ಸಂಶಯವುಳ್ಳವನಾಗಿದ್ದನು. ಅನನೀಯನು ಕರ್ತನಿಗೆ, "ಈ ಮನುಷ್ಯನು ನಿನ್ನ ವೈರಿಯೆಂಬದು ತಿಳಿಯದೋ? ಅಲ್ಲದೆ ಅವನು ಇಲ್ಲಿಯೂ ನಿನ್ನ ಹೆಸರನ್ನು ಸ್ಮರಿಸುವವರೆಲ್ಲರಿಗೆ (ಅಂದರೆ ಕ್ರಿಸ್ತನನ್ನು ನಂಬುವವರನ್ನು) ಬೇಡಿಹಾಕಿಸುವದಕ್ಕೆ ಬಂದಿದ್ದಾನೆ –" ಅಂದನು.

**15** ಆದರೆ ಕರ್ತನು ಅನನೀಯನಿಗೆ "ನೀನು ಹೋಗು! ನನ್ನೊಂದಿಗೆ ತರ್ಕಿಸಬೇಡ. ಆ ಮನುಷ್ಯನು ಅನ್ಯಜನರಿಗೂ ಅರಸುಗಳಿಗೂ ಇಸ್ರಾಯೇಲ್ಯರಿಗೂ ನನ್ನ ಹೆಸರನ್ನು ತಿಳಿಸುವದಕ್ಕಾಗಿ ನಾನು ಆರಿಸಿಕೊಂಡ ಸಾಧನವಾಗಿದ್ದಾನೆ." ಅಂದನು. ಇಲ್ಲಿ ಕರ್ತನು ಸೌಲನನ್ನು ಅನ್ಯಜನರಿಗೆ ಅಪೊಸ್ತಲನನ್ನಾಗಿ ನೇಮಕ ಮಾಡುವ ತನ್ನ ಇಂಗಿತವನ್ನು ಘೋಷಿಸುತ್ತಾನೆ (ಅ.ಕೃತ್ಯ 22:21) ಇದಕ್ಕೆ ಮುಂಚೆ ಕ್ರಿಸ್ತನ ಸುವಾರ್ತೆಯು ಯೆಹೂದ್ಯರು ಮತ್ತು ಸಮಾರ್ಯರ ಮಧ್ಯದಲ್ಲಿ ಮಾತ್ರವೇ ಸಾರಲ್ಪಟ್ಟಿತ್ತು. ಈಗಿನಿಂದ ನನ್ನ ಸುವಾರ್ತೆಯು ಯೆಹೂದ್ಯರು ಮತ್ತು ಅನ್ಯ ಜನರು ಅಂತೂ ಎಲ್ಲಾ ಜನರಿಗೂ ಸಮಾನವಾಗಿ ಸಾರಲ್ಪಡಬೇಕೆಂದು ಕ್ರಿಸ್ತನು ಅನನೀಯನಿಗೆ ಹೇಳುತ್ತಾನೆ. ಸೌಲನು ಕ್ರಿಸ್ತನ ಹೆಸರನ್ನು ಅರಸುಗಳ ಮುಂಭಾಗದಲ್ಲಿಯೂ (ಅ.ಕೃತ್ಯ 26:2) ಮತ್ತು ಇಸ್ರಾಯೇಲ್ಯರ (ಯೆಹೂದ್ಯರ) ಬಳಿಗೂ ಕ್ರಿಸ್ತನ ಹೆಸರನ್ನು ಹೊತ್ತೊಯ್ಯಲು ನೇಮಿಸಲ್ಪಟ್ಟಿದ್ದನು. ಸೌಲನು (ಪೌಲ) ಕೇವಲ ಅನ್ಯಜನರಿಗೆ ಮಾತ್ರ ಸಾರಲಿಲ್ಲ. ಅವನು ಯಾವದೇ ಊರಿಗೆ ಹೋಗಲಿ ಮೊದಲು ಆತನು ಸ್ಥಳೀಯ ಯೆಹೂದ್ಯ ಸಭಾಮಂದಿರಗಳಿಗೆ ಹೋಗಿ ಅಲ್ಲಿಯ ಯೆಹೂದ್ಯರಿಗೆ ಬೋಧಿಸುತ್ತಿದ್ದನು. ಅನಂತರವಷ್ಟೇ ಅವನು ಅನ್ಯಜನರಿಗೆ ಬೋಧಿಸುತ್ತಿದ್ದನು.

**16** ಸೌಲನು ಯೆಹೂದ್ಯರಿಗೂ, ಅನ್ಯಜನರಿಗೂ ಕ್ರಿಸ್ತನ ಹೆಸರನ್ನು ತಿಳಿಸುವದಕ್ಕೆ ಮಾತ್ರವಲ್ಲದೆ ಆತನು ಕ್ರಿಸ್ತನಿಗಾಗಿ ಹಿಂಸೆಯನ್ನು ತಾಳಲು ಸಹ ನೇಮಿಸಲ್ಪಟ್ಟಿದ್ದನು. ಸೌಲನು ಕ್ರೈಸ್ತರಿಗೆ ಮಹಾ ಹಿಂಸೆಯನ್ನುಂಟುಮಾಡಿದ್ದನು; ಈಗ ಹಿಂಸೆ ತಾಳುವ ಸರದಿಯು ಅವನದಾಗಿತ್ತು (2 ಕೊರಿಂಥ 6:4-5; 11:23-28 ನೋಡಿರಿ).

**17** ಅನನೀಯನು ಸೌಲನ ಮೇಲೆ ಕೈಗಳನ್ನಿಟ್ಟಾಗ ಸೌಲನು ಪುನಃ ದೃಷ್ಟಿಯನ್ನು ಪಡೆದನು. ಸೌಲನ ದೃಷ್ಟಿಮಾತ್ರವಲ್ಲ, ಆದರೆ ಅವನ ಇಡೀ ಜೀವಿತವೆಲ್ಲಾ ಪವಿತ್ರಾತ್ಮಮನ ಮೂಲಕ ನೂತನಗೊಳಿಸಲ್ಪಟ್ಟಿತು. ಬಳಿಕ ಅನನೀಯನು ತನ್ನ ದರ್ಶನದಲ್ಲಿ ಕರ್ತನಿಂದ ತಾನು ಕೇಳಿದ್ದನ್ನು ಸೌಲನಿಗೆ ಹೇಳಿದನು: ಉದಾಹರಣೆಗೆ, ಯೆಹೂದ್ಯರು ಮತ್ತು ಅನ್ಯ ಜನರನ್ನೊಳಗೊಂಡಂತೆ ಎಲ್ಲಾ ಜನರಿಗೂ ಸುವಾರ್ತೆಯನ್ನು ಸಾರುವದಕ್ಕಾಗಿ ಸೌಲನು ಕ್ರಿಸ್ತನ ಸಾಧನವಾಗಿರಬೇಕೆಂಬದು (ಅ.ಕೃತ್ಯ 22:12-16). ಸ್ವತಃ ಕ್ರಿಸ್ತನು ದಮಸ್ಕದ ದಾರಿಯಲ್ಲಿ ಇದೇ ಸಂಗತಿಯನ್ನೇ ಸೌಲನಿಗೆ ಹೇಳಿದ್ದನು (ಅ.ಕೃತ್ಯ 26:15-18). ಹೀಗಿರುವದರಿಂದ, ಅದೇ ವಿಷಯವನ್ನು ಎರಡು ಸಾರಿ – ಮೊದಲು, ಕ್ರಿಸ್ತನಿಂದ ಮತ್ತು ಈಗ ಅನನೀಯನಿಂದ – ಕೇಳಿದ ಸೌಲನು ತಾನು ನಿಜವಾಗಿಯೂ ಕ್ರಿಸ್ತ ಅಪೊಸ್ತಲನಾಗಿ ಆತನಿಂದ ಸೇವಿಸಲ್ಪಟ್ಟಿದ್ದೇನೆಂದು ನಿಶ್ಚಯವಾಗಿ ತಿಳುಕೊಂಡನು (1 ಕೊರಿಂಥ 15:7-9) ಆತನನ್ನು ಅನನೀಯನು ನೇಮಿಸಲಿಲ್ಲ; ಆತನು ಈಗ ದಮಸ್ಕದ ದಾರಿಯಲ್ಲಿ ಮುಖಾಮುಖಿಯಾಗಿ ನೋಡಿದ ಸ್ವತಃ ಪುನರುತ್ಥಾನಗೊಂಡ ಕರ್ತನೇ ಅವನನ್ನು ನೇಮಕಮಾಡಿದ್ದನು.

**18-19** ಅನನೀಯನು ಸೌಲನ ಮೇಲೆ ತನ್ನ ಕೈಗಳನ್ನಿಡಲು ಕೂಡಲೇ ಅವನ ಕಣ್ಣುಗಳಿಂದ ಪರೆಗಳಂತೆ ಏನೋ ಬಿದ್ದು ಅವನ ಕಣ್ಣು ಕಾಣಿಸಿದವು . ತರುವಾಯ ಸೌಲನು ದೀಕ್ಷಾಸ್ನಾನ ಹೊಂದಿದನು. ಯಾರು ಆತನಿಗೆ ದೀಕ್ಷಾಸ್ನಾನ ಮಾಡಿಸಿದರೆಂದು ಬೈಬಲ್ ನಮಗೆ ಹೇಳದಿದ್ದಾಗ್ಯೂ ಅನನೀಯನೇ ಸೌಲನಿಗೆ ದೀಕ್ಷಾಸ್ನಾನ ಮಾಡಿಸಿದನೆಂದು ನಾವು ಊಹಿಸಬಹುದು. ಸೌಲನ ಮಾನಸಾಂತರ ಎಂತಹ ಒಂದು ಆಶ್ಚರ್ಯಕರವಾದ ಸಂಗತಿಯಲ್ಲವೆ! ನಿಜವಾಗಿಯೂ, ಇದು ಇಡೀ ಜಗತ್ತಿನ ಇತಿಹಾಸದಲ್ಲಿಯೇ ಅತಿ ಮಹತ್ವದ ಸಂಗತಿಯೆಂದು ನಿರೂಪಿಸಲ್ಪಟ್ಟಿದೆ. ಯೇಸುವಿನ ಮೇಲೆ ಭಯಂಕರ ರೋಷವಿದ್ದ ಅಂತಹ ವೈರಿಯು ಹೇಗೆ ಅಷ್ಟೊಂದು ಶೀಘ್ರವಾಗಿ ಆತನ ಅಪೊಸ್ತಲರಲ್ಲೊಬ್ಬನಾದನು? ಸೌಲನು ಒಬ್ಬ ಮುತ್ಸದ್ದಿ ಹಾಗು ಪರಿಣಿತ ವ್ಯಕ್ತಿಯಾಗಿದ್ದನು. ಅವನು ಹುಚ್ಚನಾಗಿರಲಿಲ್ಲ. ಆದರೆ ಪಕ್ಕನೇ ಅವನ ಜೀವಿತವು ಸಂಪೂರ್ಣವಾಗಿ ತಲೆಕೆಳಗಾಯಿತು. ಕೇವಲ ಮೂರುದಿವನಗಳಲ್ಲಿ ಯೇಸುವಿನ ಮಹಾವೈರಿಯು ಆತನ ಮಹಾ ಅಪೊಸ್ತಲನಾದನು!. ನಾವು ಇದನ್ನು ಹೇಗೆ ವಿವರಿಸಬಹುದು? ಸೌಲನು ವಾಸ್ತವವಾಗಿ ದಮಸ್ಕದ ಆ ದಾರಿಯಲ್ಲಿ ಜೀವಸ್ವರೂಪನೂ ಮಹಿಮಾ ಸ್ವರೂಪನೂ ಆದ ಕ್ರಿಸ್ತನನ್ನು ಸಂಧಿಸಿದನೆಂದು ಹೇಳುವದರ ಮೂಲಕ ನಾವು ಅದನ್ನು ವಿವರಿಸಬಹುದು, ಇನ್ನಾವ ವಿವರಣೆಯ ಸಾಧ್ಯತೆಯೂ ಇರುವದಿಲ್ಲ. ಯೇಸು ಕ್ರಿಸ್ತನು ನಿಜವಾಗಿಯೂ ಸತ್ತವರೊಳಗಿಂದ ಎದ್ದು ಬಂದನು ಮತ್ತು ಈ ದಿನವೂ ಜೀವಿಸುವವನಾಗಿದ್ದಾನೆ

ಎಂಬುದಕ್ಕೆ ಸೌಲನ ಮಾನ ಸಾಂತರ ಆಧಾರವಾಗಿರುತ್ತದೆ. ಯಾವನಾದರೂ, ನಾನು ಕ್ರಿಸ್ತನ ಹಿಂಬಾಲಕನಾಗಲಾರದಷ್ಟು ಕೆಟ್ಟವನೂ, ಅತಿಘೋರ ಪಾಪಿಯೂ ಆಗಿದ್ದೇನೆಂದು ಯೋಚಿಸುವವನಿದ್ದಾನೋ? ಅವನು ಸೌಲನನ್ನು ನೆನಪಿಸಿಕೊಳ್ಳಲಿ! ಯೇಸು ಯಾರನ್ನಾದರೂ – ಭೂಮಿಯಲ್ಲಿನ ಘೋರಾತಿಘೋರ ಪಾಪಿಯನ್ನು ಸಹ ಮಾರ್ಪಡಿಸುವವನಾಗಿದ್ದಾನೆ.

## ದಮಸ್ಕ ಹಾಗು ಯೆರೂಸಲೇಮಿನಲ್ಲಿ ಸೌಲನು (9:20-31)

**20** ಗಲಾತ್ಯ 1:17ರ ಪ್ರಕಾರವಾಗಿ, ಸೌಲನು ತನ್ನ ಮಾನಸಾಂತರದ ತಕ್ಷಣವೇ ಅರಬಸ್ಥಾನಕ್ಕೆ ಹೋದನು, ಮತ್ತು ಅನಂತರ ಮಾತ್ರವೇ ದಮಸ್ಕಕ್ಕೆ ತಿರಿಗಿ ಬಂದನು. ಈ ಪು ಸ್ತಕದಲ್ಲಿ ಲೂಕನು ಸೌಲನ ಅರಬಸ್ಥಾನದ ಪ್ರವಾಸವನ್ನುಕುರಿತಾಗಿ ಪ್ರಸ್ತಾಪ ಮಾಡಿರುವದಿಲ್ಲ. ಸೌಲನು ದಮಸ್ಕಕ್ಕೆ ಹಿಂದಿರುಗಿದ ಕೂಡಲೆ ತಡಮಾಡದೆ ಸಭಾಮಂದಿರಗಳಲ್ಲಿ ಯೇಸುವಿನ ವಿಷಯವಾಗಿ ಆತನೇ ದೇವಕುಮಾರನೆಂದು ಸಾರುವದಕ್ಕೆ ಪ್ರಾರಂಭಿಸಿದನು. ಸೌಲನ ಹೃದಯವು ಮನಸಾಂತರ ಹೊಂದಿತ್ತು, ಈಗ ಆತನ ನಡಾವಳಿಯು ಸಹ ಪರಿವರ್ತನೆಗೊಂಡಿತ್ತು. ಆತನು ಕ್ರೈಸ್ತರನ್ನು ಹಿಂಸಿಸುವದರ ಬದಲಾಗಿ ಈಗ ಅವರ ಪರವಾಗಿ ಮಾತಾಡುತ್ತಿದ್ದನು.

**21-22** ಸೌಲನಲ್ಲಾದ ಪರಿವರ್ತನೆಯನ್ನು ಕಂಡು ಜನರು ಬೆರಗಾದರು. ವಿಶೇಷವಾಗಿ ಸೌಲನು, ಯೆಹೂದ್ಯರ ಧರ್ಮ ಗ್ರಂಥವಾದ ಹಳೆ ಒಡಂಬಡಿಕೆಯಂದಲೇ ಯೇಸು ಕ್ರಿಸ್ತನು – ಮೆಸ್ಸೀಯನು – ಎಂಬದಾಗಿ ಸಿದ್ಧಾಂತಪಡಿಸುವದರ ಮೂಲಕ ಯೆಹೂದ್ಯರನ್ನು ಉತ್ತರವಿಲ್ಲದವರಾಗಮಾಡಿದನು. ಅದು ಮಾತ್ರವಲ್ಲದೆ, ಸ್ವತಃ ಯೆಹೂದ್ಯನಾದ ಸೌಲನು "ನಾನು ಪು ನರುತ್ಥಾನಗೊಂಡ ಕ್ರಿಸ್ತನನ್ನು ಕಣ್ಣಾರೆ ನೋಡಿದ್ದೇನೆ" ಎಂದು ಹೇಳಲು ಶಕ್ತನಾಗಿದ್ದನು.

**23-25** ಯೆಹೂಸಲೇಮಿನ ಯೆಹೂದ್ಯ ಸ್ತೆಫನ ಹಾಗು ಇತರ ಶಿಷ್ಯರ ಮೇಲೆ ಕೋಪಗೊಂಡ ಪ್ರಕಾರವೇ ದಮಸ್ಕದಲ್ಲಿನ ಯೆಹೂದ್ಯರೂ ಸಹ ಅದೇ ವಿಧದಲ್ಲಿ ಸೌಲನ ಮೇಲೆ ಕೋಪ ಗೊಂಡರು. ಅದು ಸಹಜವಾಗಿತ್ತು, ಯಾಕೆಂದರೆ ಅವರದೃಷ್ಟಿಯಲ್ಲಿ ಸೌಲನು ಅವರಿಗೆ ದ್ರೋಹಮಾಡಿದವನಾಗಿದ್ದನು. ಅಂದಿನಿಂದ ಸೌಲನು ಹೋದ ಕಡೆಯಲೆಲ್ಲಾ ಯೆಹೂದ್ಯರು ಆತನ ವೈರಿಗಳಾದರು ಹಾಗು ಕಠೋರವಾಗಿ ವಿರೋಧಿಸಿದರು. ದಮಸ್ಕ ಪಟ್ಟಣದ ಸುತ್ತಲೆಲ್ಲಾ ಒಂದು ಮಹಾ ಗೋಡೆಯಿತ್ತು, ಅದಕ್ಕೆ ಪಟ್ಟಣದಿಂದ ಹೊರ ಹೋಗಲು ಮತ್ತು ಒಳಕ್ಕೆ ಬರಲು ಬಾಗಲುಗಳು ಇದ್ದವು . ದಮಸ್ಕದ ಯೆಹೂದಿ ವೈರಿಗಳು ಸೌಲನು ತಪ್ಪಿಸಿಕೊಂಡು ಹೋಗಲಾರದಂತೆ ನೋಡಿಕೊಳ್ಳಲು ಪಟ್ಟಣದ ಬಾಗಲುಗಳನ್ನು ಕಾಯುತ್ತಿದ್ದರು. ಆದರೆ ಸೌಲನ ಸ್ನೇಹಿತರು ಅವನನ್ನು ಚೀಲದಲ್ಲಿ ಕೂಡ್ರಿಸಿ ಗೋಡೆಯೊಳಗಿಂದ ಇಳಿಸಿದರು ಮತ್ತು ಅವನು ತಪ್ಪಿಸಿಕೊಂಡನು (2 ಕೊರಿಂಥ 11:32-33 ನೋಡಿರಿ).

**26** ಸೌಲನು ತನ್ನ ಮಾನಸಾಂತರದ ಮೂರು ವರ್ಷಗಳ ನಂತರ ಯೆರೂಸಲೇಮಿಗೆ ತಿರಿಗಿ ಬಂದನು (ಗಲಾತ್ಯ 1:18). ಆತನನ್ನು ಯಾರೊಬ್ಬರೂ ಸ್ವಾಗತಿಸಲಿಲ್ಲ! ಯೆಹೂದ್ಯರಂತೂ, ಈಗ ಆತನ ವೈರಿಗಳಾಗಿದ್ದರು. ಆದರೆ ಕ್ರೈಸ್ತರು ಸಹ ಪ್ರಾರಂಭದಲ್ಲಿ ಆತನನ್ನು ಸ್ವೀಕರಿಸಲಿಲ್ಲ. ಸೌಲನು ನಿಜವಾಗಿಯೂ ಕ್ರೈಸ್ತನಾಗಿದ್ದಾನೋ ಎಂದು ಅವರು ಸ್ವಾಭಾವಿಕವಾಗಿ ಸಂಶಯಪಟ್ಟರು. ಅನೇಕ ನೂತನ ಕ್ರೈಸ್ತರು ಪೌಲನಂತಹ ಅನುಭವವನ್ನು ಹೊಂದಿದ್ದರು. ಅವರು ತಮ್ಮ ಹಳೆಯ ಸ್ನೇಹಿತರಿಂದ ತಿರಸ್ಕರಿಸಲ್ಪಟ್ಟವರಾಗಿದ್ದರು, ಆದರೂ ಅವರು ತಮ್ಮ ಕ್ರಿಸ್ತನಲ್ಲಿ ನೂತನ ಸಹೋದರ ಸಹೋದರಿಯರಿಂದ ಸ್ವೀಕರಿಸಲ್ಪಟ್ಟಿರಲಿಲ್ಲ. ಇದು ಜರುಗದಿರಲಿ!. ನಾವು ದೀಕ್ಷಾಸ್ನಾನ ಹೊಂದಿದ ನೂತನ ವಿಶ್ವಾಸಿಯನ್ನು ಹೃದಯಪೂರ್ವಕವಾಗಿ ಸ್ವೀಕರಿಸಬೇಕು ಅವನ ಹಿಂದಿನ ಜೀವಿತವು ಎಷ್ಟು ಕೆಟ್ಟದ್ದಾಗಿದ್ದರೂ ನಾವು ಲೆಕ್ಕಿಸಬಾರದು. ಅವನು ಅನಂತರ ನಮ್ಮ ವಿಶ್ವಾಸಕ್ಕೆ ದ್ರೋಹ ಮಾಡಿದಾಗ್ಯು ಅದು ದೇವರಿಗೆ ಸೇರಿದ್ದು ಹೊರತು ನಾವು ಚಿಂತಿಸಬೇಕಿಲ್ಲ. ಒಬ್ಬ ನಿಜ ವಿಶ್ವಾಸಿಯನ್ನು ನಮ್ಮ ಅನ್ಯೋನ್ಯತೆಯಿಂದ ಹೊರಗೆ ಬಿಡುವದಕ್ಕಿಂತಲೂ ಒಬ್ಬ ವೈರಿಯನ್ನು ಒಳಬರುವಂತೆ ಅನುಮತಿಸುವದು ಉತ್ತಮವಾದದ್ದು. ಸ್ವತಃ ಯೇಸುವೇ ಯೂದನನ್ನು ಜೊತೆಯಲ್ಲಿ ಸೇರಿಸಿಕೊಂಡಿದ್ದನು.

**27** ಆದರೆ ಸೌಲನಿಗೆ ಬಾರ್ನಬನು ಸ್ನೇಹಿತನಾದನು. ಬಾರ್ನಬ ಅಂದರೆ ಧೈರ್ಯದಾಯಕ ಎಂದರ್ಥವಾಗಿದೆ (ಅ.ಕೃತ್ಯ 4:36-37). ಬಾರ್ನಬನು ನಿಜವಾಗಿಯೂ ಸೌಲನನ್ನು ಪ್ರೋತ್ಸಾಹಿಸಿದನು. ಆತನು ಸೌಲನನ್ನು ಅಪೊಸ್ತಲರಿಗೆ, ವಿಶೇಷವಾಗಿ ಕರ್ತನ ಸಹೋದರನಾದ ಯಾಕೋಬ ಮತ್ತು ಪೇತ್ರನಿಗೆ ಪರಿಚಯ ಮಾಡಿಸಿದನು (ಗಲಾತ್ಯ 1:18-19). ಅಷ್ಟು ಮಾತ್ರವಲ್ಲದೆ, ಬಾರ್ನಬನು ಸೌಲನ ಮಾನಸಾಂತರದ ನೈಜತೆಗೆ ಸಾಕ್ಷಿ ಹೇಳಿದನು.

**28-30** ಸೌಲನು ಯೆರೂಸಲೇಮಿನಲ್ಲಿ ಪೇತ್ರ ಹಾಗು ಯಾಕೋಬರೊಂದಿಗೆ ಎರಡು ವಾರಗಳ ವರೆಗೆ ಇಳಿದುಕೊಂಡನು. ಸೌಲನು ಯೆರೂಸಲೇಮಿನ ಯೆಹೂದ್ಯರೊಂದಿಗೆ, ವಿಶೇಷವಾಗಿ ಗ್ರೀಕ್ ಭಾಷೆಯನ್ನಾಡುವ ಯೆಹೂದ್ಯರೊಂದಿಗೆ ಧೈರ್ಯವಾಗಿ ಮಾತಾಡಿದನು. ಆದರೆ ಆ ಸಮಯದಲ್ಲಿ ಕರ್ತನು ಪು ನಃ ದರ್ಶನದಲ್ಲಿ ಸೌಲನಿಗೆ ಕಾಣಿಸಿಕೊಂಡು ತಕ್ಷಣವೇ ಯೆರೂಸಲೇಮನ್ನು ಬಿಟ್ಟು ಹೋಗ ಬೇಕೆಂದು ಹೇಳಿದನು (ಅ.ಕೃತ್ಯ 22:17-21). ಆದುದರಿಂದ, ಅಪೊಸ್ತಲರು ಅವನನ್ನು ಮೆಡಿಟರಿನಿಯನ್ ಸಮುದ್ರದ ಕರಾವಳಿಯಲ್ಲಿರುವ ಕೈಸರ್ಯಕ್ಕೆ ಕರೆದುಕೊಂಡು ಹೋದರು. ಅಲ್ಲಿಂದ ಸೌಲನು ದೋಣಿಯ ಮೂಲಕ ತಾನು ಹುಟ್ಟಿದ ತಾರ್ಸ (ಇಂದಿನ ಟರ್ಕಿ) ಪಟ್ಟಣಕ್ಕೆ ಹೋದನು (ಅ.ಕೃತ್ಯ 22:3). ಅಲ್ಲಿ ಸೌಲನು ಕೆಲವು ವರ್ಷಗಳ ವರೆಗೆ ಉಳಿದುಕೊಂಡನು. ಸೌಲನ (ಪೌಲನ) ಕಥೆಯು ಅ.ಕೃತ್ಯಗಳು 11:25 ರಲ್ಲಿ ಪ್ರಾರಂಭಗೊಂಡು ಪು ಸ್ತಕದ ಅಂತ್ಯದ ವರೆಗೂ ಸಾಗುತ್ತದೆ.

31 ಈ ವಚನದಲ್ಲಿ ಲೂಕನು ಯೂದಾಯ ಗಲಿಲಾಯ ಸಮಾರ್ಯಗಳಲ್ಲಿದ್ದ 50 ಸಭೆಯ ಕುರಿತಾಗಿ ಮಾತಾಡುತ್ತಾನೆ. ಒಂದು ವಿಧದಲ್ಲಿ, ವಿವಿಧ ಸ್ಥಳಗಳಲ್ಲಿ ಅನೇಕ ಸ್ಥಳೀಯ ಸಭೆಯಗಳಿರುತ್ತವೆ; ಆದರೆ ಇನ್ನೊಂದು ವಿಧದಲ್ಲಿ, ಈ ಎಲ್ಲಾ ಸ್ಥಳೀಯ ಸಭೆಗಳೆಲ್ಲಾ ಒಟ್ಟಾಗಿ ಒಂದೇ ಸಾರ್ವತ್ರಿಕ ಸಭೆ, ಅಂದರೆ ಕ್ರಿಸ್ತನ ಸಭೆಯಾಗುತ್ತದೆ. ಈ ಕಾರಣದಿಂದಲೇ ಲೂಕನು ಇಲ್ಲಿ ಸಭೆ ಎಂದು ಏಕವಚನದಲ್ಲಿ ಮಾತಾಡುತ್ತಾನೆ.

ಕ್ರೈಸ್ತರ ಪ್ರಮುಖ ವೈರಿಯಾದ ಸೌಲನ ಮಾನಸಾಂತರಮತ್ತು ಅನಂತರ ಯೆರೂಸಲೇಮಿನಿಂದ ಅವನ ಅಗಲುವಿಕೆಯ ದೆಸೆಯಿಂದ ಕ್ರೈಸ್ತರು ಸಮಾಧಾನದ ಕಾಲವನ್ನು ಅನಂದಿಸಿದರು. ಈ ಕಾಲದಲ್ಲಿ ಪವಿತ್ರಾತ್ಮನ ಕಾರ್ಯದ ಮುಖಾಂತರವಾಗಿ ಸಭೆಯು ಬೆಳೆದು ಅಭಿವೃದ್ಧಿಗೊಂಡಿತು. ಸಭೆಯು ಹಿಂಸೆಯಲ್ಲಿ ಅಭಿವೃದ್ಧಿಗೊಳ್ಳುವದಾದರೆ ಅದು ಸಮಾಧಾನದ ವೇಳೆಯಲ್ಲಿ ಸಹ ನಿಶ್ಚಯವಾಗಿಯೂ ಅಭಿವೃದ್ದಿಗೊಳ್ಳಬೇಕು! ಕ್ರೈಸ್ತರಿಗೂ ಸಹ ಸಮಾಧಾನ ಕಾಲಗಳ ಅಗತ್ಯವಿದೆ; ಹಿಂಸೆಯು ಮುಂದುವರೆಯುವದಾದರೆ ಅವರು ಬಳಲಿ ಹೋಗುವರು. ಲೂಕನು ಇಲ್ಲಿ ಸಭೆಯು ಬಲದಲ್ಲಿಯೂ ಸಂಖ್ಯೆಯಲ್ಲಿಯೂ ಹೆಚ್ಚುತ್ತಾ ಬಂತು ಎಂಬದನ್ನು ಗಮನಿಸಿರಿ. ಎರಡು ರೀತಿಯ ಬೆಳವಣಿಗೆಗಳು ಅವಶ್ಯಕ; ಸಂಖ್ಯೆಯಲ್ಲಿ ಮಾತ್ರವೇ ಬೆಳೆಯುವ ಸಭೆಯು ಕೇವಲ ಬೊಜ್ಜಾಗಿ ಬೆಳೆಯುತ್ತದಷ್ಟೆ.

## ಐನೇಯ ಹಾಗು ದೊರ್ಕಳು (9:32-43)

**32-35** ಆ ಸಮಯದಲ್ಲಿ ಪೇತ್ರನು ಯೂದಾಯ ಮತ್ತು ಸಮಾರ್ಯ ಸೀಮೆಗಳಲ್ಲಿದ್ದ ಕೆಲವು ಸಭೆಗಳನ್ನು ಸಂಧಿಸಲು ಹೋದನು. ಸ್ತೆಫನನ ಮರಣದ ನಂತರ ಉಂಟಾದ ಹಿಂಸೆಯ ವೇಳೆಯಲ್ಲಿ ಯೆರೂಸಲೇಮಿನಿಂದ ಪಲಾಯನ ಮಾಡಿದ್ದ ಶಿಷ್ಯರ ಮೂಲಕ ಈ ಸಭೆಗಳು ಸ್ಥಾಪಿಸಲ್ಪಟ್ಟಿದ್ದವು (ಅ.ಕೃತ್ಯ 8:1). ಲುದ್ಯದಲ್ಲಿನ ಸಭೆಯು ಪೇತ್ರನು ಸಂಧಿಸಿದ ಸಭೆಗಳಲ್ಲಿ ಒಂದಾಗಿತ್ತು, ಇದು ಯೆರೂಸಲೇಮಿನಿಂದ ಉತ್ತರಕ್ಕಿರುವ ಪಟ್ಟಣವಾಗಿತ್ತು. ಅಲ್ಲಿ ಪೇತ್ರನು ಐನೇಯನೆಂಬ ಮನುಷ್ಯನನ್ನು ಸ್ವಸ್ಥಮಾಡಿದನು ಮತ್ತು ಅದರ ಫಲಿತವಾಗಿ ಲುದ್ಯದಲ್ಲಿಯೂ, ಅದರ ಸುತ್ತಲಿನ ಸಾರೋನ ಪ್ರಾಂತ್ಯದಲ್ಲಿಯೂ ವಾಸವಾಗಿದ್ದವರೆಲ್ಲರೂ ಕರ್ತನ ಕಡೆಗೆ ತಿರಿಗಿಕೊಂಡರು. ಐನೇಯನು ತಕ್ಷಣ ಹಾಗು ಸಂಪೂರ್ಣವಾಗಿ ಸ್ವಸ್ಥನಾದನು. ಪೇತ್ರನು ಐನೇಯನಿಗೆ "ಯೇಸು ಕ್ರಿಸ್ತನು ನಿನ್ನನ್ನು ವಾಸಿಮಾಡುತ್ತಾನೆ (ವಚನ 34). ನಾಳೆಯಲ್ಲ, ಆದರೆ ಈ ಹೊತ್ತೇ! ಎದ್ದು ನಿನ್ನ ಹಾಸಿಗೆಯನ್ನು ಹಾಸಿಕೋ" ಎಂದು ಹೇಳಿದನು. ಐನೇಯನು ಈಗ ಹಾಸಿಗೆಯಲ್ಲಿ ಮಲಗಿಕೊಂಡಿರ ಬೇಕಾದ ಅಗತ್ಯವಿದ್ದಿಲ್ಲ, ಇದು ಆತನು ತನ್ನ ಹಾಸಿಗೆಯನ್ನು ಸುತ್ತಿಕೊಳ್ಳುವ ಸಮಯವಾಗಿತ್ತು! ತಕ್ಷಣವೇ ಐನೇಯನು ಎದ್ದು ನಿಂತುಕೊಂಡನು. ಯೇಸು ನಮ್ಮನ್ನು ಗುಣಪಡಿಸುವಾಗ ನಾವು ಹಾಸಿಗೆಯಲ್ಲಿ ಮಲಗಿಕೊಂಡೇ ಇರದೆ ಮೇಲೆ ಎದ್ದೇಳಬೇಕು.

**36-38** ಪೇತ್ರನು ಇನ್ನೂ ಲುದ್ಯದಲ್ಲಿ ಇರುವ ವೇಳೆ ಹತ್ತಿರದ ಯೊಪ್ಪ ಎಂಬ ಊರಿನಲ್ಲಿ ತಬಿಥಾ ಎಂಬ ಒಬ್ಬ ಕ್ರೈಸ್ತ ಸ್ತ್ರೀಯು ರೋಗದಲ್ಲಿ ಬಿದ್ದು ಸತ್ತು ಹೋದಳು. ಯೊಪ್ಪವು ಲುದ್ಯದಿಂದ ಸುಮಾರು ಹತ್ತು ಮೈಲುಗಳಷ್ಟು ದೂರ ಮೆಡಿಟರಿನಿಯನ್ ಸಮುದ್ರದ ಪ್ರದೇಶದಲ್ಲಿತ್ತು. ಪೇತ್ರನು ಲೂದ್ಯದಲ್ಲಿದ್ದಾನೆಂದು ಕೇಳಿದ ಯೊಪ್ಪದ ಕ್ರೈಸ್ತರು ಬಂದು ತಬಿಥಾಳನ್ನು ಎಬ್ಬಿಸಿ ಬೇಕೆಂದು ಪೇತ್ರನಿಗೆ ಹೇಳಿಕಳುಹಿಸಿದರು. ತಬಿಥಾಳು ಈಗಾಗಲೇ ಸತ್ತಿದ್ದಳಾದರೂ ಅವರು ಪೇತ್ರನಿಗೆ ಹೇಳಿಕಳುಹಿಸಿದರು. ವೈದ್ಯರನ್ನು ಕರೆಯುವದಕ್ಕೆ ಈಗ ಬಹಳ ತಡವಾಗಿ ಹೋಗಿತ್ತು ಆದರೆ ಪೇತ್ರನನ್ನು ಕರೆಯಲು ಅಷ್ಟೇನು ತಡವಾಗಿ ಹೋಗಿರಲಿಲ್ಲ!.

**39** ಪೇತ್ರನು ಬಂದಾಗ ಯೊಪ್ಪದ ವಿಧವೆಯರು ತಬಿಥಾ ತಮಗಾಗಿ ಮಾಡಿಕೊಟ್ಟಿದ್ದ ಬಟ್ಟೆಗಳನ್ನು ಅವನಿಗೆ ತೋರಿಸಿದರು. ಅವರು ಕೃತಜ್ಞತೆಯುಳ್ಳವರಾಗಿದ್ದರು. ಈ ವಿಧವೆಯರು ನಮಗೆ ಒಂದು ಮಾದರಿಯಾಗಿರಲಿ. ಎಷ್ಟೋಸಾರಿ ನಾವು ಹೊಂದಿದ ಸಹಾಯಕ್ಕೆ ಕೃತಜ್ಞ ರಾಗಿರುತ್ತೇವೆ! ಇತರರು ನಮಗಾಗಿ ಮಾಡಿರುವ ಮೇಲುಗಳನ್ನು ಹೇಳಿಕೊಳ್ಳುವದರ ಬದಲಾಗಿ ನಾವು ಬಚ್ಚಿಡುತ್ತೇವೆ ಹೀಗಾಗದಂತೆ ನೋಡಿಕೊಳ್ಳಿರಿ.

**40-43** ಯೇಸು ಯಾಯೀರನ ಮಗಳನ್ನು ಬದುಕಿಸಿದಂತೆಯ (ಮಾರ್ಕ 5:22-24, 35-43), ಪೇತ್ರನು ತಬಿಥಾಳನ್ನು ಬದುಕಿಸಿದನು. ಅದರ ಫಲಿತವಾಗಿ ಅನೇಕರು ನಂಬುವವರಾದರು; ಅವರು ಅಪೊಸ್ತಲನಾದ ಪೇತ್ರನಲ್ಲಿ ಪು ನರುಥ್ಥಾನಗೊಂಡ ಕ್ರಿಸ್ತನ ಬಲವನ್ನು ಕಂಡಿದ್ದರು.

ಅಪೊಸ್ತಲರು ಜನರನ್ನು ಸ್ವಸ್ಥ ಮಾಡಿದಾಗಲೆಲ್ಲಾ ಅಥವಾ ಇತರ ಅದ್ಭುತಗಳನ್ನು ಮಾಡಿದಾಗಲೆಲ್ಲಾ ನಿಜವಾಗಿಯೂ ಯೇಸು ಕ್ರಿಸ್ತನೇ ತನ್ನ ಪವಿತ್ರಾತ್ಮನ ಮೂಲಕವಾಗಿ ಅಲ್ಲಿ ಕಾರ್ಯ ಮಾಡುತ್ತಿದ್ದನೆಂಬದನ್ನು ನಾವು ಅರ್ಥಮಾಡಿಕೊಳ್ಳಬೇಕು. ಇಂದು ಸಹ ಕ್ರೈಸ್ತರು ಕ್ರಿಸ್ತನ ಕಾರ್ಯವನ್ನು ಮಾಡುವಾಗ ಅವರಲ್ಲಿ ವಾಸಿಸುವ ಪವಿತ್ರಾತ್ಮನೇ ಆ ಕಾರ್ಯವನ್ನು ಮಾಡುವವನಾಗಿದ್ದಾನೆ, ಕ್ರೈಸ್ತರು ಕೇವಲ ಸಾಧನಗಳು ಮಾತ್ರವೇ ಆಗಿರುತ್ತಾರೆ. ನಾವು ಯಾವದೇ ಒಳ್ಳೇ ಕಾರ್ಯವನ್ನು ಮಾಡಿದಾಗ ಇತರರು ಅದನ್ನು ನೋಡಿ "ಅದು ಕ್ರಿಸ್ತನ ಕಾರ್ಯ" ಎಂದು ಹೇಳಲು ಶಕ್ತರಾಗಬೇಕು. ನಾವು ಮಾಡುವ ಯಾವದೇ ಕೆಲಸದ ಗೌರವವು ನಮಗೆ ಸೇರುವದಿಲ್ಲ ಆದರೆ ದೇವರಿಗೂ, ಯೇಸು ಕ್ರಿಸ್ತನಿಗೂ ಸೇರಿದ್ದಾಗಿದೆ (ಮತ್ತಾಯ 5:16 ಮತ್ತು ವ್ಯಾಖ್ಯಾನ ನೋಡಿರಿ). ಪೇತ್ರನು ಯೊಪ್ಪದಲ್ಲಿ ಚರ್ಮಕಾರನಾದ ಸೀಮೋನನ ಮನೆಯಲ್ಲಿ ಇದ್ದನು (ವಚನ 43). ಅಲ್ಲಿರುವಾಗ ಪೇತ್ರನಿಗೆ ಒಂದು ಅತಿ ಪ್ರಾಮುಖ್ಯವಾದ ದರ್ಶನವನ್ನು ಪಡೆಯುತ್ತಾನೆ, ಅದು ಹತ್ತನೆಯ ಅಧ್ಯಾಯದಲ್ಲಿ ವಿವರವಾಗಿ ಬಣ್ಣಿಸಲ್ಪಟ್ಟಿದೆ.

# ಅಧ್ಯಾಯ - 10

## ಕೊರ್ನೇಲ್ಯನು ಪೇತ್ರನನ್ನು ಕರೆಸಿದ್ದು (10:1-8)

**1** ಕೈಸರೈವು ಯೊಪ್ಪದಿಂದ ಸುಮಾರು ಮೂವತ್ತು ಮೈಲುಗಳಷ್ಟು ದೂರದ ಮೆಡಿಟರಿನಿಯನ್ ಸಮುದ್ರ ತೀರದಲ್ಲಿದ್ದ ಮಹಾ ಪಟ್ಟಣವಾಗಿತ್ತು (ಅ.ಕೃತ್ಯ 8:40 ನೋಡಿರಿ). ಕೈಸರೈದಲ್ಲಿ ರೋಮಾಯ ಸೈನ್ಯದ ಶತಾಧಿಪತಿಯೂ[51] ಅನ್ಯ ಜನಾಂಗದವನೂ ಆದ ಕೊರ್ನೇಲ್ಯನೆಂಬವನು ಇದ್ದನು.

**2** ಕೊರ್ನೇಲ್ಯ ಹಾಗು ಆತನ ಕುಟುಂಬದವರು ದೇವರಿಗೆ ಭಯ ಪಡುವವರಾಗಿದ್ದರು. ಅವರು ಯೆಹೂದ್ಯರಲ್ಲದಿದ್ದಾಗ್ಯು ಇಸ್ರಾಯೇಲಿನ ಏಕೈಕ ಸತ್ಯ ದೇವರನ್ನು ನಂಬಿತ್ತಿದ್ದರು. ಅವರು ದೇವರನ್ನು ಆರಾಧಿಸಿದರು ಮತ್ತು ಅವರಿಗಿದ್ದ ಆತ್ಮೀಕ ತಿಳುವಳಿಕೆಯ ಪ್ರಕಾರವಾಗಿ ಆತನ ಚಿತ್ತವನ್ನು ಮಾಡಲು ಪ್ರಯತ್ನಿಸಿದರು. ಕೊರ್ನೇಲ್ಯ.ನು ನಿತ್ಯವು ದೇವರಿಗೆ ಪ್ರಾರ್ಥಿಸುತ್ತಿದ್ದನು. ಆದಕಾರಣ ದೇವರು ಅವನ ಮೇಲೆ ದಯಾದೃಷ್ಟಿಯನ್ನು ಬೀರಿದನು. ಈ ರೀತಿಯಾಗಿ ದೇವರ ಕೃಪೆಯ ಮುಖಾಂತರ ಕೊರ್ನೇಲ್ಯನು ಮೊದಲನೆಯ ಅನ್ಯಜನಾಂಗದ (ಯೆಹೂದ್ಯೇತರ) ಕ್ರೈಸ್ತನಾದನು.

**3-4** ದೇವರು ಯಾವಾಗಲೂ ನಮ್ಮ ಪ್ರಾರ್ಥನೆಗಳನ್ನು ಮತ್ತು ಸತ್ರೀಯೆಗಳನ್ನು – ಅಂದರೆ, ಬಡವರಿಗೆ ಮಾಡಿದ ದಾನಗಳನ್ನು ಜ್ಞಾಪಕದಲ್ಲಿಟ್ಟು ಕೊಂಡಿರುತ್ತಾನೆ (ವಚನ 4). ನಾವು ನಮ್ಮ ಪ್ರಾರ್ಥನೆಗಳು ಮತ್ತು ಒಳ್ಳೇ ಕಾರ್ಯಗಳಿಂದಾಗಿ ನೀತಿವಂತರಾಗಲಿ ಅಥವಾ ರಕ್ಷಿಸಲ್ಪಸ್ಪಟ್ಟವರಾಗಲಿ ಆಗಲಿಲ್ಲ, ಆದರೆ ಅವು ಗಳಿಗನುಸಾರವಾಗಿ ನಮಗೆ ಪ್ರತಿಫಲ ದೊರೆಯುವದು (ರೋಮ 2:6; 2 ಕೊರಿಂಥ 5:10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**5-6** ಕೊರ್ನೇಲ್ಯ ಹಾಗು ಆತನ ಕುಟುಂಬದವರು ಒಂದು ದೊಡ್ಡ ಆಶಿರ್ವಾದವನ್ನು ಪಡೆಯಲಿದ್ದರು, ಆದರೆ ಮೊದಲು ಅವರು ಪೇತ್ರನೆಂಬವನನ್ನು ಕಂಡುಕೊಳ್ಳಬೇಕಾಗಿತ್ತು.

**7-8** ದೇವದೂತನು ಬಣ್ಣಿಸಿದ ಪ್ರಕಾರವಾಗಿ ಪೇತ್ರನಿರುವ ಸ್ಥಳಕ್ಕೆ ಕೊರ್ನೇಲ್ಯನು ಸಂಪೂರ್ಣ ನಂಬಿಕೆಯೊಂದಿಗೆ ಮೂರು ಮಂದಿಯನ್ನು ಕಳುಹಿಸಿದನು.

## ಪೇತ್ರನ ದರ್ಶನ (10:9-16)

**9-10** ಕೊರ್ನೇಲ್ಯ ಹಾಗು ಪೇತ್ರರು ಪರಸ್ಪರ ಬೇಟಿಯಾಗುವದಕ್ಕೆ ಮುಂಚಿತವಾಗಿ ಪೇತ್ರನು ಒಂದು ದರ್ಶನವನ್ನು ಪಡೆಯುವದು ಅಗತ್ಯವಾಗಿತ್ತು. ಇದಕ್ಕೆ ಕಾರಣವೇನೆಂದರೆ ಪೇತ್ರನು ಒಬ್ಬ ಯೆಹೂದ್ಯನಾಗಿದ್ದು ಹೊಸ ಒಡಂಬಡಿಕೆಯ ಕಾಲದಲ್ಲಿ ಯೆಹೂದ್ಯರು ಅನ್ಯಜನರೊಂದಿಗೆ ಒಡನಾಟವನ್ನು ಹೊಂದಿರಲಿಲ್ಲ. ಯೆಹೂದ್ಯ ಸಂಪ್ರದಾಯಕ್ಕನು ಸಾರವಾಗಿ ಯೆಹೂದ್ಯರು ಅನ್ಯಜನರ ಮನೆಯನ್ನು ಪ್ರವೇಶಿಸಬಾರದಾಗಿತ್ತು ಮತ್ತು ವಿಶೇಷವಾಗಿ ಅವರು ಅನ್ಯಜನರೊಂದಿಗೆ ಊಟ ಮಾಡುವದನ್ನು ನಿಷೇಧಿಸಲಾಗಿತ್ತು ಯೆಹೂದ್ಯ ಮತ್ತು ಅನ್ಯಜನರ ನಡುವಿನ ವ್ಯತ್ಯಾಸವು ಮೇಲ್ವರ್ಗದ ಹಿಂದು ಹಾಗು ಅಸ್ಪೃಶ್ಯರ ನಡುವಿನ ವ್ಯತ್ಯಾಸದಷ್ಟೇ ದೊಡ್ಡದಾಗಿತ್ತು.

**11-13** ಯೆಹೂದ್ಯರು ತಾವು ಏನು ತಿನ್ನ ಬೇಕು ಮತ್ತು ಯಾವದನ್ನು ತಿನ್ನಬಾರದು ಎಂಬುದರ ವಿಷಯದಲ್ಲಿ ಅತಿ ಕಟ್ಟು ನಿಟ್ಟಿನವರಾಗಿದ್ದರು. ಯಾಜಕ ಕಾಂಡ 11 ನೇ ಅದ್ಯಾಯದ ಪ್ರಕಾರವಾಗಿ ಯೆಹೂದ್ಯರು ನ್ಯಾಯಬದ್ಧವಾಗಿ ತಿನ್ನಬಹುದಾದ "ಶುದ್ಧ" ಪ್ರಾಣಿಗಳು ಮತ್ತು ತಿನ್ನುವದಕ್ಕೆ ನಿಷೇಧಿಸಲ್ಪಟ್ಟಿದ್ದ "ಅಶುದ್ಧ" ಪ್ರಾಣಿಗಳೂ ಇದ್ದವು.[52] ಪೇತ್ರನು ತನ್ನ ದರ್ಶನದಲ್ಲಿ ದೊಡ್ಡ ಜೋಳಿಗೆಯಂತಿರುವ ಏನೋ ಒಂದು ವಸ್ತುವನ್ನು ಕಂಡನು, ಅದರಲ್ಲಿ ಸಕಲ ವಿಧವಾದ (ಶುದ್ಧವಾದ ಹಾಗು ಅಶುದ್ಧ) ಪ್ರಾಣಿಗಳು ಇದ್ದವು. ಆಗ–ಪೇತ್ರನೇ, ಎದ್ದು ಕೊಯ್ದು ತಿನ್ನು ಎಂಬ ವಾಣಿಯು ಕೇಳಿಸಿತು.

**14** ಒಬ್ಬ ಯೆಹೂದ್ಯನಾಗಿದ್ದ ಪೇತ್ರನು ಬೆರಗಾದನು. "ಬೇಡವೇ ಬೇಡ ಕರ್ತನೇ ನಾನು ಎಂದೂ ಹೊಲೆ ಪದಾರ್ಥವನ್ನಾಗಲಿ ಅಶುದ್ಧ ಪದಾರ್ಥವನ್ನಾಗಲಿ ತಿಂದವನಲ್ಲ" ಎಂದು ಹೇಳಿದನು.

**15-16** ದೇವರು ಪೇತ್ರನಿಗೆ : "ಹೊಲೆ" ಅಥವಾ "ಅಶುದ್ಧವಾದದ್ದು ಯಾವದೂ ಇರುವದಿಲ್ಲ. ಈಗಿನಿಂದ ನೀನು ಶುದ್ಧ ಹಾಗು ಅಶುದ್ಧ ಮಾಂಸದ ನಡುವೆ ಯಾವ ಬೇಧವನ್ನು ಮಾಡಬಾರದು. ಆ ಹಳೆ ಒಡಂಬಡಿಕೆಯ ನಿಯಮವು ಇನ್ನೆಂದಿಗೂ ಪ್ರಾಮುಖ್ಯವಲ್ಲ. ದೇವರು ಶುದ್ಧ ಮಾಡಿದ್ದನ್ನು ನೀನು ಹೊಲೆ ಎನ್ನಬೇಡ" ಎಂದು ಹೇಳಿದನು (ಅ.ಕೃತ್ಯ 11:5-10 ನೋಡಿರಿ). ಪೇತ್ರನು ಈ ದರ್ಶನದ ಅರ್ಥವೇನೆಂಬದನ್ನು ಯೋಚಿಸುತ್ತಿದ್ದಾಗ ಬಹುಶ: ಅವನು ಯೇಸುವಿನ ಮಾತುಗಳನ್ನು ನೆನಪಿಸಿಕೊಂಡನು: " ಹೊರಗಿನಿಂದ ಮನುಷ್ಯನೊಳಕ್ಕೆ ಹೋಗಿ ಅವನನ್ನು ಹೊಲೆ ಮಾಡತಕ್ಕಂಥದು ಒಂದೂ ಇಲ್ಲ; ಆದರೆ ಮನುಷ್ಯನೊಳಗಿಂದ ಹೊರಡುವವು ಗಳೇ ಮನುಷ್ಯನನ್ನು ಹೊಲೆಮಾಡುವಂಥವು ಗಳಾಗಿವೆ" (ಮಾರ್ಕ 7:15) ಯೇಸುವಿನ ಆ ಮಾತುಗಳನ್ನು ಬರೆದವನಾಗಿ ಮಾರ್ಕನು ಅನಂತರ "ಹೀಗೆ ಹೇಳಿದ್ದರಿಂದ (ಯೇಸು) ತಿನ್ನುವ ಪದಾರ್ಥಗಳೆಲ್ಲಾ "ಶುದ್ಧವೆಂದು ಸೂಚಿಸಿದನು" ಎಂದು ಕೊನೆಯಲ್ಲಿ ಸೇರಿಸುತ್ತಾನೆ (ಮಾರ್ಕ 7:19). ಆದರೆ ಪೇತ್ರನು ಈ ದರ್ಶನದ ನಿಜವಾದ ಅರ್ಥವನ್ನು ಬಹುಬೇಗನೆ ತಿಳಿದುಕೊಂಡನು. ಅದರ ನಿಜವಾದ ಅರ್ಥವೇನಾಗಿತ್ತೆಂದರೆ: "ಅಶುದ್ಧ" ಮಾಂಸವು ಇಲ್ಲದ ಪ್ರಕಾರವೇ "ಅಶುದ್ಧ" ಜನರಾರೂ ಇರುವದಿಲ್ಲ. ದೇವರ ದೃಷ್ಟಿಯಲ್ಲಿ ಯೆಹೂದ್ಯರೂ, ಅನ್ಯಜನರೂ ಸಮಾನವಾಗಿ "ಶುದ್ಧರು".

## ಕೊರ್ನೇಲ್ಯನ ಮನೆಯಲ್ಲಿ ಪೇತ್ರನು (10:17-33)

**17-20** ಪೇತ್ರನ ದರ್ಶನವು ಮುಗಿಯುತ್ತಿದ್ದಂತೆಯೇ ಪವಿತ್ರಾತ್ಮನು ಅವನಿಗೆ ಮೂವರು ಮನುಷ್ಯರು ನಿನ್ನನ್ನು ನೋಡಲು ಬಂದಿದ್ದಾರೆಂದು ತಿಳಿಸಿದನು. "ನೀನು......ಸಂಶಯ ಪಡದೆ ಅವರ ಜೊತೆಯಲ್ಲಿ ಹೋಗು, ನಾನೇ ಅವರನ್ನು ಕಳುಹಿಸಿದ್ದೇನೆ" ಎಂದು ಪವಿತ್ರಾಮ ಹೇಳಿದನು (ವಚನ 20). ಒಂದು ವೇಳೆ ಪವಿತ್ರಾತ್ಮನು ಇದನ್ನು ಹೇಳದೆ ಹೋಗಿದ್ದರೆ ಪೇತ್ರನು ನಿಶ್ಚಯವಾಗಿಯೂ ಹಿಂಜರಿಯುತ್ತಿದ್ದನು ಯಾಕೆಂದರೆ ಅವನನ್ನು ಕಾಣಲು ಬಂದವರು ಅನ್ಯಜನರಾಗಿದ್ದರು (ಅ.ಕೃತ್ಯ 11:10-12 ನೋಡಿರಿ).

**21-23** ಈಗ ಪೇತ್ರನು ಕೊನೆಗೂ ದರ್ಶನದ ಅರ್ಥವನ್ನು ತಿಳಿದುಕೊಂಡನು (ವಚನ 28 ನೋಡಿರಿ). ಅನ್ಯಜನಾಂಗದವನೊಬ್ಬನು ತನ್ನ ಮನೆಗೆ ಬರುವಂತೆ ಪೇತ್ರನನ್ನು ಕರೆದಿದ್ದನು. ದೇವರು ದರ್ಶನದ ಮುಖಾಂತರವಾಗಿ ಪೇತ್ರನನ್ನು ಹೋಗುವದಕ್ಕೆ ಸಿದ್ಧಪಡಿಸಿದ್ದನು. ಪೇತ್ರನು ಯೊಪ್ಪದಲ್ಲಿದ್ದ ಸಹೋದರರಲ್ಲಿ ಕೆಲವರನ್ನು ಜೊತೆಗೆ ಕರೆದು ಕೊಂಡು ಕರ್ನೇಲ್ಯನ ಮನೆಗೆ ಹೋದನು. ಈ ಸಹೋದರರು ಯೆಹೂದ್ಯಕ್ರೈಸ್ತರಾಗಿದ್ದರು. ಪೇತ್ರನು ತಾನು ಅನ್ಯಜನಾಂಗದವನ ಮನೆಗೆ ಹೋಗುವದಕ್ಕಾಗಿ ಇತರ ಯೆಹೂದ್ಯರು ಖಂಡಿತವಾಗಿಯೂ ಟೀಕಿಸುವರೆಂಬದನ್ನು ಬಲ್ಲವನಾಗಿದ್ದನು. ಆದುದರಿಂದ, ತಾನು ನಿಜವಾಗಿಯೂ ದೇವರ ಚಿತ್ತದ ಪ್ರಕಾರವೇ ನಡೆಯುತ್ತಿದ್ದಾನೆಂಬದಕ್ಕೆ ಸಾಕ್ಷಿಗಳಾಗಿ ಪೇತ್ರನು ಈ ಸಹೋದರರನ್ನು ತನ್ನೊಂದಿಗೆ ಕರೆದು ಕೊಂಡು ಹೋದನು.

**24-26** ಪೇತ್ರನು ಕೊರ್ನೇಲ್ಯನ ಮನೆಯನ್ನು ತಲುಪಿದಾಗ ಕೊರ್ನೇಲ್ಯನು ಪೇತ್ರನ ಪಾದಕ್ಕೆ ಬಿದ್ದು ನಮಸ್ಕಾರ ಮಾಡಿದನು (ವಚನ 25). ಆದರೆ ಪೇತ್ರನು ಅವನನ್ನು ತಡೆದು ಎದ್ದೇಳಬೇಕೆಂದು ಹೇಳಿದನು. ಇತರ ಧರ್ಮಗಲ್ಲಿ ಗೌರವಯುತ ಗುರು ಅಥವಾ ಪ್ರಾಮುಖ್ಯ ಅಧಿಕಾರಿಗಳ ಪಾದಗಳನ್ನು ಬಾಗಿ ಮುಟ್ಟುವ ಪದ್ಧತಿಯಿರುತ್ತದೆ. ಆದರೆ ಕ್ರೈಸ್ತರ ಮಧ್ಯದಲ್ಲಿ ಅದು ಇರವದಿಲ್ಲ. ನಾವು ಮನುಷ್ಯರಿಗೆ ಮರ್ಯಾದೆಯನ್ನು ಕೊಡುತ್ತೇವೆ, ಆದರೆ ಭಯಭಕ್ತಿಯನ್ನೂ ಕ್ರಿಸ್ತನಿಗೆ – ದೇವರಿಗೆ – ಮಾತ್ರವೇ ಸಲ್ಲಿಸುತ್ತೇವೆ. ಅಲ್ಲದೆ ಈ ಕಾರಣಕ್ಕಾಗಿ ಕ್ರೈಸ್ತರು ಕ್ರಿಸ್ತನಿಗೆ ಮಾತ್ರವೇ ಸಲ್ಲತಕ್ಕ ಮಹಿಮೆ ಅಥವಾ ಘನತೆಯನ್ನು ಎಂದಿಗೂ ತಮಗಾಗಿ ತೆಗೆದುಕೊಳ್ಳಬಾರದು. ಕ್ರಿಸ್ತನ ಆತ್ಮೀಕ ನಿಕ್ಷೇಪವು ಮಣ್ಣಿನ ಘಟಕ (ಮಡಿಕೆ)ಗಳಲ್ಲಿ – ಅಂದರೆ, ನಮ್ಮ ಬಲಹೀನವಾದ ಮಾನವ ಶರೀರಗಳಲ್ಲಿ – ಇಡಲ್ಪಟ್ಟಿದೆ, ಹೀಗೆ ಎಲ್ಲಾ ಮಹಿಮೆಯು ನಮಗೆ ಸೇರದೆ ಕ್ರಿಸ್ತನಿಗೆ ಸೇರಬೇಕೆಂಬುದೇ (2 ಕೊರಿಂಥ 4:7 ಮತ್ತು ವ್ಯಾಖ್ಯಾನ ನೋಡಿರಿ).

**27-29** ಕರ್ತನು ದರ್ಶನದಲ್ಲಿ ಪೇತ್ರನಿಗೆ ಶುದ್ಧ ಹಾಗು ಅಶುದ್ಧ ಪ್ರಾಣಿಗಳನ್ನು ಮಾತ್ರವೇ ತೋರಿಸಿದ್ದನು. ಆದರೆ ಆತನು ಪೇತ್ರನಿಗೆ, "ದೇವರು ಶುದ್ಧಮಾಡಿದ್ದನ್ನು ನೀನು ಹೊಲೆ ಎನ್ನಬೇಡ" ಎಂದು ಹೇಳಿದ್ದನು (ವಚನ 15). ಶುದ್ಧಮಾಡಿದ್ದನ್ನು ಎಂಬ ಪದವು ಕೇವಲ ಮಾಂಸವನ್ನು ಮಾತ್ರವಲ್ಲದೆ ಮನುಷ್ಯರನ್ನು ಸಹ ಎಂದರ್ಥ ನೀಡುತ್ತದೆಂದು ಪೇತ್ರನು ಅರ್ಥಮಾಡಿಕೊಂಡನು. ಯಾರನ್ನೂ – ಅನ್ಯಜನರನ್ನೂ ಸಹ – "ಶುದ್ಧ "ಎಂದು ಕರೆಯಬಾರದಾಗಿತ್ತು.

**30-33** ಪೇತ್ರನನ್ನು ಕರೆಯಿಸುವಂತೆ ದೇವದೂತನು ತನಗೆ ಹೇಳಿದ್ದ ನೆಂಬದನ್ನು ಕೊರ್ನೇಲ್ಯನು ತಿಳಿದುಕೊಂಡದ್ದನು. ದೇವದೂತನು ಕೊರ್ನೇಲ್ಯನಿಗೆ, "ಅವನು (ಪೇತ್ರನು) ನಿನಗೆ ಕೆಲವು ಮಾತುಗಳನ್ನು ಹೇಳುವನು. ಆ ಮಾತುಗಳಿಂದ ನಿನಗೂ ನಿನ್ನ ಮನೆಯವರೆಲ್ಲರಿಗೂ ರಕ್ಷಣೆಯಾಗುವದು" ಎಂದು ಹೇಳಿದ್ದನು (ಅ.ಕೃತ್ಯ 11:13-14). ಈಗ ಕೊರ್ನೇಲ್ಯ ಹಾಗು ಆತನ ಕುಟುಂಬದವರೆಲ್ಲರೂ ಪೇತ್ರನ ಮಾತುಗಳನ್ನು ಆಲಿಸುವದಕ್ಕೆ ಸಿದ್ಧರಾಗಿದ್ದರು.

## ಪೇತ್ರನ ಸಂದೇಶ (10:34-43)

**34-35** ಈ ವಚನಗಳಲ್ಲಿ ಪೇತ್ರನು ಇಡೀ ಬೈಬಲನಲ್ಲಿಯೇ ಅತಿ ಪ್ರಾಮುಖ್ಯವಾದ ಸತ್ಯಗಳಲ್ಲೊಂದನ್ನು ಹೇಳುತ್ತಾನೆ:"ದೇವರು ಪಕ್ಷ ಪಾತಿಯಲ್ಲ" (ರೋಮ 2:9-11 ನೋಡಿರಿ). .ಯಾವ ಜನರಲ್ಲಿ ಯಾದರೂ ದೇವರಿಗೆ ಭಯಪಟ್ಟು ನೀತಿಯನ್ನು ನಡೆಸುವವರೆಲ್ಲರನ್ನು ದೇವರು ಸಮಾನವಾಗಿ ಸ್ವೀಕರಿಸಿಕೊಳ್ಳುವನು (ವಚನ 35). ಹಳೆ ಒಡಂಬಡಿಕೆಯಲ್ಲಿ ದೇವರು ಮನುಷ್ಯರಿಗೆ ದಶಾಜ್ಞೆಗಳನ್ನು ಕೊಟ್ಟನು (ವಿಮೋಚನಕಾಂಡ 20:1-17). ದೇವರು ತನ್ನ ಈ ಆಜ್ಞೆಗಳಿಗೆ ವಿಧೇಯರಾಗುವ ಪ್ರತಿಯೊಬ್ಬರನ್ನೂ –ಯೆಹೂದ್ಯನಾಗಲಿ ಅಥವಾ ಅನ್ಯಜನವಾಗಲಿ – ಸ್ವೀಕರಿಸಿಕೊಳ್ಳುವವನಾಗಿದ್ದನು. ಪ್ರವಾದಿಯಾದ ಮೀಕನು ಹೀಗೆ ಬರೆದನು: ಮನುಷ್ಯನೇ, ಒಳ್ಳೆಯದು ಇಂಥದೇ ಎಂದು ಕರ್ತನು ನಿನಗೆ ತೋರಿಸಿದ್ದಾನಷ್ಟೇ; ನ್ಯಾಯವನ್ನು ಆಚರಿಸುವದು, ಕರುಣೆಯಲ್ಲಿ ಆಸಕ್ತನಾಗಿರುವದು, ನಿನ್ನ ದೇವರಿಗೆ ನಮ್ರವಾಗಿ ನಡೆದುಕೊಳ್ಳುವದು, ಇಷ್ಟನ್ನೇ ಹೊರತು ಕರ್ತನು ನಿನ್ನಿಂದ ಇನ್ನೇನು ಅಪೇಕ್ಷಿಸುವನು?" (ಮೀಕ 6:8). ಆದುದರಿಂದ, ಹಳೆ ಒಡಂಬಡಿಕೆಯ ಪ್ರಕಾರವಾಗಿ ದೇವರು ಕೇವಲ ನೀತಿವಂತರಾದ ಯೆಹೂದ್ಯರನ್ನು ಮಾತ್ರವಲ್ಲ, ಆದರೆ ನೀತಿವಂತರಾದ ಅನ್ಯ ಜನರನ್ನು ಸಹ ಸ್ವೀಕರಿಸುತ್ತಾನೆ. ದೇವರು ವಿವಿಧ ಕುಲಗಳ ಹಾಗು ರಾಷ್ಟ್ರಗಳ ಮನುಷ್ಯರನ್ನು ಮಾತ್ರವೇ ಅಲ್ಲ, ಆದರೆ ವಿವಿಧ ಜಾತಿ ಹಾಗು ಸ್ಥಾನಮಾನಗಳ ಜನರನ್ನು ಸಹ ಸಮಾನವಾಗಿ ಸ್ವೀಕರಿಸಿಕೊಳ್ಳುವವನಾಗಿದ್ದಾನೆ (ಎಫೆಸ 6:9 ನೋಡಿರಿ). ದೇವರ ದೃಷ್ಟಿಯಲ್ಲಿ ಎಲ್ಲಾ ಮಾನವರು ಸಮಾನವಾಗಿರುತ್ತಾರೆ, ಮತ್ತು ನಾವು ಯೇಸುವನ್ನು ನಂಬುವಾಗ – ನಾವು ಯೆಹೂದ್ಯರಾಗಲಿ, ಅಥವಾ ಅನ್ಯಜನರಾಗಲಿ, ದಾಸರಾಗಲಿ ಇಲ್ಲವೆ ಸ್ವತಂತ್ರರಾಗಲಿ, ಪು ರುಷರಾಗಲಿ ಅಥವಾ ಸ್ತ್ರೀಯಾಗಲಿ ಆಗಿರಬಹುದು – ನಾವು ಒಂದೇ ಕುಟುಂಬದ, ದೇವರ ಕುಟುಂಬದ

ಸಮಾನ ಸದಸ್ಯರಾಗುತ್ತೇವೆ (ಗಲಾತ್ಯ 3:28 ಮತ್ತು ವ್ಯಾಖ್ಯಾನ ನೋಡಿರಿ). ಇಲ್ಲಿ ಒಂದು ಪ್ರಾಮುಖ್ಯ ಸತ್ಯವು ಸೇರಿಸಲ್ಪಡತಕ್ಕದ್ದು. ಹೌದು, ಯಾವ ಜನರಲ್ಲಿ ಯಾದರೂ (ದೇಶದಲ್ಲಿ ಯಾದರೂ) ದೇವರಿಗೆ ಭಯಪಟ್ಟು ನೀತಿಯನ್ನು ನಡಿಸುವವರನ್ನು ದೇವರು ಸ್ವೀಕರಿಸಿಕೊಳ್ಳುವನು. ಆದರೆ ಅಂತಹ ಜನರು ಇದ್ದಕ್ಕಿದ್ದ ಹಾಗೆಯೇ ರಕ್ಷಣೆಯನ್ನು ಪಡೆಯುವರೆಂಬದು ಇದರರ್ಥವಲ್ಲ. ಒಂದು ವಿಧದಲ್ಲಿ, ಅವರು ನ್ಯಾಯವಾದದ್ದನ್ನು ಮಾಡಿದ್ದರಾದ್ದರಿಂದ ದೇವರು ಅವರನ್ನು ಒಪ್ಪಿಕೊಳ್ಳುವನು. ಆದರೆ ಇನ್ನೊಂದು ವಿಧದಲ್ಲಿ, ಅಂತಹ 'ನ್ಯಾಯವಂತ" ಜನರೂ ಸಹ ಪಾಪಿಗಳೇ ಆಗಿದ್ದು ಅವರಿಗೆ ರಕ್ಷಕನೊಬ್ಬನ ಅಗತ್ಯತೆಯಿರುವದು (ರೋಮ 3:9-12 ಮತ್ತು ವ್ಯಾಖ್ಯಾನ ನೋಡಿರಿ). ಕೊರ್ನೇಲ್ಯನು ಇತರರಿಗೆ ಹೋಲಿಸಿದಾಗ ನೀತಿವಂತನಾಗಿ ಕಂಡು ಬಂದನಾದರೂ ಆಗಲೂ ಆತನಿಗೆ ರಕ್ಷಕನ ಅಗತ್ಯವಿತ್ತು. ಇದೇ ಕಾರಣಕ್ಕಾಗಿಯೇ ಕೊರ್ನೇಲ್ಯನು ಕ್ರಿಸ್ತನ ಕುರಿತಾಗಿ ಕೇಳಲು ಸಾಧ್ಯವಾಗಬೇಕೆಂದು ಪೇತ್ರನು ಬಂದನು. ನಿಜ, ಕೊರ್ನೇಲ್ಯನ ಕಾರ್ಯ ಒಳ್ಳೆಯದಾಗಿತ್ತು; ಆದರೆ ಮಾನವನು ಒಳ್ಳೇ ಕಾರ್ಯಗಳಿಂದ ರಕ್ಷಿಸಲ್ಪಡುವದಿಲ್ಲ. ಮಾನವನು ನಂಬಿಕೆಯಿಂದ ದೇವರ ಕೃಪೆಯ ಮೂಲಕವೇ ರಕ್ಷಿಸಲ್ಪಡುತ್ತಾನೆ (ಎಫೆಸ 2:8-9 ಮತ್ತು ವ್ಯಾಖ್ಯಾನ ನೋಡಿರಿ).

**36** ಬಳಿಕ ಪೇತ್ರನು ಕೊರ್ನೇಲ್ಯನಿಗೂ, ಆತನ ಕುಟುಂಬದವರಿಗೂ ಮಾನವರು ಯೇಸು ಕ್ರಿಸ್ತನ ಮೂಲಕವಾಗಿ ದೇವರ ಸಂಗಡ ಸಮಾಧಾನ ಹೊಂದಬೇಕು ಎಂಬ ವಿಷಯದ ಸುವಾರ್ತೆಯನ್ನು ಹೇಳಿದನು. ದೇವರು ಮೊದಲು ಈ ಸಂದೇಶವನ್ನು ಇಸ್ರಾಯೇಲ್ಯರಿಗೆ – ಯೆಹೂದ್ಯರಿಗೆ – ಕಳುಹಿಸಿದ್ದನು. " ಆದರೆ ಈಗ ಎಲ್ಲಾ ಜನಗಳಿಗೂ ಕ್ರಿಸ್ತನ ಮೂಲಕ ದೇವರು ಸಮಾಧಾನದ ಶುಭಸಮಾಚಾರವನ್ನು ನೀಡಿರುತ್ತಾನೆ. ಯೇಸು ಕ್ರಿಸ್ತನು ಎಲ್ಲಾ ಜನಗಳಿಗೂ – ಯೆಹೂದ್ಯರಿಗೂ, ಅನ್ಯ ಜನರಿಗೂ – ಕರ್ತನಾಗಿದ್ದಾನೆ". ಎಂದು ಹೇಳಿದನು.

**37-38** ಪೇತ್ರನು ಕೊರ್ನೇಲ್ಯನಿಗೆ ಆತನು ಈಗಾಗಲೇ ಕೇಳಿದ್ದನ್ನೇ ಪು ನಃ ಜ್ಞಾಪಕಕ್ಕೆ ತಂದನು: ಉದಾಹರಣೆಗೆ ಪ್ರಾರಂಭದಲ್ಲಿ ಸ್ನಾನಿಕನಾದ ಯೋಹಾನನು ಬರಲಿರುವ ಮೆಸ್ಸೀಯನಾದ ಯೇಸುವಿಗೆ ಜನರ ಹೃದಯಗಳನ್ನು ಸಿದ್ಧಮಾಡಲು ಬಂದನು. ಬಳಿಕ ಯೋಹಾನನು ಯೇಸುವಿಗೆ ದೀಕ್ಷಾಸ್ನಾನ ಮಾಡಿಸಿದ್ದನು. ಆತನ ದೀಕ್ಷಾಸ್ನಾನದ ವೇಳೆಯಲ್ಲಿ ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮದಿಂದಲೂ ಬಲದಿಂದಲೂ ಅಭಿಷೇಕಿಸಿದನು (ವಚನ 38). ಪವಿತ್ರಾತ್ಮನು ಯೇಸುವಿನ ಮೇಲೆ ಪಾರಿವಾಳದಂತೆ ಇಳಿದು ಬಂದನು (ಮಾರ್ಕ 1:9-11).

**39-40** ಅಪೊಸ್ತಲರು "ನಾವು ಸಾಕ್ಷಿಗಳಾಗಿದ್ದೇವೆ" ಎಂದು ಪು ನಃ ಪು ನಃ ಹೇಳಿದರು (ವಚನ 39). ಪೇತ್ರನು ಕೊರ್ನೇಲ್ಯನಿಗೆ ಹೇಳುತ್ತಿದ್ದ ಸಂಗತಿಗಳು ಆತನು ಇತರರಿಂದ ತಿಳಿದುಕೊಂಡ ವರದಿಗಳಾಗಿರಲಿಲ್ಲ. ಪೇತ್ರನು ತನ್ನ ಕಣ್ಣಾರೆ ಈ ಸಂಗತಿಗಳನ್ನು ನೋಡಿದ್ದನು. ಯೇಸು ಸಾಯುವದನ್ನು ಆತನು ನೋಡಿದ್ದನು (ಲೂಕ 23:49), ಹಾಗು ಯೇಸು ಸತ್ತವರೊಳಗಿಂದ ಎದ್ದು ಬಂದಮೇಲೆಯೂ ಆತನು ನೋಡಿದ್ದನು (ಲೂಕ 24:34, ಅ.ಕೃತ್ಯ 2:32, 5:30 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**41** ಯೇಸು ಒಂದು ಭೂತದ ರೂಪದಲ್ಲಿಯಾಗಲಿ ಅಥವಾ ಯಾರದೋ ಒಬ್ಬರ ಊಹಿಕೆಯ ಕಟ್ಟುಕತೆಯಾಗಿ ಸತ್ತವರೊಳಗಿಂದ ಎದ್ದು ಬರಲಿಲ್ಲ. ಆತನು ದೈಹೀಕ ಹಾಗು ಸಂಪೂರ್ಣ ಸದೃಶ್ಯರೂಪದಲ್ಲಿ ಎದ್ದು ಬಂದನು – ತನ್ನ ಪು ನರುತ್ಥಾನದ ನಂತರ ಶಿಷ್ಯರೊಂದಿಗೆ ಉಂಡು ಕುಡಿಯುವಷ್ಟರ ಮಟ್ಟಿಗೆ (ಲೂಕ 24:41-43).

**42** ಯೇಸು ಜೀವಿಸುವವರಿಗೂ, ಈಗಾಗಲೇ ಸತ್ತಿರುವವರಿಗೂ ನ್ಯಾಯಾಧಿಪತಿಯಾಗಿ ನೇಮಿಸಲ್ಪಟ್ಟಿದ್ದನು (ದಾನಿಯೇಲ 7:13-14; ಅ.ಕೃತ್ಯ 17:31 ನೋಡಿರಿ). ಸ್ವತಃ ಯೇಸು ಹೇಳಿದ್ದೇನೆಂದರೆ : ತಂದೆಯು...ತೀರ್ಪು ಮಾಡುವ ಅಧಿಕಾರವನ್ನೆಲ್ಲಾ ಮಗನಿಗೆ ಕೊಟ್ಟಿದ್ದಾನೆ" (ಯೋಹಾನ 5:22, 27).

**43** ಯೇಸು ಮಾನವನ ನ್ಯಾಯಾಧಿಪತಿಯಾಗಿ ಮಾತ್ರವಲ್ಲ, ಆದರೆ ಮಾನವನ ರಕ್ಷಕನಾಗಿಯೂ ಸಹ ನೇಮಿಸಲ್ಪಟ್ಟಿದ್ದಾನೆ. ಆತನು ಮಾನವನ ಪಾಪಕ್ಕೆ ತೀರ್ಪು ನೀಡಲು ಮಾತ್ರ ನೇಮಿಸ್ಪಡಲಿಲ್ಲ, ಆದರೆ ಮಾನವರನ್ನು ಪಾಪದ ದಂಡನೆಯಿಂದ ರಕ್ಷಿಸುವವದಕ್ಕಾಗಿಯೂ ಸಹ ನೇಮಿಸಲ್ಪಟ್ಟಿದ್ದಾನೆ. ಪೇತ್ರನು ಹೇಳಿದ್ದೇನೆಂದರೆ: ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು—ಪಾಪ ಪರಿಹಾರವನ್ನು ಹೊಂದುವನು" (ಲೂಕ 24:45-48 ನೋಡಿರಿ).

ಅನ್ಯಜನರು ಪವಿತ್ರಾತ್ಮನನ್ನು ಹೊಂದಿದ್ದು (10:44-48)

**44** ಪಂಚಾಶತ್ತಮ ದಿನದಂದು ಶಿಷ್ಯರ ಮೇಲೆ ಪವಿತ್ರಾತ್ಮನು ಬಂದ ಪ್ರಕಾರವೇ ಪೇತ್ರನು ಮಾತಾಡುತ್ತಿರುವಾಗಲೇ ಕೊರ್ನೇಲ್ಯ ಹಾಗು ಆತನ ಕುಟುಂಬದವರೆಲ್ಲರ ಮೇಲೆಯೂ ಪಕ್ಕನೇ ಪವಿತ್ರಾತ್ಮನು ಬಂದನು (ಅ.ಕೃತ್ಯ 2:1-4, 11:15, 15:7-8). ಅಪೊಸ್ತಲರ ಕೃತ್ಯಗಳು 2:38 ರಲ್ಲಿ ಪೇತ್ರನು ಯೆಹೂದ್ಯರಿಗೆ ಹೇಳಿದ್ದೇನೆಂದರೆ : ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬನು ಪಶ್ಚಾತಾಪ ಪಟ್ಟು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ. ಆಗ ನೀವು ಪವಿತ್ರಾತ್ಮ ವರವನ್ನು ಹೊಂದುವಿರಿ". ಆದರೆ ಇಲ್ಲಿ ಕೊರ್ನೇಲ್ಯ ಹಾಗು ಆತನ ಕುಟುಂಬದವರೆಲ್ಲರ ಮೇಲೆ ಪವಿತ್ರಾತ್ಮನು ಮೊದಲು ಬಂದನು, ಅವರಿಗೆ ಇನ್ನು ದೀಕ್ಷಾಸ್ನಾನ ಹೊಂದುವ ಅವಕಾಶವು ಸಿಗುವದಕ್ಕೆ ಮುಂಚೆಯೇ ಬಂದನು. ಪವಿತ್ರಾತ್ಮನು ತನ್ನ ಸ್ವಂತ ಯೋಜನೆಗಳು ಹಾಗು ಉದ್ದೇಶಗಳಿಗನುಸಾರವಾಗಿ ಜನರ ಬಳಿಗೆ ಬರುತ್ತಾನೆ, ಮನುಷ್ಯರಾದ ನಾವು ಆತನಿಗಾಗಿ ನಿಯಮಗಳನ್ನು ರೂಪಿಸಲು ಪ್ರಯತ್ನಿಸಬಾರದು.

**45-46** ಪಂಚಾಶತ್ತಮ ದಿನದಂದು ಶಿಷ್ಯರು ಅನ್ಯಭಾಷೆಗಳಲ್ಲಿ ಮಾತಾಡಿದ ಹಾಗೆಯೇ ಈ ಅನ್ಯ ಜನರು ಸಹ ತಮ್ಮ ಮೇಲೆ ಪವಿತ್ರಾತ್ಮನು ಬಂದ ಕೂಡಲೇ ಅನ್ಯ ಭಾಷೆಗಳನ್ನಾಡಲು ಪ್ರಾರಂಭಿಸಿದರು. ಒಂದು ವೇಳೆ ಅವರು ಅನ್ಯಭಾಷೆಗಳನ್ನು ಮಾತಾಡಿರದಿದ್ದರೆ ಪೇತ್ರ ಹಾಗು ಆತನು ಯೊಪ್ಪದಿಂದ ತನ್ನೊಂದಿಗೆ ಕರೆತಂದಿದ್ದ ಸುನ್ನತಿಯವರಾದ (ಅಂದರೆ,

ಯೆಹೂದ್ಯರಾದ) ವಿಶ್ವಾಸಿಗಳು ಪವಿತ್ರಾತ್ಮನು ನಿಜವಾಗಿಯೂ ಈ ಅನ್ಯಜನರ ಮೇಲೆ ಬಂದಿದ್ದಾನೆ ಎಂಬುದನ್ನು ನಂಬದೆ ಹೋಗುವ ಸಾಧ್ಯತೆಯಿತ್ತು.

**47-48** ವಾಸ್ತವದಲ್ಲಿ ಕೊರ್ನೇಲ್ಯ ಹಾಗು ಆತನ ಕುಟುಂಬದವರು ಪಶ್ಚಾತಾಪ ಪಟ್ಟು ಯೇಸುವನ್ನು ನಂಬಿದರೆಂಬದು ಇಲ್ಲಿ ಬರೆಯಲ್ಪಟ್ಟಿಲ್ಲ. ಆದರೆ ಅವರು ಹಾಗೆ ಮಾಡಿದರೆಂದು ನಾವು ಊಹಿಸಿಕೊಳ್ಳಬಹುದು. ಅಪೊಸ್ತಲರ ಕೃತ್ಯಗಳು 15:9 ರ ಪ್ರಕಾರವಾಗಿ ಕರ್ತನು ಅವರ ಹೃದಯಗಳನ್ನು ನಂಬಿಕೆಯ ಮೂಲಕವಾಗಿ ಶುದ್ಧೀಕರಿಸಿದನು ಎಂದು ಅನಂತರ ಪೇತ್ರನು ಹೇಳಿದನು. ಈ ಅನ್ಯಜನರ ಜೀವಿತಗಳಲ್ಲಿ ದೇವರು ಮಾಡಿದ ಮಹತ್ವದ ಕಾರ್ಯವನ್ನು ನೋಡಿದ ನಂತರ ಪೇತ್ರನು ತಕ್ಷಣವೇ ಅವರಿಗೆ ದೀಕ್ಷಾಸ್ನಾನ ಮಾಡಿಸುವದಕ್ಕೆ ಯಾವ ಅಭ್ಯಂತರವನ್ನೂ ಕಾಣಲಿಲ್ಲ. ಒಂದುವೇಳೆ ಪವಿತ್ರಾತ್ಮನು ಮೊದಲು ಅವರ ಮೇಲೆ ಬರದೆ ಇದಿದ್ದರೆ ಪೇತ್ರನು ಅನ್ಯಜನರನ್ನು ದೀಕ್ಷಾಸ್ನಾನ ಮಾಡಿಸಲು ಸಿದ್ಧನಾಗಿದ್ದಿರುತ್ತಿದ್ದಿಲ್ಲ. ಆದರೆ ಈಗ ಅವರಿಗೆ ದೀಕ್ಷಾಸ್ನಾನ ಮಾಡಿಸಲು ನಿರಾಕರಿಸುವದಾದರೆ ದೇವರನ್ನು ವಿರೋದಿಸಿದಂತಾಗುತ್ತಿತ್ತು (ಅ.ಕೃತ್ಯ 11:17) ದೀಕ್ಷಾಸ್ನಾನವು ನೂತನ ಅತ್ಮೀಕ ಜೀವಿತದ ಬಹಿರಂಗದ ಧೃಡೀಕರಣ ಅಥವಾ ಗುರುತಾಗಿರುತ್ತದೆ. ಒಬ್ಬನು ಈಗಾಗಲೇ ಜೀವವನ್ನು ಪಡೆಯುವದಾದರೆ ಅವನು ಆದರ ಗುರುತನ್ನು ಸಹ ಪಡೆಯಬಾರದೇಕೆ?

ಪೇತ್ರನು ಕೊರ್ನೇಲ್ಯನ ಮನೆಗೆ ಬಂದ ದಿನವು ಕ್ರೈಸ್ತಧರ್ಮದ ಇತಿಹಾಸದಲ್ಲಿಯೇ ಅತ್ಯಂತ ಪ್ರಾಮುಖ್ಯವಾದ ದಿನವಾಗಿತ್ತು. ಆ ದಿನದಲ್ಲಿ ಪ್ರಥಮ ಅನ್ಯಜನರು ಕ್ರೈಸ್ತರಾದರು. ಆ ದಿನದಿಂದ ಮೊದಲ್ಗೊಂಡು ಈ ನೂತನ ಕ್ರೈಸ್ತಧರ್ಮವು ಯೆಹೂದ್ಯರಿಗೆ ಮಾತ್ರವೇ ಅಲ್ಲ, ಆದರೆ ಪ್ರತಿಯೊಂದು ದೇಶದ ಜನರಿಗಾಗಿ ಇರುತ್ತದೆ.

---

## ಅಧ್ಯಾಯ - 11

### ಪೇತ್ರನು ತನ್ನ ಕೃತ್ಯಗಳನ್ನು ವಿವರಿಸಿದ್ದು (11:1-18)

**1-3** ದೇವರು ಈಗಷ್ಟೇ ಅನ್ಯಜನರ ಮಧ್ಯದಲ್ಲಿ ಮಹಾ ಕಾರ್ಯವೊಂದನ್ನು ಮಾಡಿದ್ದನು. ಕ್ರಿಸ್ತನ ಸುವಾರ್ತೆಯು ಈ ಇಡೀ ಜಗತ್ತಿಗೆ – ಯೆಹೂದ್ಯರಿಗೂ, ಅನ್ಯಜನರಿಗೂ – ದೊರೆಯುವದಾಗಿತ್ತು. ಕ್ರೈಸ್ತರೆಲ್ಲರೂ ಈ ನೂತನ ಬೆಳವಣಿಗೆಗಾಗಿ ಉಲ್ಲಾಸಿಸಿ ದೇವರನ್ನು ಕೊಂಡಾಡಿರಬೇಕಿತ್ತು. ಆದರೆ ನಡೆದದ್ದಾರೂ ಏನು? ಸುನ್ನತಿಯವರು – ಅಂದರೆ, ತಮ್ಮ ಯೆಹೂದ್ಯ ಸಂಪ್ರದಾಯಗಳನ್ನು ತೊರೆಯದೇ ಇದ್ದ ಯೆಹೂದ್ಯರು – ಪೇತ್ರನನ್ನು ಟೀಕಿಸಲು ಪ್ರಾರಂಭಿಸಿದರು. ಪೇತ್ರನು ಯೆಹೂದ್ಯ ಸಂಪ್ರದಾಯವನ್ನು ಧಿಕ್ಕರಿಸಿದ್ದಾನೆಂದು ಅವರು ಆರೋಪಿಸಿದರು; ಯೆಹೂದ್ಯರು ಅನ್ಯಜನರೊಂದಿಗೆ ಊಟ ಮಾಡಬಾರದೆಂಬ ಮನುಷ್ಯ ನಿರ್ಮಿತ ನಿಯಮವನ್ನು ಆತನು ಉಲ್ಲಂಘಿಸಿದ್ದನು. ದೇವರು ಸಭೆಯಲ್ಲಿ ಬಂದು ಮಹಾಕಾರ್ಯವನ್ನು ಮಾಡುವಾಗಲೆಲ್ಲಾ ಅಸಮಾಧಾನಗೊಳ್ಳುವ ಹಾಗು ಗುಣಗುಟ್ಟುವ ಕೆಲವು ಕ್ರೈಸ್ತರು ಯಾವಾಗಲೂ ಇದ್ದೇ ಇರುತ್ತಾರೆ. ಹಲವಾರು ವೇಳೆ ಅವರು ಆ ನೂತನ ಕಾರ್ಯದಲ್ಲಿ ಪಾಲುಗಾರರಾಗಲು ಆಗಲಿಲ್ಲ ಎಂಬ ಕಾರಣಕ್ಕಾಗಿ ಹೊಟ್ಟೆಕಿಚ್ಚು ಹೊಂದಿದವರಾಗಿರುತ್ತಾರೆ. ಅಥವಾ ಅವರ ವಿಚಾರಗಳು ಸ್ವೀಕರಿಸಲ್ಪಡಲಿಲ್ಲ ಇಲ್ಲವೆ ಅವರ ವಿಚಾರಗಳನ್ನು ಪಾಲಿಸಲಿಲ್ಲ ಎಂಬ ಕಾರಣಕ್ಕಾಗಿ ಅವರು ಅಸಮಾಧಾನ ಗೊಂಡಿರುತ್ತಾರೆ. ಅಥವಾ ಅವನು ನೆನಸಿಕೊಂಡ ರೀತಿಯಲ್ಲಿ ಹೊಂದಬೇಕಾದಷ್ಟು ಗೌರವ ಮತ್ತು ಮನ್ನನೆಯನ್ನು ಸ್ವೀಕರಿಸದಿರುವದರಿಂದ ಅವರು ಅಸಮಾಧಾನಗೊಂಡಿರುತ್ತಾರೆ. ಆದರೆ ಅವರು ಗುಣಗುಟ್ಟುವಿಕೆಗೆ ಕಾರಣವು ಏನೇ ಆಗಿದ್ದರೂ ಅವರು ಪ್ರಾಥಮಿಕವಾಗಿ ದೇವರ ವಿರುದ್ಧ ಗುಣಗುಟ್ಟುವವರಾಗಿರುತ್ತಾರೆ, ಯಾಕೆಂದರೆ ಆ ಕಾರ್ಯದ ಹಿಂದೆ ದೇವರ ಹಸ್ತವಿರುತ್ತದೆ ಮತ್ತು ದೇವರ ವಿರುದ್ಧವಾಗಿ ಗುಣಗುಟ್ಟುವದು ಒಂದು ದೊಡ್ಡ ಪಾಪವಾಗಿರುತ್ತದೆ. ಯೆಹೂದ್ಯರ ಪೂರ್ವಿಕರು ಗುಣಗುಟ್ಟಿದ್ದರಿಂದ ದೇವರು ಅವರನ್ನು ವಾಗ್ದಾನ ದೇಶ ಪ್ರವೇಶಿಸಲು ಬಿಡಲಿಲ್ಲ (ಅರಣ್ಯಕಾಂಡ 14:26-30). ಸಹೋದರ ಹಾಗು ಸಹೋದರಿಯರೇ ಈ ಪಾಪವು ನಮ್ಮ ಮಧ್ಯದಲ್ಲಿ ಕಂಡು ಬರದಿರಲಿ! ದೇವರು ಕಾರ್ಯವನ್ನು ಮಾಡುವಾಗ ನಾವು ಏಕಮನಸ್ಸಿನಿಂದ ಉಲ್ಲಾಸಿಸಿ ಆತನಿಗೆ ಕೃತಜ್ಞತೆಗಳನ್ನೂ ಸ್ತುತಿಗಳನ್ನು ಅರ್ಪಿಸೋಣ. ಯೆಹೂದ್ಯ ಕ್ರೈಸ್ತರು ಪೇತ್ರನನ್ನು ಟೀಕಿಸಿದ್ದು ಮಾತ್ರವಲ್ಲ, ಆದರೆ ಕ್ರೈಸ್ತ್ಯೇತರ ಯೆಹೂದ್ಯರು ಸಹ ಆತನನ್ನು ವಿರೋಧಿಸಲು ಪ್ರಾರಂಭಿಸಿದರು. ಅದಕ್ಕೆ ಮುಂಚಿನ ಸಮಯಗಳಲ್ಲಿ ಪೇತ್ರ ಹಾಗು ಇತರ ಅಪೊಸ್ತಲರು ಮಾಡಿದ ಮಹತ್ಕಾರ್ಯಗಳ ಕಾರಣದಿಂದಾಗಿ ಯೆಹೂದ್ಯರು ಅವರಿಗೆ ಮರ್ಯಾದೆಯನ್ನು ತೋರಿಸುತ್ತಿದ್ದರು. ಆದರೆ ಈಗ ಪೇತ್ರ ಇತರ ಅಪೊಸ್ತಲರನ್ನು ಸಹ ಹಿಂಸಿಸಲು ಪ್ರಾರಂಭಿಸಿದರು (ಅ.ಕೃತ್ಯ 12:1-3 ನೋಡಿರಿ).

**4-14** ಈ ಭಾಗದಲ್ಲಿ ಪೇತ್ರನು ಯೆಹೂದ್ಯ ಕ್ರೈಸ್ತರನ್ನುದ್ದೇಶಿಸಿ ಮಾತಾಡಿ ತನ್ನ ಕೃತ್ಯಗಳನ್ನು ಸಮರ್ಥಿಸಿಕೊಳ್ಳುತ್ತಾನೆ. ಲೂಕನು ಹಿಂದಿನ ಅಧ್ಯಾಯದಲ್ಲಿ ಅನ್ಯ ಜನರೊಳಗೆ ನಡೆದದ್ದೆಲ್ಲವನ್ನು ಬಣ್ಣಿಸಿದ್ದನ್ನೇ ಪೇತ್ರನು ಇಲ್ಲಿ ಪು ನರಾವರ್ತಿಸುತ್ತಾನೆ (ಅ.ಕೃತ್ಯ 10:9-33 ನೋಡಿರಿ).

**15** "ನಾನು ಮಾತಾಡುವದಕ್ಕೆ ಪ್ರಾರಂಬಿಸಿದಾಗ ಪವಿತ್ರಾತ್ಮನು ಅವರ ಮೇಲೆ ಇಳಿದು ಬಂದನು" ಎಂದು ಪೇತ್ರನು ಹೇಳಿದನು. ಪೇತ್ರನ ಸಂದೇಶವು ಅ.ಕೃತ್ಯ 10:34-43 ರಲ್ಲಿ ಬರೆಯಲ್ಪಟ್ಟಿದೆ. ಪೇತ್ರನು ತನ್ನ ಸಂದೇಶವನ್ನು ಪೂರ್ತಿಗೊಳಿಸಲು

ಆಗಲಿಲ್ಲ, ಯಾಕೆಂದರೆ ಅದರ ಮಧ್ಯದಲ್ಲಿಯೇ ಪಕ್ಕನೆ ಪವಿತ್ರಾತ್ಮನು ಕೊರ್ನೇಲ್ಯ ಹಾಗು ಆತನ ಕುಟುಂಬದವರೆಲ್ಲರ ಮೇಲೆ ಬಂದನು ಮತ್ತು ಪೇತ್ರನು ಮುಂದುವರೆಸಲು ಆಗಲಿಲ್ಲ (ಅ.ಕೃತ್ಯ 10:44-46 ನೋಡಿರಿ).

**16** ಪವಿತ್ರಾತ್ಮನು ಅನ್ಯಜನರ ಮೇಲೆ ಇಳಿದು ಬರುವದನ್ನು ಪೇತ್ರನು ನೋಡಿದಾಗ ಯೇಸು ಹೇಳಿದ ಮಾತುಗಳನ್ನು ನೆನಪಿಸಿಕೊಂಡನು:——ನೀವು ಪವಿತ್ರಾತ್ಮನಿಂದ ದೀಕ್ಷಾಸ್ನಾನ ಹೊಂದುವಿರಿ" (ಅ.ಕೃತ್ಯ 1:5).

**17** ಯೇಸು ತನ್ನ ಶಿಷ್ಯರಿಗೆ ವಾಗ್ದಾನ ಮಾಡಿದ್ದ ಪವಿತ್ರಾತ್ಮ ವರವನ್ನೇ ಈಗ ಅನ್ಯ. ಜನಗಳಿಗೂ ಸಹ ಅನುಗ್ರಹಿಸಲಾಗಿದೆಯೆಂಬದನ್ನು ಪೇತ್ರನು ಗ್ರಹಿಸಿಕೊಂಡನು. ಸ್ವತಃ ದೇವರೇ ಆ ವರವನ್ನು ಅನುಗ್ರಹಿಸಿದ್ದನು. ಪೇತ್ರನು ಹೇಗೆ ದೇವರನ್ನು ವಿರೋಧಿಸುವದಕ್ಕೆ ಸಾಧ್ಯ? ದೇವರು ತಾನೇ ಪವಿತ್ರಾತ್ಮನಿಂದ ದೀಕ್ಷಾಸ್ನಾನ ಮಾಡಿಸಿರುವವರನ್ನು ಪೇತ್ರನು ನೀರಿನಿಂದ ದೀಕ್ಷಾಸ್ನಾನ ಮಾಡಿಸಲು ಹೇಗೆ ನಿರಾಕರಿಸಬಲ್ಲನು?

**18** ಯೆಹೂದ್ಯ ಕ್ರೈಸ್ತರು ಪೇತ್ರನ ಸಮರ್ಥನೆಯನ್ನು ಕೇಳಿದಾಗ ಅವರ ಗುಣಗುಟ್ಟುವಿಕೆ ನಿಂತು ಹೋಯಿತು ಮತ್ತು ಯಾವಾಗ ಅವರು ಗುಣಗುಟ್ಟುವಿಕೆಯನ್ನು ನಿಲ್ಲಿಸಿದರೋ ಆಗ ಪ್ರಶಂಸಿಸಲು ಪ್ರಾರಂಭಿಸಿದರು. ನಾವು ಸಹೋದರನೊಬ್ಬನ ವಿರುದ್ಧ ಗುಣಗುಟ್ಟುವಾಗ ಸಾಮಾನ್ಯವಾಗಿ ನಮಗೆ ಎಲ್ಲಾ ಸತ್ಯತೆಗಳೂ ತಿಳಿದಿರುವದಿಲ್ಲ. ಪೇತ್ರನು ಅನ್ಯಜನಾಂಗದವನೊಬ್ಬನ ಮನೆಗೆ ಹೋಗಿದ್ದನೆಂಬದಷ್ಟನ್ನೇ ಆ ಯೆಹೂದ್ಯ ಕ್ರೈಸ್ತರು ಬಲ್ಲವರಾಗಿದ್ದರು. ಆತನು ಯಾಕೆ ಹೋದನೆಂಬದು ಅವರಿಗೆ ತಿಳಿದಿರಲಿಲ್ಲ. ನಮ್ಮ ಸಹೋದರನೊಬ್ಬನು ಮಾಡಿದ ಸಂಗತಿಯೊಂದಕ್ಕಾಗಿ ಆತನನ್ನು ಟೀಕಿಸುವದಕ್ಕೆ ಮುಂಚೆ ಆತನು ಯಾಕೆ ಮತ್ತು ಏನನ್ನು ಮಾಡಿದನೆಂಬದನ್ನು ನಾವು ಕಂಡು ಕೊಳ್ಳುವವರಾಗಿರೋಣ. ನಾವು ಹೀಗೆ ಮಾಡುವದಾದರೆ ಟೀಕಿಸುವದಕ್ಕೆ ನಮಗೆ ಏನೂ ಸಿಕ್ಕುವದಿಲ್ಲ!.

## ಅಂತಿಯೋಕ್ಯದಲ್ಲಿನ ಸಭೆ (11:19-30)

**19** ಸ್ತೆಫನನ ಮರಣದ ನಂತರ ಶಿಷ್ಯರು ಇಸ್ರಾಯೇಲಿನಲೆಲ್ಲಾ ಚದರಿಹೋದರು (ಅ.ಕೃತ್ಯ 8:1,4). ಕೆಲವು ಶಿಷ್ಯರು ಫ಼ೊಯಿನಿಕೆ (ಆಧುನಿಕ – ಲೆಬನೋನ) ಮತ್ತು ಮೆಡಿಟರನಿಯನ್, ಸಮುದ್ರದ ಪೂರ್ವಭಾಗದಲ್ಲಿನ ದೊಡ್ಡ ದ್ವೀಪವಾದ ಕುಪ್ರ, ಇವುಗಳಂತಹ ಸ್ಥಳಗಳಿಗೂ ಹೋದರು. ಇತರರು ಫ಼ೊಯಿನಿಕೆಯ ಉತ್ತರ ದಿಕ್ಕಿನಲ್ಲಿರುವ ಸಿರಿಯಾದ ದೊಡ್ಡ ಪಟ್ಟಣವಾದ ಅಂತಿಯೋಕ್ಯಕ್ಕೆ ಹೋದರು. ಆ ಕಾಲದಲ್ಲಿ ಅಂತಿಯೋಕ್ಯವು ಪಾಶ್ಚಾತ್ಯ ಪ್ರಪಂಚದ ೫೩ ಮೂರನೆಯ ಅತಿ ದೊಡ್ಡ ಪಟ್ಟಣವಾಗಿತ್ತು. ಈ ಶಿಷ್ಯರಲ್ಲಿ ಬಹು ಪಾಲು ಜನರು ಈ ಸ್ಥಳಗಳಲ್ಲಿ ವಾಸಿಸುತ್ತಿದ್ದ ಯೆಹೂದ್ಯರಿಗೆ ಮಾತ್ರವೇ ವಾಕ್ಯವನ್ನು ಸಾರಿದರು. ಅವರು ಕೊರ್ನೇಲ್ಯ ಹಾಗು ಆತನ ಕುಟುಂಬದವರ ಮಾನಸಾಂತರ ಬಗ್ಗೆ ಕೇಳಿರಲಿಲ್ಲ.

**20** ಆದರೆ ಅಂತಿಯೋಕ್ಯಕ್ಕೆ ಹೋದ ಶಿಷ್ಯರು ಗ್ರೀಕರಿಗೆ, ಅಂದರೆ ಅನ್ಯ ಜನರಿಗೆ ಸಹ ಸುವಾರ್ತೆಯನ್ನು ಸಾರಲಾರಂಭಿಸಿದರು. ಈ ಶಿಷ್ಯರು ಮುಖ್ಯವಾಗಿ ಕುಪ್ರ ಹಾಗು ಕುರೇನ್ಯ [54] ಊರುಗಳವರಾಗಿದ್ದರು.

**21** ಕರ್ತನ ಹಸ್ತವು ಅಂದರೆ, ಅವನ ಬಲವು – ಶಿಷ್ಯರೊಂದಿಗಿದ್ದದರಿಂದ ಬಹು ಜನರು ನಂಬಿ ಕರ್ತನ ಕಡೆಗೆ ತಿರಿಗಿಕೊಂಡರು. ಕರ್ತನಹಸ್ತವು "ನಮ್ಮ ಸಂಗಡವಿರುವಾಗ ಸಭೆಯು ಬೆಳೆಯುತ್ತದೆ. ಅಂತಿಯೋಕ್ಯದಲ್ಲಿ ಕರ್ತನನ್ನು ಸ್ವೀಕರಿಸಿದ ಆ ಬಹುಜನರಲ್ಲಿ ಬಹುಪಾಲು ಮಂದಿ ಅನ್ಯ ಜನಾಂಗದವರಾಗಿದ್ದರೆಂದು ನಾವು ಊಹಿಸ ಬಹುದು, ಯಾಕೆಂದರೆ ಅಂತಿಯೋಕ್ಯವು ಅನ್ಯಜನರೇ ಬಹು ಸಂಖ್ಯೆಯಲ್ಲಿರುವ ಪಟ್ಟಣವಾಗಿತ್ತು.

**22-24** ಆ ಕಾಲದಲ್ಲಿ ಮಧ್ಯಪೂರ್ವಾತ್ಯದಲ್ಲೆಲ್ಲಾ ಚದುರಿದ ಸಭೆಗಳಿಗೆಲ್ಲಾ ಯೆರೂಸಲೇವು ಸಭೆಯನ್ನು "ತಾಯಿಸಭೆ" ಎಂದು ಪರಿಗಣಿಸಲಾಗಿತ್ತು, ಅದಕ್ಕನುಸಾರವಾಗಿ ಯೆರೂಸಲೇಮಿನಲ್ಲಿದ್ದ ಅಪೊಸ್ತಲರು ಈ ಸಭೆಗಳ ಕಾರ್ಯ ಭಾರಗಳನ್ನು ನೋಡಿಕೊಳ್ಳುತ್ತಿದ್ದರು. ಆದುದರಿಂದ, ಅಂತಿಯೋಕ್ಯದಲ್ಲಿ ಅನ್ಯ ಜನರೊಳಗೆ ಅನೇಕರು ಕರ್ತನ ಕಡೆಗೆ ತಿರಿಗಿಕೊಳ್ಳುತ್ತಿರುವರೆಂಬ ಸುದ್ದಿಯನ್ನು ಅಪೊಸ್ತಲರು ಕೇಳಿ ಈ ನೂತನ ಅನ್ಯಜನಾಂಗದ ಕ್ರೈಸ್ತರ ವಿಷಯವಾಗಿ ತಿಳಿದು ಕೊಂಡು ಬರುವದಕ್ಕಾಗಿ ಧೈರ್ಯದಾಯಕ ಬಾರ್ನಬನನ್ನು ಕಳುಹಿಸಿದರು (ಅ.ಕೃತ್ಯ 4:36-37). ಬಾರ್ನಬನು ಒಳ್ಳೆಯವನೂ, ಪವಿತ್ರಾತ್ಮಭರಿತನೂ, ನಂಬಿಕೆಯಿಂದ ತುಂಬಿದವನೂ ಆಗಿದ್ದನು (ವಚನ 24) ಆತನು ನೂತನ ಅನ್ಯ.ಜನಾಂಗದ ಕ್ರೈಸ್ತರನ್ನು ಪ್ರೋತ್ಸಾಹಿಸಿದನು, ಮತ್ತು ಆತನ ಪ್ರೋತ್ಸಾಹದ ಮುಖಾಂತರವಾಗಿ (ಅಲ್ಲದೆ "ಕರ್ತನ ಹಸ್ತದ " ಮೂಲಕವಾಗಿ ಸಹ) ಇನ್ನು ಬಹುಮಂದಿ ಕರ್ತನಿಗೆ ಸೇರಿಕೊಂಡರು. ಬಾರ್ನಬನು ಒಬ್ಬ ಯೆಹೂದ್ಯನಾಗಿದ್ದಾಗ್ಯು ಅನ್ಯಜನರು ಈಗ ರಕ್ಷಣೆ ಹೊಂದುತ್ತಿರೆಂಬುದರ ಬಗ್ಗೆ ಗುಣಗುಟ್ಟಲಿಲ್ಲ. ಬದಲಾಗಿ ಆತನು ಸಂತೋಷಪಟ್ಟನು (ವಚನ 23).

**25-26** ಅಂತಿಯೋಕ್ಯದಲ್ಲಿ ಬೋಧನೆ ಹಾಗು ಉಪದೇಶಗಳ ಕೆಲಸಕ್ಕಾಗಿ ಬಾರ್ನಬನಿಗೆ ಸಹಪಾಠಿಯೊಬ್ಬನ ಅವಶ್ಯಕತೆಯಿತ್ತು. ಅವನು ಸೌಲನನ್ನು ಜ್ಞಾಪಿಸಿಕೊಂಡು ಅವನನ್ನು ಹುಡುಕಲು ತಾರ್ಸಗೆ ಹೋದನು (ಅ.ಕೃತ್ಯ 9:30). ಬಾರ್ನಬನು ಸೌಲನನ್ನು ಕಂಡುಕೊಂಡು ಅಂತಿಯೋಕ್ಯಕ್ಕೆ ಕರೆದು ಕೊಂಡು ಬಂದನು, ಮತ್ತು ಅಲ್ಲಿ ಅವರು ಒಂದು ವರ್ಷದ ವರೆಗೆ ಒಟ್ಟಾಗಿ ಸೇವೆ ಮಾಡಿದರು. ಅಂತಿಯೋಕ್ಯದಲ್ಲಿನ ಸಭೆಯು ಬೆಳೆಯಿತು. ಅಂತಿಯೋಕ್ಯದಲ್ಲಿಯೇ ಶಿಷ್ಯರಿಗೆ ಕ್ರೈಸ್ತರೆಂಬ ಹೆಸರು ಮೊದಲು ಬಂತು. ಅಂದಿನಿಂದ ವಿಶ್ವಾಸಿಗಳು ತಮ್ಮನ್ನು "ಯೆಹೂದ್ಯರು", "ಗ್ರೀಕರು", ಹಾಗು "ಅನ್ಯಜನರು" ಎಂದು ಕರೆದು ಕೊಳ್ಳುವದನ್ನು ನಿಲ್ಲಿಸಿದರು. ಅವರು ಕ್ರಿಸ್ತನ ಹೆಸರನ್ನು ತೆಗೆದುಕೊಂಡರು. ಕ್ರೈಸ್ತನಾಗಿರುವದೆಂದರೆ ಕ್ರಿಸ್ತನಿಗೆ ಸೇರಿದವನಾಗಿರುವದು ಎಂದು ಅರ್ಥ. ನಾವು "ಕ್ರೈಸ್ತ" ಎಂಬ ಹೆಸರನ್ನು ನಾಚಿಕೆಪಡದೆ ಮುಕ್ತವಾಗಿಯೂ, ಸಂತೋಷದಿಂದಲೂ ಉಪಯೋಗಿಸೋಣ. ಆ ಹೆಸರಿಗೆ ಅವಮಾನವನ್ನುಂಟು ಮಾಡುವ ಯಾವದನ್ನೂ ನಾವು ಮಾಡದಿರೋಣ.

**27-28** ಆ ಕಾಲದಲ್ಲಿ ಅಗಬನೆಂಬ ಪ್ರವಾದಿಯೊಬ್ಬನು (ಅ.ಕೃತ್ಯ 21:10-11 ನೋಡಿರಿ). ಯೆರೂಸಲೇಮಿನಿಂದ ಅಂತಿಯೋಕ್ಯಕ್ಕೆ ಬಂದು ದೊಡ್ಡ ಕ್ಷಾಮ ಬರಲಿದೆ ಎಂದು ಪ್ರವಾದಿಸಿದನು. ಆ ಕ್ಷಾಮವು ನಿಜವಾಗಿಯೂ ರೋಮಾಯ ಚಕ್ರವರ್ತಿಯಾದ ಕ್ಲೌದ್ಯನ (ಕ್ರಿಶಕ 41-54) ಕಾಲದಲ್ಲಿ ಸಂಭವಿಸಿತೆಂದು ಲೂಕನು ಕ್ಲುಪ್ತವಾದ ಐತಿಹಾಸಿಕ ಟಿಪ್ಪಣಿಯನ್ನು ಇಲ್ಲಿ ನೀಡುತ್ತಾನೆ. ಕ್ಲೌದ್ಯ ಚಕ್ರವರ್ತಿಯ ಆಳಿಕೆಯಲ್ಲೆಲ್ಲಾ ಕ್ಷಾಮಗಳು ಸಂಭವಿಸಿದವೆಂದು ಇತರ ಐತಿಹಾಸಿಕ ಪುಸ್ತಕಗಳಿಂದ ಸಹ ತಿಳಿದು ಬಂದಿದೆ.

**29-30** ಕ್ಷಾಮದ ವೇಳೆಗಳಲ್ಲಿ ಸಾಮಾನ್ಯವಾಗಿ ಯೆರೂಸಲೇಮ ಹಾಗು ಯೂದಾಯದ ಸುತ್ತಲಿನ ಪ್ರಾಂತ್ಯಗಳು ಇತರ ಸ್ಥಳಗಿಂತಲೂ ಹೆಚ್ಚು ಘೋರವಾಗಿ ದಕ್ಕೆಗೊಳಗಾಗುತ್ತಿದ್ದವು. ಹಲವಾರು ಸಂದರ್ಭಗಳಲ್ಲಿ ಇತರ ಸೀಮೆಗಳ ಕ್ರೈಸ್ತರು ಯೂದಾಯದಲ್ಲಿದ್ದ ವಿಶ್ವಾಸಿಗಳಿಗೆ ಕಾಣಿಕೆಗಳನ್ನು ಕಳುಹಿಸುತ್ತಿದ್ದರು. ಈ ಕಾಲದಲ್ಲಿ ಅಂತಹ ಪ್ರಥಮ ಸಂಗ್ರಹಣೆಯನ್ನು ಅಂತಿಯೋಕ್ಯದಲ್ಲಿ ಶೇಖರಿಸಲಾಯಿತು. ಅಂತಿಯೋಕ್ಯದಲ್ಲಿ ದ್ರವ್ಯ ಸಂಗ್ರಹಣೆಯ ಕುರಿತಾಗಿ ಸೌಲನು ಬಹಳಷ್ಟು ಕಲಿತುಕೊಂಡನು. ಶಿಷ್ಯರು ತಮ್ಮ ತಮ್ಮ ಶಕ್ತ್ಯಾನುಸಾರವಾಗಿ ನೀಡಿದರು (ವಚನ 29). ಅದೇ ನಿಯಮವನ್ನೇ ಪೌಲನು ಅನಂತರ ಇತರ ಸಭೆಗಳಿಗೆ ಸಹ ಕಲಿಸಲಿದ್ದನು (1 ಕೊರಿಂಥ 16:1-2, 2 ಕೊರಿಂಥ 9:6-11). ಅಂತಿಯೋಕ್ಯದ ಕ್ರೈಸ್ತರು ತಮ್ಮ ಕಾಣಿಕೆಗಳನ್ನು ಬಾರ್ನಬ ಸೌಲರ ಕೈಗಳಲ್ಲಿ ಯೆರೂಸಲೇಮಿಗೆ ಕಳುಹಿಸಿದರು. ಅವರು ಯೆರೂಸಲೇಮಿಗೆ ಮಾಡಿದ ಈ ಪ್ರವಾಸವು ಗಲಾತ್ಯ 2:1-10 [55] ರಲ್ಲಿ ಬಣ್ಣಿಸಲ್ಪಟ್ಟಿರುವ ಪ್ರವಾಸವು ಒಂದೇ ಆಗಿದೆ ಎಂದು ಕೆಲವು ಬೈಬಲ್ ಪಂಡಿತರು ಅಭಿಪ್ರಾಯ ಪಡುತ್ತಾರೆ (ಗಲಾತ್ಯ 2:1 ಮತ್ತು ವ್ಯಾಖ್ಯಾನ ನೋಡಿರಿ). ಒಂದು ವೇಳೆ ಇದು ನಿಜವಾಗಿದ್ದರೆ, ಬಾರ್ನಬ ಸೌಲರು ಪ್ರಾಥಮಿಕವಾಗಿ ಅನ್ಯಜನರ ಮದ್ಯದಲ್ಲಿ ಸೇವೆ ಮಾಡ ಬೇಕೆಂದು ಯೆರೂಸಲೇಮಿನ ನಾಯಕರು ಇದೇ ಸಮಯದಲ್ಲಿಯೇ ಒಪ್ಪಿದರೆಂದು ಹೇಳಬಹುದು (ಗಲಾತ್ಯ 2:9). ಯೆರೂಸಲೇಮಿನಲ್ಲಿದ್ದ ಅಪೊಸ್ತಲರು ಬಾರ್ನಬ ಸೌಲರಿಗೆ ಬಡವರನ್ನು ಜ್ಞಾಪಕ ಮಾಡಿಕೊಳ್ಳಬೇಕೆಂಬ ಒಂದೇ ಸಂಗತಿಯನ್ನು ಬೇಡಿಕೊಂಡರು. ಯೆರೂಸಲೇಮ ಹಾಗು ಯೂದಾಯದಲ್ಲಿನ ಬಡವರಿಗಾಗಿ ಈಗಷ್ಟೇ ಅಂತಿಯೋಕ್ಯದಿಂದ ಕಾಣಿಕೆಗಳನ್ನು ತಂದಿದ್ದ ಸೌಲನು (ಪೌಲನು)"ಇದನ್ನು ಮಾಡುವದರಲ್ಲಿ ನಾನೂ ಆಸಕ್ತನಾಗಿದ್ದೆನು" ಎಂದು ಹೇಳಲು ಶಕ್ತನಾಗಿದ್ದನು (ಗಲಾತ್ಯ 2;10).

---

## ಅಧ್ಯಾಯ - 12

### ಕ್ರೈಸ್ತರ ವಿರುದ್ಧ ಹಿಂಸೆಯು ಹೆಚ್ಚಾದದ್ದು (12:1-5)

**1** ಇಲ್ಲಿ ಉಲ್ಲೇಖಿಸಲ್ಪಟ್ಟಿರುವ ಅರಸನಾದ ಹೆರೋದನು ಕ್ರಿಸ್ತನ ಜನನದ ವೇಳೆಯಲ್ಲಿ ಯೂದಾಯವನ್ನು ಆಳುತ್ತಿದ್ದ ಹೆರೋದನ ಮೊಮ್ಮಗನಾಗಿದ್ದಾನೆ (ಮತ್ತಾಯ 2:1, ಲೂಕ 1:5). ಹೆರೋದನಿಗೆ "ಅರಸನು" ಎಂಬ ಬಿರುದನ್ನು ರೋಮಾಯ ಚಕ್ರವರ್ತಿಯು ನೀಡಿದ್ದನು ಮತ್ತು ಅವನು ಚಕ್ರವರ್ತಿಯ ಹೆಸರಿನಲ್ಲಿ ಆಳ್ವಿಕೆಮಾಡಿದನು. ಆತನಿಗೆ ಇಸ್ರಾಯೇಲ ಹಾಗು ಸಿರಿಯಾದ ಕೆಲಬಾಗದ ಮೇಲೆ ಅಧಿಕಾರ ವ್ಯಾಪ್ತಿಯನ್ನು ನೀಡಲಾಗಿತ್ತು. ಪೇತ್ರ ಹಾಗು ಇತರ ಅಪೊಸ್ತಲರು ಹೊಸದಾಗಿ ಕ್ರೈಸ್ತರಾಗಿ ಅನ್ಯಜನರನ್ನು ಕ್ರಿಸ್ತನಲ್ಲಿ ಸಹೋದರ ಹಾಗು ಸಹೋದರಿಯರನ್ನಾಗಿ ಸ್ವೀಕರಿಸುವದಕ್ಕೆ ಪ್ರಾರಂಭಿಸಿದಾಗ ಯೆರೂಸಲೇಮ ಹಾಗು ಯೂದಾಯದಲ್ಲಿನ ಯೆಹೂದ್ಯರು ಅವರ ವಿರುದ್ದವಾಗಿ ಗಲಭೆಮಾಡಿದರು. ಹೆರೋದನು ಶಾಂತಿಯನ್ನು ಕಾಯ್ದುಕೊಳ್ಳಲು ಬಯಸಿ ಯೆಹೂದ್ಯರನ್ನು ಸಮಾಧಾನಗೊಳಿಸುವದಕ್ಕೆ ಉಪಾಯವನ್ನು ಹುಡುಕಿದನು. ಯೆಹೂದ್ಯರನ್ನು ಸಂತೋಷಗೊಳಿಸಬೇಕಾದರೆ ಅಪೊಸ್ತಲರನ್ನು ಬಂಧಿಸಿ ಕೊಲ್ಲಿಸುವದೇ ಸರಿಯಾದ ದಾರಿಯೆಂದು ತಿಳಿದುಕೊಂಡು ಕಾರ್ಯ ಶೀಲನಾದನು.

**2** ಜೆಬೆದಾಯನ ಮಗನೂ, ಯೋಹಾನನ ಅಣ್ಣನೂ ಆದ ಯಾಕೋಬನು (ಮಾರ್ಕ 1:19-20) ಮೊದಲು ಬಂಧನಕ್ಕೊಳಗಾಗಿ ಕೊಲ್ಲಲ್ಪಟ್ಟನು. ಯಾಕೋಬನು ತನಗೆ ಯೇಸು ಹೇಳಿದ್ದೆಲ್ಲವನ್ನೂ ಅನುಭವಿಸಿದನು: ನಾನು ಕುಡಿಯುವ ಪಾತ್ರೆಯಲ್ಲಿ ಕುಡಿಯುವಿ; ನನಾಗುವ ಸ್ನಾನವು ನಿನಗಾಗುವದು" (ಮಾರ್ಕ 10;35-40).

**3-4** ಯಾಕೋಬನನ್ನು ಕೊಲ್ಲಿಸಿದ್ದು ಯೆಹೂದ್ಯರಿಗೆ ಮೆಚ್ಚಿಕೆಯಾಗಿದೆ ಎಂದು ನೋಡಿ ಹೆರೋದನು ಪೇತ್ರನನ್ನೂ ಸಹ ಕೊಲ್ಲಿಸಬೇಕೆಂದು ಉದ್ದೇಶದೊಂದಿಗೆ ಬಂಧಿಸಿದನು. ಆದರೆ ಆಗಷ್ಟೆ ಹುಳಿಯಿಲ್ಲದ ರೊಟ್ಟಿಯ ಹಬ್ಬ [55] ಅಂದರೆ, ಪಸ್ಕವು ಪ್ರಾರಂಭವಾಗಿತ್ತು ಮತ್ತು ಈ ಕಾರಣದಿಂದ ಹಬ್ಬದ ನಂತರವಷ್ಟೇ ಹೆರೋದನು ಪೇತ್ರನ ವಿಚಾರಣೆ ಮಾಡಬಹುದಾಗಿತ್ತು. ಆದುದರಿಂದ ಅವನು ಪೇತ್ರನನ್ನು ಸೆರೆಮನೆಯಲ್ಲಿ ಹಾಕಿಸಿದನು. ಪೇತ್ರನು ತಪ್ಪಿಸಿಕೊಳ್ಳದಂತೆ ನಾಲ್ಕು ನಾಲ್ಕು ಸಿಪಾಯಿಗಳಿದ್ದ ನಾಲ್ಕು ಗುಂಪು ಗಳ ವಶಕ್ಕೆ ಕೊಟ್ಟನು ( ವಚನ 4).

**5** ಸಭೆಯು ಪೇತ್ರನಿಗೋಸ್ಕರ ಆಸಕ್ತಿಯಿಂದ ಪ್ರಾರ್ಥಿಸಿತು. ಒಂದು ವೇಳೆ ಸಭೆಯು ಪ್ರಾರ್ಥಿಸಿರದಿದ್ದರೆ ಪೇತ್ರನ ಜೀವಿತವು ಆಗಲೇ ಅಂತ್ಯಗೊಳ್ಳುವ ಸಾಧ್ಯತೆಯಿತ್ತು. ನಮ್ಮ ಪ್ರಾರ್ಥನೆಗಳಿಲ್ಲದೆಯೇ ದೇವರು ಕಾರ್ಯ ಮಾಡಬಲ್ಲನು, ಆದರೆ ಸಾಮಾನ್ಯವಾಗಿ ಆತನು ಕಾರ್ಯಶೀಲನಾಗುವದಕ್ಕೆ ಮುಂಚೆ ನಮ್ಮ ಪ್ರಾರ್ಥನೆಗಳನ್ನು ಕೇಳಲು ಕಾಯುತ್ತಾನೆ.

## ಪೇತ್ರನು ಸೆರೆಮನೆಯಿಂದ ಅಧ್ಭುತವಾಗಿ ಪಾರಾದದ್ದು (12:6-19)

ಪೇತ್ರನು ತಾನು ಮರಣ ದಂಡನೆಗೊಳಗಾಗುವ ಹಿಂದಿನ ರಾತ್ರಿಯಲ್ಲಿ ದೀರ್ಘ ನಿದ್ರೆಮಾಡುತ್ತಿದ್ದನು. ಆ ರಾತ್ರಿಯು ಭೂಲೋಕದಲ್ಲಿ ತನ್ನ ಕೊನೆಯ ರಾತ್ರಿಯಾಗಬಹುದೆಂಬದನ್ನು ತಿಳಿದಿದ್ದರೂ, ಅವನು ಹೆದರಲಿಲ್ಲ ಅಥವಾ ಚಿಂತೆ ಮಾಡಲಿಲ್ಲ, ಸಮಾಧಾನದಲ್ಲಿ ನಿದ್ದೆಮಾಡಿದನು. ಅವನ ಬಲಗೈ ಒಬ್ಬ ಸಿಪಾಯಿಗೂ, ಆತನ ಎಡಗೈ ಇನ್ನೊಬ್ಬ ಸಿಪಾಯಿಗೂ ಕಟ್ಟಲ್ಪಟ್ಟಿದ್ದವು. ಕಾವಲುಗಾರರು ಬಾಗಲನ್ನು ಕಾಯುತ್ತಿದ್ದರು. ಅಂತಿಮ ಕ್ಷಣ ಹತ್ತಿರವಾಗಿತ್ತು. ತಪ್ಪಿಸಿಕೊಳ್ಳುವ ಯಾವ ಮಾರ್ಗವೂ ಇರಲಿಲ್ಲ. ಹಲವಾರು ವೇಳೆಗಳಲ್ಲಿ ದೇವರು ತಾನು ಕಾರ್ಯಮಾಡುವ ಮುಂಚೆ ಇಂತಹ ಕ್ಷಣಕ್ಕಾಗಿ ಕಾಯುತ್ತಾನೆ ಇನ್ನಾವ ನಿರೀಕ್ಷೆಯೇ ಇಲ್ಲದಿರುವಾಗ ದೇವರು ತನ್ನ ಅತಿ ಶ್ರೇಷ್ಠಕಾರ್ಯವನ್ನು ಮಾಡುತ್ತಾನೆ.

**7-10** ನೇಮಕವಾದ ಸಮಯದಲ್ಲಿ ದೇವರು ತನ್ನ ದೂತನ ಮೂಲಕ ಪೇತ್ರನನ್ನು ಅದ್ಭುತಕರವಾಗಿ ಸೆರೆಮನೆಯಿಂದ ಬಿಡಿಸಿದನು. ಇದು ಸಂಪೂರ್ಣವಾಗಿ ದೇವರ ಕಾರ್ಯವಾಗಿತ್ತು. ಪೇತ್ರನ ಕೈಗಳಿಗೆ ಹಾಕಿದ್ದ ಸರಪಣಿಗಳು ಕಳಚಿ ಬಿದ್ದವು (ವಚನ 7), ಮತ್ತು ಕಬ್ಬಿಣದ ಬಾಗಿಲು ತನಷ್ಟಕ್ಕೆ ತಾನೇ ಅವರಿಗೆ ತೆರೆಯಿತು (ವಚನ 10).

**11** ಪೇತ್ರನು ತಾನು ದರ್ಶನ ಕಾಣಿತ್ತಿದ್ದೇನೆಂದು ನೆನಸಿದನು; ಅದು ಒಂದು ಕನಸಿನಂತೆ ಇತ್ತು. ಆದರೆ ನಂತರ ಅವರು ಸೆರಮನೆಯಿಂದ ಹೊರಗೆ ಬಂದಾಗ ದೇವದೂತನು ಕಣ್ಮರೆಯಾದನು, ಮತ್ತು ಪೇತ್ರನು ಎಚ್ಚರವಾದನು. ಅದು ಕನಸಾಗಿರಲಿಲ್ಲ. ಆತನು ಮುಕ್ತನಾಗಿದ್ದನು! ಯಾಕೋಬ ಕೊಲ್ಲಲ್ಪಟ್ಟನು ಮತ್ತು ಪೇತ್ರನು ಕಾಪಾಡಲ್ಪಟ್ಟನು ಏಕೆ? ಮಾನವರಾದ ನಾವು ದೇವರ ಉದ್ದೇಶಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲಾರೆವು. ಸಭೆಯು ಯಾಕೋಬನಿಗಾಗಿ ಪ್ರಾರ್ಥಿಸಲಿಲ್ಲವೇ? ಅಥವಾ ದೇವರು ಯಾಕೋಬನ ಮರಣದ ಮೂಲಕ ನಮಗೆ ಗೊತ್ತೇ ಇಲ್ಲದ ಮಹಾ ಕಾರ್ಯವೊಂದನ್ನು ನೆರವೇರಿಸಲು ಬಯಸಿದ್ದನೋ? ಅಂತಹ ಪ್ರಶ್ನೆಗಳಿಗೆ ನಾವು ಉತ್ತರಗಳನ್ನು ತಿಳಿಯಲು ಸಾದ್ಯವಿಲ್ಲ.

**12** ಪೇತ್ರನು ಮಾಡಬೇಕಾಗಿದ್ದ ಮೊದಲ ಕಾರ್ಯವೇನಂದರೆ ತಾನು ತಪ್ಪಿಸಿಕೊಂಡಿದ್ದಾನೆಂಬುದನ್ನು ಇತರ ಕ್ರೈಸ್ತರಿಗೆ ತಿಳಿಸುವದಾಗಿತ್ತು. ಪೇತ್ರನು ಮಾರ್ಕನ [56] ತಾಯಿಯಾದ ಮರಿಯಳ ಮನೆಗೆ ಹೋದನು, ಅಲ್ಲಿ ಅನೇಕ ಮಂದಿ ವಿಶ್ವಾಸಿಗಳು ಪ್ರಾರ್ಥನೆಗಾಗಿ ಸೇರಿಬಂದಿದ್ದರು. ಅದು ಮಧ್ಯರಾತ್ರಿಯಾಗಿದ್ದಾಗ್ಯು ಪೇತ್ರನ ಸ್ನೇಹಿತರು ಇನ್ನು ಎಚ್ಚರವಾಗಿದ್ದು ಪ್ರಾರ್ಥಿಸುತ್ತಿದ್ದರು.

**13-16** ರೋದೆಯು ಹೊರಗಿದ್ದ ಪೇತ್ರನ ಸ್ವರವನ್ನು ಕೇಳಿದಾಗ ಅವಳು ಬಾಗಲು ತೆರೆದು ಆತನನ್ನು ಒಳಗೆ ಬರುವದಕ್ಕೆ ಅನುಮತಿಸುವದನ್ನೇ ಮರೆಯುವಷ್ಟು ಉತ್ಸಾಹಗೊಂಡವಳಾದಳು. ಅವಳು ಒಳಗೆ ಓಡಿ ಹೋಗಿ ಪೇತ್ರನು ಹೊರಗಿದ್ದಾನೆಂದು ಎಲ್ಲರಿಗೂ ಹೇಳಿದಳು, ಆದರೆ ಅವರು ಆಕೆಗೆ," ನಿನಗೆ ಹುಚ್ಚು ಹಿಡಿದದೆ" ಎಂದರು (ವಚನ 15) ಅವಳು ದೃಢವಾಗಿ ಹೇಳುತ್ತಲೇ ಇದ್ದಾಗ ಅವನು ಪೇತ್ರನ ದೂತನು ಮಾತ್ರವೇ ಆಗಿರಬೇಕೆಂದು ಹೇಳಿದರು. ಆದರೆ ಪೇತ್ರನು ಇನ್ನೂ ತಟ್ಟುತ್ತಾ ಇರಲು ಕೊನೆಗೂ ಒಳಗಿದ್ದವರು ಹೋಗಿ ಬಾಗಿಲನ್ನು ತೆರೆದರು. ಅವರು ಪೇತ್ರನನ್ನು ನೋಡಿ ಬೆರಗಾದರು. ಬಾಗಿಲ ಬಳಿಯಲ್ಲಿ ಅವರ ಪ್ರಾರ್ಥನೆಗೆ ಉತ್ತರವೇ ನಿಂತಿತ್ತು, ಆದರೆ ಅವರು ಅದನ್ನು ನಂಬಿರಲಿಲ್ಲ!

**17** ಆಗ ಎಲ್ಲರೂ ಸಂತೋಷಪಡುತ್ತಾ ದೇವರನ್ನು ಕೊಂಡಾಡಲು ಪ್ರಾರಂಭಿಸಿದರು, ಆದರೆ ಪೇತ್ರನು ಅವರಿಗೆ ಸುಮ್ಮನಿರ್ರಿ ಎಂದು ಹೇಳಿದನು. ಬಹುಶ: ಆ ಸಮಯದಲ್ಲಿ ಸಿಪಾಯಿಗಳು ಆತನಿಗಾಗಿ ಹುಡುಕಾಡುತ್ತಿದ್ದಿರಬೇಕು, ಮತ್ತು ಮಧ್ಯರಾತ್ರಿಯಲ್ಲಿ ಇಂತಹ ಗದ್ದಲದ ಸಮೂಹವನ್ನು ನಿಶ್ಚಯವಾಗಿಯೂ ಕಂಡುಕೊಳ್ಳಬಹುದಿತ್ತು. ಪೇತ್ರನು ಅವರಿಗೆ, "ಈ ಸಂಗತಿಗಳನ್ನು ಯಾಕೋಬನಿಗೂ ಸಹೋದರರೆಲ್ಲರಿಗೂ ತಿಳಿಸಿರಿ" ಎಂದನು. ಆ ವೇಳೆಗಾಗಲೇ ಯೇಸುವಿನ ಸಹೋದರನಾದ ಯಾಕೋಬನು ಯೆರೂಸಲೇಮಿನ ಸಭೆಯ ಮುಖ್ಯ ನಾಯಕನಾಗಿದ್ದನು. ಬಳಿಕ ಪೇತ್ರನು ಹೆರೋದನಿಗೆ ಮರೆಯಾಗಿ ಅಡಗಿಕೊಳ್ಳಲು ಇನ್ನೊಂದು ಸ್ಥಳಕ್ಕೆ ಹೋದನು.

**18-19** ರೋಮಾಯ ಕಾನೂನಿನ ಪ್ರಕಾರ ಯಾವದೇ ಕೈದಿಯು ತಪ್ಪಿಸಿಕೊಂಡರೆ ಆತನನ್ನು ಕಾಯುತ್ತಿದ್ದ ಸಿಪಾಯಿಗಳಿಗೆ ಆತನು ಹೊಂದಿರ ಬಹುದಾಗಿದ್ದ ಶಿಕ್ಷೆಯನ್ನೇ ನೀಡಲಾಗುತ್ತಿತ್ತು. ಪೇತ್ರನು ಮರಣದಂಡನೆಯನ್ನು ಹೊಂದಿರುತ್ತಿದ್ದನಾದ್ದರಿಂದ ಪೇತ್ರನನ್ನು ಕಾಯುತ್ತಿದ್ದ ಸಿಪಾಯಿಗಳೆಲ್ಲರೂ ಆತನ ಸ್ಥಾನದಲ್ಲಿ ಮರಣದಂಡನೆ ಹೊಂದಬೇಕೆಂದು ಹೆರೋದನು ಅಪ್ಪಣೆ ಕೊಟ್ಟನು. ಬಹುಶಃ ಹೆರೋದನಿಗೆ ಸಿಪಾಯಿಗಳಲ್ಲಿ ಒಬ್ಬರು ಅಥವಾ ಇಬ್ಬರು ಪೇತ್ರನಿಗೆ ಪಾರಾಗುವಂತೆ ರಹಸ್ಯವಾಗಿ ಸಹಾಯಮಾಡಿರ–ಬೇಕೆಂದು ಸಂಶಯಗೊಂಡಿದ್ದನು.

## ಹೆರೋದನ ಮರಣ (12:20-25)

**20** ತೂರ್ ಮತ್ತು ಸೀದೋನ್ ಪಟ್ಟಣಗಳು ಮೆಡಿಟರನಿಯನ್ ಸಮುದ್ರತೀರದಲ್ಲಿದ್ದ ಫೊಯಿನಿಕೆ (ಆಧುನಿಕ ಲೆಬನೋನ) ಯ ಮಹಾನಗರಗಳಾಗಿದ್ದವು. ಈ ಪಟ್ಟಣದ ನಿವಾಸಿಗಳು ತಮ್ಮ ಬಹುಪಾಲು ಧವಸಧಾನ್ಯವನ್ನು ಗಲಿಲಾಯ ಪ್ರಾಂತ್ಯದಿಂದಲೇ ಪಡೆಯುತ್ತಿದ್ದರು, ಇದು ಹೆರೋದನ ಅಧಿಕಾರ ವ್ಯಾಪ್ತಿಗೆ ಸೇರಿತ್ತು. ಯಾವದೋ ಕಾರಣಕ್ಕಾಗಿ ಹೆರೋದನು ತೂರ್ ಸೀದೋನ್‌ಗಳ ನಿವಾಸಿಗಳೊಂದಿಗೆ ಅಸಮಾಧಾನಗೊಂಡಿದ್ದನು ಮತ್ತು ಅವನು ಕೋಪದಲ್ಲಿ ತಮಗೆ ಧವಸಧಾನ್ಯಗಳನ್ನು ನಿಲ್ಲಿಸಿಬಿಟ್ಟಾನೆಂದು ಅವರು ಹೆದರಿದರು. ಆದ್ದರಿಂದ ಸಮಾಧಾನವಾಗಬೇಕೆಂಬ ಪ್ರಯತ್ನದಲ್ಲಿ ಹೆರೋದನ ಸೇವಕರಲ್ಲಿ ಒಬ್ಬನಾದ ಬ್ಲಾಸ್ತನಿಗೆ ಅರಸನನ್ನು ಸಂಧಿಸಲು ಏರ್ಪಾಡು ಮಾಡಬೇಕೆಂದು ಕೇಳಿಕೊಂಡರು.

**21-22** ಗೊತ್ತು ಮಾಡಿದ ಒಂದು ದಿನ ಹೆರೋದನು ತೂರ್ ಸೀದೋನ್ ಪಟ್ಟಣಗಳ ಜನರಿಗೆ ಉಪನ್ಯಾಸ ಮಾಡಿದನು. ಹೆರೋದನನ್ನು ಹೊಗಳಿ ಮೆಚ್ಚಿಸಬೇಕೆಂದು ಜನರು ಆತನನ್ನು ದೇವರೆಂದು ಕರೆಯಲಾರಂಬಿಸಿದರು. ಅವನು ಆ ಘನವನ್ನು ನಿಜವಾದ ದೇವರಿಗೆ ಸಲ್ಲಿಸದೆ ಹೋದದ್ದರಿಂದ ಕರ್ತನ ದೂತನು ಆ ಕ್ಷಣದಲ್ಲಿಯೇ ಅವನನ್ನು ಬಡಿದನು. ಅವನು ಹುಳ ಬಿದ್ದು ಸತ್ತನು, ದೊಡ್ಡ ಹುಳವೊಂದು ಹೆರೋದನ ಮೂತ್ರಾಶಯದಲ್ಲಿ ತುಂಬಿ ಆತನ ಕಾಳಿಜವು ಛಿದ್ರಗೊಂಡಿತ್ತೆಂದು [57] ಕೆಲವರು ನಂಬುತ್ತಾರೆ. ಹೆರೋದನು ತನ್ನನ್ನು ಹೆಚ್ಚಿಸಿಕೊಂಡಿದ್ದನು. ಈಗ ದೇವರು ಅವನನ್ನು ಹುಳುಗಳಿಗೆ ಆಹಾರವಾಗಿ ಮಾಡಿದ್ದನು!

**24** ಹಿಂಸಕನೂ ದಬ್ಬಾಳಿಕೆಮಾಡುವವನೂ ಆದ ಹೆರೋದನು ಸತ್ತನು. ಆದರೆ ದೇವರ ವಾಕ್ಯವು ಹಬ್ಬಿ ಹೆಚ್ಚುತ್ತಾ ಬಂತು. ದೇವರು ರಾಜರನ್ನು ಎಬ್ಬಿಸುತ್ತಾನೆ ಹಾಗು ಬೀಳಿಸುತ್ತಾನೆ, ಆದರೆ ಆತನ ವಾಕ್ಯವು ಸದಾಕಾಲವೂ ಉಳಿಯುವದು ( 1 ಪೇತ್ರ 1:24-25 ನೋಡಿರಿ).

**25** ವಾಸ್ತವದಲ್ಲಿ ಬಾರ್ನಬ ಸೌಲರು ಯೆರೂಸಲೇಮಿನ ವಿಶ್ವಾಸಿಗಳಿಗಾಗಿ ದ್ರವ್ಯಸಂಗ್ರಹಣೆಗಾಗಿ ಹೆರೋದನ ಮರಣದ ನಂತರ ವರ್ಷೇ ಅಂತಿಯೋಕ್ಯಕ್ಕೆ ಹೋದರು (ಅ.ಕೃತ್ಯ 11:29-30). ಅವರು ತಿರಿಗಿ ಅಂತಿಯೋಕ್ಯಕ್ಕೆ ಬರುವಾಗ ಬಾರ್ನಬನ ಸಂಬಂಧಿಯಾದ ಯೋಹಾನನನ್ನು (ಮಾರ್ಕನೆಂದು ಸಹ ಕರೆಯಲ್ಪಡುತ್ತಾನೆ) ತಮ್ಮೊಂದಿಗೆ ಕರೆದುಕೊಂಡು ಹೋದರು (ಅ.ಕೃತ್ಯ 12:12; ಕೊಲೊಸ್ಸೆ 4:10).

---

## ಅಧ್ಯಾಯ - 13

### ಬಾರ್ನಬ ಸೌಲರು ಕುಪ್ರದ್ವೀಪಕ್ಕೆ ಹೋದದ್ದು (13:1-12)

**1** ಬಾರ್ನಬ ಮತ್ತು ಸೌಲರೊಂದಿಗೆ ಅಂತಿಯೋಕ್ಯಸಭೆಯ ಇತರ ಮೂರು ಮಂದಿ ನಾಯಕರು ಪ್ರಸ್ತಾಪಿಸಲ್ಪಟ್ಟಿದ್ದಾರೆ: ಸಿಮೆಯೋನ, ಲೂಕ್ಯ, ಹಾಗು ಮೆನಹೇನ. ನಿಗರನೆಂಬ ಸಿಮೆಯೋನನೇ ಯೇಸುವಿನ ಶಿಲುಬೆಯನ್ನು ಹೊತ್ತಿದ್ದ ವ್ಯಕ್ತಿಯೆಂದು ಕೆಲವರು ಯೋಚಿಸುತ್ತಾರೆ (ಮಾರ್ಕ 15:21).ಕುರೇನ್ಯದ ಲುಕ್ಯನು [58] ಅಂತಿಯೋಕ್ಯದಲ್ಲಿನ ಅನ್ಯ ಜನರಿಗೆ ಸುವಾರ್ತೆಯನ್ನು ಸಾರಿದವರಲ್ಲಿ ಮೊದಲಿಗನು (ಅ.ಕೃತ್ಯ 11:20). ಮೆನಹೇನನು ಹೆರೋದನ ಕುಟುಂಬದವರೊಂದಿಗೆ ಬೆಳೆದವನಾಗಿದ್ದನು. ಈ ಹೆರೋದನು ಅ.ಕೃತ್ಯ. 12 ನೇ ಅದ್ಯಾಯಲ್ಲಿ ಪ್ರಸ್ತಾಪಿಲ್ಪಟ್ಟಿರುವ ಹೆರೋದನಲ್ಲ. ಇಲ್ಲಿ ಸೂಚಿಸಿರುವ ಹೆರೋದನು ಯೇಸುವಿನ ಜನನದ ವೇಳೆ ಯೂದಾಯವನ್ನು ಆಳುತ್ತಿದ್ದ ಅರಸನಾದ ಹೆರೋದನ ಮಗನಾಗಿದ್ದಾನೆ (ಮತ್ತಾಯ 2;1; ಲೂಕ 1:5). ಇಲ್ಲಿ ಪ್ರಸ್ತಾಪಿಸಲಾಗಿರುವ ಹೆರೋದನು ಹೆಚ್ಚುಕಡಿಮೆ ಯೇಸುವಿನ ಜೀವಿತ ಕಾಲವೆಲ್ಲಾ ಆಳಿಕೆಯಲ್ಲಿದ್ದನು, ಅಂದರೆ ಕ್ರಿ.ಪೂ 4 [59] ರಿಂದ ಕ್ರಿ.ಶಕ. 39 ರವರೆಗೆ ಆಳಿದನು. ಈ ಹೆರೋದನೇ ಸ್ನಾನಿಕನಾದ ಯೋಹಾನನ ಶಿರಶ್ಛೇಧ ಮಾಡಿದವನು (ಮಾರ್ಕ 6:14-28). ಯೇಸುವಿನ ಬಂಧನದ ನಂತರ ಆತನನ್ನು ವಿಚಾರಿಸಿ ಹಾಸ್ಯಮಾಡಿದ ಹೆರೋದನು ಈತನೇ (ಲೂಕ 23:6-12). ಅದೇ ಕುಟುಂಬದಲ್ಲಿ ಬೆಳೆದು ಬಂದಿದ್ದ ಮೆನ ಹೇನ ಹಾಗು ಹೆರೋದ ಎಂಬ ಇಬ್ಬರು ವ್ಯಕ್ತಿಗಳಿರುತ್ತಾರೆ. ಅವರು ಎಷ್ಟು ವ್ಯತ್ಯಾಸವಾಗಿದ್ದಾರಲ್ಲವೆ! ಇಲ್ಲಿ ಹೆರೋದನು "ಉಪರಾಜನು" ಎಂದು ಕರೆಯಲ್ಪಟ್ಟಿದ್ದಾನೆ, "ನಾಲ್ಕನೆಯ ಭಾಗದ ರಾಜ" ಎಂದು ಅದರ ಅರ್ಥ. ರೋಮಾಯ ಚಕ್ರವರ್ತಿಗಳು ಸಾಮ್ರಾಜ್ಯದ ಪ್ರತಿಯೊಂದು ಪ್ರಾಂತ್ಯಗಳನ್ನು ನಾಲ್ಕು ಭಾಗಗಳಾಗಿ ವಿಭಾಗಿಸಿ ಪ್ರತಿಯೊಂದು ಭಾಗವನ್ನು ಆಳಲು ಸ್ಥಳೀಯ ರಾಜನೊಬ್ಬನಿಗೆ ವಹಿಸಿ ಕೊಡುತ್ತಿದ್ದರು. ಹೆರೋದನು ಈ ಬಿರುದನ್ನು ಈ ವಿಧದಲ್ಲಿಯೇ ಪಡೆದಿದ್ದನು.

**2-3** ಅಂತಿಯೋಕ್ಯ ಸಭೆಯ ಈ ಐದು ಮಂದಿ ನಾಯಕರು ಕರ್ತನನ್ನು ಆರಾಧಿಸುತ್ತಾ ಇದ್ದಾಗ ಪವಿತ್ರಾತ್ಮನು ಅವರೊಂದಿಗೆ ಮಾತಾಡಿದನು. ಕ್ರೈಸ್ತರು ಕರ್ತನನ್ನು ಹೆಚ್ಚು ಹೆಚ್ಚಾಗಿ ಆರಾಧಿಸಿದಂತೆ ಪವಿತ್ರಾತ್ಮನು ಹೆಚ್ಚು ಹೆಚ್ಚಾಗಿ ಅವರೊಂದಿಗೆ ಮಾತಾಡುವವನು ಹಾಗು ಮಾರ್ಗದರ್ಶಿಸುವನು. ಹೊಸ ಒಡಂಬಡಿಕೆಯಲ್ಲಿ ಇದರ ಅನೇಕ ಉದಾಹರಣೆಗಳು ಇರುತ್ತವೆ. ಇವರು ಉಪವಾಸವನ್ನು ಮಾಡುತ್ತಿದ್ದರೆಂದು ಸಹ ಲೂಕನು ಪ್ರಸ್ತಾಪಿಸುತ್ತಾನೆ. ಉಪವಾಸ ಮಾಡುವಾಗ ಅವರು ಆತನ ಸ್ವರವನ್ನು ಹೆಚ್ಚು ಸ್ಪಷ್ಟವಾಗಿ ಆಲಿಸಿ ಆತನ ಮಾರ್ಗದರ್ಶನವನ್ನು ಪಡೆಯಲು ಹೆಚ್ಚು ಶಕ್ತರಾಗಿರುವರೆಂದು ಅನೇಕ ಕ್ರೈಸ್ತರು ಸಾಕ್ಷಿ ನೀಡುತ್ತಾರೆ.

ಪವಿತ್ರಾತ್ಮನು ಆ ಐದು ಜನರಿಗೆ ಹೇಳಿದ್ದೇನೆಂದರೆ: ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ" ಎಂಬದಾಗಿ. ಅನ್ಯಜನರ ಮದ್ಯದಲ್ಲಿ ಸುವಾರ್ತೆ ಸಾರಬೇಕೆಂಬದಕ್ಕಾಗಿ ಬಾರ್ನಬ ಸೌಲರನ್ನು ದೇವರು ಈಗಾಗಲೇ ನೇಮಕಮಾಡಿದ್ದನು (ಅ.ಕೃತ್ಯ 9:15, ಗಲಾತ್ಯ 2:9). ಈಗ ಅವರು ಇತರ ಉರುಗಳಲ್ಲಿಯೂ ಸಹ ಸಾರಲು ಪ್ರಾರಂಭಿಸಬೇಕಾದ ಸಮಯವು ಬಂದಿತ್ತು. ಆದುದರಿಂದ, ಸಿಮೆಯೋನ, ಲೂಕ್ಯ ಹಾಗು ಮೆನ ಹೇನರು ಬಾರ್ನಬ ಸೌಲರ ಮೇಲೆ ತಮ್ಮ ಕೈಗಳನ್ನಿಟ್ಟು ಅವರ ಕಾರ್ಯಕ್ಕಾಗಿ ಕಳುಹಿಸಿಕೊಟ್ಟರು. ಸಭೆಯ ಸೇವಾಕಾರ್ಯಕರ್ತರಾಗಿಯೂ, ಸಭೆಯ ಅನ್ಯೋನ್ಯತೆ ಹಾಗು ಬೆಂಬಲಗಳಿಗೆ ಗುರುತಾಗಿಯೂ, ಮೂವರು ನಾಯಕರು ಬಾರ್ನಬ ಸೌಲರ ಮೇಲೆ ಹಸ್ತಾರ್ಪಣಮಾಡಿದರು

(ಅ.ಕೃತ್ಯ 6:6 ಮತ್ತು ವ್ಯಾಖ್ಯಾನ ನೋಡಿರಿ). ಈ ರೀತಿಯಾಗಿ ಬಾರ್ನಬ ಸೌಲರು ಅಂತಿಯೋಕ್ಯದ ಸಭೆಯಿಂದ ಕಳುಹಿಸಲ್ಪಟ್ಟರು ಮತ್ತು ಅವರು ತಮ್ಮ ಪ್ರಯಾಣದಿಂದ ಹಿಂದಿರುಗಿದಾಗ ತಾವು ಮಾಡಿದ ಎಲ್ಲಾ ಕಾರ್ಯದ ವರದಿಯನ್ನು ಸಭೆಗೆ ನೀಡಿದರು (ಅ.ಕೃತ್ಯ 14:26-27). ಈ ದಿನದ ವರೆಗೂ ಸಹ ಸೇವಾಕಾರ್ಯಕರ್ತರನ್ನು ಕಳುಹಿಸಿಕೊಡಲು ಇದೇ ಮಾದರಿಯು ಅನುಸರಿಸಲ್ಪಡುತ್ತಿದೆ.

**4** ಸೆಲ್ಯೂಕ್ಯವು ಅಂತಿಯೋಕ್ಯದ ಬಂದರು ಪಟ್ಟಣವಾಗಿತ್ತು. ಬಾರ್ನಬ ಸೌಲರು ಇಲ್ಲಿಂದಲೇ ಮೆಡಿಟರಿನಿಯನ್ ಸಮುದ್ರವನ್ನು ದಾಟಿ ಬಾರ್ನಬನ ಜನ್ಮಸ್ಥಳವಾದ ಕುಪ್ರಕ್ಕೆ ಹೋದರು (ಅ.ಕೃತ್ಯ 4:36).

**5** ಸಲಮೀಸಿ ಕುಪ್ರದ ಪೂರ್ವಕರಾವಳಿಯಲ್ಲಿದ್ದ ಪಟ್ಟಣವಾಗಿತ್ತು ಮತ್ತು ಇಂದಿನ ವರೆಗೂ ಇರುತ್ತದೆ. ಬಾರ್ನಬ ಸೌಲರು ಅಲ್ಲಿಗೆ ತಲುಪಿದ ಮೇಲೆ ವಾಕ್ಯವನ್ನು ಸಾರಲು ಮೊದಲು ಸ್ಥಳೀಯ ಸಭಾಮಂದಿರಗಳಿಗೆ ಹೋದರು. ಅವರು ಎಲ್ಲಿಯೇ ಹೋದರೂ ಮೊದಲು ಆಸ್ಥಳದ ಯೆಹೂದ್ಯಸಭಾಮಂದಿರಕ್ಕೆ ಹೋಗುವದು ಅವರ ಪದ್ಧತಿಯಾಗಿತ್ತು (ವಚನ 14). ಯೋಹಾನ ನೆನಿಸಿಕೊಳ್ಳುವ ಮಾರ್ಕನು ಸಹ ಅವರ ಸಂಗಡ ಇದ್ದನು (ಅ.ಕೃತ್ಯ 12:25).

**6-8** ಪಾಫ್ರೋಸ್ ಕುಪ್ರದ ಪಶ್ಚಿಮ ಕರಾವಳಿಯಲ್ಲಿದ್ದ ಪ್ರಮುಖ ಊರಾಗಿತ್ತು. ಇಲ್ಲಿ ಆ ದ್ವೀಪವನ್ನು ಆಳುವ ಮುಖ್ಯ ಅಧಿಕಾರಿಯಾದ ರೋಮಾಯ ಅಧಿಪತಿಯು ವಾಸವಾಗಿದ್ದನು. ಆ ಸಮಯದಲ್ಲಿ ಸೆರ್ಗ್ಯ ಪೌಲನು ಅಧಿಪತಿಯಾಗಿದ್ದನು, ಆತನ ಹತ್ತಿರ ಬಾರ್ ಯೇಸು ಎಂಬ ಮಂತ್ರವಾದಿಯು ಇದ್ದನು. ಆತನಿಗೆ ಎಲುಮ ಎಂದು ಸಹ ಹೆಸರಿತ್ತು. ಎಲುಮನು ತಕ್ಷಣವೇ ಬಾರ್ನಬ ಸೌಲರನ್ನು ವಿರೋಧಿಸಲು ಪ್ರಾರಂಭಿಸಿದನು. ಅಧಿಪತಿಯು ಅವರ ಬೋಧನೆಯನ್ನು ನಂಬುವದಾದರೆ ತನ್ನ ಮಂತ್ರವಾದಿಯ ಉದ್ಯೋಗವನ್ನು ಕಳೆದುಕೊಳ್ಳುವನೆಂಬದು ಎಲುಮನಿಗೆ ಗೊತ್ತಿತ್ತು.

**9-11** ಇಲ್ಲಿಂದ ಲೂಕನು ಸೌಲನ ರೋಮಾಯ ಹೆಸರಾದ ಪೌಲ ಎಂಬದನ್ನು ಉಪಯೋಗಿಸುತ್ತಾನೆ. ಪೌಲನು ಪವಿತ್ರಾತ್ಮಭರಿತನಾಗಿ ಎಲುಮನನ್ನು ಗದರಿಸಿದನು. ಮತ್ತು ದಮಸ್ಕದ ದಾರಿಯಲ್ಲಿ ಪೌಲನು ಕುರುಡನಾದ ಪ್ರಕಾರವೇ ಪೌಲನ ಮಾತುಗಳಿಂದ ಎಲುಮನು ಸಹ ಕುರುಡನಾದನು. ಇತರರು ಸತ್ಯವನ್ನು ಕಾಣದಂತೆ ಅವರನ್ನು ಕುರುಡರನ್ನಾಗಿಸಿದ್ದ ಈ ಮಂತ್ರವಾದಿಯು ಈಗ ತಾನೇ ಕುರುಡನಾಗಿದ್ದನು. ಮತ್ತು ಅವನು ಕೈಹಿಡಿಯುವವರನ್ನು ಹುಡುಕುತ್ತಾ ತಿರುಗಾಡಿದನು (ವಚನ 11). ಈಗ ಆತನ ಶಕ್ತಿ ಎಲ್ಲಿತ್ತು?

**12** ಅಧಿಪತಿಯು ಪೌಲನ ಬಲ ಹಾಗು ಬೋಧನೆಗೆ ಬೆರಗಾದನು, ಮತ್ತು ಆತನು ಕಂಡು ಕೇಳಿದ ವಿಷಯದ ಫಲಿತವಾಗಿ ಕರ್ತನನ್ನು ನಂಬಿದನು.

## ಪೌಲ ಬಾರ್ನಬರು ಪಿಸಿದ್ಯದ ಅಂತಿಯೋಕ್ಯಕ್ಕೆ ಹೋದದ್ದು (13:13-41)

**13** ಪ್ರಾರಂಭದಲ್ಲಿ ಭಾರ್ನನು ಈ ಚಿಕ್ಕ ಗುಂಪಿನ ನಾಯಕನಾಗಿದ್ದನು, ಆದರೆ ಕಾಲವು ಕಳೆದಂತೆ ಪೌಲನು ಕ್ರಮೇಣವಾಗಿ ನಾಯ ಕತ್ವವನ್ನು ವಹಿಸಿಕೊಂಡಂತೆ ತೋರುತ್ತದೆ. ಬಹುಶ: ಆತನು ಮಂತ್ರವಾದಿಯಾದ ಎಲುಮನನ್ನು ಯಶಸ್ವಿಯಾಗಿ ಎದುರಿಸಿದ್ದು ಇದಕ್ಕೆ ಕಾರಣವಾಗಿರಬಹುದು (ವಚನಗಳು 9-12). ಇಲ್ಲಿಯ ತನಕವು ಲೂಕನು ಯಾವಾಗಲೂ "ಬಾರ್ನಬ ಸೌಲರು" ಎಂದು ಬರೆದಿದ್ದಾನೆ. ಈಗಿನಿಂದ ಆತನು ಅವರನ್ನು "ಪೌಲ ಬಾರ್ನಬರು" (ವಚನ 42), ಅಥವಾ ಈ ವಚನದಲ್ಲಿರುವಂತೆ ಪೌಲನೂ ಅವನ ಜೊತೆಯಲ್ಲಿದ್ದವರೂ ಎಂದು ಸೂಚಿಸುತ್ತಾನೆ. ಬಾರ್ನಬನು ತಾನು ಪಾಲನಿಗಿಂತಲೂ ಕಡಿಮೆ ಪ್ರಾಮುಖ್ಯತೆಯುಳ್ಳವನಾದೆನೆಂದು ಗುಣಗುಟ್ಟಿದನೋ? ಅದರ ಬಗ್ಗೆ ಯಾವ ಪ್ರಸ್ತಾಪವನ್ನು ಬೈಬಲಿನಲ್ಲಿ ನಾವು ಕಾಣುವದಿಲ್ಲ. ಬಾರ್ನಬನು ಕೃಪಾಭರಿತನಾದ ವ್ಯಕ್ತಿಯಾಗಿದ್ದನು. ಒಮ್ಮೆ ಮೊದಲಿಗನಾಗಿದ್ದು ನಂತರ ಎರಡನೆಯನಾಗುವದಕ್ಕೆ ಬಹಳ ಕೃಪೆಯು ಬೇಕಾಗುತ್ತದೆ. ಪೌಲ, ಬಾರ್ನಬ ಹಾಗು ಯೋಹಾನನು (ಅಂದರೆ, ಮಾರ್ಕನು) ಬಳಿಕ ಇಂದಿನ ಟರ್ಕಿಯ ದಕ್ಷಿಣ ಭಾಗದಲ್ಲಿರುವ ಪಂಫ್ರುಲ್ಯ ಸೀಮೆಗೆ ಸೇರಿದ ಪೆರ್ಗೆಗೆ ಸಮುದ್ರ ಪ್ರಯಾಣ ಮಾಡಿದರು. ಅಲ್ಲಿಗೆ ಸೇರಿದ ಬಳಿಕ ಮಾರ್ಕನು ಪೌಲ ಬಾರ್ನಬರನ್ನು ಬಿಟ್ಟು ಯೆರೂಸಲೇಮಿಗೆ ಹಿಂದಿರುಗಿದನು. ಮಾರ್ಕನು ಏಕೆ ಬಿಟ್ಟು ಹೋದನೆಂದಕ್ಕೆ ಲೂಕನು ಯಾವ ಕಾರಣವನ್ನು ನೀಡುವದಿಲ್ಲ, ಆದರೆ ಕಾರಣವು ಏನೇ ಆಗಿದ್ದರೂ ಪೌಲನು ಇದರ ವಿಷಯವಾಗಿ ಅಸಮಾಧಾನಗೊಂಡನು (ಅ.ಕೃತ್ಯ 15:36-38 ಹಾಗು ವ್ಯಾಖ್ಯಾನ ನೋಡಿರಿ).

**14** ಪೌಲ ಬಾರ್ನಬರು ಟರ್ಕಿಯ ದಕ್ಷಿಣಭಾಗದಲ್ಲಿಯೂ ಪಿಸಿದ್ಯ ಸೀಮೆಯಲ್ಲಿಯೂ ಇರುವ ಅಂತಿಯೋಕ್ಯ ಎಂಬ ಇನ್ನೊಂದು ಊರಿಗೆ ಪ್ರಯಾಣಿಸಿದರು. ಈ ಊರು ಪೌಲ ಬಾರ್ನಬರು ಕಳುಹಿಸಲ್ಪಟ್ಟ ಸಿರಿಯಾದ ಅಂತಿಯೋಕ್ಯವಲ್ಲ ಎಂಬದನ್ನು ತೋರಿಸಲು ಲೂಕ ಇದಕ್ಕೆ ಪಿಸಿದ್ಯದ ಅಂತಿಯೋಕ್ಯ ಎಂದು ಸೂಚಿಸುತ್ತಾನೆ. ಪಿಸಿದ್ಯದ ಅಂತಿಯೋಕ್ಯವು ರೋಮಾಯ ವಸಾಹತುವಾಗಿತ್ತು. ರೋಮಾಯ ಸಾಮ್ರಾಜ್ಯದಲ್ಲೆಲ್ಲಾ ಕೆಲವೊಂದು ಪ್ರಮುಖ ಊರುಗಳಿಗೆ ರೋಮಾಯ ವಸಾಹತುಗಳೆಂದು ಗುರುತಿಸಲಾಗಿತ್ತು ಮತ್ತು ಪೌಲನು ಎಡೆಬಿಡದೆ ಇಂತಹ ವಸಾಹತುಗಳಲ್ಲಿ ವಾಕ್ಯವನ್ನು ಸಾರಿದನು (ಅ.ಕೃತ್ಯ 16:12 ನೋಡಿರಿ). ಈ ನಗರ ವಸಾಹತುಗಳು ರಾಜ ಕೀಯ ಹಾಗು ವ್ಯಾಪಾರದ ಪ್ರಾಮುಖ್ಯ ಕೇಂದ್ರಗಳಾಗಿದ್ದವು ಮತ್ತು ಆದುದರಿಂದ ಇವು ಗಳು ಕ್ರಿಸ್ತ ಸುವಾರ್ತೆಯನ್ನು ಇಲ್ಲಿಂದ ಸಾಮ್ರಾಜ್ಯದುದ್ದಕ್ಕೂ ಹರಡುವ ಯೋಜನಾಸ್ಥಳಗಳಾಗಿವೆ ಎಂಬದು ಪೌಲನ ಮನಸ್ಸಿನಲ್ಲಿತ್ತು. ಸಬ್ಬತ್ ದಿನದಲ್ಲಿ (ಶನಿವಾರ) ಯಾವದೆ ಹೊಸಪಟ್ಟಣಗಳಿಗೆ ಸೇರಿದಾಗ ಅವರು ಅನುಸರಿಸುತ್ತಿದ್ದ ಪದ್ಧತಿಯ ಪ್ರಕಾರ ಪೌಲ ಬಾರ್ನಬರು ಪಿಸಿದ್ಯದ ಅಂತಿಯೋಕ್ಯದಲ್ಲಿನ ಸಭಾಮಂದಿರಕ್ಕೆ ಹೋದರು.

**15** ಪೌಲನ ಕಾಲದ ಸಭಾಮಂದಿರದ ಆರಾಧನೆಯಲ್ಲಿ ಧರ್ಮಶಾಸ್ತ್ರದಿಂದ ಒಂದು ಭಾಗವನ್ನು (ಹಳೆ ಒಡಂಬಡಿಕೆಯ ಮೊದಲ ಐದು ಪು ಸ್ತಕಗಳು) ಮತ್ತು ಪ್ರವಾದಿಗಳ ಗ್ರಂಥದಿಂದ ಇನ್ನೊಂದು ವಾಕ್ಯವನ್ನೂ ಗಟ್ಟಿಯಾಗಿ ಓದುವದರ ಮೂಲಕ ಆರಾಧನೆಯನ್ನು ಪ್ರಾರಂಭಿಸುವ ಪದ್ಧತಿಯಿತ್ತು. ಬಳಿಕ ಯಾರಾದರೂ ಒಬ್ಬರೂ ಮೇಲೆದ್ದು ಸಂದೇಶ ನೀಡುತ್ತಿದ್ದರು. ಈ ದಿನದಲ್ಲಿ ಸಭಾಮಂದಿರದ ಅಧಿಕಾರಿಗಳು ಪೌಲ ಬಾರ್ನಬರನ್ನು ಮಾತಾಡಲು ಆಮಂತ್ರಿಸಿದರು. ದೇವರ ವಾಕ್ಯವನ್ನು ಓದುವದು ಹಾಗು ಕೇಳುವದರ ಜೊತೆಗೆ ಯಾರಾದರೂ ಅದರ ಅರ್ಥವನ್ನು ಸ್ಪಷ್ಟವಾಗಿ ವಿವರಿಸುವದು ಅವಶ್ಯಕವಾಗಿತ್ತು. ಪೌಲನು ಯಾವಾಗಲೂ ಇದನ್ನು ಮಾಡಲು ಸಿದ್ಧನೂ ಆಸಕ್ತಿಯುಳ್ಳವನೂ ಆಗಿದ್ದನು.

**16** ಪ್ರತಿಯೊಂದು ಯೆಹೂದ್ಯ ಸಭಾಮಂದಿರದಲ್ಲಿಯೂ ಕೆಲವು ಮಂದಿ ನಿಜ ಯೆಹೂದ್ಯರಿದ್ದರು; ಇಲ್ಲಿ ಪೌಲನು ಅವರನ್ನು ಇಸ್ರಾಯೇಲ್ ಜನರೇ ಎಂದು ಕರೆಯುತ್ತಾನೆ; ಮತ್ತು ಜನ್ಮದಿಂದ ಅನ್ಯಜನರಾಗಿದ್ದರೂ ಯೆಹೂದ್ಯ ಧರ್ಮವನ್ನು ಅನುಸರಿಸುತ್ತಿದ್ದ ಇತರ ಕೆಲವರು ಇರುತ್ತಿದ್ದರು. ಈ ನಂತರದ ಗುಂಪನ್ನು ಪೌಲನು ಯೆಹೂದ್ಯ ಮತಾವಲಂಭಿಗಳೇ ಎಂದು ಕರೆಯುತ್ತಾನೆ. ಪೌಲನು ಹೋದ ಪ್ರತಿಯೊಂದು ಸ್ಥಳದಲ್ಲಿಯೂ ಈ ಅನ್ಯಜನರೇ ಮುಖ್ಯವಾಗಿ ಆತನ ಸಂದೇಶವನ್ನು ಸ್ವೀಕರಿಸಿ ಕ್ರಿಸ್ತನನ್ನು ನಂಬಿದವರಾಗಿತ್ತಾರೆ. ಆದರೆ ನಿಜ ಯೆಹೂದ್ಯರು ಪೌಲನ ಸಂದೇಶವನ್ನು ಸತತವಾಗಿ ತಿರಸ್ಕರಿಸಿ ಆತನಿಗೆ ವಿರುದ್ಧವಾಗಿ ನಿಂತರು.(ವಚನಗಳು 45,50).

**17-19** ಪೌಲನು ತನ್ನ ಸಂದೇಶವನ್ನು ಯೆಹೂದ್ಯ ಚರಿತ್ರೆಯ ಕ್ಲುಪ್ತ ಸಾರಾಂಶವನ್ನು ನೀಡುವದರ ಮೂಲಕ ಪ್ರಾರಂಭಿಸಿದನು. ಆದಿಯಲ್ಲಿ ದೇವರು ತನ್ನ ಕೃಪೆಯ ಮೂಲಕ ಅಬ್ರಹಾಮ, ಇಸಾಕ್, ಮತ್ತು ಯಾಕೋಬರನ್ನು ಆರಿಸಿಕೊಂಡನು. ದೇವರು ಐಗುಪ್ತದೇಶದ ದಾಸತ್ವದೊಳಗಿಂದ ಯೆಹೂದ್ಯರನ್ನು ತನ್ನ ಭುಜಬಲದಿಂದ[60] (ವಚನ 17) ಬರಮಾಡಿದನು. ಆದರೆ ಅಡವಿಯಲ್ಲಿ ಇತ್ತೀಚಿಗಷ್ಟೆ ದೇವರ ಕರುಣೆಯ ಮೂಲಕ ದಾಸತ್ವದೊಳಗಿಂದ ವಿಮೋಚಿಸಲ್ಪಟ್ಟಿದ್ದ ಆ ಯೆಹೂದ್ಯರು ಆತನ ವಿರುದ್ಧವಾಗಿ ಗುಣಗುಟ್ಟಲೂ ದೂರು ಹೇಳಲೂ ಪ್ರಾರಂಭಿಸಿದರು. ಅದಕ್ಕಿಂತಲೂ ಘೋರವಾಗಿ, ಅವರು ವಿಗ್ರಹಗಳನ್ನು ಮಾಡಿ ಕೊಂಡು ಆರಾಧಿಸಿದರು. ಆದುದರಿಂದ, ದೇವರು ಯೆಹೂದ್ಯರ ಸಂತತಿಯನ್ನು ದಂಡಿಸಿದನು. ಆದರೆ ಮುಂದಿನ ಸಂತಲೆಗೆ ದೇವರು ಪು ನಃ ಕರುಣೆಯನ್ನು ತೋರಿಸಿ ಅವರನ್ನು ವಾಗ್ದಾನ ದೇಶವಾದ ಕಾನಾನಿಗೆ – ಅಂದರೆ, ಇಸ್ರಾಯೇಲಿಗೆ – ನಡೆಸಿ ಅದನ್ನು ಅವರಿಗೆ ಸ್ವಾಸ್ತ್ಯವಾಗಿ ಕೊಟ್ಟನು (ಕೀರ್ತನೆಗಳು 78:12-55; ಅ.ಕೃತ್ಯ 7:2-46). ಇಸ್ರಾಯೇಲ್ಯರು ಕಾನಾನ ದೇಶದೊಳಗಿಂದ ತೊಲಗಿಸಿದ ಏಳು ರಾಜ್ಯಗಳು ಧರ್ಮೋಪದೇಶಕಾಂಡ 7:1-2 ರಲ್ಲಿ ಪ್ರಸ್ತಾಪಿಸಲ್ಪಟ್ಟಿವೆ.

**20-21** ಪ್ರಾರಂಭದಲ್ಲಿ ಇಸ್ರಾಯೇಲನ್ನು ಆಳುವವರಿಗೆ ನ್ಯಾಯ ಸ್ಥಾಪಕರು ಎಂದು ಕರೆಯುತ್ತಿದ್ದರು. ಆದರೆ, ಕಾಲ ಕ್ರಮೇಣವಾಗಿ ಇಸ್ರಾಯೇಲ್ಯರು ಇತರ ದೇಶಗಳ ಹಾಗೆಯೇ ತಮಗೂ ಒಬ್ಬ ಅರಸನು ಬೇಕೆಂದು ಕೇಳಿಕೊಂಡರು. ಆದ್ದರಿಂದ ದೇವರು ಸೌಲನೆಂಬ ವ್ಯಕ್ತಿಯನ್ನು ಅವರ ಅರಸನಾಗಿ ನೇಮಿಸಿದನು. ಆದರೆ ಸೌಲನು ದೇವರಿಗೆ ವಿಧೇಯನಾಗಲಿಲ್ಲ. ಆದಕಾರಣ ದೇವರು ಅವನ ವಿಷಯದಲ್ಲಿ ಅಸಮಾಧಾನಗೊಂಡನು (1 ಸಮುವೇಲ 13:13-14; 15:22-26, 28).

**22** ತರುವಾಯ ದೇವರು ತನಗೆ ಒಪ್ಪುವ ದಾವೀದನನ್ನು ಅವರ ಅರಸನನ್ನಾಗಿ ಮಾಡಿದನು (1 ಸಮುವೇಲ 13:14) ದಾವೀದನು ದೇವರಿಗೆ ಒಪ್ಪುವ ಮನುಷ್ಯನಾಗಿದ್ದನು, ಯಾಕೆಂದರೆ ಆತನು ಸೌಲನಂತಿರದೆ ದೇವರಿಗೆ ವಿಧೇಯನಾಗಿದ್ದನು. ದೇವರು ಹೇಳಿದ್ದೇನೆಂದರೆ:"— ಅವನು ನನ್ನ ಇಷ್ಟವನ್ನೆಲ್ಲಾ ನೆರವೇರಿಸುವನು"

ದಾವೀದನಿಂದ ಹುಟ್ಟುವವನನ್ನು ನೆಲೆಗೊಳಿಸಿ ಅವನ ರಾಜ್ಯವನ್ನು ಸ್ಥಿರ ಪಡಿಸುವೆನು. ಅವನ ಸಿಂಹಾಸನವು ನಿರಂತರವಾಗಿ ಇರುವದು ಎಂದು ದೇವರು ಅವನಿಗೆ ವಾಗ್ದಾನ ಮಾಡಿದನು ( 2 ಸಮುವೇಲ 7:12-13; ಕೀರ್ತನೆಗಳು 89:20, 28-29; ಅ..ಕೃತ್ಯ 7:46-47 ಮತ್ತು ವ್ಯಾಖ್ಯಾನ ನೋಡಿರಿ). ಅರಸರ ಅನೇಕ ಸಂತತಿಗಳ ತರುವಾಯ ಮೂಲತ: ದಾವೀದನಿಂದ ಸ್ಥಾಪಿಸಲ್ಪಟ್ಟ ರಾಜ್ಯವು ಇಬ್ಭಾಗಗೊಂಡು ನಾಶವಾಯಿತು. ಯೆಹೂದ್ಯರೆಲ್ಲರೂ ಸೆರೆಯಾಳುಗಳಾಗಿ ಒಯ್ಯಲ್ಪಟ್ಟರು. ದೇವರು ಪ್ರವಾದಿಯಾದ ಯೆಹೆಜ್ಕೇಲನ ಮೂಲಕ ಹೇಳಿದ್ದೇನೆಂದರೆ: "ನಾನು ದೊಬ್ಬಿಬಿಡುವೆನು, ದೊಬ್ಬಿಬಿಡುವೆನು, (ರಾಜ್ಯಕ್ಕೆ) ಬಾಧ್ಯನು ಬರುವದರೊಳಗೆ ಒಂದೂ ಇದ್ದಂತಿರದು; ಅವನಿಗೇ ರಾಜ್ಯವನ್ನು ವಹಿಸುವೆನು". (ಯೆಹೆಜ್ಕೇಲ 21:27).

**23** ದಾವೀದನ ರಾಜ್ಯವು ನ್ಯಾಯವಾಗಿ ಒಬ್ಬ ವ್ಯಕ್ತಿಗೆ ಸೇರತಕ್ಕದ್ದು, ಆ ವ್ಯಕ್ತಿಯು ಕ್ರಿಸ್ತನೇ. ನಿನ್ನಿಂದ ಹುಟ್ಟುವವನನ್ನು ನೆಲೆಗೊಳಿಸಿ ಅವನ ರಾಜ್ಯವನ್ನು ಸ್ಥಿರ ಪಡಿಸುವನೆಂದು ದೇವರು ದಾವೀದನಿಗೆ ಮಾಡಿದವಾಗ್ದಾನವನ್ನು ಕ್ರಿಸ್ತನಲ್ಲಿ ನೆರವೇರಿಸಿದನು. ಪ್ರವಾದಿಯಾದ ಯೆರೆಮೀಯನು ದಾವೀದನ ಮೂಲದಿಂದ ಇಸ್ರಾಯೇಲರನ್ನು ರಕ್ಷಿಸಲು ಬರಲಿರುವ ಸಿದ್ಧರ್ಮಿಯಾದ ಮೊಳಿಕೆಯ ಕುರಿತಾಗಿ ಪ್ರವಾದಿಸಿದನು (ಯೆರೆಮೀಯ 23:5-6). ದೇವರು ಕಳುಹಿಸುತ್ತೇನೆಂದು ವಾಗ್ದಾನ ಮಾಡಿದ ಆ ರಕ್ಷಕನು ಕ್ರಿಸ್ತನೇ. ಯೆಹೂದ್ಯರೆಲ್ಲರೂ ನಿರೀಕ್ಷಿಸುತ್ತಿದ್ದ ಹಾಗು ಕಾಯುತ್ತಿದ್ದ ಆ ಮೆಸ್ಸೀಯನು ಕ್ರಿಸ್ತನೇ ಆಗಿದ್ದನು. ಪಿಸಿದ್ಯದ ಸಭಾಮಂದಿರದಲ್ಲಿ ಸೇರಿಬಂದಿದ್ದ ಯೆಹೂದ್ಯರಿಗೆ ಪೌಲನು ಸಾರಿದ ಸುವಾರ್ತೆಯು ಇದೇ. ಅವರು ಆತನ ಈ ವಾರ್ತೆಯನ್ನು ಆನಂದದಿಂದ ಸ್ವೀಕರಿಸಿಕೊಂಡಿರಬೇಕಿತ್ತು! ಆದರೆ ಅವರು ಸ್ವೀಕರಿಸಲಿಲ್ಲ.

**24-25** ಇಸ್ರಾಯೇಲ್ಯರೆಲ್ಲರನ್ನು (ಯೆಹೂಧ್ಯರನ್ನು) ಪಶ್ಚಾತಾಪಕ್ಕೆ ನಡೆಸಿ ಕ್ರಿಸ್ತನನ್ನು ಸ್ವೀಕರಿಸಿಕೊಳ್ಳಲು ಸಿದ್ಧ ಪಡಿಸುವದಕ್ಕಾಗಿ ಸ್ನಾನಿಕನಾದ ಯೋಹಾನನು ಮೊದಲು ಬಂದನು (ಮಾರ್ಕ 1:2-3; ಅ.ಕೃತ್ಯ 10:37) ಆದರೆ ಯೋಹಾನನು ಸ್ವತಃ ಕ್ರಿಸ್ತನಾಗಿರಲಿಲ್ಲ. ಯೋಹಾನನು ಕ್ರಿಸ್ತನ ಕೆರಗಳನ್ನು ಬಿಚ್ಚುವದಕ್ಕೆ ಸಹ ಯೋಗ್ಯನಾಗಿರಲಿಲ್ಲ (ಮಾರ್ಕ 1:7).

**26** ಪೌಲನು ಯೆಹೂದ್ಯರನ್ನೂ, ಅನ್ಯ ಜನರನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತಾಡಿದನು. ಇಲ್ಲಿ ಆತನು ಯೆಹೂದ್ಯರನ್ನು ಅಬ್ರಹಾಮನ ವಂಶಸ್ಥರೆಂದೂ, ಅನ್ಯಜನರನ್ನು ಯೆಹೂದ್ಯ ಮತಾವಲಂಭಿಗಳೇ (ದೇವರಿಗೆ ಭಯಪಡುವವರೇ) ಎಂದು ಕರೆಯುತ್ತಾನೆ (ವಚನ 16). ಅವನ ಸಂದೇಶವು ಯೆಹೂದ್ಯರು ಹಾಗು ಅನ್ಯ ಜನರಿಬ್ಬರಿಗೂ ಸಮಾನವಾಗಿ ರಕ್ಷಣೆಯ ವಾಕ್ಯವಾಗಿತ್ತು.

**27-28** ಆದರೆ ಕೊನೆಗೂ ರಕ್ಷಕನು ಯೆರೂಸಲೇಮಿನ ಯೆಹೂದ್ಯರ ಬಳಿಗೆ ಬಂದಾಗ ಅವರು ಆತನನ್ನು ಗುರುತಿಸಲಿಲ್ಲ (ಅ.ಕೃತ್ಯ 3:17-18). ಬದಲಾಗಿ, ಅವರು ಆತನನ್ನು ಕೊಂದರು. ಆದರೆ ವಾಸ್ತವದಲ್ಲಿ ಅವರು ಆತನನ್ನು ಕೊಲ್ಲುವದರ ಮುಖಾಂತರ ಅವರು ಪ್ರತಿ ಸಬ್ಬತ್ ದಿನದಂದು ತಮ್ಮ ಸಭಾಮಂದಿರಗಳಲ್ಲಿ ಕೇಳುತ್ತಿದ್ದ ಅವರ ಸ್ವಂತ ಶಾಸ್ತ್ರಗಳಲ್ಲಿಯೇ ಬರೆದಿದ್ದ ಪ್ರವಾದನೆಗಳನ್ನು ನೆರವೇರಿಸಿದವರಾಗಿದ್ದಾರೆ (ಯೇಶಾಯ 53:3-12; ಅ.ಕೃತ್ಯ 2:23; 3:13 ಹಾಗು ವ್ಯಾಖ್ಯಾನಗಳನ್ನು ನೋಡಿರಿ).

**29** ಕ್ರಿಸ್ತನು ಮರಣಿಸಿದ ಬಳಿಕ ಆತನನ್ನು ಮರದ ಕಂಭದಿಂದ ಅಂದರೆ ಶಿಲುಬೆಯಿಂದ ಇಳಿಸಿಸಮಾದಿಯಲ್ಲಿಟ್ಟರು (ಧರ್ಮೋಪದೇಶಕಾಂಡ 21:23; ಅ.ಕೃತ್ಯ 5:30; 10:39). ಕ್ರಿಸ್ತನನ್ನು ಶಿಲುಬೆಯಿಂದ ಕೆಳಗಿಳಿಸಿದವರು ಯಾರಾರೆಂದರೆ ಅರಿಮತಾಯದ ಯೋಸೇಫ ಹಾಗು ನಿಕೊದೇಮ, ಇವರಿಬ್ಬರೂ ಯೆಹೂದ್ಯರಾಗಿದ್ದು. ಯೇಸುವನ್ನು ರಹಸ್ಯವಾಗಿ ನಂಬಿದವರಾಗಿದ್ದರು (ಯೋಹಾನ 19:38-42 ನೋಡಿರಿ). ಅವರು ಬಳಿಕ ಯೇಸುವಿನ ದೇಹವನ್ನು ಸಮಾಧಿಯಲ್ಲಿಟ್ಟರು. ಮತ್ತು ಯೇಸುವಿನ ದೇಹವು ಮೂರು ದಿವಸಗಳ ತನಕ ಸಮಾಧಿಯಲ್ಲಿತ್ತು.

**30-31** ಆದರೆದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು. ಇದು ವಿಜಯದ, ಮರಣದ ಮೇಲೆ ಹೊಂದಿದ ವಿಜಯದ ಸಂದೇಶವಾಗಿದೆ. ಕ್ರಿಸ್ತನ ಪುನರುತ್ಥಾನವಿಲ್ಲದೆ ಸುವಾರ್ತೆಯೇ ಇರುವದಿಲ್ಲ (ಅ.ಕೃತ್ಯ 2:24, 32; 3:15; 4:10; 10:40-41).

**32-33** ಶುಭಸಮಾಚಾರವು ಪೌಲನ ಮಾತುಗಳಲ್ಲಿ ಹೀಗಿದೆ: ದೇವರು ನಮ್ಮ ಪಿತೃಗಳಿಗೆ ಮಾಡಿದ ವಾಗ್ದಾನವನ್ನು ನಮ್ಮ ಮಕ್ಕಳಿಗೋಸ್ಕರ ನೆರವೇರಿಸಿದ್ದಾನೆ" ಮೊದಲು, ದೇವರು ಯೇಸುವನ್ನು ತನ್ನ ಮಗನಾಗಿರುವದಕ್ಕಾಗಿ ಎಬ್ಬಿಸಿದನು. ಪೌಲನು ಇಲ್ಲಿ ಕೀರ್ತನೆಗಳು 2:7 ರಲ್ಲಿನ ವಿಷಯವನ್ನು ಉಲ್ಲೇಖಿಸುತ್ತಾನೆ, ಅಲ್ಲಿ ದೇವರು "ನನಗೆ ನೀನು ಮಗನು" ಎಂದು ಹೇಳಿತ್ತಾನೆ (ಮಾರ್ಕ 1:11 ನೋಡಿರಿ).

**34** ಎರಡನೆಯದಾಗಿ, ದೇವರು ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದನು. ಯೇಸುವನ್ನು ಮೊದಲು ತನ್ನ ಮಗನಾಗಿರಲು ಎಬ್ಬಿಸಿದ ಬಳಿಕ ದೇವರು ಆತನನ್ನು ಕೊಲ್ಲಲ್ಪಡುವದಕ್ಕೆ ಅನುಮತಿಸಿದನು. ತರುವಾಯ ಮೂರು ದಿವಸಗಳ ನಂತರ ದೇವರು ಆತನನ್ನು ಪುನಃ ಎಬ್ಬಿಸಿದನು. ಮತ್ತು ತಾನು ದಾವೀದನಿಗೆ ವಾಗ್ದಾನ ಮಾಡಿದ್ದ ಆಶೀರ್ವಾದವನ್ನು ಯೇಸುವಿಗೆ ನೀಡಿದನು: ಉದಾಹರಣೆಗೆ, ಯೇಸುವಿನ ರಾಜ್ಯಕ್ಕೆ ಅಂತ್ಯವೇ ಇರುವದಿಲ್ಲ. ಪೌಲನು ಆ ವಾಗ್ದಾನವನ್ನು ಯೆಶಾಯ 55:3 ರಿಂದ ಉಲ್ಲೇಖಿಸುತ್ತಾನೆ.

**35** ಅಲ್ಲದೆ ದೇವರು ಯೇಸುವಿಗೆ ನಶಿಸಿ ಹೋಗದ ಆದರೆ ಶಾಶ್ವತವಾಗಿ ಉಳಿಯುವ ದೇಹವನ್ನು ನೀಡಿದನು. ಇಲ್ಲಿ ಪೌಲನು ಕೀರ್ತನೆಗಳು 16:10 ರಲ್ಲಿನ ವಿಷಯವನ್ನು ಉಲ್ಲೇಖಿಸುತ್ತಾನೆ.

**36-37** ಕೊಳೆತು ಹೋಗದ ದೇಹ ವೊಂದರ ವಾಗ್ದಾನವು ದಾವೀದನಿಗೆ ಮಾಡಲ್ಪಟ್ಟಿರಲಿಲ್ಲ; ಅದು ಕ್ರಿಸ್ತನಿಗೆ ಮಾಡಲ್ಪಟ್ಟಿತ್ತು. ಕಾರಣ ದಾವೀದನು ಮರಣಿಸಿದನು ಹಾಗು ಆತನ ದೇಹವು ಕೊಳೆತು ಹೋಯಿತು. ಆದರೆ ಯೇಸು ಸತ್ತು ತಿರಿಗಿ ಎದ್ದು ಬಂದನು; ಅವನು ಕೊಳೆಯುವ ಅವಸ್ಥೆಯನ್ನು ನೋಡಲೇ ಇಲ್ಲ (ಅ.ಕೃತ್ಯ 2:25-32 ಮತ್ತು ವ್ಯಾಖ್ಯಾನ ನೋಡಿರಿ).

**38** ಒಬ್ಬ ವ್ಯಕ್ತಿಯು ರಕ್ಷಣೆಹೊಂದಬೇಕಾದರೆ ಆತನ ಪಾಪಗಳು ಮೊದಲು ಕ್ಷಮಿಸಲ್ಪಡಬೇಕು. ಪಾಪಗಳಕ್ಷಮಾಪಣೆಯಿಲ್ಲದೆ ರಕ್ಷಣೆಯು ಇರಲಾರದು. ಪಾಪಕ್ಷಮಾಪಣೆಯು ರಕ್ಷಕನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ದೊರೆಯುವದಾಗಿದೆ (ಅ.ಕೃತ್ಯ 2:38; 3:19-20; 10:43).

**39** ಮೋಶೆಯ ಧರ್ಮಶಾಸ್ತ್ರವು , ಅಂದರೆ ಯೆಹೂದ್ಯ ಧರ್ಮಶಾಸ್ತ್ರವು ಅಜ್ಞಾನದಲ್ಲಿ ಮಾಡಿದ ಪಾಪಗಳಿಗೆ ಮಾತ್ರವೇ ಕ್ಷಮಾಪಣೆಯನ್ನು ನೀಡುತ್ತಿತ್ತು. ಧರ್ಮಶಾಸ್ತ್ರದ ಪ್ರಕಾರವಾಗಿ ಗೊತ್ತಿದ್ದು ಮಾಡಿದ ಪಾಪಗಳಿಗೆ ಯಾವ ಕ್ಷಮಾಪಣೆಯೂ ಇರಲಿಲ್ಲ (ಅರಣ್ಯಕಾಂಡ 15:22-31). ಆದರೆ ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ನಾವು ನೀತಿವಂತರಾಗಿದ್ದೇವೆ; ಅಂದರೆ, ನಂಬಿಕೆಯ ಮೂಲಕ ನಾವು ಕ್ರಿಸ್ತನ ನೀತಿಯನ್ನು ಪಡೆದುಕೊಂಡು ದೇವರ ದೃಷ್ಟಿಯಲ್ಲಿ ನೀತಿವಂತರಾಗುತ್ತೇವೆ. ಈಗ ನಾವು ತಿಳಿದು ಇಲ್ಲವೆ ತಿಳಿಯದೆ ಮಾಡಿದ ಪಾಪಗಳೆಲ್ಲವೂ ಅಳಿಸಿ ಹಾಕಲ್ಪಡುವವು . ಯೆಹೂದ್ಯ ಧರ್ಮಶಾಸ್ತ್ರವು ಯಾರನ್ನೂ ನೀತಿವಂತರಾಗಿ ಮಾಡಲಿಲ್ಲ. ಯಾರೊಬ್ಬರ ಹೃದಯ ಅಥವಾ ಮನಃಸ್ಸಾಕ್ಷಿಯನ್ನಾಗಲಿ ಶುದ್ಧೀಕರಿಸಲಾಗಲಿಲ್ಲ. ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕವಾಗಿ ಮಾತ್ರವೇ ಒಬ್ಬನು ನೀತಿವಂತನಾಗಬಲ್ಲನು (ಗಲಾತ್ಯ 2:15-16, ಇಬ್ರಿಯ 7:27, 9:13-15 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**40-41** ಪೌಲನು ಇಲ್ಲಿ ಹಬಕ್ಕೂ 1:15 ರಲ್ಲಿರುವ ವಿಷಯವನ್ನು ಉಲ್ಲೇಖಿಸುತ್ತಾನೆ. ಯೆಹೂದ್ಯರು ದೇವರಿಗೆ ವಿಧೇಯರಾಗದಿದ್ದರೆ ದೇವರು ಅವರನ್ನು ನಾಶಪಡಿಸುವನೆಂದು ಪ್ರವಾದಿಯಾದ ಹಬಕ್ಕೂಕನು ಅವರನ್ನು ಎಚ್ಚರಿಸಿದನು. ಹಬಕ್ಕೂಕನ ಮುಖಾಂತರವಾಗಿ ದೇವರು ಯೆಹೂದ್ಯರಿಗೆ ಹೇಳಿದ್ದೇನೆಂದರೆ: ನಿಮ್ಮ ಕಾಲದಲ್ಲಿ ನಾನು ಒಂದು ಕಾರ್ಯವನ್ನು ಮಾಡುವೆನು. ನೀವು ಅದನ್ನು ನಂಬುವದಿಲ್ಲ (ವಚನ 41). ಅಂದರೆ, ದೇವರು ಅವರಿಗೆ ದೊಡ್ಡ ಶಿಕ್ಷೆಯನ್ನು ನೀಡಲಿದ್ದನು. ಆದರೆ ಯೆಹೂದ್ಯರು ಹಬಕ್ಕೂಕನ ಎಚ್ಚರಿಕೆಗೆ ಕಿವಿಗೊಡಲಿಲ್ಲ. ಅದಕ್ಕೆ ಬದಲಾಗಿ ದಿಕ್ಕರಿಸಿದರು. ಮತ್ತು ವೈರಿಗಳು ಅವರನ್ನು

ಸೋಲಿಸಿ ನಾಶ ಮಾಡಿದರು. ಈಗ ಯೇಸು ಕ್ರಿಸ್ತನು ಬಂದಿದ್ದನು. ದೇವರು ತಾನು ಮಾಡುವನೆಂದು ಹೇಳಿದ ಒಂದು ಕಾರ್ಯವು ಅವರಿಗೆ ದಂಡನೆಯನ್ನು ನೀಡುವದು ಮಾತ್ರವೇ ಅಲ್ಲ; ಆ ಒಂದು ಕಾರ್ಯವು ಯೇಸುವನ್ನು ಕಳುಹಿಸುವದು ಸಹ ಆಗಿತ್ತು. ಯೇಸುವು ದೇವರ ಮಹಾ "ಕಾರ್ಯ" ಆಗಿದ್ದನು. ಆದರೆ ಯೆಹೂದ್ಯರು ಯೇಸುವೇ ತಮ್ಮ ರಕ್ಷಕನೆಂಬದನ್ನು ನಂಬಲಿಲ್ಲ. ಅವರು ಆತನನ್ನು ತಿರಸ್ಕಾರ ಮಾಡಿದರು. ಹೀಗಿರುವದರಿಂದ ಪೌಲನು ತನ್ನ ಕಾಲದ ಯೆಹೂದ್ಯರಿಗೆ ನೀಡಿದ ಎಚ್ಚರಿಕೆಯೇನೆಂದರೆ:" ತಿರಸ್ಕಾರಮಾಡದಿರಿ. ಕ್ರಿಸ್ತನನ್ನು ತಿರಸ್ಕರಿಸಬೇಡಿರಿ. ನೀವು ತಿರಸ್ಕರಿಸುವದಾದರೆ ಹಬಕ್ಕೂಕನ ಕಾಲದಲ್ಲಿ ನಿಮ್ಮ ಪಿತೃಗಳ ಮೇಲೆ ಬಂದ ನಾಶನಕ್ಕಿಂತಲೂ ಘೋರವಾದ ನಾಶನವು ನಿಮ್ಮ ಮೇಲೆ ಬರುವದು.

## ಪೌಲ ಬಾರ್ನಬರು ಅನ್ಯ ಜನರಿಗೆ ಬೋಧಿಸಿದ್ದು (13:42-52)

**42-43** ಕೆಲವು ಮಂದಿ ಯೆಹೂದ್ಯರು ಹಾಗು ಯೆಹೂದ್ಯ ಮತಾವಲಂಬಿಗಳಾದ ಅನ್ಯಜನರಲ್ಲಿ ಬಹುಮಂದಿ ಪೌಲನ ಮಾತುಗಳನ್ನು ಸ್ವೀಕರಿಸಿಕೊಂಡರು. ಅವರು ಇನ್ನು ನಮಗೆ ಈ ಮಾತುಗಳನ್ನು ಹೇಳಬೇಕೆಂದು ಕೇಳಿಕೊಂಡರು. ಅವರು ಇದಕ್ಕೆ ಮುಂಚೆ ಸಭಾಮಂದಿರಗಳಲ್ಲಿ ಅನೇಕ ಸಂದೇಶಗಳನ್ನು ಕೇಳಿದ್ದರು, ಆದರೆ ಇಂತಹ ಒಂದು ಸಂದೇಶವನ್ನು ಕೇಳಿರಲೇ ಇಲ್ಲ.

**44-45** ಮುಂದಿನ ಸಬ್ಬತ್ ದಿನದಲ್ಲಿ ಊರಲ್ಲಿನ ಬಹುಪಾಲು ಅನ್ಯ ಜನರೆಲ್ಲರು ಪೌಲನಿಂದ ದೇವರ ವಾಕ್ಯವನ್ನು ಕೇಳುವದಕ್ಕೆ ಕೂಡಿಬಂದರು. ಇತರ ಫಲಿತವಾಗಿ ಯೆಹೂದ್ಯನಾಯಕರು ಪೌಲನ ಪ್ರಸಿದ್ಧಿಗೆ ಹೊಟ್ಟೆಕಿಚ್ಚು ಪಡುವವರಾದರು. ಅಷ್ಟು ಮಾತ್ರವಲ್ಲದೆ, ಯಾಹೂದ್ಯ ಧರ್ಮವನ್ನು ಹಿಂಬಾಲಿಸುತ್ತಿದ್ದ ಅನ್ಯ ಜನರು ವಿಮುಖರಾಗಿ ಪೌಲನನ್ನು ಹಿಂಬಾಲಿಸಲು ಪ್ರಾರಂಭಿಸುವರೇನೋ ಎಂದು ಅವರು ಹೆದರಿದರು. ಆದುದರಿಂದ ಯೆಹೂದ್ಯರು ಪೌಲನನ್ನು ವಿರೋಧಿಸಲಾರಂಭಿಸಿದರು.

**46** ಪೌಲ ಬಾರ್ನಬರು ಯೆಹೂದ್ಯರಿಗೆ ಹೇಳಿದ್ದೇನೆಂದರೆ, " ದೇವರ ವಾಕ್ಯವನ್ನು ಮೊದಲು ನಿಮಗೇ ಹೇಳುವದು ಅವಶ್ಯವಾಗಿತ್ತು". ಯೆಹೂದ್ಯರು ಕ್ರಿಸ್ತನನ್ನು ಸ್ವೀಕರಿಸಬೇಕಾಗಿತ್ತು. ಅವರು ಹಾಗೆ ಮಾಡಿದ್ದಾಗಿದ್ದರು ನಿತ್ಯ ಜೀವವನ್ನು ಪಡೆದಿರುತ್ತಿದ್ದರು. ಅವರು ಅನ್ಯಜನಾಂಗಗಳಿಗೆ ಬೆಳಕಾಗಿರುತ್ತಿದ್ದರು (ವಚನ 47). ಇಸ್ರಾಯೇಲ್ಯರು ಬೆಳಕಾಗಿರಬೇಕೆಂಬುದೇ ದೇವರ ಬಯಕೆಯಾಗಿತ್ತು. ಆದರೆ ಯೆಹೂದ್ಯರು ದೇವರ ವಾಕ್ಯವನ್ನು – ಅಂದರೆ, ದೇವರ ಮಗನಾದ ಯೇಸುವನ್ನು ತಿರಸ್ಕರಿಸಿದರು. ಪೌಲನು ಯೆಹೂದ್ಯರಿಗೆ "ಆದರೆ ನೀವು ದೇವರ ವಾಕ್ಯವನ್ನು ತಳ್ಳಿಬಿಟ್ಟದ್ದರಿಂದ ಈಗ ನಾವು ಅನ್ಯಜನರಿಗೆ ಬೋಧಿಸಬೇಕಾಗಿದೆ" ಎಂದನು.

**47** ಬಳಿಕ ಪೌಲನು ಯೆಶಾಯ 40:6 ರಿಂದ ಉಲ್ಲೇಖಿಸಿದನು. ಇಸ್ರಾಯೇಲ್ಯರು ಅನ್ಯ ಜನಾಂಗಗಳಿಗೆ ಬೇಕಾಗಿರಬೇಕೆಂಬದು ದೇವರ ಚಿತ್ತವಾಗಿತ್ತು. ಯೆಹೂದ್ಯ ಮುಖಾಂತರ ಲೋಕದ ಕಟ್ಟಕಡೆಯವರೆಗೆ, ಅಂದರೆ ಅನ್ಯಜನರಿಗೆ ರಕ್ಷಣೆಯನ್ನುಂಟು ಮಾಡಬೇಕೆಂಬುದು ದೇವರ ಚಿತ್ತವೇ ಆಗಿತ್ತು. ಆದುದರಿಂದ ಪಿಸಿದ್ಯದ ಅಂತಿಯೋಕ್ಯದಲ್ಲಿನ ಯೆಹೂದ್ಯರು ಏನೇ ಅಂದುಕೊಂಡರೂ ಪೌಲ ಬಾರ್ನಬರಂತೂ ಕ್ರಿಸ್ತನಲ್ಲಿನ ರಕ್ಷಣೆಯ ಸುವಾರ್ತೆಯನ್ನು ಅನ್ಯಜನರಿಗೂ, ಅಲ್ಲದೆ ಲೋಕದ ಕಟ್ಟಕಡೆಯವರೆಗೂ ಸಾರುವದಕ್ಕೆ ನಿಷ್ಕರ್ಷೆಮಾಡಿಕೊಂಡಿದ್ದರು.

**48** ಯೆಹೂದ್ಯರು ಪೌಲನ ಸಂದೇಶವನ್ನು ಇಷ್ಟಪಡಲಿಲ್ಲ, ಆದರೆ ಅನ್ಯ ಜನರು ಅದರಲ್ಲಿ ಉಲ್ಲಾಸಪಟ್ಟರು, ಮತ್ತು ನಿತ್ಯ ಜೀವಕ್ಕೆ ನೇಮಿಸಲ್ಪಟ್ಟವರೆಲ್ಲರು ನಂಬಿದರು. ಮನುಷ್ಯರು ನಿತ್ಯ ಜೀವಕ್ಕೆ ನೇಮಿಸಲ್ಪಟ್ಟಿದ್ದಾರೆ. ದೇವರು ಮೊದಲು ನಮ್ಮನ್ನು ಆರಿಸಿಕೊಳ್ಳುತ್ತಾನೆ. ಆತನು ನಮ್ಮನ್ನು ಕರೆಯುತ್ತಾನೆ. ಆತನು ನಮ್ಮನ್ನು ಸೆಳೆಯುತ್ತಾನೆ (ಯೋಹಾನ 6:44; ರೋಮ 9:16,18; ಎಫೆಸ 1:4-5 ನೋಡಿರಿ). ನಾವು ದೇವರ ಕೃಪೆಯ ಮೂಲಕ ಕ್ರಿಸ್ತನ ಬಳಿಗೆ ಬರುತ್ತೇವೆ. ಆದರೆ ನೆನಪಿರಲಿ, ನಾವು ದೇವರ ಕೃಪೆಯನ್ನು[61] ನಿರಾಕರಿಸುವ ಸ್ವಾತಂತ್ರವನ್ನು ಸಹ ಹೊಂದಿರುತ್ತೇವೆ.

**49-50** ದೇವರು ಮಾಹಾ ಕಾರ್ಯವನ್ನು ಮಾಡುವಾಗಲೆಲ್ಲಾ ಅದನ್ನು ವಿರೋಧಿಸಲು ಸೈತಾನನು ಅಲ್ಲಿ ಇದ್ದೇ ಇರುತ್ತಾನೆ. ದೇವರು ಸೇವೆಗಾಗಿ ನಮಗೆ ಬಾಗಲ್ಲೊಂದನ್ನು ತೆರೆಯುವಾಗ ಅಲ್ಲಿ ನಾವು ವಿರೋಧವನ್ನು ಕಾಣುವೆವು (1 ಕೊರಿಂಥ 16:8-9 ನೋಡಿರಿ). ಮತ್ತು ದುಃಖಕರ ವೇನೆಂದರೆ, ಹಲವಾರು ವೇಳೆ ಸೈತಾನನು ತನ್ನ ಕೆಲಸವನ್ನು ಮಾಡಲು ದೇವ ಭಕ್ತೆಯರಾದ ಕುಲೀನ ಸ್ತ್ರೀಯರನ್ನೂ ಊರಿನ ಪ್ರಮುಖರನ್ನು ಉಪಯೋಗಿಸುತ್ತಾನೆ. ಆದರೆ ವಿರೋಧತೆಯ ಹೊರತಾಗಿಯೂ ಕರ್ತನ ವಾಕ್ಯವು ಆ ಸೀಮೆಯ ಎಲ್ಲಾ ಕಡೆಗಳಲ್ಲಿ ಹಬ್ಬುತ್ತಾ ಬಂತು (ವಚನ 49) ನೂತನ ವಿಶ್ವಾಸಿಗಳು ತಮ್ಮ ನೆರೆಯವರಿಗೆ ಕ್ರಿಸ್ತನಲ್ಲಿ ದೊರಕುವ ರಕ್ಷಣೆಯ ಸುವಾರ್ತೆಯನ್ನು ತಿಳಿಸಿದರು. ಅವರು ತಮ್ಮ ನೂತನ ನಂಬಿಕೆಯನ್ನು ಬಚ್ಚಿಟ್ಟುಕೊಳ್ಳಲಿಲ್ಲ. ಅದೇ ರೀತಿಯಲ್ಲಿ ಸ್ವತಃ ನಾವು ನಿಜವಾಗಿಯೂ ಕ್ರಿಸ್ತನಲ್ಲಿ ನಂಬಿಕೆಯಿಟ್ಟಿರುವದಾದರೆ ನಾವು ಹೊಂದಿಕೊಂಡಿರುವ ರಕ್ಷಣೆಯನ್ನು ಇತರರೊಂದಿಗೆ ಹಂಚಿಕೊಳ್ಳಲು ಬಯಸುವವರಾಗಿರುತ್ತೇವೆ. ನಾವು ಹಾಗೆಯೇ ಮಾಡೋಣ.

**51-52** ಪೌಲ ಬಾರ್ನಬರು ತಮ್ಮ ಕಾಲಿಗೆ ಹತ್ತಿದ್ದ ಧೂಳನ್ನು ಅವರ ಮೇಲೆ (ವಿರೋಧವಾಗಿ) ಝಾಡಿಸಿಬಿಟ್ಟರು; ಅಂದರೆ, ಅವರು ಯೆಹೂದಿ ವಿರೋಧಿಗಳಿಗೆ ಸಂಪೂರ್ಣವಾಗಿ ತಮ್ಮ ಬೆನ್ನುಗಳನ್ನು ತಿರುಗಿಸಿದರು (ಮಾರ್ಕ 6:11 ನೋಡಿರಿ). ಕ್ರಿಸ್ತನ ಸೇವಕರನ್ನು ತಿರಸ್ಕರಿಸುವವರು ಸ್ವತಃ ತಾವೇ ತಿರಸ್ಕರಿಸಲ್ಪಡುವರು. ಪಿಸಿದ್ಯದ ಅಂತಿಯೋಕ್ಯದ ಯೆಹೂದ್ಯರು ರಕ್ಷಣೆಯನ್ನು ಸ್ವೀಕರಿಸುವ ತಮ್ಮ ಅವಕಾಶವನ್ನು ಕಳೆದು ಕೊಂಡಿದ್ದರು. ಈಗ ಪೌಲ ಬಾರ್ನಬರು ಮುಂದಿನ ಊರಾದ ಇಕೋನ್ಯಕ್ಕೆ ಹೋಗಬೇಕಾದ ಸಮಯವಾಗಿತ್ತು (ಅ.ಕೃತ್ಯ 14:1). ಆದರೆ ಅನ್ಯ ಜನರಿಂದ ಶಿಷ್ಯರಾದವರು ಸಂತೋಷ ಪೂರ್ಣರೂ ಪವಿತ್ರಾತ್ಮ ಭರಿತರೂ ಆದರು (ವಚನ 52).

## ಅಧ್ಯಾಯ - 14

### ಪೌಲ ಬಾರ್ನಬರು ಇಕೋನ್ಯಕ್ಕೆ ಹೋದದ್ದು (14:1-7).

**1-2** ಇಕೋನ್ಯವು ಪಿಸಿದ್ಯದ ಅಂತಿಯೋಕ್ಯದಿಂದ ಪಶ್ಚಿಮಕ್ಕೆ ಹದಿನೆಂಟು ಮೈಲುಗಳಷ್ಟು ದೂರದಲ್ಲಿತ್ತು. ಪಿಸಿದ್ಯದ ಅಂತಿಯೋಕ್ಯ ದಲ್ಲಿ ನಡೆದ ಸಂಗತಿಯೇ ಇಕೋನ್ಯದಲ್ಲಿ ಸಹ ನಡೆಯಿತು. ಮೊದಲು, ಪೌಲ ಬಾರ್ನಬರು ಪವಿತ್ರಾತ್ಮನ ಬಲದ ಮೂಲಕವಾಗಿ ಸುವಾರ್ತೆಯನ್ನು ಪ್ರಬಲವಾಗಿ ಸಾರಿದರೆಂದರೆ ಯೆಹೂದ್ಯರಲ್ಲಿಯೂ, ಅನ್ಯ ಜನರಲ್ಲಿಯೂ ಬಹು ಮಂದಿ ಯೇಸುವನ್ನು ನಂಬುವವರಾದರು. ಆದರೆ ನಂಬದೆ ಹೋದ ಇಕೋನ್ಯದ ಯೆಹೂದ್ಯರು ಸಹೋದರರಿಗೆ ಪೌಲ ಬಾರ್ನಬರಿಗೆ ವಿರುದ್ಧವಾಗಿ ಜನರ ಮನಸ್ಸನ್ನು ರೇಗಿಸಿಕೆಡಿಸಲಾರಂಭಿಸಿದರು.

**3-4** ವಿರೋಧದ ಹೊರತಾಗಿಯೂ ಪೌಲ ಬಾರ್ನಬರು ಕರ್ತನಿಗಾಗಿ ಧೈರ್ಯದಿಂದ ಮಾತಾಡುತ್ತಿದ್ದರು (ವಚನ 3). ಅವರು ಬಹು ಕಾಲ ಅಲ್ಲಿದ್ದು ಜನರಿಗೆ ಬೋಧನೆಯನ್ನು ಉಪದೇಶವನ್ನು ಮಾಡಿದರು; ಮತ್ತು ಕರ್ತನು ಅವರ ಮೂಲಕ ಅದ್ಭುತಗಳನ್ನು ಮಾಡಿದನು,ಅವು ಗಳು ಅವರ ಸಂದೇಶವನ್ನು ದೃಢಪಡಿಸಿದವು . ಕ್ರಮೇಣವಾಗಿ ಊರೆಲ್ಲಾ ಎರಡು ಗುಂಪು ಗಳಾಗಿ ಇಬ್ಭಾಗವಾಯಿತು: ಅಪೊಸ್ತಲರ ಪಕ್ಷದವರು ಅಂದರೆ ಅವರ ವಾಕ್ಯಗಳನ್ನು ಕೇಳಿದವರು ಹಾಗು ಕೇಳದವರು. 4 ಮತ್ತು 14 ವಚನಗಳಲ್ಲಿ ಪೌಲ ಬಾರ್ನಬರಿಬ್ಬರೂ ಒಟ್ಟಾಗಿ ಅಪೊಸ್ತಲರೆಂದು ಕರೆಯಲ್ಪಟ್ಟಿದ್ದಾರೆ. ಹೊಸ ಒಡಂಬಡಿಕೆಯ ಪ್ರಕಾರವಾಗಿ ಸುವಾರ್ತೆಯನ್ನು ಸಾರಲು ಮತ್ತು ಸಭೆಗಳನ್ನು ಸ್ಥಾಪಿಸುವದಕ್ಕಾಗಿ ವಿಶೇಷವಾದ ನೇಮಕಾತಿಯನ್ನು ಹೊಂದಿರುವವರನ್ನು ಅಪೊಸ್ತಲರೆಂದು ಕರೆಯಲ್ಪಡುತ್ತಾರೆ (1 ಕೊರಿಂಥ 15:5,7; 1 ಥೆಸಲೋನಿಕದವರಿಗೆ 2:6 ನೋಡಿರಿ).

**5-7** ಅಂತಿಮವಾಗಿ ಪೌಲ ಬಾರ್ನಬರ ವಿರೋಧಿಗಳು ಅವರಿಗೆ ಕಲ್ಲೆಸೆಯ ಬೇಕೆಂಬ ಹೊಂಚನ್ನು ಮಾಡಿದರು. ಆದರೆ ಅಪೊಸ್ತಲರಿಗೆ ಆ ಹೊಂಚಿನ ಬಗ್ಗೆ ತಿಳಿದು ಬಂದು ಅವರು ಹತ್ತಿರದ ಲುಸ್ತ್ರ ಮತ್ತು ದೆರ್ಬೆ62 ಊರುಗಳಿಗೆ ತಪ್ಪಿಸಿಕೊಂಡು ಹೋಗಲು ಶಕ್ತರಾದರು (ಮತ್ತಾಯ 10:23 ನೋಡಿರಿ). ಆದರೆ ಅವರು ಅಲ್ಲಿ ಸೇರಿದ ನಂತರ ಬಚ್ಚಿಟ್ಟುಕೊಳ್ಳದೆ ಸುವಾರ್ತೆಯನ್ನು ಸಾರುತ್ತಲಿದ್ದರು. ಇದು ವರೆಗೂ ಪ್ರಸ್ತಾಪಿಸಲಾಗಿರುವ ಊರುಗಳೆಲ್ಲಾ – ಪಿಸಿದ್ಯದ ಅಂತಿಯೋಕ್ಯ, ಇಕೋನ್ಯ, ಲುಸ್ತ್ರ ಹಾಗು ದೆರ್ಬೆ – ಇಂದಿನ ಟರ್ಕಿಯ ಕೇಂದ್ರ ಭಾಗವಾದ ರೋಮಾಯ ಸಾಮ್ರಾಜ್ಯದ ಗಲಾತ್ಯ ಪ್ರಾಂತ್ಯದಲ್ಲಿ ಇದ್ದವು . ಪೌಲನು ಗಲಾತ್ಯದವರಿಗೆ ಬರೆದ ಹೊಸ ಒಡಂಬಡಿಕೆಯ ಪತ್ರಿಕೆಯು ಈ ನೂತನ ಊರುಗಳಲ್ಲಿದ್ದ ಸಭೆಗಳಿಗೆ ಬರೆಯಲ್ಪಟ್ಟಿರುತ್ತದೆ, ಸಭೆಗಳನ್ನು ಪೌಲ ಬಾರ್ನಬರು ತಮ್ಮ ಪ್ರಥಮ ಸುವಾರ್ತಾ ಪ್ರಯಾಣದಲ್ಲಿ ಸ್ಥಾಪಿಸಿದ್ದರು.

### ಲುಸ್ತ್ರ ಮತ್ತು ದೆರ್ಬೆ (14:8-20)

**8-10** ದೇವಾಲಯದ ಬಾಗಿಲು ಬಳಿಯಲ್ಲಿ ಪೇತ್ರನು ಕುಂಟ ಬಿಕ್ಷುಕನನ್ನು ಸ್ವಸ್ಥಪಡಿಸಿದಂತೆಯೇ (ಅ.ಕೃತ್ಯ 3:1-10), ಪೌಲ ಬಾರ್ನಬರು ಸಹ ಲುಸ್ತ್ರದಲ್ಲಿ ಹುಟ್ಟು ಕುಂಟನೊಬ್ಬನನ್ನು ಸ್ವಸ್ಥಪಡಿಸಿದರು. ಆಮನುಷ್ಯನಲ್ಲಿ ವಾಸಿಯಾಗುವದಕ್ಕೆ ಬೇಕಾದ ನಂಬಿಕೆಯು ಉಂಟೆಂಬದನ್ನ ಪೌಲನು ನೋಡಿದನು (ವಚನ 9). ಹೊಸ ಒಡಂಬಡಿಕೆಯಲ್ಲಿ ಸಾಮಾನ್ಯವಾಗಿ ಒಬ್ಬನು ಸ್ವಸ್ಥನಾಗಲು ನಂಬಿಕೆಯನ್ನು ಹೊಂದಿರಬೇಕಾಗಿತ್ತು. ನಿಜ ನಾವು ನಂಬಿಕೆ ಹೊಂದದೆ ಇದ್ದರೂ ಸಹ ದೇವರು ಸ್ವಸ್ಥಮಾಡಲು ಶಕ್ತನು; ಆದರೆ ಸಾಮಾನ್ಯವಾಗಿ ನಾವು ನಂಬಿಕೆ ಹಾಗು ಆತನನ್ನೇ ಆಧಾರಮಾಡಿಕೊಳ್ಳುವ ಮನಸ್ಸನ್ನು ಹೊಂದಿ ಆತನ ಕಡೆಗೆ ತಿರುಗಿಕೊಳ್ಳಬೇಕೆಂದು ಆತನು ಕಾಯುತ್ತಾನೆ.

**11** ಕುಂಟ ಮನುಷ್ಯನು ಸ್ವಸ್ಥನಾಗುವದನ್ನು ನೋಡಿದ ಜನಸಮೂಹವು ಪೌಲ ಬಾರ್ನಬರನ್ನು ದೇವತೆಗಳೆಂದು ಕರೆಯಲಾರಂಭಿಸಿದರು. ಆದರೆ ಅವರು ಇದನ್ನು ತಮ್ಮ ಭಾಷೆಯಲ್ಲಿ ಹೇಳಿಕೊಂಡದ್ದರಿಂದ ಅವರು ಏನು ಹೇಳುತ್ತಿದ್ದಾರೆಂಬದನ್ನು ಪೌಲ ಬಾರ್ನಬರು ಪ್ರಾರಂಭದಲ್ಲಿ ಅರ್ಥಮಾಡಿಕೊಳ್ಳಲಾಗಲಿಲ್ಲ.

**12** ಗ್ರೀಕರ ಧರ್ಮದಲ್ಲಿ ಅನೇಕ ದೇವರುಗಳಿದ್ದವು , ಅವು ಗಳಲ್ಲಿ ದ್ಯೌಸ್ ಪ್ರಮುಖವಾಗಿತ್ತು ಹೆರ್ಮೆ ಎಂಬ ಇನ್ನೊಂದು ದೇವರು ದೇವತೆಗಳ ವಕ್ತಾರವಾಗಿತ್ತು. ಹೀಗಿರುವದರಿಂದ, ಪೌಲನು ಬಾರ್ನಬ ನಿಗಿಂತಲೂ ಹೆಚ್ಚಾಗಿ ಮಾತಾಡುತ್ತಿದ್ದಾನೆಂಬದಕ್ಕಾಗಿ ಜನರು ಆತನನ್ನು "ಹೆರ್ಮೆ" ದೇವರೆಂದು ಕರೆದರು.

**13** ಪೌಲ ಬಾರ್ನಬರನ್ನು ದೇವರುಗಳೆಂದು ತಿಳಿದ ಜನರು ಅವರಿಗೆ ಯಜ್ಞಗಳನ್ನು ಅರ್ಪಿಸಲು ಪ್ರಯತ್ನಿಸಿದರು. ಮನುಷ್ಯರು ಎಂತಹ ತಪ್ಪು ವಿಚಾರಗಳನ್ನು ಹೊಂದಿದ್ದಾರಲ್ಲವೇ! ನಿಜ ದೇವರಾದ ಕ್ರಿಸ್ತನು ಭೂಲೋಕಕ್ಕೆ ಬಂದಾಗ ಮನುಷ್ಯರು ಆತನಿಗೆ ಯಜ್ಞವಾಗಿ ಮಾರ್ಪಡಿಸಿ ಸಾಯಿಸಿದರು! ಈಗ ಲುಸ್ತ್ರದ ಜನರು ದೇವರಿಗೆ ಮಾತ್ರವೇ ಅರ್ಪಿಸಲ್ಪಡಬೇಕಾಗಿದ್ದ ಯಜ್ಞಗಳನ್ನು ಸಾಮಾನ್ಯ ಮನುಷ್ಯರಿಗೆ ಅರ್ಪಿಸಲು ಪ್ರಯತ್ನಿಸುತ್ತಿದ್ದಾರೆ.

**14** ಕೊನೆಗೆ, ಪೌಲ ಬಾರ್ನಬರು ತಮಗೆ ಆ ಜನರು ಏನು ಮಾಡಲಿಕ್ಕಿದ್ದಾರೆಂಬದನ್ನು ಗ್ರಹಿಸಿಕೊಂಡರು. ಅಪೊಸ್ತಲರು ಭಯ ಹಿಡಿದವರಾಗಿ ತಮ್ಮ ವಸ್ತ್ರಗಳನ್ನು ಹರಕೊಂಡರು [63]. ಅವರು ತಮಗಾಗಿ ಯಾವದೇ ಗೌರವ ಅಥವಾ ಸ್ತುತಿಯನ್ನು ಹೊಂದಿಕೊಳ್ಳಲು ನಿರಾಕರಿಸಿದರು. ಬದಲಾಗಿ, ಅವರು ಎಲ್ಲಾ ಘನತೆಯನ್ನು ಕ್ರಿಸ್ತನಿಗೆ ನೀಡಲು ತವಕ ಪಟ್ಟರು. ಹೆರೋದನಿಗೆ ಆದ ಗತಿಯನ್ನು ಅವರು ಮರೆತಿರಲಿಲ್ಲ! (ಅ.ಕೃತ್ಯ 12:21-23 ನೋಡಿರಿ).

15 "ನಾವು ದೇವರುಗಳಲ್ಲ! ನಾವು ನಿಮಗೆ ರಕ್ಷಣೆಯ ಸುವಾರ್ತೆಯನ್ನು ಸಾರಲು ಜೀವಸ್ವರೂಪನಾದ ದೇವರಿಂದ ಕಳುಹಿಸಲ್ಪಟ್ಟಿರುವ ಸಾಮಾನ್ಯ ಮನುಷ್ಯರಾಗಿದ್ದೇವೆ. ನೀವು ದ್ಯೌಸ್ ಹಾಗು ಹೆರ್ಮೆಗಳಂತಹ ವ್ಯರ್ಥ ದೇವರುಗಳ ಕಡೆಯಿಂದ ತಿರಿಗಿಕೊಳ್ಳಬೇಕೆಂದು ತಿಳಿಸಲು ನಾವು ಬಂದಿರುತ್ತೇವೆ. ಒಬ್ಬನೇ ಒಬ್ಬ ದೇವರಿರುತ್ತಾನೆ, ಆತನೇ ಭೂಮ್ಯಾಕಾಶಗಳನ್ನೂ ಸಮುದ್ರವನ್ನೂ ಅವು ಗಳಲ್ಲಿರುವ ಸಮಸ್ತವನ್ನೂ ನಿರ್ಮಾಣಮಾಡಿರುತ್ತಾನೆ" ಎಂದು ಪೌಲನು ಕೂಗಿ ಹೇಳಿದನು (ವಿಮೋಚನ ಕಾಂಡ 20:11; ಕೀರ್ತನೆಗಳು 146:6).

ಪೌಲನು ತನ್ನ ಸಂದೇಶದಲ್ಲಿ ಅನ್ಯ ಜನಾಂಗದ ಶ್ರೋತೃಗಳಿರುವಾಗ ಕೆಲವೊಂದು ಸಂಗತಿಗಳನ್ನು ಒತ್ತಿ ಹೇಳಿದನು. ಮತ್ತು ಯೆಹೂದ್ಯ ಶ್ರೋತೃಗಳಿರುವಾಗ ಇನ್ನಿತರ ಸಂಗತಿಗಳನ್ನು ಒತ್ತಿ ಹೇಳಿದನು. ಎರಡು ಗುಂಪು ಗಳಿಗೆ ಆತನು ಬೇರೆ ಬೇರೆ ಮಾರ್ಗಗಳನ್ನು ಅನುಸರಿಸುತ್ತಿದ್ದನು. ಕಾರಣ ವೇನೆಂದರೆ ಯೆಹೂದ್ಯರು ಆಗಾಗಲೇ ಒಬ್ಬನೇ ಸತ್ಯ ದೇವರನ್ನು ತಿಳಿದವರಾಗಿದ್ದರು. ಆದರೆ ಅನ್ಯ ಜನರು ತಿಳಿದುಕೊಂಡಿರಲಿಲ್ಲ. ಅವರು ದ್ಯೌಸ್ ಹಾಗು ಹೆರ್ಮೆಗಳಂತಹ ಅನೇಕ ದೇವರುಗಳನ್ನು ಪೂಜಿಸುತ್ತಿದ್ದರು. ಆದುದರಿಂದ, ಪೌಲನು ಅಲ್ಲ್ಯ ಜನಾಂಗಗಳಿಗೆ ಹೇಳಬೇಕಾಗಿದ್ದ ಪ್ರಥಮ ಸಂಗತಿಯೇನೆಂದರೆ ಅವರು ಒಬ್ಬನೇ ಸತ್ಯ ದೇವರನ್ನು ಆರಾಧಿಸಬೇಕು. ನಿಜ ದೇವರು ಜೀವಸ್ವರೂಪನಾದ ದೇವರು ಹೊರತು ಒಂದು ನಿರ್ಜೀವ ವಿಗ್ರಹವಲ್ಲ.

16 ಇಲ್ಲಿಯ ತನಕವು ದೇವರು ಅನ್ಯ ಜನರೆಡೆಗೆ ಬಹುತಾಳ್ಮೆಯನ್ನು ತೋರಿಸಿದ್ದಾನೆಂದು ಪೌಲನು ಲುಸ್ತ್ರದ ಅನ್ಯ ಜನರಿಗೆ ಹೇಳುತ್ತಾನೆ. ಪೌಲನು ಹೇಳುವದೇನೆಂದರೆ: "ಗತಿಸಿಹೋದ ಕಾಲದಲ್ಲಿ ಆತನು (ದೇವರು) ಎಲ್ಲಾ ಜನಾಂಗಗಳನ್ನು ತಮ್ಮ ತಮ್ಮ ಮನಸ್ಸಿಗೆ ತೋಚಿದ ಮಾರ್ಗದಲ್ಲಿ ನಡೆಯುವದಕ್ಕೆ ಬಿಟ್ಟನು"

17 ಪೌಲನು ಇನ್ನೂ ಹೇಳಿದ್ದೇನೆಂದರೆ "ಆದರೆ, ದೇವರು ಅನ್ಯಜನರಿಗೆ ತನ್ನನ್ನು ಪೂರ್ಣವಾಗಿ ಪ್ರಕಟಿಸಿಕೊಂಡಿಲ್ಲವಾದರೂ ಆತನು ತನ್ನ ವಿಷಯದಲ್ಲಿ ಸಾಕ್ಷಿಕೊಡದೆ ಇರಲಿಲ್ಲ". ಅನ್ಯ ಜನರು ದೇವರ ಬಗ್ಗೆ ತಿಳಿದು ಕೊಳ್ಳಲು ಅವರ ಬಳಿಯಲ್ಲಿ ಯೆಹೂದ್ಯ ಧರ್ಮಶಾಸ್ತ್ರ ಹಾಗು ಪ್ರವಾದಿಗಳ ಗ್ರಂಥವು ಹಳೆ ಒಡಂಬಡಿಕೆ) ಇಲ್ಲವಾದಾಗ್ಯು ಅವರು ತಮ್ಮ ಸುತ್ತಲಿನ ಸ್ವಾಭಾವಿಕ ಸೃಷ್ಟಿಯನ್ನು. ನೋಡಿ ದೇವರ ವಿಷಯವಾಗಿ ಕಲಿತುಕೊಳ್ಳಬಹುದಿತ್ತಷ್ಟೆ. ಅವರು ಸತ್ಯ ದೇವರನ್ನು ಗುರುತಿಸುವದಕ್ಕೆ ಶಕ್ತರಾಗಿರಬೇಕಾಗಿತ್ತು. ಯಾಕೆಂದರೆ ಅವರಿಗೆ ಈ ಸತ್ಯ ದೇವರೇ ಮಳೆ ಹಾಗು ಬೆಳೆಗಳನ್ನು ಕೊಟ್ಟವನಾಗಿದ್ದನು – ಹೊರತು ದ್ಯೌಸ್ ಹಾಗು ಹೆರ್ಮೆಗಳಲ್ಲ ! ಆದುದರಿಂದ, ಅಲ್ಲಿಯ ತನಕವೂ ದೇವರು ಅನ್ಯ ಜನಾಂಗಗಳ ವಿಷಯದಲ್ಲಿ ತಾಳ್ಮೆಯಿಂದಿದ್ದನಾದಾಗ್ಯು ಅವರು ಅಪರಾಧಿಗಳೇ ಆಗಿದ್ದರು. ಯಾಕೆಂದರೆ ಅವರು ಆತನನ್ನು ಗುರುತಿಸಿರಲಿಲ್ಲ (ರೋಮ 1:18-21) ಮತ್ತು ವ್ಯಾಖ್ಯಾನ ನೋಡಿರಿ). ಆದುದರಿಂದ ಗತಿಸಿಹೋದ ಕಾಲದಲ್ಲಿ ದೇವರು ಎಲ್ಲಾ ಜನಾಂಗಗಳನ್ನು ತಮ್ಮ ತಮ್ಮ ಮನಸ್ಸಿಗೆ ತೋಚಿದ ಮಾರ್ಗಗಳಲ್ಲಿ ನಡೆಯುವದಕ್ಕೆ ಬಿಟ್ಟಿರುವನಾದಾಗ್ಯು ಈಗ ಅನ್ಯಜನಾಂಗಗಳು ಪಶ್ಚಾತಾಪಪಟ್ಟು ಆತನಲ್ಲಿ ನಂಬಿಕೆಯಿಡತಕ್ಕ ಸಮಯವು ಬಂದಿದೆ (ಅ.ಕೃತ್ಯ. 17:36). ದೇವರು ಇನ್ನೆಂದಿಗೂ ಅವರ ಅಪರಾಧವನ್ನು ಗಮನಿಸದವನಾಗಿ ಇರುವದಿಲ್ಲ.

18 ಪೌಲ ಬಾರ್ನಬರು ಇಷ್ಟೆಲ್ಲಾ ಹೇಳಿದ ಮೇಲೆಯೂ ಸಹ ಜನರನ್ನು ತಮಗೆ ಬಲಿ ಕೊಡದಂತೆ ತಡೆಯುವದು ಕಷ್ಟವಾಗಿತ್ತು.

19 ತರುವಾಯ ಪಿಸಿದ್ಯದ ಅಂತಿಯೋಕ್ಯ ಹಾಗು ಇಕೋನ್ಯಗಳಿಂದ ಬಂದಿದ್ದ ಯೆಹೂದ್ಯರು ಪೌಲನನ್ನು ವಿರೋಧಿಸಿದರು. ಪೌಲನ ಮೇಲೆ ಅವರಿಗೆ ಎಷ್ಟು ಕೋಪವಿತ್ತೆಂದರೆ ಆತನ ಬೋಧನೆಯನ್ನು ವಿರೋಧಿಸಲು ಅವರು ಅಂತಿಯೋಕ್ಯದಿಂದ ನೂರು ಮೈಲುಗಳಷ್ಟು ದೂರ ನಡೆದು ಬಂದಿದ್ದರು. ಈ ಯೆಹೂದ್ಯರು ಜನರನ್ನು ಗೆದ್ದು ಕೊಂಡು ಪೌಲನನ್ನು ಕಲ್ಲೆಸೆದು ಕೊಲ್ಲುವದಕ್ಕೆ ಪ್ರೇರೇಪಿಸಿದರು. ಜನರು ಎಷ್ಟು ಅಂಜಿಕೆಯ ಹಾಗು ಚಂಚಲ ಮನಸ್ಸುಳ್ಳವರಲ್ಲವೇ! ಒಂದು ಕ್ಷಣ ಜನರು ಪೌಲನನ್ನು ಪೂಜಿಸುತ್ತಿದ್ದು. ಇನ್ನೊಂದು ಕ್ಷಣದಲ್ಲಿ ಅವರು ಆತನಿಗೆ ಕಲ್ಲೆಸೆಯುತ್ತಿದ್ದಾರೆ. ಒಂದು ಕ್ಷಣ, ಅವರು ಆತನನ್ನು ದೇವರಂತೆ ಕಂಡರು; ಮರು ಕ್ಷಣದಲ್ಲಿ ಒಂದು ನಾಯಿಯಂತೆ ಕಾಣುತ್ತಿದ್ದಾರೆ!

ಅನಂತರ ಪೌಲನು ಆ ದಿನದ ಅನುಭವವನ್ನು ಹೊಸ ಒಡಂಬಡಿಕೆಯಲ್ಲಿ ಆತನ ಪತ್ರಿಕೆಗಳೆರಡರಲ್ಲಿ ಬರೆದಿರುತ್ತಾನೆ (2 ಕೊರಿಂಥ 11:25; ಗಲಾತ್ಯ 6:17 ನೋಡಿರಿ).

20 ಕಲ್ಲೆಸೆದ ನಂತರ ಪೌಲನು ಸತ್ತನೆಂದು ಭಾವಿಸಿ ಜನರು ಹೊರಟು ಹೋದರು. ಆದರೆ ಶಿಷ್ಯರ, ಅಂದರೆ ನೂತನ ವಿಶ್ವಾಸಿಗಳು ಅವನ ಸುತ್ತಲು ನಿಂತುಕೊಂಡಿರುವಾಗ ಅವನು ಶೀಘ್ರವೆ ಚೇತರಿಸಿಕೊಂಡನು. ಬಹುಶ: ಅವನು ಕಲ್ಲೊಂದರ ಏಟಿನಿಂದ ಪ್ರಜ್ಞೆತಪ್ಪಿ ಬಿದ್ದಿರ ಬಹುದು. ಅಥವಾ ದೇವರು ಅವನನ್ನು ಅದ್ಭುತಕರವಾಗಿ ಪು ನಃ ಬದುಕಿಸಿರಬೇಕು. ವಿಷಯವು ಏನೇ ಆಗಿದ್ದರೂ, ಪೌಲನು ಮೇಲೆದ್ದ ತಕ್ಷಣವೇ ಊರೊಳಕ್ಕೆ ಹೋದನು. ಅವನಿಗೆ ಕಲ್ಲುಗಳ ಹೆದರಿಕೆಯಿರಲಿಲ್ಲ!

ಮರುದಿನ ಪೌಲ ಬಾರ್ನಬರು ಹತ್ತಿರದ ದೆರ್ಬೆ ಎಂಬ ಊರಿಗೆ ಹೋಗಿ ಸುವಾರ್ತೆಯನ್ನು ಸಾರಿದರು. ಸಿರಿಯಾದ ಅಂತಿಯೋಕ್ಯಕ್ಕೆ ತಿರಿಗಿ ಬಂದದ್ದು (14:21-28)

21-22 ಪೌಲ ಬಾರ್ನಬರು ಪ್ರತಿಯೊಂದು ಊರಿನಲ್ಲಿಯೂ ಶಿಷ್ಯರನ್ನು ಮಾಡಿದರು. ಅವರು ಸ್ವಸ್ಥಳವಾದ ಸಿರಿಯಾದ ಅಂತಿಯೋಕ್ಯಕ್ಕೆ ಹಿಂದಿರುಗಿ ಹೋಗಬೇಕಾದ ಸಮಯವು ಬಂದಾಗ ಅವರು ತಾವು ಬಂದಿದ್ದ ಮಾರ್ಗವಾಗಿಯೇ ಪ್ರಯಾಣಿಸಿದರು. ಮತ್ತು ಹೀಗೆ ಅವರು ಹೊಸದಾಗಿ ಶಿಷ್ಯರಾದವರನ್ನು ಬೇಟಿಯಾಗಲು ಶಕ್ತರಾದರು. ಪೌಲ ಬಾರ್ನಬರು ಇತ್ತೀಚಿಗಷ್ಟೆ ಪಿಸಿದ್ಯದ ಅಂತಿಯೋಕ್ಯ ಇಕೋನ್ಯ ಹಾಗು ಲುಸ್ತ್ರಗಳಿಂದ ಬಹಿಷ್ಕರಿಸಲ್ಪಟ್ಟಿದ್ದಾಗ್ಯು ಅವರು ಹೊಸ ಶಿಷ್ಯರನ್ನು

ಪ್ರೋತ್ಸಾಹಿಸುವದಕ್ಕಾಗಿ ಅದೇ ಊರುಗಳನ್ನು ಪುನಃ ಪ್ರವೇಶಿಸಿದರು. ಒಂದು ಸ್ಥಳದಲ್ಲಿ ಒಂದೇ ಸಾರಿ ಸುವಾರ್ತೆಯನ್ನು ಸಾರುವದ ಸಾಕಾಗುವದಿಲ್ಲ. ಹೊಸ ವಿಶ್ವಾಸಿಗಳಿಗೆ ಬೋಧಿಸಿ ಅವರನ್ನು ಅವರ ನಂಬಿಕೆಯಲ್ಲಿ ದೃಢಪಡಿಸುವದು ಸಹ ಅವಶ್ಯಕವಾದದ್ದು. ಮತ್ತು ಪೌಲ ಬಾರ್ನಬರು ಇದನ್ನೇ ಮಾಡಿದರು. ದೇವರು ರಾಜ್ಯದೊಳಗೆ ಸೇರಬೇಕಾದರೆ ಅವರು ಬಹು ಸಂಕಟಗಳನ್ನು ತಾಳ ಬೇಕೆಂದು ನೂತನ ಶಿಷ್ಯರನ್ನು ಎಚ್ಚರಿಸಿದರು. ಕ್ರಿಸ್ತನೊಂದಿಗೆ ಬಾಧ್ಯಸ್ಥರಾಗಲು ಇಚ್ಚಿಸುವದಾದರೆ ಅವರು ಆತನಿಗಾಗಿ ಹಿಂಸೆಯನ್ನು ತಾಳಬೇಕಾಗುವದು (ರೋಮ 8:17; 2 ತಿಮೊಥೆ 2:12; 2:12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**23** ಪೌಲ ಬಾರ್ನಬರು ಪ್ರತಿ ಸಭೆಯಲ್ಲಿ ಹಿರಿಯರನ್ನು ಗೊತ್ತು ಮಾಡಿ ನೇಮಿಸಿದರು. ಈ ಹಿರಿಯರು ಸ್ವತಃ ನೂತನ ವಿಶ್ವಾಸಿಗಳಾಗಿದ್ದರು! ಆದರೆ ಇತ್ತೀಚಿಗಷ್ಟೆ ಸ್ಥಾಪಿಸಲ್ಪಟ್ಟ ಸಭೆಯಲ್ಲಿ ಹಲವಾರು ವೇಳೆ ನಾಯಕರಾಗಿರಲು ಹಿರಿಯಕ್ರೈಸ್ತರು ಇರುವದಿಲ್ಲ; ಪ್ರತಿಯೊಬ್ಬನು ನೂತನ ಕ್ರೈಸ್ತನಾಗಿರುತ್ತಾನೆ. ಆದುದರಿಂದ, ಪೌಲ ಬಾರ್ನಬರು ಈ ನೂತನ ಹಿರಿಯರನ್ನು ಪವಿತ್ರಾತ್ಮನೇ ಮಾರ್ಗದರ್ಶಿಸಿ ಬಲಪಡಿಸುವನೆಂದು ವಿಶ್ವಾಸಿಸಬೇಕಾಗಿತ್ತು ಮತ್ತು ಪೌಲ ಬಾರ್ನಬರು ಉಪವಾಸವಿದ್ದು ಪ್ರಾರ್ಥನೆ ಮಾಡಿ ಅವರು ನಂಬಿದ್ದ ಕರ್ತನ ಕೈಗೆ ಅವರನ್ನು ಒಪ್ಪಿಸಿದರು. ಈ "ಹಿರಿಯರು" ಸಭೆಯ ಸದಸ್ಯರುಗಳ ಮತಗಳಿಂದ ಆಯ್ಕೆ ಮಾಡಲ್ಪಡಲಿಲ್ಲ. ಅವರು ಅಪೊಸ್ತಲರಿಂದ ನೇಮಿಸಲ್ಪಟ್ಟಿದ್ದರು. ಸಭೆಗಾಗಿ ಹಿರಿಯರನ್ನು ಆಯ್ಕೆ ಮಾಡುವ ಈ ವಿಧಾನವು ಹೊಸ ಒಡಂಬಡಿಕೆಯಲ್ಲಿ ಬಹಳ ಸಾರಿ ಪ್ರಸ್ತಾಪಿಸಲ್ಪಟ್ಟಿರುತ್ತದೆ (ಅ.ಕೃತ್ಯ 6:3-6; ತೀತನು 1:5; ಸಾಮಾನ್ಯ ಲೇಖನ: ಸಭಾ ಸರ್ಕಾರ ನೋಡಿರಿ).

**24-26** ಅಪೊಸ್ತಲರು ಪೆರ್ಗೆಗೆ ಹಿಂದಿರುಗಿದರು (ಅ.ಕೃತ್ಯ 13:13), ಮತ್ತು ನಂತರ ಅವರು ಕೊತ್ತಲುಗಳ ಊರಾದ ಅತಾಲ್ಯಕ್ಕೆ ಹೋದರು. ಅಲ್ಲಿಂದ ಅವರು ಸಮುದ್ರ ಪ್ರಯಾಣ ಮಾಡಿ ಅಂತಿಯೋಕ್ಯಕ್ಕೆ ಹೋದರು.

**27-28** ಪೌಲ ಬಾರ್ನಬರು ಅಂತಿಯೋಕ್ಯ ಸಭೆಯಿಂದ ಕಳುಹಿಸಲ್ಪಟ್ಟಿದ್ದರು. ಅವರು ಒಂದು ವರ್ಷಕಾಲ ತಮ್ಮಸಭೆ ಸುವಾರ್ತಾ ಪ್ರಯಾಣಕ್ಕಾಗಿ ದೂರದಸ್ಥಳಗಳಲ್ಲಿ ಇದ್ದರು. ಈಗ ಅವರು ತಮ್ಮ ಕಾರ್ಯಗಳ ಬಗ್ಗೆ ತವರು ಸಭೆಗೆ ವರದಿಯನ್ನು ನೀಡುವ ಸಮಯವಾಗಿತ್ತು. ಅವರು ಸ್ವತಃ ತಾವು ಮಾಡದಿದ್ದನ್ನು ತಿಳಿಸಲಿಲ್ಲ; ಬದಲಾಗಿ ದೇವರು ತಮ್ಮೊಂದಿಗಿದ್ದು ಮಾಡಿದ್ದೆಲ್ಲವನ್ನೂ ವಿವರವಾಗಿ ತಿಳಿಸಿದರು (ವಚನ 27). ದೇವರು ಬೋಧಕರಿಲ್ಲದೆಯೇ ಕಾರ್ಯಮಾಡಬಲ್ಲನು, ಆದರೆ ಬೋಧಕರಾದರೋ ದೇವರು ಅವರ ಮೂಲಕ ಕಾರ್ಯ ಮಾಡದೆ ಹೊರತು ಅವರು ದೇವರಿಗಾಗಿ ಏನನ್ನೂ ಮಾಡಲಾರರು. ಅಂತಿಯೋಕ್ಯದಲ್ಲಿನ ಕ್ರೈಸ್ತರು ನಿಶ್ಚಯವಾಗಿಯಾ ಸೇವಾಕಾರ್ಯಕರ್ತರಿಗಾಗಿ ಪ್ರಾರ್ಥಿಸುತ್ತಿದ್ದಿ-ರಬೇಕು. ಪೌಲ ಬಾರ್ನಬರ ಕೆಲಸವು ಅವರ ಕೆಲಸವೂ ಆಗಿತ್ತು. ಸಭೆಯ ಪ್ರಾರ್ಥನೆಗಳ ಹೊರತಾಗಿ ಮೊದಲು ಸುವಾರ್ತಾ ಪ್ರಯಾಣವು ವಿಫಲಗೊಳ್ಳುತ್ತಿತ್ತು.

---

## ಅಧ್ಯಾಯ - 15

### ಯೆರೂಸಲೇಮಿನಲ್ಲಿ ಸಮಾಲೋಚನಾ ಸಭೆ (15:1-5)

**1** ಬಳಿಕ ಕೆಲವರು ಯೂದಾಯದಿಂದ [64] ಅಂತಿಯೋಕ್ಯಕ್ಕೆ ಬಂದರು; ಈ ಜನರು ಮುಖ್ಯವಾಗಿ ಯೆರೂಸಲೇಮ ಸಭೆಯ ಯೆಹೂದ್ಯ ಕ್ರೈಸ್ತರಾಗಿದ್ದರು. ಅವರು ಕ್ರೈಸ್ತರಾಗಿ ಮಾರ್ಪಟ್ಟಿದ್ದಾಗ್ಯು ಯೆಹೂದ್ಯ ಧರ್ಮಶಾಸ್ತ್ರ, ಅಂದರೆ ಮೋಶೆಯ ಧರ್ಮಶಾಸ್ತ್ರವನ್ನು ಅನುಸರಿಸುವದು ಅವಶ್ಯಕವೆಂದು ನಂಬಿದ್ದರು. ಅಂತಿಯೋಕ್ಯದಲ್ಲಿಯೂ, ಸುತ್ತಲಿನ ಸೀಮೆಗಳಲ್ಲಿಯೂ ಇರುವ ಅನ್ಯ ಜನರಲ್ಲಿ ಬಹುಮಂದಿ ಕ್ರೈಸ್ತರಾಗುತ್ತಿರುವದರ ಬಗ್ಗೆ ಈ ಯೆಹೂದಿ ಕ್ರೈಸ್ತರು ಕೇಳಿದ್ದರು ಮತ್ತು ಈ ಅನ್ಯಜನರು ಸಭೆಯಲ್ಲಿ "ಅಪವಿತ್ರತೆ" ತರುವರೆಂದು ಇವರು ಚಿಂತೆಗೊಳಗಾಗಿದ್ದರು. ಯೆಹೂದ್ಯರು ಅನ್ಯ ಜನರನ್ನು ಅಪವಿತ್ರರು ಹಾಗು ಪಾಪಿಗಳೆಂದು ಪರಿಗಣಿಸುತ್ತಿದ್ದರು. ಮತ್ತು ಸ್ವಲ್ಪಮಟ್ಟಿಗೆ ಯೆಹೂದ್ಯರು ಹೇಳುವದು ಸರಿಯಾಗಿಯೇ ಇತ್ತು. ಯೆಹೂದ್ಯರಿಗೆ ಹೋಲಿಸಿದರೆ ಅನ್ಯ ಜನರು ನಿಶ್ಚಯವಾಗಿಯಾ ತಮ್ಮ ಹೊರ ನಡಾವಳಿಯಲ್ಲಿ – ವಿಶೇಷವಾಗಿ ಹಾದರದ ವಿಷಯದಲ್ಲಿ – ಹೆಚ್ಚು ಅಪವಿತ್ರರಾಗಿದ್ದರು. ಆದುದರಿಂದ, ಈ ಕಟ್ಟು ನಿಟ್ಟಿನ ಯೆಹೂದಿ ಕ್ರೈಸ್ತರು ಸಭೆಯು ನೂತನ ಅನ್ಯಜನಾಂಗಗಳ ವಿಶ್ವಾಸಿಗಳಿಂದ ಹೊಲೆಯಾಗದಂತೆ ಅದನ್ನು ಕಾಪಾಡುವ ಮಾರ್ಗವೊಂದನ್ನು ಕಂಡು ಹಿಡಿಯಲು ಬಯಸಿದರು. ಅನ್ಯ ಜನಾಂಗದ ವಿಶ್ವಾಸಿಗಳನ್ನು ಧರ್ಮಶಾಸ್ತ್ರಕ್ಕೆ ವಿಧೇಯರಾಗುವಂತೆ ಕಡ್ಡಾಯ ಪಡಿಸುವದೇ ಸಮಸ್ಯೆಗೆ ಪರಿಹಾರವೆಂದು ಅವರು ತೀರ್ಮಾನಿಸಿದರು. ಈ ರೀತಿಯಾಗಿ ಅನ್ಯ ಜನರು "ಪವಿತ್ರ" ಮಾಡಲ್ಪಡುವರೆಂದು ಅವರು ನೆನಸಿಕೊಂಡರು. ಆದುದರಿಂದ, ಈ ಯೆಹೂದಿ ಕ್ರೈಸ್ತರು ಅನ್ಯ ಜನಾಂಗದ ವಿಶ್ವಾಸಿಗಳಿಗೆ ಯೆಹೂದ್ಯ ಧರ್ಮಶಾಸ್ತ್ರಕ್ಕೆ ವಿಧೇಯರಾಗುವದನ್ನು ಕಲಿಸುವದಕ್ಕಾಗಿ ಅಂತಿಯೋಕ್ಯಕ್ಕೆ ಹೋದರು. ಆದರೆ ಯೆಹೂದಿ ಕ್ರೈಸ್ತರು ಅಂತಿಯೋಕ್ಯವನ್ನು ತಲುಪಿದಾಗ ಅವರು ಸಂಪೂರ್ಣ ಸುಳ್ಳಾದ ಇನ್ನೊಂದು ಬೋಧನೆಯನ್ನು ಸೇರಿಸಿದರು. ಒಂದು ವೇಳೆ ಅನ್ಯಜನರು ಮೋಶೆಯ ಗ್ರಂಥದಲ್ಲಿ ಹೇಳಿರುವ ನೇಮದ ಪ್ರಕಾರ ಸುನ್ನತಿಮಾಡಿಸಿಕೊಳ್ಳದಿದ್ದರೆ – ಅಂದರೆ, ಅವರು ಯೆಹೂದ್ಯ ಧರ್ಮಶಾಸ್ತ್ರಕ್ಕೆ ಸಂಪೂರ್ಣವಾಗಿ ವಿಧೆಯರಾಗದಿದ್ದರೆ – ಅವರಿಗೆ ರಕ್ಷಣೆಯಾಗಲಾರದು ಎಂಬದಾಗಿ ಬೋಧಿಸಲಾರಂಭಿಸಿದರು. ಈ ಬೋಧನೆಯು ಸುಳ್ಳಾಗಿತ್ತು, ಯಾಕೆಂದರೆ ಮನುಷ್ಯರು ಕೃಪೆಯ ಮೂಲಕ ನಂಬಿಕೆಯಿಂದ ಮಾತ್ರವೇ ರಕ್ಷಣೆ ಹೊಂದುವನು ಹೊರತು ಯಾವದೇ

ಧರ್ಮಕಾರ್ಯಗಳಿಂದಲ್ಲ (ಗಲಾತ್ಯ 2:15; ಎಪೆಸ 2:8-9 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಯೆಹೂದಿ ಕ್ರೈಸ್ತರು ಅಂತಿಯೋಕ್ಯಕ್ಕೆ ಮೊದಲು ಬಂದಾಗ ಪೇತ್ರನು ಸಹ ಅಲ್ಲಿ ಆಕಸ್ಮೀಕವಾಗಿ ಇದ್ದನು. ಅವರು ಬರುವದಕ್ಕೆ ಮುಂಚೆ ಪೇತ್ರನು ಅನ್ಯ ಜನಾಂಗದ ವಿಶ್ವಾಸಿಗಳೊಂದಿಗೆ ಸಂಪೂರ್ಣವಾದ ಅನ್ಯೋನ್ಯತೆಯ್ಲಲಿದ್ದನು. ಆದರೆ ಯೆರೂಸಲೇಮಿನಿಂದ ಯೆಹೂದಿ ಕ್ರೈಸ್ತರು ಬಂದಾಗ ಅವರ ಬೊಧನೆಯ ಕಾರಣದಿಂದಾಗಿ ಪೇತ್ರನು ಅನ್ಯ ಜನಾಂಗದ ಕ್ರೈಸ್ತರೊಂದಿಗೆ ಊಟ ಮಾಡುತ್ತಿದ್ದದ್ದನ್ನು ನಿಲ್ಲಿಸಿದನು. ಅಲ್ಲದೆ ಬಾರ್ನಬನು ಸಹ ಶಿಘ್ರವೇ ಪೇತ್ರನೊಂದಿಗೆ. [65] ಅದೇ ತಪ್ಪನ್ನು ಮಾಡಿದನು (ಗಲಾತ್ಯ 2:11-13 ನೋಡಿರಿ). ಪೌಲನು ತಕ್ಷಣವೇ ಈ ಯೆಹೂದಿ ಕ್ರೈಸ್ತರ ಬೋಧನೆಯ ನಿಮಿತ್ತವಾಗಿ ಸಭೆಯಲ್ಲಿ ಒಂದು ಮಹಾ ಬೇಧವು ಂಟಾಗಲಿದೆಯೆಂಬದನ್ನು ತಿಳಿದುಕೊಂಡನು. ಕೊನೆಯಲ್ಲಿ ಪೇತ್ರನು ಸಹ ಪೌಲನ ಈ ಕಾಳಜಿಯನ್ನು ಗಂಭೀರವಾಗಿ ತೆಗೆದು ಕೊಂಡನೆಂಬದು ನಮಗೆ ಗೊತ್ತಿದೆ, ಯಾಕೆಂದರೆ ಸ್ವಲ್ಪಕಾಲದ ತರುವಾಯ ಕೆಳಗೆ ವಿವರಿಸಿರುವ ಯೆರೂಸಲೇಮಿನ ಸಮಾಲೋಚನಾ ಸಭೆಯಲ್ಲಿ ಊಂಟಾದ ವಾಗ್ವಾದದಲ್ಲಿ ಪೇತ್ರನು ಪೌಲನ ಪಕ್ಷವಹಿಸಿದನು (ವಚನಗಳು 7:11). ಅನ್ಯ ಜನಾಂಗದ ಕೊರ್ನೇಲ್ಯ ಹಾಗು ಆತನ ಕುಟುಂಬದವರು ಹೇಗೆ ಕ್ರೈಸ್ತನಾದರೆಂಬದನ್ನು ಪೇತ್ರನು ನೆನಪಿಗೆ ತಂದು ಕೊಂಡನು. ಅವರಿಗೆ ಸುನ್ನತಿ ಮಾಡಿಸುವದು ಅವಶ್ಯವಾಗಿರಲಿಲ್ಲ (ಅ.ಕೃತ್ಯ 10:44-48; 11:15-18). ಯೆರೂಸಲೇಮಿನಿಂದ ಬಂದ ಈ ಯೆಹೂದಿ ಕ್ರೈಸ್ತರು ತಮ್ಮ ಮಿಥ್ಯ ಬೋಧನೆಯನ್ನು ಪೌಲ ಬಾರ್ನಬರು ತಮ್ಮ ಪ್ರಥಮ ಸುವಾರ್ತಾ ಪ್ರಯಾಣದಲ್ಲಿ ಸ್ಥಾಪಿಸಿದ ಗಲಾತ್ಯದಲ್ಲಿನ ನೂತನ ಸಭೆಗಳಿಗೂ ಸಹ ಕೊಂಡೊಯ್ದರು. ಪೌಲನು ಮುಖ್ಯವಾಗಿ ಈ ಮಿಥ್ಯ ಬೋಧನೆಯನ್ನು ಖಂಡಿಸಲೆಂದೆ ತನ್ನ ಹೊಸ ಒಡಂಬಡಿಕೆಯಲ್ಲಿನ ಗಲಾತ್ಯದವರಿಗೆ ಪತ್ರಿಕೆಯನ್ನು ಬರೆದನು.

**2** ಅಂತಿಯೋಕ್ಯದ ಕ್ರೈಸ್ತರು, ವಿಶೇಷವಾಗಿ ಪೌಲ ಬಾರ್ನಬರು ಯೆರೂಸಲೇಮಿನ ಈ ಯೆಹೂದಿ ಕ್ರೈಸ್ತರ ಬೋಧೆನಯನ್ನು ಒಪ್ಪಿಕೊಳ್ಳಲಿಲ್ಲ. ಎರಡುಗುಂಪು ಗಳ ಮದ್ಯದಲ್ಲಿನ ವಿಷಯವನ್ನು ಇತ್ಯರ್ಥಕ್ಕೆ ತರಲಾಗಲಿಲ್ಲ. ಆದ್ದರಿಂದ, ಅಂತಿಯೋಕ್ಯದ ಸಭೆಯು ಯೆರೂಸಲೇಮಿನಲ್ಲಿನ ಹಿರಿಯರೊಂದಿಗೆ ಚರ್ಚಿಸಲು ಪೌಲ ಬಾರ್ನಬರನ್ನೂ, ಅವರ ಜೊತೆಯಲ್ಲಿ ಇನ್ನು ಕೆಲವು ವಿಶ್ವಾಸಿಗಳನ್ನು ಕಳುಹಿಸಿಕೊಟ್ಟರು.

**3-4** ಯೆರೂಸಲೇಮಿಗೆ ಪ್ರಯಾಣಿಸುವಾಗ ಪೌಲ ಬಾರ್ನಬರು ಮಾರ್ಗದಲ್ಲಿ ತಾವು ಸಂಧಿಸಿದ ವಿಶ್ವಾಸಿಗಳಿಗೆ ಅನ್ಯ ಜನರು ಹೇಗೆ ಕ್ರಿಸ್ತನಡೆಗೆ ತಿರಿಗಿಕೊಳ್ಳುತ್ತಿರುವರೆಂದು ತಿಳಿಸಿದರು.

**5** ಮಿಥ್ಯಬೋಧನೆಯನ್ನು ಪ್ರಾರಂಭಿಸಿದ ಈ ಯೆಹೂದ್ಯ ಕ್ರೈಸ್ತರು ಮುಖ್ಯವಾಗಿ ಫರಿಸಾಯರಾಗಿದ್ದರು, ಇವರು ಯೆಹೂದ್ಯರಲ್ಲಿ ಅತಿ ಕಟ್ಟು ನಿಟ್ಟಿನ ಗುಂಪಾಗಿರುತ್ತಾರೆ (ಪೌಲನು ಸ್ವತಃ ಒಬ್ಬ ಫರಿಸಾಯನಾಗಿದ್ದನು) ಅವರು ಅನ್ಯ ಜನರಿಗೆ ಸುನ್ನತಿ ಮಾಡಿಸಬೇಕು, ಮತ್ತು ಮೋಶೆಯ [66] ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯವದಕ್ಕೆ ಅಪ್ಪಣೆಕೊಡಬೆಕು ಎಂದು ಒತ್ತಾಯ ಪಡಿಸಿದರು.

## ಪೇತ್ರ ಮತ್ತು ಯಾಕೋಬರು ತಮ್ಮ ಅಭಿಪ್ರಾಯಗಳನ್ನು ನೀಡಿದ್ದು (15:6-21)

**6-7** ಸಭೆಯ ಮದ್ಯದಲ್ಲಿ ಪೇತ್ರನು ಎದ್ದು ಕೊರ್ನೇಲ್ಯ ಹಾಗು ಆತನ ಕುಟುಂಬಕ್ಕೆ ಸುವಾರ್ತೆಯನ್ನು ಸಾರಬೇಕೆಂದು ದೇವರು ಹೇಗೆ ತನಗೆ ಆಜ್ಞಾಪಿಸಿದ ನೆಂಬುದರ ಕುರಿತಾಗಿ ಇತರರಿಗೆ ಹೇಳಿದನು (ಅ.ಕೃತ್ಯ 10:19-20).

**8-9** ಆ ಸಮಯದಲ್ಲಿ ದೇವರು ಯೆಹೂದ್ಯರು ಹಾಗು ಅನ್ಯ ಜನರ ನಡುವೆ ಯಾವ ಪಕ್ಷಪಾತಮಾಡಲಿಲ್ಲ ಎಂಬುದನ್ನು ಪೇತ್ರನು ತಿಳಿದುಕೊಂಡಿದ್ದನು (ಅ.ಕೃತ್ಯ 10:34). ಮನುಷ್ಯನು ತನ್ನ ಕೆಲಸ ಅಥವಾ ಜನ್ಮದಿಂದ ಪವಿತ್ರನಾಗಲಿ, ನೀತಿವಂತನಾಗಲಿ ಆಗುವದಿಲ್ಲ, ಆದರೆ ಆತನ ನಂಬಿಕೆಯ ನಿಮಿತ್ತವಾಗಿ ಮಾತ್ರವೇ ಪವಿತ್ರನಾಗುವನು.

**10** "ಹೀಗಿರುವದರಿಂದ ನಮ್ಮ ಪಿತೃಗಳಾಗಲಿ ನಾವಾಗಲಿ ಹೊರಲಾರದ ನೊಗವನ್ನು (ಯೆಹೂದ್ಯ ಧರ್ಮಶಾಸ್ತ್ರ) ನೀವು ಶಿಷ್ಯರ (ಅನ್ಯಜನಾಂಗದ ಕ್ರೈಸ್ತರ) ಮೇಲೆ ಹಾಕಬಾರದು" ಎಂದು ಪೇತ್ರನು ಅವರಿಗೆ ಹೇಳಿದನು. ಯೆಹೂದ್ಯ ಧರ್ಮಶಾಸ್ತ್ರವು ಒಂದು ಭಾರವಾದ ನೊಗದಂತಿತ್ತು, ಯಾಕೆಂದರೆ ಅದರಲ್ಲಿ ಯೆಹೂದ್ಯರು ವಿಧೇಯರಾಗಬೇಕಾಗಿದ್ದ ನೂರಾರು ಚಿಕ್ಕ ನೇಮಗಳು ತುಂಬಿದ್ದವು . ಫರಿಸಾಯರನ್ನು ಹೊರತು ಪಡಿಸಿ ಸ್ವತಃ ಯೆಹೂದ್ಯರೇ ಧರ್ಮಶಾಸ್ತ್ರವು ಒಂದು ಭಾರವಾದ ನೊಗ ಎಂಬದನ್ನು ಕಂಡುಕೊಂಡಿದ್ದರು. ಯೇಸು ಫರಿಸಾಯರ ವಿಷಯದಲ್ಲಿ, "ಅವರು ಭಾರವಾದ ಹೊರೆಗಳನ್ನು ಕಟ್ಟಿ ಜನರ ಹೆಗಲಿನ ಮೇಲೆ ಹೊರಿಸುತ್ತಾರೆ" ಎಂದು ಹೇಳಿದ್ದನು (ಮತ್ತಾಯ 23:4). ಆದರೆ ಪೇತ್ರನು ಯೇಸುವಿನ ಹೊರೆಯು ಹಗುರವಾದದ್ದು, ಬಾರವಾದದ್ದಲ್ಲ ಎಂಬದನ್ನು ಕಂಡುಕೊಂಡಿದ್ದನು (ಮತ್ತಾಯ 11:28-30). ಈಗ ಈ ಯೆಹೂದಿ ಕ್ರೈಸ್ತರು ಸ್ವತಃ ಯೆಹೂದ್ಯರು ತಾವು ವಿಧೇಯರಾಗುವದಕ್ಕೆ ಒಂದು ಹೊರೆಯಾಗಿ ಪರಿಗಣಿಸಿರುವ ಈ ಎಲ್ಲಾ ಅನಾವಶ್ಯಕ ನೇಮಗಳಿಗೆ ವಿಧೇಯರಾಗಬೇಕೆಂದು ಅನ್ಯ ಜನಾಂಗದ ನೂತನ ಕ್ರೈಸ್ತರನ್ನು ಏಕೆ ಒತ್ತಾಯ ಪಡಿಸಬೇಕು?

**11** ಬಳಿಕ ಪೇತ್ರನು ಒಂದು ಪ್ರಾಮುಖ್ಯ ಸಂಗತಿಯನ್ನು ಹೇಳಿದನು: ಸ್ವತಃ ಯೆಹೂದ್ಯರೇ ಈ ನೇಮಗಳಿಗೆ ವಿಧೇಯರಾಗುವದರ ಮೂಲಕ ರಕ್ಷಣೆ ಹೊಂದಲು ಸಾದ್ಯವಾಗಲಿಲ್ಲ. ಅನ್ಯ ಜನರ ಹಾಗೆ ಯೆಹೂದ್ಯರು ಸಹ ಕೃಪೆಯಿಂದ ನಂಬಿಕೆಯ ಮೂಲಕ ರಕ್ಷಣೆ ಹೊಂದಿದವರಾಗಿದ್ದರು. "......ಕರ್ತನಾದ ಯೇಸುವಿನ ಕೃಪೆಯಿಂದಲೇ ನಾವು (ಯೆಹೂದ್ಯರು) ರಕ್ಷಣೆ ಹೊಂದುವೆವೆಂಬದಾಗಿ ನಂಬುತ್ತೇವಲ್ಲಾ, ಹಾಗೆಯೇ ಅವರೂ (ಅನ್ಯ ಜನರು) ಹೊಂದುವರು ಎಂದು ಪೇತ್ರನು ಹೇಳಿದನು. ಹೀಗೆ, ಯೆಹೂದ್ಯರು ಧರ್ಮಶಾಸ್ತ್ರಕ್ಕೆ ವಿಧೇಯರಾಗುವದರ ಮೂಲಕ ರಕ್ಷಿಸಲ್ಪಡದೆ ಇರುವದಾದರೆ ಅನ್ಯ ಜನರು ಅದಕ್ಕೆ ವಿಧೇಯರಾಗುವದರ ಮೂಲಕ ಹೇಗೆ ರಕ್ಷಣೆ ಹೊಂದಲಿರುವರು?

**12** ಪೇತ್ರನು ಮಾತಾಡಿ ಮುಗಿಸಿದ ಬಳಿಕ ಪೌಲ ಬಾರ್ನಬರು ಹೇಗೆ ದೇವರು ಅನ್ಯ ಜನರನ್ನು ಕ್ರಿಸ್ತನಲ್ಲಿ ನಂಬಿಕೆಯಿಡುವಂತೆ ನಡೆಸುತ್ತಿದ್ದಾನೆಂಬದನ್ನು ಕೂಡಿಬಂದ ಸಭೆಗೆ ಹೇಳಿದರು. ದೇವರು ಯೆಹೂದ್ಯರನ್ನು ಸ್ವೀಕರಿಸಿದ ಹಾಗೆಯೇ ಅನ್ಯ ಜನರನ್ನು ಸಹ ಸ್ವೀಕರಿಸುವ ನೆಂಬುದನ್ನು ಇದು ಮತ್ತಷ್ಟು ನಿರೂಪಿಸುತ್ತದೆ.

**13-15** ಆ ಕಾಲದಲ್ಲಿ ಯೇಸುವಿನ ತಮ್ಮನಾದ ಯಾಕೋಬನು ಯೆರೂಸಲೇಮಿನ ಸಭೆಯ ಮುಖ್ಯ ನಾಯಕನಾಗಿದ್ದನು. ಸಿಮೋನನು ವಿವರಿಸಿರುವಂತದ್ದೆಲ್ಲವನ್ನು ಹಳೆ ಒಡಂಬಡಿಕೆಯ ಪ್ರವಾದಿಗಳ ಪ್ರವಾದನೆಗಳೂ ಒಪ್ಪುತ್ತವೆ ಎಂದು ಯಾಕೋಬನು ಹೇಳಿದನು.

**16-18** ತರುವಾಯ ಯಾಕೋಬನು ಆಮೋಸ 9:11-12 ರಲ್ಲಿನ ವಿಷಯವನ್ನು ಉಲ್ಲೇಖಿಸುತ್ತಾನೆ. ದೇವರು ಬಿದ್ದು ಹೋಗಿರುವ ದಾವೀದನ ಗುಡಾರವನ್ನು ಸರಿಮಾಡುವನು ಎಂದು ಪ್ರವಾದಿಯಾದ ಆಮೋಸನು ಬರೆದನು (ವಚನ 16). ಅಂದರೆ ದೇವರು ದಾವೀದನ ನಿಜವಾದ ರಾಜ್ಯವನ್ನು ಪು ನಃ ಸ್ಥಾಪಿಸುವನು – ಅದು ಕ್ರಿಸ್ತನ ಸಭೆಯೇ. ಮನುಷ್ಯ ಜಾತಿಯ ಉಳಿದ ಜನಗಳೂ (ವಚನ 17) ಕ್ರಿಸ್ತನನ್ನು ನಂಬುವ ಯೆಹೂದ್ಯರು (ರೋಮ 9:27; 11:5 ನೋಡಿರಿ). ಆದುದರಿಂದ ಆಮೋಸನ ಪ್ರವಾದನೆಯ ಪ್ರಕಾರವಾಗಿ ದೇವರು ಕ್ರಿಸ್ತನ ರಾಜ್ಯವನ್ನು ಸಭೆಯನ್ನು ಸ್ಥಾಪಿಸುವನು, ಹೀಗೆ ಯೆಹೂದ್ಯರೂ ಅನ್ಯ ಜನಾಂಗದವರೂ ಕರ್ತನನ್ನು ಹುಡುಕುವವರಾಗಿ ಆತನನ್ನು ಕಂಡುಕೊಳ್ಳುವಂತಾಗುವದು.

**19** ಅನ್ಯ ಜನಾಂಗದ ಕ್ರೈಸ್ತರು ಸುನ್ನತಿ ಮಾಡಿಸಿಕೊಳ್ಳುವದು ಅಥವಾ ಯೆಹೂದ್ಯರ ಪೂರ್ಣ ಧರ್ಮಶಾಸ್ತ್ರಕ್ಕೆ[67] ವಿಧೇಯರಾಗುವದು ಅವಶ್ಯಕವಾಗಿರುವದಿಲ್ಲ ಎಂದು ಯಾಕೋಬನು ತೀರ್ಪು ಮಾಡಿದನು. "....ಅನ್ಯ ಜನರಲ್ಲಿ ದೇವರ ಕಡೆಗೆ ತಿರಿಗಿಕೊಳ್ಳುವವರನ್ನು ತೊಂದರೆ ಪಡಿಸಬಾರದು" ಎಂಬದಾಗಿ ಯಾಕೋಬನು ಹೇಳಿದನು. ರಕ್ಷಣೆ ಹೊಂದುವದಕ್ಕೆ ದೇವರು ತಿಳಿಸಿರುವ ಅಪ್ಪಣೆಯ ಹೊರತು ಇನ್ನೊಂದಿಲ್ಲ: ಉದಾಹರಣೆಗೆ, ಯೇಸು ಕ್ರಿಸ್ತನನ್ನು ನಂಬುವದು. ಆದ್ದರಿಂದ ಯಾವ ಮನಷ್ಯನು ಇದಕ್ಕೆ ಹೆಚ್ಚಿನದನ್ನು ಕೂಡಿಸದಿರಲಿ!

**20** ಆದರೆ ಅನ್ಯ ಜನಾಂಗದ ಕ್ರೈಸ್ತರು ಮೂರು ಸಂಗತಿಗಳನ್ನು ಪಾಲಿಸುವಂತೆ ಯಾಕೋಬನು ಬೇಡಿಕೊಂಡನು: ಮೊದಲನೆಯದಾಗಿ ವಿಗ್ರಹಕ್ಕೆ ನೈವೇದ್ಯ ಮಾಡಿದ ಮಾಂಸವನ್ನು ಅವರು ತಿನ್ನದಿರಲಿ; ಎರಡನೆಯದಾಗಿ, ಅವರು ಯಾವದೇ ರೀತಿಯ ಲೈಂಗಿಕ ಅನೈತಿಕತೆಯನ್ನು ಮಾಡದಿರಲಿ (ಅಂದರೆ, ಯೆಹೂದ್ಯ ಧರ್ಮಶಾಸ್ತ್ರವು ನಿಷೇಧಿಸಿರುವ ಯಾವದೇ ಲೈಂಗಿಕ ಕೃತ್ಯ); ಮತ್ತು ಮೂರನೆಯದಾಗಿ, ಅವರು ರಕ್ತವನ್ನು ಸರಿಯಾಗಿ ಹರಿಸದ ಯಾವದೇ ಮಾಂಸವನ್ನು ತಿನ್ನದಿರಲಿ(ಆದಿಕಾಂಡ 9:4; ಅ.ಕೃತ್ಯ 15:29).

ಅನ್ಯ ಜನಾಂಗದ ಕ್ರೈಸ್ತರು ಈ ಮೂರು ಸಂಗತಿಗಳನ್ನು ಪಾಲಿಸುವಂತೆ ಯಾಕೋಬನು ಏಕೆ ಕೇಳಿಕೊಂಡನು? ಅದಕ್ಕೆ ಕಾರಣವು ಇದಾಗಿತ್ತು. ಯೆಹೂದ್ಯ ಹಾಗು ಅನ್ಯ ಜನಾಂಗದ ಕ್ರೈಸ್ತರು ಪರಸ್ಪರ ಅನ್ಯೋನ್ಯತೆಯಲ್ಲಿ ಉಳಿಯುವದು ಅತ್ಯಂತ ಪ್ರಾಮುಖ್ಯವಾಗಿತ್ತು. ಅನ್ಯ ಜನರು ಲೈಂಗಿಕ ಅನೈತಿಕತೆಯಡೆಗೆ ಹೊಂದಿದ್ದ ಒಲವು ಹಾಗು ಅಶುದ್ಧ ಮಾಂಸವನ್ನು ತಿನ್ನು ವಂತಹ ಈ ಸಂಗತಿಗಳೆ ಯೆಹೂದ್ಯರು ಅನ್ಯ ಜನಾಂಗದ ಕ್ರೈಸ್ತರಲ್ಲಿ ಪಾಲಿಯಾದನು (ವಚನ 40).

**23-29** ಯೆರೂಸಲೇಮಿನ ಅಪೊಸ್ತಲರು ತಮ್ಮ ಪತ್ರವನ್ನು ಯೂದಾಯದಿಂದ ಅಂತಿಯೋಕ್ಯಕ್ಕೆ ಪ್ರಾರಂಭದಲ್ಲಿ ಹೋಗಿದ್ದ ಯೆಹೂದಿ ಕ್ರೈಸ್ತರನ್ನು ಸ್ಪಷ್ಟವಾಗಿ ವಿರೋಧಿಸುವದರೊಂದಿಗೆ ಪ್ರಾರಂಭಿಸಿದರು. ಯಾಕೆಂದರೆ ಈ ಯೆಹೂದ್ಯ ಕ್ರೈಸ್ತರೇ ಮೊದಲನೆಯದಾಗಿ ಮಿಥ್ಯ ಬೋಧನೆಯ ಮೂಲಕವಾಗಿ ಎಲ್ಲಾ ಸಮಸ್ಯೆಗಳಿಗೆ ಕಾರಣವಾಗಿದ್ದರು. ಅವರು ಯೆರೂಸಲೇಮಿನ ಅಪೊಸ್ತಲರಿಂದ ಯಾವ ಅಧಿಕಾರವನ್ನು ಪಡೆಯದೆಯೇ ಅಂತಿಯೋಕ್ಯಕ್ಕೆ ಹೋಗಿದ್ದರು.

ನಂತರ, ಅವರು ತಮ್ಮ ಪತ್ರದಲ್ಲಿ ಯಾಕೋಬನು ಸಭೆಯ ಮುಂಭಾಗದಲ್ಲಿ ಹೇಳಿದ್ದ ಸಂಗತಿಗಳನ್ನು ಪು ನರಾವರ್ತಿಸಿದರು (ವಚನ 20). ಅವರು 29 ನೇ ವಚನದಲ್ಲಿ ರಕ್ತವನ್ನೂ ಕುತ್ತಿಗೆ ಹಿಸುಕಿಕೊಂದದ್ದನ್ನೂ ವಿಸರ್ಜಿಸಬೇಕೆಂದು ಅನ್ಯಜನಾಂಗದ ವಿಸ್ವಾಸಿಗಳಿಗೆ ಸಲಹೆ ನೀಡುತ್ತಾರೆ. ಅದರರ್ಥವೇನೆಂದರೆ ಕೊಲ್ಲಲ್ಪಡುವ ವೇಳೆಯಲ್ಲಿ ರಕ್ತವನ್ನು ಸರಿಯಾಗಿ ಹರಿಸಲ್ಪಡದ ಯಾವದೇ ಪ್ರಾಣಿಯ ಮಾಂಸವನ್ನು ಅನ್ಯ ಜನಾಂಗದ ಕ್ರೈಸ್ತರು ತಿನ್ನ ಬಾರದಾಗಿತ್ತು. ಕುತ್ತಿಗೆ ಹಿಸುಕಿಕೊಂದ ಪ್ರಾಣಿಯ ರಕ್ತವು ಹರಿದು ಹೋಗಿರಲಾರದು ಮತ್ತು ಈ ಕಾರಣದಿಂದ ಅದು ತಿನ್ನಲ್ಪಡಕೂಡದು.

28ನೇ ವಚನದಲ್ಲಿ ಅಪೊಸ್ತಲರು ಏನು ಬರೆದರೆಂಬದನ್ನು ಗಮನಿಸಿರಿ: ಪವಿತ್ರಾತ್ಮನಿಗೂ ನಮಗೂ ವಿಹಿತವಾಗಿ ತೋರಿತು. ಆ ಕೂಟದಲ್ಲಿ ಪವಿತ್ರಾತ್ಮನು ಸಹ ಹಾಜರಿದ್ದನು. ಆತ್ಮನು ಅವರನ್ನು ನಡೆಸಿದ್ದನು. ನಮ್ಮ ಎಲ್ಲಾ ಕೂಟಗಳಲ್ಲೂ ಪವಿತ್ರಾತ್ಮನು ಪ್ರಸನ್ನನಾಗಿರುತ್ತಾನೆಂಬದನ್ನು ನಾವು ನೆನಪಿನಲ್ಲಿಟ್ಟುಕೊಳ್ಳೋಣ. ನಾವು ಯಾವದೇ ತೀರ್ಮಾನಕ್ಕೆ ಬಂದರೂ ಸಹ "ಈ ತಿರ್ಮಾನವು ನಮಗೂ ಪವಿತ್ರಾತ್ಮನಿಗೂ ವಿಹಿತವಾಗಿ ತೋರಿತು" ಎಂದು ನಾವು ಹೇಳಲು ಶಕ್ತರಾಗಬೇಕು.

**30-35** ಅಂತಿಯೋಕ್ಯದಲ್ಲಿನ ಅನ್ಯ ಜನಾಂಗದ ಕ್ರೈಸ್ತರು ಅಪೊಸ್ತಲರ ಪತ್ರವನ್ನು ಸಂತೋಷದಿಂದ ಸ್ವೀಕರಿಸಿಕೊಂಡರು. ಯೆಹೂದ್ಯ ಹಾಗು ಅನ್ಯ ಜನಾಂಗದ ಕ್ರೈಸ್ತರ ನಡುವೆ ಉದ್ಭವಿಸಬಹುದಾಗಿದ್ದ ಬೇಧವನ್ನು ತಪ್ಪಿಸಲಾಗಿತ್ತು.

## ಪೌಲ ಮತ್ತು ಬಾರ್ನಬನ ನಡುವೆ ಭಿನ್ನಾಭಿಪ್ರಾಯ (15:36-41)

**36** ಪೌಲನು ಬಾರ್ನಬನಿಗೆ ಕುಪ್ರ ಹಾಗು ಗಲಾತ್ಯ ಊರುಗಳಲ್ಲಿ ಸ್ಥಾಪಿಸಿದ ಹೊಸ ಸಭೆಗಳನ್ನು ಪು ನಃ ಸಂಧಿಸೋಣ ಎಂದು ಹೇಳಿದನು. ಅವರು ಇದನ್ನು ಮಾಡುವದು ಬಹಳ ಅವಶ್ಯಕವಾಗಿತ್ತು. ಒಬ್ಬ ಸಭಾಪಾಲಕ ಅಥವಾ ಬೋಧಕರು

ಅವರ ಬೋಧನೆಯ ಫಲಿತವಾಗಿ ದೇವರ ವಾಕ್ಯವನ್ನು ಕೇಳಿ ಅಂಗೀಕರಿಸಿಕೊಂಡವರಿಗೆ ಅನುಸರಣಾ ಕಾರ್ಯವನ್ನು ಮಾಡುವದು ಅವರ ಜವಾಬ್ದಾರಿಯಾಗಿರುತ್ತದೆ; ಒಂದು ವೇಳೆ ಅವರು ಸ್ವತಃ ಆ ಕಾರ್ಯವನ್ನು ಮಾಡಲಾಗದಿದ್ದರೆ ಪ್ರತಿನಿಧಿಯೊಬ್ಬನನ್ನಾದರೂ ನೇಮಕಮಾಡಬೇಕು. ವಿಶ್ವಾಸಿಗಳನ್ನು ದೃಢಪಡಿಸುವದು ಅವಿಶ್ವಾಸಿಗಳನ್ನು ಮಾನಸಾಂತರಕ್ಕೆ ನಡೆಸುವಷ್ಟೇ ಪ್ರಾಮುಖ್ಯವಾಗಿರುತ್ತದೆ.

**37-39** ಮಾರ್ಕನು ಪೌಲಬಾರ್ನಬರ ಮೊದಲನೆಯ ಸುವಾರ್ತಾ ಪ್ರಯಾಣದಲ್ಲಿ (ವಚನ 38) ಅವರನ್ನು ಬಿಟ್ಟು ಹೋಗಿದ್ದಾದ್ದರಿಂದ ಪೌಲನು ಮಾರ್ಕನ ವಿಷಯದಲ್ಲಿ ಅಸಮಾಧಾನಗೊಂಡಿದ್ದನು (ಅ.ಕೃತ್ಯ 13:13). ಮಾರ್ಕನು ಏಕೆ ಅವರನ್ನು ಬಿಟ್ಟನೆಂಬದಕ್ಕೆ ಬೈಬಲ್ ಯಾವಕಾರಣವನ್ನು ಕೊಡುವದಿಲ್ಲ.

ಹೇಗಿದ್ದರೂ, ಮಾರ್ಕನ ಸಂಬಂಧಿಯಾದ ಬಾರ್ನಬನು ಮಾರ್ಕನನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಲು ಬಯಸಿದನು. ಪೌಲನು ಒಪ್ಪಲಿಲ್ಲವಾದ್ದರಿಂದ ಪೌಲ ಬಾರ್ನಬರು ಒಟ್ಟಾಗಿ ಪ್ರಯಾಣಿಸದಿರಲು ತೀರ್ಮಾನಿಸಿದರು; ಅಂದಿನಿಂದ ಅವರು ತಮ್ಮ ಸ್ವಯಿಚ್ಛೆಯಂತೆ ಹೋಗುವವರಾದರು.

ಒಂದು ವಿಧದಲ್ಲಿ ಪೌಲ ಬಾರ್ನಬರ ನಡುವೆ ಉಂಟಾದ ಭಿನ್ನಾಬಿಪ್ರಾಯದ ಕುರಿತಾಗಿ ಓದಲು ನಮಗೆ ವಿಷಾದ ವಾಗುತ್ತದೆ. ಅವರ ಬಲಹೀನತೆಯು ನಮಗೆ ಕಂಡು ಬರುತ್ತದೆ. ಅವರು ನಮ್ಮಂತಹ ಮನುಷ್ಯರಾಗಿದ್ದರು. ಒಳ್ಳೆಯ ಹಾಗು ಭಯಭಕ್ತಿಯುಳ್ಳ ಜನರ ಮಧ್ಯದಲ್ಲಿ ಸಹ ಭಿನ್ನಾಬಿಪ್ರಾಯಗಳು ಉಂಟಾಗಬಹುದು, ಮತ್ತು ಅವರು ಬೇರೆ ಬೇರೆ ಯಾಗಿ ಹೋದರು.ಆದರೆ ಇನ್ನೊಂದು ವಿಧದಲ್ಲಿ, ಈ ಘಟನೆಯ ಉತ್ತಮ ಸಂಗತಿಯನ್ನು ಸಹ ನಾವು ನೋಡಬಹುದು. ಪೌಲ ಬಾರ್ನಬರು ಪರಸ್ಪರ ಪೈಪೋಟಿಯನ್ನು ಹೊಂದಿರಲಿಲ್ಲ ಎಂಬದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡು ಬರುತ್ತದೆ. ಮಾರ್ಕನನ್ನು ಪೌಲನೊಂದಿಗೆ ಹೋಗುವಂತೆ ಒತ್ತಾಯಿಸುವದು ಅಜ್ಞಾನಕರವಾಗಿರುತ್ತಿತ್ತು. ಮಾರ್ಕನು ಪೌಲನ ಅಧಿಕಾರದ ಅಡಿಯಲ್ಲಿ ಇದ್ದಿದ್ದರೆ ಮಾರ್ಕನ ಆತ್ಮೀಕ ಜೀವಿತದ ಬೆಳವಣಿಗೆಗೆ ಧಕ್ಕೆಯಾಗುತ್ತಿತ್ತು. ಆದರೆ ಬಾರ್ನಬನಾದರೋ ಕಾಲಕ್ರಮೇಣ ಮಾರ್ಕನು ಒಬ್ಬ ಪರಿಪಕ್ವ ಹಾಗು ಫಲಕಾರಿಯಾದ ಶಿಷ್ಯನಾಗುವನೆಂದು ನಂಬಿದನು. ಮಾರ್ಕನಿಗೆ ಆತ್ಮೀಕವಾಗಿ ಬೆಳೆಯಲು ಸಹಾಯಮಾಡುವದಕ್ಕೆ ಪೌಲನಿಗಿಂತಲೂ ಬಾರ್ನಬನು ಸೂಕ್ತನಾಗಿದ್ದನು. ಹೀಗಿರುವದರಿಂದ ಮಾರ್ಕನು ಬಾರ್ನಬನೊಂದಿಗೆ ಒಂದು ದಿಕ್ಕಿಗೆ ಹೋಗಿದ್ದು ಮಾರ್ಕನ ಪ್ರಯೋಜನಕ್ಕಾಗಿಯೇ ಎಂದು ನಾವು ತಿಳಿಯಬಹುದು, ಮತ್ತು ಅದೇ ವೇಳೆಯಲ್ಲಿ ಪೌಲ ಸೀಲರು ಇನ್ನೊಂದು ದಿಕ್ಕಿಗೆ ಹೋದರು.

ಕೊನೆಯಲ್ಲಿ, ಬಾರ್ನಬನು ಮಾರ್ಕನ ಪಕ್ಷವಹಿಸಿದ್ದು ಸರಿಯೆಂದು ನಿರೂಪಿಸಲ್ಪಟ್ಟಿತ್ತು. ನಂತರ, ಮಾರ್ಕನು ಪೇತ್ರನ ಒಬ್ಬ ಪ್ರಾಮುಖ್ಯ ಸಹಪಾಠಿಯಾದನು. ಈತನು ಹೊಸ ಒಡಂಬಡಿಕೆಯ ಮಾರ್ಕನ ಸುವಾರ್ತೆಯನ್ನು ಬರೆದನು. ಅಲ್ಲದೆ ಪೌಲನ ಅಭಿಪ್ರಾಯವು ಸಹ ಬದಲಾಯಿತು, ಯಾಕೆಂದರೆ ಕೆಲವು ವರ್ಷಗಳ ಬಳಿಕ ಮಾರ್ಕನು ಪೌಲನ ಸಹ ಪಾಠಿಗಳಲ್ಲಿ ಒಬ್ಬನಾದನು (ಕೊಲೊಸ್ಸೆ 4:10; 2 ತಿಮೊಥೆ 4:11; ಫಿಲಮೋನ 23).

**40-41** ಪೌಲ ಬಾರ್ನಬರ ನಡುವಿನ ಭಿನ್ನಾಭಿಪ್ರಾಯದಿಂದ ಇನ್ನೊಂದು ಉತ್ತಮ ಸಂಗತಿಯು ಜರುಗಿತು: ಒಂದು ಸುವಾರ್ತಾಸೇವಾ ತಂಡದ ಬದಲಿಗೆ ಈಗ ಎರಡು ತಂಡಗಳಿದ್ದವು. ಬಾರ್ನಬ, ಮಾರ್ಕರು ಬಾರ್ನಬನ ಜನ್ಮಸ್ಥಳವಾದ ಕುಪ್ರದ್ವೀಪಕ್ಕೆ ಹೋದರು (ಅ.ಕೃತ್ಯ 4:36). ಮತ್ತು ಪೌಲ ಸೀಲರು ಪೌಲನ ಜನ್ಮ ಸ್ಥಳವಾದ ಸಿರಿಯಾ ಹಾಗು ಕಿಲಿಕ್ಯ ಸೀಮೆಗಳಿಗೆ ಹೋದರು (ಅ.ಕೃತ್ಯ 21:39). ಹೀಗೆ ಪೌಲನ ಎರಡನೆಯ ಸುವಾರ್ತಾ ಪ್ರಯಾಣವು ಪ್ರಾರಂಭಗೊಂಡಿತು.

---

# ಅಧ್ಯಾಯ - 16

## ಪೌಲ ಸೀಲರೊಂದಿಗೆ ತಿಮೋಥೆಯನು ಕೂಡಿಕೊಂಡದ್ದು (16:1-5)

**1-2** ಕಿಲಿಕ್ಯಯಿಂದ ಪೌಲ ಸೀಲರು ಗಲಾತ್ಯ ಸೀಮೆಯನ್ನು ಹಾಯ್ದು ದೆರ್ಬೆ, ಲುಸ್ತ್ರ, ಮತ್ತು ಇಕೋನ್ಯ ಊರುಗಳನ್ನು ಸಂಧಿಸಿದರು ಪೌಲ, ಬಾರ್ನಬರು ತಮ್ಮ ಮೊದಲನೆಯ ಸುವಾರ್ತಾಪ್ರಯಾಣದಲ್ಲಿ ಇಲ್ಲಿಯೇ ಸುವಾರ್ತೆಯನ್ನು ಸಾರಿದ್ದರು.

ಪೌಲನು ಲುಸ್ತ್ರದಲ್ಲಿ ತಿಮೊಥೆ ಎಂಬ ಯುವ ಶಿಷ್ಯನೊಬ್ಬನನ್ನು ಬೇಟಿಯಾದನು. ಲುಸ್ತ್ರದಲ್ಲಿ ಇದ್ದ ಇತರ ಕ್ರೈಸ್ತರು ತಿಮೊಥೆಯ ವಿಷಯದಲ್ಲಿ ಉತ್ತಮ ಸಾಕ್ಷಿ ನೀಡಿದ್ದರಿಂದ ಪೌಲನು ತಿಮೊಥೆಯನನ್ನು ತನ್ನೊಂದಿಗೆ ಕರೆದುಕೊಂಡು ಹೋಗಲಿಚ್ಚಿಸಿದನು. ತಿಮೊಥೆಯ ತಾಯಿಯಾದ ಯೂನಿಕೆಯು ಭಯಭಕ್ತಿಯುಳ್ಳ ಯೆಹೂದಿ ಕ್ರೈಸ್ತಳಾಗಿದ್ದಳು. (2 ತಿಮೊಥೆ 1:5).

**3** ತಿಮೊಥೆಯನು ಅರ್ಧ ಯೆಹೂದ್ಯನೂ, ಅರ್ಧ ಅನ್ಯಜನಾಂಗದವನಾಗಿದ್ದನು (ವಚನ 1). ತಿಮೊಥೆಯನು ಒಬ್ಬ ಯೆಹೂದ್ಯನಂತೆ ಬೆಳೆದು ಬಂದಿದ್ದರಿಂದ ಅವನು ಸುನ್ನತಿಯ ಮೂಲಕ ಸಂಪೂರ್ಣ ಯೆಹೂದ್ಯನಾಗುವದಾದರೆ ಉತ್ತಮವೆಂದು ಪೌಲನು ಆಲೋಚಿಸಿಕೊಂಡನು. ಅವರು ಸಭಾಮಂದಿರಗಳಿಗೆ ಬೋಧಿಸಲು ಹೋಗುವಾಗಲೆಲ್ಲಾ ಪೂರ್ಣಯೆಹೂದ್ಯನಾಗಿ ತಿಮೊಥೆಯನು ಪೌಲನಿಗೆ ದೊಡ್ಡ ಸಹಾಯವಾಗಲಿದ್ದನು. ಹೊಸ ಒಡಂಬಡಿಕೆಯ ಅನೇಕ ಕಡೆಗಳಲ್ಲಿ ಪೌಲನು ರಕ್ಷಣೆ

ಸಂಪಾದಿಸಿಕೊಳ್ಳಲು ಸುನ್ನತಿಯ ಅವಷ್ಯವಿರುವದಿಲ್ಲ ಎಂದು ಬರೆದಿರುತ್ತಾನೆ. (1ಕೊರಿಂಥ 7:19, ಗಲಾತ್ಯ 5:2-6,6:15). ರಕ್ಷಮೆ ಹೊಂದುವದಕ್ಕಾಗಿ ಸುನ್ನತಿ ಮಾಡಿಸಿಕೊಳ್ಳಬೇಕೆಂದು ಪೌಲನು ತಿಮೊಥೆಯನಿಗೆ ಹೇಳಲಿಲ್ಲ, ತಿಮೊಥೆಯನು ಈಗಾಗಲೇ ನಂಬಿಕೆ ಮೂಲಕ ರಕ್ಷಣೆ ಹೊಂದಿದ್ದನು. ಬದಲಾಗಿ ಯೆಹೂದ್ಯರಲ್ಲಿ ಬಹು ಮಂದಿ ಕ್ರಿಸ್ತನನ್ನು ನಂಬುವಂತಾಗಬೇಕೆಂಬದಕ್ಕಾಗಿ ಪೌಲನು ತಿಮೊತೆಯನನ್ನು ಸುನ್ನತಿ ಮಾಡಿಸಿದನು. ಪೌಲನು ಬರೆದದ್ದೇನೆಂದರೆಃ ಯೆಹೂದ್ಯರನ್ನು ಸಂಪಾದಿಸಿಕೊಳ್ಳುವದಕ್ಕೆ ಯೆಹೂದ್ಯರಿಗೆ ಯೆಹೂದ್ಯನಂತಾದೆನು. ನಾನು ನಿಯಮಗಳಿಗೆ ಅಧೀನ ನಲ್ಲದವನಾದರೂ ನಿಯಮಗಳಿಗೆ ಅಧೀನರಾದವರನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಅವರಿಗೆ ನಿಯಮಗಳಿಗೆ ಅಧೀನನಂತಾದೆನು. (1 ಕೊರಿಂಥ 9:20). ಪೌಲನು ತಾನು ಒಂದೇ ಗುರಿಯೊಂದಿಗೆ ಎಲ್ಲವನ್ನು ಮಾಡಿದನು. ಯೆಹೂದ್ಯರನ್ನು ಅನ್ಯ ಜನಾಂಗದವರನ್ನೂ ಕ್ರಿಸ್ತನಿಗಾಗಿ ಗೆಲ್ಲುವದು.

**4-5** ಪೌಲ ಸೀಲರು ತಾವು ಹೋದ ಕಡೆಯಲೆಲ್ಲಾ ಯೆರೂಸಲೇಮ ಸಮಾಲೋಚನಾ ಸಭೆಯಲ್ಲಾದ ತಿರ್ಮಾನಗಳ ಕುರಿತಾಗಿ ಪ್ರತಿಯೊಬ್ಬರಿಗೂ ಹೇಳುತ್ತಿದ್ದರು (ಅ.ಕೃತ್ಯ 15:28-29)

## ಮಕೆದೋನ್ಯದ ಮನುಷ್ಯನ ಕುರಿತಾಗಿ ಪೌಲನ ದರ್ಶನ (16:6-10)

**6-8** 6ನೇ ವಚನದಲ್ಲಿ ಪ್ರಸ್ತಾಪಿಸಿರುವ ಅಸ್ಯ ಸೀಮೆಯು ಪೆರ್ಗೆ ಗಲಾತ್ಯ ಸೀಮೆಗಳ ಪಶ್ಚಿಮ ದಿಕ್ಕಿನಲ್ಲಿದ್ದ ಪ್ರಾಂತ್ಯವಾಗಿತ್ತು. ಇಂದು ಆ ಸ್ಥಳವು ಪ್ರಸ್ತುತ ಕಾಲದ ಟರ್ಕಿಯ ಪಶ್ಚಿಮ ಭಾಗವಾಗಿರುತ್ತದೆ. ಪೌಲನ ಕಾಲದಲ್ಲಿ ಎಫೆಸವು ಅಸ್ಯ ಸೀಮೆಯ ಪ್ರಮುಖ ಪಟ್ಟಣವಾಗಿತ್ತು. ಆದರೆ ಈ ಪ್ರಯಾಣದಲ್ಲಿ ಪೌಲನು ಪಶ್ಚಿಮದೆಡೆಗೆ ಅಸ್ಯ ಸೀಮೆಯೊಳಗೆ ಹೋಗಬಾರದೆಂದು ಪವಿತ್ರಾತ್ಮನು ತಡೆದನು. ಬದಲಾಗಿ ಪವಿತ್ರಾತ್ಮನು ಪೌಲ ಹಾಗು ಆತನ ಸಂಗಡಿಗರನ್ನು ಉತ್ತರದೆಡೆಗೆ ಬಿಥೂನ್ಯಕ್ಕೆ ನಡೆಸಿದನು (ವಚನ 7). ಅವರು ಬಿಥುನ್ಯಕ್ಕೆ ಸಮೀಪ ಬಂದಾಗ ಪವಿತ್ರಾತ್ಮನು ಪು ನಃ ಅವರ ಯೋಜನೆಗಳನ್ನು ಬದಲಾಯಿಸಿಕೊಳ್ಳುವಂತೆ ನಡೆಸಿದನು. ಅವರು ಬಿಥೂನ್ಯ ಪ್ರವೇಶಿಸುವ ಬದಲಾಗಿ ಪಶ್ಚಿಮದೆಡೆಗೆ ಹೊರಡುವಂತೆ ಪು ನಃ ಪವಿತ್ರಾತ್ಮನಿಂದ ಮಾರ್ಗದರ್ಶಿಸಲ್ಪಟ್ಟರು. ಹೀಗೆ, ಪವಿತ್ರಾತ್ಮನಿಗೆ ವಿಧೇಯರಾದವರಾಗಿ ಅವರು ಕೊನೆಗೆ ಟರ್ಕಿ ಹಾಗು ಗ್ರೀಸ್‌ಗಳ ನಡುವೆ ಇರುವ ಎಗೇನ ಸಮುದ್ರ ತೀರದಲ್ಲಿನ ಕೋಟೆಯ ಊರಾದ ತ್ರೋವಕ್ಕೆ ಬಂದರು.

**9-10** ತ್ರೋವದಲ್ಲಿರುವಾಗ ಪೌಲನು ಒಂದು ದರ್ಶನವನ್ನು ಕಂಡನು, ಆ ದರ್ಶನದಲ್ಲಿ ಒಬ್ಬ ವ್ಯಕ್ತಿಯು "ಮಕೆದೋನ್ಯಕ್ಕೆ ಬಂದು ನಮಗೆ ನೆರವಾಗಬೇಕು" ಎಂದು ಬೇಡಿಕೊಳ್ಳುತ್ತಿದ್ದನು (ವಚನ 9). ಮಕದೋನ್ಯ [69] ವು ಗ್ರೀಸ್‌ನ ಉತ್ತರ ಪ್ರಾಂತ್ಯವಾಗಿರುತ್ತದೆ. ಪಿಲಿಪ್ಪಿ ಹಾಗು ಥೆಸಲೋನಿಕಗಳು ಅದರ ಪ್ರಮುಖ ಪಟ್ಟಣಳಾಗಿದ್ದವು . ಲೂಕನು 10ನೇ ವಚನದಲ್ಲಿ ಹೀಗೆ ಬರೆಯುತ್ತಾನೆ...ನಾವು ..ಕೂಡಲೇ ಮಕದೋನ್ಯಕ್ಕೆ ಹೊರಟುಹೋಗಲು ಸಿದ್ದರಾದೆವು . ಲೂಕನು ಇಲ್ಲಿ ನಾವು ಎಂದು ಹೇಳಲು ಕಾರಣವೇನೆಂದರೆ ಆ ಸಂದರ್ಭದಲ್ಲಿ ಸ್ವತಃ ಲೂಕನು ಪೌಲನೊಂದಿಗೆ ಕೂಡಿಕೊಂಡು ಮಕೆದೋನ್ಯಕ್ಕೆ ಪ್ರಯಾಣಿಸಿದನು.

ಈ ವಚನದಲ್ಲಿ ಜನತ್ತಿನ ಚರಿತ್ರೆಯ ಅತ್ಯಂತ ಪ್ರಮುಖ್ಯ ಘಟನೆಗಳಲ್ಲೊಂದನ್ನು ನಾವು ನೋಡುತ್ತೇವೆ: ಅದು, ಕ್ರಿಸ್ತನ ಸುವಾರ್ತೆಯನ್ನು ಯೂರೋಪಕ್ಕೆ ಕೊಂಡೊಯ್ಯುವದೇ. ಪೌಲ ಮತ್ತು ಆತನ ಸಂಗಡಿಗರು ಪೂರ್ವಕ್ಕೆ ಹೋಗುವ ಬದಲಾಗಿ ಪಶ್ಚಿಮಕ್ಕೆ ಹೋದರು. ಒಂದು ವೇಳೆ ಪೌಲನು ಆ ಸಂದರ್ಭದಲ್ಲಿ ಪೂರ್ವ ದಿಕ್ಕಿನೆಡೆಗೆ ಸಾಗಿ ಅಸ್ಯಸೀಮೆಯ ದಕ್ಷಿಣ ಹಾಗು ಕೇಂದ್ರ ಭಾಗಗಳಲ್ಲಿರುವ ದೇಶಗಳಿಗೆ ಹೋಗಿದ್ದರೆ, ಜಗತ್ತಿನ ಇತಿಹಾಸದಲ್ಲಿ ಎಂತಹ ಒಂದು ವ್ಯತ್ಯಾಸವಿರುತ್ತಿತ್ತು! ಆದರೆ, ದೇವರ ಚಿತ್ತವು ರೋಮಾಯ ಸಾಮ್ರಾಜ್ಯದಲ್ಲೆಲ್ಲಾ ಮೊದಲು ಸುವಾರ್ತೆಯು ಹರಡಬೇಕೆಂಬದಾಗಿತ್ತು.

## ಪಿಲಿಪ್ಪಿಯಲ್ಲಿ ಲುದ್ಯಳು ಮಾನಸಾಂತರ ಹೊಂದಿದ್ದು (16:11-15)

**11-12** ಸಮೊಥ್ರಾಕೆಯು ಎಗೇನ ಸಮುದ್ರದಲ್ಲಿನ ಒಂದು ದ್ವೀಪವಾಗಿತ್ತು. ನೆಯಾಪೊಲಿಯವು ಪಿಲಿಪ್ಪಿ ಪಟ್ಟಣಕ್ಕೆ ಹೊಂದಿಕೊಂಡಿರುವ ಕೋಟೆಯ ಊರಾಗಿತ್ತು. ಇಲ್ಲಿ ನಾವು ಪು ನಃ ಸುವಾರ್ತೆಯನ್ನು ಸಾರುವದಕ್ಕಾಗಿ ಪ್ರಮುಖ ಕೇಂದ್ರ ಪಟ್ಟಣವನ್ನು ಆರಿಸಿಕೊಳ್ಳುವ ಪೌಲನ ಪದ್ಧತಿಯನ್ನು ಕಾಣುತ್ತೇವೆ, ಕಾರಣ ಪಿಲಿಪ್ಪಿ ರೋಮಾಯ ವಸಾಹತುವಿನ ಒಂದು ಪ್ರಾಮುಖ್ಯ ಪಟ್ಟಣವಾಗಿತ್ತು (ಅ.ಕೃತ್ಯ 13:14 ಮತ್ತು ವ್ಯಾಖ್ಯಾನ ನೋಡಿರಿ).

**13** ಪೌಲನು ಪಿಲಿಪ್ಪಿಯಲ್ಲಿದ್ದ ಆ ವೇಳೆಯಲ್ಲಿ ಯಾವ ಯೆಹೂದ್ಯ ಸಬಾಮಂದಿರವೂ ಇರಲಿಲ್ಲ. ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರವಾಗಿ ಅಲ್ಲಿ ಸಭಾಮಂದಿರವು ಸ್ಥಾಪಿಸಲ್ಪಡುವದಕ್ಕೆ ಮುಂಚೆ ಆ ಸ್ಥಳದಲ್ಲಿ ಹತ್ತು ಮಂದಿ ಯೆಹೂದ್ಯರಾದರೂ ಇರಬೇಕಾಗಿತ್ತು. ಆದುದರಿಂದ, ಪೌಲನು ಪಿಲಪ್ಪಿಯನ್ನು ತಲುಪಿದ ವೇಳೆಯಲ್ಲಿ ಅಲ್ಲಿ ಹತ್ತು ಮಂದಿಗಿಂತಲೂ ಕಡಿಮೆ ಯೆಹೂದ್ಯರು ವಾಸಿಸುತ್ತಿದ್ದರೆಂದು ನಾವು ಸ್ಪಷ್ಟವಾದ ತಿರ್ಮಾನವನ್ನು ಮಾಡಬಹುದು. ಹೀಗಿದ್ದರೂ, ನಿಜವಾದ ಒಬ್ಬನೇ ದೇವರಿಗೆ ಭಯಭಕ್ತಿಯುಳ್ಳವರಾಗಿ ಆರಾಧಿಸುತ್ತಿದ್ದರು. ಮತ್ತು ಅವರು ಊರ ಬಾಗಲಿನ ಹೊರಗೆ ನದಿ ತೀರದಲ್ಲಿ ಒಟ್ಟಾಗಿ ಸೇರಿಬರುತ್ತಿದ್ದರು. ಅವರು ಪಿಲಿಪ್ಪಿಯನ್ನು ತಲುಪಿದ ನಂತರ ಮೊದಲನೆಯ ಸಬ್ಬತ್ ದಿನದಲ್ಲಿ (ಶನಿವಾರ) ಪೌಲ ಹಾಗು ಆತನ ಸಂಗಡಿಗರು ಆ ಕೂಡಿ ಬಂದಿದ್ದ ಆರಾಧಕರ ಬಳಿಗೆ ಹೋಗಿ ಮಾತಾಡಿದರು.

**14** ಕೂಡಿ ಬಂದಿದ್ದ ಆರಾಧಕರಲ್ಲಿ ಲುದ್ಯಳೆಂಬ ಸ್ತ್ರೀಯೊಬ್ಬಳು ಪೌಲನ ಸಂದೇಶವನ್ನು ಕೇಳಿ ಕ್ರಿಸ್ತನನ್ನು ನಂಬಿದಳು. ಹೀಗೆ ಅವಳು ಯೂರೋಪ್ಯದ ಪ್ರಥಮ ಕ್ರೈಸ್ತಳಾದಳು. ಅವಳು ಧೂಮ್ರವರ್ಣದ ವಸ್ತ್ರಗಳನ್ನು ಮಾರುವವಳಾಗಿದ್ದಳು. ಈ

ವಸ್ತ್ರವು ಥುವತೈರದಲ್ಲಿ ಉತ್ಪಾದಿಸಲ್ಪಡುತ್ತಿತ್ತು, ಇದು ಅಸ್ಯ ಸೀಮೆಯಲ್ಲಿನ ಒಂದು ಊರಾಗಿದ್ದು ಲುದ್ಯಳು ಇಲ್ಲಿಂದಲೇ ವ್ಯಾಪಾರಕ್ಕಾಗಿ ಫಿಲಿಪ್ಪಿಗೆ ಬಂದಿದ್ದಳು.

ದೇವರ ವಾಕ್ಯಗಳಿಗೆ ಲಕ್ಷ್ಯಕೊಡುವದಕ್ಕೆ ಕರ್ತನು ಆಕೆಯ (ಲುದ್ಯಳ) ಹೃದಯವನ್ನು ತೆರೆದನು ಎಂದು ಇಲ್ಲಿ ಬರೆಯಲ್ಪಟ್ಟಿದೆ. ನಿಜವಾದ ಧಾರ್ಮಿಕ ಮಾನಸಾಂತರವು ಯಾವಾಗಲೂ ದೇವರ ಕೃಪಾಕಾರ್ಯನಾಗಿದೆ. ಮೊದಲನೆಯದಾಗಿ, ದೇವರು ತನ್ನ ವಾಕ್ಯಕ್ಕೆ ಲಕ್ಷ್ಯಕೊಡುವಂತೆ ನಮ್ಮ ಹೃದಯವನ್ನು ತೆರೆಯುತ್ತಾನೆ. ಆದರೆ ಆಗ ಸ್ವತಃ ನಾವೇ ನಮ್ಮ ಹೃದಯದ ಬಾಗಿಲನ್ನು ತೆರೆದು ದೇವರನ್ನು ಒಳಗೆ ಅನುಮತಿಸಬೇಕು. ಅದು ನಮ್ಮ ಪಾತ್ರವಾಗಿದೆ. ಯೇಸು ಹೇಳಿದ್ದು : "ನಾನು ಬಾಗಿಲು ಬಳಿಯಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ. ಯಾವಾನಾದರೂ ನನ್ನ ಸ್ವರವನ್ನು ಕೇಳಿ ಬಾಗಿಲು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡುವೆನು ಮತ್ತು ಅವನು ನನ್ನ ಸಂಗಡ ಊಟ ಮಾಡುವನು" (ಪ್ರಕಟಣೆ 3:20).

**15** ಕೊರ್ನಲ್ಯ ಹಾಗು ಆತನ ಮನೆಯವರೆಲ್ಲರಂತೆಯೇ ಲುದ್ಯಳು ಹಾಗು ಆಕೆಯ ಮನೆಯವರೆಲ್ಲರೂ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು. ಹೊಸ ಒಡಂಬಡಿಕೆಯ ಕಾಲದಲ್ಲಿ ಮನೆಯ ಸದಸ್ಯರು ಒಟ್ಟಾಗಿ ಒಂದೇ ಸಮಯದಲ್ಲಿ ಕ್ರೈಸ್ತರಾಗುವದು ಸಾಮಾನ್ಯವಾಗಿತ್ತು (ಅ.ಕೃತ್ಯ 11:14; 16:31,33; 18:8 ನೋಡಿರಿ). ಮನೆಯಲ್ಲಿ ಇರುವವರೆಲ್ಲರೂ ದೇವರ ವಾಕ್ಯವನ್ನು – ಕ್ರಿಸ್ತನ ಸುವಾರ್ತೆಯನ್ನು ಕೇಳಿ ಅಂಗೀಕರಿಸಿಕೊಳ್ಳುವ ಅವಕಾಶವನ್ನು ಕಲ್ಪಿಸಿಕೊಡುವದು ಗಂಡ ಹೆಂಡತಿಯರ ಜವಾಬ್ದಾರಿಯಾಗಿರುತ್ತದೆ.

## ಪೌಲ ಸೀಲರು ಸೆರೆಮನೆಯಲ್ಲಿ ಹಾಕಲ್ಪಟ್ಟದ್ದು (16:16-40)

**16** ಈ ಅದ್ಯಾಯದಲ್ಲಿ ಪ್ರಸ್ತಾಪಿಸಲ್ಪಟ್ಟ ಫಿಲಿಪ್ಪಿಯದ ಎರಡನೆಯ ನಿವಾಸಿಯು ದೆವ್ವ ಪೀಡಿತಳಾದ ಒಬ್ಬ ಬಡದಾಸಿಯಾಗಿದ್ದಾಳೆ. ಅವಳು ಭವಿಷ್ಯತ್ತನ್ನು ಹೇಳಬಲ್ಲಳು ಎಂದು ಅನೇಕ ಜನರು ನಂಬುತ್ತಿದ್ದರು. ಮತ್ತು ತಮ್ಮ ಭವಿಷ್ಯತ್ತನ್ನು ತಿಳಿಸಲು ಆಕೆಯ ಯಜಮಾನನಿಗೆ ಹಣವನ್ನು ಕೊಡುತ್ತಿದ್ದರು. ಈ ರೀತಿಯಾಗಿ ಆಕೆಯ ಕಣಿ ಹೇಳುವಿಕೆಯ ಮೂಲಕವಾಗಿ ಆ ಹುಡುಗಿಯ ಯಜಮಾನರು ಬಹಳಷ್ಟು ಹಣವನ್ನು ಸಂಪಾದಿಸುತ್ತಿದ್ದರು. ಆದರೆ ಕಣಿಹೇಳುತ್ತಿದ್ದದ್ದು ಆ ದಾಸಿಯಲ್ಲ; ಆಕೆಯಲ್ಲಿ ಇದ್ದ ದುರಾತ್ಮವು ಹಾಗೆ ಮಾತಾಡುತ್ತಿತ್ತು.

**17** ಪೌಲನು ಜನರಿಗೆ ರಕ್ಷಣಾ ಮಾರ್ಗವನ್ನು ತೋರಿಸುವದಕ್ಕಾಗಿ ದೇವರಿಂದ ಕಳುಹಿಸಲ್ಪಟ್ಟಿದ್ದಾನೆಂದು ಈ ದುರಾತ್ಮವು ಗ್ರಹಿಸಿಕೊಂಡಿತು. ದುರಾತ್ಮಗಳು ಯಾವಾಗಲೂ ಕ್ರಿಸ್ತನನ್ನು ಹಾಗು ಆತನ ಸೇವಕರನ್ನು ಗುರುತಿಸಬಲ್ಲವು (ಮಾರ್ಕ 1:23-26).

**18** ಅನೇಕ ದಿವಸಗಳ ವರೆಗೆ ಆ ದಾಸಿಯು ಕೂಗುತ್ತಾ ಪೌಲನ ಹಿಂದೆ ಹೋಗುವವಳಾದಳು. ಅಂತಿಮವಾಗಿ, ಆಕೆಯನ್ನು ಬಿಟ್ಟು ಹೋಗುವಂತೆ ಪೌಲನು ದುರಾತ್ಮಕ್ಕೆ ಅಪ್ಪಣೆಕೊಟ್ಟನು. ಅದೇ ಗಳಿಗೆಯಲ್ಲಿಯೇ ಅದು ಆಕೆಯನ್ನು ಬಿಟ್ಟು ಹೋಗಿ ಅವಳು ಬಿಡುಗಡೆಹೊಂದಿದಳು.

**19** ಆದರೆ ಕಣಿ ಹೇಳುವ ಆಕೆಯ ಸಾಮರ್ಥ್ಯವು ಸಹ ಆಕೆಯನ್ನು ಬಿಟ್ಟು ಹೋಗಿ ಅವಳು ಜನರ ಭವಿಷ್ಯತ್ತನ್ನು ಹೇಳದವಳಾದಳು. ಹೀಗೆ, ಆಕೆಯ ಕಣಿಹೇಳುವಿಕೆಯಿಂದ ತಮಗಾಗುತ್ತಿದ್ದ ಆದಾಯವು ತಪ್ಪಿತೆಂದು ಗ್ರಹಿಸಿಕೊಂಡ ಯಜಮಾನರು ಬಹಳ ಕೋಪವುಳ್ಳವರಾದರು.

**20-21** ಆ ದಾಸಿಯ ಯಜಮಾನರು ಪೌಲ ಸೀಲರ ವಿಷಯದಲ್ಲಿ " ಇವರು ರೋಮಾಯರಾದ ನಾವು ಅವಲಂಭಿಸಿ ನಡಿಸಕೂಡದಂಥ ಆಚಾರಗಳನ್ನು ಪ್ರಕಟಿಸುತ್ತಾರೆ" ಎಂದು ಆರೋಪಿಸಿದರು, ಮತ್ತು ಬಹು ಮಟ್ಟಿಗೆ ಅವರ ಆರೋಪವು ನಿಜವಾಗಿತ್ತು. ಫಿಲಿಪ್ಪಿಯಂತಹ ರೋಮಾಯ ವಸಾಹತುವಿನಲ್ಲಿ ಕ್ರಿಸ್ತನ ಸುವಾರ್ತೆಯನ್ನು ಪೌಲ ಮತ್ತು ಆತನ ಸಂಗಡಿಗರು ವಾಸ್ತವದಲ್ಲಿ ರೋಮಾಯ ಸಾಮ್ರಾಜ್ಯದ ಕಾನೂನನ್ನು ಉಲ್ಲಂಘಿಸುತ್ತಿದ್ದರು. ಯಾಕೆಂದರೆ ರೋಮಾಯ ಕಾನೂನಿನ ಪ್ರಕಾರವಾಗಿ ರೋಮಾಯ ಪೌರರ ಮದ್ಯದಲ್ಲಿ ಯಾರಾದರೂ ಒಂದು ಅಪರಿಚಿತ ಅಥವಾ ಹೊರ ದೇಶದ ಧರ್ಮವನ್ನು ಬೋಧಿಸುವದು ಕಾನೂನಿಗೆ ವಿರುದ್ಧವಾದದ್ದಾಗಿತ್ತು.

**22-24** ಹೊಸ ಒಡಂಬಡಿಕೆಯ ಕಾಲದಲ್ಲಿ ಯೆಹೂದ್ಯರು ಅಪರಾಧಿಗಳನ್ನು ಕೊರಡೆಯಿಂದ ಹೊಡೆಯುವದರ ಮೂಲಕ ದಂಡಿಸುತ್ತಿದ್ದರು. ರೋಮಾಯರು ಅಪಾರಾಧಿಗಳನ್ನು ಛಡಿಗಳಿಂದ ಹೊಡೆದು ಶಿಕ್ಷಿಸುತ್ತಿದ್ದರು. ಫಿಲಿಪ್ಪಿಯ ಅಧಿಪತಿಗಳು ಪೌಲಸೀಲರನ್ನು ವಿಚಾರಿಸದೆಯೇ ಜನರ ದೊಂಬೀಯ ಆಧಾರದ ಮೇಲೆ ಅವರು ಅಪರಾಧಿಗಳಾಗಿರಬೇಕೆಂದು ತಿರ್ಮಾನಿಸಿದರು ಮತ್ತು ಅವರನ್ನು ಛಡಿಗಳಿಂದ ಹೊಡೆಯಬೇಕೆಂದು ಅಪ್ಪಣೆಕೊಟ್ಟರು. ಪೌಲ ಸೀಲರನ್ನು ಹೊಡಿಸಿದ ನಂತರ ಸೆರೆಮನೆಯೊಳಗೆ ಹಾಕಿದರು. ಸೆರೆಯ ಅಧಿಕಾರಿಯು ಪೌಲ ಸೀಲರ ಕಾಲುಗಳಿಗೆ ಕೋಳವನ್ನು ಹಾಕಿಸಿದನು. ರೋಮಾಯ ಸೆರೆಮನೆಯಲ್ಲಿ ಇಂತಹ ಕೋಳಗಳನ್ನು ಅಪರಾಧಿಗಳ ಕಾಲುಗಳು ಅಗಲಿಸಲ್ಪಡುವಂತೆ ಮಾಡಲು ಇಡಲಾಗಿತ್ತು; ಇದರ ಫಲಿತವಾಗಿ ಕೈದಿಗಳಿಗೆ ಬಹಳ ತೊಂದರೆಯಾಗುತ್ತಿತ್ತು.

2 ಕೊರಿಂಥ 11:25 ರಲ್ಲಿ ಪೌಲನು ತಾನು ಮೂರು ಸಾರಿ ಛಡಿಗಳಿಂದ ಹೊಡೆಯಲ್ಪಟ್ಟೆನು ಎಂದು ಬರೆಯುತ್ತಾನೆ. ಫಿಲಿಪ್ಪಿಯಲ್ಲಿ ಹೊಡೆಲ್ಪಟ್ಟಿದ್ದು ಆ ಮೂರು ಸಾರಿಗಳಲ್ಲಿ ಒಂದಾಗಿತ್ತು.

**25** ಬಳಿಕ ಈ ಇಬ್ಬರು ಅಪೊಸ್ತಲರು ಏನು ಮಾಡಿದರು? ಅವರು ಅಲ್ಲಿ ಛಡಿಗಳಿಂದ ಹೊಡೆಸಿಕೊಂಡವರಾಗಿ ಅವರ ಕಾಲುಗಳು ಕೋಳಗಳಲ್ಲಿ ಅಗಲ್ಪಟ್ಟವುಗಳಾಗಿ ಅವರು ಸೆರೆಮನೆಯಲ್ಲಿ ಕುಳಿತು ಕೊಂಡಿದ್ದರು. ಹಾಗಾದರೆ ಅವರು

ಏನು ಮಾಡಿದರು? ಅವರು ದೇವರಿಗೆ ಸ್ತುತಿಸ್ತೋತ್ರಗಳನ್ನು ಹಾಡಲಾರಂಭಿಸಿದರು! ಸೆರೆಮನೆಯಲ್ಲಿದ್ದ ಇತರ ಕೈದಿಗಳು ಮೂಕವಿಸ್ಮಿತರಾಗಿರಬೇಕು!

**26** ಬಳಿಕ ದೇವರು ಭೂಕಂಪದ ಮೂಲಕ ಸೆರೆಮನೆಯ ದ್ವಾರಗಳು ತೆರೆಯಲ್ಪಡುವಂತೆಯೂ, ಕೈದಿಗಳ ಸರಪಣಿಗಳು ಕಳಚುವಂತೆಯೂ ಮಾಡಿದನು – ಪೌಲ ಸೀಲರ ಸರಪಣಿಗಳು ಮಾತ್ರವೇ ಅಲ್ಲ ಇತರ ಎಲ್ಲರ ಸರಪಣಿಗಳು ಸಹ ಕಳಚುವಂತೆ ಮಾಡಿದನು. ಅಂತಹ ಸರಪಣಿಗಳು ಸೆರೆಮನೆಯ ಗೋಡೆ ಹಾಗು ನೆಲಗಳಿಗೆ ಸುರಕ್ಷಿತವಾಗಿ ಜೋಡಿಸಲ್ಪಟ್ಟಿದ್ದವು ; ಹಾಗಿದ್ದರೂ, ದೇವರು ಅವು ಗಳನ್ನು ಕಿತ್ತು ಬರುವ ಹಾಗೆ ಮಾಡಿದನು.

**27** ಸೆರೆಯ ಅಧಿಕಾರಿಯು ಭೂಕಂಪದಿಂದ ಎಚ್ಚರಗೊಂಡು ಸೆರೆಮನೆಗೆ ಓಡಿಹೋದನು. ಸೆರೆಮನೆಯ ಬಾಗಿಲುಗಳು ಸಂಪೂರ್ಣವಾಗಿ ತೆರೆದು ಕೊಂಡಿದ್ದನ್ನು ನೋಡಿ ತಕ್ಷಣವೇ ಸೆರೆಯಾಳುಗಳೆಲ್ಲಾ ಪಾರಾಗಿರಬೇಕೆಂದು ಊಹಿಸಿಕೊಂಡನು. ರೋಮಾಯದ ಸೆರೆಯ ಅಧಿಕಾರಿಗೆ ಇದಕ್ಕಿಂತಲೂ ದೊಡ್ಡ ಅವಮಾನವು ಇನ್ನೊಂದಿರಲಿಲ್ಲ. ಸೆರೆಯ ಅಧಿಕಾರಿಯು ತನ್ನ ಸೆರೆಯಾಳು ಪಾರಾಗುವಂತೆ ಅನುಮತಿಸಿದ್ದಕ್ಕಾಗಿ ಮರಣಂಡನೆಯನ್ನು ಹೊಂದುವೆನೆಂದು ಹೆದರಿ (ಅ.ಕೃತ್ಯ 12:18-19), ಸೆರೆ ಅಧಿಕಾರಿಯು ತಕ್ಷಣವೇ ತನ್ನನ್ನು ಸಾಯಿಸಿಕೊಳ್ಳುವದೇ ಉತ್ತಮವಾದ ಸಂಗತಿಯೆಂದು ತಿರ್ಮಾನಿಸಿಕೊಂಡನು.

**28** ಕತ್ತಲೆಯಿದ್ದದರಿಂದ ಸೆರೆಯ ಅಧಿಕಾರಿಯು ಸೆರೆಯ ಒಳಗೆ ನೋಡ ಲಾಗಲಿಲ್ಲ. ಆದರೆ ಪೌಲನು ಒಳಗಿನಿಂದಲೇ ಸೆರೆಯ ಅಧಿಕಾರಿಯು ತನ್ನನ್ನು ಸಾಯಿಸಿಕೊಳ್ಳಲು ಕತ್ತಿ ಹಿರಿಯುವದನ್ನು ಕಾಣಲು ಶಕ್ತನಾದನು. ಪೌಲನು "ನಾವೆಲ್ಲರೂ ಇಲ್ಲೇ ಇದ್ದೇವೆ" ಎಂದು ಕೂಗಿ ಹೇಳಿದನು. ಇತರ ಕೈದಿಗಳು ತಪ್ಪಿಸಿಕೊಳ್ಳಲು ಪ್ರಯತ್ನವನ್ನು ಸಹ ಮಾಡಿರಲಿಲ್ಲ. ಬಹುಶಃ ಅಲ್ಲೇ ಉಳಿಯಬೇಕೆಂದು ಪೌಲನು ಅವರಿಗೆ ಅಪ್ಪಣೆಮಾಡಿದ್ದನು, ಮತ್ತು ಆತನು ಒಂದು ವಿಧದಲ್ಲಿ ದೇವರಿಂದ ಕಳುಹಿಸಲ್ಪಟ್ಟವನೆಂದು ಅವರು ಗುರುತಿಸಿದ್ದರಾದ್ದರಿಂದ, ಅವರು ಆತನಿಗೆ ವಿಧೇಯರಾಗಿದ್ದರು. ದೇವರು ಅವರ ಕಾಲುಗಳನ್ನು ಮುಕ್ತಗೊಳಿಸಿದ್ದನು, ಆದರೆ ಅವರ ಹೃದಯಗಳನ್ನು ಬಂಧಿಸಿದ್ದನು.

**29-30** ಸೆರೆಯ ಅಧಿಕಾರಿಯು ಭಯದಿಂದ ನಡುಗುತ್ತಾ ಪೌಲ ಸೀಲರ ಪಾದಗಳ ಮುಂದೆ ಬಿದ್ದನು. ಬಹುಶ: ಸೆರೆಯ ಅಧಿಕಾರಿಯು ಇದಕ್ಕೆ ಮುಂಚೆ ಕಣಿಹೇಳುವದಾಸಿಯು " ಈ ಮನುಷ್ಯರು ಪರಾತ್ಪರನಾದ ದೇವರ ದಾಸರು; ನಿಮಗೆ ರಕ್ಷಣೆಯ ಮಾರ್ಗವನ್ನು ಸಾರುತ್ತಾರೆ" ಎಂದು ಕೂಗುವದನ್ನು ಕೇಳಿದ್ದನು (ವಚನ 17). ಈ ಮನುಷ್ಯರು ದೇವರ ಬಲವನ್ನು ಹೊಂದಿದವರಾಗಿದ್ದರು. ಅವರನ್ನು ಹಿಡಿದಿಟ್ಟು ಕೊಳ್ಳಲು ಯಾವ ಸೆರೆಮನೆಗೂ ಸಾದ್ಯವಿರಲಿಲ್ಲ. "ಇಂತಹ ಮನುಷ್ಯರು ನನಗೆ ದೇವರ ಕೋಪಾಗ್ನಿಯಿಂದ ತಪ್ಪಿಸಿಕೊಳ್ಳುವದು ಹೇಗೆ ಎಂಬದನ್ನು ತೋರಿಸಬಲ್ಲರು" ಎಂದು ಸೆರೆಮನೆಯ ಅಧಿಕಾರಿಯು ನೆನಸಿದನು. ಸೆರೆಯ ಅಧಿಕಾರಿಯು ತನ್ನನ್ನು ಸಾಯಿಸಿಕೊಳ್ಳುವದರಿಂದ ರಕ್ಷಿಸಲ್ಪಟ್ಟವನಾಗಿ ಈಗ ತನ್ನ ಆತ್ಮದ ಕುರಿತಾಗಿ ಚಿಂತಿಸಲು ಪ್ರಾರಂಭಿಸಿದ್ದನು.

**31-34** ಪೌಲ ಸೀಲರು ಸೆರೆಯ ಅಧಿಕಾರಿ ಹಾಗು ಆತನ ಕುಟುಂಬದವರಿಗೆ ಕರ್ತನ ವಾಕ್ಯವನ್ನು ತಿಳಿಸಿದ ನಂತರ ಅವರಿಗೆ ದೀಕ್ಷಾಸ್ನಾನ ಮಾಡಿಸಿದರು. ಇನ್ನು ತಡಮಾಡುವದಕ್ಕೆ ಯಾವ ಕಾರಣವು ಇರಲಿಲ್ಲ. ಅಷ್ಟು ಮಾತ್ರವಲ್ಲದೆ, ಪೌಲ ಸೀಲರು ನಾಳೆಯಷ್ಟರೊಳಗೆ ಹೊರಟು ಹೋಗಬಹುದು. ಸೆರೆಮನೆ ಅಧಿಕಾರಿ ಹಾಗು ಆತನ ಕುಟುಂಬದವರೆಲ್ಲರು ನಂಬಿದ್ದರಿಂದ ಉಲ್ಲಾಸಭರಿತರಾಗಿದ್ದರು. ಅಲ್ಲದೆ ಅವರು ಪವಿತ್ರಾತ್ಮನಿಂದ ಸಹ ತುಂಬಿದ್ದರೆಂದು ಇದರ ಮೂಲಕ ಹೇಳಬಹುದು; ಪವಿತ್ರಾತ್ಮನ ಫಲಗಳಲ್ಲಿ ಸಂತೋಷವೂ ಒಂದಾಗಿದೆ (ಗಲಾತ್ಯ 5:22).

**35-36** ಪೌಲ ಸೀಲರನ್ನು ಹೊಡೆದದ್ದರ ಜೊತೆಗೆ ಒಂದು ರಾತ್ರಿ ಸೆರೆಮನೆಯಲ್ಲಿ ಇಟ್ಟು ತಕ್ಕಷ್ಟು ಶಿಕ್ಷೆಯನ್ನು ನೀಡಿದಂತಾಯಿತೆಂದು ಫಿಲಿಪ್ಪಿಯ ಅಧಿಪತಿಗಳು ಅಂದುಕೊಂಡರು. ಆದ್ದರಿಂದ ಮರುದಿನ ಬೆಳಗ್ಗೆ ಅವರನ್ನು ಬಿಟ್ಟು ಬಿಡು ಎಂದು ಅಪ್ಪಣೆ ಕೊಟ್ಟರು.

**37** ಪೌಲ ಸೀಲರಿಬ್ಬರೂ ರೋಮಾಪು ರದ ಹಕ್ಕುದಾರರಾಗಿದ್ದರು. [70] ರೋಮಾಯ ಕಾನೂನಿನ ಪ್ರಕಾರ ರೋಮಾಪು ರದ ಹಕ್ಕು ದಾರ ನೊಬ್ಬನನ್ನು ಹೊಡೆಯುವದು ಕಾನೂನಿಗೆ ವಿರುದ್ಧವಾಗಿತ್ತು. ಹೀಗಿರುವದರಿಂದ ಪೌಲ ಸೀಲರನ್ನು ಹೊಡೆಸುವದಕ್ಕೆ ಕಾರಣವಾಗಿದ್ದ ಅಧಿಪತಿಗಳು ಭಯಂಕರ ತಪ್ಪೊಂದನ್ನು ಮಾಡಿದ್ದರು. ಅವರು ಭಯಹಿಡಿದವರಾದರು. ಅವರ ಈ ಕೃತ್ಯದ ಸುದ್ಧಿಯು ಹರಡುವದಾದರೆ ಅವರು ಕಠಿಣವಾಗಿ ಶಿಕ್ಷಿಸಲ್ಪಡುವವರಾಗಿದ್ದರು. ಹಿಂದಿನ ದಿನ ಪೌಲ ಸೀಲರು ತಾವು ರೋಮಾಪು ರದ ಹಕ್ಕುದಾರರೆಂಬದನ್ನು ಯಾರಿಗೂ ಹೇಳಿರಲಿಲ್ಲ ವೆಂದು ತೋರುತ್ತದೆ. ಅವರು ಕ್ರಿಸ್ತನಿಗಾಗಿ ಹಿಂಸೆ ತಾಳಲು ಸಿದ್ಧರಾಗಿದ್ದರು. ಅವರು ತಾವು ಹೆದರಿದ್ದಾರೆಂದು ತೋರಿಸಿಕೊಳ್ಳಲು ಇಷ್ಟ ಪಡಲಿಲ್ಲ. ಆದರೆ ಈಗ ಪಟ್ಟಣದ ಅಧಿಪತಿಗಳು ಎಲ್ಲರೆದುರಿನಲ್ಲಿ ತಮಗೆ ಕ್ಷಮೆ ಕೇಳಬೇಕೆಂದು ಕೋರಿದರು. ಹೀಗೆ ಮಾಡುವಂತೆ ಅವರನ್ನು ಒತ್ತಾಯ ಪಡಿಸುವದರ ಮೂಲಕ ಜನರು ಕ್ರಿಸ್ತನ ಸುವಾರ್ತೆ ಹಾಗು ಸೇವಕರೆಡೆಗೆ ಹೆಚ್ಚು ಗೌರವವನ್ನು ಹೊಂದುವರೆಂದು ಪೌಲ ಸೀಲರು ನಿರೀಕ್ಷಿಸಿದರು. ಅಲ್ಲದೆ ಜನರು ಫಿಲಿಪ್ಪಿಯಲ್ಲಿನ ನೂತನ ವಿಶ್ವಾಸಿಗಳೆಡೆಗೆ ಉನ್ನತ ದೃಷ್ಟಿಕೋನವನ್ನು ಹೊಂದುವರೆಂದು ಸಹ ಅವರು ನಿರೀಕ್ಷಿಸಿದರು.

**38-40** ಅಧಿಪತಿಗಳು ಪೌಲಸೀಲರನ್ನು ಸಾರ್ವಜನಿಕರ ಎದುರಿನಲ್ಲಿಯೇ ಸೆರಮನೆಗೆ ದೊಬ್ಬಿದ್ದರು; ಈಗ ಅವರು ಬಂದು ಸಾರ್ವಜನಿಕರೆದುರಿನಲ್ಲಿ ಹೊರಗೆ ಹೋಗಗೊಡಿಸಲಿ! ಆದುದರಿಂದ, ಅಧಿಪತಿಗಳು ಬಂದು ಪೌಲ ಸೀಲರಿಗೆ ಕ್ಷಮೆಯನ್ನು ಕೇಳಿ ಬಿಡುಗಡೆಗೊಳಿಸಿ ದಯವಿಟ್ಟು ಊರನ್ನು ಬಿಟ್ಟು ಹೋಗಬೇಕೆಂದು ಬೇಡಿಕೊಂಡರು. ಹೀಗಿದ್ದರೂ, ಪೌಲ ಸೀಲರು

ಬಿಟ್ಟು ಹೋಗುವದಕ್ಕೆ ಮುಂಚೆ ಲುದ್ಯಳ ಮನೆಗೆ ಹೋಗಿ ಇವರನ್ನು ನೋಡಲು ಅಲ್ಲಿಕೂಡಿಬಂದಿದ್ದ ನೂತನ ಶಿಷ್ಯರನ್ನು ಧೈರ್ಯಗೊಳಿಸಿ ಆದರಿಸಿದರು.

ಫಿಲಿಪ್ಪಿಯ ಸಭೆಯು ಶೀಘ್ರವಾಗಿಯೂ, ಬಲವಾಗಿಯೂ ಬೆಳೆಯಿತೆಂಬದನ್ನು ಹೊಸ ಒಡಂಬಡಿಕೆಯಲ್ಲಿ ಪೌಲನು ಫಿಲಿಪ್ಪಿಯವರಿಗೆ ಬರೆದ ಪತ್ರಿಕೆಯನ್ನು ಓದುವದರಿಂದ ನಾವು ತಿಳಿದು ಕೊಳ್ಳುವವರಾಗಿದ್ದೇವೆ. ಪೌಲನ ಪ್ರಯಾಣಗಳಲ್ಲಿ ಆತನ ಸಹಾಯಕ್ಕಾಗಿ ಫಿಲಿಪ್ಪಿಯದ ವಿಶ್ವಾಸಿಗಳು ಎಡೆ ಬಿಡದೆ ಕಾಣಿಕೆಗಳನ್ನು ಕಳುಹಿಸುತ್ತಿದ್ದರು (ಫಿಲಿಪ್ಪಿ 4:10, 14-16). ಮತ್ತು ಅವರ ಪ್ರೀತಿ ಹಾಗು ನಂಬಿಗಸ್ಥಿಕೆಯ ಸಾಕ್ಷಿಯ ಮೂಲಕ ಅವರು ಪೌಲನಿಗೆ ನಿರಂತರ ಆನಂದವನ್ನು ನೀಡಿದರು.

---

## ಅಧ್ಯಾಯ - 17

### ಪೌಲ ಸೀಲರು ಥೆಸಲೋನಿಕಕ್ಕೆ ಹೋದದ್ದು (17:1-9)

**1** ಥೆಸಲೋನಿಕವು ಮಕದೋನ್ಯ ಸೀಮೆಯ ರಾಜಧಾನಿಯಾಗಿತ್ತು. ಇಂದು ಆ ಪಟ್ಟಣಕ್ಕೆ ಸಲೊನಿಕಾ ಎಂದು ಹೆಸರಿದ್ದು ಅದು ಇಂದಿಗೂ ಸಹ ಉತ್ತರ ಗ್ರೀಸ್‌ನ ಪ್ರಮುಖ ಪಟ್ಟಣಗಳಲ್ಲಿ ಒಂದಾಗಿದೆ. ಈ ಪಟ್ಟಣದಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟಿದ್ದ ಸಭೆಗಾಗಿಯೇ ಪೌಲನು ಹೊಸ ಒಡಂಬಡಿಕೆಯಲ್ಲಿನ ಥೆಸಲೋನಿಕದವರಿಗೆ ಬರೆದ 1 ಮತ್ತು 2ನೇ ಪತ್ರಗಳನ್ನು ಬರೆದಿರುತ್ತಾನೆ (1 ಥೆಸಲೋನಿಕ 2:1-2).

**2-3** ಕ್ರಿಸ್ತನು ಬಾಧೆಯನ್ನನುಭವಿಸಿ ಸತ್ತು ಎದ್ದು ಬರುವದು ಅಗತ್ಯ. ಇಲ್ಲಿ ನಾವು ಪೌಲನ ಸುವಾರ್ತೆಯ ಸಾರಾಂಶವನ್ನು ನೋಡುತ್ತೇವೆ. ಮೊದಲನೆಯದಾಗಿ ಕ್ರಿಸ್ತನು ನಮ್ಮ ಪಾಪಗಳಿಗಾಗಿ ಬಾಧೆಯನ್ನು ಅನುಭವಿಸಿಬೇಕಾಗಿತ್ತು. ಆತನು ನಮ್ಮ ಸ್ಥಾನದಲ್ಲಿ ಸಾಯಬೇಕಾಗಿತ್ತು.

ಎರಡನೆಯದಾಗಿ, ಕ್ರಿಸ್ತನು ಸತ್ತವರೊಳಗಿಂದ ಎದ್ದು ಬರಬೇಕಾಗಿತ್ತು. ಆತನು ಪರಲೋಕಕ್ಕೆ ಏರಿಹೋಗಿ ದೇವರ ಬಲಗಡೆಯಲ್ಲಿ ಕುಳಿತುಕೊಂಡಿರುತ್ತಾನೆ. ಯೆಹೂದ್ಯರ ಶಾಸ್ತ್ರಗಳ (ಹಳೆ ಒಡಂಬಡಿಕೆ) ಪ್ರವಾದಿಗಳು ಕ್ರಿಸ್ತನು ಬರುವನೆಂಬದಾಗಿ ಪ್ರವಾದಿಸಿದ್ದರು. ಪೌಲನು, "ಯೇಸುವೇ ಆ ಕ್ರಿಸ್ತನು" (ವಚನ 3), ಎಂದನು, ಯೆಹೂದ್ಯರು ನಿರೀಕ್ಷಿಸುತ್ತಿದ್ದ ಕ್ರಿಸ್ತನು (ಮೆಸ್ಸೀಯನು) (ಲೂಕ 24:25-27, 45-46; 1 ಕೊರಿಂಥ 15:3-4 ನೋಡಿರಿ).

**4** ಯೆಹೂದ್ಯರಲ್ಲಿ ಕೆಲವರೂ ದೇವಭಕ್ತರಾದ ಗ್ರೀಕರಲ್ಲಿ ದೊಡ್ಡಗುಂಪು (ಒಬ್ಬನೇ ಸತ್ಯ ದೇವರನ್ನು ಆರಾಧಿಸುತ್ತಿದ್ದ ಗ್ರೀಕರು) ಪೌಲನ ಸಂದೇಶವನ್ನು ಸ್ವೀಕರಿಸಿಕೊಂಡರು. ಈ ಗ್ರೀಕರೊಳಗೆ ಅಪೊಸ್ತಲರ ಕೃಕ್ಯಗಳು 20:4ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಅರಿಸ್ತಾರ್ಕನೂ ಸೆಕುಂದನೂ ಇದ್ದರು.

**5** ಪಿಸಿದ್ಯದ ಅಂತಿಯೋಕ್ಯ ಹಾಗು ಇತರ ಊರುಗಳಲ್ಲಿನ ಯೆಹೂದ್ಯರ ಹಾಗೆಯೇ (ಅ.ಕೃತ್ಯ 13:50) ಥೆಸಲೋನಿಕದ ಯೆಹೂದ್ಯರು ಸಹ ಹೊಟ್ಟೆಕಿಚ್ಚಿನಿಂದ ಪೌಲ ಮತ್ತು ಆತನ ಸಂಗಡಿಗರನ್ನು ವಿರೋಧಿಸಿದರು. ದೇವಭಕ್ತರಾದ ಗ್ರೀಕರಲ್ಲಿ ಬಹುಮಂದಿ ಅವರ ಬೋಧನೆಯ ಬದಲಾಗಿ ಪೌಲನ ಬೋಧನೆಯನ್ನು ಅನುಸರಿಸಲು ಪ್ರಾರಂಭಿಸಿದ್ದರಿಂದ ಯೆಹೂದ್ಯರು ಹೊಟ್ಟೆಕಿಚ್ಚುಪಟ್ಟರು.

**6-7** ಪೌಲ ಸೀಲರು ಯಾಸೋನನೆಂಬ ನೂತನ ವಿಶ್ವಾಸಿಯೊಬ್ಬನ ಮನೆಯಲ್ಲಿ ಇಳಕೊಂಡಿದ್ದರು. ಪೌಲ ಸೀಲರು ಸಿಕ್ಕದೆ ಹೊದಾಗ ಆ ಜನರು ಯಾಸೋನನನ್ನೂ ಕೆಲವು ಮಂದಿ ಸಹೋದರರನ್ನೂ (ನೂತನ ಕ್ರಿಸ್ತರು) ಹಿಡಿದು ಕೊಂಡು ಊರಿನ ಅಧಿಕಾರಿಗಳ ಬಳಿಗೆ ಎಳಕೊಂಡು ಹೋದರು. ಯಾಸೋಮನು ಲೋಕವನ್ನು ಅಲ್ಲಕಲ್ಲೋಲ ಮಾಡಿದ ಈ ಮನುಷ್ಯರಿಗೆ ತನ್ನ ಮನೆಯಲ್ಲಿ ಸ್ಥಳ ನೀಡಿದ್ದಾನೆಂದು ಅವರು ಆರೋಪಿಸಿದರು (ವಚನ 6). ಒಂದು ವಿಧದಲ್ಲಿ, ಈ ಅಪವಾದವು ನಿಜವಾಗಿತ್ತು. ಯಾಕೆಂದರೆ ಪೌಲ ಸೀಲರು ನಿಜವಾಗಿಯೂ ಸೈತಾನನ ರಾಜ್ಯವನ್ನು ಬುಡಮೇಲು ಮಾಡುತ್ತಿದ್ದರು.

ಪೌಲ ಸೀಲರ ಮಲೆ ಅನ್ಯಧರ್ಮವನ್ನು ಬೋಧಿಸಿದ ಆರೋಪವನ್ನು ಮಾತ್ರವೇ ಅಲ್ಲ (ಅ.ಕೃತ್ಯ 16:20-21 ನೋಡಿರಿ), ಆದರೆ ರೋಮಾಯ ಚಕ್ರವರ್ತಿಯಾದ ಕೈಸರಿನಿಗೆ[71] ಹೊರತಾಗಿ ಇನ್ನೊಬ್ಬ ಅರಸನಿರುತ್ತಾನೆಂದು ಇವರು ಸಾರುತ್ತಾರೆಂಬ ಆರೋಪವನ್ನು ಸಹ ಹೊರಿಸಿದರು. ಇನ್ನಾವದೇ ಅರಸನನ್ನು ಘನಪಡಿಸುವದು ಕೈಸರನ ವಿರುದ್ಧ ಒಂದು ದೊಡ್ಡ ಅಪರಾಧವಾಗಿತ್ತು. ಆದುದರಿಂದ ಜನರ ಗುಂಪು "ಇವರು ನಿಶ್ಚಯವಾಗಿಯೂ ರೋಮಾಯ ಚಕ್ರವರ್ತಿಯ ವೈರಿಗಳಾಗಿರಬೇಕು" ಎಂದು ಯೋಚಿಸಿಕೊಂಡರು.

**8-9** ಊರಿನ ಅಧಿಕಾರಿಗಳಿಗೆ ಪೌಲ ಸೀಲರು ಸಿಕ್ಕದೆ ಹೋದಾಗ ಅವರು ಯಾಸೋನ ಹಾಗು ಇತರ ವಿಶ್ವಾಸಿಗಳಿಂದ ಈ ಬೋಧಕರು ಪು ನಃ ಬರದಿರುವದನ್ನು ನಿಶ್ಚಯಪಡಿಸಲು ಹೊಣೆಯನ್ನು ತೆಗೆದುಕೊಂಡರು. ಒಂದು ವೇಳೆ ಪೌಲ ಸೀಲರು ಪು ನಃ ಊರಿನಲ್ಲಿ ಕಾಲಿಡುವದಾದರೆ ಯಾಸೋನ ಹಾಗು ಆತನ ಸ್ನೇಹಿತರು ಜುಲ್ಮಾನೆ ಭರಿಸಬೇಕಾಗುವದು (1 ಥೆಸಲೋನಿಕದವರಿಗೆ 2:17-18 ನೋಡಿರಿ).

ಪೌಲ ಸೀಲರು ಅವಸರವಾಗಿ ಥೆಸಲೋನಿಕವನ್ನು ಬಿಡಬೇಕಾಯಿತಾದರೂ ಕೆಲವು ವಾರಗಳಲ್ಲಷ್ಟೇ ಅಲ್ಲಿ ಸ್ಥಾಪಿಸಲ್ಪಟ್ಟಿದ್ದ ನೂತನ ಸಭೆಯು ನಂಬಿಕೆಯಲ್ಲಿ ಬೆಳೆಯಿತು. ಪೌಲನು ಹೊಸ ಒಡಂಬಡಿಕೆಯಲ್ಲಿ ಥೆಸಲೋನಿಕದವರಿಗೆ ಬರೆದ ಎರಡು ಪತ್ರಿಕೆಗಳನ್ನು ಓದುವದರ ಮೂಲಕ ಫಿಲಿಪ್ಪಿಯದ ಕ್ರೈಸ್ತರಂತೆಯೇ ಥೆಸಲೋನಿಕದ ಕ್ರೈಸ್ತರು ಸಹ ತಮ್ಮ ನಂಬಿಕೆ ಹಾಗು ಸಾಕ್ಷಿಯ ಮೂಲಕ ಪೌಲನಿಗೆ ಆನಂದವನ್ನು ತಂದರೆಂಬದನ್ನು ತಿಳಿದುಕೊಳ್ಳಬಹುದು (1 ಥೆಸಲೋನಿಕ 1:6-10 ನೋಡಿರಿ).

## ಪೌಲ ಸೀಲರು ಬೆರೋಯಕ್ಕೆ ಹೋದದ್ದು (17:10-15)

**10** ಬೆರೋಯವು ಥೆಸಲೋಕದಿಂದ ಪಶ್ಚಿಮಕ್ಕೆ ಸುಮಾರು ಅರವತ್ತು ಮೈಲುಗಳಷ್ಟು ದೂರದಲ್ಲಿನ ಊರಾಗಿತ್ತು. ಕ್ರಿಸ್ತನು ತನ್ನ ಶಿಷ್ಯರಿಗೆ, "ಒಂದು ಊರಲ್ಲಿ ನಿಮ್ಮನ್ನು ಹಿಂಸೆಪಡಿಸಿದರೆ ಮತ್ತೊಂದು ಊರಿಗೆ ಓಡಿಹೋಗಿರಿ" ಎಂದು ಹೇಳಿದ್ದನು (ಮತ್ತಾಯ 10:23). ಆದರೆ ಕ್ರೈಸ್ತರು ಅಡಿಗಿಕೊಳ್ಳುವದಕ್ಕಾಗಿ ಫಲಾಯನ ಮಾಡುವದಿಲ್ಲ; ಇನ್ನೊಂದು ಸ್ಥಳದಲ್ಲಿ ಬೋಧಿಸುವದಕ್ಕು ಸಾಕ್ಷಿ ನೀಡುವದಕ್ಕೂ ಅವರು ಪಲಾಯನ ಮಾಡುತ್ತಾರೆ. ಕ್ರೈಸ್ತರನ್ನು ಹಿಂಸಿಸುವವರ ಮೂಲಕ ಸುವಾರ್ತೆಯನ್ನು ತಡೆಯುತ್ತಿದ್ದೇನೆಂದು ಸೈತಾನನು ಯೋಚಿಸುತ್ತಾನೆ; ಆದರೆ ವಾಸ್ತವದಲ್ಲಿ ಆತನು ಹರಡುವಂತೆ ಮಾಡುವವನಾಗಿದ್ದಾನೆ!

**11-12** ಬೆರೋಯದ ಯೆಹೂದ್ಯರು ಮುಕ್ತ ಮನಸ್ಸುಳ್ಳವರಾಗಿದ್ದು ಈ ನೂತನ ಬೋಧಕನಾದ ಪೌಲನ ಮಾತುಗಳನ್ನು ಆಸಕ್ತಿಯಿಂದ ಕೇಳಿದರು ಮತ್ತು ಬಳಿಕ ಅವರುಪೌಲನು ಹೇಳಿದ ಮಾತುಗಳನ್ನು ತಮ್ಮ ಶಾಸ್ತ್ರ ಗ್ರಂಥಗಳಿಗೆ, ಅಂದರೆ ಹಳೆ ಒಡಂಬಡಿಕೆಗೆ ಹೋಲಿಸಿ ನೋಡಿದರು. ನಾವು ಸಹ ಯಾವಾಗಲೂ ಬೆರೋಯದವರಂತೆ ಮಾಡುವವರಾಗಿರಬೇಕು. ನಾವು ಯಾವದೇ ನೂತನ ಬೋಧನೆಯನ್ನು ಕೇಳಿದಾಗಲೆಲ್ಲಾ ಅದು ಬೈಬಲಿನಲ್ಲಿ ಬರೆದಿರುವ ಪ್ರಕಾರ ಇರುತ್ತದೋ ಎಂಬದನ್ನು ನಿಶ್ಚಯಪಡಿಸಿಕೊಳ್ಳಬೇಕು. ಒಂದು ವೇಳೆ ಅದು ಬೈಬಲ್ ಪ್ರಕಾರವಿಲ್ಲವಾದರೆ ನಾವು ಅದನ್ನು ಮಿಥ್ಯವೆಂದು ತಿಳಿದು ತಿರಸ್ಕರಿಸಬೇಕು.

**13-15** ಥೆಸಲೋನಿಕದ ಯೆಹೂದ್ಯರು ಪೌಲ ಸೀಲರನ್ನು ತಮ್ಮ ಸ್ವ ಊರಿನಲ್ಲಿ ಹಿಂಸಿಸುವದರಲ್ಲಿ ಮಾತ್ರವೇ ತೃಪ್ತಿಗೊಳ್ಳಲಿಲ್ಲ; ಅವರು ಪೌಲ ಸೀಲರನ್ನು ಹಿಂಸಿಸುವದಕ್ಕಾಗಿ ಬೆರೋಯಕ್ಕೆ ಸಹ ಬಂದರು. ಪೌಲನು ತಾನು ಥೆಸಲೋನಿಕದವರಿಗೆ ಬರೆದ ಮೊದಲನೆಯ ಪತ್ರಿಕೆಯಲ್ಲಿ ಯೆಹೂದ್ಯರನ್ನು ಬಹಳ ಕಠಿಣವಾಗಿ ಟೀಕಿಸಿದ್ದರಲ್ಲಿ ಯಾವ ಆಶ್ಚರ್ಯವೂ ಇರುವದಿಲ್ಲ (1 ಥೆಸಲೋನಿಕದವರಿಗೆ 2:14-16).

ಪೌಲನು ಪು ನಃ ಯೆಹೂದ್ಯರಿಂದ ಪಾರಾದನು, ಮತ್ತ ಸಹೋದರರು (ಬೆರೋಯ ಹಾಗು ಥೆಸಲೋನಿಕದಲ್ಲಿನ ನೂತನ ಶಿಷ್ಯರು) ಪೌಲನನ್ನು ಅಥೇನೆಯ ವರೆಗೂ ಕರೆದು ಕೊಂಡು ಹೋದರು, ಇದು ಗ್ರೀಸ್‌ನ ಮುಖ್ಯ ಪಟ್ಟಣಗಳಲ್ಲಿ ಒಂದಾಗಿದ್ದು, ಗ್ರೀಕ್ ಸಂಸ್ಕೃತಿ ಹಾಗು ವಿಧ್ಯೆಯ ಕ್ರೇಂದ್ರ ಸ್ಥಳವಾಗಿತ್ತು.

## ಅಥೇನೆಯಲ್ಲಿ (17:16-21)

**16** ಕ್ರಿಸ್ತ ಪೂರ್ವ 300-500 ವರ್ಷಗಳ ಮುಂಚೆ ಅಥೇನೆಯು ಇಡೀ ಪಾಶ್ಚಾತ್ಯ ಪ್ರಪಂಚದಲ್ಲಿಯೇ ಒಂದು ಅತ್ಯಂತ ಶ್ರೇಷ್ಠ ಹಾಗು ಅತಿ ಪ್ರಾಮುಖ್ಯವಾದ ಪಟ್ಟಣವಾಗಿತ್ತು. ಇದು ಗ್ರೀಕ್ ಸಾಮ್ರಾಜ್ಯದ [72] ರಾಜಧಾನಿ ಸಹ ಆಗಿತ್ತು. ಪಾಶ್ಚಿಮಾತ್ಯ ಜಗತ್ತಿನ ಅತಿ ಪ್ರಸಿದ್ಧರಾದ ತತ್ವಜ್ಞಾನಿಗಳು ಅಥೇನೆಯಲ್ಲಿ ನೆಲೆಸಿದ್ದರು. ಪ್ರಜಾಪ್ರಭುತ್ವದ ವಿಚಾರವು ಮೊದಲು ಅಥೇನೆಯಲ್ಲಿ ಜನ್ಮ ತಾಳಿತು; ಹೀಗೆ, ಅಥೇನೆಯು ಈಗಲೂ ಸಹ ಪ್ರಜಾಪ್ರಭುತ್ವದ ಜನ್ಮಸ್ಥಳ ಎಂದು ಕರೆಯಲ್ಪಡುತ್ತದೆ.

ತರುವಾಯ ಕ್ರಿ.ಪೂ 146 ರಲ್ಲಿ ರೋಮಾಯರು ಅಥೇನೆಯನ್ನು ಗೆದ್ದು ಕೊಂಡು ಗ್ರೀಸ್ ನಲ್ಲೆಲ್ಲಾ ತಮ್ಮ ಅಧಿಕಾರವನ್ನು ವಿಸ್ತರಿಸಿದರು. ಆದರೆ ಅವರು ಅಥೇನೆಯು ಮುಕ್ತ ಪಟ್ಟಣವಾಗಿ ಉಳಿಯುವಂತೆ ಅನುಮತಿಸಿದರು. ನಿಜವಾಗಿಯೂ, ರೋಮಾಯರು ಗ್ರೀಕ್ ಸಂಸ್ಕೃತಿಯನ್ನು ಪ್ರಶಂಸಿಸಿದರು; ಹೀಗೆ ಪೌಲನ ಕಾಲದಲ್ಲಿ ಸಹ ಅಥೇನೆಯು ರೋಮಾಯ ಸಾಮ್ರಾಜ್ಯದಲ್ಲಿ ಸಂಸ್ಕೃತಿ ಹಾಗು ಜ್ಞಾನದ ಮುಖ್ಯ ಕೇಂದ್ರವಾಗಿ ಉಳಿದಿತ್ತು. ವಿಶೇಷವಾಗಿ ಅನೇಕ ಪ್ರಸಿದ್ಧ ಬೋಧಕರು ಹಾಗು ತತ್ವಜ್ಞಾನಿಗಳು ಬೋಧಿಸುವದಕ್ಕೂ, ತರ್ಕಿಸುವದಕ್ಕೂ ಬರುತ್ತಿದ್ದರು (ವಚನ 21).

ಗ್ರೀಕರು ಅನೇಕ ವಿಧವಾದ ದೇವರುಗಳನ್ನು ಆರಾಧಿಸುತ್ತಿದ್ದರು. ಅಥೇನೆಯಲ್ಲಿ ಎಲ್ಲಾ ಸ್ಥಳಗಳಲ್ಲಿಯೂ ದೇವಾಲಯಗಳೂ, ದೇವರ ಮೂರ್ತಿಗಳು ಇದ್ದವು . ಎಲ್ಲೆಲ್ಲಿಯೂ ವಿಗ್ರಹಗಳೇ ಇರುವದನ್ನು ನೋಡಿ ಪೌಲನ ಮನಸ್ಸು ಅವನೊಳಗೆ ಕುದಿಯಿತು. ಅನ್ಯ ಜನರು ತಾವು ಅರ್ಪಿಸುವ ಬಲಿಗಳನ್ನು ದೇವರಿಗಲ್ಲ ದೆವ್ವಗಳಿಗೆ ಅರ್ಪಿಸುತ್ತಾರೆ ಎಂದು ಪೌಲನು ಬರೆದನು (1 ಕೊರಿಂಥ 10:20).

**17** ಪೌಲನು ಅಥೇನೆಯಲ್ಲಿ ಕಾಲ ಕಳೆಯಲು ಯೋಜನೆ ಹಾಕಿಕೊಂಡಿರಲಿಲ್ಲ. ಆದರೆ, ಸಮಯವನ್ನು ವ್ಯರ್ಥಮಾಡಬಾರದೆಂಬುದಕ್ಕಾಗಿ ಅವನು ಸೀಲ ಮತ್ತು ತಿಮೊಥೆಯರಿಗಾಗಿ ಕಾಯುತ್ತಿರುವ ವೇಳೆಯಲ್ಲಿ ಯಾರು ಕೇಳುತ್ತಾರೋ ಅವರಿಗೆ ದೇವರ ವಾಕ್ಯವನ್ನು ಸಾರಲು ಪ್ರಾರಂಭಿಸಿದನು. ಪೌಲನು ಯೆಹೂದ್ಯ ಸಭಾಮಂದಿರಗಳಲ್ಲಿ ಮಾತ್ರವೇ ಬೋಧಿಸಲಿಲ್ಲ, ಗ್ರೀಕರ ಪದ್ಧತಿಯ ಪ್ರಕಾರವಾಗಿ ಆತನು ಪೇಟೆಯಲ್ಲಿ ಸಹ ಬೋಧಿಸಿದನು.

**18** ಎಪಿಕೂರಿಯರ ತತ್ವವಿಚಾರಿಕರು ಎಪಿಕೂರಿಯ ಎಂಬ ಪ್ರಸಿದ್ಧ ತತ್ವಜ್ಞಾನಿಯ ಹಿಂಬಾಲಕರಾಗಿದ್ದರು, ಇತನು ಕ್ರಿಸ್ತನಿಗಿಂತ ಸುಮಾರು ಮೂನ್ನೂರು ವರ್ಷಗಳಿಗೆ ಮುಂಚೆ ಹುಟ್ಟಿದ್ದನು. ಆತನ ತತ್ವಜ್ಞಾನದ ಪ್ರಕಾರ ಮನುಷ್ಯನು ತನ್ನಲ್ಲಿ ಉಲ್ಲಾಸಪಡುತ್ತಾ ಸುಖವಾಗಿ ಇರುವದೇ ಹೊರತು ಜೀವನದಲ್ಲಿ ಇನ್ನಾವ ಅರ್ಥವು ಇರುವದಿಲ್ಲ.
ಸ್ತೋಯಿಕರು ಅದಕ್ಕೆ ತದ್ವಿರುದ್ಧವಾದ ಅಭಿಪ್ರಾಯವನ್ನು ಪ್ರತಿಪಾದಿಸುತ್ತಿದ್ದರು. ಮನುಷ್ಯನು ಬಲಿಷ್ಠನಾಗಿರಬೇಕು ಮತ್ತು ನೋವು ಸಮಸ್ಯೆಗಳನ್ನು ತಾಳಿಕೊಳ್ಳುವವನಾಗಿರಬೇಕೆಂದು ಅವರು ನಂಬುತ್ತಿದ್ದರು. ಮನುಷ್ಯನು ಸುಖವನ್ನು ಹುಡುಕಬಾರದು, ಆದರೆ ಬದಲಾಗಿ ಸ್ವಹತೋಟಿಯನ್ನು ಸಾಧಿಸಿಕೊಳ್ಳಲು ಶ್ರಮಿಸಬೇಕು ಎಂದು ಅವರು ಹೇಳುತ್ತಿದ್ದರು. ಅವರು ಪೌಲನ ಬೋಧನೆಯನ್ನು ಕೇಳಿದಾಗ ಎರಡೂ ಗುಂಪಿನವರು ಆತನನ್ನು ಹೀಯಾಳಿಸಿದರು. ಅವರು ಆತನನ್ನು ಮಾತಾಳಿ ಎಂದು ಕರೆದರು, ಗ್ರೀಕ್ ಭಾಷೆಯಲ್ಲಿ ಅದಕ್ಕೆ ಹಕ್ಕಿಯ ಹಾಗೆ ಸುತ್ತಾಡುತ್ತಾ ಜ್ಞಾನದ ಚಿಕ್ಕತುಂಡುಗಳನ್ನು ಆಯ್ದುಕೊಳ್ಳುವವನು ಎಂಬ ಅರ್ಥವಾಗಿದೆ.
**19-20** ಅರಿಯೊಪಾಗವು ವಾಸ್ತವದಲ್ಲಿ ಅಥೇನೆಯ ಮಧ್ಯದಲ್ಲಿರುವ ಒಂದು ಬೃಹತ್ ಗುಡ್ಡವಾಗಿದೆ. ಆಡಳಿತಗಾರ ಸಮಾಲೋಚನಾ ಸಭೆ ಹಾಗು ಪಟ್ಟಣದ ಹಿರಿಯರು ಆ ಗುಡ್ಡದ ತುದಿಯಲ್ಲಿ ಸೇರಿಬರುತ್ತಿದ್ದರು. ಕಾಲ ಕ್ರಮೇಣ ಸಮಾಲೋಚನಾ ಸಭೆಯೇ ಅರಿಯೊಪಾಗ ಎಂದು ಹೆಸರು ಹೊಂದಿತು. ಸಮಾಲೋಚನಾ ಸಭೆಯು ಪಟ್ಟಣದಲ್ಲಿ ನಡೆಯುವ ಪ್ರತಿಯೊಂದು ಸಂಗತಿಗಳ ಮೇಲೆ ಬಹಳ ಅಧಿಕಾರವನ್ನು ಹೊಂದಿತ್ತು. ಪೌಲನ ಕಾಲದಲ್ಲಿ ಅಥೇನೆಗೆ ಬೋಧಿಸಲು ಬಂದ ಎಲ್ಲಾ ಹೊಸ ಬೋಧಕರನ್ನೂ ಸಮಾಲೋಚನಾ ಸಭೆಯು ಪ್ರಶ್ನಿಸುತ್ತಿತ್ತು. ಹೀಗೆ ಪೌಲನು ತನ್ನ ಬೋಧನೆಯನ್ನು ವಿವರಿಸುವದಕ್ಕಾಗಿ ಸಮಾಲೋಚನಾ ಸಭೆಗೆ (ಅರಿಯೊಪಾಗ) ಕರೆತರಲ್ಪಟ್ಟನು.
**21** ರೋಮಾಯರು ಗ್ರೀಕರನ್ನು ಜಯಿಸಲು ಶಕ್ತರಾಗುವದಕ್ಕೆ ಮುಖ್ಯ ಕಾರಣಗಳಲ್ಲೊಂದು ಯಾವದೆಂದರೆ, ಗ್ರೀಕರು ಹೋರಾಟ ಮಾಡುವದಕ್ಕಿಂತಲೂ ಹೆಚ್ಚಾಗಿ ಮಾತಾಡುವದರಲ್ಲಿ ಹೆಚ್ಚು ಸಮಯಕಳೆಯುತ್ತಿದ್ದರು.

## ಅರಿಯೊಪಾಗದ ಮುಂದೆ ಪೌಲನು ಉಪನ್ಯಾಸ ಮಾಡಿದ್ದು (17:22-34)

**22** ಪೌಲನು ಜನರಿಗೆ ತಕ್ಕಂತೆ ತನ್ನ ಬೋಧನೆಯನ್ನು ಬದಲಾಯಿಸುತ್ತಿದ್ದನು. ಪೌಲನು ಯೆಹೂದ್ಯರಿಗೂ, ದೇವಭಕ್ತರಿಗೂ (ಒಬ್ಬನೇ ಸತ್ಯ ದೇವರ ಆರಾಧಕರು) ಮಾಡಿದ ಬೋಧನೆಯು ಅತ್ಯುನ್ನತ ಉದಾಹರಣೆಯು ಆತನು ಪಿಸಿದ್ಯದ ಅಂತಿಯೋಕ್ಯದಲ್ಲಿನ ಯೆಹೂದ್ಯ ಸಭಾಮಂದಿರದಲ್ಲಿ ನೀಡಿದ ಸಂದೇಶದಲ್ಲಿ ಕಂಡು ಕೊಳ್ಳಬಹುದು (ಅ.ಕೃತ್ಯ 13:16-41). ಈ ಭಾಗದಲ್ಲಿ ಪೌಲನು ಗ್ರೀಕರಿಗೆ ನೀಡಿದ ಸಂದೇಶದ ಉತ್ತಮ ಉದಾಹರಣೆಯನ್ನು ಕಾಣುತ್ತೇವೆ, ಅವರಲ್ಲಿ ಬಹು ಪಾಲು ಜನರು ಗ್ರೀಕ್ ಧರ್ಮದ ಅನೇಕ ಮಿಥ್ಯ ದೇವರುಗಳನ್ನು ಪೂಜಿಸುತ್ತಿದ್ದರು. ಆದುದರಿಂದ ಪೌಲನು ಜಗತ್ತನ್ನೂ ಅದರಲ್ಲಿರುವ ಎಲ್ಲಾ ವಸ್ತುಗಳನ್ನೂ ಉಂಟು ಮಾಡಿದ ದೇವರನ್ನು ಬಣ್ಣಿಸುವದರೊಂದಿಗೆ ತನ್ನ ಉಪನ್ಯಾಸವನ್ನು ಪ್ರಾರಂಭಿಸುತ್ತಾನೆ (24). ಮತ್ತು ಈ ದೇವರೇ ನೀತಿಗನುಸಾರವಾಗಿ ಭೂಲೋಕದ ನ್ಯಾಯ ವಿಚಾರಣೆ ಮಾಡುತ್ತಾನೆಂದು ಹೇಳುತ್ತಾ ತನ್ನ ಉಪನ್ಯಾಸವನ್ನು ಮುಕ್ತಾಯಗೊಳಿಸುತ್ತಾನೆ (ವಚನ 31).

ಅಥೇನೆಯ ಜನರು ಅತಿ ಧಾರ್ಮಿಕರಾಗಿದ್ದರು. ಆದರೆ ಧರ್ಮವೇ ಆಗಲಿ ಅಥವಾ ಅವರ ಧಾರ್ಮಿಕ ಆಚಾರಗಳೇ ಆಗಲಿ ಜನರಿಗೆ ಯಾವ ಪ್ರಯೋಜನವನ್ನು ಉಂಟು ಮಾಡಿರಲಿಲ್ಲ. ಲಕ್ಷಾಂತರ ಜನರು ವಿವಿಧ ಧರ್ಮಗಳನ್ನು ಅನುಸರಿಸುತ್ತಾರೆ; ಆದರೆ ಅತಿ ಧಾರ್ಮಿಕರಾಗಿರಬಹುದು, ಆದರೆ ಅವರು ರಕ್ಷಸಲ್ಪಟ್ಟಿರುವದಿಲ್ಲ. ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ಮನುಷ್ಯನು ರಕ್ಷಿಸಲ್ಪಡುವನು. ಸ್ವತಃ ಧರ್ಮವೇ ಯಾರನ್ನೂ ರಕ್ಷಿಸಲಾರದು. ವಾಸ್ತವದಲ್ಲಿ, ಪೌಲನು ಇಲ್ಲಿ ಉಪಯೋಗಿಸುವ ಧಾರ್ಮಿಕರು ಎಂಬ ಪದವು "ಮೂಢ ನಂಬಿಕೆಯುಳ್ಳವರು" ಎಂಬ ಅರ್ಥವನ್ನು ನೀಡುತ್ತದೆ. ಈ ಅಥೇನೆಯ ಜನರು ದೇವರಿಗಲ್ಲ ದೆವ್ವಗಳಿಗೆ ಬಲಿಗಳನ್ನು ಅರ್ಪಿಸುತ್ತಿದ್ದರು. (1 ಕೊರಿಂಥ 1:21).
**23** ಈ ಮಿಥ್ಯ ದೇವರುಗಳಿಗೆ ನಿರ್ಮಿಸಿದ ಬಲಿಪೀಠಗಳೊಂದರ ಮೇಲೆ "ತಿಳಿಯದ ದೇವರಿಗೆ" ಎಂದು ಬರೆದಿರುವದನ್ನು ಪೌಲನು ಕಂಡು ಕೊಂಡನು. ಅಥೇನೆಯರಲ್ಲಿ ಕೆಲವರು ತಾವು ಪೂಜಿಸುತ್ತಿದ್ದ ಎಲ್ಲಾ ದೇವರುಗಳಿಗಿಂತಲೂ ಅತಿ ದೊಡ್ಡ ದೇವರೊಬ್ಬನು ಇರಬೇಕೆಂಬ ಸಂಶಯವನ್ನು ಹೊಂದಿರುವಂತೆ ತೋರುತ್ತದೆ, ಆದ್ದರಿಂದ ಅವರು ಈ ತಿಳಿಯದ ದೇವರಿಗೆ ಒಂದು ಬಲಿಪೀಠವನ್ನು ನಿರ್ಮಿಸಿದ್ದರು. ಆದರೆ ಆ ದೇವರು ಯಾವ ಯಾವ ರೀತಿಯಲ್ಲಿದ್ದನೆಂಬದರ ಯಾವ ತಿಳುವಳಿಕೆಯನ್ನು ಅವರು ಹೊಂದಿರಲಿಲ್ಲ. ಆದುದರಿಂದಪೌಲನು "ಈಗ ನಾನು ಈ ತಿಳಿಯದ ದೇವರ ಬಗ್ಗೆ ತಿಳಿಸುತ್ತೇನೆ" ಎಂದು ಹೇಳುತ್ತಾನೆ.

ಇಲ್ಲಿ ನಾವು ಪೌಲನ ಬೋಧನೆ ಹಾಗು ಸಾಕ್ಷಿ ನೀಡುವ ವಿಧಾನವನ್ನು ನೋಡಬಹುದು. ಗ್ರೀಕರು ಧರ್ಮದ ಬಗ್ಗೆ ಸ್ವಲ್ಪ ತಿಳುವಳಿಕೆಯನ್ನು ಹೊಂದಿದ್ದರು. ಆದ್ದರಿಂದ ಪೌಲನು ಅವರು ಹೊಂದಿದ್ದ ಆ ತಿಳುವಳಿಕೆಯಿಂದ ಪ್ರಾರಂಭಿಸಿ ಅದರ ನಂತರ ಹೆಚ್ಚಿನ ವಿಷಯವನ್ನು ಮುಂದುವರೆಸುತ್ತಾನೆ. ಪೌಲನು ಅವರ ಧರ್ಮದ ಬಗ್ಗೆ ದ್ವೇಷವನ್ನು ತೋರಿಸಲಿಲ್ಲ; ಆತನು ಅವರನ್ನು ಹಾಸ್ಯ ಮಾಡಲಿಲ್ಲ. ಅಲ್ಲದೆ ಪೌಲನು ತನ್ನ ವಿಷಯವನ್ನು ದೃಷ್ಟಾಂತೀಕರಿಸಲು ಗ್ರೀಕ ಪದ್ಯವೊಂದನ್ನು ಸಹ ಉಪಯೋಗಿಸುತ್ತಾನೆ (ವಚನ 28). ಈ ಕಾರಣದಿಂದಾಗಿ ಗ್ರೀಕರು ಪೌಲನ ಮಾತುಗಳನ್ನು ಕೇಳಲು ಹೆಚ್ಚು ಸಿದ್ಧಮನಸ್ಸುಳ್ಳವರಾಗಿದ್ದರು. ಈ ವಿಷಯದಲ್ಲಿ ನಾವು ಪೌಲನ ಮಾದರಿಯನ್ನು ಅನುಸರಿಸಬೇಕು.

**24** ಇಲ್ಲಿ ಪೌಲನು ಅಥೇನೆಯರ ತಿಳಿಯದ ದೇವರನ್ನು ಕುರಿತು ವಿವರಿಸುತ್ತಾನೆ. ಈ ದೇವರು ಎಲ್ಲಾ ವಸ್ತುಗಳ ಸೃಷ್ಟಿಕರ್ತನಾಗಿದ್ದಾನೆ. ಮತ್ತು ಆತನು ಎಲ್ಲಾ ಸಂಗತಿಗಳ ಸೃಷ್ಟಿಕರ್ತನಾಗಿರುವದರಿಂದ, ಆತನು ಸಮಸ್ತಕ್ಕೂ ಒಡೆಯನಾಗಿದ್ದಾನೆ. ಆತನು ಭೂಮ್ಯಾಕಾಶಗಳ ಒಡೆಯನಾಗಿದ್ದಾನೆ, ಆತನು ಕೈಯಿಂದ ಕಟ್ಟಿರುವ ಗುಡಿಗಳಲ್ಲಿ ವಾಸಮಾಡುವವನಲ್ಲ (ಅ.ಕೃತ್ಯ 7:48-50 ಮತ್ತು ವ್ಯಾಖ್ಯಾನ ನೋಡಿರಿ). ಆತನು ಆತ್ಮಸ್ವರೂಪನಾಗಿದ್ದು ಆತನನ್ನು ಆತ್ಮೀಕ ರೀತಿಯಲ್ಲಿ ಸತ್ಯಕ್ಕೆ ತಕ್ಕಹಾಗೆ ಆರಾಧಿಸಬೇಕು (ಯೋಹಾನ 4:23).

**25** ಈ ದೇವರಿಗೆ ಅಥೇನೆಯರ ಯಜ್ಞ ಹೋಮಗಳ ಅಗತ್ಯತೆಯಿರುವದಿಲ್ಲ. ಆತನು ಹಸಿವೆಗೊಳ್ಳುವವನೂ ಅಲ್ಲ, ನಾವು ಆತನಿಗೆ ಆಹಾರ ತಿನ್ನಿಸುವ ಅಗತ್ಯತೆಯೂ ಇಲ್ಲ! ಬದಲಾಗಿ ಆತನೇ ನಮಗೆ ಆಹಾರವನ್ನು ಒದಗಿಸುತ್ತಾನೆ. ಆತನು ನಮಗೆ ಆಹಾರವನ್ನು ಮಾತ್ರವಲ್ಲ, ಆದರೆ ಅವಶ್ಯಕವಾದ ಇನ್ನಿತರ ಸಂಗತಿಗಳನ್ನು ಸಹ ನಮಗೆ ಕೊಡುತ್ತಾನೆ. ನಾವು ಆತನಿಗೆ ಏನು ಕೊಡಬೇಕು? (ಕೀರ್ತನೆಗಳು 50:9-12; ಯೆಶಾಯ 42:5). ಆತನು ನಮ್ಮ ಜೀವವನ್ನೂ ಶ್ವಾಸವನ್ನೂ ಕೊಡುತ್ತಾನೆ. ದೇವರ ಜೀವಕೊಡುವ ಶಕ್ತಿಯ ಹೊರತಾಗಿ ನಾವು ಒಂದು ಕ್ಷಣವೂ ಅಸ್ತಿತ್ವದಲ್ಲಿರಲಾರೆವು. ನಾವು ಉಸಿರಾಡದೆ ಬದುಕಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ನಾವು ದೇವರಿಲ್ಲದೆ ಬದುಕಲಾರೆವು.

**26** ಆತನು ಒಬ್ಬ ನಿಂದಲೇ (ಆದಾಮ) ಎಲ್ಲಾ ಜನಾಂಗದವರನ್ನು ಹುಟ್ಟಿಸಿರುತ್ತಾನೆ. ಪ್ರತಿಯೊಂದು ದೇಶದ ಜನರೆಲ್ಲರೂ ಆದಾಮನೆಂಬ[73] ಒಬ್ಬ ವ್ಯಕ್ತಿಯಿಂದಲೇ ಹುಟ್ಟಿದವರಾಗಿರುತ್ತಾರೆ. ಮಾನವರಾದ ನಾವೆಲ್ಲರೂ ಸರಿಸಮಾನರಾಗಿದ್ದೇವೆ. ದೇವರ ದೃಷ್ಟಿಯಲ್ಲಿ ಮೇಲ್ಜಾತಿ ಹಾಗು ಕೆಳಜಾತಿ, ಗುಲಾಮ ಮತ್ತು ಸ್ವತಂತ್ರ ಎಂಬ ಬೇಧವಿರುವದಿಲ್ಲ. ದೇವರು ಗ್ರೀಕ್ ನಾಗರೀಕರನ್ನು ಮತ್ತು ಗ್ರೀಕರು ತಿರಸ್ಕಾರಮಾಡಿದ ಅವರ ಸುತ್ತಲಿನ ಅನಾಗರೀಕ ಜನರನ್ನು ಸಮಾನವಾಗಿ ಪ್ರೀತಿಸುತ್ತಾನೆ. ಮನುಷ್ಯರು ಸ್ವತಃ ತಾವೇ ರಾಜ್ಯಗಳನ್ನೂ ಸಾಮ್ರಾಜ್ಯಗಳನ್ನೂ ಸ್ಥಾಪಿಸಿದ್ದೇವೆಂದು ಯೋಚಿಸುತ್ತಾರೆ; ಆದರೆ ರಾಜ್ಯಗಳನ್ನೂ ಸಾಮ್ರಾಜ್ಯಗಳನ್ನೂ, ಸ್ಥಾಪಿಸಿದ ಏಕೈಕ ವ್ಯಕ್ತಿಯು ದೇವರೇ ಆಗಿದ್ದಾನೆ. ದೇವರು ಪ್ರತಿಯೊಂದು ದೇಶಗಳಿಗೆ ಮೇರೆಗಳನ್ನು ರೂಪಿಸಿರುತ್ತಾನೆ. ಆತನು ಎಲ್ಲಾ ಘಟನೆಗಳಿಗೂ ಸಮಯವನ್ನು ನೇಮಿಸಿರುತ್ತಾನೆ. ಆತನು ಭೂಲೋಕ ಹಾಗು ಪರಲೋಕ ಮಂಡಲಗಳ ಕಾಲಗಳನ್ನೂ ಚಲನೆಗಳನ್ನೂ ನಿರ್ಧರಿಸುವವನಾಗಿದ್ದಾನೆ.

**27** ಇದೆಲ್ಲರೊಂದಿಗೆ, ಮನುಷ್ಯರು ಒಂದು ವೇಳೆ ತಡಮಾಡಿ ಕಂಡುಕೊಂಡಾರೇನೊ ಎಂದು ತನ್ನನ್ನು ಹುಡುಕುವವರನ್ನಾಗಿ ಮಾಡಿ ತನ್ನ ಪ್ರೀತಿ, ಕರುಣೆ ಮತ್ತು ಬಲಗಳನ್ನು ತೋರಿಸುತ್ತಾನೆ. ಪೌಲನು ರೋಮಾಯದವರಿಗೆ ಹೀಗೆ ಬರೆದನು. ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಆತನ ನಿತ್ಯ ಶಕ್ತಿಯೂ ದೇವತ್ವವೂ ಜಗದುತ್ಪತ್ತಿ ಮೊದಲ್ಗೊಂಡು ಆತನ ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತದೆ (ರೋಮ 1:20). ಅಥೇನೆಯರಲ್ಲಿ ಕೆಲವರು ತಾವು ತಿಳಿಯದ ಈ ನಿಜ ದೇವರನ್ನು ಹುಡುಕುವವರಾಗಿದ್ದರು. ಈ ದೇವರು ನಮ್ಮಲ್ಲಿ ಒಬ್ಬನಿಗೂ ದೂರವಾದವನಲ್ಲ ಎಂದು ಪೌಲನು ಹೇಳುತ್ತಾನೆ. ನಾವು ಎಲ್ಲಿಯೇ ಹೋದರೂ ದೇವರು ನಮ್ಮೊಂದಿಗೆ ಇರುತ್ತಾನೆ. ನಾವು ದೇವಾಲಯದಲ್ಲಿರಲಿ ಅಥವಾ ಅಡವಿಯಲ್ಲಿರಲಿ, ನಾವು ಅರಮನೆಯಲ್ಲಿರಲಿ ಅಲ್ಲವೆ ಗುಡಿಸಲಲ್ಲಿರಲಿ ದೇವರು ಅಲ್ಲಿ ಇರುತ್ತಾನೆ. ನಾನು ನಿನ್ನ ಆತ್ಮಕ್ಕೆ ತಪ್ಪಿಸಿಕೊಳ್ಳುವಂತೆ ಎಲ್ಲಿಗೆ ಹೋಗಲಿ? ನಿನ್ನ ಕಣ್ಣಿಗೆ ಮರೆಯಾಗುವಂತೆ ಎಲ್ಲಿಗೆ ಓಡಲಿ? ಮೇಲಣ ಲೋಕಕ್ಕೆ ಏರಿಹೋದರೆ ಅಲ್ಲಿ ನೀನಿರುತ್ತಿ, ಪಾತಾಳಕ್ಕೆ ಹೋಗಿ ಮಲಗಿ ಕೊಂಡೇನೆಂದರೆ ಅಲ್ಲಿಯೂ ನೀನಿರುವಿ. ನಾನು ಅರುಣನ ರೆಕ್ಕೆಗಳನ್ನು ಕಟ್ಟಿಕೊಂಡು ಹಾರಿಹೋಗಿ ಸಮುದ್ರದ ಕಟ್ಟಕಡೆಯಲ್ಲಿ ವಾಸಮಾಡೇನೆಂದರೆ ಅಲ್ಲಿಯೂ ನನ್ನನ್ನು ನಡಿಸುವದು; ನಿನ್ನ ಬಲಗೈ ನನ್ನನ್ನು ಹಿಡಿದಿರುವದು (ಕೀರ್ತನೆಗಳು 139:7-10).

ನಾವು ದೇವರನ್ನು ಆತನು ಉಂಟುಮಾಡಿರುವ ವಸ್ತುಗಳಲ್ಲಿ ಕಂಡು ಕೊಳ್ಳುತ್ತೇವಾದರೂ, ಈ ಸಂಗತಿಗಳಲ್ಲಿ ಮಾತ್ರದಿಂದಲೇ ನಾವು ಆತನನ್ನು ಪೂರ್ತಿಯಾಗಿ ತಿಳಿದುಕೊಳ್ಳಲು ಸಾಧ್ಯವಿಲ್ಲ. ನಾವು ಕ್ರಿಸ್ತನನ್ನು ಅರಿಯುವ ತನಕ ದೇವರನ್ನು ತಿಳಿಯಲಾರೆವು, ಯಾಕೆಂದರೆ ದೇವಕುಮಾರನೂ ದೇವರ ಏಕ ನಿಜ ನರಾವತಾರವೂ ಆದ ಯೇಸು ಕ್ರಿಸ್ತನಲ್ಲಿಯೇ ದೇವರ ಎಲ್ಲಾ ಗುಣಲಕ್ಷಣಗಳು ತೋರಿಬಂದಿರುತ್ತವೆ. ದೇವರನ್ನು ಯಾರೂ ಎಂದೂ ಕಂಡಿಲ್ಲ; ಯಾವನೂ ಏಕಪುತ್ರನೂ ಸ್ವತಃ ದೇವರೂ ಆಗಿದ್ದು ತಂದೆಯ ಎದೆಯಲ್ಲಿದ್ದಾನೋ ಅವನೇ ತಿಳಿಯ ಪಡಿಸಿದನು (ಯೋಹಾನ 1:18). ಯೇಸು ಹೇಳಿದ್ದು: "ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ" (ಯೋಹಾನ 14:9).

**28** ದೇವರು ನಮ್ಮಲ್ಲಿ ಒಬ್ಬನಿಗೂ ದೂರುವಾದವನಲ್ಲ. ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೇವೆ, ಇರುತ್ತೇವೆ. ಈ ಹೇಳಿಕೆಯು ಗ್ರೀಕ್ ಕವಿಯ ಪದ್ಯಯೊಂದರಿಂದ ಉಲ್ಲೇಖಿಸಲ್ಪಟ್ಟಿರುತ್ತದೆ. ಗ್ರೀಕರ ಸ್ವಂತ ಸಾಹಿತ್ಯಗಳಲ್ಲಿಯೇ ಈಗಾಗಲೇ ಈ ಸತ್ಯ ದೇವರ ವಿಷಯದಲ್ಲಿ ಉಲ್ಲೇಖವಿರುತ್ತದೆಂಬದನ್ನು ತೋರಿಸಲು ಬಯಸಿದ್ದರಿಂದ ಪೌಲನು ಈ ಹೇಳಿಕೆಯನ್ನು ಉಲ್ಲೇಖಿಸುತ್ತಾನೆ. ಇನ್ನೊಬ್ಬ ಗ್ರೀಕ್ ಕವಿಯು ಗ್ರೀಕರ ಪ್ರಮುಖ ದೇವರಾದ ದೌಸ್ಯನ ವಿಷಯದಲ್ಲಿ ಬರೆದಿದ್ದನು (ಅ.ಕೃತ್ಯ 14:12): ನಾವು ಆತನ ಸಂತಾನದವರು. ಗ್ರೀಕರು ದೌಸ್ಯನ ಸಂತಾನದವರಲ್ಲ, ಆದರೆ ಏಕ ನಿಜದೇವರ ಸಂತಾನದವರೆಂಬದನ್ನು ತೋರಿಸುವದಕ್ಕಾಗಿ ಪೌಲನು ಆ ಹೇಳಿಕೆಯನ್ನು ಸಹ ಉಲ್ಲೇಖಿಸುತ್ತಾನೆ.

ಪೌಲನು ಸತ್ಯವನ್ನು ಕಲಿಸಲು ಅನ್ಯ ಜನಾಂಗದ ಪದ್ಯಗಳನ್ನು ಹೇಗೆ ಉಪಯೋಗಿಸುತ್ತಾನೆಂಬದನ್ನು ಗಮನಿಸಿರಿ. ಗ್ರೀಕರಿಗೆ ಪರಿಚಯವಿದ್ದ ಹೇಳಿಕೆಗಳನ್ನು ಉಪಯೋಗಿಸುವದರ ಮೂಲಕ ಪೌಲನು ದೇವರ ಕುರಿತಾದ ಸತ್ಯವನ್ನು ಸ್ಪಷ್ಟವಾಗಿ ಅವರಿಗೆ ವಿವರಿಸಲು ಶಕ್ತನಾಗಿದ್ದನು.

**29** ನಾವು ದೇವರ ಸಂತಾನದವರು. ಆತನು ನಮ್ಮನ್ನು ಉಂಟು ಮಾಡಿದ್ದಾನೆ. ಹಾಗಾದರೆ ನಮ್ಮ ಸ್ವಂತ ಕೈಗಳಿಂದ ನಿರ್ಮಿಸಲ್ಪಟ್ಟ ವಿಗ್ರಹವು ಆರಾಧನೆಯನ್ನು ಹೊಂದಲು ಯೋಗ್ಯವೆಂದು ನಾವು ಯೋಚಿಸುವದು ಹೇಗೆ ಸಾಧ್ಯ? ದೇವರು ಮಾತ್ರವೇ ಆರಾಧನೆಹೊಂದಲು ಯೋಗ್ಯನಾಗಿರುತ್ತಾನೆ. ವಿಗ್ರಹಗಳು ಏನಾಗಿವೆ? ಅವು ಗಳು ಮಾತಾಡಬಲ್ಲವೋ? ಅವು ಗಳು ಕೇಳಿಸಿಕೊಳ್ಳಲು ಸಾಧ್ಯವೋ? ಅವು ಗಳು ಏನನ್ನಾದರೂ ಸೃಷ್ಟಿಸಬಲ್ಲವೋ? ಖಂಡಿತವಾಗಿಯೂ ಇಲ್ಲ! ಅವು ಗಳು ಒಂದು ಬೆರಳನ್ನಾದರೂ ಕದಲಿಸಲು ಸಾಧ್ಯವಿಲ್ಲ.

**30** ವಿಗ್ರ ಹಾರಾಧನೆಯಂತಹ ಅಜ್ಞಾನದ ಮುಖಾಂತರ ಮನುಷ್ಯರು ದೇವರನ್ನು ಅವಮಾನ ಪಡಿಸುತ್ತಾರೆ. ಆದರೆ ದೇವರು ಮಾನವರ ವಿಷಯದಲ್ಲಿ ತಾಳ್ಮೆಯಿಂದ ಇದ್ದನು. ಆತನು ಮಾನವನ ಅಜ್ಞಾನ ಹಾಗು ಅದರ ಫಲಿತದಿಂದ ಉಂಟಾದ ಕೆಟ್ಟತನಗಳನ್ನು ನೋಡಿತಾಳಿಕೊಂಡಿರುತ್ತಾನೆ. ಗತಿಸಿಹೋದ ಕಾಲದಲ್ಲಿ ಆತನು ಎಲ್ಲಾ ಜನಾಂಗಗಳನ್ನು ತಮ್ಮ ತಮ್ಮ ಮನಸ್ಸಿಗೆ ತೋಚಿದ ಮಾರ್ಗಗಳಲ್ಲಿ ನಡೆಯುವದಕ್ಕೆ ಬಿಟ್ಟನು (ಅ.ಕೃತ್ಯ 14:16).. ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡನು...(ರೋಮ 3:26). ಆದರೆ ಈಗ ಒಂದು ಹೊಸ ದಿನವು ಬಂದಿರುತ್ತದೆ. ದೇವರು ನಮ್ಮ ಹಿಂದಿನ ಅಜ್ಞಾನ ಹಾಗು ಪಾಪಗಳನ್ನು ಲಕ್ಷಕ್ಕೆ ತಾರದೇ ಇರಬಹುದು, ಆದರೆ ಆತನು ಇನ್ನೆಂದಿಗೂ ಹಾಗೆ ಅಲಕ್ಷ್ಯ ಮಾಡುವವನಾಗಿರುವದಿಲ್ಲ. ಮನುಷ್ಯರಿಗೆ ತನ್ನನ್ನು ಸಂಪೂರ್ಣವಾಗಿ ತಿಳಿಯಪಡಿಸುವದಕ್ಕಾಗಿ ಸ್ವತಃ ಆತನೇ ಭೂಮಿಗೆ ಬಂದಿರುತ್ತಾನೆ. ಆತನು ಯೇಸು ಕ್ರಿಸ್ತನ ರೂಪದಲ್ಲಿ ಬಂದಿರುತ್ತಾನೆ. ಒಂದು ವೇಳೆ ಮಾನವರು ಈ ದೇವರ ಪ್ರಕಟಣೆಯನ್ನು ತಿರಸ್ಕರಿಸುವದಾದರೆ ಅವರು ನಿಶ್ಚಯವಾಗಿಯೂ ದಂಡನೆಯನ್ನು ಹೊಂದುವರು. ಆದುದರಿಂದ, ದೇವರು ಈಗಲಾದರೋ ನಾಲ್ಕುದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರಿಗಿ ಕೊಳ್ಳಬೇಕೆಂದು ಅಪ್ಪಣೆಕೊಡುತ್ತಾನೆ.

**31** ಆದುದರಿಂದ, ಅಥೇನೆಯವರು ದೇವರಕಡೆಗೆ ತಿರಿಗಿಕೊಳ್ಳಲಿ, ಯಾಕೆಂದರೆ ದೇವರು ಒಂದು ದಿವಸವನ್ನು ಗೊತ್ತುಮಾಡಿದ್ದಾನೆ, ಆಗ ಅಥೇನೆಯರ ಮೇಲೆಯೂ, ಇಡೀ ಜಗತ್ತಿನ ಮೇಲೆಯೂ ಆತನ ನ್ಯಾಯತೀರ್ಪು ಬರಲಿದೆ (ಕೀರ್ತನೆಗಳು 9:8; 96:13; ರೋಮ 2:5). ದೇವರು ತಾನು ನಿಷ್ಕರ್ಷೆಮಾಡಿದ ಪು ರುಷನ ಕೈಯಿಂದ–ಅಂದರೆ ಯೇಸು ಕ್ರಿಸ್ತನ ಕೈಯಿಂದ ಭೂಲೋಕದ ನ್ಯಾಯ ವಿಚಾರಣೆ ಮಾಡುವನು (ಯೋಹಾನ 5:27; ಅ.ಕೃತ್ಯ 10:42; ರೋಮ 2:16 ನೋಡಿರಿ). ಮತ್ತು ಯೇಸು ಕ್ರಿಸ್ತನು ನೇಮಕ ಮಾಡಲ್ಪಟ್ಟಿರುವ ನ್ಯಾಯಾಧಿಪತಿಯೆಂದು ನಮಗೆ ತಿಳಿದದೆ, ಯಾಕೆಂದರೆ ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದ್ದಾನೆ.

**32** ಗ್ರೀಕರು ದೇಹದ ಪು ನರುತ್ಥಾನವನ್ನು ನಂಬುತ್ತಿರಲಿಲ್ಲ. ಮನುಷ್ಯನ ಆತ್ಮವು ಸಾವಿಲ್ಲದ್ದೆಂದು ಅವರು ನಂಬುತ್ತಿದ್ದರು, ಆದರೆ ದೇಹದ ವಿಷಯದಲ್ಲಿ ನಂಬಲಿಲ್ಲ. ದೇಹವು ಸಂಪೂರ್ಣವಾಗಿ ಮರಣಿಸಿ ಮಣ್ಣಾಗಿಹೋಗುತ್ತದೆಂದು ಅವರ ನಂಬಿಕೆಯಾಗಿತ್ತು. ಆದುದರಿಂದ, ಪೌಲನು ಯೇಸುವಿನ ಪು ನರುತ್ಥಾನದ ಬಗ್ಗೆ ಹೇಳುವದನ್ನು ಅಥೇನೆಯರು ಕೇಳಿದಾಗ ಕೆಲವರು ಅಪಹಾಸ್ಯಮಾಡಿದ್ದರು. ಇನ್ನು ಕೆಲವರು, "ನಾವು ಬೇರೆ ಇನ್ನೊಂದು ಸಮಯಗಳಲ್ಲಿ ಇನ್ನು ಹೆಚ್ಚು ಕೇಳೋಣ. ಈ ವಿಷಯದಲ್ಲಿ ನಾವು ಇನ್ನು ಯಾವದೇ ತಿರ್ಮಾನಕ್ಕೂ ಬರಲಾಗಲಿಲ್ಲ ಎಂದರು. ಈ ದಿನವೂ ಸಹ ಅನೇಕರು ಅದೇ ಸಂಗತಿಯನ್ನು ಹೇಳುತ್ತಾರೆ. ಅನೇಕ ಜನರು ನಿತ್ಯಜೀವವನ್ನು ಪಡೆದುಕೊಳ್ಳುವ ಅವಕಾಶವನ್ನು ಕಳೆದುಕೊಳ್ಳುತ್ತಾರೆ,ಯಾಕೆಂದರೆ ಅವರು ದೇವರ ವಾಕ್ಯಗಳನ್ನು ಸ್ವೀಕರಿಸಿಕೊಳ್ಳಲು ಸಿದ್ಧರಾಗಿರುವದಿಲ್ಲ. ಅವರು "ನಾನು ಇದರ ಬಗ್ಗೆ ಆಮೇಲೆ ಯೋಚಿಸುತ್ತೇನೆ" ಎಂದು ಹೇಳುವರು, ಆದರೆ "ಆಮೇಲೆ" ಎಂದಿಗೂ ಬರುವದೇ ಇಲ್ಲ. ಈ ಅಥೇನೆಯರು ಸತ್ಯವನ್ನು ಕಂಡುಕೊಳ್ಳುವದಕ್ಕಿಂತ ಅದನ್ನು ಹುಡುಕಲು ಪ್ರಾಮುಖ್ಯತೆ ನೀಡಿದರು. ನಂಬುವದಕ್ಕಿಂತಲೂ ಮಾತಾಡುವದನ್ನು ಮುಖ್ಯವೆಂದು ತೆಗೆದುಕೊಂಡರು. ನಾವು ಅವರ ಹಾಗೆ ಇರದಿರೋಣ!

**33-34** ಅಥೇನೆಯದಲ್ಲಿ ಪೌಲನ ಬೋಧನೆಯು ಅಷ್ಟೇನು ಯಶಸ್ವಿಯಾಗಿರಲಿಲ್ಲ. ಕೆಲವರು ಮಾತ್ರವೇ ನಂಬಿದರು. ಅಥೇನೆಯದಲ್ಲಿ ಸಭೆಯು ಸ್ಥಾಪಿಸಲ್ಪಟ್ಟಿರುವದರ ಬಗ್ಗೆ ಹೊಸ ಒಡಂಬಡಿಕೆಯಲ್ಲಿ ಯಾವ ವಿಷಯವೂ ಬರೆಯಲ್ಪಟ್ಟಿರುವದಿಲ್ಲ. ಇಳನೇ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಇಬ್ಬರು ವಿಶ್ವಾಸಿಗಳ ಕುರಿತು ಹೊಸ ಒಡಂಬಡಿಕೆಯಲ್ಲಿ ಸದಸ್ಯನಾಗಿದ್ದನೆಂಬದು ಮಾತ್ರವೇ ಆತನ ವಿಷಯದಲ್ಲಿ ನಮಗೆ ತಿಳಿದಿರುವ ಸಂಗತಿಯಾಗಿದೆ. ಅವನು ಅರಿಯೋಪಾಗದ ಸದಸ್ಯನಾಗಿದ್ದನು[74]

---

## ಅಧ್ಯಾಯ - 18

### ಕೊರಿಂಥದಲ್ಲಿ (18:1-11)

**1-3** ಕೊರಿಂಥವು ದಕ್ಷಿಣ ಗ್ರೀಸ್‌ನ ಪ್ರಮುಖ ಪಟ್ಟಣವಾಗಿತ್ತು (1 ಕೊರಿಂಥ: ಪರಿಚಯ ನೋಡಿರಿ). ಪೌಲನು ಅಥೇನೆಯದಿಂದ ಕೊರಿಂಥಕ್ಕೆ ಬಂದ ಮೊದಲಲ್ಲಿ ಆತನಿಗೆ ಆ ಪಟ್ಟಣದಲ್ಲಿ ಯಾರೊಬ್ಬರ ಪರಿಚಯವೂ ಇರಲಿಲ್ಲ. ಆದರೆ ಆತನು ಬಹುಬೇಗನೆ ಅಕ್ವಿಲನೆಂಬ ಯೆಹೂದ್ಯನೊಬ್ಬನನ್ನು ಮತ್ತು ಆತನ ಹೆಂಡತಿಯಾದ ಪ್ರಿಸ್ಕಿಲ್ಲಳನ್ನು (ಅಥವಾ ಪ್ರಿಸ್ಕಾ) ಬೇಟಿಯಾದನು. ಅಕ್ವಿಲನು ಪೌಲನ ಹಾಗೆಯೇ ಒಬ್ಬ ಗುಡಾರ ಮಾಡುವವನಾಗಿದ್ದನು. ಪೌಲನು ತಾನು ಹೋಗುತ್ತಿದ್ದ ಎಲ್ಲಾ ಕಡೆಗಳಲ್ಲಿಯೂ ತನ್ನ ಸ್ವಂತ ದುಡಿಮೆಯಿಂದ ಜೀವಿಸುತ್ತಿದ್ದನು (ಅ.ಕೃತ್ಯ 20:34; 1 ಥೆಸಲೋನಿಕದವರಿಗೆ 2:9; 2

ಥೆಸಲೋನಿದವರಿಗೆ 3:7-8 ನೋಡಿರಿ). ಪೌಲನ ದಿನಗಳಲ್ಲಿ ಅತಿ ಉನ್ನತ ವಿದ್ಯಾವಂತ ಯೆಹೂದ್ಯರು ಸಹ ಯಾವದಾದರೂ ಕೈ ಕೆಲಸವನ್ನು ಮಾಡಿಕೊಳ್ಳವದರ ಮೂಲಕ ಜೀವನ ಸಾಗಿಸುತ್ತಿದ್ದರು. ಉದಾಹರಣೆಗೆ ಯೆಹೂದ್ಯ ಬೋಧಕರು ತಮ್ಮ ಬೋಧನೆಗಾಗಿ ವೇತನವನ್ನು ಬೇಡದೆ ತಮ್ಮ ಜೀವನಕ್ಕಾಗಿ ಇತರ ಉದ್ಯೋಗವನ್ನು ಮಾಡುತ್ತಿದ್ದರು.

ಪೌಲ ಮತ್ತು ಅಕ್ವಿಲರು ಕೊರಿಂಥದಲ್ಲಿ ವಾಸಿಸಿದ ವೇಳೆಯಲ್ಲಿ ಕ್ಲೌದಿಯನು ರೋಮಾಯ ಚಕ್ರವರ್ತಿಯಾಗಿದ್ದನು. ಕ್ರೈಸ್ತ ಸುವಾರ್ತೆಯು ರೋಮಾಪುರದಲ್ಲಿ ಪ್ರಥಮ ಬಾರಿಗೆ ಸಾರಲ್ಪಟ್ಟಾಗ [75]ಅಲ್ಲಿ ನೆಲೆಸಿದ್ದ ಯೆಹೂದ್ಯರು ವಿರೋಧದಲ್ಲಿ ಎಷ್ಟೊಂದು ಗಲಭೆಯನ್ನು ಉಂಟು ಮಾಡಿದ್ದರೆಂದರೆ ಆ ಗಲಭೆಯ ಬಗ್ಗೆ ಕೋಪಗೊಂಡ ಕ್ಲೌದಿಯು ಯೆಹೂದ್ಯರೆಲ್ಲರೂ ರೋಮಾಪುರವನ್ನು ಬಿಟ್ಟು ಹೋಗಬೇಕೆಂದು ಅಪ್ಪಣೆಮಾಡಿದ್ದನು. ಈ ಕಾರಣಕ್ಕಾಗಿಯೇ ಅಕ್ವಿಲ ಮತ್ತು ಪ್ರಿಸ್ಕಿಲ್ಲರು ರೋಮಾಪುರವನ್ನು ಬಿಟ್ಟು ಕೊರಿಂಥಕ್ಕೆ[76] ಬಂದಿದ್ದರು.

**4** ಪೌಲನು ಇತರ ಪಟ್ಟಣಗಳಲ್ಲಿ ಮಾಡುತ್ತಿದ್ದ ಹಾಗೆಯೇ ಕೊರಿಂಥದಲ್ಲಿನ ಯೆಹೂದ್ಯ ಸಭಾಮಂದಿರದಲ್ಲಿ ಬೋಧಿಸಿದನು. ಪೌಲನು ಯೆಹೂದ್ಯರು ಹಾಗು ಒಬ್ಬನೇ ಸತ್ಯದೇವರಲ್ಲಿ ಭಯಭಕ್ತಿಹೊಂದಿದ್ದ ಗ್ರೀಕರಿಬ್ಬರಿಗೂ ಸುವಾರ್ತೆಯನ್ನು ಸಾರಿದನು.

**5-6** ಸೀಲನೂ ತಿಮೊಥೆಯನೂ ಕೊರಿಂಥಕ್ಕೆ ಬಂದಾಗ ಇತ್ತೀಚಿಗಷ್ಟೇ ಥೆಸಲೋನಿಕದಲ್ಲಿ ಸ್ಥಾಪಿತಗೊಂಡಿದ್ದ ಸಭೆಯ ಒಳ್ಳೇಸುದ್ದಿಯನ್ನು ತಂದಿದ್ದರು. ಥೆಸಲೋನಿಕದವರು ತಮ್ಮ ನೂತನ ನಂಬಿಕೆಯಲ್ಲಿ ದೃಢವಾಗಿನಿಂತಿದ್ದರು (1 ಥೆಸಲೋನಿಕದವರಿಗೆ 3:6-10 ನೋಡಿರಿ).ಈ ಸುದ್ದಿಯನ್ನು ಪಡೆದನಂತರವೇ ಪೌಲನು ಥೆಸಲೋನಿಕದವರಿಗೆ ಹೊಸ ಒಡಂಬಡಿಕೆಯ ತನ್ನ ಮೊದಲನೆಯ ಪತ್ರಿಕೆಯನ್ನು ಬರೆದನು. ಅಲ್ಲದೆ ಸೀಲ ತಿಮೊಥೆಯರು ಹೊಸದಾಗಿ ಫಿಲಿಪ್ಪಿಯಲ್ಲಿ ಸ್ಥಾಪಿಸಲ್ಪಟ್ಟಿದ್ದ ಸಭೆಯಿಂದ ಪೌಲನಿಗಾಗಿ ಕಾಣಿಕೆಯೊಂದನ್ನು ಸಹ ತಂದಿದ್ದರು (2 ಕೊರಿಂಥ 11:9; ಫಿಲಿಪ್ಪಿಯವರಿಗೆ 4:15 ನೋಡಿರಿ).

ಇತರ ಪಟ್ಟಣಗಳಲ್ಲಿ ಸಂಭವಿಸಿದ ಹಾಗೆಯೇ (ಅ.ಕೃತ್ಯ 13:45; 14:2; 17:5), ಕೊರಿಂಥದಲ್ಲಿನ ಯೆಹೂದ್ಯರು ಸಹ ಪೌಲನನ್ನು ವಿರೋಧಿಸಲಾರಂಭಿಸಿದರು. ಆದುದರಿಂದ ಪೌಲನು ವಿರೋಧಸೂಚನೆಯಾಗಿ ತನ್ನ ವಸ್ತ್ರಗಳನ್ನು ಝಾಡಿಸಿದನು (ವಚನ 6), ಅವರ ಸಭಾಮಂದಿರದ ಯಾವದೇ ಧೂಳು ಅಥವಾ ಹೊಲಸು ತನ್ನನ್ನು ಅಂಟಿಕೊಂಡು ಇರಕೂಡದೆಂದು ಹೀಗೆ ಮಾಡಿದನು.

ಒಬ್ಬನು ಈ ರೀತಿಯಾಗಿ ತನ್ನ ವಸ್ತ್ರಗಳನ್ನು ಝಾಡಿಸುವದು ಅತಿ ಅಸಮಾಧಾನದ ಒಂದು ಸಂಕೇತವಾಗಿತ್ತು (ಅ.ಕೃತ್ಯ 13:51). ಪೌಲನು ಅವರಿಗೆ ಕ್ರಿಸ್ತನಲ್ಲಿ ದೊರೆಯುವ ರಕ್ಷಣೆಯ ಸುವಾರ್ತೆಯನ್ನು ಪ್ರಕಟಿಸಿದ್ದನು. ಸುವಾರ್ತೆಯನ್ನು ತಿರಸ್ಕರಿಸುವದರ ಮೂಲಕ ಯೆಹೂದ್ಯರು ತಮ್ಮ ಮೇಲೆ ದೇವರ ನ್ಯಾಯತೀರ್ಪನ್ನು ಬರಮಾಡಿಕೊಂಡಿದ್ದರು. ಯೆಹೂದ್ಯರಿಗೆ ಕ್ರಿಸ್ತನ ಸುವಾರ್ತೆಯನ್ನು ಹೇಳುವ ತನ್ನ ಕರ್ತವ್ಯವನ್ನು ಪೌಲನು ನೆರವೇರಿಸಿದ್ದನು. ಈಗ ಅವರ ನಾಶನಕ್ಕೆ ಪೌಲನು ಹೊಣೆಗಾರನಾಗುವದಿಲ್ಲ (ಅ.ಕೃತ್ಯ 20:26-27; 1 ಕೊರಿಂಥ 9:16 ಹಾಗು ವ್ಯಾಖ್ಯಾನಗಳನ್ನು ನೋಡಿರಿ).

**7** ಆದುದರಿಂದ ಪೌಲನು ಇನ್ನೊಂದು ಬಾಗಲಿಗೆ ಹೋಗಿ ಅನ್ಯ ಜನರಿಗೆ ಬೋಧಿಸಲಾರಂಭಿಸಿದನು. ದೇವರಿಗೆ ಭಯ ಪಡುವವನಾಗಿದ್ದ ತೀತಯುಸ್ತನೆಂಬವನು ತನ್ನ ಮನೆಯಲ್ಲಿ ಬೋಧಿಸಲು ಪೌಲನಿಗೆ ಅನುಮತಿಸಿದನು. ಈ ವ್ಯಕ್ತಿಯ ಮೊದಲ ಹೆಸರು ಗಾಯನೆಂಬದಾಗಿಯೂ, ರೋಮ 16:23 ಮತ್ತು 1 ಕೊರಿಂಥ 1:14 ರಲ್ಲಿ ಉಲ್ಲೇಖಿಸಲ್ಪಟ್ಟಿರುವ ವ್ಯಕ್ತಿಯು ಈತನೇ ಎಂಬದಾಗಿ ಅನೇಕ ಬೈಬಲ್ ಪಂಡಿತರು ಅಭಿಪ್ರಾಯ ಪಡುತ್ತಾರೆ.

**8** ಪೌಲನು ಅಥೇನೆ ಪಟ್ಟಣಕ್ಕಿಂತಲೂ ಕೊರಿಂಥದಲ್ಲಿ ಹೆಚ್ಚು ಯಶಸ್ವಿಯಾಗಿದ್ದನು. ಇಲ್ಲಿ ಕ್ರಿಸ್ಪನೆಂಬ ಸಭಾಮಂದಿರದ ಅಧ್ಯಕ್ಷನೂ.

## ಕರ್ತನನ್ನು ನಂಬಿದನು (1 ಕೊರಿಂಥ 1:14)

**9-11** ಈ ಸಂದರ್ಭದಲ್ಲಿ ಪೌಲನು ಕರ್ತನಿಂದ ಒಂದು ದರ್ಶನವನ್ನು ಹೊಂದಿ ಅದರ ಮೂಲಕ ಆತನು ಬೆಂಬಲ ಹಾಗು ಬಲವನ್ನು ಪಡೆದುಕೊಂಡನು. ಪೌಲನು ಕೊರಿಂಥದಲ್ಲಿರುವ ವೇಳೆಯಲ್ಲಿ ಯಾರೂ ಅವನಿಗೆ ಹಾನಿಯನ್ನು ಮಾಡುವದಿಲ್ಲ ಎಂದು ಯೇಸು ಪೌಲನಿಗೆ ಆ ದರ್ಶನದಲ್ಲಿ ವಾಗ್ದಾನ ಮಾಡಿದನು. ಯೆಹೂದ್ಯರಂತೂ ಆತನನ್ನು ವಿರೋಧಿಸಿಯೇ ವಿರೋಧಿಸುವರು (ವಚನ 112), ಆದರೆ ಅವರು ಅವನಿಗೆ ಕೇಡು ಮಾಡಲು ಸಾದ್ಯವಿರಲಿಲ್ಲ. ಕೊರಿಂಥದಲ್ಲಿ ದೇವರು ಬಹು ಜನರನ್ನು ಆರಿಸಿಕೊಂಡಿದ್ದನು ಮತ್ತು ಪೌಲನು ಅವರೆಲ್ಲರನ್ನೂ ನಂಬಿಕೆಗೆ ತರುವ ಸಾಧನವಾಗಬೇಕಿದೆಯೆಂದು ದರ್ಶನದಲ್ಲಿ ಕರ್ತನು ಪೌಲನಿಗೆ ಹೇಳಿದ್ದನು. ಹೀಗೆ ಕೊರಿಂಥದಲ್ಲಿ ದೇವರು ಆರಿಸಿಕೊಂಡ ಎಲ್ಲರನ್ನು ಕ್ರಿಸ್ತನ ಬಳಿಗೆ ನಡೆಸುವವನಾಗಿ ಪೌಲನು ಮುಂದಿನ ಒಂದೂವರೆ ವರ್ಷದ ಕಾಲ ಕೊರಿಂಥದಲ್ಲಿ ಕಳೆದನು.

## ಪೌಲ ಮತ್ತು ಗಲ್ಲಿಯೋನ (18:12-17)

**12** ಗಲ್ಲಿಯೋನನು ಗ್ರೀಸಿನ[77] ದಕ್ಷಿಣ ಪ್ರಾಂತ್ಯದಲ್ಲಿದ್ದ ಆಕಾಯದ ಅಧಿಪತಿಯಾಗಿದ್ದನು. ಗಲ್ಲಿಯೋನನು ದೊಡ್ಡ ಅಧಿಕಾರವನ್ನು ಹೊಂದಿದ್ದನು. ಆಖಾಯದಲ್ಲಿ ಮಾತ್ರವಲ್ಲ ಆದರೆ ರೋಮಾಯ ಸಾಮ್ರಾಜ್ಯದ ಪ್ರತಿಯೊಂದು ಪ್ರಾಂತ್ಯಗಳಲ್ಲಿ

ಸಹ ಬೋಧಿಸದಂತೆ ಪೌಲನನ್ನು ತಡೆಯುವ ಅಧಿಕಾರ ಅವನಿಗಿತ್ತು. ಅಧಿಪತಿಯು ಒಂದು ಪ್ರಾಂತ್ಯದಲ್ಲಿ ಹೊರಡಿಸಿದ ಆಜ್ಞೆಯು ಇತರ ಎಲ್ಲಾ ಪ್ರಾಂತ್ಯಗಳಿಗೂ ಅನ್ವಯಿಸುತ್ತಿತ್ತು. ಒಂದು ವೇಳೆ ಗಲ್ಲಿಯೋನನು ಪೌಲನಿಗೆ ಆಖಾಯದಲ್ಲಿ ಬೋಧಿಸಬಾರದೆಂದು ಆಜ್ಞಾಪಿಸಿದ್ದರೆ ಆತನು ರೋಮಾಯ ಸಾಮ್ರಾಜ್ಯದ ಯಾವದೇ ಪ್ರಾಂತ್ಯದಲ್ಲಿಯೂ ಬೋಧಿಸದಂತೆ ನಿಷೇಧಿಸಲ್ಪಟ್ಟಿರುತ್ತಿದ್ದನು.

**13** ಯೆಹೂದ್ಯ ಧರ್ಮವು ರೋಮ ಸಾಮ್ರಾಜ್ಯದ ಕಾನೂನು ಬದ್ಧ ಧರ್ಮಗಳಲ್ಲಿ ಒಂದಾಗಿತ್ತು; ಯೆಹೂದ್ಯರು ಸಭಾಮಂದಿರಗಳನ್ನು ಮಾಡಿಕೊಳ್ಳುವ ಹಾಗು ಯೆಹೂದ್ಯ ಧರ್ಮ ಶಾಸ್ತ್ರದ ಪ್ರಕಾರವಾಗಿ ದೇವರನ್ನು ಆರಾಧಿಸುವ ಅನುಮತಿಯನ್ನು ಹೊಂದಿದ್ದರು. ಆದರೆ ಯೆಹೂದ್ಯರು ಪೌಲನ ವಿರುದ್ಧವಾಗಿ ಆರೋಪಿಸುತ್ತಾ ಇವನು ಯೆಹೂದ್ಯ ಧರ್ಮವನ್ನಲ್ಲ ಆದರೆ ಯಾವದೋ ಕಾನೂನು ಬಾಹಿರವಾದ ಧರ್ಮವೊಂದನ್ನು ಬೋಧಿಸುತ್ತಿದ್ದಾನಾದ್ದರಿಂದ ಇವನು ರೋಮಕಾನೂನನ್ನು ವಿರೋಧಿಸುವವನಾಗಿದ್ದಾನೆಂದು ಹೇಳಿದರು (ಅ.ಕೃತ್ಯ 16:20-21 ಮತ್ತು ವ್ಯಾಖ್ಯಾನ ನೋಡಿರಿ).

**14-16** ಗಲ್ಲಿಯೋನನು ಪೌಲನ ವಿರುದ್ಧವಾಗಿ ಯೆಹೂದ್ಯರು ನೀಡಿದ ದೂರನ್ನು ಕೇಳಿದಾಗ ತಕ್ಷಣವೇ ಇದು ಯೆಹೂದ್ಯ ಧರ್ಮಕ್ಕೆ ಸಂಭಂಧಿಸಿದವಿವಾದ ಮಾತ್ರವೇ ಎಂದು ತಿರ್ಮಾನಿಸಿದನು. ಪೌಲನು ಯಾವದೇ ರೋಮಾಯದ ಕಾನೂನನ್ನು ಉಲ್ಲಂಘಿಸಿರಲಿಲ್ಲ. ಕೊರಿಂಥದಲ್ಲಿನ ಯೆಹೂದ್ಯರು ಒಪ್ಪದ ಯೆಹೂದ್ಯ ಧರ್ಮದಂತಹ ಧರ್ಮವೊಂದನ್ನು ಕುರಿತು ಸಾರುತ್ತಿದ್ದನಷ್ಟೆ. ಆದುದರಿಂದ, ಪೌಲನನ್ನು ಬೋಧಿಸದಂತೆ ನಿಷೇಧಿಸುವದಕ್ಕೆ ಗಲ್ಲಿಯೋನನು ನಿರಾಕರಿಸಿದನು. ಗಲ್ಲಿಯೋನನ ಈ ಪ್ರಮುಖ ನಿರ್ಧಾರದ ಕಾರಣ ದಿಂದಾಗಿ ಮುಂದಿನ ಹನ್ನೆರಡು ವರ್ಷಗಳ ವರೆಗೆ ರೋಮಾಯ ಸಾಮ್ರಾಜ್ಯದಲೆಲ್ಲಾ ಕ್ರೈಸ್ತರು ಕಾನೂನು ಬದ್ಧವಾಗಿ ಕ್ರಿಸ್ತನ ಸುವಾರ್ತೆಯನ್ನು ಸಾರಲು ಸಾದ್ಯವಾಯಿತು. ಹೇಗಿದ್ದರೂ, ನೂತನ ಚಕ್ರವರ್ತಿಯಾಗಿ ಬಂದ ನೀರೊ ಚಕ್ರವರ್ತಿಯು ಕ್ರೈಸ್ತ ಧರ್ಮವನ್ನು ಕಾನೂನು ಬಾಹಿರಗೊಳಿಸಿ ಸಾಮ್ರಾಜ್ಯದಲ್ಲೆಲ್ಲಾ [78] ವಿಶ್ವಾಸಿಗಳನ್ನು ಕ್ರೂರವಾಗಿ ಹಿಂಸಿಸಲು ಪ್ರಾರಂಭಿಸಿದನು.

**17** ಕ್ರಿಸ್ಪನು ಕರ್ತನನ್ನು ನಂಬಿದ ನಂತರ (ವಚನ 8), ಸೋಸ್ಥೆನನೆಂಬವನು ಕೊರಿಂಥದಲ್ಲಿನ ಸಭಾಮಂದಿರದ ನೂತನ ಅಧ್ಯಕ್ಷನಾದನು. ಗಲ್ಲಿಯೋನನು ಸೋಸ್ಥೆನ ಹಾಗು ಇತರ ಯೆಹೂದ್ಯರೆಲ್ಲರನ್ನು ನ್ಯಾಯಸ್ಥಾನದಿಂದ ಹೊರಡಿಸಿ ಬಿಟ್ಟ ಮೇಲೆ ಜನರೆಲ್ಲರು (ಅಂದರೆ, ಗ್ರೀಕರು) ಸೋಸ್ಥೆನನನ್ನು ಹಿಡಿದುಕೊಂಡು ನ್ಯಾಯ ಸ್ಥಾನದಮುಂದೆಯೇ ಹೊಡೆದರು. ಹೊಸ ಒಡಂಬಡಿಕೆಯ ಕಾಲದಲ್ಲಿ ಬಹುಪಾಲು ಅನ್ಯ ಜನರು (ಗ್ರೀಕರು ಸೇರಿದಂತೆ) ಯೆಹೂದ್ಯರ ವಿರುದ್ಧ ಕಹಿಭಾವನೆಗಳನ್ನು ಹೊಂದಿದ್ದರು[79] ಮತ್ತು ಅವಕಾಶವು ಉದ್ಭವಿಸಿದಾಗಲೆಲ್ಲಾ ಅವರನ್ನು ಅಸಭ್ಯವಾಗಿ ನಡೆಸಿಕೊಳ್ಳಲು ಸಿದ್ಧರಾಗಿರುತ್ತಿದ್ದರು. ಈ ಘಟನೆಯಲ್ಲಿ ಗಲ್ಲಿಯೋನನು ಯೆಹೂದ್ಯರನ್ನು ನ್ಯಾಯ ಸ್ಥಾನದಿಂದ ಹೊರಡಿಸುವದರ ಮೂಲಕ ಅವರಿಗೆ ಅವಮಾನವನ್ನು ಉಂಟು ಮಾಡಿದ್ದನು; ಈಗ ಅದು ಸಾಲದೆಂಬಂತೆ ಗ್ರೀಕರು ಯೆಹೂದ್ಯರು ನಾಯಕನಾದ ಸೋಸ್ಥೆನನನ್ನು ಹೊಡೆಯುವದರ ಮೂಲಕ ಮತ್ತಷ್ಟು ಅವಮಾನವನ್ನುಂ–ಟುಮಾಡಿದರು.

## ಪೌಲನು ಅಂತಿಯೋಕ್ಯಕ್ಕೆ ಹಿಂದಿರುಗಿದ್ದು (18:18-23)

**18** ಕಾಲ ಕಾಲಕ್ಕೆ ಯೆಹೂದ್ಯರು ದೇವರಿಗೆ ವಿಶೇಷ ಹರಕೆಯೊಂದನ್ನು ಮಾಡಿಕೊಳ್ಳುತ್ತಿದ್ದರು. ಬಹುಶ: ಪೌಲನು ಕೊರಿಂಥದಲ್ಲಿ ಇದ್ದ ವೇಳೆ ದೇವರು ಆತನನ್ನು ಕಾಪಾಡಿದ್ದಕ್ಕಾಗಿ ಕೃತಜ್ಞತಾ ಸ್ತೋತ್ರದ ಹರಕೆಯನ್ನು ಮಾಡಿಕೊಂಡಿರಬೇಕು. ಅಂತಹ ಹರಕೆಯೊಂದನ್ನು ಮಾಡಿದ ನಂತರ ಆ ಹರಕೆಯ ಅವಧಿಯು ಮುಗಿಯುವ ತನಕ ಹರಕೆ ಮಾಡಿಕೊಂಡ ವ್ಯಕ್ತಿಯು ಕ್ಷೌರ ಮಾಡಿಸಿಕೊಳ್ಳಬಾರದಾಗಿತ್ತು. ತರುವಾಯ ಹರಕೆಯ ಕೊನೆಯ ದಿನದಲ್ಲಿ ಆ ವ್ಯಕ್ತಿಯು ಕ್ಷೌರ ಮಾಡಿಸಿಕೊಂಡು ತನ್ನ ಕೂದಲನ್ನು ದೇವರಿಗೆ ಅರ್ಪಿಸಬೇಕಾಗಿತ್ತು (ಅರಣ್ಯಕಾಂಡ 6:1-21). ಕೆಂಖ್ರೆಯವು ಕೊರಿಂಥದ ಕೋಟೆಯ ಊರಾಗಿತ್ತು (ರೋಮ 16:1) ಅಲ್ಲಿಂದ ಪೌಲ, ಅಕ್ವಿಲನು, ಮತ್ತು ಪ್ರಿಸ್ಕಿಲಳೂ ಒಟ್ಟಾಗಿ ಸಮುದ್ರ ಪ್ರಯಾಣದ ಮೂಲಕ ಎಫೆಸಕ್ಕೆ ಹೊರಟರು.

**19-21** ಪೌಲನ ಕಾಲದಲ್ಲಿ ಎಫೆಸವು ಮಧ್ಯ ಪೂರ್ವದ ಅತಿ ಪ್ರಾಮುಖ್ಯ ಪಟ್ಟಣಗಳಲ್ಲಿ ಒಂದಾಗಿತ್ತು. ಇದು ಪ್ರಮುಖ ವ್ಯಾಪಾರದ ಹಾಗು ಸಾಂಸ್ಕೃತಿಕ ಕೇಂದ್ರವಾಗಿತ್ತು. ಇದು ಇಂದಿನ ಟರ್ಕಿಯ ಪೂರ್ವ ಕರಾವಳಿಯಲ್ಲಿ ಇತ್ತು. ಆದರೆ ಹೊಸ ಒಡಂಬಡಿಕೆಯ ಕಾಲದಲ್ಲಿ ಎಫೆಸವು ದೊಡ್ಡ ಪಟ್ಟಣವಾಗಿತ್ತಾದರೂ ಇಂದು ಅಲ್ಲಿ ಪಳಿಯುಳಿಕೆಗಳೇ ಹೊರತು ಮತ್ತೇನೂ ಉಳಿದಿರುವದಿಲ್ಲ.

ಈ ಪ್ರಯಾಣದಲ್ಲಿ ಪೌಲನು ಎಫೆಸದ ಸಭಾಮಂದಿರಗಳಲ್ಲಿ ಬೋಧಿಸುತ್ತಾ ಕೆಲವು ದಿನಗಳನ್ನು ಮಾತ್ರವೇ ಕಳೆದನು. ಪೌಲನು "ದೇವರ ಚಿತ್ತವಾದರೆ ತಿರಿಗಿ ನಿಮ್ಮ ಬಳಿಗೆ ಬರುತ್ತೇನೆ" ಎಂದು ಹೇಳಿ ಅಲ್ಲಿನ ಯೆಹೂದ್ಯರ ಅಪ್ಪಣೆ ತೆಗೆದು ಕೊಂಡು ಹೋದನು. ಆದರೆ ಅಕ್ವಿಲನೂ ಪ್ರಿಸ್ಕಿಲ್ಲಳು ಎಫೆಸ ದಲ್ಲಿ ಉಳಿದುಕೊಂಡು ತಮ್ಮ ಮನೆಯಲ್ಲಿ ಸಭೆಯನ್ನು ಪ್ರಾರಂಭಿಸಿದರು (1 ಕೊರಿಂಥ 16:19).ಕ್ರಿ.ಶಕ 54 ರಲ್ಲಿ ರೋಮಾಯ ಚಕ್ರವರ್ತಿಯಾದ ಕ್ಲೌದಿಯು ಮರಣಿಸಿದ್ದರಿಂದ ಅಕ್ವಿಲನೂ ಪ್ರಿಸ್ಕಿಲ್ಲಳೂ ರೋಮಾಪುರಕ್ಕೆ ಹಿಂದಿರುಗಿ ಹೋದರು (ರೋಮ 16:3).

**22** ಪೌಲನು ಎಪೆಸ್‌ದಿಂದ ಸಮುದ್ರ ಪ್ರಯಾಣ ಮಾಡಿ ಸಿರಿಯಾಕ್ಕೆ ಹೋದನು (ಅ.ಕೃತ್ಯ 8:40, 10:1). ಅವನು ಕೈಸರೈಯಲ್ಲಿ ಇಳಿದು ಯೆರೂಸಲೇಮಿಗೆ ಹೋಗಿ ಅಲ್ಲಿನ ಸಭೆಯನ್ನು ವಂದಿಸಿದನು. ಪೌಲನು ತನ್ನ ಹರಕೆಯ ಪ್ರಕಾರವಾಗಿ

ಆ ಸಮಯದಲ್ಲಿದ್ದ ಪಸ್ಕ ಹಬ್ಬದ ಆಚರಣೆಗಾಗಿ ಯೆರೂಸಲೇಮಿಗೆ ಹೋದನೆಂದು ಕೆಲವು ಬೈಬಲ್ ಪಂಡಿತರು ಅಭಿಪ್ರಾಯ ಪಡುತ್ತಾರೆ. ".ಯರೂಸಲೇಮ" ಎಂಬ ಪದವು ಈ ವಚನದಲ್ಲಿ ಉಲ್ಲೇಖಿಸಲ್ಪಟ್ಟಿರುವದಿಲ್ಲ ಆದರೆ ಅದನ್ನು ಸನ್ನಿವೇಶದಿಂದ ಅರ್ಥಮಾಡಿಕೊಳ್ಳಬಹುದು. ಯೆರೂಸಲೇಮು ಪರ್ವತಗಳಲ್ಲಿತ್ತು, ಆದುದರಿಂದ ಪೌಲನು ಕೈಸರೈದಿಂದ (ಕರಾವಳಿಯಲ್ಲಿದ್ದ) ಘಟ್ಟಾ ಹತ್ತಿ ಯೆರೂಸಲೇಮಿಗೆ ಹೋದನು. ಅನಂತರ ಅವನು ಘಟ್ಟಾ ಇಲಿದು ಯೆರೂಸಲೇಮಿನಿಂದ ತಿರಿಗಿ ಅಂತಿಯೋಕ್ಯಕ್ಕೆ ಹೋದನು.

23 ಅಂತಿಯೋಕ್ಯದ ಸಭೆಯು ಪೌಲ ಸೀಲರನ್ನು ಈ ಎರಡನೆಯ ಸುವಾರ್ತಾ ಪ್ರಯಾಣಕ್ಕೆ ಕಳುಹಿಸಿತು (ಅ.ಕೃತ್ಯ 40);ಆದುದರಿಂದ ಪೌಲ ಬಾರ್ನಬರು ತಮ್ಮ ಪ್ರಥಮ ಸುವಾರ್ತಾ ಪ್ರಯಾಣದ ವರದಿಯನ್ನು ಸಭೆಗೆ ನೀಡಿದ ಹಾಗೆಯೇ ಈ ಸಂದರ್ಭದಲ್ಲಿ ಸಹ ದೇವರು ತನ್ನ ಹಾಗು ಸೀಲನ ಮೂಲಕವಾಗಿ ಮಾಡಿದ ಎಲ್ಲಾ ಸಂಗತಿಗಳನ್ನು ಪೌಲನು ಸಭೆಗೆ ತಿಳಿಯಪಡಿಸಿದನು (ಅ.ಕೃತ್ಯ 14:26-27).

ಬಳಿಕ ಪೌಲನು ಗಲಾತ್ಯ ಹಾಗು ಹತ್ತಿರದ ಫ್ರುಗ್ಯಯಲ್ಲಿ ತಾನು ಹಾಗು ಬಾರ್ನಬ ಜೊತೆಯಾಗಿ ಪ್ರಥಮ ಸುವಾರ್ತಾ ಪ್ರಯಾಣದಲ್ಲಿ ಸ್ಥಾಪಿಸಿದ ಸಭೆಗಳ ವಿಶ್ವಾಸಿಗಳನ್ನು ಬಲಪಡಿಸಿ ಪ್ರೋತ್ಸಾಹಿಸುವದಕ್ಕಾಗಿ ಹೊರಟನು. ಹೀಗೆ ಪೌಲನ ಮೂರನೆಯ ಸುವಾರ್ತಾ ಪ್ರಯಾಣವು ಪ್ರಾರಂಭಗೊಂಡಿತು.

## ಎಫೆಸದಲ್ಲಿ ಅಪೊಲ್ಲೋಸ (18:24-28)

24 ಅಪೊಲ್ಲೋಸನು ಅಲೆಕ್ಸಾಂದ್ರಿಯದಲ್ಲಿ[80] ಹುಟ್ಟಿದ ಒಬ್ಬ ವಿದ್ಯಾವಂತ ಯೆಹೂದ್ಯನಾಗಿದ್ದನು. ಆತನು ಶಾಸ್ತ್ರಗಳಲ್ಲಿ, ಅಂದರೆ ಹಳೆ ಒಡಂಬಡಿಕೆಯಲ್ಲಿ ಪ್ರವೀಣನಾಗಿದ್ದನು.

25 ಅಪೊಲ್ಲೋಸನನ್ನು ಕರ್ತನ (ಕ್ರಿಸ್ತನ) ಮಾರ್ಗದಲ್ಲಿ ಮೊದಲು ಯಾರು ನಡೆಸಿದರೆಂಬದು ತಿಳಿದು ಬಂದಿರುವದಿಲ್ಲ. ಆತನು ಕ್ರಿಸ್ತ ಕುರಿತಾಗಿ ಬಹಳಷ್ಟು ತಿಳಿದವನಾಗಿದ್ದನು ಮತ್ತು ಸುವಾರ್ತೆಯನ್ನು ಬಹಳ ಆಸಕ್ತಮನಸ್ಸಿನಿಂದ [81] ಉಪದೇಶಿಸಿದನು. ಆದರೆ ಅವನ ಬೋಧನೆಯಲ್ಲಿ ಯಾವದೋ ಒಂದು ಸಂಗತಿಯ ಕೊರತೆಯಿತ್ತು. ಆತನು ಕೇವಲ ಸ್ನಾನಿಕನಾದ ಯೋಹಾನನ ದೀಕ್ಷಾಸ್ನಾನದ ಕುರಿತು ಮಾತ್ರ ಬಲ್ಲವನಾಗಿದ್ದನು, ಜನರನ್ನು ಕ್ರಿಸ್ತನಿಗಾಗಿ ಸಿದ್ಧ ಮಾಡುವದಕ್ಕೋಸ್ಕರವಷ್ಟೆ ಯೋಹಾನನು ಅದನ್ನು ನಡಿಸಿದ್ದನು (ಮಾರ್ಕ 1:2-4). ಪೇತ್ರನು ಪಂಚಾಶತ್ತಮದ ದಿನದಲ್ಲಿ ಮಾತಾಡಿದ್ದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವರ ಬಗ್ಗೆ ಅವನು ತಿಳಿದು ಕೊಂಡಿರಲಿಲ್ಲ (ಅ.ಕೃತ್ಯ 2:38). ಇತರ ಮೂಲಕವಾಗಿ ಅಪೊಲ್ಲೋಸನು ಪವಿತ್ರಾತ್ಮನನ್ನು ಸ್ವೀಕರಿಸಿರಲಿಲ್ಲ ಎಂಬದನ್ನು ನಾವು ಅರ್ಥ ಮಾಡಿಕೊಳ್ಳಬಹುದು, ಯಾಕೆಂದರೆ ಹೊಸ ಒಡಂಬಡಿಕೆಯಲ್ಲಿ ಒಬ್ಬನು ಪವಿತ್ರಾತ್ಮನನ್ನು ಪಡೆದುಕೊಳ್ಳುವದಕ್ಕೆ ಮುಂಚೆ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನವು ಸಾಮಾನ್ಯವಾಗಿ ಜರುಗುತ್ತದೆ (ಅ.ಕೃತ್ಯ 2:38, 8:15-17 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಅಪೊಲ್ಲೋಸನು ಸ್ವತಃ ಸ್ನಾನಿಕನಾದ ಯೋಹಾನನೇ ಹೇಳಿದ ಮಾತುಗಳನ್ನು ಕೇಳಿರಲಿಲ್ಲ. ಏನೆಂದರೆ, "ನಾನು ನಿಮಗೆ ನೀರಿನ ಸ್ನಾನ ಮಾಡಿಸಿದೆನು, ಆತನಾದರೋ ನಿಮಗೆ ಪವಿತ್ರಾತ್ಮನ ಸ್ನಾನ ಮಾಡಿಸುವನು" (ಮಾರ್ಕ 1:8).

26 ಅಪೊಲ್ಲೋಸನು ಬೋಧಿಸುವದನ್ನು ಅಕ್ವಿಲ ಪ್ರಿಸ್ಕಿಲ್ಲಳರು ಕೇಳಿದಾಗ ಆತನ ತಿಳುವಳಿಕೆಯಲ್ಲಿ ಏನೋ ಒಂದು ಕೊರೆತೆಯಿದೆಂಬದನ್ನು ಅವರು ಶೀಘ್ರವೇ ಗ್ರಹಿಸಿಕೊಂಡಿದ್ದರು. ಆದರೆ ಅವರು ಇತರ ಜನರ ಎದುರಿನಲ್ಲಿ ಅಪಲ್ಲೋಸನ ತಪ್ಪನ್ನು ಎತ್ತಿ ತೋರಿಸಲಿಲ್ಲ. ಅವರು ಆತನಿಗೆ ನಾಚಿಕೆಯನ್ನು ಉಂಟು ಮಾಡಲು ಬಯಸಲಿಲ್ಲ. ಬದಲಾಗಿ ಅವರು ಆತನನ್ನು ತಮ್ಮ ಮನೆಗೆ ಆಮಂತ್ರಿಸಿ ನಂಬಿಕೆಯ ವಿಷಯದಲ್ಲಿ ಅವನಿಗೆ ಇನ್ನೂ ಸೂಕ್ಷ್ಮವಾಗಿ ಮಾರ್ಗದರ್ಶಿಸಿದರು. ಅಪೊಲ್ಲೋಸನು ಈಗಾಗಲೇ ಪ್ರಸಿದ್ಧ ಬೋಧಕನಾಗಿದ್ದನಾದರೂ ಈ ಹಿರಿಯ ಸಹೋದರ ಹಾಗು ಸಹೋದರಿಯರ ತಿದ್ದುವಿಕೆಯನ್ನು ದೀನಮನಸ್ಸಿನಿಂದ ಸ್ವೀಕರಿಸಿಕೊಂಡನು.

27-28 ಪೌಲನು ಆಗಷ್ಟೇ ಕೊರಿಂಥದಿಂದ ಹೊರಟು ಹೋಗಿದ್ದನು. ಕೊರಿಂಥದಲ್ಲಿ ಇನ್ನಾವ ಅಪೊಸ್ತಲನಾಗಲಿ ಅಥವಾ ಪ್ರಸಿದ್ಧ ಕ್ರೈಸ್ತ ನಾಯಕನಾಗಲಿ ಇರಲಿಲ್ಲ. ಆದ್ದರಿಂದ ಅಪೊಲ್ಲೋಸನು ಕೊರಿಂಥಕ್ಕೆ ಹೋಗಿ ಅಲ್ಲಿರುವ ಸಭೆಗೆ ನಾಯಕತ್ವವನ್ನು ಒದಗಿಸಬೇಕೆಂದು ಎಫೆಸ್‌ದಲ್ಲಿನ ಸಹೋದರರು ಆತನನ್ನು ಪ್ರೋತ್ಸಾಹಿಸಿದರು. ಮತ್ತು ಅದರಂತೆ ಅಪೊಲ್ಲೋಸನು ಕೊರಿಂಥಕ್ಕೆ ಹೋಗಿ ಸಭೆಗೆ ಬಹಳಷ್ಟು ಸಹಾಯವನ್ನು ನೀಡಿದನು. ಪೌಲನಂತೆಯೇ ಒಬ್ಬ ಯೆಹೂದ್ಯನಾಗಿದ್ದ ಅಪೊಲ್ಲೋಸನು ಯೇಸುವೇ ಕ್ರಿಸ್ತನೂ, ಮೆಸ್ಸೀಯನೂ ಆಗಿದ್ದಾನೆಂಬದಾಗಿ ಅವರ ಶಾಸ್ತ್ರಗಳ (ಹಳೆ ಒಡಂಬಡಿಕೆಯ) ಆಧಾರದಿಂದ ಫಲಿತಾಮಕಾರಿಯಾಗಿ ವಾದಿಸಿ ತೋರಿಸಿಕೊಡಲು ಶಕ್ತನಾದನು.

ಅಪೊಲ್ಲೋಸನು ಮುಂದೆ ಒಬ್ಬ ಶ್ರೇಷ್ಠ ಕ್ರೈಸ್ತನಾಯಕನಾದನು. ಅವನಿಂದ ಕೊರಿಂಥದಲ್ಲಿನ ಸಭೆಗೆ ಬಹಳ ಪ್ರಯೋಜನವು ಂಟಾಯಿತು. ಅಲ್ಲಿ ಅವನ ಪ್ರಭಾವವು ಎಷ್ಟಾಗಿತ್ತೆಂದರೆ ಕೊರಿಂಥ ಸಭೆಯ ಕೆಲವು ಸದಸ್ಯರು ಆತನ ಶಿಷ್ಯರಾಗಿ ಆತನನ್ನು ಅನುಸರಿಸುವವರಾದರು (1 ಕೊರಿಂಥ 1:12, 3:4). ಪೌಲನು ಅಪೊಲ್ಲೋಸನನ್ನು ತನ್ನ ಜೊತೆ ಕೆಲಸಗಾರ ಹಾಗು ಅಪೊಸ್ತಲನೆಂದು ಪರಿಗಣಿಸಿದನು (1 ಕೊರಿಂಥ 3:21-22, 4:6,9). ಕೊರಿಂಥದಲ್ಲಿ ಪೌಲನು ಸಸಿಯನ್ನು ನೆಟ್ಟನು, ಮತ್ತು ಅಪೊಲ್ಲೋಸನು ಅದಕ್ಕೆ ನೀರು ಹಾಕಿದನು (1 ಕೊರಿಂಥ 3:6).

ಪಿಸ್ಕಿಲ್ಲ, ಅಕ್ಲಿಲ ಹಾಗು ಅಪೊಲ್ಲೋಸರ ಈ ಕಥೆಯಿಂದ ನಾವು ಕಲಿತು ಕೊಳ್ಳೋಣ. ನಾವೆಲ್ಲರೂ ಒಂದಿಲ್ಲಾ ಒಂದು ನ್ಯೂನ್ಯತೆ ಅಥವಾ ಕೊರತೆಯನ್ನು ಹೊಂದಿದ್ದೇವೆ. ನಾವು ಏಕಾಂತವಾಗಿ ಒಬ್ಬರನ್ನೊಬ್ಬರು ಸರಿಪಡಿಸಿಕೊಳ್ಳೋಣ. ಯಾರಾದರೂ ನಮ್ಮನ್ನು ತಿದ್ದುವದಾದರೆ ಅಪೊಲ್ಲೋಸನ ಹಾಗೆಯೇ ನಾವು ಅದನ್ನು ಸ್ವೀಕರಿಸಿಕೊಳ್ಳೋಣ. ಆಗ ನಾವು ಸಹ ಯೇಸು ಕ್ರಿಸ್ತನ ಪರಿಪಕ್ವ ಹಾಗು ಫಲ ಕಾರಿಯಾದ ನಾಯಕರಾಗಿ ಬೆಳೆಯುವೆವು.

---

## ಅಧ್ಯಾಯ - 19

### ಎಫೆಸದಲ್ಲಿ ಪೌಲನು (19:1-12)

**1-2** ಪೌಲನು ಫ್ರುಗ್ಯ ಹಾಗು ಗಲಾತ್ಯದಲ್ಲಿದ್ದ ಶಿಷ್ಯರನ್ನು ಸಂಧಿಸಿದ ಬಳಿಕ (ಅ.ಕೃತ್ಯ 18:23), ಆತನು ಎಫೆಸಕ್ಕೆ ಬಂದನು. ಅಲ್ಲಿ ಆತನು ಯೇಸುವನ್ನು ನಂಬಿದ್ದರೂ ಇನ್ನೂ ಪವಿತ್ರಾತ್ಮನನ್ನು ಪಡೆದುಕೊಳ್ಳದೆ ಇದ್ದ ಕೆಲವು ಮಂದಿ ಶಿಷ್ಯರನ್ನು [82] ಬೇಟಿಮಾಡಿದನು.

**3** ದೀಕ್ಷಾಸ್ನಾನ ಮಾಡಿಸಿಕೊಳ್ಳುವದು ಹಾಗು ಪವಿತ್ರಾತ್ಮನನ್ನು ಹೊಂದುವದು ಯಾವಾಗಲೂ ಎರಡು ಒಟ್ಟಾಗಿ ಸಂಭವಿಸುತ್ತವೆ ಅಥವಾ ಕ್ಲುಪ್ತ ಕಾಲಾವಧಿಯಲ್ಲಾದರೂ ಸಂಭವಿಸುತ್ತವೆ ಎಂಬದು ಪೌಲನ ತಿಳುವಳಿಕೆಯಾಗಿತ್ತು. ಕೆಲವು ಸಮಯಗಳಲ್ಲಿ ದಿಕ್ಷಾಸ್ನಾನವು ಮೊದಲು ಬರುತ್ತದೆ (ಅ.ಕೃತ್ಯ 2:38, 8:15-17). ಇನ್ನು ಕೆಲವು ಸಮಯಗಳಲ್ಲಿ ಪವಿತ್ರಾತ್ಮನು ಮೊದಲು ಬಂದನು (ಅ.ಕೃತ್ಯ 10:44, 47-48). ಆದರೆ, ಇದು ಯಾವ ಕ್ರಮದಲ್ಲಿ ಜರುಗಿದರೂ ಒಬ್ಬ ನಿಜ ಕ್ರೈಸ್ತನಾಗಿರಬೇಕಾದರೆ ದೀಕ್ಷಾಸ್ನಾನ ಮಾಡಿಸಿ ಕೊಂಡಿರುವದು ಹಾಗು ಪವಿತ್ರಾತ್ಮನನ್ನು ಹೊಂದಿಕೊಳ್ಳುವದು ಎರಡೂ ಅವಶ್ಯಕವಾಗಿ–ರುತ್ತವೆ. ಆದುದರಿಂದ, ಈ ಶಿಷ್ಯರು ಪವಿತ್ರಾತ್ಮನನ್ನು ಹೊಂದಿಲ್ಲವೆಂಬುದನ್ನು ತಿಳಿದುಕೊಂಡ ಪೌಲನು ಅವರಿಗೆ "ನೀವು ಯಾವ ದೀಕ್ಷಾಸ್ನಾನವನ್ನು ಮಾಡಿಸಿಕೊಂಡಿರಿ?" ಎಂದು ಕೇಳಿದನು. ಆದಕ್ಕೆ ಅವರು ಯೋಹಾನನದೀ "ಕ್ಷಾಸ್ನಾನ" ಎಂದು ಉತ್ತರಿಸಿದರು.

**4-5** ತರುವಾಯ ಪೌಲನು ಅವರಿಗೆ ಜನರನ್ನು ಕ್ರಿಸ್ತನ ಬರೋಣಕ್ಕಾಗಿ ಸಿದ್ಧಪಡಿಸಲು ಮಾತ್ರವೇ ಯೋಹಾನನ ದೀಕ್ಷಾಸ್ನಾನ ಕೊಡಲ್ಪಟ್ಟಿತೆಂದು ತಿಳಿಸಿಹೇಳಿದನು (ಮಾರ್ಕ 1:2-4, ಅ.ಕೃತ್ಯ 18:25). ಈಗ, ಯೇಸುವನ್ನು ನಂಬಿದರಾಗಿದ್ದ ಅವರು ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕಾಗಿತ್ತು. ಆದುದರಿಂದ ಅವರೆಲ್ಲರೂ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನನ ಮಾಡಿಸಿಕೊಂಡರು. ಒಬ್ಬರು ಎರಡು ಸಾರಿ ದೀಕ್ಷಾಸ್ನಾನ ಹೊಂದುವದರ ಕುರಿತಾಗಿ ಹೊಸ ಒಡಂಬಡಿಕೆಯಲ್ಲಿ ಇದೇ ಒಂದು ಸಾರಿ ಮಾತ್ರವೇ ನಾವು ಓದುತ್ತೇವೆ. ಈ ಶಿಷ್ಯರು ಮೊದಲನೆಯಸಾರಿ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳದೆ ಇದ್ದದ್ದೇ ಇದಕ್ಕೆ ಕಾರಣವಾಗಿತ್ತವಷ್ಟೇ. ಒಮ್ಮೆ ಒಬ್ಬನು ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡ ಮೇಲೆ – ಯಾವ ವಿಧಾನದಲ್ಲಿಯೇ ಆಗಿರಬಹುದು – ಅವನು ಪುನಃ ಇನ್ನೆಂದಿಗೂ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಅಗತ್ಯವಿರುವದಿಲ್ಲ (ಸಾಮಾನ್ಯ ಲೇಖನ: ನೀರಿನ ದೀಕ್ಷಾಸ್ನಾನ ನೋಡಿರಿ).

**6-7** ವಿಶ್ವಾಸಿಗಳು ಪವಿತ್ರಾತ್ಮನನ್ನು [83] ಹೊಂದಿದಾಗ ನಾನಾ ಭಾಷೆಗಳಲ್ಲಿ ಮಾತಾಡಿದರೆಂದು ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ಲೂಕನು ಸ್ಪಷ್ಟವಾಗಿ ಬರೆಯುವದು ಇದು ಮೂರನೆಯ ಸಾರಿಯಾಗಿರುತ್ತದೆ (ಅ.ಕೃತ್ಯ 2:4, 10:44-46 ನೋಡಿರಿ). ಹೊಸ ಒಡಂಬಡಿಕೆಯಲ್ಲಿ ಅನ್ಯ ಭಾಷೆಗಳನ್ನಾಡುವದು ಪವಿತ್ರಾತ್ಮನಿಂದ ತುಂಬಿಸಲ್ಪಡುವಿಕೆ ಅಥವಾ "ದೀಕ್ಷಾಸ್ನಾನ"ದ ಸಾಮಾನ್ಯ ಸಂಕೇತವಾಗಿತ್ತೆಂಬದನ್ನು ಈ ಉದಾಹರಣೆಗಳ ಮೂಲಕ ನಾವು ಅರ್ಥಮಾಡಿಕೊಳ್ಳಬಹುದು. ಹೇಗಿದ್ದರೂ, ಪವಿತ್ರಾತ್ಮನಿಂದ ತುಂಬಿಸಲ್ಪಡುವವರೆಲ್ಲರೂ ಅನ್ಯ ಭಾಷೆಗಳಲ್ಲಿ ಮಾತಾಡಲು ಶಕ್ತರಾಗ ಬೇಕೆಂದು ಹೊಸ ಒಡಂಬಡಿಕೆಯಲ್ಲಿ ಎಲ್ಲಿಯೂ ಬರೆಯಲ್ಪಟ್ಟಿರುವದಿಲ್ಲ (ಸಾಮಾನ್ಯ ಲೇಖನ: ಪವಿತ್ರಾತ್ಮನ ದೀಕ್ಷಾಸ್ನಾನ ನೋಡಿರಿ).
ಅಪೊಸ್ತಲರ ಕೃತ್ಯಗಳಲ್ಲಿ ವಿಶ್ವಾಸಿಗಳು ಅನ್ಯ ಭಾಷಗಳನ್ನಾಡುವದರ ಕುರಿತಾಗಿ ನಾವು ಓದುವ ಮೂರು ಸಂಧರ್ಭಗಳೂ ಬಹಳ ಪ್ರಾಮುಖ್ಯವಾದವು ಗಳಾಗಿದ್ದವು. ಮೊದಲ ಸಂದರ್ಭವು ಪಂಚಾಶತ್ತಮ ದಿನವಾಗಿತ್ತು, ಆಗ ಶಿಷ್ಯರು ಪ್ರಥಮ ಬಾರಿಗೆ ಪವಿತ್ರಾತ್ಮನ ತುಂಬಿಸಲ್ಪಡುವಿಕೆಯನ್ನು ಹೊಂದಿದರು. ಎರಡನೆಯದು ಪ್ರಥಮ ಅನ್ಯಜನರು ಕ್ರೈಸ್ತರಾದ ಸಂದರ್ಭವಾಗಿತ್ತು ಮತ್ತು ಮೂರನೆಯ ಸಂದರ್ಭದಲ್ಲಿ ಪೌಲನು ಸುವಾರ್ತೆಯ ಪ್ರಸರಣೆಗೆ ಒಂದು ಕೇಂದ್ರವಾದ ಎಫೆಸದಲ್ಲಿದ್ದನು ಹಾಗು ಹನ್ನೆರಡು ಮಂದಿ ನೂತನ ಮಂದಿ ವಿಶ್ವಾಸಿಗಳ ಅಗತ್ಯವಿತ್ತು (ವಚನ 7). ಆದುದರಿಂದ, ದೇವರು ಈ ಹನ್ನೆರಡು ಮಂದಿ ಶಿಷ್ಯರನ್ನು ವಿಶೇಷವಾದ ರೀತಿಯಲ್ಲಿ ತನ್ನ ಪವಿತ್ರಾತ್ಮನನ್ನು ಅವರ ಮೇಲೆ ಸುರಿಸುವದರ ಮೂಲಕ ಅವರನ್ನು ಸಿದ್ಧಪಡಿಸಿ ಅಭಿಷೇಕಿಸಿದನು.

ಈ ವ್ಯಕ್ತಿಗಳು ನಾನಾ ಭಾಷೆಗಳನ್ನಾಡಿದರು, ಪ್ರವಾದಿಸಿದರು. ನಾನಾ ಭಾಷೆಗಳನ್ನಾಡುವದು ಹಾಗು ಪ್ರವಾದಿಸುವದು ಎರಡೂ ಪವಿತ್ರಾತ್ಮನ ವರಗಳಾಗಿದ್ದವು (1 ಕೊರಿಂಥ 12:10, 14:5,13 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**8-10** ಪೌಲನು ಮೂರು ತಿಂಗಳುಗಳ ವರೆಗೆ ಎಫೆಸದಲ್ಲಿದ್ದು ಪ್ರತಿ ಶನಿವಾರದಂದು ಯೆಹೂದ್ಯ ಸಭಾಮಂದಿರಗಳಲ್ಲಿ ಬೋಧಿಸತ್ತಿದ್ದನು. ಹೇಗಿದ್ದರೂ, ಯೆಹೂದ್ಯರಿಂದ ವಿರೋಧವು ಹೆಚ್ಚಾದ ಕಾರಣ ಪೌಲನು ಹಾಗು ಆತನ ಶಿಷ್ಯರು ತುರನ್ನನ

ತರ್ಕಶಾಲೆಯಲ್ಲಿ ನೆಲೆಸಿದರು, ಅಲ್ಲಿ ಪೌಲನು ಎರಡು ವರ್ಷಗಳ ಕಾಲ ಬೋಧಿಸುವದನ್ನು ಮುಂದುವರೆಸಿದನು. ಈ ರೀತಿಯಾಗಿ ಪೌಲನು ಶನಿವಾರಗಳಲ್ಲಿ ಮಾತ್ರವಲ್ಲ ಆದರೆ ವಾರದ ಪ್ರತಿದಿನದಲ್ಲಿ ಬೋಧಿಸುವವನಾದನು. ಅಷ್ಟು ಮಾತ್ರವಲ್ಲದೆ, ಯೆಹೂದ್ಯರಷ್ಟೇ ಅಲ್ಲ ಆದರೆ ಎಫೆಸದ ಅನ್ಯ ಜನರೆಲ್ಲರೂ ಸಹ ಬಂದು ಆತನ ಬೋಧನೆಯನ್ನು ಕೇಳುವವರಾದರು. ಎಫೆಸದಲ್ಲಿನ ಬಹು ಪಾಲು ಜನರು ಉಷ್ಣದ ಕಾರಣದಿಂದ ಮಧ್ಯಾಹ್ನದಲ್ಲಿ ನಿದ್ರಿಸುತ್ತಿದ್ದರಾದ್ದರಿಂದ ತುರನ್ನನು ಮುಂಜಾನೆಯ ವೇಳೆಗಳಲ್ಲಿ ಮಾತ್ರವೇ ಬೋಧಿಸಿರುವ ಸಂಭವವಿರುತ್ತದೆ. ಹೀಗಿರುವದರಿಂದ, ಪೌಲನು ಬಹುಶ: ತನ್ನ ಜೀವನಾಂಶಕ್ಕಾಗಿ ಮುಂಜಾನೆಗಳಲ್ಲಿ ಗುಡಾರಗಳನ್ನು ಹೊಲೆಯುತ್ತಿದ್ದನು, ಮತ್ತು ಮಧ್ಯಾಹ್ನದಲ್ಲಿ ಮಲಗಿಕೊಳ್ಳುವದಕ್ಕೆ ಬದಲಾಗಿ ಆತನು ತುರನ್ನನ ತರ್ಕಶಾಲೆಗೆ ಹೋಗಿ ತನ್ನ ಶಿಷ್ಯರಿಗೂ ಹಾಗು ಅಲ್ಲಿ ಬರುವ ಇತರ ಜನರಿಗೂ ಬೋಧಿಸುತ್ತಿದ್ದನು. ಎರಡುವರೆ ವರ್ಷಗಳಲ್ಲಿ ಅಸ್ಯ ಸೀಮೆಯಲ್ಲಿ ನೆಲೆಸಿದ್ದ ಜನರೆಲ್ಲರೂ ಕ್ರಿಸ್ತನ ಸುವಾರ್ತೆಯನ್ನು ಕೇಳಿದ್ದರು. ಅಲ್ಲದೆ ಆ ಸಮಯದಲ್ಲಿ ಕೊಲೊಸ್ಸೆ ಹಾಗು ಲವೋದಿಕಿಯಗಳಲ್ಲಿದ್ದ ಸಭೆಗಳು ಪೌಲನ ಶಿಷ್ಯರಿಂದ ಸ್ಥಾಪಿಸಲ್ಪಟ್ಟಿದ್ದವು (ಕೊಲೊಸ್ಸೆ 2:1, 4:13 ನೋಡಿರಿ). ಬಹುಶ: ಪ್ರಕಟಣೆ ಪು ಸ್ತಕದ ಎರಡು ಮತ್ತು ಮೂರನೆಯ ಅಧ್ಯಾಯಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಏಳು ಸಭೆಗಳು ಸಹ ಇದೇ ಸಮಯದಲ್ಲಿ ಸ್ಥಾಪಿಸಲ್ಪಟ್ಟಿರಬೇಕು (ಪ್ರಕಟಣೆ 1:10-11).

**11-12** ದೇವರು ತನ್ನ ಪವಿತ್ರಾತ್ಮನ ಮೂಲಕ ಪೌಲನ ಕೈಯಿಂದ ವಿಶೇಷವಾದ ಮಹತ್ಕಾರ್ಯಗಳನ್ನು ನಡಿಸಿದನು. ಅನೇಕ ಜನರು ನಂಬಿಕೆಯಿಂದ ಪೌಲನ ಕೈವಸ್ತ್ರಗಳನ್ನೂ ಉಡಿವಸ್ತ್ರಗಳನ್ನೂ [84] ಮುಟ್ಟಿದ್ದರಿಂದ ಮಾತ್ರವೇ ಸ್ವಸ್ಥತೆಯನ್ನು ಹೊಂದಿದರು (ಮಾರ್ಕ 5:27-29, 6:56, ಅ.ಕೃತ್ಯ 5:15 ನೋಡಿರಿ). ಪೌಲನು ಈ ವಸ್ತುಗಳನ್ನು ಉಪಯೋಗಿಸುವದನ್ನು ಕೈ ಬಿಟ್ಟಿದ್ದರೂ ಸಹ ಸ್ವಸ್ಥತೆಯ ಶಕ್ತಿಯು ಇನ್ನೂ ಅವು ಗಳೊಂದಿಗಿತ್ತು.

ಸ್ಕೇವನ ಮಕ್ಕಳು (19:13-22)

**13-16** ಹೊಸ ಒಡಂಬಡಿಕೆಯ ಸಮಸ್ಯೆಗಳಲ್ಲಿ ಬಹುಮಂದಿ ಮಂತ್ರವಾದಿಗಳಿದ್ದರು, ಅವರಲ್ಲಿ ಅನೇಕರು ಯೆಹೂದ್ಯರಾಗಿದ್ದರು. ಪೌಲನು ಯೇಸುವಿನ ಹೆಸರಿನಲ್ಲಿ ದೆವ್ವಗಳನ್ನು ಬಿಡಿಸುವದನ್ನು ನೋಡಿದ ಈ ಮಂತ್ರವಾದಿಗಳಲ್ಲಿ ಕೆಲವರು ಆತನನ್ನು ಅನುಕರಿಸಲು ಪ್ರಯತ್ನಿಸಿದರು (ಅ.ಕೃತ್ಯ 8:9-13, 18-19 ನೋಡಿರಿ). ಒಮ್ಮೆ ಸ್ಕೇವನೆಂಬ ಯೆಹೂದ್ಯ ಯಾಜಕನ ಏಳು ಮಂದಿ ಮಕ್ಕಳು ಪೌಲನ ಮಾದರಿಯನ್ನು ಅನುಸರಿಸಿ ಒಬ್ಬ ವ್ಯಕ್ತಿಯೊಳಗಿಂದ ದುರಾತ್ಮವನ್ನು ಹೊರಡಿಸಲು ಪ್ರಯತ್ನಿಸಿದ್ದರು. ಆದರೆ ದುರಾತ್ಮವು ಈ ಏಳು ಮಂದಿ ಮಕ್ಕಳು ಪೌಲನು ಮಾದರಿಯನ್ನು ಅನುಸರಿಸಿ ಒಬ್ಬ ವ್ಯಕ್ತಿಯೊಳಗಿಂದ ದುರಾತ್ಮವನ್ನು ಹೊರಡಿಸಲು ಪ್ರಯತ್ನಿಸಿದ್ದರು. ಆದರೆ ದುರಾತ್ಮವು ಈ ಏಳು ಸಹೋದರರನ್ನು ಗುರುತಿಸಲಿಲ್ಲ ಮತ್ತು ಆ ದುರಾತ್ಮ ಪೀಡಿತ ವ್ಯಕ್ತಿಯು ತನ್ನೊಳಗಿದ್ದ ದುರಾತ್ಮನ ಬಲದ ಮೂಲಕವಾಗಿ ಆ ಏಳು ಮಂದಿ ಸಹೋದರರನ್ನು ಸೋಲಿಸಿ ಕಠಿಣವಾಗಿ ಹೊಡೆದುಬಿಟ್ಟನು. ಕ್ರಿಸ್ತನ ಹೆಸರು ಹಾಗು ಬಲಗಳು ನಿಜವಾಗಿಯೂ ಶ್ರೇಷ್ಠವಾದವು ಗಳೇ ಆದರೆ ಆತನು ಯಾರನ್ನು ನೇಮಕಮಾಡುತ್ತಾನೆ ಅವರು ಮಾತ್ರವೇ ಆತನ ಹೆಸರು ಹಾಗು ಆತನ ಬಲವನ್ನು ಉಪಯೋಗಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಮಂತ್ರವಾದಿಗಳಿಗೆ ಕ್ರಿಸ್ತನ ನಾಮವನ್ನು ಉಪಯೋಗಿಸುವ ಯಾವ ಅಧಿಕಾರವೂ ಇರುವದಿಲ್ಲ. ಕ್ರಿಸ್ತನ ನಿಜ ಹಾಗು ವಿಧೇಯತೆಯ ಸೇವಕರು ಮಾತ್ರವೇ ಆತನ ಹೆಸರಿನಲ್ಲಿ ಕಾರ್ಯಮಾಡುವ ಅಧಿಕಾರವನ್ನು ಹೊಂದಿರುತ್ತಾರೆ.

**17-18** ಪೌಲನು ಕ್ರಿಸ್ತನ ಹೆಸರನ್ನು ಹೇಳಿದಾಗಲೆಲ್ಲಾ ದೆವ್ವಗಳು ಓಡಿ ಹೋಗುವದನ್ನು ನೋಡಿದ ಜನರು ಭಯ ಹಿಡಿದವರಾದರು. ವಾಸ್ತವದಲ್ಲಿ ಅವರು ತಾವು ಕ್ರಿಸ್ತನನ್ನು ವಿರೋಧಿಸುವದರಲ್ಲಿ ನಿಜವಾಗಿಯೂ ಸೈತಾನನಿಗೆ ಸೇವೆ ಸಲ್ಲಿಸುವವರಾಗಿದ್ದರೆಂಬುದನ್ನು ಗ್ರಹಿಸಿಕೊಂಡರು. ಯಾವ ಮಂತ್ರವಾಗಲಿ ಅಥವಾ ದೆವ್ವವಾಗಲಿ ಅವರನ್ನು ಕ್ರಿಸ್ತ ಹೆಸರಿನ ಬಲದಿಂದ ಕಾಪಾಡಲಾರವೆಂಬದನ್ನು ಅವರು ಕಂಡುಕೊಂಡರು.

**19-20** ಹೊಸ ಒಡಂಬಡಿಕೆಯ ಸಮಯಗಳಲ್ಲಿ ಮಾಟಗಾರರೂ, ಮಂತ್ರವಾದಿಗಳೂ ಸುರುಳಿ (ಪು ಸ್ತಕ) ಗಳಲ್ಲಿ ಬರೆಯಲ್ಪಟ್ಟಿರುತ್ತಿದ್ದ ಅರ್ಥಹೀನ ಪದಗಳ ಸಾಲುಗಳನ್ನೊಳಗೊಂಡ ವಿವಿಧ ಮಂತ್ರಗಳನ್ನು ಪಠಿಸುತ್ತಿದ್ದರು. ಅಂತಹ ಸುರುಳಿಗಳಿಗೆ ಬಹಳ ಕ್ರಯವಿರುತ್ತಿತ್ತು, ಯಾಕೆಂದರೆ ಈ ಮಂತ್ರಗಳನ್ನು ಓದುವದರ ಎಲ್ಲೆಡೆಯೂ ನಂಬಲಾಗುತಿತ್ತು. ಆದರೆ ಮಂತ್ರವಾದಿಗಳಲ್ಲಿಯೂ ಕೆಲವರು ಪಶ್ಚಾತಾಪ ಪಟ್ಟು ಕ್ರಿಸ್ತನನ್ನು ನಂಬಿದ್ದರು, ಅವರು ತಮ್ಮ ಸುರುಳಿಗಳನ್ನು ಒಟ್ಟುಗೊಡಿಸಿ ಸುಟ್ಟು ಬಿಟ್ಟರು. ಆ ದಿನದಲ್ಲಿ ಸುಟ್ಟ ಸುರುಳಿಗಳ ಕ್ರಮವನ್ನು ಲೆಕ್ಕಿಸಲಾಗಿ ಐವತ್ತು ಸಾವಿರ ಬೆಳ್ಳಿನಾಣ್ಯವಾಯಿತು.[85]

**21-22** ಪೌಲನು ಎಫೆಸ್‌ದಲ್ಲಿ ಎರಡುವರೆ ವರ್ಷಗಳ ವರೆಗೆ ಉಳಿದನು. ಅಲ್ಲಿ ಆತನ ಸೇವೆಯಿಂದ ಬಹಳ ಫಲವುಂಟಾಯಿತು. ಪೌಲನು ಎಫೆಸ್‌ದಲ್ಲಿ ಇದ್ದ ಆ ಸಮಯದಲ್ಲಿ ಅನೇಕ ಅಪಾಯಗಳನ್ನು ಎದುರಿಸಿದನು, ಅದರ ಬಗ್ಗೆ ಲೂಕನು ನಮಗೆ ತಿಳಿಸುವದಿಲ್ಲ (ಅ.ಕೃತ್ಯ 20:19, 1 ಕೊರಿಂಥ 15:30-32, 2 ಕೊರಿಂಥ 1:8-10 ನೋಡಿರಿ). ಅಲ್ಲದೆ ಪೌಲನು ಎಫೆಸ್‌ದಲ್ಲಿರುವ ವೇಳೆಯಲ್ಲಿ ಕೊರಿಂಥದವರಿಗೆ ಹೊಸ ಒಡಂಬಡಿಕೆಯಲ್ಲಿನ ಮೊದಲ ಹಾಗು ಎರಡನೆಯ ಪತ್ರಿಕೆಗಳನ್ನು ಬರೆದನು.

ಯೆರೂಸಲೇಮಿನಲ್ಲಿನ ಬಡಕ್ರೈಸ್ತರಿಗಾಗಿ ಮೆಕೆದೋನ್ಯ ಹಾಗು ಅಕಾಯದಲ್ಲಿನ [86] ಸಭೆಗಳಿಂದ ಸಂಗ್ರಹಿಸಲ್ಪಟ್ಟಿದ್ದ ಹಣವನ್ನು ತೆಗೆದುಕೊಂಡು ಯೆರೂಸಲೇಮಿಗೆ ಹೋಗಲು ತಿರ್ಮಾನಿಸಿದನು (ರೋಮ 15:25-26, 1ಕೊರಿಂಥ 16:3-5 ನೋಡಿರಿ). ತರುವಾಯ ಪೌಲನು ರೋಮಾಪು ರದ ಮಾರ್ಗವಾಗಿ ಸ್ಪೇನಿಗೆ ಹೋಗುವ ನಿರೀಕ್ಷೆ ಹೊಂದಿದ್ದನು. (ರೋಮ. 15:23-24). ಸ್ಪೇನ ರೋಮಾಯ ಸಾಮ್ರಾಜ್ಯದ ಅತಿ ಪಶ್ಚಿಮಕ್ಕಿದ್ದ ಸೀಮೆಯಾಗಿತ್ತು.

ಆ ಸಮಯದಲ್ಲಿ ತಿಮೊಥೆಯನೂ ಸಹ ಪೌಲನೊಂದಿಗಿದ್ದನು, ಆದ್ದರಿಂದ ಪೌಲನು ತಿಮೊಥೆ ಹಾಗು ಎರಸ್ತನನ್ನು ತನಗಿಂತ ಮುಂಚಿತವಾಗಿ ಮೆಕೆದೋನ್ಯಕ್ಕೆ ಕಳುಹಿಸಿದನು. ಮುಂಚಿನ ಸಂದರ್ಭದಲ್ಲಿ ಪೌಲನು ತಿಮೊಥೆಯನನ್ನು ಎಫೆಸ್‌ದಿಂದ ಕೊರಿಂಥಕ್ಕೆ ಕಳುಹಿಸಿದ್ದನು (1 ಕೊರಿಂಥ 4:17).

## ಎಫೆಸದಲ್ಲಿ ಗಲಭೆ ಉಂಟಾದದ್ದು (19:23-41)

**23** ಪೌಲನು ಎಫೆಸದಲ್ಲಿ ಇದ್ದ ಅವಧಿಯ ಕೊನೆಯಲ್ಲಿ ಕ್ರಿಸ್ತ ಮಾರ್ಗದ ಅಂದರೆ ಕ್ರೈಸ್ತಧರ್ಮದ ವಿಷಯವಾಗಿ ಬಹಳ ಗಲಭೆ ಹುಟ್ಟಿತು (ಅ.ಕೃತ್ಯ 9:2 ಮತ್ತು ವ್ಯಾಖ್ಯಾನ ನೋಡಿರಿ).

**24** ಎಫೆಸದವರು ಅರ್ತೆಮೀದೇವತೆಯ ಗೌರವಕ್ಕಾಗಿ ಬೃಹತ್ ಗುಡಿಯೊಂದನ್ನು ಕಟ್ಟಿಸಿದ್ದರು, ಅದು 130 ಮೀಟರು ಉದ್ದ ಹಾಗು 60 ಮೀಟರು ಅಗಲವಾದ ಅಳತೆ ಹೊಂದಿತ್ತು. ಅಸ್ಯಸೀಮೆಯಲ್ಲೆಲ್ಲಾ [87] ಜನರು ಅರ್ತೆಮೀಯನ್ನು ಎಲ್ಲಾ ದೇವತೆಗಳಲ್ಲಿಯೂ ದೊಡ್ಡವಳೆಂದು ಪರಿಗಣಿಸಿದ್ದರು. ಆಕೆಯು ಎಲ್ಲಾ ದೇವತೆಗಳ ಹಾಗು ಎಲ್ಲಾ ಮಾನವರ ತಾಯಿಯು ಸಹ ಆಗಿರುವಳೆಂದು ತಿಳಿಯಲಾಗಿತ್ತು. ಗುಡಿಯ ಒಳಗಡೆ ಅರ್ತೆಮೀಯ ಮೂರ್ತಿಯಿತ್ತು, ವಾಸ್ತವದಲ್ಲಿ ಅದು ಆಕಾಶದಿಂದ ಬಿದ್ದ ಉಲ್ಕಾ ಶಿಲೆಯಾಗಿತ್ತು (ವಚನ 35). ಉಲ್ಕೆಯ ಮೇಲ್ಭಾಗವು ಸ್ತನಗಳನ್ನು ಹೋಲುವ ಉಬ್ಬುಗಳಿಂದ ಆವರಿಸಲ್ಪಟ್ಟಿತ್ತು. ಆದುದರಿಂದ, ಅರ್ತೆಮೀಯ ಈ ಮೂರ್ತಿಯು ಅನೇಕ ಸ್ತನಗಳ ಸ್ತ್ರೀಯನ್ನು ಪ್ರತಿನಿಧಿಸುತ್ತದೆಂದು ಎಫೆಸದವರು ನಂಬುತ್ತಿದ್ದರು.

ಅಕ್ಕಸಾಲಿಗರು ಅರ್ತೆಮೀಯ ಚಿಕ್ಕ ಬೆಳ್ಳಿ ಮೂರ್ತಿಗಳನ್ನು ಮಾಡಿ ದೊಡ್ಡಲಾಭಕ್ಕೆ ಮಾರುತ್ತಿದ್ದರು. ಆದರೆ ಬಹಳಷ್ಟು ಜನರು ಅರ್ತೆಮೀಯ ಆರಾಧನೆಯನ್ನು ನಿಲ್ಲಿಸಿ ಕ್ರಿಸ್ತನ ಕಡೆಗೆ ತಿರಿಗಿ ಕೊಳ್ಳಲಾರಂಭಿಸಿದ್ದರಿಂದ ಈ ಮೂರ್ತಿಗಳ ಮಾರಾಟವು ಕಡಿಮೆಯಾಗಿ ಅಕ್ಕಸಾಲಿಗರ ಆದಾಯವು ಕುಂಠಿತಗೊಂಡಿತು. ಆದುದರಿದ, ಅಕ್ಕಸಾಲಿಗರು ಪೌಲನ ಮೇಲೆ ಕೋಪಗೊಳ್ಳಲು ಎರಡು ಕಾರಣಗಳಿದ್ದವು: ಮೊದಲನೆಯದು ಧಾರ್ಮಿಕ, ಹಾಗು ಎರಡನೆಯದು ಆರ್ಥಿಕವಾದದ್ದು. ಆದುದರಿಂದ ಪೌಲನಿಗೆ ಅವರು ತೋರಿದ ವಿರೋಧವು ಇಮ್ಮಡಿಯಾಗಿತ್ತು.

**25-27** ಅಕ್ಕಸಾಲಿಗರು ಕೈಯಿಂದ ಮಾಡಿದ ದೇವರುಗಳನ್ನು ಮಾಡುವದರ ಮೂಲಕ ತಮ್ಮ ಬದುಕನ್ನು ನೋಡಿಕೊಳ್ಳುತ್ತಿದ್ದರು (ವಚನ 26). ಆದರೆ ಪೌಲನು ಈ ಮೂರ್ತಿಗಳನ್ನು ದೇವರುಗಳಲ್ಲವೇ ಅಲ್ಲ, ಅವು ಗಳು ವ್ಯರ್ಥವಾದವು ಗಳು ಎಂದು ಎಲ್ಲರಿಗೂ ಬೋಧಿಸುತ್ತಿದ್ದನು. ಅಕ್ಕಸಾಲಿಗರು ಸಹಜವಾಗಿ ಪೌಲನ ಮೇಲೆಕೋಪಗೊಂಡಿದ್ದರು!

**28-29** ಎಫೆಸದ ನಾಟಕ ಶಾಲೆಯಲ್ಲಿ (ರಂಗಮಂದಿರವು) ಇಪ್ಪತ್ತೈದು ಸಾವಿರ ಜನರು ಕುಳಿತುಕೊಳ್ಳಬಹುದಾಗಿತ್ತು. ಕಾನೂನು ವಿಷಯಗಳನ್ನು ಬಗೆ ಹರಿಸಿಕೊಳ್ಳಲು ಸಾರ್ವಜನಿಕ ಸಭೆಗಳು ಕ್ರಮವಾಗಿ ಈ ನಾಟಕ ಶಾಲೆಯಲ್ಲಿ ಜರುಗುತ್ತಿದ್ದವು (ವಚನ 26). ಗಾಯನೂ, ಅರಿಸ್ತಾರ್ಕನೂ ಮೇಕೆದೋನ್ಯದವರಾಗಿದ್ದರು. ಅರಿಸ್ತಾರ್ಕನು ಥೆಸಲೋನಿಕದವನಾಗಿದ್ದನು (ಅ.ಕೃತ್ಯ 20:4, 27:2, ಕೊಲೊಸ್ಸೆ 4:21) ಗಾಯನೂ ಅ.ಕೃತ್ಯ 20:4ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ದೆರ್ಬೆಯ ಗಾಯನೂ ಒಂದೇ ಆಗಿರಬಹುದು, ಆದರೆ ಇದು ಹಾಗಿರುವದಿಲ್ಲ, ಯಾಕೆಂದರೆ ದೆರ್ಬೆಯು ಮೆಕೆದೋನ್ಯದಲ್ಲಿರಲಿಲ್ಲ, ಆದರೆ ಗಲಾತ್ಯದಲ್ಲಿತ್ತು. ಗಾಯನೂ, ಅರಿಸ್ತಾರ್ಕನನ್ನು ತರ್ಕಶಾಲೆಗೆ ಎಳೆದುಕೊಂಡು ಹೋದರು, ಬಹುಶ: ತರುವಾಯ ಲೂಕನಿಗೆ ಏನು ನಡೆಯಿತೆಂಬುದರ ಪ್ರತ್ಯಕ್ಷವರದಿಯನ್ನು ಇವರೇ ನೀಡಿರಬೇಕು.

**30-31** ಪೌಲನು ಜನರ ಎದುರಿನಲ್ಲಿ ಕಾಣಿಸಿಕೊಳ್ಳಲು ಬಯಸಿದ್ದನು. ಪೌಲನು ಮನುಷ್ಯರಿಗೆ ಎಂದಿಗೂ ಹೆದರಲಿಲ್ಲ. ಪ್ರತಿಯೊಂದು ಅವಕಾಶದಲ್ಲಿಯೂ ಕ್ರಿಸ್ತನ ಸುವಾರ್ತೆಯ ಪರವಾಗಿ ವಾದಿಸಲು ಆತನು ಯಾವಾಗಲೂ ಸಿದ್ಧವಾಗಿರುತ್ತಿದ್ದನು. ಹೇಗಿದ್ದರೂ, ಈ ಸಂದರ್ಭದಲ್ಲಿ, ಪೌಲನು ಅಂತಹ ರೋಷಭರಿತ ಜನರ ಗುಂಪಿನ ಎದುರು ಮಾತಾಡುವದು ಸರಿಯಲ್ಲವೆಂದು ಆತನ ಸಹಪಾಠಿಗಳು ಆತನಿಗೆ ಹೇಳಿದರು. ಅದೊಂದು ದೊಡ್ಡ ಗಂಡಾಂತರವಾಗಿತ್ತು. ಕ್ರೈಸ್ತರು ತಮ್ಮ ಪ್ರಾಣಗಳನ್ನು ಅರ್ಪಿಸಲು ಕರೆಯಲ್ಪಟ್ಟಿದ್ದಾರೆ ಹೊರತು ಅವರು ಎಂದಿಗೂ ತಮ್ಮ ಪ್ರಾಣಗಳನ್ನು ಚೆಲ್ಲುವದಕ್ಕಾಗಿ ಕರೆಯಲ್ಪಟ್ಟಿರುವದಿಲ್ಲ.

**32-34** ಜನರು ಮುಖ್ಯವಾಗಿ ಪೌಲ ಹಾಗು ಕ್ರೈಸ್ತರ ವಿರುದ್ಧವಾಗಿ ಕೋಪಗೊಂಡಿದ್ದರಾದರೂ ಅವರು ಅರ್ತೆಮೀಯನ್ನು ಪೂಜಿಸಿದ ಯೆಹೂದ್ಯರ ಮೇಲೆ ಸಹ ಕೋಪಗೊಂಡಿದ್ದರು. ಹೀಗಿರುವದರಿಂದ, ಯೆಹೂದ್ಯರು ಈ ಗಲಭೆಯನ್ನು ನೋಡಿ ಚಿಂತಿಸಲಾರಂಭಿಸಿದರು.

ಯೆಹೂದ್ಯರು ತಮಗೂ ಕ್ರೈಸ್ತರಿಗೂ ಯಾವ ಸಂಬಂಧವಿಲ್ಲವಾದ್ದರಿಂದ ಕ್ರೈಸ್ತರು ಮಾಡುತ್ತಿರುವ ಸಂಗತಿಗಳಿಗೆ ಜನರು ಯೆಹೂದ್ಯರನ್ನು ದೂರುವ ಅಗತ್ಯವಿಲ್ಲವೆಂಬುವದನ್ನು ಜನರ ಗುಂಪಿಗೆ ಹೇಳುವದಕ್ಕಾಗಿ ಅವರು ಜೊತೆ ಯೆಹೂದ್ಯನಾದ ಅಲೆಕ್ಸಾಂದ್ರನನ್ನು[88] ಮುಂದಕ್ಕೆ ನೂಕಿದರು. ಆದರೆ ಅಲೆಕ್ಸಾಂದ್ರನು ಸ್ವತಃ ಯೆಹೂದ್ಯನಾಗಿದ್ದರಿಂದ ಯಾರು ಆತನ ಮಾತನ್ನು ಕೇಳಲಿಲ್ಲ.

**35-37** ಎಫೆಸವು ರೋಮಾಯ ಸಾಮ್ರಾಜ್ಯದೊಳಗೆ ಸ್ವತಂತ್ರ ಪಟ್ಟಣವಾಗಿತ್ತು, ಮತ್ತು ಅದು ತನ್ನದೇ ಆದ ಸರ್ಕಾರವನ್ನು ಹೊಂದಿತ್ತು. ಪಟ್ಟಣದ ಮುಖ್ಯಾಧಿಕಾರಿಯನ್ನು ಪಟ್ಟಣದ ಯಜಮಾನನು ಎಂದು ಕರೆಯುತ್ತಿದ್ದರು (ವಚನ 35). ಆದರೆ ಎಫೆಸವು ಸ್ವತಃ ಸ್ವತಂತ್ರ ಪಟ್ಟಣವಾಗಿತ್ತಾದರೂ ಅಸ್ಯದ ಸುತ್ತಲಿನ ಸೀಮೆಯು ರೋಮಾಯ ದೇಶಾಧಿಪತಿಯ ಆದೀನದಲ್ಲಿತ್ತು, ಮತ್ತು ರೋಮಾಯ ದೇಶಾಧಿಪತಿಯ ನಿವಾಸವು ಎಫೆಸದಲ್ಲಿತ್ತು. ಒಂದು ವೇಳೆ ಇಂತಹ ಗಲಭೆಯ ಸುದ್ದಿಯು ಅವನ ಕಿವಿಗೆ ಬೀಳುವದಾದರೆ ಆತನು ಖಂಡಿತವಾಗಿಯೂ ಎಫೆಸದವರನ್ನು ದಂಡಿಸುವನು ಹಾಗು ಅವರ ಸ್ವಾತಂತ್ರ್ಯವನ್ನು

ಕಿತ್ತುಕೊಳ್ಳುವ ಸಾಧ್ಯತೆಯೂ ಇತ್ತು. ಆದುದರಿಂದ ಪಟ್ಟಣದ ಯಜಮಾನನು ಜನರ ಗುಂಪನ್ನು ಶಾಂತಗೊಳಿಸಲು ಕಠಿಣವಾಗಿ ಪ್ರಯತ್ನಿಸಿದನು.

**38-41** ಯಾವನಾದರೂ ಯಾರ ವಿರುದ್ಧವಾಗಿಯೇ ದೂರನ್ನು ಹೊಂದಿರುವದಾದರೆ ಆ ಸಂಗತಿಯನ್ನು ನ್ಯಾಯ ಸ್ಥಾನಕ್ಕೆ ತರತಕ್ಕದ್ದು ಎಂಬದಾಗಿ ಪಟ್ಟಣದ ಯಜಮಾನನು ಜನರಿಗೆ ಜ್ಞಾಪಕಪಡಿಸಿದನು. ಅಥವಾ ವಿಷಯ ಪಟ್ಟಣದ ನಿಯಮಗಳನ್ನೊಳಗೊಂಡು ವಾಗ್ವಾದವು ಉದ್ಭವಿಸುವದಾದರೆ ಕ್ರಮವಾಗಿ ಜರುಗುವ ನ್ಯಾಯ ಸ್ಥಾನಗಳಲ್ಲಿ ಆ ವಿಷಯವನ್ನು ಇತ್ಯರ್ಥಗೊಳಿಸಿಕೊಳ್ಳತಕ್ಕದ್ದು. ಆದರೆ ಇಂತಹ ಗಲಭೆಯು ತಕ್ಕದ್ದಲ್ಲವಾದ ಕಾರಣ ತಕ್ಷಣವೇ ಕೊನೆಗೊಳ್ಳತಕ್ಕದ್ದು ಎಂದು ಪಟ್ಟಣದ ಯಜಮಾನನು ಜನರಿಗೆ ತಿಳಿಯ ಪಡಿಸಿದನು.

---

# ಅಧ್ಯಾಯ - 20

## ಪೌಲನು ಮೆಕೆದೋನ್ಯ ಹಾಗು ಗ್ರೀಸ್‌ಗಳಿಗೆ ಹೋದದ್ದು (20:1-6)

**1** ಕೊರಿಂಥದ ಸಭೆಯಲ್ಲಿದ್ದ ಪರಿಸ್ಥಿತಿಯನ್ನು ಕಂಡುಕೊಳ್ಳುವದಕ್ಕಾಗಿ ಪೌಲನು ತನಗಿಂತ ಮುಂಚಿತವಾಗಿ ತೀತನನ್ನು ಕೊರಿಂಥಕ್ಕೆ ಕಳುಹಿಸಿದ್ದನು. ಆದ್ದರಿಂದ, ಎಫೆಸವನ್ನು ಬಿಟ್ಟ ಮೇಲೆ ಪೌಲನು ಮೊದಲು ತೀತನನ್ನು ಸಂಧಿಸುವ ನಿರೀಕ್ಷೆಯಲ್ಲಿ ತ್ರೋವಕ್ಕೆ ಹೋದನು (ಅ.ಕತ್ಯ 16:8). ಆದರೆ ಪೌಲನು ಅಲ್ಲಿ ತೀತನನ್ನು ಕಂಡುಕೊಳ್ಳದೆ ಮೆಕೆದೋನ್ಯಕ್ಕೆ ಹೋದನು. ಕೊನೆಗೆ ಪೌಲನು ಅಲ್ಲಿ ತೀತನು ಆವನಿಗೆ ಕೊರಿಂಥ ಸಭೆಯ ಕುರಿತಾಗಿ ಒಳ್ಳೇ ವಾರ್ತೆಯನ್ನು ಹೇಳಿದನು (2 ಕೊರಿಂಥ 2:12-13, 7:5-7 ನೋಡಿರಿ).

**2-3** ಪೌಲನು ಮೆಕೆದೋನ್ಯದುದ್ದಕ್ಕೂ ಪ್ರಯಾಣಿಸುತ್ತಾ ಸುಮಾರು ಒಂದು ವರ್ಷ ಕಳೆದನು, ಈ ಸಮಯದಲ್ಲಿ ಆತನು ಇಲ್ಲುರಿಕ ಅಂದರೆ, ಆಧುನಿಕ ಯುಗೋಸ್ಲೊವಿಯದ ವರೆಗೂ ತಲುಪಿದನು (ರೋಮ 15:19). ಅದರ ನಂತರ ಪೌಲನು ಗ್ರೀಸ್ – ಅಂದರೆ ಗ್ರೀಸ್‌ನ ದಕ್ಷಿಣ ಪ್ರಾಂತ್ಯವಾದ ಅಖಾಯಗೆ – ಬಂದನು. ಆತನು ಅಖಾಯದಲ್ಲಿ – ಮುಖ್ಯವಾಗಿ ಕೊರಿಂಥದಲ್ಲಿ – ಮೂರು ತಿಂಗಳು ಕಳೆದನು, ಅಲ್ಲಿಯೇ ತಾನು ಹೊಸ ಒಡಂಬಡಿಕೆಯ ರೋಮಾಪು ರದವರಿಗೆ ಪತ್ರಿಕೆಯನ್ನು ಬರೆದನು.

ಪೌಲನು ಅಖಾಯದಿಂದ ಸಮುದ್ರ ಪ್ರಯಾಣವಾಗಿ ಸಿರಿಯ [89] (ವಚನ 3) ಮತ್ತು ಯೆರೂಸಲೇಮಿಗೆ ಹಿಂದಿರುಗಲು ಯೋಜನೆ ಹಾಕಿದನು (ಅ.ಕೃತ್ಯ 19:32). ಆದರೆ ಅವನು ಹಡಗನ್ನು ಹತ್ತಬೇಕೆನ್ನುವಷ್ಟರಲ್ಲಿ ಕೊರಿಂಥದಲ್ಲಿನ ಯೆಹೂದ್ಯರು ಆತನನ್ನು ಕೊಲ್ಲುವ ಹೊಂಚು ಹಾಕುತ್ತಿದ್ದಾರೆಂಬ ಸುದ್ದಿಯನ್ನು ಕೇಳಿ ಪೌಲನು ಅವರಿಂದ ತಪ್ಪಿಸಿಕೊಳ್ಳಲು ತನ್ನ ಯೋಜನೆಗಳನ್ನು ಬದಲಾಯಿಸಿಕೊಂಡು ಭೂಮಾರ್ಗದ ಮೂಲಕ ಮೆಕೆದೋನ್ಯವನ್ನು ಹಾಯ್ದು ಹಿಂದಿರುಗಲು ತೀರ್ಮಾನಿಸಿಕೊಂಡನು.

**4-6** ಹೇಗಿದ್ದರೂ, ಪೌಲನ ಸಹ ಪಾಠಿಗಳು ಹಡಗನ್ನು ಹತ್ತಿ ಹೊರಟು ತ್ರೋವವನ್ನು ತಲುಪಿ ಪೌಲನಿಗಾಗಿ ಅಲ್ಲಿ ಕಾಯುತ್ತಿದ್ದರು. ಅದೇ ವೇಳೆಯಲ್ಲಿ ಪೌಲನು ಕಾಲ್ನಡಿಗೆಯಿಂದ ಪಿಲಿಪ್ಪಿಗೆ ಹೋದನು, ಅಲ್ಲಿ ಆತನು ಪು ನಃ ಲೂಕನನ್ನು ಬೇಟಿಯಾಗಿ ಇಬ್ಬರು ಒಟ್ಟಾಗಿ ತ್ರೋವಕ್ಕೆ ಹೋಗುವ ಹಡಗನ್ನು ಹತ್ತಿದರು (ಲೂಕನು 6 ನೇ ವಚನದಲ್ಲಿ ನಾವು ......ಹೊರಟು ಎಂಬದಾಗಿ ಬರೆಯುವದನ್ನು ಗಮನಿಸಿರಿ). ಅವರು ಹುಳಿಯಿಲ್ಲದ ರೊಟ್ಟಿಯ ಹಬ್ಬವನ್ನು (ಪಸ್ಕ ಹಬ್ಬ) ಮುಗಿಸಿಕೊಂಡು ಪಿಲಿಪ್ಪಿಯಿಂದ ಹೊರಟರು. ವಚನ 4 ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಸಹೋದರರೂ, ಪೌಲನೂ ಒಟ್ಟಾಗಿ ಸೇರಿಕೊಂಡು ಯೆರೂಸಲೇಮಿನಲ್ಲಿನ ಬಡ ಕ್ರೈಸ್ತರಿಗೋಸ್ಕರ ಮೆಕೆದೋನ್ಯದ ಸಭೆಗಳಲ್ಲಿ ಸಂಗ್ರಹಿಸಿದ್ದ ಹಣವನ್ನು ತೆಗೆದು ಕೊಂಡು ಹೊರಟಿದ್ದರು. ಈ ವ್ಯಕ್ತಿಗಳು ಮೆಕೆದೋನ್ಯ, ಗಲಾತ್ಯ, ಮತ್ತು ಎಫೆಸಗಳಲ್ಲಿದ್ದ [90] ವಿವಿಧ ಸಭೆಗಳ ಪ್ರತಿನಿಧಿಗಳಾಗಿದ್ದರು. ಕೊರಿಂಥದ (ಅಖಾಯ) ಪ್ರತಿನಿಧಿಗಳು ಇಲ್ಲಿ ಪ್ರಸ್ತಾಪಿಸಲ್ಪಟ್ಟಿರುವದಿಲ್ಲ, ಆದರೆ 2 ಕೊರಿಂಥ 8:6, 18-24ರ ಪ್ರಕಾರವಾಗಿ ತೀತ ಹಾಗು ಇತರ ಇಬ್ಬರು ಸಹೋದರರು ಕೊರಿಂಥದ ಸಭೆಯಿಂದ ಸಂಗ್ರಹಣೆಯನ್ನು ಕೊಂಡೊಯ್ಯುವದಕ್ಕೆ ಜವಾಬ್ದಾರರಾಗಿದ್ದರೆಂಬದನ್ನು ನಾವು ಅರ್ಥಮಾಡಿಕೊಳ್ಳಬಹುದು.

## ತ್ರೋವದಲ್ಲಿ ಯೂತಿಖನೆಂಬವನನ್ನು ಸತ್ತವರೊಳಗಿಂದ ಎಬ್ಬಿಸಿದ್ದು (20:7-12)

**7** ಪೌಲನೂ, ಆತನ ಸಂಗಡಿಗರೂ ಏಳು ದಿನಗಳ ಕಾಲ ತ್ರೋವದಲ್ಲಿ ಉಳಿದರು. ಅವರು ತ್ರೋವದಲ್ಲಿದ್ದ ಕೊನೆಯ ದಿನವು ಭಾನುವಾರವಾಗಿತ್ತು. ಸಾಂಪ್ರದಾಯಿಕವಾಗಿ ಅದು ವಾರದ ಮೊದಲನೆಯ ದಿವಸ ಎಂದು ಕರೆಯಲ್ಪಟ್ಟಿರುತ್ತದೆ. ತ್ರೋವದ ವಿಶ್ವಾಸಿಗಳು ರೊಟ್ಟಿ ಮುರಿಯುವ – ಅಂದರೆ ಕರ್ತನ ಭೋಜನ ಸಂಸ್ಕಾರವನ್ನು ಆಚರಿಸಲು ಕೂಡಿಬಂದಿದ್ದರು. ಕ್ರೈಸ್ತರು ತಮ್ಮ ವಾರದ ಆರಾಧನೆಯನ್ನು ಶನಿವಾರಕ್ಕೆ ಬದಲಾಗಿ (ಯೆಹೂದ್ಯರಂತೆ) ಭಾನುವಾರ ಇಟ್ಟುಕೊಂಡಿದ್ದರ ಬಗ್ಗೆ ಹೊಸ ಒಡಂಬಡಿಕೆಯಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದು ಇದೇ ಮೊದಲನೆಯ ಸಾರಿಯಾಗಿದೆ.

**8-10** ಪೌಲನು ಎಡಬಿಡದೆ ಮಾತಾಡುತ್ತಾ ಇರುವಾಗ ಸೇರಿಬಂದವರಲ್ಲಿ ಯೂತಿಖನೆಂಬ ಯೌವನಸ್ಥನೊಬ್ಬನು ಗಾಢನಿದ್ರೆಗೊಳಗಾದನು. ಬಹುಶ: ಅನೇಕ ದೀಪಗಳಿಂದ ಹೊರಡುತ್ತಿದ್ದ ಹೊಗೆಯು ಆತನಿಗೆ ನಿದ್ರೆಬರುವದಕ್ಕೆ ಕಾರಣವಾಗಿರಬೇಕು. ಕಾರಣವು ಏನೇ ಆಗಿದ್ದರೂ, ಯೌವನಸ್ಥನು ಮೂರನೆಯ ಅಂತಸ್ತಿನ ಕಿಟಕಿಯಿಂದ ಬಿದ್ದನು, ಅವನನ್ನು ಎತ್ತಿನೋಡುವಾಗ ಸತ್ತಿದ್ದನು (ವಚನ 9), ಅಪೊಸ್ತಲರ ಕೃತ್ಯಗಳ ಪುಸ್ತಕದ ಗ್ರಂಥ ಕರ್ತನಾದ ಲೂಕನು ಸ್ವತಃ ಒಬ್ಬ ವೈದ್ಯನಾಗಿದ್ದರಿಂದ ಯೂತಿಖನು ಸತ್ತಿದ್ದಾನೆಂದು ನಿಶ್ಚಯದೊಂದಿಗೆ ಹೇಳಬಲ್ಲವನಾಗಿದ್ದನು. ಆದರೆ ಪೌಲನು ಯೌವನಸ್ಥನನ್ನು ತನ್ನ ಬಾಹುಗಳಲ್ಲಿ ತೆಗೆದುಕೊಂಡಾಗ ಅವನಿಗೆ ಜೀವ ತಿರಿಗಿ ಬಂದಿತು.

ಯೂತಿಖನಿಗೆ ಸಂಭವಿಸಿದ್ದನ್ನು ನಾವು ಗ್ರಹಿಸಿಕೊಂಡು ಸಭೆಯಲ್ಲಿ ನಿದ್ರೆಗೊಳಗಾಗದಿರೋಣ!

**11-12** ತರುವಾಯ ಕರ್ತನ ಭೋಜನವನ್ನು ಆಚರಿಸಿ ಒಟ್ಟಾಗಿ ಭೋಜನವನ್ನು ಮಾಡಿದ ನಂತರ ಪೌಲನು ಬೆಳಗಾಗುವ ತನಕ ಮಾತಾಡುತ್ತಾ ಇದ್ದನು. ಆದಾದಕೂಡಲೇ ಪೌಲ ಮತ್ತು ಆತನ ಸಂಗಡಿಗರು ಯೆರೂಸಲೇಮಿಗೆ ಹೋಗುವ ಹಡಗನ್ನು ಹತ್ತಿದರು.

## ಪೌಲನು ಎಫೆಸದ ಹಿರಿಯರಿಗೆ ವಿದಾಯ ಹೇಳಿದ್ದು (20:13-38)

**13-14** ಪೌಲನ ಪ್ರಯಾಣದ ಸಹ ಪಾಠಿಗಳು ತ್ರೋವದಲ್ಲಿ ಹಡಗನ್ನು ಹತ್ತಿದ್ದರು ಆದರೆ ಪೌಲನು ಹತ್ತಿರಲಿಲ್ಲ. ಮುಂದಿನ ಬಂದರನ್ನು ತಲುಪಬೇಕಾದರೆ ಹಡಗು ಸಮುದ್ರದಲ್ಲಿ ಚಾಚಿಕೊಂಡಿದ್ದ ಪರ್ಯಾಯ ದ್ವೀಪವನ್ನು ಸುತ್ತುವರೆದು ಹೋಗಬೇಕಾಗಿತ್ತು. ಕಾಲ್ನಡಿಗೆಯಿಂದ ಹೋಗುವದು ವೇಗವಾಗಿ ತಲುಪಬಹುದಾಗಿದ್ದರಿಂದ ಪೌಲನು ಮುಂದಿನ ಬಂದರಾದ ಅಸ್ಸೊಸಿಗೆ ನಡೆದು ಹೋದನು, ಹೀಗೆ ಅಸ್ಸೊಸಿನಲ್ಲಿ ಹಡಗನ್ನು ಸಂಧಿಸಲು ಹೋಗುವದಕ್ಕೆ ಮುಂಚೆ ಆತನು ತ್ರೋವದಲ್ಲಿ ಒಂದು ಹೆಚ್ಚಿನ ದಿನವನ್ನು ಕಳೆಯಲು ಶಕ್ತನಾಗಿದ್ದನು.

**15-16** ಎಫೆಸವು ಮಿಲೇತಿನಿಂದ ಸುಮಾರು ಮೂವತ್ತು ಮೈಲುಗಳಷ್ಟು ದೂರದಲ್ಲಿತ್ತು ಹಡಗು ಮಿಲೇತಿನಲ್ಲಿ ಹಲವಾರು ದಿನಗಳವರೆಗೆ ನಿಲ್ಲಬೇಕಾದದ್ದರಿಂದ ತನ್ನನ್ನು ಸಂಧಿಸಲು ಮಿಲೇತಿಗೆ ಬರಬೇಕೆಂದು ಪೌಲನು ಎಫೆಸದ ಹಿರಿಯರಿಗೆ ಹೇಳಿಕಳುಹಿಸಿದನು.

**17** ಪೌಲನು ಎಫೆಸದ ಸಭೆಗೆ ತಂದೆಯಾಗಿದ್ದನು. ಎಫೆಸದ ಹಿರಿಯರೆಲ್ಲರೂ ಪೌಲನ ಉಪದೇಶ ಹಾಗು ಬೋಧನೆಯ ಮೂಲಕ ವಾಗಿ ಕ್ರೈಸ್ತರಾಗಿದ್ದರು. ಅವರಲ್ಲಿ ಅನೇಕರಿಗೆ ಸ್ವತಃ ಪೌಲನೇ ದೀಕ್ಷಾಸ್ನಾನ ಮಾಡಿಸಿದ್ದನು (ಅ.ಕೃತ್ಯ 19:1-7 ನೋಡಿರಿ). ಈ ಕಾರಣಕ್ಕಾಗಿ ಎಫೆಸದ ಹಿರಿಯರೆಲ್ಲರೂ ಪೌಲನನ್ನು ನೋಡುವ ಅವಕಾಶಕ್ಕಾಗಿ ಕಾತುರದಿಂದ ಎದುರು ನೋಡುತ್ತಿದ್ದರು ಮತ್ತು ಅವರು ಮಾಡುತ್ತಿದ್ದದೆಲ್ಲವನ್ನೂ ಬಿಟ್ಟು ಪೌಲನನ್ನು ಸಂಧಿಸಲು ಮಿಲೇತಿಗೆ ಬಂದರು. ಮೂವತ್ತು ಮೈಲುಗಳ ನಡಿಗೆಯು ಅವರಿಗೆ ಏನು ಅಲ್ಲದಂತಿತ್ತು!.

ಅ.ಕೃತ್ಯ 13:16-41ರಲ್ಲಿ ಯೆಹೂದ್ಯರ ಮಧ್ಯದಲ್ಲಿ ಪೌಲನ ಬೋಧನೆಗೆ ಒಂದು ಉದಾಹರಣೆಯನ್ನು ನೋಡುತ್ತೇವೆ. ಅ.ಕೃತ್ಯ 17:22-31ರಲ್ಲಿ ಅನ್ಯ ಜನರ ಮಧ್ಯದಲ್ಲಿ ಪೌಲನು ಮಾಡಿದ ಬೋಧನೆಯ ಉದಾಹರಣೆಯು ಕೊಡಲ್ಪಟ್ಟಿದೆ. ಈ ಭಾಗದ 18-35 ವಚನಗಳಲ್ಲಿ ಕ್ರೈಸ್ತರ ಮಧ್ಯದಲ್ಲಿ ಪೌಲನು ಮಾಡಿದ ಬೋಧನೆಯ ಉದಾಹರಣೆಯನ್ನು ನಾವು ನೋಡುತ್ತೇವೆ.

**18-19** ಪೌಲನು ತಾನು ಎಫೆಸದಲ್ಲಿದ್ದಾಗ ಎಫೆಸದ ಹಿರಿಯರ ಮಧ್ಯದಲ್ಲಿ ನಡಿಸಿದ ತನ್ನ ಜೀವನ ಹಾಗು ಸೇವೆಯ ಕುರಿತಾಗಿ ಜ್ಞಾಪಕ ಪಡಿಸುತ್ತಾನೆ. ಪೌಲನು ಇವರ ಮಧ್ಯದಲ್ಲಿ ಬಹು ನಮ್ರತೆಯಿಂದಲೂ, ಕಣ್ಣೀರಿನಿಂದಲೂ ಕರ್ತನ ಸೇವೆಯನ್ನು ಮಾಡಿದ್ದನು. ಯಾವದೇ ಸೇವೆಯ ಯಶಸ್ಸಿಗಾಗಿ ನಮ್ರತೆ ಹಾಗು ಕಣ್ಣೀರು ಅವಶ್ಯಕವಾಗಿರುತ್ತವೆ. ಪೌಲನ ಕಣ್ಣೀರು ಆತನು ಕ್ರೈಸ್ತ ಸಹೋದರರ ಪಾಪಗಳಿಗಾಗಿ ಸುರಿಸಿದ ದುಃಖದ ಕಣ್ಣೀರಾಗಿದ್ದವು (ವಚನ 31) ಅಲ್ಲದೆ ಅದು ಆತನು ಕ್ರಿಸ್ತನಿಗಾಗಿ ಅನುಭವಿಸಿದ ಹಿಂಸೆಯ ಕಾರಣದಿಂದಾಗಿ ಹರಿಸಿದ ಕಣ್ಣೀರು ಸಹ ಆಗಿತ್ತು. ಎಫೆಸದಲ್ಲಿ ಪೌಲನು ಅನೇಕ ಸಂಕಷ್ಟಗಳನ್ನು ಅನುಭವಿಸಿದ್ದನು. ಆತನು ಯೆಹೂದ್ಯರ ಒಳಸಂಚುಗಳಿಂದಾಗಿ ಕಷ್ಟಗಳನ್ನು ಅನುಭವಿಸಿದ್ದನು (1 ಕೊರಿಂಥ 15:30-31, 2 ಕೊರಿಂಥ 1:8-10 ನೋಡಿರಿ).

**20-21** ಆದರೆ ತಾನು ಹಿಂಸೆಗೊಳಗಾಗುವ ಗಂಡಾಂತರ ಹೊಂದಿದ್ದರೂ ಸಹ ಪೌಲನು ಎಪೆಸದಲ್ಲಿನ ವಿಶ್ವಾಸಿಗಳಿಗೆ ಪ್ರಯೋಜನಕರವಾದ ಎಲ್ಲವನ್ನೂ ಮುಕ್ತವಾಗಿ ಬೋಧಿಸಲೂ ಉಪದೇಶಿಸಲೂ ಹಿಂಜರಿಯಲಿಲ್ಲ. ಪೌಲನು ಸುವಾರ್ತೆಯ ಆನಂದ ದಾಯಕ ಹಾಗು ಧೃಡನಿಶ್ಚಯವನ್ನುಂಟುಮಾಡುವ ಸಂಗತಿಗಳ ಬಗ್ಗೆ ಮಾತ್ರವೇ ಬೋಧಿಸಲಿಲ್ಲ, ಆತನು ಕ್ರಿಸ್ತನ ಶಿಲುಬೆಯ ವಿಷಯವಾಗಿಯೂ, ಸಹ ಬೋಧಿಸಿದನು. ಶಿಲುಬೆಯು ಯೆಹೂದ್ಯರಿಗೆ ವಿಘ್ನವೂ ಅನ್ಯ ಜನರಿಗೆ ಹುಚ್ಚುಮಾತು ಆಗಿತ್ತಾದರೂ (1 ಕೊರಿಂಥ 1:23), ಪೌಲನು ಯೆಹೂದ್ಯರು ಹಾಗು ಗ್ರೀಕರು ಇಬ್ಬರಿಗೂ ಶಿಲುಬೆಗೇರಿಸಲ್ಪಟ್ಟ ಕ್ರಿಸ್ತನ ವಿಷಯವಾಗಿ ಅಂಜಿಕೆಯಿಲ್ಲದೆ ಸಾರಿದ್ದನು. ಅದರೊಂದಿಗೆ ಅವರು ಪಶ್ಚಾತಾಪಪಟ್ಟು ದೇವರ ಕಡೆಗೆ ತಿರಿಗಿಕೊಳ್ಳಬೇಕೆಂದು ಪೌಲನು ಯೆಹೂದ್ಯ ಹಾಗು ಗ್ರೀಕರು ಇಬ್ಬರಿಗೂ ಹೇಳಿದನು (ಅ.ಕೃತ್ಯ 17:30, 26:20). ಆದರೆ ಪಶ್ಚಾತಾಪಪಡುವದು ಮಾತ್ರವೇ ಸಾಕಾಗಿರಲಿಲ್ಲ, ಜನರು ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡಬೇಕೆಂದು ಸಹ ಪೌಲನು ಸಾರಿದನು.

ಪೌಲನು ಎಲ್ಲಿಯೇ ಹೋದರೂ ಹೊಸ ವಿಶ್ವಾಸಿಗಳಿಗೆ ಹಿಂಬಾಲಿಸಲು ತನ್ನ ಸ್ವಂತ ಜೀವನದಿಂದ ಮಾದರಿಯನ್ನು ಒದಗಿಸುತ್ತಿದ್ದನು (1 ಕೊರಿಂಥ 11:1, ಫಿಲಿಪ್ಪಿ 17, 4:9). ಈ ಕಾರಣದಿಂದಲೇ ಆತನ ಬೋಧನೆಯು ಅಷ್ಟೊಂದು ಪರಿಣಾಮಕಾರಿಯಾಗಿತ್ತು. ಪೌಲನು ಯೇಸುವಿನ ಕಾಲದಲ್ಲಿದ್ದ ಫರಿಸಾಯರಂತೆ ಇರಲಿಲ್ಲ, ಅವರು ಬೋಧಿಸಿದಂತೆ

ನಡೆಯದವರಾಗಿದ್ದರು (ಮತ್ತಾಯ 23:1-3), ಪೌಲನು ಹೊಸ ಒಡಂಬಡಿಕೆಯ ತನ್ನ ಅನೇಕ ಪತ್ರಿಕೆಗಳಲ್ಲಿ ವಾಚಕರ ಮದ್ಯದಲ್ಲಿ ತಾನು ನಡೆಸಿದ ಜೀವನ ಹಾಗು ಸೇವೆಯ ಬಗ್ಗೆ ಅವರಿಗೆ ಜ್ಞಾಪಕಪಡಿಸುತ್ತಾನೆ (1 ಕೊರಿಂಥ 2:3-5, 2 ಕೊರಿಂಥ 6:4-10, 1 ಥೆಸಲೋನಿಕ 2:1-12 ನೋಡಿರಿ).

**22-23** ಪೌಲನು ಯೆರೂಸಲೇಮಿಗೆ ಹೋಗುವದು ಆತನಿಗೆ ಅಪಾಯಕರವಾಗಿತ್ತು. ಪ್ರಾರಂಭದಿಂದಲೂ ಯೆರೂಸಲೇಮಿನ ಯೆಹೂದ್ಯರು ಪೌಲನನ್ನು ಕೊಲ್ಲಲು ಯತ್ನಿಸುತ್ತಿದ್ದರು. (ಅ.ಕೃ.9:29). ಹಾಗಿದ್ದರೂ, ಪವಿತ್ರಾತ್ಮನಿಗೆ ವಿಧೇಯನಾಗಿ ಪೌಲನು ಯೆರೂಸಲೇಮಿಗೆ ಹೋಗಲು ಧೃಡ ತೀರ್ಮಾನ ಮಾಡಿಕೊಂಡಿದ್ದನು. ಅನ್ಯ ಜನಾಂಗದ ಸಭೆಗಳಿಂದ ಸಂಗ್ರಹಿಸಲ್ಪಟ್ಟಿದ್ದ ಹಣವನ್ನು ಯೆರೂಸಲೇಮಿನ ಸಭೆಗೆ ತಲುಪಿಸುವ ಜವಾಬ್ದಾರಿಯ ಕಾರಣದಿಂದ ಪೌಲನು ತಾನು ಕಡ್ಡಾಯವಾಗಿ ಯೆರೂಸಲೇಮಿಗೆ ಹೋಗಬೇಕೆಂದು ಕೊಂಡನು. ಬಹುಶ: ಪೌಲನು ಯೆರೂಸಲೇಮಿಗೆ ಹೋಗುವದಕ್ಕಾಗಿ ಪವಿತ್ರಾತ್ಮನು ಅವನಿಗೆ ಹೊಸಒಡಂಬಡಿಕೆಯಲ್ಲಿ ಉಲ್ಲೇಖಿಸಲ್ಪಡದಿರುವ ಇನ್ನು ಕೆಲವು ಕಾರಣಗಳನ್ನು ನೀಡಿರಬೇಕು.

ಪೌಲನು ಕೊರಿಂಥದಲ್ಲಿರುವಾಗ ತಾನು ಯೂದಾಯ ದಲ್ಲಿನ ಅವಿಧೇಯರ (ಅವಿಶ್ವಾಸಿಗಳ)ಕೈಗೆ ತಪ್ಪಿಸಿಕೊಳ್ಳುವಂತೆ ಪ್ರಾರ್ಥಿಸಬೇಕೆಂದು ಕೇಳಿಕೊಳ್ಳುತ್ತಾ ರೋಮಾಪು ರದವರಿಗೆ ಬರೆದಿದ್ದನು (ರೋಮ 15:31) ಮತ್ತು ಪೌಲನು ಯೆರೂಸಲೇಮಿಗೆ ಹೊರಡುವ ವೇಳೆಯಲ್ಲಿ ಆತನು ಬೇಡಿಗಳನ್ನು ಸಂಕಟಗಳನ್ನೂ ಎದುರಿಸಿದ್ದರು (ವಚನ 23). ಪ್ರತಿಯೊಂದು ನಿಲುಗಡೆಯಲ್ಲಿಯೂ ಕ್ರೈಸ್ತರು ಪೌಲನನ್ನು ಯೆರೂಸಲೇಮಿಗೆ ಹೋಗದೆ ಹಿಂದಿರುಗಿ ಹೋಗಬೇಕೆಂದು ಬೇಡಿಕೊಂಡರು (ಅ.ಕೃತ್ಯ 21:4, 10:14 ನೋಡಿರಿ).

**24** ಆದರೆ ಪೌಲನು ಹಿಂಸೆಗಾಗಲಿ ಅಥವಾ ಮರಣಕ್ಕಾಗಲಿ ಹೆದರಿರಲಿಲ್ಲ, ಆತನು ಕ್ರಿಸ್ತನ ಸುವಾರ್ತೆಗೋಸ್ಕರವಾಗಿ ತನ್ನ ಪ್ರಾಣವನ್ನು ಅರ್ಪಿಸಲು ಸಿದ್ದನಾಗಿದ್ದನು (ಅ.ಕೃತ್ಯ 21:13, ಫಿಲಿಪ್ಪಿ 2:17, ಕೊಲೊಸ್ಸೆ 1:24). ಪೌಲನಿಗೆ ಜೀವಿತದಲ್ಲಿ ಒಂದೇ ಒಂದು ಗುರಿಯಿತ್ತು, ಅದೇನೆಂದರೆ ಕರ್ತನಾದ ಯೇಸು ಆತನಿಗೆ ನೀಡಿದ ಓಟವನ್ನು ಕಡೆಗಾಣಿಸಿ, ಕ್ರಿಸ್ತನಂಬಿಕೆಯನ್ನು ಕಾಪಾಡಿಕೊಳ್ಳುವದಾಗಿತ್ತು (2 ತಿಮೊಥೆ 4:7-8). ಪೌಲನಿಗೆ ಶಾರೀರಿಕ ಜೀವವಾಗಲಿ ಅಥವಾ ಮರಣದ ಬಗ್ಗೆಯಾಗಲಿ ಚಿಂತೆಯಿರಲಿಲ್ಲ. ತಾನು ಬದುಕಿದರೂ ಸರಿಯೇ ಸತ್ತರೂ ಸರಿಯೇ ಆತನ ದೇಹದ ಮೂಲಕ ಕ್ರಿಸ್ತನಿಗೆ ಮಹಿಮೆಯುಂ-ಟಾಗಬೇಕೆಂಬುದೇ ಆತನ ಚಿಂತೆಯಾಗಿತ್ತು (ಫಿಲಿಪ್ಪಿ 1:20).

**25** ಒಂದು ವೇಳೆ ಅವನು ಯೆರೂಸಲೇಮಿನಿಂದ ಸುರಕ್ಷಿತವಾಗಿ ಹೊರಡುವದಾದರೂ ಸಹ ಆತನು ಎಫೆಸ್ ಹಾಗು ಅಸ್ಯ ಸೀಮೆಗಳಿಗೆ ಹಿಂದಿರುಗಿಬರುವ ಯೋಜನೆಯನ್ನು ಹೊಂದಿರಲಿಲ್ಲ. ಅವನು ಯೆರೂಸಲೇಮಿನಿಂದ ರೋಮಿಗೂ[91] ಮತ್ತು ಅಲ್ಲಿಂದ ಸ್ಪೇನಿಗೂ[92] ಹೋಗುವದಕ್ಕೆ ತಿರ್ಮಾನಿಸಿಕೊಂಡಿದ್ದನು (ಅ.ಕೃತ್ಯ 19:21, ರೋಮ 15:23-24, 28). ಆದುದರಿಂದ, ಯೆರೂಸಲೇಮಿನಲ್ಲಿ ತನಗೆ ಏನೇ ಸಂಭವಿಸಿದರೂ ಆತನು ಇನ್ನೆಂದಿಗೂ ಪು ನಃ ತನ್ನ ಎಫೆಸ್‌ದ ಸಹೋದರರನ್ನು ನೋಡುವದಿಲ್ಲ ಎಂದೂ ನಂಬಿದ್ದನು.

**26-27** ಎಫೆಸ್‌ದವರಲ್ಲಿ ಯಾರಾದರೂ ಕ್ರಿಸ್ತನನ್ನು ನಂಬಲು ನಿರಾಕರಿಸಿ ತಮ್ಮನ್ನು ದಂಡನೆಗೆ ಗುರಿಮಾಡಿಕೊಳ್ಳುವದಾದರೆ ಅದಕ್ಕೆ ಪೌಲನು ಜವಾಬ್ದಾರನಾಗಿರಲಿಲ್ಲ, ಯಾಕೆಂದರೆ ಆತನು ಎಲ್ಲಾ ಜನರಿಗೂ ದೇವರ ಸಂಕಲ್ಪವನ್ನೆಲ್ಲಾ ಪ್ರಾಮಾಣಿಕತೆಯಿಂದ ಸಾರಿದ್ದನು (ವಚನ 27), ಅವರಲ್ಲಿ ಯಾರಾದರೂ ನಾಶವಾದರೆ ಅದು ಪೌಲನ ದೋಷವಾಗಿರಲಿಲ್ಲ, ಅವರ ನಿತ್ಯವಾದ ದಂಡನೆಗೆ ಆತನು ಹೊಣೆಗಾರನಾಗಿರಲಿಲ್ಲ. ಆತನು ಅವರನ್ನು ಎಚ್ಚರಿಸಿದ್ದನು, ಆತನು ಅವರಿಗೆ ರಕ್ಷಣೆಯ ಮಾರ್ಗವನ್ನು ತೋರಿಸಿದ್ದನು. ಪೌಲನ ಸಂದೇಶವನ್ನು ತಿರಸ್ಕರಿಸುವದರ ಮೂಲಕ ಅವರೇ ಸ್ವತಃ ತಮ್ಮ ಮೇಲೆ ದಂಡನೆಯನ್ನು ಬರಮಾಡಿಕೊಂಡಿದ್ದರು (ಅ.ಕೃತ್ಯ 18:6 ನೋಡರಿ).

**28** "ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿ" ಸಭೆಯ ನಾಯಕರು ಮೊಟ್ಟಮೊದಲನೆಯದಾಗಿ ತಮ್ಮ ವಿಷಯದಲ್ಲಿ ಎಚ್ಚರಿಕೆಯಾಗಿರಬೇಕು! ಸೈತಾನನು ಇತರರಿಗಿಂತಲೂ ಹೆಚ್ಚಾಗಿ ನಾಯಕರ ಮೇಲೆ ಆಕ್ರಮಣ ಮಾಡಲು ತವಕ ಪಡುತ್ತಾನೆ. ಒಂದು ವೇಳೆ ನಾಯಕನು ಸೈತಾನನ ದಾಳಿಯಿಂದ ಬಿದ್ದು ಹೋಗುವದಾದರೆ ಹಿಂಡಿಗೆ, ಅಂದರೆ, ಸಭೆಗೆ ಹೆಚ್ಚು ಹಾನಿಯಾಗುತ್ತದೆ (ವಚನ 30 ನೋಡಿರಿ). ಸಭೆಯ ನಾಯಕರು ಹಿಂಡಿಗೆ ಕುರುಬರಾಗಿ ಇರುವದಕ್ಕಾಗಿ ಪವಿತ್ರಾತ್ಮನಿಂದ ನೇಮಿಸಲ್ಪಟ್ಟು ಅಭಿವೃದ್ಧಿ ಹೊಂದಲ್ಪಡುವವರಾಗಿದ್ದಾರೆ. ಆದುದರಿಂದ ಅವರು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟವರಾಗಿ ಉಳಿಯುವದು ಅಗತ್ಯವಾಗಿರುತ್ತದೆ. ಪೌಲನು ಅವರ ಮೇಲೆ ಕೈಗಳನ್ನಿಟ್ಟಾಗ ಹೇಗೆ ಪವಿತ್ರಾತ್ಮನು ಇಳಿದು ಬಂದ ನೆಂಬುದನ್ನು ಎಫೆಸ್‌ದ ಹಿರಿಯರು ಜ್ಞಾಪಕಕ್ಕೆ ತಂದುಕೊಳ್ಳಲಿ (ಅ.ಕೃತ್ಯ 19:1-7). ಹೊಸ ಒಡಂಬಡಿಕೆಯಲ್ಲಿ ಸಭಾಧ್ಯಕ್ಷ[93] (1 ತಿಮೊಥೆ 3:1) ಮತ್ತು ಹಿರಿಯನು (ಅ.ಕೃತ್ಯ 14:23, 20:17) ಎಂಬ ಪದಗಳಲ್ಲಿ ಅತಿ ಸ್ವಲ್ಪವ್ಯತ್ಯಾಸ ಮಾತ್ರವೇ ಇರುತ್ತದೆ. ಹೊಸ ಒಡಂಬಡಿಕೆಯ ಸಮಯಗಳಲ್ಲಿ ಸಭಾಧ್ಯಕ್ಷರು ಹಾಗು ಹಿರಿಯರು ಪ್ರಾಥಮಿಕವಾಗಿ ಸಭೆಯಲ್ಲಿ ಒಂದೇ ಸ್ಥಾನವನ್ನು ಹೊಂದಿದ್ದರು. ಅವರು ಸಭಾಪಾಲಕರು ಎಂದು ಸಹ ಕರೆಯಲ್ಪಟ್ಟಿರುತ್ತಾರೆ (ಎಫೆಸ್ 4:11). ಹೊಸ ಒಡಂಬಡಿಕೆಯಲ್ಲಿ ಈ ಹೆಸರುಗಳೆಲ್ಲಾ ಹೆಚ್ಚುಕಡಿಮೆ ಅದಲು ಬದಲಾಗಿ [94] ಉಪಯೋಗಿಸಲ್ಪಟ್ಟಿವೆ (ಸಾಮಾನ್ಯ ಲೇಖನ: ಸಭಾ ಸರ್ಕಾರ ನೋಡಿರಿ). ಸಭಾನಾಯಕನು "ಹಿಂಡನ್ನು ಮೇಯಿಸುವವನು" ಆಗಿರಬೇಕು (ಯೋಹಾನ 21:15-17, 1ಪೇತ್ರ 5:1-4 ನೋಡಿರಿ). ಕುರಿಗಳ ಶ್ರೇಷ್ಠಾತಿಶ್ರೇಷ್ಠ ಕುರುಬನಾದ ಕ್ರಿಸ್ತನ ಮಾದರಿಯನ್ನು ಆತನು ಅನುಸರಿಸಬೇಕು (ಯೋಹಾನ 10:11-15 ನೋಡಿರಿ). ಕ್ರಿಸ್ತನು ಕುರಿಗಳಿಗಾಗಿ ತನ್ನ ಪ್ರಾಣವನ್ನು ನೀಡಿದನು. ಆತನು ಸಭೆಯನ್ನು – ಅಂದರೆ, ಪ್ರತಿಯೊಬ್ಬ ವಿಶ್ವಾಸಿಯನ್ನು –ತನ್ನ ಸ್ವರಕ್ತದಿಂದ ಸಂಪಾದಿಸಿ ಕೊಂಡಿದ್ದಾನೆ, ಆತನು ನಾವು ಜೀವಿಸುವಂತಾಗಲು ಮರಣಿಸಿದನು.

**29** ಮಿಥ್ಯ ಬೋಧಕರು ಹಾಗು ಮಿಥ್ಯ ನಾಯಕರು ತೋಳಗಳಂತಿದ್ದಾರೆ (ಮತ್ತಾಯ 7:15). ಪೌಲನು ಎಪೆಸದ ಹಿರಿಯರನ್ನು ಸಂಧಿಸಿ ಸ್ವಲ್ಪಕಾಲವಾಗಿತ್ತಷ್ಟೇ, ಆಗಲೇ "ತೋಳಗಳು" ಸಭೆಯೊಳಗೆ ಬರಲಾರಂಭಿಸಿದ್ದವು (1 ತಿಮೊಥೆ 4:12, 2 ಪೇತ್ರ 2:1-3, 1 ಯೋಹಾನ 18-19). ಕೆಲ ಸಮಯದ ತರುವಾಯ ಪೌಲನು ತಿಮೊಥೆಯನಿಗೆ". ಅಸ್ಯ ಸೀಮೆಯಲ್ಲಿರು–ವವರೆಲ್ಲರೂ ನನ್ನನ್ನು ಕೈಬಿಟ್ಟರು" ಎಂದು ಬರೆದನು (2 ತಿಮೊಥೆ 1:15), ಮತ್ತು ಅದರಲ್ಲಿ ಎಫೆಸದ ಕ್ರೈಸ್ತರೂ ಸೇರಿದ್ದರು ! ಮತ್ತು ಅಂತಿಮವಾಗಿ ಅಪೊಸ್ತಲನಾದ ಯೋಹಾನನು ಎಪೆಸ ಸಭೆಗೆ ಸ್ವತಃ ಯೇಸುವಿಗೆ ಈ ಮಾತುಗಳನ್ನು ಬರೆದನು:ಆ ಆದರೆ ಮೊದಲು ನಿನಗಿದ್ದ ಪ್ರೀತಿಯನ್ನು ನೀನು ಬಿಟ್ಟು ಬಿಟ್ಟಿದ್ದೀಯೆಂದು ನಾನು ನಿನ್ನ ಮೇಲೆ ತಪ್ಪು ಹೊರಿಸಬೇಕಾಗುತ್ತದೆ. ಆದುದರಿಂದ ನೀನು ಎಲ್ಲಿಂದ ಬಿದ್ದಿದ್ದೀಯೋ ಅದನ್ನು ನಿನ್ನ ನೆನಪಿಗೆ ತಂದು ಕೊಂಡು ದೇವರ ಕಡೆಗೆ ತಿರುಗಿಕೋ. ನೀನು ಮೊದಲು ಮಾಡುತ್ತಿದ್ದ ಕೃತ್ಯಗಳನ್ನು ಮಾಡು. ನೀನು ದೇವರ ಕಡೆಗೆ ತಿರಿಗಿಕೊಳ್ಳದೆ ಹೋದರೆ ನಾನು ಬಂದು ನಿನ್ನ ದೀಪಸ್ತಂಭವನ್ನು ಆದರ ಸ್ಥಳದಿಂದ ತೆಗೆದು ಹಾಕುವೆನು (ಪ್ರಕಟಣೆ 2:4-5) ಮತ್ತು ಅವರ "ದೀಪಸ್ತಂಭವು" ತೆಗೆದು ಹಾಕಲ್ಪಡಲು ಬಹಳ ವರ್ಷಗಳು ಬೇಕಾಗಲಿಲ್ಲ, ಅಂದರೆ ಎಪೆಸ್ ಸಭೆಯು ಅಳಿದು ಹೋಯಿತು!,

**30** ಸಭೆಯ ನಾಯಕರೊಳಗಿಂದಲೂ ಸಹ ಮಿಥ್ಯ ಪ್ರವಾದಿಗಳು ಹಾಗು ಮಿಥ್ಯ ಬೋಧಕರು ಎದ್ದೇಳುವವರಾಗಿದ್ದಾರೆ (1 ತಿಮೊಥೆ 1:19-20, 2 ತಿಮೊಥೆ 2:16-18, 3 ಯೋಹಾನ 9-10).

**31** ಆದಕಾರಣ...ನೀವು ..ಎಚ್ಚರವಾಗಿರಿ!"...ನಾನು ಮೂರು ವರ್ಷ ಹಗಲಿರುಳು ಎಡೆಬಿಡದೆ ಪ್ರತಿಯೊಬ್ಬನಿಗೆ ಬುದ್ಧಿ ಹೇಳಿದೆನು."ಅಪೊಸ್ತಲರ ಕೃತ್ಯಗಳು 19:8, 10ರ ಪ್ರಕಾರವಾಗಿ ಪೌಲನು ಎಫೆಸದಲ್ಲಿ ಎರಡು ವರ್ಷ ಮೂರು ತಿಂಗಳುಗಳ ಕಾಲ ಮಾಡಿದನು. ಪೌಲನು ಕ್ರಿ.ಶ. 52 ರ ಅಂತ್ಯದಿಂದ ಕ್ರಿ.ಶ.55 ರ ಪ್ರಾರಂಭದ ವರೆಗೂ ಎಪೆಸದಲ್ಲಿದ್ದನು. ಆದುದರಿಂದ ಪೌಲನು ಇಲ್ಲಿ ಅದನ್ನು "ಮೂರು ವರ್ಷ" ಎಂದು ಕರೆಯುತ್ತಾನೆ.

**32** ಪೌಲನು ಎಪೆಸದವರನ್ನು ದೇವರಿಗೂ, ಆತನ ಕೃಪಾವಾಕ್ಯಕ್ಕೂ ಒಪ್ಪಿಸಿಕೊಡುತ್ತಾನೆ. ಪೌಲನು ಇನ್ನೆಂದಿಗೂ ಅವರ ಸಂಗಡವಿರುವದಿಲ್ಲ, ಆದರೆ ಪೌಲನು ಅವರಿಗೆ ಕಲಿಸಿಕೊಟ್ಟ ವಾಕ್ಯವು ಯಾವಾಗಲೂ ಅವರ ಸಂಗಡವಿರುವದಾಗಿತ್ತು (ಯೋಹಾನ 15:7). ಆ ವಾಕ್ಯವು ಅವರನ್ನು ಭಕ್ತಿಯಲ್ಲಿ ಅಭಿವೃದ್ಧಿಗೊಳಿಸುವದು; ಅವರು ಕ್ರೈಸ್ತೀಯ ಜೀವಿತದಲ್ಲಿ ಬೆಳೆಯುವಂತೆ ಮಾಡುವದು. ಹಿರಿಯ ನಾಯಕರು ಸಹ ಎಡೆಬಿಡದೆ ಬಲಗೊಳ್ಳುವ ಹಾಗು ಅಭಿವೃದ್ಧಿಗೊಳ್ಳುವ ಅಗತ್ಯತೆಯಿರುತ್ತದೆ.

ಈ ದಿನವು ಸಹ ನಾವು ನಮ್ಮೊಂದಿಗೆ ಅದೇ "ದೇವರ ಕೃಪಾವಾಕ್ಯಗಳನ್ನು" ಹೊಂದಿರುತ್ತೇವೆ. ಎಫೆಸ ಸಭೆಯ ನಾಯಕರು ಆ ವಾಕ್ಯವನ್ನು ತಮ್ಮ ನೆನಪಿನಲ್ಲಿಟ್ಟುಕೊಳ್ಳಬೇಕಾಗಿತ್ತು. ಆದರೆ ನಾವು ಆ "ಕೃಪಾವಾಕ್ಯ"ವನ್ನು ಲಿಕಿತ ರೂಪದಲ್ಲಿ ಹೊಂದಿದ್ದೇವೆ: ಹೊಸ ಒಡಂಬಡಿಕೆ. ನಾವು ಎಷ್ಟರವರೆಗೆ ಅದನ್ನು ಓದಿ ವಿಧೇಯರಾಗುತ್ತೇವೊ ಅಷ್ಟರ ಮಟ್ಟಿಗೆ ನಮ್ಮಲ್ಲಿ ಭಕ್ತಿ ಅಭಿವೃದ್ಧಿಯನ್ನುಂಟು ಮಾಡಿ ಪವಿತ್ರರಾದ ನಮ್ಮೆಲ್ಲರಿಗೂ ಪರಲೋಕದ ಹಕ್ಕನ್ನು – ಅಂದರೆ, ನಿತ್ಯ ಜೀವವನ್ನು – ಅನು ಗ್ರಹಿಸುವದು. ಪವಿತ್ರರಾದವರು ಮಾತ್ರವೇ ಪರಲೋಕದಲ್ಲಿ ಹಕ್ಕನ್ನು ಪಡೆಯುವರು (ಇಬ್ರಿಯ 12:14, ಸಾಮಾನ್ಯ ಲೇಖನ : ರಕ್ಷಣೆಯ ಮಾರ್ಗ ನೋಡಿರಿ).

**34-35** ಪೌಲನು ಪುನಃ ಎಫೆಸದವರಿಗೆ ಅನುಸರಿಸಲು ತನ್ನ ಜೀವಿತವನ್ನು ಮಾದರಿಯಾಗಿ ನೀಡುತ್ತಾನೆ. ಅವನು ತನ್ನ ಜೀವನಕ್ಕಾಗಿ ಸ್ವಂತ ಕೈಗಳಿಂದ ದುಡಿದನು. ಆತನು ಇನ್ನೊಬ್ಬರ ಬೆಳ್ಳಿಬಂಗಾರವನ್ನಾಗಲಿ ಉಡಿಗೆತೊಡಿಗೆಯನ್ನಾಗಲಿ ಆಶಿಸಲಿಲ್ಲ (2 ಕೊರಿಂಥ 11:9, 1ಥೆಸ ಲೋನಿಕ 2:9, 2 ಥೆಸಲೋನಿಕ 3:7-9 ನೋಡಿರಿ). ಸ್ವತಃ ಯೇಸು ಹೇಳಿದ್ದು : "ತೆಗೆದು ಕೊಳ್ಳುವದಕ್ಕಿಂತ ಕೊಡುವದೇ ಹೆಚ್ಚಿನ ಭಾಗ್ಯ" (ಮತ್ತಾಯ 5:42, 2 ಕೊರಿಂಥ 9:6-11 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಯೇಸುವಿನ ಆ ಹೇಳಿಕೆಯು ನಾಲ್ಕು ಸುವಾರ್ತೆಗಳಲ್ಲಿ ಯಾವುದರಲ್ಲಿಯೂ ದಾಖಲಿಸಲ್ಪಟ್ಟಿರುವದಿಲ್ಲ. ಬೈಬಲಿನಲ್ಲಿ ಬರೆಯಲ್ಪಡದಿರುವ ಅನೇಕ ಸಂಗತಿಗಳನ್ನು ಯೇಸು ಹೇಳಿದ್ದಾನೆ (ಯೋಹಾನ 21:25 ನೋಡಿರಿ).

ಬಲಹೀನರಿಗೆ ಸಹಾಯಮಾಡುವ ವಿಷಯದಲ್ಲಿ ಪೌಲನು ತನ್ನ ಪತ್ರಿಕೆಗಳಲ್ಲಿ ಅನೇಕ ಸಾರಿ ಬರೆದಿರುತ್ತಾನೆ (ರೋಮಾ 15:1, ಗಲಾತ್ಯ 6:2 ನೋಡಿರಿ). ಅಲ್ಲದೆ ಪೌಲನು ಮಾನಸಾಂತರ ಹೊಂದಿದ ಕಳ್ಳನೊಬ್ಬನ ಕುರಿತಾಗಿ ಸಹ ಬರೆದನು: ಕಳವು ಮಾಡುವವನು ಇನ್ನು ಮೇಲೆ ಕಳವು ಮಾಡದೆ ಕೈಯಿಂದ ಯಾವದಾದರೊಂದು ಒಳ್ಳೇ ಉದ್ಯೋಗವನ್ನು ಮಾಡಿ ದುಡಿಯಲಿ, ಆಗ ಕಷ್ಟದಲ್ಲಿರುವವರಿಗೆ ಕೊಡುವದಕ್ಕೆ ಅವನಿಂದಾಗುವದು (ಎಫೆಸ್ 4:28).

**36-38** ಎಫೆಸದ ಹಿರಿಯರೊಂದಿಗೆ ಪ್ರಾರ್ಥಿಸಿದ ನಂತರ ಪೌಲನು ಹಡಗನ್ನು ಹತ್ತಿ ಯೆರೂಸಲೇಮಿಗೆ ಹೊರಟನು.

---

## ಅಧ್ಯಾಯ - 21

### ಪೌಲನು ಮಿಲೇತದಿಂದ ತೂರ್‌ಗೆ ಹೋದದ್ದು (21:1-6)

**1-3** ಪೌಲ ಹಾಗು ಆತನ ಸಂಗಡಿಗರು ಮೆಡಿಟರೆನಿಯನ್ ಸಮುದ್ರದ ಪೂರ್ವದೆಡೆಗೆ ಫೊಯಿನೀಕೆಯೆಡೆಗೆ (ಆಧುನಿಕ ಲೆಬನೊನ) ಹೊರಟರು, ಅದು ಆ ಸಮಯದಲ್ಲಿ ರೋಮಾಯ ಪ್ರಾಂತ್ಯವಾದ ಸಿರಿಯದ ಭಾಗವಾಗಿತ್ತು. ಕುಪ್ರದ್ವೀಪದ ಕರಾವಳಿಯನ್ನು ದಾಟಿದ ಮೇಲೆ (ಅ.ಕೃತ್ಯ 13:4). ಅವರು ಫೊಯಿನೀಕೆಯ ಒಂದು ಪ್ರಾಮುಖ್ಯ ಪಟ್ಟಣವಾದ ತೂರ್‌ಗೆ ಬಂದು ತಲುಪಿದರು (ಅ.ಕೃತ್ಯ 12:20).

**4** ತೂರ್ ಪಟ್ಟಣದಲ್ಲಿ ಒಂದು ಸಭೆಯಿತ್ತು, ಆದುದರಿಂದ, ಹಡಗು ತನ್ನ ಸರಕನ್ನು ಇಳಿಸುವ ವೇಳೆಯಲ್ಲಿ ಪೌಲ ಹಾಗು ಆತನ ಸಹ ಪಾಠಿಗಳು ಅಲ್ಲಿನ ಶಿಷ್ಯರ ಬಳಿಯಲ್ಲಿ ಉಳಿದರು. ಈ ಶಿಷ್ಯರಲ್ಲಿ ಕೆಲವರು ಪೌಲನಿಗೆ ದೊಡ್ಡ ಸಂಕಷ್ಟವು ಬರಲಿದೆಯೆಂಬದನ್ನು ಪವಿತ್ರಾತ್ಮನ ಮುಖಾಂತರವಾಗಿ ತಿಳಿದು ಕೊಂಡಿದ್ದರು. ಆದುದರಿಂದ, ಪೌಲನು ತನ್ನ ಪ್ರಯಾಣದಲ್ಲಿ ಮುಂದುವರೆಯಬಾರದೆಂದು ಅವರು ಆತನಿಗೆ ಸಲಹೆ ಮಾಡಿದರು (ಅ.ಕೃತ್ಯ 20:23). ಆದರೆ ಪೌಲನು ತಾನು ಯೆರೂಸಲೇಮಿಗೆ ಹೋಗಲೇ ಬೇಕೆಂಬ ಮಾರ್ಗದರ್ಶನವನ್ನು ಪವಿತ್ರಾತ್ಮನಿಂದ ಪಡೆದುಕೊಂಡಿದ್ದನು, ಯಾವ ಗಂಡಾಂತರವೇ ಇರಲಿ ಅವನು ತನ್ನ ನಿರ್ಧಾರವನ್ನು ಬದಲಿಸದವನಾಗಿದ್ದನು (ಅ.ಕೃತ್ಯ 20:22).

**5-6** ಹಡಗಿನ ಸರಕನ್ನೆಲ್ಲಾ ಇಳಿಸಿದ ನಂತರ ಪೌಲ ಹಾಗು ಆತನ ಸಂಗಡಿಗರು ತೂರ್ ಪಟ್ಟಣದ ಶಿಷ್ಯರಿಂದ ಹೊರಟು ದಕ್ಷಿಣದೆಡೆಗೆ ಪ್ರಯಾಣಿಸಿ ಪ್ತೊಲೆಮಾಯವನ್ನು ಸೇರಿದರು (ವಚನ 7).

## ಕೈಸರೈದಲ್ಲಿ (21:7-16)

**7-8** ಪ್ತೊಲೆಮಾಯದಿಂದ ಪೌಲನಿದ್ದ ಹಡಗು ಪ್ರಥಮ ಅನ್ಯ ಜನರು ಕ್ರಿಸ್ತನನ್ನು ನಂಬಿದ ಉತ್ತರ ಇಸ್ರಾಯೇಲಿನಲ್ಲಿದ್ದ ಕೈಸರೈ ಪಟ್ಟಣಕ್ಕೆ ತಲುಪಿತು (ಅ.ಕೃತ್ಯ 10:1). ಪೌಲ ಮತ್ತು ಆತನ ಸಂಗಡಿಗರು ಫಿಲಿಪ್ಪನ ಮನೆಯಲ್ಲಿ ಇಳುಕೊಂಡರು. ಫಿಲಿಪ್ಪನು ಇಪ್ಪತ್ತು ವರ್ಷಗಳಹಿಂದೆ ಕೈಸರೈ ಪಟ್ಟಣಕ್ಕೆ ಬಂದಿದ್ದನು (ಅ.ಕೃತ್ಯ 8:39-40). ಯೆರೂಸಲೇಮ ಸಭೆಯ ಏಳು ಮಂದಿ ಮೂಲ ಹಿರಿಯರಲ್ಲಿ ಫಿಲಿಪ್ಪನು ಒಬ್ಬನಾಗಿದ್ದನು (ಅ.ಕೃತ್ಯ 6:3-5). ಆತನ ನಾಲ್ಕು ಮಂದಿ ಹೆಣ್ಣು ಮಕ್ಕಳು ಪ್ರವಾದಿಸುವದರಲ್ಲಿ ಪ್ರಸಿದ್ಧರಾಗಿದ್ದರು. ಅವರು ಬಹಳ ವಯಸ್ಸಿನವರಾಗುಳಿದು ಅನೇಕ ವರ್ಷಗಳ ಕಾಲ ಸಭೆಗೆ ಹೆಚ್ಚು ಸಹಾಯವನ್ನು ನೀಡಿದರು.

**10-11** ಅಗಬನು ಯೆರೂಸಲೇಮಿನ ಸಭೆಗೆ ಸೇರಿದ ಒಬ್ಬ ಪ್ರವಾದಿಯಾಗಿದ್ದನು (ಅ.ಕೃತ್ಯ 11:27-28) ಯೆರೂಸಲೇಮಿನ ಯೆಹೂದ್ಯರು ಪೌಲನನ್ನು ಹಿಡಿದುಕೊಂಡು ಅನ್ಯ. ಜನರ ಅಂದರೆ ರೋಮಾಯರ ಕೈಗೆ ಒಪ್ಪಿಸಿಕೊಡುವರು ಎಂದು ಆತನು ಪ್ರವಾದಿಸಿದನು. ಆದರೆ ಅಗಬನು ಪೌಲನಿಗೆ ಯೆರೂಸಲೇಮಿನಿಂದ ಹೊರಟು ಹೋಗಬೇಕೆಂದು ಬೇಡಿಕೊಳ್ಳಲಿಲ್ಲ...ಪೌಲನು ಅಲ್ಲಿ ಹೋದಾಗ ಏನು ಸಂಭವಿಸಲಿತ್ತೆಂಬದನ್ನು ಮಾತ್ರವೇ ಆತನು ಹೇಳಿದನು.

ಯೇಸು ತನ್ನ ಕುರಿತಾಗಿ ಇದೇ ರೀತಿಯ ಪ್ರವಾದನೆಯನ್ನು ನುಡಿದಿದ್ದನು (ಮಾರ್ಕ10:32-33) ಅಲ್ಲದೆ ಆತನು ಸಹ ದೇವರ ಚಿತ್ತವನ್ನು ನೆರವೇರಿಸದೆ ವಿಮುಖನಾಗಲು ನಿರಾಕರಿಸಿದ್ದನು.

**12-14** ಆದರೆ ದೇವರ ಚಿತ್ತವೇನಾಗಿತ್ತೆಂಬದನ್ನು ಪೌಲನ ಸ್ನೇಹಿತರು ಅರ್ಥಮಾಡಿಕೊಳ್ಳಲಿಲ್ಲ. ಅವರು ಯೇಸುವನ್ನು ಯೆರೂಸಲೇಮಿಗೆ ಹೋಗದಿರುವ ಹಾಗೆ ತಡೆಯಲು ಪ್ರಯತ್ನಿಸಿದ ಪೇತ್ರನಂತಿದ್ದರು (ಮಾರ್ಕ 8:31-33). ಅವರು ಆತನ ಮನಸ್ಸನ್ನು ಬದಲಾಯಿಸುವಂತಾಗದಂತೆ ತನಗಾಗಿ ಅಳುವದನ್ನೂ ಬೇಡಿಕೊಳ್ಳುವದನ್ನು ನಿಲ್ಲಿಸಬೇಕೆಂದು ಪೌಲನು ಅವರಿಗೆ ಹೇಳಿದನು. ಪೌಲನು ಯೆರೂಸಲೇಮಿಗೆ ಹೋಗಲು ಮುಖ್ಯ ಉದ್ದೇಶವೇನಾಗಿತ್ತೆಂದರೆ ಅನ್ಯ ಜನಾಂಗದ ಸಭೆಗಳಿಂದ ಸಂಗ್ರಹವಾದ ಹಣವನ್ನು ಅಲ್ಲಿನ ಸಭೆಗೆ ತಲುಪಿಸುವದಕ್ಕಾಗಿಯೇ ಆಗಿತ್ತು (ರೋಮ 15:25-28). ಈ ಸಂಗ್ರಹಣೆಯ ಮುಖಾಂತರ ಯೆಹೂದ್ಯ ಹಾಗು ಅನ್ಯ ಜನಾಂಗದ ಕ್ರೈಸ್ತರ ನಡುವೆ ಸಮಾಧಾನ ಹಾಗು ಐಕ್ಯತೆಗಳನ್ನುಂಟು ಮಾಡಬಹುದೆಂದು ಪೌಲನು ನಿರೀಕ್ಷಿಸಿದನು.

**15-16** ಮ್ನಾಸೋನನು ಗ್ರೀಕ್ ಮಾತಾಡುವ ಯೆಹೂದ್ಯ ಕ್ರೈಸ್ತನಾಗಿದ್ದ ಆತನು ಯೆರೂಸಲೇಮಿನ [95] ವಿಶ್ವಾಸಿಗಳಲ್ಲಿ ಮೊದಲಿಗನು. ಇವನು ಗ್ರೀಕ್ ಮಾತಾಡುವವನಾಗಿದ್ದರಿಂದ ಪೌಲನ ಗ್ರೀಕ್‌ಭಾಷೆಯ ಸಹ ಪಾಠಿಗಳಿಗೆ ಇವನ ತಕ್ಕ ಅತಿಥೇಯನಾಗಿದ್ದನು (ಅ.ಕೃತ್ಯ 20:4).

## ಪೌಲನು ಯೆರೂಸಲೇಮನ್ನು ತಲುಪಿದ್ದು (21:17-26)

**17** ಯೆರೂಸಲೇಮಿನಲ್ಲಿದ್ದ ಕ್ರೈಸ್ತ ಸಹೋದರರು ಪೌಲ ಹಾಗು ಆತನ ಸಹಪಾಠಿಗಳನ್ನು ಸಂತೋಷದಿಂದ ಸ್ವಾಗತಿಸಿದರು. ಅನ್ಯ ಜನಾಂಗ ಸಭೆಗಳಿಂದ ಸಂಗ್ರಹಿಸಲ್ಪಟ್ಟ ಕಾಣಿಕೆಗಳಿಗೆ ಅವರು ಕೃತಜ್ಞತೆಯುಳ್ಳವರಾಗಿದ್ದರು.

**18-19** ಆ ಸಮಯದಲ್ಲಿ ಯೇಸುವಿನ ತಮ್ಮನಾದ ಯಾಕೋಬನು ಯೆರೂಸಲೇಮ ಸಭೆಯ ಮುಖ್ಯ ನಾಯಕನಾಗಿದ್ದನು. ಅಪೊಸ್ತಲರಲ್ಲಿ ಹೆಚ್ಚು ಮಂದಿ ಸುವಾರ್ತೆಯನ್ನು ಸಾರುವದಕ್ಕೆ ಇತರ ಸ್ಥಳಗಳಿಗೆ ಹೋಗಿದ್ದರು. ಪೌಲನು ಯೆರೂಸಲೇಮಿನ ಹಿರಿಯರಿಗೆ ಅನ್ಯ ಜನರಲ್ಲಿ ಬಹು ಜನರು ಕ್ರಿಸ್ತನ ಕಡೆಗೆ ಬಂದದ್ದನ್ನೂ ಅಸ್ಯ ಸೀಮೆ ಹಾಗು ಗ್ರೀಸ್‌ಗಳಲ್ಲಿ ಅನೇಕ ಸಭೆಗಳು ಸ್ಥಾಪಿಸಲ್ಪಟ್ಟಿವೆ ಎಂಬದನ್ನು ವಿವಪಿಸಿದನು (ಅ.ಕೃತ್ಯ 4:27 ಮತ್ತು ವ್ಯಾಖ್ಯಾನ ನೋಡಿರಿ). ಆತನೊಂದಿಗೆ ಈ ಎಲ್ಲಾ ಸಭೆಗಳಿಂದ ಕಳುಹಿಸಲ್ಪಟ್ಟ ಪ್ರತಿನಿಧಿಗಳು ಇದ್ದರು. ಅವರು ತಾವು ತಂದಿದ್ದ ಸಂಗ್ರಹಣೆಯ ರೂಪದಲ್ಲಿ ಅನ್ಯ ಜನಾಂಗದ ನಂಬಿಕೆ ಮತ್ತು ಪ್ರೀತಿಗೆ ಆಧಾರವನ್ನು ಕೊಡಲು ಬಂದಿದ್ದರು. ಆದುದರಿಂದ, ಈ ಎಲ್ಲಾ ಸಂಗತಿಗಳಿಗಾಗಿ ಯೆರೂಸಲೇಮಿನ ಹಿರಿಯರು ದೇವರನ್ನು ಕೊಂಡಾಡಿದರು (ವಚನ 20).

**20-21** ಆದರೆ ಅಲ್ಲಿ ಒಂದು ಸಮಸ್ಯೆಯೂ ಇತ್ತು. ಯೆರೂಸಲೇಮು ಒಂದು ಯೆಹೂದಿ ಪಟ್ಟಣವಾಗಿತ್ತು ಹಾಗು ಅಲ್ಲಿರುವ ಬಹುಪಾಲು ಕ್ರೈಸ್ತರು ಮೂಲತ: ಯೆಹೂದ್ಯರೇ ಆಗಿದ್ದರು. ಅವರು ಈಗಲೂ ಯೆಹೂದ್ಯ ಧರ್ಮಶಾಸ್ತ್ರ, ಅಂದರೆ, ಮೋಶೆಯ

ಧರ್ಮಶಾಸ್ತ್ರವನ್ನು ಅನುಸರಿಸುತ್ತಿದ್ದರು (ವಚನ 21). ಈ ಯೆರೂಸಲೇಮಿನ ಯೆಹೂದಿ ಕ್ರೈಸ್ತರು ಪೌಲನ ವಿಷಯದಲ್ಲಿ ಒಂದು ಸುಳ್ಳುವದಂತಿಯನ್ನು ಕೇಳಿದ್ದರು. ಅದೇನೆಂದರೆ ಪೌಲನು ಕ್ರೈಸ್ತರಾದ ಯೆಹೂದ್ಯರಿಗೆ ಅವರು ಮೋಶೆಯ ಧರ್ಮಶಾಸ್ತ್ರವನ್ನು ಪಾಲಿಸಬಾರದು ಅಥವಾ ಸುನ್ನತಿ ಮಾಡಿಸಿಕೊಳ್ಳಬಾರದು ಎಂಬದಾಗಿ ಬೋಧಿಸುತ್ತಾನೆ ಎಂಬದೇ. ಅನ್ಯಜನಾಂಗದ ಕ್ರೈಸ್ತರಿಗೆ ಅಂತಹ ಬೋಧನೆಗಳನ್ನು ನೀಡುವದಕ್ಕೆ ಅವರ ಅಭ್ಯಂತರ ವಿರಲಿಲ್ಲ ಆದರೆ ಯೆಹೂದ್ಯ ಕ್ರೈಸ್ತರಿಗೆ ಆ ಬೋಧನೆಯು ಸಮಂಜಸವಲ್ಲ ಎಂಬದು ಅವರ ಆಲೋಚನೆಯಾಗಿತ್ತು. ಅವರ ದೃಷ್ಟಿಯಲ್ಲಿ ಯೆಹೂದ್ಯ ಕ್ರೈಸ್ತರಿಗೆ ಅವರು ಮೋಶೆಯ ಧರ್ಮಶಾಸ್ತ್ರವನ್ನು ಅನುಸರಿಸುವ ಅಗತ್ಯವಿಲ್ಲ ಎಂದು ಬೋಧಿಸುವದು ಘೋರ ಅಪರಾಧವಾಗಿತ್ತು. ಈ ಕಾರಣಕ್ಕಾಗಿ ಯೆರೂಸಲೇಮಿನ ಕ್ರೈಸ್ತರು ಪೌಲನ ವಿಷಯದಲ್ಲಿ ಅನೇಕ ಸಂಶಯಗಳನ್ನು ಹೊಂದಿದ್ದರು.

**22-24** ಪೌಲನ ವಿಷಯದಲ್ಲಿ ಯೆಹೂದ್ಯ ಕ್ರೈಸ್ತರಿಗೆ ಪುನಃ ವಿಶ್ವಾಸವನ್ನು ಮೂಡಿಸಿ ಅವರ ಮಧ್ಯದಲ್ಲಿ ಸಮಾಧಾನವನ್ನುಂಟು ಮಾಡುವದಕ್ಕೆ ಯಾಕೋಬ ಹಾಗು ಯೆರೂಸಲೇಮಿನ ಹಿರಿಯರು ಒಂದು ಉಪಾಯವನ್ನು ಕಂಡುಕೊಂಡರು. ಪೌಲನು ಸ್ವತಃ ಯೆಹೂದ್ಯ ಧರ್ಮಶಾಸ್ತ್ರವನ್ನು ಪಾಲಿಸುವದಾದರೆ ಯೆಹೂದ್ಯ ಕ್ರೈಸ್ತರು ಆಗ ತೃಪ್ತರಾಗುವರು ಎಂಬದಾಗಿ ಯಾಕೋಬ ಮತ್ತು ಹಿರಿಯರು ಯೋಚಿಸಿಕೊಂಡರು. ಅದಕ್ಕೆ ತಕ್ಕಂತೆ ಅದೇ ವೇಳೆಯಲ್ಲಿ ನಾಲ್ವರು ಯೆಹೂದ್ಯ ಕ್ರೈಸ್ತರು ವ್ರತಹಿಡಿದಿದ್ದರು (ಅ.ಕೃತ್ಯ 18:18 ಮತ್ತು ವ್ಯಾಕ್ಯಾನ ನೋಡಿರಿ). ಆದರೆ ವ್ರತದ ಕಾಲದಲ್ಲಿ ಹೇಗೊ ಅವರು ಅಶುದ್ದಗೊಂಡಿದ್ದರು,. ಆದಕಾರಣ ಈಗ ಅವರು ತಮ್ಮನ್ನು ಶುದ್ಧಿ ಮಾಡಿಕೊಳ್ಳುವದು ಅವಷ್ಯಕವಾಗಿತ್ತು (ಮತ್ತಾಯ 6:5-6, 9-12). ಒಂದು ಪೌಲನು ಅವರೊಂದಿಗೆ ಹೋಗಿ ತನ್ನನ್ನು ಶುದ್ಧಿ ಮಾಡಿಕೊಂಡು ಅವರ ಖರ್ಚನ್ನು ನೋಡುಕೊಳ್ಳುವದಾದರೆ ಪೌಲನು ಮೋಶೆಯ ಧರ್ಮಶಾಸ್ತ್ರವನ್ನು ಪಾಲಿಸುವವನಾಗಿ–ದ್ದಾನೆಂಬದನ್ನು ಪ್ರತಿಯೊಬ್ಬರು ಆಗ ತಿಳಿದುಕೊಳ್ಳುವರು.

**25** ಯೆರೂಸಲೇಮ ಸಭೆಯ ಹಿರಿಯರು ತಾವು ಮುಂಚೆ ಮಾಡಿದ ತಿರ್ಮಾನವನ್ನು ಬದಲಾಯಿಸಲು ಯೋಚಿಸಲಿಲ್ಲ: ಉದಾಹರಣೆಗೆ, ಅನ್ಯ ಜನಾಂಗದ ಕ್ರೈಸ್ತರು ಮೋಶೆಯ ಧರ್ಮಶಾಸ್ತ್ರವನ್ನು ಅನುಸರಿಸುವ ಅಗತ್ಯವಿಲ್ಲ. ಅನ್ಯ ಜನಾಂಗದ ಕ್ರೈಸ್ತರು ಅಶುದ್ಧ ಮಾಂಸವನ್ನೂ ಹಾದರವನ್ನೂ [96] ಬಿಟ್ಟು ದೂರವಾಗಿದ್ದು ಯೆಹೂದ್ಯ ವಿಶ್ವಾಸಿಗಳಿಗೆ ಅನಾವಶ್ಯಕ ಬೇಸರವನ್ನುಂಟು ಮಾಡಕೂಡದೆಂಬ ಸಂಗತಿಯನ್ನು ಮಾತ್ರವೇ ಹಿರಿಯರು ಅನ್ಯಜನಾಂಗದ ಕ್ರೈಸ್ತರಿಂದ ಕೇಳಿಕೊಂಡಿದ್ದರು (ಅ.ಕೃತ್ಯ 15:19-20, 28-29 ಮತ್ತು ವ್ಯಾಖ್ಯಾನ ನೋಡಿರಿ).

**26** ಯೆರೂಸಲೇಮಿನ ಹಿರಿಯರ ಆಲೋಚನೆಯನ್ನು ಪೌಲನು ಒಪ್ಪಿಕೊಂಡನು. ಪೌಲನು ಯೆಹೂದ್ಯರೊಂದಿಗೆ ಒಂದು ರೀತಿಯಲ್ಲಿಯೂ ಮತ್ತು ಅನ್ಯ ಜನರೊಂದಿಗೆ ಮತ್ತೊಂದು ರೀತಿಯಲ್ಲಿಯೂ ನಡೆದುಕೊಳ್ಳುತ್ತಾನೆಂದು ಕೆಲವು ಜನರು ಟೀಕಿಸಬಹುದು; ಆತನು ಎರಡು ಮುಖವುಳ್ಳವನೂ, ಚಂಚಲನೂ ಎಂದು ಅವರು ಆರೋಪಿಸಬಹುದು. ಆದರೆ ಅಂತಹ ಟೀಕೆಯು ಸತ್ಯವಾದುದಲ್ಲ. ಪೌಲನು ಒಂದೇ ಉದ್ದೇಶ, ಒಂದೇ ಗುರಿಯನ್ನು ಹೊಂದಿದ್ದನು, ಅದೇನಂದರೆ ಯಾವ ಮಾರ್ಗದಲ್ಲಿಯಾದರೂ ಯೆಹೂದ್ಯರು ಹಾಗು ಅನ್ಯಜನರು ಇಬ್ಬರನ್ನೂ ಕ್ರಿಸ್ತನಿಗಾಗಿ ಗೆಲ್ಲಬೇಕೆಂಬದಾಗಿತ್ತು (ಅ.ಕೃತ್ಯ 16:3, 1 ಕೊರಿಂಥ 9:20 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

## ಪೌಲನು ಬಂಧಿಸಲ್ಪಟ್ಟದ್ದು (21:27-40)

**27-29** ಪಂಚಾಶತ್ತಮ ಹಬ್ಬಕ್ಕಾಗಿ ಎಫೆಸ ಹಾಗು ಅಸ್ಯ ಸೀಮೆಯ ಸುತ್ತಲಿನಿಂದ ಕೆಲವು ಯೆಹೂದ್ಯರು ಯೆರೂಸಲೇಮಿಗೆ ಬಂದಿದ್ದರು (ಅ.ಕೃತ್ಯ 20:16). ಇದಕ್ಕೆ ಮುಂಚೆ ಒಮ್ಮೆ ಎಫೆಸದ ಯೆಹೂದ್ಯರು ಪೌಲನನ್ನು ಬಹಳವಾಗಿ ವಿರೋಧಿಸಿದ್ದರು (ಅ.ಕೃತ್ಯ 20:19). ಕೆಲವು ದಿವಸಗಳಿಗೆ ಮುಂಚೆ ಎಫೆಸದ ಯೆಹೂದ್ಯರು ಪೌಲನನ್ನೂ, ಅವನ ಸಂಗಡ ಎಪೆಸದ ಅನ್ಯ ಜನಾಂಗದವನಾದ ತ್ರೋಫಿಮನನ್ನು ನೋಡಿದ್ದರು (ಅ.ಕೃತ್ಯ 20:4). ಈಗ ಪೌಲನು ತನ್ನ ಶುದ್ಧಿಮಾಡಿಕೊಳ್ಳಲು ಯೆಹೂದ್ಯ ದೇವಾಲಯದ ಒಳ ಕೋಣೆಗೆ ಹೋಗುವದನ್ನು ನೋಡಿದ ಈ ಯೋಹೂದ್ಯರು ಅವನು ತನ್ನೊಂದಿಗೆ ಅನ್ಯ ಜನಾಂಗದ ತ್ರೋಫಿಮನನ್ನು ಸಹ ಒಳಗೆ ಕರೆದುಕೊಂಡು ಹೋಗಿದ್ದಾನೆಂದು ಊಹಿಸಿಕೊಂಡರು. ಯಾವದೇ ಅನ್ಯ ಜನಾಂಗದವನು ದೇವಾಲಯದ ಒಳಗಿನ ಅವರಣವನ್ನು ಪ್ರವೇಶಿಸುವದಾದರೆ ತಕ್ಷಣವೇ ಅವನಿಗೆ ಮರಣದಂಡನೆ ಆಗುತ್ತಿತ್ತು. ಅನ್ಯ ಜನಾಂಗದವನು ದೇವಾಲಯದ ಒಳಭಾಗವನ್ನು ಪ್ರವೇಶಿಸುವದು ಯೆಹೂದ್ಯರ ದೃಷ್ಟಿಯಲ್ಲಿ ಒಂದು ದೊಡ್ಡ ಅಪರಾಧವಾಗಿತ್ತು, ಯಾಕೆಂದರೆ ಅನ್ಯನೊಬ್ಬನು ಒಳ ಪ್ರವೇಶಿಸುವದಾದರೆ ದೇವಾಲಯವು ಹೊಲೆಯಾಗುವದೆಂದು ಯೆಹೂದ್ಯರ ನಂಬಿಕೆಯಾಗಿತ್ತು[97].

ಈ ರೀತಿಯಾಗಿ ಪೌಲನ ವೈರಿಗಳು ಆತನ ವಿರುದ್ಧ ಸುಳ್ಳು ಆರೋಪಗಳನ್ನು ಹೊರಿಸಿದರು. ಪೌಲನು ಸಂಪೂರ್ಣ ನಿರಪರಾಧಿಯಾಗಿದ್ದನಾದರೂ ಇದು ಆತನ ಹೆಸರು ಮತ್ತು ಪ್ರಸಿದ್ಧಿಯನ್ನು ಮಾತ್ರವಲ್ಲ ಆದರೆ ಆತನ ಜೀವಿತವನ್ನೇ ಸಂಕಷ್ಟಕ್ಕೆ ಸಿಲುಕಿಸಿತು. ನಾವು ಇದನ್ನು ಯಾವದೇ ಮಿಥ್ಯ ಆರೋಪದ ವಿನಾಶಕಾರಿ ಶಕ್ತಿಯ ಜ್ಞಾಪಕದಂತೆ (ವಿಶೇಷವಾಗಿ ಸಭೆಯಲ್ಲಿ) ತೆಗೆದುಕೊಳ್ಳೋಣ.

**30** ಯೆಹೂದ್ಯರು ಪೌಲನನ್ನು ಹಿಡಿದುಕೊಂಡು ಒಳ ಆವರಣದೊಳಗಿಂದ ಎಳೆದುಕೊಂಡು ಬಂದರು. ಆಗ ದೇವಾಲಯದ ಅಧಿಕಾರಿಗಳು ಗದ್ದಲದಲ್ಲಿ ದೇವಾಲಯವು ಹೊಲೆಯಾಗಬಾರದೆಂದು ಬಾಗಲುಗಳನ್ನು ಮುಚ್ಚಿದರು.

ಎಫೆಸದವರು ತಮ್ಮ ಅರ್ತೆಮೀಯ ದೇವಾಲಯಕ್ಕೆ ಅವಮಾನವಾಗಿದೆ ಎಂಬುದಕ್ಕಾ-ಗಿಗಲಭೆಯನ್ನುಂಟು ಮಾಡಿದ ಹಾಗೆಯೇ (ಅ.ಕೃ.19:27-29). ಯೆರೂಸಲೇಮಿನ ಯೆಹೂದ್ಯರು ಅದೇ ಕಾರಣಕ್ಕಾಗಿ ಪೌಲನ ವಿರುದ್ಧ ಗಲಭೆ ಎದ್ದಿದ್ದರು.

**31-32** ಯೆಹೂದ್ಯರ ಗುಂಪು ಪೌಲನನ್ನು ಕೊಲ್ಲುವದಕ್ಕೆ ಪ್ರಯತ್ನಿಸಿತು. ಆ ಸಮಯದಲ್ಲಿ ಕೆಲವು ರೋಮಾಯ ಸಿಪಾಯಿಗಳು ಬರದೇ ಹೋಗಿದ್ದರೆ ಆಗಲೇ ಪೌಲನ ಜೀವಿತವು ಕೊನೆಗೊಳ್ಳುತ್ತಿತ್ತು. ದೇವಾಲಯದ ಹೊರ ಆವರಣಕ್ಕೆ ಹೊಂದಿಕೊಂಡೇ ರೋಮಾಯರ ಕೋಟೆಯಿತ್ತು. ಅವು ಗಳ ನಡುವೆ ಮೆಟ್ಟಿಲುಗಳ ಜೋಡಣೆಯಿತ್ತು. ಆದುದರಿಂದ ಕೋಟೆಯೊಳಗಿದ್ದ ಸಿಪಾಯಿಗಳು ಗದ್ದಲವನ್ನು ಕೇಳಿದ ಕೂಡಲೇ ಅವರು ಶೀಘ್ರವೇ ಬಂದು ಪೌಲನ ಪ್ರಾಣವನ್ನು ಉಳಿಸಲು ಶಕ್ತರಾದರು.

**33-34** ಸಹ ಸ್ರಾಧಿಪತಿಯು ಪೌಲನು ಯಾವದೋ ದೊಡ್ಡ ಅಪರಾಧವನ್ನು ಮಾಡಿರಬೇಕೆಂದು ಊಹಿಸಿ ಆತನನ್ನು ಬಂಧಿಸಲು ಅಪ್ಪಣೆ ಮಾಡಿದನು. ಆದರೆ ಸಹ ಸ್ರಾಧಿಪತಿಯು ಗಲಭೆಗೆ ಕಾರಣವನ್ನು ಕಂಡುಕೊಳ್ಳಲು ಆಗಲಿಲ್ಲ, ಯಾಕೆಂದರೆ ಗುಂಪಿನಲ್ಲಿದ್ದ ಜನರಲ್ಲಿ ಕೆಲವರು ಹೀಗೆ ಕೆಲವರು ಹಾಗೆ ಹೇಳಿದರು.

**35-36** ಸಿಪಾಯಿಗಳು ಪೌಲನನ್ನು ಕೋಟೆಯೊಳಗೆ ಹೋಗುವ ಮೆಟ್ಟಿಲುಗಳ ಮೂಲಕ ಕರೆದು ಹೋಗುತ್ತಿರಲು ಜನರ ಗುಂಪು ಪು ನಃ ಅವನನ್ನು ಹಿಡಿದುಕೊಳ್ಳುವ ಪ್ರಯತ್ನಗಳನ್ನು ಮಾಡಿದರು. ಜನರು ಅವನನ್ನು ಕೊಲ್ಲಿರಿ! ಎಂದು ಕೂಗುತ್ತಿದ್ದರು. ಇಪ್ಪತ್ತೇಳು ವರ್ಷಗಳ ಹಿಂದೆ ಅದೇ ಪಟ್ಟಣದಲ್ಲಿ ಇನ್ನೊಂದು ಜನರ ಗುಂಪು ಯೇಸು ಎಂಬ ಇನ್ನೊಬ್ಬ ಸೆರೆಯವನ ವಿಷಯವಾಗಿ ಹಾಗೆಯೇ ಕೂಗಿದ್ದರು (ಯೋಹಾನ 19:15).

**37-38** ಸಹಸ್ರಾಧಿಪತಿಯು ಮೂರು ವರ್ಷಗಳ ಹಿಂದೆ ರೋಮಾಯರ ವಿರುದ್ಧ ದಂಗೆ ಎಬ್ಬಿಸಿದ ಆ ಐಗುಪ್ತ್ಯನು ಪೌಲನೇ ಆಗಿದ್ದಾನೆಂದು ತಪ್ಪಾಗಿ ತಿಳಿದುಕೊಂಡನು. ರೋಮಾಯರು ಆ ಐಗುಪ್ತ್ಯ ಮತ್ತು ಆತನ ಯೆಹೂದ್ಯ ಅನುಯಾಯಿಗಳ ಮೇಲೆ ದಾಳಿ ಮಾಡಿದಾಗ ಆ ಐಗುಪ್ತ್ಯನು ತಪ್ಪಿಸಿಕೊಂಡಿದ್ದನು ಆದರೆ ಆತನ ಹಿಂಬಾಲಕರಲ್ಲಿ ಬಹು ಮಂದಿಯನ್ನು ರೋಮಾಯರು ಹತ್ಯೆಗೈದಿದ್ದರು. ಆದುದರಿಂದ, ಬದು ಕುಳಿದ ಯೆಹೂದ್ಯರು ಪಲಾಯನ ಗೈದು ತಮ್ಮನ್ನು ರೋಮಾಯರ ದಾಕ್ಷಿಣ್ಯಕ್ಕೊಳ ಪಡಿಸಿದ ಐಗುಪ್ತ್ಯನ ಮೇಲೆ ಬಹಳ ಕೋಪಗೊಂಡಿದ್ದರು. ಜನರ ಗುಂಪು ಪೌಲನನ್ನು ಕೊಲ್ಲಲು ಬಹಳ ಪ್ರಯತ್ನ ಮಾಡುವದಕ್ಕೆ ಇದೇ ಕಾರಣವೆಂಬದಾಗಿ ಸಹಸ್ರಾಧಿಪತಿಯು ಯೋಚಿಸಿಕೊಂಡನು.

**39-40** ಅದಕ್ಕೆ ಪೌಲನು "ನಾನು ಆ ಐಗುಪ್ತ್ಯನಲ್ಲ. ನಾನು ಯೆಹೂದ್ಯನು, ತಾರ್ಸದವನು, ಕಿಲಿಕ್ಯ [98] ಸೀಮೆಯ ಪ್ರಖ್ಯಾತವಾದ ಪಟ್ಟಣದವನು" ಎಂದು ಹೇಳಿದನು. ತರುವಾಯ ಸಹಪ್ರಾಧಿಪತಿಯಿಂದ ತನ್ನ ಪರವಾಗಿ ಮಾತಾಡಲು ಅಪ್ಪಣೆಯನ್ನು ಪಡೆದು ಪೌಲನು ಜನರ ಗುಂಪನ್ನು ದ್ದೇಶಿಸಿ ಅವರ ಅರಾಮಿಕ ಭಾಷೆಯಲ್ಲಿಯೇ [99] ಮಾತಾಡಲಾರಂಭಿಸಿದನು.

---

## ಅಧ್ಯಾಯ - 22

### ಪೌಲನು ಜನರನ್ನು ದ್ದೇಶಿಸಿ ಮಾತಾಡಿದ್ದು (22:1-21)

**1-2** ಪೌಲನ ಪ್ರಯಣದ ಸಹ ಪಾಠಿಗಳಲ್ಲಿ ಕೆಲವರು ಗ್ರೀಸಿನ ವರಾಗಿದ್ದರಿಂದ ಪೌಲನು ಗ್ರೀಕ ಭಾಷೆಯಲ್ಲಿ ಮಾತಾಡುತ್ತಾನೆಂದು ಜನರು ಊಹಿಸಿಕೊಂಡರು. ಆದ್ದರಿಂದ, ಪೌಲನು ಅವರ ಭಾಷೆಯಲ್ಲಿಯೇ ಮಾತಾಡುವದನ್ನು ಕೇಳಿದ ಅವರು ತಕ್ಷಣವೇ ನಿಶ್ಯಬ್ದವಾಗಿ ಆಸಕ್ತಿಯಿಂದ ಕೇಳಿದರು.

**3** ಪೌಲನು ಸ್ವತಃ ತಾನೂ ಅವರಂತೆಯೇ ಒಬ್ಬ ಯೆಹೂದ್ಯನೆಂಬದನ್ನೂ ಅವರ ಪಟ್ಟಣವಾದ ಯೆರೂಸಲೇಮಿನಲ್ಲಿಯೇ ಬೆಳೆದವನೆಂಬದನ್ನೂ ಜನರಿಗೆ ಜ್ಞಾಪಕಪಡಿಸಿದನು. ಪೌಲನು ಶ್ರೇಷ್ಠ ಯೆಹೂದ್ಯ ಬೋಧಕನಾದ ಗಮಲಿಯೇಲನಿಂದ [100] ತರಬೇತಿಯನ್ನು ಹೊಂದಿದ್ದನು. ಅವರಂತೆಯೇ ಪೌಲನು ಸಹ ದೇವರ ವಿಷಯದಲ್ಲಿ ವೈರಾಗ್ಯವು ಳ್ಳವನಾಗಿದ್ದವು . [101] ಇದೆಲ್ಲವನ್ನು ಹೇಳುವದರಲ್ಲಿ ಅವರ ಹಾಗೆಯೇ ತಾನೂ ಒಬ್ಬ ಒಳ್ಳೇ ಯೆಹೂದ್ಯನೆಂಬದನ್ನು ಜನರಿಗೆ ಮನವರಿಕೆಯನ್ನು ಮಾಡಲು ಪೌಲನು ಪ್ರಯತ್ನಿಸುತ್ತಿದ್ದನು (ಗಲಾತ್ಯ 1:13-14; ಫಿಲಿಪ್ಪಿ 3: 4-6 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಪೌಲನು ದೇವಾಲಯಕ್ಕಾಗಲಿ ಅಥವಾ ಯೆಹೂದ್ಯ ಧರ್ಮಶಾಸ್ತ್ರಕ್ಕಾಗಲಿ ವೈರಿಯಾಗಿದ್ದಾನೆಂದು ಜನರು ಯೋಚಿಸದಿರಲಿ.

**4-5** ಬಳಿಕ ಪೌಲನು ಮೊದಲು ತಾನು ಹೇಗೆ ಕ್ರಿಸ್ತಮಾರ್ಗದವರನ್ನು ಅಂದರೆ ಕ್ರೈಸ್ತರನ್ನು ಹಿಂಸಿಸಿದ್ದನೆಂಬದನ್ನು ಜನರಿಗೆ ಹೇಳುತ್ತಾನೆ. ಪೌಲನು ಕ್ರೈಸ್ತರನ್ನು ಬಂಧಿಸಿ ಸೆರೆಮನೆಗೆ ಹಾಕುವದರಲ್ಲಿ ಮಾತ್ರವೇ ತೃಪ್ತಿಹೊಂದಿರಲಿಲ್ಲ; ಆತನು ಅವರ ಕೊಲೆಗಾದರೂ ಹಿಂತೆಗೆಯಲಿಲ್ಲ (ಅ.ಕೃತ್ಯ 26:9-10 ನೋಡಿರಿ). ಜನರ ಗುಂಪು ಅದನ್ನು ಕೇಳಿ ಸಂತೋಷಗೊಂಡಿದ್ದರಲ್ಲಿ ಯಾವ ಸಂಶಯವಿಲ್ಲ (ಅ.ಕೃತ್ಯ 8:3; 9:1-2 ಮತ್ತು ವ್ಯಾಖ್ಯಾನ ನೋಡಿರಿ).

**6-11** ಅ.ಕೃತ್ಯ 9:3-9 ಮತ್ತು ವ್ಯಾಖ್ಯಾನ ನೋಡಿರಿ

**12-13** ಅ.ಕೃತ್ಯ 9:10-19 ಮತ್ತು ವ್ಯಾಖ್ಯಾನ ನೋಡಿರಿ

**14-15** ಇಲ್ಲಿರುವ ಅನನೀಯನ ಮಾತುಗಳು ಅ.ಕೃತ್ಯ 9 ನೇ ಅಧ್ಯಾಯದಲ್ಲಿ ಉಲ್ಲೇಖಿಸಲ್ಪಟ್ಟಿರುವದಿಲ್ಲ.

ಇಲ್ಲಿ ಪೌಲನು ತನ್ನ ಧಾರ್ಮಿಕ ಪರಿವರ್ತನೆಯನ್ನು ಸ್ವಂತ ಮಾತುಗಳಲ್ಲಿ ಹೇಳುತ್ತಿದ್ದಾನೆ. ಒಬ್ಬ ಯೆಹೂದ್ಯನೂ, ಧರ್ಮಶಾಸ್ತ್ರಕ್ಕೆ ಸರಿಯಾಗಿ ನಡೆಯುವ ಸದ್ಭಕ್ತನೂ ಆದ ವ್ಯಕ್ತಿ – ಅಂದರೆ, ಅನನೀಯನು (ವಚನ 12) – ತನ್ನನ್ನು ಕ್ರಿಸ್ತನ ಅಪೊಸ್ತಲನಾಗಿ ನೇಮಕ ಮಾಡಿದನೆಂಬದನ್ನು ಜನರಿಗೆ ತೋರಿಸುವದು ಪೌಲನ ಬಯಕೆಯಾಗಿತ್ತು. ಅನನೀಯನು ಪೌಲನು, "ನಮ್ಮ ಪಿತೃಗಳ ದೇವರು ತನ್ನ ಚಿತ್ತವನ್ನು ನೀನು ತಿಳಿದುಕೊಳ್ಳುವದಕ್ಕೂ ಆ ನೀತಿವಂತನನ್ನು (ಕ್ರಿಸ್ತನು) ನೋಡುವದಕ್ಕೂ ಆತನ ಬಾಯಿಂದ ಒಂದು ಮಾತನ್ನು ಕೇಳುವದಕ್ಕೂ ನಿನ್ನನ್ನು ನೇಮಿಸಿದ್ದಾನೆ" ಎಂದು ಹೇಳಿದನು. ಪೌಲನು ಪು ನರುಥ್ಥಾನಗೊಂಡ ಕ್ರಿಸ್ತನನ್ನು ನೋಡಿದ್ದನು. ಆತನು ಕ್ರಿಸ್ತನ ಕಣ್ಣು ಕುಕ್ಕುವ ಮಹಿಮೆಯನ್ನು ಕಂಡಿದ್ದನು. ಮತ್ತು ಆತನ ಸ್ವಂತ ಬಾಯಿಂದ ಬಂದ ಮಾತುಗಳನ್ನು ಕೇಳಿದ್ದನು: "ನಜರೇತಿನ ಯೇಸುವೇ ನಾನು" (ವಚನ 8). ಪೌಲನು ಕರ್ತನನ್ನು ಕಣ್ಣಾರೆ ಕಂಡು ಕಿವಿಯಾರೆ ಕೇಳಿದ್ದರಿಂದಲೇ ಆತನ ಜೀವಿತವು ಸಂಪೂರ್ಣವಾಗಿ ಬದಲಾಗಿತ್ತು. ಒಂದು ವೇಳೆ ಪೌಲನು ಯೇಸುವನ್ನು ಅಷ್ಟು ಖಚಿತವಾಗಿ ತಿಳಿದಿಲ್ಲವಾಗಿದ್ದರೆ ಅವನು ತನಗುಂಟಾದ ಎಲ್ಲಾ ಹಿಂಸೆ ಹಾಗು ಸಂಕಟಗಳನ್ನು ಸಂತೋಷದಿಂದ ಅನುಭವಿಸಲು ಸಾಧ್ಯವಾಗುತ್ತಿರಲಿಲ್ಲ.

ಆದರೆ ನಾವು ಪೌಲನಂತಹ ಅಪೊಸ್ತಲರು ಮಾತ್ರವೇ ಈ ರೀತಿಯಾಗಿ ಕ್ರಿಸ್ತನನ್ನು ತಿಳಿದುಕೊಳ್ಳಬಲ್ಲರು ಎಂದು ಊಹಿಸಿಕೊಳ್ಳದಿರೋಣ. ನಾವೆಲ್ಲರೂ ಸಹ ಪವಿತ್ರಾತ್ಮನ ಮುಖಾಂತರ ಸಂಪೂರ್ಣ ನಿಶ್ಚಯದೊಂದಿಗೆ ಕ್ರಿಸ್ತನನ್ನು ತಿಳಿದು ಕೊಳ್ಳಬಹುದು. ಬಳಿಕ ಅನನೀಯನು 15ನೇ ವಚನದಲ್ಲಿ ಪೌಲನಿಗೆ ಹೇಳಿದ್ದೇನೆಂದರೆ:"ಎಲ್ಲಾ ಮನುಷ್ಯರ (ಯೆಹೂದ್ಯರಿಗೂ, ಅನ್ಯ ಜನರಿಗೂ ಮುಂದೆ ಆತನಿಗೆ ಸಾಕ್ಷಿಯಾಗಿರಬೇಕು (ಲೂಕ 24:48; ಅ.ಕೃತ್ಯ 1:8 ನೋಡಿರಿ). ನೀನು ಕಂಡು ಕೇಳಿದ್ದರ ವಿಷಯದಲ್ಲಿ ಸಾಕ್ಷಿಯಾಗಿರಬೇಕು" (1 ಯೋಹಾನ 1:1-3 ನೋಡಿರಿ). ಈ ರೀತಿಯಾಗಿ ಪೌಲನು ಒಬ್ಬ ಅಪೊಸ್ತಲನಾಗಿ ನೇಮಕಗೊಂಡನು (1 ಕೊರಿಂಥ 9:1, 15:7 - 9 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**16** ಬಳಿಕ ಅನನೀಯನು ಪೌಲನಿಗೆ ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿದನು, ಮತ್ತು ಪೌಲನು ನಂಬಿಕೆಯ ಮುಖಾಂತರ ಪಾಪಗಳನ್ನು ತೊಳೆದುಕೊಂಡನು.

**17-18** ಪೌಲನು ಪರಿವರ್ತನೆಗೊಂಡ ನಂತರ ದಮಸ್ಕ ಮತ್ತು ಅರಬ್ಬಿಯಗಳಲ್ಲಿ ಸ್ವಲ್ಪ ಕಾಲ ಕಳೆದನು (ಅ.ಕೃತ್ಯ 9:20-22; ಗಲಾತ್ಯ 1:17). ತರುವಾಯ ಆತನು ತಿರಿಗಿ ಯೆರೂಸಲೇಮಿಗೆ ಬಂದನು (ಅ.ಕೃತ್ಯ 9:26-28; ಗಲಾತ್ಯ 1:18).

ಯೆರೂಸಲೇಮಿನಲ್ಲಿರುವಾಗ ಕರ್ತನು ತನ್ನೊಂದಿಗೆ ಮಾತಾಡುವ ದರ್ಶನವನ್ನು ಪೌಲನು ಕಂಡನು (ವಚನ 18). ಕರ್ತನು ಪೌಲನಿಗೆ, "ನೀನು ತ್ವರೆ ಪಟ್ಟು ಬೇಗನೆ ಯೆರೂಸಲೇಮಿನಿಂದ ಹೊರಟು ಹೋಗು" ಎಂದು ಹೇಳಿದನು. ಯೆರೂಸಲೇಮಿನ ಯೆಹೂದ್ಯರು ಪೌಲನ ಸಾಕ್ಷಿಯನ್ನು ಸ್ವೀಕರಿಸಿಕೊಳ್ಳುವದಿಲ್ಲ ಎಂಬದನ್ನು ಕರ್ತನು ಬಲ್ಲವನಾಗಿದ್ದನು. ಯೆಹೂದ್ಯರು ಪೌಲನನ್ನು ಒಬ್ಬ ದ್ರೋಹಿಯೆಂದು ಪರಿಗಣಿಸಿದ್ದರು, ಅವರು ಆತನನ್ನು ದ್ವೇಷಿಸುವವರಾಗಿ ಕೊಲ್ಲಲು ಬಯಸಿದ್ದರು (ಅ.ಕೃತ್ಯ 9:29).

**19-20** ಆದರೆ ಪೌಲನು ಕರ್ತನೊಂದಿಗೆ ತರ್ಕಿಸಲಾರಂಬಿಸಿದನು. ತಾನು ಅಂತಹ ವೈರಾಗ್ಯದ ಯೆಹೂದ್ಯನೂ, ಸ್ತೇಫನನಂತಹ ಕ್ರೈಸ್ತರನ್ನು ಕಠಿಣವಾಗಿ ಹಿಂಸಿಸಿದವ ನಾಗಿದ್ದೇನಾದ್ದರಿಂದ (ಅ.ಕೃತ್ಯ 7:57-58), ಈ ಯೆರೂಸಲೇಮಿನ ಯೆಹೂದ್ಯರು ಖಂಡಿತವಾಗಿಯೂ ಆತನ ಮಾತುಗಳನ್ನು ಆಲಿಸುವರೆಂದು ಪೌಲನು ಯೋಚಿಸಿದ್ದನು. ಯೆಹೂದ್ಯರು ತನ್ನ ಮಾನಸಾಂತರ ಕಥೆಯನ್ನು ಕೇಳಿ ಬಹಳಷ್ಟು ಪ್ರಭಾವಿತರಾಗಿ ಸ್ವತಃ ಅವರೇ ಮಾನಸಾಂತರ ಹೊಂದಿ ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವರೆಂದು ಪೌಲನು ಊಹಿಸಿಕೊಂಡನು, ಮತ್ತು ಒಂದು ವಿಧದಲ್ಲಿ ಪೌಲನ ವಿಚಾರವು ಅರ್ಥಗರ್ಭಿತವಾದದ್ದು, ಇತರ ಸಂದರ್ಭಗಳಲ್ಲಿ ಅನೇಕ ಮಂದಿ ಯೆಹೂದ್ಯರು ಪೌಲನ ಕಥೆಯಿಂದ ಪ್ರಭಾವಿತರಾಗಿದ್ದರಲ್ಲಿ ಸಂಶಯ ವಿರುವದಿಲ್ಲ. ಆದರೆ ಈ ಸಂಧರ್ಭದಲ್ಲಿ ಪೌಲನು ಯೆರೂಸಲೇಮಿನಲ್ಲಿ ಉಳಿಯುವದು ನಿಷ್ಪ್ರಯೋಜಕವಾದದ್ದೆಂದು ಯೇಸುವಿಗೆ ಗೊತ್ತಿತ್ತು, ಅಲ್ಲಿರುವ ಯೆಹೂದ್ಯರು ಆತನ ಮಾತುಗಳನ್ನು ಕೇಳಲಾರರು ಎಂದು ಆತನಿಗೆ ತಿಳಿದಿತ್ತು. ಕ್ರಿಸ್ತನು ತನ್ನನ್ನು ಯಾರು ಸ್ವೀಕರಿಸಿಕೊಳ್ಳುವರು ಹಾಗು ಯಾರು ಸ್ವೀಕರಿಸಿಕೊಳ್ಳುವದಿಲ್ಲ ಎಂಬುದನ್ನು ಬಲ್ಲವನಾಗಿದ್ದಾನೆ.

**21** ಕರ್ತನು ಪೌಲನಿಗೆ "ನೀನು ಹೋಗು" ಎಂದನು. ಅಪೊಸ್ತಲರ ಕೃತ್ಯಗಳು 9:30 ರಲ್ಲಿ ಯೆಹೂದ್ಯರು ಪೌಲನನ್ನು ಕೊಲ್ಲಲು ಬಯಸಿದ್ದಾರೆಂಬದನ್ನು ತಿಳಿದು ಕೊಂಡ ಸಹೋದರರು ಅವನನ್ನು ಕೈಸರೈಯಕ್ಕೆ ಕರಕೊಂಡು ಹೋಗಿ ಅಲ್ಲಿಂದ ತಾರ್ಸಕ್ಕೆ ಕಳುಹಿಸಿದರು ಎಂದು ಬರೆದಿರುತ್ತದೆ. ಕರ್ತನು ಮಾತಾಡಿದನು ಮತ್ತು ಸಹೋದರರು ಪೌಲನನ್ನು. ಯೆರೂಸಲೇಮಿನಿಂದ ಹೊರಕ್ಕೆ ಕರಕೊಂಡು ಬಂದರು. ಈ ಎರಡು ಮಾರ್ಗಗಳ ಮೂಲಕ ಪೌಲನು ಯೆರೂಸಲೇಮನ್ನು ತೊರೆಯ ಬೇಕೆಂಬದು ತನ್ನ ಇಚ್ಚೆಯಾಗಿದೆಯೆಂಬದನ್ನು ಕರ್ತನು ಆತನಿಗೆ ತೋರಿಸಿದನು. ಕರ್ತನು ಪೌಲನಿಗೆ, "ನಾನು ನಿನ್ನನ್ನು ದೂರಕ್ಕೆ ಅನ್ಯ ಜನರ ಬಳಿಗೆ ಕಳುಹಿಸುತ್ತೇನೆ " ಎಂದು ಹೇಳಿದನು.ಇಲ್ಲಿ ಪೌಲನು ಪ್ರಾಥಮಿಕವಾಗಿ ಅನ್ಯ ಜನರ ಮದ್ಯದಲ್ಲಿ ಸುವಾರ್ತೆಯನ್ನು ಸಾರುವ ವಿಶೇಷ ನೇಮ ಕಾತಿಯನ್ನು ಕರ್ತನಿಂದ ಪಡೆದುಕೊಂಡನು (ಗಲಾತ್ಯ 2:8-9 ನೋಡಿರಿ).

## ರೋಮಾಪು ರದ ಪೌರನಾದ ಪೌಲನು (22:22-30)

**22** ಆ ಮಾತಿನ ತನಕ ಜನರು ಮೌನವಾಗಿ ಪೌಲನ ಮಾತುಗಳನ್ನು ಕೇಳುತ್ತಿದ್ದರು, ಆದರೆ ಆತನು ಅನ್ಯ ಜನಾಂಗದವರ ಬಳಿಗೆ ಕಳುಹಿಸಲ್ಪಟ್ಟಿದ್ದಾನೆಂಬದನ್ನು ಕೇಳಿದಾಕ್ಷಣವೇ ಜನರು ಬಹಳ ರೋಷಗೊಂಡರು. ಅವರು ಮೊದಲು ಪೌಲನ ಮೇಲೆ ಅಷ್ಟೊಂದು ರೋಷಗೊಂಡಿದ್ದದಕ್ಕೆ ಕಾರಣ ವೇನಾಗಿತ್ತೆಂದರೆ ಅವನು ಅನ್ಯ ಜನಾಂಗದವನೊಬ್ಬನನ್ನು ದೇವಾಲಯದೊಳಗೆ ಕರೆತಂದಿದ್ದಾನೆಂದು ಅವರು ಅಂದುಕೊಂಡಿದ್ದರು. ಆದ್ದರಿಂದ ಈಗ, "ಅನ್ಯಜನಾಂಗ" ಎಂದು ಹೇಳಿದ್ದನ್ನು ಕೇಳಿದ ಕೂಡಲೇ ಅವರ ಕೋಪವು ಮತ್ತೆ ಕೆರಳಿಸಲ್ಪಟ್ಟಿತು.

**23-24** ಸಹಸ್ರಾಧಿಪತಿಯು ಜನರ ಗುಂಪು ಬಹಳ ರೋಷಗೊಂಡದ್ದನ್ನು ಕಂಡಾಗ ಆತನು ತಕ್ಷಣವೇ ಪೌಲನನ್ನು ಕೋಟೆಯೊಳಗೆ ತಂದನು. ಸಹಸ್ರಾಧಿಪತಿಯು ಅರಾಮಿಕ ಭಾಷೆಯನ್ನು ತಿಳಿದಿರಲಿಲ್ಲವಾದ್ದರಿಂದ ಇದುವರೆಗೂ ಪೌಲನು ಜನರಿಗೆ ಹೇಳಿದ್ದರಲ್ಲಿ ಏನನ್ನೂ ಆತನು ಅರ್ಥಮಾಡಿಕೊಂಡಿರಲಿಲ್ಲ. ಆದುದರಿಂದ ಪೌಲನು ಮಾಡಿದ್ದ ಅಪರಾಧ ವೇನು ಹಾಗು ಜನರು ಅಷ್ಟೊಂದು ಕೋಪಗಳ್ಳುವಂತೆ ಆತನು ಮಾಡಿದ್ದೇನು ಎಂಬದನ್ನು ಕಂಡುಕೊಳ್ಳಬೇಕೆ–ಂಬುದಕ್ಕಾಗಿ ಸಹಸ್ರಾಧಿಪತಿಯು ಅವನನ್ನು ಕೊರಡೆಗಳಿಂದ ಹೊಡೆದು ಹಿಂಸಿಸಿಲು ತಿರ್ಮಾನಿಸಿದನು. ರೋಮಾಯ ಸಾಮ್ರಾಜ್ಯದಲ್ಲಿ ಕೊರಡೆಗಳಿಂದ ಹೊಡೆಯುವದು ಅತ್ಯಂತ ಭಯಾನಕ ರೂಪದ ಹಿಂಸೆಯಾಗಿತ್ತು. ಬಾರುಗಳು ತುದಿಯಲ್ಲಿ ಕಬ್ಬಿಣ ಅಥವಾ ಮೂಲೆಗಳ ಚಿಕ್ಕ ತುಂಡುಗಳನ್ನು ಜೋಡಿಸಿರುತ್ತಿದ್ದರು, ಮತ್ತು ಇವು ಗಳು ಅಪರಾಧಿಗಳ ಬೆನ್ನಿಗೆ ಭಯಂಕರ ಗಾಯಗಳನ್ನು ಉಂಟು ಮಾಡುತ್ತಿದ್ದವು. ಅಂತಹ ಕೊರಡೆ ಏಟುಗಳಿಂದಾಗಿ ಅನೇಕ ಜನರು ಮರಣಿಸಿದ್ದರು. ಪೌಲನು ಈಗಾಗಲೇ ಯೆಹೂದ್ಯರಿಂದ ಐದು ಸಾರಿ ಸಾಮಾನ್ಯ ಕೊರಡೆ ಹೊಡೆತಗಳನ್ನು ಮತ್ತು ರೋಮಾಯರಿಂದ ಮೂರು ಸಾರಿ ಛಡಿಗಳಿಂದ ಹೊಡೆತಗಳನ್ನು ಹೊಂದಿದ್ದನು (ಅ.ಕೃತ್ಯ 16:22-23, 2 ಕೊರಿಂಥ 11:24-25). ಆದರೆ ಅಲ್ಲಿಯ ತನಕ ಪೌಲನು ಎಂದೂ ತುದಿಯಲ್ಲಿ ಲೋಹ ಜೋಡಿತ ಕೊರಡೆಯಿಂದ ಹೊಡೆತಗಳನ್ನು ಹೊಂದಿರಲಿಲ್ಲ.

**25-26** ರೋಮಾಯರ ನಿಯಮದ ಪ್ರಕಾರ ರೋಮಾಪು ರದ ಪೌರನನ್ನು (ಹಕ್ಕುದಾರನನ್ನು) ಕೊರಡೆಗಳಿಂದ ಹೊಡೆಯುವದು ಅಪರಾಧವಾಗಿತ್ತು. ರೋಮಾಪು ರದ ಪೌರನು ನ್ಯಾಯಾಲಯದಲ್ಲಿ ಅಪರಾಧಿಯೆಂದು ನಿರೂಪಿಸಲ್ಪಟ್ಟಾಗ್ಯು ಸಹ ಆತನು ಈ ಭಯಂಕರ ಶಿಕ್ಷೆಯನ್ನು ಪಡೆಯುತ್ತಿರಲಿಲ್ಲ. ಪೌಲನಿಗೆ ಇದು ಚೆನ್ನಾಗಿ ಗೊತ್ತಿತ್ತು.

ಹೊಸ ಒಡಂಬಡಿಕೆಯ ಕಾಲದಲ್ಲಿ ಒಬ್ಬ ರೋಮಾಪು ರದ ಪೌರನಾಗಿರುವದು ದೊಡ್ಡ ಲಾಭವಾಗಿತ್ತು. ಒಬ್ಬನು ಪೌರನಾಗಿ ಹುಟ್ಟಬಹುದು ಇಲ್ಲವೆ ಆತನು ರಾಜ್ಯಕ್ಕಾಗಿ ಮಾಡಿದ ಯಾವದಾದರೂ ಅತಿಮಹತ್ವದ ಸೇವೆಗಾಗಿ ಪೌರತ್ವವನ್ನು ಪು ರಸ್ಕಾರ ರೂಪದಲ್ಲಿ ಆತನಿಗೆ ಕೊಡಲ್ಪಡಬಹುದು. ಪೌಲನು ರೋಮಾಪು ರದ ಪೌರನಾಗಿ ಹುಟ್ಟಿದ್ದನು (ವಚನ 28), ಆದುದರಿಂದ ಆತನ ತಂದೆಯು ಸಹ ರೋಮಾಪು ರದ ಹಕ್ಕುದಾರನಾಗಿರಬೇಕೆಂದು ನಮಗೆ ತಿಳಿದು ಬರುತ್ತದೆ. ಪೌಲನ ತಂದೆಯು ತನ್ನ ಪೌರತ್ವವನ್ನು ಹೇಗೆ ಪಡೆದು ಕೊಂಡನೆಂಬದು ತಿಳಿದಿರುವದಿಲ್ಲ, ಬಹುಶ: ಆತನು ತಾರ್ಸನಲ್ಲಿದ್ದ ರೋಮಾಯ ದೇಶಾಧಿಪತಿಗೆ ಯಾವದಾದರೂ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದ್ದನು.

ಪೌಲನ ಉದಾಹರಣೆಯಿಂದ ನಾವು ಕಲಿಯಬಹುದಾದ ದ್ದೇನೆಂದರೆ ಸಮಸ್ಯೆಯು ಎದುರಾಗುವಾಗಲೆಲ್ಲಾ ಯಾವದೇ ನ್ಯಾಯವಾದ ಹಾಗು ಕಾನೂನು ಬದ್ಧವಾದ ಮಾರ್ಗವನ್ನು ಉಪಯೋಗಿಸಿ ಸಮಸ್ಯೆಯಿಂದ ಪಾರಾಗುವದು ನಮಗೆ ಸಮಂಜಸವಾದದ್ದು ಒಂದು ವೇಳೆ ನಾವು ನಿರಪರಾಧಿಗಳಾಗಿದ್ದು ಅಪರಾಧದ ಆರೋಪವನ್ನು ಹೊರಿಸಲ್ಪಟ್ಟವರಾಗಿರುವದಾದರೆ ನಾವು ಹಾಗೆ ಹೇಳುವದು ಅಗತ್ಯವಾದದ್ದು, ನಾವು ನಮ್ಮ ಪರವಾಗಿ ವಾದಿಸಿಕೊಳ್ಳುವದು ಅಗತ್ಯವಾಗಿರುತ್ತದೆ. ನಾವು ಮಾಡದಿರುವ ಅಪರಾಧಗಳಿಗಾಗಿ ಶಿಕ್ಷೆಯನ್ನು ಹೊಂದದಿರುವದಕ್ಕಾಗಿ ಕಾನೂನಿನ ಎಲ್ಲಾ ಮಾರ್ಗಗಳನ್ನು ನಾವು ಉಪಯೋಗಿಸಬೇಕು.

ಕ್ರೈಸ್ತರಿಗೂ ಇತರ ಎಲ್ಲರಂತೆಯೇ ಕಾನೂನಿನ ಹಕ್ಕುಗಳಿರುತ್ತವೆ ಮತ್ತು ಆಹಕ್ಕುಗಳನ್ನು ನಮ್ರತೆ ಹಾಗು ಗೌರವಯುತ ವಿಧಾನದಲ್ಲಿ ಕೇಳಿಕೊಳ್ಳುವದು ಸಮಂಜಸವಾದದ್ದು. ಹೇಗಿದ್ದರೂ, ಕ್ರೈಸ್ತರು ತಾವು ಯಾವದೇ ಕಾನೂನು ಪದ್ದತಿಯಲ್ಲಿ ನಂಬಿಕೆಯನ್ನು ಇಡುವವರಾಗಿರದೇ ದೇವರಲ್ಲಿ ಮಾತ್ರವೇ ನಂಬಿಕೆಯನ್ನು ಇಡತಕ್ಕದೆಂಬದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ನಾವು ಮನುಷ್ಯರಿಂದ ನ್ಯಾಯವನ್ನು ಪಡೆಯದಿದ್ದಾಗ್ಯು ಸಹ ದೇವರಿಂದ ಯವಾಗಲೂ ನ್ಯಾಯವನ್ನು ಪಡದೇ ಪಡೆಯುತ್ತೇವೆ (1 ಪೇತ್ರ 19-23 ಮತ್ತು ವ್ಯಾಖ್ಯಾನ ನೋಡಿರಿ).

**27-28** ಪೌಲನು ರೋಮಾಪು ರದ ಪೌರನೆಂಬದನ್ನು ಸಹಸ್ರಾದಿಪತಿಯು ಕೇಳಿದಾಗ ಆತನಿಗೆ ನಂಬುವದಕ್ಕೆ ಕಷ್ಟವಾಯಿತು. ಪೌಲನ ಬಟ್ಟೆಗಳು ಹೊಲಸಾಗಿ ಹರಿಯಲ್ಪಟ್ಟಿದ್ದವು. ಅವನು ರೋಮಾಪು ರದ ಪೌರನಂತೆ ಕಾಣಿಸಲಿಲ್ಲ, ಆತನು ಒಬ್ಬ ಸಾಮಾನ್ಯ ಅಪರಾಧಿಯಂತೆ ಕಾಣಿಸುತ್ತಿದ್ದನು!

ಪೌಲನ ಕಾಲದಲ್ಲಿ ಒಬ್ಬನ ಪೌರತ್ವವನ್ನು ಕೊಂಡುಕೊಳ್ಳಲು ಸಾಧ್ಯವಿತ್ತು. ಪೌರತ್ವದ ಕಾಗದಗಳನ್ನು ಮಾರುವದರ ಮೂಲಕ ರೋಮಾಯ ಅಧಿಕಾರಿಗಳು ಹೆಚ್ಚು ಹಣವನ್ನು ಸಂಪಾದಿಸಿಕೊಳ್ಳುತ್ತಿದ್ದರು. ಸಹಸ್ರಾಧಿಪತಿಯು ಸ್ವತಃ ರೋಮಾಪು ರದ ಪೌರತ್ವವನ್ನು ಬಹಳಷ್ಟು ಹಣ ಕೊಟ್ಟುಕೊಂಡು ಕೊಂಡಿದ್ದನು. ಪೌಲನು ಸಹ ತನ್ನ ಪೌರತ್ವವನ್ನು ಕೊಂಡುಕೊಂಡಿರಬೇಕೆಂದು ಯೋಚಿಸಿದ ಸಹ ಸ್ರಾಧಿಪತಿಯು ಆದಕ್ಕಾಗಿ ನಿರ್ಗತಿಕನೂ, ಹೊಲೆಯುಳ್ಳವನೂ ಆಗಿರುವ ವ್ಯಕ್ತಿಯು ಆದಕ್ಕಾಗಿ ಹಣವನ್ನು

ಎಲ್ಲಿಂದ ಹೊಂದಿರಲಿಕ್ಕೆ ಸಾಧ್ಯ ಎಂದುಕೊಂಡನು! ಆದರೆ ಪೌಲನು ಉತ್ತರಿಸಿ, "ನಾನಾದರೋ ಹಕ್ಕುದಾರನಾಗಿ ಹುಟ್ಟಿದವನು" ಎಂದು ಹೇಳಿದನು.

29 ಫಿಲಿಪ್ಪಿಯದ ಅಧಿಪತಿಯು ಇಂತಹದೇ ಸನ್ನಿವೇಶಕ್ಕೊಳಗಾಗಿ ಹೆದರಿದಂತೆಯೇ (ಅ.ಕೃತ್ಯ 16:38), ಸಹಸ್ರಾಧಿಪತಿಯು ಸಹ ಭಯಹಿಡಿದವನಾದನು. ಆತನು ಹೆಚ್ಚು ಕಡಿಮೆ ಸ್ವತಃ ಒಂದು ದೊಡ್ಡ ಅಪರಾಧವನ್ನೇ ಮಾಡಿದ್ದನು! ವಾಸ್ತವದಲ್ಲಿ ಪೌಲನನ್ನು ಕೊರಡೆಗಳಿಂದ ಹೊಡೆಯಲು ಬೊಗ್ಗಿಸಿ ಬಾರುಗಳಿಂದ ಕಟ್ಟಬೇಕೆಂದು ಅಜ್ಞಾಪಿಸಿದಾಗಲೇ ಅವನು ಅಪರಾಧವೊಂದನ್ನು ಮಾಡಿಬಿಟ್ಟಿದ್ದನು (ವಚನ 25).

30 ಸಹಸ್ರಾಧಿಪತಿಯ ದೃಷ್ಟಿಯಲ್ಲಿ ಜನರು ಪೌಲನ ವಿರುದ್ಧ ಕೋಪಗೊಂಡದ್ದಕ್ಕೆ ಧಾರ್ಮಿಕ ವಿಷಯವಷ್ಟೇ ಕಾರಣವಾಗಿತ್ತು (ಅ.ಕೃತ್ಯ 18:14-25 ನೋಡಿರಿ). ಯೆಹೂದ್ಯಧಾರ್ಮಿಕ ವಿಚಾರಗಳನ್ನೊಳಗೊಂಡ ಎಲ್ಲಾ ವಿಷಯಗಳಿಗೆ ತೀರ್ಪು ನೀಡಲು ಯೆಹೂದ್ಯ ಹಿರೀಸಭೆಗೆ ಅಧಿಕಾರವಿತ್ತಾದ್ದರಿಂದ ಪೌಲನ ವಿರುದ್ಧದ ಆರೋಪಗಳನ್ನು ಕಂಡುಕೊಳ್ಳುವದಕ್ಕಾಗಿ ಸಹ ಸ್ರಾಧಿಪತಿಯು ಹಿರೀಸಭೆಯನ್ನು ಕೂಡಿಸಬೇಕೆಂದು ತಿರ್ಮಾನಿಸಿದನು.

---

## ಅಧ್ಯಾಯ - 23

### ಪೌಲನು ಹಿರೀಸಭೆಯ ಮುಂದೆ ನಿಂತದ್ದು (23:1-11)

1 "ನಾನು ಈ ದಿನದವರೆಗೂ ಒಳ್ಳೇ ಮನಸ್ಸಾಕ್ಷಿಯಿಂದ ದೇವರ ಮುಂದೆ ನಡೆದು ಕೊಂಡಿದ್ದೇನೆ" ಅಂದನು. ಪೌಲನು ಹೇಗೆ ಅಂತಹ ಮಾತನ್ನು ಹೇಳಲು ಸಾಧ್ಯ? ಆತನು ಕ್ರಿಸ್ತನ ಸಭೆಯನ್ನು ಘೋರವಾಗಿ ಹಿಂಸಿಸಿದ್ದನು. ಆತನು ದೇವರನ್ನು ವಿರೋಧಿಸಿದ್ದಷ್ಟೇ ಅಲ್ಲ, ಆತನು ದೇವರ ವೈರಿಯಾಗಿದ್ದನು. ಪೌಲನ ಮಾತುಗಳ ತಾತ್ಪರ್ಯವೇನಾಗಿತ್ತು.

ಪೌಲನ ತಾತ್ಪರ್ಯವೇನಾಗಿತ್ತೆಂದರೆ: ತಾನು ಎಲ್ಲಾ ಸಂಗತಿಗಳಲ್ಲಿಯೂ ದೇವರೆಡೆಗಿನ ತನ್ನ ಕರ್ತವ್ಯವನ್ನು ಮಾಡುತ್ತಿದ್ದನೆಂದು ಪ್ರಾಮಾಣಿಕವಾಗಿ ನಂಬಿದ್ದನು. ಆತನು ಒಳ್ಳೇ ಮನಸ್ಸಾಕ್ಷಿಯಿಂದ ಕ್ರಿಸ್ತನನ್ನು ವಿರೋಧಿಸಿ ಸಭೆಯನ್ನು ಹಿಂಸಿಸಿದ್ದನು (ಅ.ಕೃತ್ಯ 26:9 ನೋಡಿರಿ). ವಾಸ್ತವದಲ್ಲಿ ಪೌಲನು ಮಹಾಕೆಟ್ಟ ಕಾರ್ಯವನ್ನು ಮಾಡಿದ್ದನಾದರೂ ಆತನ ಮನಸ್ಸಾಕ್ಷಿಯು ಶುದ್ಧವಾಗಿ ಉಳಿದಿತ್ತು (ಅ.ಕೃತ್ಯ 24:16 ಮತ್ತು ವ್ಯಾಖ್ಯಾನ ನೋಡಿರಿ).

ಒಂದು ವೇಳೆ ಇದು ನಿಜವಾಗಿರುವದಾದರೆ ಪೌಲನು ರೋಮಾಪುರದವರಿಗೆ ಬರೆದ ಪ್ರತಿಕೆಯ ೭ನೇ ಅಧ್ಯಾಯವನ್ನು ಹೇಗೆ ಬರೆದಿರಲಿಕ್ಕೆ ಸಾಧ್ಯ? ಒಳ್ಳೇದನ್ನು ಮಾಡುವದಕ್ಕೆ ನನಗೇನೋ ಮನಸ್ಸುಂಟು, ಆದರೆ ಅದನ್ನು ಮಾಡುವದು ನನ್ನಿಂದಾಗದು. ನಾನು ಮೆಚ್ಚುವ ಒಳ್ಳೇ ಕಾರ್ಯವನ್ನು ಮಾಡದೆ ಮೆಚ್ಚದಿರುವ ಕೆಟ್ಟ ಕಾರ್ಯವನ್ನೆ ಮಾಡುವವನಾಗಿದ್ದೇನೆ (ರೋಮ 7:18-19). ರೋಮಾಪುರದವರಿಗೆ ಬರೆದ ಪತ್ರಿಕೆಯ 7ನೇ ಅಧ್ಯಾಯದಲ್ಲಿ ಪೌಲನು ತನ್ನ ಅಂತರ್ಯದಲ್ಲಿನ ಆತ್ಮೀಕ ಹೋರಾಟ ಹಾಗು ತಾನು ಪಾಪಕ್ಕೊಳಗಾಗುವಿಕೆಯನ್ನು ವರ್ಣಿಸುತ್ತಿದ್ದಾನೆ. ಹೇಗಿದ್ದರೂ, ಇಲ್ಲಿ ಹಿರೀ ಸಭೆಯ ಎದುರಿನಲ್ಲಿ ಪೌಲನು ತನ್ನ ಅಂತರ್ಯದ ಆತ್ಮೀಕ ಹೋರಾಟದ ಕುರಿತಾಗಿ ಅಲ್ಲ, ಆದರೆ ತನ್ನ ಬಹಿರಂಗದ ನಡವಳಿಕೆಯ ಕುರಿತು ಮಾತಾಡುತ್ತಿದ್ದಾನೆ. ಪೌಲನು ಇಲ್ಲಿ, "ನಾನು ದೇವರ ಮುಂದೆ ನಡೆದು ಕೊಂಡಿದ್ದೇನೆ" ಎಂದು ಹೇಳುವದರ ತಾತ್ಪರ್ಯವು ಆತನು ಬಹಿರಂಗವಾಗಿ ದೇವರೆಡೆಗಿನ ತನ್ನ ಕರ್ತವ್ಯವನ್ನು ನೆರವೇರಿಸಿದ್ದಾನೆ ಎಂಬದೇ. ಪೌಲನು ಫಿಲಿಪ್ಪಿಯವರಿಗೆ ಮುಖ್ಯವಾಗಿ ಇದೇ ಸಂಗತಿಯನ್ನು ಬರೆದನು. "ಧರ್ಮಶಾಸ್ತ್ರದಲ್ಲಿ ಹೇಳಿರುವ ನೀತಿಯನ್ನು ನೋಡಿದರೆ ನಾನು ನಿರ್ದೋಷಿ" ಎಂದು ಬರೆದನು (ಫಿಲಿಪ್ಪಿ 3:6).

ಹಾಗಿದ್ದರೂ, ಪೌಲನು ತನ್ನ ಸ್ವನೀತಿಯಲ್ಲಿ ಯಾವ ಭರವಸೆಯನ್ನು ಇಡಲಿಲ್ಲ, ಬದಲಾಗಿ, ಆತನು ನಂಬಿಕೆಯಿಂದ ತನ್ನ ದಾಗಿಸಿಕೊಂಡ ಕ್ರಿಸ್ತನ ನೀತಿಯಲ್ಲಿಯೇ ತನ್ನ ಮನಸ್ಸಾಕ್ಷಿಯು ೦ದೋಷವಿಲ್ಲದ್ದಾಗಿರಬಹುದು, ಆದಾಗ್ಯು ಅದೇ ನಮ್ಮನ್ನು ದೇವರ ದೃಷ್ಟಿಯಲ್ಲಿ ನೀತಿವಂತರನ್ನಾಗಿಸುವದಿಲ್ಲ. ಪೌಲನು ಕೊರಿಂಥವರಿಗೆ ಬರೆದದ್ದೇನೆಂದರೆ: ನನ್ನಲ್ಲಿ ದೋಷವಿದೆಯೆಂದು ನನ್ನ ಬುದ್ಧಿಗೆ ತೋರುವದಿಲ್ಲವಾದರೂ ದೋಷವಿಲ್ಲದವನೆಂಬ ನಿರ್ಣಯವು ಇದರಿಂದಾಗುವದಿಲ್ಲ, ನನ್ನನ್ನು ವಿಚಾರಣೆ ಮಾಡುವವನು ಕರ್ತನೇ (1 ಕೊರಿಂಥ 4:4). ಬಹಳ ವೇಳೆಗಳಲ್ಲಿ ಪೌಲನಂತೆ ನಾವೂ ಒಳ್ಳೇದನ್ನು ಮಾಡುತ್ತಿದ್ದೇವೆಂದು ಯೋಚಿಸುತ್ತೇವೆ, ಆದರೆ ವಾಸ್ತವದಲ್ಲಿ ನಾವು ಕೆಟ್ಟದ್ದನ್ನು ಮಾಡುವವರಾಗಿದ್ದೇವೆ. ನಮ್ಮ ಮನಸ್ಸಾಕ್ಷಿಯು ದೋಷವಿಲ್ಲದ್ದು, ಆದರೆ ಅದು ನಮ್ಮನ್ನು ತಪ್ಪು ದಾರಿಗೆ ನಡೆಸಿರುತ್ತದೆ. ನಾವು ತಿಳಿಯದೆ ಮಾಡಿರುವ ಕೆಟ್ಟ ಕಾರ್ಯಗಳಿಗಾಗಿಯೂ ದೇವರು ನಮಗೆ ನ್ಯಾಯ ತೀರಿಸುತ್ತಾನೆ.

2 ಪೌಲನು ಹಿರೀಸಬೆಯ ಎದುರಿನಲ್ಲಿ ಈಗಷ್ಟೇ ತನ್ನ ಮಾತುಗಳನ್ನು ಪ್ರಾರಂಭಿಸಿದ್ದನು, ತಾನು ಒಬ್ಬ ಒಳ್ಳೇ ಹಾಗು ನಂಬಿಗಸ್ಥ ಯೆಹೂದ್ಯನೆಂಬದನ್ನು ಅವರಿಗೆ ಮನವರಿಕೆ ಮಾಡಲು ಆತನು ನಿರೀಕ್ಷಿಸಿದ್ದನು. ಆದರೆ ಮಹಾಯಾಜಕನಾದ ಅನನೀಯನು, "ನಾನು ಈ ದಿನದ ವರೆಗೂ ಒಳ್ಳೇ ಮನಸ್ಸಾಕ್ಷಿಯಿಂದ ದೇವರ ಮುಂದೆ ನಡೆದು ಕೊಂಡಿದ್ದೇನೆ" ಎಂದು ಪೌಲನು ಹೇಳಿದ್ದನ್ನು ಕೇಳಿ ಎಷ್ಟು ಕೋಪಗೊಂಡನೆಂದರೆ ಪೌಲನ ಬಾಯ ಮೇಲೆ ಹೊಡೆಯುವಂತೆ ಅಪ್ಪಣೆಯನ್ನೇ ಮಾಡಿದನು.

ಈ ಅನನೀಯನು ಒಬ್ಬ ಭ್ರಷ್ಟ ಹಾಗು ದುಷ್ಟ ಮನುಷ್ಯನಾಗಿದ್ದನೆಂಬದು ಇತರ ಐತಿಹಾಸಿಕ ಪುಸ್ತಕಗಳಿಂದ ನಮಗೆ ತಿಳಿದು ಬರುತ್ತದೆ. ಅನನೀಯನು ಕ್ರಿ.ಶಕ 47 ರಿಂದ 58 ವರೆಗೆ ಮಹಾಯಾಜಕನಾಗಿದ್ದನು.

**3** ವಿಚಾರಣೆ ಯಲ್ಲಿರುವ ವ್ಯಕ್ತಿಯನ್ನು ಹೊಡೆಯುವದು ಹಿರೀಸಭೆಯ ನಿಯಮಗಳಿಗೆ ವಿರುದ್ಧವಾಗಿತ್ತು. ಇನ್ನು ಅಪರಾಧಿಯೆಂದು ನಿರ್ಧರಿಸ್ಪಡದ ವ್ಯಕ್ತಿಯೊಬ್ಬನನ್ನು ಹೊಡೆಯುವದು ಅಥವಾ ಶಿಕ್ಷಿಸುವದು ಮಹಾ ಅಪರಾಧವಾಗಿತ್ತು.

ಅಪ್ಪಣೆ ಮಾಡಿದವನು ಮಹಾ ಯಾಜಕನೆಂಬದನ್ನು ತಿಳಿಯದೆ ಪೌಲನು ಅವನಿಗೆ ಸುಣ್ಣ ಹಚ್ಚಿದ ಗೋಡೆಯೇ ಎಂದನು. ಅಂತಹ ಗೋಡೆಯು ಹೊರಗಡೆಯಲ್ಲಿ ನೂತನವಾಗಿಯೂ, ಬಲಿಷ್ಠವಾಗಿಯೂ ಕಾಣಿಸುತ್ತದೆ. ಆದರೆ ಒಳಗಡೆಯಲ್ಲಿ ಬಲಹೀನವೂ, ಕೊಳಕಿನಿಂದ ತುಂಬಿರುವಂತದ್ದು ಆಗಿರುತ್ತದೆ. ಯೇಸು ಯೆಹೂದ್ಯನಾಯಕರನ್ನು ಸುಣ್ಣ ಹಚ್ಚಿದ ಸಮಾಧಿಗಳೇ (ಮತ್ತಾಯ 23:27). ಈ ಯೆಹೂದ್ಯ ನಾಯಕರು ಬಹಿರಂಗವಾಗಿ ಒಳ್ಳೇಯವರಾಗಿ ಕಾಣಿಸುತ್ತಿದ್ದರು, ಆದರೆ ಅಂತರ್ಯದಲ್ಲಿ ದುಷ್ಟರೂ ಭ್ರಷ್ಟರೂ ಆಗಿದ್ದರು.

**4-5** ಒಂದು ವೇಳೆ ಪೌಲನು ಮಹಾಯಾಜಕನನ್ನು ಗುರುತಿಸಿದ್ದರೆ ಆತನಿಗೆ ಆ ರೀತಿಯಾಗಿ ಮಾತಾಡಿರುತ್ತಿದ್ದಿಲ್ಲ. ಹಳೆ ಒಡಂಬಡಿಕೆಯಲ್ಲಿ ಈ ರೀತಿಯಾಗಿರುವವನನ್ನು ಶಪಿಸಬಾರದು (ವಿಮೋಚನಾಕಾಂಡ 22:28). ಆದರಂತೆಯೇ ನಾವು ಸಹ ನಾಯಕರ ವಿರುದ್ಧವಾಗಿ – ಲೌಕೀಕನಾಯಕರಾಗಲಿ ಅಥವಾ ಆತ್ಮೀಕ ಮಾಯಕರಾಗಲಿ – ಕೆಟ್ಟದ್ದನ್ನು ಮಾತಾಡಬಾರದೆಂಬದನ್ನು ಜ್ಞಾಪಕದಲ್ಲಿಟ್ಟು ಕೊಳ್ಳಬೇಕು. ಅವರು ದೇವರಿಂದ ನೇಮಿಸಲ್ಪಟ್ಟಿರುತ್ತಾರೆ ಮತ್ತು ನಾವು ಅವರಿಗೆ ಕೆಟ್ಟದ್ದನ್ನು ನುಡಿಯುವಾಗ ಒಂದು ಅರ್ಥದಲ್ಲಿ ದೇವರ ವಿರುದ್ಧವಾಗಿಯೇ ಕೆಟ್ಟದ್ದನ್ನು ಮಾತಾಡಿದಂತಾಗುತ್ತದೆ (ರೋಮ 13:1-2, 1 ಪೇತ್ರ 2;13-14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**6-8** ಯೆಹೂದ್ಯರಲ್ಲಿ ಸದ್ದುಕಾಯರು ಮತ್ತು ಫರಿಸಾಯರು ಎಂಬ ಎರಡು ಪಂಗಡಗಳಿದ್ದವು. ಸದ್ದುಕಾಯರು ಯಾವಾಗಲೂ ರೋಮಾಯ ಅಧಿಕಾರಿಗಳೊಂದಿಗೆ ಸಂಬಂಧ ಹೊಂದಿರುತ್ತಿದ್ದರು. ಹೀಗಿರುವದರಿಂದ ಜನರನ್ನು ಕೆರಳಿಸುವ ಪೌಲನಂತಹ ಯಾವದೇ ಬೋಧಕರನ್ನು ಅವರು ಯಾವಾಗಲೂ ವಿರೋಧಿಸುತ್ತಿದ್ದರು, ಯಾಕೆಂದರೆ ಯಾವದೇ ಗಲಭೆಯು ರೋಮಾಯರಿಗೆ ಅಸಮಾಧಾನವನ್ನುಂಟು ಮಾಡುವದೆಂದು ಹೆದರುತ್ತಿದ್ದರು. ಅದು ಮಾತ್ರವಲ್ಲದೆ, ಮಹಾಯಾಜಕರು ಸದ್ದುಕಾಯರ ಪಕ್ಷಕ್ಕೆ ಸೇರಿದವರಾಗಿದ್ದರು, ಯಾಜಕರು ಯಾವದೇ ಗಲಭೆಗೆ ಅವಕಾಶಕೊಡುವದಾದರೆ ರೋಮಾಯರು ಅವರನ್ನು ದೂರುವರು ಮತ್ತು ಅವರು ತಮ್ಮ ಸ್ಥಾನಗಳನ್ನು ಕಳೆದುಕೊಳ್ಳುವ ಸಾಧ್ಯತೆಯಿರುತಿತ್ತು. ಹೀಗಿರುವದರಿಂದ ಹಿರೀಸಭೆಯ ಸದ್ದುಕಾಯರು – ವಿಶೇಷವಾಗಿ ಅವರೊಳಗಿನ ಮಹಾಯಾಜಕರು – ಪೌಲನನ್ನು ದಂಡಿಸುವದರ ಮೂಲಕ ರೋಮಾಯ ದೇಶಾಧಿಪತಿಯ ದಯೆಯನ್ನು ಸಂಪಾದಿಸಿಕೊಳ್ಳಲು ಕಾತುರರಾಗಿದ್ದರು. ಸದ್ದು ಕಾಯರು ಮತ್ತು ಫರಿಸಾಯರ ನಡುವೆ ಇದ್ದ ಒಂದು ವ್ಯತ್ಯಾಸವೇನೆಂದರೆ ಫರಿಸಾಯರು ದೇಹದ ಪುನರುತ್ಥಾನವನ್ನು ನಂಬುತ್ತಿದ್ದರು, ಆದರೆ ಸದ್ದುಕಾಯರು ನಂಬುತ್ತಿರಲಿಲ್ಲ (ಮಾರ್ಕ 12;18, 24-27). ಕ್ರಿಸ್ತನ ಕಾಲಕ್ಕಿಂತಲೂ ಮುಂಚೆಯೂ ಸಹ ಫರಿಸಾಯರು ದೇಹದ ಪುನರುತ್ಥಾನವನ್ನು ನಂಬುತ್ತಿದ್ದರು ಫರಿಸಾಯರು ನಿತ್ಯ ಜೀವಕ್ಕಾಗಿ ನಿರೀಕ್ಷಿಸುತ್ತಿದ್ದರು. ಆದ್ದದರಿಂದ, ಕ್ರೈಸ್ತರಾಗಿ [102] ಮಾರ್ಪಟ್ಟ ಫರಿಸಾಯರು ಸತ್ತವರೊಳಗಿಂದ ಮೊದಲು ಎದ್ದು ಬಂದ ಯೇಸು ಕ್ರಿಸ್ತನಲ್ಲಿ ಅವರ ನಿರೀಕ್ಷೆಯು ನೆರವೇರಿತೆಂದು ನಂಬಿದರು (1 ಕೊರಿಂಥ 15:20).

ಆದುದರಿಂದ, ಪೌಲನು ತಾನು ಪುನರುತ್ಥಾನವನ್ನು ನಂಬುವಂತಹ ಫರಿಸಾಯನೆಂದು ಹೇಳಿದಾಗ (ವಚನ 6), ಹಿರೀಸಭೆಯ ಫರಿಸಾಯರು ಆತನ ಪಕ್ಷವನ್ನು ವಹಿಸಲಾರಂಭಿಸಿದರು. ಇದು ಹಿರೀಸಭೆಯಲ್ಲಿದ್ದ ಫರಿಸಾಯರು ಹಾಗು ಸದ್ದುಕಾಯರ ಮದ್ಯದಲ್ಲಿ ಒಂದು ದೊಡ್ಡ ವಾಗ್ವಾವನ್ನು ಮಾಡಿತು. ಆದಾದ ಮೇಲೆ ಹಿರೀಸಭೆಯು ಪೌಲನ ವಿಷಯದಲ್ಲಿ ಯಾವ ತಿರ್ಮಾನಕ್ಕೂ ಬರಲಾಗಲಿಲ್ಲ.

**9** ಪೌಲನು ಹಿರೀಸಭೆಗೆ ಪುನರುತ್ಥಾನಗೊಂಡ ಕ್ರಿಸ್ತನು ತನ್ನೊಂದಿಗೆ ಮಾತಾಡಿದ್ದಾನೆಂದು ಹೇಳಿದ್ದನು. ಹಿರೀಸಭೆಯಲ್ಲಿದ್ದ ಫರಿಸಾಯರಿಗೆ ಆದರಲ್ಲಿ ಯಾವ ದೋಷವೂ ಕಾಣಿಸಲಿಲ್ಲ. ಪೌಲನು ತನ್ನೊಂದಿಗೆ ದೇವದೂತನು ಇಲ್ಲವೆ, ಆತ್ಮವು ಮಾತಾಡಿದೆಯೆಂಬ ಅರ್ಥದಲ್ಲಿ ಹೇಳಿದ್ದಾನೆಂದು ಊಹಿಸಿದರು ಮತ್ತು ಸ್ವತಃ ಅವರೇ ದೇವದೂತರಲ್ಲಿಯೂ, ಆತ್ಮಗಳಲ್ಲಿಯೂ ನಂಬಿಕೆಯನ್ನು ಹೊಂದಿದ್ದರಿಂದ (ವಚನ 8) ಪೌಲನ ಹೇಳಿಕೆಯ ಕುರಿತಾಗಿ ಅಸಹಜವಾದದ್ದೇನೂ ಅವರಿಗೆ ಅನ್ನಿಸಲಿಲ್ಲ.

**10** ಪೌಲನು ಯಾವ ಅಪರಾಧ ಮಾಡಿದ್ದಾನೆಂಬದನ್ನು ಸಹಸ್ರಾಧಿಪತಿಯು ಹಿರೀಸಭೆಯಿಂದ ತಿಳಿದುಕೊಳ್ಳುವ ನಿರೀಕ್ಷೆಯನ್ನಿಟ್ಟಿದ್ದನು, ಆದರೆ ಆತನು ಯಶಸ್ವಿಯಾಗಲಿಲ್ಲ. ಅಂತ್ಯದಲ್ಲಿ ಅವನು ಕಂಡುಕೊಂಡದ್ದು ಶೂನ್ಯವೇ!

**11** ಪೌಲನ ಜೀವಿತದ ಒಂದು ನಿರ್ಧಿಷ್ಠ ಸಮಯದಲ್ಲಿ ಆತನನ್ನು ಧೈರ್ಯಪಡಿಸಿ ಮಾರ್ಗದರ್ಶಿಸುವದಕ್ಕಾಗಿ ಕ್ರಿಸ್ತನು ಅವನೊಂದಿಗೆಮಾತಾಡಿದನು (ಅ.ಕೃತ್ಯ 18:9, 22:17). ಈಗ ಪುನಃ ಯೇಸು ದರ್ಶನವೊಂದರಲ್ಲಿ ಪೌಲನಿಗೆ –ಹೇಳಿದ್ದೇನೆಂದರೆ: ಧೈರ್ಯದಿಂದಿರು! ನಾನು ನಿನ್ನನ್ನು ರೋಮಾಪುರಕ್ಕೆ ಕಳುಹಿಸಲು ತಿರ್ಮಾನಿಸಿದ್ದೇನೆ". ಅದರ ನಂತರ ಪೌಲನು ಇನ್ನು ಎರಡು ವರ್ಷಗಳ ಕಾಲ ಇಸ್ರಾಯೇಲಿನಲ್ಲಿ ಸೆರೆಯಾಳಾಗಿ ಉಳಿದನು, ಆದರೆ ಆತನು ಎಂದಿಗೂ ಸಹ ತನ್ನ ಪ್ರಾಣದ ಬಗ್ಗೆ ಚಿಂತೆಯನ್ನಾಗಲಿ ಅಥವಾ ಭಯವನ್ನಾಗಲಿ ಪಡಲಿಲ್ಲ. ಆತನು ತಾನು ತಕ್ಕ ಕಾಲದಲ್ಲಿ ರೋಮಾಪುರಕ್ಕೆ ಹೋಗುವನೆಂದು ಬಲ್ಲವನಾಗಿದ್ದನು.

## ಪೌಲನನ್ನು ಕೊಲ್ಲಲು ಮಾಡಿದ ಸಂಚು (23:12-22)

**12-15** ಒಂದು ನಿರ್ಧಿಷ್ಟವಾದ ಗುರಿಯನ್ನು ನೆರವೇರಿಸುವ ತನಕ ಅನ್ನಪಾನಗಳನ್ನು ಸೇವಿಸಿದಿರುವ ಶಪಥ ಮಾಡಿಕೊಳ್ಳುವದು ಯೆಹೂದ್ಯರಲ್ಲಿ ಒಂದು ಸಾಮನ್ಯ ವಾಡಿಕೆಯಾಗಿತ್ತು. ಯೆಹೂದ್ಯ ಪದ್ಧತಿಯ ಪ್ರಕಾರವಾಗಿ ಗುರಿಯನ್ನು ಸಾಧಿಸುವದು ಅಸಾಧ್ಯವೆಂದು ನಿರೂಪಿತವಾಗುವದಾದರೆ ಶಪಥವನ್ನು ಬಿಟ್ಟು ಬಿಡಬಹುದಾಗಿತ್ತು. ಸುಮಾರು ನಾಲ್ವತ್ತು ಮಂದಿ ಯೆಹೂದ್ಯರು ಒಟ್ಟಾಗಿ ಸೇರಿಕೊಂಡು ಪೌಲನನ್ನು ಕೊಲ್ಲುವ ತನಕ ಅನ್ನಪಾನವೇನೂ ಮುಟ್ಟುವ ದಿಲ್ಲವೆಂದು ಶಪಥಮಾಡಿಕೊಂಡರು. ಅವರು ಮಹಾಯಾಜಕರು ಮತ್ತು ಸಭೇ ಹಿರಿಯರ ಬಳಿಗೆ ಹೋಗಿ ತಮ್ಮ ದುಷ್ಟ ಉಪಾಯದ ಬಗ್ಗೆ ಹೇಳಿ ಅದನ್ನು ನೆರವೇರಿಸುವದಕ್ಕೆ ಅವರ ಸಹಾಯವನ್ನು ಕೇಳಿಕೊಂಡರು. ಈ ಯೆಹೂದ್ಯನಾಯಕರು ಈ ಆಲೋಚನೆಯನ್ನು ಒಪ್ಪಿಕೊಂಡಂತೆ ತೋರುತ್ತದೆ, ಅವರು ಅದನ್ನು ವಿರೋಧಿಸಿದರೆಂದು ಸೂಚಿಸುವ ಯಾವ ಸಂಗತಿಯು ಬರೆಯಲ್ಪಟ್ಟಿರುವದಿಲ್ಲ.

**16-22** ಈ ವಾಕ್ಯಭಾಗವನ್ನು ಹೊರತು ಪಡಿಸಿ ಪೌಲನ ಸಹೋದರಿ ಹಾಗು ಆಕೆಯ ಮಗನ ವಿಷಯದಲ್ಲಿ ಇನ್ನೇನೂ ಬರೆಯಲ್ಪಟ್ಟಿರುವದಿಲ್ಲ. ಈ ಯುವಕನೂ ಸಂಚಿನ ಕುರಿತಾಗಿ ಹೇಗೆ ತಿಳಿದುಕೊಂಡನೆಂಬದು ಹೇಳಲ್ಪಟ್ಟಿರುವದಿಲ್ಲ. ಸಂಚಿನ ವಿಷಯವಾಗಿ ಸಹಸ್ರಾಧಿಪತಿಯು ಕೇಳಿದಾಗ ಇನ್ನು ಪೌಲನನ್ನು ತನ್ನ ಅಧಿಕಾರದಡಿಯಲ್ಲಿ ಇಟ್ಟುಕೊಳ್ಳುವ ಧೈರ್ಯಮಾಡಲಿಲ್ಲ. ರೋಮಾಪುರದ ಹಕ್ಕುದಾರನಾದ ಪೌಲನು ಕೊಲ್ಲಲ್ಪಡುವದಾದರೆ ಆತನನ್ನು ಕಾಪಾಡಲು ವಿಫಲನಾದದ್ದಕ್ಕೆ ಸಹ ಸ್ರಾದಿಪತಿಯು ಹೊಣೆಯಾಗುವನು.

## ಪೌಲನನ್ನು ಕೈಸರೈಯಕ್ಕೆ ವರ್ಗಾಯಿಸಲ್ಪಟ್ಟದ್ದು (23:23-35)

**23-24** ಸಹಸ್ರಾಧಿಪತಿಯು ಶೀಘ್ರವೇ ರಾತ್ರಿಯ ಮರೆಯಲ್ಲಿ ಪೌಲನನ್ನು ದೇಶಾಧಿಪತಿಯಾದ ಫೇಲಿಕ್ಸನ ಬಳಿಗೆ ಕಳುಹಿಸಲು ತಿರ್ಮಾನಿಸಿದನು. ಮಾರ್ಗ ಮಧ್ಯದಲ್ಲಿ ಯಾರೂ ಸಹ ಪೌಲನನ್ನು ಕೊಲ್ಲಲಾಗದಂತೆ ಪೌಲನೊಂದಿಗೆ 470 ಮಂದಿ ಸಿಪಾಯಿಗಳನ್ನು ಕಳುಹಿಸಿದನು. ಸಹಸ್ರಾಧಿಪತಿಯು ಯಾವ ಅವಕಾಶಗಳನ್ನೂ ತೆಗೆದುಕೊಳ್ಳದವನಾಗಿದ್ದನು!

**25-30** ಕ್ಲೌದ್ಯ ಲೂಸ್ಯನೆಂಬ ಹೆಸರಿನ ಆ ಸಹಸ್ರಾಧಿಪತಿಯು ಪೌಲನ ಕುರಿತಾದ ಸತ್ಯಾಂಶಗಳನ್ನು ವಿವರಿಸುತ್ತಾ ದೇಶಾಧಿಪತಿಯಾದ ಫೇಲಿಕ್ಸನಿಗೆ ಪತ್ರವೊಂದನ್ನು ಬರೆದನು. ಆದರೆ ಒಂದು ವಿಷಯದಲ್ಲಿ ಆತನು ಸತ್ಯವನ್ನು ಬರೆದಿರಲಿಲ್ಲ. ಆತನು ಬರೆದದ್ದೇನೆಂದರೆ: ನಾನು ಸಿಪಾಯಿಗಳೊಂದಿಗೆ ಹೋಗಿ ಅವನನ್ನು ರೋಮಾಪುರದ ಹಕ್ಕುದಾರನೆಂದು ತಿಳಿದು ಅವನನ್ನು ತಪ್ಪಿಸಿದೆನು (ವಚನ 27). ಅದು ಸಂಪೂರ್ಣ ಸತ್ಯವಾಗಿರಲಿಲ್ಲ. ಪೌಲನನ್ನು ಕೊರಡೆಗಳಿಂದ ಹೊಡೆಯುವದಕ್ಕಾಗಿ ಬೊಗ್ಗಿಸಿ ಬಾರುಗಳಿಂದ ಕಟ್ಟುವಂತೆ ಆಜ್ಞಾಪಿಸಿದ ವಂತರವಷ್ಟೆ ಅವನು ರೋಮಾಪುರದ ಹಕ್ಕುದಾರನೆಂಬದನ್ನು ಸಹ ಸ್ರಾಧಿಪತಿಯು ತಿಳಿದುಕೊಂಡಿದ್ದನು (ಅ.ಕೃತ್ಯ 22:24-25). ಸಹ ಸ್ರಾಧಿಪತಿಯು ಅದರ ಬಗ್ಗೆ ಏನನ್ನೂ ಬರೆದಿರಲಿಲ್ಲ!

**31-32** ಅಂತಿಪತ್ರಿಯು ಯೆರೂಸಲೇಮಿನಿಂದ ಸುಮಾರು ಮೂವತ್ತೈದು ಮೈಲಿಗಳಷ್ಟು ದೂರದಲ್ಲಿದ್ದ ಊರಾಗಿತ್ತು. ಅವರು ಒಂದು ರಾತ್ರಿಯಲ್ಲಿಯೇ ಅಷ್ಟು ದೂರವನ್ನು ಪ್ರಯಾಣಿಸಿದ್ದರು. ಕಾಲ್ನಡಿಗೆಯ ಸಿಪಾಯಿಗಳು ಖಂಡಿತವಾಗಿಯೂ ವೇಗವಾಗಿ ನಡೆದರು! ಮುಂಜಾನೆಯ ಹೊತ್ತಿಗಾಗಲೆ ಪೌಲನಿಗೆ ಯೆರೂಸಲೇಮಿನ ಯೆಹೂದ್ಯರಿಂದ ಇನ್ನು ಯಾವ ಅಪಾಯವೂ ಇರಲಿಲ್ಲ, ಅದ್ದರಿಂದ ರೋಮಾಯ. ದೇಶಾಧಿಪತಿಯ ವಾಸಸ್ಥಾನವಾದ ಕೈಸರೈಯದ ವರೆಗಿನ ಉಳಿದ ಮೂವತ್ತು ಮೈಲುಗಳವರೆಗೆ ಎಪ್ಪತ್ತು ಮಂದಿ ಕುದುರೆ ಸವಾರರು ಮಾತ್ರವೇ ಪೌಲನೊಂದಿಗೆ ಇದ್ದರು.

**33-35** ದೇಶಾಧಿಪತಿಯಾದ ಫೇಲಿಕ್ಸನು ಸಹಸ್ರಾಧಿಪತಿಯ ಪತ್ರವನ್ನು ಓದಿದ ನಂತರ ಪೌಲನ ಮೇಲೆ ತಪ್ಪು ಹೊರಿಸುವವರು ಯೆರೂಸಲೇಮಿನಿಂದ ಬರುವ ತನಕ ಪೌಲನ ವಿಷಯದಲ್ಲಿ ಏನೂ ಮಾಡಕೂಡದೆಂದು ತಿರ್ಮಾನಿಸಿಕೊಂಡನು. ಆ ಸಮಯದಲ್ಲಿ ಆತನು ಪೌಲನ ವಿಷಯವನ್ನು ಕೇಳಲಿದ್ದನು. ಈ ಮಧ್ಯದಲ್ಲಿ ಆತನನ್ನು ಅರಸನಾದ ಹೆರೋದನು ಮೂಲತಃ ತನಗಾಗಿ ಕಟ್ಟಿಸಿಕೊಂಡಿದ್ದ ಅರಮನೆಯಲ್ಲಿ ಇಟ್ಟು ಸುರಕ್ಷಿತವಾಗಿ ಕಾಯಬೇಕೆಂಬದಾಗಿ ಅಪ್ಪಣೆ ಮಾಡಿದನು (ಅ.ಕೃತ್ಯ 12:1, 19).

---

# ಅಧ್ಯಾಯ - 24

## ಫೇಲಿಕ್ಸನ ಮುಂದೆ ನ್ಯಾಯ ವಿಚಾರಣೆ (24:1-9)

**1** ಹಿರೀಸಭೆಯ ಯೆಹೂದ್ಯ ನಾಯಕರು ಪೌಲನ ವಿರುದ್ಧವಾಗಿ ದೂರು ಹೇಳಲು ಕೈಸರೈಯಕ್ಕೆ ಬಂದಾಗ ಅವರು ತಮ್ಮ ಜೊತೆಯಲ್ಲಿ ತೆರ್ತುಲ್ಲನೆಂಬ ಒಬ್ಬ ವಕೀಲನನ್ನೂ ಕರೆದು ಕೊಂಡು ಬಂದರು.

**2-4** ತೆರ್ತುಲ್ಲನು ಫೇಲಿಕ್ಸನನ್ನು ಹೊಗಳುವುದರ ಮೂಲಕ ತನ್ನ ಮಾತುಗಳನ್ನು ಪ್ರಾರಂಭಿಸಿದನು. ಹೊಸ ಒಡಂಬಡಿಕೆಯ ಕಾಲದಲ್ಲಿ ಅದು ಒಂದು ಪದ್ಧತಿಯಾಗಿತ್ತು. ಆದರೆ ಫೇಲಿಕ್ಸನು ಹೊಗಳಿಕೆಗೆ ಯೋಗ್ಯನಾಗಿರಲಿಲ್ಲ, ಯಾಕೆಂದರೆ ಆತನು ಕ್ರೂರ ಹಾಗು ನಿರಂಕುಶ ಆಡಳಿತಗಾರನಾಗಿದ್ದನೆಂಬದಾಗಿ ಇತರ ಐತಿಹಾಸಿಕ ಪುಸ್ತಕಗಳಿಂದ ತಿಳಿದು ಬಂದಿರುತ್ತದೆ.

**5-6** ಮೊದಲನೆಯದಾಗಿ ತೆರ್ತುಲ್ಲನು ಪೌಲನೊಬ್ಬ ಪೀಡೆಯಂತಿದ್ದು ಲೋಕದಲ್ಲಿ ಎಲ್ಲೆಲ್ಲಿಯೂ ಇರುವ ಎಲ್ಲಾ ಯೆಹೂದ್ಯರಲ್ಲಿ ದಂಗೆಯನ್ನು ಎಬ್ಬಿಸುವವನಾಗಿದ್ದಾನೆಂದು ಆರೋಪಿಸಿದನು. ಹೊಸ ಒಡಂಬಡಿಕೆಯ ಕಾಲದಲ್ಲಿ ಯೆಹೂದ್ಯರು ಕ್ರೈಸ್ತರ ವಿರುದ್ಧವಾಗಿ ಯಾವಾಗಲೂ ಈ ಅಪವಾದವನ್ನು ಹೊರಿಸುತ್ತಿದ್ದರು (ಲೂಕ 23:1-2, 5, ಅ.ಕೃತ್ಯ 16;20-21, 17:6-7) ವಾಸ್ತವದಲ್ಲಿ ಲೂಕನು ತನ್ನ ಸುವಾರ್ತೆ ಹಾಗು ಈ ಅಪೊಸ್ತಲರ ಕಾರ್ಯಗಳ ಪು ಸ್ತಕಗಳೆರಡನ್ನೂ ಬರೆದ ಮುಖ್ಯ ಕಾರಣಗಳಲ್ಲಿ ಈ ಅಪವಾದವನ್ನು ತೊಡೆದು ಹಾಕುವದು ಒಂದಾಗಿತ್ತು. ಕ್ರೈಸ್ತರ ಮೇಲೆ ಹೊರಿಸಿದ ಅಪರಾಧಗಳಲ್ಲಿ ಅವರು ಯಾವು ದನ್ನೂ ಮಾಡಿಲ್ಲ ಎಂಬದನ್ನು ತೋರಿಸುವ ಉದ್ದೇಶದಿಂದಲೂ ಲೂಕನು ಬರೆದನು. ಕ್ರೈಸ್ತರು ರೋಮಾಯ ಸರ್ಕಾರದ ವಿರುದ್ಧ ಯಾವದೇ ಗಲಭೆ ಅಥವಾ ದಂಗೆಗಳಿಗೆ ಕಾರಣರಾಗಿರಲಿಲ್ಲ. ಅವರು ನ್ಯಾಯಸ್ಥಾನಗಳಿಗೆ ತರಲ್ಪಟ್ಟಾಗಲೆಲ್ಲಾ ಅವರು ರೋಮಾಯ ಕಾನೂನಿನ ಯಾವದೇ ನಿಯಮಗಳನ್ನು ಉಲ್ಲಂಘಿಸಲ್ಪಟ್ಟ ಅಪರಾಧಿಗಳಾಗಿದ್ದಾರೆಂದು ಯಾರೊಬ್ಬರಿಗೂ ನಿರೂಪಿಸಲು ಸಾಧ್ಯ.ವಾಗಲಿಲ್ಲ (ಲೂಕ 23:4, 13-15, ಅ.ಕೃತ್ಯ. 18:14-15, 26:30-32). ತೆರ್ತುಲ್ಲನು ಪೌಲನ ವಿರುದ್ಧ ಮಾಡಿದ ಎರಡನೆಯ ಆರೋಪವೇನೆಂದರೆ, ಪೌಲನು ನಜರೇತಿನವರ ಪಾಷಂಡಿ ಮತದಲ್ಲಿ ಪ್ರಮುಖನು ಎಂಬದೇ (ವಚನ 5).

ಯೇಸುವು ಇಸ್ರಾಯೇಲಿನ ನಜರೇತೆಂಬ ಊರಿನಲ್ಲಿ ಬೆಳೆದನಾದ್ದರಿಂದ ಆತನು "ನಜರೇಯ"ನೆಂದು ಕರೆಯಲ್ಪಟ್ಟಿದ್ದನು (ಲೂಕ 4'16). ಯೇಸುವಿನ ಹಿಂಬಾಲಕರು "ನಜರೇತಿನ ಪಾಷಂಡಿ ಮತದ [103] ಸದಸ್ಯರೆಂದು ಹೊಸ ಒಡಂಬಡಿಕೆಯಲ್ಲಿ ಕರೆಯಲ್ಪಟ್ಟಿದ್ದು ಇದೇ ಪ್ರಥಮ ಸಾರಿಯಾಗಿದೆ. ಪೌಲನು ದೇವಾಲಯವನ್ನು ಹೊಲೆಮಾಡಲು ಪ್ರಯತ್ನಿಸಿದನೆಂಬದು ಅವನ ವಿರುದ್ದವಾಗಿ ತೆರ್ತುಲ್ಲ ಮಾಡಿದ ಮೂರನೆಯ ಆರೋಪವಾಗಿತ್ತು (ವಚನ 6). ಪೌಲನು ನಿಜವಾಗಿಯೂ ದೇವಲಯವನ್ನು ಹೊಲೆ ಮಾಡಿದ್ದಾನೆಂಬದಕ್ಕೆ ಯಾವ ಆಧಾರವೂ ಇಲ್ಲ ಎಂಬುದು ಯೆಹೂದ್ಯರಿಗೆ ಗೊತ್ತಿತ್ತು, ಆದಕಾರಣ ಅವರು ಆತನ ಮೇಲೆ ಆ ಆರೋಪವನ್ನು ಹೊರಿಸಲಿಲ್ಲ. ಅವರು ಆತನ ಮೇಲೆ ದೇವಾಲಯವನ್ನು ಹೊಲೆಮಾಡಲು "ಪ್ರಯತ್ನಿಸಿದನು" ಎಂದು ಮಾತ್ರವೇ ಆರೋಪಿಸಿದರು! ಒಂದು ಯೆಹೂದ್ಯರು ಪ್ರಾರಂಭದಲ್ಲಿಯೇ ಪೌಲನನ್ನು ಹಿಡಿದಿರದಿದ್ದರೆ ಆತನು ಖಂಡಿತವಾಗಿಯೂ ಹೊಲೆಮಾಡಿರುತ್ತಿದ್ದನು ಎಂಬುದು ತೆರ್ತುಲ್ಲನ ಅಂಶವಾಗಿತ್ತು. ಆ ಆರೋಪವನ್ನು ನಿಜವಲ್ಲ ವೆಂದು ನಿರೂಪಿಸಲು ಪೌಲನಿಗೆ ಎಷ್ಟು ಕಷ್ಟವಲ್ಲವೆ! ತೆರ್ತುಲ್ಲನು ಬಹಳ ಚಾಣಾಕ್ಷನಾಗಿದ್ದನು. ಕುತಂತ್ರ ಹಾಗು ಕುಶಲತೆಯುಳ್ಳ ವಕೀಲನು ಒಬ್ಬ ನಿರಪರಾಧಿಯನ್ನು ಸಹ ಅಪರಾಧಿಯಾಗಿ ಕಾಣಿಸುವಂತೆ ಮಾಡಬಲ್ಲನು!

**7-9** ನಂತರ, ಪೌಲನ ಬಂಧನವನ್ನು ವಿವರಿಸುವಲ್ಲಿ ತೆರ್ತುಲ್ಲನು ಸತ್ಯವನ್ನು ತಿರುಚಿದನು.ಯೆಹೂದ್ಯರು ಪೌಲನನ್ನು "ನಮ್ಮ ಧರ್ಮ ಶಾಸ್ತ್ರನುಸಾರವಾಗಿ " ಹಿಡಿದರು (ವಚನ 6), ಆದರೆ ರೋಮಾಯ ಸಹಸ್ರಾಧಿಪತಿಯಾದ ಲುಸ್ಯನು, ಪೌಲನನ್ನು ಯೆಹೂದ್ಯರ ಕೈಯೊಳಗಿಂದ ಬಹಳ ಬಲತ್ಕಾರದಿಂದ ಎಳೆದು ಕೊಂಡನು ಎಂದು ಹೇಳಿದನು[104] (ವಚನ 7). ಹೇಗಿದ್ದರೂ, ತೆರ್ತುಲ್ಲನ ಮಾತುಗಳು ಸುಳ್ಳಾಗಿದ್ದವು. ಬದಲಾಗಿ, ಯೆಹೂದ್ಯರೇ ಹೆಚ್ಚು ಬಲತ್ಕಾರದಿಂದ ದೇವಾಲಯದ ಆವರಣದಲ್ಲಿಯೇ ಪೌಲನನ್ನು ಕೊಲ್ಲುವದಕ್ಕೆ ಹೆಚ್ಚು ಕಡಿಮೆ ಯಶಸ್ವಿಗೊಂಡಿದ್ದರು, ಆದರೆ ರೋಮಾಯ ಸಿಪಾಯಿಗಳು ಬಂದದ್ದರಿಂದ ಮಾತ್ರವೇ ಪೌಲನ ಪ್ರಾಣವು ಉಳಿದಿತ್ತು! (ಅ.ಕೃತ್ಯ 21:30-32)

## ಪೌಲನ ಪ್ರತಿವಾದ (24:10-21)

**10** ಪೇಲಿಕ್ಸನು ಕ್ರಿ.ಶಕ 52 ರಿಂದ 59 ರ ವರೆಗೆ ಯೂದಾಯದ (ಇಸ್ರಾಯೇಲಿನ ದಕ್ಷಿಣ ಪ್ರಾಂತ್ಯ) ದೇಶಾಧಿಪತಿಯಾಗಿದ್ದನು ಪೌಲನ ವಿಚಾರಣೆಯ ಸಮಯದಲ್ಲಿ ಫೇಲಿಕ್ಸನು ಈಗಾಗಲೇ ಅನೇಕ ವರ್ಷಗಳು ದೇಶಾಧಿಪತಿಯಾಗಿದ್ದನು, ಮತ್ತು ಯೆಹೂದ್ಯ ಪದ್ಧತಿಗಳ ಬಗ್ಗೆ ಅವನಿಗೆ ಸಾಕಷ್ಟು ಗೊತ್ತಿತ್ತು. ಆದುದರಿಂದ, ಪೌಲನು ಅವನ ಎದುರಿನಲ್ಲಿ ತನ್ನ ಪರವಾಗಿ ವಾದಿಸಿಕೊಳ್ಳಲು ಸಂತೋಷವು –ಳ್ಳವನಾಗಿದ್ದನು.

**11-13** ತೆರ್ತುಲ್ಲನು ತನ್ನ ವಿರುದ್ಧವಾಗಿ ಮಾಡಿದ ಎಲ್ಲಾ ಆರೋಪಗಳನ್ನು ಪೌಲನು ನಿರಾಕರಿಸಿದನು. ತೆರ್ತುಲ್ಲನ ಆರೋಪಗಳೆಲ್ಲವೂ ಅನಿಶ್ಚಿತತೆಯಿಂದ ಕೂಡಿದವು ಗಳಾಗಿವೆ ಎಂಬದನ್ನು ಗಮನಿಸಿರಿ. ಅವನು ಪೌಲನ ಮೇಲೆ ಯಾವದೇ ನಿಖರವಾದ ಆರೋಪವನ್ನು ಹೊರಿಸಲಿಲ್ಲ. ಪೌಲನು "ಲೋಕದಲ್ಲಿ ಎಲ್ಲೆಲ್ಲಿಯೂ ದಂಗೆಯನ್ನು ಎಬ್ಬಿ ಸಿದನು" ಮತ್ತು ಆತನು "ದೇವಾಲಯವನ್ನು ಹೊಲೆಮಾಡಿದನು" ಎಂಬಂತಹ ಸಡಿಲವಾದ ಹಾಗು ವಿಸ್ತಾರವಾದ ಆರೋಪಗಳನ್ನು ಮಾತ್ರವೇ ಮಾಡಿದನು. ಅಂತಹ ಸಡಿಲವಾದ ಆರೋಪಗಳನ್ನು ಸುಲಭವಾಗಿ ಮಾಡಬಹುದು. ಉದಾಹರಣೆಗೆ, ಯಾರ ಮೇಲೆ ಯಾದರೂ "ಗಲಭೆಗಾರ" ಅಥವಾ "ತಪ್ಪು ಮಾಡುವವನು" ಎಂದು ಆರೋಪಿಸುವದು ಸರಳವಾಗಿರುತ್ತದೆ. ಅಂತಹ ಆರೋಪಗಳು ನಿಂದೆಯೇ ಹೊರತು ಮತ್ತೇನೂ ಆಗಿರುವದಿಲ್ಲ. ಆದರೆ ಪೌಲನು ಆರೋಪಗಳಿಗೆ ನೀಡಿದ ಉತ್ತರವು ನಿಖರವಾಗಿತ್ತು. ಆತನು ತೆರ್ತುಲ್ಲನ ಪ್ರತಿಯೊಂದು ಆರೋಪವನ್ನು ಸ್ಪಷ್ಟವಾಗಿಯೂ ವಿವರವಾಗಿಯೂ ಅಲ್ಲಗಳೆದನು. ಪೌಲನು ತಾನು ದೇವಾಲಯದಲ್ಲಿ ಯಾರೊಂದಿಗೂ ವಾದಿಸಲಿಲ್ಲ ಅಥವಾ ಪಟ್ಟಣದಲ್ಲಿ ಎಲ್ಲಿಯೂ ಸಹ ಜನರನ್ನು ಕೆರಳಿಸಲಿಲ್ಲ ಎಂಬದಾಗಿ ಹೇಳಿದನು. ಆತನ ವಿರುದ್ಧದ ಯಾವದೇ ಒಂದು ಆರೋಪವನ್ನಾದರೂ ನಿರೂಪಿಸಬೇಕೆಂದು ತನ್ನನ್ನು ಆರೋಪಿಸಿದವರಿಗೆ ಸವಾಲು ಹಾಕಿದನು.

**14** ಪೌಲನು ತಾನು ಏನೂ ಮಾಡಲಿಲ್ಲ ಎಂಬುದನ್ನು ತಿಳಿಸಿದನಂತರ ತಾನು ಮಾಡಿದ್ದೇನು ಎಂಬದನ್ನು ಫೇಲಿಕ್ಸನಿಗೆ ತಿಳಿಸುತ್ತಾನೆ ಆತನು ಸತ್ಯ ದೇವರನ್ನು ಸೇವಿಸಿದನು ಮತ್ತು ನಿತ್ಯ ಮಾರ್ಗವಾದ ಯೇಸು ಕ್ರಿಸ್ತನನ್ನು ಅನುಸರಿಸಿದನು

(ಯೋಹಾನ 14:6). ಆತನು ಧರ್ಮಶಾಸ್ತ್ರ ಹಾಗು ಪ್ರವಾದಿಗಳ ಗ್ರಂಥಗಳಲ್ಲಿ, ಅಂದರೆ ಹಳೆ ಒಡಂಬಡಿಕೆಯಲ್ಲಿ ಬರೆದಿರುವದನ್ನೆಲ್ಲಾ ನಂಬುವವನಾಗಿದ್ದನು. ಕ್ರಿಸ್ತನು ಸ್ವತಃ ಒಬ್ಬ ನಿಜ ಯೆಹೂದ್ಯನಾಗಿದ್ದ ಪ್ರಕಾರವೇ ಆತನೂ ಒಬ್ಬ ನಿಜ ಯೆಹೂದ್ಯನಾಗಿದ್ದನು.

**15** ಅದು ಮಾತ್ರವಲ್ಲದೆ ಬಹುಪಾಲು ಯೆಹೂದ್ಯರಂತೆಯೇ ಪೌಲನು ಸತ್ತವರ ಪುನರುತ್ಥಾನ ಹಾಗು ನಿತ್ಯ ಜೀವಗಳನ್ನು ನಂಬುವವನಾಗಿದ್ದನು. ದೇಹದ ಪುನರುತ್ಥಾನದ ಜೊತೆಯಲ್ಲಿ ನಿತ್ಯ ಜೀವವು ಯೆಹೂದ್ಯರ ಮುಖ್ಯ ನಿರೀಕ್ಷೆಯಾಗಿತ್ತು. ಸದ್ದುಕಾಯರು ಮಾತ್ರವೇ ಪುನರುತ್ಥಾನ, ಮರಣಾನಂತರದ ಜೀವನಗಳಲ್ಲಿ ನಂಬಿಕೆ ಹೊಂದಿರಲಿಲ್ಲ (ಅ.ಕೃತ್ಯ 23:6-8 ನೋಡಿರಿ).

ಪೌಲನು ಇಲ್ಲಿ ನೀತಿವಂತರಿಗೂ ಅನೀತಿವಂತರಿಗೂ ಪುನರುತ್ಥಾನ ಇರುವದೆಂದು ಹೇಳುತ್ತಾನೆ. ಯೇಸು ಹೇಳಿದ್ದೇನೆಂದರೆ: "ಸಮಾಧಿಗಳಲ್ಲಿರುವವರು ಆತನ (ಮನುಷ್ಯಕುಮಾರನ) ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವಕಾಲ ಬರುತ್ತದೆ. ಒಳ್ಳೆಯದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾ–ನವಾಗುವದು; ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವದು" (ಯೋಹಾನ 5:28-29). ಪ್ರತಿಯೊಬ್ಬರೂ ಪುನರುತ್ಥಾನಗೊಳ್ಳುವರು. ಮುಖ್ಯ ಪ್ರಶ್ನೆಯೇನೆಂದರೆ: ನಮ್ಮ ಪುನರುತ್ಥಾನವು ಎಲ್ಲಿ ಸಂಭವಿಸುವದು – ದೇವರ ರಾಜ್ಯದಲ್ಲಿಯೋ ಅಥವಾ ಸೈತಾನನ ರಾಜ್ಯದಲ್ಲಿಯೋ?

**16** ಪ್ರತಿಯೊಬ್ಬ ಕ್ರೈಸ್ತನಿಗೆ ಶುದ್ಧ ಮನಸ್ಸಾಕ್ಷಿಯು ಅತ್ಯ ವಶ್ಯಕವಾಗಿರುತ್ತದೆ. ನಾವು ತಿಳಿದು ಪಾಪ ಮಾಡಿ ಅದಕ್ಕಾಗಿ ಪಶ್ಚಾತಾಪ ಪಡದೆ ಹೋಗುವಾಗ ನಮ್ಮ ಮನಸ್ಸಾಕ್ಷಿಯು ಅಶುದ್ಧಗೊಳ್ಳುತ್ತದೆ (ಅ.ಕೃತ್ಯ 23:1 ಮತ್ತು ವ್ಯಾಖ್ಯಾನ ನೋಡಿರಿ). ನಾವು ಅಂತಹ ಸ್ಥಿತಿಯಲ್ಲಿರುವಾಗ ದೇವರು ನಮ್ಮ ಸಮೀಪಕ್ಕೆ ಬರಲಾರನು. ನಾವು ಪಾಪದಲ್ಲಿ ಮುಂದುವರೆಯುವಾಗ ಪವಿತ್ರಾತ್ಮನನ್ನು ದುಃಖಪಡಿಸುತ್ತೇವೆ ಎಫೆಸ 4:30) ಮತ್ತು ಆತನ (ಬೆಂಕಿಯನ್ನು) ನಂದಿಸುವವರಾಗಿದ್ದೇವೆ (1 ಥೆಸಲೋನಿಕ 5:19). ನಮ್ಮ ಆತ್ಮೀಕ ಜೀವಿತವು ಒಣಗಿ ಹೋಗುತ್ತದೆ. ನಮ್ಮ ನಂಬಿಕೆಯು ಹಡಗು ಒಡೆದು ಹೋದಂತಾಗುವದು (1 ತಿಮೊಥೆ 1:19 ನೋಡಿರಿ). ನಮ್ಮಲ್ಲಿ ಯಾವನಾದರೂ ಅಶುದ್ಧ ಮನಸ್ಸಾಕ್ಷಿಯನ್ನು ಹೊಂದಿರುವದಾದರೆ ಅವನು ತಡಮಾಡದೆ ಪಶ್ಚಾತಾಪಪಟ್ಟು ಕ್ಷಮಾಪಣೆಯನ್ನು ಶುದ್ಧತೆಯನ್ನು ಪಡೆದುಕೊಳ್ಳಲಿ (1 ಯೋಹಾನ 1:9 ಮತ್ತು ವ್ಯಾಕ್ಯಾನ ನೋಡಿರಿ).

**17** ಇಲ್ಲಿ ಪೌಲನು ಈ ಸಾರಿ ತಾನು ಯೆರೂಸಲೇಮಿಗೆ ಬರುವದಕ್ಕೆ ಮುಖ್ಯ ಕಾರಣವೇನೆಂಬದನ್ನು ತಿಳಿಸುತ್ತಾನೆ. ಅನ್ಯ ಜನಾಂಗದ ಸಭೆಗಳಿಂದ ಸಂಗ್ರಹಿಸಲಾಗಿದ್ದ ಕಾಣಿಕೆಗಳನ್ನು ಯೆರೂಸಲೇಮಿನ ಸಭೆಗೆ ತಲುಪಿಸುವದಕ್ಕಾಗಿಯೇ. (ಅ.ಕೃತ್ಯ 19:21, 20:22, ರೋಮ 15:25-27 ನೋಡಿರಿ).

**18-19** ಇಲ್ಲಿ ಪುನಃ ಪೌಲನು ತಾನು ಸರಿಯಾದ ವಿಧಾನದಲ್ಲಿಯೇ ದೇವಾಲಯದಲ್ಲಿ ಕಾಣಿಕೆಗಳನ್ನು ಅರ್ಪಿಸುತ್ತಿದ್ದನೆಂದು ಹೇಳುತ್ತಾನೆ. ಆತನು ಯೆಹೂದ್ಯ ಪದ್ಧತಿಗೆ ವಿರುದ್ಧವಾದದ್ದೇನನ್ನು ಮಾಡಲಿಲ್ಲ. ಅವನು ಯಾವದೆ ಗಲಭೆಯನ್ನುಂಟು ಮಾಡಲಿಲ್ಲ. ಆಗ ತಕ್ಷಣವೇ ಅಸ್ಯ ಸೀಮೆಯ ಕೆಲವು ಮಂದಿ ಯೆಹೂದ್ಯರು ಆತನನ್ನು ಹಿಡಿದುಕೊಂಡರು (ಅ.ಕೃತ್ಯ 21:27-28). "ಅಸ್ಯ ಸೀಮೆಯ ಈ ಯೆಹೂದ್ಯರು ಇಲ್ಲಿ ವಯುಕ್ತಿಕವಾಗಿ ಬಂದು ನನ್ನ ಮೇಲೆ ತಪ್ಪು ಹೊರಿಸಬೇಕಾಗಿತ್ತು" ಎಂದು ಪೌಲನು ಹೇಳುತ್ತಾನೆ.

ಇಲ್ಲಿ ನಾವು ಒಂದು ಪ್ರಾಮುಖ್ಯ ಸೂತ್ರವನ್ನು ಕಾಣಬಹುದು. ಯಾರ ಮೇಲಾದರೂ ತಪ್ಪನ್ನು ಹೊರಿಸಬೇಕಾಗುವದಾದರೆ ಅದನ್ನು ಮುಖಾ ಮುಖಿಯಾಗಿ ಮಾಡತಕ್ಕದ್ದು. ಯಾರ ಆರೋಪಗಳು ಸುಳ್ಳು ಅಥವಾ ಅರ್ಧಸತ್ಯದಿಂದ ಕೂಡಿರುತ್ತವೋ ಅಂತವರು ಯಾವಾಗಲೂ ವ್ಯಕ್ತಿಯ ಹಿಂದಗಡೆಯಲ್ಲಿ ಆರೋಪಗಳನ್ನು ಮಾಡಲಿಚ್ಚಿಸುತ್ತಾರೆ. ಅವರು ಆ ವ್ಯಕ್ತಿಯ ಮುಖದೆದುರಿಗೆ ಆರೋಪಗಳನ್ನು ಮಾಡಲು ಧೈರ್ಯಪಡುವದಿಲ್ಲ, ಯಾಕೆಂದರೆ ಅವರು ಹಾಗೆ ಮಾಡುವದಾದರೆ ಅವರ ಸುಳ್ಳು ತನವು ಶೀಘ್ರವೆ ಬೈಲಾಗುವದು. ಒಂದು ವೇಳೆ ನಾವು ಒಬ್ಬ ವ್ಯಕ್ತಿ ವಿರುದ್ಧ ಏನನ್ನಾದರೂ ಹೊಂದಿ ಅದನ್ನು ಆತನ ಮುಖದೆದುರಿಗೆ ಹೇಳಲಿಚ್ಚಿಸದಿರುವದಾದರೆ ನಾವು ನಮ್ಮ ಬಾಯನ್ನು ಭದ್ರ ಪಡಿಸಿಕೊಂಡರೆ ಒಳ್ಳೇದು.

**20** ಆದರೆ ಅಸ್ಯಸೀಮೆಯ ಆ ಯೆಹೂದ್ಯರು ಹಾಜರಿರಲಿಲ್ಲ. ಆದುದರಿಂದ ಪೌಲನು ಹೇಳುವದೇನೆಂದರೆ: "ಇಲ್ಲಿರುವ ಹಾಜರಿರುವ ಹಿರೀಸಭೆಯ ಯೆಹೂದ್ಯರು ನಾನು ಮಾಡಿದ ಅಪರಾಧವೇನೆಂಬದನ್ನು ತೋರಿಸಲಿ".

**21** ಪೌಲನು ಒಬ್ಬ ಫರಿಸಾಯನಾಗಿ ಸತ್ತವರ ಪುನರುತ್ಥಾನದಲ್ಲಿ ನಂಬಿಕೆ ಹೊಂದಿರುವದೇ ಹಿರೀಸಭೆಯ ದೃಷ್ಟಿಯಲ್ಲಿ ಅಪರಾಧವಾಗಿತ್ತು. ಅದನ್ನೇ ಅವರು ಅಪರಾಧವೆಂದು ಕರೆದು ನ್ಯಾಯವಿಚಾರಣೆ ಮಾಡುತ್ತಿರುವರು. ಹಿರೀಸಭೆಯಲ್ಲಿನ ಸದ್ದುಕಾಯರ [105] ಕೋಪದ ಕಾರಣದಿಂದಾಗಿ ಮಾತ್ರವೇ ಪೌಲನು ನ್ಯಾಯ ವಿಚಾರಣೆಗೊಳಗಾಗಿರುತ್ತಾನೆ. ವಾಸ್ತವದಲ್ಲಿ ಈ ಸದ್ದುಕಾಯರು ಪೌಲನಲ್ಲಿ ಯಾವ ನಿಜವಾದ ಅಪರಾಧವನ್ನು ಕಂಡಿರಲಿಲ್ಲ.

## ಪೌಲ ಮತ್ತು ಫೇಲಿಕ್ಷ (24:22-27)

**22-23** ಪೌಲನ ವಿಷಯದಲ್ಲಿ ಫೇಲಿಕ್ಷನು ಇನ್ನಷ್ಟು ವಿಚಾರಣೆ ಮಾಡಿದನೋ ಅಥವಾ ಇಲ್ಲವೋ ಎಂಬುದು ತಿಳಿದು ಬಂದಿರುವದಿಲ್ಲ. ಆದರೆ ಫೇಲಿಕ್ಷನು ಪೌಲನಿಂದ ಲಂಚವನ್ನು ಪಡೆಯುವ ನಿರೀಕ್ಷೆಯಲ್ಲಿಯೂ, ಅಲ್ಲದೆ ಯೆಹೂದ್ಯರನ್ನು

ಸಂತೋಷಪಡಿಸುವದಕ್ಕಾಗಿಯೂ ಮುಂದಿನ ಎರಡು ವರ್ಷಗಳಕಾಲ ಪೌಲನನ್ನು ಸೆರೆಯಲ್ಲಿ ಇಟ್ಟನೆಂಬುದು ಮಾತ್ರವೇ ನಮಗೆ ತಿಳಿದಿರುತ್ತದೆ (ವಚನಗಳು 26-27).

**24-25** ಫೇಲಿಕ್ಸ ಮತ್ತು ಆತನ ಹೆಂಡತಿಯಾದ ದ್ರೂಸಿಲ್ಲಳು[106] ಕ್ರಿಸ್ತ ಮಾರ್ಗದ ಅಂದರೆ, ಕ್ರೈಸ್ತ ನಂಬಿಕೆಯ – ವಿಷಯವಾಗಿ ಮತ್ತಷ್ಟು ಕೇಳಲಿಚ್ಛಿಸಿದ್ದರಿಂದ ಅವರು ಪೌಲನನ್ನು ಕರೆಸಿ ಅದರ ವಿಷಯವಾಗಿ ಹೇಳಬೇಕೆಂದು ಕೇಳಿದರು. ಆದರೆ ಅವರು ನಿಜವಾಗಿಯೂ ದೇವರನ್ನು ಹುಡುಕುವವರಾಗಿರಲಿಲ್ಲ, ಬದಲಾಗಿ, ಅವರು ಕೆಲವು ನೂತನ ಬೋಧನೆಗಳಿಂದ ಮನರಂಜನೆಗೊಳ್ಳಲು ಮಾತ್ರವೇ ಇಚ್ಛಿಸಿದ್ದರು. ಆದುದರಿಂದ, ಪೌಲನು ಸುನೀತಿ, ದಮೆ, ಮುಂದಣ ನ್ಯಾಯ ವಿಚಾರಣೆಗಳ ಬಗ್ಗೆ ಮಾತಾಡಲು ಪ್ರಾರಂಭಿಸಿದಾಗ (ವಚನ 25) ಫೇಲಿಕ್ಸನು ಗೊಂದಲಕ್ಕೊಳಗಾಗಿ "ಸಾಕು! ಸಾಕು!" ಎಂದು ಹೇಳಿದನು. ಆದರೆ ಫೇಲಿಕ್ಸ ಮತ್ತು ದ್ರೂಸಿಲ್ಲಳರು ಈ ಮೂರು ಸಂಗತಿಗಳ – ಸುನೀತಿ, ದಮೆ ಮತ್ತು ಮುಂದಣ ನ್ಯಾಯ ವಿಚಾರಣೆ– ಬಗ್ಗೆಯೇ ಕೇಳಬೇಕಾದ ಹೆಚ್ಚು ಅಗತ್ಯತೆಯಿತ್ತು! ದೇವರು ನಮ್ಮ ಪಾಪಗಳನ್ನು ತೋರಿಸಲು ಪ್ರಾರಂಭಿಸುತ್ತಾನೋ ಆಗ ಹಲವಾರು ವೇಳೆ ನಾವು ಬೇಸರಗೊಂಡು, "ಸದ್ಯಕ್ಕೆ ಸಾಕು, ಆದರ ಬಗ್ಗೆ ನಾನು ಯೋಚಿಸುತ್ತೇನೆ" ಎನ್ನುತ್ತೇವೆ. ಮತ್ತು ನಾವು ದೇವರಿಗೆ ಅದನ್ನು ಹೇಳುವದರ ಫಲಿತಾಮವಾಗಿ ಪಶ್ಚಾತಾಪ ಪಟ್ಟು ಕ್ಷಮಾಪಣೆಯನ್ನು ಪಡೆದುಕೊಳ್ಳುವ ಒಂದು ಸದಾವಕಾಶವನ್ನು ಕಳೆದು ಕೊಳ್ಳುವವರಾಗಿದ್ದೇವೆ. ಫೇಲಿಕ್ಸನು ಯಾಕೆ ಹೆದರಿದ್ದನು? ಯಾಕೆಂದರೆ ಅವನು ಒಬ್ಬ ದುಷ್ಟ ಹಾಗು ದುರಾಶೆಯ ಮನುಷ್ಯನಾಗಿದ್ದನು. ಅವನು ತನ್ನ ಪಾಪಗಳನ್ನು ಬಿಟ್ಟು ಬಿಡಲು ಇಚ್ಛಿಸಲೂ ಇಲ್ಲ, ದೇವರ ನ್ಯಾಯ ತೀರ್ಪನ್ನು ಎದುರಿಸಲಾದರೂ ಇಷ್ಟಪಡಲಿಲ್ಲ.

ನಾವು ದೇವರ ನ್ಯಾಯ ತೀರ್ಪಿಗೆ ಭಯಪಡುವದು ಮಾತ್ರವೇ ಸಾಲದು, ನಾವು ನಮ್ಮ ಪಾಪಗಳಿಗಾಗಿ ಪಶ್ಚಾತಾಪವನ್ನೂ ಪಡಬೇಕು. ಫೇಲಿಕ್ಸನು ಪೌಲನಿಗೆ "ಸದ್ಯಕ್ಕೆ ಹೋಗು, ನಾನು ಅದರ ಬಗ್ಗೆ ನಾಳೆ ಯೋಚಿಸುತ್ತೇನೆ" ಎಂದು ನಾವು ಹೇಳದಿರೋಣ. ಯಾಕೆಂದರೆ ಈಗಲೇ ರಕ್ಷಣ ದಿನವು (2 ಕೊರಿಂಥ 6:2) ನಾಳೆಯು ಬಹಳ ತಡವಾಗಬಹುದು!

**26** ಫೇಲಿಕ್ಸನು ಇನ್ನು ಮತ್ತೆಂದೂ ಪೌಲನೊಂದಿಗೆ ಧಾರ್ಮಿಕ ವಿಷಯವಾಗಿ ಮಾತಾಡುವ ಯೋಚನೆ ಮಾಡಲಿಲ್ಲವಾದಾಗ್ಯು ಆತನು ಪೌಲನೊಂದಿಗೆ ತಕ್ಕಷ್ಟು ಉತ್ತಮವಾಗಿ ನಡೆದು ಕೊಳ್ಳುತ್ತಲಿದ್ದನು, ಯಾಕೆಂದರೆ ಒಂದು ದಿನ ಪೌಲನು ತನ್ನ ಬಿಡುಗಡೆಯನ್ನು ಸಂಪಾದಿಸಿಕೊಳ್ಳಲು ಅವನಿಗೆ ಲಂಚವನ್ನು ಕೊಡುವನೆಂದು ನಿರೀಕ್ಷಿಸಿದನು.

**27** ಎರಡುವರ್ಷಗಳ ನಂತರ ಕ್ರಿ.ಶಕ 59ರಲ್ಲಿ ಯೆಹೂದ್ಯರು ಹಾಗು ಅನ್ಯ ಜನರ ನಡುವೆ ಕೈಸರೈಯಲ್ಲಿ ಒಂದು ಅಂತರ್ಯುದ್ಧವು ಉದ್ಭವಿಸಿತು. ಆ ಸಮಯದಲ್ಲಿ ಫೇಲಿಕ್ಸನ ಸೈನಿಕರು ಯೆಹೂದ್ಯರ ಮೇಲೆ ಕ್ರೂರವಾಗಿ ದಾಳಿಮಾಡಿ ಅವರಲ್ಲಿ ಅನೇಕರನ್ನು ಕೊಂದು ಬಿಟ್ಟರು. ಆ ಘಟನೆಯ ಕಾರಣದಿಂದ ಫೇಲಿಕ್ಸನನ್ನು ದೇಶಾಧಿಪತಿಯ ಹುದ್ದೆಯಿಂದ ವಜಾ ಮಾಡಿ ತಿರಿಗಿ ರೋಮಾಪುರಕ್ಕೆ ಕಳುಹಿಸಲಾಯಿತು. ಆತನ ಸ್ಥಾನಕ್ಕೆ ಫೇಸ್ತನೆಂಬ ನೂತನ ದೇಶಾಧಿಪತಿಯು ಬಂದನು.

ಫೇಲಿಕ್ಸನು ಪೌಲನನ್ನು ಬಿಡುಗಡೆ ಮಾಡಲೇ ಇಲ್ಲ. ಯಹೂದ್ಯರು ಆತನ ಕ್ರೂರ ನಡಾವಳಿಯ ಬಗ್ಗೆ ರೋಮಾಯ ಚಕ್ರವರ್ತಿಗೆ ದೂರು ನೀಡುವರೆಂದು ಹೆದರಿದ್ದನಾದ್ದರಿಂದ ಯೆಹೂದ್ಯರ ಪ್ರೀತಿಯನ್ನು ಸಂಪಾದಿಸಬೇಕೆಂದು ಫೇಲಿಕ್ಸನು ಪೌಲನನ್ನು ಸೆರೆಯಲ್ಲಿಯೇ ಬಿಟ್ಟು ಹೋದನು.

ಫೇಲಿಕ್ಸನು ಪೌಲನ ಫಿರ್ಯಾದಿಯನ್ನು ಪೂರ್ಣಗೊಳಿಸಲಿಲ್ಲವಾದ್ದರಿಂದ ಈಗ ನೂತನ ದೇಶಾಧಿಪತಿಯಾದ ಫೇಸ್ತನು ಪೌಲನ ಫಿರ್ಯಾದಿಯನ್ನು ಪುನಃ ತೆರೆದು ಆ ವಿಷಯದಲ್ಲಿ ನ್ಯಾಯ ವಿಚಾರಣೆ ಮಾಡುವದು ಅಗತ್ಯವಾಗಿತ್ತು.

---

# ಅಧ್ಯಾಯ - 25

## ಫೇಸ್ತನ ಎದುರಿನಲ್ಲಿ ನ್ಯಾಯ ವಿಚಾರಣೆ (25:1-12)

**1-3** ನೂತನ ದೇಶಾಧಿಪತಿಯಾದ ಫೇಸ್ತನು ಕೈಸರೈಯನ್ನು ತಲುಪಿ ಸ್ವಲ್ಪ ಕಾಲದ ನಂತರ ಯೂದಾಯ ಪ್ರಾಂತ್ಯದ ಮುಖ್ಯ ನಾಗರೀಕರನ್ನು ಬೇಟಿಮಾಡಲು ಯೆರೂಸಲೇಮಿಗೆ ಹೋದನು. ಅಲ್ಲಿರುವ ಯೆಹೂದ್ಯರು ಆ ಅವಕಾಶವನ್ನೇ ಉಪಯೋಗಿಸಿಕೊಂಡು ತಕ್ಷಣವೇ ಹೊಸದಾಗಿಯೂ, ಅನುಭವವಿಲ್ಲದೆಯೂ ಇದ್ದ ದೇಶಾಧಿಪತಿಯ ಮುಂದೆ ಪೌಲನ ಮೇಲೆ ದೂರುಗಳನ್ನು ಹೇಳಲಾರಂಭಿಸಿದರು. ತರುವಾಯ ಪೌಲನನ್ನು ನ್ಯಾಯವಿಚಾರಣೆಗಾಗಿ ತಿರಿಗಿ ಯೆರೂಸಲೇಮಿಗೆ ಕಳುಹಿಸಬೇಕೆಂದು ಅವರು ಫೇಸ್ತನನ್ನು ವಿನಂತಿಸಿಕೊಂಡರು. ಅವರು ಮಾರ್ಗಮಧ್ಯದಲ್ಲಿ ಅಡಗಿಕೊಂಡು ಪೌಲನನ್ನು ಕೊಲ್ಲುವ ಉದ್ದೇಶವನ್ನು ಹೊಂದಿದ್ದರು. ಎರಡು ವರ್ಷಗಳ ಹಿಂದೆ ಯೆಹೂದ್ಯರು ಇದೇ ರೀತಿಯ ಸಂಚನ್ನು ಮಾಡಿ ವಿಫಲರಾಗಿದ್ದರು (ಅ.ಕೃತ್ಯ 23:12-15). ಈ ಸಾರಿ ಅವರ ಸಂಚು ಯಶಸ್ವಿಗೊಳ್ಳುವದೆಂದು ಅವರು ನಿರೀಕ್ಷೆಯನ್ನಿಟ್ಟಿದ್ದರು.

**4-5** ಆದರೆ ಫೇಸ್ತನು ಹೊಸಬನಾಗಿದ್ದ–ನಾದರೂ ಒಬ್ಬ ರೋಮಾಪುರದ ಹಕ್ಕುದಾರನನ್ನು ಈ ಕೋಪಭರಿತ ಯೆಹೂದ್ಯರ ಕೈಗಳಲ್ಲಿ ಒಪ್ಪಿಸಬಾರದೆಂದು ಆತನು ಗ್ರಹಿಸಿಕೊಂಡನು. ಬದಲಾಗಿ, ಆತನು ಕೈಸರೈಯಲ್ಲಿ ಪೌಲನನ್ನು ವಿಚಾರಣೆ ಮಾಡಲು ತಿರ್ಮಾನಿಸಿಕೊಂಡನು.

**6-8** ನ್ಯಾಯ ಸ್ಥಾನವು ಪ್ರಾರಂಭಿಸಲ್ಪಟ್ಟಾಗ ಯೆಹೂದ್ಯರು ಪುನಃ ಪೌಲನ ವಿರುದ್ಧವಾಗಿ ವಿವಿದ ಆರೋಪಗಳನ್ನು ಹೊರಿಸಿದರು. ಆದರೆ ಅವರು ಅವುಗಳಲ್ಲಿ ಒಂದನ್ನೂ ನಿರೂಪಿಸಲಿಲ್ಲ. ಅವರು ಯಾವ ಸಾಕ್ಷಿಗಾರರನ್ನೂ ಒದಗಿಸಲಾಗಲಿಲ್ಲ. ಆರೋಪಗಳನ್ನು ಹೊರಿಸುವದು ಸುಲಭ, ಆದರೆ ಅವುಗಳನ್ನು ನಿರೂಪಿಸುವದು ಅಷ್ಟು ಸುಲಭವಾಗಿರುವದಿಲ್ಲ. ನಾವು ಯಾವ ಆಧಾರವಾಗಿಲಿ, ಸಾಕ್ಷಿಗಳನ್ನಾಗಲಿ ಹೊಂದಿಲ್ಲವಾದರೆ. ಆರೋಪಗಳನ್ನು ಮಾಡುವ ಕೆಲಸವು ನಮಗಿರುವದಿಲ್ಲ (ಮತ್ತಾಯ 18:15-16 ಮತ್ತು ವ್ಯಾಖ್ಯಾನ ನೋಡಿರಿ).

ಪುನಃ ಪೌಲನು ತನ್ನ ವಿರುದ್ದವಾದ ಎಲ್ಲಾ ಆರೋಪಗಳನ್ನು ನಿರಾಕರಿಸಿದನು. ಅದರಲ್ಲಿಯೂ ವಿಶೇಷವಾಗಿ ತಾನು ಕೈಸರನ (ರೋಮಾಯ ಚಕ್ರವರ್ತಿ) ವಿರುದ್ಧವಾಗಿ ಯಾವತಪ್ಪನ್ನಾಗಲಿ ಮಾಡಲಿಲ್ಲ ಎಂದು ಹೇಳಿದನು. ಪೌಲನು ರೋಮಾಯ ಸಾಮ್ರಾಜ್ಯದಲ್ಲೆಲ್ಲಾ ದಂಗೆಗಳನ್ನು ಎಬ್ಬಿಸುತ್ತಿದ್ದಾನೆಂದು ಯೆಹೂದ್ಯರು ಆತನ ವಿರುದ್ಧವಾಗಿ ಮಾಡಿದ ಆರೋಪವನ್ನು ಖಂಡಿಸುವದಕ್ಕಾಗಿ ಪೌಲನು ಇದನ್ನು ಹೇಳಿದ್ದನು (ಅ.ಕೃತ್ಯ 17:5-7, 24:5).

**9** ಫೇಸ್ತನು ತಾನು ದೇಶಾಧಿಪತಿಯಾಗಿದ್ದ ಯೂದಾಯ ಪ್ರಾಂತ್ಯದಲ್ಲಿರುವ ಯೆಹೂದ್ಯರ ಪ್ರೀತಿಯನ್ನು ಸಂಪಾದಿಸಿಕೊಳ್ಳಲು ಬಯಸಿದ್ದನು. ಯೆಹೂದ್ಯರು ಮಾಜಿ ದೇಶಾಧಿಪತಿಯಾದ ಫೇಲಿಕ್ಸನನ್ನು ಬಲವಾಗಿ ವಿರೋಧಿಸಿದ್ದರು. ಮತ್ತು ಯೆಹೂದ್ಯರು ತನ್ನನ್ನು ಅದೇ ರೀತಿಯಲ್ಲಿ ವಿರೋಧಿಸುವದು ಫೇಸ್ತನಿಗೆ ಇಷ್ಟವಿರಲಿಲ್ಲ. ಆದುದರಿಂದ, ಯೆಹೂದ್ಯರನ್ನು ಸಂತೋಷಪಡಿಸುವ ಅವಕಾಶವಿರುವದನ್ನು ಕಂಡ ಫೇಸ್ತನು ಯೆಹೂದ್ಯರ ವಿನಂತಿಯ ಮೇರೆಗೆ ಪೌಲನನ್ನು ವಿಚಾರಣೆಗಾಗಿ ಯೆರೂಸಲೇಮಿಗೆ ಕಳುಹಿಸಲು ಸೂಚಿಸಿದನು.

**10-11** ಆದರೆ ಪೌಲನು ಆ ಸಲಹೆಯನ್ನು ಒಪ್ಪಿಕೊಳ್ಳಲಿಲ್ಲ. ಪೌಲನು "ನಾನು ಚಕ್ರವರ್ತಿಯ ನ್ಯಾಯ ಸ್ಥಾನದ ಮುಂದೆ ನಿಂತಿದ್ದೇನೆ ರೋಮಾಪುರದ ಹಕ್ಕುದಾರನೊಬ್ಬನ ವಿಚಾರಣೆಯು ಕೈಸರನ ನ್ಯಾಯ ಸ್ಥಾನದಲ್ಲಿ ನಡೆಯಬೇಕು ಹೊರತು ಯೆರೂಸಲೇಮಿನಲ್ಲಿ ಅಲ್ಲ" ಎಂದು ಹೇಳಿದನು. ಪೌಲನು ಫೇಸ್ತನ ನ್ಯಾಯ ಸ್ಥಾನವನ್ನು "ಚಕ್ರವರ್ತಿಯ ನ್ಯಾಯ ಸ್ಥಾನ "ಎಂದನು. ಯಾಕೆಂದರೆ ಫೇಸ್ತನು ಯೂದಾಯ ಪ್ರಾಂತ್ಯದಲ್ಲಿ ಚಕ್ರವರ್ತಿಯ ಔಪಚಾರಿಕ ಪ್ರತಿನಿಧಿಯಾಗಿದ್ದನು.

ಯೆಹೂದ್ಯರು ತನ್ನನ್ನು ಕೊಲ್ಲುವದಕ್ಕೆ ಅವಕಾಶವನ್ನು ಹುಡುಕುತ್ತಿದ್ದಾರೆಂದು ಪೌಲನಿಗೆ ಗೊತ್ತಿತ್ತು. ಅವರು ಆತನನ್ನು ಕೊಲ್ಲದಿದ್ದರು ಆತನು ಅಪರಾಧಿಯೆಂದು ತೀರ್ಪು ಮಾಡುವಂತೆ ಫೇಸ್ಥನ ಮನ ಒಲಿಸುವದರಲ್ಲಿ ಯೆಹೂದ್ಯರು ಸಫಲರಾಗಬಹುದೇನೋ ಎಂದು ಪೌಲನು ಹೆದರಿದನು. ಆದುದರಿಂದ ಪೌಲನು ಯೆರೂಸಲೇಮಿಗೆ ಹೋಗುವದು ಬಹಳ ಅಪಾಯಕಾರಿಯಾಗಿತ್ತು.

ಒಂದು ವೇಳೆ ಫೇಸ್ತನು ಪೌಲನನ್ನು ಯೆರೂಸಲೇಮಿಗೆ ಕಳುಹಿಸಿ ಯೆಹೂದ್ಯರನ್ನು ಮೆಚ್ಚಿಸಲು ಮನಸುಳ್ಳವನಾಗಿರುವದಾದರೆ ಆತನು ಕೇವಲ ಯೆಹೂದ್ಯರನ್ನು ಮೆಚ್ಚಿಸುವದಕ್ಕಾಗಿ ಇನ್ನು ಏನೇನು ಮಾಡಬಹುದೆಂದು ಪೌಲನು ಚಿಂತಿತಗೊಂಡನು. ಬಹುಶಃ ಫೇಸ್ತನು ಕ್ರಮೇಣವಾಗಿ ಪೌಲನನ್ನು ಸಂಪೂರ್ಣಅವರ ವಶಕ್ಕೆ ಒಪ್ಪಿಸಲಿದ್ದನು.

ರೋಮಾಪುರದ ಹಕ್ಕುದಾರನಾಗಿ (ಪೌರನಾಗಿ) ಪೌಲನು ಚಕ್ರವರ್ತಿಗೆ ನೇರವಾಗಿ ಮನವಿ ಸಲ್ಲಿಸುವ ಹಕ್ಕನ್ನು ಹೊಂದಿದ್ದನು. ತಾನು ಯೆರೂಸಲೇಮಿಗಿಂತಲೂ ರೋಮಾಪುರದಲ್ಲಿ ನ್ಯಾಯವಾದ ವಿಚಾರಣೆ ಪಡೆಯಬಹುದೆಂದು ತಿಳಿದಿದ್ದ ಪೌಲನು ಚಕ್ರವರ್ತಿಗೆ ಮನವಿ ಮಾಡಲು ನಿರ್ಧರಿಸಿದನು, ಹೀಗೆ ಫೇಸ್ತನು ಅವನ ವಿಚಾರಣೆಯನ್ನು ರೋಮಾಪುರಕ್ಕೆ ವರ್ಗಾಯಿಸುವಂತೆ ಒತ್ತಡ ತಂದನು.

ಆ ಸಮಯದಲ್ಲಿ ಅಂದರೆ, ಕ್ರಿ.ಶಕ. 59 ರಲ್ಲಿ ನೀರೋ [107] ರೋಮಾಯದ ಚಕ್ರರ್ತಿಯಾಗಿದ್ದನು. ನಿರೋ ತನ್ನ ಆಳಿಕೆಯ ಪ್ರಾರಂಭದಲ್ಲಿ ಅಷ್ಟೊಂದು ದುಷ್ಟನಂತೆ ಕಾಣಿಸಲಿಲ್ಲ. ಆದುದರಿಂದ, ಆತನು ಪೌಲನ ವಿಚಾರಣೆಯನ್ನು ನ್ಯಾಯವಾಗಿಯೇ ಮಾಡುವನೆಂದು ನಿರೀಕ್ಷಿಸಿದ್ದರಲ್ಲಿ ತಪ್ಪಿರುವದಿಲ್ಲ. ಆದರೆ ಕ್ರಿ.ಶಕ. 62 ರ ನಂತರ ನಿರೋ ರೋಮಾಯ ಸಾಮ್ರಾಜ್ಯದಲ್ಲೆಲ್ಲಾ[108] ಇರುವ ಕ್ರೈಸ್ತರೆಲ್ಲರನ್ನು ಕಠಿಣವಾಗಿ ಹಿಂಸಿಸಲು ಪ್ರಾರಂಭಿಸಿದನು ಆತನು ಅವರನ್ನು ಬಂದಿಸಿ ಸಿಂಹಗಳಿಗೆ ಆಹಾರವಾಗಿ ಮಾಡಿದನು. ನಿರೋ ಮತ್ತು ಆತನ ಆಸ್ಥಾನಿಕರು ಮನರಂಜನೆಗಾಗಿ ಒಂದು ಬೃಹತ್ ಕ್ರೀಡಾಂಗಣದಲ್ಲಿ ಸಿಂಹಗಳು ಕ್ರೈಸ್ತರನ್ನು ನುಂಗುವದನ್ನು ನೋಡುವದಕ್ಕೆ ಹೋಗುತ್ತಿದ್ದರು. ( ಆ ಕ್ರೀಡಾಂಗಣವು ಈ ದಿನವೂ ರೋಮಿನಲ್ಲಿ ಇರುತ್ತದೆ).ರೋಮಾಯ ಚಕ್ರವರ್ತಿಗಳಲೆಲ್ಲಾ ನಿರೋ ಅತ್ಯಂತ ಕ್ರೂರ ಹಾಗು ದುಷ್ಟ ಚಕ್ರವರ್ತಿಯಾಗಿದ್ದನೆಂಬದನ್ನು ಇತರ ಐತಿಹಾಸಿಕ ಪುಸ್ತಕಗಳಿಂದ ನಮಗೆ ತಿಳಿದು ಬರುತ್ತದೆ. ಆದರೆ ಪೌಲನು ನಿರೋವಿಗೆ ತನ್ನ ಮನವಿಯನ್ನು ಮಾಡಿದಾಗ ಆ ವಿಷಯವನ್ನು ತಿಳಿದಿರಲಿಕ್ಕಿಲ್ಲ.

**12** ಪೌಲನು ಚಕ್ರವರ್ತಿಗೆ ಮನವಿ ಮಾಡಿದ್ದಕ್ಕೆ ಫೇಸ್ತನು ನಿಶ್ಚಯವಾಗಿಯೂ ಸಂತೋಷಗೊಂಡಿರುತ್ತಾನೆ, ಯಾಕೆಂದರೆ ಇನ್ನು ಆತನು ಅಂತಹ ಕಠಿಣವಾದ ಫಿರ್ಯಾದಿಯೊಂದಿಗೆ ಕಷ್ಟಪಡಬೇಕಾಗಿದ್ದಿಲ್ಲ.

## ಫೇಸ್ತನು ಅರಸನಾದ ಅಗ್ರಿಪ್ಪನನ್ನು ಸಂಪರ್ಕಿಸಿದ್ದು (25:13-27)

**13** ಅಗ್ರಿಪ್ಪರಾಜನು ಅಪೊಸ್ತಲರ ಕೃತ್ಯಗಳು 12ನೇ ಅಧ್ಯಾಯದಲ್ಲಿ ಉಲ್ಲೇಖಿಸಲ್ಪಟ್ಟಿರುವ ಹೆರೋದ ಅರಸನ ಮಗನಾಗಿರುತ್ತಾನೆ. ಅಲ್ಲದೆ ಆತನು ಫೇಲಿಕ್ಸನ ಹೆಂಡತಿಯಾದ ದ್ರೂಸಿಲ್ಲಳ ಸಹೋದರನು ಸಹ ಆಗಿದ್ದನು (ಅ.ಕೃತ್ಯ 24:24). ರೋಮಾಯ ಚಕ್ರವರ್ತಿಯು ಯೂದಾಯದ ಉತ್ತರ ಪ್ರಾಂತ್ಯದ ಚಿಕ್ಕ ರಾಜ್ಯವನ್ನು [109] ಅಗ್ರಿಪ್ಪನಿಗೆ ಕೊಟ್ಟಿದ್ದನು, ಮತ್ತು

ಅಗ್ರಿಪ್ಪನು ಅಲ್ಲಿ ಚಕ್ರವರ್ತಿಯ ಅಧಿಕಾರದಡಿಯಲ್ಲಿ ಆಳುತ್ತಿದ್ದನು. ರೋಮಾಯ ದೇಶಾಧಿಪತಿಯಾದ ಫೇಸ್ತನು ಕೈಸರೈದಲ್ಲಿರುವ ತನ್ನ ನಿವಾಸವನ್ನು ತಲುಪಿದ ತಕ್ಷಣವೇ ಅಗ್ರಿಪ್ಪರಾಜನು ತನ್ನ ಸಹೋದರಿಯಾದ ಬೆರ್ನಿಕೆಯೊಂದಿಗೆ ಫೇಸ್ತನನ್ನು ಸ್ವಾಗತಿಸುವದಕ್ಕಾಗಿ ಕೈಸರೈಕ್ಕೆ ಹೋದರು.

**14-21** ಅಗ್ರಿಪ್ಪನು ಸ್ವತಃ ಒಬ್ಬ ಯೆಹೂದ್ಯನಾಗಿದ್ದು ಯೆಹೂದ್ಯ ಪದ್ಧತಿಗಳ ಬಗ್ಗೆ ಫೇಸ್ತನಿಗಿಂತಲೂ ಹೆಚ್ಚಾಗಿ ತಿಳಿದವನಾಗಿದ್ದನು. ಆದುದರಿಂದ ಫೇಸ್ತನು ಅವಕಾಶವನ್ನು ಉಪಯೋಗಿಸಿಕೊಂಡು ಪೌಲನ ವಿಷಯವಾಗಿ ಅಗ್ರಿಪ್ಪನ ಜೊತೆಯಲ್ಲಿ ಚರ್ಚಿಸಿದನು. ಈ ಭಾಗದಲ್ಲಿ, ಅಲ್ಲಿಯ ತನಕವೂ ಪೌಲನ ವಿಷಯದಲ್ಲಿ ಏನೇನು ಜರುಗಿತೆಂಬದನ್ನು ಫೇಸ್ತನು ಜ್ಞಾಪಕಕ್ಕೆ ತರುತ್ತಾನೆ. ಯೆಹೂದ್ಯರು ಪೌಲನ ಕುರಿತಾಗಿ ಅಂತಹ ಕೆಟ್ಟ ಸಂಗತಿಗಳನ್ನು ಹೇಳಿದ್ದರಿಂದ ಅವನು ಯಾವದೋ ದೊಡ್ಡ ಅಪರಾಧವನ್ನು ಮಾಡಿರಬೇಕೆಂದು ಪೇಸ್ತನು ಊಹಿಸಿಕೊಂಡನು. ಆದರೆ ಫೇಸ್ತನು ಪೌಲನನ್ನು ವಿಚಾರಣೆ ಮಾಡಿದಾಗ ಅವನಲ್ಲಿ ಯಾವ ಅಪರಾಧವನ್ನೂ ಕಂಡು ಕೊಳ್ಳಲಿಲ್ಲ. ಆದುದರಿಂದ ಪೌಲನ ಫಿರ್ಯಾದೆಯು ಕೇವಲ ಯೆಹೂದ್ಯರ ಧಾರ್ಮಿಕ ವಿಷಯಗಳ ಕುರಿತಾದ ವಾಗ್ವಾದವನ್ನೊಳಗೊಂಡಿದೆ ಎಂದು ಆತನು ತಿರ್ಮಾನಿಸಿಕೊಂಡನು (ಅ.ಕೃತ್ಯ 18:14-16 ನೋಡಿರಿ).

**22** ಫೇಸ್ತನು ಹೇಳಿದ ಸಂಗತಿಯನ್ನು ಕೇಳಿದ ಅಗ್ರಿಪ್ಪನು ತಾನು ಪೌಲನನ್ನು ನೋಡಬೇಕೆಂದು ಹೇಳಿದನು. ಸತ್ತು ಹೋದಂಥ ಮತ್ತು ಪೌಲನು ಹೇಳುವಂತೆ ಜೀವಿತನಾಗಿದ್ದ ಯೇಸುವಿನ ವಿಷಯವಾಗಿ ಅಗ್ರಿಪ್ಪನು ಖಂಡಿತವಾಗಿಯೂ ಕೇಳಿರುತ್ತಾನೆಂಬದರಲ್ಲಿ ಯಾವ ಸಂಶಯವಿಲ್ಲ (ವಚನ 19). ಈಗ ಅಗ್ರಿಪ್ಪನು ಇನ್ನು ಹೆಚ್ಚಾಗಿ ಕೇಳಲು ಬಯಸಿದ್ದನು.

**23** ಮರುದಿನ ಅಗ್ರಿಪ್ಪರಾಜನೂ ಬೆರ್ನಿಕೆಯೂ ಬಹು ಆಡಂಬರದಿಂದ ಬಂದರು. ನಾವು ಸಭಾಸ್ಥಾನದೊಳಗಿನ ದೃಶ್ಯವನ್ನು ಊಹಿಸಿಕೊಳ್ಳಬಹುದು. ಒಂದು ಬದಿಯಲ್ಲಿ ಅಗ್ರಿಪ್ಪರಾಜ, ದೇಶಾಧಿಪತಿಯಾದ ಫೇಸ್ತ ಮತ್ತು ಸಹಸ್ರಾಧಿಪತಿಗಳು ಹಾಗು ಪಟ್ಟಣದ ಮುಖಂಡರು – ಎಲ್ಲರೂ ಅತ್ಯಂತ ಪ್ರಾಮುಖ್ಯ ಜನರಾಗಿದ್ದರು. ಇನ್ನೊಂದು ಬದಿಯಲ್ಲಿ ಸರಪಳಿಗಳಿಂದ ಬಂಧಿತನಾದ ಯೆಹೂದ್ಯ ಕೈದಿಯೊಬ್ಬನು ಒಂಟಿಗನಾಗಿದ್ದಾನೆ. ಆದಾಗ್ಯು ನಾವು ಕೇಳಬೇಕಾದದ್ದೇನೆಂದರೆ: ಆ ಸಭಾಸ್ಥಾನದೊಳಗೆ ದೇವರ ದೃಷ್ಟಿಯಲ್ಲಿ ಯಾರು ಅತ್ಯಂತ ಪ್ರಾಮುಖ್ಯವಾಗಿದ್ದರು? ಈದಿನ ಪೌಲನು ಮಾತ್ರವೇ ಪ್ರಸಿದ್ಧನಾಗಿರುತ್ತಾನೆ. ಅಗ್ರಿಪ್ಪ ಹಾಗು ಫೇಸ್ತರು ಕ್ಷಣಕಾಲ ಪೌಲನ ಜೊತೆಯಲ್ಲಿದ್ದರೆಂಬ ಒಂದೇ ಕಾರಣಕ್ಕಾಗಿ ನಾವು ಅವರನ್ನು ಜ್ಞಾಪಿಸಿಕೊಳ್ಳುತ್ತೇವೆ. ಇಲ್ಲವಾದರೆ ಅವರ ಹೆಸರುಗಳ ಗುರುತು ಸಹ ನಮಗಿರುತ್ತಿದ್ದಿಲ್ಲ! ದೇವರು ಬಲಿಷ್ಟರನ್ನು ನಾಚಿಕೆ ಪಡಿಸುವದಕ್ಕಾಗಿ ಈ ಲೋಕದ ಬಲಹೀನರನ್ನು ಆರಿಸಿಕೊಂಡಿದ್ದಾನೆ, ದೇವರು ಈ ಲೋಕದ ಕುಲಹೀನರನ್ನೂ ಅಸಡ್ಡೆಯಾದವರನ್ನು ಆರಿಸಿಕೊಂಡಿದ್ದಲ್ಲದೆ ಗಣ್ಯರನ್ನು ಇಲ್ಲದಂತೆ ಮಾಡುವದಕ್ಕಾಗಿ ಗಣನೆಗೆ ಬಾರದವರನ್ನು ಆರಿಸಿಕೊಂಡಿದ್ದಾನೆ. ಹೀಗಿರಲು ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ (1 ಕೊರಿಂಥ 1:27-2)

**24-25** ರೋಮಾಯ ಅಧಿಕಾರಿಗಳು ಪೌಲನಲ್ಲಿ ಯಾವ ಅಪರಾಧವನ್ನೂ ಕಂಡು ಕೊಳ್ಳಲಾಗಲಿಲ್ಲ ಎಂಬದನ್ನು ಇಲ್ಲಿ ಪುನಃ ನಾವು ನೋಡುತ್ತೇವೆ (ಅ.ಕೃತ್ಯ 26:30-32 ನೋಡಿರಿ).

**26-27** ಯೆಹೂದ್ಯರು ಪೌಲನ ವಿರುದ್ಧವಾಗಿ ಮಾಡಿದ ಆರೋಪಗಳನ್ನು ಪೇಸ್ತನು ಅರ್ಥಮಾಡಿಕೊಳ್ಳಲು ಶಕ್ತನಾಗಲಿಲ್ಲ. ಆತನು ಪೌಲನ ಜೊತೆಯಲ್ಲಿ ಈ ಆರೋಪಗಳನ್ನು ರೋಮಾಪುರಕ್ಕೆ ಕಳುಹಿಸಬೇಕಾಗಿತ್ತು, ಆದರೆ ಏನನ್ನು ಬರೆಯ ಬೇಕೆಂಬುದು ಆತನಿಗೆ ತಿಳಿಯಲಿಲ್ಲ. ಆದ್ದರಿಂದ ಬರೆಯುವದಕ್ಕೆ ಏನಾದರೂ ಸಿಕ್ಕೀತೆಂದು ಪೌಲನ ವಿಚಾರಣೆಮಾಡುವಂತೆ ಆತನು ಅಗ್ರಿಪ್ಪನನ್ನು ಕೇಳಿಕೊಂಡನು.

---

## ಅಧ್ಯಾಯ - 26

### ಅಗ್ರಿಪ್ಪನ ಎದುರಿನಲ್ಲಿ ಪೌಲನು (26:1-8)

**1-3** ಪೌಲನು ಇದಕ್ಕೆ ಮುಂಚೆ 22:1-21ರಲ್ಲಿ ಯೆಹೂದ್ಯ ಜನಸಮೂಹ ಮುಂದೆ ಮಾತಾಡಿದ ರೀತಿಯಲ್ಲಿಯೇ ಈ 26ನೇ ಅಧ್ಯಾಯದಲ್ಲಿಯೂ ಸಹ ಅಗ್ರಿಪ್ಪನ ಎದುರಿನಲ್ಲಿ ತನ್ನ ಪರವಾಗಿ ವಾದಿಸುತ್ತಿದ್ದಾನೆ.

ಈ ಅಧ್ಯಾಯದಲ್ಲಿ ಲೂಕನು ಮೂರನೆಯ ಬಾರಿಗೆ ಪೌಲನ ಧಾರ್ಮಿಕ ಪರಿವರ್ತನೆಯ ಬಗ್ಗೆ ಬಣ್ಣಿಸುತ್ತಾನೆ. ಲೂಕನು ನಮಗೆ ಈ ಕಥೆಯನ್ನು ಮೂರು ಸಾರಿ ತಿಳಿಸುವದರ ಕಾರಣವನ್ನು ಊಹಿಸಿಕೊಳ್ಳುವದು ಕಠಿಣವೇನು: ಇಡೀ ಕ್ರೈಸ್ತ ಇತಿಹಾಸದಲ್ಲಿಯೇ ಕ್ರಿಸ್ತನ ಮರಣ ಮತ್ತು ಪುನರುತ್ಥಾನಗಳ ತರುವಾಯ ಅಪೊಸ್ತಲನಾದ ಪೌಲನ ಮಾನಸಾಂತರಕ್ಕಿಂತಲೂ ಪ್ರಾಮುಖ್ಯವಾದ ಘಟನೆ ಮತ್ತೊಂದಿರುವದಿಲ್ಲ (ಅ.ಕೃತ್ಯ 1-19 ಮತ್ತು ವ್ಯಾಖ್ಯಾನ ನೋಡಿರಿ).

**4-5** ಪೌಲನು ತನ್ನ ಮಾನಸಾಂತರಕ್ಕೆ ಮುಂಚೆ ಒಬ್ಬ ಕಟ್ಟುನಿಟ್ಟಿನ ಫರಿಸಾಯನಾಗಿ ಜೀವಿಸಿದನೆಂಬದನ್ನು ಪ್ರತಿಯೊಬ್ಬರು ತಿಳಿದವರಾಗಿದ್ದರು (ಅ.ಕೃತ್ಯ 22:3, ಗಲಾತ್ಯ 1:13-14 ನೋಡಿರಿ). ಯೆಹೂದ್ಯ ಧರ್ಮಶಾಸ್ತ್ರದ ವಿಷಯದಲ್ಲಿ ಪೌಲನು ನಿರ್ದೋಷಿಯಾಗಿದ್ದನು (ಫಿಲಿಪ್ಪಿ 3:4-6 ನೋಡಿರಿ).

**6** ಇಲ್ಲಿ ಪೌಲನು ಪುನಃ ತಾನು ದೇವರವಾಗ್ದಾನದಲ್ಲಿ – ಅಂದರೆ, ದೇಹದ ಪುನರುತ್ಥಾನದಲ್ಲಿ – ನಿರೀಕ್ಷೆಯನ್ನಿಟ್ಟ ಕಾರಣಕ್ಕಾಗಿಯೇ ವಿಚಾರಣೆಯಲ್ಲಿದ್ದಾನೆಂಬದನ್ನು ತಿಳಿಸುತ್ತಾನೆ (ಅ.ಕೃತ್ಯ 23:6 ನೋಡಿರಿ). ದೇವರು ಯೆಹೂದ್ಯರ ಪಿತೃವಾದ

ಅಬ್ರಹಾಮನಿಗೆ " ನಿನ್ನ ಮೂಲಕವಾಗಿ ಎಲ್ಲಾ ಜನಂಗಗಳಿಗೂ ಆಶೀರ್ವಾದವು ಂಟಾಗುವದು" ಎಂದು ವಾಗ್ದಾನ ಮಾಡಿದನು (ಆದಿಕಾಂಡ 12:2-3) ಆ ವಾಗ್ದಾನವು ಕ್ರಿಸ್ತನಿಂದ, ಆದರಲ್ಲೂ ವಿಶೇಷವಾಗಿ ಆತನ ಪುನರುತ್ಥಾನದಿಂದ ನೆರವೇರಿಸಲ್ಪಟ್ಟಿತು. ದೇವರು ನಮಗೆ ನಿತ್ಯಜೀವವನ್ನು ಅನುಗ್ರಹಿಸಿದನು, ಆ ಜೀವವು ಆತನ ಮಗನಲ್ಲಿ ಅದೆ (1 ಯೋಹಾನ 5:11).

**7-8** ದೇಹದ ಪುನರುತ್ಥಾನದ ಜೊತೆಯಲ್ಲಿ ನಿತ್ಯ ಜೀವವು ಯೆಹೂದ್ಯ ಜನಾಂಗದ ಮುಖ್ಯ ನಿರೀಕ್ಷೆಯಾಗಿದೆ ಎಂದು ಪೌಲನು ಹೇಳುತ್ತಾನೆ. ಆದಿಯಿಂದಲೂ ಇಸ್ರಾಯೇಲಿನ ಹನ್ನೆರಡು ಕುಲದವರು [110] ಈ ವಾಗ್ದಾನದ – ದೇಹದ ಪುನರುತ್ಥಾನ ಮತ್ತು ನಿತ್ಯ ಜೀವದ ವಾಗ್ದಾನ – ನೆರವೇರಿಕೆಯನ್ನು ನಿರೀಕ್ಷಿಸಿಕೊಂಡಿದ್ದರು. ದೇವರು ಸತ್ತವರನ್ನು ಎಬ್ಬಿಸುತ್ತಾನೆಂಬದನ್ನು ನಂಬುವದು ಅಷ್ಟೊಂದು ಕಠಿಣವೇಕೆ? ಎಂದು ಪೌಲನು ಕೇಳುತ್ತಾನೆ (ವಚನ 8). ಕೆಲವು ವರ್ಷಗಳ ಹಿಂದೆಯಷ್ಟೇ ದೇವರು ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದ್ದನು. ಈ ಯೇಸುವೇ ಯೆಹೂದ್ಯರ ನಿರೀಕ್ಷೆಯ ನೆರವೇರಿಕೆಯಾಗಿದ್ದಾನೆ. ಯೆಹೂದ್ಯರು ಹೊಂದಿರುವ ನಿರೀಕ್ಷೆಯನ್ನೇ ಪೌಲನೂ ಹೊಂದಿರುವಾಗ ಅವರು ಆತನ ಮೇಲೆ ಏಕೆ ತಪ್ಪು ಹೊರಿಸಬೇಕು? ಅವರು ನಂಬಿದ್ದ ವಾಗ್ದಾನವನ್ನೇ ಪೌಲನು ನಂಬಿದ್ದನು. (ಅ.ಕೃತ್ಯ.24:15). ಪೌಲ ಹಾಗು ಈ ಯೆಹೂದ್ಯರ ನಡುವೆ ಒಂದೇ ಒಂದು ವ್ಯತ್ಯಾಸವಿತ್ತು: ಆ ವಾಗ್ದಾನವು ನೆರವೇರಿರುವದನ್ನು ಪೌಲನು ತಿಳಿದಿದ್ದನು ಆದರೆ ಯೆಹೂದ್ಯರು ತಿಳಿದಿರಲಿಲ್ಲ.

## ಪೌಲನ ಮಾನಸಾಂತರ (26:9-23)

**9-11** ಪೌಲನು ಸ್ವತಃ ತನ್ನ ಪರಿವರ್ತನೆಗೆ ಮುಂಚೆ ಯೇಸು ಸತ್ತವರೊಳಗಿಂದ ಎದ್ದು ಬಂದನೆಂಬದನ್ನು ನಂಬಲಿಲ್ಲ. ಯೇಸುವಿನ ಹಿಂಬಾಲಕರನ್ನು ಆತನು ಯೆಹೂದ್ಯ ಧರ್ಮದ ವೈರಿಗಳೆಂದು ಪರಿಗಣಿಸಿದ್ದನು. ವಚನ 10ರಲ್ಲಿ ಪೌಲನು ಹೇಳುವದೇನೆಂದರೆ : "ದೇವಜನರಲ್ಲಿ ಅನೇಕರನ್ನು ಸೆರೆಮನೆಗಳಲ್ಲಿ ಇಡಿಸಿ ಅವರಿಗೆ ಮರಣದ ತೀರ್ಪಾದಾಗ ನನ್ನ ಸಮ್ಮತಿಯನ್ನು ಸೂಚಿಸಿದೆನು" (ಅ.ಕೃತ್ಯ 7:60, 8:3, 9:1, 22:4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**12-15** ಈ ವಚನಗಳಲ್ಲಿ ಬರೆಯಲ್ಪಟ್ಟಿರುವದೆಲ್ಲವು ಇದಕ್ಕೆ ಮುಂಚೆ ಅಪೊಸ್ತಲರ ವ್ಯಾಖ್ಯಾನಗಳನ್ನು 9 ಮತ್ತು 22ನೇ ಅಧ್ಯಾಯಗಳಲ್ಲಿ ಬರೆಯಲ್ಪಟ್ಟಿರುತ್ತದೆ (ಅ.ಕೃತ್ಯ 9:2-5, 22:5-8 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). 14ನೇ ವಚನದ ಪ್ರಕಾರವಾಗಿ ಯೇಸು ಪೌಲನಿಗೆ "ಮುಳ್ಳುಗೋಲನ್ನು ಒದೆಯುವದು ನಿನಗೆ ಕಷ್ಟ" ಎಂದು ಹೇಳಿದನು. ಇಲ್ಲಿ ಸೂಚಿಸಲಾಗಿರುವ ಮುಳ್ಳುಗೋಲು ಪ್ರಾಣಿಗಳನ್ನು ಹೊಡೆಯಲು ಅಥವಾ ತಿವಿಯಲು ಉಪಯೋಗಿಸಲ್ಪಡುತ್ತಿತ್ತು. ಇಲ್ಲಿ ಯೇಸು ಸಾಮ್ಯರೂಪವಾಗಿ ಮಾತಾಡುತ್ತಿದ್ದು ಅದರ ಪ್ರಕಾರವಾಗಿ ಮುಳ್ಳುಗೋಲು ಪೌಲನ ಮನಸ್ಸಾಕ್ಷಿಯಾಗಿರುತ್ತದೆ. ಪೌಲನು ತನ್ನ ಮನಸ್ಸಾಕ್ಷಿಯಲ್ಲಿ ಕ್ರಿಸ್ತನ ಮಾರ್ಗವು ಸರಿಯಾದದ್ದೆಂದು ಅಂದುಕೊಂಡನು, ಆದರೆ ಹೇಗೂ ಆತನು ಕ್ರಿಸ್ತನನ್ನು ವಿರೋಧಿಸುತ್ತಲಿದ್ದನು. ಪೌಲನು ನೇಗಿಲನ್ನು ಎಳೆಯುವ ಎತ್ತಿನಂತಿದ್ದು ರೈತನು ಅದನ್ನು ಮುಳ್ಳುಗೋಲಿನಿಂದ ಹೊಡೆಯುವಾಗ ಅದು ತನ್ನ ಕಾಲನ್ನು ಒದೆಯುವುದಾಗಿದೆ. ಎತ್ತು ವ್ಯರ್ಥವಾಗಿ ತನ್ನ ಕಾಲನ್ನು ಒದೆಯುವಂತೆಯೆ ಪೌಲನು ಕ್ರಿಸ್ತನ ವಿರುದ್ಧವಾಗಿ ತನ್ನ ಕಾಲನ್ನು ವ್ಯರ್ಥವಾಗಿ ಒದೆಯುತ್ತಲಿದ್ದನು. ಇದು ಕ್ರಿಸ್ತನ ವಿರೋಧಿಸುವದನ್ನು ನಿಲ್ಲಿಸಿ ಆತನನ್ನು ಹಿಂಬಾಲಿಸಲು ಪ್ರಾರಂಬಿಸುವ ಸಮಯವಾಗಿತ್ತು.

ಪೌಲನು, "ಕರ್ತನೇ, ನೀನಾರು?" ಎಂದು ಕೇಳಿದನು (ವಚನ 15), ಯೇಸು ಸತ್ತು ಹೂಣಲ್ಪಟ್ಟಿದ್ದಾನೆಂದು ಪೌಲನು ಊಹಿಸಿಕೊಂಡಿದ್ದನು. ಈಗ ಆತನು ಆಕಾಶದಿಂದ ಯೇಸು ಮಾತಾಡುವದನ್ನು ಕೇಳುತ್ತಾನೆ!.

**16-18** ಬಳಿಕ ಯೇಸು ಪೌಲನನ್ನು ಅನ್ಯ ಜನರಿಗೆ ಅಪೊಸ್ತಲನಾಗಿರುವಂತೆ ನೇಮಿಸುತ್ತಾನೆ (ಅ.ಕೃತ್ಯ 9:15, 22:14-15 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಯೇಸು ಮೊದಲ ಪೌಲನನ್ನು ಸೇವಕನಾಗಿ ನೇಮಿಸಿದನು (ವಚನ 16). ಪೌಲನು ಹಲವಾರು ವೇಳೆ ತನ್ನನ್ನು ಕ್ರಿಸ್ತನ ಸೇವಕ ಎಂದು ಕರೆದುಕೊಂಡನು (ರೋಮ 1:1 ಮತ್ತು ವ್ಯಾಖ್ಯಾನ ನೋಡಿರಿ). ಆದರ ನಂತರ ಯೇಸು ಪೌಲನನ್ನು ಸಾಕ್ಷಿಯಾಗಿ ನೇಮಿಸಿದನು (ಅ.ಕೃತ್ಯ 1:8 ನೋಡಿರಿ).ಅಂದಿನಿಂದ ಪೌಲನು ತನ್ನ ಜೀವಿತವನ್ನು ಸುವಾರ್ತೆ ಸಾರುವದಕ್ಕಾಗಿ ಪ್ರತ್ಯೇಕಿಸಬೇಕಾಗಿತ್ತು (1 ಕೊರಿಂಥ 9:16, ಗಲಾತ್ಯ 1:11-12, ಎಫೆಸ 3:7-8 ನೋಡಿರಿ).

ಅ.ಕೃತ್ಯ 9:16ರ ಪ್ರಕಾರವಾಗಿ ಯೇಸು ಅನನೀಯನಿಗೆ "ಅವನು ನನ್ನ ಹೆಸರಿನ ನಿಮಿತ್ತ ಎಷ್ಟು ಹಿಂಸೆ ಅನುಭವಿಸಬೇಕೆಂಬದನ್ನು ನಾನೇ ಅವನಿಗೆ (ಪೌಲನಿಗೆ) ತೋರಿಸುವೆನು" ಎಂದು ಹೇಳಿದನು. ಆದರೆ ಇಲ್ಲಿ, 17ನೇ ವಚನದಲ್ಲಿ ಯೇಸು ಪೌಲನಿಗೆ,"ನಾನು ನಿನ್ನನ್ನು ಇಸ್ರಾಯೇಲ್ ಜನರ ಕೈಯೊಳಗಿಂದಲೂ ಅನ್ಯ ಜನರ ಕೈಯೊಳಗಿಂದಲೂ ಬಿಡಿಸುವೆನು" ಎಂಬ ವಾಗ್ದಾನವನ್ನು ಸಹ ಮಾಡುತ್ತಾನೆ. ಮತ್ತು ಯೇಸು ಎಷ್ಟು ಸಾರಿ ಪೌಲನನ್ನು ಆತನ ವೈರಿಗಳಿಂದ ಬಿಡಿಸುವ ವಾಗ್ದಾನವನ್ನು ಕಾಪಾಡಿಕೊಂಡನೆಂಬದನ್ನು ನಾವು ಹೊಸ ಒಡಂಬಡಿಕೆಯನ್ನು ಓದುವದರಿಂದ ತಿಳಿದುಕೊಂಡಿರುತ್ತೇವೆ! ಅನೇಕ ವೇಳೆಗಳಲ್ಲಿ ದೇವರು ತನ್ನ ಸೇವಕರ ಮೇಲೆ ಸಮಸ್ಯೆ ಹಾಗು ಹಿಂಸೆ ಬರುವಂತೆ ಅನುಮತಿಸುತ್ತಾನೆ ಮತ್ತು ನಂತರ ಅವರನ್ನು ವಿಮೋಚಿಸುವದರ ಮೂಲಕ ತನ್ನ ಶಕ್ತಿ ಹಾಗು ಮಹಿಮೆಯನ್ನು ಪ್ರಕಟಗೊಳಿಸುತ್ತಾನೆ. ಹಲವಾರು ವೇಳೆಗಳಲ್ಲಿ ಪೌಲನ ಅನುಭವವು ಅಂತದ್ದೇ ಆಗಿತ್ತು.

ಯೇಸು ವಿಶೇಷವಾಗಿ ಪೌಲನನ್ನು ಅನ್ಯ ಜನರ ಬಳಿಗೆ ಕಳುಹಿಸಿದನು. ಯಾಕೆ? ಯಾಕೆಂದರೆ ಅವರು ಕತ್ತಲೆಯಿಂದ ಬೆಳಕಿಗೂ ಸೈತಾನನ ಅಧಿಕಾರದಿಂದ ದೇವರ ಕಡೆಗೂ ತಿರಿಗಿಕೊಳ್ಳುವಂತೆ ಅವರ ಕಣ್ಣುಗಳನ್ನು ತೆರೆಯ ಬೇಕೆಂಬುದಕ್ಕಾಗಿಯೇ

(ವಚನ 18). ಪೌಲನು ಪಿಸಿದ್ಯದ ಅಂತಿಯೋಕ್ಯದ ಕುರಿತಾಗಿ ಯೆಹೂದ್ಯರಿಗೆ ಹೇಳಿದ್ದೇನೆಂದರೆ: "ಕರ್ತನು ನಮಗೆ ಅಪ್ಪಣೆಕೊಟ್ಟಿದ್ದಾನೆ ಹೇಗೆಂದರೆ: ನೀನು ಲೋಕದ ಕಟ್ಟಕಡೆಯ ವರೆಗೆ ರಕ್ಷಣೆಯನ್ನು ತರುವಂತೆ ನಿನ್ನನ್ನು ಅನ್ಯ ಜನಾಂಗಗಳಿಗೂ ಬೆಳಕನ್ನಾಗಿನೇಮಿಸಿದ್ದೇನೆ" (ಅಕೃತ್ಯ 13:47).

ಪೌಲನು ಯೇಸುವಿನಿಂದ ಪಡೆದುಕೊಂಡ ನೇಮಕಾತಿಯೂ ಯೇಸು ಸ್ವತಃ ದೇವರಿಂದ ಪಡೆದುಕೊಂಡ ನೇಮಕಾತಿಯು ಒಂದೇ ಆಗಿತ್ತು (ಯೆಶಾಯ 42:1, 6-7, ಅ.ಕೃತ್ಯ 26:23 ನೋಡಿರಿ). ಲೋಕದ ಕಟ್ಟಕಡೆಯ ವರೆಗೆ ರಕ್ಷಣೆಯನ್ನುಂಟು ಮಾಡುವದು ಎಲ್ಲಾ ಅಪೊಸ್ತಲರ ಕೆಲಸ ಮಾತ್ರವೇ ಆಗಿರುವದಿಲ್ಲ, ಇದು ಕ್ರಿಸ್ತನ ಪ್ರತಿಯೊಬ್ಬ ಹಿಂಬಾಲಕನ ಕೆಲಸವೂ ಆಗಿರುತ್ತದೆ. ಯೇಸುವನ್ನು ನಂಬುವ ಪ್ರತಿಯೊಬ್ಬನು ಅನ್ಯ ಜನಾಂಗಗಳಿಗೆ ಬೆಳಕನ್ನಾಗಿ ನೇಮಿಸಲ್ಪಟ್ಟಿರುತ್ತಾನೆ. ಯೇಸುವನ್ನು ನಂಬುವ ಪ್ರತಿಯೊಬ್ಬನೂ ಆತನಿಗೆ ಸಾಕ್ಷಿಯಾಗಿದ್ದಾನೆ. ಒಂದು ವಿಧದಲ್ಲಿ ನಮ್ಮ ಕೆಲಸವು ಸಹ ಆತನ ಕೆಲಸದಂತೆಯೇ – ಮನುಷ್ಯರನ್ನು ದೇವರೊಂದಿಗೆ ಸಂಧಾನ ಗೊಳಿಸುವದು (2 ಕೊರಿಂಥ 5:20), ಮತ್ತು ಅವರನ್ನು ಕತ್ತಲೆಯ ರಾಜ್ಯದಿಂದ ಬಿಡಿಸಿ ಬೆಳಕಿನ ರಾಜ್ಯಕ್ಕೆ ಸೇರಿಸುವದಾಗಿದೆ ಮತ್ತು ಮನುಷ್ಯರು ಕ್ರಿಸ್ತನಲ್ಲಿ ನಂಬಿಕೆಯಿಡುವ ಮೂಲಕ ಸೈತಾನನ ಅಧಿಕಾರದಿಂದ ದೇವರಕಡೆಗೆ ತಿರಿಗಿಕೊಳ್ಳುವಾಗ ಅವರು ಪಾಪಗಳ ಕ್ಷಮಾಪಣೆಯನ್ನು ಪಡೆದುಕೊಳ್ಳುತ್ತಾರೆ (ವಚನ 18). ಅಷ್ಟು ಮಾತ್ರವಲ್ಲದೆ, ಅವರು ಪವಿತ್ರರಾದವರಲ್ಲಿ ಹಕ್ಕನ್ನು ಹೊಂದುತ್ತಾರೆ, ಅಂದರೆ, ಅವರು ದೇವರ ರಾಜ್ಯದ ಪವಿತ್ರ ಪ್ರಜೆಗಳಾಗುವರು.

ಪ್ರಾಥಮಿಕವಾಗಿ ಪೌಲನು ಅನ್ಯಜನರಿಗೆ ಅಪೊಸ್ತಲನಾಗಿ ನೇಮಿಸಲ್ಪಟ್ಟಿದ್ದನು (ಗಲಾತ್ಯ 2:7-8). ಪೌಲನ ಮುಖಾಂತರ ಯೆಹೂದ್ಯರ ಚಿಕ್ಕ ಪಂಗಡವಾಗಿದ್ದ ಕ್ರೈಸ್ತತ್ವವು ಜಗತ್ತಿನಲ್ಲೆಲ್ಲಾ ಎಲ್ಲಾ ಜನರನ್ನು ತಲುಪುವ ಮತವಾಗಿ ಬದಲಾಯಿತು. ಈಗ ಯೆಹೂದ್ಯರು ಮಾತ್ರವಲ್ಲ, ಆದರೆ ಭೂಲೋಕದಲ್ಲಿರುವ ಎಲ್ಲಾ ರಾಷ್ಟ್ರದ ಅನ್ಯ ಜನರೂ ದೇವರ ರಾಜ್ಯದ ಪ್ರಜೆಗಳಾಗುವ ಅವಕಾಶವನ್ನು ಹೊಂದಿರುತ್ತಾರೆ (ಎಫೆಸ 2:11-13, 19, 3:6 ನೋಡಿರಿ).

**19** "ಪರಲೋಕದಿಂದ ನನಗೆ ಉಂಟಾದ ಆದರ್ಶನಕ್ಕೆ ನಾನು ಅವಿಧೇಯನಾಗಲಿಲ್ಲ". ಕ್ರಿಸ್ತನಲ್ಲಿರುವ ಪ್ರತಿಯೊಬ್ಬ ವಿಶ್ವಾಸಿಗೂ ಪರಲೋಕದಿಂದ ದರ್ಶನ ಕೊಡಲ್ಪಟ್ಟಿರುತ್ತದೆ. ಪೌಲನಂತೆ ನಾವೆಲ್ಲರೂ ಆದರ್ಶನಕ್ಕೆ ವಿಧೇಯರಾಗಿರೋಣ.

**20** ಪೌಲನು ಪರಲೋಕದಿಂದ ದರ್ಶನವನ್ನು ಪಡೆದುಕೊಂಡ ಕೂಡಲೆ ಮೊದಲು ದಮಸ್ಕದಲ್ಲಿಯೂ ಬೋಧಿಸಲು ಪ್ರಾರಂಭಿಸಿದನು (ಅ.ಕೃತ್ಯ 9:19-20), ಮತ್ತು ನಂತರ ಯೆರೂಸಲೇಮಿನಲ್ಲಿಯೂ ಬೋಧಿಸಲು ಪ್ರಾರಂಭಿಸಿದನು (ಅ.ಕೃತ್ಯ 9:28). ಆತನ ಸಂದೇಶವು ಸರಳ ಹಾಗು ಸ್ಪಷ್ಟವಾಗಿತ್ತು : "ಪಶ್ಚಾತಾಪ ಪಟ್ಟು ದೇವರ ಕಡೆಗೆ ತಿರಿಗಿಕೊಳ್ಳಿರಿ". ಇಲ್ಲಿ ನಾವು ಪಶ್ಚಾತಾಪದ ಎರಡು ಭಾಗಗಳನ್ನು ನೋಡುತ್ತೇವೆ: ಮೊದಲನೆಯದಾಗಿ ನಮ್ಮ ಪಾಪವನ್ನು ದ್ವೇಷಿಸುವದು, ಮತ್ತು ಎರಡನೆಯದಾಗಿ ನಮ್ಮ ಪಾಪದಿಂದ ತಿರಿಗಿಕೊಳ್ಳುವದು. ಆದರೆ ಅಷ್ಟಕ್ಕೆ ಮುಗಿಯುವದಿಲ್ಲ, ಮಾನಸಾಂತರಕ್ಕೆ ಯೋಗ್ಯವಾದ ಕೃತ್ಯಗಳನ್ನು ಮಾಡುವದರ ಮೂಲಕ ನಿರೂಪಿಸಬೇಕೆಂದು ಪೌಲನು ಜನರಿಗೆ ಹೇಳಿದನು. ಅಂದರೆ. ಮನುಷ್ಯರು ಒಂದು ಮಾರ್ಪಾಟಾದ ಜೀವಿತವನ್ನು ಪ್ರದರ್ಶಿಸುವದರ ಮೂಲಕ ಅವರ ಮಾನಸಾಂತರವು ನಿಜವಾದದ್ದೆಂಬದನ್ನು ತೋರಿಸಬೇಕು (ಮತ್ತಾಯ 3:8 ನೋಡಿರಿ). ನಿಜವಾದ ಮಾನಸಾಂತರವು ಮಾತುಗಳಿಂದಲ್ಲ ಆದರೆ ಕೃತ್ಯಗಳಿಂದ ಕೂಡಿರುತ್ತದೆ. ನಮ್ಮ ನಂಬಿಕೆಗೂ ಇದು ಅನ್ವಯಿಸುತ್ತದೆ. ನಾವು ನಂಬಿಕೆಯ ಮುಖಾಂತರ ರಕ್ಷಿಸಲ್ಪಟ್ಟಿದ್ದೇವೆ, ಆದರೆ ನಿಜ ನಂಬಿಕೆಯು ಯಾವಾಗಲೂ ಸತ್ಕಾರ್ಯಗಳಲ್ಲಿ ತೋರಿಬರುತ್ತದೆ (ಎಫೆಸ 2:9-10, ಯಾಕೋಬ 2:14-17 ಮತ್ತು ವ್ಯಾಖ್ಯಾಗಳನ್ನು ನೋಡಿರಿ). ನಿಜವಾದ ಮಾನಸಾಂತರ ಹಾಗು ನಂಬಿಕೆ ಯಾವಾಗಲೂ ನಮ್ಮ ನಡೆ, ನುಡಿ, ಆಲೋಚನೆಗಳಲ್ಲಿ ಒಂದು ಬದಲಾವಣೆಯನ್ನು ಉಂಟುಮಾಡುತ್ತದೆ.

**21** ಯೆಹೂದ್ಯರು ತಿರಸ್ಕಾರಮಾಡುತ್ತಿದ್ದ ಅನ್ಯ ಜನರ ಮದ್ಯದಲ್ಲಿ ಪೌಲನು ಬೋಧಿಸುತ್ತಿದ್ದನಾದ ಕಾರಣ ಯೆಹೂದ್ಯರು ಅವರನ್ನು ವಿರೋಧಿಸಿದರು. ಪೌಲನು ಅನ್. ಜನರಿಗೆ ರಕ್ಷಣೆಯ ಮಾರ್ಗವನ್ನು ತೋರಿಸಿದ್ದರಿಂದ ಯೆಹೂದ್ಯರು ಹೊಟ್ಟೆಕಿಚ್ಚು ಪಟ್ಟು ಆತನನ್ನು ಕೊಲ್ಲಲು ಬಯಸಿದ್ದರು. ಯೆಹೂದ್ಯರು ದೇವರ ಆಶಿರ್ವಾದವನ್ನು ಯಾರೊಂದಿಗೂ ಹಂಚಿಕೊಳ್ಳಲು ಇಷ್ಟಪಡಲಿಲ್ಲ, ಅದರ ಫಲತವಾಗಿ ಅವರು ಆಶೀರ್ವಾದವನ್ನು ಕಳೆದು ಕೊಂಡರು. ಕ್ರೈಸ್ತರಾದ ನಾವು ಅದೇ ತಪ್ಪನ್ನು ಮಾಡದಿರೋ!

**22-23** ಪೌಲನಿ ಯೆಹೂದ್ಯರನ್ನಾಗಲಿ, ಅವರ ಶಾಸ್ತ್ರಗಳನ್ನು, ಅಂದರೆ ಹಳೆ ಒಡಂಬಡಿಕೆಯನ್ನಾಗಲಿ ವಿರೋಧಿಸುವವನಾಗಿರಲಿಲ್ಲ (ಅ.ಕೃತ್ಯ 24:14). ಪೌಲನು ಹಳೆ ಒಡಂಬಡಿಕೆಯ ಪ್ರವಾದಿಗಳೂ ಮೋಶೆಯೂ[111] ಬರೆದ ಸಂಗತಿಗಳನ್ನು ಮೀರಿ ಏನನ್ನೂ ಬೋಧಿಸಲಿಲ್ಲ (ಅ.ಕೃತ್ಯ 3:18-21, 3:22). ಕ್ರಿಸ್ತನು ಭಾಧಪಟ್ಟು ಸತ್ತವರೊಳಗಿಂದ ಎದ್ದಳಬೇಕಾಗುವದೆಂದು ಸ್ವತಃ ಮೋಶೆಯೂ ಪ್ರವಾದಿಗಳೂ ಪ್ರವಾದಿಸಿದ್ದರು (ಲೂಕ 24:44-4, ಅ.ಕೃತ್ಯ 17:3 ನೋಡಿರಿ). ಮತ್ತು ಕ್ರಿಸ್ತನು ಯೆಹೂದ್ಯರಿಗೂ ಅನ್ಯ ಜನರಿಗೂ ಬೆಳಕನ್ನು ಪ್ರಸಿದ್ಧಿ ಪಡಿಸುವವನಾಗಿರುವನು ಎಂದು ಸಹ ಹಳೆ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿದೆ (ಯೆಶಾಯ 42:6, 49:6). ಸ್ವತಃ ಯೇಸು ಹೇಳಿದ್ದೇನೆಂದರೆ : "ನಾನೇ ಲೋಕಕ್ಕೆ ಬೆಳಕು, ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವ ಕೊಡುವ ಬೆಳಕನ್ನು ಹೊಂದಿದವನಾಗಿರುವನು" (ಯೋಹಾನ 8:12).

## ಪೌಲನು ಫೇಸ್ತ ಹಾಗು ಅಗ್ರಿಪ್ಪನೊಂದಿಗೆ ಚರ್ಚಿಸಿದ್ದು (26:24-32)

**24** ಪೌಲನಂತಹ ವಿಧ್ಯಾಪಾರಂಗ-ತನೊಬ್ಬನು ಯೇಸುವೆಂಬ ಸತ್ತವ್ಯಕ್ತಿಗೋಸ್ಕರವಾಗಿ ತನ್ನ ಸ್ವಾತಂತ್ರವನ್ನು ತೊರೆದು ಬಿಟ್ಟು ಪ್ರಾಣವನ್ನು ನೀಡಲು ಏಕೆ ಮನಸ್ಸುಮಾಡಿರುವನೆಂದು ಫೇಸ್ತನಿಗೆ ಅರ್ಥಮಾಡಿ ಕೊಳ್ಳಲಾಗಲಿಲ್ಲ. ಪೌಲನು ಖಂಡಿತವಾಗಿಯೂ ಮೂರ್ಖನು ಎಂದು ಫೇಸ್ತನು ಅಂದುಕೊಂಡನು.

**25-27** ಆದರೆ ಪೌಲನು ಮೂರ್ಖನಾಗಿರಲಿಲ್ಲ. ಯೇಸುವಿನ ವಿಷಯವಾದ ಈ ಎಲ್ಲಾ ಸಂಗತಿಗಳು ಹಳೆ ಒಡಂಬಡಿಕೆಯಲ್ಲಿ ಸ್ಪಷ್ಟವಾಗಿ ಮುಂತಿಳಿಸಲ್ಪಟ್ಟಿದ್ದವು . ಯೇಸುವಿನ ಜೀವಿತಕಾಲದಲ್ಲಿ ಏನು ಸಂಭವಿಸಿತೆಂಬದು ಸಾವಿರಾರು ಜನರಿಗೆ ತಿಲಿದಿತ್ತು. ಯೇಸು ಹಳೆ ಒಡಂಬಡಿಕೆಯ ಪ್ರವಾದಿಗಳಿಂದ ಬಣ್ಣಿಸಲ್ಪಟ್ಟಿರುವ ರಕ್ಷಕನಾಗಿದ್ದನೆಂಬುದು ಸ್ಪಷ್ಟವಾಗಿತ್ತು. ಅರಸನಾದ ಅಗ್ರಿಪ್ಪನಿಗೆ ಪ್ರವಾದಿಗಳಲ್ಲಿ ನಂಬಿಕೆಯಿತ್ತು. ಪೌಲನು ಮರುಳಾಗಿಲ್ಲ ಎಂದನ್ನು ಆತನು ತಿಲಿಯುವವನಾಗಿದ್ದನು. ಪೇಸ್ತನು ಅವನನ್ನು ಕೇಳಲಿ.

"ಅಗ್ರಿಪ್ಪರಾಜನೇ, ಪ್ರವಾದಿಗಳಲ್ಲಿ ನಿನಗೆ ನಂಬಿಕೆಯುಂಟೋ? ಉಂಟೆಂದು ಬಲ್ಲೆನು" ಎಂದು ಪೌಲನು ಹೇಳಿದನು (ವಚನ 27).

**28** ಅಗ್ರಿಪ್ಪನು ಹೇಗೆ ಉತ್ತರಿಸಬೇಕೆದಂದು ತಿಳಿಯದೆ ಗೊಂದಲಕ್ಕಿಡಾಗಿದ್ದನು. ಆತನು ತಾನು ಪೌಲನ ಪಕ್ಷವನ್ನು ವಹಿಸಿಕೊಳ್ಳುವವನೆಂತೆ ಕಾಣಲು ಇಷ್ಟವಿರಲಿಲ್ಲ, ಯಾಕೆಂದರೆ ಆತನೂ ಮರುಳಾಗಿದ್ದಾನೆಂದು ಫೇಸ್ತನು ಯೋಚಿಸಬಾರದೆಂದು ಬಯಸಿದನು. ಹೇಗಿದ್ದರೂ, ಆತನು ಸ್ವತಃ ತಾನೊನಬ್ಬ ಯೆಹೂದ್ಯನಾಗಿ ದ್ದರಿಂದ ಪ್ರವಾದಿಗಳಿಂದ ಬರೆಯಲ್ಪಟ್ಟಿರುವದನ್ನು ಅಲ್ಲಗಳೆಯಲಾಗಲಿಲ್ಲ. ಆದುದರಿಂದ, ಆತನಿಗೆ ಪ್ರವಾದಿಗಳಲ್ಲಿ ನಂಬಿಕೆಯುಂಟೋ ಎಂದು ಪೌಲನು ಕೇಳಿದ ಪ್ರಶ್ನೆಗೆ ಆತನು ಉತ್ತರಿಸಲಿಲ್ಲ. ಬದಲಾಗಿ ಆತನು ತಮಾಷೆ ಮಾಡುತ್ತಾ ಪ್ರಶ್ನೆಗೆ, ನೀನುವ ನನ್ನನ್ನೂ ಕ್ರೈಸ್ತನನ್ನಾಗಿ ಮಾಡಲು ಪ್ರಯತ್ನಿಸುತ್ತಿರುವೆಯೋ? ಎಂದು ಕೇಳಿದನು.

**29** ಅದಕ್ಕೆ ಪ್ರತ್ಯ ತ್ತರವಾಗಿ ತಮಾಕ್ಷೆಯಿಲ್ಲದೆ ಪೌಲನು ಹೇಳಿದ್ದೇನೆಂದರೆ: "ಹೌದು", ಅಗ್ರಿಪ್ಪನು ಮಾತ್ರವಲ್ಲದೆ ಆ ಕೋಣೆಯಲ್ಲಿರುವ ಪ್ರತಿಯೊಬ್ಬನು ಪೌಲನಂತೆಯೇ – ಬೇಡಿಗಳ ಹೊರತಾಗಿ – ಕ್ರೈಸ್ತನಾ ಬೇಕೆಂದು ಪೌಲನ ಪ್ರಾರ್ಥನೆಯಾಗಿತ್ತು.

**30-32** ಪೌಲನು ಯಾವ ಅಪರಾಧವನ್ನೂ ಮಾಡಲಿಲ್ಲ ಎಂಬದನ್ನು ಪ್ರತಿಯೊಬ್ಬನು ಸ್ಪಷ್ಟವಾಗಿ ಕಾಣಬಹುದಾಗಿತ್ತು. ಅವನನ್ನು ಬಿಟ್ಟು ಬಡಬಹುದಾಗಿತ್ತು. ಆದರೆ ಆತನು ಚಕ್ರವರ್ತಿಗೆ ಫಿರ್ಯಾದಿ ಮಾಡಿದ್ದರಿಂದ ಪೌಲನ ಫಿರ್ಯಾದಿಯು ಫೇಸ್ತಕೈಯಲ್ಲಿರಲಿಲ್ಲ. ಚಕ್ರವರ್ತಿಗೆ ಮನವಿಸಲ್ಲಿಸಿದ ಪೌಲನು ಈಗ ಆತನ ಬಲಿಗೆ ಹೋಗಬೇಕು. ಯೇಸು ಪೌಲನಿಗೆರೋ-ಮಾಪ್ರರದಲ್ಲಿ ತನ್ನ ಕುರಿತಾಗಿ ಸಾಕ್ಷಿ ನೀಡಬೇಕೆಂದು ಹೇಳಿದ್ದನು (ಅ.ಕೃತ್ಯ 23:11). ಈಗ ಯೇಸುವಿನ ಇಚ್ಛೆಯು ನೆರವೇರುವದರಲ್ಲಿತ್ತು.

---

# ಅಧ್ಯಾಯ - 27

## ಪೌಲನು ರೋಮಾಪು ರಕ್ಕೆ ಪ್ರಯಾಣಿಸಿದ್ದು (27:1-12)

**1-2** ಪೌಲನು ಇತಾಲಯಕ್ಕೆ[112] ಮಾಡುತ್ತಿದ್ದ ಸಮುದ್ರಯಾನದಲ್ಲಿ ಲೂಕನು ಅವನೊಂದಿಗಿದ್ದನೆಂದು ನಾವವ ಬಲ್ಲೆವು , ಯಾಕೆಂದರೆ ಪ್ರಯಾಣದ ಬಗ್ಗೆ ವಿವರಿಸುವಾಗಲ್ಲಾ ಲೂಕನು "ನಾವು " ಎಂಬ ಪದವನ್ನು ಉಪಯೋಗಿಸುತ್ತಾನೆ: ನಾವು ...ಒಂದು ಹಡಗನ್ನು ಹತ್ತಿ ಸಮುದ್ರ ಪ್ರಯಾಣವನ್ನು ಪ್ರರಂಭಸಿದೆವು (ವಚನ 2). ಹೀಗಿರುವದರಿಂದ ನಡೆದಿರುವದಕ್ಕೆಲ್ಲಾ ಲೂಕನು ಪ್ರತಮ ಸಾಕ್ಷಿಯಾಗಿರುತ್ತಾನೆ. ಅಲ್ಲದೆ ಅವರೊಂದಿಗೆ ಅವರೊಂದಗೆ ಅರಿಸ್ತಾರ್ಕನು ಇದದ್ನು (ಅ.ಕೃತ್ಯ 19:29, 20:4, ಕೊಲೊಸ್ಸೆ 4:10) ಆ ಹಡಿಗಿನಲ್ಲಿ ರೋಮಾ ಪು ರಕ್ಕೆ ಕರೆರೊಯ್ಯಲ್ಪಡುತ್ತಿದ್ದ ಇತರ ಕೈದಿಗಳು ಸಹ ಇದ್ದರು. ಅವರು ಹತ್ತಿದ ಪ್ರಥಮ ಹಡಗು ಅಸ್ಯಸೀಮೆಗೆ ಹೊರಟಿತ್ತು.

**3-5** ಅವರು ಫೊಯಿನೀಕೆಯಲ್ಲಿನ (ಆದುನಿಕ ಲೆಬನೊನ) ಸೀದೋನಿಗೆ ಮುಟ್ಟಿದ ನೆಂತರ, ಅವರು ತುರ್ಕಿಯ ದಕ್ಷಿಣ ಕರಾವಳಿಯಲ್ಲಿನ ಊರಾದ ಮುದಕ್ಕೆ ಹೊರಟರು.

**6** ಆ ಪ್ರಥಮ ಹಡಗು ರೋಮಾಪು-ರದವರೆಗು ಹೋಗದ್ದರಿಂದ ಅವರು ಮುರದಲ್ಲಿ ಇನ್ನೊಂದು ಹಡಗನ್ನು ಹತ್ತಿದರು, ಆ ಹಡಗು ಪ್ರಸಿದ್ಧ ಐಗುಪ್ತ್ಯದ ಆತಿಗ್ಬಾಂಧ್ರಿಯದಿಂದ ಬಂದು ರೋಮಾಪು ರಕ್ಕೆ ಹೋಗುತ್ತಲಿತ್ತು. ಈ ಹಡಗು ಧಾನ್ಯದ ಸರಕಿನಿಂದ ತುಂಬಿತ್ತು (ವಚನ 38). ಹೊಸ ಒಡಂಬಡಿಕೆಯ ಕಾಲದಲ್ಲಿ ರೋಮಾಪು ರಕ್ಕೆ ಬಹಳಷ್ಟು ಗೋಧಿಹಾ ದಾನ್ಯಗಳು ಐಗುಪ್ತ್ಯದಿಂದಲೇ ರವಾನೆಯಾಗುತ್ತಿದ್ದೆವು .

**7-8** ಗಾಲಿಯು ಅವರ ಹಡಗಿಗೆ ಎದುರಾಗಿ ಬೀಸುತ್ತಿದ್ದದರಿಂದ ಹಡಗು ಮುಂದಕೆ ಸಾಗಲು ಕಷ್ಟವಾಯಿತ್ತು.[113] ಕೊನೆಗೂ ಅವರು ಚಿಂದರೇವು ಗಳೆಂಬ ಸ್ಥಳವನ್ನು ಸೇರಿದರು, ಅದು ದಕ್ಷಿಮ ಗ್ರೀಸಿನ ಒಂದು ದೊಡ್ಡ ದ್ವೀಪವಾದ ಕ್ರೇತದ್ವೀಪದ ಸಮುದ್ರ ತೀರದಲ್ಲಿತ್ತು.

**9-10** ಅನೂಕಲರವಲ್ಲದ ಗಾಳಿಯ ಕಾರಣದಿಂದ ಅವರು ಬಹಳಷ್ಟು ಸಮಯವನ್ನು ಕಳೆದುಕೊಂಡರು. ಚಲಿಗಾಲದ ತಿಂಗಳಗಳಲ್ಲಿ ಮೆಡಿಟರಿನಿಯನ್ ಸಮುದ್ರ ಮಾರ್ಗವಾಗಿ ಪ್ರಯಾಣಿಸುವದು ಬಹಳ ಅಪಾಯಕರವಾಗಿತ್ತು. ಆಗಾಗಲೇ ಅಕ್ಟೋಬರ ತಿಂಗಳಿನ ಮದ್ಯಕಾಲವಾಗಿತ್ತು. ಇಲ್ಲಿ ಪ್ರಸ್ತಾಪಿಸಲಾಗಿರುವ ಉಪವಾಸವು (ವಚನ 9) ದೋಷಪರಿಹಾರಕದ[114] ದಿನವಾಗಿದ್ದುವ (ವಿಮೋಚನಕಾಂಡ 30:10, ಯಾಜಕಕಾಂಡ 23:27, ಇಬ್ರಿಯ 9:7), ಅದು ಆ ವರ್ಷದಲ್ಲಿ (ಕ್ರಿ.ಶಕ 59) ಅಕ್ಟೋಬರ ತಿಂಗಳಿನ ಮೊದಲು ವಾರದಲ್ಲಿ ಬಂದಿತ್ತು. ಪೌಲನು ಒಬ್ಬ ಅನುಭವಿ ಪ್ರಯಾಣಿಕನಾಗಿದ್ದನು. ಅವನು ಪ್ರಯಾಣದ ಮೇಲ್ವಿಚಾರನಾದ ಶತಾಧಿಪತಿಗೆ ಪ್ರಯಾಣವನ್ನು ಮುಂದುವರೆಸದೆ ಚಳಿಗಾಲ ಮುಗಿಯುವವರೆಗು ಕಾಯ್ದುಕೊಳ್ಳಬೇಕೆಂದು ಸಲಹೆ ಮಾಡಿದನು. ಒಂದು ವೇಳೆ ಅವರು ಆ ಸಮಯದಲ್ಲಿ ಪ್ರಯಾಣಿಸುವದಾದರೆ ಹಡಗಿಗೂ ಸರಕಿಗೂ ಮಾತ್ರವಲ್ಲದೆ ಪ್ರಯಾಣಿಕರಿಗೂ ದೊಡ್ಡ ನಷ್ಟ ಉಂಟಾಗುವದೆಂದು ಪೌಲನು ಎಚ್ಚರಿಸಿದನು.

**11-12** ಹಾಗಿದ್ದರೂ, ಚಂದರೇವು ಒಂದು ಚಿಕ್ಕ ಬಂದರು ಹಾಗು ಚಳಿಗಾಲ ವೆಲ್ಲಾ ಕಳೆಯಲು ತಕ್ಕದ್ದಾಗಿರಲಿಲ್ಲವಾದ ಕಾರಣ ಕ್ರೇತದ್ವೀಪದ ದಕ್ಷಿಣಕರಾವಳಿಯ ಪಶ್ಚಿಮದೆಡೆಗಿದ್ದ ಫೊಯ್ನಿಕ್ಸ ಎಂಬ ಬೃಹತ್ ಬಂದರಿಗೆ ಹೋಗಲು ಹಡಗಿನ ಯಜಮಾನ, ನಾವಿಕನು ಇಬ್ಬರೂ ತಿರ್ಮಾನಿಸಿಕೊಂಡರು.

## ಬಿರುಗಾಳಿ (27:13-26)

**13-15** ಅವರು ಫೋಯಿನಿಕ್ಸನ್ನು ತಲುಪಲು ಇನ್ನು ಕೇವಲ ಎರಡು ತಾಸುಗಳಿರುವಾಗ ಈ ಶಾನ್ಯದಿಂದ ಭಯಂಕರ ಬಿರುಗಾಳಿಯೂ ಬೀಸಲಾರಂಭಿಸಿತು. ರಭಸವಾಗಿ ಬೇಸುತ್ತಿದ್ದ ಗಾಳಿಯು ಅವರ ಹಡಗನ್ನು ಬಡಿದುಕೊಂಡು ಮೆಡಿಟರಿನಿಯನ್ ಸಮುದ್ರದ ಮದ್ಯದಲ್ಲಿ ಕೊಂಡೊಯ್ಯಿತು.

**16** ಅವರು ಕೌಡವೆಂಬ ಸಣ್ಣ ದ್ವೀಪದ ಮರೆಯಲ್ಲಿ ಹಡಗನ್ನು ನಡಿಸಿಕೊಂಡು ಬಂದರು. ಅವರು ಅದರ ಮರೆಯಲ್ಲಿ ಸಾಗುತ್ತಿದ್ದಂತೆ ಆ ದ್ವೀಪವು ಕ್ಷಣಕಾಲ ಗಾಳಿಯನ್ನು ತೆಡಯಿತು. ಆ ಕ್ಲುಪ್ತಕಾಲದಲ್ಲಿ ಪ್ರಯಾಣಿಕರು ಅದೇ ಅವಕಾಶವನ್ನು ಉಪಯೋಗಿಸಿಕೊಂಡು ಹಡಗಿನ ಹಿಂದೆ ಕಟ್ಟಿದ ಹಗ್ಗದಿಂದ ಎಳೆಯಲ್ಪಡುತ್ತಿದ್ದ ಚಿಕ್ಕ ಜೀವ ದೋಣಿಯನ್ನು ಮುಖ್ಯ ಹಡಗಿನೊಳಗೆ ಏರಿಸಿದರು. ಅನುಕೂಲಕರ ಹವಾಮಾನದ ವೇಳೆಯಲ್ಲಿ ಅಂತಹ ಜೀವದೋಣಿಗಳು ಮುಖ್ಯ ಹಡಗಿನ ಹಿಂದೆ ಎಳೆಯಲ್ಪಡುವದು ಒಂದು ಪದ್ದತಿಯಾಗಿತ್ತು; ಆದರೆ ಬಿರುಗಾಳಿಯು ಂಬಂದಾಗಲೆಲ್ಲಾ ತಕ್ಷಣವೇ ಜೀವದೋಣಿಯನ್ನು ಹಡಗಿನೊಳಗೆ ತರಲ್ಪಟ್ಟು ಭದ್ರ ಪಡಿಸಲಾಗುತ್ತಿತ್ತು. ಹೇಗಿದ್ದರೂ, ಆ ಬಿರುಗಾಳಿಯು ಎಷ್ಟೊಂದು ವೇಗವೂ ಕ್ರೂರವೂ ಆಗಿತ್ತೆಂದರೆ ಈ ಮುಂಚೆ ಜೀವದೋಣಿಯನ್ನು ಭದ್ರಪಡಿಸುವದಕ್ಕೆ ಅವರಿಗೆ ಅವಕಾಶವು ಸಿಕ್ಕಿರಲಿಲ್ಲ.

**17** ನಂತರ ಪ್ರಯಾಣಿಕರು ಬಲಿಷ್ಠ ಹಗ್ಗಗಳನ್ನು ಹಡಗಿನ ಪೂರ್ಣ ಅಡಿಭಾಗದಿಂದ ಹಾಯಿಸಿ ಹಡಗು ಬೃಹತ್ ಅಲೆಗಳಿಂದ ಒಡೆದು ಹೋಗದಂತೆ ಕೆಳಭಾಗವನ್ನು ಬಿಗಿದರು. ಅಲ್ಲದೆ ಅವರು ಬಿರುಗಾಳಿ ಹಡಗನ್ನು ತೀವ್ರವಾಗಿ ಸಾಗಿಸಿಕೊಂಡು ಹೋಗದಂತೆ ತುದಿಯಲ್ಲಿನ ಹಾಯಿ.ನ್ನು ಕೆಳಗಿಳಿಸಿದರು. ಇಲ್ಲ ವಾದರೆ ಹಡಗು ದಕ್ಷಿಣಕ್ಕೆ ಬಹಳಷ್ಟು ದೂರ ನೂಕಿಸಿಕೊಂಡು ಸಾಗಿ ಇಂದಿನ ಲಿಬ್ಯದ (ಉತ್ತರ ಆಫ್ರಿಕಾ) ಕರಾವಳಿಯಡೆಗೆ ಹೋಗುತ್ತಿತ್ತು.

**18-19** ಮರುದಿನ ಹಡಗು ಮುಳುಗದಂತೆ ತಡೆಯಲು ಪ್ರಯಾಣಿಕರು ಸರಕುಗಳನ್ನು ಸಮುದ್ರದಲ್ಲಿ ಬಿಸಾಡಲಾರಂಭಿಸಿದರು; ಆ ದಿನದ ನಂತರ ಅವರು ಹಡಗಿನ ಇತರ ಸಲಕರಣೆಗಳನ್ನೂ ಬಿಸಾಡಿದರು.

**20** ನಾಲ್ವತ್ತು ದಿವಸಗಳ ವರೆಗೆ ಹಡಗು ಬಿರುಗಾಳಿಯಿಂದ ದೊಬ್ಬಲ್ಪಟ್ಟು ಪಶ್ಚಿಮದೆಡೆಗೆ ಸಾಗಿತ್ತು. ಹೇಗಿದ್ದರೂ, ಹಡಗಿನಲ್ಲಿದ್ದ ಜನರಿಗೆ ತಾವು ಎಲ್ಲಿ ದ್ದೇವೆಂಬದು ತಿಳಿದಿರಲಿಲ್ಲ, ಯಾಕೆಂದರೆ ಆ ಸಮಯದಲ್ಲೆಲ್ಲಾ ನಕ್ಷತ್ರಗಳು ಮೋಡಗಳಿಂದ[115] ಮರೆಯಾಗಿದ್ದವು . ಬಹುಶಃ ಹಡಗು ಬಿರುಕು ಬಿಡಲಾರಂಭಿಸಿತ್ತು. ನಿಶ್ಚಯವಾಗಿಯೂ ಅವರೆಲ್ಲರೂ ಕಳೆದು ಹೋಗಲಿದ್ದರು.

**21-22** ಹಡಗಿನಲ್ಲಿದ್ದವರೆಲ್ಲರೂ ನಿರೀಕ್ಷೆಯನ್ನು ಕಳೆದುಕೊಂಡಿದ್ದರು (ವಚನ 20). ಹಡಗು ಆಕಡೆ ಈಕಡೆ ಹೊಯ್ದಾಡುತ್ತಿದ್ದದರಿಂದ ಹಡಗಿನಲ್ಲಿದ್ದ ಯಾರೊಬ್ಬರೂ ಊಟಮಾಡಲಿಚ್ಚಿಸಲಿಲ್ಲ; ಅವರಲ್ಲಿ ಅನೇಕರು ಸಮುದ್ರದಿಂದ ಜೀಗುಪ್ಸೆಗೊಂಡಿದ್ದರೆಂಬದರಲ್ಲಿ ಸಂಶಯವಿಲ್ಲ. ಬಹುಶಃ ಆಹಾರವು ಸಮುದ್ರದನೀರಿನಿಂದ ಇಂಗಿ ಹೋಗಿರಬೇಕು. ಆದರೆ ಆಳವಾದ ಹತಾಶೆಯ ದೀರ್ಘಕಾಲದ ಮೇಲೆ ಪೌಲನು ಅವರ ಮದ್ಯದಲ್ಲಿ ನಿಂತು, "ನೀವು ಧೈರ್ಯದಿಂದಿರಬೇಕು..ನಿಮ್ಮಲ್ಲಿ ಒಬ್ಬರಿಗೂ ಪ್ರಾಣನಷ್ಟವಾಗುವದಿಲ್ಲ" ಎಂದು ಹೇಳಿದನು.

**23-26** ದೇವರ ದೂತನೊಬ್ಬನು ರಾತ್ರಿಯಲ್ಲಿ ಪೌಲನಿಗೆ ಕಾಣಿಸಿಕೊಂಡು, "ನೀನು ಚಕ್ರವರ್ತಿಯ ಮುಂದೆ ನಿಲ್ಲಬೇಕಾದ್ದರಿಂದ ನೀನು ಯಾವ ಹಾನಿಯಿಲ್ಲದೆ ರೋಮಾಪು ರವನ್ನು ತಲುಪು ವಿ" ಎಂದು ಪೌಲನಿಗೆ ಹೇಳಿದ್ದನು (ಅ.ಕೃತ್ಯ 23:11 ನೋಡಿರಿ). ಪೌಲನು ಮಾತ್ರವಲ್ಲ, ಆದರೆ "ಆತನ ಸಂಗಡ ಈ ಹಡಗಿನಲ್ಲಿ ಪ್ರಯಾಣ ಮಾಡುವವರೆಲ್ಲರ ಪ್ರಾಣ ದೇವರು ನಿನ್ನ ಮೇಲಣದ ದಯೆಯಿಂದ ಉಳಿಸಿಕೊಟ್ಟಿದ್ದಾನೆ" ಎಂದು ದೇವದೂತನು ಹೇಳಿದನು. ಹಡಗಿನಲ್ಲಿರುವ ಒಬ್ಬನಿಗೂ ಸಹ ಪ್ರಾಣನಷ್ಟವಾಗುವದಿಲ್ಲ! ಆದರೆ ಸ್ವತಃ ಹಡಗು ನಾಶವಾಗುವದು; ಅದು ಯಾವದೋ ಒಂದು ದ್ವೀಪದ ದಡವನ್ನು ತಾಕುವದಾಗಿತ್ತು (ವಚನ 26).

ದೇವರು ಒಬ್ಬನು ಅಥವಾ ಹೆಚ್ಚು ದೇವಸೇವಕರ ಪ್ರಸನ್ನತೆಯ ಕಾರಣದಿಂದ ಅವರ ಮದ್ಯದಲ್ಲಿದ್ದ ಇತರ ಜನರಿಗೆ ವಿಶೇಷ ಕರುಣೆಯನ್ನು ತೋರಿಸಿರುವ ಅನೇಕ ಉದಾಹರಣೆಗಳು ಇತಿಹಾಸದಲ್ಲಿರುತ್ತವೆ (ಆದಿಕಾಂಡ 18:22-32). ಹೀಗಿರುವದರಿಂದ, ಪೌಲನು ಹಡಗಿನಲ್ಲಿ ಇದ್ದ ಕಾರಣದಿಂದ ದೇವರು ಹಡಗಿನಲ್ಲಿದ್ದ ಪ್ರತಿಯೊಬ್ಬನ ಪ್ರಾಣವನ್ನು

ಉಳಿಸಿದನು."ನನಗೆ ಹೇಳಲ್ಪಟ್ಟ ಪ್ರಕಾರವೇ ಆಗುವದೆಂದು ದೇವರನ್ನು ನಂಬುತ್ತೇನೆ" ಎಂದು ಪೌಲನು ಹೇಳಿದನು (ವಚನ 25). ದೇವರು ಏನನ್ನಾದರೂ ಹೇಳಿದನಂತರ ಅದರಂತೆಯೇ ನೆರವೇರಿಸುವವನಾಗಿದ್ದಾನೆ. ಆದೇ ರೀತಿಯಲ್ಲಿ ನಾವು ದೇವರವಾಗ್ದಾನವನ್ನು ನಂಬುವಂತೆಯೇ ಅದನ್ನು ಸ್ವೀಕರಿಸುವವರೂ ಆಗಿರಬೇಕು.

ಹಡಗು ಒಡೆಯಲ್ಪಟ್ಟಿದ್ದು (27:27-44)

**27** ಹೊಸ ಒಡಂಬಡಿಕೆಯ ಕಾಲದಲ್ಲಿ ಮೆಡಿಟರಿನಿಯನ್ ಸಮುದ್ರದ ಬಹಳಷ್ಟು ಕೇಂದ್ರ ಭಾಗವನ್ನು ಆದ್ರಿಯಸಮುದ್ರ[116] ಎಂದು ಕರೆಯಲಾಗುತ್ತಿತ್ತು. ಒಂದು ರಾತ್ರಿ ಹಡಗು ಸಮುದ್ರದ ಪಶ್ಚಿಮಭಾಗವನ್ನು ತಲುಪುತ್ತಿದ್ದಂತೆ ಪ್ರಯಾಣಕರಿಗೆ ತಾವು ಭೂಮಿಯ ಸಮೀಪಕ್ಕೆ ಬಂದಿರುತ್ತೇವೆಂಬದನ್ನು ಗ್ರಹಿಸಿಕೊಂಡರು. ಅವರು ನೆಲವನ್ನು ಕಾಣಲಿಲ್ಲ ಆದರೆ ನೊರೆಯು ದಡಕ್ಕೆ ಬಡಿಯುತ್ತಿರುವ ಶಬ್ದವನ್ನು ಅವರು ಕೇಳ ಬಹುದಾಗಿತ್ತು. ಅವರು ಆಳತೇ ಗುಂಡನ್ನು ಇಳಿಸಿ ನೀರು ಕೇವಲ ಮೂವತ್ತು ಮೀಟರುಗಳಷ್ಟು ಆಳವಿದೆಯೆಂಬದನ್ನು ತಿಳಿದುಕೊಂಡರು. ಅವರು ನಿಜವಾಗಿಯೂ ಭೂಮಿಗೆ ಹತ್ತಿರವಾಗಿ ದ್ದಾರೆಂಬದನ್ನು ಇದು ನಿರೂಪಿಸಿತು.

**28-29** ಆಗ ಇನ್ನು ಮಧ್ಯರಾತ್ರಿಯಾಗಿತ್ತು. ಹಡಗು ದಡದ ಬದಿಯಲ್ಲಿರುವ ಬೃಹತ್ ಬಂಡೆಗಳಿಗೆ ಡಿಕ್ಕೆ ಹೊಡೆಯ ಬಹುದೆಂದು ಪ್ರಯಾಣಿಕರು ಹೆದರಿದರು. ಆದುದರಿಂದ, ಅವರು ಹಡಗು ದಡಕ್ಕೆ ಹತ್ತಿರ ವಾಗದಂತೆ ತಡೆಯಲು ನಾಲ್ಕು ಲಂಗರುಗಳನ್ನು ಇಳಿಬಿಟ್ಟರು. ಮುಂಜಾನೆಯಲ್ಲಿ ಅವರು ದಡವನ್ನು ನೋಡಿ ಹಡಗು ನಿಲ್ಲಿಸಲು ಸುರಕ್ಷಿತ ಸ್ಥಳವನ್ನು ಕಂಡುಕೊಳ್ಳಲು ಶಕ್ತರಾಗುತ್ತಿದ್ದರು.

**30-32** ಬಳಿಕ ಹಡಗು ರಾತ್ರಿಪೂರ್ತಿಯೆಲ್ಲಾ ಉಳಿಯಲಾರದೆಂದು ಹೆದರಿದ ಪ್ರಯಾಣಿಕರು ಹಡಗನ್ನು ಬಿಟ್ಟು ದಡಕ್ಕೆ ತಪ್ಪಿಸಿಕೊಂಡು ಹೋಗುವ ಇಂಗಿತದಿಂದ ಜೀವದೋಣಿಯನ್ನು ಕೆಳಗಿಳಿಸಲು ಪ್ರಾರಂಭಿಸಿದರು. ಆದರೆ ಪೌಲನು ಅವರ ಇಂಗಿತವನ್ನು ತಿಳಿದಿದ್ದನು. ಪೌಲನು ಕೈದಿಗಳ ಕಾವಲಿಗಿದ್ದ ಸಿಪಾಯಿಗಳಿಗೆ "ನಾವಿಕರು ಹಡಗನ್ನು ತೊರೆಯಲು ಬಿಡಬೇಡಿರಿ, ಇಲ್ಲವಾದರೆ ನೀವೂ ಉಳುಕೊಳ್ಳುವದಕ್ಕಾಗುವದಿಲ್ಲ" ಎಂದನು (ವಚನ 31). ನಾವಿಕರು ಮುಂಜಾನೆಯಲ್ಲಿ ಹಡಗನ್ನು ದಡದ ಹತ್ತಿರಕ್ಕೆ ತರಬೇಕಾಗಿತ್ತು. ಹಡಗು ದಡದಿಂದ ಇನ್ನು ಬಹಳ ದೂರವಿದ್ದರಿಂದ ಜೀವದೋಣಿಯನ್ನು ಕಳಕೊಂಡು ಯಾರೊಬ್ಬರು ಭೂಮಿಯನ್ನು ತಲುಪಲು ಆಗುತ್ತಿರಲಿಲ್ಲ. ಆದುದರಿಂದ, ನಾವಿಕರು ಪಾರಾಗದಂತೆ ತಡೆಯಲು ಸಿಪಾಯಿಗಳು ದೋಣಿಯ ಹಗ್ಗಗಳನ್ನು ಕತ್ತರಿಸಿ ಅದು ತೇಲಿಕೊಂಡು ಹೋಗುವಂತೆ ಮಾಡಿದರು.

**33-38** ಎಲ್ಲರೂ ಆಹಾರವನ್ನು ಸೇವಿಸಿದ ಮೇಲೆ ಹಡಗನ್ನು ಹಗುರಗೊಳಿಸುವದಕ್ಕಾಗಿ ನಾವಿಕರು ಹಡಗು ಕೊಂಡೊಯ್ಯುತಿದ್ದ ಧಾನ್ಯವನ್ನೆಲ್ಲಾ ಬಿಸಾಡಿದರು (ವಚನ 6 ಮತ್ತು ವ್ಯಾಖ್ಯಾನ ನೋಡಿರಿ). ಹಡಗು ಹಗುರಾದಷ್ಟು ಹೆಚ್ಚು ನೀರಿನ ಮೇಲೆ ಕೂಡ್ರುವದು ಹಾಗು ನೆಲವನ್ನು ತಾಕುವದಕ್ಕೆ ಮುಂಚೆಯೇ ಅದು ದಡಕ್ಕೆ ಹತ್ತಿರವಾಗಬಹುದಾಗಿತ್ತು. ಹೀಗೆ ಇದರಿಂದ ಎಲ್ಲರೂ ಸುರಕ್ಷಿತವಾಗಿ ದಡವನ್ನು ತಲುಪು ವದನ್ನು ಸುಲಭವಾಗಿಸುತ್ತಿತ್ತು.

**39-41** ಬೆಳಗಾದ ಮೇಲೆ ನಾವಿಕರು ಬಂಡೆಗಳಿಲ್ಲದ ಉಸುಬಿನ ದಡವನ್ನು ಕಂಡು ಅಲ್ಲಿಗೆ ಹಡಗನ್ನು ನೂಕುವದಕ್ಕೆ ಪ್ರಯತ್ನಿಸಬೇಕೆಂದು ತಿರ್ಮಾನಿಸಿದರು. ಆದರೆ ಹಡಗು ದಡವನ್ನು ತಲುಪು ನದಕ್ಕೆ ಮುಂಚೆ ಅದಕ್ಕೆ ಅಗೋಚರವಾದ ಮರಳ ದಿಬ್ಬ ಸಿಕ್ಕಿತು.[117] ಹಡಗಿನ ಮುಂಭಾಗವು ಮರಳಿನಲ್ಲಿ ಗಟ್ಟಿಯಾಗಿ ಸಿಕ್ಕಿಕೊಂಡಿರುವಾಗ ತೆರೆಗಳು ಬಹು ಶೀಘ್ರವೇ ಹಡಗಿನ ಹಿಂಭಾಗವನ್ನು ಒಡೆದು ಹಾಕಿದವು.

**42-44** ರೋಮಾಯ ಕಾನೂನಿನ ಪ್ರಕಾರವಾಗಿ ಸಿಪಾಯಿಯ ಅಧೀನದಲ್ಲಿ ರುವ ಕೈದಿಯು ತಪ್ಪಿಸಿಕೊಳ್ಳುವದಾದರೆ ಅವನನ್ನು ಕಾಯುತ್ತಿದ್ದ ಸಿಪಾಯಿಗೆ ಕೈದಿಯ ಶಿಕ್ಷೆಯನ್ನೇ ಕೊಡಲಾಗುತ್ತಿತ್ತು (ಅ.ಕೃತ್ಯ 12:19 ನೋಡಿರಿ). ಆದುದರಿಂದ ಕೈದಿಗಳು ತಪ್ಪಿಸಿಕೊಳ್ಳದಂತೆ ನೋಡಿಕೊಳ್ಳಲು ಸಿಪಾಯಿಗಳು ಅವರನ್ನೆಲ್ಲಾ ಕೊಲ್ಲಬೇಕೆಂಬದಾಗಿ ತಿರ್ಮಾನಿಸಿಕೊಂಡರು! ಆದರೆ ಪೌಲನ ಮೇಲ್ವಿಚಾರಕನಾಗಿದ್ದ ಶತಾಧಿಪತಿಯು ಪೌಲನನ್ನು ಉಳಿಸಬೇಕೆಂದಿದ್ದನು; ಪೌಲನ ಕಾರಣದಿಂದಲೇ ಪ್ರತಿಯೊಬ್ಬರ ಪ್ರಾಣಗಳು ಉಳಿಯಲ್ಪಟ್ಟಿವೆ ಎಂಬದನ್ನು ಆತನು ತಿಳಿದಿದ್ದನು. ಆದುದರಿಂದ ಸಿಪಾಯಿಗಳು ಕೈದಿಗಳಲ್ಲಿ ಒಬ್ಬರನ್ನೂ ಸಹ ಕೊಲ್ಲದಂತೆ ಆತನು ತಡೆದನು. ಈ ರೀತಿಯಾಗಿ ದೇವದೂತನು ಹೇಳಿದ ಪ್ರಕಾರವೇ ಹಡಗಿನಲ್ಲಿದ್ದವರೆಲ್ಲರೂ ಉಳಿಸಲ್ಪಟ್ಟು ಸುರಕ್ಷಿತವಾಗಿ ದಡವನ್ನು ತಲುಪಿದರು.

---

## ಅಧ್ಯಾಯ - 28

### ಮೆಲೀತೆದ್ವೀಪದ ದಡಕ್ಕೆ ಸೇರಿದ್ದು (28:1-10)

**1-2** ಅವರೆಲ್ಲರೂ ದಡವನ್ನೂ ತಲುಪಿದಾಗ ತಾವು ಇಟಲಿಯ ದಕ್ಷಿಣಕ್ಕಿರುವ ಚಿಕ್ಕ ದ್ವೀಪವಾದ ಮೆಲೀತೆಯಲ್ಲಿ ಇಳಿದಿರುತ್ತಾರೆಂದು ತಿಳಿದುಕೊಂಡರು. ಅಲ್ಲಿ ವಾಸಿಸುತ್ತಿದ್ದ ಜನರು ಅನಾಗರೀಕರಾಗಿದ್ದಾಗ್ಯು ಅವರು ಹಡಗಿನಲ್ಲಿದ್ದವರೆಲ್ಲರಿಗೂ ಬಹಳ ಉಪಕಾರಮಾಡಿದರು. ಅನಾರೀಕರು ಸಹ ಹೇಗೆ ಸತ್ಕರಿಸುವವರಾಗಿರಬೇಕೆಂದು ತಿಳಿದಿರುವದಾದರೆ ಕ್ರೈಸ್ತರೆಂದು ಕರೆದುಕೊಳ್ಳುವಂಥ ನಾವು ವಿಶೇಷವಾಗಿ ಅಗತ್ಯದಲ್ಲಿರುವವರಿಗೆ ಎಷ್ಟೋ ಹೆಚ್ಚಾಗಿ ಉಪಚಾರ ಮಾಡುವವರಾಗಿರಬೇಕು.

**3-4** ಪೌಲನು ಒಬ್ಬ ಮಹಾವ್ಯಕ್ತಿಯಾಗಿದ್ದನು, ಆದರೆ ಚಿಕ್ಕ ಕಾರ್ಯದಲ್ಲಿಯೂ ಸಹ (ಉದಾಹರಣೆಗೆ, ಬೆಂಕಿಗಾಗಿ ಕಟ್ಟಿಗೆಗಳನ್ನು ಕೂಡಿಸುವದು) ಸಹಾಯಮಾಡಲು ಯಾವಾಗಲೂ ಸಿದ್ದನಾಗಿರುತ್ತಿದ್ದನು. ಆದರೆ ಕಟ್ಟಿಗೆಗಳೊಂದಿಗೆ ಪೌಲನು ತನಗೆ ಅರಿವಿಲ್ಲದೆಯೆ ವಿಷಕಾರಿ ಹಾವೊಂದನ್ನು ಸಹ ಎತ್ತಿಕೊಂಡಿದ್ದನು. ಪೌಲನು ಕಟ್ಟಿಗೆಗಳನ್ನು ಬೆಂಕಿಯ ಮೇಲೆ ಇಡುತ್ತಿದ್ದಂತೆ ಕಾವಿನಿಂದಾಗಿ ಹಾವು ಹೊರ ಬಂದು ಪೌಲನ ಕೈಯನ್ನು ಕಚ್ಚುವಂತಾಯಿತು. ಈ ದೃಶ್ಯವನ್ನು ನೋಡಿದ ಆ ದ್ವೀಪದ ನಿವಾಸಿಗಳು ಇವನು ಕೊಲೆಪಾತಕನೇ ಸರಿ, ಯಾಕೆಂದರೆ ಸಮುದ್ರದಿಂದ ತಪ್ಪಿಸಿಕೊಂಡಿದ್ದರೂ ದೇವತೆಗಳು ಅವನನ್ನು ಇನ್ನೊಂದು ವಿಧದಲ್ಲಿ ಶಿಕ್ಷಿಸುತ್ತಿದ್ದಾರೆಂದು ಮಾತಾಡಿಕೊಂಡರು!

**5-6** ಆದರೆ ಪೌಲನಿಗೆ ಯಾವ ಹಾನಿಯೂ ಆಗಲಿಲ್ಲ (ಮಾರ್ಕ 16:18 ನೋಡಿರಿ). ಆದುದರಿಂದ, ದ್ವೀಪ ನಿವಾಸಿಗಳು ತಮ್ಮ ಮನಸ್ಸುಗಳನ್ನು ಬದಲಾಯಿಸಿ ಪೌಲನು ಒಬ್ಬ ದೇವರು ಎಂದು ಹೇಳಿಕೊಂಡರು! ಮನುಷ್ಯರು ಎಷ್ಟು ಬೇಗ ತಮ್ಮ ಅಭಿಪ್ರಾಯಗಳನ್ನು ಬದಲಾಯಿಸಿಕೊಳ್ಳುತ್ತಾರಲ್ಲವೆ! ಜನರು ಈ ರೀತಿಯಾಗಿ ತಮ್ಮ ಮನಸ್ಸುಗಳನ್ನು ಬದಲಾಯಿಸಿಕೊಳ್ಳುವದನ್ನು ಈ ಮುಂಚೆ ಒಮ್ಮೆ ಕಂಡಿದ್ದನು – ವಿಶೇಷವಾಗಿ ಲುಸ್ತ್ರದಲ್ಲಿ ಒಂದು ಕ್ಷಣ ಜನರು ಆತನನ್ನು ದೇವರನ್ನಾಗಿ ಆರಾಧಿಸಿದರೆ, ಇನ್ನೊಂದು ಕ್ಷಣದಲ್ಲಿ ಅವರು ಆತನಿಗೆ ಒಂದು ನಾಯಿಯ ರೀತಿಯಲ್ಲಿ ಕಲ್ಲೆಸೆಯುತ್ತಿದ್ದರು (ಅ.ಕೃತ್ಯ 14:11-19).

**7-10** ಸಮುದ್ರದ ಮೇಲೆ ದೇವರು ಪೌಲನ ಜೊತೆಯಲ್ಲಿದ್ದನು; ಈಗ ನೆಲದ ಮೇಲೆಯೂ ದೇವರು ಆತನೊಂದಿಗಿದ್ದಾನೆ. ಪೌಲನ ಕಾರಣದಿಂದಲೇ ಹಡಗಿನಲ್ಲಿ ದ್ದವರೆಲ್ಲೂ ಬದುಕಿಕೊಂಡಿದ್ದರು. ಈಗ ಪೌಲನ ಕಾರಣದಿಂದ ಮೆಲೀತೆಯಲ್ಲಿದ್ದ ಪ್ರತಿಯೊಬ್ಬರು ಸ್ವಸ್ಥರಾದರು. ತಾವು ಸ್ವಸ್ಥರಾದದ್ದಕ್ಕಾಗಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಲು ಮೆಲೀತೆಯ ಜನರು ಪೌಲ ಮತ್ತು ಆತನ ಸಂಗಡಿಗರನ್ನು ಬಹಳವಾಗಿ, ಅಂದರೆ, ಅವರಿಗೆ ಉಡುಗೊರೆಗಳನ್ನು ಕೊಡುವದರ ಮೂಲಕ ಸನ್ಮಾನಿಸಿದರು (ವಚನ 10). (ಬಹುಶಃ ಸ್ವತಃ ಒಬ್ಬ ವೈದ್ಯನಾಗಿದ್ದ ಲೂಕನು ಸಹ ಜನರನ್ನು ಗುಣಪಡಿಸುವದರಲ್ಲಿ ಸಹಾಯ ಮಾಡಿದ್ದನು). ಪೌಲನು ಉಡುಗೊರೆಗಳನ್ನು ಬೇಡವೆನ್ನದೆ ಕೃತಜ್ಞತೆಯೊಂದಿಗೆ ಅವು ಗಳನ್ನು ಸ್ವೀಕರಿಸಿಕೊಂಡನು. ತೆಗೆದು ಕೊಳ್ಳವದಕ್ಕಿಂತ ಕೊಡುವದೆ ಹೆಚ್ಚು ಭಾಗ್ಯಕರವಾದದ್ದಾದರೂ (ಅ.ಕೃತ್ಯ 20:35). ಹಲವಾರು ವೇಳೆಗಳಲ್ಲಿ ಇನ್ನೊಬ್ಬರಿಂದ ದಯೆಯುಳ್ಳವರಾಗಿ ಉಡುಗೋರೆಗಳನ್ನೂ ಸಹಾಯವನ್ನೂ ಸ್ವೀಕರಿಸಿಕೊಳ್ಳುವದು ಸಹ ಉತ್ತಮವಾಗಿರುತ್ತದೆ.

## ರೋಮಾಪು ರವನ್ನು ತಲುಪಿದ್ದು (28:11-16)

**11** ಮೆಲೀತೆಯಲ್ಲಿ ಮೂರು ತಿಂಗಳುಗಳನ್ನು ಕಳೆದ ಮೇಲೆ ಅಲೆಕ್ಸಾಂದ್ರಿಯದಿಂದ ಬಂದು ಈ ದ್ವೀಪದಲ್ಲಿ ಹಿಮಕಾಲವನ್ನು ಕಳೆದು ರೋಮಾಪು ರಕ್ಕೆ ಹೊರಟ್ಟಿದ್ದ ಹಡಗನ್ನು ಹತ್ತಿ ಹೊರಟರು. ಹಡಗಿನ ಮುಂಭಾಗದಲ್ಲಿ ಅಶ್ವಿನೀ ಎಂಬ ಅವಳಿ ದೇವತೆಗಳ ಲಾಂಛನವನ್ನು ಕೆತ್ತಲಾಗಿತ್ತು. ರೋಮಾಯ ಸಾಮ್ರಾಜ್ಯದ ಕಾಲದಲ್ಲಿ ಆ ಅವಳಿ ದೇವತೆಗಳು ಸಮುದ್ರದಲ್ಲಿ ತಮಗೆ ವಿಶೇಷ ಸಹಾಯವನ್ನು ನೀಡುವರೆಂದು ನಾವಿಕರು ನಂಬುತ್ತಿದ್ದರು.

**12-14** ರೋಮಾಪು ರಕ್ಕೆ ಹೋಗುವ ಮಾರ್ಗದಲ್ಲಿ ಇಟಲಿಯ ದಕ್ಷಿಣಕ್ಕಿರುವ ಸಿಸಿಲಿ – ಎಂಬ ಬೃಹತ್ ದ್ವೀಪದ ಪ್ರಮುಖ ಬಂದರಾದ ಸುರಕೂಸಿನಲ್ಲಿ ಹಡಗು ನಿಂತಿತು. ಅನಂತರ ಹಡಗು ಅಲ್ಲಿಂದ ರೇಗಿಯಕ್ಕೆ ಹೊರಟಿತು, ಇದು ಇಟಲಿಯದಿಂದ ದಕ್ಷಿಣಕ್ಕೆ ತುದಿಯಲ್ಲಿರುವ ಒಂದು ಪಟ್ಟಣವಾಗಿತ್ತು. ಅಲ್ಲಿಂದ ಪೌಲ ಮತ್ತು ಆತನ ಸಂಗಡಿಗರು ಇಂದಿನ ನಾಪಲಸ್ ಪಟ್ಟಣದ ಹತ್ತಿರವಿರುವ ಪೊತಿಯೋಲಕ್ಕೆ ಪ್ರಯಾಣಿಸಿದರು. ಅಲ್ಲಿಂದ ಅವರು ಸಿಪಾಯಿಗಳ ಮಂಡಳಿಯೊಂದಿಗೆ ಕಾಲ್ನಡಿಗೆಯಲ್ಲಿ ರೋಮಾಪು ರಕ್ಕೆ ಹೊರಟರು.

**15** ರೋಮಾಪು ನಕ್ಕೆ ಸೇರಿದ್ದ ಕೆಲವು ಮಂದಿ ಕ್ರೈಸ್ತರು ಪೌಲ ಮತ್ತು ಆತನ ಸಂಗಡಿಗರನ್ನು ಬೇಟಿಯಾಗಲು ದಕ್ಷಿಣದೆಡೆಗೆ ನಾಲ್ವತ್ತು ಮೈಲುಗಳಷ್ಟು ನಡೆದು ಬಂದಿದ್ದರು. ಅವರನ್ನು ಕಂಡಾಗ ಪೌಲನು ಎಷ್ಟು ಸಂತೋಷಗೊಂಡನು! ಅನೇಕ ವರ್ಷಗಳಿಂದಲೂ ಪೌಲನು ರೋಮಾಪು ರದಲ್ಲಿದ್ದ ಸಭೆಯನ್ನು ಸಂಧಿಸಲು ಇಚ್ಚಿಸಿದ್ದನು. ಮೂರು ವರ್ಷಗಳ ಹಿಂದೆ ಪೌಲನು ತಾನು ರೋಮಾಪು ರಕ್ಕೆ ಬಂದು ಅಲ್ಲಿನ ಕ್ರೈಸ್ತರನ್ನು ಬೇಟಿಯಾಗಲು ನಿರೀಕ್ಷಿಸುತ್ತಿದ್ದೇನೆಂದು ರೋಮಾಪು ರದವರಿಗೆ ಪತ್ರವನ್ನು ಬರೆದಿದ್ದನು (ರೋಮ 1:"9-13; 15:23-24). ಕೊನೆಗೂ ಈಗ ಆತನು ಬಂದು ಸೇರಿದ್ದನು – ಮುಕ್ತಮನುಷ್ಯನಾಗಿಯಲ್ಲ, ಆದರೆ ಒಬ್ಬ ಕೈದಿಯಾಗಿ ಬಂದಿದ್ದನು.

**16** ರೋಮಾಪು ರದಲ್ಲಿ ಪೌಲನು ಒಬ್ಬ ಸೆರೆಯಾಳಾಗಿದ್ದಾಗ್ಯು ಆತನು ತನ್ನ ಸ್ವಂತ ಬಾಡಿಗೆ ಮನೆಯಲ್ಲಿ ಇರುವದಕ್ಕೆ ಅನುಮತಿಲ್ಪಟ್ಟಿದ್ದನು (ವಚನ 30). ಆದರೆ ಆತನೊಂದಿಗೆ ಯಾವಾಗಲೂ ಒಬ್ಬ ಸಿಪಾಯಿ ಇರುತ್ತಿದ್ದನು, ಮತ್ತು ಪೌಲನನ್ನು ಸರಪಳಿಯಿಂದ ಸಿಪಾಯಿಗೆ ಕಟ್ಟಲಾಗಿತ್ತು (ವಚನ 20).

## ಪೌಲನು ಕಾವಲಿನೊಳಗೆ ರೋಮಾಪು ರದಲ್ಲಿ ಬೋಧಿಸಿದ್ದು (28:17-31)

**17-20** ಪೌಲನು ತಾನು ಇತರ ಊರುಗಳಲ್ಲಿ ಮಾಡಿದ ಹಾಗೆಯೇ ರೋಮಾಪು ರದಲ್ಲಿಯೂ ಸಹ ಆತನು ಯೆಹೂದ್ಯರನ್ನು ಹುಡುಕಿಕೊಂಡನು. ಅವನು ಅವರ ಸಭಾಮಂದಿರಕ್ಕೆ ಹೋಗುವ ಸ್ವಾತಂತ್ರ ಹೊಂದಿರಲಿಲ್ಲ, ಆದರೆ ಅವರನ್ನು ತನ್ನ ಮನೆಗೆ ಆ ಮಂತ್ರಿಸಬಹುದಾಗಿತ್ತು.

ಪೌಲನು ತಾನು ಯೆರೂಸಲೇಮಿನ ಯೆಹೂದ್ಯರಿಗೆ ವಿರುದ್ಧವಾಗಿ ಯಾವ ಅಪರಾಧವನ್ನು ಮಾಡಲಿಲ್ಲ ಎಂಬದನ್ನು ರೋಮಾ ಪುರದ ಯೆಹೂದ್ಯರಿಗೆ ಮೊದಲು ಖಚಿತಪಡಿಸಿದನು. ಪೌಲನು ಯೆಹೂದ್ಯರನ್ನು ವಿರೋಧಿಸಬೇಕೆಂಬದಕ್ಕಾಗಿಯಲ್ಲ ಆದರೆ ತಾನು ನಿರಪರಾಧಿಯೆಂಬದನ್ನು ಸ್ಥಾಪಿಸುವದಕ್ಕಾಗಿ ಚಕ್ರವರ್ತಿಗೆ ಮನವಿಸಲ್ಲಿಸಿದ್ದನು. ಆತನು ಇಸ್ರಾಯೇಲರ ನಿರೀಕ್ಷೆಯನಿಮಿತ್ತವಾಗಿ – (ವಚನ 20) ಅಂದರೆ, ಆತನು ಯೇಸು ಕ್ರಿಸ್ತನಲ್ಲಿ ಇಟ್ಟ ನಂಬಿಕೆಯ ಕಾರಣದಿಂದಾಗಿ – ಸೆರೆಯಾಳಾಗಿದ್ದನು. ಆತನು ಕ್ರಿಸ್ತನ ಬಗ್ಗೆ ಬೋಧಿಸಿದ್ದರಿಂದಲೇ ಯೆಹೂದ್ಯರು ಆತನ ವಿರುದ್ಧ ತಪ್ಪುಗಳನ್ನು ಹೊರಿಸಿದ್ದರು (ಅ.ಕೃತ್ಯ 26:6-7). ರೋಮಾ ಪುರದಲ್ಲಿರುವ ಯೆಹೂದ್ಯರು ತನ್ನ ಕುರಿತಾಗಿ ಕೆಟ್ಟವರದಿಗಳನ್ನು ಕೇಳಿರುತ್ತಾರೇನೋ ಎಂದು ಪೌಲನು ಹೆದರಿದ್ದನು. ನಿಜವಾಗಿಯೂ ಹೇಳ ಬೇಕಾದರೆ ಅವರು ಯೆರೂಸಲೇಮಿನ .ಯೆಹೂದ್ಯರಿಂದ ಕೇಳಿರಹುದಾದ ಯಾವದೇ ಸುಳ್ಳು ಮಾಹಿತಿಯನ್ನು ನಿವಾರಿಸುವದಕ್ಕಾಗಿ ಆತನು ಅವರನ್ನು ಸಂಧಿಸಲಿಚ್ಚಿಸಿದ್ದನು.

**21-22** ಹೇಗಿದ್ದರೂ, ರೋಮಾಪುರದ ಯೆಹೂದ್ಯರಲ್ಲಿ ಯಾರೂ ಸಹ ಯೆರೂಸಲೇಮ ಹಾಗು ಯೂದಾಯದಲ್ಲಿನ ಅವರ ಯೆಹೂದ್ಯ ಸಹೋದರರಿಂದ ಯಾವ ಕೆಟ್ಟ ವಿಷಯವನ್ನೂ ಕೇಳಿರಲಿಲ್ಲ. ಹೇಗಿದ್ದರೂ, ಅವರು ಕ್ರಿಸ್ತನ ಹಿಂಬಾಲಕರನ್ನೊಳಗೊಂಡಿದ್ದ ಒಂದು ಹೊಸ ಮತದ ಬಗ್ಗೆ ಕೇಳಿದವರಾಗಿದ್ದರು (ವಚನ 22). ಹತ್ತು ವರ್ಷಗಳ ಹಿಂದೆ ಕೆಲವು ಮಂದಿ ಕ್ರೈಸ್ತ ಬೋಧಕರು ರೋಮಾಪುರದಲ್ಲಿನ ಯೆಹೂದ್ಯರ ಮಧ್ಯದಲ್ಲಿ ಒಂದು ದೊಡ್ಡ ಪಂಗಡ ಹಾಗು ಗಲಭೆಯನ್ನು ಉಂಟು ಮಾಡಿದ್ದರು ಮತ್ತು ಅದರ ಫಲಿತವಾಗಿ ಆಗ ರೋಮಾಯ ಚಕ್ರವರ್ತಿಯಾಗಿದ್ದ ಕ್ಲೌದ್ಯನು ಯೆಹೂದ್ಯರೆಲ್ಲರನ್ನೂ, ರೋಮಾಪುರದಿಂದ ಹೊರಡಿಸಿ ಬಿಟ್ಟಿದ್ದನು (ಅ.ಕೃತ್ಯ 18:2 ನೋಡಿರಿ). ಇದರ ಕಾರಣದಿಂದಾಗಿ ರೋಮಾಪುರದ ಯೆಹೂದ್ಯರು ಕ್ರೈಸ್ತರೆಡೆಗೆ ಅನಾರೋಗ್ಯಕರ ಭಾವನೆಗಳನ್ನು ಬೆಳೆಸಿಕೊಂಡಿದ್ದರು.

ಆದರೆ ಈ ಯೆಹೂದ್ಯರು ಕ್ರೈಸ್ತರ ವಿಷಯದಲ್ಲಿ ಕೆಲವೊಂದು ಒಳ್ಳೇ ಸಂಗತಿಗಳನ್ನು ಸಹ ಕೇಳಿದ್ದರು, ಯಾಕೆಂದರೆ ರೋಮಾಪುರದ ಕ್ರೈಸ್ತರ ನಂಬಿಕೆಯು ಲೋಕದಲ್ಲೆಲ್ಲಾ ಪ್ರಸಿದ್ಧಿಗೆ ಬಂದಿತ್ತು (ರೋಮ 1:8). ಆದುದರಿಂದ, ರೋಮಾ ಪುರದ ಕ್ರೈಸ್ತರು ಈ ನೂತನ ಕ್ರೈಸ್ತ "ಮತ"ದ ವಿಷಯದಲ್ಲಿ ಪೌಲನಿಂದ ಇನ್ನಷ್ಟು ಸಂಗತಿಗಳನ್ನು ಕೇಳಲಿಚ್ಚಿಸಿದ್ದರು.

**23-24** ಪೌಲನು ಇತರ ಸ್ಥಳಗಳಲ್ಲಿ ಯೆಹೂದ್ಯರಿಗೆ ಬೋಧಿಸಿದ ಪ್ರಕಾರವೇ (ಅ.ಕೃತ್ಯ 13:16-41), ಆತನು ರೋಮಾಪುರದ ಯೆಹೂದ್ಯರೊಂದಿಗೆ ಮಾತನಾಡಿದನು. ಆತನು ಅವರ ಶಾಸ್ತ್ರಗಳಾದ ಮೋಶೆಯ ಧರ್ಮಶಾಸ್ತ್ರ ಹಾಗು ಪ್ರವಾದಿಗಳ ಗ್ರಂಥಗಳ ಆಧಾರದಿಂದಲೇ ಯೇಸು ಕ್ರಿಸ್ತನು ಇಸ್ತಾಯೇಲ ರಕ್ಷಕನೂ ಮೆಸ್ಸೀಯನೂ ಆಗಿದ್ದಾನೆಂಬದನ್ನು ಕಲಿಸಿಕೊಟ್ಟನು. ಕೆಲವು ಮಂದಿ ಯೆಹೂದ್ಯರು ನಂಬಿದರು ಆದರೆ ಬಹಳಷ್ಟು ಮಂದಿ ನಂಬಲಿಲ್ಲ.

**25-27** ನಂತರ, ಯೆಹೂದ್ಯೇತರರಿಗೆ ಒಂದು ಎಚ್ಚರಿಕೆಯೇ ಎಂಬಂತೆ ಪೌಲನು ಯೆಶಾಯ 6:9-10 ರಲ್ಲಿ ಬರೆಯಲ್ಪಟ್ಟಿರುವ ಯೆಶಾಯ ಪ್ರವಾದನೆಯನ್ನು ಉಲ್ಲೇಖಿಸುತ್ತಾನೆ. ಇಲ್ಲಿ ಪೌಲನು ಯೆಹೂದ್ಯರ ಬಗ್ಗೆ ಮಾತಾಡುತ್ತಾ ಅವರು ದೇವರ ವಾಕ್ಯ ಕೇಳುತ್ತಾರೆ ಆದರೆ ಅದನ್ನು ಅರ್ಥ ಮಾಡಿಕೊಳ್ಳುವದಿಲ್ಲ ಮತ್ತು ಅವರು ದೇವರ ಸತ್ಯದೆಡೆಗೆ ದೃಷ್ಟಿಸಿದರೂ ಅದನ್ನು ನಿಜವಾಗಿಯೂ ಗ್ರಹಿಸಿಕೊಳ್ಳುವದಿಲ್ಲ ಎಂದು ಹೇಳುತ್ತಾನೆ. ಇದಕ್ಕೆ ಕಾರಣ ಯೆಹೂದ್ಯರ ಹೃದಯಗಳು ಕೊಬ್ಬಿರುತ್ತವೆ ಎಂದು ಯೆಶಾಯನು ನುಡಿಯುತ್ತಾನೆ (ವಚನ 27). ಅವರು ಅರ್ಥಮಾಡಿಕೊಂಡು ಗ್ರಹಿಸಿಕೊಳ್ಳಲು ಇಷ್ಟ ಪಡದವರಾಗಿದ್ದಾರೆ. ಆದುದರಿಂದ ದೇವರು ಅವರನ್ನು ಅವರ ಅಪನಂಬಿಕೆಯಲ್ಲಿ ಕೈಬಿಟ್ಟಿರುತ್ತಾನೆ ಅಪನಂಬಿಕೆಯುಳ್ಳ ಯೆಹೂದ್ಯರು ಕಿವಿಗೊಡಲಿ! ದೇವರ ವಾಕ್ಯ ಹಾಗು ಬೆಳಕನ್ನು ನಿರಾಕರಿಸುವವರು ನಿಜವಾಗಿಯೂ ಕುರುಡರೂ ಕಿವುಡರೂ ಆಗಿದ್ದಾರೆ! (ಮತ್ತಾಯ 13:13-17; ಮಾರ್ಕ 4:12; ರೋಮ 11:8 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**28-29** ಬಹುಮಂದಿ ಯೆಹೂದ್ಯರು ಕ್ರಿಸ್ತನನ್ನು ತಿರಸ್ಕರಿಸಿದ್ದರಿಂದ ರಕ್ಷಣೆಯ ಸುವಾರ್ತೆಯು ಅನ್ಯಜನರಿಗೆ ಕೊಡಲ್ಪಟ್ಟಿತು (ಅ.ಕೃತ್ಯ 13:46; 18:6). ಕ್ರಿಸ್ತನು ತನ್ನ ಸ್ವಾಸ್ತ್ಯಕ್ಕೆ (ಯೆಹೂದ್ಯರ ಬಳಿಗೆ) ಬಂದನು, ಆದರೆ ಸ್ವಂತ ಜನರು ಆತನನ್ನು ಅಂಗೀಕರಿಸಲಿಲ್ಲ (ಯೋಹಾನ 1:11). ಪ್ರಸ್ತುತಕಾಲದಲ್ಲಿಯೂ ಸಹ ಕ್ರಿಸ್ತನನ್ನು ಅಂಗೀಕರಿಸಿಕೊಂಡ ಯೆಹೂದ್ಯರ ಸಂಖ್ಯೆಯು ಅಲ್ಪವಾಗಿಯೇ ಉಳಿದಿರುತ್ತದೆ.[118]

**30-31** ಪೌಲನು ಕ್ರಿ.ಶಕ 60 ರಲ್ಲಿ ರೋಮಾಪುರವನ್ನು ಸೇರಿದನು. ಆತನು ರೋಮಾಪುರದಲ್ಲಿದ್ದುಕೊಂಡು ಎಫೆಸದವರಿಗೆ, ಫಿಲಿಪ್ಪಿಯವರಿಗೆ, ಕೊಲೊಸ್ಸೆಯವರಿಗೆ, ಮತ್ತು ಫಿಲಮೋನನಿಗೆ ಹೊಸ ಒಡಂಬಡಿಕೆಯಲ್ಲಿರುವ ಪತ್ರಿಕೆಗಳನ್ನು ಬರೆದನು. ಪೌಲನು ಎರಡು ವರ್ಷಗಳ ಕಾಲ ಯಾವ ಅಡ್ಡಿಯೂ ಇಲ್ಲದೆ ತುಂಬಾ ಧೈರ್ಯದಿಂದ ದೇವರ ರಾಜ್ಯ ಹಾಗು ಯೇಸು ಕ್ರಿಸ್ತನ ಕುರಿತಾಗಿ ಸಾರಿದನು. ಪೌಲನು ಅರಮನೆಯ ಕಾವಲಿನವರಿಗೆಲ್ಲಾ ಬೋಧಿಸಿದನು (ಫಿಲಿಪ್ಪಿ 1:12-14). ಅಲ್ಲದೆ ಅವನು ಚಕ್ರವರ್ತಿಯ ಮನೆಯವರಿಗೆಲ್ಲಾ ಸಹ ಬೋಧಿಸಿದನು (ಫಿಲಿಪ್ಪಿ 4:22).

ಈ ಒಂದು ಐತಿಹಾಸಿಕ ಟಿಪ್ಪಣಿಯಲ್ಲಿ ಲೂಕನು ಚರಿತ್ರೆಯನ್ನು ಮುಕ್ತಾಯಕ್ಕೆ ತರುತ್ತಾನೆ. ಇದರ ನಂತರ ಪೌಲನಿಗೆ ಏನು ಸಂಭವಿಸಿತೆಂಬದು ತಿಳಿದು ಬಂದಿರುವದಿಲ್ಲ. ಅವನು ಸ್ವಲ್ಪ ಕಾಲದವರೆಗೆ ಬಿಡುಗಡೆ ಮಾಡಲ್ಪಟ್ಟನು ಮತ್ತು ಅನಂತರದಲ್ಲಿ ಮತ್ತು ಬಂಧಿಸಲ್ಪಟ್ಟನು ಎಂದು ಕೆಲವರು ಹೇಳುತ್ತಾರೆ. ಪೌಲನು ಬಿಡುಗಡೆ ಮಾಡಲ್ಪಡಲಿಲ್ಲ ಎಂದು ಇನ್ನು ಕೆಲವರು ಹೇಳುತ್ತಾರೆ. ಆದರೆ ಎಲ್ಲಾ ಪುರಾತನ ಇತಿಹಾಸಕಾರರ ಪ್ರಕಾರವಾಗಿ ಕಾಲಕ್ರಮೇಣದಲ್ಲಿ ಕ್ರೈಸ್ತರಿಗೆ ಉಂಟಾದ ಹಿಂಸೆಯವೇಳೆ ಕ್ರಿ.ಶಕ 64-68 ರಲ್ಲಿ ನಿರೋ ಚಕ್ರವರ್ತಿಯು ಪೌಲನನ್ನು ಕೊಲ್ಲಿಸಿದನೆಂದು ತಿಳಿದು ಬರುತ್ತದೆ.

ಪೌಲನ ಕಾರ್ಯವು ಮುಗಿದಿತ್ತು. ಆತನು ಇಡೀ ರೋಮಾಯ ಸಾಮ್ರಾಜ್ಯದಲ್ಲೆಲ್ಲಾ ಕ್ರಿಸ್ತನ ಸಭೆಯ ಅಸ್ತಿವಾರವನ್ನು ಹಾಕಿದ್ದನು. 250 ವರ್ಷಗಳ ನಂತರ ರೋಮಾಯ ಚಕ್ರವರ್ತಿಯಾದ ಕಾನ್ಸಂಟಂಟೈನನು ಕ್ರಿಸ್ತನನ್ನು ಅಂಗೀಕರಿ–ಸಿಕೊಂಡನು, ಮತ್ತು ಆಗ ಕ್ರೈಸ್ತತ್ವವು ರೋಮಾಯ ಸಾಮ್ರಾಜ್ಯದ ಪ್ರಮುಖ ಧರ್ಮವಾಗಿ ಮಾರ್ಪಟ್ಟಿತು.
ಇದೇ ಕ್ರೈಸ್ತ ಇತಿಹಾಸವಾಗಿದೆ. ಇದು ಇಸ್ರಾಯೇಲಿನ ಚಿಕ್ಕ ಗ್ರಾಮವೊಂದರಲ್ಲಿ ಜನಿಸಿದ ಬಡಗಿಯನಿಂದ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಇದು ಬಹುಮಟ್ಟಿಗೆ ಅವಿಧ್ಯಾವಂತರಾಗಿದ್ದ ಹನ್ನೆರಡು ಮಂದಿ ಅಪೊಸ್ತಲರಿಂದ ಹರಡಿತು ಮತ್ತು ಅನಂತರ ಅಪೊಸ್ತಲ ಪೌಲ ಹಾಗು ಆತನ ಸಂಗಡಿಗರಿಂದ ಪ್ರಸರಿಸಲ್ಪಟ್ಟಿತು. ಲೂಕನು ತನ್ನ ಸುವಾರ್ತೆ ಮತ್ತು ಅಪೊಸ್ತಲರ ಕೃತ್ಯಗಳ ಪು ಸ್ತಕಗಳಲ್ಲಿ ಚರಿತ್ರೆಯನ್ನೇ ವಿವರಿಸಿರುತ್ತಾನೆ. ಆದರೆ ಅ.ಕೃತ್ಯ ಪು ಸ್ತಕವು ಅಪೊಸ್ತಲರ ಕೃತ್ಯಗಳು ಎಂದು ಕರೆಯಲ್ಪಟ್ಟಿದೆಯಾದರೂ ಅದನ್ನು ಇನ್ನು ಹೆಚ್ಚು ನಿರ್ದಿಷ್ಠವಾಗಿ "ಪವಿತ್ರಾತ್ಮನ ಕೃತ್ಯಗಳು" ಎಂದು ಕರೆಯಬಹುದು. ಯಾಕೆಂದರೆ ಅಪೊಸ್ತಲರು ಏನೇನು ಮಾಡಿದರೋ ಅದೆಲ್ಲವನ್ನೂ ಅವರು ಪವಿತ್ರಾತ್ಮನ ಮೂಲಕವಾಗಿ ಮಾಡಿದರು. ಮತ್ತು ಇದೇ ಪವಿತ್ರಾತ್ಮನು ಈ ದಿನದವರೆಗೂ ಸಹ ಜನತ್ತಿನಲ್ಲೆಲ್ಲಾ ತನ್ನ ಕಾರ್ಯವನ್ನು ಮಾಡುತ್ತಿದ್ದಾನೆ. ಅಪೊಸ್ತಲರ ಕೃತ್ಯಗಳ ಪು ಸ್ತಕವು ಮುಗಿದಿರುವದಿಲ್ಲ.

---

## ಟಿಪ್ಪಣಿ

1 ಪು ಸ್ತಕವು ಸಾಮಾನ್ಯವಾಗಿ "ಅಪೊಸ್ತಲರ ಕೃತ್ಯಗಳು" ಎಂದು ಕರೆಯಲ್ಪಡುತ್ತದೆ. ಅಪೊಸ್ತಲರು ಆದಿಸಭೆಯ ಪ್ರಾರಂಭಿಕನಾಯಕರಾಗಿದ್ದು ಅವರಲ್ಲಿ ಬಹು ಮಂದಿ ಯೇಸುವನ್ನು ತಿಳಿದವರೂ, ನೋಡಿದವರೂ ಆಗಿದ್ದರು ಮತ್ತು ಅವರನ್ನು ಯೇಸು ಸುವಾರ್ತೆಯನ್ನು ಸಾರುವದಕ್ಕೂ ತನ್ನ ಸಭೆಯನ್ನು ಸ್ಥಾಪಿಸುವದಕ್ಕೂ ಸೇಮಿಸಿದ್ದನು. ಈ ಅಪೊಸ್ತಲರಲ್ಲಿ ಯೇಸವಿನ ಹನ್ನೆರಡು ಮಂದಿ ಮೂಲ ಶಿಷ್ಯರು (ಇಸ್ಕರಿಯೋತಯೂದನನ್ನು ಹೊರತು ಪಡಿಸಿ) ಪೌಲ, ಯಾಕೋಬ ಮತ್ತು ಇನ್ನು ಕೆಲವರು ಸೇರಿರುತ್ತಾರೆ. ಪವಿತ್ರಾತ್ಮನನ ಬಲದ ಮಖಾಂತರವಾಗಿ ಈ ಅಪೊಸ್ತಲರು ಅನೇಕ ಮಹತ್ಕಾರ್ಯಗಳನ್ನು ಮಾಡಿದರು.

2 ಯೆರೂಸಲೇಮು ಆಧುನಿಕ ಮಧ್ಯಪೂರ್ವ ರಾಷ್ಟ್ರವಾದ ಇಸ್ರಾಯೇಲಿನ ಮುಕ್ಯನಗರಗಳಲ್ಲಿ ಒಂದಾಗಿದೆ. ಹೊಸ ಒಡಂಬಡಿಕೆಯ ಕಾಲದಲ್ಲಿ ಇದು ಇಸ್ರಾಯೇಲಿನ ದಕ್ಷಿಣ ಪ್ರಾಂತ್ಯವಾದ ಯೂದಾಯದ ರಾಜಧಾನಿಯಾಗಿತ್ತು. ಯೆರೂಸಲೇಮು ಯೆಹೂದ್ಯಧಾರ್ಮಿಕ ಜೀವನದ ಕೇದ್ರವಾಗಿತ್ತು; ಅಲ್ಲಿ ಯೆಹೂದ್ಯರ ದೇವಾಲಯವಿತ್ತು. ಯೇಸು ಯೆರೂಸಲೇಮಿನ ಹತ್ತಿರದಲ್ಲಿ ಶಿಲುಬೆಗೇರಿಸಲ್ಪಟ್ಟನು.

3 ಯೂದಾಯವು ಇಸ್ರಾಯೇಲಿನ ದಕ್ಷಿಣ ಪ್ರಾಂತ್ಯದ ತುದಿಯಲ್ಲಿತ್ತು ಮತ್ತು ಅದರಿಂದ ಸ್ವಲ್ಪ ಉತ್ತರಕ್ಕೆ ಸಮಾರ್ಯ ಸೀಮೆಯಿತ್ತು. ಸಮಾರ್ಯ ಉತ್ತರಭಾಗವು ಗಲಿಲಾಯದ ಪ್ರಾಂತ್ಯವಾಗಿತ್ತು.

4 ಸಬ್ಬತ್ ದಿನವು (ಶನಿವಾರ) ಯೆಹೂದ್ಯರ ವಿಶ್ರಾಂತಿದಿನವಾಗಿದ್ದು ದೇವರ ಆರಾಧನೆಗಾಗಿ ಪ್ರತ್ಯೇಕಿಸಲ್ಪಟ್ಟಿತ್ತು. ಯೆಹೂದ್ಯರ ಧರ್ಮಶಾಸ್ತ್ರದ ಪ್ರಕಾರವಾಗಿ ಯೆಹೂದ್ಯನೊಬ್ಬನು ಸಬ್ಬತ್ ದಿನದಲ್ಲಿ ಯಾವ ರೀತಿಯ ಕೆಲಸವನ್ನೂ ಮಾಡಬಾರದಾಗಿತ್ತು (ವಿಮೋಚನಕಾಂಡ 20:8-11). ಮೂರುಮೈಲುಗಳಿಗಿಂತಲೂ ಹೆಚ್ಚು ದೂರ ನಡೆಯುವದನ್ನು "ಕೆಲಸ" ವೆಂದು ಪರಿಗಣಿಸಲಾಗುತ್ತಿತ್ತು.

5 ಇಸ್ರಾಯೇಲಿನ ಹನ್ನೆರಡು ಕುಲಗಳು ಯೆಹೂದ್ಯರ ಮೂಲ ಪಿತೃವಾದ ಅಬ್ರಹಾಮನ ಮೊಮ್ಮಗನಾದ ಯಾಕೋಬನ ಹನ್ನೆರಡು ಮಂದಿ ಮಕ್ಕಳಿಂದ ಉತ್ಪತ್ತಿಯಾಗಿದ್ದರು.

6 ಹೊಸ ಒಡಂಬಡಿಕೆಯು ಮೂಲತಃ ಗ್ರೀಕ ಭಾಷೆಯಲ್ಲಿ ಬರೆಯಲ್ಪಟ್ಟಿತ್ತು. ಹೊಸ ಒಡಂಬಡಿಕೆಯ ಕಾಲದಲ್ಲಿ ಮಧ್ಯ ಪೂರ್ವದಲ್ಲಿದ್ದ – ವಿಧ್ಯಾವಂತರು ಸಾಮಾನ್ಯವಾಗಿ ಗ್ರೀಕ್ ಭಾಷೆಯನ್ನು ಮಾತಾಡುತ್ತಿದ್ದರು. ಹೆಚ್ಚಿನ ಚರ್ಚೆಗಾಗಿ ಅ.ಕೃತ್ಯ ೨:೪ರ ವ್ಯಾಖ್ಯಾನದ ಅಡಿಟಿಪ್ಪಣೆಗಳನ್ನು ನೋಡಿರಿ.

7 ಕೆಲವು ಬೈಬಲ್ ಪಂಡಿತರು ನಂಬುವದೇನೆಂದರೆ ಪಂಚಾಶತ್ತಮ ದಿನದಂದು ಆ ಮನೆಯಲ್ಲಿ ಯೇಸುವಿನ ಹನ್ನೆರಡು ಮಂದಿ ಪ್ರಮುಖ ಶಿಷ್ಯರಿದ್ದರು. ಯಾಕೆಂದರೆ 7ನೇ ವಚನದಲ್ಲಿ "ಇಗೋಮಾತಾಡುತ್ತಿರುವ ಇವರೆಲ್ಲರು ಗಲಿಲಾಯದವರಲ್ಲವೇ" ಎಂದು ಹೇಳಲ್ಪಟ್ಟಿದೆ ಎಂಬದಾಗಿ. ಆದರೆ ಆಸಮಯ ಯೆರೂಸಲೇಮಿನಲ್ಲಿ ನೂರಿಪ್ಪತ್ತು ಮಂದಿ ವಿಶ್ವಾಸಿಗಳೊಳಗೆ (ಅ.ಕೃತ್ಯ 1:15). ಅನೇಕರು ಗಲಿಲಾಯ ದವರಾಗಿದ್ದರು. ಆದುದರಿಂದ, ಯೇಸುವಿನ ಹನ್ನೆರಡು ಮಂದಿ ಮುಖ್ಯ ಶಿಷ್ಯರಷ್ಟೇ ಅಲ್ಲದೆ ಪವಿತ್ರಾತ್ಮನು ಬಂದಾಗ ಯೇಸುವಿನ ಇತರ ಹಿಂಬಾಲಕರು ಸಹ ಆ ಮನೆಯಲ್ಲಿ ಹಾಜರಿದ್ದರು ಮತ್ತು ಅವರೆಲ್ಲರೂ ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೊಂದಿಕೊಂಡರು.

8 ಹೊಸ ಒಡಂಬಡಿಕೆಯ ಬರಹಗಾರರು "ಇತರ ಭಾಷೆಗಳು" (ಅಥವಾ ಅನ್ಯಭಾಷೆಗಳು) ಎಂದು ಪ್ರಸ್ತಾಪಿಸುವಾಗ ಅವರ ತಾತ್ಪರ್ಯವು ಆತ್ಮೀಕ ಭಾಷೆಗಳು ಅಥವಾ ಮಾತಾಡುವವನು ಎಂದಿಗೂ ಕಲಿಯದಿರುವ ಲೌಕೀಕ ಭಾಷೆಗಳು ಎಂದಾಗಿರುತ್ತದೆ. ಇಲ್ಲಿ ತಿಳಿ.ಬೇಕಾದ ಅಂಶವೇನೆಂದರೆ ಇತರ ಭಾಷೆ ಅಥವಾ ಅನ್ಯ ಭಾಷೆಗಳಲ್ಲಿ ಮಾತಾಡುವವರಿಗೆ ಅ ಭಾಷೆಯನ್ನು ಮಾತಾಡುವಂತೆ ಶಕ್ತರನ್ನಾಗಿಸುವ – ಆ ಭಾಷೆಯು "ಆತ್ಮೀಕ"ವಾಗಿರಬಹುದು ಅಥವಾ "ಲೌಕೀಕ" ಆಗಿರಬಹುದು – ಒಂದು ಅಸ್ವಾಭಾವಿಕ ವರವು ಕೊಡಲ್ಪಟ್ಟಿರುತ್ತದೆ.

9 ಗ್ರೀಕ್ ಭಾಷೆಯ ಗ್ರೀಸ್‌ನ ಜನರಿಂದ ಮಾತಾಡಲ್ಪಡುತ್ತಿತ್ತು, ಇದು ಮೆಡಿಟರನಿಯನ್ ಸಮುದ್ರದ ಉತ್ತರ ದಂಡೆಯಲ್ಲಿರುವ ದಕ್ಷಿಣ ಯೂರೋಪಿನ ಪ್ರಮುಖ ರಾಷ್ಟ್ರವಾಗಿತ್ತು, ಹೇಗಿದ್ದರೂ, ಮೆಡಿಟರನಿಯದ ರಾಷ್ಟ್ರಗಳಿಗೆ ಸೇರಿದ ಬಹು ಪಾಲು ವಿಧ್ಯಾವಂತರೂ ಸಹ ಸಾಮಾನ್ಯವಾಗಿ ಗ್ರೀಕ್ ಭಾಷೆಯನ್ನು ಮಾತಾಡುತ್ತಿದ್ದರು.

10 ಕ್ರಿಸ್ತನ ಕಾಲದಲ್ಲಿ ಮಧ್ಯ ಪೂರ್ವದಲ್ಲಿ ವಾಸಿಸುತ್ತಿದ್ದ ಬಹು ಪಾಲು ಸಾಮಾನ್ಯ ಜನರು ಆರಾಮಿಕ ಭಾಷೆಯನ್ನು ಮಾತಾಡುತ್ತಿದ್ದರು. ಕ್ರಿಸ್ತನು ಸಹ ಆರಾಮಿಕ ಮಾತಾಡಿದನು. ಹೇಗಿದ್ದರೂ, ಇಂದು ಆರಾಮಿಕ ಭಾಷೆಯು ಮಧ್ಯ ಪೂರ್ವದಲ್ಲಿನ ಸ್ವಲ್ಪ ಜನರಿಂದ ಮಾತ್ರವೇ ಮಾತಾಡಲ್ಪಡುತ್ತದೆ.

11 ಹೊಸ ಒಡಂಬಡಿಕೆಯ ಕಾಲದಲ್ಲಿ ಯೂರೋಪ, ಉತ್ತರ ಆಫ್ರಿಕಾ ಮತ್ತು ಮದ್ಯ ಪೂರ್ವದ ಬಹು ಪಾಲು ರಾಷ್ಟ್ರಗಳು ರೋಮಾಯ ಸಾಮ್ರಾಜ್ಯದ ಆಧಿನಕ್ಕೊಳಗಾಗಿದ್ದವು . ರೋಮಾಯ ಸಾಮ್ರಾಜ್ಯದ ರಾಜಧಾನಿಯು ರೋಮನಗರವಾಗಿತ್ತು, ಇದು ಇಂದು ಆಧುನಿಕ ಐರೋಪ್ಯ ರಾಷ್ಟ್ರವಾದ ಇಟಲಿಯ ರಾಜದಾನಿಯಾಗಿರುತ್ತದೆ.

12 ಬೆಳಗ್ಗೆ ಒಂಭತ್ತು ಘಂಟೆ ಎಂಬ ಪದಗಳ ಬದಲಾಗಿ ಕೆಲವು ಬೈಬಲ್ ಆವೃತ್ತಿಗಳಲ್ಲಿ "ಮೂರನೆಯ ತಾಸು" ಎಂದು ಹೇಳುತ್ತವೆ. ಯೆಹೂದ್ಯ ಪದ್ದತಿಯ ಪ್ರಕಾರವಾಗಿ ಸಮಯವನ್ನು ಸೂರ್ಯೋದಯದಿಂದ ಲೆಕ್ಕಿಸುತ್ತಿದ್ದರು, ಅಂದರೆ ಅಂದಾಜಾಗಿ ಬೆಳಿಗ್ಗೆ 6 ಘಂಟೆಯಿಂದ ಲೆಕ್ಕಿಸುತ್ತಿದ್ದರು.

13 ನಜರೇತು ಗಲಿಲಾಯ ಪ್ರಾಂತ್ಯದಲ್ಲಿನ ಒಂದು ಊರಾಗಿದ್ದು ಅಲ್ಲಿಯೇ ಯೇಸು ಬೆಳೆದನು.

14 ರೋಮಾಯ ಪದ್ದತಿಯ ಪ್ರಕಾರವಾಗಿ ಅಪರಾಧಿಗಳನ್ನು ಶಿಲುಬೆಗೆ ಜಡಿದು ಮರಣ ದಂಡನೆ ವಿಧಿಸುವದು ಸಾಮಾನ್ಯ ವಿಧಾನವಾಗಿತ್ತು. ಹೆಚ್ಚಿನ ಚರ್ಚೆಗಾಗಿ, ಪದಪಟ್ಟಿ: ಶಿಲುಬೆ ನೋಡಿರಿ.

15 ಹೊಸ ಒಡಂಬಡಿಕೆಯ ಕಾಲದಲ್ಲಿ ಇಸ್ರಾಯೇಲವು ರೋಮಾಯ ಸಾಮ್ರಾಜ್ಯದ ಅಧೀನದಲ್ಲಿದ್ದ ಒಂದು ಪ್ರಾಂತ್ಯವಾಗಿತ್ತಾದ್ದರಿಂದ ಇಸ್ರಾಯೇಲಿನ ನಾಯಕರು (ಯೆಹೂದ್ಯ ನಾಯಕರು) ಸ್ವತಃ ತಾವೇ ಮರಣದಂಡನೆಯನ್ನು ವಿಧಿಸಲು ಅನುಮತಿಯಿರಲಿಲ್ಲ. ರೋಮಾಯ ಅಧಿಕಾರಿಗಳು ಮಾತ್ರವೇ ಒಬ್ಬ ವ್ಯಕ್ತಿಯನ್ನು ಕಾನೂನು ಬದ್ಧವಾಗಿ ಮರಣಕ್ಕೊಳಪಡಿಸಬಹುದಾಗಿತ್ತು.

16 ಯೆಹೂದ್ಯ ಧರ್ಮಗ್ರಂಥಗಳು (ಶಾಸ್ತ್ರಗಳು) ಹಳೆ ಒಡಂಬಡಿಕೆಯಲ್ಲಿ ಲೀನವಾಗಿದ್ದವು .

17 ಕ್ರಿಸ್ತನು ಎಂಬದು ಗ್ರೀಕ ಪದವಾಗಿದ್ದು "ಅಭಿಷೀಕ್ತನು" ಎಂಬ ಅರ್ಥವನ್ನು ಕೊಡುತ್ತದೆ. "ಅಬಿಷೀಕ್ತನು" ಎಂಬದಕ್ಕೆ ಯೆಹೂದ್ಯ ಭಾಷೆಯಾದ ಇಬ್ರಿಯದಲ್ಲಿ "ಮೆಸ್ಸೀಯನು" ಎಂದಿರುತ್ತದೆ. ಹೀಗೆ "ಕ್ರಿಸ್ತನು" ಮತ್ತು "ಮೆಸ್ಸೀಯನು" ಎಂಬ ಪದಗಳು ಒಂದೇ ಅರ್ಥವನ್ನು ಹೊಂದಿವೆ.

18 ಅನೇಕ ಸಭೆಗಳಲ್ಲಿ ಕ್ರೈಸ್ತ ತಂದೆ ತಾಯಿಗಳು ತಮ್ಮ ಮಕ್ಕಳು ತಮ್ಮದೇ ಆದ ನಿಜ ನಂಬಿಕೆಯನ್ನು ಹೊಂದಲು ಶಕ್ತರಾಗುವದಕ್ಕೆ ಮುನ್ನವೇ ಅತಿ ಚಿಕ್ಕ ವಯಸ್ಸಿನಲ್ಲಿಯೇ ಅವರಿಗೆ ದೀಕ್ಷಾಸ್ನಾನ ಮಾಡಿಸುತ್ತಾರೆ. ಹೇಗಿದ್ದರೂ, ಅಂತಹ ಮಕ್ಕಳು ದೊಡ್ಡವರಾಗುವಾಗ ಅವರು ಸ್ವತಃ ಯೇಸುವಿನಲ್ಲಿ ನಂಬಿಕೆಯಿಡತಕ್ಕದ್ದು, ಇಲ್ಲವಾದರೆ ಅವರ ದೀಕ್ಷಾಸ್ನಾನವು ಅರ್ಥಹೀನವಾಗುವು ದು.

19 ಇಲ್ಲಿ ಶಿಶು ದೀಕ್ಷಾಸ್ನಾನವು ಚರ್ಚೆಯಲ್ಲಿರುವದಿಲ್ಲ; ಅದೊಂದು ಬೇರೆ ವಿಷಯವಾಗಿದೆ (ಸಾಮಾನ್ಯ ಲೇಖನ: ನೀರಿನ ದೀಕ್ಷಾಸ್ನಾನ ನೋಡಿರಿ).

20 ದೀಕ್ಷಾಸ್ನಾನದ ಮಹತ್ವದ ವಿಷಯದಲ್ಲಿ ಹೆಚ್ಚಿನ ಚರ್ಚೆಗಾಗಿ, ಸಾಮಾನ್ಯ ಲೇಖನ: ನೀರಿನ ದೀಕ್ಷಾಸ್ನಾನ ನೋಡಿರಿ.

21 ಈ ಕ್ರೈಸ್ತರು ನಂಬುವದೇನೆಂದರೆ ಎಲ್ಲಾ ಕ್ರೈಸ್ತರು ನಂಬಿದ ಮೊದಲಲ್ಲಿ ಪವಿತ್ರಾತ್ಮನನ್ನು ಸಾಮಾನ್ಯವಾಗಿ ಪಡೆದುಕೊಳ್ಳುವದೇ ಬೇರೆ ಹಾಗು ಪವಿತ್ರಾತ್ಮನ "ದೀಕ್ಷಾಸ್ನಾನ"ವೇ ಬೇರೆಯಾದದ್ದು. ಪವಿತ್ರಾತ್ಮನ "ದೀಕ್ಷಾಸ್ನಾನ"ವು ಒಂದು ವಿಶೇಷ ಅನುಭವವಾಗಿದ್ದು ಎಲ್ಲಾ ಕ್ರೈಸ್ತರು ಅದನ್ನು ಹೊಂದಿರುವದಿಲ್ಲ ಆದರೆ ಅದನ್ನು ಕ್ರೈಸ್ತರೆಲ್ಲರೂ ಹಾರೈಸಿ ಅದಕ್ಕಾಗಿ ದೇವರನ್ನು ಕೇಲಿಕೊಳ್ಳವಂತದ್ದಾಗಿದೆ. ಹೆಚ್ಚಿನ ಚರ್ಚೆಗಾಗಿ, ಸಾಮಾನ್ಯ ಲೇಖನ: ಪವಿತ್ರಾತ್ಮನ ದೀಕ್ಷಾಸ್ನಾನ ನೋಡಿರಿ.

22 ಬಹುಶಃ ಅವರು ತಮ್ಮ ಮನೆಗಳನ್ನು ಅಪೊಸ್ತಲರ ಪಾದಕ್ಕೆ ಒಪ್ಪಿಸಲಿಲ್ಲ, ಯಾಕೆಂದರೆ 46ನೇ ವಚನದಲ್ಲಿ ಅವರು ತಮ್ಮ ಮನೆಮನೆಗಳಲ್ಲಿ ರೊಟ್ಟಿ ಮುರಿಯುತ್ತಿದ್ದರೆಂದು ಲೂಕನು ಹೇಳುತ್ತಾನೆ. ಹೇಗಿದ್ದರೂ, ಯಾವದೇ ಅಗತ್ಯತೆಯನ್ನು ಸಂದಿಸಲು ತಮ್ಮ ಮನೆಗಳನ್ನು ಒಪ್ಪಿಸಿದ್ದರೆಂಬುದರಲ್ಲಿ ಯಾವ ಸಂಶಯವಿಲ್ಲ. ಅವರು ತಮ್ಮ ಮನೆ, ಆದರೊಂದಿಗೆ ಇತರ ಎಲ್ಲಾ ಸ್ವತ್ತುಗಳನ್ನು ತಮಗಾಗಿ ಅಲ್ಲ, ಆದರೆ ದೇವರಿಗೆ ಎಂದು ಪರಿಗಣಿಸಿದ್ದರು.

23 ಆಸ್ತಿಗಳನ್ನು ಹೊಂದಿರುವದು ಪಾಪವಲ್ಲ; ಸ್ವತ್ತುಗಳನ್ನು ಪ್ರೀತಿಸುವದೇ ಪಾಪವಾಗಿರುತ್ತದೆ (ಮತ್ತಾಯ 6:24; 1 ಯೋಹಾನ 2:15 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

24 ಮದ್ಯಾಹ್ನ ಮೂರು ಘಂಟೆಗೆ ಎಂಬ ಪದಗಳ ಬದಲಾಗಿ ಬೈಲಿನ ಕೆಲವು ಆವೃತ್ತಿಗಳು 'ಒಂಭತ್ತನೆಯ ತಾಸಿನಲ್ಲಿ" ಎಂದು ಹೇಳುತ್ತವೆ, ಅದು ಗ್ರೀಕ್ ಪ್ರತಿಯ ಅಕ್ಷರಂಶಃ ಭಾಷಾಂತರವಾಗಿದೆ.

25 ಇಂದು ಸಾಕಷ್ಟು "ಬೆಳ್ಳಿ ಬಂಗಾರಗಳನ್ನು" ಹೊಂದಿರುವ ಬೋಧಕರು ಅನೇಕರಿದ್ದಾರೆ, ಆದರೆ ಅವರಲ್ಲಿ ಕ್ರಿಸ್ತನ ಶಕ್ತಿಯು ಇರುವದಿಲ್ಲ!

26 ಯೆಹೂದ್ಯ ದೇವಾಲಯದ ಒಳ ಭಾಗಕ್ಕೆ ಸಾಗುವ ಒಂಭತ್ತು ಬಾಗಲುಗಳಿದ್ದವು . ಅವು ಗಳಲ್ಲಿ ಸುಂದರ ದ್ವಾರವೂ ಒಂದಾಗಿತ್ತು.

27 ಒಂದು ದಿನ ಮೆಸ್ಸೀಯನು (ಕ್ರಿಸ್ತನು) ಬಂದು ಸಮಸ್ತವನ್ನು ಸರಿ ಮಾಡುವನು – ವಿಶೇಷವಾಗಿ ಅವರ ಇಸ್ರಾಯೇಲ ರಾಷ್ಟ್ರವನ್ನು ಪು ನಃ ಸ್ಥಾಪಿಸುವನು ಎಂದು ಯೆಹೂದ್ಯರು ನಂಬಿದ್ದರು. ಹೊಸ ಒಡಂಬಡಿಕೆಯ ಕಾಲದಲ್ಲಿ ಇಸ್ರಾಯೇಲವು ತನ್ನ ಸ್ವಾತಂತ್ರ್ಯವನ್ನು ಕಳೆದು ಕೊಂಡು ರೋಮಾಯ ಸಾಮ್ರಾಜ್ಯದ ಆಧೀನಕ್ಕೊಳಗಾಗಿತ್ತು.

28 ಸದ್ದು ಕಾಯರು ಸತ್ತವರ ಪು ನರುಥ್ಥಾನವನ್ನು ನಂಬದ ಯೆಹೂದ್ಯರ ಒಂದು ಪಂಗಡವಾಗಿದ್ದರು. ಯೆಹೂದ್ಯರ ಮಹಾಯಾಜಕರಲ್ಲಿ ಬಹು ಮಂದಿ ಸದ್ದು ಕಾಯರಾಗಿದ್ದರು. ಹೆಚ್ಚಿನ ಚರ್ಚೆಗಾಗಿ ಪದ ಪಟ್ಟಿ: ಸದ್ದು ಕಾಯರು ನೋಡಿರಿ.

29 ಜನರ ಸಮೂಹಗಳನ್ನು ಲೆಕ್ಕಿಸುವಾಗ ಯೆಹೂದ್ಯರು ಸಾಮಾನ್ಯವಾಗಿ ಪು ರುಷರನ್ನು ಮಾತ್ರವೇ ಲೆಕ್ಕಿಸುತ್ತಿದ್ದರು. ಐದು ಸಾವಿರ ಪು ರುಷರನ್ನು ಹೊರತು ಪಡಿಸಿ ಇನ್ನು ಅನೇಕ ಸ್ತ್ರೀಯರು ಸಹ ನಂಬಿದ್ದರು.

30 ಅವರು ಯೇಸುವಿನ ಶವವನ್ನು ಕಾಣಲಿಲ್ಲ, ಯಾಕೆಂದರೆ ಅಲ್ಲಿ ಶವವಿರಲಿಲ್ಲ. ಯೇಸು ಜೀವದಿಂದೆದ್ದಿದ್ದನು!

31 ಯೇಸು ಸ್ವತಃ ಪವಿತ್ರಾತ್ಮನ ಮೂಲಕವಾಗಿ ತನ್ನ ಅಪೊಸ್ತಲರೊಂದಿಗೆ ಕಾರ್ಯ ಮಾಡಿ ಕುಂಟನನ್ನು ಸ್ವಸ್ಥಮಾಡಿದನು (ಮಾರ್ಕ 16:20). ವಾಸ್ತವದಲ್ಲಿ ನಿಜವಾಗಿಯೂ ಸ್ವಸ್ಥಮಾಡಿದವನು ಪವಿತ್ರಾತ್ಮನೇ.

32 ಅಭಿಷೀಕ್ತನು ಎಂಬುದಕ್ಕೆ ಗ್ರೀಕ್ ಪದವು "ಕ್ರಿಸ್ತನು" . ಇಬ್ರಿಯ (ಯೆಹೂದ್ಯ) ಹಾಗು ಅರಾಮಿಕ ಭಾಷೆಗಳಲ್ಲಿ ಅಭಿಷೀಕ್ತನು ಎಂಬದಕ್ಕೆ "ಮೆಸ್ಸೀಯನು" ಎಂಬ ಪದವಿರುತ್ತದೆ.

33 ರೋಮಾಯ ಸಾಮ್ರಾಜ್ಯದಲ್ಲೆಲ್ಲಾ ಇಂತಹ "ಕೈಗೊಂಬೆ ಆಡಳಿತಗಾರರು" ಬಹು ಮಂದಿಯಿದ್ದರು, ಅವರು ತಮ್ಮ ಸ್ಥಳೀಯ

ಕ್ಷೇತ್ರವನ್ನು ಆಳುವದಕ್ಕೆ ರೋಮಾಯರಿಂದ ಮೀತಿಯುಳ್ಳ ಅಧಿಕಾರವನ್ನು ಹೊಂದಿದ್ದರು. ಅರಸನಾದ ಹೆರೋದನು ಗಲಿಲಾಯ ಪ್ರಾಂತ್ಯವನ್ನು ಆಳುತ್ತಿದ್ದನು (ಲೂಕ 23:6-7; ಅ.ಕೃತ್ಯ 12:1 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

34 ಅರಾಮಿಕ ಭಾಷೆಯಲ್ಲಿ (ಅದು ಪೇತ್ರನ ಭಾಷೆಯಾಗಿತ್ತು) ಸಜ್ಜೀವ ಎಂಬುದಕ್ಕೆ ಈ ವಚನದಲ್ಲಿ ಉಪಯೋಗಿಸಿರುವ ಪದದ ಅರ್ಥವು "ರಕ್ಷಣೆ" ಎಂದು ಸಹ ಆಗುತ್ತದೆ (ಅ.ಕೃತ್ಯ 13:26).

35 ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರವಾಗಿ ಅಪರಾಧಿಗಳ ಅವಮಾನವನ್ನು ಎಲ್ಲರೂ ನೋಡುವಂತಾಗಬೇಕೆಂದು ಮರಣಂಡನೆಗೊಳಗಾದ ಅವರ ದೇಹಗಳನ್ನು ಮರದಕಂಬಕ್ಕೆ ತೂಗಾಡುವಂತೆ ಬಿಡಲಾಗುತ್ತಿತ್ತು (ಧರ್ಮೋಪದೇಶಕಾಂಡ 21:22-23). ಆದುದರಿಂದ ಶಿಲುಬೆಗೇರಿಸಲ್ಪಡುವದು – ಮರದ ಕಂಬದ ಮೇಲೆ ತೂಗಾಡಲ್ಪಡುವಂತಿದ್ದ ಅದು – ಯೆಹೂದ್ಯರ ದೃಷ್ಟಿಯಲ್ಲಿ ಅತ್ಯಂತ ಅವಮಾನಕರವಾಗಿತ್ತು.

36 ಫರಿಸಾಯರು ಯೆಹೂದ್ಯರ ಒಂದು ಪಕ್ಷವಾಗಿದ್ದರು. ಅಪೊಸ್ತಲನಾದ ಪೌಲನು ತಾನು ಕ್ರೈಸ್ತನಾಗುವದಕ್ಕೆ ಮುಂಚೆ ಒಬ್ಬ ಕಟ್ಟುನಿಟ್ಟಿನ ಫರಿಸಾಯನಾಗಿದ್ದನು ಮತ್ತು ಇಲ್ಲಿ ಪ್ರಸ್ತಾಪಿಸಲಾಗಿರುವ ಗಮಲಿಯೇಲನು ಆತನ ಬೋಧಕನಾಗಿದ್ದನು (ಅ.ಕೃತ್ಯ 22:3). ಹೆಚ್ಚಿನ ಚರ್ಚೆಗಾಗಿ, ಪದಪಟ್ಟಿ: ಫರಿಸಾಯ ನೋಡಿರಿ.

37 ಇಬ್ರಿಯ ಮತ್ತು ಆರಾಮಿಕ ಬೇರೆ ಬೇರೆ ಯಾಗಿದ್ದರೂ ಅವು ಗಳೆರಡು ಆಪ್ತ ಬಾಂಧವ್ಯದ ಭಾಷೆಗಳಾಗಿವೆ. ಇಬ್ರಿಯವು ಯೆಹೂದ್ಯ ವಿಶೇಷ ಭಾಷೆಯಾಗಿತ್ತು, ಅದೇ ವೇಳೆಯಲ್ಲಿ ಆರಾಮಿಕ ಬಹುಪಾಲು ಮಧ್ಯ ಪೂರ್ವ ಜನರ (ಯೆಹೂದ್ಯರೂ ಸೇರಿದಂತೆ) ಸಾಮಾನ್ಯ ಭಾಷೆಯಾಗಿತ್ತು.

38 ಗ್ರೀಕ್ ಭಾಷೆಯು ರೋಮಾಯ ಸಾಮ್ರಾಜ್ಯದಲೆಲ್ಲಾ ಇದ್ದ ವಿಧ್ಯಾವಂತರು ಮಾತಾಡುತ್ತಿದ್ದ ಅತಿ ಸಾಮಾನ್ಯ ಭಾಷೆಯಾಗಿತ್ತು, ಇಟಲಿಯಲ್ಲಿ ಮಾತ್ರ ಲ್ಯಾಟಿನ್ ಭಾಷೆಯನ್ನಾಡುತ್ತಿದ್ದರು (ಲ್ಯಾಟಿನ್ ರೋಮಾಯ ಸರ್ಕಾರದ ಆಡಳಿತ ಭಾಷೆಯಾಗಿತ್ತು).

39 ಸಾಮಾನ್ಯವಾಗಿ ಸುಳ್ಳು ಸಾಕ್ಷಿಗಾರರು ಸಂಪೂರ್ಣವಾಗಿ ಸುಳ್ಳನ್ನು ಹೇಳುವದಿಲ್ಲ. ಅವರು ಸಹಜವಾಗಿ ಸತ್ಯವನ್ನು ತೆಗೆದುಕೊಂಡು ತಿರುಚಿ ಹೇಳುವವರಾಗಿದ್ದಾರೆ. ಈ ರೀತಿಯಾಗಿ ತಾವು ಹೇಳುವದು ಸತ್ಯವೆಂಬದಾಗಿ ಅನೇಕ ಜನರನ್ನು ಒಡಂಬಡಿಸುವವರಾಗಿದ್ದಾರೆ. ಸೈತಾನನು ಬಹಳ ಚಾಣಕ್ಷ್ಯನಾಗಿದ್ದಾನೆ! ಹೇಗಿದ್ದರೂ, ನಾವು ನೆನಪಿನಲ್ಲಿಟ್ಟು ಕೊಳ್ಳಬೇಕಾದದ್ದೇನೆಂದರೆ ಸತ್ಯವನ್ನು ತಿರುಚಿ ಹೇಳುವದು, ಸುಳ್ಳು ಹೇಳುವದು ಎರಡೂ ಒಂದೇ ಆಗಿದೆ. ಸತ್ಯವನ್ನು ಬೇಕೆಂದೆ ತಿರುಚಿ ಹೇಳುವದು ದೇವರ ದೃಷ್ಟಿಯಲ್ಲಿ ನೇರವಾಗಿ ಸುಳ್ಳನ್ನು ಹೇಳಿದಷ್ಟೇ ಕೆಟ್ಟದ್ದಾಗಿರುತ್ತದೆ.

40 ರೋಮಾಯ ಚಕ್ರವರ್ತಿಗಳನ್ನು "ಕೈಸರ" ಎಂದು ಕರೆಯುವ ಪ್ರಕಾರವೇ ಐಗುಪ್ತ್ಯದ ಬಹು ಮಂದಿ ಅರಸರನ್ನು ಪರೋಹ ಎಂದು ಕರೆಯಲಾಗುತ್ತಿತ್ತು.

41 ಹಳೆ ಒಡಂಬಡಿಕೆಯಲ್ಲಿ ದೇವರು ಜನರಿಗೆ ಕಾಣಿಸಿಕೊಳ್ಳುವಾಗ ಸಾಮಾನ್ಯವಾಗಿ ಆತನು ಒಬ್ಬ ದೂತನ ರೂಪದಲ್ಲಿ ಪ್ರತ್ಯಕ್ಷನಾಗುತ್ತಿದ್ದನು.

42 ಮನುಷ್ಯರು ದೇವರ ವಿರುದ್ಧವಾಗಿ ಇಚ್ಛಾಪೂರ್ವಕವಾಗಿ ಪಾಪವನ್ನು ಮಾಡಿದಾಗಲೆಲ್ಲಾ ದೇವರು ಅವರನ್ನು ಇನ್ನಷ್ಟು ಕೆಟ್ಟ ಪಾಪಗಳನ್ನು ಮಾಡುವಂತೆ "ಒಪ್ಪಿಸಿ ಕೊಡುತ್ತಾನೆ" (ರೋಮ 1:24, 26; 28 ನೋಡಿರಿ).

43 ಪುರಾತನ ಬಾಬೇಲ ಇಂದಿನ ಆಧುನಿಕ ರಾಷ್ಟ್ರವಾದ ಇರಾಕನಲ್ಲಿತ್ತು.

44 ಪುರಾತನ ಕಾಲಗಳಲ್ಲಿ ರಾಜ ರಾಣಿಯರ ಮುಖ್ಯ ಅದಿಕಾರಿಗಳು ಹಲವಾರು ವೇಳೆಗಳಲ್ಲಿ ಕಂಚುಕಿಯ.ರಾಗಿರುತ್ತಿದ್ದರು. ಇತರ ಸಾಮಾನ್ಯ ವ್ಯಕ್ತಿ ಗಳಿಗಿಂತಲೂ ಬೀಜವಡೆಯಲ್ಪಟ್ಟ ವ್ಯಕ್ತಿಯು ರಾಜ್ಯದ ವ್ಯವಹಾರಗಳನ್ನು ವಹಿಸಿಕೊಳ್ಳಲು ಹೆಚ್ಚು ವಿಶ್ವಾಸರ್ಹ ಎಂದು ಯೋಚಿಸಲಾಗುತ್ತಿತ್ತು, ಯಾಕೆಂದರೆ ಅವನು ಅಧಿಕಾರವನ್ನು ತನಗಾಗಿ ದುರುಪಯೋಗ ಪಡಿಸಿಕೊಳ್ಳಲು ಸಾಧ್ಯತೆಯಿರಲಿಲ್ಲ. ಅಲ್ಲದೆ ಅವನು ರಾಜಪರಿವಾರದ ಸ್ತ್ರೀಯರಿಗೆ ತೊಂದರೆಯನ್ನುಂಟು ಮಾಡುವ ಸಾಧ್ಯತೆಯೂ ಇರಲಿಲ್ಲ.

45 ಇಥಿಯೋಪ್ಯವು ಐಗುಪ್ತ್ಯದ ದಕ್ಷಿಣಕ್ಕಿದ್ದ ಆಫ್ರಿಕಾದ ಒಂದು ಬೃಹತ್ ರಾಷ್ಟ್ರವಾಗಿತ್ತು.

46 ರಥವು ಕುದುರೆಗಳಿಂದ ಎಳೆಯಲ್ಪಡುವ ಎರಡು ಗಾಲಿಗಳ ಚಕ್ಕಡಿಯಾಗಿತ್ತು. ಪುರಾತನ ಕಾಲದಲ್ಲಿ ಸೈನಿಕರು ಮತ್ತು ಸರ್ಕಾರದ ಅಧಿಕಾರಿಗಳು ಇದನ್ನು ಸಾರಿಗೆಗಾಗಿ ಉಪಯೋಗಿಸುತ್ತಿದ್ದರು.

47 ಹಳೆ ಒಡಂಬಡಿಕೆಯ ಎರಡು ಪ್ರತಿಗಳಿರುತ್ತವೆ: ಒಂದು ಇಬ್ರಿಯ ಭಾಷೆಯಲ್ಲಿ ಹಾಗು ಇನ್ನೊಂದದು, ಗ್ರೀಕ್ ಭಾಷೆಯಲ್ಲಿದೆ. ಹಳೆ ಒಡಂಬಡಕೆಯು ಮೂಲಕಃ ಇಬ್ರಿಯ ಭಾಷೆಯಲ್ಲಿ ಬರೆಯಲ್ಪಟ್ಟಿತ್ತು, ಇದು ಯೆಹೂದ್ಯರ ಭಾಷೆಯಾಗಿದೆ. ತರುವಾಯ ಕ್ರಿಸ್ತನು ಬರುವದಕ್ಕೆ ಕೆಲವೊಂದು ವರ್ಷಗಳಿಗೆ ಮುಂಚೆಯಷ್ಟೇ ಇಬ್ರಿಯ ಆವೃತ್ತಿಯು ಗ್ರೀಕ ಭಾಷೆಯಲ್ಲಿ ಭಾಷಾಂತರಗೊಂಡಿದೆ. ಈ ಗ್ರೀಕ ಮತ್ತು ಇಬ್ರಿಯ ಪ್ರತಿಗಳಲ್ಲಿ ಅನೇಕ ಚಿಕ್ಕ ವ್ಯತ್ಯಾಸಗಳಿರುತ್ತವೆ. ಬಹು ಪಾಲು ಆಧುನಿಕ ಹಳೆ ಒಡಂಬಡಿಕೆಯ ಭಾಷಾಂತರಗಳು ಇಬ್ರಿಯ ಪ್ರತಿಯ ಮೇಲೆ ಆದಾರಗೊಂಡಿರುತ್ತವೆ. ಆದರೆ ಹೊಸ ಒಡಂಬಡಿಕೆಯ ಕೆಲವು ಬರಹ ಗಾರರು, ವಿಶೇಷವಾಗಿ ಲೂಕ ಮತ್ತು ಇಬ್ರಿ ಬರಹಗಾರರು ಹಳೆ ಒಡಂಬಡಿಕೆಯಿಂದ ಉಲ್ಲೇಕಿಸುವಾಗ ಮುಖ್ಯವಾಗಿ ಗ್ರೀಕ್ ಪ್ರತಿಯನ್ನು ಉಪಯೋಗಿಸಿರುತ್ತಾರೆ. ಆದುದರಿಂದ, ಇಲ್ಲಿ 32-33 ವಚನಗಳಲ್ಲಿ ಪ್ರಸ್ತಾಪಿಸಲಾಗಿರುವ ಯೆಶಾಯನ ಪುಸ್ತಕದ ಭಾಗವನ್ನು ಯೆಶಾಯ 53:7-8 ರಲ್ಲಿನ ಅದೇ ವಾಕ್ಯಭಾಗದೊಂದಿಗೆ ಹೋಲಿಸಿ ನೋಡುವದಾದರೆ ವಿಶೇಷವಾಗಿ ಎರಡನೆಯ ವಚನದಲ್ಲಿ ಹಲವಾರು ವ್ಯತ್ಯಾಸಗಳನ್ನು ಗಮನಿಸಬಹುದು.

48 ಅ.ಕೃತ್ಯಗಳ ಪುಸ್ತಕದ ಪುರಾತನ ಪ್ರತಿಗಳಲ್ಲೆಲ್ಲಾ 37ನೇ ವಚನವು ಇರುವದಿಲ್ಲ, ಕೆಲ ಪ್ರತಿಗಳಲ್ಲಿ ಮಾತ್ರ ಇರುತ್ತದೆ.

49 ಸೌಲ ಇಬ್ರಿಯ ಹೆಸರಾಗಿದೆ. ಸೌಲನ ರೋಮಾಯ ಹೆಸರು ಪೌಲ ಎಂಬದಾಗಿತ್ತು.

50 ಹೊಸ ಒಡಂಬಡಿಕೆಯ ಕಾಲದಲ್ಲಿ ಯೂದಾಯ, ಗಲಿಲಾಯ ಮತ್ತು ಸಮಾರ್ಯಗಳು ಇಸ್ರಾಯೇಲಿನ ಮೂರು ಪ್ರಾಂತ್ಯಗಳಾಗಿದ್ದವು.

51 ರೋಮಾಯ ಸೈನ್ಯದಲ್ಲಿ ಶತಾಧಿಪತಿಯೊಬ್ಬನು ನೂರು ಮಂದಿ ಸೈನಿಕರ ಸೇನಾಧಿಪತಿಯಾಗಿದ್ದನು.

52 ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರವಾಗಿ, ಯೆಹೂದ್ಯರು ಯಾವ ಪ್ರಾಣಿಯ ಕಾಲ್ಗೊರಸು ಸೀಳಿದೆಯೋ ಅದು ಮೆಲಕು ಹಾಕುವಂಥದಾದರೆ ಅದರ ಮಾಂಸವನ್ನು ತಿನ್ನ ಬಹುದಾಗಿತ್ತು (ಯಾಜಕ ಕಾಂಡ 11:3).

53 ರೋಮಾಪುರವು ಅತಿ ದೊಡ್ಡನಗರವಾಗಿತ್ತು ಮತ್ತು ಎರಡನೆಯದಾಗಿ ಐಗುಪ್ತ್ಯದಲ್ಲಿರುವ ಅಲೆಗ್ಸಾಂಡ್ರಿಯವು ಹೊಡ್ಡದಾಗಿತ್ತು.

54 ಕೂರೇನ್ಯವು ಐಗುಪ್ತ್ಯದ ಪಶ್ಚಿಮ ದಿಕ್ಕಿನೆಡೆಗಿರುವ ಆಫ್ರಿಕಾದ ಉತ್ತರ ಕರಾವಳಿಯಲ್ಲಿನ ಒಂದು ಪ್ರಾಮುಖ್ಯ ಊರಾಗಿತ್ತು.

55 ಹೇಗಿದ್ದರೂ, ಇತರ ಬೈಬಲ್ ಪಂಡಿತರು ಒಪ್ಪಿಕೊಳ್ಳುವದಿಲ್ಲ. ಈ ಇತರ ಪಂಡಿತರು ನಂಬುವದೇನೆಂದರೆ ಗಲಾತ್ಯ 2:1-10 ರಲ್ಲಿ ಪ್ರಸ್ತಾಪಿಸಲಾಗಿರುವ ಯೆರೂಸಲೇಮಿನ ಪ್ರಯಾಣವು ನಿಜವಾಗಿಯು ಅನಂತರದಲ್ಲಿ ಮಾಡಿದ ಪ್ರಯಾಣವಾಗಿದ್ದು ಇದನ್ನು ಅ.ಕೃತ್ಯ 15:1-29 ರಲ್ಲಿ ವಿವರಿಸಲಾಗಿದೆ. ಈ ಎರಡೂ ಅಭಿಪ್ರಾಯಗಳಲ್ಲಿ ಯಾವದು ಸರಿಯೆಂಬದನ್ನು ನಿಖರವಾಗಿ ಹೇಳುವದು ಅಸಾಧ್ಯವಾಗಿರುತ್ತದೆ.

ಹುಳಿಯಿಲ್ಲದ ರೊಟ್ಟಿಯ ಹಬ್ಬವು ಒಂದು ವಾರದ ವರೆಗೆ ಇರುತ್ತದೆ (ವಿಮೋಚನ ಕಾಂಡ 12:18) ನಿಜವಾದ ಪಸ್ಕವು ಆವಾರದ ಮೊದಲನೆಯ ದಿನದಂದು ಬರುತ್ತಿತ್ತು, ಆದರೆ ಸಾಮಾನ್ಯವಾಗಿ ಯೆಹೂದ್ಯರು ಇಡೀವಾರವನ್ನು "ಪಸ್ಕಹಬ್ಬ" ಎಂದು ಸೂಚಿಸುತ್ತಿದ್ದರು.

56 ಈತನು ಎರಡನೆಯ ಸುವಾರ್ತೆಯನ್ನು ಮಾರ್ಕನು ಕ್ರಿಸ್ತನು ಬಂಧನಕ್ಕೊಳಗಾಗುವದನ್ನು ಇತನು ಕಣ್ಣಾರೆ ಕಂಡಿದ್ದನು (ಮಾರ್ಕ 14:51-52), ಇತನು ಬಾರ್ನಬನ ಸಂಬಂಧಿಯಾಗಿದ್ದನು, ಮತ್ತು ಬಾರ್ನಬ ಸೌಲರ ಮೊದಲನೆಯ ಸುವಾರ್ತಾ ಪ್ರಯಾಣದಲ್ಲಿ ಕೆಲ ಕಾಲ ಜೊತೆಯಾಗಿದ್ದನು ( ಅ.ಕೃತ್ಯ 12:25; 13:5; 13; ಕೊಲೊಸ್ಸೆ 4:10).

57 ಅಂತಹ ಮೂತ್ರಾಶಯ ಹುಳುಗಳು ಮಧ್ಯಪೂರ್ವ ದೇಶಗಳಲ್ಲಿ ಸಾಮಾನ್ಯವಾಗಿದ್ದವು.

58 ಕುರೇನ್ಯವು ಉತ್ತರ ಆಫ್ರಿಕಾದ ಒಂದು ನಗರವಾಗಿತ್ತು (ಅ.ಕೃತ್ಯ 11:20 ನೋಡಿರಿ).

59 ವಾಸ್ತವದಲ್ಲಿ ಕ್ರಿಸ್ತನು ಕ್ರಿ.ಪೂ 4ರಲ್ಲಿ ಜನಿಸಿದ್ದನು. ಪೂರ್ವಾತ್ಯ ಕ್ಯಾಲೆಂಡರ ಸ್ಥಾಪಿಸಲ್ಪಟ್ಟಾಗ ಕ್ರಿ.ಶಕ 1 ನೇ ವರ್ಷವು ಕ್ರಿಸ್ತನ ನಿಜವಾದ ಜನ್ಮದಿನದ ಬದಲಾಗಿ ನಾಲ್ಕು ವರ್ಷಗಳ ನಂತರ ತಪ್ಪಾಗಿ ಇಡಲ್ಪಟ್ಟಿತು.

60 ಭುಜಬಲದಿಂದ ಎಂಬ ಪದಗಳಿಗೆ ಬದಲಾಗಿ ಬೈಬಲಿನ ಕೆಲವು ಭಾ.ಷಾಂತರಗಳು ಮಹಾ ಶಕ್ತಿ ಎಂದು ಹೇಳುತ್ತದೆ. ಅರ್ಥವು ಒಂದೇ ಆಗಿದೆ.

61 ಹೆಚ್ಚಿನ ಚರ್ಚೆಗಾಗಿ, ಸಾಮಾನ್ಯ ಲೇಖನ: ರಕ್ಷಣೆ – ದೇವರ ಆಯ್ಕೆಯೋ ಅಥವಾ ಮನುಷ್ಯನ ಆಯ್ಕೆಯೋ?

62 ಲುಸ್ತ್ರ ಮತ್ತು ದೆರ್ಬೆ ಲುಕವೋನ್ಯ ಜಿಲ್ಲೆಯಲ್ಲಿದ್ದವು, ಇದು ಗಲಾತ್ಯ ಪ್ರಾಂತ್ಯದ ಭಾಗವಾಗಿತ್ತು. ಪಿಸಿದ್ಯದ ಅಂತಿಯೋಕ್ಯದಂತೆಯೇ ಇದು ಸಹ ಒಂದು ರೋಮಾಯ ವಸಾಹತು ಆಗಿತ್ತು.

63 ಯೆಹೂದ್ಯರು ದೇವರೊಷಣೆಯನ್ನು ಕೇಳಿದಾಗಲ್ಲೆಲ್ಲಾ ತಮ್ಮ ಬಟ್ಟೆಗಳನ್ನು ಹರಿದು ಕೊಳ್ಳುವದು ಪದ್ಧತಿಯಾಗಿತ್ತು (ಮಾರ್ಕ 14:63 ನೋಡಿರಿ). ಒಬ್ಬ ಮನುಷ್ಯನನ್ನು ದೇವಲರೋ ಎಂಬಂತೆ ಆರಾಧಿಸುವದು ದೇವದೂಷಮೆಯಾಗಿತ್ತು, ಯಾಕೆಂದರೆ ಇದು ಪಾಪಿಮಾನವನನ್ನು ದೇವರಿಗೆ ಸರಿಸಮಾನ ವಾಗಿ ಮಾಡಿದಂತಾಗುತ್ತಿತ್ತು.ಇದು ದೇವರಿಗೆ ಒಂದು ಅವಮಾವನಾಗಿತ್ತು.

64 ಯೂದಾಯವು ಇಸ್ರಾಯೇಲಿನ ದಕ್ಷಿಣ ಪ್ರಾಂತ್ಯವಾಗಿದ್ದು, ಅಲ್ಲಿ, ಯೆರೂಸಲೇಮ ನಗರವಿತ್ತು.

65 ಪೇತ್ರನಿಗೆ ಇದ್ದ ಇತರ ಹೆಸರುಗಳಾವವೆಂದರೆ ಕೇಫ (ಆತನ ಅರಾಮಿಕ ಹೆಸರು) ಮತ್ತು ಸೀಮೋನ, ಇದು ಆತನ ಮೂಲ ಯೆಹೂದ್ಯ ಹೆಸರಾಗಿತ್ತು (ಯೋಹಾನ 1:42 ನೋಡಿರಿ).

66 ದೇವರು ಮೋಶೆಗೆ ಯೆಹೂದ್ಯ ಧರ್ಮಶಾಸ್ತ್ರವನ್ನು ಕೊಡುವದಕ್ಕೆ ನಾನ್ನೂರು ವರ್ಷಗಳಿಗೆ ಮುಂಚೆಯೇ ಸುನ್ನತಿ ಮಾಡಿಕೊಳ್ಳಬೇಕೆಂಬ ಆಜ್ಞೆಯು ಅಬ್ರಹಾಮನಿಗೆ ದೇವರಿಂದ ಕೊಡಲ್ಪಟ್ಟಿತ್ತು (ಆದಿಕಾಂಡ 17:9-11). ಪೌಲನು ತಾನು ರಕ್ಷಣೆಗೆ ಸುನ್ನತಿ ಅವಸ್ಯವೆಂದು ಒಪ್ಪಿಕೊಂಡಿದ್ದರೆ ಇಡೀ ಯೆಹೂದ್ಯ ಧರ್ಮಶಾಸ್ತ್ರವೆಲ್ಲಾ ರಕ್ಷಣೆಗಾಗಿ ಅವಶ್ಯಕವೆಂದು ಒಪ್ಪಿಕೊಳ್ಳಬೇಕಾಗಿತ್ತೆಂಬದನ್ನು ಬಲ್ಲವನಾಗಿದ್ದನು – ಮತ್ತು ತನ್ನ ಯೋಚನೆ ಸಂಪೂರ್ಣ ಮಿಥ್ಯವಾಗುತ್ತಿತ್ತೆಂಬದನ್ನು ತಿಳಿದಿದ್ದನು (ಗಲಾತ್ಯ 5:3 ನೋಡಿರಿ). ಸುನ್ನತಿ ಮಾಡಿಸಿಕೊಳ್ಳುವದು ಮತ್ತು ಧರ್ಮಶಾಸ್ತ್ರಕ್ಕೆ ವಿಧೇಯರಾಗುವದು ಸೂತ್ರದಲ್ಲಿ ಎರಡೂ ಒಂದೇ ಆಗಿದ್ದವು. ಆದುದರಿಂದ ಅನ್ಯ ಜನರು ಸುನ್ನತಿ ಮಾಡಿಕೊಳ್ಳಬೇಕೆಂಬ ಆಲೋಚನೆಯನ್ನು ಪೌಲನು ತಿರಸ್ಕರಿಸಿದನು.

67 ಕ್ರೈಸ್ತರೆಲ್ಲರೂ ದಶಾಜ್ಞೆಗಳಿಗೆ ವಿಧೇಯರಾಗುವದು ಅವಶ್ಯಕವಾಗಿರುತ್ತದೆ (ವಿಮೋಚನಕಾಂಡ 20:1-17). ಈ ವಚನದಲ್ಲಿ ಯಾಕೋಬನು ಯೆಹೂದ್ಯ ಆಚಾರಗಳಿಗೆ ಸಂಬಂಧ ಪಟ್ಟ ನಿಯಮಗಳ ಕುರಿತು ಮಾತ್ರವೇ ಮಾತಾಡುತ್ತಿದ್ದಾನೆ, ಉದಾಹರಣೆಗೆ, ಯಜ್ಞಗಳ ಅರ್ಪಣೆ, ತಿನ್ನುವ ಹಾಗು ತೊಳೆದುಕೊಳ್ಳುವ ಪದ್ಧತಿಗಳು, ಮುಂತಾದವು ಗಳು. ಕ್ರೈಸ್ತರು ಈ ನಿಯಮಗಳಿಗೆ ವಿಧೇಯರಾಗಬೇಕಾಗಿಲ್ಲ (ಮತ್ತಾಯ 5:17-19 ಮತ್ತು ವ್ಯಾಖ್ಯಾನ ನೋಡಿರಿ).

68 ಸೀಲನು (ಸಿಲ್ವಾನನು) 2 ಕೊರಿಂಥ 1:19; 1 ಥೆಸಲೋನಿಕ 1:1; 1 ಪೇತ್ರ 5:12 ರಲ್ಲಿ ಸಹ ಪ್ರಸ್ತಾಪಿಸಲ್ಪಟ್ಟಿದ್ದಾನೆ.

69 ಗ್ರೀಸ್ ಮೆಡಿಟರಿನಿಯನ್ ಸಮುದ್ರದ ಬಳಿಯಲ್ಲಿರುವ ದಕ್ಷಿಣ ಐರೋಪ್ಯದ ಒಂದು ಪ್ರಾಮುಖ್ಯ ರಾಷ್ಟ್ರವಾಗಿದೆ. ಇದು ಪೂರ್ವಕ್ಕೆ ಏಗೇನ ಸಮುದ್ರದ ಕಾರಣದಿಂದಾಗಿ ಟರ್ಕಿಯಿಂದ ಬೇರ್ಪಡಿಸಲ್ಪಟ್ಟಿರುತ್ತದೆ; ಮತ್ತು ಪಶ್ಚಿಮಕ್ಕೆ ಇಟಲಿಯಿದ್ದು ಇವುಗಳ ಮಧ್ಯದಲ್ಲಿ ಆಡ್ರಿಯಾಟಿಕ ಸಮುದ್ರ ವಿರುತ್ತದೆ. ಹೊಸ ಒಡಂಬಡಿಕೆಯ ಕಾಲದಲ್ಲಿ ಗ್ರೀಸ್ ರೋಮಾಯ ಸಾಮ್ರಾಜ್ಯದ ಅಧೀನಕ್ಕೊಳಪಟ್ಟಿತ್ತು. ಹೆಚ್ಚಿನ ಚರ್ಚೆಗಾಗಿ, ಅ.ಕೃತ್ಯ 17:16 ರ ಮೇಲಿನ ವ್ಯಾಖ್ಯಾನವನ್ನು ನೋಡಿರಿ.

70 ರೋಮಾಪುರದ ಹಕ್ಕುತನ (ಪೌರತ್ವ)ದ ವಿಷಯದ ಹೆಚ್ಚಿನ ಚರ್ಚೆಗಾಗಿ ಅ.ಕೃತ್ಯ 22:25 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

71 ರೋಮಾಯ ಚಕ್ರವರ್ತಿಗಳೆಲ್ಲರನ್ನು ಕೈಸರ ಎಂದು ಕರೆಯಲಾಗುತ್ತಿತ್ತು.

72 ಇಂದು ಅಥೇನೆಯ ಆಧುನಿಕ ಗ್ರೀಸ್ ರಾಷ್ಟ್ರದ ರಾಜಧಾನಿಯಾಗಿದೆ.

73 ಆದಾಮನು ದೇವರಿಂದ ಸೃಷ್ಟಿಸಲ್ಪಟ್ಟ ಪ್ರಥಮ ಮಾನವನಾಗಿದ್ದನು (ಆದಿಕಾಂಡ 1:27; 2:7). ಆದಾಮ ಎಂಬ ಹೆಸರಿನ ಅರ್ಥವು "ಮಾನವ" ಎಂದಾಗಿರುತ್ತದೆ.

74 ಅರಿಯೊಪಾಗದ ಸಭೆಯವನಾದ ದಿಯೊನುಸ್ಯನೂ ಎಂಬ ಪದಗಳ ಬದಲಾಗಿ ಬೈಬಲ್ ಭಾಷಾಂತರಗಳು "ಅರಿಯೊಪಾಗ್ಯನಾದ ದಿಯೊನುಸ್ಯನು" ಎಂದು ಹೇಳುತ್ತವೆ. ಅರ್ಥವು ಒಂದೇ ಆಗಿದೆ.

75 ರೋಮಾಪುರಕ್ಕೆ ಯಾರು ಮೊದಲು ಸುವಾರ್ತೆಯನ್ನು ತಂದರು ಎಂಬದು ತಿಳಿದಿರುವದಿಲ್ಲ.

[76] ಅಕ್ವಿಲ ಪ್ರಿಸ್ಕಿಲ್ಲಳರ ಬಗ್ಗೆ ರೋಮ 16:3-4; 1 ಕೊರಿಂಥ 16:19; 2 ತಿಮೊಥೆ 4:19 ಗಳಲ್ಲಿ ಸಹ ಪ್ರಸ್ತಾಪಿಸಲಾಗಿದೆ.

[77] ಕೊರಿಂಥವು ಅಖಾಯದ ರಾಜಧಾನಿಯಾಗಿತ್ತು.

[78] ಕ್ರಿ.ಶಕ 62ರಲ್ಲಿ ನಿರೋ ಒಬ್ಬ ಸ್ತ್ರೀಯನ್ನು ವಿವಾಹವಾದನು, ಅವಳು ಜನ್ಮದಿಂದ ಒಬ್ಬ ಯೆಹೂದ್ಯಳಲ್ಲದಿದ್ದಾಗ್ಯು ಯೆಹೂದ್ಯಧರ್ಮದ ಅನುಯಾಯಿಯಾಗಿದ್ದಳು. ಆ ಸಮಯದಿಂದ ನಿರೋ ಕ್ರೈಸ್ತರನ್ನು ಹಿಂಸಿಸಲು ಪ್ರಾರಂಭಿಸಿದನು. ಕ್ರಿಶ 64ರಲ್ಲಿ ರೋಮ ನಗರದಲ್ಲಿ ಒಂದು ದೊಡ್ಡ ಅಗ್ನಿದುರಂತ ಸಂಭವಿಸಿ ನಗರದ ಬಹು ಪಾಲು ನಾಶಗೊಂಡಿತು ಮತ್ತು ನಿರೋ ಈ ಬೆಂಕಿಯನ್ನು ಕ್ರೈಸ್ತರು ಹಚ್ಚಿದರೆಂದು ಸುಳ್ಳು ಆರೋಪಮಾಡಿದನು. ಅದರ ನಂತರ ನಿರೋ ಕ್ರೈಸ್ತರನ್ನು ಇನ್ನು ಹೆಚ್ಚು ಭಯಂಕರವಾಗಿ ಹಿಂಸಿಸಿದನು. ಪೌಲ, ಪೇತ್ರ ಮತ್ತು ಇತರ ಅನೇಕ ಕ್ರೈಸ್ತ ನಾಯಕರನ್ನು ನಿರೋ ಕೊಲ್ಲಿಸಿದನು.

[79] ಯೆಹೂದ್ಯರು ಅನ್ಯಜನರನ್ನು ಉದಾಸೀನ ಮಾಡಿ ಅವರೊಂದಿಗೆ ಸಂಪರ್ಕ ಇಟ್ಟು ಕೊಳ್ಳಲು ನಿರಾಕರಿಸಿದ ಕಾರಣಕ್ಕಾಗಿಯೇ ಅನ್ಯ ಜನರು ಯೆಹೂದ್ಯರನ್ನು ಇಷ್ಟಪಡಲಿಲ್ಲ ಎಂಬದರಲ್ಲಿ ಯಾವ ಸಂಶಯವಿರುವದಿಲ್ಲ.

[80] ಮೆಡಿಟರನಿಯನ್ ಕರಾವಳಿಯಲ್ಲಿರುವ ಅಲೆಗ್ಸಾಂದ್ರಿಯವು ಹೊಸ ಒಡಂಬಡಿಕೆಯ ಕಾಲದಲ್ಲಿ ಐಗುಪ್ತ್ಯದ ಮುಖ್ಯನಗರವಾಗಿತ್ತು. ಇಂದು ಅಲೆಗ್ಸಾಂದ್ರಿಯವು (ಕೈರೊದ ನಂತರ) ಐಗುಪ್ತ್ಯದ ಎರಡನೆಯ ಬೃಹತ್ ನಗರವಾಗಿದೆ.

[81] ಸೂಕ್ಷ್ಮವಾಗಿ ಎಂಬ ಪದದ ಬದಲಾಗಿ ಬೈಬಲಿನ ಕೆಲವು "ಭಾಷಾಂತರಗಳು " ಎಂದು ಹೇಳುತ್ತವೆ. "ಆತ್ಮ" ಎಂಬ ಪದವು ಮೂಲ ಗ್ರೀಕ್ ಪ್ರತಿಯಲ್ಲಿ ಉಪಯೋಗಿಸಲ್ಪಟ್ಟಿದೆ, ಆದರೆ ಇದು ಪವಿತ್ರಾತ್ಮನನ್ನು ಅಲ್ಲ ಆದರೆ ಬದಲಾಗಿ ಅಪೊಲ್ಲೋಸನ ಮಾನವ ಆತ್ಮವನ್ನು ಸೂಚಿಸುತ್ತದೆ.

[82] ಲೂಕನು "ಶಿಷ್ಯನು" ಎಂದು ಉಪಯೋಗಿಸುವಾಗಲೆಲ್ಲಾ ಸಾಮಾನ್ಯವಾಗಿ ಆತನ ತಾತ್ಪರ್ಯವು ಒಬ್ಬ ಕ್ರೈಸ್ತ ಶಿಷ್ಯ ಎಂದಾಗಿರುತ್ತದೆ.

[83] ಅ.ಕೃತ್ಯಗಳು 8:17-18ರಲ್ಲಿ ನಾಲ್ಕನೆಯ ಬಾರಿಗೆ ವಿಶ್ವಾಸಿಗಳು ಪವಿತ್ರಾತ್ಮನನ್ನು ಸ್ವೀಕರಿಸಿಕೊಂಡಾಗ ಅನ್ಯ ಭಾಷೆಗಳಲ್ಲಿ ಮಾತಾಡಿದರು, ಆದರೆ ಇದು ಸ್ಪಷ್ಟವಾಗಿ ಹೇಳಲ್ಪಟ್ಟಿರುವದಿಲ್ಲ.

[84] ಪೌಲನು ತನ್ನ ಗುಡಾರ ಮಾಡುವ ಕೆಲಸದ ವೇಳೆ ಈ ಕೈವಸ್ತ್ರಗಳನ್ನೂ ಉಡಿವಸ್ತ್ರಗಳನ್ನೂ ಉಪಯೋಗಿಸುತ್ತಿದ್ದನು. ಅಂತಹ ಕೈವಸ್ತ್ರಗಳು ಹಣೆಯಿಂದ ಬರುವ ಬೆವರನ್ನು ಇಂಗುವದಕ್ಕಾಗಿ ಹಣೆಗೆ ಕಟ್ಟಿಕೊಳ್ಳಲಾಗುತ್ತಿತ್ತು. ಒಬ್ಬನ ಸಾಮಾನ್ಯ ಬಟ್ಟೆಗಳ ಸಂರಕ್ಷಣೆಗಾಗಿ ಉಡಿವಸ್ತ್ರಗಳನ್ನು ತೊಡಲಾಗುತ್ತಿತ್ತು.

[85] ಬೆಳ್ಳಿ ನಾಣ್ಯವು ಪು ರಾತ ಗ್ರೀಸ್‌ಲ್ಲಿ ಉಪಯೋಗಿಸುತ್ತಿದ್ದ ನಾಣ್ಯವಾಗಿದೆ. ಒಂದು ಬೆಳ್ಳಿ ನಾಣ್ಯವು ಬೆಲೆಯಲ್ಲಿ ಒಬ್ಬ ಸಾಮಾನ್ಯ ಕೆಲಸಗಾರನ ಒಂದು ದಿನದ ಸಂಬಳವಾಗಿತ್ತು. ಹೀಗಿರುವದರಿಂದ ಐವತ್ತು ಸಾವಿರ ಬೆಳ್ಳಿ ನಾಣ್ಯಗಳು ಬಹಳ ದೊಡ್ಡ ಮೊತ್ತವಾಗಿದೆ.

[86] ಮೆಕೆದೋನ್ಯ ಮತ್ತು ಆಕಾಯ ಕ್ರಮವಾಗಿ ಗ್ರೀಸ್‌ನ ಉತ್ತರ ಮತ್ತು ದಕ್ಷಿಣ ಪ್ರಾಂತ್ಯಗಳಾಗಿದ್ದವು .

[87] ಅಸ್ಯ ಸೀಮೆಯು ಪಶ್ಚಿಮ ಪ್ರಾಂತ್ಯವಾಗಿದ್ದು ಅದು ಇಂದಿನ ಟರ್ಕಿ ರಾಷ್ಟ್ರವಾಗಿರುತ್ತದೆ. ಎಫೆಸವು ಅದರ ಮುಖ್ಯ ನಗರವಾಗಿತ್ತು.

[88] ಅಲೆಗ್ಸಾಂಡ್ರನೆಂಬ ವ್ಯಕ್ತಿಯು 1 ತಿಮೊಥೆ 1:20 ಮತ್ತು 2 ತಿಮೊಥೆ 4:14 ರಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾನೆ. ಈ ವ್ಯಕ್ತಿಗಳೆಲ್ಲರೂ ಒಂದೇಯೋ ಅಥವಾ ಬೇರೆ ಬೇರೆಯೋ ನಿಖರವಾಗಿರುವದಿಲ್ಲ.

[89] ಸಿರಿಯ ರೋಮಾಯ ಸಾಮ್ರಾಜ್ಯದ ಪ್ರಾಂತ್ಯವಾಗಿತ್ತು, ಈ ಪ್ರಾಂತ್ಯದಲ್ಲಿ ಹೊಸ ಒಡಂಬಡಿಕೆಯ ಪ್ರಾಮುಖ್ಯ ನಗರಗಳಾದ ದಮಸ್ಕ, ಅಂತಿಯೋಕ್ಯಗಳಿದ್ದವು (ಅ.ಕೃತ್ಯ 9:2-3; 11:19-26). ಇಂದು ಸಿರಿಯ ಒಂದು ದೊಡ್ಡ ಮಧ್ಯ ಪೂರ್ವಾತ್ಯ ರಾಷ್ಟ್ರವಾಗಿದ್ದು ಇಸ್ರಾಯೇಲಿನ ಉತ್ತರಕ್ಕಿರುತ್ತದೆ.

[90] ವಚನ 4ರಲ್ಲಿ ಪ್ರಸ್ತಾಪಿಸಲ್ಪಟ್ಟವರೊಳಗೆ ಅರಿಸ್ತಾರ್ಕನು ಅ.ಕೃತ್ಯ 19:29, 27:2 ಮತ್ತು ಕೊಲೊಸ್ಸೆ 4:20 ರಲ್ಲಿ ಸಹ ಪ್ರಸ್ತಾಪಿಸಲ್ಪಟ್ಟಿದ್ದಾನೆ; ತುಖಿಕನು ಎಫೆಸ 6:21-22 ಮತ್ತು ಕೊಲೊಸ್ಸೆ 4:7-8ರಲ್ಲಿಯೂ; ತ್ರೊಫಿಮನು ಅ.ಕೃತ್ಯ 21:29 ಮತ್ತು 2 ತಿಮೊಥೆ 4:20 ಗಳಲ್ಲಿಯೂ ಸಹ ಪ್ರಸ್ತಾಪಿಸಲ್ಪಟ್ಟಿರುತ್ತದೆ.

[91] ರೋಮನಗರವು ರೋಮಾಯ ಸಾಮ್ರಾಜ್ಯದ ರಾಜಧಾನಿಯಾಗಿತ್ತು ಮತ್ತು ಅದು ಇಂದಿನ ದಕ್ಷಿಣ ಐರೋಪ್ಯದ ರಾಷ್ಟ್ರವಾದ ಇಟಲಿಯಲ್ಲಿತ್ತು. ಹೊಸ ಒಡಂಬಡಿಕೆಯ ಕಾಲದಲ್ಲಿ ಪಾಶ್ಚಾತ್ಯ ಜಗತ್ತಿನಲ್ಲಿಯೇ ರೋಮನಗರ ಅತ್ಯಂತ ಪ್ರಾಮುಖ್ಯ ನಗರವಾಗಿತ್ತು.

[92] ಸ್ಪೇನ್ ರೋಮಾಯ ಸಾಮ್ರಾಜ್ಯದ ಪಶ್ಚಿಮ ತುದಿಯಲ್ಲಿದ್ದ ಪ್ರಾಂತ್ಯವಾಗಿತ್ತು; ಇಂದು ಇದು ಪಶ್ಚಿಮ ಐರೋಪ್ಯದ ಒಂದು ಮುಖ್ಯ ರಾಷ್ಟ್ರವಾಗಿದೆ.

[93] ಅಂಗ್ಲ ಭಾಷೆಯಲ್ಲಿ ಸಭಾಧ್ಯಕ್ಷ ಎಂಬ ಪದವು "ಬೀಷಪ" ಎಂಬದಾಗಿ ಭಾಷಾಂತರಿಸಲ್ಪಟ್ಟಿದೆ.

[94] ಹೇಗಿದ್ದರೂ, ಹಿರಿಯರು ವ್ಯತ್ಯಾಸವಾಗಿದ್ದಾರೆ. ಹಿರಿಯರು ಸಭೆಯಲ್ಲಿ ಅನೇಕ ಸೇವಾಕಾರ್ಯಗಳನ್ನು ಮಾಡಲು ನೇಮಿಸಲ್ಪಟ್ಟಿದ್ದಾರೆ, ಉದಾಹರಣೆಗೆ, ಬಡವರನ್ನೂ, ರೋಗಿಗಳನ್ನೂ, ಪರಾಂಭರಿಸುವದು, ಮತ್ತು ಸಭೆಯ ಹಣಕಾಸಿನ ವ್ಯವಹಾರಗಳಲ್ಲಿ ಜವಾಬ್ದಾರಿಯನ್ನು ವಹಿಸಿಕೊಳ್ಳುವದು (ಅ.ಕೃತ್ಯ 6:2-4; 1 ತಿಮೊಥೆ 3:8 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

[95] ಸ್ತೆಫನನ ಮರಣದ ತರುವಾಯ ಪೌಲನಿಂದ ಎಬ್ಬಿಸಲ್ಪಟ್ಟ ಹಿಂಸೆಯ ಫಲಿತವಾಗಿ ಬಹು ಪಾಲು ಗ್ರೀಕ್ ಭಾಷೆಯ ಯೆಹೂದ್ಯ ಕ್ರೈಸ್ತರು ಯೆರೂಸಲೇಮಿನಿಂದ ಓಡಿ ಹೋದರು (ಅ.ಕೃತ್ಯ 8:1-3). ಆದರೆ ಮ್ನಾಸೋನ ಯೆರೂಸಲೇಮನ್ನು ಬಿಟ್ಟು ಹೋಗಿರಲಿಲ್ಲ. ಆತನು ಪೌಲನ ಅನ್ಯಜನಾಂಗದ ಸಹಪಾಠಿಗಳಿಗೆ ಉಪಚಾರವನ್ನು ಮಾಡಲು ಮನಸ್ಸುಳ್ಳವನಾಗಿದ್ದನು. ಅರಾಮಿಕ ಭಾಷೆಯನ್ನಾಡುವ ಯೆಹೂದ್ಯ ಕ್ರೈಸ್ತನೊಬ್ಬನು ಇದನ್ನು ಮಾಡುವದು ಬಹಳ ಕಷ್ಟಕರವಾಗಿತ್ತು.

[96] ಹಾದರತನ ಎಂದರೆ ಯೆಹೂದ್ಯ ಧರ್ಮಶಾಸ್ತ್ರದಿಂದ ನಿಷೇಧಿಸಲ್ಪಟ್ಟ ಲೈಂಗಿಕ ನಡಾವಳಿ ಎಂಬದು ಲೂಕನ ತಾತ್ಪರ್ಯವಾಗಿದೆ.

[97] ಯೆಹೂದ್ಯ ದೇವಾಲಯದ ಒಳ ಆವರಣಕ್ಕೆ ಹೋಗುವ ಮಾರ್ಗ ದ್ವಾರಕ್ಕೆ ಒಂದು ಎಚ್ಚರಿಕೆಯನ್ನು ಅಂಟಿಸಲಾಗಿತ್ತು, ಅದೇನೆಂದರೆ: ಈ ದ್ವಾರದ ಮೂಲಕ ಪ್ರವೇಶಿಸುವ ಯಾವದೇ ಅನ್ಯ ಜನಾಂಗದವನು ಮರಣ ದಂಡನೆಗೊಳಗಾಗುವನು, ಈ ದ್ವಾರವು ಒಳ ಆವರಣವನ್ನು ಹೊರ ಆವರಣದಿಂದ (ಅನ್ಯ ಜನರ ಆವರಣ) ಪ್ರತ್ಯೇಕಿಸುತ್ತಿತ್ತು. ಅನ್ಯ ಜನರು ಹೊರ ಆವರಣದಲ್ಲಿರುವದಕ್ಕೆ ಮಾತ್ರ ಅನುಮತಿಯಿತ್ತು. ಪೌಲನು ಬಳಿಕ ತಾನು ಎಫೆಸದವರಿಗೆ ಪತ್ರಿಕೆಯಲ್ಲಿ ಈ ದ್ವಾರದ ಬಗ್ಗೆ ಬರೆಯುತ್ತಾ ಯೆಹೂದ್ಯರನ್ನು ಅನ್ಯಜನರನ್ನು

ಅಗಲಿಸುವ ದೇಷದ ಅಡ್ಡಗೋಡೆ ಎಂದು ಹೇಳುತ್ತಾನೆ (ಎಫೆಸ 2:14-18). ಕ್ರಿಸ್ತನು ಆ "ಅಡ್ಡ ಗೋಡೆ" ಯನ್ನು ಒಡೆದು ಹಾಕಿದನು. ಈಗ ಯೆಹೂದ್ಯ, ಅನ್ಯ ಜನಾಂಗದ ವಿಶ್ವಾಸಿಗಳಿಬ್ಬರೂ ಒಂದೇ ಕುಟುಂಬದ ಸದಸ್ಯರಾಗಿರುತ್ತಾರೆ.

98 ತಾರ್ಸವು ರೋಮಾಯ ಸಾಮ್ರಾಜ್ಯವಾದ ಕಿಲಿಕ್ಯದ ಮುಖ್ಯ ನಗರವಾಗಿತ್ತು. ತಾರ್ಸವು ಇಂದಿನ ಆಧುನಿಕ ರಾಷ್ಟ್ರವಾದ ತುರ್ಕಿ (ಟರ್ಕಿ)ಯಲ್ಲಿ ಇತ್ತು (ಅ.ಕೃತ್ಯ 9:30).

99 ಹೊಸ ಒಡಂಬಡಿಕೆಯ ಕಾಲದಲ್ಲಿ ಅರಾಮಿಕ ಇಸ್ರಾಯೇಲ ಹಾಗು ಮದ್ಯ ಪೂರ್ವದ ಬಹುಪಾಲು ಸಾಮಾನ್ಯ ಜನರಿಂದ ಮಾತಾಡಲ್ಪಡುತ್ತಿದ್ದ ಭಾಷೆಯಾಗಿತ್ತು.

100 ಗಮಲಿಯೇಲನ ಬಗ್ಗೆ ಅ.ಕೃತ್ಯ 5:33-39ರಲ್ಲಿ ಪ್ರಸ್ತಾಪಿಸಲಾಗಿದೆ.

101 ಯೆಹೂದ್ಯರು "ಆಸಕ್ತಿ" (ವೈರಾಗ್ಯ) ಉಳ್ಳವರೆಂಬದು ನಿಜವೇ; ಆದರೂ ಅವರ ಆಸಕ್ತಿ ಜ್ಞಾನಾನುಸಾರವಾದದ್ದಲ್ಲ (ರೋಮ 10:2). ಆದುದರಿಂದ, ಯೇಸು ಅವರಿಗಾಗಿ ಹೀಗೆ ಪ್ರಾರ್ಥಿಸಿದನು: ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬದನ್ನು ಅರಿಯರು" (ಲೂಕ 23:34).

102 ಕ್ರೈಸ್ತರಾಗಿ ಮಾರ್ಪಟ್ಟ ಫರಿಸಾಯನು ಆಗಲೂ ಒಬ್ಬ ಫರಿಸಾಯನಾಗಿಯೇ ಉಳಿದನು. ಅದೇ ರೀತಿಯಾಗಿ ಕ್ರೈಸ್ತರಾದ ಯೆಹೂದ್ಯನು ಒಬ್ಬ ಯೆಹೂದ್ಯನಾಗಿಯೇ ಉಳಿದನು, ಉದಾಹರಣೆಗೆ, ಪೌಲನು ಕ್ರೈಸ್ತನಾಗಿದ್ದನು ಮತ್ತು ಹಾಗಿದ್ದರೂ ಆತನು ಯೆಹೂದ್ಯನೂ ಫರಿಸಾಯನೂ ಆಗಿ ಉಳಿದುಕೊಂಡನು (ಯೆಹೂದ್ಯ ಧರ್ಮದ ವಿಷಯದಲ್ಲಿ ಮಾತ್ರ ಇದು ಸಾಧ್ಯವಿರುತ್ತದೆ; ಒಬ್ಬ ವ್ಯಕ್ತಿಯು ಕ್ರೈಸ್ತನಾಗಿಯೂ, ಅದೇ ವೇಳೆಯಲ್ಲಿ ಬೇರೆ ಇನ್ನಾವದೇ ಧರ್ಮ ಯೆಹೂದ್ಯ ಧರ್ಮವನ್ನು ಹೊರತು ಪಡಿಸಿ – ಅನುಸರಿಸುವದು ಸಾಧ್ಯವಿರುವದಿಲ್ಲ). ಹೇಗಿದ್ದರೂ, ಕ್ರಿಶಕ ೯೦ರಲ್ಲಿ ಯೆಹೂದ್ಯ ನಾಯಕರು ಯೇಸುವನ್ನು ನಂಬಿದ ಯೆಹೂದ್ಯರು ಇನ್ನು ಮೇಲೆ ಯೆಹೂದ್ಯ ಸಭಾ ಮಂದಿರಗಳಿಗೆ ಹಾಜರಾಗುವಂತಿಲ್ಲ ಎಂದು ತಿರ್ಮಾನಿಸಿದರು. ಆದುದರಿಂದ, ಕ್ರಿ.ಶಕ 90 ರ ನಂತರ ಯೆಹೂದ್ಯ ಕ್ರೈಸ್ತರು ಇತರ ಯೆಹೂದ್ಯ ರೊಂದಿಗೆ ಆಪ್ತ ಸಂಪರ್ಕ ಅಥವಾ ಸಂಬಂಧವನ್ನು ಹೊಂದಿಕೊಳ್ಳುವದು ದಿನೇ ದಿನೇ ಕಷ್ಟವಾಗುತ್ತಾ ಹೋಯಿತು.

103 ಇಬ್ರಿಯ ಹಾಗು ಅರೇಬಿಕ್ ಭಾಷೆಗಳಲ್ಲಿ ಕ್ರೈಸ್ತನು ಎಂಬುದಕ್ಕೆ "ನಾಜರೀನ" ಎಂಬ ಪದವಿರುತ್ತದೆ.

104 ಅಪೊಸ್ತಲರ ಕೃತ್ಯಗಳ ಪುಸ್ತಕದ ಕೆಲವು ಪುರಾತನ ಪ್ರತಿಗಳಲ್ಲಿ ಮಾತ್ರವೆ 6 ಮತ್ತು 7 ವಚನಗಳನ್ನು ಹೊಂದಿರುವದಿಲ್ಲ.

105 ಯೆಹೂದ್ಯ ಮಹಾ ಯಾಜಕರಲ್ಲಿಯೂ ಹಿರಿಯರಲ್ಲಿಯೂ ಬಹುಮಂದಿ ಸದ್ದು ಕಾಯರಾಗಿದ್ದರು. ಅವರು ಪುನರುತ್ಥಾನವನ್ನು ನಂಬದವರಾಗಿದ್ದಾರೆ (ಅ.ಕೃತ್ಯ 23:6-8 ಮತ್ತು ವ್ಯಾಖ್ಯಾನ ನೋಡಿರಿ).

106 ದ್ರೂಸಿಲ್ಲಳು ಹೆರೋದ ಅರಸನ ಮಗಳಾಗಿದ್ದಳು (ಅ.ಕೃತ್ಯ 12:1). ಫೇಲಿಕ್ಸನು ಆಕೆಯನ್ನು ಹೆಂಡತಿಯನ್ನಾಗಿ ಮಡಿಕೊಳ್ಳುವದಕ್ಕೆ ಮುಂಚೆ ಅವಳು ಇನ್ನೊಬ್ಬನೊಂದಿಗೆ ಈಗಾಗಲೇ ವಿವಾಹ ಮಾಡಿಕೊಂಡಿದ್ದಳು. ಆದುದರಿಂದ, ಅವಳೊಬ್ಬ ವ್ಯಭಿಚಾರಿಣಿಯಾಗಿರುವಳು.

107 ರೋಮಾಯ ಚಕ್ರವರ್ತಿಗಳನ್ನೆಲ್ಲಾ ಕೈಸರ ಎನ್ನುತ್ತಿದ್ದರು. ಆದರೆ ಪ್ರತಿಯೊಬ್ಬನೂ ತನ್ನ ವಯಕ್ತಿಕ ಹೆಸರನ್ನು ಸಹ ಹೊಂದಿದ್ದನು. ನಿರೋ ಕ್ರಿ.ಶಕ 54 ರಿಂದ 68 ವರೆಗೆ ಆಳಿದನು. ನಿರೋಗೆ ಮುಂಚೆ ಕ್ಲೌದ್ಯನು ಚಕ್ರವರ್ತಿಯಾಗಿದ್ದನು (ಅ.ಕೃತ್ಯ 11:28; 18:2).

108 ನಿರೋ ಆಡಳಿತದಲ್ಲಾದ ಹಿಂಸೆಯ ವಿಷಯದಲ್ಲಿ ಹೆಚ್ಚಿನ ಚರ್ಚೆಗಾಗಿ ಅ.ಕೃತ್ಯ 18:14-16 ಮತ್ತು ವ್ಯಾಖ್ಯಾನಕ್ಕಿರುವ ಅಡಿ ಟಿಪ್ಪಣಿಯನ್ನು ನೋಡಿರಿ.

109 ಅಗ್ರಿಪ್ಪನ ರಾಜ್ಯದಲ್ಲಿ ಇಂದಿನ ಲೆಬನೊನಿನ ದಕ್ಷಿಣಭಾಗವು ಸೇರಿತ್ತು ಮತ್ತು ಇಸ್ರಾಯೇಲಿನ ಉತ್ತರ ಪ್ರಾಂತ್ಯ, ಗಲಿಲಾಯ ಪ್ರಾಂತ್ಯಗಳೂ ಸಹ ಸೇರಿದ್ದವು.

110 ಅಬ್ರಹಾಮನ ಮೊಮ್ಮಗನಾದ ಯಾಕೋಬನಿಗೆ ಹನ್ನೆರಡು ಗಂಡು ಮಕ್ಕಳಿದ್ದರು (ಆದಿಕಾಂಡ 35:23-26). ಇಸ್ರಾಯೇಲಿನ ಹನ್ನೆರಡು ಕುಲಗಳು ಆ ಹನ್ನೆರಡು ಮಕ್ಕಳ ಸಂತತಿಗಳಾಗಿವೆ.

111 ಹಳೆ ಒಡಂಬಡಿಕೆಯ ಪ್ರಾರಂಭದ ಐದು ಪುಸ್ತಕಗಳನ್ನೂ ಮೋಶೆಯು ಬರೆದನು.

112 ಇಟಲಿ (ಇತಾಲ್ಯ)ಯು ದಕ್ಷಿಣ ಐರೋಪ್ಯದ ಒಂದು ಪ್ರಾಮುಖ್ಯ ರಾಷ್ಟ್ರವಾಗಿದೆ ಮತ್ತು ರೋಮ ಅದರ ರಾಜಧಾನಿಯಾಗಿದೆ. ಹೊಸ ಒಡಂಬಡಿಕೆಯ ಕಾಲದಲ್ಲಿ ಇಟಲಿ ಮತ್ತು ಅದರ ರಾಜಧಾನಿ ರೋಮಾಯ ಸಾಮ್ರಾಜ್ಯದ ಕೇಂದ್ರಗಳಾಗಿದ್ದವು.

113 ಹೊಸ ಒಡಂಬಡಿಕೆಯ ಕಾಲದಲ್ಲಿ ಭೂಮದ್ಯ ಸಮುದ್ರದಲ್ಲಿ ಹೋಗುವ ದೊಡ್ಡ ಹಡಗುಗಳು, ಜನರು ಪ್ರಯಾಣಿಸುವ ಹಡಗುಗಳಾಗಿದ್ದವು.

114 ಪ್ರಾಯಶ್ಚಿತ್ತ ದಿನವು ವರ್ಷಕ್ಕೆ ಒಂದು ಬಾರಿಯಾಗಿದ್ದು, ಆ ದಿನದಲ್ಲಿ ಯಾಹೂದ್ಯಮಹಾಯಾಜಕನು ಜನರ ಪಾಪಗಳಿಗಾಗಿ ಪ್ರಾಯಶ್ಚಿತ್ತ ಬಲಿಯನ್ನು ಅರ್ಪಿಸುತ್ತಿದ್ದನು (ಯಾ.ಕಾ. 16-1-34) ಹೆಚ್ಚಿನ ವಿವರಕ್ಕಾಗಿ ಪದಗಳ ಪಟ್ಟಿಯಲ್ಲಿರುವ ಪ್ರಾಯಶ್ಚಿತ್ತ ಎಂಬ ಪದವನ್ನು ನೋಡಿರಿ.

115 ಹೊಸ ಒಡಂಬಡಿಕೆಯ ಕಾಲದಲ್ಲಿ ನಾವಿಕರು ನಕ್ಷತ್ರಗಳ ಸ್ಥಾನವನ್ನು ನೋಡಿ ತಮ್ಮ ದಿಕ್ಕುಗಳನ್ನು ನಿರ್ಧರಿಸುತ್ತಿದ್ದರು.

116 ಇಂದು ಅಂಡ್ರಿಯಾಟಿಕ್ ಸಮುದ್ರವು ಭೂಮಧ್ಯ ಸಮುದ್ರದ ಉತ್ತರ ಬಾಗದ ವಿಸ್ತರಣೆಯಾಗಿದ್ದು ಇಟಲಿ ಮತ್ತು ಯುಗೋಸ್ಲೋವಿಯ ಮಧ್ಯದಲ್ಲಿದೆ. ಆದರೆ ಪೌಲನ ದಿನದಲ್ಲಿ ಅಂಡ್ರಿಯಾಟಿಕ್ ಸಮುದ್ರದ ವಿಸ್ತರಣೆ ಇಟಲಿಯ ದಕ್ಷಿಣದ ಬಾಗದವರೆಗೂ ವಿಸ್ತರಣೆಯಾಗಿತ್ತು.

117 ಪೌಲನು ಪ್ರಯಾಣಿಸುತ್ತಿದ್ದ ಹಡಗು ಮಾಲ್ಟೋ ದ್ವೀಪದ ಚಿಕ್ಕ ಕೊಲ್ಲಿಯಲ್ಲಿ ಸ್ಥಗಿತಗೊಂಡಿತು. ಈ ದಿವಸವೂ ಸಹ ಆ ಕೊಲ್ಲಿಯನ್ನು 'ಸಂತ ಪೌಲನಕೊಲ್ಲಿ' ಎಂದು ಕರೆಯುತ್ತಾರೆ. ಆ ಕೊಲ್ಲಿಯ ದ್ವಾರದಲ್ಲಿ ಸಮುದ್ರದ ಅಲೆಗಳು ಎರಡು ದಿಕ್ಕುಗಳಿಂದ ಬರುತ್ತಿರುತ್ತವೆ. ಇದರ ಪರಿಣಾಮವಾಗಿ ಮಧ್ಯದಲ್ಲಿ ಮರಳು ಶೇಖರಿಸಲ್ಪಟ್ಟಿರುತ್ತದೆ. ಈ ಮರಳಿನಲ್ಲಿ ಪೌಲನು ಪ್ರಯಾಣಿಸಿದ ಹಡಗು ಸ್ಥಗಿತಕೊಂಡಿತು. ಗ್ರೀಕ್ ಬರವಣಿಗೆಯಲ್ಲಿ ಲೂಕನು ಈ ಮರಳುರಾಶಿಯನ್ನು ಎರಡು ಸಮುದ್ರಗಳ ಸ್ಥಳವೆಂದು ಬರೆದಿದ್ದಾನೆ. ಯಾಕೆಂದರೆ ಈ ಮರಳುರಾಶಿಯು ಕೊಲ್ಲಿಯನ್ನು ಎರಡು ಬಾಗವಾಗಿ ವಿಂಗಡಿಸುತ್ತವೆ.

118 ಅಪೊಸ್ತಲರ ಕೃತ್ಯಗಳ ಎಲ್ಲಾ ಪುರಾತನ ಬರವಣಿಗೆಯಲ್ಲಿ ೨೯ನೇ ವಚನ ಇರುವುದಿಲ್ಲ.

# ರೋಮಾಪುರದವರಿಗೆ

## ಪರಿಚಯ

ರೋಮಾಪುರದವರಿಗೆ ಈ ಪತ್ರಿಕೆಯನ್ನು ಅಪೊಸ್ತಲನಾದ ಪೌಲನು ಬರೆದಿರುತ್ತಾನೆ. ಪೌಲನು (ಪರಿವರ್ತನೆಗೆ ಮುಂಚೆ ಸೌಲನೆಂದು ಕರೆಯಲ್ಪಡುತ್ತಿದ್ದನು) ಯೇಸುವಿನ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾಗಿರಲಿಲ್ಲ. ಯೇಸು ಭೂಮಿಯ ಮೇಲಿದ್ದಾಗ ಪೌಲನು ಎಂದಿಗೂ ಸಹ ಆತನನ್ನು ಬೇಟಿಯಾದಂತೆ ಕಾಣುವದಿಲ್ಲ. ಪೌಲನು ಅತಿ ಕಟ್ಟುನಿಟ್ಟಿನ ಯೆಹೂದ್ಯನಾಗಿದ್ದನು (ಫಿಲಿಪ್ಪಿ 3:4-6). ಕ್ರಿಸ್ತನ ಸುವಾರ್ತೆಯು ಹರಡುವದಕ್ಕೆ ಪ್ರಾರಂಭಿಸಿದಾಗ ಪೌಲನು ರೋಷದಿಂದ ವಿಶ್ವಾಸಿಗಳನ್ನು ಹಿಂಸಿಸಿದನು (ಅ.ಕೃತ್ಯ 8:3, 9:1-2, 22:3-5, 26:9-11). ಬಳಿಕ ಒಂದು ದಿನ ಆತನು ದಮಸ್ಕಕ್ಕೆ ಹೊರಟಿದ್ದಾಗ[1] ಪೌಲನು ಪಕ್ಕನೇ ಪುನರುಥ್ಥಾನಗೊಂಡವನೂ, ಸಜೀವನೂ ಆದ ಕರ್ತನಾದ ಯೇಸು ಕ್ರಿಸ್ತನನ್ನು ಸಂಧಿಸಿದನು, ಮತ್ತು ಸ್ವತಃ ತಾನೇ ವಿಶ್ವಾಸಿಯಾದನು (ಅ.ಕೃತ್ಯ 9:3-9, 22:6-11, 26:12-18). ಈಗ ಯೇಸು ಪೌಲನನ್ನು ಒಬ್ಬ ಅಪೊಸ್ತಲನನ್ನಾಗಿ ನೇಮಿಸಿದನು. ಯೇಸು ಪ್ರಾಥಮಿಕವಾಗಿ ಪೌಲನನ್ನು ಅನ್ಯ ಜನರೊಳಗೆ ಅಂದರೆ ಯೆಹೂದ್ಯೇತರೊಳಗೆ ಸುವಾರ್ತೆಯನ್ನು ಸಾರಲು ಕಳುಹಿಸಿದನು. ಪೌಲನ ಜೀವಿತ ಮತ್ತು ಕಾರ್ಯದ ಸಂಪೂರ್ಣ ವಿವರಣೆಯನ್ನು ಅ.ಕೃತ್ಯಗಳು 9 ಮತ್ತು 13-28 ಅಧ್ಯಾಯಗಳಲ್ಲಿ ಕಾಣಬಹುದು. ಪೌಲನು ಮೂರು ಸುವಾರ್ತಾ ಪ್ರಯಾಣಗಳನ್ನು ಮಾಡಿದನು, ಆ ವೇಳೆಗಳಲ್ಲಿ ಆತನು ಎಫೆಸ, ಫಿಲಿಪ್ಪಿ, ಥೆಸಲೋನಿಕ, ಕೊರಿಂಥ, ಮತ್ತು ಇಂದಿನ ಗ್ರೀಕ್ ಮತ್ತು ಟರ್ಕಿಗಳಲ್ಲಿನ ಇನ್ನು ಅನೇಕ ಪಟ್ಟಣಗಳಲ್ಲಿಯೂ ಸಭೆಗಳನ್ನು ಸ್ಥಾಪಿಸಿದನು. ಆತನು ಪ್ರಯಾಣದಲ್ಲಿರುವಾಗ ತಾನು ಸ್ಥಾಪಿಸಿದ ಈ ಹೊಸ ಸಭೆಗಳನ್ನು ಪ್ರೋತ್ಸಾಹಿಸುವದಕ್ಕೂ, ಪ್ರಭೋದಿಸುವದಕ್ಕೂ ಪತ್ರಿಕೆಗಳನ್ನು ಬರೆದನು. ಅಲ್ಲದೆ ಪೌಲನು ತಾನು ಸ್ಥಾಪಿಸದ ಕೆಲವು ಸಭೆಗಳಿಗೂ ಪತ್ರಗಳನ್ನು ಬರೆದನು. ಉದಾಹರಣೆಗೆ ರೋಮ ಮತ್ತು ಕೊಲೆಸ್ಸೆಯಲ್ಲಿದ್ದ ಸಭೆಗಳಿಗೆ ಬರೆದನು. ಪೌಲನು ತಿಮೊಥೆಯನಿಗೂ, ತೀತ ಹಾಗು ಫಿಲೆಮೋನರಿಗೂ ವಯುಕ್ತಿಕ ಪತ್ರಿಕೆಗಳನ್ನು ಸಹ ಬರೆದನು. ಇವುಗಳೆಲ್ಲವೂ ಹೊಸ ಒಡಂಬಡಿಕೆಯಲ್ಲಿರುತ್ತವೆ ಮತ್ತು ನಾವು ಕ್ರಿಸ್ತನ ಬೋಧನೆಗಳನ್ನು ಅರ್ಥಮಾಡಿಕೊಳ್ಳುವಂತೆಯೂ, ಕ್ರೈಸ್ತರಾಗಿ ನಾವು ಹೇಗೆ ಜೀವಿಸ ಬೇಕೆಂಬುದನ್ನು ತೋರಿಸುವದರಲ್ಲಿಯೂ ಇವುಗಳು ಬಹಳಷ್ಟು ಸಹಾಯಕವಾಗಿರುತ್ತವೆ. ವಾಸ್ತವದಲ್ಲಿ ಬಹಳಷ್ಟು ಪೌಲನ ಪತ್ರಿಕೆಗಳು ಮತ್ತಾಯ, ಮಾರ್ಕ, ಲೂಕ, ಮತ್ತು ಯೋಹಾನರ ನಾಲ್ಕು ಸುವಾರ್ತೆಗಳಿಗಿಂತಲೂ ಮುಂಚೆಯೇ ಬರೆಯಲ್ಪಟ್ಟಿರುತ್ತವೆ. ಆದುದರಿಂದ, ಪೌಲನ ಪತ್ರಿಕೆಗಳು ಹೊಸ ಒಡಂಬಡಿಕೆಯಲ್ಲಿ ಬಹಳಷ್ಟು ಮುಂಚಿನವುಗಳಾಗಿವೆ.

ಪೌಲನು ರೋಮಾಪುರದವರಿಗೆ ಈ ಪತ್ರಿಕೆಯನ್ನು ಸುಮಾರು ಕ್ರಿ.ಶಕ ೫೫ರಲ್ಲಿ ಕೊರಿಂಥದ ಗ್ರೀಕ್ ಪಟ್ಟಣದಲ್ಲಿದ್ದುಕೊಂಡು ಬರೆದಿರುತ್ತಾನೆ. ಆ ಸಮಯದಲ್ಲಿ ಮೆಡಿಟರಿಯನ್ ಸಮುದ್ರದ ಸುತ್ತಲಿನ ರಾಷ್ಟ್ರಗಳೆಲ್ಲವೂ ರೋಮಾಯ ಸಾಮ್ರಾಜ್ಯದ ಅಧೀನಕ್ಕೊಳಪಟ್ಟಿದ್ದವು, ರೋಮ ಅದರ ರಾಜಧಾನಿಯಾಗಿತ್ತು. (ಇಂದಿಗೂ ಸಹ ರೋಮ ಒಂದು ಪ್ರಾಮುಖ್ಯ ನಗರವಾಗಿದ್ದು .ಐರೋಪ್ಯದ ಬೃಹತ್ ರಾಷ್ಟ್ರಗಳಲ್ಲೊಂದಾದ ಇಟಲಿಯ ರಾಜಧಾನಿಯಾಗಿರುತ್ತದೆ). ರೋಮ ನಗರದಲ್ಲಿ ಯಾರು ಮೊದಲು ಸಭೆ (ಅಥವಾ ಸಭೆಗಳನ್ನು) ಸ್ಥಾಪಿಸಿದರೆಂಬುದು ತಿಳಿದು ಬಂದಿರುವದಿಲ್ಲ. ಹೇಗಿದ್ದರೂ, ಪೌಲನು ಈ ಪತ್ರಿಕೆಯನ್ನು ಬರೆಯುವ ಹೊತ್ತಿಗೆ ರೋಮನಗರದಲ್ಲಿ ಅನೇಕ ಕ್ರೈಸ್ತರಿದ್ದರು, ಅವರಲ್ಲಿ ಕೆಲವರು ಯೆಹೂದ್ಯ ಕ್ರೈಸ್ತರು ಮತ್ತು ಇತರರು ಅನ್ಯ ಜನಾಂಗದ ಕ್ರೈಸ್ತರಾಗಿದ್ದರು. ಪೌಲನು ರೋಮನಗರಕ್ಕೆ ನಾಲ್ಕನೆಯ ಸುವಾರ್ತಾ ಪ್ರಯಾಣವನ್ನು ಮಾಡಿ, ಅಲ್ಲಿಂದ ಸ್ಪೇನಿಗೆ ಹೋಗಬೇಕೆಂದು ಯೋಚಿಸಿದ್ದನು (ರೋಮ 15:23-24). ಆದರೆ ಪೌಲನು ಈ ಯೋಜನೆಯನ್ನು ಸಫಲ ಗೊಳಿಸಲು ಆಗಲೇ

ಇಲ್ಲ, ಯಾಕೆಂದರೆ ಆತನು ಯೆರೂಸಲೇಮಿನಲ್ಲಿ (ಇಸ್ರಾಯೇಲಿನಲ್ಲಿದ್ದ ಯೂದಾಯ ಪ್ರಾಂತ್ಯದ ರಾಜಧಾನಿ) ಬಂಧಿಸಲ್ಪಟ್ಟು ಇಸ್ರಾಯೇಲಿನಲ್ಲಿ ಎರಡು ವರ್ಷಗಳ ಕಾಲ ಸೆರೆಮನೆಯಲ್ಲಿ ಹಾಕಲ್ಪಟ್ಟನು. ಕೊನೆಗೂ ಆತನು ರೋಮನಗರಕ್ಕೆ ಹೋಗುವಂತಾಯಿತು, ಸ್ವತಂತ್ರನಾಗಿಯಲ್ಲ, ಆದರೆ ಕೈದಿಯಾಗಿ ಹೋದನು. ಪೌಲನು ರೋಮನಗರದಲ್ಲಿ ಇನ್ನು ಎರಡು ವರ್ಷಗಳ ಕಾಲ ಗೃಹಬಂಧನದಲ್ಲಿರಬೇಕಾಯಿತು (ಅ.ಕೃತ್ಯ 28:30-31). ಆದಾದ ಮೇಲೆ ಪೌಲನಿಗೆ ಏನು ಸಂಭವಿಸಿತೆಂಬುದರ ಯಾವ ದಾಖಲೆಯು ಇರುವದಿಲ್ಲ. ಆತನು ಸುಮಾರು ಕ್ರಿ.ಶಕ 67ರಲ್ಲಿ ನಿರೋ ಚಕ್ರವರ್ತಿಯಿಂದ ಕೊಲ್ಲಿಸಲ್ಪಟ್ಟನೆಂದು ನಂಬಲಾಗುತ್ತಿತ್ತು.

ಪೌಲನು ರೋಮಾಪುರದವರಿಗೆ ಬರೆದ ಪತ್ರಿಕೆಯು ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನ ಸುವಾರ್ತೆಯ ಅತ್ಯಂತ ಸಂಪೂರ್ಣ ಹೇಳಿಕೆಯಾಗಿದೆ. ಈ ಪತ್ರಿಕೆಯ ಮುಖ್ಯ. ವಿಷಯವೇನೆಂದರೆ ಎಲ್ಲಾ ಮಾನವರು ಪಾಪಿಗಳಾಗಿದ್ದಾರೆ, ಆದರೆ ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಮಾನವನು ದೇವರ ದೃಷ್ಟಿಯಲ್ಲಿ ನೀತಿವಂತನಾಗಿ ರಕ್ಷಣೆಯನ್ನೂ ನಿತ್ಯ ಜೀವವನ್ನೂ ಪಡೆದುಕೊಳ್ಳಬಹುದು.

ಬೈಬಲಿನ ಎಲ್ಲಾ ಬರಹಗಾರರಂತೆಯೇ ಪೌಲನು ಸಹ ಹೊಸ ಒಡಂಬಡಿಕೆಯ ತನ್ನ ಪತ್ರಿಕೆಗಳನ್ನು ಪವಿತ್ರಾತ್ಮನ ಪ್ರೇರಣೆಯಿಂದ ಬರೆದನು. ಪವಿತ್ರಾತ್ಮನೇ ಬೈಬಲಿನ ಎಲ್ಲಾ ಪುಸ್ತಕಗಳ ಗ್ರಂಥಕರ್ತನು, ಮಾನವ ಬರಹಗಾರರು ಪವಿತ್ರಾತ್ಮನ ಸಾಧನಗಳು ಮಾತ್ರವೇ ಎಂದು ಹೇಳಿದರೆ ತಪ್ಪಾಗಲಾರದು [2] ಆದುದರಿಂದ, ನಾವು ಪೌಲನ ಪತ್ರಿಕೆಗಳನ್ನು ಓದುತ್ತಿರುವ ಹಾಗೆ ಅವುಗಳು (ಮತ್ತು ಬೈಬಲಿನ ಎಲ್ಲಾ ಪುಸ್ತಕಗಳು) ವಿಶೇಷವಾಗಿ ಸ್ವತಃ ದೇವರಿಂದ ಬರೆಯಲ್ಪಟ್ಟು ಕಳುಹಿಸಲಾಗಿರುವ ಸಂಗತಿಗಳೆಂಬದನ್ನು ನಾವು ನೆನಪಿನಲ್ಲಿಟ್ಟು ಕೊಳ್ಳೋಣ. ಪೌಲನು ರೋಮಾಪುರದವರಿಗೆ ಬರೆದ ಈ ಪತ್ರಿಕೆಯು ರೋಮಾಪುರದವರಿಗೆ ಮಾತ್ರವಲ್ಲದೆ ನಮಗೂ ಸಹ ಬರೆಯಲ್ಪಟ್ಟಿರುತ್ತದೆ.

## ಹೊರ ರೇಖೆ

ಅ. ಮುನ್ನುಡಿ (1:1-17)
- 1. ಶುಭಾಷಯಗಳು (1-7)
- 2. ಸ್ತೋತ್ರ ಹಾಗು ಪ್ರಾರ್ಥನೆ (1:8-15)
- 3. ಸುವಾರ್ತೆಯ ಬಲ (1:16-17)

ಆ. ಸುವಾರ್ತೆಯ ಸೂತ್ರಗಳು (1:18-5:21)
- 1. ಮೃದುವಾದ ನೀತಿ (1:18-32)
- 2. ಯೆಹೂದ್ಯ ನೀತಿ (2:1-3:20)
- 3. ದೇವರ ನೀತಿ (3:21-31)
- 4. ಅಬ್ರಹಾಮನ ನೀತಿ (4:1-25)
- 5. ವಿಶ್ವಾಸಿಗಳ ನೀತಿ (5:1-21)

ಇ. ಸುವಾರ್ತೆಯಿಂದ ಉಧ್ಭವವಾದ ನೈತೀಕ ಸಮಸ್ಯೆಗಳು (6:1-23)
- 1. ಪರವಾನಿಗೆಯ ಆರೋಪ (6:1-14)
- 2. ಅಧರ್ಮದ ಆರೋಪ (6:15-23)

ಈ. ಕ್ರಿಸ್ತನು ಹಾಗು ಧರ್ಮಶಾಸ್ತ್ರ (7:1-8:39)
- 1. ಧರ್ಮಶಾಸ್ತ್ರವು ಈ ಜೀವಿತ ಅವಧಿಯ ವರೆಗೆ ಮಾತ್ರವೇ (7:1-6)
- 2. ಧರ್ಮಶಾಸ್ತ್ರ ಮತ್ತು ಪಾಪ (7:7-25)
- 3. ಧರ್ಮಶಾಸ್ತ್ರದ ಪಾಪ ಮತ್ತು ಮರಣಗಳಿಂದ ಆತ್ಮನ ಮೂಲಕ ಬಿಡುಗಡೆ (8:1-39)

ಉ. ಯೆಹೂದ್ಯ ಹಕ್ಕು ಮತ್ತು ಅವಕಾಶಗಳ ಸಮಸ್ಯೆ (9:1-11:36)
- 1. ದೇವರ ಸಂಪೂರ್ಣ ಸರ್ವಶಕ್ತತೆ(9:1-29)
- 2. ಇತಿಹಾಸದಲ್ಲಿ ಯೆಹೂದ್ಯರ ಜವಾಬ್ದಾರಿಕೆ (9:30-10:21)
- 3. ದೇವರ ಕರುಣೆಯುಳ್ಳ ಉದ್ದೇಶ (11:1-36)

ಊ. ಕ್ರೈಸ್ತತ್ವವನ್ನು ಆಚರಣೆಯಲ್ಲಿ ತರುವದು (12:1-15:33)

1. ವಯಕ್ತಿಕ ನೈತೀಕತೆಗಳು (12:1-21)
2. ರಾಜಕೀಯ ನೈತೀಕತೆಗಳು (13:1-7)
3. ಅಧಿಕ ವಯಕ್ತಿಕ '—' (13:8-14)
4. ಬಲಿಷ್ಠ ಮತ್ತು ಬಲಹೀನ (14:1-15:13)

ಎ. ಹಿನ್ನುಡಿ (15:14-16:27)

1. ಪೌಲನು ಬರೆಯುವದಕ್ಕೆ ಕಾರಣಗಳು (15:14-21)
2. ಭವಿಷ್ಯತ್ತಿನಲ್ಲಿ ಪ್ರಯಾಣಗಳಿಗೆ ಯೋಜನೆಗಳು (15:22-33)
3. ರೋಮಾಪುರದಲ್ಲಿರುವ ಸ್ನೇಹಿತರಿಗೆ ವಂದನೆಗಳು (16:1-16)
4. ಕೊನೆಯ ಪ್ರಬೋಧನೆ ಮತ್ತು ವಂದನೆಗಳು (16:17-27)

## ಅಧ್ಯಾಯ - 1

### ಶುಭಾಷಯಗಳು (1:1-7)

1 ಅಪೊಸ್ತಲ ಎಂಬ ಬಿರುದನ್ನು ವಿಶೇಷವಾಗಿ ಸುವಾರ್ತೆಯನ್ನು ಸಾರಿ ಸಭೆಗಳನ್ನು ಸ್ತಾಪಿಸಲು ಕ್ರಿಸ್ತನಿಂದ "ಕಳುಹಿಸಲ್ಪಟ್ಟವನಿಗೆ" ನೀಡಲಾಗಿರುತ್ತದೆ. ಈ ಬಿರುದು ಪ್ರಥಮವಾಗಿ ಯೇಸು ಹನ್ನೆರಡು ಮೂಲ ಶಿಷ್ಯರಿಗೆ ಕೊಡಲ್ಪಟ್ಟಿತ್ತು (ಮಾರ್ಕ 3:13-19) ಅನಂತರದಲ್ಲಿ ಪೌಲನು[3] ಸಹ ದಮಸ್ಕದ ಮಾರ್ಗದಲ್ಲಿ ಜೀವದಿಂದೆದ್ದ ಕ್ರಿಸ್ತನನ್ನು ಸಂದಿಸಿದ ಬಳಿಕ ಕ್ರಿಸ್ತನಿಂದ ಒಬ್ಬ ಅಪೊಸ್ತಲನಾಗಿ ನೇಮಿಸಲ್ಪಟ್ಟನು (ಅ.ಕೃತ್ಯ 9:3-16, 26:15-18). ಆದುದರಿಂದ, ತನ್ನ ಪತ್ರಿಕೆಯ ಪ್ರಾರಂಭದಲ್ಲಿಯೇ ಪೌಲನು ತನ್ನನ್ನು ಅಪೊಸ್ತಲನೆಂದು ಕರೆದುಕೊಳ್ಳುವದರ ಮೂಲಕ ತಾನು ಕ್ರಿಸ್ತನ ಸಂಪೂರ್ಣ ಅಧಿಕಾರದೊಂದಿಗೆ ಬರೆಯುತ್ತಿದ್ದಾನೆಂಬದನ್ನು ರೋಮಾಪು ರದವರಿಗೆ (ಎಲ್ಲಾ ವಾಚಕರಿಗೆ) ಜ್ಞಾಪಕಪಡಿಸುತ್ತಿದ್ದಾನೆ. ಪೌಲನು ನೇರವಾಗಿ ಯೇಸುವಿನಿಂದಲೇ ನೇಮಿಸಲ್ಪಟ್ಟ ಒಬ್ಬ ನಿಜ ಅಪೊಸ್ತಲನಾಗಿದ್ದನು (ಗಲಾತ್ಯ 1:1).

ದೇವರ ಸುವಾರ್ತೆಯು ದೇವಕುಮಾರನಾದ ಯೇಸು ಕ್ರಿಸ್ತನ ಕುರಿತಾದ ಸುವಾರ್ತೆಯಾಗಿದೆ. ಅದನ್ನು ಪೌಲನು ರೋಮಾ ಪು ರದವರಿಗೆ ಬರೆದ ಈ ಪತ್ರಿಕೆಯಲ್ಲಿ ವಿವರಿಸುವವನಾಗಿದ್ದಾನೆ.

ಪೌಲನು ಇಲ್ಲಿ ತನ್ನನ್ನು ಯೇಸು ಕ್ರಿಸ್ತನ ದಾಸನು ಎಂದು ಕರೆದು ಕೊಳ್ಳುತ್ತಾನೆ. ಒಬ್ಬ ದಾಸನು ತನಗೋಸ್ಕರ ಜೀವಿಸುವದಿಲ್ಲ, ಆದರೆ ಆತನ ಯಜಮಾನನಿಗಾಗಿ ಜೀವಿಸುತ್ತಾನೆ. ಪೌಲನು ಇದೇ ರೀತಿಯಾಗಿ ಜೀವಿಸಿದನು ಮತ್ತು ಕ್ರೈಸ್ತರೆಲ್ಲರೂ ಇದೆ ರೀತಿಯಾಗಿಯೇ ತಮ್ಮ ಜೀವಿತಗಳನ್ನು ಜೀವಿಸಬೇಕು. ಪೌಲನ ದಿನಗಳಲ್ಲಿ ದಾಸನು ಅವನ ಯಜಮಾನನಿಂದ ಕೊಂಡುಕೊಳ್ಳಲ್ಪಡುತ್ತಿದ್ದನು, ಆತನು ಯಜಮಾನನ ಸ್ವತ್ತಾಗಿರುತ್ತಿದ್ದನು. ದಾಸನ ಜೀವನವು ಆತನ ಸ್ವಂತದ್ದಾಗಿರಲಿಲ್ಲ, ಆದರೆ ಅದು ಆತನ ಯಜಮಾನನಿಗೆ ಸೇರಿತ್ತು. ಅದೇ ರೀತಿಯಲ್ಲಿ ವಿಶ್ವಾಸಿಗಳಾದ ನಾವು ಯೇಸುವಿನಿಂದ ಕೊಂಡುಕೊಳ್ಳಲ್ಪಟ್ಟಿದ್ದೇವೆ ಮತ್ತು ಆತನ ರಕ್ತವೇ ನಮಗಾಗಿ ಕೊಡಲ್ಪಟ್ಟ ಕ್ರಯವಾಗಿದೆ (1 ಕೊರಿಂಥ 6:19-20 ಮತ್ತು ವ್ಯಾಖ್ಯಾನ ನೋಡಿರಿ).

2 ಸುವಾರ್ತೆಯು, ಯೇಸು ಕ್ರಿಸ್ತನ ವಿಷಯವಾದ ಶುಭವಾರ್ತೆಯು ಪವಿತ್ರ ಶಾಸ್ತ್ರಗಳಲ್ಲಿ, ಹಳೆ ಒಡಂಬಡಿಕೆಯಲ್ಲಿ ಮುಂತಿಳಿಸಲ್ಪಟ್ಟಿತು. (ಪೌಲನು ಈ ಪತ್ರಿಕೆಯನ್ನು ಬರೆಯುವಾಗ ಹೊಸ ಒಡಂಬಡಿಕೆ ಇನ್ನೂ ಪೂರ್ಣಗೊಂಡಿರಲಿಲ್ಲ ವಷ್ಟೇ). ಹಳೆ ಒಡಂಬಡಿಕೆಯ ಪ್ರವಾದಿಗಳು ರಕ್ಷಕನಾದ ಯೇಸು ಕ್ರಿಸ್ತನ ಬರೋಣದ ಕುರಿತಾಗಿ ಅನೇಕ ಪ್ರವಾದನೆಗಳನ್ನು ಬರೆದರು. ಆದಕಾರಣವೇ, ಪೌಲನು ಇಲ್ಲಿ ಯೇಸು ಕ್ರಿಸ್ತನ ಸುವಾರ್ತೆಯು ದೇವರಿಂದ ಮುಂಚಿತವಾಗಿ ವಾಗ್ದಾನ ಮಾಡಲ್ಪಟ್ಟಿತೆಂದು ಹೇಳುತ್ತಾನೆ.

3-4 ಯೇಸು ಕ್ರಿಸ್ತನು ಯಾರು? ಒಬ್ಬ ವ್ಯಕ್ತಿಯು ಕೇಳಬಹುದಾದ ಇದಕ್ಕಿಂತಲೂ ಪ್ರಾಮುಖ್ಯವಾದ ಪ್ರಶ್ನೆಯು ಇನ್ನೊಂದಿರುವದಿಲ್ಲ. ಆತನು ಮಾನವನಾಗಿದ್ದನೋ ಅಥವಾ ದೇವರೋ? ಈ ಎರಡು ವಚನಗಳಲ್ಲಿ ಪೌಲನು ಈ ಮಹತ್ವದ ಪ್ರಶ್ನೆಗೆ ಉತ್ತರಿಸುತ್ತಾನೆಃ ಯೇಸು ಪೂರ್ಣ ಮಾನವನೂ ಪೂರ್ಣ ದೇವರೂ ಆಗಿದ್ದಾನೆ. ಆತನು ವಂಶಕ್ರಮದಿಂದ ದಾವೀದನ ಸಂತಾನದಲ್ಲಿ ಹುಟ್ಟಿದನು (ವಚನ 3).

ಆತನ ಆತ್ಮೀಕ ಸ್ವಭಾವದಲ್ಲಾದರೋ ಯೇಸು ದೇವಕುಮಾರನಾಗಿದ್ದು ನೇರವಾಗಿ ಪವಿತ್ರಾತ್ಮನಿಂದ ಹುಟ್ಟಿದನು (ವಚನ 4) ಯೇಸು ಮಾನವ ತಾಯಿಯಲ್ಲಿ ಹುಟ್ಟಿದನು, ಆದರೆ ಪವಿತ್ರಾತ್ಮನು ಆತನ ತಂದೆಯಾಗಿದ್ದನು (ಮತ್ತಾಯ 1:18–21 ಮತ್ತು ವ್ಯಾಖ್ಯಾನ, ಸಾಮಾನ್ಯ ಲೇಖನ: ಯೇಸು ಕ್ರಿಸ್ತ ನೋಡಿರಿ). ಯೇಸು ಸತ್ತಮೇಲೆ ಪು ನರುತ್ಥಾನಗೊಳ್ಳುವದರ ಮೂಲಕ ತಾನು ದೇವಕುಮಾರನೆಂಬುದಕ್ಕೆ ಆಧಾರವನ್ನು ನೀಡಿದನು. ಯಾವ ಸಾಮಾನ್ಯ ಮಾನವನೂ ತನ್ನನ್ನು ಸತ್ತವರಿಂದ ಎದ್ದು ಬರುವಂತೆ ಮಾಡಲಾರನು. ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದಿದ್ದಾನೆಂದು ಪೌಲನು ನಿಶ್ಚಯವಾಗಿ ತಿಳಿದಿದ್ದನು, ಯಾಕೆಂದರೆ ಸ್ವತ: ತಾನೇ ಆತನನ್ನು ಸಂಧಿಸಿದ್ದನು ! (ರೋಮಾಪು ರದವರಿಗೆ: ಪರಿಚಯ ನೋಡಿರಿ).

5 ಇಲ್ಲಿ ಪೌಲನು ತಾನು ಎಲ್ಲಾ ಅನ್ಯ ಜನಗಳಲ್ಲಿ[4] ನಂಬಿಕೆಯೆಂಬ ವಿಧೇಯತ್ವ ಉಂಟಾಗುವದಕ್ಕೋಸ್ಕರ ಹೇಗೆ ಕ್ರಿಸ್ತನಿಂದ ಅಪೊಸ್ತಲನಾಗಿ ನೇಮಿಸಲ್ಪಟ್ಟನೆಂಬುದನ್ನು ವಿವರಿಸುತ್ತಾನೆ. ಈ ಕಾರ್ಯವನ್ನು ಮಾಡಲು ಪೌಲನು ಕೃಪೆಯನ್ನೂ ಅಪೊಸ್ತಲತನವನ್ನೂ– ಅಂದರೆ, ಕ್ರಿಸ್ತನ ಬಲ ಹಾಗು ಅಧಿಕಾರವನ್ನು – ಪಡೆದುಕೊಂಡನು. ಬೈಬಲ್ ನಲ್ಲಿ ಕೃಪೆ ಎಂಬದು ದೇವರು ಅಯೋಗ್ಯನೂ ಪಾಪಿಯೂ ಆದ ಮಾನವರಿಗೆ ಮುಕ್ತ ಕರುಣೆಯನ್ನು ತೋರಿಸುವದು ಎಂಬ ಸಾಮಾನ್ಯ ಅರ್ಥವಿರುತ್ತದೆ (ವಚನ 7). ಆದರೆ ಈ ವಚನದಲ್ಲಿ "ಕೃಫೆ" ಎಂಬ ಪದವು ಬೇರೆ ಅರ್ಥವನ್ನು ಹೊಂದಿದೆ. ಇಲ್ಲಿ ಆದರರ್ಥವು ವಿಶೇಷ ಕಾರ್ಯವೊಂದನ್ನು ನೆರವೇರಿಸಲು ದೇವರಿಂದ ಕೊಡಲ್ಪಟ್ಟ ಬಲ ಎಂಬುದಾಗಿದೆ (ರೋಮ 15:15-16, ಎಫೆಸ 3:7 ನೋಡಿರಿ).

ಪೌಲನ ಉದ್ದೇಶವು ಜನರನ್ನು ನಂಬಿಕೆಗೆ ತರುವದು ಮಾತ್ರವೇ ಅಲ್ಲ, ಆದರೆ ನಂಬಿಕೆಯೆಂಬ ವಿಧೇಯತ್ವ ಉಂಟಾಗುವದಕ್ಕೋಸ್ಕರ ಅವರನ್ನು ಕರೆಯುವದು ಸಹ ಆಗಿದೆ ಎಂಬದನ್ನು ಗಮನಿಸಿರಿ. ನಂಬಿಕೆಯು ಯಾವಾಗಲೂ ವಿಧೇಯತ್ವ ಉಂಟು ಮಾಡುವದಾಗಿರಬೇಕು, ಇಲ್ಲವಾದರೆ ಅದು ನಿಜವಾದ ನಂಬಿಕೆಯಾಗಿರುವದಿಲ್ಲ (ಯಾಕೋಬ 2:17 ಮತ್ತು ವ್ಯಾಖ್ಯಾನ ನೋಡಿರಿ). ಜನರನ್ನು ಕ್ರಿಸ್ತನ ಬಳಿಗೆ ತರುವದು ಮಾತ್ರವೇ ಸಾಕಾಗುವದಿಲ್ಲ, ಅವರನ್ನು ವಿಧೇಯತೆಯುಳ್ಳ ಶಿಷ್ಯರನ್ನಾಗಿ ಸಹ ಮಾಡತಕ್ಕದ್ದು.

**6-7** ಪೌಲನು ಈ ಪತ್ರಿಕೆಯನ್ನು ದೇವರಿಂದ ಪ್ರೀತಿಸಲ್ಪಟ್ಟ ಎಲ್ಲಾ ರೋಮಾಪುರದವರಿಗೆ ಬರೆಯುತ್ತಾನೆ (ವಚನ 7) – ಅಂದರೆ, ರೋಮಾಪುರದಲ್ಲಿರುವ ಎಲ್ಲಾ ಕ್ರೈಸ್ತರಿಗೆ ಬರೆಯುತ್ತಾನೆ. ದೇವರು ಎಲ್ಲಾ ಸ್ತ್ರೀಪುರುಷರನ್ನು ಪ್ರೀತಿಸುತ್ತಾನೆ, ಆದರೆ ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ತನ್ನ ಮಕ್ಕಳಾದವರನ್ನೂ ಆತನು ವಿಶೇಷವಾಗಿ ಪ್ರೀತಿಸುತ್ತಾನೆ (1 ತಿಮೊಥೆ 4:9-10 ಮತ್ತು ವ್ಯಾಖ್ಯಾನ ನೋಡಿರಿ). ಕ್ರೈಸ್ತರೆಲ್ಲರೂ ಪವಿತ್ರರಾಗುವದಕ್ಕೆ ಕರೆಯಲ್ಪಟ್ಟಿರುತ್ತಾರೆ, ಅಂದರೆ ಅವರು ಒಂದು ಪವಿತ್ರ ಜೀವಿತವನ್ನು ನಡೆಸಲು ಕರೆಯಲ್ಪಟ್ಟಿರುತ್ತಾರೆ. ನಿಜವಾದ ಕ್ರೈಸ್ತರು ದೇವರ ದೃಷ್ಟಿಯಲ್ಲಿ "ಪವಿತ್ರ" ರಾಗಿದ್ದಾರೆ, ಅವರ ಸ್ವಂತ ಕಾರ್ಯದಿಂದಲ್ಲ, ಆದರೆ ಅವರ ಪಾಪಗಳನ್ನು ನಿವಾರಣೆ ಮಾಡಲು ಶಿಲುಬೆಯ ಮೇಲೆ ಮರಣಿಸಿದ ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕವೇ ಪವಿತ್ರರಾಗಿರುತ್ತಾರೆ (ಫಿಲಿಪ್ಪಿ 1:1 ನೋಡಿರಿ).

ಪೌಲನು ತನ್ನ ಬಹು ಪಾಲು ಪತ್ರಿಕೆಗಳ ಸುಭಾಷೆಯಗಳಲ್ಲಿ ತನ್ನ ವಾಚಕರು ದೇವರ "ಕೃಪೆ" ಮತ್ತು" ಸಮಾಧಾನ"ಗಳನ್ನು ಅನುಭವಿಸಬೇಕೆಂಬ ತನ್ನ ಕೋರಿಕೆಯನ್ನು ವ್ಯಕ್ತಪಡಿಸುತ್ತಾನೆ. "ಕೃಫೆ"ಯು ಉಚಿತವಾಗಿ ಕೊಡಲ್ಪಟ್ಟ ದೇವರ ದಯೆ, ಪ್ರೀತಿ ಮತ್ತು ಕರುಣೆ ಆಗಿದೆ, ಮಾನವರು ಅದಕ್ಕೆ ಯೋಗ್ಯರಲ್ಲ ಮತ್ತು ಅದನ್ನು ಸಂಪಾಧಿಸಿಕೊಳ್ಳಲಾರರು. ಕೃಪೆಯ ಮುಖಾಂತರ ನಾವು ದೇವರೊಂದಿಗೂ ಪರಸ್ಪರರೊಂದಿಗೂ ಸಮಾಧಾನ ಅಥವಾ ಸಂಧಾನವನ್ನು ಹೊಂದಿಕೊಳ್ಳುತ್ತೇವೆ. ಈ ಕೃಪೆ ಮತ್ತು ಸಮಾಧಾನಗಳೆಂಬ ಎರಡು ಮಹಾ ವರಗಳು ಯಾವಾಗಲೂ ನಮಗೆ ತಂದೆಯಾದ ದೇವರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ ಕೊಡಲ್ಪಡುತ್ತವೆ. ತಂದೆ ಮತ್ತು ಯೇಸು ಕ್ರಿಸ್ತನು (ಮತ್ತು ಪವಿತ್ರಾತ್ಮನು) ಯಾವಾಗಲೂ ಒಟ್ಟಾಗಿ ಕಾರ್ಯಗಳನ್ನು ಮಾಡುತ್ತಾರೆ, ಯಾಕೆಂದರೆ ಅವರು ಒಬ್ಬನೇ ದೇವರಾಗಿದ್ದಾರೆ.

ಪೌಲನು ಯೇಸುವನ್ನು ಇಲ್ಲಿ ಕರ್ತನಾದ ಯೇಸು ಕ್ರಿಸ್ತನು ಎಂದು ಕರೆಯುತ್ತಾನೆ., ಯೇಸು ಎಂಬದು ಮನುಷ್ಯನ ಹೆಸರಾಗಿದೆ, ಯಾಕೆಂದರೆ ಯೇಸು ಮನುಷ್ಯನಾಗಿದ್ದನು. ಕ್ರಿಸ್ತನು ಎಂಬದು ಜಗದ್ರಕ್ಷನ ಹೆಸರಾಗಿದ್ದು "ಅಭಿಷೀಕ್ತನು" ಎಂಬದು ಅದರರ್ಥವಾಗಿದೆ (ಕೀರ್ತನೆಗಳು 2:2, ಅ.ಕೃತ್ಯ 4:26) ಯೇಸುವಿನ ಮೂರನೆಯ ಹೆಸರು ಕರ್ತನು, ಗ್ರೀಕ್[5] ಭಾಷೆಯಲ್ಲಿ ಅದರರ್ಥವು "ದೇವರು" ಎಂಬದಾಗಿರುತ್ತದೆ (ಯಾಕೋಬ 1:1 ಮತ್ತು ವ್ಯಾಖ್ಯಾನ ನೋಡಿರಿ).

## ಪೌಲನು ರೋಮಾಪುರವನ್ನು ಸಂಧಿಸಲು ಹಾರೈಸಿದ್ದು (1:8-15)

**8** ಪೌಲನ ಕಾಲದಲ್ಲಿ ರೋಮ ಪಾಶ್ಚಾತ್ಯ ಜಗತ್ತಿನಲ್ಲಿ ಅತಿ ಪ್ರಾಮುಖ್ಯವಾದ ನಗರವಾಗಿತ್ತು, ಅದು ರೋಮಾಯ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಆದುದರಿಂದ, ಜಗತ್ತಿನ ಎಲ್ಲಾ ಕಡೆಗಳಿಂದಲೂ ಜನರು ಒಂದಿಲ್ಲಾ ಒಂದು ಕಾರಣಕ್ಕಾಗಿ ರೋಮನಗರಕ್ಕೆ ಬರುತ್ತಿದ್ದರು. ಈ ಕಾರಣದಿಂದಾಗಿ ರೋಮ ನಗರದ ಕ್ರೈಸ್ತರ ಕುರಿತಾದ ಯಾವದೇ ಸುದ್ದಿಯು ಸಹಜವಾಗಿ ದಿಗಂತಗಳವರೆಗೂ ಹರಡುವದಾಗಿತ್ತು. ಹೀಗಿರುವದರಿಂದ ಅವರ ನಂಬಿಕೆಯು ಲೋಕದಲ್ಲೆಲ್ಲಾ ಪ್ರಸಿದ್ಧಿಗೆ ಬಂದಿತೆಂದು ಸತ್ಯವಾಗಿಯೇ ಹೇಳಿದ್ದನು. ಅದೇ ರೀತಿಯಲ್ಲಿ ಸ್ವತಃ ಸುವಾರ್ತೆಯು ರೋಮಾಯ ಸಾಮ್ರಾಜ್ಯದುದ್ದಕ್ಕೂ ಸುವಾರ್ತೆಯು ಹರಡುತಿತ್ತು. ವಾಸ್ತವದಲ್ಲಿ, ಕ್ರೈಸ್ತರ ಸಂಖ್ಯೆಯು ಎಷ್ಟು ತೀವ್ರವಾಗಿ ಬೆಳೆಯುತ್ತಿತ್ತೆಂದರೆ ರೋಮಾಯರು ಅವರನ್ನು ಹೆಚ್ಚು ಕಠೋರವಾಗಿ ಹಿಂಸಿಸಲು ಪ್ರಾರಂಭಿಸಿದ್ದರು.[6] ಆದುದರಿಂದ, ಯೋಮಾಯರು ವಿಶ್ವಾಸಿಗಳು ಅಂತಹ ಭಯಂಕರ ಹಿಂಸೆಯ ಮಧ್ಯದಲ್ಲಿಯೂ ತಮ್ಮ ನಂಬಿಕೆಯಲ್ಲಿ ಧೃಡವಾಗಿ ನಿಂತುಕೊಂಡದ್ದಕ್ಕಾಗಿ ಪೌಲನು ಕೃತ್ಯಜ್ಞತೆಯುಳ್ಳವನಾಗಿದ್ದಾನೆ. ಪೌಲನು ರೋಮಾಪುರದ ಕ್ರೈಸ್ತರನ್ನು ಹೇಗೆ ಪ್ರಶಂಸಿಸಿ ಮೌಲ್ಯ ಮಾಡುತ್ತಾನೆಂಬದನ್ನು ಗಮನಿಸಿರಿ. ನಾವು ಸಹ ಪೌಲನ ಮಾದರಿಯನ್ನು ಅನುಸರಿಸುತ್ತಾ ಯಾವಾಗಲೂ ನಮ್ಮ ಸಹ ಕ್ರೈಸ್ತರನ್ನು ಪ್ರಾಮುಖ್ಯ ಹಾಗು ಮೌಲ್ಯವೆಂದು ಪರಿಗಣಿಸೋಣ, ಯಾಕೆಂದರೆ ಅವರು ದೇವರ ದೃಷ್ಟಿಯಲ್ಲಿಯೂ ಹಾಗೆಯೇ ಇರುತ್ತಾರೆ. ಆದುದರಿಂದ, ಒಬ್ಬರಿಗೊಬ್ಬರು ದೂರು ಹೇಳಿಕೊಳ್ಳುವದರ ಬದಲಾಗಿ ಪೌಲನ ಹಾಗೆ ಒಬ್ಬರಿಗೊಬ್ಬರಿಗಾಗಿ ದೇವರಿಗೆ ಸ್ತೋತ್ರಗಳನ್ನು ಸಲ್ಲಿಸೋಣ.

**9-10** ಪೌಲನು ಈ ಪತ್ರಿಕೆಯನ್ನು ಬರೆದ ಸಮಯದಲ್ಲಿ ಆತನು ಇನ್ನು ರೋಮಾಪುರಕ್ಕೆ ಹೋಗಿರಲಿಲ್ಲ. ಆದರೆ ಆತನು ಎಂದಿಗೂ ರೋಮಾಪುರದ ಕ್ರೈಸ್ತರನ್ನು ಬೇಟಿಯಾಗಿಲ್ಲದಿದ್ದಾಗ್ಯು ಆತನು ಅವರಿಗಾಗಿ ಚಿಂತಿಸಿ ನಂಬಿಗಸ್ಥನಾಗಿ ಪ್ರಾರ್ಥಿಸುತ್ತಿದ್ದನು.

**11-13** ರೋಮಾಪುರದ ಕ್ರೈಸ್ತರಿಗೆ ಪಾರಮಾರ್ಥಿಕ ವರವನ್ನು ದೊರಕುವಂತೆ ಮಾಡಿ ಧೃಢಗೊಳಿಸುವದಕ್ಕಾಗಿ ಪೌಲನು ರೋಮಾಪುರಕ್ಕೆ ಹೋಗಲು ಬಯಸಿದ್ದನು (ವಚನ 11). ಬೋಧಿಸುವದು ಮಾತ್ರವೇ ಸಾಕಾಗುವದಿಲ್ಲ, ಸಭೆಗಳನ್ನು ಸ್ಥಾಪಿಸುವದಷ್ಟೇ ಸಾಲದು. ವಿಶ್ವಾಸಿಗಳನ್ನು ಧೃಢಪಡಿಸುವದು ಸಹ ಅವಶ್ಯಕವಾಗಿರುತ್ತದೆ. ಅವರು ಧೃಢವಾಗಿಲ್ಲವಾದರೆ ಹೇಗೆ ಸಮಸ್ಯೆ ಹಾಗು ಹಿಂಸೆಗಳನ್ನು ಸಹಿಸಿಕೊಂಡು ನಿಲ್ಲಲು ಸಾಧ್ಯ? ಈ ಕಾರಣದಿಂದಲೇ ಪೌಲನ ಸಭಾಸ್ಥಾಪನೆಯ ಸೇವೆಯು ಸಾಮಾನ್ಯವಾಗಿ ಅಷ್ಟೊಂದು ಯಶಸ್ವಿಯಾಗಿತ್ತು : ತಾನು ಹೋದಲೆಲ್ಲಾ ವಿಶ್ವಾಸಿಗಳನ್ನು ಬಲಪಡಿಸುವದು ಆತನ ಎಡೆಬಿಡದ ಬಯಕೆಯಾಗಿತ್ತು (ಅ.ಕೃತ್ಯ 14:21-22 ನೋಡಿರಿ).

ರೋಮಾಪುರದಲ್ಲಿ ಸಫಲತೆ ಆದಿತೆಂಬ ನಿರೀಕ್ಷೆಯನ್ನು (ವಚನ 13), ಅಂದರೆ, ತಮ್ಮ ನಂಬಿಕೆಯಲ್ಲಿ ಬಲಗೊಂಡ ಅನೇಕ ಕ್ರೈಸ್ತರನ್ನು ಕಂಡುಕೊಳ್ಳುತ್ತೇನೆಂಬ ನಿರೀಕ್ಷೆಯನ್ನು ಹೊಂದಿದ್ದೇನೆಂದು ಪೌಲನು ಬರೆಯುತ್ತಾನೆ. ಅಲ್ಲದೆ ತನ್ನ ಬೇಟಿಯಿಂದ ರೋಮಾಪುರದಲ್ಲಿ ಅನೇಕರು ಹೊಸದಾಗಿ ಕ್ರೈಸ್ತನನ್ನು ನಂಬುವಂತಾಗುವದೆಂದು ಸಹ ಪೌಲನು ನಿರೀಕ್ಷಿಸಿದನು.

**14-15** ಇಲ್ಲಿ ಪೌಲನು ಗ್ರೀಕರಿಗೂ ಇತರ ಜನಗಳಿಗೂ, ಜ್ಞಾನಿಗಳಿಗೂ, ಮೂಢರಿಗೂ ತೀರಿಸಬೇಕಾದ ಒಂದು ಋಣ ನನ್ನು ಮೇಲೆ ಇದೆ ಎಂದು ಹೇಳುತ್ತಾನೆ (ವಚನ 14). ಪೌಲನು ಯಾವ ವಿಧದಲ್ಲಿ ಋಣ ಹೊಂದಿದ್ದನು? ಆತನು ಕ್ರಿಸ್ತನ ಸುವಾರ್ತೆಯನ್ನು ಎಲ್ಲಾ ಜನರಿಗೆ – ವಿಶೇಷವಾಗಿ ಅನ್ಯಜನಗಳಿಗೆ – ಸಾರುವ ಋಣವನ್ನು ಹೊಂದಿದ್ದನು. ಪೌಲನು ಸುವಾರ್ತೆಸಾರಲು ನೇಮಿಸಲ್ಪಟ್ಟಿದ್ದನು ಮತ್ತು ಅದಕ್ಕಾಗಿ ಆತನು ಕೃಪೆಯನ್ನು ಪಡೆದುಕೊಂಡಿದ್ದನು, ಆದುದರಿಂದ, ಸಾಲಗಾರನು ತಾನು ಕೊಡಬೇಕಾದ ಹಣವನ್ನು ಹಿಂದಿರುಗಿಸುವ ಋಣವನ್ನು ಹೊಂದಿರುವ ಪ್ರಕಾರವೇ ಪೌಲನು ದೇವರೆಡೆಗೂ, ಇನ್ನು ಸುವಾರ್ತೆಯನ್ನು ಕೇಳದಿರುವವರೆಡೆಗೂ ಇರುವ ತನ್ನ ಕರ್ತವ್ಯವನ್ನು ನೇರವೇರಿಸುವ ಋಣಹೊಂದಿದ್ದನು.

ಅದೇ ರೀತಿಯಲ್ಲಿ ನಂಬುವವರಾದ ನಮಗೆ ದೇವರು ತೋರಿಸಿರುವ ಕೃಪೆ, ಕರುಣೆ ಮತ್ತು ಪ್ರೀತಿಗಳಿಗಾಗಿ ನಾವು ಸಹ ದೇವರ ಋಣವನ್ನು ಹೊಂದಿದ್ದೇವೆ. ನಾವು ಎಷ್ಟರ ವರೆಗೆ ದೇವರಿಂದ ಆಶೀರ್ವದಿಸಲ್ಪಟ್ಟಿದ್ದೇವೋ ಅಷ್ಟರವರಿಗೆ ನಾವು ಆತನ ಋಣವನ್ನು ಹೊಂದಿದ್ದೇವೆ.

ಒಂದು ವೇಳೆ ನಾವು ರಕ್ಷಣೆ ಹೊಂದಿದವರಾಗಿ ಇತರರಿಗೆ ರಕ್ಷಣೆಯ ಸುವಾರ್ತೆಯನ್ನು ಹೇಳದಿರುವದಾದರೆ ನಾವು ಹಣವನ್ನು ಸಾಲವಾಗಿ ಪಡೆದು ತಿರಿಗಿ ಕೊಡದಿರುವ ಮನುಷ್ಯನಂತಿರುತ್ತೇವೆ. ದೇವರು ಅಂತಹ ವ್ಯಕ್ತಿಯನ್ನು ಮೆಚ್ಚುವದಿಲ್ಲ (ಕೀರ್ತನೆಗಳು 37:21). ಆದುದರಿಂದಲೇ ಪೌಲನು ಇನ್ನೊಂದು ಕಡೆಯಲ್ಲಿ ಬರೆದಿರುವದೇನೆಂದರೆ: "ಸುವಾರ್ತೆಯನ್ನು.....ಸಾರಲೇಬೇಕೆಂಬ ನಿರ್ಬಂಧ ನನಗುಂಟು. ಸಾರದಿದ್ದರೆ ನನ್ನ ಗತಿಯನ್ನು ಏನು ಹೇಳಲಿ!" (1 ಕೊರಿಂಥ 9:16).

ಗ್ರೀಕರು ಗ್ರೀಸ್ ನಿವಾಸಿಗಳಾಗಿದ್ದರು, ಇದು ಮೆಡಿಟರನಿಯನ್ ಸಮುದ್ರದ ಬಳಿಯಲ್ಲಿ ಇಟಲಿ ಮತ್ತು ಟರ್ಕಿಯ ನಡುವೆ ಇರುವ ತೆಂಕಣ ಐರೋಪ್ಯದ ಒಂದು ಪ್ರಮುಖ ರಾಷ್ಟ್ರವಾಗಿತ್ತು. ಪೌಲನ ಕಾಲದಲ್ಲಿ ಗ್ರೀಕರು ಪಾಶ್ಚಾತ್ಯ ಜಗತ್ತಿನಲ್ಲಿ ಅತ್ಯಂತ ನಾಗರೀಕ ಮತ್ತು ಸಾಂಸ್ಕೃತೀಕ – ರೋಮಾಯಗಿಂತಲೂ ಹೆಚ್ಚಾಗಿ – ಜನರಾಗಿದ್ದರು. ಆದುದರಿಂದ, ಪೌಲನು ಗ್ರೀಕರಿಗೂ ಇತರ ಜನರಿಗೂ 7 ಎಂದು ಹೇಳುವದರ ತಾತ್ಪರ್ಯವು "ನಾಗರೀಕ ಜನರು ಮತ್ತು ಅನಾಗರೀಕ ಜನರು" ಎಂದಾಗಿರುತ್ತದೆ.

ರೋಮಾಪು ರದಲ್ಲಿ ವಿವಿಧ ರೀತಿಗಳ ಕ್ರೈಸ್ತರಿದ್ದರು: ಯೆಹೂದ್ಯ ಕ್ರೈಸ್ತರು, ಅನ್ಯ ಜನಾಂಗದ ಕ್ರೈಸ್ತರು, ಗ್ರೀಕರು, ಗ್ರೀಕರಲ್ಲದವರೂ,[7] ಜ್ಞಾನಿಗಳು, ಮೂಢರು ಇತ್ಯಾದಿ. ಕ್ರಿಸ್ತನ ಸುವಾರ್ತೆಯು ಎಲ್ಲಾ ಜನರಿಗಾಗಿ – ಮೇಲ್ಜಾತಿ ಅಥವಾ ಕೀಳುಜಾತಿ, ವಿಧ್ಯಾವಂತರಾಗಲಿ, ಅವಿಧ್ಯಾವಂತರಾಗಲಿ, ಬಡವನಿರಲಿ ಅಥವಾ ಬಲ್ಲಿದನಿರಲಿ – ಇರುತ್ತದೆ. ನಮ್ಮ ಬಹಿರಂಗದ ಪರಿಸ್ಥಿತಿಗಳು ದೇವರಿಗೆ ಯಾವ ವ್ಯತ್ಯಾಸವನ್ನುಂಟು ಮಾಡುವದಿಲ್ಲ (ಗಲಾತ್ಯ 3:28 ಮತ್ತು ವ್ಯಾಖ್ಯಾನ ನೋಡಿರಿ).

## ಸುವಾರ್ತೆಯ ಶಕ್ತಿ (1:16-17)

**16** ಸುವಾರ್ತೆಯು ಒಂದು ಸಾಮಾನ್ಯ ಸುದ್ದಿಯಾಗಿರುವದಿಲ್ಲ, ಇದು ರಕ್ಷಣೆಯನ್ನುಂಟುಮಾಡುವ ದೇವರ ಬಲಸ್ವರೂಪವಾಗಿದೆ. ಸುವಾರ್ತೆಯು ದೇವರ ವಾಕ್ಯವಾದ ಬೈಬಲಿನಲ್ಲಿ ಅಡಕವಾಗಿರುತ್ತದೆ. ಆದುದರಿಂದ, ಬೈಬಲ್ ಸಾಮಾನ್ಯ ಪು ಸ್ತಕವಲ್ಲ, ಇದು ದೇವರ ಬಲವುಳ್ಳ ವಾಕ್ಯವಾಗಿದೆ. ಈ ವಾಕ್ಯವನ್ನು ಓದಿ ನಂಬಿಕೆಯನ್ನಿಡುವ ವ್ಯಕ್ತಿಯು ರಕ್ಷಣೆಯನ್ನೂ ನಿತ್ಯವಾಗಿ ಜೀವಿಸಲು ಬಲವನ್ನೂ ಪಡೆಯುತ್ತಾನೆ ಮತ್ತು ಒಬ್ಬನು ನಿತ್ಯವಾಗಿ ಜೀವಿಸಬೇಕಾದರೆ ನಿತ್ಯವಾದ ಬಲವು ಅಗತ್ಯವಾಗಿರುತ್ತದೆ!

ಈ ಬಲವನ್ನು ಪಡೆದುಕೊಳ್ಳಲು ನಾವು ಕ್ರಿಸ್ತನನ್ನು ನಂಬಬೇಕು. ನಂಬುವವರೆಲ್ಲರಿಗೂ ಈ ರಕ್ಷಣೆಯನ್ನುಂಟು ಮಾಡುವ ಬಲವು ಕೊಡಲ್ಪಡುತ್ತದೆ – ಗ್ರೀಕರಾಗಲಿ ಅಥವಾ ಗ್ರೀಕರಲ್ಲದವರಾಗಿರಲಿ, ಜ್ಞಾನಿಗಳಾಗಿರಲಿ ಅಥವಾ ಮೂಢರಾಗಲಿ (ವಚನ 14). ಹೇಗಿದ್ದರೂ, ಸುವಾರ್ತೆಯು ಮೊದಲು ಯೆಹೂದ್ಯರಿಗೆ ಸಾರಲ್ಪಟ್ಟಿತು. ಯೆಹೂದ್ಯರು ದೇವರಿಂದ ವಿಶೇಷವಾಗಿ ಆರಿಸಿಕೊಳ್ಳಲ್ಪಟ್ಟ ಜನರಾಗಿದ್ದರು, ಪ್ರಾರಂಭದಿಂದಲೂ ಅವರು ಏಕೈಕ ಸತ್ಯ ದೇವರನ್ನು ಆರಾಧಿಸುತ್ತಿದ್ದರು. ಯೆಹೂದ್ಯ ಶಾಸ್ತ್ರಗಳಲ್ಲಿ (ಹಳೆ ಒಡಂಬಡಿಕೆ) ಬರಲಿರುವ ರಕ್ಷಕನಾದ ಕ್ರಿಸ್ತನ ಕುರಿತಾಗಿ ಅನೇಕ ಪ್ರವಾದನೆಗಳು ಬರೆಯಲ್ಪಟ್ಟಿವೆ. ಆದುದರಿಂದ, ಸ್ವತಃ ಯೆಹೂದ್ಯನಾಗಿ ಯೇಸು ಬಂದಾಗ ಮೊದಲು ಆತನು ತನ್ನ ಸ್ವಜನಾಂಗವಾದ ಯೆಹೂದ್ಯರಿಗೆ ಸುವಾರ್ತೆಯನ್ನು ಸಾರಿದರು.

ಹೇಗಿದ್ದರೂ, ಬಹು ಪಾಲು ಯೆಹೂದ್ಯರು ಯೇಸುವನ್ನು ತಿರಸ್ಕರಿಸಿದರು, ಮತ್ತು ಕೊನೆಯಲ್ಲಿ ಅವರು ಆತನನ್ನು ಶಿಲುಬೆಗೆ [8] ಹಾಕಿ ಕೊಲ್ಲಲ್ಪಡುವಂತೆ ಮಾಡಿದರು. ಆದುದರಿಂದ, ದೇವರು ಪೌಲನಂತಹ ಬೋಧಕರನ್ನು ಅನ್ಯ ಜನಾಂಗಗಳಿಗೆ, ಅಂದರೆ ಜಗತ್ತಿನ ಎಲ್ಲಾ ಜನರಿಗೆ ಸುವಾರ್ತೆಯನ್ನು ಸಾರುವದಕ್ಕಾಗಿ ನೇಮಿಸಿದನು. ಆದ್ದರಿಂದಲೇ ಪೌಲನು ಇಲ್ಲಿ ಸುವಾರ್ತೆಯು ಮೊದಲು ಯೆಹೂದ್ಯರಿಗೆ ಆಮೇಲೆ ಗ್ರೀಕರಿಗೆ ಎಂದು ಹೇಳುತ್ತಾನೆ.

ಪೌಲನು ಸುವಾರ್ತೆಯನ್ನು ಸಾರುವದಕ್ಕೆ ನಾಚಿಕೆಯುಳ್ಳವನಾಗಿರಲಿಲ್ಲ. ಪೌಲನ ಕಾಲದಲ್ಲಿ ಕ್ರೈಸ್ತನಾಗಿರುವದೆಂದರೆ ಕಠಿಣ ಕಾರ್ಯವಾಗಿತ್ತು. ಕ್ರೈಸ್ತರು ತಿರಸ್ಕಾರ ಮತ್ತು ಹಿಂಸೆ ಗುರಿಯಾಗಿದ್ದರು. ಕ್ರಿಸ್ತನು ಸ್ವತಃ ಒಬ್ಬ ಅಪರಾಧಿಯಂತೆ ಶಿಲುಬೆಯ ಮೇಲೆ ತೂಗಾಡಲ್ಪಟ್ಟನು. ಪ್ರಾರಂಭದಲ್ಲಿ, ಕ್ರೈಸ್ತರಲ್ಲಿ ಬಹು ಮಂದಿ ಬಡವರ್ಗಕ್ಕೆ ಸೇರಿದವರಾಗಿದ್ದರು. ಅನೇಕರು ಗುಲಾಮರಾಗಿದ್ದರು, ಇನ್ನು ಅನೇಕರು ಒಂದಿಲ್ಲಾ ಒಂದು ರೀತಿಯ ಸಮಸ್ಯೆಗೊಳಗಾಗಿದ್ದರು. ಲೋಕದ ದೃಷ್ಟಿಯಲ್ಲಿ

ಕ್ರೈಸ್ತನಾಗಿರುವದು ಒಂದು ನಾಚಿಕೆಕರ ಸಂಗತಿಯಾಗಿತ್ತು. ಆದರೆ ಪೌಲನು ನಾಚಿಕೆಗೊಳ್ಳಲಿಲ್ಲ, ರೋಮಾಪುರದ ಕ್ರೈಸ್ತರಾಗಲಿ ಸಹ – ಕಠಿಣ ಹಿಂಸೆಯ ವೇಳೆಯಲ್ಲೂ – ನಾಚಿಕೆ ಪಟ್ಟುಕೊಳ್ಳಲಿಲ್ಲಿ. ಅವರೇಕೆ ನಾಚಿಕೆಗೊಳ್ಳಬೇಕು? – ಅವರು ರಕ್ಷಣೆಯನ್ನುಂಟು ಮಾಡುವ ದೇವರ ಬಲವನ್ನು ಹೊಂದಿದ್ದರು.

ನಾವು ಕ್ರಿಸ್ತನ ಸುವಾರ್ತೆಗೆ ನಾಚಿಕೆ ಪಟ್ಟುಕೊಂಡಿದ್ದೇವೋ? ಮನುಷ್ಯರು ನಮಗೇನು ಹೇಳುತ್ತಾರೊ, ಏನು ಮಾಡುತ್ತಾರೋ ಎಂದು ಹೆದರಿದ್ದೇವೋ? ಸುವಾರ್ತೆಯು ದೇವರ ಬಲವು , ನಿತ್ಯ ಜೀವಕ್ಕಾಗಿರುವ ಬಲವೂ ಆಗಿದೆ. ಆದರೆ ನಾವು ನಮ್ಮ ನಂಬಿಕೆಯನ್ನು ಬಚ್ಚಿಟ್ಟುಕೊಂಡು ಸುವಾರ್ತೆಯನ್ನು ನಿರಾಕರಿಸುವದಾದರೆ ಆ ಬಲ, ಆ ನಿತ್ಯಜೀವ, ಒಂದು ಮೇಣದ ಬತ್ತಿಯಂತೆ ನಂದಿಹೋಗುವದು (ಮತ್ತಾಯ 10:32-33 ಮತ್ತು ವ್ಯಾಖ್ಯಾನ ನೋಡಿರಿ).

**17** ದೇವರ ನೀತಿಯು ಆತನ ಮಗನಾದ ಯೇಸುವಿನಲ್ಲಿ ಪ್ರಕಟವಾಗಿದೆ. ಯೇಸು ಎಂದಿಗೂ ಪಾಪ ಮಾಡಲಿಲ್ಲ, ಎಲ್ಲಾ ವಿಧದಲ್ಲಿಯೂ ಆತನು ಪವಿತ್ರನೂ ನೀತಿವಂತನೂ ಆಗಿದ್ದನು (ಇಬ್ರಿಯ 4:15).

ನಾವು ಸಹ ನಂಬಿಕೆಯಿಂದ ಆ ನೀತಿಯಲ್ಲಿ ಪಾಲುಗಾರರಾಗಬಹುದು. ಸ್ವಾಭಾವಿಕವಾಗಿ ನಮ್ಮಲ್ಲಿ ಯಾವ ನೀತಿಯೂ ಇರುವದಿಲ್ಲ (ರೋಮ 3:10-12). ಆದರೆ ನಂಬಿಕೆಯ ಮೂಲಕ ನಾವು ದೇವರ (ಕ್ರಿಸ್ತನ) ನೀತಿಯನ್ನು ಪಡೆದುಕೊಳ್ಳಬಹುದು. ಒಂದು ವೇಳೆ ನಾವು ನೀತಿಯನ್ನು ಪಡೆದುಕೊಳ್ಳದಿರುವದಾದರೆ ಸ್ವತಃ ನೀತಿವಂತನಾದ ದೇವರು ನಮ್ಮನ್ನು ಸ್ವೀಕರಿಸಲಾರನು (ಇಬ್ರಿಯ 12:14 ಮತ್ತು ವ್ಯಾಖ್ಯಾನ ನೋಡಿರಿ). ಕ್ರಿಸ್ತನಲ್ಲಿ ನಂಬಿಕೆಯಿಡುವ ಮೂಲಕ ಆ ನೀತಿಯನ್ನು ಪಡೆದುಕೊಳ್ಳದೆ ನಾವು ರಕ್ಷಣೆ ಹೊಂದಲು ಸಾಧ್ಯವಿಲ್ಲ. ಆದ್ದರಿಂದಲೇ ಸುವಾರ್ತೆಯು ಬಹಳ ಪ್ರಾಮುಖ್ಯವಾಗಿದೆ: ಇದು ನಂಬುವವರೆಲ್ಲರಿಗೂ ರಕ್ಷಣೆ ಉಂಟು ಮಾಡುವ ದೇವರ ಬಲಸ್ವರೂಪವಾಗಿದೆ, ಯಾಕೆಂದರೆ ನಾವು ನಂಬುವಾಗ ದೇವರಿಂದ ನೀತಿವಂತರೆಂದು ಪರಿಗಣಿಸಲ್ಪಡುತ್ತೇವೆ ಮತ್ತು ಆತನ ರಾಜ್ಯದಲ್ಲಿ ಸ್ವೀಕರಿಸಿಕೊಳ್ಳಲ್ಪಡುತ್ತೇವೆ.

ನಾವು ರಕ್ಷಣೆಯನ್ನು ಸಂಪಾಧಿಸಿಕೊಳ್ಳಬೇಕೆಂದು ಮಾತ್ರವೇ ನಮಗೆ ದೇವರ ನೀತಿಯು ಕೊಡಲ್ಪಟ್ಟಿಲ್ಲ, ನಾವು ಈ ಭೂಲೋಕದಲ್ಲಿ ದಿನನಿತ್ಯವೂ ನೀತಿಯ ಜೀವನವನ್ನು ನಡೆಸಬೇಕೆಂದು ಸಹ ಇದು ಕೊಡಲ್ಪಟ್ಟಿರುತ್ತದೆ. ನಾವು ನಂಬಿಕೆಯಿಂದಲೇ ನೀತಿಯ ಜೀವನವನ್ನು ನಡೆಸಬೇಕು. ಅಂದರೆ ನಂಬಿಕೆಯ ಮುಖಾಂತರ ಕ್ರಿಸ್ತನ ಹಿಂಬಾಲಕರಾದ ನಾವು ಈಗ ನಂಬಿಕೆಯ ಮೂಲಕ ಕ್ರಿಸ್ತನಂತೆ ಜೀವಿಸಬೇಕು. ನಂಬಿಕೆಯು ನಮ್ಮ ಕ್ರೈಸ್ತ ಜೀವನದ ಪ್ರತಿಯೊಂದು ದಿನದಲ್ಲೂ ಅವಶ್ಯಕವಾಗಿದೆ. ಇದನ್ನು ಸ್ಪಷ್ಟಪಡಿಸಲು ಪೌಲನು ಹಳೆ ಒಡಂಬಡಿಕೆಯ ಪ್ರವಾದಿಯಾದ ಹಬಕ್ಕೂಕನ ಮಾತುಗಳನ್ನು ಉಲ್ಲೇಖಿಸುತ್ತಾನೆ: "ನೀತಿವಂತನು ನಂಬಿಕೆಯಿಂದಲೇ ಬದುಕುನು" (ಹಬಕ್ಕೂಕ 2:4).

ಮಾನವ ಜನಾಂಗದ ವಿರುದ್ಧ ದೇವರ ಕೋಪಾಗ್ನಿ (1:18-32)

**18** ಕ್ರಿಸ್ತನ ಸುವಾರ್ತೆಯಲ್ಲಿ ದೇವರ ನೀತಿಯು ಪ್ರಕಟಗೊಂಡಿರುವ ಪ್ರಕಾರವೇ ಮನುಷ್ಯರು ಎಲ್ಲಾ ವಿಧವಾದ ಭಕ್ತಿಹೀನತೆಯ ಮೇಲೆಯೂ ದುಷ್ಟತನದ ಮೇಲೆಯೂ ದೇವರ ಕೋಪವು ತೋರಿಬರುತ್ತದೆ. ಪ್ರಥಮ ಹಾಗು ಅತಿ ದೊಡ್ಡ ಪಾಪವೆಂದರೆ ಭಕ್ತಿಹೀನತೆ, ಅಂದರೆ ಏಕೈಕ ಸತ್ಯ ದೇವರನ್ನು ಗುರುತಿಸಿ ಆರಾಧಿಸಲು ನಿರಾಕರಿಸುವದು. ದೇವರಿಗೆ ಬದಲಾಗಿ ಮಾನವನನ್ನು ಪ್ರಥಮ ಸ್ಥಾನದಲ್ಲಿಡುವದೇ "ಭಕ್ತಿ ಹೀನತೆ" ಆಗಿದೆ. ಇದು ದೇವರಲ್ಲಿ ವಿಶ್ವಾಸವಿಡುವದರ ಬದಲಾಗಿ ಮನುಷ್ಯನಲ್ಲಿಯೂ, ತನ್ನಲ್ಲಿಯೂ ವಿಶ್ವಾವಿಡುವದಾಗಿದೆ. ಮಾನವರ ಎಲ್ಲಾ ಪಾಪ ಮತ್ತು ಅನೀತಿಯು ಒಂದೇ ಮೂಲಾಧಾರದಿಂದ ಬರುತ್ತವೆ, ಅದ್ಯಾವದೆಂದರೆ ಭಕ್ತಿಹೀನತೆ – ಅಂದರೆ, ದೇವರನ್ನು ನಂಬದಿರುವದು (ವಚನಗಳು 29-31 ನೋಡಿರಿ).

**19-20** ದೇವರು ಸೃಷ್ಟಿಸಿದ ಸಂಗತಿಗಳ ಮುಖಾಂತರ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯ ಶಕ್ತಿಯೂ ದೇವತ್ವವೂ ಸ್ಪಷ್ಟವಾಗಿ ಪ್ರಟಗೊಂಡಿರುತ್ತದೆ. ಎಲ್ಲಾ ಮಾನವರೂ ದೇವರ ಈ ಗುಣಲಕ್ಷಣಗಳನ್ನು ಕಾಣಬಹುದು. ಅವರ ಸ್ವಂತ ಕಣ್ಣುಗಳಿಂದ ಪರ್ವತಗಳನ್ನೂ ನಕ್ಷತ್ರಗಳನ್ನೂ ನೋಡಬಹುದು. ಇವೆಲ್ಲವು ಗಳನ್ನೂ ಯಾರು ಮಾಡಿದರು? ದೇವರಿಲ್ಲದೆ ಈ ಎಲ್ಲಾ ಸಂಗತಿಗಳು ಉಂಟಾಗಿರುವದಕ್ಕೆ ಹೇಗೆ ಸಾದ್ಯ? ದೇವರು ಮಾತ್ರವೇ ಅವು ಗಳನ್ನು ಸೃಷ್ಟಿಸಿರಲ್ಲಿಕ್ಕೆ ಸಾದ್ಯವಿದೆ (ಕೀರ್ತನೆಗಳು 19:1-4). ಆದಾಗ್ಯು ಮಾನವರು ದುಷ್ಟತನ ನಡಿಸಿ ಸತ್ಯವನ್ನು ಅಣಗಿಸುತ್ತಾರೆ (ವಚನ 18) ಮತ್ತು ದೇವರು ದೇವರ ಅಸ್ತಿತ್ವವನ್ನು ನಿರಾಕರಿಸುತ್ತಾರೆ. ಆ ಕಾರಣಕ್ಕಾಗಿ ಮಾನವರು ಉತ್ತರ (ನೆಪ) ವಿಲ್ಲದವರಾಗಿದ್ದಾರೆ (ವಚನ 20).

**21** ಮಾನವರು ದೇವರನ್ನು ಬಲ್ಲವರಾದಾಗ್ಯು ಅವರು ಆತನನ್ನು ತಿರಸ್ಕರಿಸುತ್ತಾರೆ. ಮಾನವರೆಲ್ಲರೂ–ಅವರು ದೇವರನ್ನು ನಿರಾಕರಿಸಿದಾಗ್ಯು – ಆತನು ಇದ್ದಾನೆಂಬ ಒಂದಿಲ್ಲಾ ಒಂದು ರೀತಿಯ ಸ್ವಾಭಾವಿಕ ತಿಳುವಳಿಕೆಯನ್ನು ಹೊಂದಿದ್ದಾರೆ. ಸೃಷ್ಟಿಯು ಇರುವದಾದರೆ ಸೃಷ್ಟಿ ಕರ್ತನು ಸಹ ಇರಲೇಬೇಕೆಂಬದನ್ನು ಮಾನವರೆಲ್ಲರೂ ಬಲ್ಲರು. ಆದರೆ ಆ ತಿಳುವಳಿಕೆಯು ಅಡಗಿಸಲ್ಪಟ್ಟಿದೆ, ಮಾನವರ ಹೃದಯಗಳು ಕಠಿಣಗೊಂಡು ಅವರ ಬುದ್ಧಿಯು ಮಂಕಾಗಿರುತ್ತದೆ (ಎಫೆಸ 4:17-18). ಮಾನವರು ದೇವರನ್ನು ನಿರಾಕರಿಸಲು ಇಷ್ಟಪಡುತ್ತಾರೆ, ಯಾಕೆಂದರೆ ಆಗ ಅವರು ತಮಗೆ ಇಷ್ಟವಾದದ್ದನ್ನು ಮಾಡಬಹುದು.

**22-23** ಆದುದರಿಂದ, ಮಾನವರು ದೇವರನ್ನು ಆರಾಧಿಸುವದರ ಬದಲಾಗಿ ವಿಗ್ರಹಗಳನ್ನು ಆರಾಧಿಸುತ್ತಾರೆ. ಮಾನವರು ಸೃಷ್ಟಿಕರ್ತನಿಗೆ ಬದಲಾಗಿ ಸೃಷ್ಟಿಯನ್ನು ಪೂಜಿಸುತ್ತಾರೆ. ಕೆಲವರು ಕಲ್ಲುಗಳನ್ನು ಸಹ ಪೂಜಿಸುತ್ತಾರೆ. ಇದು ಲೋಕದ ಜ್ಞಾನವಾಗಿದೆ!ಆದಾಗ್ಯು ಲೋಕದ ಜನರು ತಮ್ಮನ್ನು ಜ್ಞಾನಿಗಳೆಂದು ಪರಿಗಣಿಸಿಕೊಳ್ಳುತ್ತಾರೆ! ಅವರು ಕ್ರಿಸ್ತನ ಸುವಾರ್ತೆಯನ್ನು ಹುಚ್ಚುತನ ಎಂದು ಕರೆಯುತ್ತಾರೆ. ಪೌಲನು ಕೊರಿಂಥದವರಿಗೆ ಬರೆದದ್ದೇನೆಂದರೆ: ಶಿಲುಬೆಯ ವಿಷಯವಾದ ಮಾತು

(ಅಂದರೆ, ಕ್ರಿಸ್ತನ ಸುವಾರ್ತೆಯ ನಾಶನದ ಮಾರ್ಗದಲ್ಲಿರುವವರಿಗೆ ಹುಚ್ಚು ಮಾತಾಗಿದೆ. ರಕ್ಷಣೆಯ ಮಾರ್ಗದಲ್ಲಿರುವ ನಮಗಾದರೋ ದೇವರ ಶಕ್ತಿಯಾಗಿದೆ (1 ಕೊರಿಂಥ 1:18-21 ಮತ್ತು ವ್ಯಾಖ್ಯಾನ ನೋಡಿರಿ).

**24** ಆದ್ದರಿಂದ, ದೇವರು ಈ ಭಕ್ತಿ ಹೀನರಿಗೆ ಮಾಡಿದ್ದೇನು? ಆತನು ಅವರನ್ನು ಒಪ್ಪಿಸಿದನು. ಬೇರೆ ಮಾತಗಳಲ್ಲಿ ಹೇಳುವದಾದರೆ, ಆತನು ಅವರನ್ನು ಅವರಷ್ಟಕ್ಕೆ ಬಿಟ್ಟನು, ಅವರು ತಮ್ಮ ಪಾಪಗಳಲ್ಲಿಯೇ ಉಳಿಯುವಂತೆ ಬಿಟ್ಟು ಬಿಟ್ಟನು (ಎಫೆಸ 4:19 ನೋಡಿರಿ). ಅವರು ತಮ್ಮ ಮನಸ್ಸಿನ ದುರಾಶೆಗಳನ್ನು ನಡೆಸುವಂತೆಬಿಟ್ಟನು.

ಪೌಲನು ಮೂರು ಸಾರಿ "ದೇವರು ಅವರನ್ನು ಒಪ್ಪಿಸಿದನು" ಎಂದು ಬರೆಯುತ್ತಾನೆ (ವಚನಗಳು 24,26,28). ಚಿಕ್ಕ ಪಾಪಗಳು ದೊಡ್ಡ ಪಾಪಗಳಿಗೆ ಮಾರ್ಗಮಾಡಿದವು ಮತ್ತು ಶೀಘ್ರವೇ ಈ ಪಾಪಗಳು ಕ್ರಮೇಣ ದೊಡ್ಡವು ಗಳಾಗುತ್ತಾ ಸಾಗುತ್ತವೆಂದು ನಮ್ಮ ಸ್ವಂತ ಅನುಭವದಿಂದಲೇ ಬಲ್ಲೆವು. ನಾವು ಹೆಚ್ಚು ಪಾಪ ಮಾಡಿದಂತೆ ದೇವರಿಂದ ಹೆಚ್ಚು ದೂರವಾಗುತ್ತಾ ಹೋಗುತ್ತೇವೆ ಮತ್ತು ಪಾಪದ ಮೂಲಕವಾಗಿ ನಾವು ದೇವರಿಂದ ದೂರವಾದಾಗ, ಆತನೂ ನಮ್ಮಿಂದ ದೂರವಾಗುತ್ತಾನೆ – ಅಂದರೆ, ಆತನು "ನಮ್ಮನ್ನು ಒಪ್ಪಿಸಿಕೊಡುತ್ತಾನೆ". ನಾವು ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿ ದೇವರ ಸಮೀಪಕ್ಕೆ ಬರುವಾಗ ಆತನು ನಮ್ಮ ಸಮೀಪಕ್ಕೆ ಬರುತ್ತಾನೆ (ಯಾಕೋಬ 4:8).

**25** ವಿಗ್ರಹಾರಾಧನೆಯು ಭಕ್ತಿ ಹೀನತೆಯ ಮುಖ್ಯ ಸಂಕೇತವಾಗಿದೆ. ವಿಗ್ರಹಗಳನ್ನು ಪೂಜಿಸುವದೆಂದರೆ ಸೃಷ್ಟಿಕರ್ತನನ್ನು ಬಿಟ್ಟು ಸೃಷ್ಟಿವಸ್ತುಗಳನ್ನು ಪೂಜಿಸುವಂತಾಗಿದೆ. ವಿಗ್ರಹವೊಂದನ್ನು ಆರಾಧಿಸುವದೆಂದರೆ ಒಂದು ಮಿಥ್ಯ ದೇವರನ್ನೂ ದೆವ್ವವನ್ನೂ ಪೂಜಿಸುವಂತಾಗಿದೆ (1 ಕೊರಿಂಥ 10:19-20 ನೋಡಿರಿ). ವಿಗ್ರಹಾರಾಧನೆಯು ಸತ್ಯ ದೇವರ ವಿರುದ್ಧದ ಪಾಪಗಳಲ್ಲಿ ಅಗ್ರಸ್ಥಾನದಲ್ಲಿರುತ್ತದೆ. ಹಳೆ ಒಡಂಬಡಿಕೆಯಲ್ಲಿ ದಶಾಜ್ಞೆಯ ಮೊದಲಿನ ಎರಡು ಆಜ್ಞೆಗಳು ವಿಗ್ರಹಾರಾಧನೆಗೆ ಸಂಬಂಧಿಸಿದವು ಗಳಾಗಿವೆ: ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು....ಯಾವ ಮೂರ್ತಿಯನ್ನೂ ಮಾಡಿಕೊಳ್ಳಬಾರದು (ವಿಮೋಚನ ಕಾಂಡ 20:3-6).

ಇನ್ನು ಒಂದು ವಿಷಯವಿರುತ್ತದೆ : ಲೋಹ, ಕಲ್ಲು ಅಥವಾ ಕಟ್ಟಿಗೆಗಳಿಂದ ಮಾಡಿದ ಯಾವದಾದರೂ ವಸ್ತುವು ಮಾತ್ರವೇ ವಿಗ್ರಹವಲ್ಲ. ನಾವು ಯಾವು ದನ್ನೇ ಆಗಲಿ – ಅದು ಹಣವಾಗಿರಬಹುದು, ಆಸ್ತಿಗಳು, ಪ್ರಸಿದ್ಧಿ, ಅಧಿಕಾರ, ಘನತೆ, ಅಥವಾ ಕುಟುಂಬವೇ ಆಗಿರಬಹುದು – ದೇವರಿಂದ ಹೆಚ್ಚಾಗಿ ಪ್ರೀತಿಸುವದಾದರೆ ಅದು ಸಹ ವಿಗ್ರಹವಾಗಿರುತ್ತದೆ: ನಾವು ದೇವರಿಗಿಂತಲೂ ಹೆಚ್ಚಾಗಿ ಆ ಸಂಗತಿಗಳನ್ನು ಪ್ರೀತಿಸುವಾಗ ನಾವು ವಿಗ್ರಹಾರಾಧನೆಯ ಮಾಡಿದ ಅಪರಾಧಕ್ಕೊಳಗಾಗುತ್ತೇವೆ. ಈ ಸಂಗತಿಗಳು – ಅವು ಒಳ್ಳೇಯವು ಗಳಾದರೂ – ನಮಗೆ ವಿಗ್ರಹಗಳಾಗುತ್ತವೆ.

**26-27** ಪೌಲನು ಇಲ್ಲಿ ಸಲಿಂಗ ಕಾಮವನ್ನು ಕುರಿತು ಮಾತಾಡುತ್ತಾನೆ. ಪೌಲನ ಬೋಧನೆಗನುಸಾರವಾಗಿ ಒಬ್ಬ ಸ್ತ್ರೀಯು ಇನ್ನೊಬ್ಬ ಸ್ತ್ರೀಗಾಗಿ ಮತ್ತು ಒಬ್ಬ ಪುರುಷ ಇನ್ನೊಬ್ಬ ಪುರುಷನಿಗಾಗಿ ಅಭಿಲಾಷಿಸುವದು ಒಂದು ಪಾಪವಾಗಿದೆ.[9] ಇದು ಅಸ್ವಾಭಾವಿಕವಾಗಿದೆ, ಇದು ದೇವರು ಸ್ತ್ರೀಪುರುಷರಿಗಾಗಿ ಮಾಡಿದ ಯೋಜನೆಗೆ ವಿರುದ್ಧವಾದದ್ದಾಗಿದೆ, ಮತ್ತು ಅಂತಹ ಕಾಮಾಭಿಲಾಷೆಯನ್ನು ತೃಪ್ತಿಪಡಿಸಿಕೊಳ್ಳಲು ಸಮ ಲಿಂಗದವರೊಂದಿಗೆ ಸ್ವಭಾವಕ್ಕೆ ವಿರುದ್ಧವಾದ ಕಾರ್ಯಗಳನ್ನು ಮಾಡುವದು ಇನ್ನು ಕೆಟ್ಟ ಪಾಪವಾಗಿದೆ. ವಿಶೇಷವಾಗಿ ಗಂಡಸರು ಇತರ ಗಂಡ ಸರೊಂದಿಗೆ ಅವಲಕ್ಷಣವಾದದ್ದನ್ನು ನಡೆಸುವಾಗ ಏಡ್ಸ್ ನಂತಹ ಗಂಭೀರವಾದ, ಅಲ್ಲದೆ ಮರಣಾಂತೀಕವಾದ ವ್ಯಾಧಿಗಳನ್ನು ಪಡೆದುಕೊಳ್ಳುವ ಸಾಧ್ಯತೆಯಿರುತ್ತದೆ (ಲಿಂಗಗಳ ವ್ಯಾಧಿಗಳನ್ನು ಅಭೇದದ ನಡಾವಳಿಯ ಫಲಿತವಾಗಿ ಸಹ ಅಂತಹ ರೋಗಗಳು ಬರಬಹುದಷ್ಟೇ). ಇಂತಹ ರೋಗಗಳು ಅವರ ಭ್ರಾಂತಿಗೆ ತಕ್ಕ ಫಲಿತವಾಗಿರುತ್ತದೆ (ವಚನ 27).

ಮಾನವ ಮೊದಲ ಪಾಪವು ದೇವರಿಗೆ ಬದಲಾಗಿ ಸೃಷ್ಟಿವಸ್ತುಗಳನ್ನು ಪೂಜಿಸಿ ಸೇವಿಸುವದೇ ಎಂಬುದನ್ನು ಗಮನಿಸಿರಿ (ವಚನ 25). ಇದಲ್ಲದೆ ದೇವರ ಜ್ಞಾನವು ಅವರಿಗೆ ಇಷ್ಟವಿಲ್ಲದ್ದರಿಂದ ದೇವರು "ಒಪ್ಪಿಸಿದನು", ಮತ್ತು ಅವರು ಅನೇಕ ದೈಹೀಕ ಪಾಪಗಳಿಗೆ ಒಳಗಾದರು (ವಚನಗಳು 26-27). ಈಗ 28ನೇ ವಚನದಲ್ಲಿ ದೇವರು ಅನಿಷ್ಟಭಾವಕ್ಕೆ" ಅವರನ್ನು ಒಪ್ಪಿಸಿದನು". ಮಾನವನಲ್ಲಿ ಮನಸ್ಸು ದುಷ್ಟತನದ ಮೂಲಾಧಾರವಾಗಿದೆ. ನಮ್ಮ ಎಲ್ಲಾ ಕೆಟ್ಟ ಆಲೋಚನೆಗಳು ಮತ್ತು ಬಯಕೆಗಳು ನಮ್ಮ ಮನಸ್ಸಿನಲ್ಲಿ ಉದ್ಭವವಾಗುತ್ತವೆ. ಆದುದರಿಂದ, ಯಾವದೇ ವ್ಯಕ್ತಿಯ ಮನಸ್ಸು ಅನಿಷ್ಟವಾಗುವದಾದರೆ ಆತನ ಆಲೋಚನೆಗಳು ಮತ್ತು ಬಯಕೆಗಳೆಲ್ಲವೂ ಅನಿಷ್ಟವಾಗುತ್ತವೆ. ಒಬ್ಬ ಅದಕ್ಕಿಂತಲೂ ಘೋರವಾದದ್ದನ್ನು ಪಡೆಯಲಾರನು!

ದೇವರು ಎಂದಿಗೂ ಸಹ ಮಾನವನನ್ನು ಕೆಟ್ಟತನಕ್ಕೆ ಪ್ರೇರಿಸಲಾರನು. ಆದರೆ ಯಾವಾಗ ಮಾನವನು ದೇವರನ್ನು ಅಲ್ಲಗಳೆದು ವಿಗ್ರಹಗಳನ್ನು ಪೂಜಿಸಲಾರಂಭಿಸುತ್ತಾನೋ ಆಗ ದೇವರು ಆವರನ್ನು ಹೋಗಲು ಕೈಬಿಡಬೇಕಾಗುತ್ತದೆ. ಮಾನವನು ದೇವರನ್ನು ಸ್ವೀಕರಿಸುವದಕ್ಕೂ ಇಲ್ಲವೆ ತಿರಸ್ಕರಿಸುವದಕ್ಕೂ ಮುಕ್ತನಾಗಿದ್ದಾನೆ, ದೇವರು ಮಾನವನಿಗೆ ಆ ಸ್ವಾತಂತ್ರ್ಯವನ್ನು[10] ಕೊಟ್ಟಿದ್ದಾನೆ. ಆದರೆ ಒಮ್ಮೆ ಮಾನವನು ದೇವರನ್ನು ಸಂಪೂರ್ಣವಾಗಿಯೂ ಇಚ್ಛಾಪೂರ್ವಕವಾಗಿಯೂ ತಿರಸ್ಕರಿಸಿದಾಗ ಆತನು ದೇವರಿಗೆ ಸಮಾಧಾನಗೊಳ್ಳಲು ಇನ್ನಾವ ಮಾರ್ಗವೂ ಇರುವದಿಲ್ಲ, ಆ ಮನುಷ್ಯನು ತನ್ನನ್ನು ದೇವರ ಕೃಪೆ ಮತ್ತು ಕರುಣೆಗಳು ತಲಪಬಹುದಾದ ಮೇರೆಯೊಳಗಿಂದ ತನ್ನನ್ನು ಹೊರಸೆಳೆದು ಕೊಂಡಿರುತ್ತಾನೆ.

**29-31** ಪೌಲನು ಇಲ್ಲಿ ವಿವಿಧ ಪಾಪಗಳ ಉದಾಹರಣೆಗಳನ್ನು ನೀಡುತ್ತಾನೆ. ಇಂತಹ ಪಾಪಗಳನ್ನು ಇತರರಲ್ಲಿ ಕಾಣುವದು ಸುಲಭವಾಗಿರುತ್ತದೆ, ಆದರೆ ಅವು ಗಳನ್ನು ನಮ್ಮಲ್ಲಿ ಗುರುತಿಸುವದು ಕಷ್ಟಕರವಾಗಿರುತ್ತದೆ. ನಾವು ನಮ್ಮನ್ನು ದುಷ್ಟರನ್ನಾಗಿ ಅಥವಾ ಕೆಟ್ಟವರನ್ನಾಗಿ ನೋಡಿಕೊಳ್ಳುವದಕ್ಕೆ ಇಷ್ಟ ಪಡುವದಿಲ್ಲ. ಆದರೆ ನಾವು ನಮ್ಮನ್ನು ಸೂಕ್ಷ್ಮವಾಗಿ

ಪರೀಕ್ಷಿಸಿಕೊಳ್ಳುವದಾದರೆ ನಾವು ನಮ್ಮಲ್ಲಿ ಇಂತಹದೆ ಕೆಲವು ಪಾಪಗಳನ್ನು ಕಂಡುಕೊಳ್ಳುವ ಸಾಧ್ಯತೆಯಿರುತ್ತದೆ: ದುರಾಶೆ? ಹೊಟ್ಟೆಕಿಚ್ಚು? ಮೋಸ? ನಾವು ಕಿವಿಊದುವವರೋ? ನಾವು ಚಾಡಿ ಹೇಳುವವರೋ? ನಾವು ಸೊಕ್ಕಿನವರೋ? ನಾವು ಅಹಂಕಾರಿಗಳೋ? ನಾವು ಕೊಲೆಗಾರರೋ? "ಇಲ್ಲ, ಇಲ್ಲ, ಕೊಲೆಗಾರನಲ್ಲ!" ಎಂದು ನೀವು ತಕ್ಷಣವೇ ಹೇಳಬಹುದು. ಆದರೆ ಇನ್ನೊಮ್ಮೆ ನೋಡಿರಿ. ನಾವು ನಮ್ಮ ಸಹೋದರನೊಂದಿಗೆ ಕೋಪಗೊಳ್ಳುವದು ಆತನನ್ನು ಕೊಲೆ ಮಾಡಿದಂತೆಯೇ ಎಂದು ಯೇಸು ಬೋಧಿಸಿದನು! (ಮತ್ತಾಯ 5:21-22 ಮತ್ತು ವ್ಯಾಖ್ಯಾನ ನೋಡಿರಿ).ನಾವು ಆಗಾಗ ನಮ್ಮ ಸಹೋದರನೊಂದಿಗೆ ಅಥವಾ ಸಹೋದರಿಯೊಂದಿಗೆ ಕೋಪಗೊಳ್ಳುವದಿಲ್ಲವೋ? ಆದುದರಿಂದ, ನಮ್ಮನ್ನು ನಾವು ಪರೀಕ್ಷಿಸಿಕೊಳ್ಳೋಣ. ಈ ಪಾಪಮಯ ಕಾರ್ಯಗಳು ನಾವು "ಕೆಟ್ಟವರು" ಎಂದು ಕರೆಯಲಿಚ್ಛಿಸುವ ಜನರಲ್ಲಿ ಮಾತ್ರವೇ ಇರುವದಿಲ್ಲ. ನಮಗಾಗಿ ಶಿಲುಬೆಯ ಮೇಲೆ ಸುರಿಸಲ್ಪಟ್ಟ ಕ್ರಿಸ್ತನ ರಕ್ತವು ಮಾತ್ರವೇ ನಮ್ಮನ್ನು ಈ ಪಾಪಗಳಿಂದ ಶುದ್ಧಿ ಮಾಡಬಲ್ಲದು.

**32** ರೋಮಾಪುರದವರಿಗೆ 6:23 ರಲ್ಲಿ ಪೌಲನು ಹೇಳುವದೇನೆಂದರೆ: ಪಾಪವು ಕೊಡುವ ಸಂಬಳ ಮರಣ. ಪಾಪವು ಒಂದು ವಿಧದಲ್ಲಿ ಕೆಲಸವಾಗಿದೆ – ನಾವು ಸೈತಾನನಿಗಾಗಿ ಮಾಡುವ ಒಂದು ಕೆಲಸವಾಗಿರುತ್ತದೆ ಮತ್ತು ಸೈತಾನನು ನಮಗೆ ಆ ಕೆಲಸಕ್ಕಾಗಿ ಸಂಬಳವನ್ನು ಕೊಡುತ್ತಾನೆ – ಆ ಸಂಬಳವು ಮರಣವೇ. ಆದರೆ ಅದು ತಿಳಿದಿದ್ದರೂ ಸಹ ಮಾನವರು ಪಾಪದಲ್ಲಿ ಮುಂದುವರೆಯುತ್ತಾರೆ. ಎರಡು ಚಿಕ್ಕ ಉದಾಹರಣೆಗಳನ್ನು ನೋಡಿರಿ, ಅತಿಯಾದ ಮದ್ಯಪಾನ ಮತ್ತು ದೂಮ್ರ ಪಾನ ಮಾಡುವದು. ಈ ಎರಡು ಕಾರ್ಯಗಳೂ ಒಬ್ಬನ ದೇಹಕ್ಕೆ ದೊಡ್ಡ ಹಾನಿಯನ್ನು ಮಾಡಿ ಮರಣಾಂತೀಕ ರೋಗಕ್ಕೆ ದಾರಿ ಮಾಡಬಲ್ಲವು. ಆದರೆ ಅದು ಗೊತ್ತಿದ್ದರೂ ಜನರು ಮದ್ಯಸೇವನೆಯನ್ನೂ, ದೂಮ್ರ ಪಾನವನ್ನು ನಿರಂತರವಾಗಿ ಮಾಡುತ್ತಾರೆ. ಅವರು ನಿಶ್ಚಯವಾಗಿಯೂ "ಅವರ ಪಾಪಮಯ ಚಟಗಳ ಸಂಬಳವನ್ನು" ಪಡೆಯುತ್ತಾರೆ!.

ಈ ಪಾಪಗಳನ್ನು ಮಾಡುವದು ಕೆಟ್ಟದ್ದಾಗಿದೆ. ಆದರೆ ಅವುಗಳನ್ನು ಮಾಡುವವರನ್ನು ಅನುಮೋದಿಸುವದು ಇನ್ನು ಘೋರವಾದದ್ದಾಗಿದೆ. ಅದಕ್ಕೆ ಕಾರಣವೇನೆಂದರೆ : ಮಾನವನು ಸ್ವತಃ ತಿಳಿಯದೆ ಪಾಪದಲ್ಲಿ ಬೀಳುವದು ಸಾಧ್ಯವಿದೆ, ಆದರೆ ಇತರರಲ್ಲಿರುವ ಪಾಪವನ್ನು ಒಬ್ಬನು "ಅನುಮೋದನೆ" ಮಾಡುವಾಗ ಯಾವಾಗಲೂ ಅದು ಗೊತ್ತಿದ್ದೇ ಮಾಡಲ್ಪಡುತ್ತದೆ. ಈ ರೀತಿ ಮಾಡುವವನು ನೀತಿಗೆಟ್ಟವನೇ ಸರಿ.

---

## ಅಧ್ಯಾಯ - 2

## ದೇವರ ನೀತಿಯುಳ್ಳ ನ್ಯಾಯತೀರ್ಪು (2:1-16)ಪು೬

**1** ಪೌಲನು ಇಲ್ಲಿ ಎಲ್ಲಾ ಮಾನವರಿಗೆ ಒಂದು ದೊಡ್ಡ ಎಚ್ಚರಿಕೆಯನ್ನು ನೀಡುತ್ತಾನೆ: ಮತ್ತೊಬ್ಬರಿಗೆ ತೀರ್ಪು ಮಾಡದಿರು. ನಾವು ಇತರರಲ್ಲಿ ದೋಷವೆಣಿಸಲು ಎಷ್ಟು ಕಾತುರರಾಗಿರುತ್ತೇವಲ್ಲವೇ! ನಾವು ಸ್ವತಃ ನೀತಿವಂತರಾಗಿದ್ದೇವೆ ಮತ್ತು ಈ ಕಾರಣದಿಂದ, ಇತರರಿಗೆ ತೀರ್ಪು ಮಾಡುವದಕ್ಕೆ ನಾವು ಅರ್ಹರು ಎಂದು ಊಹಿಸಿಕೊಳ್ಳುತ್ತೇವೆ. ನಾವು ಮತ್ತೊಬ್ಬರ ಪಾಪಗಳನ್ನೂ ತಪ್ಪುಗಳನ್ನೂ ನೋಡುತ್ತೇವೆ, ಆದರೆ ನಾವು ನಮ್ಮಲ್ಲಿರುವವುಗಳನ್ನು ನೋಡುವದಿಲ್ಲ. ನರನ ನಡತೆಯು ಸ್ವಂತ ದೃಷ್ಟಿಗೆ ನೆಟ್ಟಗೆ, ಕರ್ತನು ಹೃದಯಗಳನ್ನೇ ಪರೀಕ್ಷಿಸುವನು (ಜ್ಞಾನೋಕ್ತಿ 21:2). ನಾವು ಇತರ ಜನರ ಪಾಪಗಳನ್ನು ದೃಷ್ಟಿಸುವದಕ್ಕೆ ಯಾವ ಸಮಯವೂ ಉಳಿಯದಂತೆ ನಾವು ನಮ್ಮ ಪಾಪಗಳನ್ನು ದೃಷ್ಟಿಸುವದರಲ್ಲಿ ಬಹಳಷ್ಟು ತಲ್ಲೀನರಾಗಿರತಕ್ಕದ್ದು!

ಕ್ರೈಸ್ತರ ಮದ್ಯದಲ್ಲಿಯೂ ಸಹ ಇನ್ನೊಬ್ಬರಿಗೆ ತೀರ್ಪು ಮಾಡುವ ಈ ಚಟವು ಸಾಮಾನ್ಯವಾಗಿರುತ್ತದೆಂದು ನಾವು ಅರಿಕೆ ಮಾಡುವದಕ್ಕೆ ನಾಚಿಕೆಯಾಗುತ್ತದೆ. ಯೇಸುವಿನ ಮಾತುಗಳನ್ನು ಜ್ಞಾಪಿಸಿಕೊಳ್ಳೋಣ: "ನೀವು ಮಾಡುವ ತೀರ್ಪಿಗೆ ಸರಿಯಾಗಿ ನಿಮಗೂ ತೀರ್ಪಾಗುವದು" (ಮತ್ತಾಯ 7:1-5, ರೋಮ 14:10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ವಚನ 1 ರಲ್ಲಿನ ಎಚ್ಚರಿಕೆಯು ಎಲ್ಲಾ ಜನರಿಗಾಗಿಯಾಗಿದ್ದರೂ, ಪೌಲನು ಇಲ್ಲಿ ವಿಶೇಷವಾಗಿ ತನ್ನ ಸ್ವಜನರಾದ ಯೆಹೂದ್ಯರನ್ನುದ್ದೇಶಿಸಿ ಮಾತಾಡುತ್ತಿದ್ದಾನೆ. ಇತರ ಯಾವದೇ ಜನಾಂಗಗಳಿಗಿಂತಲೂ ಹೆಚ್ಚಾಗಿ ಯೆಹೂದ್ಯರು ಮತ್ತೊಬ್ಬರಿಗೆ ತೀರ್ಪು ಮಾಡುವ ಚಟವನ್ನು ಹೊಂದಿದ್ದರು, ಅವರು ವಿಶೇಷವಾಗಿ ಯೆಹೂದ್ಯೇತರ, ಅಂದರೆ ಅನ್ಯ ಜನರಲ್ಲಿ ದೋಷವೆಣಿಸುತ್ತಿದ್ದರು. ಯೆಹೂದ್ಯರು ಅಹಂಕಾರಿಗಳಾಗಿದ್ದರು, ಅವರು ತಮ್ಮನ್ನು ನೀತಿವಂತರೆಂದು ಪರಿಗಣಿಸಿದ್ದರು. ಇದಕ್ಕೆ ಕಾರಣವೇನಾಗಿತ್ತು?

ಈ ಪ್ರಶ್ನೆಗೆ ಉತ್ತರವನ್ನು ಅರ್ಥಮಾಡಿಕೊಳ್ಳಬೇಕಾದರೆ, ಯೆಹೂದ್ಯ ಚರಿತ್ರೆಯನ್ನು ದೃಷ್ಟಿಸುವದು ಅವಶ್ಯವಾಗಿರುತ್ತದೆ. ಆದಿಯಲ್ಲಿ ಮಾನವರೆಲ್ಲರೂ ವಿಗ್ರಹಗಳನ್ನು ಆರಾಧಿಸಿ ಪಾಪದಲ್ಲಿ ಜೀವಿಸಿದರು. ದೇವರು ತನ್ನನ್ನು ಗೌರವಿಸಿ ವಿಧೇಯರಾಗುವ ಜನರ ಒಂದು ಜನಾಂಗವನ್ನು ಸ್ಥಾಪಿಸಲು ಇಚ್ಛೆ ಪಟ್ಟನು. ಆದುದರಿಂದ, ಕ್ರಿಸ್ತನು ಬರುವದಕ್ಕೆ ಎರಡು ಸಾವಿರ ವರ್ಷಗಳ ಮುಂಚೆ ದೇವರು ಅಬ್ರಹಾಮನೆಂಬ (ಅಥವಾ ಅಬ್ರಾಮ) ಒಬ್ಬ ಮನುಷ್ಯನನ್ನು ಕರೆದನು, ಅವನ ಮೂಲಕ ಒಂದು ನೂತನ ಜನಾಂಗ, ಅಂದರೆ ಯೆಹೂದ್ಯ ಜನಾಂಗವನ್ನು ಸ್ಥಾಪಿಸುವದಕ್ಕಾಗಿ ಕರೆದನು

(ಆದಿಕಾಂಡ 12:1-3). ದೇವರು ಯೆಹೂದ್ಯರನ್ನು ತನ್ನ ಸ್ವಜನಾಂಗವಾಗಿರ ಬೇಕೆಂದು ಆರಿಸಿಕೊಂಡನು. ಅದಾದ ಮೇಲೆ, ದೇವರು ಯೆಹೂದ್ಯರಿಗೆ ತನ್ನ ಧರ್ಮಶಾಸ್ತ್ರವನ್ನು ಕೊಟ್ಟನು, ದಶಾಜ್ಞೆಗಳು ಅದರ ಮುಖ್ಯ ಭಾಗವಾಗಿರುತ್ತದೆ (ವಿಮೋಚನಕಾಂಡ 20:1-7).

ಅನಂತರ, ಅವರು ದೇವರಿಂದ ವಿಶೇಷವಾಗಿ ಆರಿಸಿಕೊಳ್ಳಲ್ಪಟ್ಟವರೂ, ಆತನ ಧರ್ಮಶಾಸ್ತ್ರವನ್ನು ಪಡೆದವರೂ ಆಗಿದ್ದರಿಂದ ಯೆಹೂದ್ಯರು ತಾವು ಇತರ ಜನರಿಗಿಂತಲೂ ಹೆಚ್ಚು ನೀತಿವಂತರಾಗಿರಬೇಕೆಂದು ಯೋಚಿಸಲಾರಂಭಿಸಿದರು. ಆದುದರಿಂದ, ಅವರು ಅನ್ಯ ಜನರೆಲ್ಲರನ್ನು (ಯೆಹೂದ್ಯೇತರನ್ನು) ಉದಾಸೀನ ಮಾಡಲಾರಂಭಿಸಿದರು. ಅವರು ಅನ್ಯ ಜನರನ್ನು ಭಕ್ತಿ ಹೀನರೆಂದೂ, ಪಾಪಿಗಳೂ ಎಂದು ಪರಿಗಣಿಸಿದರು.

ಆದರೆ ಪೌಲನು ಇಲ್ಲಿ ಹೇಳುವದೇನೆಂದರೆ, ಅವರು ದೇವರಾದುಕೊಂಡ ಜನಾಂಗವಾಗಿದ್ದು ಆತನ ಧರ್ಮಶಾಸ್ತ್ರವನ್ನು ಪಡೆದುಕೊಂಡಿದ್ದರೂ. ಅವರು ಅಂತರ್ಯದಲ್ಲಿ ತಮ್ಮ ಹೃದಯಗಳಿಂದ ದೇವರ ಧರ್ಮಶಾಸ್ತ್ರಕ್ಕೆ ವಿಧೇಯರಾಗುವದಿಲ್ಲ. ಅವರ ಹೃದಯಗಳು ಅನ್ಯಜನರ ಹೃದಯಗಳಷ್ಟೆ ಪಾಪಮಯವಾಗಿವೆ. ಒಂದು ವಿಧದಲ್ಲಿ ಯೆಹೂದ್ಯರು ಅನ್ಯಜನರಿಗಿಂತಲೂ ಹೆಚ್ಚು ಪಾಪದ ಅಪರಾಧವನ್ನು ಹೊಂದಿದ್ದಾರೆ, ಯಾಕೆಂದರೆ ದೇವರ ಆಜ್ಞೆಗಳಾವು ವೆಂಬದನ್ನು ಯೆಹೂದ್ಯರು ಸರಿಯಾಗಿ ಬಲ್ಲವರಾಗಿದ್ದರು. ಹಾಗಿದ್ದರೂ, ಅವರು ತಮ್ಮ ಪಾಪಗಳನ್ನು ಗುರುತಿಸಲಿಲ್ಲ.

2 ಈ ವಚನದಲ್ಲಿ ಅಂಥವುಗಳು ಎಂಬ ಪದವು ರೋಮಾಪುರದವರಿಗೆ 1:29-31ರಲ್ಲಿ ಪಟ್ಟಿ ಮಾಡಲ್ಪಟ್ಟಿರುವ ವಿವಿಧ ಪಾಪಗಳನ್ನು ಸೂಚಿಸುತ್ತದೆ. ಅಂಥವುಗಳನ್ನು ನಡಿಸುವವರ ವಿರುದ್ಧವಾಗಿ ದೇವರು ತೀರ್ಪು ಮಾಡುತ್ತಾನೆ. ದೇವರ ತೀರ್ಪು ಸತ್ಯ ಕ್ಕನುಸಾರವಾಗಿರುತ್ತದೆ. ದೇವರು ಪಕ್ಷಪಾತವಿಲ್ಲದೆ ನ್ಯಾಯವಾಗಿ ತೀರ್ಪು ಮಾಡುವನು. ಆತನು ನಮ್ಮ ಕೃತ್ಯಗಳಿಗನುಸಾರವಾಗಿ ಮಾತ್ರವಲ್ಲ, ಆದರೆ ನಮ್ಮ ಹೃದಯಗಳಲ್ಲಿ ಇರುವಂಥದ್ದರ ಪ್ರಕಾರವಾಗಿ ಸಹ ತೀರ್ಪು ಮಾಡುತ್ತಾನೆ (ಪ್ರಸಂಗಿ 12:14, ಪ್ರಕಟಣೆ 2:23).

3 ಆ ಜನರು (ವಿಶೇಷವಾಗಿ, ಯೆಹೂದ್ಯರು) ತಮ್ಮನ್ನು ನೀತಿವಂತರೆಂದು ಪರಿಗಣಿಸಿಕೊಂಡು ಪಾಪಗಳಲ್ಲಿ ಮುಂದು ವರೆಯುತ್ತಾರೆ, ಇವರು ದೇವರ ನ್ಯಾಯತೀರ್ಪಿಗೆ ತಪ್ಪಿಸಿಕೊಳ್ಳಲಾರರು. ಯೆಹೂದ್ಯರು ದೇವರಾದುಕೊಂಡ ಜನಾಂಗವಾಗಿದ್ದು ಬಹಿರಂಗವಾಗಿ ಅನ್ಯ ಜನರಿಗಿಂತಲೂ ಹೆಚ್ಚು "ನೀತಿವಂತರಾಗಿ" ಕಂಡರೂ ಅವರು ತಮ್ಮ ಪಾಪಗಳಿಗೆ ಬರತಕ್ಕ ಶಿಕ್ಷೆಯನ್ನು ಹೊಂದುವರು.

4 ದೇವರು ತಮ್ಮ ಪಾಪಗಳನ್ನು ಲೆಕ್ಕಕ್ಕೆ ತಂದುಕೊಳ್ಳುವದಿಲ್ಲ, ಆದ್ದರಿಂದ ತಾವು ಪಶ್ಚಾತಾಪ ಪಡಬೇಕಾದ ಅಗತ್ಯವಿಲ್ಲ ಎಂದು ಯೆಹೂದ್ಯರು ನೆನಸಿದರು. ಆದರೆ ಅವರ ಯೋಚನೆಯು ತಪ್ಪಾಗಿತ್ತು. ನಿಜವಾಗಿಯೂ, ದೇವರು ಯೆಹೂದ್ಯರಿಗೆ ಅಪಾರವಾದ ದಯೆ, ಸಹನೆ, ದೀರ್ಘಶಾಂತಿಗಳನ್ನು ತೋರಿಸಿದ್ದನು, ಆದರೆ ಅವರು ಕೃತಜ್ಞರಾಗಿ ಈ ಆಶಿರ್ವಾದಗಳಿಗೆ ಅಸಡ್ಡೆ ತೋರಿಸಿದ್ದರು. ಅವರು ತಮ್ಮ ಪಾಪಗಳಿಗೆ ಪಶ್ಚಾತಾಪ ಪಡಬೇಕೆಂಬುದಕ್ಕಾಗಿ ದೇವರು ಅವರಿಗೆ ಕರುಣೆಯನ್ನು ತೋರಿಸಿದನೆಂಬದನ್ನು ಅವರು ಗ್ರಹಿಸಿಕೊಳ್ಳಲಿಲ್ಲ. ಯೆಹೂದ್ಯನಾಗಲಿ, ಅನ್ಯಜನಾಂಗದವನಾಗಲಿ ದೇವರ ಬಳಿಗೆ ಬರಲು ಪ್ರಥಮ ಹೆಜ್ಜೆಯು ಪಶ್ಚಾತಾಪವೇ ಆಗಿದೆ ಆದರೆ ನಾವು ಅಹಂಕಾರಿಗಳಾಗಿ ಉಳಿದು ನಮ್ಮ ಪಾಪಗಳಿಗೆ ಪಶ್ಚಾತಾಪ ಪಡಲು ನಿರಾಕರಿಸುವದಾದರೆ ನಿಶ್ಚಯವಾಗಿಯೂ ನಾವು ದೇವರನ್ನು ಕಂಡುಕೊಳ್ಳಲಾರೆವು.

ಪಶ್ಚಾತಾಪವೆಂದರೇನು? ಮೊಟ್ಟಮೊದಲನೆಯದಾಗಿ, ಇದು ನಮ್ಮ ಪಾಪವನ್ನು ಗುರುತಿಸಿಕೊಂಡು ಅರಿಕೆ ಮಾಡುವದಾಗಿದೆ. ಎರಡನೆಯದಾಗಿ, ಪಶ್ಚಾತಾಪವೆಂದರೆ ಆ ಪಾಪದಿಂದ ವಿಮುಖರಾಗುವದಾಗಿದೆ. ನಮ್ಮ ಪಾಪವನ್ನು ಅರಿಕೆ ಮಾಡುವದು ಮಾತ್ರವೇ ಸಾಲದು, ನಾವು ಆ ಪಾಪದಿಂದ ತಿರಿಗಿಕೊಂಡು ಅದನ್ನು ತೊರೆದು ಬಿಟ್ಟಾಗ ಮಾತ್ರವೇ ನಾವು ನಿಜವಾಗಿಯೂ ಸಂಪೂರ್ಣ ಪಶ್ಚಾತಾಪ ಪಟ್ಟಿದ್ದೇವೆಂದು ಹೇಳಬಹುದು (ಜ್ಞಾನೋಕ್ತಿ 28:13).

ನಿಜವಾಗಿಯೂ, ಪಶ್ಚಾತಾಪಪಡುವಾಗ ನಾವು ನಮ್ಮ ಬಯಕೆಗಳನ್ನೂ, ಯೋಚನೆಗಳನ್ನು ಬದಲಾ.ಯಿಸಿಕೊಳ್ಳುತ್ತೇವೆ, ನಾವು ಕೆಟ್ಟತನವನ್ನು ಬಿಟ್ಟು ದೇವರ ಕಡೆಗೆ ತಿರಿಗಿಕೊಳ್ಳುವವರಾಗಿದ್ದೇವೆ. ಮನಸ್ಸು ಮತ್ತು ಹೃದಯಗಳನ್ನು ಬದಲಾಯಿಸಿಕೊಳ್ಳುವದೆ ಪಶ್ಚಾತಾಪವಾಗಿದೆ. ಪಶ್ಚಾತಾಪವಿಲ್ಲದೆ ಯಾರೂ ದೇವರ ಬಳಿಗೆ ಬರಲಾರರು.

ನಮ್ಮ ದೇವರು ಎಂಥಹ ರೀತಿಯ ದೇವರೆಂಬುದನ್ನು ಗಮನಿಸಿರಿ. ಆತನು ನಮ್ಮನ್ನು ಗದರಿಸುವದಿಲ್ಲ, ಆತನು ನಮ್ಮನ್ನು ಉದಾಸೀನ ಮಾಡುವದೂ ಇಲ್ಲ. ಆತನ ಚಿತ್ತವನ್ನು ಮಾಡುವಂತೆ ನಮ್ಮನ್ನು ಒತ್ತಾಯಿಸುವದಿಲ್ಲ, ಅಲ್ಲದೆ ಆತನು ನಮಗೆ ಅನಾವಷ್ಯಕವಾದ ಸಮಸ್ಯೆ ಅಥವಾ ಕಷ್ಟವನ್ನು ನೀಡುವದೂ ಇಲ್ಲ. ಬದಲಾಗಿ ಆತನು ಕರುಣೆಯಿಂದ ನಮ್ಮನ್ನು ಪಶ್ಚಾತಾಪಕ್ಕೆ ಪ್ರೇರಿಸುತ್ತಾನೆ. ಪ್ರೀತಿಯುಳ್ಳ ಮಾನವ ತಂದೆಯು ತನ್ನ ಮಕ್ಕಳನ್ನು ಕರೆಯುವಂತೆಯೇ ದೇವರು ಎಲ್ಲಾ ಸ್ತ್ರೀ ಪುರುಷರನ್ನು ಕರೆಯುವವನಾಗಿದ್ದಾನೆ, ಆತನು ಅತಿ ದೀರ್ಘ ಶಾಂತಿಯುಳ್ಳವನು, ಪ್ರತಿಯೊಬ್ಬರಿಗೂ ಪಶ್ಚಾತಾಪಪಡಲು ಅವಕಾಶವನ್ನು ಕೊಡುವವನಾಗಿದ್ದಾನೆ (2 ಪೇತ್ರ 3:9 ನೋಡಿರಿ). ಅಂತಹ ಪ್ರೀತಿಸ್ವರೂಪನಾದ ದೇವರ ಬಳಿಗೆ ನಾವು ಪಶ್ಚಾತಾಪಪಟ್ಟವರಾಗಿ ಬರದಿರಲು ಹೇಗೆ ಸಾಧ್ಯ?

5 ದೇವರು ನಮ್ಮ ಪ್ರೀತಿಸ್ವರೂಪಿಯೂ ಕರುಣೆಯುಳ್ಳವನೂ ಎಂಬುದು ಸಂಪೂರ್ಣವಾಗಿ ಸತ್ಯವಾಗಿರುತ್ತದೆ. ಆದರೆ ದೇವರು ಮಾನವರನ್ನು ಅವರ ಪಾಪಗಳಿಗಾಗಿ ದಂಡಿಸುತ್ತಾನೆಂಬುದು ಅಷ್ಟೇ ಸತ್ಯವಾಗಿರುತ್ತದೆ. ಪಾಪದ ವಿರುದ್ದ ಆತನ

ಕೋಪವು ಅಧಿಕ ಹಾಗು ಭಯಂಕರವಾಗಿರುತ್ತದೆ. (ಇಬ್ರಿಯ 10:30-31, 12:29). ಪಶ್ಚಾತಾಪ ಪಡದಿರುವದಾದರೆ ನಾವು ದೇವರ ಕರುಣೆ, ಪ್ರೀತಿ, ಕ್ಷಮೆಗಳನ್ನು ಹೊಂದಿಕೊಳ್ಳಲಾರೆವು. ಬದಲಾಗಿ, ನಾವು ಆತನ ಕೋಪಾಗ್ನಿಯನ್ನು ಹೊಂದಿಕೊಳ್ಳುತ್ತೇವೆ. ಆಯ್ಕೆಯು ನಮಗೆ ಸೇರಿದ್ದು.

**6** ದೇವರ ಕೋಪವೂ ನ್ಯಾಯವಾದ ತೀರ್ಪುಪ್ರಕಟವಾಗುವ ದಿವಸ ಆತನು ಎಲ್ಲಾ ಮಾನವರಿಗೆ ನ್ಯಾಯ ತೀರಿಸುವನು (ವಚನ 5). ಆತನು ನಮಗೆ ಹೇಗೆ ನ್ಯಾಯ ತೀರಿಸುವನು ? ಅಥವಾ ಯಾವ ಅಳತೆಗನುಸಾರ ನಮಗೆ ಪ್ರತಿಫಲ ಕೊಡುವನು? ಉತ್ತರವೇನೆಂದರೆಃ ದೇವರು ಪ್ರತಿಯೊಬ್ಬನಿಗೂ ಅವನವನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಕೊಡುವನು (ಕೀರ್ತನೆಗಳು 62:12, ಜ್ಞಾನೋಕ್ತಿಗಳು 24:12, ಯೆರೆಮೀಯ 17:10,32:19, 2ಕೊರಿಂಥ 5:10, ಪ್ರಕಟಣೆ 22:12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಇಲ್ಲಿ ನಾವು ಎರಡು ಸತ್ಯಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಮೊದಲನೆಯದಾಗಿ, ನಂಬಿಕೆಯಿಂದ ರಕ್ಷಣೆ ಹೊಂದಿದ್ದೇವೆ.

ಎರಡನೆಯದಾಗಿ, ನಾವು ನಮ್ಮ ಕೃತ್ಯಗಳಿಗೆ ತಕ್ಕಂತೆ ನ್ಯಾಯತೀರ್ಪು ಹೊಂದುವೆವು.

ಕ್ರೈಸ್ತರು ನಂಬಿಕೆಯ ಮೂಲಕ ಮಾತ್ರವೆ ರಕ್ಷಣೆಯನ್ನು ಪಡೆದುಕೊಳ್ಳುವವರಾಗಿದ್ದಾರೆ (ಎಫೆಸ 2:8-9). ನಾವು ಒಳ್ಳೆ ಕಾರ್ಯಗಳಿಂದ ರಕ್ಷಣೆ ಹೊಂದಲಾರೆವು. ನಾವು ಎಷ್ಟು ಒಳ್ಳೇಕಾರ್ಯಗಳನ್ನು ಮಾಡಿದರೂ ನಂಬಿಕೆಯಿಲ್ಲದೆ ನಾವು ರಕ್ಷಣೆ ಹೊಂದಲು ಸಾಧ್ಯವಿಲ್ಲ.

ಹೇಗಿದ್ದರೂ, ಕ್ರಿಸ್ತನಲ್ಲಿ ನಂಬಿಕೆಯಿಡುವದರ ಫಲಿತವಾಗಿ ಯಾವಾಗಲೂ ಒಳ್ಳೆ ಕಾರ್ಯಗಳನ್ನು ಮಾಡುವವರಾಗಿರುತ್ತೇವೆ, ಒಂದು ನಮ್ಮ ಕಾರ್ಯ ಮತ್ತು ನಡವಳಿಕೆಗಳು ಒಳ್ಳೆಯವುಗಳಾಗಿ ಇಲ್ಲವಾದರೆ ನಮ್ಮ "ನಂಬಿಕೆ" ನಿಜವಾದ ನಂಬಿಕೆಯಾಗಿರುವದಿಲ್ಲ (ಯಾಕೋಬ 2:14-1 ಮತ್ತು ವ್ಯಾಖ್ಯಾನ ನೋಡಿರಿ). ಒಬ್ಬನು ನಂಬಿಕೆಯಿಲ್ಲದೆಯೇ ಒಳ್ಳೇಕಾರ್ಯಗಳನ್ನು ಮಾಡಬಹುದು, ಆದರೆ ಆತನು ಒಳ್ಳೇಕಾರ್ಯಗಳನ್ನು ಮಾಡದೆ ನಂಬಿಕೆಯನ್ನು ಹೊಂದಲು ಸಾಧ್ಯವಿಲ್ಲ. ಒಳ್ಳೇ ಫಲವು ಹೇಗೆ ಒಳ್ಳೇಮರಕ್ಕೆ ಆಧಾರವೋ ಹಾಗೆಯೇ ಒಳ್ಳೇ ಕಾರ್ಯಗಳು ನಮ್ಮ ನಂಬಿಕೆಯ ಸದೃಶ್ಯ ಆಧಾರವಾಗಿದೆ (ಮತ್ತಾಯ 7:17, 20). ಆದುದರಿಂದ, ದೇವರು ನಮ್ಮ ಕಾರ್ಯಗಳನ್ನು ನೋಡಿ ನಮ್ಮ ನಂಬಿಕೆಯು ನಿಜವೋ ಅಥವಾ ಅಲ್ಲವೋ ಎಂದು ಹೇಳಬಲ್ಲವನಾಗಿದ್ದಾನೆ. ದೇವರು ನಮ್ಮ ಕ್ರತ್ಯಗಳಿಗೆ ತಕ್ಕಂತೆ ನಮಗೆ ನ್ಯಾಯ ತೀರಿಸುವ ವೇಳೆ ಆತನು ನಮ್ಮ ನಂಬಿಕೆಗೆ ಸಹ ನ್ಯಾಯ ತೀರಿಸುವವನಾಗಿದ್ದಾನೆ. ಆದರೆ ನೆನಪಿರಲಿ, ನಮ್ಮ ಕಾರ್ಯಗಳಿಂದಲ್ಲ ಆದರೆ ನಂಬಿಕೆಯಿಂದಲೇ ರಕ್ಷಣೆ ಹೊಂದುತ್ತೇವೆ. ಕಾರ್ಯಗಳಿಗಿಂತ ನಂಬಿಕೆಯು ಅಗ್ರಸ್ಥಾನದಲ್ಲಿರುತ್ತದೆ. ನಂಬಿಕೆಯ ನಂತರ ರಕ್ಷಣೆ, ರಕ್ಷಣೆಯ ನಂತರ ಕಾರ್ಯಗಳು.[11]. ಅನೇಕರು ಕೇವಲ ಧಾರ್ಮಿಕ ಯೋಗ್ಯ.ತೆ ಅಥವಾ ಕೆಲವು ಆತ್ಮೀಕ ಆಶಿರ್ವಾದಗಳನ್ನು ಸಂಪಾದಿಸಿಕೊಳ್ಳಲು ಒಳ್ಳೇ ಕಾರ್ಯಗಳನ್ನು ಮಾಡುತ್ತಾರೆ. ಹಾಗಾದರೆ ಅಂತಹ ಒಳ್ಳೇ ಕಾರ್ಯಗಳು ಸ್ವಾರ್ಥತೆಯೊಳಗಿಂದ ಉದ್ಭವಿಸುವವುಗಳಾಗಿವೆ. ಈ ಸ್ವಾರ್ಥ "ಒಳ್ಳೇಕಾರ್ಯಗಳಿಗೆ" ತದ್ವಿರುದ್ಧವಾಗಿ ನಂಬಿಕೆ ಯೊಳಗಿಂದ ಹೊರಡುವ ಒಳ್ಳೇ ಕಾರ್ಯಗಳು. ಸ್ವಾರ್ಥರಹಿತವಾಗಿರುತ್ತವೆ. ನಂಬಿಕೆಯ ಫಲಿತವಾಗಿರುವ ಒಳ್ಳೇಕಾರ್ಯಗಳು ಯಾವಾಗಲೂ ದೇವರ ಮಹಿಮೆಗಾಗಿಯೂ, ಇತರರ ಪ್ರಯೋಜನಕ್ಕಾಗಿಯೂ[12] ಮಾಡಲ್ಪಡುತ್ತವೆ.

**7** ಒಳ್ಳೇದನ್ನು ಬೇಸರಗೊಳ್ಳದೆ ಮಾಡುವ ಅಗತ್ಯತೆಯಿರುತ್ತದೆ. ನಮ್ಮ ಒಳ್ಳೇ ಕಾರ್ಯಗಳು ನಿರಂತರವಾಗಿರಬೇಕು, ಯಾಕೆಂದರೆ ಅವುಗಳು ನಮ್ಮ ನಿರಂತರವಾಗಿರುವ ನಂಬಿಕೆಯ ಫಲಿತವಾಗಿವೆ.

ಪೌಲನು ಹೇಳುವ ಹಾಗೆ ನಾವು ತವಕಪಡುವ ಪ್ರಭಾವ, ಮಾನ, ನಿರ್ಲಯತ್ವಗಳು ಭೂಲೋಕದವುಗಳಲ್ಲ ಆದರೆ ಪರಲೋಕದ ಸಂಗತಿಗಳಾಗಿವೆ. ನಾವು ನಮ್ಮ ದೃಷ್ಟಿಯನ್ನು ಪರಲೋಕದ ಸಂಗತಿಗಳ ಮೇಲಿಡಬೇಕು (ಕೊಲೊಸ್ಸೆ 3:1). ಪಶ್ಚಾತಾಪ ಪಟ್ಟು ಕ್ರಿಸ್ತನನ್ನು ನಂಬುವ ಎಲ್ಲರಿಗೂ ದೇವರು ಪರಲೋಕದಲ್ಲಿ ಪ್ರಬಾವ, ಮಾನ, ನಿರ್ಲಯತ್ವಗಳನ್ನು ಕೊಡುವವನಾಗಿದ್ದಾನೆ.

**8-9** ಇಲ್ಲಿ ಪ್ರಸ್ತಾಪಿಸಲಾಗಿರುವ ಕೋಪ ರೌದ್ರಗಳು (ವಚನ 8). ದೇವರ ಅಂತಿಮ ನ್ಯಾಯತೀರ್ಪನ್ನು ಸೂಚಿಸುತ್ತವೆ. ದೇವರ ನ್ಯಾಯ ತೀರ್ಪು ಯೆಹೂದ್ಯರಿಗೆ ಮೊದಲು ಅನಂತರ ಅನ್ಯ ಜನರಿಗೆ[13] ಆಗುವದು. ಯೆಹೂದ್ಯರಿಗೆ ಅತ್ಯಂತ ದಯೆಯನ್ನೂ ಅಪಾರವಾದ ಜ್ಞಾನವನ್ನು ಕೊಡಲಾಗಿದೆಯಾದ್ದರಿಂದ ಅವರಿಗೆ ಅವರ ಪಾಪಗಳಿಗಾಗಿ ಅಪಾರವಾದ ಶಿಕ್ಷೆಯು ಸಹ ಕೊಡಲಾಗುತ್ತದೆ. ನಾವು ನಮ್ಮ ದುಷ್ಕೃತ್ಯಗಳಿಗೆ ತಕ್ಕಂತೆಯಲ್ಲ, ಆದರೆ ದೇವರ ಚಿತ್ತದ ಕುರಿತಾದ ನಮ್ಮ ತಿಳುವಳಿಕೆಗೆ ತಕ್ಕಂತೆ ಸಹ ದಂಡಿಸಲ್ಪಡುತ್ತೇವೆ. ಆತನು ಚಿಕ್ಕ ಮಕ್ಕಳಿಗೆ ಕಡಿಮೆ ಶಿಕ್ಷೆಯನ್ನು ವಿಧಿಸುವನು, ಯಾಕೆಂದರೆ ತಪ್ಪು ಸರಿಗಳ ಕುರಿತಾದ ಅವರ ತಿಳುವಳಿಕೆಯು ಕಡಿಮೆಯಾಗಿರುತ್ತದೆ. ಆದರೆ ಯಾರು ಹೆಚ್ಚಾದ ತಿಳುವಳಿಯನ್ನು ಹೊಂದಿರುತ್ತಾರೋ ಅವರ ಶಿಕ್ಷೆಯು ಸಹ ಹೆಚ್ಚಾಗಿರುತ್ತದೆ (ಲೂಕ 12:47-48 ಮತ್ತು ವ್ಯಾಖ್ಯಾನ ನೋಡಿರಿ).

**10-11** ದೇವರು ಪ್ರತಿಫಲಗಳನ್ನು ಸಹ ಮೊದಲು ಯೆಹೂದ್ಯರಿಗೂ ಅನಂತರ ಅನ್ಯ ಜನರಿಗೂ ಕೊಡಲಾಗುವದು. ಯೆಹೂದ್ಯರು ದೇವರ ಪ್ರತಿಫಲಗಳನ್ನು ಹೊಂದುವದರಲ್ಲಿ ಮೊದಲಿಗರು, ಯಾಕೆಂದರೆ ಅವರು ದೇವರಾದುಕೊಂಡ ಜನರಾಗಿದ್ದಾರೆ. ಯೆಹೂದ್ಯರೂ ಅನ್ಯ ಜನರೂ ತಮ್ಮ ಕೃತ್ಯಗಳು ಹಾಗು ತಿಳುವಳಿಕೆಗೆ ತಕ್ಕಂತೆ ಪ್ರತಿಫಲ ಅಥವಾ ದಂಡನೆಯನ್ನು ಪಡೆಯುವರು. ದೇವರು ಯೆಹೂದ್ಯರನ್ನೂ ಅನ್ಯ ಜನರನ್ನೂ ಸಮಾನವಾದ ಸೂತ್ರದಿಂದ ನ್ಯಾಯವಿಚಾರಣೆ ಮಾಡುವನು.

ದೇವರು ಪಕ್ಷಪಾತ ಮಾಡುವದಿಲ್ಲ (ಕೊಲೊಸ್ಸೆ 3:25). ಯೆಹೂದ್ಯರು ತಾವು ನ್ಯಾಯ ತೀರ್ಪಿನಿಂದ ತಪ್ಪಿಸಿಕೊಳ್ಳುವರೆಂದು ಯೋಚಿಸಿಕೊಂಡರು. ಆದರೆ ಅವರು ತಪ್ಪಿಸಿಕೊಳ್ಳಲಾರರು.

**12** ಇಲ್ಲಿ ಪ್ರಸ್ತಾಪಿಸಲಾಗಿರುವ ಧರ್ಮಶಾಸ್ತ್ರವು ಯೆಹೂದ್ಯ ಧರ್ಮಶಾಸ್ತ್ರವಾಗಿದೆ. ಅಂದರೆ ದೇವರು ಯೆಹೂದ್ಯರಿಗೆ ನೀಡಿದ ಧರ್ಮಶಾಸ್ತ್ರ. ಈ ಧರ್ಮ ಶಾಸ್ತ್ರವು ಹಳೆ ಒಡಂಬಡಿಕೆಯ ಮೊದಲಿನ ಐದು ಪ್ರಸ್ತಕಗಳಲ್ಲಿ ಕಂಡು ಬರುತ್ತದೆ, ನಿಖರವಾಗಿ ಹೇಳುವದಾದರೆ, ಆದಿಕಾಂಡ, ವಿಮೋಚನ ಕಾಂಡ, ಯಾಜಕಕಾಂಡ, ಅರಣ್ಯಕಾಂಡ ಮತ್ತು ಧರ್ಮೋಪದೇಶಕಾಂಡಗಳೇ. ಧರ್ಮಶಾಸ್ತ್ರವಿಲ್ಲದವರಾಗಿ ಪಾಪ ಮಾಡಿದವರು ಎಂದು ಪೌಲನು ಇಲ್ಲಿ ಅನ್ಯ ಜನರನ್ನು ಸೂಚಿಸಿ ಹೇಳುತ್ತಾನೆ.

ಯೆಹೂದ್ಯರೂ ಅನ್ಯ ಜನರೂ ಅವರ ಪಾಪಗಳಿಗಾಗಿ ದಂಡನೆಯನ್ನು ಹೊಂದುವರು. ಧರ್ಮಶಾಸ್ತ್ರವಿಲ್ಲದವರಾಗಿ ಪಾಪ ಮಾಡಿದವರಾದ ಅನ್ಯ ಜನರು ದೇವರ ನೀತಿಯನ್ನು ನ್ಯಾಯತೀರ್ಪಿಗನುಸಾರವಾಗಿ ದಂಡನೆಯನ್ನು ಹೊಂದುವರು, ಧರ್ಮಶಾಸ್ತ್ರವುಳ್ಳವರಾಗಿದ್ದು ಪಾಪ ಮಾಡಿದವರಾದ ಯೆಹೂದ್ಯರು ಧರ್ಮಶಾಸ್ತ್ರಕ್ಕನುಸಾರವಾಗಿ ದಂಡಿಸಲ್ಪಡುವರು. ವಾಸ್ತವದಲ್ಲಿ, ಯೆಹೂದ್ಯರಿಗೆ ಧರ್ಮಶಾಸ್ತ್ರದಿಂದ ಯಾವ ಪ್ರಯೋಜನವನ್ನು ಹೊಂದುವದಿಲ್ಲ. ಬದಲಾಗಿ ಅದು ಅವರಿಗೆ ನಷ್ಟವನ್ನುಂಟುಮಾಡುತ್ತದೆ. ಯಾಕೆಂದರೆ ಧರ್ಮಶಾಸ್ತ್ರದ ಅಂಶಗಳಿಗೆಲ್ಲಾ ವಿಧೇಯರಾಗುವದು ಅಸಾಧ್ಯವಾಗಿರುತ್ತದೆ. ಆದುದರಿಂದ, ಧರ್ಮಶಾಸ್ತ್ರವು ಅವರನ್ನು ಸಂರಕ್ಷಿಸುವದರ ಬದಲಾಗಿ ವಾಸ್ತವದಲ್ಲಿ ಅವರನ್ನು ದಂಡಿಸುತ್ತದೆ (ಗಲಾತ್ಯ 10, ಯಾಕೋಬ 10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಇಲ್ಲಿ ಒಂದು ಪ್ರಶ್ನೆ ಉದ್ಭವವಾಗುತ್ತದೆ ಅನ್ಯಜನರಿಗೆ ಧರ್ಮಶಾಸ್ತ್ರವಿಲ್ಲದಿರುವದಾದರೆ ಅವರು ಹೇಗೆ ಶಿಕ್ಷೆ ಹೊಂದಲು ಸಾದ್ಯ? ಉತ್ತರವೇನೆಂದರೆ: ಅವರೂ ಧರ್ಮಶಾಸ್ತ್ರವನ್ನು ಹೊಂದಿರುತ್ತಾರೆ. ಅದು ಯೆಹೂದ್ಯ ಧರ್ಮಶಾಸ್ತ್ರವಲ್ಲ – ಇದು ಸ್ವಾಭಾವಿಕ ಧರ್ಮಶಾಸ್ತ್ರ. ಇದು ಮೊದಲನೆಯ ಅಧ್ಯಾಯದಲ್ಲಿ ಪೌಲನು ಮಾಡಿದ ಚರ್ಚೆಗೆ ಪುನ: ಕರೆದೊಯ್ಯುತ್ತದೆ, ಅಲ್ಲಿ ಆತನು ಹೇಳುವದೇನೆಂದರೆ ಎಲ್ಲಾ ಮನುಷ್ಯರು ದೇವರ ಕಣ್ಣಿಗೆ ಕಾಣದಿರುವ ಗುಣಲಕ್ಷಣಗಳನ್ನು ಅಂದರೆ ನಿತ್ಯ ಶಕ್ತಿಯನ್ನೂ ದೇವತ್ವವನ್ನೂ ನೋಡುವವರಾಗಿದ್ದಾರೆ. (ರೋಮ 1:20). ಮಾನವರೆಲ್ಲರಿಗೂ ಒಳ್ಳೇದು ಹಾಗು ಕೆಟ್ಟದ್ದರ ನಡುವಿನ ವ್ಯತ್ಯಾಸದ ತಿಳುವಳಿಕೆಯು ಸ್ವಾಭಾವಿಕವಾಗಿಯೇ ಇರುತ್ತದೆ. ಎಲ್ಲಾ ಮಾನವರೂ ಸ್ವಾಭಾವಿಕವಾಗಿ ಪಾಪವನ್ನು ಗುರುತಿಸಬಲ್ಲವರಾಗಿದ್ದಾರೆ. ಎಲ್ಲರೂ ಮನಸ್ಸಾಕ್ಷಿಯನ್ನು ಹೊಂದಿದ್ದಾರೆ. ಆದುದರಿಂದ, ಎಲ್ಲಾ ಮನುಷ್ಯರಿಗೂ ಒಂದು ಸ್ವಾಭಾವಿಕ ಧರ್ಮಶಾಸ್ತ್ರವು ಇರುತ್ತದೆಂದು ನಾವು ಹೇಳಬಹುದು, ಅದು ಅವರ ಹೃದಯಗಳಲ್ಲಿ ಬರೆದದೆ (ವಚನ 15). ಅನ್ಯ ಜನರು ಈ ಧರ್ಮಶಾಸ್ತ್ರಕ್ಕನುಸಾರಾಗಿಯೇ ದಂಡಿಸಲ್ಪಡುವರು.

**13** ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯದೆ ಕೇವಲ ಅದನ್ನು ಕೇಳಿದ ಮಾತ್ರದಿಂದಲೇ ಯೆಹೂದ್ಯರಿಗೂ ಯಾವ ಪ್ರಯೋಜನವೂ ಇರುವದಿಲ್ಲ (ಯಾಕೋಬ 1:22). ಧರ್ಮಶಾಸ್ತ್ರವನ್ನು ಸಂಪೂರ್ಣವಾಗಿ ಅನುಸರಿಸುವದರಿಂದಲೇ ಒಬ್ಬನು ನೀತಿವಂತನೆಂದು ನಿರ್ಣಯಿಸಲ್ಪಡುವನು – ಅಂದರೆ ರಕ್ಷಣೆಯನ್ನು ಪಡೆಯುವನು.

**14-15** ಅನೇಕ ಅನ್ಯ ಜನರು ಯೆಹೂದ್ಯ ಧರ್ಮಶಾಸ್ತ್ರವನ್ನು ತಿಳಿಯರಾದಾಗ್ಯು ಅವರು ಸ್ವಾಭಾವಿಕವಾಗಿ ಧರ್ಮಶಾಸ್ತ್ರದಲ್ಲಿ ಹೇಳಿದಂತೆ ನಡೆಯುತ್ತಾರೆ. (ವಚನ 14). ಅವರು "ಸ್ವಾಭಾವಿಕ" ಧರ್ಮಶಾಸ್ತ್ರಕ್ಕೆ ವಿಧೇಯರಾಗುತ್ತಾರೆ. ಉದಾಹರಣೆಗೆ, ಯೆಹೂದ್ಯ ಧರ್ಮಶಾಸ್ತ್ರ ಹೇಳುವದೇನೆಂದರೆ: ನರ ಹತ್ಯ ಮಾಡಬಾರದು (ವಿಮೋಚನ ಕಾಂಡ 20:13). ನೀವು ಕಳ್ಳತನ ಮಾಡಬಾರದು (ವಿಮೋಚನಕಾಂಡ 20:15). ಆದರೆ ಅನ್ಯ ಜನರು ಎಂದಿಗೂ ವಿಮೋಚನಕಾಂಡ ಪುಸ್ತವನ್ನು ಓದದಿದ್ದಾಗ್ಯು ಸಹ ಕೊಲೆ ಮತ್ತು ಕಳ್ಳತನ ತಪ್ಪು ಎಂಬುದನ್ನು ಬಲ್ಲವರಾಗಿದ್ದಾರೆ! ಮನುಷ್ಯನು ತನ್ನ ನೆರೆಯವನಿಗೆ ದಯೆಯನ್ನು ತೋರಿಸಬೇಕೆಂದೂ, ಅವನು ತನ್ನ ಹಿರಿಯರನ್ನು ಗೌರವಿಸಬೇಕೆಂದು, ಆತನು ರೋಗಿಗಳಿಗೆ ಸಹಾಯ ಮಾಡಬೇಕೆಂದೂ ಯೆಹೂದ್ಯ ಧರ್ಮಶಾಸ್ತ್ರವು ಹೇಳುತ್ತದೆ. ಆದರೆ ಅನ್ಯ ಜನರು ಸಹ ಈ ಸಂಗತಿಗಳನ್ನು ಮಾಡುತ್ತಾರೆ. ಅನ್ಯ ಜನರು ತಮ್ಮ ಮನಸ್ಸಾಕ್ಷಿಯ ಕಾರಣದಿಂದಾಗಿ ಸರಿ ಮತ್ತು ತಪ್ಪುಗಳನಡುವಿನ ಅಂತರವನ್ನು ಬಲ್ಲವರಾಗಿದ್ದಾರೆ (ವಚನ 15). ಅವರು ಕೆಟ್ಟದ್ದನ್ನು ಮಾಡುವಾಗ ಅವರ ಮನಸ್ಸಾಕ್ಷಿಯು ಅಪರಾಧಿಯೆಂದು ಸಾಕ್ಷಿನುಡಿಯಲಾರಂಭಿಸುತ್ತದೆ, ಮತ್ತು ಅವರು ಒಳ್ಳೇದನ್ನು ಮಾಡುವಾಗ ಅವರ ಮನಸ್ಸಾಕ್ಷಿಯು ಅವರ ಪರವಾಗಿ ವಾದಿಸುತ್ತದೆ. ವಾಸ್ತವದಲ್ಲಿ, ಯೆಹೂದ್ಯ ಧರ್ಮಶಾಸ್ತ್ರ ಮತ್ತು ಅನ್ಯ ಜನರ ಧರ್ಮಶಾಸ್ತ್ರಗಳ ಪ್ರಾಮುಖ್ಯ ವಿಷಯಗಳನಡುವೆ ಅಷ್ಟಾಗಿ ವ್ಯತ್ಯಾಸವಿರುವದಿಲ್ಲ 14 . ಮುಖ್ಯ ವ್ಯತ್ಯಾಸವೇನೆಂದರೆ: ಯೆಹೂದ್ಯ ಧರ್ಮಶಾಸ್ತ್ರವು ದೇವರಿಂದ ಎರಡು ಕಲ್ಲಿನ ಶಾಸನಗಳ ಮೇಲೆ ಬರೆಯಲ್ಪಟ್ಟಿತ್ತು (ವಿಮೋಚನಕಾಂಡ 24:12). ಆದರೆ ಅನ್ಯ ಜನರ ಸ್ವಾಭಾವಿಕ ಧರ್ಮಶಾಸ್ತ್ರವು ಅವರ ಹೃದಯಗಳಲ್ಲಿ ಬರೆದದೆ (ವಚನ 15).

**16** ದೇವರು ವಿಚಾರಿಸುವ ದಿನವು ಕಡೇ ನ್ಯಾಯ ತೀರ್ಪಿನ ದಿನವಾಗಿದೆ (ವಚನ 5 ನೋಡಿರಿ). ದೇವರು ಮನುಷ್ಯರ ಕೃತ್ಯಗಳಿಗನುಸಾರವಾಗಿ ನ್ಯಾಯ ವಿಚಾರಣೆ ಮಾಡುವದು ಮಾತ್ರವಲ್ಲದೆ ಅವರ ಗುಟ್ಟುಗಳನ್ನು ಹಿಡಿದು, ಅಂದರೆ, ಅವರ ಅಂತರ್ಯದ ಆಲೋಚನೆ, ಉದ್ದೇಶಗಳನ್ನು ಹಿಡಿದು ಸಹ ವಿಚಾರಿಸುವನು. ದೇವರು ನಮ್ಮ ಪ್ರತಿಯೊಂದು "ಗುಟ್ಟುಗಳ" ವಿಷಯವಾಗಿಯೂ ಬಲ್ಲನು. ಆತನು ಎಲ್ಲವನ್ನೂ ನೋಡುವವನಾಗಿದ್ದಾನೆ. ದೇವರು ಯೇಸು ಕ್ರಿಸ್ತನ ಮೂಲಕವಾಗಿ ನ್ಯಾಯ ವಿಚಾರಣೆ ಮಾಡುವನು. ಅಂದರೆ ಕ್ರಿಸ್ತನನ್ನು ತಿರಸ್ಕರಿಸಿಕೊಳ್ಳುವ ಎಲ್ಲರೂ ರಕ್ಷಣೆ ಹೊಂದುವರು. ಮತ್ತು ಕ್ರಿಸ್ತನನ್ನು ತಿರಸ್ಕರಿಸುವವರೆಲ್ಲಾ ನಾಶವಾಗುವರು. ಅದರ ಫಲಿತವಾಗಿ, ಕ್ರಿಸ್ತನು ನಮ್ಮ ನ್ಯಾಯಾಧಿಪತಿಯಾಗಿರುತ್ತಾನೆ (ಯೋಹಾನ 5:22, ರೋಮ 14:10, 1 ಕೊರಿಂಥ 4:4, 2 ಕೊರಿಂಥ 5:10 ಮತ್ತು ವ್ಯಾಖ್ಯಾನ ನೋಡಿರಿ).

## ಯೆಹೂದ್ಯರು ಮತ್ತು ಧರ್ಮ ಶಾಸ್ತ್ರ (2:17-29)

**17-20** ಈ ಭಾಗದಲ್ಲಿ ಪೌಲನು ಯೆಹೂದ್ಯರ ಆತ್ಮೀಕ ಅಹಂಕಾರಕ್ಕಾಗಿ ಅವರನ್ನು ಕಟುವಾಗಿ ಗದರಿಸುತ್ತಾನೆ. ವಾಕ್ಚಾತುರ್ಯಯುಕ್ತ ಪ್ರಶ್ನೆಗಳ ಸರಣಿ ಆತನ ವಿಧಾನವಾಗಿರುತ್ತದೆ.

ಆದರ್ಶಭೂತ ಯೆಹೂದ್ಯನು ದೇವರೊಂದಿಗಿನ (ತನ್ನ) ಸಂಬಂಧದ ಬಗ್ಗೆ ಹೊಗಳಿಕೊಳ್ಳುವನು (ವಚನ 17). ಅವನು ತನ್ನನ್ನೇ ಆಧಾರ ಮಾಡಿಕೊಂಡನು. ಯೆಹೂದ್ಯನು ತನ್ನನ್ನು ಬೆಳಕೂ, ಶಿಕ್ಷಕನೂ, ಒಬ್ಬ ಉಪಾಧ್ಯಾಯನೂ ಎಂಬದಾಗಿ ಪರಿಗಣಿಸಿಕೊಳ್ಳುವವನಾಗಿದ್ದಾನೆ. ಅಲ್ಲದೆ, ಆತನು ಇತರರನ್ನು ಕುರಡರೂ, ತಿಳುವಳಿಕೆಯಿಲ್ಲದವರೂ, ಬಾಲಕರೂ ಎಂಬದಾಗಿ ಪರಿಗಣಿಸಿದ್ದರು (ವಚನಗಳು 19:20), ಮತ್ತು ಇದು ಅವರನ್ನು ಭಕ್ತಿವಂತರನ್ನಾಗಿ ಮಾಡಿರಬಹುದು. ಆದರೆ ಅವರು ಬಹಿರಂಗದ ಭಕ್ತಿ (ನೀತಿ) ಯನ್ನು ಮಾತ್ರ ಹೊಂದಿದ್ದರು, ಅವರು ನಿಜ ಭಕ್ತಿಯ.ನ್ನು ಹೊಂದಿರಲಿಲ್ಲ. ಪೌಲನು ತಿಮೊಥೆಗೆ ಅಂತಹ ಜನರನ್ನು ಭಕ್ತಿಯ ವೇಷವಿದ್ದು ಅದರ ಶಕ್ತಿಯನ್ನು ಬೇಡವೆನ್ನುವವರು ಎಂದು ಬಣ್ಣಿಸಿದನು (2 ತಿಮೊಥೆ 3:5).

**21-23** ಇಲ್ಲಿ ಪೌಲನು ಯೆಹೂದ್ಯರ ದೋಷಗಳನ್ನು ತೋರಿಸುತ್ತಾನೆ. ಪೌಲನು ಅವರನ್ನು ಕಪಟಿಗಳೆಂದು ಕರೆಯುತ್ತಾನೆ. ಇವರು ಇತರರಿಗೆ ಮಾಡಬೇಕೆಂದು ಬೋಧಿಸುವದನ್ನು ಸ್ವತಃ ತಾವು ಮಾಡುವದಿಲ್ಲ. ಒಂದು ಕಡೆಯಲ್ಲಿ ಅವರು ಧರ್ಮಶಾಸ್ತ್ರದ ಬಗ್ಗೆ ಅಭಿಮಾನ ಪಡುವ ಅವರು ಇನ್ನೊಂದು ಕಡೆಯಲ್ಲಿ ಧರ್ಮಶಾಸ್ತ್ರವನ್ನು ಮೀರಿ ನಡೆಯುವವರಾಗಿದ್ದಾರೆ (ವಚನ 23). ಮತ್ತಾಯ 23 ನೇ ಅಧ್ಯಾಯದಲ್ಲಿ ಯೇಸು ಸಹ ಅಂತಹ ಯೆಹೂದ್ಯರನ್ನು ಕಪಟಿಗಳು ಎಂದು ಕರೆದನು (ಮತ್ತಾಯ 23:13, 25,27). ಮೂರ್ತಿಗಳಲ್ಲಿ ಅಸಹ್ಯ ಪಡುತ್ತಿರುವ ನೀನು ದೇವಾಸ್ಥಾನದಲ್ಲಿ ಕಳ್ಳತನ ಮಾಡುತ್ತೀಯೋ? ಎಂದು ಪೌಲನು ಕೇಳುತ್ತಾನೆ (ವಚನ 22). ಉತ್ತರವು ಹೌದು ಎಂದಾಗಿರುತ್ತದೆ. ಕೆಲವು ಯೆಹೂದ್ಯರು ಅನ್ಯ ಜನರ ದೇವಸ್ಥಾನಗಳಲ್ಲಿ ಅಕ್ರಮವಾಗಿ ನುಗ್ಗಿ ಮೂರ್ತಿಗಳನ್ನು (ಮಾರುವದಕ್ಕಾಗಿ) ಕದ್ದು ಕೊಂಡದ್ದು ನಿಜವೇ ಆಗಿದೆ.

**24** ಪೌಲನು ಇಲ್ಲಿ ಯೆಶಾಯ ೫೨:೫ರಲ್ಲಿ ವಿಷಯವನ್ನು ಉಲ್ಲೇಖಿಸುತ್ತಾನೆ. ಮಗನ ಕೆಟ್ಟ ನಡವಳಿಕೆಯು ಅವನ ತಂದೆಗೆ ಅವಮಾನವನ್ನುಂಟು ಮಾಡುವ ಪ್ರಾಕಾರವೇ ಯೆಹೂದ್ಯರ ಕೆಟ್ಟ ನಡವಳಿಕೆಯು ದೇವರಿಗೆ ಅವಮಾನವನ್ನುಂಟು ಮಾಡಿತು. ಕ್ರೈಸ್ತರಾದ ನಾವು ಸಹ ಪಾಪಮಾಡಿದಾಗಲೆಲ್ಲಾ ದೇವರ ನಾಮಕ್ಕೆ ಅವಮಾನವನ್ನುಂಟು ಮಾಡುವವರಾಗಿರುತ್ತೇವೆ ಎಂಬದನ್ನು ನೆನಪಿನಲ್ಲಿಟ್ಟುಕೊಳ್ಳತಕ್ಕದ್ದು.

**25** ಸುನ್ನತಿಯೆಂದರೆ ಶಿಶ್ನದ ತುದಿಯ ಹೆಚ್ಚಿನ ಚರ್ಮವನ್ನು ಕತ್ತರಿಸಿ ಹಾಕುವದಾಗಿದೆ. ಯೆಹೂದ್ಯ ಗಂಡು ಶಿಶುಗಳೆಲ್ಲಕ್ಕೂ ಹುಟ್ಟಿದ ಎಂಟನೆಯ ದಿನದಲ್ಲಿ ಸುನ್ನತಿ ಮಾಡಲ್ಪಡಬೇಕೆಂದು ದೇವರು ಆಜ್ಞಾಪಿಸಿದ್ದನು. ಒಬ್ಬನು ಯೆಹೂದ್ಯನೂ, ದೇವರಾದುಕೊಂಡ ಜನಾಂಗದ ಸದಸ್ಯನೂ ಎಂಬುದಕ್ಕೆ ಸುನ್ನತಿಯು ಬಹಿರಂಗದ ದೈಹೀಕ ಗುರುತಾಗಿತ್ತು (ಆದಿಕಾಂಡ 17:9-14). ವಾಸ್ತವದಲ್ಲಿ, ಸುನ್ನತಿಯಲ್ಲಿಯೇ ಯಾವ ಪ್ರಯೋಜನವಿರಲಿಲ್ಲ. ಇದು ಕೇವಲ ಒಬ್ಬ ವ್ಯಕ್ತಿಯು ಯೆಹೂದ್ಯನೆಂಬುದಕ್ಕೆ ಹೊರಗಿನ ಗುರುತಾಗಿತ್ತು. ಒಂದು ವೇಳೆ ಯೆಹೂದ್ಯ ನೊಬ್ಬನು ಧರ್ಮಶಾಸ್ತ್ರವನ್ನು ಮೀರುವದಾದರೆ ಆತನು ದೇವರೊಂದಿಗಿನ ತನ್ನ ವಿಶೇಷ ಸಂಬಂಧವನ್ನು ಕಳೆದುಕೊಳ್ಳುತ್ತಿದ್ದನು (ಸುನ್ನತಿಯು ಆ ಸಂಬಂಧದ ಗುರುತೇ ಆಗಿತ್ತು). ಆಗ, ಆ ಯೆಹೂದ್ಯನು ಎಂದಿಗೂ ಸುನ್ನತಿ ಮಾಡಿಸಿ ಕೊಳ್ಳಲಿಲ್ಲವೇನೋ ಎಂಬಂತಿರುತ್ತಿತ್ತು. ಅದರ ಪರಿಣಾಮವಾಗಿ ಆತನು "ಸುನ್ನತಿಯಿಲ್ಲದವನಾಗಿ" ಇರುವನು (1ಕೊರಿಂಥ 7:19).

ದೇವರು ಮನುಷ್ಯನ ಬಹಿರಂಗವನ್ನು ನೋಡುವದಿಲ್ಲ, ಬದಲಾಗಿ ಆತನು ಅಂತರ್ಯದವ್ಯಕ್ತಿಯನ್ನು, ಮನುಷ್ಯನ ಹೃದಯವನ್ನು ನೋಡುತ್ತಾನೆ. ದೇವರಿಗೆ ಅತಿಪ್ರಾಮುಖ್ಯವಾದ ಸಂಗತಿಯೇನೆಂದರೆ ನಾವು ನಮ್ಮ ಹೃದಯದಿಂದ ಆತನಿಗೆ ವಿಧೇಯರಾಗುವದೇ. ನಮ್ಮ ಹೃದಯವು ಸರಿಯಾಗಿರುವದಾದರೆ, ನಮ್ಮ ಕೃತ್ಯಗಳು ಸಹ ಸರಿಯಾಗಿರುವವು (ಯೆರೆ 17:10).

**26** ಪೌಲನು ಇಲ್ಲಿ ಇನ್ನೊಂದು ವಾಕ್ಚಾತುರ್ಯಯುಕ್ತ ಪ್ರಶ್ನೆಯನ್ನು ಕೇಳುತ್ತಾನೆ. ಹೀಗಿರಲಾಗಿ ಸುನ್ನತಿಯಿಲ್ಲದವನು ಧರ್ಮಶಾಸ್ತ್ರದ ನೇಮಗಳ ಪ್ರಕಾರ ನಡೆದರೆ ಸುನ್ನತಿಯಿಲ್ಲದವನಾಗಿದ್ದರೂ ಸುನ್ನತಿಯಿದ್ದವನಂತೆ ಎಣಿಸಲ್ಪಡುವದಿಲ್ಲವೇ? ಉತ್ತರವು ಹೌದೆಂದಾಗಿರುತ್ತದೆ? ಪೌಲನ ಅಂಶವೇನೆಂದರೆ ಧರ್ಮಶಾಸ್ತ್ರವನ್ನು ಅನುಸರಿಸುವ ಅನ್ಯ ಜನಾಂಗದವನು ದೇವರಿಂದ ಯೆಹೂದ್ಯನಿಗೆ ಸಮಾನವಾಗಿ ಎಣಿಸಲ್ಪಡುತ್ತಾನೆ.

**27** ಅದು ಮಾತ್ರವಲ್ಲದೆ, ಶರೀರದಲ್ಲಿ ಸುನ್ನತಿಯಲ್ಲದವನಾಗಿದ್ದು ಧರ್ಮಶಾಸ್ತ್ರದಲ್ಲಿ ಹೇಳಿದ್ದನ್ನು ಕೈಕೊಂಡು ನಡೆಯುವ ಅವನು ಧರ್ಮಶಾಸ್ತ್ರವನ್ನು ಮೀರಿನಡೆಯುವ ಯೆಹೂದ್ಯನನ್ನು ದೂಷಿಯೆಂದು ನಿರ್ಣಯಿಸುವವನಾಗಿದ್ದಾನೆ.

**28-29** ಆದುದರಿಂದ, ಬಹಿರಂಗವಾಗಿ ಮಾತ್ರವೇ ಯೆಹೂದ್ಯನಾಗಿರುವದರಿಂದ ಯಾವ ಪ್ರಯೋಜನ ವಿರುವದಿಲ್ಲ. ಅದಕ್ಕೆ ಯಾವ ಅರ್ಥವಿರುವದಿಲ್ಲ. ಒಬ್ಬನು ತನ್ನ ಹೃದಯಲ್ಲಿ ಅಂತರೀಕವಾಗಿ ಯೆಹೂದ್ಯ ನಾಗಿರುವಾಗ ಮಾತ್ರವೇ ಆತನು ನಿಜ ಯೆಹೂದ್ಯನಾಗಿರುವನು.

ಅದೇ ರೀತಿಯ ತರ್ಕದ ಪ್ರಕಾರವಾಗಿ, ನಿಜವಾದ ಸುನ್ನತಿಯು ಕೇವಲ ದೈಹೀಕ ಅಥವಾ ಬಹಿರಂಗವಾದ ಸಂಗತಿಯಲ್ಲ, ಬದಲಾಗಿ ನಿಜ ಸುನ್ನತಿಯು ಅಂತರ್ಯದ ಸಂಗತಿಯಾಗಿದೆ. ನಿಜ ಸುನ್ನತಿಯು ಹೃದಯದಲ್ಲಾಗುವ ಸುನ್ನತಿಯು, ಆತ್ಮಕ್ಕೆ ಸಂಬಂಧ ಪಟ್ಟದ್ದು ಆಗಿದೆ (ವಚನ 29). ನಮ್ಮ ಹೃದಯಗಳಲ್ಲಿರುವ [15] ಪಾಪ ಮತ್ತು ಕೆಟ್ಟತನವನ್ನು ಕತ್ತರಿಸಿ ಹಾಕುವದೇ ನಿಜವಾದ ಸುನ್ನತಿಯಾಗಿದೆ. ಹೊರಗೆ ಮಾತ್ರ ಯೆಹೂದ್ಯ ನಾಗಿರುವವನು ಯೆಹೂದ್ಯ ನಲ್ಲದೆ ಇರುವ ಪ್ರಕಾರವೇ

(ವಚನ 28). ಒಬ್ಬನು ಹೊರಗೆ ಮಾತ್ರ ಕ್ರೈಸ್ತನಾಗಿರುವದಾದರೆ ಅವನು ನಿಜವಾದ ಕ್ರೈಸ್ತನಲ್ಲ. ಯೆಹೂದ್ಯರು ಹೊರಗಿನದ್ದನ್ನು ಮಾತ್ರವೇ ನೋಡುವ ಮನುಷ್ಯರಿಂದ ಹೊಗಳಿಕೆಯನ್ನು ಎದುರು ನೋಡುತ್ತಿದ್ದರು (ಮತ್ತಾಯ 23:5-7) ಎಲ್ಲವನ್ನು ನೋಡುವ ದೇವರಿಂದ ಬರುವ ಹೊಗಳಿಕೆಯನ್ನು ಎದುರು ನೋಡುವದು ಎಷ್ಟೋ ಹೆಚ್ಚು ಉತ್ತಮವಾಗಿದೆ. ಆ ಹೊಗಳಿಕೆಯೇ ಪ್ರಾಮುಖ್ಯವಾಗಿರುತ್ತದೆ

---

## ಅಧ್ಯಾಯ - 3

### ದೇವರ ನಂಬಿಗಸ್ಥಿಕೆ (3:1-8)

**1-2** ರೋಮಾಪುರದವರಿಗೆ 2ನೇ ಅಧ್ಯಾಯದಲ್ಲಿ ಪೌಲನು ಯೆಹೂದ್ಯರ ಅಪರಾಧ ಮತ್ತು ಅನೀತಿಯ ಬಗ್ಗೆ ಮಾತಾಡಿದನು. ಈಗ 3 ನೇ ಅಧ್ಯಾಯ 1-8 ವಚನಗಳಲ್ಲಿ ಪೌಲನು ಯೆಹೂದ್ಯರ ಪಕ್ಷವನ್ನು ವಹಿಸಿಕೊಳ್ಳುತ್ತಾನೆ. ಪೌಲನು ಎರಡು ಮುಖಗಳನ್ನು – ಯೆಹೂದ್ಯರ ಕುರಿತಾದ ಒಳ್ಳೆಯ ಮತ್ತು ಕೆಟ್ಟದ್ದರ ಕುರಿತಾದ ಸಂಗತಿಗಳನ್ನು – ಪ್ರಸ್ತುತ ಪಡಿಸಲು ಇಚ್ಛಿಸುತ್ತಾನೆ. ಪೌಲನು ಇಲ್ಲಿ ಯೆಹೂದ್ಯರ ಪರವಾಗಿ ನ್ಯಾಯಾಲಯದಲ್ಲಿ ವಾದಿಸುವ ವಕೀಲನಂತೆ ವಾದಿಸುತ್ತಾನೆ. ಆತನ ವಿಧಾನವು ಅಧ್ಯಾಯ 2ರಲ್ಲಿದ್ದಂತೆಯೇ ವಾಕ್ಚಾತುರ್ಯಯುಕ್ತ ಪ್ರಶ್ನೆಗಳು ಕೇಳುವದಾಗಿದೆ.

ಪೌಲನ ಮೊದಲ ಪ್ರಶ್ನೆಯೇನೆಂದರೆ: ಯೆಹೂದ್ಯರು ಮತ್ತು ಅನ್ಯ ಜನರು ಒಂದೇ ಮಟ್ಟಗಳಿಂದ ನ್ಯಾಯ ವಿಚಾರಣೆ ಹೊಂದಲಿರುವದಾದರೆ. ಯೆಹೂದ್ಯನಾಗಿರುವದರಲ್ಲಿ ಯಾವ ಪ್ರಯೋಜನವಾದರೂ ಇದೆಯೋ? ಪೌಲನು ಹೌದು ಎನ್ನುತ್ತಾನೆ.

ಯೆಹೂದ್ಯರು ದೈವೋಕ್ತಿಗಳನ್ನು ಅಂದರೆ ಹಳೆ ಒಡಂಬಡಿಕೆಯನ್ನು ಹೊಂದಿದ್ದು ಒಂದು ಪ್ರಯೋಜನವಾಗಿರುತ್ತದೆ. ಈ ಲೋಕದಲ್ಲಿ ಅವರು ದೇವರ ಸಾಕ್ಷಿಗಳೂ, ವಕ್ತಾರರೂ ಆಗಿದ್ದಾರೆ.

**3** ಅಧ್ಯಾಯ 2ರಲ್ಲಿ ಪೌಲನು ಯೆಹೂದ್ಯರಲ್ಲಿ ಅನೇಕ ಅಪನಂಬಿಗಸ್ಥರಾಗಿದ್ದಾರೆಂಬದನ್ನು ತೋರಿಸಿರುತ್ತಾನೆ. ಹಾಗಾದರೆ ಸ್ವತಃ ದೇವರು ಸಹ ಅಪನಂಬಿಗಸ್ಥನೆಂದು ಅದರರ್ಥವೋ? ಖಂಡಿತವಾಗಿಯೂ ಅಲ್ಲ! ಎಂದು ಪೌಲನು ಅನ್ನುತ್ತಾನೆ. ಯೆಹೂದ್ಯರಲ್ಲಿ ಕೆಲವರು ಅಪನಂಬಿಗಸ್ಥರಾಗಿದ್ದರೂ ದೇವರು ಅವರಿಗೆ ನಂಬಿಗಸ್ಥನಾಗಿ ಉಳಿದಿರುತ್ತಾನೆ. ದೇವರು ಈಗಲೂ ಸಹ ಪ್ರೀತಿಪೂರ್ವಕವಾಗಿ ಯೆಹೂದ್ಯರನ್ನು ತಾನು ಆದುಕೊಂಡ ಜನಾಂಗವೆಂದು ಪರಿಗಣಿಸುತ್ತಾನೆ. ಯಾವ ವಿಧದಲ್ಲಿ ಯೆಹೂದ್ಯರು ಅಪನಂಬಿಗಸ್ಥರಾಗಿದ್ದರು? ಅವರ ಅಪನಂಬಿಗಸ್ಥಿಕೆಗಳಲ್ಲಿ ಮುಖ್ಯವಾದದ್ದೆಂದರೆ ರಕ್ಷಕನಾದ ಯೇಸು ಕ್ರಿಸ್ತನು ಭೂಲೋಕಕ್ಕೆ ಬರುವ ಕುರಿತಾಗಿ ಹಳೆ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿರುವ ವಾಗ್ದಾನಗಳನ್ನೂ ಪ್ರವಾದನೆಗಳನ್ನೂ ಅವರು ನಂಬಿಲಿಲ್ಲ. ಅಲ್ಲದೆ ಕ್ರಿಸ್ತನು ಬಂದ ಮೇಲೂ ಅವರು ಆತನನ್ನು ತಿರಸ್ಕರಿಸಿದರು. ಹೇಗಿದ್ದರೂ, ಸತ್ಯಾಂಶವೇನೆಂದರೆ ಯೆಹೂದ್ಯರು ಕ್ರಿಸ್ತನ ಕುರಿತಾದ ವಾಗ್ದಾನಗಳನ್ನು ನಂಬಲಿಲ್ಲವೆಂದ ಮಾತ್ರಕ್ಕೆ ವಾಗ್ದಾನಗಳು ನಿರರ್ಥಕವಾಗಲಿಲ್ಲ. ಕುರುಡನು ಬೆಳಕನ್ನು ನೋಡಲಾರನೆಂದ ಮಾತ್ರಕ್ಕೆ ಬೆಳಕು ಪ್ರಕಾಶಿಸುತ್ತಿಲ್ಲ ಎಂದು ಅರ್ಥವಲ್ಲವಷ್ಟೇ!

**4** ಪ್ರತಿಯೊಬ್ಬ ಯೆಹೂದ್ಯನು ಸುಳ್ಳುಗಾರನಾಗಿದ್ದರೂ ದೇವರು ಹಾಗು ಆತನ ಮಾತು ಸತ್ಯವಾಗಿ ಉಳಿಯುವದು. ದೇವರು (ತನ್ನ) ನುಡಿಗಳಲ್ಲಿ ನ್ಯಾಯಸ್ಥನೆಂದು ಕಾಣಿಸಿಕೊಳ್ಳುವನು ಮತ್ತು ನ್ಯಾಯತೀರ್ಪು ನಿಷ್ಕಳಂಕವಾಗಿರುತ್ತದೆ (ಕೀರ್ತನೆಗಳು 51:4). ಮಾನವನ ಪಾಪವು ಗೋಚರವಾಗುವದಾದರೆ ಅದಕ್ಕೆ ತದ್ವಿರುದ್ಧವಾಗಿ ದೇವರ ನೀತಿಯು ಇನ್ನು ಹೆಚ್ಚು ಸ್ಪಷ್ಟವಾಗಿ ಕಾಣಲ್ಪಡುವದು. ಮೇಣದ ಬತ್ತಿಯು ಹಗಲಿಗಿಂತಲೂ ಕತ್ತಲೆಯಲ್ಲಿ ಪ್ರಕಾಶ ಮಾನವಾಗಿ ಕಾಣುವ ಹಾಗೆಯೇ ದೇವರ ನೀತಿಯು ಮನುಷ್ಯನ ಅನೀತಿಯೆಂಬ ಕತ್ತಲೆಯಲ್ಲಿ ಹೆಚ್ಚು ಪ್ರಕಾಶಮಾನವಾಗಿ ತೋರುತ್ತದೆ.

**5** ಮಾನವನ ಅನೀತಿಯು ದೇವರ ನೀತಿಯನ್ನು ಪ್ರಸಿಧಿ್ಧಗೆ ತರುವದಾದರೆ ದೇವರು ಮಾನವನ ಅನೀತಿಯ ಕುರಿತಾಗಿ ಬೇಸರಗೊಳ್ಳುವದೇಕೆ? ದೇವರು ಮನುಷ್ಯನ ಅನೀತಿಯಿಂದ ಮಹಿಮೆ ಹೊಂದುತ್ತಿದ್ದಾನೆ ಮತ್ತು ಈ ಕಾರಣದಿಂದ ದೇವರು ಅದಕ್ಕಾಗಿ ಮನುಷ್ಯನನ್ನು ದಂಡಿಸುವದು ಅನ್ಯಾಯ ಅಥವಾ ಸರಿಯಲ್ಲ ಎಂದು ಯಾರಾದರೂ (ಸುಳ್ಳಾಗಿ) ಹೇಳಬಹುದು. ಎಂದಿಗೂ ಇಲ್ಲ! ಎಂದು ಪೌಲನು ಹೇಳುತ್ತಾನೆ (ವಚನ 6).

**6** ಮನುಷ್ಯನ ಪಾಪದೊಂದಿಗೆ ಹೋಲಿಸಿದಾಗ ದೇವರ ನೀತಿಯು ಹೆಚ್ಚು ಸ್ಪಷ್ಟವಾಗಿ ಕಾಣಿಸುತ್ತದೆ, ಆದಾಗ್ಯು ದೇವರು ಆಗಲೂ ಪಾಪವನ್ನು ದ್ವೇಷಿಸುತ್ತಾನೆ ಮತ್ತು ಅದನ್ನು ನಿಶ್ಚಯವಾಗಿಯೂ ದಂಡಿಸುತ್ತಾನೆ, ಮತ್ತು ಆತನ ತೀರ್ಪು ಸಂಪೂರ್ಣ ನ್ಯಾಯವಾಗಿರುತ್ತದೆ.

**7** ಪೌಲನು ಇಲ್ಲಿ ಕೇಳುವ ಪ್ರಶ್ನೆಯು ೫ನೇ ವಚನದಲ್ಲಿನ ಪ್ರಶ್ನೆಯನ್ನು ಹೋಲುತ್ತದೆ. ದೇವರ ಸತ್ಯವಂತಿಕೆಯು (ಬೆಳಕು) ಮನುಷ್ಯನ ಸುಳ್ಳಿನಿಂದ (ಕತ್ತಲೆಯಿಂದ) ಪ್ರಕಾಶಮಾನವಾಗಿ ಕಾಣುವದಾದರೆ ಯಾಕೆ ದೇವರು ನಮ್ಮ ಸುಳ್ಳಿಗೆ ದಂಡನೆಯನ್ನುಂಟು ಮಾಡಬೇಕು ? ಯಾಕೆಂದರೆ, ಬೆಳಕು ಕತ್ತಲೆಯನ್ನು ಸೋಲಿಸಿ ದಂಡನೆಯನ್ನುಂಟು ಮಾಡುವ ಪ್ರಕಾರವೇ ದೇವರ ಸತ್ಯವು ನಮ್ಮ ಸುಳ್ಳುತನವನ್ನು ದಂಡಿಸುವದು.

**8** ಪೌಲನ ಕಾಲದಲ್ಲಿ ಕೆಲವರು, "ಪಾಪ ಮಾಡಿದರೆ ತಪ್ಪೇನಿಲ್ಲ, ಯಾಕೆಂದರೆ ಪಾಪದ ಮೂಲಕವಾಗಿ ದೇವರು ಹೆಚ್ಚು ಪರಿಶುದ್ದನೂ, ನೀತಿವಂತನೂ ಆಗಿ ಕಾಣುತ್ತಾನೆ" ಎಂದು ವಾಸ್ತವಿಕವಾಗಿ ಹೇಳುತ್ತಿದ್ದರು. ಅಂತಹ ಒಂದು ಆಲೋಚನೆಯು ಸಂಪೂರ್ಣವಾಗಿ ಸುಳ್ಳಾಗಿರುತ್ತದೆ. ಪೌಲನು ಅಂತಹ ಜನರನ್ನು ಕುರಿತು ಅಂಥವರಿಗೆ ದಂಡನೆಯ ತೀರ್ಪಾಗುವದು ನ್ಯಾಯ ಎಂದು ಹೇಳುತ್ತಾನೆ.

ಕೆಲವು ಕ್ರೈಸ್ತೇತರು ಸಹ ಇದೇ ಸಂಗತಿಯನ್ನು ಹೇಳುತ್ತಾ ಕ್ರೈಸ್ತರನ್ನು ದೂಷಿಸುತ್ತಿದ್ದರು: ಪಾಪ ಮಾಡುವದರಲ್ಲಿ ತಪ್ಪೇನಿಲ್ಲ, ಯಾಕೆಂದರೆ ಇದು ದೇವರನ್ನು ಹೆಚ್ಚು ನೀತಿವಂತನನ್ನಾಗಿ ಕಾಣುವಂತೆ ಮಾಡುತ್ತದೆ. ಉದಾಹರಣೆಗೆ, ಕ್ರೈಸ್ತರ ವಿರುದ್ಧ ಅವರು "ನಾವು ಎಷ್ಟು ಪಾಪ ಮಾಡುತ್ತೇವೋ ದೇವರ ಕರುಣೆಯು ಅಷ್ಟು ಹೆಚ್ಚಾಗುತ್ತದೆ, ಆದುದರಿಂದ, ದೇವರ ಕರುಣೆಯು ಇನ್ನು ಹೆಚ್ಚಾಗಬೇಕೆಂದು ನಾವು ಹೆಚ್ಚು ಹೆಚ್ಚಾಗಿ ಪಾಪಮಾಡೋಣ" ಎಂದು ಸುಳ್ಳಾಗಿ ಆರೋಪಿಸಲಾಗಿತ್ತು. ಅಥವಾ ಅವರು "ನಾವು ಕ್ರಿಯೆಗಳಿಂದಲ್ಲ ಆದರೆ ನಂಬಿಕೆಯಿಂದ ರಕ್ಷಣೆ ಹೊಂದಿದ್ದೇವಾದ್ದರಿಂದ ನಾವು ಇನ್ನೆಂದಿಗೂ ಒಳ್ಳೇಕಾರ್ಯಗಳನ್ನು ಮಾಡಬೇಕಾಗಿಲ್ಲ. ನಾವು ಎಷ್ಟೇ ಪಾಪ ಮಾಡಿದರೂ ಚಿಂತೆಯಿಲ್ಲ, ದೇವರು ಆಗಲೂ ನಮ್ಮನ್ನು ಕ್ಷಮಿಸಿ ರಕ್ಷಿಸುವನು" ಎಂದು ಹೇಳುತ್ತಾರೆಂದು ಆರೋಪಿಸಲಾಗಿತ್ತು. ನಿಶ್ಚಯವಾಗಿಯೂ, ಈ ಆರೋಪಗಳೆಲ್ಲವೂ ಸುಳ್ಳಾಗಿರುತ್ತವೆ. ಕ್ರೈಸ್ತರು ಈ ಸಂಗತಿಗಳನ್ನು ನಂಬುವದಿಲ್ಲ.

## ಯಾರೊಬ್ಬರೂ ನೀತಿವಂತರಲ್ಲ (3:9-20)

**9** ಇಲ್ಲಿ ಪೌಲನು ಯೆಹೂದ್ಯರು ಅನ್ಯ ಜನರಿಗಿಂತ ಉತ್ತಮರೇನಲ್ಲ ಮತ್ತು ಅನ್ಯ ಜನರೂ ಯೆಹೂದ್ಯರಿಗಿಂತ ಉತ್ತಮರೇನಲ್ಲ ಎಂಬ ತನ್ನ ಅಂಶವನ್ನು ಪುನರುಚ್ಚರಿಸುತ್ತಾನೆ. ನಾವು (ಯೆಹೂದ್ಯರು ) ಉತ್ತಮ ಸ್ಥಾನದಲ್ಲಿದ್ದೇವೋ? ಎಂದು ಪ್ರಶ್ನಿಸುತ್ತಾನೆ. ಹಾಗು ಎಷ್ಟು ಮಾತ್ರಕ್ಕೂ ಇಲ್ಲ! ಎಂದು ಉತ್ತರಿಸುತ್ತಾನೆ. ಸ್ವಭಾವದಿಂದಲೇ ಮಾನವರೆಲ್ಲರೂ ಸಮಾನವಾಗಿ ಪಾಪಿಗಳಾಗಿದ್ದಾರೆ. ಯೆಹೂದ್ಯರೇ ಆಗಲಿ ಗ್ರೀಕರೇ ಆಗಲಿ ಎಲ್ಲರೂ ಪಾಪಕ್ಕೆ ಒಳಬಿದ್ದವರು... ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ (ವಚನ 10).

**10-12** ಈ ಮುಂದಿನ ಭಾಗದಲ್ಲಿ ಪೌಲನು ಹಳೆ ಒಡಂಬಡಿಕೆಯ ವಿವಿಧ ವಾಕ್ಯಭಾಗಗಳಿಂದ ಉಲ್ಲೇಖಿಸುತ್ತಾನೆ. ಈ 10 ರಿಂದ 12 ಚನಗಳಲ್ಲಿ ಪೌಲನು ಕೀರ್ತನೆಗಳು 14:1-3, 53:1-3, ಪ್ರಸಂಗಿ 7:20 ರಿಂದ ಉಲ್ಲೇಖಿಸುತ್ತಾನೆ. ಈ ಉಲ್ಲೇಖಗಳು ಕಠಿಣವಾದ ಮಾತುಗಳಾಗಿವೆ. ದೇವರು ಮಾವ ಜನಾಂಗದ ಬಗ್ಗೆ ಅಷ್ಟೊಂದು ಟೀಕಾತ್ಮಕವಾಗಿಯೂ, ಕಠೋರವಾಗಿಯೂ ಮಾತಾಡಲು ಹೇಗೆ ಸಾಧ್ಯ? ಸ್ವತಃ ಮಾನವ ಜನಾಂಗವು ತನ್ನನ್ನು ಈ ರೀತಿಯಲ್ಲಿ ಕಾಣುವದಿಲ್ಲ!ಹಾಗಿದ್ದರೂ, ಈ ಹೇಳಿಕೆಗಳು ಸತ್ಯವಾಗಿವೆ. ದೇವರು ಮಾನವ ಜನಾಂಗವನ್ನು ಹೇಗೆ ಕಾಣುತ್ತಾನೆಂಬದನ್ನು ಈ ವಚನಗಳಿಂದ ನಾವು ಕಂಡು ಕೊಳ್ಳಬಹುದು. ಆದಿಯಲ್ಲಿ ದೇವರು ಮಾನವನನ್ನು ಸೃಷ್ಟಿಸಿದಾಗ ಆತನು ತಾನು ಉಂಟು ಮಾಡಿದ್ದೆಲ್ಲವೂ ಬಹಳ ಒಳ್ಳೇದಾಗಿತ್ತು ಎಂದು ಕಂಡನು (ಆದಿಕಾಂಡ 1:31). ಆದರೆ ಅನಂತರ ಪ್ರಥಮ ಪುರುಷ ಹಾಗು ಸ್ತ್ರೀಯಾದ ಆದಾಮ ಮತ್ತು ಹವ್ವಳ – ಮಾನವಜನಾಂಗದ ತಂದೆತಾಯಿಗಳು – ಒಂದು ಅತಿದೊಡ್ಡ ಪಾಪವನ್ನು ಮಾಡಿದರು (ಆದಿಕಾಂಡ 3:1-6).ಆದರೆ ನಂತರ ಮಾನವನ ಹೃದಯವು ಕೆಟ್ಟದ್ದಾಯಿತು (ಯೆರೆಮೀಯ 17:9) ಮತ್ತು ಅಂದಿನಿಂದ ದೇವರು ಮಾನವ ಜನಾಂಗದ ಬಗ್ಗೆ ಅಸಮಾಧಾನಗೊಂಡಿದ್ದನು.

ನಾವು ನಮ್ಮ ಸುತ್ತಲಿನ ಸ್ತ್ರೀಪುರುಷರನ್ನು ನೋಡುವಾಗ ಅವರಲ್ಲಿ ಬಹು ಪಾಲು ಜನರು ನಮಗೆ ಬಹಳ ಸಭ್ಯರಂತೆ ಕಾಣುತ್ತಾರೆ. ಅವರು ಅನೀತಿವಂತರಾಗಿದ್ದಾರೆಂಬಂತೆ ತೋರುವದಿಲ್ಲ. ಹಾಗಾದರೆ ಯಾವ ವಿಧದಲ್ಲಿ ಮಾನವರೆಲ್ಲರೂ ಸ್ವಾಭಾವಿಕವಾಗಿ ಅನೀತಿವಂತರಾಗಿದ್ದಾರೆ? ಮಾನವರೆಲ್ಲರೂ ಅನೀತಿವಂತರು ಯಾಕೆಂದರೆ ಎಲ್ಲರೂ ಮೂಲತ: ಸ್ವಾರ್ಥಿಗಳು ಅಥವಾ ಅಹಂಭಾವದಿಂದ ತುಂಬಿರುವವರೂ ಆಗಿದ್ದಾರೆ. ಮಾನವರು ಸ್ವಾಭಾವಿಕವಾಗಿ ದೇವರಿಗಿಂತಲೂ ಹೆಚ್ಚಾಗಿ ತಮ್ಮನ್ನು ಪ್ರೀತಿಸಿಕೊಳ್ಳುತ್ತಾರೆ. ಬಾಲ್ಯದಿಂದಲೇ ಮಾನವರು ತಮ್ಮನ್ನು ಅಗ್ರಸ್ಥಾನದಲ್ಲಿಟ್ಟು ಮೊದಲು ತಮ್ಮ ಪ್ರಯೋಜನವನ್ನು ಹುಡುಕುತ್ತಾರೆ. ಬಹಿರಂಗವಾಗಿ ಅವರು ಒಳ್ಳೆಯವರಂತೆ ಕಾಣಬಹುದು, ಆದರೆ ತಮ್ಮ ಹೃದಯಗಳಲ್ಲಿ ಅವರು ದೇವರ ಚಿತ್ತಕ್ಕೆ ಕಿವಿಗೊಡುವದಿಲ್ಲ, ಬದಲಾಗಿ, ಅವರು ತಮ್ಮ ಸ್ವಂತ ಚಿತ್ತವನ್ನು ಅನುಸರಿಸುತ್ತಾರೆ. ದೇವರ ಚಿತ್ತಕ್ಕಿಂತಲೂ ಮೇಲಾಗಿ ಮನುಷ್ಯನ ಚಿತ್ತಕ್ಕೆ ಪ್ರಾಧಾನ್ಯತೆ ನೀಡುವದು ದೇವರ ದೃಷ್ಟಿಯಲ್ಲಿ ಮಾನವನ ಅತ್ಯಂತ ದೊಡ್ಡ ಹಾಗು ಮೂಲ ಪಾಪವಾಗಿದೆ 16 (ರೋಮ 6:12 ಮತ್ತು ವ್ಯಾಖ್ಯಾನ ನೋಡಿರಿ).

ದೇವರ ಬಳಿಗೆ ಬರುವದಕ್ಕೆ ಒಬ್ಬ ವ್ಯಕ್ತಿಯು ತೆಗೆದುಕೊಳ್ಳಬೇಕಾದ ಪ್ರಥಮ ಹೆಜ್ಜೇಯೇನೆಂದರೆ ಅವನು ತನ್ನ ಅತಿ ಮೂಲ ಪಾಪವನ್ನು ಗುರುತಿಸಿಕೊಳ್ಳಬೇಕು. ಒಂದು ವೇಳೆ ಒಬ್ಬನು ತನ್ನ ಪಾಪಮಯ ಸ್ಥಿತಿಯನ್ನು ಗುರುತಿಸಿಕೊಳ್ಳದಿದ್ದರೆ ದೇವರ ಬಳಿಗೆ ಬಂದು ಕ್ಷಮಾಪಣೆಯನ್ನು ಕೇಳಬೇಕೆಂಬ ಯಾವ ಅಗತ್ಯತೆಯು ಆತನಿಗೆ ಕಾಣಿಸುವದಿಲ್ಲ. ಮತ್ತು ಆತನು ಕ್ಷಮಾಪಣೆಯನ್ನು ಕೇಳದಿರುವದಾದರೆ ಆತನು ಹೇಗೆ ಅದನ್ನು ಹೊಂದುವನು? ಮತ್ತು ಆತನು ಕ್ಷಮಾಪಣೆಯನ್ನು ಹೊಂದಲಿಲ್ಲವಾದರೆ ಆತನು ರಕ್ಷಣೆ ಹೊಂದುವದಾದರೂ ಹೇಗೆ? ಆದಕಾರಣವೇ, ದೇವರು 11ನೇ ವಚನದಲ್ಲಿ ತಿಳುವಳಿಕೆಯುಳ್ಳವನು ಇಲ್ಲ ಎಂದು ಹೇಳುತ್ತಾನೆ. ಮಾನವರೆಲ್ಲರೂ ಪಾಪಿಗಳೆಂಬದನ್ನು ಅರ್ಥಮಾಡಿಕೊಳ್ಳುವ ಒಬ್ಬನಾದರೂ ಇಲ್ಲ. ಈ ಕಾರಣಕ್ಕಾಗಿ ಪಾಪಕ್ಷಮೆಯನ್ನು ಕೇಳುವದಕ್ಕೋಸ್ಕರ ದೇವರನ್ನು ಹುಡುಕುವವನು ಇಲ್ಲ.

ದೇವರು ನಮ್ಮನ್ನು ದೃಷ್ಟಿಸುವ ಪ್ರಕಾರವೇ ನಾವು ನಮ್ಮನ್ನು ದೃಷ್ಟಿಸಿಕೊಳ್ಳಲು ಕಲಿಯೋಣ. ಇಲ್ಲವಾದರೆ, ನಾವು ಒಳ್ಳೆಯವರಲ್ಲದಿದ್ದಾಗ್ಯು ನಮ್ಮನ್ನು ಒಳ್ಳೆಯವರೆಂದು ಯೋಚಿಸಿಕೊಳ್ಳುವ ಮೋಸಕ್ಕೊಳಗಾಗುತ್ತೇವೆ. ಒಂದು ಇರುವೆಯು ತನ್ನನ್ನು ಆನೆಯೆಂದು ಊಹಿಸಕೊಳ್ಳಬಹುದು, ಆದರೆ ಅದು ಇನ್ನು ಇರುವೆ ಆಗಿಯೇ ಉಳಿದಿರುತ್ತದೆ! ಮನುಷ್ಯರ ವಿಷಯದಲ್ಲಿಯೂ ಹಾಗೆಯೇ ಇರುತ್ತದೆ, ನಾವು ಉತ್ತಮರಲ್ಲದಿದ್ದಾಗ್ಯು ಯಾವಾಗಲೂ ನಮ್ಮನ್ನು ಉತ್ತಮರೆಂದು ಭಾವಿಸಿಕೊಳ್ಳುತ್ತಿರುತ್ತೇವೆ ಸ್ವಾಭಾವಿಕವಾಗಿ ನಮ್ಮ ಹೃದಯಗಳು ವಂಚನೆಯಿಂದ ತುಂಬಿವೆ (ಯೆರೆಮೀಯ 17:9). ನಮ್ಮನ್ನು ವಂಚಿಸುವದು, ನಮ್ಮ ಪಾಪ ಹಾಗು ಕೆಟ್ಟತನವನ್ನು ನೋಡದಂತೆ ನಮ್ಮನ್ನು ಮಂಕುಮಾಡುವದು ಸೈತಾನನ ಮುಖ್ಯತಂತ್ರಗಳಲ್ಲಿ ಒಂದಾಗಿದೆ.

13 ಅವರ ಗಂಟಲುಗಳು ತೆರೆದಿರುವ ಸಮಾಧಿಗಳಾಗಿವೆ ಎಂಬ ಹೇಳಿಕೆಯ ತಾತ್ಪರ್ಯವು ಮನುಷ್ಯರು ಮರಣಕ್ಕೆ ಯೋಗ್ಯವಾದಂಥ ಮಾತುಗಳನ್ನು ಮಾತಾಡುತ್ತಾರೆ ಎಂದಾಗಿದೆ (ಕೀರ್ತನೆಗಳು 5:9).

14 ಪೌಲನು ಇಲ್ಲಿ ಕೀರ್ತನೆಗಳು 10:7ರಿಂದ ಉಲ್ಲೇಖಿಸುತ್ತಾನೆ. 13-14 ವಚನಗಳಲ್ಲಿ ಮಾನವನ ಈ ಒಟ್ಟಾರೆ ಚಿತ್ರಣದಲ್ಲಿ ನಾಲಿಗೆಯ ಪಾಪಗಳ ಪ್ರಾಮುಖ್ಯ.ತೆಯನ್ನು ನಾವು ಕಾಣುತ್ತೇವೆ (ಯಾಕೋಬ 3:3-8 ನೋಡಿರಿ).

15-17 ಈ ವಚನಗಳು ಯೆಶಾಯ 59:7-8 ರಿಂದ ಉಲ್ಲೇಖಿಸಲ್ಪಟ್ಟಿವೆ. ಸಮಾಧಾನದ ಮಾರ್ಗವು (ವಚನ 17). ದೇವರೊಂದಿಗೆ ಸಮಾದಾನ ಮಾಡಿಕೊಳ್ಳುವ ಮಾರ್ಗವಾಗಿದೆ. ಆ ಮಾರ್ಗವು ಒಬ್ಬನು ಪಾಪಗಳಿಗಾಗಿ ಪಶ್ಚಾತಾಪ ಪಟ್ಟು ವಿಧೇಯತೆಯಲ್ಲಿ ದೇವರ ಕಡೆಗೆ ತಿರಿಗಿಕೊಳ್ಳುವ ಮಾರ್ಗವಾಗಿದೆ.

18 ಪೌಲನು ಇಲ್ಲಿ ಕೀರ್ತನೆಗಳು 36:1 ರಿಂದ ಉಲ್ಲೇಖಿಸುತ್ತಾನೆ. ಮಾನವನಿಗೆ ದೇವರ ಭಯವೇ ಇಲ್ಲ ಎಂದು ಕೀರ್ತನೆಗಾರನು ಹೇಳುತ್ತಾನೆ. ಮಾನವರು ಯಾಕೆ ದೇವರಿಗೆ ಭಯಪಡಬೇಕು? ಯಾಕೆಂದರೆ ದೇವರು ಪಾಪವನ್ನು ದ್ವೇಷಿಸುತ್ತಾನೆ ಮತ್ತು ಅದಕ್ಕಾಗಿ ಆತನು ನ್ಯಾಯತೀರ್ಪಿನ ದಿನದಲ್ಲಿ ಮಾನವನನ್ನು ಶಿಕ್ಷಿಸುತ್ತಾನೆ. ಕರ್ತನ ಭಯವೇ ಜ್ಞಾನಕ್ಕೆ ಮೂಲ (ಜ್ಞಾನೋಕ್ತಿ 1:7). ಜ್ಞಾನಿಯು ತನ್ನ ಪಾಪವನ್ನು ಗುರುತಿಸಿಕೊಂಡು ದೇವರಿಗೆ ಭಯ ಪಡುತ್ತಾನೆ.

19 ನಿಶ್ಚಯವಾಗಿಯೂ, ಪೌಲನು 10-18 ವಚನಗಳಲ್ಲಿ ಉಲ್ಲೇಖಿಸುವ ಈ ಎಲ್ಲಾ ಹಳೆ ಒಡಂಬಡಿಕೆಯ ವಾಕ್ಯ ಭಾಗಗಳು ಯೆಹೂದ್ಯರಿಗೆ ಪರಿಚಿತವಾಗಿದ್ದವು . ಆದರೆ ಅವರು ಅವು ಗಳು ಅನ್ಯ ಜನರಿಗೆ ಮಾತ್ರ ಅನ್ವಯಿಸುತ್ತವೆ ಹೊರತು ನಮಗಲ್ಲ ಎಂದು ಯೋಚಿಸಿದರು! ಇಲ್ಲಿ ಪೌಲನು ಈ ಸಂಗತಿಗಳು ಅವರಿಗೆ ಸಹ ಅನ್ವಯಿಸುತ್ತವೆ ಎಂದು ಯೆಹೂದ್ಯರಿಗೆ ಹೇಳುತ್ತಾನೆ. ಧರ್ಮಶಾಸ್ತ್ರದ ನುಡಿಗಳೆಲ್ಲವು (ಅಂದರೆ, ಹಳೆ ಒಡಂಬಡಿಕೆ) ಆ ಶಾಸ್ತ್ರಕ್ಕೆ ಒಳಗಾದವರಿಗೇ (ಅಂದರೆ ಯೆಹೂದ್ಯರಿಗೆ) ಹೇಳಿವೆ. ಆದ್ದರಿಂದ, ಧರ್ಮಶಾಸ್ತ್ರವು , "ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ" (ವಚನ 10). ಎಂದು ಹೇಳುವಾಗ ಆದರಲ್ಲಿ ಯೆಹೂದ್ಯರು ಸಹ ಸೇರಿರುತ್ತಾರೆ. ಆದುದರಿಂದ, ಎಲ್ಲರ ಬಾಯಿ ಕಟ್ಟಿ ಹೋಗುವದು. ಯಾವನೂ ಸಹ ತನ್ನ ಪರವಾಗಿ ವಾದಿಸುತ್ತಾ ಏನನ್ನು ಹೇಳಲಾಗದು, ಯಾವ ನೆಪಗಳೂ ಇರುವದಿಲ್ಲ. ನ್ಯಾಯತೀರ್ಪಿನ ದಿನದಲ್ಲಿ ಪ್ರತಿಯೊಬ್ಬನು ದೇವರ ಮುಂದೆ ಮೌನವಾಗಿ ನಿಲ್ಲುವನು.

20 ಯೆಹೂದ್ಯರು ತಾವು ಧರ್ಮಶಾಸ್ತ್ರವನ್ನು ಪಾಲಿಸುವದರ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಡುವವೆಂದು ಅಂದುಕೊಂಡರು. ಆದರೆ ಪೌಲನು ಇಲ್ಲಿ, ಯಾವನಾದರೂ, ನೇಮ ನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ ಎಂದು ಹೇಳುತ್ತಾನೆ. ಅದಕ್ಕೆ ಸರಳ ಕಾರಣವಿರುತ್ತದೆ: ಯಾರೊಬ್ಬರೂ ಸಹ ಎಲ್ಲಾ ಸಮಯಗಳಲ್ಲಿಯೂ ಧರ್ಮ ಶಾಸ್ತ್ರದ ಪ್ರತಿಯೊಂದು ಅಂಶವನ್ನೂ ಪರಿಪೂರ್ಣವಾಗಿ ಕೈಕೊಂಡು ನಡೆಯಲು ಸಾಧ್ಯವಿಲ್ಲ. ಒಬ್ಬನು ಧರ್ಮಶಾಸ್ತ್ರವನ್ನು ಪರಿಪೂರ್ಣವಾಗಿ ಪಾಲಿಸಿದಾಗ ಮಾತ್ರವೇ ನೀತಿವಂತನೆಂದು ನಿರ್ಣಯಿಸಲ್ಪಡುವನು (ಗಲಾತ್ಯ 11, ಯಾಕೋಬ 2:10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ವಾಸ್ತವದಲ್ಲಿ ಧರ್ಮಶಾಸ್ತ್ರವು ನಮ್ಮನ್ನು ನೀತಿವಂತರೆಂದು ನಿರ್ಣಯಿಸುವದಕ್ಕೆ ಬದಲಾಗಿ ಅಪರಾಧಿಗಳೆಂದು – ಯೆಹೂದ್ಯರನ್ನೂ ಗ್ರೀಕರನ್ನೂ ಸಮನಾಗಿ – ನಿರ್ಣಯಿಸುತ್ತದೆ. ಆದರೆ ಧರ್ಮಶಾಸ್ತ್ರವು ನಮಗೆ ಒಂದು ಪ್ರಾಮುಕ್ಯವಾದ ಸಂಗತಿಯನ್ನು ಮಾಡುತ್ತದೆ: ಇದು ನಮಗೆ ಪಾಪದ ಅರುಹನ್ನುಂಟುಮಾಡುತ್ತದೆ. ನಾವು ದೇವರ ಮಟ್ಟದಿಂದ ಎಷ್ಟರವರೆಗೆ ಬಿದ್ದುಹೋಗಿದ್ದೇವೆಂಬದರ ಅರುಹನ್ನು ಅದು ನಮಗೆ ಉಂಟು ಮಾಡುತ್ತದೆ, ನಾವು ದೇವರಿಂದ ಎಷ್ಟು ದೂರ ತೊಲಗಿ ಹೋಗಿದ್ದೇವೆಂಬದನ್ನು ತೋರ್ಪಡಿಸುತ್ತದೆ. ಮತ್ತು ಪ್ರತಿಯೊಬ್ಬ ಸ್ತ್ರೀ ಹಾಗು ಪು ರುಷನಿಗೂ ದೇವರ ಕಡೆಗೆ ತಿರಿಗಿಕೊಳ್ಳುವದಕ್ಕೆ ಅರುಹು ಪ್ರಥಮ ಹಜ್ಜೆಯಾಗಿದೆ.

## ನಂಬಿಕೆಯ ಮೂಲಕ ನೀತಿವಂತಿಕೆ (3:21-31)

21 ಪೌಲನು ಇಲ್ಲ ಪು ನಃ ತಾನು ರೋಮಾಪು ರದವರಿಗೆ 1:17ರಲ್ಲಿ ಹೇಳಿದ್ದನ್ನೇ ಹೇಳುತ್ತಾನೆ, ಆದೇನೆಂದರೆ, ಒಂದು ನೂತನ ವಾದ, ನಾವೆಲ್ಲರೂ ಯೇಸು ಕ್ರಿಸ್ತನನ್ನು ನಂಬುವದರ ಮೂಲಕ ಪಡೆದುಕೊಳ್ಳಬಹುದಾದ ನೀತಿಯು ಪ್ರಕಟವಾಗಿದೆ (ವಚನ 22).

ಈ ನೀತಿಯು ಧರ್ಮಶಾಸ್ತ್ರ ನಿಯಮಗಳ ಹೊರತಾಗಿದೆ. ಅಂದರೆ, ಇದು ಯೆಹೂದ್ಯ ಧರ್ಮಶಾಸ್ತ್ರದ ಮೇಲೆ ಆಧಾರವಾಗಿರುವದಿಲ್ಲ. ಇದು ಧರ್ಮಶಾಸ್ತ್ರದಿಂದ ಬೇರೆಯಾಗಿದೆ. ಪೌಲನು ಈಗಾಗಲೇ ವಚನ 20ರಲ್ಲಿ ಧರ್ಮಶಾಸ್ತ್ರವನ್ನನುಸರಿಸಿ ಯಾರೂ ನೀತಿವಂತರೆಂದು ನಿರ್ಣಯಿಸಲ್ಪಡುವದಿಲ್ಲ, ಎಂಬುದನ್ನು ತೋರಿಸಿದ್ದಾನೆ. ಆದುದರಿಂದ, ಒಬ್ಬನು ನೇಮ ನಿಷ್ಠೆಗಳನ್ನೂ ಅನುಸರಿಸುವದರಿಂದ ನೀತಿವಂತನಾಗಿ ನಿರ್ಣಯಿಸಲ್ಪಡದಿರುವದಾದರೆ ಇನ್ನೊಂದು ಮಾರ್ಗದ ಅಗತ್ಯವಿರುತ್ತದೆ, ಮತ್ತು ಆ

ಮಾರ್ಗವು ಯೇಸು ಕ್ರಿಸ್ತನನ್ನು ನಂಬುವದರಿಂದಲೇ ಆಗಿದೆ (ವಚನ 22). ಹಾಗಾದರೆ ಈ ನೂತನ ನೀತಿಯು ಕ್ರಿಸ್ತನ ನೀತಿಯಾಗಿದೆ, ಅದನ್ನು ನಾವು ಆತನಲ್ಲಿ ನಂಬಿಕೆಯಿಡುವದರಿಂದ ಪಡೆದುಕೊಳ್ಳುತ್ತೇವೆ. ಪೌಲನು ಇಲ್ಲಿ ಧರ್ಮಶಾಸ್ತ್ರದಿಂದಲೂ ಪ್ರವಾದಿಗಳ ನುಡಿಗಳಿಂದಲೂ 17 (ಹಳೆ ಒಡಂಬಡಿಕೆ) ಈ ನೂತನ ನೀತಿಯು ಸಾಕ್ಷಿಗೊಂಡಿರುತ್ತದೆ ಎಂದು ಹೇಳುತ್ತಾನೆ. ಇದು ಪೌಲನು ಕಂಡುಹಿಡಿದಂಥ ಒಂದು ನೂತನ ಬೋಧನೆಯಾಗಿರುವದಿಲ್ಲ, ಇದನ್ನು ಯೆಹೂದ್ಯರ ಶಾಸ್ತ್ರಗಳಿಂದಲೇ ತೆಗೆದುಕೊಳ್ಳಲಾಗಿರುತ್ತದೆ. ಹಳೆ ಒಡಂಬಡಿಕೆಯು ಬರಲಿರುವ ಕ್ರಿಸ್ತನೆಡೆಗೆ ದೃಷ್ಟಿಸೆಳೆಯಿತು. ಅಲ್ಲದೆ ಇದು ಧರ್ಮಶಾಸ್ತ್ರವು – ಕಲ್ಲಿನ ಹಲಿಗೆಗಳ ಮೇಲೆ ಬರೆಯಲಾಗಿದ್ದ – ಮನುಷ್ಯರು ಹೃದಯಗಳ ಮೇಲೆ ಬರೆಯಲ್ಪಡುವ ಒಂದು ನೂತನ ದಿನದ ಕಡೆಗೂ ಗಮನಸೆಳೆಯಿತು. (ಯೆರೆಮೀಯ 31:31-33). ಧರ್ಮಶಾಸ್ತ್ರವು ನಂಬಿಕೆಯ ಮೂಲಕ ಮನುಷ್ಯರ ಹೃದಯಗಳಲ್ಲಿ ಬರೆಯಲ್ಪಟ್ಟಾಗ ದೇವರ ದೃಷ್ಟಿಯಲ್ಲಿ ಅವರು ನೀತಿವಂತರೆಂದು ನಿರ್ಣಯಿಸಲ್ಪಡುವರು.

**22** ನಾವು ರಕ್ಷಣೆ ಹೊಂದುವದಕ್ಕೆ ಮುನ್ನ ದೇವರಿಂದ ನೀತಿವಂತರೆಂದು ನಿರ್ಣಯಿಸಲ್ಪಡಬೇಕು (ರೋಮ 1:17). ಯಾವ ಅನೀತಿವಂತ ವ್ಯಕ್ತಿಯು ಸಹ ದೇವರಿಂದ ಸ್ವೀಕರಿಸಲ್ಪಡುವದಿಲ್ಲ. ಅಥವಾ ಪರಲೋಕರಾಜ್ಯದೊಳಗೆ ಅನುಮತಿಸಲ್ಪಡುವದಿಲ್ಲ. ಆದುದರಿಂದ ಈ ನೂತನ ನೀತಿಯು ರಕ್ಷಣೆಯನ್ನು ನೀಡುವ ನೀತಿಯಾಗಿದೆ. ನಾವು ಹೇಳಬಹುದು. ಮತ್ತು ಇದನ್ನು ಪಡೆದುಕೊಳ್ಳಬೇಕಾದರೆ ನಾವು ಯೇಸುವಿನಲ್ಲಿ ನಂಬಿಕೆಯಿಡಬೇಕಷ್ಟೆ ಮತ್ತು ಈ ನೀತಿಯು ಯೆಹೂದ್ಯರಿಗೆ ಮಾತ್ರವೇ ಅಲ್ಲದೆ ಪ್ರತಿಯೊಬ್ಬರಿಗೂ ದೊರೆಯುವದಾಗಿದೆ. ಯೆಹೂದ್ಯರಿಗೂ ಅನ್ಯ. ಜನರಿಗೂ ಹೆಚ್ಚು ಕಡಿಮೆ ಏನೂ ಇಲ್ಲ, ಇಬ್ಬರೂ ಸಮಾನವಾಗಿ ಈ ನೀತಿಯನ್ನು ಹೊಂದಿಕೊಳ್ಳಬಹುದು.

**23** ಈ ವಚನದಲ್ಲಿ ಪೌಲನು 10-12 ವಚನಗಳಲ್ಲಿ ಬರೆಯಲ್ಪಟ್ಟಿರುವ ಸತ್ಯವನ್ನು ಪು ನರಾವರ್ತಿಸುತ್ತಾನೆ. ಎಲ್ಲರೂ ಅನೀತಿವಂತರಾಗಿದ್ದಾರೆ ಮಾನವರೆಲ್ಲರೂ ದೊಡ್ಡ ಮತ್ತು ಸಣ್ಣ ವಿಷಯಗಳಲ್ಲಿ ದೇವರಿಗೆ ಅವಿಧೇಯರಾಗಿದ್ದಾರೆ, ಆದುದರಿಂದ, ಮಾನವರೆಲ್ಲರಿಗೂ ಈ ನೂತನ ನೀತಿಯ ಅಗತ್ಯತೆ ಇರುತ್ತದೆ.

ಎಲ್ಲರೂ ದೇವರ ಮಹಿಮೆಯನ್ನು ಕಳೆದುಕೊಂಡಿದ್ದಾರೆ. ನಾವೆಲ್ಲರೂ ದೇವರ ಸ್ವರೂಪದಲ್ಲಿ ಮಾಡಲ್ಪಟ್ಟಿದ್ದೇವೆ (ಆದಿಕಾಂಡ 1:27). ಆದುದರಿಂದ, ನಾವೆಲ್ಲರೂ ದೇವರ ಮಹಿಮೆಯನ್ನು ಪ್ರತಿಬಿಂಬಿಸಬೇಕು. ಆದರೆ ನಮ್ಮ ಅನೀತಿಯ ಕಾರಣದಿಂದಾಗಿ ನಮಗೆ ಅದು ಸಾದ್ಯವಾಗುತ್ತಿಲ್ಲ. ನಾವು ಹೊಲಸು ಕನ್ನಡಿಯಂತಿದ್ದೇವೆ. ಒಬ್ಬ ಮನುಷ್ಯನು ಮಾತ್ರವೇ ಇದುವರೆಗೂ ದೇವರ ಮಹಿಮೆಯನ್ನು ಪರಿಪು ರ್ಣವಾಗಿ ಪ್ರತಿಬಿಂಬಿಸಿರುತ್ತಾನೆ – ಆ ಮನುಷ್ಯನು ಯೇಸು ಕ್ರಿಸ್ತನು (ಯೋಹಾನ 1:14 ಮತ್ತು ವ್ಯಾಖ್ಯಾನ ನೋಡಿರಿ).

**24** ಈ ಅತಿ ಪ್ರಾಮುಖ್ಯವಾದ ವಚನದಲ್ಲಿ ಪೌಲನು ನಮಗೆ ಕ್ರಿಸ್ತನ ಸುವಾರ್ತೆಯ ತಿರುಳನ್ನು ನೀಡುತ್ತಾನೆ. ಮನುಷ್ಯರು ನೀತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥ ಕೃಪೆಯಿಂದಲೇ, ಮನುಷ್ಯರು ದೇವರ ಕೃಪೆಯಿಂದ ಉಚಿತವಾಗಿ ರಕ್ಷಿಸಲ್ಪಡುತ್ತಾರೆಂಬುದು ಇದರ ಅರ್ಥವಾಗಿದೆ (ಎಫೆಸ 2:8 ಮತ್ತು ವ್ಯಾಖ್ಯಾನ ನೋಡಿರಿ). ಪ್ರಾರಂಭದಲ್ಲಿ ಮಾನವರಿಗೆ ನಿರೀಕ್ಷೆಯನ್ನು ಅಂದರೆ ನೀತಿವಂತರಾಗುವ, ರಕ್ಷಣೆ ಹೊಂದುವ ನಿರೀಕ್ಷೆಯನ್ನು [18] ಹೊಂದಿರಲಿಲ್ಲ. ಆದರೆ ಈಗ, ದೇವರು ತನ್ನ ಮಹಾ ಪ್ರೀತಿ, ಕರುಣೆಗಳಿಂದಾಗಿ ಮನುಷ್ಯರು ರಕ್ಷಣೆ ಹೊಂದಬಹುದಾದ ಒಂದು ದಾರಿಯನ್ನು ಮಾಡಿದ್ದಾನೆ: ಅದು, ಯೇಸು ಕ್ರಿಸ್ತನನ್ನು ನಂಬುವದೇ ಆಗಿದೆ. ನಮ್ಮ ರಕ್ಷಣೆಯು ಉಚಿತವಾಗಿ ಕೊಡಲ್ಪಟ್ಟಿದೆ. ನಾವು ರಕ್ಷಣೆ ಹೊಂದುವದಕ್ಕಾಗಿ ಎಲ್ಲಾ ರೀತಿಯ ಸತ್ಕ್ರೀಯೆಗಳನ್ನು ಮಾಡಬೇಕಾಗಿಲ್ಲ, ನಾವು ನಮ್ಮ ರಕ್ಷಣೆಯನ್ನು ಸಂಪಾದಿಸಿ ಕೊಳ್ಳಬೇಕಾಗಿಲ್ಲ. ಯೇಸು ಕ್ರಿಸ್ತನು ನಮಗಾಗಿ ನಮ್ಮ ರಕ್ಷಣೆಯನ್ನು "ಸಂಪಾದಿಸಿಕೊಂಡಿದ್ದಾನೆ" ಆತನು ನಮ್ಮ ರಕ್ಷಣೆಗಾಗಿ ಕ್ರಯವನ್ನು ಸಲ್ಲಿಸಿರುತ್ತಾನೆ. ಆ ಕ್ರಯವು ಆತನ ಸ್ವ ಪ್ರಾಣವೇ.

ಪೌಲನು ಇಲ್ಲಿ ನಾವು ಯೇಸು ವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ನೀತಿವಂತರಾಗಿದ್ದೇವೆಂದು ಹೇಳುತ್ತಾನೆ. ನೀತಿಕರಣವು ನಮ್ಮ ರಕ್ಷಣೆಯ ಒಂದು ಭಾಗವಾಗಿದೆ. ನಾವು ರಕ್ಷಿಸಲ್ಪಡುವ ವೇಳೆಯಲ್ಲಿ ನಾವು ನೀತಿವಂತರು ಸಹ ಆಗಿದ್ದೇವೆಂಬುದು ಇದರ ಅರ್ಥವಾಗಿದೆ. ನೀತಿವಂತರಾಗುವದು ಮತ್ತು ರಕ್ಷಿಸಲ್ಪಡುವದು ಎರಡೂ ಯಾವಾಗಲೂ ಒಟ್ಟಾಗಿ ಸಾಗುತ್ತವೆ, ನೀವು ಒಂದನ್ನು ಬಿಟ್ಟು ಇನ್ನೊಂದನ್ನು ಹೊಂದಲು ಸಾದ್ಯವಿಲ್ಲ.

ನೀತಿಕರಣ ಮತ್ತು ರಕ್ಷಣೆ ಎರಡೂ ಉಚಿತ ವರಗಳಾಗಿವೆ ಮತ್ತು ಎರಡೂ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಬಂದಿರುತ್ತವೆ. ನೀತಿಕರಣವು ರಕ್ಷಣೆ ಹೊಂದಿರುವದರ ಮೊದಲ ಹಂತವಾಗಿದೆ. ರಕ್ಷಣೆಯ ಇತರ ಎಲ್ಲಾ ಆಶಿರ್ವಾದಗಳನ್ನು ಪಡೆದುಕೊಳ್ಳುವಂತೆ ಇದು ನಮಗೆ ದಾರಿಮಾಡುತ್ತದೆ (ಸಾಮಾನ್ಯಲೇಖನ: ರಕ್ಷಣೆಯ ಮಾರ್ಗ ನೋಡಿರಿ).

**25** ಕ್ರಿಸ್ತನು ನಮ್ಮನ್ನು ಹೇಗೆ ರಕ್ಷಿಸಿದನು? ಪೌಲನು ಆ ಪ್ರಶ್ನೆಗೆ ಈ ವಚನದಲ್ಲಿ ಉತ್ತರಿಸುತ್ತಾನೆ. ಈತನು (ಕ್ರಿಸ್ತನು) ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು (ಪ್ರಾಯಶ್ಚಿತ್ತ) ದೇವರು ಈತನನ್ನು ಮುಂದಿಟ್ಟನು. ಪಾಪವಿಮೋಚನೆಯ ಯಜ್ಞವು ಒಂದು ಕ್ರಿಯೆಯಾಗಿದ್ದು ಅದರಲ್ಲಿ ಒಬ್ಬ ವ್ಯಕ್ತಿಯು ನಮ್ಮ ಪಾಪದ ದಂಡನೆಯನ್ನು ತೆಗೆದುಕೊಳ್ಳುವದಾಗಿದೆ. ನಮ್ಮ ಪಾಪಗಳ ದಂಡನೆಯು ಒಮ್ಮೆ ಮತ್ತೊಬ್ಬನಿಗೆ ಕೊಡಲ್ಪಟ್ಟ ಮೇಲೆ ಇನ್ನು ಆ ಪಾಪಗಳನ್ನು ನಮ್ಮ ಲೆಕ್ಕಕ್ಕೆ ಎಣಿಸಲಾಗುವದಿಲ್ಲ, ನಾವು ದೇವರೊಂದಿಗೆ ಸರಿಯಾದ ಸಂಬಂಧವನ್ನು ಪು ನ: ಹೊಂದಿದವರಾಗಿದ್ದೇವೆ. ಹೀಗೆ ಯೇಸು ನಮ್ಮ ಪ್ರಾಯಶ್ಚಿತ್ತ ಅಥವಾ ಪಾಪವಿಮೋಚನೆಯ ಯಜ್ಞವಾಗಿದ್ದಾನೆ ಎಂದು ನಾವು ಹೇಳಬಹುದು. ಆತನು ಮಾನವನ ಪಾಪವನ್ನು ತನ್ನ ಮೇಲೆ ವಹಿಸಿಕೊಂಡನು ಮತ್ತು ಅವರಿಗೋಸ್ಕರ ದಂಡನೆಯನ್ನು ಸ್ವೀಕರಿಸಿಕೊಂಡನು. ನಮ್ಮ ಪಾಪಗಳಿಗಾಗಿ "ಈಡು" ಕೊಡಲಾಗಿದೆ, ಇನ್ನೆಂದಿಗೂ ದೇವರು ಅವು ಗಳನ್ನು ನಮ್ಮ ವಿರುದ್ಧವಾಗಿ ಎಣಿಸುವದಿಲ್ಲ.

ಪಾಪಕ್ಕಾಗಿ ದೇವರು ಕೊಡುವಂತಹ ಶಿಕ್ಷೆಯಾವದು? ಅದು ಮರಣವೇ (ರೋಮ 6:23). ಆದುದರಿಂದ, ಕ್ರಿಸ್ತನು ನಮ್ಮ ಶಿಕ್ಷೆಯನ್ನು ತೆಗೆದುಕೊಳ್ಳಲು ತನ್ನ ರಕ್ತವನ್ನು ಸುರಿಸಬೇಕಾಯಿತು, ಅಂದರೆ ಆತನು ಸಾಯಬೇಕಾಗಿತ್ತು. ಹೀಗೆ ಆತನ ರಕ್ತದಲ್ಲಿ (ಮರಣದಲ್ಲಿ) ನಂಬಿಕೆಯಿಡುವದರ ಮೂಲಕವೇ ಕ್ರಿಸ್ತನು ನಮ್ಮ ವಯುಕ್ತಿಕ ಪ್ರಾಯಶ್ಚಿತ್ತ ಯಜ್ಞವಾಗುತ್ತಾನೆ. ಕ್ರಿಸ್ತನು ನಮ್ಮ ಪಾಪಗಳನ್ನು ಹೊತ್ತುಕೊಳ್ಳಲು ಸತ್ತಿರುತ್ತಾನೆಂಬದನ್ನು ನಾವು ನಂಬಬೇಕಾಗುತ್ತದೆ. ಇಲ್ಲವಾದರೆ ಆತನ ಮರಣ, ಆತನ ಪಾಪ ವಿಮೋಚನೆಯ ಯಜ್ಞದಿಂದ ನಮಗೆ ಯಾವ ಪ್ರಯೋಜನವೂ ಆಗುವದಿಲ್ಲ (ಮಾರ್ಕ 10:45, 1 ಯೋಹಾನ 2:2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಇದೆಲ್ಲದರಿಂದಲೂ ನಾವು ದೇವರ ಕುರಿತು ಎರಡು ಸಂಗತಿಗಳನ್ನು ನೋಡಬಹುದು: ಮೊದಲನೆಯದಾಗಿ, ಆತನ ನ್ಯಾಯ (ಅಥವಾ ನೀತಿ) ಮತ್ತು ಎರಡನೆಯದಾಗಿ, ಆತನ ಪ್ರೀತಿ, ದೇವರು ನ್ಯಾಯವಂತನೂ, ನೀತಿವಂತನೂ ಆಗಿರುವದರಿಂದ ಆತನು ಪಾಪವನ್ನು ಶಿಕ್ಷಿಸಲೇಬೇಕು. ಆತನು ತನ್ನ ನೀತಿಯನ್ನು ತೋರ್ಪಡಿಸಬೇಕೆಂತಲೇ ನಮ್ಮ ಪಾಪಗಳಿಗಾಗಿ ಕ್ರಿಸ್ತನನ್ನು ದಂಡಿಸಿದನು. ಆದರೆ ನಮಗಾಗಿ ಆತನು ಹೊಂದಿರುವ ಪ್ರೀತಿಯ ಕಾರಣದಿಂದಲೂ ಸಹ ದೇವರು ಕ್ರಿಸ್ತನನ್ನು ನಮ್ಮ ಸ್ಥಾನದಲ್ಲಿ ದಂಡಿಸಿದನು. ವಾಸ್ತವದಲ್ಲಿ ದೇವರು ಕ್ರಿಸ್ತನನ್ನು ದಂಡಿಸುವದರಲ್ಲಿ ಸ್ವತಃ ತಾನೇ ದಂಡನೆಯನ್ನು ತೆಗೆದುಕೊಳ್ಳುವವನಾಗಿದ್ದನು. ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು (ಯೋಹಾನ 3:16).

ಕ್ರಿಸ್ತನು ನಮಗಾಗಿ ಹೊಂದಿದ ತ್ಯಾಗಮಯ ಮರಣ ಪ್ರಯೋಜನಗಳನ್ನು ಸ್ವಂತ ಮಾಡಿಕೊಳ್ಳುವದಕ್ಕಾಗಿ ನಾವು ಒಂದೇ ಸಂಗತಿಯನ್ನು ಮಾಡಬೇಕು: ಆತನಲ್ಲಿಯೂ ಆತನು ನಮಗಾಗಿ ಮಾಡಿದ ಕಾರ್ಯದಲ್ಲಿಯೂ ನಂಕೆಯಿಡಬೇಕು. ಕ್ರಿಸ್ತನಲ್ಲಿಯೂ ಆತನ ಮರಣ (ರಕ್ತ) ದಲ್ಲಿಯೂ, ನಂಬಿಕೆಯಿಡುವದರ ಮೂಲಕ ನಾವು ನೀತಿವಂತರೆಂದು ನಿರ್ಣಯಿಸಲ್ಪಟ್ಟು ನ್ಯಾಯತೀರ್ಪಿನ ದಿನದಲ್ಲಾಗುವ ದಂಡನೆಯಿಂದ ತಪ್ಪಿಸಿಕೊಳ್ಳುವವರಾಗಿದ್ದೇವೆ. ಈ ವಚನದಲ್ಲಿ ವಿವರಣೆ ಕೊಡಬೇಕಾದ ಒಂದು ವಾಕ್ಯವು ಉಳಿದು ಕೊಂಡಿರುತ್ತದೆ: ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿದ್ದಾನೆ. ನೂರಾರು ವರ್ಷಗಳ ವರೆಗೆ ದೇವರು ಯೆಹೂದ್ಯರಿಗೆ ಮಹಾ ಸಹನೆ (ತಾಳ್ಮೆ)ಯನ್ನು ತೋರಿಸಿದ್ದಾನೆ. ಆತನು ಅವರ ಪಾಪಗಳ ದಂಡನೆಯನ್ನು ತಡಮಾಡಿದ್ದಾನೆ. ಆತನು ಅವರಿಗೆ ತಮ್ಮ ಪಾಪಗಳಿಗಾಗಿ ಪಶ್ಚಾತಾಪ ಪಟ್ಟು ಯೇಸುವಿನಲ್ಲಿ ನಂಬಿಕೆಯಿಡುವದಕ್ಕೆ ಅವಕಾಶವನ್ನು ಕೊಡಲಿಚ್ಚಿಸಿದನು. ಮತ್ತು ಇಂದಿನ ತನಕವೂ ದೇವರು ಎಲ್ಲಾ ಮಾನವರ ವಿಷಯದಲ್ಲಿ ಸಹಿಸಿಕೊಂಡಿರುತ್ತಾನೆ. ಎಲ್ಲರಿಗೂ ದೀರ್ಘಶಾಂತಿಯನ್ನು ತೋರಿಸುತ್ತಲಿದ್ದಾನೆ. ಎಲ್ಲಾ ಮನುಷ್ಯರು ರಕ್ಷಣೆಯನ್ನು ಪಡೆದುಕೊಳ್ಳಬೇಕು ಎಂಬುದು ಆತನ ಬಯಕೆಯಾಗಿದೆ (1 ತಿಮೊಥೆ 2:4). ಆದುದರಿಂದ, ಇನ್ನು ಅವಕಾಶ ಇರುವಾಗಲೇ ಕ್ರಿಸ್ತನನ್ನು ನಂಬುವಂತೆ ಸ್ತ್ರೀಪುರುಷರನ್ನು ಪ್ರೋತ್ಸಾಹಿಸೋಣ!

**26** ಇಲ್ಲಿ ಪೌಲನು ತಾನು 24-25 ವಚನಗಳಲ್ಲಿ ಹೇಳಿದ ಸಂಗತಿಯನ್ನು ಪುನಃ ಹೇಳುತ್ತಾನೆ. ದೇವರು (ಪಾಪವನ್ನು ದಂಡಿಸುವದರ ಮೂಲಕ) ನೀತಿಸ್ವರೂಪನಾಗಿ ಕಾಣಿಸಿಕೊಳ್ಳುವದಕ್ಕಾಗಿ ಕ್ರಿಸ್ತನನ್ನು ಪಾಪವಿಮೋಚನಾರ್ಥವಾಗಿ ಕಳುಹಿಸಿದನು. ದೇವರು ಇದನ್ನು ಎರಡು ಕಾರಣಗಳಿಗಾಗಿ ಮಾಡಿದನು: ಮೊದಲನೆಯದಾಗಿ, ಆತನು ನೀತಿಸ್ವರೂಪನಾಗಿ ಇರುವದಕ್ಕಾಗಿ ಇದನ್ನು ಮಾಡಿದನು. ಎರಡನೆಯದಾಗಿ, ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವದಕ್ಕಾಗಿ ಮಾಡಿದನು. ಈ ಎರಡು ಕಾರಣಗಳಲ್ಲಿ ನಾವು ಪುನಃ ದೇವರ ನ್ಯಾಯ (ನೀತಿ) ಮತ್ತು ಪ್ರೀತಿಯನ್ನು ಕಾಣುತ್ತೇವೆ. ನಾವು ಎಂದಿಗೂ ಸಹ ದೇವರ ಈ ಎರಡು ಗುಣಲಕ್ಷಣಗಳನ್ನು – ನೀತಿ ಮತ್ತು ಪ್ರೀತಿ – ಬೇರ್ಪಡಿಸಬಾರದು, ಅವುಗಳು ಯಾವಾಗಲೂ ಒಟ್ಟಾಗಿ ಸಾಗುತ್ತವೆ.

**27** ಯಾವ ಪ್ರಮಾಣದಿಂದ, ಅಥವಾ ಯಾವ ಆಧಾರದ ಮೇಲೆ ದೇವರು ಮಾನವನನ್ನು ಉಚಿತವಾಗಿ ನೀತಿವಂತನೆಂದು ನಿರ್ಣಯಿಸುತ್ತಾನೆ? ಆತನು ಮಾನವನನ್ನು ಕರ್ಮ ಮಾರ್ಗವನ್ನು ಅನುಸರಿಸುವದರಿಂದ –ಅಂದರೆ ಮನುಷ್ಯನ ಒಳ್ಳೇ ಕಾರ್ಯಗಳಿಂದ – ನೀತಿವಂತನೆಂದು ನಿರ್ಣಯಿಸುತ್ತಾನೋ? ಅಲ್ಲ, ಎಂದು ಪೌಲನು ಉತ್ತರಿಸುತ್ತಾನೆ. ಯಾವ ಮನುಷ್ಯನೂ ಯೆಹೂದ್ಯ ಧರ್ಮ ಶಾಸ್ತ್ರದ ಕಾರ್ಯಗಳಿಂದ ನೀತಿವಂತನಾಗುವದಿಲ್ಲ (ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ – (ಗಲಾತ್ಯ 2:15-16 ಮತ್ತು ವ್ಯಾಖ್ಯಾನ ನೋಡಿರಿ). ಹೀಗೆ ಹೊಗಳಿಕೊಳ್ಳುವದಕ್ಕೆ ಆಸ್ಪದವಿಲ್ಲ. ಯಾರೊಬ್ಬರೂ ಸಹ " ನಾನು ನನ್ನ ಒಳ್ಳೇ ಕಾರ್ಯಗಳಿಂದ ನನ್ನನ್ನು ನೀತಿವಂತನೆಂದು ನಿರೂಪಿಸಿಕೊಂಡಿದ್ದೇನೆ ಮತ್ತು ನಾನು ರಕ್ಷಣೆ ಹೊಂದಲು ಯೋಗ್ಯನಾಗಿದ್ದೇನೆ" ಎಂದು ಹೇಳಲು ಸಾಧ್ಯವಿಲ್ಲ. ಬದಲಾಗಿ, ವಿಶ್ವಾಸ ಮಾರ್ಗ ಅನುಸರಿಸುವದರಿಂದಲೇ ಒಬ್ಬನು ನೀತಿವಂತನಾಗಿ ರಕ್ಷಿಸಲ್ಪಡುವನು ಎಂದು ಪೌಲನು ಹೇಳುತ್ತಾನೆ (ಎಫೆಸ 2:8-9 ಮತ್ತು ವ್ಯಾಖ್ಯಾನ ನೋಡಿರಿ).

**28** ಇಲ್ಲಿ ಪೌಲನು ಕರ್ಮ ಮಾರ್ಗಗಳಿಲ್ಲದೆ (ಯೆಹೂದ್ಯ ಧರ್ಮಶಾಸ್ತ್ರ) ನಂಬಿಕೆಯಿಂದಲೇ ಮನುಷ್ಯರು ನೀತಿವಂತರೆಂದು ನಿರ್ಣಯಿಸಲ್ಪಡುವರು ಮೇಲಿನ ಚರ್ಚೆಯನ್ನು ಮುಕ್ತಾಯಗೊಳಿಸುತ್ತಾನೆ.

**29-30** ಆದ್ದರಿಂದ, ಮನುಷ್ಯನು ಯೆಹೂದ್ಯ ಧರ್ಮಶಾಸ್ತ್ರದ ಹೊರತಾಗಿ ನೀತಿವಂತನೆಂದು ನಿರ್ಣಯಿಸಲ್ಪಡುವರಾದ ಕಾರಣ ರಕ್ಷಣೆ ಹೊಂದುವದಕ್ಕೆ ಯೆಹೂದ್ಯರಿಗೆ ಹೇಗೆ ಉತ್ತಮ ಅವಕಾಶವಿದೆಯೋ ಹಾಗೆಯೇ ಅನ್ಯ ಜನರಿಗೂ ಇರುತ್ತದೆ. ದೇವರು ಯೆಹೂದ್ಯರಿಗೂ ಅನ್ಯ ಜನರಿಗೂ ದೇವರಾಗಿದ್ದಾನೆ, ಮತ್ತು ಆತನು ಇಬ್ಬರನ್ನೂ ಸಮಾನವಾಗಿ ಪ್ರೀತಿಸುತ್ತಾನೆ. ದೇವರು ಸುನ್ನತಿಯವರನ್ನು (ಯೆಹೂದ್ಯರು) ನಂಬಿಕೆಯ ಆಧಾರದಿಂದ ನೀತಿವಂತರೆಂದು ನಿರ್ಣಯಿಸುತ್ತಾನೆ, ಮತ್ತು ಆತನು ಸುನ್ನತಿಯಿಲ್ಲದವರನ್ನೂ (ಅನ್ಯ ಜನರನ್ನು) ನಂಬಿಕೆಯ ಆಧಾರದಿಂದಲೇ ನೀತಿವಂತರೆಂದು ನಿರ್ಣಯಿಸುತ್ತಾನೆ. ಯೆಹೂದ್ಯರು ಮತ್ತು ಅನ್ಯ. ಜನರ ನಡುವೆ ಹೆಚ್ಚು ಕಡಿಮೆ ಏನೂ ಇಲ್ಲ (ವಚನ 22).

31 ರಕ್ಷಣೆಗೆ ಹೊಂದುವದಕ್ಕೆ ನಂಬಿಕೆಯೊಂದೆ ಅವಶ್ಯಕವಾಗಿರುವದಾದರೆ ಯೆಹೂದ್ಯ ಧರ್ಮ ಶಾಸ್ತ್ರವು ನಿರರ್ಥಕ ಎಂದು ಪೌಲನ ತಾತ್ಪರ್ಯವೋ? ಎಂದಿಗೂ ಇಲ್ಲ. ಈ ನಂಬಿಕೆಯಿಂದ ಧರ್ಮ ಪ್ರಮಾಣವನ್ನು ನಿರರ್ಥಕಮಾಡುವದಿಲ್ಲ ಆದರೆ ಬದಲಾಗಿ ಧರ್ಮಶಾಸ್ತ್ರವನ್ನು ಸ್ಥಿರಪಡಿಸುತ್ತೇನೆ ಎಂದು ಪೌಲನು ಹೇಳುತ್ತಾನೆ. ದರ್ಮಶಾಸ್ತ್ರವು ಹೇಳುವದೇನೆಂದರೆ: "ಪಾಪವು ದಂಡಿಸಲ್ಪಡಬೇಕು " ನಂಬಿಕೆಯು" ಕ್ರಿಸ್ತನು ಆ ದಂಡನೆಯನ್ನು ಹೊತ್ತುಕೊಂಡನು ಎನ್ನುತ್ತದೆ. ಆದುದರಿಂದ, ನಂಬಿಕೆಯು ಧರ್ಮಶಾಸ್ತ್ರವನ್ನು ವಿರೋಧಿಸುವದಿಲ್ಲ ಅಥವಾ ಧರ್ಮಶಾಸ್ತ್ರವನ್ನು ನಿರರ್ಥಕವೂ ಮಾಡುವದಿಲ್ಲ, ಬದಲಾಗಿ ನಂಬಿಕೆಯು ಧರ್ಮಶಾಸ್ತ್ರವನ್ನು ಎತ್ತಿ ಹಿಡಿಯುತ್ತದೆ. ನಂಬಿಕೆಯು (ಅಥವಾ ನಾವು ಕ್ರಿಸ್ತನೆಂದು ಹೇಳಬಹುದು) ಧರ್ಮಶಾಸ್ತ್ರವನ್ನು ನೆರವೇರಿಸುತ್ತದೆ. ಯಾಕೆಂದರೆ ಧರ್ಮ ಶಾಸ್ತ್ರವು ಮನುಷ್ಯನನ್ನು ರಕ್ಷಿಸದಿದ್ದಾಗ ಕ್ರಿಸ್ತನಲ್ಲಿಡುವ ನಂಬಿಕೆಯು ರಕ್ಷಿಸಬಲ್ಲದು (ಮತ್ತಾಯ 5:17 ಮತ್ತು ವ್ಯಾಖ್ಯಾನ ನೋಡಿರಿ). ಕ್ರಿಸ್ತನು ಸ್ವತಃ ಬಂದು ರಕ್ಷಣೆಯ ಮಾರ್ಗವನ್ನು ನಮಗಾಗಿ ತೆರೆದನು. ಮತ್ತು ನಾವು ಆತನಲ್ಲಿ ನಂಬಿಕೆಯಿಡುವದರ ಮೂಲಕ ಆ ರಕ್ಷಣೆಯೊಳಗೆ ಪ್ರವೇಶಿಸಬಹುದು (ರೋಮ 8:3-4 ಮತ್ತು ವ್ಯಾಖ್ಯಾನ ನೋಡಿರಿ).

---

# ಅಧ್ಯಾಯ - 4

## ಅಬ್ರ ಹಾಮನು ನಂಬಿಕೆಯಿಂದಲೇ ನೀತಿವಂತನೆಂದು ನಿರ್ಣಯಿಸಲ್ಪಟ್ಟನು (4:1-12)

1 ಅಬ್ರಹಾಮನು (ಅಬ್ರಾಮ ಎಂದು ಸಹ ಕರೆಯಲಾಗಿರುವ ) ಪ್ರಪ್ರಥಮ ಯೆಹೂದ್ಯನಾಗಿದ್ದನು. ದೇವರು ಅಬ್ರಹಾಮನನ್ನು ಒಂದು ನೂತನ ಜನಾಂಗಕ್ಕೆ ಪಿತೃವಾಗಿರುವದಕ್ಕೆ ಕರೆದನು (ಆದಿಕಾಂಡ 12:1-5, 17:3-8). ಹೀಗೆ ಅಬ್ರಹಾಮನು ಎಲ್ಲಾ ಯೆಹೂದ್ಯರ ಮೂಲ ಪಿತೃವಾಗಿದ್ದಾನೆ (ಮತ್ತಾಯ 1:1-2).

ಅಬ್ರಹಾಮನು ಕ್ರಿಸ್ತನಿಗಿಂತಲೂ ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಜನಿಸಿದನು. ಆತನು ಉರ್ ಎಂಬ ಊರಿನಲ್ಲಿ ಜನಿಸಿದ್ದನು, ಅದು ಇಂದಿನ ಆಧುನಿಕ ಇರಾಕಿನಲ್ಲಿತ್ತು. ಅಲ್ಲಿಂದ ಆತನು ತನ್ನ ತಂದೆಯೊಂದಿಗೆ ಇಂದಿನ ಟರ್ಕಿಯಲ್ಲಿನ ಹಾರಾನ ಎಂಬ ಸ್ಥಳಕ್ಕೆ ವಲಸೆ ಹೋದನು (ಆದಿಕಾಂಡ 11:31).

ಆದರ ನಂತರ ದೇವರ ಕರೆಗೆ ವಿಧೇಯನಾಗಿ (ಆದಿಕಾಂಡ 12:1), ಅಬ್ರಹಾಮನು ಕಾನಾನ ದೇಶಕ್ಕೆ ಹೋದನು (ಅನಂತರ ಇಸ್ರಾಯೇಲ ಆಗಲಿದ್ದ ದೇಶ ಅದಾಗಿತ್ತು), ದೇವರು ಅಬ್ರಹಾಮನಿಗೂ, ಆತನ ಸಂತತಿಗಳಿಗೂ ಅದನ್ನು ಸಿದ್ಧ ಪಡಿಸಿದ್ದನು ಆದರೆ ಅಲ್ಲಿ ಒಂದು ದೊಡ್ಡ ಸಮಸ್ಯೆಯಿತ್ತು: ಅಬ್ರಹಾಮನ ಹೆಂಡತಿಯಾದ ಸಾರಳು ಬಂಜೆಯಾಗಿದ್ದಳು. ದೇವರು ಅಬ್ರಹಾಮನಿಗೆ "ನಾನು ನಿನ್ನನ್ನು ಒಂದು ದೊಡ್ಡ ಜನಾಂಗವಾಗಿ ಮಾಡುವೆನು" ಎಂದು ವಾಗ್ದಾನ ಮಾಡಿದ್ದನು (ಆದಿಕಾಂಡ 12:2). ಆದರೆ ಮಕ್ಕಳನ್ನು ಹೆರದ ಸಾರಯಳ ಮೂಲಕ ದೇವರ ವಾಗ್ದಾನವು ಹೇಗೆ ನೆರವೇರಲು ಸಾಧ್ಯ? ದೇವರು ಅಬ್ರಹಾಮನಿಗೆ ಈ ವಾಗ್ದಾನವನ್ನು ಮಾಡಿದ ವೇಳೆಯಲ್ಲಿ ಸಾರಯಳು ಆಗಾಗಲೇ ವೃದ್ಧಳೂ ಮಕ್ಕಳನ್ನು ಹೆರುವ ವಯಸ್ಸನ್ನು ದಾಟಿದವಳೂ ಆಗಿದ್ದಳು. ಆದುದರಿಂದ, ಅಬ್ರಹಾಮನು ಪ್ರಾರಂಭದಲ್ಲಿ ದೇವರ ಮಾತನ್ನು ಸಂಶಯಿಸಿದ್ದನು (ಆದಿಕಾಂಡ 15:2-3). ಮತ್ತು ಈ ಕಾರಣದಿಂದ ದೇವರು ಅಬ್ರಹಾಮನಿಗೆ ಹೇಳಿದ್ದೇನೆಂದರೆ: "ಆಕಾಶದ ಕಡೆಗೆ ನೋಡು, ನಕ್ಷತ್ರಗಳನ್ನು ಲೆಕ್ಕಿಸುವದು ನಿನ್ನಿಂದಾದರೆ ಲೆಕ್ಕಿಸು: ನಿನ್ನ ಸಂತಾನವು ಅಷ್ಟಾಗುವದು" (ಆದಿಕಾಂಡ 15:5).

ಅಂದಿನಿಂದ, ಅಬ್ರಹಾಮನು ದೇವರನ್ನು ಸಂಶಯಿಸಲಿಲ್ಲ, ಆದರೆ ತನಗೂ, ತನ್ನ ಹೆಂಡತಿಯಾದ ಸಾರಯಳಿಗೂ ಮಗನನ್ನು ಕೊಡುತ್ತೇನೆಂಬ ವಾಗ್ದಾನವನ್ನು ದೇವರು ನಿಶ್ಚಯವಾಗಿಯೂ ನೆರವೇರಿಸುವನೆಂದು ನಂಬಿದನು.

ಅಬ್ರಹಾಮನು ನೂರು ವರ್ಷದವನೂ, ಸಾರಯಳು ತೊಂಬತ್ತು ವರ್ಷದವಳೂ ಆಗಿರುವಾಗ, ಸಾರಯಳು ಗಂಡು ಮಗುವಿಗೆ ಜನ್ಮ ನೀಡಿದಳು. ಅಬ್ರಹಾಮನು ಅವನಿಗೆ ಇಸಾಕ ಎಂದು ಹೆಸರಿಟ್ಟನು (ಆದಿಕಾಂಡ 21:1-5).

1ನೇ ವಚನದಲ್ಲಿ ಪೌಲನು ಅಬ್ರಹಾಮನನ್ನು ನಮಗೆ ಮೂಲ ಪಿತೃ[19] ಎಂದು ಕರೆಯುತ್ತಾನೆ, ಯಾಕೆಂದರೆ ಯೆಹೂದ್ಯನಾಗಿದ್ದ ಪೌಲನು ಸಹ ಅಬ್ರಹಾಮನ ಸಂತತಿಯವನಾಗಿದ್ದನು. ಯೆಹೂದ್ಯರು ತಾವು ಮಾತ್ರವೇ ನ್ಯಾಯ ಸಮ್ಮತವಾಗಿ ಅಬ್ರಹಾಮನ ಸಂತತಿಯಾಗಿದ್ದೇವೆಂದು ಪರಿಗಣಿಸಿಕೊಂಡಿದ್ದರು.

2 ಹಳೆ ಒಡಂಬಡಿಕೆಯ ಪ್ರಕಾರವಾಗಿ ಅಬ್ರಹಾಮನು ನೀತಿವಂತನೆಂದು[20] ಪರಿಗಣಿಸಲ್ಪಟ್ಟಿದ್ದನು (ಆದಿಕಾಂಡ 15:6). ಆತನು ಹೇಗೆ ನೀತಿವಂತನೆಂದು ನಿರ್ಣಯಿಸಲ್ಪಟ್ಟನು? ಅಬ್ರಹಾಮನು ಸುನ್ನತಿ ಮಾಡಿಸಿಕೊಂಡಿದ್ದರಿಂದಲೇ ನೀತಿವಂತನಾದನು (ದೇವರಿಂದ ನೀತಿವಂತನೆಂದು ನಿರ್ಣಯಿಲ್ಪಟ್ಟನು) ಎಂದು ಯೆಹೂದ್ಯರು ತಪ್ಪಾಗಿ ಯೋಚಿಸಿಕೊಂಡಿದ್ದರು. ದೇವರು ಪ್ರಾರಂಭದಲ್ಲಿ ಅಬ್ರಹಾಮನಿಗೆ ಹೇಳಿದ್ದೇನೆಂದರೆ: "ನೀವು ಮಾನ ಸ್ಥಾನದಲ್ಲಿ ಸುನ್ನತಿ ಮಾಡಿಕೊಳ್ಳಬೇಕು: ಅದೇ ನಿಮಗೂ ನನಗೂ ಉಂಟಾದ ಒಡಂಬಡಿಕೆಗೆ ಗುರುತು" (ಆದಿಕಾಂಡ 17:9-14). ಹೀಗೆ ಯೆಹೂದ್ಯರು ಯೋಚಿಸಿದ್ದೇನೆಂದರೆ ಅಬ್ರಹಾಮನು ದೇವರ ದೃಷ್ಟಿಯಲ್ಲಿ ನೀತಿವಂತನಾದನು ಎಂಬದಾಗಿ. ಅದು ಮಾತ್ರವಲ್ಲದೆ, ಯೆಹೂದ್ಯರು ತಾವು ಸರಿಯಾಗಿ ಸುನ್ನತಿಮಾಡಿಸಿಕೊಂಡು ಯೆಹೂದ್ಯ ಧರ್ಮಶಾಸ್ತ್ರವನ್ನು ಪಾಲಿಸುವದಾದರೆ ಅವರು ಸಹ ಅಬ್ರಹಾಮನಂತೆಯೇ ನೀತಿವಂತರಾಗುವರೆಂದು ನೆನೆಸಿದರು (ರೋಮ 2:25 ಮತ್ತು ವ್ಯಾಖ್ಯಾನ ನೋಡಿರಿ). ಪೌಲನು ಈ ವಚನದಲ್ಲಿ ಪು ಣ್ಯಕ್ರಿಯೆಗಳು ಎಂದು ಹೇಳುವಾಗ ಯೆಹೂದ್ಯ ಧರ್ಮಶಾಸ್ತ್ರಕ್ಕೆ ವಿಧೇಯರಾಗುವ "ಪು ಣ್ಯಕ್ರಿಯೆ"ಎಂಬದು ಅದರ ಅರ್ಥವಾಗಿದೆ. ಒಂದು

ವೇಳೆ ಅಬ್ರಹಾಮನು ನಿಜವಾಗಿಯೂ ಕ್ರಿಯೆಗಳಿಂದ – ಅಂದರೆ, ತನ್ನ ವಿಧೇಯತೆ – ನೀತಿವಂತನಾದ ಪಕ್ಷದಲ್ಲಿ, ಆತನಿಗೆ ಹೊಗಳಿಕೊಳ್ಳುವದಕ್ಕೆ ಆಸ್ಪದವಿರುವದು. ಆತನು "ನನ್ನನ್ನು ನೋಡು, ನನ್ನ ಪು ಣ್ಯಕ್ರಿಯೆಗಳ ಕಾರಣದಿಂದ ದೇವರು ನನ್ನನ್ನು ಘನಪಡಿಸುತ್ತಿದ್ದಾನೆ" ಎಂದು ಆತನು ಹೊಗಳಿಕೊಂಡಿರಬಹುದಿತ್ತು. ಆದರೆ ಪೌಲನು ಹಾಗಾಗಲಿಲ್ಲ ಎಂದು ಹೇಳುತ್ತಾನೆ. ಅಬ್ರಹಾಮನು ತನ್ನ ಪು ಣ್ಯ ಕ್ರಿಯೆಗಳಿಂದ ನೀತಿವಂತನಾಗಲಿಲ್ಲ, ಮತ್ತು ಈ ಕಾರಣದಿಂದ ಆತನು ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ಆಸ್ಪದವಿಲ್ಲ.

ಇಲ್ಲಿ ಪು ನಃ ನೀತಿವಂತರೆಂದು ನಿರ್ಣಯಿಸಲ್ಪಡುವದು ಯಾಕೆ ಪ್ರಾಮುಖ್ಯವೆಂಬದನ್ನು ಪ್ರಸ್ತಾಪಿಸುವದು ಉತ್ತಮವಾದದ್ದು. ಇದು ಪ್ರಾಮುಖ್ಯವೇಕೆಂದರೆ ಮೊದಲು ನೀತಿವಂತನಾಗದೆ ಅಥವಾ ದೇವರಿಂದ ನೀತಿ ವಂತನೆಂದು ನಿರ್ಣಯಿಸಲ್ಪಡದೆ ಒಬ್ಬ ವ್ಯಕ್ತಿಯು ರಕ್ಷಣೆ ಹೊಂದಲಾರನು (ರೋಮ 3:24 ಮತ್ತು ವ್ಯಾಖ್ಯಾನ ನೋಡಿರಿ). ಒಂದು ವೇಳೆ ಒಬ್ಬ ವ್ಯಕ್ತಿಯು ನೀತಿವಂತನಾಗದೆ ಇರುವದಾದರೆ ಆತನು ತನ್ನ ಪಾಪಗಳ ಕಾರಣದಿಂದ ದಂಡನೆಗೆ ಗುರಿಯಾಗುತ್ತಾನೆ ಮತ್ತು ನಿತ್ಯ ಮರಣವೇ ಆತನ ದಂಡನೆಯಾಗಿದೆ. ಆದುದರಿಂದ, ಪ್ರತಿಯೊಬ್ಬನು ಕೇಲಿಕೊಳ್ಳಬೇಕಾದ ಪ್ರಶ್ನೆಯೇನೆಂದರೆ: ದೇವರ ದೃಷ್ಟಿಯಲ್ಲಿ ನಾನು ಹೇಗೆ ನೀತಿವಂತನಾಗಿ ಮಾಡಲ್ಪಡಲು ಸಾದ್ಯ? ನೀತಿವಂತನಾದ ದೇವರು ಅನೀತಿವಂತ ಮನುಷ್ಯನನ್ನು ತನ್ನ ರಾಜ್ಯದೊಳಗೆ ಸ್ವೀಕರಿಸಿಕೊಳ್ಳುವದಿಲ್ಲ.

3 ಹಾಗಾದರೆ ಅಬ್ರಹಾಮನು ಹೇಗೆ ನೀತಿವಂತನಾದನು ಅಥವಾ ನೀತಿವಂತನೆಂದು ನಿರ್ಣಯಿಲ್ಪಟ್ಟನು? ಆತನು ತನ್ನ ಪು ಣ್ಯ ಕಾರ್ಯಗಳಿಂದಲ್ಲ, ಆದರೆ ಆತನು ದೇವರನ್ನು ನಂಬಿದ್ದರಿಂದಲೇ ನೀತಿವಂತನೆಂದು ನಿರ್ಣಯಿಸಲ್ಪಟ್ಟನು. ಅಬ್ರಹಾಮನು ನಂಬಿಕೆಯಿಂದಲೇ ತನ್ನ ಸ್ವದೇಶವನ್ನು ಬಿಟ್ಟು ಕಾನಾನ ದೇಶಕ್ಕೆ ಪ್ರಯಾಣಿಸಿದನು. ಸಾರಳು ಮಗುವೊಂದನ್ನು ಹಡೆಯುವಳು ಎಂಬ ದೇವರ ವಾಗ್ದಾನವನ್ನು – ಅದು ಮಾನವ ದೃಷ್ಟಿಯಲ್ಲಿ ಅಸಾದ್ಯವಾಗಿದ್ದರೂ – ಆತನು ಅಂಗೀಕರಿಸಿಕೊಂಡನು. ಆದುದರಿಂದ, ಅಬ್ರಹಾಮನ ನಂಬಿಕೆ ಅವನ ಲೆಕ್ಕಕ್ಕೆ ನೀತಿ ಎಂದು ಎಣಿಸಲ್ಪಟ್ಟಿತು. ಪೌಲನು ಇಲ್ಲಿ ಆದಿಕಾಂಡ 15:6 ರಲ್ಲಿನ ವಿಷಯವನ್ನು ಉಲ್ಲೇಖಿಸುತ್ತಾನೆ, ಆತನು ಪು ನಃ ಆ ಹೇಳಿಕೆಯನ್ನು 9 ಮತ್ತು 22ನೇ ವಚನದಲ್ಲಿ ಪು ನರಾವರ್ತಿಸುತ್ತಾನೆ.

4 ಒಬ್ಬನು ಕೆಲಸ ಮಾಡಿದರೆ ಯಜಮಾನನು ಅವನಿಗೆ ಕೆಲಸದ ಕೂಲಿಯನ್ನು ಕೊಡಬೇಕಾದ ನಿರ್ಬಂಧವನ್ನು ಹೊಂದಿರುತ್ತಾನೆ. ಕೆಲಸಗಾರನು ತನ್ನ ಕೆಲಸಕ್ಕೆ ಕೂಲಿಯನ್ನು ಸಂಪಾದಿಸಿಕೊಂಡವನಾಗಿದ್ದಾನೆ. ಯಜಮಾನನು ಕೆಲಸಗಾರನಿಗೆ ಕೂಲಿಯನ್ನು ಕೊಡುವ ಹಂಗಿನಲ್ಲಿದ್ದಾನೆ.

5 ಆದರೆ ದೇವರು ಮಾನವ ಯಜಮಾನನಂತಿರುವದಿಲ್ಲ. ದೇವರು ಯಾರಿಗೂ ಯಾವ ಹಂಗಿನಲ್ಲಿಯೂ ಇರುವದಿಲ್ಲ. ನಾವು ದೇವರಿಗಾಗಿ ದುಡಿದಿದ್ದೇವೆ ಎಂಬುದಕ್ಕಾಗಿ ಆತನು ನಮಗೆ ಪ್ರತಿಫಲ ನೀಡುವದಿಲ್ಲ, ಬದಲಾಗಿ ನಮ್ಮ ನಂಬಿಕೆಗೆ ಉತ್ತರವಾಗಿ ಆತನ ಕೃಪೆ ಮತ್ತು ಕರುಣೆಯಿಂದಲೇ ಆತನು ನಮಗೆ ಪ್ರತಿಫಲವನ್ನು ನೀಡುತ್ತಾನೆ. ನಂಬಿಕೆಯು ಒಂದು ರೀತಿಯ "ಕೆಲಸ" ಎಂದು ಹೇಳಬಹುದು. ಒಬ್ಬ ವ್ಯಕ್ತಿಯು ನೀತಿವಂತನಾಗಲು ನಂಬಿಕೆಯು ದೇವರ ದೃಷ್ಟಿಯಲ್ಲಿ ಆತನು ಮಾಡಲೇಬೇಕಾದ ಒಂದು ಪ್ರಾಮುಖ್ಯ "ಕೆಲಸ" ಆಗಿದೆ ಎಂದು ಹೇಳಬಹುದು (ಯೋಹಾನ 6:28-29 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ನಂಬಿಕೆಯನ್ನು "ಕೆಲಸ" ಎನ್ನುವದು ತಪ್ಪುದಾರಿಗೆ ನಡೆಸುವದಾಗಿದೆ. ಹೇಗಿದ್ದರೂ, ನಂಬಿಕೆ ಸಹ ದೇವರ ಉಚಿತ ವರವಾಗಿದೆ, ಆತನು ಅದನ್ನು ನಮಗೆ ತನ್ನ ಕೃಪೆಯಿಂದ ಕೊಡುತ್ತಾನೆ. ಹಾಗೆ ನೋಡಿದರೆ, ದೇವರ ಕೃಪೆಯ ಹೊರತಾಗಿ ನಾವು ನಂಬಲು ಸಹ ಆಗುವದಿಲ್ಲ. ನಮ್ಮ ರಕ್ಷಣೆಯು ಪ್ರಾರಂಬದಿಂದ ಕಡೆಯ ತನಕವೂ ದೇವರ ಕೃಪೆಯಿಂದ ಬರುವದಾಗಿದೆ. ದೇವರೇ ನಮ್ಮ ರಕ್ಷಣೆಯ ಪ್ರಾರಂಬಿಕನು ಮತ್ತು ಮುಕ್ತಾಯಗೊಳಿಸುವವನು ಆಗಿದ್ದಾನೆ (ಸಾಮಾನ್ಯ ಲೇಖನ: ರಕ್ಷಣೆ – ದೇವರ ಆಯ್ಕೆಯೋ ಅಥವಾ ಮನುಷ್ಯನ ಆಯ್ಕೆಯೋ? ನೋಡಿರಿ)

ಪೌಲನು ಇಲ್ಲಿ ದೇವರು ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುತ್ತಾನೆ ಎಂದು ಹೇಳುತ್ತಾನೆ. ಇದರ ಮೂಲಕ ಪೌಲನ ತಾತ್ಪರ್ಯವೇನೆಂದರೆ, ದೇವರು ನಂಬಿಕೆ ಹೊಂದಿರುವವರೆಲ್ಲರನ್ನು ನೀತಿವಂತರೆಂದು ನಿರ್ಣಯಿಸುತ್ತಾನೆ, ಯಾಕೆಂದರೆ ಕ್ರಿಸ್ತನಲ್ಲಿ ನಂಬಿಕೆಯಿಡುವ ಮೂಲಕ ಪಾಪಾತ್ಮರು (ಅನೀತಿವಂತರು) ದೇವರ ದೃಷ್ಟಿಯಲ್ಲಿ ನೀತಿವಂತರಾಗುತ್ತಾರೆ.

6-8 ಪೌಲನು ಇಲ್ಲಿ ಯೆಹೂದ್ಯರ ಶ್ರೇಷ್ಟ ಅರಸನಾದ ದಾವೀದನು ಬರೆದ ಕೀರ್ತನೆಗಳು 32:1-3 ರಲ್ಲಿನ ವಿಷಯವನ್ನು ಉಲ್ಲೇಖಿಸುತ್ತಾನೆ. 6 ರಿಂದ 8 ವಚನಗಳ ವರೆಗೆ ಪ್ರತಿಯೊಂದು ವಚನದಲ್ಲಿ ಒಂದು ಕ್ರಿಯೆಯು ಬಣ್ಣಿಸಲ್ಪಟ್ಟಿದೆ: "ನೀತಿವಂತನೆಂದು ಎಣಿಸುವದು" (ವಚನ 6). "ಅಪರಾಧಗಳ ಪರಿಹಾರ" ಮತ್ತು ಪಾಪಗಳ ಕ್ಷಮಾಪಣೆ" (ವಚನ 7), "ಪಾಪವನ್ನು ಲೆಕ್ಕಕ್ಕೆ ತರುವದು" (ವಚನ 8). ಈ ಎಲ್ಲಾ ಹೇಳಿಕೆಗಳು ಒಂದೇ ಕ್ರಿಯೆಯನ್ನು ಬಣ್ಣಿಸುತ್ತವೆ: ನಾವು ದೇವರ ಮುಂದೆ ನಿರಪರಾಧಿಗಳಾಗಿ ನಿಂತುಕೊಳ್ಳುವಂತಾಗಲು ನಮ್ಮ ಹಿಂದಿನ ಪಾಪಗಳನ್ನು ಶುದ್ದೀಕರಿಸುವದು ಅಥವಾ ನಿವಾರಿಸುವದು. ಒಬ್ಬನ ಪಾಪಗಳು ಕ್ಷಮಿಸಲ್ಪಡುವಾಗ ಆತನು ದೇವರಿಂದ ನೀತಿವಂತನೆಂದು ನಿರ್ಣಯಿಲ್ಪಟ್ಟವನಾಗಿದ್ದಾನೆ, ಬೇರೆ ಮಾತುಗಳಲ್ಲಿ ಹೇಳುವದಾದರೆ ದೇವರು ಅವನನ್ನು ನೀತಿವಂತನೆಂದು ಎಣಿಸುತ್ತಾನೆ. ಅಂತಹ ಮನುಷ್ಯನು ನಿಜವಾಗಿಯೂ ಧನ್ಯನೇ. ನೀತಿಯಂತೆಯೇ ಕ್ಷಮಾಪಣೆಯು ಸಹ (ಶುದ್ಧಿಮಾಡುವಿಕೆಯು) ದೇವರ ವರವಾಗಿದೆ. ನಾವು ನಮ್ಮ ಸ್ವಕಾರ್ಯ ಅಥವಾ ಪ್ರಯತ್ನದಿಂದಾಗಿ ಕ್ಷಮಿಸಲ್ಪಟ್ಟಿರುವದಿಲ್ಲ ಆದರೆ ದೇವರ ಉಚಿತಾರ್ಥ ಕೃಪೆಯಿಂದಲೇ ಕ್ಷಮಿಸಲ್ಪಟ್ಟಿರುತ್ತೇವೆ. ನಾವು ಕ್ಷಮಾಪಣೆಯನ್ನು ಪಡೆದುಕೊಳ್ಳಲು ಮಾಡಬೇಕಾದ ಏಕೈಕ ಕಾರ್ಯವೆಂದರೆ ನಂಬುವದೇ ಆಗಿದೆ.

9 ಈ ಧನ್ಯತೆಯು (ನೀತಿ ಮತ್ತು ಕ್ಷಮಾಪಣೆಯ ಧನ್ಯತೆ) ಸುನ್ನತಿಯಿದ್ದವರಿಗೆ (ಯೆಹೂದ್ಯರಿಗೆ) ಮಾತ್ರವೋ? ಯೆಹೂದ್ಯರು "ಹೌದು" ಎಂದು ಕೊಂಡರು, ಆದರೆ ಪೌಲನು "ಅಲ್ಲ" ಎನ್ನುತ್ತಾನೆ. ಅದು ಅನ್ಯ ಜನರಿಗೂ ಸಹ ಆಗಿರುತ್ತದೆ.

**10** ಅಬ್ರಹಾಮನು ಸುನ್ನತಿ ಮಾಡಿಸಿಕೊಂಡಿದ್ದರಿಂದ ನೀತಿ ವಂತನೆಂದು ನಿರ್ಣಯಿಸಲ್ಪಟ್ಟನೆಂಬದಾಗಿ ಯೆಹೂದ್ಯರು ವಾದಿಸಿದರು. ಆದರೆ ಅದು ಹಾಗಿರುವದಿಲ್ಲ ಯಾಕೆಂದರೆ ಅಬ್ರಹಾಮನು ಸುನ್ನತಿ ಮಾಡಿಸಿಕೊಳ್ಳುವದಕ್ಕೆ ಮುಂಚೆ ಈಗಾಗಲೇ ದೇವರನ್ನು ನಂಬಿದವನಾಗಿದ್ದನು ಎಂದು ಪೌಲನು ಹೇಳುತ್ತಾನೆ. ಅಬ್ರಹಾಮನು ಸುನ್ನತಿ ಮಾಡಿಸಿಕೊಳ್ಳುವದಕ್ಕೆ ಅನೇಕ ವರ್ಷಗಳ ಮುಂಚೆಯೇ ತಾನೊಬ್ಬ ಮಗನನ್ನು ಪಡೆದು ಒಂದು ದೊಡ್ಡ ಜನಾಂಗದ ಪಿತೃವಾಗುವನೆಂಬ ದೇವರ ವಾಗ್ದಾನವನ್ನು ಆತನು ನಂಬಿದ್ದನು. ಆ ಮುಂಚಿನ ನಂಬಿಕೆಯ ಕಾರಣದಿಂದಲೇ ದೇವರು ಅಬ್ರಹಾಮನನ್ನು ನೀತಿವಂತನೆಂದು ನಿರ್ಣಯಿಸಿದನು ಹೊರತು ಆತನು ಸುನ್ನತಿ ಮಾಡಿಸಿಕೊಂಡಿದ್ದರಿಂದಲ್ಲ. ಸುನ್ನತಿಯು ಅಬ್ರಹಾಮನ ನಂಬಿಕೆಯ ಬಹಿರಂಗದ ಗುರುತು ಮಾತ್ರವೇ ಆಗಿತ್ತು.

**11** ಸುನ್ನತಿಗಿಂತಲೂ ಮುಂಚೆ ಅಬ್ರಹಾಮನ ಜೀವನ ನಂಬಿಕೆಗಳು ಇರುತ್ತವೆ. ಅಬ್ರಹಾಮನು ನಂಬಿದ್ದ ನಂತರ ವರ್ಷೇ ದೇವರು ಅವನಿಗೆ ಸುನ್ನತಿಯೆಂಬ ಸಂಸ್ಕಾರವನ್ನು ಗುರುತಾಗಿ ಕೊಟ್ಟನು. ಪೌಲನು ಈ ಗುರುತನ್ನು ಅಬ್ರಹಾಮನಿಗಿದ್ದ ನಂಬಿಕೆಯಿಂದಾದ ಮುದ್ರೆ ಯೆಂದು ಕರೆಯುತ್ತಾನೆ. ನಂಬಿಕೆಯೇ ಮುಖ್ಯವಾದದ್ದು, ಸುನ್ನತಿಯು ಒಂದು ಗುರುತು ಮಾತ್ರವೇ (ಆದಿಕಾಂಡ 17:11). ಅಬ್ರಹಾಮನಿಗೆ ಸುನ್ನತಿಯಾಗುವದಕ್ಕೆ ಮೊದಲೇ ನಂಬಿಕೆಯಿತ್ತು, ಮತ್ತು ಅವನು ದೇವರ ದೃಷ್ಟಿಯಲ್ಲಿ ಯೋಗ್ಯನಾಗಿ ಕಾಣಲು ಈ ನಂಬಿಕೆಯೇ ಕಾರಣವಾಗಿದೆ. ಆದುದರಿಂದ, ಅವನು ನಂಬುವವರೆಲ್ಲರಿಗೂ, ಅವರು ಸುನ್ನತಿಯಿಲ್ಲದವರಾದಾಗ್ಯು ಮೂಲತಂದೆಯಾದನು. ಅಂದರೆ ನಂಬುವಂತಹ ಅನ್ಯ ಜನರಿಗೆಲ್ಲಾ ಆತ್ಮೀಕ "ತಂದೆ" ಆದನು.

**12** ವಚನ 11 ರಲ್ಲಿ ಪೌಲನು ನಂಬುವವರೆಲ್ಲರಿಗೂ ಅಬ್ರಹಾಮನು ತಂದೆಯಾದನು ಎಂದು ಬರೆದನು. ಈಗ 12 ನೇ ವಚನದಲ್ಲಿ ಅಬ್ರಹಾಮನು ಸುನ್ನತಿಯವರಿಗೆ ಸಹ (ಯೆಹೂದ್ಯರಿಗೆ) ತಂದೆಯಾಗಿದ್ದಾನೆ ಎಂದು ಪೌಲನು ಹೇಳುತ್ತಾನೆ. ಹೌದು, ಅಬ್ರಹಾಮನು ಶರೀರಸಂಬಂಧವಾಗಿ ಯೆಹೂದ್ಯರಿಗೆ ಮೂಲತಂದೆಯಾಗಿದ್ದಾನೆ. ಆದರೆ ನಿಜವಾಗಿಯೂ ದೇವರನ್ನು (ಮತ್ತು ಕ್ರಿಸ್ತನನ್ನು) ನಂಬದ ಯೆಹೂದ್ಯರು ನಿಜವಾದ ಆತ್ಮೀಕ ಯೆಹೂದ್ಯರಲ್ಲ, ಅವರು ಅಬ್ರಹಾಮನ ನಿಜವಾದ ಆತ್ಮೀಕ ಸಂತತಿಯಾಗಿರುವದಿಲ್ಲ. ಅಬ್ರಹಾಮನಿಗೆ..ಇದ್ದ ನಂಬಿಕೆಯ ಹೆಜ್ಜೆಗಳನ್ನು ಹಿಡಿದು ನಡೆಯುವವರು ಮಾತ್ರವೇ ನಿಜವಾದ ಯೆಹೂದ್ಯರು. ಅದೇ ರೀತಿಯಾಗಿ, ಯೇಸು ಕ್ರಿಸ್ತನ ಹೆಜ್ಜೆಗಳ ಜಾಡಿನಲ್ಲಿ ನಡೆಯುವವರೇ ನಿಜವಾದ ಕ್ರೈಸ್ತರಾಗಿದ್ದಾರೆ. "ನಾನು ನಂಬುತ್ತೇನೆ" ಎಂದು ಹೇಳಿದರೆ ಸಾಕಾಗುವದಿಲ್ಲ. ನಾವು ನಂಬಿಕೆಯ ಹೆಜ್ಜೆಗಳನ್ನು ಹಿಡಿದು ನಡೆಯಬೇಕು.

## ಅಬ್ರಹಾಮನು ನಂಬಿಕೆಯ ಮೂಲಕ ವಾಗ್ದಾನವನ್ನು ಪಡೆದುಕೊಂಡನು (4:13-25)

**13-14** ಪೌಲನು 13ನೇ ವಚನದಲ್ಲಿ ಬರೆಯುವ ಧರ್ಮಶಾಸ್ತ್ರ ಎಂಬ ಪದ ಅರ್ಥವು "ಧರ್ಮ ಶಾಸ್ತ್ರದ ಕಾರ್ಯಗಳು" ಎಂಬದಾಗಿ ವಚನ 14ರಲ್ಲಿ ಧರ್ಮಶಾಸ್ತ್ರದವರು ಎಂಬ ಪದದ ಅರ್ಥವು "ಧರ್ಮಶಾಸ್ತ್ರದ ಕಾರ್ಯಗಳಿಗನುಸಾರ ಜೀವಿಸುವವರು" ಎಂದಾಗಿರುತ್ತದೆ.

ಅಬ್ರಹಾಮನ ಕಾಲದ ನಂತರ ನಾನ್ನೂರಕ್ಕಿಂತಲೂ ಹೆಚ್ಚು ವರ್ಷಗಳಾದ ಮೇಲೆ ದೇವರು ಯೆಹೂದ್ಯರಿಗೆ ಧರ್ಮಶಾಸ್ತ್ರವನ್ನು ನೀಡಿದ್ದನು. ಆದ್ದರಿಂದ, ಅಬ್ರಹಾಮನು ಲೋಕಕ್ಕೆ ಬಾಧ್ಯನಾಗುವ ವಾಗ್ದಾನವನ್ನು ಧರ್ಮಶಾಸ್ತ್ರದ ಕಾರ್ಯಗಳಿಂದ ಹೊಂದಿರಲಿಕ್ಕೆ ಸಾಧ್ಯವಿಲ್ಲ (ವಚನ 13) ಯಾಕೆಂದರೆ ಆಗ ಧರ್ಮಶಾಸ್ತ್ರವು ಇನ್ನು ಕೊಡಲ್ಪಟ್ಟಿರಲಿಲ್ಲ.

ವಚನ 14ರಲ್ಲಿ ಪೌಲನು ಹೇಳಿದ್ದೇನೆಂದರೆ: ನಾವು ಧರ್ಮಶಾಸ್ತ್ರದ ಮೂಲಕ ಬಾಧ್ಯರಾಗುವ ಹಾಗಿದ್ದರೆ ನಂಬಿಕೆಯ ಅವಶ್ಯಕತೆಯೇ ಇರುತ್ತಿದ್ದಿಲ್ಲ, ನಂಬಿಕೆಯು ವ್ಯರ್ಥವಾಗುತ್ತಿತ್ತು. ಆದರೆ ವಾಸ್ತವ ಸಂಗತಿಯೇನೆಂದರೆ ನಂಬಿಕೆಯ ಮೂಲಕ ಮಾತ್ರವೇ ನಾವು ಬಾಧ್ಯರಾಗಬಹುದು, ಅಂದರೆ ಅಬ್ರಹಾಮನ ನಿಜವಾದ ಬಾಧ್ಯಸ್ಥರು (ಗಲಾತ್ಯ 3:18 ಮತ್ತು ವ್ಯಾಖ್ಯಾನ ನೋಡಿರಿ).

ಧರ್ಮಶಾಸ್ತ್ರದ ಕಾರ್ಯಗಳ ಮೂಲಕ ಬಾಧ್ಯಸ್ಥರಾಗುವದು ಸಂಪೂರ್ಣ ಅಸಾಧ್ಯವಾಗಿರುತ್ತದೆ, ಯಾಕೆಂದರೆ ಯಾರೂ ಎಲ್ಲಾ ವೇಳೆಯಲ್ಲಿಯೂ ಇಡೀ ಧರ್ಮಶಾಸ್ತ್ರಕ್ಕೆ ವಿಧೇಯರಾಗಲು ಸಾಧ್ಯವಿಲ್ಲ. ಒಂದೇ ವೇಳೆ ಪುಣ್ಯಕಾರ್ಯಗಳಿಂದ ಹೊಂದಲು ಸಾಧ್ಯವಿರುವದಾದರೆ ಯಾರೊಬ್ಬರೂ ಸಹ ವಾಗ್ದಾನವನ್ನು ಪಡೆಯಲಾರರು, ಹಾಗಾಗುವದಾದರೆ ವಾಗ್ದಾನವೂ ಬರೀದಾಗುವರು. (ವಚನ 14).

**15** ಧರ್ಮಶಾಸ್ತ್ರವು ಕೋಪಕ್ಕೆ ಅಂದರೆ, ದಂಡನೆಗೆ – ಗುರಿಮಾಡುತ್ತದೆ. ಧರ್ಮಶಾಸ್ತ್ರವು ಕೋಪಕ್ಕೆ ಗುರಿಮಾಡುತ್ತದೆ ಯಾಕೆಂದರೆ ಮನುಷ್ಯರು ಅದಕ್ಕೆ ಪೂರ್ಣವಾಗಿ ವಿಧೇಯರಾಗಲಾರರು ಮತ್ತು ಹೀಗಿರುವದರಿಂದ ದೇವರು ಅವರನ್ನು ದಂಡಿಸಲೇಬೇಕು. ಧರ್ಮಶಾಸ್ತ್ರವಿಲ್ಲದ ಪಕ್ಷದಲ್ಲಿ ಅವಿಧೇಯರಾಗಲು ಅವಕಾಶವೇ ಇರುತ್ತಿರಲಿಲ್ಲ ಮತ್ತು ಈ ಕಾರಣದಿಂದ ಯಾವದಂಡನೆಯು ಇರಲಾರದಾಗಿತ್ತು. ಆದರೆ ಧರ್ಮಶಾಸ್ತ್ರವು ಇರುತ್ತದೆ – ಮತ್ತು ಅದರೊಂದಿಗೆ – ದಂಡನೆಯು ಸಹ ಇರಲೇಬೇಕು.

**16** ಆದುದರಿಂದ, ಲೋಕಕ್ಕೆ ಬಾಧ್ಯನಾಗುವ ವಾಗ್ದಾನವು ಅಬ್ರಹಾಮನಿಗೆ (ವಚನ 13). ದೇವರ ಕೋಪಕ್ಕೆ ಮಾತ್ರವೇ ನಡೆಸುವ ಧರ್ಮಶಾಸ್ತ್ರದಿಂದ ಉಂಟಾಗಲಿಲ್ಲ. ಬದಲಾಗಿ ಆ ವಾಗ್ದಾನವು ಕೃಪೆಯಿಂದಲೇ ನಂಬಿಕೆಯ ಮೂಲಕ ದೊರಕಿತು. ಆ ವಾಗ್ದಾನವು ಅಬ್ರಹಾಮನ ಸಂತತಿಯವರೆಲ್ಲರಿಗೂ ದೊರೆಯುವಂಥದಾಗಿದೆ. ಧರ್ಮಶಾಸ್ತ್ರವನ್ನು ಆಧಾರ ಮಾಡಿಕೊಂಡವರಿಗೆ (ಯೆಹೂಬದ್ಯರಿಗೆ) ಮಾತ್ರವಲ್ಲ ಆದರೆ ಅಬ್ರಹಾಮನಲ್ಲಿದ್ದಂಥ ನಂಬಿಕೆಯಿಲ್ಲದವರಿಗೆ ಸಹ (ಅಂದರೆ, ಅಬ್ರಹಾಮನು ಹೊಂದಿದ್ದಂಥ ನಂಬಿಕೆಯನ್ನು ಹೊಂದಿರುವವರಿಗೆ) – ಎಂದು ಪೌಲನು ಹೇಳುತ್ತಾನೆ. ಅಬ್ರಹಾಮನು ನಮ್ಮೆಲ್ಲರಿಗೂ – ನಂಬಿಕೆ ಹೊಂದಿರುವವರಿಗೆಲ್ಲಾ – ಮೂಲ ಪಿತೃವಾಗಿದ್ದಾನೆ. ವಿಶ್ವಾಸಿಗಳೆಲ್ಲರೂ ಅಬ್ರಹಾಮನ ನಿಜವಾದ ಆತ್ಮೀಕ

ಬಾಧ್ಯರಾಗಿದ್ದಾರೆ, ಶರೀರ ಸಂಬಂಧವಾಗಿಯಲ್ಲ, ಆದರೆ ನಂಬಿಕೆಯ ಪ್ರಕಾರವೇ ಆಗಿರುತ್ತಾರೆ. ನಂಬಿಕೆಯ ಮುಖಾಂತರ ಮಾತ್ರವೇ ಬಾಧ್ಯಸ್ಥನಾಗುವದು ಸ್ಥಿರವಾಗಿನಿಲ್ಲುವದು (ಗಲಾತ್ಯ 3:29 ಮತ್ತು ವ್ಯಾಖ್ಯಾನ ನೋಡಿರಿ).

**17** ದೇವರು ಅಬ್ರಹಾಮನನ್ನು ಅನೇಕರ ಜನಾಂಗಗಳಿಗೆ (ಆದಿಕಾಂಡ 17:5) – ಯೆಹೂದ್ಯ ಜನಾಂಗಕ್ಕೆ ಮಾತ್ರವಲ್ಲ ಆದರೆ ಆತ್ಮೀಕ ಅರ್ಥದಲ್ಲಿ, ಅನ್ಯ ಜನಾಂಗಗಳಿಗೆ ಸಹ – ಮೂಲ ಪಿತೃವಾಗಿರುತ್ತಾನೆ. ಪೌಲನು ಇಲ್ಲಿ ದೇವರನ್ನು ಆತನು ಸತ್ತವರನ್ನು ಬದುಕಿಸುವವನಾಗಿಯೂ ಇಲ್ಲದ್ದನ್ನು ಇರುವದಾಗಿ ಕರೆಯುವವನಾಗಿಯೂ ಇದ್ದಾನೆಂದು ಕರೆಯುತ್ತಾನೆ. ಅಬ್ರಹಾಮನು ಮತ್ತು ಆತನ ಹೆಂಡತಿಯಾದ ಸಾರಯಳು ಮಗುವನ್ನು ಹಡೆಯುವ ಸಾಮರ್ಥ್ಯದ ಬಗ್ಗೆ ನೋಡಿದಾಗ ಅವರು ಸತ್ತವರೇ ಆಗಿದ್ದರು – ಬಹಳ ವೃದ್ಧರಾಗಿದ್ದರು. ಆದರೆ ದೇವರು ಅವರಿಗೆ ಮಗುವಿನ ರೂಪದಲ್ಲಿ ಜೀವವನ್ನು ಕೊಟ್ಟನು, ಅಂದರೆ "ಸತ್ತ"ಪರಸ್ಥಿತಿಯೊಳಗಿಂದ ದೇವರು ಒಂದು ನೂತನ ಜೀವವನ್ನು ಉಂಟು ಮಾಡಿದನು. ದೇವರು ಇಲ್ಲದ್ದನ್ನು – ಸಂಭವಿಸಲಾಗದ ಸಂಗತಿಗಳನ್ನು – ಸಂಭವಿಸುವಂತೆ ಮಾಡಿದನು! (ಇಬ್ರಿಯ 11:11-12). ದೇವರು ಇಸಾಕನನ್ನು ಅವನ "ಸತ್ತ" ತಂದೆತಾಯಿಯೊಳಗಿಂದ ಎಬ್ಬಿಸಿದ ಎರಡು ಸಾವಿರ ವರ್ಷಗಳ ನಂತರ ದೇವರು ತನ್ನ ಸ್ವಂತ ಕುಮಾರನಾದ ಯೇಸು ಕ್ರಿಸ್ತನನ್ನು ಸಹ ಸತ್ತವರೊಳಗಿಂದ ಎಬ್ಬಿಸಿದನೆಂಬ ವಿಷಯವನ್ನು ಪೌಲನು ಇಲ್ಲಿ ಮನಸ್ಸಿನಲ್ಲಿಟ್ಟು ಕೊಂಡಿದ್ದನು. ಆದರೆ ಅದು ಮಾತ್ರವಲ್ಲದೆ, ದೇವರು ನಮ್ಮನ್ನು ಸಹ – ನಮ್ಮ ಅಪರಾಧ ಪಾಪಗಳಲ್ಲಿ ಸತ್ತು ಹೋಗಿರುವವರಾದ ನಮ್ಮನ್ನು – ಬದುಕಿಸುವವನಾಗಿದ್ದನೆ (ಎಫೆಸ 2:1, 4-5).

**18** ಇಲ್ಲಿ ಪೌಲನು ಆದಿಕಾಂಡ 15:5 ರಲ್ಲಿ ದೇವರು ಅಬ್ರಹಾಮನಿಗೆ ನೀಡಿದ ವಾಗ್ದಾನದ ಕೆಲಭಾಗವನ್ನು ಉಲ್ಲೇಖಿಸುತ್ತಾನೆ.

**19-21** ದೇವರಲ್ಲಿ ಭರವಸವಿಟ್ಟ ಅಬ್ರಹಾಮನು ಎಲ್ಲಾ ಘನವನ್ನು ದೇವರಿಗೆ ಸಲ್ಲಿಸಿದನು (ವಚನ 20). ವಿಶ್ವಾಸಿಯಾದವನು ಯಾವಾಗಲೂ ದೇವರನ್ನು ಘನಪಡಿಸುತ್ತಾನೆ, ಮತ್ತು ದೇವರು ಯಾವಾಗಲೂ ವಿಶ್ವಾಸಿಯಾದವನನ್ನು ಘನಪಡಿಸುವನು.

ನಾವು ಅಬ್ರಹಾಮನ ಮಾದರಿಯನ್ನು ಅನುಸರಿಸೋಣ. ದೇವರು ಅಬ್ರಹಾಮನಿಗೆ ನೀಡಿದಂತೆಯೇ ನಮಗೂ ಸಹ ಆಶ್ಚರ್ಯಕರ ವಾಗ್ದಾನಗಳನ್ನು ರಕ್ಷಣೆ, ಪವಿತ್ರಾತ್ಮನ ತುಂಬಿಸುವಿಕೆ, ಸ್ವತಃ ದೇವರ ಶಕ್ತಿ ಮತ್ತು ಪರಿಪೂರ್ಣತೆ ಗಳಂತಹ ಸಂಗತಿಗಳ ಕುರಿತಾದ ವಾಗ್ದಾನಗಳನ್ನು ನೀಡಿರುತ್ತಾನೆ! ಈ ವಾಗ್ದಾನಗಳ ವಿಷಯದಲ್ಲಿ ನಾವು ಅಪನಂಬಿಕೆಯಿಂದ ಚಂಚಲಚಿತ್ತರಾಗುತ್ತೇವೋ? ಮಾನವನು ದೇವರ ವಿರುದ್ಧ ಮಾಡುವ ಮೂಲ ಪಾಪವು ಅಪನಂಬಿಕೆಯೇ (ರೋಮ 1:18 ಮತ್ತು ವ್ಯಾಖ್ಯಾನ ನೋಡಿರಿ).

ಅಪನಂಬಿಕೆಯು ದೇವರಿಗೆ ಅವಮಾನವನ್ನುಂಟು ಮಾಡುತ್ತದೆ. ಅಪನಂಬಿಕೆಯು ಹೇಳುವದೇನೆಂದರೆ: ದೇವರು ತಾನು ಮಾಡಿದ ವಾಗ್ದಾನಗಳನ್ನು ನೆರವೇರಿಸಲಾರನು. ಅಪನಂಬಿಕೆಯು ಎಲ್ಲಾ ಪಾಪದ ಮೂಲ ಕಾರಣವಾಗಿದೆ. ಆದುದರಿಂದಲೇ ದೇವರ ದೃಷ್ಟಿಯಲ್ಲಿ ನಂಬಿಕೆಯು ಇಷ್ಟೊಂದು ಪ್ರಾಮುಖ್ಯವೂ ಅವಶ್ಯಕವೂ ಆಗಿರುತ್ತದೆ. ಈ ಕಾರಣದಿಂದಲೇ ಮಾನವನು ನಂಬಿಕೆಯಿಂದ ಮಾತ್ರವೇ ನೀತಿವಂತನೆಂದು ನಿರ್ಣಯಿಸಲ್ಪಡುವವನಾಗಿದ್ದಾನೆ.

**22** ಪೌಲನು ಪುನಃ ಇಲ್ಲಿ ಆದಿಕಾಂಡ 15:5 ರಲ್ಲಿನ ವಿಷಯವನ್ನು ಉಲ್ಲೇಖಿಸುತ್ತಾನೆ (ವಚನ 3 ನೋಡಿರಿ).

**23-24** ಅಬ್ರಹಾಮನ ಉದಾಹರಣೆಗೆ ಅನುಸಾರವಾಗಿ ದೇವರು ನಮ್ಮ ನಂಬಿಕೆಯ ಕಾರಣದಿಂದಾಗಿ ನಮ್ಮ ಲೆಕ್ಕಕ್ಕೆ ಸಹ ನೀತಿಯೆಂದು ಎಣಿಸಲ್ಪಡುವದು ಎಂದು ಪೌಲನು ಇಲ್ಲಿ ಹೇಳುತ್ತಾನೆ. ನಾವು ಅಬ್ರಹಾಮನಂತೆ ನೀತಿವಂತರೆಂದು ನಿರ್ಣಯಿಸಲ್ಪಟ್ಟ ನಂತರ ನಾವು ಸಹ ಬಾಧ್ಯರಾಗುವೆವು. ಅಬ್ರಹಾಮನ ಬಾಧ್ಯರು ಮಾತ್ರವಲ್ಲ, ಆದರೆ ದೇವರ ರಾಜ್ಯಕ್ಕೆ ಬಾಧ್ಯರೂ ಸಹ ಆಗುವೆವು. ಮತ್ತು ನಾವು ಅಬ್ರಹಾಮನ ಬಾಧ್ಯರು ಮಾತ್ರವಲ್ಲ, ಸ್ವತಃ ಕ್ರಿಸ್ತನೊಂದಿಗೆ ಜೊತೆ ಬಾಧ್ಯರಾಗುವೆವು! (ರೋಮ 8:17 ನೋಡಿರಿ).

**25** ಪೌಲನು 4ನೇ ಅಧ್ಯಾಯದಲ್ಲಿ ದೇವರಿಂದ ಕೊಡಲ್ಪಡುವ ಎರಡು ದೊಡ್ಡ ಆಶಿರ್ವಾದಗಳು ಅಥವಾ ವರಗಳನ್ನು ಬಣ್ಣಿಸಿದ್ದಾನೆ : ಮೊದಲನೆಯದಾಗಿ, ಕ್ಷಮಾಪಣೆ (ವಚನಗಳು 7-8), ಮತ್ತು ಎರಡನೆಯದಾಗಿ, ನೀತಿ ಅಥವಾ ನೀತಿಕರಣ (ವಚನಗಳು 3,6,9,11,22,24-25). ಈ ಎರಡು ಆಶಿರ್ವಾದಗಳು ಯಾವಾಗಲೂ ಒಟ್ಟಾಗಿ ಸಾಗುತ್ತವೆ. ವಾಸ್ತವದಲ್ಲಿ, ಕ್ಷಮಿಸಲ್ಪಡುವದು ಮತ್ತು ನೀತಿವಂತರೆಂದು ನಿರ್ಣಯಿಸಲ್ಪಡುವದು ಇವೆರಡು ಶ್ರೇಷ್ಟಾತಿಶ್ರೇಷ್ಟ ಆಶಿರ್ವಾದಗಳಾಗಿವೆ, ಅವು ಗಳು ಮಾನವನ ರಕ್ಷಣೆಯಲ್ಲಿ ಎರಡು ಪ್ರಮುಖ ಭಾಗಗಳಾಗಿವೆ. ಮತ್ತು ಈ ಎರಡು ಆಶಿರ್ವಾದಗಳನ್ನು (ಕ್ಷಮಾಪಣೆ ಮತ್ತು ನೀತಿ) ಧರ್ಮಶಾಸ್ತ್ರದ ಕಾರ್ಯಗಳಿಂದಲ್ಲ ಆದರೆ ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ಹೊಂದಿಕೊಳ್ಳಬಹುದೆಂದು ಪೌಲನು ಹೇಳುತ್ತಾನೆ.

ಆದರೆ ಇಲ್ಲಿ ನಾವು ಒಂದು ಪ್ರಶ್ನೆಯನ್ನು ಕೇಳಿಕೊಳ್ಳಲಿಚ್ಛಿಸುತ್ತೇವೆ: ಕ್ರಿಸ್ತನು ನಮಗಾಗಿ ಏನನ್ನು ಮಾಡಿದ್ದಾನೆ? ಆತನಲ್ಲಿ ಏಕೆ ನಂಬಿಕೆಯಿಡಬೇಕು? ಈ 25ನೇ ವಚನದಲ್ಲಿ ಪೌಲನು ಉತ್ತರವನ್ನು ಕೊಡುತ್ತಾನೆ. ಕ್ರಿಸ್ತನಲ್ಲಿ ನಂಬಿಕೆಯಿಡುವದಕ್ಕೆ ಕಾರಣವೇನೆಂದರೆ: ಆತನ ಮೂಲಕವೇ ನಾವು ಕ್ಷಮಾಪಣೆ ಮತ್ತು ನೀತಿ (ಅಥವಾ ನೀತಿಕರಣ) ಗಳೆಂಬ ಈ ಎರಡು ಆಶಿರ್ವಾದಗಳನ್ನು ಪಡೆದುಕೊಳ್ಳುವವರಾಗಿದ್ದೇವೆ.

ಮೊದಲನೆಯದಾಗಿ, ನಾವು ನಮ್ಮ ಪಾಪಗಳಿಗಾಗಿ ದಂಡನೆಯನ್ನು ಹೊಂದಬಾರದೆಂದು ಶಿಲುಬೆಯ ಮೇಲೆ ಮರಣಕ್ಕೆ ಒಪ್ಪಿಸಿಕೊಡಲ್ಪಟ್ಟ ಕ್ರಿಸ್ತನು ಇವನಾಗಿದ್ದಾನೆ. ನಾವು ನಮ್ಮ ಪಾಪಗಳಿಗಾಗಿ ಕ್ಷಮೆಯನ್ನು ಶುದ್ಧಿಯನ್ನೂ ಪಡೆದು

ಕೊಂಡು ದೇವರ ಮುಂದೆ ಅಪರಾಧವಿಲ್ಲದವರಾಗಿ ನಿಂತುಕೊಳ್ಳಬೇಕೆಂಬುದಕ್ಕಾಗಿ ಆತನು ಮರಣಿಸಿದನು. ಆತನು ನಮ್ಮ ಪಾಪಗಳನ್ನು ತನ್ನ ಮೇಲೆ ಹೊತ್ತು ಕೊಂಡು ನಮ್ಮ ದಂಡನೆಯನ್ನು ವಹಿಸಿಕೊಳ್ಳುವದರ ಮೂಲಕ ಆತನು ಈ ಕಾರ್ಯವನ್ನು ಮಾಡಿದನು (ಮಾರ್ಕ 10:45 ಮತ್ತು ವ್ಯಾಖ್ಯಾನ ನೋಡಿರಿ).

ಎರಡೆಯದಾಗಿ, ಕ್ರಿಸ್ತನು ನಮಗೆ ನೀತಿವಂತರೆಂಬ ನಿರ್ಣಯ ಉಂಟಾಗುವ ನಿಮಿತ್ತ ಜೀವದಿಂದ ಎಬ್ಬಿಸಲ್ಪಟ್ಟನು. ನಾವು ದೇವರ ಮುಂದೆ ನೀತಿವಂತರೆಂದು ನಿರ್ಣಯವನ್ನು ಹೊಂದಬೇಕೆಂಬುದಕ್ಕಾಗಿ ಆತನು ಸತ್ತವರೊಳಗಿಂದ ಎದ್ದು ಬಂದನು, ಮತ್ತು ನೀತಿವಂತರೆಂದು ನಿರ್ಣಯಿಸಲ್ಪಟ್ಟ ಮೇಲೆ ನಾವು ರಕ್ಷಣೆಯನ್ನು ಹೊಂದುತ್ತೇವೆ, ದೇವರ ರಾಜ್ಯದಲ್ಲಿ ಸ್ವೀಕರಿಸಲ್ಪಡುತ್ತೇವೆ ಮತ್ತು ನಿತ್ಯ ಜೀವವನ್ನು ಪಡೆಯುತ್ತೇವೆ. ಹಾಗಾದರೆ ಇದು ನಮ್ಮ ಕರ್ತನೂ, ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ಮಹಿಮಾಕಾರ್ಯವಾಗಿರುತ್ತದೆ:

ಇದು ಕ್ರಿಸ್ತನ ಆಶ್ಚರ್ಯಕರ ಹಾಗು ಆನಂದಕರವಾದ ಸುವಾರ್ತೆಯಾಗಿದೆ. ಅಂತಹ ರಕ್ಷಕನಲ್ಲಿ ನಂಬಿಕೆಯಿಡುವದಕ್ಕೆ ನಾವು ಸಂಕೋಚಪಡುವು ದೇಕೆ!

---

# ಅಧ್ಯಾಯ - 5

## ನಂಬಿಕೆಯ ಫಲಿತಗಳು (5:1-5)

1 ರೋಮಾಪುರದವರಿಗೆ ಬರೆದ ಪತ್ರಿಕೆಯ ಮೊದಲಿನ ನಾಲ್ಕು ಅಧ್ಯಾಯಗಳಲ್ಲಿ ಮನುಷ್ಯನು ನಂಬಿಕೆಯಿಂದ ಮಾತ್ರವೇ ನೀತಿವಂತನೆಂದು ನಿರ್ಣಯಿಸಲ್ಪಡುತ್ತಾನೆಂಬದಾಗಿ ಪೌಲನು ತೋರಿಸಿಕೊಟ್ಟಿದ್ದಾನೆ. ಆದುದರಿಂದ ಪೌಲನು 1 ನೇ ವಚನದಲ್ಲಿ ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ದೇವರೊಂದಿಗೆ ಸಮಾಧಾನ ಹೊಂದಿರುತ್ತೇವೆ [21] ಎಂದು ಪೌಲನು ಇಲ್ಲಿ ಹೇಳುತ್ತಾನೆ.

ಒಮ್ಮೆ ನಾವು ನೀತಿವಂತರಾದ ನಂತರ ದೇವರೊಂದಿಗೆ ಸಮಾಧಾನ ಅಥವಾ ಸಂಧಾನ ಹೊಂದಿರುವ ಸ್ಥಿತಿಯಲ್ಲಿರುತ್ತೇವೆ. ನಾವು ಇನ್ನೆಂದಿಗೂ ಸಮಾಧಾನಕ್ಕಾಗಿ ತವಕ ಪಡಬೇಕಾಗಿಲ್ಲ, ಅಥವಾ ಮಾಡಬೇಕಿಲ್ಲ, ನಾವು ಈಗಾಗಲೇ ಅದನ್ನು ಪಡೆದುಕೊಂಡಿದ್ದೇವೆ. ನಾವು ನಂಬುವ ಕ್ಷಣದಲ್ಲಿಯೇ ನೀತಿವಂತರಾಗುತ್ತೇವೆ, ಮತ್ತು ನಾವು ನೀತಿವಂತರಾದ ತಕ್ಷಣವೇ ದೇವರೊಂದಿಗಿನ ಈ ಸಮಾಧಾನವನ್ನು ಅನುಭವಿಸಬಹುದಾಗಿದೆ.

ದೇವರೊಂದಿಗೆ ಸಮಾಧಾನ (ಅಥವಾ ದೇವರೊಂದಿಗೆ ಸಂಧಾನವು ) ಅಷ್ಟೊಂದು ಪ್ರಾಮುಖ್ಯವಾದದ್ದು? ಯಕೆಂದರೆ ಹುಟ್ಟಿನಿಂದಲೂ ಮಾನವನು ದೇವರೊಂದಿಗೆ ವೈರತ್ವ ಹೊಂದಿರುತ್ತಾನೆ. ನಮ್ಮ ಪಾಪದ ಕಾರಣದಿಂದ ನಾವು ದೇವರೊಂದಿಗೆ ಸಮಾಧಾನ ಹೊಂದಲು ಸಾಧ್ಯವಿಲ್ಲ. ಯೇಸು ಕ್ರಿಸ್ತನು ನಮ್ಮ ಪಾಪವನ್ನು ನಿವಾರಿಸಲು ಈ ಲೋಕಕ್ಕೆ ಬಂದನು. ಹೀಗೆ, ಆತನು ತನ್ನ ಸ್ವ ಮರಣದ ಮೂಲಕ ನಮಗೂ ದೇವರಿಗೂ ನಡುವೆ ಸಮಾಧಾನ ಉಂಟುಮಾಡಿದನು, ದೇವರಿಗೂ ನಮಗೂ ಮಧ್ಯದಲ್ಲಿದ್ದ ಆ ಪಾಪವನ್ನು ಆತನು ನೀಗಿಸಿದನು. ಆದುದರಿಂದ ಕ್ರಿಸ್ತನ ಮೂಲಕ ಮಾತ್ರವೇ ನಾವು ದೇವರೊಂದಿಗೆ ಸಮಾಧಾನವನ್ನು ಕಂಡುಕೊಳ್ಳಬಹುದು. ಯೇಸು ಕ್ರಿಸ್ತನನ್ನು ಹೊರತು ಪಡಿಸಿ ದೇವರಿಗೂ ಮನುಷ್ಯನಿಗೂ ಮಧ್ಯಸ್ಥನು ಮತ್ತಾರೂ ಇರುವದಿಲ್ಲ.

2 ದೇವರ ಕೃಪಾಶ್ರಯದಲ್ಲಿ ಕ್ರಿಸ್ತನ ಮುಖಾಂತರವೇ ನಂಬಿಕೆಯಿಂದ ನಾವು ಪ್ರವೇಶಿಸುವಂತಾಯಿತು. ಒಬ್ಬ ಸಾಮಾನ್ಯ ವ್ಯಕ್ತಿಯು ಅರಸನನ್ನು ಸಂಧಿಸಲು ಇದ್ದಕ್ಕಿದ್ದ ಹಾಗೆಯೇ ಅರಮನೆಯೊಳಗೆ ಪ್ರವೇಶಿಸಲು ಸಾಧ್ಯವಿಲ್ಲ, ಮೊದಲು ಆತನು ಪ್ರವೇಶಿಸುವದಕ್ಕೆ ಅಪ್ಪಣೆ ಅಥವಾ ಅಧಿಕಾರವನ್ನು ಪಡೆದು ಕೊಳ್ಳಬೇಕಾಗುತ್ತದೆ ಮತ್ತು ಅನಂತರ ಅರಸನ ಅಧಿಕಾರಿಗಳಲ್ಲೊಬ್ಬನು ಆತನನ್ನು ಅರಸನ ಸನ್ನಿಧಿಯೊಳಗೆ ಕರೆತರತಕ್ಕದ್ದು. ಅದೇ ರೀತಿಯಲ್ಲಿ, ಕ್ರಿಸ್ತನು ನಮ್ಮನ್ನು ದೇವರ ಸನ್ನಿಧಿಯೊಳಗೆ ಕೃಪಾಶ್ರಯದೊಳಗೆ – ಕರೆತರುವ ಅಧಿಕಾರಿಯಾಗಿದ್ದಾನೆ. ಅಲ್ಲಿ ನಾವು ದೇವರ ಕೃಪೆಯನ್ನು ಅನುಭವಿಸುವವರಾಗಿದ್ದೇವೆ. ಮತ್ತು ದೇವರಕೃಪೆಯು, ಆತನ ಸಮಾಧಾನ, ಆತನ ಕರುಣೆ, ಆತನ ಪ್ರೀತಿ, ಆತನ ಆನಂದ ಮುಂತಾದವುಗಳನ್ನು ಒಳಗೊಂಡಿರುತ್ತದೆ. ಪೌಲನಿಗಾದರೋ "ಕೃಪೆ" ಎಂಬ ಪದದ ಅರ್ಥವು ವಿಶಾಲ ಹಾಗು ಆಳವಾಗಿತ್ತು! ಈ ಪತ್ರಿಕೆಯ ಪ್ರಾರಂಭದಲ್ಲಿಯೂ ಮತ್ತು ಆತನ ಇತರ ಬಹು ಪಾಲು ಪತ್ರಿಕೆಗಳಲ್ಲಿಯೂ ತನ್ನ ವಾಚಕರು ದೇವರ ಕೃಪೆ ಮತ್ತು ಅದರೊಂದಿಗೆ ದೇವರ ಶಾಂತಿಯನ್ನು ಅನುಭವಿಸಬೇಕೆಂದು ಪೌಲನು ಪ್ರಾರ್ಥಿಸುವದನ್ನು ನೆನಪಿಗೆ ತಂದು ಕೊಳ್ಳಿರಿ (ರೋಮ 1:7, 1 ಕೊರಿಂಥ 1:3, ಎಫೆಸ 1:2 ನೋಡಿರಿ).

ಒಬ್ಬ ಸಾಮಾನ್ಯ ವ್ಯಕ್ತಿಯು ಅಪ್ಪಣೆಯಿಲ್ಲದೆ ಅರಸನ ಸನ್ನಿಧಿಯನ್ನು ಪ್ರವೇಶಿಸಲಾಗದು, ಆದರೆ ಅರಸನ ಸ್ವಂತ ಮಕ್ಕಳು ಬರಬಹುದು. ಕ್ರಿಸ್ತನಲ್ಲಿ ನಂಬಿಕೆಯಿಡುವ ಮೂಲಕ ನಾವು ಈಗ ದೇವರ ಮಕ್ಕಳಾಗಿದ್ದೇವೆ, ಆದುದರಿಂದ, ಯಾವ ಸಮಯದಲ್ಲಾದರೂ ದೇವರ ಸನ್ನಿಧಿಯೊಳಗೆ ಬರಬಹುದಾಗಿದೆ (ಎಫೆಸ 2:18-19, 3:12, ಇಬ್ರಿಯ 10:19-22 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ನಾವು ಈ ಕೃಪೆಯಲ್ಲಿ ಈಗ ನೆಲೆಗೊಂಡಿದ್ದೇವೆ, ಅಂದರೆ ದೇವರ ಸನ್ನಿಧಿಯಲ್ಲಿ ನೆಲೆಗೊಂಡಿದ್ದೇವೆ ಎಂದು ಪೌಲನು ಹೇಳುತ್ತಾನೆ. ಒಬ್ಬ ಅನೀತಿವಂತನೂ ಪಾಪಿಯೂ ಆದ ವ್ಯಕ್ತಿಯು ದೇವರ ಸನ್ನಿಧಿಯಲ್ಲಿ ನಿಲ್ಲದಿರಬಹುದು, ಯಾಕೆಂದರೆ ಅಂತಹ ಮನುಷ್ಯನು ಅಯೋಗ್ಯನಾಗಿದ್ದಾನೆ. ಆದರೆ ಈಗ, ಕ್ರಿಸ್ತನಲ್ಲಿ ನಂಬಿಕೆಯಿಡುವ ಮೂಲಕ ನಾವು ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ ಮತ್ತು ಈ ಕಾರಣದಿಂದ ದೇವರ ಮುಂದೆ ನಿಂತುಕೊಳ್ಳುವದಕ್ಕೆ ಯೋಗ್ಯರಾಗಿದ್ದೇವೆ ನಾವು ಕ್ರಿಸ್ತನ ನೀತಿಯನ್ನು ಹೊಂದಿಕೊಂಡಿದ್ದೇವೆ. ನಮ್ಮ ನೀತಿಯು ನಮ್ಮನ್ನು ಯೋಗ್ಯರನ್ನಾಗಿಸುವದಿಲ್ಲ ಆದರೆ ಕ್ರಿಸ್ತನ ನೀತಿಯು ನಮ್ಮನ್ನು ಯೋಗ್ಯರನ್ನಾಗಿಸುತ್ತದೆ.

ದೇವರ ಕೃಪೆಯ ಮೂಲಕ ನಾವು ಆನಂದವನ್ನು ಸಹ ಅನುಭವಿಸುತ್ತೇವೆ. ನಾವು ಉಲ್ಲಾಸ ಪಡುತ್ತೇವೆ. ನಾವು ಯಾತಕ್ಕಾಗಿ ಉಲ್ಲಾಸಪಡುತ್ತೇವೆ? ನಾವು ದೇವರ ಮಹಿಮೆಯನ್ನು ಹೊಂದುವೆವೆಂಬ ಭರವಸೆಯಿಂದ ಉಲ್ಲಾಸಿಸುತ್ತೇವೆ. ಅಂದರೆ, ನಾವು ದೇವರ ಮಹಿಮೆಯಲ್ಲಿ ಪಾಲುಗಾರರಾಗುವ ನೀರೀಕ್ಷೆಯಲ್ಲಿ ಉಲ್ಲಾಸವಾಗಿದ್ದೇವೆ. ನಾವೆಲ್ಲರೂ ದೇವರ ಮಹಿಮೆಯನ್ನು ಕಳೆದುಕೊಂಡವರಾಗಿದ್ದೇವು (ರೋಮ 3:23). ಆದರೆ ಕ್ರಿಸ್ತನ ಮುಖಾಂತರವಾಗಿ ನಾವು ದೇವರ ಮಹಿಮೆಯಲ್ಲಿ ಪಾಲುಗಾರರಾಗಿದ್ದೇವೆ (ರೋಮ 8:16-17).

3 ದೇವರ ಮಹಿಮೆಯಲ್ಲಿ ಉಲ್ಲಾಸಿಸುವದು ಸುಲಭವಾದದ್ದು, ಉಪದ್ರವಗಳಲ್ಲಿ ಉಲ್ಲಾಸವಾಗಿರುವದು ಸುಲಭವಾಗಿರುವದಿಲ್ಲ! ಹೇಗಿದ್ದರೂ, ಕ್ರೈಸ್ತರು ಉಪದ್ರವಗಳಲ್ಲಿಯೂ, ಸಂಕಷ್ಟಗಳಲ್ಲಿಯೂ ಉಲ್ಲಾಸಿಸುತ್ತಾರೆ, ಯಾಕೆಂದರೆ ಅಂತಹ ಉಪದ್ರವಗಳು ಅಂತಿಮವಾಗಿ ತಮ್ಮ ಒಳ್ಳೇದಕ್ಕಾಗಿಯೇ ಎಂದು ಅವರು ತಿಳಿದವರಾಗಿದ್ದಾರೆ (ರೋಮ 8:28 ಮತ್ತು ವ್ಯಾಖ್ಯಾನ ನೋಡಿರಿ). ಪೌಲನು ಇಲ್ಲಿ ನಾವು ಉಪದ್ರವಗಳಿಲ್ಲದೆ ಎಂದಲ್ಲ, ಉಪದ್ರವಗಳಲ್ಲಿ ಉಲ್ಲಾಸಿಸುತ್ತೇವೆ ಎಂದು ಹೇಳುವದನ್ನು ಗಮನಿಸಿರಿ.

ಒಂದು ವೇಳೆ ಉಪದ್ರವವು ನಮಗೆ ಉತ್ತಮವಾಗಿರುತ್ತದೆಂದು ಹೇಳುವದಾದರೆ ಸಾಮಾನ್ಯವಾಗಿ ನಾವು ಕೇಳಲು ಬಯಸುವದೇನೆಂದರೆ: ಅದರಿಂದ ನಮಗೆ ಏನು ಒಳ್ಳೆಯದಾಗುತ್ತದೆ ? ಉತ್ತರ ವೇನೆಂದರೆ: ಉಪದ್ರವದಿಂದ ತಾಳ್ಮೆ ಹುಟ್ಟುತ್ತದೆ (ಯಾಕೋಬ 1:2-4 ಮತ್ತು ವ್ಯಾಖ್ಯಾನ ನೋಡಿರಿ).

ಉಪದ್ರವಗಳಲ್ಲಿ ಎರಡು ವಿಧಗಳುಂಟು ಒಂದು, ನಾವು ನಮ್ಮ ಮೂರ್ಖತನ ಮತ್ತು ಪಾಪ ಕಾರಣದಿಂದ ತಂದುಕೊಳ್ಳುವ ಉಪದ್ರವ. ಇಂತಹ ಒಂದು ರೀತಿಯ ಉಪದ್ರವದಲ್ಲಿ ಉಲ್ಲಾಸಿಸುವದು ಕಷ್ಟಕರವೇ! ಹಾಗಿದ್ದರೂ, ಅಂತಹ ಉಪದ್ರವವು ನಿಜವಾಗಿಯೂ ದೇವರಿಂದಾಗುವ ಶಿಕ್ಷಣವಾಗಿದೆ ಮತ್ತು ನಾವು ಅದನ್ನು ಶಿಕ್ಷಣವೆಂದೆ ಸ್ವೀಕರಿಸಿಕೊಳ್ಳಬೇಕು (ಇಬ್ರಿಯ 12:7, 12, ಪ್ರಕಟಣೆ 3:19 ನೋಡಿರಿ).

ಎರಡನೆಯ ವಿಧದ ಉಪದ್ರವವು ನಾವು ನೀತಿಯ ನಿಮಿತ್ತ ಅನುಭವಿಸುವ ಉಪದ್ರವವಾಗಿದೆ. ಈ ರೀತಿಯ ಉಪದ್ರವದಲ್ಲಿ ನಾವು ಬಹಳವಾಗಿ ಉಲ್ಲಾಸಿಸುವವರಾಗಿದ್ದೇವೆ (ಮತ್ತಾಯ 5:10-12, 1 ಪೇತ್ರ 4:12-16 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಹೀಗಿರುವದರಿಂದ ನಮಗೆ ಬರುವ ಉಪದ್ರ ವವು ಪಾಪದ ಲೆಕ್ಕದಲ್ಲಿ ಬರದೆ ನೀತಿಯ ಲೆಕ್ಕದಲ್ಲಿ ಬರುವದಾಗಿರಲಿ!

4 ಉಪದ್ರವವು ಅನುಭವ ಸಿದ್ಧಿಯನ್ನು ಉಂಟುಮಾಡುತ್ತದೆ, ಅಂದರೆ, ಉಪದ್ರವವು ನಮ್ಮ ಗುಣಲಕ್ಷಣವನ್ನು ಹೆಚ್ಚು ಬಲಿಷ್ಟ ಹಾಗು ಪರಿಪಕ್ವಗೊಳಿಸುತ್ತದೆ. ಉಪದ್ರವಗಳಲ್ಲಿ ತಾಳ್ಮೆಯಿಂದ ಇರುವದರ ಮೂಲಕ ನಮ್ಮ ನಂಬಿಕೆಯು ಪರೀಕ್ಷಿಸಲ್ಪಟ್ಟು ಸ್ಥಿರಗೊಳ್ಳುತ್ತದೆ (1 ಪೇತ್ರ 1:6-7 ಮತ್ತು ವ್ಯಾಖ್ಯಾನ ನೋಡಿರಿ).

ನಮ್ಮ ನಂಬಿಕೆಯು ನಮ್ಮ ತಾಳ್ಮೆಯಿಂದ ನೈಜವೆಂದು ತೋರಲ್ಪಟ್ಟಾಗ ನಾವು ನಿರೀಕ್ಷೆಯನ್ನು – ನಮ್ಮ ರಕ್ಷಣೆ ಮತ್ತು ನಿತ್ಯ ಬಹುಮಾನದಲ್ಲಿ ನಿರೀಕ್ಷೆ – ಹೊಂದಬಹುದು. ಯೇಸು "ಕಡೆಯ ವರೆಗೂ ತಾಳಿಕೊಳ್ಳುವವನು ರಕ್ಷಣೆ ಹೊಂದುವನು" ಎಂದು ಹೇಳಿದನು (ಮಾರ್ಕ 13:13). ಉಪದ್ರವದ ವೇಳೆಗಳಲ್ಲಿ ನಾವು ಕಡೆಯ ವರೆಗು ತಾಳಿಕೊಳ್ಳದಿರುವದಾದರೆ ನಾವು ನಮ್ಮ ರಕ್ಷಣೆಯನ್ನು ಕಳೆದು ಕೊಳ್ಳುವ ಅಪಾಯದಲ್ಲಿ ಇರುತ್ತೇವೆಂದು ದೇವರ ವಾಕ್ಯದ ಅನೇಕ ವಚನಗಳು ಸೂಚಿಸುತ್ತವೆ (ಸಾಮಾನ್ಯಲೇಖನ: ನಾವು ನಮ್ಮ ರಕ್ಷಣೆಯನ್ನು ಕಲೆದುಕೊಳ್ಳಬಹುದೋ?).

ಯೇಸು ಬಿತ್ತುವವನ ಬಗ್ಗೆ ಹೇಳಿದ ಸಾಮ್ಯವನ್ನು ನೆನಪಿಗೆ ತಂದುಕೊಳ್ಳಿರಿ. ಕೆಲವು ಬೀಜಗಳು (ದೇವರವಾಕ್ಯ) ಬಂಡೆಯ ನೆಲದಲ್ಲಿ ಬಿದ್ದವು (ಮತ್ತು) ಬೇಗ ಮೊಳೆತವು . ಆದರೆ ಬಿಸಲೇರಿದಾಗ ಬಾಡಿ ಬೇರಿಲ್ಲದ ಕಾರಣ ಒಣಗಿ ಹೋದವು (ಮಾರ್ಕ 4:5-6).

ಸಾಮ್ಯದಲ್ಲಿ ಬಿಸಿಲು ಉಪದ್ರವವನ್ನು ಹಿಂಸೆಯನ್ನೂ ಪ್ರತಿನಿಧಿಸುತ್ತದೆ, ಮತ್ತು ಮೊಳಿಕೆಗಳು – ಅಂದರೆ, ಪೊಳ್ಳು ನಂಬಿಕೆಯುಳ್ಳ ವಿಶ್ವಾಸಿಗಳು – ತಾಳಿಕೊಳ್ಳಲಾರದೆ ಒಣಗಿ ಹೋಗುವರು (ಮಾರ್ಕ 4:16-17, ಲೂಕ 8:6,13 ಮತ್ತು ವ್ಯಾಖ್ಯಾನ ನೋಡಿರಿ). ಆದುದರಿಂದ, ಪೌಲನು ಇಲ್ಲಿ ಹೇಳುವದೇನೆಂದರೆ, ನಾವು ತಾಳ್ಮೆಯಿಂದ ಅನುಭವಿಸುವಾಗ ಮತ್ತು ನಮ್ಮ ಗುಣಲಕ್ಷಣವು ಬಲದಲ್ಲಿಯೂ, ಅನುಭವದಲ್ಲಿಯೂ (ಆಳವಾದಬೇರುಗಳು) ಅಭಿವೃದ್ಧಿಗೊಳ್ಳುವಾಗ ನಮ್ಮ ರಕ್ಷಣೆಯ ನಿಶ್ಚಯತೆಯಲ್ಲಿ ಪೂರ್ಣ ನಿರೀಕ್ಷಣ ಹೊಂದಬಹುದು (2 ತಿಮೊಥೆ 2:12, ಇಬ್ರಿಯ 10:38-39, ಪ್ರಕಟಣೆ 3:11 ನೋಡಿರಿ).

5 ನಾವು ದೇವರಲ್ಲಿಯೂ, ಆತನ ವಾಗ್ದಾನಗಳಲ್ಲಿಯೂ ಇಡುವ ನಿರೀಕ್ಷೆಯು ನಮ್ಮ ಆಶೆಯನ್ನು ಭಂಗಪಡಿಸುವದಿಲ್ಲ. ಅಷ್ಟು ಮಾತ್ರವಲ್ಲದೆ, ದೇವರು ನಮಗೆ ಪವಿತ್ರಾತ್ಮನನ್ನು ಅನುಗ್ರಹಿಸುವದರ ಮೂಲಕ ಈಗಾಗಲೇ ನಮ್ಮ ನಿರೀಕ್ಷೆಯನ್ನು

ನೆರವೇರಿಸಿರುತ್ತಾನೆ. ಪವಿತ್ರಾತ್ಮನು ಪರಲೋಕದಲ್ಲಿ ನಮಗಾಗಿ ಕೂಡಿಟ್ಟಿರುವ ಸ್ವಾಸ್ಥ್ಯಕ್ಕೆ ಮುಂಗಡ ಅಥವಾ ಸಂಚಕಾರವಾಗಿದ್ದಾನೆ. (ಎಫೆಸ 1:13-14 ಮತ್ತು ವ್ಯಾಖ್ಯಾನ ನೋಡಿರಿ).

ನಾವು ಯಾವಾಗ ಪವಿತ್ರಾತ್ಮನಿಂದ ತುಂಬಿಸಲ್ಪಟ್ಟಿದ್ದೇವೆ ಎಂಬುದನ್ನು ಬಲ್ಲೆವು, ಯಾಕೆಂದರೆ ದೇವರು ತನ್ನ ಪ್ರೀತಿರಸವನ್ನು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿಸುತ್ತಾನೆ. ಆತ್ಮನ ಮೂಲಕ ನಾವು ದೇವರ ಪ್ರೀತಿಯನ್ನು ಅನುಭವಿಸುತ್ತೇವೆ ಮತ್ತು ಪ್ರೀತಿಯಿಂದ ತುಂಬಿದವರಾಗಿದ್ದೇವೆ. ಮತ್ತು ಒಮ್ಮೆ ನಾವು ತುಂಬಿಸಲ್ಪಟ್ಟಾಗ ದೇವರ ಪ್ರೀತಿಯು ನಮ್ಮೊಳಗಿಂದ ಸುತ್ತಲಿನ ಜನರಿಗೆ ತುಂಬಿ ಹರಿಯುತ್ತದೆ.

## ದೇವರ ಪ್ರೀತಿಯು ಕ್ರಿಸ್ತನ ಮರಣದಲ್ಲಿ ಪ್ರಕಟಗೊಂಡಿದೆ (5:6-11)

**6** ಮೊದಲನೆಯದಾಗಿ, ದೇವರು ತನ್ನ ಮಗನಾದ ಯೇಸು ಕ್ರಿಸ್ತನನ್ನು ನಮಗಾಗಿ ಮರಣಿಸಲು ಕಳುಹಿಸುವದರ ಮೂಲಕ ನಮ್ಮ ಮೇಲಿರುವ ಮಹಾ ಪ್ರೀತಿಯನ್ನು ತೋರ್ಪಡಿಸಿದನು (ಯೋಹಾನ 3:16, 1 ಯೋಹಾನ 4:9-10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ಅಶಕ್ತರಾಗಿದ್ದಾಗಲೇ – ಇನ್ನು ಪಾಪಿಗಳಾಗಿದ್ದಾಗಲೆ (ವಚನ 8). ಇನ್ನು ವೈರಿಗಳಾಗಿದ್ದಾಗಲೇ (ವಚನ 10) – ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟನು. ಅಶಕ್ತರು ಎಂಬ ಪದವನ್ನು ಉಪಯೋಗಿಸುವದರಲ್ಲಿ ನಾವು ಪಾಪವನ್ನು ಜಯಿಸಲೂ, ಧರ್ಮಶಾಸ್ತ್ರಕ್ಕೆ ವಿಧೇಯರಾಗಲೂ ಯಾವ ಬಲವಿಲ್ಲದವರಾಗಿದ್ದೇವೆಂಬುದನ್ನು ಪೌಲನು ತೋರಿಸುತ್ತಾನೆ.

**7-8** ಸಾಮಾನ್ಯವಾಗಿ ಇನ್ನೊಬ್ಬ ವ್ಯಕ್ತಿಗಾಗಿ (ನಮ್ಮ ಸ್ವಂತ ಸಂಗಾತಿ ಅಥವಾ ಮಗುವಿಗಾಗಿ ಹೊರತು) ನಮ್ಮ ಪ್ರಾಣವನ್ನು ನೀಡುವದರ ಬಗ್ಗೆ ಯೋಚನೆಯನ್ನು ಮಾಡುವದಿಲ್ಲ. ಒಂದು ವೇಳೆ ಆ ಇನ್ನೊಬ್ಬ ವ್ಯಕ್ತಿಯು ನೀತಿವಂತನಾಗಿದ್ದರೂ (ವಚನ 7). ನಾವು ಸ್ವಪ್ರಾಣವನ್ನು ಆತನಿಗಾಗಿ ಕೊಡುವದಿಲ್ಲ. ಹೇಗೂ, ಬಹುಶ: ಒಬ್ಬನು ಬಹಳ ಉಪಕಾರಿಯಾಗಿದ್ದರೆ ಅವನಿಗೋಸ್ಕರ ನಮ್ಮನ್ನು ಬಲಿಕೊಡುವದರ ಬಗ್ಗೆ ನಾವು ಯೋಚಿಸಿದರೂ ಯೋಚಿಸಬಹುದು. ಆದರೆ ದುಷ್ಟನೂ ಅಥವಾ ಪಾಪಿಯಾದ ವ್ಯಕ್ತಿಗೋಸ್ಕರ ನಮ್ಮ ಪ್ರಾಣವನ್ನು ಅರ್ಪಿಸುವದರ ಕುರಿತು ನಾವು ಎಂದಿಗೂ ಯೋಚಿಸುವದಿಲ್ಲ. ನಾವು ಅಂತಹ ವ್ಯಕ್ತಿಗೆ ಸಹಾಯ ಮಾಡಲು ಸಹ ಇಚ್ಚಿಸದೆ ಹಾಗೆಯೇ ಸಾಯಲಿ ಎಂದು ಬಿಡುವವರಾಗಿದ್ದೇವೆ.

ಆದರೆ ದೇವರ ಪ್ರೀತಿ ಎಷ್ಟು ಆಶ್ಚರ್ಯವಾದದ್ದು ನೋಡಿರಿ! ಇದು ಮಾನವನ ಪ್ರೀತಿಗಿಂತ ಎಷ್ಟು ಉನ್ನತವಾದದ್ದೆಂದು ನೋಡಿರಿ. ಕ್ರಿಸ್ತನು ನೀತಿವಂತರಿಗಾಗಿಯೂ, ಒಳ್ಳೆಯವರಿಗಾಗಿಯೂ ಮಾತ್ರವೇ ಮರಣಿಸಲಿಲ್ಲ, ಆತನು ದುಷ್ಟರೂ, ಮತ್ತು ಪಾಪಿಗಳಿಗಾಗಿ – ತನ್ನ ವೈರಿಗಳಿಗಾಗಿ–ಸಹ ಮರಣಿಸಿದನು. ಆದುದರಿಂದ, ನಮ್ಮ ವೈರಿಗಳನ್ನು ಪ್ರೀತಿಸಬೇಕೆಂದು ಕ್ರಿಸ್ತನು ನಮಗೆ ಆಜ್ಞಾಪಿಸುವದಕ್ಕೆ ಆಶ್ಚರ್ಯ ಪಡದಿರೋಣ! (ಮತ್ತಾಯ 5:43-44 ಮತ್ತು ವ್ಯಾಖ್ಯಾನ ನೋಡಿರಿ).

**9** ನಾವು ಕ್ರಿಸ್ತನ ರಕ್ತದಿಂದ – ಅಂದರೆ, ಆತನ ತ್ಯಾಗಮಯ ಮರಣದ ಮೂಲಕ – ನೀತಿವಂತರಾದೆವು (ಎಫೆಸ 1:7 ಮತ್ತು ವ್ಯಾಖ್ಯಾನ ನೋಡಿರಿ). ಕ್ರಿಸ್ತನು ತನ್ನ ಮರಣದ ಮೂಲಕ ನಮ್ಮ ಪಾಪಗಳ ದಂಡನೆಯನ್ನು ತನ್ನ ಮೇಲೆ ಹೊತ್ತು ಕೊಂಡನು. ಆತನ ರಕ್ತದ ಮುಖಾಂತರ ನಮ್ಮ ಪಾಪಗಳು "ತೊಳೆಯಲ್ಪಟ್ಟಿವೆ" ಎಂದು ಹೇಳಬಹುದು. ಹೀಗೆ ಆತನ ರಕ್ತದಿಂದ ತೊಳೆಯಲ್ಪಟ್ಟವರಾದ ನಾವು ದೇವರ ದೃಷ್ಟಿಯಲ್ಲಿ ನೀತಿವಂತರಾಗಿರುತ್ತೇವೆ (ನೀತಿವಂತರೆಂದು ನಿರ್ಣಯಿಸಲ್ಪಟ್ಟಿರುತ್ತೇವೆ) ಮತ್ತು ನೀತಿವಂತರಾದ ಮೇಲೆ ನಾವು ದಂಡನೆಯಿಂದ – ಅಂದರೆ ದೈವಕೋಪದಿಂದ ರಕ್ಷಿಸಲ್ಪಡುವೆವು.

**10** ಕ್ರಿಸ್ತನ ಮರಣದ ಮೂಲಕ ನಾವು ದೇವರೊಂದಿಗೆ ಸಮಾಧಾನವಾಗಿರುತ್ತೇವೆ. ಕ್ರಿಸ್ತನ ಮರಣದ ಮೂಲಕ ನಾವು ಅಂತಹ ದೊಡ್ಡ ಪ್ರಯೋಜನವನ್ನು ಪಡೆದಿರುವದಾದರೆ ಆತನ ಪುನರುತ್ಥಾನದ ಜೀವದ ಮೂಲಕ ನಾವು ಇನ್ನು ಎಷ್ಟು ಹೆಚ್ಚಾಗಿ ಪ್ರಯೋಜನವನ್ನು ಪಡೆದುಕೊಳ್ಳಬಹುದೆಂದು ಯೋಚಿಸಿರಿ!

ದೇವರೊಂದಿಗೆ ಒಮ್ಮೆ ಸಮಾಧಾನ ಹೊಂದಿಕೊಂಡರೆ ಸಾಕಾಗುವದಿಲ್ಲ, ನಾವು ಸಮಾಧಾನಗೊಂಡವರಾಗಿಯೇ ಉಳಿಯಬೇಕು. [22] ನಾವು ದೇವರೊಂದಿಗೆ ಸಮಾಧಾನಗೊಂಡವರಾಗಿಯೇ ಉಳಿಯಲು ನಮಗೆ ಸಹಾಯದ ಅಗತ್ಯತೆಯುರುತ್ತದೆ. ಕಡೇವರೆಗೂ ತಾಳಿಕೊಳ್ಳುವವನು ರಕ್ಷಣೆ ಹೊಂದುವನು (ಮಾರ್ಕ 13:13), ಎಂಬದನ್ನು ಜ್ಞಾಪಕದಲ್ಲಿಟ್ಟುಕೊಂಡು ಉಪದ್ರವ ಮತ್ತು ಹಿಂಸೆಯನ್ನು ತಾಳಿಕೊಳ್ಳಲು ನಮಗೆ ಬಲದ ಅವಶ್ಯಕತೆಯಿರುತ್ತದೆ. ನಾವು ಕೃಪೆಯಲ್ಲಿಯೂ, ನಂಬಿಕೆಯಲ್ಲಿಯೂ ಬೆಳೆಯಬೇಕಾಗುತ್ತದೆ. ನಾವು ಬೆಳೆದು ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು, ಆತನೇ ಶಿರಸ್ಸು (ಎಫೆಸ 4:15). ಇದೆಲ್ಲದರಲ್ಲಿಯೂ ಪುನರುತ್ಥಾನಗೊಂಡ ಜೀವವುಳ್ಳ ಕ್ರಿಸ್ತನು ನಮ್ಮೊಂದಿಗಿದ್ದು ಸಹಾಯ ಮಾಡುವನು.

**11** ದೇವರೊಂದಿಗೆ ಸಮಾಧಾನ ಹೊಂದಿರದ ವ್ಯಕ್ತಿಯ ಹೃದಯದಲ್ಲಿ ಆಳವಾದ ಹಾಗು ಸ್ಥಿರವಾದ ಆನಂದವು ಇರಲಾರದು. ಆದರೆ ನಾವು ಆತನೊಂದಿಗೆ ಸಮಾಧಾನಗೊಂಡ ಕೂಡಲೇ ನಮ್ಮ ಹೃದಯಗಳು ಆತನ ಆನಂದದಿಂದ ತುಂಬುತ್ತವೆ, ಮತ್ತು ದೇವರಲ್ಲಿ ಹರ್ಷಗೊಳ್ಳಬಲ್ಲರಾಗಿದ್ದೇವೆ. ಕ್ರಿಸ್ತನ ಮುಖಾಂತರವಾಗಿ ನಮಗೋಸ್ಕರ ಅಷ್ಟೊಂದು ಮಾಡಿರುವ ದೇವರಲ್ಲಿ ನಾವು ಹರ್ಷಿಸಬಾರದೇಕೆ?

## ಆದಾಮನಿಂದ ಮರಣ, ಕ್ರಿಸ್ತನ ಮೂಲಕ ಜೀವ (5:12-21)

**12** ಒಬ್ಬ ಮನುಷ್ಯನಿಂದಲೇ ಪಾಪವು ...ಲೋಕದೊಳಗೆ ಸೇರಿತು. ಆ ಮನುಷ್ಯನು ಯಾರಾಗಿದ್ದನು? ಆತನು ಆದಾಮ (ವಚನ 14). ದೇವರಿಂದ ಸೃಷ್ಟಿಸಲ್ಪಟ್ಟ ಮೊದಲ ಮನುಷ್ಯನು.

ಆಕಾಶ ಭೂಮಿಗಳನ್ನೂ ಅವು ಗಳಲ್ಲಿನ ಸಮಸ್ತವನ್ನೂ ಸೃಷ್ಟಿಸಿ ಮುಗಿಸಿದ ಮೇಲೆ, ದೇವರು ತಾನು ಉಂಟು ಮಾಡಿದ್ದನ್ನೆಲ್ಲಾ ನೋಡಲಾಗಿ ಅದು ಬಹು ಒಳ್ಳೇದಾಗಿತ್ತು (ಆದಿಕಾಂಡ 1:31). ಆದರೆ ಆದರ ತರುವಾಯ ಮೊದಲ ಮಾನವನಾದ ಆದಾಮನು ಪಾಪ ಮಾಡಿದನು. ದೇವರು ತಿನ್ನಬಾರದೆಂದು ಆಜ್ಞಾಪಿಸಿದ್ದ ಹಣ್ಣನ್ನು ಆದಾಮ ಮತ್ತು ಆತನ ಹೆಂಡತಿ ತಿಂದರು (ಆದಿಕಾಂಡ 2:15-17, 3:1-3). ಆ ಕ್ಷಣದಲ್ಲಿ ಪಾಪವು ಮಾನವ ಜನಾಂಗದೊಳಗೆ ಪ್ರವೇಶಿಸಿತು. ಮತ್ತು ಆದಾಮನ ಕಾಲದಿಂದ ಮೊದಲ್ಗೊಂಡು ಮಾನವರೆಲ್ಲರೂ ಆದಾಮನ ಪಾಪದಲ್ಲಿ ಪಾಲುಗಾರರಾಗಿರುತ್ತಾರೆ. ಪ್ರಪ್ರಥಮ ಮೂಲ ಪಿತೃವಿನಿಂದಲೇ ನಾವು ಪಾಪಮಯ ಸ್ವಭಾವವನ್ನು ಸ್ವಾಸ್ತ್ಯವಾಗಿ ಹೊಂದಿರುತ್ತೇವೆ. ಮತ್ತು ಪಾಪಕ್ಕೆ ದಂಡನೆಯು ಮರಣವಾದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು. ಆ ಮರಣವು ಶಾರೀರಿಕ ಮತ್ತು ಆತ್ಮೀಕ ಮರಣವಾಗಿದೆ.

ಇಲ್ಲಿ ಒಂದು ಪ್ರಶ್ನೆಯ ಉದ್ಭವವಾಗುತ್ತದೆ. ಪೌಲನು ಇಲ್ಲಿ ಎಲ್ಲರೂ ಪಾಪಮಾಡಿದ್ದಾರೆ ಎಂದು ಹೇಳುತ್ತಾನೆ. ಆದರೆ ಚಿಕ್ಕ ಕೂಸುಗಳು ಸಹ ಪಾಪ ಮಾಡಿವೆಯೋ? ಇಲ್ಲ, ಅವರು ಪಾಪ ಮಾಡಿದ್ದಾರೆಂದು ನಾವು ಹೇಳುವದಿಲ್ಲ, ಆದರೆ ಪಾಪದ ಬೀಜವು ಅವರಲ್ಲಿ ಬಿತ್ತಲ್ಪಟ್ಟಿದೆ. ಮತ್ತು ಕೂಸುಗಳು ಬೆಳೆಯುತ್ತಾ ಬಂದ ಹಾಗೆ ಆ ಬೀಜವು ಖಂಡಿತವಾಗಿಯೂ ಮೊಳಕೆಯೊಡೆಯುತ್ತದೆ,. ನಾಯಿ ಮರಿಯೊಂದು ಕಲಿಸಲ್ಪಡದೆಯೇ ಬೊಗಳಲು ಪ್ರಾರಂಭಿಸುವ ಪ್ರಕಾರವೇ ಚಿಕ್ಕ ಮಗು ಕಲಿಸದೆಯೇ ಪಾಪ ಮಾಡಲಾರಂಭಿಸುತ್ತದೆ. ಪಾಪಮಾಡುವದು ಆತನ ಸ್ವಭಾವದಲ್ಲಿಯೇ ಇರುತ್ತದೆ.

ಬಾಲ್ಯದಲ್ಲಿಯೇ ಸಾಯುವ ಮಗುವಿನ ಗತಿಯೇನು? ಆತನು ಪರಲೋಕಕ್ಕೆ ಹೋಗುವನೋ ಅಥವಾ ನರಕಕ್ಕೆ ಹೋಗುವನೋ? ಬೈಬಲ್ ಈ ಪ್ರಶ್ನೆಗೆ ನಿಖರವಾದ ಉತ್ತರವನ್ನು ಕೊಡುವದಿಲ್ಲ. ಮಗುವು ಉದ್ದೇಶ ಪೂರ್ವಕವಾಗಿ ಪಾಪಮಾಡಿಲ್ಲವಾದ್ದರಿಂದ ಆತನು ಪರಲೋಕಕ್ಕೆ ಹೋಗುವನು ಎಂದು ಬಹುಪಾಲು ಜನರು ನಂಬುತ್ತಾರೆ. ದೇವರು ಕೂಸುಗಳಿಗಾಗಿಯೂ ಚಿಕ್ಕ ಮಕ್ಕಳಿಗಾಗಿಯೂ ಬಹಳ ಪ್ರೀತಿ ಮತ್ತು ಚಿಂತೆಯನ್ನು ಹೊಂದಿದ್ದಾನೆಂಬದನ್ನು ನಾವು ಬಲ್ಲೆವು. ದೇವರು ಸರಿಯಾದದ್ದನ್ನೇ ಮಾಡುವನು (ಮತ್ತಾಯ 18:10, ಮಾರ್ಕ 10:14-15, ಸಾಮನ್ಯ ಲೇಖನ: ಮಕ್ಕಳು ಮತ್ತು ದೇವರ ರಾಜ್ಯ ನೋಡಿರಿ).

**13** ಆದಾಮ ಕಾಲದಿಂದ ಮೋಶೆಯ ಕಾಲದ ವರೆಗೂ (ವಚನ 14), ಧರ್ಮ ಶಾಸ್ತ್ರವು [23] ಅಸ್ತಿತ್ವದಲ್ಲಿರಲಿಲ್ಲ. ಯೆಹೂದ್ಯ ಜನಾಂಗಕ್ಕೆ ತಿಳಿಪಡಿಸುವದಕ್ಕಾಗಿ ದೇವರು ಮೋಶೆಗೆ ಲಿಖಿತಧರ್ಮಶಾಸ್ತ್ರವನ್ನು ನೀಡಿದನು. (ಮೋಶೆಯು ಅಬ್ರಹಾಮನ ಕಾಲದ ನಂತರ ಸುಮಾರು ನಾನ್ನೂರು ವರ್ಷಗಳಾದ ಮೇಲೆ ಜನಿಸಿದನು, ಹಾಗಾದರೆ ಮೋಶೆಯ ಕಾಲಕ್ಕೆ ಮುಂಚೆ ಯೆಹೂದ್ಯರಿಗಾಗಲಿ ಇಲ್ಲವೆ ಅನ್ಯ ಜನರಿಗಾಗಲಿ ಲಿಖಿತರೂಪದ ಧರ್ಮಶಾಸ್ತ್ರವು ಇರಲಿಲ್ಲ).

ಮೋಶೆಯ ಸಮಯಕ್ಕೆ ಮುಂಚೆ ಧರ್ಮಶಾಸ್ತ್ರವು ಅಸ್ತಿತ್ವದಲ್ಲಿ ಇರಲಿಲ್ಲವಾದ್ದರಿಂದ ನಿಶ್ಚಯವಾಗಿಯೂ ಅವಿಧೇಯತೆ ಎಂಬುದು ಆಗ ಇಲ್ಲವಾಗಿತ್ತು (ರೋಮ 4:15). ಅಲ್ಲದೆ ಧರ್ಮಶಾಸ್ತ್ರಕ್ಕೆ ಅವಿಧೇಯರಾಗುವದಕ್ಕಾಗಿ ಯಾವ ದಂಡನೆಯು ಸಹ ಇರಲಿಲ್ಲ. ದೇವರ ಧರ್ಮಶಾಸ್ತ್ರಕ್ಕೆ ಅವಿಧೇಯರಾಗುವದೇ ಪಾಪ. ಧರ್ಮಶಾಸ್ತ್ರವಿಲ್ಲದಿರುವಲ್ಲಿ ಕಾನೂನಿನ ಪ್ರಕಾರವಾಗಿ ಪಾಪವು ಲೆಕ್ಕಕ್ಕೆ ಬರುವದಿಲ್ಲ[24].

ಉದಾಹರಣೆಗೆ, ತಿಳುವಳಿಕೆಯಿಲ್ಲದೆಯೇ ಮಗುವು ತಪ್ಪೊಂದನ್ನು ಮಾಡುತ್ತದೆ. ಅದು ತಪ್ಪೆಂದು ಯಾರೂ ಅವನಿಗೆ ಎಂದೂ ಹೇಳಲಿಲ್ಲ. ಆದ್ದರಿಂದ, ಮಗುವು ದಂಡಿಸಲ್ಪಡುವದಿಲ್ಲ. ಆದರೆ ಮಗುವಿಗೆ ಯಾವದಾದರೂ ತಪ್ಪೆಂದು ಹೇಳಿದ ಮೇಲೆ ಅದನ್ನು ಮಾಡುವದಾದರೆ ಅವನ ಪಾಪವು ಲೆಕ್ಕಕ್ಕೆ ಬರುವದು, ಮತ್ತು ಆತನ ತಂದೆ ತಾಯಿಗಳು ಅವನನ್ನು ಶಿಕ್ಷಿಸುವರು.

**14** ಮೋಶೆಗೂ ಮುಂಚೆ ಲಿಖಿತರೂಪದ ಧರ್ಮಶಾಸ್ತ್ರವು ಅಸ್ತಿತ್ವದಲ್ಲಿರದಿದ್ದಾಗ್ಯು ಪಾಪವು ಲೋಕದಲ್ಲಿತ್ತು (ವಚನ 13). ಪಾಪವು ಲೋಕದಲ್ಲಿತ್ತು, ಯಾಕೆಂದರೆ ಮೂಲತ: ಅದು ಆದಾಮನನ್ನು ಪ್ರವೇಶಿಸಿತ್ತು, ದೇವರು ತಿನ್ನ ಬಾರದೆಂದು ಹೇಳಿದ್ದ ಹಣ್ಣನ್ನು ಆತನು ತಿಂದಿದ್ದನು ಮತ್ತು ಆದಾಮನಿಂದ ಪಾಪವು ಮಾನವರಿಗೆಲ್ಲಾ ಹಸ್ತಾಂತರಿಸಲ್ಪಟ್ಟಿತ್ತು. ಮತ್ತು ಪಾಪದ ಜೊತೆಯಲ್ಲಿ ಪಾಪದ ದಂಡನೆಯಾದ ಮರಣವು ಸಹ ಬಂದಿತು. ಆದಾಮನ ನಂತರದ ಕೆಲವು ಪೀಳಿಗೆಗಳ ತರುವಾಯ ದೇವರು ಪಾಪಮಯ ಮಾನವರ ಮೇಲೆ ಬಹಳ ಕೋಪಗೊಂಡು ಮಹಾ ಜಲಪ್ರಳಯವನ್ನು ಬರಮಾಡಿ ನೋಹ ಮತ್ತು ಆತನ ಕುಟುಂಬವನ್ನು ಹೊರತು ಪಡಿಸಿ ಭೂಮಿಯ ಮೇಲಿನ ಎಲ್ಲಾ ಜನರನ್ನು ನಾಶಮಾಡಿದನು (ಆದಿಕಾಂಡ 6-7 ಅಧ್ಯಾಯಗಳು) ಅಬ್ರಹಾಮನ ಕಾಲದಲ್ಲಿ ದೇವರು ಸೋದೋಮ ಗೊಮೋರ ಪಟ್ಟಣಗಳಲ್ಲಿನ ಜನರ ದುಷ್ಟ ತನಕ್ಕೋಸ್ಕರ ಆ ಪಟ್ಟಣಗಳನ್ನು ನಾಶಮಾಡಿದನು (ಆದಿಕಾಂಡ 19 ಅಧ್ಯಾಯ). ದೇವರ ನಿರ್ದಿಷ್ಟವಾದ ಆಜ್ಞೆಯನ್ನು ಉಲ್ಲಂಘಿಸದ ಜನರು ಸಹ ಎಲ್ಲರಂತೆಯೇ ಮರಣಿಸಿದರು, ಯಾಕೆಂದರೆ ಆದಾಮನ ಮೂಲಕ ಮರಣವು ಮಾನವರೊಳಗೆ ಪ್ರವೇಶಿಸಿತ್ತು (ವಚನ 12). ಹೀಗಿರುವದರಿಂದ ಪೌಲನು ಆದಾಮನ ಕಾಲದಿಂದ ಮೋಶೆಯ ಕಾಲದ ವರೆಗೂ ಮರಣದ ಆಳಿಕೆಯು ನಡೆಯುತ್ತಿತ್ತು ಎಂದು ಹೇಳುತ್ತಾನೆ.

ಆದಾಮನು ಬರಬೇಕಾದ ಒಬ್ಬಾತನಿಗೆ – ಅಂದರೆ, ಕ್ರಿಸ್ತನಿಗೆ ಸೂಚಕ ಪುರುಷನಾಗಿದ್ದಾನೆ. ಯಾವ ವಿಧದಲ್ಲಿ ಆದಾಮನು ಕ್ರಿಸ್ತನಿಗೆ ಸೂಚಕ ಪುರುಷನಾಗಿದ್ದಾನೆ? ಆದಾಮನು ಹಳೆಯ ಮಾನವ ಜನಾಂಗದ ಶಿರಸ್ಸಾಗಿದ್ದನು, ಕ್ರಿಸ್ತನು ನೂತನ ಆತ್ಮೀಕ ಜನಾಂಗದ ಶಿರಸ್ಸಾಗಿದ್ದಾನೆ. ಪ್ರಥಮ ಮಾನವನಾಗಿ ಆದಾಮನು ತನ್ನ ಹಿಂದಿನವರ ಮೇಲೆಲ್ಲಾ ಪ್ರಭಾವಬೀರಿದನು, ಅಂದರೆ, ಆದಾಮನು ಪಾಪ ಮಾಡಿದಂತೆಯೇ ಅವರೆಲ್ಲರೂ ಸಹ ಪಾಪ ಮಾಡಿದರು. ಅವರು ಆತನಂತೆಯೇ ಪಾಪಿಗಳಾದರು. ಇನ್ನೊಂದು ಕಡೆಯಲ್ಲಿ, ಕ್ರಿಸ್ತನು ನೂತನ ಆತ್ಮೀಕ ಜನಾಂಗದ ಪ್ರಥಮ ಮಾನವನೂ, ದೇವರ ಪುತ್ರರಲ್ಲಿ ಜೇಷ್ಠನೂ ಆದವನಾಗಿ ತನ್ನನ್ನು ಹಿಂಬಾಲಿಸುವ ಎಲ್ಲರ ಮೇಲೆ ಪ್ರಭಾವ ಬೀರಿದನು. ಅವರು ಆತನಂತೆಯೇ ನೀತಿವಂತರಾದರು.

15 ಆದರೆ ಆ ಅಪರಾಧದ ಸಂಗತಿಗೂ ದೇವರ ಕೃಪಾದಾನದ ಸಂಗತಿಗೂ ಬಹಳ ಹೆಚ್ಚು ಕಡಿಮೆ ಉಂಟು. ಕ್ರಿಸ್ತನ ಕಾರ್ಯವು ಆದಾಮನ ಕಾರ್ಯದಂತೆ ಇರುವದಿಲ್ಲ. ಆದಾಮನಿಂದ ಮರಣ ಉಂಟಾಯಿತು, ಕ್ರಿಸ್ತನಿಂದ ಜೀವ ಉಂಟಾಯಿತು. ಆದಾಮನಿಂದ ಪಾಪವು ಬಂದಿತು, ಕ್ರಿಸ್ತನಿಂದ ಜೀವ ಉಂಟಾಯಿತು. ಆದಾಮನಿಂದ ಪಾಪವು ಬಂದಿತು, ಕ್ರಿಸ್ತನಿಂದ ದಾನ (ವರ) ಬಂದಿತು. ಇಲ್ಲಿ ಪ್ರಸ್ತಾಪಿಸಲಾಗಿರುವ ದಾನವು ನೀತಿಯ ದಾನವಾಗಿರುತ್ತದೆ (ವಚನ 17), ಅದು ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಕೃಪೆಯಿಂದ ಸಿಕ್ಕುವ ವರ ಆಗಿದೆ. ನೀತಿಯ ವರದ ಜೊತೆಯಲ್ಲಿ ನಿತ್ಯ ಜೀವವು – ರಕ್ಷಣೆಯು ದೊರೆಯುದಾಗಿದೆ ಮತ್ತು ಈ ವರವು ಎಲ್ಲಾ ಮನುಷ್ಯರಿಗೆ ಹೇರಳವಾಗಿ – ಅಂದರೆ, ಎಲ್ಲಾ ವಿಶ್ವಾಸಿಗಳಿಗೂ ದೊರೆಯುವದಾಗಿದೆ.

16 ಒಬ್ಬನೇ ಮನುಷ್ಯನ ಪಾಪದ ದೆಸೆಯಿಂದ (ಆದಾಮನು ನಿಷೇಧಿಸಲ್ಪಟ್ಟ ಹಣ್ಣನ್ನು ತಿಂದ ಪಾಪ) ಸಾಯಬೇಕೆಂಬ ನಿರ್ಣಯವು ಉಂಟಾಯಿತು. ಹೀಗೆ ಒಬ್ಬನ ಪಾಪದಿಂದ (ಆದಾಮನ ಪಾಪ) ನ್ಯಾಯತೀರ್ಪು ಬಂದಿತು. ಆದರೆ ಅನಂತರ ದೇವರ ಕೃಪಾದಾನವು ಅನೇಕರ ಅಪರಾಧಗಳ ಕಾರಣದಿಂದ ಉಂಟಾಯಿತು. ಅಂದರೆ, ಇನ್ನು ಅನೇಕ ಮಾನವರು ಪಾಪ ಮಾಡಿದ ಬಳಿಕ ಯೇಸು ಕ್ರಿಸ್ತನ ಕೃಪೆಯ ಮೂಲಕ ನೀತಿಯ ವರವು ಅನುಗ್ರಹಿಸಲ್ಪಟ್ಟಿತು. ಒಬ್ಬನ ಪಾಪದಿಂದ ಎಲ್ಲಾ ಮಾನವರಿಗೂ ಸಾಯಬೇಕೆಂಬ ನಿರ್ಣಯ ಉಂಟಾಯಿತು, ಒಬ್ಬನ (ಕ್ರಿಸ್ತನ) ವಿಧೇಯ ಮೂಲಕ ನಂಬುವ ಎಲ್ಲರಿಗೆ ನೀತಿವಂತರೆಂಬ ನಿರ್ಣಯ ಉಂಟಾಯಿತು.

17 ಆದಾಮನಿಂದ "ಮರಣದ ಆಳಿಕೆ" ಬಂದಿತು, ಕ್ರಿಸ್ತನ ಮೂಲಕ "ಜೀವದ ಆಳಿಕೆ" ಬಂದಿತು. ಆದಾಮನಿಂದ ನಾವೆಲ್ಲರೂ ಮರಣದ ಭಾದ್ಯತೆಯನ್ನು ಹೊಂದಿದ್ದೇವೆ. ನಮ್ಮ ದೇಹಗಳೂ ಆತ್ಮಗಳೂ ಮರಣದ ಬಲದಡಿಯಲ್ಲಿ ಇರುತ್ತವೆ. ನಾವೆಲ್ಲರೂ ದೈಹೀಕವಾಗಿ ಮರಣಿಸುತ್ತೇವೆ ಮತ್ತು ಕ್ರಿಸ್ತನಿಲ್ಲದೆ ನಾವು ಆತ್ಮೀಕವಾಗಿ ಸಹ ಮರಣಿಸುವೆವು.[25] ಆದರೆ ಕ್ರಿಸ್ತನಿಂದ ನಾವು ಜೀವವನ್ನು, ನಿತ್ಯಜೀವವನ್ನು ಭಾದ್ಯವಾಗಿ ಹೊಂದಿದ್ದೇವೆ. ಈ ಭೂಮಿಯ ಮೇಲೆ ಮಾತ್ರವಲ್ಲದೆ ಪರಲೋಕದಲ್ಲಿಯೂ ಸಹ ಹೊಂದಿದ್ದೇವೆ (ರೋಮ 6:23, 1 ಕೊರಿಂಥ 15:21-22 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಈ ಜೀವವು ನಮಗೆ ದೇವರು ದಾರಾಳವಾಗಿ ಅನುಗ್ರಹಿಸುವ ಕೃಪಾದಾನದ ಮೂಲಕವೂ, ನೀತಿಯೆಂಬ ವರದ ಮೂಲಕವೂ ದೊರೆತಿರುವದಾಗಿದೆ.

18 ಇಲ್ಲಿ ಪೌಲನು ತಾನು 16ನೇ ವಚನದಲ್ಲಿ ಬರೆದ ಸಂಗತಿಯನ್ನು ಪುನರಾವರ್ತಿಸುತ್ತಾನೆ. ಒಂದೇ ಅಪರಾಧದ ಮೂಲಕ ಎಲ್ಲಾ ಮನುಷ್ಯರಿಗೆ ಸಾಯಬೇಕೆಂಬ ನಿರ್ಣಯವು ಆಯಿತು. ಹಾಗೆಯೇ ಒಂದೇ ನೀತಿಯ ಕಾರ್ಯದಿಂದ (ಕ್ರಿಸ್ತನು ನಮಗಾಗಿ ತನ್ನ ಸ್ವಪ್ರಾಣವನ್ನು ಅರ್ಪಿಸುವ ಕಾರ್ಯದಿಂದ) ಎಲ್ಲಾ ಮನುಷ್ಯರಿಗೆ ನೀತಿವಂತರೆಂಬ ನಿರ್ಣಯವು ಉಂಟಾಗಿ ಜೀವವನ್ನು ಫಲಿಸುತ್ತದೆ (ರೋಮ 8:1-2).

19 ಆದಾಮನ ಅವಿಧೇಯತ್ವದಿಂದ ಎಲ್ಲಾ ಮಾನವರು ಪಾಪಿಗಳಾದರು. ಕ್ರಿಸ್ತನ ವಿಧೇಯತ್ವದಿಂದ ಎಲ್ಲರೂ ನೀತಿವಂತರಾಗುವರು (ಫಿಲಿಪ್ಪಿ 2:8 ನೋಡಿರಿ).

ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ: ಒಬ್ಬನೇ ವ್ಯಕ್ತಿಯು, ಅಂದರೆ ಆದಾಮನು ಹೇಗೆ ಎಲ್ಲರ ಮೇಲೆ ಪ್ರಭಾವ ಬೀರಲು ಸಾದ್ಯ? ಆದಾಮನ ಪಾಪವು ಹೇಗೆ ತಲೆಮಾರಿನಿಂದ ತಲೆಮಾರಿಗೆ ಹಸ್ತಾಂತರಗೊಳ್ಳಲು ಸಾದ್ಯ? ಅದಕ್ಕೆ ಉತ್ತರವೇನೆಂದರೆ: ಆದಾಮನು ನಮ್ಮ ಶಾರೀರಿಕ ಪಿತೃವಾಗಿದ್ದಾನೆ, ಶಾರೀರಿಕವಾಗಿ ನಮ್ಮೆಲ್ಲರ ಸಾಮಾನ್ಯ ಪೂರ್ವಜನಾಗಿದ್ದಾನೆ. ಮಾನವ ಜನಾಂಗವು ಒಂದು ಬೃಹತ್ ಮರದಂತಿರುತ್ತದೆ, ಮತ್ತು ಆದಾಮನು ಆಮರದ ಬೀಜವಾಗಿದ್ದಾನೆ. ಬೀಜದಂತೆಯೇ ಮರವೂ ಇರಬೇಕಷ್ಟೆ.

ಇನ್ನೊಂದು ಪ್ರಶ್ನೆಯು ಉದ್ಭವಿಸುತ್ತದೆ: ಒಬ್ಬನೇ ವ್ಯಕ್ತಿಯಾದ ಕ್ರಿಸ್ತನು ಹೇಗೆ ಬಹುಜನರನ್ನು ನೀತಿವಂತರನ್ನಾಗಿ ಮೂಡಲು ಸಾದ್ಯ? ಅದೇ ನಿಯಮದ ಮೂಲಕವೇ ಮಾಡುತ್ತಾನೆ. ಆದಾಮನು ಹೇಗೆ ಹಳೆ ಜನಾಂಗದ ಬೀಜವಾಗಿದ್ದನೋ ಹಾಗೆಯೇ ಕ್ರಿಸ್ತನು ನೂತನ ಆತ್ಮೀಕ ಜನಾಂಗದ ಬೀಜವಾಗಿದ್ದಾನೆ. ಕ್ರಿಸ್ತನಿಂದ ಚಿಗುರಿ ಬಂದ ಅನೇಕರನ್ನು ದೇವರು ನೀತಿವಂತರೆಂದು ನಿರ್ಣಯಿಸಿರುತ್ತಾನೆ. ಕ್ರಿಸ್ತನ ಬೀಜವಿರುವ ಪ್ರಕಾರವೇ ಆತನ ವಿಶ್ವಾಸಿಸುವವರು ಸಹ ಇರುತ್ತಾರೆ.

20 ಇಲ್ಲಿ ಪ್ರಸ್ತಾಪಿಸಲಾಗಿರುವ ಧರ್ಮಶಾಸ್ತ್ರವು ದೇವರು ಮೋಶೆಗೆ ನೀಡಿದ ಲಿಖಿತ ಧರ್ಮಶಾಸ್ತ್ರವಾಗಿದೆ. ಧರ್ಮಶಾಸ್ತ್ರ ಬಂದ ಬಳಿಕ ಮಾನವನ ಪಾಪವು ಹೆಚ್ಚಿತು; ಯಾಕೆಂದರೆ ಆಗ ಮಾನವರಿಗೆ ದೇವರ ಆಜ್ಞೆಗಳೆನೆಂಬುದು ಸರಿಯಾಗಿ ತಿಳಿದಿತ್ತು. ತಿಳಿಯದೇ ಒಂದು ಆಜ್ಞೆಯನ್ನು ಉಲ್ಲಂಘಿಸುವದಕ್ಕಿಂತಲೂ ತಿಳಿದವರಾಗಿ ಆಜ್ಞೆಯನ್ನು ಉಲ್ಲಂಘಿಸುವದು ಮಹಾ ಪಾಪವಾಗಿದೆ. ಧರ್ಮಶಾಸ್ತ್ರವು ಬರುವದಕ್ಕೆ ಮುಂಚೆ ಮಾನವರು ಪಾಪ ಮಾಡಿದರು. ಆದರೆ ಅವರು ಆಗ ದೇವರ

ಆಜ್ಞೆಗಳಾವವೆಂಬದನ್ನು ತಿಳಿಯದೆಯೇ ಮಾಡಿದರು, ಆದುದರಿಂದ, ಅವರ ಅಪರಾಧವು ಕಡಿಮೆಯೆಂದೆಣಿಸಲ್ಪಟ್ಟಿತ್ತು. ನಮಗೂ ಸಹ ಅದೇ ನಿಯಮವು ಅನ್ವಯಿಸುತ್ತದೆ: ನಾವು ತಿಳಿದವರಾಗಿ ಪಾಪ ಮಾಡುವದಾದರೆ ದೇವರು ನಮ್ಮ ಪಾಪವನ್ನು ಹೆಚ್ಚಾಗಿ ಪರಿಗಣಿಸುತ್ತಾನೆ (ಲೂಕ 12:47-48). ಮತ್ತು ವ್ಯಾಖ್ಯಾನ ನೋಡಿರಿ).

ಹೇಗಿದ್ದರೂ, ಆದಾಮನಿಂದ ಎಷ್ಟು ಪಾಪವು ಬಂದಿದ್ದರೂ ಲೆಕ್ಕವಿಲ್ಲ, ಕ್ರಿಸ್ತನಿಂದ ಇನ್ನು ಹೆಚ್ಚಾಗಿ ಕೃಪೆಯು ಬಂದಿದೆ, ಪಾಪವು ಹೆಚ್ಚಾದಂತೆ ಕೃಪೆಯೂ ಹೆಚ್ಚಾಗುತ್ತದೆ.

21 ಕೃಪೆಯು ಯಾವಾಗಲು ಪಾಪದ ಮೇಲೆ ಅಧಿಕಾರ ನಡೆಸುವದು, ಬೆಳಕು ಕತ್ತಲೆಯನ್ನಾಳುವ ಪ್ರಕಾರವೇ ಕೃಫೆಯು ಪಾಪವನ್ನು ಆಳುತ್ತದೆ. ಪಾಪವು ಮರಣಕ್ಕೆ ನಡೆಸುತ್ತದೆ. ಕೃಪೆಯು ಯೇಸು ಕ್ರಿಸ್ತನ ಮೂಲಕವಾಗಿ ನಿತ್ಯ ಜೀವಕ್ಕೆ ನಡೆಸುತ್ತದೆ. ಕ್ರಿಸ್ತನು ಪಾಪವನ್ನೂ ಮರಣವನ್ನೂ ಸಂಪೂರ್ಣವಾಗಿ ಜಯಿಸಿರುತ್ತಾನೆ (ರೋಮ 8:1-2, 1 ಕೊರಿಂಥ 15:56 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಈ ವಚನದಲ್ಲಿ ನಾವು ನಮ್ಮ ರಕ್ಷಣೆಯಲ್ಲಿರುವ ಮೂರು ಮಹಾ ಹೆಜ್ಜೆಗಳನ್ನು ಅಂದರೆ ಕ್ರಿಸ್ತನ ಮೂರು ಮಹಾ ವರಗಳನ್ನು ನೋಡುತ್ತೇವೆ: ಮೊದಲನೆಯದಾಗಿ ಕೃಪೆ, ಎರಡನೆಯದಾಗಿ, ಕೃಪೆಯ ಮೂಲಕ, ನೀತಿ, ಮೂರನೆಯದಾಗಿ ನೀತಿಯ ಮುಖಾಂತರ, ನಿತ್ಯ ಜೀವ. ಈ ರೀತಿಯಾಗಿ ಕ್ರಿಸ್ತನು ಆದಾಮನಿಂದ ತರಲ್ಪಟ್ಟ ಹಾನಿಯನ್ನು ಅಳಿಸಿ ಹಾಕಿದ್ದಷ್ಟೇ ಅಲ್ಲ ಆದರೆ ಆತನು ಇನ್ನು ಅಧಿಕವಾದದ್ದನ್ನು ಸಹ ಮಾಡಿರುತ್ತಾನೆ: ಆತನು ನಮ್ಮನ್ನು ದೇವರ ಮಕ್ಕಳನ್ನಾಗಿಯೂ, ಪರಲೋಕದ ಎಲ್ಲಾ ಐಶ್ವರ್ಯಗಳಿಗೆ ಬಾಧ್ಯಸ್ಥರನ್ನಾಗಿಯೂ ಮಾಡಿರುತ್ತಾನೆ.

---

## ಅಧ್ಯಾಯ - 6

### ಪಾಪಕ್ಕೆ ಸತ್ತವರು, ಕ್ರಿಸ್ತನಲ್ಲಿ ಜೀವಿತರು ( 6:1-14)

1 ರೋಮಾಪುರದವರಿಗೆ 5:20 ರಲ್ಲಿ ಪೌಲನು ಬರೆದದ್ದೇನೆಂದರೆ: ಪಾಪವು ಹೆಚ್ಚಿದಲ್ಲೇ ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು. ಪೌಲನ ತಾತ್ಪರ್ಯವೇನೆಂದರೆ: ನಮ್ಮ ಎಷ್ಟು ಹೆಚ್ಚಾದರೂ, ಅವು ಬಹಳ ಹೆಚ್ಚಾಗಿ ಇಲ್ಲವೆ ಅಸಂಖ್ಯವಾಗಿದ್ದರೂ ಚಿಂತೆಯಿಲ್ಲ, ಅವೆಲ್ಲವುಗಳನ್ನು ಕ್ಷಮಿಸುವದಕ್ಕೂ ದೇವರ ಕೃಪೆಯು ಸಾಕಷ್ಟಿರುತ್ತದೆ. ಹೇಗಿದ್ದರೂ,. ಕೆಲವು ಜನರಿಗೆ ಹೀಗೆ ಹೇಳಬೇಕೆನ್ನಿಸಬಹುದು: ಒಳ್ಳೆಯದು, ಹಾಗಾದರೆ ನಾವು ಇಷ್ಟ ಪಡುವ ಪಾಪವನ್ನೆಲ್ಲಾ ಮಾಡೋಣ. ನಾವು ಏನೇ ಮಾಡಿದರೂ ದೇವರು ನಮ್ಮನ್ನು ಕ್ಷಮಿಸುವನು, ನಾವು ಚಿಂತಿಸಬೇಕಿಲ್ಲ. "ನಾವು ಹೆಚ್ಚು ಪಾಪ ಮಾಡಿದಷ್ಟು ಹೆಚ್ಚು ಕೃಪೆಯನ್ನು ಪಡೆಯುವೆವು". ಎಂದಿಗೂ ಇರಬಾರದು! ಎಂದು ಪೌಲನು ಹೇಳುತ್ತಾನೆ (ವಚನ 2). ಅಂತಹ ಯೋಚನೆಯು ಬಹಳ ತಪ್ಪಾಗುವದಾಗಿದೆ!

2 ನಾವು ಪಾಪದ ಪಾಲಿಗೆ ಸತ್ತವರು. ಪೌಲನು ಹೀಗೆ ಹೇಳುವದರ ತಾತ್ಪರ್ಯವೇನು? ನಾವು ಕ್ರಿಸ್ತನನ್ನು ನಂಬುವಾಗ ನಮ್ಮ ಹಳೆಯ ಪಾಪಭರಿತ ಸ್ವಾರ್ಥ ಸ್ವಭಾವವು "ಸತ್ತಿತು". ಮೊದಲು ನಾವು ಪಾಪಕ್ಕೆ ದಾಸರಾಗಿದ್ದೇವು . ತರುವಾಯ ನಾವು ಸತ್ತೇವು . ಸಾಯುವ ಯಾವದೇ ದಾಸನು ಇನ್ನೆಂದಿಗೂ ತನ್ನ ಯಜಮಾನನ ಅಧಿನದಲ್ಲಿರುವದಿಲ್ಲ, ಅವನು "ಮುಕ್ತನಾಗಿದ್ದಾನೆ" (ವಚನ 7). ಹಾಗಾದರೆ, ನಾವು ನಮ್ಮ ಯಜಮಾನನಾದ ಪಾಪದಿಂದ ಹೊಂದಿರುವದಾದರೆ ನಾವು ಇನ್ನು ಪಾಪಕ್ಕೆ ದಾಸರೇನೋ ಎಂಬಂತೆ ಜೀವಿಸುತ್ತಾ ಏಕೆ ಇರಬೇಕು? ದೇವರ ಕೃಪೆಯ ಮುಖಾಂತರವಾಗಿ ನಾವು ಪಾಪದ ಬಲದಿಂದ ಬಿಡಿಸಲ್ಪಟ್ಟಿದ್ದೇವೆ, ಇನ್ನೆಂದಿಗೂ ಅದರಲ್ಲಿ ಜೀವಿಸದಿರೋಣ!

3 ನಾವು ಕ್ರಿಸ್ತನನ್ನು ನಂಬುವಾಗ ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾಗಿದ್ದೇವೆ. ನಾವು ದೀಕ್ಷಾಸ್ನಾನ [26] ತೆಗೆದು ಕೊಳ್ಳುವಾಗ ನೀರಿನೊಳಗೆ ಹೋಗುತ್ತೇವೆ ಮತ್ತು ಆತ್ಮೀಕ ಅರ್ಥದಲ್ಲಿ ನಮ್ಮ ಪಾಪಗಳು ತೊಳೆಯಲ್ಪಟ್ಟು ನಮ್ಮ ಹಳೆಯ ಪಾಪಭರಿತ ಸ್ವಾರ್ಥವು ಸಾಯುತ್ತದೆ. ಆದಾದ ಮೇಲೆ, ನಾವು ನೀರಿನಿಂದ ಮೇಲೆದ್ದಾಗ ನೂತನ ಆತ್ಮೀಕ ಜೀವವನ್ನು ಪಡೆದವರಾಗಿ ನಾವು ಕ್ರಿಸ್ತನಲ್ಲಿ ನೂತನ ಸೃಷ್ಟಿಯಾಗುತ್ತೇವೆ (2 ಕೊರಿಂಥ 5:17). ಹೀಗೆ, ದಿಕ್ಷಾಸ್ನಾನವು ಆತ್ಮೀಕ ಅರ್ಥದಲ್ಲಿ ನಿಜವಾಗಿಯೂ ನಮ್ಮ ಹಳೆಯ ಸ್ವಾರ್ಥಸ್ವಭಾವದ ಮರಣವೂ ನೂತನ ಆತ್ಮೀಕ ಜೀವಿತದ ಜನನವೂ ಆಗಿರುತ್ತದೆ. ಆದುದರಿಂದ, ನಾವು ಯೇಸು ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಾಗ ನಮ್ಮ ಹಳೆಯ ಸ್ವಭಾವವು ಒಂದು ಅರ್ಥದಲ್ಲಿ ಆತನೊಂದಿಗೆ ಸಾಯುತ್ತದೆ. ನಾವು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾಗಿದ್ದೇವೆ.

4 ನಾವು ಕ್ರಿಸ್ತನೊಂದಿಗೆ ಸತ್ತವರಾಗಿರುವದಾದರೆ ಆತನ ಕೂಡ ನಾವು ಸಹ ಜೀವದಿಂದ ಎದ್ದು ಹೊಸಬರಾಗಿ ಜೀವಿಸುವವರಾಗಿದ್ದೇವೆ (ಕೊಲೊಸ್ಸೆ 2:12 ನೋಡಿರಿ). ಸತ್ತವರೊಳಗಿಂದ ಎದ್ದೇಳುವದಕ್ಕೋಸ್ಕರ ಕ್ರಿಸ್ತನು ಮೊದಲು ಸಾಯಬೇಕಾಗಿದ್ದ ಪ್ರಕಾರವೇ ನಾವು ಸಹ ಆತನೊಂದಿಗೆ ಹೊಸ ಜೀವಕ್ಕಾಗಿ ಎದ್ದೇಳಲು ಮೊದಲು ಸಾಯ ಬೇಕಾಗುತ್ತದೆ. ಹೊಸಬರಾಗಿ ಜೀವಿಸಬೇಕಾದರೆ ನಮ್ಮ ಹಳೆಯ ಪಾಪ ಸ್ವಭಾವವು ಮೊದಲು ಸಾಯಲ್ಪಡಬೇಕು, ಅದು ತೆಗೆದು ಹಾಕಲ್ಪಡಬೇಕು (ಎಫೆಸ 4:22-24). ಅನಂತರ, ಹಳೆಯ ಸ್ವಭಾವದ ಸ್ಥಾನದಲ್ಲಿ ನಮಗೆ ನೂತನ ಮನಸ್ಸು ಮತ್ತು ಹೃದಯ, ನೂತ ಆತ್ಮೀಕ ಸ್ವಭಾವ ಅಗತ್ಯವಿರುತ್ತದೆ.

ಆದುದರಿಂದ, ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಳ್ಳುವದೆಂದರೆ ಕ್ರಿಸ್ತನೊಂದಿಗೆ ಸತ್ತು, ಹೂಣಲ್ಪಟ್ಟು ಕ್ರಿಸ್ತನೊಂದಿಗೆ ಜೀವದಿಂದೆದ್ದು ಹೊಸಬರಾಗಿ ಜೀವಿಸುವದಾಗಿದೆ.

5 ಕ್ರಿಸ್ತನ ಮರಣದಲ್ಲಿ ಆತನೊಂದಿಗೆ ಐಕ್ಯವಾಗುವದೆಂದರೆ ಕ್ರಿಸ್ತನೊಂದಿಗೆ ಸಾಯುವದು ಎಂದರ್ಥವಾಗಿದೆ. ಸಾಯುವದೆಂದರೆ ನಿಶ್ಚಯವಾಗಿಯೂ ಒಂದು ನೋವು ದಾಯಕ ಮತ್ತು ಕಷ್ಟಕರ ಅನುಭವವಾಗಿದೆ. ಒಬ್ಬನ ಹಳೆಯ ಸ್ವಭಾವವನ್ನು ಬಿಟ್ಟು ಬಿಡುವದು ಸುಲಭವಾಗಿರುವದಿಲ್ಲ. ಆದಾಗ್ಯು ಪೌಲನು ಈ ವಾಗ್ದಾನವನ್ನು ಮಾಡುತ್ತಾನೆ: ನಾವು ಕ್ರಿಸ್ತನೊಂದಿಗೆ ಸಾಯುವದಾದರೆ ಖಂಡಿತವಾಗಿಯೂ ನಾವು ಆತನ ಪುನರುತ್ಥಾನಕ್ಕೆ ಸಾದೃಶ್ಯವಾದ ಪುನರುತ್ಥಾನವನ್ನೂ ಹೊಂದುವೆವು .ಯೇಸು ಶ್ರೇಷ್ಟ ಬೋಧಕನು ಎಂದು ಅನೇಕ ಜನರು ಒಪ್ಪಿಕೊಳ್ಳುತ್ತಾರೆ ಮತ್ತು ಅವರು ಆತನೊಂದಿಗೆ ಹೊಸಬರಾಗಿ ಜೀವಿಸಲು ಬಯಸುತ್ತಾರೆ. ಆದರೆ ಅವರು ಆತನೊಂದಿಗೆ ಸಾಯುವಂತದ್ದೇನಿದೆಯೋ ಅದರಲ್ಲಿ ಆಸಕ್ತರಾಗಿರುವದಿಲ್ಲ!

ನಾವು ಬಹಳ ಸುಲಭವಾಗಿ "ನಾನು ಕ್ರೈಸ್ತನು" ಎಂದು ಹೇಳುತ್ತೇವೆ, ಆದರೆ ನಾವೆಲ್ಲರೂ ನಮ್ಮನ್ನು ಕೇಳಿಕೊಳ್ಳಬೇಕಾದದ್ದೇನೆಂದರೆ: ನಾನು ಕ್ರಿಸ್ತನೊಂದಿಗೆ ಸತ್ತಿರುತ್ತೇನೊ? ಯಾಕೆಂದರೆ ನಾವು ಆತನೊಂದಿಗೆ ಸತ್ತಿಲ್ಲವಾದರೆ – ಅಂದರೆ ನಮ್ಮ " ಪೂರ್ವ ಪಾಪ ಸ್ವಭಾವವು " ಸತ್ತಿಲ್ಲವಾದರೆ – ನಾವು ಆತನಲ್ಲಿ ನೂತನ ಜೀವವನ್ನು ಪಡೆಯಲು ಸಾಧ್ಯವಿಲ್ಲ ಮತ್ತು ನಾವು ಆತನಲ್ಲಿ ನಿತ್ಯ ಜೀವವನ್ನು ಪಡೆದಿಲ್ಲವಾದರೆ ನಾವು ಕ್ರೈಸ್ತರೆಂದು ಹೇಳಿಕೊಳ್ಳಲು ಹೇಗಾದಿತು?

6 ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ. ಯೇಸು ಸ್ವತಃ ಶಿಲುಬೆಗೆ ಹಾಕಲ್ಪಟ್ಟನು, ಅಂದರೆ, ತಾನು ಸಾಯುವ ವರೆಗೂ ಶಿಲುಬೆಯಲ್ಲಿ ನೇತಾಡಿದನು. ರೋಮಾಯರು ಅಪರಾಧಿಗಳನ್ನು ಮರಣಕ್ಕೊಳಪಡಿಸುತ್ತಿದ್ದಂಥ ಮತ್ತು ಮರಣದಂಡನೆಯ ಅತ್ಯಂತ ಕ್ರೂರ ವಿಧಾನ ಇದಾಗಿತ್ತು. ಆದುದರಿಂದ, ನಮ್ಮ ಪೂರ್ವ ಸ್ವಭಾವವು ಶಿಲುಬೆಗೆ ಹಾಕಲ್ಪಟ್ಟಿತೆಂದು ಹೇಳುವದರ ಅರ್ಥವು ನಮ್ಮ ಪೂರ್ವಸ್ವಭಾವವು ಮರಣಕ್ಕೆ ಒಪ್ಪಿಸಲ್ಪಟ್ಟಿತು. ಎಂದಾಗಿದೆ.

ನಮ್ಮ ಪೂರ್ವಸ್ವಭಾವವು ಶಿಲುಬೆಗೆ ಹಾಕಲ್ಪಟ್ಟ ಅಥವಾ ಮರಣಕ್ಕೆ ಒಪ್ಪಿಸಲ್ಪಟ್ಟಿದ್ದರ ಉದ್ದೇಶವೇನು? ಪಾಪಧೀನ ಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಶಿಲುಬೆಗೆ ಹಾಕಲ್ಪಟ್ಟಿತು. ಪಾಪಾಧೀನಸ್ವಭಾವವು ಸಕಲವಿಧವಾದ ಎಲ್ಲಾ ಗರ್ವ ಮತ್ತು ಪಾಪಮಯ ಇಚ್ಛೆಗಳಿಂದ ತುಂಬಿದ ಮಾನವ ದೇಹವಾಗಿದೆ. ಪಾಪಾಧೀನ ಸ್ವಭಾವವು ಒಮ್ಮೆ ನಮ್ಮ ಒಡೆಯನಾಗಿತ್ತು, ಅಂದರೆ, ಒಮ್ಮೆ ನಾವು ನಮ್ಮ ಪಾಪಮಯ ಇಚ್ಛೆಗಳಿಗೆ ದಾಸರಾಗಿದ್ದೇವು. ಆದರೆ ನಾವು ಕ್ರಿಸ್ತನೊಂದಿಗೆ ಸಾಯುವಾಗ ನಮ್ಮ ಪೂರ್ವ ಸ್ವಭಾವವು ಶಿಲುಬೆಗೆ ಹಾಕಲ್ಪಟ್ಟು ನಮ್ಮ ಪಾಪಾಧೀನ ಸ್ವಭಾವವು ನಿಶ್ಶಕ್ತಿಗೊಂಡಿತು.

ಇಲ್ಲಿ ಒಂದು ಪ್ರಶ್ನೆಯು ಉದ್ಭವವಾಗುತ್ತದೆ: ಒಂದು ವೇಳೆ ಕ್ರೈಸ್ತರಾದ ನಮ್ಮ ಪೂರ್ವ ಪಾಪಸ್ವಭಾವವು ಸತ್ತಿರುವದಾದರೆ ನಾವು ಇನ್ನೂ ಪಾಪ ಮಾಡುವು ದೇಕೆ ? ನಮ್ಮ ಪೂರ್ವ ಸ್ವಭಾವವು ಪೂರ್ಣವಾಗಿ ಸತ್ತಿಲ್ಲವಾದ್ದರಿಂದ ನಾವು ಪಾಪ ಮಾಡುತ್ತಲೇ ಇರುತ್ತೇವೆ ಎಂದು ಕೆಲವರು ಉತ್ತರಿಸುತ್ತಾರೆ. ಇವರು ಹೇಳುವದೇನೆಂದರೆ, ಅದರ ಶಕ್ತಿಯು ಸಂಪೂರ್ಣವಾಗಿ ಹೋಗಿದ್ದರೂ ಸಹ ಅದು ಇನ್ನೂ ಜೀವಂತವಾಗಿದೆ. ಪೂರ್ವ ಪಾಪಾಧೀನಸ್ವಭಾವವು ಬಲಹೀನವಾದ್ದರಿಂದ ನಾವು ಅದಕ್ಕೆ ಒಳಪಡಲೇಬಾರದು! ನಾವು ಅದನ್ನು ಜಯಿಸುವವರಾಗಿರಬೇಕು.

ಇನ್ನು ಕೆಲವರು ಕ್ರೈಸ್ತರಾಗಿ ಇನ್ನು ಪಾಪದಲ್ಲಿ ಏಕೆ ಜೀವಿಸುತ್ತೇವೆಂಬದಕ್ಕೆ ಬೇರೆ, ರೀತಿಯಲ್ಲಿ ಹೇಳುತ್ತಾರೆ. ಏನೆಂದರೆ, ಕ್ರಿಸ್ತನ ಮರಣದ ಮೂಲಕವಾಗಿ ನಮ್ಮ 'ಪೂರ್ವಸ್ವಭಾವವು' ಸಂಪೂರ್ಣವಾಗಿ ಸತ್ತಿತು. ಮತ್ತು ಈಗ ಕ್ರೈಸ್ತರಾದ ನಮ್ಮಲ್ಲಿ ಪವಿತ್ರಾತ್ಮನು ಆಳುತ್ತಾನೆ. ನಮ್ಮ ಪೂರ್ವ ಪಾಪ ಸ್ವಭಾವದ ಆಳಿಕೆಯು ಅಂತ್ಯಗೊಂಡಿದೆ. ನಾವು ಇನ್ನು ಸೈತಾನನ ಹತೋಟಿಯಲ್ಲಿ ಇರುವದಿಲ್ಲ, ನಾವು ಪಾಪದಿಂದ ಬಿಡುಗಡೆ ಹೊಂದಿದ್ದೇವೆ. ಹೇಗಿದ್ದರೂ, ನಾವು ಈ ನೂತನ ಸ್ಥಿತಿಯನ್ನು ನಂಬಿಕೆಯಿಂದ ಸ್ವಂತವಾಗಿಸಿಕೊಳ್ಳಬೇಕು. ಕ್ರೈಸ್ತರು ತಾವು ಪಾಪದಿಂದ ಬಿಡಪಗಡೆ ಹೊಂದಿದ್ದಾರೆಂದು ಸಂಪೂರ್ಣವಾಗಿ ನಂಬುವದಿಲ್ಲವಾದ ಕಾರಣ ಅವರು ಆಗಾಗ ಪಾಪವನ್ನು ಮಾಡುತ್ತಲಿರುತ್ತಾರೆ! ಅವರ ನಂಬಿಕೆಯ ಕೊರತೆಯಿಂದಾಗಿ ಪವಿತ್ರಾತ್ಮನು ಅವರ ಜೀವಿತಗಳಲ್ಲಿ ಸಂಪೂರ್ಣವಾಗಿ ಕಾರ್ಯ ಮಾಡಲಾಗುವದಿಲ್ಲ ಹೀಗ, ನಂಬಿಕೆಯ ಕೊರೆತೆಯಿಂದಾಗಿ ನಾವು ಕ್ರೈಸ್ತರಾದ ಮೇಲೆ ಸಹ ಪಾಪ ಮಾಡುವವರಾಗಗಿದ್ದೇವೆಂದು ಈ ಜನರು ಹೇಳುತ್ತಾರೆ

ಈ ಎರಡು ಉತ್ತರಗಳಲ್ಲಿ ಯಾವದು ಸರಿಯೋ, ಒಟ್ಟಿನಲ್ಲಿ ನಾವು ಕ್ರೈಸ್ತರಾದ ಮೇಲೆಯೂ ಆಗಾಗ ಪಾಪ ಮಾಡುತ್ತೇವೆಂಬ ಸತ್ಯವನ್ನು ಅಲ್ಲಗಳೆಯಲಾಗುವದಿಲ್ಲ. ಆದುದರಿಂದ, ಪೌಲನು ವಿಶೇಷವಾಗಿ ಇಲ್ಲಿ ಪಾಪವು – ಪೂರ್ವ ಪಾಪಾಧೀನಸ್ವಭಾವವು – ಇನ್ನೆಂದಿಗೂ ನಮ್ಮ ಯಜಮಾನನಾಗಿರುವದಿಲ್ಲ ಎಂಬುದನ್ನು ನಮಗೆ ಜ್ಞಾಪಕ ಪಡಿಸಲು ಇಚ್ಛಿಸುತ್ತಾನೆ. ನಾವು ಆಗಾಗ ಪಾಪ ಮಾಡುವವರಾದಾಗ್ಯು ನಾವು ಪಾಪದಲ್ಲಿ ಉಳಿಯುವದಿಲ್ಲ. ಹೇಗಿದ್ದರೂ, ಒಬ್ಬನು ತಿಳಿದವನಾಗಿಯೂ ಪಾಪದಲ್ಲಿ ಮುಂದು ವರೆಯುವದಾದರೆ ಆವ್ಯಕ್ತಿಯ "ಪೂರ್ವಸ್ವಭಾವವು " ಸತ್ತಿಲ್ಲ ಆದರೆ ಜೀವಂತವಾಗಿದೆ ಮತ್ತು ಹಿಂದೆಂದಿಗಿತಂಲೂ ಹೆಚ್ಚು ಪ್ರಬಲವಾಗಿದೆಯೆಂದು ನಾವು ಹೇಳಬೇಕಾಗುತ್ತದೆ. ಅಂತಹ ವ್ಯಕ್ತಿ ನಿಜವಾಗಿಯೂ ಕ್ರಿಸ್ತನನ್ನು ಅರಿತವನಲ್ಲ (1 ಯೋಹಾನ 3:6,9 ಮತ್ತು ವ್ಯಾಖ್ಯಾನ ನೋಡಿರಿ).

ಈ ಪ್ರಾಮುಖ್ಯ ವಚನವನ್ನು ಅರ್ಥಮಾಡಿಕೊಳ್ಳಲು ನಾವು ಇನ್ನೊಂದು ಸಂಗತಿಯನ್ನು ಗಮನಿಸಿತಕ್ಕದ್ದು. ಒಂದು ಕಡೆಯಲ್ಲಿ ಪೌಲನು ನಾವು ಕ್ರಿಸ್ತನ ಕೂಡ ಸತ್ತಿದ್ದೇವೆ ಎನ್ನುತ್ತಾನೆ. (ವಚನಗಳು 3-5).. ಇನ್ನೊಂದು ಕಡೆಯಲ್ಲಿ ಆತನು ಹೇಳುವದೇನೆಂದರೆ:....ಪಾಪದ ಪಾಲಿಗೆ ಸತ್ತವರು ಎಂದು ಎಣಿಸಿಕೊಳ್ಳಿರಿ (ವಚನ 11), ಮತ್ತು .....ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವನ್ನು ಅಳಗೊಡಿಸಬೇಡಿರಿ.(ವಚನ 12). ಒಂದು ಕಡೆಯಲ್ಲಿ ಪೌಲನು ಕ್ರಿಸ್ತನಲ್ಲಿ ನಮ್ಮ ನಿಜವಾದ

ಸ್ಥಾನವೇನೆಂಬದನ್ನು ಹೇಳುತ್ತಾನೆ, ಇನ್ನೊಂದು ಕಡೆಯಲ್ಲಿ ಆ ಸ್ಥಾನದ ಪ್ರಕಾರವಾಗಿ ನಡೆಯಿರಿ ಎಂದು ಪ್ರಬೋಧಿಸುತ್ತಾನೆ. ಬೇರೆ ಮಾತುಗಳಲ್ಲಿ ಹೇಳುವದಾದರೆ ಆತನು ನಮಗೆ ತಾತ್ವಿಕ ಬೋಧನೆ, ಮತ್ತು ವ್ಯವಹಾರಿಕ ಅನ್ವಯಿಕೆಗಳೆರಡನ್ನೂ ನೀಡುತ್ತಿದ್ದಾನೆ. ಇವೆರಡರ ಸಮ್ಮಿಲನದ ಇನ್ನೊಂದು ಉದಾಹರಣೆಯು 18-19 ವಚನಗಳಲ್ಲಿ ಕಂಡು ಬರುತ್ತದೆ. ಪೌಲನು ೧೮ನೇ ವಚನದಲ್ಲಿ ನಾವು ಪಾಪದಿಂದ ಬಿಡುಗಡೆ ಹೊಂದಿದ್ದೇವೆ ಎಂದು ಬರೆಯುತ್ತಾನೆ. ಬಳಿಕ 19ನೇ ವಚನದಲ್ಲಿ ನಿಮ್ಮ ದೇಹಗಳನ್ನು ಪಾಪದ ದಾಸತ್ವಕ್ಕೆ ಒಪ್ಪಿಸಬೇಡಿರಿ, ಆದರೆ ಅವುಗಳನ್ನು ನೀತಿಗೆ ದಾಸರನ್ನಾಗಿ ಒಪ್ಪಿಸಿಕೊಡಿರಿ – ಎಂದು ಪ್ರಬೋಧಿಸುತ್ತಾನೆ (ಗಲಾತ್ಯ 5:13).

ಮೇಲಿನ ಚರ್ಚೆಯನ್ನು ಮನಸ್ಸಿಲ್ಲಿಟ್ಟುಕೊಂಡು ನಾವು ಈಗ ಪೌಲನ ಮುಖ್ಯ ತಾತ್ಪರ್ಯವು ಈ ಕೆಳಗಿನದಾಗಿರುತ್ತೆಂಬದನ್ನು ತಿಳಿಯಬಹುದು: ನಮ್ಮ ಪೂರ್ವಸ್ವಭಾವವು (ನಮ್ಮ ಪೂರ್ವ ಪಾಪ ಸ್ವಭಾವವು) ನಿಜವಾಗಿಯೂ ಸತ್ತಿರುತ್ತದೆ, ಹಾಗಿದ್ದರೂ, ನಾವು ಅದನ್ನು ಸೇವಿಸುವ ಸಾಧ್ಯತೆ ಈಗಲೂ ಇರುತ್ತದೆ. ಪೌಲನು ನಮಗೆ "ಹಾಗೆ ಮಾಡ ಬೇಡಿರಿ!ಠ. "ಆ ಪೂರ್ವ ಪಾಪ ಸ್ವಭಾವವನ್ನು ತೆಗೆದು ಹಾಕಿರಿ" (ಎಫೆಸ 4:22 ನೋಡಿರಿ). ಆ ಪೂರ್ವ ಪಾಪಾಧೀನ ಸ್ವಭಾವದ ಇಚ್ಛೆಗಳನ್ನು ನೆರವೇರಿಸಬೇಡಿ" ಎಂದು ನಮ್ಮನ್ನು ಪ್ರಬೋಧಿಸುತ್ತಾನೆ.[27]

7 ಸತ್ತವನು ಪಾಪದ ವಶದಿಂದ ಬಿಡುಗಡೆ ಹೊಂದಿದ್ದಾನಷ್ಟೆ. ಅಪರಾಧಿಯೊಬ್ಬನು ಸಾಯುವದಾದರೆ ಅವನ ಶಿಕ್ಷೆಯು ಸಹ ಅಂತ್ಯಗೊಳ್ಳುತ್ತದೆ. ಸತ್ತ ವ್ಯಕ್ತಿಯನ್ನು ದಂಡಿಸಲು ಸಾಧ್ಯವಿಲ್ಲ!

ದೇವರ ದೃಷ್ಟಿಯಲ್ಲಿ ನಾವು ಒಮ್ಮೆ ಅಪರಾಧಿಗಳು (ಪಾಪಿಗಳು) ಆಗಿದ್ದೇವು. ಈಗ ನಮ್ಮ "ಪೂರ್ವ ಸ್ವಭಾವವು" ಸತ್ತಿದ್ದರಿಂದ ನಮ್ಮ ಪೂರ್ವ ಸ್ವಭಾವದ ಪಾಪಗಳಿಗಾಗಿ ನಾವು ದಂಡಿಸಲ್ಪಡಲು ಸಾಧ್ಯವಿಲ್ಲ. ನಾವು ಪಾಪದ ವಶದಿಂದಲೇ ಬಿಡುಗಡೆ ಹೊಂದಿದ್ದು ಮಾತ್ರವಲ್ಲ, ಆದರೆ ಪಾಪದ ದಂಡನೆಯಿಂದ ಸಹ ಬಿಡಿಸಲ್ಪಟ್ಟಿದ್ದೇವೆ

8 ಇಲ್ಲಿ ಪೌಲನು ವಚನ 5 ರಲ್ಲಿ ವಿಚಾರವನ್ನು ಪುನರಾವರ್ತಿಸುತ್ತಾನೆ (2 ತಿಮೊಥೆ2: 11-12 ನೋಡಿರಿ).

9 ಒಮ್ಮೆ ಸತ್ತವನಾಗಿ ಪುನರುಥ್ಥಾನಗೊಂಡ ಕ್ರಿಸ್ತನು ಪುನಃ ಸಾಯಲು ಸಾಧ್ಯವಿಲ್ಲ. ಅದೇ ರೀತಿಯಾಗಿ ನಾವು ಕ್ರಿಸ್ತನೊಂದಿಗೆ ಸತ್ತು ಎದ್ದು ಬಂದಿರುವದಾದರೆ ನಾವು ಸಹ ಪುನಃ ಸಾಯುವದಿಲ್ಲ, ಆದರೆ ಸದಾಕಾಲ ಆತನೊಂದಿಗೆ ಜೀವಿಸುವೆವು.[28] ಕ್ರಿಸ್ತನು ಮರಣವನ್ನು ಜಯಿಸಿದ್ದಾನೆ, ಮತ್ತು ಆತನ ಮುಖಾಂತರವಾಗಿ ನಾವು ಸಹ ಅದನ್ನು ಜಯಿಸಿದ್ದೇವೆ (ಯೋಹಾನ 5:24, 11:25-26 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

10 ಕ್ರಿಸ್ತನು ಒಂದೇ ಸಾರಿ ಎಲ್ಲರಿಗಾಗಿ ಸತ್ತನು, ಅಂದರೆ, ಆತನು ಎಲ್ಲಾ ಮಾನವರ ಪಾಪಗಳಿಗಾಗಿ ಸತ್ತನು (ಇಬ್ರಿಯ 9:26 ನೋಡಿರಿ). ನೆನಪಿರಲಿ, ಕ್ರಿಸ್ತನು ಸ್ವತಃ ಯಾವ ಪಾಪವನ್ನು ಮಾಡಲಿಲ್ಲ. ಆದರೆ ಆತನು ಈ ಪಾಪಮಯ ಲೋಕಕ್ಕೆ ಬಂದು ಪಾಪಿ ಮನುಷ್ಯರ ಮಧ್ಯದಲ್ಲಿ ಜೀವಿಸಿದನು. ಮತ್ತು ಆತನು ಮಾನವರ ಪಾಪಗಳನ್ನು ತೆಗೆದುಕೊಂಡು ಒಟ್ಟಾಗಿ ತನ್ನೊಂದಿಗೆ ಮರಣದಲ್ಲಿ ಹೂಣಿಟ್ಟನು (ಯೋಹಾನ 1:29 ನೋಡಿರಿ). ಹಾಗಾದರೆ ಕ್ರಿಸ್ತನು ಪಾಪದ ಪಾಲಿಗೆ ಸತ್ತನು ಎಂದು ಪೌಲನು ಹೇಳುವದರ ತಾತ್ಪರ್ಯವು ಇದೇ ಆಗಿದೆ.

ಕ್ರಿಸ್ತನು ಪಾಪದ ಪಾಲಿಗೆ ಸತ್ತನು, ಆದರೆ ಈಗ ಆತನು ದೇವರ ಪಾಲಿಗೆ ಜೀವಿಸುತ್ತಾನೆ (1 ಪೇತ್ರ 3:18). ಅದೇ ರೀತಿಯಾಗಿ, ನಾವು ಸಹ ಪಾಪದ ಪಾಲಿಗೆ ಸತ್ತು ದೇವರಿಗಾಗಿ ಜೀವಿಸುವವರಾಗಿದ್ದೇವೆ (ವಚನ 11).

11 ಅದೇ ಪ್ರಕಾರ ನೀವು ಸಹ ನಿಮ್ಮನ್ನು....ಎಣಿಸಿಕೊಳ್ಳಿರಿ. ಎಣಿಸಿಕೊಳ್ಳುವದು ಎಂದರೆ ಯಾವದಾದರ ಕುರಿತು ಬಹಳ ನಿಶ್ಚಯದೊಂದಿಗೆ ಯೋಚಿಸುವದು ಎಂದು ಅರ್ಥವಾಗಿದೆ ನಾವು ನಿಜವಾಗಿಯೂ ಕ್ರಿಸ್ತನನ್ನು ನಂಬಿರುವದಾದರೆ ನಿಶ್ಚಯವಾಗಿಯೂ ಪಾಪದ ಪಾಲಿಗೆ ಸತ್ತು ದೇವರಿಗಾಗಿ ಜೀವಿಸುವವರಾಗಿದ್ದೇವೆ. ಇದು ಖಂಡಿತವಾದದ್ದು, ನಾವು ಹಾಗೆ ಎಣಿಸಿಕೊಳ್ಳಬಹುದು. ಆದುದರಿಂದ, ನಾವು ಈ ತಿಳುವಳಿಕೆಯ ಪ್ರಕಾರ ನಡೆಯೋಣ, ಅದು ಸತ್ಯವೋ ಎಂಬಂತೆ ನಡೆದುಕೊಳ್ಳೋಣ (1 ಪೇತ್ರ2:24).

12 ಹೀಗಿರುವದರಿಂದ – ನೀವು ಪಾಪದ ಪಾಲಿಗೆ ಸತ್ತಿರುವದರಿಂದ – ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವನ್ನು ಆಳಗೊಡಿಬೇಡಿರಿ. ನಾವು ನಮ್ಮನ್ನು ಕೇಳಿಕೊಳ್ಳಬೇಕೆನೆಂದರೆ: ನಮ್ಮ ದೇಹಗಳನ್ನು ಯಾರು ಆಳುತ್ತಾರೆ – ಪಾಪವೋ ಅಥವಾ ದೇವರೋ? ನಾವು ಯಾರ ಅಧೀನದಲ್ಲಿದ್ದೇವೆ? ನಮ್ಮ ಒಡೆಯನೂ, ಆಳುವವನೂ ಯಾರು? ಈ ವಚನದಲ್ಲಿ ಪಾಪವು ಒಟ್ಟಾಗಿ ಮಾನವನ ಎಲ್ಲಾ ಪಾಪಗಳನ್ನೊಳಗೊಂಡಿದೆ – ಉದಾಹರಣೆಗೆ – ವಿಗ್ರಹಾರಾಧನೆ, ಕೊಲೆ, ಸುಳ್ಳು ಕಳ್ಳತನ, ಗರ್ವ, ದುರ್ಭಾಷೆ, ಕೆಟ್ಟ ಇಚ್ಛೆಗುಳ ಮತ್ತು ಆಲೋಚನೆಗಳು. ಆದರೆ ಈ ಎಲ್ಲಾ ವಿವಿಧ ಪಾಪಗಳು ಒಂದೇ ಮೂಲ ಪಾಪದಿಂದ ಉದ್ಭವಿಸುತ್ತವೆ – ಅದೇನೆಂದರೆ, ಸ್ವಾರ್ಥತೆ ಅಥವಾ ಸ್ವಾರ್ಥದಿಂದ ಕೂಡಿದ ಸ್ವಭಾವ [29]. ಸ್ವಾರ್ಥತೆಯ ಕಾರಣದಿಂದ ನಾವು ಎಲ್ಲ ಕ್ಕಿಂತಲೂ ಮೇಲಾಗಿ ನಮ್ಮನ್ನು ಮುಂದಿಡುತ್ತೇವೆ. ಸ್ವಾರ್ಥತೆಯ ಕಾರಣದಿಂದ ನಾವು ಎಲ್ಲ ಕ್ಕಿಂತಲೂ ಮುಂಚಿತವಾಗಿ ನಮ್ಮ ಸ್ವ ಯಿಚ್ಛೆಗಳನ್ನು ನೆರವೇರಿಸುತ್ತೇವೆ. ಈ ಇಚ್ಛೆಗಳು ತಮ್ಮಲ್ಲಿ ಒಳ್ಳೇವುಗಳಾಗಿರುವ ಸಂಗತಿಗಳಿಗಾಗಿ ಇರಬಹುದು– ಉದಾಹರಣೆಗೆ, ವಿದ್ಯಾಭ್ಯಾಸ ಪಡೆಯುವದು, ಉದ್ಯೋಗವನ್ನು ಪಡೆಯುವದು. ಸಾಮಾನ್ಯವಾಗಿ ಸ್ವತಃ ದೇವರೇ ನಾವು ಈ ಸಂಗತಿಗಳನ್ನು ಹೊಂದಬೇಕೆಂದು ಬಯಸುತ್ತಾನೆ. ಆದರೆ ಇದರಲ್ಲಿ ಪಾಪವು ಅಡಕವಾಗಿರುತ್ತದೆ: ನಾವು ದೇವರ ಇಚ್ಛೆಗಳಿಗಿಂತಲೂ ಮುಂಚಿತವಾಗಿ ನಮ್ಮ ಸ್ವ ಇಚ್ಛೆಗಳನ್ನು ಇಡುತ್ತೇವೆ. ನಾವು ನಮ್ಮ ಸ್ವಂತ ಇಚ್ಛೆಗಳನ್ನು ಪ್ರಥಮ ಸ್ಥಾನದಲ್ಲಿ ಇಡುತ್ತೇವೆ . ದೇವರು ಏನನ್ನು ಇಚ್ಛೆಸುತ್ತಾನೋ ಅದಕ್ಕಿಂತ ಹೆಚ್ಚಾಗಿ ನಾವು ಏನನ್ನು ಇಚ್ಛಿಸುತ್ತೇವೆಂಬದನ್ನು ಬಯಸುತ್ತೇವೆ. ಅದು ಸ್ವಾರ್ಥವಾಗಿದೆ. ಮತ್ತು ಸ್ವಾರ್ಥತೆಯೊಳಗಿಂದ ಇತರ ಎಲ್ಲಾ ಪಾಪಗಳು ಉದ್ಭವಿಸುತ್ತವೆ.

ಈಗ ಮೇಲೆ ಕೇಳಿದ ಪ್ರಶ್ನೆಯೆಡೆಗೆ ತಿರಿಗಿಕೊಳ್ಳೋಣ: ನಮ್ಮ ದೇಹಗಳನ್ನು ಯಾರು ಆಳುತ್ತಾರೆ – ಪಾಪವೋ ಅಥವಾ ದೇವರೋ? ಈಗ ನಾವು "ಪಾಪ" ಎಂಬ ಪದದ ಸ್ಥಾನದಲ್ಲಿ "ಸ್ವಾರ್ಥ" ಎಂದು ಸೇರಿಸಿ ಪು ನಃ ಹೇಳೋಣ: ನಮ್ಮ ದೇಹಗಳನ್ನು ಯಾರು ಆಳುತ್ತಾರೆ – ಸ್ವಾರ್ಥವೋ ಅಥವಾ ದೇವರೋ? ಇದು ಅದೇ ಪ್ರಶ್ನೆಯಾಗಿದೆ. ನಾವು ಯಾರ ಚಿತ್ತಕ್ಕೆ ವಿಧೇಯರಾಗುತ್ತೇವೆ– ನಮ್ಮ ಸ್ವಂತ ಚಿತ್ತಕ್ಕೋ ಅಥವಾ ದೇವರ ಚಿತ್ತಕ್ಕೋ? ಒಂದು ಉತ್ತರವು "ನಮ್ಮ ಸ್ವಂತದ್ದು" ಎಂದಾಗಿರುವದಾದರೆ ಪಾಪವು ಇನ್ನು ನಮ್ಮ ದೇಹಗಳಲ್ಲಿ ಆಳುವದಾಗಿದೆ.

ಕೆಲವೊಂದು ಇಚ್ಛೆಯು ನಮ್ಮದೋ ಅಥವಾ ದೇವರದೋ ಎಂದು ನಾವು ಹೇಗೆ ಹೇಳಲು ಸಾಧ್ಯ? ಉದಾಹರಣೆಗೆ, ಶಾಲೆಯಲ್ಲಿ ಅಭ್ಯಾಶಿಸುವ ಇಚ್ಛೆಯನ್ನು ತೆಗೆದುಕೊಳ್ಳಿರಿ. ಇದು ದೇವರ ಚಿತ್ತವೋ ಅಥವಾ ನಮ್ಮ ಸ್ವಂತ ಚಿತ್ತವೋ ಎಂಬದನ್ನು ಹೇಳಬೇಕಾದರೆ ನಾವು ಒಂದು ಪ್ರಶ್ನೆಯನ್ನು ಕೇಳಿಕೊಳ್ಳಬೇಕು: ನಾನು ಯಾರಿಗೋಸ್ಕರ ವಿದ್ಯಾಭ್ಯಾಸ ಮಾಡುತ್ತಿರುವೆ – ನನಗಾಗಿಯೋ ಅಥವಾ ದೇವರಿಗಾಗಿಯೋ? ನಾವು ಮಾಡುತ್ತಿರುವ ಮತ್ತು ಮಾಡಲಿಚ್ಚಿಸುವ ಎಲ್ಲಾ ಸಂಗತಿಗಳಿಗಾಗಿಯಾ ಈ ಪ್ರಶ್ನೆಯನ್ನು ಕೇಳಿಕೊಳ್ಳುವದು ಅಗತ್ಯವಾಗಿದೆ.

ಅನೇಕರು ಯೋಚಿಸುವದೇನೆಂದರೆ: "ನಾನು ಯಾರಿಗೇ ಆಗಲಿ ಯಾವದೇ ಹಾನಿಯನ್ನು ಮಾಡುತ್ತಿಲ್ಲವಾದರೆ ನಾನು ಹೇಗೆ ಪಾಪಮಾಡುತ್ತಿರಲು ಸಾಧ್ಯ? ನಾನು ವಿದ್ಯಾಭ್ಯಾಸ ಅಥವಾ ಕೆಲಸವನ್ನು ಮಾಡಲಿಚ್ಚಿಸುವದಾದರೆ ಅದರಲ್ಲಿ ಪಾಪವೆಲ್ಲಿದೆ? ಯಾವ ಪಾಪವೂ ಇರುವದಿಲ್ಲ". ಆದರೆ ಅಂತಹ ಜನರು ನಿಜಾಂಶವನ್ನೇ ಬಿಡುತ್ತಿದ್ದಾರೆ. ದೇವರ ಚಿತ್ತವೇನಾಗಿರಬಹುದೆಂಬದನ್ನು ಪರಿಗಣನೆಗೆ ತಂದುಕೊಳ್ಳದೆ ನಾವು ನಮ್ಮ ಸ್ವಂತ ಚಿತ್ತವನ್ನು ಅನುಸರಿಸುವದಾದರೆ ದೇವರ ದೃಷ್ಟಿಯಲ್ಲಿ ನಾವು ಪಾಪ ಮಾಡುತ್ತಿರುವವರಾಗಿದ್ದೇವೆ. ನಾವು ಆದಾಮನಿಂದ ಸ್ವಾಸ್ತ್ಯವಾಗಿ ಪಡೆದುಕೊಂಡ ಮೂಲ ಪಾಪವು ಇದೇ ಆಗಿದೆ: ದೇವರ ಚಿತ್ತಕ್ಕೆ ಮೇಲಾಗಿ ನಮ್ಮ ಸ್ವಚಿತ್ತವನ್ನು ಇಡುವದು. ಅಥವಾ ನಾವು ಹೀಗೆ ಹೇಳಬಹುದು: ಮಾನವನು ದೇವರ ಸ್ಥಾನದಲ್ಲಿ ತನ್ನನ್ನು ಇಟ್ಟು ಕೊಳ್ಳುವದೇ ಮಾನವನ ಮುಖ್ಯ ಪಾಪವಾಗಿದೆ ಸ್ವಾಭಾವಿಕವಾಗಿ ಮಾನವನು ದೇವರ ಇಚ್ಛೆಗಳನ್ನಲ್ಲದೆ ತನ್ನ ಇಚ್ಛೆಗಳನ್ನು ನೆರವೇರಿಸಲು ತವಕಪಡುತ್ತಾನೆ. ಇಂತಹ ಪಾಪ ಸ್ವಭಾವವು ನಮ್ಮದಾಗಿದೆ. ಈ ಕಾರಣಕ್ಕಾಗಿಯೇ ಕ್ರೈಸ್ತರಾದ ನಾವು ಏನೇ ಮಾಡಿದರೂ ನಾವು ಯಾವಾಗಲೂ ನಮ್ಮನ್ನು ಕೇಳಿಕೊಳ್ಳಬೇಕಾದದ್ದೇನೆಂದರೆ: ನಾನು ಇದನ್ನು ಯಾರಿಗೋಸ್ಕರ ಮಾಡುತ್ತಿದ್ದೇನೆ – ನನಗಾಗಿಯೋ ಅಥವಾ ದೇವರಿಗಾಗಿಯೋ?

ಕ್ರೈಸ್ತನೊಬ್ಬನು ಪಾಪದ ಪಾಲಿಗೆ ಸಾಯುವದಾದರೆ ಅವನ ಪೂರ್ವ ಪಾಪಮಯ ಸ್ವಭಾವವು ಸಹ ಸಾಯತಕ್ಕದ್ದು ಮತ್ತು ಅವು ಗಳ ಸ್ಥಾನದಲ್ಲಿ ಪವಿತ್ರಾತ್ಮನಿಂದ ಒಂದು ನೂತನ ಬಯಕೆಯು ಬರಬೇಕು ದೇವರನ್ನು ಮೆಚ್ಚಿಸುವ ಮತ್ತು ಆತನಿಗೆ ವಿಧೇಯನಾಗುವ ಬಯಕೆ ಮತ್ತು ನೂತನ ಬಯಕೆಯೊಳಗಿಂದ ನೂತನ ನಡವಳಿಕೆ ಸಹ ಉದಯವಾಗತಕ್ಕದ್ದು.

**13** ಪೌಲನು 12 ನೇ ವಚನದಲ್ಲಿ ಬರೆದದ್ದೇನೆಂದರೆ: ಹೀಗಿರುವದರಿಂದ ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವನ್ನು ಆಳಗೊಡಿಸಿ ನೀವು ದೇಹದ ದುರಾಶೆಗಳಿಗೆ ಒಳಪಡಬೇಡಿರಿ. ಈ 13ನೇ ವಚನದಲ್ಲಿ ಹೆಚ್ಚು ಕಡಿಮೆ ಆತನು ಅದೇ ಸಂಗತಿಯನ್ನು ತಿಳಿಸುತ್ತಾನೆ : ನೀವು ನಿಮ್ಮ ಅಂಗಗಳನ್ನು ಪಾಪಕ್ಕೆ ಒಪ್ಪಿಸುವವರಾಗಿದ್ದು ದುಷ್ಟತ್ವವನ್ನು ನಡಿಸುವ ಸಾಧನಗಳಾಗಿ ಮಾಡಬೇಡಿರಿ. ಈಗ ದೇವರು ನಮ್ಮ ಜೀವಿತವನ್ನು ಆಳುವವನಾಗಿದ್ದಾನೆ: ಆದುದರಿಂದ, ನಮ್ಮ ದೇಹದ ಎಲ್ಲಾ ಅಂಗಗಳು ಆತನಿಗೆ ಸೇರಿರುತ್ತವೆ. ನಮ್ಮ ದೇಹದ ಅಂಗಗಳು ನೀತಿಕೃತ್ಯಗಳನ್ನು ನಡಿಸುವ ಸಾಧನಗಳಾಗಿ ಉಪಯೋಗಿಸಲ್ಪಡತಕ್ಕದ್ದು. ಆದ್ದರಿಂದ ನಾವು ನಮ್ಮ ದೇಹಗಳನ್ನು ದೇವರಿಗೆ ಸಂಪೂರ್ಣವಾಗಿಯೂ ನಿರಂತರವಾಗಿಯೂ ಅರ್ಪಿಸ ಬೇಕು (ರೋಮ 12:1 ಮತ್ತು ವ್ಯಾಖ್ಯಾನ ನೋಡಿರಿ).

ಪೌಲನು ಈ ವಚನದಲ್ಲಿ ಧರ್ಮಶಾಸ್ತ್ರದ ಅಧೀನರ ಮೇಲೆ – ಅಂದರೆ ಧರ್ಮಶಾಸ್ತ್ರದ ಅಧಿಕಾರಕ್ಕೊಳ್ಳಪಟ್ಟವರ ಮೇಲೆ ಪಾಪವು ಅಧಿಕಾರ ನಡೆಸುವದು ಎಂಬದನ್ನು ಸೂಚಿಸುತ್ತಾನೆ [30] ಅದಕ್ಕೆ ಕಾರಣವೇನು? ಕಾರಣವು ಏನೆಂದರೆ, ಧರ್ಮಶಾಸ್ತ್ರವು " ವಿಧೇಯವಾಗು" ಎನ್ನುತ್ತದೆ. ಆದರೆ ಅದು ವಿಧೇಯವಾಗುವದಕ್ಕೆ ಮನುಷ್ಯನಿಗೆ ಬಲವನ್ನು ನೀಡುವದಿಲ್ಲ. ಧರ್ಮಶಾಸ್ತ್ರವು "ಇದನ್ನು ಮಾಡು, ಅದನ್ನು ಮಾಡು" ಎಂದು ಹೇಳುತ್ತದೆ. ಆದರೆ ಮನುಷ್ಯನು ಧರ್ಮಶಾಸ್ತ್ರ ಹೇಳುವದನ್ನೆಲ್ಲಾ ಮಾಡಲು ಸಾಧ್ಯವಿಲ್ಲ ಆದುದರಿಂದ, ಅದರ ಪರಿಣಾಮವಾಗಿ ಅವನು ಕೊನೆಗೆ ಧರ್ಮಶಾಸ್ತ್ರವನ್ನು ಉಲ್ಲಂಘಿಸುತ್ತಾನಷ್ಟೆ – ಮತ್ತು ಅದೇ ಪಾಪವಾಗಿದೆ. ಧರ್ಮಶಾಸ್ತ್ರಕ್ಕೆ ಅಧೀನರಾದವರು ಪಾಪ ಮಾಡದಿರುವದಕ್ಕೆ ಯಾವ ದಾರಿಯೂ ಇರುವದಿಲ್ಲ. ಹೀಗೆ ಪಾಪವು ಅವರ ಒಡೆಯನಾಗುತ್ತದೆ. ಅವರು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲಃ ಮತ್ತು ಈ ಕಾರಣಕ್ಕಾಗಿ ಧರ್ಮಶಾಸ್ತ್ರದ ಅಧೀನರಿಗೆ ಕ್ಷಮಾಪಣೆಯಾಗಲಿ, ನಿರೀಕ್ಷೆಯಾಗಲಿ ಇರುವದಿಲ್ಲ.[31] ಆದರೆ ನಂತರ ಪೌಲನು ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ, ಕೃಪೆಗೆ ಅಧೀನರಾಗಿದ್ದೀರಷ್ಟೆ ಎಂದು ನಮಗೆ ಜ್ಞಾಪಕ ಪಡಿಸುತ್ತಾನೆ.

ಅಂದರೆ, ನಾವು ದೇವರ ಕರುಣೆಯ ಮುಖಾಂತರ ಪಾಪಕ್ಷಮಾಪಣೆಯನ್ನು ಪಡೆದುಕೊಂಡಿದ್ದೇವೆ, ಮತ್ತು ಅದು ಮಾತ್ರವಲ್ಲದೆ, ಪಾಪವನ್ನು ಜಯಿಸಲಿಕ್ಕೆ ನಾವು ನೂತನ ಬಲವನ್ನು ಪಡೆದುಕೊಂಡಿದ್ದೇವೆ, ಹೀಗೆ ನಾವು ದೇವರ ದೃಷ್ಟಿಯಲ್ಲಿ ನೀತಿವಂತರಾಗಿ ಜೀವಿಸುವಂತಾಗುತ್ತದೆ.

ಪೌಲನು ರೋಮಾಪು ರದವರಿಗೆ, ಬರೆದ ಪತ್ರಿಕೆಯ ಮೊದಲಿನ ಆರು ಅಧ್ಯಾಯಗಳಲ್ಲಿ ಯೆಹೂದ್ಯ ಧರ್ಮಶಾಸ್ತ್ರದ ಕುರಿತಾಗಿ ಹೆಚ್ಚು ಮಾತಾಡಿದ್ದೇಕೆ. ಅನ್ಯ ಜನರಾದ ನಾವು ಯೆಹೂದ್ಯ ಧರ್ಮಶಾಸ್ತ್ರವನ್ನೇಕೆ ಲೆಕ್ಕಕ್ಕೆ ತಂದುಕೊಳ್ಳಬೇಕು?

ಎಂದು ಬಹುಶಃ ಕೆಲವರು ಯೋಚಿಸುತ್ತಿರಬಹುದು. ಕಾರಣವೇನೆಂದು ಜನರು ಅನುಸರಿಸುವಂತಹ ಅನೇಕ ವಿಧವಾದ ಧರ್ಮಶಾಸ್ತ್ರಗಳಲ್ಲಿ ಯೆಹೂದ್ಯ ಧರ್ಮಶಾಸ್ತ್ರವು ಒಂದು ಉದಾಹರಣೆಯಷ್ಟೆಯಾಗಿದೆ. ಜಗತ್ತಿನ ಎಲ್ಲಾ ಧರ್ಮಗಳಲ್ಲಿಯೂ

ಜನರು ಅನುಸರಿಸಲೇಬೇಕಾದ ಒಂದಿಲ್ಲಾ ಒಂದು ರೀತಿಯ, ಧರ್ಮಶಾಸ್ತ್ರ, ಅಥವಾ ನಿಯಮ ಹಾಗು ಆಚಾರಗಳು ಇರುತ್ತವೆ. ಹೀಗಿರುವದರಿಂದ ಯೆಹೂದ್ಯ ಧರ್ಮಶಾಸ್ತ್ರದ ಅಧೀನದಲ್ಲಿ ಜೀವಿಸಲು ಯೆಹೂದ್ಯರಿಗಿದ್ದ ಸಮಸ್ಯೆಯನ್ನೇ ಇತರ ಎಲ್ಲಾ ಧರ್ಮಗಳ ಅನುಯಾಯಿಗಳು ಸಹ ಹೊಂದಿದ್ದಾರೆ.

ಹೇಗಿದ್ದರೂ, ಯೆಹೂದ್ಯ ಧರ್ಮಶಾಸ್ತ್ರವು ಇತರ ಧರ್ಮಗಳ ಧರ್ಮಶಾಸ್ತ್ರ ಮತ್ತು ಆಚಾರಗಳಂತೆಯೇ ಇರುತ್ತದೆಂದು ನಾವು ಯೋಚಿಸಬಾರದು. ಅದು ಹಾಗಿರುವದಿಲ್ಲ. ಯೆಹೂದ್ಯ ಧರ್ಮಶಾಸ್ತ್ರವು ಸ್ವತಃ ದೇವರಿಂದ ಕೊಡಲ್ಪಟ್ಟದ್ದಾಗಿತ್ತು. ಇತರ ಬಹು ಪಾಲು ಧರ್ಮಗಳ ನಿಯಮಗಳು ಮನುಷ್ಯ ನಿರ್ಮಿತವಾಗಿವೆ. ಹಾಗಿದ್ದರೂ, ಯೆಹೂದ್ಯರು ಮತ್ತು ಇತರ ಧರ್ಮಗಳ ಹಿಂಬಾಲಕರು ಈ ವಿಷಯದಲ್ಲಿ ಸಮರೂಪವಾಗಿದ್ದಾರೆ: ಇವರಿಬ್ಬರೂ ಸಹ ಧರ್ಮಶಾಸ್ತ್ರ ಮತ್ತು ಆಚಾರಗಳಿಗೆ ವಿಧೇಯರಾಗುವದು ರಕ್ಷಣೆಯನ್ನು ಸಂಪಾದಿಸಿಕೊಳ್ಳುವ ದಾರಿಯಾಗಿದೆ ಎಂದು ನಂಬುತ್ತಾರೆ ಮತ್ತು ಅದರಲ್ಲಿ ತಮ್ಮ ನಿರೀಕ್ಷೆಯನ್ನು ಇಡುತ್ತಾರೆ. ಮತ್ತು ಇದೇ ಅವರು ಮಾಡುವ ದೋಷವಾಗಿದೆ. ಅವರು ಧರ್ಮಶಾಸ್ತ್ರಕ್ಕೆ ಅಧೀನರಾಗುಳಿಯುತ್ತಾರೆ. ಎಲ್ಲಿಯ ವರೆಗೆ ಮನುಷ್ಯರು ಧರ್ಮಶಾಸ್ತ್ರಕ್ಕೆ ಅಧೀನರಾಗಿ ಉಳಿಯುತ್ತಾರೋ ಅವರು ಕೃಪೆಗೆ ಅಧೀನರಾಗಿ ಇರಲಾಗುವದಿಲ್ಲ, ಮತ್ತು ಅವರು ಕೃಪೆಗೆ ಅಧೀನರಲ್ಲದಿದ್ದರೆ ರಕ್ಷಣೆ ಹೊಂದಲು ಸಾಧ್ಯವಿಲ್ಲ.

ಯಾವ ವ್ಯಕ್ತಿಯೂ – ಆತನು ಯೆಹೂದ್ಯನಾಗಿರಲಿ ಇಲ್ಲವೆ ಇತರ ಯಾವದಾದರೂ, ಧರ್ಮದವನಾಗಿರಲಿ – ನೇಮ ನಿಷ್ಠೆಗಳನ್ನು ಅನುಸರಿಸಿ ರಕ್ಷಣೆಯನ್ನು ಪಡೆದುಕೊಳ್ಳಲಾರನು. ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ದೊರೆಯುವ ದೇವರ ಕೃಪೆಯ ಮುಖಾಂತರ ಮಾತ್ರವೆ ರಕ್ಷಣೆ ಹೊಂದಲು ಸಾಧ್ಯ (ಎಫೆಸ 2:8-9 ಮತ್ತು ವ್ಯಾಖ್ಯಾನ ನೋಡಿರಿ).

## ನೀತಿಗೆ ದಾಸರು (6:15-23)

**15** ಕ್ರಿಸ್ತನನ್ನು ನಂಬುವ ನಾವು ಇನ್ನೆಂದಿಗೂ ಧರ್ಮಶಾಸ್ತ್ರಕ್ಕೆ ಅಧೀನರಲ್ಲವಾದ್ದರಿಂದ (ವಚನ 14). ನಾವು ಧರ್ಮಶಾಸ್ತ್ರದ ಪ್ರಕಾರವಾಗಿ ದಂಡನೆಗೊಳಗಾಗುವದಿಲ್ಲ. ಈಗ ನಾವು ದಂಡನೆಯಿಂದ ಮುಕ್ತರಾದ್ದರಿಂದ ಕೆಲವರು ಹೀಗೆ ಹೇಳಬಹುದು: "ಪಾಪವನ್ನು ಮಾಡೋಣ! ನಮಗೆ ಅದರಿಂದ ಹಾನಿಯಿಲ್ಲ!" ಆದರೆ ಪೌಲನು ಅಂತಹ ವಿಚಾರಕ್ಕೆ ಹೇಳುವದೇನೆಂದರೆ: ಎಂದಿಗೂ ಇರಬಾರದು! (ವಚನಗಳು 1-2 ಮತ್ತು ವ್ಯಾಖ್ಯಾನ ನೋಡಿರಿ).

**16** ನಾವು ಪಾಪಮಾಡುವಾಗ ಪಾಪಕ್ಕೆ ದಾಸರಾಗುತ್ತೇವೆ. ನಾವು ದೇವರಿಗೆ ವಿಧೇಯರಾಗುವಾಗ ದೇವರ "ದಾಸರಾಗುತ್ತೇವೆ" – ಅಥವಾ ೧೮ನೇ ವಚನದಲ್ಲಿ ಪೌಲನು ಹೇಳುವಂತೆ ನೀತಿಗೆ ದಾಸರಾಗುತ್ತೇವೆ( ಮತ್ತಾಯ 6:24, ಯೋಹಾನ 8:34 ನೋಡಿರಿ).

ನಾವು ಯಾರಿಗೆ ವಿಧೇಯರಾಗುತ್ತೇವೆ – ಪಾಪಕ್ಕೋ ಅಥವಾ ದೇವರಿಗೋ? ನಾವು ಯಾರಿಗೆ ವಿಧೇಯರಾಗುತ್ತೇವೋ ಆತನಿಗೆ ದಾಸರಾಗಿದ್ದೇವೆ. ನಾವು ಯಾರಿಗೆ ವಿಧೇಯರಾಗುತ್ತೇವೆಂಬುದೇ ನಾವು ಯಾರ ದಾಸರೆಂಬುದಕ್ಕೆ ಆಧಾರವಾಗುತ್ತವೆ. ನಾವು ದೇವರ ದಾಸರು ಎಂದು ಹೇಳಿ ಆತನ ಆಜ್ಞೆಗಳಿಗೆ ವಿಧೇಯರಾಗದಿದ್ದರೆ ನಾವು ಸುಳ್ಳುಗಾರಾಗಿದ್ದೇವೆ. ನಾವು ಕ್ರೈಸ್ತರೆಂಬದು ದೇವರಿಗೆ ನಾವು ತೋರುವ ವಿಧೇಯತೆಯಿಂದ ಸಿದ್ಧಾಂತವಾಗುತ್ತದೆ (1 ಯೋಹಾನ 2:3-6 ಮತ್ತು ವ್ಯಾಖ್ಯಾನ ನೋಡಿರಿ).

ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ: ನಾವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ ಎಂದು ಪೌಲನು ಹೇಳಿದ್ದಾನೆ (ವಚನ 14). ಆದರೆ ಇಲ್ಲಿ ಪೌಲನು ನಾವು ದೇವರಿಗೆ ವಿಧೇಯರಾಗಬೇಕೆಂದು ಹೇಳುತ್ತಾನೆ. ಅದು "ಧರ್ಮಶಾಸ್ತ್ರಕ್ಕೆ ಅಧೀನರಾಗಿರುವಂತೆ" ಅಲ್ಲವೇ? ಒಂದು ಕ್ಷಣ, ಪೌಲನು ನಾವು ಇನ್ನು ಧರ್ಮಶಾಸ್ತ್ರದ ಅಧಿಕಾರಕ್ಕೊಳಪಡುವದಿಲ್ಲ ಅನ್ನುತ್ತಾನೆ, ಆದರೆ ಇನ್ನೊಂದು ಕ್ಷಣದಲ್ಲಿ, ನಾವು ದೇವರ ಅಧಿಕಾರದ ಅಡಿಯಲ್ಲಿ ಇರಬೇಕು ಎಂದು ಹೇಳುತ್ತಾನೆ ವ್ಯತ್ಯಾಸವೇನು? ಒಂದು ದೊಡ್ಡ ವ್ಯತ್ಯಾಸವಿರುತ್ತದೆ. ಧರ್ಮಶಾಸ್ತ್ರಕ್ಕೆ ಅಧೀನರಾಗಿರುವದು, ಅಂದರೆ, ದೇವರ ಧರ್ಮಶಾಸ್ತ್ರದ ಅಧಿಕಾರದಡಿಯಲ್ಲಿ – ಎಂದರೆ ಧರ್ಮಶಾಸ್ತ್ರದ ಶಿಕ್ಷೆ ಅಥವಾ ದಂಡನೆಯ ಅಡಿಯಲ್ಲಿರುವದು ಎಂಬ ಅರ್ಥವಾಗಿದೆ. ಧರ್ಮಶಾಸ್ತ್ರಾಧೀನರಿಗೆ ಧರ್ಮಶಾಸ್ತ್ರದಿಂದಲೇ ದಂಡನೆಯಾಗುವದು, ಯಾಕೆಂದರೆ ಅವರು ಎಂದಿಗೂ ಧರ್ಮಶಾಸ್ತ್ರಕ್ಕೆ ಪೂರ್ಣವಾಗಿ ವಿಧೇಯರಾಗಲು ಸಾಧ್ಯವಿಲ್ಲ.

ಹೇಗಿದ್ದರೂ ಸ್ವತಃ ದೇವರ ಅಧಿಕಾರದಡಿಯಲ್ಲಿ ಇರುವದು ಸಂಪೂರ್ಣವಾಗಿ ವ್ಯತ್ಯಾಸವಾದದ್ದು. ದೇವರ ಅಧೀನದಲ್ಲಿರುವದೆಂದರೆ ಕೃಪೆಯ ಅಧೀನದಲ್ಲಿ ಇರುವದೇ ಆಗಿದೆ (ವಚನ 14). ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಪಾಪ ಕ್ಷಮಾಪಣೆ ಮತ್ತು ಧರ್ಮಶಾಸ್ತ್ರದ ದಂಡನೆಯಿಂದ ವಿಮೋಚನೆಯು ದೊರೆಯುವದಾಗಿದೆ ಎಂದು ಇದರ ಅರ್ಥವಾಗಿದೆ. ನಾವು ಎಡವಿ ಬೀಳುವಾಗ ನಮ್ಮ ಪಾಪಕ್ಕಾಗಿ ಪಶ್ಚಾತಾಪ ಪಡುವದಾದರೆ ಸಾಕು, ನಾವು ಶುದ್ಧೀಕರಿಸಲ್ಪಟ್ಟು ಪು ನಃ ಯಥಾಸ್ಥಿತಿಗೆ ಬರುತ್ತೇವೆ ಎಂಬದು ಇದರ ತಾತ್ಪರ್ಯವಾಗಿದೆ ( ಯೋಹಾನ 1:9 ಮತ್ತು ವ್ಯಾಖ್ಯಾನ ನೋಡಿರಿ).

ದೇವರ ಅಧಿಕಾರದಡಿಯಲ್ಲಿ ಇರುವದೆಂದರೆ ಇನ್ನೊಂದು ಅರ್ಥವಿರುತ್ತದೆ. ಪವಿತ್ರಾತ್ಮನ ಅಧಿಕಾರದ ಅಡಿಯಲ್ಲಿ ಇರುವದೆಂದು ಅದರರ್ಥವಾಗಿದೆ. ಮತ್ತು ದೇವರ ಆಜ್ಞೆಗಳಿಗೆ ವಿಧೇಯರಾಗಬೇಕೆಂಬ ಬಯಕೆಯನ್ನು ನಮಗೆ ಕೊಡುವವನು ಪವಿತ್ರಾತ್ಮನೇ ಆಗಿದ್ದಾನೆ, ಮತ್ತು ಇನ್ನು ಪ್ರಾಮುಖ್ಯವೇನೆಂದರೆ, ಅವು ಗಳಿಗೆ ವಿಧೇಯರಾಗಲು ಆತನು ನಮಗೆ ಬಲವನ್ನು ಕೊಡುತ್ತಾನೆ.

ಹೀಗೆ ನಾವು ದೇವರ ಅಧಿಕಾರದ ಅಧೀನದಲ್ಲಿರುವದು ಧರ್ಮಶಾಸ್ತ್ರದ ಅಧಿಕಾರದಡಿಯಲ್ಲಿ ಇರುವದಕ್ಕಿಂತಲೂ ಸಂಪೂರ್ಣವಾಗಿ ವ್ಯತ್ಯಾಸವಾಗಿದೆ ಎಂಬದನ್ನು ಕಾಣುತ್ತೇವೆ. ದೇವರ ಆಧೀನದಲ್ಲಿ ನಾವು ಪಾಪ ಕ್ಷಮಾಪಣೆಯನ್ನೂ ಪಾಪವನ್ನು ಜಯಿಸಲು ಶಕ್ತಿಯನ್ನೂ ಪಡೆದುಕೊಳ್ಳುತ್ತೇವೆ.. ಧರ್ಮಶಾಸ್ತ್ರದ ಅಧೀನದಲ್ಲಿ ನಾವು ಯಾವ ಪಾಪಕ್ಷಮೆಯನ್ನಾಗಲಿ ಶಕ್ತಿಯನ್ನಾಗಲಿ ಪಡೆಯದೇ ಕೇವಲ ದಂಡನೆಯನ್ನು ಪಡೆದುಕೊಳ್ಳುತ್ತೇವೆ.

ಹೇಗಿದ್ದರೂ, ನಾವು ನೆನಪಿನಲ್ಲಿಟ್ಟು ಕೊಳ್ಳಬೇಕಾದದ್ದೇನೆಂದರೆ: ನಾವು ದೇವರ ಅಧಿಕಾರದಡಿಯಲ್ಲಿ ಉಳಿಯ ಬೇಕು, ನಾವು ಆತನ ಆಜ್ಞೆಗಳಿಗೆ ವಿಧೇಯರಾಗಬೇಕು. ನಾವು ನ್ಯಾಯತೀರ್ಪಿನಿಂದ ಮುಕ್ತರಾದಾಗ್ಯು ದೇವರಿಂದ ನಾವು ಮುಕ್ತರಲ್ಲ!

**17-18** ರೋಮಾಯ ಕ್ರೈಸ್ತರು ತಮಗೆ ಕಲಿಸಲ್ಪಟ್ಟ ಬೋಧನೆಗೆ ....ಮನಪೂರ್ವಕವಾಗಿ ಅಧೀನರಾಗಿದ್ದರು, ಅಂದರೆ, ಅವರು ಪೌಲ ಮತ್ತು ಇತರ ಅಪೊಸ್ತಲರ ಬೋಧನೆಗಳಿಗೆ ವಿಧೇಯರಾಗಿದ್ದರು. ಅವರು ವಿಧೇಯರಾದದ್ದರಿಂದ ಪಾಪದಿಂದ ಬಿಡುಗಡೆ ಹೊಂದಿದ್ದಾರೆಂದು ಪೌಲನು ಅವರಿಗೆ ಹೇಳುತ್ತಾನೆ.

ಆದರೆ ಅವರು ದೇವರಿಂದ ಬಿಡುಗಡೆ ಹೊಂದಿರುವದಿಲ್ಲ. ಮನುಷ್ಯರು ಪಾಪಕ್ಕೆ ದಾಸರು (ವಚನ 17), ಅಥವಾ ನೀತಿಗೆ ದಾಸರು (ವಚನ 18), – ಅಂದರೆ ದೇವರ ದಾಸರಾಗಿರುತ್ತಾರೆ. ನಾವು ಎರಡರಲ್ಲಿ ಒಂದು ಆಗಿರುತ್ತೇವೆ. ಮತ್ತು ನಾವು ಏಕ ಕಾಲದಲ್ಲಿ ಎರಡೂ ಆಗಿರಲಾರೆವು (ಮತ್ತಾಯ 6:24). ಆದುದರಿಂದ, ನಾವು ಯಾರಾದರೊಬ್ಬರ ದಾಸರಾಗಿ ಇರಲೇ ಬೇಕಾದ್ದರಿಂದ ದೇವರ ದಾಸರಾಗಿರುವದು ಎಷ್ಟೋ ಉತ್ತಮವಾದದ್ದು! ಆತನು ಪ್ರೀತಿಸ್ವರೂಪನೂ ಕರುಣಾಮಯನೂ ಆಗಿದ್ದಾನೆ. ಅಲ್ಲದೆ ಆತನು ಸರ್ವಶಕ್ತನೂ ಆಗಿದ್ದಾನೆ ಮತ್ತು ಆತನು ತನ್ನ ಎಲ್ಲಾ ದಾಸರಿಗೆ ಪ್ರತಿಫಲವನ್ನು – ನಿತ್ಯ ಜೀವವನ್ನು ಕೊಡುತ್ತಾನೆ! (ವಚನಗಳು 22:23). ಪಾಪದ ದಾಸರು ಇನ್ನೊಂದು ರೀತಿಯ ಪ್ರತಿಫಲವನ್ನು ಪಡೆಯುತ್ತಾರೆ, ಅದಾವು ದೆಂದರೆ, ನಿತ್ಯ ಮರಣ (ವಚನಗಳು 21, 23).

ಪೌಲನು ಉಪಯೋಗಿಸುವ "ದಾಸ" ಎಂಬ ಪದದಿಂದ ಕೆಲವರಿಗೆ ಸಮಸ್ಯೆಯೆನಿಸಬಹುದು. ಪೌಲನು "ದಾಸ" ಎಂಬ ಪದವನ್ನು ಒಂದು ದೃಷ್ಟಾಂತವಾಗಿ ಮಾತ್ರವೇ ಉಪಯೋಗಿಸುತ್ತಾನೆ. ನಾವು ದೇವರ "ದಾಸರು" ಮಾತ್ರವಲ್ಲ, ನಾವು ಆತನ ಮಕ್ಕಳೂ, ಬಾಧ್ಯರೂ ಆಗಿದ್ದೇವೆ.

ಒಂದು ವಿಧದಲ್ಲಿ, ನಾವು ದಾಸರಂತಿದ್ದೇವೆ, ಯಾಕೆಂದರೆ ನಾವು ದೇವರ ಅಧಿಕಾರದ ಅಡಿಯಲ್ಲಿ ಇದ್ದೇವೆ. ಆದರೆ ಇನ್ನೊಂದು ವಿಧದಲ್ಲಿ ನಾವು ದೇವರ ಮಕ್ಕಳೂ, ಆತನ ಕುಟುಂಬದ ಮುಕ್ತ ಸದಸ್ಯರೂ ಆಗಿದ್ದೇವೆ.

**19** ಪೌಲನು ರೋಮಾಪು ರದ ಕ್ರೈಸ್ತರನ್ನು ಅವರ ನರಭಾವದಲ್ಲಿ ಬಲಹೀನರೆಂದು ಕರೆಯುವದರ ತಾತ್ಪರ್ಯವು ಅವರು ತಿಳಿವಳಿಕೆಯಲ್ಲಿ ಬಲಹೀನರೆಂಬದಾಗಿದೆ. ಅವರು ತನ್ನ ಬೋಧನೆಗಳನ್ನು ಇನ್ನೂ ಸುಲಭವಾಗಿ ಅರ್ಥ ಮಾಡಿಕೊಳ್ಳುವಂತೆ ಅವರಿಗೆ ಸಹಾಯ ಮಾಡಲು ಪೌಲನು ಸಂಗತಿಗಳನ್ನು ಲೋಕ ರೀತಿಯಾಗಿ ಹೇಳಿದ್ದನು, ಅಂದರೆ ಆತನು ದಿನನಿತ್ಯ ದಲ್ಲಿನ ಸಾಮಾನ್ಯ ಅನುಭವದ ಮಾತುಗಳನ್ನು ಉಪಯೋಗಿಸಿದ್ದನು, ಉದಾಹರಣೆಗೆ "ದಾಸನು". ಈ ವಚನದ ಎರಡನೆಯ ಭಾಗದಲ್ಲಿ ಪೌಲನು ೧೩ನೇ ವಚನದ ವಿಚಾರವನ್ನು ಪು ನರಾವರ್ತಿಸುತ್ತಾನೆ

**20** ನಾವು ಏಕ ಕಾಲದಲ್ಲಿ ಇಬ್ಬರು ಯಜಮಾನರಿಗೆ ದಾಸರಾಗಿರಲು ಸಾಧ್ಯವಿಲ್ಲ. ನಾವು ಒಬ್ಬನ ದಾಸರಾಗಿರುವದಾದರೆ ಇನ್ನೊಬ್ಬನಿಂದ ಮುಕ್ತರಾಗಿರುತ್ತೇವೆ. ಇಲ್ಲಿ ಪೌಲನು ರೋಮಾಪು ರದವರಿಗೆ ಅವರ ವಿಷಯದಲ್ಲಿಯೂ ಹೀಗೆಯೇ ಎಂದು ಜ್ಞಾಪಿಸುತ್ತಾನೆ ಅವರು ಪಾಪಕ್ಕೆ ದಾಸರಾಗಿದ್ದಾಗ ನೀತಿಯ ಹಂಗಿನವರಾಗಿದ್ದಿಲ್ಲ.

**21** ನಾವು ಯಾವ ಯಜಮಾನನನ್ನು ಸೇವಿಸಲು ಇಚ್ಚಿಸುತ್ತೇವೆಂಬದನ್ನು ಆರಿಸಿಕೊಳ್ಳಬಹುದು. ಹೀಗಿರುವದರಿಂದ, ನಾವು ನಮಗೆ ಉತ್ತಮ ಪ್ರತಿಫಲವನ್ನು ನೀಡುವ ಯಜಮಾನನನ್ನು ಆರಿಸಿ ಕೊಳ್ಳೋಣ೧
ಕ್ರೈಸ್ತರು ಪಾಪದ ದಾಸತ್ವದಿಂದ ಬಿಡುಗಡೆ ಹೊಂದಿದವರಾಗಿದ್ದಾರೆ. ಹಾಗಿದ್ದರೂ, ಆಗಾಗ ಅವರು ಪಾಪಕ್ಕೆ ದಾಸರಂತೆ ವರ್ತಿಸುತ್ತಾರೆ. ಅಂದರೆ ಕ್ರೈಸ್ತರು ಆಗಾಗ ತಮ್ಮ ಯಜಮಾನನನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರವನ್ನು ದುರುಪಯೋಗಪಡಿಸಿಕೊಳ್ಳುತ್ತಾರ. ಕೆಲವು ವೇಳೆಗಳಲ್ಲಿ ಅವರು ತಪ್ಪು ಯಜಮಾನನನ್ನು ಆರಿಸಿಕೊಳ್ಳುತ್ತಾರೆ – ಅವರು ಪಾಪ, ಅಥವಾ ಸೈತಾನನನ್ನು ಸೇವಿಸಲು ಇಚ್ಚಿಸುತ್ತಾರೆ. "ಹಾಗೆ ಎಂದಿಗೂ ಇರಬಾರದು "ಎಂದು ಪೌಲನು ನಮ್ಮನ್ನು ಪ್ರಬೋಧಿಸುತ್ತಾನೆ (ವಚನ 6 ಮತ್ತು ವ್ಯಾಖ್ಯಾನ ನೋಡಿರಿ).

ಪಾಪಕ್ಕೆ ದಾಸರಾಗಿರುವದರಲ್ಲಂತೂ ಯಾವ ಪ್ರಯೋಜನವೂ ಇರುವದಿಲ್ಲ. ಪಾಪವು ಮರಣಕ್ಕೆ ಮಾತ್ರವೇ ನಡಿಸುತ್ತದೆ (ವಚನ 23).

**22** ಆದರೆ ದೇವರಿಗೆ ದಾಸರಾಗಿರುವದರಲ್ಲಿ ದೊಡ್ಡ ಪ್ರಯೋಜನವಿರುತ್ತದೆ! ಮೊದಲನೆಯದಾಗಿ, ಇದು ಪರಿಶುದ್ಧತೆಗೆ ನಡಿಸುತ್ತದೆ, ಮತ್ತು ಪರಿಶುದ್ಧತೆಯಿಲ್ಲದೆ ಯಾರೂ ಕರ್ತನನ್ನು ನೋಡಲಾರರು (ಇಬ್ರಿಯ 12:14). ಎರಡನೆಯದಾಗಿ, ದೇವರಿಗೆ ದಾಸರಾಗಿರುವದು ನಿತ್ಯಜೀವಕ್ಕೆ ನಡಿಸುತ್ತದೆ (ವಚನ 23).

**23** ಮನುಷ್ಯರು ಕೆಲಸಮಾಡಿ ಸಂಬಳವನ್ನು ಸಂಪಾದಿಸುತ್ತಾರೆ. ನಾವು ಪಾಪ ಮಾಡುವಾಗ ಪಾಪದ "ಸಂಬಳ" ವನ್ನು ಪಡೆಯುತ್ತೇವೆ. ಆದರೆ ನಿತ್ಯ ಜೀವವು (ಅಥವಾ ರಕ್ಷಣೆಯು) ನಾವು ನಮ್ಮ ಸ್ವಂತ ಕೆಲಸ ಅಥವಾ ಪ್ರಯತ್ನದಿಂದ ಸಂಪಾದಿಸುವಂತ ಸಂಗತಿಯಾಗಿರುವದಿಲ್ಲ. ಅದು ದೇವರವರವಾಗಿದೆ. ಜನರು ವರಗಳನ್ನು "ಸಂಪಾದಿಸುವದಿಲ್ಲ". ಬದಲಾಗಿ, ವರಗಳು ಕೊಡುವವನ ಪ್ರೀತಿ ಮತ್ತು ಸಂತೋಷದ ಪ್ರಕಾರ – ಅಂದರೆ ಕೃಪೆಯ ಪ್ರಕಾರ ಉಚಿತವಾಗಿ ಕೊಡಲ್ಪಡುತ್ತವೆ.

ನಿತ್ಯ ಜೀವವು ದೇವರ ಕೃಪೆಯ ವರವಾಗಿದೆ. ಇದು ನಮಗೆ ಕರ್ತನಾದ ಯೇಸು ಕ್ರಿಸ್ತನಲ್ಲಿ ಕೊಡಲ್ಪಟ್ಟಿದೆ, ನಮಗೆ ವರವನ್ನು ತಂದವನು ಆತನೇ, ಆತನು ಅದಕ್ಕೆ ತನ್ನ ಸ್ವಂತ ರಕ್ತದಿಂದ ಕ್ರಯಕ್ಕೆ ಕೊಟ್ಟನು. ಪೌಲನು ಇದನ್ನು ತಾನು ಎಫೆಸದವರಿಗೆ ಬರೆದ ಪ್ರತಿಕೆಯಲ್ಲಿ ಸಾರಾಂಶಗೊಳಿಸುತ್ತಾನೆ: ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲಾ, ಅದು ದೇವರ ವರವೇ (ಎಫೆಸ 2:8).

---

## ಅಧ್ಯಾಯ - 7

### ವಿವಾಹದಿಂದ ಒಂದು ದೃಷ್ಟಾಂತ (7:1-6)

**1** ಈ ವಚನದಲ್ಲಿ ಪೌಲನು ಪ್ರಸ್ತಾಪಿಸುವ ಧರ್ಮಶಾಸ್ತ್ರವು ಯೇಸುವಿನ ಸಮಯ ಕ್ಕಿಂತಲೂ ಸುಮಾರು 1500 ವರ್ಷಗಳಿಗೆ ಮುಂಚೆ ದೇವರು ಮೋಶೆಗೆ ನೀಡಿದ ಯೆಹೂದ್ಯ ಧರ್ಮಶಾಸ್ತ್ರವಾಗಿದೆ. ಈ ಧರ್ಮಶಾಸ್ತ್ರವು ಅನೇಕ ನಿಯಮಗಳನ್ನೂ ಆಜ್ಞೆಗಳನ್ನೂ, ಒಳಗೊಂಡಿತ್ತು. ದೇವರಿಂದ ನೀತಿವಂತರೆಂಬ ನಿರ್ಣಯವನ್ನು ಹೊಂದಬೇಕಾದರೆ ಈ ಎಲ್ಲಾ ನಿಯಮ ಹಾಗು ಆಜ್ಞೆಗಳನ್ನು ಪಾಲಿಸುವದು ಅವಶ್ಯಕವಾಗಿತ್ತೆಂದು ಯೆಹೂದ್ಯರು ನಂಬಿದ್ದರು. ಯೆಹೂದ್ಯರಿಗೆ ಧರ್ಮಶಾಸ್ತ್ರವು ಯಜಮಾನನಂತಿತ್ತು. ಯೆಹೂದ್ಯರ ದೃಷ್ಟಿಯಲ್ಲಿ ಗಂಡನು ಹೆಂಡತಿಗೆ "ಯಜಮಾನ" ಆಗಿದ್ದಂತೆಯೇ ಧರ್ಮಶಾಸ್ತ್ರವು ಯೆಹೂದ್ಯರಿಗೆ ಯಜಮಾನನಾಗಿತ್ತು.

ಪೌಲನು ಪತ್ರಿಕೆ ಬರೆದ ಈ ರೋಮಾಪುರದ ಕ್ರೈಸ್ತರಲ್ಲಿ ಬಹು ಮಂದಿ ಯೆಹೂದ್ಯ ಮತದಿಂದ ಬಂದವರಾಗಿದ್ದರೆಂಬದನ್ನು 1ನೇ ವಚನದಿಂದ ನಾವು ಹೇಳಬಹುದು, ಯಾಕೆಂದರೆ ಆತನು ಇಲ್ಲಿ ಹೇಳುವದೇನೆಂದರೆ: ನಾನು ಧರ್ಮಶಾಸ್ತ್ರವನ್ನು ತಿಳಿದವರಿಗೆ – ಅಂದರೆ ಯೆಹೂದ್ಯರಿಗೆ – ಹೇಳುತ್ತಿದ್ದೇನೆ.

ಸತ್ತವ್ಯಕ್ತಿಯ ಮೇಲೆ ಧರ್ಮಶಾಸ್ತ್ರಕ್ಕೆ ಯಾವ ಅಧಿಕಾರವು ಇರುವದಿಲ್ಲ, ಸತ್ತವನು ಧರ್ಮಶಾಸ್ತ್ರಕ್ಕೆ ವಿಧೇಯನಾಗಬೇಕಾಗಿಲ್ಲ!

**2-3** ಈ ವಚನಗಳಲ್ಲಿ ಪೌಲನು ಧರ್ಮಶಾಸ್ತ್ರವನ್ನು ಗಂಡನಿಗೂ ಮತ್ತು ಯೆಹೂದ್ಯರನ್ನು ಹೆಂಡತಿಗೂ ಹೋಲಿಸುತ್ತಾನೆ. ಧರ್ಮಸಾಸ್ತ್ರ ಮತ್ತು ಯೆಹೂದ್ಯರ ನಡುವಿನ ಸಂಬಂಧವು ಹಾಗು ಯೆಹೂದ್ಯ ಗಂಡ ಹೆಂಡತಿಯರ ನಡುವಿನ ಸಂಬಂಧವು ಮುಖ್ಯವಾಗಿ ಒಂದೇ ರೀತಿಯಾಗಿವೆ ಎಂಬದು ಪೌಲನು ಹೇಳಬಯಸುವ ಅಂಶವಾಗಿದೆ (1 ಕೊರಿಂಥ 7"39 ನೋಡಿರಿ). ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರವಾಗಿ ಗಂಡನು ಬದುಕಿರುವವರೆಗೂ ಆತನ ಹೆಂಡತಿಯು ಆತನ ಅಧಿಕಾರದಡಿಯಲ್ಲಿರಬೇಕಾಗಿತ್ತು. ಆದರೆ ಗಂಡನು ಸತ್ತರೆ ಆಕೆಯು ಅವನ ಹಂಗಿನಿಂದ ಮುಕ್ತಳಾಗಿ ಇನ್ನೊಬ್ಬನನ್ನು ವಿವಾಹವಾಗಬಹುದಾಗಿತ್ತು. ಇದೇ ರೀತಿಯಾಗಿ, ಯಾವಾಗ ಒಬ್ಬನು ಕ್ರಿಸ್ತನನ್ನು ನಂಬುತ್ತಾನೋ ಆಗ ಅವನು ಮುಂಚೆ ಹಿಂಬಾಲಿಸಿದ್ದ ಧರ್ಮ ಅಥವಾ ಧಾರ್ಮಿಕ ಧರ್ಮಶಾಸ್ತ್ರಗಳು "ಸತ್ತಂತೆ" ಆಗುತ್ತವೆ, ಮತ್ತು ಆ ವ್ಯಕ್ತಿಯು ಕ್ರಿಸ್ತನನ್ನು ಹಿಂಬಾಲಿಸಲು "ಸ್ವತಂತ್ರನಾಗಿದ್ದಾನೆ". ಆ ವ್ಯಕ್ತಿಯು ಇನ್ನು ಹಿಂದಿನ ಧರ್ಮ ಅಥವಾ ಅದರ ಧರ್ಮಶಾಸ್ತ್ರದ ಅಧಿಕಾರಕ್ಕೊಳಪಡುವದಿಲ್ಲ.

**4** ಹಾಗೆಯೇ ನೀವು ಸಹ...ಧರ್ಮಶಾಸ್ತ್ರದ ಪಾಲಿಗೆ ಸತ್ತಿರಿ. ಧರ್ಮಶಾಸ್ತ್ರವೇ ಸತ್ತಿತೆಂದು ಪೌಲನು ಹೇಳುವದಿಲ್ಲ. ನೀವು ಧರ್ಮಶಾಸ್ತ್ರದ ಪಾಲಿಗೆ ಸತ್ತಿರೆಂದು ಹೇಳುತ್ತಾನೆ. ನಮಗಾದರೋ ಧರ್ಮಶಾಸ್ತ್ರವು ಸತ್ತಂತೆ ಎಂಬದು ಪೌಲನ ತಾತ್ಪರ್ಯವಾಗಿದೆ. ಆದುದರಿಂದ ನಾವು "ಬೇರೊಬ್ಬನನ್ನು (ಕ್ರಿಸ್ತನನ್ನು) ವಿವಾಹಮಾಡಿಕೊಳ್ಳಲು" ಸ್ವತಂತ್ರರಾಗಿದ್ದೇವೆ. ನಾವು ನಮ್ಮ ಮೊದಲ ಗಂಡನ (ಧರ್ಮ ಶಾಸ್ತ್ರದ) ಹಂಗಿನಲ್ಲಿಲ್ಲ, ಮತ್ತು ಈ ಕಾರಣದಿಂದ ನಾವು ಎರಡನೆಯ ಗಂಡನನ್ನು (ಕ್ರಿಸ್ತನು) ವಿವಾಹ ಮಾಡಿಕೊಳ್ಳಬಹುದು. ನಾವು ಕ್ರಿಸ್ತನ ದೇಹದ ಮೂಲಕವಾಗಿ – ಅಂದರೆ, ಶಿಲುಬೆಯ ಮೇಲೆ ಕ್ರಿಸ್ತನ ದೇಹ ಹೊಂದಿದ ಮರಣದ ಮೂಲಕವಾಗಿ – ಧರ್ಮಶಾಸ್ತ್ರದ ಪಾಲಿಗೆ ಸತ್ತೆವು . ನಾವು ಕ್ರಿಸ್ತನೊಂದಿಗೆ ನೂತನ ಜೀವದಲ್ಲಿ ಸೇರಿಕೊಳ್ಳುವದಕ್ಕಾಗಿ ನಾವು ಕ್ರಿಸ್ತನ ಮರಣದಲ್ಲಿ ಸೇರಿಕೊಂಡಿದ್ದೇವೆ (ರೋಮ 6:4-5).

ವಿವಾಹದ ಮುಖ್ಯ ಉದ್ದೇಶಗಳಲ್ಲಿ ಫಲ ಬಿಡುವದಾಗಿದೆ –ಅಂದರೆ ಮಕ್ಕಳನ್ನು ಪಡೆಯುವದು. ನಾವು ಕ್ರಿಸ್ತನೊಂದಿಗೆ ವಿವಾಹವಾದಾಗ ದೇವರಿಗೆ ಫಲವಾಗುತ್ತೇವೆ: ನಮ್ಮ ಸಾಕ್ಷಿಯ ಮುಖಾಂತರ ನೂತನ ವಿಶ್ವಾಸಿಗಳು ಹುಟ್ಟುವರು ಮತ್ತು ಪವಿತ್ರಾತ್ಮನ ಫಲವು ನಮ್ಮಲ್ಲಿ ಕಂಡು ಬರುವದು – ಉದಾಹರಣೆಗೆ, ಪ್ರೀತಿ, ಸಂತೋಷ, ಸಮಾಧಾನ ಮುಂತಾದವುಗಳು (ಗಲಾತ್ಯ 5:22-23).

**5** ನಾವು ಪಾಪಮಯ ಸ್ವಭಾವದ ಹತೋಟಿಯಲ್ಲಿದ್ದಾಗ [32] ಒಂದು ಅರ್ಥದಲ್ಲಿ ನಾವು ಧರ್ಮಶಾಸ್ತ್ರದೊಂದಿಗೆ ವಿವಾಹವಾಗಿದ್ದೇವು , ಅದರ ಫಲಿತವಾಗಿ ನಾವು ಮರಣಕ್ಕೆ ಫಲವನ್ನು ಹೊಂದಿದ್ದೇವು . ಮರಣಕ್ಕೆ ಫಲವು ಪಾಪವೇ ಆಗಿದೆ. ದೇವರಿಗಾಗಿ ಸತ್ಕ್ರಿಯೇಗಳನ್ನು ಮಾಡುವದರ ಬದಲಿಗೆ ನಾವು ಮರಣವನ್ನುಂಟು ಮಾಡುವ ಪಾಪ ಮಯ ಕೃತ್ಯಗಳನ್ನು ಮಾಡಿದೆವು .

ಶರೀರಾಧೀನ ಭಾವ ಎಂಬುದಕ್ಕೆ ಪೌಲನು ಉಪಯೋಗಿಸುವ ಗ್ರೀಕ್ ಪದದ ಅಕ್ಷರಂಶ: ಅರ್ಥವು "ಶರೀರ" ಎಂದಿರುತ್ತದೆ. "ಶರೀರ" ಎಂಬ ಪದಕ್ಕೆ ಎರಡು ಅರ್ಥಗಳಿರಬಹುದು; ಮೊದಲನೆಯದಾಗಿ "ದೇಹ" (ಕಣ್ಣು, ಕೈಗಳು,

ಕಾಲುಗಳು, ಮುಂತಾದವು ), ಮತ್ತು ಎರಡನೆಯದಾಗಿ, "ಶರೀರಾಧೀನ (ಪಾಪಭರಿತ) ಸ್ವಭಾವ" (ಪಾಪಭರಿತ ಇಚ್ಛೆಗಳು ಮತ್ತು ಪಾಪಭರಿತ ಚಿತ್ತ).

ಈ ವಚನದಲ್ಲಿ ಪೌಲನು "ಶರೀರ" ಎಂಬ ಗೀಕ್ ಪದವನ್ನು ಶರೀರಾಧೀನ ಸ್ವಭಾವ ಎಂಬ ಅರ್ಥ ನೀಡುವದಕ್ಕೆ ಉಪಯೋಗಿಸುತ್ತಾನೆ. ಸ್ವತಃ ದೇಹವು ಪಾಪಮಯವಲ್ಲ, ನಮ್ಮ ಪೂರ್ವ ಸ್ವಭಾವ ಮಾತ್ರವೇ ಪಾಪವಾಗಿದೆ. ಪಾಪವು ಎಲ್ಲಿ ಉದ್ಭವವಾಗುತ್ತದೆ? ಪಾಪವು ನಮ್ಮ ಕಣ್ಣುಗಳು, ಕೈಗಳು ಮತ್ತು ಪಾದಗಳಿಂದ ಹುಟ್ಟುವದಿಲ್ಲ, ಬದಲಾಗಿ ಇದು ನಮ್ಮ ಹೃದಯ ಮತ್ತು ಮನಸ್ಸಿನಲ್ಲಿರುವ ಪಾಪಮಯ ಇಚ್ಛೆಗಳಿಂದ ಉದ್ಭವವಾಗುತ್ತದೆ.[33] ನಮ್ಮ ಹೃದಯ ಮನಸ್ಸುಗಳಲ್ಲಿ ಪಾಪವು ಉದ್ಭವಿಸಿದ ಬಳಿಕ ನಮ್ಮ ದೇಹಗಳು (ಕಣ್ಣುಗಳು, ಕೈಗಳು, ಪಾದಗಳು) ಪಾಪದ ಹತೋಟಿಗೆ ಬರುತ್ತವೆ ಮತ್ತು ನಾವು ಪಾಪ ಕೃತ್ಯಗಳನ್ನು ಮಾಡಲು ಪ್ರಾರಂಭಿಸುತ್ತೇವೆ,ಹೀಗೆ ಈ ವಚನದಲ್ಲಿ "ಶರೀರ" ಎಂಬ ಪದವು "ಪಾಪದ ಹತೋಟಿಯಲ್ಲಿನ ದೇಹ" ವೆಂಬ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. ಈ ಅರ್ಥವು ಶರೀರಾಧೀನ ಸ್ವಭಾವ [34] ಎಂಬ ಪದದ ಮೂಲಕ ಅತಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪೌಲನು ಧರ್ಮಶಾಸ್ತ್ರದಿಂದ ಪ್ರೇರಿತವಾದ ದುರಾಶೆಗಳನ್ನು ಪ್ರಸ್ತಾಪಿಸುತ್ತಾನೆ. ಧರ್ಮಶಾಸ್ತ್ರದಿಂದ ದುರಾಶೆಗಳು ಉದ್ಭವವಾಗಲು ಸಾಧ್ಯ? ಧರ್ಮಶಾಸ್ತ್ರವು ಪಾಪಮಯವೋ? ಖಂಡಿತವಾಗಿಯೂ ಅಲ್ಲ! ಹೇಗಿದ್ದರೂ, ಧರ್ಮಶಾಸ್ತ್ರವಿಲ್ಲದ ಪಕ್ಷದಲ್ಲಿ ಮೀರೋಣ ಎಂಬುದಿಲ್ಲ (ರೋಮ 4:15). ಧರ್ಮಶಾಸ್ತ್ರವು ಇರುತ್ತದಾದ್ದರಿಂದ ದುರಾಶೆಗಳು ಸಹ ಇರುತ್ತವೆ.

ಉದಾಹರಣೆಗೆ, ಚಿಕ್ಕ ಮಗುವೊಂದು ಬೇರೊಬ್ಬರಿಗೆ ಸೇರಿದ ವಸ್ತುವೊಂದನ್ನು ತೆಗೆದು ಕೊಳ್ಳಬಹುದು. ಮಗುವು ಇದು "ಕಳ್ಳತನ" ಎಂದು ಗ್ರಹಿಸಿಕೊಳ್ಳುವದಿಲ್ಲ. ಅವನು ಏನನ್ನೋ ನೋಡಿ ಇಷ್ಟಪಟ್ಟು ತೆಗೆದುಕೊಳ್ಳುತ್ತಾನಷ್ಟೇ. ಅನಂತರ ಆತನ ತಂದೆತಾಯಿಗಳು ಆತನಿಗೆ ಹೇಳುವದೇನೆಂದರೆ: "ನೀನು ಇದನ್ನು ಮಾಡಬಾರದು. ಇದಕ್ಕೆ ಕಳ್ಳತನ ಎನ್ನುತ್ತಾರೆ. ಇದು ಪಾಪ". ಈಗ ಮಗುವಿಗೆ ಗೊತ್ತಿದೆ, ಅವನು "ಧರ್ಮಶಾಸ್ತ್ರವನ್ನು" ಪಡೆದಿರುತ್ತಾನೆ. ಒಂದು ವೇಳೆ ಅವನು ಪುನಃ ಇನ್ನೊಬ್ಬರಿಗೆ ಸೇರಿದ ವಸ್ತುವನ್ನು ತೆಗೆದುಕೊಂಡರೆ ಅವನಲೆಕ್ಕಕ್ಕೆ ಅದು ಪಾಪವೆಂದು ಎಣಿಸಲ್ಪಡುವದು.

ಆದರೆ ಆತನ ತಂದೆತಾಯಿಗಳು ಎಚ್ಚರಿಕೆ ಮತ್ತು ಧರ್ಮಶಾಸ್ತ್ರದ ಹೊರತಾಗಿಯೂ ಮಗುವು ಇನ್ನು ಮತ್ತೊಬ್ಬರಿಗೆ ಸೇರಿದ್ದನ್ನು ತೆಗೆದುಕೊಳ್ಳಲು ಬಯಸುತ್ತಾನೆ, ಆತನು ಇನ್ನು ಕಳ್ಳತನಮಾಡಲಿಚ್ಛಿಸುತ್ತಾನೆ. ಅವನು ಈಗಲೂ ಶೋಧನೆಗೊಳಗಾಗಿ ಪಾಪಮಾಡುತ್ತಾನೆ.

ಮತ್ತು ಬಹುಶಃ ಶೋಧನೆಯು ಬಹಳ ದೊಡ್ಡದಿರಬಹುದು, ಈಗ ಮಗುವಿಗೆ ಅದು ತಪ್ಪೆಂದು ತಿಳಿದಿರುತ್ತದೆ. ಏನನ್ನಾದರೂ ಮಾಡಬಾರದೆಂದು ಹೇಳಿದಾಗ ನಾವು ಇನ್ನು ಹೆಚ್ಚಾಗಿ ಅದನ್ನು ಮಾಡಲು ಇಚ್ಛಿಸುವದು ಸಾಮಾನ್ಯ ಅನುಭವವಾಗಿದೆ. ಯಾರಾದರೂ ನಮಗೆ "ನೋಡಬೇಡ", ಅಂದರೆ ಇನ್ನು ಹೆಚ್ಚಾಗಿ ನೋಡಲಿಚ್ಛಿಸುತ್ತೇವೆ! ಅದುದರಿಂದಲೇ ಪೌಲನು ಇಲ್ಲಿ ದುರಾಶೆಗಳು ಧರ್ಮಶಾಸ್ತ್ರದಿಂದ ಪ್ರೇರಿತವಾದವು ಗಳು ಎಂದು ಹೇಳುತ್ತಾನೆ.

6 ಈಗಲಾದರೋ ನಮ್ಮನ್ನು ವಶಮಾಡಿಕೊಂಡಿದ್ದ ಧರ್ಮಶಾಸ್ತ್ರದ ಪಾಲಿಗೆ ನಾವು ಸತ್ತ ಕಾರಣ ಆ ಧರ್ಮಶಾಸ್ತ್ರದಿಂದ ವಿಮುಕ್ತರಾಗಿದ್ದೇವೆ. ಧರ್ಮಶಾಸ್ತ್ರದಿಂದ ವಿಮುಕ್ತರಾದವರಾಗಿ ನಾವು ಈಗ ಪವಿತ್ರಾತ್ಮ ಪ್ರೇರಿತವಾದ ಹೊಸ ರೀತಿಯಲ್ಲಿ ಆತನನ್ನು ಸೇವಿಸಲು ಸ್ವತಂತ್ರರಾಗಿದ್ದೇವೆ. ಪ್ರಾರಂಭದಲ್ಲಿ ನಾವು ಲಿಖಿತ ನಿಯಮಕ್ಕೆ ಅಂದರೆ ಧರ್ಮಶಾಸ್ತ್ರಕ್ಕೆ – ಒಳ ಪಟ್ಟಿದ್ದೇವು . ಈಗ ನಾವು ಪವಿತ್ರಾತ್ಮನ ಸ್ವಾತಂತ್ರ್ಯದ ಅಡಿಯಲಿ ಜೀವಿಸುತ್ತೇವೆ. ಈಗ ನಾವು ದೇವರಿಗೆ ವಿಧೇಯರಾಗುವಾಗ ನಿರ್ಬಂಧದಿಂದ ಅಲ್ಲ, ಆದರೆ ಮುಕ್ತವಾಗಿಯೂ, ಮನಪೂರ್ವಕವಾಗಿ ಹೃದಯಂತರಾಳದಿಂದ ವಿಧೇಯರಾಗುತ್ತೇವೆ (ಯೆರೆ 31:33, 2 ಕೊರಿಂಥ 3:6, ಇಬ್ರಿಯ 8:10 ನೋಡಿರಿ).

## ಪಾಪ ಮತ್ತು ಧರ್ಮಶಾಸ್ತ್ರ (7:7-13)

7 ಮಾನವ ತಂದೆಯು ತನ್ನ ಮಕ್ಕಳಿಗೆ ಯಾವದು ಸರಿ ಮತ್ತು ಯಾವದು ತಪ್ಪು ಎಂದು ಹೇಳುವ ಪ್ರಕಾರವೇ ಧರ್ಮಶಾಸ್ತ್ರವು ಮಾನವರಿಗೆ ಸರಿ ಹಾಗು ತಪ್ಪುಗಳಾವೆಂಬದನ್ನು ತಿಳಿಸುತ್ತದೆ. ಧರ್ಮಶಾಸ್ತ್ರವಿಲ್ಲದೆಯೇ ಮನುಷ್ಯರು ಸರಿಮತ್ತು ತಪ್ಪು ಹಾಗು ದೇವರ ವಿಷಯವಾಗಿ ಸ್ವಲ್ಪ ಮಟ್ಟಿಗೆ ತಿಳುವಳಿಕೆಯನ್ನು ಹೊಂದಿರುತ್ತಾರೆ (ರೋಮ 1:19-20 ಮತ್ತು ವ್ಯಾಖ್ಯಾನ ನೋಡಿರಿ).. ಆದರೆ ನಮಗೆ ಪಾಪದ ಕುರಿತಾಗಿ ಬಹುಪಾಲು ತಿಳುವಳಿಕೆಯು ಧರ್ಮಶಾಸ್ತ್ರದಿಂದ ಬರುವದಾಗಿದೆ.

ಉದಾಹರಣೆಗೆ, ದಶಾಜ್ಞೆಗಳಲ್ಲಿ ಕೊನೆಯ ಆಜ್ಞೆಯಾವುದೆಂದರೆ; ನೀನು ಮತ್ತೊಬ್ಬನದೇನನ್ನೂ ಆಶಿಸಬಾರದು (ವಿಮೋಚನಕಾಂಡ 20:17). ಒಂದು ವೇಳೆ ಈ ಅಜ್ಞೆಯು ಎಂದಿಗೂ ಬರೆಯಲ್ಪಡದೇ ಇದ್ದಿದ್ದರೆ ದುರಾಶೆಯು ಒಂದು ಪಾಪ ಎಂಬುದು ಯಾರಿಗೂ ತಿಳಿದಿರುತ್ತಿದ್ದಿಲ್ಲ.

8 ಪೌಲನು ಪ್ರಥಮ ಬಾರಿಗೆ "ಮತ್ತೊಬ್ಬನದನ್ನು ಆಶಿಸಬಾರದು" ಎಂಬ ಆಜ್ಞೆಯ ಬಗ್ಗೆ ಕೇಳಿದಾಗ ಅವನಲ್ಲಿ ಸಕಲ ವಿಧವಾದ ದುರಾಶೆಗಳು ಹುಟ್ಟಿದವು . ಆ ಸಮಯದಲ್ಲಿ ಪೌಲನು ಇನ್ನು ಯೇಸುವನ್ನು ನಂಬಿರಲಿಲ್ಲ.
ಪೌಲನ ಅನುಭವವು ಸಹ ಏದೇನ್ ತೋಟದಲ್ಲಿ ಮೊದಲ ಸ್ತ್ರೀಪುರುಷರಾದ ಆದಾಮ ಹವ್ವಳರು ಹೊಂದಿದ ಅನುಭವದಂತಿತ್ತು (ಆದಿಕಾಂಡ 3:1-6). ಅವರಿಗೆ ತಿನ್ನಲು ಎಲ್ಲಾ ವಿಧದ ಹಣ್ಣುಗಲು ದೊರೆಯುತ್ತಿದ್ದವು, ಆದರೆ ಒಂದೇ ಒಂದು ಮರದ

ಹಣ್ಣನ್ನು ಮಾತ್ರ ತಿನ್ನ ಬಾರದಾಗಿತ್ತು. ಆದಾಗ್ಯು ಅವರ ದುರಾಶೆಯ ಇಚ್ಛೆಯ ಮೂಲಕವಾಗಿ ಅವರು ಅದೇ ಹಣ್ಣಿನೆಡೆಗೇ ಸೆಳೆಯಲ್ಪಟ್ಟರು. ಎಲ್ಲಾ ಹಣ್ಣುಗಳಲ್ಲಿಯೂ ಅವರು ತಾವು ತಿನ್ನ ಬಾರದೆಂದು ನಿಷೇಧಿಸಲ್ಪಟ್ಟಿದ್ದ ಹಣ್ಣನ್ನೇ ಹೆಚ್ಚು ಆಶಿಸಿದರು.

ಆದುದರಿಂದ, ಆದಾಮ ಹವ್ವಳರಂತೆಯೇ ಪಾಪವು ಆಜ್ಞೆಯಿಂದ (ಧರ್ಮಶಾಸ್ತ್ರದಿಂದ) ಅನುಕೂಲ ಹೊಂದಿ ತನ್ನಲ್ಲಿ ದುರಾಶೆಗಳನ್ನು ಹುಟ್ಟಿಸಿತು ಎಂದು ಪೌಲನು ಹೇಳುತ್ತಾನೆ. ಬೇರೆ ಮಾತುಗಳಲ್ಲಿ, ನಾವು ಧರ್ಮಶಾಸ್ತ್ರದಿಂದ ಪಾಪಕ್ಕೆ ಜೀವ ಬಂತು ಎಂದು ಹೇಳಬಹುದು (ವಚನ 9).

9 ಪೌಲನು ತನ್ನ ಬಾಲ್ಯದ ಬಗ್ಗೆ ಮಾತಾಡುತ್ತಾ ಹೇಳುವದೇನೆಂದರೆ; ಮೊದಲು ನಾನು ಧರ್ಮಶಾಸ್ತ್ರ ವಿಲ್ಲದವನಾಗಿದ್ದು ಜೀವದಿಂದೆದ್ದೇನು. ಪೌಲನು ಬೆಳೆದು ದೊಡ್ಡವನಾದಾಗ ಆತನು ಧರ್ಮಶಾಸ್ತ್ರದ ತಿಳುವಳಿಕೆಯನ್ನು ಹೊಂದಿದನು, ಬಳಿಕ ಆತನು ತನ್ನ ಜೀವಿತದಲ್ಲಿ ಪಾಪವನ್ನು ಅನುಭವಿಸಲು ಪ್ರಾರಂಭಿಸಿದನು. ಆತನ ಬಾಲ್ಯದ ಆನಂದಕರ ಮತ್ತು ಚಿಂತಾರಹಿತ ಜೀವನವು ಅಂತ್ಯವಾಯಿತು. ತನ್ನ ಪಾಪಮಯದ ಅರಿವು ಅವನಿಗುಂಟಾಯಿತು, ಬೇರೆಮಾತುಗಳಲ್ಲಿ ಹೇಳುವದಾದರೆ ಪಾಪಕ್ಕೆ ಜೀವ ಬಂತು. ಪೌಲನ ಮನಸ್ಸಾಕ್ಷಿಯು ಅವನನ್ನು ಪೀಡಿಸಲಾರಂಬಿಸಿತು.

10 ಧರ್ಮಶಾಸ್ತ್ರವು ಮನುಷ್ಯರ ಮಾರ್ಗಕ್ಕೆ ಬೆಳಕಾಗಿರುವ ದೀಪದಂತಿತ್ತು (ಕೀರ್ತನೆಗಳು 119:105). ಧರ್ಮಶಾಸ್ತ್ರವು ಮನುಷ್ಯರನ್ನು ನೀತಿಗೆ ನಡೆಸಿ ಅದರ ಮೂಲಕ ನಿತ್ಯಜೀವವನ್ನುಂಟು ಮಾಡುವದಕ್ಕಾಗಿತ್ತು (ಯಾಜಕಕಾಂಡ 18:5, ರೋಮ 10:5). ಆದರೆ ಅದಕ್ಕೆ ಬದಲಾಗಿ ಧರ್ಮಶಾಸ್ತ್ರವು ಮನುಷ್ಯರಿಗೆ ಮರಣದಂಡನೆಯನ್ನುಂಟು ಮಾಡುವದಾಗಿತ್ತು, ಯಾಕೆಂದರೆ ಯಾವನಿಗೂ ಧರ್ಮಶಾಸ್ತ್ರದ ಪ್ರತಿಯೊಂದು ಭಾಗಕ್ಕೂ ಸಂಪೂರ್ಣವಾಗಿ ವಿಧೇಯವಾಗುವದು ಅಸಾಧ್ಯವಾಗಿದೆ. ಧರ್ಮಶಾಸ್ತ್ರವು ಪಾಪವನ್ನು ಕ್ಷಮಿಸುವದಿಲ್ಲ, ಧರ್ಮಶಾಸ್ತ್ರವು ಮನುಷ್ಯರಿಗೆ ಪಾಪವನ್ನು ಜಯಿಸಲು ಬಲವನ್ನು ನೀಡುವದಿಲ್ಲ, ಆದುದರಿಂದ, ದರ್ಮಶಾಸ್ತ್ರದ ಮೂಲಕ ದಂಡನೆ ಮತ್ತು ಮರಣ ಮಾತ್ರವೇ ಉಂಟಾಗುತ್ತದೆ.

ಪೌಲನು ಇಲ್ಲಿ ಯೆಹೂದ್ಯ ಧರ್ಮಶಾಸ್ತ್ರದ ಕುರಿತಾಗಿ ಮಾತಾಡುತ್ತಿದ್ದನಾದಾಗ್ಯು ಆತನು ಹೇಳುವದು ಇತರ ಎಲ್ಲಾ ಧರ್ಮಗಳ ಧರ್ಮಶಾಸ್ತ್ರದ ವಿಷಯದಲ್ಲಿಯೂ ಅದು ಅಷ್ಟೇ ಸತ್ಯ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಎಲ್ಲಾ ಧರ್ಮಗಳ ಧರ್ಮಶಾದ ಫಲಿತವು ದಂಡನೆ ಮತ್ತು ಮರಣವೇ ಆಗಿದೆ. ಕ್ರೈಸ್ತರನ್ನು ಹೊರತು ಪಡಿಸಿ ಇತರ ಎಲ್ಲಾ ಧರ್ಮದವರೂ ವಿವಿದ ಧಾರ್ಮಿಕ ಧರ್ಮಶಾಸ್ತ್ರಗಳನ್ನು ಪಾಲಿಸುವದರ ಮೂಲಕ ಪರಲೋಕಕ್ಕೆ ಸೇರಲು ಪ್ರಯತ್ನಿಸುತ್ತಾರೆ. ಪ್ರತಿಯೊಂದು ಧರ್ಮವೂ ತನ್ನದೇ ಆದ ನೇಮಗಳನ್ನೂ ಆಜ್ಞೆಗಳನ್ನೂ ಹೊಂದಿದೆ, ಆದರೆ ಇವುಗಳಲ್ಲಿ ಯಾವದೂ ಸಹ ಒಬ್ಬನನ್ನು ದೇವರ ದೃಷ್ಟಿಯಲ್ಲಿ ನೀತಿವಂತನನ್ನಾಗಿ ಮಾಡುವದಿಲ್ಲ. ಈ ವಿಷಯದಲ್ಲಿ ಇತರ ಧರ್ಮಗಳ ಧರ್ಮಶಾಸ್ತ್ರಗಳು ಯೆಹೂದ್ಯ ಧರ್ಮಶಾಸ್ತ್ರದಂತೆಯೇ ಇರುತ್ತವೆ. ಮನುಷ್ಯರು ತಮ್ಮ ಸ್ವಪ್ರಯತ್ನದಿಂದ ಈ ನೇಮಗಳಿಗೆ ವಿಧೇಯರಾಗಲು ಪ್ರಯತ್ನಿಸುತ್ತಾರೆ ಆದರೆ ಕೊನೆಯಲ್ಲಿ ಇವುಗಳು ಕೇವಲ ನಿರಾಶೆ, ದಂಡನೆ ಮತ್ತು ಮರಣಕ್ಕೆ ಮಾತ್ರವೇ ನಡಿಸುತ್ತವೆ. ದೇವರ ಕೃಪೆಯ ಮೂಲಕ ಕ್ರಿಸ್ತನಲ್ಲಿ ನಂಬಿಕೆಯಿಡುವದರಿಂದ ಮಾತ್ರವೇ ಮಾನವನು ದೇವರ ದೃಷ್ಟಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಟ್ಟು ರಕ್ಷಣೆಯನ್ನು ಪಡೆದುಕೊಳ್ಳಲು ಸಾಧ್ಯವಿರುತ್ತದೆ.

11 ಪೌಲನು ಈ ವಚನದಲ್ಲಿ ಸಂಬಂಧಿಸುವ ಅನುಭವವು ಆದಿಕಾಂಡ 3:1-6 ರಲ್ಲಿ ವಿವರಿಸಲಾಗಿರುವ ಆದಾಮ ಹವ್ವಳರ ಅನುಭವದಂತೆಯೇ ಇರುತ್ತದೆ. ಹವ್ವಳು ಸರ್ಪದಿಂದ (ಪಾಪದಿಂದ) ವಂಚಿಸಲ್ಪಟ್ಟಳು. ಸರ್ಪವು ಹವ್ವಳಿಗೆ ಹೇಳಿದ್ದೇನೆಂದರೆ: "ನೀನು ನಿಷೇಧಿಸಲ್ಪಟ್ಟ ಹಣ್ಣನ್ನು ತಿಂದರೂ ಸಾಯುವದಿಲ್ಲ (ಆದಿಕಾಂಡ 3:4). ಬದಲಾಗಿ ನೀನು ದೇವರಂತೆ ಆಗಿ ಒಳ್ಳೇದರ ಕೆಟ್ಟದರ ಭೇದವನ್ನು ಅರಿತವಳಾಗುವಿ" (ಆದಿಕಾಂಡ 3:5).

12 ಆದರೆ ನಮ್ಮ ಪಾಪಕ್ಕಾಗಿ ನಾವು ಧರ್ಮಶಾಸ್ತ್ರ, ಆಜ್ಞೆಯನ್ನು ದೂರದಿರೋಣ. ಧರ್ಮಶಾಸ್ತ್ರವು ದೇವರಿಂದ ಕೊಡಲ್ಪಟ್ಟಿತು, ಅದು ಪರಿಶುದ್ಧವೂ ನ್ಯಾಯವೂ ಹಿತವೂ ಆಗಿರುವಂಥದು. ಬದಲಾಗಿ ನಾವು "ಸರ್ಪ" – ಅಂದರೆ, ನಮ್ಮ ಹೃದಯದಲ್ಲಿನ ಪಾಪವನ್ನು ದೂರಬೇಕು. ಧರ್ಮಶಾಸ್ತ್ರವು ಪಾಪಕ್ಕೆ ಒಂದು ಅವಕಾಶವನ್ನು ನೀಡುತ್ತದೆ, ಆದರೆ ಪಾಪವೇ (ಧರ್ಮಶಾಸ್ತ್ರವಲ್ಲ) ಕೆಟ್ಟ ಕಾರ್ಯವನ್ನು ಮಾಡುತ್ತದೆ. ನಮ್ಮ ಸ್ವಹೃದಯಗಳಲ್ಲಿನ ಕೆಟ್ಟದ್ದಕ್ಕಾಗಿ ನಾವು ಎಂದಿಗೂ ದೇವರನ್ನು ದೂರಬಾರದು (ಯಾಕೋಬ 1:13-15).

13 ಹಿತವಾದ ಧರ್ಮಶಾಸ್ತ್ರವು ಮರಣವನ್ನು ಬಳಕೆಗೆ ತರಲಿಲ್ಲ. ಪಾಪವೇ ಮರಣವನ್ನುಂಟು ಮಾಡುತ್ತದೆ, ಯಾಕೆಂದರೆ ಪಾಪವು ಮನುಷ್ಯನನ್ನು ಅನೀತಿವಂತನನ್ನಾಗಿ ಮಾಡುತ್ತದೆ ಮತ್ತು ಈ ಕಾರಣದಿಂದ ಮರಣದಂಡನೆಗೆ ಗುರಿಯಾಗುತ್ತಾನೆ. ಪಾಪವು ನಮಗೆ ಮರಣದಂಡನೆಯನ್ನು ತಂದಿರುವಾಗ ನಾವು ಅದನ್ನು ಇನ್ನು ಸುಲಭವಾಗಿ ಗುರುತಿಸಬಹುದು! ಪ್ರಾರಂಭದಲ್ಲಿ ಹವ್ವಳು ಸರ್ಪದ ವಂಚನೆಯನ್ನು ಗುರುತಿಸಲಾಗಲಿಲ್ಲ. ಆದರೆ ಅವಳು ನಿಷೇಧಿಸಲ್ಪಟ್ಟ ಹಣ್ಣನ್ನು ತಿಂದ ನಂತರಷ್ಟೆ ಅವಳು ತನ್ನ ಪಾಪವನ್ನು ಕಾಣಲು ಶಕ್ತಳಾದಳು. ಧರ್ಮಶಾಸ್ತ್ರಯಿಲ್ಲದಿರುವಲ್ಲಿ ಪಾಪವು ಅಷ್ಟಾಗಿ ಪಾಪಸ್ವರೂಪವಾಗಿ ತೋರುವದಿಲ್ಲ (ರೋಮ 5:13, 20 ನೋಡಿರಿ). ಆದರೆ ಆಜ್ಞೆಯ ಮೂಲಕ (ಧರ್ಮಶಾಸ್ತ್ರದ ಮೂಲಕ) ಪಾಪವು ಕೇವಲ ಪಾಪಸ್ವರೂಪವಾಗಿ ಕಾಣುತ್ತದೆ. ಅಂದರೆ, ದೇವರ ಪರಿಶುದ್ಧ ಧರ್ಮಶಾಸ್ತ್ರಕ್ಕೆ ಹೋಲಿಸಿದಾಗ ಪಾಪವು ಇನ್ನು ಹೆಚ್ಚು ಪಾಪಸ್ವರೂಪವಾಗಿ ತೋರುತ್ತದೆ.

## ಪಾಪದೊಂದಿಗೆ ಪೌಲನ ಅಂತರ್ಯದ ಹೋರಾಟ (7:14-15)

14 ಪೌಲನು 14ನೇ ವಚನದಿಂದ ಈ ಅಧ್ಯಾಯದ ಅಂತ್ಯದವರೆಗೂ ತನ್ನ ಸ್ವಂತ ಅನುಭವವನ್ನು ಕುರಿತು ಮಾತಾಡುವದನ್ನು ಮುಂದುವರೆಸುತ್ತಾನೆ. ಪೌಲನು ಉತ್ತಮ ಯೆಹೂದ್ಯನೂ, ದೇವರನ್ನು ಮೆಚ್ಚಿಸುವವನೂ, ನೀತಿವಂತನೂ

ಆಗಿರುವದಕ್ಕೆ ಬಯಸಿದ್ದನು, ಆದರೆ ಆತನಿಗೆ ಸಾಧ್ಯವಾಗಲಿಲ್ಲ. ಮತ್ತು ಯಾವದಾದರೂ ಧಾರ್ಮಿಕ ಧರ್ಮಶಾಸ್ತ್ರವನ್ನು ಅನುಸರಿಸುವದರ ಮೂಲಕ ಅಥವಾ ಒಳ್ಳೇ ಕಾರ್ಯಗಳನ್ನು ಮಾಡುವದರ ಮೂಲಕ ತಮ್ಮ ಸ್ವಪ್ರಯತ್ನದಿಂದ ನೀತಿವಂತರಾಗಲು ಯತ್ನಿಸುವ ಎಲ್ಲಾ ಮನುಷ್ಯರ ಅನುಭವವು ಸಹ ಪೌಲನ ಅನುಭವದಂತೆಯೇ ಆಗಿರುತ್ತದೆ : ಇದು ಸಾಧ್ಯವಿಲ್ಲ.

ನಾವು 7ನೇ ಅಧ್ಯಾಯದ ಈ ಭಾಗವನ್ನು ಓದುವಾಗ ಒಂದು ಪ್ರಶ್ನೆಯು ಉದ್ಭವಿಸುತ್ತದೆ; ಪೌಲನು ಇಲ್ಲಿ ಮಾತಾಡುತ್ತಿರುವದು ತಾನು ಕ್ರೈಸ್ತನಾಗುವದಕ್ಕೆ ಮುಂಚಿನ ಅನುಭವವನ್ನು ಕುರಿತಾಗಿಯೋ ಅಥವಾ ನಂತರದ ಅನುಭವವನ್ನು ಕುರತಾಗಿಯೋ? ಈ ಪ್ರಶ್ನೆಗೆ ಖಚಿತವಾಗಿ ಉತ್ತರಿಸಲು ಸಾಧ್ಯವಿಲ್ಲ, ಕೆಲವು ಬೈಬಲ್ ಪಂಡಿತರು ಒಂದು ಸಂಗತಿಯನ್ನು ಹೇಳುತ್ತಾರೆ, ಇನ್ನು ಕೆಲವರು ಮತ್ತೊಂದು ಸಂಗತಿಯನ್ನು ಹೇಳುತ್ತಾರೆ.

ಹೇಗಿದ್ದರೂ, ನಾವು ಎರಡು ಸಂಗತಿಗಳನ್ನು ಹೇಳಬಹುದು. ಮೊದಲನೆಯದಾಗಿ, ಕ್ರೈಸ್ತರಲ್ಲದ ಅನೇಕ ಜನರು ಪ್ರಾಮಾಣಿಕವಾಗಿ ದೇವರನ್ನು ಹುಡುಕುತ್ತಾರೆ ಮತ್ತು ಆತನನ್ನು ಮೆಚ್ಚಿಸಲು ಪ್ರಯತ್ನಿಸುತ್ತಾರೆ. ಅವರು ತಮ್ಮ ಪಾಪಗಳನ್ನು ಸಹ ಒಪ್ಪಿಕೊಳ್ಳುತ್ತಾರೆ ಮತ್ತು ಪಾಪ ಮಾಡುವದನ್ನು ನಿಲ್ಲಿಸಲು (ತಮ್ಮ ಸ್ವಬಲದಿಂದ) ಪ್ರಯತ್ನಿಸುತ್ತಾರೆ. ಪೌಲನ ಕಾಲದಲ್ಲಿ ಖಂಡಿತವಾಗಿಯೂ ಅನೇಕ ಯೆಹೂದ್ಯರು ಅದೇ ರೀತಿಯಲ್ಲಿದ್ದರು. ಆದುದರಿಂದ, ಪೌಲನು ಬರೆಯುವ ಸಂಗತಿಯು ಬಹುಶ; ಆತನು ಕ್ರೈಸ್ತನಾಗುವದಕ್ಕೆ ಮುಂಚೆ ಹೊಂದಿದ ಅನುಭವವನ್ನು ವಿವರಿಸಬಹುದಾಗಿದೆ[35].

ಎರಡನೆಯದಾಗಿ ನಾವು ಹೇಳಬಹುದೇನೆಂದರೆ ಎಲ್ಲಾ ಕ್ರೈಸ್ತರೂ ಪೌಲನು ಈ ಭಾಗದಲ್ಲಿ ಬಣ್ಣಿಸುವ ಅನುಭವವನ್ನೇ ಹೊಂದುತ್ತಾರೆ. ಕ್ರೈಸ್ತರಾದ ಮೇಲೆಯೂ ಸಹ ನಾವು ನಮ್ಮ "ನೂತನ ಸ್ವಭಾವ" ಮತ್ತು "ಪೂರ್ವ ಸ್ವಭಾವಗಳ" ನಡುವೆಯೂ, ನಮ್ಮ ಆತ್ಮ (ಅಥವಾ ಆತ್ಮೀಕ ಸ್ವಭಾವ) ಮತ್ತು ನಮ್ಮ "ಶರೀರ" (ಅಥವಾ ಪಾಪಾಧೀನ ಸ್ವಭಾವ)ಗಳ ನಡುವೆ ಹೋರಾಟವನ್ನು ಅನುಭವಿಸುತ್ತೇವೆ. ವಾಸ್ತವದಲ್ಲಿ ನಾವು ಕ್ರೈಸ್ತರಾದ ಮೇಲೆಯೇ ಸಾಮಾನ್ಯವಾಗಿ ಈ ಹೋರಾಟವು ಹೆಚ್ಚಾಗುತ್ತದೆ. ನಾವು ಕ್ರಿಸ್ತನನ್ನು ನಂಬಿದವರಾಗಿದ್ದಾಗ್ಯು, ನಮ್ಮ "ಪೂರ್ವ ಸ್ವಭಾವವು ಶಿಲುಬೆಗೆ ಹಾಕಲ್ಪಟ್ಟಿದ್ದರೂ" (ರೋಮ 6:6), ನಮ್ಮ ಪೂರ್ವಸ್ವಭಾವವು ಈಗಲೂ ಪೂರ್ಣವಾಗಿ ಸತ್ತಿಲ್ಲವೆಂಬಂತೆ ತೋರುತ್ತದೆ. ಆಗಾಗ ನಾವು ಪಾಪ ಮಾಡುವವರಾಗಿದ್ದೇವೆ (1 ಯೋಹಾನ 1:8). ಆದುದರಿಂದ, ಪೌಲನು ಇಲ್ಲಿ ಕ್ರೈಸ್ತನಾದ ನಂತರದ ತನ್ನ ಅನುಭವದ ಬಗ್ಗೆ ಮಾತಾಡುತ್ತಿದ್ದಾನೆ ಎಂದು ಕೆಲವು ಬೈಬಲ್ ಪಂಡಿತರು ಅಭಿಪ್ರಾಯ ಪಡುತ್ತಾರೆ.[36] ಪೌಲನು ಇಲ್ಲಿ ತಾನು ಕ್ರೈಸ್ತನಾಗುವದಕ್ಕೆ ಮುಂಚೆ ಹೊಂದಿದ ಅನುಭವದ ಬಗ್ಗೆ ಮಾತಾಡುತ್ತಾನೆಂದು ನಂಬುತ್ತೇವೋ ಅಥವಾ ನಂತರದ ಅನುಭವದ ಬಗ್ಗೆ ಮಾತಾಡುತ್ತಾನೆಂದು ನಂಬುತ್ತೇವೋ, ಒಟ್ಟಿನಲ್ಲಿ ನಾವೆಲ್ಲರೂ ಸಹ ಈ ಸಂಗತಿಗಳನ್ನು ಒಂದಿಲ್ಲಾ ಒಂದು ಸಮಯದಲ್ಲಿ ಅನುಭವಿಸಿದ್ದೇವೆ, ಅದು ಕ್ರೈಸ್ತರಾಗುವದಕ್ಕೆ ಮುಂಚೆ ಆಗಿರಬಹುದು ಇಲ್ಲವೆ ಅನಂತರದಲ್ಲಿಯೇ ಆಗಿರಬಹುದು ಬಹುಶ: ನಮ್ಮಲ್ಲಿ ಬಹು ಮಂದಿ ಕ್ರೈಸ್ತರಾಗುವದಕ್ಕೆ ಮುಂಚೆಯೂ ಕ್ರೈಸ್ತರಾದ ಮೇಲೆಯೂ ಈ ಅಂತರೀಕ ಹೋರಾಟವನ್ನು, ಅನುಭವಿಸಿದ್ದೇವೆ.

14ನೇ ವಚನದಲ್ಲಿ ಪೌಲನು ಬರೆಯುವದೇನೆಂದರೆ: ನಾನು ಪಾರಮಾರ್ಥಿಕವಾದವನಲ್ಲ [37]. ಇಲ್ಲಿ ಪೌಲನು ತನ್ನ ಪಾಪಧೀನ ಸ್ವಭಾವದ ಹತೋಟಿಯಲ್ಲಿರುವ ತನ್ನ "ಪೂರ್ವ ಸ್ವಭಾವದ" ಬಗ್ಗೆ ಮಾತಾಡುತ್ತಿದ್ದಾನೆ. "ಪಾರಮಾರ್ಥಿಕವಲ್ಲದವನಾಗಿ" ಇರುವದೆಂದರೆ ಶರೀರಧೀನಮ ಸ್ವಭಾವವನ್ನು ಹೊಂದಿರುವದು ಎಂದು ಅರ್ಥವಾಗಿದೆ (ವಚನ 5). ಮಾನವರೆಲ್ಲರೂ ಜನ್ಮದಿಂದಲೂ "ಪಾಕೃತ" ಸ್ವಭಾವದವರಾಗಿರುತ್ತಾರೆ. ಅಂದರೆ ಅವರು ಆತ್ಮನ ಹತೋಟಿಯಲ್ಲಿ ಇರುವದಿಲ್ಲ! ಬದಲಾಗಿ ಅವರ ಪಾಪಕ್ಕೆ ದಾಸರಾಗಿರುತ್ತಾರೆ. ನಾವು ಕ್ರಿಸ್ತನನ್ನು ನಂಬುವಾಗ ನಾವು ಇನ್ನೂ ಪಾಪದ ವಿಶದಲ್ಲಿರದಂತೆ ಶಿಲುಬೆಗೆ ಹಾಕಲ್ಪಡುತ್ತದೆ (ರೋಮ 6:6).

ಪೌಲನು ಬರೆಯುವದೇನೆಂದರೆ; ನಾನು ಪಾಪದ ಸ್ವಾಧೀನದಲ್ಲಿ ರುವದಕ್ಕೆ ಮಾರಲ್ಪಟ್ಟಿದ್ದೇನೆ. ಪೌಲನ ಕಾಲದಲ್ಲಿ ದಾಸರನ್ನು ಪ್ರಾಣಿಗಳಂತೆ ಮಾರಲಾಗುತ್ತಿತ್ತು ಮತ್ತು ಕೊಂಡುಕೊಳ್ಳಲಾಗುತ್ತಿತ್ತು. ಅವರು ತಮ್ಮನ್ನು ಕೊಂಡುಕೊಂಡವರ ಸ್ವತ್ತಾಗಿರುತ್ತಿದ್ದರು. ಪೌಲನ ಜೀವಿತವು ಒಡೆಯನೊಬ್ಬನಿಗೆ ಮಾರಲ್ಪಟ್ಟ ದಾಸನಂತಿತ್ತು. ಪಾಪವೇ ಆ ಒಡೆಯನಾಗಿತ್ತು.

**15** ಪೌಲನು ಈ ವಚನದಲ್ಲಿ ಬರೆಯುವದನ್ನು ನಾವೆಲ್ಲರೂ ಅನುಭವಿಸಿದ್ದೇವೆ. ಒಳ್ಳೇದೇನೆಂದನ್ನು ನಾವು ಬಲ್ಲೆವು ಮತ್ತು ಅದನ್ನೇ ಮಾಡಲಿಚ್ಚಿಸುತ್ತೇವೆ. ಆದರೆ ಪಾಪವು ಬಂದಾಗ ನಾವು ಒಳ್ಳೇದರ ಬದಲಾಗಿ ಕೆಟ್ಟದನ್ನು ಮಾಡುತ್ತೇವೆ. ಆದಾದಮೇಲೆ ನಾವು ನಮ್ಮಲ್ಲಿಯೇ ಅಸಮಾಧಾನ ಗೊಳ್ಳುತ್ತೇವೆ. ನಾವು ನಮ್ಮ ಸ್ವಂತ ನಡವಿಕೆಯನ್ನು ಅರ್ಥ ಮಾಡಿಕೊಳ್ಳುವದಿಲ್ಲ. ನಮ್ಮ ಮನಸ್ಸುಗಳಲ್ಲಿ ಪಾಪಾಧೀನ ಸ್ವಭಾವ ಮತ್ತು ಆತ್ಮದ ನಡುವೆ ಹೋರಾಟವೊಂದು ನಡೆಯುತ್ತಿರುತ್ತದೆ (ಗಲಾತ್ಯ 16-17 ಮತ್ತು ವ್ಯಾಖ್ಯಾನ ನೋಡಿರಿ).

**16** ಪೌಲನು ತಾನು ಮಾಡಬಾರದೆಂದು ಇಚ್ಚಿಸುವದನ್ನೇ (ಅಂದರೆ ಕೆಟ್ಟದ್ದನ್ನು) ಮಾಡಿದರೂ ಈಗಲೂ ಅವನ ಅಂತರ್ಯದಲ್ಲಿ ಧರ್ಮಶಾಸ್ತ್ರವು ಉತ್ತಮವಾದದ್ದು ಎಂದು ಒಪ್ಪಿಕೊಳ್ಳುತ್ತಾನೆ.

**17** ನನ್ನಲ್ಲಿ ನೆಲೆಗೊಂಡಿರುವ ಪಾಪ ಎಂದು ಪೌಲನು ಇಲ್ಲಿ ಹೇಳುವದು ಆತನ ಪಾಪಾಧೀನ ಸ್ವಭಾವದಿಂದ ಉದ್ಭವಿಸುವ ಪಾಪದ ಪ್ರಚೋದನೆಯಾಗಿದೆ. ಪೌಲನು ಪಾಪ ಮಾಡುವಾಗ ಆತನ ಆತ್ಮೀಕ ಸ್ವಭಾವವು ಅದನ್ನು ಮಾಡುತ್ತಿಲ್ಲ., ಪಾಪವನ್ನು ಮಾಡುವದು ಆತನ ಶಾರೀರಿಕ ಸ್ವಭಾವವೇ ಆಗಿದೆ. ಅದು ಪಾಪಾಧೀನ ಸ್ವಭಾವದ ಹತೋಟಿಯಲ್ಲಿರುತ್ತದೆ. ಪೌಲನ ದೇಹದ ಒಳಗೆ ಇಬ್ಬರು ವ್ಯಕ್ತಿಗಳು – ಎರಡು ನಿಯಮಗಳು – ಪರಸ್ಪರ ಹೋರಾಡುವಂತೆ ತೋರುತ್ತಿತ್ತು.

**18** ನಮ್ಮಲ್ಲಿ ಅಂದರೆ ಪಾಪಾಧೀನ ಸ್ವಭಾವದಲ್ಲಿ – ಸ್ವಾಭಾವಿಕವಾಗಿಯೇ ಯಾವ ಒಳ್ಳೇತನ ಇರುವದಿಲ್ಲ (ರೋಮ 3:10-12 ನೋಡಿರಿ). ಒಳ್ಳೇದನ್ನು ಮಾಡಬೇಕೆಂಬ ಇಚ್ಚೆಯು ಪೌಲನ ಅಂತರಾತ್ಮದೊಳಗೆ ಇತ್ತು (ವಚನ 22), ಆದರೆ

ಪೌಲನ ಒಳ್ಳೇ ಇಚ್ಛೆಯನ್ನು ನೆರವೇರಿಸದಂತೆ ಆತನ ಪಾಪಾಧೀನ ಸ್ವಭಾವವು ಅಡ್ಡಿಮಾಡುತ್ತಿತ್ತು. ಪೌಲನ "ಅಂತರಾತ್ಮವು" ಅವನ ಪಾಪಾಧೀನ ಸ್ವಭಾವವನ್ನು ಜಯಿಸಲು ಬಲವನ್ನು ಹೊಂದಿರುವದಿಲ್ಲ. ಪೌಲನ ದೇಹವು (ಕಣ್ಣುಗಳು, ಕೈಗಳು, ಕಾಲುಗಳು, ಮುಂತಾದವು) ಆತನ ಪಾಪಾಧೀನ ಸ್ವಭಾವಕ್ಕೆ ವಿಧೇಯವಾಗುತ್ತವೆ ಹೊರತು ಆತನ ಅಂತರಾತ್ಮಕ್ಕೆ ವಿಧೇಯವಾಗುವದಿಲ್ಲ.

19 ಇಲ್ಲಿ ಪೌಲನು ತಾನು 15ನೇ ವಚನದಲ್ಲಿ ಬರೆದ ವಿಷಯವನ್ನೇ ಪುನರಾವರ್ತಿಸುತ್ತಾನೆ.

20 ಇಲ್ಲಿ ಪೌಲನು ಪುನಃ ತಾನು 17ನೇ ವಚನದಲ್ಲಿ ಬರೆದದ್ದನ್ನೇ ಹೇಳುತ್ತಾನೆ. ಅದನ್ನು (ಪಾಪ) ಮಾಡಿದವನು ಇನ್ನು ನಾನಲ್ಲ (ನನ್ನ ಅಂತರಾತ್ಮ). ಆದರೆ ನನ್ನಲ್ಲಿ ನೆಲೆಗೊಂಡಿರುವ ಪಾಪವೇ (ನನ್ನ ಪಾಪಾಧೀನ ಸ್ವಭಾವವು) ಅದನ್ನು ಮಾಡಿತು.

21 ಹೀಗಿರಲಾಗಿ.... ಈ ನಿಯಮವು ನನಗೆ ಕಾಣಬರುತ್ತದೆ. ಯಾವ ನಿಯಮ? ಆ ನಿಯಮ ಯಾವದೆಂದರೆ ಪೌಲನಲ್ಲಿರುವ ಒಳ್ಳೇದು ಮತ್ತು ಕೆಟ್ಟದ್ದರ ನಡುವಿನ ಹೋರಾಟವಾಗಿದೆ. ಈ ಹೋರಾಟವು ಎಲ್ಲರಲ್ಲಿಯೂ ಕಂಡು ಬರುತ್ತದೆ, ಇದು ಜೀವನದ ಸೂತ್ರ ಅಥವಾ "ನಿಯಮ" ದಂತೆ ಇರುತ್ತದೆ.

22 ಅಂತರಾತ್ಮ ಎಂಬುದು ಮಾನವನ ಮನಸಾಕ್ಷಿಯನ್ನೊಳಗೊಂಡ [38] ಮಾನವನ ಆತ್ಮ ಎಂಬ ಅರ್ಥವನ್ನು ಕೊಡುತ್ತದೆ. ನಮ್ಮ ಅಂತರಾತ್ಮದಿಂದಲೇ ನಮ್ಮ ಉನ್ನತ ವಿಚಾರಗಳು ಮತ್ತು ಪ್ರೇರಣೆಗಳು ಬರುತ್ತದೆ. ದೇವರ ದೃಷ್ಟಿಯಲ್ಲಿ ನಮ್ಮ "ಬಾಹ್ಯಜೀವ" ಕ್ಕಿಂತಲೂ – ಹೊರ ತೋರಿಕೆ ಮತ್ತು ನಡವಳಿಕೆ– ನಮ್ಮ "ಅಂತರಾತ್ಮ" ಬಹಳ ಪ್ರಾಮುಖ್ಯವಾಗಿರುತ್ತದೆ (ರೋಮ 2:28-29). ಮನುಷ್ಯನು ಹೊರಗಿನ ತೋರಿಕೆಯನ್ನು ನೋಡುತ್ತಾನೆ. ಆದರೆ ಕರ್ತನಾದರೋ ಹೃದಯವನ್ನು ನೋಡುತ್ತಾನೆ. (1 ಸಮುವೇಲ 16:7).

ಒಂದುವೇಳೆ 14-24 ವಚನಗಳಲ್ಲಿ ಪೌಲನು ಕ್ರೈಸ್ತನಾಗುವದಕ್ಕೆ ಮುಂಚಿನ ಅನುಭವವನ್ನು ಬಣ್ಣಿಸುವದಾದರೆ "ಅಂತರಾತ್ಯ" ಎಂಬ ಪದದ ಅರ್ಥವು "ಮನಸ್ಸಾಕ್ಷಿ" ಎಂದಾಗುತ್ತದೆ, ಮಾನವರೆಲ್ಲರೂ ಮನಸ್ಸಾಕ್ಷಿಯನ್ನು ಹೊಂದಿದ್ದು ಅದರ ಮೂಲಕ ಒಳ್ಳೇದು ಮತ್ತು ಕೆಟ್ಟದರ ವ್ಯತ್ಯಾಸವನ್ನು ಗುರುತಿಸುತ್ತಾರೆ. ಮಾನವರೆಲ್ಲರೂ ತಮ್ಮ ಮನಸ್ಸಾಕ್ಷಿಯ ಮೂಲಕ ತಾವು ಪಾಪಿಗಳೆಂಬುದನ್ನು ಬಲ್ಲರು (ರೋಮ 1:20, 13:5 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಆದರೆ 14-24 ವಚನಗಳು ಒಂದುವೇಳೆ ಪೌಲನು ಕ್ರೈಸ್ತನಾದ ನಂತರದ ಅನುಭವವನ್ನು ಬಣ್ಣಿಸುತ್ತಿರುವದಾದರೆ ಅಂತರಾತ್ಮ ಎಂಬ ಪದವು ಪೌಲನ ನೂತನ ಆತ್ಮಸ್ವಾಧೀನದಲ್ಲಿರುವ ಸ್ವಭಾವ ಎಂಬ ಅರ್ಥವನ್ನು ನೀಡುತ್ತದೆ. ಎರಡೂ ಅರ್ಥಗಳ ಸಾಧ್ಯತೆಯೂ ಇರುತ್ತದೆ.

23 ಪೌಲನು ಈ ವಚನದಲ್ಲಿ "ನಿಯಮ" ಎಂಬ ಪದವನ್ನು ಉಪಯೋಗಿಸುವಾಗ ಅದರ ಅರ್ಥವು "ಸೂತ್ರ" ಎಂಬುದಾಗಿ. ನಮ್ಮ ಮನಸ್ಸಿನಲ್ಲಿರುವ ನಿಯಮ [39] ಎಂಬುದರ ಅರ್ಥವು "ನನ್ನ ಮನಸ್ಸಿನ ನೇಮ " ಎಂದು ಸಹ ಆಗಿರಬಹುದು ಮತ್ತು ಪಾಪದ ನಿಯಮ ಎಂಬುದಕ್ಕೆ "ಪಾಪನೇಮ" ಎಂಬ ಅರ್ಥವು ಸಹ ಆಗಬಹುದು. ನನ್ನ ಅಂಗಗಳಲ್ಲಿ ಬೇರೊಂದು ನಿಯಮ ಉಂಟೆಂದು ನೋಡುತ್ತೇನೆ ಎಂದು ಪೌಲನು ಬರೆಯುತ್ತಾನೆ. ಈ ನಿಯಮವು ವಚನದ ಕೊನೆಯಲ್ಲಿ ಪ್ರಸ್ತಾಪಿಸಲಾಗಿರುವ ಪಾಪದ ನಿಯಮ ಆಗಿದೆ. ಈ "ಪಾಪದ ನಿಯಮ" ವು ಪೌಲನ ಮನಸ್ಸಿನಲ್ಲಿರುವ ನಿಯಮಕ್ಕೆ ವಿರುದ್ಧವಾಗಿ ಕಾದಾಡುತ್ತದೆ. "ಪೌಲನ ಮನಸ್ಸಿನ ನಿಯಮ"ವು ಆತನ ಆತ್ಮ ಅಥವಾ ಅಂತರಾತ್ಮರ ನಿಯಮವಾಗಿದೆ (ವಚನ 22).

ಹೀಗೆ,ನಮ್ಮೊಬ್ಬೊಬ್ಬರಲ್ಲಿಯೂ ಈ ಎರಡು "ನಿಯಮಗಳು" (ಅಥವಾ ಸೂತ್ರಗಳು, ಅಥವಾ ಶಕ್ತಿಗಳು) ಇರುತ್ತವೆ: ಠನಮ್ಮ ಮನಸ್ಸಿನ ನಿಯಮ" (ಅಂದರೆ ನಮ್ಮ ಅಂತರಾತ್ಮದ ನಿಯಮ) ಮತ್ತು "ಪಾಪದ ನಿಯಮ" (ಅಂದರೆ ನಮ್ಮ ಪಾಪಾಧೀನ ಸ್ವಭಾವದ ನಿಯಮ).

ಪಾಪದ ನಿಯಮವು ಪೌಲನ ಅಂಗಗಳಲ್ಲಿ (ಕಣ್ಣುಗಳು, ಕೈಗಳು, ಕಾಲುಗಳು, ಮುಂತಾದವು ಗಳಲ್ಲಿ) ಕಾರ್ಯಮಾಡುತ್ತಾ ಕೆಟ್ಟದ್ದನ್ನು ಮಾಡುವಂತೆ ಅವು ಗಳನ್ನು ನಡಿಸುತ್ತವೆ. ಪಾಪದನಿಯಮವು ಪೌಲನನ್ನು ಪಾಪಕ್ಕೆ ಸೆರೆಹಿಡಿಯುತ್ತದೆ ಅಥವಾ ದಾಸನನ್ನಾಗಿ ಮಾಡುತ್ತದೆ (ವಚನ 14).

24 ಅಯ್ಯೋ ನಾನು ಎಂಥದುರವಸ್ಥೆಯಲ್ಲಿ ಬಿದ್ದ ಮನುಷ್ಯನು! ತನ್ನ ಪಾಪವನ್ನು ಗುರುತಿಸಿ ಅದನ್ನು ಜಯಿಸಲು ಇಚ್ಛಿಸುವ ಪ್ರತಿಯೊಬ್ಬ – ಮನುಷ್ಯನ ಕೂಗು ಇದಾಗಿದೆ.

ಇಂಥ ಮರಣಕ್ಕೆ ಒಳಗಾದ ಈ ದೇಹದಿಂದ ನನ್ನನ್ನು ಬಿಡಿಸುವವನು ಯಾರು? ಮರಣಕ್ಕೊಳಗಾದ ದೇಹವು "ಪಾಪದ ದೇಹ" ಆಗಿದೆ. ಅವೆರೆಡು ಒಂದೇ ಯಾಕೆಂದರೆ ಪಾಪವು ಮರಣವನ್ನುಂಟು ಮಾಡುತ್ತದೆ. ದೇಹ ಎಂಬ ಪದವು ಭೌತೀಕ ದೇಹವನ್ನು (ಕಣ್ಣುಗಳು, ಕೈಗಳು, ಕಾಲುಗಳು) ಸೂಚಿಸುತ್ತದೆ: ಸ್ವತಃ ಭೌತೀಕ ದೇಹವು ಕೆಟ್ಟದ್ದಲ್ಲ ಅಥವಾ ಪಾಪಮಯವಲ್ಲ. ಪಾಪ ಮಾಡಬೇಕೆಂಬ ಇಚ್ಛೆಯು ನಮ್ಮ ಭೌತೀಕ ಶರೀರದಿಂದ ಬರುವದಿಲ್ಲ ಆದರೆ ನಮ್ಮ ಪಾಪಾಧೀನ ಸ್ವಭಾವದಿಂದ ಬರುತ್ತದೆ.

25 ಇಂಥ ಮರಣಕ್ಕೆ ಒಳಗಾದ ದೇಹದಿಂದ, ನನ್ನ ಪಾಪಾಧೀನ ಸ್ವಭಾವದಿಂದ ನನ್ನನ್ನು ಬಿಡಿಸುವವನು ಯಾರು/ ಇಲ್ಲಿ ಪೌಲನು ಉತ್ತರವನ್ನು ನೀಡುತ್ತಾನೆ: ಕರ್ತನಾದ ಯೇಸುಕ್ರಿಸ್ತನ ಮೂಲಕ ನಾವು ಬಿಡಿಸಲ್ಪಡುತ್ತೇನೆಂಬದಕ್ಕಾಗಿ ದೇವರಿಗೆ ಸ್ತೋತ್ರವಾಗಲಿ!

ಯೇಸು ಕ್ರಿಸ್ತನು ನಮ್ಮನ್ನು ಬಿಡಸಿಕಾಪಾಡುವವನಾಗಿದ್ದಾನೆ. ಆತನು ಪೌಲನನ್ನು ಮಾತ್ರವಲ್ಲ, ಆದರೆ ನಂಬಿಕೆಯಿಂದ ಆತನನ್ನು ಕೂಗಿಕೊಳ್ಳುವ ಪ್ರತಿಯೊಬ್ಬನನ್ನೂ ಬಿಡಿಸುವನು. ನಮ್ಮಲ್ಲಿರುವ ಪಾಪದ ನಿಯಮವನ್ನು ಜಯಿಸಲು ಶಕ್ತಿಯನ್ನು ಕೊಡುವಾತನು ಕ್ರಿಸ್ತನೇ ಆಗಿದ್ದಾನೆ. ಆತನೇ ನಮ್ಮನ್ನು ಪಾಪದ ದಂಡನೆಯಾದ ಮರಣದಿಂದ ಬಿಡಿಸುತ್ತಾನೆ. ದೇವರಿಗೆ ಸ್ತೋತ್ರವಾಗಲಿ1ನಮ್ಮ ಕ್ರೈಸ್ತ ಜೀವಿತಗಳಲ್ಲಿ ಒಳ್ಳೇದು ಮತ್ತು ಕೆಟ್ಟದ್ದರ ನಡುವಿನ, ನಮ್ಮ ಪೂರ್ವ ಸ್ವಭಾವ ಮತ್ತು ನೂತನ ಸ್ವಭಾವದ ನಡುವಿನ, ನಮ್ಮ ಪಾಪಾಧೀನ ಸ್ವಭಾವ ಮತ್ತು ಆತ್ಮೀಕ ಸ್ವಭಾವದ ನಡುವಿನ ಈ ಹೋರಾಟವು ಎಂದೆಂದಿಗೂ ಮುಂದುವರೆಯುವ ಅಗತ್ಯವಿಲ್ಲ. ಕ್ರಿಸ್ತನ ಮೂಲಕ. ಅಂದರೆ ಪವಿತ್ರಾತ್ಮನಿಂದ ನಮಗೆ ಕೊಡಲ್ಪಟ್ಟಿರುವ ಕ್ರಿಸ್ತನ ಬಲದ ಮೂಲಕವಾಗಿ ನಾವು ನಮ್ಮಲ್ಲಿರುವ "ಪಾಪದ ನಿಯಮ" ವನ್ನು ಜಯಿಸಬಲ್ಲೆವು . ಒನೇ ಅಧ್ಯಾಯದಲ್ಲಿ ಪೌಲನು ನಾವೆಲ್ಲರೂ ಅನುಭವಿಸಿದ ಆಂತರೀಕ ಹೋರಾಟವನ್ನು ವಿವರಿಸಿರುತ್ತಾನೆ. ಈಗ ೮ನೇ ಅಧ್ಯಾಯದಲ್ಲಿ ಆ ಹೋರಾಟವನ್ನು ಜಯಿಸುವ ಹಾಗು ಪಾಪವನ್ನು ಜಯಿಸುವ ಮಾರ್ಗವನ್ನು ನಮಗೆ ತೋರಿಸುತ್ತಾನೆ. ಆ ಮಾರ್ಗ ಯಾವು ದೆಂದರೆ ಪವಿತ್ರಾತ್ಮನನ್ನು ಅನುಸರಿಸಿ ಜೀವಿಸುವದು. (ರೋಮ 8:5).ಮತ್ತು ದೇವರ ಆತ್ಮನಿಂದ ನಡೆಸಿಕೊಳ್ಳುವದು (ರೋಮ 8:14). ಕ್ರಿಸ್ತನು ನಮಗೆ ಪವಿತ್ರಾತ್ಮನನ್ನು ನೀಡಿದ್ದಾನೆ, ನಾವು ಪವಿತ್ರಾತ್ಮನಿಂದ ನಡಿಸಿಕೊಂಡು ಜೀವಿಸುವದಾದರೆ ನಾವು ಶರೀರಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೆ ನೆರವೇರಿಸುವದಿಲ್ಲ (ಗಲಾತ್ಯ 5:16).

---

## ಅಧ್ಯಾಯ - 8

### ಪವಿತ್ರಾತ್ಮನ ಮೂಲಕ ಜೀವ (8:1-17)

1 ಯೆಹೂದ್ಯ ಧರ್ಮಶಾಸ್ತ್ರದ ಮೂಲಕ ಅಪರಾಧ ನಿರ್ಣಯ ಉಂಟಾಗುತ್ತದೆ. ಧರ್ಮಶಾಸ್ತ್ರವು ನಮಗ ಮರಣದಂಡನೆಯನ್ನು ನೀಡುತ್ತದೆ, ಯಾಕೆಂದರೆ ನಾವು ಎಷ್ಟೇ ಪ್ರಯಾಸಪಟ್ಟರೂ ಧರ್ಮಶಾಸ್ತ್ರದ ಎಲ್ಲಾ ನಿಭಂದನೆಗಳನ್ನು ನೆರವೇರಿಸಲಾಗುವದಿಲ್ಲ. ಧರ್ಮಶಾಸ್ತ್ರವು ಹೇಳುವದೇನೆಂದರೆ: ನಿನ್ನ ದೇವರಾದ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ, ನಿನ್ನ ಪೂರ್ಣ ಮನಸ್ಸಿನಿಂದಲೂ, ನಿನ್ನ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು (ಧರ್ಮೋಪದೇಶಕಾಂಡ 6:5, ಮಾರ್ಕ 12:30). ಆ ಆಜ್ಞೆಯನ್ನು ಯಾರು ಸಂಪೂರ್ಣವಾಗಿ ಪಾಲಿಸಲಿಕ್ಕೆ ಸಾಧ್ಯ? ಯಾರೂ ಇಲ್ಲ. ಧರ್ಮಶಾಸ್ತ್ರವು ," ಮತ್ತೊಬ್ಬನದನ್ನು ಆಶಿಸಬೇಡ" ಎನ್ನುತ್ತದೆ (ವಿಮೋಚನಕಾಂಡ 20:17, ರೋಮ 7:7). ಆ ಆಜ್ಞೆಗೆ ಯಾರು ಸಂಪೂರ್ಣವಾಗಿ ವಿಧೇಯರಾಗಲು ಸಾಧ್ಯ? ಯಾರೂ ಇಲ್ಲ. ನಮ್ಮ ಹೃದಯ, ನಮ್ಮ ಸ್ವಭಾವವು ಕೆಟ್ಟದ್ದು ಹಾಗು ಅಪರಿಶುದ್ಧವಾಗಿರುತ್ತದೆ. ನಾವು ದೇವರ ದೃಷ್ಟಿಯಲ್ಲಿ ನೀತಿವಂತರೆಂದು ನಿರ್ಣಯಿಸಲ್ಪಡುವದಾದರೂ ಹೇಗೆ ಸಾಧ್ಯ/ ನಮಗೆ ಸಾಧ್ಯವಿಲ್ಲ. ಬದಲಾಗಿ, ಧರ್ಮಶಾಸ್ತ್ರವು ನಮಗೆ ಮರಣಕ್ಕೊಳಪಡಿಸುತ್ತದೆ.

ಆದರೆ 1 ನೇ ವಚನದಲ್ಲಿ ನಾವು ಅಪರಾಧ ನಿರ್ಣಯ ಹಾಗು ಮರಣದಿಂದ ಪಾರಾಗುವ ಮಾರ್ಗವನ್ನು ಕಂಡುಕೊಳ್ಳುತ್ತೇವೆ; ನಾವು ಕ್ರಿಸ್ತ ಯೇಸುವಿನಲ್ಲಿ ಇರುವದಾದರೆ ನಮಗೆ ಅಪರಾಧ ನಿರ್ಣಯವು ಇರುವದಿಲ್ಲ! ಕ್ರಿಸ್ತನಲ್ಲಿ ಇರುವದೆಂದರೆ ಆತನನ್ನು ನಂಬುವದು. ಆತನನ್ನು, ಕರ್ತನನ್ನಾಗಿಯಾ ರಕ್ಷಕನನ್ನಾಗಿಯೂ ಅಂಗೀಕರಿಸಿಕೊಳ್ಳುವದು, ಮತ್ತು ನಮ್ಮ ಜೀವಿತಗಳನ್ನು ಆಳಲು ಆತನಿಗೆ ಅನುಮತಿಸುವದಾಗಿದೆ.

ನಾವು ಕ್ರಿಸ್ತನಲ್ಲಿ ರುವಾಗ ನಮ್ಮ ಪಾಪಗಳು ಕ್ಷಮಿಸಲ್ಪಟ್ಟು ತೊಳೆಯಲ್ಪಡುತ್ತವೆ, ಮತ್ತು ನಾವು ದೇವರ ದೃಷ್ಟಿಯಲ್ಲಿ ನೀತಿವಂತರೆಂದು ನಿರ್ಣಯಿಸಲ್ಪಡುತ್ತೇವೆ (ರೋಮ 5:1). ಯಾರು ಕ್ರಿಸ್ತನಲ್ಲಿಲ್ಲವೋ ಅವರು ಅಪರಾಧಿಗಳೆಂದು ನಿರ್ಣಯಿಸಲ್ಪಟ್ಟು ನಿತ್ಯ ದಂಡನೆಯನ್ನು ಹೊಂದುವರು.

ನಿಶ್ವಾಸಿಗಳು ಅವರ ಸ್ವಂತ ನೀತಿಯ ಆಧಾರದ ಮೇಲೆ ನೀತಿವಂತರೆಂದು ನಿರ್ಣಯಿಸಲ್ಪಡುವದಿಲ್ಲ, ಆದರೆ ಕ್ರಿಸ್ತನ ನೀತಿಯ ಆಧಾರದ ಮೇಲೆ ನೀರ್ಣಯಿಸಲ್ಪಡುತ್ತಾರೆ. ಕ್ರಿಸ್ತನಲ್ಲಿ ಯಾವ ಪಾಪವೂ ಇರುವದಿಲ್ಲ (ಇಬ್ರಿಯ 4:15). ಆತನು ಇಡೀ ಧರ್ಮಶಾಸ್ತ್ರವನ್ನು ಪರಿಪೂರ್ಣವಾಗಿ ನೆರವೇರಿಸಿದನು. ಅದನ್ನು ಮಾಡಿದ ಮೇಲೆ ಆತನು ನಾವು ಪಡೆಯಬೇಕಾಗಿದ್ದ ನಮ್ಮ ಪಾಪದ ದಂಡನೆಯನ್ನು ತಾನೇ ಹೊತ್ತುಕೊಂಡನು. ಧರ್ಮಶಾಸ್ತ್ರವು ಇನ್ನು ನಮ್ಮನ್ನು ದಂಡಿಸುವದಿಲ್ಲ. ದಂಡನೆಯು ಈಗಾಗಲೇ (ಕ್ರಿಸ್ತನಿಗೆ) ಕೊಡಲ್ಪಟ್ಟಿದೆ. ಆತನು ನಮ್ಮ ಸ್ಥಾನದಲ್ಲಿ ಮರಣ ದಂಡನೆಯನ್ನು ಹೊಂದಿದನು. ಆದುದರಿಂದ ಕ್ರಿಸ್ತನಲ್ಲಿ ರುವವರಿಗೆ ಅಪರಾಧ ನಿರ್ಣಯವು ಇರುವದಿಲ್ಲ. ಇದು ಎಂತಹ ಆಶ್ಚರ್ಯಕರ ಮತತ್ತು ಅದ್ಭುತಮಯ ವಾರ್ತೆಯಲ್ಲವೇ ಜಗತ್ತಿನಲ್ಲೆಲ್ಲಾ ಇರುವ ಎಲ್ಲಾ ಮನುಷ್ಯರು ಏಕೈಕ ಸತ್ಯ ದೇವರ ಮುಂದೆ ಅಪರಾಧಿಗಳಾಗಿ ನಿಲ್ಲುತ್ತಾರೆ. ಆದರೆ ಇಲ್ಲಿ, ಕ್ರಿಸ್ತನಲ್ಲಿ ದೇವರು ಅವರಿಗೆ ದಂಡನೆಯಿಂದ ತಪ್ಪಿಸಿಕೊಳ್ಳುವ ಮಾರ್ಗವನ್ನು ತೋರಿಸುತ್ತಾನೆ. ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಅವರ ದಂಡನೆಯು ತೆಗೆದು ಹಾಕಲ್ಪಡುತ್ತದೆ.

ಆದರೆ ನೆನಪಿರಲಿ, ವಿಶ್ವಾಸಿಗಳಾದ ನಾವು ದಂಡನೆಯಿಂದ ಪಾರಾಗಿದ್ದೇವಾದಾಗ್ಯು, ಪಾಪವು ಈಗಲೂ ನಮ್ಮ ಜೀವಿತಗಳಲ್ಲಿ ಉಳಿದಿರುತ್ತದೆ. ಆದುದರಿಂದ, ನಾವು ಈಗಲೂ ಪಾಪದ ಅಪರಾಧದಲ್ಲಿದ್ದೇವೆ ಮತ್ತು ದಂಡನೆಗೆ ಯೋಗ್ಯರಾಗಿದ್ದೇವೆ. ಆದರೆ, ನಾವು ನಮ್ಮ ಪಾಪಗಳಿಗಾಗಿ ಪಶ್ಚಾತಾಪ ಪಡುವದಾದರೆ ದೇವರು ನಮ್ಮ ಪಾಪಗಳನ್ನು ನಮ್ಮ

ಲೆಕ್ಕಕ್ಕೆ ಎಣಿಸುವದಿಲ್ಲ, ಆತನು ನಮ್ಮನ್ನು ಅಪರಾಧಿಗಳೆಂದು ನಿರ್ಣಯಿಸುವದಿಲ್ಲ (1 ಯೋಹಾನ 1:9 ಮತ್ತು ವ್ಯಾಖ್ಯಾನ ನೋಡಿರಿ).

2 ಯೇಸು ನಮ್ಮ ರಕ್ಷಕನು. ಜೀವವನ್ನುಂಟು ಮಾಡುವ ಆತ್ಮನು ಪವಿತ್ರಾತ್ಮನಾಗಿದ್ದಾನೆ (ದೇವರು ಮತ್ತು ಕ್ರಿಸ್ತನ ಆತ್ಮನು). ಪೌಲನು ತನ್ನ ಪತ್ರಿಕೆಗಳಲ್ಲಿ ಧರ್ಮಶಾಸ್ತ್ರ ಎಂಬ ಪದವನ್ನು ವಿವಿಧರೀತಿಗಳಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಉಪಯೋಗಿಸುತ್ತಾನೆ, "ಧರ್ಮಶಾಸ್ತ್ರ" ಎಂಬ ಪದವು ವಿವಿಧ ಅರ್ಥಗಳನ್ನು ಹೊಂದಿದೆ. ಅತಿಸಾಮಾನ್ಯವಾಗಿ ಧರ್ಮಶಾಸ್ತ್ರ ಎಂಬ ಪದವು ಯೆಹೂದ್ಯರಿಗೆ ಹಸ್ತಾಂತರಿಸುವದಕ್ಕೆ ದೇವರು ಮೋಶೆಗೆ ಕೊಟ್ಟ ಯೆಹೂದ್ಯ ಧರ್ಮಶಾಸ್ತ್ರವನ್ನು ಸೂಚಿಸುತ್ತದೆ. ಆದರೆ ಈ ವಚನದಲ್ಲಿ "ಧರ್ಮಶಾಸ್ತ್ರ"ವು ಒಂದು ಬೇರೆ ಅರ್ಥವನ್ನು ಹೊಂದಿದೆಃ ಇಲ್ಲಿ ಅದು "ನೀತಿ ಸೂತ್ರ"ಅಥವಾ "ನಿಯಮ"ಎಂಬ ಅರ್ಥವನ್ನು ನೀಡುತ್ತದೆ. (ರೋಮ 7:21, 23 ರಲ್ಲಿಯೂ ಅದೇ ರೀತಿ ಇರುತ್ತದೆ). ಪವಿತ್ರಾತ್ಮನು ನಮ್ಮನ್ನು ಪ್ರವೇಶಿಸುವದಕ್ಕೆ ಮುಂಚೆ ಕೇವಲ ಪಾಪದ ಮರಣಗಳ ನಿಯಮವು ನಮ್ಮ ಜೀವಿತಗಳಲ್ಲಿತ್ತು. ಪವಿತ್ರಾತ್ಮನು ನಮ್ಮನ್ನು ಪ್ರವೇಶಿಸಿದಾಗ ಆ ಪೂರ್ವದ "ಪಾಪಮರಣಗಳ ನಿಯಮ" ದ ಸ್ಥಾನದಲ್ಲಿ ಜೀವವನ್ನುಂಟು ಮಾಡುವ ಪವಿತ್ರಾತ್ಮನ ನಿಯಮವು ಬಂದಿತು. ಮನುಷ್ಯರಿಗೆ ಮರಣದಂಡನೆಯನ್ನು ಉಂಟುಮಾಡುವ ಯೆಹೂದ್ಯ ಧರ್ಮಶಾಸ್ತ್ರವು ಮನುಷ್ಯರನ್ನು ಪಾಪಮರಣಗಳ ನಿಯಮದ ಅಡಿಯಲ್ಲಿ ಇಡುತ್ತದೆ.[40] ಪವಿತ್ರಾತ್ಮನು ನಮ್ಮನ್ನು ಪಾಪದ ಅಪರಾದ ದಂಡನೆಗಳಿಂದ ಬಿಡಿಸುವದು ಮಾತ್ರವಲ್ಲ, ಆದರೆ ಪಾಪದ ಬಲ ಮತ್ತು ಅಧಿಕಾರದಿಂದ ಸಹ ಬಿಡಿಸುತ್ತದೆ (ರೋಮ 6:14).

3 ಈ ವಚನದಲ್ಲಿ ಧರ್ಮಶಾಸ್ತ್ರ ಎಂಬ ಪದವು ಯೆಹೂದ್ಯ ಧರ್ಮಶಾಸ್ತ್ರವನ್ನು ಸೂಚಿಸುತ್ತದೆ. ಯೆಹೂದ್ಯ ಧರ್ಮಶಾಸ್ತ್ರವು ಮನುಷ್ಯರನ್ನು ನೀತಿಯಲ್ಲಿಯೂ ನಿತ್ಯ ಜೀವದಲ್ಲಿಯೂ ನಡೆಸಬೇಕಾಗಿತ್ತು (ರೋಮ 7:10). ಆದರೆ ಮಾನವನ ಶರೀರಾಧೀನ ಸ್ವಭಾವದ ನಿಮಿತ್ತ ಮನುಷ್ಯರನ್ನು ನೀತಿವಂತರನ್ನಾಗಿ ಮಾಡಿ ರಕ್ಷಿಸಲು ನಿರ್ಬಲವಾಗಿತ್ತು. ಯೆಹೂದ್ಯ ಧರ್ಮಶಾಸ್ತ್ರವು ಮಾನವರ ಪಾಪಕ್ಕಾಗಿ ಅವರನ್ನು ದಂಡಿಸಲಿಕ್ಕೆ ಮಾತ್ರವೇ ಶಕ್ತವಾಗಿತ್ತು, ಮಾನವರು ತಮ್ಮ ಪಾಪವನ್ನು ಜಯಿಸಲು ಅದು ಅವರಿಗೆ ಯಾವ ಸಹಾಯವನ್ನು ಕೊಡಲಾಗಲಿಲ್ಲ. ಧರ್ಮಶಾಸ್ತ್ರವು ಯಾವ ಕೆಲಸವನ್ನು ಮಾಡಲಾರದೆ ಇತ್ತೋ ಅಂದರೆ, ನಮ್ಮನ್ನು "ಪಾಪಮರಣಗಳ ನಿಯಮ" ದಿಂದ ಬಿಡಿಸುವ ಕೆಲಸ –ಅದನ್ನು ಮಾಡಲು ದೇವರು ತನ್ನ ಮಗನನ್ನು (ಕ್ರಿಸ್ತನನ್ನು) ಕಳುಹಿಸಿಕೊಟ್ಟನು. ನಮ್ಮನ್ನು ಪಾಪ ಮರಣಗಳ ನಿಯಮದಿಂದ ಬಿಡಿಸುವದಕ್ಕಾಗಿ ದೇವರು ಕ್ರಿಸ್ತನನ್ನು ಲೋಕಕ್ಕೆ ಕಳುಹಿಸಿದನು, (ಯೆಹೂದ್ಯ ಧರ್ಮಶಾಸ್ತ್ರವು ಅದನ್ನು ಮಾಡಲಾಗಿರಲಿಲ್ಲ.

ಕ್ರಿಸ್ತನು ಹೇಗೆ ನಮ್ಮನ್ನು ಪಾಪ ಮರಣಗಳ ನಿಯಮದಿಂದ ಬಿಡಿಸಿದನು ? ಆತನು ಪಾಪನಿವಾರಣೆಯ ಯಜ್ಞವಾಗಿ ಕಳುಹಿಸಲ್ಪಟ್ಟಿದ್ದನು[41], ಅಂದರೆ, ಆತನು ತನ್ನ ಪ್ರಾಣವನ್ನು ಯಜ್ಞವಾಗಿ ಅರ್ಪಿಸುವದರ "ಮೂಲಕ" ನಮ್ಮ ಪಾಪಗಳ ದಂಡನೆಯನ್ನು ಹೊತ್ತುಕೊಂಡನು. ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರವಾಗಿ ಯಾವದೇ ಯೆಹೂದ್ಯನು ಪಾಪಮಾಡುವದಾದರೆ ಅವನು ಪ್ರಾಣಿಯೊಂದನ್ನು ಯಜ್ಞವಾಗಿ ಅರ್ಪಿಸಬೇಕಾಗಿತ್ತು. [42]. ಒಂದು ಅರ್ಥದಲ್ಲಿ ಯಜ್ಞಮಾಡಲ್ಪಟ್ಟ ಪ್ರಾಣಿಯು ಪಾಪವನ್ನು ಮಾಡಿದ ವ್ಯಕ್ತಿಯ ಮರಣದಂಡನೆಯನ್ನು ಹೊಂದುತ್ತಿತ್ತು. ಅದೇ ರೀತಿಯಾಗಿ, ಯೇಸು ಕ್ರಿಸ್ತನು ಆ ಯಜ್ಞದ ಪ್ರಾಣಿಯಂತಿದ್ದಾನೆ, ಆತನ ಯಜ್ಞದ ಮೂಲಕ –ತನ್ನ ಸ್ವಂತ ದೇಹದ ಯಜ್ಞದ ಮೂಲಕ – ಪಾಪವನ್ನು ಮಾಡಿದ್ದ ನಾವು ಈಗ ನಿರಪರಾಧಿಗಳೆಂದು ನಿರ್ಣಯಿಸಲ್ಪಟ್ಟಿದ್ದೇವೆ. ಎಂದೂಗೀ ಪಾಪವನ್ನೇ ಮಾಡದ ಕ್ರಿಸ್ತನು ನಮ್ಮ ಅಪರಾಧವನ್ನೂ ಶಿಕ್ಷೆಯನ್ನೂ ತನ್ನ ಮೇಲೆ ತೆಗೆದುಕೊಂಡನು (ಮಾರ್ಕ 10:45, 2 ಕೊರಿಂಥ 5:21 ಹಾಗು ವ್ಯಾಖ್ಯಾನಗಳನ್ನು ನೋಡಿರಿ).

ಕ್ರಿಸ್ತನು ನರಭಾವದಲ್ಲಿ ಬಂದನು., ಅವನು ಸ್ವತಃ ಪಾಪಿಯಲ್ಲ, ಆತನು ಪಾಪದ ನರಭಾವದಲ್ಲಿ ಮಾತ್ರವೇ ಬಂದನು. ಆದರೆ ಇತರ ಎಲ್ಲಾ ರೀತಿಗಳಲ್ಲಿ ಕ್ರಿಸ್ತನು ನಮ್ಮಂತೆಯೇ ಪೂರ್ಣವಾಗಿ ಮಾನವನಾಗಿದ್ದನು. ನಾವು ಅನುಭವಿಸುವ ಎಲ್ಲಾ ಶೋಧನೆಗಳನ್ನು ಆತನು ಅನುಭವಿಸಿದನು – ಆದಾಗ್ಯು ಆತನು ಆ ಯಾವ ಶೋಧನೆಯಲ್ಲಿಯೂ, ಬೀಳಲಿಲ್ಲ (ಇಬ್ರಿಯ 2:14-15, 17-18, 4:14-15).

ಕ್ರಿಸ್ತನು ನರಭಾವದಲ್ಲಿಯೇ ಪಾಪಕ್ಕೆ ಮರಣದಂಡನೆಯನ್ನು ವಿಧಿಸಿದನು – ಅಂದರೆ, ಆತನು ಪಾಪವನ್ನು ಜಯಿಸಿ ಅದರ ಬಲವನ್ನು ನಾಶಮಾಡಿದನು. ಆತನು ಇದನ್ನು ಹೇಗೆ ಮಾಡಿದನು? ಅದು ಈ ರೀತಿಯಾಗಿರುತ್ತದೆ. ಯೆಹೂದ್ಯ ಧರ್ಮಶಾಸ್ತ್ರವು ಒಬ್ಬ ವ್ಯಕ್ತಿಯ. ಪಾಪಕ್ಕಾಗಿ ಅವನನ್ನು ದಂಡಿಸಬೇಕಾದ ನ್ಯಾಯಾಧಿಪತಿಯಂತಿದೆ. ಮರಣದಂಡನೆಯನ್ನು ವಿಧಿಸಿದ ಬಳಿಕ ಇನ್ನು ನ್ಯಾಯಾಧಿಪತಿಗೆ ಪಾಪಿ ವ್ಯಕ್ತಿಯು ಮೇಲೆ ಯಾವ ಅಧಿಕಾರ ಇರುವದಿಲ್ಲ. ಒಬ್ಬ ವ್ಯಕ್ತಿಯು ಮರಣದಂಡನೆಯನ್ನು ಹೊಂದಿದ ಬಳಿಕ ಅವನು ನ್ಯಾಯಾಧಿಪತಿಯಿಂದಲೂ, ಧರ್ಮಶಾಸ್ತ್ರದಿಂದಲೂ ವಿಮುಕ್ತನಾಗುತ್ತಾನೆ. ಆತನು ತನ್ನ ಪಾಪಕ್ಕೆ ಪೂರ್ಣಕ್ರಯವನ್ನು ಸಂದಾಯ ಮಾಡಿರುತ್ತಾನೆ. ಇನ್ನು ಸಂದಾಯ ಮಾಡಲು ಬೇರೆನೂ ಉಳಿದಿರುವದಿಲ್ಲ. ಆತನು ಇನ್ನು ಪಾಪದ ಅಪರಾಧವನ್ನು ಹೊಂದಿರುವದಿಲ್ಲ. ಆತನ ಪಾಪವು ಅಳಿಸಲ್ಪಟ್ಟಿರುತ್ತದೆ, ಎಲ್ಲಾ ಮುಗಿದಿರುತ್ತದೆ. ಒಂದು ಅರ್ಥದಲ್ಲಿ ಆತನ ಪಾಪಕ್ಕೆ ಮರಣದಂಡನೆ ವಿಧಿಸಲ್ಪಟ್ಟಿರುತ್ತದೆ. ಕ್ರಿಸ್ತನು ನರಭಾವದಲ್ಲಿಯೇ ಪಾಪಕ್ಕೆ ಮರಣದಂಡನೆಯನ್ನು ವಿಧಿಸಿದನೆಂದು ಪೌಲನು ಹೇಳುವದರ ಅರ್ಥವು ಇದೇ ಆಗಿದೆ. ಕ್ರಿಸ್ತನು ತನ್ನನ್ನೇ ಯಜ್ಞವಾಗಿ ಅರ್ಪಿಸುವದರ ಮೂಲಕ ನಮ್ಮ ದಂಡನೆಯನ್ನು ತೆಗೆದುಕೊಳ್ಳುವದರ ಮೂಲಕ ಪಾಪಕ್ಕೆ "ಮರಣದಂಡನೆ ವಿಧಿಸಿದನು" ಅಥವಾ ಅದನ್ನು ಅಳಿಸಿ ಹಾಕಿದನು. ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರವಾಗಿ ಯೆಹೂದ್ಯನೊಬ್ಬನು ಪಾಪಮಾಡುವಾಗಲೆಲ್ಲಾ ತನ್ನನ್ನು ಪಾಪದಿಂದ ಶುದ್ಧಿಪಡಿಸಿಕೊಳ್ಳುವದಕ್ಕಾಗಿ ಪ್ರಾಣಿಯೊಂದನ್ನು ಯಜ್ಞವಾಗಿ ಅರ್ಪಿಸಬೇಕಾಗಿತ್ತು. ಹೀಗಿರುವದರಿಂದ, ಯೆಹೂದ್ಯರು ಸತತವಾಗಿ ಯಜ್ಞಗಳನ್ನು ಅರ್ಪಿಸಬೇಕಾಗಿತ್ತು. ಯಜ್ಞವನ್ನು ಅರ್ಪಿಸಿದ ಬಳಿಕ ಅವರು ತಾತ್ಕಾಲಿಕವಾಗಿ

ಶುದ್ಧವಾಗುತ್ತಿದ್ದರು. ಆದರೆ ಮರುಕ್ಷಣ ಅವರು ಮತ್ತೆ ಪಾಪಮಾಡುವರು ಮತ್ತು ಹೀಗೆ ಪುನಃ ಅವರು ಅಶುದ್ಧಗೊಳ್ಳುವರು. ಈ ರೀತಿಯಾಗಿ ಒಂದು ಕ್ಷಣ ಪರಿಶುದ್ಧ, ಇನ್ನೊಂದು ಕ್ಷಣ ಅಪರಿಶುದ್ಧ – ಯೆಹೂದ್ಯರು ನಿಜವಾಗಿಯೂ ಎಂದಿಗೂ ತಮ್ಮ ಪಾಪಗಳಿಂದ ಶುದ್ಧಗೊಳ್ಳುವದಿಲ್ಲ. ಅವರ ಪಾಪಗಳು ಎಂದಿಗೂ ಸಂಪೂರ್ಣವಾಗಿ ಅಳಿಸಿಹಾಕಲ್ಪಡಲಾರವು. ಅವರು ಅಪರಾಧಿಗಳಾಗಿ ಉಳಿಯುವರು.

ಆದರೆ ಕ್ರಿಸ್ತನ ಯಜ್ಞವು ಯೆಹೂದ್ಯರ ಪ್ರಾಣಿಯಜ್ಞಗಳಿಗಿಂತಲೂ ವ್ಯತ್ಯಾಸವಾಗಿರುತ್ತದೆ. ಕ್ರಿಸ್ತನ ಯಜ್ಞವು ವಿಶ್ವಾಸಿಗಳ ಪಾಪವನ್ನು ಸಂಪೂರ್ಣವಾಗಿ ಅಳಿಸಿಹಾಕುವದು. ಆತನ ಯಜ್ಞವು ಎಂದೆಂದಿಗೂ ಪರಿಣಾಮಕಾರಿಯಾಗಿಯೇ ಉಳಿಯುತ್ತದೆ. ಆತನ ಒಂದೇ ಯಜ್ಞದ ಮೂಲಕವಾಗಿ ಪಾಪಕ್ಕೆ ಮರಣದಂಡನೆ ವಿಧಿಸಲ್ಪಟ್ಟು ಅದರ ಬಲವು ಒಂದೇ ಸಾರಿ ಶಾಶ್ವತವಾಗಿ ನಾಶಮಾಡಲ್ಪಟ್ಟಿರುತ್ತದೆ (ಇಬ್ರಿಯ 7:26-27, 9:11-14, 24-26, 10:1,4,11-14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

4 ಪೌಲನು ಯೆಹೂದ್ಯ ಧರ್ಮಶಾಸ್ತ್ರದ ಬಗ್ಗೆ ಅನೇಕ ಸಂಗತಿಗಳನ್ನು ಹೇಳುತ್ತಾನೆ – ಉದಾಹರಣೆಗೆ, ಧರ್ಮಸಾಸ್ತ್ರವು ನಿರ್ಬಲ (ವಚನ 3), ಇದು ಪಾಪಮರಣಗಳ ನಿಯಮ (ವಚನ 2). ಹಾಗಿದ್ದರೂ, ಇದು ದೇವರ ಧರ್ಮಶಾಸ್ತ್ರವಾಗಿದ್ದು ಆತನು ಅದನ್ನು ಯೆಹೂದ್ಯರಿಗೆ ಕೊಟ್ಟಿದ್ದನು. ಆದ್ದರಿಂದ, ಇದು ನ್ಯಾಯ ಮತ್ತು ನೀತಿವುಳ್ಳ ಧರ್ಮಶಾಸ್ತ್ರವಾಗಿದೆ. ಅದಕ್ಕೆ ವಿಧೇಯವಾಗತಕ್ಕದ್ದು. ಧರ್ಮಶಾಸ್ತ್ರಕ್ಕೆ ವಿಧೇಯರಾಗದಿದ್ದಲ್ಲಿ ದೇವರು ಅದಕ್ಕಾಗಿ ಮನುಷ್ಯರನ್ನು ದಂಡಿಸಬೇಕು. ಕ್ರಿಸ್ತನು ಸ್ವತಃ ಧರ್ಮಶಾಸ್ತ್ರದ ಎಲ್ಲಾ ನಿಭಂದನೆಗಳನ್ನು ನೆರವೇರಿಸಿದನು. ಮನುಷ್ಯರು ಸಂಪೂರ್ಣವಾಗಿ ನೀತಿವುಳ್ಳ ಜೀವಿತವನ್ನು ನಡಿಸಬೇಕೆಂದು ಧರ್ಮಶಾಸ್ತ್ರವು ಅಪೇಕ್ಷಿಸುತ್ತದೆ, ಯೇಸು ಆ ನಿಭಂದನೆಯನ್ನು ಪೂರ್ಣವಾಗಿ ನೆರವೇರಿಸಿದನು. ಪಾಪಕ್ಕೆ ಮರಣದಂಡನೆಯಾಗಬೇಕೆಂದು ಧರ್ಮಶಾಸ್ತ್ರವು ಅಪೇಕ್ಷಿಸುತ್ತದೆ. ಯೇಸು ಶಿಲುಬೆಯ ಮೇಲಿನ ತನ್ನ ಮರಣದ ಮೂಲಕವಾಗಿ ಆ ನಿಭಂದನೆಯನ್ನು ಸಹ ಪೂರೈಸಿದನು. ಧರ್ಮಶಾಸ್ತ್ರದ ನೀತಿಯ ನಿಭಂದನೆಗಳು ನಮ್ಮಲ್ಲಿ ಪೂರ್ಣವಾಗಿ ನೆರವೇರಬೇಕೆಂಬುದಕ್ಕಾಗಿ ಆತನು ಜೀವಿಸಿ ಸತ್ತನು. ಆ ನಿಭಂದನೆಗಳನ್ನು ನಾವು ನಮ್ಮಷ್ಟಕ್ಕೆ ವೆರವೇರಿಸಲಾಗಲಿಲ್ಲ, ಆದುದರಿಂದ,ಯೇಸು ನಮಗೋಸ್ಕರ ಅವುಗಳನ್ನು ನೆರವೇರಿಸಿದನು (ರೋಮ 5:17, 3:31 ಮತ್ತು ವ್ಯಾಖ್ಯಾನ ನೋಡಿರಿ).

ಧರ್ಮಶಾಸ್ತ್ರದ ನೀತಿಯ ನಿಭಂದನೆಗಳು ಹೇಗೆ ನೆರವೇರಿಸಲ್ಪಟ್ಟವು ? ಉತ್ತರವೇನೆಂದರೆ; ಯೇಸು ನಮ್ಮ ಅಪರಾಧ ಮತ್ತು ದಂಡನೆಯನ್ನು ತನ್ನ ಮೇಲೆ ಹೊತ್ತುಕೊಂಡ ಅದೇ ವೇಳೆಯಲ್ಲಿ ಧರ್ಮಶಾಸ್ತ್ರದ ನಿಭಂದನೆಗಳನ್ನು ನೆರವೇರಿಸುವ ತನ್ನ ನೀತಿಯನ್ನು ಸಹ ಅನುಗ್ರಹಿಸಿದನು (2 ಕೊರಿಂಥ 5:21).

ಕ್ರಿಸ್ತನ ನೀತಿಯನ್ನು ಯಾರು ಸ್ವೀಕರಿಸಿಟ್ಟಾರೆ? ಕ್ರಿಸ್ತನ ನೀತಿಯನ್ನು ನರಭಾವಕ್ಕೆ ಅನುಸಾರವಾಗಿ ನಡೆಯುವವರಲ್ಲ ಆದರೆ ಪವಿತ್ರಾತ್ಮನು ಸಾರವಾಗಿ ನಡೆಯುವವರು ಸ್ವೀಕರಿಸಿಕೊಂಡಿದ್ದಾರೆ.

ಪವಿತ್ರಾತ್ಮಾನು ಸಾರವಾಗಿ ನಡೆಯುವದು ಎಂದರೇನೆಂದರೆ; ಒಮ್ಮೆ ನಾವು ಯೇಸುವನ್ನು ನಂಬುವದಾದರೆ ಪವಿತ್ಮಾತ್ಮನು ನಮ್ಮ ಜೀವಿತಗಳಲ್ಲಿ ಬರುತ್ತಾನೆ ಮತ್ತು ದೇವರಿಗೆ ವಿಧೇಯ.ರಾಗಲು ನಮಗೆ ಒಂದು ನೂತನ ಬಯಕೆ, ನೂತನ ಬಲವನ್ನು ಕೊಡುತ್ತಾನೆ. ನಾವು ಪವಿತ್ರಾತ್ಮನಿಂದ ಹೊಸದಾಗಿ ಹುಟ್ಟಿದವರಾಗಿದ್ದವೇ. ನಾವು ಕ್ರಿಸ್ತನಲ್ಲಿ ನೂತನ ಆತ್ಮೀಕ ಜೀವಿತವನ್ನು ಪಡೆಯುತ್ತೇವೆ.

ನಮ್ಮಲ್ಲಿರುವ ಪವಿತ್ರಾತ್ಮನ ಸಹಾಯದ ಮೂಲಕವಾಗಿ ಮಾತ್ರವೇ ನಾವು ಧರ್ಮಶಾಸ್ತ್ರದ ನೀತಿಯ ನಿಭಂದನೆಗಳನ್ನು ನೆರವೇರಿಸಲು ಸಾಧ್ಯವಿರುತ್ತದೆ. ಅಂದರೆ ಪವಿತ್ರಾತ್ಮನ ಸಹಾಯದ ಮೂಲಕ ಮಾತ್ರವೇ ನಾವು ನೀತಿಯುಳ್ಳ ಜೀವಿತಗಳನ್ನು ನಡಿಸಲು ಸಾಧ್ಯ. ಕ್ರಿಸ್ತನು ನೀತಿವಂತನು ಎಂದು ಹೇಳಿದರೆ ಸಾಕಾಗುವದಿಲ್ಲ, ಪವಿತ್ರಾತ್ಮನ ಮೂಲಕ ಕ್ರಿಸ್ತನ ನೀತಿಯು ನಮ್ಮ ಜೀವಿತಗಳಲ್ಲಿ ತೋರಲ್ಪಡಬೇಕು. ಪವಿತ್ರಾತ್ಮಾನು ಸಾರವಾಗಿ ಜೀವಿಸುವದರ ಅರ್ಥವು ಇದೇ ಆಗಿದೆ.

ಪವಿತ್ರಾತ್ಮಾನು ಸಾರವಾಗಿ ಜೀವಿಸುವದಕ್ಕೆ ತದ್ವಿರುದ್ಧವಾದದ್ದೆಂದರೆ ನರಭಾವಕ್ಕೆ ಅನುಸಾರವಾಗಿ ಜೀವಿಸುವದಾಗಿದೆ.[43] ನರಭಾವಕ್ಕೆ ಅನುಸಾರವಾಗಿ ಜೀವಿಸುವದೆಂದರೆ ಶರೀರಭಾವದ ಅಭಿಲಾಷೆ ಮತ್ತು ಯೋಚನೆಗಳಿಗೆ ಅನುಸಾರವಾಗಿ ಜೀವಿಸುವದಾಗಿದೆ (ಗಲಾತ್ಯ 5:19-21 ನೋಡಿರಿ). ನಾವು ಏಕಕಾಲದಲ್ಲಿ ಶರೀರಭಾವಕ್ಕನುಸಾರವಾಗಿಯೂ, ಪವಿತ್ರಾತ್ಮಾನುಸಾರವಾಗಿಯೂ ಜೀವಿಸಲು ಸಾಧ್ಯವಿಲ್ಲ, ನಾವು ಅವುಗಳೆರಡರಲ್ಲಿ ಒಂದರ ಪ್ರಕಾರವಾಗಿ ಜೀವಿಸ ತಕ್ಕದ್ದು (ಗಲಾತ್ಯ 5:16-18, 24-25 ಮತ್ತು ವ್ಯಾಖ್ಯಾನ ನೋಡಿರಿ).

ರೋಮಾಪುರದವರಿಗೆ 8ನೇ ಅಧ್ಯಾಯದ ಮೊದಲಿನ ನಾಲ್ಕು ವಚನಗಳಲ್ಲಿ ಪೌಲನು ನಮಗೆ ಕ್ರಿಸ್ತನ ಸುವಾರ್ತೆಯ ಸಾರಾಂಶವನ್ನು ನೀಡುತ್ತಾನೆ. ರೋಮಾಪುರದವರಿಗೆ ಬರೆದ ಪತ್ರಿಕೆಯ ಮೊದಲಿನ ಏಳು ಅಧ್ಯಾಯಗಳಲ್ಲಿ ಪೌಲನು ನಮಗೆ ಸುವಾರ್ತೆಯ ಹಿನ್ನಲೆ ಅಥವಾ ಅಸ್ತಿವಾರ ಏನೆಂಬದನ್ನು ತಿಳಿಯ ಪಡಿಸುತ್ತಾನೆ, ಈಗ 8ನೇ ಅಧ್ಯಾಯದಲ್ಲಿ ಸ್ವತಃ ಸುವಾರ್ತೆಯನ್ನೇ ನಮ್ಮ ಮುಂದಿಡುತ್ತಾನೆ. ಈಗ ಆತನು ನಿಜವಾಗಿಯೂ ಕ್ರೈಸ್ತನಾಗಿರುವದರ ಅರ್ಥವೇನೆಂಬದನ್ನು ನಮಗೆ ತಿಳಿಸುತ್ತಾನೆ.

ನಾವು ಈ ವಚನಗಳನ್ನು ಓದಿ, ಅಭ್ಯಾಸಿಸಬಹುದು, ಚರ್ಚಿಸಬಹುದು, ಅಲ್ಲದೆ ನಾವು ಅವುಗಳೊಂದಿಗೆ ಒಪ್ಪಿಕೊಳ್ಳಬಹುದು (ವಾಸ್ತವದಲ್ಲಿ ಪ್ರಪಂಚದಲ್ಲಿನ ಬಹುಪಾಲು ಜನರು ಸುವಾರ್ತೆ ನಿಜವಾಗಿಯೂ "ಶುಭವಾರ್ತೆ"ಎಂದು ಒಪ್ಪಿಕೊಳ್ಳುತ್ತಾರೆ). ಹೇಗಿದ್ದರೂ, ನಿಜವಾಗಿಯೂ ಪವಿತ್ರಾತ್ಮನು ನಮ್ಮ ಜೀವಿತಗಳಲ್ಲಿ ವಾಸಿಸಿ ಕಾರ್ಯ ಮಾಡುವದನ್ನು ನಾವು ಅನುಭವಿಸುವವರೆಗೂ ಈ ವಚನಗಳು ನಮಗೆ ಅಪ್ರಯೋಜಕಗಳಾಗಿರುತ್ತವೆ. ಪವಿತ್ರಾತ್ಮನು ಸಜೀವನೂ, ವಾಸ್ತವವಾದವನೂ

ಆಗಿದ್ದಾನೆ. ಮತ್ತು ಆತನು ನಮ್ಮ ಜೀವಿತಗಳಲ್ಲಿ ಬರುವದಕ್ಕೆ ಕಾಯುತ್ತಿದ್ದಾನೆ. ಆದುದರಿಂದ, ನಾವು ಆತನನ್ನು ಆಮಂತ್ರಿಸಲು ತ್ವರೆಪಡೋಣ.

5 ನಾವು ಪವಿತ್ರಾತ್ಮಾನುಸಾರವಾಗಿ ಜೀವಿಸುತ್ತಿದ್ದೇವೋ ಅಥವಾ ಇಲ್ಲವೋ ಎಂದು ಹೇಗೆ ಹೇಳಬಹುದು? ನಾವು ಯಾವು ದರ ಮೇಲೆ ನಮ್ಮ ಮನಸ್ಸಿಟ್ಟಿದ್ದೇವೆ ಎಂಬದನ್ನು ನೋಡಿ ಹೇಳುಬಹುದು. ಒಂದು ವೇಳೆ ನಮ್ಮ ಮನಸ್ಸನ್ನು ಲೋಕದ ಸಂಗತಿಗಳ – ಉದಾಹರಣೆಗೆ, ಶಾರೀರಿಕ ಅಭಿಲಾಷೆಗಳು, ಐಶ್ವರ್ಯ, ಘನತೆ – ಮೇಲೆ ಇಟ್ಟಿರುವದಾದರೆ ನಾವು ಪವಿತ್ರಾತ್ಮಾನು ಸಾರವಾಗಿ ಅಲ್ಲ, ಆದರೆ ಶರೀರಭಾವವನ್ನು ಅನುಸರಿಸಿ ಜೀವಿಸುತ್ತಿದ್ದೇವೆ. ಆದರೆ ನಾವು ಪವಿತ್ರಾತ್ಮನಿಗೆ ಸಂಬಂಧ ಪಟ್ಟವು ಗಳ ಮೇಲೆ ಮನಸ್ಸಿಡುವದಾದರೆ – ಉದಾಹರಣೆಗೆ, ನೀತಿ, ಪ್ರೀತಿ, ದೀನತೆ ಸ್ವಹತೋಟಿ – ನಾವು ಪವಿತ್ರಾತ್ಮಾನು ಸಾರವಾಗಿ ಜೀವಿಸುತ್ತಿದ್ದೇವೆಂಬ ನಿಶ್ಚಯವನ್ನು ಹೊಂದಿರಬಹುದು.ನಮ್ಮಲ್ಲಿ ಪ್ರತಿಯೊಬ್ಬರು ಸಹ "ನನ್ನ ಮನಸ್ಸು ಯಾವು ದರ ಮೇಲಿರುತ್ತದೆ?ಠ ಎಂದು ಕೇಳಿಕೊಳ್ಳೋಣ.

6 ಶರೀರಭಾವ ದವು ಗಳ ಮೇಲೆ ಮನಸ್ಸಿಡುವದು ಮರಣ – ಅಂದರೆ, ನಮ್ಮ ಮನಸ್ಸುಗಳು ಶರೀರಭಾವದ ಹತೋಟಿಯಲ್ಲಿರುವದಾದರೆ, ಫಲಿತವು ಮರಣವೇ ಆಗಿದೆ. ಇನ್ನೊಂದು ಕಡೆಯಲ್ಲಿ, ಪವಿತ್ರಾತ್ಮನ ವು ಗಳ ಮೇಲೆ ಮನಸ್ಸಿಡುವದು ಜೀವವೂ (ನಿತ್ಯಜೀವ) ಮನಶ್ಶಾಂತಿಯೂ ಆಗಿದೆ (ರೋಮ 7:5, 8:13, ಗಲಾತ್ಯ 6:7-8 ನೋಡಿರಿ).

7 ಶರೀರಭಾವದವು ಗಳ ಮೇಲಿನ ಮನಸ್ಸು – ಅಂದರೆ, ಶರೀರಭಾವದ ಹತೋಟಿಯಲ್ಲಿರುವ ಮನಸ್ಸು[44]– ದೇವರಿಗೆ ಶತ್ರು ತ್ವವಾಗಿದೆ. ಇದು ಕೇವಲ ದೇವರಿಂದ ಅಗಲಿಸಲ್ಪಟ್ಟಿಲ್ಲ, ಅದು ಕ್ರಿಯಾತ್ಮಕವಾಗಿ ದೇವರಿಗೆ ವಿರೋಧಿಯಾಗಿದೆ (ಯಾಕೋಬ 4:4). ಅದು ದೇವರ ನಿಯಮಕ್ಕೆ ಒಳಪಡುವದಿಲ್ಲ (ಈ ವಚನದಲ್ಲಿ ದೇವರ ನಿಯಮ ಎಂಬ ಪದವು ಯೆಹೂದ್ಯ ಧರ್ಮಶಾಸ್ತ್ರ ಎಂಬ ಅರ್ಥವಲ್ಲ, ಆದರೆ ಬದಲಾಗಿ "ದೇವರ ಚಿತ್ತ" ಅಥವಾ "ದೇವರ ನೇಮ".

8 ನಾವು ಎಷ್ಟೇ ಯಜ್ಞಗಳನ್ನು ಅರ್ಪಿಸಿದರೂ, ನಾವು ಎಷ್ಟೇ ಒಳ್ಳೇ ಕಾರ್ಯಗಳನ್ನು ಮಾಡಿದರೂ ಸಹ ಶರೀರಭಾವಾಧೀನ ಸ್ವಭಾವದ [45] ಹತೋಟಿಯಲ್ಲಿ ರುವದಾದರೆ ನಾವು ದೇವರನ್ನು ಮೆಚ್ಚಿಸಲು ಸಾಧ್ಯವಿಲ್ಲ. ಶರೀರಬಾವದೀನರಾಗಿ ಜೀವಿಸುವರು (ವಚನಗಳು 4-5). ಅಥವಾ ಶರೀರಭಾವಕ್ಕೆ ಒಳಪಡುವವರು ಕ್ರೈಸ್ತರಲ್ಲ, ಅವರು ರಕ್ಷಣೆಯನ್ನು ಪಡೆದಿರುವದಿಲ್ಲ (ರೋಮ 7:5, 1 ಕೊರಿಂಥ 2:14 ನೋಡಿರಿ). ಅದಕ್ಕೆ ತದ್ವಿರುದ್ಧವಾಗಿ, ಪವಿತ್ರಾತ್ಮಾನು ಸಾರವಾಗಿ ಜೀವಿಸುವವ ರಿದ್ದಾರೆ (ವಚನ 5), ಅಥವಾ ಪವಿತ್ರಾತ್ಮನಿಂದ ನಡಿಸಿಕೊಳ್ಳುವವರಿದ್ದಾರೆ (ವಚನ 14). ಅವರು ನಿಜವಾದ ಕ್ರೈಸ್ತರಾಗಿದ್ದಾರೆ.

ಆದರೆ ಈ ಎರಡು ಮುಖ್ಯ ಜನರ ಗುಂಪು ಗಳಲ್ಲದೆಯೇ ಮದ್ಯದಲ್ಲಿ ಮೂರನೆಯ ಇನ್ನೊಂದು ಗುಂಪು ಇರುವಂತೆ ತೋರುತ್ತದೆ. ಈ ಮೂರನೆಯ ಗುಂಪಿನಲ್ಲಿ ಸೇರಿರುವ ಜನರ ಜೀವಿತಗಳನ್ನು ನೀವು ನೋಡುವಾಗ ಅವರು ಕ್ರೈಸ್ತರು ಹೌದೋ ಅಥವಾ ಅಲ್ಲವೋ ಎಂದು ಹೇಳುವದು ಕಷ್ಟಕರವಾಗಿರುತ್ತದೆ. ಇವರು ಪ್ರಾಕೃತರೂ ಪರಿಪಕ್ವವಲ್ಲದ ಕ್ರೈಸ್ತರೂ ಆಗಿದ್ದಾರೆ. 2 ಕೊರಿಂಥ 3:1-3 ರಲ್ಲಿ ಪೌಲನು ಅಂತಹ ಕ್ರೈಸ್ತರನ್ನು ಪ್ರಾಪಂಚಿಕರೆಂದು [46] ಕರೆಯುತ್ತಾನೆ, ಯಾಕೆಂದರೆ ಅವರು ಶರೀರಾಧೀನ ಸ್ವಭಾವವು ಳ್ಳವರಾಗಿ ಜೀವಿಸುವಂತೆತೋರುತ್ತಾರೆ. ಪೌಲನು ಈ ಪ್ರಾಪಂಚಿಕರೂ ಪ್ರಾಕೃತರೂ ಆಗಿರುವ ಕ್ರೈಸ್ತರ ವಿಷಯವಾಗಿಯೇ ರೋಮ 7:14-24 ರಲ್ಲಿ ಮಾತಾಡುತ್ತಿದ್ದಾನೆಂದು ಕೆಲವು ಬೈಬಲ್ ಪಂಡಿತರು ನಂಬುತ್ತಾರೆ. ರೋಮಾಪು ರದವರಿಗೆ 7:14 ರಲ್ಲಿ ಪೌಲನು ತನ್ನನ್ನು ದೇಹ ಧರ್ಮಕ್ಕೆ ಒಳಪಟ್ಟವನು (ಪ್ರಾಕೃತನು) ಅಥವಾ ಪ್ರಾಪಂಚಿಕ ಎಂದು ಕರೆಯುತ್ತಾನೆ.

ಹೇಗಿದ್ದರೂ, ರೋಮ 7:14-24 ಕ್ರೈಸ್ತರ ವಿಷಯವಾಗಿ ಬರೆಯಲ್ಪಟ್ಟಿದೆಯೋ ಅಥವಾ ಇಲ್ಲವೋ, ಒಟ್ಟಾರೆ ಪೌಲನು ಈ ವಚನಗಳಲ್ಲಿ ಬಣ್ಣಿಸುವ ಆತ್ಮೀಕ ಮತ್ತು ಪ್ರಾಕೃತಿಕ ಸ್ವಭಾವಗಳ ನಡುವಿನ ಅಂತರೀಕ ಹೋರಾಟವನ್ನು ಇಂದು ನಿರಂತರನಾಗಿ ಅನುಭವಿಸುತ್ತಿದ್ದಾರೆ. ಅವರ ಕ್ರೈಸ್ತೀಯ ಜೀವಿತಗಳು ರೋಮಾಪು ರದವರಿಗೆ 8ನೇ ಅಧ್ಯಾಯದಲ್ಲಿ ಪೌಲನು ನೀಡಿರುವ ಬಣ್ಣನೆಗೆ ಹೊಂದಿಕೊಳ್ಳುವದಿಲ್ಲ, ಬದಲಾಗಿ ಅವು ಗಳು ರೋಮಾ ಪು ರದವರಿಗೆ 7ನೇ ಅಧ್ಯಾಯದಲ್ಲಿನ ಬಣ್ಣನೆಗೆ ಸರಿಹೊಂದುತ್ತವೆ. ಈ ಪರಿಸ್ಥಿತಿಯು ಮುಂದುವರೆಯದಿರಲಿ! ರೋಮಾ ಪು ರದವರಿಗೆ 8:2 ರಲ್ಲಿ ಪೌಲನು ಪಾಪಮರಣಗಳ ನಿಯಮದಿಂದ ಬಿಡಿಸಲ್ಪಟ್ಟಿದ್ದಾನೆ ಮತ್ತು ಆತ್ಮವು ಗೆದ್ದಿರುತ್ತದೆ (ಗಲಾತ್ಯ 2:19-21, 2 ತಿಮೋಥೆ 4:7 ನೋಡಿರಿ). ಆದುದರಿಂದ, ನಾವು ಸಹ 7ನೇ ಅಧ್ಯಾಯದ ಹೋರಾಟವನ್ನು ತೊರೆದು ಲನೇ ಅಧ್ಯಾಯದ ವಿಜಯದಲ್ಲಿ ಪ್ರವೇಶಿಸೋಣ! ನಾವು ಪ್ರಾಪಂಚಿಕ ಪ್ರಾಕೃತ ಕ್ರೈಸ್ತರಾಗಿ ಉಳಿಯದಿರೋಣ. ಬದಲಾಗಿ, ಪವಿತ್ರಾತ್ಮನ ಆಧಿನದಲ್ಲಿದ್ದು ಆತನಿಂದ ನಡಿಸಿಕೊಳ್ಳುವಂತ ಕ್ರೈಸ್ತರಾಗಿರೋಣ. ಪರಿಶುದ್ದರೂ ಆತ್ಮೀಕರೂ ಆಗಬೇಕಾದರೆ ಒಂದೇ ಸಾರಿ ವಿಶೇಷಕೃಪೆಯೊಂದನ್ನು ಪಡೆಯುವದು ಅಶ್ಯಕವೆಂದು ಕೆಲವು ಕ್ರೈಸ್ತರು ನಂಬುತ್ತಾರೆ. ಇನ್ನು ಕೆಲವು ಕ್ರೈಸ್ತರು ನಮ್ಮ ಕ್ರೈಸ್ತ ಜೀವನದಲ್ಲಿ ಬೆಳೆಯುತ್ತಾ ಹೋದಂತೆ ಕ್ರಮೇಣವಾಗಿ ನಾವು ಹೆಚ್ಚು ಪರಿಶುದ್ಧರೂ ಆತ್ಮೀಕರೂ ಆಗುತ್ತೇವೆಂದು ನಂಬುತ್ತಾರೆ. ಹೇಗಿದ್ದರೂ – ಶೀಘ್ರವೇ ಆಗಲಿ ಅಥವಾ ಕ್ರಮೇಣವಾಗಿಯೇ ಆಗಲಿ – ರೋಮಾಪು ರದವರಿಗೆ 7ನೇ ಅಧ್ಯಾಯದಲ್ಲಿ ಬಣ್ಣಿಸಲಾಗಿರುವ ಪ್ರಕೃತಸ್ಥಿತಿಯನ್ನು ತೊರೆದು ಲನೇ ಅಧ್ಯಾಯಲ್ಲಿ ಬಣ್ಣಿಸಲಾಗಿರುವ ಆತ್ಮೀಕ ಜೀವನವನ್ನು ಪ್ರಾರಂಭಿಸೋಣ[47]

9 ಪೌಲನು ಇಲ್ಲಿ ಕ್ರೈಸ್ತರಿಗೆ ಅವರು ಶರೀರಭಾವಾಧೀನರಲ್ಲ, ಆದರೆ ದೇವರಾತ್ಮನಿಗೆ [48] ಆಧೀನರು ಎಂದು ಹೇಳುತ್ತಾನೆ. ಈ ವಚನದಲ್ಲಿ ಆತ್ಮ, ದೇವರಾತ್ಮ ಮತ್ತು ಕ್ರಿಸ್ತನ ಎಂಬ ಪದಗಳು ಒಂದೇ ಆತ್ಮನನ್ನು – ಪವಿತ್ರಾತ್ಮನನ್ನು ಸೂಚಿಸುತ್ತವೆ (1 ಕೊರಿಂಥ 3:16, 6:19).

ನೀರಿನ ಕುರಿತಾದ ಒಂದು ಸರಳ ದೃಷ್ಟಾಂತವು ದೇವರು, ಕ್ರಿಸ್ತನು ಮತ್ತು ಪವಿತ್ರಾತ್ಮನ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ. ದೇವರು ನೀರಿನ ಮೂಲಾಧಾರವಾದ ಬುಗ್ಗೆ ಯಾಗಿದ್ದಾನೆ, ಕ್ರಿಸ್ತನು ನೀರನ್ನು ಭೂಮಿಗೆ ತರುವ ಕೊಳವೆ ಅಥವಾ ಕಾಲುವೆ ಆಗಿದ್ದಾನೆ, ಮತ್ತು ಪವಿತ್ರಾತ್ಮನು ಸ್ವತಃ ನೀರಾಗಿದ್ದು ದೇವರಿಂದ ಕ್ರಿಸ್ತನ ಮೂಲಕವಾಗಿ ನಮ್ಮ ಬಳಿಗೆ ಹರಿದು ಬರುವವನಾಗಿದ್ದಾನೆ.

ಕ್ರಿಸ್ತನ ಆತ್ಮನು ನಮ್ಮಲ್ಲಿ ವಾಸಿಸುವದಾದರೆ ಮಾತ್ರವೇ ನಾವು ಕ್ರಿಸ್ತನಿಗೆ ಸೇರಿದವರಾಗಿರುತ್ತೇವೆ. ಪವಿತ್ರಾತ್ಮನು ಕಾಲಕಾಲಕ್ಕೆ ಬಂದು ಅವಿಶ್ವಾಸಿಗಳನ್ನು ಸಂಧಿಸುವದು ನಿಜವೇ, ಆದರೆ ಆತನು ಅವರೊಳಗೆ ವಾಸಿಸುವದಿಲ್ಲ. ಒಬ್ಬ ವ್ಯಕ್ತಿಯು ತನ್ನ ಹೃದಯದ ಬಾಗಿಲನ್ನು ಪವಿತ್ರಾತ್ಮನಿಗೆ ತೆರೆಯುವದಾದರೆ ಮಾತ್ರವೇ ಪವಿತ್ರಾತ್ಮನು ಅವನೊಳಗೆ ಪ್ರವೇಶಿಸಿ ವಾಸಮಾಡುತ್ತಾನೆ (ಪ್ರಕಟಣೆ 3:20 ಮತ್ತು ವ್ಯಾಖ್ಯಾನ ನೋಡಿರಿ).

**10** ಆದರೆ ಕ್ರಿಸ್ತನು (ಕ್ರಿಸ್ತನ ಆತ್ಮನು) ನಿಮ್ಮಲ್ಲಿದ್ದರೆ ನಿಮ್ಮ ದೇಹವು (ನಿಮ್ಮ ಪೂರ್ವ ಪಾಪಾಧೀನ ಸ್ವಭಾವವು) ಸತ್ತದ್ದಾಗಿದೆ. ಈಗಿನಿಂದ ನಿಮ್ಮ ಪೂರ್ವಸ್ವಭಾವವು ನಿಮ್ಮ ಒಡೆಯನಾಗಿರುವದಿಲ್ಲ (ರೋಮಾ 6:6ಮತ್ತು ವ್ಯಾಖ್ಯಾನ ನೋಡಿರಿ).

ಕ್ರಿಸ್ತನ ಆತ್ಮನು ನಿಮ್ಮಲ್ಲಿದ್ದರೆ ನಿಮ್ಮ ದೇಹವು ಸತ್ತದ್ದಾಗಿದ್ದರೂ ನಿಮ್ಮ ಆತ್ಮವು ಜೀವಸ್ವರೂಪವಾಗಿದೆ – ಅಂದರೆ, ನಿಮ್ಮ ನೂತನ ಆತ್ಮೀಕ ಸ್ವಭಾವವು ಜೀವಂತವಾಗಿದೆ (ರೋಮ 6:11, ಗಲಾತ್ಯ 2:20). ನಮ್ಮ ದೇಹಗಳು, ನಮ್ಮ ಪೂರ್ವ ಸ್ವಭಾವಗಳು ಪಾಪದ ದೆಸೆಯಿಂದ ಸತ್ತವುಗಳಾಗಿವೆ. ನಮ್ಮ ಆತ್ಮಗಳು ನೀತಿಯ ದೆಸೆಯಿಂದ – ಅಂದರೆ, ಕ್ರಿಸ್ತನ ನೀತಿಯ ಕಾರಣದಿಂದ – ಜೀವ ಸ್ವರೂಪವಾಗಿವೆ.

**11** ದೇವರೇ ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದಾತನಾಗಿದ್ದಾನೆ. ನಮ್ಮಲ್ಲಿ ವಾಸವಾಗಿರುವ ತನ್ನ ಆತ್ಮನ ಮೂಲಕ ದೇವರು ನಮ್ಮ ಮರ್ತ್ಯದೇಹಗಳನ್ನು ಸಹ ಬದುಕಿಸುವನು. ಅಂದರೆ. ಆತನು ನಮಗೆ ಆತ್ಮೀಕ ಜೀವವನ್ನು ನೀಡುವನು. ದೇವರು ಈ ಲೋಕದಲ್ಲಿ ನಮಗೆ ನೂತನ ಆತ್ಮೀಕ ಜೀವವನ್ನು ಕೊಡುವದು ಮಾತ್ರವಲ್ಲ, ಆದರೆ ಆತನು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದಂತೆಯೇ ನಮ್ಮನ್ನು ಸಹ ಸದಾಕಾಲ ಆತನೊಂದಿಗೆ ಜೀವಿಸುವಂತಾಗಲು ಲೋಕಾಂತ್ಯದಲ್ಲಿ ಸತ್ತವರೊಳಗಿಂದ ಎಬ್ಬಿಸುವನು. ಹಾಗಾದರೆ, ಈ ವಚನದಲ್ಲಿ ನಮ್ಮ ದೇಹಗಳು ಪುನರುತ್ಥಾನಗೊಳ್ಳುವವೆಂಬ ವಾಗ್ದಾನವು ನಮಗೆ ಕೊಡಲ್ಪಟ್ಟಿದೆ (1 ಕೊರಿಂಥ 15:42-49, ಫಿಲಿಪ್ಪಿ 3:20-21 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**12** ಪೌಲನು ಇಲ್ಲಿ ತಾನು 4ನೇ ವಚನದಲ್ಲಿ ಬರೆದ ಸಂಗತಿಯನ್ನು ನಮ್ಮ ನೆನಪಿಗೆ ತರುತ್ತಾನೆ. ಕ್ರೈಸ್ತರು ಶರೀರಭಾವಾಧೀನರಾಗಿ ಜೀವಿಸುವದಿಲ್ಲ ಬದಲಾಗಿ ಆತ್ಮನಿಗೆ ಅಧೀನರಾಗಿ ಜೀವಿಸುತ್ತಾರೆ. ನಾವು ಶರೀರಭಾವಾಧೀನರಾಗಿ ಜೀವಿಸುವ ಹಂಗಿನವರಾಗಿರುವದಿಲ್ಲ, ಅದನ್ನು ಅನುಸರಿಸಿ ಬದುಕಬೇಕೆಂಬ ಹಂಗಿನಲ್ಲಿರುವದಿಲ್ಲ, ನಮ್ಮ ಶರೀರಾಧೀನ ಸ್ವಭಾವವು ನಮಗೆ ಯಾವ ಒಳ್ಳೇದನ್ನು ಮಾಡಿರುವದಿಲ್ಲ, ನಾವು ಅದರ ಋಣದಲ್ಲಿರುವದೂ ಇಲ್ಲ! ಬದಲಾಗಿ, ನಾವು ಕ್ರಿಸ್ತನ ಹಂಗಿನಲ್ಲಿದ್ದೇವೆ. ನಮ್ಮ ಪಾಪಕ್ಕಾಗಿ ನಾವು ಹೊಂದಿದ್ದ "ಸಾಲ"ವನ್ನು ಕ್ರಿಸ್ತನು ಸಂದಾಯ ಮಾಡಿದನು. ಆದುದರಿಂದ, ನಾವು ಕ್ರಿಸ್ತನ ಹಂಗಿನಲ್ಲಿದ್ದೇವೆ – ಹೊರತು ಶರೀರಭಾವಕ್ಕಲ್ಲ.

**13** ನಾವು ಶರೀರಭಾವಕ್ಕನುಸಾರ ಜೀವಿಸುವದಾದರೆ ಸಾಯುತ್ತೇವೆ – ಅಂದರೆ, ನಾವು ದೇವರಿಂದ ನಿತ್ಯ ಮರಣದ ದಂಡನೆಯನ್ನು ಪಡೆಯುತ್ತೇವೆ. ಆದುದರಿಂದ, ನಾವು ಅತ್ಯಂತ ಪ್ರಾಮುಖ್ಯವಾದ ಒಂದು ಪ್ರಶ್ನೆಯನ್ನು ಕೇಳಿಕೊಳ್ಳಬೇಕು: ನಾವು ಹೇಗೆ ನಿತ್ಯ ಮರಣದಿಂದ ತಪ್ಪಿಸಿಕೊಂಡು ನಿತ್ಯ ಜೀವವನ್ನು ಪಡೆದುಕೊಳ್ಳಬಹುದು?

ಕೆಲವು ಜನರು ಈ ಪ್ರಶ್ನೆಗೆ ಉತ್ತರಿಸುತ್ತಾ ಹೇಳುವದೇನೆಂದರೆ ನಾವು ಕ್ರಿಸ್ತನನ್ನು ನಂಬಿದರೆ ಸಾಕು ಉಳಿದದ್ದೆಲ್ಲವನ್ನೂ ಕ್ರಿಸ್ತನು ಮಾಡುತ್ತಾನೆ. ನಾವು ಮಾಡಬೇಕಾದದ್ದಿಷ್ಟೇ, "ನಾನು ನಂಬುತ್ತೇನೆ" ಎಂದು ಹೃದಯ ಪೂರ್ವಕವಾಗಿ ಹೇಳಿದಾಗ ನಾವು ಹಾಗೆಯೇ ರಕ್ಷಿಸಲ್ಪಡುವೆವು ಎಂದು ಈ ಜನರು ಹೇಳುತ್ತಾರೆ.

ಆದರೆ ಇಲ್ಲಿ ಪೌಲನು ಬೇರೆಯಾದ ಉತ್ತರವನ್ನು ನೀಡುತ್ತಾನೆ. ನಿಜ, ನಾವು ಮೊದಲು ಕ್ರಿಸ್ತನನ್ನು ನಂಬಬೇಕು. ಆದರೆ, ಅನಂತರ ಪವಿತ್ರಾತ್ಮನ ಮೂಲಕವಾಗಿ ನಾವು ದೇಹದ (ಶರೀರಭಾವದ) ದುರಭ್ಯಾಸಗಳನ್ನು ನಾಶಮಾಡಬೇಕು. ಇದನ್ನು ಮಾಡಿದಾಗ ಮಾತ್ರವೇ ನಾವು ಜೀವಿಸುವೆವು – ಅಂದರೆ, ರಕ್ಷಿಸಲ್ಪಡುವೆವು. ಇದು ಏಕೆ? ಯಾಕೆಂದರೆ ನಾವು ಶರೀರಭಾವಕ್ಕನುಸಾರವಾಗಿ ಜೀವಿಸಬೇಕು, ಇಲ್ಲವೆ ಆತ್ಮನಿಗೆ ಅನುಸಾರವಾಗಿ ಜೀವಿಸಬೇಕು, ನಾವು ಎರಡರ ಅನುಸಾರವಾಗಿ ಜೀವಿಸರೋಮಾಪುರದವರಿಗೆಲು ಸಾಧ್ಯವಿಲ್ಲ. ನಾವು ಶರೀರ ಭಾವಕ್ಕನುಸಾರ ಜೀವಿಸುವದಾದರೆ ಸಾಯುವೆವು – ಅದು ನಿಶ್ಚಯ. ಆದರೆ ನಾವು ಪವಿತ್ರಾತ್ಮಾನುಸಾರ ಜೀವಿಸಬೇಕಾದರೆ ಒಂದು ಕಾರ್ಯವನ್ನು ಮಾಡಬೇಕಾಗುವದು: ನಾವು ದೇಹದ ದುರಭ್ಯಾಸಗಳನ್ನು ನಾಶಮಾಡಬೇಕು.

ಇಲ್ಲಿ ಒಂದು ಅತ್ಯಂತ ಪ್ರಾಮುಖ್ಯ ಬೋಧನೆಯಿರುತ್ತದೆ. ಕ್ರಿಸ್ತನನ್ನು ಹಿಂಬಾಲಿಸುವದು ಸುಲಭವೆಂಬದಾಗಿ ಜನರು ತಪ್ಪಾಗಿ ಯೋಚಿಸುತ್ತಾರೆ. ಕ್ರೈಸ್ತರಾದ ನಾವು ಒಳ್ಳೇ ಕಾರ್ಯಗಳನ್ನು ಮಾಡಬೇಕಾಗಿಲ್ಲ ಅಥವಾ ಧಾರ್ಮಿಕ ನಿಯಮಗಳಿಗೆ ವಿಧೇಯರಾಗುವ ಅವಶ್ಯಕತೆಯಿಲ್ಲಾ ಎಂದು ಹೇಳುತ್ತಾರೆ. ನಾವು ಪಾಪ ಮಾಡುವದಾದರೆ ಅದರ ಕುರಿತಾಗಿ ಚಿಂತಸಬೇಕಾಗಿಲ್ಲ ಯಾಕೆಂದರೆ ನಾವು ಹಾಗೆಯೇ ಕ್ಷಮಿಸಲ್ಪಡುವೆವು ಎಂದು ಹೇಳುತ್ತಾರೆ. ಈ ಹೇಳಿಕೆಗಳು ಸತ್ಯಕ್ಕೆ ದೂರವಾಗಿವೆ. ಕ್ರಿಸ್ತನನ್ನು ಹಿಂಬಾಲಿಸುವದು ಎಲ್ಲರಿಗೂ ಅತ್ಯಂತ ಕಠಿಣವಾದ ದಾರಿಯಾಗಿರುತ್ತದೆ. ಯಾಕೆ ? ಯಾಕೆಂದರೆ ಕ್ರಿಸ್ತನನ್ನು ಹಿಂಬಾಲಿಸಲು ನಾವು ದೇಹದ ದುರಭ್ಯಾಸಗಳನ್ನು ನಾಶಮಾಡಬೇಕು. ಅದು ಒಬ್ಬನು ತನ್ನನ್ನು ಸಾಯಿಸಿಕೊಳ್ಳುವಂತಿರುತ್ತದೆ. ಒಬ್ಬನು ತನ್ನನ್ನು ಸಾಯಿಸಿಕೊಳ್ಳುವದು – ಶಿಲುಬೆಗೆ ಹಾಕಿಕೊಳ್ಳುವದು ಸುಲಭವೋ? ಖಂಡಿತವಾಗಿಯೂ ಅಲ್ಲ, ಅದಕ್ಕಿಂತಲೂ

ಕಠಿಣವಾದದ್ದು ಇನ್ನೊಂದಿಲ್ಲ ಹಾಗಿದ್ದರೂ, ಜೀವಿಸಬೇಕಾದರೆ ನಮ್ಮ ಪೂರ್ವ ಶರೀರಭಾವವು ಸಾಯುವದು ಅವಶ್ಯಕವಾದದ್ದು. ನಾವು ನೂತನ ಆತ್ಮೀಕ ಜೀವವನ್ನು ಹೊಂದುವದಕ್ಕೆ ಮುಂಚೆ ನಮ್ಮ ಪೂರ್ವ ಶರೀರಾಧೀನ ಸ್ವಭಾವವು ಸಾಯಬೇಕು. ಪುನರುತ್ಥಾನಕ್ಕೆ ಮುಂಚೆ ಮರಣವು ಅಗತ್ಯ ನಮ್ಮ ದೇಹದ ದುರಭ್ಯಾಸಗಳನ್ನು "ನಾಶಮಾಡಬೇಕಾದರೆ" ನಾವು ಮೊದಲು ನಮ್ಮ ಶರೀರಾಧೀನ ಸ್ವಭಾವದ ಅಭಿಲಾಷೆಗಳನ್ನು ಸಾಯಿಸಬೇಕು, ಯಾಕೆಂದರೆ ನಮ್ಮ ಅಭಿಲಾಷೆಗಳಿಂದಲೇ ದುರಭ್ಯಾಸಗಳು ಉದ್ಭವಿಸುತ್ತವೆ (ಯಾಕೋಬ 1:14-15 ಮತ್ತು ವ್ಯಾಖ್ಯಾನ ನೋಡಿರಿ). ನಾವು ಪಾಪ ಮಾಡುವದನ್ನು ನಿಲ್ಲಿಸಬೇಕಷ್ಟೇ ಅಲ್ಲ, ನಾವು ಪಾಪಮಾಡುವದರ ಬಗ್ಗೆ ಯೋಚಿಸುವದನ್ನು ಸಹ ನಿಲ್ಲಿಸಬೇಕು! ನಾವು ಬಹಿರಂಗದಲ್ಲಿ ಮಾತ್ರವೇ ನೀತಿವಂತರಾಗಿರುವದಿಲ್ಲ, ಆದರೆ ಅಂತರ್ಯದಲ್ಲಿ ಸಹ ನೀತಿವಂತರಾಗಿರಬೇಕು. ನಾವು ಹೃದಯ ಮನಸ್ಸುಗಳ ರಹಸ್ಯಭಾಗಗಳನ್ನು "ಸಾಯಿಸಬೇಕು", ಆ ಸ್ಥಳಗಳಿಂದಲೇ ಮೊದಲು ಪಾಪವು ಹುಟ್ಟುತ್ತದೆ. ಇದು ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಳ್ಳುವದರ ಅರ್ಥಗಳಲ್ಲಿ ಒಂದಾಗಿದೆ (ರೋಮ 6:6,12, ಕೊಲೊಸ್ಸೆ 3:5, ಗಲಾತ್ಯ 5:17, 24 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಏಕಕಾಲದಲ್ಲಿ ಆತ್ಮಾನುಸಾರವಾಗಿ ಜೀವಿಸುತ್ತಾ ದೇಹದ ದುರಭ್ಯಾಸಗಳಲ್ಲಿ ಮುಂದು ವರೆಯುವದು ಅಸಾಧ್ಯವಾಗಿರುತ್ತದೆ. ನಾವು ದೇಹದ ದುರಭ್ಯಾಸಗಳನ್ನು ಸಾಯಿಸದೇ ಇರುವದಾದರೆ ಪವಿತ್ರಾತ್ಮನು ನಮ್ಮಲಿಲ್ಲ ಮತ್ತು ನಾವು ಕ್ರಿಸ್ತನಿಗೆ ಸೇರಿದವರಲ್ಲ, ಮತ್ತು ನಾವು ಕ್ರಿಸ್ತನಿಗೆ ಸೇರಿದವರಲ್ಲವಾದರೆ ನಾವು ರಕ್ಷಣೆಯನ್ನು ಪಡೆದಿರುವದಿಲ್ಲ.

ಆದರೆ ನಾವು ಒಂದು ಸಂಗತಿಯನ್ನು ನೆನಪಿನಲ್ಲಿಟ್ಟುಕೊಳ್ಳಬೇಕು: ನಾವು ದೇಹದ ದುರಭ್ಯಾಸಗಳನ್ನು ಸಾಯಿಸಬೇಕಾದರೆ ನಮಗೆ ಪವಿತ್ರಾತ್ಮನ ಸಹಾಯದ ಅಗತ್ಯವಿರುತ್ತದೆ. ಆತನಿಲ್ಲದೆ ನಾವು ಇದನ್ನು ಮಾಡಲಾಗುವದಿಲ್ಲ ಮತ್ತು ಪವಿತ್ರಾತ್ಮನು ಯಾವಾಗಲೂ ನಮ್ಮೊಂದಿಗಿದ್ದು ನಾವು ನೀತಿಯುಳ್ಳ ಜೀವಿತವನ್ನು ನಡೆಸುವಂತೆ ಸಹಾಯ ಮಾಡಲು ಸಿದ್ಧನಾಗಿರುತ್ತಾನೆ. ಇದು ರೋಮಾಪುರದವರಿಗೆ ಏನೇ ಅಧ್ಯಾಯದ ಸಂತೋಷಕರ ವಾರ್ತೆಯಾಗಿದೆ.

**14** ದೇವರಾತ್ಮನಿಂದ ನಡಿಸಿಕೊಳ್ಳುವವರು ಮಾತ್ರವೇ ದೇವರ ಮಕ್ಕಳೆಂದು ಕರೆಯಿಸಿಕೊಳ್ಳಬಹುದು ದೇವರು ಎಲ್ಲಾ ಮಾನವರ ತಂದೆಯಾಗಿದ್ದಾನೆಂದು ಕೆಲವರು ಹೇಳುತ್ತಾರೆ. ಆದರೆ ಇದು ಸತ್ಯವಾದದ್ದಲ್ಲ. ದೇವರು ಎಲ್ಲಾ ಮಾನವರ ಸೃಷ್ಟಿಕರ್ತನು, ಆದರೆ ಆತನು ಆತ್ಮನಿಂದ ನಡಿಸಿಕೊಳ್ಳುವವರಿಗೆ ಮಾತ್ರವೇ ತಂದೆಯಾಗಿದ್ದಾನೆ (ಯೋಹಾನ 1:12 ಮತ್ತು ವ್ಯಾಖ್ಯಾನ ನೋಡಿರಿ).

**15** ಆತ್ಮನು ನಮ್ಮನ್ನು ದಾಸರನ್ನಾಗಿ ಮಾಡುವದಿಲ್ಲ, ಬದಲಾಗಿ ಆತನು ನಮ್ಮನ್ನು ದೇವರ ಸ್ವತಂತ್ರ ಮಕ್ಕಳನ್ನಾಗಿ ಮಾಡುತ್ತಾನೆ. ಮೊದಲು ನಾವು ಮಕ್ಕಳಾಗಿರಲಿಲ್ಲ. ಆದ್ದರಿಂದ, ಆತ್ಮನು ನಮ್ಮನ್ನು ದತ್ತು ಮಕ್ಕಳನ್ನಾಗಿ ಮಾಡುತ್ತಾನೆ. ಪವಿತ್ರಾತ್ಮನು ಮಕ್ಕಳನ್ನಾಗಿ ಮಾಡುವವನಾಗಿದ್ದಾನೆ [49] . ಅಥವಾ ದತ್ತು ಪುತ್ರರನ್ನಾಗಿ ಮಾಡುವ ಆತ್ಮನಾಗಿದ್ದಾನೆ. ಪವಿತ್ರಾತ್ಮನ ಮೂಲಕವಾಗಿ ನಾವು ತಂದೆಯನ್ನು "ಅಪ್ಪಾ" [50] ಎಂದು ಕರೆಯಲು ಅದರರ್ಥವು "ತಂದೆಯೇ" ಎಂಬದಾಗಿರುತ್ತದೆ (ಮಾರ್ಕ 14:36 ನೋಡಿರಿ).

**16** ನಾವು ನಿಜವಾಗಿಯೂ ದೇವರ ಮಕ್ಕಳೆಂಬ ನಿಶ್ಚಯವನ್ನು ಪವಿತ್ರಾತ್ಮನು ನಮಗೆ ನೀಡುತ್ತಾನೆ. ಪವಿತ್ರಾತ್ಮನು ನಮ್ಮ ಲ್ಲಿರುವದಾದರೆ ನಾವು ದೇವರ ಮಕ್ಕಳೆಂಬದನ್ನು ಸಂಶಯಿಸುವದಿಲ್ಲ (ಗಲಾತ್ಯ 4:6-7, 1 ಯೋಹಾನ 3:1 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಪೌಲನು ಇಲ್ಲಿ ಪವಿತ್ರಾತ್ಮನೇ, ನಮ್ಮ ಆತ್ಮದೊಂದಿಗೆ (ಅಂದರೆ, ನಮ್ಮ ಮಾನವ ಆತ್ಮ) ಸಾಕ್ಷಿ ಹೇಳುತ್ತಾನೆ ಎಂದು ತಿಳಿಸುತ್ತಾನೆ. ಮಾನವ ಆತ್ಮ ಯಾವದು ? ಮಾನವ ಆತ್ಮವು ಮನುಷ್ಯನ ಆತ್ಮೀಕ ಭಾಗವಾಗಿದೆ. ನಾವು ಕ್ರಿಸ್ತನನ್ನು ನಂಬುವಾಗ ಪವಿತ್ರಾತ್ಮನು ಜೀವಂತಗೊಳಿಸುವ ನಮ್ಮ ಭಾಗವಾಗಿದೆ. ಕೆಲವರು ಮಾನವನ ಆತ್ಮವನ್ನು ಅಂತರ್ಯ ಅಥವಾ ಮನಸ್ಸಾಕ್ಷಿ ಎಂದು ಕರೆಯುತ್ತಾರೆ (ರೋಮ 7:22 ಮತ್ತು ವ್ಯಾಖ್ಯಾನ ನೋಡಿರಿ). ಮಾನವನು ಆತ್ಮ, ಪ್ರಾಣ ಮತ್ತು ಶರೀರ ಎಂಬ ಮೂರು ಭಾಗಗಳಿಂದ ಸೃಷ್ಟಿಸಲ್ಪಟ್ಟಿರುತ್ತಾನೆಂದು ಹೇಳಬಹುದು. (1 ಥೆಸಲೋನಿಕದವರಿಗೆ 5:23). ನಮ್ಮ ಮಾನವ ಆತ್ಮದ ಮುಖಾಂತರವಾಗಿ ನಾವು ದೇವರ ಪ್ರಸನ್ನತೆಯನ್ನು ಹಾಗು ನಮ್ಮ ಜೀವಿತಗಳಲ್ಲಿ ಪವಿತ್ರಾತ್ಮನ ಆಶಿರ್ವಾದಗಳನ್ನು ಅನುಭವಿಸುತ್ತೇವೆ.

**17** ನಾವು ಮಕ್ಕಳಾಗಿರುವದಾದರೆ ನಾವು "ಬಾಧ್ಯರು" ಸಹ ಆಗಿದ್ದೇವೆ! ನಮ್ಮಲ್ಲಿರುವ ಪವಿತ್ರಾತ್ಮನು ಪರಲೋಕದಲ್ಲಿ ನಾವು ಮುಂದೆ ಹೊಂದಲಿರುವ ಸ್ವಾಸ್ತ್ಯಕ್ಕೆ "ಸಂಚಕಾರ" (ಠೇವಣಿ) ಆಗಿದ್ದಾನೆ (2 ಕೊರಿಂಥ 5:5, ಎಫೆಸ 1:13-14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಆದರೆ ಇಲ್ಲಿ ಇನ್ನೊಂದು ಪ್ರಾಮುಖ್ಯ ಸಂಗತಿಯನ್ನು ತಿಳಿಸುತ್ತಾನೆ. ಕ್ರಿಸ್ತನೊಂದಿಗೆ ಬಾಧ್ಯರಾದ ನಾವು ಆತನ ಜೀವ ಮತ್ತು ಆತನ ಮಹಿಮೆಯಲ್ಲಿ ಮಾತ್ರವೇ ಪಾಲುಗಾರರಲ್ಲ; ಆದರೆ ಆತನ ಬಾಧೆಗಳಲ್ಲಿ ಸಹ ಪಾಲುಗಾರರಾಗಿದ್ದೇವೆ. ಒಂದು ವೇಳೆ ನಾವು ಆತನ ಬಾಧೆಗಳಲ್ಲಿ ಪಾಲುಗಾರರಾಗಲಿಚ್ಚಿಸದೇ ಹೋದರೆ ನಾವು ಆತನ ಮಹಿಮೆಯಲ್ಲಿ ಪಾಲುಗಾರರಾಗುವದಿಲ್ಲ (2 ತಿಮೊಥೆ 2:11-12, 3:12, 1 ಪೇತ್ರ 4:12-14).

ಕ್ರೈಸ್ತರಿಗೆ ಎರಡು ರೀತಿಯ ಶಿಲುಬೆಗಳಿರುತ್ತವೆ 51 ಮೊದಲನೆಯದಾಗಿ, ನಮ್ಮ ಪೂರ್ವ ಸ್ವಭಾವವು ಶಿಲುಬೆಗೇರಿಸಲ್ಪಟ್ಟಂಥ ಶಿಲುಬೆ (ರೋಮ 6:6). ಇನ್ನೊಂದು "ಶಿಲುಬೆ"ಯು ಕ್ರಿಸ್ತನನ್ನು ಹಿಂಬಾಲಿಸುವದರ ಫಲಿತವಾಗಿ ಬರುವ ಬಾಧೆ ಮತ್ತು ಹಿಂಸೆ ಆಗಿದೆ. ಮೊದಲನೆಯ ಶಿಲುಬೆಯನ್ನು ಕ್ರಿಸ್ತನು ನಮಗಾಗಿ ಹೊತ್ತಕೊಂಡನು. ಎರಡನೆಯ

ಶಿಲುಬೆಯನ್ನು ನಾವು ಕ್ರಿಸ್ತನಿಗಾಗಿ ಹೊತ್ತುಕೊಳ್ಳಬೇಕು. ನಾವು ಕ್ರಿಸ್ತನೊಂದಿಗೆ ಬಾಧ್ಯರಾಗಿ ಆಳಲಿಚ್ಚಿಸುವದಾದರೆ ನಾವು ಈ ಎರಡನೆಯ ಶಿಲುಬೆಯನ್ನು ಹೊತ್ತುಕೊಳ್ಳಬೇಕು (ಮಾರ್ಕ 8:34 ಮತ್ತು ವ್ಯಾಖ್ಯಾನ ನೋಡಿರಿ).

## ಭವಿಷ್ಯದ ಮಹಿಮೆ (8:18-30)

**18** ಪೌಲನು ಅನುಭವಿಸಿದ ಸಂಕಷ್ಟ ಮತ್ತು ಬಾಧೆಗಳಿಗಿಂತ ಅಧಿಕವಾದದ್ದನ್ನು ಕೆಲವರು ಮಾತ್ರವೇ ಅನುಭವಿಸಿದ್ದಾರೆ (2 ಕೊರಿಂಥ 6:4-10, 11:23-28). ಹಾಗಿದ್ದರೂ, ಬರಲಿರುವ ಮಹಿಮೆಗೆ ಹೋಲಿಸುವದಾದರೆ ಅನುಭವಿಸಿದ ಹಿಂಸೆಯು ಗಣನೆಗೆ ಬರಲು ಯೋಗ್ಯವಾಗಿರುವದಿಲ್ಲ (2 ಕೊರಿಂಥ 4:17).

ಪೌಲನು ಇಲ್ಲಿ ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮೆಯನ್ನು ಕುರಿತು ಪ್ರಸ್ತಾಪಿಸುತ್ತಾನೆ. ನಮ್ಮಲ್ಲಿ ಯಾರ ಮಹಿಮೆಯುಪ್ರತ್ಯಕ್ಷವಾಗುವದು ? ಕ್ರಿಸ್ತನ ಮಹಿಮೆ. ನಾವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಾಗ ಆತನ ಮಹಿಮೆಯನ್ನು ಪಡೆಯುವೆವು; ನಾವು ಆತನ ಹಾಗೆ ಇರುವೆವು (1 ಯೋಹಾನ 3:2). ಪವಿತ್ರಾತ್ಮನಿಂದ ನಡಿಸಿಕೊಳ್ಳುವವರಿಗೆ ಈ ಮಹಿಮೆಯು ಈಗಾಗಲೇ ಈ ಲೋಕದಲ್ಲಿ ಪ್ರಾರಂಭವಾಗಿರುತ್ತದೆ (2 ಕೊರಿಂಥ 3:18 ಮತ್ತು ವ್ಯಾಖ್ಯಾನ ನೋಡಿರಿ).

**19** ಈ ವಚನದಲ್ಲಿರುವ ಜಗತ್ತು (ಸೃಷ್ಟಿ) ಎಂಬ ಪದವು ಪ್ರಾಣಿಗಳು ಮತ್ತು ಗಿಡಗಳನ್ನೊಳಗೊಂಡ ಎಲ್ಲಾ ಜೀವವುಳ್ಳ ಸಂಗತಿಗಳನ್ನು ಸೂಚಿಸುತ್ತದೆ. ಇಡೀ ಜಗತ್ತು ದೇವಪುತ್ರರ ( ಕ್ರಿಸ್ತನ ವಿಶ್ವಾಸಿಗಳ) ಮಹಿಮೆಯು ಪ್ರಶ್ಯಕ್ಷವಾಗುವದನ್ನು (ಮಹಿಮೆಗೊಳ್ಳುವದನ್ನು) ಎದುರುನೋಡುತ್ತಿರುವದು ಅದು ಯಾವಾಗ ಪ್ರತ್ಯಕ್ಷವಾಗುವದು? ದೇವರನ್ನು ಹೊರತು ಪಡಿಸಿ ಯಾರಿಗೂ ಗೊತ್ತಿರುವದಿಲ್ಲ. ಆದರೆ ಬೈಬಲ್ ಬೋಧನೆಯ ಪ್ರಕಾರವಾಗಿ ಕ್ರಿಸ್ತನು ಮಹಿಯೊಂದಿಗೆ ಆಳುವದಕ್ಕೆ ಪುನಃ ಬರುವ ಲೋಕಾಂತ್ಯದ ವೇಳೆಯಲ್ಲಿ ಅವರ ಮಹಿಮೆಯು ಪ್ರತ್ಯಕ್ಷವಾಗುವದು (ಮಾರ್ಕ 13:23-27, 31-32; 2 ಪೇತ್ರ 3:13; ಪ್ರಕಟಣೆ 21:1-4 ನೋಡಿರಿ). ಇಡೀ ಜಗತ್ತು ಆ ದಿನಕ್ಕಾಗಿ ಕಾಯುತ್ತಿದೆ, ಯಾಕೆಂದರೆ ಆ ದಿನದಲ್ಲಿ ವಿಶ್ವಾಸಿಗಳು ಪ್ರತ್ಯಕ್ಷವಾಗುವದು (ಮಹಿಮೆಗೊಳ್ಳುವದು) ಮಾತ್ರವೇ ಅಲ್ಲ; ಆದರೆ ಇಡೀ ಜಗತ್ತೇ ಕೆಲವೊಂದು ರೀತಿಯಲ್ಲಿ ನೂತನಗೊಳಿಸಲ್ಪಡುವದು.

**20** ನಾವು ಜಗತನ್ನು ನೋಡುವಾಗ ಅದರ ಸ್ಥಿತಿಯು ಕೆಲವು ವಿಧಗಳಲ್ಲಿ ನಿರರ್ಥಕವಾಗಿ ತೋರುತ್ತದೆ; ಆದರೆ ಚಟುವಟಿಕೆಗಳೆಲ್ಲವೂ ವ್ಯರ್ಥತ್ವಕ್ಕೆ ಒಳಗಾದಂತೆ ಕಾಣುತ್ತವೆ. ಸಮಸ್ತವೂ ಕೇವಲ ಕ್ಷಣ ಮಾತ್ರ ಇರುತ್ತದೆ; ಅನಂತರ ಅದು ರೋಗಗ್ರಸ್ತವಾಗಿ ಸಾಯುತ್ತದೆ. ಜೀವನವು ಅಷ್ಟು ಶೀಘ್ರವಾಗಿ ಅಂತ್ಯಗೊಳ್ಳುವದಾದರೆ ಅದರಲ್ಲಿ ಅರ್ಥವಾದರೂ ಏನಿದೆ? ಜಗತ್ತು (ಸೃಷ್ಟಿಯು) ಪ್ರಾರಂಭದಲ್ಲಿ ಹಾಗಿರಲಿಲ್ಲ. ದೇವರು ಲೋಕವನ್ನು ಉಂಟುಮಾಡಿದ ಬಳಿಕ ಅದನ್ನು ನೋಡಲು ಅದು ಉತ್ತಮವಾಗಿತ್ತು (ಆದಿಕಾಂಡ 1:31). ದೇವರು ಉಂಟುಮಾಡಿದ್ದೆಲ್ಲವೂ ಒಳ್ಳೇದು ಮತ್ತು ಸುಂದರವಾಗಿತ್ತು, ಆದರೆ ತರುವಾಯ ಪ್ರಥಮ ಪುರುಷ ಮತ್ತು ಸ್ತ್ರೀಯಾದ ಆದಾಮ್ ಹವ್ವಳರ ಪಾಪದ ಮೂಲಕ ದೇವರ ದೃಷ್ಟಿಯು ಹಾಳಾಯಿತು. (ಆದಿಕಾಂಡ 3:1-6). ದೇವರು ಅವರಿಗೆ ಹೇಳಿದ್ದೇನೆಂದರೆ: "ನಿಮ್ಮ ನಿಮಿತ್ತ ಭೂಮಿಗೆ ಶಾಪ ಬಂತು" (ಆದಿಕಾಂಡ 3:17-18). ಹೀಗೆ, ಒಂದು ವಿಧದಲ್ಲಿ ಮಾನವನ ಪಾಪದ ಮೂಲಕವಾಗಿ ಮಾನವಜನಾಂಗ ಮಾತ್ರವಲ್ಲ, ಆದರೆ ಇಡೀ ಜಗತ್ತು ನರಳಾಟಕ್ಕೆ ಒಳಗಾಯಿತು – ಅಂದರೆ, ಮರಣ ಮತ್ತು ನಾಶನಕ್ಕೆ ಒಳಪಟ್ಟಿತು. ಅದನ್ನು ಒಳಪಡಿಸಿದವನು ದೇವರೇ ಆಗಿದ್ದಾನೆ. ಆದರೆ ದೇವರು ತನ್ನ ಸೃಷ್ಟಿಯು ನಿರಂತರವೂ ಅಂತಹ "ವೇದನೆಯ" ಸ್ಥಿತಿಯಲ್ಲಿ ಉಳಿಯಬೇಕೆಂದು ಯೋಜನೆ ಮಾಡಲಿಲ್ಲ. ಆತನು ಜಗತ್ತನ್ನು ನರಳಾಟಕ್ಕೆ ಮಾತ್ರವೇ ಅಲ್ಲ, ಆದರೆ ನಿರೀಕ್ಷೆಗೂ ಸಹ ಒಳಪಡಿಸಿದನು. ಆ ನಿರೀಕ್ಷೆಯೇನೆಂದರೆ ಭವಿಷ್ಯತ್ತಿನಲ್ಲಿ ಒಂದು ದಿನ ಆ ಜಗತ್ತು ಕೂಡಾ ನಾಶದ, ರೋಗ ಮತ್ತು ಮರಣದ ವಶದಿಂದ ಬಿಡುಗಡೆ ಹೊಂದುವದು (ವಚನ 21).

**21** ಈಗಿನ ಆಕಾಶ ಭೂಮಿಗಳು ಅಂತ್ಯಗೊಂಡಾಗ ಇಡೀ ಜಗತ್ತು ಒಂದು ವಿಧದಲ್ಲಿ ಪುನರುತ್ಥಾನಗೊಂಡು ನೂತನವಾಗುವದು ಮತ್ತು ಅಲ್ಲಿ ಇನ್ನು ನಾಶನವಾಗಲಿ ಮರಣವಾಗಲಿ ಇರುವದಿಲ್ಲ. ಪೌಲನು ಈ ನೂತನ ಪುನರುತ್ಥಾನದ ಸ್ಥಿತಿಯನ್ನು ದೇವರ ಮಕ್ಕಳ ಮಹಿಮೆಯುಳ್ಳ ವಿಮೋಚನೆ – ಅಥವಾ, ಸರಳವಾಗಿ ಹೇಳುವದಾದರೆ, ನಿತ್ಯಜೀವ – ಎಂದು ಕರೆಯುತ್ತಾನೆ. ಈ ಮಹಿಮೆಯುಳ್ಳ ವಿಮೋಚನೆಗಾಗಿಯೇ (ನಿತ್ಯ ಜೀವಕ್ಕಾಗಿಯೇ) ಇಡೀ ಜಗತ್ತು ಬಹು ಲವಲವಿಕೆಯಿಂದ ಎದುರು ನೋಡುತ್ತದೆ

**22** ಜಗತ್ತೆಲ್ಲಾ ಇಂದಿನ ವರೆಗೂ ನರಳುತ್ತಾ ಪ್ರಸವ ವೇದನೆ ಪಡುತ್ತಾ ಇರುತ್ತದೆ. ನಮ್ಮ ಸ್ವಂತ ಅನುಭವದಿಂದ ಇದು ಸತ್ಯಎಂಬದಾಗಿ ನಾವು ಬಲ್ಲೆವು . ಈ ಲೋಕದಲ್ಲಿ ಯಾತನೆ, ನೋವು , ಸಂಕಷ್ಟ, ರೋಗ ಮತ್ತು ಮರಣಗಳು ನಮ್ಮೆಲ್ಲರ ಜೀವಿತಗಳಲ್ಲಿ ಎಂದೆಂದಿಗೂ ಇರುತ್ತವೆ.

ಆದರೆ ಈ ಎಲ್ಲಾ ಸಮಸ್ಯೆಗಳು ಪ್ರಸವ ವೇದನೆಯಂತಿರುತ್ತವೆ, ಪ್ರಸವ ವೇದನೆಯು ನೂತನ ಜೀವವೊಂದು ಹುಟ್ಟಲಿದೆಯೆಂಬುದಕ್ಕೆ ಗುರುತಾಗಿದೆ. ಪ್ರಸವ ವೇದನೆಯಿಲ್ಲದೆ ನೂತನ ಜೀವವು ಇರಲಾರದು. ಒಂದು ರೀತಿಯಲ್ಲಿ, ಈ ಜಗತ್ತು ಈಗ ಅನುಭವಿಸುತ್ತಿರುವ ಪ್ರಸವ ವೇದನೆಯು ಅದರ ನಾಶದ ವಶದಿಂದ ಬಿಡುಗಡೆಯಾಗುವದರಲ್ಲಿ ನಾಂದಿಯಾಗುತ್ತದೆ (ವಚನ 21) ; ಅದು ನೂತನ ಜನ್ಮದಲ್ಲಿ, ನೂತನ ಜೀವ, ನೂತನ ಸೃಷ್ಟಿಯಲ್ಲಿ ಅಂತ್ಯಗೊಳ್ಳುವದು!

**23** ವಿಶ್ವಾಸಿಗಳಾದ ನಾವು ದೇವರ ಮಕ್ಕಳಾಗಿದ್ದೇವೆ; ನಾವು ದೇವರಾತ್ಮನಿಂದ ನಡಿಸಲ್ಪಡುವವರಾಗಿದ್ದೇವೆ. ಹಾಗಿದ್ದರೂ, ನಾವು ಸಹ ಈ ಜೀವನದಲ್ಲಿ ನಮ್ಮೊಳಗೆ ನರಳುತ್ತೇವೆ. ನಮ್ಮ ದೇಹಗಳು ಕೂಡಾ ನಾಶದ ವಶದಲ್ಲಿರುತ್ತವೆ, ನಾವು ಈಗಾಗಲೇ ಪವಿತ್ರಾತ್ಮನ ಪ್ರಥಮ ಫಲವನ್ನು ಹೊಂದಿದ್ದರೂ –ಅಂದರೆ, ಕ್ರಿಸ್ತನಲ್ಲಿರುವ ನೂತನ ಜೀವಿತವನ್ನು – ನಮಗಾಗಿ ಪರಲೋಕದಲ್ಲಿರುವ ನಮ್ಮ ಪೂರ್ಣ ಸ್ವಾಸ್ತ್ಯವನ್ನು ನಾವು ಇನ್ನೂ ಪಡೆದುಕೊಂಡಿಲ್ಲ (೨ ಕೊರಿಂಥ ೫:೫; ಎಫೆಸ 1:13-14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆ ಸ್ವಾಸ್ತ್ಯವು ನಿತ್ಯಜೀವ – ನಾಶನ ಮತ್ತು ಮರಣದ ವಶದಿಂದ ಮಹಿಮೆಯುಳ್ಳವಿಮೋಚನೆ ಆಗಿದೆ (ವಚನ 21).

ಕ್ರಿಸ್ತನಲ್ಲಿ ವಿಶ್ವಾಸಿಗಳು ಈಗಾಗಲೇ ದೇವರ "ದತ್ತು ಮಕ್ಕಳಾಗಿದ್ದಾರೆ" (ವಚನ ೧೫). ಆದರೆ ನಾವು ಇನ್ನೂ ವಯಸ್ಸಿಗೆ ಬಂದಿಲ್ಲ, ಪುತ್ರರಾಗಿ ನಮ್ಮ ಪೂರ್ಣದತ್ತನ್ನು (ಪದವಿಯನ್ನು) ನಾವು ಇನ್ನು ಪಡೆದು ಕೊಂಡಿರುವದಿಲ್ಲ. ನಮ್ಮ ದೇಹಗಳ ವಿಮೋಚನೆಯು ಸಂಭವಿಸುವ ದಿನದಲ್ಲಿ – ನಮ್ಮ ದೇಹಗಳು ಪುನರುತ್ಥಾನಗೊಳ್ಳುವ ದಿನದಲ್ಲಿ – ನಾವು ನಮ್ಮ ಪದವಿಯ ಪೂರ್ಣ ಅವಕಾಶವನ್ನು, ಪೂರ್ಣ ಸ್ವಾಸ್ತ್ಯವನ್ನು ಪಡೆದುಕೊಳ್ಳುವೆವು . ಆ ದಿನದಲ್ಲಿ ನಾವು ನಮ್ಮ ವಿಮೋಚನೆಯ, ನಮ್ಮ ರಕ್ಷಣೆಯ ಪೂರ್ಣ ಪ್ರಯೋಜನಗಳನ್ನು ಪಡೆಯುವೆವು . ಅಲ್ಲದೆ ನಾವು ಸಹ ಇಡೀ ಜಗತ್ತಿನೊಂದಿಗೆ ಬರಲಿಕ್ಕಿರುವದನ್ನು ಲವಲವಿಕೆಯಿಂದ ಎದುರು ನೋಡುತ್ತಿದ್ದೇವೆ (ಎಫೆಸ 4:30 ನೋಡಿರಿ).

**24-25** ಕ್ರೈಸ್ತರಿಗೆ ನಿರೀಕ್ಷೆಯು ಒಂದು ಅತಿ ಪ್ರಾಮುಖ್ಯವಾದ ಸಂಗತಿಯಾಗಿರುತ್ತದೆ. ಈ ಲೋಕದಲ್ಲಿ ನಮ್ಮ ನಮ್ಮ ಪೂರ್ಣ ಸ್ವಾಸ್ತ್ಯವನ್ನು, ನಮ್ಮ ಪೂರ್ಣ ರಕ್ಷಣೆಯನ್ನು ಪಡೆದುಕೊಳ್ಳುವದಿಲ್ಲ; ನಾವು ನಮ್ಮ ಸ್ವಾಸ್ತ್ಯಕ್ಕೆ "ಮುಂಗಡ" ಅಥವಾ ಸಂಚಕಾರವನ್ನು ಮಾತ್ರವೇ ಪಡೆದುಕೊಳ್ಳುತ್ತೇವೆ (ಎಫೆಸ 1:14) .ನಮ್ಮ ಪೂರ್ಣ ಸ್ವಾಸ್ತ್ಯ, ನಮ್ಮ ಪೂರ್ಣ ರಕ್ಷಣೆ – ನಮ್ಮ ದೇಹಗಳ ವಿಮೋಚನೆಯು – ತರುವಾಯ ಬರುವದಾಗಿದೆ. ಆದುದರಿಂದ, ನಾವು ಇನ್ನೂ ಬರಲಿಕ್ಕಿರುವದನ್ನು ನಿರೀಕ್ಷಿಸುವವರಾಗಿದ್ದೇವೆ.

ನಾವು ರಕ್ಷಣೆಯನ್ನು ಹೊಂದಿದವರಾದರೂ ಇನ್ನು ಎದುರುನೋಡುವವರಾಗಿದ್ದೇವೆ. (ವಚನ 24). "ಈ ನೀರಿಕ್ಷೆಯು" ನಮ್ಮ ದೇಹಗಳ ವಿಮೋಚನೆಯ ನಿರೀಕ್ಷೆಯಾಗಿದೆ. (ವಚನ 23). ನಾವು ಈ ನಿರೀಕ್ಷೆಯಲ್ಲಿ ನಂಬಿಕೆಯ ಮೂಲಕ ರಕ್ಷಿಸಲ್ಪಟ್ಟಿದ್ದೇವೆ ಎಂಬುದು ಪೌಲನ ತಾತ್ಪರ್ಯವಾಗಿಸೆ. ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವದು (ಇಬ್ರಿಯ 11:1). ನಿರೀಕ್ಷೆಯು ನಂಬಿಕೆಯಿಂದ ಹುಟ್ಟುತ್ತದೆ. ದೇವರು ತನ್ನ ವಾಗ್ದಾನಗಳನ್ನು ನೆರವೇರಿಸುವನೆಂಬ ನಂಬಿಕೆಯನ್ನು ನಾವು ಹೊಂದಿದ್ದೇವೆ. ಆದ್ದರಿಂದ, ಆತನು ವಾಗ್ದಾನ ಮಾಡಿದ್ದನ್ನು ನಾವು ಪಡೆಯುವೆವೆಂಬ ನಿರೀಕ್ಷೆಯನ್ನು ನಾವು ಹೊಂದಿರುತ್ತೇವೆ.

**26** ಪವಿತ್ರಾತ್ಮನು ನಮಗಾಗಿ ಮಾಡುವ ಅನೇಕ ಕಾರ್ಯಗಳಲ್ಲಿ ನಮಗೆ ಪ್ರಾರ್ಥನೆ ಮಾಡುವಂತೆ ಸಹಾಯ ಮಾಡುವದು ಒಂದಾಗಿದೆ. ಕೆಲವು ವೇಳೆಗಳಲ್ಲಿ ನಮಗೆ ಯಾವದಕ್ಕಾಗಿ ಪ್ರಾರ್ಥಿಸಬೇಕೆಂದು ತಿಳಿಯುವದಿಲ್ಲ. ನಾವು ಚೆನ್ನಾಗಿ ತಿಳಿಯದ ಮಗುವು ತಕ್ಕದಲ್ಲದ ಅಥವಾ ಹಾನಿಕರವೂ ಆದ ಸಂಗತಿಯೊಂದನ್ನು ತಂದೆಯಿಂದ ಕೇಳುವ ಹಾಗೆ ಇರುತ್ತೇವೆ. ನಮಗಾಗಿ ಆಗಲಿ ಅಥವಾ ಇತರರಿಗೆ ಆಗಲಿ ಉತ್ತಮವಾದದ್ದೇನೆಂಬದು ಯಾವಾಗಲೂ ನಮಗೆ ತಿಳಿಯುವದಿಲ್ಲ.

ಆದುದರಿಂದ, ಪವಿತ್ರಾತ್ಮನು ಯಾವಾಗಲೂ ನಮ್ಮ ಪ್ರಾರ್ಥನೆಗಳಲ್ಲಿ ಸಹಾಯ ಮಾಡಲು ಸಿದ್ಧನಾಗಿರುತ್ತಾನೆಂಬದಕ್ಕಾಗಿ ನಾವು ಕೃತಜ್ಞತೆಯುಳ್ಳವರಾಗಿರೋಣ. ಕ್ರಿಸ್ತನು ನಮಗಾಗಿ ಪರಲೋಕದಲ್ಲಿ ಪ್ರಾರ್ಥಿಸುವ ಪ್ರಕಾರವೇ (ರೋಮ 8:34; ಇಬ್ರಿಯ 7:25). ಪವಿತ್ರಾತ್ಮನು ಸಹ ನಮ್ಮಲ್ಲಿ ವಾಸವಾಗಿದ್ದು ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ. ಕೆಲವು ಕ್ರೈಸ್ತರು ಅನ್ಯ ಭಾಷೆಗಳಲ್ಲಿ ಪ್ರಾರ್ಥಿಸುತ್ತಾರೆ. ಅಂದರೆ, ಆತ್ಮೀಕ ಭಾಷೆಯೊಂದರಲ್ಲಿ 52 ಪ್ರಾರ್ಥಿಸುತ್ತಾರೆ. ಇತರ ಕ್ರೈಸ್ತರು, ಕೆಲವು ಮಾತುಗಳಲ್ಲಿ ದೇವರಿಗೆ ಮೊರೆಯಿಡುತ್ತಾರಷ್ಟೇ, ಇದರ ಮೂಲಕ ಅವರ ಪ್ರಾರ್ಥನಾಭಾರವನ್ನು ಪೂರ್ಣವಾಗಿ ಆತನ ಮೇಲೆ ಹಾಕುತ್ತಾರೆ.

ನಾವು ಸ್ವತಃ ಪ್ರಾರ್ಥಿಸುವದಕ್ಕೆ ಪ್ರಯತ್ನವನ್ನು ಮಾಡದಿದ್ದರೆ ಪವಿತ್ರಾತ್ಮನು ಖಂಡಿತವಾಗಿಯೂ ನಮಗೆ ಸಹಾಯ ಮಾಡುವದಿಲ್ಲಗ ನಮಗೆ ಸಾಧ್ಯವಾದಷ್ಟು ಮಟ್ಟಿಗೆ ನಾವು ಪ್ರಾರ್ಥಿಸಬೇಕು; ಅಂದರೆ ನಾವು ಪ್ರಾರ್ಥನೆಯಲ್ಲಿ ಸಮಯವನ್ನು ಕಳೆಯಬಹುದು.ಒಂದು ನಾಣ್ಣುಡಿ ಹೀಗಿದೆ; ನಮ್ಮನ್ನು ಬಿಟ್ಟು ದೇವರು ಏನನ್ನು ಮಾಡಲಾಗದು, ನಮ್ಮನ್ನು ಬಿಟ್ಟು ದೇವರು ಏನನ್ನೂ ಮಾಡುವದಿಲ್ಲ. ಈ ನಾಣ್ಣುಡಿಯು ನಮ್ಮ ಪ್ರಾರ್ಥನಾ ಜೀವಿತಕ್ಕೆ ಸತ್ಯವಾದದ್ದಷ್ಟೇಅಲ್ಲ; ನಮ್ಮ ಉಳಿದ ಜೀವಿತಕ್ಕೆಲ್ಲಾ ಸಹ ಅಷ್ಟೇ ಸತ್ಯವಾದದ್ದು.

1 ಯೋಹಾನ 5:14 ರಲ್ಲಿ ಯೋಹಾನನು ಬರೆಯುವದೇನೆಂದರೆ ; ...ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆ. ನಾವು ಆತನ ಚಿತ್ತಾನುಸಾರವಾಗಿ ಪ್ರಾರ್ಥಿಸಬೇಕೆಂದು ಪವಿತ್ರಾತ್ಮನೇ ನಮಗೆ ದೇವರ ಚಿತ್ತವೇನೆಂಬದನ್ನು ತೋರಿಸುತ್ತಾನೆ.

**27** ನಮ್ಮ ಹೃದಯಗಳನ್ನು ಶೋಧಿಸಿ ನೋಡುವಾತನಿಗೆ (ದೇವರು) ಪವಿತ್ರಾತ್ಮನ ಮನೋಭಾವವು ಏನೆಂದು ತಿಳಿದದೆ. ಆತ್ಮನು ದೇವರ ಸ್ವಂತ ಪವಿತ್ರಾತ್ಮನೇ ಆಗಿದ್ದಾನೆ. ಆದುದರಿಂದ ದೇವರು ನಿಶ್ಚಯವಾಗಿಯೂ ತನ್ನ ಸ್ವಂತ ಆತ್ಮನ "ಮನೋಭಾವ" ಏನೆಂದು ತಿಳಿದವನಾಗಿದ್ದಾನೆ. ಮತ್ತು ಆತನು ಸ್ವತಃ ದೇವರ ಸ್ವಂತ ಆತ್ಮನಾಗಿರುವದರಿಂದ ಪವಿತ್ರಾತ್ಮನು ಯಾವಾಗಲೂ ನಮಗೋಸ್ಕರ ದೇವರ ಚಿತ್ತಾನುಸಾರವಾಗಿ ಬೇಡಿಕೊಳ್ಳುವನು. ದೇವರು ನಮ್ಮ ಹೃದಯಗಳ ಪ್ರತಿಯೊಂದು ತಳವನ್ನು ಸಹ ನೋಡಬಲ್ಲವನಾಗಿದ್ದಾನೆ. ನಾವು ಕೇಳುವದಕ್ಕೆ ಮುಂಚೆಯೇ ನಮಗೆ ಏನು ಬೇಕೆಂಬದನ್ನು ಆತನು

ತಿಳಿದವನಾಗಿದ್ದಾನೆ. ನಾವು ಹೃದಯಂತರಾಳದಿಂದ ಪ್ರಾರ್ಥಿಸುತ್ತಿದ್ದೇವೋ ಅಥವಾ ನಮ್ಮ ತುಟಿಗಳಿಂದ ಮಾತ್ರವೇ ಪ್ರಾರ್ಥಿಸುತ್ತಿದ್ದೇವೋ ಎಂಬದನ್ನು ಸಹ ಆತನು ಬಲ್ಲವನಾಗಿದ್ದಾನೆ. ನಾವು ಕೇವಲ ನಮ್ಮತುಟಿಗಳಿಂದ ದೇವರನ್ನು ಆರಾಧಿಸಿದೆವೆಂದು ನಮ್ಮ ವಿಷಯದಲ್ಲಿ ಹೇಳಲ್ಪಡದಿರಲಿ! (ಮಾರ್ಕ 7:6).

**28** ಈ ವಚನವು ನಿಶ್ಚಯವಾಗಿಯೂ ಹೊಸ ಒಡಂಬಡಿಕೆಯ ಅತೀಶ್ರೆಷ್ಠ ವಚನಗಳಲ್ಲಿಯೇ ಅಗ್ರಸ್ಥಾನದಲ್ಲಿ ನಿಲ್ಲುತ್ತದೆ. ಶತಶತಮಾನಗಳಿಂದಲೂ ಲಕ್ಷಾಂತರ ಕ್ರೈಸ್ತರು ಈ ವಚನದಿಂದ ಮಹಾ ಆದರಣೆ ಮತ್ತು ನಿರೀಕ್ಷೆಯನ್ನು ಪಡೆದುಕೊಂಡಿದ್ದಾರೆ. ಎಲ್ಲಾ ಕಾರ್ಯಗಳಲ್ಲಿಯೂ ದೇವರು ನಮ್ಮ ಹಿತಕ್ಕಾಗಿ ಕಾರ್ಯ ಮಾಡುತ್ತಾನೆ. ಎಲ್ಲಾ ಕಾರ್ಯಗಳು ಎಂಬ ಪದವು ಜೀವತದಲ್ಲಿನ ಉಲ್ಲಾಸ ಮತ್ತು ಸಂತೋಷಕರ ಸಂಗತಿಗಳನ್ನು ಮಾತ್ರವಲ್ಲ, ಆದರೆ ಅಸಮಾಧಾನ ಮತ್ತು ದುಃಖದ ಸಂಗತಿಗಳನ್ನು ಸಹ ಒಳಗೊಂಡಿರುತ್ತದೆ. ಇದು ಕೆಟ್ಟತನ, ಅನಾರೋಗ್ಯ ಮತ್ತು ಮರಣವನ್ನು ಒಳಗೊಂಡಿರುತ್ತದೆ. ದೇವರು ನಮ್ಮ ಜೀವಿತಗಳಲ್ಲಿನ "ಕೆಟ್ಟ" ಸಂಗತಿಗಳನ್ನು ಸಹ ನಮ್ಮ ಹಿತಕ್ಕಾಗಿ ಕಾರ್ಯ ಮಾಡಲು ಉಪಯೋಗಿಸುತ್ತಾನೆ.

ನಾವು ಸಂತೋಷವುಳ್ಳವರಾಗಿ ಎಲ್ಲಾ ಕಾರ್ಯಗಳು ಉತ್ತಮವಾಗಿ ಸಾಗುವ ಆ ವೇಳೆಗಳಲ್ಲಿ ಈ ವಚನವನ್ನು ಒಪ್ಪಿಕೊಳ್ಳುವದು ಬಹಳ ಸುಲಭವಾದದ್ದು. ಆದರೆ ಕಷ್ಟಗಳ ಸಮಯಗಳಲ್ಲಿ ಈ ವಚನವನ್ನು ಅರ್ಥಮಾಡಿಕೊಳ್ಳುವದು ಕಷ್ಟಕರವಾಗಿರುತ್ತದೆ ಮತ್ತು, ಅದನ್ನು ನಂಬುವದು ಇನ್ನೂ ಕಠಿಣವಾಗಿರುತ್ತದೆ.ನಾವು ಎಂದಿಗೂ ಈ ವಚನವನ್ನು ಹಗುರವಾಗಿ –ಒಳ್ಳೇ ಸಮಯಗಳಲ್ಲಿಯೂ ಸಹ – ಪರಿಗಣಿಸಬಾರದು.

ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ; ಎಲ್ಲಾ ಕಾರ್ಯಗಳಲ್ಲಿಯೂ ದೇವರು ನಮ್ಮ ಹಿತಕ್ಕಾಗಿ ಕಾರ್ಯ ಮಾಡುವದಾದರೆ "ಎಲ್ಲಾ ಕಾರ್ಯಗಳು" ಎಂಬ ಹೇಳಿಕೆಯಲ್ಲಿ ಸೈತಾನನು ಸಹ ಸೇರಿರುತ್ತಾನೋ? ದೇವರು ಸೈತಾನನನ್ನು ನಮ್ಮ ಹಿತಕ್ಕಾಗಿ ಉಪಯೋಗಿಸುತ್ತಾನೋ? ಇದು ಒಂದು ಪ್ರಾಮುಖ್ಯವಾದ ಪ್ರಶ್ನೆಯಾಗಿದೆ. ಸೈತಾನನ ಕಾರ್ಯವು ನಮ್ಮ ಹಿತಕ್ಕಾಗಿ ಉಪಯೋಗಿಸಲ್ಪಡುದಾದರೆ ಸೈತಾನನು ನಮ್ಮ ವೈರಿಯಲ್ಲ – ಆತನು ನಮ್ಮ ಸ್ನೇಹಿತ ಎಂದು ಕೆಲವರು ವಾದಿಸಬಹುದು 1 ಹೇಗಿದ್ದರೂ, ಸೈತಾನನು ನಿಜವಾಗಿಯೂ ನಮ್ಮ ವೈರಿಯೇ – ಒಬ್ಬ ಬಲವುಳ್ಳ ಮತ್ತು ಭಯಂಕರ ವೈರಿಯೆಂದು – ಬೈಬಲ್ ಸ್ಪಷ್ಟವಾಗಿ ಬೋಧಿಸುತ್ತದೆ. ಈ ಲೋಕದಲ್ಲಿ ಸೈತಾನನ ಕಾರ್ಯವು ನಮ್ಮ ಹಿತಕ್ಕಾಗಿ ಅಲ್ಲ, ಆದರೆ ನಮ್ಮ ಹಾನಿಗಾಗಿಯೇ. ಸಾವಿರಾರು ಕ್ರೈಸ್ತರು ತಮ್ಮ ಜೀವಿತಗಳನ್ನು ಸೆರೆಮನೆಯಲ್ಲಿ ಕಳೆದಿರುತ್ತಾರೆ. ಅಥವಾ ಕೊಲ್ಲಲ್ಪಟ್ಟಿರುತ್ತಾರೆ – ಸಜೀವವಾಗಿ ಸುಡಲ್ಪಟ್ಟಿದ್ದಾರೆ, ಶಿಲುಬೆಗೇರಿಸಲ್ಪಟ್ಟಿದ್ದಾರೆ, ಸಿಂಹಗಳಿಗೆ ಆಹಾರ ವಾಗಿರುತ್ತಾರೆ – ಹೀಗಿರವಾಗ ಎಲ್ಲಾ ಕಾರ್ಯಗಳು ಈ ಲೋಕದಲ್ಲಿ ಅವರ ಹಿತಕ್ಕಾಗಿ ಇರುತ್ತೇವೆಂದು ನಾವು ಹೇಳಬಹುದೋ? ಸಾಧ್ಯವಿಲ್ಲ.

ಹಾಹಾದರೆ ನಾವು ಹೇಗೆ ಈ ವಚನವನ್ನು ಅರ್ಥ ಮಾಡಿಕೊಳ್ಳುತ್ತೇವೆ. ನಾವು ಇದನ್ನು ಈ ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು; ಈ ಲೋಕದಲ್ಲಿ ನಮಗೆ ಸಂಭವಿಸುವ ಎಲ್ಲಾ ಕಾರ್ಯಗಳನ್ನು ದೇವರು ಪರಲೋಕದಲ್ಲಿ ನಮ್ಮ ಹಿತಕ್ಕಾಗಿ ಕಾರ್ಯಮಾಡುತ್ತಾನೆ. 18-25 ವಚನಗಳಲ್ಲಿ ಪೌಲನು ನಮ್ಮ ಭವಿಷ್ಯತ್ತಿನ ನಿರೀಕ್ಷೆ ಮತ್ತು ಮಹಿಮೆಯ ಕುರಿತಾಗಿ ಮಾತಾಡಿದ್ದಾನೆ. ಆದುದರಿಂದ, ಪೌಲನು ಈ ವಚನದಲ್ಲಿ ಹಿತವು ಪರಲೋಕದ ಹಿತವಾಗಿದೆ ಹೊರತು ಲೋಕದ ಹಿತವಾಗಿರುವದಿಲ್ಲ ಲೋಕದಲ್ಲಿ ಸೈತಾನನ ಬಲವು ಅಧಿಕವಾಗಿರುತ್ತದೆ; ಆದರೆ ಪರಲೋಕದಲ್ಲಿ ಅವನಿಗೆ ಯಾವ ಬಲವೂ ಇರುವದಿಲ್ಲ. ಪರಲೋಕದಲ್ಲಿ ಸೈತಾನನ ಎಲ್ಲಾ ಭೂಲೋಕದ ದುಷ್ಟತನವು ನಮ್ಮ ಹಿತವಾಗಿ ಮಾರ್‍ಪಡುವದು.

ಆದರೆ ಆದನ್ನು ಹೇಳಿದ ಬಳಿಕ ದೇವರು ಈ ಜೀವಿತದಲ್ಲಿ ನಮ್ಮ ಒಳಿತಗಾಗಿಯೂ ಸಹ ಚಿಂತೆಯುಳ್ಳವನಾಗಿದ್ದಾನೆ ಎಂಬದು ಸಹ ಸತ್ಯವಾದದ್ದು. ಆತನು ನಮ್ಮ ದೇಹಗಳ ಕುರಿತಾಗಿಯೂ, ನಮ್ಮ ಆರೋಗ್ಯ, ಆಹಾರ ಮತ್ತು ಬಟ್ಟೆಗಳ ಕುರಿತಾಗಿಯೂ ಸಹ ಚಿಂತೆಯುಳ್ಳವನಾಗಿದ್ದಾನೆ. ಯೇಸು ಹೇಳಿದ್ದೇನೆಂದರೆ;...ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕ ಪಡಿರಿ, ಆಗ ಉಳಿದವುಗಳೆಲ್ಲಾ (ಆಹಾರ, ಬಟ್ಟೆ, ಮುಂತಾದವುಗಳು) ನಿಮಗೆ "ಕೊಡಲ್ಪಡುವವು " (ಮತ್ತಾಯ 6:33). ದೇವರು ನಮ್ಮ ಜೀವಿತಗಳಲ್ಲಿ ಸಮಸ್ಯೆಯನ್ನು ಅನುಮತಿಸುವಾಗ ಈ ಲೋಕದಲ್ಲಿರುವಾಗಲೇ ನಮ್ಮ ಜೀವಿತಗಳಲ್ಲಿ ಯಾವದೋ ಒಂದು ಒಳ್ಳೇ ಫಲಿತವನ್ನುಂಟು ಮಾಡಲು ಆ ಸಮಸ್ಯೆಯನ್ನು ಉಪಯೋಗಿಸುತ್ತಾನೆ. (ರೋಮ 5:3-4, ಯಾಕೋಬ 1:2-4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಸಮಸ್ಯಗಳ ಮೂಲಕವೇ ನಮ್ಮ ನಂಬಿಕೆಯು ಶೋಧಿಸಲ್ಪಟ್ಟು ಬಲಗೊಳಿಸಲ್ಪಡುತ್ತದೆ.( 1ಪೇತ್ರ 1:6-7). ನಾವ ಹೆಚ್ಚು ನೀತಿಯುಳ್ಳವರಾಗುವಂತೆ ದೇವರು ವಿವಿಧ ಸಮಸ್ಯೆಗಳ ಮೂಲಕವಾಗಿ ನಮ್ಮನ್ನು ಶಿಕ್ಷಿತರನ್ನಾಗಿ ಮಾಡುತ್ತಾನೆ (ಇಬ್ರಿಯ 12:7, 10-11). ಅಲ್ಲದೆ ನಾವು ನೆನಪಿನಲ್ಲಿಟ್ಟು ಕೊಳ್ಳಬೇಕಾದ ಸಂಗತಿಯೇನೆಂದರೆ, ಸೈತಾನನ ಬಲವು ಅಧಿಕವಾಗಿದ್ದರೂ ದೇವರ ಬಲವು ಇನ್ನು ಅತ್ಯಧಿಕವಾದದ್ದು; ದೇವರು ನಮ್ಮ ಜೀವಿತಗಳಿಗಾಗಿ ಹೊಂದಿರುವ ಅಂತಿಮ ಯೋಜನೆಯನ್ನು ಸೈತಾನನು ಬದಲಾಯಿಸಲು ಸಾಧ್ಯವಿಲ್ಲ.

ಹೇಗಿದ್ದರೂ, ಈ ವಚನದ ಬಗ್ಗೆ ನೆನಪಿನಲ್ಲಿಡಬೇಕಾದ ಅತಿ ಪ್ರಾಮುಖ್ಯವಾದ ಸಂಗತಿಯೇನೆಂದರೆ, ವಚನದಲ್ಲಿ ಕೊಡಲ್ಪಟ್ಟಿರುವ ವಾಗ್ದಾನವು ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರಿಗೆ ಮಾತ್ರವೇ ಕೊಡಲ್ಪಟ್ಟಿರುತ್ತದೆ. ನಾವು ದೇವರನ್ನು ಪ್ರೀತಿಸುವರು ಮತ್ತು ಆತನ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟವರಾಗಿರುವದಾದರೆ ಎಲ್ಲಾ ಕಾರ್ಯಗಳಲ್ಲೂ ನಮ್ಮ ಹಿತಕ್ಕಾಗಿ ಕಾರ್ಯಮಾಡುವಂತೆ ನಾವು ಆತನನ್ನು ಪೂರ್ಣವಾಗಿ ವಿಶ್ವಾಸಿಸಬಹುದಾಗಿದೆ. ನಮ್ಮ ನಿರೀಕ್ಷೆಯು ದೇವರಲ್ಲಿದೆ; ಆತನು ತಾನು ವಾಗ್ದಾನ ಮಾಡಿದ್ದೆಲ್ಲವನ್ನೂ ನೆರವೇರಿಸಲು ನಂಬಿಗಸ್ತನೂ ಶಕ್ತನೂ ಆಗಿದ್ದಾನೆ (ಇಬ್ರಿಯ 10:23). ನಾವು ದೇವರನ್ನು ಪ್ರೀತಿಸದೇ ಆತನ ಸಂಕಲ್ಪದ ಮೇರೆಗೆ ಕರೆಯಲ್ಪಡದವರಾಗಿದ್ದರೆ ಈ ವಚನದ ವಾಗ್ದಾನವು ನಮಗಾಗಿ ಅಲ್ಲ.

**29** ಎಲ್ಲಾ ಕಾರ್ಯಗಳಲ್ಲೂ ನಮ್ಮ ಹಿತಕ್ಕಾಗಿ ಕಾರ್ಯಮಾಡುವದರಲ್ಲಿ ದೇವರ ಮುಖ್ಯ ಉದ್ದೇಶವೇನೆಂಬದನ್ನು ನಾವು ಇಲ್ಲಿ ಕಾಣುತ್ತೇವೆ. ನಂಬುವವರಾದ ನಮ್ಮೆಲ್ಲರಿಗಾಗಿ ಆತನ ಅಂತಿಮ ಉದ್ದೇಶವು ನಾವು ಆತನ ಮಗನ ಸಾರೂಪ್ಯವು ಳ್ಳವರಾಗಬೇಕೆಂಬುದೇ ಆಗಿದೆ. ಜಗದುತ್ಪತ್ತಿಗೆ ಮುಂಚೆಯೇ ದೇವರು ನಮ್ಮೊಬ್ಬೊಬ್ಬರನ್ನು ತಿಳುಕೊಂಡಿದ್ದನು (ಎಫೆಸ 1:4-5 ಮತ್ತು ವ್ಯಾಖ್ಯಾನ ನೋಡಿರಿ). ಜಗತ್ತು ಸೃಷ್ಟಿಸಲ್ಪಡುವದಕ್ಕೆ ಮುಂಚೆಯೇ ದೇವರು ನಮ್ಮೊಬ್ಬೊಬ್ಬರಿಗಾಗಿ ಸಂಕಲ್ಪವನ್ನು ಮಾಡಿದ್ದನು ಮತ್ತು ಈ ಸಂಕಲ್ಪವು ಏನೆಂದರೆ ನಾವು ಆತನ ಮಗನ ಸಾರೂಪ್ಯವು ಳ್ಳರಾಗ ಬೇಕೆಂಬದೇ – ಅಂದರೆ, ನಾವು ಆತನ ಮಗನ ಸಾರೂಪ್ಯವು ಳ್ಳವರಾಗಬೇಕೆಂಬದೇ. ನಮ್ಮನ್ನು ಯೇಸುವಿನ ಹಾಗೆ ಮಾಡುವ ದೇವರ ಕಾರ್ಯವು ನಾವು ಮೊದಲು ನಂಬಿದಾಗ ಪ್ರಾರಂಭವಾಯಿತು, ಮತ್ತು ನಮ್ಮ ದೇಹಗಳು ಪರಲೋಕದಲ್ಲಿ ಪು ನರುತ್ಥಾನಗೊಂಡಾಗ ಅದು ಮುಕ್ತಾಯ ಗೊಳ್ಳುವದು. ನಾವು ದೇವರನ್ನು ಪ್ರೀತಿಸುವವರೂ ಆತನ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟವರೂ ಆಗಿರುವದಾದರೆ ಆ ಲೋಕದಲ್ಲಿ ನಮಗೆ ಸಂಭವಿಸುವದೆಲ್ಲವೂ– ಅದು ಎಷ್ಟೇ ಕೆಟ್ಟದ್ದಾಗಿದ್ದರೂ ಸಹ – ಅಂತಿಮವಾಗಿ ನಮ್ಮನ್ನು ಯೇಸುವಿನ ಹಾಗೆ ಮಾಡುವ ಈ ಶ್ರೇಷ್ಟ ಫಲಿತದೆಡೆಗೆ ಕಾರ್ಯಮಾಡುತ್ತದೆ.

ಯೇಸುವಿನ ಸಾರೂಪ್ಯವು ಳ್ಳವರಾದಾಗ ನಾವು ಯೇಸುವಿನ ಸಹೋದರರಾಗುತ್ತೇವೆ. ಮತ್ತು ಅನೇಕ ಮಂದಿ ಸಹೋದರರಲ್ಲಿ ಯೇಸು ಹಿರಿಯವನಾಗಬೇಕೆಂದು ದೇವರು ಅಭಿಲಾಷಿಸುತ್ತಾನೆ. ಪೌಲನು ಇಲ್ಲಿ ಸಭೆಯ ಕುರಿತಾಗಿ ಮಾತಾಡುತ್ತಿದ್ದಾನೆ, ಯಾಕೆಂದರೆ ಸಭೆಯು ಅನೇಕ ಮಂದಿ ಸಹೋದರರನ್ನು (ಮತ್ತು ಸಹೋದರಿಯರನ್ನು) ಒಳಗೊಂಡಿದ್ದು ಅವರೊಳಗೆ ಯೇಸುವೇ ಹಿರಿಯವನಾಗಿದ್ದಾನೆ.

**30** ದೇವರು ಜಗದುತ್ಪತ್ತಿಗೆ ಮುಂಚೆಯೇ ನಮ್ಮ ಮೇಲೆ ತನ್ನ ದೃಷ್ಟಿಯಿಟ್ಟಿದ್ದನು. ನಮಗಾಗಿ ಆತನು ಹೊಂದಿರುವ ನಿತ್ಯವಾದ ಸಂಕಲ್ಪವನ್ನು ತಡೆಯಲು ಸಾಧ್ಯವಿಲ್ಲ. ನಾವು ಹುಟ್ಟುವದಕ್ಕೆ ಮುಂಚೆಯೇ ಆತನು ನಮ್ಮನ್ನು ಮುಂದಾಗಿ ತಿಳುಕೊಂಡಿದ್ದನು (ವಚನ 29). ನಾವು ಹುಟ್ಟುವದಕ್ಕೆ ಮುಂಚೆಯೇ ಆತನು ನಮ್ಮನ್ನು ನೇಮಿಸಿದನು ಮತ್ತು ಕರೆದನು. ನಾವು ದೇವರ ಕರೆಯನ್ನು ಕೇಳಿ ಕ್ರಿಸ್ತನನ್ನು ನಂಬಿದೆವು . ನಂಬಿಕೆಯ ಮೂಲಕವಾಗಿ ನಾವು ಕ್ರಿಸ್ತನ ನೀತಿಯನ್ನು ಪಡೆದುಕೊಂಡೆವು ಮತ್ತು ದೇವರು ನಮ್ಮನ್ನು ನೀತಿವಂತರೆಂದು ನಿರ್ಣಯಿಸಿದನು. ತರುವಾಯ ದೇವರು ನಮ್ಮನ್ನು ತನ್ನ ಮಕ್ಕಳನ್ನಾಗಿ – ಯೇಸುವಿನ ಸಹೋದರ ಮತ್ತು ಸಹೋದರಿಯರನ್ನಾಗಿ – ಮಾಡುವದರ ಮೂಲಕ ನಮ್ಮನ್ನು ಮಹಿಮಾಪದವಿಗೆ[53] ಸೇರಿಸಿದನು. ಮತ್ತು ನಾವು ಪರಲೋಕಕ್ಕೆ ಹೋಗುವಾಗ ಆತನು ನಮ್ಮ ದೇಹಗಳನ್ನು ಪು ನರುತ್ಥಾನಗೊಳಿಸಿ ನಮ್ಮನ್ನು ಸಂಪೂರ್ಣವಾಗಿ ತನ್ನ ಮಗನ ಸಾರೂಪ್ಯವು ಳ್ಳವರಾಗಿ ಮಾಡುವದರ ಮೂಲಕ ಆತಮು ನಮ್ಮನ್ನು ಸಂಪೂರ್ಣವಾಗಿ ಮಹಿಮಾ ಪದವಿಗೆ ಸೇರಿಸುತ್ತಾನೆ. ಹೀಗೆ ಪರಲೋಕದಲ್ಲಿ ನಮ್ಮ ಮಹಿಮೆಯು ಪೂರ್ಣಗೊಳ್ಳುವದು (ವಚನ 18 ನೋಡಿರಿ).

ದೇವರು ನಮಗಾಗಿ ಮಾಡಿರುವ ಇದೆಲ್ಲವು ಮತ್ತು ಮಾಡಲಿರುವದೆಲ್ಲವೂ ಆತನ ರಕ್ಷಣೆಯ ಮಹಾ ಕಾರ್ಯವಾಗಿದೆ. 29-30 ವಚನಗಳಲ್ಲಿ ಪೌಲನು ಆತನ ರಕ್ಷಣೆಯ ಹೆಜ್ಜೆಗಳನ್ನು ಬಣ್ಣಿಸಿದ್ದಾನೆ. ಜಗದುತ್ಪತ್ತಿಗೆ ಮುಂಚಿನಿಂದಲೂ ನಮಗಾಗಿ ದೇವರು ಹೊಂದಿರುವ ಸಂಕಲ್ಪ ಮತ್ತು ಉದ್ದೇಶವೇನೆಂದರೆ ನಾವು ರಕ್ಷಣೆಯನ್ನು, ನಿತ್ಯ ಜೀವವನ್ನೂ ಪಡೆಯ ಬೇಕೆಂಬದಾಗಿತ್ತು. ನಾವು ಈ ಕ್ಲುಪ್ತ ಜೀವಿತದ ಸಮಸ್ಯೆಗಳನ್ನು ಅಂತಹ ಮಹಾರಕ್ಷಣೆಯೊಂದಿಗೆ ಹೋಲಿಸಲು ಹೇಗೆ ಸಾಧ್ಯ! (ವಚ 18).

## ಪೂರ್ಣ ಜಯಶಾಲಿಗಳು (8:31-39)

**31** ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು? ಸೈತಾನನು ನಮಗೆ ವಿರುದ್ಧವಾಗಿರಬಹುದು. ಆದರೆ ಅಂತ್ಯದಲ್ಲಿ ನಿಜ ವಿಶ್ವಾಸಿಯನ್ನು ಸೈತಾನನು ಎದುರಿಸಲಾರನು (ಯೋಹಾನ 16:33 ಮತ್ತು ವ್ಯಾಖ್ಯಾನ ನೋಡಿರಿ).

**32** ದೇವರು ನಮಗೆ ಅನೇಕ ಅದ್ಭುತವಾದ ವರಗಳನ್ನು ನೀಡಿರುತ್ತಾನೆ – ಕೃಪೆ, ಪ್ರೀತಿ, ಸಂತೋಷ, ಕ್ಷಮಾಪಣೆ, ರಕ್ಷಣೆ, ಪರಲೋಕದ ಸ್ವಾಸ್ಥ್ಯ ಆದರೆ ಆತನ ಮಗನಾದ ಯೇಸು ಕ್ರಿಸ್ತನು ಎಲ್ಲಾ ವರಗಳಲ್ಲಿಯೂ ಅತೀಶ್ರೇಷ್ಟವರವಾಗಿದ್ದಾನೆ. ನಾವು ಇನ್ನು ದೇವರ ವೈರಿಗಳಾಗಿರುವಾಗಲೇ ಆತನು ತನ್ನ ಪ್ರಿಯ ಮಗನನ್ನು ಕೊಟ್ಟಿರುವದಾದರೆ ಈಗ ನಾವು ಆತನ ಮಕ್ಕಳಾಗಿರುವಾಗ ಈ ಎಲ್ಲಾ ಅಲ್ಪ ವರಗಳನ್ನು ಸಹ ಆತನು ನಮಗೆ ಕೊಡಲಾರನೇ? ವಾಸ್ತವದಲ್ಲಿ ಈ ಇತರ ಎಲ್ಲಾ ವರಗಳು ನಮಗೆ ಕ್ರಿಸ್ತನಲ್ಲಿ ಅನುಗ್ರಹಿಸಲ್ಪಟ್ಟಿವೆ. ಪ್ರತಿಯೊಂದು ಆತ್ಮೀಕ ಆಶಿರ್ವಾದವು ಕ್ರಿಸ್ತನಲ್ಲಿ ಸಿಕ್ಕುತ್ತದೆ (ಎಫೆಸ 1:3 ಮತ್ತು ವ್ಯಾಖ್ಯಾನ ನೋಡಿರಿ). ಮತ್ತು ನಾವು ಈ ಯಾವದೇ ಆತ್ಮೀಕ ವರಗಳಿಗಾಗಿ ಕ್ರಯ ನೀಡಬೇಕಾಗುವದೋ? ಇಲ್ಲ. ಕ್ರಿಸ್ತನನ್ನು ನಂಬುವವರಗೆ ಈ ಎಲ್ಲಾ ಆಶಿರ್ವಾದಗಳು ಉಚಿತವಾಗಿ ಕೊಡಲ್ಪಡುತ್ತವೆ! ದೇವರು ಆತನನ್ನು (ಕ್ರಿಸ್ತನನ್ನು) ನಮ್ಮೆಲ್ಲರಿಗೋಸ್ಕರ ದೇವರನ್ನು ಪ್ರೀತಿಸುವ ಮತ್ತು ಆತನ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟಿರುವ ಎಲ್ಲರಿಗಾಗಿ (ವಚನ 28)–ಒಪ್ಪಿಸಿಕೊಟ್ಟನೆಂದು ಪೌಲನು ಹೇಳುತ್ತಾನೆ. ದೇವರು ತನ್ನ ಸ್ವಂತ ಮಗನನ್ನು ಉಳಿಸಿಕೊಳ್ಳಲಿಲ್ಲ. ದೇವರು ನಮ್ಮಿಂದ ಏನನ್ನೂ ಹಿಂದಕ್ಕೆ ಉಳಿಸಿಕೊಳ್ಳಲಿಲ್ಲ. ಆತನು ನಮಗೆ ತನ್ನ ಅತೀ ಶ್ರೇಷ್ಟವರವನ್ನು (ತನ್ನ ಮಗನನ್ನು) ಕೊಟ್ಟಿದ್ದಾನೆ ಮತ್ತು ಆ ವರದಲ್ಲಿ ಆತನು ನಮಗೆ ಇತರ ಎಲ್ಲಾ ಆತ್ಮೀಕ ಆಶಿರ್ವಾದಗಳನ್ನು ಅನುಗ್ರಹಿಸಿರುತ್ತಾನೆ. ದೇವರು ನಮ್ಮಿಂದ ಏನನ್ನೂ ಹಿಂದಕ್ಕೆ ಉಳಿಸಿಕೊಳ್ಳುವದಿಲ್ಲವಾದ್ದರಿಂದ ನಾವೂ ಆತನಿಂದ ಏನನ್ನೂ ಹಿಂದಕ್ಕೆ ಉಳಿಸಿಕೊಳ್ಳುವದಿಲ್ಲ ಎಂದು ಆತನು ನಿರೀಕ್ಷಿಸುತ್ತಾನೆ. ಆತನು ನಮಗೋಸ್ಕರ ಕ್ರಿಸ್ತನನ್ನು ಒಪ್ಪಿಸಿಕೊಟ್ಟ ಹಾಗೆಯೇ ನಾವು ಸಹ ಆತನಿಗಾಗಿ ನಮ್ಮನ್ನು – ಮತ್ತು ನಮಗಿರುವದನ್ನೆಲ್ಲಾ – ಒಪ್ಪಿಸಿ ಕೊಡತಕ್ಕದ್ದು.

ಈ ಪ್ರಾಮುಖ್ಯವಾದ ಸತ್ಯವು ಹಳೆ ಒಡಂಬಡಿಕೆಯಲ್ಲಿ ಬಣ್ಣಿಸಲಾಗಿರುವ ಅತಿ ಪ್ರಾಮುಖ್ಯ ಘಟನೆಗಳಲ್ಲೊಂದರಿಂದ – ಅಬ್ರಹಾಮನು ಇಸಾಕನನ್ನು ಯಜ್ಞವಾಗಿ ಅರ್ಪಿಸುವದು – ದೃಷ್ಟಾಂತೀಕರಿಸಲ್ಪಟ್ಟಿದೆ (ಆದಿಕಾಂಡ 22:1-14). ಅಬ್ರಹಾಮನು ಮಗನನ್ನು ಪಡೆಯಲು ಅನೇಕ ವರ್ಷಗಳವರೆಗೆ ಕಾಯ್ದಿದ್ದನು; ಅಂತಿಮವಾಗಿ ಇಸಾಕನು ಹುಟ್ಟಿದಾಗ ಅಬ್ರಹಾಮನು ನೂರು ವರ್ಷದವನಾಗಿದ್ದನು! ಬಳಿಕ ದೇವರು ಅಬ್ರಹಾಮನಿಗೆ ಇಸಾಕನನ್ನು ಯಜ್ಞವಾಗಿ ಅರ್ಪಿಸಬೇಕೆಂದು – ಯಾವ ಮಗನಿಗಾಗಿ ಅಷ್ಟೊಂದು ವರ್ಷಗಳ ವರೆಗೆ ಕಾಯ್ದನೋ ಆ ಮಗನನ್ನು ಸಾಯಿಸಬೇಕೆಂದು – ಹೇಳಿದನು! ಆದಾಗ್ಯ ಅಬ್ರಹಾಮನು ದೇವರಿಗೆ ವಿಧೇಯನಾದನು ಮತ್ತು ಇಸಾಕನನ್ನು ಯಜ್ಞ ಮಾಡಲು ಸಿದ್ಧನಾದನು. ತುರುವಾಯ ಅಬ್ರಹಾಮನು ತನ್ನ ಮಗನನ್ನು ಕೊಲ್ಲಬೇಕೆನ್ನುವಷ್ಟರಲ್ಲಿಯೇ ದೇವರು ಅವನನ್ನು ತಡೆದು ಇಸಾಕನ ಬದಲಿಗೆ ಒಂದು ಟಗರನ್ನು ಒದಗಿಸಿದನು. ದೇವರು ಅಬ್ರಹಾಮನಿಗೆ ಹೇಳಿದ್ದೇನೆಂದರೆ: "ನೀನು ನಿನ್ನ ಒಬ್ಬನೇ ಮಗನನ್ನಾದರೂ ನಮಗೆ ಸಮರ್ಪಿಸುವದಕ್ಕೆ ಹಿಂದೆಗೆಯಲಿಲ್ಲವಾದ್ದರಿಂದ ನೀನು ದೇವರಲ್ಲಿ ಭಯಭಕ್ತಿಯುಳ್ಳವನೆಂಬದು ಈಗ ತೋರಬಂತು" (ಆದಿಕಾಂಡ 22:12). ಹೀಗೆ ದೇವರು ಅಬ್ರಹಾಮನಿಗೆ ಆತನ ಮಗನನ್ನು ಯಜ್ಞವಾಗಿ ಅರ್ಪಿಸಬೇಕೆಂದು ಆಜ್ಞಾಪಿಸಿದ್ದರ ಉದ್ದೇಶವು ಅಬ್ರಹಾಮನ ನಂಬಿಕೆ ಮತ್ತು ವಿಧೇಯತೆಯನ್ನು ಪರೀಕ್ಷಿಸಬೇಕೆಂಬದಾಗಿತ್ತು.

ಆದಾದ ಮೇಲೆ ದೇವರು ಅಬ್ರಹಾಮನಿಗೆ ಹೇಳಿದ್ದೇನೆಂದರೆ: "....ನೀನು ನಿನ್ನ ಒಬ್ಬನೇ ಮಗನನ್ನು ಸಮರ್ಪಿಸುವದಕ್ಕೆ ಹಿಂದೆಗೆಯಲಿಲ್ಲವಾದ್ದರಿಂದ ನಾನು ನಿನ್ನನ್ನು ಆಶಿರ್ವದಿಸೇ ಆಶಿರ್ವದಿಸುವೆನು" (ಆದಿಕಾಂಡ 22:15-18).

ನಮ್ಮನ್ನು ನಾವು ಪರೀಕ್ಷಿಸಿಕೊಳ್ಳೋಣ. ನಾವು ದೇವರಿಗೆ ನೀಡುವದಕ್ಕೆ ಏನನ್ನಾದರೂ ಹಿಂದೆಗೆದಿದ್ದೇವೋ? ನಾವು ದೇವರಿಗೆ ಅರ್ಪಿಸದೇ ಇರುವ ನಮಗೆ ಪ್ರಿಯವಾದ ಅಥವಾ ಅಮೂಲ್ಯವಾದದ್ದು ಏನಾದರೂ ಇದೆಯೋ? ನಾವು ದೇವರಿಗಿಂತಲೂ ಹೆಚ್ಚಾಗಿ ಪ್ರೀತಿಸುವ ಯಾವ ಸಂಗತಿಯಾದರೂ – ಉದಾಹರಣೆಗೆ, ಐಶ್ವರ್ಯ, ನಮ್ಮ ಕುಟುಂಬ, ನಮ್ಮ ಘನತೆ – ಇದೆಯೋ? ದೇವರು ನಮ್ಮಿಂದ ಏನನ್ನೂ ಹಿಂದೆಗೆಯಲಿಲ್ಲ. ನಾವು ಅಬ್ರಹಾಮನ ಮಾದರಿಯನ್ನು ಅನುಸರಿಸುವವರಾಗಿ ದೇವರಿಂದ ಏನನ್ನೂ ಹಿಂದೆಗೆಯದಿರೋಣ (ಇಬ್ರಿಯ 11:17-19 ಮತ್ತು ವ್ಯಾಖ್ಯಾನ ನೋಡಿರಿ).

ನಾವು ಅತಿಯಾಗಿ ಪ್ರೀತಿಸುವ ಸಂಗತಿಗಳನ್ನು ದೇವರಿಗೆ ಅರ್ಪಿಸುವಾಗ ಏನು ಸಂಭವಿಸುತ್ತದೆ? ಹಲವಾರು ವೇಳೆ ದೇವರು ಅವುಗಳನ್ನು ನಮಗೆ ಹಿಂದಕ್ಕೆ ಕೊಡುತ್ತಾನೆ! ಒಮ್ಮೆ ದೇವರಿಗೆ ನಾವು ನಿಜವಾಗಿಯೂ ಅವುಗಳನ್ನು ಕೊಡಲು ಇಚ್ಛೆಯುಳ್ಳವರಾಗಿದ್ದೇವೆ ಎಂಬದನ್ನು ತಿಳುಕೊಂಡನೆಂದರೆಯೇ ಹಲವಾರು ವೇಳೆಗಳಲ್ಲಿ ಆತನು ಅಬ್ರಹಾಮನು ಇಸಾಕನನ್ನು ಇಟ್ಟುಕೊಳ್ಳುವಂತೆ ಅನುಮತಿಸಿದಂತೆ ನಾವೇ ಅವುಗಳನ್ನು ಇಟ್ಟುಕೊಳ್ಳುವಂತೆ ಅನುಮತಿಸುತ್ತಾನೆ.

33 ಸೈತಾನನು ನಮ್ಮ ಮೇಲೆ ಯಾವದೇ ತಪ್ಪು ಹೊರಿಸಲು ಸಾಧ್ಯವಿದೆ. ಆದರೆ ಆತನು ನಮ್ಮನ್ನು ಅಪರಾಧಿಗಳೆಂದು ನಿರ್ಣಯಿಸಲು ಸಾಧ್ಯವಿಲ್ಲ... ಕ್ರಿಸ್ತ ಯೇಸುವಿನಲ್ಲಿರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ (ವಚನ 1). ನಿಜ, ಈ ಲೋಕದಲ್ಲಿ ಜನರು ನಮ್ಮನ್ನು ಅಪರಾಧಿಗಳೆಂದು ನಿರ್ಣಯಿಸಬಹುದು; ಆದರೆ ಕ್ರಿಸ್ತನಲ್ಲಿರುವವರಿಗಾದರೋ ಆ ಅಪರಾಧ ನಿರ್ಣಯವು ಪರಲೋಕದಲ್ಲಿ ಅಳಿಸಿಹಾಕಲ್ಪಡುವದು. ಈಗ ಅಪರಾಧ ನಿರ್ಣಯವು ಇಲ್ಲವೇ ಇಲ್ಲ ಎಂದು ಹೇಳುವಾಗ ಆತನು ಪರಲೋಕದ ಕುರಿತು ಮಾತಾಡುತ್ತಿದ್ದಾನೆ ಹೊರತು ಭೂಲೋಕದ ಕುರಿತಾಗಿ ಅಲ್ಲ.

34 ಅಪರಾಧಿಗಳೆಂದು ನಿರ್ಣಯಿಸುವವರು ಯಾರು? ಅಂತಿಮವಾಗಿ ಯಾರೂ ಇಲ್ಲ. ಯಾಕೆಂದರೆ ಸೈತಾನನು ನಮ್ಮ ವಿರುದ್ಧವಾಗಿ ಹೊರಿಸುವ ತಪ್ಪುಗಳನ್ನು ದೇವರು ಕೇಳಿಸಿಕೊಳ್ಳುವದಿಲ್ಲ. ನಮ್ಮ ಸಹಾಯಕನಾಗಿ (ವಕೀಲನಾದ) ದೇವರ ಬಲಗಡೆಯಲ್ಲಿ ಕುಳಿತು ಕೊಂಡು ನಮಗಾಗಿ ಬೇಡಿಕೊಳ್ಳುವ ಯೇಸು ಕ್ರಿಸ್ತನ ಮಾತುಗಳನ್ನು ಮಾತ್ರವೇ ದೇವರು ಕೇಳಿಸಿಕೊಳ್ಳುತ್ತಾನೆ (ಎಫೆಸ 1:20-23 ನೋಡಿರಿ).

35 ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು? ಯಾರೂ ಇಲ್ಲ! ಪಾಪವನ್ನು ಹೊರತು ಪಡಿಸಿ (ವಚನಗಳು 38-39 ಮತ್ತು ವ್ಯಾಖ್ಯಾನ ನೋಡಿರಿ). ಈ ಜೀವಿತದಲ್ಲಿ ಕ್ರಿಸ್ತನಲ್ಲಿ ವಿಶ್ವಾಸಿಸುವವರನ್ನು ದೇವರ ಪ್ರೀತಿಯಿಂದ ಬೇರೆ ಇನ್ನಾವ ಸಂಗತಿಯೂ ಅಗಲಿಸಬಾರದು. ಪೌಲನು ಈ ವಚದಲ್ಲಿ ಕಷ್ಟಗಳು ಮತ್ತು ಹಿಂಸೆ ನಮ್ಮ ಈ ಜೀವನದಲ್ಲಿ ಬರುವದಿಲ್ಲ ಎಂಬದಾಗಿ ಹೇಳುತ್ತಿಲ್ಲ. ಆದರೆ ಈ ಸಂಗತಿಗಳು ನಮ್ಮನ್ನು ದೇವರ ಪ್ರೀತಿಯಿಂದ ಅಗಲಿಸುವದಿಲ್ಲ ಎಂದಷ್ಟೇ ಹೇಳುತ್ತಿದ್ದಾನೆ.

36 ಇಲ್ಲಿ ಪೌಲನು ಕೀರ್ತನೆಗಳು 44:22 ರಿಂದ ಉಲ್ಲೇಖಿಸುತ್ತಾನೆ. ಕ್ರಿಸ್ತನು ನಮಗೋಸ್ಕರ ಸತ್ತ ಹಾಗೆಯೇ ನಾವು ಸಹ ಆತನಿಗೋಸ್ಕರ ದಿನವೆಲ್ಲಾ ಕೊಲೆಗೆ ಗುರಿಯಾಗಲು ಸಿದ್ಧರಿರಬೇಕು (1 ಕೊರಿಂಥ 15:31, 2 ಕೊರಿಂಥ 4:8-12, 16-17 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಮರಣವು ಸಹ ನಮ್ಮನ್ನು ದೇವರ ಪ್ರೀತಿಯಿಂದ ಅಗಲಿಸಲಾರದು. ಕ್ರಿಸ್ತನು ನಮಗೋಸ್ಕರ ಕೊಯ್ಗುರಿಯಂತೆ ತನ್ನ ದೇಹವನ್ನು ನಮಗಾಗಿ ಅರ್ಪಿಸಿದ ಪ್ರಕಾರವೇ ನಾವು ಸಹ ನಮ್ಮ ದೇಹಗಳನ್ನು ದೇವರಿಗೆ ಸಜೀವಯಜ್ಞವಾಗಿ ಅರ್ಪಿಸಬೇಕು (ರೋಮ 12:1). ನಾವು ಬದುಕಿದರೂ, ಸತ್ತರೂ ದೇವರ ಪ್ರೀತಿಯಲ್ಲಿ ಉಳಿಯುವೆವು.

37 ಯೇಸು ಕ್ರಿಸ್ತನು ಲೋಕವನ್ನು ಜಯಿಸಿದನು (ಯೋಹಾನ 16:33). ಆತನು ವೈಷಮ್ಯ, ಹಿಂಸೆಗಳನ್ನೂ ಮರಣವನ್ನು ಸಹ ಜಯಿಸಿದನು (2 ತಿಮೊಥೆ 1:10). ನಾವು ಸಹ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ – ನಮ್ಮ ಸ್ವಂತ ಬಲದಿಂದ ಅಲ್ಲ, ಆದರೆ ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ, ಅಂದರೆ ಕ್ರಿಸ್ತನ ಮೂಲಕವಾಗಿಯೇ (1 ಕೊರಿಂಥ 15:57 ಮತ್ತು ವ್ಯಾಖ್ಯಾನ ನೋಡಿರಿ).

**38-39** ಪೌಲನ ದಿನದಿಂದ ನಮ್ಮ ದಿನವರೆಗೂ ಈ ವಚನಗಳು ಅಸಂಖ್ಯಾತ ಕ್ರೈಸ್ತರಿಗೆ ಅದ್ಭುತವಾದ ಆದರಣೆ, ಪ್ರೋತ್ಸಾಹ ಮತ್ತು ನಿರೀಕ್ಷೆಯನ್ನು ನೀಡಿರುತ್ತವೆ. ಮತ್ತು ಈ ವಚನಗಳು ಸಂಪೂರ್ಣ ಸತ್ಯವಾಗಿವೆ: ಇಡೀ ಸೃಷ್ಟಿಯಲ್ಲಿಯೇ ಯಾವದೂ ಸಹ ನಮ್ಮನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ತೋರಿಬಂದ ದೇವರ ಪ್ರೀತಿಯಿಂದ ಅಗಲಿಸಲಾರದು. ಹಾಗಿದ್ದರೂ, ಕ್ರೈಸ್ತರು ಮತ್ತೆ ಮತ್ತೆ ಅದ್ಭುತವಾದ ಈ ವಚನಗಳನ್ನು ಪುನರುಚ್ಚರಿಸುತ್ತಿದ್ದರೂ ವಾಸ್ತವದಲ್ಲಿ ಅವರು ಒಂದು ಸಂಗತಿಯು – ದೇವರು ಉಂಟುಮಾಡದಿರುವ ಒಂದು ಸಂಗತಿಯು – ನಿಶ್ಚಯವಾಗಿಯೂ ಅವರನ್ನು ದೇವರ ಪ್ರೀತಿಯಿಂದ ಅಗಲಿಸುವದೆಂಬದನ್ನು ಮರೆಯುವವರಾಗಿದ್ದಾರೆ. ಆ ಒಂದು ಸಂಗತಿಯು ಪಾಪವೇ ಆಗಿದೆ. ನಾವು ಗೊತ್ತಿದ್ದು ಯಾವುದಾದರೂ ಪಾಪದಲ್ಲಿ ಮುಂದುವರೆದು ಅದಕ್ಕಾಗಿ ಪಶ್ಚಾತಾಪ ಪಡದಿರುವದಾದರೆ ಆ ಪಾಪವು ಅತಿ ನಿಶ್ಚಯವಾಗಿ ನಮ್ಮನ್ನು ದೇವರ ಪ್ರೀತಿಯಿಂದ ಅಗಲಿಸಿ ನಮ್ಮ ಮೇಲೆ ದೇವರ ಭಯಂಕರ ಕೋಪಾಗ್ನಿ ಮತ್ತು ನ್ಯಾಯತೀರ್ಪನ್ನು ತರುವದು. ನಾವು ಕ್ರೈಸ್ತರಾಗುವದಕ್ಕೆ ಮುಂಚೆ ನಮ್ಮ ಪಾಪದ ಕಾರಣದಿಂದ [54] ನಾವು ದೇವರಿಂದ ಅಗಲಿಸಲ್ಪಟ್ಟಿದ್ದೇವೆ. ನಾವು ದೇವರಿಗೆ ವೈರಿಗಳಾಗಿದ್ದೇವೆ (ರೋಮ 5:10). ತರುವಾಯ, ನಮ್ಮ ಪಾಪಗಳಿಗಾಗಿ ಪಶ್ಚಾತಾಪ ಪಟ್ಟು ಕ್ರಿಸ್ತನನ್ನು ನಂಬುವದರ ಮೂಲಕ ನಾವು ದೇವರೊಂದಿಗೆ ಸಂಧಾನ ಹೊಂದಿದ್ದೇವು . ಆದರೆ ನಾವು ತಿರಿಗಿ ಪಾಪದಲ್ಲಿ ಬಿಳುವದಾದರೆ ಮತ್ತು ಅದರಲ್ಲಿ ಗೊತ್ತಿದ್ದು ಮುಂದುವರೆದು ಪಶ್ಚಾತಾಪ ಪಡದಿರುವದಾದರೆ ನಾವು ಪುನಃ ದೇವರಿಂದ ಅಗಲುವ ಅಪಾಯದಲ್ಲಿ ಇರುತ್ತೇವೆ (ಇಬ್ರಿಯ 10:26-27 ಮತ್ತು ವ್ಯಾಖ್ಯಾನ ನೋಡಿರಿ). ಮತ್ತು ನ್ಯಾಯತೀರ್ಪಿನ ದಿನದಲ್ಲಿ ಅಗಲುವಿಕೆಯು ಶಾಶ್ವತವಾಗುವದು.

ಬೈಬಲ್‌ನಲ್ಲಿನ ಎಲ್ಲಾ ವಾಗ್ದಾನಗಳಲ್ಲಿಯೂ 38-39 ವಚನಗಳ ವಾಗ್ದಾನವು ಅತಿ ಶ್ರೇಷ್ಠವಾದದ್ದು. ಆದರೆ ನಾವು ವಾಗ್ದಾನದ ನಿಭಂದನೆಗಳನ್ನು ಸಹ ಯೋಚಿಸದೆಯೇ ಆ ವಾಗ್ದಾನದ ಕುರಿತಾಗ ಯೋಚಿಸಬಾರದು. ಬೈಬಲಿನ ವಾಗ್ದಾನವನ್ನು ನೆನಪಿಸಿಕೊಳ್ಳುವದು ಉತ್ತಮವಾದದ್ದು – ಆದರೆ ನಾವು ಎಚ್ಚರಿಕೆಗಳನ್ನು ಮರೆಯಬಾರದು!

ನಾವು ರೋಮಾಪುರದವರಿಗೆ ಬರೆದ ಪತ್ರಿಕೆಯ ಶ್ರೇಷ್ಠ ಅನೇ ಅಧ್ಯಾಯವನ್ನು ಇಡೀ ಬೈಬಲಿನಲ್ಲಿಯೇ ಅತಿ ಶ್ರೇಷ್ಠವಾದ ಏಕೈಕ ಅಧ್ಯಾಯ ವೆಂದು ಅನೇಕರು ಹೇಳುವ ಅಧ್ಯಾಯವನ್ನು – ಹಿಂದಿರುಗಿ ನೋಡುವಾಗ ನಮ್ಮ ಮುಂಭಾಗದಲ್ಲಿ ಯೇಸು ಕ್ರಿಸ್ತನ ಪೂರ್ಣ ಹಾಗು ಮಹಿಮೆಯುಳ್ಳ ಸುವಾರ್ತೆಯು ಬಯಲು ಪಡಿಸಲ್ಪಟ್ಟಿರುವದನ್ನು ಕಾಣುತ್ತೇವೆ. ಒಮ್ಮೆ ನಾವು ಹೇಗೆ ಅಪರಾಧ ನಿರ್ಣಯಕ್ಕೆ ಒಳಗಾಗಿದ್ದೇವು. ಆದರೆ ಈಗ ಹೇಗೆ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ ಎಂಬದನ್ನು ಕಾಣುತ್ತೇವೆ. ಒಮ್ಮೆ ನಾವು ಹೇಗೆ ದಾಸತ್ವಕ್ಕೊಳಗಾಗಿದ್ದೇವು, ಆದರೆ ಈಗ ಹೇಗೆ ಸ್ವತಂತ್ರರಾಗಿದ್ದೇವೆಂಬದನ್ನು ನೋಡುತ್ತೇವೆ. ಒಮ್ಮೆ ನಾವು ಹೇಗೆ ಸತ್ತವರಾಗಿದ್ದೇವು. ಆದರೆ, ಈಗ ಹೇಗೆ ಜೀವಂತವಾಗಿದ್ದೇವೆಂದು ನೋಡುತ್ತೇವೆ. ಈಗ ನಮ್ಮಲ್ಲಿ ವಾಸವಾಗಿರುವ ಪವಿತ್ರಾತ್ಮನ ಮೂಲಕವಾಗಿ ಆ ನೂತನ ಹಾಗು ಜಯಭರಿತ ಜೀವಿತವು ನಮಗೆ ಸಾಧ್ಯವೆಂಬದನ್ನು ನೋಡುತ್ತೇವೆ. ನಾವು ಪವಿತ್ರಾತ್ಮನಿಂದ ನಡಿಸಿಕೊಳ್ಳುವದಾದರೆ ನಾವು ದೇವರ ಕುಟುಂಬದೊಳಗೆ ಸ್ವೀಕರಿಸಿಕೊಳ್ಳಲ್ಪಟ್ಟು ಆತನ ಮಕ್ಕಳು ಮತ್ತು ಬಾಧ್ಯರು ಎಂದು ಕರೆಯಿಸಿಕೊಳ್ಳುತ್ತೇವೆಂಬದನ್ನು ಕಾಣುತ್ತೇವೆ. ಮತ್ತು ಅಂತಿಮವಾಗಿ, ಜಗದುತ್ಪತ್ತಿಗೆ ಮುಂಚೆಯೇ ದೇವರಿಂದ ಸಂಕಲ್ಪಿಸಲ್ಪಟ್ಟ ನಮ್ಮ ನಿತ್ಯತ್ವದ ಪ್ರಾರಬ್ಧವನ್ನು ಕಾಣುತ್ತೇವೆ. ಮತ್ತು ಪ್ರಾರಬ್ಧವು 29 ನೆಯ ವಚನದ ಮಾತುಗಳಲ್ಲಿ ಸಾರಾಂಶಿಸಲ್ಪಟ್ಟಿದೆಃ ನಮ್ಮ ಪ್ರಾರಬ್ಧವು ಸದಾಕಾಲವೂ ಯೇಸು ಕ್ರಿಸ್ತನ ಸಾರೂಪ್ಯವುಳ್ಳವರಾಗುವದೇ ಆಗಿದೆ. ಸ್ನೇಹಿತರೇ, ಇದು ನಮ್ಮ ಜೀವಿತಗಳಲ್ಲಿ ದಹಿಸುವ ಏಕೈಕ ಅಭಿಲಾಷೆಯಾಗಿರಲಿಃ ಯೇಸು ಕ್ರಿಸ್ತನ ಸಾರೂಪ್ಯವುಳ್ಳವರಾಗುವದು. ಅದಕ್ಕಿಂತಲೂ ಉನ್ನತವಾದ ಕರೆ ಇಲ್ಲ; ಅದಕ್ಕಿಂತಲೂ ಉನ್ನತವಾದ ಮಹಿಮೆ ಮತ್ತೊಂದಿಲ್ಲ.

---

# ಅಧ್ಯಾಯ–9

## ಇಸ್ರಾಯೇಲ್ಯರ ಅಪನಂಬಿಕೆಗಾಗಿ ಪೌಲನ ದುಃಖ (9:1-5)

**1-3** ಪೌಲನಿಗೆ ಏಕೆ ಅಂತಹ ಮಹಾದುಃಖವೂ ಎಡೆಬಿಡದೆ ವೇದನೆಯೂ ಇತ್ತು? ಯಾಕೆಂದರೆ, ಆತನ ಸ್ವಕುಲದವರಾದ ಬಹು ಪಾಲು ಯೆಹೂದ್ಯರು ಯೇಸು ಕ್ರಿಸ್ತನನ್ನು ನಂಬಿರಲಿಲ್ಲ. ಯೆಹೂದ್ಯರು ದೇವರಿಂದ ವಿಶೇಷವಾಗಿ ಆರಿಸಿಕೊಳ್ಳಲ್ಪಟ್ಟ ಜನರಾಗಿದ್ದರೂ ಅವರ ಅಪನಂಬಿಕೆಯ ಕಾರಣದಿಂದ ಅವರು ರಕ್ಷಣೆಹೊಂದುವ ಅವಕಾಶವನ್ನು ಕಳೆದುಕೊಂಡಿದ್ದರು. ಕ್ರಿಸ್ತನು ಮೊದಲನೆಯದಾಗಿ ಯೆಹೂದ್ಯರ ರಕ್ಷಕನಾಗಿರಲು ಬಂದನು (ಮತ್ತಾಯ 15:24; ರೋಮ 1:16), ಆದರೆ ಅವರಲ್ಲಿ ಬಹುಮಂದಿ ಆತನನ್ನು ಅಂಗೀಕರಿಸಿರಲಿಲ್ಲ. ಆದ್ದರಿಂದ, ಸುವಾರ್ತೆಯು ಅನ್ಯಜನರಿಗೆ ಸಾರಲ್ಪಟ್ಟಿತು. ಪೌಲನು ಸ್ವತಃ ವಿಶೇಷವಾಗಿ ಅನ್ಯ ಜನರಿಗೆ

ಅಪೊಸ್ತಲನಾಗಿರುವಂತೆ ನೇಮಿಸಲ್ಪಟ್ಟಿದ್ದನು (ಅ.ಕೃತ್ಯ 9:15; ಗಲಾತ್ಯ 2:8). ಹೀಗೆ, ಅನ್ಯ ಜನರು ಕ್ರಿಸ್ತನನ್ನು ನಂಬುವದಕ್ಕೆ ಪ್ರಾರಂಭಿಸಿದರು ಮತ್ತು ಕೆಲವು ವರ್ಷಗಳಲ್ಲಿಯೇ ಯೆಹೂದ್ಯ ಕ್ರೈಸ್ತರಿಗಿಂತಲೂ ಅನ್ಯ ಜನಾಂಗದ ಕ್ರೈಸ್ತರು ಅಧಿಕವಾಗಿದ್ದರು.

ಪೌಲನ, ದುಃಖವು ಎಷ್ಟು ಅಧಿಕವಾಗಿತ್ತೆಂದರೆ ಸ್ವತಃ ಆತನೇ ಶಾಪಗ್ರಸ್ತನಾಗುವದಕ್ಕೆ ಸಿದ್ಧನಾಗಿದ್ದನು – ಒಂದು ವೇಳೆ ಅದರ ಮೂಲಕವಾಗಿ ಆತನ ಯೆಹೂದ್ಯ ಸಹೋದರರು ರಕ್ಷಣೆ ಹೊಂದಬಹುದೇನೋ ಎಂಬದು ಆತನ ನಿರೀಕ್ಷೆ

ಯಾಗಿತ್ತು. ಪೌಲನು ಇತರರಿಗಾಗಿ ಎಷ್ಟೋ ಪ್ರೀತಿ ಮತ್ತು ಚಿಂತನೆಯುಳ್ಳವನಾಗಿ ಅವರಿಗೋಸ್ಕರವಾಗಿ ತನ್ನ ಸ್ವಂತ ನಿತ್ಯ ರಕ್ಷಣೆಯನ್ನು ಬಿಟ್ಟು ಕೊಡಲು ಸಿದ್ಧನಾಗಿದ್ದನು! ಹಳೆ ಒಡಂಬಡಿಕೆಯಲ್ಲಿ ಯೆಹೂದ್ಯರ ಶ್ರೇಷ್ಠನಾಯಕನಾದ ಮೋಶೆಯು ಸಹ ಯೆಹೂದ್ಯರನ್ನು ದೇವರ ಕೋಪಾಗ್ನಿಯಿಂದ ರಕ್ಷಿಸಲು ಅದೇ ಸಂಗತಿಯನ್ನು ಮಾಡಲಿಚ್ಚಿಸಿದನು (ವಿಮೋಚನ ಕಾಂಡ 32:30-32).

4 ಪೌಲನು ಇಲ್ಲಿ ಯೆಹೂದ್ಯರನ್ನು ಇಸ್ರಾಯೇಲನ ವಂಶದವರೆಂದು ಕರೆಯುತ್ತಾನೆ. ಇಸ್ರಾಯೇಲವು ಯೆಹೂದ್ಯ ರಾಷ್ಟ್ರದ ಮೂಲ ಹೆಸರಾಗಿತ್ತು. ಯೆಹೂದ್ಯರು ಇಸ್ರಾಯೇಲ್ಯರೆಂದು ಸಹ ಕರೆಯಲ್ಪಟ್ಟಿರುತ್ತಾರೆ (ರೋಮ 10:1). ದೇವರು ಇಸ್ರಾಯೇಲ್ಯರನ್ನು ತನ್ನ ವಿಶೇಷ ಜನಾಂಗ ವಾಗಿರಬೇಕೆಂದು ಆರಿಸಿಕೊಂಡಿದ್ದನು; ಆತನು ಅವರನ್ನು ಮಕ್ಕಳನ್ನಾಗಿ "ದತ್ತು ಸ್ವೀಕರಿಸಿದ್ದನು". ಆತನು ಅವರಿಗೆ ಪು ತ್ರರಾಗಿಸ್ವೀಕರಿಸುವ ಅವಕಾಶವನ್ನು ನೀಡಿದ್ದನು.. ದೇವರ ತೇಜಸ್ಸಾನ್ನಿಧ್ಯ ವು – ಅಂದರೆ, ದೇವರ ಪ್ರಸನ್ನತೆಯು – ಅವರೊಂದಿಗಿತ್ತು. ದೇವರು ಯೆಹೂದ್ಯ ರೊಂದಿಗೆ ತನ್ನ ಒಡಂಬಡಿಕೆಗಳನ್ನು ಮಾಡಿಕೊಂಡನು; ವಿಶೇಷವಾಗಿ, ಆತನು ಪ್ರಥಮ ಯೆಹೂದ್ಯನಾದ ಅಬ್ರಹಾಮನೊಂದಿಗೆ ತನ್ನ ಒಡಂಬಡಿಕೆಯನ್ನು ಮಾಡಿಕೊಂಡಿದ್ದನು. (ಆದಿಕಾಂಡ 17:3-8). ದೇವರು ಯೆಹೂದ್ಯರಿಗೆ ಧರ್ಮಶಾಸ್ತ್ರವನ್ನು ನೀಡಿದ್ದನು, ಆದರಲ್ಲಿ ಅವರಿಗಾಗಿ ಆತನ ನೀತಿಯುಳ್ಳ ಚಿತ್ತವು ಸ್ಪಷ್ಟವಾಗಿ ಪ್ರಕಟಗೊಂಡಿತ್ತು. ಮತ್ತು ಅವರ ಬಳಿಗೆ ರಕ್ಷಕನನ್ನು (ಕ್ರಿಸ್ತನನ್ನು) ಕಳುಹಿಸುವನೆಂಬ ವಾಗ್ದಾನಗಳನ್ನು ಅವರಿಗೆ ಕೊಟ್ಟಿದ್ದನು. ಅಬ್ರಹಾಮನು ತನ್ನ ನಂಬಿಕೆಯ ಮೂಲಕವಾಗಿ ನೀತಿವಂತನೆಂದು ನಿರ್ಣಯಿಸಲ್ಪಟ್ಟ ಹಾಗೆಯೇ (ಆದಿಕಾಂಡ 15:6). ಯೆಹೂದ್ಯರು ಸಹ ಕ್ರಿಸ್ತನಲ್ಲಿ ತಮ್ಮ ನಂಬಿಕೆಯನ್ನು ಇಡುವದಾದರೆ ನೀತಿವಂತರೆಂದು ನಿರ್ಣಯಿಸಲ್ಪಡುವರು.

5 ಕ್ರಿಸ್ತನು ಸ್ವತಃ ಯೆಹೂದ್ಯರ ಪಿತೃಗಳ – ಅಬ್ರಹಾಮ, ಇಸಾಕ, ಯಾಕೋಬ ಮತ್ತು ಯೂದಾ – ವಂಶದಿಂದ ಬಂದ ಒಬ್ಬ ಯೆಹೂದ್ಯನಾಗಿದ್ದನು (ಮತ್ತಾಯ 1:1-2). ನಿಶ್ಚಯವಾಗಿಯೂ, ಇಸ್ರಾಯೇಲವು ದೇವರಿಂದ ಆಶೀರ್ವಧಿಸಲ್ಪಟ್ಟ ಒಂದು ರಾಷ್ಟ್ರವಾಗಿದೆ! ಇಲ್ಲಿ ಪೌಲನು ಕ್ರಿಸ್ತನ ವಿಷಯವಾಗಿ ಒಂದು ಮಾತನ್ನು ಸೇರಿಸದಿರಲು ಆಗುವದಿಲ್ಲ: ಅದೇನೆಂದರೆ, ಕ್ರಿಸ್ತನು ಎಲ್ಲಾದರ ಮೇಲೆ – ದೇವರಾಗಿದ್ದಾನೆ. ಕ್ರಿಸ್ತನು ಒಬ್ಬ ಶ್ರೇಷ್ಠ ಮನುಷ್ಯನು ಮಾತ್ರವಲ್ಲ, ಆತನು ಒಬ್ಬ ನಾಯಕನೂ, ಪ್ರವಾದಿ ಮತ್ತು ಬೋಧಕನೂ ಮಾತ್ರವೇ ಆಗಿರುವದಿಲ್ಲ. ಆತನು ಸ್ವತಃ ದೇವರು, ಎಲ್ಲಾದರ ಮೇಲೆ ದೇವರು ಆಗಿದ್ದಾನೆಂಬದನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳೋಣ.

## ದೇವರ ವಾಗ್ದಾನಗಳು ಸುಳ್ಳಾಗುವದಿಲ್ಲ (9:6-13).

6 ಇಸ್ರಾಯೇಲವು ಅಂತಹ ಒಂದು ಆಶಿರ್ವಾದಕರ ಜನಾಂಗವಾಗಿರುವದಾದರೆ ಆದಕ್ಕೆ ಏನಾಯಿತು? ಯೆಹೂದ್ಯರು ಏಕೆ ರಕ್ಷಣೆಯನ್ನು ಕಂಡುಕೊಳ್ಳುವ ತಮ್ಮ ಅವಕಾಶವನ್ನು ಕಳೆದು ಕೊಂಡಿದ್ದಾರೆ/ ಅವರಿಗೆ ದೇವರು ಮಾಡಿದ ವಾಗ್ದಾನಗಳು – ದೇವರು ಹೇಳಿದ ಮಾತು – ತಪ್ಪಿತೋ ಅಥವಾ ವಿಫಲವಾಗಿದೆಯೋ?

ಎಂದಿಗೂ ಇಲ್ಲ! ದೇವರು ಇಸ್ರಾಯೇಲ್ಯರಿಗೆ ಮಾಡಿದ ವಾಗ್ದಾನಗಳಿಗೆ ತಪ್ಪಿಲ್ಲ. ಆದರೆ ಆ ವಾಗ್ದಾನಗಳು – ರಕ್ಷಕ ಮತ್ತು ರಕ್ಷಣೆಯ ವಾಗ್ದಾನಗಳು – ನಿಜವಾದ ಯೆಹೂದ್ಯರಿಗಾಗಿ ಮಾತ್ರವೇ ಕೊಡಲ್ಪಟ್ಟಿವೆ. ಮತ್ತು ಪೌಲನು ಇಲ್ಲಿ ಯೆಹೂದ್ಯರೆಂದು ಹೇಳಿಕೊಳ್ಳುವವರೆಲ್ಲರೂ ನಿಜವಾದ ಯೆಹೂದ್ಯರಲ್ಲ ಎಂದು ಹೇಳುತ್ತಾನೆ (ರೋಮ 2:28-29 ನೋಡಿರಿ).

ಇಸ್ರಾಯೇಲ್ ವಂಶದಲ್ಲಿ ಹುಟ್ಟಿದವರೆಲ್ಲರೂ (ಅಂದರೆ, ಜನ್ಮದಿಂದ ಯೆಹೂದ್ಯರು) ಇಸ್ರಾಯೇಲ್ಯರಲ್ಲ (ಅಂದರೆ, ನಿಜವಾದ ಯೆಹೂದ್ಯರಲ್ಲ).

ಆದುದರಿಂದ, ದೇವರು ಯೆಹೂದ್ಯರಿಗೆ ನೀಡಿದ ವಾಗ್ದಾನಗಳು ಮುರಿಯಲ್ಪಟ್ಟಿಲ್ಲ ಅಥವಾ ವಜಾಮಾಡಲ್ಪಟ್ಟಿಲ್ಲ, ಯಾಕೆಂದರೆ ವಾಸ್ತವದಲ್ಲಿ ಬಹು ಮಂದಿ ಯೆಹೂದ್ಯರು "ನಿಜವಾದ ಯೆಹೂದ್ಯರಾಗಿರಲಿಲ್ಲ". ಯೇಸುವನ್ನು ನಂಬುವವರು ಮಾತ್ರವೇ ನಿಜವಾದ ಯೇಹೂದ್ಯರಾಗಿದ್ದಾರೆ. ಪೌಲನು 8ನೇ ವಚನಲ್ಲಿ ಶರೀರಸಂಬಂಧವಾಗಿ ಹುಟ್ಟಿದ ಯೆಹೂದ್ಯರು (ಅಬ್ರಹಾಮನ ವಂಶದಲ್ಲಿ ಹುಟ್ಟಿದವರು) ಮತ್ತು ವಾಗ್ದಾನ ಸಂಬಂಧವಾಗಿ ಹುಟ್ಟಿದ (ವಾಸ್ಥವದಲ್ಲಿ ಕ್ರಿಸ್ತನಲ್ಲಿ – ನಂಬಿಕೆಯಿಟ್ಟ) ಯೆಹೂದ್ಯರ ನಡುವೆ ಅಂತರವನ್ನು ಮಾಡುತ್ತಾನೆ. " ವಾಗ್ದಾನ ಸಂಬಂಧವಾದ ಮಕ್ಕಳಿಗೆ" ಮಾತ್ರವೇ – ಅಂದರೆ, ನಿಜವಾದ ಯೆಹೂದ್ಯರು, ವಿಶ್ವಾಸಿಸುವ ಯೆಹೂದ್ಯರಿಗಾಗಿ – ದೇವರ ವಾಗ್ದಾನಗಳು ನೆರವೇರಿವೆ (ರೋಮ 4:11-17 ಮತ್ತು ವ್ಯಾಖ್ಯಾನ ನೋಡಿರಿ). ನಂಬಿಕೆಯ ಮೂಲಕ ನೀತಿವಂತರಾಗಲು ತವಕಪಡುವವರೇ "ವಾಗ್ದಾನ ಸಂಬಂಧವಾದ ಮಕ್ಕಳಾಗಿದ್ದಾರೆ". ತಮ್ಮ ಸ್ವಂತ ಪ್ರಯತ್ನಗಳಿಂದಲೂ, ಸತ್ಕ್ರೀಯೆಗಳಿಂದಲೂ ನೀತಿವಂತರಾಗಲು ತವಕಪಡುವವರು "ಶರೀರ ಸಂಬಂಧವಾದ ಮಕ್ಕಳು" ಆಗಿದ್ದಾರೆ (ರೋಮ 9:32; ಗಲಾತ್ಯ 3:6-9 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

7-9 ಶರೀರ ಸಂಬಂಧವಾಗಿ ಹುಟ್ಟಿದ ಮಕ್ಕಳೆಲ್ಲರೂ ಸ್ವಾಸ್ತ್ಯವನ್ನು (ವಾಗ್ದಾನವನ್ನು) ಪಡೆಯುವದಿಲ್ಲ ಎಂಬದನ್ನು ತೋರಿಸಲು ಪೌಲನು ಅಬ್ರಹಾಮನ ಉದಾಹರಣೆಯನ್ನು ನೀಡುತ್ತಾನೆ. ಅಬ್ರಹಾಮನಿಗೆ ಇಸಾಕ ಮತ್ತು ಇಸ್ಮಾಯೇಲರೆಂಬ ಇಬ್ಬರು ಶರೀರಸಂಬಂಧವಾಗಿ ಹುಟ್ಟಿದ ಮಕ್ಕಳಿದ್ದರು. ಆದರೆ ಅವರಲ್ಲಿ ಒಬ್ಬನಾದ ಇಸಾಕನು ಮಾತ್ರವೇ "ನಿಜವಾದ ಮಗ" ಆಗಿದ್ದನು; ಇಸಾಕನು ಮಾತ್ರವೇ ಸ್ವಾಸ್ತ್ಯವನ್ನು ಪಡೆದನು. ಅಬ್ರಹಾಮನು ಮೊದಲು ತನ್ನ ಹೆಂಡತಿಯ ದಾಸಿಯಿಂದ ಇಸ್ಮಾಯೇಲನನ್ನು ಪಡೆದನು (ಆದಿಕಾಂಡ 16:1-14, 15-16). ಇಸ್ಮಾಯೇಲನ ಸಂತತಿಯವರು ಯೆಹೂದ್ಯರಲ್ಲ. [55] ಯೆಹೂದ್ಯರು ಅಬ್ರಹಾಮನಿಗೆ ಆತನ ಹೆಂಡತಿಯಾದ ಸಾರಯಳಿಗೆ ಜನಿಸಿದ ಎರಡನೆಯ ಮಗನಾದ ಇಸಾಕನ

ಸಂತತಿಯವರಾಗಿದ್ದಾರೆ. ಇತನು ಅಬ್ರಹಾಮನಿಗೆ ದೇವರು ಕೊಡುತ್ತೇನೆಂದುವಾಗ್ದಾನ ಮಾಡಿದ ಮಗನಾಗಿದ್ದಾನೆ (ಆದಿಕಾಂಡ 18:14; 21:1-13; ಗಲಾತ್ಯ 4:22-23). ದೇವರು ಜನ್ಮದಿಂದ ಮಾತ್ರವೇ ನಿಜವಾದ ಸಂತತಿಯೆಂದು ಎಣಿಸುವದಿಲ್ಲ. ದೇವರ ದೃಷ್ಟಿಯಲ್ಲಿ ದೇವರ ವಾಗ್ದಾನಕ್ಕನುಸಾರವಾಗಿ ಬಂದವರೇ – ಅಂದರೆ, ನಂಬಿಕೆಯ ಅನುಸಾರವಾಗಿ ಬಂದವರೇ – ನಿಜವಾದ ಸಂತತಿಯಾಗಿದ್ದಾರೆ. ಯಾಕೆಂದರೆ ಅಬ್ರಹಾಮನ ನಂಬಿಕೆಯ ಆಧಾರದಿಂದಲೇ ದೇವರು ವಾಗ್ದಾನ ಮೂಲಕವಾಗಿ ಅಬ್ರಹಾಮ ಮತ್ತು ಸಾರಯಳನ್ನು ಮಗನನ್ನು ನೀಡಿ ಆಶಿರ್ವದಿಸಿದನು.

ಇಲ್ಲಿ ಪೌಲನ ಅಂಶವೇನೆಂದರೆ ಯೆಹೂದ್ಯರು ಶರೀರ ಸಂಬಂಧವಾಗಿ ಅಬ್ರಹಾಮನಿಗೆ ಹುಟ್ಟಿದ ಮಾತ್ರದಿಂದಲೇ ತಾವು ದೇವರ ಮಕ್ಕಳೆಂದು ಹೇಳಿಕೊಳ್ಳಲು ಸಾಧ್ಯವಿಲ್ಲ ಎಂಬದೇ. ವಾಗ್ದಾನ ಸಂಬಂಧವಾಗಿ ಹುಟ್ಟಿದವರೇ ದೇವರ ನಿಜವಾದ ಮಕ್ಕಳು. ವಾಗ್ದಾನಸಂಬಂಧವಾಗಿ ಹುಟ್ಟಿದವರೇ ಅಬ್ರಹಾಮನ ಸಂತತಿಯವರೆಂದು ಎಣಿಸಲ್ಪಡುವರು.

ಅಥವಾ ಬೇರೆಮಾತುಗಳಲ್ಲಿ ಹೇಳುವದಾದರೆ ನಂಬಿಕೆಯ ಮಕ್ಕಳೇ ನಿಜವಾದ ಯೆಹೂದ್ಯರು ಹೊರತು ಶಾರೀರಿಕ ಮಕ್ಕಳಲ್ಲ. ಹಾಗಾದರೆ, ಕ್ರಿಸ್ತನಲ್ಲಿ ನಂಬಿಕೆಯಿಡುವವರೇ ಅಬ್ರಹಾಮನ ನಿಜವಾದ ಸಂತತಿಯಾಗಿದ್ದಾರೆ. ಯೆಹೂದ್ಯರು (ಜನ್ಮದಿಂದ ಯೆಹೂದ್ಯರು) ಕ್ರಿಸ್ತನನ್ನು ತಿರಸ್ಕರಿಸಿದಾಗ ಅವರು ತಮ್ಮನ್ನೇ ತಿರಸ್ಕರಿಸಿ ತಮ್ಮ ಸ್ವಾಸ್ತ್ಯವನ್ನು ದೇವರ ಕುಟುಂಬದಲ್ಲಿ ತಮ್ಮ ಸ್ಥಾನವನ್ನೂ ಕಳೆದುಕೊಂಡರು.

**10-12** ಈ ವಚನಗಳಲ್ಲಿ ದೇವರು ಹೇಗೆ ಶರೀರ ಸಂಬಂಧವಾಗಿ ಹುಟ್ಟಿದ ಪ್ರಕಾರದಂತೆ ತನ್ನ ನಿಜ ಬಾಧ್ಯಸ್ಥರನ್ನು ಆರಿಸಿಕೊಳ್ಳುವದಿಲ್ಲ ಎಂಬುದಕ್ಕೆ ಪೌಲನು ಇನ್ನೊಂದು ದೃಷ್ಟಾಂತವನ್ನು ನೀಡುತ್ತಾನೆ. ಇಸಾಕನ ಹೆಂಡತಿಯಾದ ರೆಬಕ್ಕಳು ಅವಳಿ ಜವಳಿ ಮಕ್ಕಳಿಗೆ ಜನ್ಮ ನೀಡಿದಳು. ಯೆಹೂದ್ಯ ಪದ್ಧತಿಯ ಪ್ರಕಾರವಾಗಿ ಅವಳಿ ಜವಳಿ ಯಲ್ಲಿ ಜೇಷ್ಟಪು ತ್ರನಾದ ಏಸಾವನು ಕುಟುಂಬದ ಸ್ವಾಸ್ತ್ಯವನ್ನು ಪಡೆಯಬೇಕಾಗಿತ್ತು. ಆದರೆ ದೇವರು ತನ್ನ ಸಂಕಲ್ಪದ ಪ್ರಕಾರವಾಗಿ ಅವಳಿ ಜವಳಿಯ ಎರಡನೆಯ ಮಗುವಾಗಿ ಹುಟ್ಟಿದ ಯಾಕೋಬನಿಗೆ ಸ್ವಾಸ್ತ್ಯವು ದೊರೆಯವಂತೆ ಮಾಡಿದನು (ಆದಿಕಾಂಡ 25:20-26; 27:1-35).

ಇಲ್ಲಿ ಪು ನಃ ನಾವು ಜನ್ಮದ ಆಧಾರದ ಮೇಲೆ ದೇವರು ಜನರಿಗೆ ಸ್ವಾಸ್ತ್ಯವನ್ನು ನೀಡುವದಿಲ್ಲ, ಆದರೆ ದೇವರು ತಮಗೆ ಮನಸ್ಸಿದ್ದವರನ್ನು ಆರಿಸಿಕೊಳ್ಳುತ್ತಾನೆಂಬ ಸಂಕಲ್ಪವು ಸ್ಥಿರವಾಗಿರಬೇಕೆಂಬದುಕ್ಕಾಗಿ ತನ್ನ ಸ್ವಂತ ಚಿತ್ತದ ಪ್ರಕಾರವಾಗಿ ನೀಡುತ್ತಾನೆಂಬದನ್ನು ನೋಡುತ್ತೇವೆ (ವಚನ 11). ಯಾಕೋಬನು ಹುಟ್ಟುವದಕ್ಕೆ ಮುಂಚೆಯೇ ದೇವರು ಅವನನ್ನು ಬಾಧ್ಯಸ್ತನಾಗಿರಬೇಕೆಂದು "ಆಯ್ಕೆ" ಮಾಡಿದನು ಅಥವಾ ಆರಿಸಿಕೊಂಡನು.ಯಾಕೋಬನು ತನ್ನನ್ನು ಯೋಗ್ಯನನ್ನಾಗಿ ನಿರೂಪಿಸಿಕೊಳ್ಳಲು ಯಾವದೇ ಪು ಣ್ಯ ಕ್ರಿಯೆಯನ್ನು ಮಾಡುವ ಅವಕಾಶ ಇರಲಿಲ್ಲ; ಅವನು ಇನ್ನೂ ಹುಟ್ಟಿರಲೂ ಇಲ್ಲ! ದೇವರ ಆಯ್ಕೆಯು ಪು ಣ್ಯಕ್ರಿಯೆಗಳ ಮೇಲೆ ಆಧಾರವಾಗಿಲ್ಲ, ಆದರೆ ಅವನ ಸರ್ವ ಶಕ್ತಿಯುಳ್ಳ ಕಾರಣದಿಂದ ಆರಿಸಿಕೊಳ್ಳಲಿಲ್ಲ; ಆತನ ಕೃಪೆಯಿಂದಲೇ ಆರಿಸಿಕೊಂಡನು.

**13** ಈ ರೀತಿಯಾಗಿ ದೇವರು ಯಾಕೋಬನನ್ನು ಮತ್ತು ಆತನು ಸಂತತಿಯನ್ನು ಪ್ರೀತಿಸಿದಮು (ಆರಿಸಿಕೊಂಡನು). ಮತ್ತು ಏಸಾವನನ್ನು, ಆತನ ಸಂತತಿಯನ್ನು ದ್ವೇಷಿಸಿದನು (ತಿರಸ್ಕರಿಸಿದನು). ಮಲಾಕಿ 1:23, ಯಾಕೋಬ ಮತ್ತು ಏಸಾವ ಇಬ್ಬರೂ ಇಸಾಕನ ಮಕ್ಕಳಾಗಿದ್ದರು, ಆದರೆ ಯಾಕೋಬನು ಮಾತ್ರವೇ ಸ್ವಾಸ್ತ್ಯವನ್ನು ಪಡೆದನು, ಮತ್ತು ಯಾಕೋಬನಿಂದ ಮಾತ್ರವೇ ನಿಜ ಯೆಹೂದ್ಯರು, ನಿಜ ಇಸ್ರಾಯೇಲ ಸಂತತಿಯ ಹುಟ್ಟಿತು.

ಆದುದರಿಂದ, ಈ ಭಾಗದಲ್ಲಿ ಪೌಲನ ಮುಖ್ಯ.ಬೋಧನೆಯು ಇದಾಗಿದೆ: ದೇವರು ಜನ್ಮದಿಂದ ಮಾತ್ರವೇ ಯೆಹೂದ್ಯರಾಗಿರುವವರನ್ನೂ, ತಮ್ಮ ಸ್ವಕಾರ್ಯಗಳಿಂದ ನೀತಿವಂತರಾಗಿರಲು ಪ್ರಯತ್ನಿಸಿದವರನ್ನೂ ತನ್ನ ಮಕ್ಕಳನ್ನಾಗಿ ಆರಿಸಿಕೊಳ್ಳಲಿಲ್ಲ. ಬದಲಾಗಿ, ಆತನ ಕರೆಯನ್ನು ಕೇಳಿದವರಾಗಿ ಆತನ ಮಗನಾದ ಯೇಸುವಿನಲ್ಲಿ ನಂಬಿಕೆಯಿಟ್ಟವರನ್ನು ಆರಿಸಿಕೊಂಡನು.

## ದೇವರು ಅನ್ಯಾಯಗಾರನಲ್ಲ (9:14-18)

**14-16** ದೇವರು ಅನ್ಯಾಯಗಾರನೆಂದು ಕೆಲವರು ಯೋಚಿಸಬಹುದು. ಅವರು ಕೇಳಬಹುದೇನೆಂದರೆ: "ದೇವರು ಏಕೆ ಯಾಕೋಬನನ್ನು ಪ್ರೀತಿಸಿ ಏಸಾವನನ್ನು ದ್ವೇಷಿಸಿದನು? ಅದು ಅನ್ಯಾಯ ವಲ್ಲವೋ?" ಆದರೆ ದೇವರ ವಿಷಯವಾಗಿ ನಾವು ಅಂತಹ ರೀತಿಯಲ್ಲಿ ಯೋಚಿಸಬಾರದು.

ಪೌಲನು 15ನೇ ವಚನದಲ್ಲಿ ಮೋಶೆಗೆ ದೇವರು ವಿಮೋಚನಕಾಂಡ 33:19ರಲ್ಲಿ ಹೇಳಿದ ಮಾತುಗಳನ್ನು ಉಲ್ಲೇಖಿಸುತ್ತಾನೆ. ದೇವರು ಮನುಷ್ಯರನ್ನು ತನ್ನ ಕರುಣೆಯ ನಿಮಿತ್ತವಾಗಿ ಆರಿಸಿಕೊಳ್ಳುತ್ತಾನೆ, ಕರೆಯುತ್ತಾನೆ ಮತ್ತು ಆಶಿರ್ವದಿಸುತ್ತಾನೆ ಹೊರತು ಮನುಷ್ಯರು ಇಚ್ಚಿಸುವದರಿಂದಾಗಲಿ ಅಥವಾ ಪ್ರಯತ್ನಿಸುವದರಿಂದಾಗಲಿ ಅಲ್ಲ (ವಚನ16).

ಈ ವಚನಗಳಲ್ಲಿ ಪೌಲನು ದೇವರ ಕರುಣೆಯು ಎಂದಿಗೂ ಅನ್ಯಾಯಕರವಲ್ಲ ಎಂಬದನ್ನು ಕಲಿಸುತ್ತಾನೆ. ಪ್ರತಿಯೊಬ್ಬ ಪು ರುಷ ಮತ್ತು ಸ್ತ್ರೀಯು ಒಂದಿಲ್ಲಾ ಒಂದು ವಿಧದಲ್ಲಿ ದೇವರಿಗೆ ಅವಿಧೇಯರಾಗಿರುವದರಿಂದ ಯಾರೂ ರಕ್ಷಣೆಯನ್ನು ಪಡೆಯಲು ಯೋಗ್ಯರಲ್ಲ. ಆದರೆ ದೇವರು ತನ್ನ ಕೃಪೆ ಮತ್ತು ಕರುಣೆಯಿಂದ ತನ್ನ ಸ್ವಂತ ಕುಮಾರನಾದ ಯೇಸುವನ್ನು

ನಮ್ಮ ರಕ್ಷಣಾರ್ಥವಾಗಿ ಕೊಟ್ಟನು. ದೇವರ ಕೃಪೆ ಮತ್ತು ಕರುಣೆಯ ಹೊರತಾಗಿ ಯಾರೊಬ್ಬರೂ ರಕ್ಷಣೆಯನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ.

ಯಾವನೂ ತಾನು ಸ್ವತಃ ಇಚ್ಛಿಸುವದರಿಂದಾಗಲಿ, ಪ್ರಯತ್ನಿಸುವದರಿಂದಾಗಲಿ ದೇವರ ಕೃಪೆ ಮತ್ತು ಕರುಣೆಯನ್ನು ಪಡೆಯಲು ಸಾಧ್ಯವಿಲ್ಲ (ವಚನ 16). ದೇವರು "ನೀವು ನನ್ನನ್ನು ಹುಡುಕುವಿರಿ, ಮನಪೂರ್ವಕವಾಗಿ ಹುಡುಕಿದಾಗ ನನ್ನನ್ನು ಕಂಡುಕೊಳ್ಳುವಿರಿ" (ಯೆರೆಮೀಯ 29:13) ಎಂದು ಹೇಳಿದ್ದು ನಿಜವೇ. ನಾವು ಮುಕ್ತ ಹಾಗು ದೀನ ಹೃದಯದೊಂದಿಗೆ ದೇವರೆಡೆಗೆ ನೋಡಬೇಕೆಂಬದು ನಿಜವೇ. ಆದರೆ ಇದನ್ನು ಸಹ ನಾವು ಮೊದಲು ದೇವರ ಕೃಪೆಯ ಉತ್ತೇಜನಗಳನ್ನು ಪಡೆಯದೆ ನಮ್ಮ ಸ್ವಬಲದಿಂದ ಮಾಡಲು ಸಾಧ್ಯವಿಲ್ಲ (ಯೋಹಾನ 1:12-13; 6:44 ನೋಡಿರಿ). ಪ್ರಾರಂಬದಿಂದ ಅಂತ್ಯದವರೆಗೂ ನ್ಮಮ ರಕ್ಷಣೆಯು ದೇವರ ಕೃಪೆಯ ಕಾರ್ಯವಾಗಿದೆ.

**17-18** ಪರೋಹನು ಯಾರು? ಮೋಶೆಯ ಕಾಲದಲ್ಲಿ ಐಗುಪ್ತ್ಯದ ಅರಸರನ್ನು ಪರೋಹ ಎಂದು ಕರೆಯಲಾಗುತ್ತಿತ್ತು. ಪೌಲನು ಇಲ್ಲಿ ಆ ಕಾಲದಲ್ಲಿ ಐಗುಪ್ತ್ಯದೊಳಗೆ ವಾಸಿಸುತ್ತಿದ್ದ ಯೆಹೂದ್ಯರನ್ನು ಹಿಂಸಿಸಿದ ಕ್ರೂರ ಮತ್ತು ದುಷ್ಟ ಅರಸನಾದ ಎರಡನೆಯ ರಾಮಸ್ಸೆಸ್‌ನ ಕುರಿತಾಗಿ ಸೂಚಿಸುತ್ತಿದ್ದಾನೆ. ದೇವರು ಈ ದುಷ್ಟಪರೋಹನ ಕೈಯೊಳಗಿಂದ ಯೆಹೂದ್ಯರನ್ನು ಬಿಡಿಸುವದಕ್ಕಾಗಿ ಮೋಶೆಯನ್ನು ಕಳುಹಿಸಿದನು, ಈ ಪರೋಹನ ಹೃದಯದಲ್ಲಿ ಭಯವನ್ನುಂಟು ಮಾಡಲು ದೇವರು ಮೋಶೆಯ ಮೂಲಕ ಮಹಾ ಸೂಚಕ ಕಾರ್ಯಗಳನ್ನೂ , ಅದ್ಭುತಗಳನ್ನೂ ನಡಿಸಿದನು, ಅವು ಗಳು ವಿಮೋಚನ ಕಾಂಡ 7-12 ಅಧ್ಯಾಯಗಳಲ್ಲಿ ವಿವರಿಸಲ್ಪಟ್ಟಿವೆ.

17ನೇ ವಚನದಲ್ಲಿ ದೇವರು ಪರೋಹನಿಗೆ ಹೇಳಿದ ಮಾತುಗಳನ್ನು ಪೌಲನು ಉಲ್ಲೇಖಿಸುತ್ತಿದ್ದಾನೆ (ವಿಮೋಚನ ಕಾಂಡ 9:16). ದೇವರು ತನ್ನ ಶಕ್ತಿಯನ್ನು ತೋರಿಸಿ ತನ್ನ ಹೆಸರನ್ನು ಪ್ರಖ್ಯಾತಗೊಳಿಸಲು ಈ ದುಷ್ಟ ಅರಸನನ್ನು ಎಬ್ಬಿಸಿ ಅವನ ಹೃದಯವನ್ನು ಕಠಿಣಪಡಿಸಿದನು. ಪರೋಹನ ಹೃದಯವು ಕಠಿಣಗೊಳ್ಳದಿದ್ದರೆ – ಉದಾಹರಣೆಗೆ, ಪರೋಹನು ಪಶ್ಚಾತಾಪಪಟ್ಟಿದ್ದರೆ – ದೇವರಿಗೆ ಆಸಮಯದಲ್ಲಿ ತನ್ನ ಶಕ್ತಿಯನ್ನು ತೋರಿಸುವ ಅವಕಾಶವಿರುತ್ತಿರಲಿಲ್ಲ.

ಇತರ ಮೂಲಕ ದೇವರು ಕೆಲವರಿಗೆ ಕರುಣೆಯನ್ನು ತೋರಿಸುತ್ತಾನೆ, ಆದರೆ ಇನ್ನು ಕೆಲವರಿಗೆ ಅವರ ಕರುಣೆಯನ್ನು ಪಡೆಯಬಾರದೆಂದು ಅವರನ್ನು ಕಠಿಣಗೊಳಿಸುತ್ತಾನೆಂಬದನ್ನು ನಾವು ತಿಳಿಯಬಹುದು.

ಇದನ್ನು ಓದಿದ ಬಳಿಕ ದೇವರು ನಿಜವಾಗಿಯೂ ಅನ್ಯಾಯಗಾರನೆಂದು ಯೋಚಿಸುವ ಶೋಧನೆಗೆ ನಾವು ಒಳಗಾಗುತ್ತೇವೆ – ಅಂದರೆ, ದೇವರು ಪರೋಹನಿಗೆ ಅನ್ಯಾಯ ಮಾಡಿದನೆಂದು ಯೋಚಿಸುವವರಾಗಿದ್ದೇವೆ. ದೇವರು ಪರೋಹನಿಗೆ ಒಂದು ಅವಕಾಶವನ್ನು ನೀಡಲೇ ಇಲ್ಲ! ದೇವರು ಪರೋಹನಿಗೆ ಸ್ವಲ್ಪವೂ ದಯೆಯನ್ನು ತೋರಿಸಲೇ ಇಲ್ಲ! ಎಂದು ಯೋಚಿಸಬಹುದು. ಆದರೆ ಯಾವ ಮನುಷ್ಯನು ದೇವರ ದಯೆಗೆ ಯೋಗ್ಯನಲ್ಲ; ಯಾವನೂ ದೇವರ ಕರುಣೆಗೆ ಯೋಗ್ಯನಲ್ಲ ಎಂಬದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಯಾವ ಮನುಷ್ಯನು ಸಹ ದೇವರಿಗೆ – "ನಾನು ಒಂದು ಅವಕಾಶಕ್ಕೆ ಯೋಗ್ಯನು!" ಎಂದು ಹೇಳಲು ಸಾಧ್ಯವಿಲ್ಲ. ಕಾರಣವೇನೆಂದರೆ ನಾವೆಲ್ಲರೂ ಸತತವಾಗಿ ದೇವರ ವಿರುಧ್ಧವಾಗಿ ಪಾಪ ಮಾಡಿದವರಾಗಿದ್ದೇವೆ (ರೋಮ 3:10-12 ನೋಡಿರಿ). ಮನುಷ್ಯನು ದೇವರಿಂದ ದಂಡನೆಯನ್ನು ಹೊಂದಲು ಮಾತ್ರವೇ ಯೋಗ್ಯನಾಗಿದ್ದಾನೆ. ದೇವರು ಒಬ್ಬ ವ್ಯಕ್ತಿಯನ್ನು ಕಠಿಣಪಡಿಸುವಾಗ ಆತನು ತನ್ನ ನ್ಯಾಯವನ್ನು ತೋರಿಸುತ್ತಿದ್ದಾನೆ ಹೊರತು ಅನ್ಯಾಯವನ್ನಲ್ಲ. ಆದುದರಿಂದ, ಪರೋಹನ ದುಷ್ಟತನದ ನಿಮಿತ್ತವಾಗಿ ದೇವರು ಆತನ ಹೃದಯವನ್ನು ಕಠಿಣಪಡಿಸಿದನು. ಪರೋಹನ ಹೃದಯವನ್ನು ಕಠಿಣಪಡಿಸುವದರಲ್ಲಿ ದೇವರು ಸಂಪೂರ್ಣ ನ್ಯಾಯವಂತನೇ ಆಗಿದ್ದಾನೆ.[56] ಪರೋಹನು ದೇವರಿಂದ ದಂಡನೆಯನ್ನು ಹೊಂದಲು ಅರ್ಹನಾಗಿದ್ದನು. ಇನ್ನೊಂದು ಕಡೆಯಲ್ಲಿ ಕರುಣೆಯು ಯಾವನೂ ಪಡೆಯಲು "ಯೋಗ್ಯವಲ್ಲದ"ಸಂಗತಿಯಾಗಿದೆ, ಇಲ್ಲವಾದರೆ ಅದು ಕರುಣೆಯಾಗಿರಲಾರದು. ಕರುಣೆಯು ಸ್ವಭಾವತಃ ಅಯೋಗ್ಯವಾಗಿದೆ. ಇದು ಕೇವಲ ಅಯೋಗ್ಯರಿಗೆ ಕೊಡಲ್ಪಡುವದಾಗಿದೆ. ಯಾರೂ ಕೂಡಾ ಕರುಣೆಗೆ ಯೋಗ್ಯರಲ್ಲವಾದ್ದರಿಂದ ಯಾರೊಬ್ಬರು ಸಹ ಕರುಣೆಯನ್ನು ಹೊಂದದಿದ್ದಕ್ಕೆ ಗುಣಗುಟ್ಟಲು ಸಾಧ್ಯವಿಲ್ಲಗ ದೇವರು ಯಾರಿಗೇ ಆಗಲಿ ಕರುಣೆಯನ್ನು ತೋರಿಸಬೇಕೆಂಬ ನಿರ್ಬಂದಕ್ಕೊಳಪಟ್ಟವನಲ್ಲ. ಆದರೆ ದೇವರು ಕೆಲವರಿಗೆ ಕರುಣೆಯನ್ನು ತೋರಿಸಬೇಕೆಂದು ಇಚ್ಛಿಸುವದಾದರೆ ಅದರಲ್ಲಿ ಯಾವ ತಪ್ಪಿದೆ? ಆತನು ಹಾಗೆ ಮಾಡುವದು ಅನ್ಯಾಯವೋ? ಎಂದಿಗೂ ಇಲ್ಲ.

ಆದ್ದರಿಂದ, ದೇವರು ಎಲ್ಲರಿಗೂ ನ್ಯಾಯವನ್ನು (ದಂಡನೆಯನ್ನು) ನೀಡುತ್ತಾ ನೆಂದು ನೋಡುತ್ತೇವೆ. ಆದರೆ ಕೆಲವರಿಗಾದಲೋ ಆತನು ತನ್ನ ನಿತ್ಯ ಸಂಕಲ್ಪಕ್ಕನುಸಾರವಾಗಿ ಕರುಣೆಯನ್ನು ತೋರಿಸುತ್ತಾನೆ. ಮತ್ತು ಕ್ರಿಸ್ತನು ಲೋಕಕ್ಕೆ ಬಂದಾಗಿನಿಂದ ದೇವರು ಆತನಲ್ಲಿ ನಂಬುವ ಎಲ್ಲರಿಗೂ ಕರುಣೆಯನ್ನು ತೋರಿಸಿದ್ದಾನಷ್ಟೆ. ದೇವರು ಎಂದಿಗೂ ಸಹ ನಾವು ಹೊಂದಲು ಅರ್ಹವಾದ ದಂಡನೆಯನ್ನು ಹಿಂದೆಗೆದಿರುವದಿಲ್ಲ; ಬದಲಾಗಿ, ಆತನು ಅದನ್ನು ನಮ್ಮ ಸ್ಥಾನದಲ್ಲ ಕ್ರಿಸ್ತನಿಗೆ ನೀಡಿರುತ್ತಾನೆ. ಹೀಗೆ, ನಾವು ದೇವರ ನ್ಯಾಯವನ್ನೂ ಕರುಣೆಯನ್ನೂ ಒಟ್ಟಾಗಿ ಕಾಣುತ್ತೇವೆ. ರಕ್ಷಣೆಯನ್ನು ಪಡೆದಿರುವವರು ದೇವರಿಗೆ ಮಾತ್ರವೇ ಕೃತಜ್ಞಯನ್ನು ಸಲ್ಲಿಬೇಕಾಗಿರುತ್ತದೆ, ಯಾಕೆಂದರೆ ಅವರ ರಕ್ಷಣೆಯು ಸಂಪೂರ್ಣವಾಗಿ ಆತನ ಕರುಣೆ ಮತ್ತು ಕೃಪೆಯ ಫಲಿತವೇ ಆಗಿದೆ. ಆದರೆ ನಿತ್ಯದಂಡನೆಯನ್ನು ಪಡೆಯುವವರು ತಮಗೆ ಮಾತ್ರವೇ ಕೃತಜ್ಞತೆಯನ್ನು ಸಲ್ಲಿಸಿಕೊಳ್ಳಬೇಕಾಗುತ್ತದೆ, ಯಾಕೆಂದರೆ ಅವರ ಪಾಪದ ಮೂಲಕವಾಗಿ ಅವರು ತಮ್ಮ ಪೂರ್ಣ ದಂಡನೆಯನ್ನು ಸಂಪಾದಿಸಿಕೊಂಡಿರುತ್ತಾರೆ.

## ದೇವರು ಸರ್ವಶಕ್ತನು (9:19-29)

**19-21** ಮಣ್ಣಿನ ಮುದ್ದೆಯು ಹೇಗೆ ಕುಂಬಾರನಿಗೆ ಎದುರಾಗಿ ಪ್ರಶ್ನಿಸುವ ಹಕ್ಕನ್ನು ಹೊಂದಿರುವದಿಲ್ಲವೋ ಹಾಗೆಯೇ ನಾವು ಸಹ ರೂಪಿಸಲ್ಪಟ್ಟಿರುವ ವಿಧಾನಕ್ಕಾಗಿ ದೇವರನ್ನು ದೂರುವದಕ್ಕೆ ಯಾವ ಹಕ್ಕನ್ನು ಹೊಂದಿಲ್ಲ. ಯೆರೆಮಿಯ 18:1-12ರಲ್ಲಿ ಪ್ರವಾದಿಯಾದ ಯೆರೆಮೀಯನು ಲೋಕದ ಜನಾಂಗಗಳನ್ನು ಕುಂಬಾರನ ಕೈಗಳಲ್ಲಿರುವ ಮಣ್ಣಿಗೆ ಹೋಲಿಸುತ್ತಾನೆ. ದೇವರು ತಾನು ಉನ್ನತಕ್ಕೆ ಏರಿಸಲು ಸಂಕಲ್ಪಿಸಿದ ಯಾವದೇ ಜನಾಂಗವು ದುಷ್ಟತನವನ್ನು ನಡಿಸಿದರೆ ಆತನು ತನ್ನ ಮನಸ್ಸನ್ನು ಬದಲಾಯಿಸಿ ಅದನ್ನು ದಂಡಿಸುವೆನೆಂದು ಯೆರೆಮೀಯನ ಮೂಖಾಂತರವಾಗಿ ಹೇಳಿದನು. ಅದೇ ರೀತಿಯಲ್ಲಿ ತಾನು ದಂಡಿಸಲು ಸಂಕಲ್ಪಿಸಿದ ಯಾವದೇ ಜನಾಂಗವು ಪಶ್ಚಾತಾಪ ಪಡುವದಾದರೆ ಆತನು ಆ ಜನಾಂಗವನ್ನು ಕ್ಷಮಿಸಿ ಉನ್ನತಕ್ಕೇರಿಸುವೆನೆಂದು ಹೇಳಿದನು. ದೇವರು ಜನಾಂಗಗಳ ವಿಷಯದಲ್ಲಿ ನಡೆದು ಕೊಳ್ಳುವ ಪ್ರಾಕಾರವೇ ವ್ಯಕ್ತಿಪರರೊಂದಿಗೆ ಸಹ ನಡೆದುಕೊಳ್ಳುತ್ತಾನೆ.

**22** ಈ ವಚನದಲ್ಲಿ ಪೌಲನು ಪ್ರಸ್ತಾಪಿಸುವ ದೇವರ ಕೊಪಕ್ಕೆ ಗುರಿಯಾದ ಪಾತ್ರೆಗಳಾವವು ? ಅವರು ಪರೋಹನಂತಹ ಅವಿಧೇಯರು ಅಥವಾ ಕ್ರಿಸ್ತನಲ್ಲಿ ನಂಬಿಕೆಯಿಡಲು ನಿರಾಕರಿಸುವಂತಹ ಜನರು; ಇವರು ದೇವರ ಕೋಪಕ್ಕೆ ಯೋಗ್ಯರಾಗಿದ್ದಾರೆ. ದೇವರು ಈ ಅವಿಧೇಯ ಜನರನ್ನು – "ಈ ಕೋಪಕ್ಕೆ ಗುರಿಯಾದ ಪಾತ್ರೆಗಳನ್ನು" ಬಹು ಸೈರಣೆಯಿಂದ ಸೈರಿಸಿಕೊಂಡಿದ್ದಾನೆ, ಹೀಗೆ ಅವರು ಪಶ್ಚಾತಾಪ ಪಡುವ ಅವಕಾಶವನ್ನು ಪಡೆಯಬೇಕೆಂದು ಆತನು ಬಯಸಿದನು. ಆದರೆ ಕೊನೆಯಲ್ಲಿ ಆತನು ಪಶ್ಚಾತಾಪ ಪಡದವರ ಮೇಲೆಲ್ಲಾ ತನ್ನ ಕೋಪಾಗ್ನಿಯನ್ನು ಸುರಿಸುವನು. ಅಂತಹ ಜನರು ನಿಜವಾಗಿಯೂ ನಾಶನಕ್ಕೆ ಪಾತ್ರರಾಗಿದ್ದಾರೆ.

ಇಲ್ಲಿ ಸಹ ಕೆಲವೊಂದು ಕಷ್ಟಕರ ಪ್ರಶ್ನೆಗಳು ಉದ್ಭವಿಸುತ್ತವೆ: ನಾಶನಕ್ಕೆ ಪಾತ್ರವಾದ ಈ "ಕೋಪಕ್ಕೆ ಗುರಿಯಾದ ಪಾತ್ರೆಗಳನ್ನು" ಯಾರು ನಿರ್ಮಿಸಿದರು ಮತ್ತು ಅವು ಗಳು ಯಾವಾಗ ನಿರ್ಮಿಸಲ್ಪಟ್ಟವ/ ಈ ಸಂಗತಿಗಳು ಮೂಲತಃ ಮಾಡಲ್ಪಟ್ಟ ಮಣ್ಕು ಹೇಗಿತ್ತು? ಮಣ್ಣು ಒಂದು ರೀತಿಯಲ್ಲಿ ಕೆಟ್ಟದ್ದಾಗಿತ್ತೋ ಮತ್ತು ಆ ಕಾರಣಕ್ಕಾಗಿಯೇ ದೇವರು ಅದನ್ನು "ಕೋಪಕ್ಕೆ ಗುರಿಯಾದ ಪಾತ್ರೆಗಳನ್ನಾಗಿ" ನಿರ್ಮಿಸಿದನೋ? ಅಥವಾ ಆ ಮಣ್ಣನ್ನು ಪ್ರತ್ಯೇಕಿಸಿಟ್ಟನೋ? ದೇವರ ತಿರ್ಮಾನಕ್ಕೆ ಆಧಾರವೇನಾಗಿತ್ತು? ಅದು ಮಣ್ಣಿನ ಗುಣಮಟ್ಟವೋ? ಅಥವಾ ಅದು ದೇವರ ಸರ್ವಶಕ್ತಿಯುಳ್ಳ ಚಿತ್ತವೋ? (ವಚನಗಳು 17-18 ಮತ್ತು ವ್ಯಾಖ್ಯಾನ ನೋಡಿರಿ).

ಪು ನಃ ಕ್ರೈಸ್ತರು ಈ ವಿಷಯದ ಮೇಲೆ ಎರಡು ಮುಖ್ಯ ಯೋಚನೆಗಳನ್ನು ಹೊಂದಿದ್ದಾರೆ. ಪ್ರಾರಂಬದಲ್ಲಿಯೇ ದೇವರು ಕೆಲವು ಜನರನ್ನು (ಮಣ್ಣು) ನಾಶನಕ್ಕಾಗಿಯೂ, ಕೆಲವರನ್ನು ರಕ್ಷಣೆಗಾಗಿಯೂ ಆರಿಸಿಕೊಂಡನೆಂದು ಅನೇಕ ಕ್ರೈಸ್ತರು ಯೋಚಿಸುತ್ತಾರೆ. ಈ ಪ್ರಥಮ ದೃಷ್ಟಿಕೋನದ ಪ್ರಕಾರವಾಗಿ ಮಾನವನ ನಾಶನದ ಪೂರ್ಣ ಜವಾಬ್ದಾರಿಯು ದೇವರ ಮೇಲಿರುತ್ತದೆ.

ಆದರೆ ಇತರ ಕ್ರೈಸ್ತರು ವ್ಯತ್ಯಾಸವಾದ ವಿಚಾರವೊಂದನ್ನು ಹೊಂದಿದ್ದಾರೆ. ದೇವರು ಮೊದಲು ಎಲ್ಲಾ ಮಾನವರನ್ನು ರಕ್ಷಣೆಗಾಗಿ ಉಂಟು ಮಾಡಿದನು. ಆದರೆ ಕೆಲವರು ದೇವರ ಕೃಪೆಯನ್ನು ವಿರೋಧಿಸಿ ಆತನ ವಿರುದ್ಧವಾಗಿ ಪಾಪ ಮಾಡಿದರು. ಅವರ ಸ್ವಂತ ವಿರೋಧ ಮತ್ತು ಪಾಪದ ಫಲಿತವಾಗಿ ಈ ವ್ಯಕ್ತಿಗಳು "ಕೋಪಕ್ಕೆ ಗುರಿಯಾದ ಪಾತ್ರೆಗಳು" ಆಗಿ ಮಾರ್ಪಟ್ಟರು ಎಂದು ಈ ಕ್ರೈಸ್ತರು ನಂಬುತ್ತಾರೆ. ದೇವರು ಅವರ ಪಾಪ ಮತ್ತು ಅವಿಧೇಯತೆಯನ್ನು ಬಹು ಸೈರಣೆಯಿಂದ ಸೈರಿಸಿಕೊಂಡನು. ಅವರಿಗೆ ಪಶ್ಚಾತಾಪ ಪಡುವದಕ್ಕೆ ಒಂದು ಅವಕಾಶ ದೊರೆಯಬೇಕೆಂಬುದಕ್ಕಾಗಿ ದೇವರು ಸೈರಿಸಿಕೊಂಡನು. ಈಗಲೂ ಸಹ ದೇವರು ಇಂದಿಲ್ಲಾ ನಾಳೆ ಜನರು ಪಶ್ಚಾತಾಪ ಪಡುವರೇನೋ ಎಂದು ಧೀರ್ಘ ಶಾಂತಿಯಿಂದ ಕಾಯುತ್ತಿದ್ದಾನೆ. ಈ ಅವಿಧೇಯ ಜನರಿಗೆ – ಆತನ ಕೋಪಕ್ಕೆ ಗುರಿಯಾದ ಪಾತ್ರೆಗಳಿಗೆ – ಪಶ್ಚಾತಾಪ ಪಟ್ಟು ಕರುಣೆಯ ಪಾತ್ರೆಗಳಾಗಿ ಮಾರ್ಪಡಲು ಅವಕಾಶ ವಿರುತ್ತದೆ (ವಚನ 23). ಹೀಗೆ, ಈ ಎರಡನೆಯ ದೃಷ್ಟಿಕೋನದ ಪ್ರಕಾರವಾಗಿ ಜನರು ತಾವು ನಾಶನಕ್ಕಾಗಿ ಆರಿಸಿಕೊಳ್ಳಲ್ಪಡಲಿ ಇಲ್ಲವೆ ರಕ್ಷಣೆಗಾಗಿ ಆರಿಸಿಕೊಳ್ಳಲ್ಪಡಲಿ, ಅವರು ಕೋಪಕ್ಕೆ ಗುರಿಯಾದ ಪಾತ್ರೆಗಳಾಗಲಿ ಇಲ್ಲವೆ ಕರುಣಾ ಪಾತ್ರೆಗಳಾಗಲಿ ಅದಕ್ಕೆ ಪ್ರಾಥಮಿಕವಾಗಿ ಸ್ವತಃ ಅವರೇ ಜವಾಬ್ದಾರರಾಗಿದ್ದಾರೆ ಹೊರತು ದೇವರಲ್ಲ (2 ತಿಮೊಥೆ 2:20-21 ಮತ್ತು ವ್ಯಾಖ್ಯಾನ ನೋಡಿರಿ).

ಇವೆರಡರಲ್ಲಿ ಯಾವ ವಿಚಾರವು ಸರಿಯೆಂದು ನಿಖರವಾಗಿ ಹೇಳುವದಕ್ಕೆ ಸಾಧ್ಯವಿಲ್ಲ. ಇವೆರಡರಲ್ಲಿಯೂ ಬಹು ಸತ್ಯವಿರುವದು ಸ್ಪಷ್ಟವಾಗಿರುತ್ತದೆ. ಬಹುಶಃ, ಹೇಗೊ ಅದು ನಮ್ಮ ತಿಳುವಳಿಕೆಗೆ ನಿಲುಕದ್ದಾಗಿದೆ, ಅವೆರಡು ವಿಚಾರಗಳೂ ಸಮಾನ ಸತ್ಯವಾಗಿದ್ದು ಒಂದೇ ಶ್ರೇಷ್ಠ ಸತ್ಯದ ಎರಡು ಕೋನಗಳನ್ನು ಪ್ರತಿನಿಧಿಸುತ್ತವೆ ಆದರೆ ಈ ವಿಚಾರಗಳಲ್ಲಿ ನಾವು ಯಾವು ದನ್ನೇ ಇಷ್ಟ ಪಟ್ಟರೂ ಎಲ್ಲಾ ವಿಶ್ವಾಸಿಗಳೂ ಒಪ್ಪಬಹುದಾದ ಒಂದು ಪ್ರಾಮುಖ್ಯ ಸತ್ಯವು ನಿಲ್ಲುತ್ತದೆ: ಅದೇನೆಂದರೆ, ತಮ್ಮ ಪಾಪಗಳಿಗಾಗಿ ಪಶ್ಚಾತಾಪ ಪಟ್ಟು ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವ ಎಲ್ಲಾ ಪು ರುಷ ಮತ್ತು ಸ್ತ್ರೀಯರಿಗೂ ರಕ್ಷಣೆಯು ಕೊಡಲ್ಪಡುತ್ತದೆ. ಇದು ಕ್ರಿಸ್ತನ ಸುವಾರ್ತೆಯಾಗಿದೆ. ಇದಕ್ಕಿಂತಲೂ ಹೆಚ್ಚಾಗಿ ನಾವು ತಿಳಿಯಬೇಕಾದ ಅಗತ್ಯವಿರುವದಿಲ್ಲ.

**23-24** ಹಾಗಾದರೆ (ದೇವರ) ಕರುಣಾ ಪಾತ್ರರು ಯಾರು? (ವಚನ 23). ಜಗದುತ್ಪತ್ತಿಗೆ ಮುಂಚೆಯೇ ದೇವರಿಂದ ಆರಿಸಿಕೊಳ್ಳಲ್ಪಟ್ಟ ನಂಬಿಕೆಯನ್ನು ಹೊಂದಿರುವ ಪು ರುಷ ಮತ್ತು ಸ್ತ್ರೀಯರೇ ಕರೆಯಲ್ಪಟ್ಟ ನಾವು ಸಹ – ಆಕರುಣಾ ಪಾತ್ರರು

(ವಚನ 24). ವಿಶ್ವಾಸಿಗಳಾದ ನಾವು ದೇವರ "ಕರುಣಾ ಪಾತ್ರರು" ಆಗಿದ್ದು ನಮಗೆ ಆತನು ತನ್ನ ಪ್ರಭಾವ ಐಶ್ವರ್ಯವನ್ನು ತೋರಿದ್ದಾನೆ (ಎಫೆಸ 1:18; 3:16 ನೋಡಿರಿ).

**25** ಇಲ್ಲಿ ಪೌಲನು ಹಳೆ ಒಡಂಬಡಿಕೆಯ ಪ್ರವಾದಿಯಾದ ಹೋಶೆಯನ ಮಾತುಗಳನ್ನು ಉಲ್ಲೇಖಿಸುತ್ತಾನೆ. ಅನ್ಯ ಜನರು ಪ್ರಾರಂಭದಲ್ಲಿ ದೇವರ ಜನವಾಗಿದ್ದಿಲ್ಲ ಆದರೆ ಅನಂತರ ನಂಬಿಕೆಯ ಮೂಲಕ ಅವರು ದೇವವಜನವಾದರು. ಮೊದಲು ಯೆಹೂದ್ಯರು ಮಾತ್ರವೇ ದೇವರಿಂದ "ನನ್ನ ಜನರು" ಎಂದು ಪರಿಗಣಿಸಲ್ಪಟ್ಟಿದ್ದರು; ಮತ್ತು ಇಸ್ರಾಯೇಲ ಮಾತ್ರವೆ "ನನ್ನ ಪ್ರೀಯಳು" ಎಂದು ಕರೆಯಲ್ಪಟ್ಟಿತ್ತು (ಹೋಶೇಯ 2:23; 1 ಪೇತ್ರ 2:10).

**26** ಆದರೆ ಅನಂತರ ದೇವರ ಜನವಲ್ಲದ ಅನ್ಯಜನರು ಕ್ರಿಸ್ತನನ್ನು ನಂಬುವದರ ಮುಖಾಂತರ ಜೀವವುಳ್ಳ ದೇವರ ಪುತ್ರರು ಆದರು. ಬೇರೆ ಮಾತುಗಳಲ್ಲಿ ಹೇಳುವದಾದರೆ "ನಿಜವಾದ ಇಸ್ರಾಯೇಲ"ವು ಜನ್ಮದಿಂದ ಯೆಹೂದ್ಯರಾದವರನ್ನು ಮಾತ್ರವೇ ಒಳಗೊಂಡಿರಲಿಲ್ಲ; ಆದರೆ ಅದರಲ್ಲಿ ಕ್ರಿಸ್ತನಲ್ಲಿ ನಂಬಿಕೆಯಿಡುವ ಎಲ್ಲರೂ ಸೇರಿದ್ದರು (ಹೋಶೇಯ 1:10; ರೋಮ 9:6).

**27-28** ಇಲ್ಲಿ ಪೌಲನು ಹಳೆ ಒಡಂಬಡಿಕೆಯ ಪ್ರವಾದಿಯಾದ ಯೆಶಾಯನ ಮಾತುಗಳನ್ನು ಉಲ್ಲೇಖಿಸುತ್ತಾನೆ. ಯೆಶಾಯನು ಕೆಲವು ಯೆಹೂದ್ಯರು, ಅಂದರೆ ಒಂದು ಅಂಶ (ಜನಶೇಷ) ಮಾತ್ರವೇ ರಕ್ಷಣೆ ಹೊಂದುವರು – ಅಂದರೆ ಯೇಸು ಕ್ರಿಸ್ತನನ್ನು ನಂಬುವವರು ಮಾತ್ರವೇ ರಕ್ಷಣೆ ಹೊಂದವರೆಂದು ಹೇಳುತ್ತಾನೆ (ಯೆಶಾಯ 10:2223).

**29** ಇಲ್ಲಿ ಯೆಶಾಯನು ಹೇಳುವ ದೇನೆಂದರೆ, ದೇವರು ಅಬ್ರಹಾಮನ ಕೆಲವು ಸಂತಾನವನ್ನು – ಅಂದರೆ, ಯೆಹೂದ್ಯರ "ಜನಶೇಷ" ವನ್ನು – ಉಳಿಸದೆ ಹೋಗಿದ್ದರೆ ಸೋದೋಮ ಗೊಮೋರ ಪಟ್ಟಣಗಳ ನಿವಾಸಿಗಳಂತೆಯೇ ಯೆಹೂದ್ಯರೆಲ್ಲರೂ ನಾಶವಾಗುತ್ತಿದ್ದರು (ಯೆಶಾಯ 1:9). ದೇವರು ಆ ಎರಡು ಹಳೆ ಒಡಂಬಡಿಕೆಯ ಪಟ್ಟಣಗಳನ್ನು ಅವುಗಳನಿವಾಸಿಗಳ ದುಷ್ಟತನಕ್ಕಾಗಿ ನಾಶಮಾಡಿದನು (ಆದಿಕಾಂಡ 19:1-29).

## ಇಸ್ರಾಯೇಲರ ಅಪನಂಬಿಕೆಗೆ ಕಾರಣ (9:30-33)

**30** ಅನ್ಯ ಜನರು ಯೆಹೂದ್ಯ ಧರ್ಮಶಾಸ್ತ್ರಕ್ಕನುಸಾರವಾಗಿ ನೀತಿಯನ್ನು ಹೊಂದುವದಕ್ಕೆ ಪ್ರಯತ್ನಮಾಡಲಿಲ್ಲ; ಕೊನೆಯಲ್ಲಿ ಅವರು ನಂಬಿಕೆಯ ಮೂಲಕ ನೀತಿಯನ್ನು ಪಡೆದುಕೊಂಡರು (ರೋಮ 3:22).

**31-33** ಇನ್ನೊಂದೆಡೆಯಲ್ಲಿ ಇಸ್ರಾಯೇಲ್ಯರು (ಯೆಹೂದ್ಯರು) ನೀತಿಯನ್ನು ದೊರಕಿಸುವ ಧರ್ಮವನ್ನು ಹಿಡಿಯಬೇಕೆಂದು ಪ್ರಯತ್ನಿಸಿದರು (ವಚನ 31), ಆದರೆ ಅವರು ಅದನ್ನು ಪಡೆಯದೆ ಹೋದರು. ಅವರು ಯಾಕೆ ಅದನ್ನು ಪಡೆಯಲಾಗಲಿಲ್ಲ? ಯಾಕೆಂದರೆ ಅವರಲ್ಲಿ ನಂಬಿಕೆಯಿರಲಿಲ್ಲ; ಬದಲಾಗಿ ಅವರು ನೇಮ ನಿಷ್ಟೆಗಳ ಮೂಲಕ ನೀತಿಯನ್ನು ಪಡೆಯಲು ಪ್ರಯತ್ನಿಸಿದರು (ವಚನ 32). ಅವರು ತಮ್ಮ ಸ್ವಪ್ರಯತ್ನಗಳಲ್ಲಿ ಭರವಸೆವಿಟ್ಟರು. ಅವರು ಹೇಳಿದ್ದೇನೆಂದರೆ; "ನಾವು ಜನ್ಮದಿಂದಲೂ ಅಬ್ರಹಾಮನ ಸಂತಾನದವರಾದ್ದರಿಂದ ಖಂಡಿತವಾಗಿಯೂ ನಾವು ದೇವರ ಮಕ್ಕಳೇ". ಆದರೆ ಈ ರೀತಿಯಾಗಿ ಯೋಚಿಸಿ ಅವರು ದೊಡ್ಡ ತಪ್ಪನ್ನು ಮಾಡಿದ್ದರು. ಶರೀರಸಂಬಂಧವಾದ ಜನ್ಮದ ಆಧಾರದ ಮೇಲೆ ಅವರು ದೇವರಾದುಕೊಂಡ ಜನರೆಂಬುದು ನಿಜವೇ, ಆದಾಗ್ಯು ಕೊನೆಯಲ್ಲಿ ಅವರು ದೇವರ ಜನವಾಗಿರುವ ದೇವರ ಮಕ್ಕಳಾಗಿರುವ ಅವಕಾಶವನ್ನು ಕಳೆದುಕೊಂಡರು, ಯಾಕೆಂದರೆ ಅವರು ಕ್ರಿಸ್ತನಲ್ಲಿ ನಂಬಿಕೆಯಿಡುವದಕ್ಕೆ ನಿರಾಕರಿಸಿದರು. ನಮ್ಮ ಆಯ್ಕೆ, ನಮ್ಮ ನೀತಿ, ನಮ್ಮ ರಕ್ಷಣೆಯ ನಂಬಿಕೆಯ ಮೂಲಕವೇ ಹೊರತು ನೇಮ ನಿಷ್ಟೆಗಳಿಂದಲ್ಲ. ಬಹು ಪಾಲು ಯೆಹೂದ್ಯರು ನೀತಿ ಮತ್ತು ರಕ್ಷಣೆಯನ್ನು ತಮ್ಮ ಧಾರ್ಮಿಕ ಕಾರ್ಯಗಳ ಮೂಲಕ ಪಡೆದುಕೊಳ್ಳಲು ಪ್ರಯತ್ನಿಸಿ ವಿಫಲರಾದರು. ಯೆಹೂದ್ಯರ ದೃಷ್ಟಿಯಲ್ಲಿ ನೀತಿಯನ್ನು ಪಡೆದುಕೊಳ್ಳಲು ಪ್ರಯತ್ನವನ್ನು ಸಹ ಮಾಡದ ಅನ್ಯ ಜನರಾದರೋ ನಂಬಿಕೆಯ ಮೂಲಕ ಅದನ್ನು ಪಡೆದುಕೊಂಡರು.

33 ನೇ ವಟನದಲ್ಲಿ ಪೌಲನು ಪುನಃ ಯೆಶಾಯನ ಮಾತುಗಳನ್ನು ಉಲ್ಲೇಖಿಸುತ್ತಾನೆ. ಯೆಹೂದ್ಯ ರಾಷ್ಟ್ರವಾದ ಇಸ್ರಾಯೇಲಿಗೆ ಚೀಯೋನ್ ಎಂಬದು ಇನ್ನೊಂದು ಹೆಸರಾಗಿದೆ. ಯೆಹೂದ್ಯರು "ಎಡವುವಕಲ್ಲಿಗೆ" ಎಡವಿಬಿದ್ದರು (ವಚನ 32). ಯೇಸು ಕ್ರಿಸ್ತನೇ ಆ "ಎಡವುವ ಕಲ್ಲು" ಆಗಿದ್ದನು. ಯೆಹೂದ್ಯರು ಕ್ರಿಸ್ತನನ್ನು ತಿರಸ್ಕರಿಸಿದಾಗ ತಮ್ಮ ರಕ್ಷಣೆಯನ್ನು ಕಳೆದುಕೊಂಡರು ಅಂದರೆ, ಅವರು ಎಡವಿ ಬಿದ್ದರು (ಯೆಶಾಯ 8:14; 28:16). ಯೆಹೂದ್ಯರು ತಮ್ಮ ರಕ್ಷಕನು – ಹಳೆ ಒಡಂಬಡಿಕೆಯಿಂದ ಬರುವನು ಎಂಬದಾಗಿ ಪ್ರವಾದಿಸಲ್ಪಟ್ಟ ರಕ್ಷಕನು – ಸಾಮಾನ್ಯ ಬಡಗಿಯ ಮಗನಾಗಿರುವನು ಮತ್ತು ನಂತರ, ಅದಕ್ಕಿಂತಲೂ ಕೆಟ್ಟದ್ದಾಗಿ. ಶಿಲುಬೆಯ ಮೇಲೆ ಒಬ್ಬ ಹೀನಾಯ ಅಪರಾಧಿಯಂತೆ ಸಾಯುವ ನೆಂಬದನ್ನು ನಂಬಲಾಗಲಿಲ್ಲ. ಅಂತಹ ರಕ್ಷಕನನ್ನು ಆರಾಧಿಸುವದಕ್ಕೆ ಬದಲಾಗಿ ಅವರು ಆತನನ್ನು ಉದಾಸೀನ ಮಾಡಿದರು. ಆದ್ದರಿಂದ, ಕ್ರಿಸ್ತನು ಯೆಹೂದ್ಯರಿಗೆ "ಎಡವುವ ಕಲ್ಲು" ಆದನು ಮತ್ತು ಅವರು ಎಡವಿಬಿದ್ದು ಹೋದರು (1 ಕೊರಿಂಥ 1:22; ಪೇತ್ರ 2:8 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

# ಅಧ್ಯಾಯ - 10

## ಕ್ರಿಸ್ತನು ಧರ್ಮಶಾಸ್ತ್ರದ ಅಂತ್ಯವಾಗಿದ್ದಾನೆ (10:1-4)

1 ಪೌಲನು ಇಸ್ರಾಯೇಲ್ಯರಿಗಾಗಿ, ಯೆಹೂದ್ಯರಿಗಾಗಿ ದೇವರನ್ನು ಯಾಕೆ ಪ್ರಾರ್ಥಿಸಿದನು? ಒಂದು ವೇಳೆ ಪೌಲನು ರೋಮಾಪು ರದವರಿಗೆ 9:18ರಲ್ಲಿ ಬರೆಯುವ ಪ್ರಕಾರ ದೇವರು ಯಾರನ್ನು ಕರುಣಿಸಿದರೂ ಯಾರನ್ನೂ ಕಠಿಣಪಡಿಸಿದರೂ ಅದೆಲ್ಲವೂ ಆತನ ಇಷ್ಟಾನುಸಾರವಾಗಿಯೇ ಇರುವದಾದರೆ ಪೌಲನು ಯೆಹೂದ್ಯರ ರಕ್ಷಣೆಗಾಗಿ ಪ್ರಾರ್ಥಿಸುವದರಲ್ಲಿ ಪ್ರಯೋಜನವೇನಿದೆ? ಪೌಲನು ತನ್ನ ಪ್ರಾರ್ಥನೆಯ ಮೂಲಕ ದೇವರ ಮೇಲೆ ಪ್ರಭಾವ ಬೀರುವನೋ ಅಥವಾ ದೇವರ ಮನಸ್ಸನ್ನು ಬದಲಾಯಿಸಲಿರುವನೋ? ಉತ್ತರವು ಹೌದು ಎಂದಾಗಿದೆ. ಒಂದು ಆಶ್ಚರ್ಯಕರ ರೀತಿಯಲ್ಲಿ ದೇವರು ತನ್ನನ್ನು ನಮ್ಮ ಪ್ರಾರ್ಥನೆಗಳ ಮೂಲಕ ಪ್ರಭಾವಕ್ಕೊಳಪಡಿಸಿಕೊಳ್ಳುತ್ತಾನೆ. ಇದಕ್ಕೆ ಬೈಬಲನಲ್ಲಿ ಸಾಕಷ್ಟು ಉದಾಹರಣೆಗಳಿರುತ್ತವೆ. ಅಷ್ಟುಮಾತ್ರವಲ್ಲದೆ ನಮ್ಮ ಪ್ರಾರ್ಥನೆಗಳ ಮೂಲಕ ನಾವು ಸೈತಾನನ ಕಾರ್ಯಕ್ಕೆ ತಡೆಯನ್ನೊಡ್ಡಬಹುದು. ದೇವರ ವಾಖ್ಯದ ನಂತರ ಪ್ರಾರ್ಥನೆಯು ನಮಗಿರುವ ಒಂದು ಅತಿಶಕ್ತಿಯುತ ಆತ್ಮೀಕ ಆಯುಧವಾಗಿದೆ (ಎಫೆಸ 6:17-18). ನಾವು ಯೇಸುವಿನ ಹೆಸರಿನಲ್ಲಿ ಏನಾದರೂ ಬೇಡಿಕೊಂಡರೆ ದೇವರು ನಮ್ಮ ಪ್ರಾರ್ಥನೆಗೆ ಉತ್ತರವನ್ನು ಕೊಡುವನು (ಯೋಹಾನ 15:16 ಮತ್ತು ವ್ಯಾಖ್ಯಾನ ನೋಡಿರಿ). ಆದುದರಿಂದ, ಪೌಲನು ಯೆಹೂದ್ಯರಿಗಾಗಿ ಪ್ರಾರ್ಥಿಸುತ್ತಾನೆ.

2 ಅನೇಕ ಜನರು ದೇವರಲ್ಲಿ ಆಸಕ್ತರಾಗಿದ್ದಾರೆ (ವೈರಾಗ್ಯವು ಳ್ಳವರು), ಆದರೆ ಅವರ ಆಸಕ್ತಿಯು ಸತ್ಯದ ಜ್ಞಾನಾನುಸಾರವಾಗಿಲ್ಲವಾದರೆ ಕೇವಲ ವ್ಯರ್ಥವಾಗಿರುತ್ತದೆ. ಮೂರ್ಖತನದ ಮೇಲೆ ಆಧಾರಗೊಂಡಿರುವ ಆಸಕ್ತಿ (ವೈರಾಗ್ಯ)ಯು ಬಹಳ ಅಪಾಯಕಾರಿಯಾಗಿದ್ದು ಅನೇಕ ವೇಳೆ ಅತಿ ಕೆಟ್ಟದ್ದಕ್ಕೆ ದಾರಿ ಮಾಡುತ್ತದೆ.

3 ಯೆಹೂದ್ಯರು ದೇವರಿಂದ ದೊರಕುವ ನೀತಿಯನ್ನು ತಿಳಿಯದ ಕಾರಣ – ಅಂದರೆ, ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ದೊರೆಯುವ ನೀತಿ – ಅವರು ಅದಕ್ಕೆ ಅಧೀನರಾಗಲಿಲ್ಲ. ಕ್ರಿಸ್ತನು ಸ್ವತಃ ದೇವರ ನೀತಿಯನ್ನು ಅವತರಿಸಿಬಂದನೆಂಬದನ್ನು ಅವರು ಅರ್ಥಮಾಡಿಕೊಳ್ಳಲಿಲ್ಲ (ರೋಮ 3:21-22 ಮತ್ತು ವ್ಯಾಖ್ಯಾನ ನೋಡಿರಿ).

4 ಕ್ರಿಸ್ತನಿಂದಲೇ ಕ್ರಮ ಮಾರ್ಗಕ್ಕೆ ಅಂತ್ಯವಾಯಿತು ಎಂದು ಪೌಲನು ಹೇಳುವದರ ತಾತ್ಪರ್ಯವು ಕ್ರಿಸ್ತನು ಧರ್ಮಶಾಸ್ತ್ರವನ್ನು – ಅಂದರೆ, ಯೆಹೂದ್ಯ ಧರ್ಮಶಾಸ್ತ್ರವನ್ನು – "ಅಂತ್ಯಗೊಳಿಸಿದನು" ಎಂಬದಾಗಿರುತ್ತದೆ. ಧರ್ಮಶಾಸ್ತ್ರದ ಸ್ಥಾನದಲ್ಲಿ ಈಗ ಸ್ವತಃ ಕ್ರಿಸ್ತನು ಇರುತ್ತಾನೆ. ನೀತಿಯನ್ನಾಗಲಿ ಅಥವಾ ರಕ್ಷಣೆಯನ್ನಾಗಲಿ ಪಡೆದುಕೊಳ್ಳಲು ಇನ್ನು ಧರ್ಮಶಾಸ್ತ್ರವು ಒಂದು ಮಾರ್ಗವಾಗಿರುವದಿಲ್ಲ. ಮಾನವರು ನೀತಿಯನ್ನು ಪಡೆದುಕೊಳ್ಳಲು ಆತನೇ ಮಾರ್ಗವಾಗಿದ್ದಾನೆ; ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬರಿಗೂ ಆತನು ತಂದೆಯ ಬಳಿಗೆ ಹೋಗುವ ಮಾರ್ಗವಾಗಿದ್ದಾನೆ (ಯೋಹಾನ 14:6 ಮತ್ತು ವ್ಯಾಖ್ಯಾನ ನೋಡಿರಿ). ಕ್ರಿಸ್ತನು ಧರ್ಮಶಾಸ್ತ್ರದ ಅಂತ್ಯವು ಮಾತ್ರವಲ್ಲ; ಆತನು ಧರ್ಮಶಾಸ್ತ್ರದ ನೆರವೇರಿಕೆ ಸಹ ಆಗಿದ್ದಾನೆ (ಮತ್ತಾಯ 5:17 ಮತ್ತು ವ್ಯಾಖ್ಯಾನ ನೋಡಿರಿ).

## ನೀತಿಯ ನೂತನವಾದ ಮಾರ್ಗ (10:5-21)

5 ಪೌಲನು ಮೋಶೆಯನ್ನು ಉಲ್ಲೇಖಿಸುತ್ತಾ ಮೊದಲು ನೇಮನಿಷ್ಠೆಯಿಂದಾಗುವ (ಧರ್ಮಶಾಸ್ತ್ರದ) ನೀತಿಯನ್ನು ಬಣ್ಣಿಸುತ್ತಾನೆ. ದೇವರು ಮೋಶೆಗೆ ಹೇಳಿದ್ದೇನೆಂದರೆ: "ಅದನ್ನು ಅನುಸರಿಸಿದವನೇ – ಅಂದರೆ, ಧರ್ಮಶಾಸ್ತ್ರದ ಆಜ್ಞೆಗಳಿಗೆ ವಿಧೇಯನಾಗುವವನು– ಆದರಿಂದ ಜೀವಿಸುವನು" ಎಂದು ಹೇಳುತ್ತಾನೆ (ಯಾಜಕಕಾಂಡ 18:5). ಯೆಹೂದ್ಯ ಧರ್ಮಶಾಸ್ತ್ರವು ಧರ್ಮಶಾಸ್ತ್ರದ ಎಲ್ಲಾ ವಿಷಯಗಳನ್ನು ಸಂಪೂರ್ಣವಾಗಿ ಪಾಲಿಸುವವನಿಗೆ "ಜೀವವನ್ನು" (ಅಥವಾ ರಕ್ಷಣೆಯನ್ನು) ನೀಡುವದಕ್ಕೆ ಶಕ್ತವಾಗಿದೆ. ಯಾವನೂ ಸಹ ಅದನ್ನು ಮಾಡುವದಕ್ಕೆ ಶಕ್ತನಾಗಿಲ್ಲವಾದ್ದರಿಂದ ಧರ್ಮಶಾಸ್ತ್ರವು ಯಾರನ್ನೇ ಆಗಲಿ ರಕ್ಷಿಸಲಿಲ್ಲ ಎಂದೇ ಹೇಳಬಹುದು.

6 ಪೌಲನು ಈಗ ನಂಬಿಕೆಯಿಂದುಂಟಾಗುವ ನೀತಿಯನ್ನು ಬಣ್ಣಿಸುತ್ತಾನೆ – ಅದು ಮುಖ್ಯವಾಗಿ ರಕ್ಷಣೆಯ ಮಾರ್ಗವಾಗಿದೆ. ನಾವು ಈ ರಕ್ಷಣೆಯನ್ನು ಪಡೆದುಕೊಳ್ಳಲು ಮೇಲಣ ಲೋಕಕ್ಕೆ ಏರಿಹೋಗ ಬೇಕಾಗಿಲ್ಲ (ಧರ್ಮೋಪದೇಶಕಾಂಡ 30:11-12). ಕ್ರಿಸ್ತನು ಈಗಾಗಲೇ ಅದನ್ನು ಪರಲೋಕದಿಂದ ನಮ್ಮ ಬಳಿಗೆ ತಂದಿರುತ್ತಾನೆ. ನಾವು ಕ್ರಿಸ್ತನನ್ನು ಕೆಳಕ್ಕೆ ಕರೆದು ಕೊಂಡು ಬರುವದಕ್ಕೆ ಮೇಲಣ ಲೋಕಕ್ಕೆ ಏರಿಹೋಗುವದು ಬೇಕಾಗಿಲ್ಲ; ಆತನು ಈಗಾಗಲೇ ಸ್ವತಃ ಕೆಳಕ್ಕೆ ಬಂದಿರುತ್ತಾನೆ.

7 ಅಲ್ಲದೆ ನಾವು ಈ ನೀತಿಯನ್ನು ಪಡೆಯಲು, ಅಂದರೆ, ಕ್ರಿಸ್ತನನ್ನು ಕಂಡುಕೊಳ್ಳಲು ಪ್ರೇತ ಲೋಕಕ್ಕೆ (ನರಕದೊಳಗೆ) ಇಳಿದು ಹೋಗುವದು ಸಹ ಬೇಕಾಗಿಲ್ಲ – (ಧರ್ಮೋಪದೇಶಕಾಂಡ 30:13). ಕ್ರಿಸ್ತನು ಈಗಾಗಲೇ ಸತ್ತವರೊಳಗಿಂದ ಎದ್ದಿರುತ್ತಾನೆ; ಆತನು ಈಗಾಗಲೇ ಸಮಾಧಿಯಿಂದ ಎದ್ದು ಬಂದಿರುತ್ತಾನೆ.

8 ಆದರೆ ಈ ನೀತಿಯು – ನೇಮನಿಷ್ಠೆಗಳಿಂದಾಗುವ ನೀತಿಯು (ವಚನ 5) – ಏನು ಹೇಳುತ್ತದೆ? ಮನುಷ್ಯರಿಗೆ ರಕ್ಷಣೆಯ ಮಾರ್ಗವನ್ನು ತೋರಿಸುವ ನಂಬಿಕೆಯ ವಿಷಯವಾದ ವಾಕ್ಯವು ಸಮೀಪದಲ್ಲಿಯೇ ಇದೆ ಎಂದು ಅದು ಹೇಳುತ್ತದೆ. ಅದು ಸಮೀಪದಲ್ಲಿ ಮಾತ್ರವೇ ಇಲ್ಲ; ಅದು ನಿನ್ನ ಹೃದಯಲ್ಲಿಯೂ ಇದೆ (ಧರ್ಮೋಪದೇಶಕಾಂಡ 30:14).

9 ಈ ನಂಬಿಕೆಯ ವಿಷಯವಾದ ವಾಕ್ಯವು –ಈ ರಕ್ಷಣೆಯ ಮಾರ್ಗವು– ಏನಾಗಿದೆ? ಅದೇನೆಂದರೆ: ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದೇ.

ಇದೇ ರಕ್ಷಣೆಯ ಮಾರ್ಗ. ರಕ್ಷಣೆಯನ್ನು ಪಡೆದುಕೊಳ್ಳಬೇಕಾದರೆ ನಾವು ಮಾಡಬೇಕಾದ ಎರಡು ಸಂಗತಿಗಳಿವೆ; ಮೊದಲನೆಯದಾಗಿ, ಬಾಯಿಂದ ಅರಿಕೆ ಮಾಡುವದು; ಮತ್ತು ಎರಡನೆಯದಾಗಿ, ನಮ್ಮ ಹೃದಯದಲ್ಲಿ ನಂಬುವದು. ನಾವು ಕೇವಲ ನಮ್ಮ ಬಾಯಿಂದ ಅರಿಕೆ ಮಾಡಿ ನಂಬದೆ ಹೋಗುವದಾದರೆ ನಾವು ಸುಳ್ಳುಗಾರರಾಗಿದ್ದೇವೆ. ನಾವು ನಂಬುತ್ತೇವೆಂದು ಯೋಚಿಸಿದರೂ ನಮ್ಮ ಬಾಯಿಂದ ಕ್ರಿಸ್ತನ್ನು ಅರಿಕೆ ಮಾಡಲಿಲ್ಲವಾದರೆ ನಾವು ನಮ್ಮನ್ನೇ ಮೋಸ ಪಡಿಸಿಕೊಳ್ಳುತ್ತೇವೆ: ನಮ್ಮ ನಂಬಿಕೆ ಮಿಥ್ಯವಾಗಿದೆ. ಒಬ್ಬ ವ್ಯಕ್ತಿಯು "ಯೇಸು ವನ್ನೇ ಕರ್ತನೆಂದು ಅರಿಕೆಮಾಡಲು" ಸಿದ್ಧನಾಗದ ಹೊರತು ರಕ್ಷಣೆಯನ್ನು ಹೊಂದಲಾರನು.

"ರಹಸ್ಯಕ್ರೈಸ್ತ" ಎಂದು ಕರೆಯಲ್ಪಡುವ ವ್ಯಕ್ತಿಯು ತಾನು ಕ್ರಿಸ್ತನನ್ನು ತನ್ನ ಹೃದಯದಲ್ಲಿ ಅಂಗೀಕರಿಸಿಕೊಳ್ಳತ್ತೇನೆಂದು, ಹೇಳಿಕೊಂಡಾಗ್ಯು ಜನರ ಎದುರಿನಲ್ಲಿ ಆತನನ್ನು ನಿರಾಕರಿಸುತ್ತಾ ಇರುವದಾದರೆ ಅವನು ನಿಜವಾದ ಕ್ರೈಸ್ತನಲ್ಲ (ಮತ್ತಾಯ 10:32-33 ಮತ್ತು ವ್ಯಾಖ್ಯಾನ ನೋಡಿರಿ).

10 ನಮ್ಮ ಹೃದಯದಿಂದ ನಂಬಿದವರಾಗಿ ನೀತಿವಂತರಾಗುತ್ತೇವೆ, ಮತ್ತು ನಮ್ಮ ಬಾಯಿಂದ ಅರಿಕೆಮಾಡುವದರಾಗಿ ನಾವು ರಕ್ಷಣೆ ಹೊಂದುತ್ತೇವೆಂದು ಪೌಲನು ಹೇಳುತ್ತಾನೆ. ಆದರೆ ಇವೆರಡು ಬೇರೆ ಬೇರೆ ಸಂಗತಿಗಳಾಗಿರುವದಿಲ್ಲ. ನೀತಿಕರಣ ಮತ್ತು ರಕ್ಷಣೆ ಯಾವಾಗಲೂ ಒಟ್ಟಾಗಿ ಸಾಗುವ ಪ್ರಕಾರವೇ ನಂಬುವದು ಮತ್ತು ಅರಿಕೆಮಾಡುವದು ಎರಡು ಯಾವಾಗಲೂ ಒಟ್ಟಾಗಿ ಸಾಗುತ್ತವೆ. ನಾವು ನಂಬಿದವರಾಗಿ ನಮ್ಮ ನಂಬಿಕೆಯನ್ನು ಅರಿಕೆಮಾಡುತ್ತೇವೆ. ನೀತಿಕರಣಗೊಂಡವರಾಗಿ ನಾವು ರಕ್ಷಣೆಯನ್ನು ಪಡೆಯುತ್ತೇವೆ. ಈ ಸಂಗತಿಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ.

11 ಕ್ರಿಸ್ತನ ಮೇಲೆ ನಂಬಿಕೆಯಿಡುವ ಯಾವನಾದರೂ – ಯೆಹೂದ್ಯನಾಗಲಿ ಅಥವಾ ಅನ್ಯ ಜನಾಂಗದವನಾಗಲಿ – ಆಶಾಭಂಗ ಪಡುವದಿಲ್ಲ (ಯೆಶಾಯ 28:16; ರೋಮ 9:33). ಹೇಗಿದ್ದರೂ, ಕೆಲವು ಸಮಯಗಳಲ್ಲಿ, ನಾವು ಕ್ರೈಸ್ತರಾಗಿರುವದಕ್ಕೆ ನಾಚಿಕೊಳ್ಳುತ್ತೇವೆ. ನಾವು ನಮ್ಮ ನಂಬಿಕೆಯನ್ನು ಬಚ್ಚಿಟ್ಟುಕೊಳ್ಳುತ್ತೇವೆ. ಆದರೆ ಇದು ಹೇಗೆ ಸಾಧ್ಯ? ರಕ್ಷಣೆ ಹೊಂದಿದವರಾಗಿ ದೇವರ ಮಗುವಾಗಿ ಇರುವದರಲ್ಲಿ ಅವಮಾನಕರವಾದದ್ದೇನಾದರೂ ಇದೇಯೋ? ಖಂಡಿತವಾಗಿಯೂ ಇಲ್ಲ! (2 ತಿಮೊಥೆ 1:8, 12).

12 ಯೆಹೂದ್ಯ ಧರ್ಮಶಾಸ್ತ್ರದ ಬದಲಾಗಿ ಅದರ ಸ್ಥಾನದಲ್ಲಿ ಕ್ರಿಸ್ತನಿರುತ್ತಾನೆ. ಯೆಹೂದ್ಯರಿಗೂ ಅನ್ಯಜನರಿಗೂ ನೀತಿ ಮತ್ತು ರಕ್ಷಣೆಯನ್ನು ಪಡೆದುಕೊಳ್ಳಲು ನೂತನ ಮಾರ್ಗವು ತೆರೆಯಲ್ಪಟ್ಟಿರುತ್ತದೆ. ಈಗ ಯೆಹೂದ್ಯನಿಗೂ ಗ್ರೀಕನಿಗೂ ಹೆಚ್ಚುಕಡಿಮೆ ಏನೂಇಲ್ಲ; ಕ್ರಿಸ್ತನು ಎಲ್ಲರಿಗೂ ಕರ್ತನು (ರೋಮ 3:29; ಗಲಾತ್ಯ 3:28; ಕೊಲೊಸ್ಸೆ 3:11 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಮತ್ತು ಕ್ರಿಸ್ತನು ತನ್ನ ನಾಮವನ್ನು ಹೇಳಿಕೊಳ್ಳುವವರಿಗೆ ಹೇರಳವಾಗಿ ಆಶಿರ್ವದಿಸುವವನಾಗಿದ್ದಾನೆ – ಅಂದರೆ, ಆತನು ಅವರಿಗೆ ಆತ್ಮೀಕ ಆಶಿರ್ವಾದಗಳನ್ನು ಕೊಡುತ್ತಾನೆ.

13 ಪೌಲನು ಇಲ್ಲಿ ಹಳೆ ಒಡಂಬಡಿಕೆಯ ಪ್ರವಾದಿಗಳಲ್ಲೊಬ್ಬನಾದ ಯೋವೇಲನ ಮಾತುಗಳನ್ನು ಉಲ್ಲೇಖಿಸುತ್ತಾನೆ:" ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವದು" (ಯೋವೇಲ 2:32). ಈ ಕರ್ತನ ನಾಮವನ್ನು ಹೇಳಿಕೊಳ್ಳುವದೆಂದರೆ ಸುಮ್ಮನೆ ಕೆಲವು ಮಾತುಗಳನ್ನು ಹೇಳುವದೆಂದು ಅರ್ಥವಲ್ಲ. ನಿಜವಾಗಿಯೂ ಕರ್ತನ ನಾಮವನ್ನು ಹೇಳಿಕೊಳ್ಳಬೇಕಾದರೆ ಮೊದಲು ಆತನಲ್ಲಿ ನಂಬಿಕೆಯಿಡುವದು ಅವಶ್ಯಕವಾಗಿರುತ್ತದೆ. ನಂಬಿಕೆಯಿಲ್ಲದೆ ಕರ್ತನ ನಾಮವನ್ನು ಹೇಳಿಕೊಳ್ಳುವದು ಪ್ರಯೋಜನವಿಲ್ಲದ್ದಾಗಿದೆ (ಇಬ್ರಿಯ 11:6 ನೋಡಿರಿ). ಕರ್ತನ ನಾಮವನ್ನು ಹೇಳಿಕೊಳ್ಳುವದರ ಅರ್ಥವು ಯಾವಾಗಲೂ ಏನೆಂದರೆ ಕರ್ತನಲ್ಲಿ ನಂಬಿಕೆಯಿಡುವದೆಂದಾಗಿರುತ್ತದೆ; ಈಕಾರಣದಿಂದಲೇ ಆತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವದು.

14 ಆದುದರಿಂದ, ಕರ್ತನ ನಾಮವನ್ನು ಹೇಳಿಕೊಳ್ಳುವ ಮುಂಚೆ ನಂಬಿಕೆಯು ಅಗತ್ಯವಾದದ್ದು. ಆದರೆ ನಂಬಿಕೆಗಿಂತ ಮುಂಚೆ ಕೇಳುವದು ಅವಶ್ಯಕವಾಗಿರುತ್ತದೆ. ಮತ್ತು ಕೇಳಬೇಕಾದರೆ ಬೋಧಕನೊಬ್ಬನು (ಸಾರುವವನು) ಇರುವದು ಅಗತ್ಯ.

15 ಸಾರುವದಕ್ಕೆ ಯಾರು ಕಳುಹಿಸಲ್ಪಡುವರು? ಪೌಲನು ಮಾತ್ರವಲ್ಲ ಆದರೆ ಸ್ವತಃ ದೇವರೇ ನಮಗೆ ಆಪ್ರಶ್ನೆಯನ್ನು ಕೇಳುತ್ತಿದ್ದಾನೆ. ಸಾರುವವರ ಪಾದಗಳು (ಸುವಾರ್ತೆಯನ್ನು ಸಾರುವವರು) ಸುಂದರವಾಗಿವೆ ಎಂದು ಯೆಶಾಯನು ಹೇಳುತ್ತಾನೆ (ಯೆಶಾಯ 52:7). ಯೆಹೂದ್ಯರ ಒಂದು ನಾಣ್ಣುಡಿ. ಪ್ರಕಾರವಾಗಿ "ಸುಂದರವಾದ ಪಾದಗಳನ್ನು" ಹೊಂದಿರುವ ವ್ಯಕ್ತಿಯು ಸ್ವಾಗತಿಸಲ್ಪಡುವದಕ್ಕೆ ಅರ್ಹನು.

16 ಆದರೆ ಯೆಹೂದ್ಯರಲ್ಲಿ ಎಲ್ಲರೂ ಅವರಿಗೆ ಸಾರಲ್ಪಟ್ಟ ಶುಭವರ್ತಮಾನಕ್ಕೆ ಕಿವಿಗೊಡಲಿಲ್ಲ. ನಿಜ ಹೇಳಬೇಕೆಂದರೆ ಅವರಲ್ಲಿ ಬಹು ಪಾಲು ಮಂದಿ ಕಿವಿಗೊಡಲಿಲ್ಲ. ಅವರು ಕ್ರಿಸ್ತನ್ನು ಮಾತ್ರವೇ ಅಲ್ಲ ಆದರೆ ತಮ್ಮ ಸ್ವಂತ ಪ್ರವಾದಿಗಳನ್ನು ಸಹ ನಂಬಲು ನಿರಾಕರಿಸಿದರು (ಯೆಶಾಯ 53:1). ಈ ಕಾರಣಕ್ಕಾಗಿಯೇ ಪೌಲನು ಯೆಹೂದ್ಯರ ವಿಷಯವಾಗಿ ಅಂತಹ ಮಹಾದುಃಖವನ್ನು ಹೊಂದಿರುತ್ತಾನೆ (ರೋಮ 9:2).

17 ಇಲ್ಲಿ ಪೌಲನು 14ನೇ ವಚನದ ವಿಚಾರವನ್ನು ಪುನರಾವರ್ತಿಸುತ್ತಾನೆ. ಕೇಳುವದರ ಮೂಲಕ ನಂಬಿಕೆ ಹುಟ್ಟಬೇಕು; ಆದರೆ ಯೆಹೂದ್ಯರ ವಿಷಯದಲ್ಲಿ ಅದು ಸುಳ್ಳಾಗಿತ್ತು.

**18** ಯೆಹೂದ್ಯರು ಏಕೆ ನಂಬಲಿಲ್ಲ? ಅವರು ಸುವಾರ್ತೆಯನ್ನು ಕೇಳದಿರುವದು ಇದಕ್ಕೆ ಕಾರಣವೋ? ಇಲ್ಲ. ಯಾಕೆಂದರೆ ಸುವಾರ್ತೆಯು ಭೂಮಿಯೆಲ್ಲೆಲ್ಲಾ ಸಾರಲ್ಪಟ್ಟಿತು. ಇಲ್ಲಿ ಪೌಲನು ಕೀರ್ತನೆಗಳು ೧೯:೪ ರಿಂದ ಉಲ್ಲೇಖಿಸುತ್ತಾನೆ. ಯೆಹೂದ್ಯರು ಸುವಾರ್ತೆಯನ್ನು ಕೇಳಿದ್ದರು, ಆದರೆ ಅವರು ಕಿವಿಗೊಟ್ಟಿರಲಿಲ್ಲ.

**19** ಯೆಹೂದ್ಯರು ಸುವಾರ್ತೆಗೆ ಕಿವಿಗೊಡಲಿಲ್ಲ ಏಕೆ? ಅವರು ಕ್ರಿಸ್ತನ ವಾಕ್ಯವಾದ ಸುವಾರ್ತೆಯನ್ನು ಅರ್ಥಮಾಡಿಕೊಳ್ಳಲಿಲ್ಲ ಎಂಬುದು ಇದಕ್ಕೆ ಕಾರಣವೋ? ಇಲ್ಲ. ಅವರು ನಿಶ್ಚಯವಾಗಿಯೂ ಅದನ್ನು ಅರ್ಥಮಾಡಿಕೊಂಡರು. ಅವರ ಶಾಸ್ತ್ರಗಳೇ (ಹಳೆ ಒಡಂಬಡಿಕೆಯು) ಕ್ರಿಸ್ತನ ಬರೋಣದ ಬಗ್ಗೆ ಸ್ಪಷ್ಟವಾಗಿ ಮಾತಾಡಿದವು . ಇಲ್ಲಿ ಪೌಲನು ಉಲ್ಲೇಕಿಸುವ ಧರ್ಮೋಪದೇಶಕಾಂಡದಲ್ಲಿ ಜನಾಂಗವಲ್ಲದವರ – ಅಂದರೆ, ಅನ್ಯಜನರ ಮೂಲಕ ಯೆಹೂದ್ಯರಲ್ಲಿ ಹುರುಡು ಹುಟ್ಟಿಸಲ್ಪಡುವದು ಮತ್ತು ವಿವೇಕವಿಲ್ಲದ ಜನರ (ಅನ್ಯಜನರ) ಮೂಲಕ ಅವರು ಸಿಟ್ಟಿಗೆಬ್ಬಿಸಲ್ಪಡುವರು ಎಂದು ಮೋಶೆಯ [57] ಮುಂತಿಳಿಸಿದನು (ಧರ್ಮೋಪದೇಶಕಾಂಡ 32:21). ಮತ್ತು ನಿಜವಾಗಿಯೂ ಹಾಗೆಯೇ ಸಂಭವಿಸಿತು: ಅನ್ಯ ಜನರು ರಕ್ಷಣೆಯನ್ನು ಪಡೆಯುತ್ತಿದ್ದರು ಮತ್ತು ಯೆಹೂದ್ಯರಿಗೆ ಅದು ದೊರಕಲಿಲ್ಲವಾದ್ದರಿಂದ ಯೆಹೂದ್ಯರು ಅನ್ಯ ಜನರ ಮೇಲೆ ಹೊಟ್ಟೆಕಿಚ್ಚು ಪಟ್ಟು ಸಿಟ್ಟುಗೊಂಡರು. ವಿವೇಕವಿದ್ದ ಜನರಾದವರು (ಯೆಹೂದ್ಯರು) ಸುವಾರ್ತೆಯನ್ನು ತಿರಸ್ಕರಿಸಿದರು, ಅದೇ ವೇಳೆಯಲ್ಲಿ ವಿವೇಕವಿಲ್ಲದ ಜನರು (ಅನ್ಯ ಜನರು) ಸುವಾರ್ತೆಯನ್ನು ಸ್ವೀಕರಿಸಿಕೊಂಡರು!

**20** ಇಲ್ಲಿ ದೇವರು ಪ್ರವಾದಿಯಾದ ಯೆಶಾಯನ ಮೂಲಕ ಹೇಳುವದೇನೆಂದರೆ: "ನನ್ನನ್ನು ಹುಡುಕದವರಿಗೂ (ಅನ್ಯಜನರಿಗೆ) ಸಿಕ್ಕಿದೆನು; ನನ್ನ ವಿಷಯ ವಿಚಾರಮಾಡದವರಿಗೂ (ಅನ್ಯಜನರಿಗೂ) ಪ್ರತ್ಯಕ್ಷನಾದೆನು" (ಯೆಶಾಯ 65:1).

ಇದು ನಮ್ಮ ವಿಷಯದಲ್ಲೂ ಸತ್ಯವಲ್ಲವೋ? ದೇವರು ನಮ್ಮನ್ನು ನಾವು ಇನ್ನು ಆತನನ್ನು ಹುಡುಕದೇ ಇರುವವೇಳೆಯಲ್ಲಿ ಮೊದಲೇ ಕಂಡುಕೊಂಡನು. ನಾವು ಆತನ ವಿಷಯವಾಗಿ ವಿಚಾರಿಸದಿರುವಾಗಲೇ ಆತನು ತನ್ನನ್ನು ನಮಗೆ ಪ್ರಕಟಿಸಿಕೊಂಡನು. ಅತನ ಕರುಣೆಯು ಅಷ್ಟೊಂದು ಅಪಾರವಾಗಿದೆ!(ರೋಮ 5:8 ನೋಡಿರಿ).

**21** ಆದುದರಿಂದ, ಯೆಹೂದ್ಯರು ಸುವಾರ್ತೆಯನ್ನು ಕೇಳಿದವರಾಗಿಯೂ ಅರ್ಥಮಾಡಿಕೊಂಡವರಾಗಿಯೂ ಇದ್ದರು. ಹಾಗಾದರೆ ಅವರು ಏಕೆ ಕಿವಿಗೊಡಲಿಲ್ಲ? ಯಾಕೆಂದರೆ ಅವರು ಅವಿಧೇಯರಾಗಿ ಎದುರು ಮಾತಾಡುವ ಜನರಾಗಿದ್ದರು (ಯೆಶಾಯ 65:2) ಅಪನಂಬಿಕೆಯು ಯಾವಾಗಲೂ ದೇವರ ದೃಷ್ಟಿಯಲ್ಲಿ ಅವಿಧೇಯತೆಯಾಗಿದೆ. ಒಂದು ವೇಳೆ ಒಬ್ಬ ವ್ಯಕ್ತಿಯು "ನಾನು ನಂಬಲಾಗುವದಿಲ್ಲ" ಎಂದು ಹೇಳುವದಾದರೆ ನಿಜವಾಗಿಯೂ ಆತನ ತಾತ್ಪರ್ಯವೇನೆಂದರೆ, "ನಾನು ವಿಧೇಯನಾಗುವದಿಲ್ಲ" ಎಂಬದಾಗಿ.

ಆದರೆ ಅವಿಧೇಯರಾದ (ಅಪನಂಬಿಕೆಯ) ಜನರೆಡೆಗೆ ದೇವರು ಹೊಂದಿರುವ ತಾಳ್ಮೆಯನ್ನು ಗಮನಿಸಿರಿ. ದೇವರು "ನಾನು ದಿನವೆಲ್ಲಾ ಕೈಚಾಚಿ ಕರೆದೆನು" ಎಂದು ಹೇಳುತ್ತಾನೆ.

---

# ಅಧ್ಯಾಯ - 11

## ಇಸ್ರಾಯೇಲಿನ ಆಯಲ್ಪಟ್ಟವರು (11:1-10)

**1** ದೇವರು ತನ್ನ ಪ್ರಜೆಯನ್ನು – ಯೆಹೂದ್ಯರು, ಇಸ್ರಾಯೇಲ ಜನಾಂಗವನ್ನು – ತಳ್ಳಿಬಿಟ್ಟದ್ದುಂಟೇ? ಇಲ್ಲ, ದೇವರು ಎಲ್ಲಾ ಯೆಹೂದ್ಯರನ್ನು ತಳ್ಳಿ ಬಿಡಲಿಲ್ಲ. ಯಾಕೆಂದರೆ, ನಾನು ಸಹ ಇಸ್ರಾಯೇಲ್ಯನು (ಯೆಹೂದ್ಯ), ಮತ್ತು ದೇವರು ನನ್ನನ್ನು ತಿರಸ್ಕರಿಸಲಿಲ್ಲ (ಕೀರ್ತನೆಗಳು 94:14) ಎಂದು ಪೌಲನು ಹೇಳುತ್ತಾನೆ.

ಪೌಲನು ಒಬ್ಬ ಇಸ್ರಾಯೇಲ್ಯನೂ ಬೆನ್ಯಾಮೀನನ ಕುಲದವನೂ ಆಗಿದ್ದನು. ಇಸಾಕನ ಮಗನಾದ ಯಾಕೋಬನಿಗೆ ಹನ್ನೆರಡು ಮಂದಿ ಗಂಡು ಮಕ್ಕಳಿದ್ದರು. ಅವರಲ್ಲಿ ಬೆನ್ಯಾಮೀನನು ಕಿರಿಯವನಾಗಿದ್ದನು. ಈ ಹನ್ನೆರಡು ಮಂದಿ ಮಕ್ಕಳಿಂದ ಇಸ್ರಾಯೇಲಿನ ಹನ್ನೆರಡು ಕುಲಗಳು ಹುಟ್ಟಿರುತ್ತವೆ.

**2-3** ಎಲೀಯನು ಯೆಹೂದ್ಯರ ಶ್ರೇಷ್ಠಪ್ರವಾದಿಗಳಲ್ಲೊಬ್ಬನಾಗಿದ್ದನು. ಎಲೀಯನು ದೇವರಿಗೆ – ಅವರು ನಿನ್ನ ಪ್ರವಾದಿಗಳನ್ನು ಸಂಹರಿಸಿದ್ದಾರೆ, ನಿನ್ನ ಯಜ್ಞವೇದಿಗಳನ್ನು ಒಡೆದು ಹಾಕಿದ್ದಾರೆ ಎಂದು ದೂರು ಹೇಳಿದನು. ಎಲೀಯನು ತಾನೊಬ್ಬನೇ ಉಳಿದಿರುವ ನಿಜ ಯೆಹೂದ್ಯನೆಂದು – ಇತರ ಎಲ್ಲಾ ಯೆಹೂದ್ಯರು ದೇವರನ್ನು ತೊರೆದು ಬಿಟ್ಟಿದ್ದಾರೆಂದು – ಯೋಚಿಸಿದನು. ಆತನು ದೇವರಿಗೆ, "ನಾನೊಬ್ಬನೇ ಉಳಿದಿದ್ದೇನೆ" ಎಂದು ಹೇಳಿದನು (1 ಅರಸುಗಳು 19:10).

**4** ಆದರೆ ದೇವರು ಎಲೀಯನಿಗೆ ಮಿಥ್ಯ ದೇವರುಗಳನ್ನು ಹಿಂಬಾಲಿಸದೆ ಇರುವ ಏಳು ಸಾವಿರ ನಂಬಿಗಸ್ಥ ಯೆಹೂದ್ಯರಿದ್ದಾರೆ ಎಂದು ಹೇಳಿದನು (1 ಅರಸುಗಳು 19:18). ಬಾಳ್ ಎಂಬದು ಎಲೀಯನ ಕಾಲದಲ್ಲಿ ಅನೇಕ ಯೆಹೂದ್ಯರು ಆರಾಧಿಸಿದ ಮಿಥ್ಯ ದೇವರೊಬ್ಬನ ಹೆಸರಾಗಿತ್ತು.

**5** ಎಲೀಯನ ಕಾಲದಲ್ಲಿದ್ದಂತೆಯೇ ಪೌಲನ ಕಾಲದಲ್ಲಿ ಸಹ ಕೃಪೆಯಿಂದ ಆದುಕೊಂಡವರಾದ ಶ್ರೇಷ್ಟ ಯೆಹೂದ್ಯರು –ಅಂದರೆ, ದೇವರಿಂದ ಆತನ ಕೃಪೆಗೆ ಅನುಸಾರವಾಗಿ ಆದುಕೊಳ್ಳಲ್ಪಟ್ಟು ಕ್ರಿಸ್ತನಲ್ಲಿ ನಂಬಿಕೆಯಿಡುವಂತೆ ಮಾಡಲ್ಪಟ್ಟ ಯೆಹೂದ್ಯರು – ಇದ್ದರು (ರೋಮ 9:27).

6 ದೇವರು ಕೃಪೆಯ ಮೂಲಕ ಪೌಲನ ಹಾಗೆ ಕ್ರಿಸ್ತನಲ್ಲಿ ನಂಬಿಕೆಯಿಡುವ ಯೆಹೂದ್ಯರನ್ನು ಆದುಕೊಂಡಿದ್ದನು. ಅವರು ಮಾಡಿದ ಸತ್ಕ್ರೀಯೆಗಳ ಕಾರಣದಿಂದಾಗಿ ದೇವರು ಅವರನ್ನು ರಕ್ಷಣೆ ಹೊಂದಬೇಕೆಂದು ಆದುಕೊಳ್ಳಲಿಲ್ಲ; ಅದು ಸಂಪೂರ್ಣವಾಗಿ ಆತನ ಕೃಪೆಯ ಕಾರಣದಿಂದಲೇ ಆಗಿತ್ತು. ಕೃಪೆಯು ಎಂದಿಗೂ ಮನುಷ್ಯನ ಕಾರ್ಯ ಅಥವಾ ಪ್ರಯತ್ನಕ್ಕನುಸಾರವಾಗಿ ಕೊಡಲ್ಪಡುವದಿಲ್ಲ. ಮನುಷ್ಯನು ಎಂದಿಗೂ ಸಹ ತನ್ನ ಸ್ವಂತ ಪರಿಶ್ರಮದಿಂದ ಕೃಪೆಯನ್ನು "ಸಂಪಾದಿಸಲು" ಸಾಧ್ಯವಿಲ್ಲ.

ಮನುಷ್ಯನು ಎಂದಿಗೂ ಕೃಪೆಗೆ ಅರ್ಹನನ್ನಾಗಿ ಮಾಡಿಕೊಳ್ಳಲಾರನು. ಕೃಪೆಯು ಅಯೋಗ್ಯರಾದವರಿಗೆ ಮಾತ್ರವೇ ಕೊಡಲ್ಪಡುವಂತದ್ದಾಗಿದೆ – ಇಲ್ಲ ವಾದರೆ ಅದು ಕೃಪೆಯಾಗಿರಲಾರದು. ಅದು ಉಚಿತವಾಗಿ ಕೊಡಲ್ಪಡುತ್ತದೆ; ನಾವು ಅದಕ್ಕಾಗಿ ಕ್ರಯ ಕೊಡಬೇಕಾಗಿಲ್ಲ. ನಾವು ಕೃಪೆಯನ್ನು ಕೇವಲ ದೇವರು ನಮಗಾಗಿ ಹೊಂದಿರುವ ಕರುಣೆ ಮತ್ತು ಪ್ರೀತಿಯ ಕಾರಣದಿಂದಲೇ ಪಡೆಯುತ್ತೇವೆ.

7 ಈ ವಚನದಲ್ಲಿ ಯಾರು ಆಯಲ್ಪಟ್ಟವರು? ಕ್ರಿಸ್ತನಲ್ಲಿ ನಂಬಿಕೆಯಿಡುವ ಯೆಹೂದ್ಯರು ಮತ್ತು ಅನ್ಯ ಜನರೇ "ಆಯಲ್ಪಟ್ಟವರಾಗಿದ್ದಾರೆ". ಇಸ್ರಾಯೇಲ್ಯರು ಹುಡುಕಿದರೂ ದೊರೆಯದೇ ಹೋದದ್ದೇನು? ಅವರು ನೀತಿಯನ್ನು ಅಂದರೆ ರಕ್ಷಣೆಯನ್ನು ಹುಡುಕಿದರು. ಆದರೆ ಅವರು ಅದನ್ನು ಪಡೆಯಲಾಗಲಿಲ್ಲ, ಯಾಕೆಂದರೆ ಕ್ರಿಸ್ತನನ್ನು ನಂಬಲು ನಿರಾಕರಿಸಿದರು. ನಂಬದೆ ಹೋದ ಆ ಯೆಹೂದ್ಯರು ಮೊಂಡರಾದರು (ರೋಮ 9:18 ನೋಡಿರಿ). ಯೆಹೂದ್ಯರ ಬಹು ಪಾಲು ಜನರು ಈ ವರ್ಗಕ್ಕೆ ಸೇರಿದವರಾದರು; ಇದು ನಂಬುವಂತಹ ಯೆಹೂದ್ಯರ ಒಂದು ಚಿಕ್ಕ ಜನಶೇಷ ಮಾತ್ರವೇ ಆಗಿತ್ತು (ವಚನ 5).

8 ದೇವರು ಹೇಗೆ ಯೆಹೂದ್ಯರನ್ನು ಕಠಿಣಗೊಳಿಸಿದನೆಂಬದನ್ನು ತೋರಿಸಲು ಪೌಲನು ಇಲ್ಲಿ ಯೆಶಾಯ 29:10 ರಿಂದ ಉಲ್ಲೇಖಿಸುತ್ತಾನೆ. ದೇವರು ಅವರಿಗೆ ಜಡಭಾವವನ್ನು ಕೊಟ್ಟನು; ಆಭಾವವು ಈ ಹೊತ್ತಿನ ವರೆಗೂ ಹಾಗೆಯೇ ಉಳಿದಿರುತ್ತದೆ. ಯೆಹೂದ್ಯರು ಕ್ರಿಸ್ತನನ್ನು ನೋಡಿದರು; ಆದರೆ ನಂಬಲಿಲ್ಲ; ಅವರು ಆತನ ಸ್ವರವನ್ನು ಕೇಳಿದರೂ ಅದನ್ನು ಅಂಗೀಕರಿಸಲಿಲ್ಲ (ಮತ್ತಾಯ 13:14-15, ಮಾರ್ಕ 4:12 ಮತ್ತು ವ್ಯಾಖ್ಯಾನ ನೋಡಿರಿ).

9-10 ಈ ವಚನಗಳಲ್ಲಿ ಪೌಲನು ಇಸ್ರಾಯೇಲ್ಯರ ಶ್ರೇಷ್ಠ ಅರಸನಾದ ದಾವೀದನ ಮಾತುಗಳನ್ನು ಉಲ್ಲೇಖಿಸುತ್ತಾನೆ. ದಾವೀದನು ಈ ಮಾತುಗಳನ್ನು ತನ್ನ ವೈರಿಗಳ ವಿಷಯದಲ್ಲಿ ನುಡಿದಿದ್ದನು (ಕೀರ್ತನೆಗಳು 69:22-23). ಆದರೆ ಇಲ್ಲಿ ಪೌಲನು ದಾವೀದನ ಮಾತುಗಳನ್ನು ತನ್ನ ಕಾಲದ ಅಪನಂಬಿಕೆಯ ಯೆಹೂದ್ಯರನ್ನು ಬಣ್ಣಿಸಲು ಉಪಯೋಗಿಸುತ್ತಾನೆ. ಯೆಹೂದ್ಯರ ಉಟದ ಮೇಜು ದೇವರು ಮೂಲತಃ ಯೆಹೂದ್ಯರಿಗಾಗಿ ಸಿದ್ಧಪಡಿಸಿದ "ಹಬ್ಬ" ಆಗಿತ್ತು – ಧರ್ಮಶಾಸ್ತ್ರ, ಪ್ರವಾದಿಗಳು, ವಾಗ್ದಾನಗಳು, ಮತ್ತು ದೇವ ಪುತ್ರರಾಗಿ ಸ್ವೀಕಾರಗಳಂತಹ ಆತ್ಮೀಕ ಆಶಿರ್ವಾದಗಳ "ಹಬ್ಬ" ಆಗಿತ್ತು (ರೋಮ 9:4 ನೋಡಿರಿ). ಆದರೆ ಈಗ ಎಲ್ಲಾ ಆಶಿರ್ವಾದಗಳು ಯೆಹೂದ್ಯರಿಗೆ ಉರ್ಲೂ– ಬೋನೂ – ಶಾಪವು ಆಗಿದ್ದವು, ಯಾಕೆಂದರೆ ಅವರು ಯೇಸುವನ್ನು ನಂಬಲಿಲ್ಲ. ಅವಿಧೇಯರ ಬೆನ್ನಿನಂತೆ ಅವರ ಬೆನ್ನು ಯಾವಾಗಲೂ ಬೊಗ್ಗಿಕೊಂಡಿರಲಿ" ಎಂದು ಪೌಲನು ಉಲ್ಲೇಖಿಸುತ್ತಾನೆ (ವಚನ 10).

## ಅನ್ಯಜನರ ರಕ್ಷಣೆ (11:11-24)

11 ಯೆಹೂದ್ಯರು ಶಾಶ್ವತವಾಗಿ ಬಿದ್ದೇ ಹೋಗುವಂತೆ ಎಡವಿದರೇನು? ಕ್ರಿಸ್ತನನ್ನು ತಿರಸ್ಕರಿಸಿದವರಾಗಿ ಅವರೆಲ್ಲರೂ ಈಗ ಯಾವ ನಿರೀಕ್ಷೆಯೇ ಇಲ್ಲದವರೋ? ಎಂದಿಗೂ ಇಲ್ಲ, ಈಗಲೂ ಯೆಹೂದ್ಯರಿಗೆ ನಿರೀಕ್ಷೆ ಇದೆ ಎಂದು ಪೌಲನು ಹೇಳುತ್ತಾನೆ. ಯೆಹೂದ್ಯರು ಬಿದ್ದೇ ಹೋದದ್ದರಿಂದ (ಅಂದರೆ, ಅವರ ಅಪನಂಬಿಕೆಯಿಂದ) ಈಗ ಅನ್ಯಜನರಿಗೆ ಸುವಾರ್ತೆಯನ್ನು ಕೇಳಿ ರಕ್ಷಣೆ ಹೊಂದುವ ಅವಕಾಶ ದೊರಕಿತ್ತು (ಅ.ಕೃತ್ಯ 13:44-47). ಪೌಲನ ನಿರೀಕ್ಷೆಯೇನೆಂದರೆ ಅನ್ಯ ಜನರು ರಕ್ಷಣೆ ಹೊಂದುವದನ್ನು ನೋಡಿ ಆಸೂಯೆ ಪಟ್ಟುಕೊಳ್ಳುವ ಯೆಹೂದ್ಯರು (ರೋಮ 10:19) ಕಾಲಕ್ರಮೇಣವಾಗಿ ಪಶ್ಚಾತಾಪ ಪಟ್ಟು ಕ್ರಿಸ್ತನಕಡೆಗೆ ತಿರಿಗಿಕೊಳ್ಳುವರು ಎಂಬದೇ.

12 ಮತ್ತು ಅಂತಿಮವಾಗಿ ಯೆಹೂದ್ಯರು ಕ್ರಿಸ್ತನೆಡೆಗೆ ತಿರಿಗಿಕೊಳ್ಳುವಾಗ ಎಲ್ಲಾ ಜನರಿಗೂ ಮಹಾ ಆಶಿರ್ವಾದ ವುಂಟಾಗುವದು! ಯಾಕೆಂದರೆ ಯೆಹೂದ್ಯರ ಅಪರಾಧ (ಅಪನಂಬಿಕೆ) ಮತ್ತು ಸೋಲುವಿಕೆ (ರಕ್ಷಣೆಯ ಸೋಲು)ಗಳ ಮುಖಾಂತರ ಲೋಕಕ್ಕೆ ಮಹಾ ಭಾಗ್ಯವುಂಟಾಗಿರುವದಾದರೆ ಯೆಹೂದರ ಪೂರ್ಣ ಪುನಃ ಸ್ಥಾಪನೆಯಿಂದ – ಅಂದರೆ, ಅವರು ಕ್ರಿಸ್ತನೆಡೆಗೆ ತಿರಿಗಿಕೊಳ್ಳವದರ ಮುಖಾಂತರ – ಇನ್ನು ಎಷ್ಟೋ ಹೆಚ್ಚಾಗಿ ಭಾಗ್ಯವುಂಟಾಗುವದಲ್ಲವೇ?

13-14 ಪೌಲನ ಪ್ರಾಥಮಿಕ ಕರೆಯು ಅನ್ಯಜನರಿಗೆ ಅಪೊಸ್ತಲನಾಗಿರುವದಾಗಿದ್ದಾಗ್ಯು ಆತನು ಹಾಗಿದ್ದರೂ ಯಾವಾಗಲೂ ತನ್ನ ಸ್ವಜನರಾದ ಯೆಹೂದ್ಯರ ವಿಷಯವಾಗಿಯೇ ಯೋಚಿಸುತ್ತಾ ಅವರು ರಕ್ಷಣೆ ಹೊಂದುವರೆಂದು ನಿರೀಕ್ಷಿಸುವವನಾಗಿದ್ದನು.

15 ಯೆಹೂದ್ಯರು ಬಿದ್ದು ಹೋಗುವಿಕೆಯ ಫಲಿತವಾಗಿ ಲೋಕವು ದೇವರ ಸಂಗಡ ಸಮಾಧಾನವಾಯಿತು– ಅಂದರೆ, ಅನ್ಯಜನರು ಸಮಾಧಾನವಾದರು. ಯೆಹೂದ್ಯರು ಸುವಾರ್ತೆಯಮ್ನು ತಿರಸ್ಕರಿಸಿದ್ದರಿಂದ ಸುವಾರ್ತೆಯು ಅನ್ಯಜನರಿಗೆ ಸಾರಲ್ಪಟ್ಟು ಅನೇಕರು ರಕ್ಷಿಸಲ್ಪಟ್ಟರು. ದೇವರೊಂದಿಗೆ ಸಮಾಧಾನಗೊಂಡರು (ರೋಮ 5:1) ಕೊನೆಗೂ ಯೆಹೂದ್ಯರು ದೇವರೊಂದಿಗೆ ಸಮಾಧಾನ ಗೊಂಡಾಗ ಅವರಿಗೆ ಅದು ಸತ್ತವರು ಜೀವಿತರಾಗಿ ಎದ್ದು ಬಂದಂತಾಗುವದು.

**16** ಈ ವಚನದಲ್ಲಿ ಪೌಲನು ಯೆಹೂದ್ಯ ಜನಾಂಗವಾದ ಇಸ್ರಾಯೇಲನ್ನು ಬಣ್ಣಿಸಲು ಎರಡು ದೃಷ್ಟಾಂತಗಳನ್ನು ಉಪಯೋಗಿಸುತ್ತಾನೆ. ಮೊದಲನೆಯ ದೃಷ್ಟಾಂತವು ಖಣಕದ ರೊಟ್ಟಿಯ ಕುರಿತಾಗಿದೆ. ಯೆಹೂದ್ಯರು ದೇವರಿಗೆ ರೊಟ್ಟಿಕಣಕದ ಒಂದು ಭಾಗವನ್ನು – ಮೊದಲನೆಯ ಉರುಳಿ –ನೈವೇದ್ಯವಾಗಿ ಅರ್ಪಿಸುತ್ತಿದ್ದರು. ಒಂದು ವೇಳೆ "ಮೊದಲನೆಯ ಉರುಳಿ" ಪರಿಶುದ್ಧ ಎಂದು ಪರಿಗಣಿಸಲ್ಪಡುವದಾದರೆ ಉಳಿದ ಕಣಕವೆಲ್ಲಾ ಸಹ ಪರಿಶುದ್ಧವಾಗಿರತಕ್ಕದ್ದು, ಯಾಕೆಂದರೆ ಅದೆಲ್ಲವೂ ಒಂದೇ ಕಣಕಕ್ಕೆ ಸೇರಿದ್ದಾಗಿದೆ. ಯೆಹೂದ್ಯರ ಪೂರ್ವಜರು ಇಸ್ರಾಯೇಲಿನ ಮೊದಲನೆಯ ಉರುಳಿಗಳ ಹಾಗಿದ್ದರು; ಅವರು ಪರಿಶುದ್ಧರಾಗಿದ್ದರಿಂದ ಇಸ್ರಾಯೇಲಿನ ಇಡೀ ಜನಾಂಗವು ಸಹ – ಅದು ಹೆಚ್ಚು ಕಡಿಮೆ ಅಪನಂಬಿಕೆಯಲ್ಲಿ ಬಿದ್ದಿದ್ದಾಗ್ಯು – ಮೂಲತಃ ಪರಿಶುದ್ಧವಾಗಿರಬೇಕು. ಹಾಗಾದರೆ, ಪೌಲನು ಈಗಲೂ ಯೆಹೂದ್ಯರನ್ನು ದೇವರ ಪರಿಶುದ್ಧ ಮತ್ತು ಪ್ರೀತಿಯ ಜನವೆಂದು ಪರಿಗಣಿಸುತ್ತಾನೆ. ದೇವರು ಅವರನ್ನು ಎಂದಿಗೂ ಶಾಶ್ವತವಾಗಿ ತಳ್ಳಿಬಿಡುವದಿಲ್ಲ.

ಎರಡನೆಯ ದೃಷ್ಟಾಂತದಲ್ಲಿ ಪೌಲನು ಇಸ್ರಾಯೇಲನ್ನು ಮರ ಮತ್ತು ಅದರ ಬೇರುಗಳೊಂದಿಗೆ ಹೋಲಿಸುತ್ತಾನೆ. ಇಲ್ಲಿ ಪುನಃ ಬೇರುಗಳು ಯೆಹೂದ್ಯರ ಮೂಲ ಪಿತೃಗಳಾಗಿವೆ; ಫಲವಿಲ್ಲದ್ದಾಗಿ ಕಂಡು ಬಂದಿದ್ದಾಗ್ಯು ಬೇರುಗಳು ಪರಿಶುದ್ಧವಾಗಿದ್ದ ಕಾರಣ ಕೊಂಬೆಗಳು ಸಹ ಪರಿಶುದ್ಧವಾಗಿದ್ದವು.

**17** ಪೌಲನು ಇಲ್ಲಿ ಬೇರು ಮತ್ತು ಕೊಂಬೆಗಳ ತನ್ನ ದೃಷ್ಟಾಂತವನ್ನು ಮುಂದು ವರೆಸುತ್ತಾನೆ. ಆತನು ಕೆಲವು ಕೊಂಬೆಗಳು ಮುರಿದುಹಾಕಲ್ಪಟ್ಟಿವೆ – ಅಂದರೆ, ಕೆಲವು ಯೆಹೂದ್ಯರು ಅಪನಂಬಿಕೆಯ ಮೂಲಕ ತಮ್ಮ ರಕ್ಷಣೆಯನ್ನು ಕಳೆದುಕೊಂಡರು – ಎಂದು ಹೇಳುತ್ತಾನೆ. ಕಾಡೆಣ್ಣೆ ಮರವು ಅನ್ಯ ಜನರನ್ನು ಪ್ರತಿನಿಧಿಸುತ್ತದೆ, ಅವರು ಇಸ್ರಾಯೇಲಿನೊಳಗೆ ಕಸಿಕಟ್ಟಿಸಿಕೊಂಡವರಾಗಿರುತ್ತಾರೆ.

**18** ಹೇಗಿದ್ದರೂ, ಅನ್ಯ ಜನರು ತಾವು ಇಸ್ರಾಯೇಲೆಂಬ ಮರದೊಳಗೆ ಕಸಿಕಟ್ಟಿಸಿಕೊಂಡಿರುವದರಿಂದ ಎಂದಿಗೂ ತಮ್ಮನ್ನು ಹೆಚ್ಚಿಸಿಕೊಳ್ಳಬಾರದು. ಅವರು ಯೆಹೂದ್ಯರನ್ನು ಕಡೆಗಣಿಸದಿರಲಿ; ಯಕೆಂದರೆ ಯೆಹೂದ್ಯರು ಒಂದು ಅರ್ಥದಲ್ಲಿ ಮರದಬೇರುಗಳಾಗಿದ್ದಾರೆ. ಅನ್ಯಜನರು ನಿಜವಾದ ಇಸ್ರಾಯೇಲಿನೊಳಗೆ ಒಂದು ಅಸ್ವಾಭಾವಿಕ ರೀತಿಯಲ್ಲಿ ಸೇರಿಸಲ್ಪಟ್ಟಿದ್ದಾರೆ. ನಿಜವಾದ ಇಸ್ರಾಯೇಲವು ಕ್ರಿಸ್ತನ ಸಭೆಯಾಗಿದ್ದು, ಅದರ ಬೇರುಗಳು ಯೆಹೂದ್ಯರೇ. ಅನ್ಯ ಜನಾಂಗದ ಕ್ರೈಸ್ತರು ಅದನ್ನು ಮರೆಯದಿರಲಿ

**19-21** ಆದುದರಿಂದ, ಅನ್ಯ ಜನಾಂಗದ ಕ್ರೈಸ್ತರು ಗರ್ವ ಪಡದೇ ಭಯದಿಂದಿರಲಿ (ವಚನ 20). ಅವರು ನಂಬಿಕೆಯ ಕಾರಣದಿಂದಲೇ ಮರದೊಳಗೆ ಕಸಿಮಾಡಲ್ಪಟ್ಟಿದ್ದಾರೆ. ಒಂದು ವೇಳೆ ಅವರು ನಂಬುವುದನ್ನು ನಿಲ್ಲಿಸುವದಾದರೆ ಹುಟ್ಟುಕೊಂಬೆಗಳು (ಅಪನಂಬಿಕೆಯ ಯೆಹೂದ್ಯರು) ಮುರಿದು ಹಾಕಲ್ಪಟ್ಟದ್ದಕ್ಕಿಂತಲೂ ಹೆಚ್ಚು ಶೀಘ್ರವಾಗಿ ಮುರಿದು ಹಾಕಲ್ಪಡುವರು! ಇಲ್ಲಿ ಪುನಃ ಪೌಲನು ಯೆಹೂದ್ಯರಿಗೂ ಅನ್ಯ ಜನರಿಗೂ ರಕ್ಷಣೆಯನ್ನು ಪಡೆದುಕೊಳ್ಳಲು ನಂಬಿಕೆ ಮಾತ್ರವೇ ಅವಶ್ಯಕವಾದದ್ದೆಂಬದನ್ನು ನಮ್ಮ ನೆನಪಿಗೆ ತರುತ್ತಾನೆ.

**22** ದೇವರು ಬಿದ್ದವರ ಕಡೆಗೆ ಕಾಠಿಣ್ಯ ತೋರಿಸುತ್ತಾನೆ –ಅಂದರೆ, ಅವಿಧೇಯರೂ ಅಪನಂಬಿಕೆಯುಳ್ಳವರೂ ಆದವರೆಡೆಗೆ ಕಾಠಿಣ್ಯ ತೋರಿಸುತ್ತಾನೆ. ಮತ್ತು ನಂಬುವವರಿಗೆ ದಯೆಯನ್ನು (ಅಥವಾ ಕೃಪೆಯನ್ನು) ತೋರಿಸುತ್ತಾನೆ. ಆದರೂ ಪೌಲನು ದೇವರ "ದಯೆಯನ್ನು" ಪಡೆದುಕೊಳ್ಳಲು ಒಂದು ಶರತ್ತನ್ನು ನೀಡುತ್ತಾನೆ. ಆತನು ಹೇಳುವದೇನೆಂದರೆ; ನೀನು ದೇವರ ದಯೆಯನ್ನೇ ಆಶ್ರಯಿಸಿಕೊಂಡೇ ಇದ್ದರೆ ದೇವರು ನಿನಗೆ ದಯೆಯನ್ನು ತೋರಿಸುವನು. ನಾವು ದೇವರ ದಯೆಯಲ್ಲಿ ಮುಂದು ವರೆಯದಿರುವದಾದರೆ, ನಾವು ಕ್ರಿಸ್ತನ ನಂಬಿಕೆಯಲ್ಲಿ (ಆತನಲ್ಲಿಯೇ ದೇವರ ದಯೆಯು ಪೂರ್ಣವಾಗಿ ಪ್ರದರ್ಶಿಸಲ್ಪಟ್ಟಿರುತ್ತದೆ) ಮುಂದುವರೆಯದಿದ್ದರೆ ದೇವರು ತನ್ನ ದಯೆಯನ್ನು ಹಿಂದೆಗೆದುಕೊಳ್ಳುವನು ಮತ್ತು ನಾವು ಕಡಿದು ಹಾಕಲ್ಪಡುವೆವು. ಬೇರೆ ಮಾತುಗಳಲ್ಲಿ ಹೇಳುವದಾದರೆ, ನಾವು ಕ್ರಿಸ್ತನಲ್ಲಿ ನೆಲೆಗೊಳ್ಳದಿದ್ದರೆ ದೇವರ ದಯೆ ಮತ್ತು ಕೃಪೆಯೊಳಗಿಂದ ನಾವು ಕಡಿದು ಹಾಕಲ್ಪಡುವೆವು. ನಾವು ಒಣಗಿಹೋದ ಕೊಂಬೆಗಳಂತೆ ಬಿಸಾಡಲ್ಪಡುವೆವು (ಯೋಹಾನ 15:6 ಮತ್ತು ವ್ಯಾಖ್ಯಾನ ನೋಡಿರಿ). ಆದುದರಿಂದ, "ಗರ್ವ ಪಡಬೇಡ; ಭಯದಿಂದಿರು" ಎಂದು ಪೌಲನು ಹೇಳುತ್ತಾನೆ(ವಚನ 20).

ಕ್ರೈಸ್ತರು ನಂಬಿಕೆಯನ್ನು ಬಿಟ್ಟು ಬಿಡುವದಾದರೆ ತಮ್ಮ ರಕ್ಷಣೆಯನ್ನು ಕಳೆದುಕೊಳ್ಳುವರೆಂಬ ಅಭಿಪ್ರಾಯಕ್ಕೆ ಬೆಂಬಲವಾಗಿ ಅನೇಕ ಬೈಬಲ್ ಪಂಡಿತರು 19-22 ವಚನಗಳನ್ನು ಉಲ್ಲೇಖಿಸುತ್ತಾರೆ. ಆದರೆ ಇನ್ನು ಕೆಲವರು ನಿಜವಾದ ಕ್ರೈಸ್ತರು ಎಂದಿಗೂ ತಮ್ಮ ರಕ್ಷಣೆಯನ್ನು ಕಳೆದು ಕೊಳ್ಳಲಾರರು ಎಂದು ಹೇಳುತ್ತಾರೆ. ಈ ಎರಡನೆಯ ಗುಂಪು ಹೇಳುವದೇನೆಂದರೆ "ಕಡಿದು ಹಾಕಲ್ಪಡುವವನಾಗುವ" ಯಾವನೇ ಆಗಲಿ ನಿಜವಾದ ಕ್ರೈಸ್ತನೇ ಆಗಿರಲಿಲ್ಲ ಎಂಬದಾಗಿ. ಈ ಎರಡನೆಯ ಗುಂಪಿನ ಪ್ರಕಾರವಾಗಿ ಪೌಲನು ಇಲ್ಲಿ ಕೇವಲ ಗರ್ವ ಪಡುವದರ ಕುರಿತು ಕ್ರೈಸ್ತರನ್ನು ಎಚ್ಚರಿಸುತ್ತಿದ್ದಾನೆಯೇ ಹೊರತು ಅವರು ಸಂಪೂರ್ಣವಾಗಿ "ಕಡಿದು ಹಾಕಲ್ಪಡುವರು" ಎಂದು ಹೇಳುತ್ತಿಲ್ಲ ಎಂಬದೇ. ಈ ಎರಡು ವ್ಯಾಖ್ಯಾನಗಳಲ್ಲಿ ಯಾವದು ಸರಿಯಾದದ್ದು ಎಂದು ಖಚಿತವಾಗಿ ಹೇಳುವದು ಕಷ್ಟಕರವಾದದ್ದು (ಸಾಮಾನ್ಯ ಲೇಖನ: ನಾವು ನಮ್ಮ ರಕ್ಷಣೆಯನ್ನು ಕಳೆದು ಕೊಳ್ಳಬಹುದೋ? ನೋಡಿರಿ).

**23** ಯೆಹೂದ್ಯರು ಸಹ ಇನ್ನು ಅಪನಂಬಿಕೆಯಲ್ಲಿ ನಿಲ್ಲದ ಪಕ್ಷದಲ್ಲಿ ಅವರು ಪುನಃ ಮರದೊಳಗೆ ಕಸಿಕಟ್ಟಲ್ಪಡುವರು. ಅವರು ತಿರಿಗಿ ನಿಜವಾದ ಇಸ್ರಾಯೇಲಿನ ಪೌರರಾಗುವರು – ಅಂದರೆ, ಕ್ರಿಸ್ತನ ಸಭೆಯ ಸದಸ್ಯರಾಗುವರು.

**24** ಹುಟ್ಟು ಕಾಡುಮರದ ಕೊಂಬೆಗಳು (ಅನ್ಯಜನರು) ಆ ಮರದಲ್ಲಿ ಕಸಿಕಟ್ಟಲ್ಪಡುವದಕ್ಕಿಂತಲೂ ಹುಟ್ಟುಕೊಂಬೆಗಳು (ಯೆಹೂದ್ಯರು) ತನ್ನದೇ ಆ ಮರದಲ್ಲಿ ಕಸಿಕಟ್ಟಲ್ಪಡುವದು ಹೆಚ್ಚು ಸುಲಭವಾಗಿದೆ. ಹೀಗೆ, ಒಂದು ದಿನ ಅಪನಂಬಿಕೆಯ

ಯೆಹೂದ್ಯರು ಪಶ್ಚಾತಾಪ ಪಟ್ಟು ಕ್ರಿಸ್ತನ ಕಡೆಗೆ ತಿರಿಗಿಕೊಳ್ಳುವರು ಹಾಗು ಅವರು ತಮ್ಮ ಹುಟ್ಟು ಮರದೊಂದಿಗೆ ತಿರಿಗಿ ಕಸಿಕಟ್ಟಲ್ಪಡುವರೆಂಬ ದೃಢನಿಶ್ಚಯವನ್ನು ಪೌಲನು ಹೊಂದಿರುತ್ತಾನೆ.

## ಇಸ್ರಾಯೇಲಿನ ರಕ್ಷಣೆ (11:25-36)

**25** ಪೌಲನು 17-24 ವಚನಗಳಲ್ಲಿ ಅನ್ಯಜನರಿಗೆ ಇಸ್ರಾಯೇಲಿನ ವಿಷಯವಾಗಿ ಗುಪ್ತವಾಗಿದ್ದ ಸಂಗತಿಯನ್ನು ವಿವರಿಸಲು ಎಣ್ಣೇಮರ ಮತ್ತು ಅದರ ಕಸಿಮಾಡಲ್ಪಟ್ಟ ಕೊಂಬೆಗಳ ದೃಷ್ಟಾಂತವನ್ನು ಉಪಯೋಗಿಸಿದ್ದಾನೆ. ಇದೆಲ್ಲವನ್ನು ಅನ್ಯ. ಜನರಿಗೆ ವಿವರಿಸುವದರಲ್ಲಿ ಪೌಲನ ಉದ್ದೇಶವೇನೆಂದರೆ ಅವರು ತಮ್ಮನ್ನು ತಾವೇ ಬುದ್ಧಿವಂತರೆಂದು ಎಣಿಸಿಕೊಳ್ಳಬಾರದೇ ಆಗಿದೆ (ವಚನಗಳು 17-18 ನೋಡಿರಿ). ಇಸ್ರಾಯೇಲಿನ ಮೊಂಡತನವು ಅನ್ಯಜನಗಳ ಸಮುದಾಯವು ದೇವರ ರಾಜ್ಯದಲ್ಲಿ ಸೇರುವ ತನಕ ಇತ್ತು. ಅನ್ಯ ಜನಗಳ "ಸಮುದಾಯವು" ಎಷ್ಟೆಂಬದನ್ನು ದೇವರು ಮಾತ್ರವೇ ಬಲ್ಲನು. ಆದರೆ ಅವರ ಸಂಖ್ಯೆಯು ಯಾರೂ ಲೆಕ್ಕಿಸಲಾರದಷ್ಟು ಅಸಂಖ್ಯವಾಗಿರುವದು (ಪ್ರಕಟಣೆ 7:9 ನೋಡಿರಿ). ಅನ್ಯ ಜನರು ಸಭೆಯಲ್ಲಿ ಸೇರಿಸಲ್ಪಡುವ ವೇಳೆಯಲ್ಲಿ (ಅದರಲ್ಲಿ, ಈಗಿನ ಕಾಲವು ಸಹ ಸೇರಿರುತ್ತದೆಂಬುದು ಖಚಿತ) ಕೆಲವೇ ಯೆಹೂದ್ಯರು ಮಾತ್ರ ನಂಬುವರು. ಆದರೆ ಅನ್ಯ ಜನರ ಪೂರ್ಣ ಸಮುದಾಯವು ನಂಬಿದ ನಂತರ ಯೆಹೂದ್ಯರು ಸಹ ನಂಬುವದಕ್ಕೆ ಪ್ರಾರಂಭಿಸುವರು. ಇದು ಸಂಭವಿಸುವಾಗ ಲೋಕದ ಅಂತ್ಯವು ಹತ್ತಿರವಾಗುವದು ಎಂದು ಅನೇಕ ಜನರು ಯೋಚಿಸುತ್ತಾರೆ.

**26-27** ಹೀಗೆ, ಅಂತ್ಯದಲ್ಲಿ ಇಸ್ರಾಯೇಲ್ ಜನವೆಲ್ಲಾ ರಕ್ಷಣೆ ಹೊಂದುವದು, ಅಂದರೆ, ನಂಬುವ ಯೆಹೂದ್ಯರೆಲ್ಲರೂ ರಕ್ಷಣೆ ಹೊಂದುವರು. ಕಾರಣ ನಂಬಕೆಯಿಲ್ಲದೆ – ಯೆಹೂದ್ಯನಾಗಲಿ ಅಥವಾ ಅನ್ಯ ಜನವಾಗಲಿ – ರಕ್ಷಣೆ ಹೊಂದಲು ಸಾಧ್ಯವಿಲ್ಲ.

ಪೌಲನು ಇಲ್ಲಿ ಯೆಶಾಯ 59:20-21 ರಿಂದ ಉಲ್ಲೇಖಿಸುತ್ತಾನೆ. ಬಿಡಿಸುವವನು (ಕ್ರಿಸ್ತನು) ಚೀಯೋನಿನೊಳಗಿಂದ [58] ಹೊರಟು ಬರುವನು. ಕ್ರಿಸ್ತನು ಚೀಯೋನಿನೊಳಗಿಂದ (ಇಸ್ರಾಯೇಲ) "ಹೊರಟು ಬರುವನು", ಯಾಕೆಂದರೆ ಆತನು ಸ್ವತಃ ಒಬ್ಬ ಇಸ್ರಾಯೇಲನೂ, ಯೆಹೂದ್ಯನೂ ಆಗಿದ್ದನು. ಕ್ರಿಸ್ತನು ಯಾಕೋಬ ನಲ್ಲಿರುವ ಭಕ್ತಿ ಹೀನತೆಯನ್ನು ನಿವಾರಣೆ ಮಾಡುವನು, ಅಂದರೆ ಇಸ್ರಾಯೇಲಿನಲ್ಲಿರುವ [59] ಭಕ್ತಿಹೀನತೆಯನ್ನು ತೆಗೆಯುವನು. ಕ್ರಿಸ್ತನು ಅಂತ್ಯದಲ್ಲಿ ಯಾಕೋಬನನ್ನು ದೇವರ ಕಡೆಗೆ ತಿರಿಗಿಸುವನು.

**28** ಪೌಲನ ಕಾಲದಲ್ಲಿ ಯೆಹೂದ್ಯರು ಶತ್ರುಗಳಾಗಿದ್ದರು. ಅವರು ಕ್ರಿಸ್ತನ ಮತ್ತು ಎಲ್ಲಾ ಕ್ರೈಸ್ತರ ಶತ್ರುಗಳಾಗಿದ್ದರು ಮತ್ತು ಅವರು ಈ ಹೊತ್ತಿನವರೆಗೂ "ಶತ್ರುಗಳಾಗಿ" ಉಳಿದಿರುತ್ತಾರೆ. ಹಾಗಿದ್ದರೂ, ದೇವರು ಮೂಲತಃ ಯೆಹೂದ್ಯರನ್ನು ತನ್ನ ವಿಶೇಷ ಜನವಾಗಿ ಆರಿಸಿಕೊಂಡನು (ವಿಮೋಚನ ಕಾಂಡ 19:3-6). ದೇವರು ಸ್ವತಃ ಇಸ್ರಾಯೇಲ ಜನಾಂಗವನ್ನು ಸೃಷ್ಟಿಸಿದ್ದನು. ದೇವರು ಪ್ರಥಮ ಯೆಹೂದ್ಯನಾದ ಅಬ್ರಹಾಮನನ್ನು ಕರೆದನು. ದೇವರು ಅಬ್ರಹಾಮನ ಮಗನಾದ ಇಸಾಕನನ್ನು ಉನ್ನತಕ್ಕೇರಿಸಿದನು. ಬಹು ಪಾಲು ಯೆಹೂದ್ಯರು ಕ್ರಿಸ್ತನನ್ನು ನಂಬದಿದ್ದಾಗ್ಯು ದೇವರು ಈಗಲೂ ಅವರನ್ನು ಮೂಲ ಪಿತೃಗಳ – ಅಬ್ರಹಾಮ, ಇಸಾಕ, ಮತ್ತು ಯಾಕೋಬ – ವಂಶಸ್ಥ ರಾಗಿರುವದರಿಂದ ಪ್ರೀತಿಸುತ್ತಾನೆ.

**29** ದೇವರು ಎಂದಿಗೂ ಯೆಹೂದ್ಯರನ್ನು ಸಂಪೂರ್ಣವಾಗಿ ತಿರಸ್ಕರಿಸುವದಿಲ್ಲ. ಆತನು ಅವರಿಗೆ ಧರ್ಮಶಾಸ್ತ್ರ, ಪ್ರವಾದಿಗಳು ಮತ್ತು ವಾಗ್ದಾನಗಳಂತಹ ಶ್ರೇಷ್ಠವರಗಳನ್ನು ಕೊಟ್ಟಿರುತ್ತಾನೆ. ಆತನು ಅವರನ್ನು ತನ್ನ ಜನವಾಗಿರುವಂತೆ ಕರೆದನು. ಅವರು ಅವಿಧೇಯರಾಗಿರುತ್ತರಾದರೂ ಆತನು ಅವರನ್ನು ತೊರೆದು ಬಿಡುವದಿಲ್ಲ; ಆತನು ಅವರಿಗೆ ವರಗಳನ್ನು ಅನುಗ್ರಹಿಸಿದ್ದಕ್ಕೂ, ಕರೆದದ್ದಕ್ಕೂ ಪಶ್ಚಾತಾಪ ಪಡುವವನಲ್ಲ ಮತ್ತು ಅದು ಬದಲಾಗಲು ಸಾಧ್ಯವಿಲ್ಲ.

**30-31** ಅನ್ಯ ಜನರು ಪೂರ್ವದಲ್ಲಿ ಅವಿಧೇಯರಾಗಿದ್ದು ಕರುಣೆಯನ್ನು (ರಕ್ಷಣೆಯನ್ನು) ಪಡೆದುಕೊಂಡಿರುವ ಪ್ರಕಾರವೇ ಯೆಹೂದ್ಯರು ಸಹ ಅವಿಧೇಯರಾಗಿದ್ದರೂ ಕರುಣೆಯನ್ನು ಹೊಂದುವರು (ವಚನ 31). ದೇವರು ಅನ್ಯ ಜನರಿಗೆ ಕರುಣೆಯನ್ನು ತೋರಿಸಿರುವದಾದರೆ ಆತನು ನಿಶ್ಚಯವಾಗಿಯೂ ತನ್ನ ಸ್ವಜನವಾದ ಯೆಹೂದ್ಯರಿಗೂ ಕರುಣೆಯನ್ನು ತೋರಿಸುವನು.

**32** ಎಲ್ಲಾ ಮಾನವರು ದೇವರಿಗೆ ಅವಿಧೇಯರಾಗಿರುತ್ತಾರೆ. ಯೆಹೂದ್ಯರೂ ಅನ್ಯರೂ ಸೇರಿದಂತೆ ಎಲ್ಲಾ ಜನರು "ತಮ್ಮ" ಸ್ವಂತ ಮಾರ್ಗಗಳನ್ನು ಹಿಡಿದಿದ್ದಾರೆ" (ಅ.ಕೃತ್ಯ 14:16). ದೇವರು ಎಲ್ಲರನ್ನೂ ಅವಿಧೇಯತೆಯೆಂಬ ದುಸ್ಥಿತಿಯಲ್ಲಿ ಕಟ್ಟಿ ಹಾಕಿದ್ದಾನೆ – ಅಂದರೆ, ಆತನು ಅವರನ್ನು ಅವಿಧೆಯತೆಗೆ "ಒಪ್ಪಿಸಿದ್ದಾನೆ" (ರೋಮ 1:24, 26; 28 ನೋಡಿರಿ). ಆದರೆ ಆತನು ಎಲ್ಲರಿಗೂ – ಅಂದರೆ, ಯೆಹೂದ್ಯರಿಗೂ ಅನ್ಯಜನರಿಗೂ – ಕರುಣೆಯನ್ನು ತೋರಿಸಬೇಕೆಂದು ಇದನ್ನು ಮಾಡಿದ್ದಾನೆ. ಒಂದು ವೇಳೆ ಮಾನವರು ಅವಿಧೇಯರಾಗಿರದಿದ್ದರೆ ಅವರಿಗೆ ಕರುಣೆಯ ಅಗತ್ಯವಿರುತ್ತಿರಲಿಲ್ಲ. ಪಾಪಿಗಳಿಗೆ ಮಾತ್ರವೇ ಕರುಣೆಯು ಅಗತ್ಯವಾಗಿದೆ. ಆದರೆ ನಾವೆಲ್ಲರೂ ಪಾಪಿಗಳಾಗಿದ್ದೇವೆ ಎಂಬುದು ನೆನಪಿರಲಿ (ರೋಮ 3:10-12). ಮತ್ತು ದೇವರ ಕರುಣೆಯನ್ನು ಸ್ವೀಕರಿಸಬೇಕಾದರೆ ನಾವು ನಮ್ಮ ಪಾಪವನ್ನು ಒಪ್ಪಿಕೊಂಡು ಅರಿಕೆಮಾಡಬೇಕು.

ದೇವರು ಪ್ರತಿಯೊಬ್ಬನಿಗೂ ಕರುಣೆ ತೋರಿಸುವನೆಂದು ಪೌಲನು ಇಲ್ಲಿ ಹೇಳುವದಿಲ್ಲ. ಆತನು ಎಲ್ಲರಿಗೂ ಕರುಣೆಯನ್ನು ತೋರಿಸುವನು – ಅಂದರೆ, ಎಲ್ಲಾ ರಾಷ್ಟ್ರಗಳ ಮೇಲೆಯೂ, ಕ್ರಿಸ್ತನನ್ನು ನಂಬುವ ಎಲ್ಲರಿಗೂ ಕರುಣೆಯನ್ನು ತೋರಿಸುವನು – ಎಂದು ಪೌಲನು ಹೇಳುತ್ತಾನೆ (ಗಲಾತ್ಯ 3:22-29 ಮತ್ತು ವ್ಯಾಖ್ಯಾನ ನೋಡಿರಿ).

**33** ಪೌಲನು 9-11 ಅಧ್ಯಾಯಗಳಲ್ಲಿ ಅರ್ಥಮಾಡಿಕೊಳ್ಳಲು ಸುಲಭವಲ್ಲದ ಸಂಗತಿಗಳ ಕುರಿತಾಗಿ ಮಾತಾಡುತ್ತಿದ್ದಾನೆ. ಉದಾಹರಣೆಗೆ, ಯೆಹೂದ್ಯರು ಏಕೆ ಬಿದ್ದು ಹೋದರು? ದೇವರು ಯಾಕೆ ಕೆಲವರನ್ನು ಕಠಿಣ ಪಡಿಸಿದರೂ ಇನ್ನು ಕೆಲವರಿಗೆ

ಕರುಣೆಯನ್ನು ತೋರಿಸುವನು? ಯಾಕೆಂಬದನ್ನು ನಾವು ಅರ್ಥಮಾಡಿಕೊಳ್ಳುವದಿಲ್ಲ. ದೇವರು ತಾನು ಮಾಡಲಿಚ್ಛಿಸುವದನ್ನು ಮಾಡುತ್ತಾನೆಗೆ ಆದಾಗ್ಯು ದೇವರು ತಾನು ಮಾಡುವದೆಲ್ಲವೂ ನ್ಯಾಯವೂ, ಸರಿಯಾದದ್ದೂ ಮತ್ತು ಜ್ಞಾನವುಳ್ಳದ್ದೂ ಆಗಿದೆ. ದೇವರು ಯೆಹೂದ್ಯನಿಗಾಗಲಿ ಅನ್ಯ ಜನಾಂಗದವನಿಗಾಗಲಿ ಪ್ರತಿಯೊಬ್ಬನಿಗಾಗಿಯೂ ಒಂದು ಸಂಕಲ್ಪ ಮತ್ತು ಉದ್ದೇಶವನ್ನು ಹೊಂದಿದ್ದಾನೆ. ಪೌಲನು ದೇವರ ಉದ್ದೇಶಗಳ ವಿಷಯವಾಗಿ ಎಲ್ಲವನ್ನೂ ಅರ್ಥಮಾಡಿಕೊಳ್ಳಲಿಲ್ಲ; ಹಾಗಿದ್ದರೂ, ಆತನು ದೇವರ ಜ್ಞಾನ ಮತ್ತು ವಿವೇಕದಲ್ಲಿ ಪೂರ್ಣ ಭರವಸೆಯನ್ನು ಹೊಂದಿದ್ದಾನೆ. ದೇವರ ಉದ್ದೇಶಗಳು ಆಶ್ಚರ್ಯಕರವಾಗಿವೆ; ಯೆಹೂದ್ಯರು ಬಿದ್ದು ಹೋಗಿದ್ದರ ಮೂಲಕವಾಗಿ ಅನ್ಯ ಜನರಿಗೆ ಈಗ ದೇವರರಾಜ್ಯದೊಳಗೆ ಪ್ರವೇಶಿಸುವ ಅವಕಾಶವು ಕೊಡಲ್ಪಟ್ಟಿರುತ್ತದೆ. ಈಗ ದೇವರು ಎಲ್ಲಾ ಜನರಿಗೂ ರಕ್ಷಣೆಯನ್ನು ಕಂಡುಕೊಳ್ಳುವ ಅವಕಾಶವನ್ನು ಕೊಟ್ಟಿರುತ್ತಾನೆ. ಮಾನವ ಜನಾಂಗಕ್ಕೆ ದೇವರ ಯೋಜನೆಯು ಎಷ್ಟು ಶ್ರೇಷ್ಠ ಮತ್ತು ಅಗಾಧವಾದುದೆಂದರೆ ಪೌಲನು "ಆಹಾ, ದೇವರ ಐಶ್ವರ್ಯವೂ ಜ್ಞಾನವೂ ವಿವೇಕವೂ ಎಷ್ಟೋಅಗಾಧ! ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ!" ಎಂದು ದೇವರನ್ನು ಸ್ತುತಿಸಲು ಮಾತ್ರವೇ ಶಕ್ತನಾದನು (ಕೊಲೊಸ್ಸೆ 2:2-3 ನೋಡಿರಿ).

**34** ಕರ್ತನ ಮನಸ್ಸನ್ನು ತಿಳುಕೊಂಡವರು ಯಾರು? (ಯೆಶಾಯ 40:13-14). ಒಬ್ಬನು ಮಾತ್ರವೇ ಕರ್ತನ ಮನಸ್ಸನ್ನು ಪೂರ್ಣವಾಗಿ ತಿಳುಕೊಂಡಿದ್ದಾನೆ, ಆತನು ಮನುಷ್ಯನಾದ ಯೇಸು ಕ್ರಿಸ್ತನೇ. ಆದರೆ ಯೇಸುವಿನ ಬೋಧನೆಗಳ ಮೂಲಕ ನಾವು ಸಹ ಕರ್ತನ ಮನಸ್ಸನ್ನು ತಿಳುಕೊಳ್ಳಬಹುದು (1 ಕೊರಿಂಥ 2:16). ನಾವು ಕರ್ತನ ಮನಸ್ಸನ್ನು ತಿಳುಕೊಂಡಿದ್ದೇವೆ, ಕಾರಣ ಯೇಸುವೇ ಆತನನ್ನು ತಿಳಿಯಪಡಿಸಿದನು (ಯೋಹಾನ 1:18 ಮತ್ತು ವ್ಯಾಖ್ಯಾನ ನೋಡಿರಿ).

**35** ಅನ್ಯ ಜನರು ದೇವರ ರಕ್ಷಣೆಯನ್ನು ಹೊಂದುತ್ತಿದ್ದಾರೆಂಬದಕ್ಕಾಗಿ ಯೆಹೂದ್ಯರು ಅನ್ಯ ಜನರ ವಿಷಯದಲ್ಲಿ ಅಸೂಯೆಯುಳ್ಳವರಾಗಿದ್ದರು. ಯೆಹೂದ್ಯರು ತಾವು ದೇವರ ಆಶಿರ್ವಾದವನ್ನು ಕಳೆದುಕೊಂಡದ್ದಕ್ಕಾಗಿ ಗುಣಗುಟ್ಟಿದರು. ದೇವರು ತಮ್ಮ ಸ್ವಾಸ್ತ್ಯವನ್ನು ತೆಗೆದು ಬಿಟ್ಟಿದ್ದಾನೆಂದು ಅವರು ದೇವರನ್ನು ದೂರಿದರು.

ಹೇಗಿದ್ದರೂ, ದೇವರು ತಾನು ಕೊಡುವದನ್ನು ಹಿಂದಕ್ಕೆ ತೆಗೆದುಕೊಳ್ಳುವ ಹಕ್ಕನ್ನೂ ಹೊಂದಿದ್ದಾನೆ. ಯೋಬನು ಸೈತಾನ ನಿಂದ ಶೋಧಿಸಲ್ಪಟ್ಟು ತನ್ನ ಆಸ್ತಿ, ತನ್ನ ಘನತೆ, ತನ್ನ ಕುಟುಂಬ ಮತ್ತು ತನ್ನ ಆರೋಗ್ಯವನ್ನು ಕಳೆದುಕೊಂಡಾಗ ಆತನು ಹೇಳಿದ್ದೇನು? ಆತನು ಹೇಳಿದ್ದೇನೆಂದರೆ; ಕರ್ತನೇ ಕೊಟ್ಟನು, ಕರ್ತನೇ ತೆಗೆದುಕೊಂಡನು; ಕರ್ತನ ನಾಮಕ್ಕೆ ಸ್ತೋತ್ರವಾಗಲಿ" (ಯೋಬ 1:20-21). ಮತ್ತು ಯೋಬ 1:22 ರಲ್ಲಿ ಬರೆದಿರುವದೇನೆಂದರೆ; ಇದೆಲ್ಲದರಲ್ಲಿಯೂ ಯೋಬನು ಪಾಪಮಾಡಲಿಲ್ಲ, ದೇವರ ಮೇಲೆ ತಪ್ಪು ಹೊರಿಸಲೂ ಇಲ್ಲ.

ಆದ್ದರಿಂದ, ಪೌಲನು ಯೋಬ 41:11 ರಲ್ಲಿನ ಮಾತುಗಳನ್ನು ಉಲ್ಲೇಖಿಸುತ್ತಾನೆ. ಅದೇನೆಂದರೆ; ನಾನು ಸಾಲ ತೀರಿಸಬೇಕಾದರೆ ಮೊದಲು ಅದನ್ನು ನನಗೆ ಕೊಟ್ಟವರು ಯಾರು? ಯಾರೂ ಎಂದೂ ದೇವರಿಗೆ ಕೊಟ್ಟಿರುವದಿಲ್ಲ; ದೇವರೇ ಕೊಡುವವನಾಗಿದ್ದಾನೆ. ದೇವರು ಯಾರಿಗೂ ಸಾಲ ತೀರಿಸ ಬೇಕಾಗಿಲ್ಲ. ದೇವರು ಯಾವ ಮನುಷ್ಯನಿಗೂ ಸಾಲಗಾರನಲ್ಲ. ಮನುಷ್ಯರಾದ ನಾವೇ ಆತನಿಗೆ ಎಲ್ಲಾ ಸಂಗತಿಗಳಲ್ಲಿ ಸಾಲಗಾರರಾಗಿದ್ದೇವೆ. ಯಾವ ಮನುಷ್ಯನು ದೇವರ ವಿರುದ್ಧ ದೂರು ಹೇಳದಿರಲಿ!

**36** ನಾವು ಯಾಕೆ ದೇವರ ವಿರುದ್ಧ ದೂರು ಹೇಳಬಾರದು? ಯಾಕೆಂದರೆ ದೇವರು ಸರ್ವಜ್ಞನೂ, ಸರ್ವೋತ್ತಮನೂ, ಸರ್ವಶಕ್ತನೂ ಆಗಿದ್ದಾನೆ. ಸಮಸ್ತವು ಆತನಿಂದ ಉತ್ಪತ್ತಿಯಾಗಿ ಆತನಿಂದ ನಡೆಯುತ್ತಾ ಆತನಿಗಾಗಿ ಇರುತ್ತದೆ; ಆತನಿಗೇ ಸದಾಕಾಲವೂ ಸ್ತೋತ್ರ. ಆಮೆನ್ (1 ಕೊರಿಂಥ 8:6 ನೋಡಿರಿ).

---

## ಅಧ್ಯಾಯ - 12

### ಸಜೀವ ಯಜ್ಞ (12:1-2)

1 ರೋಮಾಪುರದವರಿಗೆ ಬರೆದ ಪತ್ರಿಕೆಯ ಮೊದಲಿನ 11 ಅಧ್ಯಾಯಗಳಲ್ಲಿ ಪೌಲನು ಕ್ರೈಸ್ತ ಧರ್ಮದ ಮುಖ್ಯ ಸಿದ್ಧಾಂತ ಮತ್ತು ಬೋಧನೆಗಳನ್ನು ನಮ್ಮ ಮುಂದಿಟ್ಟಿರುತ್ತಾನೆ. ಆತನು ನಮ್ಮ ನಂಬಿಕೆಗೆ ಅಸ್ತಿವಾರವನ್ನು ಹಾಕಿರುತ್ತಾನೆ. ಕ್ಲುಪ್ತವಾಗಿ ಆ ಬೋಧನೆಗಳು ಈ ಕೆಳಗಿನಂತಿರುತ್ತವೆ. ನಾವು ಕ್ರಿಸ್ತನೊಂದಿಗೆ ಐಕ್ಯವಾಗಿರುತ್ತೇವೆ. ಕ್ರಿಸ್ತನ ಮರಣದ ಮುಖಾಂತರವಾಗಿ ನಮ್ಮ "ಪೂರ್ವ ಸ್ವಭಾವವು" ಸತ್ತು ಹೋಗಿ ನಮ್ಮ ಜೀವಿತಗಳಲ್ಲಿನ ಪಾಪವು ಅಂತ್ಯ ಗೊಂಡಿರುತ್ತದೆ. ಕ್ರಿಸ್ತನ ಪುನರುತ್ಥಾನದ ಮುಖಾಂತರ ನಮ್ಮ" ನೂತನ ಸ್ವಭಾವವು" ಸಜೀವಗೊಂಡಿದೆ. ನಾವು ಕ್ರಿಸ್ತನ ಆತ್ಮನಾದ ಪವಿತ್ರಾತ್ಮನನ್ನು ಪಡೆದವರಾಗಿದ್ದು ಆತನ ಮೂಲಕವಾಗಿ ನಾವು ಪರಿಶುದ್ಧ ಮತ್ತು ನೀತಿಯುಳ್ಳ ಜೀವಿತಗಳನ್ನು ನಡಿಸಲು ಮಾರ್ಗದರ್ಶನವನ್ನೂ ಬಲವನ್ನೂ ಪಡೆಯುತ್ತೇವೆ.

ಈಗ ಮುಂದಿನ ನಾಲ್ಕು ಅಧ್ಯಾಯಗಳಲ್ಲಿ ಪೌಲನು ಕ್ರಿಸ್ತನ ಪರಿಶುದ್ಧ ಮತ್ತು ನೀತಿಯ ಜೀವಿತವನ್ನು ಬಣ್ಣಿಸುತ್ತಾನೆ. ನಾವು ನಿಜವಾಗಿಯೂ ಕ್ರಿಸ್ತನೊಂದಿಗೆ ಐಕ್ಯವಾಗಿರುವದಾದರೆ ನಮ್ಮ ಜೀವಿತಗಳಲ್ಲಿ ಕೆಲವೊಂದು ಆಧಾರಗಳು ಕಂಡುಬರತಕ್ಕದ್ದು.

ನಮ್ಮ ಅಂತರ್ಯವು ಕ್ರಿಸ್ತನಿಂದ ಮಾರ್ಪಟ್ಟಿರುವದಾದರೆ ನಮ್ಮ ಬಹಿರಂಗದ ಜೀವಿತವು ಸಹ ಮಾರ್ಪಟ್ಟಿರಬೇಕು. ಆದುದರಿಂದ, ಪೌಲನು ಈಗ ಕ್ರೈಸ್ತನ ಬಹಿರಂಗದ ಜೀವನ, ಕೆಲಸ, ಆತನ ಕರ್ತವ್ಯಗಳು, ಆತನ ನಡಾವಳಿಗಳ ವಿಷಯವಾಗಿ ಮಾತಾಡಲಾರಂಭಿಸುತ್ತಾನೆ (ಎಫೆಸ 2:10 ಮತ್ತು ವ್ಯಾಖ್ಯಾನ ನೋಡಿರಿ). ಕ್ರೈಸ್ತರಾಗಿ ನಮ್ಮ ಪ್ರಥಮ ಮತ್ತು ಅತಿ ಶ್ರೇಷ್ಠವಾದ ಕಾರ್ಯ ಯಾವದು? ಅದಾವು ದೆಂದರೆ: ನಮ್ಮ ದೇಹಗಳನ್ನು ದೇವರಿಗೆ ...ಸಜೀವ ಯಜ್ಞವಾಗಿ ಅರ್ಪಿಸುವದಾಗಿದೆ. ದೇಹಗಳು ಎಂದು ಹೇಳುವಲ್ಲಿ ಪೌಲನ ಅರ್ಥವು ನಮ್ಮ ಇಡೀ ವ್ಯಕ್ತಿತ್ವ – ಆತ್ಮ, ಪ್ರಾಣ, ಮತ್ತು ಬೌತೀಕ ದೇಹಗಳನ್ನು ಒಟ್ಟಾಗಿ ಅರ್ಪಿಸಬೇಕೆಂಬುದೇ. ಹೇಗಿದ್ದರೂ, ಪೌಲನು ಇಲ್ಲಿ ಮಾತಾಡುವ ಈ "ದೇಹ" ವು (ಪೂರ್ಣವ್ಯಕ್ತಿತ್ವವು) ನಮ್ಮ ಪೂರ್ವ ಸ್ವಭಾವ ಅಲ್ಲ (ರೋಮಾ 6:6), ಅದು ನಮ್ಮ ಪಾಪಾಧೀನ ಸ್ವಭಾವದ ಅಧೀನದಲ್ಲಿತ್ತು. ನಾವು ದೇವರಿಗೆ ಅರ್ಪಿಸುವದೇಹವು ದೇವರ ಅಧೀನದಲ್ಲಿರುವ ನಮ್ಮ ಬದಲಾವಣೆಗೊಂಡ ನೂತನ ಸ್ವಭಾವವಾಗಿದೆ (ರೋಮ 6:13,19). ನಾವು ದೇವರಿಗೆ ಅರ್ಪಿಸುವ ಬದಲಾವಣೆ ಗೊಂಡ ನೂತನ ಸ್ವಭಾವವು ಪಾಪರಹಿತವೂ, ಪರಿಶುದ್ಧವೂ, ಆತ್ಮೀಕವಾಗಿ ಸಜೀವವಾದದ್ದೂ ಆಗಿರಬೇಕು (1 ಪೇತ್ರ 2:5 ನೋಡಿರಿ). ನಾವು ಅರ್ಪಿಸುವ "ದೇಹ" ನಿಷ್ಕಳಂಕವಾದ ಸಜೀವಯಜ್ಞವಾಗಿರಬೇಕು.

ನಾವು ದೇವರ ಕರುಣೆಗೆ ಪ್ರತಿಕ್ರಿಯೆಯಾಗಿ ನಮ್ಮನ್ನು ಯಜ್ಞಗಳನ್ನಾಗಿ ಅರ್ಪಿಸಬೇಕು. ದೇವರ ಕರುಣೆಯಿಂದಲೇ ಕ್ರಿಸ್ತನು ಸಹ ತನ್ನ ಸ್ವಶರೀರವನ್ನು ನಮಗಾಗಿ, ಯಜ್ಞವಾಗಿ ಅರ್ಪಿಸಿದನು. ಆದುದರಿಂದ, ದೇವರ ಕರುಣೆಯನ್ನು ನೆನಪಿಗೆ ತಂದು ಕೊಂಡು ಮನಪೂರ್ವಕವಾಗಿ ನಮ್ಮನ್ನು ನಾವು ಆತನಿಗೆ ಅರ್ಪಿಸಬೇಕು. ಅದೇ ದೇವರು ನಮ್ಮಿಂದ ಬಯಸುವ ವಿವೇಕಪೂರ್ವಕವಾದ ಆರಾಧನೆಯಾಗಿದೆ. ಆತನು ನಮ್ಮಿಂದ ಇಚ್ಚಿಸುವ ಆರಾಧನೆಯು ಅದೇ ಆಗಿದೆ. ಅಂತಹ ಯಜ್ಞವು ಆತನಿಗೆ ಪವಿತ್ರವೂ ಮೆಚ್ಚಿಕೆಯಾದದ್ದೂ ಆಗಿದೆ. ಆತನು ನಮಗಾಗಿ ಮಾಡಿರುವದಕ್ಕೆ ಹೋಲಿಸಿದರೆ ನಾವು ಆತನಿಗೆ ಮಾಡುವ ಆರಾಧನೆಯು ಬಹಳ ಅಲ್ಪವಾದದ್ದೇ ಸರಿ!ದೇವರ ದೃಷ್ಟಿಯಲ್ಲಿ ಕ್ರೈಸ್ತನ ದೇಹವು ಪವಿತ್ರವಾದದ್ದೆಂಬದನ್ನು ಗಮನಿಸಿರಿ. ಆದಿಯಿಂದಲೇ ನಾವು ದೇವರಿಂದ ಪರಿಶುದ್ಧರೂ ದೋಷ ವಿಲ್ಲದವರೂ ಆಗಿರುವದಕ್ಕಾಗಿ ಸೃಷ್ಟಿಸಲ್ಪಟ್ಟಿದ್ದೇವೆ(ಎಫೆಸ್ 1:4 ನೋಡಿರಿ). ಕ್ರೈಸ್ತನ ದೇಹವು ಪವಿತ್ರಾತ್ಮನಿಗೆ ಗರ್ಭಗುಡಿಯಾಗಿದ್ದು ಪವಿತ್ರಾತ್ಮನು ನೆಲೆಸುವ ಸ್ಥಾನವಾಗಿದೆ. (1 ಕೊರಿಂಥ 3:16; 6:19 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಪವಿತ್ರಾತ್ಮನು ನಮ್ಮಲ್ಲಿ ವಾಸಿಸುವ ಕಾರಣದಿಂದಲೇ ನಮ್ಮ ದೇಹಗಳು ದೇವರಿಗೆ ಪವಿತ್ರವಾಗಿಯೂ ಮೆಚ್ಚಿಕೆಯಾಗಿಯೂ ಮಾಡಲ್ಪಡುತ್ತವೆ. .

2 ಇಹಲೋಕದ ನಡವಳಿಕೆಯನ್ನು ಅನುಸರಿಸಬೇಡಿರಿ. ಈ ವಚನದಲ್ಲಿ ಇಹ ಲೋಕವು "ಸೈತಾನನ ರಾಜ್ಯ" ವನ್ನು ಸೂಚಿಸುತ್ತದೆ. ಇಹಲೋಕದಲ್ಲಿ ಸೈತಾನನ ಬಲವು ಅಪಾರವಾಗಿರುತ್ತದೆ; ಆತನು ಎಲ್ಲಾ ಅವಿಶ್ವಾಸಿಗಳ ಜೀವಿತಗಳಲ್ಲಿ ತನ್ನ ಅಧಿಕಾರವನ್ನು ಚಲಾಯಿಸುತ್ತಾನೆ. ನಾವು ಸೈತಾನನಿಗಾಗಲಿ ಅಥವಾ ಆತನ ಹಿಂಬಾಲಕರಿಗಾಗಲಿ ಸಹಕಾರ ನೀಡಬಾರದು. ನಾವು ಅವರಂತೆ ಇರದಿರೋಣ; ಇಲ್ಲವಾದರೆ, ನಾವು ದೇವರಿಗೆ ಪವಿತ್ರರೂ ಮೆಚ್ಚಿಕೆಯಾದವರೂ ಆಗಿರಲಾರೆವು (1 ಯೋಹಾನ 2:15-16 ಮತ್ತು ವ್ಯಾಖ್ಯಾನ ನೋಡಿರಿ).

ನಾವು ಹೇಗೆ ದೇವರಿಗೆ "ಪವಿತ್ರರಾಗಿಯೂ ಮೆಚ್ಚಿಕೆಯಾದವರಾಗಿಯೂ" ಇರಲು ಸಾಧ್ಯ? ನಾವು ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿ ಇರುವದರ ಮೂಲಕ ಮಾತ್ರವೇ ದೇವರಿಗೆ ಪವಿತ್ರರಾಗಿಯೂ ಮೆಚ್ಚಿಕೆಯಾಗಿಯೂ ಇರಬಲ್ಲೆವು. ಪೌಲನು ಈ ವಚನದಲ್ಲಿ ನಮಗೆ ಸ್ಪಷ್ಟ ಆಜ್ಞೆಯನ್ನು ಕೊಡುತ್ತಾನೆ; ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರಿ[60]. (ಎಫೆಸ್ 4:22-24 ಮತ್ತು ವ್ಯಾಖ್ಯಾನ ನೋಡಿರಿ).

ನಾವು ಕ್ರಿಸ್ತನನ್ನು ನಂಬಿದ ಪ್ರಾರಂಬದಲ್ಲಿ ಆತ್ಮೀಕವಾಗಿ ಕೂಸುಗಳಂತಿರುತ್ತೇವೆ. ನಾವು ಬೆಳೆಯಬೇಕು. ನಾವು ಹೆಚ್ಚು ಹೆಚ್ಚಾಗಿ ಕ್ರಿಸ್ತನಂತಾಗಬೇಕು. ನಮ್ಮ ನೂತನ ಆತ್ಮೀಕ ಸ್ವಭಾವವು ಹೇಗೆ ಬೆಳೆಯುತ್ತದೆ? ಅದು ನಮ್ಮ ಮನಸ್ಸನ್ನು ನೂತನಗೊಳಿಸಿಕೊಳ್ಳುವದರ ಮೂಲಕ ಬೆಳೆಯುತ್ತದೆ. ಮನಸ್ಸು[61] ಎಂಬ ಪದದ ಮೂಲಕ ಪೌಲನು ಇಲ್ಲಿ ನಮ್ಮ ಅಂತರ್ಯದ ಮನಸ್ಸು ಅಥವಾ ಹೃದಯವನ್ನು ಸೂಚಿಸುತ್ತಾನೆ, ಅಲ್ಲಿಂದಲೇ ನಮ್ಮ ಎಲ್ಲಾ ಆಲೋಚನೆಗಳು, ಅಭಿಲಾಷೆಗಳು, ಮತ್ತು ಉದ್ದೇಶಗಳು ಉಗಮಿಸುತ್ತವೆ. ನಮ್ಮ ಮನಸ್ಸಿನೊಳಗಿಂದಲೇ ನಮ್ಮ "ಪೂರ್ವ ಸ್ವಭಾವ" ದ ಪಾಪಮಯ ಆಲೋಚನೆಗಳು, ಅಭಿಲಾಷೆಗಳೂ ಬರುತ್ತವೆ. ಮತ್ತು ನಮ್ಮ ಮನಸ್ಸಿನೊಳಗಿಂದಲೇ ನಮ್ಮ "ನೂತನ ಸ್ವಭಾವ"ದ ಒಳ್ಳೆಯ ಅಲೋಚನೆಗಳು ಮತ್ತು ಅಭಿಲಾಷೆಗಳು ಹೊರಡುತ್ತವೆ. ನಮ್ಮ ಮನಸ್ಸು ಇರುವಂತೆಯೇ ನಮ್ಮ ಆಲೋಚನೆಗಳು ಮತ್ತು ಕ್ರಿಯೆಗಳು ಇರುತ್ತವೆ. ಹೀಗಿರುವದರಿಂದ, ನಾವು ಕ್ರೈಸ್ತರಾದಾಗ ಎಲ್ಲಕ್ಕಿಂತಲೂ ಮೇಲಾಗಿ ನಮ್ಮ ಮನಸ್ಸು ಬದಲಾಗತಕ್ಕದ್ದು ಆದ್ದರಿಂದಲೇ ಪೌಲನು ಇಲ್ಲಿ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರಿ ಎಂದು ಹೇಳುತ್ತಾನೆ. ವಾಸ್ತವದಲ್ಲಿ ದೇವರೇ ನಮ್ಮ ಮನಸ್ಸುಗಳನ್ನು ನೂತನ ಗೊಳಿಸುವದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿಕೊಳ್ಳುತ್ತಾನೆ. ನಾವು ನಮ್ಮ ಸ್ವಂತ ಸಾಮರ್ಥ್ಯದಿಂದ ನಮ್ಮ "ಪೂರ್ವ ಕೆಟ್ಟ ಸ್ವಭಾವ" ವನ್ನು "ನೀತಿಯುಳ್ಳ ಸ್ವಭಾವ"ವನ್ನಾಗಿ ಮಾಡಲಾರೆವು. ಆದರೆ ಸ್ವತಃ ದೇವರೇ ನಮ್ಮ "ನೂತನ ಆತ್ಮೀಕ ಸ್ವಭಾವ"ವನ್ನು ಸೃಷ್ಟಿಸುವವನಾದರೂ ನಾವು ಸಹ ನೂತನ ಸ್ವಭಾವವನ್ನು ಧರಿಸಿಕೊಳ್ಳತಕ್ಕದ್ದು. (ಎಫೆಸ್ 4:24)

ಆದುದರಿಂದ, ನೂತನ ಮನಸ್ಸನ್ನು ಹೊಂದಿಕೊಂಡು ಎಂದು ಪೌಲನು ಹೇಳುವದರ ನಿಜವಾದ ಅರ್ಥವು "ನಿಮ್ಮ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ" ಎಂದಾಗಿರುತ್ತೆಂಬದನ್ನು ನಾವು ಅರ್ಥಮಾಡಿಕೊಳ್ಳಬಹುದು. ಅಂದರೆ ನಾವು ನೂತನ ಆಲೋಚನೆಗಳನ್ನು , ನೂತನ ಅಭಿಲಾಷೆಗಳು, ನೂತನ ಉದ್ದೇಶಗಳು, ನೂತನ ಕೃತ್ಯಗಳನ್ನು "ಧರಿಸಿಕೊಳ್ಳಬೇಕು" – ಅವೆಲ್ಲವೂ ದೇವರ ಚಿತ್ತಾನುಸಾರವಾಗಿ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಆಗಿರುತ್ತವೆ.

ದೇವರ ಚಿತ್ತಾನುಸಾರವಾಗಿ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವದು? ಅದನ್ನು ಎರಡು ಶ್ರೇಷ್ಠ ಆಜ್ಞೆಗಳಲ್ಲಿ ಸಾರಾಂಶಗೊಳಿಸಬಹುದು; ನಿನ್ನ ದೇವರಾದ ಕರ್ತನನ್ನು ನಿಮ್ಮ ಪೂರ್ಣ ಹೃದಯದಿಂದಲೂ ನಿಮ್ಮ ಪೂರ್ಣ ಪ್ರಾಣದಿಂದಲೂ ನಿಮ್ಮ ಪೂರ್ಣ ಮನಸ್ಸಿನಿಂದಲೂ ನಿಮ್ಮ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು.... ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು (ಮಾರ್ಕ 12:30-31). ಇತರ ಎಲ್ಲಾ ಆಜ್ಞೆಗಳು ಮತ್ತು ನಿಯಮಗಳು ಈ ಎರಡು ಶ್ರೇಷ್ಠ ಆಜ್ಞೆಗಳಿಂದ ಬಂದಿರುತ್ತವೆ (ಮತ್ತಾಯ 22:40; ರೋಮ 13:8-10; ಗಲಾತ್ಯ 5:14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

"ದೇವರನ್ನು ಪ್ರೀತಿಸು; ನಿನ್ನ ನೆರೆಯವನನ್ನು ಪ್ರೀತಿಸು" ಎಂದು ಹೇಳುವದು ಸುಲಭವಾದದ್ದು. ಪ್ರೀತಿಯು ಪ್ರಾಮುಖ್ಯ.ವಾದದ್ದೆಂಬದನ್ನು ಎಲ್ಲಾ ಮನುಷ್ಯರು ಒಪ್ಪಿಕೊಳ್ಳುತ್ತಾರೆ. ಆದರೆ ನಾವು ನಮ್ಮ ದಿನನಿತ್ಯದ ಜೀವಿತಗಳಲ್ಲಿ ದೇವರನ್ನು ಮತ್ತು ನೆರೆಯವನನ್ನು ಯಾವ ವಿಧದಲ್ಲಿ ಪ್ರೀತಿಸಬೇಕಾಗಿದೆ? ಪ್ರತಿದಿನವೂ ನಾವು ವಿವಿಧವಾದ ಅನೇಕ ಪರಿಸ್ಥಿತಿಗಳನ್ನು ಎದುರ್ಗೊಳ್ಳುತ್ತೇವೆ. ಈ ಪ್ರೀತಿಯ ನಿಯಮದ ಪ್ರಕಾರವಾಗಿ ಪ್ರತಿಯೊಂದು ಪರಿಸ್ಥಿತಿಯಲ್ಲಿ ನಾವು ಏನು ಮಾಡಬೇಕು? – ಅದೇ ಪ್ರಶ್ನೆಯಾಗಿದೆ. ನಮ್ಮ ದಿನನಿತ್ಯದ ಜೀವಿತವು ಒಳಗೊಂಡ ಪ್ರತಿಯೊಂದ ಚಿಕ್ಕ ಸಂಗತಿಗಳಲ್ಲಿ ದೇವರ ಚಿತ್ತವೇನು?

ನಮ್ಮ ಮನಸ್ಸುಗಳು ನೂತನಗೊಂಡಿರುವದಾದರೆ – ಪರಲೋಕಭಾವದವುಗಳಾಗಿದ್ದರೆ – ಪ್ರತಿಯೊಂದು ಪರಿಸ್ಥಿತಿಯಲ್ಲಿ ದೇವರ ಚಿತ್ತಾನುಸಾರವಾಗಿ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವದೆಂದು ತಿಳಿಯಬಹುದಾಗಿದೆ. ನಮ್ಮ ಮನಸ್ಸಿನ ಮೂಲಕ ನಾವು ದೇವರ ಚಿತ್ತವೇನೆಂಬದ್ನು ತಿಳಿಯುತ್ತೇವೆ. ನಮ್ಮ ಮನಸ್ಸು ಮಂಕುಗೊಂಡು ಅವಿಧೇಯತೆಯಿಂದ ತುಂಬಿರುವಾಗ ನಾವು ದೇವರ ಚಿತ್ತವನ್ನು ವಿವೇಚಿಸಲು ಸಾಧ್ಯವಿಲ್ಲ. ಆದರೆ ನಮ್ಮ ಮನಸ್ಸು ನೂತನಗೊಂಡು ಪರಲೋಕಭಾವದ್ದಾಗಿರುವದಾದರೆ ನಾವು ಹೆಚ್ಚುಕಡಿಮೆ ಎಲ್ಲಾ ಪರಿಸ್ಥಿತಿಗಳಲ್ಲಿಯೂ ದೇವರ ಚಿತ್ತವನ್ನು ವಿವೇಚಿಸಬಹುದಾಗಿದೆ. ಆಗ ನಾವು ದೇವರ ಚಿತ್ತಕ್ಕನುಸಾರವಾದದ್ದು ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವೆವು.

ದೇವರ ಚಿತ್ತವನ್ನು ವಿವೇಚಿಸಲು ಎರಡು ಸಂಗತಿಗಳು ಅವಶ್ಯವಾಗಿರುತ್ತವೆ. ಮೊದಲನೆಯದಾಗಿ, ದೇವರು ತನ್ನ ಚಿತ್ತವನ್ನು ಪ್ರಕಟಿಸಬೇಕು. ಆತನು ಇದನ್ನು ಮೂರು ರೀತಿಗಳಲ್ಲಿ ಮಾಡುತ್ತಾನೆ: ಬೈಬಲಿನ ಮೂಲಕ, ಪವಿತ್ರಾತ್ಮನ ಮೂಲಕ ಮತ್ತು ಜೊತೆ ಕ್ರೈಸ್ತರ ಮೂಲಕ.

ದೇವರ ಚಿತ್ತವನ್ನು ವಿವೇಚಿಸಲು ಅವಶ್ಯಕವಾದ ಎರಡನೆಯ ಸಂಗತಿಯು ಏನೆಂದರೆ ನಾವು ಸಕ್ರೀಯವಾಗಿ ಆತನ ಚಿತ್ತವನ್ನು ಹುಡುಕುವವರಾಗಿರಬೇಕು. ನಾವು ಹೇಗೆ ಅದನ್ನು ಹುಡುಕಬೇಕು? ಮೊದಲನೆಯದಾಗಿ, ನಾವು ನಮ್ಮ ಮನಸ್ಸನ್ನು ನೂತನಗೊಳಿಸಿ ಪರಲೋಕಭಾವವಾಗಿ ಮಾಡಬೇಕು. ಅದು ಮುಖ್ಯ ಹೆಜ್ಜೆಯಾಗಿದೆ. ಎರಡನೆಯದಾಗಿ, ನಾವು ಪ್ರಾರ್ಥಿಸಬೇಕು. ಮೂರನೆಯದಾಗಿ, ನಾವು ಬೈಬಲನ್ನು ಅಭ್ಯಾಸಿಸಬೇಕು. ನಾಲ್ಕನೆಯದಾಗಿ ನಾವು ಇತರ ಕ್ರೈಸ್ತರ ಸಲಹೆಗೆ ಕಿವಿಗೊಡಬೇಕು. ಐದನೆಯದಾಗಿ ನಾವು ನಮ್ಮನ್ನು ದೇವರ ಚಿತ್ತಕ್ಕೆ ಒಪ್ಪಿಸಬೇಕು ಮತ್ತು ಆದೇನೆ ಆಗಿದ್ದರೂ [62] ಅದಕ್ಕೆ ವಿಧೇಯರಾಗಲು ಒಪ್ಪಿಕೊಳ್ಳಬೇಕು.ನಾವು ಇದೆಲ್ಲವನ್ನೂ ಮಾಡಿದಾಗ ದೇವರ ದೇವರ ಚಿತ್ತಕ್ಕನುಸಾರವಾಗಿ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ತಿಳಿಯುವೆವು.

## ಆತ್ಮೀಕ ವರಗಳ ಸರಿಯಾದ ಉಪಯೋಗ (12:3-8)

3 ಪೌಲನು ಇಲ್ಲಿ ತಾನು ದೇವರು ತನಗೆ ಕೃಪೆಮಾಡಿದ ಸೇವೆಯ ಮೂಲಕ ಬರೆಯತ್ತಿದ್ದಾನೆಂದು ಹೇಳುತ್ತಾನೆ. ಪೌಲನಿಗೆ ಕೃಪೆಮಾಡಿದ[63] ಸೇವೆಯು ಅವನಿಗೆ ದೇವರಿಂದ ಮಾಡಲ್ಪಟ್ಟ ಅಪೊಸ್ತಲತನದ ನೇಮಕಾತಿ ಆಗಿತ್ತು (ಎಫೆಸ 3:7 ನೋಡಿರಿ). ನೇಮಕಾತಿಯ ಜೊತೆಯಲ್ಲಿ ಪೌಲನಿಗೆ ಅಪೊಸ್ತಲ ಕಾರ್ಯವನ್ನು ಮಾಡಲು ಕೃಪೆಯು – ಅಂದರೆ, ಬಲ ಮತ್ತು ಸಾಮರ್ಥ್ಯ – ಕೊಡಲ್ಪಟ್ಟಿತ್ತು. ಆಕಾರ್ಯವು ಸಭೆಗಳನ್ನು ಸ್ಥಾಪಿಸುವದು, ಸುವಾರ್ತೆಯನ್ನು ಸಾರುವದು, ಮತ್ತು ವಿಶ್ವಾಸಿಗಳಿಗೆ ಬೋಧಿಸಿ ಪ್ರಬೋಧಿಸುವದಾಗಿತ್ತು.

ಇಲ್ಲಿ ಪೌಲನು ಬರೆಯುವದೇನೆಂದರೆ: ಯಾರೂ ತನ್ನ ಯೋಗ್ಯತೆಗೆ ಮೀರಿ ತನ್ನನ್ನು ಭಾವಿಸಿಕೊಳ್ಳದಿರಲಿ. ಅಂದರೆ ನಾವು ನಮ್ಮನ್ನು ನ್ಯಾಯವಾದ ಅಭಿಪ್ರಾಯದಿಂದ – ಸರಿಯಾಗಿಯೂ, ಯಥಾರ್ಥವಾಗಿಯೂ ಮತ್ತು ಸಾಧ್ಯವಾದಷ್ಟು ವಾಸ್ತವಾದ ರೀತಿಯಲ್ಲಿಯೂ – ಭಾವಿಸಿಕೊಳ್ಳಬೇಕು. ನಾವು ನಮ್ಮ ಬಲಹೀನತೆಗಳನ್ನು ಅತಿಯಾದ ಗಣ್ಯತೆಗೇರಿಸುವದಾಗಲಿ ಅಥವಾ ಕೊಚ್ಚಿಕೊಳ್ಳುವದಾಗಲಿ ಮಾಡಬಾರದು ಮತ್ತು ನಾವು ಅನಾವಶ್ಯಕವಾಗಿ ನಮ್ಮನ್ನು ಟೀಕಿಸಿಕೊಳ್ಳಲೂ ಬಾರದು; ಕಾರಣ ಅದು ಮಿಥ್ಯದೀನತೆಗೆ ನಡಿಸುತ್ತದೆ. [64] ಇನ್ನೊಂದೆಡೆಯಲ್ಲಿ, ನಾವು ನಮ್ಮ ಕುರಿತು ಅತಿ ಉನ್ನತವಾಗಿ ಭಾವಿಸಿಕೊಳ್ಳಬಾರದು, ಯಾಕೆಂದರೆ ಇದು ಗರ್ವಕ್ಕೆ [65] ದಾರಿ ಮಾಡುತ್ತದೆ.

ನಾವು ಯಾವ ಅಳತೆಯಿಂದ ನಮ್ಮನ್ನು ಭಾವಿಸಿಕೊಳ್ಳಬೇಕೆಂಬದನ್ನು ಪೌಲನು ನಮಗೆ ತಿಳಿಸುತ್ತಾನೆ: ದೇವರು ಒಬ್ಬೊಬ್ಬನಿಗೆ ಎಂಥೆಂಥ ವಿಶ್ವಾಸಬಲವನ್ನು ಕೊಟ್ಟನೋ ಅದಕ್ಕೆ ತಕ್ಕ ಹಾಗೆ...ತನ್ನನ್ನು ಭಾವಿಸಿಕೊಳ್ಳಬೇಕು. ಈ ವಚನದಲ್ಲಿ ವಿಶ್ವಾಸ (ನಂಬಿಕೆ) ಎಂಬ ಪದವು ಒಂದು ವಿಶೇಷ ಅರ್ಥವನ್ನು ಹೊಂದಿದ್ದು ಅದರ ಸಹಜ ಅರ್ಥಕ್ಕಿಂತಲೂ ವ್ಯತ್ಯಾಸವಾಗಿದೆ.

ಇಲ್ಲಿ ವಿಶ್ವಾಸವು ನಾವು ನಂಬಿಕೆಯಲ್ಲಿ ಉಪಯೋಗಿಸುವ ದೇವರ ವರವಾಗಿದೆ. ಕೆಲವು ಕ್ರೈಸ್ತರಿಗೆ ಬೋಧಿಸುವ ವರವು ಕೊಡಲ್ಪಟ್ಟಿರುತ್ತದೆ. ಕೆಲವರಿಗೆ ಪ್ರಬೋಧನೆಯ ಅಥವಾ ಅತಿಥಿಸತ್ಕಾರದ ವರವು ಕೊಡಲ್ಪಟ್ಟಿದೆ. ದೇವರು ನಮಗೆ

ಕೊಟ್ಟಿರುವ "ನಂಬಿಕೆಯ" ವರಗಳನ್ನು ದೀನತೆ ಮತ್ತು ಕೃತಜ್ಞತಾಭಾವದೊಂದಿಗೆ ಉಪಯೋಗಿಸಬೇಕು. ಅಂತಿಮವಾಗಿ ನಾವು ಅವುಗಳು ನಮ್ಮಿಂದಲೇ ಬಂದಿವೆಯೋ ಎಂಬಂತೆ ಗರ್ವಪಟ್ಟುಕೊಳ್ಳುವದಕ್ಕೆ ಅರ್ಹರಲ್ಲವೆಂಬದನ್ನು ನಾವು ನೆನಪಿನಲ್ಲಿಟ್ಟುಕೊಳ್ಳೋಣ! ಯೇಸು ತಲಾಂತಗಳ ವಿಷಯಗಳನ್ನು, ನೆನಪಿಗೆ ತಂದುಕೊಂಡು (ಮತ್ತಾಯ 25:14-30), ನಾವು ದೇವರಿಂದ ಐದು ತಲಾಂತುಗಳನ್ನು ಹೊಂದಿರುವದಾದರೆ ನಾವು ಕೇವಲ ಒಂದು ಅಥವಾ ಎರಡು ಮಾತ್ರವೇ ಹೊಂದಿದ್ದೇವೋ ಎಂಬಂತೆ ನಡೆದುಕೊಳ್ಳಬಾರದು. ದೇವರು ನಮಗೆ ಎಂಥೆಂಥ ವಿಶ್ವಾಸಬಲವನ್ನು ಕೊಟ್ಟನೋ ಅದಕ್ಕೆ ತಕ್ಕಹಾಗೆ ಎಲ್ಲಾ ಐದು ತಲಾಂತುಗಳನ್ನೂ ದೇವರಿಗಾಗಿ ಉಪಯೋಗಿಸಬೇಕು.

**4-5** ದೇವರು ನಮ್ಮ ದೇಹದ ವಿವಿಧ ಸದಸ್ಯರುಗಳಿಗೆ ವಿಭಿನ್ನವಾದ ಕಾರ್ಯಗಳನ್ನೂ ಸಾಮರ್ಥ್ಯಗಳನ್ನೂ ಕೊಟ್ಟಿದ್ದಾನೆ. ಕ್ರಿಸ್ತನ ಸಭೆಯು ಮಾನವ ದೇಹದಂತಿರುತ್ತದೆ; ದೇವರು ಸಭೆಯಲ್ಲಿ ಪ್ರತಿಯೊಬ್ಬ ಕ್ರೈಸ್ತನಿಗೂ ಬೇರೆ ಬೇರೆ ಕಾರ್ಯಗಳನ್ನು ಸಾಮರ್ಥ್ಯಗಳನ್ನೂ – ಅಥವಾ ಬಹುಶ: ಒಂದಕ್ಕೆಂತಲೂ ಹೆಚ್ಚನ್ನು – ಕೊಟ್ಟಿರುತ್ತಾನೆ (1 ಕೊರಿಂಥ 12:12, 27 ಮತ್ತು ವ್ಯಾಖ್ಯಾನ ನೋಡಿರಿ)....ನಾವೆಲ್ಲರು....ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ (ವಚನ 5). ದೇಹದ ಅಂಗಗಳು ಒಂದಕ್ಕೊಂದು "ಸೇರಿರುವ" ಪ್ರಕಾರವೇ ಕ್ರೈಸ್ತರಾದ ನಾವು ಪರಸ್ಪರ ಅಂಗಗಳಾಗಿದ್ದೇವೆ". ಆದುದರಿಂದ, ನಾವು ನಮ್ಮ ವರಗಳನ್ನು ಪರಸ್ಪರ ಪ್ರಯೋಜನಕ್ಕಾಗಿ – ನಮ್ಮ ಸ್ವಂತ ಪ್ರಯೋಜನಕ್ಕಾಗಿಯಲ್ಲ – ಉಪಯೋಗಿಸಬೇಕು (1 ಕೊರಿಂಥ 12:7; 1 ಪೇತ್ರ 4:10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಆದುದರಿಂದ, ನಾವು ಸಭೆಯೆಂಬ ಒಂದೇ ದೇಹಕ್ಕೆ ಸೇರಿದವರಾದ್ದರಿಂದ ನಮ್ಮ ಹಾಗು ಇತರ ವಿಷಯದಲ್ಲಿ ನ್ಯಾಯವಾದ ಅಭಿಪ್ರಾಯದಿಂದ ಭಾವಿಸಿಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ (ವಚನ 3). ಚಿಕ್ಕ ಬೆರಳು ತನ್ನನ್ನು ದೊಡ್ಡ ಪಾದದಂತೆ ಭಾವಿಸಿಕೊಳ್ಳದಿರಲಿ!

**6** ನಮ್ಮೆಲ್ಲರಿಗೂ ದೇವರು ಕೃಪೆಮಾಡಿದ ಪ್ರಕಾರ ಬೇರೆ ಬೇರೆ ವರಗಳು ಕೊಡಲ್ಪಟ್ಟಿವೆ (1 ಕೊರಿಂಥ 12:4-11 ಮತ್ತು ವ್ಯಾಖ್ಯಾನ ನೋಡಿರಿ). ಈ ವಚನದಲ್ಲಿ (3 ನೇ ವಚನದಂತೆಯೇ) ಕೃಪೆ ಎಂಬ ಪದಕ್ಕೆ ಒಂದು ವಿಶೇಷ "ಸಾಮರ್ಥ್ಯ" ಅಥವಾ "ಕರೆ" [66] ಎಂಬ ಅರ್ಥ ವಿರುತ್ತದೆ.

ದೇವರು ನಮಗೆ ಕೃಪೆ ಮಾಡಿದ ಪ್ರಕಾರ ಎಂಬ ಹೇಳಿಕೆಯನ್ನು ಉಪಯೋಗಿಸುವದರ ಮೂಲಕ ಪೌಲನು ೩ನೇ ವಚನದಲ್ಲಿ ದೇವರು ಒಬ್ಬೊಬ್ಬನಿಗೆ ಎಂಥೆಂಥ ವಿಶ್ವಾಸಬಲವನ್ನು ಕೊಟ್ಟನೋ ಅದಕ್ಕೆ ತಕ್ಕಹಾಗೆ ಎಂಬ ಮಾತನ್ನು ಉಪಯೋಗಿಸಿದ ಅರ್ಥ ಉಪಯೋಗಿಸುತ್ತಾನೆ.

ಕ್ರೈಸ್ತರಾದ ನಾವು ನಮಗೆ ಕೃಪೆ ಮಾಡಿದ ಪ್ರಕಾರ ಅಥವಾದೇವರು ನಮಗೆ ಎಂಥೆಂಥ ವಿಶ್ವಾಸಬಲವನ್ನು ಕೊಟ್ಟನೋ ಅದಕ್ಕೆ ತಕ್ಕಹಾಗೆ ದೇವರ ವರಗಳನ್ನು ಪಡೆಯುತ್ತೇವೆ. ನಾವು ವರಗಳನ್ನು ಅಳತೆಗೆ ತಕ್ಕಂತೆ ಮಿತಿಯ ಪ್ರಕಾರ ಪಡೆಯುವವರಾಗಿದ್ದೇವೆ. ಹೇಗಿದ್ದರೂ, ಯೇಸು ಕ್ರಿಸ್ತನು ಪವಿತ್ರಾತ್ಮವರವನ್ನು ಅಳತೆಯಿಲ್ಲದೆ ಸ್ವೀಕರಿಸಿದನು (ಯೋಹಾನ 3:34), ಯಾಕೆಂದರೆ ಆತನು ಸ್ವತಃ ದೇರಾಗಿದ್ದಾನೆ.

ಈ ಚನದಲ್ಲಿ ಪೌಲನು ಪ್ರವಾದನೆಯ ವರದ ಬಗ್ಗೆ ಪ್ರಸ್ತಾಪಿಸುತ್ತಾನೆ. ಪ್ರವಾದನೆಯು ನೇರವಾಗಿ ದೇವರಿಂದ ಬರುವ ಮಾತಾಗಿದೆ. ಪ್ರವಾದಿಯು ಪ್ರವಾದಿಸುವಾಗ ದೇವರು ನೇರವಾಗಿ ಆತನನ್ನು ನಡಿಸುವ ಪ್ರಕಾರ ಅಥವಾ ಪ್ರೇರಿಸುವದನ್ನೇ ಮಾತಾಡುತ್ತಾನೆ. ಪ್ರವಾದಿಯು ತನಗೆ ಕೊಡಲ್ಪಟ್ಟ ವಿಶ್ವಾಸಬಲಕ್ಕೆ ತಕ್ಕ ಹಾಗೆ ಮಾತಾಡಬೇಕು; ಅಂದರೆ. ದೇವರು ಆತನಿಗೆ ಮಾತಾಡುವ ನೀಡಿರುವ ಮಾತುಗಳ ಮಟ್ಟಿಗೆ ಮಾತ್ರವೇ ಮಾತಾಡಬೇಕು – ಹೆಚ್ಚೂ ಅಲ್ಲ, ಕಡಿಮೆಯಾ ಅಲ್ಲ. ಒಬ್ಬ ಪ್ರವಾದಿಯು ತನ್ನ ಸ್ವಂತ ಅಧಿಕಾರದಿಂದ ಮಾತಾಡದೇ ದೇವರ ಅಧಿಕಾರದಿಂದ ಮಾತಾಡುತ್ತಾನೆ. ಯಾವನಾದಲೂ ದೇವರಿಂದ ಮಾತನ್ನು ಸ್ವೀಕಿರಿಸಿ ಮಾತಾಡುವದಾದರೆ ನಿಜವಾಗಿಯೂ ಅದು ಪ್ರವಾದನೆಯೇ ಆಗಿದೆ. ಪ್ರವಾದನೆಯು ಭವಿಷ್ಯದ ಮುಂತಿಳಿಸುವಿಕೆ ಮಾತ್ರವೇ ಅಲ್ಲ; ಹಲವಾರು ವೇಳೆ ಅದು ನೆರೆದು ಬಂದವರಿಗೆ ಪ್ರೋತ್ಸಾಹ ಅಥವಾ ಪ್ರಬೋಧನೆಯ ಮಾತನ್ನು ಹೇಳುವದಾಗಿದೆ. ಹೀಗೆ ಬೋಧಕನು ಕೆಲವು ವೇಳೆಗಳಲ್ಲಿ ತನ್ನ ಪ್ರಸಂಗದ ನಡುವೆ ಪ್ರವಾದಿಸುವವನಾಗಿದ್ದಾನೆ (1 ಕೊರಿಂಥ 14:1, 3; 1 ಪೇತ್ರ 4:11 ಮತ್ತು ವ್ಯಾಖ್ಯಾಗಳನ್ನು ನೋಡಿರಿ).

**7** ಸಭಾಸೇವೆಯ ವರವು ಇತರರಿಗೆ ನಾವು ಸಲ್ಲಿಸುವ ಎಲ್ಲಾ ವಿಧವಾದ ಸಹಕಾರ ಮತ್ತು ಸೇವೆಯನ್ನು ಒಳಗೊಂಡಿರುತ್ತದೆ. ಕ್ರೈಸ್ತರು ಸೇವಕರ ಮನೋಭಾವವನ್ನು "ಧರಿಸಿಕೊಳ್ಳುವ" ಅಗತ್ಯವಿರುತ್ತದೆ (ಮಾರ್ಕ 10:43-44 ಮತ್ತು ವ್ಯಾಖ್ಯಾನ ನೋಡಿರಿ). ನಾವು ನಮ್ಮ ಪೂರ್ಣ ಹೃದಯದಿಂದ ಸೇವೆ ಮಾಡಬೇಕಾಗಿರುತ್ತದೆ. ವಾಸ್ತವದಲ್ಲಿ, ನಾವು ಏನೇ ಮಾಡಿದರೂ ಅದನ್ನು ಕರ್ತನಿಗೋಸ್ಕರ [65] ಎಂದು ನೆನಸಿ ಪೂರ್ಣ ಹೃದಯದಿಂದ ಮಾಡಬೇಕು (ಎಫೆಸ್ 6:7 ನೋಡಿರಿ). ಉದಾಹರಣೆಗೆ, ನಮ್ಮ ವರವು ಬೋಧಿಸುವದಾಗಿದ್ದರೆ ಬೋಧಿಸೋಣ – ಅಂದರೆ, ಪೂರ್ಣ ಹೃದಯದಿಂದ ಬೋಧಿಸೋಣ.

**8** ಇತರರಿಗೆ ಬುದ್ದಿ ಹೇಳುವದು (ಪ್ರೋತ್ಸಾಹಿಸುವದು) [68] ಸಹ ಒಂದು ವರವಾಗಿದ್ದು ಅದು ಅತಿ ಪ್ರಾಮುಖ್ಯವಾದದ್ದೆಂಬದನ್ನು ಗಮನಿಸಿರಿ. ಪ್ರೋತ್ಸಾಹಿಸುವ ವರದಲ್ಲಿ ಇತರರನ್ನು ಗದರಿಸುವದು ಮತ್ತು ತಿದ್ದುವದು (ಅದು ಕೆಲವು ವೇಳೆಗಳಲ್ಲಿ ಅವಶ್ಯಕವಾದಾಗ್ಯು) ಸೇರಿರುವದಿಲ್ಲ. ಭದಲಾಗಿ ಅದು ಬಲಪಡಿಸುವದು ಮತ್ತು ಸಂತೈಸುವದು ಎಂದರ್ಥವಾಗಿದೆ. ಪ್ರೋತ್ಸಾಹ ಅಥವಾ ಪ್ರಬೋಧನೆ ಯಾವಾಗಲೂ ಇತರ ವ್ಯಕ್ತಿಯ ಒಳಿತಿಗಾಗಿಯೂ ಪ್ರಯೋಜನಕ್ಕಾಗಿಯೂ ಕೊಡಲ್ಪಡುತ್ತವೆ. ನಾವು ಒಬ್ಬರನ್ನೊಬ್ಬರು ಸಂಧಿಸಿ ಮಾತಾಡುವಾಗ ಎಷ್ಟು ಸಾರಿ ನಾವು ಪ್ರೋತ್ಸಾಹದ ಮಾತನ್ನು ಹೇಳುತ್ತೇವೆ?

ನಾವು ಕಡೆಯ ಸಾರಿಯಾವಾಗ ಒಬ್ಬ ಸಹೋದರ ಅಥವಾ ಸಹೋದರಿಗೆ ಪ್ರೋತ್ಸಾಹದ ಮಾತನ್ನು ಹೇಳಿದ್ದೇವೆ? ಅಂತಹ ಪ್ರೋತ್ಸಾಹವು ಒಬ್ಬನಿಗೆ ಎಷ್ಟು ಪ್ರಾಮುಖ್ಯವಾಗಿರಬಹುದು – ಈ ದಿನವು ಕೂಡಾ! ದಾನ ಕೊಡುವವನು ಯದಾರ್ಥ (ದಾರಾಳ) ಮನಸ್ಸಿನಿಂದ ಕೊಡಲಿ.

ನಾವು ಕೊಡುವಾಗ ವೆಚ್ಚವನ್ನು ಲೆಕ್ಕಿಸದೆ ದಾರಾಳವಾಗಿ ಕೊಡೋಣ (ಮತ್ತಾಯ 6:3-4 ಮತ್ತು ವ್ಯಾಖ್ಯಾನ ನೋಡಿರಿ). ದೇವರು ಸಹ ನಮಗೆ ಅದೇ ರೀತಿಯಲ್ಲಿ ತನ್ನ ವರಗಳನ್ನು ಕೊಟ್ಟಿದ್ದಾನೆ (2 ಕೊರಿಂಥ 9:6-8; ಯಾಕೋಬ 1:5). ನಾವು ಇತರರಿಗೆ ಕೊಡುವಾಗ ಅವರಿಂದ ಏನಾದರೂ ಹಿಂದಕ್ಕೆ ಪಡೆಯುವ ನಿರೀಕ್ಷೆಯಿಂದ ಕೊಡದಿರೋಣ (ಲೂಕ 6:33-34). ನಾವು ಇತರರಿಗೆ ನಮ್ಮ ಪ್ರಯೋಜನಕ್ಕಾಗಿ ಕೊಡಬಾರದು, ಆದರೆ ಅವರ ಪ್ರಯೋಜನಕ್ಕಾಗಿಯೇ ಕೊಡಬೇಕು! ವಿಶೇಷವಾಗಿ, ನಾವು ನಮಗೆ ಹಿಂದಕ್ಕೆ ಕೊಡಲು ಆಗದೆ ಇರುವವರಿಗೆ ಕೊಡಬೇಕು; ನಾವು ಕೊಡುವದಾದರೆ ದೇವರು ನಮಗೆ ಪ್ರತಿಫಲವನ್ನು ಕೊಡುವನು (ಲೂಕ 14:12-14 ನೋಡಿರಿ).

ಹಿರೀತನ ನಡಿಸುವವನು ಆಸಕ್ತಿಯಿಂದ ನಡಿಸಲಿ. ಸಭೆಯ ನಾಯಕರು ಕಾಳಜಿ ಮತ್ತು ಆಸಕ್ತಿಯಿಂದ ಆಳಬೇಕು; ಅವರು ದೊಡ್ಡ ಜವಾಬ್ದಾರಿಯನ್ನು ಹೊಂದಿರುತ್ತಾರೆ.

...ಉಪಕಾರ ಮಾಡುವವನು ಸಂತೋಷವಾಗಿ ಮಾಡಲಿ. ಕೆಲವು ವೇಳೆಗಳಲ್ಲಿ ನಾವು ಯಾರಿಗಾದರೂ ಉಪಕಾರ ಮಾಡುತ್ತಿರುವಾಗ ನಾವು ಅದರ ವಿಷಯದಲ್ಲಿ ಸಂತೋಷವಾಗಿರುವದಿಲ್ಲ; ನಾವು ಅಸಮಾಧಾನ ಪಟ್ಟು ಕೊಳ್ಳುತ್ತಾ ಮಾಡುತ್ತೇವೆ. ನಾವು ಬಹಳ ಅನಾರೋಗ್ಯ ವುಳ್ಳ ವ್ಯಕ್ತಿಯನ್ನು ಆರೈಕೆ ಮಾಡುತ್ತಿರಬಹುದು – ಉದಾಹರಣೆಗೆ, ಹೊಲಸುನಾರುವ ವಿಪರೀತಗಾಯಗಳುಳ್ಳ ವ್ಯಕ್ತಿಯನ್ನು ಆರೈಕೆ ಮಾಡುತ್ತಿರುವಾಗ ಆ ಗಾಯಗಳು ನಮಗೆ ವಾಕರಿಕೆಯನ್ನು ತರುತ್ತಿರಬಹುದು – ಆ ವೇಳೆಯಲ್ಲಿ ನಮ್ಮ ಮುಖದಲ್ಲಿ ಹೇಸಿಕೆ ಕಾಣಿಸಬಹುದಾಗಿದೆ. ಅಷ್ಟು ಮಾತ್ರವಲ್ಲದೆ, ನಮ್ಮ ದಯೆಯ ಹೆಚ್ಚು ಆಗತ್ಯತೆಯುಳ್ಳವರು ಸಾಮಾನ್ಯವಾಗಿ ಸ್ವತಃ ಸಂತೋಷ ಅಥವಾ ಉಲ್ಲಾಸಕರ ಮನಸ್ಥಿತಿಯನ್ನು ಹೊಂದಿರುವದಿಲ್ಲ. ಹಾಗಾದರೆ ದುಃಖದಲ್ಲಿರುವ ಜನರಿಗೆ ನಾವು ಇನ್ನು ಹೆಚ್ಚು ಸಂತೋಷದಿಂದ ಸೇವೆ ಮಾಡಬೇಕಲ್ಲವೇ!

## ಕ್ರೈಸ್ತಜೀವಿತದ ಕೆಲವೊಂದು ಸೂತ್ರಗಳು (12:9-21)

9 ಪೌಲನು 3-8 ವಚನಗಳಲ್ಲಿ ವಿವಿಧ ವರಗಳು ಮತ್ತು ಕಾರ್ಯಗಳ ಕುರಿತಾಗಿ ಮಾತಾಡಿದ್ದಾನೆ. ಈಗ ಆತನು ಎಲ್ಲಾ ಸಮಯಗಳಲ್ಲೂ ಎಲ್ಲಾ ಕ್ರೈಸ್ತರಿಗೂ ಅನ್ವಯಿಸುವ ಸಾಮಾನ್ಯ ಕರ್ತವ್ಯಗಳೆಡೆಗೆ ತನ್ನ ಗಮನವನ್ನು ಹರಿಸುತ್ತಾನೆ.

ಕ್ರೈಸ್ತ ಜೀವಿತದಲ್ಲಿ ಪ್ರಥಮ ಮತ್ತು ಅತಿ ಶ್ರೇಷ್ಠವಾದ ಸೂತ್ರವು ಯಾವಾಗಲೂ ಪ್ರೀತಿಯೇ ಆಗಿದೆ. ನಮ್ಮ ಪ್ರೀತಿಯು ನಿಷ್ಕಪಟವಾಗಿರಬೇಕು. ನಿಜವಾದ ಪ್ರೀತಿಯು ನಮ್ಮ ಅಂತರ್ಯದಿಂದ ತೋರಿಕೆಯಾಗಿರುವದಾದರೆ ಅದು ಮಿಥ್ಯ ಮತ್ತು ಕಪಟತನದ ಪ್ರೀತಿಯಾಗಿದೆ ಮತ್ತು ಅದು ನೆಲೆಗೊಳ್ಳಲಾರದು. ಯಾವನ ಪ್ರೀತಿಯು ಮಿಥ್ಯ ಹಾಗು ಕಪಟತನವುಳ್ಳದ್ದಾಗಿರುತ್ತದೋ ಅವ್ಯಕ್ತಿಯು ತನ್ನ ಸ್ವಂತ ಲಾಭ ಮತ್ತು ಒಳಿತನ್ನು ಮಾತ್ರವೇ ನೋಡಿಕೊಳ್ಳುತ್ತಾನೆ. ಇನ್ನೊಂದೆಡೆಯಲ್ಲಿ, ನಿಷ್ಕಪಟವಾದ ಪ್ರೀತಿಯುಳ್ಳ ವ್ಯಕ್ತಿಯು ದೇವರ ಕಾರ್ಯಗಳಿಗಾಗಿಯೂ ಇತರರ ಒಳಿತಿಗಾಗಿಯೂ ತವಕಪಡುತ್ತಾನೆ.

ಕೆಟ್ಟ ತನಕ್ಕೆ ಹೇಸಿಕೊಳ್ಳಿರಿ. ಈ ಮಾನವರ ಲೋಕವು ಕೆಟ್ಟದ್ದಾಗಿದ್ದು ಸೈತಾನನ ಹತೋಟಿಯಲ್ಲಿರುತ್ತದೆ. ಆದುದರಿಂದ, ಕೆಟ್ಟ ತನಕ್ಕೆ ಹೇಸಿಕೊಳ್ಳಿರಿ ಎಂದು ಹೇಳುವದು ಇಹಲೋಕದ ನಡವಳಿಕೆಯನ್ನು ಅನುಸರಿಸಬೇಡಿರಿ ಎಂದು ಹೇಳುವಂತೆಯೇ ಆಗಿದೆ (ವಚನ 2).

. . .ಒಳ್ಳೇದನ್ನು ಬಿಗಿಯಾಗಿ ಹಿಡದುಕೊಳ್ಳಿರಿ. ಅದನ್ನು ದೃಡವಾಗಿ ಹಿಡಿದುಕೊಳ್ಳಿರಿ೧ ಸೈತಾನನು ಯಾವಾಗಲೂ ನಮ್ಮನ್ನು ಒಳ್ಳೇದರಿಂದ ದೂರ ತಳ್ಳಲು ಪ್ರತ್ನಿಸುತ್ತಿದ್ದಾನೆ; ಆದುದರಿಂದ, ನಾವು ಅದನ್ನು ಬಿಗಿಯಾಗಿ ಹಿಡಿದುಕೊಳ್ಳಬೇಕು.
10 ಕ್ರೈಸ್ತರು ಹೇಗೆ ಒಬ್ಬರನ್ನೊಬ್ಬರು ಪ್ರೀತಿಸಬೇಕು? ನಾವು ಒಬ್ಬರನ್ನೊಬ್ಬರು ಸಹೋದರ ಪ್ರೀತಿಯಿಂದ ಪ್ರೀತಿಸಬೇಕು (ಇಬ್ರಿಯ 13:1 ನೋಡಿರಿ). ತಂದೆತಾಯಿಗಳು ತಮ್ಮ ಮಕ್ಕಳಿಗಾಗಿ ತಮ್ಮನ್ನು ಮುಡಿಪಾಗಿಟ್ಟು ಕೊಳ್ಳುವ ಪ್ರಕಾರವೇ ನಾವೂ ಒಬ್ಬರಿಗೊಬ್ಬರಿಗಾಗಿ ನಮ್ಮನ್ನು ಮುಡಿಪಾಗಿಟ್ಟು ಕೊಂಡಿರಬೇಕು. ಕ್ರೈಸ್ತರು ಎಲ್ಲರನ್ನು ಪ್ರೀತಿಸಬೇಕು ಆದರೆ ಅವರು ವಿಶೇಷವಾಗಿ ಸಭೆಯಲ್ಲಿನ ತಮ್ಮ ಸಹೋದರ ಹಾಗು ಸಹೋದರಿಯನ್ನು ಪ್ರೀತಿಸಬೇಕು (ಗಲಾತ್ಯ 6:10; 1 ಪೇತ್ರ 4:8 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಕ್ರಿಸ್ತನು ನಮ್ಮನ್ನು ಪ್ರೀತಿಸಿದಂತೆಯೇ ನಾವು ಒಬ್ಬರನ್ನೊಬ್ಬರು ಪ್ರೀತಿಸಬೇಕು (ಯೋಹಾನ 13:34-35; 1 ಯೋಹಾನ 3:16-18 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಪ್ರೀತಿಯು ಮರ್ಯಾದೆ ಪೂರ್ವಕವಾದದ್ದು: ತನ್ನ ಸಹೋದರನನ್ನು ಪ್ರೀತಿಸುವವನು ಅವನಿಗೆ ಮಾನ ಮಾರ್ಯಾದೆಯನ್ನು ಸಹ ತೋರಿಸುವನು. ನಾವು ಯಾವಾಗಲೂ ಇತರರನ್ನು ನಮಗಿಂತಲೂ ಶ್ರೇಷ್ಠರೆಂದೆಣಿಸಬೇಕು (ಫಿಲಿಪ್ಪಿ 2:3 ಮತ್ತು ವ್ಯಾಖ್ಯಾನ ನೋಡಿರಿ). ನಾವು ಹೀಗೆ ಮಾಡುವದಾದರೆ ಸಭೆಯಲ್ಲಿ ಪಂಗಡಗಳು ಹಾಗು ಒಡಕುಗಳು ಉಂಟಾಗುವದೇ ಇಲ್ಲ. ಇತರ ವ್ಯಕ್ತಿಯು ಗೌರವ, ಸ್ಥಾನ, ಪ್ರಶಂಸೆಗಳನ್ನು ಹೊಂದಲಿ; ನಾವು ನಮಗಾಗಿ ಅವುಗಳನ್ನು ಹೊಂದಿಸಿಕೊಳ್ಳಲು ತವಕಪಡದಿರೋಣ.

ನಮ್ಮ ಸಭೆಗಳಲ್ಲಿ ಪಂಗಡಗಳು ಏಕೆ ಇರುತ್ತವೆ? ಯಾಕೆಂದರೆ ನಾವೆಲ್ಲರೂ ನಮಗಾಗಿ ಘನತೆಯನ್ನು ಹೊಂದಲು ತವಕಪಡುತ್ತಿದ್ದೇವೆ ಹೊರತು ಅದನ್ನು ಇತರರಿಗೆ ನೀಡುತ್ತಿಲ್ಲ. ನಾವು ನಮ್ಮನ್ನು "ನೇರ' ಎಂದು ಇತರ ವ್ಯಕ್ತಿಯನ್ನು "ವಕ್ರ" ಎಂದು ಭಾವಿಸಿಕೊಳ್ಳುತ್ತೇವೆ. ನಾವು ನಮ್ಮ ಕೆಲಸವನ್ನು ಯೋಗ್ಯವೆಂದೂ ಇತರ ವ್ಯಕ್ತಿಯ ಕೆಲಸವನ್ನು ಅಯೋಗ್ಯವೆಂಬದಾಗಿ ಊಹಿಸಿಕೊಳ್ಳುತ್ತೇವೆ. ನಾವು ಯಾವಾಗಲೂ ನಮ್ಮ ಸ್ವಂತ ದೃಷ್ಟಿಯಲ್ಲಿ ತುಲನೆ ಮಾಡಿಕೊಳ್ಳುತ್ತಿದ್ದೇವೆ. ನಾವು ಹೀಗೆ ಮಾಡುವಾಗ ಪಂಗಡವು ಂಟಾಗುವದರಲ್ಲಿ ಸಂಶಯವಿಲ್ಲ.

11 . . .ಆಸಕ್ತ ಚಿತ್ತರಾಗಿದ್ದು ಕರ್ತನ ಸೇವೆ ಮಾಡುವವರಾಗಿರಿ. ಪೌಲನು ಇಲ್ಲಿ ನಮ್ಮ ಮಾನವ ಆತ್ಮ ಮತ್ತು ಪವಿತ್ರಾತ್ಮನಗಳೆರಡನ್ನೂ ಸೂಚಿಸುತ್ತಿದ್ದಾನೆ. ನಮ್ಮ ಆತ್ಮೀಕ ಆಸಕ್ತಿಯನ್ನು ಕಾಪಾಡಿಕೊಳ್ಳಲು ನಾವು ಯಾವಾಗಲೂ ದೇವರ ಪವಿತ್ರಾತ್ಮನಿಗೆ ಸ್ಪಂದಿಸುತ್ತಿರಬೇಕು. ಪವಿತ್ರಾತ್ಮನ ಮುಖಾಂತರ ನಮ್ಮ ಆತ್ಮಗಳಿಗೆ ಜೀವವು ಂಟಾಗುತ್ತದೆ; ಪವಿತ್ರಾತ್ಮನ ಮುಖಾಂತರ ನಾವು ಆಸಕ್ತಿಯಿಂದ ತುಂಬುತ್ತೇವೆ. ಆದುದರಿಂದ, ನಮ್ಮ ಜೀವಿತಗಳಲ್ಲಿ ಪವಿತ್ರಾತ್ಮನು ಮಾಡುವ ಕಾರ್ಯಕ್ಕೆ ಅಡ್ಡಿಯನ್ನು ಉಂಟುಮಾಡುವ ಯಾವು ದನ್ನೂ ಮಾಡದಿರೋಣ (1 ಥೆಸಲೋನಿಕ 5:19 ನೋಡಿರಿ).

12 ನಮ್ಮ ನಿರೀಕ್ಷೆಯ ಕಾರಣದಿಂದ ನಾವು ಉಲ್ಲಾಸವಾಗಿರಬಹುದು. ನಮ್ಮ ನಿರೀಕ್ಷೆಯ ಕಾರಣದಿಂದ – ಅಂದರೆ, ರಕ್ಷಣೆಯಲ್ಲಿನ ನಿರೀಕ್ಷೆ – ನಾವು ಕಷ್ಟದಲ್ಲಿಯೂ ಉಪದ್ರವದಲ್ಲಿಯೂ ಸೈರಣೆಯಿಂದಿರಬಲ್ಲೆವು (ರೋಮ 5:2-4) ಮತ್ತು ಕಷ್ಟಗಳು ಉಪದ್ರವಗಳು ಒಂದು ದಿನ ಪ್ರತಿಯೊಬ್ಬ ಕ್ರೈಸ್ತನಿಗೂ ಬರಲಿವೆ (2 ತಿಮೊಥೆ 3:12). ವಿಶೇಷವಾಗಿ, ಆದಿನದಲ್ಲಿ ನಾವು ಈ ವಚನವನ್ನು ಜ್ಞಾಪಕಕ್ಕೆ ತರಬೇಕಾಗುವದು: ನಿರೀಕ್ಷಿಸುವ ಮಹಾಪದವಿಯನ್ನು ನೆನಸಿ ಉಲ್ಲಾಸವಾಗಿರಿ.

ಉಪದ್ರವದಲ್ಲಿ ಸೈರಣೆಯುಳ್ಳವರಾಗಿರಬೇಕಾದರೆ ನಾವು ಬೇಸರಗೊಳ್ಳದೆ ಪ್ರಾರ್ಥನೆ ಮಾಡುವ ಅಗ್ಯವಿರುತ್ತದೆ. ಪ್ರಾರ್ಥನೆಯ ಮೂಲಕವಾಗಿ ನಾವು ಉಪದ್ರವವನ್ನು ಸೈರಿಸಿಕೊಳ್ಳಲು ಬಲ ಮತ್ತು ಸೈರಣೆಯನ್ನು ಪಡೆದು ಕೊಳ್ಳುವೆವು (ಅ.ಕೃತ್ಯ 1: 14; 1 ಥೆಸಲೋನಿಕ 5:17).

13 ದೇವಜನರಿಗೆ ಕೊರತೆ ಬಂದಾಗ ಸಹಾಯ ಮಾಡಿರಿ. ನಾವು ಕೊರತೆಯಲ್ಲಿರುವ ನಮ್ಮ ಕ್ರೈಸ್ತ ಸಹೋದರ ಹಾಗು ಸಹೋದರಿಯರನ್ನು ಎಂದಿಗೂ ಉದಾಸೀನ ಮಾಡಬಾರದು; ನಾವು ಹೊರ ಹೋಗಿ ಕ್ರೈಸ್ತೇತರರ ಕೊರತೆಗಳನ್ನು ನೀಗಿಸುವದಕ್ಕಿಂತ ಮುಂಚೆ ಅವರ ಕೊರತೆಗಳನ್ನು ನೀಗಿಸ ಬೇಕು. ಆದರೆ ಮಾವು ಅವರ ಕೊರತೆಗಳನ್ನು ಮಾತ್ರವೇ ನೀಗಿಸಬೇಕಾಗಿದೆ ಹೊರತು ಅವರ ಇಚ್ಚೆಗಳನ್ನಲ್ಲ. ಕೆಲವು ವೇಳೆಗಳಲ್ಲಿ ಕ್ರೈಸ್ತರು ಒಬ್ಬರನ್ನೊಬ್ಬರು ಪರಾಂಬರಿಸುವದರಲ್ಲಿ ಎಷ್ಟಾಗಿ ಲೀನರಾಗುತ್ತಾರೆಂದರೆ ಅವರು ಸಭೆಯ ಹೊರಗಿನ ತಮ್ಮ ನೆರೆಯವರನ್ನು ಮರೆತೇ ಬಿಡುತ್ತಾರೆ.

ಅಥಿತಿ ಸತ್ಕಾರವನ್ನು ಅಭ್ಯಾಸಿಸುವದು ಪ್ರಾಮುಖ್ಯವಾದ ಕ್ರೈಸ್ತ ಕರ್ತವ್ಯವಾಗಿದೆ. ನಾವು ಯಾವಾಗಲೂ ಅಥಿತಿಸತ್ಕಾರವನ್ನು ಅಭ್ಯಾಸಿಸುವದಕ್ಕಾಗಿ ಅವಕಾಶವನ್ನು ಹುಡುಕುತ್ತಿರಬೇಕು – ಮಾಡಬೇಕಾದಾಗ ಮಾತ್ರವೇ ಅದನ್ನು ಮಾಡದೆ ಅವಕಾಶಕ್ಕಾಗಿ ತವಕಿಸಬೇಕು (1 ಪೇತ್ರ 4:9). ಮತ್ತು ನಮಗೆ ಪ್ರತಿಯಾಗಿ ಅಥಿತಿಸತ್ಕಾರ ಮಾಡಬಲ್ಲವರಿಗೆ ಮಾತ್ರವೇ ನಾವು ಸತ್ಕಾರವನ್ನು ಮಾಡದಿರೋಣ. ಬದಲಾಗಿ, ನಮಗೆ ಯಾರು ಪ್ರತಿಯಾಗಿ ಸತ್ಕಾರ ಮಾಡುವದಕ್ಕೆ ಸಾದ್ಯವಿಲ್ಲವೋ ಅವರಿಗೆ ನಾವು ವಿಶೇಷವಾಗಿ ಅಥಿತಿಸತ್ಕಾರವನ್ನು ಮಾಡೋಣ (ಮತ್ತಾಯ 5:46-47; ಲೂಕ 6:32-34; 112-14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

14 ಈ ವಚನದಲ್ಲಿ ಆಶಿರ್ವದಿಸು ಎಂಬ ಪದವು ದಯೆ ಮತ್ತು ಪ್ರೀತಿಯನ್ನು ತೋರಿಸುವದೆಂಬ ಅರ್ಥವನ್ನು ಹೊಂದಿದೆ. ದೇವರು ನಮ್ಮ ವೈರಿಗಳನ್ನು ಆಶಿರ್ವದಿಸುವಂತೆ ನಾವು ಪ್ರಾರ್ಥಿಸಬೇಕು (ಮತ್ತಾಯ 5:43-44; ಲೂಕ 6:27-28 ಮತ್ತು ವ್ಯಾಖ್ಯಾನ ನೋಡಿರಿ). ನಾವು ನಮ್ಮ ಸ್ವಂತ ಬಲದಲ್ಲಿಯಲ್ಲ, ಆದರೆ ಕ್ರಿಸ್ತನ ಪವಿತ್ರಾತ್ಮನ ಮೂಲಕ ಮಾತ್ರವೇ ನಾವು ಈ ವಿಧದಲ್ಲಿ ನಮ್ಮ ವೈರಿಗಳನ್ನು ಪ್ರೀತಿಸಬಲ್ಲೆವು .

ಕ್ರಿಸ್ತನೇ ನಮ್ಮ ಮಾದರಿ; ಆತನು ಎದುರಿಸುವದಕ್ಕೆ ಬದಲಾಗಿ ಪ್ರಾರ್ಥಿಸಿದನು; ತಪ್ಪು ಹೊರಿಸುವದಕ್ಕೆ ಬದಲಾಗಿ ಕ್ಷಮಿಸಿದನು; ದ್ವೇಷಿಸುವದಕ್ಕೆ ಬದಲಾಗಿ ಆತನು ಪ್ರೀತಿಸಿದನು; ಮರಣವನ್ನುಂಟು ಮಾಡುವದಕ್ಕೆ ಬದಲಾಗಿ ಆತನು ಜೀವವನ್ನುಂಟು ಮಾಡಿದನು (ಲೂಕ 23;34 ನೋಡಿರಿ).

15 ಸಂತೋಷ ಪಡುವವರ ಸಂಗಡ ಸಂತೋಷ ಪಡಿರಿ. ಕೆಲವು ವೇಳೆಗಳಲ್ಲಿ ನಮ್ಮ ಸಹೋದರನು ಸಂತೋಷ ಅಥವಾ ಯಶಸ್ವಿಯಲ್ಲಿರುವಾಗ ನಾವು ಅಸಮಾಧಾನಗೊಳ್ಳುತ್ತೇವೆ. ಇದು ಹೊಟ್ಟೆಕಿಚ್ಚಿನಿಂದ ಬರುತ್ತದೆ. (ಲೂಕ 15:25-30 ನೋಡಿರಿ).. ಕೆಲವು ವೇಳೆಗಳಲ್ಲಿ ನಮ್ಮ ಸಹೋದರನು ವಿಫಲನಾದಾಗ ಅಥವಾ ದುಃಖ ಇಲ್ಲವೆ ಸಮಸ್ಸೆಯಲ್ಲಿರುವಾಗ ನಾವು ಅಂತರ್ಯದಲ್ಲಿ ಸಂತೋಷಗೊಳ್ಳುತ್ತೇವೆ. ನಾವು ಆತನ ಬೀಳುವಿಕೆಯನ್ನು ರಹಷ್ಯದಲ್ಲಿ ಮೆಚ್ಚಿಕೊಳ್ಳುತ್ತೇವೆ; ಯಾಕೆಂದರೆ, ಅವನು "ಕಂದಕದಲ್ಲಿದ್ದರೆ" ನಾವು "ಎತ್ತರದಲ್ಲಿ" ಇರುವಂತೆ ಅನಿಸುತ್ತದೆ.

ಆದರೆ ಪೌಲನು ಹೇಳುವದೇನೆಂದರೆ: ಇದು ಜರುಗದಿರಲಿ. ನಮ್ಮ ಸಹೋದರನು ಸಂತೋಷ ಪಡುತ್ತಿರುವಾಗ ನಾವೂ ಆತನೊಂದಿಗೆ ಸಂತೋಷಪಡೋಣ – (1 ಕೊರಿಂಥ 12:26 ನೋಡಿರಿ). ನಮ್ಮ ಸಹೋದನು ದುಃಖದಲ್ಲಿರುವಾಗ ನಾವು ಆತನ ದುಃಖವನ್ನು ಹಂಚಿಕೊಳ್ಳೋಣ. ನಮ್ಮ ಸಹೋದರನು ಭಾರದಿಂದಿರುವಾಗ ನಾವು ಆಭಾರವನ್ನು ಹೊತ್ತುಕೊಳ್ಳುವಂತೆ ಅವನಿಗೆ ಸಹಾಯ ಮಾಡಬೇಕು (ಗಲಾತ್ಯ 6:2 ಮತ್ತು ವ್ಯಾಖ್ಯಾನ ನೋಡಿರಿ).

16 ನಿಮ್ಮ ನಿಮ್ಮೊಳಗೆ ಏಕಮನಸ್ಸುಳ್ಳವರಾಗಿರಿ..... ದೊಡ್ಡಸ್ತಿಕೆಯ ಮೇಲೆ ಮನಸ್ಸಿಡಬೇಡಿರಿ. ಇನ್ನೊಬ್ಬರೊಂದಿಗೆ ಸಾಮರಸ್ಯದಿಂದ ಇರಬೇಕಾದರೆ ನಾವು ದೀನತೆಯುಳ್ಳರಾಗಿರಬೇಕು; ಗರ್ವವು ಐಕ್ಯತೆಯನ್ನು ನಾಶ ಮಾಡುತ್ತದೆ (ಎಫೆಸ 4:2-3 ಮತ್ತು ವ್ಯಾಕ್ಯಾನ ನೋಡಿರಿ).

ನಾವು ಒಂದೇ ದೇಹಕ್ಕೆ ಸೇರಿದವರಾಗಿರುವದಾದರೆ ನಾವು ಏಕಮನಸ್ಸುಳ್ಳವರೂ ಆಗಿರಬೇಕು (1 ಕೊರಿಂಥ 1:10; ಫಿಲಿಪ್ಪ 2:2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ಒಬ್ಬರನ್ನೊಬ್ಬರು ಕೀಳಾಗಿ ಕಾಣದಿರೋಣ. ಕೈ ಕಣ್ಣಿಗಿಂತಲೂ ಉತ್ತಮವೋ? ನಾಲಿಗೆಯು ಕಾಲಿಗಿಂತಲೂ ಉತ್ತಮವೋ? ಇಲ್ಲ. ಆದ್ದರಿಂದ ನಾವು ಒಬ್ಬರಿಗೊಬ್ಬರು ಮರ್ಯಾದೆ ತೋರಿಸೋಣ (1 ಕೊರಿಂಥ 12:21-27 ಮತ್ತು ವ್ಯಾಖ್ಯಾನ ನೋಡಿರಿ).

ದೀನರಸಂಗಡ ಬಳಿಕೆಯಾಗಿರಿ.[69] ದೀನರ ಸಂಗಡ ಬಳಿಕೆಯಾಗಿರುವದು ಮಾತ್ರವಲ್ಲ, ಆದರೆ ಅವರ ಕೆಲಸವನ್ನು ಮಾಡಬೇಕೆಂಬದು ಇದರ ಅರ್ಥವಾಗಿದೆ. ಇಲ್ಲಿ ಪೌಲನು ತಿಳಿಸುವ ಮುಖ್ಯ ಅಂಶವೇನೆಂದರೆ ಕ್ರೈಸ್ತರು ಜನರ ಹುಟ್ಟು ಜಾತಿ ಅಥವಾ ಆರ್ಥಿಕ ಸ್ಥಿತಿಗಳ ಪ್ರಕಾರವಾಗಿ ಎಂದಿಗೂ ಭೇದಭಾವವನ್ನು ಮಾಡಬಾರದು (ಯಾಕೋಬ 2:1-4 ಮತ್ತು ವ್ಯಾಖ್ಯಾನ ನೋಡಿರಿ). ಮತ್ತು ವಿಶೇಷವಾಗಿ ಅವರು ತಮ್ಮ ಸಹ ಕ್ರೈಸ್ತರ ಮದ್ಯದಲ್ಲಿ ಅಂತಹ ಭೇದಗಳನ್ನು ಮಾಡಬಾರದು! ನಾವೆಲ್ಲರೂ ಒಂದೇ ದೇಹದ ಸದಸ್ಯರಾಗಿರುವದರಿಂದ ಉನ್ನತ ಸ್ಥಿತಿಯ ವಿಶ್ವಾಸಿಗಳು ದೀನ ವಿಶ್ವಾಸಿಗಳ ಸಂಗಡ ಒಳಿಕೆಯಾಗಬೇಕು. ನಿಮ್ಮನ್ನು ನೀವೇ ಬುದ್ಧಿವಂತರೆಂದು ಎಣಿಸಿಕೊಳ್ಳಬೇಡಿರಿ. ನಮ್ಮನ್ನು ನಾವು ಬುದ್ಧಿವಂತರೆಂದು ಪರಿಗಣಿಸಿಕೊಳ್ಳದಿರೋಣ. ಬುದ್ಧಿವಂತರಾಗಿರುವದು ಉತ್ತಮವಾದದ್ದು, ಆದರೆ ನಾವು ಬುದ್ಧಿವಂತರೆಂದು ಎಣಿಸಿಕೊಳ್ಳುವದು ಉತ್ತಮವಲ್ಲಗ ನಾವು ಯಾವಾಗಲೂ "ನಾನು ಸರಿ" ಎಂದು ಯೋಚಿಸುತ್ತಾ ತಿರುಗಾಡದಿರೋಣ. ಯಾವ ವ್ಯಕ್ತಿಯು ತಾನೇ ಸರಿ ಎಂದು ಯಾವಾಗಲೂ ಹೇಳಿಕೊಳ್ಳುತ್ತಾನೋ ಅವನಿಗೆ ಕಲಿಸುವದು ಕಷ್ಟಕರವಾದದ್ದು; ದೇವರು ಸಹ ಅಂತಹ ವ್ಯಕ್ತಿಗೆ ಕಲಿಸಲು ಸಾಧ್ಯವಿಲ್ಲ.

ವಿಧ್ಯಾವಂತರಾದ ಜನರು ಹಲವಾರು ವೇಳೆ ತಮ್ಮನ್ನು – ತಮ್ಮ ದೃಷ್ಟಿಯಲ್ಲಿ – ತಾವೇ ಬುದ್ಧಿವಂತರೆಂದು ಎಣಿಸಿಕೊಳ್ಳುತ್ತಾರೆ.

ವಿಧ್ಯಾವಂತರು ಅವಿಧ್ಯಾವಂತರನ್ನು ಕೀಳಾಗಿ ಕಾಣದಿರಲಿ. ನಿಜವಾದ ಜ್ಞಾನವು ಶಾಲೆಗಳಿಂದ ಬರುವದಿಲ್ಲ! ಅದು ಮುಖ್ಯವಾಗಿ ದೇವರಿಂದ – ಆತನ ಆತ್ಮದಿಂದ, ಆತನ ವಾಕ್ಯ (ಸತ್ಯವೇದ) ದಿಂದ, ಮತ್ತು ಸಭೆಯಲ್ಲಿನ ಸಹ ವಿಶ್ವಾಸಿಗಳಿಂದ – ಕಲಿಯಲ್ಪಡುತ್ತದೆ. ಹಲವಾರುವೇಳೆ ಸಭೆಯಲ್ಲಿರುವ ಅವಿಧ್ಯಾವಂತ ಸದಸ್ಯರು ಕೆಲವೊಂದು ವಿಷಯಗಳಲ್ಲಿ ವಿಧ್ಯಾವಂತರಿಗಿಂತಲೂ ಹೆಚ್ಚು ಜ್ಞಾನವನ್ನು ಹೊಂದಿರುತ್ತಾರೆ!

17 ಯಾರಿಗೂ ಅಪಕಾರಕ್ಕೆ ಅಪಕಾರ ಮಾಡಬೇಡಿರಿ (ಮತ್ತಾಯ 5:38-41; 1 ಥೆಸಲೋನಿಕ 5:15; 1 ಪೇತ್ರ 3:9 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ದೇವರ ದೃಷ್ಟಿಗೆ ಸರಿಯಾದದ್ದನ್ನು ಮಾತ್ರವೇ ಮಾಡುವದಲ್ಲ; ಎಲ್ಲರ[70] ದೃಷ್ಟಿಗೆ ಸರಿಯಾದದ್ದನ್ನು ಸಹ ಮಾಡಬೇಕು (2 ಕೊರಿಂಥ 8:21). ಇಲ್ಲವಾದರೆ, ನಾವು ಕ್ರಿಸ್ತನಿಗೆ ಅವಮಾನವನ್ನುಂಟು ಮಾಡುತ್ತೇವೆ (ರೋಮ 14:16; 1 ಥೆಸಲೋನಿಕ 5:22 ನತ್ತು ವ್ಯಾಖ್ಯಾನಗಳನ್ನು ನೋಡಿರಿ).

18 ಎಲ್ಲರ ಸಂಗಡ ಸಮಾಧಾನದಿಂದಿರುವದು ಎಲ್ಲಾ ವೇಳೆಗಳಲ್ಲಿ ಸಾಧ್ಯವಾಗುವದಿಲ್ಲ. ನಾವು ಕೆಲವು ಜನರೊಂದಿಗೆ – ಉದಾಹರಣೆಗೆ, ದುಷ್ಟರೊಂದಿಗೆ – ಸಂಪೂರ್ಣವಾಗಿ ಸಮಾಧಾನದಿಂದ ಇರುವದಕ್ಕಾಗುವದಿಲ್ಲ. ನಾವು ಕೆಟ್ಟದ್ದನ್ನು ವಿರೋಧಿಸಬೇಕು. ನಾವು ಕ್ರಿಸ್ತನನ್ನು ವಿರೋಧಿಸುವವರನ್ನು, ವಿಶೇಷವಾಗಿ ಆತನನ್ನು ಅವಮಾಗೊಳಿಸಿ ಆತನ ಕೆಲಸಕ್ಕೆ ಅಡ್ಡಿಯನ್ನು ಮಾಡಲು ಪ್ರಯತ್ನಿಸುವವರನ್ನು ನಾವು ವಿರೋಧಿಸಬೇಕು. ಆದರೆ ನಮ್ಮ ಪಾತ್ರವು ದೇವರ ಮಾರ್ಗದರ್ಶನದ ಹತೋಟಿಯಲ್ಲಿರಬೇಕು; ಆದರಿಂದ ದೇವರಿಗೆ ಮಹಿಮೆಯಾಗುವದಾದರೆ ಮಾತ್ರ ಹೋರಾಟದಲ್ಲಿ ತೊಡಗಬೇಕು. ಪೌಲನು ಇಲ್ಲಿ ಒಂದು ಸಾಮಾನ್ಯ ನಿಯಮವನ್ನು ನೀಡುತ್ತಾನೆ; ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರಸಂಗಡ – ನಿಮ್ಮ ವೈರಿಗಳೊಂದಿಗೆ[71] ಸಹ – ಸಮಾಧಾನದಿಂದಿರಿ.

ಹೇಗಿದ್ದರೂ., ಸಭೆಯೊಳಗೆ ಯಾವಾಗಲೂ ಸಮಾಧಾನವಿರಬೇಕು (ರೋಮ 14:19; ಎಫೆಸ್ 4:3 ಮತ್ತು ವ್ಯಾಖ್ಯಾನ ನೋಡಿರಿ).

19 ಮುಯ್ಯಿಗೆ ಮುಯ್ಯಿ ತೀರಿಸಬೇಡಿರಿ. ಈ ಆಜ್ಞೆಯು ಮತ್ತು ಪೌಲನು 17ನೇ ವಚನದಲ್ಲಿ ನೀಡಿದ ಆಜ್ಞೆಯೂ ಒಂದೇ ಆಗಿವೆ: ಅಪಕಾರಕ್ಕೆ ಅಪಕಾರ ಮಾಡಬೇಡಿರಿ.

ನಾವು ಎಂದಿಗೂ ಯಾವದೇ ಕಾರಣಕ್ಕೂ ಯಾವದೇ ರೀತಿಯಾದ ಸೇಡನ್ನು ತೀರಿಸಿಕೊಳ್ಳಬಾರದು (ಜ್ಞಾನೋಕ್ತಿ 20:22). ನಾವು ಇನ್ನೊಬ್ಬವ್ಯಕ್ತಿಯಿಂದ – ಒಬ್ಬ ಕ್ರೈಸ್ತ ಸಹೋದರನಿಂದಲೂ ಸಹ – ಯಾವದೇ ರೀತಿಯ ನೋವು ಅನುಭವಿಸಿದ್ದರೆ ಸ್ವಾಭಾವಿಕವಾಗಿ ನಾವು ಅವನಿಗೆ ಮುಯ್ಯಿತೀರಿಸಬೇಕೆಂದು ಇಚ್ಚಿಸುತ್ತೇವೆ. ಸಾಮಾನ್ಯವಾಗಿ ನಾವು ಮುಯ್ಯಿ ತೀರಿಸಲು ಯಾವ ವಿಧವಾದ ಸಂಗತಿಗಳನ್ನು ಮಾಡುತ್ತೇವೆ. ನಾವು ನಮಗೆ ನೋವುಂಟು ಮಾಡಿದ ವ್ಯಕ್ತಿಯೊಂದಿಗೆ ಸ್ನೇಹ ಮತ್ತು ಅನ್ಯೋನ್ಯತೆಯನ್ನು ಹಿಂದೆಗೆಯುವವರಾಗಿದ್ದೇವೆ. ಆತನಿಗೆ ನೋವುಂಟುಮಾಡುವದೇ ನಮ್ಮ ಅಂತರ್ಯದ ಇಚ್ಛೆಯಾಗಿದೆ. ಮತ್ತು ಅದೇ ಮುಯ್ಯಿ ತೀರಿಸುವದಾಗಿದೆ. ನಮಗೆ ನೋವುಂಟು ಮಾಡುವ ವ್ಯಕ್ತಿಯೊಂದಿಗೆ ಮಾತಾಡಲು ನಿರಾಕರಿಸುವದರ ಬದಲಾಗಿ ನಾವು ಆತನ ಬಳಿಗೆ ಹೋಗಿ ಕ್ಷಮಿಸುವವರಾಗಿರಬೇಕು! ಆತನು ನಮಗೆ ಮಾಡಿದ ತಪ್ಪನ್ನು ಸಾಧ್ಯವಾದಷ್ಟು ಬೇಗನೆ ಮರೆತು ಬಿಡುವದಕ್ಕೆ ನಾವು ಪ್ರಯತ್ನಿಸಬೇಕು.

ಅಷ್ಟು ಮಾತ್ರವಲ್ಲದೆ, ಮುಯ್ಯಿತೀರಿಸುವದು ನಮಗೆ ಅಗತ್ಯವಿಲ್ಲ: ಯಾವಾಗಲೂ ಸ್ವತಃ ದೇವರೇ ನಮಗಾಗಿ ಮುಯ್ಯಿ ತೀರಿಸುತ್ತಾನೆ. ದೇವರು "ಮುಯ್ಯಿತೀರಿಸುವದು ನನ್ನ ಕೆಲಸ" ಎಂದು ಹೇಳುತ್ತಾನೆ (ಧರ್ಮೋಪದೇಶಕಾಂಡ 32:55). ದೇವರು ಎಲ್ಲಾ ಮನುಷ್ಯರಿಗೂ ನ್ಯಾಯತೀರಿಸುವನು; ಆತನು ಪ್ರತಿಯೊಬ್ಬನಿಗೂ ಅವನವನ ಕೆಲಸಕ್ಕೆ ತಕ್ಕಹಾಗೆ – ಅದು ಒಳ್ಳೇದಾಗಿರಲಿ ಅಥವಾ ಕೆಟ್ಟದ್ದಾಗಿರಲಿ – ಪ್ರತಿಫಲವನ್ನು ಕೊಡುತ್ತಾನೆ (ರೋಮ 2:6; 2 ಕೊರಿಂಥ 5:10; ಇಬ್ರಿಯ 10:30; ಪ್ರಕಟಣೆ 22:12 ಮತ್ತು ವ್ಯಾಖ್ಯಾನ ನೋಡಿರಿ).

20 ಪೌಲನು ಇಲ್ಲಿ ಜ್ಞಾನೋಕ್ತಿಗಳು 25:21-22 ರಲ್ಲಿನ ಮಾತುಗಳನ್ನು ಉಲ್ಲೇಖಿಸುತ್ತಾನೆ. ಜ್ಞಾನೋಕ್ತಿಯ ಅರ್ಥವೇನೆಂದರೆ ನಾವು ನಮ್ಮ ವೈರಿಗೆ ಒಳ್ಳೇದನ್ನು ಮಾಡುವದಾದರೆ ಹಲವಾರು ವೇಳೆ ಆತನು ತಾನು ನಮಗೆ ಮಾಡಿದ ತಪ್ಪಿಗಾಗಿ ಗೊಂದಲಕ್ಕೊಳಗಾಗಿ ನಾಚಿಕೆ ಪಟ್ಟುಕೊಳ್ಳುತ್ತಾನೆ. ಆತನು "ನಾಚಿಕೆಯಿಂದ ಸುಡಲ್ಪಡುವನು" ಇದು ಈ ವಚನದ ಅರ್ಥಗಳಲ್ಲಿ ಒಂದಾಗಿದೆ; ಹೀಗೆ ಮಾಡುವದರಿಂದ ಅವನ ತಲೆಯ ಮೇಲೆ ಕೆಂಡಗಳನ್ನು ಕೂಡಿಸಿಟ್ಟಂತಾಗುವದು. ಕೆಂಡಗಳು ದೇವರ ನ್ಯಾಯತೀರ್ಪಿನ ಸಂಕೇತವು ಸಹ ಆಗಿದೆ; ನಮ್ಮ ವೈರಿಯು ಪಶ್ಚಾತಾಪ ಪಡದೇ ಹೋದರೆ ನಮ್ಮ ಉಪಕಾರವು ಆತನ ಅಪರಾಧವನ್ನು ಇನ್ನು ಕೆಟ್ಟದ್ದಾಗಿಸುತ್ತದೆ, ಮತ್ತು ಆತನ ನ್ಯಾಯತೀರ್ಪು – ಮತ್ತಷ್ಟು ಹೆಚ್ಚು ಕಠಿಣವಾಗಿರುವದು.ಈ ಜ್ಞಾನೋಕ್ತಿಯಲ್ಲಿ ಇನ್ನೊಂದು ಹೆಚ್ಚಿನ ಅರ್ಥವಿರುತ್ತದೆ; ಅದು ಯಾವದೆಂದರೆ ವೈರಿಯನ್ನು ಸ್ನೇಹಿತನನ್ನಾಗಿ ಮಾಡಿಕೊಳ್ಳುವದೇ ಆತನನ್ನು ಜಯಿಸುವ ಉತ್ತಮ ಮಾರ್ಗವಾಗಿದೆ!

21 ಕೆಟ್ಟ ತನವು ನಮ್ಮ ಸುತ್ತಲೂ ಇರುತ್ತದೆ. ಕೆಲವು ವೇಳೆಗಳಲ್ಲಿ ಕ್ರೈಸ್ತರು ಕೆಟ್ಟತನದಿಂದ ನಿರಾಶರಾಗಿ ಕುಂದಿ ಹೋಗಿರುತ್ತಾರೆ. ಅವರು ದುಷ್ಟರ ನಿಮಿತ್ತ ಬಾಧೆಗೊಳಗಾಗುತ್ತಾರೆ. ಕೆಲವು ವೇಳೆಗಳಲ್ಲಿ ಅವರು "ನಾನು ಇದನ್ನು ಸಹಿಸಲಾರೆ" ಎಂದು ಕೂಗುತ್ತಾರೆ. ಅವರ ನಂಬಿಕೆ ಬಲ ಹೀನಗೊಳ್ಳುತ್ತದೆ; ಅವರು ದೇವರಿಂದ ಬೇರ್ಪಟ್ಟವರಾಗುತ್ತಾರೆ.

ಇದು ನಮಗೆ ಸಂಭವಿಸದಿರಲಿ! ಕೆಟ್ಟತನವು ನಮ್ಮ ಸುತ್ತಲೆಲ್ಲಾ ಇದ್ದಾಗ್ಯು ನಾವು ದೇವರ ಸಹಾಯದ ಮೂಲಕ ಒಳ್ಳೇತನ ದಿಂದ ಕೆಟ್ಟತನವನ್ನು ಸೋಲಿಸಬಹುದಾಗಿದೆ. ಬೆಳಕು ಯಾವಾಗಲೂ ಕತ್ತಲೆಯನ್ನು ಸೋಲಿಸುವ ಪ್ರಕಾರವೇ ಒಳ್ಳೇತನವು ಯವಾಗಲೂ ಕೆಟ್ಟತನವನ್ನು ಸೋಲಿಸುತ್ತದೆ. ಪೌಲನು "ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸು"ಎಂದು ಹೇಳಿದ ಮಾತುಗಳು ಒಂದು ಆಜ್ಞೆಯೇ ಹೊರತು ಸಲಹೆಯಾಗಿರುವದಿಲ್ಲ ದೇವರು ಆಜ್ಞೆಯೊಂದನ್ನು ಕೊಡುವಾಗಲೆಲ್ಲಾ ಆ ಆಜ್ಞೆಯನ್ನು ಕೈಕೊಂಡು ನಡೆಯಲು ನಮಗೆ ಬೇಕಾದ ಮಾರ್ಗವನ್ನೂ ಬಲವನ್ನೂ ಸಹ ಯಾವಾಗಲೂ ಅನುಗ್ರಹಿಸುತ್ತಾನೆ.

---

## ಅಧ್ಯಾಯ - 13

### ಅಧಿಕಾರಿಗಳಿಗೆ ಅಧೀನತೆ (13:1-7)

1 ಎಲ್ಲಾ ಅಧಿಕಾರವೂ ಅಂತಿಮವಾಗಿ ದೇವರಿಂದಲೇ ಬರುತ್ತದೆ. ನಾವು ಯಾರ ಅಧಿಕಾರದ ಬಗ್ಗೆ ಮಾತಾಡುತ್ತಿದ್ದರೂ– ಅದು ಅರಸನ ಅಧಿಕಾರ, ರಾಷ್ಟ್ರಪತಿಯ ಅಧಿಕಾರ, ಸೇನಾನಾಯನಕ ಅಧಿಕಾರ ಅಥವಾ ಬೇರೆ ಇನ್ನಾರದೇ ಆಗಿರಬಹುದು– ಅವರ ಅಧಿಕಾರವು ಅಂತಿಮವಾಗಿ ದೇವರಿಂದಲೇ ಬರುವದಾಗಿದೆ (ಜ್ಞಾನೋಕ್ತಿ 8:15-16; ಯೋಹಾನ 19:10-11).

ಆದುದರಿಂದ, ನಾವು ಯಾವಾಗಲಾದರೂ ನಮ್ಮ ಮೇಲಿನ ಅಧಿಕಾರಿಗೆ ಅವಿಧೇಯ ರಾಗುವಾಗ ನಾವು ದೇವರಿಗೂ ಅವಿಧೇಯರಾಗುವವರಾಗಿದ್ದೇವೆ (ವಚನ 2). ಆದಕ್ಕೆ ಬದಲಾಗಿ, ನಾವು ದೇವರಿಗೆ ಅಧೀನರಾಗುವ ಪ್ರಕಾರವೇ ಎಲ್ಲಾ ಅಧಿಕಾರಿಗಳಿಗೂ ಅಧೀನರಾಗಬೇಕು. ನಾವು ಎಲ್ಲಾ ಅಧಿಕಾರಗಳಿಗೂ ವಿಧೇಯರಾಗತಕ್ಕದ್ದು – ಅವರು ಸರ್ಕಾರದ ಅಧಿಕಾರಿಗಳು, ಸೇನಾ ಅಧಿಕಾರಿಗಳು, ಆಡಳಿತ ಗಾರರು, ನಮ್ಮ ಕೆಲಸಗಾರರು, ಅಥವಾ ನಮ್ಮ ಸ್ವಂತ ತಂದೆತಾಯಿಗಳೇ ಆಗಿರಬಹುದು. ಉದಾಹರಣೆಗೆ, ಸಭಾಪಾಲಕರು ಮತ್ತು ಹಿರಿಯರು. ಹೇಗಿದ್ದರೂ, 13ನೇ ಅಧ್ಯಾಯದ ಈ ಮುಖ್ಯ ಭಾಗದಲ್ಲಿ ಪೌಲನು ಮುಖ್ಯವಾಗಿ ಸರ್ಕಾರದ ಅಧಿಕಾರಿಗಳ ಬಗ್ಗೆ ಮಾತಾಡುತ್ತಿದ್ದಾನೆ. ದೇವರು ನಮ್ಮ ನಾಯಕರಿಗೆ ಅಧಿಕಾರವನ್ನು ಮಾತ್ರವೇ ಕೊಟ್ಟಿರುವದಿಲ್ಲ, ಆದರೆ ಅವರು ತಮ್ಮ ಕೆಳಗಿನ ಜನರ ಹಿತರಕ್ಷಣೆಗಿ ದುಡಿಯಬೇಕೆಂದು ದೇವರು ಅವರನ್ನು ಅವರ ಸ್ಥಾನಗಳಿಗೆ ನೇಮಕ ಮಾಡಿರುತ್ತಾನೆ (1 ತಿಮೊಥೆ 2:1-2 ನೋಡಿರಿ).

ಇಲ್ಲಿ ಒಂದು ಪ್ರಶ್ನೆ ಉದ್ಭವವಾಗುತ್ತದೆ: ನಮ್ಮ ಮೇಲಿರುವ ಅಧಿಕಾರಿಗಳಲ್ಲೊಬ್ಬನು ದುಷ್ಟನಾಗಿದ್ದು ದೇವರು ನಿಯಮಕ್ಕೆ ಎದುರು ಬೀಳುವದಾದರೆ ನಾವು ಏನು ಮಾಡಬೇಕು? ಅಂತಹ ಪರಿಸ್ಥಿತಿಗಳಲ್ಲಿ ನಾವು ಅಧಿಕಾರಿಗೆ ವಿಧೇಯರಾಗಬೇಕೋ? ಅದಕ್ಕೆ ಉತ್ತರವು ಇಲ್ಲ ಎಂಬುದಾಗಿರುತ್ತದೆ. ಅಧಿಕಾರಿಯು ದೇವರ ಧರ್ಮಶಾಸ್ತ್ರಕ್ಕೆ ಅವಿಧೇಯನಾಗುವ ಆ ವಿಷಯದಲ್ಲಿ ನಾವು ಅಧಿಕಾರಿಗೆ ವಿಧೇಯರಾಗಬಾರದು. ದೇವರ ನಿಯಮ ಮತ್ತು ಮನುಷ್ಯನ ನಿಯಮಗಳ ನಡುವೆ ವಿರೋಧವಾಗುವಾಗ ನಾವು ಯಾವಾಗಲೂ ದೇವರ ನಿಯಮಕ್ಕೆ ವಿಧೇಯರಾಗಬೇಕು (ಅ.ಕೃತ್ಯ 4:18-20 5:29 ನೋಡಿರಿ).

ಹೇಗಿದ್ದರೂ, ಬಹುಪಾಲು ಮಾನವ ಅಧಿಕಾರಿಗಳು ಅತಿಕೆಟ್ಟವರಾಗಿರುವದಿಲ್ಲ ಮತ್ತು ಅವರ ಬಹುಪಾಲು ನಿಯಮಗಳು ದೇವರ ನಿಯಮವನ್ನು ವಿರೋಧಿಸುವದಿಲ್ಲ. ಆದುದರಿಂದ ಈ ವಚನದಲ್ಲಿ ಕೊಡಲಾಗಿರುವ ಸಾಮಾನ್ಯ

ಸೂತ್ರವನ್ನು ನಾವು ಅನುಸರಿಸಬಹುದು; ಅದೇನೆಂದರೆ ನಮ್ಮ ಮೇಲಿರುವ ಅಧಿಕಾರಿಗಳಿಗೆ ನಾವು ಅಧೀನರಾಗಿರಬೇಕು (ತೀತ 3:1; 1ಪೇತ್ರ 2:13-14 ನೋಡಿರಿ). ಒಂದು ವೇಳೆ ಸರ್ಕಾರದ ಅಧಿಕಾರಿಗಳು ಕ್ರೈಸ್ತರನ್ನು ವಿರೋಧಿಸಿ ಸುವಾರ್ತೆ ಸಾರುವದರಿಂದ ಅವರನ್ನು ತಡೆಯುವದಾದರೆ ಕ್ರೈಸ್ತರು ಏನು ಮಾಡಬೇಕು? ಅವರು ದೇವರಿಗೆ ವಿಧೇಯರಾಗಿ ತಕ್ಕ ಸಂದರ್ಭವು ದೊರೆಯುವಾಗಲೆಲ್ಲಾ ಆತನಿಗೆ ಸಾಕ್ಷಿಯಾಗಿದ್ದು ಆತನ ವಾಕ್ಯಗಳನ್ನು ಸಾರುವ ಕಾರ್ಯವನ್ನು ಮುಂದುವರೆಸಬೇಕು. ಆದರೆ, ಅದೇ ವೇಳೆಯಲ್ಲಿ ಅವರು ದೀನರಾಗಿಯೂ, ಜಾಗ್ರತರಾಗಿಯೂ.ಮತ್ತು ಜಾಣರಾಗಿಯೂ ಇರಬೇಕು. ಅವರು ಸಮಸ್ಯೆಗಾಗಿ ಎದುರು ನೋಡಬಾರದು. ಅವರು ಸಕಾರಣವಿಲ್ಲದೆ ಸರ್ಕಾರವನ್ನು ವಿರೋಧಿಸಬಾರದು. ಸಾಧ್ಯವಾದಷ್ಟು ಕ್ರೈಸ್ತರು ದೇವರ ನಿಯಮಕ್ಕೆ ವಿರೋದವಾಗಿರದ ಸರ್ಕಾರದ ಇತರ ಎಲ್ಲಾ ನಿಯಮಗಳಿಗೆ ವಿಧೇಯರಾಗಬೇಕು.

2 ನಾವು (ದೇವರ ನಡಿಸುವಿಕೆಯಿಲ್ಲದೆ) ಸರ್ಕಾರದ ಅಧಿಕಾರಿಯನ್ನು ವಿರೋಧಿಸುವದಾದರೆ ನಾವು ದೇವರನ್ನೇ ವಿರೋಧಿಸುವವರಾಗುತ್ತೇವೆ ಮತ್ತು ಅದಕ್ಕಾಗಿ ದಂಡಿಸಲ್ಪಡುತ್ತೇವೆ. ಆದರೆ ನಮ್ಮನ್ನು ದಂಡಿಸುವವನು ದೇವರೇ ಆಗಿದ್ದು ದಂಡನೆಯನ್ನು ಕಾರ್ಯರೂಪಕ್ಕೆ ಆತನು ಅದೇ ಸರ್ಕಾರದ ಅಧಿಕಾರಿಯನ್ನು ಉಪಯೋಗಿಸುತ್ತಾನೆ (ವಚನ 4).

ಒಂದು ವೇಳೆ ಸರ್ಕಾರದ ಅಧಿಕಾರಿಯು ದುಷ್ಟನಾಗಿದ್ದು ದೇವರ ನಿಯಮಕ್ಕೆ ವಿರೋದ ಮಾಡುವದಾದರೆ ನಾವು ಆತನಿಗೆ ಅವಿಧೇಯರಾಗಬೇಕು; ಆದರೆ ಆಗಲೂ ನಾವು ದಂಡಿಸಲ್ಪಡುವೆವು – ದೇವರಿಂದಲ್ಲ ಆದರೆ ಆ ಅಧಿಕಾರಿಯಿಂದಲೇ. ಮತ್ತು ನಾವು ಆದಂಡನೆಯನ್ನು ಗುಣಗುಟ್ಟದೆ ಸ್ವೀಕರಿಸಲು ಸಿದ್ಧರಾಗಿರಬೇಕು.

3-4 ಈ ಅಧ್ಯಾಯದಲ್ಲಿ ಮುಖ್ಯವಾಗಿ ಪೌಲನು ಒಳ್ಳೇ ಅಧಿಕಾರಿಗಳ ಬಗ್ಗೆ ಮಾತಾಡುತ್ತಿದ್ದಾನೆ ಹೊರತು ಕೆಟ್ಟ ಅಧಿಕಾರಿಗಳ ಬಗ್ಗೆಯಲ್ಲ. ಒಳ್ಳೇ ಅಧಿಕಾರಿಗಳು ಒಳ್ಳೇದನ್ನು ಮಾಡುವವರಿಗೆ ಮತ್ತು ನಿಯಮಗಳಿಗೆ ವಿಧೇಯರಾಗುವವರಿಗೆ ಸಮಸ್ಯೆಯನ್ನಂಟು ಮಾಡುವದಿಲ್ಲ; ಬದಲಾಗಿ, ಅವರು ಕೆಟ್ಟದ್ದನ್ನು ಮಾಡುವವರನ್ನೂ ನಿಯಮವನ್ನು ಉಲ್ಲಂಘಿಸುವವರನ್ನೂ ಮಾತ್ರವೇ ದಂಡಿಸುತ್ತಾರೆ.

ನಾವು ಒಳ್ಳೇದನ್ನೇ ಮಾಡುವವರಾಗಿದ್ದರೆ ನಮ್ಮನ್ನು ಕೆಟ್ಟವರಿಂದ ಸಂರಕ್ಷಿಸುತ್ತಾನೆ. ನಾವು ಕೆಟ್ಟದನ್ನು ನಡಿಸುವದಾದರೆ ಅಧಿಕಾರಿಯು ನಮ್ಮನ್ನು ದಂಡಿಸುವದಕ್ಕೆ ದೇವರ ಸೇವಕ ಅಥವಾ ಪ್ರತಿನಿಧಿ ಆಗುತ್ತಾನೆ. ಈ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಕತ್ತಿಯು ಅಧಿಕಾರಿಯ ಅಧಿಕಾರಕ್ಕೆ ಸಂಕೇತವಾಗಿದೆ. ಅಲ್ಲದೆ ಅದು ಅಧಿಕಾರಿಯ ಅಧಿಕಾರವನ್ನು ಕಾರ್ಯರೂಪಕ್ಕೆ ತರುವ ಸಾಧನವೂ ಆಗಿದೆ. ಅಧಿಕಾರಿಗೆ ಕತ್ತಿಯು (ಅಧಿಕಾರವು ) ದೇವರಿಂದ ಕೊಡಲ್ಪಟ್ಟದ್ದಾಗಿದ್ದು ಕೆಟ್ಟತನವನ್ನು ದಂಡಿಸಲು ಆತನು ಅದನ್ನು ಉಪಯೋಗಿಸುತ್ತಾನೆ.

ಅಧಿಕಾರಿಯು ಸುಮ್ಮನೆ ಕೈಯಲ್ಲಿ ಕತ್ತಿಯನ್ನು ಹಿಡಿದಿಲ್ಲ. ಅಂದರೆ, ಆತನು ಕಾರಣವಿಲ್ಲದೆಯೇ ತನ್ನ ಅಧಿಕಾರವನ್ನು ಉಪಯೋಗಿಸುವದಿಲ್ಲ; ಆತನು ಜನರನ್ನು ಕಾರಣವಿಲ್ಲದೆಯೇ ದಂಡಿಸುವದಿಲ್ಲ. ಬಲಾಗಿ ಅಧಿಕಾರಿಯು ಕೆಟ್ಟತನವನ್ನು ದಂಡಿಸುವದಕ್ಕೂ ತಡೆಯುವದಕ್ಕೂ "ತನ್ನ ಕತ್ತಿಯನ್ನು" ಹಿಡಿದಿರುತ್ತಾನೆ. ಪೌಲನು ಈ ವಚನಗಳಲ್ಲಿ ಮುಖ್ಯವಾಗಿ ಬಹಳಷ್ಟು ಸಂಗತಿಗಳಲ್ಲಿ ಸಕ್ರಿಯವಾಗಿ ದೇವರನ್ನು ವಿರೋದಿಸದ ಒಳ್ಳೇ ಅಧಿಕಾರಿಗಳನ್ನು ಸೂಚಿಸುತ್ತಿದ್ದಾನೆಂಬದನ್ನು ನೆನಪಿನಲ್ಲಿಟ್ಟು ಕೊಳ್ಳೋಣ. ಖಂಡಿತವಾಗಿಯೂ, ಕೆಲವರು ಕೆಟ್ಟ ಅಧಿಕಾರಿಗಳು ಸಹ ಇರುತ್ತಾರೆ. ಆದರೆ ಕೆಟ್ಟ ಅಧಿಕಾರಿಗಳ ಅಧಿಕಾರವು ಸಹ ದೇವರಿಂದಲೇ ಬರುತ್ತದೆ! [72] ಆದ್ದರಿಂದ, ಬಹು ಪಾಲು ವಿಷಯಗಳಲ್ಲಿ ಕ್ರೈಸ್ತರು ಕೆಟ್ಟ ಅಧಿಕಾರಿಗಳಿಗೆ ಸಹ ವಿಧೇಯರಾಗಬೇಕು. ಆದರೆ ಯಾವು ದಾದರೂ ಒಂದು ವಿಷಯದಲ್ಲಿ ಕೆಟ್ಟ ಅಧಿಕಾರಿಯು ದೇವರನ್ನು ವಿರೋಧಿಸುವು ದಲ್ಲದೆ ನಮಗೂ ಕೂಡ ದೇವರನ್ನು ವಿರೋಧಿಸಲು ಒತ್ತಾಯಿಸುವದಾದರೆ ಈ ವಿಷಯದಲ್ಲಿ ನಾವು ಧೈರ್ಯದಿಂದ ಅಧಿಕಾರಿಗೆ ವಿಧೇಯರಾಗಲೂ ನಿರಾಕರಿಸಬೇಕು.

5 ನಾವು ನಮ್ಮ ಅಧಿಕಾರಿಗಳಿಗೆ ಹೆದರಿದವರಾಗಿ ಮಾತ್ರ ವಿಧೇಯರಾಗದಿರೋಣ; ಮನಸ್ಸಿಗೆ ನ್ಯಾಯವಾಗಿ ತೋರುವದರಿಂದ ಸಹ – ಅಂದರೆ ದೇವರ ಮೇಲಿನ ಪ್ರೀತಿಗಾಗಿ – ವಿಧೇಯರಾಗೋಣ. ನಾವು ಹೃದಯಂತರಾಳದಿಂದ ಅವರಿಗೆ ವಿಧೇಯರಾಗೋಣ (ಎಫೆಸ 6:6-7 ಮತ್ತು ವ್ಯಾಖ್ಯಾನ ನೋಡಿರಿ).

6 ನಾವು ಸರ್ಕಾರದ ಅಧಿಕಾರಿಗಳಿಗೆ ಕಂದಾಯವನ್ನು ಸಲ್ಲಿಸಲು ಸಹ ಸಂತೋಷದಿಂದಿರೋಣ. ಅವರು ದೇವರ ಸೇವಕರು; ಆದ್ದರಿಂದ, ನಮ್ಮ ಕಂದಾಯಗಳ ಮುಖಾಂತರ ಅವರು ದೇವರ ಕಾರ್ಯವನ್ನು ಮಾಡಲು ಸಹಾಯ ಮಾಡುವವರಾಗಿದ್ದೇವೆ (ಮತ್ತಾಯ 17:24-27; ಮಾರ್ಕ 12:13-17).

7 ನಾವು ಅವರವರಿಗೆ ಸಲ್ಲತಕ್ಕದ್ದನ್ನು ಸಲ್ಲಿಸತಕ್ಕದ್ದು. ನಾವು ಸಲ್ಲಿಸಬೇಕಾದದ್ದು ಕಂದಾಯ ಆಗಿರುವದಾದರೆ ಅದನ್ನು ಸಲ್ಲಿಸೋಣ: ನಾವು ಯಾರಿಗಾದರೂ ಭಯವನ್ನು ಸಲ್ಲಿಸಬೇಕಾಗಿದ್ದರೆ ಅದನ್ನು ಅವರಿಗೆ ಸಲ್ಲಿಸೋಣ. ಅದು ಮರ್ಯಾದೆ ಆಗಿರುವದಾದರೆ ಅದನ್ನು ಸಲ್ಲಿಸೋಣ. ನಾವು ಯಾವನಿಗೂ ಋಣವನ್ನು ಹೊಂದಿರಬಾರದು (ವಚನ 8).

## ಪ್ರೀತಿಯು ಧರ್ಮಪ್ರಮಾಣದ ನೆರವೇರಿಕೆಯಾಗಿದೆ (13:8-10)

8 ಅಧಿಕಾರಿಗಳು ಮತ್ತು ನಾಯಕರ ಕಡೆಗೆ ನಮಗಿರುವ ಕರ್ತವ್ಯಗಳ ಕುರಿತಾಗಿ ಮಾತಾಡಿದ ನಂತರ ಪೌಲನು ಈಗ ಪುನಃ ನಾವು ಎಲ್ಲಾ ಮಾನವರೆಡೆಗೆ ಹೊಂದಿರುವ ಕರ್ತವ್ಯಗಳ ಕಡೆಗೆ ಗಮನ ಹರಿಸುತ್ತಾನೆ.

ಬೇರೆ ಯಾವ ಸಾಲವೂ..ಇರಬಾರದು.[73] ನಾವು ಎಂದಿಗೂ ಹಣವನ್ನಾಗಲಿ ಅಥವಾ ಬೇರೆ ಏನನ್ನಾಗಲಿ ಸಾಲವಾಗಿ ತೆಗೆದುಕೊಳ್ಳಬಾರದೆಂದು ಇದರ ಅರ್ಥವೋ? ಇಲ್ಲ, ಇದು ಅದರ ಅರ್ಥವಾಗಿರಲಾರದು; ಯಾಕೆಂದರೆ ಇತರರಿಗೆ ವಸ್ತುಗಳನ್ನು ಸಾಲವಾಗಿ ಕೊಡುವದು ಉತ್ತಮವೆಂದು ಬೈಬಲ್ ಕಲಿಸುತ್ತದೆ (ಕೀರ್ತನೆಗಳು 37:25-26; 112:5; ಮತ್ತಾಯ 5:42; ಲೂಕ 6:35). ಸಾಲಕೊಡುವದು ಉತ್ತಮ ವಾದ್ದರಿಂದ ಸಾಲ ತೆಗೆದುಕೊಳ್ಳುವದು ಸಹ ಉತ್ತಮವಾಗಿರಬೇಕಷ್ಟೆ! ಆದರೆ ಈ ವಾಕ್ಯಭಾಗದ ಅರ್ಥವೇನೆಂದರೆ; ನಾವು ನಮ್ಮ ಸಾಲವನ್ನು ಸಾಧ್ಯವಾದಷ್ಟು ಶೀಘ್ರವಾಗಿ ಹಿಂದಕ್ಕೆ ಸಲ್ಲಿಸಬೇಕು. ಸಾಲದ ಮೇಲೆ ಸಮಯದ ಮಿತಿ ಇರುವದಾದರೆ ನಾವು ಆ ಸಮಯದೊಳಗೆಯೇ ಅದನ್ನು ತೀರಿಸಬೇಕು – ಇಲ್ಲವಾದರೆ, ನಾವು ಇತರ ವ್ಯಕ್ತಿಯ ಹಣ ಅಥವಾ ಸ್ವತ್ತನ್ನು ಕದ್ದುಕೊಳ್ಳುವರಾಗುತ್ತೇವೆ. ಎಷ್ಟೋ ಸಾರಿ ನಾವು ಸಾಲವನ್ನು ಪಡೆದು ಹಿಂದಿರುಗಿಸಲು ತಡಮಾಡುತ್ತೇವೆ ಅಥವಾ ಹಿಂದಕ್ಕೆ ಕೊಡದೆಯೇ ಇರುತ್ತೇವಲ್ಲವೇ! ಇದು ಬಹಳ ತಪ್ಪಾಗಿರುತ್ತದೆ. ದುಷ್ಟನು ಸಾಲಮಾಡಿಕೊಂಡು ತೀರಿಸಲಾರದೆ ಹೋಗುತ್ತಾನೆ (ಕೀರ್ತನೆಗಳು 37:21). ಕೊರತೆಯ ಸಮಯದಲ್ಲಿ ಯರಾದರೂ ನಮಗೆ ಏನನ್ನಾದರೂ ಸಾಲವಾಗಿ ಕೊಡುವದರ ಮೂಲಕ ಪ್ರೀತಿಯನ್ನು ತೋರಿಸಿರುವದಾದರೆ ನಾವು ಸಾಲವನ್ನು ತಕ್ಕ ಸಮಯದಲ್ಲಿ – ಹಿಂದಕ್ಕೆ ಸಲ್ಲಿಸುವದರ ಮೂಲಕ ನಮ್ಮ ಕೃತ ಜ್ಞತೆಯನ್ನು ತೋರಿಸಬೇಕು. ನಾವು ಯಾರಿಗೂ ಸಾಲದಲ್ಲಿರಬಾರದು. ಅದು ಪೌಲನ ಬೋಧನೆಯಾಗಿದೆ. ನಾವು ಜನರಿಗೆ ಹಣ ಅಥವಾ ಬೇರೆ ಇನ್ನಾವದೇ ಸಾಲದಲ್ಲಿದ್ದರೂ – ಸ್ವತ್ತುಗಳು, ನಮ್ಮ ಕೆಲಸಗಾರರಿಗೆ ವೇತನಗಳು, ಇತರರಿಗೆ ಮರ್ಯಾದೆ –ನಾವು ಅದನ್ನು ಶೀಘ್ರವಾಗಿ ಸಲ್ಲಿಸಬೇಕು.

ಹೇಗಿದ್ದರೂ, ನಾವು ನಿರಂತರವಾಗಿ ಹೊಂದಿರಬಹುದಾದ (ಮತ್ತು ಹೊಂದಿರಲೇ ಬೇಕಾದ) ಒಂದು ಸಂಗತಿಯಿರುತ್ತದೆ; ಮತ್ತು ಆ ಒಂದು ಸಂಗತಿಯು ಪ್ರೀತಿಯೇ ಆಗಿದೆ. ಪ್ರೀತಿಯು ಒಂದು ವಿಧವಾದ ಸಾಲವಾಗಿದೆ. ಉದಾಹರಣೆಗೆ, ದೇವರು ನಮ್ಮನ್ನು ಪ್ರೀತಿಸುವಷ್ಟು ಮಟ್ಟಿಗೆ ನಾವು ಆತನನ್ನು ಎಂದಿಗೂ ಪ್ರೀತಿಸಲಾರೆವು ; ಆತನು ನಮಗಾಗಿ ತೋರಿದ ಪ್ರೀತಿಗಾಗಿ ನಾವು ಆತನನ್ನು ಪ್ರೀತಿಸಿ ಸಾಲವನ್ನು ತೀರಿಸಲು ಎಂದಿಗೂ ಸಾಧ್ಯವಿಲ್ಲ. ಹೀಗೆ, ನಾವು ಯಾವಾಗಲೂ ದೇವರಿಗೆ ಸಾಲಗಾರರಾಗಿ ಉಳಿಯವೆವು – ನಮಗೆ ಯಾವಾಗಲೂ ಪ್ರೀತಿಯ ಸಾಲವು ಇರುತ್ತದೆ. ನಮ್ಮ ನೆರೆಯವನ [74] ವಿಷಯದಲ್ಲಿಯೂ ಅದು ಅಷ್ಟೇ ಸತ್ಯವಾದದ್ದು. ಕ್ರಿಸ್ತನ ಮಾದರಿಯನ್ನು ಅನುಸರಿಸುವವರಾಗಿ ನಾವು ಇತರರಿಗೆ "ಸಾಲದಲ್ಲಿ" ಇರುತ್ತೇವೋ ಎಂಬಂತೆ, ನಾವು ಅವರಿಗೆ ಪ್ರೀತಿಯಲ್ಲಿ ಸಾಲಗಾರರಾಗಿರುತ್ತೇವೋ ಎಂಬಂತೆ ಅವರೆಡೆಗೆ ನಡೆದುಕೊಳ್ಳಬೇಕು. ಮತ್ತು ಇದನ್ನು ಮಾಡುವದರ ಮೂಲಕ ನಾವು ದೇವರನ್ನು ಪ್ರೀತಿಸಬೇಕು ಹಾಗು ನಮ್ಮ ನೆರೆಯವನನ್ನು ಪ್ರೀತಿಸಬೇಕು ಎಂಬ ದೇವರ ಎರಡು ಶ್ರೇಷ್ಠ ಆಜ್ಞೆಗಳಿಗೆ ವಿಧೇಯರಾಗುವವರಾಗಿದ್ದೇವೆ (ಮಾರ್ಕ 12:30-31). ಇಡೀ ನೈತೀಕ ಧರ್ಮಶಾಸ್ತ್ರವು ಈ ಎರಡು ಆಜ್ಞೆಗಳ ಮೇಲೆ ಆಧಾರವಾಗಿರುತ್ತದೆ (ಮತ್ತಾಯ 22:40; ಗಲಾತ್ಯ 5:14 ಮತ್ತು ವ್ಯಾಖ್ಯಾನ ನೋಡಿರಿ).

ಇಲ್ಲಿ ಇನ್ನೊಂದು ಪ್ರಶ್ನೆ ಉದ್ಭವಿಸುತ್ತದೆ: ನಾವು ಪ್ರೀತಿಸಬೇಕಾಗಿರುವ ಈ ನೆರೆಯವನು ಯಾರು? ಈತನು ನಮ್ಮ ಕ್ರೈಸ್ತ ಸಹೋದರನು ಮಾತ್ರವೋ? ಆತನು ನಮ್ಮ ಸಹ ಗ್ರಾಮಸ್ಥನು ಮಾತ್ರವೋ? ಇಲ್ಲ, ನೆರೆಯವನು – ನಮ್ಮ ಸಹ ಮಾನವನು – ಕೊರತೆಯಲ್ಲಿರುವ ಯಾವದೇ ವ್ಯಕ್ತಿಯಾಗಿರುತ್ತಾನೆ (ಲೂಕ 10:25-37 ನೋಡಿರಿ).

**9-10** ಪ್ರೀತಿಯು ಧರ್ಮಪ್ರಮಾಣದ ನೆರವೇರಿಕೆಯಾಗಿದೆ (ವಚನ ೧೦). ಧರ್ಮಶಾಸ್ತ್ರವು ನಮಗೆ ಹೇಗೆ ಪ್ರೀತಿಸಬೇಕೆಂಬದನ್ನು ಕಲಿಸುತ್ತದೆ. ನಾವು ಎಲ್ಲಾ ವೇಳೆ ಯಲ್ಲಿಯೂ, ಎಲ್ಲಾ ವಿಧದಲ್ಲಿಯೂ ಎಲ್ಲಾ ಮಾನವರನ್ನೂ ಪರಿಪೂರ್ಣವಾಗಿ ಪ್ರೀತಿಸಲು ಶಕ್ತರಾಗುವದಾದರೆ ನಾವು ಧರ್ಮಶಾಸ್ತ್ರದ ಅತಿಶ್ರೇಷ್ಠವಾದ ಎರಡು ಆಜ್ಞೆಗಳನ್ನು ಮಾತ್ರವಲ್ಲ, ಆದರೆ ಧರ್ಮಶಾಸ್ತ್ರದ ಉಳಿದೆಲ್ಲಾ ಆಜ್ಞೆಗಳನ್ನೂ ಸಹ ನೆರವೇರಿಸುವವರಾಗಿದ್ದೇವೆ.

ಪೌಲನು ಇಲ್ಲಿ ದಶಾಜ್ಞೆಗಳಲ್ಲಿನ ನಾಲ್ಕು ಆಜ್ಞೆಗಳನ್ನು ಪುನಃ ಪ್ರಸ್ತಾಪಿಸುತ್ತಾನೆ (ವಿಮೋಚನ ಕಾಂಡ 20:13-15, 17). ನಾವು ನಮ್ಮ ನೆರೆಯವನನ್ನು ಪ್ರೀತಿಸುವದಾದರೆ ಹೇಗೆ ನಾವು ಅವನನ್ನು ಕೊಲ್ಲಲಾದೀತು? ಅಥವಾ ನಾವು ಆತನಿಂದ ಕದ್ದುಕೊಳ್ಳಬಹುದೋ? ಹೀಗೆ, ನಾವು ಈ ಇತರ ಎಲ್ಲಾ ಆಜ್ಞೆಗಳಿಗೆ ಸಹವಿಧೇಯರಾಗುವೆವು . ನಮ್ಮ ನೆರೆಯವನನ್ನು ನಮ್ಮಂತೆಯೇ ಪ್ರೀತಿಸಬೇಕೆಂಬ ಆಜ್ಞೆಯನ್ನು ಇನ್ನೊಂದು ರೀತಿಯಲ್ಲಿ ವ್ಯಕ್ತಪಡಿಸಬಹುದು: ...ಅಂತು ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತಾರೋ ಅದನ್ನೇ ನೀವು ಅವರಿಗೆ ಮಾಡಿರಿ (ಮತ್ತಾಯ 7:12; ಲೂಕ 6:31). ಇದು "ಸ್ವರ್ಣ ನಿಯಮ"ಎಂದು ಕರೆಯಲ್ಪಟ್ಟಿದೆ.

ಪ್ರೀತಿಯು ಕೇವಲ ನಮ್ಮ ಹೃದಯಗಳಲ್ಲಿ ಮರೆಯಾಗಿರುವ ಸಂಗತಿಯೊಂದು ಮಾತ್ರವೇ ಆಗಿರುವದಿಲ್ಲ. ಪ್ರೀತಿಯು ಕಾರ್ಯರೂಪದ್ದಾಗಿದೆ; ಅದು ತನ್ನನ್ನು ವ್ಯಕ್ತಪಡಿಸಿಕೊಳ್ಳುವದಾಗಿದೆ. ಪ್ರೀತಿಯು ನೆರೆಯವನಿಗೆ ಯಾವ ಕೇಡನ್ನೂ ಮಾಡದಿರುವದು ಮಾತ್ರವಲ್ಲ; ಅದು ತನ್ನ ನೆರೆಯವನಿಗೆ ಎಲ್ಲಾ ರೀತಿಯ ಒಳ್ಳೇದನ್ನೂ ಸಹ ಮಾಡುತ್ತದೆ!

ಇಲ್ಲಿ ಮತ್ತೊಂದು ಪ್ರಶ್ನೆ ಉದ್ಭವಿಸುತ್ತದೆ. ಎರಡನೆಯ ಅತಿ ಶ್ರೇಷ್ಠ ಆಜ್ಞೆಯು ಹೇಳುವದೇನೆಂದರೆ; ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸು (ವಚನ 9). ನಾವು ನೆರೆಯವರನ್ನು ಪ್ರೀತಿಸುವಂತೆಯೇ ನಮ್ಮನ್ನು ಸಹ ಪ್ರೀತಿಸಬೇಕು ಎಂದು ಇದರ ಅರ್ಥವೋ?

ಇದು ಒಂದು ಆಳವಾದ ಪ್ರಶ್ನೆಯಾಗಿದೆ. ಯೇಸು ಹೇಳಿದ್ದೇನೆಂದರೆ; "ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಲಿ" (ಮಾರ್ಕ 8:34). ಆದರೆ ನಾವು ನಮ್ಮ ನಿರಾಕರಿಸಿದಾಗ್ಯು ಸಹ ನಮ್ಮ ಸ್ವದೇಹಗಳನ್ನು "ಪ್ರೀತಿಸುತ್ತೇವೆ" ಮತ್ತು ಮೌಲ್ಯಮಾಡುತ್ತೇವೆ; ಅದು ಸ್ವಾಭಾವಿಕವಾದದ್ದು. ಹಾಗಾದರೆ ನಮ್ಮ ನೆರೆಯವನನ್ನು ನಮ್ಮಂತೆಯೇ

ಪ್ರೀತಿಸಬೇಕೆಂಬುದರ ಅರ್ಥವೇನೆಂದರೆ ನಾವು ಸ್ವಾಭಾವಿಕವಾಗಿ ನಮ್ಮ ಸ್ವದೇಹಗಳನ್ನು ಪ್ರೀತಿಸುವಂತೆಯೇ ನಮ್ಮ ನೆರಯವನನ್ನು ಪ್ರೀತಿಸುತ್ತೇವೆ ಎಂಬದೇ. ನಾವು ನಮ್ಮ ನೆರೆಯವನಿಗಿಂತಲೂ ಹೆಚ್ಚಾಗಿ ನಮ್ಮನ್ನು ಪ್ರೀತಿಸಬಾರದು; ಹಾಗೆ ಮಾಡುವದು ಸ್ವಾರ್ಥವಾಗಿದೆ. ಬದಲಾಗಿ ನಮ್ಮ ಪ್ರೀತಿಸುವದಕ್ಕಿಂತಲೂ ಹೆಚ್ಚಾಗಿ ನಾವು ನಮ್ಮ ನೆರೆಯವನನ್ನು ಪ್ರೀತಿಸಬೇಕು ಇದನ್ನು ಮಾಡಿದಾಗ ಮಾತ್ರವೇ ನಾವು ನಮ್ಮನ್ನು ಸ್ವಾಭಾವಿಕವಾಗಿ ಪ್ರೀತಿಸಿಕೊಳ್ಳುವ ಪ್ರಕಾರವೇ ನಮ್ಮ ನೆರೆಯವನನ್ನು ಪ್ರೀತಿಸುವೆವು ಸ್ವಾಭಾವಿಕವಾಗಿ ನಾವು ಎಲ್ಲಕ್ಕಿಂತಲೂ ಹೆಚ್ಚಾಗಿ ನಮ್ಮನ್ನು ಪ್ರೀತಿಸುತ್ತೇವಾದ್ದರಿಂದ ನಮ್ಮ ನೆರೆಯವನನ್ನು ನಾವು ನಿಜವಾಗಿಯೂ "ನಮ್ಮಂತೆ" ಪ್ರೀತಿಸಬೇಕಾದರೆ ನಾವು "ಎಲ್ಲಕ್ಕಿಂತ ಹೆಚ್ಚಾಗಿ" ಆತನನ್ನು ಪ್ರೀತಿಸಬೇಕು (ಮಾರ್ಕ 12:31; ಗಲಾತ್ಯ 5:14 ಮತ್ತು ವ್ಯಾಖ್ಯಾನ ನೋಡಿರಿ).

ನಾವು ದೇವರನ್ನು ಎಷ್ಟಾಗಿ ಪ್ರೀತಿಸಬೇಕು? ನಮ್ಮನ್ನು ನಾವು ಪ್ರೀತಿಸುವಷ್ಟರ ಮಟ್ಟಿಗೋ? ಇಲ್ಲ, ಅದಕ್ಕಿಂತಲೂ ಎಷ್ಟೋ ಹೆಚ್ಚಾಗಿ ಪ್ರೀತಿಸಬೇಕು. ಅತೀಶ್ರೇಷ್ಠ ಆಜ್ಞೆಯು ಹೇಳುವದೇನೆಂದರೆ: ನಿನ್ನ ದೇವರಾದ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ, ನಿನ್ನ ಪೂರ್ಣ ಮನಸ್ಸಿನಿಂದಲೂ, ನಿನ್ನ ಪೂರ್ಣ ಬಲದಿಂದಲೂ ಪ್ರೀತಿಸಬೇಕು (ಮಾರ್ಕ 12:30). ನಾವು ಈ ಆಜ್ಞೆಯನ್ನು ನೆರವೇರಿಸುವದಾದರೆ ನಮಗೋಸ್ಕರ ಇನ್ನಾವ ಪ್ರೀತಿಯು ಉಳಿಯುವದಿಲ್ಲ! ಮತ್ತು ಅದೇ ಮುಖ್ಯವಿಷಯವಾಗಿದೆ: ನಮ್ಮ ಎಲ್ಲಾ ಪ್ರೀತಿಯು ದೇವರಿಗೆ ಮತ್ತು ನಮ್ಮ ನೆರೆಯವನಿಗೆ ಸಲ್ಲಬೇಕು; ನಾವು ನಮಗೋಸ್ಕರ ಏನನ್ನೂ ಉಳಿಸಿಕೊಳ್ಳಬಾರದು. [75]

ದಿನವು ಹತ್ತಿರವಾಗಿದೆ (13:11-14)

11 ಈ ವಚನದಲ್ಲಿ ಎಚ್ಚರವಾಗಿರತಕ್ಕ ಎಂಬ ಪದವು "ಆತ್ಮೀಕ ಎಚ್ಚರ" ವನ್ನು ಸೂಚಿಸುತ್ತದೆ. ಪೌಲನು ಇಲ್ಲಿ ಸೂಚಿಸುವ ನಮ್ಮ ವಿಮೋಚನೆಯು ಎಂಬುದು ಲೋಕದ ಅಂತ್ಯವಾಗಿದ್ದು ಆಗ ಯೇಸು ತಿರಿಗಿ ಬಂದು ಸೈತಾನನ ಕೆಲಸಗಳನ್ನು ನಾಶ ಮಾಡುವನು ಮತ್ತು ಎಲ್ಲಾ ವಿಶ್ವಾಸಿಗಳ ದೇಹಗಳು ಪುನರುತ್ಥಾನಗೊಳ್ಳುವವು. ಅದು ನಮ್ಮ ರಕ್ಷಣೆಯಲ್ಲಿನ ಅಂತಿಮ ಹಂತವಾಗಿದೆ – ನಮ್ಮ ದೇಹಕ್ಕೆ ಬರಬೇಕಾದ ವಿಮೋಚನೆ ಅಥವಾ ಪುನರುತ್ಥಾನ (ರೋಮ 8:23). ಯೇಸು ವಿನಲ್ಲಿ ನಂಬಿಕೆಯಿಡುವದು ಮೊದಲನೆಯ ಹೆಜ್ಜೆಯಾಗಿತ್ತು; ಈಗ ದಿನವು ಕಳೆದಂತೆ ನಮ್ಮ ರಕ್ಷಣೆಯ ಆ ಅಂತಿಮ ಹಂತವು ಸಮೀಪಿಸುತ್ತದೆ. ಆದರೆ, ಆ ಅಂತಿಮದಿನವು ಸರಿಯಾಗಿ ಯಾವಾಗ ಬರುವದೆಂಬುದು ದೇವರಿಗೆ ಮಾತ್ರವೇ ಹೊರತು ಮತ್ತಾರಿಗೂ ತಿಳಿಯದು (ಮಾರ್ಕ 13:32).

ಒಂದು ದಿನ ಯೇಸು ಬರುವನು ಮತ್ತು ಲೋಕವು ಅಂತಯಗೊಳ್ಳುವದೆಂಬದನ್ನು ನಾವು ಯಾವಾಗಲೂ ಮನಸ್ಸಿನಲ್ಲಿಟ್ಟು ಕೊಳ್ಳುವ ಅಗತ್ಯವಿರುತ್ತದೆ. ಯೇಸು ನಾಳೆಯೇ ಬರಬಹುದು. ಆತನು ಪಕ್ಕನೇ ಬರುವನು. ಆ ಅಂತಿಮ ದಿನವು ರಾತ್ರಿಯಲ್ಲಿ ಕಳ್ಳನು ಬರುವಂತೆ ಬರುವದು (1 ಥೆಸಲೋನಿಕ 5:1-2). ಕ್ರಿಸ್ತನು ವಿಶ್ವಾಸಿಗಳಿಗೆಲ್ಲಾ ಹೇಳುವದೇನೆಂದರೆ: "ಆ ಕಾಲವು ಯಾವಾಗ ಬರುವದೋ ನಿಮಗೆ ಗೊತ್ತಿಲ್ಲವಾದ್ದರಿಂದ ನೋಡಿಕೊಳ್ಳಿರಿ, ಜಾಗರೂಗರಾಗಿರಿ! (ಮಾರ್ಕ 13:33-37). ಬೇರೆ ಮಾತುಗಳಲ್ಲಿ ಹೇಲುವದಾದರೆ: "ಎಚ್ಚರಗೊಳ್ಳಿರಿ!" ಇದು ನಾವು ಆತ್ಮೀಕ ನಿದ್ರೆಯಿಂದ ಎಚ್ಚರವಾಗಿರತಕ್ಕ ಕಾಲವಾಗಿದೆ; ಈಗಿನಿಂದ ನಾವು ಎಚ್ಚರವಾಗಿಯೂ ಸಿದ್ಧರಾಗಿಯು ಇರಬೇಕು.

ನಾವು ಹೇಗೆ ಸಿದ್ಧರಾಗಿ ಉಳಿಯ ಬೇಕು? ಯಾವಾಗಲೂ ಕ್ರಿಸ್ತನ ಚಿತ್ತವನ್ನು ಮಾಡುವದರಿಂದಲೇ. ನಾವು ಆತನ ಚಿತ್ತಕ್ಕನುಸಾರವಾಗಿ ನಡೆಯುತ್ತಿರುವದಾದರೆ ನಾವು ಸಿದ್ಧರಾಗಿರುವೆವು. ಪರಲೋಕದಿಂದ ದೇವದೂತನೊಬ್ಬನು ಬಂದು ಇನ್ನು ಒಂದು ತಿಂಗಳಲ್ಲಿ ಕ್ರಿಸ್ತನು ಭೂಮಿಗೆ ಬರಲಿಕ್ಕಿದ್ದಾನೆ ಎಂದು ಊಹಿಸಿಕೊಳ್ಳಿರಿ. ನಾವು ಆ ಸುದ್ದಿಯನ್ನು ಕೇಳುವದಾದರೆ ಅದು ನಮ್ಮ ಜೀವಿತ ಶೈಲಿಯ ಮೇಲೆ ವ್ಯತ್ಯಾಸವನ್ನುಂಟು ಮಾಡುವದೋ? ನಾವು ಆ ಸುದ್ದಿಯನ್ನು ಕೇಳುವದಕ್ಕೆ ಮುಂಚೆ ಇದ್ದದಕ್ಕಿಂತಲೂ ಈ ಕೊನೆಯ ತಿಂಗಳಲ್ಲಿ ನಮ್ಮ ಆತ್ಮೀಕ ಜೀವಿತಗಳು ವ್ಯತ್ಯಾಸವಾಗಿರುವವೋ? ನಮ್ಮಲ್ಲಿ ಬಹುಮಂದಿಯ ಉತ್ತರವು ಹೌದು ಎಂದಾಗಿರುತ್ತದೆ. ಆದರೆ, ವಾಸ್ತವದಲ್ಲಿ ಅಂತಹ ಸುದ್ದಿಯನ್ನು ಕೇಳುವದು ನಮ್ಮ ಜೀವಿತಗಳಲ್ಲಿ ಅಷ್ಟೊಂದು ವ್ಯತ್ಯಾಸವನ್ನುಂಟು ಮಾಡಬಾರದು. [76] ನಾವು ಈಗಲೇ, ಈ ಕ್ಷಣದಲ್ಲೂ ಕ್ರಿಸ್ತನು ನಾಳೆಯೇ ಬರಲಿದ್ದಾನೋ ಎಂಬಂತೆ ಜೀವಿಸಬೇಕು.

ಒಂದು ವೇಳೆ ಯೇಸು ನಾಳೆ ಬರುವದಾದರೆ ಆತನು ಬಂದಾಗ ನಾವು ಏನು ಮಾಡುವದನ್ನು ಕಾಣುತ್ತಾನೆ? ಆತನು ಏಕಾಏಕಿಬಂದು ನೀವು ನಿದ್ದೆ ಮಾಡುವದನ್ನು ಕಂಡಾನು (ಮಾರ್ಕ 13:36).

12 ಕತ್ತಲೆ ಮತ್ತು ಪಾಪದ ಇರುಳು (ಸಂಜೆಯು) – ಸೈತಾನನ ಆಳ್ವಿಕೆ – ಬಹಳ ಮಟ್ಟಿಗೆ ಮುಕ್ತಾಯಗೊಂಡಿದೆ; ಹಗಲು ಸಮೀಪವಾಯ.ಯಿತು, ಆಗ ಕ್ರಿಸ್ತನು ತಿರಿಗಿ ಬಂದು ಸೈತಾನನನ್ನು ಶಾಶ್ವತವಾಗಿ ಸೋಲಿಸುವನು. ಆದುದರಿಂದ, ನಾವು ತಕ್ಷಣ ಮೇಲೆದ್ದು ಕತ್ತಲೆಗೆ ಅನುಗುಣವಾದ ಕೃತ್ಯಗಳನ್ನು ಬಿಟ್ಟು – ಅಂದರೆ, ನಮ್ಮ ರಾತ್ರಿಯ ಉಡುಪನ್ನು ತೆಗೆದು ಬಿಟ್ಟು – ಬೆಳಕಿಗೆ ಅನುಗುಣವಾದ ಆಯುಧಗಳನ್ನು – ಅಂದರೆ, ನಮ್ಮ ಹಗಲು ಉಡುಪುಗಳನ್ನು – ಧರಿಸಿಕೊಳ್ಳೋಣ (ಎಫೆಸ 4:22-24; 5:8-11; 6:11, 13-17; 1 ಥೆಸಲೋನಿಕ 5:4-8; ಯಾಕೋಬ 5:8-9; 1 ಪೇತ್ರ 4:7-8 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಕ್ರಿಸ್ತನು ಬಂದಾಗ ನಾವು ಯಾವ ಉಡುಪುಗಳನ್ನು ಧರಿಸಿರುವದನ್ನು ಆತನು ಕಾಣುವನು? ನಮ್ಮ ರಾತ್ರಿ ಉಡುಪುಗಳೋ ಅಥವಾ ಹಗಲು ಉಡುಪುಗಳೋ?

13 ಈ ವಚವದಲ್ಲಿ ಪೌಲನು ಕತ್ತಲೆಗೆ ಅನುಗುಣವಾದ ಕೃತ್ಯಗಳಲ್ಲಿ ಕೆಲವನ್ನು ಪ್ರಸ್ತಾಪಿಸುತ್ತಾನೆ. ಇನ್ನೂ ಪೂರ್ಣವಾದ ಪಟ್ಟಿಗಳನ್ನು ರೋಮ 1:29-31 ಮತ್ತು ಗಲಾತ್ಯ 5:19-21 ರಲ್ಲಿ ಕಾಣಬಹುದು.

14 ಕರ್ತನಾದ ಯೇಸು ಕ್ರಿಸ್ತನನ್ನು ಧರಿಸಿಕೊಳ್ಳಿರಿ (ಗಲಾತ್ಯ 3:26-27 ಮತ್ತು ವ್ಯಾಖ್ಯಾನ ನೋಡಿರಿ). ಯೇಸು ನಮ್ಮ ಹಗಲಿನ ಉಡುಪಾಗಿದ್ದಾನೆ. ಯೇಸು ನಮ್ಮ ಬೆಳಕಿನ ಆಯುಧವಾಗಿದ್ದಾನೆ (ವಚನ 12). ಯೇಸು ಮಾತ್ರವೇ ನಮಗೆ ಬೇಕಾದವನಾಗಿದ್ದಾನೆ.

ನಾವು ಯೇಸುವನ್ನು ಧರಿಸಿಕೊಳ್ಳವದಕ್ಕೆ ಮುಂಚೆ ನಮ್ಮ ರಾತ್ರಿಉಡುಪು ಗಳನ್ನು, ನಮ್ಮ ಪೂರ್ವಪಾಪಸ್ವಭಾವವನ್ನು ತೆಗೆದು ಬಿಡತಕ್ಕದ್ದು (ಎಫೆಸ 4:22). ನಮ್ಮನ್ನು ಕ್ರಿಸ್ತನಿಂದ ಧರಿಸಿಕೊಳ್ಳವದೆಂದರೆ ಪವಿತ್ರಾತ್ಮನಿಂದ ಜೀವಿಸುವದೇ ಆಗಿದೆ. ಅತ್ಮನನ್ನು ಅನುಸರಿಸಿ ಜೀವಿಸುವದಾದರೆ ನಾವು ಶರೀರಾಧೀನ ಸ್ವಭಾವದ ಅಭಿಲಾಷೆಗಳನ್ನು ನೆರವೇರಿಸುವದಿಲ್ಲ (ಗಲಾತ್ಯ 5:16) ಸಾಮಾನ್ಯವಾದ ಶಾರೀರಿಕ ಅಗತ್ಯತೆಗಳನ್ನು – ಆಹಾರ ಬಟ್ಟೆ, ಆಶ್ರಯ, ಅನ್ಯೋನ್ಯತೆ – ನಾವು ಒದಗಿಸಿಕೊಳ್ಳಬೇಕು. ಆದರೆ ಶರೀರಾಧೀನ ಸ್ವಭಾವದ ಅಭಿಲಾಷೆಗಳನ್ನು ನಾವು ಎಷ್ಟು ಮಾತ್ರಕ್ಕೂ ನೆರವೇರಿಸಬಾರದು.

---

# ಅಧ್ಯಾಯ - 14

## ನಿನ್ನ ಸಹೋದರನಿಗೆ ತೀರ್ಪು ಮಾಡಬೇಡ (14:1-12)

1 ಪ್ರತಿಯೊಂದು ರಾಷ್ಟ್ರದಲ್ಲಿನ ಪ್ರತಿಯೊಂದು ಸಭೆಯಲ್ಲಿಯೂ ನಂಬಿಕೆಯಲ್ಲಿ ದೃಢವಿಲ್ಲದವರು ಇದ್ದಾರೆ, ಅವರು ಪ್ರಾಮುಖ್ಯ ಮತ್ತು ಪ್ರಾಮುಖ್ಯವಲ್ಲದ ನಂಬಿಕೆಗಳಲ್ಲಿನ ವ್ಯತ್ಯಾಸವನ್ನು ಗುರುತಿಸಲು ಕಷ್ಟಪಡುತ್ತಾರೆ. ನಂಬಿಕೆಯಲ್ಲಿ ಬಲಹೀನರಾಗಿರುವವರು ಪ್ರಾಮುಖ್ಯ ವಲ್ಲದ ನಂಬಿಕೆಗಳ ಮತ್ತು ನಿಯಮಗಳ ಬಲವಾದ ಪ್ರಭಾವಕ್ಕೊಳಗಾಗಿ ಅವು ಗಳಿಗನುಸಾರವಾಗಿ ಜೀವಿಸುತ್ತಾರೆ. ಅವರು ಈ ನಂಬಿಕೆಗಳನ್ನು ಅನುಸರಿಸಲು ವಿಫಲರಾಗುವದಾದರೆ ಅಂತಹ ಜನರು ತಾವು ನಿಜವಾಗಿಯೂ ರಕ್ಷಣೆ ಹೊಂದಿದ್ದೇವೋ ಎಂದು ಸಂಶಯ ಪಟ್ಟು ಕೊಳ್ಳಲು ಪ್ರಾರಂಭಿಸುತ್ತಾರೆ; ಅವರ ನಂಬಿಕೆಯು ನಿಜವಾಗಿಯೂ ಬಲಹಿನವೇ ಸರಿ.

ನಾವು ಅಂತಹ ಸಹೋದರ ಮತ್ತು ಸಹೋದರಿಯರನ್ನು ಅವರ ಅನಾವಶ್ಯಕ ನಂಬಿಕೆಗಳಿಗಾಗಿ ಟೀಕಿಸದೆಯೂ ತೀರ್ಪೂ ಮಾಡದೆಯೂ ಸೇರಿಸಿಕೊಳ್ಳುವವರಾಗಿರಬೇಕೆಂದು ಪೌಲನು ಹೇಳುತ್ತಾನೆ. ಈ ನಂಬಿಕೆಗಳು ಸಂದೇಹಾಸ್ಪದವಾದ ಕಾರ್ಯಗಳ ವಿಷಯವಾಗಿರುತ್ತದೆ. ಅವು ಗಳನ್ನು ನಂಬುವದರಲ್ಲಿ ಪಾಪವಿಲ್ಲ, ಮತ್ತು ಅವು ಗಳನ್ನು ನಂಬದಿರುವದು ಸದ್ಗುಣವೇನಲ್ಲ; ಈ ಯಾವ ವಿಧದಲ್ಲಿಯೂ ಈ ಸಂಗತಿಗಳೂ ನಮಗೆ ಕ್ರಿಸ್ತನಲ್ಲಿ ದೊರೆತ ರಕ್ಷಣೆ ಅಥವಾ ಅನ್ಯೋನ್ಯತೆಗೆ ಪ್ರಾಮುಖ್ಯವಾಗಿರುವದಿಲ್ಲ. ಈ ಸಂಗತಿಗಳು ಚರ್ಚೆಮಾಡವದಕ್ಕೂ ಯೋಗ್ಯವಲ್ಲ.[77] ಎಲ್ಲಕ್ಕಿಂತಲೂ ಮೇಲಾಗಿ ನಾವು ನಮ್ಮ ದೃಢವಿಲ್ಲದ ನಂಬಿಕೆಯುಳ್ಳ ಸಹೋದರ ಮತ್ತು ಸಹೋದರಿಯರನ್ನು ನಾವು ಕೀಳಾಗಿ ಕಾಣಬಾರದು. ಅವರು ಈ ಚರ್ಚಾಸ್ಪದ ಕಾರ್ಯಗಳಲ್ಲಿ ಇಟ್ಟಿರುವ ನಂಬಿಕೆಗಳಿಗಾಗಿ ನಾವು ಅವರಿಗೆ ತೀರ್ಪು ಮಾಡಬಾರದು (ಮತ್ತಾಯ 7:1) ಬದಲಾಗಿ, ನಾವು ಅವರನ್ನು ಇದ್ದ ಸ್ಥಿತಿಯಲ್ಲಿಯೇ ಪ್ರೀತಿಯಿಂದ ಸೇರಿಸಿಕೊಳ್ಳಬೇಕು.

ಈ ಭಾಗದಲ್ಲಿ, ಪೌಲನು ನಂಬಿಕೆಯಲ್ಲಿ ದೃಢವಿಲ್ಲದ ಕೆಲವು ರೋಮಾಪು ರದ ಕ್ರೈಸ್ತರಿಂದ ಅನುಸರಿಸಲ್ಪಡುತ್ತಿದ್ದ ಪಾಮುಖ್ಯವಲ್ಲದ ನಂಬಿಕೆಗಳು ಅಥವಾ ನಿಯಮಗಳಲ್ಲಿ ಎರಡನ್ನು ಪ್ರಸ್ತಾಪಿಸುತ್ತಾನೆ. ಮೊದಲನೆಯ ನಿಯಮವು ಯಾವು ದಾಗಿತ್ತೆಂದರೆ; ನಾವು ಮಾಂಸವನ್ನು ತಿನ್ನಬಾರದು. ಎರಡನೆಯ ನಿಯಮವು ಏನೆಂದರೆಃ ನಾವು ಕೆಲವೊಂದು ದಿನಗಳನ್ನು ಬೇರೆ ದಿನಗಳಿಗಿಂತ "ಉತ್ತಮ"ಅಥವಾ ಹೆಚ್ಚು ವಿಶೇಷ ಎಂದು ಎಣಿಸಬೇಕು (ವಚನ 5). ಪೌಲನು ಈ ಎರಡು ನಿಯಮಗಳನ್ನು ಉದಾಹರಣೆಯಾಗಿ ಪ್ರಸ್ತಾಪಿಸುತ್ತಾನೆ. ನಾವು ಈ ಭಾಗವನ್ನು ಅಭ್ಯಾಸಿಸುತ್ತಿರುವಹಾಗೆ ನಮ್ಮನ್ನು ಕೇಳಿಕೊಳ್ಳ ಬೇಕಾದದ್ದೇನೆಂದರೆ: ನಮ್ಮ ಸಭೆಯಲ್ಲಿ ಕಂಡು ಬರಬಹುದಾದ ಇಂತಹ "ನಿಯಮಗಳ" ಬೇರೆ ಉದಾಹರಣೆಗಳಿರುತ್ತವೋ? ಯಾಕೆಂದರೆ ಇಲ್ಲಿ ಪೌಲನ ಬೋಧನೆಯು ರೋಮಾಪು ರದ ಸಭೆಯಲ್ಲಿದ್ದ ಈ ಎರಡು ನಿರ್ಧಿಷ್ಟವಾದ ನಂಬಿಕೆಗಳಿಗೆ ಮಾತ್ರವೇ ಅನ್ವಯಿಸುವದಿಲ್ಲ; ಅದು ನಮ್ಮ ಸಭೆಯಲ್ಲಿರುವ ಅಂತಹ ಯಾವದೇ ನಂಬಿಕೆಗಳಿಗೂ ಅನ್ವಯಿಸುತ್ತದೆ.

2 ರೋಮಾಪು ರದ ಸಭೆಯಲ್ಲಿದ್ದ ದೃಢವಾದ ನಂಬಿಕೆಯುಳ್ಳ ಕ್ರೈಸ್ತರು ತಮ್ಮ ನಂಬಿಕೆಯ ಮೂಲಕ ಮಾತ್ರವೇ ದೇವರನ್ನು ಮೆಚ್ಚಿಸಲು ಸಾಧ್ಯ; ದೇವರನ್ನು ಮೆಚ್ಚಿಸಲು ಯೆಹೂದ್ಯ ಧರ್ಮದ ಎಲ್ಲಾ ನೇಮ ನಿಷ್ಟೆಗಳನ್ನು ಅನುಸರಿಸುವ ಅಗತ್ಯವಿಲ್ಲ ಎಂಬದನ್ನು ಬಲ್ಲವರಾಗಿದ್ದರು.

ಆದರೆ ನಂಬಿಕೆಯಲ್ಲಿ ದೃಢವಿಲ್ಲದವರು (ಮುಖ್ಯವಾಗಿ ಮುಂಚೆ ಯೆಹೂದ್ಯರಾಗಿದ್ದವರು) ಈಗಲೂ ಸಹ ಯೆಹೂದ್ಯ ಧರ್ಮದ ಎಲ್ಲಾ ನೇಮ ನಿಷ್ಠೆಗಳನ್ನು ಪಾಲಿಸುವ ಅಗತ್ಯ ಎಂದು ಯೋಚಿಸಿದರು. ಹೀಗೆ ರೋಮಾಪು ರದ ಸಭೆಯಲ್ಲಿ ಎರಡು ಅಭಿಪರ್ ಣಾಯಗಳು ಉದ್ಭವಿಸಿದವುಃ ನಂಪಿಕೆಯಲ್ಲಿ ದೃಡವಿಲ್ಲದವರು ಮಾಂಸವನ್ನು ತಿನ್ನುವದು ತಪ್ಪು ಎಂದರು. ದೃಡವಾದ ನಂಬಿಕೆಯುಳ್ಳವರು ಮಾಂಸವನ್ನು ತಿನ್ನುವದರಲ್ಲಿ ತಪ್ಪೇನಿಲ್ಲ ಎಂದು ಹೇಳಿದರು.

3 ಸಭೆಯಲ್ಲಿ ಅಂತಹ ಎರಡು ವಾಗ್ವಾದವನ್ನುಂಟು ಮಾಡುವ ಅಭಿಪ್ರಾಯಗಳು ಇರುವಾಗ ಸಹಜವಾಗಿ ಜರುಗುವದೇನು? ಒಂದು ವಾಗ್ವಾದವು ಬೆಳೆದು ಕ್ರಮೇಣ ಸಭೆಯಲ್ಲಿ ಬಿರುಕುವುಂಟಾಗುತ್ತದೆ. "ಇದು ಸಂಭವಿಸದಿರಲಿ!" ಎಂದು ಪೌಲನು ಬೇಡಿಕೊಳ್ಳುತ್ತಾನೆ. ದೃಢವಿಲ್ಲದ ನಂಬಿಕೆಯುಳ್ಳ ಸಹೋದರನು ನಂಬಿಕೆಯಲ್ಲಿ ದೃಢವಿಲ್ಲದ ಸಹೋದರನನ್ನು ಹೀನೈಸಬಾರದು. ಮತ್ತು ಅದೇ ವೇಳೆಯಲ್ಲಿ ನಂಬಿಕೆಯಲ್ಲಿ ದೃಢವಿಲ್ಲದ ಸಹೋದರನು ಕೆಲವೊಂದು ಪ್ರಾಮುಖ್ಯವಲ್ಲದ ನಿಯಮಗಳನ್ನು ಉಲ್ಲಂಘಿಸಿದ ದೃಢವಾದ ನಂಬಿಕೆಯುಳ್ಳ ಸಹೋದರನನ್ನು ದೂಷಿಯೆಂದು ತೀರ್ಪುಮಾಡಬಾರದು. ದೃಢವಾದ ಸಹೋದರನಿಗೆ ತೀರ್ಪು ಮಾಡಲ್ಪಡಲಾಗದು, ಯಾಕೆಂದರೆ ಆತನು ನಂಬಿಕೆಯಿಂದ ನೀತಿವಂತನೆಂದು ನಿರ್ಣಯಿಸಲ್ಪಟ್ಟು ದೇವರಿಂದ ಸೇರಿಸಿಕೊಳ್ಳಲ್ಪಟ್ಟಿರುತ್ತಾನೆ. ನಮ್ಮ ಸಭೆಗಳಲ್ಲಿ ನಂಬಿಕೆಯಲ್ಲಿ ದೃಢವಿಲ್ಲದವರು ದೃಢವಾದ ನಂಬಿಕೆಯುಳ್ಳವರನ್ನು ಖಂಡಿಸಿ ಟೀಕಿಸುವದನ್ನು ನೋಡುವದು ಎಷ್ಟು ಸಾಮಾನ್ಯವಾಗಿರುತ್ತದಲ್ಲವೇ! ಇದು ಯೇಸುವಿಗೆ ಎಷ್ಟು ನೋವು ದಾಯಕವಲ್ಲವೇ!

4 ಈ ವಚನದಲ್ಲಿ ಪೌಲನು ನಂಬಿಕೆಯಲ್ಲಿ ದೃಢವಿಲ್ಲದ ಸಹೋದರನೊಂದಿಗೆ ಮಾತಾಡುತ್ತಾ ದೃಢವಾದ ಸಹೋದರನನ್ನು ದೂಷಿಯೆಂದು ತೀರ್ಪು ಮಾಡಬೇಡ ಎಂದು ಹೇಳುತ್ತಾನೆ.

ನಾವು ಎಂದಿಗೂ ಇನ್ನೊಬ್ಬ ಕ್ರೈಸ್ತನಿಗೆ ತೀರ್ಪುಮಾಡಬಾರದು. ಆತನು ನಮ್ಮ ಸೇವಕನಲ್ಲ, ಆದರೆ ಕ್ರಿಸ್ತನ ಸೇವಕನಾಗಿದ್ದಾನೆ; ಮತ್ತು ತನ್ನ ವಿಷಯವಾಗಿ ಲೆಕ್ಕವನ್ನು ನಮಗಲ್ಲ ಆದರೆ ಕ್ರಿಸ್ತನಿಗೆ ಒಪ್ಪಿಸುವನು. ನಮ್ಮ ಕೆಲಸವು ಕ್ರಿಸ್ತನು ಆ ಕ್ರೈಸ್ತನನ್ನು ಪ್ರೀತಿಸಿ ಸೇರಿಸಿಕೊಳ್ಳುವಂತೆಯೇ ನಾವು ಅತನನ್ನು ಪ್ರೀತಿಸಿ ಸೇರಿಸಿಕೊಳ್ಳುವು ದಾಗಿದೆ. ಕ್ರಿಸ್ತನು ಸೇರಿಸಿಕೊಳ್ಳುವವನನ್ನು ನಾವು ತಿರಸ್ಕರಿಸದಿರೋಣ; ಕ್ರಿಸ್ತನು ಮೌಲ್ಯ ಮಾಡುವ ವ್ಯಕ್ತಿಯನ್ನು ನಾವು ಟೀಕಿಸದಿರೋಣ.

ನಾವು ಎಷ್ಟು ಶೀಘ್ರವಾಗಿ ಪರಸ್ಪರ ತೀರ್ಪು ಮಾಡಿಕೊಳ್ಳುತ್ತೇವಲ್ಲವೇ? ಆದರೆ ನಾವು ಹಾಗೆ ಮಾಡದಿರೋಣ. ನಾವು ತೀರ್ಪುಮಾಡುವದೆಲ್ಲವನ್ನು ಕ್ರಿಸ್ತನಿಗೆ ಬಿಡಬೇಕು. ಆತನೇ ನಮ್ಮೆಲ್ಲರ ಯಜಮಾನನಾಗಿದ್ದಾನೆ, ಮತ್ತು ಆತನು ನಮ್ಮೊಬ್ಬೊಬ್ಬರಿಗೂ ತೀರ್ಪು ಮಾಡುತ್ತಾನೆ. ನಾವೆಲ್ಲರೂ ಒಂದು ದಿನ ಕ್ರಿಸ್ತನಿಗೆ ನಮ್ಮ ವಿಷಯವಾಗಿ ಲೆಕ್ಕ ಒಪ್ಪಿಸಬೇಕಾದ್ದರಿಂದ ನಾವು ಇನ್ನೊಬ್ಬರ ತಪ್ಪುಗಳಿಗೆ ಬದಲಾಗಿ ನಮ್ಮ ಸ್ವಂತ ದೋಷಗಳ ಮೇಲೆ ಗಮನ ಹರಿಸಿಕೊಳ್ಳುವದು ಉತ್ತಮವಾದದ್ದು.

5 ಸಬ್ಬತ್ ದಿನದ [78] ಜೊತೆಯಲ್ಲಿ ಯೆಹೂದ್ಯರು ವರ್ಷವೆಲ್ಲಾ ಇತರ ಅನೇಕ ವಿಶೇಷ ದಿನಗಳನ್ನು ಪಾಲಿಸುತ್ತಿದ್ದರು. ಅವರು ಈ ದಿನಗಳನ್ನು ಇತರದಿನಗಳಿಗಿಂತಲೂ ಹೆಚ್ಚು ಪರಿಶುದ್ಧ ಎಂದು ಪರಿಗಣಿಸುತ್ತಿದ್ದರು. ಅಂತಹ ದಿನಗಳಂದು ಅವರು ಉಪವಾಸವಿದ್ದು ಇತರ ಯೆಹೂದ್ಯ ಧಾರ್ಮಿಕ ಸಂಪ್ರದಾಯಗಳನ್ನು ಪಾಲಿಸುತ್ತಿದ್ದರು. ಕ್ರೈಸ್ತರಾಗಿ ಮಾರ್ಪಟ್ಟ ಕೆಲವು ಮಂದಿ ಯೆಹೂದ್ಯರು ಈ ವಿಶೇಷ ದಿನಗಳ ಪಾಲಿಸುವದನ್ನು ಮುಂದು ವರೆಸಿದರು; ತಾವು ದೇವರನ್ನು ಮೆಚ್ಚಿಸಲು ಹೀಗೆ ಮಾಡಲೇಬೇಕೆಂದು ಅವರು ನೆನಸಿದರು. ಕ್ರೈಸ್ತರು ಅಂತಹ ದಿನಗಳನ್ನು ಪಾಲಿಸಬೇಕಾಗಿಲ್ಲ ಎಂಬದನ್ನು ಅವರು ಗ್ರಹಿಸಲಿಲ್ಲ. ಅವರ ನಂಬಿಕೆಯು ಬಲಹೀನವಾಗಿತ್ತು; ಬಹುಶಃ ಅವರು ತಮ್ಮ ಬಲಹೀನ ನಂಬಿಕೆಯಿಂದ ಮಾತ್ರವೇ ದೇವರು ಮೆಚ್ಚುವನೆಂಬದು ಅವರಿಗೆ ಅನ್ನಿಸಲಿಲ್ಲ. ದೇವರನ್ನು ಸಂತೋಷಗೊಳಿಸಲು ಅವರು ತಾವು ಇನ್ನೇನನ್ನಾದರೂ – ಯಾವದಾದರೂ ಕರ್ಮ ಅಥವಾ ಆಚಾರವನ್ನು – ಸೇರಿಸಬೇಕೆಂದು ಯೋಚಿಸಿಕೊಂಡರು.

ನಂಬಿಕೆಯಲ್ಲಿ ದೃಢವುಳ್ಳ ಕ್ರೈಸ್ತರು ಪ್ರತಿಯೊಂದು ದಿನವು ಒಂದೇ ಎಂದು ಪರಿಗಣಿಸುತ್ತಿದ್ದರು. ಪ್ರತಿದಿನವು ಅವರು ತಮ್ಮ ಜೀವಿತಗಳನ್ನು ಕ್ರಿಸ್ತನ ಸೇವೆಗೆ ಅರ್ಪಿಸಬೇಕು. ಪ್ರತಿದಿನವೂ ಸಂಪೂರ್ಣವಾಗಿ ಕ್ರಿಸ್ತನಿಗೋಸ್ಕರ ಕಳೆಯಲ್ಪಡಬೇಕು – ಒಂದು ದಿನ ಹೆಚ್ಚಾಗಿ ಆಗಲಿ ಅಥವಾ ಮತ್ತೊಂದು ದಿನ ಕಡಿಮೆಯಾಗಲಿ ಅಲ್ಲ. ಆದುದರಿಂದ, ಅವರು ಹೇಳುವದೇನೆಂದರೆ ಒಂದು ದಿನವು ಇತರ ದಿನಕ್ಕಿಂತ ಹೆಚ್ಚು ಪ್ರಾಮುಖ್ಯ ಅಥವಾ ವಿಶೇಷ ಆಗಿರುವದಕ್ಕೆ ಸಾಧ್ಯ? ಅದು ಸಾಧ್ಯವಿಲ್ಲ ನಾವು ಮುಂದಿನ ದಿನ ಕ್ಕಿಂತಲೂ ಈ ದಿನದಲ್ಲಿ ಹೆಚ್ಚು ಪವಿತ್ರರಾಗಿ ಇರಬೇಕೋ? ಇಲ್ಲ. ನಾವು ಪ್ರತಿದಿನವೂ ಸಮಾನವಾಗಿ ಪವಿತ್ರರಾಗಿರಬೇಕು.

ನಿಜ, ದೇವರು ನಮಗೆ ವಾರದಲ್ಲಿ ಒಂದು ದಿನ ವಿಶ್ರಾಂತಿ ತೆಗೆದುಕೊಳ್ಳಲು ಹೇಳುತ್ತಾನೆ (ವಿಮೋಚನಕಾಂಡ 20:8). ಆದಿನದಲ್ಲಿ ಆತನನ್ನು ಆರಾಧಿಸುವದಕ್ಕೂ ಸಭೆಗೆ ಹೋಗುವದಕ್ಕೂ ನಮಗೆ ಹೆಚ್ಚು ಸಮಯವಿರುತ್ತದೆ. ಆದರೆ ಆ ದಿನದಂದು ಹೆಚ್ಚು ಪರಿಶುದ್ಧರಾಗಿರುತ್ತೇವೆಂದು ಅದರ ಅರ್ಥವಲ್ಲ.

ಅಷ್ಟು ಮಾತ್ರವಲ್ಲದೆ, ವಾರದ ಯಾವ ದಿನವನ್ನು ವಿಶ್ರಾಂತಿಗಾಗಿ ಅಥವಾ ಸಬ್ಬತ್ ದಿನಕ್ಕಾಗಿ ಪ್ರತ್ಯೇಕಿಸಬೇಕೆಂಬದನ್ನು ಬೈಬಲ್ ಹೇಳುವದಿಲ್ಲ. ನಾವು ಆರುದಿನ ಕೆಲಸಮಾಡಿ ಏಳನೆಯ ದಿನದಲ್ಲಿ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಮಾತ್ರವೇ ಬೈಬಲ್ ತಿಳಿಸುತ್ತದೆ. ಯೆಹೂದ್ಯರು ತಮ್ಮ ಇತಿಹಾಸದ ಪ್ರಾರಂಬದಲ್ಲಿ ಶನಿವಾರವನ್ನು ಸಬ್ಬತ್ ದಿನವಾಗಿ ಆಯ್ಕೆಮಾಡಿಕೊಂಡರು.

ಕೆಲವು ಕ್ರೈಸ್ತರು ಯೇಸು ಹುಟ್ಟಿದ ದಿನ (ಕ್ರಿಸ್‌ಮಸ್) ಮತ್ತು ಆತನು ಸತ್ತವರೊಳಗಿಂದ ಎದ್ದು ಬಂದ ದಿನಗಳನ್ನು (ಈಸ್ಟರ್) ವಿಶೇಷವಾಗಿ ಪರಿಶುದ್ಧವೆಂದು ನಂಬಿತ್ತಾರೆ. ಆದರೆ ಇತರ ಕ್ರೈಸ್ತರು ವರ್ಷದ ಪ್ರತಿದಿನವೂ ನಾವು ನಮ್ಮ ಹೃದಯದಲ್ಲಿ ಕ್ರಿಸ್ತನ ಜನನ ಮತ್ತು ಪುನರುತ್ಥಾನಗಳನ್ನು ಆಚರಿಸಿಕೊಳ್ಳಬೇಕು ಎಂದು ಹೇಳುತ್ತಾರೆ. ಈ ವಿಶೇಷ ದಿನಗಳಲ್ಲಿ ಕ್ರಿಸ್ತನನ್ನು ಆರಾಧಿಸಲು, ಸಾಕ್ಷಿನೀಡುವದಕ್ಕೂ, ಸ್ತುತಿಸುವದಕ್ಕೂ ಹೆಚ್ಚಿನ ಸಮಯವನ್ನು ನೀಡುವದಕ್ಕೆ ವಿಶೇಷ ಆರಾಧನೆಗಳನ್ನು ಇಟ್ಟುಕೊಳ್ಳುವದು ತಕ್ಕದದ್ದಾಗಿರುತ್ತದೆ. ಅದರಲ್ಲಿ ತಪ್ಪೇನಿಲ್ಲ. ಆದರೆ ನಾವು ಇದನ್ನು ಕೆಲವು ಧಾರ್ಮಿಕ ನಿಯಮ ಅಥವಾ

ಆದಿನವು ಪವಿತ್ರವಾದದ್ದು ಎಂಬ ಕಾರಣದಿಂದ ಮಾಡುವದಿಲ್ಲ. ಬದಲಾಗಿ, ನಾವು ನಮ್ಮ ಸ್ವಯಿಚ್ಛೆಯಿಂದ ಈ ದಿನಗಳನ್ನು ಕ್ರಿಸ್ತನಿಗೆ ಸ್ತುತಿ ಆರಾಧನೆಯನ್ನು ಸಲ್ಲಿಸುವದಕ್ಕು, ಆತನಿಗೆ ಸಾಕ್ಷಿಯನ್ನು ನೀಡುವದಕ್ಕೆ ವಿಶೇಷ ಸಂದರ್ಭಗಳಂತೆ ಪ್ರತ್ಯೇಕಿಸಿಡುತ್ತೇವೆ. ಕ್ರೈಸ್ತರು ದಿನಗಳನ್ನು ಕೊಂಡಾಡುವದಿಲ್ಲ; ಅವರು ಕ್ರಿಸ್ತನನ್ನು ಕೊಂಡಾಡುತ್ತಾರೆ.

ನಾವು ದೇವರ ಮಹಿಮೆಗಾಗಿ ಮಾಡುವ ಪಕ್ಷದಲ್ಲಿ ವಿಶೇಷ ದಿನಗಳನ್ನು ಪಾಲಿಸುವದರಲ್ಲಿ ಯಾವ ತಪ್ಪಿರುವದಿಲ್ಲ. ನಾವು ಪ್ರತಿದಿನವನ್ನೂ ದೇವರ ಮಹಿಮೆಗಾಗಿ ಪಾಲಿಸುವ ಪಕ್ಷದಲ್ಲಿ ಪ್ರತಿದಿನವನ್ನೂ ಸಮಾನವಾಗಿ ಪಾಲಿಸುವದರಲ್ಲಿ ತಪ್ಪೇನಿಲ್ಲ. ನಾವು ಮಾಡುವದೆಲ್ಲವೂ ದೇವರ ಮಹಿಮೆಗಾಗಿ ಆಗಿರುವದಾದರೆ ಈ ಎರಡು ಅಭಿಪ್ರಾಯಗಳಲ್ಲಿ ನಾವು ಯಾವದಕ್ಕೆ ಬದ್ಧರಾಗಿದ್ದೇವೆಂಬುದು ಪ್ರಾಮುಖ್ಯವಾಗಿರುವದಿಲ್ಲ. ಪ್ರತಿಯೊಬ್ಬನು ತನ್ನ ತನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿರಬೇಕು. ಅಂದರೆ, ಪ್ರತಿಯೊಬ್ಬ ಕ್ರೈಸ್ತನು ತನಗೆ ಯಾವದು ಸರಿಯೆಂಬದನ್ನು ತನ್ನ ಮನಸ್ಸಾಕ್ಷಿಗೆ ಅನುಗುಣವಾಗಿ ತಿರ್ಮಾನಿಸಕೊಳ್ಳಬೇಕು. ಅವನು ನಿರ್ದೋಷಿಯಾಗಿ ನಿಂತರೂ ನಿರ್ದೋಷಿಯಾಗಿ ಬಿದ್ದರೂ ಅದು ಅವನ ಯಜಮಾನನಿಗೆ ಸೇರಿದ್ದು (ವಚನ 4) ಒಬ್ಬರಿಗೊಬ್ಬರು ತೀರ್ಪುಮಾಡಿಕೊಳ್ಳುವದು ನಮ್ಮ ಕೆಲಸವಲ್ಲ (ನಚನಗಳು 10-13 ನೋಡಿರಿ).

6 ಆದುದರಿಂದ, ನಾವು ಏನೇ ಮಾಡಿದರೂ – ಮಾಂಸತಿಂದರೂ, ಮಾಂಸವನ್ನು ತಿನ್ನದಿದ್ದರೂ, ವಿಶೇಷದಿನಗಳನ್ನು ಪಾಲಿಸಿದರೂ, ಪಾಲಿಸದಿದ್ದರೂ – ಅದನ್ನು ಕ್ರಿಸ್ತನಿಗಾಗಿಯೂ, ಆತನ ಮಹಿಮೆಪಡಿಸುವದಕ್ಕೂ ಮಾಡೋಣ. ಮಾಂಸವನ್ನು ತಿನ್ನುವವನು ತನ್ನ ಮಾಂಸಕ್ಕಾಗಿ ಸ್ತೋತ್ರ ಸಲ್ಲಿಸಿ ದೇವರನ್ನು ಮಹಿಮೆ ಪಡಿಸಲಿ. ಕಾಯಿಪಲ್ಯಗಳನ್ನು ತಿನ್ನುವವನು ತನ್ನ ಕಾಯಿಪಲ್ಯಗಳಿಗಾಗಿ ಸ್ತೋತ್ರಸಲ್ಲಿಸಿ ದೇವರನ್ನು ಮಹಿಮೆಪಡಿಸಲಿ.[79]

ನಾವು ನೆನಪಿನಲ್ಲಿಟ್ಟು ಕೊಳ್ಳಬೇಕಾದ ಮುಖ್ಯ ಸಂಗತಿಯೇನೆಂದರೆ, ಪವಿತ್ರಾತ್ಮನು ನಮ್ಮ ಮನಸ್ಸಾಕ್ಷಿಯ ಮುಖಾಂತರವಾಗಿಯೂ, ನಮ್ಮ ವಿಶ್ವಾಸಬಲಕ್ಕನು ಗುಣವಾಗಿಯೂ ನಮ್ಮನ್ನೂ ಈ ವಿಷಯಗಳಲ್ಲಿ ನಡಿಸುವನು. ಪ್ರತಿಯೊಬ್ಬ ಕ್ರೈಸ್ತನು ತನ್ನ ಮನಸ್ಸಾಕ್ಷಿಗೆ ವಿಧೇಯನಾಗಬೇಕು. ನಾವು ಒಬ್ಬರೊಬ್ಬರ ಮನಸ್ಸಾಕ್ಷಿಗೆ ತೀರ್ಪುಮಾಡಬಾರದು! ಮನುಷ್ಯನ ಮನಸ್ಸಾಕ್ಷಿಯ ಸಂಗತಿಗಳು ಆತನಿಗೂ ದೇವರಿಗೂ ಮಧ್ಯದಲ್ಲಿ ಮಾತ್ರವೇ ಇರುತ್ತದೆ (ವಚನ 22).

7-8 ನಮ್ಮ ಜೀವಿತದ ಏಕೈಕ ಗುರಿಯು ದೇವರನ್ನು ಮೆಚ್ಚಿಸುವದೇ ಆಗಿದೆ. ನಮ್ಮನ್ನು ಮೆಚ್ಚಿಸಿಕೊಳ್ಳುವದು ಗುರಿಯಾಗಿರುವದಿಲ್ಲ. ನಾವು ಕ್ರಿಸ್ತನಲ್ಲಿ ಜೀವಿಸುವದಾದರೆ ನಮ್ಮ ಜೀವಿತಗಳನ್ನು ಆತನಿಗೆ ಅರ್ಪಿಸುವವರಾಗಿದ್ದೇವೆ. ನಮ್ಮ ಜೀವಿತವು ಇನ್ನೆಂದಿಗೂ ನಮ್ಮ ಸ್ವಂತ ಸ್ವತ್ತಲ್ಲ; ಅದು ಆತನಿಗೆ ಸೇರಿದ್ದಾಗಿದೆ. ನಾವು ವಿಶ್ವಾಸಿಗಳಾಗುವ ಮುನ್ನ ನಮಗೋಸ್ಕರ ಜೀವಿಸಿದೆವು . ಈಗ ನಾವು ಯೇಸುವಿನಲ್ಲಿ ಜೀವಿಸುವವರಾಗಿದ್ದರಿಂದ ಆತನಿಗಾಗಿಯೇ ಜೀವಿಸುತ್ತೇವೆ (2 ಕೊರಿಂಥ 5:15 ಮತ್ತು ವ್ಯಾಖ್ಯಾನ ನೋಡಿರಿ). ಮತ್ತು ನಾವು ಸತ್ತರೂ ಆತನಿಗಾಗಿಯೇ, ಯಾಕೆಂದರೆ ಮರಣದ ಮುಖಾಂತರವಾಗಿ ಆತನು ನಮ್ಮನ್ನು ಪರಲೋಕದಲ್ಲಿ ಆತನೊಂದಿಗೆ ಜೀವಿಸಲು ಕರೆಯುತ್ತಾನೆ. ಆದ್ದದರಿಂದ, ನಾವು ಏನೇ ಮಾಡಿದರೂ ಪ್ರತಿಯೊಬ್ಬರು ಕರ್ತನಾದ ಯೇಸುವಿಗೆ ಸೇರಿದವರಾಗಿದ್ದೇವೆ. ನಂಬಿಕೆಯಲ್ಲಿ ದೃಢವಾಗಿರುವ ಸಹೋದರೂ, ದೃಢವಿಲ್ಲದ ನಂಬಿಕೆಯುಳ್ಳ ಸಹೋದರೂ ಕರ್ತನಿಗೆ ಸೇರಿದವರಾಗಿದ್ದು ಆತನು ಅವರಿಬ್ಬರನ್ನೂ ಸೇರಿಸಿಕೊಳ್ಳುತ್ತಾನೆ.

9 ಕ್ರಿಸ್ತನು ಮರಣಿಸಿದ ಬಳಿಕ ಪಾತಾಳಕ್ಕೆ ಇಳಿದು ಹೋಗಿ ಸತ್ತವರಿಗೆ ಒಡೆಯನಾದನು. ಅನಂತರ, ಆತನು ಸತ್ತವರೊಳಗಿಂದ ಎದ್ದು ಬಂದಾಗ ಆತನು ಜೀವಿಸುವವರಿಗೆ ಒಡೆಯನಾದನು. ಆದುದರಿಂದ, ನಾವು ಸತ್ತವರಾಗಿದ್ದರೂ, ಜೀವಿಸುವವರಾಗಿದ್ದರೂ ಆತನೇ ನಮ್ಮ ಒಡೆಯನಾಗಿದ್ದಾನೆ.

10 ಇನ್ನೊಬ್ಬರ ಸೇವಕನಿಗೆ ತೀರ್ಪು ಮಾಡುವದು ಸರಿಯಾದದ್ದಲ್ಲ. ಆದ್ದರಿಂದ, ನಾವೆಲ್ಲರೂ ಕ್ರಿಸ್ತನ ಸೇವಕರಾಗಿರುವ ಕಾರಣ ಒಬ್ಬರೊಬ್ಬರಿಗೆ ತೀರ್ಪುಮಾಡುವ ಕೆಲಸ ನಮಗಿರುವದಿಲ್ಲ. ಕ್ರಿಸ್ತನೇ ತನ್ನ ಸೇವಕರಿಗೆ ತೀರ್ಪುಮಾಡುವನು (2 ಕೊರಿಂಥ 5:10).

ನಾವೆಲ್ಲರೂ ದೇವರ ನ್ಯಾಯಾಸನದ ಮುಂಆದೆ ನಿಲ್ಲುವೆವು ದೇವರ ದೃಷ್ಟಿಯಲ್ಲಿ ನಾವೆಲ್ಲರೂ ದಂಡನೆಗೆ ಅರ್ಹರು; ಹೀಗೆ ನಮ್ಮಲ್ಲಿ ಯಾರಿಗೂ ಮತ್ತೊಬ್ಬನಿಗೆ ತೀರ್ಪು ಮಾಡುವ ಹಕ್ಕು ಇರುವದಿಲ್ಲ. ಇದು ನಿಜವಾಗಿದ್ದರೆ, ಕ್ರೈಸ್ತರ ಮದ್ಯದಲ್ಲಿ ಖಂಡಿಸುವದು ಮತ್ತು ತೀರ್ಪು ಮಾಡುವದು ಬಹಳಷ್ಟು ಇರುವದಕ್ಕೆ ಕಾರಣವೇನು? ಅದು ನಿಲ್ಲಬೇಕು! (ಗಲಾತ್ಯ 5:15 ಮತ್ತು ವ್ಯಾಖ್ಯಾನ ನೋಡಿರಿ).. ಬದಲಾಗಿ, ನಮ್ಮ ಸಹೋದರರಿಗೆ ತೀರ್ಪು ಮಾಡುವದಕ್ಕೆ ನಮಗೆ ಸಮಯವೇ ಉಳಿಯದ ಹಾಗೆ ನಾವು ನಮ್ಮ ಸ್ವಂತ ದೋಷಗಳನ್ನು ನೋಡಿಕೊಳ್ಳುವದರಲ್ಲಿ ಹೆಚ್ಚು ತಲ್ಲೀನರಾಗಿರತಕ್ಕದ್ದು (2 ಕೊರಿಂಥ 13:5 ನೋಡಿರಿ).

ಖಂಡಿಸುವದು ಮತ್ತು ತೀರ್ಪು ಮಾಡುವದರ ವಿಷಯದಲ್ಲಿ ಇನ್ನೊಂದು ಸಂಗತಿಯನ್ನು ಹೇಳುವದು ಅಗತ್ಯವಾಗಿರುತ್ತದೆ. ಕ್ರೈಸ್ತರ ಮಧ್ಯದಲ್ಲಿ ಜರುಗತ್ತಲಿರುವ ಖಂಡಿಸುವಿಕೆ ಮತ್ತು ತೀರ್ಪು ಮಾಡುವಿಕೆಯು ಹೆಚ್ಚು ಕಡಿಮೆ ಒಂದು ಅರಿವಿಲ್ಲದ ಚಟವಾಗಿದೆ; ನಾವು ಅದನ್ನು ಮಾಡುತ್ತಿದ್ದೇವೆಂಬದನ್ನು ಅಷ್ಟಾಗಿ ನಮ್ಮ ಗಮನದಲ್ಲಿರುವದೇ ಇಲ್ಲ. ಉದಾಹರಣಗೆ, ನಾವು ಇನ್ನೊಬ್ಬನ ಬಗ್ಗೆ : "ಆ ವ್ಯಕ್ತಿಯು ಒಳ್ಳೇಯವನಲ್ಲ" ಎಂದು ಹೇಳುವಾಗ ವಾಸ್ತವದಲ್ಲಿ ನಾವು ಆತನಿಗೆ ತೀರ್ಪುಮಾಡುತ್ತಿರುವವರಾಗಿದ್ದೇವೆ. ನಾವು " ನಾನು ಯಾರಿಗೂ ತೀರ್ಪು ಮಾಡಿಲ್ಲ" ಎಂದು ಹೇಳುತ್ತೇವೆ. ಆದರೆ ಸತ್ಯಾಂಶವೇನೆಂದರೆ ನಾವು ಎಲ್ಲಾ ಸಮಯದಲ್ಲೂ ಅದನ್ನು ಮಾಡುತ್ತೇವೆ. ನಾವು ಯಾವ ಮಾತನ್ನು ಹೇಳದಿದ್ದಾಗ್ಯು ನಮ್ಮ ಟೀಕಾತ್ಮಅಥವಾ ಅಸಮ್ಮತಿಯ ನೋಟದಿಂದ ಇತರರಿಗೆ, ತೀರ್ಪು ಮಾಡುತ್ತೇವೆ. ಮತ್ತು ನಾವು ಯಾವ ಬಹಿರಂಗ ಸನ್ನೆಯನ್ನು

ಮಾಡದಿದ್ದಾಗ್ಯು ನಾವು ಆಗಲೂ ನಮ್ಮ ಆಲೋಚನೆಗಳಲ್ಲಿ ವ್ಯಕ್ತಿಗೆ ತೀರ್ಪು ಮಾಡುತ್ತೇವೆ. ದೇವರು ನಮ್ಮ ನಾಲಿಗೆಯನ್ನೂ ಆಲೋಚನೆಗಳನ್ನು ಕಾಪಾಡುವಂತೆ ನಾವು ನಿರಂತರವಾಗಿ ಪ್ರಾರ್ಥಿಸಬೇಕಾದ ಅಗತ್ಯವಿರುತ್ತದೆ.

**11-12** ಇಲ್ಲಿ ಪೌಲನು ಯೆಶಾಯ 45:23 ರಿಂದ ಉಲ್ಲೇಖಿಸುತ್ತಾನೆ (ಫಿಲಿಪ್ಪಿ 2:10-11 ನೋಡಿರಿ). ಪ್ರತಿಯೊಬ್ಬನೂ – ಕ್ರೈಸ್ತನೂ, ಕ್ರೈಸ್ತ್ಯೇತನೂ – ನ್ಯಾಯತೀರ್ಪಿನ ದಿನದಲ್ಲಿ ದೇವರ ಮುಂದೆ ತಲೆಬಾಗುವನು. ಆದಿನದಲ್ಲಿ ನಮ್ಮಲ್ಲಿ ಪ್ರತಿಯೊಬ್ಬನು ತನ್ನ ಪಾಪಗಳನ್ನು ದೇವರಿಗೆ ಅರಿಕೆ ಮಾಡುವನು. ಅಂದರೆ, ನಮ್ಮಲ್ಲಿ ಪ್ರತಿಯೊಬ್ಬನು ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರ ಕೊಡಬೇಕು (ವಚನ 12). ಮತ್ತು ನಾವು ಒಬ್ಬರೊಬ್ಬರ ಪಾಪಗಳಿಗೆ ಉತ್ತರವನ್ನು ಕೊಡುವವರಾಗುವದಿಲ್ಲ; ನಾವು ನಮ್ಮ ಲೆಕ್ಕವನ್ನು ಮಾತ್ರವೇ ಕೊಡುವವರಾಗಿರುತ್ತೇವೆ!

## ಸಹೋದರನಿಗೆ ಎಡೆತಡೆಯನ್ನು ಹಾಕಬೇಡಿರಿ (14:13-23)

**13** ಈ 14ನೇ ಅಧ್ಯಾಯದ ಮುಖ್ಯ ಬೋಧನೆಯು ಈ ವಚನದಲ್ಲಿ ಸಾರಾಂಶಗೊಳಿಸಲ್ಪಟ್ಟಿದೆ: ನಂಬಿಕೆಯಲ್ಲಿ ದೃಢವಿಲ್ಲದ ಕ್ರೈಸ್ತನೂ, ದೃಢವಾದ ನಂಬಿಕೆಯುಳ್ಳ ಕ್ರೈಸ್ತನೂ ಪರಸ್ಪರ ತೀರ್ಪುಮಾಡುವದನ್ನು ನಿಲ್ಲಿಸಬೇಕು. ನಾವು ಮಾತಿನಲ್ಲಾಗಲಿ ಆಲೋಚನೆಯಲ್ಲಾಗಲಿ ಒಬ್ಬರಿಗೊಬ್ಬರು ತೀರ್ಪು ಮಾಡಬಾರದು (ಮತ್ತಾಯ 7:1-5 ಮತ್ತು ವ್ಯಾಖ್ಯಾನ ನೋಡಿರಿ). ಈಗಿನಿಂದ ನಾವು ಮಾಂಸವನ್ನು ತಿನ್ನುವದು ಸರಿಯೋ ಅಥವಾ ಸರಿಯಲ್ಲವೋ, ವಿಶೇಷ ದಿನಗಳನ್ನಾಗಲಿ ಅಥವಾ ಅಂತಹ ವಿಷಯಗಳನ್ನಾಗಲಿ ಪಾಲಿಸುವದು ಸರಿಯೇ ತಪ್ಪೋ ಎಂಬದರ ಮೇಲೆ ಗಮನಕೊಡುವದನ್ನು ನಿಲ್ಲಿಸೋಣ. ಬದಲಾಗಿ, ನಮ್ಮ ಸಹೋದರನ ದಾರಿಯಲ್ಲಿ ಅಡ್ಡಿಯನ್ನಾಗಲಿ ಎಡೆತಡೆಯನ್ನಾಗಲಿ ಹಾಕಬಾರದೆಂಬುದರ ಮೇಲೆ ಗಮನವನ್ನು ಹರಿಸೋಣ. ಅದು ಅತಿ ಪ್ರಾಮುಖ್ಯವಾದ ಸಂಗತಿಯಾಗಿದೆ (1 ಕೊರಿಂಥ 8:4-13; 9:22-23; 10:23-33; ಕೊಲೊಸ್ಸೆ 2:16 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**14** ಯೆಹೂದ್ಯರು ಅನೇಕ ರೀತಿಯ ಆಹಾರವನ್ನು ಆಚಾರಬದ್ಧವಾಗಿ ಅಶುದ್ಧವೆಂದು ಎಣಿಸುತ್ತಾರೆ ಮತ್ತು ಹಳೆ ಒಡಂಬಡಿಕೆಯಲ್ಲಿ ಯೆಹೂದ್ಯರು ಏನನ್ನು ತಿನ್ನಬಹುದು ಮತ್ತು ತಿನ್ನ ಬಾರದು ಎಂಬ ವಿಷಯದಲ್ಲಿ ಅನೇಕ ನಿಯಮಗಳು ಬರೆಯಲ್ಪಟ್ಟಿವೆ.

ಆದರೆ ಕ್ರಿಸ್ತನು ಆಹಾರದ ಕುರಿತ ಆ ಎಲ್ಲಾ ನಿಯಮಗಳನ್ನು ವಜಾಮಾಡಿದನು. ಆದುದರಿಂದ, ಪೌಲನು ಸ್ವತಃ ಒಬ್ಬ ಕಟ್ಟುನಿಟ್ಟಿನ ಯೆಹೂದ್ಯನಾಗಿದ್ದಾಗ್ಯು ಆತನು ಇಲ್ಲಿ ಯಾವ ಪದಾರ್ಥವೂ ಸ್ವತಃ ಅಶುದ್ಧವಾದದ್ದಲ್ಲ ಎಂದು ಗ್ರಹಿಸಿಕೊಂಡಿದ್ದಾನೆಂದು ಹೇಳುತ್ತಾನೆ (ಅ.ಕೃತ್ಯ 10:9-16; 1 ತಿಮೊಥೆ 4:4 ನೋಡಿರಿ). ಯೇಸು ಮನುಷ್ಯನೊಳಗೆ ಹೋಗುವಂತದ್ದು ಆತನನ್ನು ಹೊಲೆ ಮಾಡುವದಿಲ್ಲ ಆದರೆ ಬದಲಾಗಿ ಆತನ ಹೃದಯದೊಳಗಿಂದ ಬರುವಂತದ್ದೇ ಆತನನ್ನು ಹೊಲೆಮಾಡುತ್ತದೆಂದು ಯೇಸು ಕಲಿಸಿಕೊಟ್ಟನು (ಮಾರ್ಕ 7:14-23 ಮತ್ತು ವ್ಯಾಖ್ಯಾನ ನೋಡಿರಿ).

ಪೌಲನು ಇಲ್ಲಿ ಇನ್ನೊಂದು ವಿಷಯವನ್ನು ಕಲಿಸುತ್ತಾನೆ. ನಂಬಿಕೆಯಲ್ಲಿ ದೃಢವಿಲ್ಲವನೊಬ್ಬನು ಒಂದು ಪದಾರ್ಥವನ್ನು ಅಶುದ್ಧವೆಂದು ಭಾವಿಸಿದರೆ ಅವನಿಗೆ ಅದು ಅಶುದ್ಧ. ಇದರ ಅರ್ಥವೇನೆಂದರೆ, ಆ ವ್ಯಕ್ತಿಯು ಆ ನಿರ್ಧಿಷ್ಟವಾದ ಪದಾರ್ಥವನ್ನು ತಿನ್ನ ಬಾರದು, ಯಾಕೆಂದರೆ, ಅವನಮನಸ್ಸಾಕ್ಷಿಯ ಪ್ರಕಾರವಾಗಿ ಅದನ್ನು ತಿನ್ನಲು ಪಾಪವಾಗುತ್ತದೆ. ನಾವು ಎಂದಿಗೂ ನಮ್ಮ ಮನಸ್ಸಾಕ್ಷಿಯ ಪ್ರೇರಣೆಗಳಿಗೆ ವಿರುದ್ಧವಾಗಿ ನಡೆಯಬಾರದು ಯಾವುದಾದರೂ ನಮಗೆ ಪಾಪವೆಂದು ತೋರುವದಾದರೆ ನಾವು ಆ ಸಂಗತಿಯನ್ನು ಮಾಡಬಾರದು. ವಾಸ್ತವದಲ್ಲಿ ಅದು ಪಾಪವಲ್ಲದಿದ್ದಾಗ್ಯು ಅದರ ವಿಷಯದಲ್ಲಿ ನಮಗೆ ಯಾವದೇ ಸಂಶಯ ವಿರುವದಾದರೆ ನಾವು ಅದನ್ನು ಮಾಡಕೂಡದು. ಆ ಕಾರಣದಿಂದಲೇ ಪೌಲನು ಪ್ರತಿಯೊಬ್ಬನು – ತನಗೆಯಾವದು ಪಾಪ ಮತ್ತು ಯಾವದು ಪಾಪವಲ್ಲ ಎಂಬದನ್ನು – ತನ್ನ ತನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿರಬೇಕು ಎಂದು ಹೇಳುತ್ತಾನೆ (ವಚನ 5).

**15** ಪೌಲನು ಈಗ ನಮ್ಮ ಪರಸ್ಪರರೊಂದಿಗಿನ ಸಂಬಂಧವನ್ನು ನಿರ್ಧರಿಸುವ ಅತಿ ಪ್ರಾಮುಖ್ಯವಾದ ಸಂಗತಿಯನ್ನು ಪ್ರಸ್ತಾಪಿಸುತ್ತಾನೆ: ನಾವು ಪ್ರೀತಿಯಲ್ಲಿ ನಡೆದು ಕೊಳ್ಳಬೇಕು. ಉದಾಹರಣೆಗೆ, ಒಬ್ಬ ಸಹೋದರನು ತಾನು ಮಾಂಸವನ್ನು ತಿನ್ನಬಾರದೆಂದು ತನ್ನ ಮಸ್ಸಿನಲ್ಲಿ ನಂಬಿರುತ್ತಾನೆಂದು ಊಹಿಸಿಕೊಳ್ಳಿರಿ ಮತ್ತು ನೀವು ನಿಮ್ಮ ಮನಸ್ಸಿನಲ್ಲಿ ಮಾಂಸವನ್ನು ತಿನ್ನುವದರಲ್ಲಿ ತಪ್ಪೇನಿಲ್ಲ ಎಂದು ನಂಬುತ್ತೀರಿ. ತರುವಾಯ ನೀವು ಆ ಸಹೋದರನನ್ನು ಊಟಕ್ಕೆ ಆಮಂತ್ರಿಸಿ ಅವನಿಗೆ ಮಾಂಸವನ್ನು ತಿನ್ನಲು ನೀಡುವಿರೆಂದು ಊಹಿಸಿಕೊಳ್ಳಿರಿ. ಆದುಮಾತ್ರವಲ್ಲದೆ, ಅದನ್ನು ತಿನ್ನುವದಕ್ಕೆ ನೀವು ಅವನನ್ನು ಒತ್ತಾಯ ಪಡಿಸುವಿರೆಂದು ಊಹಿಸಿಕೊಳ್ಳಿರಿ – ಬಹುಶಃ ತಿನ್ನದಿದ್ದರೆ ಅದು ಕೆಟ್ಟದ್ದು ಎಂದು ಅವನು ಯೋಚಿಸಿಕೊಳ್ಳುವಂತೆ ಮಾಡುವದರಿಂದ ಒತ್ತಾಯಪಡಿಸುವಿರಿ. ಆ ಮೇಲೆ, ಖಂಡಿತವಾಗಿಯೂ ಆ ಸಹೋದರನಿಗೆ ಅವನ ಮನಸ್ಸಿನಲ್ಲಿ ನೋವಾಗುವದು; ಅವನ ಮನಸ್ಸು ತಾನು ಪಾಪ ಮಾಡಿದ್ದಾನೆಂದು ದೂರುವದು. ಆತನು ತಾನು ಮಾಂಸವನ್ನು ತಿನ್ನುವದು ಪಾಪವೆಂದು ನಂಬಿದ್ದಕಾರಣ ಅವನಿಗೆ ಅದು ಒಂದು ಪಾಪವೇ ಆಗಿದೆ. ಆದುದರಿಂದ, ನೀನು ತೆಗೆದುಕೊಳ್ಳುವ ಆಹಾರದಿಂದ ನಿನ್ನ ಸಹೋದರನ ಪಾಪಕ್ಕೆ ಕಾರಣವಾಗಿರುವಿ. ನೀನು ನಿನ್ನ ಸಹೋದರನ ಮಾರ್ಗದಲ್ಲಿ ಅಡ್ಡಿಯನ್ನೂ ಎಡೆತಡೆಯನ್ನು ಹಾಕಿದವನಾಗಿರುವಿ (ವಚನ 13). ನೀನು ಅವನನ್ನು ಈ ರೀತಿಯಾಗಿ ಪಾಪಮಾಡುವಂತೆ ಸತತವಾಗಿನಡಿಸುವದಾದರೆ ಸಹೋದರನನ್ನು ಆತ್ಮೀಕವಾಗಿ ನಾಶಮಾಡುವವನಾಗಿರುತ್ತಿ.

ನಾವು ನಮ್ಮ ಸಹೋದರನನ್ನು ಪ್ರೀತಿಸುವದಾದರೆ ಆತನೆಡೆಗೆ ನಾವು ಹೇಗೆ ಈ ರೀತಿಯಾಗಿ ವರ್ತಿಸಲು ಸಾಧ್ಯ? ಅದು ಮಾತ್ರವಲ್ಲ, ಕ್ರಿಸ್ತನು ನಮ್ಮ ಸಹೋದರನಿಗಾಗಿಯೂ ಮರಣಿಸಿದನುಗ ಕ್ರಿಸ್ತನು ಯಾರನ್ನು ರಕ್ಷಿಸಿದ್ದಾನೋ ಆವ್ಯಕ್ತಿಯನ್ನು ನಾವು ಕೆಡಿಸಲಿದ್ದೇವೋ? ದೇವರು ಅದನ್ನು ನಿಷೇಧಿಸುತ್ತಾನೆ! ಕ್ರಿಸ್ತನು ನಮ್ಮ ಸಹೋದರನನ್ನು ರಕ್ಷಿಸುವದಕ್ಕೆ ತನ್ನ ಸ್ವಪ್ರಾಣವನ್ನು ಅರ್ಪಿಸಿರುವದಾದರೆ ನಾವು ಆತನಿಗಾಗಿ ಅಲ್ಪ ಆಹಾರವನ್ನು ತ್ಯಜಿಸಲು ಸಾಧ್ಯವಿಲ್ಲವೋ? (1 ಕೊರಿಂಥ 8:13 ನೋಡಿರಿ).

**16** ನಂಬಿಕೆಯಲ್ಲಿ ದೃಢವಾಗಿರುವದು ಮೇಲಾದ ಸಂಗತಿಯಾಗಿದೆ. ಯೆಹೂದ್ಯಧರ್ಮಶಾಸ್ತ್ರದ ನೇಮ ನಿಷ್ಠೆಗಳಿಂದ ಮುಕ್ತರಾಗಿರುವದು ಸಹ ಮೇಲಾದ ಸಂಗತಿಯಗಿದೆ. ಆದರೆ ಪೌಲನು ಇಲ್ಲಿ ಬರೆಯುವದೇನೆಂದರೆ; ನಿಮಗಿರುವ ಮೇಲು ಕೆಟ್ಟದೆಂದು ದೂಷಣೆಗೆ ಆಸ್ಪದವಾಗಬಾರದು. ಅಂದರೆ, ನಿಮ್ಮ ಮೇಲು ನಿಮ್ಮ ಸಹೋದರನಿಗೆ ನೋವುಂಟು ಮಾಡುವಂತೆ ಅನುಮತಿಸದಿರಿ. ನಾವು ನಮ್ಮ ಸಹೋದರನಿಗೆ ಹಾನಿಯನ್ನುಂಟು ಮಾಡುವದಾದರೆ ನಮ್ಮ ಮೇಲು (ನಮ್ಮ ಸ್ವಾತಂತ್ರ, ನಮ್ಮ ದೃಢವಾದ ನಂಬಿಕೆ) ಕೆಟ್ಟದ್ದೆಂದು ಕರೆಯಲ್ಪಡುವದು. ಇದು ಸಂಭವಿಸುವ ಪಕ್ಷದಲ್ಲಿ ನಾವೂ ಕ್ರಿಸ್ತನೂ ಅವಮಾನಕ್ಕೊಳಗಾಗುವೆವು. ನಾವು ಏನೇ ಮಾಡಿದರೂ ಸಹ ನಮ್ಮ ವಿಷಯದಲ್ಲಿ ಕೆಟ್ಟದ್ದಾಗಿ ಮಾತಾಡುವವರು ಯಾವಾಗಲೂ ಇರುತ್ತಾರೆಂಬದನ್ನು ನಾವು ಬಲ್ಲೆವು. ಹೇಗಿದ್ದರೂ, ನಾವು ಹಾಗೆ ಮಾಡುವಂತೆ ಅವರಿಗೆ ಅನಾವಶ್ಯಕವಾಗಿ ಅವಕಾಶವನ್ನು ಕೊಡದಿರೋಣ!

**17-18** ಇಲ್ಲಿ ಪೌಲನು ಇನ್ನೊಂದು ಪ್ರಾಮುಖ್ಯವಾದ ಸೂತ್ರವನ್ನು ನೀಡುತ್ತಾನೆ. ದೇವರಿಗೆ ನಮ್ಮ ಬಹಿರಂಗದ ನಡವಳಿಕೆಯಲ್ಲ ಆದರೆ ನಮ್ಮ ಅಂತರ್ಯದ ಅಭಿಲಾಷೆಗಳು ಮತ್ತು ಉದ್ದೇಶಗಳು ಅತ್ಯಂತ ಪ್ರಾಮುಖ್ಯವಾಗಿರುತ್ತವೆ. ಮಾಂಸವನ್ನು ತಿನ್ನವದಾಗಲಿ ಅಥವಾ ತಿನ್ನದಿರುವದಾಗಲಿ ಅಷ್ಟೊಂದು ಪ್ರಾಮುಖ್ಯವಲ್ಲ. ನಾವು ನಮ್ಮ ಸಹೋದರನನ್ನು ಪ್ರೀತಿಸುತ್ತೇವೋ ಅಥವಾ ಇಲ್ಲವೋ ಎಂಬದೇ ಪ್ರಾಮುಖ್ಯವಾಗಿರುತ್ತದೆ. ನಮ್ಮ ಬಹಿರಂಗದ ನಡವಳಿಕೆಯು ನಮ್ಮ ಅಂತರ್ಯದ ಮನಸ್ಸು, ನಮ್ಮ ಹೃದಯ, ನಮ್ಮ ಗುಣಲಕ್ಷಣದಿಂದ ಉದ್ಭವಿಸುತ್ತದೆ. ನಮ್ಮ ಮನಸ್ಸು, ನಮ್ಮ ಹೃದಯವು ಪವಿತ್ರಾತ್ಮನ ಹತೋಟಿಯಲ್ಲಿ ನೆಲೆಗೊಳ್ಳುವದಾದರೆ ನಾವು ಮತ್ತು ನಮ್ಮ ಸಹೋದರ ಇಬ್ಬರೂ ನೀತಿ, ಸಮಾಧಾನ, ಪವಿತ್ರಾತ್ಮನಿಂದಾಗುವ ಆನಂದದೊಳಗೆ ನಡಿಸಲ್ಪಡುವೆವು (ವಚನ 17). ಇದು ದೇವರಿಗೆ ಮೆಚ್ಚಿಕೆಯಾಗಿರುತ್ತದೆ (ವಚನ 18). ನಾವು ಏನು ತಿನ್ನುತ್ತೇವೆ ಅಥವಾ ಕುಡಿಯುತ್ತೇವೆ ಎಂಬದು ದೇವರಿಗೆ ಚಿಂತೆಯಿಲ್ಲ; ಆತನ ಸಭೆಯಲ್ಲಿ ನೀತಿಯೂ, ಸಮಾಧಾನವೂ ಪವಿತ್ರಾತ್ಮನಿಂದಾಗುವ ಆನಂದವೂ ಇರುತ್ತವೋ ಎಂಬುದರ ಬಗ್ಗೆ ಮಾತ್ರವೇ ದೇವರು ಚಿಂತಿಸುತ್ತಾನೆ1

**19** ಆದುದರಿಂದ, ನಾವು ಸಮಾಧಾನಕ್ಕೆ ....ಅನುಕೂಲವಾಗಿರುವವುಗಳನ್ನು ಸಾಧಿಸಿಕೊಳ್ಳೋಣ (ರೋಮ 12:18; ಎಫೆಸ 4:3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಪರಸ್ಪರ ಭಕ್ತಿವೃದ್ಧಿಗೆ ಕಾರಣವಾಗುವ ಸಂಗತಿಗಳನ್ನು ಮಾಡಲು ಶ್ರಮಿಸಿರಿ. "ಪರಸ್ಪರ ಭಕ್ತಿವೃದ್ಧಿ" ಎಂದರೆ ಒಬ್ಬರನ್ನೊಬ್ಬರು ಗದರಿಸುವದು, ತಪ್ಪು ಹೊರಿಸುವದು ಎಂಬ ಅರ್ಥವಲ್ಲ. ಬದಲಾಗಿ, ಒಬ್ಬರಿಗೊಬ್ಬರು ಬೋಧಿಸುವದು, ಆಲೋಚನೆ ಹೇಳುವದು ಮತ್ತು ಬಲಪಡಿಸುವದು ಎಂದು ಇದರ ಅರ್ಥವಾಗಿದೆ, ಇದೆಲ್ಲವೂ ಒಬ್ಬರನ್ನೊಬ್ಬರು ಕರ್ತನಲ್ಲಿ ದೃಢಪಡಿಸುವ ಉದ್ದೇಶಕ್ಕಾಗಿಯೇ ಆಗಿದೆ. ನಮ್ಮ ಮಧ್ಯದಲ್ಲಿ ಎಲ್ಲಿಯ ತನಕ ಜಗಳಗಳು, ತಪ್ಪು ಹೊರಿಸುವದು ಮತ್ತು ತೀರ್ಪು ಮಾಡುವದು ನಡೆಯುತ್ತದೋ ಅಲ್ಲಿಯ ತನಕ ಸಮಾಧಾನ ಅಥವಾ ಪರಸ್ಪರ ಭಕ್ತಿವೃದ್ಧಿ ಇರಲು ಸಾಧ್ಯವಿಲ್ಲ.

**20** ಇಲ್ಲಿ ಪೌಲನು 15ನೇ ವಚನದ ವಿಚಾರವನ್ನು ಪುನರಾವರ್ತಿಸುತ್ತಾನೆ. ಈ ವಚನದಲ್ಲಿ ಪ್ರಸ್ತಾಪಿಸಲಾಗಿರುವ ದೇವರು ಕಟ್ಟಿದ್ದು (ಅಥವಾ ದೇವರ ಕಾರ್ಯ). "ನಾವೇ" – ಮಾನವಜನಾಂಗ – ಆಗಿದ್ದೇವೆ. ನಾವು ದೇವರ ಸೃಷ್ಟಿ, ಆತನ ಜೊತೆ ಕೆಲಸದವರು ಆಗಿದ್ದೇವೆ (ಎಪೆಸ 2:10). ಆದುದರಿಂದ, ದೇವರ ನಿರ್ಮಾಣವಾಗಿರುವ ನಮ್ಮ ಸಹೋದರನನ್ನು ನಾವು ಕೆಡಿಸದಿರೋಣ.

ಮಾಂಸವನ್ನು ತಿನ್ನುವದು (ಉದಾಹರಣೆಗೆ) ಸ್ವತಃ ಒಂದು ಪಾಪವಲ್ಲ. ಆದರೆ ಮಾಂಸವನ್ನು ತಿನ್ನುವದರಿಂದ ನಾವು ಸಹೋದರನಿಗೆ ನೋವುಂಟು ಮಾಡುವದಾದರೆ ಅಥವಾ ಎಡವಿ ಬೀಳುವಂತೆ ಮಾಡುವದಾದರೆ ಮಾಂಸವನ್ನು ತಿನ್ನುವದು ಆ ಸನ್ನಿವೇಶದಲ್ಲಿ ಒಂದು ಪಾಪವಾಗುವದು (1 ಕೊರಿಂಥ 8:9-13 ಮತ್ತು ವ್ಯಾಖ್ಯಾನ ನೋಡಿರಿ).

**21** ಮಾಂಸವನ್ನು ತಿನ್ನುವದು ಮತ್ತು ದ್ರಾಕ್ಷಾರಸವನ್ನು ಕುಡಿಯುವದು ನಮ್ಮ ಸಹೋದರನು ಎಡವುವಂತೆ ಮಾಡುವ ಅನೇಕ ಚಟುವಟಿಕೆಗಳಲ್ಲಿ ಕೇವಲ ಉದಾಹರಣೆಗಳಾಗಿವೆ. ನಾವು ನಮ್ಮ ಜೀವಿತಗಳಲ್ಲಿ ಮಾತ್ರವಲ್ಲ ಆದರೆ ಸಭೆಯಲ್ಲಿ ಸಹ ನಮ್ಮ ಸಹೋದರನಿಗೆ ಅಡ್ಡಿಯನ್ನುಂಟು ಮಾಡುವ ಬೇರೆ ಇನ್ನಿತರ ಇಂತಹ ಚಟುವಟಿಕೆಗಳು ಇರದಂತೆ ನಿರಂತರವಾಗಿ ಎಚ್ಚರಿಕೆ ವಹಿಸಿಕೊಳ್ಳೋಣ.

**22** ನಂಬಿಕೆಯಲ್ಲಿ ದೃಢವಾಗಿರುವ ಮತ್ತು ಮಾಂಸವನ್ನು ತಿನ್ನುವದರಲ್ಲಿ ತಪ್ಪೇನೂ ಇಲ್ಲವೆಂಬ ಮನವರಿಕೆಯನ್ನು ಹೊಂದಿರುವ ವ್ಯಕ್ತಿಯು ತನ್ನ ಮನೆಯಲ್ಲಿ ಅದನ್ನು ಮೌನವಾಗಿ ತಿನ್ನತಕ್ಕದ್ದು. ಆತನು ಮಾಂಸವನ್ನು ತಿನ್ನುವದು ಅವನ ಮತ್ತು ದೇವರ ನಡುವಿನ ವಿಷಯ ಮಾತ್ರವೇ ಆಗಿರಬೇಕು. ಈ ರೀತಿಯಲ್ಲಿ ಆಕನು ತಾನು ಸರಿಯೆಂದು ಒಪ್ಪುವ ಸಂಗತಿಯಿಂದ ತನ್ನನ್ನು ತೀರ್ಪಿಗೆ ಗುರಿಮಡಿಕೊಳ್ಳುವದಿಲ್ಲ. ಅಂದರೆ, ತಾನು ಮಾಂಸವನ್ನು ತಿನ್ನುವದು ತನ್ನ ಮತ್ತು ದೇವರ ನಡುವೆ ಸಮ್ಮತಿಯನ್ನು ಹೊಂದಿರುವದಾದರೆ ಮತ್ತು ಇತರರಿಗೆ ಯಾವ ಹಾನಿಯನ್ನು ಮಾಡದಿರುವದಾದರೆ ಮಾಂಸವನ್ನು ತಿನ್ನುವದಕ್ಕಾಗಿ ಆತನ ಮನಸ್ಸು ಅವನನ್ನು ದೋಷಿಯೆಂದು ತೀರ್ಪು ಮಾಡುವದಿಲ್ಲ. ಆದರೆ ತಾನು ಸಮ್ಮತಿಸುವ ಸಂಗಿತಿಯೊಂದರಿಂದ ಇತರರಿಗೆ

ಅಡ್ಡಿಯನ್ನುಂಟು ಮಾಡುವದಾದರೆ ಆತನು ಪಾಪವನ್ನು ಮಾಡುವವನಾಗಿದ್ದಾನೆ – ಮತ್ತು ನಿಶ್ಚಯವಾಗಿಯೂ ಆತನ ಮಸಸ್ಸಾಕ್ಷಿಯು ಅದಕ್ಕಾಗಿ ಅವನನ್ನು ದೋಷಿಯೆಂದು ತೀರ್ಪು ಮಾಡುವದು.

**23** ಈ ವಚನದಲ್ಲಿ ನಂಬಿಕೆ ಎಂಬ ಪದವು ಕ್ರಿಸ್ತನಲ್ಲಿಡುವ "ನಂಬಿಕೆ" ಯನ್ನು ಸೂಚಿಸುವದಿಲ್ಲ, ಆದರೆ ಒಬ್ಬನು ತನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿರುವ ಸಂಗತಿಯ ವಿಷಯವಾಗಿ ಹೊಂದಿರುವ ಆಳವಾದ ಖಚಿತತೆ ಅಥವಾ ಮನವರಿಕೆಯನ್ನು ಇದು ಸೂಚಿಸುತ್ತದೆ (ವಚನ 5). ನಂಬಿಕೆ ಅಥವಾ ಮನವರಿಕೆಗೆ ಒಂದು ಉದಹರಣೆಯೇನೆಂದರೆ ಮಾಂಸವನ್ನು ತಿನ್ನುವದು ತಪ್ಪೇನಲ್ಲ ಎಂಬದೇ.

ಸಂಶಯ ಪಡುವವನು ದೃಢವಿಲ್ಲದ ನಂಬಿಕೆಯುಳ್ಳ ವ್ಯಕ್ತಿಯಾಗಿದ್ದು ತಾನು ಮಾಂಸವನ್ನು ತಿನ್ನ ಬಾರದೆಂದು ನಂಬುವನಾಗಿದ್ದಾನೆ. ಆತನು ಮಾಂಸವನ್ನು ತಿನ್ನುವದರಲ್ಲಿ ತಪ್ಪೇನಿಲ್ಲ ಎಂಬ ನಂಬಿಕೆ ಅಥವಾ ಮನವರಿಕೆಯನ್ನು ಹೊಂದಿಲ್ಲವಾದ್ದರಿಂದ ಅವನು ಅದನ್ನು ತಿನ್ನ ಬಾರದು. ಏನನ್ನಾದರೂ ಮಾಡುವದು ತಪ್ಪೇನಿಲ್ಲಎಂಬ ನಂಬಿಕೆ ಅಥವಾ ಮನವರಿಕೆ ನಮಗಿಲ್ಲವಾದರೆ ನಾವು ಮಾಡಬಾರದು. ಅಲ್ಲದೆ ಯಾವ ಸಂಗತಿಯಾದರೂ ಸ್ವತಃ ಪಾಪವಲ್ಲದಿದ್ದಾಗ್ಯು ಅದರಲ್ಲಿ ನಮಗೆ ಸಂಶಯ ಇರುವದಾದರೆ ಮತ್ತು ಅದರಲ್ಲಿ ತಪ್ಪೇನಿಲ್ಲ ಎಂಬ ನಂಬಿಕೆ ನಮಗಿಲ್ಲವಾದರೆ ನಾವು ಅದನ್ನು ಮಾಡಬಾರದು – ಇಲ್ಲವಾದರೆ ಅದು ಒಂದು ಪಾಪವಾಗಿರುವದು.

---

## ಅಧ್ಯಾಯ - 15

### ಇನ್ನೊಬ್ಬರನ್ನು ಸಂತೋಷಪಡಿಸಬೇಕು, ಹೊರತು ನಮ್ಮನ್ನಲ್ಲ (15:1-6)

**1** ಈ ವಚನದಲ್ಲಿ ದೃಢವಾದ ನಂಬಿಕೆಯುಳ್ಳವರು ಅಚಲ ನಂಬಿಕೆಯನ್ನು ಹೊಂದಿರುವ ವಿಶ್ವಾಸಿಗಳಾಗಿದ್ದಾರೆ. ದೃಢವಿಲ್ಲದವರು ಬಲಹೀನ ನಂಬಿಕೆಯುಳ್ಳವರಾಗಿದ್ದಾರೆ.

ದೃಢವಾದವರು ದೃಢವಿಲ್ಲದವರ ಅನುಮಾನಗಳನ್ನು ಸಹಿಸಿಕೊಳ್ಳಬೇಕು. ದೃಢವಾದವರು ದೃಢವಿಲ್ಲದವರ ಅನುಮಾನಗಳನ್ನು ಸಹಿಸಿಕೊಳ್ಳುವದು ಮಾತ್ರವಲ್ಲ, ಆದರೆ ಅವರು ಸಹ ವಾಸ್ತವದಲ್ಲಿ ಸಹಿಸಿಕೊಳ್ಳುವಂತೆ ಅವರಿಗೆ ಸಹಾಯವನ್ನು ಮಾಡಬೇಕು. ಅಂದರೆ, ದೃಢವಾದವರು ದೃಢವಿಲ್ಲದವರನ್ನು ಸೈರಿಸಿಕೊಳ್ಳುವದು ಮಾತ್ರವಲ್ಲದೆ ಅವರನ್ನು ಪ್ರೋತ್ಸಾಹಿಸಿ ಬಲಪಡಿಸಬೇಕು.

ಉದಾಹರಣೆಗೆ, ಒಬ್ಬ ದೃಢವಿಲ್ಲದ ಸಹೋದರನು ತನ್ನ ಕೋಪವನ್ನು ಹತೋಟಿಯಲ್ಲಿಟ್ಟುಕೊಳ್ಳುವ ವಿಷಯದಲ್ಲಿ ಸಮಸ್ಯೆಯನ್ನು ಹೊಂದಿದ್ದಾನೆಂದು ಊಹಿಸಿಕೊಳ್ಳಿರಿ. ಅವನು ಕೋಪ ಗೊಳ್ಳುವಾಗ ಅವನ ಬಲಹೀನಕೆಯು ಗೋಚರವಾಗುತ್ತದೆ. ಆತನ ಬಲಹೀನತೆಯು (ಶೀಘ್ರಕೋಪಗೊಳ್ಳುವಿಕೆ) ಅವನಿಗೆ ಮಾತ್ರವೇ ಒಂದು ಭಾರವಾಗಿರುವದಿಲ್ಲ, ಆದರೆ ಸಭೆಗೆ ಸಹ ಒಂದು ಭಾರವಾಗಿರುತ್ತದೆ. ಆತನು ಕೋಪಗೊಳ್ಳುವಾಗ ಸಭೆಯ ಸದಸ್ಯರು ಸಹ ಸಮಸ್ಯೆಗೂ ನಾಚಿಕೆಗೂ ಒಳಗಾಗುತ್ತಾರಾದ್ದರಿಂದ ಅವರು ಸಹ ಆತನ ಭಾರವನ್ನು "ಸಹಿಸಿಕೊಳ್ಳಲು" ಒತ್ತಾಯಿಸಲ್ಪಡುವರು.

ಇಂತಹ ಬಲಹೀನ ಸಹೋದರನೆಡೆಗೆ ನಮಗಿರುವ ಜವಾಬ್ದಾರಿಯೇನು? ಆತನನ್ನು ಗದರಿಸಿ ಟೀಕಿಸುವದೋ? ಇಲ್ಲ. ಅದು ಉತ್ತರವಲ್ಲ. ನಾವು ಆತನೊಂದಿಗೆ ತಾಳ್ಮೆಯಿಂದ ಇದ್ದು ಅವನಿಗೆ ಬೆಂಬಲವನ್ನೂ ಸಹಾಯವನ್ನೂ ನೀಡುವದು ನಮ್ಮ ಕರ್ತವ್ಯವಾಗಿದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಆತನ ಭಾರವನ್ನು ಹೊತ್ತು ಕೊಳ್ಳುವಂತೆ ಆತನಿಗೆ ಸಹಾಯ ಮಾಡುವದೇ ನಮ್ಮ ಕರ್ತವ್ಯವಾಗಿದೆ (ಗಲಾತ್ಯ 6:2 ಮತ್ತು ವ್ಯಾಖ್ಯಾನ ನೋಡಿರಿ).

ಹೌದು, ಒಬ್ಬರು ಅಥವಾ ಇಬ್ಬರು ಹಿರಿಯ ಸಹೋದರರು ಏಕಾಂತದಲ್ಲಿ ಪ್ರೀತಿಯಿಂದ ಮತ್ತು ದೀನತೆಯಿಂದ ಆ ಬಲಹೀನ ಸಹೋದರನಿಗೆ ಪ್ರಬೋಧಿಸಿ ಸಮಾಲೋಚನೆ ನೀಡಬೇಕು. ಬಲಹೀನ ಮತ್ತು ಕಿರಿಯ ಸದಸ್ಯರನ್ನು ಪ್ರಬೋಧಿಸಿ ತಿದ್ದು ವದು ಸಭೆಯಲ್ಲಿ ರುವ ಹಿರಿಯ ಸಹೋದರರ ಮತ್ತು ಸಹೋದರಿಯರ ಜವಾಬ್ದಾರಿಯಗಿದೆ. ಮತ್ತು ಹಿರಿಯ ಸಹೋದರರು ತನ್ನ ಬಳಿಗೆ ಪ್ರೀತಿಯಿಂದ ಆತನ ಒಳ್ಳೇದಕ್ಕಾಗಿಯೇ ಬಂದಿರುವ ಕಾರಣದಿಂದ ಬಲಹೀನ ಸಹೋದರನು ಅವರ ಮಾತನ್ನು ಕೇಳುವನು. ಹೇಗಿದ್ದರೂ, ಆ ಸಹೋದರನನ್ನು ತಿದ್ದುವದಕ್ಕಿಂತಲೂ ಆತನನ್ನು ಪ್ರೀತಿಯಲ್ಲಿ ಸಹಿಸಿಕೊಳ್ಳುವದು ಹೆಚ್ಚು ಪ್ರಾಮುಖ್ಯವಾಗಿರುತ್ತದೆ (ಎಫೆಸ 4: 2 ಮತ್ತು ವ್ಯಾಖ್ಯಾನ ನೋಡಿರಿ).

ನಾವು ನಮ್ಮ ಸುಖವನ್ನು ನೋಡಿಕೊಳ್ಳಬಾರದೆಂದು ಪೌಲನು ಹೇಳುತ್ತಾನೆ. ಕ್ರಿಸ್ತನು ಶಿಲುಬೆಯ ಮೇಲೆ ನಮ್ಮ ಪಾಪಗಳನ್ನು ಹೊತ್ತುಕೊಂಡಾಗ ತನ್ನ ಸುಖವನ್ನು ನೋಡಿಕೊಳ್ಳಲಿಲ್ಲ. ಕ್ರಿಸ್ತನು ನಮ್ಮ ಕಡೆಗೆ ನಡೆದುಕೊಂಡ ಪ್ರಕಾರವೇ ನಾವೂ ನಮ್ಮ ಸಹೋದರನೆಡೆಗೆ ನಡೆದುಕೊಳ್ಳೋಣ (1 ಯೋಹಾನ 3:16 ಮತ್ತು ವ್ಯಾಖ್ಯಾನ ನೋಡಿರಿ).

**2** ಪ್ರತಿಯೊಬ್ಬ ಕ್ರೈಸ್ತನು ತನ್ನ ಸುಖವನ್ನು ನೋಡಿಕೊಳ್ಳದೆ ತನ್ನ ನೆರೆಯವನ ಸುಖವನ್ನು ನೋಡಿಕೊಳ್ಳಲಿ. ಇಲ್ಲಿ ನೆರೆಯವನು ಎಂಬದು ಸಭೆಯಲ್ಲಿರುವ ಸಹೋದರ ಅಥವಾ ಸಹೋದರಿ ಎಂದು ಅರ್ಥವಾಗಿದೆ. ನಾವು ನಮ್ಮ ನೆರೆಯವನ ಹಿತವನ್ನೂ ಭಕ್ತಿವೃದ್ಧಿಯನ್ನೂ ಅಪೇಕ್ಷಿಸಿಸಿ ಅವನ ಸುಖವನ್ನು ನೋಡಿಕೊಳ್ಳ ಬೇಕು ( 1 ಕೊರಿಂಥ 10:33 ನೋಡಿರಿ).

ನಾವು ಹೇಗೆ ಆತನ ಭಕ್ತಿವೃದ್ಧಿಯನ್ನು ಮಾಡುವೆವು ? ಆತನನ್ನು ಗದರಿಸಿ ಟೀಕಿಸುವದರ ಮೂಲಕವೋ? ಇಲ್ಲ. ನಾವು ಆತನ "ಸುಖವನ್ನು ನೋಡಿಕೊಳ್ಳುವದರ" ಮೂಲಕ ಆತನ ಭಕ್ತಿವೃದ್ಧಿಯನ್ನು ಮಾಡುತ್ತೇವೆ.

14ನೇ ಅಧ್ಯಾಯದಲ್ಲಿ ಪೌಲನು ಮಾಂಸವನ್ನು ತಿನ್ನುವ ಉದಾಹರಣೆಯನ್ನು ಕೊಟ್ಟನು. ತಾನು ಮಾಂಸವನ್ನು ತಿನ್ನ ಬಾರದೆಂದು ನೆನಸುವ ಸಹೋದರನನ್ನು ನಾವು ಗದರಿಸಬಾರದು ಅಥವಾ ಹೀನೈಸಬಾರದೆಂಬದನ್ನು ಆತನು ಕಲಿಸಿಕೊಟ್ಟನು. ಬದಲಾಗಿ, ನಾವು ಅಂತಹ ಸಹೋದರನಿಗೆ ಪರವಾಗಿಲ್ಲ, ನಾನೂ ಮಾಂಸವನ್ನು "ತಿನ್ನುವದಿಲ್ಲ" ಎಂದು ನಾವು ಹೇಳಬೇಕು. ನಾವು ನಮ್ಮ ಸುಖವನ್ನು ನೋಡಿಕೊಳ್ಳುವದರ ಬದಲಾಗಿ ನಾವು ನಮ್ಮ ಸಹೋದರನ ಸುಖವನ್ನು ನೋಡಿಕೊಳ್ಳಬೇಕು. ಈ ರೀತಿಯಲ್ಲಿ ನಾವು ನಮ್ಮ ದೃಢವಿಲ್ಲದ ಸಹೋದರನಿಗೆ ಬೆಂಬಲನೀಡಿ ಬಲ ಪಡಿಸಬಹುದಾಗಿದೆ. ಅಂತ್ಯದಲ್ಲಿ, ನಮ್ಮ ಪ್ರೀತಿಯ ದೆಸೆಯಿಂದ ಆತನ ನಂಬಿಕೆಯು ಬಲಗೊಳ್ಳುವದು. ಆದರೆ ನಾವು ಆತನೊಂದಿಗೆ ವಾಗ್ವಾದ ಮಾಡಿ ಅವನನ್ನು ಗದರಿಸುವದಾದರೆ ಆತನು ನಮ್ಮ ಸಮಾಲೋಚನೆಯನ್ನೂ ಸ್ನೇಹವನ್ನೂ ಸಂಪೂರ್ಣವಾಗಿ ತಿರಸ್ಕರಿಸಿ ನೋವು ಗೊಂಡವನೂ ಕೋಪಗೊಂಡವನೂ ಆಗಿತ್ತಾನೆ. ನಾವು ಆತನಿಗಾಗಿ – ಅಥವಾ ನಮಗಾಗಿ – ಯಾವ ಹಿತವನ್ನೂ ಮಾಡದವರಾಗುತ್ತೇವೆ.

ನಾವು ಎಲ್ಲಾ ವಿಷಯದಲ್ಲಿಯೂ ನಮ್ಮ ಸಹೋದರನಿಗೆ ಸಲಹೆ ನೀಡಿ ತಿದ್ದುವದು ಅವಶ್ಯಕವಿಲ್ಲ. ಆತನನ್ನು, ತಿದ್ದಿ ಸರಿಪಡಿಸಲು ನಾವು ಪವಿತ್ರಾತ್ಮನಿಗೂ ಸ್ವಲ್ಪ ಸ್ಥಳವನ್ನು ಬಿಡೋಣ! ನಮ್ಮ ಮುಖ್ಯ ಕೆಲಸವು ಯಾವಾಗಲೂ ಪ್ರೀತಿಯಲ್ಲಿ ನಮ್ಮ ಸಹೋದರನನ್ನು ಸಹಿಸಿಕೊಳ್ಳುವದೇ ಆಗಿದೆ.

**3** ಇಲ್ಲಿ ಪೌಲನು ಕ್ರಿಸ್ತನ ವಿಷಯವಾಗಿ ಬರೆಯಲ್ಪಟ್ಟ ಕೀರ್ತನೆಗಳು 69:9 ರಲ್ಲಿನ ಮಾತುಗಳನ್ನು ಉಲ್ಲೇಖಿಸುತ್ತಾನೆ. ಕ್ರಿಸ್ತನು ನಮಗೆ ಒಂದು ಮಾದರಿಯಾಗಿದ್ದಾನೆ. ಕೀರ್ತನೆಗಾರನು (ಕ್ರಿಸ್ತನೇ ಮಾತಾಡುತ್ತಿದ್ದಾನೆಂಬಂತೆ) ಬರೆಯುವದೇನೆಂದರೆ ದುಷ್ಟಮಾನವರು ದೇವರಿಗೆ ಮಾಡಿದ ದೂಷಣೆಗಳು ನನ್ನ ಮೇಲೆ ಬಂದವು (ಕ್ರಿಸ್ತನು) ಎಂಬದೇ. ಅಂದರೆ, ನಾವು ಮಾಡಿದ ದೂಷಣೆಗಳು ಅಥವಾ ಪಾಪಗಳು,

ನಾವು ಅವು ಗಳಿಗಾಗಿ ಹೊಂದಬೇಕಾಗಿದ್ದ ದಂಡನೆಯ ಜೊತೆಯಲ್ಲಿ ಒಟ್ಟಾಗಿ ಕ್ರಿಸ್ತನ ಮೇಲೆ ಬಿದ್ದಿರುತ್ತವೆ. ಕ್ರಿಸ್ತನು ನಮ್ಮ ದಂಡನೆಯನ್ನು ಸಹಿಸಿಕೊಂಡು ನಮ್ಮ ದೂಷಣೆಗಳಿಗಾಗಿ (ಪಾಪಗಳಿಗಾಗಿ) ಮರಣಿಸಿದನು. ಇದರ ಮೂಲಕವಾಗಿ, ಕ್ರಿಸ್ತನು ತನ್ನ ಸುಖವನ್ನು ನೋಡಿಕೊಳ್ಳಲಿಲ್ಲ, ಆದರೆ ಬದಲಾಗಿ, ಬದಲಾಗಿ ಮಾನವರ ಅನುಮಾನಗಳನ್ನು (ಸೋಲುಗಳನ್ನು) ಸಹಿಸಿಕೊಂಡನು ಎಂಬದನ್ನು ಬಲ್ಲೆವು (ವಚನ 1). ನಮ್ಮ ದುಷ್ಟತನದ ನಿಮಿತ್ತದಿಂದ ಕ್ರಿಸ್ತನು ನಮ್ಮಿಂದ ದೂಷಣೆಗಳನ್ನು, ದ್ವೇಷ, ಮತ್ತು ಮರಣವನ್ನು ಹೊಂದಿಕೊಂಡನು. ಇದನ್ನು ದೃಷ್ಟಿಯಲ್ಲಿಟ್ಟಕೊಂಡು ನಾವು ನಮ್ಮ ಬಲಹೀನ ಸಹೋದರನ ಕೆಲವು ಅನುಮಾನಗಳನ್ನು ಸಹಿಸಿಕೊಳ್ಳಲಾರೆವೋ!

**4** ಪೌಲನು ಗ್ರಂಥಗಳಲ್ಲಿ, ಅಂದರೆ, ಹಳೆ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟದ್ದನ್ನು ಏಕೆ ಇಷ್ಟಾಗಿ ಉಲ್ಲೇಖಿಸುತ್ತಾನೆ?[80] ಯಾಕೆಂದರೆ, ಗ್ರಂಥಗಳು ನಮಗೆ ಉಪದೇಶಿಸುವದಕ್ಕಾಗಿ ಬರೆಯಲ್ಪಟ್ಟಿವೆ (2 ತಿಮೊಥೆ 3:16-17 ಮತ್ತು ವ್ಯಾಖ್ಯಾನ ನೋಡಿರಿ). ನಾವು ಹಳೆ ಒಡಂಬಡಿಕೆಯಲ್ಲಿ ಅಬ್ರಹಾಮ, ಮೋಶೆ, ಮತ್ತು ದಾವೀದರ ವಿಷಯವಾಗಿ ಅಥವಾ ಯೆಶಾಯ, ಯೆರೆಮೀಯ ನಂತಹ ಪ್ರವಾದಿಗಳ ಬಗ್ಗೆ ಓದುವಾಗ ಈ ವ್ಯಕ್ತಗಳು ಹೊಂದಿದ್ದ ಸ್ಥಿರಚಿತ್ತದ ಬಗ್ಗೆ ಕಲಿಯುತ್ತೇವೆ ಮತ್ತು ಅವರ ಉದಾಹರಣೆಗಳ ಮುಖಾಂತರ ನಾವು ಆದರಣೆಯನ್ನು ಮತ್ತು ಆದರಣೆಯಿಂದ ನಿರೀಕ್ಷೆಯನ್ನೂ ಪಡೆದುಕೊಳ್ಳುತ್ತೇವೆ (ರೋಮ 5:3-4).

**5** ದೇವರು ಸ್ವತಃ ಗ್ರಂಥಗಳ ಮುಖಾಂತರ – ಅವು ಗಳು, ನಿಜವಾಗಿಯೂ, ಆತನ ಜೀವವುಳ್ಳ ವಾಕ್ಯವಾಗಿವೆ – ನಮಗೆ ಸ್ಥಿರ ಚಿತ್ತವನ್ನೂ ಆದರಣೆಯನ್ನೂ ಕೊಡುವವನಾಗಿದ್ದಾನೆ. ಮತ್ತು ಆತನು ಅದರ ಜೊತೆಗೆ ಸ್ಥಿರಚಿತ್ತವನ್ನೂ ಆದರಣೆಯನ್ನೂ ನಮ್ಮಲ್ಲಿ ವಾಸವಾಗಿರುವ ಪವಿತ್ರಾತ್ಮನ ಮುಖಾಂತರ ನೇರವಾಗಿ ನೀಡುತ್ತಾನೆ.

ಪವಿತ್ರಾತ್ಮನ ಮೂಲಕ ದೇವರು ನಮಗೆ ಏಕಮನಸ್ಸನ್ನು ಸಹ ಒದಗಿಸುತ್ತಾನೆ. ರೋಮಾಪುರದ ಕ್ರೈಸ್ತರು ತಮ್ಮೊಳಗೆ "ಏಕಮನಸ್ಸುಳ್ಳವರಾಗಿ" ಇರಬೇಕೆಂದು ಪ್ರಾರ್ಥಿಸುತ್ತಾನೆ (ರೋಮ 12:16 ; 1 ಕೊರಿಂಥ 1:10; 2 ಕೊರಿಂಥ 13:11; ಫಿಲಿಪ್ಪಿ 2:2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ನೀವು ಕ್ರಿಸ್ತ ಯೇಸುವನ್ನು ಅನುಸರಿಸುವಂತೆ ಎಂದು ಹೇಳುವದರ ಅರ್ಥವು "ಕ್ರಿಸ್ತ ಯೇಸುವಿನಲ್ಲಿ" ಎಂದು ಸಹ ಆಗಿದೆ. ನಮ್ಮ ಏಕಮನಸ್ಸುಳ್ಳ ಐಕ್ಯತೆಯು ಯಾವಾಗಲೂ "ಕ್ರಿಸ್ತನಲ್ಲಿಯೇ" ದೊರೆಯುವದಾಗಿದೆ. ನಾವು ಕ್ರಿಸ್ತನಲ್ಲಿ ನೆಲೆಗೊಳ್ಳುವದಾದರೆ ಮಾತ್ರವೇ ನಾವು "ಏಕಮನಸ್ಸುಳ್ಳವರಾಗಿ" ಇರಬಲ್ಲೆವು .

"ಏಕಮನಸ್ಸು" ಉಳ್ಳವರಾಗಿರುವದೆಂದರೆ – ಅಥವಾ ಏಕಮನಸ್ಸು ಮತ್ತು ಒಮ್ಮುಖ (ವಚನ ) – ಪ್ರಾಮುಖ್ಯ ಮತ್ತು ಮಹತ್ವದ ವಿಷಯಗಳಲ್ಲಿ ಒಪ್ಪಿಗೆಯನ್ನು ಹೊಂದಿರುವದು ಅರ್ಥವಾಗಿದೆ. ಆದರೆ ಚಿಕ್ಕ ಪ್ರಾಮುಖ್ಯವಲ್ಲದ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳನ್ನು ಹೊಂದಿರುವದರಲ್ಲಿ ತಪ್ಪೇನಿಲ್ಲ. ಉದಾಹರಣೆಗೆ, ಒಬ್ಬನು ಮಾಂಸವನ್ನು ತಿನ್ನಲಿ ಹಾಗು ಇನ್ನೊಬ್ಬನು ತಿನ್ನದಿರಲಿ. ಅದು ಒಂದು ಮಹತ್ವದ ವಿಷಯವಾಗಿರುವದಿಲ್ಲ. ಆದರೆ ಪ್ರಾಮುಖ್ಯವಾದ ವಿಷಯಗಳಲ್ಲಿ ನಮ್ಮ ಮನಸ್ಸುಗಳು ಐಕ್ಯವಾಗಿರಬೇಕು.ಉದಾಹರಣೆಗಾಗಿ, ನಮ್ಮ ಮನುಸ್ಸುಗಳು ದೇವರೆಡೆಗೂ, ನಮ್ಮ ನೆರೆಯವನೆಡೆಗೂ ನಮಗಿರುವ ಪ್ರೀತಿಯಲ್ಲಿ ಐಕ್ಯವಾಗಿರಬೇಕು. ನಾವು ಏಕ ಮನಸ್ಸು – ಒಂದೇ ಹೃದಯ ಮತ್ತು ಒಮ್ಮುಖದಿಂದ – ದೇವರನ್ನೂ ಕ್ರಿಸ್ತನನ್ನೂ ಮಹಿಮೆ ಪಡಿಸಲು ಹಾತೊರೆಯಬೇಕು. ನಾವು ಏಕಮನಸ್ಸಿನೊಂದಿಗೆ ಪವಿತ್ರಾತ್ಮನ ಫಲಗಳನ್ನು – ಪ್ರೀತಿ, ಸಂತೋಷ, ಸಮಾಧಾನ,

ತಾಳ್ಮೆಮುಂತಾದವು ಗಳನ್ನು ಹೊಂದಬೇಕು (ಗಲಾತ್ಯ 5:22-23). ದೃಷ್ಟಾಂತವಾಗಿ, ಗಿಡದ ಕೊಂಬೆಗಳು "ಏಕಮನಸ್ಸನ್ನು" ಹೊಂದಿರುವದಾದರೆ ಬೆಳೆದು ರುಚಿಯಾದ ಫಲವನ್ನು ಬಿಡುತ್ತವೆ. ಅದೇ ಪ್ರಕಾರವಾಗಿ ನಾವು ಸಹ ಇರಬೇಕು.

6 ನಾವು "ಏಕಮನಸ್ಸು" ಹೊಂದಿರಬೇಕಾದದ್ದು ನಮಗೆ ಬಹಳ ಪ್ರಾಮುಖ್ಯವೇಕೆ? ನಾವು ಏಕಮನಸ್ಸುಳ್ಳವರಾಗಿರುವಾಗ ಮಾತ್ರವೇ ನಾವು ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾದ ದೇವರನ್ನು ಮಹಿಮೆ ಪಡಿಸಲು ಸಾಧ್ಯ,ಎಂಬ ಕಾರಣಕ್ಕಾಗಿಯೇ ನಾವು ಏಕಮನಸ್ಸುಳ್ಳವರಾಗಿ ಇಲ್ಲವಾದರೆ ಮತ್ತು ನಮ್ಮೊಳಗೆ ಜಗಳಗಳೂ ಭೇದಗಳೂ ಇರುವದಾದರೆ ನಾವು ದೇವರನ್ನು ಮಹಿಮೆಪಡಿಸಲು ಸಾಧ್ಯವಿಲ್ಲ. ಹೊಸ ಒಡಂಬಡಿಕೆಯಲ್ಲಿ ವಿಶ್ವಾಸಿಗಳ ಮಧ್ಯದಲ್ಲಿನ ಐಕ್ಯತೆಯ ವಿಷಯವಾಗಿ ಅರವತ್ತಕ್ಕಿಂತಲೂ ಹೆಚ್ಚು ವಚನಗಳು ಬರೆಯಲ್ಪಟ್ಟಿರುತ್ತವೆ; ನಮ್ಮ ಐಕ್ಯತೆಯು ದೇವರಿಗೆ ಅಷ್ಟೊಂದು ಪ್ರಾಮುಖ್ಯವಾಗಿರುವದಾದರೆ ನಮಗೆ ಸಹ ಅದು ಅಷ್ಟೇ ಪ್ರಾಮುಖ್ಯವಾಗಿರಬೇಕು!

ಕ್ರೈಸ್ತರೊಳಗಿನ ಐಕ್ಯತೆಯು ಕೇವಲ ಬಹಿರಂಗವಾದುದಲ್ಲ; ಅದು ಒಂದು ಅಂತರ್ಯದ, ನಮ್ಮ ಮನಸ್ಸುಗಳ ಒಂದು ವಿಷಯವಾಗಿದೆ ಎಂಬದನ್ನು ನಾವು ನೆನಪಿನಲ್ಲಿಟ್ಟು ಕೊಳ್ಳೋಣ. ಬಹಿರಂಗವಾಗಿ ಐಕ್ಯತೆಯನ್ನು ಹೊಂದಬೇಕಾದರೆ ಅಂತರ್ಯದಲ್ಲಿ ಮೊದಲು ಐಕ್ಯತೆಯು ಇರತಕ್ಕದ್ದು. ಮನಸ್ಸುಗಳ ಏಕತೆಯು ಎರಡು ಅಸ್ತಿವಾರಗಳ ಮೇಲೆ ನಿಂತಿರುತ್ತದೆ: ಮೊದಲನೆಯದಾಗಿ, ಕ್ರಿಸ್ತನಲ್ಲಿ ನಂಬಿಕೆಯಿಡುವದು; ಮತ್ತು ಎರಡನೆಯದಾಗಿ, ಪರಸ್ಪರ ಪ್ರೀತಿ ಮತ್ತು ದೀನತೆ. ನೆನಪಿನಲ್ಲಿರಬೇಕಾದದ್ದೇನೆಂದರೆ, ಎಲ್ಲಿಕ್ರೈಸ್ತರ ಮಧ್ಯದೊಳಗೆ ಮನಸ್ಸಿನ ಭೇದವಿರುತ್ತದೋ ಅಲ್ಲಿ ಯಾವಾಗಲೂ ಪಾಪವು ಇರುತ್ತದೆ; ಯಾಕೆಂದರೆ ಪಾಪವು ಮಾತ್ರವೇ ನಮ್ಮ ಐಕ್ಯತೆಯನ್ನು ಹಾಳು ಮಾಡುವದಾಗಿದೆ. ಆ ದಿನ ನಾವು ಯಾರೊಂದಿಗಾದರೂ ಏಕಮನವಸ್ಸನ್ನು ಹೊಂದದೇ ಇದ್ದೇವೋ? ಇರುವದಾದರೆ, ಆವ್ಯಕ್ತಿಯೊಂದಿಗೆ ಒಂದಾಗಲು ಅವಶ್ಯಕವಾದ ಎಲ್ಲವನ್ನೂ ಶೀಘ್ರವಾಗಿ ಮಾಡೋಣ, ಆಗ ಮಾತ್ರವೇ ನಾವು ಏಕಮನಸ್ಸಿನಿಂದ ಒಮ್ಮು ಖವಾಗಿ ದೇವರನ್ನು ಒಟ್ಟಾಗಿ ಕೊಂಡಾಡುವವರಾಗಿದ್ದೇವೆ.

## ಸುವಾರ್ತೆಯು ಅನ್ಯಜನರಿಗಾಗಿಯೇ ಇರುತ್ತದೆ (15:7-13)

7 ನಾವು ಹೇಗೆ ಏಕಮನಸ್ಸುಳ್ಳವರಾಗಿರಬಹುದು? ಒಬ್ಬರನೊಬ್ಬರು ಸೇರಿಸಿಕೊಳ್ಳುವದರ ಮೂಲಕವೇ. ಪೌಲನು ಇಲ್ಲಿ ಹೇಳುವದೇನೆಂದರೆ; ಒಬ್ಬರನ್ನೊಬ್ಬರು ಸೇರಿಸಿಕೊಳ್ಳಿರಿ. [81] ನಾವು ಒಬ್ಬರನ್ನೊಬ್ಬರು ಪೂರ್ಣವಾಗಿ ಸ್ವೀಕರಿಸಿಕೊಳ್ಳುವಾಗ ನಮ್ಮ ಮನಸ್ಸು ಮತ್ತು ಹೃದಯಗಳು ಐಕ್ಯವಾಗಿರುವವು. ನಾವು ಮತ್ತೊಬ್ಬ ವ್ಯಕ್ತಿಯ ಪಾಪಗಳನ್ನು ಮತ್ತು ದೋಷಗಳನ್ನು ಸಹ ಸ್ವೀಕರಿಸಿಕೊಳ್ಳಬೇಕೆಂದು ಇದರ ಅರ್ಥವೋ? ಹೌದು. ಯಾಕೆಂದರೆ ಕ್ರಿಸ್ತನು ನಮ್ಮನ್ನೂ ಅದೇ ರೀತಿಯಲ್ಲಿಯೇ ಸ್ವೀಕರಿಸಿಕೊಂಡಿದ್ದಾನೆ. ಕ್ರಿಸ್ತನು ನಮ್ಮನ್ನು – ನಮ್ಮ ಪಾಪಗಳು ಮತ್ತು ದೋಷಗಳ ಜೊತೆಯಲ್ಲಿ – ಸಂಪೂರ್ಣವಾಗಿ ಸೇರಿಸಿಕೊಂಡಿರುತ್ತಾನೆ.

ನಾವು ಒಬ್ಬರನ್ನೊಬ್ಬರು ಸೇರಿಸಿಕೊಳ್ಳದಿದ್ದರೆ ಹೇಗೆ ದೇವರನ್ನು ಕೊಂಡಾಡುವದಕ್ಕೆ ಸಾಧ್ಯವಾಗುತ್ತದೆ? ನಾವು ಒಬ್ಬರನ್ನೊಬ್ಬರು ತಿರಸ್ಕರಿಸುವಾಗ ಪ್ರತಿಯೊಬ್ಬ ವಿಶ್ವಾಸಿಯಲ್ಲಿರುವ ಕ್ರಿಸ್ತನನ್ನು ಸಹ ತಿರಸ್ಕರಿಸುವವರಾಗಿದ್ದೇವೆ (ಮತ್ತಾಯ 10:40 ಮತ್ತು ವ್ಯಾಖ್ಯಾನ ನೋಡಿರಿ).

ಒಬ್ಬರನ್ನೊಬ್ಬರು ಸ್ವೀಕರಿಸಿಕೊಳ್ಳವು ಈ ಕಾರ್ಯವು ಹೃದಯದಿಂದ ಬರತಕ್ಕದ್ದು ಹೊರತು ಕೇವಲ ತುಟಿಗಳಿಂದಲ್ಲ. ನಾವು ಒಬ್ಬರನ್ನೊಬ್ಬರು ಯೇಸು ಕ್ರಿಸ್ತನಲ್ಲಿ ಸಹೋದರ ಮತ್ತು ಸಹೋದರಿಯರಂತೆ ಸೇರಿಸಿಕೊಳ್ಳಬೇಕು. ಈ ರೀತಿಯಾಗಿ ನಮ್ಮ ಕರ್ತನು ಮಹಿಮೆ ಹೊಂದುವನು.

ಪೌಲನ ಕಾಲದಲ್ಲಿ ಯೆಹೂದ್ಯ. ಹಿನ್ನಲೆಯಿಂದ ಕ್ರೈಸ್ತರು ಅನ್ಯಜನಾಂಗದ ಹಿನ್ನಲೆಯಿಂದ ಬಂದ ಕ್ರೈಸ್ತರನ್ನು ಸೇರಿಸಿಕೊಳ್ಳುವದಕ್ಕೆ ದೊಡ್ಡ ಸಮಸ್ಯೆಯನ್ನು ಹೊಂದಿದ್ದರು, ಯಾಕೆಂದರೆ, ಯೆಹೂದ್ಯರಿಗೆ ಅವರ ಬಾಲ್ಯದಿಂದಲೇ ಅನ್ಯ ಜನರನ್ನು ತುಚ್ಚೀಕರಿಸುವಂತೆ ಕಲಿಸಲಾಗುತ್ತಿತ್ತು. ಅದೇ ರೀತಿಯಲ್ಲಿ ಮೇಲ್ವರ್ಗದ ಕ್ರೈಸ್ತರು ಕೇಳವರ್ಗದ ಕ್ರೈಸ್ತರನ್ನು ಸೇರಿಸಿಕೊಳ್ಳಲು ಸಮಸ್ಯೆಯನ್ನು ಹೊಂದಿದ್ದಾರೆ ಮತ್ತು ವಿಧ್ಯಾವಂತ ಕ್ರೈಸ್ತರು ಅವಿಧ್ಯಾವಂತ ಕ್ರೈಸ್ತರನ್ನು ಸೇರಿಸಿಕೊಳ್ಳಲು ಹಿಂದೇಟು ಹಾಕುತ್ತಾರೆ. ಶ್ರೀಮಂತರು ಬಡವರನ್ನು ಸೇರಿಸಿಕೊಳ್ಳುವದಕ್ಕೂ ಮತ್ತು ಆರೋಗ್ಯವಂತರು ರೋಗಿಗಳನ್ನು ಸೇರಿಸಿಕೊಳ್ಳುವದಕ್ಕೂ ಸಮಸ್ಯೆಯನ್ನು ಹೊಂದಿರುತ್ತಾರೆ. ನಾವೆಲ್ಲರೂ ಒಬ್ಬರನ್ನೊಬ್ಬರು ಪೂರ್ಣವಾಗಿ ಸೇರಿಸಿಕೊಳ್ಳಬೇಕು ಮತ್ತು ಸ್ವಾಗತಿಸಬೇಕು. ನಾವೆಲ್ಲರೂ ಕ್ರಿಸ್ತನ ಕುಟುಂಬಕ್ಕೆ ಸೇರಿದವರಾಗಿದ್ದೇವೆ.

ಆದ್ದರಿಂದ, ವಚನಗಳು 8-9 ರಲ್ಲಿ ಕ್ರಿಸ್ತನು ಯೆಹೂದ್ಯರಿಗಾಗಿ ಮಾತ್ರವಲ್ಲ, ಆದರೆ ಅನ್ಯ ಜನರಿಗೆ ಸಹ – ಎಲ್ಲಾ ಜನರಿಗಾಗಿಯೂ – ಈ ಲೋಕಕ್ಕೆ ಬಂದನೆಂದು ಪೌಲನು ತಿಳಿಸುತ್ತಾನೆ. ಯೆಹೂದ್ಯರು ಇನ್ನೆಂದಿಗೂ ಅನ್ಯಜನರನ್ನು ತಿರಸ್ಕರಿಸುವದಕ್ಕೆ ಯಾವ ಕಾರಣವೂ ಇರುವದಿಲ್ಲ.

ಕ್ರಿಸ್ತನು ಪಿತೃಗಳಿಗೆ – ಅಂದರೆ, ಅಬ್ರಹಾಮ, ಇಸಾಕ, ಯಾಕೋಬ ಮತ್ತು ಇತರರು – ಉಂಟಾದ ದೇವರ ವಾಗ್ದಾನಗಳನ್ನು ದೃಢಪಡಿಸುವದಕ್ಕಾಗಿ ಬಂದನು. ವಾಗ್ದಾನಗಳು ಹಳೆ ಒಡಂಬಡಿಕೆಯಲ್ಲಿ ಬರಲಿರುವ ರಕ್ಷಕನೊಬ್ಬನ ವಿಷಯವಾಗಿ ಹೇಳಿದ ಪ್ರವಾದನೆಗಳಾಗಿದ್ದವು. ಆದರೆ ಕ್ರಿಸ್ತನು ವಾಗ್ದಾನಗಳನ್ನು "ದೃಢಪಡಿಸಿದ್ದು" ಮಾತ್ರವಲ್ಲದೆ ಆತನು ಸ್ವತಃ ವಾಗ್ದಾನಗಳ ನೆರವೇರಿಕೆಯಾಗಿದ್ದಾನೆ. ಕ್ರಿಸ್ತನು ಸ್ವತಃ ಮೆಸ್ಸೀಯನೂ, [82] ಬರಲಿರುವ ರಕ್ಷಕನೂ ಆಗಿದ್ದನು. ಕ್ರಿಸ್ತನು ಎಂದಿಗೂ ಅಂತ್ಯವಾಗದಂಥ ರಾಜ್ಯದ ಮಹಾ ಅರಸನಾಗಿದ್ದನು. ಕ್ರಿಸ್ತನು ಅಬ್ರಹಾಮನ ಸಂತಾನ ಅಥವಾ ಸಂತತಿಯಾಗಿದ್ದು

ಆತನ ಮೂಲಕ ಭೂಮಿಯಲ್ಲಿರುವ ಎಲ್ಲಾ ಜನಾಂಗಗಳು ಆಶಿರ್ವದಿಸಲ್ಪಡುವವು ಗಳಾಗಿದ್ದವು (ಆದಿಕಾಂಡ 22:18). ಕ್ರಿಸ್ತನು ಮೊದಲು ಯೆಹೂದ್ಯರಿಗೆ ಒಳಗಾಗಿದ್ದನು [83], ಮತ್ತು ಪ್ರಾರಂಬದಲ್ಲಿ ಆತನ ಕೆಲಸವು ಯೆಹೂದ್ಯರಿಗೆ ರಕ್ಷಣೆಯ ಮಾರ್ಗವನ್ನು ತೋರಿಸುವದಾಗಿತ್ತು. ಕ್ರಿಸ್ತನು ದೇವರ ವಾಕ್ಯದಲ್ಲಿನ ವಾಗ್ದಾನಗಳನ್ನು ನೆರವೇರಿಸುವದರ ಮೂಲಕ ದೇವರ ವಾಕ್ಯವು ಸತ್ಯವಾದದ್ದು ಎಂಬದನ್ನು ಲೋಕಕ್ಕೆ ತೋರಿಸಿಕೊಟ್ಟನು.

9 ಆದರೆ ಕ್ರಿಸ್ತನು ಯೆಹೂದ್ಯರ ಸೇವಕನು ಮಾತ್ರವಲ್ಲ; ಆತನು ತನ್ನಲ್ಲಿ ನಂಬಿಕೆಯಿಟ್ಟು ಅನ್ಯಜನರು ಸಹ ಕಾರುಣ್ಯದ ನಿಮಿತ್ತ ದೇವರನ್ನು ಕೊಂಡಾಡಬೇಕೆಂಬುದಕ್ಕಾಗಿ ಅವರಿಗೂ ರಕ್ಷಣೆಯನ್ನು ಒದಗಿಸಿದನು.

ಇಲ್ಲಿ ಪೌಲನು ಕೀರ್ತನೆಗಳು 18:49 ರಿಂದ ಉಲ್ಲೇಖಿಸುತ್ತಾನೆ. " ಈ ಕಾರಣದಿಂದ ಅನ್ಯ ಜನಗಳ ಮಧ್ಯದಲ್ಲಿ ನಿನ್ನನ್ನು (ದೇವರು) ಸ್ತುತಿಸುವೆನು" (ಕ್ರಿಸ್ತನು) ಇಲ್ಲಿ ಕೀರ್ತನೆಗಾರನೂ ಅರಸನೂ ಆದ ದಾವೀದನು ಅನ್ಯಜನರು ಕ್ರಿಸ್ತನ ಸುವಾರ್ತೆಯನ್ನು ಸ್ವೀಕರಿಸುವರೆಂದು ಪ್ರವಾದಿಸುತ್ತಾನೆ.

10 ಇಲ್ಲಿ ಪೌಲನು ಅನ್ಯಜನರು ದೇವರ ಜನರೊಡನೆ – ಅಂದರೆ, ಯೆಹೂದ್ಯರೊಡನೆ ಉಲ್ಲಾಸಪಡುವರೆಂಬದನ್ನು ತೋರಿಸಲು ಧರ್ಮೋಪದೇಶಕಾಂಡದ ಮಾತುಗಳನ್ನು ಉಲ್ಲೇಖಿಸುತ್ತಾನೆ (ಧರ್ಮೋಪದೇಶಕಾಂಡ 32:43). ಅನ್ಯ ಜನರು ಯೆಹೂದ್ಯರೊಂದಿಗೆ ಉಲ್ಲಾಸ ಪಡುವರು, ಯಾಕೆಂದರೆ ಅವರಿಗೂ ಸಹ ಕ್ರಿಸ್ತನ ಮುಖಾಂತರ ರಕ್ಷಣೆಯನ್ನು ಪಡೆದುಕೊಳ್ಳುವ ಅವಕಾಶವು ಕೊಡಲ್ಪಟ್ಟಿರುತ್ತದೆ.

11 ಅನ್ಯ ಜನರು ಕ್ರಿಸ್ತನಲ್ಲಿ ತಾವು ಪಡೆದುಕೊಂಡ ರಕ್ಷಣೆಯ ನಿಮಿತ್ಯವಾಗಿ ಕರ್ತನನ್ನು ಕೀರ್ತಿಸುವರೆಂಬದನ್ನು ತೋರಿಸಲು ಪೌಲನು ಪು ನಃ ಕೀರ್ತನೆಗಳ ಭಾಗದಿಂದ ಉಲ್ಲೇಖಿಸುತ್ತಾನೆ. (ಕೀರ್ತನೆಗಳು 117:1).

12 ಇಷಯನು ಅರಸನಾದ ದಾವೀದನ ತಂದೆಯಾಗಿದ್ದು ಆತನ ವಂಶದಿಂದಲೇ ಕ್ರಿಸ್ತನು ಬಂದನು. ಆದುದರಿಂದ, ಇಷಯನ ಅಂಕುರ ಎಂದರೆ ಸ್ವತಃ ಕ್ರಿಸ್ತನೇ. ಕ್ರಿಸ್ತನು ಅನ್ಯ ಜನಾಂಗಗಳನ್ನು ಒಳಗೊಂಡಂತೆ ಎಲ್ಲಾ ಜನಾಂಗಗಳನ್ನು ಆಳುವದಕ್ಕಾಗಿ ಬಂದನು. ಆದುದರಿಂದ, ಜನಾಂಗಗಳು ಆತನನ್ನು – ಅಂದರೆ, ಕ್ರಿಸ್ತನನ್ನು ನಿರೀಕ್ಷಿಸುತ್ತಿರುವರು. (ಯೇಶಾಯ 11:10)

13 ನಿರೀಕ್ಷೆಯ ಮೂಲನಾದ ದೇವರು ಎಂಬ ಮಾತಿಗೆ ಅರ್ಥವು "ನಿರೀಕ್ಷೆಯನ್ನು ಕೊಡುವ ದೇವರು" ಎಂಬದೇ. ದೇವರು ನಮಗೆ ಪವಿತ್ರಾತ್ಮನ ಬಲದ ಮೂಲಕ ನಿರೀಕ್ಷೆಯನ್ನು ಕೊಡುತ್ತಾನೆ. ಆತನು ಯಾವ ನಿರೀಕ್ಷೆಯನ್ನು ಕೊಡುವನು? ರಕ್ಷಣೆ ಅಥವಾ ನಿತ್ಯ ಜೀವವನ್ನು [84] ಪಡೆಯುವ ನಿರೀಕ್ಷೆಯನ್ನು ಕೊಡುತ್ತಾನೆ.
ರೋಮಾಪು ರದ ಕ್ರೈಸ್ತರು ಸಂತೋಷದಿಂದಲೂ ಶ್ಯಾಂತಿಯಿಂದಲೂ ತುಂಬಿದವರಾಗ ಬೇಕೆಂದು ಪೌಲನು ಪ್ರಾರ್ಥಿಸುತ್ತಾನೆ.

ಸಂತೋಷವು ಕ್ರಿಸ್ತನಿಂದ ಪವಿತ್ರಾತ್ಮನ ಮೂಲಕ ಕೊಡಲ್ಪಟ್ಟ ಆತ್ಮೀಕ ಸಂತೋಷವಾಗಿದೆ; ಇದು ಲೋಕದಿಂದ ಬರುವ ಸಂತೋಷವಾಗಿರುವದಿಲ್ಲ (ಲೂಕ 15:11 ಮತ್ತು ವ್ಯಾಖ್ಯಾನ ನೋಡಿರಿ).

ಈ ಲೋಕದಲ್ಲಿ ಎಷ್ಟೇ ಕಷ್ಟ ಹಿಂಸೆಗಳು ಬಂದಾಗ್ಯು ಈ ಆತ್ಮೀಕ ಸಂತೋಷವನ್ನೂ ಮಾಧಾನವನ್ನೂ ಕಿತ್ತು ಕೊಳ್ಳಲಾಗದು. ನೀತಿಯೂ ಸಮಾಧಾನವೂ ಪವಿತ್ರಾತ್ಮನಿಂದಾಗುವ ಆನಂತದವೂ ದೇವರ ಕೊಳ್ಳಲಾಗದು. ನೀತಿಯೂ ಸಮಾಧಾನವೂ ಪವಿತ್ರಾತ್ಮನಿಂದಾಗುವ ಆನಂದವೂ ದೇವರ ರಾಜ್ಯವಾಗಿದೆ (ರೋಮ 14:17). ಮನುಷ್ಯನು ಎಲ್ಲಾ ಸಂತೋಷವನ್ನೂ ಸಮಾಧಾನವನ್ನೂ ಬೇರೆ ಯಾವ ರಾಜ್ಯದಲ್ಲಿಯೇ ಆಗಲಿ ಎಂದಿಗೂ ಕಂಡುಕೊಳ್ಳಲಾರನು, ಆದರೆ ದೇವರ ರಾಜ್ಯದಲ್ಲಿ ಮಾತ್ರವೇ ಕ್ರೈಸ್ತಧರ್ಮವಲ್ಲದೆ ಬೇರೆ ಇನ್ನಾವ ಧರ್ಮದಲ್ಲಿಯಾಗಲಿ, ದೇವರಾದ ಯೇಸು ಕ್ರಿಸ್ತನಲ್ಲಿ, ಹೊರತು ಇನ್ನಾವ ದೇವರಲ್ಲಿಯೂ ಕಂಡುಕೊಳ್ಳಲಾರನು.

ನಾವು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ಎಲ್ಲಾ ಸಂತೋಷದಿಂದಲೂ, ಸಮಾಧಾನದಿಂದಲೂ ತುಂಬಿಸಲ್ಪಡುವಂತೆ ಒಬ್ಬರಿಗೊಬ್ಬರು ಎಡಬಿಡದೆ ಪ್ರಾರ್ಥಿಸೋಣ.

## ಅನ್ಯ ಜನರಿಗೆ ಸೇವಕನಾದ ಪೌಲನು ( 15:14-21)

14 ಒಂದು ವೇಳೆ ಪೌಲನು ಇಂದು ನಮ್ಮ ಸಭೆಗೆ ಪತ್ರವನ್ನು ಬರೆಯುವದಾದರೆ ಆತನು ನಮ್ಮ ಸಭೆಯನ್ನು ಹೇಗೆ ಬಣ್ಣಿಸುವನು? ಆತನು ರೋಮಾಪು ರದವರಿಗೆ ಬರೆದಂತೆಯೇ ಬರೆಯುವನೋ:...ನೀವಂತೂ ಒಳ್ಳೇತನದಿಂದ ಭರಿತರಾಗಿಯೂ ಸಕಲಜ್ಞಾನದಿಂದ ತುಂಬಿದವರಾಗಿಯೂ ಒಬ್ಬರಿಗೊಬ್ಬರು ಬುದ್ಧಿ ಹೇಳುವದಕ್ಕೆ ಶಕ್ತರಾಗಿಯೂ ಇದ್ದೀರಿ. ನಮ್ಮ ಸಭೆಯ ಬಣ್ಣನೆ ಇದಾಗಿದೆಯೇ? ಇಲ್ಲವಾಗಿದ್ದರೆ ಹಾಗೆ ಆಗಬೇಕು!

ನಾವು ಒಳ್ಳೇತನವನ್ನೂ ಜ್ಞಾನವನ್ನೂ ಹೊಂದಿರಬೇಕೆಂದು ಕ್ರಿಸ್ತನು ಬಯಸುತ್ತಾನೆ. ಒಳ್ಳೇತನ ಮತ್ತು ಜ್ಞಾನವನ್ನು ಹೊಂದಿರುವವರು ಆ ವರಗಳನ್ನು ಇತರರೊಂದಿಗೆ ಹಂಚಿಕೊಳ್ಳಬೇಕು.

ಪೌಲನು ಈ ಪತ್ರಿಕೆಯನ್ನು ಬರೆದ ವೇಳೆಯಲ್ಲಿ ಆತನು ಇನ್ನೂ ರೋಮಾಪು ರಕ್ಕೆ ಬೇಟಿ ನೀಡಿರಲಿಲ್ಲ. ಆದರೆ ಆತನು ರೋಮಾಪು ರದ ಕ್ರೈಸ್ತರ ವಿಷಯವಾಗಿ ಒಳ್ಳೇ ಸಂಗತಿಗಳನ್ನು ವಿಶ್ವಾಸಿಸಲು ಸಿದ್ದನಾಗಿದ್ದನು. ನಾವು ಸಹ ಯಾವಾಗಲೂ ಒಬ್ಬರೊಬ್ಬರ ವಿಷಯವಾಗಿ ಕೆಟ್ಟ ಸಂಗತಿಗಳಿಗಿಂತಲೂ ಒಳ್ಳೇ ಸಂಗತಿಗಳನ್ನು ಕೇಳಿಸಿಕೊಳ್ಳಲು ಹೆಚ್ಚು ಸಿದ್ದರಾಗಿಯೂ ಆಸಕ್ತಿಯುಳ್ಳವರಾಗಿಯೂ ಇರಬೇಕು.

15-16 ಪೌಲನು ಪುನಃ ತನ್ನ ವಾಚಕರಿಗೆ ತಾನು ದೇವರ ಸುವಾರ್ತೆಯನ್ನು ಸಾರುವದಕ್ಕೆ ವಿಶೇಷ ಕೃಪೆ (ಅನುಗ್ರಹ) ಯನ್ನು – ಅಂದರೆ, ವಿಶೇಷ ಅಭಿಷೇಕ ಮತ್ತು ಬಲವನ್ನು – ಪಡೆದಿದ್ದಾನೆಂದು ಜ್ಞಾಪಕ ಪಡಿಸುತ್ತಾನೆ (ರೋಮ 1:5; ಎಫೆಸ 3:7 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಸುವಾರ್ತೆಯನ್ನು ಸಾರುವದರ ಉದ್ದೇಶವೇನು? ವಚನ 16 ರಲ್ಲಿ ಹೇಳಲ್ಪಟ್ಟಿರುವ ಪ್ರಕಾರವಾಗಿ ಉದ್ದೇಶವು ಸುವಾರ್ತೆಯನ್ನು ಅಂಗೀಕರಿಸುವವರು ದೇವರಿಗೆ ಪವಿತ್ರಾತ್ಮನ ಮೂಲಕವಾಗಿ ಪವಿತ್ರರಾಗಿದ್ದು ಸಮರ್ಪಕವಾದ ಕಾಣಿಕೆ ಯಾಗುವಂತಾಗಬೇಕೆಂಬದೇ (ರೋಮ 12:1 ನೋಡಿರಿ). ನಾವು ಪವಿತ್ರಾತ್ಮನ ಮೂಲಕ ಪವಿತ್ರರಾಗಿಲ್ಲವಾದರೆ ನಾವು ದೇವರಿಗೆ ಸಮರ್ಪಕವಾದ ಕಾಣಿಕೆಯಾಗಲಾರೆವು. ಮತ್ತು ನಮ್ಮಲ್ಲಿ ವಾಸಿಸುವ ಪವಿತ್ರಾತ್ಮನ ಕಾರ್ಯದಿಂದ ಮಾತ್ರವೇ ನಾವು ಪವಿತ್ರರಾಗಲು ಸಾಧ್ಯವಿರುತ್ತದೆ (1 ಕೊರಿಂಥ 6:11 ಮತ್ತು ವ್ಯಾಖ್ಯಾನ ನೋಡಿರಿ). ಪುರುಷ ಮತ್ತು ಸ್ತ್ರೀಯರು ದೇವರಿಗೆ ಸಮರ್ಪಕವಾದ ಪವಿತ್ರ ಕಾಣಿಕೆಯಾಗಬೇಕೆಂಬದೇ ಎಲ್ಲಾ ಬೋಧನೆಯ ಮುಖ್ಯ ಉದ್ದೇಶ ಮತ್ತು ಗುರಿಯಾಗಿದೆ. ಬೋಧನೆಯು ಕೇವಲ ಒಣ ಚರ್ಚೆ, ವಿವರಣೆ ಮತ್ತು ಉಪದೇಶದ ವಿಷಯವಾಗಿರುವದಿಲ್ಲ. ಅದು ಕೇಳುವವರನ್ನು ಕ್ರಿಸ್ತನಿಂದ ನೂತನ ಜೀವವನ್ನು ಪಡೆದುಕೊಳ್ಳುವಂತೆಯೂ ಮತ್ತು ಪಡೆದುಕೊಂಡ ನಂತರ ತಮ್ಮ ಜೀವಿತಗಳನ್ನು ಆತನಿಗೆ ವಿಧೇಯತೆ ಮತ್ತು ಪ್ರೀತಿಯಲ್ಲಿ ಅರ್ಪಿಸುವಂತೆಯೂ ಮನವೊಲಿಸುವ ವಿಷಯವಾಗಿರುತ್ತದೆ.

17 ಪೌಲನು ತನ್ನಲ್ಲಿ ಹೆಚ್ಚಳಪಡದೆ ಕ್ರಿಸ್ತ ಯೇಸುವಿನಲ್ಲಿ ಹೆಚ್ಚಳ ಪಡುತ್ತಾನೆಂಬದನ್ನು ಗಮನಿಸಿರಿ.

18 ಪೌಲನು ತನ್ನ ಕೈಯಿಂದ ಕ್ರಿಸ್ತನು ಮಾಡಿಸಿದ ಕಾರ್ಯಗಳನ್ನು ಕುರಿತು ಮಾತ್ರವೇ ಮಾತಾಡುತ್ತಾನೆ. ಕ್ರಿಸ್ತನು ಪೌಲನ ಬೋಧನೆಯ ಮೂಲಕ ಅನ್ಯ ಜನರನ್ನು ದೇವರಿಗೆ ಅಧೀನರಾಗುವಂತೆ ನಡಿಸಿದನು. ವಿಧೇಯತೆಯು ನಿಜವಾದ ನಂಬಿಕೆಯ ಮುಖ್ಯ ಸಂಕೇತ ಮತ್ತು ಆಧಾರವಾಗಿರುತ್ತದೆ. ಪೌಲನು ತನ್ನ ಮಾತಿನಲ್ಲಿಯೂ ಕ್ರಿಯೆಯಲ್ಲಿಯೂ ಮಾಡಿದ ಸಂಗತಿಗಳ ಮೂಲಕ ಅನ್ಯ ಜನರು ದೇವರಿಗೆ ಅಧೀನರಾಗುವಂತೆ ನಡೆಸಲ್ಪಟ್ಟರೆಂದು ಪೌಲನು ಹೇಳುವದನ್ನು ಗಮನಿಸಿರಿ. ಕ್ರಿಸ್ತನ ಸೇವಕರು ಮಾತಿನಲ್ಲಿ ಮಾತ್ರವಲ್ಲ, ಆದರೆ ಕ್ರಿಯೆಯಲ್ಲಿ ಸಹ ಸೇವೆಯನ್ನು ಮಾಡಬೇಕು. ಅನೇಕ ವೇಳೆ ಜನರು ನಾವು ಏನು ಹೇಳುತ್ತೇವೆಂಬದಕ್ಕಿಂತಲೂ ನಾವು ಮಾಡುತ್ತೇವೆಂಬುದರಿಂದ ಹೆಚ್ಚು ಪ್ರಬಾವಿತರಾಗುತ್ತಾರೆ. ಹೇಗಿದ್ದರೂ, ನಾವು ಮಾತು ಹಾಗು ಕ್ರಿಯೆಗಳೆರಡನ್ನು ಸಮ್ಮಿಲನಗೊಳಿಸುವಾಗ ಅವರು ಇನ್ನು ಹೆಚ್ಚು ಪ್ರಾಭಾವಕ್ಕೊಳಗಾಗುತ್ತಾರೆ.

19 ಪವಿತ್ರಾತ್ಮನು ಪೌಲನ ಜೀವಿತದಲ್ಲಿ ಪ್ರಬಲವಾಗಿ ಕಾರ್ಯಮಾಡಿದನು (ಅ.ಕೃತ್ಯ 19:11; 2 ಕೊರಿಂಥ 12:12 ನೋಡಿರಿ). ಪವಿತ್ರಾತ್ಮನ ಬಲದಿಂದ ಪೌಲನು ಬಹಳಷ್ಟು ಸಾಧಿಸಿದನು! ಪೌಲನು ಪವಿತ್ರಾತ್ಮನ ಮೂಲಕ ಕ್ರಿಸ್ತನು ಈ ಲೋಕದಲ್ಲಿದ್ದಾಗ ಸಾಧಿಸಿದ್ದಕ್ಕಿಂದಲೂ ಹೆಚ್ಚಾದದ್ದನ್ನು ಸಾಧಿಸಿದನೆಂದು ನಾವು ಹೇಳಬಹುದು! ಯೇಸು ಹೇಳಿದ್ದೇನೆಂದರೆ: ..".ನನ್ನನ್ನು ನಂಬುವವನು ನಾವು ನಡಿಸುವ ಕ್ರಿಯೆಗಳನ್ನು ತಾನೂ ನಡಿಸುವನು; ಮತ್ತು ಅವುಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡಿಸುವನು; ಯಾಕೆಂದರೆ ನಾನು ತಂದೆಯ ಬಳಿಗೆ ಹೋಗುತ್ತೇನೆ"(ಯೋಹಾನ 14:12). ಯೇಸು ತಾನು ತಂದೆಯ ಬಳಿಗೆ ಹೋದನಾದ್ದರಿಂದಲೇ ತನ್ನ ಹಿಂಬಾಲಕರ ಬಳಿಗೆ ಪವಿತ್ರಾತ್ಮನನ್ನು ಕಳುಹಿಸಿಕೊಟ್ಟನು. ಪೌಲನು ತಾನು ಮಾಡಿದ ಎಲ್ಲಾ ಕಾರ್ಯಗಳನ್ನು ಪವಿತ್ರಾತ್ಮನ ಬಲದಿಂದಲೇ ಮಾಡುವದಕ್ಕೆ ಶಕ್ತನಾಗಿದ್ದನು. ಮತ್ತು ನಾವು ಸಹ ಪವಿತ್ರಾತ್ಮನ ಬಲದ ಮೂಲಕ ಪೌಲನು ಮಾಡಿದ್ದನ್ನೇ ಮಾಡಲು ಶಕ್ತರಾಗಿದ್ದೇವೆ!

ಪವಿತ್ರಾತ್ಮನು ವಿಶ್ವಾಸಿಗಳ ಜೀವಿತಗಳಲ್ಲಿ ಮಾತ್ರವೇ ಕಾರ್ಯ ಮಾಡುವದಿಲ್ಲ; ನಮ್ಮ ಸಾಕ್ಷಿಯ ಮಾತುಗಳನ್ನು, ನಮ್ಮ ಬೋಧನೆಯನ್ನು ಕೇಳುವವರ ಜೀವಿತಗಳಲ್ಲಿ ಸಹ ಆತನು ಕಾರ್ಯ ಮಾಡುತ್ತಾನೆ. ನಮ್ಮ ಸ್ವಂತ ಮಾತುಗಳು ಮಾತ್ರವೇ ಜನರನ್ನು ಕ್ರಿಸ್ತನಲ್ಲಿ ನಂಬಿಕೆಯಿಡುವಂತೆ ನಡಿಸುವದಿಲ್ಲ; ನಮ್ಮ ಮಾತುಗಳನ್ನು ಕೇಳುವವರ ಹೃದಯಗಳಲ್ಲಿ ಕಾರ್ಯಮಾಡುವ ಪವಿತ್ರಾತ್ಮನೇ ಅವರನ್ನು ಕ್ರಿಸ್ತನ ಬಳಿಗೆ ತರುತ್ತಾನೆ.

ಇಲ್ಲುರಿಕವು ಗ್ರೀಸಿನ ವಾಯುವ್ಯ ದಿಕ್ಕಿನಲ್ಲಿರುವ ರೋಮಾಯ ಸಾಮ್ರಾಜ್ಯದ ಒಂದು ಸೀಮೆಯಾಗಿತ್ತು. ಇಂದು ಅದು ಆಧುನಿಕ ಯೆಗೋಸ್ಲಾವಿಯಾ ರಾಷ್ಟ್ರದ ಭಾಗವಾಗಿದೆ.

20 ಕ್ರೈಸ್ತರೆಲ್ಲರೂ ಒಂದೇ ಕೆಲಸಕ್ಕಾಗಿ ಕರೆಯಲ್ಪಟ್ಟಿರುವದಿಲ್ಲ. ಕೆಲವು ಕ್ರೈಸ್ತರು ಪೌಲನಂತೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಪ್ರಯಾಣಿಸಲು ಕರೆಯಲ್ಪಟ್ಟಿದ್ದಾರೆ. ಇತರ ಕ್ರೈಸ್ತರು ಒಂದು ಸ್ಥಳದಲ್ಲಿ ಕಾರ್ಯ ಮಾಡುತ್ತಾ ಉಳಿಯುವದಕ್ಕೆ ಕರೆಯಲ್ಪಟ್ಟಿದ್ದಾರೆ. ಕೆಲವು ಕ್ರೈಸ್ತರು ಕ್ರಿಸ್ತನ ಹೆಸರು ತಿಳಿಯದ ಹೊಸಸ್ಥಳದಲ್ಲಿ ಸುವಾರ್ತೆಯನ್ನು ಸಾರುವದಕ್ಕೆ ಕರೆಯಲ್ಪಟ್ಟಿದ್ದಾರೆ. ಮತ್ತು ಇತರ ಕ್ರೈಸ್ತರು ಮತ್ತೊಬ್ಬರು ಹಾಕಿದ ಅಸ್ತಿವಾರದ ಮೇಲೆ ಕಟ್ಟುವದಕ್ಕೆ – ಅಂದರೆ, ವಿಶ್ವಾಸಿಗಳನ್ನು ಉಪದೇಶಿಸಿ ಬಲಗೊಳಿಸಲು, ಮತ್ತೊಬ್ಬರು ನೆಟ್ಟ "ಸಸಿಗಳಿಗೆ ನೀರು ಹಾಕಲು" – ಕರೆಯಲ್ಪಟ್ಟಿರುತ್ತಾರೆ (1 ಕೊರಿಂಥ 3:6-9 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ಈ ವಚನದಿಂದ ಕಲಿಯತಕ್ಕ ಪ್ರಾಮುಖ್ಯ ವಿಷಯವೇನೆಂದರೆ ಕ್ರೈಸ್ತರು ಒಬ್ಬರೊಂದಿಗೊಬ್ಬರು ಪೈಪೋಟಿ ನಡೆಸಬಾರದು. ನಾವು ನಮ್ಮ ಕಾರ್ಯವನ್ನು ಅಭಿವೃದ್ಧಿಪಡಿಸಲು ಇನ್ನೊಬ್ಬ ಕ್ರೈಸ್ತನನ್ನು ಎಂದಿಗೂ ತುಚ್ಚೀಕರಿಸಬಾರದು. ನಾವು ನಮ್ಮ ಸಭೆಯನ್ನು ದೊಡ್ಡದಾಗಿಸುವದಕ್ಕಾಗಿ ಮತ್ತೊಂದು ಸಭೆಯಿಂದ ಎಂದಿಗೂ ಜನರನ್ನು ಹೊರಗೆ ಸೆಳೆಯ ಬಾರದು. ಇನ್ನೊಬ್ಬರಿಗೆ ಸೇರಿದ ಘನತೆ ಅಥವಾ ಪ್ರಸಂಶೆಯನ್ನು ನಾವು ಎಂದಿಗೂ ನಮಗಾಗಿ ತೆಗೆದು ಕೊಳ್ಳಬಾರದು (2 ಕೊರಿಂಥ 10:15-16)

21 ಪೌಲನು ಯೆಶಾಯನ ಪ್ರವಾದನೆಯೊಂದನ್ನು, ಉಲ್ಲೇಖಿಸುತ್ತಾನೆ.ಅಲ್ಲಿ ಯೆಶಾಯನು ಯಾರು ಕ್ರಿಸ್ತನ ವರ್ತಮಾನವನ್ನು ಕೇಳಿರಲಿಲ್ಲವೋ ಅವರೇ ಗ್ರಹಿಸಿಕೊಳ್ಳುವರು ಎಂದು ಹೇಳುತ್ತಾನೆ (ಯೆಶಾಯ 52:15). ಕ್ರಿಸ್ತನ ಕುರಿತು

ಎಂದಿಗೂ ಕೇಳಿರದಿದ್ದವರ ಬಳಿಗೆ ಹೋಗಿ ಸಾರುವದರ ಮೂಲಕ ಈ ಪ್ರವಾದನೆಯು ನೆರವೇರುವಂತೆ ಸಹಾಯ ಮಾಡಬೇಕೆಂಬದೇ ಪೌಲನ ಅಭಿಲಾಷೆಯಾಗಿತ್ತು.

ರೋಮಾಪುರಕ್ಕೆ ಬೇಟಿನೀಡಬೇಕೆಂಬ ಪೌಲನ ಸಂಕಲ್ಪ (15:22-33)

**22** ಪೌಲನು ಈ ಪತ್ರಿಕೆಯನ್ನು ಬರೆದಾಗ ಆತನು ಇನ್ನೂ ರೋಮಾಪುರಕ್ಕೆ ಬೇಟಿ ನೀಡಿರಲಿಲ್ಲ (ರೋಮ 1:13), ಯಾಕೆಂದರೆ ಆತನು ಕ್ರಿಸ್ತನ ಹೆಸರನ್ನು ತಿಳಿಸದ ಸ್ಥಳಗಳಲ್ಲಿ ಸುವಾರ್ತೆಯನ್ನು ಸಾರುವದರಲ್ಲಿ ತಲ್ಲೀನನಾಗಿದ್ದನು (ವಚನ 20).

**23-24** ಪೌಲನು ಐರೋಪ್ಯಖಂಡದ ಪಶ್ಚಿಮಕ್ಕೆ ಒಳಭಾಗದಲ್ಲಿದ್ದ ಸ್ಪೇನ್ ದೇಶಕ್ಕೆ ಹೋಗುವ ಅಭಿಲಾಷೆಯನ್ನು ಹೊಂದಿದ್ದನು. ಪೌಲನ ಕಾಲದಲ್ಲಿ ಸ್ಪೇನ್ ರೋಮಾಯ ಸಾಮ್ರಾಜ್ಯದ ಒಂದು ಪ್ರಾಂತ್ಯವಾಗಿತ್ತು. ಸ್ಪೇನ್‌ನಲ್ಲಿ ಸುವಾರ್ತೆಯು ಸಾರಲ್ಪಟ್ಟಿರಲೇ ಇಲ್ಲ; ಈ ಕಾರಣದಿಂದಲೇ ಪೌಲನು ಅಲ್ಲಿಗೆ ಹೋಗುವ ಅಭಿಲಾಷೆಯನ್ನು ಹೊಂದಿದ್ದನು.

ರೋಮಾಪುರದ ಕ್ರೈಸ್ತರು ತಾನು ಸ್ಪೇನಿಗೆ ಹೋಗುವ ಪ್ರಯಾಣದಲ್ಲಿ ತನಗೆ ಸಹಾಯ ಮಾಡುವರೆಂದು ಪೌಲನು ನಿರೀಕ್ಷಿಸಿದನು. ಪೌಲನ ಮನಸ್ಸಿನಲ್ಲಿ ರೋಮಾಪುರದ ಸಭೆಯು ಒಂದು ನೂತನ ಕೇಂದ್ರವಾಗಿ ಸುವಾರ್ತೆಯು ಪಾಶ್ಚಾತ್ಯ ಮತ್ತು ದಕ್ಷಿಣ ಐರೋಪ್ಯದೊಳಗೆ ಹರಡುವದಕ್ಕೆ ಅನುಕೂಲಕರವಾದ ಸ್ಥಳವಾಗಿತ್ತು.

ಪೌಲನು ರೋಮಾಪುರದ ಕ್ರೈಸ್ತರನ್ನು ನೋಡುವದಕ್ಕೆ ಅಭಿಲಾಷಿಸುತ್ತಿದ್ದನು (ಅ.ಕೃತ್ಯ 19:21; ರೋಮ 1:11-12). ಪೌಲನು ಅವರ ಸಹವಾಸದಲ್ಲಿ, ಅವರ ಅನ್ಯೋನ್ಯತೆಯಲ್ಲಿ ಆನಂದಿಸಲು ಬಯಸಿದ್ದನು. ಹೇಗಿದ್ದರೂ, ಕೆಲವು ವರ್ಷಗಳ ನಂತರ ಕೊನೆಗೂ ಪೌಲನು ಒಬ್ಬ ಕೈದಿಯಾಗಿ ರೋಮಾಪುರಕ್ಕೆ ಬಂದು ತಲುಪಿದಾಗ (ಅ.ಕೃತ್ಯ 28:16), ಇದೇ ರೋಮಾಪುರದ ಕ್ರೈಸ್ತರೇ ಪೌಲನ ಪಕ್ಷವನ್ನು ವಹಿಸಿಕೊಳ್ಳಲು ನಿರಾಕರಿಸಿದರು; ಬದಲಾಗಿ, ಆತನ ಕಷ್ಟಗಳಲ್ಲಿ ಅವರೆಲ್ಲರೂ ಆತನನ್ನು ಕೈಬಿಟ್ಟರು ( 2 ತಿಮೊಥೆ 4:16).

**25-26** ಯೆರೂಸಲೇಮು [85] ಇಸ್ರಾಯೇಲಿನ ದಕ್ಷಿಣ ಪ್ರಾಂತ್ಯವಾದ ಯೂದಾಯ ಸೀಮೆಯ ಪ್ರಮುಖ ನಗರವಾಗಿತ್ತು. ಹೊಸ ಒಡಂಬಡಿಕೆಯ ಕಾಲದಲ್ಲಿ ಎಲ್ಲಾ ಇಸ್ರಾಯೇಲವೂ ರೋಮಾಯ ಸಾಮ್ರಾಜ್ಯದ ಹತೋಟಿಗೊಳಗಾಗಿತ್ತು.. ಯೆರೂಸಲೇಮಿನಲ್ಲಿದ್ದ ದೇವಜನರು (ವಿಶ್ವಾಸಿಗಳು) ಬಹಳ ಬಡವರಾಗಿದ್ದರು. ಅವರಲ್ಲಿ ಬಹು ಮಂದಿ ಮೂಲತಃ ಯೆಹೂದ್ಯರಾಗಿದ್ದರು, ಆದರೆ ಅವರು ಕ್ರಿಸ್ತನ ಹಿಂಬಾಲಕರಾದ ಮೇಲೆ ಅವರ ಸುತ್ತಲಿನ ಇತರ ಯೆಹೂದ್ಯರಿಂದ ವಿರೋಧಕ್ಕೂ ಹಿಂಸೆಗೂ ಒಳಗಾಗಿದ್ದರು. ಅನೇಕರು ಕ್ರಿಸ್ತನಲ್ಲಿ ನಂಬಿಕೆಯಿಟ್ಟ ಕಾರಣದಿಂದ ತಮ್ಮ ಆಸ್ತಿಯನ್ನೂ ವ್ಯಾಪಾರಗಳನ್ನೂ ಕಳೆದುಕೊಂಡಂತೆ ತೋರುತ್ತದೆ. ಬಹುಶಃ ಅವರಲ್ಲಿ ಅನೇಕರ ಆಸ್ತಿಗಳು ಮುಟ್ಟುಗೋಲು ಹಾಕಲ್ಪಟ್ಟಿದ್ದವು . ಹಾಗಾದರೆ, ಈ ಕಾರಣಗಳಿಂದ ಯೆರೂಸಲೇಮಿನ ಕ್ರೈಸ್ತರು ಬಡವರಾಗಿದ್ದರು. ಹನ್ನೆರಡು ವರ್ಷಗಳಿಗೆ ಮುಂಚೆ ಘೋರ ಕ್ಷಾಮದ ವೇಳೆಯಲ್ಲಿ ಪೌಲ ಬಾರ್ನರು ಎಲ್ಲಾ ಅನ್ಯಜನಾಂಗದ ಸಬೆಗಳಿಂದ ಕಾಮಿಕೆಗಳನ್ನು ಸಂಗ್ರಹಿಸಿ ಯೆರೂಸಲೇಮಿನಲ್ಲಿನ ವಿಸ್ವಾಸಿಗಳಿಗೆ ನೀಡಿದ್ದರು (ಅ.ಕೃತ್ಯ 11:28-30 ನೋಡಿರಿ). ಈಗ ಪು ನಃ ಪೌಲನು ಮೆಕೆದೋನ್ಯ (ಉತ್ತರ ಗ್ರೀಸ್) ಮತ್ತು ಅಖಾಯ (ಧಕ್ಷಿಣಗ್ರೀಸ್) ಗಳಲ್ಲಿನ ಸಭೆಗಳಿಂದ ಸಂಗ್ರಹಿಸಲಾಗಿದ್ದ ಅದೇ ರೀತಿಯ ಕಾಣಿಕೆಗಳನ್ನು ಯೆರೂಸಲೇಮಿನಲ್ಲಿದ ಕ್ರೈಸ್ತರಿಗೆ ಕೊಡುವದಕ್ಕೆ ಅಲ್ಲಿಗೆ ಹೋರಟ್ಟಿದ್ದನು; ಯೆರೂಸಲೇಮಿನ ಕ್ರೈಸ್ತರಿಗೆ ಪು ನಃ ಗ್ರೀಸನ ಶ್ರೀಮಂತ ಅನ್ಯ ಜನಾಂಗ ಸಭೆಗಳಿಂದ ಆರಿಥಿಕ ಸಹಾಯದ ಅಗತ್ಯತೆಯಲ್ಲಿದ್ದರು (2 ಕೊರಿಂಥ 8:1-4; 9:1-2 ನೋಡಿರಿ).

**27** ಮೆಕೆದೋನ್ಯ ಮತ್ತು ಆಖಾಯದಲ್ಲಿನ ಸಭೆಗಳು ದೇಣಿಗೆಯನ್ನು ನೀಡುವದಕ್ಕೆ ಇಷ್ಟಪಟ್ಟಿದ್ದರು. ಆದಾಗ್ಯು ಒಂದು ವಿಧದಲ್ಲಿ ಗ್ರೀಸನಲ್ಲಿದ್ದ ಅನ್ಯಜನಾಂಗಗಳ ಸಭೆಗಳು ಯೆರೂಸಲೇಮಿನಲ್ಲಿದ್ದ ಯೆಹೂದ್ಯ ಕ್ರೈಸ್ತರಿಗೆ ಸಹಾಯ ಮಾಡುವ ನಿರ್ಭಂಧಕ್ಕೊಳಪಟ್ಟಿದ್ದರು. ಅವರು ಏಕೆ ನಿರ್ಭಂಧಕ್ಕೊಳಪಟ್ಟಿದ್ದರು? ಯಾಕೆಂದರೆ ಪ್ರಾರಂಬದಲ್ಲಿ ಸುವಾರ್ತೆಯವರಿಗೆ ಯೆರೂಸಲೇಮ ಸಭೆಯಿಂದ ಬಂದಿತ್ತು. ಯೆರೂಸಲೇಮಿನಿಂದ ಸುವಾರಂತೆಯು ರೋಮಾಯ ಸಾಮ್ರಾಜ್ಯದ ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ – ಅವು ಗಳಲ್ಲಿ ಮೆಕೆದೋನ್ಯ ಮತ್ತು ಆಕಾಯ ಪ್ರಾಂತ್ಯಗಳೂ ಸೇರಿದ್ದವು – ಒಯ್ಯಲ್ಪಟ್ಟಿತ್ತು. ಆದುದರಿಂದ, ಗ್ರೀಸನಲ್ಲಿದ್ದ ಅನ್ಯಜನಾಂಗದ ಕ್ರೈಸ್ತರು ಯೆಹೂದ್ಯರ ಆತ್ಮಸಂಬಂಧವದ ಸಂಪತ್ತಿಗೆ ಪಾಲುಗಾರರಾದ ಕರಣ ನಿಸ್ಚಯವಾಗಿಯೂ ಅವರು ತಮ್ಮ ಕೆಲವು ಲೋಕಸಂಬಂಧವಾದ ಆಸಿರ್ವಾದಗಳನ್ನೂ, ಹಣವನ್ನೂ ಯೆರೂಸಲೇಮಿನ ಕ್ರೈಸ್ತಸರೊಂದಿಗೆ ಹಂಚಿಕೊಳ್ಳಲು ಇಷ್ಟ ಪಟ್ಟಿರಲೇ ಬೇಕು. ನಿಜವಾಗಿಯು, ಅನ್ಯ ಜನರು ತಾವು ಪಡೆದುಕೊಂಡ ಆತ್ಮೀಕ ಆಶಿರ್ವಾದಗಳಿಗೆ ಪ್ರತಿಯಾಗಿ ತಮ್ಮ ಭೌತಿಕ ಆಶಿರ್ವಾದಗಳನ್ನು ಯೆಹೂದ್ಯರಿಗ (ಯೆಹೂದ್ಯ ಕ್ರೈಸ್ತರಿಗೆ) ನೀಡುವ ಹಂಗಿನವರಾಗಿದ್ದಾರೆ ಎಂದು ಪೌಲನು ಹೇಳುತ್ತಾನೆ.

**28-29** ಪೌಲನು ಎಂದಾದರೂ ಸ್ಪೇನ್ ತಲುಪಿದನೋ ಅಥವಾ ಇಲ್ಲವೋ ಎಂಬುದು ತಿಳಿದು ಬಂದಿರುವದಿಲ್ಲ. ಹೇಗಿದ್ದರೂ, ಪೌಲನು ಕೊನೆಗೂ ರೋಮಾಪುರವನ್ನು ತಲುಪಿದಾಗ ಒಬ್ಬ ಕೈದಿಯಾಗಿ ಅಲ್ಲಿಗೆ ಬಂದನೆಂಬದನ್ನು ನಾವು ಬಲ್ಲೆವು (ಅ.ಕೃತ್ಯ 28:6). ಆದರೆ ಪೌಲನು ಕೈದಿಯಾಗಿದ್ದಾಗ್ಯು ರೋಮಾಪುರಕ್ಕೆ ಆತನು ಕ್ರಿಸ್ತನಿಂದಾಗುವ ವರಗಳನ್ನು ಹೇರಳವಾರ್ಗಿ ತಂದಿದ್ದನು (ವಚನ 29). ಪೌಲನು ಎಲ್ಲಿಯೇ ಹೋದರೂ, ತಾನು ಯಾವ ಪರಿಸ್ಥಿತಿಯಲ್ಲಿದ್ದಾಗ್ಯು ಆತನು ಯಾವಾಗಲೂ ಕ್ರಿಸ್ತ ನಿಂದಾಗುವ ವರಗಳನ್ನು (ಆಶಿರ್ವಾದಗಳನ್ನು) ಹೇರಳವಾಗಿ ಅನುಭವಿಸಿದನು. ನಾವು ನಮ್ಮ ವಿಷಯದಲ್ಲಿ ಹಾಗೆ ಹೇಳಿಕೊಳ್ಳಬಲ್ಲೆವೋ?

**30-31** ಇಲ್ಲಿ ಪೌಲನು ರೋಮಾಪು ರದಕ್ರೈಸ್ತರಿಗೆ ತನ್ನ ಪರವಾಗಿ ಎರಡು ವಿಷಯಗಳಿಗಾಗಿ ಪ್ರಾರ್ಥಿಸಬೇಕೆಂದು ಕೇಳಿಕೊಳ್ಳುತ್ತಾನೆ. ಮೊದಲನೆಯದಾಗಿ, ತಾನು ಯೂದಾಯದಲ್ಲಿರುವ ಅವಿಧೇಯರ (ಅವಿಶ್ವಾಸಿಗಳ) ಕೈಗೆ ತಪ್ಪಿಸಿಕೊಳ್ಳುವಂತೆ ಪ್ರಾರ್ಥಿಸಬೇಕೆಂದು ಅವರನ್ನು ಕೇಳಿಕೊಳ್ಳುತ್ತಾನೆ (ವಚನ 31). ಪೌಲನು ಯೆರೂಸಲೇಮಿನಲ್ಲಿದ್ದ ಕ್ರೈಸ್ತರಿಗೆ ಅನ್ಯಜನಾಂಗದ ಕ್ರೈಸ್ತರು ನೀಡಿರುವ ಕಾಣಿಕೆಗಳನ್ನು ಒಯ್ಯಲು ಯೂದಾಯಕ್ಕೆ ಹೋರಟಿದ್ದನು. ಆದರೆ ಯೆರೂಸಲೇಮಿನಲ್ಲಿದ್ದ ಅವಿಶ್ವಾಸಿಗಳಾದ ಯೆಹೂದ್ಯರೊಲಗೆ ಪೌಲನಿಗೆ ಅನೇಕ ವೈರಿಗಳಿದ್ದರು. ಅವರು ಖಂಡಿತವಾಗಿಯಟೂ ಅವನನ್ನು ಕೊಲ್ಲಲು ಪ್ರಯತ್ನಿಸುವರು. ಮತ್ತು ನಿಜವಾಗಿಯೂ, ಪೌಲನು ಯೆರೂಸಲೇಮನ್ನು ತಲುಪಿದ ಸ್ವಲ್ಪಹೊತ್ತಿನೊಳಗೆಯೇ ಅವರು ಅವನನ್ನು ರೊಲ್ಲಲು ಪ್ರಯತ್ನಿಸಿ ಹೆಚ್ಚು ಕಡಿಮೆ ಯಶಖಸ್ವಿಯಾಗಿದ್ದು ನಿಜವೇ ಆಗಿತ್ತು! (ಅ.ಕೃತ್ಯ 21:27-32). ಆದ್ದರಿಂದ, ಪೌಲನು ಯೆರೂಸಲೇಮಿನಲ್ಲಿ ತನ್ನ ಸುರಕ್ಷತೆಗೋಸ್ಕರ ಪ್ರಾರ್ಥಿಸುವಂತೆ ಕೇಳಿಕೊಳ್ಳುತ್ತಾನೆ.

ಪೌಲನ ಎರಡನೆಯ ಪ್ರಾರ್ಥನಾ ಮನವಿಯೇನೆಂದರೆ ಅವನ ಧರ್ಮಕಾರ್ಯವು ಯೆರೂಸಲೇಮಿನಲ್ಲಿರುವ ದೇವಜನರಿಗೆ ಹಿತಕರವಾಗಿ ತೋರಬೇಕೆಂಬದೇ. ಪೌಲನು ಯಾಕೆ ಅದಕ್ಕಾಗಿ ಪ್ರಾರ್ಥಿಸಬೇಕು? ಅವನ ಸೇವಾಕಾರ್ಯವು ಯೆರೂಸಲೇಮಿನಲ್ಲಿರುವ ಕ್ರೈಸ್ತರಿಗೆ ಏಕೆ ಹಿತಕರವಾಗಿ ತೋರುವದಿಲ್ಲ? ಕಾರಣವೇನೆಂದರೆ, ಯೆರೂಸಲೇಮಿನಲ್ಲಿರುವ ಕ್ರೈಸ್ತರು ಅನ್ಯಜನಾಂಗದ ಕ್ರೈಸ್ತರನ್ನು ಸಂಪೂರ್ಣವಾಗಿ ಸ್ವೀಕರಿಸಿಕೊಂಡಿರಲೇ ಇಲ್ಲ. ಅಷ್ಟು ಮಾತ್ರವಲ್ಲದೆ, ಪೌಲನು ಸ್ವತಃ ಒಬ್ಬ ಯೆಹೂದ್ಯನಾಗಿ ಅನ್ಯಜನರಿಗೆ ಅಪೊಸ್ತಲನಾಗಿರುವದಕ್ಕೆ ಅವರು ಅಸಮಾಧಾನ ಹೊಂದಿದ್ದರು. ಈ ಯೆರೂಸಲೇಮಿನಲ್ಲಿರುವ ಕ್ರೈಸ್ತರು ತನ್ನ ಧರ್ಮಕಾರ್ಯವನ್ನು – ಆತನು ಅನ್ಯಜನರಿಂದ ತರುತ್ತಿದ್ದ ಕಾಮಿಕೆಯನ್ನು – ಸ್ವೀಕರಿಸಿಕೊಳ್ಳಲಾರರೆನೋ ಎಂದು ಪೌಲನು ಹೆದರಿದ್ದನು.

**32-33** ಪೌಲನು ತನ್ನ ಈ ಪ್ರಾರ್ಥನಾ ಮನವಿಗಳು ನೆರವೇರುವದಾದರೆ ತಾನು ರೋಮಾಪು ರಕ್ಕೆ ಆನಂದವು ಳ್ಳವನಾಗಿ ಬರಲು ಶಕ್ತನಾಗುತ್ತೇನೆಂದು ಬರೆಯುತ್ತಾನೆ (ವಚನ 32). ಆದರೆ ಅ.ಕೃತ್ಯಗಳ 21-28 ಅಧ್ಯಾಯಗಳನ್ಂೇನು ಓದುವದರ ಮೂಲಕ ನಮಗೆ ತಿಳಇದು ಬರುವದೇನೆಂದರೆ ಯೆರೂಸಲೇಮಿನಲ್ಲಿ ಸಂಗತಿಗಳು ಪೌಲನು ನಿರೀಕ್ಷಿಸಿದಂತೆಯೂ ಪ್ರಾರ್ಥಿಸಿದಂತೆಯೂ ಜರುಗಲಿಲ್ಲ. ಪೌಲನು ಪ್ರಾರ್ಥಿಸಿದನು; ಆದರೆ ಅದೇ ವೇಳೆಯಲ್ಲಿ ಆತನು ತನ್ನ ಜೀವವನ್ನು ದೇವರ ಕೈಗಳಲ್ಲಿ ಒಪ್ಪಿಸಿದನು.

---

## ಅಧ್ಯಾಯ - 16

### ವಯಕ್ತಿಕ ವಂದನೆಗಳು (16:1-27)

**1-2** ಪೌಲನಿಗಾಗಿ ಈ ಪತ್ಂಿಕೆಯನ್ನು ರೋಮಾಪು ರಕ್ಕೆ ಫೊಯಿಬೆಯು ತೆಗೆದುಕೊಂಡು ಹೋದಳೆದು ಕೆಲವು ಜನರು ನಂಬುತ್ತಾರೆ. ಆಕೆಯು ತನ್ನ ಸ್ವಂತ ಸ್ಥಳೀಯ ಸಭಾ ಸೇವಕಳು [86] ಅಥವಾ "ಸಭಾ ಹಿರಿಯಳು" ಆಗಿದ್ದಳು ಮತ್ತು ಅವಳು ಅನೇಕರಿಗೆ ಸಹಾಯಕಳಾಗಿದ್ದಳು (ವಚನ 2). ಫೊಯಿಬೆಯಳಂತೆಯೇ ಎಲ್ಲಾಕ್ರೈಸ್ತರು ಸೇವಕರಾಗರಲು ಕರೆಯಲ್ಪಟ್ಟಿದ್ದಾರೆ.

**3-5** ಪ್ರಿಸ್ಕಳು [87]ಮತ್ತು ಅಕ್ವಿಲನೂ ವಿವಾಹತ ದಂಪತಿಗಲಾಗಿದ್ದರು, ಪೌಲನು ಅವರನ್ನು ತಾನು ಕೊರಿಂಥಕ್ಕೆ ಮಾಡಿದ ಮೊದಲನೆಯ ಪ್ರಯಾಣದಲ್ಲಿ ಬೇಟಿಯಾಗಿದ್ದನು. ಪೌಲನ ಹಾಗೆ ಅಕ್ವಿಲನೂ ಗುಡಾರಮಾಡುವ ಕೆಲಸದಿಂದ ಜೀವನ ಸಾಗಿಸುತ್ತಿದ್ದನು. ಆದುದರಿಂದ, ಅವರು ಕೊರಿಂಥದಲ್ಲಿರುವಾಗ ಒಟ್ಟಾಗಿ ಕೆಲಸಮಾಡಿದರು (ಅ,.ಕೃತ್ಯ 18:1-3 ನೋಡಿರಿ). ಪ್ರಿಸ್ಕಿಲ್ಲ ಅಕ್ವಿಲರು ಪೌಲನಿಗಾಗಿ ತಮ್ಮ ಪ್ರಾಣಗಳನ್ನು ಅಪಾಯಕ್ಕೆ ಗುರಿಮಾಡಿಕೊಂಡಿದ್ದರು. ಪೌಲನು ಇಲ್ಲಿ ಯಾವ ಘಟನೆಯನ್ನು ಸೀಚಿಸಿ ಮಾತಾಡುತ್ತಿದ್ದಾನೆಂಬದು ತಿಳಿದಿರುವದಿಲ್ಲ. ಘಟನೆಯು ಬೈಬಲನಲ್ಲಿ ಇನ್ನೆಲ್ಲಿಯೂ ಪ್ರಸ್ತಾಪಿಸಲ್ಪಟ್ಟಿರುವದಿಲ್ಲ. ಹೇಗಿದ್ದರೂ, ಪೌಲನ ದಿನಗಳಲ್ಲಿ ಅನ್ಯ ಜನಾಂಗದ ಎಲ್ಲಾ ಸಭೆಗಳ ವರೆಲ್ಲಿರೂ ಈ ಘಟನೆಯ ಬಲ್ಲವರಾಗಿದ್ದರು (ವಚನ 4), ಯಾಕೆಂದರೆ ಅವರು ಪೌಲನ ಪ್ರಾಣರಕ್ಷಿಸುವದಕ್ಕೆ ಅಕ್ವಿಲ ಪ್ರಿಸ್ಕಿಲ್ಲರೂ ಮಾಡಿದ ಉಪಕಾರವನ್ನು ಸ್ಮರಿಸುವವರಾಗಿದ್ದರು. ಪ್ರಿಸ್ಕಿಳು ಮತ್ತು ಅಕ್ವಿಲ್ಲರು ಪರಿಪಕ್ವ ಕ್ರೈಸ್ತರಾಗಿದ್ದು ಕಿರಿಯ ಕ್ರೈಸ್ತನಾಯಕರಿಗೆ ಉಪದೇಶಿಸಲು ಸಹಾಯ ಮಾಡಿದರು (ಅ.ಕೃತ್ಯ 18:18-19; 24-26 ನೋಡಿರಿ).

ರೋಮಾಪು ರದಲ್ಲಿ ಒಂದು ಚಿಕ್ಕ "ಗೃಹಸಭೆಯು" ಪ್ರಿಸ್ಕಿಲಳು ಮತ್ತು ಅಕ್ವಲ್ಲರ ಮನೆಯಲ್ಲಿ ಕೂಡಿ ಬರುತ್ತಿದ್ದರು. ಅವರು ಎಫಸಕ್ಕೆ ಹೋಗಿ ನೆಲೆಸಿದಾಗ ಅಲ್ಲಿಯೂ ಅವರ ಮನೆಯಲ್ಲಿ ಚಿಕ್ಕ ಸಭೆಯೊಂದು ಕೂಡಿಬರುತ್ತಿತ್ತು. ಹೊಸಬಂಡಬಡಿಕೆಯ ಕಾಲದಲ್ಲಿ ಸಭಾಕಟ್ಟಡಗಳು ಬಹಳ ವಿರಳವಾಗಿದ್ದವು ; ಬಹು ಪಾಲು ಸಭಾ ಆರಾಧನೆಗಳು ಜನರ ಮನೆಯಲ್ಲಿ ನಡೆಸಲ್ಪಡುತ್ತಿದ್ದವು (ಕೊಲೊಸ್ಸೆ 4:15; ಫಿಲಮೋನ 2).

**6-15** ಪೌಲನು ಈ ಅಧ್ಯಾಯದಲ್ಲಿ ವಂದನೆ ತಿಳಿಸುವ ಜನರೊಳಗೆ ಐವರು ಯೆಹೂದ್ಯ ಕ್ರೈಸ್ತರಾಗಿದ್ದಾರೆ: ಪ್ರಿಸ್ಕಳು ಮ್ತು ಅಕ್ವಿಲ್ಲ (ವಚನ 3), ಅಂದ್ರೋನಿಕ ಮತ್ತು ಯೂನ್ಯನು (ವಚನ 7), ಮತ್ತು ಹೆರೊಡಿಯೋನನು (ವಚನ 11). ಅಲ್ಲದೆ ಪೌಲನ ಪಟ್ಟಿಯಲ್ಲಿ ಇಬ್ಬರು ದಾಸರೂ ಸೇರಿದ್ದಾರೆ: ಅಂಪ್ಲಿಯಾತನು 9ವಚನ 8) ಮತ್ತು ಉರ್ಬಾನನು (ವಚನ 9). ಅರಿಸ್ಟೊಬೂಲನು ಯೂದಾಯದ ಮಾಜಿ ಅರಸನಾದ ಹೆರೋದನ ಮೊಮ್ಮಗನಾಗಿದ್ದನು. 13ನೇ ವಚನದಲ್ಲಿ ಪೌಲನು

ರೂಫನ ತಾಯಿಯ ಬಗ್ಗೆ ಪ್ರಸ್ತಾಪಿಸುತ್ತಾನೆ; ಅವಳು ಪಲನಿಗೆ ತಾಯಿಯಂತೆ ನಡೆದುಕೊಂಡಿದ್ದಳು. ಇಲ್ಲಿ ಪ್ರಸ್ತಾಪಿಸಲಾಗಿರುವ ರೂಫನು ಮತ್ತು ಮಾರ್ಕ 15:21 ರಲ್ಲಿ ಪ್ರಸ್ತಿಪಿಸಲ್ಪಟ್ಟಿರುವ ರೂಪನು ಒಂದೇ ಆಗಿರುವ ಸಾಧ್ಯತೆಯಿರುತ್ತದೆ.

ಈ ಅಧ್ಯಯದಲ್ಲಿ ಪ್ರಸ್ತಾಪಸಲಾಗಿರುವ ಜನರೊಳಗೆ ಮೂರರಲ್ಲಿ ಒಂದು ಭಾಗ ಸ್ತ್ರೀಯರೇ ಆಗಿದ್ದಾರೆಂಬದನ್ನು ಗಮನಿಸಿರಿ. ಯಾರೂ ಸಹ ಸ್ತ್ರೀಯರು ಸಭೆಯಲ್ಲಿ ಪ್ರಾಮುಖ್ಯ ಪಾತ್ರವನ್ನು ವಹಿಸಲಾರರು ಎಂದು ಹೇಲದಿರಲಿ! ವಾಸ್ತವದಲ್ಲಿ, ಅಪೊಸ್ತಲ ಯೂನ್ಯ (ವಚನ 7) ಒಬ್ಬ ಸ್ತ್ರೀಯೆಂಬದಾಗಿ ಕೆಲವು ಬೈಬಲ್ ಪಂಡಿತರು ನಂಬುತ್ತಾರೆ; ಗ್ರೀಕನಲ್ಲಿ ಯುನ್ಯ ಎಂಬ ಹೆಸರು ಸ್ತ್ರೀಲಿಂಗ ರೂಪದ್ದಾಗಿದೆ ಎಂದು ಅವರು ಹೇಳುತ್ತಾರೆ (ಸಾಮಾನ್ಯ ಲೇಖನ: ಸಭೆಯಲ್ಲಿ ಸ್ತ್ರೀಯರ ಪಾತ್ರ ನೋಡಿರಿ).

**16** ಪವಿತ್ರವಾದ ಮುದ್ದಿಟ್ಟು ಒಬ್ಬರನ್ನೊಬ್ಬರು ವಂದಿಸಿರಿ, ಈ ಹೊತ್ತು ಸಹ ಮಧ್ಯ ಪೂರ್ವಾತ್ಯ ರಾ,ಿಟ್ರಗಳಲ್ಲಿ ಜನರು ಒಬ್ಬರನ್ನೊಬ್ಬರು ಮುದ್ದಿಟ್ಟು ವಂದಿಸಿಕೊಳ್ಳುವ ಪದ್ಧತಿ ಇರುತ್ತದೆ. 1 ಪೇತ್ರ 5:14 ರಲ್ಲಿ ಪೇತ್ರನು ತನ್ನ ವಾಚಕರಿಗೆ ಪ್ರೀತಿಯಿಂದ ಮುದ್ದಿಟ್ಟು ಒಬ್ಬರನ್ನೊಬ್ಬರು ವಂದಿಸಿರಿ ೆಂದು ಕರೆ ನೀಡುತ್ತಾನೆ.

**17** . . .ನೀವು ಹೊಂದಿದ ಉದದೇಶಕ್ಕೆ ವಿರುದ್ಧಾವಗಿ ಭೇದಗಳನ್ನೂ ವಿಘ್ನಗಳನ್ನೂ ನಿಮ್ಮಲ್ಲಿ ಉಂಟು ಮಾಡುವವರನ್ನು ಗರಪು ತಿಸಿರಿ. ಅವರ ವಿಷಯದಲ್ಲಿ ಎಚ್ಚರಿಕೆಯಾಗಿರಿ. ಪೌಲಸನು ಈ ವಿಷಯದಲ್ಲಿ ಎಷ್ಟೊಂದು ಎಚ್ಚರಿಕೆಗಳನ್ನು ನೀಡಿದ್ದಾನೆಂಬದನ್ನು ನೆನಪಿಸಿಕೊಳ್ಳಿರಿ; ಇದು ಯವಾಗಲೂ ಆತನ ಮನಸ್ಸಿನಲ್ಲಿತ್ತು. ಮತ್ತು ಇದು ಯಾವಾಗಲೂ ನಮ್ಮ ಗಮನದಲ್ಲಿ ಸಹ ಇರಬೇಕು. ಯಾಕೆಂದರೆ ಭೇದಗಳನ್ನು ಉಂಟು ಮಾಡುವದೇ ಸೈತಾನನು ಸಭೆಯನ್ನು ಹಾಳು ಮಾಡಲು ಉಪಯೋಗಿಸುವ ಮುಕ್ಯ ವಿಧಾನವಾಗಿದೆ. ಪೌಲನು ನಮಗೆ ಹೇಳುವದೇನೆಂದರೆ: ಅಂತಹ ಜನರನ್ನು ಬಿಟ್ಟು ತೊಲಗಿ ಹೋಗಿರಿ (ಗಲಾತ್ಯ 1:8-9; 2 ಥೆಸಲೋನಿಕ 3:6, 14; 2 ಯೋಹಾನ 9-11 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**18** ಆ ಜನರು ಏನು ಮಾಡುತ್ತಾರೆ? ಅವರು ಸುಳ್ಳು ಬೋಧನೆಗಳನ್ನು ಮಾಡುತ್ತಾರೆ. ಉದಾಹರಣೆಗೆ, ರಕ್ಷಣೆ ಹೊಂದಬೇಕಾದ ಸುನ್ನತಿ ಮಾಡಿಸಿ ಮಾಡಿಸಿಕೊಳ್ಳುವದು ಅವಶ್ಯಕವೆಂದು ಹೇಳುತ್ತಾರೆ. ಅಥವಾ ಕ್ರೈಸ್ತನಾಗಿರಬೇಕಾದರೆ ಒಂದು ನಿರ್ದಿಷ್ಟವಾದ ಕ್ರಮದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವದು ಅಗತ್ಯವೆಂದು ಹೇಳುವರು. ಅಂತಹ ಮಿಥ್ಯ ಮತ್ತು ಅನುವಶ್ಯಕ ಬೋಧನೆಗಳು ಬಹಳ ಶೀಘ್ರವಾಗಿ ಸಭೆಯಲ್ಲಿ ಭೇದಗಳನ್ನು ಉಂಟು ಮಾಡುತ್ತ; ಮತ್ತು ಸಭೆಯಲ್ಲಿ ಭೇದವು ಕ್ರಿಸ್ತನ ದೇಹದಲ್ಲಿ ಒಂದು ಗಾಯವಾಗಿರುತ್ತದೆ.

ಸುಳ್ಳು ಬೋಧಕರು ಯಾವಾಗಲೂ ಭೇದಗಳನ್ನುಂಟು ಮಾಡುತ್ತಾರೆ. ಅವರು ಇತರರನ್ನು ಮೋಸಗೊಶಿಸಿ ತಮ್ಮ ಹಿಂಬಾಲಕರಾಗಿ ಮಾಡುವದಕ್ಕೆ ಪ್ರಯತ್ನಿಸುತ್ತಾರೆ. ಅವರ ಮೋಸಕ್ಕೆ ಒಳಗಾಗಬೇಡಿರಿ ಎಂದು ಪೌಲನು ಎಚ್ಚರಿಸುತ್ತಾನೆ. ಆ ಸುಳ್ಳುಬೋಧಕರು ಹೊರೆಗೆ ಕುರಿಗಳಂತೆ ಕಾಣಿಉತ್ತಾರೆ, ಆದರೆ ಒಳಗೆ ನೋಡಿದರೆ ಅವರು ಹಿಡುಕೊಂಡು ಹೋಗುವ ತೋಳಗಳಾಗಿರುತ್ತಾರೆ 9ಮತ್ತಾಯ 7:15). ಸತ್ಯವನ್ನು ಬೋಧಿಸುತ್ತೇವೆಂದು ಹೇಳಿಕೊಳ್ಳುತ್ತಾ ಅವರು ತಮ್ಮ ಕ್ರಿಸ್ತನ ಅಪೊಸ್ತಲರು ಮತ್ತು ನೀತಿಯ ಸೇವಕರು ಎಂಬಂತೆ ತೋರಿಸಿಕೊಳ್ಳುತ್ತಾರೆ (2 ಕೊರಿಂಥ 11:13-15). ಕೆಲವು ವೇಳೆಗಳಲ್ಲಿ ಅವರ ಬೋಧನೆಯ ಸತ್ಯವಾಗಿಯೂ ಸಮಂಜಸವಾಗಿಯೂ ತೋರುತ್ತದೆ, ಆದರೆ ನಾವು ವಂಚನೆಗೊಳಗಾಗದಿರೋಣ; ಸತ್ಯವು ಎಂದಿಗೂ ಕ್ರೈಸ್ತರನ್ನು ಇಬ್ಭಾಗಿಸುವದಿಲ್ಲ. ಕ್ರೈಸ್ತರು ಯಾವುದಾದರೂ ಬೋಧನೆಯಿಂದ ಇಬ್ಭಾಗಗೊಳ್ಳುವದಾದರೆ ಈ ಬೋಧನೆಯು ಸಹಜವಾಗಿ ಮಿಥ್ಯವಾದದ್ದು ಅಥವಾ ತಿರುಚಿದ್ದಾಗಿರುತ್ತದೆ. ಅಲ್ಲದೆ, ಸುಳ್ಳು ಬೋಧಕರು ಕೆಲವು ವೇಳೆಗಳಲ್ಲಿ ಬುದ್ಧಿವಂತರಾಗಿ ಕಾಣಿಸುತ್ತಾರೆ, ಆದರೆ ನಾವು ವಂಚನೆಗೊಳಗಾಗದಿರೋಣ. ಯಾಕೋಬನು ಹೇಳಿದ್ದೇನಂದರೆ:...(ಮೇಲಿಣಿಂದ) ಪರಲೋಕದಿಂದ ಬರುವ ಜ್ಞಾನವು ಮೊದಲು ಪರಿಶುದ್ಧವಾಗದ್ದು, ಆ ಮೇಲೆ ಸಮಾಧಾನಕರವಾದದ್ದು, ವಿನಯವುಳ್ಳದ್ದು, ಸಂತೋಷವಾಗಿ ಒಪ್ಪಿಕೊವಂಥದ್ದು, ಕರುಣೆ ಮುಂತಾದ ಒಳ್ಳೇ ಫಲಗಳಿಂದ ತುಂಬಿರುವಂಥದು ಆಗಿದೆ; ಅದರಲ್ಲಿ ಚಂಚಲವೂ ಕಪಟವೂ ಇಲ್ಲ (ಯಾಕೋಬ 3:17).

ಅಂಥವರು (ಸುಳ್ಳು ಬೋಧಕರು) ನಮ್ಮ ಕರ್ತನಾದ ಯೇಸು ಕ್ರಿಸ್ತನ ಸೇವೆಯನ್ನು ಮಾಡದೆ ತಮ್ಮ ಹೊಟ್ಟೆಯ ಸೇವೆಯನ್ನೇ ಮಾಡುವವರಾಗಿದ್ದಾರೆ – ಅಂದರೆ, ಅವರು ತಮ್ಮ ಸ್ವಂತ (ಸ್ವಾರ್ಥ) ಸೇವೆಯನ್ನೇ ಮಾಡುವವರಾಗಿದ್ದಾರೆ. ವರ ಹೊಟ್ಟೆ ಅಥವಾ ಹಸಿವೆಗಲು ಏನೆಂದರೆ ಅವರ ಪ್ರಸಿದ್ಧಿಗಾಗಿನ ಆಶೆ ಮತ್ತು ಅಧಿಕಾರಕ್ಕಾಗಿ ದುರುಶಎಗಳನ್ನೊಳಗೊಂಡ ಅವರ ಅಭಿಲಾಷೆಗಳು ಮತ್ತು ದುರಿಚ್ಛೆಗಳೇ ಆಗಿವೆ( ಫಿಲಿಪ್ಪಿ 18-19).

**19** ಈ ಪತ್ರಿಕೆಯ ತನಕವೂ ರೋಮಾಪುರದ ಕ್ರೈಸ್ತರು ಸುಳ್ಳುವ ಬೋಧಕರಿಂದ ವಂಚಿಸಲ್ಪಟ್ಟಿರಲಿಲ್ಲ. ಪೌಲನು ಇದಕ್ಕಾಗಿ ಬಹಳ ಕೃತಜ್ಞತೆಯುಳ್ಳವನಾಗಿದ್ದಾನೆ. ಈ ಕಾರಣದಿದಲೇ ಪೌಲನು ಅವರನ್ನು ಈ ಸುಳ್ಳು ಬೋಧನೆಯ ಅಪಾಯದ ವಿಷಯದಲ್ಲಿ ಎಚ್ಚರಿಸಲು ಕಾತುರನಾಗಿದ್ದಾನೆ – ಆತನು ಅವರ ಐಕ್ಯತೆಯು ಹಾಳುಗುವದನ್ನು ನೋಡುವ ಇಚ್ಛೆಯನ್ನು ಹೊಂದಿರುವದಿಲ್ಲ....ಒಳ್ಳೇತನದ ವಿಷಯದಲ್ಲಿ ಜಾಣರಾಗಿರಿ. ಇದರ ಅರ್ಥವೇನೆಂದರೆ: ಒಳ್ಳೇದನ್ನು ಮಾಡುವರ ವಿಷಯದಲ್ಲಿ ಎಲ್ಲವನ್ನೂ ತಿಳಿಯಿರಿ. ಕೆಟ್ಟತನದ ವಿಷಯದಲ್ಲಿ ನಿಷ್ಕಪಟಿಗಳಾಗಿರಿ. ಇತರ ಅರ್ಥವೇನೆಂದರೆ: ಕೆಟ್ಟದ್ದನ್ನು ಮಾಡುವದರ ಬಗ್ಗೆ ಏನನ್ನೂ ತಿಳಿದುಕೊಳಅಳದಿರಿ (ಮತ್ತಾಯ 10:16; 1 ಕೊರಿಂಥ 120 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**20** ಪೌಲನು ರೋಮಾಪುರದ ಕ್ರೈಸ್ತರಿಗೆ ಹೇಳಲುವದನ್ನು ಗಮನಿಸಿರಿ: ದೇವರು ಶೀಘ್ರವಾಗಿ ಸೈತಾನನನ್ನು ನಿಮ್ಮ ಕಾಲುಗಳ ಕೆಳಗೆ ಹಾಕಿ ತುಳಿಸಿಬಿಡುವನು. ಆದರ ಅರ್ಥವೇನೆಂದರೆ ದೇವರು ನಿಮ್ಮ ಕಾಲುಗಳ ಕೆಳಗೆ ಸಹ ಸೈತಾನನ್ನು ಹಾಕಿ ತುಳಿಸಿಬಿಡುವನು. ಅಂದರೆ, ದೇವರು ಸೈತಾನನನ್ನು ನಾಶಮಾಡಲು ನಮ್ಮನ್ನು ಉಪಯೋಗಿಸುವನು! (ಆದಿಕಾಂಡ 3:14-15). ಯೇಸು ಪುನಃ ಭೂಮಿಗೆ ಬಂದಾಗ ಸೈತಾನನು ಸಂಪೂರ್ಣವಾಗಿ ನಾಸ ಹೊಂದುವನು.

**21** ಪೌಲನು ರೋಮಾಪುರದವರಿಗೆ ಈ ಪತ್ರಿಕೆಯನ್ನು ದಕ್ಷಿಣ ಗ್ರೀಸಿನ ಪ್ರಮುಖ ನಗರವಾದ ಕೊರಿಂತದಿಂದ ಬರೆದನು. ತಿಮೊತೆಯನು ಪೌಲನ ಜೊತೆ ಕೆಲಸದನಾಗಿದ್ದನು; ಅಲ್ಲದೆ ಆತನು ಪೌಲನ ಆತ್ಮೀಕ ಮಗನು ಸಹ ಆಗಿದ್ದನು (ಅ.ಕೃತ್ಯ 16:1-3; ಪಿಲಿಪ್ಪಿ 2:22). ತಿಮೊಥೆಯನ್ನು ಹೊಸಒಡಂಬಡಿಕೆಯಲ್ಲಿ ಅನೇಕಾವರ್ತಿ ಪ್ರಸ್ತಾಪಿಸಲ್ಪಟ್ಟಿದ್ದಾನೆ. ಪೌಲನು ಅವನಿಗೆ ಎರಡು ಪತ್ರಿಕೆಗಳನ್ನು ಬರೆದನು, 1 ತಿಮೊಥೆ ಮತ್ತು 2 ತಿಮೊತೆ, ಅವುಗಳು ಹೊಸ ಒಡಂಬಡಿಕೆಯಲ್ಲಿ ಸೇರಿರುತ್ತವೆ.

ಲೂಕ್ಯ ಎಂಬ ವ್ಯಕ್ತಿಯು ಅ.ಕೃತ್ಯ 13:1 ರಲ್ಲಿ ಸಹ ಪ್ರಸ್ತಾಪಿಸಲ್ಪಟ್ಟಿದ್ದಾನೆ. ಅಪೊಸ್ತಲರ ಕೃತ್ಯಗಳಲ್ಲಿನ ಲೂಕನು ಮತ್ತು ಈ ವಚನದಲ್ಲಿ ಪ್ರಸ್ತಾಪಿಸಲಾಗಿರುವ ಲೂತ್ಯನೂ ಒಂದೇ ಆಗಿರುವ ಸಾಧ್ಯತೆಯಿದೆ.

ಯಾಸೋನ ಎಂಬವನು ಅ.ಕೃತ್ಯ 17:5-9ರಲ್ಲಿ ಪ್ರಸ್ತಪಿಸಲ್ಪಟ್ಟಿದ್ದಾನೆ. ಸೋಸಿಪತ್ರನು ಅ.ಕೃತ್ಯ 20:4 ರಲ್ಲಿ ಪ್ರಸ್ತಪಿಸಲ್ಪಟ್ಟಿದ್ದಾನೆ.

**22** ಪೌಲನು ಸಾಮಾನ್ಯವಾಗಿ ತನ್ನ ಪತ್ರಿಕೆಗಳನ್ನು ಸ್ವಂತ ಕೈಯಿಂದ ಬರೆಯಲಿಲ್ಲ; ಬದಲಾಗಿ ಆತನು ಸದ್ದುರಾಯನಿಗೆ ಹೇಳುತ್ತಿದ್ದನು ಮತ್ತು ಪೌಲನು ಹೇಳಿದ್ದನ್ನು ಸದ್ದು ಕಾಯನು ಬರೆಯುತ್ತಿದ್ದನು. ರೋಮಾಪುರದವರಿಗೆ ಈ ಪತ್ರಿಕೆಯನ್ನು ಬರೆದ ಸದ್ದುಕಾಯನು ತೆರ್ತ್ಯನೆಂಬ ವನಾಗಿದ್ದನು, ಮತ್ತು ಇಲ್ಲಿ ಆತನ ತನ್ನ ವಯಕ್ತಿಕ ವಂದನೆಗಳನ್ನು ತಿಳಿಸುತ್ತಾನೆ.

**23-24** ಗಾಯನು ಎಂಬ ವ್ಯಕ್ತಿಯು ಅ.ಕೃತ್ಯ 129; 20:4; 1 ಕೊರಿಂಥ 1:14; 3 ಯೋಹಾನ 1 ರಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾನೆ.

**25** ಪೌಲನು ಇಲ್ಲಿ ಸುವಾರ್ತೆಯನ್ನು ನಾನುಸಾರುವಂಥ ಸುವಾರ್ತೆ ಎಂದು ಕರೆಯುತ್ತಾನೆ, ಯಾಕೆಂದರೆ ಆತನೇದನ್ನು ಸಾರುತ್ತಿದ್ದನು. ಆದರೆ ನಿಜವಾಗಿಯೂ, ಅದು ಕ್ರಿಸ್ತ ಸುವಾರ್ತೆಯಾಗಿದೆ, ಯೇಸು ಕ್ರಿಸ್ತನ ವಿಷಯವಾದ ಸುವಾರ್ತೆಯಾಗಿದೆಯಷ್ಟೇ. ನಾವು ಸಾರುವಾಗಲೆಲ್ಲಾ ಯೇಸು ಕ್ರಿಸ್ತನ ವಿಷಯವಾದ ಸಾರುವಿಕೆಯು ನಮ್ಮ ಬೋಧನೆಯ ಕೇಂದ್ರ ಹಾಗು ವ್ಯಾಪಕ ವಿಷಯವಾಗಿರತಕ್ಕದ್ದು (1 ಕೊರಿಂಥ 2:2 ನೋಡಿರಿ. ಸುವಾರ್ತೆ ಸಾರುವಿಕೆಯ ಮುಖಾಂತರ ಕ್ರಿಸ್ತನು ಸ್ವತಃ ನಮ್ಮನ್ನು ಸ್ಥಿರಪಡಿಸುವನು (ರೋಮ 14:4; 1 ಪೇತ್ರ 5:10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಅನಾದಿಯಾಗಿ ಗುಪ್ತವಾಗಿದ್ದ ಮರ್ಮವು ಯಾವದು? ಪುರುಷ ಮತ್ತು ಸ್ತ್ರೀಯರು ತಮ್ಮ ಸ್ವಕಾರ್ಯಗಳಿಂದಲ್ಲ, ಆದರೆ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕವೇ ರಕ್ಷಿಸಲ್ಪಟ್ಟಿದ್ದಾರೆಂಬದೇ ಈ "ಮರ್ಮ" ಆಗಿದೆ (ಎಫೆಸ 2:8-9; 3:4-6, 8:9; ಕೊಲೊಸ್ಸೆ 1:25-27 ಮತ್ತು ವಾಖ್ಯಾನಗಳನ್ನು ನೋಡಿರಿ). ಈಗ ಯೇಸು ಕ್ರಿಸ್ತನನು ಈ ಲೋಕಕ್ಕೆ ಬರುವದರ ಮೂಲಕ ಈ ಮರ್ಮವು ಪೂರ್ಣ ಪ್ರಕಾಶಕ್ಕೆ ಬಂದಿರುತ್ತದೆ.

ಕ್ರಿಸ್ತನ ಮೂಲಕ ದೊರೆಯುವ ರಕ್ಷಣೆಯ ಮರ್ಮವು ಮೊದಲು ಹಳೆ ಒಡಂಬಡಿಕೆಯ ಪ್ರವಾದಿಗಳು ಬರೆದ ಗ್ರಂಥಗಳ ಮೂಲಕ ಪ್ರಕಟಗೊಂಡಿತ್ತು. ಆದರೆ ಬಹುಪಾಲು ಜನರು ಪ್ರವಾದಿಗಳು ಹೇಳಿದ್ದನ್ನು ನಿಜವಾಗಿಯೂ ಗ್ರಹಿಸಿಕೊಳ್ಳಲಿಲ್ಲ. ಕ್ರಿಸ್ತನು ಬಂದಾಗ ಮಾತ್ರವೇ ಮರ್ಮವು ಸಂಪೂರ್ಣವಾಗಿ ಬೆಳಕಿಗೆ ಬಂತು (ಲೂಕ 24:25-27 ಮತ್ತು ವ್ಯಾಖ್ಯಾನ ನೋಡಿರಿ).

ಎಲ್ಲಾ ಜನಾಂಗಗಳು ಕ್ರಿಸ್ತನಲ್ಲಿ ನಂಬಿಕೆಯಿಟ್ಟು ಆತನಿಗೆ ವಿಧೇಯರಾಗಬೇಕೆಂಬದಕ್ಕಾಗಿ ಕ್ರಿಸ್ತನ ಮೂಲಕ ದೊರೆಯುವ ರಕ್ಷಣೆಯ ಈ ಮರ್ಮವು ತಿಳಿಸಲ್ಪಟ್ಟಿತು. ನಂಬುವದು ಮತ್ತು ವಿಧೇಯರಾಗುವದು ಹೇಗೆ ಒಟಾಟಗಿ ಸಾಗಬೇಕೆಂಬದನ್ನು ಪುನಃ ಗಮನಿಸಿರಿ (ಯೋಹಾನ 14:15; 21; ರೋಮ 1:5; ಯಕೋಬ 2:14, 17 ಮತ್ತು ವ್ಯಾಖ್ಯನಗಳನ್ನು ನೋಡಿರಿ).

ಕ್ರಿಸ್ತನಿಗೆ ವಿಧೇಯರಾಗದ ಹೊರತು ಕ್ರಿಸ್ತನಲ್ಲಿ ನಿಜವಾದ ನಂಬಿಕೆಯಿಡಲು ಸಾಧ್ಯವಿಲ್ಲ. ಕ್ರಿಸ್ತನಲ್ಲಿ ನಂಬಿಕೆಯನ್ನಿಡದೆ ವಿಧೇಯತ್ವವು ಇರಲಾರದು; ಯಾಕೆಂದರೆ ವಿಧೇಯತ್ವವು ನಂಬಿಕೆಯ ಫಲವೂ ಕಾರ್ಯವೂ ಆಗಿದೆ. ನಾವು ಕೇವಲ ಸುವಾರ್ತೆಯನ್ನು ಕೇಳಬಾರದು; ನಾವು ಅದಕ್ಕೆ ವಿಧೇಯರೂ ಆಗಬೇಕು. ಇಲ್ಲವಾದರೆ ಅದನ್ನು ಕೇಳಿಸಿಕೊಳ್ಳುವದರಲ್ಲಿ ಯಾವ ಅರ್ಥವಿರುವದಿಲ್ಲ (ಯಾಕೋಬ 1:22 ಮತ್ತು ವ್ಯಾಖ್ಯಾನ ನೋಡಿರಿ).

**27** ಪೌಲನು ತನ್ನ ಎಲ್ಲಾ ಪತ್ರಿಕೆಗಳಲ್ಲಿ ಶ್ರೇಷ್ಠವಾದ ಈ ಪತ್ರಿಕೆಯನ್ನು ದೇವರಿಗೆ ಯೇಸು ಕ್ರಿಸ್ತನ ಮೂಲಕ ಸ್ತೋತ್ರವಾಗಲಿ ಎಂದು ಹೇಳುತ್ತಾ ಮಕ್ತಾಯ ಗೊಳಿಸುತ್ತಾನೆ (ಯೋಹಾನ 17:1, 4 ಮತ್ತು ವ್ಯಾಖ್ಯಾನ ನೋಡಿರಿ). ಕ್ರಿಸ್ತ ಜೀವಿತದ ಮುಖಾಂತರ ದೇವರರ ನೀತಿ, ಒಳ್ಳೇತನ, ಕರುಣೆ ಮತ್ತು ಪ್ರೀತಿಗಳು ಸಂಪೂರ್ಣವಾಗಿ ಪ್ರಕಟಗೊಂಡಿರುತ್ತವೆ. ಇದಕ್ಕಾಗಿ ಜ್ಞಾನ ನಿಧಿಯಾದ ಒಬ್ಬನೇ ದೇವರಿಗೆ ಮತ್ತು ಆತನ ಮಗನಾದ ಯೇಸು ಕ್ರಿಸ್ತನಿಗೆ ಯುಗಯುಗಾಂತರಗಳಲ್ಲಿಯೂ ಮಹಿಮೆಯಾಗಲಿ. ಆಮೆನ್.

---

## ಟಿಪ್ಪಣಿ

[1] ಪೌಲನ ದಿನಗಳಲ್ಲಿ ದಮಸ್ಕವು ಮಧ್ಯಪೂರ್ವತ್ಯದ ಪ್ರಮುಖ ನಗರಗಳಲ್ಲಿ ಒಂದಾಗಿತ್ತು. ಇಂದು ಅದು ಆಧುನಿಕ ರಾಷ್ಟ್ರವಾದ ಸಿರಿಯಾದ ರಾಜಧಾನಿಯಾಗಿದೆ.

[2] ಪೌಲನ ಮೂಲ ಇಬ್ರಿಯ ಹೆಸರು ಸೌಲ; ಆತನ ಪರಿವರ್ತನೆಯ ನಂತರ ಅವನು ತನ್ನ ರೋಮಾಯ. ಹೆಸರಾದ ಪೌಲ ಎಂಬದನ್ನು ಉಪಯೋಗಿಸಿದನು.

4 ಪೌಲನ ಕಾಲದಲ್ಲಿ ಯೆಹೂದ್ಯನಲ್ಲದ ಯಾವನೇ ಆಗಲಿ "ಅನ್ಯ ಜನಾಂಗದವನು" ಎಂದು ಕರೆಯಲ್ಪಡುತ್ತಿದ್ದನು. ಕ್ರಿಸ್ತನ ಸುವಾರ್ತೆಯು ಮೊದಲು ಯೆಹೂದ್ಯರಿಗೆ ಸಾರಲ್ಪಟ್ಟಿತು, ಆದರೆ ಈಗ, ಪೌಲ ಮತ್ತು ಇತರರ ಮುಕಾಂತರ ಸುವಾರ್ತೆಯು ಅನ್ಯ ಜನಗಳಿಗೆ ಸಹ ಸಾರಲ್ಪಡುತ್ತಿತ್ತು.

5 ಹೊಸ ಒಡಂಬಡಿಕೆಯು ಮೂಲತಃ ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟಿತು.

6 ಪೌಲನ ಮರಣದ ನಂತರ ಸ್ವಲ್ಪ ಕಾಲದೊಳಗೆ ರೋಮಾಯ ಸಾಮ್ರಾಜ್ಯದಲೆಲ್ಲಾ ಇರುವ ಜನರೆಲ್ಲರೂ ರೋಮಾಯ ಚಕ್ರವರ್ತಿಯನ್ನು ದೇವರೆಂತೆ ಆರಾಧಿಸಬೇಕೆಂಬ ಹೊಸ ನಿಯಮವು ಜರಿಗೆ ಬಂದಿತ್ತು. ಕ್ರೈಸ್ತರು ಅದಕ್ಕೆ ನಿರಾಕರಿಸಿದಾಗ ಸೆರೆಮನೆ.ಲ್ಲಿ ಹಾಕಲ್ಪಟ್ಟರು ಮತ್ತು ಮರಣದಂಡನೆ ಸಹ ವಿಧಿಸಲ್ಪಟ್ಟಿತ್ತು. ಈ ದಿನವು ಸಹ ಬೃಹತ್ ಕ್ರೀಡಾಂಗಣವೊಂದರ ಪಲಿಯುಳಿಕೆಗಳಿರುತ್ತವೆ, ಅಲ್ಲಿ ಮನರಂಜನೆಗಾಗಿ ಚಕ್ರವರ್ತಿ ಮತ್ತು ರೋಮಾಯದ ಇತರ ಅಧಿಕಾರಿಗಲು ಕ್ರೂರ ಹಿಂಸಗಳಿಂದ ಕ್ರೈಸ್ತರು ಕೊಲ್ಲಲ್ಪಟ್ಟು ತಿನ್ನಲ್ಪಡುವದನ್ನು ವಿಕ್ಷಿಸುವದಕ್ಕೆ ಬರುತ್ತಿದ್ದರು.

7 ಗ್ರೀಕರಲ್ಲಿ ದವರು ಎಂಬ ಸ್ಥಾನದಲ್ಲಿ ಬೈಬಲಿನ ಕೆಲವು ಭಾಷಾಂತರಗಳು "ಬಾರ್ಬೆರಿಯರು" – ಅಂದರೆ, ಅನಾಗರಿಕ ಜನರು ಎಂದು ಹೇಳುತ್ತವೆ.

8 ಯೆಹೂದ್ಯರು ಕಾಯೆ ಯೇಸುವನ್ನು ತಿರಸ್ಕರಿಸಿದರೆಂಬದರ ಹೆಚ್ಚಿನ ಚರ್ಚೆಗಾಗಿ ಯೋಹಾನ 9:22-23 ಮತ್ತು ವ್ಯಾಖ್ಯಾನ ನೋಡಿರಿ.

9 ಸಲಿಂಗ ವ್ಯಕ್ತಿಯೆಡೆಗೆ ಸ್ವಾಭಾವಿಕ ಆಕರ್ಷಣೆಯನ್ನು ಹೊಂದುವದು ಪಾಪವಲ್ಲ. ಆ ಆಕರ್ಷಮೆಯು ಕಾಮಾಭಿಲಾಷೆಯಾಗಿಯೂ ಮನಸ್ಸನ್ನು ಪೀಡಿಸುವದಾಗಿಯು ಬೆಳೆಯುವಾಗ ಮಾತ್ರವೇ ಅದು ಒಂದು ಪಾಪವಾಗುತ್ತದೆ. ಕೆಲವು ಜನರು ಬಾಲ್ಯದ ವಯಸ್ಸಿನಿಂದಲೇ ತದ್ವರುದ್ಧಲಿಂಗಕ್ಕಿಂತಲೂ ಸಲಿಂಗದೆಡೆಗೆ ಹೆಚ್ಚು ಆಕರ್ಶಿತರಾಗಿರುತ್ತಾರೆ. ಅದಕ್ಕೆ ಅನೇಕ ಕಾರಣಗಳಿರಬಹುದು; ಆ ವ್ಯಕ್ತಿಯು ಅತಿರೇಕನು ಅಥವಾ ಪಾಪಿ ಯಾಗಿರುವನು ಎಂದು ಅರ್ಥವಲ್ಲ. ಅಂತಹ ಅಕರ್ಷಣೆಯು ದುರಿಚ್ಛೆಗೂ ಅಸ್ವಾಭಾವಿಕ ಕ್ರಿಯೆಗೂ ನಡೆಸುವಾಗ ಮಾತ್ರವೇ ಅದು ಒಂದು ಪಾಪಮಯವಾಗುತ್ತದೆ.

10 ಕೆಲವು ಕ್ರೈಸ್ತರು ಮಾನವನಿಗೆ ಅಂತಹ ಸ್ವಾತಂತರ ಇರುವದಿಲ್ಲ ಎಂದು ನಂಬುತ್ತಾರೆ. ದೇವರ ಕೃಪೆಯಿಂದ ಮಾತ್ರವೇ ಒಬ್ಬ ಮನುಷ್ಯನು ದೇ ಬಳಿಗೆ ಬರಬಲ್ಲನು ಎಂದು ಅವರು ಹೇಳುತ್ತಾರೆ. ಇದು ನಿಜವಾದದ್ದು. ಆದರೆ ಮಾನವನಿಗೆ ದೇವರ ಕೃಪೆಯನ್ನುತಿರಸ್ಕರಿಸುವ ಸ್ವಾತಂತ್ರವಿರುತ್ತದೆಂದು ಬಹಾಪಾಲು ಜನರು ನಂಬುತ್ತಾರೆ. ಇದು ಒಂದು ಕ್ಲೇಷ್ಠಕರ ವಿಷಯವಾಗಿದೆ; ಹೆಚ್ಚಿನ ಚರ್ಚೆಗಾಗಿ ಸಾಮಾನ್ಯ ಲೇಖನ: ರಕ್ಷಣೆ – ದೇವರ ಆಯ್ಕೆಯೋ ಅಥವಾ ಮನು,ಶ್ಯನ ಆಯ್ಕೆಯೋ? ನೋಡಿರಿ.

11 ರಕ್ಷಣೆಯ ಕುರಿತು ಹೆಚ್ಚಿನ ಚರ್ಚೆಗಾಗಿ ಸಾಮಾನ್ಯ ಲೇಖನ: ರಕ್ಷಣೆಯ ಮಾರ್ಗ ನೋಡಿರಿ.

12 ಹೇಗಿದ್ದರೂ, ವಿಷಯವು ಅ,ಶ್ಟು ಸರಳವಾಗಿರುವದಿಲ್ಲ, ಯಾಕೆಂದರೆ ಹಲವಾರು ವೇಲೆಗಳಲ್ಲಿ ಜನರು ಕಾರ್ಯಗಳನ್ನು ನಾನಾ ವಿಧದ ಕಾರಣಗಳಿಗಾಗ, ಅರ್ಥ ಸ್ವಾರ್ಥ ಮತ್ತು ಅರ್ಥ ನಿಸ್ವಾರ್ಥ ಕಾರಣಗಳ ಸಮ್ಮಿಲನದಿಂದ ಮಾಡುತ್ತಾರೆ. ದೇವರು ಮಾತ್ರವೇ ನಮ್ಮ ಕಾರ್ಯಗಳ ಹಿಂದಿನ ಕಾರಣಗಳನ್ನು ಬಲ್ಲನು ಮತ್ತು ಆತನು ನಮ್ಮ ಕಾರ್ಯಗಳಿಗೆ ತಕ್ಕ ಹಾಗೆ ತೀರ್ಪು ಮಾಡುವನು.

13 ಅನ್ಯಜನಾಂಗ ಎಂಬ ಪದದ ಬದಲಿಗೆ ಬೈಬಲಿನ ಕೆಲವು ಭಾಷೆಂತರಗಳು "ಗ್ರೀಕರು" ಎಂದು ಹೇಳುತ್ತವೆ. ಈ ಸನ್ನಿವೇಶದಲ್ಲಿ "ಗ್ರೀಕರು" ಎಂಬ ಪದವು "ಅನ್ಯ ಜನಾಂಗ" ಎಂಬ ಅರ್ಥವನ್ನು ಕೊಡುತ್ತದೆ.

14 ವಿಗ್ರಹಾರಾಧನೆಯ ವಿಷಯದಲ್ಲಿ ಸಹ ಯೆಹೂದ್ಯ ಧರ್ಮಶಾಸ್ತ್ರ ಮತ್ತು "ಸ್ವಾಭಾವಿಕ ಧರ್ಮಶಾಸ್ತ್ರ" ಗಳನಡುವೆ ಪ್ರಾಥಮಿಕವಾಗಿ ಯಾವ ವ್ಯತ್ಯಾಸವಿರುವದಿಲ್ಲ. ವಿಗ್ರಹಾರಾಧನೆಯು ಯಾವದೇ ಸ್ವಭಾವಿಕ ಧರ್ಮಸಾಸ್ತ್ರದ ಭಾಗವಾಗಿರುವದಿಲ್ಲ. ಎಲ್ಲಾ ಮಾನವ ಜನಾಂಗವೂ ಶ್ರೇಷ್ಠ ಸೃಷ್ಟಿ ಕರ್ತ ದೇವರನ್ನು ಗುರುತಿಸಿ ಆತನನ್ನೇ ಆರಾಧಿಸುವದಕ್ಕೆ ಶಕ್ತರಾಗಬೇಕು.

15 ಕೋಲವು ಜನರು ದೀಒಖಾಸ್ನಾನದ ಸಂಸ್ಕಾರವ್ನನು ಯೆಹೂದ್ಯ.ರು ಸುನ್ನತಿಯನ್ನು ಪರಿಗಣಿಸಿದ್ದ ಪ್ರಕಾರವೇ ಪರಿಗಮಿಸುತ್ತಾರೆ; ಕೇವಲ ದಿಕ್ಷಾಸ್ನಾನ ಹೊಂದಿದವರಾಗಿರುವದು ಅವರನ್ನು ಕ್ರೈಸ್ತರನ್ನಾಗಿ ಮಾಡುತ್ತದೆಂದು ಅವರು ತಪ್ಪಾದ ನಂಬಿಕೆಯನ್ನು ಹೊಂದರುತ್ತಾರೆ. ಹೇಗಿದ್ದರೂ,. ದಿಕ್ಷಾಸ್ನಾನದ ಜೊತೆಯಲ್ಲಿ ನಿಜವಾದ ಅಂತರ್ಯದ ನಂಬಿಕೆಯಲ್ಲದಿದ್ದರೆ ದೀಕ್ಷಾಸ್ನಾನಕ್ಕೆ ಯಾವ ಬೆಲೆಯಿರುವದಿಲ್ಲ (ಸಾಮಾನ್ಯ ಲೇಖನ: ನೀರಿನ ದಿಕ್ಷಾಸ್ನಾನ ನೋಡಿರಿ).

16 ಹೇಗಿದ್ದರೂ ನಾವು ನೆನಪಿನಲ್ಲಿಟ್ಟು ಕೊಳ್ಳಬೇಕಾದ ಸಂಗತಿಯೇ ನೆಂದರೆ, ಸ್ವಾರ್ಥತೆಯೆಂಬ ಮೂಲ ಪಾಪಕ್ಕೆ ಕಾರಣವಾಗುವ ಸಂಗತಿಯೇ ಎಲ್ಲಾ ಪಾಪಕ್ಕೂ ಮೂಲವಾಗಿದೆ: ಅಪನಂಬಿಕೆ (ರೋಮ 1:18 ಮತ್ತು ವ್ಯಾಖ್ಯಾನ ನೋಡಿರಿ). ದೇವರನ್ನು ನಂಬದ ವ್ಯಕ್ತಿಯು ಯಾವಾಗಲೂ ತನ್ನನ್ನೇ ದೇವರ ಸ್ಥಾನದಲ್ಲಿಟ್ಟುಕೊಳ್ಳುವವನಾಗಿದ್ದಾನೆ. ಆತನು ದೇವರ ಮೇಲೆ ಆದಾರವಾಗಿರುವದರ ಬದಲಾಗಿ ತನ್ನ ಸ್ವರ್ಥವನ್ನು ಆಧಾರಮಾಡಿಕೊಂಡಿರುತ್ತಾನೆ. ದೇವರ ಚ್ತವನ್ನು ಅನುಸಂರಿಸುವದರ ಬದಲಾಗಿ ಆತನು ತನ್ನ ಸ್ವಂತ ಚಿತ್ತವನ್ನು ಅನುಸರಿಸುತ್ತಾನೆ. ಹೀಗೆ, ಅಪನಂಬಿಕೆಯುರು ತಪ್ಪದೆ ಸ್ವಆಧಾರಕ್ಕೆನಡಿಸುತ್ತದೆ, ಅದು ತಿರಿಗಿ ಇತರ ಎಲ್ಲಾ ಪಾಪಗಳಿಗೂ ದಾರಿಮಾಡುತ್ತದೆ.

17 ಕೆಲವು ವೇಲೆಗಳಲ್ಲಿ ಪೌಲನು ಹಳೆ ಒಡಂಬಡಿಕೆಯನ್ನು ೧೯ನೇ ವಚನದಲ್ಲಿರುವ ಪ್ರಕಾರ ಧರ್ಮಸಾಸ್ತ್ರಕ್ಕೆ ಸೂಚಿಸುತ್ತಾನೆ. ಆದರೆ ಬಹಲ ಸಾಮಾನ್ಯವಾಗಿ ಹಲೆ ಒಡಂಬಡಿಕೆಯು ಧರ್ಮಸಾಸ್ತ್ರ ಮತ್ತು ಪ್ರವಾದಿಗಳ ಗ್ರಂಥಗಳು ಎಂದು ಕರೆಯಲ್ಪಟ್ಟಿದೆ. ಹಳೆ ಒಡಂಬಡಿಕೆಯ ಮೊದಲ ಐದು ಪುಸ್ತಕಗಳು ಧರ್ಮಸಾಸ್ತ್ರ ಎಂಬಂತೆ ತಿಳಿಯಲ್ಪಟ್ಟಿರುತ್ತವೆ. ಅಲ್ಲದೆ, ಹಳೆ ಒಡಂಬಡಿಕೆಯ ಬಹುಪಾಲು ಬಾಗಲು ಯೆಶಾಯ, ಯೆರೆಮೀಯ ಮತ್ತು ಇತರ ಅನೇಕ ಪ್ರವಾದಿಗಳಂತಗ ಬರಹಗಳನ್ನು ಒಳಗೊಂಡಿರುತ್ತದೆ; ಹಾಗಾದರೆ ಹಳೆ ಡಂಬಡಿಕೆಯ ಈ ಬಾಗವು ಪ್ರವಾದಿಗಳ ಗ್ರಂಥಗಲು ಎಂದು ಕರೆಯಲ್ಪಡುತ್ತದೆ.

18 ಇಬ್ರಾಯ 139-40ರ ಪ್ರಕಾರವಾಗಿ ಕ್ರಿಸ್ತನ ಕಾಲಕ್ಕಿಂತ ಮುಂಚೆ ಜೀವಿಸಿದ್ದ ಸ್ತ್ರೀಪುರುಷ್ರು ಕ್ರಿಸ್ತನನ್ನು ನಂಬುವವರಾದ ನಮ್ಮೊಂದಿಗೆ ಸಿದ್ದಿಗೆ ಬರುತ್ತಾರೆ. ಹೀಗೆ, ದೇವರು ಅವರ ನಂಬಿಕೆಯನ್ನು ಘನಪಡಿಸಿ ಅವರನ್ನು ರಕ್ಷಿಸುವನೆಂದು ತೋರುತ್ತದೆ. ಹೇಗಿದ್ದರೂ, ಹಳೆ ಒಡಂಬಡಿಕೆಯ ಯೆಹೂದ್ಯರು ಕ್ರೈಸ್ತರಿಗೆ ಕೊಡಲ್ಪಟ್ಟಿರುವ ರಕ್ಷಣೆಯ ದೃಢವಾಜದ ನಿರೀಕ್ಷೆಯನ್ನು ಹೊಂದಿರಲಿಲ್ಲ.

19 ಬೈಬಲಿನ ಕೆಲವು ಭಾಷಾಂತರಗಳು "ವಂಶಕ್ರಮವಾಗಿ ನಮ್ಮ ಮೂಲಪಿತೃವಾದ" ಎಂದು ಹೇಳುತ್ತವೆ.

[20] ನೀತಿವಂತರಾಗುವದು ಎಂದರೆ ದೇವರಿಂದ ನೀತಿವಂತರೆಂದು ನಿರ್ಣಯಸಲ್ಪಡುವದು ಎಂಬ ಅರ್ಥವಾಗಿದೆ.

[21] ನಾವು ದೇವರೊಂದಿಗೆ ಸಮಾದಾನ ಹೊಂದಿದ್ದೇವೆ ಎಂಬ ಪದಗಳಿಗೆ ಬದಲಾಗಿ ಬೈಬಲಿನ ಕೆಲವು ಬಾಷಾಂತರಗಳು "ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ" ಎಂದು ಹೇಳುತ್ತವೆ. ರೋಮಾಪುರದವರಿಗೆ ಬರೆದ ಪತ್ರಿಕೆಯ ಕೆಲವು ಪುರಾತನ ಹತ್ತ ಪ್ರತಿಗಳಲ್ಲಿ ಒಂದು ರೀತಿಯಿದ್ದರೆ ಬೇರೆ ಕೆಲವು ಪ್ರತಿಗಳಲ್ಲಿ ಬೇರೆ ರೀತಿಯಾಗಿ ಇರುತ್ತದೆ. ಎರಡರ ಮದ್ಯದಲ್ಲಿ ಪೌಲನು ಯಾವುದನ್ನು ಬರೆದನೆಂದು ನಾವು ಸಂಪೂರ್ಣ ಖಚಿತವಾಗಿ ಹೇಳಲಾಗದು. ಹೇಗಿದ್ದರೂ, ಅರ್ಥವನ್ನು ನೋಡುವಾಗ ನಾವು ದೇವರೊಂದಿಗೆ ಸಮಾಧಾನ ಹೊಂದಿದ್ದೇವೆ ಎಂಬದು ಪೌಲನ ಒಟ್ಟಾರೆ ಬೋಧನೆಗೆ ಉತ್ತಮವಾಗಿ ಹೊಂದಾಣಿಕೆಯಾಗುತ್ತದೆ.

[22] ವಿಶ್ವಾಸಿಗಳು ಒಂದು ಅರ್ಥದಲ್ಲಿ ಒಂದೇ ಸಾರಿ ಶಾಸ್ವತವಾಗಿ ದೇವರೊಂದಿಗೆ ಸಮಾಧಾನ ಹೊಂದಿರುತ್ತಾರೆ ಮತ್ತು ಒಮ್ಮೆ ನಿಜವಗಿಯೂ ಸಮಾಧಾನಹೊಂದಿದ ಮೇಲೆ ಅವರು ಪುನಃ ಬೇರ್ಪಡಲು ಸಾಧ್ಯವಿಲ್ಲ ಎಂದು, ಅನೇಕ ಕ್ರೈಸ್ತರು ನಂಬಿತ್ತಾರೆ. ಈ ವಿಷಯದ ಕುರಿತು ಹೆಚ್ಚಿನ ಚರ್ಚೆಗಾಗಿ ಸಾಮಾನ್ಯ ಲೇಖನ: ನಾವು ನಮ್ಮ ರಕ್ಷಣೆಯನ್ನು ಕಳೆದು ಕೊಳ್ಳಲು ಸಾಧ್ಯವೋ? ನೋಡಿರಿ.

[23] ಇಲ್ಲಿ ಧರ್ಮಶಾಸ್ತ್ರ ಎಂಬ ಪದವು ದೇವರು ಕಲ್ಲಿನ ಶಾಸನಗಳ ಮೇಲೆ ಬರೆದು ಮೋಶೆಗೆ ನೀಡಿದ ಧರ್ಮಶಾಸ್ತ್ರವನ್ನು ಸೂಚಿಸುತ್ತದೆ.

[24] ಹೇಗಿದ್ದರೂ, ಮೋಶೆಯ ಕಾಲಕ್ಕಿಂತ ಮುಂಚೆ ಒಂದು "ಸ್ವಾಭಾವಿಕ ಧರ್ಮಶಾಸ್ತ್ರ" ಇತ್ತು. ಮಾನವರು ಈ ಸ್ವಾಭಾವಿಕ ಧರ್ಮಸಾಸ್ತ್ರವನ್ನು ಉಲ್ಲಂಘಿಸಿ ದೇವರ ವಿರುದ್ಧ ಪಾಪಮಾಡಿದಾಗ ದೇವರು ಅದಕ್ಕಾಗಿ ಅವರನ್ನು ದಂಡಿಸಿದನು (ವಚನ 14 ಮತ್ತು ವ್ಯಾಕ್ಯಾನ ನೋಡಿರಿ).

[25] ಕ್ರಿಸ್ತನಿಲ್ಲದೆ ಇರುವವರು ಒಂದು ಅರ್ಧದಲ್ಲಿ ಈಗಾಗಲೇ "ಸತ್ತವರಾಗಿರುತ್ತಾರೆ" (ಎಫೆಸ 1). ಕ್ರೈಸ್ತನಾಗುವದೆಂದರೆ ಪವಿತ್ರಾತ್ಮ ಮೂಲಕ "ಜೀವವನ್ನು ಪಡೆಯುವದು' ಎಂದು ಅರ್ಧವಾಗಿರುತ್ತದೆ (ಯೋಹಾನ 3:3,5 ಮತ್ತು ವ್ಯಾಕ್ಯಾನ ನೋಡಿರಿ). ಹೇಗಿದ್ದರೂ, ಮಾನವನು ವಾಸ್ತವಿಕವಾಗಿ ಸಾಯುವ ವರೆಗೂ ಆತನು ಆತ್ಮೀಕವಾಗಿ ಸಂಪೂರ್ಣ ಸತ್ತಿರುವದಿಲ್ಲ; ಅದಕ್ಕೆ ಮುಂಚಿತವಾಗಿ ಜೀವದ ನಿರೀಕ್ಷೆಯು ಯಾವಾಗಲೂ ಇರುತ್ತದೆ.

[26] ಒಬ್ಬ ಕ್ರೈಸ್ತನಿಗೆ ದೀಕ್ಷಾಸ್ನಾನವು ಅತ್ಯಂತ ಪ್ರಾಮುಖ್ಯಾವಾದ ಘಟನೆಯಾಗಿರುತ್ತದೆ. ಇದು ಒಬ್ಬ ನೂತನ ಕ್ರೈಸ್ತನು ಎಲ್ಲಾ ಜನರೆದುರಿಗೆ ಪಾಲ್ಗೊಳ್ಳುವ ಪ್ರಥಮ ಬಹಿರಂಗದ ಕಾರ್ಯವಾಗಿದ್ದು ಅದರಲ್ಲಿ ಆತನು ಈಗ ತಾನು ಯೇಸು ಕ್ರಿಸ್ತನಿಗೆ ಸೇರಿದವನೆಂಬದನ್ನು ಪ್ರಪಂಚಕ್ಕೆ ಸಾಕ್ಷಿಯಾಗಿ ಹೇಳುವವನಾಗಿದ್ದಾನೆ. ದೀಕ್ಷಾಸ್ನಾನದ ಸಂಸ್ಕಾರದಲ್ಲಿ ವಿಶ್ವಸಿಯನ್ನು ನೀರಿನಲ್ಲಿ ಮುಳ್ಳುಗಿಸವದರ ಮೂಲಕ ಆತ್ಮೀಕ ಅರ್ತದಲ್ಲಿ ಆತನ ಪಾಪಗಳ ತೊಳೆಯಲ್ಪಟ್ಟಿರುತ್ತವೆ ಎಂಬ ಅರ್ಥವಾಗಿರುತ್ತದೆ.

ದೀಕ್ಷಾ ಸ್ನಾನವು ನಾವು ಪಾಪದಿಂದ ಶುದ್ದಿ ಗೊಳಿಸಲ್ಪಟ್ಟಿರುವದಕ್ಕೂ ಕ್ರಿಸ್ತನಲ್ಲಿ ನಮಗಿರುವ ನೂತನ ಜೀವಿತಕ್ಕೂ ಹೊರಗಿನ ಗುರುತು ಅಥವಾ ಚಿನ್ಹೆ ಮಾತ್ರವೇ ಿಂದು ಕೆಲವು ಕ್ರೈಸ್ತರು ಸನಂಬುತ್ತಾರೆ. ಆದರೆ ಇತರ ಕ್ರೈಸ್ತರು ಈ ವಚನವನ್ನು ಪ್ರಸ್ತಪಿಸುತ್ತಾ ದೇವರು ದೀಕ್ಷಾಸ್ನಾನ ಸಂಸ್ಕಾರದ ಮುಖಾಂತರ ನಮ್ಮ "ಪೂರ್ಣ ಪಾಪಾಧೀನ ಸ್ವಭಾವವನ್ನು" ಆತ್ಮೀಕವಾಗಿ ಮರಣೆ ಸುವಂತೆ ಮಾಡುತ್ತಾನೆಂದೂ ಮತ್ತು ಅದೇ ವೇಳೆಯಲ್ಲಿ ನಮ್ಮ "ನೂತನ ಆತ್ಮೀಕ ಸ್ವಭಾವವು " ಕ್ರಿಸ್ತನಲ್ಲಿ ಜೀವವನ್ನು ಪಡೆಯುವಂತೆ ಮಾಡುತ್ತಾನೆಂದು ನಂಬುತ್ತಾರೆ. ಹೆಚ್ಚಿನ ಚರ್ಚೆಗಾಗಿ ಪದಪಚ್ಚಿ: ದೀಕ್ಷಾಸ್ನಾನ; ದೀಕ್ಷಾಸ್ನಾನ; ಸಾಮಾನ್ಯ ಲೇಖನ: ನೀರಿನ ದೀಕ್ಷಾಸ್ನಾನ ನೋಡಿರಿ.

[27] ಈ ವಚನದಲ್ಲಿ ಪ್ರಸ್ತಾಪಿಸಲಾಗಿರುವ ನಮ್ಮ ಪೂರ್ವ ಸ್ವಬಾವವನ್ನು ಶಿಲುಬೆಗೆ ಹಾಕುವದು ನಿಷ್ಕ್ರಿಯ ಶಿಲುಬೆಗೇರಿಸುವಿಕೆ ಯಾಗಿದೆ. ಗಲಾತ್ಯ ೫:೨೪ರಲ್ಲಿ ಪೌಲನು ಸಕ್ರಯ ಶಿಲುಬೆಗೇರಿಸುವಿಕೆಯ ಬಗ್ಗೆ ಮಾತಾಡುತ್ತಾನೆ, ಅದನ್ನು ಸ್ವತಃ ನಾವೇ ಜಾರಿಗೆ ತರಬೇಕಾಗಿತ್ತದೆ. ನಮ್ಮ ನಿಷ್ಕ್ರಿಯ ಶಿಲುಬೆಗೇರಿಸುವಿಕೆಯು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮುಖಾಂತರ ನೆರೆವೇರುತ್ತದೆ. ನಮ್ಮ ಸಕ್ರಿಯ ಶಿಲುಬೆಗೇರಿಸುವಿಕೆಯು ನಾವು ನಮ್ಮನ್ನು ನಿರಾಕರಿಸಿ ಪವಿತ್ರಾತ್ಮನಿಗೆ ಒಪ್ಪಿಸಿಕೊಡುವದಾದರೆ ಅದು ನಮ್ಮ ಮೂಲಕ ನೆರವೇರಿಸಲ್ಪಡುತ್ತದೇ ಮಾರ್ಕ 34; ರೋಮ 13; ಗಲಾತ್ಯ 5:24 ಮತ್ತು ವ್ಯಾಕ್ಯಾನಗಳನ್ನು ನೋಡಿರಿ.

[28] ನಮ್ಮ ಭೌತಿಕ ದೇಹವು ಸಾಯುವದು, ಆದರೆ ನಮ್ಮ ಅತಿಪ್ರಾಮುಖ್ಯ ಭಾಗವಾದ – ನಮ್ಮ ಪ್ರಾಣ ಮತ್ತು ಆತ್ಮ – ಿಂದಿಗೂ ಸಾಯುವದಿಲ್ಲ.

[29] ನಾವು ಸ್ವ ಆಧಾರವನ್ನು ಮಾನವನ ಅತಿ ಮೂಲ ಪಾಪವೆಂದು ಕರೆಯಬಹುದಾದರೂ ಆ ಪಾಪಕ್ಕೆ ಮೂಲ ಕಾರಣವು ಅಪನಂಬಿಕೆಯಾಗಿದೆ. ಅಪನಂಬಿಕೆಯು ಎಲ್ಲಾ ಪಾಪಕ್ಕೂ ಮೂಲವಾಗಿದೆ (ರೋಮ 4:19-21 ಮತ್ತು ವ್ಯಾಖ್ಯಾನ ನೋಡಿರಿ). ಹೆಚ್ಚಿನ ಚರ್ಚೆಗಾಗಿ ರೋಮ 3:10-12 ರ ವ್ಯಾಖ್ಯಾನ ಮತ್ತು ವ್ಯಾಖ್ಯಾನದ ಅಡಿ ಟಿಪ್ಪಿಣಿಯನ್ನು ನೋಡಿರಿ.

ಧರ್ಮಶಾಸ್ತ್ರಕ್ಕೆ ಅಧೀನರಲ್ಲಿ ಯೆಹೂದ್ಯರು ಮತ್ತು ರಕ್ಷಣೆಯು ಸತ್ಕ್ರೀಯೆಗಳನ್ನು ಮಾಡುವದರಿಂದ ಅಥವಾ ಧರ್ಮಶಾಸ್ತ್ರ ಇಲ್ಲವೆ ಕೆಲವೊಂದು ಧಾರ್ಮಿಕ ನಿಯಮಗಲಿಗೆ ವಿಧೇಯರಾಗುವದರಿಂದ ದೊರೆಯುತ್ತದೆಂದು ನಂಬುವ ಇತರ ಎಲ್ಲಾ ಜನರೂಸೇರಿತುತ್ತಾರೆ.

[31] ಧರ್ಮಶಾಸ್ತ್ರವು ಕೆಟ್ಟದ್ದೆಂದು ನಾವು ಯೋಚ್ಚದಿರೋಣ. ಮನುಷ್ಯರೇ ಕೆಟ್ಟವರು. ಅವರು ಧರ್ಮಶಾಸ್ತ್ರಕ್ಕೆ ಪೂರ್ಣವಾಗಿ ವಿಧೇಯರಾಗುವದಿಲ್ಲ.

[32] ಶರೀರಾಧೀನ ಸ್ವಬಾವಲಕ್ಕೊಳಪಟ್ಟವರು ಎಂಬ ಪದಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಶರೀರಾಧೀನ ಸ್ವಬಾವವನ್ನು ಅನುಸರಿಸುವವರು" ಎಂದು ಹೇಳುತ್ತವೆ. ಎರಡರ ಅರ್ಥವೂ ಒಂದೇ ಆಗಿದೆ. ರೋಮಾಪುರದವರಿಗೆ ಬರೆದ ಪತ್ರಿಕೆಯ ಅನೇಕ ವಚನಗಳಲ್ಲಿ ಪೌಲನು "ಶರೀರಾಧೀನ" ಎಂಬ ಗ್ರೀಕ್ ಉಪಯೋಗಿಸುವಾಗ ಆತನ ತಾತ್ಪರ್ಯವು " ಪಾಪಾಧೀನ ಸ್ವಭಾವ" ಎಂಬದೇ ಹೊರತು ದೇಹವಲ್ಲ. ಹೆಚ್ಚಿನ ಚರ್ಚೆಗಾಗಿ ಪದಪಟ್ಟಿ: ಶರೀರಾಧೀನ ಸ್ವಭಾವ ನೋಡಿರಿ.

[33] ಮಾನವನ ಹೃದಯ ಮತ್ತು ಮನಸ್ಸು ಸ್ವತಃ ಪಾಪಮಯವಲ್ಲ. ಆದರೆ ಅವುಗಳು ನಮ್ಮ ಪಾಪಧೀನ ಸ್ವಭಾವಕ್ಕಳಪಡುವಾಗ ಅವುಗಳು ಸಹ ಪಾಪಮಯವಾಗುತ್ತವೆ.

[34] ಪೌಲನು ಈ ವಚನದಲ್ಲಿ ಕ್ರಿಸ್ತನ ವಿಶ್ವಾಸಿಗಳ ಕುರಿತಾಗಿ ಅಲ್ಲ, ಆದರೆ ಅವಿಶ್ವಾಸಿಗಳ ಕುರಿತಾಗಿ ಮಾತುಡುತ್ತಿದ್ದಾನೆ. ಅವಿಶ್ವಾಸಿಗಲು ಧರ್ಮಸಾಸ್ತ್ರದ ಅಧೀನದಲ್ಲಿ ರುತ್ತಾರೆ; ಅವರು ಪಾಪಧೀನ ಸ್ವಭಾವಕ್ಕೊಳಪಟ್ಟಿರುತ್ತಾರೆ. ಆದರೆ ವಿಶ್ವಾಸಿಗಳು ಪಾಪಧೀನ ಸ್ವಭಾವದ ಹತೋಟಿಯಲ್ಲಿರುವದಿಲ್ಲ (ರೋಮ 8:9).

[35] ಪೌಲನು ಇಲ್ಲಿ ಬರೆಯುವದೇನೆಂದರೆ: ನಾನು... ಪಾಪದ ಸ್ವಾಧೀನದಲ್ಲಿ ರುವದಕ್ಕೆ ಮಾರಲ್ಪಟ್ಟವನು. ಪೌಲನು ಇಲ್ಲಿ ತಾನು ಕ್ರೈಸ್ತನಾಗುವದಕ್ಕೆ ಮುಂಚಿನ ಕಾಲದ ಬಗ್ಗೆ ಮಾತುಡುತ್ತಿದ್ದಿರಬೇಕು, ಯಾಕೆಂದರೆ ಒಬ್ಬ ನಿಜ ಕ್ರೈಸ್ತನು ಎಂದಿಗೂ ತನ್ನನ್ನು

ಪಾಪಾಸ್ವಧೀನದಲ್ಲಿರುವದಕ್ಕೆ ಮಾರಲ್ಪಟ್ಟವನೆಂದು ಹೇಳುವದಿಲ್ಲ ಎಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ. (ರೋಮ 6:18 ನೋಡಿರಿ).

36 ವಚನ 22ರಲ್ಲಿ ಪೌಲನು ಬರೆಯುವದೇನೆಂದರೆ: ಅಂತರಾತ್ಮದೊಳಗೆ ದೇವರ ನಿಯಮದಲ್ಲಿ ಆನಂದ ಪಡುವವನಾಗಿದ್ದೇನೆ. ಪೌಲನು ಇಲ್ಲಿ ತಾನು ಕ್ರೈಸ್ತನಾದ ಮೇಲೆ ಹೊಂದಿದ ಅನುಭವದ ಕುರಿತಾಗಿ ಬರೆಯುತ್ತಿದ್ದಾನೆಂದು ನಂಬುವ ಬೈಬಲ್ ಪಂಡಿತರು ಹೇಲುವದೇನೆಂದರೆ ಒಬ್ಬ ಕ್ರೈಸ್ತ್ಯೇತರನಾಗಿ ಆತನು ಎಂದಿಗೂ ಈ ಹೇಲಿಕೆಯನ್ನು ನೀಡಿರಲು ಸಾಧ್ಯವಿಲ್ಲ ಎಂಬದಾಗಿ (1 ಕೊರಿಂಥ 2:14 ನೋಡಿರಿ).

37 ದೇಹಧರ್ಮಕ್ಕೆ ಒಳಗಾದವನು ಎಂಬ ಪದದ ಬದಲಿಗೆ ಬೈಬಲನ ಕೆಲವು ಭಾಷಾಂತರಗಳು "ಪ್ರಾಕೃತಿಕ" ಅಥವಾ " ಶಾರೀರಿಕ" ಎಂದು ಹೇಳುತ್ತವೆ. ಅರ್ಥವು ಒಮದೇ ಆಗಿದೆ.

38 ಮನಸ್ಸಾಕ್ಷಿಯು ಮಾನವನ ಮಾನುಷ ಆತ್ಮದ "ಸ್ವರ"ಆಗಿದೆ. ಪ್ರತಿ ಮನುಷ್ಯನು ದೇವರ ಪವಿತ್ರಾತ್ಮನಿಗೆ ಪ್ರತಿಸ್ಪಂದಿಸುವ ಆತ್ಮೀಕಬಾಗವನ್ನು ಹೊಂದಿರುತ್ತಾನೆ. ನಾಲು ದೇವರ ಆತ್ಮನಿಗೆ ಅವಿಧೇಯರಾಗುವಾಗ ನಮ್ಮ ಮನಸ್ಸಾಕ್ಷಿಯು ನಮಗೆ ತಿಲಿಸುತ್ತದೆ. ಹೇಗಿದ್ದರೂ, ನಮ್ಮ ಜೀವತಗಲಲ್ಲಿ ದೇವರ ಪವಿತ್ರಾತ್ಮನಿಲ್ಲದೆ ನಮ್ಮ ಸ್ವಂತ ಆತ್ಮ ಅಥವಾ "ಅಂತರತ್ಮ" ನಮ್ಮ ಪಾಪಧೀನ ಮಾನುಷ ಸ್ವಬಾವವನ್ನು ಡಯಿಸಲು ಅಶಕ್ತವಾಗಿದೆ. ಈ ಕಾರಣದಿಂದಲೇ ಪವಿತ್ರಾತ್ಮನನ್ನು ಹೊಂದದವರಜೀವಿತಗಳಲ್ಲಿ ಪಾಪವು ಆಳುತ್ತದೆ. "ಅಂತರಾತ್ಮ." ಎಂಬ ಪದದ ಅರ್ಥವು ಮಾನವನ "ಮನಸ್ಸು" – ಅಂದರೆ, ಮಾನವನ ಆತ್ಮದ ಪ್ರಬಾವ ಅಥವಾ ಹತೋಟಿಯಲ್ಲಿರುವ ಮನಸ್ಸು – ಎಂದು ಸಹ ಆಗಿರಬಹುದು. ಪೌಲನು 23 ನೇ ವಚವದಲ್ಲಿ ಮನಸ್ಸು ಎಂಬ ಪದವನ್ನು ಈ ಅರ್ಥದಲ್ಲಿಯೇ ಉಪಯೋಗಿಸುತ್ತಾನೆ. ನಮ್ಮ ಮನಸ್ಸು ನಮ್ಮ ಪಾಪಾಧೀನ ಸ್ವಭಾವ ಅಥವಾ ಹತೋಟಿಯಲ್ಲಿರುವಾಗ ಅದು ನಮ್ಮ ಈತ್ಮೀಕ ಬದಿಯನ್ನು, ನಮ್ಮ "ಅಂತರಾತ್ಮ"ವನ್ನು ಪ್ರತಿನಿಧಿಸುತ್ತದೆ. ಅಂತಹ ಮನಸ್ಸು ರೂಪಾಂತರ ಅಥವಾ ನೂತನ ಹೊಂದಿ ದೇವರ ಪವಿತ್ರಾತ್ಮನ ಹತೋಟಿಯಲ್ಲಿಡುವದಕ್ಕೆ ಸಮರ್ಥವಾಗಿದೆ (ರೋಮ 12:2 ಮತ್ತು ವ್ಯಾಕ್ಯಾನ ನೋಡಿರಿ).

39 ಪೌಲನು ಇಲ್ಲಿ ಮನಸ್ಸು ಎಂಬ ಪದವನ್ನು ಮಾನವನ ಆತ್ಮ, ಅಥವಾ "ಆತ್ಮದ ಪ್ರಬಾವದಡಿಯಲ್ಲಿರುವ ಮನಸ್ಸು" ಎಂಬ ಅರ್ಥದಲ್ಲಿ ಉಪಯೋಗಿಸುತ್ತಾನೆ. ಹೆಚ್ಚಿನ ಚರ್ಚೆಗಾಗಿ ೨೨ನೇ ವಚನಕ್ಕೆ ನೀಡಿರುವ ವ್ಯಾಖ್ಯಾನದ ಅಡಿಟಿಪ್ಪಣಿ ನೋಡಿರಿ.

40 ಕ್ರಿಸ್ತನು ಸ್ವತಃ ಶಿಲುಬೆಯ ಮೇಲಿನ ತನ್ನ ಮರಣದ ಮುಕಾಂತರ ನಮ್ಮ ಸ್ವತಂತ್ರಗೊಳಿಸಿದ್ದಾನೆ; ಆದರೆ ನಾವು ಸ್ವತಂತ್ರವನ್ನು ಪವಿತ್ರಾತ್ಮನ ಮೂಲಕ ಅನುಭವಿಸುತ್ತೇವೆ. ಹೀಗೆ, ಕ್ರಿಸ್ತನು ನಮ್ಮನ್ನು ಬಿಡುಗಡೆಗೊಳಿಸಿದ್ದಾನೆಂದು ಹೇಳುವದು ಹಾಗು ಪವಿತ್ರಾತ್ಮನು ನಮ್ಮನ್ನು ಬಿಡುಗಡೆಗೊಳಿಸಿದ್ದಾನೆಂದು ಹೇಳುವದು ಪ್ರಾಥಮಿಕವಾಗಿ ಒಂದೇ ಆಗಿದೆ; ಎರಡೂ ಹೇಲಿಕೆಗಲು ಸತ್ಯವಾಗಿವೆ.

41 ಪಾಪ ನಿವಾರಮೆಗಾಗಿ ಎಂಬ ಮಾತುಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ದೋಷ ಪರಿಹಾರಕ ಯಜ್ಞ" ಎಂದು ಹೇಳುತ್ತವೆ, ಮೊದಲೆನೆಯದು ಗ್ರೀಕ ಪ್ರತಿಯ ಅಕ್ಷರಂಶ: ಭಾಷಾಂತರವಾಗಿದೆ. ಅರ್ಥವು ಒಂದೇ ಆಗಿರುತ್ತದೆ.

42 ಅದು ಮಾತ್ರವಲ್ಲದೆ, ಪ್ರತಿವರ್ಷಕ್ಕೆ ಒಮ್ಮೆ ಮಹಾಯಾಜಕನು ತನ್ನ ಪಾಪಗಳಿಗಾಗಿಯೂ ಜನರ ಪಾಪಗಳಿಗಾಗಿಯೂ ಪ್ರಾಣಿಯೊಂದನ್ನು ಯಜ್ಞವಾಗಿ ಅರ್ಪಿಸಬೇಕಾಗಿತ್ತು (ಯಜಕಕಾಂಡ 16; 15-16)

43 ಗ್ರೀಕ್ ಬಾಷೆಯಲ್ಲಿ ಪಾಪಧೀನ ಸ್ವಬಾವ ಎಂಬ ಪದಗಳು ಅಕ್ಷರಂಶ:ವಾಗಿ "ಶಾರೀರಾಧೀನ" ಎಂಬ ಅರ್ಥವನ್ನು ಕೊಡುತ್ತವೆ (ರೋಮ 7:5 ಮತ್ತು ವ್ಯಾಕ್ಯಾನ ನೋಡಿರಿ). ಇಲ್ಲಿ 3-13 ವಚನಗಳಲ್ಲಿ ಪೌಲನು ಸತತವಾಗಿ ಉಪಯೋಗಿಸುವ "ಶರೀರಾಧೀನ" ಎಂಬ ಗ್ರೀಕ್ ಪದವು ಪಾಪಾಧೀನ ಸ್ವಭಾವ ಎಂಬದಾಗಿ ಭಾಷಾಂತಿರಸಲ್ಪಟ್ಟಿದ್ದು ಸಮಂಜಸವಾಗಿರುತ್ತದೆ.

44 ಗ್ರೀಕ್ ಬಾಷೆಯಲ್ಲಿ: "ಶರೀರಭಾವದವು ಗಳ ಮೇಲೆ ಮನಸ್ಸಿಡುವದು"

45 ಪಾಪಧೀನ ಸ್ವಬಾವಕ್ಕೊಳಪಟ್ಟವರು ಎಂಬ ಮಾತುಗಲು ಬದಲಿಗೆ ಬೈಬಲಿನ ಕೇಲವು ಪ್ರತಿಯ ಅಕ್ಷರಂಶ; ಭಾಷಾಂತರವಾಗಿದೆ. ಅರ್ಥವು ಒಂದೇ ಆಗಿದೆ.

46 ಗ್ರೀಕ್ ಭಾಷೆಯಲ್ಲಿ: "ಶರೀರ ಭಾವಾದೀನರು".

47 ಆತ್ಮನ ಜೀವನದ ಹೆಚ್ಚಿನ ಚ್ರಚೆಗಾಗಿ ಸಾಮಾನ್ಯ ಲೇಖನ; ಪವಿತ್ರಾತ್ಮ ನೋಡಿರಿ.

48 ಪಾಪಾದೀನ ಸ್ವಭಾವಕ್ಕೊಳಪಟ್ಟವರಲ್ಲಿ, ಆತ್ಮನಿಗೊಳಪಟ್ಟವರು ಎಂಬ ಮಾತುಗಳ ಬದಲಿಗೆ ಬೈಬಲಿನ ಕೆಲವು ಭಾಷಾಂತರಗಳು ಶರೀರಭಾವಾಧೀನರಲ್ಲ, ಆದರೆ ಆತ್ಮನಿಗೆ" ಅಧೀನರು" ಎಂದು ಹೇಳುತ್ತವೆ, ಅದು ಗ್ರೀಕ್ ಪ್ರತಿಯ ಅಕ್ಷರಂಶ; ಭಾಷಾಂತರವಾಗಿದೆ.

49 ಮಗನಭಾವ ಎಂಬ ಮಾತಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ದುತ್ತು" ಎಂದು ಹೇಳುತ್ತವೆ. ಹೆಚ್ಚಿನ ಚರ್ಚೆಗಾಗಿ ಪದಪಟ್ಟಿ: ದತ್ತು ನೋಡಿರಿ.

50 ಅಪ್ಪಾ ಎಂಬದು ಅರಾಮಿಕ ಪದವಾಗಿದ್ದು "ತಂದೆ" ಅಥವಾ "ಡ್ಯಾಡಿ" ಎಂಬ ಅರ್ಥವನ್ನು ಕೊಡುತ್ತದೆ. ಇದು ಪ್ರೀತಿ ಮತ್ತು ಆಪ್ತತೆಯನ್ನು ವ್ಯಕ್ತಪಡಿಸುವ ಅನೌಪಚಾರೀಕ ಪದವಾಗಿರುತ್ತದೆ.

ಯೇಸುವಿನ ಕಾಲದಲ್ಲಿ ಆರಾಮಿಕ ಬಾಷೆಯು ಮಧ್ಯಪೂರ್ವದಲ್ಲಿ ಅತಿ ಸಾಮಾನ್ಯವಾಗಿ ಮತಾಡಲ್ಪಡುತ್ತಿದ್ದ ಬಾಷೆಯಾಗಿತ್ತು. ಅರಾಮಿಕ ಯೇಸು ಬೂಮಿಯಲ್ಲಿರುವಾಗ ಮಾತಾಡಿದ ಬಾಷೆಯಾಗಿತ್ತು. ಹೇಗಿದ್ದರೂ, ಇಂದು ಸಿರಿಯಾದ ಚಿಕ್ಕಕ್ಷೇತ್ರವೊಂದರಲ್ಲಿರು ಕೆಲವು ಜನರು ಮಾತ್ರವೇ ಆರಾಮಿಕ ಭಾಷೆಯನ್ನು ಮಾತಾಡುತ್ತಾರೆ.

51 ಕ್ರೈಸ್ತನಿಗೆ ಶಿಲುಬೆಯು ಉಪದ್ರವ ಮತ್ತು ಮರಣದ ಸಂಕೇತ ವಾಗಿರುತ್ತದೆ, ಯಾಕೆಂದರೆ ಶಿಲುಬೆಯೊಂದರ ಮೇಲೆಯೇ ಯೇಸು ಕೊಲ್ಲಲ್ಪಟ್ಟನು. ಶಿಲುಬೆಯು ರೋಮಾಯರು ಅಪರಾಧಿಗಳಿಗೆ ಮರಣವನ್ನು ವಿಧಿಸಲು ಉಪಯೋಗಿಸುತ್ತಿದ್ದ ಮುಖ್ಯವಿಧಾನವಾಗಿತ್ತು. ಸಾವಿರಾರು ಜನರು ಈ ರೀತಿಯಲ್ಲಿ ಮರಣಕ್ಕೊಳಗಾದರು.

52 "ಅನ್ಯ ಭಾಷೆಗಳಲ್ಲಿ ಮಾತಾಡುವದು" 1 ಕೊರಿಂಥ 14:2 ಮತ್ತು ವ್ಯಾಖ್ಯಾನದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಹೆಚ್ಚಿನ ಚರ್ಚೆಗಾಗಿ ಸಾಮಾನ್ಯ ಲೇಖನ: ಪವಿತ್ರಾತ್ಮನ ದೀಕ್ಷಾಸ್ನಾನ ನೋಡಿರಿ.

53 ಈ ಲೋಕದಲ್ಲಿ ನಾವು ಪೂರ್ಣವಾಗಿ ಮಹಿಮಾಸದವಿಗೆ ಸೇರುವದಿಲ್ಲ; ಪರಲೋಕದಲ್ಲಿ ಮಾತ್ರವೇ ದೇವರು ನಮನ್ನು ಮಹಿಮೆಗೆ ಸೇರಿಸುವನು. ಹಾಗಾದರೆ, ಈ ವಚನದಲ್ಲಿ ಪೌಲನ ಈಗಾಗಲೇ ನಾವು ಮಹಿಮಾಪದವಿಗೆ ಸೇರಿದ್ದೇವೆ ಎಂಬಂತೆ ಮಹಿಮಾ ಪದವಿಗೆ

ಸೇರಿದನು ಎಂಬ ಪದವನ್ನು ಭೂತಕಾಲರೂಪವಾಗಿ ಏಕೆ ಉಪಯೋಗಿಸುತ್ತಾನೆ? ನಾವು ಮಹಿಮಾಪದವಿಗೆ ಸೇರಲಿದ್ದೇವೆಂಬ ಬಹು ನಿಶ್ಚಯತೆಯನ್ನು ಹೊಂದಿದ್ದ ಪೌಲನು ಈಗಾಗಲೇ ಅದು ಸಂಭವಿಸಿರುತ್ತೆದೇನೋ ಎಂಬಂತೆ ಮಾತಾಡಲು ಶಕ್ತನಾಗಿದ್ದನು.

54 ಕ್ರೈಸ್ತರಾಗುವದಕ್ಕೆ ಮುಂಚೆ ನಾವು ದೇವರಿಂದ ಬೇರ್ಪಟ್ಟಿದ್ದೇವು ; ಆದರೆ ನಾವು ದೇವರ ಪ್ರೀತಿಯಿಂದ ಬೇರ್ಪಟ್ಟಿರಲಿಲ್ಲ. ಮನುಷ್ಯರು ದೇವರಿಗೆ ವೈರಿಗಳಾಗಿರುವಾಗಲೂ ಪ್ರೀತಿಯು ಅವರನ್ನು ಸಮೀಪಿಸುವದಾಗಿದೆ. ಆದರೆ ನ್ಯಾಯತೀರ್ಪಿನ ದಿನದಲ್ಲಿ ಆತನ ಪ್ರೀತಿಯು ಪಶ್ಚಾತಾಪಪಡಲು ಹಾಗು ಯೇಸುವಿನಲ್ಲಿ ನಂಬಿಕೆಯಿಡಲು ನಿರಕರಿಸ,ಿದವರನ್ನು ಇನ್ನು ಸಮೀಪಿಸುವದಿಲ್ಲ. ಆದಿನ ಅವರು ಶಾಸ್ವತವಾಗಿ ದೇವರ ಪ್ರೀತಿಯಿಂದ ಬೇರ್ಪಡುವರು.

55 ಆಧುನಿಕ ಕಾಲದ ಅರಬ್ಬರು ಇಸ್ಮಾಯೇಲನ ಸಂತತಿಯವರೆಂದು ಅನೇಕ ಜನರು ನಂಬುತ್ತಾರೆ.

56 ಇಲ್ಲಿ ಒಂದು ಕಠಿಣವಾದ ಪ್ರಶ್ನೆ ಉದ್ಭವಿಸುತ್ತದೆ: ದೇವರು ಹೇಗೆ ಮನುಷ್ಯನ ಹೃದಯವನ್ನು ಕಠಿಣಪಡಿಸಿಗನು? ಕ್ರೈಸ್ತರು ಈ ಪ್ರಶ್ನೆಗೆ ಎರಡು ಭಿನ್ನವಾದ ಉತ್ತರಗಳನ್ನು ಕೊಡುತ್ತಾರೆ. ಮೊದಲನೆಯ ಉತ್ತರವೇನೆಂದರೆ ದೇವರು ಕಲವು ಜನರನ್ನು ಪಾಪದಲ್ಲಿ ಮುಂದುವರೆಯಲು ಅನುಮತಿಸುತ್ತಾನೆ. ಅವರು ಪಾಪದಲ್ಲಿ ಮುಂದುವರೆದ ಹಾಗೆ ೆವರು ದೇವರ ಸ್ವರವನ್ನು ಕೇಳಿಸಿಕೊಳ್ಳದವರಾಗುತ್ತಾರೆ; ಅವರು ಇನ್ನೆಂದೂ ಪಶ್ಚಾತಾಪಪಡಲಾರರು. ದೇವರು ಅವರನ್ನು ಅವರ ಪಾಪಕ್ಕೆ "ಒಪ್ಪಿಸುತ್ತಾನೆ" (ರೋಮ 1:24, 26,28 ಮತ್ತು ವ್ಯಾಖ್ಯಾನ ನೋಡಿರಿ). ಆದುದರಿಂದ, ಈ ಮೊದಲನೆಯ ಉತ್ತರದ ಪ್ರಕರವಾಗಿ ಜನರ ಹೃದಯಗಳನ್ನು ಕಠಿಣಕೊಳಿಸುವದಕ್ಕಾಗಿಯೇ ದವರು ಅವರನ್ನು ಅನುಮತಿಸುತ್ತಾನೆ. ಅಂತಹ ಜನರು ತಮ್ಮ ಪಾಪಗಳಿಂದ ವಿಮುಖರಾಗಲು ನಿರಾಕರಿಸುತ್ತಾರೆ. ಅಂಥವರು ಮೊದಲು ತಮ್ಮ ಸ್ವಂತ ಹೃದಯಗಳನ್ನು ಕಠಿಣಪಡಿಸಿಕೊಂಡಿರುತ್ತಾರೆ (ವಿಮೋಚನಕಾಂಡ 13-14, 22; 8:15, 32; ಜ್ಞಾನೋಕ್ತಿ 29:1). ಇಬ್ರಿಯ ೩:೮ ರಲ್ಲಿ ನಮಗೆ ಒಂದು ಎಚ್ಚರಿಕೆಕೊಡಲಾಗಿದೆ:.."ನಿಮ್ಮ ಹೃದಯಗಳನ್ನು ಕಠಿಣ ಮಾಡಿಕೊಳ್ಳಬೇಡಿರಿ" ಹಾಗಾದರೆ, ಈ ಮೊದಲನೆಯ ಉತ್ತರದ ಪ್ರಕಾರವಾಗಿ ಮಾನವನು ರಕ್ಷಣೆಯನ್ನು ಪಡೆದುಕೊಳ್ಳದಿರುವದರ ಮುಖ್ಯ ಜವಾಬ್ದಾರಿಯು ಮಾನವನ ಮೇಲಿದೆ ಹೊರತು ದೇವರು ಜವಾಬ್ದಾರನಲ್ಲ.

ದೇವರು ಮಾನವನ ಹೃದಯವನ್ನು ಹೇಗೆ ಕಠಿಣಪಡಿಸುತ್ತಾನೆಂಬ ಪ್ರಶ್ನೆಗೆ ಎರಡನೆಯ ಉತ್ತರವೇನೆಂದರೆ ಆದಿಯಲ್ಲಿಯೇ ದೇವರು ಕೆಲವು ಜನರನ್ನು ರಕ್ಷಣೆಗಾಗಿ ಆರಿಸಿಕೊಂಡನು ಹಾಗು ಕೆಲವರನ್ನು ಆರಿಸಿಕೊಳ್ಳಲಿಲ್ಲ. ಆಯ್ಕೆಯು ಸಂಪೂರ್ಣವಲಾಗಿ ದೇವರದಾಗಿತ್ತು. ಈ ಎರಡನೆಯ ಉತ್ತರದ ಪ್ರಕಾರವಾಗಿ ಮಾನವನು ರಕ್ಷಣೆಯನ್ನು ಪಡೆದು ಕೊಳ್ಳದಿರುವದಕ್ಕೆ ಮುಖ್ಯವಾಗಿ ದೇವರೇ ಜವಾಬಾದಾರನು ಹೊರತು ಮಾನವನಲ್ಲ (ವಿಮೋಚನ ಕಾಂಡ 7:3; 9:12; 10:20, 27; ಯೋಹಾನ 12:9-40 ಮತ್ತು ವ್ಯಾಕ್ಯಾನ ಸಾಮಾನ್ಯ ಲೇಖನ: ರಕ್ಷಣಎ – ದೇವರ ಆಯ್ಕೆಯೋ ಅಥವಾ ಮನುಷ್ಯನ ಆಯ್ಕೆಯೋ? ನೋಡಿರಿ.

ಇವೆರಡು ಉತ್ತರಗಳಲ್ಲಿ ಯಾವದು ಸರಿಯಾದದ್ದೆಂದು ಹೇಳುವದು ಕಷ್ಟಕರವಾಗಿರುತ್ತದೆ ಆದರೆ ಯಾವ ಉತ್ತರವು ಸರಿಯಾಗಿದ್ದರೂ ನಾವು ನಾವು ಎಂದಿಗೂ ದೇವರನ್ನು ಅನ್ಯಾಯಸ್ಥನೆಂದು ಕರೆಯಲು ಸಾಧ್ಯವಿಲ್ಲ. ದೇವರು ಜನರ ಕರ್ಮ ಅಥವಾ ಯೋಗ್ಯತೆಯನ್ನು ನೋಡದೆಯೇ ಕೆಲವರನ್ನು ಸೇರಿಸಿಕೊಳ್ಳುತ್ತಾನೆ ಹಾಗು ಕೆಲವರನ್ನು ತಿರಸ್ಕರಿಸುತ್ತಾನೆ. ವಿಶೇಷವಾಗಿ, ದೇವರು ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವವರನ್ನು ಅಂಗೀಕರಿಸಿಕೊಲ್ಲುತ್ತಾನೆ ಮತ್ತು ಕ್ರಿಸ್ತನನ್ನು ತಿರಸ್ಕರಿಸುವವರನ್ನು ತಿರಸ್ಕರಿಸುತ್ತಾನೆ. ದೇವರ ಸ್ವಂತ ಮಗನನ್ನು ತಿರಸ್ಕರಿಸುವವರನ್ನು ದೇವರು ತಿರಸ್ಕರಿಸುವದಾದರೆ ನಾವು ಆತನನ್ನು ಅನ್ಯಾಯಗಾರನೆಂದು ಹೇಗೆ ಹೇಲುಬಲ್ಲೆವು ?

57 ಹಳೆ ಒಡಂಬಡಿಕೆಯ ಮೊದಲ ಐದು ಪುಸ್ತಕಗಳನ್ನು ಮೋಶೆಯು ಬರೆದನು.

58 ಚೀಯೋನ್ ಎಂಬದು ಇಸ್ರಾಯೇಲಿಗೆ ಇರುವ ಇನ್ನೊಂದು ಹೆಸರಾಗಿದೆ (ರೋಮ 9:33 ನೋಡಿರಿ).

59 ಇಸ್ರಾಯೇಲ ಜನಾಂಗವು ಕೆಲವು ವೇಳೆ ಯಾಕೋಬ ಎಂದು ಕರೆಯಲ್ಪಟ್ಟಿದೆ, ಯಾಕೆಂದರೆ ಇಸ್ರಾಯೇಲಿನ ಹನ್ನೆರಡು ಕುಲಗಳ ಸಂತತಿಗೆ ಯಾಕೋಬನು ತಂದೆಯಾಗಿದ್ದನು. ಸ್ವತಃ ಯಾಕೋಬನಿಗೆ ಇಸ್ರಾಯೇಲ ಎಂಬ ಹೆಸರು ದೇವರಿಂದ ಕೊಡಲ್ಪಟ್ಟಿತ್ತು (ಆದಿಕಾಂಡ 338).

60 ಗ್ರೀಕ್ ಭಾಷೆಯಲ್ಲಿ: "ನೂತ ಮನಸ್ಸನ್ನು ಹೊಂದುತ್ತಾ ಇರಿ"

61 ಇಲ್ಲಿ ಪೌಲನು ಮನಸ್ಸು ಎಂಬ ಪದವನ್ನು ತಾನು ರೋಮ 7:23 ರಲ್ಲಿ ಉಪಯೋಗಿಸಿದ್ದಕ್ಕಿಂತಲೂ ವ್ಯತ್ಯಾಸಕರ ಅರ್ಥದಲ್ಲಿ ಉಪಯೋಗಿಸುತ್ತಾನೆ. ಅಲ್ಲಿ ಆತನು "ಮಾನವ ಆತ್ಮ" ಅಥವಾ "ಮಾನವ ಆತ್ಮದ ಅಧೀನದಲ್ಲಿರುವ ಮನಸ್ಸು" ಎಂಬುದನ್ನು ಸೂಚಿಸುವದಕ್ಕೆ ಮನಸ್ಸು ಎಂಬ ಪದವನ್ನು ಉಪಯೋಗಿಸಿದನು. ಇಲ್ಲಿ ರೋಮ 12:2 ರಲ್ಲಿ ಪೌಲನು ಮನಸ್ಸು ಎಂಬ ಪದವನ್ನು ಅತಿಸಾಮಾನ್ಯ ೆರ್ಥದಲ್ಲಿ ಉಪಯೋಗಿಸುತ್ತಾನೆ.

62 ಅನೇಕ ಕ್ರೈಸ್ತರು ದೇವರ ಚಿತ್ತದ ಬಗ್ಗೆ ಅನಿಶ್ಚಯತೆಯಿಂದಿರುತ್ತಾರೆ, ಯಾಕೆಂದರೆ ಅವರು ತಮ್ಮನ್ನು ಸಂಪೂರ್ಣವಾಗಿ ದೇವರ ಇಚ್ಛೆಗಳಿಗೆ ಒಪ್ಪಿಸಿಕೊಳ್ಳವದಿಲ್ಲ. ದೇವರು ತನಗೆ ಪೀರ್ಣವಾಗಿ ಸಮರ್ಪಿಸಿಕೊಂಡಿರುವದರಿಗೆ ತನ್ನ ಚಿತ್ತವನ್ನು ಪೀರ್ಣವಾಗಿ ಬಯಲುಪಡಿಸುವದಿಲ್ಲ. ನಾವು ಮೊದಲು ದೇವರಿಗೆ ಹೇಳಬೇಕಾದದ್ದೇನೆಂದರೆ: "ನೀನು ಇಚ್ಚಿಸುಲ ಏನನ್ನೇ ಆಗಲಿ ನಾನು ಮಾಡವೇನು". ಆಗ ದೇವರು ನಾವು ಏನು ಮಾಡಬೇಕೆಂದು ಬಯಸುತ್ತಾನೆಂಬದನ್ನು ನಮಗೆ ಸ್ಪಷ್ಟವಾಗಿ ತೋರಿಸುವನು.

63 ಹೊಸಒಡಂಬಡಿಕೆಯಲ್ಲಿ ಕೃಪೆ ಎರಡು ಮುಖ್ಯ ಅರ್ಥಗಳನ್ನು ಹೊಂದಿದೆ. ಅದರ ಅತಿಸಾಮಾನ್ಯವಾದ ೆರ್ಥವು ಪಾಪಿ ಮಾನವನೆಡೆಗೆ ದೇವರು ಹೊಂದಲರ್ಹವಲ್ಲದ ಪ್ರೀತಿ ಮತ್ತು ಕರುಣೆಯನ್ನು ತೋರಿಸುವದು ಆದರೆ ಕೃಪೆಯ ಎರಡನೆಯ ಅರ್ಥವೇನೆಂದರೆ, ದೇವರಿಗಾಗಿ ಒಂದು ನಿರ್ದಿಷ್ಟವಾದ ಕಾರ್ಯವನ್ನು ಪೂರ್ಣಗೊಳಿಸುವದಕ್ಕೆ ಒಬ್ಬನನ್ನು ಶಕ್ತನನ್ನಾಗಿಸುವ ವಿಶೇಷ ನೇಮಕಾತಿ ಅಥವಾ ವರ ಎಂದಾಗಿರುತ್ತದೆ. ಈ ವಚನದಲ್ಲಿ ಪೌಲನು ತನ್ನ ಮನಸ್ಸಿನಲ್ಲಿ ಎರಡನೆಯ ಅರ್ಥವನ್ನು ಹೊಂದಿರುತ್ತಾನೆ. ಹೆಚ್ಚಿನ ಚರ್ಚಾಗಿ ಪದಪಟ್ಟಿ: ಕೃಪೆ ನೋಡಿರಿ.

64 ಕೆಲವು ಜನರಲ್ಲಿ "ಕೀಳರಿಮೆ" ಬಾವನೆಯು ಆಳವಾಗಿ ಬೇರೂರಿರುತ್ತದೆ, ಅದು ಹೆಚ್ಚು ಕಡಿಮೆ ಅವರ ಅಏರಿವಿಗೆ ಬಂದಿರುವದಿಲ್ಲ. ಅಂತಹ ಜನರ ದೀನತೆಯು ಸುಳ್ಳಾಗಿರದಿರಬಹುದ, ಆದರೆ ಅವರ ಸ್ವಂತ ವ್ಯಕ್ತಿತ್ವವು ಖಂಡಿತವಾಗಿಯೂ ಮಿಥ್ಯವೇ ಸರಿ., ಅಂತಹ ಜನರಿಗೆ ತಮ್ಮ ಕುರಿತು "ಸರಿಯಾಗಿ" ಯೋಚಿಸಿಕೊಳ್ಳಲು ಸಹಾಯದ ಅಗತ್ಯವಿರುತ್ತದೆ.

65 ಒಬ್ಬನು ತನ್ನನ್ನು ಅತಿ ಉನ್ನತವಾಗಿ ಭಾವಿಸಿಕೊಳ್ಳುವ ಸಮಸ್ಯೆಯು ಒಬಬ್ಬು ತನ್ನನ್ನು ಅತಿ ಕೀಳಾಗಿ ಭಾವಿಸಿಕೊಲ್ಲುವ ಸಮಸ್ಯೆಗಿಂತಲೂ ಹೆಚ್ಚು ಸಾಮಾನ್ಯವಾಗಿರುತ್ತೆದೆಂಬದು ನಿಸ್ಸಂಶಯವಾದದ್ದು. ಒಬ್ಬನು ಸಂಶಯದಲ್ಲಿರುವದಾದರೆ ತನ್ನನ್ನು ಕೀಳಾಗಿ ಭಾವಿಸಿಕೊಲ್ಲುವ ಪಕ್ಕದಲ್ಲಿ ತಪ್ಪು ಮಾಡುವದು ಉತ್ತಮವಾದದ್ದು.

66 ಹೆಚ್ಚಿನ ಚರ್ಚೆಗಾಗಿ ವಚನ 3ರ ಮೇಲಿನ ವ್ಯಾಖ್ಯಾನದ ಅಡಿಟಿಪ್ಪಣಿ ನೋಡಿರಿ.

67 ಖಂಡಿತವಾಗಿಯೂ, ನಾವು ಇತರರ ಸೇವೆಯನ್ನು ಮಾಡುವಾಗಲೆಲ್ಲಾ ಕರ್ತನಾದ ಯೇಸುವಿನ ಸೇವೆಯನ್ನು ಸಹ ಮಾಡುವವರಾಗಿದ್ದೇವೆ (ಮತ್ತಾಯ 25:34-40 ಮತ್ತು ವ್ಯಾಖ್ಯಾನ ನೋಡಿರಿ).

68 ಬುದ್ಧಿ ಹೇಳುವದು ಎಂಬ ಮಾತಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಪ್ರಬೋಧಿಸುವದು" ಎಂದು ಹೇಳುತ್ತವೆ.

69 ದೀನರ ಸಂಗಡ ಬಳಕೆಯಾಗಿರಲು ಮನಸ್ಸುಳ್ಳವರಾಗಿರಬೇಕು ಎಂಬ ಮಾತುಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಆಳಿನಕೆಲಸವನ್ನು ಮಾಡಲು ಮನಸ್ಸುಳ್ಳವರಾಗಿರಬೇಕು" ಎಂದು ಹೇಳುತ್ತವೆ.

70 ಕೆಲವು ವೇಳೆಗಳಲ್ಲಿ ಮನುಷ್ಯ ದೃಷ್ಟಿಯಲ್ಲಿ "ಸರಿಯಾದದ್ದು" ದೇವರ ದೃಷ್ಟಿಯಲ್ಲಿ ಕೆಟ್ಟದ್ದಾಗಿರುತ್ತದೆ. ವಿಷಯ ಹೀಗಿರುವದಾದರೆ ನಾವು ಯಾವಾಗಲೂ ದೇವರ ದೃಷ್ಟಿಯಲ್ಲಿ ಸರಿಯಾದದ್ದನ್ನು ಮಾತ್ರವೇ ಮಾಡಬೇಕು (ಅ.ಕೃತ್ಯ 18-20; 5:29 ನೋಡಿರಿ).

71 ಈ ವಿಷಯದ ಬಗ್ಗೆ ಹೆಚ್ಚಿನ ಚರ್ಚೆಗಾಗಿ ಸಾಮಾನ್ಯ ಲೇಖನ: ದುಷ್ಟನನ್ನು ಎದುರಿಸುವದು ನೋಡಿರಿ.

72 ಅತಿ ದುಷ್ಟ ಅಧಿಕಾರಿಗಳ ಅಧಿಕರವು ಸಹ ಸೇರಿದಂತೆ ಎಲ್ಲಾ ಅಧಿಕಾರವೂ ದೇವರಿಂದಲೇ ಬರುತ್ತದೆ (ವಚನ 1 ನೋಡಿರಿ).

73 ಬೇರೆಯಾವ ಸಾಲವೂ ಇರಬಾರದು ಎಂಬ ನಾತುಗಳ ಬದಲಾಗಿ ಬೈಬಲಿನ ಕೆಲವು ಭಾ,ಷಾಂತರಗಳು "ಯಾರ ಋಣದಲ್ಲಿಯೂ ಇರಬೇಡಿರಿ" ಎಂದು ಹೇಳುತ್ತವೆ.

74 ಮತ್ತೊಬ್ಬನನ್ನು ಎಂಬ ಮಾತುಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ನೆರೆಯವನು" ಎಂದು ಹೇಳುತ್ತವೆ. ಅರ್ಥವು ಒಂದೇ ಆಗಿದೆ.

75 ಕ್ರೈಸ್ತರಾದ ನಾವು ನಮ್ಮನ್ನು ಪ್ರೀತಿಸಬಾರದಾದರೂ ನಾವು ನಮ್ಮನ್ನು ದೇವರ ಒಲವಿನ ಪ್ರಿಯ ಮಕ್ಕಳೆಂದು ಮೌಲ್ಯ. ಮಾಡಿತೊಳ್ಳಬೇಕಾಗಿರುತ್ತದೆ. ನಾವು ನಮ್ಮನ್ನು ದೇವರ ಒಲವಿನ ಹಾಗು ಪ್ರೀಯ ಮಕ್ಕಳೆಂದು ಮೌಲ್ಯ ಮಾಡಿಕೊಲ್ಲಬೇಕಾಗಿರುತ್ತದೆ. ನಾವು ನಮ್ಮನ್ನು ತುಚಿಚೀಕರಿಸಿಕೊಳ್ಳಬಾರದು. ನಾವು ನಮ್ಮ ಬಗ್ಗೆ ನಕಾರಾತ್ಮಕ ಹಾಗು ಅನಾರೋಗ್ಯಕರ ಸ್ವರೂಪವನ್ನಿಟ್ಟು ಕೊಂಡಿರುವದಾದರೆ ನಾವು ದೇವರನ್ನು ಮತ್ತು ಇತರರನ್ನು ಪ್ರೀತಿಸಬೇಕಾದ ರೀತಿಯಲ್ಲಿ ಪ್ರೀತಿಸಲು ಶಕ್ತರಾಗುವದಿಲ್ಲ.

76 ನಮ್ಮ ಚಟುವಟಿಕೆಗಳಲ್ಲಿ ಕೆಲವೊಂದು ಬದಲಾವಣೆಗಳಿರುವವು ; ಇದರಲ್ಲಿ ಸಂಶಯ ವಿಲ್ಲ; ಒಂದು ತಿಂಗಲಿಗಿಂತಲೂ ಹೆಚ್ಚು ಕಾಲದ ಯೋಜನೆಗಳು ಸುರಕ್ಷಿತವಾಗಿ ಕೈಬಿಡಲ್ಪಡಬಹುದು.

77 ಈ ವಿಷಯಗಳ ಬಗ್ಗೆ ತರ್ಕಿಸುವದು ತಪ್ಪು, ಆದರೆ ಅವು ಗಳನ್ನು ಬೈಬಲ್ ಆಭ್ಯಾಸದ ವೇಲೆಯಲ್ಲಿ ಚರ್ಚಿಸುವದು ತಪ್ಪಾಗಿರುವದಿಲ್ಲ. ಸಂದೇಹಾಸ್ಪದ (ವಾಗ್ವಾದಕರ) ಕಾರ್ಯಗಳನ್ನು ಚರ್ಚಿಸಲು ನಾವು ಹೆದರಬಾರದು, ಆದರೆ ನಾವು ಪ್ರೀತಿ ಮತ್ತು ದೀನತೆಯ ಭಾವದಲ್ಲಿ ಮಾತ್ರವೇ ಅದನ್ನು ಮಾಡಬೇಕು.

78 ಯೆಹೂದ್ಯ ಸಬ್ಬತ್ ದಿನವು ಶುಕ್ರವಾದ ಸೂರ್ಯಾಸ್ತಮದಿಂದ ಪ್ರಾರಂಬವಾಗಿ ಶನಿವಾರದ ಸೂರ್ಯಾಸ್ತದ ವರೆಗೆ ಮುಂದುವರೆಯುತ್ತಾರೆ. ಯೆಹೂದ್ಯರು ಸಬ್ಬತ್ ದಿನವನ್ನು ಪರಿಶುದ್ಧವೆಂದು ಎಣಿಸುತ್ತಾರೆ; ಆ ದಿನದಂದು ಅವರು ಸಭಾಮಂದಿರದಲ್ಲಿ ಆರಾಧನೆ ಮಾಡುವರು ಮತ್ತು ಯಾವ ಕೆಲಸವನ್ನು ಮಾಡುವದಿಲ್ಲ (ವಿಮೋಚನ ಕಾಂಡ 20:8-11).

ಆದಿ ಕ್ರೈಸ್ತರು ಸಹ ಶನಿವಾರದಂದು ಸಬ್ಬತ್ ದಿನವನ್ನು ಪಾಲಿಸುತ್ತಿದ್ದರು; ಆದರೆ ಅನಂತರ ಹೊಸ ಒಡಂಬಡಿಕೆಯ ಕಾಲದಲ್ಲಿ ಅವರು ಸಬ್ಬತ್‌ನ್ನು ವಾರದ ಮೊದಲನೆಯ ದಿನವಾದ ಭಾನುವಾರದಂದು ಪಾಲಿಸಲಾರಂಭಿಸಿದರು (ಅ.ಕೃತ್ಯ 20:7). ಈ ಅಭ್ಯಾಸವು ಇಂದಿಗೂ ಸಹ ಬಹುಪಾಲು ರಾಷ್ಟ್ರಗಳಲ್ಲಿ ಕಂಡುಬರುತ್ತದೆ.

79 ನಾವು ಏನೇ ತಿಂದಲೂ, ಅಥವಾ ಕುಡಿದರೂ ಎಲ್ಲವನ್ನೂ ದೇವರ ಮಹಿಮೆಗಾಗಿಯೇ ಮಾಡಬೇಕು. ಕ್ರೈಸ್ತರು ದೇವರಿಗಾಗಿ ಜೀವಿಸಲು ತಿನ್ನತ್ತಾರೆ. ಅನೇಕ ಜನರು ತಿನ್ನುವದಕ್ಕಾಗಿ ಜೀವಿಸುತ್ತಾರೆ; ಅವರನ್ನು ಹೊಟ್ಟೆಬಾಕರೆಂದು ಕರೆಯುತ್ತಾರೆ. ನಮ್ಮ ದೇಹಗಳನ್ನು ಆರೋಗ್ಯವಾಗಿಟ್ಟುಕೊಳ್ಳುವ ತಿನ್ನುವದು ದೇವರಿಗೆ ಮಹಿಮೆಯನ್ನು ತರುತ್ತದೆ. ನಮ್ಮ ದೇಹಗಳು ಆತನಿಗೆ ಕೊಡಲ್ಪಟ್ಟಿರುವದಾದರೆ ಆತನಿಗೆ ಮಹಿಮೆಯಾಗುತ್ತದೆ (ರೋಮ 12:1); ಆರೋಗ್ಯಕರ ದೇಹವು ದೇವರಿಗೆ ಹೆಚ್ಚು ಉಪಯುಕ್ತವಾಗಿರುತ್ತದೆ. ಆದರೆ ಕೇವಲ ಸಂತೋಷಕ್ಕಾಗಿ ತಿನ್ನುವದು ಅಥವಾ ಅನಾರೋಗ್ಯಕರ ಆಹಾರವನ್ನು ತಿನ್ನುವದು ದೇವರಿಗೆ ಮಹಿಮೆಯನ್ನು ತರುವದಿಲ್ಲ. ನಾವು ಏನೇ ಮಾಡಿದರೂ ನಮ್ಮ ಕೇಲಿಕೊಳ್ಳಬೇಕಾದದ್ದೇನೆಂದರೆ: ಇದು ದೇವರಿಗೆ ಮಹಿಮೆಯನ್ನು ತರುತ್ತದೋ ಅಥವಾ ಇಲ್ಲವೋ? ನಾವು ಮಾಡುವಂತದ್ದು ನೇರವಾಗಿಯಗಲಿ ಅಥವಾ ಪರೋಕ್ಷವಾಗಿ ಆಗಲಿ ದೇವರನ್ನು ಮಹಿಮೆ ಪಡಿಸದಿರುವದಾದರೆ ಅದು ಒಂದು ಪಾಪವಾಗಿದೆ.

80 ಪೌಲನ ದಿನಗಳಲ್ಲಿ ಹೊಸ ಒಡಂಬಡಿಕೆಯು ಪೂರ್ಣ ಗೊಂಡಿರಲಿಲ್ಲ.

81 ಸೇರಿಸಿಕೊಳ್ಳಿರಿ. ಎಂಬ ಮಾತಿಗೆ ಬದಲಾಗಿ ಬೈಬಲಿನ ಕೆಲವು ಬಾಷಾಂತರಗಳು "ಸ್ವಾಗತಿಸಿರಿ" ಎಂದು ಹೇಳುತ್ತವೆ. ಈ ಸನ್ನಿವೇಶದಲ್ಲಿ ಅರ್ಥವು ಒಂದೇ ಆಗಿದೆ.

82 ಮೆಸ್ಸೀಯ ಎಂಬ ಹೆಸರು ಇಬ್ರಿಯ ಪದವಾಗಿ "ಅಭಿಷೀಕ್ತನು" ಎಂಬ ಅರ್ತವನ್ನು ಕೊಡುತ್ತದೆ. "ಕ್ರಿಸ್ತನು" ಗ್ರೀಕ ಪದವಾಗಿದ್ದು ಆದೇ ಅರ್ಥವನ್ನು ಕೊಡುತ್ತದೆ. ಮೆಸ್ಸೀಯ ಎಂಬದು ಕ್ರಿಸ್ತನ ಇನ್ನೊಂದು ಹೆಸರಾಗಿದೆ.

83 ಯೆಹೂದ್ಯರು ಎಂಬ ಮಾತಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಸುನ್ನತಿ" ಎಂದು ಹೇಲುತ್ತವೆ. ಯೆಹೂದ್ಯರು ಹಲವಾರು ವೇಳೆ "ಸುನ್ನತಿ" ಯೆಂದು ಸೂಚಿಸಲ್ಪಟ್ಟಿದ್ದಾರೆ, ಸುನ್ನತಿಯುಳ್ಳ ಜನರ ರಾಷ್ಟ್ರ ಎಂಬದು ಅದರ ಅರ್ಥವಾಗಿದೆ.

84 "ರಕ್ಷಣೆ" ಎಂಬ ಮಾತಿನಲ್ಲಿ ಅನೇಕ ಶ್ರೇಷ್ಠ ಆಶಿರ್ವಾದಗಳು ಸೇರಿರುತ್ತವೆ, ಆದರೆ ಅವು ಗಳಲ್ಲಿ ಕ್ರಿಸ್ತನೊಂದಿಗೆ ನಿತ್ಯವಾಗಿ ಜೀವಿಸುವದೇ ಅತಿ ಶ್ರೇಷ್ಠವಾದ ಆಶಿರ್ವಾದವಾಗಿದೆ. ಹೆಚ್ಚಿನ ಚರ್ಚೆಗಾಗಿ ಸಾಮಾನ್ಯ ಲೇಖನ: ರಕ್ಷಣೆಯ ಮಾರ್ಗ ನೋಡಿರಿ.

[85] ಇಂದು ಯೆರೂಸಲೇಮ್ ಇಸ್ರಾಯೇಲಿನ ಪ್ರಮುಖ ನಗರಗಲ್ಲಿ ಒಂದಾಗಿದೆ. ಇದು ಯೆಹೂದ್ಯರು, ಮಹಮ್ಮದಿಯರು ಹಾಗು ಕ್ರೈಸ್ತರಿಂದ ಪವಿತ್ರ ನಗರವಾಗಿ ಪರಿಗಣಿಸಲ್ಪಡುತ್ತದೆ.

[86] ಈ ವಚನದಲ್ಲಿ ಸೇವಕ ಎಂಬದಕ್ಕೆ ಉಪಯೋಗಿಸಲಾಗಿರುವ ಗ್ರೀಕ್ ಪದವು ಮತ್ತು ಪೌಲನು 1 ತಿಮೊಥೆ 3:8 ರಲ್ಲಿ ಉಪಯೋಗಿಸಲಾಗಿರುವ ಗ್ರೀಕ್ ಪದವೂ ಒಂದೇ ಆಗಿದೆ, ಅಲ್ಲಿ ಅಜು "ಸಭಾಸೇವಕ" ಎಂದು ಭಾಷಾಂತರಿಸಲ್ಪಟ್ಟಿದೆ. ಆದಕಾರಣವೇ ಬೈಬಲಿನ ಕೆಲವು ಭಾಷಾಂತರಗಳು ಈ ವಚನದಲ್ಲಿ "ಸಭಾಸೇವಕಳು" ಎಂದು ಹೇಳುತ್ತವೆ.

[87] ಪ್ರಿಸ್ಕಿಲ್ಲಳು ಎಂಬ ಹೆಸರಿನ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಪ್ರಿಸ್ಕಳು"ಎಂದು ಹೇಳುತ್ತವೆ, ಅದು ಪ್ರಿಸ್ಕಿಲ್ಲಳು ಎಂಬ ಹೆಸರಿನ ಸಂಕ್ಷಿಪ್ತರೂಪವಾಗಿದೆ.

# ಪೌಲನ ಕೊರಿಂಥದವರಿಗೆ ಬರೆದ ಮೊದಲನೆಯ ಪತ್ರಿಕೆ

## ಪರಿಚಯ

ಪೌಲನ ಕಾಲದಲ್ಲಿ ಕೊರಿಂಥವು ದಕ್ಷಿಣ ಗ್ರೀಸ್‌ನಲ್ಲಿ' ಒಂದು ಅತಿ ಪ್ರಸಿದ್ಧ ಹಾಗು ಪ್ರಮುಖ ನಗರವಾಗಿತ್ತು. ಎಫೆಸದ ಹಾಗೆ ಕೊರಿಂಥವೂ ಒಂದು ವ್ಯಾಪಾರದ ಮತ್ತು ಸಾಂಸ್ಕೃತಿಕ ಕೇಂದ್ರವಾಗಿತ್ತು. ಕೊರಿಂಥವು ಗ್ರೀಕ ಪ್ರಾಂತ್ಯವಾದ ಆಖಾಯದ ರಾಜಧಾನಿಯಾಗಿತ್ತು, ಅದು ದಕ್ಷಿಣಗ್ರೀಸಿನ ಬಹುಪಾಲು ಭಾಗವನ್ನು ಒಳಗೊಂಡಿತ್ತು. ಹೀಗೆ, ಕೊರಿಂಥವು ಅದರ ಸ್ಥಳ ಮತ್ತು ಪ್ರಾಮುಖ್ಯತೆಯ ಕಾರಣದಿಂದ ಸುವಾರ್ತೆಯನ್ನು ಸಾರುವದಕ್ಕೆ ಕಾರ್ಯತಾಂತ್ರಿಕ ಸ್ಥಳವಾಗಿತ್ತು.

ಸುಮಾರು ಕ್ರಿ.ಶಕ 50 ರಲ್ಲಿ ಪೌಲನು ತನ್ನ ಎರಡನೆಯ ಸುವಾರ್ತಾ ಪ್ರಯಾಣದ ಅಂತ್ಯದಲ್ಲಿ ಕೊರಿಂಥಕ್ಕೆ ಪಯಣಿಸಿ ಸುಮಾರು ಹದಿನೆಂಟು ತಿಂಗಳುಗಳ ಕಾಲ ಅಲ್ಲಿ ನೆಲೆಸಿದನು. ಪ್ರಾರಂಬದಲ್ಲಿ ಪೌಲನು ಮುಖ್ಯವಾಗಿ ಕೊರಿಂಥದಲ್ಲಿದ್ದ ಯೆಹೂದ್ಯರಿಗೆ ಸುವಾರ್ತೆಯನ್ನು ಸಾರಿದನು; ಆದರೆ ಅವರಲ್ಲಿ ಬಹು ಪಾಲು ಮಂದಿ ಆತನ ಬೋಧನೆಯನ್ನು ತಿರಸ್ಕರಿಸಿದಾಗ ಪೌಲನು ಯೆಹೂದ್ಯ ಸಭಾಮಂದಿರವನ್ನು ತೊರೆದು ಅನ್ಯ ಜನರ ಮಧ್ಯದೊಳಗೆ ಬೋಧಿಸಲಾರಂಭಿಸಿದನು. (ಅ.ಕೃತ್ಯ 18:1, 4-7, 9-11 ನೋಡಿರಿ).

ಕೊರಿಂಥದಲ್ಲಿ ಸಭೆಯೊಂದನ್ನು ಸ್ಥಾಪಿಸಿದ ಬಳಿಕ ಪೌಲನು ಸುಮಾರು ಕ್ರಿ.ಶಕ 52 ರಲ್ಲಿ ಆ ನಗರವನ್ನು ಬಿಟ್ಟು ಎಫೆಸಕ್ಕೆ ಹೋಗಿ ಎರಡು ವರ್ಷಗಳ ವರೆಗೆ ಅಲ್ಲಿ ನೆಲೆಸಿದನು. ಎಫೆಸವು ಕೊರಿಂಥದಿಂದ ಪೂರ್ವಕ್ಕೆ ಮೂನ್ನೂರು ಮೈಲುಗಳಷ್ಟು ದೂರಕ್ಕೆ ಎಗೇನ್ ಸಮುದ್ರದ ತೀರದಲ್ಲಿತ್ತು, ಅಲ್ಲಿ ಇಂದು ಆಧುನಿಕ ಟರ್ಕಿ (ತುರ್ಕಿ) ಇರುತ್ತದೆ. ಎರಡು ಪಟ್ಟಣಗಳೂ ಪ್ರಾಮುಖ್ಯವಾಗಿದ್ದರಿಂದ ಆ ಕಡೆಯಿಂದಲೂ ಈ ಕಡೆಯಿಂದಲೂ ಅನೇಕ ಜನರು ಪ್ರಯಾಣಿಸುತ್ತಲೇ ಇದ್ದರು.

ಪೌಲನು ಎಫೆಸದಲ್ಲಿ ಇರುವ ವೇಳೆ ಕೊರಿಂಥದ ಸಭೆಯ ವಿಶ್ವಾಸಿಗಳ ನಡವಳಿಕೆಯ ವಿಷಯವಾಗಿ ಕೆಲವೊಂದು ಕೆಟ್ಟ ವರದಿಗಳನ್ನು ಕೇಳಿದನು. ಅದರ ಜೊತೆಯಲ್ಲಿ ಪೌಲನಿಗೆ ಕೊರಿಂಥದ ವಿಶ್ವಾಸಿಗಳು ಕ್ರೈಸ್ತ ಜೀವಿತದ ವಿಷಯವಾಗಿ ಕೆಲವೊಂದು ಪ್ರಾಯೋಗಿಕ ಪ್ರಶ್ನೆಗಳನ್ನು ಕೇಳಿ ಬರೆದ ಪತ್ರವು ಸಹ ತಲುಪಿತು. ಆದುದರಿಂದ, ಈ ಎರಡು ಕಾರಣಗಳಿಗಾಗಿ ಸುಮಾರು ಕ್ರಿ.ಶಕ 54ರಲ್ಲಿ ಪೌಲನು ಕೊರಿಂಥದವರಿಗೆ ತನ್ನ ಮೊದಲನೆಯ ಪತ್ರಿಕೆಯನ್ನು ಬರೆದನು. ಪೌಲನು ಪತ್ರಿಕೆಯ ಮೊದಲು ಭಾಗದಲ್ಲಿ ಅವರ ಅಸಮಂಜಸವಾದ ನಡವಳಿಕೆಯ ವಿಷಯದಲ್ಲಿ ಕೆಲವೊಂದು ಎಚ್ಚರಿಕೆ ಹಾಗು ಸಲಹೆಗಳನ್ನು ನೀಡುತ್ತಾನೆ. ನಂತರ, ಎರಡನೆಯ ಭಾಗದಲ್ಲಿ ಪೌಲನು ಅವರ ಪ್ರಶ್ನೆಗಳಿಗೆ ಉತ್ತರಿಸುತ್ತಾನೆ.

ಪೌಲನು ತನ್ನ ಮೊದಲನೆಯ ಪತ್ರಿಕೆಯಲ್ಲಿ ಬರೆದ ಕಠಿಣವಾದ ಎಚ್ಚರಿಕೆ ಹಾಗು ಗದರಿಕೆಗಳ ಕಾರಣದಿಂದ ಕೊರಿಂಥದವರು ಆ ಪತ್ರಿಕೆಯನ್ನು ಸಂತೋಷದಿಂದ ಸ್ವೀಕರಿಸಲಿಲ್ಲ. ಅವರಲ್ಲಿ ಅನೇಕರು ಪೌಲನ ವಿರುದ್ಧವಾಗಿ ಮಾತಾಡಲಾರಂಭಿಸಿದರು. ಆದ್ದರಿಂದ, ಪೌಲನು ಎಫೆಸದಿಂದ ಅವರಿಗೆ ಇನ್ನೊಂದು ಪತ್ರಿಕೆಯನ್ನು ಕಳುಹಿಸಿದನು (2 ಕೊರಿಂಥ 2:3-4). ಹೇಗಿದ್ದರೂ, ಈ ಎರಡನೆಯ ಪತ್ರಿಕೆಯು ಕಳೆದು ಹೋಗಿರುತ್ತದೆ ಮತ್ತು ಇಂದು ಅದರ ಯಾವ ಪ್ರತಿಯೂ ಅಸ್ತಿತ್ವದಲ್ಲಿರುವದಿಲ್ಲ (ಬಹುಶ: ಕೊರಿಂಥದವರು ಪತ್ರಿಕೆಯನ್ನು ಪಡೆದುಕೊಂಡಾಗ ತಮ್ಮ ಅಸಮಾಧಾನ ವನ್ನು ವ್ಯಕ್ತಪಡಿಸಲು ಅವರೇ ಅದನ್ನು ನಾಶ ಮಾಡಿರಬೇಕು). ಈ "ಕಳೆದು ಹೋದ" ಪತ್ರಿಕೆಗೆ ಏನೇ ಸಂಭವಿಸಿದ್ದಾಗ್ಯು ಕೊರಿಂಥದವರು ಅದನ್ನು ಪಡೆದುಕೊಂಡ ಮೇಲಂತೂ ಕೊರಿಂಥ ಸಭೆಯಲ್ಲಿದ್ದ ಪರಿಸ್ಥಿತಿಯು

ಸುಧಾರಿಸಲಾರಂಭಿಸಿತು. ಪೌಲನು ಈ ಒಳ್ಳೇ ಸುದ್ದಿಯನ್ನು ಕೇಳಿದಾಗ ಆತನು ಕೊರಿಂಥದವರಿಗೆ ಮೂರನೆಯ ಪತ್ರಿಕೆಯನ್ನು ಬರೆದನು, ಅದೇ ಹೊಸ ಒಡಂಬಡಿಕೆಯ ಕೊರಿಂಥದವರಿಗೆ ಬರೆದ ಎರಡನೆಯ ಪತ್ರಿಕೆ ಎಂದು ಕರೆಯಲ್ಪಟ್ಟಿದೆ.

ಪೌಲನ ಜೀವಿತದ ಕುರಿತ ಹೆಚ್ಚಿನ ವಿವರಣೆಗಾಗಿ ರೋಮಾಪುರದವರಿಗೆ ಬರೆದ ಪತ್ರಿಕೆ: ಪರಿಚಯ ನೋಡಿರಿ.

## ಹೊರ ರೇಖೆ

ಅ. ಪೀಠಿಕೆ (1:1-9)
   1. ವಂದನೆಗಳು (1:1-3)
   2. ಕೃತಜ್ಞತಾರ್ಪಣೆ (1:4-9)

ಆ. ಕೊರಿಂಥ ಸಭೆಯಲ್ಲಿನ ಪಂಗಡಗಳು (1:10-4:21)
   1. ಪಂಗಡಗಳ ಸತ್ಯಾಂಶ (1:10-17)
   2. ಸಂದೇಶದ ವಿಷಯದಲ್ಲಿ ಪಂಗಡಗಳು (1:18-2:16)
   3. ಸೇವೆಯ ವಿಷಯದಲ್ಲಿ ಪಂಗಡಗಳು (3:1-23)
   4. ಪಂಗಡಗಳನ್ನು ಅಂತ್ಯಗೊಳಿಸಲು ಮನವಿ (4:1-21)

ಇ. ಕೊರಿಂಥ ಸಭೆಯಲ್ಲಿನ ಅಶಿಸ್ತುಗಳು (5:1-6:20)
   1. ಶಿಸ್ತಿನ ಕೊರತೆ (5:1-13)
   2. ಕ್ರೈಸ್ತೇತರ ನ್ಯಾಯವಾದಿಗಳ ಮುಂದೆ ಮೊಕದ್ದಮೆಗಳು (6:1-11)
   3. ಸಭೆಯಲ್ಲಿ ಅನೈತೀಕತೆ (6:12-20)

ಈ. ಕೊರಿಂಥದವರ ಪ್ರಶ್ನೆಗಳಿಗೆ ಪೌಲನ ಉತ್ತರಗಳು (7:1-15:58)
   1. ವಿವಾಹದ ವಿಷಯದಲ್ಲಿ (7:1-40)
   2. ವಿಗ್ರಹಗಳಿಗೆ ನೈವೇದ್ಯ ಮಾಡಿದ ಮಾಂಸದ ವಿಷಯದಲ್ಲಿ (8:1-13)
   3. ಅಪೊಸ್ತಲನ ಹಕ್ಕು ಮತ್ತು ಕರ್ತವ್ಯಗಳ ವಿಷಯದಲ್ಲಿ (9:1-27)
   4. ಪ್ರಶ್ನಾರ್ಹವಾದ ಅಭ್ಯಾಸಗಳ ವಿಷಯದಲ್ಲಿ (10:1-33)
   5. ಸಾರ್ವಜನಿಕ ಆರಾಧನೆಯಲ್ಲಿ ಸ್ತ್ರೀಯು ಹೇಗಿರಬೇಕೆಂಬುದರ ವಿಷಯದಲ್ಲಿ (11:1-16)
   6. ಕರ್ತನ ಭೋಜನದ ವಿಷಯದಲ್ಲಿ (11:17-34)
   7. ಆತ್ಮೀಕ ವರಗಳ ವಿಷಯದಲ್ಲಿ (12:1-14:40)
   8. ಪುನರುತ್ಥಾನದ ವಿಷಯದಲ್ಲಿ (15:1-58)

ಉ. ಅಂತಿಮ ಸಲಹೆಗಳು (16:1-24)
   1. ಬಡವರಿಗಾಗಿ ಹಣಸಂಗ್ರಹಣೆ (16:1-4)
   2. ಪೌಲನ ಬೇಟಿನೀಡುವ ಯೋಜನೆ (16:5-12)
   3. ಅಂತಿಮ ವಂದನೆಗಳು ಮತ್ತು ಪ್ರಾರ್ಥನೆ (16:13-24)

## ಅಧ್ಯಾಯ - 1

### ವಂದನೆಗಳು ಮತ್ತು ಕೃತಜ್ಞತಾರ್ಪಣೆ (1:1-9)

1 ಪೌಲನು ತನ್ನನ್ನು ದೇವರ ಚಿತ್ತದಿಂದ ಯೇಸು ಕ್ರಿಸ್ತನ ಅಪೊಸ್ತಲನಾಗುವದಕ್ಕೆ ಕರೆಯಲ್ಪಟ್ಟವನು ಎಂದು ಪರಿಚಯಿಸಿಕೊಳುತ್ತಾನೆ (ರೋಮ 1:1; ಗಲಾತ್ಯ 1:1; ಎಫೆಸ 1:1 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಸೊಸ್ಥೆನನು ಪೌಲನ ಜೊತೆಕೆಲಸಗಾರರಲ್ಲಿ ಒಬ್ಬನಾಗಿದ್ದನು. ವಾಸ್ತವದಲ್ಲಿ ಸೊಸ್ಥೆನನು ಈ ಪತ್ರಿಕೆಯ ಯಾವದೇ ಭಾಗವನ್ನು ಬರೆಯಲಿಲ್ಲ, ಆದರೆ, ಆತನು ನಿಸ್ಸಂಶಯವಾಗಿಯೂ ಈ ಪತ್ರಿಕೆಯಲ್ಲಿ ವಿಷಯಾಂಶಗಳ ಬಗ್ಗೆ ಪೌಲನೊಂದಿಗೆ ಚರ್ಚಿಸಿದ್ದನು ಮತ್ತು ಬಹುಶಃ ಏನು ಬರೆಯಬೇಕೆಂಬ ವಿಷಯದಲ್ಲಿ ಪೌಲನಿಗೆ ಸಲಹೆಯನ್ನು ನೀಡಿದ್ದಿರಬೇಕು.

2 ಪೌಲನು ಕೊರಿಂಥದಲ್ಲಿನ ದೇವರ ಸಭೆಗೆ ಬರೆಯುತ್ತಾನೆ. ಸಭೆಯೆಂದರೇನು? ಕ್ರಿಸ್ತೇಸುವಿನಲ್ಲಿ ಪ್ರತಿಷ್ಠಿತರಾಗಿರುವ ಜನರು – ನಾವು – "ಸಭೆ" ಆಗಿದ್ದಾರೆ. ಈ ಕಾರಣದಿಂದಲೇ ಹೊಸ ಒಡಂಬಡಿಕೆಯಲ್ಲಿ "ದೇವ ಜನರು" ಎಂದು ಕರೆಯಲ್ಪಟ್ಟಿದ್ದಾರೆ.

ಕ್ರಿಸ್ತನಲ್ಲಿ ಪ್ರತಿಷ್ಠಿತರು ಯಾರಾಗಿದ್ದಾರೆ? ನಮ್ಮ ಕರ್ತನಾಗಿರುವ ಯೇಸು ಕ್ರಿಸ್ತನ ನಾಮಸ್ಮರಣೆಯನ್ನು ಮಾಡುವವರೆಲ್ಲರೂ ಪ್ರತಿಷ್ಠಿತರಾಗಿದ್ದಾರೆ (ರೋಮ 10:12-13 ನೋಡಿರಿ). ಅವರು ತಮ್ಮ ತುಟಿಗಳಿಂದ ಮಾತ್ರವೇ ಅಲ್ಲ, ಆದರೆ ತಮ್ಮ ಹೃದಯಗಳಿಂದ ಸಹ ಸ್ಮರಣೆಯನ್ನು ಮಾಡುವವರಾಗಿದ್ದಾರೆ, ಅವರು ಮಾತುಗಳಲ್ಲಿ ಮಾತ್ರವಲ್ಲ, ಆದರೆ ನಂಬಿಕೆಯಲ್ಲಿ – ಕ್ರಿಸ್ತನಲ್ಲಿ ನಂಬಿಕೆ – ಸಹ ಸ್ಮರಣೆಯನ್ನು ಮಾಡುವವರಾಗಿದ್ದಾರೆ. ಅನೇಕ ಜನರು ತಮ್ಮ ತುಟಿಗಳಿಂದ "ಕರ್ತನು, ಕರ್ತನು ಎನ್ನುತ್ತಾರೆ, ಆದರೆ ಅವರ ಹೃದಯಗಳಲ್ಲಿ ಯಾವ ಬದಲಾವಣೆಯಾಗಲಿ, ಪರಿಶುದ್ಧತೆಯಾಗಲಿ ಇರುವದಿಲ್ಲ (ಮತ್ತಾಯ 7:21 ಮತ್ತು ವ್ಯಾಖ್ಯಾನ ನೋಡಿರಿ). ನಾವು ನಿಜವಾದ ನಂಬಿಕೆಯಿಂದ ಕ್ರಿಸ್ತನ ನಾಮವನ್ನು ಸ್ಮರಣೆ ಮಾಡುವವದಾದರೆ ಕ್ರಿಸ್ತನು ಪವಿತ್ರಾತ್ಮನ ಬಲದ ಮುಖಾಂತರ ನಮ್ಮ ಜೀವಿತಗಳು ಪರಿಶುದ್ಧ ಅಥವಾ ಪ್ರತಿಷ್ಠಿತಗೊಳ್ಳುತ್ತವೆ ನಾವು "ದೇವಜನರು' ಆಗುತ್ತೇವೆ. ಕ್ರಿಸ್ತನಲ್ಲಿ ಪ್ರತಿಷ್ಠಿತರಾಗಿರುವವರೇ – ಅಂದರೆ, ದೇವರಿಂದ ನೀತಿವಂತರೆಂದು ನಿರ್ಣಯಿಸಲ್ಪಟ್ಟವರು, ತಮ್ಮ ಪಾಪಗಳಿಂದ ತೊಳೆಯಲ್ಪಟ್ಟು ಕ್ಷಮಾಪಣೆಯನ್ನು ಹೊಂದಿರುವವರು – ದೇವಜನರಾಗಿದ್ದಾರೆ.

3 ರೋಮ 1:7; ಎಫೆಸ 1:2 ಮತ್ತು ವ್ಯಾಖ್ಯಾನ ನೋಡಿರಿ.

4 ಪೌಲನು ತನ್ನ ಜೊತೆ ಕ್ರೈಸ್ತರೆಲ್ಲರಿಗೋಸ್ಕರ ಯಾವಾಗಲೂ ದೇವರನ್ನು ಕೊಂಡಾಡುತ್ತಿದ್ದನು (ರೋಮ 1:8; ಎಫೆಸ 1:15-16; ಕೊಲೊಸ್ಸೆ 1:3-4). ದೇವರು ಕೊರಿಂಥದ ವಿಶ್ವಾಸಿಗಳಿಗೆ ಅನುಗ್ರಹಿಸಿದ ಕೃಪೆಯ ನಿಮಿತ್ತ ಅವರಿಗಾಗಿ ಪೌಲನು ಇಲ್ಲಿ ಕೃತಜ್ಞತೆಯನ್ನು ಅರ್ಪಿಸುತ್ತಾನೆ. ನಾವು ಸಹ ಒಬ್ಬರಿಗೊಬ್ಬರಿಗಾಗಿಯೂ ಆತನು ನಮ್ಮೊಬ್ಬೊಬ್ಬರಿಗೂ ಅನುಗ್ರಹಿಸಿದ ವರಗಳಿಗಾಗಿಯೂ ಎಡೆಬಿಡದೆ ದೇವರನ್ನು ಕೊಂಡಾಡುವದನ್ನು ನಿಲ್ಲಿಸದಿರೋಣ.

5 ಕೊರಿಂಥದವರು ಎಲ್ಲಾ ವಿಧದಲ್ಲಿಯೂ ಸಮೃದ್ಧಿ ಹೊಂದಿದವರಾಗಿದ್ದರು, ಆದರೆ ಪೌಲನು ಅಲ್ಲಿ ಅವರು ವಿಶೇಷವಾಗಿ ಸಮೃದ್ಧಿ ಹೊಂದಿದ ಎರಡು ವಿಧಗಳನ್ನು ಪ್ರಸ್ತಾಪಿಸುತ್ತಾನೆ – ಅಂದರೆ, ಅವರ ನುಡಿಯಲ್ಲಿಯೂ ಮತ್ತು ಅವರ ತಿಳುವಳಿಕೆಯಲ್ಲಿಯೂ. ನುಡಿಯ ಮತ್ತು ತಿಳುವಳಿಕೆಗಳೆರಡೂ ವರಗಳನ್ನು ಹೊಂದಿರುವ ವ್ಯಕ್ತಿಯು ಎಷ್ಟು ವಿರಳವಲ್ಲವೇ! ಬಹು ಮಂದಿ ಉತ್ತಮವಾಗಿ ಮಾತಾಡುತ್ತಾರೆ ಆದರೆ ತಿಳುವಳಿಕೆಯಿರುವದಿಲ್ಲ ಅಥವಾ, ಅವರು ತಿಳುವಳಿಕೆಯನ್ನು ಹೊಂದಿರುತ್ತಾರೆ ಆದರೆ ಅದನ್ನು ವ್ಯಕ್ತಪಡಿಸಲು ಆಗುವದಿಲ್ಲ. ಆ ಎರಡು ವರಗಳಲ್ಲಿ ಸಮೃದ್ಧಿ ಯಾಗಿರುವ ವ್ಯಕ್ತಿಯು ಇತರರಿಗೆ ಹೆಚ್ಚು ಆಶಿರ್ವಾದವನ್ನು ಉಂಟು ಮಾಡಲು ಶಕ್ತನಾಗಿರುತ್ತಾನೆ.

6 ಕೊರಿಂಥದ ಕ್ರೈಸ್ತರು ಅಷ್ಟೊಂದು "ಸಮೃದ್ಧಿ ಹೊಂದಿದವರಾಗಿ" ಇದ್ದದಕ್ಕೆ ಕಾರಣವನ್ನು ಇಲ್ಲಿ ಪೌಲನು ನೀಡುತ್ತಾನೆ. ಪೌಲನು ನೀಡಿದ ಕ್ರಿಸ್ತನ ವಿಷಯವಾದ ಸಾಕ್ಷಿಯು ಅವರಲ್ಲಿ ದೃಢವಾಗಿ ನೆಲೆಗೊಂಡಿದ್ದೇ ಅದಕ್ಕೆ ಕಾರಣವಾಗಿತ್ತು. ನಾವು ಕ್ರಿಸ್ತನ ವಿಷಯವಾಗಿ ಸಾಕ್ಷಿನೀಡುವಾಗಲೇ ಇತರರು ಸಮೃದ್ಧಿ ಹೊಂದುತ್ತಾರೆ. ಪೌಲನು ತನ್ನ ವಿಷಯವಾಗಿ ಅಲ್ಲ, ಆದರೆ ತನ್ನ ಕರ್ತನ ವಿಷಯವಾಗಿ ಸಾಕ್ಷಿಹೇಳಿದನು.

7 ದೇವರು ಕೊರಿಂಥದಲ್ಲಿನ ವಿಶ್ವಾಸಿಗಳಿಗೆ ಅನುಗ್ರಹಿಸಿದ್ದ ಕೃಪೆಯ ಕಾರಣದಿಂದ (ವಚನ 4), ಅವರಿಗೆ ಯಾವ ಕೃಪಾವರದಲ್ಲಿಯೂ (ಆತ್ಮೀಕವರದಲ್ಲಿಯೂ) ಇಲ್ಲಿ ಪೌಲನು ಮುಖ್ಯವಾಗಿ ಪವಿತ್ರಾತ್ಮನ ವಿಶೇಷ ವರಗಳನ್ನು ಸೂಚಿಸುತ್ತಿದ್ದಾನೆ, ಆದರ ವಿಷಯವಾಗಿ ಪೌಲನು ಬೇರೆ ಕಡೆಯಲ್ಲಿಯೂ ಬರೆದಿರುತ್ತಾನೆ (ರೋಮ 12:6-8; 1 ಕೊರಿಂಥ 12:7-11, 27-28; ಎಫೆಸ 4:11 ನೋಡಿರಿ).ಆದರೆ ಸ್ವತಃ ಯೇಸು ಕ್ರಿಸ್ತನೂ, ಸ್ವತಃ ಪವಿತ್ರಾತ್ಮನೂ ಮತ್ತು ನಮ್ಮ ನಿತ್ಯರಕ್ಷಣೆಯೂ ಅತಿ ಶ್ರೇಷ್ಠವಾದ " ಆತ್ಮೀಕ ವರಗಳು" ಆಗಿವೆ. ನಮಗೆ ಅನುಗ್ರಹಿಸಲ್ಪಟ್ಟಿರುವ ದೇವರ ಎಲ್ಲಾ ಆಶಿರ್ವಾದಗಳೆಲ್ಲವೂ – ಆತನ ಕೃಪೆ, ಆತನ ಪ್ರೀತಿ, ಆತನ ಕರುಣೆ, ಆತನ ಬಲ, ಆತನ ಆತ್ಮ, ಆತನ ಮಗ – " ಆತ್ಮೀಕ ವರಗಳು" ಎಂದು ಕರೆಯಲ್ಪಡಬಹುದು.

ಕೊರಿಂಥದವರು ಯಾವ ಆತ್ಮೀಕವರದಲ್ಲಿಯೂ ಕೊರತೆಯನ್ನು ಹೊಂದಿರಲಿಲ್ಲವಾದರೂ ಅವರು ಅನೇಕ ಪಾಪಗಳು ಮತ್ತು ಬಲಹೀನತೆಗಳಿಂದ ಕೂಡಿದವರಾಗಿದ್ದರು. ಅವರು ಯಾವ ಆತ್ಮೀಕ ವರಗಳ ಕೊರತೆಯನ್ನು ಹೊಂದಿರಲಿಲ್ಲ,

ಆದರೆ ಅವರಲ್ಲಿ ಯಾವ ಪಾಪಗಳ ಕೊರೆತೆಯು ಸಹ ಇರಲಿಲ್ಲ! ಅವರು ಇನ್ನೂ ಬಹಳಷ್ಟು ಬೆಳೆಯಬೇಕಾಗಿತ್ತು, ಅವರು ಪರಿಪೂರ್ಣತೆಯಿಂದ ಬಹಳ ದೂರದಲ್ಲಿದ್ದರು (ಮತ್ತಾಯ 5;48). ಆದುದರಿಂದ, ಅವರು ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯನ್ನು ಎದುರು ನೋಡುತ್ತಾ ಇರಲಿ – ಅಂದರೆ ಕ್ರಿಸ್ತನು ಲೋಕಕ್ಕೆ ಎರಡನೆಯ ಸಾರಿ ಬರುವದನ್ನು ಅವರು ಎದುರು ನೋಡಲಿ, ಆ ಸಮಯದಲ್ಲಿ ಅವರ ದೇಹಗಳು ವಿಮೋಚಿಸಲ್ಪಡುವವು (ರೋಮ 8:23), ಮತ್ತು ಅವರ ಪಾಪಗಳು ಹಾಗು ಬಲಹೀನತೆಗಳು ಶಾಶ್ವತವಾಗಿ ಅಳಿಸಿ ಹಾಕಲ್ಪಡುವವು – ಎಂದು ಪೌಲನು ಹೇಳುತ್ತಾನೆ

8 ಕ್ರಿಸ್ತನು ನಿಮ್ಮನ್ನು ಕಡೇವರೆಗೂ ದೃಢಪಡಿಸುವನು. ಕ್ರಿಸ್ತನು ಶಿಲುಬೆಯ ಮೇಲಿನ ತನ್ನ ಮರಣದ ಮೂಲಕ ನಮ್ಮ ಅಪರಾಧ, ನಮ್ಮ "ತಪ್ಪು" ಗಳನ್ನು ತೆಗೆದು ಹಾಕಿರುತ್ತಾನೆ, ಹೀಗೆ ನಾವು ನಮ್ಮ ಕರ್ತನಾದ ಯೇಸು ಕ್ರಿಸ್ತನ ದಿನದಲ್ಲಿ – ಅಂದರೆ, ಕ್ರಿಸ್ತನು ಎಲ್ಲಾ ಮನುಷ್ಯರಿಗೆ ನ್ಯಾಯತೀರ್ಪು ನೀಡಲು ಭೂಮಿಗೆ ಬರುವ ದಿನದಲ್ಲಿ – ಯಾರೂ ನಮ್ಮ ಮೇಲೆ ತಪ್ಪು ಹೊರಿಸಲಾಗದು. ನಾವು ಸಂಪೂರ್ಣವಾಗಿ ಕ್ರಿಸ್ತನ ಬಲವನ್ನು ಅವಲಂಭಿಸಿರುತ್ತೇವೆ, ಆತನು ಅದನ್ನು ಪವಿತ್ರಾತ್ಮನ ಮುಖಾಂತರ ನಮಗೆ ಕೊಡುತ್ತಾನೆ. ನಾವು ನಮ್ಮ ಸ್ವಂತ ಬಲದಿಂದ ದೇವರಿಗೆ ಮೆಚ್ಚಿಕೆಯಾದ ಜೀವಿತವನ್ನು ಜೀವಿಸಲಾರೆವು. ಕ್ರಿಸ್ತನು ನಮ್ಮನ್ನು ದೃಢಪಡಿಸುವನು (ಫಿಲಿಪ್ಪಿ 1:6; 1 ಥೆಸಲೋನಿಕ 5:23-24 ನೋಡಿರಿ).

9 ದೇವರು ನಂಬಿಗಸ್ಥನು. ದೇವರು ನಮ್ಮನ್ನು ಕರೆದನು; ಆತನು ನಮ್ಮನ್ನು ನೀತಿವಂತರನ್ನಾಗಿ ಮಾಡಿದನು; ಮತ್ತು ಆತನು ನಮ್ಮನ್ನು ಮಹಿಮಾಪದವಿಗೆ ಸೇರಿಸುವನು (ರೋಮ 8:30 ಮತ್ತು ವ್ಯಾಖ್ಯಾನ ನೋಡಿರಿ). ಕೆಲವು ಜನರು 8-9 ವಚನಗಳನ್ನು ಉಲ್ಲೇಖಿಸುತ್ತಾ ಕ್ರೈಸ್ತರು ಬಿದ್ದು ಹೋಗಲಾರರೆಂದೂ, ಅವರು ಯಾವದೇ ಕಾರಣಕ್ಕೂ ತಮ್ಮ ರಕ್ಷಣೆಯನ್ನು ಕಳೆದು ಕೊಳ್ಳಲು ಸಾಧ್ಯವಿಲ್ಲ ಎಂದು ನಂಬುತ್ತಾರೆ. ಆದರೆ ಹೊಸ ಒಡಂಬಡಿಕೆಯಲ್ಲಿನ ಇತರ ವಚನಗಳು ಖಂಡಿತವಾಗಿಯೂ ಕ್ರೈಸ್ತರು ತಮ್ಮ ನಂಬಿಕೆಯಿಂದ ವಿಮುಖರಾಗುವ ಸಾದ್ಯತೆಯಿದೆ ಎಂದು ಸೂಚಿಸುತ್ತವೆ (ಲೂಕ 8:13; ರೋಮ 11:22; 1 ತಿಮೊಥೆ 4:1; ಸಾಮಾನ್ಯ ಲೇಖನ: ನಾವು ನಮ್ಮ ರಕ್ಷಣೆಯನ್ನು ಕಳೆದುಕೊಳ್ಳಬಹುದೋ? ನೋಡಿರಿ).

ದೇವರು ನಮ್ಮನ್ನು ಯಾವ ಉದ್ದೇಶಕ್ಕಾಗಿ ಕರೆಯುತ್ತಾನೆ? ದೇವರು ನಮ್ಮನ್ನು ಆತನ ಮಗನೊಂದಿಗೆ ಅನ್ಯೋನ್ಯತೆ ಹೊಂದುವದಕ್ಕೆ ಕರೆಯುತ್ತಾನೆ. ಮತ್ತು ನಾವು ಯೇಸುವಿನೊಂದಿಗೆ ಅನ್ಯೋನ್ಯತೆಯನ್ನು ಹೊಂದಿದಾಗ ಹೆಚ್ಚು ಹೆಚ್ಚಾಗಿ ಆತನಂತೆಯೇ ಆಗುವೆವು. ನಮಗಾಗಿ ದೇವರ ಅಂತಿಮ ಉದ್ದೇಶವು ಇದಾಗಿದೆ: ನಾವು ಆತನ ಮಗನ ಸಾರೂಪ್ಯವುಳ್ಳವರಾಗ ಬೇಕು. ಎಂಬುದೇ (ರೋಮ 8:29 ಮತ್ತು ವ್ಯಾಖ್ಯಾನ ನೋಡಿರಿ).

ಹಾಗಾದರೆ, ಅಂತಹ ಶ್ರೇಷ್ಠ ಪ್ರಾರಬ್ಧವನ್ನು ದೃಷ್ಟಿಯಲ್ಲಿಟ್ಟು ಕೊಂಡು ನಮ್ಮನ್ನು ನಾವು ಒಂದು ಸಂಗತಿಯನ್ನು ಕೇಳಿಕೊಳ್ಳೋಣ:ಈದಿನ ನಾವು ಯೇಸುವಿನೊಂದಿಗೆ ಅನ್ಯೋನ್ಯತೆ ಹೊಂದಿದ್ದೇವೋ? ಆತನೊಂದಿಗೆ ಅನ್ಯೋನ್ಯತೆಯಿಲ್ಲದಿದ್ದರೆ ನಾವು ಗಿಡದಿಂದ ಕತ್ತರಿಸಲ್ಪಟ್ಟು ಒಣಗಿ ಹೋಗುವ ಕೊಂಬೆಯಂತಾಗುವೆವು (ಯೋಹಾನ 15:5-6 ಮತ್ತು ವ್ಯಾಖ್ಯಾನ ನೋಡಿರಿ).

## ಸಭೆಯಲ್ಲಿ ಪಂಗಡಗಳು (1:10-17)

10 ಕೊರಿಂಥದ ವಿಶ್ವಾಸಿಗಳು ಒಂದೇ ಮನಸ್ಸೂ ಒಂದೇ ಅಭಿಪ್ರಾಯವೂ ಉಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು ಎಂಬದು ಪೌಲನ ಪ್ರಾರ್ಥನೆಯಾಗಿದೆ. ಕೊರಿಂಥದವರು ಪ್ರತಿಯೊಂದು ಚಿಕ್ಕ ವಿಷಯದಲ್ಲಿಯೂ ಒಪ್ಪಿಗೆಯುಳ್ಳವರಾಗಿರಬೇಕೆಂದು ಇದರ ಅರ್ಥವೋ? ಇಲ್ಲ, ಇದು ಆದರರ್ಥವಲ್ಲ. ಆದರೆ ಅವರು ಎಲ್ಲಾ ದೊಡ್ಡ ಹಾಗು ಪ್ರಾಮುಖ್ಯ ವಿಷಯಗಳಲ್ಲಿ ಒಪ್ಪಿಗೆಯುಳ್ಳವರಾಗಿರಬೇಕೆಂದು ಇದರ ಅರ್ಥವಾಗಿದೆ – ಉದಾಹರಣೆಗೆ, ಯೇಸು ಕ್ರಿಸ್ತನು ದೇವರ ಮಗನು, ಬೈಬಲ್ ದೇವರ ವಾಕ್ಯವಾಗಿದ್ದು ನಾವು ಅದಕ್ಕೆ ವಿಧೇಯರಾಗಬೇಕು. ರಕ್ಷಣೆಯು ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ದೊರೆಯುತ್ತದೆ ಎಂಬ ಮುಂತಾದ ವಿಷಯಗಳಲ್ಲಿ ಏಕ ಅಭಿಪ್ರಾಯವುಳ್ಳವರಾಗಿರಬೇಕು (ಸಾಮಾನ್ಯ ಲೇಖನಗಳಿಗೆ ನೀಡಲಾಗಿರುವ ಪೀಠಿಕೆ ನೋಡಿರಿ).

ನಾವು ನಂಬಿಕೆ, ಪ್ರೀತಿ ಮತ್ತು ಕ್ರಿಸ್ತನಿಗೆ ವಿಧೇಯತೆಗಳಲ್ಲಿ ಐಕ್ಯತೆಯುಳ್ಳವರಾಗಿರಬೇಕು. ಆದರೆ ಚಿಕ್ಕ ಚಿಕ್ಕ ವಿಷಯಗಳಲ್ಲಿ ಭಿನ್ನಾಭಿ ಪ್ರಾಯಗಳನ್ನು ಹೊಂದಿರುವದರಲ್ಲಿ ತಪ್ಪೇನಿಲ್ಲ. ಒಬ್ಬನು ಮಾಂಸವನ್ನು ತಿನ್ನಲಿ ಮತ್ತು ಇನ್ನೊಬ್ಬನು ತಿನ್ನದಿರಲಿ (ರೋಮ 14:2,5). ನಾವು ಈ ಚಿಕ್ಕ ವಿಷಯಗಳ ಮೇಲೆ ಗಮನ ಕೊಡುವ ಅಗತ್ಯವಿರುವದಿಲ್ಲ. ನಾವು ಚಿಕ್ಕ ವಿಷಯಗಳಲ್ಲಿ ವಿಭಿನ್ನ ವಿಚಾರಗಳನ್ನೂ ಪದ್ಧತಿಗಳನ್ನೂ ಹೊಂದಿದ್ದಾಗ್ಯೂ ಎಲ್ಲಿಯ ತನಕ ನಾವು ಒಬ್ಬರನ್ನೊಬ್ಬರ ಸೇರಿಸಿಕೊಂಡು ಗೌರವಿಸುತ್ತೇವೋ ಅಲ್ಲಿಯ ತನಕ ಕ್ರಿಸ್ತನಲ್ಲಿ ಒಂದೇ ಅಭಿಪ್ರಾಯವುಳ್ಳವರಾಗಿದ್ದು ಹೊಂದಿಕೆಯಿಂದಿರಬಹುದು. ಅದೇ ಪ್ರಾಮುಖ್ಯವಾದದ್ದು (ರೋಮ 12:16; 15:5-6; 2 ಕೊರಿಂಥ 13:11; ಫಿಲಿಪ್ಪಿ 2:2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಕ್ರೈಸ್ತರೊಳಗೆ ಐಕ್ಯತೆಯು ಮರದ ಎಲೆಗಳೊಳಗಿನ "ಐಕ್ಯತೆ" ಹಾಗೆ ಇರುತ್ತದೆ. ದೂರದಿಂದ ನೋಡಿದಾಗ ಮರದ ಎಲೆಗಳು ಒಂದೇ ರೀತಿಯಾಗಿ ಕಾಣುತ್ತವೆ. ಆದದೆ ನಾವು ಹತ್ತಿರದಿಂದ ನೋಡುವಾಗ ಎಲೆಗಳೆಲ್ಲವೂ ವಿಭಿನ್ನವಾಗಿರುತ್ತವೆ. ಎಲೆಗಳು ಮರದಲ್ಲಿ ಐಕ್ಯವಾಗಿರುವ ಪ್ರಕಾರವೇ ನಾವು ಕ್ರಿಸ್ತನಲ್ಲಿ ಐಕ್ಯವಾಗಿರಬೇಕು – ಐಕ್ಯವಾಗಿ, ಆದರೆ ತದ್ರೂಪವಾಗಿಯಲ್ಲ!

ವಿಶ್ವಾಸಿಗಳ ಮದ್ಯದಲ್ಲಿ ಐಕ್ಯತೆಗಾಗಿ ಪೌಲನು ಮಾತ್ರವೇ ಪ್ರಾರ್ಥಿಸಲಿಲ್ಲ. ಕ್ರಿಸ್ತನು ಸ್ವತಃ ತನ್ನಲ್ಲಿ ನಂಬಿಕೆಯಿಡುವವರೆಲ್ಲಾ ಒಂದಾಗಿರಬೇಕೆಂದು ಪ್ರಾರ್ಥಿಸಿದನು (ಯೋಹಾನ 17:20-23 ಮತ್ತು ವ್ಯಾಖ್ಯಾನ ನೋಡಿರಿ).

11 ಖ್ಲೋಯೆಳು ಕೊರಿಂಥದಲ್ಲಿ ವಾಸಿಸುತ್ತಿದ್ದ ಒಬ್ಬ ಸ್ತ್ರೀಯಾಗಿದ್ದಳು. ಆಕೆಯ ಮನೆಯವರಲ್ಲಿ ಕೆಲವರು ಎಫೆಸಕ್ಕೆ ಪ್ರಯಾಣ ಮಾಡಿರುವಂತೆ ತೋರುತ್ತದೆ, ಅಲ್ಲಿ ಅವರು ಪೌಲನನ್ನು ಬೇಟಿಯಾಗಿ ಕೊರಿಂಥದಲ್ಲಿನ ಸಭೆಯಲ್ಲಿದ್ದ ಜಗಳಗಳ ಮತ್ತು ಪಂಗಡಗಳ ಕುರಿತಾಗಿ ಅವನಿಗೆ ತಿಳಿಸಿದರು.

12 ಕೊರಿಂಥದಲ್ಲಿನ ಸಭೆಯಲ್ಲಿ ಏನು ಸಂಭವಿಸಿತ್ತು? ವಿಶ್ವಾಸಿಗಳು ವಿಭಾಗಗೊಂಡಿದ್ದರು. ಕೆಲವು ವಿಶ್ವಾಸಿಗಳು ಪೌಲನನ್ನು ಹಿಂಬಾಲಿಸಲಾರಂಬಿಸಿದ್ದರು – ಬಹುಶಃ ಪ್ರಾರಂಭದಲ್ಲಿ ಆತನಿಂದ ಸುವಾರ್ತೆಯನ್ನು ಕೇಳಿದವರು. ಆದರೆ, ಆ ಮೇಲೆ ಪೌಲನು ಕೊರಿಂಥದಿಂದ ಹೊರಟು ಹೋಗಿದ್ದನು, ಮತ್ತು ಅನಂತರ ಅಪೊಲ್ಲೋಸ ಎಂಬವನು ಬಂದು ಪೌಲನ ಸ್ಥಾನವನ್ನು ವಹಿಸಿಕೊಂಡಿದ್ದನು. ಹಾಗಾದರೆ ಕೊರಿಂಥದ ಕೆಲವು ಮಂದಿ ಆಗ ಅಪೊಲ್ಲೋಸನನ್ನು ಹಿಂಬಾಲಿಸಲಾರಂಬಿಸಿದ್ದರು! ಅಪೊಲ್ಲೋಸನು ವಿಧ್ಯಾವಂತ ಯೆಹೂದ್ಯನಾಗಿದ್ದನು ಮತ್ತು ಆತನು ಆಸಕ್ತ ಮನಸ್ಸುಳ್ಳವನಾಗಿದ್ದು ಯೇಸುವಿನ ಸಂಗತಿಗಳನ್ನು ಸೂಕ್ಷ್ಮವಾಗಿ ಹೇಳಿ ಉಪದೇಶಿಸಿದನು (ಅ.ಕೃತ್ಯ 18:24-25). ಅಪೊಲ್ಲೋಸನು ಕೊರಿಂಥದಲ್ಲಿರುವ ವೇಳೆಯಲ್ಲಿ ಅಲ್ಲಿರುವ ವಿಶ್ವಾಸಿಗಳಿಗೆ ಬಹಳ ಸಹಾಯ ಮಾಡಿದನು (ಅ.ಕೃತ್ಯ 18:27-28).

ಅಲ್ಲದೆ, ಇನ್ನು ಕೆಲವು ವಿಶ್ವಾಸಿಗಳು ಯೇಸುವಿನ ಹನ್ನೆರಡು ಮಂದಿ ಮೂಲ ಶಿಷ್ಯರಲ್ಲಿ ಪ್ರಮುಖನಾಗಿದ್ದ ಕೇಫ (ಪೇತ್ರ)ನನ್ನು ಹಿಂಬಾಲಿಸಲಾರಂಬಿಸಿದ್ದರು (ಯೋಹಾನ 1:42 ನೋಡಿರಿ). ಬಹಶಃ ಕೆಲವು ಮಂದಿ ವಿಶ್ವಾಸಿಗಳು ಪೇತ್ರನನ್ನು ಹಿಂಬಾಲಿಸುತ್ತಿದ್ದುದಕ್ಕೆ ಕಾರಣವೇನೆಂದರೆ ಆತನು ಹನ್ನೆರಡು ಮಂದಿ ಮೂಲ ಶಿಷ್ಯರಲ್ಲೊಬ್ಬನಾಗಿದ್ದನು, ಪೌಲ ಮತ್ತು ಅಪೊಲ್ಲೋಸನಾದರೋ ಮೂಲ ಶಿಷ್ಯರೊಳಗೆ ಸೇರಿದವರಾಗಿರಲಿಲ್ಲ. ಮೂಲ ಶಿಷ್ಯರುಗಳನ್ನು ಮಾತ್ರವೇ ನಿಜವಾದ ಅಪೊಸ್ತಲರೆಂದು ಪರಿಗಣಿಸಲ್ಪಡಬೇಕು ಎಂದು ಕೆಲವು ಜನರು ನೆನಸಿದ್ದರು.

ಮತ್ತು ಅಂತಿಮವಾಗಿ, ಇನ್ನೂ ಒಂದು ಗುಂಪಿನವರು "ನಾವು ಕ್ರಿಸ್ತನನ್ನು ಹಿಂಬಾಲಿಸುತ್ತೇವೆ" ಎನ್ನುತ್ತಿದ್ದರು. "ನಾವು ಕ್ರಿಸ್ತನನ್ನು ಹಿಂಬಾಲಿಸುತ್ತೇವೆ" ಎಂದು ಹೇಳುವದು ಉತ್ತಮವೇ, ಆದರೆ ಈ ಗುಂಪಿನವರು ಕೊರಿಂಥದಲ್ಲಿನ ಇತರ ವಿಶ್ವಾಸಿಗಳೆಲ್ಲರನ್ನು ಕೀಳಾಗಿ ಕಾಣುತ್ತಿದ್ದದ್ದು ಉತ್ತಮವಾದದ್ದಾಗಿರಲಿಲ್ಲ. ಅವರು ತಮ್ಮನ್ನು ಮಾತ್ರವೇ ನಿಜವಾದ ವಿಶ್ವಾಸಿಗಳು ಎಂದು ಪರಿಗಣಿಸಿಕೊಂಡರು. ಆದರೆ ಈ ರೀತಿಯಾಗಿಯೇ ಯೋಚಿಸುವಲ್ಲಿ ಅವರು ಗರ್ವಿಷ್ಠರಾಗಿದ್ದರು; ಅವರು ತಮ್ಮನ್ನು ಬೇರೆಯವರಿಗಿಂತ ಶ್ರೇಷ್ಠರೆಂದೆಣಿಸಿಕೊಳ್ಳುತ್ತಿದ್ದರು. ಅದಷ್ಟೇ ಅಲ್ಲದೆ ಅವರ ಅಭಿಪ್ರಾಯವು ತಪ್ಪಾಗಿತ್ತು: ಅವರು ಮಾತ್ರವೇ ನಿಜವಾದ ಕ್ರೈಸ್ತರಾಗಿರಲಿಲ್ಲ. ಇತರರು ಸಹ ಕ್ರೈಸ್ತರೇ ಆಗಿದ್ದರು! ಹೀಗೆ, ಅವರ ಗರ್ವದ ನಿಮಿತ್ತದಿಂದಾಗಿ " ಕ್ರಿಸ್ತನ ಹಿಂಬಾಲಕರು" ಎಂದು ಕರೆದುಕೊಳ್ಳುವವರು ಇತರ ಗುಂಪುಗಳಂತೆಯೇ ಜಗಳವಾಡುವದಕ್ಕೂ ಪಂಗಡಗಳನ್ನುಂಟು ಮಾಡುವದಕ್ಕೂ ತೊಡಗಿದರು. ಅವರು ಕ್ರಿಸ್ತನಿಗೆ ಅವಮಾನವನ್ನು ತಂದರು, ಯಾಕೆಂದರೆ, ಕ್ರಿಸ್ತನು ಅವರ ಸ್ವಂತ ಚಿಕ್ಕ ಗುಂಪಿಗೆ ಕರ್ತನೆಂದು ಹೇಳಿಕೊಳ್ಳುತ್ತಾ ಆತನು ಇಡೀ ಸಭೆಗೆ ಕರ್ತನಾಗಿದ್ದಾನೆಂಬದನ್ನು ಅಲ್ಲಗಳೆಯುವವರಾಗಿದ್ದರು – ಆತನು ವಾಸ್ತವದಲ್ಲಿ ಇಡೀ ಸಭೆಗೆ ಕರ್ತನಷ್ಟೇ. ಗರ್ವವು ಎಷ್ಟೊಂದು ಹಾನಿಯನ್ನು ಉಂಟು ಮಾಡಬಲ್ಲದೆಂಬದನ್ನು ಗಮನಿಸಿರಿ. ಅದು ಕ್ರಿಸ್ತನು ಹಾಗು ಆತನ ಸ್ವಂತ ಅಪೊಸ್ತಲರ ನಡುವೆ ಸಹ ಭೇದವನ್ನು ತರಬಲ್ಲದು! ಯಾವದೇ ಸಭೆಯಲ್ಲಿ ಭೇದವುಂಟಾಗುವದಕ್ಕೆ ದೊಡ್ಡ ಕಾರಣವು ಗರ್ವವೇ. ಸಭೆಯಲ್ಲಿನ ಪಂಗಡಕ್ಕೆ ಒಂದೇ ಒಂದು ಪರಿಹಾರವುಂಟು; ಎಲ್ಲಾ ಸದಸ್ಯರೂ ತಮ್ಮನ್ನು ತಗ್ಗಿಸಿಕೊಂಡು ತಮ್ಮ ಬದಲಾಗಿ ಕ್ರಿಸ್ತನನ್ನು ದೃಷ್ಟಿಸಲಾರಂಭಿಸಬೇಕು. ಸಭಾ ನಾಯಕರು ಮತ್ತು ಅವರ ಹಿಂಬಾಲಕರು ತಮ್ಮನ್ನಲ್ಲ, ಆದರೆ ಕ್ರಿಸ್ತನನ್ನೇ ಮಾತ್ರ ಮೇಲೆತ್ತುವದರೆಡೆಗೆ ಗಮನ ಹರಿಸಬೇಕು.

13 ಕೊರಿಂಥದ ಕ್ರೈಸ್ತರು ಈ ರೀತಿಯಾಗಿ ವಿರೋಧಿಸುವ ಪಕ್ಷಗಳಾಗಿ ವಿಭಾಗಗೊಳ್ಳಲು ಹೇಗೆ ಸಾಧ್ಯ? ಎಂದು ಪೌಲನು ಕೇಳುತ್ತಾನೆ. ಅವರು ಈ ನಾಯಕರನ್ನು ಅನುಸರಿಸಲು ಹೇಗೆ ತಮ್ಮ ನಿಷ್ಠೆಯನ್ನು ಒಪ್ಪಿಸಿಕೊಳ್ಳಲು ಸಾಧ್ಯ? ಅವರು ಎಂತಹ ತಪ್ಪಾದ ದಾರಿಯನ್ನು ಹಿಡಿದಿದ್ದಾರೆ! ಕ್ರಿಸ್ತನು ಮಾತ್ರವೇ ಅವರಿಗೋಸ್ಕರ ಶಿಲುಬೆಯ ಮೇಲೆ ಮರಣಿಸಿದನು. ಈ ನಾಯಕರು ಅವರಿಗೆ ದೀಕ್ಷಾಸ್ನಾನ ಮಾಡಿಸಿರಬಹುದು, ಆದರೆ ಅವರು ತಮ್ಮ ಸ್ವಂತ ಹೆಸರಿನಲ್ಲಿ ಅವರಿಗೆ ದೀಕ್ಷಾಸ್ನಾನ ಮಾಡಿಸಲಿಲ್ಲ; ಕ್ರಿಸ್ತನ ಹೆಸರಿನಲ್ಲಿಯೇ ಅವರನ್ನು ದೀಕ್ಷಾಸ್ನಾನ ಮಾಡಿಸಿದರು.

14-15 ಕೊರಿಂಥದವರು ಮನುಷ್ಯರನ್ನು ಅನುಸರಿಸುವದು ಪೌಲನಿಗೆ ಇಷ್ಟವಿಲ್ಲ; ಅವರು ಕ್ರಿಸ್ತನನ್ನು ಹಿಂಬಾಲಿಸಬೇಕೆಂದು ಆತನು ಇಚ್ಚಿಸುತ್ತಾನೆ. ಪೌಲನು ತಾನು ಕೊರಿಂಥದ ವಿಶ್ವಾಸಿಗಳಲ್ಲಿ ಇಬ್ಬರಿಗೆ ಮಾತ್ರ ದೀಕ್ಷಾಸ್ನಾನ ಮಾಡಿಸಿದ್ದಕ್ಕೆ ಸಂತೋಷ ಪಡುತ್ತಾನೆ, ಯಾಕೆಂದರೆ ಯಾರೂ ಸಹ ಆತನು ತನ್ನ ಸ್ವಂತ ಪಕ್ಷವನ್ನು ಪ್ರಾರಂಭಿಸುವದಕ್ಕೆ ಪ್ರಯತ್ನಿಸಿದನೆಂದು ಅವನ ಮೇಲೆ ತಪ್ಪು ಹೊರಿಸಲು ಸಾಧ್ಯವಿಲ್ಲ!

ಕ್ರಿಸ್ಪನು ಕೊರಿಂಥದಲ್ಲಿನ ಯೆಹೂದ್ಯ ಸಭಾಮಂದಿರದ ಅಧಿಕಾರಿಯಾಗಿದ್ದನು (ಅ.ಕೃತ್ಯ 18:8). ಗಾಯನ ಬಗ್ಗೆ ರೋಮ 16:23 ರಲ್ಲಿ ಪ್ರಸ್ತಾಪಿಸಲಾಗಿದೆ; ಬಹುಶಃ ಕೊರಿಂಥದಲ್ಲಿನ ಸಭೆಯು ಇವನ ಮನೆಯಲ್ಲಿ ಕೂಡಿಬರುತ್ತಿತ್ತು.

16 ಪಕ್ಕನೇ ಪೌಲನು ತಾನು ದೀಕ್ಷಾಸ್ನಾನ ಮಾಡಿಸಿದ ಮತ್ತೊಂದು ಕುಟುಂಬವನ್ನು ಜ್ಞಾಪಕಮಾಡಿಕೊಳ್ಳುತ್ತಾನೆ, ಅದನ್ನು ಆತನು ಪ್ರಸ್ತಾಪಿಸುವದಕ್ಕೆ ಮರೆತಿದ್ದನು. ಪೌಲನು ಯಾರನ್ನೂ ಮರೆಯಲಿಚ್ಛಿಸಲಿಲ್ಲ; ಪ್ರತಿಯೊಬ್ಬ ವಿಶ್ವಾಸಿಯೂ ಆತನಿಗೆ ಪ್ರಾಮುಖ್ಯನಾಗಿರುತ್ತಾರೆ. ಆದರೆ, ವಿಶೇಷವಾಗಿ ಈ ಕುಟುಂಬವನ್ನು – ಸ್ತೆಫನನ ಮನೆಯವರು – ಆತನು ಮರೆಯಲು ಬಯಸಲಿಲ್ಲ; ಅವರು ಅಖಾಯ ಸೀಮೆಯಲ್ಲಿ (ದಕ್ಷಿಣ ಗ್ರೀಸ್) ಕ್ರಿಸ್ತನನ್ನು ನಂಬಿದ ಪ್ರಥಮ ಜನರಾಗಿದ್ದರು (1 ಕೊರಿಂಥ 16:15-18).

17 ಪೌಲನು ಈಗ ತಾನು ಕೊರಿಂಥದಲ್ಲಿನ ಅಷ್ಟೊಂದು ಸ್ವಲ್ಪಜನರಿಗೆ ಮಾತ್ರವೇ ದೀಕ್ಷಾಸ್ನಾನ ಮಾಡಿಸಿದ್ದೇಕೆಂಬದನ್ನು ವಿವರಿಸುತ್ತಾನೆ. ಆತನು ಮುಖ್ಯವಾಗಿ ದೀಕ್ಷಾಸ್ನಾನ ಮಾಡಿಸುವದಕ್ಕಲ್ಲ, ಆದರೆ ಸುವಾರ್ತೆಯನ್ನು ಸಾರುವದಕ್ಕೆ ಕರೆಯಲ್ಪಟ್ಟನೆಂದು ಹೇಳುತ್ತಾನೆ. ದೀಕ್ಷಾಸ್ನಾನ ಮಾಡಿಸುವದಕ್ಕಲ್ಲ, ಸುವಾರ್ತೆಯನ್ನು ಸಾರುವದಕ್ಕೇ ಕ್ರಿಸ್ತನು ನನ್ನನ್ನು ಕಳುಹಿಸಿದನು. ಬಹು ಪಾಲು ಸಭಾಪಾಲಕರು ಹಾಗು ಬೋಧಕರು

ಎರಡೂ ರೀತಿಯ ಕಾರ್ಯವನ್ನು – ದೀಕ್ಷಾಸ್ನಾನ ಮಾಡಿಸುವದು ಹಾಗು ಸಾರುವದು – ಒಟ್ಟಾಗಿ ಮಾಡುತ್ತಾರೆ, ಮತ್ತು ಇತರ ಪಟ್ಟಣಗಳಲ್ಲಿ ಪೌಲನು ಸಹ ಎರಡೂ ಕಾರ್ಯವನ್ನು ಮಾಡಿದನು. ಆದರೆ ಕೊರಿಂಥದಲ್ಲಿ ಪೌಲನು ಮುಖ್ಯವಾಗಿ ಸುವಾರ್ತೆ ಸಾರುವದಕ್ಕೆ ಗಮನ ಕೊಟ್ಟನು ಮತ್ತು ದೀಕ್ಷಾಸ್ನಾನ ಮಾಡಿಸುವ ಕಾರ್ಯವನ್ನು ಇತರರಿಗೆ ಬಿಟ್ಟನು. ಪೌಲನು ನೂತನ ವಿಶ್ವಾಸಿಗಳಿಗೆ ದೀಕ್ಷಾಸ್ನಾನ ಮಾಡಿಸುವ ನಾಯಕರನ್ನು ವಿರೋಧಿಸುವದಿಲ್ಲ; ಆತನು ಸಭೆಯಲ್ಲಿ ಪಕ್ಷಗಳನ್ನೂ ಪಂಗಡಗಳನ್ನೂ ಸೃಷ್ಟಿಸುವದಕ್ಕೆ ವಿರೋಧವ್ಯಕ್ತ ಪಡಿಸುತ್ತಾನೆ.

ಪೌಲನು ವಾಕ್ಚಾತುರ್ಯದಿಂದ – ಅಂದರೆ, ದೇವರ ಜ್ಞಾನದಿಂದ ಬರದೇ ಮಾನುಷ ಜ್ಞಾನದಿಂದ ಮಾತ್ರಬರುವ ವಾಕ್ಚಾತುರ್ಯ – ಬೋಧಿಸುವದಿಲ್ಲ. ಈ ವಿಷಯದಲ್ಲಿ ಪೌಲನು ಎಲ್ಲಾ ಬೋಧಕರು ಅನುಸರಿಸಬೇಕಾದ ಮಾದರಿಯಾಗಿರುತ್ತಾನೆ. ಬೋಧಕನೊಬ್ಬನು ಕೇವಲ ಮಾನಷ ಜ್ಞಾನದಿಂದ – ಮಾನುಷ ವಾಕ್ಚಾತುರ್ಯದಿಂದ – ಬೋಧಿಸುವದಾದರೆ ಕೇಳುವವರು ಬೋಧಕನೆಡೆಗೆ ಸೆಳೆಯಲ್ಪಡುತ್ತಾರೆಯೇ ಹೊರತು ಕ್ರಿಸ್ತನೆಡೆಗೆ ಅಲ್ಲ. ಅವರು ಕ್ರಿಸ್ತನನ್ನು ಹೊಗಳುವದಕ್ಕೆ ಬದಲಾಗಿ ಬೋಧಕನನ್ನು ಹೊಗಳುತ್ತಾರೆ. ಸುವಾರ್ತೆಯನ್ನು ನಂಬಬೇಕು ಹೊರತು ಆತನು ವಾಕ್ಚಾತುರ್ಯದಿಂದ ಅದನ್ನು ಸಾರಿದನೆಂಬುದಕ್ಕಾಗಿ ಅಲ್ಲ ಎಂದು ಪೌಲನು ಬಯಸುತ್ತಾನೆ.

ಕೆಲವು ಬೋಧಕರು ಬಹಳ ಬುದ್ಧಿವಂತರಾಗಿ ತೋರುವದರಿಂದ ಅವರ ಮಾತುಗಳನ್ನು ಕೇಳಿಸಿಕೊಳ್ಳಲು ಅನೇಕರು ಬರುತ್ತಾರೆ. ಆದರೆ ಈ "ಬುದ್ಧಿವಂತ" ಬೋಧಕರು ಮಾನವರಿಗಾಗಿ ಯೇಸು ಕ್ರಿಸ್ತನು ಹೇಗೆ ಶಿಲುಬೆಯ [2] ಮೇಲೆ ಸತ್ತನೆಂಬುದರ ಬಗ್ಗೆ ಏನನ್ನೂ ಹೇಳುವದಿಲ್ಲ. ಕ್ರಿಸ್ತನು ಹೇಗೆ ಶಿಲುಬೆಯ ಮೇಲೆ ಸಾಯಿವದರ ಮೂಲಕ ಈಗ ಆತನು ಮಾನವರ ಪಾಪಗಳನ್ನು ಕ್ಷಮಿಸಿ ಅವರಿಗೆ ನಿತ್ಯಜೀವವನ್ನು ಕೊಡುವ ಶಕ್ತಿಯನ್ನು ಹೊಂದಿದ್ದಾನೆಂಬುದರ ಬಗ್ಗೆ ಏನನ್ನೂ ಅವರು ಹೇಳುವದಿಲ್ಲ. ಪೌಲನು ಇಲ್ಲಿ ಸೂಚಿಸುವ " ಶಿಲುಬೆಯ ಶಕ್ತಿ" ಇದೆ ಆಗಿದೆ. ಮತ್ತು ಈ " ಬುದ್ಧಿವಂತ" ಭೋದಕರು ಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಏನನ್ನೂ ಹೇಳದೆ ಹೋದರೆ ಶಿಲುಬೆಯು ನಿರರ್ಥಕವಾಗುವದು – ಅಂದರೆ, ಕೇಳುಗರಿಗೆ ಅದು ಪ್ರಯೋಜನವನ್ನು ತರುವದಿಲ್ಲ. ಕೇಳುವವರಿಗೆ ಕ್ರಿಸ್ತನು ಶಿಲುಬೆಯ ಮೇಲೆ ಅವರಿಗಾಗಿ ಏನು ಮಾಡಿದನೆಂಬದನ್ನು ತಿಳಿಯಲು ಅವಕಾಶವಿರುವದಿಲ್ಲ, ಮತ್ತು ಈ ಕಾರಣದಿಂದ ಅವರು ಅದರಿಂದ ಪ್ರಯೋಜನವನ್ನು ಪಡೆಯಲಾರರು. ಒಬ್ಬ ಬೋಧಕನು ತಾನು ಎಷ್ಟೇ ಜ್ಞಾನಿಯಾಗಿದ್ದರೂ ಯಾರನ್ನೂ ರಕ್ಷಿಸಲಾರನು. ಶಿಲುಬೆಗೇರಿಸಲ್ಪಟ್ಟು ಪು ನರುತ್ಥಾನಗೊಂಡ ಕ್ರಿಸ್ತನು ಶಿಲುಬೆಯ ಮೇಲೆ ಹೊಂದಿದ ಮರಣದ ಮೂಲಕವೇ ನಾವು ಜೀವವನ್ನು ಪಡೆದಿದ್ದೇವೆ! ಅದೇ ದೇವರ ಜ್ಞಾನವಾಗಿದೆ ಮತ್ತು ಪೌಲನು ಅದನ್ನೇ ಸಾರುವವನಾಗಿದ್ದಾನೆ (1 ಕೊರಿಂಥ 2:1, 4-5, 13 ನೋಡಿರಿ).

## ಕ್ರಿಸ್ತನು ದೇವರ ಜ್ಞಾನವೂ ಶಕ್ತಿಯೂ ಆಗಿದ್ದಾನೆ (1:18-31)

18 ಶಿಲುಬೆಯ ವಿಷಯವಾದ ಮಾತು ನಾಶನದ ಮಾರ್ಗದಲ್ಲಿ ರುವವರಿಗೆ ಹುಚ್ಚು ಮಾತಾಗಿದೆ. ನಾಶನ ಮಾರ್ಗದಲ್ಲಿರುವವರಾರು? ಅವರು ಅವಿಶ್ವಾಸಿಗಳಾಗಿದ್ದಾರೆ. ಅವರಿಗೆ ಶಿಲುಬೆಯ ವಿಷಯವಾದ ಮಾತು – ಅಂದರೆ, ಸುವಾರ್ತೆ – ಹುಚ್ಚು ಮಾತಾಗಿದೆ. ಯಾಕೆ? ಯಾಕೆಂದರೆ ಅವರು ದೇವಕುಮಾರನೂ ಲೋಕರಕ್ಷಕನೂ ಆಗಿರುವಾತನು ಅಪರಾಧಿಯಂತೆ ಶಿಲುಬೆಯ ಮೇಲೆ ಸತ್ತನೆಂಬದು ಹಾಸ್ಯಾಸ್ಪದವೆಂದು ಯೋಚಿಸುತ್ತಾರೆ. ಅವರು ಇದನ್ನು ನಂಬಲಾಗದು. ಅವರಿಗೆ ಶಿಲುಬೆಯ ಮೇಲೆ ಯೇಸು ಮರಣ ಹೊಂದಿದ ವಿಷಯದಲ್ಲಿನ ಯಾವದೇ ಮಾತು ಅವರಿಗೆ ಹುಚ್ಚುಮಾತಾಗಿದೆ.

ಆದರೆ ಕ್ರಿಸ್ತನನ್ನು ಅರಿತು ಆತನಲ್ಲಿ ನಿಜವಾಗಿಯೂ ನಂಬಿಕೆಯಿಟ್ಟವರು ತಮ್ಮ ಸ್ವಂತ ಜೀವಿತಗಳಲ್ಲಿ ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ ಆದೇ ದೇವರ ಶಕ್ತಿಯನ್ನೆ ಅನುಭವಿಸಿದ್ದಾರೆ. ನಾವು ಶಿಲುಬೆಯ ವಿಷಯವಾದ ಮಾತು, ಕ್ರಿಸ್ತನ ಮಹಿಮಾಸುವಾರ್ತೆಯನ್ನು ಸ್ವೀಕರಿಸಿಕೊಳ್ಳುವಾಗ ಆ ಶಕ್ತಿಯನ್ನೇ ಪಡೆದುಕೊಳ್ಳುತ್ತೇವೆ. ದೇವರಿಗೆ ಕೊಂಡಾಟವಾಗಲಿ! (ರೋಮ 1:16 ನೋಡಿರಿ).

19 ಪೌಲನು ಇಲ್ಲಿ ಯೆಶಾಯ 29:14 ರಲ್ಲಿ ಮಾತುಗಳನ್ನು ಉಲ್ಲೇಖಿಸುತ್ತಾನೆ. ದೇವರು ಪ್ರವಾದಿಯಾದ ಯೆಶಾಯನ ಮೂಲಕ ತಾನು ಜ್ಞಾನಿಗಳ ಜ್ಞಾನವನ್ನು ನಾಶಮಾಡುವವನು ಎಂದು ಹೇಳುತ್ತಾನೆ, ಈ ಜ್ಞಾನವು ಶಿಲುಬೆಯ ವಿಷಯವಾದ ಮಾತನ್ನು ವಿರೋಧಿಸುವದಾಗಿದೆ (ವಚನ 18). ಮಾನವನ ಜ್ಞಾನವನ್ನು ದೇವರ ಜ್ಞಾನಕ್ಕೆ ಹೋಲಿಸಲು ಹೇಗೆ ಸಾಧ್ಯ? ಅದು ಸಾಧ್ಯವಿಲ್ಲ! (ಕೀರ್ತನೆಗಳು 33:10-11; ಯೆಶಾಯ 55:8-9; ರೋಮ 11:33-34.).

20 ಜ್ಞಾನಿಯು ಎಲ್ಲಿ? ಎಲ್ಲಿಯೂ ಇಲ್ಲ. ದೇವರನ್ನು ಹೊರತು ಪಡಿಸಿಯಾವನೂ ಜ್ಞಾನಿಯಲ್ಲ. ದೇವರು "ಶಿಲುಬೆಯ ವಿಷಯವಾದ ಮಾತನ್ನು ನಂಬುವವರಿಗೆ ತನ್ನ ಜ್ಞಾನವನ್ನು ಕೊಡುತ್ತಾನೆ.

ಶಾಸ್ತ್ರಿಯೆಲ್ಲಿ? ಇಹಲೋಕದ ತರ್ಕವಾದಿ ಎಲ್ಲಿ? ಪಂಡಿತರು ಹಾಗು ತತ್ವಜ್ಞಾನಿಗಳು ಬಹಳ ಜ್ಞಾನಿಗಳೆಂಬದಾಗಿ ಜನರು ಊಹಿಸಿಕೊಳ್ಳುತ್ತಾರೆ. ಪಂಡಿತರು ಹಾಗು ತತ್ವಜ್ಞಾನಿಗಳು ಸಹ ಬೈಬಲನ್ನು ಓದುತ್ತಾರೆ, ಆದಾಗ್ಯು ಅದರಲ್ಲಿ ಬರೆದಿರುವದನ್ನು ಅವರು ನಂಬುವದಿಲ್ಲ. ಆದರೆ ತನ್ನ ಸ್ವಂತ ಮಗನನ್ನು ಶಿಲುಬೆಯ ಮರಣಕ್ಕಾಗಿ ಕಳುಹಿಸಿಕೊಡುವದರ ಮೂಲಕ ದೇವರು ಇಹಲೋಕ ಜ್ಞಾನವನ್ನು ಹುಚ್ಚುತನವಾಗ ಮಾಡಿದ್ದಾನೆ – ಅಂದರೆ, ಪಂಡಿತರ (ಶಾಸ್ತ್ರಿಗಳ) ಹಾಗು ತತ್ವಜ್ಞಾನಿಗಳ ಜ್ಞಾನವನ್ನು ಹುಚ್ಚುತನವಾಗ ಮಾಡಿದ್ದಾನೆ. ಇಹಲೋಕದ ಜ್ಞಾನವನ್ನು
ಹೊಂದಿರುವವನು ತನ್ನ ಜ್ಞಾನದೊಂದಿಗೆ ನಾಶವಾಗುವನು, ಆದರೆ ಕ್ರಿಸ್ತನನ್ನು ನಂಬುವವನು ಸದಾಕಾಲವೂ ಜೀವಿಸುವನು.

**21** ಇಹಲೋಕದ ಜ್ಞಾನವು ದೇವರ ಜ್ಞಾನವನ್ನು ತಿಳಿಯುವದು ಅಸಾಧ್ಯ (1 ಕೊರಿಂಥ 2:14 ನೋಡಿರಿ). ಲೋಕವು[3] ದೇವರ ಜ್ಞಾನವನ್ನು (ಸುವಾರ್ತೆ) ಹುಚ್ಚುತನ ಎನ್ನುತ್ತದೆ. ಆದರೆ ದೇವರು ಆ "ಹುಚ್ಚುತನ" ಎಂದು ಕರೆಯಿಸಿಕೊಳ್ಳುವ ಸಂಗತಿಯ ಮೂಲಕವೇ ಕ್ರಿಸ್ತನನ್ನು ನಂಬುವವರಿಗೆಲ್ಲಾ ರಕ್ಷಣೆಯನ್ನು ನೀಡುತ್ತಾನೆ.

**22** ಯೆಹೂದ್ಯರು ನಂಬುವದಕ್ಕೋಸ್ಕರ ಯಾವಾಗಲೂ ಸೂಚಕ ಕಾರ್ಯಗಳನ್ನು ಕೇಳುತ್ತಿದ್ದರು (ಮತ್ತಾಯ 12:38; ಮಾರ್ಕ 8:11; ಯೋಹಾನ 2:18 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಅವರಿಗೆ ಆಧಾರವು ಬೇಕಾಗಿತ್ತು; ಅವರಲ್ಲಿ ನಂಬಿಕೆಯು ಇರಲಿಲ್ಲ.

ಯೇಸು ಅವರಿಗೆ ಒಂದು ಸೂಚಕ ಕಾರ್ಯವನ್ನು ತೋರಿಸಿದನು. ಆತನು ಸತ್ತವರೊಳಗಿಂದ ಎದ್ದು ಬಂದನು – ಅದೇ ಒಂದು ಸೂಚಕ ಕಾರ್ಯವಾಗಿತ್ತು (ಯೋಹಾನ 2:19-22 ನೋಡಿರಿ). ಆದರೆ ಯೇಸುವಿನ ಎಲ್ಲಾ ಸೂಚಕ ಕಾರ್ಯಗಳಲ್ಲಿ ಅತಿ ಶ್ರೇಷ್ಠವಾದ ಇದನ್ನು – ಆತನ ಪುನರುತ್ಥಾನವನ್ನು – ಯೆಹೂದ್ಯರು ನಂಬಲು ನಿರಾಕರಿಸಿದರು. ಗ್ರೀಕರು[4] ಯಾವಾಗಲೂ ಜ್ಞಾನವನ್ನೂ, ಇಹಲೋಕ ಜ್ಞಾನವನ್ನು ಹುಡುಕುತ್ತಿದ್ದರು.

**23** ಯೆಹೂದ್ಯರಿಗೆ ಶಿಲುಬೆಗೇರಿಸಲ್ಪಟ್ಟ ಕ್ರಿಸ್ತನು ಒಂದು ವಿಘ್ನ ಆಗಿದ್ದನು. ಅಂದರೆ ಶಿಲುಬೆಯು ಒಂದು ವಿಘ್ನವಾಗಿ ಅವರನ್ನು ನಂಬದಂತೆ ತಡೆಯಿತು. ಯೆಹೂದ್ಯರಿಗಾದರೋ ಅವರ ರಕ್ಷಕನು ಶಿಲುಬೆಯ ಮೇಲೆ ಸಾಯುವದು ಆಶ್ಚರ್ಯಕರವೂ ಅಸಹ್ಯವೂ ಆಗಿತ್ತು. ಅಲ್ಲದೆ ಕ್ರಿಸ್ತನು ಶಿಲುಬೆಯ ಮೇಲೆ ನೇತಾಡುವಾಗ ಸಹ ಅವರು ಆತನಿಗೆ ಹಾಸ್ಯಮಾಡಿದರು (ಮತ್ತಾಯ 27:41-42; ಮಾರ್ಕ 15:31-32 ನೋಡಿರಿ).

ಅನ್ಯ ಜನರಿಗೆ – ಅಂದರೆ, ಜಗತ್ತಿನ ಯೆಹೂದ್ಯೇತರ ಜನರಿಗೆ – ಶಿಲುಬೆಗೇರಿಸಲ್ಪಟ್ಟ ರಕ್ಷಕನ ವಿಚಾರವು ಹುಚ್ಚುಮಾತಾಗಿತ್ತು. ದೇವಕುಮಾರನು ಭೂಮಿಗೆ ಬಂದು ಒಬ್ಬ ಅಪರಾಧಿಯಂತೆ ಮರಣಕ್ಕೊಳಗಾಗುವದು ಅವರಿಗೆ ಹಾಸ್ಯಮಯವಾಗಿತ್ತು.

**24** ಆದರೆ, ಕ್ರಿಸ್ತನನ್ನು, ಅಂದರೆ ಶಿಲುಬೆಗೇರಿಸಲ್ಪಟ್ಟ ಕ್ರಿಸ್ತನನ್ನು ನಂಬುವವರಿಗೆ ಕ್ರಿಸ್ತನು ದೇವರ ಶಕ್ತಿಯೂ ದೇವರ ಜ್ಞಾನವೂ ಆಗಿದ್ದಾನೆ. ದೇವರಿಂದ ಕರೆಯಿಸಿಕೊಂಡವರು ವಿಶ್ವಾಸಿಗಳಾಗಿದ್ದಾರೆ. ದೇವರ ಕರೆಯನ್ನೂ ಶಿಲುಬೆಗೇರಿಸಲ್ಪಟ್ಟ ಕ್ರಿಸ್ತನನ್ನೂ ಸ್ವೀಕರಿಸಿಕೊಂಡವರಿಗಾದರೋ ಅದು ಒಂದು ಬಲಹೀನತೆ, ಅಸಹ್ಯ, ಅಥವಾ ಹುಚ್ಚುತನದ ಸಂಕೇತವಾಗಿರುವದಿಲ್ಲ. ಬದಲಾಗಿ ಆತನು ಅಸಹ್ಯ, ಅಥವಾ ಹುಚ್ಚುತನದ ಸಂಕೇತವಾಗಿರುವದಿಲ್ಲ. ಬದಲಾಗಿ ಆತನು ದೇವರ ಶಕ್ತಿಯೂ ದೇವರ ಜ್ಞಾನವೂ ಆಗಿದ್ದಾನೆ. ಎಲ್ಲಾ ಶಕ್ತಿಗಳೂ ಹಾಗು ಎಲ್ಲಾ ಜ್ಞಾನವೂ ಕ್ರಿಸ್ತನಲ್ಲಿರುತ್ತವೆ (ರೋಮ 1:16 ನೋಡಿರಿ). ಮತ್ತು ಆ ಶಕ್ತಿಯೂ ಜ್ಞಾನವೂ – ಪಾಪವನ್ನು ಜಯಿಸಿ ಹೊಸಬಾಳನ್ನು ಜೀವಿಸುವದಕ್ಕೆ ಶಕ್ತಿ ಹಾಗು ದೇವರನ್ನು ತಿಳಿದು ಕೊಂಡು ರಕ್ಷಣೆಯ ಮಾರ್ಗವನ್ನು ಕಂಡುಕೊಳ್ಳುವ ಜ್ಞಾನವು – ನಮಗೆ ಸಹ ದೊರೆಯುವದಾಗಿದೆ.

**25** ಪೌಲನು ದೇವರಲ್ಲಿ ಬುದ್ಧಿಹೀನತೆ ಎಂಬುದನ್ನು ಹೇಳುವಲ್ಲಿ ಆತನು ಒಬ್ಬ ಅವಿಶ್ವಾಸಿಯು ಉಪಯೋಗಿಸುವಂಥ ಮಾತನ್ನು ಉಪಯೋಗಿಸುತ್ತಿದ್ದಾನೆ. ದೇವರು ತನ್ನ ಮಗನನ್ನು ಶಿಲುಬೆಯ ಮೇಲೆ ಸಾಯುವದಕ್ಕೆ ಕಳುಹಿಸುವದರಲ್ಲಿರುವ ಆತನ":ಬುದ್ಧಿ ಹೀನತೆ" ಎಂದು ಪೌಲನ ತಾತ್ಪರ್ಯವಾಗಿದೆ. ದೇವರಲ್ಲಿ ಬಲಹೀನತೆ ಎಂದು ಹೇಳುವದರಲ್ಲಿ ಪೌಲನು ಕ್ರಿಸ್ತನ ಬಲಹೀನತೆಯನ್ನು – ಅಂದರೆ, ಶಿಲುಬೆಯ ಮೇಲಿನ ಆತನ ಮರಣವನ್ನು ಸೂಚಿಸುತ್ತಾನೆ. ಮರಣವು ಮಾನವನ ಬಲಹೀನತೆಯ ಅಂತಿಮ ಸಂಕೇತವಾಗಿದೆ.

ಆದರೂ, ದೇವರ "ಬುದ್ಧಿಹೀನತೆ" ಮತ್ತು "ಬಲಹೀನತೆ"ಗಳಿಗೆ ಹೋಲಿಸಿದರೆ ಮಾನವನ ಜ್ಞಾನ ಬಲಗಳು ಏನು ಮಾಡಬಲ್ಲವು ? ಮಾನವನ ಅತಿ ಶ್ರೇಷ್ಠ ಜ್ಞಾನ ಬಲಗಳು ಒಂದು ಆತ್ಮವನ್ನಾದರೂ ರಕ್ಷಿಸಲಾರವು . ಆದರೆ ದೇವರ ಬುದ್ದಿ ಹೀನತೆ ಮತ್ತು ಬಲಹೀನತೆಯು ರಕ್ಷಿಸಬಲ್ಲದು! ಮತ್ತು ದೇವರ ಬುದ್ಧಿಹೀನತೆ ಹಾಗು ಬಲ ಹೀನತೆಯು– ಅಂದರೆ, ಯೇಸು ಶಿಲುಬೆಯ ಮೇಲೆ ಹೊಂದಿದ ಮರಣ – ಒಂದು ಆತ್ಮವನ್ನು ಮಾತ್ರವಲ್ಲದೆ ಯೇಸುವನ್ನು ನಂಬುವ ಪ್ರತಿಯೊಬ್ಬನ ಆತ್ಮನನ್ನೂ ರಕ್ಷಿಸುವದು.

**26** ಜ್ಞಾನಿಗಳೂ, ಅಧಿಕಾರಿಗಳೂ, ಅಥವಾ ಕುಲೀನರಾಗಿರುವ ಬಹು ಮಂದಿ ದೇವರನ್ನು ದೃಷ್ಟಿಸುವದಿಲ್ಲ. ಅವರು ತಮಗೆ ಆತನ ಅಗತ್ಯವಿಲ್ಲ ಎಂದು ಭಾವಿಸುತ್ತಾರೆ (ಮಾರ್ಕ 10:23 ಮತ್ತು ವ್ಯಾಖ್ಯಾನ ನೋಡಿರಿ). ಅಂತಹ ಜನರು ದೇವರ ಸೇವಕರಾಗಿರಲು ಇಷ್ಟಪಡುವದಿಲ್ಲ; ಅವರು ದೇವರ ಬದಲಾಗಿ ತಮ್ಮ ಸೇವೆಯನ್ನೇ ಮಾಡಿಕೊಳ್ಳಲಿಚ್ಚಿಸುತ್ತಾರೆ (ಮಾರ್ಕ 10:42-44 ಮತ್ತು ವ್ಯಾಖ್ಯಾನ ನೋಡಿರಿ).

**27-28** ದೇವರ ಜ್ಞಾನವು ಮಾನವನ ಜ್ಞಾನಕ್ಕೆ ತದ್ವಿರುದ್ಧವಾಗಿರುತ್ತದೆ. ಮಾನವನು ಯಾವು ದನ್ನು ಜ್ಞಾನವೆಂದು ಎಣಿಸುತ್ತಾರೋ ದೇವರು ಅದನ್ನು ಹುಚ್ಚುತನ ಎಂದು ಪರಿಗಣಿಸುತ್ತಾನೆ; ಮತ್ತು ಮಾನವನು ಹುಚ್ಚು ತನವೆಂದು ಎಣಿಸುವದನ್ನು ದೇವರು ಜ್ಞಾನವೆಂದು ಪರಿಗಣಿಸುತ್ತಾನೆ. ಆದುದರಿಂದ, ದೇವರು ಮಾನವರ ದೃಷ್ಟಿಯಲ್ಲಿ ಬುದ್ಧಿಹೀನರು, ಬಲಹೀನರು ಹಾಗು ಕುಲಹೀನರನ್ನು ತನ್ನ ಹಿಂಬಾಲಕರನ್ನಾಗಿ ಆರಿಸಿಕೊಂಡಿದ್ದಾನೆ. ವಿಶ್ವಾಸಿಗಳಾದ ನಾವು ಬುದ್ಧಿಹೀನರೂ, ಬಲಹೀನರೂ, ಕುಲಹೀನರೂ ಹಾಗು ಅಸಡ್ಡೆ ಯಾದವರೂ ಆಗಿದ್ದೇವೆ1 ದೇವರು ಇಹಲೋಕ ಜ್ಞಾನಿಗಳನ್ನೂ ಬಲಿಷ್ಠರನ್ನೂ ನಾಚಿಕೆ ಪಡಿಸುವದಕ್ಕಾಗಿ ನಮ್ಮಂತಹ ಜನರನ್ನು ಆರಿಸಿಕೊಂಡಿದ್ದಾನೆ (ಯಾಕೋಬ 2:5 ನೋಡಿರಿ).

ಗಣನೆಗೆ ಬಾರದವರು ಸಹ (ವಚನ 28). ಕ್ರೈಸ್ತರಾದ ನಾವೇ ಆಗಿದ್ದೇವೆ. ಕೊರಿಂಥದಲ್ಲಿನ ಅವಿಶ್ವಾಸಿಗಳ ದೃಷ್ಟಿಯಲ್ಲಿ ಕ್ರೈಸ್ತರು "ಗಣನೆಗೆ ಬಾರದವರಂತೆ" ಇದ್ದರು. ಪೌಲನ ಕಾಲದಲ್ಲಿ ಅವಿಶ್ವಾಸಿಗಳು ಸಭೆಯನ್ನು ಗಣನೆಗೆ ತಂದು ಕೊಳ್ಳಲಿಲ್ಲ; ಅವರು ಸಭೆಯೆಡೆಗೆ ಅದು ಅಸ್ತಿತ್ವದಲ್ಲಿಯೇ ಇಲ್ಲವೇನೋ ಎಂಬಂತೆ ವರ್ತಿಸಿದರು. ಆದಾಗ್ಯು ಆ ಸಭೆಯು ಕ್ರಮೇಣವಾಗಿ ರೋಮಾಯ ಸಾಮ್ರಾಜ್ಯದುದ್ದಕ್ಕೂ, ಮತ್ತು ಅನಂತರ ಜಗತ್ತಿನಲ್ಲೆಡೆಯೂ ವ್ಯಾಪಿಸಿತು. ಮತ್ತು ಜಗತ್ತು ಅಳಿದು ಹೋಗುವಾಗೂ ಕ್ರಿಸ್ತನ ಸಭೆಯು ನೆಲೆಗೊಳ್ಳುವದು.

ಗಣನೆಗೆ ಬಾರದವರು ಸಹ 9ವಚನ 28). ಕ್ರೈಸ್ತರಾದ ನಾವೇ ಆಗಿದ್ದೇವೆ. ಕೊರಿಂಥದಲ್ಲಿನ ಅವಿಶ್ವಾಸಿಗಳ ದೃಷ್ಟಿಯಲ್ಲಿ ಕ್ರೈಸ್ತರು "ಗಣನೆಗೆ ಬಾರದವರಂತೆ" ಇದ್ದರು ಪೌಲನ ಕಾಲದಲ್ಲಿ ಅವಿಶ್ವಾಸಿಗಳು ಸಭೆಯನ್ನು ಗಣನೆಗೆ ತಂದು ಕೊಳ್ಳಲಿಲ್ಲ; ಅವರು ಸಬೆಯೆಡೆಗೆ ಅದು ಅಸ್ತಿತ್ವದಲ್ಲಿಯೇ ಇಲ್ಲವೇನೋ ಎಂಬಂತೆ ವರ್ತಿಸಿದರು. ಆದಾಗ್ಯ ಆ ಸಭೆಯು ಕ್ರಮೇಣವಾಗಿ ರೋಮಾಯ ಸಮ್ರಾಜ್ಯದ್ದುದ್ದಕ್ಕೂ, ಮತ್ತು ಅನಂತರ ಜಗತ್ತಿನಲ್ಲೆಡೆಯೂ ವ್ಯಾಪಿಸಿತು. ಮತ್ತು ಜಗತ್ತು ಅಳಿದು ಹೋಗುವಾಗೂ ಕ್ರಿಸ್ತನ ಸಭೆಯು ನೆಲೆಗೊಳ್ಳುವದು.

**29** ದೇವರು ನಮ್ಮನ್ನು – ಬುದ್ದಿಹೀನರು, ಬಲಹೀನರು ಹಾಗು ಕುಲಹೀನರನ್ನು – ಏಕೆ ಆರಿಸಿಕೊಂಡನು? ಯಾವ ಮನುಷ್ಯನು ಸಹ ತನ್ನ ಸ್ವಂತ ಜ್ಞಾನ ಮತ್ತು ಸಾಮರ್ಥ್ಯದ ಕಾರಣದಿಂದಲೇ ದೇವರು ಅವನನ್ನು ಆರಿಸಿಕೊಂಡಿದ್ದಾನೆಂದು ಗರ್ವಪಟ್ಟುಕೊಳ್ಳಬಾರದೆಂದು ಆತನು ಬುದ್ಧಿಹೀನರೂ, ಬಲಹೀನರೂ ಹಾಗು ಕುಲಹೀನರೂ ಆಗಿರುವ ನಮ್ಮನ್ನು ಆರಿಸಿಕೊಂಡಿದ್ದಾನೆ! (ಎಫೆಸ 2:8-9). ದೇವರಿಗೆ ಗರ್ವಪಟ್ಟುಕೊಳ್ಳುವವರು ಬೇಕಾಗಿಲ್ಲ. ಆತನು ನಮ್ಮನ್ನು ತನ್ನ ಕೃಪೆಯ ನಿಮಿತ್ತ ಆರಿಸಿಕೊಳ್ಳುತ್ತಾನೆ ಹೊರತು ನಮ್ಮ ಯೋಗ್ಯತೆಯ ನಿಮಿತ್ತವಲ್ಲ. ಅದು ಮಾತ್ರವಲ್ಲದೆ, ನಾವು ಹೊಂದಿರುವ ಯಾವದೇ ಜ್ಞಾನ ಹಾಗು ಬಲ ದೇವರಿಂದಲೇ ಬಂದಿರುವದಾಗಿದೆ೧ ಮಾನವನಲ್ಲಿ ತನ್ನ ಕುರಿತಾಗಿ ಹೊಗಳಿಕೊಳ್ಳುವದಕ್ಕೆ ಏನೂ ಇರುವದೇ ಇಲ್ಲ.

**30** ಆದಿಯಲ್ಲಿಯೇ ದೇವರು ನಮ್ಮನ್ನು ಆರಿಸಿಕೊಂಡನು, ನಾವು ಆತನನ್ನು ಆರಿಸಿಕೊಳ್ಳಲಿಲ್ಲ ಎಂಬದನ್ನು ನಾವು ಎಂದಿಗೂ ಮರೆಯದಿರೋಣ (ಯೋಹಾನ 15:16; ಎಫೆಸ 1;4-5 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ಕ್ರಿಸ್ತನಲ್ಲಿ ರುವದಕ್ಕೆ ಕಾರಣನು ಆತನೇ ಆಗಿದ್ದಾನೆ.

ದೇವರು ನಮಗೆ ನೀಡಿರುವ ವರಗಳಲ್ಲಿ ಅತಿ ಶ್ರೇಷ್ಠವರವು ಸ್ವತಃ ಯೇಸು ಕ್ರಿಸ್ತನೇ. ಇತರ ಎಲ್ಲಾ ಆಶೀರ್ವಾದಗಳೂ – ಉದಾಹರಣೆಗೆ, ಪು ನರುತ್ಥಾನ ಶುದ್ಧೀಕರಣ ಹಾಗು ವಿಮೋಚನೆ, ಅಥವಾ ರಕ್ಷಣೆ – ಕ್ರಿಸ್ತನಲ್ಲಿ ಸೇರಿರುತ್ತವೆ (ರೋಮ 3:24; ಎಫೆಸ 1:6-8; ಕೊಲೊಸ್ಸೆ 1:14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ಕ್ರಿಸ್ತನನ್ನು ಸ್ವೀಕರಿಸಿಕೊಂಡಿರುವದಾದರೆ ಉಳಿದೆಲ್ಲಾ ಆತ್ಮೀಕ ಆಶೀರ್ವಾದಗಳನ್ನು ಸಹ ಸ್ವೀಕರಿಸಿಕೊಂಡವರಾಗಿದ್ದೇವೆ (ರೋಮ 8:32; ಎಫೆಸ 1:3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಪೌಲನು ಸತತವಾಗಿ ಕ್ರಿಸ್ತನಲ್ಲಿ ಎಂಬ ಮಾತನ್ನು ಉಪಯೋಗಿಸುತ್ತಾನೆ. ಕ್ರಿಸ್ತ ಯೇಸುವಿನಲ್ಲಿರುವದು ಎಂದರೆ ಮರಕ್ಕೆ ಹೊಂದಿಕೊಂಡು ಇರುವ ಕೊಂಬೆಗಳಂತೆಯೇ ಕ್ರಿಸ್ತನೊಂದಿಗೆ ಹೊಂದಿಕೆಯಾಗಿರುವದು ಎಂಬ ಅರ್ಥವಾಗಿದೆ (ಯೋಹಾನ 15:4-7 ನೋಡಿರಿ). ನಾವು ಕ್ರಿಸ್ತನಲ್ಲಿರುವಾಗ ಕ್ರಿಸ್ತನು ಸಹ ನಮ್ಮಲ್ಲಿರುತ್ತಾನೆ. ಕ್ರಿಸ್ತನು ನಮ್ಮಲ್ಲಿರುವದಾದರೆ ಆತನ ಶಕ್ತಿ, ಜ್ಞಾನ ಹಾಗು ಪ್ರೀತಿ – ಅಲ್ಲದೆ, ದೇವರ ಸರ್ವ ಸಂಪೂರ್ಣತೆಯು ಕೂಡಾ – ನಮ್ಮಲ್ಲಿರುತ್ತವೆ ಎಂದು ಇದರ ಅರ್ಥವಾಗಿರುತ್ತದೆ ! (ಎಫೆಸ 3:19). ಕ್ರಿಸ್ತನು ನಮ್ಮ ಜೀವಿತದ ರಾಜನೂ ಕರ್ತನೂ ಆಗಿದ್ದಾನೆ: ನಾವು ಆತನಿಗೆ ಸೇರಿದವರು.

**31** ಇಲ್ಲಿ ಪೌಲನು ಹಳೆ ಒಡಂಬಡಿಕೆಯ ಪ್ರವಾದಿಯಾದ ಯೆರೆಮೀಯನ ಮಾತುಗಳನ್ನು ಉಲ್ಲೇಖಿಸುತ್ತಾನೆ. ಯೆರೆಮೀಯನು ಹೇಳುವದೇನೆಂದರೆಃ ನಮ್ಮಲ್ಲಿ ಹೆಚ್ಚಳ ಪಡುವದಕ್ಕೆ ಏನಾದರೂ ಇರುವದಾದರೆ, ನಾವು ನಮ್ಮಲ್ಲಿ ಅಲ್ಲ ಆದರೆ ಕರ್ತನಲ್ಲಿಯೇ ಹೆಚ್ಚಳಪಡಬೇಕು ಎಂಬದೇ (ಯೆರೆಮೀಯ 9:24).

ಮತ್ತು ಖಂಡಿತವಾಗಿಯೂ, ನಮ್ಮಲ್ಲಿ ಹೆಚ್ಚಳಪಡುವದಕ್ಕೆ ಒಂದು ಸಂಗತಿಯು ಇರುತ್ತದೆ! ಕ್ರಿಸ್ತನು ನಮ್ಮಲ್ಲಿರುವದರಿಂದ ನಾವು ಐಶ್ವರ್ಯವಂತರು, ಬುದ್ಧಿವಂತರು ಹಾಗು ಬಲಿಷ್ಠರಾಗಿದ್ದೇವೆ. ನಿಶ್ಚಯವಾಗಿಯೂ ನಾವು ಹೆಚ್ಚಳಪಡಬಹುದು – ಆದರೆ, ನಮ್ಮಲ್ಲಿಯಲ್ಲ. ನಾವು ಹೊಂದಿರುವ ಪ್ರತಿಯೊಂದು ಒಳ್ಳೇಕಾರ್ಯವು ಕ್ರಿಸ್ತನಿಂದ ಬಂದಿರುತ್ತದೆ; ನಾವು ಆತನಲ್ಲಿ ಹೆಚ್ಚಳಪಡೋಣ (ಗಲಾತ್ಯ 6:14 ನೋಡಿರಿ).[2]

## ಅಧ್ಯಾಯ - 2

**ಪೌಲನ ಬೋಧನೆ (2:1-5)**

1 ಗ್ರೀಕರು ವಾಕ್ಚಾತುರ್ಯ ಮತ್ತು ಜ್ಞಾನಾಡಂಬರಕ್ಕೆ – ಅಂದರೆ, ಇಹಲೋಕದ ಮಾತುಗಳು ಹಾಗು ಜ್ಞಾನಕ್ಕೆ ಬಹಳ ಗಣ್ಯತೆ ನೀಡುತ್ತಿದ್ದರು. ಗ್ರೀಕರೊಳಗೆ ಮಾನುಷಜ್ಞಾನದಿಂದ ಮಾತಾಡಿದ ತತ್ವಜ್ಞಾನಿಗಳು ಅನೇಕರಿದ್ದಾರೆ, (1 ಕೊರಿಂಥ 1:17) ಮತ್ತು ಅವರು ತಮ್ಮ ಬೋಧನೆಗಳನ್ನು ನಂಬುವಂತೆ ಜನರ ಮನವೊಲಿಸಲು ಪ್ರಯತ್ನಿಸಿದರು. ಆದರೆ ಪೌಲನು ವಾಕ್ಚಾತುರ್ಯದಿಂದಾಗಲಿ ಜ್ಞಾನಾಡಂಬರದಿಂದಾಗಲಿ ಬೋಧಿಸಲಿಲ್ಲ. ಪೌಲನು ತನ್ನ ಸ್ವಂತ ತತ್ವಜ್ಞಾನ, ತನ್ನ ಸ್ವಂತ ವಿಚಾರಗಳನ್ನು ಉಪದೇಶಿಸಲಿಲ್ಲ. ಬದಲಾಗಿ, ಆತನು ಸರಳಭಾಷೆಯಲ್ಲಿ ದೇವರು ಹೇಳಿಕೊಟ್ಟ ಮಾತನ್ನು[5] ತಿಳಿಸಿದನು; ಅಂದರೆ, ಆತನು ಕ್ರಿಸ್ತನ ಕುರಿತಾದ ಸತ್ಯವನ್ನು ಪ್ರಕಟಗೊಳಿಸಿದನು. ದೇವರ ಮಾತು (ಸಾಕ್ಷಿಯು) ಆತನ ಮಗನಾದ ಯೇಸುವಿನ ವಿಷಯವಾಗಿರುತ್ತದೆ. ನಂಬದವರಿಗೆ ಕ್ರಿಸ್ತನ ಸುವಾರ್ತೆಯು ಮರೆಯಾದದ್ದೂ, ಅರ್ಥಮಾಡಿಕೊಳ್ಳಲು ಕಷ್ಟಕರವಾದ ಸಂಗತಿಯಾಗಿರುತ್ತದೆ. ಇದು ಪ್ರಕಟಗೊಳ್ಳಬೇಕಾದ ಮರ್ಮ ಆಗಿದೆ. (ರೋಮ 16:25; ಎಫೆಸ 3:4–6, 8-9; ಕೊಲೊಸ್ಸೆ 1:25-27 ನೋಡಿರಿ). ಮತ್ತು ಪೌಲನು ಈ ಕ್ರಿಸ್ತನ 'ಮರ್ಮ'ವನ್ನು ಸ್ಪಷ್ಟ ಹಾಗು ಸರಳ ಭಾಷೆಯಲ್ಲಿ ಬಯಲು ಪಡಿಸಿದನು.

2 ಪೌಲನ ಬೋಧನೆಯಲ್ಲೆಲ್ಲಾ ಒಂದೇ ವಿಷಯವಿತ್ತು, ಆ ವಿಷಯವು ಯೇಸು ಕ್ರಿಸ್ತನೇ ಆಗಿದ್ದನು. ಸ್ತ್ರೀ ಪುರುಷರೆಲ್ಲರು ಕ್ರಿಸ್ತನೆಡೆಗೆ ಸೆಳೆಯಲ್ಪಟ್ಟು ಆತನಲ್ಲಿ ತಮ್ಮ ನಂಬಿಕೆಯನ್ನಿಡಬೇಕೆಂಬದೇ ಪೌಲನ ಬಯಕೆಯಾಗಿತ್ತು. ಪೌಲನು ಕ್ರಿಸ್ತನನ್ನು ದೇವರೆಂದು ಮಾತ್ರವೇ ಬೋಧಿಸಲಿಲ್ಲ, ಆದರೆ ಆತನು ನಮ್ಮ ಹಾಗೆಯೇ ಮಾನವನಾಗಿದ್ದು ನಮ್ಮ ಪಾಪಗಳಿಗೋಸ್ಕರ ಶಿಲುಬೆಯ ಮೇಲೆ ಮರಣಿಸಿದನೆಂದು ಸಹ ಬೋಧಿಸುತ್ತಿದ್ದನು (ಸಾಮಾನ್ಯ ಲೇಖನ: ಯೇಸು ಕ್ರಿಸ್ತನು ನೋಡಿರಿ). ಇದು ಪೌಲನ ಸುವಾರ್ತೆಯಾಗಿದ್ದು ಆತನು ಇದನ್ನಷ್ಟೇ ಬೋಧಿಸಿದನು. ವಾಸ್ತವದಲ್ಲಿ, ಪೌಲನು ತನ್ನ ಬೋಧನೆಯಲ್ಲಿ ಯೇಸು ಕ್ರಿಸ್ತನನ್ನೇ ಹೊರತು ಬೇರೆ ಯಾವದನ್ನೂ ತಿಳಿಯದವನಾಗಿ ಇರುವನೆಂದು ತೀರ್ಮಾನಿಸಿಕೊಂಡಿದ್ದನು; ಅಂದರೆ, ಆತನು ತಾನು ಬೇರೆಯಾವದನ್ನೂ ತಿಳಿಯದನೋ ಎಂಬಂತೆ ಕ್ರಿಸ್ತನ ಸುವಾರ್ತೆಯನ್ನು ಸಾರುವದಕ್ಕೆ ತೀರ್ಮಾನಿಸಿಕೊಂಡಿದ್ದನು. ಒಂದು ವೇಳೆ ಪೌಲನು ವಾಕ್ಚಾತಾರ್ಯದಿಂದಾಗಲಿ, ಜ್ಞಾನಾಡಂಬರದಿಂದಾಗಲಿ ಮಾತಾಡುವದಕ್ಕೆ ಇಚ್ಛಿಸಿದ್ದಾಗಿದ್ದರೆ (ವಚನ 1) ಆತನು ತನ್ನ ಬೋಧನೆಯಲ್ಲಿ ಕ್ರಿಸ್ತನ ಶಿಲುಬೆಯ ಪ್ರಸ್ತಾಪವನ್ನುಮಾಡುತ್ತಲೇ ಇರಲಿಲ್ಲ, ಯಾಕೆಂದರೆ ಗ್ರೀಕರಿಗೆ ಶಿಲುಬೆಯ ಹುಚ್ಚು ಮಾತಾಗಿತ್ತು ( 1ಕೊರಿಂಥ 1:18,23).

3 ಕೊರಿಂಥವು ಒಂದು ಮಹಾನಗರವಾಗಿತ್ತು, ಮತ್ತು ಅಲ್ಲಿ ಅನೇಕ ಮಂದಿ ಶ್ರೀಮಂತ ಹಾಗು ಪ್ರಸಿದ್ಧ ಜನರು ವಾಸವಾಗಿದ್ದರು. ಪೌಲನು ಒಬ್ಬ ಅಪರಿಚಿತ ಪರಕೀಯನಾಗಿಯೂ ಒಬ್ಬ ಸಾಮಾನ್ಯ ಮನುಷ್ಯನಾಗಿಯೂ ಸುವಾರ್ತೆಯನ್ನು ಸಾರುತ್ತಾ, ಗುಡಾರಗಳನ್ನು ಮಾಡುತ್ತಾ ತಿರುಗಾಡಿದನು. ಆತನು ಸರಳ ಭಾಷೆಯಲ್ಲಿ ಮಾತಾಡಿದನು (2 ಕೊರಿಂಥ 10:10). ಪೌಲನು ಪ್ರಥಮಬಾರಿಗೆ ಕೊರಿಂಥಕ್ಕೆ ಹೋದಾಗ ಆ ನಗರದಲ್ಲಿ ಒಬ್ಬ ಕ್ರೈಸ್ತನೂ ಇರಲಿಲ್ಲ. ಆತನು ಒಬ್ಬಂಟಿಗನಾಗಿದ್ದನು. ಅನೇಕರು ಆತನನ್ನು ವಿರೋಧಿಸಿದರು (ಅ.ಕೃತ್ಯ 18:12). ಈ ಕಾರಣದಿದಲೇ ಪೌಲನು ಇಲ್ಲಿ ತಾನು ಕೊರಿಂಥಕ್ಕೆ ಬಲಹೀನನೂ, ಭಯಪಡುವವನೂ, ಬಹು ನಡುಗುವವನೂ ಆಗಿ ಬಂದನೆಂಬದಾಗಿ ಹೇಳುತ್ತಾನೆ.

4 ಆದರೆ ಪೌಲನ ಸರಳ ಬೋಧನೆಯಿಂದ ದೇವರಾತ್ಮನ ಬಲವು ತೋರ್ಪಡಿಸಲ್ಪಟ್ಟಿತು. ನಾವು ಬಲಹೀನರಾಗಿರುವಾಗ ದೇವರ ಬಲವು ನಮ್ಮ ಜೀವಿತಗಳಲ್ಲಿ ಹೆಚ್ಚು ಸ್ಪಷ್ಟವಾಗಿ ತೋರಲ್ಪಡುತ್ತದೆ (2 ಕೊರಿಂಥ 4:7; 12:9-10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಪೌಲನ ಸೇವೆಯಲ್ಲಿ ದೇವರಾತ್ಮನ ಬಲವು ಎರಡು ರೀತಿಗಳಲ್ಲಿ ತೋರ್ಪಡಿಸಲ್ಪಟ್ಟಿತು. ಮೊದಲನೆಯದಾಗಿ, ಅದು ಬಹುಮಂದಿ ಪಶ್ಚಾತಾಪಪಟ್ಟು ನಂಬಿಕೆಯಿಡುವದರಲ್ಲಿ ತೋರ್ಪಡಿಸಲ್ಪಟ್ಟಿತು; ಅಂದರೆ, ಅದು ಸಭೆಯನ್ನ ಅಭಿವೃದ್ಧಿಗೊಳಿಸುವದರಲ್ಲಿ ತೋರ್ಪಟ್ಟಿತು. ಎರಡನೆಯದಾಗಿ, ಅದು ಒಬ್ಬ ಅಪೊಸ್ತಲನಾಗಿ ಪೌಲನು ಮಾಡಿದ ಸೂಚಕಾರ್ಯಗಳು ಹಾಗು ಅದ್ಭುತಗಳಲ್ಲಿ ಇನ್ನು ಹೆಚ್ಚಾಗಿ ಪ್ರದರ್ಶಿಸಲ್ಪಟ್ಟಿತ್ತು (ರೋಮ 15:19; 2 ಕೊರಿಂಥ 12:12 ನೋಡಿರಿ).

5 ಕ್ರೈಸ್ತರಾದ ನಾವು ಸಾಕ್ಷಿನುಡಿಯುವಾಗ ಮತ್ತು ಬೋಧಿಸುವಾಗ ನಮ್ಮ ಮಾತನ್ನು ಕೇಳುವ ಅನೇಕರು ನಮ್ಮ ಮಾತುಗಳು ಮೆಚ್ಚಿಕೆಯುಳ್ಳವುಗಳಾಗಿಯೂ, ಆದರಣೆಕರವಾಗಿಯೂ ಇದ್ದಾವೆಂದು ಹೇಳುತ್ತಾರೆ. ಅವರು ಸುವಾರ್ತೆಯನ್ನು ಕೇಳಲು ಇಷ್ಟಪಡುತ್ತಾರೆ. ಆದರೆ ಮೆಚ್ಚಿಕೆಯನ್ನು ಹೊಂದುವದಕ್ಕೆ ಮಾತ್ರವೇ ಕೇಳುವವರು ನಿವಾಗಿಯೂ ಸುವಾರ್ತೆಯನ್ನು ಅರ್ಥಮಾಡಿಕೊಂಡಿರುವದಿಲ್ಲ. ವಾಸ್ತವದಲ್ಲಿ, ಸುವಾರ್ತೆಯು ನಂಬುವವರೆಲ್ಲರಿಗೂ ರಕ್ಷಣೆಯನ್ನುಂಟುಮಾಡುವ ದೇವರ ಶಕ್ತಿಯಾಗಿದೆ ಎಂಬುದನ್ನು ಅವರು ಅರ್ಥಮಾಡಿಕೊಳ್ಳುವದಿಲ್ಲ (ರೋಮ 1:16; 1 ಕೊರಿಂಥ 4:20).

ಆದುದರಿಂದ, ನಮ್ಮ ಬೋಧನೆಯೂ ಪ್ರಸಂಗವೂ ಮನವೊಲಿಸುವ ಜ್ಞಾನವಾಕ್ಯಗಳಿಂದ ಕೂಡಿರದೆ ದೇವರಾತ್ಮನ ಬಲವನ್ನು ತೋರ್ಪಡಿಸುವದಾಗಿರಲಿ (ವಚನ 4), ಹೀಗೆ ನಮ್ಮ ಮಾತನ್ನು ಕೇಳುವವರ ನಂಬಿಕೆಯು ಮಾನುಷ ಜ್ಞಾನದ ಮೇಲೆ ಅಲ್ಲ, ಆದರೆ ದೇವರ ಬಲದ ಮೇಲೆಯೇ ಆಧಾರವಾಗಿರುವಂತಾಗುತ್ತದೆ. ಪವಿತ್ರಾತ್ಮನ ಬಲದ ಮುಖಾಂತರ ಮಾತ್ರವೇ ಸ್ತ್ರೀಪುರುಷರು ಕ್ರಿಸ್ತನಲ್ಲಿ ನಿಜವಾದ ನಂಬಿಕೆಯನ್ನಿಡುವಂತೆ ನಡಿಸಲ್ಪಡುತ್ತಾರೆ. ನಮ್ಮ ಬೋಧನೆಯು ಕೇವಲ

ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನ ಮೇಲೆ ಕೇಂದ್ರಿಕೃತಗೊಂಡಿರುವಾಗ (1 ಕೊರಿಂಥ 1:23), ನಮ್ಮ ಮಾತುಗಳನ್ನು ಕೇಳುವವರ ನಂಬಿಕೆಯು ದೇವರ ಬಲದ ಮೇಲೆ ಆಧಾರವಾಗುತ್ತದೆಂಬದನ್ನು ನಾವು ಖಚಿತವಾಗಿ ತಿಳಿದುಕೊಳ್ಳಬಹುದು.

## ಆತ್ಮನಿಂದ ಬರುವ ಜ್ಞಾನ (2:6-16)

6 ಪ್ರವೀಣರಿಗೆ, ಅಂದರೆ ಆತ್ಮೀಕರಾದವರಿಗೆ ಪೌಲನ ಮಾತುಗಳು ಜ್ಞಾನವಾಗಿದೆ. ಪೌಲನು ಇಹಲೋಕದ ಜ್ಞಾನವನ್ನು ಅಥವಾ ಇಹಲೋಕದ ಅಧಿಕಾರಿಗಳ ಜ್ಞಾನವನ್ನಾಗಲಿ ಮಾತಾಡುವದಿಲ್ಲ. ಇಹಲೋಕಾಧಿಕಾರಿಗಳು ಲೋಕದಲ್ಲಿ ಅಧಿಕಾರವನ್ನು ಉಪಯೋಗಿಸುವ ಅಧಿಕಾರಿಗಳು ಮಾತ್ರವೇ ಅಲ್ಲ, ಆದರೆ ಅಧಿಕಾರಿಗಳೂ, ಅಂಧಕಾರದ ಲೋಕಾಧಿಪತಿಗಳೂ ಮತ್ತು ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಗಳು ಸಹ ಆಗಿದ್ದಾರೆ (ಎಫೆಸ 6:12).

7 ಒಂದು ಅರ್ಥದಲ್ಲಿ ದೇವರ ಜ್ಞಾನವು ಮರೆ ಮಾಡಲ್ಪಟ್ಟಿರುವ ಮತ್ತು ಗುಪ್ತವಾಗಿರುವ ಜ್ಞಾನವಾಗಿದೆ. ಪ್ರಾಕೃತೀಕ ಅಥವಾ ಪ್ರಾಪಂಚಿಕ ಜನರು ದೇವರ ಜ್ಞಾನವನ್ನು ಅರ್ಥಮಾಡಿಕೊಳ್ಳಲಾರರು. ಪವಿತ್ರಾತ್ಮನ ಸಹಾಯದ ಮೂಲಕ ಮಾತ್ರವೇ ನಾವು ದೇವರ ಜ್ಞಾನವನ್ನು ಸುವಾರ್ತೆಯನ್ನು ಅರ್ಥಮಾಡಿಕೊಳ್ಳಬಹುದಾಗಿದೆ (ವಚನ 14). ಕ್ರಿಸ್ತನಲ್ಲಿ ನಂಬಿಕೆಯಿಡುವವರಿಗೆ ಮಾತ್ರವೇ ಸುವಾರ್ತೆಯು ಪೂರ್ಣವಾಗಿ ಪ್ರಕಟವಾಗುತ್ತದೆ. ಸುವಾರ್ತೆಯು ದೇವರು ನಮ್ಮ ಮಹಿಮೆಗಾಗಿ ಲೋಕೋತ್ಪತ್ತಿಗಿಂತ ಮೊದಲೇ ನೇಮಿಸಿದ ದೇವರ ಜ್ಞಾನವಾಗಿದೆ. ಕ್ರಿಸ್ತನಲ್ಲಿ ದೇವರ ಜ್ಞಾನವು ಅವತರಿಸಿ ವಾಸಮಾಡುತ್ತದೆ; ಕ್ರಿಸ್ತನು ಸ್ವತಃ ದೇವರ ಜ್ಞಾನ ಎಂದು ಕರೆಯಲ್ಪಡಬಹುದು (1 ಕೊರಿಂಥ 1:24). ಕ್ರಿಸ್ತನ ಮುಖಾಂತರವಾಗಿ ನಾವು ಮಹಿಮಾ ಪದವಿಗೆ ಸೇರಿಸಲ್ಪಡುವೆವು (ರೋಮ 8:30; 2 ಥೆಸಲೋನಿಕ 2:14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ದೇವರು ನಮ್ಮನ್ನು ಮಹಿಮಾಪದವಿಗೆ ಸೇರಿಸುವ ತಿರ್ಮಾನವನ್ನು ಜಗದುತ್ಪತ್ತಿಗೆ ಮುಂಚೆಯೇ ಮಾಡಿದನು (ಎಫೆಸ 1:4;2 ಥೆಸಲೋನಿಕ 2:3).

8 ಕ್ರಿಸ್ತನು ಲೋಕಕ್ಕೆ ಬಂದಾಗ ದೇವರ ಜ್ಞಾನವು ಪೂರ್ಣವಾಗಿ ಬೆಳಕಿಗೆ ಬಂತು "ಮರ್ಮ'ವು ಪ್ರಕಟವಾಯಿತು; ದೇವರ ಜ್ಞಾನವು ಇನ್ನೆಂದಿಗೂ ಮರೆಯಾಗಿರಲಿಲ್ಲ. ಆದರೆ ದೇವರ ಜ್ಞಾನವು ಪ್ರತ್ಯಕ್ಷವಾದಾಗ್ಯು ಬಹುಮಂದಿ ಇನ್ನು ಅದನ್ನು ಅರ್ಥಮಾಡಿಕೊಳ್ಳಲಿಲ್ಲ. ಅವರು ಕ್ರಿಸ್ತನ್ನು ತಿರಸ್ಕರಿಸಿದರು. ಅವರ ಆತ್ಮೀಕ ಕಣ್ಣುಗಳು ಕುರುಡಾಗಿದ್ದವು. ವಿಶೇಷವಾಗಿ ಇಹಲೋಕಾಧಿಕಾರಿಗಳು ಕುರುಡರಾಗಿದ್ದರು; ಇಲ್ಲವಾದರೆ ಅವರು ಮಹಿಮೆಯುಳ್ಳ ಕರ್ತನಾದ ಕ್ರಿಸ್ತನನ್ನು ಶಿಲುಬೆಗೆ ಹಾಕಿಸುತ್ತಿರಲಿಲ್ಲ. ಇಹಲೋಕಾಧಿಕಾರಿಗಳು ವಾಸ್ತವದಲ್ಲಿ ಕ್ರಿಸ್ತನನ್ನು ಮರಣಕ್ಕೊಳಪಡಿಸಿದ ಯೆಹೂದ್ಯನಾಯಕರು ಮತ್ತು ರೋಮಾಯ ದೇಶಾಧಿಪತಿಯಾಗಿದ್ದಾರೆ; ಆದರೆ ಅಧಿಕಾರಿಗಳಲ್ಲಿ ದುರಾತ್ಮಸೇನೆಗಳು ಸಹ ಇರತ್ತವೆ (ಎಫೆಸ 6:12), ಅವು ಗಳು ಸೈತಾನನ ಸೇನೆಗಳೇ. ಕ್ರಿಸ್ತನನ್ನು ಶಿಲುಬೆಗೆ ಹಾಕಿದವರು ನಿಶ್ಚಯವಾಗಿಯೂ ಸೈತಾನನ ಹತೋಟಿಯಲ್ಲಿದ್ದರು; ಅವರು ತಮ್ಮ ದುಷ್ಟಕಾರ್ಯವನ್ನು ಒಬ್ಬಂಟಿಗರಾಗಿ ಮಾಡಲಿಲ್ಲ.

9 ಪೌಲನು ಇಲ್ಲಿ ಯೆಶಾಯ 64:4 ರಿಂದ ಉಲ್ಲೇಖಿಸುತ್ತಾನೆ. ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂತಹದ್ದು–ಆದರೆ, ಪ್ರೀತಿಸದವರಿಗೆ ಮರೆ ಮಾಡಲ್ಪಟ್ಟಿರುವಂತಹದ್ದು– ಏನಾಗಿದೆ? ಇದು ರಕ್ಷಣೆ, ನಿತ್ಯಜೀವ ಮತ್ತು ಮಹಿಮೆಯಾಗಿದೆ; ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂತದ್ದು ಇದೇ ಆಗಿದೆ. ಮತ್ತು ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂತಹದ್ದು ನಾವು ಊಹಿಸಿಕೊಳ್ಳಲಾಗದಷ್ಟು ಎಷ್ಟೊಂದು ಶ್ರೇಷ್ಠ ಹಾಗು ಹೆಚ್ಚು ಆಶ್ಚರ್ಯಕರವಾದದ್ದಾಗಿದೆ (ರೋಮ 11:33; ಎಫೆಸ 3;20-21 ಹಾಗು ವ್ಯಾಖ್ಯಾನಗಳನ್ನು ನೋಡಿರಿ).

10 ನಮಗಾದರೋ ದೇವರು ತನ್ನ (ಪರಿಶುದ್ಧ) ಆತ್ಮನ ಮೂಲಕ ಅದನ್ನು (ತನ್ನಜ್ಞಾನ, ಸುವಾರ್ತೆ) ಪ್ರಕಟಿಸಿದನು. ಪವಿತ್ರಾತ್ಮನು ದೇವರ ಸ್ವಂತ ಆತ್ಮನಾಗಿದ್ದಾನೆ. ಪವಿತ್ರಾತ್ಮನಿಗೆ ಯಾವದೂ ಮರೆಯಾಗಿರುವದಿಲ್ಲ.

11 ಮನುಷ್ಯರಾದ ನಾವು ಇನ್ನೊಬ್ಬನ ಮನಸ್ಸಿನಲ್ಲಿ ಹಾಗು ಹೃದಯದಲ್ಲಿ ಏನಿದೆ ಎಂಬದನ್ನು ತಿಳಿಯಲಾರೆವು ; ಆ ಇನ್ನೊಬ್ಬನು ಮಾತ್ರವೇ – ಅಂದರೆ; ಅವನಲ್ಲಿರುವ ಜೀವಾತ್ಮ – ಅವನ ಮನಸ್ಸಿನಲ್ಲಿಯೂ ಹೃದಯದಲ್ಲಿಯೂ ಇರುವ ಆಲೋಚನೆಗಳನ್ನು ತಿಳಿಯಬಲ್ಲನು. ಆದರೆ ಆ ಇನ್ನೊಬ್ಬನು ತನ್ನ ಮನಸ್ಸಿನಲ್ಲಿಯೂ ಹೃದಯದಲ್ಲಿಯೂ ಇರುವದೇನೆಂಬದನ್ನು ನಮಗೆ ಬಯಲು ಪಡಿಸುವದಾದರೆ ನಾವು ಸಹ ಅದನ್ನು ತಿಳಿಯಬಹುದಾಗಿದೆ. ಹಾಗೆಯೇ ದೇವರ "ಮನಸ್ಸು" ಮತ್ತು "ಹೃದಯ" ದಲ್ಲಿ ಏನಿದೆಯೆಂಬದು ನಮಗೆ ಗೊತ್ತಿಲ್ಲ. ಪವಿತ್ರಾತ್ಮನು ಮಾತ್ರವೇ ಅದನ್ನು ಬಲ್ಲನು. ಆದರೆ ಇನ್ನೊಬ್ಬ ವ್ಯಕ್ತಿಯು ತನ್ನ ಮನಸ್ಸು ಮತ್ತು ಹೃದಯದಲ್ಲಿ ಇರುವದನ್ನು ತಿಳಿಸಬಹುದಾದ ಪ್ರಕಾರವೇ ದೇವರಾತ್ಮನು ನಮಗೆ ದೇವರ "ಮನಸ್ಸು" ಮತ್ತು "ಹೃದಯ" ದಲ್ಲಿ ಇರುವದನ್ನು ತಿಳಿಸುವವನಾಗಿದ್ದಾನೆ. ಈ ರೀತಿಯಾಗಿಯೇ ವಿಶ್ವಾಸಿಗಳು ದೇವರ ಆಲೋಚನೆಗಳನ್ನು ಬಲ್ಲವರಾಗಿದ್ದಾರೆ; ಅವರು ಅವು ಗಳನ್ನು ದೇವರ ಆತ್ಮನ ಮೂಲಕ ತಿಳಿದವರಾಗಿದ್ದಾರೆ.

12 ನಾವು ದೇವರಿಂದ ಬಂದ ಆತ್ಮವನ್ನೇ ಹೊಂದಿದ್ದೇವೆ, ಅಂದರೆ, ಪವಿತ್ರಾತ್ಮನನ್ನು ಹೊಂದಿದವರಾಗಿದ್ದು ಆತ್ಮನ ಮೂಲಕವಾಗಿ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ಅರ್ಥಮಾಡಿಕೊಳ್ಳಬಹುದು: ಆತನ ಸ್ವಂತ ಮಗ, ಮತ್ತು ಆತನೊಂದಿಗೆ ರಕ್ಷಣೆ, ನಿತ್ಯ ಜೀವಗಳು.

13 ಪೌಲನು ಇಲ್ಲಿ 1, 4-5 ವಚನಗಳಲ್ಲಿನ ವಿಚಾರವನ್ನು ಪು ನರಾವರ್ತಿಸುತ್ತಾನೆ. ವಿಶ್ವಾಸಿಗಳಾದ ನಾವು ಮಾನುಷ ಜ್ಞಾನವು ಕಲಿಸಿದ ಮಾತುಗಳನ್ನಾಡದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳನ್ನಾಡುತ್ತಾರೆ. ಹೀಗೆ ನಮ್ಮ ಮಾತುಗಳು ಆತ್ಮಸಂಬಂಧವಾದವು ಗಳು. ಮತ್ತು ನಾವು ಸಂಬಂಧವಾದ ಮಾತುಗಳನ್ನಾಡುವಾಗ ಆತ್ಮೀಕ ಸತ್ಯಗಳನ್ನು ವಿವರಿಸುವೆವು.

ಆತ್ಮೀಕ ಸತ್ಯಗಳು ಆತ್ಮಸಂಬಂಧವಾದ ಮಾತುಗಳಿಂದ ಮಾತ್ರವೇ ವಿವರಿಸಲ್ಪಡಬಹುದಾಗಿದೆ. ನಮ್ಮ ಮಾತುಗಳು ನಿಜವಾಗಿಯೂ ಆತ್ಮೀಕ ವಾಗಿರುವದಾದರೆ. ನಿಜವಾಗಿಯೂ ದೇವರಾತ್ಮನು ಕಲಿಸಿಕೊಟ್ಟ ಮಾತುಗಳಾಗಿದ್ದರೆ, ನಾವು ಯಾವಾಗಲೂ ಆತ್ಮೀಕ ಸತ್ಯಗಳನ್ನು ವ್ಯಕ್ತಪಡಿಸುವೆವು. ದೇವರಾತ್ಮನಿಂದ ಕಲಿಸಲ್ಪಡದ ಮನುಷ್ಯನು ಆತ್ಮೀಕ ಸತ್ಯಗಳನ್ನು ವ್ಯಕ್ತ ಪಡಿಸಲಾರನು; ಅಲ್ಲದೆ ಅವನು ಅವು ಗಳನ್ನು ಗ್ರಹಿಸಿಕೊಳ್ಳಲು ಸಹ ಆಗುವದಿಲ್ಲ.

**14** ಪಾಕೃತ ಮನುಷ್ಯನು ಅಥವಾ ಸ್ವಾಭಾವಿಕ ಮನುಷ್ಯನು ಪವಿತ್ರಾತ್ಮನನ್ನು ಹೊಂದಿರುವದಿಲ್ಲ, ಆದುದರಿಂದ, ಅವನು ದೇವರಾತ್ಮನ ವಿಷಯಗಳನ್ನು ಅರ್ಥಮಾಡಿಕೊಳ್ಳಲಾರನು. ಪವಿತ್ರಾತ್ಮನ ಮೂಲಕ ಮಾತ್ರವೇ ನಾವು ದೇವರ ಆಲೋಚನೆಗಳನ್ನು ಅರ್ಥಮಾಡಿಕೊಳ್ಳಬಲ್ಲೆವು (ಯೋಹಾನ 8:47; 14:16-17; ರೋಮ 8:5, 9 ಮತ್ತು ವ್ಯಾಖ್ಯಾಗಳನ್ನು ನೋಡಿರಿ).

**15** ದೇವರಾತ್ಮನಿಂದ ನಡಿಸಿಕೊಳ್ಳುವವನು ನಿಜವಾದ ಕ್ರೈಸ್ತನಾಗಿದ್ದಾನೆ. ಆತನು ಪವಿತ್ರಾತ್ಮನನ್ನು ಹೊಂದಿಕೊಂಡವನಾಗಿದ್ದಾನೆ. "ಆತ್ಮೀಕ ಮನುಷ್ಯನು" ಲೌಕೀಕ ಹಾಗು ಆತ್ಮೀಕ ಸಂಗತಿಗಳೆರಡನ್ನು ಅರ್ಥಮಾಡಿಕೊಂಡು ತಪ್ಪು ಒಪ್ಪುಗಳನ್ನು ತೀರ್ಮಾನಿಸಿಕೊಳ್ಳಬಲ್ಲನು.

**16** ಆದರೆ ಸ್ವಾಭಾವಿಕ ಮಾನವನು, ಪ್ರಾಕೃತ ಮನುಷ್ಯನಿಗೆ (ವಚನ 14). ದೇವರಾತ್ಮನಿಂದ ನಡಿಸಿಕೊಳ್ಳುವವನನ್ನು ತಿಳಿಯುವದಕ್ಕಾಗಲಿ ಅವನ ಕುರಿತ ತಪ್ಪು ಒಪ್ಪುಗಳನ್ನು ತೀರ್ಮಾನಿಸುವದಕ್ಕಾಗಲಿ ಆಗುವದಿಲ್ಲ. ಆತ್ಮೀಕ ಮನುಷ್ಯನು ತನ್ನ ಜೀವಿತದಲ್ಲಿ ಪವಿತ್ರಾತ್ಮನ ಗಣಗಳನ್ನು ವಿಶೇಷವಾಗಿ ಆತ್ಮನ ಫಲಗಳನ್ನು – ಪ್ರೀತಿ, ಸಂತೋಷ, ಸಮಾಧಾನ, ಮುಂತಾದವು ಗಳನ್ನು – ಹೊಂದಿಕೊಂಡಿರುತ್ತಾನೆ (ಗಲಾತ್ಯ 5:22-23). ಈ ಸಂಗತಿಗಳನ್ನು ಸ್ವಾಭಾವಿಕ ಮನುಷ್ಯನು ಪೂರ್ಣವಾಗಿ ಅರ್ಥಮಾಡಿಕೊಳ್ಳಲಾರನು. ಆತನು ಈ ಗುಣಗಳಿಗೆ ಮೂಲ ಯಾರೆಂಬದನ್ನು ಅರ್ಥ ಮಾಡಿಕೊಳ್ಳಲಾರನು. ಆತನು ಆತ್ಮೀಕ ಮಾನವನ ಚಿಂತನೆಗಳನ್ನು ಪ್ರಾಶಸ್ತ್ಯಗಳನ್ನೂ ಗ್ರಹಿಸಿಕೊಳ್ಳಲಾರನು. ಈ ಕಾರಣಕ್ಕಾಗಿಯೇ ಆತ್ಮೀಕ ಮನುಷ್ಯನನ್ನು ಯಾವನಾದರೂ (ಸ್ವಾಭಾವಿಕ ಮಾನವನು) ವಿಚಾರಿಸಿ ತಿಳುಕೊಳ್ಳುವದಿಲ್ಲ.

**16** ಇಲ್ಲಿ ಪೌಲನು ಯೆಶಾಯ 40:13 ರಿಂದ ಉಲ್ಲೇಖಿಸುತ್ತಾನೆ (ರೋಮ 11:34 ನೋಡಿರಿ). ಸ್ವಾಭಾವಿಕ ಅಥವಾ ಪ್ರಾಕೃತ ಮನುಷ್ಯನು ದೇವರ ಮನಸ್ಸನ್ನು ತಿಳುಕೊಳ್ಳಲಾಗದ ಪ್ರಕಾರವೇ ಆತನು ಕ್ರೈಸ್ತರಾದ ನಮ್ಮ ಮನಸ್ಸನ್ನು, ತಿಳಿದುಕೊಳ್ಳಲಾರನು – ಯಾಕೆಂದರೆ, ನಿಜವಾದ ಕ್ರೈಸ್ತರು ಸ್ವತಃ ದೇವರ ಮನಸ್ಸನ್ನು ಹೊಂದಿದ್ದಾರೆ. ಅಂದರೆ ನಾವು ಕ್ರಿಸ್ತನ ಮನಸ್ಸು ಹೊಂದಿದ್ದೇವೆ. ಎಂತಹ ಒಂದು ಆಶ್ಚರ್ಯಕರವಾದ ಸತ್ಯವಲ್ಲವೇ! ಹಾಗಾದರೆ, ನಾವು ಕ್ರಿಸ್ತನ ಮನಸ್ಸನ್ನು ಹೊಂದಿರುವದರಿಂದ ಅದನ್ನು ಉಪಯೋಗಿಸುವಲ್ಲಿ ಜಾಗ್ರತರಾಗಿರೋಣ!

---

# ಅಧ್ಯಾಯ - 3

## ಸಭೆಯಲ್ಲಿದ್ದ ಪಂಗಡಗಳ ಬಗ್ಗೆ (3:1-9)

**1** ಪೌಲನು ಕೊರಿಂಥದಲ್ಲಿ ತನ್ನ ಪ್ರಾರಂಬದ ಸೇವೆಯಲ್ಲಿ ಆತನು ಪರಿಪಕ್ವ ಕ್ರೈಸ್ತರೊಂದಿಗೆ ಮಾತಾಡುವ ಪ್ರಕಾರ ಅಲ್ಲಿರುವ ವಿಶ್ವಾಸಿಗಳೊಂದಿಗೆ ಮಾತಾಡಲಾಗಲಿಲ್ಲ; ಬದಲಾಗಿ ಆತನು ಅವರೊಂದಿಗೆ ಅವರು ಆತ್ಮೀಕವಾಗಿ ಎಳೆಗೂಸುಗಳೋ ಎಂಬಂತೆ ಮಾತಾಡಿದನು. ಅವರು ಕ್ರಿಸ್ತನನ್ನು ನಂಬಿದವರಾಗಿ ಪವಿತ್ರಾತ್ಮನನ್ನು ಹೊಂದಿಕೊಂಡಿದ್ದಾಗ್ಯು ಇನ್ನೂ ಅವರು ಪ್ರಾಪಂಚಿಕರಾಗಿದ್ದರು[6].

ನಾವು ಈ ಪ್ರಾಪಂಚಿಕರು ಎಂಬ ಪದದ ಅರ್ಥವನ್ನು ತಿಳಿದುಕೊಳ್ಳಬೇಕು. ಪ್ರಾಪಂಚದ ಮಾರ್ಗದಂತೆ ಜೀವಿಸುವವನೇ "ಪ್ರಾಪಂಚಿಕನು" ಆಗಿದ್ದಾನೆ. ಆತನು ದೇವರಿಗಿಂತಲೂ ಹೆಚ್ಚಾಗಿ ಲೋಕದ ಸಂಗತಿಗಳನ್ನು ಪ್ರೀತಿಸುತ್ತಾನೆ. ಪ್ರಾಪಂಚಿಕನು ಶರೀ ಭಾವವನ್ನು ಅನುಸರಿಸುವವನಾಗಿದ್ದಾನೆ (ರೋಮ 8:4); ಅಂದರೆ ಆತನು ತನ್ನ ಪಾಪಮಯ ಆಲೋಚನೆಗಳ ಹಾಗು ಅಭಿಲಾಷೆಗಳ ಹತೋಟಿಯಲ್ಲಿ ಉಳಿಯುತ್ತಾನೆ. ಆತನ ಜೀವಿತವನ್ನು ಆತನ ಪಾಪಾಧೀನ ಸ್ವಭಾವವು ಆಳುತ್ತದೆ. ಪ್ರಾಪಂಚಿಕ ಮನುಷ್ಯನು ತನ್ನ ಪಾಪಾಧೀನ ಸ್ವಭಾವದಿಂದ ಬಿಡುಗಡೆಗೊಂಡಿರುವದಿಲ್ಲ (ರೋಮ 6:11-12 ನೋಡಿರಿ). ಪ್ರಾಪಂಚಿಕ ವ್ಯಕ್ತಿಯನ್ನು "ಸ್ವಾಭಾವಿಕ ಮನುಷ್ಯ" ಅಥವಾ ಪ್ರಾಕೃತ ಮನುಷ್ಯ ಎಂದು ಸಹಕರೆಯಬಹುದು (1 ಕೊರಿಂಥ 2:14). ಅಲ್ಲದೆ, ಅವನನ್ನು "ಶರೀರಭಾವದ" ಮನುಷ್ಯ ಎಂದು ಸಹ ಕರೆಯಬಹುದು. ಈ ಎಲ್ಲಾ ಪದಗಳು ಒಂದೇ ವಿಧದ ವ್ಯಕ್ತಿಯನ್ನು ಬಣ್ಣಿಸುತ್ತವೆ.

ಈ ವಚನದಲ್ಲಿ ಒಂದು ಪ್ರಾಮುಖ್ಯ ಬೋಧನೆಯಿರುತ್ತದೆ. ಸಾಮಾನ್ಯವಾಗಿ ಪೌಲನು ವಿಶ್ವಾಸಿಗಳನ್ನು "ಆತ್ಮೀಕರು" ಎಂದೂ, ಅವಿಶ್ವಾಸಿಗಳನ್ನು "ಪ್ರಾಕೃತರು" ಅಥವಾ "ಪ್ರಾಪಂಚಿಕರು" ಎಂದು ಕರೆಯುತ್ತಾನೆ. ಅದಕ್ಕೆ ಕಾರಣವೇನೆಂದರೆ: ನೂತನ ಹಾಗು ಪರಿಪಕ್ವಗೊಳ್ಳದ ವಿಶ್ವಾಸಿಗಳು ಅರ್ಧ ಆತ್ಮೀಕವಾಗಿಯೂ, ಇನ್ನು ಅರ್ಧ ಪ್ರಾಕೃತರಾಗಿಯೂ (ಅಥವಾ ಪ್ರಾಪಂಚಿಕರು) ಇರುತ್ತಾರೆ. ಒಬ್ಬ ವ್ಯಕ್ತಿಯು ಕ್ರಿಸ್ತನನ್ನು ನಂಬುವಾಗ ಆತನು ಪವಿತ್ರಾತ್ಮನ ಮುಖಾಂತರವಾಗಿ ನೂತನ

ಆತ್ಮೀಕ ಜೀವವನ್ನು ಪಡೆದುಕೊಳ್ಳುತ್ತಾನೆ. ಆದರೆ ಆ ವ್ಯಕ್ತಿಯು ಆತ್ಮೀಕವಾಗಿ ಎಳೆಗೂಸಿನಂತಿರುತ್ತಾನೆ. ಆತನು ಆತ್ಮೀಕವಾಗಿ ಬೆಳೆಯಬೇಕು. ಆತನು ಒಬ್ಬ ಕ್ರೈಸ್ತನಾಗಿರುತ್ತಾನಾದರೂ ಅವನು ಅರ್ಧ ಆತ್ಮೀಕನಾಗಿಯೂ, ಅರ್ಧ ಪ್ರಾಪಂಚಿಕನಾಗಿಯೂ ಇರುತ್ತಾನೆ; ಆತನು ಈಗಲೂ ಲೋಕದ ಅಭ್ಯಾಸಗಳನ್ನು ಅಭಿಲಾಷೆಗಳನ್ನೂ ಹೊಂದಿರುತ್ತಾನೆ. ಆತನು ಇನ್ನೂ ಲೋಕದೆಡೆಗೆ ಸೆಳೆಯಲ್ಪಡುವವನಾಗಿದ್ದಾನೆ. ಅವನ ಹೃದಯದೊಳಗೆ ಆತನ ನೂತನ ಆತ್ಮೀಕ ಸ್ವಭಾವ ಹಾಗು ಆತನ ಪೂರ್ವದ ಪ್ರಾಪಂಚಿಕ ಸ್ವಭಾವಗಳ ನಡುವೆ ಒಂದು ಹೋರಾಟವಿರುತ್ತದೆ (ರೋಮ 7:19-21; ಗಲಾತ್ಯ 5:16-17 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ಆತ್ಮೀಕವಾಗಿ ಬೆಳೆದು ಹೆಚ್ಚು ಹೆಚ್ಚು ಪರಿಪಕ್ವಗೊಂಡ ಹಾಗೆ ಕ್ರಮೇಣವಾಗಿ ನಾವು ಪವಿತ್ರಾತ್ಮನ ಸಹಾಯದ ಮೂಲಕ ನಮ್ಮ ಪಾಪಾಧೀನ ಸ್ವಭಾವದ ಮೇಲೆ ಜಯವನ್ನು ಪಡೆಯುವೆವು ಮತ್ತು ಕೊನೆಗೆ ನಾವು ಇನ್ನೆಂದಿಗೂ ಪ್ರಾಪಂಚಿಕರಾಗಿರದೆ ಆತ್ಮೀಕರಾಗಿರುವವರಾಗಿದ್ದೇವೆ (2 ಕೊರಿಂಥ 3:18; ಎಫೆಸ 4:13-15 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

2 ಪ್ರಾರಂಭದಲ್ಲಿ ಪೌಲನು ಕೊರಿಂಥದ ನೂತನ ವಿಶ್ವಾಸಿಗಳಿಗೆ ಹಾಲು ಕುಡಿಸಿದನು, ಅಂದರೆ, ಸುವಾರ್ತೆಯ ಸರಳ ಹಾಗು ಮೂಲ ಮತ್ತು ಆದರಣೆಯ ಸತ್ಯಗಳನ್ನು ತಿಳಿಸಿದನು – ಉದಾಹರಣೆಗೆ, ದೇವರು ನಮ್ಮನ್ನು ಪ್ರೀತಿಸುತ್ತಾನೆ ಹಾಗು ನಮ್ಮ ಪಾಪಗಳನ್ನು ಕ್ಷಮಿಸಲು ಸಿದ್ಧನಾಗಿದ್ದಾನೆ (ಯೋಹಾನ 3:16). ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತನು (ರೋಮ 5:8); ಕ್ರಿಸ್ತನು ನಮಗೆ ವಿಶ್ರಾಂತಿಯನ್ನು ಕೊಡುತ್ತಾನೆ (ಮತ್ತಾಯ 11:28). ಈ ಬೋಧನೆಗಳು ಹಾಲಿನಂತಿದ್ದು ಆತ್ಮೀಕ ಎಳೆಗೂಸುಗಳಿಗೆ ತಕ್ಕ ಹಾಗಿರುತ್ತವೆ (ಇಬ್ರಿಯ 5: 11-14; 1 ಪೇತ್ರ 2:2 ನೋಡಿರಿ).

ಇನ್ನೊಂದೆಡೆಯಲ್ಲಿ, ಗಟ್ಟಿಯಾದ ಆಹಾರವು ದೇವರವಾಕ್ಯದ ಹೆಚ್ಚು ಆಳವಾದ ಹಾಗು ಕಷ್ಟಕರವಾದ ಬೋಧನೆಗಳನ್ನು ಒಳಗೊಂಡಿರುತ್ತದೆ. ಇವು ಗಳಲ್ಲಿ ಮತ್ತಾಯ 5-7 ಅಧ್ಯಾಯಗಳಲ್ಲಿಯೂ ಯೋಹಾನ 13-16 ಅಧ್ಯಾಯಗಳಲ್ಲಿಯೂ ಕಂಡುಬರುವ ಯೇಸು ಸಂಭಾಷಣೆಗಳು ಸೇರುವವು. ಅವು ಗಳಲ್ಲಿ ಪೌಲನ ಸೈದ್ಧಾಂತೀಕ ಬೋಧನೆಗಳು ಸಹ ಸೇರಿರುತ್ತವೆ. ಅಲ್ಲದೆ ಅವು ಗಳಲ್ಲಿ ಪ್ರಬೋಧನೆ ಹಾಗು ಎಚ್ಚರಿಕೆಯ ವಾಕ್ಯಭಾಗಗಳೂ ಸೇರಿರುತ್ತವೆ, ಅವು ಗಳ ಕೆಲವು ಉದಾಹರಣೆಗಳು ಮಾರ್ಕ 8:34-35; ರೋಮ 8:13; 2 ತಿಮೊತೆ 3:12; ಇಬ್ರಿಯ 10:26-31 ರಲ್ಲಿ ಕಂಡುಬರುತ್ತವೆ.

ಒಬ್ಬ ಬುದ್ಧಿವಂತ ಸಭಾಪಾಲಕ ಅಥವಾ ಬೋಧಕನು ಒಬ್ಬ ವ್ಯಕ್ತಿಗೆ ಯಾವ ರೀತಿಯ ಆಹಾರವನ್ನು – ಹಾಲು ಅಥವಾ ಗಟ್ಟಿಯಾದ ಆಹಾರ– ನೀಡಬೇಕೆಂದು ತೀರ್ಮಾನಿಸುವದಕ್ಕೆ ಮುಂಚೆ ಆ ವ್ಯಕ್ತಿಯ ಆತ್ಮೀಕ "ವಯಸ್ಸು" ಅಥವಾ ಸ್ಥಿತಿ ಹೇಗಿದೆಯೆಂಬದನ್ನು ತಿಳಿದುಕೊಳ್ಳಲು ತಿಳಿದುಕೊಳ್ಳಲು ಪ್ರಯತ್ನಿಸುತ್ತಾನೆ. ಕೆಲವರಿಗೆ ಮುಖ್ಯವಾಗಿ "ಹಾಲು" ಹಾಗು ಇನ್ನು ಕೆಲವರಿಗೆ "ಗಟ್ಟಿಯಾದ ಆಹಾರ" ಅಗತ್ಯವಿರುತ್ತದೆ. ಚಿಕ್ಕ ಮಗುವಿಗೆ ಮಾಂಸದ ಒಂದು ದೊಡ್ಡ ತುಂಡನ್ನು ನೋಡುವದು ಸಹಾಯಕರವಾಗಿರುವದಿಲ್ಲ; ಅದು ಆತನ ಗಂಟಲಲ್ಲಿ ಸಿಕ್ಕಿಕೊಳ್ಳಬಹುದು! ಪೌಲನು ಕೊರಿಂಥದಲ್ಲಿ ನೆಲೆಸಿದ ಪ್ರಾರಂಬದಲ್ಲಿ ಅಲ್ಲಿರುವ ವಿಶ್ವಾಸಿಗಳು ಗಟ್ಟಿಯಾದ ಆಹಾರವನ್ನೂ ತಿನ್ನುವದಕ್ಕೆ ಸಿದ್ಧರಾಗಿರಲಿಲ್ಲ; ಅವರು ಕ್ರಿಸ್ತನ ವಿಷಯದಲ್ಲಿ ಎಳೆಗೂಸುಗಳಾಗಿದ್ದರು (ವಚನ 1). ಈಗ ಪೌಲನು ಈ ಪತ್ರಿಕೆಯನ್ನು ಬರೆಯುತ್ತಿರುವಾಗ ಮೂರು ಅಥವಾ ನಾಲ್ಕು ವರ್ಷಗಳು ಕಳೆದು ಹೋಗಿದ್ದವು; ಈ ಕೊರಿಂಥದ ವಿಶ್ವಾಸಿಗಳ ಆತ್ಮೀಕ ಪರಿಸ್ಥಿತಿ ಈಗ ಏನಾಗಿದೆ? ಅವರು ಈಗಲೂ ಆತ್ಮೀಕವಾಗಿ ಎಳೆಗೂಸುಗಳು ಆಗಿದ್ದರು! ಅವರು ಇನ್ನೂ ಗಟ್ಟಿಯಾದ ಆಹಾರ ತಿನ್ನುವದಕ್ಕೆ ಸಿದ್ಧರಾಗಿರುವದಿಲ್ಲ; ಅವರು ಸುವಾರ್ತೆಯ ಆಳವಾದ ಬೋಧನೆಗಳಿಗಾಗಿ ಇನ್ನೂ ಸಿದ್ಧರಾಗಿರುವದಿಲ್ಲ. ಅವರು ಬೆಳೆದಿರುವದಿಲ್ಲ. ಅವರು ಆತ್ಮದಿಂದ ಹುಟ್ಟಿದವರಾಗಿದ್ದಾರೆ, ಆದರೆ ಅವರು ಇನ್ನೂ ಆತ್ಮನಿಂದ ನಡಿಸಿಕೊಂಡವರಾಗಿ ಜೀವಿಸುತ್ತಿಲ್ಲ (ಗಲಾತ್ಯ 5:16).

3 ಕೊರಿಂಥದ ವಿಶ್ವಾಸಿಗಳು ಇನ್ನು ಆತ್ಮೀಕ "ಎಳೆಗೂಸುಗಳಾಗಿದ್ದಾರೆ" ಎಂಬದನ್ನು ಪೌಲನು ಹೇಗೆ ತಿಳುಕೊಂಡನು? ಅವರು ಇನ್ನೂ "ಪ್ರಾಪಂಚಿಕರು" ಎಂಬದನ್ನು ಆತನು ಹೇಗೆ ತಿಳುಕೊಂಡನು? ಅವನು ಅದನ್ನು ತಿಳಿಯುವದಕ್ಕೆ ಅವರ ಮದ್ಯದಲ್ಲಿದ್ದ ಹೊಟ್ಟೇಕಿಚ್ಚು ಜಗಳಗಳೇ ಕಾರಣವಾಗಿದ್ದವು. ಹೊಟ್ಟೇಕಿಚ್ಚು ಮತ್ತು ಜಗಳಗಳು ಪರಿಪಕ್ವ ಕ್ರೈಸ್ತರ ಮದ್ಯದಲ್ಲಿ ಜರುಗುವದಿಲ್ಲ. ಈ ಕೊರಿಂಥದವರು ಕೇವಲ ನರ ಪ್ರಾಣಿಗಳಂತೆ ನಡೆಯುತ್ತಿದ್ದರು – ಅಂದರೆ, ಸ್ವಾಭಾವಿಕ, ಪ್ರಾಪಂಚಿಕರಂತೆ ನಡೆಯುತ್ತಿದ್ದರು. ಅವರು ಎಂದಿಗೂ ಕ್ರೈಸ್ತರಾಗಲಿಲ್ಲವೇನೋ ಎಂಬಂತೆ ವರ್ತಿಸುತ್ತಿದ್ದರು!

4 ಇಲ್ಲಿ ನಾವು ಕೊರಿಂಥದ ಸಭೆಯಲ್ಲಿ ಯಾವು ದರ ಬಗ್ಗೆ ಜಗಳ ವಿತ್ತೆಂಬುದನ್ನು ನೋಡುತ್ತೇವೆ; ಕ್ರೈಸ್ತರು ತಮ್ಮೊಳಗೆ ವಿರೋಧಿ ಪಕ್ಷಗಳಾಗಿ ವಿಭಾಗಿಸಲ್ಪಟ್ಟಿದ್ದರು (1 ಕೊರಿಂಥ 1:12). ಅವರು ನಿಜವಾಗಿಯೂ ಪ್ರಾಪಂಚಿಕರು ಅಥವಾ ಪ್ರಾಕೃತರಾಗಿದ್ದರೆಂಬದಕ್ಕೆ ಇದು ಆಧಾರವಾಗಿತ್ತು. ನಮ್ಮನ್ನು ನಾವು ಪರೀಕ್ಷಿಸಿಕೊಳ್ಳೋಣ. ನಾವು ಎಷ್ಟರಮಟ್ಟಿಗೆ ಆ ಕೊರಿಂಥದ ಕ್ರೈಸ್ತರಂತಿದ್ದೇವೆ? ನಾವು ನಮ್ಮನ್ನು ಕೇಳಿಕೊಳ್ಳಬೇಕಾದದ್ದೇನೆಂದರೆ; ನಾನು ಪ್ರಾಪಂಚಿಕ ಅಥವಾ ಪ್ರಾಕೃತನಾಗಿದ್ದೇನೋ?

ನಾವು 3ನೇ ಅಧ್ಯಾಯದ ಈ ಮೊದಲು ನಾಲ್ಕು ವಚನಗಳಿಂದ ಇನ್ನೊಂದು ಸಂಗತಿಯನ್ನು ಕಲಿಯಬಹುದು: ಅದೇನೆಂದರೆ, ಕ್ರೈಸ್ತರು ಎಲ್ಲಾ ಸಮಯದಲ್ಲಿಯೂ, ಎಲ್ಲದರಲ್ಲಿಯೂ ಆತ್ಮನಿಗನುಸಾರವಾಗಿ ನಂಬದಿರಬಹುದು; ಹಾಗಿದ್ದರೂ, ಅವರು ಆಗಲೂ ಕ್ರೈಸ್ತರೇ ಆಗಿರುತ್ತಾರೆ. ಕೆಲವು ವೇಳೆಗಳಲ್ಲಿ, ಸಹೋದರನ್ನೊಬ್ಬನು ಪ್ರಾಪಂಚಿಕ ರೀತಿಯಲ್ಲಿ ವರ್ತಿಸುವದನ್ನು ನೋಡುವಾಗ ನಾವು "ಆತನು ನಿಜವಾದ ಕ್ರೈಸ್ತನಲ್ಲ ಅವನು ಪ್ರಾಪಂಚಿಕನು" ಎಂದು ಯೋಚಿಸುವ ಶೋಧನೆಗೊಳಗಾಗುತ್ತೇವೆ. ಹೇಗಿದ್ದರೂ, ಯಾರು ನಿಜವಾದ ಕ್ರೈಸ್ತನು ಹಾಗು ಕ್ರೈಸ್ತನಲ್ಲ ಎಂಬದನ್ನು ದೇವರು ಮಾತ್ರವೇ ಖಚಿತವಾಗಿ ಬಲ್ಲನು; ನಮ್ಮ ಸಹೋದರನಿಗೆ ತೀರ್ಪು ಮಾಡುವದು ನಮ್ಮ ಕೆಲಸವಲ್ಲ. ನಿಜ, ನಾವು ನಮ್ಮ ಸಹೋದರನ ವರ್ತನೆಯನ್ನು ನೋಡಿ ಇದು

ಕ್ರಿಸ್ತನಿಗೆ ತಕ್ಕಂತೆ ಇರುವದಿಲ್ಲ ಎಂದು ಹೇಳಬಹುದು, ಆದರೆ ನಮ್ಮ ಸಹೋದರನು ಕ್ರಿಸ್ತನಿಗೆ ಸೇರಿದವನೋ ಅಥವಾ ಅಲ್ಲವೋ ಎಂಬದನ್ನು ನಾವು ಹೇಳಲು ಸಾಧ್ಯವಿಲ್ಲ. ಹೌದು, ನಮ್ಮ ಸಹೋದರನು ನಿಜವಾದ ಕ್ರೈಸ್ತನಲ್ಲದಿರುವ ಸಾಧ್ಯತೆಯಿದೆ; ಆತನು ತನ್ನ ತುಟಿಗಳಿಂದ ಮಾತ್ರವೇ ಕ್ರಿಸ್ತನನ್ನು ಅರಿಕೆ ಮಾಡಿರುವ ಸಾಧ್ಯತೆಯಿರುತ್ತದೆ. ಆದರೆ, ಆತನು ತನ್ನ ಹೃದಯಲ್ಲಿ ನಿಜವಾಗಿಯಬ ಕ್ರೈಸ್ತನಾಗಿರುವ ಸಾಧ್ಯತೆಯು ಸಹ ಇರುತ್ತದೆ. ಆದುದರಿಂದ, ನಮ್ಮ ಸಹೋದರನು (ಕ್ರೈಸ್ತನೆಂದು ಹೇಳಿಕೊಳ್ಳುವವನು) ಪ್ರಾಪಂಚಿಕ ಜೀವನವನ್ನು ನಡಿಸುತ್ತಿದ್ದಾಗ್ಯು ನಾವು ಆಗಲೂ ಆತನನ್ನು ಕ್ರೈಸ್ತ ಸಹೋದರ ನೆಂಬದಾಗಿ ಪರಿಗಣಿಸಬೇಕು. ಅವನ ನಂಬಿಕೆಯವಾಸ್ತವ ಸ್ಥಿತಿಯು ಹೇಗೇ ಇರಲಿ, ನಾವು ಆತನಿಗೆ ತೀರ್ಪು ಮಾಡಬಾರದು; ತೀರ್ಪು ಮಾಡುವುದು ದೇವರಿಗೆ ಮಾತ್ರವೇ ಸೇರಿದ್ದು (ಮತ್ತಾಯ 7:1; ರೋಮ 2:1; 14:1 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**5-7** ಕೊರಿಂಥವರು ಏಕೆ ಅಪೊಲ್ಲೋಸ ಅಥವಾ ಪೌಲನನ್ನು ಹಿಂಬಾಲಿಸಬೇಕು?; (1 ಕೊರಿಂಥ 1:12) ಅಪೊಲ್ಲೋಸ ಮತ್ತು ಪೌಲ ಕೇವಲ ಮನುಷ್ಯರು ಮಾತ್ರವೇ ಆಗಿದ್ದಾರೆ. ಅವರು ಸೇವಕರಾಗಿದ್ದು ಕ್ರಿಸ್ತನು ಅವರ ಯಜಮಾನನಾಗಿದ್ದಾನೆ. ಪೌಲನು ಸಸಿಯನ್ನು ನೆಡುತ್ತಾನೆ (ಅ.ಕೃತ್ಯ 18:1,4), ಮತ್ತು ಅಪೊಲ್ಲೋಸನು ನೀರು ಹೊಯಿದನು (ಅ.ಕೃತ್ಯ 18:27). ಆದರೆ ಅದು ಕೇವಲ ತೋಟಗಾರರ ಕೆಲಸ ಮಾತ್ರವೇ ಆಗಿದೆ. ಕ್ರೈಸ್ತರಾದ ನಾವು ದೇವರ ಸಾಧನಗಳಷ್ಟೇ; ನಾವು ದೇವರ ವಾಕ್ಯವೆಂಬ ಸಸಿಯನ್ನು ನೆಟ್ಟು ನೀರನ್ನು ಹಾಕುವ "ತೋಟಗಾರರು" ಮಾತ್ರವೇ ಆಗಿದ್ದೇವೆ (ಮಾರ್ಕ 4:3,14). ಆದರೆ ಸಸಿಯನ್ನು ಬೆಳೆಯುವಂತೆ ನಿಜವಾದ ಕಾರ್ಯವನ್ನು ಮಾಡುವವನು ದೇವರೇ ಆಗಿದ್ದಾನೆ. ದೇವರು ಮಾತ್ರವೇ ಫಲವನ್ನು – ಅಂದರೆ, ನೂತನ ವಿಶ್ವಾಸಿಗಳನ್ನು – ಉಂಟುಮಾಡುವಂತೆ ನಡೆಸುವವನಾಗಿದ್ದಾನೆ. ಮಾನವನು ಏನೂ ಅಲ್ಲ; ಎಲ್ಲಾ ಬಲವೂ ದೇವರದೇ ಆಗಿದೆ. ಆದುದರಿಂದ, ಪೌಲನು ಈ ಮುಂಚೆ ಉಲ್ಲೇಖಿಸಿದಂತೆ: ಹೆಚ್ಚಳ ಪಡುವವನು ಕರ್ತನಲ್ಲಿಯೇ ಹೆಚ್ಚಳಪಡಲಿ (1 ಕೊರಿಂಥ 1:31).

ಪೌಲ, ಅಪೊಲ್ಲೋಸರು ಒಬ್ಬನೇ ಯಜಮಾನನಾದ ಕ್ರಿಸ್ತನ ಸೇವಕರು. ಅವರಿಗೆ ಒಬ್ಬನೇ ಯಜಮಾನನಿರುವದಾದರೆ, ಅವರು ಏಕೆ ಕೊರಿಂಥದಲ್ಲಿನ ಸಭೆಯಲ್ಲಿ ಬೇರೆ ಬೇರೆ ಪಕ್ಷಗಳನ್ನು ಹೊಂದಿದ್ದಾರೆ? ಒಬ್ಬ ಯಜಮಾನನಿಗೆ ಒಂದೇ ಪಕ್ಷದ ಅಗತ್ಯವಿರುತ್ತದೆ!

**8** ಪೌಲ ಮತ್ತು ಅಪೊಲ್ಲೋಸರು ಒಬ್ಬನೇ ಯಜಮಾನನನ್ನು ಹೊಂದಿದ್ದಾರೆ, ಆದರೆ ಯಜಮಾನನು ಅವರಿಗೆ ಎರಡು ವಿಭಿನ್ನವಾದ ಕೆಲಸಗಳನ್ನು ನೀಡಿರುತ್ತಾನೆ. ಅದೇ ಪ್ರಕಾರ ನಾವು ಸಹ ಒಬ್ಬನೇ ಯಜಮಾನನನ್ನು ಹೊಂದಿದ್ದು ಆಯಜಮಾನನಿಗಾಗಿ ಬೇರೆ ಬೇರೆ ಕೆಲಸಗಳನ್ನು ಮಾಡಬೇಕಾಗಿದೆ. (1 ಕೊರಿಂಥ 12:4-6 ನೋಡಿರಿ). ಮತ್ತು ನಮ್ಮಲ್ಲಿ ಪ್ರತಿಯೊಬ್ಬನು ಅವನವನ ಕಷ್ಟಕ್ಕೆ ತಕ್ಕ ಹಾಗೆ ಕೂಲಿಯನ್ನು ಪಡೆಯುವೆವು – ಅಂದರೆ, ನಾವು ಮಾಡಿರುವ ನಿರ್ದಿಷ್ಟವಾದ ಕೆಲಸಕ್ಕೆ ತಕ್ಕ ಪ್ರತಿಫಲವನ್ನು ಪಡೆಯುತ್ತೇವೆ. ನಾವು ಪ್ರಾಥಮಿಕವಾಗಿ ಕೆಲಸದ ಯಶಸ್ಸು ಅಥವಾ ವಿಫಲತೆಯ ಪ್ರಕಾರವಾಗಿಯಲ್ಲ, ಆದರೆ ನಮ್ಮ ಕಷ್ಟ, ಪ್ರಯತ್ನ ಹಾಗು ಪರಿಶ್ರಮಗಳಿಗೆ ಅನುಸಾರವಾಗಿ ಪ್ರತಿಫಲವನ್ನು ಪಡೆಯುತ್ತೇವೆಂಬದನ್ನು ಗಮನಿಸಿರಿ. ಯೇಸು ತಲಾಂತುಗಳ ವಿಷಯವಾಗಿ ಹೇಳಿದ ಸಾಮ್ಯದಲ್ಲಿ ಐದು ಹೆಚ್ಚು ತಲಾಂತುಗಳನ್ನು ಸಂಪಾದಿಸಿದವ್ಯಕ್ತಿಗೂ ಹಾಗು ಎರಡು ಹೆಚ್ಚು ತಲಾಂತುಗಳನ್ನು ಸಂಪಾಧಿಸಿಕೊಂಡ ವ್ಯಕ್ತಿಗೂ ಒಂಧೆ ಪ್ರತಿಫಲ ದೊರೆಯಿತು (ಮತ್ತಾಯ 25:20-23). ಕೆಲವು ವರಗಳನ್ನು ಹಾಗು ತಲಾಂತಗಳನ್ನು ಮಾತ್ರವೇ ಹೊಂದಿರುವ ಕ್ರೈಸ್ತನು ಅನೇಕ ವರಗಳು ಹಾಗು ತಲಾಂತಗಳನ್ನು ಹೊಂದಿಕೊಂಡಿರುವ ಕೈಸ್ತನಷ್ಟಯೇ ಪ್ರತಿಫಲವನ್ನು ಪಡೆದುಕೊಳ್ಳುವನು; ಅವರಿಬ್ಬರಿಗೂ ಪ್ರಾಥಮಿಕವಾಗಿ ಅವರ ಪ್ರಯತ್ನ ಹಾಗ ಪರಿಶ್ರಮಕ್ಕನುಗುಣವಾಗಿ ಪ್ರತಿಫಲ ನೀಡಲಾಗುವದು. ಲೂಕ 19:16-19ರಲ್ಲಿ ಕ್ರಿಸ್ತನು ನೀಡಿದ ದೃಷ್ಟಾಂತವು ಸ್ವಲ್ಪ ವ್ಯತ್ಯಾಸವಾಗಿರುತ್ತದೆ. ಆದರೆ ಅದರ ಬೋಧನೆಯು ಒಂದೇ ಆಗಿದೆ. ತಲಾಂತುಗಳ ಸಾಮ್ಯದ ಬಗ್ಗೆ ಲೂಕನ ಆವೃತ್ತಿಯ ಪ್ರಕಾರವಾಗಿ ಎಲ್ಲಾ ಆಳುಗಳಿಗೂ ಒಂದೇ ರೀತಿಯ ವರವು – ಅಂದರೆ, ಒಂದು ಮೊಹರಿ – ಕೊಡಲ್ಪಟ್ಟಿತು. ಆದರೆ ಪ್ರತಿಯೊಬ್ಬ ಆಳಿಗೂ ಬೇರೆ ಬೇರೆ ಪ್ರತಿಫಲ ದೊರಕಿತು; ಅಂದರೆ, ಒಬ್ಬ ಆಳು ಹತ್ತು ಗ್ರಾಮಗಳನ್ನು ಪಡೆದನು ಮತ್ತು ಇನ್ನೊಬ್ಬ ಆಳು ಐದು ಗ್ರಾಮಗಳನ್ನು ಮಾತ್ರವೇ ಪಡೆದುಕೊಂಡನು. ಈ ಆಳುಗಳ ಪ್ರಯತ್ನ ಹಾಗು ಪರಿಶ್ರಮ ಬೇರೆ ಬೇರೆಯಾಗಿದ್ದದರಿಂದ ಅವರು ಬೇರೆ ಬೇರೆ ಪ್ರತಿಫಲಗಳನ್ನು ಪಡೆದರು. ಬೇರೆ ಮಾತುಗಳಲ್ಲಿ ಹೇಳಬೇಕಾದರೆ, ಪ್ರತಿಯೊಬ್ಬನಿಗೂ ಅವನವನ ಕಷ್ಟಕ್ಕೆ ತಕ್ಕ ಹಾಗೆ ಪ್ರತಿಫಲವು ದೊರಕಿತು.

**9** ಪೌಲನು ತನ್ನನ್ನು ಹಾಗು ಅಪೊಲ್ಲೋಸನನ್ನು ದೇವರ ಜೊತೆ ಕೆಲಸದವರು ಎಂದು ಬಣ್ಣಿಸುತ್ತಾನೆ. ಮತ್ತು ಕೊರಿಂಥದ ಕ್ರೈಸ್ತರು ಸಭೆಯಾಗಿ ದೇವರ ಹೊಲ ಆಗಿದ್ದಾರೆ. ಅವರಲ್ಲಿ ಪ್ರತಿಯೊಬ್ಬರೂ ಆ ಹೊಲದಲ್ಲಿ ನೆಡಲಾಗಿರುವ ಸಸಿಗಳಾಗಿದ್ದಾರೆ (ಮಾರ್ಕ 4:20) ಸಭೆಯು (ಅಂದರೆ, ವಿಶ್ವಾಸಿಗಳ ದೇಹ) ಕಟ್ಟಡ – ದೇವರ ಕಟ್ಟಡ – ಎಂದು ಸಹ ಬಣ್ಣಿಸಲ್ಪಟ್ಟಿದೆ (ಎಫೆಸ 2:22; 1 ಪೇತ್ರ 2:5 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

## ದೇವರ ಕಟ್ಟಡ (3:10-13)

**10** ಪೌಲನು ಹೇಳುವದೇನೆಂದರೆ: ನಾನು ಪ್ರವೀಣಶಿಲ್ಪಿಯಂತೆ ಅಸ್ತಿವಾರ ಹಾಕಿದೆನು. ಪೌಲನು ಇಲ್ಲಿ ತನ್ನ ಬಗ್ಗೆ ಹೆಚ್ಚಳ ಪಡುತ್ತಿದ್ದಾನೋ? ಇಲ್ಲ, ಆತನು ತಾನು ದೇವರು ನಿನಗೆ ಕೃಫೆಯಿಂದ ಒಪ್ಪಿಸಿದ ಎಲ್ಲವನ್ನು ಮಾಡಿದ್ದೇನೆಂದು ಹೇಳುತ್ತಾನೆ (ರೋಮ 1:5; 1 ಕೊರಿಂಥ 15:10; ಎಫೆಸ 3:7 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ದೇವರು ಪೌಲನಿಗೆ

ಆತನು ಒಬ್ಬ ಪ್ರವೀಣ ಶಿಲ್ಪಿಯಾಗಿರುವದಕ್ಕೆ ಕೃಪೆ ಹಾಗು ಕುಶಲತೆಯನ್ನು ಅನುಗ್ರಹಿಸಿದನು. ಪೌಲನು ಅಸ್ತಿವಾರ ಹಾಕಿದನು – ಮತ್ತು ಆ ಅಸ್ತಿವಾರವು ಸ್ವತಃ ಕ್ರಿಸ್ತನೇ (ವಚನ 11). ಈ ಕಾರಣದಿಂದಲೇ ಪೌಲನು ಒಬ್ಬ ಪ್ರವೀಣ ಶಿಲ್ಪಿಯಾಗಿದ್ದಾನೆ; ಆತನು ಉತ್ತಮ ಅಸ್ತಿವಾರನ್ನು ಆಯ್ಕೆ ಮಾಡಿದನು! ಪೌಲನು ಕೊರಿಂಥಕ್ಕೆ ಹೋದ ಪ್ರಥಮ ಕ್ರೈಸ್ತನು. ಆತನು ಅಲ್ಲಿ ಸಭೆಯನ್ನು ಸ್ಥಾಪಿಸಿದನು; ಅಂದರೆ, ಆತನು ಅಸ್ತಿವಾರ ಹಾಕಿದನು. ಈಗ ಸ್ವತಃ ಕೊರಿಂಥದವರೇ ತಮ್ಮ ಸಭೆಯನ್ನು ಕಟ್ಟುವದರಲ್ಲಿ ಸಹಾಯ ಮಾಡಲಾರಂಭಿಸಿದ್ದರು; ಅಂದರೆ, ಅವರು ಪೌಲನ ಅಸ್ತಿವಾರದ ಮೇಲೆ ಕಟ್ಟಲಾರಂಭಿಸಿದ್ದರು. ಆದುದರಿಂದ, ಅವರು ಉತ್ತಮವಾದ ಅಸ್ತಿವಾರದಂತೆಯೇ ಉತ್ತಮವಾಗಿ ಕಟ್ಟುವದಕ್ಕೆ ಜಾಗ್ರತರಾಗಿರಬೇಕೆಂದು ಪೌಲನು ಅವರನ್ನು ಪ್ರಬೋಧಿಸುತ್ತಾನೆ. ಅವರು ಅರಮನೆಗಾಗಿ ರೂಪಿಸಲ್ಪಟ್ಟಿರುವ ಅಸ್ತಿವಾರದ ಮೇಲೆ ಗುಡಿಸಲನ್ನು ಕಟ್ಟದಿರಲಿ! ಆದರೆ ಪ್ರತಿಯೊಬ್ಬನು ತಾನು ಅದರ ಮೇಲೆ (ಅಸ್ತಿವಾರದ ಮೇಲೆ) ಎಂಥದನ್ನು ಕಟ್ಟುತ್ತಾನೋ ಎಚ್ಚರಿಕೆಯಾಗಿರಬೇಕು. ಆ ಕೊರಿಂಥದವರು ವಾಸ್ತವದಲ್ಲಿ ಗುಡಿಸಲನ್ನು ಕಟ್ಟುತ್ತಿದ್ದರು!

**11** ಎಲ್ಲಾ ಕೆಲಸದ ಅಸ್ತಿವಾರವು ಯೇಸು ಕ್ರಿಸ್ತನಾಗಿರಬೇಕು (ಎಫೆಸ 2:19-22 ಮತ್ತು ವ್ಯಾಖ್ಯಾನ ನೋಡಿರಿ). ಸಭೆಯ ತಳದ ಅಸ್ತಿವಾರವು ಯೇಸು ಕ್ರಿಸ್ತನೇ ಆಗಿರುವದಾದರೆ ಪಂಗಡಗಳು ಹಾಗು ಭೇದಗಳು ಉದ್ಭವವಾಗುವದಿಲ್ಲ.

**12-13** ನಾವು ಬೇರೆ ಬೇರೆ ಸಾಮಗ್ರಿಗಳನ್ನು ಉಪಯೋಗಿಸಿ ದೇವರ ಸಭೆಯನ್ನು ಕಟ್ಟಬಹುದು, ಯಾಕೆಂದರೆ ನಮ್ಮೊಬ್ಬೊಬ್ಬರಿಗೂ ಬೇರೆ ಬೇರೆ ವರಗಳು ಹಾಗು ತಲಾಂತುಗಳು ಕೊಡಲ್ಪಟ್ಟಿವೆ. ಖಂಡಿತವಾಗಿಯೂ, ಅಗ್ನಿ ಹತ್ತಿಕೊಳ್ಳುವ ಸಾಮಗ್ರಿಗಳನ್ನು ಉಪಯೋಗಿಸದಿರುವದು ಉತ್ತಮವಾದದ್ದು. ಆದರೆ ಯಾವ ಸಾಮಗ್ರಿಗಳನ್ನು ಉಪಯೋಗಿಸಿದರೂ ನಾವು ಎಚ್ಚರಿಕೆಯಾಗಿದ್ದು ಪರಿಶ್ರಮ ವಹಿಸಿ ಕಟ್ಟಬೇಕು.

ಪೌಲನು ಇಲ್ಲಿ ಸೂಚಿಸುವ ದಿನವು ನ್ಯಾಯತೀರ್ಪಿನ ದಿನವಾಗಿದ್ದು, ಅದು ಲೋಕಾಂತ್ಯದಲ್ಲಿ ಸಂಭವಿಸುತ್ತದೆ. ಆದಿನದಲ್ಲಿ ನಾವು ಮಾಡಿರುವ ಎಲ್ಲಾ ಕೆಲಸವನ್ನು ದೇವರು ಪರೀಕ್ಷಿಸುತ್ತಾನೆ. ಮತ್ತು ಆತನು ಅದನ್ನು ಬೆಂಕಿಯಿಂದ ಶೋಧಿಸುವನು (ವಚನ 13). ನಾವು ಒಂದು ಸಭೆಯನ್ನು ಕಟ್ಟಿರುವದಾದರೆ ಅದು ನಂಬಿಗಸ್ಥವಾಗಿ ಉಳಿಯುವದೋ ಎಂದು ತಿಳಿದುಕೊಳ್ಳುವದಕ್ಕೆ ದೇವರು ಆ ಸಭೆಯ ಮೇಲೆ ಬೆಂಕಿ ಅಥವಾ ಹಿಂಸೆ ಬರುವಂತೆ ಅನುಮತಿಸುವನು (ಯೋಬ 23:10).

**14-15** ಒಂದು ವೇಳೆ ನಾವು ಮಾಡಿದ ಕೆಲಸವು ಯಾವದೇ ರೀತಿಯಲ್ಲಿ ದೇವರಿಗೆ ಮೆಚ್ಚಿಕೆಯಾಗಿಲ್ಲವಾದರೆ ನಮ್ಮ ಕೆಲಸವು ಸುಟ್ಟು ಹೋಗುವದು, ಮತ್ತು ಪರಲೋಕದಲ್ಲಿ ನಮ್ಮ ಪ್ರತಿಫಲವು ಕಡಿಮೆಯಾಗಿರುವದು – ಅಂದರೆ, ನಮಗೆ ಸಂಬಳವು ನಷ್ಟವಾಗುವದು – (ವಚನ 15). ಆದರೆ, ನಾವು ನಮ್ಮ ರಕ್ಷಣೆಯನ್ನು ಕಳೆದುಕೊಳ್ಳುವದಿಲ್ಲ [7]. ಉದಾಹರಣೆಗೆ, ಶಿಲ್ಪಿಯು ಮನೆಯೊಂದನ್ನು ಕಳಪೆಯಾಗಿ ಕಟ್ಟುವದಾದರೆ ಆ ಮನೆಯು ಅನಂತರ ಬಿದ್ದು ಹೋಗುವದು; ಮತ್ತು, ಶಿಲ್ಪಿಯು ತನ್ನ ಸಂಬಳವನ್ನು ಪಡೆಯುವದಕ್ಕೆ ಬದಲಾಗಿ ಆಗಿರುವ ನಷ್ಟಕ್ಕೋಸ್ಕರ ಹಣಸಂದಾಯ ಮಾಡಬೇಕಾಗುವದು. ಆದರೆ ಸ್ವತಃ ಶಿಲ್ಪಿಗೆ ಯಾವ ಹಾನಿಯಾಗದು; ಆತನ ಹಣದ ಚೀಲಕ್ಕೆ ಮಾತ್ರ ಹಾನಿಯಾಗುವದು. ಅದೇ ಪ್ರಕಾರವಾಗಿ ನಮಗೆ ಪರಲೋಕದ ಪ್ರತಿಫಲದಲ್ಲಿ ನಷ್ಟವಾಗಬಹುದು, ಆದರೆ ರಕ್ಷಣೆಯನ್ನು ಕಳೆದುಕೊಳ್ಳುವದಿಲ್ಲ.

ದೇವರು ನಮ್ಮ ಕೆಲಸಕ್ಕಾಗಿ ಯಾವರೀತಿಯ ಪರಲೋಕದ ಪ್ರತಿಫಲವನ್ನು ಕೊಡುವನೆಂಬದು ನಮಗೆ ತಿಳಿಯದು. ಆದರೆ, ನಮ್ಮ ಕೆಲಸವು ಉತ್ತಮ ವಾಗಿರುವದಾದರೆ ದೇವರು ಯಾವದೇ ಒಂದು ರೀತಿಯಲ್ಲಿ ವಿಶೇಷವಾಗಿ ನಮಗೆ ಬಹುಮಾನವನ್ನು ಕೊಡುವನು (ಮತ್ತಾಯ 7:24-27; 1 ಕೊರಿಂಥ 4:5; 2 ಯೋಹಾನ 8 ನೋಡಿರಿ).

**16** ಪ್ರತಿಯೊಬ್ಬ ಕ್ರೈಸ್ತನೂ ದೇವರ ಆಲಯ ಅಥವಾ ಸಭೆಯಾಗಿ ಕಟ್ಟಲ್ಪಡುತ್ತಿದ್ದಾನೆ. ವಿಶ್ವಾಸಿಗಳಾದ ನಾವು ಈ ಆಲಯದ ಕಲ್ಲುಗಳಾಗಿದ್ದೇವೆ (1 ಪೇತ್ರ 2:5). ದೇವರ ಆತ್ಮನು (ಪವಿತ್ರಾತ್ಮನು) ನಮ್ಮಲ್ಲಿ, ನಮ್ಮ ಆಲಯದಲ್ಲಿ ವಾಸಮಾಡುತ್ತಾನೆ (1 ಕೊರಿಂಥ 6:19; ಎಫೆಸ 2:22 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**17** ದೇವರ ಆಲಯ ಅಥವಾ ಸಭೆಯು ಹೇಗೆ ನಾಶವಾಗಲು ಸಾಧ್ಯ? ಸದಸ್ಯರಾದ ನಾವು – ಕಲ್ಲುಗಳು – ಪ್ರಾಪಂಚಿಕರೂ, ಪ್ರಾಕೃತರೂ ಆಗುವದಾದರೆ ನಮ್ಮ ಆಲಯವು ನಾಶವಾಗುವದು[8]. ನಮ್ಮ ಆಲಯವು (ಸಭೆಯು) ಅದರ ಸದಸ್ಯರ ಪಾಪಗಳು, ಪ್ರಾಪಂಚಿಕತೆ, ಮೂಲಕ ನಾಶವಾಗಬಲ್ಲದು ಅದು ಸುಳ್ಳುಬೋಧನೆ, ಭೇದಗಳು, ಜಗಳಗಳು ಹಾಗು ಸದಸ್ಯರು ಒಬ್ಬರ ವಿರುದ್ಧವಾಗಿ ಒಬ್ಬರು ಮಾಡುವ ನಿಂದೆಗಳ ಮೂಲಕ ಕೆಡಿಸಲ್ಪಡುತ್ತದೆ. ಆದುದರಿಂದ, ನಾವು ಎಚ್ಚರಿಕೆಯಾಗಿರೋಣ! ದೇವರ ಸಭೆಯನ್ನು ಕೆಡಿಸುವವನು ಯಾರೇ ಆಗಿದ್ದರೂ ದೇವರು ಅವನ ಸಹ ಕೆಡಿಸುವನು.

**18** ಕೊರಿಂಥದವರು ತಮ್ಮನ್ನು ತಾವೇ ಜ್ಞಾನಿಯಾಗಿದ್ದೇವೆಂದು ಪರಿಗಣಿಸಿಕೊಂಡಿದ್ದರು. ಬಹುಶಃ ಅವರು ಲೋಕಸಂಬಂಧವಾಗಿ "ಜ್ಞಾನಿಗಳಾಗಿದ್ದರು", ಆದರೆ ಅಂತಹ ಜ್ಞಾನವು ದೇವರ ದೃಷ್ಟಿಯಲ್ಲಿ ಹುಚ್ಚುತನವಾಗಿದೆ (ವಚನ 19). ದೇವರ ದೃಷ್ಟಿಯಲ್ಲಿ ಹುಚ್ಚರಾಗಿರುವದಕ್ಕಿಂತಲೂ ಲೋಕದ ದೃಷ್ಟಿಯಲ್ಲಿ ಹುಚ್ಚರಾಗಿರುವದು ಉತ್ತಮವಾದದ್ದು! (1 ಕೊರಿಂಥ 1:27 ನೋಡಿರಿ).

ನಮ್ಮನ್ನು ನಾವೇ ಜ್ಞಾನಿಗಳೆಂದು ಪರಿಗಣಿಸಿಕೊಳ್ಳದಿರೋಣ. ಬದಲಾಗಿ, ನಾವು ದೀನ ರಾಗಿರೋಣ. ನಮ್ಮ ಸ್ವಂತ "ಜ್ಞಾನದ" ಮೇಲೆ ಆಧಾರವಾಗಿರದೆ ದೇವರಿಂದ ಕಲಿತುಕೊಳ್ಳಲು ತವಕ ಪಡೋಣ. ಕೊರಿಂಥದವರು ಇದನ್ನು ಮಾಡಿದ್ದಾಗಿದ್ದರೆ ಅಂತಹ ಪಂಗಡಗಳು ಅವರ ಸಭೆಯಲ್ಲಿ ಉದ್ಭವಿಸುತ್ತಿರಲಿಲ್ಲ (ಯೆಶಾಯ 5:21; 1 ಕೊರಿಂಥ 8:2; ಗಲಾತ್ಯ 6:3 ನೋಡಿರಿ).

**19-20** ಪೌಲನು ಇಲ್ಲಿ ಯೋಬ 5:13 ಹಾಗು ಕೀರ್ತನೆಗಳು 94:11 ರಿಂದ ಉಲ್ಲೇಖಿಸುತ್ತಾನೆ (1 ಕೊರಿಂಥ 1:19-20, 25 ನೋಡಿರಿ).

**21** ಆದುದರಿಂದ, ಮನುಷ್ಯ ಮಾತ್ರದವರ ವಿಷಯದಲ್ಲಿ, – ಪೌಲ, ಅಪೊಲ್ಲೋಸರಂತಹ ಮನುಷ್ಯರಲ್ಲಿ, – ಯಾರೂ ಹಿಗ್ಗದಿರಲಿ ಎಂದು ಪೌಲನು ಹೇಳುತ್ತಾನೆ. ಕೊರಿಂಥದವರು ಪೌಲ ಮತ್ತು ಅಪೊಲ್ಲೋಸರಂತಹ ಮನುಷ್ಯರ ಹಿಂಬಾಲಿಸುವದನ್ನು ನಿಲ್ಲಿಸಲಿ. ಬದಲಾಗಿ, ಅವರು ಕ್ರಿಸ್ತನನ್ನು ಮಾತ್ರವೇ ಹಿಂಬಾಲಿಸಲಿ (1 ಕೊರಿಂಥ 4:6 ನೋಡಿರಿ). ಅವರು ಹೆಚ್ಚಳ ಪಡುವದಿದ್ದರೆ ಕ್ರಿಸ್ತನಲ್ಲಿ ಹೆಚ್ಚಳ ಪಡಲಿ (1 ಕೊರಿಂಥ 1:29;31). ದೇವರು ಅವರಿಗೆ ಕ್ರಿಸ್ತನಲ್ಲಿ ಸಮಸ್ತವನ್ನು ಅನುಗ್ರಹಿಸಿದ್ದಾನೆ (ರೋಮ 8:32; 1ಕೊರಿಂಥ 1:30; ಎಫೆಸ 1:3 ನೋಡಿರಿ). ಅವರು ಕ್ರಿಸ್ತನಲ್ಲಿರುವ ಕಾರಣದಿಂದಲೇ ಸಮಸ್ತವನ್ನು ಹೊಂದಿಕೊಂಡವರಾಗಿದ್ದಾರಿ. ಹಾಗಾದರೆ ಅವರ ಹೆಚ್ಚಿಸಿಕೊಳ್ಳುವಿಕೆ ಎಲ್ಲಿದೆ? ಅದಕ್ಕೆ ಬದಲಾಗಿ ಅವರು ತಮಗೆ ದೇವರು ನೀಡಿದ ವರ್ಣಿಸಲಸಾಧ್ಯವಾದ ವರಕ್ಕಾಗಿ ಕರ್ತನಾದ ಯೇಸು ಕ್ರಿಸ್ತನಿಗಾಗಿ – ದೇವರಿಗೆ ಸ್ತೋತ್ರ ಸಲ್ಲಿಸಲಿ.

**22** ದೇವರು ಕೊರಿಂಥದವರಿಗೆ ಅಪೊಸ್ತಲರನ್ನು – ಪೌಲ, ಅಪೊಲ್ಲೋಸ ಹಾಗು ಕೇಫ (ಪೇತ್ರ) – ಕೊಟ್ಟನು. ಆದರೆ ಕೊರಿಂಥದವರು ಒಬ್ಬನನ್ನು ಸ್ವೀಕರಿಸಿಕೊಂಡು ಮತ್ತೊಬ್ಬನನ್ನು ತಿರಸ್ಕರಿಸಿದ್ದರು. ಆದರೂ, ಅವರೆಲ್ಲರೂ ಅಪೊಸ್ತಲರಾಗಿದ್ದರು; ಅವರೆಲ್ಲರೂ ದೇವರ ವರಗಳಾಗಿದ್ದರು. ಅವರು ದೇವರ ವರವೊಂದನ್ನು ಏಕೆ ತಿರಸ್ಕರಿಸಿರಬೇಕಿತ್ತು? ಕೊರಿಂಥದವರ "ಜ್ಞಾನವು " ನಿಜವಾಗಿಯೂ ಹುಚ್ಚುತನವೇ ಆಗಿತ್ತು!.

ಸಮಸ್ತವೂ ನಿಮ್ಮದು. ಇಡೀ ಲೋಕವು ನಿಮ್ಮದು! ಕ್ರಿಸ್ತನಲ್ಲಿಲ್ಲದ ಮನುಷ್ಯನು ಲೋಕಕ್ಕೆ ಸೇರಿದ್ದಾನೆ. ಆದರೆ ಕ್ರಿಸ್ತನಲ್ಲಿರುವ ಮನುಷ್ಯನಿಗಾದರೋ ಇಡೀ ಲೋಕವೇ ಅವನಿಗೆ ಸೇರಿದ್ದುಗ ಕ್ರಿಸ್ತನು ಎಲ್ಲಾ ಭೂಲೋಕದಲ್ಲಿಯೂ ಸಂಪೂರ್ಣ ಅಧಿಕಾರವನ್ನು ಹೊಂದಿದ್ದು ಆ ಅಧಿಕಾರವನ್ನು ಆತನು ನಮಗೆ ಕೊಟ್ಟಿರುತ್ತಾನೆ (ಮತ್ತಾಯ 28:18 ಮೋಡಿರಿ). ಆದರೆ ವಿಶ್ವಾಸಿಗಳಾದ ನಾವು ಭೂಮಿಗೆ ಮಾತ್ರವೇ ಬಾಧ್ಯರಾಗುವದಿಲ್ಲ; ಪರಲೋಕರಾಜ್ಯಕ್ಕೂ ಬಾಧ್ಯರಾಗುವೆವು ! (ಮತ್ತಾಯ 5:3,10).

**23** ಸಮಸ್ತವೂ ನಮ್ಮದು. ಒಂದು ಸಂಗತಿಯನ್ನು ಮಾತ್ರ – ನಮ್ಮನ್ನು – ಹೊರತು ಪಡಿಸಿ! ಸಮಸ್ತವೂ ನಮ್ಮದು – ಆದರೆ ನಾವು ನಮ್ಮ ಸ್ವಂತ ಸ್ವತ್ತಲ್ಲ. ನಾವು ಕ್ರಿಸ್ತನವರು. ನಾವು ಆತನ ಸೇವಕರು. ಆತನು ನಮ್ಮನ್ನು ಕೊಂಡುಕೊಂಡಿದ್ದಾನೆ. ಆತನು ನಮ್ಮನ್ನು ಕ್ರಯಕ್ಕೆ ಕೊಂಡುಕೊಂಡಿದ್ದಾನೆ, ಮತ್ತು ಆ ಕ್ರಯವು ಆತನ ಸ್ವಂತ ರಕ್ತವೇ (1 ಕೊರಿಂಥ 6:19-20 ಮತ್ತು ವ್ಯಾಖ್ಯಾನ ನೋಡಿರಿ). ಕ್ರಿಸ್ತನು ನಮ್ಮಲ್ಲಿದ್ದಾನೆ ಮತ್ತು ನಾವು ಕ್ರಿಸ್ತನಲ್ಲಿದ್ದೇವಾದ್ದರಿಂದ ಸಮಸ್ತವೂ ನಮ್ಮದು ( ಯೋಹಾನ 15:4-5). ನಾವು ಕ್ರಿಸ್ತನಲ್ಲಿ ನೆಲೆಗೊಳ್ಳುವದನ್ನು ನಿಲ್ಲಿಸುವದಾದರೆ ನಾವು ನಮಗೆ ಕೊಡಲ್ಪಟ್ಟಿರುವ ಸಮಸ್ತವನ್ನೂ ಕಳೆದುಕೊಳ್ಳುತ್ತೇವೆ (ಯೋಹಾನ 15:6).

ಕ್ರಿಸ್ತನು ದೇವರವನು. ಕ್ರಿಸ್ತನು ನಮ್ಮಲ್ಲಿರುವ ಪ್ರಕಾರವೇ ದೇವರು ಕ್ರಿಸ್ತನಲ್ಲಿರುತ್ತಾನೆ (ಯೋಹಾನ 17:22-23 ನೋಡಿರಿ). ಆದರೆ ಕ್ರಿಸ್ತನು ದೇವರವನು ಮಾತ್ರವಲ್ಲ; ಆತನು ದೇವರಾಗಿದ್ದಾನೆ. "ನಾನೂ ತಂದೆಯೂ ಒಂದೇ ಆಗಿದ್ದೇವೆ" (ಯೋಹಾನ 10:30).

---

# ಅಧ್ಯಾಯ - 4

## ಕ್ರಿಸ್ತನ ಅಪೊಸ್ತಲರು (4:1-13)

**1** ಪೌಲನು ಬರೆಯುವದೇನೆಂದರೆ ಜವರು ನಮ್ಮನ್ನು (ಪೌಲ, ಅಪೊಲ್ಲೋಸ ಮತ್ತು ಇತರ ಅಪೊಸ್ತಲರು) ಕ್ರಿಸ್ತನು ಕೈಕೆಳಗಿನವರೆಂತ ಎಣಿಸಬೇಕು ಎಂಬದೇ. ಅಪೊಸ್ತಲರು ಸಭೆಯಲ್ಲಿನ ಸ್ವಾತಂತ್ರ ಗುಂಪು ಗಳ ನಾಯಕರಲ್ಲ ಆದರೆ ಎಲ್ಲರೂ ಸಮಾನವಾಗಿ ಒಬ್ಬನೇ ಯಜಮಾನನಾದ ಕ್ರಿಸ್ತನ ಸೇವಕರೆಂಬುದು ಪೌಲನು ತಿಳಿಸಲಿಚ್ಚಿಸುವ ವಿಷಯವಾಗಿದೆ.

ಕ್ರೈಸ್ತರೆಲ್ಲರೂ ಕ್ರಿಸ್ತನ ಕೈಕೆಳಗಿನವರಾಗಿದ್ದಾರೆ. ಒಂದು ವೇಳೆ ನಾವೆಲ್ಲರೂ ಕ್ರಿಸ್ತನ ಕೈಕೆಳಗಿನವರಂತೆ ವರ್ತಿಸುವದಾದರೆ ನಮ್ಮ ಸಭೆಗಳಲ್ಲಿ ಯಾವ ಪಂಗಡಗಳು ಉಟಾಗುವದಿಲ್ಲ (ಮತ್ತಾಯ 23:8, 10 ಮೋಡಿರಿ).

ಅಪೊಸ್ತಲರು ದೇವರ ಸತ್ಯಾರ್ಥಗಳ ವಿಷಯದಲ್ಲಿ ಮನೆವಾರ್ತೆಯವರಾಗಿದ್ದಾರೆ. ಈ "ಸತ್ಯಾರ್ಥಗಳು" ಒಟ್ಟಾಗಿ ಸೇರಿದಾಗ ಕ್ರಿಸ್ತನ ಸುವಾರ್ತೆ, ರಕ್ಷಣೆಯ ಮಾರ್ಗ ರೂಪಗೊಳ್ಳುತ್ತದೆ. ಈ ಸತ್ಯಾರ್ಥಗಳು ಒಮ್ಮೆ ಮರೆಯಾಗಿದ್ದವು ಆದರೆ ಈಗ ಪ್ರಕಟಗೊಂಡಿರುತ್ತವೆ (ರೋಮ 1:17; 1 ಕೊರಿಂಥ 2:7). ಮತ್ತು ಈ ಸತ್ಯಾರ್ಥಗಳು ಈಗ ಅಪೊಸ್ತಲರ ವಶಕ್ಕೆ ಕೊಡಲ್ಪಟ್ಟಿರುತ್ತವೆ; ಅಪೊಸ್ತಲರು ಈ ಸಂಗತಿಗಳ ವಿಷಯದಲ್ಲಿ "ಮನೆವಾರ್ತೆಯವರಾಗಿದ್ದಾರೆ."

**2** ಯಾರ ವಶಕ್ಕೆ ಒಂದು ಸಂಗತಿಯನ್ನು ನೀಡಲಾಗಿರುತ್ತದೋ ಅವರು ಮನೆವಾರ್ತೆಯವರಾಗಿದ್ದಾರೆ, ಮತ್ತು ಯಾವದೇ ವ್ಯಕ್ತಿಯು ತನ್ನ ಜವಾಬ್ದಾರಿಯನ್ನು ಹೊಂದಿರುವದಾದರೆ ಅಂತಹ ವ್ಯಕ್ತಿಯು ತನ್ನ ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ನಂಬಿಗಸ್ಥನಾಗಿರಬೇಕು. ದೇವರು ಪೌಲನ ವಶಕ್ಕೆ ಈ ಸತ್ಯಾರ್ಥಗಳನ್ನು (ಸುವಾರ್ತೆ) ನೀಡಿದ್ದನಾದ್ದರಿಂದ

ದೇವರ ಆಲಯವು (1 ಕೊರಿಂಥ 3:16) – ಅಂದರೆ, ಕ್ರಿಸ್ತನ ಸಭೆಯು – ಕಟ್ಟಲ್ಪಡುವಂತಾಗಲು ಪೌಲನು ಈ ಸಂಗತಿಗಳನ್ನು ನಂಬಿಗಸ್ಥನಾಗಿ ಬೋಧಿಸಬೇಕು. ಪೌಲನು ಸಭೆಯನ್ನು ಕಟ್ಟುವದಕ್ಕೆ ಕರೆಯಲ್ಪಟ್ಟಿದ್ದಾನೆ ಹೊರತು ತನ್ನ ಸ್ವಂತ ಪಕ್ಷ ಅಥವಾ ಪಂಗಡವನ್ನಲ್ಲ.

3 ಒಬ್ಬ ಅಪೊಸ್ತಲನಾಗಿ ತನ್ನ ಕೆಲಸದಲ್ಲಿ ಪೌಲನು ಮನುಷ್ಯರ ಹೊಗಳಿಕೆಯನ್ನಲ್ಲ, ಆದರೆ ದೇವರ ಹೊಗಳಿಕೆಯನ್ನು ಮಾತ್ರವೇ ಎದುರುನೋಡುವವನಾಗಿದ್ದಾನೆ (ಯೋಹಾನ 5:41, 44, ಗಲಾತ್ಯ1:10 ನೋಡಿರಿ). ಅದೇ ಪ್ರಕಾರವಾಗಿ ನಾವು ಸಹ ಮನುಷ್ಯರಲ್ಲಿ ಒಳ್ಳೇ ಹೆಸರನ್ನು ಪಡೆಯಲು ತವಕ ಪಡಬಾರದು. ಖಂಡಿತವಾಗಿಯೂ, ನಾವು ಕೆಟ್ಟ ಹೆಸರನ್ನಾಗಲಿ ಸಹ ಪಡೆಯಲು ತವಕಪಡಬಾರದು! ಸಾಧ್ಯವಾದಷ್ಟು ಮಟ್ಟಿಗೆ ನಾವು ನಮ್ಮ ಹೆಸರಿಗೆ ಕಳಂಕ ಬರುವಂತೆ ಬಿಡಬಾರದು, ಯಾಕೆಂದರೆ ಇದು ಕ್ರಿಸ್ತನ ಹೆಸರಿಗೆ ಅವಮಾನವನ್ನು ತರುತ್ತದೆ. ಆದರೆ, ನಾವು ದೇವರ ಚಿತ್ತವನ್ನು ಮಾಡುವವರಾಗಿರುವಾಗ ಇತರ ಜನರಿಂದ ದೋಷಿಯೆಂದು ನಿರ್ಣಯಿಸಲ್ಪಡುವದಾದರೆ – ಅಂದರೆ. ಮನುಷ್ಯರು ಸೇವಿಸುವ ನ್ಯಾಯಸಭೆಯಿಂದ – ನಾವು ಅದರ ಬಗ್ಗೆ ಚಿಂತಿಸದಿರೋಣ ಎಂದು ಪೌಲನು ಹೇಳುತ್ತಾನೆ. ಮನುಷ್ಯರು ಸಾಮಾನ್ಯವಾಗಿ ಇತರರನ್ನು ನಿಷ್ಪಕ್ಷವಾಗಿ ತೀರ್ಪುಮಾಡುವದಿಲ್ಲ, ಯಾಕೆಂದರೆ, ಅವರು ಯಾವುದರ ಕುರಿತು ತೀರ್ಪು ಮಾಡುತ್ತಿದ್ದಾರೆಂಬ ಪೂರ್ಣ ತಿಳುವಳಿಕೆಯನ್ನು ಹೊಂದಿರುವದಿಲ್ಲ. ಆದರೆ ದೇವರು ಯಾವಾಗಲೂ ಪಕ್ಷಪಾತವಿಲ್ಲದೆ ತೀರ್ಪು ಮಾಡುವನು. ಆದುದರಿಂದ, ಪೌಲನು ದೇವರ ನ್ಯಾಯವಿಚಾರಣೆಯ ಬಗ್ಗೆ ಬಹಳಷ್ಟು ಚಿಂತನೆಯುಳ್ಳವನಾಗಿರುತ್ತಾನೆ, ಆದರೆ ಮನುಷ್ಯರಿಂದ ನ್ಯಾಯವಿಚಾರಣೆಯಾಗುವದು ಆತನಿಗೆ ಅತ್ಯಲ್ಪಕಾರ್ಯವಾಗಿದೆ. ನಾನೂ ನನ್ನನ್ನು ವಿಚಾರಿಸಿಕೊಳ್ಳುವದಿಲ್ಲ ಎಂದು ಪೌಲನು ಹೇಳುತ್ತಾನೆ. ಅಂದರೆ, ಆತನು ತನ್ನ ಕುರಿತು ತಾನು ಮಾಡಿಕೊಳ್ಳುವ ವಿಚಾರಣೆಯ ಬಗ್ಗೆ ಚಿಂತೆಮಾಡುವದಿಲ್ಲ. ತಾನು ಮಾಡಿಕೊಳ್ಳುವ ವಿಚಾರಣೆಯ ಬಗ್ಗೆ ಚಿಂತೆ ಮಾಡುವದಿಲ್ಲ.

ಒಬ್ಬನು ತನ್ನನ್ನು ಪರೀಕ್ಷಿಸಿಕೊಳ್ಳುವದು ಉತ್ತಮವಾದದ್ದು, ಆದರೆ ತನಗೆ ತಾನು ತೀರ್ಪು ಮಾಡಿಳ್ಳುವದು ನಿಷ್ಪ್ರಯೋಜನಕರವಾದದ್ದು. ಅದಕ್ಕೆ ಕಾರಣವೇನೆಂದರೆ, ನಾವು ನಮ್ಮನ್ನು ನಿಖರವಾಗಿ ತೀರ್ಪುಮಾಡಿಕೊಳ್ಳಲಾಗುವದೇ ಇಲ್ಲವಷ್ಟೆ. ಬಹಳಷ್ಟು ವೇಳೆಗಳಲ್ಲಿ ನಾವು ವಾಸ್ತವವಾಗಿ ಅಪರಾಧಿಗಳಾಗಿದ್ದರೂ ನಮ್ಮನ್ನು ನಿರಪರಾಧಿಗಳೆಂದು ತೀರ್ಪುಮಾಡಿಕೊಳ್ಳುತ್ತೇವೆ (1 ಕೊರಿಂಥ 11:28, 31 ಮತ್ತು ವ್ಯಾಖ್ಯಾನ ನೋಡಿರಿ).

4 ಪೌಲನು ಇಲ್ಲಿ ಹೇಳುವದೇನೆಂದರೆಃ ನನ್ನಲ್ಲಿ ದೋಷವಿದೆಯೆಂದು ನನ್ನ ಬುದ್ಧಿಗೆ ತೋರುವದಿಲ್ಲ ಎಂಬದೇ ಅಂದರೆ, ಆತನ ಮನುಸ್ಸಾಕ್ಷಿಯು ದೋಷವಿಲ್ಲದ್ದಾಗಿದೆ. ಆತನು ಸುವಾರ್ತೆಯ ವಿಷಯದಲ್ಲಿ ನಂಬಿಗಸ್ಥ "ಮನೆವಾರ್ತೆಯವನಾಗಿದ್ದಾನೆ", ಆತನು ನಂಬಿಗಸ್ಥನಾಗಿ ಕ್ರಿಸ್ತನ ಸೇವೆ ಮಾಡಿದ್ದಾನೆ (2 ಕೊರಿಂಥ 1:12). ಆದರೆ, ಪೌಲನ ಮನಸ್ಸಾಕ್ಷಿಯು ದೋಷವಿಲ್ಲದ್ದಾದಾಗ್ಯು ಅದು ಅವನನ್ನು ನಿರಪರಾಧಿಯನ್ನಾಗಿ ಮಾಡುವದಿಲ್ಲ. ಹಲವಾರು ವೇಳೆಗಳಲ್ಲಿ, ನಮ್ಮ ಸ್ವಂತ ಪಾಪಗಳು ನಮಗೆ ಕಾಣಿಸುವದಿಲ್ಲ ಅಥವಾ ನಾವು ಅವುಗಳನ್ನು ಬಹಳ ಶೀಘ್ರವಾಗಿ ಮರೆತು ಬಿಡುತ್ತೇವೆ. ಆದರೆ ದೇವರು ಸಮಸ್ತವನ್ನೂ ನೋಡುತ್ತಾನೆ; ನಮ್ಮ ರಹಸ್ಯ ಪಾಪಗಳನ್ನೂ ಆತನು ಬಲ್ಲನು. ನಾವು ಎಂದಿಗೂ ನಮ್ಮನ್ನು ನಿರಪರಾಧಿಗಳು ಅಥವಾ ನೀತಿವಂತರು ಎಂದು ನಿರ್ಣಯಿಸಿಕೊಳ್ಳಲಾರೆವು ; ದೇವರಿಗೆ ಮಾತ್ರವೇ ಅದು ಸಾಧ್ಯ (ರೋಮ 14:4). ನನ್ನನ್ನು ವಿಚಾರಣೆ ಮಾಡುವವನು ಕರ್ತನೇ. ಎಲ್ಲಾ ಜನರ ನ್ಯಾಯವಿಚಾರಣೆ ಮಾಡುವ ಪೂರ್ಣ ಅಧಿಕಾರವನ್ನು ದೇವರು ಕ್ರಿಸ್ತನಿಗೆ ನೀಡಿರುತ್ತಾನೆ (ಯೋಹಾನ 5:22-23 ನೋಡಿರಿ).ನಮಗಾಗಲಿ ಅಥವಾ ಇತರರಿಗೇ ಆಗಲಿ ವಿಚಾರಣೆ ಮಾಡುವ ಕೆಲಸವು ನಮ್ಮದಲ್ಲ.

5 ಆ ಕಾಲದಲ್ಲಿ – ಅಂದರೆ, ನ್ಯಾಯತೀರ್ಪಿನ ದಿನದಲ್ಲಿ – ಕ್ರಿಸ್ತನು ನಮ್ಮೊಬ್ಬೊಬ್ಬರಿಗೂ ತೀರ್ಪು ಮಾಡುವನು (ಮತ್ತಾಯ 13:24-30, 37-43 ನೋಡಿರಿ). ಕ್ರಿಸ್ತನು ಮಾತ್ರವೇ ಕತ್ತಲೆಯಲ್ಲಿರುವ ಗುಪ್ತ ಕಾರ್ಯಗಳಿಗೆ (ನಮ್ಮ ಪಾಪಗಳಿಗೆ) ಸರಿಯಾಗಿ ತೀರ್ಪುಮಾಡಬಲ್ಲನು; ಕ್ರಿಸ್ತನು ಮಾತ್ರವೇ ಮನುಷ್ಯರ ಹೃದಯದ ಯೋಚನೆಗಳನ್ನು (ನಮ್ಮ ರಹಸ್ಯ ಅಭಿಲಾಷೆಗಳು ಮತ್ತು ಉದ್ದೇಷಗಳನ್ನು) ಪ್ರತ್ಯಕ್ಷಪಡಿಸುವನು. ಹೀಗೆ, ಯೇಸು ಮಾತ್ರವೇ ನಮ್ಮ ನ್ಯಾಯಾಧಿಪತಿಯಾಗಿರುವದಕ್ಕೆ ಅರ್ಹನಾಗಿದ್ದಾನೆ (ರೋಮ 2:16 ನೋಡಿರಿ).

ನಾನು ಒಬ್ಬರಿಗೊಬ್ಬರು ತೀರ್ಪು ಮಾಡಿಕೊಳ್ಳಲು ಬಹಳ ತುದಿಗಾಲಲ್ಲಿರುತ್ತೇವೆ; ಅಲ್ಲದೆ ನಮ್ಮಲ್ಲಿ ಅನೇಕರಿಗೆ ಇದು ಒಂದು ಚಟವಾಗಿರುತ್ತದೆ. ಆದಾಗ್ಯು, ನಾವು ಒಬ್ಬರಿಗೊಬ್ಬರು ತೀರ್ಪುಮಾಡಿಕೊಳ್ಳಲು ಭಯಪಡಬಾರದೋ? ಯಾಕೆಂದರೆ ನಾವು ಇತರರಗೆ ತೀರ್ಪು ಮಾಡುವ ಪ್ರಕಾರವೇ ನಮಗೂ ತೀರ್ಪಾಗುವದೆಂದು ಯೇಸು ಹೇಳಿದ್ದಾನೆ (ಮತ್ತಾಯ 7:1-2 ಮತ್ತು ವ್ಯಾಖ್ಯಾನ ನೋಡಿರಿ).

ಆ ಕಾಲದಲ್ಲಿ ಪ್ರತಿಯೊಬ್ಬನಿಗೆ ಬರತಕ್ಕ ಹೊಗಳಿಕೆಯು ದೇವರಿಂದ ಬರುವದು. ಇಸ್ಸಿ ಪೌಲನು ವಿಶ್ವಾಸಿಗಳ ಕುರಿತು ಮಾತಾಡುತ್ತಿದ್ದಾನೆ. ಅವಿಶ್ವಾಸಿಗಳು ನ್ಯಾಯತೀರ್ಪಿನ ದಿನದಲ್ಲಿ ದಂಡನೆಯನ್ನು ಪಡೆಯುವರು, ಆದರೆ ವಿಶ್ವಾಸಿಗಳು ಹೊಗಳಿಕೆಯನ್ನು ಪಡೆಯುವರು. ದೇವರು ನಮ್ಮ ಕಷ್ಟಕ್ಕೆ ತಕ್ಕ ಹೊಗಳಿಕೆಯನ್ನು (ಪ್ರತಿಫಲವನ್ನು) ಕೊಡುವನು (1 ಕೊರಿಂಥ 3:8, 13-14 ನೋಡಿರಿ). ದೇವರ ಹೊಗಳಿಕೆಗೆ ಹೋಲಿಸಿದರೆ ಮನುಷ್ಯರ ಹೊಗಳಿಕೆಗಳು ಯಾವುವೋ! (2 ಕೊರಿಂಥ 10:18 ನೋಡಿರಿ).

6 ಪೌಲನು ಇಲ್ಲಿ ಯೆಹೂದಿ ನಾಣ್ಣುಡಿಯನ್ನು ಉಲ್ಲೇಖಿಸುತ್ತಾನೆ: ಶಾಸ್ತ್ರದಲ್ಲಿ ಬರೆದಿರುವದನ್ನು ಮೀರಿ ಹೋಗಬಾರದು – ಅಂದರೆ, ಬೈಬಲಿನಲ್ಲಿ ಬರೆದಿರುವದನ್ನು ಮೀರಿ ಬೋಧಿಸಬೇಡಿರಿ (ಪೌಲನ ಕಾಲದಲ್ಲಿ ಹಳೆ ಒಡಂಬಡಿಕೆಯು ಮಾತ್ರವೇ

ಅಸ್ತಿತ್ವದಲ್ಲಿತ್ತು; ಹೊಸ ಒಡಂಬಡಿಕೆಯು ಇನ್ನೂ ಪೂರ್ತಿಗೊಂಡಿರಲಿಲ್ಲ). ಬೈಬಲಿನಲ್ಲಿ ಬರೆದಿರುವಂತದ್ದು ದೇವರ ಜ್ಞಾನವನ್ನು ಮಾತ್ರವೇ ನಾವು ಕಂಡುಕೊಳ್ಳುತ್ತೇವೆ, ಅದು ದೇವರ ದೃಷ್ಟಿಯಲ್ಲಿ ಹುಚ್ಚುತನವಾಗಿದೆ (1 ಕೊರಿಂಥ 3:19).

ಎಲ್ಲಾ ಜನರ ಆಶಿರ್ವಾದಗಳು ಹಾಗು ವರಗಳು ದೇವರಿಂದಲೇ ಬರುತ್ತವೆ. ಇದು ನಿಜವಾಗಿದ್ದರೆ, ನಾವು ಒಬ್ಬ ಭೋಧಕನನ್ನು ವಿರೋಧಿಸಿ ಮತ್ತೊಬ್ಬನ ಪಕ್ಷವನ್ನು ಹಿಡಿದು ಉಬ್ಬಿಕೊಳ್ಳುವದೇಕೆ? ಒಬ್ಬನು ಪೌಲನನ್ನೂ ಮತ್ತೊಬ್ಬನು ಅಪೊಲ್ಲೋಸನನ್ನೂ ಹಿಂಬಾಲಿಸಬೇಕೆಂದು ಸೂಚಿಸುವದೇಕೆ? (1 ಕೊರಿಂಥ 3:4-5, 21 ನೋಡಿರಿ). ಒಬ್ಬನನ್ನು ವಿರೋಧಿಸಿ ಇನ್ನೊಬ್ಬನಲ್ಲಿ ಉಬ್ಬಿಕೊಳ್ಳುವದು ಯಾವಾಗಲೂ ಭೇದಕ್ಕೆ ನಡಿಸುತ್ತದೆ; ಮತ್ತು ಅಂತಹ ಭೇದವು ಕ್ರಿಸ್ತನ ದೇಹದಲ್ಲಿ (ಸಭೆಯಲ್ಲಿ) ಒಂದು ಗಾಯದಂತಿರುತ್ತದೆ.

7 ನಮಗಿರುವದೆಲ್ಲವೂ ದೇವರಿಂದ ಬಂದದ್ದಾಗಿದೆ. ನಾವು ನಮ್ಮದೆಂದು ಹೇಳಿಕೊಳ್ಳಬಹುದಾದದ್ದು (ನಮ್ಮ ಪಾಪವನ್ನು ಹೊರತು ಪಡಿಸಿ) ನಮ್ಮಲ್ಲಿ ಯಾವದೂ ಇಲ್ಲ. ಆದ್ದದರಿಂದ, ನಾವು ನಮ್ಮಲ್ಲಿ ಆಗಲಿ ಅಥವಾ ಒಬ್ಬನನ್ನು ವಿರೋಧಿಸಿ ಮತ್ತೊಬ್ಬನ ಪಕ್ಷವನ್ನು ಹಿಡಿದು ಆಗಲಿ ಉಬ್ಬಿಕೊಳ್ಳಬಾರದು.

8 ಈ ವಚನದಲ್ಲಿ ಕೊರಿಂಥದ ವಿಶ್ವಾಸಿಗಳು ತಮ್ಮ ಕುರಿತಾಗಿ ಏನು ಯೋಚಿಸಿಕೊಳ್ಳುತ್ತಾರೆಂಬದನ್ನು ಪೌಲನು ಕಟುವಾಗಿ ಪುನರುಚ್ಚರಿಸುತ್ತಾನೆ. ಕೊರಿಂಥದವರು ತಾವು ಕೆಲವೊಂದು ಆತ್ಮೀಕ ವರಗಳನ್ನು ಪಡೆದುಕೊಂಡಿದ್ದರಾದ್ದರಿಂದ ಅವರು ತಮ್ಮ ತೃಪ್ತಿ ಹೊಂದಿಕೊಂಡಿದ್ದಾರೇನೋ ಎಂಬಂತೆ ವರ್ತಿಸುತ್ತಿದ್ದರು. "ನಾವು ನಮಗೆ ಬೇಕಾದದ್ದೆಲ್ಲವನ್ನೂ ಹೊಂದಿದ್ದೇವೆ. ನಾವು ಈಗಾಗಲೇ ಐಶ್ವರ್ಯವಂತರು" ಎಂದು ಅವರು ಯೋಚಿಸಿಕೊಂಡರು. ಅವರು ಅರಸರಂತೆ ವರ್ತಿಸುತ್ತಿದ್ದರು. ಆದರೆ, ವಾಸ್ತವದಲ್ಲಿ, ಅವರು ಐಶ್ವರ್ಯವಂತರಾಗಿರಲೇ ಇಲ್ಲ. ಆತ್ಮೀಕವಾಗಿ ಅವರು ಬಡವರಾಗಿದ್ದರು; ಅವರು ಕ್ರಿಸ್ತನ ವಿಷಯದಲ್ಲಿ ಎಳೆಗೂಸುಗಳಾಗಿದ್ದರು (1 ಕೊರಿಂಥ 3:1-2; ಪ್ರಕಟಣೆ 3:17 ನೋಡಿರಿ). ಅವರು ಗರ್ವದಲ್ಲಿ ಮಾತ್ರವೇ ಐಶ್ವರ್ಯವಂತರಾಗಿದ್ದರು!

ಸಂಗತಿಗಳು ಎಷ್ಟು ಹಿನ್ನಡೆಯಲ್ಲಿದ್ದವು ! ಪೌಲ ಮತ್ತು ಇತರ ಅಪೊಸ್ತಲರು ಕೇವಲ ಕೆಲಸಗಾರರೂ ದೀನ ಸೇವಕರು ಆಗಿರುವ ವೇಳೆ ಈ ಕೊರಿಂಥದ ನೂತನ ಕ್ರೈಸ್ತರು ತಮ್ಮನ್ನು ಅರಸರಂತೆ ಭಾವಿಸಿಕೊಳ್ಳಲಾರಂಭಿಸಿದ್ದರು! ಕೊರಿಂಥದವರು ನಿಜವಾಗಿಯೂ ಅರಸರಾಗಿ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ಪೌಲನು ಮಾರ್ಮಿಕವಾಗಿ ಹೇಳುತ್ತಾನೆ; ಯಾಕೆಂದರೆ, ಆಗ ಪೌಲನು ಸಹ ಸ್ವತಃ ಒಬ್ಬ ಅರಸನಾಗಿರುತ್ತಿದ್ದನು! ಖಂಡಿತವಾಗಿಯೂ, ಪೌಲನು ಅರಸನಾಗಿರಲು ಇಚ್ಚಿಸಲಿಲ್ಲ; ಇದನ್ನು ಹೇಳುವದರಲ್ಲಿ ಆತನು ಕೊರಿಂಥದವರ ಗರ್ವವು ಎಷ್ಟಾಗಿತ್ತೆಂಬದನ್ನು ತೋರಿಸಲು ಪ್ರಯತ್ನಿಸುತ್ತಿದ್ದಾನಷ್ಟೇ.

9 ಇಲ್ಲಿ ಪೌಲನು ತನ್ನ ಹಾಗು ತನ್ನ ಜೊತೆಯ ಅಪೊಸ್ತಲರ ಅನುಭವವನ್ನು ಬಣ್ಣಿಸುತ್ತಾನೆ. ಅವರು ಅಪೊಸ್ತಲರಾಗಿದ್ದ ಕಾರಣದಿಂದ ಅವಿಶ್ವಾಸಿಗಳಿಂದ ಮಾತ್ರವಲ್ಲ, ಆದರೆ ವಿಶ್ವಾಸಿಗಳಿಂದ ಸಹ ಎಲ್ಲಾ ರೀತಿಯ ವಿರೋಧಗಳನ್ನು ಎದುರಿಸಿದ್ದರು. ಅವರು ಅರಸರಂತಿರುವದರ ಬದಲಾಗಿ ಮರಣವಿಧಿಯನ್ನು ಹೊಂದಿದ ಅಪರಾಧಿಗಳಿಂತಿದ್ದರು. ಪ್ರತಿದಿನವೂ ಅವರು ಮರಣದ ಅಪಾಯವನ್ನು ಎದುರಿಸಿದರು.

ರೋಮಾಯ ಸಾಮ್ರಾಜ್ಯದ ಕಾಲದಲ್ಲಿ ಮರಣವಿಧಿಗೊಳಗಾದ ಅಪರಾಧಿಗಳು ಮರಣದಂಡನೆಯ ಸ್ಥಳದ ವರೆಗೆ ಪಥಸಂಚಲನೆಯಲ್ಲಿ ನಡೆಸಲ್ಪಡುತ್ತಿದ್ದರು; ಅಪರಾಧಿಗಳು ಪಥಸಂಚಲನೆಯ ಕೊನೆಯಲ್ಲಿ ನಡೆಯುತ್ತಿದ್ದರು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಅಪರಾಧಿಗಳು ಪ್ರದರ್ಶಿಸಲ್ಪಡುತ್ತಿದ್ದು; ಅವರು ಜನರಿಗೆ ನೋಟವಾಗುತ್ತಿದ್ದರು. ಪ್ರತಿಯೊಬ್ಬ ಅಪರಾಧಿಯು ತನ್ನ ಶಿಲುಬೆಯನ್ನು ಹೊತ್ತು ಸಾಗಬೇಕಾಗಿತ್ತು, ಆ ಶಿಲುಬೆಯ ಮೇಲೆ ಕೆಲವು ಕ್ಷಣಗಳ ತರುವಾಯ ಆತನು ನೇತಾಡಲ್ಪಡುತ್ತಿದ್ದನು. ಕ್ರಿಸ್ತನು ಸ್ವತಃ ಈ ರೀತಿಯಾಗಿ ತನ್ನ ಶಿಲುಬೆಯನ್ನು ಹೊತ್ತುಕೊಳ್ಳಬೇಕಾಗಿತ್ತು (ಯೋಹಾನ 17:17-18).

ಅಪರಾಧಿಗಳು ತಮ್ಮ ಸ್ವಂತ ಶಿಲಬೆಯನ್ನು ಹೊತ್ತು ಸಾಗುವಂತೆ ಮಾಡುವ ಈ ರೋಮಾಯರ ಪದ್ಧತಿಯಿಂದಲೇ ದೃಷ್ಟಾಂತವೊಂದನ್ನು ಕೊಡುತ್ತಾ ಯೇಸು ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆ; "ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನ ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತು ಕೊಂಡು ನನ್ನ ಹಿಂದೆ ಬರಲಿ" (ಮಾರ್ಕ 8:34). ಪೌಲನು ಇಲ್ಲಿ ತಾನು ಮತ್ತು ಅವನ ಜೊತೆಯ ಅಪೊಸ್ತಲರು ದಂಡನೆಗೊಳಗಾಗಿರುವ ಅಪರಾಧಿಗಳಿಂತಿದ್ದು ಅವರು ಜಗತ್ತಿಗೆ ನೋಟವಾದರು; ಅವರು ಪ್ರದರ್ಶನದಂತೆ ತೋರಿಸಲ್ಪಟ್ಟಿದ್ದಾರೆ ಎಂದು ಹೇಳುತ್ತಾನೆ (ರೋಮ 8:36 ನೋಡಿರಿ).

10 ಇಲ್ಲಿ ಪುನಃ ಪೌಲನು ತಮ್ಮ ವಿಷಯದಲ್ಲಿ ಕೊರಿಂಥದವರು ಹೇಳಿಕೊಳ್ಳುತ್ತಿದ್ದ ಸಂಗತಿಗಳು ಪುನರಾವರ್ತಿಸುತ್ತಾ ಮಾರ್ಮಿಕವಾಗಿ ಬರೆಯುತ್ತಾನೆ. ಕೊರಿಂಥದವರು ತಾವು ಅಪೊಸ್ತಲರಿಗಿಂತ ಉತ್ತಮರೇನೋ ಎಂಬಂತೆ ನಡೆದುಕೊಳ್ಳುತ್ತಿದ್ದರು. ಅವರು ತಮ್ಮನ್ನು ಬುದ್ಧಿವಂತರು, ಬಲಿಷ್ಟರು, ಮಾನಶಾಲಿಗಳು ಎಂದೂ ಅದಕ್ಕೆ ತದ್ವಿರುದ್ಧವಾಗಿ ಅಪೊಸ್ತಲರನ್ನು ಹುಚ್ಚರ, ಬಲಹೀನರು, ಹಾಗು ಮಾನ ಹೀನರು ಎಂದೂ ಪರಿಗಣಿಸಿದ್ದರು. ಪೌಲನು ಅಪೊಸ್ತಲರ ವಾಸ್ತವ ಪರಿಸ್ಥಿತಿಯನ್ನು ವಿವರಿಸುವಾಗ ಆತನು ಮಾರ್ಮಿಕವಾಗಿ ಹೇಳುತ್ತಿಲ್ಲ. ಅಪೊಸ್ತಲರು ನಿಜವಾಗಿಯೂ ಕ್ರಿಸ್ತನಿಗೋಸ್ಕರ ಹುಚ್ಚರಾಗಿದ್ದರು (2 ಕೊರಿಂಥ 12:11). ಅವರು ನಿಜವಾಗಿಯೂ ಬಲಹೀನರೂ ಮಾನಹೀನರೂ ಆಗಿದ್ದರು (1 ಕೊರಿಂಥ 2:3; 2 ಕೊರಿಂಥ 13:9).

11-13 ಈ ವಚನಗಳಲ್ಲಿ ಪೌಲನು ಒಬ್ಬ ಅಪೊಸ್ತಲನ ಜೀವಿತದ ಬಗ್ಗೆ ಬಣ್ಣಿಸುವದನ್ನು ಮುಂದುವರೆಸುತ್ತಾನೆ. ಮತ್ತು ಈ ಬಣ್ಣನೆಯು ಅಪೊಸ್ತಲರ ಜೀವಿತಕ್ಕೆ ಮಾತ್ರವೇ ಅನ್ವಯಿಸುವದಿಲ್ಲ; ಇದು ಪ್ರತಿಯೊಬ್ಬ ನಿಜಕ್ರೈಸ್ತನ ಜೀವಿತಕ್ಕು ಅನ್ವಯಿಸುತ್ತದೆ (2 ಕೊರಿಂಥ 6:4-10; 11:23-29 ನೋಡಿರಿ). ಈ ಬಣ್ಣನೆಯು ಸ್ವತಃ ಯೇಸುವಿನ ಜೀವಿತಕ್ಕೂ ಅನ್ವಯಿಸುತ್ತದೆ.

ನಾವು ಪೌಲನಂತೆ ಬೈಸಿಕೊಂಡು, ಹಿಂಸೆ ಪಟ್ಟು, ಅಪಕೀರ್ತಿ ಹೊಂದಿದಾಗೆ (ವಚನ 12) ಪ್ರತಿಯಾಗಿ ನಾವು ಹೇಗೆ ವರ್ತಿಸುತ್ತೇವೆ? ನಾವು ಪೌಲನ ಹಾಗೆ ಅಂತಹ ಸಮಸ್ಯೆಯು ನಮಗೆ ಬಂದಾಗ ಹರಸುತ್ತವೆ, ಸಹಿಸಿಕೊಳ್ಳುತ್ತೇವೆ ಹಾಗು ಆದರಿಸುತ್ತೇವೆ ಎಂದು ಹೇಳಬಲ್ಲೆವೋ/ ದೇವರು ಪ್ರತಿಯೊಬ್ಬ ಕ್ರೈಸ್ತನಿಂದ ನಿರೀಕ್ಷಿಸುವ ನಡವಳಿಕೆ ಇದೇಆಗಿದೆ (ಮತ್ತಾಯ 5:44; ಲೂಕ 6:27;1 ಪೇತ್ರ೨: 21-23; 3:9 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಪೌಲನು 12ನೇ ವಚನದಲ್ಲಿ ಹೇಳುವದೇನೆಂದರೆ: ನಾವು . . .ಸ್ವಂತ ಕೈಗಳಿಂದ ಕೆಲಸ ಮಾಡಿ ದುಡಿಯುವವರಾಗಿದ್ದೇವೆ. ಪೌಲನು ಬೋಧಿಸುವದರ ಜೊತೆಗೆ ತನ್ನ ಜೀವಾಧಾರಕ್ಕಾಗಿ ಗುಡಾರಗಳನ್ನು ಮಾಡುತ್ತಿದ್ದನು (ಅ.ಕೃತ್ 18:1-3). ಪೌಲನು ಹೊದ ಕಡೆಗಳಲೆಲ್ಲಾ ತನ್ನ ಉಳಿದ ಸಮಯದಲ್ಲಿ ಗುಡಾರಗಳನ್ನು ಮಾಡಿ ತನ್ನ ಜೀವನಾಧಾರಕ್ಕೆ ಸಂಪಾದಿಸಿಕೊಳ್ಳುತ್ತಿದ್ದನು (1 ಥೆಸಲೋನಿಕ 2:9 ನೋಡಿರಿ).

ಈ ವಚನಗಳನ್ನು ಬರೆಯುವಲ್ಲಿ ಪೌಲನು ಗುಣಗುಟ್ಟುತ್ತಿದ್ದಾನೋ? ಇಲ್ಲ, ಆತನು ಗುಣಗುಟ್ಟುತ್ತಿಲ್ಲ. ಪೌಲನು ಕ್ರಿಸ್ತ ನಿಮಿತ್ತ ಲೋಕದ ಕಸವೋ ಎಲ್ಲಾದರ ಹೊಲಸೋ ಎಂಬಂತೆ ಆಗುವದಕ್ಕೆ ಸಂತೋಷವುಳ್ಳವನಾಗಿದ್ದಾನೆ (ಮತ್ತಾಯ 5:10-12; 20:16; 23:11-12; ಮಾರ್ಕ 9:35; ಫಿಲಿಪ್ಪಿ 3:7-8 ಹಾಗು ವ್ಯಾಖ್ಯಾನಗಳನ್ನು ನೋಡಿರಿ).

## ಎಚ್ಚರಿಕೆಗಳು ಹಾಗು ಸಲಹೆಗಳು (4:14-21)

**14-15** ಪೌಲನು 15ನೇ ವಚನದಲ್ಲಿ ಕೊರಿಂಥದ ವಿಶ್ವಾಸಿಗಳಿಗೆ ಸಾವಿರಾರು ಮಂದಿ ಉಪಾಧ್ಯಾಯರು[9] (ಪೋಷಕರು) ಇದ್ದಾರೆಂದು ಹೇಳುತ್ತಾನೆ. ಪೌಲನ ಕಾಲದಲ್ಲಿ ಉಪಾಧ್ಯಾಯನು ಒಬ್ಬ ವಿಶೇಷವಾದ ಉನ್ನತ ಶ್ರೇಣಿಯ ಸೇವಕನಾಗಿದ್ದನು, ಅವನಿಗೆ ಯಜಮಾನನ ಮಕ್ಕಳನ್ನು ಪೋಷಿಸಿ ಶಾಲೆಗೆಕರೆದುಕೊಂಡು ಹೋಗುವದಕ್ಕೆ ಸಂಬಳ ನೀಡಲಾಗುತ್ತಿತ್ತು. ಹೀಗೆ, ಕೊರಿಂಥದವರಿಗೆ ಅವರನ್ನು ಇಂತಹ ಅನೇಕ (ಸಾವಿರಾರು) ಆತ್ಮೀಕ "ಉಪಾಧ್ಯಾಯರು" ಇದ್ದಾರೆ ಎಂದು ಪೌಲನು ಹೇಳುತ್ತಾನೆ. ಹೇಗಿದ್ದರೂ,ಈ ಉಪಾಧ್ಯಾಯರು (ಪೋಷಕರು) ಮಕ್ಕಳ ಸ್ವಂತ ತಂದೆಯಂತಾಗುವದಿಲ್ಲ. ಕೊರಿಂಥದವರಿಗೆ ಅನೇಕ ಆತ್ಮೀಕವಾದ "ತಂದೆಗಳಿಲ್ಲ". ಖಂಡಿತವಗಿಯೂ, ಪೌಲನು ಅವರಿಗೆ ಮುಖ್ಯ "ತಂದೆ" ಆಗಿದ್ದನು. ಪೌಲನು ತಾನು ಮೊದಲು ಅವರಿಗೆ ಸಾರಿದ ಸುವಾರ್ತೆಯ ಮೂಲಕ ಅವರಿಗೆ ತಂದೆಯಾದನು. ಆದುದರಿಂದ, ಪೌಲನು ಕೊರಿಂಥದವರನ್ನು ನನ್ನ ಪ್ರಿಯ ಮಕ್ಕಳೆಂದು ಕರೆಯಬಲ್ಲನು (ವಚನ 14).

**16** ಮಕ್ಕಳು ತಮ್ಮ ತಂದೆಯನ್ನು ಅನುಸರಿಸಬೇಕು. ಪೌಲನು ಕ್ರಿಸ್ತನನ್ನು ಅನುಸರಿಸಿದನು; ಆದುದರಿಂದ, ಕೊರಿಂಥದ ವಿಶ್ವಾಸಿಗಳು ಪೌಲನನ್ನು ಅನುಸರಿಸತಕ್ಕದ್ದು (1 ಕೊರಿಂಥ 11:1). ಹೇಗಿದ್ದಕೂ, ಹಾಗೆ ಮಾಡುವದರಲ್ಲಿ ಅವರು ಪೌಲನ ಶಿಷ್ಯರಾಗಬಾರದು; ಅವರು ಕ್ರಿಸ್ತನಿಗೆ ಮಾತ್ರವೇ ಶಿಷ್ಯರಾಗಬೇಕು. ಪೌಲನು ಕ್ರಿಸ್ತನನ್ನು ಎಷ್ಟು ಆಪ್ತವಾಗಿ ಹಿಂಬಾಲಿಸಿದನೆಂದರೆ ಪೌಲನನ್ನು ಹಿಂಬಾಲಿಸುವದು ಮುಖ್ಯವಾಗಿ ಕ್ರಿಸ್ತನನ್ನೇ ಹಿಂಬಾಲಿಸುವಂತಾಗಿತ್ತು. ನಮ್ಮಲ್ಲಿ ಎಷ್ಟು ಮಂದಿ ಪೌಲನೊಂದಿಗೆ ನಮ್ಮ ವಿಷಯದಲ್ಲಿ ಹಾಗೆ ಹೇಳಿಕೊಳ್ಳ ಬಲ್ಲೆವು? ಪೌಲನನ್ನು ಹಿಂಬಾಲಿಸುವದರಲ್ಲಿ ಏನೇನು ಅಡಕವಾಗಿದೆಯೆಂಬದು 11-13 ವಚನಗಳಲ್ಲಿ ಉತ್ತವಾಗಿ ಬಣ್ಣಿಸಲ್ಪಟ್ಟಿದೆ.

**17** ಪೌಲನು ತಿಮೊಥೆಯನನ್ನು ಕೊರಿಂಥಕ್ಕೆ ಕಳುಸಲು ಉದ್ದೇಶಿಸುತ್ತಾನೆ. ತಿಮೊಥೆಯನು ಪೌಲನ ಆತ್ಮೀಕ ಮಗನಾಗಿದ್ದನು (ಅ.ಕೃತ್ಯ 16:1-5; 1 ಕೊರಿಂಥ 16:10-11).

ಪೌಲನು ಇಲ್ಲಿ ಬರೆಯುವದೇನೆಂದರೆ, ನಮ್ಮ ನಡಾವಳಿಯು....ನಾನು ಎಲ್ಲೆಲ್ಲಿಯೂ ಪ್ರತಿಯೊಂದು ಸಭೆಯಲ್ಲಿಯೂ ಬೋಧಿಸುವ ಕ್ರಮವನ್ನು ಹೋಲುತ್ತದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಪೌಲನು ತಾನು ಬೋಧಿಸುವದನ್ನು ಕೈಕೊಂಡು ನಡೆಯುವವನಾಗಿದ್ದಾನೆ. ಆತನ ಬೋಧನಂತೆಯೇ ಆತನ ಜೀವನವಿತ್ತು ಇದು ಸತ್ಯವೆಂಬದಕ್ಕೆ ತಿಮೊಥೆಯನು ಸಾಕ್ಷಿ ಹೇಳುವನು. ಬಹುಶ: ಕೊರಿಂಥದವರಲ್ಲಿ ಕೆಲವರು ಪೌಲನವಿಷಯದಲ್ಲಿ ಆತನು ಬೋಧಿಸದಂತೆ ನಡೆಯುತ್ತಿಲ್ಲವೆಂದು ತಪ್ಪು ಹೊರಿಸಿದ್ದರು. ಆದರೆ ತಿಮೊಥೆಯನು ಕೊರಿಂಥಕ್ಕೆ ಹೋಗುವಾಗ ಆತನು ಪೌಲನ ಪಕ್ಷವನ್ನು ವಹಿಸಿಕೊಂಡು ಅಂತಹ ಸುಳ್ಳು ಆರೋಪಗಳಿಗೆ ನಾಂದಿಹಾಡುವನು.

ಅಲ್ಲದೆ ಪೌಲನು ಇಲ್ಲಿ ಎಲ್ಲಾ ಸಭೆಯಲ್ಲಿಯೂ ಆತನ ಬೋಧನೆಯು ಏಕರೀತಿಯಾಗಿದೆಯೆಂದು ಹೇಳುತ್ತಾನೆ. ಆತನು ಜನರನ್ನು ಮೆಚ್ಚಿಸಲು ಒಂದು ಸಭೆಯಲ್ಲಿ ಒಂದು ಸಂಗತಿಯನ್ನು ಬೋಧಿಸಿ ನಂತರ ಇನ್ನೊಂದು ಸಭೆಗೆ ಹೋಗಿ ಅಲ್ಲಿನ ಜನರನ್ನು ಮೆಚ್ಚಿಸಲು ಮತ್ತೊಂದು ಸಂಗತಿಯನ್ನು ಬೋಧಿಸುವದಿಲ್ಲ. ಪೌಲನು ಹೊಗುವ ಎಲ್ಲಾ ಕಡೆಗಳಲ್ಲಿಯೂ ಒಂದೇ ರೀತಿಯ ಸತ್ಯಗಳನ್ನು ಬೋಧಿಸುವವನಾಗಿದ್ದಾನೆ.

ನಾವು ಸಹ ಪೌಲನನ್ನು ಅನುಸರಿಸೋಣ. ನಮ್ಮ ಜೀವಿತಗಳ ಮೂಲಕ ನಾವು ಕ್ರಿಸ್ತನ ನಂಬಿಗಸ್ತ ಸೇವಕರೆಂಬದಕ್ಕೆ ಸಾಕ್ಷಿ ನೀಡೋಣ. ನಾವು ಬೋಧಿಸುವ ಪ್ರಕಾರವೇ ನಮ್ಮ ಜೀವಿತಗಳು ಇರಲಿ. ಮತ್ತು ಎಲ್ಲಾ ವೇಳೆಗಳಲ್ಲಿಯೂ ಜನರು ವಿರೋಧಿಸಲಿ ಅಥವಾ ವಿರೋಧಿಸದಿರಲಿ ನಾವು ಸುವಾರ್ತೆಯ ಒಂದೇ ವಿಧದ ಸತ್ಯವನ್ನು ಧೈರ್ಯವಾಗಿ ಸಾರುತ್ತಲಿರೋಣ.

**18** ಕೊರಿಂಥದವರಲ್ಲಿ ಉಬ್ಬಿಕೊಂಡಿದ್ದ ಕೆಲವರು ಪೌಲನು ಕೊರಿಂಥಕ್ಕೆ ಬರಲು ಧೈರ್ಯಮಾಡಲಿಲ್ಲ ಎಂದು ಹೇಳಿದರು. ಅವನು ಸ್ವತಃ ಏಕೆ ಬರುವದಿಲ್ಲ?. ಆತನು ತನ್ನ ಸ್ಥಾನದಲ್ಲಿ ತಿಮೊಥೆಯನನ್ನು ಏಕೆ ಕಳುಹಿಸುತ್ತಾನೆ? ಎಂದು ಅವರು ಪ್ರಶ್ನಿಸಿದರು. ಬಹುಶಃ ಹೀಗೆ ಹೇಳಿದವರು ಪೌಲನನ್ನು ವಿರೋಧಿಸಿ ಆತನ ಅಧಿಕಾರವನ್ನು ಸ್ವೀಕರಿಸಿಕೊಳ್ಳಲು

ನಿರಾಕರಿಸಿದ ಕೊರಿಂಥ ಸಭೆಯಲ್ಲಿನ ಒಂದು ಪಕ್ಷಕ್ಕೆ ಸೇರಿದವರಾಗಿರಬೇಕು (1 ಕೊರಿಂಥ 1:12). ಅಂತಹ ಜನರು ತಮ್ಮ ಸ್ವ ಅಧಿಕಾರವನ್ನು ಹೆಚ್ಚಿಸಿಕೊಳ್ಳಲು ಮಾತ್ರವೇ ಇಚ್ಛಿಸುವವರಾಗಿದ್ದರು.

19 ಆದರೆ ಪೌಲನು ಕೋರಿಂಥದಲ್ಲಿನ ತನ್ನ ವೈರಿಗಳಿಗೆ ಹೆದರಿರಲಿಲ್ಲ. ಆತನು ಸ್ವತಃ ಕೊರಿಂಥಕ್ಕೆ ಹೋಗುವ ಯೋಜನೆ ಹಾಕಿಕೊಂಡಿದ್ದನು. ಇಲ್ಲಿ ಆತನು ಕೊರಿಂಥದವರಿಗೆ ತಾನು ಶೀಘ್ರವೇ – ಕರ್ತನ ಚಿತ್ತವಿದ್ದರೆ ಅವರ ಬಳಿಗೆ ಬರುತ್ತೇನೆಂದು ಹೇಳುತ್ತಾನೆ. ಪೌಲನ ಯೋಜನೆಗಳೆಲ್ಲವೂ ದೇವರ ಚಿತ್ತದ ಮೇಲೆ ಆಧಾರವಾಗಿದ್ದವು; ಆತನು ತನ್ನ ಸ್ವಂತ ಚಿತ್ತದ ಪ್ರಕಾರವಾಗಿ ಏನೂ ಮಾಡಲಿಲ್ಲ.

ಪೌಲನು ಕೊರಿಂಥಕ್ಕೆ ಹೋಗುವಾಗ ಆತನು ಆ ಉಬ್ಬಿಕೊಂಡಿರುವ ಕೊರಿಂಥದವರನ್ನು ಎದುರಿಸುವನು. ಆ ಸನಮಯದಲ್ಲಿ ಅವರು ನಿಜವಾಗಿಯೂ ಏನಾದರೂ ಶಕ್ತಿಯನ್ನು ಹೊಂದಿದ್ದಾರೋ ಅಥವಾ ಅವರು ಕೇವಲ ಮಾತಾಡುತ್ತಿರುವರೋ ಎಂಬದನ್ನು ಆತನು ಕಂಡುಕೊಳ್ಳುವನು (2 ಕೊರಿಂಥ 12:11).

20 ಪೌಲನಂತಹ ನಿಜವಾದ ಅಪೊಸ್ತಲರು ದೇವರ ಬಲವನ್ನು ತೋರ್ಪಡಿಸುವವರಾಗಿದ್ದಾರೆ. ಒಬ್ಬನು ನಿಜವಾದ ಅಪೊಸ್ತಲರನ್ನು ಗುರುತಿಸಬಹುದು; ಯಾಕೆಂದರೆ ಅವರು ಸೂಚಕ ಕಾರ್ಯಗಳನ್ನೂ ಅಧ್ಭುತಗಳನ್ನೂ ಮಹತ್ಕಾರ್ಯಗಳನ್ನೂ ನಡಿಸುವವರಾಗಿದ್ದಾರೆ (2 ಕೊರಿಂಥ 12:12).

ದೇವರ ರಾಜ್ಯವು ಮಾತಿನಲ್ಲಿ ಮಾತ್ರವೇ ಇಲ್ಲ. ನಾವು ನೂರಾರು ಸಂದೇಶಗಳನ್ನು ಕೇಳಬಹುದು, ಹಾಗು ದಿನವೆಲ್ಲಾ ದೇವರ ರಾಜ್ಯದ ಬಗ್ಗೆ ಚರ್ಚಿಸಬಹುದು; ಆದರೆ ನಮ್ಮ ಜೀವಿತಗಳು ಪರಿಶುದ್ಧವಾಗಿರುವದಕ್ಕೆ ನಮಗೆ ಶಕ್ತಿಯ, ಪವಿತ್ರಾತ್ಮನ ಶಕ್ತಿಯ ಅಗತ್ಯವಿರುತ್ತದೆ.

21 ಕೊರಿಂಥದಲ್ಲಿನ ಕ್ರೈಸ್ತರ ಮನೋಭಾವ ಹಾಗು ನಡಾವಳಿಕೆಗಳನ್ನು ಆಧರಿಸಿ ಪೌಲನು ಬೆತ್ತ ತೆಗೆದುಕೊಂಡು ಬರುವನು ಅಥವಾ ಆತನು ಪ್ರೀತಿಯಿಂದಲೂ (ಅಂದರೆ, ಪ್ರೀತಿಯ ಮಾತುಗಳಿಂದ) ಸೌಮ್ಯಭಾವದಿಂದಲೂ ಬರುವನು. ಆಯ್ಕೆಯು ಕೊರಿಂಥದವರಿಗೆ ಸೇರಿದ್ದು. ಅವರ ಉಬ್ಬಿಕೊಂಡ ನಡವಳಿಕೆಯು ಮುಂದುವರೆಯುವದಾದರೆ ಪೌಲನು ಖಂಡಿತವಾಗಿಯೂ ಅವರ ಬಳಿಗೆ ಬೆತ್ತ ತೆಗೆದುಕೊಂಡು ಬರುವನು.

ಬೇರೆ ಯಾವದೇ ತಂದೆಯಂತೆ ಪೌಲನು ಸಹ ಕೊರಿಂಥದಲ್ಲಿನ ಆತನ ಆತ್ಮೀಕ ಮಕ್ಕಳು ಪಶ್ಚಾತಾಪ ಪಡುವರೆಂದು ನಿರೀಕ್ಷಿಸುತ್ತಾನೆ. ಪೌಲನು "ಬೆತ್ತವನ್ನು" ಉಪಯೋಗಿಸಲು ಬಯಸುವದಿಲ್ಲ. ಆತನು ಅವರನ್ನು ಹೆಚ್ಚಾಗಿ ಪ್ರೀತಿಯಿಂದಲೂ ಸೌಮ್ಯಭಾವದಿಂದಲೂ ಸಂದಿಸಲಿಚ್ಚಿಸುತ್ತಾನೆ.

ಆದರೆ ಪೌಲನು ಬೆತ್ತವನ್ನು ತರಬೇಕಾಗಿ ಬಂದಾಗ್ಯು ಆತನು ಆಗಲೂ ಅವರ ಬಳಿಗೆ ಪ್ರೀತಿಯಿಂದಲೇ ಬರುವನು. ಒಬ್ಬ ತಂದೆಯು ತನ್ನ ಮಕ್ಕಳನ್ನು ನಿಜವಾಗಿಯೂ ಪ್ರೀತಿಸುವದಾದರೆ ಆತನು ಅವಶ್ಯಕವಾದಲ್ಲಿ "ಬೆತ್ತ"ವನ್ನು ಉಪಯೋಗಿಸುವದಕ್ಕೂ ಹಿಂಜರಿಯವದಿಲ್ಲ (2 ಸಮುವೇಲ 7;14; ಇಬ್ರಿಯ 12:6 ಮತ್ತು ವ್ಯಾಖ್ಯಾನ ನೋಡಿರಿ).

---

# ಅಧ್ಯಾಯ - 5

## ಸಭೆಯಲ್ಲಿನ ಅನೈತೀಕತೆ (5:1-13)

1 ಕೊರಿಂಥದ ನಾಗರಿಕರು ತಮ್ಮ ಲೈಂಗೀಕ ಅನೈತೀಕತೆಗೆ ಪ್ರಸಿದ್ಧರಾಗಿದ್ದರು ಮತ್ತು ಆ ಅನೈತೀಕತೆಯ ಅಭ್ಯಾಸವು ಕೊರಿಂಥದಲ್ಲಿನ ಸಭೆಯಲ್ಲಿ ನುಸುಳಿತು. ಬಹುಶಃ ಈ ಕೊರಿಂಥದ ನೂತನ ಕ್ರೈಸ್ತರು ತಾವು ಕ್ರಿಸ್ತನಲ್ಲಿ ನಂಬಿಕೆಯಿಟ್ಟು ರಕ್ಷಣೆಯನ್ನು ಪಡೆದವರಾಗಿ ಈಗ ತಮ್ಮ ಇಷ್ಟದಂತೆ ನಡೆದುಕೊಳ್ಳಬಹುದೆಂದು ಊಹಿಸಿಕೊಂಡಿದ್ದೀರಬೇಕು. ಅದು ನಿಜವಾಗಿದ್ದರೆ ಅವರು ಸ್ವಾಭಾವಿಕವಾಗಿ ತಮ್ಮ ಹಳೆಯ ಕೆಟ್ಟ ಪದ್ಧತಿಗಳೊಳಗೆ ಹಿಂಜಾರುವವರಾಗಿದ್ದಾರೆ.

ಕೊರಿಂಥದ ಕ್ರೈಸ್ತರ ಮಧ್ಯದಲ್ಲಿದ್ದ ಒಂದು ವಿಧದ ಲೈಂಗೀಕ ಅನೈತೀಕತೆಯು ಕೊರಿಂಥದ ಭಕ್ತಿಹೀನ ನಾಗರೀಕರು ಸಹ ಮಾಡದಿದ್ದಷ್ಟು ಕೆಟ್ಟದ್ದಾಗಿತ್ತು! ಅಂದರೆ, ಕ್ರೈಸ್ತನೆಂದು ಹೇಳಿಕೊಂಡ ಒಬ್ಬನು ತನ್ನ ಸ್ವಂತ ಮಲತಾಯಿಯೊಂದಿಗೆ ಜಾರತ್ವದಲ್ಲಿ ಜೀವಿಸುತ್ತಿದ್ದನು! (ಧರ್ಮೋಪದೇಶಕಾಂಡ 22:30; 27:20). ಆದರೆ ಅಷ್ಟೇ ಕೆಟ್ಟದ್ದಾದ ಇನ್ನೊಂದು ಸಂಗತಿಯಿತ್ತು: ಇತರ ಕ್ರೈಸ್ತರೆಲ್ಲರೂ ಈ ಅನೈತೀಕತೆಯನ್ನು ಸೈರಿಸಿಕೊಂಡಿದ್ದರು; ಅವರು ಅದರ ಬಗ್ಗೆ ಚಿಂತೆಯನ್ನು ಸಹ ಮಾಡಲಿಲ್ಲ. ಅಂತಹ ಒಂದು ಪಾಪವು ಅವರ ಮಧ್ಯದಲ್ಲಿದದ್ದು ಅವರಿಗೆ ಯಾವ ಚಿಂತೆಯನ್ನೂ ತರಲಿಲ್ಲ.

2 ಪೌಲನು ೪ನೇ ಅಧ್ಯಾಯದಲ್ಲಿ ಕೊರಿಂಥದವರ ಅಹಂಕಾರದ ಬಗ್ಗೆ ಬರೆದನು. ಅವರ ಅಹಂಕಾರವು ಎಷ್ಟಾಗಿತ್ತೆಂದರೆ ಅವರು ತಮ್ಮಸ್ವಂತ ಪಾಪಗಳಲ್ಲಿಯೇ ಉಬ್ಬಿಕೊಳ್ಳಲಾರಂಬಿಸಿದ್ದರು! ಅವರ ಉಬ್ಬಿಕೊಂಡಿರುವದರ ಬದಲಾಗಿ ದುಃಖಿಸಬೇಕಾಗಿತ್ತು. ಅಂತಹ ಪಾಪದಲ್ಲಿ ಜೀವಿಸುತ್ತಿರುವ ಯಾವದೇ ವ್ಯಕ್ತಿಯನ್ನು ಶೀಘ್ರವಾಗಿ ಹಾಗು ಸಾರ್ವಜನಿಕವಾಗಿ ಸಭೆಯಿಂದ ಬಹಿಷ್ಕರಿಸಿರಬೇಕಿತ್ತು.

3 ಪೌಲನು ಆತ್ಮದಿಂದ ಕೊರಿಂಥದವರೊಂದಿಗಿದ್ದನು (ಕೊಲೊಸ್ಸೆ 2:5 ನೋಡಿರಿ). ಎಲ್ಲಾ ಕ್ರೈಸ್ತರೂ ತಾವು ದೈಹೀಕವಾಗಿ ಒಟ್ಟಾಗಿಲ್ಲದಿದ್ದಾಗ್ಯು ಅವರು ಒಬ್ಬರೊಂದಿಗೊಬ್ಬರು ಆತ್ಮೀಕ ಅನ್ಯೋನ್ಯತೆಯನ್ನು ಹೊಂದಬಹುದು.

ಪೌಲನು ತಾನು ಆಗಲೇ ಮಲತಾಯಿಯೊಂದಿಗೆ ಜಾರತ್ವಮಾಡಿದವನನ್ನು ಕುರಿತು ತೀರ್ಪುಮಾಡಿದ್ದೇನೆಂದು ಹೇಳುತ್ತಾನೆ. ಪೌಲನು ಹೀಗೆ ಹೇಳಿದ್ದರ ತಾತ್ಪರ್ಯವೇನು? ಯೇಸು ಸ್ವತಃ ಆಜ್ಞಾಪಿಸಿದ್ದೇನೆಂದರೆ: "ತೀರ್ಪು ಮಾಡಬೇಡಿರಿ" (ಮತ್ತಾಯ 7:1). ಪೌಲನು ಯೇಸುವಿನ ಆಜ್ಞೆಯನ್ನು ವಿರೋಧಿಸುತ್ತಿದ್ದಾನೋ? ಅಲ್ಲದೆ ಪೌಲನು ಸ್ವತಃ ಕ್ರೈಸ್ತರು ಒಬ್ಬರಿಗೊಬ್ಬರು ತೀರ್ಪು ಮಾಡಬಾರದೆಂದು ಕಲಿಸಿದನು (ರೋಮ 14:4,13). ಆತನು ತನ್ನ ಸ್ವಂತ ಬೋಧನೆಯನ್ನು ವಿರೋಧಿಸುತ್ತಿರುವನೋ?

ಇಲ್ಲ, ಪೌಲನು ಯೇಸುವಿನ ಆಜ್ಞೆಯನ್ನಾಗಲಿ ಅಥವಾ ತನ್ನ ಬೋಧನೆಯನ್ನಾಗಲಿ ವಿರೋಧಿಸುತ್ತಿಲ್ಲ. ಎರಡು ವಿಭಿನ್ನ ರೀತಿಗಳ ತೀರ್ಪು ಮಾಡುವಿಕೆ ಇರುವ ಕಾರಣ ಗೊಂದಲ ಉದ್ಭವಿಸುತ್ತದೆ: ಒಂದು ವಿಧದ ತೀರ್ಪುಮಾಡುವಿಕೆಯು, ಮನುಷ್ಯನ ಬಹಿರಂಗದ ಕಾರ್ಯ ಅಥವಾ ನಡವಳಿಕೆಗೆ ತೀರ್ಪು ಮಾಡುವದಾಗಿದೆ; ಎರಡನೆಯ ರೀತಿಯ ತೀರ್ಪು ಮಾಡುವಿಕೆಯು, ಮನುಷ್ಯನ ಅಂತರಂಗದ ಗುಣನಡತೆ ಮತ್ತು ಉದ್ದೇಶಗಳಿಗೆ, ತೀರ್ಪು ಮಾಡುವದಾಗಿದೆ. "ತೀರ್ಪು ಮಾಡಬೇಡಿರಿ" ಎಂಬ ಯೇಸುವಿನ ಆಜ್ಞೆಯು ಎರಡನೆಯ ರೀತಿಯ ತೀರ್ಪುಮಾಡುವಿಕೆಯನ್ನು ಅಂದರೆ, ಅಂತರಾತ್ಮಕ್ಕೆ ತೀರ್ಪುಮಾಡುವದರ ಕುರಿತಾಗಿದೆ.

ಮನುಷ್ಯನ ಬಹಿರಂಗದ ಸದೃಶ್ಯಕಾರ್ಯ ಮತ್ತು ನಡವಳಿಕೆಗೆ "ತೀರ್ಪುಮಾಡುವದು" ಅಥವಾ ಪ್ರತಿಪಾದಿಸುವದು ಅವಶ್ಯಕ ಹಾಗು ಸಮಂಜಸವಾಗಿರುತ್ತದೆ; ಆದರೆ ಸ್ವತಃ ಅಂತರಾತ್ಮಕ್ಕೆ ತೀರ್ಪು ಮಾಡುವದು ತಪ್ಪಾಗಿರುತ್ತದೆ. ಪೌಲನು ನಿಜವಾಗಿಯೂ ಹೇಳುವದೇನೆಂದರೆ ತಾನು ಆ ವ್ಯಕ್ತಿಯ ಮೇಲೆ ಅಲ್ಲ ಆದರೆ ಆತನ ಪಾಪದ[10] ಕುರಿತು ತೀರ್ಪು ಮಾಡಿದ್ದೇನೆ ಎಂಬದೇ.

**4-5** ಪೌಲನು ತನ್ನ ಮಲತಾಯಿಯೊಂದಿಗೆ ಜಾರತ್ವಮಾಡಿದ ಆವ್ಯಕ್ತಿಯ ವಿಷಯದಲ್ಲಿ ಮಾಡಿದ "ತೀರ್ಪು" ಮಾನವನ ಆತ್ಮದ ಅಂತಿಮ ನ್ಯಾಯತೀರ್ಪಾಗಿರುವದಿಲ್ಲ. ಇದು ಆ ನಿರ್ಧಿಷ್ಟವಾದ ಸಮಯದಲ್ಲಿ ಆ ವ್ಯಕ್ತಿ ಮಾಡಿದ ಪಾಪಕ್ಕೆ ಸಂಬಂಧಿಸಿದ ತೀರ್ಪು ಅಥವಾ ತೀರ್ಮಾನವಾಗಿದೆ ಆ ವ್ಯಕ್ತಿಯು ಸಭೆಯಿಂದ ಬಹಿಷ್ಕರಿಸಲ್ಪಡಬೇಕೆಂಬದು ಪೌಲನ ತೀರ್ಪು (ತೀರ್ಮಾನ) ಆಗಿತ್ತು. ಆದರೆ, ಕ್ರೈಸ್ತರು ಕರ್ತನಾದ ಯೇಸುವಿನ ಹೆಸರಿನಲ್ಲಿ ಸೇರಿಬಂದು ಕರ್ತನಾದ ಯೇಸುವಿನ ಸಾಮರ್ಥ್ಯ ಸಹಿತ ಒಟ್ಟುಗೂಡಿರುವಾಗ ಮಾತ್ರವೇ ಆ ವ್ಯಕ್ತಿಯನ್ನು ಬಹಿಷ್ಕರಿಸಬೇಕೆಂದು ಪೌಲನು ಹೇಳುತ್ತಾನೆ (ವಚನ 4).

ಕೊರಿಂಥದ ಕ್ರೈಸ್ತರು ಅವನನ್ನು ಸೈತಾನನಿಗೆ ಒಪ್ಪಿಸಿಕೊಡಬೇಕಾಗಿತ್ತು (ವಚನ 5). ಒಬ್ಬನು ಎರಡು ರಾಜ್ಯಗಳಿಗೆ ಮಾತ್ರವೇ ಸೇರಿರಬಹುದಾಗಿದೆ – ಸೈತಾನನ ರಾಜ್ಯ ಹಾಗು ದೇವರ ರಾಜ್ಯ – ಮತ್ತು ಒಬ್ಬ ಮನುಷ್ಯನು ಇವೆರಡರಲ್ಲಿ ಒಂದು ರಾಜ್ಯಕ್ಕೆ ಮಾತ್ರವೇ ಸೇರಿದವನಾಗಿದ್ದಾನೆ. ಒಂದು ವೇಳೆ ಒಬ್ಬ ಮನುಷ್ಯನು ಒಂದು ರಾಜ್ಯದಿಂದ ಬಹಿಷ್ಕರಿಸಲ್ಪಡುವದಾದರೆ ಆತನು ಏಕಾಏಕಿ ಇನ್ನೊಂದಕ್ಕೆ

ರಾಜ್ಯಕ್ಕೊಳಪಡುತ್ತಾನೆ. ಯಾವದೇ ವ್ಯಕ್ತಿಯು ಗೊತ್ತಿದ್ದೂ ಪಾಪದಲ್ಲಿ ಮುಂದುವರೆಯುವದಾದರೆ ಆತನು ದೇವರ ರಾಜ್ಯಕ್ಕೆ ಸಂಬಂಧಪಟ್ಟವನಲ್ಲ; ಅವನು ಸೈತಾನನ ರಾಜ್ಯಕ್ಕೆ ಸೇರಿದವನಾಗಿದ್ದಾನೆ (1 ಯೋಹಾನ 3:8-9). ಆದುದರಿಂದ, ಈ ವ್ಯಕ್ತಿಯು ಸೈತಾನನ ರಾಜ್ಯಕ್ಕೆ ವರ್ಗಾಯಿಸಲ್ಪಡಬೇಕೆಂದು ಪೌಲನು ಹೇಳುತ್ತಾನೆ. ಈ ವ್ಯಕ್ತಿಯು ಬಹೀಷ್ಕರಿಸಲ್ಪಟ್ಟವನಾಗಿ ತನ್ನ ಪಾಪವನ್ನು ದ್ವೇಷಿಸುವವನೂ ಅದಕ್ಕಾಗಿ ಪಶ್ಚಾತಾಪಪಡುವವನೂ ಆಗುವನು ಮತ್ತು ಹೀಗೆ ಅಂತಿಮ ನ್ಯಾಯ ತೀರ್ಪಿನದಿನದಲ್ಲಿ – ಕರ್ತನ ಪ್ರತ್ಯಕ್ಷತೆಯ ದಿನದಲ್ಲಿ – ಅವನು ರಕ್ಷಣೆ ಹೊಂದುವನೆಂದು ಪೌಲನ ನಿರೀಕ್ಷೆಯಾಗಿರುತ್ತದೆ (1 ತಿಮೊಥೆ 1:20 ನೋಡಿರಿ).

ಈ ವ್ಯಕ್ತಿಯ ಶರೀರಭಾವವು ನಾಶವಾಗಬೇಕೆಂದು ಸೈತಾನನಿಗೆ ಒಪ್ಪಿಸಿಕೊಡಲ್ಪಡಬೇಕು. ಮಾನವನ ಶರೀರ ಭಾವವು[11] ಅಂತಿಮವಾಗಿ ಮರಣದ ವೇಳೆಯಲ್ಲಿ ನಾಶವಾಗುವದು. ಆದರೆ ಮರಣಕ್ಕೆ ಮುಂಚೆ ಸೈತಾನನಿಂದುಂಟಾಗುವ ವ್ಯಾಧಿಹಾಗು ಉಪದ್ರವದ ಮೂಲಕ ಒಬ್ಬ ಮನುಷ್ಯನು ಪಶ್ಚಾತಾಪ ಪಡಬಹುದು, ಮತ್ತು ಆತನು ತನ್ನ ಪಾಪಗಳ ಬಗ್ಗೆ ಪಶ್ಚಾತಾಪಪಟ್ಟು ನಂಬಿಕೆಯಿಂದ ಯೇಸುವಿನ ಕಡೆಗೆ ತಿರಿಗಿಕೊಳ್ಳುವದಾದರೆ ಆತನು ರಕ್ಷಣೆ ಹೊಂದುವನು (ಜ್ಞಾನೋಕ್ತಿಗಳು 23:14). ಹೀಗೆ ಈ ಪಾಪಮಾಡಿದ ವ್ಯಕ್ತಿಯು ಏಕೆ ಸಭೆಯಿಂದ ಬಹಿಷ್ಕರಿಸಲ್ಪಡಬೇಕೆಂಬುದಕ್ಕೆ ಎರಡು ಕಾರಣಗಳನ್ನು ನೋಡುತ್ತೇವೆ: ಮೊದಲನೆಯದಾಗಿ, ದೇವರ ಪವಿತ್ರಾಲಯವಾದ ಸಭೆಯನ್ನು ಪವಿತ್ರಾಗೊಳಿಸುವದಾಗಿದೆ (1 ಕೊರಿಂಥ 3:16-17); ಮತ್ತು ಎರಡನೆಯದಾಗಿ, ಪಾಪಿಯಾದ ಮನುಷ್ಯನನ್ನು ಪಶ್ಚಾತಾಪಕ್ಕೆ ನಡೆಸಿ ಆತನ ನಿತ್ಯ ಆತ್ಮವು ರಕ್ಷಿಸಲ್ಪಡುವಂತಾಗಬೇಕು ಎಂಬದೇ..

ಒಬ್ಬ ವ್ಯಕ್ತಿಯ ಪಾಪದ ವಿಷಯದಲ್ಲಿ ನೋಡುವದಾದರೆ ಯಾವದೇ ವ್ಯಕ್ತಿಯನ್ನು ಸಭೆಯಿಂದ ಬಹಿಷ್ಕರಿಸುವದಕ್ಕೆ ಮುಂಚೆ ಎರಡು ನಿರ್ಬಂಧುಗಳ ಅವಶ್ಯಕತೆಯಿರುತ್ತದೆಂಬದನ್ನು ಗಮನಿಸಿರಿ.[12] ಮೊದಲನೆಯದಾಗಿ, ವ್ಯಕ್ತಿಯ ಪಾಪವು ಸ್ಪಷ್ಟವಾಗಿ ಗೋಚರವಾಗಿರುವ ಹಾಗು ಅದರ ವಿಷಯದಲ್ಲಿ ಯಾವ ಪ್ರಶ್ನೆಯೇ ಇಲ್ಲದ ಒಂದು ಗಂಭೀರ ಪಾಪವಾಗಿರಬೇಕು. ಎರಡನೆಯದಾಗಿ ವ್ಯಕ್ತಿಯು ಯಾವ ಪಶ್ಚಾತಾಪದ ಸಂಕೇತವಿಲ್ಲದೆ ಆಪಾಪದಲ್ಲಿಯೇ ಮುಂದುವರೆಯುತ್ತಿರಬೇಕು. ತಮ್ಮ ಪಾಪಗಳಿಗಾಗಿ ಪಶ್ಚಾತಾಪ ಪಡುವವರು ಸಭೆಯಿಂದ ಬಹಿಷ್ಕರಿಸಲ್ಪಡಬಾರದು.

ನೆನಪಿರಲಿ, ಪೌಲನು ಬಹಿಷ್ಕರಿಸಲ್ಪಡಬೇಕಾಗಿದ್ದ ಈ ವ್ಯಕ್ತಿಯನ್ನು ತುಚ್ಛೀಕರಿಸುತ್ತಿಲ್ಲ; ಆತನು ಅವನ ಪಾಪವನ್ನು ಮಾತ್ರವೇ ತುಚ್ಛೀಕರಿಸುತ್ತಿದ್ದಾನೆ. ಒಂದು ನಾಣ್ಣುಡಿಯಿರುತ್ತದೆ: ನಾವು ಹೊಡೆಯುವದು ಮಗುವನ್ನಲ್ಲ, ಆದರೆ ಮಗುವಿನ ಕೆಟ್ಟ ನಡವಳಿಕೆಯನ್ನು ಹೊಡೆಯುತ್ತೇವೆ. ಈ ನಾಣ್ಣುಡಿಯಲ್ಲಿ ಸ್ವಲ್ಪ ಮಟ್ಟಿಗೆ ಸತ್ಯವಿರುತ್ತದೆ. ನಾವು ಒಬ್ಬ ವ್ಯಕ್ತಿಯನ್ನು ಸಭೆಯಿಂದ ಬಹಿಷ್ಕರಿಸುವಾಗ ನಮ್ಮ ಉದ್ದೇಶವು ಆತನನ್ನು ಬಹಿಷ್ಕರಿಸುವದಕ್ಕಿಂತಲೂ ಆತನ ಪಾಪವನ್ನು

ಬಹಿಷ್ಕರಿಸುವದಾಗಿರುತ್ತದೆ. ಇದು ಪ್ರಾಥಮಿಕವಾಗಿ ನಾವು ಬಹಹಿಷ್ಕರಿಸಲ್ಪಡಬೇಕಾದ ವ್ಯಕ್ತಿಯ ಪಾಪದಿಂದ ಸಭೆಯನ್ನು ಶುದ್ದೀಕರಿಸುವದಾಗಿರುತ್ತದೆ. ಆದರೆ ಆ ವ್ಯಕ್ತಿಯು ನಿಜವಾಗಿಯೂ ತನ್ನ ಪಾಪಗಳಿಗಾಗಿ ಪಶ್ಚಾತಾಪ ಪಟ್ಟಕೂಡಲೇ ನಾವು ಅವನನ್ನು ಕ್ಷಮಿಸಿ ಪುನಃ ಸಂಪೂರ್ಣವಾಗಿ ಸಭೆಯಲ್ಲಿ ಸೇರಿಸಿಕೊಳ್ಳಬೇಕು. ವಾಸ್ತವದಲ್ಲಿ, ಈ ಭಾಗದಲ್ಲಿ ಪ್ರಸ್ತಾಪಿಸಲ್ಪಟ್ಟ ವ್ಯಕ್ತಿಯ ವಿಷಯದಲ್ಲಿ ಸರಿಯಾಗಿ ಇದೇ ಜರುಗಿತ್ತು (2 ಕೊರಿಂಥ 2:5-11 ಮತ್ತು ವ್ಯಾಖ್ಯಾನ ನೋಡಿರಿ).

**6** ಪೌಲನು ಇಲ್ಲಿ ಸಭೆಯಲ್ಲಿನ ಪಾಪವನ್ನು ಕಣಕದಲ್ಲಿರುವ ಹುಳಿಗೆ ಹೋಲಿಸುತ್ತಾನೆ. ವಾಸ್ತವದಲ್ಲಿ ಹುಳಿಯು ಸೂಕ್ಷ್ಮದರ್ಶಕ ದೇಹರಚನೆ ಅಥವಾ ಅಣಬೆಯಂತಿರುವ ವಸ್ತುವಾಗಿದೆ. ಈ ಹುಳಿಯು ಕಣಕದಲ್ಲಿ ಸೇರಿಸಲ್ಪಡುವದಾದರೆ ಅದು ಕಣಕದಲ್ಲೆಲ್ಲಾ ಹರಡಿ ಅದನ್ನು ಉಬ್ಬಿಸುತ್ತದೆ. ಹೀಗೆ, ಸ್ವಲ್ಪ ಹುಳಿಯು ಇಡೀ ಕಣಕವನ್ನು ಬದಲಾಯಿಸುತ್ತದೆ. ಬೈಬಲ್‌ನಲ್ಲಿ ಹುಳಿ ಎಂಬ ಪದವು ಸಾಮಾನ್ಯವಾಗಿ ಪಾಪ ಅಥವಾ ಕೆಟ್ಟದಕ್ಕೆ ಗುರುತಾಗಿ ಉಪಯೋಗಿಸಲ್ಪಟ್ಟಿದೆ (ಮಾರ್ಕ 8:15 ನೋಡಿರಿ).

ಪೌಲನು ಕೊರಿಂಥ ಸಭೆಯಲ್ಲಿನ ಎರಡು ಪ್ರಮುಖ ಪಾಪಗಳನ್ನು ಪ್ರಸ್ತಾಪಿಸಿದ್ದಾನೆ: ಉಬ್ಬಿಕೊಳ್ಳುವಿಕೆ ಮತ್ತು ಲೈಂಗೀಕ ಅನೈತೀಕತೆ. ಸ್ವಲ್ಪ ಹುಳಿ ಕಲಸಿದರೆ ಕಣಕವೆಲ್ಲಾ ಹುಳಿಯಾಗುವಂತೆಯೇ ಈ ಎರಡು ಪಾಪಗಳು (ಮತ್ತು ಇತರ ಪಾಪಗಳು ಸಹ) ಸಭೆಯಲ್ಲೆಲ್ಲಾ ಹರಡಿ ಅದನ್ನು ಹೊಲೆ ಮಾಡುವವು (ಗಲಾತ್ಯ 5:9 ನೋಡಿರಿ).

**7-8** ಪೌಲನು ಕೊರಿಂಥದ ಕ್ರೈಸ್ತರಿಗೆ ಹಳೆ ಹುಳಿಯ್ನು ತೆಗೆದು ಹಾಕಿರಿ ಎಂದು ಹೇಳುತ್ತಾನೆ. ಈ ಪಾಪಿವ್ಯಕ್ತಿಯನ್ನು ನಿಮ್ಮ ಸಭೆಯಿಂದ ಬಹಿಷ್ಕರಿಸುವದು ಮಾತ್ರವಲ್ಲ, ಆದರೆ ನಿಮ್ಮ ಹೃದಯಗಳಲ್ಲಿರುವ ಪಾಪವನ್ನು ಸಹ ಬಹಿಷ್ಕರಿಸಿರಿ!. ನೀವು ಹುಳಿಯಿಲ್ಲದವರೆನಿಸಿಕೊಂಡಿದ್ದರಿಂದ ಹಳೆ ಹುಳಿಯನ್ನು ತೆಗೆದು ಹಾಕಿ ಹೊಸ ಕಣಿಕದಂತಾಗಿರಿ. ಕೊರಿಂಥದ ಕ್ರೈಸ್ತರು (ಮತ್ತು ಉಳಿದೆಲ್ಲಾ ಕ್ರೈಸ್ತರು) ಆತ್ಮೀಕವಾಗಿ ನೂತನ ಗೊಳಿಸಲ್ಪಟ್ಟಿದ್ದಾರೆ; ಅವರು ಹೊಸಕಣಿಕವಾಗಿದ್ದಾರೆ. ಆದಕಾರಣ, ಅವರು ಪಾಪದ ಹಳೆ ಹುಳಿಯಿಲ್ಲದವರಾಗಿರಬೇಕು. ಕ್ರೈಸ್ತರಾದ ನಾವು ನೂತನ ಸೃಷ್ಟಿಯಾಗಿದ್ದೇವೆ (2 ಕೊರಿಂಥ 5:17). ಅಲ್ಲದೆ ನಾವು ದೇವರ ಆಲಯ ಸಹ ಆಗಿದ್ದೇವೆ (1 ಕೊರಿಂಥ 3:16-17). ಆದುದರಿಂದ ನಮ್ಮಲ್ಲಿ ಹಳೆಹುಳಿಗೆ ಸ್ಥಾನವಿಲ್ಲ!

ಯಾಕೆಂದರೆ ನಮ್ಮ ಪಸ್ಕದ ಯಜ್ಞದ ಕುರಿಯ ಕೊಯಿದದೆ; ಅದಾವದೆಂದರೆ ಕ್ರಿಸ್ತನೇ (ವಚನ 7). ಪಸ್ಕ ಎಂಬ ಪದದ ಅರ್ಥವು "ವಿಮೋಚನೆ". ಮೋಶೆಯ ಕಾಲದಲ್ಲಿ ಯೆಹೂದ್ಯರು ಐಗುಪ್ತ್ಯದ ದಾಸತ್ವದಲ್ಲಿ ಜೀವಿಸುತ್ತಿದ್ದರು. ಯೆಹೂದ್ಯರನ್ನು ಬಿಡುಗಡೆಗೊಳಿಸುವಂತೆ ಐಗುಪ್ತ್ಯದ ಅರಸನನ್ನು ಒತ್ತಾಯ ಪಡಿಸುವದಕ್ಕಾಗಿ ದೇವರು ಐಗುಪ್ತ್ಯರ ಮೇಲೆ ಅನೇಕ ಉಪದ್ರವಗಳನ್ನು ಬರಮಾಡಿದನು, ಅವುಗಳಲ್ಲಿ ಕೊನೆಯದು ಐಗುಪ್ತ್ಯದ ಜನರ ಹಾಗು ಪ್ರಾಣಿಗಳೆಡರ ಚೊಚ್ಚಲು ಮಕ್ಕಳುಗಳಿಗೆ ಮರಣವನ್ನು ಉಂಟುಮಾಡುವದಾಗಿತ್ತು. ಹೇಗಿದ್ದರೂ, ತಮ್ಮ ಸ್ವಂತ ಚೊಚ್ಚಲು ಮಕ್ಕಳನ್ನು ಉಳಿಸಿಕೊಳ್ಳುವದಕ್ಕಾಗಿ ಯೆಹೂದ್ಯರು ಕರಿಮರಿಯೊಂದನ್ನು ಯಜ್ಞವರ್ಪಿಸಿ ಅದರ ರಕ್ತವನ್ನು ತಮ್ಮ ಮನೆ ಬಾಗಲುಗಳಿಗೆ ಹಚ್ಚಿದರು (ವಿಮೋಚನಕಾಂಡ 12:6-8). ಹೀಗೆ, ದೇವರು ತನ್ನ ದೂತನನ್ನು ಐಗುಪ್ತ್ಯದ ಚೊಚ್ಚಲು ಮಕ್ಕಳನ್ನೆಲ್ಲಾ ಕೊಲ್ಲುವದಕ್ಕೆ ಕಳುಹಿಸಿದಾಗ ದೇವದೂತನು ಯೆಹೂದ್ಯರ "ಮನೆಗಳಿಗೆ ರಕ್ತವು ಲೋಪಿಸಲ್ಪಟ್ಟಿರುವದನ್ನು ನೋಡಿ ಅವರ ಚೊಚ್ಚಲು ಮಕ್ಕಳನ್ನು ಕೊಲ್ಲದೆ ದಾಟಿಹೋದನು" (ವಿಮೋಚನಕಾಂಡ 12:12-13). ಮುಂಜಾನೆಯಲ್ಲಿ ಐಗುಪ್ತ್ಯದ ಅರಸನು ಭಯದಿಂದ ತುಂಬಿದವನಾಗಿ ಯೆಹೂದ್ಯರನ್ನು ಹೊರಟು ಹೋಗಲು ಅನುಮತಿಸಿದನು. ಹೀಗೆ ಯೆಹೂದ್ಯರು ದಾಸತ್ವದೊಳಗಿಂದ ವಿಮೋಚಿಸಲ್ಪಟ್ಟರು, ಮತ್ತು ಈ ಹೊತ್ತಿನ ವರೆಗೂ ಅವರು ಪಸ್ಕ (ವಿಮೋಚನೆ) ಹಬ್ಬವನ್ನು ಆಚರಿಸುವದರ ಮೂಲಕ ಘಟನೆಯನ್ನು ಜ್ಞಾಪಿಸಿಕೊಳ್ಳುತ್ತಾರೆ.

ಅವರ ವಿಮೋಚನೆಯ ರಾತ್ರಿಯಲ್ಲಿ ಯೆಹೂದ್ಯರು ತಾವು ಯಜ್ಞ ಮಾಡಿದ ಕುರಿಯ ಜೊತೆಯಲ್ಲಿ ಹುಳಿಯಿಲ್ಲದ ರೊಟ್ಟಿಯನ್ನು ಸಹ ಭುಜಿಸಿದರು (ವಿಮೋಚನಕಾಂಡ 12:8). ಅಂದಿನಿಂದ ಅವರು ತಮ್ಮ ವಿಮೋಚನೆಯ ಜ್ಞಾಪಕಾರ್ಥವಾಗಿ ಪ್ರತಿವರ್ಷವೂ ಪಸ್ಕಹಬ್ಬವನ್ನು [13] ಆಚರಿಸಬೇಕೆಂದು ದೇವರು ಅವರಿಗೆ ಹೇಳಿದನು (ವಿಮೋಚನಕಾಂಡ 12:14). ಹಬ್ಬದ ಅವಧಿಯ ವೇಳೆಯಲ್ಲಿ ಅವರು ತಮ್ಮ ಮನೆಗಳಿಂದ ಎಲ್ಲಾ ಹುಳಿಯನ್ನು ತೆಗೆದು ಹಾಕಬೇಕಾಗಿತ್ತು (ವಿಮೋಚನಕಾಂಡ 12:15). ಕಾರಣವೇನೆಂದರೆ ಹುಳಿಯು ಐಗುಪ್ತ್ಯದ ಪಾಪಗಳ ಚಿನ್ಹೆಯಾಗಿತ್ತು. ಅದೇ ಪ್ರಕಾರವಾಗಿ ಹುಳಿಯು ಕೊರಿಂಥದ ಸಭೆಯಲ್ಲಿನ ಪಾಪಗಳಿಗೆ ಗುರುತ್ತಾಗಿತ್ತು. ಪೌಲನು ಇಲ್ಲಿ ಯೇಸು ಕ್ರಿಸ್ತನನ್ನು ನಮ್ಮ ಪಸ್ಕದ ಯಜ್ಞದ ಕುರಿಯೆಂಬದಾಗಿ ಕರೆಯುತ್ತಾನೆ (ಯೋಹಾನ 1:36). ಯೇಸುವಿನ ಮರಣ, ಆತನ ರಕ್ತದ ಮೂಲಕ ದೇವರು ಯೆಹೂದ್ಯರನ್ನು ಐಗುಪ್ತ್ಯದ ದಾಸತ್ವದೊಳಗಿಂದ ವಿಮೋಚಿಸಿದ ಹಾಗೆಯೇ ನಮ್ಮನ್ನು ಪಾಪದ ದಾಸತ್ವದೊಳಗಿಂದ ವಿಮೋಚಿಸಿದನು (1 ಪೇತ್ರ 1:18-19 ನೋಡಿರಿ). ಮತ್ತು ಯೆಹೂದ್ಯರು ಹುಳಿಯಿಲ್ಲದ ರೊಟ್ಟಿಯ ಜೊತೆಯಲ್ಲಿ ತಾವು ಯಜ್ಞಮಾಡಿದ ಕುರಿಯನ್ನು ತಿನ್ನ ಬೇಕಾಗಿದ್ದ ಹಾಗೆಯೇ ನಾವು ಸಹ ಹುಳಿಯಿಲ್ಲದ ರೊಟ್ಟಿಯನ್ನೇ – ದುರ್ಮಾರ್ಗತ್ವ ದುಷ್ಟತ್ವ ಎಂಬ ಹುಳಿಯಿಲ್ಲದ ರೊಟ್ಟಿ –(ವಚನ 8). ತೆಗೆದುಕೊಂಡು ಹಬ್ಬವನ್ನು ಆಚರಿಸೋಣ (ಕ್ರಸ್ತನ ಜೀವದಲ್ಲಿ ಪಾಲುಗಾರರಾಗೋಣ). ಹುಳಿಯಿಲ್ಲದ ರೊಟ್ಟಿಯು ಸರಳತೆ ಸತ್ಯತೆಯ ರೊಟ್ಟಿಯೇ ಆಗಿದೆ. ಕ್ರೈಸ್ತರು ಯೆಹೂದ್ಯರ ಪಸ್ಕ ಹಬ್ಬದ ಬದಲಾಗಿ ಯೇಸುವಿನ ಮರಣ ಮತ್ತು ಪುನರುತ್ಥಾನವನ್ನು ಆಚರಿಸುತ್ತಾರೆ. ಯೇಸು ಪಸ್ಕ ಹಬ್ಬದ ವೇಳೆಯಲ್ಲಿ ಮರಣಕ್ಕೊಳಗಾದನು. ಆತನು ಸ್ವತಃ ನಮ್ಮ "ಪಸ್ಕ"ಕ್ಕಾಗಿಯೂ ಪಾಪದಿಂದ ನಮ್ಮನ್ನು ವಿಮೋಚಿಸುವದಾಗಿಯೂ ಯಜ್ಞವಾದನು.

ಆದರೆ ಕ್ರೈಸ್ತರಾದ ನಾವು ಪಸ್ಕ ಹಬ್ಬವನ್ನು ವರ್ಷದಲ್ಲಿ ಕೇವಲ ಒಂದು ದಿನ ಅಥವಾ ಒಂದು ವಾರ ಮಾತ್ರವೇ ಆಚರಿಸುವದಿಲ್ಲ. ನಾವು ವರ್ಷಪೂರ್ತಿಯೆಲ್ಲಾ ಪ್ರತಿದಿನವೂ ಅದನ್ನು ಆಚರಿಸುತ್ತೇವೆ. ವಾಸ್ತವದಲ್ಲಿ, ಪೌಲನು ಇಲ್ಲಿ

ಉಪಯೋಗಿಸುವ ಆಚರಿಸೋಣ ಎಂಬ ಗ್ರೀಕ್ ಪದದ ಅಕ್ಷರಂಶ: ಅರ್ಥವು "ಆಚರಿಸುತ್ತಲಿರೋಣ" ಎಂದಾಗಿರುತ್ತದೆ. ಆದುದರಿಂದ, ವರ್ಷದ ಪ್ರತಿಯೊಂದು ದಿನದಲ್ಲಿ ನಾವು ಹಬ್ಬವನ್ನು (ಪಸ್ಕ) ಆಚರಿಸಲಿಕ್ಕಿರುವದಾದರೆ ನಾವು ದುರ್ಮಾರ್ಗತ್ವ ದುಷ್ಟತ್ವಗಳೆಂಬ ಹಳೆ ಹುಳಿಯನ್ನು ನಮ್ಮ ಹೃದಯಗಳಿಂದಲೂ ನಮ್ಮ ಸಭೆಯಿಂದಲೂ ಪ್ರತಿದಿನವೂ ತೆಗೆದು ಹಾಕಲ್ಪಡುತ್ತಿರಬೇಕು!

**9-10** ಪೌಲನು ಈ ೯ನೇ ವಚನದಲ್ಲಿ ಕಳೆದು ಹೋಗಿರುವ ಮುಂಚಿನ ಒಂದು ಪತ್ರಿಕೆಯನ್ನು ಸೂಚಿಸಿ ಮಾತಾಡುತ್ತಾನೆ. ಈ ಪತ್ರಿಕೆ ಮತ್ತು 2 ಕೊರಿಂಥ 2;3-4ರಲ್ಲಿ ಸೂಚಿಸಲಾಗಿರುವ ಕಳೆದು ಹೋದ ಇನ್ನೊಂದು ಪತ್ರಿಕೆ ಎರಡೂ ಬೇರೆ ಬೇರೆಯಾಗಿವೆ.

ಈ 9ನೇ ವಚನದಲ್ಲಿ ಸೂಚಿಸಲಾಗಿರುವ ಪತ್ರಿಕೆಯಲ್ಲಿ ಪೌಲನನು ಕೊರಿಂಥದವರಿಗೆ ಅವರು ಲೈಂಗಿಕ ಅನೈತೀಕತೆಯುಳ್ಳ ಜನರೊಂದಿಗೆ ಸಹವಾಸವನ್ನು ಇಟ್ಟುಕೊಳ್ಳಲೇ ಬಾರದೆಂದು ಬರೆದಿದ್ದನು. ಹೇಗಿದ್ದರೂ, ಕ್ರೈಸ್ತರಲ್ಲದ ಹಾಗು ಸಭೆಯ ಹೊರಗಿದ್ದ ಲೈಂಗೀಕವಾಗಿ ಅನೈತೀಕತೆಯುಳ್ಳ ಜನರೊಂದಿಗೆ ಸಹವಾಸ ಇಟ್ಟುಕೊಳ್ಳುವ ವಿಷಯಕ್ಕೆ ಬಂದಾಗ ಅದೊಂದು ವ್ಯತ್ಯಾಸವಾದ ವಿಷಯವಾಗಿತ್ತು. ಈ ಅವಿಶ್ವಾಸಿಗಳೊಂದಿಗೆ ಸಹವಾಸ ಇಟ್ಟುಕೊಳ್ಳುವದು ಅವಶ್ಯಕವಾಗಿತ್ತು, ಯಾಕೆಂದರೆ ಸಹವಾಸವಿಲ್ಲದಿದ್ದರೆ ಅವರೊಂದಿಗೆ ಸುವಾರ್ತೆಯನ್ನು ಹಂಚಿಕೊಳ್ಳಲು ಅವಕಾಶವೇ ದೊರೆಯುವದಿಲ್ಲ. ಕ್ರಿಸ್ತನು ಸ್ವತಃ ಪಾಪಿಗಳೊಂದಿಗೆ ಸಹವಾಸ ಇಟ್ಟುಕೊಂಡಿದ್ದನು. (ಮಾರ್ಕ 2:15-17 ನೋಡಿರಿ). ಒಂದು ವೇಳೆ ನಾವು ಎಲ್ಲಾ ಪಾಪಿಗಳೊಂದಿಗೆ ಸಹವಾಸವನ್ನು ಕಳೆದು ಕೊಳ್ಳಬೇಕಾಗಿದ್ದರೆ ನಾವು ಈ ಲೋಕವನ್ನೇ ತೊರೆದು ಬಿಡಬೇಕಾಗುತ್ತದೆ! (ಯೋಹಾನ 17:15 ನೋಡಿರಿ).

**11** ಇಲ್ಲಿ ಪೌಲನು ಪುನಃ ತನ್ನ ಮುಂಚಿನ ಪತ್ರಿಕೆಯ ಅರ್ಥವನ್ನು ವಿವರಿಸುತ್ತಾನೆ: ಕೊರಿಂಥದ ಕ್ರೈಸ್ತರು ಕ್ರೈಸ್ತ ಸಹೋದರನೆನಿಸಿಕೊಂಡವನು ಈ ವಚನದಲ್ಲಿ ಪಟ್ಟಿಮಾಡಲ್ಪಟ್ಟಿರುವ ಕೆಟ್ಟ ಕಾರ್ಯಗಳಲ್ಲಿ ಮುಂದುವರೆಯುವದಾದರೆ ಅಂತಹ ಸಹೋದರನೊಂದಿಗೆ ಸಹವಾಸ ಮಾಡಬಾರದು (2 ಥೆಸಲೋನಿಕ 3:6 ನೋಡಿರಿ). ಅಂಥವನ ಸಂಗಡ ಊಟಮಾಡಲೂ ಬಾರದು: ಅಂದರೆ ಯಾವ ರೀತಿಯ ಸಹವಾಸವನ್ನು ಇಟ್ಟುಕೊಳ್ಳಬಾರದು ಅಂಥವನು ಸಭೆಯಿಂದ ಬಹಿಷ್ಕರಿಸಲ್ಪಡಬೇಕು (ವಚನ 13).

ಸಭೆಯೊಳಗೆ ಹೊರಗಿನಿಂದ ಪಾಪವು ಪ್ರವೇಶಿಸುವದು ನಿಜವಾಗಿಯೂ ಒಂದು ದೊಡ್ಡ ಅಪಾಯ' ಆದರೆ ಸಭೆಯೊಳಗಿನಿಂದ ಪಾಪವು ಉದ್ಭವವಾಗುವದಾದರೆ ಇನ್ನು ಹೆಚ್ಚು ದೊಡ್ಡ ಅಪಾಯವಿರುತ್ತದೆ. ಆ ಪಾಪವು ಹುಳಿಯಂತಿದ್ದು ಬಹುಬೇಗನೆ ಹರಡಿ ಇಡೀ ಸಭೆಯನ್ನೇ ಹೊಲೆಮಾಡುತ್ತದೆ.

**12-13** ಸಭೆಯ ಹೊರಗಿನವರ (ಅವಿಶ್ವಾಸಿಗಳ) ವಿಷಯದಲ್ಲಿ ತೀರ್ಪು ಅಥವಾ ತೀರ್ಮಾನ ಮಾಡುವದು ಕ್ರೈಸ್ತರ ಕೆಲಸವಲ್ಲ. ಹೊರಗಿನವರಿಗೆ ದೇವರು ತೀರ್ಪು ಮಾಡುತ್ತಾನೆ. ಹೆಗಿದ್ದರೂ, ಸಭೆಯ ಒಳಗಿನವರನ್ನು ಕುರಿತು ತೀರ್ಪು ನೀಡುವದು ವಿಶ್ವಾಸಿಗಳ ಜವಾಬ್ದಾರಿಯಾಗಿರುತ್ತದೆ. ಜೊತೆಯ ಕ್ರೈಸ್ತರನ್ನು ಕುರಿತು "ತೀರ್ಪುನೀಡುವ" ಕ್ರೈಸ್ತರ ಜವಾಬ್ದಾರಿಯು ಅವರ ಬಹಿರಂಗದ ನಡವಳಿಕೆಯ ವಿಷಯದಲ್ಲಿ ಮಾತ್ರ ಅನ್ವಯಿಸುತ್ತದೆ ಹೊರತು ಅಂತರಾತ್ಮದ ವಿಷಯದಲ್ಲಿ ಅಲ್ಲ (ವಚನ 3 ಮತ್ತು ವ್ಯಾಖ್ಯಾನ ನೋಡಿರಿ).

ತೀರ್ಪು ಮಾಡುವಿಕೆಯು ಸಭೆಯಲ್ಲಿ ಶಿಸ್ತನ್ನು ನೀಡಲು ಸರಿಯಾಗಿ ಅಧಿಕಾರ ಕೊಡಲ್ಪಟ್ಟಿರುವವರಿಂದ ಮಾತ್ರವೇ – ಕೆಲವು ಸಭೆಗಳಲ್ಲಿ ಇಡೀ ಸಭೆಯು ಒಂದೇ ಅಂಗವಾಗಿ ಕ್ರಮತೆಗೆದುಕೊಳ್ಳಬಹುದು – ಮಾಡಲ್ಪಡಬೇಕು (ವಚನ 4). ಪಾಪದಲ್ಲಿ ಜೀವಿಸುತ್ತಿರುವ ಸಭಾಸದಸ್ಯನ ವಿಷಯದಲ್ಲಾದರೆ ಸಭೆಯ ಪವಿತ್ರತೆಯನ್ನು ಕಾಪಾಡಿಕೊಳ್ಳುವದಕ್ಕಾಗಿ ಇತರ ಸಭಾಸದಸ್ಯರು ಆ ವ್ಯಕ್ತಿಯನ್ನು ಬಹಿಷ್ಕರಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಆದರೆ ಪೌಲನು ಇಲ್ಲಿ ಮಾತಾಡುತ್ತಿರುವ ತೀರ್ಪು ಮಾಡುವಿಕೆಯು ಬಹಿರಂಗದ ಕ್ರಿಯೆಗಳನ್ನೊಳಗೊಂಡಿರುತ್ತದೆ ಹೊರತು ವ್ಯಕ್ತಿಯ ಅಂತರಾತ್ಮದ ಕ್ರಿಯೆಗಳನ್ನು ಒಳಗೊಂಡಿರುವದಿಲ್ಲ ಎಂಬದು ನೆನಪಿರಲಿ. ದೇವರು ಮಾತ್ರವೇ ಸ್ವತಃ ಮನುಷ್ಯನಿಗೆ ತೀರ್ಪು ಮಾಡಲು ಯೋಗ್ಯನು ಮತ್ತು ಶಕ್ತನಾಗಿದ್ದಾನೆ.

---

## ಅಧ್ಯಾಯ - 6

### ವಿಶ್ವಾಸಿಗಳ ಮದ್ಯದಲ್ಲಿ ಮೊಕದ್ದಮೆಗಳು (6:1-11)

**1** ಈ ಭಾಗದಲ್ಲಿ ಪೌಲನು ಕೊರಿಂಥದ ಸಭೆಯಲ್ಲಿದ್ದ ಇನ್ನೊಂದು ಸಮಸ್ಯೆಯನ್ನು ಮುಂದಿಡುತ್ತಾನೆ, ಇದು ಆತನಿಗೆ ಇತರರಿಂದ ವರದಿಮಾಡಲ್ಪಟ್ಟಿತ್ತು: ಅಂದರೆ, ಸಭೆಯ ಕೆಲವು ಮಂದಿ ಸದಸ್ಯರು ಸಭೆಯ ಇತರ ಸದಸ್ಯರ ವಿರುದ್ಧವಾಗಿ ವ್ಯಾಜ್ಯಗಳನ್ನು ತೆಗೆದುಕೊಂಡು ನ್ಯಾಯಸಭೆಗೆ ಹೋಗುತ್ತಿದ್ದರು; ಸಹೋದರನು ಸಹೋದರನ ಮೇಲೆ ವ್ಯಾಜ್ಯವನ್ನು ತೆಗೆದು ಕೊಂಡು ನ್ಯಾಯಸಭೆಗೆ ಹೋಗುತ್ತಾನೆ (ವಚನ 6).

ಯಾವದೇ ಸಭೆಯಲ್ಲಿ ಆಗಾಗ ಸದಸ್ಯರ ನಡುವೆ ವಾಗ್ವಾದಗಳು ಉದ್ಭವಾಗುವ ಸಾಧ್ಯತೆಯಿದೆ. ಅದು ಸಂಭವಿಸಬಾರದು, ಆದರೆ ಅದು ಸಂಭವಿಸುತ್ತದೆಂಬುದು ನಮಗೆಲ್ಲಾ ತಿಳಿದದೆ. ಈ ರೀತಿಯ ಜಗಳಗಳು ಉದ್ಭವಿಸುವೆಂಬದು ಕ್ರಿಸ್ತನಿಗೆ ಸಹ ಗೊತ್ತಿತ್ತು. ಮತ್ತು ಅವುಗಳು ಉದ್ಭವಿಸುವಾಗ ಏನು ಮಾಡಬೇಕು ಎಂಬುದಕ್ಕೆ ಸ್ಪಷ್ಟವಾದ ಸಲಹೆಗಳನ್ನು ಕೊಟ್ಟನು – ಮತ್ತು ಆ ಸಲಹೆಗಳು ಜಗಳವನ್ನು ಸಭೆಯೊಳಗೆ ಇತ್ಯರ್ಥಮಾಡಿಕೊಳ್ಳುವದನ್ನು ಒಳಗೊಂಡಿದ್ದವು (ಮತ್ತಾಯ 18:15-17 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ಕೊರಿಂಥದ ಕ್ರೈಸ್ತರು ಸಭೆಯ ಹೊರಗಿನ ನ್ಯಾಯಸಭೆಗೆ ಹೋಗುತ್ತಿದ್ದರು ಹಾಗು ಕ್ರಿಸ್ತಭಕ್ತರಲ್ಲದವರ ಮುಂದೆ, ಅಂದರೆ ವಿಶ್ವಾಸಿಗಳಲ್ಲದವರ ಮುಂದೆ ದೂರು ಹೇಳಿಕೊಳ್ಳುತ್ತಿದ್ದರು.

ಪೌಲನು ಏಕೆ ಅವಿಶ್ವಾಸಿಗಳನ್ನು ಭಕ್ತರಲ್ಲದವರು ಎಂದು ಕರೆದನು? ಯಾಕೆಂದರೆ ಜನರೆಲ್ಲರೂ ಯೇಸುವನ್ನು ನಂಬುವ ತನಕ ಭಕ್ತಿ ಹೀನರಾಗಿದ್ದಾರೆ (ರೋಮ 3:10). ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ಮನುಷ್ಯನು "ಭಕ್ತಿವಂತನು" ಅಥವಾ ನೀತಿವಂತನೆಂದು ನಿರ್ಣಯಿಸಲ್ಪಡುವನು (ರೋಮ 5:1; ಗಲಾತ್ಯ 2:15-16 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಪೌಲನು ಕೇಳುವದೇನೆಂದರೆ: ಭಕ್ತರಲ್ಲದವರು ಹೇಗೆ ದೇವಜನರಿಗೆ, ಅಂದರೆ ವಿಶ್ವಾಸಿಗಳಿಗೆ ತೀರ್ಪು ಮಾಡುವದಕ್ಕೆ ಸಾಧ್ಯ? ವಿಶ್ವಾಸಿಗಳು ಆತ್ಮೀಕ ತಿರುಳಿನ ಪ್ರಾಕಾರವಗಿ ಮಾತ್ರವೇ ತೀರ್ಪುಮಾಡಲ್ಪಡಬಹುದು; ದೇವರಾತ್ಮನಿಂದ ನಡಿಸಿಕೊಳ್ಳುವವನನ್ನು...ಯಾವನಾದರೂ ವಿಚಾರಿಸಿ ತಿಳುಕೊಳ್ಳುವದಿಲ್ಲ (1 ಕೊರಿಂಥ 2:15).

ಕ್ರೈಸ್ತರು ನ್ಯಾಯಾಧಿಪತಿಗಳ ಹಾಗು ನ್ಯಾಯ ಸಭೆಯ ತೀರ್ಮಾನಗಳನ್ನು ಧಿಕ್ಕರಿಸಬೇಕೆಂದು ಅಲ್ಲಿ ಪೌಲನ ತಾತ್ಪರ್ಯವಲ್ಲ. ಖಂಡಿತವಾಗಿಯು ಇಲ್ಲ. ಪೌಲನು ಸ್ವತಃ ಎಲ್ಲಾ ಸರ್ಕಾರಿ ಅಧಿಕಾರಿಗೆ ಅಧೀನಾಗಿದ್ದು ಅವರನ್ನು ಗೌರವಿಸುವವನಾಗಿದ್ದಾನೆ (ರೋಮ 13:1-7 ನೋಡಿರಿ). ಪೌಲನು ಇಲ್ಲಿ ಕ್ರೈಸ್ತರ ನಡುವೆ ಉದ್ಭವಿಸುವ ಜಗಳಗಳು ಸಭೆಯೊಳಗೆ ಇತ್ಯರ್ಥಮಾಡಿಕೊಳ್ಳಲ್ಪಡಬೇಕು ಹೊರತು ಸರ್ಕಾರಿ ನ್ಯಾಯಾಲಯಗಳ ವರೆಗೆ ಹೋಗಬಾರದು ಎಂದು ಮಾತ್ರವೇ ಹೇಳುತ್ತಿದ್ದಾನೆ.

2 ದೇವಜನರು (ವಿಶ್ವಾಸಿಗಳು) ಲೋಕಕ್ಕೆ ತೀರ್ಪು ಮಾಡುವರು[14]. ಅವರು ಲೋಕಕ್ಕೆ ತೀರ್ಪು ಮಾಡುವವರಾಗಿರುವದರಿಂದ ಅವರು ಸಹೋದರರ ನಡುವಿನ ವಿಷಯಗಳನ್ನು ಕುರಿತು ತೀರ್ಪುಮಾಡಿಕೊಳ್ಳಲು ಶಕ್ತರಾಗಿರತಕ್ಕದ್ದು! ವಿಶ್ವಾಸಿಗಳು ಯಾವಾಗ ಲೋಕಕ್ಕೆ ತೀರ್ಪುಮಾಡುವರು? ಕ್ರಿಸ್ತನು ನ್ಯಾಯ ತೀರ್ಪಿನ ದಿನದಲ್ಲಿ ತಿರಿಗಿ ಬರುವಾಗ ತೀರ್ಪುಮಾಡುವರು (ಮತ್ತಾಯ 19:28; ಪ್ರಕಟಣೆ 3:21 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

3 ವಿಶ್ವಾಸಿಗಳು ದೇವದೂತರಿಗೂ ತೀರ್ಪುಮಾಡುವರು (2 ಪೇತ್ರ 2:4; ಯೂದ 6 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ತೀರ್ಪು ಮಾಡುವ ಈ ದೇವದೂತರು ಯಾರು? ಅವರು ಪರಲೋಕದ ಜೀವಗಳಾಗಿದ್ದಾರೆ. ಕೆಲವು ದೇವದೂತರು ದೇವರಿಗೆ ವಿಧೇಯರಾಗುಳಿದು ಆತನನ್ನು ಸೇವಿಸುತ್ತಿದ್ದಾರೆ. ಮತ್ತು ಸೈತಾನ ಹಾಗು ಆತನ ದುರಾತ್ಮಗಳಂತಹ ಇತರರು ದೇವರ ವಿರುದ್ಧಬಂಡಾಯವೆದ್ದು ಈಗ ಆತನನ್ನು ವಿರೋಧಿಸುತ್ತಿದ್ದಾರೆ (ಪ್ರಕಟಣೆ 12:9 ನೋಡಿರಿ). ನ್ಯಾಯತೀರ್ಪಿನ ದಿನದಲ್ಲಿ ಈ ದುಷ್ಟ ದೇವದೂತರು (ದುರಾತ್ಮಗಳು) ತೀರ್ಪಿಗೊಳಗಾಗಿ ದಂಡನೆಹೊಂದುವರು. ಪೌಲನು ತಿಳಿಸಲಿಚ್ಛಿಸುವ ಅಂಶವೇನೆಂದರೆ: ಒಂದು ವೇಳೆ ಕ್ರೈಸ್ತರು ಒಂದು ದಿನ ದೇವದೂತರಂತಹ ಪರಲೋಕದ ಜೀವಿಗಳಿಗೆ ತೀರ್ಪು ಮಾಡುವವರಾಗಿರುವದಾದರೆ ನಿಶ್ಚಯವಾಗಿಯೂ ಅವರು ಸಹೋದರರ ಮಧ್ಯದಲ್ಲಿನ ಜಗಳಗಳಂತಹ ಲೌಕೀಕ ಸಂಗತಿಗಳಿಗೆ ತೀರ್ಪು ಮಾಡುವದಕ್ಕೆ ಶಕ್ತರಾಗಿರಬೇಕಲ್ಲವೇ!

4 ಪೌಲನು ಇಲ್ಲಿ ಹೇಳುವದೇನೆಂದರೆ ಕೊರಿಂಥದ ಕ್ರೈಸ್ತರು ಲೋಕ ಹಾಗು ದೇವದೂತರಂತಹ ದೊಡ್ಡ ಸಂಗತಿಗಳಿಗೆ ತೀರ್ಪುಮಾಡುವವರಾಗಿರುವದರಿಂದ ನಿಶ್ಚಯವಾಗಿಯೂ ಸಭೆಯಲ್ಲಿ ಗಣನೆಗೆ ಬಾರದವರು[15] ಸಹೋದರರ ಮಧ್ಯದಲ್ಲಿ ಉದ್ಭವಿಸುವ ಜಗಳಗಳಿಗೆ ತೀರ್ಪು ಮಾಡುವದಕ್ಕೆ ಶಕ್ತರಾಗಿರಬೇಕು. ಹೇಗೂ, ವ್ಯಾಜ್ಯಗಳನ್ನು ಸಭೆಯ ಹೊರಗಿನ ಕ್ರಿಸ್ತ ಭಕ್ತರಲ್ಲದ ನ್ಯಾಯಾಧಿಪತಿಗಳ ಮುಂದೆ ತೆಗೆದುಕೊಂಡು ಹೋಗುವದಕ್ಕಿಂತಲೂ ಸಭೆಯಲ್ಲಿ ಗಣನೆಗೆ ಬಾರದವರನ್ನು ತೀರ್ಪುಮಾಡುವದಕ್ಕೆ ನೇಮಿಸುವದು ಉತ್ತಮವಾದದ್ದು.

ಸಭೆಯಲ್ಲಿ ಗಣನೆಗೆ ಬಾರದ ಈ ವ್ಯಕ್ತಿಗಳು ಯಾರು? ಅವರು ಸಾಮಾನ್ಯ ಕ್ರೈಸ್ತರಾಗಿದ್ದಾರೆ. ಪೌಲನು ಇಲ್ಲಿ ವಿಶೇಷವಾಗಿ ಸಭೆಯಲ್ಲಿರುವ ಅತಿ ದೀನ ಹಾಗು ಅವಿಧ್ಯಾವಂತ ಸದಸ್ಯರ ಬಗ್ಗೆ ಯೋಚಿಸುತ್ತಿದ್ದಾನೆ. ಸಭೆಯ ವ್ಯಾಜ್ಯಗಳನ್ನು ಕುರಿತು ತೀರ್ಪುಮಾಡುವದಕ್ಕೆ ಈ ಗಣನೆಗೆ ಬಾರದ ಕ್ರೈಸ್ತರು ಹೊರಗಿನ ನ್ಯಾಯಾಧಿಪತಿಗಳಿಗಿಂತಲೂ ಹೆಚ್ಚು ಶಕ್ತರಾಗಿದ್ದಾರೆ.

5 ಕೊರಿಂಥದ ಕ್ರೈಸ್ತರು ತಮ್ಮ "ಜ್ಞಾನದಲ್ಲಿ" ಅತಿಯಾಗಿ ಹೆಚ್ಚಳಪಟ್ಟುಕೊಂಡರು. ಅವರು ತಾವು ಅಪೊಸ್ತಲರಿಗಿಂತಲೂ ಜ್ಞಾನಿಗಳೆಂದು ನೆನಸಿದರು (1 ಕೊರಿಂಥ 4:20). ಆದುದರಿಂದ, ಸಹೋದರರ ಮದ್ಯದಲ್ಲಿನ ಈ ವ್ಯಾಜ್ಯಗಳಿಗೆ ತೀರ್ಪು ಮಾಡುವದಕ್ಕೆ ಶಕ್ತನಾಗುವಷ್ಟು ಒಬ್ಬ ಜ್ಞಾನಿಯಾದರೂ ಸಭೆಯಲ್ಲಿ ಇಲ್ಲದಿರುವದಕ್ಕೆ ಹೇಗೆ ಸಾಧ್ಯ? ಎಂದು ಪೌಲನು ಮಾರ್ಮಿಕವಾಗಿ ಪ್ರಶ್ನಿಸುತ್ತಾನೆ.

6 ನಿಮ್ಮ ಕ್ರೈಸ್ತ ಸಹೋದರನನ್ನು ನ್ಯಾಯಾಲಯಕ್ಕೆ ಒಯ್ಯುವದು ಬಹಳ ತಪ್ಪಾಗಿರುತ್ತದೆ. ನೀವು ಹಾಗೆ ಮಾಡುವಾಗ ನಿಮ್ಮ ಸಹೋದರನಿಗೆ ವೈರಿಯಾಗುವಿರಿ. ನೀವು ಹಾಗೆ ಮಾಡುವದಾದರೆ ಪ್ರೀತಿ ಎಲ್ಲಿದೆ? ನಿಮ್ಮ ಸಹೋದರನೊಂದಿಗೆ ವ್ಯಾಜ್ಯ ಮಾಡುವದಕ್ಕೆ ಬದಲಾಗಿ ವ್ಯಾಜ್ಯವನ್ನು ಕೈಬಿಟ್ಟು ನಿಮ್ಮ ಸಹೋದರನು ಗೆಲ್ಲುವಂತೆ ಬಿಡುವದು – ಅದರಿಂದ ನಿಮಗೆ ನಷ್ಟವಾಗುವದಾದರೂ ಸಹ – ಅತ್ಯಂತ ಉತ್ತಮವಾದದ್ದು – (ವಚನ 7). ಇದೇ ಕ್ರೈಸ್ತ ಮಾರ್ಗವಾಗಿದೆ. ನಾವು ಒಬ್ಬ

ಅವಿಶ್ವಾಸಿಯನ್ನು ಸಹ ನ್ಯಾಯ ಸಭೆಯಲ್ಲಿ ವಿರೋಧಿಸಬಾರದೆಂದು ಯೇಸು ಬೋಧಿಸಿದನು (ಮತ್ತಾಯ 5:25, 39-41 ನೋಡಿರಿ). ಅದು ನಿಜವಾಗಿಯೂ, ನಮ್ಮ ಕ್ರೈಸ್ತ ಸಹೋದರನ ಮೇಲೆ ವ್ಯಾಜ್ಯಮಾಡಿ ಕ್ರಿಸ್ತಭಕ್ತರಲ್ಲದವರ ಮುಂದೆ ತೆಗೆದುಕೊಂಡು ಹೋಗುವದು ಇನ್ನು ಎಷ್ಟೋ ಕೆಟ್ಟದ್ದಲ್ಲವೇ![16]

7 ಪೌಲನು ಈಗ ಈ ವಿಷಯದಲ್ಲಿ ಕೊರಿಂಥದವರ ಪಾಪದ ಕೇಂದ್ರ ಭಾಗಕ್ಕೆ ಸಾಗುತ್ತಾನೆ. ಮೊದಲನೆಯದಾಗಿ ವ್ಯಾಜ್ಯಗಳನ್ನು ಮಾಡುವದು ಅವರ ಪಾಪವಾಗಿದೆ: ಈ ವ್ಯಾಜ್ಯದಲ್ಲಿ ತೊಡಗುವದು ಎಂಬದು ಎರಡನೆಯ ವಿಷಯವಾಗಿದೆ. ಈ ವ್ಯಾಜ್ಯಗಳಲ್ಲಿ ತೊಡಗುವದು ಮಾತ್ರವೇ ಅವರು ಈಗಾಗಲೇ ಆತ್ಮೀಕವಾಗಿ ಸೋತವರೆಂಬ ಅರ್ಥವಾಗಿದೆ. ಕೊರಿಂಥದವರು ಇನ್ನೂ ಬೆಳೆಯದವರೂ ಪ್ರಾಪಂಚಿಕರೂ ಎಂಬುದಕ್ಕೆ ಈ ವ್ಯಾಜ್ಯಗಳು ಸಾಕ್ಷಿಯಾಗಿವೆ. ತಮ್ಮ ಸಹೋದರನ ಮೇಲೆ ವ್ಯಾಜ್ಯಮಾಡುವದರಲ್ಲಿ ವಾಸ್ತವವಾಗಿ ಅವರು ಅವನ ವಿರುದ್ಧ ಪಾಪಮಾಡುವವರಾಗಿದ್ದಾರೆ. ಅವರು ನ್ಯಾಯ ಸಭೆಯಲ್ಲಿ ತಮ್ಮ ಸಹೋದರನನ್ನು ಸೋಲಿಸಿರಬಹುದು, ಆದರೆ ಪಾಪವು ಅವರನ್ನು ಅವರ ಹೃದಯಗಳಲ್ಲಿ ಸೋಲಿಸಿರುತ್ತದೆ!

ನ್ಯಾಯ ತೀರ್ಪಿನದಿನದಲ್ಲಿ ನಿತ್ಯವಾದ ನಷ್ಟವನ್ನು ಅನುಭವಿಸುವದಕ್ಕಿಂತಲೂ ಈ ಲೋಕದಲ್ಲಿ ಅತ್ಯಲ್ಪ ನಷ್ಟವನ್ನು ಅನುಭವಿಸುವದು ಅತ್ಯುತ್ತಮವಾದದ್ದು!

**8** ನಮ್ಮ ಸಹೋದರನು ಯಾವದೋ ವಿಧದಲ್ಲಿ ನಮಗೆ ವಂಚನೆ ಅಥವಾ ತಪ್ಪನ್ನು ಮಾಡಿದ್ದಾಗ್ಯು ನಾವು ಅವನನ್ನು ನ್ಯಾಯಾಲಯಕ್ಕೆ ಒಯ್ಯುವದಾದರೆ ನಾವು ಆತನಿಗೆ ಪ್ರತಿಯಾಗಿ ವಂಚನೆ ಹಾಗು ತಪ್ಪನ್ನು ಮಾಡುವವರಾಗಿದ್ದೇವೆ. ಯಾಕೆಂದರೆ, ನಾವು ಹಾಗೆ ಮಾಡುವಾಗ ನಮ್ಮ ಸಹೋದರನನ್ನು ನಾವು ಕ್ಷಮಿಸಿ ಪ್ರೀತಿಸದವರಾಗಿದ್ದೇವೆ; ನಮ್ಮ ಪ್ರೀತಿ ಮತ್ತು ಕ್ಷಮೆಯಿಂದ ಆತನನ್ನು ವಂಚಿಸುವವರಾಗಿರುತ್ತೇವೆ. ಮತ್ತು ನಮ್ಮ ಸಹೋದರನನ್ನು ಪ್ರೀತಿಸಿ ಕ್ಷಮಿಸದಿದ್ದರೆ ನಾವು ಆತನ ವಿರುದ್ಧ ಪಾಪ ಮಾಡುವವರಾಗಿದ್ದೇವೆ.

**9-10** ಅನ್ಯಾಯಗಾರರು (ದುಷ್ಟರು) ಯಾರು? ಅವರು 1 ನೇ ವಚನದಲ್ಲಿನ ಅನ್ಯಜನರಾಗಿದ್ದಾರೆ, ಅಂದರೆ ಅವಿಶ್ವಾಸಿಗಳಾಗಿದ್ದಾರೆ. ಅವರು 9-10 ವಚನಗಳಲ್ಲಿ ಪ್ರಸ್ತಾಪಿಸಲಾಗಿರುವ ಜನರಂತೆಯೂ, ಪಶ್ಚಾತಾಪ ಪಡದೆ ತಮ್ಮ ಪಾಪಗಳಲ್ಲಿ ಮುಂದು ವರೆಯವವರೂ ಆಗಿದ್ದಾರೆ. ಅಂಥವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ (ಗಲಾತ್ಯ 5:19-21 ನೋಡಿರಿ). ದೇವರ ರಾಜ್ಯದಲ್ಲಿ ನಮ್ಮ ಬಾಧ್ಯತೆಯೇನು? ರಕ್ಷಣೆ – ನಿತ್ಯಜೀವ.

**11** ಕೊರಿಂಥದ ಕ್ರೈಸ್ತರು ಒಮ್ಮೆ ದುಷ್ಟರು; ಅನೀತಿವಂತರು ಆಗಿದ್ದರು; ಅವರು ಒಮ್ಮೆ 9-10 ವಚನಗಳಲ್ಲಿ ಪ್ರಸ್ತಾಪಿಸಲಾಗಿರುವ ಪಾಪಿಗಳ ಹಾಗಿದ್ದರು. ಆದರೆ ಈಗ ಅವರು ಇನ್ನೆಂದಿಗೂ ಅನೀತಿವಂತರಾಗಿರಲಿಲ್ಲ. ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕವೂ ಪವಿತ್ರಾತ್ಮನ ಬಲದ ಮೂಲಕವೂ ಅವರು ಪರಿವರ್ತನೆ, ರೂಪಾಂತರ ಹೊಂದಿದವರಾಗಿದ್ದರು.

ಅವರು ಹೇಗೆ ರೂಪಾಂತರಗೊಂಡಿದ್ದರು? ಮೊದಲನೆಯದಾಗಿ, ಅವರು ತೊಳೆದುಕೊಂಡವರಾಗಿದ್ದರು. ಅವರು ತಮ್ಮ ಪಾಪಗಳಿಗಾಗಿ ಪಶ್ಚಾತಾಪಪಟ್ಟು ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿಯೂ ನಮ್ಮ ದೇವರ ಆತ್ಮದಲ್ಲಿಯೂ ಪವಿತ್ರಾತ್ಮನಲ್ಲಿ ನೀರಿನ ದೀಕ್ಷಾಸ್ನಾನ ಹೊಂದಿದ್ದರು (ಮಾರ್ಕ 1:4, 7-8 ಮತ್ತು ವ್ಯಾಖ್ಯಾನ ನೋಡಿರಿ).

ಅನಂತರ ತೊಳೆದುಕೊಂಡವರಾಗಿ ಅವರು ನೀತಿವಂತರೆಂಬ ನಿರ್ಣಯವನ್ನು ಹೊಂದಿದ್ದರು. ಅವರು ಕ್ರಿಸ್ತನ ನೂತನ ಸೃಷ್ಟಿಯಾದರು (2 ಕೊರಿಂಥ 5:17 ಮತ್ತು ವ್ಯಾಖ್ಯಾನ ನೋಡಿರಿ). ಅವರು ತೊಳೆದುಕೊಂಡವರಾಗಿ ದೇವರ ದೃಷ್ಟಿಯಲ್ಲಿ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದರು (ತೀತ 3:3-7 ನೋಡಿರಿ).

ಈ ಎಲ್ಲಾ ಸಂಗತಿಗಳು ನಮ್ಮ ರಕ್ಷಣೆಯಲ್ಲಿ ಅಡಕವಾಗಿರುತ್ತವೆ. ಈ ರಕ್ಷಣೆಯನ್ನು ನಾವು ಕೃಪೆಯ ಮೂಲಕ ನಂಬಿಕೆಯಿಂದೇಪಡೆಯುತ್ತೇವೆ (ಎಫೆಸ 2:8 ಮತ್ತು ವ್ಯಾಖ್ಯಾನ; ಸಾಮಾನ್ಯ ಲೇಖನ: ರಕ್ಷಣೆಯ ಮಾರ್ಗ ನೋಡಿರಿ).

ಆದುದರಿಂದ ಕೊರಿಂಥದವರು ಹಾಗು ನಾವು ನಿಜವಾಗಿಯೂ ತೊಳೆದುಕೊಂಡವರೂ, ದೇವಜನರೂ ನೀತಿವಂತರೆಂಬ ನಿರ್ಣಯವನ್ನು ಹೊಂದಿದವರೂ ಆಗಿರುವದಾದರೆ ನಾವು ಕ್ರೈಸ್ತರಾಗುವದಕ್ಕೆ ಮುಂಚೆ ನಡೆದುಕೊಂಡ ಹಾಗೆ ಈಗಲೂ ಮುಂದು ವರೆಯುವದು ಹೇಗೆ? ನಾವು ನೂತನ ಸೃಷ್ಟಿಯಾಗಿರುವದಾದರೆ ನೂತನ ಸೃಷ್ಟಿಗಳಂತೆಯೇ ವರ್ತಿಸಬೇಕು (ರೋಮ 6:17-18; ಎಫೆಸ 4:1 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

## ಲೈಂಗೀಕ ಅನೈತೀಕತೆ (6:12-20)

**12** "ಎಲ್ಲಾ ಕಾರ್ಯಗಳನ್ನು (ಪಾಪ ಹೊರತು ಪಡಿಸಿ) ಮಾಡುವದಕ್ಕೆ ನನಗೆ ಸ್ವಾತಂತ್ರ್ಯ ಉಂಟು" ಎಂಬದು ಕೊರಿಂಥದವರ ಮಧ್ಯದಲ್ಲಿದ್ದ ಸಾಮಾನ್ಯ ಹೇಳಿಕೆಯಾಗಿತ್ತು. ಆದರೆ ಯಾವುದಾದರೂ ಒಂದು ಕಾರ್ಯವು ಪಾಪವಲ್ಲದಿರಬಹುದಾದ ಕಾರಣದಿಂದ ಕಾನೂನು ಬದ್ಧವಾಗಿ ಅದಕ್ಕೆ ಅನುಮತಿ ಇದ್ದಾಗ್ಯು ಅದನ್ನು ಮಾಡುವದರಿಂದ ಸ್ವತಃ ವ್ಯಕ್ತಿಗೆ ಪ್ರಯೋಜನಕರವಾಗಿ ಇರದಿರಬಹುದು. ಆ ಕಾರ್ಯವು ಸ್ವತಃ ಅವನಿಗೂ ಅವನ ಸಹೋದರನಿಗೂ ಹಾನಿಯನ್ನೂ ಉಂಟುಮಾಡಬಹುದು (ರೋಮ 14:21; 1 ಕೊರಿಂಥ 8:9; 1 ಪೇತ್ರ 2;16 ಹಾಗು ವ್ಯಾಖ್ಯಾನಗಳನ್ನು ನೋಡಿರಿ).

ಪೌಲನು ಹೇಳುವದೇನೆಂದರೆ: ನಾನು ಯಾವದಕ್ಕೂ ಒಳಗಾಗುವದಿಲ್ಲ. ಯಾವದೇ ಶಾರೀರಿಕ ಅಭಿಲಾಷೆಯು ತನ್ನ ಮೇಲೆ ಅಧಿಕಾರ ನಡಿಸಲು ಅಥವಾ "ಆಳುವದಕ್ಕೆ" ಪೌಲನು ಅವಕಾಶ ನೀಡುವದಿಲ್ಲ. ನಾವು ಕ್ರಿಸ್ತನಲ್ಲಿ ಕಂಡುಕೊಂಡಿರುವ

ಸ್ವಾತಂತ್ರ್ಯದ ಮೂಲಕವೇ ನಮ್ಮನ್ನು ನಮ್ಮ ಶಾರೀರಿಕ ಅಭಿಲಾಷೆಗಳಿಗೆ ದಾಸರಾಗುವಂತೆ ಅನುಮತಿಸಿಕೊಳ್ಳುವ ಸಾಧ್ಯತೆಯಿರುತ್ತದೆ. ಕ್ರಿಸ್ತನಲ್ಲಿ ನಮಗಿರುವ ಸ್ವಾತುತ್ರ್ಯವು ಪಾಪಮಾಡುವದಕ್ಕಲ್ಲ, ಆದರೆ ದೇವರನ್ನು ಸೇವಿಸುವದಕ್ಕಾಗಿಯೇ ಇರುತ್ತದೆ! (ರೋಮ 6:18; 22; ಗಲಾತ್ಯ 5:13 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆದುದರಿಂದ, ನಾವು ಪುನಃ ಪಾಪವನ್ನು ನಮ್ಮ ಯಜಮಾನನ್ನಾಗಿ ಮಾಡಿಕೊಳ್ಳದಿರೋಣ (ಯೋಹಾನ 8:34 ನೋಡಿರಿ).

13 ಕೊರಿಂಥದವರಿಗೆ ಇನ್ನೊಂದು ನಾಣ್ಣುಡಿಯಿತ್ತು: "ಭೋಜನ ಪದಾರ್ಥಗಳು ಹೊಟ್ಟೆಗಾಗಿಯೂ ಹೊಟ್ಟೆಯು ಭೋಜನ ಪದಾರ್ಥಗಳಿಗಾಗಿಯೂ ಅವೆ". ಈ ನಾಣ್ಣುಡಿಯು ನಿಜವಲ್ಲ. ಈ ಜೀವನದಲ್ಲಿ ಹೊಟ್ಟೆ ಮತ್ತು ಆಹಾರಗಳು ಖಂಡಿತವಾಗಿಯೂ ಪರಸ್ಪರರಿಗಾಗಿ ಮಾಡಲ್ಪಟ್ಟಿವೆ. ಆದರೆ ಪರಲೋಕದಲ್ಲಿ ಹೊಟ್ಟೆಯಾಗಲಿ ಅಥವಾ ಆಹಾರವಾಗಲಿ ಅಗತ್ಯವಿರುವದಿಲ್ಲ; ದೇವರು ಅವುಗಳೆರಡನ್ನೂ ತೆಗೆದುಹಾಕುವನು.

ಹೇಗಿದ್ದರೂ, ಕೊರಿಂಥದವರು, "ಹೊಟ್ಟೆಯು ಆಹಾರಕ್ಕೋಸ್ಕರ ಸೃಷ್ಟಿಸಲ್ಪಟ್ಟಿರುವ ಪ್ರಕಾರವೇ ದೇಹವು ಲೈಂಗೀಕಸುಖಕ್ಕೋಸ್ಕರ ಸೃಷ್ಟಿಸಲ್ಪಟ್ಟಿದೆ" ಎಂದು ಸಹ ಹೇಳುತ್ತಿದ್ದರು – ಮತ್ತು ಆ ನುಡಿಯು ನಿಜವಾದದ್ದಲ್ಲ. ದೇವರು ನಮ್ಮ ಹೊಟ್ಟೆಗಳನ್ನು ಪರಲೋಕದಲ್ಲಿ ತೆಗೆದು ಹಾಕುವನು, ಆದರೆ ಆತನು ನಮ್ಮ ದೇಹಗಳನ್ನು ತೆಗೆದು ಹಾಕುವದಿಲ್ಲ. ಬದಲಾಗಿ, ಆತನು ನಮ್ಮ ದೇಹಗಳನ್ನು ಪುನರುತ್ಥಾನ ಗೊಳಿಸುವನು (ವಚನ 14).

ನಮ್ಮ ದೇಹಗಳು ಲೈಂಗೀಕ ಸುಖಕ್ಕೋಸ್ಕರವಾಗಲಿ ಅಥವಾ ಇತರ ಯಾವದೇ ಸುಖಕೋಸ್ಕರವಾಗಲಿ ಸೃಷ್ಟಿಸಲ್ಪಟ್ಟಿರುವದಿಲ್ಲ; ನಮ್ಮ ದೇಹಗಳು ಕರ್ತನನ್ನು ಸೇವಿಸುವದಕ್ಕಾಗಿ ನಿರ್ಮಿಸಲ್ಪಟ್ಟಿವೆ. ನಮ್ಮ ದೇಹಗಳು ಪವಿತ್ರಾತ್ಮನಿಗೆ ವಾಸಸ್ಥಾನವಾಗಿವೆ (ವಚನ 19). ಆದುದರಿಂದ, ನಾವು ಯಾವದೇ ಸುಖಕ್ಕೆ ಒಳಗಾಗಬಾರದು. ಸುಖಕ್ಕೊಳಗಾಗುವದೆಂದರೆ ನಮ್ಮ ದೇಹವನ್ನು ಪುನಃ ಪಾಪದ ದಾಸತ್ವಗೊಳಪಡಿಸುವದಾಗಿದೆ.

ಆಹಾರ ಮತ್ತು ಹೊಟ್ಟೆ ಪರಸ್ಪರರಿಗಾಗಿ ನಿರ್ಮಿಸಲ್ಪಟ್ಟಿರುವ ಪ್ರಕಾರವೇ ಕರ್ತನು ಮತ್ತು ನಮ್ಮ ದೇಹಗಳಿಗೆ ಆತ್ಮೀಕ "ಆಹಾರ" ಆಗಿದ್ದಾನೆ (ಯೋಹಾನ 6:54 ನೋಡಿರಿ).

14 ದೇವರು ಕ್ರಿಸ್ತನನ್ನು ಎಬ್ಬಿಸಿದನು; ಆತನು ನಮ್ಮನ್ನೂ ಎಬ್ಬಿಸುವನು ಆತನು ನಮ್ಮ ಆತ್ಮಗಳನ್ನು ಮಾತ್ರವೇ ಅಲ್ಲದೆ ನಮ್ಮ ದೇಹಗಳನ್ನೂ ಸಹ ಎಬ್ಬಿಸುವನು (ರೋಮ 6:5, 8; 8:11; ಎಫೆಸ 2:6; ಫಿಲಿಪ್ಪಿ 3:20-21 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

15 ನಮ್ಮ ದೇಹಗಳು ಕ್ರಿಸ್ತನ ಅಂಗಗಳಾಗಿವೆ (1 ಕೊರಿಂಥ 12:27). ನಾವು ವೇಶ್ಯೆಯೊಂದಿಗೆ ಮಲಗುವದಾದರೆ ಇನ್ನೆಂದಿಗೂ ನಾವು ಕ್ರಿಸ್ತನಿಗೆ ಸೇರಿದವರಲ್ಲ, ಆದರೆ ವೇಶ್ಯಗೆ ಸೇರಿದವರಾಗಿದ್ದೇವೆ.

ಕೊರಿಂಥದಲ್ಲಿ ವೇಶ್ಯಯರು ತಮ್ಮ ವೃತ್ತಿಯನ್ನು ಗ್ರೀಕ್ ಪ್ರೇಮ ದೇವತೆಯ ದೇವಾಲಯದಲ್ಲಿ ಅಭ್ಯಾಸಿಸುತ್ತಿದ್ದರು. ಆದುದರಿಂದ ವ್ಯಕ್ತಿಯೊಬ್ಬನು ವೇಶ್ಯಯೊಂದಿಗೆ ಲೈಂಗೀಕ ಸಂಪರ್ಕ ಹೊಂದುವಾಗ ಆತನು ಸಹ ವೇಶ್ಯಯ ದೇವತೆಯೊಂದಿಗೆ ಇಜ್ಜೋಡಾಗುತ್ತಿದ್ದನು; ಒಂದು ಅರ್ಥದಲ್ಲಿ ಆತನು ವಿಗ್ರಹಾರಾಧಕನಾದನು. ಬೈಬಲಿನ ಪ್ರಕಾರವಾಗಿ ವಿಗ್ರಹಾರಾಧನೆಯು ವ್ಯಭಿಚಾರಕ್ಕೆ ಸಮವಾಗಿದೆ. ಒಬ್ಬ ವ್ಯಕ್ತಿಯು ವಿಗ್ರಹಾರಾಧನೆಯನ್ನು ಮಾಡುವಾಗ ಆತನು ಏಕ ಸತ್ಯ ದೇವರನ್ನು ತೊರೆದು ಮಿಥ್ಯ ದೇವರೊಂದಿಗೆ ಅಥವಾ ದೆವ್ವದೊಂದಿಗೆ ಒಂದಾಗುವವನಾಗಿದ್ದಾನೆ (ಯೆಹೆಜ್ಕೇಲ 23:37; ಹೋಶೇಯ 5:4).

16 ಗಂಡ ಹೆಂಡರಿಬ್ಬರೂ ಲೈಂಗೀಕ ಸಂಪರ್ಕದ ವೇಳೆ ಒಂದೇ ಶರೀರವಾಗುವ ಪ್ರಕಾರವೇ ವೇಶ್ಯೆಯೊಂದಿಗೆ ಲೈಂಗೀಕ ಸಂಪರ್ಕಹೊಂದುವ ವ್ಯಕ್ತಿಯು ಆ ವೇಶ್ಯೆಯೊಂದಿಗೆ ಒಂದೇ ಶರೀರವಾಗುವನು. ಪೌಲನು ಇಲ್ಲಿ ವಿವಾಹದ ವಿಷಯದಲ್ಲಿ ಬರೆಯಲ್ಪಟ್ಟಿರುವ ಆದಿಕಾಂಡ 2:24 ರಿಂದ ಉಲ್ಲೇಖಿಸುತ್ತಾನೆ (ಪೌಲನು ಇಲ್ಲಿ ಪುರುಷ ಮತ್ತು ವೇಶ್ಯೆಯು ಸಂಸರ್ಗ ಮಾಡುವದರಿಂದ "ವಿವಾಹಿತರಾಗುವರು" ಎಂದು ಹೇಳುತ್ತಿಲ್ಲ; ಅವರು ಹಾಗಾಗುವದಿಲ್ಲ. ನಿಜವಾದ ವಿವಾಹದಲ್ಲಿ ಗಂಡ ಹೆಂಡರಿಬ್ಬರು ದೇಹದಲ್ಲಿ ಮಾತ್ರವಲ್ಲ, ಆದರೆ ಹೃದಯ, ಮನಸ್ಸು ಮತ್ತು ಆತ್ಮಗಳಲ್ಲಿ ಸಹ ಒಂದಾಗುತ್ತಾರೆ).

ಪೌಲನು ಹೇಳಬಯಸುವ ಅಂಶವೇನೆಂದರೆ: ಕ್ರಿಸ್ತನೊಂದಿಗೆ ಒಂದೇ ಆತ್ಮೀಕ ದೇಹವಾಗಿರುವ ವ್ಯಕ್ತಿಯು ಹೋಗಿ ವೇಶ್ಯೆಯೊಂದಿಗೆ ಒಂದೇ ದೇಹವಾಗುವದಕ್ಕೆ ಹೇಗೆ ಸಾಧ್ಯ? ಇದು ಕ್ರಿಸ್ತನ ವಿರುದ್ಧ ಒಂದು ಭಯಂಕರ ಪಾಪವಾಗಿದೆ. ಇದು ದೈಹೀಕ ವ್ಯಭಿಚಾರ ಮಾತ್ರವಲ್ಲ; ಇದು ಆತ್ಮೀಕ ವ್ಯಭಿಚಾರ ಸಹ ಆಗಿದೆ.

17 ಒಬ್ಬ ಪುರುಷ, ಮತ್ತು ಸ್ತ್ರೀಯು ದೇಹದಲ್ಲಿ ಒಂದಾಗುವಂತೆಯೇ ಕ್ರಿಸ್ತನು ಆತ್ಮದಲ್ಲಿ ಪ್ರತಿಯೊಬ್ಬ ವಿಶ್ವಾಸಿಯೊಂದಿಗೆ ಒಂದಾಗುತ್ತಾನೆ (ಯೋಹಾನ 17;20-23 ನೋಡಿರಿ).

18 ಜಾರತ್ವವನ್ನು ಹೊರತು ಪಡಿಸಿ ಉಳಿದೆಲ್ಲಾ ಶಾರೀರಿಕ ಅಭಿಲಾಷೆಯಗಳು ದೇಹದ ಅಂಗವಲ್ಲದ ವಸ್ತಗಳಿಂದ ತೃಪ್ತಿಹೊಂದಲ್ಪಡಬಲ್ಲವು . ಮದ್ಯವನ್ನು ಸೇವಿಸಬೇಕೆಂಬ ಅಭಿಲಾಷೆಯು ಮದ್ಯದ ಮೂಲಕ ತೃಪ್ತಿಹೊಂದುತ್ತದೆ. ಶ್ರೀಮಂತರಾಗಬೇಕೆಂಬ ಅಭಿಲಾಷೆಯು ಹಣದಿಂದ ತೃಪ್ತಿಹೊಂದಲ್ಪಡುವದು. ಆದರೆ ಲೈಂಗೀಕ ಸಂಪರ್ಕದ ಅಭಿಲಾಷೆಯು ಒಬ್ಬನು ತನ್ನ ಸ್ವಂತ ದೇಹವನ್ನು ಉತ್ತೇಜನಗೊಳಿಸುವದರಿಂದ ಮಾತ್ರವೇ ತೃಪ್ತಿಹೊಂದುತ್ತದೆ. ಹೀಗೆ ಜಾರತ್ವವು ವಿಶೇಷವಾದ ರೀತಿಯಲ್ಲಿ ಒಬ್ಬನ ದೇಹವನ್ನು ಹೊಲೆ ಮಾಡುತ್ತದೆ, ಯಾಕೆಂದರೆ ಜಾರತ್ವದ ವೇಳೆಯಲ್ಲಿ ಅವನ ಸ್ವಂತ ದೇಹವು ಪಾಪದಲ್ಲಿ ಒಬ್ಬ ವೇಶ್ಯೆಗೆ ಅಥವಾ ವ್ಯಭಿಚಾರಿಣಿಗೆ ಒಳಪಡಿಸಲ್ಪಡುತ್ತದೆ. ಜಾರತ್ವಮಾಡುವವನು ತನ್ನ ದೇಹಕ್ಕೆ ಹಾನಿ ಕರವಾದ ಪಾಪವನ್ನು ಮಾಡುತ್ತಾನೆ ಎಂದು ಪೌಲನು ಹೇಳುವದರ ತಾತ್ಪರ್ಯವು ಅದೇ ಆಗಿದೆ.

ಆದುದರಿಂದ ಪೌಲನು ಹೇಳುವದೇನೆಂದರೆ: ಜಾರತ್ವಕ್ಕೆ ದೂರವಾಗಿ ಓಡಿ ಹೋಗಿರಿ. ನಾವು ಜಾರತ್ವಕ್ಕೊಳಗಾಗುವ ಶೋಧನೆಯನ್ನು ಎದುರಿಸುವದು ಮಾತ್ರವಲ್ಲ; ನಾವು ಅದಕ್ಕೆ ದೂರವಾಗಿ ಓಡಿ ಹೋಗಬೇಕು!

19 ನಾವು ಜಾರತ್ವದಲ್ಲಿ ತೊಡಗುವಾಗ ನಮ್ಮ ಸ್ವಂತ ದೇಹವನ್ನು ಮಾತ್ರವಲ್ಲದೆ ದೇವರ ಆಲಯವನ್ನು ಸಹ ಹೊಲೆಮಾಡುತ್ತೇವೆ – ಯಾಕೆಂದರೆ, ಸ್ವತಃ ವಿಶ್ವಾಸಿಗಳ ದೇಹವೇ ದೇವರ ಆಲಯವಾಗಿದೆ. ಪಾಪದ ಮೂಲಕ ನಾವು ದೇವರ ಆಲಯವನ್ನು "ಕೆಡಿಸುತ್ತೇವೆ' ಅಥವಾ ಹಾಳು ಮಾಡುತ್ತೇವೆ. ನಾವು ಇದನ್ನು ಮಾಡುವದಾದರೆ ಆತನು ಸಹ ನಮ್ಮನ್ನು ನಾಶಮಾಡುವನು (1 ಕೊರಿಂಥ 3:16-17).

ಜಾರತ್ವದಿಂದ ನಾವು ದೇವರ ಆಲಯವನ್ನು ಮಾತ್ರವೇ ಕೆಡಿಸುವದಿಲ್ಲ; ಅದು ಪವಿತ್ರಾತ್ಮನ ಆಲಯವು ಸಹ ಆಗಿದೆ – ಯಾಕೆಂದರೆ ಪ್ರತಿಯೊಬ್ಬ ಕ್ರೈಸ್ತನ ದೇಹವು ಪವಿತ್ರಾತ್ಮನಿಗೆ ಗರ್ಭಗುಡಿಯಾಗಿದೆ. ಪವಿತ್ರಾತ್ಮನ ಆಲಯವನ್ನು ಅಂದರೆ, ನಮ್ಮದೇಹ ನಾವು ಅಪವಿತ್ರಗೊಳಿಸಬಾರದು. ನಾವು ಹಾಗೆ ಮಾಡುವದಾದರೆ ಪವಿತ್ರಾತ್ಮನು ನಮ್ಮನ್ನು ತೊರೆದು ಹೋಗುವನು; ಆತನು ಅಪವಿತ್ರವಾದ ಸ್ಥಳದಲ್ಲಿ ನೆಲೆಸುವದಿಲ್ಲ.

ನಮ್ಮ ದೇಹಗಳು ದೇವರ ಹಾಗು ಪವಿತ್ರಾತ್ಮನ ಆಲಯವಾಗಿವೆ; ಆದದರಿಂದ ನಮ್ಮ ದೇಹಗಳು ದೇವರಿಗೆ ಸೇರಿವೆ. ನೀವು ನಿಮ್ಮ ಸ್ವಂತ ಸೊತ್ತಲ್ಲ ಎಂದು ಪೌಲನು ಹೇಳುತ್ತಾನೆ. ಕೊರಿಂಥ ವಿಶ್ವಾಸಿಗಳು ತಮ್ಮ ದೇಹಗಳನ್ನು ಅವರ ಸ್ವಂತ ಸೊತ್ತು ಎಂದು ನೆನಸಿದರು ಮತ್ತು ಈ ಕಾರಣದಿಂದಲೇ ಅವರು ತಮ್ಮ ದೇಹಗಳಿಂದ ತಾವು ಇಷ್ಟಪಟ್ಟದ್ದನ್ನು ಮಾಡುತ್ತಿದ್ದರು. ದೇವರು ದೇಹಗಳ ಬಗ್ಗೆ ಅಷ್ಟೇನು ಲೆಕ್ಕಿಸುವದಿಲ್ಲ; ಆತನು ಅವರ ಆತ್ಮಗಳ ವಿಷಯದಲ್ಲಿ ಮಾತ್ರವೇ ಚಿಂತೆಯುಳ್ಳವನಾಗಿದ್ದಾನೆ ಎಂದು ಅವರು ಯೋಚಿಸಿಕೊಂಡಿದ್ದರು. ಅವರು ಎಂತಹ ತಪ್ಪಿಗೊಳಗಾಗಿದ್ದರಲ್ಲವೇ!

20 ದೇವರು ನಮ್ಮ ದೇಹಗಳ ವಿಷಯದಲ್ಲಿ ಎಷ್ಟಾಗಿ ಚಿಂತೆಯುಳ್ಳವನಾಗಿದ್ದಾನೆ? ಆತನು ನಮ್ಮ ದೇಹಗಳ ಬಗ್ಗೆ ಎಷ್ಟೋ ಚಿಂತೆಯುಳ್ಳವನಾಗಿ ನಮ್ಮ ದೇಹಗಳನ್ನು ಕೊಂಡುಕೊಂಡನು! (1 ಕೊರಿಂಥ 7:23 ನೋಡಿರಿ). ದೇವರು ಕೊಟ್ಟ ಕ್ರಯವೇನಾಗಿತ್ತು? ಆತನು ನೀಡಿದ ಕ್ರಯವು ಆತನ ಒಬ್ಬನೇ ಮಗನಾದ ಯೇಸು ಕ್ರಿಸ್ತನ ರಕ್ತ – ದೇಹ – ಆಗಿತ್ತು (ಮಾರ್ಕ 10:45; ಅ.ಕೃತ್ಯ 20:28; 1 ಪೇತ್ರ 1:18-19 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).ದೇವರು ನಮ್ಮನ್ನು ಕೊಂಡುಕೊಂಡಿದ್ದಾನೆ. ಆದುದರಿಂದ, ನಾವು ನಮ್ಮ ದೇಹಗಳನ್ನು, ನಮ್ಮ ಜೀವಿತಗಳನ್ನು ಆತನಿಗೆ ಒಪ್ಪಿಸಬೇಕು (ರೋಮ 12:1 ಹಾಗು ವ್ಯಾಖ್ಯಾನ ನೋಡಿರಿ). ನಮ್ಮ ದೇಹಗಳು, ನಮ್ಮ ಜೀವಿತಗಳು ದೇವರವೇ. ನಮ್ಮ ದೇಹದ ಎಲ್ಲಾ ಭಾಗಗಳೂ, ಅಂಗಗಳೂ ನಮ್ಮವು ಗಳಲ್ಲ ಆದರೆ ದೇವರವು ಗಳೇ. ಆದ್ದರಿಂದ, ನಾವು ನಮ್ಮ ಅಂಗಗಳನ್ನು ನಮ್ಮ ಸ್ವಂತ ಚಿತ್ತಕ್ಕನುಸಾರವಾಗಿ ಉಪಯೋಗಿಸದೆ ದೇವರ ಚಿತ್ತಕ್ಕನುಸಾರವಾಗಿ ಉಪಯೋಗಿಸಬೇಕು. ಈ ಲೋಕದಲ್ಲಿ ನಮ್ಮ ಜೀವಿತಗಳಿಗೆ ಒಂದೇ ಉದ್ದೇಶವಿರುತ್ತದೆ ಮತ್ತು ಆ ಉದ್ದೇಶವೇನೆಂದರೆ ನಮ್ಮ ಇಡೀ ಜೀವದಿಂದ – ಶರೀರ, ಪ್ರಾಣ ಹಾಗು ಆತ್ಮ ದೇವರನ್ನು ಮಹಿಮೆ ಪಡಿಸಬೇಕೆಂಬುದೇ.

---

## ಅಧ್ಯಾಯ - 7

### ವಿವಾಹ ವಿಷದಲ್ಲಿ ಉಪದೇಶ (7:1-24)

1 ಕೊರಿಂಥದವರು ವಿವಾಹದ ವಿಷಯದಲ್ಲಿ ಕೆಲವೊಂದು ಪ್ರಶ್ನೆಗಳನ್ನು ಕೇಳಿ ಪೌಲನಿಗೆ ಪತ್ರ ಬರೆದಿದ್ದರು ಮತ್ತು ಈ ಅಧ್ಯಾಯದಲ್ಲಿ ಪೌಲನು ಅವರ ಪ್ರಶ್ನೆಗಳಿಗೆ ಉತ್ತರಿಸುತ್ತಾನೆ.

ಸ್ತ್ರೀಸಂಪರ್ಕವಿಲ್ಲದೆ (ವಿವಾಹವಿಲ್ಲದೆ) ಇರುವದು ಮನುಷ್ಯನಿಗೆ ಒಳ್ಳೇದು [17] ಎಂದು ಹೇಳುವದರ ಮೂಲಕ ಪೌಲನು ಪ್ರಾರಂಬಿಸುತ್ತಾನೆ. ಪೌಲನು ಏಕೆ ಹಾಗೆ ಹೇಳಿದನು? ಪು ರುಷನಿಗೆ ಅವಿವಾಹಿತ ಸ್ಥಿತಿಯಲ್ಲಿ ಕರ್ತನ ಸೇವೆ ಮಾಡುವದಕ್ಕೆ ಹೆಚ್ಚು ಸಮಯವಿರುತ್ತದೆಂಬುದಕ್ಕಾಗಿ ಪೌಲನು ಇದನ್ನು ಹೇಳುತ್ತಾನೆ. ಆದರೆ ಅವಿವಾಹಿತನಾಗಿ ಉಳಿಯಲು ಒಬ್ಬನಿಗೆ ದೇವರಿಂದ ಸ್ವಹತೋಟಿಯ ವಿಶೇಷವಾದ ವರದ ಅಗತ್ಯವಿರುತ್ತದೆ (ವಚನ 7); ಅಂದರೆ ಒಬ್ಬನಿಗೆ ಅವಿವಾಹಿತನಾಗಿ ಉಳಿಯುವದಕ್ಕೆ ದೇವರಿಂದ ವಿಶೇಷವಾದ ಕರೆಯುವಿಕೆಯು ಅಗತ್ಯವಿರುತ್ತದೆ. ಬಹುಮಂದಿ ಪು ರುಷ ಮತ್ತು ಸ್ತ್ರೀಯರಿಗೆ ಈ ವರವು ಇರುವದಿಲ್ಲ ಮತ್ತು ಈ ಕಾರಣದಿಂದ ಅವರು ವಿವಾಹವಾಗುವದು ಉತ್ತಮವಾದದ್ದು.

2 ದೇವರು ವಿವಾಹವನ್ನು ಸ್ಥಾಪಿಸಿದ ಕಾರಣಗಳಲ್ಲಿ ಜಾರತ್ವವನ್ನು ತಡೆಗಟ್ಟುವದು ಒಂದಾಗಿದೆ. ಎಲ್ಲಾ ಪು ರುಷ ಮತ್ತು ಸ್ತ್ರೀಯರಿಗೆ ಲೈಂಗಿಕ ಅಭಿಲಾಷೆಗಳು ಮತ್ತು ಅಗತ್ಯತೆಗಳು ಇರುತ್ತವೆ. ಆದರೆ ಪ್ರತಿಯೊಬ್ಬ ವ್ಯಕ್ತಿಯು ಅವನ ಅಥವಾ ಅವಳ ಸ್ವಂತ ಹೆಂಡತಿ ಅಥವಾ ಗಂಡನನ್ನು ಹೊಂದಿರುವದಾದ್ರೆ ಯಾವನಿಗೂ ಅನೈತೀಕವಾದ ಲೈಂಗೀಕ ಚಟುವಟಿಕೆಗಳಲ್ಲಿ ತೊಡಗುವ ಅಗತ್ಯವಿರುವದಿಲ್ಲ.

ಈ ವಚನದಲ್ಲಿ ಪೌಲನು ಪ್ರತಿಯೊಬ್ಬ ಪು ರುಷನೂ ಮದುವೆ ಮಾಡಿಕೊಳ್ಳಬೇಕೆಂದು ಹೇಳುತ್ತಿಲ್ಲ; ಆತನು ಸ್ವತಃ ಅವಿವಾಹಿತನಾಗಿದ್ದನು! ವಿವಾಹವಾಗುವ ಪ್ರತಿಯೊಬ್ಬನು ಪು ರುಷನಿಗೆ ಸ್ವಂತ ಹೆಂಡತಿಯ ಇರಲಿ ಮತ್ತು ವಿವಾಹವಾಗುವ ಪ್ರತಿಯೊಬ್ಬಳಿಗೆ ಅವಳ ಸ್ವಂತ ಗಂಡನು ಇರಲಿ ಎಂದಷ್ಟೆ ಪೌಲನು ಹೇಳುತ್ತಿದ್ದಾನೆ.

**3-4** 3ನೇ ವಚನದಲ್ಲಿ ಸಲ್ಲತಕ್ಕದ್ದು ಎಂಬ ಹೇಳಿಕೆಯ ಅರ್ಥವು "ಲೈಂಗೀಕ ಸಂಸರ್ಗವನ್ನು ಹೊಂದುವದು" ಎಂಬದೇ. ಲೈಂಗೀಕ ಸಂಪರ್ಕವಿಲ್ಲದೆ ದಾಂಪತ್ಯವು ಪೂರ್ಣವಲ್ಲ. ಗಂಡಹೆಂಡತಿಯರು ಸಂಸರ್ಗದ ಮುಖಾಂತರ ಒಂದೇ ಶರೀರವಾಗುವದು ವಿವಾಹದ ಮುಖ್ಯ ಚಟುವಟಿಕೆಗಳಲ್ಲಿ ಒಂದು ಮುಖ್ಯ ಕಾರ್ಯವಾಗಿದೆ (ಎಫೆಸ 5:31).

ಈ ಕಾರಣಕ್ಕಾಗಿ ಗಂಡ ಮತ್ತು ಆತನ ಹೊಂಡತಿಯು ಸಂಸರ್ಗಮಾಡುವದರಲ್ಲಿ ತಮ್ಮ ಕರ್ತವ್ಯವನ್ನು ನೆರವೇರಿಸತಕ್ಕದ್ದು. ಅವರು ಲೈಂಗೀಕ ವಿಷಯಗಳಲ್ಲಿ ಒಬ್ಬರಿಗೊಬ್ಬರು ಅಧೀನರಾಗಿರಬೇಕು (ಎಪೆಸ 5:21). ಅವರ ದೇಹಗಳು ಪರಸ್ಪರರ ಹತೋಟಿಯಲ್ಲಿ ಉಳಿಯಬೇಕು. ಹೆಂಡತಿಯ ದೇಹವು ಅವಳಿಗೆ ಮಾತ್ರವಲ್ಲ, ಆದರೆ ಆಕೆಯ ಗಂಡನಿಗೆ ಸಹ ಸೇರಿರುತ್ತದೆ, ಮತ್ತು ಗಂಡನ ದೇಹವು ಅವನಿಗೆ ಮಾತ್ರವಲ್ಲದೆ ಆತನ ಹೆಂಡತಿಗೂ ಸೇರಿರುತ್ತದೆ. ಅವರು ಸಮಾನವಾಗಿ ಒಬ್ಬರಿಗೊಬ್ಬರಿಗೆ ಸೇರಿರುತ್ತಾರೆ.

ಅನೇಕ ಸಂಸ್ಕೃತಿಗಳಲ್ಲಿ, ಹೆಂಡತಿಯು ಆಕೆಯ ಗಂಡನ ಸೊತ್ತು ಎಂದು ಪರಿಗಣಿಸಲ್ಪಟ್ಟಿರುತ್ತಾಳೆ. ಅಂತಹ ಸಮಾಜಗಳಲ್ಲಿ ಎಲ್ಲಾ ಅಧಿಕಾರ ಹಾಗು ಎಲ್ಲಾ ಹಕ್ಕುಗಳು ಗಂಡನಿಗೆ ಸೇರಿರುತ್ತವೆ. ಹೆಂಡತಿಯು ಗಂಡನಿಗೆ ಗೌರವ ಹಾಗು ವಿಧೇಯತೆಯನ್ನು ಸಲ್ಲಿಸಿ ತನ್ನ ಗಂಡನ ಸೇವೆಮಾಡುವ "ಹಕ್ಕನ್ನು" ಮಾತ್ರವೇ ಹೊಂದಿರುತ್ತಾಳೆ. ಹೆಂಡತಿಯು ಒಬ್ಬ ದಾಸಳಂತಿರುತ್ತಾಳೆ. ದೇವರ ದೃಷ್ಟಿಯಲ್ಲಿ ಅಂತಹ ಗುಲಾಮತನವು ನಿಜವಾದ ವಿವಾಹದ ಭ್ರಷ್ಟಾಚಾರದಂತಿರುತ್ತದೆ. ದೇವರು ಪುರುಷ ಮತ್ತು ಸ್ತ್ರೀಯಳ ನಡುವೆ ವಿವಾಹವನ್ನು ಸ್ಥಾಪಿಸಿದಾಗ ಆತನ ಇಂಗಿತ ಇದಾಗಿರಲಿಲ್ಲ (ಸಾಮಾನ್ಯ ಲೇಖನಃ ಕ್ರೈಸ್ತೀಯ ವಿವಾಹ ನೋಡಿರಿ).

**5** ದಾಂಪತ್ಯದಲ್ಲಿ ಹೆಂಡತಿಯು ಸಂಸರ್ಗವನ್ನು ಹೊಂದಲಿಚ್ಚಿಸುವದಾದರೆ ಗಂಡನು (ಕೆಲವೊಂದು ನ್ಯಾಯ ಸಮ್ಮತ ಕಾರಣಗಳಿರುವ ಹೊರತು) ಅದಕ್ಕೆ ಒಪ್ಪಿಕೊಳ್ಳಬೇಕು. ಒಂದು ವೇಳೆ ಗಂಡನು ಸಂಸರ್ಗ ಮಾಡಲು ಬಯಸುವದಾದರೆ ಹೆಂಡತಿಯು ಸಮ್ಮತಿಸಬೇಕು. ಒಂದು ವೇಳೆ ಗಂಡಹೆಂಡತಿಯರಿಬ್ಬರೂ ಒಬ್ಬರೊಬ್ಬರ ಲೈಂಗೀಕ ವಿಷಯಗಳಲ್ಲಿನ ಅಭಿಲಾಷೆಯನ್ನು ನೆರವೇರಿಸಲು ಅವರು ಒಬ್ಬರನ್ನೊಬ್ಬರು ಬಿಟ್ಟು ಅಗಲುತ್ತಾರೆ ಮತ್ತು ಇದು ತಪ್ಪಾದದ್ದು. ಗಂಡಹೆಂಡತಿಯರು ಒಬ್ಬರೊಬ್ಬರ ಅಗತ್ಯತೆಗಳನ್ನೂ ಅಭಿಲಾಷೆಗಳನ್ನೂ ನೆರವೇರಿಸಲು ಯಾವಾಗಲೂ ಸಿದ್ಧವಾಗಿಯೂ ಮನಸ್ಸುಳ್ಳವರಾಗಿಯೂ ಇರಬೇಕು.

ಆ ಕಾರಣಕ್ಕಾಗಿ ಗಂಡ ಹೆಂಡತಿಯರು ಸಂಪೂರ್ಣ ಅವಶ್ಯಕವಾಗಿರದ ಹೊರತು ಒಬ್ಬರನ್ನೊಬ್ಬರು ಬಿಟ್ಟು ಅಗಲಿರಬಾರದು ಗಂಡ ಹೆಂಡತಿಯರು ಏಕೆ ಸ್ವಲ್ಪ ಕಾಲ ಒಬ್ಬರ್ನೊಬ್ಬರು ಬಿಟ್ಟು – ಅಂದರೆ ಸಂಸರ್ಗಮಾಡುವದರಿಂದ ದೂರ ಇರಬಹುದು – ಇರಬಹುದೆಂಬದಕ್ಕೆ ಪೌಲನು ಒಂದೇ ಒಂದು ತಕ್ಕ ಕಾರಣವನ್ನು ನೀಡುತ್ತಾನೆ, ಮತ್ತು ಆ ಕಾರಣವೇನೆಂದರೆ ಅವರಿಬ್ಬರೂ ಪ್ರಾರ್ಥನೆಗಾಗಿ ವಿಶೇಷ ಸಮಯವನ್ನು[18] ನೀಡುವದಕ್ಕಾಗಿ ಹಾಗೆ ಮಾಡಬಹುದೆಂಬದೇ. ಒಂದು ವೇಳೆ ಅವರು ಈ ಕಾರಣಕ್ಕೋಸ್ಕರ ಸಂಸರ್ಗ ಮಾಡುವದರಿಂದ ದೂರವಿರುವಾದರೆ ಅವರು ಇದನ್ನು ಪರಸ್ಪರ ಸಮ್ಮತಿಯಿಂದ ಸ್ವಲ್ಪಕಾಲಕ್ಕಾಗಿ ಮಾತ್ರವೇ ಮಾಡಬಹುದು. ಇಲ್ಲವಾದರೆ ಅವರ ಲೈಂಗೀಕ ಅಭಿಲಾಷೆಯು ಹೆಚ್ಚಾಗಿ ಜಾರತ್ವಕ್ಕೊಳಗಾಗುವಶೋಧನೆಯಲ್ಲಿ ಅವರು ಸೋತು ಹೋಗಬಹುದು.

ಅನೇಕ ರಾಷ್ಟ್ರಗಳಲ್ಲಿ ವಿಶೇಷವಾಗಿ ಗಂಡನು ವ್ಯಾಸಂಗ ಅಥವಾ ಉದ್ಯೋಗಕ್ಕೋಸ್ಕರ ದೀರ್ಘಕಾಲದವರೆಗೆ ಹೆಂಡತಿಯನ್ನು ಬಿಟ್ಟು ದೂರ ಹೋಗುವ ಪದ್ಧತಿಯಿರುತ್ತದೆ. ಬೈಬಲಿನ ಬೋಧನೆಗನುಗುಣವಾಗಿ ಈ ಪದ್ಧತಿಯು ಒಳ್ಳೇದಲ್ಲ. ಅಂತಹ ದೀರ್ಘವಾದ ಅಗಲುವಿಕೆಗಾಗಿ ಯೋಜನೆ ಹಾಕುವ ಕ್ರೈಸ್ತದಂಪತಿಗಳು ಈ ವಿಷಯದಲ್ಲಿ ಆಸಕ್ತಿಯಿಂದ ದೇವರ ಚಿತ್ತವನ್ನು ಹುಡುಕಬೇಕು. ಅದು ದೇವರ ಚಿತ್ತವಾಗಿದೆ [19] ಎಂಬ ಮನವರಿಕೆಯು ಆಗದ ಹೊರತು ಅವರು ತಮ್ಮ ಯೋಜನೆಯಂತೆ ಮುಂದುವರೆಯಬಾರದು. ಒಂದು ವೇಳೆ ಗಂಡನು ಬೇರೆ ಸ್ಥಳಕ್ಕೆ ಹೋಗುವದು ಅತ್ಯವಶ್ಯಕವಾಗಿರುವದಾದರೆ ಹೆಡತಿಯು ಆಕೆಯ ಗಂಡನ ಜೊತೆಗೊಡುವಕ್ಕೆ ಎಲ್ಲಾ ಪ್ರಯತ್ನಗಳು ಮಾಡಲ್ಪಡಬೇಕು.

ಕೆಲವು ಜನರು ಮಕ್ಕಳನ್ನು ಹಡೆಯುವದು ಮಾತ್ರವೇ ಲೈಂಗೀಕ ಸಂಪರ್ಕದ ಏಕೈಕ ಕಾರಣವೆಂಬದಾಗಿ ನಂಬುತ್ತಾರೆ. ಆದರೆ ಇಲ್ಲಿ ಪೌಲನು ವಿವಾಹಕ್ಕೆ ಲೈಂಗೀಕ ಸಂಪರ್ಕವು ಯಾಕೆ ಪ್ರಾಮುಖ್ಯವಾದದ್ದೆಂಬದಕ್ಕೆ ಇನ್ನು ಎರಡು ಕಾರಣಗಳನ್ನು ನೀಡುತ್ತಾನೆ: ಮೊದಲನೆಯದಾಗಿ, ಜಾರತ್ವಕ್ಕೊಳಗಾಗುವಶೋಧನೆಯನ್ನು ತಗ್ಗಿಸಲು; ಹಾಗು ಎರಡನೆಯದಾಗಿ, ಪರಸ್ಪರ ಲೈಂಗೀಕ ಅಗತ್ಯತೆಗಳನ್ನು ನೆರವೇರಿಸುವದರಿಂದ ಬರುವ ಆನಂದ ಹಾಗು ಆಪ್ತತೆಯನ್ನು ದಂಪತಿಗಳು ಅನುಭವಿಸುವಂತೆ ಶಕ್ತರನ್ನಾಗಿಸುವದಾಗಿದೆ.

**6** ಪೌಲನು ಹೇಳುವದೇನೆಂದರೆ: ಹೀಗೆ ಮಾಡಬಹುದೆಂದು ಹೇಳುವದು ಹಿತೋಪದೇಶವೇ ಹೊರತು ಆಜ್ಞೆಯಲ್ಲ. "ಹೀಗೆ' ಎಂಬುದು ಆತನು 2ನೇ ವಚನದಲ್ಲಿ ಹೇಳಿದ ಸಂಗತಿಯನ್ನು ಸೂಚಿಸುತ್ತದೆ: ಅದೇನೆಂದರೆ, ಪುರುಷ ಅಥವಾ ಸ್ತ್ರೀಗೆ ಅವನ ಅಥವಾ ಅವಳ ಸಹಪಾಠಿ ಇರಲಿ ಎಂಬದೇ. ಪ್ರತಿಯೊಬ್ಬರು ಮದುವೆ ಮಾಡಿ ಕೊಳ್ಳಬೇಕೆಂಬ ಆಜ್ಞೆಯನ್ನು ಪೌಲನು ನೀಡುತ್ತಿಲ್ಲ. ಬದಲಾಗಿ, ಆತನು ಇಲ್ಲಿ ಬಹುಜನರು ತಮ್ಮನ್ನು ಜಾರತ್ವದಿಂದ ದೂರವಿಟ್ಟು ಕೊಳ್ಳುವದಕ್ಕಾಗಿ ಮದುವೆ ಮಾಡಿಕೊಳ್ಳುವ ಅಗತ್ಯವಿರುತ್ತದೆಂದಷ್ಟೇ ಹೇಳುತ್ತಿದ್ದಾನೆ. 1 ನೇವಚನದಲ್ಲಿ ಪೌಲನು ಸ್ತ್ರೀಸಂಪರ್ಕವಿಲ್ಲದೆ ಇರುವದು ಮನುಷ್ಯನಿಗೆ ಒಳ್ಳೇದು ಎಂದು ಹೇಳಿದ ಬಳಿಕ ಈಗ 6ನೇ ವಚನದಲ್ಲಿ, ಬಹುಮಂದಿಗೆ ವಿವಾಹಮಾಡಿಕೊಳ್ಳುವದು ಅಗತ್ಯವಾಗಿರುತ್ತದೆಂದು – ಹಿತೋಪದೇಶ– ಹೇಳುತ್ತಾನೆ.

7 ನಾನಿರುವಂತೆಯೇ – ಅಂದರೆ, ಅವಿವಾಹಿತರಾಗಿ – ಎಲ್ಲಾ ಮನುಷ್ಯರು ಇರಬೇಕೆಂದು ನನ್ನ ಇಷ್ಟ ಎಂದು ಪೌಲನು ಬರೆಯುತ್ತಾನೆ. ಅವಿವಾಹಿತರು ಕ್ರಿಸ್ತನ ಸೇವೆಗಾಗಿ ಹೆಚ್ಚು ಸಮಯವನ್ನೂ ಬಲವನ್ನೂ ಪ್ರತ್ಯೇಕಿಸಿಡುವದಕ್ಕೆ ಶಕ್ತರಾಗುತ್ತಾರೆಂಬ ಕಾರಣಕ್ಕಾಗಿ ಪೌಲನು ಇದನ್ನು ಹಾರೈಸುತ್ತಾನೆ. ಆದರೆ ಒಬ್ಬನು ಒಂದು ವಿಧವಾಗಿ ಮತ್ತೊಬ್ಬನು ಇನ್ನೊಂದು ವಿಧವಾಗಿ ದೇವರಿಂದ ವರವನ್ನು ಹೊಂದಿಕೊಂಡಿದ್ದಾರೆ. ಪೌಲನು ಸ್ವಹತೋಟಿಯ ವರವನ್ನು ಹೊಂದಿದ್ದನಾದ್ದರಿಂದ ಅವನಿಗೆ ವಿವಾಹವಾಗುವದು ಅಗತ್ಯವಿರಲಿಲ್ಲ. ಇತರರು ಬೇರೆ ವರಗಳನ್ನು ಹೊಂದಿರುತ್ತಾರೆ. ಉದಾಹರಣೆಗೆ, ವಿವಾಹವಾಗುವವರು ಮಕ್ಕಳನ್ನು ಬೆಳೆಸುವ, ಅಥವಾ ಉಪಚಾರದ ವರವನ್ನು ಹೊಂದಿರುವ ಸಾಧ್ಯತೆಯಿತ್ತದೆ.

8 ಪೌಲನು ಇಲ್ಲಿ 1ನೇ ವಚನದ ವಿಚಾರವನ್ನು ಪುನರಾವರ್ತಿಸುತ್ತಾನೆ; ಅದಾವುದೆಂದರೆ, ಅವಿವಾಹತರಾಗಿ ಉಳಿಯುವದು ಒಳ್ಳೇದು.

ದಮೆಯಿರುವವರು (ಸ್ವಹತೋಟಿ) ಅವಿವಾಹಿತರಾಗಿ – ನಾನಿರುವಂತೆಯೇ – ಉಳಿಯಬೇಕೆಂದು ಪೌಲನು ಪ್ರೋತ್ಸಾಹಿಸುತ್ತಾನೆ. ಪೌಲನು ಮುಂಚೆ ವಿವಾಹವಾಗಿದ್ದನೋ ಅಥವಾ ಇಲ್ಲವೋ ಎಂಬದು ತಿಳಿದುಬಂದಿರುವದಿಲ್ಲ. ಹೆಚ್ಚು ಕಡಿಮೆ ಯೆಹೂದ್ಯ ಗಂಡಸರೆಲ್ಲರೂ, ವಿವಾಹ ವಾದವರಾಗಿದ್ದರು. ಮತ್ತು ಪೌಲನು ಒಬ್ಬ ಅತಿ ಕಟ್ಟುನಿಟ್ಟಿನ ಯೆಹೂದ್ಯನಾಗಿದ್ದನು. ಒಮ್ಮೆ ಆತನು ವಿವಾಹವಾಗಿ ಆತನ ಹೆಂಡತಿಯು ಮರಣಿಸಿರುವ ಸಾಧ್ಯತೆಯಿರುತ್ತದೆ. ನಮಗೆ ಖಚಿತವಾಗಿ ತಿಳಿದಿರುವ ಒಂದು ಸಂಗತಿಯು ಮಾತ್ರವೇನೆಂದರೆ ಈ ಪತ್ರಿಕೆಯನ್ನು ಬರೆದ ವೇಳೆಯಲ್ಲಿ ಪೌಲನು ಅವಿವಾಹಿತನಾಗಿದ್ದನು. ಈ ವಚನದಲ್ಲಿ ಅವಿವಾಹಿತ ಎಂಬ ಪದಕ್ಕೆ ಮೂರು ಅರ್ಥಗಳಿರಬಹುದುದಾಗಿದೆ. ಮೊದಲನೆಯದಾಗಿ, ಇದು ಎಂದಿಗೂ ವಿವಾಹವಾಗದ ವ್ಯಕ್ತಿಯನ್ನು ಸೂಚಿಸಬಹುದು. ಎರಡನೆಯದಾಗಿ, ಇದು ಒಮ್ಮೆ ವಿವಾಹವಾಗಿ ಹೆಂಡತಿ ಮರಣಿಸಿರುವ ವ್ಯಕ್ತಿಯನ್ನು – ಅಂದರೆ, ವಿಧವೆ ಅಥವಾ ವಿಧುರ – ಸೂಚಿಸಬಹುದು. ಮೂರನೆಯದಾಗಿ, ಇದು ಅವನ ಅಥವಾ ಅವಳ ಸಹಪಾಠಿಯಿಂದ ವಿಭ್ಛೇದನವನ್ನು ಹೊಂದಿರುವ ವ್ಯಕ್ತಿಯನ್ನು ಸೂಚಿಸಬಹುದು.[20]

ಹೇಗಿದ್ದರೂ, ಪೌಲನು ಇಲ್ಲಿ ಮುಖ್ಯವಾಗಿ ಮೊದಲನೆಯ ಅರ್ಥವನ್ನೂ ಮನಸ್ಸಿನಲ್ಲಿಟ್ಟು ಕೊಂಡಿರುವಂತೆ ಸ್ಪಷ್ಟವಾಗುತ್ತದೆ, ಯಾಕೆಂದರೆ ವಿಧವೆಯರ ಬಗ್ಗೆ (ಎರಡನೆಯ ಅರ್ಥ) ಪ್ರತ್ಯೇಕವಾಗಿ ಪ್ರಸ್ತಾಪಿಸುತ್ತಾನೆ.

9 ಪೌಲನು ದಮೆಯಿಲ್ಲದವರಾದ ಅವಿವಾಹಿತರು ಹಾಗು ವಿಧವೆಯರು ಕಾಮತಾಪಪಡುವದಕ್ಕಿಂತ ಮದುವೆ ಮಾಡಿಕೊಳ್ಳುವದು ಉತ್ತಮವೆಂದು ಸಲಹೆ ನೀಡುತ್ತಾನೆ. ಅಂದರೆ, ದಮೆಯಿಂದಿರುವ ವರವನ್ನು ಹೊಂದಿರದವರು ವಿವಾಹವಾಗಬೇಕು. ಈ ಸಲಹೆಯು ಪುರುಷರಿಗೂ ಸ್ತ್ರೀಯರಿಗೂ ಅನ್ವಯವಾಗುತ್ತದೆ.

ಕಾಮ ತಾಪಪಡುವದು ಸಂಪೂರ್ಣ ಸ್ವಾಭಾವಿಕ; ಅದು ಸ್ವತಃ ಪಾಪವಲ್ಲ. ಹೇಗಿದ್ದರೂ, ಅಂತಹ ಕಾಮತಾಪವು ತೃಪ್ತಿಪಡಿಸಲ್ಪಡದೆ ಉಳಿಯುವದಾದರೆ ಅದು ಶೋಧನೆಗೂ ನಂತರ ಪಾಪಕ್ಕೂ ನಡೆಸಬಲ್ಲದು. ಆದುದರಿಂದ, ಒಬ್ಬನು ಅಂತಹ ಕಾಮವು ತಾಪಪಡುವಂತೆ ಅನುಮತಿಸದೆ ವಿವಾಹವಾಗಬೇಕು..

10-11 ವಿವಾಹವು ಜೀವನ ಪರ್ಯಂತರಕ್ಕೂ ಇರತಕ್ಕದುಃ ಅದು ಕ್ರಿಸ್ತನ ಆಜ್ಞೆಯಾಗಿದೆ (ಮಾರ್ಕ 10:6-9). ಹೆಂಡತಿಯು ಗಂಡನನ್ನು ಬಿಟ್ಟು ಅಗಲಬಾರದು (ವಚನ 10). ಮತ್ತು ಗಂಡನು ಹೆಂಡತಿಯನ್ನು ಬಿಡಬಾರದು (ವಿಛ್ಛೇದನವನ್ನು ನೀಡಬಾರದು). ಆದರೆ ಒಬ್ಬರು ಮತ್ತೊಬ್ಬರಿಗೆ ವಿಛ್ಛೇದನ ನೀಡಿರುವದಾದರೆ (ಅಥವಾ ಒಬ್ಬರನ್ನೊಬ್ಬರು ಅಗಲಿ ಜೀವಿಸುತ್ತಿರುವದಾದರೆ) ಅವರು ಪರಸ್ಪರ ಸಮಾಧಾನವಾಗುವದಕ್ಕೆ ಎಲ್ಲಾ ಪ್ರಯತ್ನವನ್ನು ಮಾಡಬೇಕು. ಒಂದು ವೇಳೆ ಅದು ಅಸಾಧ್ಯವಾಗಿ ನಿರೂಪಿಸಲ್ಪಡುವದಾದರೆ ಅವರು ಅವಿವಾಹಿತರಾಗಿ ಉಳಿಯಬೇಕು. ಬೈಬಲಿನಲ್ಲಿ ಎರಡು ನಿರ್ಬಂಧಗಳು ಮಾತ್ರವೇ ಸ್ಪಷ್ಟವಾಗಿ ಕೊಡಲ್ಪಟ್ಟಿರುತ್ತವೆ, ಅವುಗಳ ಅಡಿಯಲ್ಲಿ ವಿಛ್ಛೇದನ ಹೊಂದಿರುವವರು ಮರುವಿವಾಹ ಮಾಡಿಕೊಳ್ಳುವದು ಕಾನೂನುಬದ್ಧವಾಗಿರುತ್ತದೆ. ಮೊದಲನೆಯ ನಿರ್ಬಂಧವೇನೆಂದರೆ, ಒಬ್ಬರ ಸಂಗಾತಿಯು ವ್ಯಭಿಚಾರ ಮಾಡಿರುವದಾದರೆ ನಿರಪರಾಧಿಯಾದ ಸಂಗಾತಿಯು ಮರುವಿವಾಹ ಮಾಡಿಕೊಳ್ಳಲು ಅನುಮತಿಯಿರುತ್ತದೆ (ಮತ್ತಾಯ 5:32). ಎರಡನೆಯ ನಿರ್ಬಂಧವೇನೆಂದರೆ, ವಿಛ್ಛೇದನ ಹೊಂದಿರುವ ಸಂಗಾತಿಯು ಸಾಯುವದಾದರೆ ಬದುಕುಳಿದಿರುವ ಸಂಗಾತಿಯು ಮರುವಿವಾಹ ಮಾಡಿಕೊಳ್ಳುವದು ಕಾನೂನು ಬದ್ಧವಾಗಿರುತ್ತದೆ (ರೋಮಾ 7:3; 1 ಕೊರಿಂತ 7:39). ಈ ಎರಡೂ ಕಾರಣಗಳಿಲ್ಲದಿರುವದಾದರೆ ವಿಛ್ಛೇದಿತ ವ್ಯಕ್ತಿಯು ಮರುವಿವಾಹ ಮಾಡಿಕೊಳ್ಳಬಾರದು; ಹಾಗೆ ಮಾಡುವದು ವ್ಯಭಿಚಾರವಾಗಿರುತ್ತದೆ.[21]

12-13 ಇಲ್ಲಿ ಪೌಲನು ಬೇರೆ ವಿಷಯದೆಡೆಗೆ ತಿರಿಗಿಕೊಳ್ಳುತ್ತಾನೆ: ವಿಶ್ವಾಸಿಯಾಗಿರುವ ಹಾಗು ವಿಶ್ವಾಸಿಯಲ್ಲದ ಸಂಗಾತಿಗಳ ವಿವಾಹ. ಪೌಲನು 12ನೇ ವಚನದಲ್ಲಿ ಮಿಕ್ಕಾದವರ ವಿಷಯದಲ್ಲಿ ಮಾತಾಡುತ್ತಾನೆ. "ಮಿಕ್ಕಾದವರು" ಅವಿಶ್ವಾಸಿಗಳೊಂದಿಗೆ ವಿವಾಹವಾಗಿರುವ ವಿಶ್ವಾಸಿಗಳಾಗಿದ್ದಾರೆ. ಈ ವಿಷಯದಲ್ಲಿ ಯೇಸುವಿನ ಯಾವ ಲಿಖಿತ ಬೋಧನೆಯಿರುವದಿಲ್ಲ. ಯೇಸುವಿನ ಸೇವೆಯು ಭೂಲೋಕದಲ್ಲಿ ಕೇವಲ ಮೂರು ವರ್ಷಗಳ ತನಕ ಮಾತ್ರವೇ ಇದ್ದದರಿಂದ ಆತನ ಜೀವಿತಾವಧಿಯಲ್ಲಿ ಈ "ಮಿಶ್ರವಿವಾಹ"ದ ಸಮಸ್ಯೆಯು ಉದ್ಭವಿಸಿರಲಿಕ್ಕಿಲ್ಲ. ಆದುದರಿಂದ, ಆತನಿಗೆ ಇದರ ವಿಷಯದಲ್ಲಿ ಬೋಧಿಸುವ ಸಂದರ್ಭವು ದೊರಕಿರಲಿಲ್ಲ. ಈ ಕಾರಣದಿಂದಲೇ ಪೌಲನು ಈ ಭಾಗದಲ್ಲಿ ತನ್ನ ಅಪೊಸ್ತಲತನದ ಅಧಿಕಾರದಿಂದ ಮಾತಾಡುತ್ತಾನೆ.

ಆತನು ಹೇಳುವದೇನೆಂದರೆ; ಕರ್ತನ ಮಾತು ಇಲ್ಲವಾದರೂ ನನ್ನ ಅಭಿಪ್ರಾಯ ಹೇಳುತ್ತೇನೆ. ಅಲ್ಲದೆ ಪೌಲನು ಪವಿತ್ರಾತ್ಮನ ಅಧಿಕಾರದಿಂದ ಸಹ ಮಾತಾಡುತ್ತಾನೆ (ವಚನ 10), ಯಾಕೆಂದರೆ ಪವಿತ್ರಾತ್ಮನ ನೇರವಾದ ಪ್ರೇರಣೆಯ ಮುಖಾಂತರವೇ ಪೌಲನು ಹೊಸ ಒಡಂಬಡಿಕೆಯ ತನ್ನ ಎಲ್ಲಾ ಪತ್ರಿಕೆಗಳನ್ನು ಬರೆದಿರುತ್ತಾನೆ.

ಈ ಮಿಶ್ರವಿವಾಹದ (ಅದರಲ್ಲಿ ಒಬ್ಬ ಸಂಗಾತಿ ಮಾತ್ರವೇ ವಿಶ್ವಾಸಿಯಾಗಿರುತ್ತಾರೆ) ವಿಷಯದಲ್ಲಿನ ಪೌಲನ ಬೋಧನೆಯೆಡೆಗೆ ಗಮನ ಹರಿಸುವದಕ್ಕೆ ಮುನ್ನ ಪೌಲನ ಮೂಲ ಬೋಧನೆಗಳಲ್ಲಿನ ಇನ್ನೊಂದು ಸಂಗತಿಯನ್ನು ಪುನಃ ದೃಢಪಡಿಸಿಕೊಳ್ಳುವದು ಪ್ರಾಮುಖ್ಯವಾದದ್ದು: ಅದೇನೆಂದರೆ, ಕ್ರೈಸ್ತ ವ್ಯಕ್ತಿ ಕ್ರೈಸ್ತೇತರರನ್ನು ವಿವಾಹವಾಗಲೇ ಬಾರದು (2 ಕೊರಿಂಥ 6:14).

ಹೇಗಿದ್ದರೂ, ಒಬ್ಬನು ಈಗಾಗಲೇ ವಿವಾಹಿತನಾಗಿದ್ದು ಅನಂತರದಲ್ಲಿ ವಿಶ್ವಾಸಿಯಾಗುವದಾದರೆ ಅಂಥವನು ಏನು ಮಾಡಬೇಕು? ಪೌಲನ ಉತ್ತರ ಹೀಗಿರುತ್ತದೆ: ಅವಿಶ್ವಾಸಿಯಾದ ಸಂಗಾತಿಯು ವಿಶ್ವಾಸಿಯಾದ ಸಂಗಾತಿಯೊಂದಿಗೆ ಇರುವದಕ್ಕೆ ಮನಸ್ಸು ಮಾಡುವದಾದರೆ ವಿಶ್ವಾಸಿಯಾದ ಸಂಗಾತಿಯು ಅವಿಶ್ವಾಸಿಗೆ ವಿಚ್ಛೇದನ ಮಾಡಬಾರದು. ಅಂತಹ ವಿವಾಹವು (ದಾಂಪತ್ಯ) ದೇವರ ದೃಷ್ಟಿಯಲ್ಲಿ ಪವಿತ್ರವೇ ಆಗಿರುತ್ತದೆ.

ಯಾಕೆಂದರೆ ಕ್ರಿಸ್ತನಂಬಿಕೆಯಿಲ್ಲದ ಗಂಡನು ತನ್ನ ಹೆಂಡತಿಯಲ್ಲಿ ದೇವಜನಕ್ಕೆ ಸಂಬಂಧ ಪಟ್ಟವನಾದನು; ಮತ್ತು ಕ್ರಿಸ್ತನಂಬಿಕೆಯಿಲ್ಲದ ಹೆಂಡತಿಯು ತನ್ನ ಗಂಡನಲ್ಲಿ ದೇವಜನಕ್ಕೆ ಸಂಬಂಧ ಪಟ್ಟವಳಾದಳು. ಕ್ರಿಸ್ತನಂಬಿಕೆಯಿಲ್ಲದ ಸಂಗಾತಿಯು ರಕ್ಷಣೆಯನ್ನು ಪಡೆಯುವರೆಂದು ಇದರ ಅರ್ಥವಲ್ಲ. ಬದಲಾಗಿ, ಕ್ರಿಸ್ತನಂಬಿಕೆಯುಳ್ಳ ಸಂಗಾತಿಯ ಪವಿತ್ರತೆ ಹಾಗು ಪರಿಶುದ್ಧತೆಯು ಸ್ವಲ್ಪಮಟ್ಟಿಗೆ ಕ್ರಿಸ್ತನಂಬಿಕೆಯಿಲ್ಲದ ಸಂಗಾತಿ ಮತ್ತು ಅವರ ಮಕ್ಕಳ ಮೇಲೆ ಪ್ರತಿಬಿಂಬಿಸುವದು ಎಂಬದು ಇದರ ಅರ್ಥವಾಗಿದೆ. ದೇವರು ಕ್ರಿಸ್ತನಂಬಿಕೆಯುಳ್ಳ ಸಂಗಾತಿಗೆ ನೀಡುವ ಆತ್ಮೀಕ ಆಶೀರ್ವಾದಗಳು ಸ್ವಲ್ಪ ಮಟ್ಟಿಗೆ ಕ್ರಿಸ್ತನಂಬಿಕೆಯಿಲ್ಲದ ಸಂಗಾತಿ, ಅವರ ಮಕ್ಕಳು, ಹಾಗು ಅವರ ಇಡೀ ಮನೆಯವರ ಮೇಲೆ ಸಹ ಬರುವವು (ಆದಿಕಾಂಡ 7:7, 39:4-5).

ಹಾಗಲ್ಲದಿದ್ದರೆ ನಮ್ಮ ಮಕ್ಕಳು ಅಪವಿತ್ರರಾಗುತ್ತಿದ್ದರು. ತಂದೆ ತಾಯಿಗಳ ನಂಬಿಕೆಯ ಕಾರಣದಿಂದ ಮಕ್ಕಳು ಏಕಾಏಕಿ ರಕ್ಷಿಸಲ್ಪಡುವರೆಂದು ಇದರ ಅರ್ಥವಲ್ಲ. ಪ್ರತಿಯೊಬ್ಬ ವ್ಯಕ್ತಿಯು ರಕ್ಷಣೆಯನ್ನು ಹೊಂದಬೇಕಾದರೆ ವಯುಕ್ತಿಕವಾಗಿ ನಂಬಕೆಯನ್ನಿಟ್ಟು ಪವಿತ್ರಾತ್ಮನಿಂದ ಹೊಸದಾಗಿ ಹುಟ್ಟಬೇಕೆಂಬದನ್ನು ನಾವು ಬಲ್ಲೆವು (ಯೋಹಾನ 3:3). ಆದರೆ ಮೇಲಿನ ಹೇಳಿಕೆಯ ಅರ್ಥವು ಹೀಗಿದೆ: ಕ್ರಿಸ್ತನಂಬಿಕೆಯುಳ್ಳ ತಂದೆತಾಯಿಗಳ (ಅಥವಾ ಹೆತ್ತವರಲ್ಲಿ ಒಬ್ಬರು ಮಾತ್ರವೆ ವಿಶ್ವಾಸಿಯಾಗಿರುವವರ) ಮಕ್ಕಳು ಒಂದು ವಿಧದಲ್ಲಿ ದೇವರ ಕುಟುಂಬದೊಳಗೆ ಜನಿಸಿದವರಾಗಿರುತ್ತಾರೆ. ಆದರೆ, ಅದು ನಿಜವಾಗಿದ್ದಾಗ್ಯು ಅವರು ಬೆಳೆದು ವಯಸ್ಸಿಗೆ ಬಂದ ತಕ್ಷಣವೇ ಸ್ವತಃ ತಾವೇ ಕ್ರಿಸ್ತನಲ್ಲಿ ನಂಬಿಕೆಯನ್ನಿಡಬೇಕು. ಯಾವ ವ್ಯಕ್ತಿಯು ಸ್ವಾಭಾವಿಕವಾಗಿ ಒಬ್ಬ ಕ್ರೈಸ್ತನಾಗಿ ಹುಟ್ಟುವದಿಲ್ಲ. ಒಬ್ಬ ವ್ಯಕ್ತಿಯು ತನ್ನ ತಾಯಿ ಅಥವಾ ತಂದೆಯ ನಂಬಿಕೆಯ ಮೂಲಕವಲ್ಲ, ಆದರೆ ತನ್ನ ಸ್ವಂತ ನಂಬಿಕೆಯ ಮುಖಾಂತರ ಮಾತ್ರವೇ ರಕ್ಷಣೆ ಹೊಂದುತ್ತಾನೆ.

**15** ಒಂದು ವೇಳೆ ಕ್ರಿಸ್ತನ ನಂಬಿಕೆಯಿಲ್ಲದ ಸಂಗಾತಿಯು ಅಗಲಬೇಕೆಂದಿದ್ದರೆ ಕ್ರಿಸ್ತನಂಬಿಕೆಯುಳ್ಳ ಸಂಗಾತಿಯು ಕ್ರಿಸ್ತನಂಬಿಕೆಯಿಲ್ಲದವರನ್ನು ಅಗಲಿ ಹೋಗಲು ಬಿಡಬೇಕು. ಯಾಕೆ? ಯಾಕೆಂದರೆ, ಗಂಡ ಹೆಂಡತಿಯರು ಸಮಾಧಾನದಲ್ಲಿರಬೇಕೆಂದು ದೇವರು ಇಚ್ಛಿಸುತ್ತಾನೆ. ಒಂದು ವೇಳೆ ಕ್ರಿಸ್ತ ನಂಬಿಕೆಯಿಲ್ಲದ ಸಂಗಾತಿಯು ವಿಶ್ವಾಸಿಯಾದ ಸಂಗಾತಿಯೊಂದಿಗೆ ಯಾವಾಗಲೂ ಜಗಳವಾಡುತ್ತಾ ಇರುವದಾದರೆ ಆ ದಾಂಪತ್ಯವು ಅಂತ್ಯಗೊಳ್ಳಲಿ! ಕೇವಲ ಗಾಯಗಳಿಂದ ತುಂಬಿರುವ ದಾಂಪತ್ಯವನ್ನು ದೇವರು ಮೆಚ್ಚುವದಿಲ್ಲ.

ಕ್ರಿಸ್ತನಂಬಿಕೆಯಿಲ್ಲದ ಸಂಗಾತಿಯು ಅಗಲಿಹೋಗುವದಾದರೆ ಕ್ರಿಸ್ತನಂಬಿಕೆಯುಳ್ಳ ಸಂಗಾತಿಯು ಇಂಥಾ ಸಂದರ್ಭಗಳಲ್ಲಿ ಬದ್ಧನಲ್ಲ. ಪೌಲನು ಇಲ್ಲಿ ಕ್ರಿಸ್ತನಂಬಿಕೆಯುಳ್ಳ ಸಂಗಾತಿಯು ಮರು ವಿವಾಹವಾಗುವದರಲ್ಲಿ ತಪ್ಪೇನಿಲ್ಲ, ಯಾಕೆಂದರೆ, ಕ್ರಿಸ್ತನಂಬಿಕೆಯುಳ್ಳ ಸಹೋದರನಾಗಲಿ ಸಹೋದರಿಯಾಗಲಿ ಬದ್ಧರಲ್ಲ ಎಂದು ಹೇಳುತ್ತಿದ್ದಾನೆಂಬದಾಗಿ ಅನೇಕ ಕ್ರೈಸ್ತರು ಯೋಚಿಸುತ್ತಾರೆ.

**16** ಕ್ರಿಸ್ತ ನಂಬಿಕೆಯಿಲ್ಲದ ಸಂಗಾತಿಯು ಕ್ರಿಸ್ತನ ವಿಶ್ವಾಸಿಯಾಗಿ ರಕ್ಷಣೆ ಹೊಂದುವಂತೆ ಕ್ರಿಸ್ತನಂಬಿಕೆಯುಳ್ಳ ಸಂಗಾತಿಯು ನಿರಂತರವಾಗಿ ನಿರೀಕ್ಷಿಸುತ್ತಾ ಪ್ರಾರ್ಥಿಸಬೇಕು (1 ಪೇತ್ರ 3:1-2 ನೋಡಿರಿ). ಆದರೆ ಸಂಧಾನವು ಅಸಾಧ್ಯವಾಗಿರುವದಾದರೆ ಕ್ರಿಸ್ತನಂಬಿಕೆಯುಳ್ಳ ಸಂಗಾತಿಯು ಕ್ರಿಸ್ತನಂಬಿಕೆಯಿಲ್ಲದ ಸಂಗಾತಿಯನ್ನು ಇರುವಂತೆ ಒತ್ತಾಯಿಸಬಾರದು.

**17** ಪೌಲನು ಈಗ ಪ್ರತಿಯೊಬ್ಬರಿಗೂ ಸಾಮಾನ್ಯ ನಿಯಮವೊಂದನ್ನು ನೀಡುತ್ತಾನೆ; ಆದರೂ ಪ್ರತಿಯೊಬ್ಬನಿಗೆ ಯಾವ ಸ್ಥಿತಿಯನ್ನು ನೇಮಿಸಿದ್ದಾನೋ. ಆಯಾಸ್ಥಿತಿಗೆ ಸರಿಯಾಗಿ ನಡೆದುಕೊಳ್ಳಲು. ನಾವು ಕ್ರೈಸ್ತರಾಗಿ ಆತ್ಮೀಕವಾದ ರೀತಿಯಲ್ಲಿ ರೂಪಾಂತರ ಹೊಂದಿದ್ದಾಗ್ಯು ನಾವು ನಮ್ಮ ಸಾಮಾಜಿಕ ಹಾಗು ಆರ್ಥಿಕ ಸ್ಥಿತಿಗಳು ಸಹ ರೂಪಾಂತರ ವಾಗುವಂತೆ ನಿರೀಕ್ಷಿಸಬೇಕೆಂದು ಇದರ ಅರ್ಥವಲ್ಲ.[22] ಉದಾಹರಣೆಗೆ, ಒಬ್ಬ ವ್ಯಕ್ತಿಯು ಮೊದಲು ನಂಬಿಕೆಯಿಟ್ಟಾಗ – ಅಂದರೆ, ದೇವರು ಕರೆದ ಕಾಲದಲ್ಲಿ (ವಚನ 18) – ವಿವಾಹಿತನಾಗಿದ್ದರೆ ಸಾಧ್ಯವಾದಲ್ಲಿ ಆತನು ವಿವಾಹಿತನಾಗಿಯೇ ಉಳಿಯಲಿ. ಒಂದು ವೇಳೆ ಒಬ್ಬ ವ್ಯಕ್ತಿಯು ಮೊದಲು ನಂಬಿದಾಗ ಸುನ್ನತಿಯುಳ್ಳವನಾಗಿದ್ದರೆ (ಒಬ್ಬ ಯೆಹೂದ್ಯ) ಆತನು ಯೆಹೂದ್ಯನಾಗಿಯೇ ಉಳಿಯಲಿ (ವಚನ 18). ಒಬ್ಬನು ದಾಸನಾಗಿದ್ದರೆ ಆತನು ದಾಸನಾಗಿಯೇ ಉಳಿಯಲಿ (ವಚನ 21).

**18-19** ನಮ್ಮ ಜೀವಿತದ ಸ್ಥಿತಿಯು ಏನೇ ಆಗಿದ್ದರೂ ದೇವರಿಗೆ ವಿಧೇಯರಾಗುಳಿಯುವದೇ ಅತಿ ಮುಖ್ಯ ಸಂಗತಿಯಾಗಿದೆ. ದೇವರ ಕಟ್ಟಳೆಗಳನ್ನು ಅನುಸರಿಸಿ ನಡೆಯುವದೇ ಪ್ರಯೋಜನವಾಗಿದೆ ಎಂದು ಪೌಲನು ಬರೆಯುತ್ತಾನೆ (ವಚನ 19).

ಒಬ್ಬನು ವಿವಾಹಿತ ನಾಗಿರಲಿ ಅಥವಾ ಅವಿವಾಹಿತನಾಗಿರಲಿ, ಸುನ್ನತಿಯುಳ್ಳವನಾಗಿರಲಿ, ಅದು ಪ್ರಾಮುಖ್ಯವಾದ ವಿಷಯವಲ್ಲ (ಗಲಾತ್ಯ 3:28;5:6,6:15 ನೋಡಿರಿ). ಅತಿ ಪ್ರಾಮುಖ್ಯವಾದ ಯೇಸು ಕ್ರಿಸ್ತನನ್ನು ಪ್ರೀತಿಸಿ ವಿಧೇಯರಾಗಿರುವದಕ್ಕೂ ಕರೆಯಲ್ಪಟ್ಟಿದ್ದೇವೆ (ಯೋಹಾನ 14:21).

**20-21** ದೇವರು ಯಾವಾಗಲಾದರೂ ನಮ್ಮ ಹೊರಗಿನ ಪರಿಸ್ಥಿತಿಗಳನ್ನು ಬದಲಾಯಿಸಬಲ್ಲನು; ಅದು ಆತನಿಗೆ ಸಮಸ್ಯೆಯಾಗಿರುವದಿಲ್ಲ. ನಾವು ಅವಿವಾಹಿತರಾಗಿದ್ದು ಕ್ರೈಸ್ತರಾದ ಬಳಿಕ ನಮಗೆ ಗಂಡ ಅಥವಾ ಹೆಂಡತಿ ಬೇಕಾಗಿರುವದಾದರೆ ದೇವರು ನಮಗಾಗಿ ಒದಗಿಸಬಲ್ಲನು. ನಾವು ದಾಸರಾಗಿದ್ದರೆ ದೇವರು ನಮ್ಮನ್ನು ಸ್ವತಂತ್ರಗೊಳಿಸಬಲ್ಲನು. ಆದರೆ ನಾವು ಸ್ವತಃ ಒತ್ತಾಯದಿಂದಾಗಲಿ ಅಥವಾ ನಮ್ಮ ಸ್ವಚಿತ್ತಕ್ಕನುಸಾರವಾಗಲಿ ನಮ್ಮ ಪರಿಸ್ಥಿತಿಯನ್ನು ಬದಲಾಯಿಸಿಕೊಳ್ಳಲು ಯತ್ನಿಸಬಾರದು. ಬದಲಾಗಿ, ನಾವು ದೇವರ ನಡಿಸುವಿಕೆ ಮತ್ತು ಕಾರ್ಯಕ್ಕಾಗಿ ಕಾಯಬೇಕು (ವಚನಗಳು 20,24). ನಮಗೆ ಯಾವದು ಉತ್ತಮವೆಂಬದನ್ನು ದೇವರು ನಮಗಿಂತಲೂ ಚೆನ್ನಾಗಿ ಬಲ್ಲನು, ಮತ್ತು ಆತನಿಗೆ ಯಾವದು ಹೆಚ್ಚು ಮಹಿಮೆಯನ್ನುಂಟು ಮಾಡುವದೆಂಬದನ್ನು ಆತನು ಖಂಡಿತವಾಗಿಯೂ ಬಲ್ಲನು. ನಮಗೆ ಒಂದೇಕರ್ತವ್ಯವಿದೆ; ನಾವು ದೇವರಿಂದ ಕರೆಯಲ್ಪಟ್ಟ ಮೇರೆಗೆ ಯೋಗ್ಯರಾಗಿ ಜೀವಿಸುವದೇ (ಎಫೆಸ 41).

**22** ನಮ್ಮ ಬಹಿರಂಗದ ಪರಸ್ಥಿತಿಯು – ನಾವು ವಿವಾಹಿತರಾಗಿರಲಿ, ಸುನ್ನತಿಯುಳ್ಳವರಾಗಿರಲಿ ಅಥವಾ ದಾಸರಾಗಿರಲಿ – ಗಣನೆಗೆ ಬರುವದಿಲ್ಲ. ನಾವು ಕ್ರಿಸ್ತನಿಗೆ ಸೇರಿರುತ್ತೇವೆಂಬದೇ ಪ್ರಾಮುಖ್ಯವಾಗಿರುತ್ತದೆ. ಬೇರೆ ಇನ್ನಾವದಾಗಲಿ ಇದಕ್ಕಿಂತ ಪ್ರಾಮುಖ್ಯವಾಗಿರುವದಿಲ್ಲ. ಕ್ರಿಸ್ತನನ್ನು ನಂಬುವ ದಾಸನು ಕರ್ತನ ಮೂಲಕ ಬಿಡುಗಡೆ ಹೊಂದಿರುವ ಸ್ವತಂತ್ರನು – ಮತ್ತು ಅಂತಹ ಮನುಷ್ಯನು ನಿಜವಾಗಿಯೂ ಸ್ವತಂತ್ರನೇ (ಯೋಹಾನ 831-32, 36 ನೋಡಿರಿ). ಅಥವಾ ಇನ್ನೊಂದು ವಿಧದಲ್ಲಿ ನೋಡುವದಾದರೆ ಕ್ರಿಸ್ತನಲ್ಲಿ ನಂಬಿಕೆಯಿಡುವ ಸ್ವತಂತ್ರನು ವಾಸ್ತವದಲ್ಲಿ ಕ್ರಿಸ್ತನಿಗೆ ದಾಸನು. ಆದುದರಿಂದ, ನಾವು ಬಹಿರಂಗವಾಗಿ ನಾವು ದಾಸರಾಗಿರಬಹುದು ಅಥವಾ ಸ್ವತಂತ್ರರಾಗಿರಬಹುದು, ಅಂತರ್ಯದಲ್ಲಂತೂ ನಾವು ಕ್ರಿಸ್ತನಿಗೇ ಸೇರಿದವರಾಗಿದ್ದೇವೆ.

**23** ಒಮ್ಮೆ ಕ್ರಿಸ್ತನು ನಮ್ಮನ್ನು ಕೊಂಡುಕೊಂಡರೆ ನಾವು ಆತನಿಗೆ ದಾಸರು ಬಹಿರಂಗದಲ್ಲಿ ನಾವು ಇನ್ನೊಬ್ಬನ ದಾಸ ಅಥವಾ ಸೇವಕರಾಗಿದ್ದಾಗ್ಯು ಅಂತರ್ಯದಲ್ಲಿ ನಾವು ಕ್ರಿಸ್ತನಿಗೆ ಸೇರಿದವರಾಗಿದ್ದೇವೆ. ಮತ್ತು ನಾವು ಎಲ್ಲಾದಕ್ಕಿಂತ ಮೇಲಾಗಿ ಆತನಿಗೆ ವಿಧೇಯರಾಗಬೇಕು ಆತನೊಬ್ಬನೆ ನಮ್ಮ ನಿಜವಾದ ಯಜಮಾನನು ಹಾಗು ಕರ್ತನಾಗಿದ್ದಾನೆ.

ಕ್ರಿಸ್ತನು ನಮ್ಮನ್ನು ಕೊಂಡುಕೊಂಡಿದ್ದಾನೆ. ಪೌಲನ ಕಾಲದಲ್ಲಿ ದಾಸರು ಆಸ್ತಿ ಅಥವಾ ಪಶುಗಳಂತೆ ಮಾರಲ್ಪಡುತ್ತಿದ್ದ ಪ್ರಕಾರವೇ ನಾವು ಕ್ರಿಸ್ತನಿಂದ ಕೊಂಡುಕೊಳ್ಳಲ್ಪಟ್ಟಿದ್ದೇವೆ. ಕ್ರಿಸ್ತನು ನಮಗಾಗಿ ಯಾವ ಕ್ರಯವನ್ನು ಕೊಟ್ಟನು? ಆ ಕ್ರಯವು ಆತನ ಸ್ವಂತ ರಕ್ತವೂ ಆತನ ಸ್ವಪ್ರಾಣವೂ ಆಗಿದೆ (1 ಕೊರಿಂಥ 620; 1 ಪೇತ್ರ 118-19 ನೋಡಿರಿ).

**24** ಪೌಲನು ಇಲ್ಲಿ ತಾನು 20ನೇ ವಚನದಲ್ಲಿ ಬರೆದ ವಿಷಯವನ್ನು ಪು ನರಾವರ್ತಿಸುತ್ತಾನೆ.

## ಕನ್ನಿಕೆಯರ ವಿಷಯದಲ್ಲಿನ ಪ್ರಶ್ನೆಗಳು (7:25-40)

**25** ಗ್ರೀಕ್ ಭಾಷೆಯಲ್ಲಿ[23] ಕನ್ನಿಕೆ ಎಂಬ ಪದದ ಅರ್ಥವು ವಿವಾಹ ಮಾಡಿಕೊಳ್ಳದೆಯೇ ಇರುವ ಪು ರುಷ ಅಥವಾ ಸ್ತ್ರೀ ಎಂದಾಗಿರುತ್ತದೆ. ಆದುದರಿಂದ, 25-28 ನೇ ವಚನಗಳಲ್ಲಿ ಪೌಲನು ವಿವಾಹಮಾಡಿಕೊಳ್ಳದೆಯೇ ಇರುವ ಪು ರುಷರು ಮತ್ತು ಸ್ತ್ರೀಯರ ಕುರಿತು ಮಾತಾಡುತ್ತಾನೆಂದು ನಾವು ಅರ್ಥಮಾಡಿಕೊಳ್ಳಬಹುದು.

**26** ಈಗಿನ ಕಷ್ಟಕಾಲದಲ್ಲಿ ಎಂದು ಪೌಲನು ಹೇಳುವದರ ತಾತ್ಪರ್ಯವೇನೆಂದರೆ, ಹೊಸ ಒಡಂಬಡಿಕೆಯ ಕಾಲದಲ್ಲಿ ರೋಮಾಯ ಸಾಮ್ರಾಜ್ಯದಲ್ಲಿ ಕ್ರೈಸ್ತರ ಮೇಲೆ ನಿರಂತರವಾಗಿ ಬರುತ್ತಿದ್ದ ಮಹಾ ಕಷ್ಟಗಳು ಹಾಗು ಹಿಂಸೆಗಳ ಸ್ಥಿತಿಯೇ ಆಗಿದೆ.

ಅಂತಹ ಪರಿಸ್ಥಿತಿಗಳಲ್ಲಿ ಅವಿವಾಹಿತರಾಗಿ ಉಳಿಯುವದೇ ಉತ್ತಮವೆಂದು ಪೌಲನು ಹಿತೋಪದೇಶ ನೀಡುತ್ತಾನೆ. ಸಹಜವಾಗಿ ಜನರಿಗೆ ಚಿಂತೆಮಾಡುವದಕ್ಕೆ ಹೆಂಡತಿ ಹಾಗು ಮಕ್ಕಳಿರದಿದ್ದ ಅವರು ಹಿಂಸೆಯನ್ನು ಬಹಳ ಸರಳವಾಗಿ ತಾಳಿಕೊಳ್ಳಬಲ್ಲರು.

**27** ಸಾಧ್ಯವಾದಷ್ಟು ಮೇರೆಗೆ ಜನರು ತಾವು ಇದ್ದ ಸ್ಥಿತಿಯಲ್ಲಿಯೇ ಇರಲಿ. ದೇವರು ಅವರನ್ನು ಇಟ್ಟಂಥ ಪರಿಸ್ಥಿತಿಗಳನ್ನು ಅವರು ಅಂಗೀಕರಿಸುವವರಾಗಿರಲಿ (ವಚನ 17 ಮತ್ತು ವ್ಯಾಖ್ಯಾನ ನೋಡಿರಿ).

**28** ಒಂದು ವೇಳೆ ಯವನಾದರೂ ಮದುವೆ ಮಾಡಿಕೊಳ್ಳಬೇಕಿದ್ದರೆ ಮಾಡಿಕೊಳ್ಳಲಿ; ಅದರಲ್ಲಿ ಪಾಪವಿಲ್ಲ. ಆದರೆ ವಿವಾಹಿತರು ಅವಿವಾಹಿತರಿಗಿಂತಲೂ ಹೆಚ್ಚು ಚಿಂತೆಗಳನ್ನೂ ಸಮಸ್ಯೆಯನ್ನೂ ಅನುಭವಿಸುವರು– ಉದಾಹರಣೆಗೆ, ತಾವು ಎಲ್ಲಿ ಜೀವಿಸಬೇಕು, ತಮ್ಮ ಕುಟುಂಬವನ್ನು ಹೇಗೆ ಪೋಷಿಸಬೇಕು, ಎಂಬ ಮುಂತಾದವು ಗಳು ವಿವಾಹಿತ ಸ್ತ್ರೀಯು ಮಗುವಿಗೆ ಜನ್ಮ ನೀಡುವದು, ಮಕ್ಕಳನ್ನು ಬೆಳೆಸುವದು, ಮತ್ತು ತನ್ನ ಗಂಡನ ಅಧಿಕಾರದಡಿಯಲ್ಲಿ ಉಳಿಯುವಂತಹ ಹೆಚ್ಚಿನ ಸಮಸ್ಯೆಗಳನ್ನು ಹೊಂದುವಳು. ಅಂತಹ ಪರಿಸ್ಥಿತಿಗಳಲ್ಲಿ ವಿವಾಹವಾಗುವದಕ್ಕೆ ಮುನ್ನ ಎರಡು ಸಾರಿ ಯೋಚಿಸಬೇಕೆಂದು ಪೌಲನು ಕೊರಿಂಥದವರನ್ನು ಬೇಡಿಕೊಳ್ಳುತ್ತಾನೆ!

**29-31** ಕ್ರೈಸ್ತರು ತಮ್ಮ ಹೊರಗಿನ ಪರಿಸ್ಥಿತಿಯನ್ನು ಬದಲಾಯಿಸುವದಕ್ಕೆ ಪ್ರಯತ್ನಿಸಬಾರದೆಂದು ಪೌಲನು ಹಿತೋಪದೇಶ ನೀಡುವದಕ್ಕೆ ಮುಖ್ಯ ಕಾರಣವೇನೆಂದರೆ ಆತನು ಸಮಯವು ಕ್ಲುಪ್ತವಾಗಿದೆ (ಸಂಕೋಚ) ಎಂದು ನಂಬಿದವನಾಗಿದ್ದನು.

ಸಮಯ ಕ್ಲುಪ್ತವಾಗಿದೆ ಎಂಬ ಪೌಲನ ಹೇಳಿಕೆಗೆ ಎರಡು ಅರ್ಥಗಳಿರಬಲ್ಲವು : ಮೊದಲನೆಯದಾಗಿ, ಈ ಲೋಕವು ಬೇಗನೆ ಗತಿಸಿ ಹೋಗುವದು ಎಂಬದೇ (ರೋಮ 13: 11-12 ನೋಡಿರಿ). ನಾವು ಯಾವದೇ ಅರ್ಥವನ್ನು ಆರಿಸಿಕೊಂಡಾಗ್ಯು ಒಂದು ಸಂಗತಿಯಂತೂ ಖಚಿತಃ ಕೆಲವು ಕ್ಲುಪ್ತ ವರ್ಷಗಳಲ್ಲಿಯೇ ಈ ಭೂಲೋಕದಲ್ಲಿನ ನಮ್ಮ ಜೀವಿತಗಳು ಗತಿಸಿ ಹೋಗುವವು – ಮತ್ತು ಅಭ್ಯಾಸಗತವಾದ ವಿಷಯದಲ್ಲಾದರೋ ಅದು ನಮಗೆ "ಲೋಕದ ಅಂತ್ಯ" ಆಗಿರುತ್ತದೆ. ಯಾಕೆಂದರೆ ಅದರ ನಂತರ ನಮಗಿರುವ ಮಹತ್ವದ ಘಟನೆಯೇನೆಂದರೆ ನಿಜವಾದ ಲೋಕಾಂತ್ಯದ ವೇಳೆಯಲ್ಲಿನ ಕಡೇ ನ್ಯಾಯತೀರ್ಪು ಆಗಿದೆ.

ಆದುದರಿಂದ, ನಮ್ಮೆಲ್ಲರಿಗೂ ನಿಜವಾಗಿಯೂ ಸಮಯವು ಕ್ಲುಪ್ತವೇ. ಕೆಲವು ವರ್ಷಗಳೊಳಗೆ ಕ್ರಿಸ್ತನನ್ನು ನಂಬುವವರಾದ ಈ ಭೂಲೋಕವನ್ನು ತೊರೆದು ಸದಾಕಾಲವೂ ಆತನ ಜೊತೆಯಲ್ಲಿರುವದಕ್ಕೆ ಹೋಗುತ್ತೇವೆ. ಹಾಗಾದರೆ ನಾವು ಲೌಕೀಕ ಪರಿಸ್ಥಿತಿಯ ವಿಷಯದಲ್ಲಿ ಏಕೆ ಚಿಂತೆಯಿಂದ ತುಂಬಿರಬೇಕು? (ಮತ್ತಾಯ 6;31-33; ಮಾರ್ಕ 4:19; ಕೊಲೊಸ್ಸೆ 3:2 ನೋಡಿರಿ). ಉದಾಹರಣೆಗೆ, ಪರಲೋಕದಲ್ಲಿ ನಾವು ವಿವಾಹಿತರಾಗಿರುವದಿಲ್ಲ (ಮತ್ತಾಯ 22:30). ಆದುದರಿಂದ, ನಮ್ಮಲ್ಲಿ ಗಂಡಂದಿರನ್ನು ಮತ್ತು ಹೆಂಡತಿಯರನ್ನು ಹೊಂದಿರುವ ಅವರಾರು ಇಲ್ಲದ ವರಂತೆ ಜೀವಿಸಬೇಕು. ಅಂದರೆ, ನಾವು ಈ ಭೂಲೋಕದಲ್ಲಿ ವಿವಾಹದ ಮೇಲೆ ನಮ್ಮ ಗಮನವನ್ನು ಹೆಚ್ಚಾಗಿ ಕೇಂದ್ರಿಕರಿಸಬಾರದು. ಬದಲಾಗಿ, ನಾವೆಲ್ಲರೂ ದೇವರ ಕಟ್ಟಳೆಗಳನ್ನು ಅನುಸರಿಸಿ ನಡೆಯುವದರ ಮೇಲೆ ಹೆಚ್ಚು ಗಮನವನ್ನು ಹರಿಸೋಣ (ವಚನ 19).

ಅದೇ ತರ್ಕಕ್ಕನುಗುಣವಾಗಿ, ಈ ಭೂಲೋಕದಲ್ಲಿ ನಾವು ಅಳುವವರಾಗಿರಲಿ ಅಥವಾ ಸಂತೋಷ ಪಡುವವರಾಗಿರಲಿ, ಅದೇನು ಅಷ್ಟೊಂದು ಪ್ರಾಮುಖ್ಯವಲ್ಲ. ಶೀಘ್ರ್ರವೇ ನಾವು ಲೋಕವನ್ನು ತೊರೆಯುತ್ತೇವೆ; ಆಗ ಯೇಸುವನ್ನು ನಂಬಿರುವ ನಾವು ಸಂತೋಷ ಪಡುತ್ತೇವೆ, ಹಾಗು ನಂಬದಿರುವವರು ಅಳುವರು. ಆದುದರಿಂದ, ಅಳುವವರು ಹಾಗು ಸಂತೋಷ ಪಡುವವರು ತಮ್ಮ ದುಃಖ ಹಾಗು ಸಂತೋಷಗಳು ಶೀಘ್ರ್ರವೇ ಗತಿಸಿ ಹೋಗುವವೋ ಎಂಬಂತೆ ಲೋಕದಲ್ಲಿ ಉಲ್ಲಾಸ ಪಡಲಿ – ಅಂದರೆ, ಅವರು ಅಳಲಿಲ್ಲವೇನೋ ಹಾಗು ಸಂತೋಷ ಪಡಲಿಲ್ಲವೇನೋ ಎಂಬಂತೆ ಅಳಲಿ ಹಾಗು ಸಂತೋಷ ಪಡಲಿ (ವಚನ 30)

ಅದೇ ಪ್ರಕಾರವಾಗಿ ಏನನ್ನಾದಜರೂ ಕೊಂಡುಕೊಳ್ಳುವವರು ತಾವ ಅದನ್ನು ದಿರ್ಘಕಾಲ ಇಟ್ಟುಕೊಳ್ಳಲಾಗದೆಂದು ತಿಳಿದು ಕೊಂಡುಕೊಳ್ಳಲಿ; ನಾವು ನಮಗಾಗಿ ಏನನ್ನಾದರೂ ಕೂಡಿಸಿಟ್ಟುಕೊಳ್ಳಬಹುದೆಂದು ಯೋಚಿಸದಿರೋಣ (ಮತ್ತಾಯ 6:19-21; ಲೂಕ 12:16-21 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ಈ ಲೋಕಕ್ಕೆ ಬರಿಗೈಯಿಂದ ಬಂದೆವು ಮತ್ತು ಬರಿಗೈಯಿಂದಲೇ ಹಿಂದಿರುಗುವೆವು (ಯೋಬ 1:21).

ಅದೇ ರೀತಿಯಲ್ಲಿ, ಲೋಕದ ಸಂಗತಿಗಳನ್ನು ಅನುಭೋಗಿಸುವವರು ಅವು ಗಳನ್ನು ಪರಿಪೂರ್ಣವಾಗಿ ಅನುಭೋಗಿಸದವರಂತೆಯೂ ಇರಲಿ, ಅಥವಾ ಅವು ಗಳಿಗೆ ಅಂಟಿಕೊಂಡವರಾಗಿರಬಾರದು. ಅಂದರೆ, ನಾವು ಲೋಕದ ಸಂಗತಿಗಳನ್ನು ಒಳ್ಳೇ ಮನೆವಾರ್ತೆಯವರಂತೆ ಜಾಣತನದಿಂದ ಉಪಯೋಗಿಸೋಣ. ನಾವು ಲೋಕದ ಸಂಗತಿಗಳನ್ನು ಉಪಯೋಗಿಸೋಣ – ಆದರೆ ಲೋಕದ ಸಂಗತಿಗಳು ನಮ್ಮನ್ನು ಉಪಯೋಗಿಸುವಂತೆ ಬಿಡದಿರೋಣ! ಲೋಕವು ನಮ್ಮ ಕೈಗಳಲ್ಲಿದೆ – ಆದರೆ ಅದು ನಮ್ಮ ಹೃದಯಗಳಲ್ಲಿ ಇರುವಂತೆ ಅನುಮತಿಸದಿರೋಣ (ಯೋಹಾನ 2:15-17 ನೋಡಿರಿ).

**32-34** ಈ ಮೂರು ವಚನಗಳಲ್ಲಿ ಪೌಲನು ಪು ನಃ ಅವಿವಾಹಿತರಾಗಿ ಉಳಿಯುವದರ ಪ್ರಯೋಜನಗಳನ್ನು ಗಮನಕ್ಕೆ ತರುತ್ತಾನೆ. ಅವಿವಾಹಿತ ಪು ರುಷ ಅಥವಾ ಸ್ತ್ರೀಯ ಕರ್ತವ್ಯವು ಕ್ರಿಸ್ತನೆಡೆಗೆ ಮಾತ್ರವೇ ಇರುತ್ತದೆ. ವಿವಾಹಿತ ಪು ರುಷರ ಹಾಗು ಸ್ತ್ರೀಯರು ಕ್ರಿಸ್ತನೆಡೆಗೂ ತಮ್ಮ ಸಂಗಾತಿಗಳೆಡೆಗೂ ಕರ್ತವ್ಯಗಳನ್ನು ಹೊಂದಿರುತ್ತಾರೆ. ವಿವಾಹಿತ ವ್ಯಕ್ತಿಯ ಗಮನವು ಎರಡು ದಿಕ್ಕುಗಳೆಡೆಗೆ ತಿರಿಗಿರುತ್ತದೆ; ಅದು ವಿಭಾಗವಾಗಿರುತ್ತದೆ. ಅದು ಪಾಪವೇನಲ್ಲ, ಯಾಕೆಂದರೆ ದೇವರು ವಿವಾಹಿತರಿಗೆ ಪರಸ್ಪರರಿಗಾಗಿಯು ಅವರ ಮಕ್ಕಳಿಗೋಸ್ಕರವೂ ಜವಾಬ್ದಾರಿಗಳನ್ನು ಕೊಟ್ಟಿರುತ್ತಾನೆ. ಆದರೆ ಪೌಲನ ಅಭಿಪ್ರಾಯದಲ್ಲಿ ಒಬ್ಬನು ಅವಿವಾಹಿತನಾಗಿ (ಒಬ್ಬಂಟಿಗನಾಗಿ) ಉಳಿಯುವದು ಉತ್ತಮ, ಹೀಗಾದರೆ ಆತನು ತನ್ನ ಇಡೀ ಚಿಂತನೆಯನ್ನು ಹಾಗು ಗಮನವನ್ನು ಕರ್ತನೆಡೆಗೆ ಹರಿಸಬಲ್ಲನು.

**35** ಹಾಗಿದ್ದರೂ, ಕೊರಿಂಥದ ವಿಶ್ವಾಸಿಗಳ ಮೇಲೆ ನಿರ್ಬಂಧ ಹೇರಬೇಕೆಂದಾಗಲಿ ಅಥವಾ ಉರ್ಲು ಹಾಕಬೇಕೆಂದಾಗಲಿ ಪೌಲನು ಇಚ್ಚಿಸುವದಿಲ್ಲ. ಅಂದರೆ, ಅವರ ಮೇಲೆ ವಿವಾಹವಾಗಬೇಕೆಂದಾಗಲಿ ಅಥವಾ ವಿವಾಹವಾಗ ಬಾರದೆಂದಾಗಲಿ ನಿರ್ಬಂಧಕ್ಕೊಳಾಗಗುವಂತೆ ಮಾಡಲಿಚ್ಚಿಸುವದಿಲ್ಲ. ಬದಲಾಗಿ, ಅವರು ಸಜ್ಜನರಿಗೆ ತಕ್ಕ ಹಾಗೆ ನಡೆದು ಭಿನ್ನಭಾವವಿಲ್ಲದೆ ಕರ್ತನಿಗೆ ಪಾದ ಸೇವೆಯನ್ನು ಮಾಡುವವರಾಗಬೇಕೆಂಬದು ಅವರ ಏಕೈಕ ಗುರಿಯಾಗಲೆಂದು ಪೌಲನು ಇಚ್ಚಿಸುತ್ತಾನೆ. ಒಂದು ಬದಿಯಲ್ಲಿ ನೋಡುವದಾದರೆ, ಒಬ್ಬ ವ್ಯಕ್ತಿಯು ವಿವಾಹವಾಗುವ ಅಗತ್ಯವಿಲ್ಲವಾದರೆ ಒಬ್ಬಂಟಿಗನಾಗುಳಿಯುವದು ಉತ್ತಮವಾದದ್ದು; ಇಲ್ಲವಾದರೆ ವಿವಾಹವು ವ್ಯಕ್ತಿಯು ಕರ್ತನೆಡೆಗೆ ಹೊಂದಿರುವ ಭಕ್ತಿಗೆ ಒಂದು ಅಡ್ಡಿಯಾಗಬಹುದು. ಇನ್ನೊಂದು ಬದಿಯಲ್ಲಿ, ಒಬ್ಬ ವ್ಯಕ್ತಿಯು ವಿವಾಹವಾಗುವದು ಅಗತ್ಯವಾದರೆ ಅವನು ವಿವಾಹವಾಗುವದು ಉತ್ತಮ; ಇಲ್ಲವಾದರೆ "ಕಾಮತಾಪವು" (ವಚನ 9) ಅವನು ಕರ್ತನೆಡೆಗೆ ಹೊಂದಿರುವ ಭಕ್ತಿಗೆ ಒಂದು ಅಡ್ಡಿಯಾಗಬಹುದು. ಒಂದು ವೇಳೆ ಒಬ್ಬ ವ್ಯಕ್ತಿಯು ಯಾವಾಗಲೂ ವಿವಾಹವಾಗಬೇಕೆಂಬ ಅಭಿಲಾಷೆಯನ್ನು ಹೊಂದಿಕೊಂಡಿರುವದಾದರೆ ಅವನು ಅಥವಾ ಅವಳು ಹೇಗೆ ಯಾವ ಅಡ್ಡಿಯೂ ಇಲ್ಲದೆ ಕರ್ತನಿಗೆ ಭಕ್ತಿಯಿಂದ ಸೇವೆ ಮಾಡಲು ಸಾಧ್ಯ? ಅಂತಹ ಜನರು

ವಿವಾಹವಾಗುವದಾದರೆ ಕರ್ತನಿಗೆ ಹೆಚ್ಚು ಉತ್ತಮವಾಗಿ ಸೇವೆ ಮಾಡಲು ಶಕ್ತರಾಗುವರು! ನಾವೆಲ್ಲರೂ ದೇವರು ನಮಗೆ ನೀಡಿರುವ ವರಹಾಗು ಕರೆಯುವಿಕೆಗೆ ಅನುಸಾರವಾಗಿ ಜೀವಿಸಬೇಕು (ವಚನ 7, 17).

ಆದುದರಿಂದ, ನಾವು ವಿವಾಹಿತರಾಗಿರಲಿ ಅಥವಾ ಅವಿವಾಹಿತರಾಗಿರಲಿ – ನಾವು ಯಾವ ಸ್ಥಿತಿಯಲ್ಲಿದ್ದರೂ – ಸಾಧ್ಯವಾದಷ್ಟು ಮಟ್ಟಿಗೆ ನಾವು ಭಿನ್ನಭಾವವಿಲ್ಲದೆ ಕರ್ತನಿಗೆ ಪಾದ ಸೇವೆ ಮಾಡುವವರಾಗಿರೋಣ.

**36-38** ಈ ಮೂರು ವಚನಗಳು ಹೇಗೆ ಭಾಷಾಂತರಿಸಲ್ಪಡಬೇಕೆಂಬ ವಿಷಯದಲ್ಲಿ ಅನಿಶ್ಚಿಯತೆ ಇರುತ್ತದೆ. ಗ್ರೀಕ್ ಪ್ರತಿಯಲ್ಲಿ ಪೌಲನು ಒಬ್ಬ ಪುರುಷ ಹಾಗು ವಿವಾಹವಾಗಲಿರುವ ಆತನ ಸಂಗಾತಿಯ ಕುರಿತು ಮಾತಾಡುತ್ತಿದ್ದಾನೋ ಅಥವಾ ಒಬ್ಬ ತಂದೆ ಹಾಗು ಆತನ ಕನ್ನಿಕೆಯಾದ ಮಗಳ ಕುರಿತು ಮಾತಾಡುತ್ತಿದ್ದಾನೋ ಎಂಬದು ಸ್ಪಷ್ಟವಾಗಿರುವದಿಲ್ಲ. ಈ ವ್ಯಾಖ್ಯಾನ ಗ್ರಂಥದಲ್ಲಿ ಉಪಯೋಗಿಸಲಾಗಿರುವ ಬೈಬಲ್ ಭಾಷಾಂತರವು ಮೊದಲನೆಯ ಅರ್ಥವನ್ನು ಅನುಸರಿಸುತ್ತದೆ. ಎರಡನೆಯ ಅರ್ಥವು ಅಡಿಟಿಪ್ಪಣಿಯಲ್ಲಿ ಪ್ರಸ್ತಾಪಿಸಲ್ಪಟ್ಟಿದೆ.[24]

ಮೊದಲನೆಯ ಅರ್ಥಕ್ಕನುಸಾರವಾಗಿ, ಕನ್ನಿಕೆಯೊಬ್ಬಳ ಜೊತೆಯಲ್ಲಿ ನಿಶ್ಚಿತಾರ್ಥ ಮಾಡಿಕೊಂಡಿರುವ ಪುರುಷನು ಆಕೆಯನ್ನು ವಿವಾಹಮಾಡಿಕೊಳ್ಳುವದಕ್ಕೆ ಅಥವಾ ಮಾಡಿಕೊಳ್ಳದಿರುವದಕ್ಕೆ ಸ್ವತಂತ್ರನಾಗಿದ್ದಾನೆ. ಇವೆರಡರಲ್ಲಿ ಯಾವುದನ್ನಾದರೂ ಮಾಡಲೇಬೇಕೆಂಬ ನಿರ್ಬಂಧ ಹೊಂದಿದ್ದೇನೆಂದು ಆತನು ಭಾವಿಸಬಾರದು. ಆತನು ತನಗೆ ಕರ್ತನು ನೀಡಿರುವ ವರಗಳು ಹಾಗು ಕರೆಯುವಿಕೆ ಏನೆಂಬದನ್ನು ನಿಶ್ಚಯಿಸಿಕೊಳ್ಳಬೇಕು, ಮತ್ತು ಅದಕ್ಕೆ ತಕ್ಕ ಹಾಗೆ ಕ್ರಿಯಾಶೀಲನಾಗಬೇಕು. ಒಂದು ವೇಳೆ ವ್ಯಕ್ತಿಯು ದೃಢಚಿತ್ತನಾಗಿದ್ದು....ತನ್ನೊಳಗೆ ನಿರ್ಣಯಿಸಿಕೊಂಡರೆ – ಆತನಿಗೆ ದಮೆಯಿಂದಿರುವ ವರವು ಕೊಡಲ್ಪಟ್ಟಿರುವದಾದರೆ – ಹಾಗು ಕರ್ತನ ಚಿತ್ತದ ಬಗ್ಗೆ ಮನವರಿಕೆಯನ್ನು ಹೊಂದಿರುವದಾದರೆ ಆತನು ತನಗೆ ನಿಶ್ಚಿತಾರ್ಥವಾದ ಕನ್ನಿಕೆಯನ್ನು ವಿವಾಹವಾಗದಿರುವದರ ಮೂಲಕ ಸರಿಯಾದದ್ದನ್ನೇ ಮಾಡುವವನಾಗಿದ್ದಾನೆ.

ಪುರುಷನು ವಿವಾಹವಾದರೂ, ವಿವಾಹವಾಗದಿದ್ದರೂ ಆತನು ಒಳ್ಳೇದನ್ನು ಮಾಡುತ್ತಾನೆ. ಹೇಗಿದ್ದರೂ, ವಾಡಿಕೆಯ ಪ್ರಕಾರ ಪೌಲನು ವಿವಾಹವಾಗದಿರುವದು ಉತ್ತಮವಾದದ್ದೆಂದು ಅಭಿಪ್ರಾಯ ಪಡುತ್ತಾನೆ (ವಚನಗಳು 1,8).

**39** ವಿಧವೆಯು ಮರುವಿವಾಹವಾಗುವದಕ್ಕೆ ಯಾವಾಗಲೂ ಸ್ವತಂತ್ರಳಾಗಿದ್ದಾಳೆ (ರೋಮ 7:2 ನೋಡಿರಿ). ಆದರೆ ಅವಳು ಮರುವಿವಾಹವಾಗುವದಾದರೆ ಆಕೆಯು ವಿವಾಹವಾಗುವ ವ್ಯಕ್ತಿಯು ಕರ್ತನಿಗೆ ಸೇರಿದವನಾಗಿರಬೇಕು; ಅಂದರೆ, ಆತನು ಒಬ್ಬ ವಿಶ್ವಾಸಿಯಾಗಿರತಕ್ಕದ್ದು.

ಇದೇ ಬೋಧನೆಯು ಒಬ್ಬ ವಿಧುರನಾಗಿದ್ದು ಮರುವಿವಾಹವಾಗಲಿಚ್ಚಿಸುವ ಪುರುಷನಿಗೂ ಅನ್ವಯಿಸುತ್ತದೆ. ಆತನು ಸಹ ಒಬ್ಬ ವಿಶ್ವಾಸಿಯನ್ನು ವಿವಾಹವಾಗಬೇಕು.

**40** ಪೌಲನ ಅಭಿಪ್ರಾಯದಲ್ಲಿ ಒಬ್ಬ ವಿಧವೆ (ಅಥವಾ ವಿಧುರ) ಇದ್ದ ಹಾಗೆಯೇ ಇರುವದು ಆಕೆಗೆ ಉತ್ತಮ ವಾಗಿರುತ್ತದೆ. ಅಂದರೆ ಅವಿವಾಹಿತಳಾಗುಳಿದು ಪುನಃ ವಿವಾಹ ಮಾಡಿಕೊಳ್ಳದಿರುವದು. ಅವಳು ಒಬ್ಬಂಟಿಗಳಾಗಿ ಉಳಿದರೆ ಆಕೆಗೆ ಸುಖವೆಂದು ಪೌಲನು ನಂಬುತ್ತಾನೆ. ಹೇಗಿದ್ದರೂ, 1 ತಿಮೊಥೆ 5:14ರಲ್ಲಿ ಪೌಲನು ಪ್ರಾಯಸ್ಥರಾಗಿರುವ ವಿಧವೆಯರು ಸಾಮಾನ್ಯವಾಗಿ ಪುನ: ವಿವಾಹಿತರಾಗಬೇಕೆಂದು ಹಿತೋಪದೇಶ ನೀಡುತ್ತಾನೆ.

ಕೊರಿಂಥದಲ್ಲಿದ್ದ ಪೌಲನ ವಿರೋಧಿಗಲು ಬಹುಶಃ ಆತನ ಪತ್ರಿಕೆಗಳ ಬಗ್ಗೆ ಕುಚೋದ್ಯ ಮಾಡಿರಬೇಕು. ಅವನು ಬರೆದ ಸಂಗತಿಗಳು ಕೇವಲ ಆತನ ವಯುಕ್ತಿಕ ಅಭಿಪ್ರಾಯಗಳು ಮಾತ್ರವಾಗಿದ್ದು ಯಾವ ಅಧಿಕಾರವನ್ನು ಹೊಂದಿಲ್ಲ; ಆದುದರಿಂದ ಅವುಗಳಿಗೆ ಯಾವದೇ ಗಮನವನ್ನು ಕೊಡುವ ಅವಶ್ಯಕತೆಯಿಲ್ಲ ಎಂದು ಅವರು ಟೀಕಿಸಿದರು. ಈ ಕಾರಣಕ್ಕಾಗಿ ಪೌಲನು ಕೊರಿಂಥದವರಿಗೆ ಜ್ಞಾಪಿಸುವದೇನೆಂದರೆ, ಅವರೆಲ್ಲರಂತೆಯೇ ತಾನು ಪವಿತ್ರಾತ್ಮನನ್ನು ಹೊಂದಿಕೊಂಡಿದ್ದಾನೆ – ಮತ್ತು ನಿಶ್ಚಯವಾಗಿಯೂ, ಅದಕ್ಕಿಂತಲೂ ಎಷ್ಟೋ ಹೆಚ್ಚಾಗಿ ಹೊಂದಿಕೊಂಡಿದ್ದನು! ಎಂದು ಹೇಳುತ್ತಾನೆ. ಆದುದರಿಂದ, ಆತನು ಬರೆದ ಸಂಗತಿಗಳಿಗೆ ಅವರು ಕಿವಿಗೊಡಲಿ!

---

# ಅಧ್ಯಾಯ - 8

## ವಿಗ್ರಹಕ್ಕೆ ಅರ್ಪಿತವಾದ ಆಹಾರ (8:1-13)

**1** ವಿಗ್ರಹಕ್ಕೆ ನೈವೇದ್ಯ ಮಾಡಿದ ಆಹಾರವನ್ನು ತಿನ್ನುವದು ಸರಿಯಾದದ್ದೋ ಎಂದು ಪ್ರಶ್ನಿಸಿ ಕೊರಿಂಥದ ಕ್ರೈಸ್ತರು ಪೌಲನಿಗೆ ಪತ್ರ ಬರೆದಿದ್ದರು. ಪೌಲನು ಅವರ ಪ್ರಶ್ನೆಗೆ ಉತ್ತರಿಸುತ್ತಾ ಮೊದಲನೆಯದಾಗಿ ಜ್ಞಾನವು ಉಬ್ಬಿಸುತ್ತದೆ ಎಂಬುದರ ಕುರಿತು ಮಾತಾಡುತ್ತಾನೆ.

ಆತನು ಹೀಗೆ ಮಾಡಲು ಕಾರಣವೇನು? ಯಾಕೆಂದರೆ ಕೊರಿಂಥದವರು ತಮಗೆ ಸಮಸ್ತವೂ ಗೊತ್ತಿದೆಯೇನೋ ಎಂಬಂತೆ ವಿಗ್ರ ಹಕ್ಕೆ ನೈವೇದ್ಯ ಮಾಡಿದ ಆಹಾರದ ಕುರಿತಾದ ವಿಷಯದಲ್ಲಿ ತಮ್ಮೊಳಗೆ ತರ್ಕ ಮಾಡುತ್ತಿದ್ದರು. ಅವರು "ಜ್ಞಾನ"ವೆಂದು ಭಾವಿಸಿಕೊಂಡಿದ್ದ ಸಂಗತಿಯಿಂದ "ಉಬ್ಬಿದವರಾಗಿದ್ದರು" ಅವರಲ್ಲಿ ಕೆಲವರು ವಿಗ್ರಹಕ್ಕೆ ಅರ್ಪಿತವಾದ

ಆಹಾರವನ್ನು ತಿನ್ನುವದರಲ್ಲಿ ತಪ್ಪೇನಿಲ್ಲ ಎಂದು ಹೇಳುತ್ತಿದ್ದರು; ಇತರರು ಅದನ್ನು ತಪ್ಪು ಎಂದು ಹೇಳಿದರು. ಎರಡೂ ಕಡೆಯವರೂ ತಾವು ಆ ವಿಷಯದಲ್ಲಿ ಜ್ಞಾನ ಹೊಂದಿದ್ದಾರೆಂಬ ನಿಶ್ಚಯತೆಯಲ್ಲಿದ್ದರು; ಆದರೆ ಅವರು ಪರಸ್ಪರ ಪ್ರೀತಿಯನ್ನೇ ಹೊಂದಿರಲಿಲ್ಲ. ಪ್ರೀತಿಯಿಲ್ಲದೆ ಜ್ಞಾನವು ಉಬ್ಬಿಸುತ್ತದೆ. ಆದರೆ ಪ್ರೀತಿಯು ಭಕ್ತಿವೃದ್ಧಿಯನ್ನುಂಟು ಮಾಡುತ್ತದೆ (1 ಕೊರಿಂಥ 13:2,8 ನೋಡಿರಿ).

2 ತಾನು ಎಲ್ಲವನ್ನೂ ಬಲ್ಲನೆಂದು ಯೋಚಿಸಿ ಬೇರೆ ಯಾರೊಬ್ಬರ ಮಾತಿಗೂ ಕಿವಿಗೊಡದಂತಹ ವ್ಯಕ್ತಿಯ ಬಗ್ಗೆ ನಾವೆಲ್ಲರೂ ಬಲ್ಲೆವು . ಅಂತಹ ಮನುಷ್ಯನು ಗರ್ವದಿಂದ ಉಬ್ಬಿದವನಾಗಿರುತ್ತಾನೆ. ಆತನು ತಿಳಿಯಬೇಕಾದ ರೀತಿಯಿಂದ ಇನ್ನೂ ತಿಳುಕೊಂಡವನಲ್ಲ.

ನಾವು ವಿಷಯಗಳನ್ನು ಹೇಗೆ ತಿಳಿದು ಕೊಳ್ಳಬೇಕಾಗಿರುತ್ತದೆ? ನಾವು ಪ್ರೀತಿ ಹಾಗು ದೀನತೆಯಿಂದ ತಿಳುಕೊಳ್ಳ ಬೇಕಾಗಿರುತ್ತದೆ. ನಾವು ಮಾನವರು ಮಾತ್ರವಾಗಿರುವದರಿಂದ ನಮ್ಮ ಜ್ಞಾನವು ಮೀತಿಯುಳ್ಳದ್ದೆಂಬದನ್ನು ನೆನಪಿಗೆ ತಂದುಕೊಳ್ಳುವ ಅಗತ್ಯವಿರುತ್ತದೆ. ಜ್ಞಾನಿಯು ತಾನು ನಿಜವಾಗಿಯೂ ಎಷ್ಟು ಅಲ್ಪ ಜ್ಞಾನವನ್ನು ಹೊಂದಿದ್ದಾನೆಂದು ಅರಿತುಕೊಂಡು ದೀನನಾಗುಳಿಯುತ್ತಾನೆ. (1 ಕೊರಿಂಥ 3:18-20 ನೋಡಿರಿ).

3 ನಾವು ಜ್ಞಾನವನ್ನು ಪಡೆದುಕೊಳ್ಳಲು ಬಯಸುವದಾದರೆ ಮೊದಲು ನಾವು ದೇವರನ್ನು ಪ್ರೀತಿಸಬೇಕು. ಅದೇ ಪ್ರಥಮ ಹಾಗು ಅತಿ ಶ್ರೇಷ್ಠ ಆಜ್ಞೆಯಾಗಿದೆ.. ನಾವು ದೇವರನ್ನು ಪ್ರೀತಿಸದಿರುವದಾದರೆ ಆತನನ್ನು ನಾವು ತಿಳುಕೊಂಡಿಲ್ಲ ಎಂದು ಅರ್ಥವಾಗಿದೆ (1 ಯೋಹಾನ 4:8). ಮತ್ತು ದೇವರನ್ನು ತಿಳುಕೊಳ್ಳುವದು ಎಲ್ಲಾ ಜ್ಞಾನಕ್ಕಿಂತಲೂ ಮೇಲಾದದ್ದು. ಕರ್ತನ (ದೇವರ) ಭಯವೇಜ್ಞಾನಕ್ಕೆ ಮೂಲ (ಕೀರ್ತನೆಗಳು 111:10; ಜ್ಞಾನೋಕ್ತಿಗಳು 1:7).

ಹೀಗೆ ನಾವು ದೇವರನ್ನು ಎರಡು ಮಾರ್ಗಗಳ ಮೂಲಕ ತಿಳುಕೊಳ್ಳುತ್ತೇವೆ. ಮೊದಲನೆಯದಾಗಿ, ನಾವು ದೇವರನ್ನು ಪ್ರೀತಿಸುವಾಗಲೇ ಆತನನ್ನು ತಿಳುಕೊಳ್ಳುತ್ತೇವೆ. ಎರಡನೆಯದಾಗಿ, ನಾವು ದೇವರ ಮಗನಾದ ಯೇಸು ಕ್ರಿಸ್ತನನ್ನು ತಿಳಿಯುವಾಗಲೇ ದೇವರನ್ನು ತಿಳುಕೊಳ್ಳುತ್ತೇವೆ (ಯೋಹಾನ 14:7-9 ಮತ್ತು ವ್ಯಾಖ್ಯಾನ ನೋಡಿರಿ).

ಹೇಗಿದ್ದರೂ, ಪೌಲನು ಈ ವಚನದಲ್ಲಿ ಮುಖ್ಯವಾಗಿ ನಾವು ದೇವರನ್ನು ತಿಳುಕೊಳ್ಳುವದರ ಕುರಿತಾಗಿ ಮಾತಾಡುತ್ತಿಲ್ಲ, ಆದರೆ ದೇವರು ನಮ್ಮನ್ನು ತಿಳುಕೊಳ್ಳುವದರ ಕುರಿತು ಮಾತಾಡುತ್ತಿದ್ದಾನೆ. ಯಾವನು ದೇವರನ್ನು ಪ್ರೀತಿಸುತ್ತಾನೋ ಅವನನ್ನೇ ದೇವರು ತಿಳುಕೊಳ್ಳುತ್ತಾನೆ. ಅದರ ಅರ್ಥವೇನು "ದೇವರಿಂದ ತಿಳುಕೊಳ್ಳಲ್ಪಡುವದು" ಎಂದರೆ ಆತನ ಮಗುವಾಗಿರುವದು ಎಂಬ ಅರ್ಥ; ದೇವರಿಂದ ಪ್ರೀತಿಸಲ್ಪಡುವದು ಎಂದು ಇದರ ಅರ್ಥವಾಗಿದೆ (ಯೋಹಾನ 10:14, 27 ನೋಡಿರಿ). ನಾವು ದೇವರಿಂದ ತಿಳುಕೊಳ್ಳಲ್ಪಡದವರಾಗಿದ್ದರೆ ನಮ್ಮ ಸ್ಥಿತಿಯು ನಿಜವಾಗಿಯೂ ಭಯಾನಕವೇ (ಮತ್ತಾಯ 7:22-23 ನೋಡಿರಿ).

ಆದಕಾರಣ, ನಾವು ಮೊದಲು ಜ್ಞಾನವನ್ನಲ್ಲ ಪ್ರೀತಿಯನ್ನೇ ಹುಡುಕೋಣ. ನಾವು ಪ್ರೀತಿಯನ್ನು ಹೊಂದಿರುವದಾದರೆ ನಿಜವಾದ ಜ್ಞಾನವನ್ನು ಸಹ ಹೊಂದುತ್ತೇವೆ.

4 ಕೊರಿಂಥದಲ್ಲಿ ಹೆಚ್ಚುಕಡಿಮೆ ಎಲ್ಲಾ ಅಂಡಿಗಳಲ್ಲೂ ಮಾರಲ್ಪಡುತ್ತಿದ್ದ ಮಾಂಸವು ಮೊದಲು ವಿಗ್ರಹಕ್ಕೆ ಅರ್ಪಿತವಾದದ್ದಾಗಿರುತ್ತಿತ್ತು. ಯಾಜಕರು ಮಾಂಸದ ಒಂದು ಭಾಗವನ್ನು ಇಟ್ಟುಕೊಂಡು ಉಳಿದದ್ದನ್ನು ಅಂಗಡಿಗಳವರಿಗೆ ಮಾರುತ್ತಿದ್ದರು. ಕೊರಿಂಥದ ಕ್ರೈಸ್ತರು ಪೌಲನಿಗೆ ಅಂತಹ ಮಾಂಸವನ್ನು ತಿನ್ನುವದು ಸರಿಯೋ ಅಥವಾ ತಪ್ಪೋ ಎಂಬುದರ ಕುರಿತಾಗಿ ಪ್ರಶ್ನೆಯನ್ನು ಕೇಳಿಬರೆದಿದ್ದರು.

ಪೌಲನ ಉತ್ತರ ಹೀಗಿದೆ: ಜಗತ್ತಿನಲ್ಲಿ ವಿಗ್ರಹವು ಏನೂ ಅಲ್ಲ. ಒಂದು ವೇಳೆ ವಿಗ್ರಹವು ಏನು ಅಲ್ಲವಾಗಿರುವದಾದರೆ ವಿಗ್ರಹಕ್ಕೆ ಅರ್ಪಿತವಾದ ಮಾಂಸ ಮತ್ತು ಅರ್ಪಿತವಾಗದಿರುವ ಮಾಂಸದ ನಡುವೆ ಯಾವ ವ್ಯತ್ಯಾಸವೂ ಇರುವದಿಲ್ಲ. ಮತ್ತು ಹೀಗೆ ಒಬ್ಬನು ಆ ಮಾಂಸವನ್ನು ತಿನ್ನುವದು ಅಥವಾ ತಿನ್ನದಿರುವದು ಯಾವ ವ್ಯತ್ಯಾಸವನ್ನು ಉಂಟು ಮಾಡುವದಿಲ್ಲ. ಆದುದರಿಂದ, ಪೌಲನು ಅಂತಹ ಮಾಂಸವನ್ನು ತಿನ್ನುವದರಲ್ಲಿ ತಪ್ಪೇನಿಲ್ಲ ಎಂದು ಹೇಳುತ್ತಿದ್ದಾನೆ (1 ಕೊರಿಂಥ 10:25-30 ಮತ್ತು ವ್ಯಾಖ್ಯಾನ ನೋಡಿರಿ).

ಇಲ್ಲಿ ನಾವು ಒಂದು ಪ್ರಾಮುಖ್ಯ ಸತ್ಯವನ್ನು ಅರ್ಥಮಾಡಿಕೊಳ್ಳಬೇಕು. ವಿಗ್ರಹಕ್ಕೆ ನೈವೇದ್ಯ ಮಾಡಿದ ಆಹಾರವನ್ನು ತಿನ್ನುವದು ಒಂದು ದುರಾತ್ಮವನ್ನು ಆರಾಧಿಸುವದಕ್ಕೆ ಸಮಾನವಾಗಿರುವದಿಲ್ಲ; ಇವೆರಡೂ ಸಂಪೂರ್ಣ ವ್ಯತ್ಯಾಸವಾದ ಸಂಗತಿಗಳಾಗಿವೆ. ವಿಗ್ರಹಗಳಿಗೆ ನೈವೇದ್ಯ ಮಾಡಿದ ಆಹಾರವನ್ನು ಕೇವಲ ತಿನ್ನುವದರಲ್ಲಿ ತಪ್ಪೇನಿಲ್ಲ, ಯಾಕೆಂದರೆ, ಸ್ವತಃ ವಿಗ್ರಹವು ಏನೂ ಅಲ್ಲ. ಆದರೆ ತಿನ್ನುವದರೊಂದಿಗೆ ಒಂದಿಲ್ಲಾ ಒಂದು ವಿಧದಲ್ಲಿ ನಾವು ಆ ವಿಗ್ರಹದ ಆರಾಧನೆಯನ್ನು ಸಹ ಮಾಡುತ್ತಿರುವದಾದರೆ ಅಥವಾ ದುರಾತ್ಮ ಇಲ್ಲವೆ ವಿಗ್ರಹವನ್ನು ಪ್ರತಿನಿಧಿಸುವ ದೇವರೊಂದನ್ನು ಆರಾಧಿಸುತ್ತಿರುವದಾದರೆ ಅದು ಒಂದು ಅತಿ ದೊಡ್ಡ ಪಾಪವಾಗಿರುತ್ತದೆ (ವಿಮೋಚನಕಾಂಡ 20:3-6; ರೋಮ 1:25) ಒಂದು ವೇಳೆ ಯಾವನಾದರೂ ಒಂದು ವಿಗ್ರಹವನ್ನು ಆತ್ಮ ಅಥವಾ ದೇವರಾಗಿರುತ್ತದೆಂದು ಪರಿಗಣಿಸುವದಾದರೆ ಆವ್ಯಕ್ತಿಯು ವಿಗ್ರಹಗಳಿಗೆ ಅರ್ಪಿತವಾದ ಆಹಾರವನ್ನು ತಿನ್ನದಿರಲಿ; ಇಲ್ಲವಾದರೆ ತನ್ನ ಮನಸ್ಸಿನಲ್ಲಿ ಆತನು ಆ ವಿಗ್ರಹವು ಪ್ರತಿನಿಧಿಸುವ ಆತ್ಮ ಅಥವಾ ದೇವರನ್ನು ಆರಾಧಿಸುವವನೂ ಘನಪಡಿಸುವವನೂ ಆಗುತ್ತಾನೆ.

ಆದರೆ ಒಬ್ಬನು ವಿಗ್ರಹವು ಏನು ಅಲ್ಲ – ಅದು ಕೇವಲ ಒಂದು ಸತ್ತ ಕಟ್ಟಿಗೆ ಅಥವಾ ಕಲ್ಲು ಇಲ್ಲವೆ ಲೋಹದ ತುಂಡು ಮಾತ್ರ – ಎಂದು ಪರಿಗಣಿಸುವದಾದರೆ ಆ ವ್ಯಕ್ತಿಯು ಯಾವದೇ ಪಾಪವಿಲ್ಲದೆ ವಿಗ್ರಹಕ್ಕೆ ಅರ್ಪಿತವಾದ ಆಹಾರವನ್ನು

ತಿನ್ನ ಬಹುದು, ಯಾಕೆಂದರೆ ಆತನು ಅಂತಹ ಆಹಾರವನ್ನು ತಿನ್ನುವಾಗ ದೇವರನ್ನಾಲಿ ಅಥವಾ ದುರಾತ್ಮವನ್ನಾಗಲಿ ಆರಾಧಿಸುತ್ತಿಲ್ಲ. ಹೇಗಿದ್ದರೂ, ಆತನು ಅಂತಹ ಆಹಾರವನ್ನು ವಿಗ್ರಹವು ಒಂದು ದೇವರು ಅಥವಾ ಆತ್ಮವಾಗಿದೆಯೆಂದು ನಂಬುವ ಸಹೋದರ ಅಥವಾ ಸಹೋದರಿಯ ಎದುರಿನಲ್ಲಿ ತಿನ್ನಬಾರದು, ಯಾಕೆಂದರೆ ಅವರ ದೃಷ್ಟಿಯಲ್ಲಿ ಆತನು ವಿಗ್ರಹವೊಂದನ್ನು ಆರಾಧಿಸುವಂತಿರುತ್ತದಾದ್ದರಿಂದ ಅವರಿಗೆ ದಕ್ಕೆ ಯಾಗುವದು. ನಾವು ಎಂದಿಗೂ ನಮ್ಮ ಸ್ವಂತ ಅಭಿಪ್ರಾಯ ಹಾಗು ತಿಳುವಳಿಕೆಗೆ ಅನುಸಾರವಾಗಿ ಮಾತ್ರವೇ ನಡೆಯಬಾರದು; ನಮ್ಮ ಸಹೋದರ ಅಥವಾ ಸಹೋದರಿಯು ಪಾಪಮಯ ಹಾಗು ಅಪರಾಧಕರ ವೆಂದು ಪರಿಗಣಿಸುವ ಸಂಗತಿಗಳನ್ನು ನಾವು ಮಾಡದಿರುವದು ಸಹ ಅವಶ್ಯವಾಗಿದೆ. ಒಬ್ಬನು ವಿಗ್ರಹಕ್ಕೆ ನೈವೇದ್ಯ ಮಾಡಿದ ಆಹಾರವನ್ನು ತಿನ್ನುವದಾದರೆ ಆತನು ಅದನ್ನು ಸ್ವಂತ ಮನೆಯಲ್ಲಿ ಏಕಾಂತವಾಗಿ ತಿನ್ನಲಿ. ಆತನು ಅದನ್ನು ತಿನ್ನುವದಕ್ಕೆ ದೇವಾಲಯ ಅಥವಾ ಸಾರ್ವಜನಿಕ ಸ್ಥಳಕ್ಕೆ ಹೋಗಬಾರದು, ಯಾಕೆಂದರೆ ಸಹೋದರ ಅಥವಾ ಸಹೋದರಿಯೊಬ್ಬಳು ಆತನನ್ನು ನೋಡಿ ಬೇಸರ ಪಟ್ಟು ಕೊಳ್ಳಬಹುದು (ಅ.ಕೃತ್ಯ 15:20, 29; 1 ಕೊರಿಂಥ 10:18-22 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

5 ಅನೇಕ ವಿಗ್ರಹಗಳು ಹಾಗು ದೇವರುಗಳೆಂದು ಕರೆಯಿಸಿಕೊಳ್ಳುವ ಸಂಗತಿಗಳು ಇರುವದು ನಿಜವೇ. ಕೆಲವು ಗಳು ದೇವರುಗಳೆಂದು ಇನ್ನು ಕೆಲವು ಗಳು ಕರ್ತರೆಂದೂ ಕರೆಯಲ್ಪಟ್ಟಿರುತ್ತವೆ. ಕೆಲವರು ಆಕಾಶದಲ್ಲಿ ವಾಸಿಸಿದರೆ ಇನ್ನು ಕೆಲವರು ಭೂಮಿಯ ಮೇಲೆ ವಾಸಿಸುತ್ತಾರೆಂದು ಹೇಳಲಾಗುತ್ತದೆ. ಹೇಗಿದ್ದರೂ, ಇವು ಗಳಲ್ಲಿ ಯಾರೂ ದೇವರಲ್ಲ. ಅವರಿಗೆ ಯಾವ ಅರ್ಥವೂ ಇರುವದಿಲ್ಲ; ಅವರಿಗೆ ಯಾವ ಅಸ್ತಿತ್ವವೂ ಇರುವದಿಲ್ಲ.

ಆದರೆ ವಿಗ್ರಹಗಳು ಏನು ಅಲ್ಲವಾದರೂ ದುರಾತ್ಮಗಳು (ದೆವ್ವಗಳು) ಗಣನೆಗೆ ಬರುತ್ತವೆ – ಅವು ಗಳ ಅಸ್ತಿತ್ವ ಹಾಗು ಶಕ್ತಿ ಅತಿ ವಾಸ್ತವವಾಗಿರುತ್ತದೆ (1 ಕೊರಿಂಥ 10:20). ಈ ಆತ್ಮಗಳು ಅಥವಾ ದೆವ್ವಗಳು ಜನರನ್ನು ವಿಗ್ರಹಗಳ ಆರಾಧನೆಗೆ ಒಬ್ಬ ವ್ಯಕ್ತಿಯು ವಿಗ್ರಹಕ್ಕೆ ನೈವೇದ್ಯ ಅರ್ಪಿಸುವಾಗ ಆತನು ವಾಸ್ತವದಲ್ಲಿ ದುರಾತ್ಮವೊಂದಕ್ಕೆ ಅರ್ಪಿಸುವವನಾಗಿದ್ದಾನೆ. ಹೇಗಿದ್ದರೂ, ವಿಗ್ರಹವೊಂದಕ್ಕೆ ಅರ್ಪಿತವಾದ ಮಾಂಸವು ಯಾವ ವಿಧದಲ್ಲಿಯೂ ಬದಲಾಗದೆ ಅದು ಮಾಂಸವಾಗಿಯೇ ಉಳಿಯುತ್ತದೆ.

6 ನಮಗಾದರೋ ಒಬ್ಬನೇ ದೇವರಿದ್ದಾನೆ; ಆತನು ಪರಲೋಕದ ತಂದೆಯೇ ಮತ್ತು ನಮಗೆ ಒಬ್ಬನೇ ಕರ್ತ; ಆತನು ಯೇಸು ಕ್ರಿಸ್ತನೇ.

ಸಮಸ್ತವೂ ಕ್ರಿಸ್ತನ ಮುಖಾಂತರ ಉಂಟಾಯಿತೆಂದು ಪೌಲನು ಇಲ್ಲಿ ಹೇಳುತ್ತಾನೆ. ದೇವರು ಮತ್ತು ಕ್ರಿಸ್ತನು ಒಂದೇ, ಮತ್ತು ಅವರ ಕಾರ್ಯವೂ ಒಂದೇ ಆಗಿದೆ. (ಯೋಹಾನ 10:30 ಮತ್ತು ವ್ಯಾಖ್ಯಾನ ನೋಡಿರಿ). ದೇವರು ಸಮಸ್ತವನ್ನೂ ಕ್ರಿಸ್ತನ ಮುಖಾಂತರ ಮಾಡಿದ್ದಾನೆ. ಆತನು ಜಗತ್ತನ್ನು ಕ್ರಿಸ್ತನ ಮುಖಾಂತರ ಸೃಷ್ಟಿಸಿದನು (ಯೋಹಾನ 1:3; ಕೊಲೊಸ್ಸೆ 1:16 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆತನು ಲೋಕವನ್ನು ಕ್ರಿಸ್ತನ ಮುಖಾಂತರ ರಕ್ಷಿಸಿದನು (ಯೋಹಾನ 3:17 ಮತ್ತು ವ್ಯಾಖ್ಯಾನ ನೋಡಿರಿ). ಮತ್ತು ಕೊನೆಯಲ್ಲಿ ಆತನು ಕ್ರಿಸ್ತನ ಮುಖಾಂತರ ಲೋಕಕ್ಕೆ ನ್ಯಾಯ ತೀರಿಸುವನು (ಯೋಹಾನ 5:22).

7 ಆದರೆ ಈ ಜ್ಞಾನವು ಎಲ್ಲರಲ್ಲಿಯೂ ಇಲ್ಲ: ಅಂದರೆ, ವಿಗ್ರಹವು ಏನೂ ಅಲ್ಲ ಎಂಬದು ಎಲ್ಲರಿಗೂ ತಿಳಿದಿರುವದಿಲ್ಲ (ವಚನ 4). ಅದರ ಫಲಿತವಾಗಿ ಅಂತಹ ಒಬ್ಬ ವ್ಯಕ್ತಿಯ ಮನಸ್ಸು ಬಲಹೀನನಾಗಿರುತ್ತದೆ. ಬಲಹೀನ ಮನಸ್ಸನ್ನು ಹೊಂದಿರುವ ವ್ಯಕ್ತಿಯು ವಿಗ್ರಹಗಳಿಗೆ ಅರ್ಪಿತವಾದ ಆಹಾರವನ್ನು ತಿನ್ನ ಬಾರದು. ಅಂತಹ ಆಹಾರವು ಸ್ವತಃ ಶುದ್ಧವಾಗಿರುವದಾದರೂ ಒಬ್ಬನು ಅದನ್ನು ಅಶುದ್ಧವೆಂದು ಯೋಚಿಸುವದಾದರೆ ಅದು ಆತನಿಗೆ ಅಶುದ್ಧವಾಗಿಯೇ ಇರುವದು. ಮತ್ತು ಆತನು ಅದನ್ನು ತಿನ್ನುವದಾದರೆ ಆತನ ಮನಸ್ಸು ಸಹ ಅಶುದ್ಧವಾಗುವದು (ರೋಮ 14:14 ಮತ್ತು ವ್ಯಾಖ್ಯಾನ ನೋಡಿರಿ).

ಆಹಾರವು ಸ್ವತಃ ಕ್ರೈಸ್ತ ನೊಬ್ಬನನ್ನು ಹೊಲೆಗೊಳಿಸುವದಿಲ್ಲ (ಮಾರ್ಕ 7:18-19). ಒಬ್ಬನು ತಾನು ತಪ್ಪೆಂದು ಯೋಚಿಸುವ ಸಂಗತಿಯನ್ನು ಮಾಡುವದೇ ಆತನನ್ನು ಹೊಲೆ ಗೊಳಿಸುತ್ತದೆ; ಅದು ಆತನ ಮನಸ್ಸಾಕ್ಷಿಯನ್ನು ಹೊಲೆಗೊಳಿಸುತ್ತದೆ (ರೋಮ 14:23 ನೋಡಿರಿ).

8 ನಾವು ಕೆಲವೊಂದು ಆಹಾರವನ್ನು ತಿನ್ನುವದಾಗಲಿ ಅಥವಾ ತಿನ್ನದಿರುವದಾಗಲಿ ದೇವರಿಗೆ ಯಾವ ವ್ಯತ್ಯಾಸವನ್ನುಂಟು ಮಾಡುವದಿಲ್ಲ.[25] ಸ್ವತಃ ಆಹಾರವು ನಮ್ಮನ್ನು ದೇವರ ಸಮೀಪಕ್ಕೆ ತರುವದಿಲ್ಲ; ಸ್ವತಃ ಆಹಾರವು ನಮ್ಮನ್ನು ಉತ್ತಮರನ್ನಾಗಲಿ ಅಥವಾ ಕೆಟ್ಟವರನ್ನಾಗಲಿ ಮಾಡುವದಿಲ್ಲ (ರೋಮ 14:17 ನೋಡಿರಿ).

ಕೊರಿಂಥದ ಕ್ರೈಸ್ತರಲ್ಲಿ ಕೆಲವರು ವಿಗ್ರಹಗಳಿಗೆ ಅರ್ಪಿತವಾದ ಆಹಾರವನ್ನು ದೇವಾಲಯದಲ್ಲಿಯೇ ಎಲ್ಲರ ಎದುರಿನಲ್ಲಿ ತಮ್ಮ ನಂಬಿಕೆಯು – ವಿಗ್ರಹಗಳು ಏನು ಅಲ್ಲ ಎಂಬ ಅವರ ನಂಬಿಕೆಯು – ಎಷ್ಟು ದೃಢವಾಗಿದೆ ಎಂಬದನ್ನು ತೋರಿಸಲು ತಿಂದರು. ಆದರೆ ಇದನ್ನು ಮಾಡುವದರಲ್ಲಿ ತಪ್ಪನ್ನೆಸಗಿದ್ದರು, ಯಾಕೆಂದರೆ ಜನರು ಏನು ತಿನ್ನುತ್ತಾರೆಂಬದರಿಂದ ನಂಬಿಕೆಯು ತೋರಿ ಬರುವದಿಲ್ಲ. ಆಹಾರವು ಮನುಷ್ಯ ದೇಹಕ್ಕೆ ಹೊರತು ಆತನ ಹೃದಯ ಅಥವಾ ಆತ್ಮಕ್ಕಲ್ಲ.

9 ಈ ವಚನದಲ್ಲಿ ಬಲವಿಲ್ಲದವರು ಎಂದರೆ ಬಲಹೀನ ಮನಸ್ಸಾಕ್ಷಿಯುಳ್ಳವಿಶ್ವಾಸಿಗಳು; ವಿಗ್ರಹಗಳು ಏನೂ ಅಲ್ಲ ಎಂಬದು ಅವರಿಗೆ ತಿಳಿಯದು (ವಚನ 7). ವಿಗ್ರಹಗಳು ಏನೂ ಅಲ್ಲವೆಂಬ ಜ್ಞಾನವನ್ನು ಹೊಂದಿರುವವರು ವಿಗ್ರಹಗಳಿಗೆ ಅರ್ಪಿತವಾದ ಆಹಾರವನ್ನು ತಿನ್ನುವದಕ್ಕೆ ಸ್ವತಂತ್ರರಾಗಿದ್ದಾರೆ. ಆದರೆ ಅವರು ತಮ್ಮ ಸ್ವಾತಂತ್ರವನ್ನು ಅವರ ಬಲವಿಲ್ಲದ

ಸಹೋದರ ಅಥವಾ ಸಹೋದರಿಗೆ ವಿಘ್ನವಾಗುವದಕ್ಕೆ ಉಪಯೋಗಿಸಬಾರದು (ರೋಮ 14:13,15, 20-21 ಮತ್ತು ವ್ಯಾಖ್ಯಾನ ನೋಡಿರಿ). ನಮ್ಮ ಸ್ವಾತಂತ್ರ್ಯವು ಅತಿ ಪ್ರಾಮುಖ್ಯವಾದ ಸಂಗತಿಯಲ್ಲ; ಬದಲಾಗಿ ನಮ್ಮ ಸಹೋದರನ ಮೇಲೆ ನಮಗಿರುವ ಪ್ರೀತಿಯೇ ಅತಿ ಪ್ರಾಮುಖ್ಯವಾದ ಸಂಗತಿಯಾಗಿರುತ್ತದೆ.

**10** ಹೊಸ ಒಡಂಬಡಿಕೆಯ ಕಾಲದಲ್ಲಿ ಕೊರಿಂಥದ ನಾಗರೀಕರು ವಿವಿಧ ವಿಗ್ರಹಗಳ ದೇವಾಲಯಗಳಲ್ಲಿ ಮಹಾ ಜಾತ್ರೆಗಳನ್ನು ಜರುಗಿಸುತ್ತಿದ್ದರು; ಇಲ್ಲಿ ಅವರು ಆರಾಧನೆಗಾಗಿ ಮಾತ್ರವಲ್ಲ; ಆದರೆ ಒಬ್ಬರನ್ನೊಬ್ಬರು ಸಂಧಿಸಿ ಸಂಭ್ರಮದಿಂದ ಕಾಲಕಳೆಯುವದಕ್ಕೆ ಸಹ ಬರುತ್ತಿದ್ದರು. ಕೊರಿಂಥದ ಕ್ರೈಸ್ತರಲ್ಲಿ ಸಹ ಕೆಲವರು ಆನಂದಿಸುವದಕ್ಕಾಗಿ ಈ ಜಾತ್ರೆಗಳಿಗೆ ಹೋಗುತ್ತಿದ್ದರು.

ಹೇಗಿದ್ದರೂ, ದೃಢವಾದ ನಂಬಿಕೆಯುಳ್ಳ ಸಹೋದರನು ಈ ಜಾತ್ರೆಗಳೊಂದರಲ್ಲಿ ಊಟ ಮಾಡುವದನ್ನು ನಿರ್ಬಲವಾದ ಮನಸ್ಸುಳ್ಳ ಸಹೋದರನು ನೋಡಿ ದೃಢವಾದ ಸಹೋದರನ ಮಾದರಿಯನ್ನು ಅನುಸರಿಸಿ ಅವನೂ ತಿನ್ನುವದಕ್ಕೆ ತಿರ್ಮಾನಿಸಿಕೊಂಡಾನು ಎಂದು ಪೌಲನು ಎಚ್ಚರಿಸುತ್ತಾನೆ. ಆದರೆ ತಿಂದ ಬಳಿಕ ನಿರ್ಬಲವಾದ ಸಹೋದರನು ಕೆಟ್ಟದ್ದಾಗಿ ಭಾವಿಸಿಕೊಂಡು ತಾನು ಪಾಪ ಮಾಡಿದ್ದೇನೆಂದು ಯೋಚಿಸಿಕೊಳ್ಳಬಹುದು. ಮತ್ತು ನಿಜವಾಗಿಯೂ, ನಿರ್ಬಲನಾದ ಸಹೋದರನು ತಿನ್ನುವಾಗ ತಾನು ಏನೋ ತಪ್ಪನ್ನು ಮಾಡುತ್ತಿದ್ದೇನೆಂದು ಯೋಚಿಸುವದಾದರೆ ಆತನು ಪಾಪವನ್ನೇ ಮಾಡುವವನಾಗಿದ್ದಾನೆ. ಹೀಗೆ ಜ್ಞಾನವನ್ನು (ವಿಗ್ರಹವು ಏನು ಅಲ್ಲ ಎಂದು) ಹೊಂದಿರುವವರು ಅದೇ ಜ್ಞಾನದ ಕಾರಣದಿಂದ ತಮ್ಮನಿರ್ಬಲವಾದ ಸಹೋದರನನ್ನು ಪಾಪಕ್ಕೆ ನಡಿಸಿದವರಾಗುವದು (ವಚನ 11) – ಅಂದರೆ, ಏನನ್ನಾದರೂ ತಿನ್ನುವ ತಮ್ಮ ಸ್ವಾತಂತ್ರ್ಯದ ಕಾರಣದಿಂದ ಪಾಪಕ್ಕೆ ನಡಿಸಿದವರಾಗುವರು. ಇದು ಸಂಭವಿಸದಿರಲಿ ಎಂದು ಪೌಲನು ಹೇಳುತ್ತಾನೆ. ದೃಢನಂಬಿಕೆಯುಳ್ಳ ಸಹೋದರನು ದೇವಾಲಯಕ್ಕೆ ಹೋಗಿ ತಿನ್ನದಿರಲಿ.

**11-12** ನಮ್ಮ ಜ್ಞಾನವು ವಿಗ್ರಹಗಳಿಗೆ ಅರ್ಪಿತವಾದ ಆಹಾರವನ್ನು ತಿನ್ನುವದಕ್ಕೆ. ನಮ್ಮನ್ನು ಸ್ವತಂತ್ರರನ್ನಾಗಿಸಿರುತ್ತದೆ. ಆದರೆ ನಮ್ಮ ಜ್ಞಾನವು (ಅಥವಾ ಸ್ವಾತಂತ್ರ್ಯ) ನಮ್ಮ ನಿರ್ಬಲ ಸಹೋದರನನ್ನು ನಾಶಗೊಳಿಸಬಲ್ಲದು. ಮತ್ತು ಈ ರೀತಿಯಾಗಿ ನಾವು ನಮ್ಮ ಸಹೋದರನ ವಿರುದ್ಧ ಪಾಪಮಾಡುವಾಗ ನಮಗಾಗಿಯೂ ನಮ್ಮ ಸಹೋದರನಿಗಾಗಿಯೂ ಶಿಲುಬೆಯ ಮೇಲೆ ಪ್ರಾಣಕೊಟ್ಟ ಯೇಸುವಿಗೆ ವಿರುದ್ಧವಾಗಿ ನಾವು ಪಾಪ ಮಾಡುವವರಾಗಿದ್ದೇವೆ. ಕ್ರಿಸ್ತನು ನಮಗಾಗಿ ಅಷ್ಟೊಂದು ಮಾಡಿರಬೇಕಾದರೆ ನಾವು ನಮ್ಮ ಸಹೋದರ ನಿಗೋಸ್ಕರ ನಮ್ಮ ಸ್ವಾತಂತ್ರ್ಯದಲ್ಲಿ ಸ್ವಲ್ಪನ್ನು ತ್ಯಾಗ ಮಾಡಲಾರೆವೋ? (ಮಾರ್ಕ 9:42; ರೋಮ 14:15 ನೋಡಿರಿ). ಹಾಗಾದರೆ ಜ್ಞಾನವು ಇತರರನ್ನು ನಾಶಮಾಡುತ್ತದೆ, ಆದರೆ ಪ್ರೀತಿಯು ಇತರರಿಗೆ ಭಕ್ತಿವೃದ್ಧಿಯನ್ನುಂಟು ಮಾಡುತ್ತದೆಂಬದನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳೋಣ (ವಚನ).

**13** ಈ ವಚನದಲ್ಲಿ ಮಾಂಸವನ್ನು ತಿನ್ನುವದು ಯಾವ ರೀತಿಯ ಚಟುವಟಿಕೆಯು ನಮ್ಮ ಸಹೋದರನನ್ನು ಪಾಪದಲ್ಲಿ ಬೀಳುವಂತೆ ಮಾಡುತ್ತದೆಂಬದಕ್ಕೆ ಒಂದು ಉದಾಹರಣೆ ಮಾತ್ರವೇ ಆಗಿದೆ. ಖಂಡಿತವಾಗಿಯೂ, ನಮ್ಮ ಸಹೋದರನಿಗೆ ವಿಘ್ನವನ್ನುಂಟು ಮಾಡುವ ಇನ್ನು ಅನೇಕ ಸಂಗತಿಗಳು ಇರುತ್ತವೆ. ಈ ಸಂಗತಿಗಳು ಸ್ವತಃ ಪಾಪಗಳಲ್ಲವಾದಾಗ್ಯು ಅವು ಗಳು ನಮ್ಮ ಸಹೋದರನಿಗೆ ಹಾಗಿಯನ್ನುಂಟು ಮಾಡುವದಕ್ಕೆ ಯಾವದೇ ಅವಕಾಶ ಕಂಡು ಬರುವದಾದರೆ ನಾವು ಅವು ಗಳನ್ನು ಮಾಡಲೇ ಬಾರದು.

---

## ಅಧ್ಯಾಯ - 9

### ಅಪೊಸ್ತಲನ ಹಕ್ಕುಗಳು (9:1-18)

**1** ಕೊರಿಂಥದ ಕ್ರೈಸ್ತರಲ್ಲಿ ಕೆಲವರು ಪೌಲನ ವಿರುದ್ಧವಾಗಿ ಮಾತಾಡಲಾರಂಭಿಸಿದ್ದರು. ವಿಶೇಷವಾಗಿ, ಪೌಲನು ಒಬ್ಬ ವಿಜವಾದ ಅಪೊಸ್ತಲನಲ್ಲಿ ಎಂದು ಅವರು ಹೇಳಿದರು. ಆದುದರಿಂದ ಪೌಲನು ಈ ಅಧ್ಯಾಯದಲ್ಲಿ ತನ್ನ ಜೀವನ ಮತ್ತು ಕಾರ್ಯದ ಕುರಿತಾಗಿ ಹೇಳುತ್ತಾನೆ, ಹೀಗೆ ಆತನು ನಿಜವಾಗಿಯೂ ಒಬ್ಬ ಅಪೊಸ್ತಲನೇ ಎಂಬದಾಗಿ ಕೊರಿಂಥದ ವಿಶ್ವಾಸಿಗಳು ತಿಳಿದುಕೊಳ್ಳುವಂತಾಗಬೇಕೆಂದು ಆತನು ಇಚ್ಛಿಸುತ್ತಾನೆ.

ನಾನು ಸ್ವಾತಂತ್ರನಲ್ಲವೇ? ಹೌದು, ಪೌಲವು ಸ್ವತಂತ್ರನು; ಆದರೆ ಆತನ ಸ್ವಾತಂತ್ರ್ಯವು ಸಹೋದರನೊಬ್ಬನಿಗೆ ವಿಘ್ನವಾಗುವಂತೆ ಆತನು ಎಂದಿಗೂ ಅನುಮತಿಸುವದಿಲ್ಲ (1 ಕೊರಿಂಥ 8:13).

ನಾನು ಅಪೊಸ್ತಲನಲ್ಲವೇ? ಹೌದು, ಪೌಲನು ಒಬ್ಬ ಅಪೊಸ್ತಲನು, ಯಾಕೆಂದರೆ ಅವನು ಪು ನರುಥ್ಥಾನಗೊಂಡ ಕ್ರಿಸ್ತನನ್ನು ಕಣ್ಣಾರೆ ಕಂಡಿದ್ದನು (ಅ.ಕೃತ್ಯ 9:3-6, 17; 22;6-9).

ಪೌಲನು ನಿಜವಾಗಿಯೂ ಒಬ್ಬ ಅಪೊಸ್ತಲನಾಗಿದ್ದನೆಂಬದಕ್ಕೆ ಆಧಾರವೇನಾಗಿತ್ತು? ಆಧಾರವು ಆತನ ಫಲ, ಫಲಿತಗಳು, ಹಾಗು ಆತನ ಸೇವೆಗಳಲ್ಲಿಯೇ ಇರುತ್ತದೆ. ಅವು ಗಳಲ್ಲಿ ಕೊರಿಂಥದ ಸಭೆಯು ಒಂದು ಫಲವಾಗಿತ್ತುಗ ಪೌಲನು ಕೊರಿಂಥದವರ ಮಧ್ಯದಲ್ಲಿ ಶ್ರೇಷ್ಠ ಕೆಲಸವನ್ನುಮಾಡಿದ್ದನು ಮತ್ತು ಕೊರಿಂಥದವರು ಅದರ ಮೂಲಕವಾಗಿ ಪೌಲನು ಒಬ್ಬ

ನಿಜವಾದ ಅಪೊಸ್ತಲನಾಗಿದ್ದನೆಂದು ತಿಳಿದುಕೊಳ್ಳಬೇಕಾಗಿತ್ತು (2 ಕೊರಿಂಥ 12:12). ಪೌಲನು ಯಾವಾಗಲೂ ಕರ್ತನ ಸೇವೆಯಲ್ಲಿ ಕೆಲಸ ಮಾಡಿದನು ಮತ್ತು ಈ ಕಾರಣದಿಂದ ಅದು ಯಾನಾಗಲೂ ಫಲವನ್ನು ತಂದಿತು.

2 ಸ್ವತಃ ಕೊರಿಂಥದ ಕ್ರೈಸ್ತರೇ ಪೌಲನ ಅಪೊಸ್ತಲತ್ವಕ್ಕೆ ಪ್ರಮಾಣ ಅಥವಾ ಮುದ್ರೆಯಾಗಿದ್ದರು. ಮರವೊಂದರ ಫಲಗಳೇ ಆ ಮರವು ಎಂಥದ್ದೆಂಬದನ್ನು ನಿರೂಪಿಸುವ ಪ್ರಕಾರವೇ ಪೌಲನ ಸಾಧನೆಗಳೇ ಆತನೊಬ್ಬ ಅಪೊಸ್ತಲನೆಂಬದನ್ನು ನಿರೂಪಿಸಿದವು . ಕೊರಿಂಥದವರು ಪೌಲನ್ನು ಅಪೊಸ್ತಲನೆಂದು ಪರಿಗಣಿಸ ಬೇಕು, ಯಾಕೆಂದರೆ ಆತನ ಬೋಧನೆಯ ಮೂಲಕವೇ ಅವರು ಮೊದಲು ಕ್ರಿಸ್ತನೆಡೆಗೆ ಬಂದಿದ್ದರು.

3 ಕೊರಿಂಥದ ಕ್ರೈಸ್ತರು ಬಹಳ ಗರ್ವಿಷ್ಠರಾಗಿದ್ದರು (1 ಕೊರಿಂಥ 4:18-19). ಅವರು ತಮ್ಮ ಆತ್ಮೀಕ ತಂದೆಯಾದ ಪೌಲನ ವಿಷಯದಲ್ಲಿ ತೀರ್ಪು ಮಾಡುವದಕ್ಕೆ ಯೋಚಿಸಿದರು!

ಒಬ್ಬ ಅಪೊಸ್ತಲನಾಗಿ ಪೌಲನು ತಾನು ಸಂಧಿಸಿದ ಸಭೆಗಳು ಆತನ ಆಹಾರ ಹಾಗು ಇತರ ವೆಚ್ಚಗಳನ್ನು ಭರಿಸಬೇಕೆಂದು ಕೇಳುವ ಹಕ್ಕುಳ್ಳವನಾಗಿದ್ದನು (ವಚನ 14). ಇತರ ಅಪೊಸ್ತಲರಿಗೆ ಅವರು ಬೇಟಿ ನೀಡಿದ ಸಭೆಗಳಿಂದ ಸೌಕರ್ಯಗಳು ಒದಗಿಸಲ್ಪಡುತ್ತಿದ್ದವು . ಹೇಗಿದ್ದರೂ, ಪೌಲನು ಎಂದಿಗೂ ಕೊರಿಂಥದವರಿಂದ ಏನನ್ನೂ, ಕೇಳಲಿಲ್ಲ; ಅವನು ಎಂದಿಗೂ ತನ್ನ ಹಕ್ಕಿನ ಲಾಭವನ್ನು ಪಡೆದುಕೊಳ್ಳಲಿಲ್ಲ. ಬದಲಾಗಿ, ಆತನು ತನ್ನ ಉಳಿತಾಯದ ಸಮಯದಲ್ಲಿ ಗುಡಾರಗಳನ್ನು ಮಾಡಿ ತನ್ನ ಜೀವನೋಪಾಯಕ್ಕಾಗಿ ಸಂಪಾದಿಸಿಕೊಳ್ಳುತ್ತಿದ್ದನು.

5 ಒಂದು ವೇಳೆ ಪೌಲನಿಗೆ ಹೆಂಡಿತಿಯಿದ್ದಿದ್ದರೆ ಆತನು ಆಕೆಯನ್ನು ಕೊರಿಂಥಕ್ಕೆ ಕರೆದುಕೊಂಡು ಬರುವ ಹಕ್ಕನ್ನು ಹೊಂದಿರುತ್ತಿದ್ದನು ಮತ್ತು ಕೊರಿಂಥದ ಸಭೆಯು ಅವರಿಬ್ಬರಿಗೂ ಸೌಕರ್ಯಗಳನ್ನು ಒದಗಿಸಬೇಕಾಗಿತ್ತು. ಈ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಕರ್ತನ ತಮ್ಮಂದಿರು ಯೇಸುವಿನ ಕಿರಿಯ ಸಹೋದರರಾಗಿದ್ದಾರೆ. ಯೇಸು ಮರಿಯಳ ಹಿರಿಯ ಮಗನಾಗಿದ್ದನು; ಆತನು ಮಾನವ ತಂದೆಯಿಂದ ಅಲ್ಲ, ಆದರೆ ಪವಿತ್ರಾತ್ಮನಿಂದಲೇ ಹುಟ್ಟಿದವನಾಗಿದ್ದಾನೆ. (ಮತ್ತಾಯ 1:18). ಅದರ ತರುವಾಯ ಮರಿಯಳು ತನ್ನ ಸ್ವಂತ ಗಂಡನಾದ ಯೋಸೇಫನಿಂದ ಅನೇಕ ಸ್ವಾಭಾವಿಕ ಮಕ್ಕಳನ್ನು ಪಡೆದಳೆಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ. ಈ ಅಭಿಪ್ರಾಯ ಸರಿಯಾಗಿರುವದಾದರೆ, ಈ ವಚನದಲ್ಲಿ ಪ್ರಸ್ತಾಪಿಸಲಾಗಿರುವ ಕರ್ತನ ತಮ್ಮಂದಿರು ಯೇಸುವಿನ ನಿಜವಾದ ಸಹೋದರರೂ ಮರಿಯಳ ಮಕ್ಕಳೂ ಆಗಿರುತ್ತಾರೆ. ಅವರಲ್ಲಿ ಯಾಕೋಬನೂ ಒಬ್ಬ ನಾಗಿದ್ದು ಆತನು ಯೆರೂಸಲೇಮಿನ ಸಭೆಯ ಮುಖ್ಯನಾಯಕನಾದನು. ಹೊಸ ಒಡಂಬಡಿಕೆಯ "ಯಾಕೋಬ" ಎಂಬ ಪತ್ರಿಕೆಯನ್ನು ಬರೆದವನು ಈ ಯಾಕೋಬನೇ ಎಂದು ಬಹುಮಂದಿ ಬೈಬಲ್ ಪಂಡಿತರು ನಂಬುತ್ತಾರೆ.

ಕೇಫನು (ಪೇತ್ರ) ಯೇಸುವಿನ ಮುಖ್ಯ ಶಿಷ್ಯನಾಗಿದ್ದನು. ಪೇತ್ರ ಹಾಗು ಯೇಸುವಿನ ಸಹೋದರರು ಸಾಮಾನ್ಯವಾಗಿ ತಾವು ಇತರ ಸಭೆಗಳಿಗೆ ತಮ್ಮ ಹೆಂಡತಿಯರನ್ನು ಕರಕೊಂಡು ಸಂಚರಿಸುತ್ತಿದ್ದರು.

6 ಅಪೊಸ್ತಲರೊಳಗೆ ಪೌಲ ಬಾರ್ನಬರು ಮಾತ್ರವೇ ಉದ್ಯೋಗ ಮಾಡುತ್ತಾ ತಮ್ಮ ಜೀವನೋಪಾಯವನ್ನು ನೋಡಿಕೊಂಡರು. ಪೌಲನು ಗುಡಾರಗಳನ್ನು ಮಾಡುತ್ತಿದ್ದನು. ಅವರು ಹೀಗೆ ಕೆಲಸಮಾಡಬೇಕೆಂಬ ಒತ್ತಾಯವೇನಿರಲಿಲ್ಲ; ಅವರು ಸ್ವಯಿಚ್ಛೆಯಿಂದ ಮಾಡುತ್ತಿದ್ದರು.

ಬಾರ್ನಬನು ಸೇವೆಯಲ್ಲಿ ಪೌಲನ ಪ್ರಥಮ ಸಹಪಾಠಿಯಾಗಿದ್ದನು, ಮತ್ತು ಆತನು ಪೌಲನ ಮೊದಲನೆಯ ಸುವಾರ್ತಾ ಪ್ರಯಾಣದಲ್ಲಿ ಸಂಗಡ ಇದ್ದನು (ಅ.ಕೃತ್ಯ 4:36-37; 11:22,24-26; 13:2-3 ನೋಡಿರಿ).

7 ಬೇರೆ ಎಲ್ಲಾ ರೀತಿಯ ಕೆಲಸದಲ್ಲಿಯೂ ಕೆಲಸಗಾರನು ತನ್ನ ಕಷ್ಟಕ್ಕೆ ಕೂಲಿಪಡೆಯುತ್ತಾನೆ – ಹಣವಾಗಿರಬಹುದು ಅಥವಾ ಆಹಾರ ಇಲ್ಲವೆ ಬೆಳೆಯ ಸ್ವಲ್ಪಭಾಗ ಆಗಿರಬಹುದು, ಕೆಲಸಗಾರನಿಗೆ ಸಂಬಳ ಪಡೆಯುವಹಕ್ಕಿದೆ ಆದರೆ ಪೌಲನು ತಾನು ಅಪೊಸ್ತಲನಾಗಿ ಮಾಡಿದ ಕೆಲಸಕ್ಕೆ ಸಂಬಳವನ್ನಾಗಲಿ ಅಥವಾ ಪ್ರತಿಫಲವನ್ನಾಗಲಿ ಕೊರಿಂಥದವರಿಂದ ಕೇಳಲಿಲ್ಲ.

8-9 ಕೆಲಸಗಾರನು ಸಂಬಳವನ್ನು ಪಡೆಯ ತಕ್ಕದ್ದೆಂದು ಪೌಲನು ಮಾತ್ರವೇ ಹೇಳುವದಿಲ್ಲ; ಮೋಶೆಯ ಧರ್ಮಶಾಸ್ತ್ರವು (ಹಳೆ ಒಡಂಬಡಿಕೆಯ ಮೊದಲಿನ ಐದು ಪು ಸ್ತಕಗಳು) ಸಹ ಅದನ್ನು ಹೇಳುತ್ತದೆ. ಮೋಶೆಯ ಧರ್ಮಶಾಸ್ತ್ರದ ಪ್ರಕಾರವಾಗಿ ಒಂದು ಎತ್ತಿಗೂ ಸಹ "ಸಂಬಳ' ಅಂದರೆ, ಆಹಾರ ದೊರೆಯಕ್ಕದ್ದು. ಆದುದರಿಂದ, ಒಬ್ಬನು ಕಣತುಳಿಯುವ ಎತ್ತಿನ ಬಾಯಿ ಕಟ್ಟಬಾರದು (ಧರ್ಮೋಪದೇಶಕಾಂಡ 25:4).

10 ಒಂದು ವೇಳೆ ದೇವರು ಒಂದು ಎತ್ತಿಗಾಗಿ ಅಷ್ಟೊಂದು ಚಿಂತಿಸುವದಾದರೆ ಖಂಡಿತವಾಗಿಯೂ ಆತನು ಪೌಲನಿಗೋಸ್ಕರ ಇನ್ನು ಎಷ್ಟೋ ಹೆಚ್ಚಾಗಿ ಚಿಂತಿಸುತ್ತಾನೆ! ಒಂದು ಎತ್ತು ತನ್ನ ಸಂಬಳವನ್ನು ಪಡೆಯಲು ಅರ್ಹವಾಗಿದ್ದರೆ ನಿಶ್ಚಯವಾಗಿಯೂ ಮನುಷ್ಯರು ಸಹ ತಮ್ಮ ಕಷ್ಟಕ್ಕಾಗಿ ಸಂಬಳವನ್ನು ಪಡೆಯುವದಕ್ಕೆ ಅರ್ಹರಾಗಿದ್ದಾರೆ (1 ತಿಮೊಥೆ 5:17-18).

ಅಪೊಸ್ತಲರು ಹಾಗು ಬೋಧಕರು ಉಳುವವರಂತೆಯೂ ಒಕ್ಕುವವನಂತೆಯೂ ಇದ್ದಾರೆ. ಕೆಲವರು ಭೂಮಿಯನ್ನು ಉಳುತ್ತಾರೆ ಮತ್ತು ಕೆಲವರು ಬೀಜವನ್ನು ಬಿತ್ತುತ್ತಾರೆ, ಅದೇ ವೇಳೆಯಲ್ಲಿ ಇತರರು ಬೆಳೆಯನ್ನು ಕೊಯ್ದು ಒಕ್ಕುತ್ತಾರೆ.

11 ಪೌಲನು ಕೊರಿಂಥದಲ್ಲಿ ಆತ್ಮಸಂಬಂಧವಾದ ಬೀಜವನ್ನು ಬಿತ್ತಿದ್ದನು; ಮತ್ತು ಈ ಬೀಜದಿಂದ ಕೊರಿಂಥದ ವಿಶ್ವಾಸಿಗಳ ಜೀವಿತಗಳಲ್ಲಿ ಆತ್ಮೀಕ ಫಲವು – ನಂಬಿಕೆ ಮತ್ತು ನಿತ್ಯ ಜೀವ ಎಂಬ ಫಲ – ಚಿಗುರೊಡೆದಿತ್ತು. ಪೌಲನು ಕೊರಿಂಥದವರಿಗೆ ಅಂತಹ ಶ್ರೇಷ್ಠ ಉಡುಗೋರೆಯನ್ನು ನೀಡಿದ್ದಾದರೆ ಆತನು ಅವರಿಂದ ಶರೀರ ಸಂಬಂಧವಾದ ಪೈರನ್ನು, ಅಂದರೆ, ಭೌತೀಕ ಸಂಬಳವನ್ನು ನಿರೀಕ್ಷಿಸಬಾರದೋ? (ರೋಮ 15:27 ನೋಡಿರಿ).

12 ಇತರ ಅಪೊಸ್ತಲರು ಕೊರಿಂಥದವರಿಂದ ಸಹಾಯವನ್ನು ಪಡೆದುಕೊಂಡಿದ್ದರು. ಅವರ ಆತ್ಮೀಕ ತಂದೆಯಾದ ಪೌಲನಿಗೆ ಅವರಿಂದ ಸಹಾಯವನ್ನು ಕೇಳುವದಕ್ಕೆ ಇನ್ನು ಹೆಚ್ಚಾದ ಹಕ್ಕಿಲ್ಲವೇ? ಹಾಗಿದ್ದರೂ, ಆತನು ಅವರಿಂದ ಏನನ್ನೂ ಕೇಳಿರಲಿಲ್ಲ. ಆತನು ಸಹಾಯವನ್ನು ಏಕೆ ಕೇಳಿರಲಿಲ್ಲ? ಯಾಕೆಂದರೆ, ಕೊರಿಂಥದವರು ತನಗೆ ಸಹಾಯ ಮಾಡಿದ್ದಕ್ಕೆ ಗುಣಗುಟ್ಟುವದನ್ನು ಕೇಳಿಸಿಕೊಳ್ಳಲು ಪೌಲನಿಗೆ ಇಷ್ಟವಿರಲಿಲ್ಲ. ಬಹುಶಃ ಪೌಲನು ಅವರಿಂದ ಕೇವಲ ಹಣ ಅಥವಾ ಆಹಾರವನ್ನು ಪಡೆದುಕೊಳ್ಳುವದಕ್ಕಾಗಿ ಸುವಾರ್ತೆ ಸಾರಿದನೆಂದು ಅವರು ಪೌಲನ ಮೇಲೆ ಆರೋಪವನ್ನು ಹೊರಿಸಿರುತ್ತಿದ್ದರು. ಅಂತಹ ಆರೋಪವು ಖಂಡಿತವಾಗಿಯೂ ಆತನ ಬೋಧನೆಯ ಕಾರ್ಯಸಾಧಕತೆಯನ್ನು ಕುಂದಿಸಿರುತ್ತಿತ್ತು (2 ಕೊರಿಂಥ 6:3; 11;9 ನೋಡಿರಿ).

13 ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರವಾಗಿ ಯೆಹೂದ್ಯ ಯಾಜಕರಿಗೆ ಜನರು ಅರ್ಪಿಸುತ್ತಿದ್ದ ಯಜ್ಞಗಳಲ್ಲಿ ಪಾಲನ್ನು ಕೊಡಲಾಗುತ್ತಿತ್ತು (ಅರಣ್ಯಕಾಂಡ 18:8-9, 12-14; ಧರ್ಮೋಪದೇಶಕಾಂಡ 18:1-5). ಯೆಹೂದ್ಯ ದೇವಾಲಯದಲ್ಲಿ ಸೇವೆಮಾಡುವವರು ದೇವಾಲಯದ ಆದಾಯದಿಂದಲೇ ಜೀವನ ಮಾಡಬೇಕೆಂದು ನೇಮವಿತ್ತು.

14 ಅಲ್ಲದೆ, ಕ್ರಿಸ್ತನ ಬೋಧನೆಯ ಪ್ರಕಾರವಾಗಿ ಅಪೊಸ್ತಲರು ಹಾಗು ಬೋಧಕರು ತಮ್ಮ ಬೋಧನೆ ಹಾಗು ಉಪದೇಶದ ಕೆಲಸದಿಂದಲೇ ತಮ್ಮ ಸಂಬಳ ಅಥವಾ ಆಹಾರವನ್ನು ಪಡೆಯಬೇಕೆಂಬುದಾಗಿತ್ತು (ಮತ್ತಾಯ 10;9-10; ಲೂಕ 10:7).

15 ಪೌಲನು ಕೊರಿಂಥದವರಿಂದ ಈ ಸಂಗತಿಗಳನ್ನು – ಅಂದರೆ ಸಹಾಯ ಅಥವಾ ಸಂಬಳ – ಪಡೆದುಕೊಳ್ಳಬೇಕೆಂಬ ನಿರೀಕ್ಷೆಯಲ್ಲಿ ಬರೆಯುತ್ತಿಲ್ಲ, ಆದಾಗ್ಯು ಈ ಸಂಗತಿಗಳನ್ನು ಅವರಿಂದ ನಿರೀಕ್ಷಿಸಲು ಅವನಿಗೆ ಎಲ್ಲಾ ರೀತಿಯ ಹಕ್ಕಿತ್ತು. ಪೌಲನು ತಾನು ಒಬ್ಬ ಅಪೊಸ್ತಲನಾಗಿ ಮಾಡಿದ ಕೆಲಸಕ್ಕೆ ಅವರಿಂದ ಏನನ್ನೂ ಪಡೆದುಕೊಂಡಿಲ್ಲ ಎಂಬುದಾಗಿ ತನಗೆ; "ಹೊಗಳಿಕೊಳ್ಳುವದಕ್ಕೆ" ಆಸ್ಪದವಿರಬೇಕೆಂದು ಪೌಲನು ಬಯಸಿದ್ದನು (ವಚನ 18).

16 ಪೌಲನು ತನ್ನ ಬೋಧನೆಯಲ್ಲಿ ಹೆಚ್ಚಳ ಪಟ್ಟು ಕೊಳ್ಳುವದಿಲ್ಲ, ಯಾಕೆಂದರೆ ಆತನು ಸುವಾರ್ತೆಯನ್ನು ಸಾರುವದಕ್ಕೆ ಕ್ರಿಸ್ತನಿಂದ ನೇಮಿಸಲ್ಪಟ್ಟಿದ್ದಾನೆ; ಅವನಿಗೆ ಸುವಾರ್ತೆಯನ್ನು ಸಾರದೇ ಬೇರೆ ಇನ್ನಾವ ಆಯ್ಕೆಯಿರಲಿಲ್ಲ. ಅವನಿಗೆ ಸಾರಲೇಬೇಕೆಂಬ ನಿರ್ಬಂಧವಿತ್ತು. ಅವನಿಗೆ ಸಾರಬೇಕೆಂಬ ಒತ್ತಾಯವಿರತ್ತದೆ; ಆದುದರಿಂದ ಹೊಗಳಿಕೊಳ್ಳುವದಕ್ಕೆ ಆತನಿಗೇನೂ ಆಸ್ಪದವಿಲ್ಲ. ಜನರು ತಾವು ಮಾಡಲೇ ಬೇಕಾದ ಕಾರ್ಯದ ಕುರಿತು ಹೊಗಳಿಕೊಳ್ಳುವದಿಲ್ಲ; ಅವರು ತಾವು ಸ್ವಯಿಚ್ಛೆಯಿಂದ ಮಾಡಿದ ಸಂಗತಿಗಳ ಕುರಿತಾಗಿ ಮಾತ್ರವೇ ಹೊಗಳಿಕೊಳ್ಳಬಹುದು.

ಸಾರದಿದ್ದರೆ ನನ್ನ ಗತಿಯನ್ನು ಏನು ಹೇಳಲಿ, ಎಂದು ಪೌಲನು ಬರೆಯುತ್ತಾನೆ. ಕ್ರೈಸ್ತರಲ್ಲಿ ಎಲ್ಲರೂ ಬೋಧಕರಾಗಿರಲು ನೇಮಿಸಲ್ಪಟ್ಟಿಲ್ಲ, ಆದರೆ ಎಲ್ಲಾ ಕ್ರೈಸ್ತರು ತಾವು ಹೊಂದಿರುವ ಅವಕಾಶದಂತೆ ಸುವಾರ್ತೆಯ ಸಾಕ್ಷಿ ನೀಡುವದಕ್ಕೆ ನೇಮಿಸಲ್ಪಟ್ಟಿದ್ದಾರೆ. ಕ್ರಿಸ್ತನಿಗಾಗಿ ಸಾಕ್ಷಿ ನೀಡಲು ನಿರಾಕರಿಸುವ ವಿಶ್ವಾಸಿಯ ಗತಿಯನ್ನು ಏನು ಹೇಳಲಿ! ಒಂದು ಸಮಯದಲ್ಲಿ ಪೌಲನು ಪಟ್ಟಣವೊಂದರಲ್ಲಿ ಯೆಹೂದ್ಯರಿಗೆ ಸುವಾರ್ತೆಯನ್ನು ಸಾರಿದ್ದನು, ಆದರೆ ಅವರು ಅದನ್ನು ಸ್ವೀಕರಿಸಲಿಲ್ಲ. ಆದುದರಿಂದ ಪೌಲನು ಅವರಿಗೆ ಹೇಳಿದ್ದೇನೆಂದರೆ: "ನಿಮ್ಮ ನಾಶನಕ್ಕೆ ನೀವೇ ಹೊಣೆ! ನನ್ನ ಜವಾಬ್ದಾರಿಯಲ್ಲಿ ನಾನು ಶುದ್ಧಮನಸ್ಸುಳ್ಳವನಾಗಿದ್ದೇನೆ" (ಅ.ಕೃತ್ಯ 18:6). ಒಂದು ವೇಳೆ ಪೌಲನು ಅವರಿಗೆ ಸುವಾರ್ತೆಯನ್ನು ಸಾರಿದಿದ್ದರೆ ಅವರ ಅಪನಂಬಿಕೆಗೆ ಆತನು ಜವಾಬ್ದಾರನಾಗುತ್ತಿದ್ದನು. ಪಶ್ಚಾತಾಪ ಪಟ್ಟು ನಂಬುವದಕ್ಕೆ ನಿರಾಕರಿಸುವವರು ತಮ್ಮ ದಂಡನೆಯನ್ನು ತಾವೇ ಹೊಂದಬೇಕು; ಆದರೆ ಅವರಿಗೆ ಸಾಕ್ಷಿನೀಡಬೇಕಾಗಿದ್ದವರು ನೀಡಲಿಲ್ಲವಾದರೆ ಅವರು ಸಹ ದಂಡನೆಯನ್ನು ಹೊಂದುವರು. ಆ ಅವಿಶ್ವಾಸಿಗಳ "ನಾಶನದ ಹೊಣೆಯು" ಅವರಿಗೆ ಸಾಕ್ಷಿಯನ್ನು ನೀಡಬೇಕಾಗಿದ್ದವರ ತಲೆಯ ಮೇಲಿರುವದು (ಯೆಹೆಜ್ಕೇಲ 33:7-9); ಅಂದರೆ, ಅವಿಶ್ವಾಸಿಗಳ ಅಪನಂಬಿಕೆಯ ಅಪರಾಧದಲ್ಲಿ ವಿಶ್ವಾಸಿಗಳು ಸಹ ಸ್ವಲ್ಪಮಟ್ಟಿಗೆ ಹೊಣೆಯಾಗಿರುತ್ತಾರೆ.

17 ನಾವು ಸ್ವಂತ ಇಷ್ಟದಿಂದ ಸಾರುವದಾದರೆ ನಮಗೆ ಬಹು ಮಾನ ದೊರೆಯುವದು. ಆದರೆ ವಿಶೇಷವಾಗಿ ಬೋಧಿಸುವದಕ್ಕಾಗಿಯೇ ಕರೆಯಲ್ಪಟ್ಟವರು ಸ್ವಂತ ಇಷ್ಟದಿಂದ ಸಾರುವದಿಲ್ಲ; ಬದಲಾಗಿ ಅವರು ತಮ್ಮ ಕರೆಯುವಿಕೆಯ ನಿಮಿತ್ತ ಸಾರಲೇ ಬೇಕೆಂಬ ನಿರ್ಬಂಧದಲ್ಲಿರುತ್ತಾರೆ. ಅವರ ವಶಕ್ಕೆ ಮನೆವಾರ್ತೆಯು ಕೊಡಲ್ಪಟ್ಟಿದೆ, ಆದ್ದರಿಂದ ಅವರು ಅದನ್ನು ನೆರವೇರಿಸಬೇಕು. ಮತ್ತು ಹಾಗೆ ಮಾಡುವದಕ್ಕಾಗಿ ಅವರು ಬಹುಮಾನವನ್ನು – ಈ ಜೀವಿತದಲ್ಲಿ – ನಿರೀಕ್ಷಿಸಬಾರದು.

18 ಹೀಗಿರುವದಾದರೆ ಪೌಲನ ಬಹುಮಾನ ಏನಾಗಿದೆ? ಪೌಲನು ತಾನು ಸುವಾರ್ತೆಯನ್ನು ಉಚಿತಾರ್ಥವಾಗಿ ಸಾರಿದ್ದಾನೆಂಬ ಸತ್ಯಾಂಶವೇ ಆತನ "ಬಹುಮಾನ" ಆಗಿದೆ. ಪೌಲನು ಅಪೊಸ್ತಲನಾಗಿ ನಡಿಸಿದ ಕೆಲಸದಿಂದ ಯಾವದೇ ವಯುಕ್ತಿಕ ಲಾಭವನ್ನು ಪಡೆಯಲಿಲ್ಲ. ಅಂತಹ ಹೇಳಿಕೆಯನ್ನು ನೀಡುವದಕ್ಕೆ ಶಕ್ತನಾಗುವದೇ ಪೌಲನ ಬಹುಮಾನವಾಗಿದೆ.

## ಜನರನ್ನು ಕ್ರಿಸ್ತನೆಡೆಗೆ ನಡಿಸುವಲ್ಲಿ ಪೌಲನ ಪ್ರಯತ್ನಗಳು (9:19-27)

19 ಪೌಲನು ಸ್ವತಂತ್ರನಾಗಿದ್ದನು. ಆತ್ಮೀಕ ಅರ್ಥದಲ್ಲಿ ಆತನು ಪಾಪದಿಂದಲೂ ಲೋಕದ ದಾಸತ್ವದೊಳಗಿಂದಲೂ ಸ್ವಂತಂತ್ರನಾಗಿದ್ದನು. ಆರ್ಥಿಕ ಅರ್ಥದಲ್ಲಿಯೂ ಆತನು ಸ್ವತಂತ್ರನಾಗಿದ್ದನು; ಆತನು ಯಾರ ಋಣದಲ್ಲಿಯೂ ಇರಲಿಲ್ಲ. ಅವನು ತನ್ನ ಜೀವನೋಪಾಯಕ್ಕೆ ಸ್ವತಃ ದುಡಿದನು. ಆತನು ಯಾವ ಮನುಷ್ಯನಿಗೂ ಸೇರಿದವನಲ್ಲ. ಆದರೆ ಪೌಲನು ಸ್ವಂತ ಇಷ್ಟದಿಂದ ತನ್ನ ಸ್ವಾತಂತ್ರ್ಯವನ್ನು ತೊರೆದು ಬಿಟ್ಟು ತನ್ನನ್ನು ಎಲ್ಲರಿಗೂ ಅಧೀನ ಮಾಡಿದನು. ಆತನು ಇತರರನ್ನು ಕ್ರಿಸ್ತನಲ್ಲಿ ನಂಬಿಕೆಯಿಡುವಂತೆ ನಡಿಸಲು ಆತನು ಇತರರಿಗೆ ದಾಸನಾದನು. ಮೊಟ್ಟಮೊದಲನೆಯಾಗಿ ಪೌಲನು ತನ್ನನ್ನು

ಕ್ರಿಸ್ತನಿಗೆ ದಾಸನನ್ನಾಗಿ ಮಾಡಿಕೊಂಡನು (1 ಕೊರಿಂಥ 7:22). ಅನಂತರ, ಸುವಾರ್ತೆ ಸಾರೋಣದಲ್ಲಿ ಪೌಲನು ಸಾಧ್ಯವಾದಷ್ಟು ಜನರನ್ನು ಕ್ರಿಸ್ತನಿಗಾಗಿ ಸಂಪಾದಿಸಿಕೊಳ್ಳಬೇಕೆಂದು ಇತರರಿಗೆ ಅಧೀನಮಾಡಿಕೊಂಡನು.

20 ಪೌಲನು ತಾನು ಸುವಾರ್ತೆ ಸಾರುವವರಿಗೆ ತನ್ನನ್ನು ಹೊಂದಿಸಿಕೊಳ್ಳುವದಕ್ಕೆ ಸಾಧ್ಯವಾದಷ್ಟು ಪ್ರಯತ್ನಿಸಿದನು. ಆತನು ಮನುಷ್ಯರ ಪದ್ಧತಿಗಳು ಹಾಗು ಸಂಪ್ರದಾಯಗಳಿಂದ ಸ್ವತಂತ್ರನಾಗಿದ್ದಾಗ್ಯು ತಾನು ಗೆದ್ದು ಕೊಳ್ಳಲು ಪ್ರಯತ್ನಿಸುತ್ತಿದ್ದ ಜನರಿಗೆ ಅನಾವಶ್ಯಕವಾಗಿ ಬೇಸರವನ್ನುಂಟು ಮಾಡಬಾರದೆಂದು ಆತನು ಸ್ವಂತ ಇಷ್ಟದಿಂದ ಅವರ ಅನೇಕ ಪದ್ಧತಿಹಾಗು ಸಂಪ್ರದಾಯಗಳಿಗೆ ತನ್ನನ್ನು ಒಪ್ಪಿಸಿಕೊಂಡನು[26]. ಉದಾಹರಣೆಗೆ, ಪೌಲನು ಯೆಹೂದ್ಯ ಸಭಾಮಂದಿರಕ್ಕೆ ಹೋದಾಗ ಯೆಹೂದ್ಯರಿಗೆ ಯಾವದೇ ಅನಾವಶ್ಯಕಬೇಸರವನ್ನುಂಟು ಮಾಡಬಾರದೆಂದು ಆತನು ಸಭಾಮಂದಿರದ ಪದ್ಧತಿಗಳನ್ನು ಅನುಸರಿಸಿದನು. ನಿಯಮಗಳು ಯೆಹೂದ್ಯ

ನಿಯಮಗಳಾಗಿವೆ – ನಿಖರವಾಗಿ ಹೇಳುನದಾದರೆ. ಯಜ್ಞಗಳು ಹಾಗು ಶುದ್ಧತೆಯ ವಿಷಯದಲ್ಲಿನ ಎಲ್ಲಾ ಆಚಾರಬದ್ಧ ನೇಮನಿಷ್ಠೆ ಹಾಗು ಸಂಪ್ರದಾಯಗಳಾಗಿವೆ. ಪೌಲನು ಸ್ವತಃ ಒಬ್ಬ ಯೆಹೂದ್ಯನಾಗಿದ್ದಾಗ್ಯು ಆತನು ಇನ್ನು ಈ ನೇಮ ನಿಷ್ಠೆ ಹಾಗು ಸಂಪ್ರದಾಯಗಳನ್ನು ಪಾಲಿಸುವ ನಿರ್ಬಂಧಕ್ಕೊಳಪಟ್ಟಿರಲಿಲ್ಲ. ಆತನು ಇನ್ನೆಂದಿಗೂ ಯೆಹೂದ್ಯ ಆಚಾರ ಬದ್ಧ ನಿಯಮಕ್ಕೆ ಅಧೀನನಾಗಿರಲಿಲ್ಲ, ಯಾಕೆಂದರೆ, ಕ್ರಿಸ್ತನು ಆಚಾರ ಬದ್ಧ ನಿಯಮವನ್ನು ವಜಾಮಾಡಿದ್ದನು (ಎಫೆಸ 2:15; ಕೊಲೊಸ್ಸೆ 2:14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

21 ನಿಯಮವಿಲ್ಲದವರು ಅನ್ಯಜನರು ಅಥವಾ ಯೆಹೂದ್ಯೇತರರಾಗಿದ್ದಾರೆ. ಪೌಲನು ಅವರ ಮಧ್ಯದಲ್ಲಿರುವಾಗ ಆತನು ಸಾಧ್ಯವಾದಷ್ಟು ಮಟ್ಟಿಗೆ ಅವರ ಪದ್ಧತಿಗಳಿಗನುಸಾರವಾಗಿ ನಡೆದು ಕೊಳ್ಳಲು ಪ್ರಯತ್ನಿಸಿದನು. ಪೌಲನು ಯೆಹೂದ್ಯರಿಗೂ ಅನ್ಯಜನರಿಗೂ ಒಂದೇ ಸುವಾರ್ತೆಯನ್ನು ಸಾರಿದನು, ಆದರೆ ಎರಡುಗುಂಪು ಗಳಿಗೆ ಆತನ ಸುವಾರ್ತೆಸಾರುವಿಕೆಯ ವಿಧಾನ ಹಾಗು ಶೈಲಿಯು ವ್ಯತ್ಯಾಸವಾಗಿತ್ತು.

ಪೌಲನು ಇನ್ನೆಂದಿಗೂ ಯೆಹೂದ್ಯ ಆಚಾರಬದ್ಧ ನಿಯಮಗಳಿಗೆ (ಯೆಹೂದ್ಯರ ಆಚಾರಬದ್ಧ ನಿಯಮ ಹಾಗು ಸಂಪ್ರದಾಯಗಳ) ಅಧೀನನಲ್ಲದಿದ್ದಾಗ್ಯು ಆತನು ದೇವರ ನಿಯಮಕ್ಕೆ – ಅಂದರೆ, ಕ್ರಿಸ್ತನ ನಿಯಮ – ಅಧೀನನಾಗುಳಿದನು, ಅದು ಯೆಹೂದ್ಯ ಧರ್ಮಶಾಸ್ತ್ರದ "ನೈತೀಕ" ಭಾಗಕ್ಕೆ ಸಮಾನವಾಗಿರುತ್ತದೆ. ಕ್ರಿಸ್ತನ ನಿಯಮವು (ನೈತೀಕ: ನಿಯಮ) ಎರಡು ಶ್ರೇಷ್ಠ ಆಜ್ಞೆಗಳಲ್ಲಿ ಸಾರಾಂಶಿಸಲ್ಪಟ್ಟಿದೆ; ದೇವರನ್ನು ಪ್ರೀತಿಸುವದು ಹಾಗು ನೆರೆಯವನನ್ನು ಪ್ರೀತಿಸುವದು[27] (ಧರ್ಮೋಪದೇಶಕಾಂಡ 6:5; ಯಾಜಕಕಾಂಡ 19:18; ಮತ್ತಾಯ 22:35-40; ಮಾರ್ಕ 12:29-31 ಹಾಗು ವ್ಯಾಖ್ಯಾನಗಳನ್ನು ನೋಡಿರಿ).

22 ಬಲ್ಲವಿಲ್ಲದವರು ನಂಬಿಕೆಯಲ್ಲಿ ಬಲಹೀನರು ಹಾಗು ಬಲಹೀನ ಮನಸ್ಸಾಕ್ಷಿಯುಳ್ಳವರು ಆಗಿದ್ದಾರೆ (ರೋಮ 14:2; 15:1;1 ಕೊರಿಂಥ 8:9-13). ಒಂದು ವೇಳೆ ಅವರು ವಿಗ್ರಹಕ್ಕೆ ನೈವೇದ್ಯ ಮಾಡಿದ ಆಹಾರವನ್ನು ತಿನ್ನುವದಕ್ಕೆ ಅಂಜುವವರಾಗಿದ್ದರೆ ಪೌಲನು ಸಹ ಅವರೊಂದಿಗಿರುವಾಗ ಅಂತಹ ಆಹಾರವನ್ನು ತಿನ್ನುವದಿಲ್ಲ.

ಜನರು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವದರಿಂದ ವಿಮುಖರಾಗಬಾರದೆಂದು ಪೌಲನು ಅವರ ಮನಸ್ಸಿಗೆ ಬೇಸರವನ್ನುಂಟು ಮಾಡಲಿಚ್ಚಿಸುವದಿಲ್ಲ. ಹೇಗಿದ್ದರೂ, ಪೌಲನು "ತನ್ನ ಬಾಯಿಂದ ಎರಡೂ ಪಕ್ಷಗಳ ಪರವಾಗಿ "ಮಾತಾಡಲಿಲ್ಲ; ಅಂದರೆ, ಆತನು ಕೆಲವರ ಮುಖಸ್ತುತಿಮಾಡುವದಕ್ಕಾಗಿ ಸುಳ್ಳಾಗಿ ಮಾತಾಡಲಿಲ್ಲ. ಆತನು ಸತ್ಯವನ್ನೇ ಮಾತಾಡಿದನು. ಆದರೆ ಆತನು ಸುವಾರ್ತೆ ಸಾರುವಂಥ ವಿವಿಧ ರೀತಿಯ ಜನರೊಂದಿಗೆ ಸಾಧ್ಯವಾದಷ್ಟು ಹೊಂದಿಕೊಳ್ಳುತ್ತಿದ್ದನು, ಹೀಗೆ ಆತನು ಅವರನ್ನು ಹೆಚ್ಚು ಸುಲಭವಾಗಿ ಕ್ರಿಸ್ತನಿಗೋಸ್ಕರ ಸಂಪಾದಿಸಿಕೊಳ್ಳಬೇಕೆಂದು ಆತನ ಇಚ್ಛೆಯಾಗಿತ್ತು. ಪೌಲನು ಯಾರಾರಿಗೆ ಎಂಥೆಂಥವನಾಗಬೇಕೊ ಅಂಥಂಥವನಾಗಿದ್ದನು – ಯೆಹೂದ್ಯರು, ಅನ್ಯಜನರು, ಬಲವಿಲ್ಲದವರು, ಬಲಿಷ್ಠರು. ಅದೇ ರೀತಿಯಲ್ಲಿ ನಾವೂ ಇದರಲ್ಲಿ ಪೌಲನ ಮಾದರಿಯನ್ನು ಅನುಸರಿಸೋಣ (1 ಕೊರಿಂಥ 10:33 ನೋಡಿರಿ).

23 ಪೌಲನು ಇತರರಿಗೆ ಸುವಾರ್ತೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಸಾರುವದಕ್ಕೆ ಸಾಧ್ಯವಾಗುವಂತೆ ಅವರಂತೆಯೇ ಆದನು ಸುವಾರ್ತೆಯನ್ನು ಸ್ವೀಕರಿಸಿ ರಕ್ಷಣೆಯನ್ನು ಪಡೆದುಕೊಂಡವರ ಆನಂದ ಹಾಗು ಆಶೀರ್ವಾದಗಳಲ್ಲಿ ಪೌಲನು ಪಾಲುಗಾರನಾದನು.

24 ಕ್ರೈಸ್ತೀಯ ಜೀವಿತವು ಓಟದಂತಿರುತ್ತದೆ. ಮತ್ತು ಕ್ರಿಸ್ತನ ಪರಿಪೂರ್ಣ ತೆಯೆಂಬ ಪ್ರಮಾಣವನ್ನೂ ಮುಟ್ಟುವದೇ ಓಟದ "ಮುಕ್ತಾಯರೇಖೆ" ಆಗಿದೆ (ಎಫೆಸ 4:13). ಅಥವಾ, ಬೇರೆಮಾತುಗಳಲ್ಲಿ ಹೇಳುವದಾದರೆ, (ದೇವರ) ಮಗನ ಸಾರೂಪ್ಯವು ಳ್ಳವರಾಗುವದೇ " ಮುಕ್ತಾಯ ರೇಖೆ" ಆಗಿದೆ (ರೋಮ 8:29). ನಮ್ಮ ಜೀವಿತದ ಅತಿಶ್ರೇಷ್ಠಗುರಿಯು ಕ್ರಿಸ್ತನಂತಾಗುವದಾಗಿದೆ. ಕ್ರೈಸ್ತರೆಲ್ಲರೂ ನಂಬಿಕೆಯ ಮುಖಾಂತರ ಮುಕ್ತಾಯ ರೇಖೆಯನ್ನು ಮುಟ್ಟುವರು ಅಂದರೆ, ಅವರೆಲ್ಲರೂ ಪರಲೋಕವನ್ನು ತಲುಪಿ ಅಲ್ಲಿ ಅವರು ಕ್ರಿಸ್ತನಂತಾಗುವರು (1 ಯೋಹಾನ 3:2 ಮತ್ತು ವ್ಯಾಖ್ಯಾನ ನೋಡಿರಿ).

ಆದರೆ ಇಲ್ಲಿ ಪೌಲನು ಹೇಳುವದೇನೆಂದರೆ: ನೀವು ವಿಹಾರಕ್ಕೆ ಹೋಗುತ್ತಿರುವಿರೇನೋ ಎಂಬಂತೆ ಮುಕ್ತಾಯ ರೇಖೆಯಡೆಗೆ ನಡೆದುಹೋಗಬೇಡಿರಿ; ಬದಲಾಗಿ ಸಾಧ್ಯವಾದಷ್ಟು ಶ್ರಮವಹಿಸಿ ಓಡಿರಿ! ನಾವು ಸೋಮಾರಿಗಳಾಗಿ ಇರದಿರೋಣ; ನಾವು ಈ ಜೀವನದಲ್ಲಿ–ಪರಲೋಕದಲ್ಲಿ ಮಾತ್ರವೇ ಅಲ್ಲ! – ಕ್ರಿಸ್ತನಂತಾಗುವದಕ್ಕೆ ನಮ್ಮ ಎಲ್ಲಾ ಪ್ರಾಣದಿಂದಲೂ ಬಲದಿಂದಲೂ ಶ್ರಮಿಸೋಣ. ನಾವು ಸಾಧ್ಯವಾದಷ್ಟು ವೇಗವಾಗಿ ಓಡಿ ಪ್ರಥಮ ಸ್ಥಾನದಲ್ಲಿ ಬಹುಮಾನ ಪಡೆಯಲು ಪ್ರಯತ್ನಿಸೋಣ (ಇಬ್ರಿಯ 12:1 ನೋಡಿರಿ).

**25** ಕ್ರೈಸ್ತರು ಕ್ರೀಡೆಗಳಿಗಾಗಿ ತರಬೇತಿ ಹೊಂದುತ್ತಿರುವವರಂತಿದ್ದಾರೆ. ಕ್ರೀಡಾಪಟುಗಳು ಕ್ರೀಡೆಗಳಿಗಾಗಿ ತಮ್ಮನ್ನು ತರಬೇತು ಗೊಳಿಸಿಕೊಳ್ಳುವದಕ್ಕಾಗಿ ಉಳಿದೆಲ್ಲವನ್ನೂ ಬದಿಗಿಡುತ್ತಾರೆ. ಅದೇ ರೀತಿಯಾಗಿ ಕ್ರೈಸ್ತರಾದ ನಾವು ಸ್ವ ಸಂಪೂರ್ಣವಾಗಿ ಕ್ರಿಸ್ತನ ಸೇವೆಯಲ್ಲಿ ಗಮನ ಹರಿಸುವದಕ್ಕಾಗಿ ಎಲ್ಲಾ ಸುಖಗಳನ್ನೂ ಅನುಕೂಲತೆಗಳನ್ನೂ ಬಿಟ್ಟು ಬಿಡುವದಕ್ಕೆ ಸಿದ್ಧರಾಗಿರಬೇಕು. ನಾವು ನಮ್ಮ ದೇಹಗಳನ್ನು ಕ್ರೀಡೆಗಳಲ್ಲಿ ಸ್ಪರ್ಧಿಸುವವರು ದಮೆಯನ್ನು ಅಭ್ಯಾಸಿಸುವಂತೆಯೇ – ಮಿತವಾಗಿಟ್ಟುಕೊಂಡಿರಬೇಕು. ನಾವು ಓಟವನ್ನು ಓಡುವದಕ್ಕೆ ಅವಶ್ಯಕವಾದ ತರಬೇತಿ ಹಾಗು ಶಿಸ್ತನ್ನು ಸ್ವೈರಿಸಿಕೊಳ್ಳುವದಾದರೆ ನಾವು ಬಿರುದನ್ನು, ಅಂದರೆ, ಜಯಮಾಲಿಕೆಯನ್ನು ಪಡೆಯುತ್ತೇವೆ. ಪೌಲನ ಕಾಲದಲ್ಲಿ ಓಟವನ್ನು ಜಯಿಸಿದವರು ಬಹುಮಾನವಾಗಿ ಲಾರೆಲ್ ಎಂಬ ಗಿಡದ ಎಲೆಗಳ ಹಾರದಿಂದ ಮಾಡಿದ ಜಯಮಾಲಿಕೆಯನ್ನು ಪಡೆಯುತ್ತಿದ್ದರು; ಅಲ್ಲದೆ ಅವರು ವೀಕ್ಷಕರಿಂದ ಸ್ತುತಿಯನ್ನೂ ಗೌರವವನ್ನೂ ಪಡೆಯುತ್ತಿದ್ದರೆಂಬದರಲ್ಲಿ ಸಂಶಯವಿಲ್ಲ. ಕ್ರೈಸ್ತರಾದ ನಾವು ದೇವರಿಗಾಗಿ ಮಾಡಿದ ಪ್ರಾಮಾಣಿಕ ಸೇವೆ ಪಡೆಯುವ "ಬಿರುದು' ಆತನ ಪ್ರಶಂಸೆಯೇ. ಎಲೆಗಳ ಜಯಮಾಲಿಕೆಯ ಹಾಗೆ ನಮ್ಮ ಬಿರುದು (ಜಯಮಾಲಿಕೆಯು) ಎಂದಿಗೂ ಬಾಡಿಹೋಗುವದಿಲ್ಲ; ಅದು ಸದಾಕಾಲ ಇರುವದು (2 ತಿಮೊಥೆ 2:4-5; 4:7-8; ಯಾಕೋಬ 1:12 ನೋಡಿರಿ).

**26** ಪೌಲನು ಓಟವನ್ನು ಗುರಿಗೊತ್ತಿಲ್ಲದವನಾಗಿ ಓಡುವದಿಲ್ಲ; ಆತನು ಗೆಲ್ಲಬೇಕೆಂಬುದಕ್ಕಾಗಿಯೇ ಓಟವನ್ನು ಓಡುವವನಾಗಿದ್ದಾನೆ. ಪೌಲನು ಇತರರಿಗಿಂತ ಹಿಂದಾಗಿ ಮುಕ್ತಾಯ ರೇಖೆಯನ್ನು ತಲುಪು ವದಕ್ಕೆ ಇಚ್ಚಿಸುವದಿಲ್ಲ. ಪೌಲನ ಕಾಲದ ವೇಳೆ ಗ್ರೀಕ್ ಪಂದ್ಯಗಳಲ್ಲಿ ಕ್ರೀಡಾಪಟುಗಳು ಸ್ಪರ್ಧಿಸುತ್ತಿದ್ದ ಕ್ರೀಡೆಗಳಲ್ಲಿ ಮುಷ್ಠಿಕಾಳಗ ಒಂದಾಗಿತ್ತು. ಪೌಲನು ಇಲ್ಲಿ ತನ್ನ ವಿರೋಧಿಯನ್ನು ಗುದ್ದದೆ ಗಾಳಿಯನ್ನು ಗುದ್ದುವಂಥ ಮುಷ್ಠಿಕಾಳಗದ ಪಟುವಿನ ದೃಷ್ಟಾಂತವನ್ನು ಉಪಯೋಗಿಸುತ್ತಾನೆ. ಮುಷ್ಠಿಕಾಳಗದ ಪಟು ಗಾಳಿಯನ್ನು ಗುದ್ದುವದು "ಗುರಿಗೊತ್ತಿಲ್ಲದ್ದಾಗಿದೆ"; ಆತನು ಆ ವಿಧದಲ್ಲಿ ತನ್ನ ವಿರೋದಿಯನ್ನು ಸೋಲಿಸಲಾಗುವದೇ ಇಲ್ಲ!

**27** ಪೌಲನು ಇಲ್ಲಿ ಹೇಳುವದೇನೆಂದರೆ: ನನ್ನ ಮೈಯನ್ನು ಜಜ್ಜಿಕೊಳ್ಳುತ್ತೇನೆ. ಅಂದರೆ, ಪೌಲನು ಓಟಕ್ಕಾಗಿ ತನ್ನನ್ನು ಪರಿಶ್ರಮದಿಂದ ತರಬೇತಿಗೊಳಿಸಿಕೊಳ್ಳುತ್ತಾನೆ. ಆತನು ವ್ಯಾಯಾಮ ಮಾಡುತ್ತಾನೆ. ಆತನು ನಿರಂತರವಾಗಿ ಕೆಲಸಮಾಡುತ್ತಾನೆ. ಆತನು ಗುಡಾರಗಳನ್ನು ಮಾಡುತ್ತಾನೆ; ಬೋಧಿಸುತ್ತಾನೆ ಹಾಗು ಉಪದೇಶಿಸುತ್ತಾನೆ; ಆತನು ಪತ್ರಿಕೆಗಳನ್ನು ಬರೆಯುತ್ತಾನೆ. ಆತನು ಯಾವಾಗಲೂ ಒಂದಿಲ್ಲಾ ಒಂದು ವಿಧದಲ್ಲಿ ದೇವರಿಗಾಗಿ ಕೆಲಸ ಮಾಡುತ್ತಿರುತ್ತಾನೆ (1 ಥೆಸಲೋನಿಕ 2:9 ನೋಡಿರಿ).

ಪೌಲನು ತನ್ನ ದೇಹವನ್ನು ತನಗೆ ಆಳನ್ನಾಗಿ ಮಾಡಿಕೊಳ್ಳುತ್ತಾನೆ; ಅಂದರೆ, ಅದನ್ನು ಸ್ವಾಧೀನಪಡಿಸಿಕೊಳ್ಳುತ್ತಾನೆ. ಆತನು ತನ್ನ ದೇಹ ಹಾಗು ಶಾರೀರಿಕ ಅಭಿಲಾಷೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳುತ್ತಾನೆ. ಪೌಲನು ಶಮೆದಮೆಯುಳ್ಳವನಾಗಿದ್ದಾನೆ (ಗಲಾತ್ಯ 5:23). ಆತನು ತನ್ನನ್ನು ನಿರಾಕರಿಸಿಕೊಳ್ಳುತ್ತಾನೆ (ಮಾರ್ಕ 8:34). ಆತನು ತನ್ನ ಬಿರುದನ್ನು – ಅಂದರೆ, ತನ್ನ ನಂಬಿಗಸ್ಥಿಕೆಯ ಹಾಗು ಒಳ್ಳೇಯ ಕೆಲಸಗಳಿಗಾಗಿ ಬಹಮಾನವನ್ನು – ಕಳೆದುಕೊಳ್ಳಲು ಇಚ್ಚಿಸುವದಿಲ್ಲ (1 ಕೊರಿಂಥ 3:13-15).

ಪೌಲನು ಬಿರುದನ್ನು ಪಡೆಯಲು ಅಯೋಗ್ಯನೆನಿಸಿಕೊಳ್ಳುವದಕ್ಕೆ ಇಚ್ಚಿಸುವದಿಲ್ಲ. ಕೆಲವು ಬೈಬಲ್ ಪಂಡಿತರ ಅಭಿಪ್ರಾಯದ ಪ್ರಕಾರವಾಗಿ ಪೌಲನು ಇಲ್ಲಿ ತಾನು ಕ್ರೈಸ್ತನ "ಓಟವನ್ನು" ಕಳೆಪೆಯಾಗಿ ಓಡುವದಾದರೆ "ಬಿರುದನ್ನು" ಪಡೆಯದಿರಬಹುದು – ಅಂದರೆ, ಆತನು ತನ್ನ ರಕ್ಷಣೆಯನ್ನು ಕಳೆದುಕೊಳ್ಳಬಹುದು – ಎಂದು ಹೇಳುತ್ತಿದ್ದಾನೆ.ಆದರೆ ಇನ್ನು ಕೆಲವು ಪಂಡಿತರು ಇಲ್ಲಿ ಪೌಲನು ಸೂಚಿಸುವ ಬಿರುದು ಆತನ ರಕ್ಷಣೆಯಲ್ಲಿ, ಆದರೆ ತನ್ನ ನಂಬಿಗಸ್ಥಿಕೆಯ ಸೇವೆಗಾಗಿ ದೇವರಿಂದ ಪಡೆಯಲು ನಿರೀಕ್ಷಿಸುವವ ವಿಶೇಷ ಪ್ರಶಂಸೆ ಹಾಗು ಗೌರವವಾಗಿದೆ ಎಂದು ಹೇಳುತ್ತಾರೆ.

ಪೌಲನಂತಹ ಶ್ರೇಷ್ಠ ಬೋಧಕ ಹಾಗು ಅಪೊಸ್ತಲನು ಹೇಗೆ ತನ್ನ ಬಿರುದನ್ನು ಕಳೆದುಕೊಳ್ಳಲು ಸಾಧ್ಯ? ಇದು ಖಂಡಿತವಾಗಿಯೂ ಸಾಧ್ಯವಿದೆ. ಒಬ್ಬನು ಎಷ್ಟೇ ದೊಡ್ಡ ಕ್ರೈಸ್ತನಾಯಕ, ಸಭಾಪಾಲಕ, ಅಥವಾ ಬೋಧಕನೇ ಆಗಿದ್ದರೂ ಅವನು ತನ್ನ ಬಿರುದನ್ನು ಕಳೆದುಕೊಳ್ಳಲು ಸಾಧ್ಯವಿರುತ್ತದೆ. ಅಲ್ಲದೆ ಇತರ ಅನೇಕರನ್ನು ಪರಲೋಕಕ್ಕೆ ನಡಿಸಿದವರು ಸಹ ಸ್ವತಃ ಮಾರ್ಗವನ್ನು ಕಳೆದುಕೊಳ್ಳಬಹುದು. ಯಾಕೆ? ಯಾಕೆಂದರೆ ಅವರು ಸಹ ಮಾನವರೇ. ಅವರು ಶೋಧನೆಯಲ್ಲಿ ಬೀಳಬಹುದು. ಅವರು ಅಲಸ್ಯಗಾರರಾಗಬಲ್ಲರು. ಅವರು ಕ್ರಿಸ್ತನಿಗೆ ಅವಿಧೇಯರಾಗಬಹುದು. ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕಾದದ್ದೇನೆಂದರೆ: ಒಂದು ವೇಳೆ ಪೌಲನಂತಹ ಶ್ರೇಷ್ಠ ಅಪೊಸ್ತಲರೇ ತಮಗೆ ಸಾಧ್ಯವಾದಷ್ಟು ಮಟ್ಟಿಗೆ ಶ್ರಮವಹಿಸಿ ಓಟವನ್ನು ಓಡುತ್ತಲಿರಬೇಕಾಗಿರುವದಾದರೆ ನಿಶ್ಚಯವಾಗಿಯೂ ಸಾಮಾನ್ಯ ಕ್ರೈಸ್ತರಾದ ನಾವು ಸಹ ಹಾಗೆ ಮಾಡತಕ್ಕದ್ದು!

---

## ಅಧ್ಯಾಯ - 10

### ಇಸ್ರಾಯೇಲರ ಚರಿತ್ರೆಯಿಂದ ಎಚ್ಚರಿಕೆಗಳು (10:1-13)

**1** ಈ ವಚನದಲ್ಲಿ ಪೌಲನಿಂದ ಪ್ರಸ್ತಾಪಿಸಲ್ಪಟ್ಟಿರುವ ಪಿತೃಗಳೆಲ್ಲರೂ ಯೆಹೂದ್ಯರ ಪೂರ್ವಜರಾಗಿದ್ದಾರೆ, ಅಂದರೆ, ಇಸ್ರಾಯೇಲ್ ಜನಾಂಗದ ಸ್ಥಾಪಕರು. ಅಬ್ರಹಾಮನು ಪ್ರಥಮ ಯೆಹೂದ್ಯನೂ ಅವರೆಲ್ಲರ ಪಿತೃವೂ ಆಗಿದ್ದನು. ಅಬ್ರಹಾಮನ

ಕಾಲದ ನಂತರ ಸುಮಾರು ಮೂನ್ನೂರು ವರ್ಷಗಳಾದ ಮೇಲೆ ಯೆಹೂದ್ಯರು ಐಗುಪ್ತ್ಯದೇಶದ ದಾಸತ್ವಕ್ಕೊಳಗಾದರು. ಈ ಪಿತೃಗಳೆಲ್ಲರೂ ಆತ್ಮೀಕ ಅರ್ಥದಲ್ಲಿ ಕೊರಿಂಥದಲ್ಲಿನ ಅನ್ಯಜನಾಂಗದ ವಿಶ್ವಾಸಿಗಳಿಗೆ ಸಹ ಮೂಲ ಪಿತೃಗಳಾಗಿದ್ದರು, ಯಾಕೆಂದರೆ ಕೊರಿಂಥದ ಕ್ರೈಸ್ತರು ನೂತನ ಆತ್ಮೀಕ ಇಸ್ರಾಯೇಲ್ "ಜನಾಂಗದ" ಪ್ರಜೆಗಳಾಗಿದ್ದರು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಅನ್ಯ ಜನರೆಲ್ಲರೂ "ಆತ್ಮೀಕ ಸಂತತಿಯವರಾಗಿದ್ದು ಅಬ್ರಹಾಮನಿಂದ ಆತ್ಮೀಕ ಸ್ವಾಸ್ತ್ಯವೊಂದನ್ನು ಪಡೆದಿರುತ್ತಾರೆ" (ರೋಮ 4:11,16; ಗಲಾತ್ಯ 3:7, 29 ಹಾಗು ವ್ಯಾಖ್ಯಾನಗಳನ್ನು ನೋಡಿರಿ). ಈ ಕಾರಣದಿಂದಲೇ ಕೊರಿಂಥದ ಕ್ರೈಸ್ತರಲ್ಲಿ ಬಹು ಮಂದಿ ಯೆಹೂದ್ಯರಾಗಿರದೇ ಅನ್ಯಜನರಾಗಿದ್ದಾಗ್ಯು ಪೌಲನು ಇಲ್ಲಿ "ನಮ್ಮಪಿತೃಗಳು" ಎಂದು ಬರೆಯುತ್ತಾನೆ.

ಮೋಶೆಯು ಯೆಹೂದ್ಯರನ್ನು ಐಗುಪ್ತ್ಯದಿಂದ ಹೊರಗೆ ನಡಿಸಿದನು. ಖಂಡಿತವಾಗಿಯೂ ಈ ಯೆಹೂದ್ಯರು ಪೌಲನ ಪೀಳಿಗೆಗೆ ಸಹ ಪಿತೃಗಳಾಗಿದ್ದರು. ಅವರು ಐಗುಪ್ತ್ಯದಿಂದ ಹೊರಗೆ ನಡಿಸಲ್ಪಡುತ್ತಾ ದೇವರ ಪ್ರಸನ್ನತೆಯ ಹಾಗು ಮಾರ್ಗದರ್ಶನದ ಮೇಘದನೆರಳಿನಲ್ಲಿ ಪ್ರಯಾಣಿಸಿದರು (ವಿಮೋಚನ ಕಾಂಡ 13;21; ಕೀರ್ತನೆಗಳು 105:39).

ಯೆಹೂದ್ಯರು ಐಗುಪ್ತ್ಯದಿಂದ ಪಾರಾಗುತ್ತಿದ್ದಂತೆಯೇ ಅವರು ಸಮುದ್ರವನ್ನು ದಾಟಿಹೋದರು. ಇದು ಐಗುಪ್ತ್ಯದ ಪೂರ್ವಗಡಿರೇಖೆಯಂತಿದ್ದ ಕೆಂಪು ಸಮುದ್ರವಾಗಿತ್ತು. ದೇವರು ಸಮುದ್ರದ ನೀರನ್ನು ಇಬ್ಭಾಗಿಸಿದನು ಮತ್ತು ಯೆಹೂದ್ಯರು ಓಣನೆಲದಲ್ಲಿ ನಡೆದು ಅದನ್ನು ದಾಟಿ ಹೋಗಿ ಹಿಂದಟ್ಟಿದ್ದ ಐಗುಪ್ತ್ಯದಿಂದ ತಪ್ಪಿಸಿಕೊಂಡರು (ವಿಮೋಚನಕಾಂಡ 14:21-31).

2 ಮೋಶೆಯು ಯೆಹೂದ್ಯರ ಶ್ರೇಷ್ಠನಾಯಕನಾಗಿದ್ದನು. ಆತನು ಯೆಹೂದ್ಯರನ್ನು ಐಗುಪ್ತ್ಯದಿಂದ ಹೊರಗೆ ಕರತಂದ ಬಳಿಕ ನಾಲ್ವತ್ತು ವರ್ಷಗಳ ವರೆಗೆ ಆತನು ಅವರ ನಾಯಕನಾಗಿ ಮುಂದುವರೆದನು, ಆ ವೇಳೆಯಲ್ಲಿ ಅವರು ಐಗುಪ್ತ್ಯ ಹಾಗು ಇಸ್ರಾಯೇಲಿನ ಮಧ್ಯದಲ್ಲಿದ್ದ ಸಿನಾಯ್ ಅರಣ್ಯದಲ್ಲಿ ಉಳಿದರು. ಯೆಹೂದ್ಯರೆಲ್ಲರೂ ಮೋಶೆಯ ಶಿಷ್ಯರಾಗುವದಕ್ಕಾಗಿ ದೀಕ್ಷಾಸ್ನಾನವನ್ನು ಹೊಂದಿದರು ಎಂದು ಪೌಲನು ಹೇಳುತ್ತಾನೆ. ಪೌಲನು ಇಲ್ಲಿ ನಿಜವಾದ ದೀಕ್ಷಾಸ್ನಾನದ ಬಗ್ಗೆ ಮಾತಾಡುತ್ತಿಲ್ಲ. ಬದಲಾಗಿ, ಆತನು ಕ್ರೈಸ್ತೀಯ ದೀಕ್ಷಾಸ್ನಾನದ ಅರ್ಥವನ್ನು ದೃಷ್ಟಾಂತಪಡಿಸಲು ಯೆಹೂದ್ಯರ ಅನುಭವವನ್ನು ಉಪಯೋಗಿಸುತ್ತಿದ್ದಾನೆ. ಮೇಘ ಹಾಗು ಸಮುದ್ರಗಳು (ವಚನ 1) ದೇವರ ಪ್ರಸನ್ನತೆ ಮತ್ತು ಸಂರಕ್ಷಣೆ, ಆಶಿರ್ವಾದಗಳಿಗೆ ಗುರುತುಗಳಾಗಿದ್ದು ಅವುಗಳನ್ನು ಕ್ರೈಸ್ತದೀಕ್ಷಾಸ್ನಾನದ ಮುಖಾಂತರ ವಿಶ್ವಾಸಿಗಳು ಸಹ ಪಡೆದುಕೊಳ್ಳುವವರಾಗಿದ್ದಾರೆ. ಯೆಹೂದ್ಯರು ಮೋಶೆಯ ನಾಯಕತ್ವ ಹಾಗು ಅಧಿಕಾರದಡಿಯಲ್ಲಿ ತರಲ್ಪಟ್ಟ ಹಾಗೆಯೇ ಕ್ರೈಸ್ತರು ಕ್ರಿಸ್ತನ ನಾಯಕತ್ವ ಹಾಗು ಅಧಿಕಾರದಡಿಯಲ್ಲಿ ತರಲ್ಪಟ್ಟಿರುತ್ತಾರೆ. ಈ ಕಾರಣಕ್ಕಾಗಿಯೇ ಪೌಲನು ಇಲ್ಲಿ ಯೆಹೂದ್ಯರು ಮೋಶೆಯ ಶಿಷ್ಯರಾಗುವದಕ್ಕಾಗಿ ದೀಕ್ಷಾಸ್ನಾನವನ್ನು ಹೊಂದಿದರು ಎಂದು ಹೇಳುತ್ತಾನೆ.

3 ಯೆಹೂದ್ಯರು ಸಿನಾಯ್ ಅರಣ್ಯದಲ್ಲಿರುವ ವೇಳೆ ದೇವರು ಅವರಿಗೆ "ಪರಲೋಕದ ರೊಟ್ಟಿ' ಅಥವಾ ಮನ್ನಾ ಕೊಟ್ಟನು, ಇಲ್ಲಿ ಪೌಲನು ಅದನ್ನು ದೈವೀಕವಾದ ಆಹಾರ[28] ಎಂದು ಕರೆಯುತ್ತಾನೆ (ವಿಮೋಚನಕಾಂಡ 16:4, 14:15, 31, 35; ಯೋಹಾನ 6;31).

4 ಅಲ್ಲದೆ ದೇವರು ಯೆಹೂದ್ಯರಿಗೆ ಅವರು ಅರಣ್ಯದಲ್ಲಿರುವಾಗ ನೀರನ್ನು ಅಥವಾ ದೈವೀಕವಾದ ನೀರನ್ನು ಕೊಟ್ಟನು. ಆನೀರು ಅದ್ಭುತವಾದ ರೀತಿಯಲ್ಲಿ ಬಂಡೆಯೊಂದರಿಂದ ಹೊರಟು ಬಂದಿತು (ವಿಮೋಚನಕಾಂಡ 17:6). ಈ ಬಂಡೆಯು "ದೈವೀಕ ಬಂಡೆ" ಒಂದರ ಸದೃಶ್ಯ ಚಿನ್ಹೆಯಾಗಿತ್ತು, ಅದು ಯೆಹೂದ್ಯರು ಹೋದಲೆಲ್ಲಾ ಅವರೊಂದಿಗೆ ಯಾವಾಗಲೂ ಇರುತ್ತಿತ್ತು. ಆ (ದೈವೀಕ) ಬಂಡೆ ಕ್ರಿಸ್ತನೇ ಎಂದು ಪೌಲನು ಹೇಳುತ್ತಾನೆ. ಈ ಎಲ್ಲಾ ಆಶಿರ್ವಾದಗಳು – ಮೇಘ, ಸಮುದ್ರ, ದೈವೀಕ ಆಹಾರ ಹಾಗು ನೀರು – ವಾಸ್ತವದಲ್ಲಿ ಕ್ರಿಸ್ತನಿಂದಲೇ ಬಂದವು . ಕ್ರಿಸ್ತನು ಪರಲೋಕದಿಂದ ಇಳಿದು ಬಂದ ನಿಜವಾದ ರೊಟ್ಟಿಯಾಗಿದ್ದಾನೆ (ಯೋಹಾನ 6;30-35). ಕ್ರಿಸ್ತನಿಂದಲೇ ದೈವೀಕ ನೀರು ಬರುತ್ತದೆ, ಆ ನೀರು ಪವಿತ್ರಾತ್ಮನೇ (ಯೋಹಾನ 7:37-39). ಅಲ್ಲದೆ ಸಿನಾಯ್ ಅರಣ್ಯದಲ್ಲಿಯೂ ದೇವರ ನಿತ್ಯಮಗನಾದ ಕ್ರಿಸ್ತನು ಯೆಹೂದ್ಯರ ಜೊತೆಯಲ್ಲಿದ್ದನು. ಕ್ರಿಸ್ತನು ಜಗತ್ತು ಪ್ರಾರಂಭಗೊಳ್ಳುವ ಮುನ್ನವೇ ಅಸ್ತಿತ್ವದಲ್ಲಿದ್ದನು; ಆತನು ಯಾವಾಗಲೂ ಇದ್ದಾನೆ. ಎಲ್ಲಾ ಆತ್ಮೀಕ ಆಶಿರ್ವಾದಗಳು ಕ್ರಿಸ್ತನಲ್ಲಿ ದೊರೆಯುವವುಗಳಾಗಿವೆ (ಎಫೆಸ 1:3). ಕ್ರಿಸ್ತನನ್ನು ಹೊಂದಿರುವ ವ್ಯಕ್ತಿಯು ದೇವರ ಎಲ್ಲಾ ಆಶಿರ್ವಾದಗಳನ್ನೂ ಹೊಂದಿದವನಾಗಿದ್ದಾನೆ (ರೋಮ 8:32 ನೋಡಿರಿ).

5 ಆದರೆ ಯೆಹೂದ್ಯರಿಗೆ ಸಂಭವಿಸಿದ್ದೇನು? ದೇವರು ಅವರಿಗೆ ಎಷ್ಟೊಂದು ಮಾಡಿದ್ದನು. ಆತನು ಮೋಶೆಯನ್ನು ಅವರಿಗೆ ನಾಯಕನಾಗಿರಲು ಕಳುಹಿಸಿದ್ದನು. ಆತನು ಅವರನ್ನು ಐಗುಪ್ತ್ಯದ ದಾಸತ್ವದೊಳಗಿಂದ ವಿಮೋಚಿಸಿದ್ದನು. ಆತನು ಕ್ರಿಸ್ತನ ಮೂಲಕ ಅವರಿಗೆ ಈ ಎಲ್ಲಾ ಈತ್ಮೀಕ ಆಶಿರ್ವಾದಗಳನ್ನು ಅನುಗ್ರಹಿಸಿದ್ದನು. ಆದರೆ ಕೃತಜ್ಞತೆಯುಳ್ಳವರಾಗಿರುವದಕ್ಕೆ ಬದಲಾಗಿ ಅವರು ದೇವರ ವಿರುದ್ಧ ಗುಣಗುಟ್ಟಿದರು (ಅರಣ್ಯಕಾಂಡ 11:1). ಆದುದರಿಂದ, ದೇವರು ಅವರಲ್ಲಿ ಬಹು ಮಂದಿಯನ್ನು ದಂಡಿಸಿ ಅರಣ್ಯದಲ್ಲಿ ಸಾಯುವಂತೆ ಮಾಡಿದನು.

6 ನಾವು ದೇವರ ವಿರುದ್ಧವಾಗಿ ಗುಣಗುಟ್ಟದಂತೆ ಎಚ್ಚರಿಕೆಯಾಗಿರೋಣ. ಕ್ರಿಸ್ತನನ್ನು ನಂಬುವವರಾದ ನಾವು ಆ ಯೆಹೂದ್ಯರಿಗಿಂತಲೂ ಎಷ್ಟೋ ಶ್ರೇಷ್ಟವಾದ ಆಶಿರ್ವಾದಗಳನ್ನು ಪಡೆದಿದ್ದೇವೆ, ಆದಾಗ್ಯು ಎಷ್ಟೋ ವೇಳೆಗಳಲ್ಲಿ ನಾವು ದೇವರ ವಿರುದ್ಧವಾಗಿ ಗುಣಗುಟ್ಟುತ್ತಾ ದೂರು ಹೇಳುತ್ತೇವಲ್ಲವೆ! ದೇವರಿಗೆ ಇದು ಮೆಚ್ಚಿಕೆಯಾಗಿರುವದಿಲ್ಲ.ಯೆಹೂದ್ಯರು ತಮ್ಮ ಗುಣಗುಟ್ಟುವಿಕೆಯ ಕಾರಣದಿಂದ ಎಷ್ಟು ಕಠಿಣವಾಗಿ ದಂಡಿಸಲ್ಪಟ್ಟರೆಂಬದನ್ನು ನಾವು ಮರೆಯಜದಿರೋಣ!

ಯೆಹೂದ್ಯರು ಕೆಟ್ಟ ವಿಷಯಗಳನ್ನು ಆಶಿಸಿದಂತೆ ನಾವು ಆಶಿಸುವವ ರಾಗಬಾರದೆಂದು ಪೌಲನು ನಮ್ಮನ್ನು ಪ್ರಬೋಧಿಸುತ್ತಾನೆ. ಯೆಹೂದ್ಯರು ಯಾವ ಕೆಟ್ಟ ವಿಷಯಗಳನ್ನು ಮಾಡಿದರು? ಪೌಲನು ಉತ್ತರವನ್ನು 7-10 ವಚನಗಳಲ್ಲಿ ನೀಡುತ್ತಾನೆ.

7 ಯೆಹೂದ್ಯರಲ್ಲಿ ಕೆಲವರು ವಿಗ್ರಹಾರಕರಾಗಿದ್ದರು (ವಿಮೋಚನಕಾಂಡ 32:1-6). ಪೌಲನು ಇಲ್ಲಿ ವಿಮೋಚನಕಾಂಡ 32:6 ರಿಂದ ಉಲ್ಲೇಖಿಸುತ್ತಾನೆ.

8 ಕೆಲವು ಮಂದಿ ಯೆಹೂದ್ಯರು ಜಾರತ್ವಮಾಡಿದ್ದರು, ಮತ್ತು ದೇವರು ಅವರ ಮೇಲೆ ಒಂದು ವ್ಯಾಧಿಯನ್ನು ಕಳುಹಿಸಿ ಅವರನ್ನು ದಂಡಿಸಿದರು (ಅರಣ್ಯಕಾಂಡ 25:1-9). ಅರಣ್ಯಕಾಂಡ 25:9ರ ಪ್ರಕಾರವಾಗಿ ಇಪ್ಪತ್ತೈದು ಸಾವಿರಮಂದಿ ಸತ್ತರು. ಇಲ್ಲಿ ಪೌಲನು ಒಂದೇ ದಿನದಲ್ಲಿ ಇಪ್ಪತ್ತು ಮೂರು ಸಾವಿರ ಮಂದಿ ಸತ್ತರು ಎಂದು ಬರೆಯುತ್ತಾನೆ. ಉಳಿದ ಒಂದು ಸಾವಿರ ಮಂದಿ ಮರುದಿನ ಸತ್ತರು.

9 ನಾವು ... ಕರ್ತನನ್ನು ಪರೀಕ್ಷಿಸದೆ ಇರೋಣ. "ಕರ್ತನನ್ನು ಪರೀಕ್ಷಿಸುವದು" ಎಂದರೆ ದೇವರ ವಿರೋಧದಲ್ಲಿ ನಡೆಯುವದು ಅಥವಾ ಮಾತಾಡುವದಾಗಿದೆ. ಈ ರೀತಿಯಾಗಿ ದೇವರನ್ನು ಪರೀಕ್ಷಿಸುವದರ ಉದಾಹರಣೆಯು ಅರಣ್ಯಕಾಂಡ 21:4-5ರಲ್ಲಿ ಸಿಕ್ಕುತ್ತದೆ. ಅಂತಹ ಪರೀಕ್ಷಿಸುವಿಕೆಯ ಫಲಿತವು ಅರಣ್ಯಕಾಂಡ 21;6ರಲ್ಲಿ ಬಣ್ಣಿಸಲ್ಪಟ್ಟಿದೆ.

10 ದೇವರು ಯೆಹೂದ್ಯರನ್ನು ಐಗುಪ್ತ್ಯದಿಂದ ಸಿನಾಯ್ ಅರಣ್ಯದ ಮುಖಾಂತರವಾಗಿ ಹಾಯ್ದು ಕಾನಾನ್ (ಇಂದಿನ ಇಸ್ರಾಯೇಲಿನ ಗಡಿಭಾಗದ ತನಕವೂ ನಡಿಸಿದನು, ಅದು ಅಬ್ರಹಾಮನ ಸಂತತಿಗೆ ಸ್ವಾಸ್ತ್ಯವಾಗಿ ಕೊಡುತ್ತೇನೆಂದು ದೇವರು ವಾಗ್ದಾನಮಾಡಿದ ಸ್ಥಳವಾಗಿತ್ತು. ಯೆಹೂದ್ಯರು ಅರಣ್ಯದಲ್ಲಿರುವಾಗ ದೇವರು ಅವರಿಗೆ ಬಹಳ ಪ್ರೀತಿ ಹಾಗು ಕರುಣೆಯನ್ನು ತೋರಿಸಿದನು ಮತ್ತು ಅವರನ್ನು ಪೋಷಿಸಿ ಸಂರಕ್ಷಿಸಿದನು. ಅದು ಮಾತ್ರವಲ್ಲದೆ, ದೇವರು ಅನೇಕ ಆಶ್ಚರ್ಯಕರವಾದ ಸೂಚಕಕಾರ್ಯಗಳನ್ನೂ ಮಹತ್ಕಾರ್ಯಗಳನ್ನೂ ನಡಿಸಿದನು. ಹಾಗಿದ್ದರೂ, ಯೆಹೂದ್ಯರು ದೇವರಲ್ಲಿ ನಂಬಿಕೆಯಿಡಲಿಲ್ಲ. ಬದಲಾಗಿ ಅವರು ಆತನ ವಿರುದ್ಧವಾಗಿ ಯಾವಾಗಲೂ ದೂರುವವರೂ ಗುಣಗುಟ್ಟುವವರೂ ಆಗಿದ್ದರು. ಆದುದರಿಂದ ಅವರಲ್ಲಿ ಬಹುಮಂದಿ ವಾಗ್ದಾನ ದೇಶವನ್ನು ಪ್ರವೇಶಿಸದಂತೆ ತಡೆದನು ಮತ್ತು ಅವರು ಅರಣ್ಯದಲ್ಲಿಯೇ ನಾಶವಾದರು (ಅರಣ್ಯಕಾಂಡ 14:1-33; 16:41,49). ಯೆಹೂದ್ಯರು ಸಂಹಾರಕನ ಕೈಯಿಂದ ನಾಶವಾದರು, ಆತನು ಯೆಹೂದ್ಯರ ಗುಣಗುಟ್ಟುವಿಕೆಗಾಗಿ ಅವರನ್ನು ದಂಡಿಸುವದಕ್ಕೆ ದೇವರು ಕಳುಹಿಸಿದ ದೂತನಾಗಿದ್ದನು (ವಿಮೋಚನಕಾಂಡ 12:23).

11 ಯೆಹೂದ್ಯರ ಪಾಪಗಳು ಹಾಗು ಅವರು ಹೊಂದಿದ ದಂಡನೆಯು ನಮಗೊಂದು ಉದಾಹರಣೆ ಹಾಗು ಎಚ್ಚರಿಕೆಯಂತಿರುತ್ತವೆ ಎಂದು ಪೌಲನು ಬಣ್ಣಿಸುತ್ತಾನೆ. ಆದುದರಿಂದ, ಕೊರಿಂಥದ ಕ್ರೈಸ್ತರು ಯೆಹೂದ್ಯರಂತೆ ಮಾಡದಿರಲಿ; ಅದು ಪೌಲನ ಎಚ್ಚರಿಕೆಯಾಗಿದೆ. ಯೆಹೂದ್ಯರಲ್ಲಿ ಎಲ್ಲಾ ಪಾಪಗಳೂ ಕೊರಿಂಥದ ಸಭೆಯಲ್ಲಿ ಕಂಡುಬಂದಿದ್ದವು: ವಿಗ್ರಹಾರಾಧನೆ, ಜಾರತ್ವ, ದೇವರನ್ನು ಪರೀಕ್ಷಿಸುವದು, ಪೌಲನ ವಿರುದ್ಧವಾಗಿ ಗುಣಗುಟ್ಟುವದು (ಯೆಹೂದ್ಯರು ಮೋಶೆಯ ವಿರುದ್ಧವಾಗಿ ಗುಣಗುಟ್ಟಿದಂತೆಯೇ). "ಎಚ್ಚರಿಕೆಯಾಗಿರಿ, ಇಲ್ಲವಾದರೆ ಪು ರಾತನ ಯೆಹೂದ್ಯರ ಮೇಲೆ ಬಂದ ದಂಡನೆಯು ನಿಮ್ಮ ಮೇಲೆಯೂ ಬರುವದು!" ಎಂದು ಪೌಲನು ಕೊರಿಂಥದವರಿಗೆ (ಮತ್ತು ಇತರ ಎಲ್ಲಾ ಕ್ರೈಸ್ತರಿಗೆ) ಹೇಳುತ್ತಾನೆ. ಯೆಹೂದ್ಯರಿಗೆ ಸಂಭವಿಸಿದ ಈ ಸಂಗತಿಗಳು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿವೆ. ಯುಗಾಂತ್ಯ ಏನಾಗಿದೆ? ಇದು ಭೂಲೋಕಕ್ಕೆ ಬಂದ ಕ್ರಿಸ್ತನ ಮೊದಲನೆಯ ಬರೋಣವಾಗಿದೆ. ಕ್ರಿಸ್ತನು ತಾನೇ ಯುಗದ ನೆರವೇರಿಕೆಯಾಗಿದ್ದಾನೆ (ಗಲಾತ್ಯ 4:4; ಇಬ್ರಿಯ 1:1-2).

12 ಯೆಹೂದ್ಯರು ತಾವು ಅಬ್ರಹಾಮನ ಸಂತತಿಯರೂ ದೇವರಾದುಕೊಂಡ ಜನಾಂಗವೂ ಆಗಿದ್ದಾರೆಂದು ಉಬ್ಬಿಕೊಂಡಿದ್ದರು. ದೇವರು ಯಾವಾಗಲೂ ಅವರನ್ನೂ ಆಶೀರ್ವದಿಸುವನೆಂಬ ದೃಢನಿಶ್ಚಯವನ್ನು ಹೊಂದಿದ್ದರು. ಅವರು ತಾವು ನಿಂತಿದ್ದೇವೆಂದು ನೆನಸಿದರು. ಅವರು ತಾವು ಎಂದಿಗೂ ದೇವರ ದಯಯೊಳಗಿಂದ ಹೊರ ಬೀಳುವದಿಲ್ಲವೆಂದು ಭಾವಿಸಿದ್ದರು. ಅವರು ಗರ್ವಿಷ್ಠರಾಗಿದ್ದರು. ಆದರೆ ಕೊನೆಯಲ್ಲಿ ಅವರು ಹೆಚ್ಚು ಹೆಚ್ಚಾಗಿ ಪಾಪದಲ್ಲಿ ಬಿದ್ದರು ಮತ್ತು ಅವರಲ್ಲಿ ಬಹುಮಂದಿಯನ್ನು ದೇವರು ಅರಣ್ಯದಲ್ಲಿ ಸಂಹರಿಸಿದನು.

ಕೊರಿಂಥದ ಕ್ರೈಸ್ತರು ಸಹ ಗರ್ವದಿಂದಿದ್ದರು; ಅವರು ಸಹ ತಾವು ನಿಂತಿದ್ದೇವೆಂದು ಹಾಗು ಎಂದಿಗೂ ಬೀಳುವದಿಲ್ಲ ವೆಂದೂ ಊಹಿಸಿಕೊಂಡಿದ್ದರು. 'ನಾವು ಸ್ವತಂತ್ರರು; ನಾವು ಇಷ್ಟಪಟ್ಟದ್ದನ್ನೆಲ್ಲಾ ಮಾಡಬಹುದು' ಎಂದು ಅವರು ನೆನಸಿದರು. 'ಪಾಪವು ನಮಗೆ ಸಮಸ್ಯೆಯೇನಲ್ಲ' ಎಂದು ಅವರು ಹೆಚ್ಚಳಪಟ್ಟುಕೊಂಡರು.

ನಾವು ಅಂತಹ ಸಂಗತಿಗಳನ್ನು ಯೋಚಿಸದಿರೋಣ. ನಾವು ನಮ್ಮೊಳಗೆ "ನಾವು ಸ್ಥಿರವಾಗಿ ನಿಂತಿದ್ದೇವೆ" ಎಂದು ಯೋಚಿಸುವ ಕ್ಷಣದಲ್ಲಿಯೇ ನಾವು ನಿಶ್ಚಯವಾಗಿಯೂ ಬೀಳುವೆವು . ದೇವರು ನಮಗೆ ಅನುದಿನವೂ ನೀಡುವ ಕೃಪೆಯಿಂದ ಮಾತ್ರವೇ ನಾವು ಸ್ಥಿರವಾಗಿ ನಿಲ್ಲಬಲ್ಲೆವು . ಅಲ್ಲದೆ ಪರಿಪಕ್ವವಾದ ಹಾಗು ಆತ್ಮೀಕರಾದ ಕ್ರೈಸ್ತರು ಸಹ ಶೋಧನೆಯಲ್ಲಿ ಬೀಳಬಹುದು (ಗಲಾತ್ಯ 6:1).

....ಬೀಳದಂತೆ ಎಚ್ಚರಿಕೆಯಾಗಿರಿ. ಪೌಲನು ಇಲ್ಲಿ ಒಬ್ಬನು ಶಾಶ್ವತವಾಗಿ ಕ್ರಿಸ್ತನಿಂದ ಬೀಳುವವನಾಗಿ ತನ್ನ ರಕ್ಷಣೆಯನ್ನು ಕಳೆದುಕೊಳ್ಳುವದರ ಕುರಿತು ಮಾತಾಡುತ್ತಿದ್ದಾನೆಂದು ಕೆಲವರು ನಂಬುತ್ತಾರೆ. ಇನ್ನು ಕೆಲವರು ಇಲ್ಲಿ ಪೌಲನು ಪಾಪದೊಳಗೆ ಬೀಳುವದರ ವಿಷಯದಲ್ಲಿ ಮಾತ್ರವೇ ಮಾತಾಡುತ್ತಿದ್ದಾನೆಂದು ಹೇಳುತ್ತಾರೆ.

ನಾವು ಕ್ರಿಸ್ತನನ್ನು ಹಿಂಬಾಲಿಸಿ ಆತನ ಆಜ್ಞೆಗಳನ್ನು ಪಾಲಿಸುವದಾದರೆ ಆತನು ನಮ್ಮನ್ನು ಬೀಳದಂತೆ ಕಾಪಾಡುತ್ತಾನೆ. ಆದರೆ ನಾವು ಕ್ರಿಸ್ತನನ್ನು ಹಿಂಬಾಲಿಸುವದನ್ನು ನಿಲ್ಲಿಸುವದಾದರೆ ನಾವು ಖಂಡಿತವಾಗಿಯೂ ಬೀಳುವೆವು. ಕ್ರಿಸ್ತನು ತನ್ನನ್ನು ಹಿಂಬಾಲಿಸದವರನ್ನು ಕಾಪಾಡಲಾಗುವದಿಲ್ಲ (ಯೋಹಾನ 10:27-28 ಮತ್ತು ವ್ಯಾಖ್ಯಾನ ನೋಡಿರಿ).

**13** ಎಲ್ಲಾ ಜನರು ಶೋಧನೆಯನ್ನು ಅನುಭವಿಸುವರು. ಒಂದು ವೇಳೆ ನಾವು ಯಾವುದಾದರೂ ಶೋಧನೆಯಿಂದ ತೊಂದರೆಗೊಳಗಾಗುವದಾದರೆ ನಾವು ಮಾತ್ರವೇ ಆ ಶೋಧನೆಯನ್ನು ಅನುಭವಿಸಿದವರೆಂದು ಊಹಿಸಿದಿರೋಣ. ಇನ್ನು ಅನೇಕರು ಅದೇ ರೀತಿಯ ಶೋಧನೆಯನ್ನು ಅನುಭವಿಸಿದ್ದಾರೆಂಬದು ನಿಶ್ಚಯವಾಗಿ ತಿಳಿಯಬಹುದು.

ಶೋಧನೆಗಳು ಎರಡು ವಿಧಗಳಲ್ಲಿರುತ್ತವೆ. ಮೊದಲನೆಯದಾಗಿ, ನಮಗೆ ಹೊರಗಿನಿಂದ ಬರುವ ಹಿಂಸೆ, ನಿಂದನೆ, ಕಷ್ಟ, ರೋಗಗಳಂತಹ[29] ಒಂದು ವಿಧವಾದ ಶೋಧನೆ ಆಗಿದೆ. ಎರಡನೆಯ ವಿಧದ ಶೋಧನೆಯು ನಮ್ಮೊಳಗಿಂದ ಉದ್ಭವಿಸುತ್ತದೆ – ಏನೆಂದರೆ, ಕೆಟ್ಟ ವಿಚಾರಗಳು ಹಾಗು ಅಭಿಲಾಷೆಗಳು, ಮತ್ತು ಅಲ್ಪ ನಂಬಿಕೆ. ಈ ವಚನದಲ್ಲಿ ಪೌಲನು ಎರಡೂ ರೀತಿಯ ಶೋಧನೆಗಳನ್ನು ಮನಸ್ಸಿನಲ್ಲಿಟ್ಟು ಕೊಂಡು ಮಾತಾಡುತ್ತಾನೆ.

ನಮ್ಮ ಶಕ್ತಿಯನ್ನು ಮೀರುವ ಶೋಧನೆಗೊಳಗಾಗುವಂತೆ ದೇವರು ನಮ್ಮನ್ನು ಬಿಡುವದಿಲ್ಲ. ಇದು ಒಂದು ಅತ್ಯಂತ ಪ್ರಾಮುಖ್ಯವಾದ ವಾಗ್ದಾನವಾಗಿದೆ. ನಾವು ನಿರ್ದಿಷ್ಟವಾದ ಶೋಧನೆಯನ್ನು ಇನ್ನು ಎದುರಿಸಲು ಸಾಧ್ಯವೇ. ಇಲ್ಲ – ನಾವು ಸ್ಥಿರವಾಗಿ ನಿಲ್ಲಲಾರೆವು – ಎಂದು ಎಂದಿಗೂ ಹೇಳಲಾಗದು. ಒಂದು ವೇಳೆ ಹೀಗೆ ಹೇಳುವದಾದರೆ ನಾವು ದೇವರನ್ನು ಸುಳ್ಳುಗಾರ ಎಂದು ಕರೆಯುವವರಾಗಿದ್ದೇವೆ. ಯಾಕೆಂದರೆ, ನಾವು ನಿಂತುಕೊಳ್ಳುವದಕ್ಕೂ, ಯಾವದೇ ಶೋಧನೆಯನ್ನು ಎದುರಿಸುವದಕ್ಕೂ ದೇವರು ನಮಗೆ ಬಲವನ್ನು ಕೊಡುವನೆಂದು ವಾಗ್ದಾನ ಮಾಡಿರುತ್ತಾನೆ. ನಮಗೆ ಎದುರಿಸುವದಕ್ಕೆ ಮನಸ್ಸಿರುವದಾದರೆ ನಾವು ಹಾಗೆ ಮಾಡಲು ಶಕ್ತರಾಗುವೆವು.[30] ಶೋಧನೆಯನ್ನು ಎದುರಿಸುವದಕ್ಕೆ ದೇವರು ನಮಗೆ ಬಲವನ್ನಾದರೂ ಕೊಡುವನು ಇಲ್ಲವೆ ಆತನು ತಪ್ಪಿಸಿಕೊಳ್ಳುವ ಮಾರ್ಗವನ್ನು ಸಿದ್ಧಮಾಡುವನು – ಅಂದರೆ, ಆತನು ಶೋಧನೆಯನ್ನು ತೆಗೆದುಹಾಕುವನು ಅಥವಾ ಕಡಿತಗೊಳಿಸುವನು. ನಮಗೆ ಎದುರಾಗುವ ಪ್ರತಿಯೊಂದು ಶೋಧನೆಯನ್ನು ಜಯಿಸುವಂತೆ ಶಕ್ತರನ್ನಾಗಿಸುವದಕ್ಕೆ ದೇವರ ಕೃಪೆಯು ಸಾಕಾಗಿರುತ್ತದೆ.

ನಮಗೆ ಶೋಧನೆ ಬರುವಂತೆ ದೇವರು ಏಕೆ ಅನುಮತಿಸುತ್ತಾನೆ? ಉತ್ತರವು ಹೀಗಿದೆ: ನಮ್ಮ ನಂಬಿಕೆಯು ಪರಿಶೋಧನೆಗೊಳಗಾಗಿ ನಾವು ಶಿಕ್ಷಿತರೂ, ಏನೂ ಕಡಿಮೆಯಿಲ್ಲದವರೂ (ಪರಿಪೂರ್ಣರೂ) ಆಗಬೇಕೆಂಬುದಕ್ಕಾಗಿ ನಾವು ಶೋಧನೆಗೊಳಗಾಗುವಂತೆ ದೇವರು ಅನುಮತಿಸುತ್ತಾನೆ (ಯಾಕೋಬ 1;2-4, 12-15; 1 ಪೇತ್ರ, 1:6-7 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

## ವಿಗ್ರಹಕ್ಕೆ ಅರ್ಪಿತವಾದ ಔತಣ ಹಾಗು ಕರ್ತನ ಭೋಜನ (10:14-22)

**14-15** ನಾವು ದೇವರ ದಶಾಜ್ಞೆಗಳಲ್ಲಿನ ಮೊದಲನೆಯ ಆಜ್ಞೆಯನ್ನು ನೆನಪಿಸಿಕೊಳ್ಳೋಣಃ ನಿಮಗೆ ನಾನಲ್ಲದೆ ಬೇರೆ ದೇವರುಗಳಿರಬಾರದು (ವಿಮೋಚನಕಾಂಡ 20:3-5; 1 ಯೋಹಾನ 5:21. ಅಲ್ಲದೆ ವಿಗ್ರ ಹಾರಾಧನೆಯಲ್ಲಿ ಕೇವಲ ಕಟ್ಟಿಗೆ, ಕಲ್ಲು ಅಥವಾ ಲೋಹದ ಸಾಮಾನ್ಯ ವಿಗ್ರಹಗಳನ್ನು ಆರಾಧಿಸುವದಕ್ಕಿಂತಲೂ ಹೆಚ್ಚಿನದು ಅಡಕವಾಗಿರುತ್ತದೆ. ಯಾವ ಸಂಗತಿಯನ್ನಾಗಲಿ ದೇವರ ಸ್ಥಾನದಲ್ಲಿಡುವದು ವಿಗ್ರಹಾರಾಧನೆಯಾಗಿರುತ್ತದೆ. ದೇವರನ್ನು ಹೊರತು ಪಡಿಸಿ ಬೇರೆ ಇನ್ನಾವುದಕ್ಕಾಗಲಿ ಪ್ರಥಮ ಸ್ಥಾನ ಕೊಡುವದೇ ವಿಗ್ರಹರಾಧನೆಯ

ಅರ್ಥವಾಗಿದೆ. ವಿಗ್ರಹಾರಾಧನೆಯ ಅರ್ಥವು ದೇವರಿಗಿಂತಲೂ ಹೆಚ್ಚಾಗಿ ಬೇರೆ ಇನ್ನಾವುದನ್ನಾಗಲಿ – ಉದಾಹರಣೆಗೆ, ಹಣ ಅಥವಾ ಸ್ವತ್ತುಗಳು, ನಮ್ಮ ಕುಟುಂಬ, ನಮ್ಮ ಕೆಲಸ, ನಮ್ಮ ಘನತೆ, ಮುಂತಾದವುಗಳನ್ನು– ಪ್ರೀತಿಸುವದೆಂಬದೇ. ಒಂದು ವೇಳೆ ನಾವು ಬೇರೆ ಯಾವದನ್ನೇ ಆಗಲಿ ದೇವರಿಗಿಂತ ಹೆಚ್ಚಾಗಿ ಪ್ರೀತಿಸುವದಾದರೆ ಆ ಸಂಗತಿಯು ನಮಗೊಂದು ವಿಗ್ರಹವಾಗುತ್ತದೆ.

**16** ಸ್ತೋತ್ರದ ಪಾತ್ರೆಯು ಯೆಹೂದ್ಯರ ಪಸ್ಕಹಬ್ಬದ ವೇಳೆಯಲ್ಲಿ ಸಾಂಪ್ರದಾಯಿಕವಾಗಿ ಕುಡಿಯಲ್ಪಡುತ್ತಿದ್ದ ನಾಲ್ಕು ಪಾತ್ರೆಗಳಲ್ಲಿ ಮೂರನೆಯದ್ದಾಗಿರುತ್ತದೆ. ಯೇಸುವಿನ ಕಡೇ ರಾತ್ರಿಬೋಜನದಲ್ಲಿ ಆತನು ಮೇಲೆತ್ತಿ ತನ್ನ ಶಿಷ್ಯರಿಗೆ "ಇದು ನನ್ನ ರಕ್ತ" ಎಂದು ಹೇಳಿದ ಪಾತ್ರೆಯು ಈ ಮೂರನೆಯ ಪಾತ್ರೆಯೇ ಆಗಿತ್ತೆಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ (ಮಾರ್ಕ 14:23-24).

ಪಾತ್ರೆಯಲ್ಲಿಪಾನಮಾಡಿ ರೊಟ್ಟಿಯನ್ನು ತಿನ್ನುವದು ಕ್ರಿಸ್ತನ ರಕ್ತ ಹಾಗು ದೇಹದಲ್ಲಿ ಪಾಲು ಗಾರರಾಗುವದಾಗಿದೆ ಎಂದು ಇಲ್ಲಿ ಪೌಲನು ಹೇಳುತ್ತಾನೆ. ಪೌಲನು ಇಲ್ಲಿ ಕರ್ತನ ಬೋಜನದ ವಿಷಯವಾಗಿ ಮಾತಾಡುತ್ತಿದ್ದಾನೆ. ಕೆಲವು ಕ್ರೈಸ್ತರು ನಂಬುವದೇನೆಂದರೆ ಪಾತ್ರೆ (ಅಂದರೆ, ಅದರೊಳಗಿನ ದ್ರಾಕ್ಷಾರಸ) ಹಾಗು ರೊಟ್ಟಿಗಳು ಶಾರೀರಿಕವಿಧದಲ್ಲಿ ವಾಸ್ತವವಾಗಿ ಕ್ರಿಸ್ತನ ರಕ್ತ ದೇಹವಾಗಿವೆ ಎಂಬದೇ (ಮಾರ್ಕ 14;22) ಇತರರು ಪಾತ್ರೆ ಹಾಗು ರೊಟ್ಟಿಗಳು ಕ್ರಿಸ್ತನ ರಕ್ತದ ಹಾಗು ದೇಹದ ಸಂಕೇತಗಳು ಅಥವಾ ಪ್ರತಿನಿದಿಸುವಂಥವುಗಳು ಮಾತ್ರವೇ ಆಗಿವೆಯೆಂದು ನಂಬುತ್ತಾರೆ. ಇನ್ನೂ ಕೆಲವರು ಪಾತ್ರೆ ಹಾಗು ರೊಟ್ಟಿಗಳು ಯೇಸುವಿನ ಮರಣದ ಜ್ಞಾಪಕಾರ್ಥಗಳಷ್ಟೇ ಎಂದು ನಂಬುತ್ತಾರೆ (1 ಕೊರಿಂಥ 11:23-26; ಸಾಮಾನ್ಯ ಲೇಖನ: ಕರ್ತನ ಭೋಜನ ನೋಡಿರಿ).

ಹೇಗಿದ್ದರೂ, ಕ್ರೈಸ್ತರೆಲ್ಲರು ಒಪ್ಪಿಕೊಳ್ಳುವಂಥ ಒಂದು ಸಂಗತಿಯಿರುತ್ತದೆ, ಅದೇನೆಂದರೆ, ನಮ್ಮ ಪಾಪಗಳು ಕ್ಷಮಿಸಲ್ಪಟ್ಟು ನಾವು ರಕ್ಷಣೆಯನ್ನು ಪಡೆಯುವಂತಾಗಬೇಕೆಂದು ಕ್ರಿಸ್ತನು ತನ್ನ ದೇಹವನ್ನೂ, ರಕ್ತವನ್ನೂ ಅರ್ಪಿಸಿದನು. ಕರ್ತನ ಭೋಜನ ವೇಳೆಯಲ್ಲಿ ನಾವು ಪಾತ್ರೆಯಿಂದ ಕುಡಿದು ರೊಟ್ಟಿಯನ್ನು ತಿನ್ನುವಾಗ ಕ್ರಿಸ್ತನು ನಮಗೆ ನೀಡಿರುವ ಕ್ಷಮಾಪಣೆ ಹಾಗು ರಕ್ಷಣೆಗಳೆಂಬ ಶ್ರೇಷ್ಠವರಗಳಲ್ಲಿ ಪಾಲುಗಾರರಾಗುತ್ತೇವೆ. ಕರ್ತನ ಭೋಜನದ ವೇಳೆ ಒಂದು ರೀತಿಯಲ್ಲಿ ನಾವು ಕ್ರಿಸ್ತನ ಮರಣದೊಳಗೆ ನೂತನವಾಗಿ ಪಾಲ್ಗೊಳ್ಳುತ್ತೇವೆ, ಆ ಮರಣದ ಮೂಲಕವೇ ನಾವು ಎಂದಿಗೂ ಅಂತ್ಯವಾಗದ ನೂತನ ಆತ್ಮೀಕ ಜೀವವನ್ನು ಪಡೆದಿರುತ್ತೇವೆ (ಯೋಹಾನ 6:33-35, 48-56 ಮತ್ತು ವ್ಯಾಖ್ಯಾನ ನೋಡಿರಿ). ನಾವು ಜೀವಸ್ವರೂಪನಾದ ದೇವರ ರಕ್ತ ಹಾಗು ದೇಹದಲ್ಲಿ ಪಾಲುಗಾರರಾಗಿರುತ್ತೇವೆ. ಹಾಗಾದರೆ ನಾವು ವಿಗ್ರಹಗಳಾರಾಧನೆಯ ಬಗ್ಗೆ ಯೋಚಿಸಲಾದರೂ ಹೇಗೆ ಸಾಧ್ಯ? ಎಂದು ಪೌಲನು ಕೇಳುತ್ತಾನೆ.

**17** ಕರ್ತನ ಭೋಜನದ ವೇಳೆಯಲ್ಲಿ ಹಾಜರಿರುವ ಪ್ರತಿಯೊಬ್ಬರು ತಿನ್ನುವಂತಾಗುವದಕ್ಕೆ ರೊಟ್ಟಿಯು ಚಿಕ್ಕ ತುಂಡುಗಳಾಗಿ ಮುರಿಯಲ್ಪಡುತ್ತದೆ. ಆದರೆ ಎಲ್ಲಾ ತುಂಡುಗಳು ಒಂದೇ ರೊಟ್ಟಿಯಿಂದ ಬಂದವು ಗಳಾಗಿವೆ. ಅದೇ ರೀತಿಯಲ್ಲಿ ವಿಶ್ವಾಸಿಗಳಾದ ನಾವು ಅನೇಕರಾಗಿದ್ದಾಗ್ಯು ಕ್ರಿಸ್ತನಲ್ಲಿ ನಾವೆಲ್ಲರೂ ಒಂದೇ ದೇಹವಾಗಿದ್ದೇವೆ (ರೋಮ 12:4-5; 1 ಕೊರಿಂಥ 12:27 ಮತ್ತು ವ್ಯಾಖ್ಯಾನ ನೋಡಿರಿ).

ನಾವೆಲ್ಲರೂ ಒಂದೇ ರೊಟ್ಟಿಯಲ್ಲಿ ಪಾಲುತಕ್ಕೊಂಡು ತಿನ್ನುತ್ತೇವೆ ಎಂದು ಪೌಲನು ಹೇಳುತ್ತಾನೆ. ಅಂದರೆ, ನಾವೆಲ್ಲರೂ ಒಟ್ಟಾಗಿ ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆ. ಕರ್ತನ ಭೋಜನದ ವೇಳೆ ಒಂದೇ ರೊಟ್ಟಿಯು ನಮ್ಮ ದೇಹಗಳನ್ನು ಸೇರುವ ಪ್ರಕಾರವೇ ಕ್ರಿಸ್ತನ ಒಂದೇ ಪವಿತ್ರಾತ್ಮನು ನಮ್ಮನ್ನು ಪ್ರವೇಶಿಸಿ ಒಂದೇ ಆತ್ಮೀಕ "ದೇಹ"ವನ್ನಾಗಿ ಮಾಡುತ್ತಾನೆ, ಆ ದೇಹಕ್ಕೆ ಶಿರಸ್ಸು ಸ್ವತಃ ಕ್ರಿಸ್ತನೇ (1 ಕೊರಿಂಥ 12:12-13; ಕೊಲೊಸ್ಸೆ 1:18 ನೋಡಿರಿ).

**18** ಇಲ್ಲಿ ಪೌಲನು ಪು ನಃ ಇಸ್ರಾಯೇಲ್ಯರ; ಅಂದರೆ ಯೆಹೂದ್ಯರ ಉದಾಹರಣೆಯನ್ನು ನೀಡುತ್ತಾನೆ. ಯೆಹೂದ್ಯರು ಯಜ್ಞಗಳನ್ನು ಅರ್ಪಿಸುತ್ತಿದ್ದಾಗ ಯಾಜಕರು ಹಾಗು ಜನರು ಯಜ್ಞ ಮಾಡಲ್ಪಟ್ಟ ಪ್ರಾಣಿಯ ಮಾಂಸವನ್ನು ತಿನ್ನುತ್ತಿದ್ದರು (ಯಾಜಕಕಾಂಡ 7:15-16; 10:12-14). ಅವರು ಹೀಗೆ ಮಾಡುವಾಗ ಯಜ್ಞವೇದಿಯೊಡನೆ ಭಾಗಿಗಳಾಗುತ್ತಿದ್ದರು, ಅಂದರೆ, ಅವರು ಯಜ್ಞವೇದಿಯ ವೇಲೆ ಅರ್ಪಿಸಲಾದ ಮಾಂಸದಲ್ಲಿ ಪಾಲುಗಾರರಾಗುತ್ತಿದ್ದರು.

ಅದೇ ರೀತಿಯಲ್ಲಿ ಕೊರಿಂಥದ ಕ್ರೈಸ್ತರು ವಿಗ್ರಹದ ದೇವಾಲಯವೊಂದರಲ್ಲಿ ಊಟಮಾಡಿದಾಗ ಅವರು ದುರಾತ್ಮಗಳು ಅಥವಾ ದೆವ್ವಗಳೊಡನೆ ಪಾಲನ್ನೂ ಅನ್ಯೋನ್ಯತೆಯನ್ನೂ ಹೊಂದುವವರಾಗಿದ್ದರು (ವಚನ 20). ಇದು ಜರುಗಬಾರದು ಎಂದು ಪೌಲನು ಹೇಳುತ್ತಾನೆ. ನಾವು ಏಕಕಾಲದಲ್ಲಿ ಕ್ರಿಸ್ತನೊಡನೆಯೂ ದೆವ್ವಗಳೊಡನೆಯೂ ಭಾಗಿಗಳಾಗಿರಲು ಸಾಧ್ಯವಿಲ್ಲ (1 ಕೊರಿಂಥ 8:4-5; 10:21 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**19** ಯೆಹೂದ್ಯರು ಜೀವಸ್ವರೂಪನಾದ ದೇವರಿಗೆ ಅರ್ಪಿಸಿದ ಯಜ್ಞಗಳು ಹಾಗು ಅನ್ಯಜನರು ಸತ್ತವಿಗ್ರಹಗಳಿಗೆ ಅರ್ಪಿಸಿದ ಯಜ್ಞಗಳು ಒಂದೇ ಎಂಬದಾಗಿ ಪೌಲನು ಇಲ್ಲಿ ಹೇಳುತ್ತಿಲ್ಲ. ವಿಗ್ರಹವು ಏನೂ ಅಲ್ಲ (1 ಕೊರಿಂಥ 8:4).

**20-21** ವಿಗ್ರಹಗಳು ಏನೂ ಅಲ್ಲ, ಆದರೆ ದೆವ್ವಗಳು (ದುರಾತ್ಮಗಳು) ಗಣನೆಯಲ್ಲಿರುತ್ತವೆ. ಯಾವಾಗ ಒಬ್ಬನು ವಿಗ್ರಹವನ್ನು ಆರಾಧಿಸುತ್ತಾನೋ ನಿಜವಾಗಿಯೂ ಆತನು ದೆವ್ವವೊಂದನ್ನು ಆರಾಧಿಸುವವನಾಗಿದ್ದಾನೆ (ಧರ್ಮೋಪದೇಶಕಾಂಡ 32:7). ನಾವು ದೆವ್ವಗಳೊಡನೆ ಭಾಗಿಗಳಾಗಿರಬಾರದು.

**22** ನಾವು ದೆವ್ವಗಳೊಡನೆ ಭಾಗಿಗಳಾಗುವದಾದರೆ ವ್ಯಭಿಚಾರಿಗಳಿಂತಿರುತ್ತೇವೆ. ದೇವರು ತನ್ನ ಮಹಿಮೆಯನ್ನು ಮತ್ತೊಬ್ಬನಿಗೆ ಸಲ್ಲಗೊಡುವದಿಲ್ಲ (ವಿಮೋಚನ ಕಾಂಡ 20:5), ಮತ್ತು ನಾವು ಆತನನ್ನು ತೊರೆದು ದೆವ್ವಗಳನ್ನು ಹಿಂಬಾಲಿಸುವದಾದರೆ ಆತನು ನಮ್ಮ ಮೇಲೆ ಕೋಪಗೊಳ್ಳುವನು. ಆತನಿಗಿಂತಲೂ ನಾವು ಬಲಿಷ್ಠರೇನು? ಖಂಡಿತವಾಗಿಯೂ ಇಲ್ಲ. ನಮಗಿಂತಲೂ ಎಷ್ಟೋ ಹೆಚ್ಚು ಬಲಿಷ್ಠನಾಗಿರುವ ದೇವರನ್ನು ರೇಗಿಸುವದು ನಿಜವಾಗಿಯೂ ಮೂರ್ಖತನವೇ!

## ವಿಶ್ವಾಸಿಗಳ ಸ್ವಾತಂತ್ರ್ಯ (10:23-33)

**23-24** ರೋಮ 14:19-20; 15:1-2; 1 ಕೊರಿಂಥ 6:12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

**25** ಪೌಲನ ಕಾಲದಲ್ಲಿ ಕೊರಿಂಥದೊಳಗೆ ಹೆಚ್ಚು ಕಡಿಮೆ ಎಲ್ಲಾ ಅಂಗಡಿಗಳಲ್ಲಿ ಮಾರಲ್ಪಡುತ್ತಿದ್ದ ಮಾಂಸವೆಲ್ಲವೂ ಮೊದಲು ವಿಗ್ರಹಗಳಿಗೆ ಅರ್ಪಿಸಲ್ಪಟ್ಟಿರುತ್ತಿತ್ತು. ಆದರೆ ವಿಗ್ರಹವು ಏನೂ ಅಲ್ಲವಾದ್ದರಿಂದ (1 ಕೊರಿಂಥ 8:4), ಅಂತಹ ಮಾಂಸವು ಅಶುದ್ಧವಾಗಿರಲಿಲ್ಲ; ಕ್ರೈಸ್ತನು ಅದನ್ನು ತಿನ್ನುವದರಲ್ಲಿ ತಪ್ಪೇನಿರಲಿಲ್ಲ.

**26** ಪೌಲನು ಇಲ್ಲಿ ಕೀರ್ತನೆಗಳು 24:1 ರಿಂದ ಉಲ್ಲೇಖಿಸುತ್ತಾನೆ. ದೇವರು ಉಂಟು ಮಾಡಿರುವ ಸಮಸ್ತವೂ "ಶುದ್ಧವಾದದ್ದೇ", ಮತ್ತು ಅದೆಲ್ಲವನ್ನೂ ಕೃತಜ್ಞತಾಸ್ತುತಿಯೊಂದಿಗೆ ಆನಂದಿಸಬಹುದಾಗಿದೆ (ಮಾರ್ಕ 7:19; ಅ.ಕೃತ್ಯ 10:13-15; ರೋಮ 14:14; 1 ತಿಮೊಥೆ 4:4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**27** ಕ್ರೈಸ್ತರು ವಿಗ್ರಹಗಳ ದೇವಾಲಯದಲ್ಲಿನ ಔತಣಗಳಿಗೆ ಹೋಗಬಾರದು; ಆದರೆ ಅವರು ತಮ್ಮ ಕ್ರೈಸ್ತೇತರರಾದ ಸ್ನೇಹಿತರ ಮನೆಗೆ ಹೋಗಿ ತಿನ್ನುವದರಲ್ಲಿ ತಪ್ಪೇನಿಲ್ಲ. ಅಲ್ಲಿ ಅವರು ತಮಗೆ ಬಡಿಸಲ್ಪಟ್ಟಿದ್ದೆಲ್ಲವನ್ನೂ ತಿನ್ನಬಹುದು (ಲೂಕ 10:8).

**28-29** ಆದರೆ ಒಬ್ಬನು ನಿಮಗೆ "ನೋಡಿರಿ, ಈ ಆಹಾರವು ವಿಗ್ರಹಗಳಿಗೆ ಯಜ್ಞಮಾಡಿದ್ದು" ಎಂದು ಹೇಳಿದರೆ ಅದನ್ನು ತಿನ್ನಬೇಡಿರಿ (ವಚನ 28). ಒಬ್ಬನು ಎಂದು ಹೇಳುವಾಗ ಬಲಹೀನ ನಂಬಿಕೆ ಅಥವಾ ಮನಸ್ಸಾಕ್ಷಿಯುಳ್ಳ ಯಾವದೇ ಕ್ರೈಸ್ತನು ಎಂದು ಪೌಲನ ತಾತ್ಪರ್ಯವಾಗಿದೆ (1 ಕೊರಿಂಥ 8:7, 9-13 ಮತ್ತು ವ್ಯಾಖ್ಯಾನ ನೋಡಿರಿ). ಒಂದು ವೇಳೆ ಅಂತಹ ಬಲಹೀನ ಮನಸ್ಸಾಕ್ಷಿಯುಳ್ಳ ಕ್ರೈಸ್ತನು ನಾವು ತಿನ್ನಲಿಕ್ಕಿರುವ ಆಹಾರವು ನಿಜವಾಗಿಯೂ ವಿಗ್ರಹಕ್ಕೆ ಬಲಿಕೊಟ್ಟದ್ದೆಂದು ತಿಳಿದು ನಮ್ಮನ್ನು ಎಚ್ಚರಿಸುವದಾದರೆ ಆವ್ಯಕ್ತಿಯ ಬಲಹೀನ ಮನಸ್ಸಾಕ್ಷಿಯ ನಿಮಿತ್ತವಾಗಿ ನಾವು ಆ ಆಹಾರವನ್ನು ತಿನ್ನಕೂಡದು. ಮತ್ತೊಬ್ಬನ ಮನಸ್ಸಿನಲ್ಲಿರುವ ಸಂಶಯದ ನಿಮಿತ್ತವೇ (ವಚನ 29) – ಅಂದರೆ, ಬಲಹೀನ ಕ್ರೈಸ್ತನ ಮನಸ್ಸಿನ ನಿಮಿತ್ತವಾಗಿ – ಪೌಲನು ವಿಗ್ರಹಕ್ಕೆ ಅರ್ಪಿತವಾದ ಆಹಾರವನ್ನು ತಿನ್ನುವದಿಲ್ಲ. ಪೌಲನು ತನ್ನ ಸಹೋದರನ ಬಲಹೀನ ಮನಸ್ಸಿಗೆ ಸಂಶಯವನ್ನು ಉಂಟುಮಾಡಿ ಆತನನ್ನು ಪಾಪಕ್ಕೆ ನಡಿಸುವಂತಹ ಯಾವುದನ್ನೂ ಪೌಲನು ಮಾಡುವದಿಲ್ಲ. ಪೌಲನ ಸ್ವಂತ ಮನಸ್ಸು ತಾನು ಅಂತಹ ಮಾಂಸವನ್ನು ಸ್ವತಂತ್ರವಾಗಿ ತಿನ್ನಬಹುದು ಹಾಗು ಅದು ನಿಯಮಬದ್ಧವಾದದ್ದು ಎಂದು ಹೇಳುತ್ತದೆ, ಆದರೆ ಬಲಹೀನ ಸಹೋದರನ ಮನಸ್ಸು ಆತನನ್ನು ತಿನ್ನದಂತೆ ತಡೆಯುತ್ತದೆ. ಪ್ರತಿಯೊಬ್ಬನಿಗೂ ಅವನವನ ಮನಸ್ಸಾಕ್ಷಿಯಿಂದ ತೀರ್ಪಾಗುವದು. ಪೌಲನು ತನ್ನ ಮನಸ್ಸಿನಿಂದ ತೀರ್ಪಿಗೊಳಗಾಗುವನು ಹೊರತು ಆತನು ಬಲಹೀನ ಸಹೋದರನ ಮನಸ್ಸಾಕ್ಷಿಯಿಂದಲ್ಲ. ಬಲಹೀನ ಸಹೋದರನ ಮನಸ್ಸಾಕ್ಷಿಯು ಪೌಲನ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾರದು. ಪೌಲನ ಸ್ವಾತಂತ್ರ್ಯಕ್ಕೆ ತೀರ್ಪುಮಾಡುವದು ಬಲಹೀನ ಸಹೋದರನ ಕೆಲಸವಲ್ಲ (ರೋಮ 14:2-3 ನೋಡಿರಿ). ಬಲಹೀನ ಸಹೋದರನಿಗೆ ಯಾವುದು ಪಾಪವಾಗಿರುತ್ತದೋ (ವಿಗ್ರಹಗಳಿಗೆ ಅರ್ಪಿಸಿದ ಆಹಾರ) ಪೌಲನಿಗೆ ಅದು ಪಾಪವಾಗಿರುವದಿಲ್ಲ.

ಹೇಗಿದ್ದರೂ, ವಿಗ್ರಹಗಳಿಗೆ ಬಲಕೊಟ್ಟ ಆಹಾರವನ್ನು ತಿನ್ನುವದಕ್ಕೆ ಪೌಲನಿಗೆ ಸ್ವಾತಂತ್ರ್ಯವಿದ್ದಾಗ್ಯು ಆತನು ತನ್ನ ಬಲಹೀನ ಸಹೋದರನ ಮನಸ್ಸಿಗೆ ಸಂಶಯವನ್ನುಂಟು ಮಾಡಿ ಆತನು ಪಾಪಮಾಡುವಂತೆ ಕಾರಣವಾಗಬಾರದೆಂಬುದಕ್ಕಾಗಿ ತನ್ನ ಸ್ವಾತಂತ್ರ್ಯವನ್ನು ಸ್ವಂತ ಇಷ್ಟದಿಂದ ಬಿಟ್ಟು ಕೊಡುತ್ತಾನೆ (1 ಕೊರಿಂಥ 8:13).

**30** ನಾವು ಕೃತಜ್ಞತಾಭಾವದಿಂದ ದೇವರ ಮೂಲಕ ಪಡೆಯುವಂತದ್ದೇಲ್ಲವೂ ಶುದ್ಧ ಹಾಗು ಒಳ್ಳೇದಾಗಿದ್ದು ಅದನ್ನು ನಿಯಮಬದ್ಧವಾಗಿ ಆನಂದಿಸಬಹುದಾಗಿದೆ [31] (1 ತಿಮೊಥೆ 4:4). ನಾವು ಅದರಲ್ಲಿ ಭಾಗಿಗಳಾಗುವದಕ್ಕೆ ನಿಂದಿಸಲ್ಪಡಬಾರದು.

**31** ಈ ವಚನದಲ್ಲಿ ನಾವು ಪೌಲನ ಮುಖ್ಯ ವಿಷಯವನ್ನು ನೋಡುತ್ತೇವೆ. ನಾವು ಏನೇ ಮಾಡಿದರೂ ಮೊದಲು ನಮ್ಮನ್ನು ಪ್ರಶ್ನಿಸಿಕೊಳ್ಳಬೇಕೇನೆಂದರೆ: ನಾನು ಇದನ್ನು ಏಕೆ ಮಾಡುತ್ತಿದ್ದೇನೆ? ಯಾರಿಗಾಗಿ ಇದನ್ನು ಮಾಡುತ್ತಿದ್ದೇನೆ? ಮತ್ತು ಉತ್ತರವು ಯಾವಾಗಲೂ ಹೀಗಿರಬೇಕು: ನಾನು ಇದನ್ನು ದೇವರಿಗಾಗಿಯೂ ಆತನ ಮಹಿಮೆಗಾಗಿಯೂ ಮಾಡುತ್ತಿದ್ದೇನೆಂಬದೇ. ಒಂದು ವೇಳೆ ನಾವು ಹಾಗೆ ಹೇಳದಿದ್ದರೆ ಆ ಸಂಗತಿಯನ್ನು ನಾವು ಮಾಡಬಾರದು.

ನಾವು ಏನೇ ಮಾಡಿದರೂ ಅದು ಅಂತಿಮವಾಗಿ ದೇವರ ಘನತೆಗಾಗಿಯೇ ಆಗಿರಬೇಕು ( ಮತ್ತಾಯ 5:16; ರೋಮ 14:7-8 ನೋಡಿರಿ). ದೇವರಿಗೆ ಘನತೆಯನ್ನು ತರಲಾರದ ಯಾವದೇ ಸಂಗತಿಯಾಗಲಿ ಅದು ಆತನಿಗೆ ಸ್ವೀಕೃತವಲ್ಲ.[32]

**32** ರೋಮ 14:13,20-21; 1 ಕೊರಿಂಥ 8:8, 13 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**33** ಪೌಲನು ತನಗೋಸ್ಕರ ಪ್ರಯೋಜನ ಪಡೆದುಕೊಳ್ಳುವದಕ್ಕಾಗಿ ಇತರರನ್ನು ಮೆಚ್ಚಿಸುವದಿಲ್ಲ. ಬದಲಾಗಿ, ಆತನು ಇತರರ ಆತ್ಮೀಕ ಪ್ರಯೋಜನಕ್ಕಾಗಿ ಅವರನ್ನೇ ಮೆಚ್ಚಿಸುವವನಾಗಿದ್ದಾನೆ (ರೋಮ 15;2; 1 ಕೊರಿಂಥ 9:22; 10:24 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

---

# ಅಧ್ಯಾಯ - 11

## ಆರಾಧನೆಯ ವೇಳೆಯಲ್ಲಿ ತಲೆಯನ್ನು ಮುಚ್ಚಿಕೊಳ್ಳುವದು (11:1-16)

**1** ಪೌಲನು "ನೀವು ನನ್ನನ್ನು ಅನುಸರಿಸುವವರಾಗಿರಿ" ಎಂದು ಹೇಳುತ್ತಾನೆ. ನಾವು ಸಹ ಪೌಲನ ಹಾಗೆ ನಮ್ಮ ಸ್ನೇಹಿತರಿಗೆ "ನನ್ನನ್ನು ಅನುಸರಿಸುವವರಾಗಿರಿ" ಎಂದು ಹೇಳಬಲ್ಲೆವೋ? ನಮ್ಮ ಮಾದರಿಯು ಎಷ್ಟು ಉತ್ತಮವಾಗಿದೆ?

ಪೌಲನು ಇತರರಿಗೆ "ನನ್ನ ಮಾದರಿಯನ್ನು ಅನುಸರಿಸಿರಿ" ಹೇಳಲು ಏಕೆ ಸಾಧ್ಯವಾಯಿತು? ಏಕೆಂದರೆ ಸ್ವತಃ ಪೌಲನು ಕ್ರಿಸ್ತನ ಮಾದರಿಯನ್ನು ಅನುಸರಿಸಿದನು. ನಾವು ಎಷ್ಟರ ಮಟ್ಟಿಗೆ ಸ್ವತಃ ಕ್ರಿಸ್ತನ ಮಾದರಿಯನ್ನು ಅನುಸರಿಸುತ್ತೇವೆಂಬದರ ಆಧಾರದಿಂದ ಮಾತ್ರವೇ ನಾವು ಇತರರಿಗೆ ನಮ್ಮ ಮಾದರಿಯನ್ನು ಅನುಸರಿಸಿರೆಂದು ಹೇಳಬಲ್ಲೆವು . ಅವರು ಅನುಸರಿಸಬೇಕಾದದ್ದು ಕ್ರಿಸ್ತನನ್ನೇ ಹೊರತು ನಮ್ಮನ್ನಲ್ಲ.

ಇತರರು ನಮ್ಮ ಒಳ್ಳೇ ಮಾತುಗಳನ್ನು ಕೇಳುವಾಗ ಬಹುಶಃ ಅವರು ನಮಗೆ ಕಿವಿಗೊಡಬಹುದು, ಆದರೆ ಅವರು ನಮ್ಮ ಒಳ್ಳೇ ಜೀವಿತಗಳನ್ನು ನೋಡುವಾಗ ನಮ್ಮನ್ನು ಅನುಸರಿಸುವರು. ಮಾತುಗಳ ಮೂಲಕ ಸಾಕ್ಷಿನೀಡುವದು ಒಳ್ಳೇದೇ, ಆದರೆ ಒಬ್ಬನು ತನ್ನ ಇಡೀ ಜೀವಿತದ ಮೂಲಕ ಸಾಕ್ಷಿನೀಡುವದು ಅತ್ಯುತ್ತಮವಾದದ್ದು. ಕೇವಲ ಮಾತುಗಳಿಗಿಂತಲೂ ಮಾತು ಹಾಗು ಹಾಗು ಜೀವಿತಗಳು ಒಟ್ಟಾಗಿ ಸೇರಿ ಹೆಚ್ಚು ಪರಿಣಾಮ ಕಾರಿಯಾಗಿರುತ್ತವೆ.

2 ಪೌಲನು ಕೊರಿಂಥದವರಿಗೆ ತಿಳಿಯ ಪಡಿಸಿದ ಬೋಧನೆಗಳು ಹನ್ನೆರಡು ಮಂದಿ ಅಪೊಸ್ತಲರ[33] ಬೋಧನೆಯಗಳು (ಕಟ್ಟಳೆಗಳು) ಆಗಿದ್ದು ಅವು ಗಳನ್ನು ಪೌಲನು ಸ್ವತಃ ಅಪೊಸ್ತಲರಿಂದ ಪಡೆದುಕೊಂಡಿದ್ದನು (2 ಥೆಸಲೋನಿಕ 2:15 ನೋಡಿರಿ). ಹೆಚ್ಚುಕಡಿಮೆ ಪೌಲನ ಬೋಧನೆಗಳೆಲ್ಲವೂ ಹನ್ನೆರಡು ಮಂದಿ ಅಪೊಸ್ತಲರಿಂದ ಬಂದಿದ್ದವು ಇಲ್ಲವೆ ಕ್ರಿಸ್ತನ ನೇರವಾದ ಪ್ರಕಟಣೆಯಿಂದ ಬಂದವು ಗಳಾಗಿದ್ದವು (ಗಲಾತ್ಯ 1:12). ಕೆಲವು ವಿಷಯಗಳಲ್ಲಿ ಮಾತ್ರವೇ ಪೌಲನು ತನ್ನ ಸ್ವಂತ ಅಭಿಪ್ರಾಯವನ್ನಾಧರಿಸಿ ಬೋಧಿಸಿರುತ್ತಾನಷ್ಟೇ (1 ಕೊರಿಂಥ 7:12,25,40). ಹಲವಾರು ವೇಳೆ ಈ ಪತ್ರಿಕೆಯಲ್ಲಿ ಪೌಲನು ಕೊರಿಂಥದ ಕ್ರೈಸ್ತರ ನಡವಳಿಕೆಗಾಗಿ ಅವರನ್ನು ಗದರಿಸಬೇಕಾಗಿತ್ತು. ಆದರೆ ಈ ವಚನದಲ್ಲಿ ಆತನು ಅವರಿಗಾಗಿ ಕೆಲವು ಒಳ್ಳೇ ಮಾತುಗಳನ್ನು ಹೊಂದಿದ್ದಾನೆ. ಪೌಲನಿಗೆ ಇತರರನ್ನು ಗದರಿಸುವ ಅವಶ್ಯಕತೆಯು ಇರುವಾಗಲೆಲ್ಲಾ ಅವರ ಕುರಿತು ಏನಾದರೂ ಒಳ್ಳೇದನ್ನು ಸಹ ಹೇಳುವದಕ್ಕೆ ಆತನು ಯಾವಾಗಲೂ ಪ್ರಯತ್ನಿಸಿದನು. ಇದು ಅಧಿಕಾರದಲ್ಲಿರುವವರೆಲ್ಲಾ ಅನುಸರಿಸಬೇಕಾದ ಒಂದು ಉತ್ತಮ ನೀತಿಸೂತ್ರವಾಗಿದೆ.

3 . . .ಕ್ರಿಸ್ತನಿಗೆ ದೇವರು ತಲೆ ಆಗಿದ್ದಾನೆ. ಕ್ರಿಸ್ತನು ದೇವರಿಗೆ ಸರಿಸಮಾನನು (ಯೋಹಾನ 10:30; ಫಿಲಿಪ್ಪಿ 2:6-7 ನೋಡಿರಿ). ಆದರೆ ಕ್ರಿಸ್ತನು ಭೂಲೋಕದಲ್ಲಿ ಜೀವಿಸಿದ್ದಾಗ ಆತನು ಒಬ್ಬ ಮಾನವನು, ದೇವರ ಮಗನು ಸಹ ಆಗಿದ್ದನು ಹಾಗು ದೇವರು ಆತನ ತಂದೆಯಾಗಿದ್ದನು (1 ಕೊರಿಂಥ 3:23 ನೋಡಿರಿ). ಆದ್ದರಿಂದಲೇ ಯೇಸು ಹೇಳಿದ್ದೇನೆಂದರೆ: "....ತಂದೆಯು ನನಗಿಂತ ದೊಡ್ಡವನು" (ಯೋಹಾನ 14:28).

ಕ್ರಿಸ್ತನಿಗೆ ದೇವರು ಶಿರಸ್ಸಾಗಿರುವಂತೆಯೇ ಪ್ರತಿಪು ರುಷನಿಗೂ ಕ್ರಿಸ್ತನು ತಲೆ ಆಗಿದ್ದಾನೆ (ಎಫೆಸ 1;22; ಕೊಲೊಸ್ಸೆ 1:18 ನೋಡಿರಿ). ದೇಹದ ಅಂಗಗಳು ಶಿರಸ್ಸಿನ ಅಧಿಕಾರದಡಿಯಲ್ಲಿ ಇರುವ ಹಾಗೆಯೇ ಕ್ರಿಸ್ತನ ದೇಹದ ಅಂಗಗಳಾದ ನಾವು ಕ್ರಿಸ್ತನ ಅಧಿಕಾರದಡಿಯಲ್ಲಿ ಇದ್ದೇವೆ.

ಅದೇ ರೀತಿಯಲ್ಲಿ ಸ್ತ್ರೀಗೆ ಪು ರುಷನು ತಲೆ ಆಗಿದ್ದಾನೆ. ಇಲ್ಲಿ ಪೌಲನು ವಿವಾಹಿತ ಸ್ತ್ರೀ ಬಗ್ಗೆ ಮಾತಾಡುತ್ತಿದ್ದಾನೆ. ಅವಿವಾಹಿತ ಸ್ತ್ರೀಯರು ಪು ರುಷರ ಅಧೀನಕ್ಕೊಳಪಟ್ಟಿರುವದಿಲ್ಲ (ಎಫೆಸ 5:22-24 ಮತ್ತು ವ್ಯಾಖ್ಯಾನ ನೋಡಿರಿ).

ಈ ವಿಧವಾಗಿಯೇ ದೇವರು ಲೋಕವನ್ನು ಸೃಷ್ಟಿಸಿದನು. ದೇವರು ಎಲ್ಲಾದಕ್ಕಿಂತಲೂ ಮೇಲಾದ ಅಧಿಕಾರವನ್ನು ಹೊಂದಿದ್ದಾನೆ. ಅದಾದ ಮೇಲೆ ದೇವರು ಮನುಷ್ಯನನ್ನು ಕ್ರಿಸ್ತನ ಅಧಿಕಾರದಡಿಯಲ್ಲಿಟ್ಟಿದ್ದಾನೆ. ಮತ್ತು ಗಂಡನ ಅಧೀನದಲ್ಲಿ ದೇವರು ಹೆಂಡತಿಯನ್ನು ಇಟ್ಟಿರುತ್ತಾನೆ.

ಹೇಗಿದ್ದರೂ, ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ಗಂಡಂದಿರು ತಮ್ಮ ಹೆಂಡತಿಯರನ್ನು ಪ್ರೀತಿಸಬೇಕೆಂಬದನ್ನು ನೆನಪಿನಲ್ಲಿಟ್ಟುಕೊಳ್ಳಲಿ (ಎಫೆಸ 5:25). ಹೆಂಡತಿಯರು ತಮ್ಮ ಗಂಡಂದಿರಿಗೆ ಅಧೀನರಾಗಿರಬೇಕು.. ಆದರೆ ಗಂಡಂದಿರು ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳಬಾರದು. ಹೆಂಡತಿಯು ತನ್ನ ಗಂಡನ ಗುಲಾಮಳಲ್ಲ; ಬದಲಾಗಿ, ಆತನ ಸ್ನೇಹಿತಳು ಹಾಗು ಸಹಾಯಕಳು ಆಗಿದ್ದಾಳೆ.[34]

ಅಲ್ಲದೆ ಕ್ರಿಸ್ತನಲ್ಲಿ ಗಂಡ ಮತ್ತು ಹೆಂಡತಿ ಆತ್ಮೀಕವಾಗಿ ಸರಿಸಮಾನರೆಂಬದನ್ನು ಸಹ ನಾವು ನೆನಪಿನಲ್ಲಿಟ್ಟು ಕೊಳ್ಳೋಣ (ಗಲಾತ್ಯ 3: 28; 1 ಪೇತ್ರ 3:7 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಹೆಂಡತಿಯು ತಾನು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಮುನ್ನ ಗಂಡನ ಒಪ್ಪಿಗೆಯನ್ನು ಪಡೆದುಕೊಳ್ಳಬೇಕೆಂದು ಕೆಲವರು ನಂಬುತ್ತಾರೆ. ಆದರೆ, ಈ ಬೋಧನೆಯು ಸರಿಯಾದದ್ದಾಗಿ ಇರಲಾರದು, ಯಾಕೆಂದರೆ ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ರಕ್ಷಣೆಯನ್ನು ಹೊಂದುವವಾಗ್ಗಾನವು ಗಂಡನಿಗೂ ಹೆಂಡತಿಗೂ ಸಮಾನವಾಗಿ ಹಾಗು ವಯಕ್ತಿಕವಾಗಿ ಕೊಡಲ್ಪಟ್ಟಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ದೇವರ ಕರೆಯುವಿಕೆಗೆ ಸ್ಪಂಧಿಸುವ ಜವಾಬ್ದಾರಿಯನ್ನು ಹೊಂದಿರುತ್ತಾನೆ.

4 ಪೌಲನ ಕಾಲದಲ್ಲಿ ಇತರರ ಅಧೀನದಲ್ಲಿರುವವರು ತಮ್ಮ ತಲೆಗಳಿಗೆ ಒಂದು ರೀತಿಯ ಮುಸುಕು ಹಾಕಿಕೊಳ್ಳುವ ಪದ್ಧತಿಯು ಗ್ರೀಕರೊಳಗಿತ್ತು. ಉದಾಹರಣೆ, ಗುಲಾಮರು ತಮ್ಮ ಮನೆಗಳಿಂದ ಹೊರಗೆ ಹೊರಟರೆ ಟೊಪ್ಪಿಗೆಗಳನ್ನು ಧರಿಸಿಕೊಳ್ಳಬೇಕಾಗಿತ್ತು. ಆದರೆ ಸಾಮಾನ್ಯ ಗಂಡಸರು ಸಾರ್ವ ಜನಕ ಸ್ಥಳಗಳಲ್ಲಿ ತಮ್ಮ ತಲೆಗಳನ್ನು ಮುಚ್ಚಿಕೊಳ್ಳುತ್ತಿರಲಿಲ್ಲ.

ಆದುದರಿಂದ, ಪೌಲನ ಬೋಧನೆಯ ಪ್ರಕಾರವಾಗಿ ಒಬ್ಬ ಪು ರುಷನು ಸಭೆಯಲ್ಲಿ ಅಥವಾ ಇತರ ಸಾರ್ವ ಜನಿಕ ಸ್ಥಳಗಳಲ್ಲಿ ಪ್ರಾರ್ಥಿಸುವಾಗ ಅಥವಾ ಪ್ರವಾದನೆ ಹೇಳುವಾಗ ತಲೆಯನ್ನು ಮುಚ್ಚಿಕೊಳ್ಳುವದಾದರೆ ತಾನು ಇನ್ನೊಬ್ಬನ ಅಧೀನದಲ್ಲಿದ್ದನೇನೋ ಎಂಬಂತೆ ವರ್ತಿಸುವವನಾಗಿರುತ್ತಾನೆ. ಆದರೆ ಅಂಥವನು ಕ್ರಿಸ್ತನ ಅಧಿಕಾರಕ್ಕೆ ಮಾತ್ರವೇ ಒಳಪಟ್ಟವನು. ಆದುದರಿಂದ, ಅವನು ತನ್ನ ತಲೆಯನ್ನು ಮುಚ್ಚಿಕೊಳ್ಳುವದಾದರೆ ಅವನು ತನ್ನ ತಲೆಯನ್ನು ಅವಮಾನಪಡಿಸುತ್ತಾನೆ – ಅಂದರೆ, ಅವನು ಕ್ರಿಸ್ತನನ್ನು ಅವಮಾನ ಪಡಿಸುತ್ತಾನೆ. ಆತನು ತಾನು ಕ್ರಿಸ್ತನಿಗೆ ಬದಲಾಗಿ ಬೇರೆ ಇನ್ನೊಬ್ಬರ ಅಧಿಕಾರದಡಿಯಲ್ಲಿದ್ದಾನೋ ಎಂಬಂತೆ ನಡೆದುಕೊಳ್ಳುತ್ತಿದ್ದಾನಾದ್ದರಿಂದ ಅವನು ಕ್ರಿಸ್ತನನ್ನು ಅವಮಾನ ಪಡಿಸುವವನಾಗಿದ್ದಾನೆ.

5 ಪೌಲನ ಕಾಲದಲ್ಲಿನ ಪದ್ಧತಿಯ ಪ್ರಕಾರವಾಗಿ ಹೆಂಡತಿಯರು ತಮ್ಮ ಮನೆಯಿಂದ ಹೊರಗೆ ಹೋಗುವಾಗ ತಮ್ಮ ತಲೆಗೆ ಮುಸುಕು ಹಾಕಿಕೊಳ್ಳಬೇಕಾಗಿತ್ತು. ಇಲ್ಲವಾದರೆ ಅವರು ಪು ರುಷರಂತೆ ವರ್ತಿಸುವವರಾಗಿರುತ್ತಾರೆ; ಅಂದರೆ ಅವರು ತಮ್ಮ ಗಂಡಂದಿರಿಗೆ ಸೇರಿದ ಅಧಿಕಾರವನ್ನು ತಾವು ತೆಗೆದುಕೊಳ್ಳುವಂತೆ ಕಾಣುವವರಾಗಿರುತ್ತಿದ್ದರು. ಹೀಗೆ, ಒಬ್ಬ ಸ್ತ್ರೀಯು ಮುಸುಕು ಹಾಕಿಕೊಳ್ಳದೆ ಸಾರ್ವಜನಿಕವಾಗಿ ಆರಾಧನೆಯನ್ನು ಮಾಡುವದಾದರೆ ತನ್ನ ತಲೆಯನ್ನು ಅವಮಾನ ಪಡಿಸುತ್ತಾಳೆ – ಅಂದರೆ, ಅವಳು ತನ್ನ ಗಂಡನನ್ನು ಅವಮಾನ ಪಡಿಸುತ್ತಾಳೆ.

ಅದು ಮಾತ್ರವಲ್ಲದೆ, ಪೌಲನ ಕಾಲದಲ್ಲಿ ವೇಶ್ಯೆಯರಂತಹ ಕೆಟ್ಟ ಸ್ತ್ರೀಯರು ಮಾತ್ರವೇ ತಲೆಯನ್ನು ಮುಚ್ಚಿಕೊಳ್ಳದೆ ಹೊರಗೆ ಹೋಗುತ್ತಿದ್ದರು. ಅದುದರಿಂದ ಗೌರವಾನ್ವಿತ ಗೃಹಪತ್ನಿಯು ತನ್ನ ತಲೆಯನ್ನು ಮುಚ್ಚಿಕೊಳ್ಳದೆ ಹೊರಗೆ ಹೋಗುವದಾದರೆ ಅವಳು ವೇಶ್ಯೆಯಂತೆ ನಡೆದುಕೊಳ್ಳುವವಳಾಗುತ್ತಿದ್ದಳು, ಮತ್ತು ಹೀಗೆ ಅವಳು ತನ್ನನ್ನೂ ತನ್ನ ಗಂಡನನ್ನೂ ಅವಮಾನ ಪಡಿಸುವವಳಾಗುತ್ತಿದ್ದಳು.

ಪೌಲನು ಈ ಭಾಗದಲ್ಲಿ ನೀಡುವ ಬೋಧನೆಯ ವಿಷಯದಲ್ಲಿ ಕ್ರೈಸ್ತರು ಎರಡು ಮುಖ್ಯ ಅಭಿಪ್ರಾಯಗಳನ್ನು ಹೊಂದಿರುತ್ತಾರೆ. ಪೌಲನ ಬೋಧನೆಯು ಮುಖ್ಯವಾಗಿ ಆತನು ಜೀವಿಸಿದ ಕಾಲಕ್ಕೆ ಮಾತ್ರವೇ ಅನ್ವಯಿಸುತ್ತದೆಂದು ಇಂದಿನ ಅನೇಕ ಕ್ರೈಸ್ತರು ನಂಬುತ್ತಾರೆ. ಪೌಲನ ಬೋಧನೆಯು ಆತನ ಕಾಲದ ಪದ್ಧತಿಗಳ ಮೇಲೆ ಆಧಾರವಾಗಿರುತ್ತದೆ ಹೊರತು ನಮ್ಮ ಕಾಲದ ಪದ್ಧತಿಗಳ ಮೇಲೆ ಆಧಾರವಾಗಿರುವದಿಲ್ಲ ಎಂದು ಈ ಕ್ರೈಸ್ತರು ಹೇಳುತ್ತಾರೆ. ಈ ಅಭಿಪ್ರಾಯದ ಪ್ರಕಾರವಾಗಿ ನೋಡುವದಾದರೆ ಇಂದು ಸಾರ್ವಜನಿಕ ಸ್ಥಳದಲ್ಲಿ ಪುರುಷರು ತಲೆಯನ್ನು ಮುಚ್ಚಿಕೊಳ್ಳುವದರಲ್ಲಿಯೂ ಸ್ತ್ರೀಯರು ತಮ್ಮ ತಲೆಯನ್ನು ಮುಚ್ಚಿಕೊಳ್ಳದಿರುವದರಲ್ಲಿಯೂ ತಪ್ಪೇನಿರುವದಿಲ್ಲ ಎಂದಾಗುತ್ತದೆ.

ಪ್ರತಿಯೊಂದು ಪೀಳಿಗೆಯ ವಿಶ್ವಾಸಿಗಳು ತಮ್ಮ ಕಾಲದ ಪದ್ಧತಿಗಳನ್ನು ಅನುಸರಿಸಬೇಕು, ಆದರೆ ಆ ಪದ್ಧತಿಗಳು ದೇವರ ನಿಯಮಕ್ಕೆ ವಿರೋಧವಾಗಿರಬಾರದೆಂಬದಕ್ಕೆ ಕ್ರೈಸ್ತರೆಲ್ಲರೂ ಒಪ್ಪಿಕೊಳ್ಳುತ್ತಾರೆ. ಒಂದು ವೇಳೆ ವಿಶ್ವಾಸಿಗಳು ಸ್ಥಳೀಯ ಪದ್ಧತಿಗಳನ್ನು ಅನುಸರಿಸದಿದ್ದರೆ ಅನಾವಶ್ಯಕವಾಗಿ ತಮ್ಮ ನೆರೆಯವರಿಗೆ ಬೇಸರವನ್ನುಂಟು ಮಾಡಿ ಕ್ರಿಸ್ತನಿಗೆ ಅವಮಾನತರುತ್ತಾರೆ.

ಪ್ರತಿಯೊಂದು ಪರಿಸ್ಥಿತಿಯಲ್ಲಿಯೂ ಪ್ರಾಮುಖ್ಯವಾದ ಪ್ರಶ್ನೆಯೇನೆಂದರೆ: ದೇವರ ನಿಯಮವೇನು? ಯಾಕೆಂದರೆ ದೇವರ ನಿಯಮವು ಮಾರ್ಪಡುವದಿಲ್ಲ. ಕ್ರೈಸ್ತರ ಈ ಮೊದಲನೆಯ ಗುಂಪಿನ ಅಭಿಪ್ರಾಯವನ್ನು ಪ್ರತಿಪಾದಿಸುವದರಲ್ಲಿನ ಅಪಾಯವೇನೆಂದರೆ ನಾವು ಬೈಬಲಿನ ಇತರ ಕಷ್ಟಕರವಾದ ಬೋಧನೆಗಳನ್ನು ತೆಗೆದುಕೊಂಡು ಅವುಗಳೂ ನಮಗೆ ಅನ್ವಯಿಸುವದಿಲ್ಲ ಎಂದು ಹೇಳಲಾರಂಭಿಸಬಹುದು. ಒಬ್ಬನು ಎಲ್ಲಿ ಗೆರೆಯನ್ನೆಳೆಯುತ್ತಾನೆ?

ಕ್ರೈಸ್ತರ ಎರಡನೆಯ ಗುಂಪು ನಂಬುವದೇನೆಂದರೆ, ಈ ಭಾಗದಲ್ಲಿ ಪೌಲನು ದೇವರ ಮಾರ್ಪಡಲಾರದ ನಿಯಮವನ್ನು ತಿಳಿಸುತ್ತಿದ್ದಾನೆ ಎಂಬದೇ. ಪೌಲನು ಇಲ್ಲಿ ತನ್ನ ಕಾಲದವರಿಗಾಗಿ ಮಾತ್ರವಲ್ಲ, ಆದರೆ ಎಲ್ಲಾ ಕಾಲದವರಿಗಾಗಿಯೂ ಬರೆಯುತ್ತಿದ್ದಾನೆಂದು ಹೇಳುತ್ತಾರೆ. ಈ ಎರಡನೆಯ ಅಭಿಪ್ರಾಯದ ಪ್ರಕಾರವಾಗಿ ಇಂದಿನ ಕ್ರೈಸ್ತರು ಇಲ್ಲಿ ಪೌಲನು ನೀಡಿರುವ ಬೋಧನೆಯನ್ನು ಪಾಲಿಸುವವರಾಗಿರಬೇಕು. ಮತ್ತು ಈ ಭಾಗದಲ್ಲಿ ಪೌಲನ ಕೇಂದ್ರ ಬೋಧನೆಯು ಏನೆಂದರೆ, ದೇವರು ವಿವಿಧ ಹಂತಗಳ ಅಧಿಕಾರವನ್ನು ಸ್ಥಾಪಿಸಿದ್ದಾನೆ: ಮೊದಲು ದೇವರು ಅಧಿಕಾರ ಹೊಂದಿರುತ್ತಾನೆ, ನಂತರ ಕ್ರಿಸ್ತನು, ಆನಂತರ ಗಂಡನು ಮತ್ತು ಆ ಮೇಲೆ ಹೆಂಡತಿಯ ಅಧಿಕಾರವಿರುತ್ತದೆ. ಆದುದರಿಂದ, ಕ್ರೈಸ್ತ ಹೆಂಡತಿಯರು ತಾವು ತಮ್ಮ ಗಂಡಂದಿರ ಅಧಿಕಾರದ ಡಿಯಲ್ಲಿದ್ದಾರೆಂಬುದರ ಗುರುತಾಗಿ ಸಾರ್ವಜನಿಕ ಆರಾಧನಾವೇಳೆಯಲ್ಲಿ ಯಾವಾಗಲೂ ತಮ್ಮ ತಲೆಗಳನ್ನು ಮುಚ್ಚಿಕೊಳ್ಳಬೇಕೆಂದು ಈ ಕ್ರೈಸ್ತರ ಎರಡನೆಯ ಗಂಪು ನಂಬುತ್ತದೆ. ಆದರೆ ಗಂಡಂದಿರು ಸಾರ್ವಜನಿಕ ಆರಾಧನಾವೇಳೆಯಲ್ಲಿ ತಮ್ಮ ತಲೆಗಳನ್ನು ಮುಚ್ಚಿಕೊಳ್ಳಬಾರದು ಯಾಕೆಂದರೆ ಅವರು ತಮ್ಮ ಹೆಂಡತಿಯರ ಮೇಲೆ ಅಧಿಕಾರವನ್ನು ಹೊಂದಿರುತ್ತಾರೆಂದು ಇವರು ಹೇಳುತ್ತಾರೆ. ಸ್ತ್ರೀಯ ಉದ್ದವಾದ ಕೂದಲೇ ಅವಳ ತಲೆಗೆ ತಕ್ಕ ಮುಸುಕು. ಇದ್ದಂತೆ ಇರುತ್ತದೆಂದು ಕೆಲವು ಕ್ರೈಸ್ತರು ನಂಬುತ್ತಾರೆ (ವಚನ 15 ನೋಡಿರಿ). ಒಂದು ವೇಳೆ ಇದು ನಿಜವಾಗಿದ್ದರೆ ಹೆಂಡತಿಗೆ ಬೇರಿನ್ನಾವ ಮುಸುಕಿನ ಅಗತ್ಯವಿರುವದಿಲ್ಲ. ಈ ಭಾಗದಲ್ಲಿ ಪೌಲನು ಸಾರ್ವಜನಿಕ ಆರಾಧನಾ ವೇಳೆಯಲ್ಲಿ – ವಿಶೇಷವಾಗಿ ಸಾರ್ವಜನಿಕ ಸ್ಥಳದಲ್ಲಿ ಪ್ರಾರ್ಥಿಸುವ ಹಾಗು ಪ್ರವಾದಿಸುವ ವೇಳೆಯಲ್ಲಿ – ಮನೆ ಅಥವಾ ಸಭೆ ಅಥವಾ ಇತರ ಕೂಟದ ಸ್ಥಳದಲ್ಲಿ ಒಬ್ಬನು ತಲೆಯನ್ನು ಮುಚ್ಚಿಕೊಳ್ಳುವದರ ವಿಷಯವಾಗಿ ಮಾತಾಡುತ್ತಿದ್ದಾನೆಂಬದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಉಳಿದ ಎಲ್ಲಾ ಸಮಯಗಳಲ್ಲಿ ಗಂಡನು ತಲೆಯನ್ನು ಮುಚ್ಚಿಕೊಳ್ಳುವದಕ್ಕೂ ಹೆಂಡತಿಯು ತನ್ನ ತಲೆಯನ್ನು ಮುಚ್ಚಿಕೊಳ್ಳದೆ ಬಿಡುವದಕ್ಕು ಸ್ವತಂತ್ರರಾಗಿರುತ್ತಾರೆ.

**6** ಪೌಲನ ಕಾಲದಲ್ಲಿ ವೇಶ್ಯೆಯರ ಹಾಗು ಇತರ ಕೆಟ್ಟ ಸ್ತ್ರೀಯರ ತಲೆಯನ್ನು ಬೋಳಿಸುವದರ ಮೂಲಕ ಅವರನ್ನು ದಂಡಿಸಲಾಗುತ್ತಿತ್ತು. ಆದುದರಿಂದ, ಯಾವದೇ ಸ್ತ್ರೀಯು ತನ್ನ ತಲೆಯನ್ನು ಮುಚ್ಚಿಕೊಳ್ಳದೆ ಸಾರ್ವಜನಿಕ ಸ್ಥಳದಲ್ಲಿ ಪ್ರಾರ್ಥಿಸುವದಾದರೆ ಅವಳು ತಲೆಯನ್ನು ಬೋಳಿಸಿಕೊಂಡ ವೇಶ್ಯೆಯಂತಿದ್ದು ಅವಮಾನಗೊಂಡವಳಾಗುತ್ತಾಳೆ ಎಂದು ಪೌಲನು ಇಲ್ಲಿ ಹೇಳುತ್ತಾನೆ!

**7** ಪೌಲನ ಕಾಲದಲ್ಲಿ ದಾಸರನ್ನು ಹೊರತು ಪಡಿಸಿ ಗ್ರೀಕ್ ಪುರುಷರು ಟೊಪ್ಪಿಗೆಗಳನ್ನು ಧರಿಸಿಕೊಳ್ಳುತ್ತಿರಲಿಲ್ಲ. ಪುರುಷನು ಸ್ವತಂತ್ರನಾಗಿದ್ದನು; ಆತನು ದೇವರ ಪ್ರತಿರೂಪವೂ ಪ್ರಭಾವವೂ ಆಗಿದ್ದನು. ಆದುದರಿಂದ ಆತನು ಟೊಪ್ಪಿಗೆಯನ್ನು ಧರಿಸಿಕೊಳ್ಳುವ ಅಗತ್ಯವಿರಲಿಲ್ಲ.

ಆದಿಕಾಂಡ 1:27ರ ಪ್ರಕಾರವಾಗಿ, ಪುರುಷರು ಮತ್ತು ಸ್ತ್ರೀಯರು ಇಬ್ಬರೂ ದೇವರ ಸ್ವರೂಪದಲ್ಲಿ ನಿರ್ಮಿಸಲ್ಪಟ್ಟರು, ಆದರೆ ಪುರುಷನು ಮೊದಲು ಸೃಷ್ಟಿಸಲ್ಪಟ್ಟನಾದ್ದರಿಂದ ಆತನು ದೇವರ ಪ್ರಭಾವವಾಗಿದ್ದಾನೆ, ಮತ್ತು ಸ್ತ್ರೀಯು ಪುರುಷನೊಳಗಿಂದ ಸೃಷ್ಟಿಸಲ್ಪಟ್ಟವಳಾದ್ದರಿಂದ ಅವಳು ಪುರುಷನ ಪ್ರಭಾವವಾಗಿದ್ದಾಳೆ (ಆದಿಕಾಂಡ 2:18, 21:23).

**8-9** ಪುರುಷನು ಸ್ತ್ರೀಯಿಂದ ಉತ್ಪತ್ತಿಯಾಗಲಿಲ್ಲ; ಸ್ತ್ರೀಯು ಪುರುಷನಿಂದ ಉತ್ಪತ್ತಿಯಾದಳು. ಮೊದಲನೆಯ ಸ್ತ್ರೀಯಾದ ಹವ್ವಳು ಪ್ರಥಮ ಮಾನವನಾದ ಆದಾಮನ ಪಕ್ಕೆಲುಬೊಂದರಿಂದ ನಿರ್ಮಿಸಲ್ಪಟ್ಟಳು (ಆದಿಕಾಂಡ 2:21-22).

ದೇವರು ಸ್ತ್ರೀಯನ್ನು ಪುರುಷನಿಗಾಗಿ ನಿರ್ಮಿಸಿದನು; ಪುರುಷನಿಗೆ ಸರಿಬೀಳುವ ಸಹಕಾರಿಣಿ ಆಗಿರಬೇಕೆಂದು ದೇವರು ಸೃಷ್ಟಿಸಿದನು (ಆದಿಕಾಂಡ 1:18).

**10** ಏದೇನ್ ತೋಟದಲ್ಲಿ ಹವ್ವಳು ಪಾಪ ಮಾಡಿದ ನಂತರ ದೇವರು ಅವಳನ್ನು ಆದಾಮನ ಅಧಿಕಾರಕೊಳ್ಳಪಡಿಸಿದನು (ಆದಿಕಾಂಡ 3:16). ಈ ಕಾರಣದಿಂದಲೇ ಸ್ತ್ರೀಯು ತನ್ನ ಗಂಡನ ಅಧಿಕಾರದ ಗುರುತನ್ನು ಧರಿಸಬೇಕು; ಅಂದರೆ, ಅವಳು ಸಾರ್ವಜನಿಕ ಸ್ಥಳದಲ್ಲಿ ಮುಸುಕನ್ನು ತಲೆಯ ಮೇಲೆ ಹಾಕಿಕೊಂಡಿರಬೇಕು. ಒಂದು ವೇಳೆ ಅವಳು ತಲೆಯನ್ನು ಮುಚ್ಚಿಕೊಳ್ಳದಿದ್ದರೆ ಅವಳನ್ನು ಅಗೌರವಾನ್ವಿತ ಸ್ತ್ರೀಯೆಂದು ಪರಿಗಣಿಸಲಾಗುತ್ತದೆ. ಒಬ್ಬ ಹೆಂಡತಿಯು ದೂತರ ನಿಮಿತ್ತವಾಗಿ ಸಹ ತನ್ನ ತಲೆಗೆ ಮುಸುಕನ್ನು ಹಾಕಿಕೊಂಡಿರಬೇಕೆಂದು ಪೌಲನು ಹೇಳುತ್ತಾನೆ. ಸಭೆಯ ಆರಾಧನಾ ವೇಳೆಯಲ್ಲಿ ಅನೇಕ ದೂತರು ಹಾಜರಿರುತ್ತಾರೆಂದು ಅನೇಕರು ನಂಬುತ್ತಾರೆ. ಹೀಗೆ ಸ್ತ್ರೀಯರು ಸಾರ್ವಜನಿಕ ಆರಾಧನಾ ವೇಳೆಯಲ್ಲಿ ಹಾಜರಿರುವ ದೂತರಿಗೆ ಬೇಸರವನ್ನುಂಟು ಮಾಡದಂತೆ ತಮ್ಮ ತಲೆಗೆ ಮುಸುಕನ್ನು ಹಾಕಿಕೊಂಡಿರಬೇಕೆಂಬುದು ಪೌಲನ ತಾತ್ಪರ್ಯವಾಗಿರುತ್ತದೆ.

**11** ಪುರುಷ ಮತ್ತು ಸ್ತ್ರೀಯು ಪರಸ್ಪರರನ್ನು ಅವಲಂಭಿಸಿದವರಾಗಿ ಜೀವಿಸಬೇಕೆಂದು ದೇವರು ಅವರನ್ನು ನಿರ್ಮಿಸಿದನು. ಅವರು "ವಿವಾಹ"ದಲ್ಲಿ ಒಂದೇ ಶರೀರವಾಗುವದಕ್ಕಾಗಿ ಸೃಷ್ಟಿಸಲ್ಪಟ್ಟನು (ಆದಿಕಾಂಡ 2:23-24). ಅವರು "ಒಂದೇ ಶರೀರ" ಆಗಿರುವ ದಾದರೆ ಪರಸ್ಪರ ಸ್ವತಂತ್ರರಾಗಿ ಜೀವಿಸಲು ಹೇಗೆ ಸಾಧ್ಯ?

**12** ಪುರುಷನು ಹೆಚ್ಚಳ ಪಟ್ಟುಕೊಂಡು ಸ್ತ್ರೀಯನ್ನು ತುಚ್ಚವಾಗಿ ಕಾಣಬಾರದು ಅವನಿಗೆ ಜನ್ಮ ನೀಡಿದವಳು ಒಬ್ಬ ಸ್ತ್ರೀಯೇ ಎಂಬದನ್ನು ಆತನು ಮರೆಯದಿರಲಿ!

ಆದರೆ, ಮಕ್ಕಳು ಸ್ತ್ರೀಯ ದೇಹದಿಂದ ಹುಟ್ಟಿದಾಗ್ಯು ದೇವರಿಗೆ ಮಾತ್ರವೇ ಜೀವವನ್ನು ಸೃಷ್ಟಿಸುವ ಶಕ್ತಿಯಿರುತ್ತದೆ...ಸಮಸ್ತಕ್ಕೂ ದೇವರೇ ಮೂಲ ಕಾರಣನು.

**13** ಹೆಂಡತಿಯರು ತಮ್ಮ ತಲೆಗೆ ಮುಸುಕನ್ನು ಹಾಕಿಕೊಳ್ಳಬೇಕೆಂಬ ವಿಷಯವನ್ನು ಕೊರಿಂಥದ ಕ್ರೈಸ್ತರು ತಿಳಿದಿರಬೇಕಿತ್ತು; ಅವಿಶ್ವಾಸಿಗಳಾದ ಗ್ರೀಕರಿಗೂ ಅದು ತಿಳಿದಿತ್ತು.

ಆದರೆ ನೆನಪಿರಲಿ: ಒಬ್ಬ ವ್ಯಕ್ತಿಯು ತಲೆಯನ್ನು ಮುಚ್ಚಿಕೊಳ್ಳಬೇಕೆಂಬ ಕುರಿತಾದ ಪೌಲನ ಬೋಧನೆಯು ಒಬ್ಬನು ಪ್ರಾರ್ಥನೆಯನ್ನಾಗಲಿ ಪ್ರವಾದನೆಯನ್ನಾಗಲಿ ಮಾಡುವ ವೇಳೆಯಲ್ಲಿ ಮಾತ್ರವೇ ಅನ್ವಯವಾಗುತ್ತದೆ ಹೊರತು ಬೇರೆ ಸಮಯಗಳಲ್ಲಲ್ಲ (ವಚನಗಳು 4-5).

**14** ಪೌಲನ ಕಾಲದಲ್ಲಿ ರೋಮಾಯ ಸಾಮ್ರಾಜ್ಯದುದ್ದಕ್ಕೂ ಪುರುಷರು ಸ್ತ್ರೀಯರಿಗಿಂತಲೂ ಚಿಕ್ಕದಾದ ಕೂದಲನ್ನು ಇಟ್ಟುಕೊಂಡಿರುತ್ತಿದ್ದರು. ಪುರುಷನು ಸ್ತ್ರೀಯಂತೆ ತನ್ನ ಕೂದಲನ್ನು ಬೆಳಿಸಿಕೊಂಡರೆ ಅವನಿಗೆ ಅದು ಅವಮಾನಕರವಾಗಿರುತ್ತಿತ್ತು.

ಪುರುಷರು ಯಾವ ತಲೆಮಾರಿನವರಾದಾಗ್ಯು ಅಥವಾ ಯಾವದೇಶದಲ್ಲಿ ವಾಸಿಸಿದಾಗ್ಯು ತಮ್ಮ ಕೂದಲುಗಳನ್ನು ಬೆಳಿಸಿಕೊಳ್ಳಲೇಬಾರದು ಎಂದು ಪೌಲನ ತಾತ್ಪರ್ಯವಾಗಿದೆಯೋ? ಪೌಲನು ತನ್ನ ಕಾಲದ ವಿಷಯದಲ್ಲಿ ಮಾತ್ರವೇ ಬರೆಯುತ್ತಿದ್ದಾನೆಂದು ಕೆಲವು ಕ್ರೈಸ್ತರು ಅಭಿಪ್ರಾಯ ಪಡುತ್ತಾರೆ. ಆದರೆ ಇತರರು ಯೋಚಿಸುವದೇನೆಂದರೆ ಪೌಲನು ಪ್ರತಿಯೊಂದು ತಲೆಮಾರಿನವರಿಗಾಗಿ ಈ ಬೋಧನೆಯನ್ನು ನೀಡಿರತ್ತಾನೆ; ಪುರುಷನ ಕೂದಲು ಯಾವಾಗಲೂ ಸ್ತ್ರೀಯ ಕೂದಲಿಗಿಂತ ಚಿಕ್ಕದ್ದಾಗಿರಬೇಕೆಂದು ಅವರು ಹೇಳುತ್ತಾರೆ.

ನಿಜವಾದ ಕ್ರೈಸ್ತರು ಪೌಲನ ಈ ಬೋಧನೆಯನ್ನು ವಿವಿಧ ರೀತಿಗಳಲ್ಲಿ ಅರ್ಥ ಮಾಡಿಕೊಳ್ಳುವ ಸಾಧ್ಯತೆಯಿರುತ್ತದೆ. ಪ್ರತಿಯೊಬ್ಬ ಕ್ರೈಸ್ತನು ಪವಿತ್ರಾತ್ಮನ ಸಹಾಯದಿಂದ ಈ ವಚನಗಳನ್ನು ಅಭ್ಯಾಸಿಸಿ ಪೌಲನ ತಾತ್ಪರ್ಯವೇನೆಂಬದನ್ನು ತನ್ನ ಮನಸ್ಸಿನಲ್ಲಿ ತಿರ್ಮಾನಿಸಿಕೊಳ್ಳಬೇಕು. ಆದರೆ ಈ ಚಿಕ್ಕವಿಷಯಗಳಲ್ಲಿ ನಮ್ಮ ಅಭಿಪ್ರಾಯಕ್ಕೆ ವ್ಯತ್ಯಾಸವಾದ ಅಭಿಪ್ರಾಯವನ್ನು ಹೊಂದಿರುವ ಮತ್ತೊಬ್ಬ ವಿಶ್ವಾಸಿಯನ್ನು ಕುರಿತು ನಾವು ತೀರ್ಪು ಮಾಡಬಾರದು ಅಥವಾ ದೋಷಿಯೆಂದು ಎಣಿಸಬಾರದು. ಚಿಕ್ಕ ವಿಷಯಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಹೊಂದಿರುವದರಲ್ಲಿ ತಪ್ಪೇನಿಲ್ಲ, ಆದರೆ ಒಬ್ಬರನ್ನೊಬ್ಬರು ಕುರಿತು ತೀರ್ಪು ಮಾಡುವದು ಸರಿಯಲ್ಲ. ಕೂದಲಿನ ವಿಷಯದಲ್ಲಿ ತರ್ಕಿಸುವದರ ಮೂಲಕ ಸಭೆಯನ್ನು ಇಬ್ಬಾಗಿಸಬೇಡಿರಿ.

**15** ಇತಿಹಾಸದುದ್ದಕ್ಕೂ ಸ್ತ್ರೀಯರು ಸಾಮಾನ್ಯವಾಗಿ ಉದ್ದವಾದ ಕೂದಲನ್ನು ಹೊಂದಿರುತ್ತಾರೆ. ಅದು ತಕ್ಕದ್ದೆಂದು ಸ್ವಭಾವ ಸಿದ್ಧವಾಗಿ ತಿಳಿಯುತ್ತದೆಂದು ಪೌಲನು ಹೇಳುತ್ತಾನೆ (ವಚನ 14). ಸ್ತ್ರೀಯ ಉದ್ದವಾದ ಕೂದಲು ದೇವರಿಂದ ಕೊಡಲ್ಪಟ್ಟ ಮುಸುಕಿನಂತಿರುತ್ತದೆ. ವಾಸ್ತವದಲ್ಲಿ ಅನೇಕರು ಯೋಚಿಸುವದೇನೆಂದರೆ, ಸ್ತ್ರೀಯ ಉದ್ದವಾದ ಕೂದಲು ಮಾತ್ರವೇ ಅವಳಿಗೆ ಅಗತ್ಯವಾದ ಮುಸುಕು ಆಗಿರುತ್ತದೆ ಎಂಬದೇ (ವಚನ 5 ಮತ್ತು ವ್ಯಾಖ್ಯಾನ ನೋಡಿರಿ).

**16** ಕೊರಿಂಥದವರು ಈ ವಿಷಯದಲ್ಲಿ ವಾಗ್ವಾದ ಪ್ರಿಯರಾಗಬಾರದು, ಪೌಲನು ಹೇಳುವದನ್ನೇ ಮಾತ್ರ ಅವರು ಒಪ್ಪಿಕೊಳ್ಳಲಿ. ಪೌಲನು ಅವರಿಗೆ ಯಾವದೋ ಅಪರಿಚಿತವಾದ ನೂತನ ಬೋಧನೆಯನ್ನು ನೀಡುತ್ತಿಲ್ಲ, ಆತನು ಇತರ ಎಲ್ಲಾ ಸಭೆಗಳಿಗೆ ನೀಡಿದ ಬೋಧನೆಯನ್ನೇ ಅವರಿಗೂ ನೀಡಿದ್ದನು.

## ಕರ್ತನ ಭೋಜನ (11:17-34)

**17-18** ಪೌಲನು 2ನೇ ವಚನದಲ್ಲಿ ಕೊರಿಂಥದವರನ್ನು ಹೊಗಳಿದನು; ಈಗ ಆತನು ಅವರನ್ನು ತಿದ್ದಬೇಕಾಗಿರುತ್ತದೆ. ಕೊರಿಂಥದಲ್ಲಿನ ಸಭೆಯಲ್ಲಿ ಅನೇಕ ಭೇದಗಳಿರುತ್ತವೆ. ಈ ಭೇದಗಳಲ್ಲಿ ಕೊರಿಂಥದಲ್ಲಿನ ಸಭೆಯಲ್ಲಿ ಅನೇಕ ಭೇದಗಳು ಯಾವ ಅಪೊಸ್ತಲನನ್ನು ಅನುಸರಿಸಬೇಕೆಂಬುದರ ಕುರಿತಾಗಿದ್ದವು (1 ಕೊರಿಂಥ 1:11-12). ಇತರ ಭೇದಗಳು ಶ್ರೀಮಂತ

ಹಾಗು ಬಡವರ ನಡುವೆಯೂ, ಸಾಮಾಜಿಕವಾಗಿ ಪ್ರಾಮುಖ್ಯರಾದ ವಿಶ್ವಾಸಿಗಳು ಹಾಗು ಸಾಮಾನ್ಯ ವಿಶ್ವಾಸಿಗಳ ನಡುವೆಯೂ ಇದ್ದವು. ಈ ರೀತಿಯಾಗಿ ಭೇದಗಳಿರುವದಾದರೆ ಸಭೆಯಾಗಿ ಕೂಡಿ ಬರದಿರುವದೇ ಉತ್ತಮವಾದದ್ದು!..ಯಾಕೆಂದರೆ ನೀವು ಕೂಡಿಬರುವದರಿಂದ ಕೇಡಾಗುತ್ತದೆಯೇ ಹೊರತು ಮೇಲಾಗುವದಿಲ್ಲ ಎಂದು ಪೌಲನು ಕೊರಿಂಥವರಿಗೆ ಹೇಳುತ್ತಾನೆ.

19 ಕ್ರೈಸ್ತರ ಯಾವದೇ ಗುಂಪಿನೊಳಗೆ ಅನೇಕ ವಿಷಯಗಳಲ್ಲಿ ವಿವಿಧ ವಿಚಾರಗಳು ಹಾಗು ದೃಷ್ಟಿಕೋನಗಳು ಯಾವಾಗಲೂ ಇದ್ದೇ ಇರುತ್ತವೆ. ಇದು ತಪ್ಪಲ್ಲ. ಹೇಗಿದ್ದರೂ, ಕ್ರೈಸ್ತರೊಳಗೆ ಅಂತಹ ಭಿನ್ನಾಭಿಪ್ರಾಯಗಳು ಉದ್ಭವವಾಗುವಾಗ ಎಲ್ಲಾ ಪಕ್ಷದವರು ಪರಸ್ಪರರೆಡೆಗೆ ಪ್ರೀತಿ ಹಾಗು ದೀನತೆಯಿಂದ ನಡೆದುಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ. ಪ್ರೀತಿ ಮತ್ತು ದೀನತೆಯನ್ನು ತೋರ್ಪಡಿಸುವವರು ಮಾತ್ರವೇ ದೇವರಿಂದ ಮನ್ನಣೆಯನ್ನು ಹೊಂದಿರುತ್ತಾರೆ. ಅಹಂಕಾರಿಗಳಾಗಿದ್ದು ಸಭೆಯಲ್ಲಿ ಭೇದ ಹಾಗು ಪಂಗಡವನ್ನುಂಟು ಮಾಡುವವರು ದೇವರಿಂದ ಯೋಗ್ಯರೆನಿಸಿಕೊಳ್ಳುವದಿಲ್ಲ. ಚಿಕ್ಕ ವಿಷಯಗಳ ಕುರಿತಾಗಿ ವಿವಿಧ ವಿಚಾರವನ್ನು ದೀನತೆಯಿಂದ ವ್ಯಕ್ತ ಪಡಿಸುವದರ ಮೂಲಕ ಯಾವಹಾನಿಯೂ ಉಂಟಾಗುವದಿಲ್ಲ. ವಿಶ್ವಾಸಿಗಳು ಅಂತಹ ವಿಷಯಗಳಲ್ಲಿ ಪರಸ್ಪರರಿಗೆ ತೀರ್ಪು ಮಾಡಿ ವಿರೋಧಿಸುವಾಗ ಹಾನಿಯುಂಟಾಗುತ್ತದೆ.

20 ಕೊರಿಂಥದ ಸಭೆಯಲ್ಲಿ ಕರ್ತನ ಭೋಜನವು – ಕ್ರಿಸ್ತನು ತನ್ನ ಶಿಷ್ಯರೊಂದಿಗೆ ಪಸ್ಕಹಬ್ಬದ ಕಡೇ ಭೋಜನವನ್ನು ಆಚರಿಸಿದಂತೆಯೇ – ಸಾಮಾನ್ಯ ಊಟದೊಂದಿಗೆ ಒಟ್ಟಾಗಿ ಆಚರಿಸಲ್ಪಡುತ್ತಿತ್ತು. ಹೀಗೆ. ಕೊರಿಂಥದ ಕ್ರೈಸ್ತರು ಕರ್ತನ ಭೋಜನಕ್ಕಾಗಿ ಸೇರಿಬಂದಾಗ ರೊಟ್ಟಿ ಮತ್ತು ದ್ರಾಕ್ಷಾರಸವನ್ನು ಮಾತ್ರವೇ ಸೇವಿಸದೆ ಅವರು ಇಡೀ ಊಟವನ್ನೇ ಸೇವಿಸುತ್ತಿದ್ದರು. ಆದರೆ ಕೊರಿಂಥದವರು ಕರ್ತನ ಭೋಜನದ ನಿಜವಾದ ಅರ್ಥವನ್ನೂ ಉದ್ದೇಶವನ್ನೂ ಮರೆತುಬಿಟ್ಟಿದ್ದರು. ಅವರು ಸಂತೋಷದಿಂದ ಸಮಯ ಕಳೆದು ಹೊಟ್ಟೆ ತುಂಬಾ ಉಣ್ಣುವದಕ್ಕೂ ದ್ರಾಕ್ಷಾರಸವನ್ನು ಕುಡಿಯುವದಕ್ಕೂ ಕೂಡಿ ಬರುತ್ತಿದ್ದರು (ವಚನ 21). ಅಂತಹ ಪರಿಸ್ಥಿತಿಗಳಲ್ಲಿ ಕರ್ತನ ಭೋಜನವನ್ನು ನಿಜವಾಗಿಯೂ ಆಚರಿಸುವದು ಅಸಾಧ್ಯವಾಗಿರುತ್ತಿತ್ತು.

21 ಕೊರಿಂಥದಲ್ಲಿನ ಸಭೆಯಲ್ಲಿ ಕರ್ತನ ಭೋಜನಕ್ಕೆ ಬರುತ್ತಿದ್ದ ಪ್ರತಿಯೊಬ್ಬನು ತನ್ನೊಂದಿಗೆ ಮನೆಯಿಂದ ಆಹಾರವನ್ನು ತರುತ್ತಿದ್ದನು. ಶ್ರೀಮಂತನು ಹೆಚ್ಚು ಆಹಾರತಂದರೆ ಬಡವನು ಸ್ವಲ್ಪ ಆಹಾರವನ್ನು ತರುತ್ತಿದ್ದನು. ಆದರೆ ಶ್ರೀಮಂತರು ತಮ್ಮ ಊಟವನ್ನು ಬಡವರೊಂದಿಗೆ ಹಂಚಿಕೊಳ್ಳುತ್ತಿರಲಿಲ್ಲ; ಆದದರಿಂದ ಹಲವಾರು ವೇಳೆ ಬಡವರು ಹಸಿದವರಾಗಿಯೇ ಹಿಂದಿರುಗುತ್ತಿದ್ದರು. ಸಭೆಯಲ್ಲಿದ್ದ ಅತಿ ಪ್ರಾಮುಖ್ಯರಾದ ಸದಸ್ಯರು ಮತ್ತೊಬ್ಬರಿಗಿಂತ ಮುಂದಾಗಿ ಊಟಮಾಡುತ್ತಿದ್ದರು (ಸಭೆಯ ಸದಸ್ಯರಲ್ಲಿ ದಾಸರು ಅಥವಾ ಸೇವಕರಾಗಿದ್ದವರು ಸಾಮಾನ್ಯವಾಗಿ ತಡಮಾಡಿ ಬರುತ್ತಿದ್ದರು, ಯಾಕೆಂದರೆ ಅವರು ಕರ್ತನ ಭೋಜನಕ್ಕೆ ಬರುವ ಮುಂಚೆ ತಮ್ಮ ಯಜಮಾನರ ಮನೆಯಲ್ಲಿ ಅವರ ಸೇವೆ ಮಾಡಬೇಕಾಗಿರುತ್ತಿತ್ತು).

22 ಒಂದು ವೇಳೆ ಸಭೆಯಲ್ಲಿರುವ ಶ್ರೀಮಂತ ಹಾಗು ಪ್ರಾಮುಖ್ಯರಾದ ಸದಸ್ಯರು ಈ ರೀತಿಯಾಗಿ ವರ್ತಿಸುವವರಾಗುವದಾದರೆ ಅವರು ತಮ್ಮ ಕ್ರಮವಾದ ಉಟವನ್ನು ಮೊದಲು ಮನೆಯಲ್ಲಿಯೇ ಮುಗಿಸಿಕೊಂಡು ಅನಂತರ ಕರ್ತನ ಭೋಜನಕ್ಕೆ ಬರಲಿ ಎಂದು ಪೌಲನು ಹೇಳುತ್ತಾನೆ. ಅವರು ನಡೆದುಕೊಳ್ಳುತ್ತಿದ್ದ ರೀತಿಯು ಕ್ರಿಸ್ತನಿಗೆ ಅವಮಾನವನ್ನೂ ನೋವನ್ನೂ ಉಂಟುಮಾಡಿತ್ತು. ಕ್ರಿಸ್ತನ ದೇಹವಾದ ಸಭೆಗಾಗಿ ಅವರ ಮರ್ಯಾದೆಯೆಲ್ಲಿತ್ತು? ಬಡ ಸಹೋದರರಿಗಾಗಿ ಅವರ ಪ್ರೀತಿ ಎಲ್ಲಿತು? ಅವರು ಕರ್ತನ ಭೋಜನವನ್ನು "ಪ್ರೇಮೌತಣ" ಎಂದು ಕರೆದಿರಬಹುದು. ಆದರೆ ಅವರು ತಮಗೆ ಮಾತ್ರವೇ ಪ್ರೀತಿಯನ್ನು ತೋರಿಸಿಕೊಳ್ಳುತ್ತಿದ್ದರು.

23 ಪೌಲನು ಕರ್ತನ ಭೋಜನದ ವಿಷಯದಲ್ಲಿ ವಿಶೇಷ ಸಲಹೆಗಳನ್ನು ಕರ್ತನಿಂದ ಹೊಂದಿದ್ದನು. ಖಂಡಿತವಾಗಿಯೂ ಪೌಲನು ಯೇಸುವಿನ ಕಡೇ ಭೋಜನ ವಿಷಯವನ್ನು ಹನ್ನೆರಡು ಮಂದಿ ಶಿಷ್ಯರಿಂದ ತಿಳುಕೊಂಡಿದ್ದನು. ಆದರೆ ಪೌಲನು ಕರ್ತನ ಭೋಜನ ಹಾಗು ಸಭೆಗಳಲ್ಲಿ ಅದು ಹೇಗೆ ಪಾಲಿಸಲ್ಪಡಬೇಕೆಂಬುದರ ವಿಷಯವಾಗಿ ಯೇಸುವನಿಂದ ನೇರವಾದ ಪ್ರಕಟಣೆಯನ್ನು ಸಹ ಪಡೆದಿರಬೇಕು (ಗಲಾತ್ಯ 1:11-12 ನೋಡಿರಿ). ಯೇಸು ಹಿಡಿದುಕೊಡಲ್ಪಟ್ಟ ರಾತ್ರಿಯಲ್ಲಿ ಪ್ರಥಮ ಕರ್ತನ ಭೋಜನ ಜರುಗಿತು. ಯೇಸು ತಮಗೋಸ್ಕರ ಎಷ್ಟೊಂದು ಹಿಂಸೆ ಅನುಭವಿಸಿದನೆಂಬದನ್ನು ನೋಡಿಯೂ ಕೊರಿಂಥದವರು ಕರ್ತನ ಭೋಜನವನ್ನು ರಂಜನೆಪಟ್ಟು ಮತ್ತರಾಗುವ ಸಮಯವನ್ನಾಗಿ ಪರಿಗಣಿಸಲು ಹೇಗೆ ಸಾಧ್ಯ?

24 ಕರ್ತನಾದ ಯೇಸು ರೊಟ್ಟಿಯನ್ನು ತೆಗೆದುಕೊಂಡು "ಇದು ನನ್ನ ದೇಹ" ಎಂದು ಹೇಳಿದನು (ಮತ್ತಾಯ 26:26; ಮಾರ್ಕ 14:22; ಲೂಕ 22:19; 1 ಕೊರಿಂಥ 10:16 ಮತ್ತು ವ್ಯಾಖ್ಯಾನ ನೋಡಿರಿ).

ಕರ್ತನಾದ ಯೇಸು ತನ್ನ ದೇಹದ ಮುಖಾಂತರ ನಮಗೆ ನಿತ್ಯ ಜೀವ ದೊರೆಯುವಂತಾಗಲು ನಮಗೋಸ್ಕರ ತನ್ನ ದೇಹವನ್ನು ಯಜ್ಞವಾಗಿ ಅರ್ಪಿಸಿದನು. ಆ ಅದ್ಭುತವಾದ ಸತ್ಯಾಂಶವನ್ನು ನಾವು ಎಂದಿಗೂ ಮರೆಯಬಾರದು. ವಾಸ್ತವದಲ್ಲಿ ಕರ್ತನ ಭೋಜನವನ್ನು ಮೇಲಿಂದ ಮೇಲೆ ಆಚರಿಸುವದಕ್ಕೆ ಒಂದು ಕಾರಣವೇನೆಂದರೆ ಯೇಸು ನಮಗೋಸ್ಕರ ಮಾಡಿದ ಕಾರ್ಯವನ್ನು ಯಾವಾಗಲೂ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವಂತಾಗಬೇಕೆಂಬದೇ.

ಯೇಸು ಹೇಳಿದ್ದೇನೆಂದರೆ: "....ನನ್ನನ್ನು ನೆನಪಿಸಿಕೊಳ್ಳುವದಕ್ಕೋಸ್ಕರ ಹೀಗೆ (ಈ ರೊಟ್ಟಿಯನ್ನು ತಿನ್ನಿರಿ) ಮಾಡಿರಿ".ಸಾಮಾನ್ಯವಾದ ರೊಟ್ಟಿಯು (ಆಹಾರವು) ನಮ್ಮ ದೇಹಗಳಿಗೆ ಅವಶ್ಯಕವಾಗಿರುವಂತೆಯೇ ನಮ್ಮ ಆತ್ಮಗಳಿಗೆ ಆತ್ಮೀಕ "ರೊಟ್ಟಿ" ಅವಶ್ಯಕವಾಗಿದೆ. ಯೇಸು ನಮ್ಮ ಆತ್ಮೀಕ ರೊಟ್ಟಿಯಾಗಿದ್ದಾನೆ(ಯೋಹಾನ 6:51, 53-54 ನೋಡಿರಿ).

25 ಯೇಸು ಹೇಳಿದ್ದೇನೆಂದರೆಃ "ಈ ಪಾತ್ರೆಯು ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ" ಮಾರ್ಕ 14:24 ರ ಪ್ರಕಾರವಾಗಿ ಯೇಸು ಇನ್ನೂ ಹೇಳಿದ್ದೇನೆಂದರೆ: "ಇದು ನನ್ನ ರಕ್ತ; ಒಡಂಬಡಿಕೆಯ

ರಕ್ತ". ಈ ಎರಡೂ ಹೇಳಿಕೆಗಳ ಅರ್ಥವು ಒಂದೇ ಆಗಿದೆ (ಮತ್ತಾಯ 26:28; ಮಾರ್ಕ 14:23-24; ಲೂಕ 22:20; 1 ಕೊರಿಂಥ 10:16 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಪಾತ್ರೆ ಎಂಬ ಪದದ ಮೂಲಕ ಪೌಲನು ಅದರೊಳಗಿರುವದನ್ನು ಕುರಿತು ಸೂಚಿಸುತ್ತಾನೆ. ಯೇಸು ಕಡೇ ರಾತ್ರಿ ಭೋಜನದ ವೇಳೆ ಆತನು ಮತ್ತು ಆತನ ಶಿಷ್ಯರು ದ್ರಾಕ್ಷಾರಸವನ್ನು ಕುಡಿದರು. ಆದರೆ ನಾವು ಕರ್ತನ ಭೋಜನದಲ್ಲಿ ದ್ರಾಕ್ಷಾರಸವನ್ನು ಮಾತ್ರವೇ ಕುಡಿಯಬೇಕೆಂದು ಪೌಲನು ಹೇಳುತ್ತಿಲ್ಲ. ಅನೇಕ ಕ್ರೈಸ್ತರು ಕರ್ತನ ಭೋಜನವನ್ನು ಆಚರಿಸುವಾಗ ಯಾವುದಾದರೂ ಒಂದು ವಿಧದ ಹಣ್ಣಿನ ರಸವನ್ನು ಕುಡಿಯುತ್ತಾರೆ.

ಇಲ್ಲಿ ಪ್ರಸ್ತಾಪಿಸಲಾಗಿರುವ ಹೊಸ ಒಡಂಬಡಿಕೆಯು ದೇವರು ಮಾನವರಿಗೆ ನೀಡಿರುವ ವಾಗ್ದಾನವಾಗಿದೆ, ಅದೇನೆಂದರೆ ಅವರು ಆತನ ಮಗನಾದ ಯೇಸುವನ್ನು ನಂಬುವದಾದರೆ ಆತನು ಅವರ ಪಾಪಗಳನ್ನು ಕ್ಷಮಿಸಿ ಅವರಿಗೆ ನಿತ್ಯಜೀವವನ್ನು ಕೊಡುತ್ತಾನೆಂಬದೇ. ಹಳೆ ಒಡಂಬಡಿಕೆಯ ಅಡಿಯಲ್ಲಿ ದೇವರು ಜನರಿಗೆ ತನ್ನ ಧರ್ಮಶಾಸ್ತ್ರವನ್ನು ಕೊಟ್ಟಿದ್ದನು; ಹೊಸ ಒಡಂಬಡಿಕೆಯ ಅಡಿಯಲ್ಲಿ ದೇವರು ಜನರಿಗೆ ತನ್ನ ಮಗನನ್ನು ಕೊಟ್ಟಿದ್ದಾನೆ. ಈಗ ಆತನ ಮಗನ ಮೂಲಕವೂ ಪವಿತ್ರಾತ್ಮನ ಮೂಲಕವೂ ದೇವರು ಒಂದು ಹೊಸ "ಧರ್ಮಶಾಸ್ತ್ರ"ವನ್ನು ಬರೆದಿದ್ದಾನೆ. ಹಳೆ ಒಡಂಬಡಿಕೆಯಂತೆ ಕಲ್ಲಿನ ಹಲಗೆಗಳ ಮೇಲಲ್ಲ ಆದರೆ ಮಾನವರ ಹೃದಯಗಳ ಮೇಲೆಯೇ (ಯೆರೆಮೀಯ 31:31-34; 2ಕೊರಿಂಥ 3:6; ಇಬ್ರಿಯ 8:8-10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಆದುದರಿಂದ, ಯೇಸುವಿನ ರಕ್ತವು ಈ ಹೊಸ ಒಡಂಬಡಿಕೆಯ ಸಂಕೇತವಾಗಿದೆ. ಯಾಕೆಂದರೆ ಆತನ ರಕ್ತದ ಮೂಲಕವೇ (ಅಂದರೆ, ಶಿಲುಬೆಯ ಮೇಲಿನ ಆತನ ತ್ಯಾಗಮಯವಾದ ಮರಣದ ಮೂಲಕ) ನಾವು ರಕ್ಷಣೆಯನ್ನು ನಿತ್ಯಜೀವವನ್ನು ಪಡೆಯುವವರಾಗಿದ್ದೇವೆ.

ರೊಟ್ಟಿಯಂತೆಯೇ ಯೇಸು ಪಾತ್ರೆಯನ್ನು ತೆಗೆದುಕೊಂಡು ಹೇಳಿದ್ದೇನೆಂದರೆ; "ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಪಾನ ಮಾಡಿರಿ"[35].

26 ನಾವು ಕರ್ತನ ಭೋಜನವನ್ನು ಆಚರಿಸುವಾಗ ಕರ್ತನ ಮರಣವನ್ನು ಪ್ರಸಿದ್ಧಿ ಪಡಿಸುವವರಾಗಿದ್ದೇವೆ; ಅಂದರೆ, ಕ್ರಿಸ್ತನು ನಮ್ಮ ರಕ್ಷಣೆ ಗೋಸ್ಕರ ಮರಣಿಸಿ ಪು ನರುತ್ಥಾನಗೊಂಡನೆಂದು ನಾವು ಎಲ್ಲಾ ಜನರಿಗೂ ಸಾಕ್ಷಿನೀಡುವವರಾಗಿದ್ದೇವೆ. ಕ್ರಿಸ್ತನು ಏನು ಮಾಡಿದ್ದಾನೆಂಬದನ್ನು ಇಡೀ ಲೋಕವು ತಿಳಿಯಲಿ; ನಾವು ಅದಕ್ಕೆ ಸಾಕ್ಷಿಗಳಾಗಿದ್ದೇವೆ.

ನಾವು ಕರ್ತನ ಮರಣವನ್ನು ಆತನು ಬರುವ ತನಕ ಪ್ರಸಿದ್ಧಿ ಪಡಿಸಬೇಕು. ಅಂದರೆ, ಕ್ರಿಸ್ತನು ತಿರಿಗಿ ಈ ಭೂಲೋಕಕ್ಕೆ ಬರುವ ತನಕ ನಾವು ಕರ್ತನ ಭೋಜನವನ್ನು ಆಚರಿಸುತ್ತಿರಬೇಕು. ಆತನು ಬಂದ ನಂತರ ನಾವು ಇನ್ನು ಕರ್ತನ ಭೋಜನವನ್ನು ಆಚರಿಸಬೇಕಾಗುವದಿಲ್ಲ, ಯಾಕೆಂದರೆ ಅಂದಿನಿಂದ ನಾವು ಆತನೊಂದಿಗೆ ಪರಲೋಕದಲ್ಲಿ ಆಚರಿಸುವೆವು (ಮತ್ತಾಯ 26:29; ಮಾರ್ಕ 14:25 ನೋಡಿರಿ).

27 ಕೊರಿಂಥದವರು ಕರ್ತನ ಭೋಜನವನ್ನು ಅಯೋಗ್ಯವಾದ ರೀತಿಯಲ್ಲಿ ಆಚರಿಸುತ್ತಿದ್ದರು (ವಚನಗಳು 20-22). ಕರ್ತನ ಭೋಜನವನ್ನು ಅಯೋಗ್ಯವಾದ ರೀತಿಯಲ್ಲಿ ಆಚರಿಸುವದೆಂದರೆ ಒಬ್ಬನ ಪಾಪಗಳನ್ನು ಅರಿಕೆ ಮಾಡದೆ, ಸಹೋದರನನ್ನು ಪ್ರೀತಿಸದೆ, ದೀನತೆಯಿಲ್ಲದೆ ಆಚರಿಸುವದು ಎಂಬ ಅರ್ಥವಾಗಿದೆ. ನಾವು ಕರ್ತನ ಭೋಜನವನ್ನು ಅಂತಹ ಒಂದು ಅಯೋಗ್ಯವಾದ ರೀತಿಯಲ್ಲಿ ಆಚರಿಸುವಾಗ ನಾವು ಕರ್ತನ ದೇಹಕ್ಕು ರಕ್ತಕ್ಕೂ ದ್ರೋಹ ಮಾಡುವವರಾಗಿರುತ್ತೇವೆ. ಇದು ನಾವು ಕ್ರಿಸ್ತನ ದೇಹವನ್ನು ಮುರಿದು ಆತನ ರಕ್ತವನ್ನು ಪು ನಃ ಸುರಿಸುತ್ತಾ ಆತನನ್ನು ಮತ್ತೇ ಶಿಲುಬೆಗೇರಿಸುವಂತಿರುತ್ತದೆ.

28 ಆದುದರಿಂದ, ಕರ್ತನ ಭೋಜನವನ್ನು ಆಚರಿಸುವದಕ್ಕೆ ಮೊದಲು ನಾವು ಅರಿಕೆ ಮಾಡದಿರುವ ಯಾವದೇ ಪಾಪವು ನಮ್ಮಲ್ಲಿರುತ್ತದೋ ಎಂದು ಜಾಗರೂಕತೆಯಿಂದ ನಮ್ಮನ್ನು ಪರೀಕ್ಷಿಸಿಕೊಳ್ಳಬೇಕು. ಪಾಪವಿರುವದಾದರೆ ನಾವು ಕೂಡಲೇ ಅದನ್ನು ಅರಿಕೆಮಾಡಿ ಅದಕ್ಕಾಗಿ ಪಶ್ಚಾತಾಪ ಪಟ್ಟು ದೇವರಿಂದ ಕ್ಷಮಾಪಣೆಯನ್ನು ಕೇಳಬೇಕು (1 ಯೋಹಾನ 1:9 ನೋಡಿರಿ). ಆಗ ಮಾತ್ರವೇ ಕರ್ತನ ಭೋಜನದಲ್ಲಿ ರೊಟ್ಟಿಯನ್ನು ತಿಂದು ಪಾತ್ರೆಯಲ್ಲಿ ಪಾನ ಮಾಡುವದು ಸಮಂಜಸವಾಗಿರುತ್ತದೆ.

29 ಕರ್ತನ ದೇಹವೆಂದು ವಿವೇಚಿಸದೆ ತಿನ್ನುವು ದೆಂದರೆ ಯೇಸುವಿನ ದೇಹವನ್ನು ಗೌರವಿಸದೆ ಆತನ ಮರಣವನ್ನು ನೆನಸಿಕೊಳ್ಳದೆ ಕರ್ತನ ಭೋಜನವನ್ನು ಆರಿಸಿದಂತಾಗುತ್ತದೆ. ಕರ್ತನ ದೇಹವೆಂದು ವಿವೇಚಿಸದೆ ತಿಂದು ಕುಡಿಯುವದೆಂದರೆ ಯೇಸುವಿನ ಬಾಧೆ ಮತ್ತು ಆತನ ಯಜ್ಞದ ಕುರಿತಾಗಿ ಚಿಂತಿಸದೇ ಕರ್ತನ ಭೋಜನವನ್ನು ಆಚರಿಸಿದಂತಾಗುತ್ತದೆ. ಕೊರಿಂಥವರು ತಾವು ಸಾಮಾನ್ಯವಾದ ಊಟವನ್ನು ಮಾಡುತ್ತಿದ್ದಾರೇನೋ ಎಂಬಂತೆ ಕರ್ತನ ಭೋಜನವನ್ನು ಆಚರಿಸುತ್ತಿದ್ದರು. ಅವರು ಭೋಜನವನ್ನು ಆಚರಿಸಿದರು, ಆದರೆ ಕರ್ತನನ್ನು ಅವರು ಮರೆತುಬಿಟ್ಟಿದ್ದರು!

ಒಂದು ವೇಳೆ ನಾವು ಕ್ರಿಸ್ತನ ದೇಹವನ್ನು ವಿವೇಚಿಸದೆ ಅಥವಾ ಗಣನೆಗೆ ತಂದುಕೊಳ್ಳದೆ ಕರ್ತನ ಭೋಜನವನ್ನು ಆಚರಿಸುವದಾದರೆ ನಾವು ನಿಶ್ಚಯವಾಗಿಯೂ ದೇವರ ತೀರ್ಪನ್ನು ನಮ್ಮ ಮೇಲೆ ಬರಮಾಡಿಕೊಳ್ಳುತ್ತೇವೆ; ದೇವರು ನಮ್ಮನ್ನು ದಂಡಿಸುವನು (ವಚನ 27). ಆ ನ್ಯಾಯತೀರ್ಪು ಅಥವಾ ದಂಡನೆಯು ಅವಿಶ್ವಾಸಿಗಳಿಗಾಗುವ ಕಡೇ ನ್ಯಾಯತೀರ್ಪಿನಂತಿರುವದಿಲ್ಲ; ಬದಲಾಗಿ ಅದು ದೇವರು ಅಯೋಗ್ಯವಾಗಿ ಕರ್ತನ ಭೋಜನದಲ್ಲಿ ಪಾಲುಗಾರರಾಗುವವರಿಗೆ ನೀಡುವ "ಶಿಕ್ಷಣ" (ಶಿಸ್ತು) ಆಗಿದೆ (ವಚನ 32).

**30** ಪೌಲನು ಈ ಪತ್ರಿಕೆಯನ್ನು ಬರೆಯುವ ವೇಳೆಗಾಗಲೇ ದೇವರು ಕೊರಿಂಥದ ಕ್ರೈಸ್ತರ ಅಯೋಗ್ಯ ವರ್ತನೆಗಾಗಿ ಅವರನ್ನು ಶಿಕ್ಷಿತರನ್ನಾಗಿ ಮಾಡುವದಕ್ಕೆ (ಅಥವಾ ದಂಡಿಸುವದಕ್ಕೆ) ಪ್ರಾರಂಭಿಸಿದ್ದನು. ದೇವರು ಅವರೊಳಗೆ ಅನೇಕರನ್ನು ಬಲಹೀನರನ್ನಾಗಿಯೂ ರೋಗಿಗಳನ್ನಾಗಿಯೂ ಮಾಡಿದ್ದನು; ಅಲ್ಲದೆ ಅವರಲ್ಲಿ ಹಲವರನ್ನು ಮರಣಕ್ಕೆ ಅನುಮತಿಸಿದ್ದನು (1 ಕೊರಿಂಥ 5:5). ಕೊರಿಂಥದವರಿಗೆ ಎಂತಹ ಕಠಿಣವಾದ ಶಿಕ್ಷಣ ಅಗತ್ಯವಾಗಿತ್ತಲ್ಲವೇ! ದೇವರು ನಮ್ಮ ಎಷ್ಟು ಕಠಿಣವಾಗಿ ಸಿಕ್ಷಿಸಬೇಕಾಗುವದು?

**31** ನಮ್ಮನ್ನು ನಾವೇ ವಿಚಾರಿಸಿಕೊಂಡರೆ ನ್ಯಾಯ ವಿಚಾರಣೆಗೊಳಗಾಗುವದಿಲ್ಲ – ಅಂದರೆ, ನಾವು ದೇವರ ಶಿಕ್ಷೆಗೊಳಪಡುವದಿಲ್ಲ. ಇಲ್ಲಿ "ನಮ್ಮನ್ನು ನಾವೇ ವಿಚಾರಿಸಿಕೊಳ್ಳುವದು" ಎಂದರೆ ನಮ್ಮನ್ನು ಪರೀಕ್ಷಿಸಿಕೊಳ್ಳುವದು ಎಂಬ ಅರ್ಥವಾಗಿದೆ. ಹಾಗಾದರೆ ಈ ವಚನದಲ್ಲಿ ಪೌಲನ ತಾತ್ಪರ್ಯವು ಈ ರೀತಿಯಾಗಿದೆ: ನಾವು ನಮ್ಮನ್ನು ಪರೀಕ್ಷಿಸಿಕೊಳ್ಳುವದಾದರೆ ನಮಗೆ ದೇವರಿಂದ ಶಿಕ್ಷಿತರಾಗುವ ಅಗತ್ಯ ಬೀಳುವದಿಲ್ಲ. ನಾವು ನಮ್ಮನ್ನು ಪರೀಕ್ಷಿಸಿಕೊಳ್ಳುವಾಗ ನಮ್ಮ ಪಾಪವನ್ನು ಕಂಡುಕೊಂಡು ಅದಕ್ಕಾಗಿ ಪಶ್ಚಾತಾಪಪಡಬಹುದು. ಮತ್ತು ನಾವು ನ್ಯಾಯ ತೀರ್ಪು ಅಥವಾ ದಂಡನೆಯನ್ನು ಹೊಂದುವ ಅಗತ್ಯವಿರುವದಿಲ್ಲ. ಯಾಕೆಂದರೆ ನಾವು ಪಾಪಕ್ಕಾಗಿ ಪಶ್ಚಾತಾಪ ಪಟ್ಟು ದೇವರಿಂದ ಕ್ಷಮಾಪಣೆಯನ್ನು ಕೇಳಿದ ತಕ್ಷಣವೇ ದೇವರು ನಮ್ಮನ್ನು ಕ್ಷಮಿಸಿ ಬಿಡುವನು (1 ಯೋಹಾನ 1:9 ಮತ್ತು ವ್ಯಾಖ್ಯಾನ ನೋಡಿರಿ). ಅನಂತರ ನಾವು ಕ್ಷಮಿಸಲ್ಪಟ್ಟ ಮೇಲೆ ಕರ್ತನ ಭೋಜನವನ್ನು ಸ್ವತಂತ್ರರಾಗಿಯೂ ಉಲ್ಲಾಸಕರವಾಗಿಯೂ ಆಚರಿಸಬಹುದು, ಮತ್ತು ನಾವು ನ್ಯಾಯತೀರ್ಪು ಣ್ನಲ್ಲ, ಆದರೆ ಆಶೀರ್ವಾದವನ್ನು ಪಡೆಯುವೆವು.

**32** ನಾವು ಕರ್ತನ ನ್ಯಾಯವಿಚಾರಣೆಗೆ ಒಳಗಾಗಿರಲಾಗಿ ಆತನು...ನಮ್ಮನ್ನು ಶಿಕ್ಷಿಸುತ್ತಾನೆ (ಶಿಸ್ತುಗೊಳಪಡಿಸುತ್ತಾನೆ). ನಾವು "ನ್ಯಾಯ ವಿಚಾರಣೆಗೆ ಒಳಗಾಗಿರಲಾಗಿ" ಎಂದು ಪೌಲನು ಹೇಳುವಾಗ ಆತನು ಅವಿಶ್ವಾಸಿಗಳ ಮೇಲೆ ಬರಲಿರುವ ಕಡೇ ನ್ಯಾಯ ತೀರ್ಪಿನ ಕುರಿತಾಗಿ ಮಾತಾಡುತ್ತಿಲ್ಲ. ಆತನು ವಿಶ್ವಾಸಿಗಳು ದಂಡನೆ ಅಥವಾ ಶಿಕ್ಷಿತರಾಗುವದರ ಕುರಿತಾಗಿ ಮಾತಾಡುತ್ತಿದ್ದಾನೆ. ನಮಗೆ ಲೋಕದವರ ಸಂಗಡ ಅಪರಾಧಿಗಳೆಂಬ ನಿರ್ಣಯವಾಗಬಾರದೆಂದು ದೇವರು ನಮ್ಮನ್ನು ಶಿಕ್ಷಿಸುತ್ತಾನೆ – ಅಂದರೆ, ಕಡೇ ನ್ಯಾಯ ತೀರ್ಪಿನ ವೇಳೆಯಲ್ಲಿ ಅವಿಶ್ವಾಸಿಗಳ ಲೋಕದ ಜೊತೆಯಲ್ಲಿ ಅಪರಾಧಿಗಳೆಂಬ ನಿರ್ಣಯವಾಗಬಾರದೆಂಬದಾಗಿ ಶಿಕ್ಷಿಸುತ್ತಾನೆ. ನಾವು ಪಾಪ ಮಾಡಿ ಕೂಡಲೇ ಅದಕ್ಕಾಗಿ ಪಶ್ಚಾತಾಪ ಪಡದಿದ್ದರೆ ದೇವರು ನಮ್ಮನ್ನು ಶಿಕ್ಷಿಸಬೇಕಾಗುತ್ತದೆ (ಇಬ್ರಿಯ 12:5-7, 10-11 ಮತ್ತು ವ್ಯಾಖ್ಯಾನ ನೋಡಿರಿ). ದೇವರು ಶಿಕ್ಷಿಸದಿದ್ದರೆ ನಾವು ಕ್ರಿಸ್ತನಿಂದ ಬಿದ್ದು ಹೋಗುವ ಸಾಧ್ಯತೆಯಿರುತ್ತದೆ. ದೇವರ ಶಿಕ್ಷೆಯ ಮೂಲಕವೇ ನಾವು ಸರಿಯಾದ ದಾರಿಯಲ್ಲಿ ಇಡಲ್ಪಡುತ್ತೇವೆ; ಶಿಕ್ಷೆಯ ಮುಖಾಂತರವೇ ನಾವು ಅವಿಶ್ವಾಸಿಗಳ ಸಂಗಡ ಅಪರಾಧಿಗಳೆಂಬ ನಿರ್ಣಯಕ್ಕೊಳಗಾಗದಂತೆ ಉಳಿಸಲ್ಪಡುತ್ತೇವೆ.

**33-34** ಕೊರಿಂಥದ ಕ್ರೈಸ್ತರನ್ನು ಅವರ ತಪ್ಪಿಗಾಗಿ ಗದರಿಸಿದ ಬಳಿಕ (ವಚನಗಳು 20:22). ಪೌಲನು ಈಗ ಅವರಿಗೆ ತಾವು ಹೇಗೆ ಕರ್ತನ ಭೋಜನವನ್ನು ಆಚರಿಸಬೇಕೆಂಬದನ್ನು ತಿಳಿಸುತ್ತಾನೆ. ಒಬ್ಬನು ಹಸಿದರೆ ಅವನು ಮನೆಯಲ್ಲೇ ಊಟಮಾಡಲಿ. ಕೊರಿಂಥವರು ತಮ್ಮ ಹೊಟ್ಟೆಗಳನ್ನು ತುಂಬಿಸಿಕೊಳ್ಳುವದಕ್ಕಾಗಿ ಕರ್ತನ ಭೋಜನಕ್ಕೆ ಬರಬಾರದು, ಆದರೆ ಕರ್ತನನ್ನು ಆರಾಧಿಸುವದಕ್ಕಾಗಿಯೇ ಬರಬೇಕು!

---

## ಅಧ್ಯಾಯ - 12

### ಆತ್ಮೀಕ ವರಗಳು (12:1-11)

**1** ಪವಿತ್ರಾತ್ಮನು ವಿಶ್ವಾಸಿಗಳಿಗೆ ಮುಖ್ಯವಾದ ಎರಡು ರೀತಿಗಳ ಆಶೀರ್ವಾದಗಳನ್ನು ಅಥವಾ ವರಗಳನ್ನು ಕೊಡುತ್ತಾನೆ. ಮೊದಲನೆಯದಾಗಿ, ಪವಿತ್ರಾತ್ಮನು ತನ್ನ ಫಲವನ್ನು – ಅಂದರೆ, ಪ್ರೀತಿ, ಸಂತೋಷ, ಸಮಾಧಾನ, ದೀರ್ಘ ಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ – ನಮ್ಮಲ್ಲಿ ಬೆಳೆಯುವಂತೆ ಮಾಡುತ್ತಾನೆ (ಗಲಾತ್ಯ 5:22-23). ಈ ಫಲಗಳು ಎಲ್ಲಾ ಕಾಲದ ಕ್ರೈಸ್ತರೆಲ್ಲರಲ್ಲಿಯೂ ತೋರಿಬರತಕ್ಕವು ಗಳಾಗಿವೆ.

ಎರಡನೆಯ ಮುಖ್ಯಾವಾದ ರೀತಿಯ ಆಶೀರ್ವಾದಗಳಾವವೆಂದರೆ ಪವಿತ್ರಾತ್ಮನು ನಮಗೆ ಅನುಗ್ರಹಿಸುವ ವಿಶೇಷವರಗಳು ಆಗಿವೆ. ಪೌಲನು ಈ ಭಾಗದಲ್ಲಿ ಆ ವರಗಳನ್ನು ಬಣ್ಣಿಸುತ್ತಾನೆ. ಈ ವರಗಳು ವಿಶೇಷ ಸಂದರ್ಭಗಳಲ್ಲಿ ಆಯ್ದ ಕ್ರೈಸ್ತರಿಗೆ ಕೊಡಲ್ಪಟ್ಟಿವೆ. ಅವು ಗಳು ಕೆಲವೊಂದು ವಿಶೇಷ ಅಗತ್ಯತೆಯನ್ನು ಸಂಧಿಸಲು ಅಥವಾ ಯಾವದಾದರೂ ವಿಶೇಷ ಗುರಿಯನ್ನು ನೆರವೇರಿಸಲು ಒಬ್ಬನನ್ನು ಶಕ್ತನನ್ನಾಗಿಸಲು ಕೊಡಲ್ಪಡುತ್ತವ[36].

**2** ಕೊರಿಂಥದವರು ಕ್ರೈಸ್ತರಾಗುವದಕ್ಕೆ ಮುಂಚೆ ಅವರಿಗೆ ಪ್ರೇರಣೆಯಾದ ಹಾಗೆ ಮೂಕ ವಿಗ್ರಹಗಳ ಬಳಿಗೆ ಹೋಗುತ್ತಿದ್ದರು. ಅವರು ಸುಳ್ಳು ಬೋಧಕರಿಂದಲೂ ಸುಳ್ಳು ಪ್ರವಾದಿಗಳಿಂದಲೂ ಮಾರ್ಗ ತಪ್ಪಿಸಲ್ಪಟ್ಟಿದ್ದರು. (ಎಫೆಸ 2:1-2; 4:17-18 ನೋಡಿರಿ). ಸ್ವತಃ ವಿಗ್ರಹವು ಏನೂ ಅಲ್ಲ. ಆದರೆ ಕೊರಿಂಥದವರು ವಿಗ್ರಹವೊಂದನ್ನು ಆರಾಧಿಸುವಾಗ ವಾಸ್ತವದಲ್ಲಿ ಅವರು ಒಂದು ಮಿಥ್ಯ ಆತ್ಮವನ್ನೂ ದುರಾತ್ಮವನ್ನೂ ಆರಾಧಿಸುತ್ತಿದ್ದರು (1 ಕೊರಿಂತ 10:19-20).

3 ಸತ್ಯದ ಆತ್ಮನು ಒಬ್ಬನೇ, ಆತನು ಪವಿತ್ರಾತ್ಮನೇ ಒಬ್ಬ ವ್ಯಕ್ತಿಯು ಪವಿತ್ರಾತ್ಮನನ್ನು ಪಡೆದುಕೊಂಡ ನಂತರವವಷ್ಟೇ ಯೇಸುವು ಕರ್ತನೂ, ದೇವಕುಮಾರನೂ ಎಂಬದನ್ನು ತಿಳುಕೊಳ್ಳಬಲ್ಲನು. ಒಂದು ವೇಳೆ ಯಾವನಾದರೂ ತನ್ನ ಹೃದಯಂತರಾಳದಿಂದ "ಯೇಸುವೇ ಕರ್ತನು"[37] ಎಂದು ಹೇಳಿದರೆ ಪವಿತ್ರಾತ್ಮನು ಆ ವ್ಯಕ್ತಿಯಲ್ಲಿ ಇದ್ದಾನೆಂದು ಖಚಿತವಾಗುತ್ತದೆ. ನಾವು ಸುಳ್ಳು ಆತ್ಮ ಹಾಗು ಪವಿತ್ರಾತ್ಮನ ನಡುವಿನ ವ್ಯತ್ಯಾಸವನ್ನು ಗುರುತಿಸಬೇಕು. ಸುಳ್ಳು ಅಥವಾ ದುರಾತ್ಮವು "ಯೇಸು ಶಾಪಗ್ರಸ್ತನು" ಎಂದು ಹೇಳುತ್ತದೆ; ಪವಿತ್ರಾತ್ಮನು ಯಾವಾಗಲೂ ಯೇಸುವನ್ನು ಘನಪಡಿಸುತ್ತಾನೆ (ಯೋಹಾನ 16:13-14; 1 ಯೋಹಾನ 4:1-3 ಮತ್ತು ವ್ಯಾಖ್ಯಾನ ನೋಡಿರಿ).

4 ಪವಿತ್ರಾತ್ಮನು ಎಲ್ಲಾ ವಿಶ್ವಾಸಿಗಳಿಗೂ ಒಂದೇ ಫಲಗಳನ್ನು ನೀಡುತ್ತಾನೆ, ಆದರೆ ಆತನು ಬೇರೆ ಬೇರೆ ವಿಶ್ವಾಸಿಗಳಿಗೆ ಬೇರೆ ಬೇರೆ ವರಗಳನ್ನು ಕೊಡುತ್ತಾನೆ. ಆತ್ಮನು ಒಬ್ಬನಿಗೆ ಒಂದು ವರವನ್ನೂ ಕೊಡುತ್ತಾನೆ ಮತ್ತು ಇನ್ನೊಬ್ಬನಿಗೆ ಮತ್ತೊಂದು ವರವನ್ನು ಕೊಡುತ್ತಾನೆ. ಹಾಗಿದ್ದರೂ, ಈ ವಿವಿಧ ವರಗಳು ಒಬ್ಬನೇ ಆತ್ಮನಿಂದ ಬರುತ್ತವೆ.

5 ಪ್ರತಿಯೊಬ್ಬ ಕ್ರೈಸ್ತನಿಗೂ ಅವನದೇ ಆದ ಸೇವೆ ಕೊಡಲ್ಪಟ್ಟಿದೆ, ಅಂದರೆ, ಅವನದೇ ಆದ ಕೆಲಸ, ಜವಾಬ್ದಾರಿ ಕೊಡಲ್ಪಟ್ಟಿದೆ. ಆದರೆ ಈ ವಿವಿಧ ರೀತಿಯ "ಸೇವೆಗಳು" ಒಬ್ಬನೇ ಕರ್ತನಿಗಾಗಿ ಮಾಡಲ್ಪಡುತ್ತವೆ.

6 ಕಾರ್ಯಗಳಲ್ಲಿ ಬೇರೆ ಬೇರೆ ವಿಧಗಳುಂಟು. ಇಲ್ಲಿ "ಕಾರ್ಯಗಳು" ಸ್ವತಃ ದೇವರ ಕಾರ್ಯವಾಗಿದೆ – ಜನರನ್ನು ನಂಬಿಕೆಗೆ ಕರೆಯುವದು, ರೋಗಿಗಳನ್ನು ಸ್ವಸ್ಥಪಡಿಸುವದು, ತನ್ನ ಸಭೆಯನ್ನು ಸ್ಥಾಪಿಸುವದು. ದೇವರು ಬೇರೆ ಬೇರೆ ಮಾರ್ಗಗಳಲ್ಲಿ ಕಾರ್ಯಮಾಡುತ್ತಾನೆ, ಆದರೆ ಆತನು ಒಬ್ಬನೇ ದೇವರಾಗಿದ್ದಾನೆ.

ಇಲ್ಲಿ 4-6 ವಚನಗಳಲ್ಲಿ ಪೌಲನು ತ್ರೈಯೇಕ ದೇವರ ಮೂರು ದೃಷ್ಟಿಕೋನಗಳನ್ನು ಪ್ರಸ್ತಾಪಿಸುತ್ತಾನೆ: ದೇವರಾತ್ಮ (ವಚನ 4), ಕರ್ತನು (ವಚನ 5), ಮತ್ತು ದೇವರು (ವಚನ 6). ಈ ಮೂವರು ಒಟ್ಟಾಗಿ ಒಬ್ಬನೇ ದೇವರಾಗಿದ್ದು ತಾವು ಮಾಡುವದೆಲ್ಲವನ್ನೂ ಒಟ್ಟಾಗಿ ಮಾಡುತ್ತಾರೆ.

7 ಪ್ರತಿಯೊಬ್ಬ ವಿಶ್ವಾಸಿಯಲ್ಲಿ ದೇವರಾತ್ಮನ ವರಗಳು ತೋರಿಬರುತ್ತವೆ: ಅಂದರೆ, ಪ್ರತಿಯೊಬ್ಬ ವಿಶ್ವಾಸಿಗೆ ದೇವರಾತ್ಮನ ವರಗಳಲ್ಲಿ ಒಂದು ಅಥವಾ ಹೆಚ್ಚು ವರಗಳು ಕೊಡಲ್ಪಟ್ಟಿರುತ್ತವೆ. ಪವಿತ್ರಾತ್ಮನು ಈ ವರಳನ್ನು ಏಕೆ ಕೊಡುತ್ತಾನೆ? ಆತನು ಅವು ಗಳನ್ನು ನಮ್ಮ ಸ್ವಂತ ಪ್ರಯೋಜನಕ್ಕಾಗಿ ಅಲ್ಲ, ಆದರೆ ಸರ್ವರ ಪ್ರಯೋಜನಾರ್ಥವಾಗಿ ಕೊಡುತ್ತಾನೆ.

ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ ವರಗಳು ಎಂದು ಪೌಲನು ಬರೆಯವದರ ತಾತ್ಪರ್ಯವೇನು? ಪ್ರತಿಯೊಬ್ಬ ಕ್ರೈಸ್ತನಿಗೆ ಒಂದು ಅಥವಾ ಹೆಚ್ಚು ವರಗಳು ಕೊಡಲ್ಪಟ್ಟಿವೆ ಎಂದು ಆತನ ಅರ್ಥವೋ? ಕೆಲವು ಮಂದಿ ಬೈಬಲ್ ಪಂಡಿತರು "ಹೌದು" ಎನ್ನುತ್ತಾರೆ ಮತ್ತು ಇನ್ನು ಕೆಲವರು "ಇಲ್ಲ" ಎನ್ನುತ್ತಾರೆ. ಆದರೆ ಪೌಲನು ಇಲ್ಲಿ "ಪ್ರತಿಯೊಬ್ಬ" ಕ್ರೈಸ್ತನಿಗೆ ದೇವರಾತ್ಮನು ವರಗಳನ್ನು ಕೊಡುತ್ತಾನೆಂದು ಹೇಳುತ್ತಾನೋ ಅಥವಾ ಕೆಲವರಿಗೆ ಮಾತ್ರವೇ ಕೊಡುತ್ತಾನೆಂದು ಹೇಳುತ್ತಾನೋ ತಿಳಿಯದು, ಆದರೆ ಪವಿತ್ರಾತ್ಮನು ತಾನು ವರಗಳನ್ನು ಕೊಡಲಿಚ್ಚಿಸುವ ಪ್ರತಿಯೊಬ್ಬನಿಗೆ ನೀಡುತ್ತಾನೆಂದಾದರೂ ಪೌಲನ ತಾತ್ಪರ್ಯವಾಗಿರುತ್ತದೆ.

8 ಪವಿತ್ರಾತ್ಮನ ವರಗಳಾವವು? ಇಲ್ಲಿ 8-10 ವಚನಗಳಲ್ಲಿ ಪೌಲನು ಪವಿತ್ರಾತ್ಮನ ವರಗಳ ಒಂಬತ್ತು ಉದಾಹರಣೆಗಳನ್ನು ನೀಡುತ್ತಾನೆ. ಪೌಲನು ರೋಮ 12:3-8; 1 ಕೊರಿಂಥ 12:28; ಎಫೆಸ 4;11 ರಲ್ಲಿ ಇತರ ಕೆಲವು ಉದಾಹರಣೆಗಳನ್ನು ನೀಡುತ್ತಾನೆ[38].

ಪೌಲನು ಇಲ್ಲಿ ಪ್ರಸ್ತಾಪಿಸುವ ಮೊದಲನೆಯ ವರವು ಜ್ಞಾನವಾಕ್ಯದ ವರವಾಗಿದೆ. ಇದು ದೇವರು ಕೇಳಿಕೊಳ್ಳುವ ಪ್ರತಿಯೊಬ್ಬರಿಗೂ ದಯಪಾಲಿಸುವ ಸಾಮಾನ್ಯ ಜ್ಞಾನವಲ್ಲ (ಯಾಕೋಬ 1:5). ಇಲ್ಲಿ ಪ್ರಸ್ತಾಪಿಸಲಾಗಿರುವ "ಜ್ಞಾನವಾಕ್ಯವು" ನಿರ್ದಿಷ್ಟವಾದ ಸಮಯಗಳಲ್ಲಿ ವಿಶೇಷ ಸಮಸ್ಯೆಗಳನ್ನು ಪರಿಹರಿಸುವದಕ್ಕಾಗಿ ದೇವರಾತ್ಮನು ಅನುಗ್ರಹಿಸುವ ವಿಶೇಷವಾದ ಆತ್ಮೀಕ ಜ್ಞಾನವಾಗಿದೆ.

ಎರಡನೆಯ ವರವು "ವಿಧ್ಯಾವಾಕ್ಯ" ಆಗಿದೆ. ಇದು ನಿರ್ದಿಷ್ಟವಾದ ವಿಷಯದ ಕುರಿತಾಗಿ ಕೊಡಲಾಗುವ ವಿಶೇಷವಾದ ಆತ್ಮೀಕ ತಿಳುವಳಿಕೆಯಾಗಿದೆ. ಉದಾಹರಣೆಗೆ, ಒಬ್ಬ ವ್ಯಕ್ತಿಯು ಅನಾರೋಗ್ಯವು ಳ್ಳವನಾಗಿರುವಾಗ ಇನ್ನೊಬ್ಬನು ಅವನ ರೋಗದ ಕುರಿತು "ವಿಧ್ಯಾವಾಕ್ಯ"ವನ್ನು ಪಡೆದುಕೊಳ್ಳಬಹುದು. ಅಥವಾ, ಇನ್ನೊಂದು ಉದಾಹರಣೆಯೇನೆಂದರೆ, ಒಬ್ಬವ್ಯಕ್ತಿಯು ಗುಪ್ತವಾಗಿ ಪಾಪ ಮಾಡುವಾಗ ಮತ್ತೊಬ್ಬನು "ವಿಧ್ಯಾವಾಕ್ಯ"ದ ಮುಖಾಂತರ ಆದರ ಕುರಿತಾಗಿ ತಿಳಿದುಕೊಳ್ಳಬಹುದು (ಅ.ಕೃತ್ಯ 5:1-11 ನೋಡಿರಿ).

9 ಮೂರನೆಯ ವರವಾದ ನಂಬಿಕೆಯು ನಮ್ಮ ರಕ್ಷಣೆಗೆ ಕಾರಣವಾದ ಕ್ರಿಸ್ತನಲ್ಲಿಡುವ ನಂಬಿಕೆಯಾಗಿರುವದಿಲ್ಲ. ಬದಲಾಗಿ, ಇಲ್ಲಿ ಪ್ರಸ್ತಾಪಿಸಲಾಗಿರುವ ನಂಬಿಕೆಯು ನಿರ್ದಿಷ್ಟವಾದ ಪರಿಸ್ಥಿತಿಯಲ್ಲಿ ಯಾವದಾದರು ಕೆಲಸಕ್ಕಾಗಿ ಕೊಡಲ್ಪಡುವ ವಿಶೇಷ ರೀತಿಯ ನಂಬಿಕೆಯಾಗಿದೆ. ಊದಾಹರಣೆಗೆ, ಒಬ್ಬ ವಿಶ್ವಾಸಿಗೆ ಯಾವದಾದರೂ ಸಂಗತಿಯ – ಹಣ, ಬಲ, ಆರೋಗ್ಯ, ಮುಂತಾದವು ಗಳ – ವಿಶೇಷ ಅಗತ್ಯತೆಯಿರುವದಾದರೆ ಮತ್ತೊಬ್ಬ ವಿಶ್ವಾಸಿಯು ಆ ಅಗತ್ಯತೆಗಾಗಿ ಪ್ರಾರ್ಥಿಸಲು ವಿಶೇಷ ನಂಬಿಕೆಯನ್ನು ಪಡೆದುಕೊಳ್ಳಬಹುದು. ಅಂತಹ ನಂಬಿಕೆಯು ಸಾಮಾನ್ಯವಾಗಿ ನಮಗೆ ನಮ್ಮ ಸ್ವಪ್ರಯೋಜನಾರ್ಥವಾಗಿಯಲ್ಲ, ಆದರೆ ಮತ್ತೊಬ್ಬರ ಪ್ರಯೋಜನಾರ್ಥವಾಗಿ ಕೊಡಲ್ಪಡುತ್ತದೆ (ಮಾರ್ಕ 11:22-23 ಮತ್ತು ವ್ಯಾಖ್ಯಾನ ನೋಡಿರಿ).

ಆತ್ಮನ ವರಗಳ ನಾಲ್ಕನೆಯ ಉದಾಹರಣೆಯು ರೋಗಗಳನ್ನು ವಾಸಿಮಾಡುವ ವರವು . ಈ ವರಗಳು ಅನಾರೋಗ್ಯ ಅಥವಾ ಘಾಯಕ್ಕೊಳಗಾಗಿರುವ ವ್ಯಕ್ತಿಗಳನ್ನು ವಾಸಿಮಾಡುವ ಉದ್ದೇಶದಿಂದ ಕೊಡಲ್ಪಡುತ್ತವೆ. ಒಬ್ಬನು ಈ ವರವನ್ನು ಹೊಂದಿರುವಾಗ ಔಷಧ ಮತ್ತು ವೈದ್ಯರ ಅಗತ್ಯವಿರುವದಿಲ್ಲ; ಅನಾರೋಗ್ಯವುಳ್ಳ ವ್ಯಕ್ತಿಯು ಪವಿತ್ರಾತ್ಮ ಬಲದ ಮೂಲಕ ಮಾತ್ರವೇ ಗುಣಪಡಿಸಲ್ಪಡುವನು. ಕೆಲವೊಂದು ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿಯನ್ನು ಸ್ವಸ್ಥಪಡಿಸಲು ಎರಡು ವರಗಳು ಬೇಕಾಗಬಹುದು: ಮೊದಲನೆಯದಾಗಿ, ರೋಗಗಳನ್ನು ವಾಸಿಮಾಡುವ ವರವೇ.

**10** ಐದನೆಯ ವರವು ಮಹತ್ತುಗಳನ್ನು ಮಾಡುವ ವರವು. ಇದು ರೋಗಗಳನ್ನು ವಾಸಿಮಾಡುವ ವರದಿಂದ ವ್ಯತ್ಯಾಸವಾದದ್ದು. ಹೊಸ ಒಡಂಬಡಿಕೆಯ ಕಾಲದಲ್ಲಿ ಈ" ಮಹತ್ತುಗಳನ್ನು ಮಾಡುವ ವರವು" ಯಾವನಿಗಾದರೂ ಹಾನಿಯನ್ನುಂಟು ಮಾಡುವ ವಿಶೇಷ ಪರಿಸ್ಥಿತಿಗಳಲ್ಲಿ ಕೊಡಲ್ಪಡುತ್ತಿತ್ತು. ಉದಾಹರಣೆಗೆ, ಯಾರನ್ನಾದರೂ ಕುರುಡರನ್ನಾಗಿಸುವದಕ್ಕಾಗಿ ಅಥವಾ ಮರಣಕ್ಕೊಳಪಡಿಸುವದಕ್ಕಾಗಿ ಕೊಡಲ್ಪಡುತ್ತಿತ್ತು (ಅ.ಕೃತ್ಯ 5:5; 13:6-12 ನೋಡಿರಿ). ಆದರೆ ಈ ಮಹತ್ತುಗಳನ್ನು ಮಾಡುವ ವರವು ಆಶೀರ್ವಾದವನ್ನು ತರುವದಕ್ಕಾಗಿ ಸಹ ಕೊಡಲ್ಪಡುತ್ತಿತ್ತು. ಉದಾಹರಣೆಗೆ, ಯೇಸುವಿನ ಸೇವೆಯ ವೇಳೆಯಲ್ಲಿ ಅಂತಹ ವರವು ನೀರನ್ನು ದ್ರಾಕ್ಷಾರಸವನ್ನಾಗಿ ಮಾಡುವದಕ್ಕೆ ಅಥವಾ ಬೃಹತ್ ಜನಸಮೂಹಕ್ಕೆ ಊಟಮಾಡಿಸುವದಕ್ಕಾಗಿ ಉಪಯೋಗಿಸಲ್ಪಟ್ಟಿತು (ಮಾರ್ಕ 6:30-44; ಯೋಹಾನ 2:1-11).

ಪವಿತ್ರಾತ್ಮನ ವರಗಳ ಮತ್ತೊಂದ ಉದಾಹರಣೆಯು ಪ್ರವಾದನೆಯ ವರ. ಇದು ನೇರವಾಗಿ ದೇವರಿಂದ ಬಂದ ವಿಶೇಷ ಮಾತನ್ನು ಹೇಳುವ ವರವಾಗಿದೆ. ಈ ವರವು ಭವಿಷ್ಯತ್ತಿನ ಘಟನೆಗಳನ್ನು ಮುಂತಿಳಿಸಲು ಸಹ ಕೊಡಲ್ಪಡುತ್ತದೆ.

ಇನ್ನೊಂದು ವರವು ಸತ್ಯಾಸತ್ಯಾತ್ಮಗಳನ್ನು ವಿವೇಚಿಸುವ ವರವು ಜನರನ್ನು ದುರಾತ್ಮಗಳಿಂದ ಬಿಡುಗಡೆಗೊಳಿಸುವದಕ್ಕಾಗಿ ಅವಶ್ಯ ವಾಗಿರುತ್ತದೆ. ಅಲ್ಲದೆ ಈ ವರವು ಕೆಲವೊಂದು ಸಮಯಗಳಲ್ಲಿ ಸೈತಾನನ ಗುಪ್ತ ಕಾರ್ಯವನ್ನು[39] ಕಂಡು ಹಿಡಿದು ತಡೆಯನ್ನೊಡ್ಡುವದಕ್ಕೆ ಸಹ ಉಪಯೋಗಿಸಲ್ಪಡುತ್ತದೆ (ಮತ್ತಾಯ 24:24; 2 ಕೊರಿಂಥ 11:13-15 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಮತ್ತೊಂದು ವರವು ವಿವಿಧ ವಾಣಿಗಳನ್ನಾಡುವ ವರವಾಗಿದೆ – ಅಂದರೆ, ಇತರ ಭಾಷೆಗಳಲ್ಲಿ ಮಾತಾಡುವ ಸಾಮರ್ಥ್ಯ (1 ಕೊರಿಂಥ 14:2). ಈ ವರವು ಎರಡು ರೂಪದಲ್ಲಿರುತ್ತದೆ. ಇತರ ದೇಶಗಳ ಭಾಷೆಗಳನ್ನಾಡುವ ಸಾಮಾರ್ಥ್ಯವು ಮೊದಲನೆಯ ರೂಪವಾಗಿದೆ (ಅ.ಕೃತ್ಯ 2:4-12 ನೋಡಿರಿ). ಎರಡನೆಯ ರೂಪವೇನೆಂದರೆ ಒಂದು ಅಪರಿಚಿತ ಭಾಷೆಯನ್ನು, ಅಂದರೆ, ಪರಿಚಿತವಿರುವ ಯಾವದೇ ರಾಷ್ಟ್ರದಲ್ಲಿ ಮಾತಾಡಲ್ಪಡದ ಭಾಷೆಯನ್ನು ಮಾತಾಡುವ ಸಾಮರ್ಥ್ಯವಾಗಿದೆ. ಅಂತಹ ಭಾಷೆಯು ಆತ್ಮೀಕವಾದದ್ದು; ಅದನ್ನು ಸ್ವಾಭಾವಿಕವಾಗಿ ಅರ್ಥಮಾಡಿಕೊಳ್ಳಲಾಗದು (ಅ.ಕೃತ್ಯ 19:6; 1 ಕೊರಿಂಥ 14:2,9,19 ನೋಡಿರಿ).

ಒಬ್ಬ ವ್ಯಕ್ತಿಯು ಈ ವರವನ್ನು ಯಾವದೇ ರೂಪದಲ್ಲಿ ಪಡೆದರೂ ಒಟ್ಟಿನಲ್ಲಿ ಆತನು ತಾನು ಮುಂಚೆ ಕಲಿಯದೇ ಇರುವ ಭಾಷೆಯಲ್ಲಿ ಮಾತಾಡಲು ಶಕ್ತನಾಗುವನು; ಆತನು ಅದನ್ನು ತನ್ನ ಸ್ವಂತ ತಿಳುವಳಿಕೆಯಿಂದಲ್ಲ, ಆದರೆ ಪವಿತ್ರಾತ್ಮನ ಬಲದಿಂದಲೇ ಮಾತಾಡುತ್ತಾನೆ. ಸ್ವತಃ ಪವಿತ್ರಾತ್ಮನೇ ವಾಸ್ತವದಲ್ಲಿ ವಾಣಿಗಳನ್ನಾಡುವ ವರವನ್ನು ಹೊಂದಿರುವ ವ್ಯಕ್ತಿಯು ಬಾಯ ಮೂಲಕ ಮಾತಾಡುತ್ತಾನೆ. ಆದರೆ ವರವನ್ನು ಹೊಂದಿರುವ ವ್ಯಕ್ತಿಯು ಆಗಲೂ ತನ್ನ ಬಾಯ ಮೇಲೆ ಮಾತಾಡಲು ಅಥವಾ ಮಾತಾಡದಿರುವಂತೆ ಇರಲು ಹತೋಟಿಯನ್ನು ಹೊಂದಿರುತ್ತಾನೆ. ಒಬ್ಬ ವ್ಯಕ್ತಿಯು ಆತ್ಮೀಕ ಭಾಷೆಯಲ್ಲಿ ಮಾತಾಡುವಾಗ ಆ ವ್ಯಕ್ತಿ ಹಾಗು ಹಾಜರಿರುವವರೆಲ್ಲರೂ ಪವಿತ್ರಾತ್ಮನ ಪ್ರಸನ್ನ ಹಾಗು ಬಲವನ್ನು ಅನುಭವಿಸುತ್ತಾರೆ. ಅನ್ಯಭಾಷೆಗಳಲ್ಲಿ ಮಾತಾಡುವದೆಂದರೆ. ಕಿರುಚಾಡುವದು, ನರಳಾಡುವದು ಅಥವಾ ವಟಗುಟ್ಟುವದಾಗಿರುವದಿಲ್ಲ. ಬದಲಾಗಿ, ಅದು ಸ್ವತಃ ಪವಿತ್ರಾತ್ಮನಿಂದ ಕೊಡಲ್ಪಟ್ಟಿರುವ ಭಾಷೆಯೊಂದರಲ್ಲಿ ಮಾತಾಡುವದಾಗಿದೆ.

ವಾಣಿಗಳ ಅರ್ಥವನ್ನು ಹೇಳುವ ವರವು ಈ ಭಾಗದಲ್ಲಿ ಪೌಲನು ಪ್ರಸ್ತಾಪಿಸುವ ಒಂಬತ್ತನೆಯ ಹಾಗು ಕೊನೆಯ ವರವಾಗಿದೆ. ಒಬ್ಬ ವ್ಯಕ್ತಿಯು ಅನ್ಯ ಭಾಷೆಯನ್ನು ಮಾತಾಡುವಾಗಲೆಲ್ಲಾ ಪವಿತ್ರಾತ್ಮನು ಏನು ಹೇಳುತ್ತಿದ್ದಾನೆಂಬದನ್ನು ಸಭೆಯಲ್ಲಿರುವ ಇತರರು ಅರ್ಥಮಾಡಿಕೊಳ್ಳುವಂತೆ ಹೇಳಲ್ಪಟ್ಟಿರುವದಕ್ಕೆ ಮತ್ತೊಬ್ಬನು "ಅರ್ಥ ಹೇಳುವ" ಅಗತ್ಯವಿರುತ್ತದೆ. ಅರ್ಥಹೇಳುವವನಿಲ್ಲದಿದ್ದರೆ ಹೇಳಲ್ಪಟ್ಟಿರುವದರಿಂದ ಸಭೆಯು ಯಾವ ಪ್ರಯೋಜನವನ್ನು ಪಡೆದು ಕೊಳ್ಳಲಾಗುವದಿಲ್ಲ (1 ಕೊರಿಂಥ 14:5-6, 13). ಕೆಲವು ವೇಳೆಗಳಲ್ಲಿ ಅನ್ಯ ಭಾಷೆಯನ್ನು ಮಾತಾಡುವ ವ್ಯಕ್ತಿಯೇ ಅದಕ್ಕೆ ಅರ್ಥಹೇಳುವವನಾಗಿರುತ್ತಾನೆ. ಅನ್ಯ ಭಾಷೆಯನ್ನಾಡುವದು ಮತ್ತು ಹೇಳಲ್ಪಟ್ಟಿರುವದರ ಅರ್ಥವನ್ನು ಹೇಳುವದು ಜೊತೆಗೂಡಿದಾಗ ಅವು ಗಳು ಪ್ರವಾದನೆಗೆ ಸಮಾನವಾಗಿರುತ್ತವೆ (1 ಕೊರಿಂಥ 14:4-6, 13 ಮತ್ತು ವ್ಯಾಖ್ಯಾನ ನೋಡಿರಿ).

**11** ಈ ವರಗಳೆಲ್ಲವೂ ಪವಿತ್ರಾತ್ಮನಿಂದ ಆಯಾವ್ಯಕ್ತಿಗೆ ಆತ್ಮನು ತನ್ನ ಚಿತ್ತಕ್ಕೆ ಬಂದ ಹಾಗೆ ಹಂಚಿಕೊಡುತ್ತಾನೆ. ಆದುದರಿಂದ, ವಿವಿಧ ವರಗಳನ್ನು ಪಡೆದುಕೊಳ್ಳುವ ವಿಶ್ವಾಸಿಗಳ ನಡುವೆ ಯಾವ ಜಗಳವು ಇರಬಾರದು. ಈ ಎಲ್ಲಾ ಪವಿತ್ರಾತ್ಮನ ವರಗಳು ಸಭೆಯ ಭಕ್ತಿವೃದ್ಧಿಗಾಗಿಯೂ, ಅದರ ಸಾಕ್ಷಿಯನ್ನು ಲೋಕದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಮಾಡುವದಕ್ಕಾಗಿಯೂ ಕೊಡಲ್ಪಟ್ಟಿರುತ್ತವೆ. ಯಾವದೇ ವಿಶ್ವಾಸಿಯು ತನಗೆ ಅನುಗ್ರಹಿಸಲ್ಪಟ್ಟ ವರವನ್ನು ಸಭೆಯಲ್ಲಿ ಭೇದವುಂಟು ಮಾಡುವ ರೀತಿಯಲ್ಲಿ ಉಪಯೋಗಿಸುವದಾದರೆ ಅಥವಾ ತನ್ನನ್ನು ಹೆಚ್ಚಿಸಿಕೊಂಡು ಆತನ ಸಹೋದರರನ್ನು ತುಚ್ಛೀಕರಿಸುವ ವಿಧಾನದಲ್ಲಿ ಉಪಯೋಗಿಸಲ್ಪಡುವದಾದರೆ ಆತನು ಪವಿತ್ರಾತ್ಮನ ಆ ವರವನ್ನು ದುರುಪಯೋಗ ಮಾಡಿಕೊಳ್ಳುವವನಾಗಿದ್ದಾನೆ. ಪವಿತ್ರಾತ್ಮನ ವರಗಳು ಯಾವಾಗಲೂ ಇತರ ವಿಶ್ವಾಸಿಗಳೊಂದಿಗೆ ಪ್ರೀತಿಯಲ್ಲಿಯೂ ದೀನತೆಯಲ್ಲಿಯೂ ಉಪಯೋಗಿಸಲ್ಪಡತಕ್ಕದ್ದು.

ಆದರೆ ಪವಿತ್ರಾತ್ಮನ ವರಗಳನ್ನು ಉಪಯೋಗಿಸುವದರಲ್ಲಿ ಒಂದು ದೊಡ್ಡ ಅಪಾಯವಿದ್ದು ಎಲ್ಲಾ ಕ್ರೈಸ್ತರೂ ಎಚ್ಚರವಾಗಿರಬೇಕಾಗಿರುತ್ತದೆ: ಸೈತಾನನು ಪವಿತ್ರಾತ್ಮನ ಎಲ್ಲಾ ವರಗಳನ್ನೂ ಅನುಕರಿಸಬಲ್ಲನು. ಕೆಲವು ವೇಳೆಗಳಲ್ಲಿ ದುರುಪಯೋಗಪಡಿಸಿಕೊಳ್ಳಲ್ಪಟ್ಟ ವರವು ಪವಿತ್ರಾತ್ಮನ ವರವೇ ಅಲ್ಲದಿರಬಹುದು, ಆದರೆ ಸೈತಾನನಿಂದ ಕೊಡಲ್ಪಟ್ಟ ವರವಾಗಿರುತ್ತದೆ‌ಗ ಸೈತಾನನು ಜನರಿಗೆ ಪ್ರಭಾವಕಾರಿ ವರಗಳನ್ನು ನೀಡಲು ಶಕ್ತನಾಗಿದ್ದಾನೆ; ಮತ್ತು ವಿವೇಚಿಸಲಾರದವರಿಗೆ ಸೈತಾನನ ವರಗಳು ಪ್ರಾರಂಭದಲ್ಲಿ ಪವಿತ್ರಾತ್ಮನ ವರಗಳಂತೆಯೇ ಕಾಣಿಸಬಹುದು (ಮಾರ್ಕ 13:22 ಮತ್ತು ವ್ಯಾಖ್ಯಾನ ನೋಡಿರಿ). ಆದರೆ, ಅಂತ್ಯದಲ್ಲಿ ಸೈತಾನನ ವರಗಳ ಫಲಿತವು ಆತ್ಮೀಕ ಹಾನಿಯೇ ಆಗಿರುತ್ತದೆ ಹೊರತು ಆಶೀರ್ವಾದವಲ್ಲ.

ಸಾಮಾನ್ಯವಾಗಿ ಒಬ್ಬ ವಿಶ್ವಾಸಿಯು ಪವಿತ್ರಾತ್ಮನ ಒಂದು ಅಥವಾ ಎರಡು ವರಗಳನ್ನು ಮಾತ್ರವೇ ಪಡೆದುಕೊಳ್ಳುತ್ತಾನೆ. ಆದರೆ ಅಪೊಸ್ತಲರಲ್ಲಿ ಪ್ರತಿಯೊಬ್ಬರು ಅನೇಕ ವರಗಳನ್ನು ಪಡೆದುಕೊಂಡರು; ಈ ವರಗಳು ಅವರ ಅಪೊಸ್ತಲತನಕ್ಕೆ ಗುರುತು ಅಥವಾ ಆಧಾರವಾಗಿದ್ದವು (2 ಕೊರಿಂಥ 12:12). ಈ ವರಗಳ ಸಹಾಯದಿಂದ ಅಪೊಸ್ತಲರು ರೋಮಾಯ ಸಾಮ್ರಾಜ್ಯದುದ್ದಕ್ಕೂ ಕ್ರಿಸ್ತನ ಸಭೆಯನ್ನು ಸ್ಥಾಪಿಸಲು ಶಕ್ತರಾಗಿದ್ದರು.

## ಒಂದೇ ದೇಹ, ಅನೇಕ ಅಂಗಗಳು (12:12-31)

**12** ಹೇಗೆ ದೇಹವು ಒಂದಾಗಿದ್ದರೂ ಅದಕ್ಕಿರುವ ಅಂಗಗಳು ಅನೇಕವಾಗಿವೆಯೋ. ಹಾಗೆಯೇ ಕ್ರಿಸ್ತನು – ಅಂದರೆ, ಕ್ರಿಸ್ತನ ದೇಹವಾದ ಸಭೆಯು ಹಾಗಿಯೇ (ವಚನ 27). ಕ್ರಿಸ್ತನ ದೇಹಕ್ಕೆ ಅನೇಕ ಅಂಗಗಳಿವೆ (ವಿಶ್ವಾಸಿಗಳು), ಆದರೆ ಆತನ ದೇಹವು ಒಂದೇ (ರೋಮ 12:4-5). ದೇಹದ ಶಿರಸ್ಸು ಸ್ವತಃ ಕ್ರಿಸ್ತನೇ (ಎಫೆಸ 1:22-23; 5: 23).

**13** ನಾವು ಹೇಗೆ ಕ್ರಿಸ್ತನ ದೇಹದ ಅಂಗಗಳಾಗುತ್ತೇವೆ? ನಾವು ಒಂದೇ ದೇಹವಾಗುವದಕ್ಕಾಗಿ...ದೀಕ್ಷಾಸ್ನಾನ ಮಾಡಿಕೊಳ್ಳುವದರ ಮೂಲಕ ಆತನ ದೇಹದ ಅಂಗಗಳಾದೆವು – ಅಂದರೆ, ಕ್ರಿಸ್ತನಲ್ಲಿ ಸೇರುವದಕ್ಕಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವದರ ಮೂಲಕ ಆತನ ದೇಹದ ಅಂಗಗಳಾದೆವು (ಗಲಾತ್ಯ 3:26-27 ನೋಡಿರಿ).

ಈ ವಚನದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡೆವು ಎಂಬ ಪದದ ಅರ್ಥವು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿರುವದು ಮಾತ್ರವಲ್ಲ, ಆದರೆ ಒಂದೇ ಆತ್ಮದಲ್ಲಿ [40], ಅಂದರೆ ಪವಿತ್ರಾತ್ಮನಲ್ಲಿ "ದೀಕ್ಷಾಸ್ನಾನ ಮಾಡಿಸಿಕೊಳ್ಳುವದು" ಎಂದು ಸಹ ಆಗಿದೆ. ನಾವು ಕ್ರಿಸ್ತನನ್ನು ನಂಬುವಾಗ ಪವಿತ್ರಾತ್ಮನು ನಮ್ಮ ಜೀವಿತದೊಳಗೆ ಬರುತ್ತಾನೆ; ಆ ಸಮಯದಲ್ಲಿ ಕ್ರಿಸ್ತನು ನಮ್ಮನ್ನು ಪವಿತ್ರಾತ್ಮನಲ್ಲಿ "ದೀಕ್ಷಾಸ್ನಾನ ಮಾಡಿಸಿದ್ದಾನೆ" ಎಂದು ಹೇಳಬಹುದು (ಮತ್ತಾಯ 3:11; ಮಾರ್ಕ 1:8 ನೋಡಿರಿ).

ಆದುದರಿಂದ, ಕೆಲವು ಮಂದಿ ಕ್ರೈಸ್ತರು ನಂಬುವದೇನೆಂದರೆ ಒಬ್ಬನು ಕ್ರಿಸ್ತನಲ್ಲಿ ನಂಬಿಕೆಯಿಟ್ಟ ಕ್ಷಣದಲ್ಲಿ ಆತನು ಆತ್ಮೀಕವಾಗಿ "ದೀಕ್ಷಾಸ್ನಾನ ಮಾಡಿಸಿಕೊಂಡವನಾಗುತ್ತಾನೆ" – ಅಂದರೆ, ಆತನು ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಪಡೆಯುತ್ತಾನೆ. ಆದರೆ ಇತರ ಕ್ರೈಸ್ತರು ನಂಬುವದೇನನಂದರೆ, ಪವಿತ್ರಾತ್ಮನ ದೀಕ್ಷಾಸ್ನಾನ ಒಂದು ಸಮಯದಲ್ಲಿ ಸಂಭವಿಸತ್ತದೆ ಎಂಬದೇ (ಸಾಮಾನ್ಯ ಲೇಖನ: ಪವಿತ್ರಾತ್ಮನ ದೀಕ್ಷಾಸ್ನಾನ ನೋಡಿರಿ). ಈ ಕ್ರೈಸ್ತರ ಎರಡನೆಯ ಗುಂಪು ಈ ಅನುಭವವನ್ನು "ಎರಡನೆಯ ಆಶೀರ್ವಾದ" ಎಂದು ಕರೆಯುತ್ತಾರೆ; ಇದು ಪವಿತ್ರಾತ್ಮನಿಂದ "ತುಂಬಿಸಲ್ಪಡುವಿಕೆ"ಯಂತೆ (ಅ.ಕೃತ್ಯ 2:4, 9:17), ಅಥವಾ ಪವಿತ್ರಾತ್ಮನನ್ನು "ಪಡೆದುಕೊಳ್ಳುವಿಕೆ"ಯಂತೆಯೇ ಆಗಿದೆ ಎಂದು ಅವರು ಹೇಳುತ್ತಾರೆ (ಅ.ಕೃತ್ಯ 8:15, 19; 10:47).

"ಪವಿತ್ರಾತ್ಮನ ದೀಕ್ಷಾಸ್ನಾನ" ಎಂದು ಕರೆಯಲ್ಪಡುವಂತದ್ದು ನಾವು ನಂಬುವ ಕ್ಷಣದಲ್ಲಾದರೂ ಸಂಭವಿಸುವ ಒಂದು ಸಂಗತಿಯಾಗಿರಲಿ ಅಥವಾ ಅನಂತರ ಕೆಲವು ಸಮಯದಲ್ಲಾದರೂ ಸಂಭವಿಸಲಿ, ಅತಿಪ್ರಾಮುಖ್ಯವಾದ ವಿಷಯವೇನೆಂದರೆ ನಾವು ನಂಬಿಕೆಯಿಡುವಾಗ ಪವಿತ್ರಾತ್ಮನು ನಮ್ಮ ಜೀವಿತಗಳಲ್ಲಿ ಬರುತ್ತಾನೆಂಬದೇ[41]. ಯಾಕೆಂದರೆ ಒಂದು ಸಂಗತಿಯಂತೂ ಖಚಿತವಾದದ್ದು: ಒಂದು ವೇಳೆ ಪವಿತ್ರಾತ್ಮನು (ಕ್ರಿಸ್ತನ ಆತ್ಮನು) ನಮ್ಮಲ್ಲಿಲ್ಲದಿದ್ದರೆ ನಾವು ಕ್ರಿಸ್ತನಿಗೆ ಸೇರಿದವರಲ್ಲ (ರೋಮ 8:9 ನೋಡಿರಿ). ಪವಿತ್ರಾತ್ಮನು ನಮ್ಮಲ್ಲಿರುವಾಗ ಮಾತ್ರವೇ ನಾವು ಕ್ರಿಸ್ತನ ದೇಹದ ಅಂಗಗಳಾಗುತ್ತೇವೆ; ನಮ್ಮನ್ನು ಒಂದೇ ದೇಹವಾಗಿ ಮಾಡುವಾತನು ಪವಿತ್ರಾತ್ಮನೇ. ಪವಿತ್ರಾತ್ಮನು ರಕ್ತದ ಹಾಗಿದ್ದಾನೆ; ಅದು ದೇಹದ ಪ್ರತಿಯೊಂದು ಅಂಗಕ್ಕೂ ಹರಿಯುತ್ತದೆ. ರಕ್ತವಿಲ್ಲದೆ ದೇಹವು ಸಾಯುತ್ತದೆ. ಪವಿತ್ರಾತ್ಮನಿಲ್ಲದೆ ನಾವು ಸಹ – ಆತ್ಮೀಕವಾಗಿ – ಸಾಯುತ್ತೇವೆ (ಯೋಹಾನ 6:53 ನೋಡಿರಿ). ಅಥವಾ, ಇನ್ನೊಂದು ದೃಷ್ಟಾಂತವನ್ನು ನೋಡುವದಾದರೆ, ಪವಿತ್ರಾತ್ಮನು ನಾವು ಕುಡಿಯುವದಕ್ಕೆ ಆಹ್ವಾನಿಸಲ್ಪಟ್ಟಿರುವ ಜೀವಕರವಾದ ನೀರು ಆಗಿದ್ದಾನೆ (ಯೋಹಾನ 4:10, 13:14 ನೋಡಿರಿ). ಈ 13ನೇ ವಚನದಲ್ಲಿ ಒಂದೇ ಆತ್ಮ ನಮ್ಮೆಲ್ಲರಿಗೂ ಪಾನವಾಗಿ ಕೊಡಲ್ಪಟ್ಟನು ಎಂದು ಪೌಲನು ಬರೆಯುತ್ತಾನೆ (ಯೋಹಾನ 7:37-39 ನೋಡಿರಿ). ನಾವು ಪವಿತ್ರಾತ್ಮನ ಜೀವವುಳ್ಳ ನೀರನ್ನು ಕುಡಿಯುವಾಗ ನಾವು ಕ್ರಿಸ್ತನ ಸೇವೆಮಾಡುವದಕ್ಕೆ ಬಲವನ್ನು ಪಡೆಯುತ್ತೇವೆ ಹಾಗು ಪವಿತ್ರಾತ್ಮನ ಫಲವು ನಮ್ಮ ಜೀವಿತಗಳಲ್ಲಿ ತೋರಿಬರುತ್ತದೆ (ಗಲಾತ್ಯ 5:22-23).

ನಾವು ಯೆಹೂದ್ಯರಾಗಲಿ, ಗ್ರೀಕರಾಗಲಿ, ದಾಸರಾಗಲಿ ಅಥವಾ ಸ್ವತಂತ್ರರಾಗಲಿ ಪವಿತ್ರಾತ್ಮನ ಮುಖಾಂತರ ನಾವೆಲ್ಲರೂ ಕ್ರಿಸ್ತನಲ್ಲಿ ಒಂದೇ ಆಗಿದ್ದೇವೆ (ಗಲಾತ್ಯ 3:28; ಕೊಲೊಸ್ಸೆ 3:11 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**14** ರೋಮ 12:4-5; 1 ಕೊರಿಂಥ 12:12; 17-20 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

**15** ಪ್ರತಿಯೊಬ್ಬ ವಿಶ್ವಾಸಿಯು ಕ್ರಿಸ್ತನ ದೇಹದ ವಿಭಿನ್ನ ಅಂಗವಾಗಿದ್ದಾನೆ. ಕಾಲು ತನ್ನ ಕಾಲಿನ ಕೆಲಸವನ್ನು ಮಾಡುವಂತೆಯೂ, ಕೈ ತನ್ನ ಕೈಯ ಕೆಲಸವನ್ನು ಮಾಡುವಂತೆಯೂ ನಾವು ಒಬ್ಬೊಬ್ಬರು ನಮ್ಮದೇ ಆದ ಕೆಲಸವನ್ನು ಹೊಂದಿದ್ದೇವೆ. ನಾವು ಮತ್ತೊಂದು ಅಂಗದ ಕೆಲಸವನ್ನು ಮಾಡುವದಕ್ಕೆ ತವಕಪಡಬಾರದು. ಉದಾಹರಣೆಗೆ, ಕಾಲು "ನಾನು ಕೀಳಾದ ಕಾಲು ಆಗಿರುವದಕ್ಕೆನನಗೆ ಸಂತೋಷವಿಲ್ಲ; ಅದಕ್ಕೆ ಬದಲಾಗಿ ನಾನು ಕೈಯಾಗಿರುತ್ತೇನೆ". ಕೈಯು ಹೆಚ್ಚು ಆಸಕ್ತಿಕರ ಹಾಗು ಪ್ರಾಮುಖ್ಯ ಕೆಲಸವನ್ನು ಹೊಂದಿರುತ್ತದೆ. ನಾನು ಕೈಯಾಗಿ ಇರಲಾಗದಿದ್ದರೆ ದೇಹದ ಭಾಗವಾಗಿರುವದಕ್ಕೆ ನಾನು ಇಚ್ಛಿಸುವದಿಲ್ಲ!" ಎಂದು ಹೇಳುವದೆಂದು ಊಹಿಸಿಕೊಳ್ಳಿರಿ. ನಾವು ಕೆಲವು ವೇಳೆಗಳಲ್ಲಿ ಆ ರೀತಿಯಾಗಿ ಮಾತಾಡುತ್ತೇವೋ? ನಾವು ಕೆಲವು ವೇಳೆಗಳಲ್ಲಿ ಹೀಗೆ ಹೇಳಲಿಲ್ಲವೋ: ನಾನು ಸಭೆಯ ಸಮಿತಿಯಲ್ಲಿ ಒಬ್ಬನಾಗಿಲ್ಲದಿದ್ದರೆ ಸಭೆಗೋಸ್ಕರ ನಾನು ಕೆಲಸ ಮಾಡುವದಿಲ್ಲ"? ಅಥವಾ ಕೆಲವು ವೇಳೆಗಳಲ್ಲಿ ನಾವು "ನಾನು ಕೇವಲ ಕೀಳಾದ ವ್ಯಕ್ತಿ; ನನಗೆ ದೊಡ್ಡ ವರವೇನಿಲ್ಲ; ಈ ಸಭೆಯಲ್ಲಿ ನನಗೆ ಯಾವ ಪಾತ್ರವಿಲ್ಲ" ಎಂದು ಹೇಳಲಿಲ್ಲವೋ? ನಾವು ಅಂತಹ ವಿಚಾರಗಳನ್ನು ಮಾಡದಿರೋಣ. ಬದಲಾಗಿ, ಕ್ರಿಸ್ತನು ತನ್ನ ದೇಹವಾದ ಸಭೆಯಲ್ಲಿ ನಮಗೆ ನೀಡಿರುವ ಕೆಲಸವನ್ನು ನಾವು ಪ್ರತಿಯೊಬ್ಬರು ದೀನತೆಯಿಂದಲೂ ಕೃತಜ್ಞತೆಯಿಂದಲೂ ಮಾಡುವವರಾಗಿರೋಣ.

**16** ಪೌಲನು ಇಲ್ಲಿ 15ನೇ ವಚನದ ವಿಚಾರವನ್ನು ಪುನರಾವರ್ತಿಸುತ್ತಾನೆ.

**17-20** ಈ ವಚನಗಳಲ್ಲಿ ಪೌಲನು 14ನೇ ವಚನ ವಿಚಾರಕ್ಕೆ ಹೆಚ್ಚಿನದನ್ನು ಕೂಡಿಸುತ್ತಾನೆ.

**21** ದೇಹದ ಪ್ರತಿಯೊಂದು ಅಂಗವು ಇತರ ಎಲ್ಲಾ ಅಂಗಗಳನ್ನು ಅವಲಂಭಿಸಿರುತ್ತದೆ. ಕೆಲವು ಕ್ರೈಸ್ತರು ತಾವು ಇತರ ಎಲ್ಲರ ಕೆಲಸವನ್ನು ಮಾಡಬಲ್ಲರು ಮತ್ತು ಅವರಿಗೆ ಇತರರಿಂದ ಯಾವದೇ ಸಹಾಯದ ಅಗತ್ಯವಿಲ್ಲ ಎಂದು ಯೋಚಿಸುತ್ತಾರೆ. ಆದರೆ ಎಂತಹ ತಪ್ಪು! ಕಣ್ಣು ಕೈಯ ಕೆಲಸವನ್ನು ಮಾಡಬಲ್ಲದೋ?

**22** ಕಣ್ಣು ದೇಹದ ಅಲ್ಪ ಬಲವುಳ್ಳ ಅಂಗಗಳಲ್ಲಿ ಒಂದಾಗಿದೆ; ಹಾಗಿದ್ದರೂ ಅದು ಅತ್ಯವಶ್ಯಕವಾಗಿದೆ.

**23** ದೇಹದಲ್ಲಿ ಅಲ್ಪಮಾನವುಳ್ಳ ಹಾಗು ಅಂದವಿಲ್ಲದ ಅಂಗಗಳು ಮಲವಿಸರ್ಜನೆ ಹಾಗು ಜೀವೋತ್ಪತ್ತಿಯ ಅಂಗಗಳಾಗಿವೆ. ಈ ಅಂಗಗಳಿಗೆ ಉಡಿಗೆಯಿಂದ ನಾವು ಹೆಚ್ಚಾದ ಮಾನವನ್ನು[42] ಕೊಡತ್ತೇವೆಂದು ಪೌಲನು ಹೇಳುತ್ತಾನೆ.

ಅದೇ ರೀತಿಯಾಗಿ ಸಭೆಯಲ್ಲಿನ ದೀನ ಹಾಗು ಅಲ್ಪ ವಿಧ್ಯೆಯಿರುವ ಸದಸ್ಯರನ್ನು ನಾವು ಉದಾಸೀನ ಮಾಡಬಾರದು, ಆದರೆ ಬದಲಾಗಿ, ನಾವು ಅವರಿಗೆ ಹೆಚ್ಚಾದ ಮಾನವನ್ನು ಕೊಡಬೇಕು. ಅವರು ಕ್ರಿಸ್ತನ ದೇಹದ ಪ್ರಾಮುಖ್ಯ ಅಂಗಗಳಾಗಿದ್ದಾರೆ. ಸಭೆಗೆ ಅವರ ಅಗತ್ಯತೆಯಿರುತ್ತದೆ (ರೋಮ 12:16 ನೋಡಿರಿ).

**24-25** ದೇಹದ ಅಂಗಗಳಂತೆಯೇ ಸಭೆಯ ಸದಸ್ಯರು ಒಬ್ಬರಿಗೊಬ್ಬರ ಹಿತವನ್ನು ಚಿಂತಿಸುವವರಾಗಿರಬೇಕು (ವಚನ 25). ದೇವರು ದೇಹದ ಎಲ್ಲಾ ಅಂಗಗಳಿಗೆ ಮಾನವನ್ನು ಕೊಟ್ಟಿರುತ್ತಾನೆ. ಆದುದರಿಂದ, ನಾವು ಹಾಗೆಯೇ ಮಾಡಬೇಕು. ನಾವು ದೇವರ ಸಭೆಯ ಯಾವದೇ ಸದಸ್ಯನನ್ನು ಕೀಳಾಗಿ ಕಾಣದಿರೋಣ.

**26** ಕಾಲಿಗೆ ನೋವಾದರೆ ಇಡೀ ದೇಹಕ್ಕೆ ನೋವಾಗುತ್ತದೆ ಸಭೆಯ ಯಾವದೇ ಸದಸ್ಯನು ಹಿಂಸೆಗೊಳಗಾಗುವದಾದರೆ ಇಡೀ ಸಭೆಯು ಆ ಸದಸ್ಯನ ಹಿಂಸೆಯಲ್ಲಿ ಪಾಲು ಹೊಂದುತ್ತದೆ.

ಒಬ್ಬ ಮನುಷ್ಯನು ತನ್ನ ಕೈಗಳ ಕೆಲಸ ಅಥವಾ ತನ್ನ ಬಾಯ ಮಾತುಗಳ ಕಾರಣದಿಂದ ಮಾನವನ್ನು ಪಡೆಯುವದಾದರೆ ಕೇವಲ ಆತನ ಕೈಗಳು ಅಥವಾ ಬಾಯಿಯು ಮಾತ್ರವಲ್ಲ ಆದರೆ ಇಡೀ ಮಾನವನು ಮಾನವನ್ನು ಪಡೆಯುತ್ತಾನೆ. ಸಭೆಯ ಸದಸ್ಯರ ವಿಷಯದಲ್ಲಿಯೂ ಹಾಗೆಯೇ: ಒಬ್ಬನು. ಮಾನವನ್ನು ಹೊಂದುವದಾದರೆ ಎಲ್ಲರೂ ಮಾನ ಪಡೆಯುತ್ತಾರೆ; ಒಬ್ಬನು ಸಂತೋಷಿಸುವದಾದರೆ ಎಲ್ಲರೂ ಸಂತೋಷಿಸುವರು (ರೋಮ 12:15 ನೋಡಿರಿ).

**27** ಪ್ರತಿಯೊಂದು ಕ್ಷೇತ್ರದಲ್ಲಿ ಸ್ಥಳೀಯ ಸಭೆಯು ಕ್ರಿಸ್ತನ ದೇಹವನ್ನು ರೂಪಿಸುತ್ತದೆ. ಪ್ರತಿಯೊಬ್ಬ ವಿಶ್ವಾಸಿಯು ಕ್ರಿಸ್ತನ ದೇಹವಾದ ಸ್ಥಳೀಯ ಸಭೆಯ ಅಂಗವಾಗಿದ್ದಾನೆ. ನಮ್ಮನ್ನು ನಾವು ಪರೀಕ್ಷಿಸಿಕೊಳ್ಳೋಣ. ನಾವು ಕ್ರಿಸ್ತನ ದೇಹದ ಅಂಗಗಳಂತೆ ನಡೆದುಕೊಳ್ಳುತ್ತಿದ್ದೇವೋ? ನಾವು ದೇಹದ ಶಿರಸ್ಸಾದ ಕ್ರಿಸ್ತನಿಗೆ ವಿಧೇಯರಾಗಿದ್ದೇವೋ? ನಮ್ಮ ಸ್ಥಳೀಯ ಸಭೆಯು ಕ್ರಿಸ್ತನ ಕಾರ್ಯವನ್ನು – ಅಂದರೆ, ಕ್ರಿಸ್ತನು ಲೋಕದಲ್ಲಿದಿದ್ದರೆ ಸ್ವತಃ ಮಾಡಿರುತ್ತಿದ್ದ ಕಾರ್ಯವನ್ನು – ಮಾಡುತ್ತಿದ್ದೇವೋ? ಅವಿಶ್ವಾಸಿಗಳು ನಮ್ಮ ಸ್ಥಳೀಯ ಸಭೆಯನ್ನು ನೋಡುವಾಗ ಕ್ರಿಸ್ತನು ಕಾರ್ಯ ಮಾಡುವದನ್ನು ಅವರು ಕಾಣುತ್ತಾರೋ?

**28** ಈ ವಚನದಲ್ಲಿ ಪೌಲನು ಕ್ರಿಸ್ತನ ದೇಹದ ವಿವಿಧ ಅಂಗಗಳ ಕೆಲವೊಂದು ಉದಾಹರಣೆಗಳನ್ನು ನೀಡುತ್ತಾನೆ. ಎರಡು ಅತೀ ಪ್ರಾಮುಖ್ಯವಾದ ಅಂಗಗಳು ಅಪೊಸ್ತಲರು ಮತ್ತು ಪ್ರವಾದಿಗಳು ಆಗಿದ್ದಾರೆ (ಎಫೆಸ 2:19-20 ನೋಡಿರಿ). ಕೆಲವು ಕ್ರೈಸ್ತರು ಇಂದು ಯಾವದೇ ಅಪೊಸ್ತಲರಾಗಲಿ ಪ್ರವಾದಿಗಳಾಗಲಿ ಇರುವದಿಲ್ಲವೆಂದು ನಂಬುತ್ತಾರೆ. ಸಭೆಯ ಅಸ್ತಿವಾರವು ಈಗಾಗಲೇ ಹೊಸ ಒಡಂಬಡಿಕೆಯ ಅಪೊಸ್ತಲರಿಂದಲೂ ಪ್ರವಾದಿಗಳಿಂದಲೂ ಹಾಕಲ್ಪಟ್ಟಿದೆ ಮತ್ತು ಈ ಕಾರಣದಿಂದ ಇನ್ನು ಯಾವದೇ ಹೊಸ ಅಪೊಸ್ತಲರ ಹಾಗು ಪ್ರವಾದಿಗಳ ಅಗತ್ಯವಿರುವದಿಲ್ಲ ಎಂದು ಅವರು ಹೇಳುತ್ತಾರೆ.

ಹೇಗಿದ್ದರೂ, ಇತರ ಕ್ರೈಸ್ತರು ಅದನ್ನು ಒಪ್ಪಿಕೊಳ್ಳುವದಿಲ್ಲ. ಇಂದಿಗೂ ಸಹ ಅವರು ವಾಕ್ಯಗಳ ಮೂಲ ಬರಹಗಾರರ ಅಧಿಕಾರಕ್ಕೆ ಸಮಾನವಲ್ಲದಿದ್ದಾಗ್ಯು ಸಭೆಯಲ್ಲಿ ಅಪೊಸ್ತಲರು ಹಾಗು ಪ್ರವಾದಿಗಳು ಇದ್ದಾರೆಂದು ಅವರು ಹೇಳುತ್ತಾರೆ.

ಅವರ ಉದ್ದೇಶವು ನೂತನ ಅಸ್ತಿವಾರವನ್ನು ಹಾಕುವದಲ್ಲ, ಆದರೆ ಈಗಾಗಲೇ ಹಾಕಲ್ಪಟ್ಟಿರುವ ಅಸ್ತಿವಾರದ ಮೇಲೆ ಸಭೆಕಟ್ಟುವದನ್ನು ಮುಂದುವರೆಸುವದೇ ಆಗಿದೆ. ಈ ಅಭಿಪ್ರಾಯಗಳಲ್ಲಿ ಯಾವದು ಸರಿಯಾದದ್ದೆಂಬದು ಬೈಬಲಿನಿಂದ ಸ್ಪಷ್ಟವಾಗಿರುವದಿಲ್ಲ.

ಸಭೆಯಲ್ಲಿನ ಎರಡು ಅತಿ ಪ್ರಾಮುಖ್ಯವಾದ ಸ್ಥಾನಗಳನ್ನು – ಅಪೊಸ್ತಲರು ಹಾಗು ಪ್ರವಾದಿಗಳು – ಪ್ರಸ್ತಾಪಿಸಿದ ಬಳಿಕ ಪೌಲನು ಮೂರನೆಯದಾಗಿ ಉಪದೇಶಕರ ಸ್ಥಾನದ ಬಗ್ಗೆ ಪ್ರಸ್ತಾಪಿಸುತ್ತಾನೆ. ಉಪದೇಶಕರ ನಂತರ ಪೌಲನು ಪ್ರತಿಯೊಂದು ಸಭೆಗೆ ಅಗತ್ಯವಾಗಿರುವ ಇನ್ನು ಐದು ವಿಧದ ಜನರನ್ನು ಪ್ರಸ್ತಾಪಿಸುತ್ತಾನೆ. ಬಹುಶ: ಈ ಕಡೇ ಐದು ಜನರು ನಿರ್ಧಿಷ್ಟವಾಗಿ ಯಾವದೇ ಕ್ರಮದಲ್ಲಿ ಪಟ್ಟಿ ಮಾಡಲ್ಪಟ್ಟಿರುವದಿಲ್ಲ – ಅವರೆಲ್ಲರೂ ಸಮಾನವಾಗಿ ಪ್ರಾಮುಖ್ಯರಾಗಿದ್ದಾರೆ. ಪವಿತ್ರಾತ್ಮನು ಈ ಸದಸ್ಯರಗೆಲ್ಲಾ ಅವರು ತಮ್ಮ ನಿರ್ಧಿಷ್ಟವಾದ ಕೆಲಸವನ್ನು ನಿರ್ವಹಿಸುವಂತೆ ಶಕ್ತರನ್ನಾಗಿಸಲು ಅವಶ್ಯಕವಾದ ವರ ಅಥವಾ ವರಗಳನ್ನು ಕೊಡುತ್ತಾನೆ. ಸಭೆಯ ಕೆಲವು ಸದಸ್ಯರು ರೋಗ ವಾಸಿಮಾಡುವ ವರಗಳು ಮತ್ತು ಮಹತ್ಕಾರ್ಯಗಳನ್ನು ಮಾಡುವ ಸಾಮರ್ಥ್ಯಗಳಂತಹ ಅಸ್ವಾಭಾವಿಕ ವರಗಳನ್ನು ಹೊಂದಿರುತ್ತಾರೆಂಬದನ್ನು ಗಮನಿಸಿರಿ (ವಚನಗಳು 10-12 ನೋಡಿರಿ). ಹೇಗಿದ್ದರೂ, ಇತರ ಸದಸ್ಯರು ಕಾರ್ಯಗಳನ್ನು ನಿರ್ವಹಿಸುವ ವರಗಳು ಹಾಗು ಪರಸಹಾಯ ಮಾಡುವ ಸಾಮರ್ಥ್ಯಗಳಂತಹ ಸ್ವಾಭಾವಿಕ ವರಗಲನ್ನು ಹೊಂದಿರುತ್ತಾರೆ. ಸಭೆಯ ಬಹುಪಾಲು ಸದಸ್ಯರು ಸ್ವಾಭಾವಿಕ ಹಾಗು ಅಸ್ವಾಭಾವಿಕ ವರಗಳೆರಡನ್ನೂ ಸ್ವಲ್ಪ ಸ್ವಲ್ಪವಾಗಿ ಹೊಂದಿರುತ್ತಾರೆ. ಹೇಗಿದ್ದರೂ, ಒಬ್ಬನಿಗೆ ಸ್ವಾಭಾವಿಕ ಅಥವಾ ಅಸ್ವಾಭಾವಿಕವಾದ ವರಗಳಲ್ಲಿ ಯಾವ ರೀತಿಯ ವರಗಳನ್ನೇ ಹೊಂದಿದ್ದಾಗ್ಯು ಅವೆಲ್ಲವೂ ದೇವರ ಪವಿತ್ರಾತ್ಮನಿಂದಲೇ ಬರುವಂತವು ಗಳಾಗಿವೆ. ಒಬ್ಬನಿಗೆ ಯಾವರೀತಿಯ ಕೆಲಸವು ಕೊಟಲ್ಪಟ್ಟಿದ್ದಾಗ್ಯು ಅದು ಪವಿತ್ರಾತ್ಮನ ಶಕ್ತಿಯಿಂದ ಮಾತ್ರವೇ ಮಾಡಲ್ಪಡಲು ಸಾಧ್ಯ (ವಚನ 11).

ದೇವರು ಈ ಎಲ್ಲಾ ಸದಸ್ಯರನ್ನು ಅವರವರ ವಿವಿಧ ಕೆಲಸಗಳನ್ನು ಮಾಡುವದಕ್ಕೆ ನೇಮಿಸಿದ್ದಾನೆಂದು ಪೌಲನು ಈ ವಚನದ ಪ್ರಾರಂಬದಲ್ಲಿ ಹೇಳುತ್ತಾನೆ. ದೇವರು ಪ್ರತಿಯೊಬ್ಬ ಸದಸ್ಯನಿಗೆ ಬೇರೆ ಬೇರೆ ಗುರಿಗಳನ್ನು ಹಾಗು ಜವಾಬ್ದಾರಿಗಳನ್ನು ಕೊಡುತ್ತಾನೆ. ಸದಸ್ಯರಾದ ನಾವು ನಮ್ಮ ಕೆಲಸವನ್ನು ಆರಿಸಿಕೊಳ್ಳುವದಿಲ್ಲ; ನಮ್ಮ ಕೆಲಸವು ದೇವರಿಂದಲೇ ಕೊಡಲ್ಪಟ್ಟಿರುತ್ತದೆ. ಮತ್ತು ದೇವರು ನಮಗೆ ಯಾವ ಕೆಲಸವನ್ನು ಕೊಟ್ಟಾಗ್ಯು ಅದನ್ನು ಮಾಡುವದಕ್ಕೆ ಅವಶ್ಯಕವಾದ ಬಲ ಹಾಗು ಸಾಮರ್ಥ್ಯವನ್ನು ಆತನು ನಮಗೆ ದಯಪಾಲಿಸುವನು. ದೇವರು ಕೈಯಿಗೆ ನೋಡುವಂತೆಯಾಗಲಿ, ಕಣ್ಣಿಗೆ ಬರೆಯಬೇಕೆಂದಾಗಲಿ ಎಂದಿಗೂ ಆಜ್ಞಾಪಿಸುವದಿಲ್ಲ.

ಎಲ್ಲಾ ವರಗಳು ಕ್ರಿಸ್ತನ ದೇಹವಾದ ಸಭೆಯ ಅಭಿವೃದ್ಧಿಗಾಗಿ ಕೊಡಲ್ಪಟ್ಟಿವೆ (1 ಕೊರಿಂಥ 12:7; 14:26; ಎಫೆಸ 4:12) ಅವು ಗಳು ವರಗಳನ್ನು ಪಡೆಯುವ ವ್ಯಕ್ತಿಪರ ಸದಸ್ಯರ ವಯಕ್ತಿಕ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟಿರುವದಿಲ್ಲ.

ಆತ್ಮೀಕವರಗಳ ವಿಷಯದಲ್ಲಿ ಹೆಚ್ಚಿನ ಚರ್ಚೆಗಾಗಿ ರೋಮ 12:6-8; 1 ಕೊರಿಂಥ 12:10-12; ಎಫೆಸ 4:22 ಮತ್ತು ವ್ಯಾಖ್ಯಾನಗಳನ್ನು: ಸಾಮಾನ್ಯ ಲೇಖನ: ಪವಿತ್ರಾತ್ಮ, ಪವಿತ್ರಾತ್ಮನ ದೀಕ್ಷಾಸ್ನಾನ ನೋಡಿರಿ.

**29-30** ಒಂದು ವೇಳೆ ಸಭೆಯಲ್ಲಿ ಎಲ್ಲರೂ ಒಂದೇ ಕೆಲಸವನ್ನು ಮಾಡುವದಾದರೆ ಉಳಿದೆಲ್ಲಾ ಅವಶ್ಯಕವಾದ ಕೆಲಸವನ್ನು ಯಾರು ಮಾಡುವರು? ಪ್ರತಿಯೊಬ್ಬರೂ ಉಪದೇಶಕರಾಗಿದ್ದರೆ ರೋಗ ವಾಸಿಮಾಡುವವರಾರು? ಕೇವಲ ಕಣ್ಣುಗಳಿಂದಲೇ ತುಂಬಿರುವ ಒಂದು ದೇಹದಿಂದ ಪ್ರಯೋಜನವೇನು?

**31** ಆದರೆ ಇವು ಗಳಲ್ಲಿ ಶ್ರೇಷ್ಠವರಗಳನ್ನು ಆಸಕ್ತಿಯಿಂದ ಅಪೇಕ್ಷಿಸಿರಿ. ಆತ್ಮೀಕ ವರಗಳಿಗಾಗಿ ಅಪೇಕ್ಷಿಸಿ ಅವು ಗಳನ್ನು ಹೊಂದಿಕೊಳ್ಳಲು ಪ್ರಾರ್ಥಿಸುವದು ಉತ್ತಮವಾದದ್ದು. ಹೇಗಿದ್ದರೂ, ಪವಿತ್ರಾತ್ಮನು ತನ್ನ ವರಗಳನ್ನು ಆತನ ಸ್ವಂತ ಯೋಜನೆ ಹಾಗು ಉದ್ದೇಶಗಳಿಗನುಸಾರವಾಗಿ ಕೊಡುತ್ತಾನೆ (ವಚನ 11 ನೋಡಿರಿ).

ಶೇಷ್ಠ ವರಗಳು ಯಾವವು ? ಬೈಬಲ್ ಪಂಡಿತರು ಈ ಪ್ರಶ್ನೆಗೆ ಬೇರೆ ಬೇರೆ ಉತ್ತರಗಳನ್ನು ಕೊಡುತ್ತಾರೆ. ಅಪೊಸ್ತಲರು ಅಥವಾ ಪ್ರವಾದಿಗಳಾಗಿರುವ "ವರಗಳು"ಶ್ರೇಷ್ಠವರಗಳಾಗಿವೆ ಎಂದು ಕೆಲವರು ಹೇಳುತ್ತಾರೆ. ಇತರರು ಈ ಅಧ್ಯಾಯದಲ್ಲಿ ಪಟ್ಟಿಮಾಡಲ್ಪಟ್ಟಿರುವವು ಗಳು ಶ್ರೇಷ್ಠವರಗಳಲ್ಲ, ಆದರೆ ಪ್ರೀತಿ, ಸಂತೋಷ ಮತ್ತು ಸಮಾಧಾನಗಳಂತಹ ಪವಿತ್ರಾತ್ಮನ ಫಲಗಳೇ ಶ್ರೇಷ್ಠವರಗಳಾಗಿವೆ ಎಂದು ಹೇಳುತ್ತಾರೆ. ಮತ್ತು ಇನ್ನು ಕೆಲವರು ಮೇಲಿನ ಎರಡೂ ಉತ್ತರಗಳು ಸರಿಯಾದವು ಗಳೆಂದು ಹೇಳುತ್ತಾರೆ. ಪೌಲನು ಶ್ರೇಷ್ಠವರಗಳು ಎಂದು ಹೇಳುವದರ ತಾತ್ಪರ್ಯವೇನೆಂಬದನ್ನು ಸಂಪೂರ್ಣ ಖಚಿತವಾಗಿ ಹೇಳುವದು ಅಸಾಧ್ಯವಾಗಿದೆ.

ಕೊರಿಂಥದವರು ಇತರ ಎಲ್ಲಾ ವರಗಳಿಂದ ಮೇಲಾಗಿ ಅನ್ಯಭಾಷೆಗಳನ್ನಾಡುವ ವರವನ್ನೇ ಅಪೇಕ್ಷಿಸುವವರಾಗಿದ್ದರು. ಆದರೆ ಸ್ವತಃ ಈ ವರವು ಸಭೆಯ ಭಕ್ತಿವೃದ್ದಿಗಾಗಿ ಏನನ್ನೂ ಮಾಡದ್ದಾಗಿದೆ, ಯಾಕೆಂದರೆ ಅನ್ಯಭಾಷೆಯನ್ನು ಬೇರೆ ಯಾರೂ ಅರ್ಥಮಾಡಿಕೊಳ್ಳುವದಿಲ್ಲ. ಆದುದರಿಂದ ಕೊರಿಂಥದವರು ವಾಣಿಗಳ ಅರ್ಥವನ್ನು ಹೇಳುವ ವರಕ್ಕಾಗಿ ಸಹ ಪ್ರಾರ್ಥಿಸುವ ಅಗತ್ಯವಿತ್ತು (1 ಕೊರಿಂಥ 14:12-13 ನೋಡಿರಿ).

ಇದು ವರೆಗೂ ಪೌಲನು ಎಲ್ಲವು ಗಳಿಂಗಿತಲೂ ಉತ್ಕೃಷ್ಟವಾದ "ವರ" ಅಥವಾ ಮಾರ್ಗದ ಬಗ್ಗೆ ಪ್ರಸಾಪಿಸಿರುವದಿಲ್ಲ. ಇದಿಲ್ಲದಿದ್ದರೆ ಉಳಿದೆಲ್ಲ ವರಗಳು ಅಯೋಗ್ಯವಾಗಿವೆ. ಮತ್ತು ಈ ಉತ್ಕೃಷ್ಟವಾದ ವರವು ಪ್ರೀತಿಯ ವರವೇ[43]. ಪ್ರೀತಿಯು ಅತಿ ಉತ್ಕೃಷ್ಟವಾದ ಮಾರ್ಗ ಆಗಿದೆ. ಪೌಲನು ಈ ಪ್ರೀತಿಯಮಾರ್ಗವನ್ನು 13ನೇ ಅಧ್ಯಾಯದಲ್ಲಿ ಬಣ್ಣಿಸುತ್ತಾನೆ.

# ಅಧ್ಯಾಯ - 13

## ಅತಿ ಉತ್ಕೃಷ್ಟವಾದ ಮಾರ್ಗ (13:1-13)

1 ಮನುಷ್ಯರ ಭಾಷೆಗಳನ್ನೂ ದೇವದೂತರ ಭಾಷೆಗಳನ್ನೂ ಎಂದು ಹೇಳುವದರ ಮೂಲಕ ಪೌಲನು ಎರಡು ರೀತಿಯ ಮಾತುಗಳನ್ನು ಸೂಚಿಸುತ್ತಾನೆ. ಮೊದಲನೆಯದಾಗಿ, ಆತನು ವಾಕ್ಚಾತುರ್ಯ ಹಾಗು ಶಕ್ತಿಯುತ ಮಾನವ ಮಾತನ್ನು ಸೂಚಿಸುವವನಾಗಿದ್ದು ಅದನ್ನು ಆತನು ಮನುಷ್ಯರ ಭಾಷೆಗಳು ಎಂದು ಕರೆಯುತ್ತಾನೆ (ಪೌಲನು ಸ್ವತಃ ಪ್ರಭಾವಕಾರಿ ಮಾತುಗಾರನೂ ಬೋಧಕನೂ ಆಗಿದ್ದನು). ಎರಡನೆಯದಾಗಿ ಪೌಲನು "ಅನ್ಯ ಭಾಷೆಗಳನ್ನು" ಅಥವಾ ಆತ್ಮೀಕ ಭಾಷೆಗಳನ್ನು ಸೂಚಿಸುವವನಾಗಿದ್ದು ಅದನ್ನು ಇಲ್ಲಿ ಆತನು ದೇವದೂತರ ಭಾಷೆಗಳು... ಎಂದು ಕರೆಯುತ್ತಾನೆ (1 ಕೊರಿಂಥ 12:10; 14:18 ನೋಡಿರಿ).

ಪ್ರೀತಿಯಿಲ್ಲದೆ ಮಾನವ ವಾಕ್ಚಾತುರ್ಯ ಹಾಗು ಅನ್ಯ ಭಾಷೆಗಳನ್ನಾಡುವ ಸಾಮರ್ಥ್ಯಗಳೆರಡೂ ಕೇವಲ ಗದ್ದಲವಾಗುತ್ತವೆ; ಅವು ಗಳು ನಿಷ್ಪ್ರಯೋಜನವೇ.

2 ಈ ವಚನದಲ್ಲಿ ಪೌಲನು ಪವಿತ್ರಾತ್ಮನ ಇನ್ನು ಮೂರು ವರಗಳನ್ನು ಪ್ರಸ್ತಾಪಿಸುತ್ತಾನೆ: ಅವಾವು ವೆಂದರೆ, ಪ್ರವಾದನೆ, ವಿಧ್ಯೆ ಹಾಗು ನಂಬಿಕೆ (1 ಕೊರಿಂಥ 12:8-10). ನಾವು ಈ ಮೂರು ವರಗಳನ್ನು ಪೂರ್ಣ ಪ್ರಮಾಣದಲ್ಲಿ ಸ್ವೀಕರಿಸಿಕೊಂಡಾಗ್ಯು – ಅಂದರೆ, ನಮಗೆ ಎಲ್ಲಾ ರಹಸ್ಯಗಳೂ ತಿಳಿದರೂ, ಮತ್ತು ನಾವು ಬೆಟ್ಟಗಳನ್ನು ತೆಗೆದಿಡುವವರಾಗಿದ್ದರೂ – ನಮಗೆ ಪ್ರೀತಿಯಿಲ್ಲದಿದ್ದರೆ ನಾವು ಏನೂ ಅಲ್ಲದವರಾಗಿದ್ದೇವೆ! ಪ್ರೀತಿಯಿಲ್ಲದೆ ಈ ಶ್ರೇಷ್ಠವರಗಳು ಏನು ಅಲ್ಲದವು ಗಳಾಗಿವೆ!

3 ಪ್ರೀತಿಯಿಲ್ಲದೆ ಧಾರ್ಮಿಕ ಕಾರ್ಯಗಳು ನಿಷ್ಪ್ರಯೋಜನಕರವಾಗಿವೆ. ಧರ್ಮಗಳ ಅನುಯಾಯಿಗಳು ಒಳ್ಳೇ ಕಾರ್ಯಗಳನ್ನು ಮಾಡುವದರ ಮೂಲಕ ಧಾರ್ಮಿಕ ಅರ್ಹತೆಯನ್ನು ಸಂಪಾದಿಸಿಕೊಳ್ಳಲು ತವಕಪಡುತ್ತಾರೆ. ಅವರು ಬಡವರಿಗೆ ಹಣವನ್ನು ಕೊಡುತ್ತಾರೆ. ಅವರು ಜನರ ಕಾರ್ಯಗಳಿಗಾಗಿ ತಮ್ಮ ಸಮಯವನ್ನು ನೀಡುತ್ತಾರೆ. ಅವರು ನೋವು ಹಾಗು ಮರಣವನ್ನು ಅನುಭವಿಸಲು ಸಿಧ್ ಧರಾಗಿರುತ್ತಾರೆ. ಆದರೆ ಯಾತಕ್ಕಾಗಿ? ಯಾವು ದಕ್ಕಾಗಿ? ಕೊನೆಯಲ್ಲಿ ಈ ಸಂಗತಿಗಳೆಲ್ಲವೂ ಅವು ಗಳನ್ನು ಮಾಡುವ ವ್ಯಕ್ತಿಯ ಪ್ರಯೋಜನಕ್ಕಾಗಿಯೇ ಮಾಡಲ್ಪಡುತ್ತವೆ. ಅವು ಗಳು ಧಾರ್ಮಿಕ ಯೋಗ್ಯತೆಯನ್ನು ಸಂಪಾದಿಸಿಕೊಳ್ಳಲು ಹಾಗು ಅವು ಗಳನ್ನು ಮಾಡುವವನು ಮುಂದಿನ ಜೀವನದಲ್ಲಿ ಉತ್ತಮವಾಗಿರುವಂತಾಗಲು ಮಾಡಲ್ಪಡುತ್ತವೆ. ಈ ಸಂಗತಿಗಳು ಇತರರಿಗಾಗಿ ಅಲ್ಲ, ಆದರೆ ಒಬ್ಬನ ಸ್ವಾರ್ಥಕ್ಕಾಗಿ ಮಾಡಲ್ಪಡುತ್ತವೆ.

ಆದರೆ ಅಂತಹ "ಒಳ್ಳೇ ಕಾರ್ಯಗಳು" ಅವು ಗಳನ್ನು ಮಾಡುವವನಿಗೆ ಯಾವ ಪ್ರಯೋಜನವನ್ನುಂಟು ಮಾಡುವದಿಲ್ಲವೆಂದು ಪೌಲನು ಇಲ್ಲಿ ಕಲಿಸುತ್ತಾನೆ. ನಿಜ, ಬಡವರು ಅಂತಹ ಕಾರ್ಯಗಳಿಂದ ಸ್ವಲ್ಪಸಹಾಯವನ್ನು ಪಡೆದಿಕೊಳ್ಳುತ್ತಾರೆ, ಆದರೆ ಆ ಕಾರ್ಯ.ಗಳನ್ನು ಮಾಡುವ ವ್ಯಕ್ತಿಯು ಅವನಿಗಾಗಲಿ ಅಥವಾ ಅವಳಿಗಾಗಲಿ ದೊರಕಿಸಿಕೊಳ್ಳುವ ಪ್ರಯೋಜನವನ್ನು ಕಂಡುಕೊಳ್ಳುವದಿಲ್ಲ. ಅಲ್ಲದೆ ಸುವಾರ್ತೆಗೋಸ್ಕರ ಸುಡಲ್ಪಡುವ ಕ್ರೈಸ್ತರು ಸಹ ತಮ್ಮ ಹೃದಯಗಳಲ್ಲಿ ಪ್ರೀತಿಯ ಅಗ್ನಿಯನ್ನು ಹೊಂದಿಲ್ಲವಾದರೆ ಅವರಿಗೂ ಯಾವ ಪ್ರತಿಫವು ದೊರೆಯುವದಿಲ್ಲ

4 4-7 ವಚನಗಳಲ್ಲಿ ಪ್ರೀತಿ ಎಂಬ ಪದವು ಉಪಯೋಗಿಸಲ್ಪಡುವಾಗ ಪೌಲನು "ಪ್ರೀತಿಯಿಂದ ತುಂಬಿರುವ ವ್ಯಕ್ತಿಯ" ಕುರಿತಾಗಿ ಮಾತಾಡುತ್ತಿದ್ದಾನೆಂಬದನ್ನು ನಾವು ಅರ್ಥಮಾಡಿಕೊಳ್ಳಬಹುದು.

ಹೀಗೆ, 4ನೇ ವಚನದಲ್ಲಿ ನಾವು ಮುಂದಿನಂತೆ ಓದಬಹುದು: "ಪ್ರೀತಿಯಿಂದ ತುಂಬಿರುವ ವ್ಯಕ್ತಿಯು "ತಾಳ್ಮೆಯುಳ್ಳವನು, "ಪ್ರೀತಿಯಿಂದ ತುಂಬಿರುವ ವ್ಯಕ್ತಿಯು" ದಯೆ ತೋರಿಸುವವನು. ದಯೆ ಎಂಬ ಪದದ ಅರ್ಥವು ಕೇವಲ ಒಬ್ಬನ ಹೃದಯದಲ್ಲಿ ಮಾತ್ರದಯೆಯುಳ್ಳವನಾಗಿರುವದೆಂದಲ್ಲ, ಆದರೆ ಇತರರಿಗೆ ದಯೆಯನ್ನು ತೋರಿಸುವದೆಂಬದೇ. ದಯೆಯುಳ್ಳ ವ್ಯಕ್ತಿಯು ಯಾವಾಗಲೂ ಇತರರಿಗೆ ಕಾರ್ಯಗಳನ್ನು ಮಾಡುವದಕ್ಕೆ ತವಕಪಡುತ್ತಾನೆ.

"ಪ್ರೀತಿಯಿಂದ ತುಂಬಿರುವ ವ್ಯಕ್ತಿ"ತಾಳ್ಮೆ, ದಯೆಯುಳ್ಳವನಾಗಿದ್ದು ಪವಿತ್ರಾತ್ಮನ ಮೂರು ಫಲಗಳನ್ನು ಪ್ರೀತಿ, ತಾಳ್ಮೆ ಹಾಗು ದಯೆ – ಹೊಂದಿದ್ದಾನೆಂಬದನ್ನು ಗಮನಿಸಿರಿ (ಗಲಾತ್ಯ 5:22 ಮತ್ತು ವ್ಯಾಖ್ಯಾನ ನೋಡಿರಿ).

"ಪ್ರೀತಿಯಿಂದ ತುಂಬಿರುವ ವ್ಯಕ್ತಿಯು" ಮುತ್ತೊಬ್ಬರ ಮೇಲೆ ಹೊಟ್ಟೆಕಿಚ್ಚು ಪಡುವದಿಲ್ಲ. ಬದಲಾಗಿ, ಇತರರು ಸಂತೋಷ ಹಾಗು ಯಶಸ್ವಿಯುಳ್ಳವರಾಗಿರುವಾಗ ಆತನು ಅವರೊಂದಿಗೆ ಸಂತೋಷಿಸುತ್ತಾನೆ (ಲೂಕ 15:25-32 ಮತ್ತು ವ್ಯಾಖ್ಯಾನ ನೋಡಿರಿ).

"ಪ್ರೀತಿಯಿಂದ ತುಂಬಿರುವ ವ್ಯಕ್ತಿಯು" ಹೊಗಳಿಕೊಳ್ಳುವದಿಲ್ಲ, (ಆತನು). ಉಬ್ಬಿಕೊಳ್ಳುವದಿಲ್ಲ. ಬದಲಾಗಿ, ಆತನು ದೀನನಾಗಿರುತ್ತಾನೆ.[44] ಉಬ್ಬಿಕೊಂಡವನು ತನ್ನನ್ನು ಮಾತ್ರ ಪ್ರೀತಿಸುತ್ತಾನೆ ಹೊರತು ಇತರರನ್ನಲ್ಲ.

5 "ಪ್ರೀತಿಯಿಂದ ತುಂಬಿರುವ ವ್ಯಕ್ತಿಯು " ಮರ್ಯಾದೆಗೆಟ್ಟು ನಡೆಯುವದಿಲ್ಲ. ಆತನ ನಡವಳಿಕೆಯು ಯಾವಾಗಲೂ ಸೌಜನ್ಯವು ಳ್ಳದ್ದೂ ಕೃಪಾಳವೂ ಆಗಿರುತ್ತದೆ. "ಪ್ರೀತಿಯಿಂದ ತುಂಬಿರುವ ವ್ಯಕ್ತಿಯು" ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ, ಆದರೆ ಇತರರಿಗೆ ಒಳ್ಳೇದನ್ನು ಮಾಡಲು ಹಾತೊರೆಯುತ್ತಾನೆ. ಆತನು ಉಪಕಾರದಿಂದ ತುಂಬಿರುತ್ತಾನೆ, ಅದು ಪವಿತ್ರಾತ್ಮನ ಇನ್ನೊಂದು ಫಲವಾಗಿದೆ (1 ಕೊರಿಂಥ 10:24,33; ಗಲಾತ್ಯ 5:22). "ಪ್ರೀತಿಯಿಂದ ತುಂಬಿರುವ ವ್ಯಕ್ತಿಯು" ಸುಲಭವಾಗಿ ಸಿಟ್ಟುಗೊಳ್ಳುವದಿಲ್ಲ. ಯಾರಾದರೂ ಆತನಿಗೆ ನೋವನ್ನಾಗಲಿ ಅಥವಾ ಅವಮಾನಗಳನ್ನಾಗಲಿ ಮಾಡುವದಾದರೆ ಆತನು

ಮೌನವಾಗಿ ಸೈರಿಸಿಕೊಳ್ಳುತ್ತಾನೆ. "ಪ್ರೀತಿಯಿಂದ ತುಂಬಿರುವ" ವ್ಯಕ್ತಿಯು ಅಪಕಾರಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದಿಲ್ಲ– ಅಂದರೆ ಇತರರು ತನ್ನ ವಿರುದ್ಧವಾಗಿ ಮಾಡುವ ತಪ್ಪುಗಳನ್ನು ಲೆಕ್ಕಕ್ಕೆ ಇಟ್ಟುಕೊಳ್ಳುವದಿಲ್ಲ. ಆದರೆ ನಮ್ಮಲ್ಲಿ ಅನೇಕರು ಅನೇಕ ವರ್ಷಗಳ ವರೆಗೆ ನೋವು ಗಳನ್ನು ಹಾಗೆ ವೈರತ್ವಗಳನ್ನು ಮೆಲಕು ಹಾಕುತ್ತೇವೆ ಯಾರಾದರೂ ನಮಗೆ ನೋವು ಂಟು ಮಾಡುವಾಗ ನಾವು ಅದನ್ನು ನೆನಪು ಮಾಡಿಕೊಳ್ಳುತ್ತಲೇ ಇರುವಾಗ ನಾವು ಅಪಕಾರಗಳನ್ನು ಮನಸ್ಸಿನಲ್ಲಿ ಇಟ್ಟು ಕೊಳ್ಳುವವರಾಗಿದ್ದೇವೆ. ನಾವು ಅದನ್ನು ಮರೆಯುವದಿಲ್ಲ; ನಮಗೆ ತಪ್ಪು ಮಾಡಿದ ಇನ್ನೊಬ್ಬ ವ್ಯಕ್ತಿಯನ್ನು ನಾವು ಕ್ಷಮಿಸುವದಿಲ್ಲ ಪ್ರೀತಿಯು ಹಾಗಿರುವದಿಲ್ಲ. ಪ್ರೀತಿಯುಳ್ಳ ವ್ಯಕ್ತಿಯು ತನಗೆ ಮಾಡಲ್ಪಟ್ಟ ತಪ್ಪಿನ ಕುರಿತಾಗಿ ಯೋಚಿಸುವದಿಲ್ಲ. ಪ್ರೀತಿಯಿಂದ ತುಂಬಿರುವ ವ್ಯಕ್ತಿಯು ಎಂದಿಗೂ ಮುಯ್ಯಿ ತೀರಿಸಲು ಹಂಬಲಿಸುವದಿಲ್ಲ.

6 "ಪ್ರೀತಿಯಿಂದ ತುಂಬಿರುವ ವ್ಯಕ್ತಿಯು" ಅನ್ಯಾಯವನ್ನು ನೋಡಿ ಸಂತೋಷಪಡುವದಿಲ್ಲ; ಆತನು ಅದರ ಬಗ್ಗೆ ಕೇಳಿಸಿಕೊಳ್ಳಲು ಸಹ ಇಚ್ಛಿಸುವದಿಲ್ಲ. ಆದರೆ ನಮ್ಮಲ್ಲಿ ಅನೇಕರು ಇನ್ನೊಬ್ಬರ ಕುರಿತಾಗಿ ಕೆಟ್ಟದ್ದನ್ನೇನಾದರೂ ಕೇಳಲು ಹಾತೊರೆಯುವವರಾಗಿರುತ್ತೇವೆ! ಯಾಕೆ? ಯಾಕೆಂದರೆ ಇತರರು ಕೆಳಗೆ ದೊಬ್ಬಲ್ಪಟ್ಟಾಗ ನಮಗೆ ಎತ್ತರಕ್ಕೇರಿಸಲ್ಪಟ್ಟಂತೆ ಅನ್ನಿಸುತ್ತದೆ. ಆದರೆ ಪ್ರೀತಿಯು ಎಂದಿಗೂ ಹಾಗಿರುವದಿಲ್ಲ.

"ಪ್ರೀತಿಯಿಂದ ತುಂಬಿರುವ ವ್ಯಕ್ತಿಯು" ಸತ್ಯಕ್ಕೆ ಜಯವಾಗುವಲ್ಲಿ ಸಂತೋಷಪಡುತ್ತಾನೆ. ಪ್ರೀತಿ ಮತ್ತು ಸತ್ಯ ಯಾವಾಗಲೂ ಜೊತೆಯಾಗಿ ಸಾಗುತ್ತವೆ (ಎಫೆಸ 4:15 ಮತ್ತು ವ್ಯಾಖ್ಯಾನ ನೋಡಿರಿ).

7 "ಪ್ರೀತಿಯಿಂದ ತುಂಬಿರುವ ವ್ಯಕ್ತಿಯು"ಯಾವಾಗಲೂ ಇತರರನ್ನು ಅಡಗಿಸಿಕೊಳ್ಳುತ್ತಾನೆ [45] (ಸಂರಕ್ಷಿಸುತ್ತಾನೆ). ವಿಶೇಷವಾಗಿ ಆತನು ಬಲಹೀನತೆಗಳನ್ನು ಹಾಗು ನ್ಯೂನ್ಯತೆಗಳನ್ನು ಹೊಂದಿರುವವರೊಂದಿಗೆ ಸೈರಿಸಿಕೊಂಡು ಅಡಗಿಸಿಕೊಳ್ಳುತ್ತಾನೆ. ಆತನು ತನ್ನ ಸಹೋದರನ ದೋಷಗಳನ್ನು ಇತರರಿಗೆ ಬಯಲು ಪಡಿಸುವದಿಲ್ಲ; ಬದಲಾಗಿ ಪ್ರೀತಿಯಿಂದ ಅವು ಗಳನ್ನು ಅಡಗಿಸಿಕೊಳ್ಳುತ್ತಾನೆ (1 ಪೇತ್ರ 4:8 ನೋಡಿರಿ).

ನಾವು ಯಾರನ್ನಾದಲೂ ಪ್ರೀತಿಸುವದಾದರೆ ಆ ವ್ಯಕ್ತಿಯ ದೋಷಗಳನ್ನೂ ಬಲಹೀನತೆಗಳನ್ನೂ ಸಹಿಸಿಕೊಳ್ಳುವದು ಸುಲಭವಾಗಿರುತ್ತದೆ. ಆದರೆ ಯಾವದೇ ಒಬ್ಬ ವ್ಯಕ್ತಿಯನ್ನು ಸೈರಿಸಿಕೊಳ್ಳುವದು ನಮಗೆ ಕಷ್ಟಕರವಾಗಿ ತೋರುವದಾದರೆ ಆ ವ್ಯಕ್ತಿಗಾಗಿ ನಮ್ಮ ಪ್ರೀತಿಯು ಅತ್ಯಲ್ಪವಾಗಿದೆ ಎಂಬದನ್ನು ನಿಶ್ಚಯವಾಗಿ ತಿಳಿದುಕೊಳ್ಳಬಹುದು.

ಪ್ರೀತಿಯು ಎಲ್ಲವನ್ನೂ ನಂಬುತ್ತದೆ. ನಾವು ಯಾರನ್ನಾದರೂ ಪ್ರೀತಿಸುವದಾದರೆ ಆ ವ್ಯಕ್ತಿಯನ್ನು ವಿಶ್ವಾಸಿಸಲು ಇಚ್ಛಿಸುತ್ತೇವೆ. ನಿಜ, ಕೊನೆಗೆ ಆ ವ್ಯಕ್ತಿಯು ನಮ್ಮನ್ನು ವಂಚಿಸಬಹುದು; ಆದರೆ ಅದು ದೇವರ ಕೆಲಸ, ನಮ್ಮದಲ್ಲ. ನಮ್ಮ ಕೆಲಸವು ಇತರರನ್ನು ನಂಬುವದೇ ಹೊರತು ಅವರ ಬಗ್ಗೆ ಸಂಶಯ ಪಡುವದಲ್ಲ [46].

ಪ್ರೀತಿಯು ಎಲ್ಲವನ್ನೂ ನಿರೀಕ್ಷಿಸುತ್ತದೆ. ನಾವು ಯಾರನ್ನಾದರೂ ಪ್ರೀತಿಸುವದಾದರೆ ಆ ವ್ಯಕ್ತಿಯಲ್ಲಿ ನಿರೀಕ್ಷೆಯಿಡುತ್ತೇವೆ. ನಾವು ಆ ವ್ಯಕ್ತಿಯ ಹಿತ, ಆತನ ಯಶಸ್ಸು, ಆತನ ಸಂತೋಷಗಳನ್ನು ನಿರೀಕ್ಷಿಸುತ್ತೇವೆ. ನಾವು ಆತನ ಹೃದಯವು ಶುದ್ಧವಾಗಿಯೂ ಆತನ ಗುಣಲಕ್ಷಣವು ಬಲವಾಗಿಯೂ ಇರುವಂತೆ ನಿರೀಕ್ಷಿಸುತ್ತೇವೆ. ಮತ್ತು ಆ ವ್ಯಕ್ತಿಯು ನಮಗೆ ನಿರಾಶೆಯನ್ನು ಅಥವಾ ವಂಚನೆಯನ್ನು ಮಾಡಬೇಕಾದರೂ ನಾವು ಆತನಲ್ಲಿ ನಿರೀಕ್ಷೆಯಿಡುತ್ತಾ ಸಾಗುತ್ತೇವೆ.

ಪ್ರೀತಿಯು ಎಲ್ಲವನ್ನೂ ಸಹಿಸಿಕೊಳ್ಳುತ್ತದೆ. ಪ್ರೀತಿಯು ಯಾವಾಗಲೂ ಜಯಿಸುತ್ತದೆ (ರೋಮ 12:21 ನೋಡಿರಿ).. ಪ್ರೀತಿಯನ್ನು ಎಂದಿಗೂ ನಾಶಮಾಡಲಾಗುವದಿಲ್ಲ. ಪ್ರೀತಿಯು ಭೂಮಿಯ ಮೇಲಿರುವ ಅತಿದೊಡ್ಡ ಶಕ್ತಿಯಾಗಿದೆ. 4-7 ವಚನಗಳಲ್ಲಿ ಪೌಲನು ಪ್ರೀತಿಯಿಂದ ತುಂಬಿರುವ ವ್ಯಕ್ತಿಯ ಚಿತ್ರಣವನ್ನು ನಮಗೆ ನೀಡಿರುತ್ತಾನೆ. ನಮ್ಮ ಜೀವಿತವು ಹೀಗೆಯೇ ಇರತಕ್ಕದ್ದು! ಇದು ನಮ್ಮ ಗುರಿಯಾಗಿರಬೇಕು. ಆದರೆ ಒಂದು ಕ್ಷಣ ಯೋಚಿಸಿರಿ: ಈ ವಚನಗಳಲ್ಲಿ ಪೌಲನು ಯಾವದೋ ಕಾಲ್ಪನಿಕ ವ್ಯಕ್ತಿಯನ್ನು ಬಣ್ಣಿಸಿರುವದಿಲ್ಲ; ಆತನು ಸ್ವತಃ ಯೇಸು ಕ್ರಿಸ್ತನನ್ನೇ ವಿವರಿಸಿರುತ್ತಾನೆ. ಹಾಗಾದರೆ ನಮ್ಮ ಗುರಿಯು ಪ್ರೀತಿಯ ವ್ಯಕ್ತಿಯಾದ ಯೇಸುವಿನಂತಾಗುವದೇ (ರೋಮ 8:29). ಪೌಲನು ಈ ಅಧ್ಯಾಯದಲ್ಲಿ ಮಾತಾಡುತ್ತಿರುವ ಪ್ರೀತಿಯು ಮನುಷ್ಯನಲ್ಲಿ ಉಗಮವಾಗುವದಿಲ್ಲ; ಅದು ದೇವರಿಂದ ಮಾತ್ರವೇ ಬರುತ್ತದೆ (1 ಯೋಹಾನ 4:7). ಪ್ರೀತಿಯು ಮನುಷ್ಯರ ಜೀವಿತಗಳಲ್ಲಿ ಪವಿತ್ರಾತ್ಮನು ಮಾಡುವ ಕಾರ್ಯವಾಗಿದೆ (ರೋಮ 5:5), ಈ ಪ್ರೀತಿಯು ದೇವರಿಂದ ನಿರಂತರವಾಗಿ ನಮ್ಮ ಜೀವಿತಗಳೊಳಗೂ ನಮ್ಮ ಸಭೆಯೊಳಗೂ ಹರಿಯಬೇಕೆಂಬುದು ನಮ್ಮ ಆಸಕ್ತಿಯುಳ್ಳ ಪ್ರಾರ್ಥನೆಯಾಗಿರಲಿ.

ಇಲ್ಲಿ ನಾವು ಪ್ರಾಮುಖ್ಯವಾದ ಸಂಗತಿಯೊಂದನ್ನು ಅರ್ಥಮಾಡಿಕೊಳ್ಳಬೇಕು. ಈ ಅಧ್ಯಾಯದಲ್ಲಿ ಪೌಲನು ದೇವರಿಂದಲೇ ಬರುವ ಆತ್ಮೀತ ಪ್ರೀತಿಯ ವಿಷಯದಲ್ಲಿ ಮಾತಾಡುತ್ತಿದ್ದಾನೆ. ದೇವರ ಆತ್ಮೀಕ ಪ್ರೀತಿ ಹಾಗು ಮಾನವನ ಸ್ವಾಭಾವಿಕ ಪ್ರೀತಿಯ ನಡುವೆ ಒಂದು ದೊಡ್ಡ ಅಂತರವಿರುತ್ತದೆ. ಸಾಧ್ಯವಾದಷ್ಟು ಮಟ್ಟಿಗೆ ಮಾನವನ ಸ್ವಾಭಾವಿಕ ಪ್ರೀತಿಯು ಒಳ್ಳೆಯದು, ಆದರೆ ಅದರಲ್ಲಿ ಯಾವಾಗಲೂ ಸ್ವಾರ್ಥತೆಯ ಕಲಬೆರಿಕೆಯಿರುತ್ತದೆ. ಗಂಡಹೆಂಡತಿಯ ನಡುವಿನ ತಂದೆತಾಯಿ ಹಾಗು ಮಕ್ಕಳನಡುವಿನ ಸ್ವಾಭಾವಿಕ ಪ್ರೀತಿಯು ದೇವರಿಗೆ ಮೆಚ್ಚಿಕೆಯಾದದ್ದು; ಹಾಗಿದ್ದರೂ, ಈ ಪ್ರೀತಿಯಲ್ಲಿ ಶಾರೀರಿಕ ಹಾಗು ಸ್ವಾರ್ಥ ಉದ್ದೇಶಗಳಿಂದ ಕಲಬೆರಿಕೆಗೊಂಡಿರುತ್ತದೆ. ಯಾಕೆಂದರೆ ನಾವು ನಮ್ಮ ಸಂಗಾತಿ ಅಥವಾ ನಮ್ಮ ಮಗು ಅಥವಾ ಆಪ್ತ ಸ್ನೇಹಿತನೊಬ್ಬನನ್ನು ಪ್ರೀತಿಸುವಾಗ ಒಂದು ಅರ್ಥದಲ್ಲಿ ನಾವು ನಮ್ಮನ್ನು [47] ಸಹ ಪ್ರೀತಿಸಿಕೊಳ್ಳುವವರಾಗಿದ್ದೇವೆ (ಎಫೆಸ 5:28-29 ನೋಡಿರಿ). ಆದರೆ ದೇವರ ಆತ್ಮೀಕ ಪ್ರೀತಿಯಲ್ಲಿ ಸ್ವಾರ್ಥತೆಯು ಅಡಕವಾಗಿರುವದಿಲ್ಲ. ಈ ಕಾರಣದಿಂದಲೇ ಮಾನವನಿಂದ ಈ ಪ್ರೀತಿಯು ಬರಲು ಸಾಧ್ಯವೇ ಇಲ್ಲ; ಇದು ದೇವರಿಂದಲೇ ಬರುತ್ತದೆ.

ದೇವರ ಪ್ರೀತಿ ಹಾಗು ಮಾನವನ ಪ್ರೀತಿಯಲ್ಲಿ ಇನ್ನೊಂದು ವ್ಯತ್ಯಾಸವಿರುತ್ತದೆ. ಮಾನವರಾದ ನಾವು ಇತರರನ್ನು ಅವರ ಯೋಗ್ಯತೆಗನುಸಾರವಾಗಿ ಪ್ರೀತಿಸುತ್ತೇವೆ. ನಾವು ನಮ್ಮ ಕುಟುಂಬ ಹಾಗು ಸ್ನೇಹಿತರನ್ನು ಸುಲಭವಾಗಿ ಪ್ರೀತಿಸುತ್ತೇವೆ, ಯಾಕೆಂದರೆ ನಮ್ಮ ದೃಷ್ಟಿಯಲ್ಲಿ ಅವರು ನಮ್ಮ ಪ್ರೀತಿಗೆ ಯೋಗ್ಯರಾಗಿರುತ್ತಾರೆ. ಆದರೆ ಅಯೋಗ್ಯರು ಅಥವಾ ನಮ್ಮ ಮನಸ್ಸಿಗೆ ಒಪ್ಪದವರು ಅಥವಾ ಪಾಪಿಗಳು ಆಗಿರುವವರನ್ನು ಪ್ರೀತಿಸುವದಕ್ಕೆ ನಾವು ಕಷ್ಟ ಪಡುತ್ತೇವೆ. ಆದರೆ ದೇವರ ಪ್ರೀತಿಯು ನಮ್ಮ ಪ್ರೀತಿಯಂತಿರುವದಿಲ್ಲ; ದೇವರು ಅತಿ ಅಯೋಗ್ಯರೂ ದುಷ್ಟರೂ ಆದ ಜನರನ್ನು ಸಹ ಪ್ರೀತಿಸುತ್ತಾನೆ (ರೋಮ 5:7-8 ನೋಡಿರಿ). ಮತ್ತು ನಮ್ಮಲ್ಲಿ ಕಾರ್ಯಮಾಡುವ ಪವಿತ್ರಾತ್ಮನ ಸಹಾಯದಿಂದ ನಾವು ಸಹ ಈ ಜನರನ್ನು ಪ್ರೀತಿಸಬಹುದು. ನಾವು ಅವರನ್ನು ಪ್ರೀತಿಸಬೇಕು; ವಾಸ್ತವದಲ್ಲಿ, ನಮ್ಮ ವೈರಿಗಳನ್ನು ಸಹ ಪ್ರೀತಿಸಬೇಕೆಂದು ಯೇಸು ಆಜ್ಞಾಪಿಸಿದ್ದಾನೆ! (ಮತ್ತಾಯ 5:44 ಮತ್ತು ವ್ಯಾಖ್ಯಾನ ನೋಡಿರಿ).

**8** ಪವಿತ್ರಾತ್ಮನ ಈ ಎಲ್ಲಾ ವರಗಳು – ಪ್ರವಾದನೆಯ, ವಾಣಿಗಳನ್ನಾಡುವ, ಜ್ಞಾನವಾಕ್ಯ (ಕೊರಿಂಥ 12:8-10) – ಇಲ್ಲದಂತಾಗುವವು. ಪರಲೋಕದಲ್ಲಿ ಈ ವಿಶೇಷವಾದ ವರಗಳ ಅಗತ್ಯವಿರುವದಿಲ್ಲ. ಪರಲೋಕದಲ್ಲಿ ನಾವು ಎಲ್ಲವನ್ನೂ ತಿಳಿದುಕೊಳ್ಳುವೆವು ಹಾಗು ಎಲ್ಲವನ್ನೂ ಅರ್ಥ ಮಾಡಿಕೊಳ್ಳುವೆವು; ಪರಲೋಕದಲ್ಲಿ ನಾವೆಲ್ಲರೂ ಒಂದೇ ಪರಲೋಕ ಭಾಷೆಯನ್ನಾಡುವೆವು. ಆದರೆ ಪ್ರೀತಿಯು ಸದಾ ಕಾಲವೂ ಇರುವದು. ಯಾಕೆ? ಯಾಕೆಂದರೆ ದೇವರು ಸ್ವತಃ ಪ್ರೀತಿಸ್ವರೂಪಿಯಾಗಿದ್ದಾನೆ (1 ಯೋಹಾನ 4:8,16).

**9-10** ಈ ಜೀವಿತದಲ್ಲಿ ನಾವು ಪವಿತ್ರಾತ್ಮನ ವರಗಳನ್ನು ಪಡೆದುಕೊಂಡರೂ ನಮ್ಮ ವಿಧ್ಯ, ನಮ್ಮ ಪ್ರವಾದನೆಗಳು, ಹಾಗು ನಮ್ಮ ಇತರ ಎಲ್ಲಾ ಕಾರ್ಯಗಳು ಎಂದಿಗೂ ಪರಿಪೂರ್ಣವಾಗಿರಲಾರವು. ಆದರೆ ಸಂಪೂರ್ಣವಾದದ್ದು ಬಂದಾಗ – ಅಂದರೆ, ಪರಲೋಕದಲ್ಲಿ – ನಮ್ಮ ಎಲ್ಲಾ ತಲಾಂತುಗಳು ಮತ್ತು ಕಾರ್ಯಗಳು ಸಂಪೂರ್ಣವಾಗುವವು, ಯಾಕೆಂದರೆ ಆಗ ನಾವು ಕ್ರಿಸ್ತನಂತಾಗುವೆವು (1 ಯೋಹಾನ 3:2 ನೋಡಿರಿ).

**11** ವಿಶ್ವಾಸಿಗಳಿಗಾದರೋ ಈ ಭೂಲೋಕದ ಜೀವಿತ ಬಾಲ್ಯ ಜೀವಿತದಂತಿರುತ್ತದೆ. ಪರಲೋಕದಲ್ಲಿ ಪೂರ್ಣವಾಗಿ ಬೆಳೆಯುವೆವು. ಆದರೆ ಈ ಜೀವಿತದಲ್ಲಿ ಬೆಳೆಯಬೇಕು ಹಾಗು ಸಾಧ್ಯವಾದಷ್ಟು ಮಟ್ಟಿಗೆ ಬಾಲ್ಯದವುಗಳನ್ನು ಬಿಟ್ಟುಬಿಡಬೇಕು.

ಕೊರಿಂಥದವರು ಎಷ್ಟೋ ವಿಧಗಳಲ್ಲಿ ಬಾಲಕರಂತೆ ವರ್ತಿಸುತ್ತಿದ್ದರು (1 ಕೊರಿಂಥ 3:1-3; 11:20-21, 14:20). ಅವರು ಅನೇಕ ಆತ್ಮೀಕ ವರಗಳನ್ನು ಪಡೆದುಕೊಂಡಿದ್ದರು, ಆದರೆ ಅವರು ಬೆಳೆದವರಾಗಿರಲಿಲ್ಲ. ಈ ಕೊರಿಂಥದ ವಿಶ್ವಾಸಿಗಳನ್ನು ನೋಡಿ ನಾವು ಒಂದು ಪ್ರಾಮುಖ್ಯ. ಸತ್ಯವನ್ನು ಕಲಿಯಬಹುದು: ಅದೇನೆಂದರೆ, ಸ್ವತಃ ಆತ್ಮೀಕವರಗಳು ಒಬ್ಬನನ್ನು ಆತ್ಮೀಕವಾಗಿ ಮಾಡುವದಿಲ್ಲ (ಗಲಾತ್ಯ. 5:22-23). ಒಬ್ಬ ವ್ಯಕ್ತಿಯ ಜೀವಿತದಲ್ಲಿ ಪವಿತ್ರಾತ್ಮನ ಫಲಗಳು ತೋರಿಬರುವಾಗ ಮಾತ್ರವೇ ಆತನು ಪರಿಪಕ್ವವುಳ್ಳವನೂ ಆತ್ಮೀಕನೂ ಆಗುತ್ತಾನೆ. ಈ ವರಗಳು ನಿಸ್ಸಂದೇಹಕರವಾಗಿ ಪ್ರತಿಯೊಬ್ಬ ಕ್ರೈಸ್ತನಿಗೂ ಅತ್ಯವಶ್ಯಕವಾಗಿವೆ. ಪವಿತ್ರಾತ್ಮನ ವರಗಳು ವಯಕ್ತಿಕವಾಗಿ ಕೊಡಲ್ಪಡುತ್ತವೆ, ಒಂದು ಒಬ್ಬನಿಗೂ ಮತ್ತೊಂದು ಇನ್ನೊಬ್ಬನಿಗೂ ಕೊಡಲ್ಪಡುತ್ತದೆ. ಆದರೆ ಪವಿತ್ರಾತ್ಮನ ಫಲಗಳನ್ನು ಪ್ರತಿಯೊಬ್ಬರು ಸಮಾನವಾಗಿ ಹೊಂದಿಕೊಳ್ಳಬೇಕಾಗಿರುತ್ತದೆ. ಪವಿತ್ರಾತ್ಮನ ಫಲಗಳು ಹಾಗು ಪವಿತ್ರಾತ್ಮನ ವರಗಳೆರಡೂ ನಮ್ಮ ಜೀವಿತದಲ್ಲಿ ಅವಶ್ಯಕವಾಗಿವೆ, ಆದರೆ ನಮಗೆ ಆತನ ಫಲಗಳೇ ಅತ್ಯಂತ ಆವಶ್ಯಕವಾಗಿರುತ್ತವೆ.

**12** ನಾವು ಹಳೆಯದಾದ ಹಾಗು ಹೊಲಸಾದ ಕನ್ನಡಿಯಲ್ಲಿ ನೋಡುವಾಗ ಮೊಬ್ಬಾದ ಪ್ರತಿಬಿಂಬವು ಕಾಣಿಸುತ್ತದೆ. ಅದೇ ರೀತಿಯಲ್ಲಿ ನಮ್ಮ ಪ್ರಸ್ತುತ ವಿಧ್ಯೆ ಹಾಗು ಜ್ಞಾನಗಳು ನಿಜ ಸ್ಥಿತಿಯ "ಮೊಬ್ಬಾದ ಪ್ರತಿಬಿಂಬ"ದ ಹಾಗಿರುತ್ತವೆ. ನಾವು ಸಂಗತಿಗಳನ್ನು ಸ್ಪಷ್ಟವಾಗಿ ಕಾಣುವದಿಲ್ಲ. ಈ ಜೀವನದಲ್ಲಿ ನಾವು ನೋಡುವವರಾಗಿ ನಡೆಯದೇ ನಂಬುವವರಾಗಿ ನಡೆಯುತ್ತೇವೆ (2 ಕೊರಿಂಥ 5:7). ಆದರೆ ನಾವು ಪರಲೋಕಕ್ಕೆ ಹೋಗುವಾಗ ಸ್ಪಷ್ಟವಾಗಿ ನೋಡುವೆವು; ಆಗ ಮುಖಾಮುಖಿಯಾಗಿ ನೋಡುವೆವು (1 ಯೋಹಾನ 3:2 ನೋಡಿರಿ). ದೇವರು ನಮ್ಮನ್ನು ಈಗ ತಿಳುಕೊಂಡಿರುವಂತೆಯೇ ಆಗ ನಾವು ಆತನನ್ನು ತಿಳಿಯುವೆವು.

**13** ಈ ಮೂರು ಸಂಗತಿಗಳನ್ನು ಹೊರತು ಪಡಿಸಿ ಭೂಮಿಯಲ್ಲಿರುವದೆಲ್ಲವೂ ಗತಿಸಿ ಹೋಗುತ್ತದೆ: ನಂಬಿಕೆ ನಿರೀಕ್ಷೆ ಮತ್ತು ಪ್ರೀತಿ (1 ಥೆಸಲೋನಿಕ 1:3 ನೋಡಿರಿ). ಆದರೆ ಇವುಗಳಲ್ಲಿ ಪ್ರೀತಿಯೇ – ದೇವರ ಪ್ರೀತಿ – ದೊಡ್ಡದು. ಸಮಸ್ತವೂ ದೇವರ ಪ್ರೀತಿಯಿಂದ ಬರುತ್ತದೆ. ದೇವರ ಪ್ರೀತಿಯು ಆದಿಯಲ್ಲಿಯೇ ಇತ್ತು. ನಮ್ಮನ್ನು ಮೊದಲು ಪ್ರೀತಿಸಿದವನು ದೇವರೇ (ಯೋಹಾನ 3:16; ರೋಮ 5:8; 1 ಯೋಹಾನ 4:10;19 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ದೇವರ ಪ್ರೀತಿಯಿಂದಲೇ ನಮ್ಮ ಪ್ರೀತಿಯು ಬರುತ್ತದೆ. ನಾವು ನಮ್ಮ ಜೀವಿತದಲ್ಲಿ ಹೊಂದಿರುವ ಆತ್ಮೀಕ ಪ್ರೀತಿಯೆಲ್ಲವೂ ದೇವರಿಂದಲೇ ಬರುತ್ತದೆ, ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದದೆಯಲ್ಲಾ (ರೋಮ 5:5). ಆದುದರಿಂದ, ದೇವರು ನಮಗೆ ತನ್ನ ಪ್ರೀತಿಯನ್ನು ನಿಡಿರುವದರಿಂದ ನಾವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂದು ಆತನು ಅಪೇಕ್ಷಿಸುತ್ತಾನೆ (1 ಯೋಹಾನ 4:7,11 ನೋಡಿರಿ).

ದೇವರ ಪ್ರೀತಿಯಿಂದಲೇ ನಮಗೆ ನಿರೀಕ್ಷೆಯು ಬರುತ್ತದೆ (1 ಯೋಹಾನ 4:17 ನೋಡಿರಿ). ನಾವು ಯಾವುದಕ್ಕಾಗಿ ನಿರೀಕ್ಷಿಸುತ್ತೇವೆ? ನಾವು ರಕ್ಷಣೆಗಾಗಿ, ನಿತ್ಯಜೀವಕ್ಕಾಗಿ ನಿರೀಕ್ಷಿಸುತ್ತೇವೆ. ನಾವು ಒಂದು ದಿನ ನಮ್ಮ ಪರಲೋಕದ ತಂದೆಯನ್ನು ಮುಖಾಮುಖಿಯಾಗಿ ಕಾಣುವ ಹಾಗೆ ಆತನ ಪ್ರೀತಿಯಲ್ಲಿ ಸದಾಕಾಲವೂ ವಾಸಿಸುವ ನಿರೀಕ್ಷೆಯನ್ನು ಹೊಂದಿರುತ್ತೇವೆ. ಮತ್ತು ಪರಲೋಕದಲ್ಲಿ ಪ್ರೀತಿ ಮಾತ್ರವಿರುತ್ತದೆ, ಯಾಕೆಂದರೆ ಪರಲೋಕದಲ್ಲಿ ನಂಬಿಕೆ ಮತ್ತು ನಿರೀಕ್ಷೆಯ ಅಗತ್ಯತೆ ಇನ್ನೆಂದಿಗೂ ಇರುವದಿಲ್ಲ.

## ಅಧ್ಯಾಯ - 14

### ಪ್ರವಾದನೆಯ ಹಾಗು ವಾಣಿಗಳನ್ನಾಡುವ ವರಗಳು (14:1-25)

1 ಪ್ರೀತಿಯು ಅತಿ ಉತ್ಕೃಷ್ಟವಾದ ಮಾರ್ಗವಾಗಿದೆ (1 ಕೊರಿಂಥ 12:31). ಆದದರಿಂದ ಪೌಲನು ಹೇಳುವದೇನೆಂದರೆ: ಪ್ರೀತಿಯನ್ನು ಅಭ್ಯಾಸಮಾಡಿಕೊಳ್ಳಿರಿ. ಇದು ಅತಿ ದೊಡ್ಡ ಆಜ್ಞೆಯಾಗಿದೆ (ಮಾರ್ಕ 12:30-21). ಆದರೆ ಅದೇ ಸಮಯದಲ್ಲಿ ಪವಿತ್ರಾತ್ಮನ ವರಗಳನ್ನು ಅಪೇಕ್ಷಿಸುವದು ಉತ್ತಮವಾದದ್ದು (1 ಕೊರಿಂಥ 12:8-10, 31 ನೋಡಿರಿ).

ಪವಿತ್ರಾತ್ಮನ ವರಗಳಲ್ಲಿ ಪೌಲನು ಪ್ರವಾದಿಸುವವರನ್ನು ಉನ್ನತಸ್ಥಾನದಲ್ಲಿಡುತ್ತಾನೆ. ಆದರೆ, ಕೊರಿಂಥದವರು ವಾಣಿಗಳನ್ನಾಡುವ ವರವನ್ನು ಉನ್ನತ ಸ್ಥಾನದಲ್ಲಿಡುವ ತಪ್ಪನ್ನು ಮಾಡುತ್ತಿದ್ದರೆಂಬದನ್ನು ಜ್ಞಾಪಿಸಿಕೊಳ್ಳಿರಿ.

ಬೈಬಲಿನಲ್ಲಿ ಪ್ರವಾದನೆ ಎಂಬ ಪದಕ್ಕೆ ಕೇವಲ ಭವಿಷ್ಯತ್ತನ್ನು ಮುಂತಿಳಿಸುವದಕ್ಕಿಂತಲೂ ಹೆಚ್ಚಿನ ಅರ್ಥವಿರುತ್ತದೆ. ಇದರ ಅರ್ಥವು ಯಾವದೇ ವಿಷಯದಲ್ಲಿ ದೇವರಿಂದ ಬಂದ ವಿಶೇಷ ವಾಕ್ಯ ಅಥವಾ ಪ್ರಕಟಣೆಯನ್ನು ಪ್ರಚುರಪಡಿಸುವದೆಂಬದೇ.

2 ಒಬ್ಬನು ವಾಣಿಯನ್ನಾಡುವವನು ಪವಿತ್ರಾತ್ಮನಿಂದ ಕೊಡಲ್ಪಟ್ಟ ಭಾಷೆಯೊಂದರಲ್ಲಿ ಮಾತಾಡುವವನಾಗಿದ್ದಾನೆ. ಆದುದರಿಂದ ದೇವರನ್ನು ಹೊರತು ಪಡಿಸಿ ಇನ್ನಾರೂ ಆ ವ್ಯಕ್ತಿಯು ಮಾತಾಡುತ್ತಿರುವದನ್ನು ಅರ್ಥಮಾಡಿಕೊಳ್ಳಲಾರರು. ಆತನು ತನ್ನ ಆತ್ಮದೊಂದಿಗೆ 48 ಮಾತಾಡುವವನಾಗಿದ್ದಾನೆ (1 ಕೊರಿಂಥ 12:10 ಮತ್ತು ವ್ಯಾಖ್ಯಾನ ನೋಡಿರಿ).

3 ಪ್ರವಾದನೆಯು ಸಹ ವಾಣಿಗಳಂತೆಯೇ ಪವಿತ್ರಾತ್ಮನಿಂದ ಕೊಡಲ್ಪಟ್ಟ ವಾಕ್ಯವಾಗಿರುತ್ತದೆ. ಆದರೆ ಪ್ರವಾದನೆಯು ಸಾಮಾನ್ಯವಾದ ಮಾನುಷ ಭಾಷೆಯಲ್ಲಿ ಮಾತಾಡಲ್ಪಡುವ ಕಾರಣದಿಂದ ಕೇಳುವವರು ಅದನ್ನು ಅರ್ಥಮಾಡಿಕೊಳ್ಳಲು ಶಕ್ತರಾಗುತ್ತಾರೆ. ಹೀಗೆ ಇತರರು ಪ್ರವಾದನೆಯನ್ನು ಕೇಳುವಾಗ ಅವರು ಭಕ್ತಿವೃದ್ಧಿಯನ್ನು ಪ್ರೋತ್ಸಾಹವನ್ನು ಸಂತೈಸುವಿಕೆಯನ್ನೂ ಪಡೆದುಕೊಳ್ಳುತ್ತಾರೆ.

ಯಾವನಾದರು ವಾಣಿಯನ್ನಾಡಿ (ಆತ್ಮೀಕ ಭಾಷೆ) ಅದರ ಅರ್ಥವನ್ನು ಹೇಳುವದಾದರೆ ವಾಣಿಯು ಅದರ ಅರ್ಥದ ಜೊತೆಯಲ್ಲಿ ಪ್ರವಾದಿಸುವಿಕೆಗೆ ಸಮವಾಗಿದ್ದು ಅದು ಸಹ ಸಭೆಗೆ ಭಕ್ತಿವೃದ್ಧಯನ್ನುಂಟು ಮಾಡುತ್ತದೆ (1 ಕೊರಿಂಥ 12:10 ಮತ್ತು ವ್ಯಾಖ್ಯಾನ ನೋಡಿರಿ).

4 ಅನ್ಯ ಭಾಷೆಯನ್ನಾಡುವ ವ್ಯಕ್ತಿಯು ತಾನು ಮಾತಾಡುತ್ತಿರುವದನ್ನು ಸ್ವತಃ ಅರ್ಥಮಾಡಿಕೊಳ್ಳದಿದ್ದಾಗ್ಯು, ತನಗೆ ಹೆಚ್ಚು ಆತ್ಮೀಕ ಆಶೀರ್ವಾದವನ್ನು ಪಡೆದುಕೊಳ್ಳುತ್ತಾನೆ; ಆತನು ಪವಿತ್ರಾತ್ಮನ ಆನಂದವನ್ನೂ ಪ್ರಸನ್ನತೆಯನ್ನೂ ವಿಶೇಷವಾದ ರೀತಿಯಲ್ಲಿ ಅನುಭವಿಸುತ್ತಾನೆ. ಹೇಗಿದ್ದರೂ, ಇನ್ನೊಬ್ಬನು ಅನ್ಯಭಾಷೆಯನ್ನಾಡುವದನ್ನು ಕೇಳಿಸಿಕೊಳ್ಳುವ ವ್ಯಕ್ತಿಯು ಅತ್ಯಲ್ಪವಾದ ಆತ್ಮೀಕ ಆಶೀರ್ವಾದವನ್ನು ಪಡೆದುಕೊಳ್ಳುತ್ತಾನೆ. ಆದರೆ ಅನ್ಯಭಾಷೆಯು ಭಾಷಾಂತರಿಸಲ್ಪಡುವದಾದರೆ ಕೇಳುವವನು ಹೆಚ್ಚು ಆತ್ಮೀಕ ಆಶೀರ್ವಾದವನ್ನು ಪಡೆಯುವನು.

5 ಇಲ್ಲಿ ಪೌಲನು ಪ್ರವಾದಿಸುವ ವರವು ವಾಣಿಗಳನ್ನಾಡುವ ವರಕ್ಕಿಂತಲೂ ಶ್ರೇಷ್ಠವಾದದ್ದೆಂದು ಸ್ಪಷ್ಟವಾಗಿ ಹೇಳುತ್ತಾನೆ. ಆದರೆ ವಾಣಿಯ ಅರ್ಥವನ್ನು ಸಹ ಹೇಳಲ್ಪಡುವದಾದರೆ ವಾಣಿಗಳನ್ನಾಡುವದು ಸಹ ಮುಖ್ಯವಾಗಿ ಪ್ರವಾದಿಸುವ ವರದಂತೆಯೇ ಇರುತ್ತದೆ.

ಪೌಲನು ಅನ್ಯ ಭಾಷೆಗಳನ್ನಾಡುವದನ್ನು ವಿರೋಧಿಸುವದಿಲ್ಲ; ವಾಸ್ತವದಲ್ಲಿ ಆತನು ಕೊರಿಂಥದವರೆಲ್ಲರೂ ವಾಣಿಗಳನ್ನಾಡಬೇಕೆಂದು ಹಾರೈಸುತ್ತಾನೆ. ಆದರೆ ವಾಣಿಗಳನ್ನಾಡುತ್ತಿದ್ದ ಕೊರಿಂಥದವರು ತಮ್ಮ ವರವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದರು. ಅವರು ಸಭೆಯ ಆರಾಧನಾ ಕ್ರಮದಲ್ಲಿ ಅಸ್ತವ್ಯಸ್ತತೆಯನ್ನು ಸೃಷ್ಟಿಸುತ್ತಿದ್ದರು. ಅವರು ತಾವು ವರವನ್ನು ಹೊಂದಿದ್ದಕ್ಕಾಗಿಯೂ ಇತರರು ಹೊಂದದಿರುವದಕ್ಕಾಗಿಯೂ ಉಬ್ಬಿಕೊಂಡಿದ್ದರು. ಅವರು ಕ್ರಿಸ್ತನನ್ನು ಘನಪಡಿಸುವದಕ್ಕಲ್ಲ, ಆದರೆ ತಮ್ಮನ್ನೇ ಘನಪಡಿಸಿಕೊಳ್ಳುವದಕ್ಕಾಗಿ ವಾಣಿಗಳನ್ನಾಡುತ್ತಿದ್ದರು. ಅವರು ತಮ್ಮನ್ನು ತೋರ್ಪಡಿಸಿಕೊಳ್ಳುತ್ತಿದ್ದರು.

6-9 ನಾವು ಸ್ವರಗಳಲ್ಲಿರುವ ಭೇದದ ಕಾರಣದಿಂದ ವಿವಿಧ ಸಂಗೀತಗಳನ್ನು ಗುರುತಿಸಬಲ್ಲೆವು (ವಚನ 7). ಕೆಲವು ಹಾಡುಗಳು ದುಃಖವುಳ್ಳವುಗಳು ಹಾಗು ಇನ್ನು ಕೆಲವು ಯುದ್ದಗೀತೆಗಳಾಗಿರುತ್ತವೆ. ಅವುಗಳ ಸ್ವರಗಳು, ಸಂಗೀತಗಳು ಬೇರೆ ಬೇರೆಯಾಗಿರುವದರಿಂದ ನಾವು ಅವುಗಳ ಭೇದವನ್ನು ಹೇಳಬಹುದು.

ಆದರೆ ವಾಣಿಗಳನ್ನಾಡುವದು ಒಂದೇ ಸ್ವರವಿರುವ ಹಾಡನ್ನು ಬಾರಿಸುವಂತಿರುತ್ತದೆಂದು ಪೌಲನು ಹೇಳುತ್ತಾನೆ. ಯಾವನೂ ಹಾಡಿನ ಅರ್ಥವು ಏನೆಂಬದನ್ನು ಹೇಳಲಾರನು.

ತುತೂರಿ ಸಹ ಬೇರೆಯಾದ ಸ್ವರವನ್ನು ಹೊಂದಿದೆ (ವಚನ 8). ಸೈನ್ಯದಲ್ಲಿ ತುತೂರಿ ಊದುವವನು ಬೇರೆ ಬೇರೆ ಸ್ವರಗಳನ್ನು ಊದಿ ಸೈನಿಕರು ಯಾವಾಗ ಎದ್ದೇಳಬೇಕು, ಯಾವಾಗ ಮಲಗಬೇಕು, ಯಾವಾಗ ತಿನ್ನಬೇಕು ಮತ್ತು ಯಾವಾಗ ಯುದ್ಧಕ್ಕೆ ಸಿದ್ಧಮಾಡಿಕೊಳ್ಳಬೇಕು ಎಂಬದನ್ನು ಸಂಜ್ಞೆಯ ಮೂಲಕ ಸೂಚಿಸುತ್ತಾನೆ. ಆದರೆ ತುತೂರಿ ಊದುವವನು ಬೇರೆ ಬೇರೆ ಸ್ವರಗಳನ್ನು ಸ್ಪಷ್ಟವಾಗಿ ನುಡಿಸಬೇಕು, ಇಲ್ಲವಾದರೆ ಸೈನಿಕರಿಗೆ ಏನು ಮಾಡಬೇಕೆಂದು ತಿಳಿಯಲಾರರು.

ಹಾಗಾದರೆ ತುತೂರಿ ಹಾಗು ಇತರ ಅಚೇತನ ವಾದ್ಯಗಳು ಅರ್ಥಮಾಡಿಕೊಳ್ಳಲ್ಪಡುವಂಥ ಸ್ವರಗಳನ್ನು ಒದಗಿಸುವದಾದರೆ ಮನುಷ್ಯರಾದ ನಾವು ಸಹ ನಿಶ್ಚಯವಾಗಿಯೂ ಹಾಗೆ ಮಾಡುವದಕ್ಕೆ ಶಕ್ತರಾಗಿರಬೇಕೆಂದು ಪೌಲನು ಹೇಳುತ್ತಾನೆ.

**10-12** ಯಾವನಾದರೂ ನಾವು ಅರ್ಥಮಾಡಿಕೊಳ್ಳಲಾರದ ಅಪರಿಚಿತ ಭಾಷೆಯಲ್ಲಿ ಮಾತಾಡುವದಾದರೆ ಆ ವ್ಯಕ್ತಿಯು ಹೇಳುವಂತದ್ದು ನಮಗೆ ಯಾವ ಅರ್ಥವನ್ನು ನೀಡುವದಿಲ್ಲ. ಅದೇ ರೀತಿಯಲ್ಲಿ ಯಾವನಾದರೂ ಯಾವದೇ ಅರ್ಥವನ್ನು ಹೇಳದೆ ಆತ್ಮೀಕ ಭಾಷೆಯೊಂದರಲ್ಲಿ ಮಾತಾಡುವದಾದರೆ ಅದು ನಮಗೆ ಯಾವ ಅರ್ಥವನ್ನೂ ನೀಡುವದಿಲ್ಲ; ನಮಗೆ ಯಾವ ಪ್ರಯೋಜನವೂ ಆಗುವದಿಲ್ಲ. ಎಲ್ಲಾ ಆತ್ಮೀಕ ವರಗಳು – ವಾಣಿಗಳನ್ನಾಡುವ ವರವನ್ನೂ ಒಳಗೊಂಡು – ಇತರರ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟಿವೆ(1 ಕೊರಿಂಥ12:7). ಅವು ಗಳು ಸಭೆಯ ಭಕ್ತಿವೃದ್ಧಿಗೋಸ್ಕರ ಕೊಡಲ್ಪಟ್ಟಿವೆ (ವಚನ 12). ಆದುದರಿಂದ, ಕೊರಿಂಥದವರು ಮೊದಲು ಸಭೆಯ ಭಕ್ತಿವೃದ್ಧಿಯನ್ನು ಮಾಡುವಂತಹ ವರಗಳಿಗಾಗಿ ಅಪೇಕ್ಷಿಸಲಿ ಎಂದು ಪೌಲನು ಹೇಳುತ್ತಾನೆ.

**13** ಆದುದರಿಂದ, ಒಬ್ಬ ವ್ಯಕ್ತಿಯು ಈಗಾಗಲೇ ವಾಣಿಗಳನ್ನಾಡುವ ವರವನ್ನು ಪಡೆದುಕೊಂಡಿದ್ದರೆ ಆತನು ತಾನು ಅದರ ಅರ್ಥವನ್ನು ಹೇಳುವ ವರವನ್ನು ಸಹ ಪಡೆದುಕೊಳ್ಳುವಂತೆ ಪ್ರಾರ್ಥಿಸುಬೇಕು. ಆತನು ಎರಡು ವರಗಳನ್ನು ಒಟ್ಟಾಗಿ ಹೊಂದಿರುವದಾದರೆ ಆತನು ಪ್ರವಾದಿಸಲು ಸಹ ಶಕ್ತನಾಗಿ ಸಭೆಗೆ ಬಹಳಷ್ಟು ಪ್ರಯೋಜನವನ್ನು ತರುವನು (ವಚನಗಳು 3-4).

**14** ಅನ್ಯಭಾಷೆಯಲ್ಲಿ (ಆತ್ಮೀಕ ಭಾಷೆಯಲ್ಲಿ) ಮಾತಾಡುವ ಅಥವಾ ಪ್ರಾರ್ಥಿಸುವ ವ್ಯಕ್ತಿಯು ತಾನು ಮಾತಾಡುತ್ತಿರುವದನ್ನು ತಿಳಿಯಲಾರನು. ಆತನ ಬುದ್ಧಿ ನಿಷ್ಫಲವಾಗಿರುವದು – ಅಂದರೆ, ಆತನ ಬುದ್ಧಿ ಉಪಯೋಗಿಸಲ್ಪಡುವದಿಲ್ಲ. ಅದು "ಅಚೇತನಗೊಳಿಸಲ್ಪಟ್ಟಿರುತ್ತದೆ".

**15** ಆದ್ದರಿಂದ, ಪೌಲನು ಸಭೆಯಲ್ಲಿ ಹಾಡುವಾಗ ಅಥವಾ ಪ್ರಾರ್ಥಿಸುವಾಗ ಆತನು ತನ್ನ ಆತ್ಮದಿಂದ – ಅಂದರೆ, ಆತ್ಮೀಕ ಭಾಷೆಯೊಂದರಲ್ಲಿ – ಮಾತ್ರವೆ ಹಾಗೆ ಮಾಡದೆ ತನ್ನ ಬುದ್ಧಿಯಿಂದ ಸಹ ಹಾಡಿ ಪ್ರಾರ್ಥಿಸುತ್ತಾನೆ, ಹೀಗೆ ಸಭೆಯಲ್ಲಿರುವ ಇತರರಿಗೆ ಭಕ್ತಿವೃದ್ಧಿಯೂ ಆಶಿರ್ವಾದವೂ ಉಂಟಾಗುವದು.

ಪೌಲನು ಸಾರ್ವಜನಿಕವಾಗಿಯಲ್ಲ; ಆದರೆ ಏಕಾಂತದಲ್ಲಿ ಪ್ರಾರ್ಥಿಸುವವರ ಕುರಿತಾಗಿ ಮಾತಾಡುತ್ತಿದ್ದಾನೆಂದು ಕೆಲವರು ನಂಬುತ್ತಾರೆ. ಈ ದಿನಗಳಲ್ಲಿ ಅನೇಕ ಕ್ರೈಸ್ತರು ಅನ್ಯ ಭಾಷೆಯಲ್ಲಿ ಪ್ರಾರ್ಥಿಸುವ ವರವನ್ನು ಹೊಂದಿದ್ದು ಅವರು ಇದನ್ನು "ಪ್ರಾರ್ಥನಾಭಾಷೆ" ಎಂದು ಕರೆಯುತ್ತಾನೆ. ಅವರು ಈ ರೀತಿಯಾಗಿ ಪ್ರಾರ್ಥಿಸುವದರಿಂದ ಹೆಚ್ಚು ಆತ್ಮೀಕ ಆಶಿರ್ವಾದವನ್ನು ಪಡೆದುಕೊಳ್ಳುತ್ತಾರೆ. ರೋಮ 8:26 ರ ಪ್ರಕಾರವಾಗಿ [49] ಪವಿತ್ರಾತ್ಮನು ಈ ರೀತಿಯಲ್ಲಿಯೇ ಪ್ರಾರ್ಥಿಸುವಂತೆ ನಮಗೆ ಸಹಾಯ ಮಾಡುತ್ತಾನೆಂದು ಅವರು ಹೇಳುತ್ತಾರೆ.

**16-17** ಈ ವಚನಗಳಲ್ಲಿ ಪೌಲನ ತಾತ್ಪರ್ಯವು ಹೀಗಿದೆ: ನಾವು ಸಭೆಯಲ್ಲಿ ಆ ವರವನ್ನು ಹೊಂದದಿರುವವರ[50] ಮದ್ಯದಲ್ಲಿ ಪ್ರಾರ್ಥಿಸುವಾಗ ನಾವು ಅರ್ಥವಾಗಬಲ್ಲ ಭಾಷೆಯಲ್ಲಿ ಪ್ರಾರ್ಥಿಸಬೇಕು. ಇಲ್ಲವಾದರೆ ಅವರು ನಮ್ಮ ಪ್ರಾರ್ಥನೆಗೆ ಆಮೆನ್[51] ಎಂದು ಹೇಗೆ ಹೇಳಾರು? ಅಂದರೆ, ಅವರು ಹೇಗೆ ನಮ್ಮ ಪ್ರಾರ್ಥನೆಯೊಂದಿಗೆ ಒಪ್ಪಿಕೊಂಡಾರು (ಯಾಕೆಂದರೆ 'ಆಮೆನ್' ಎಂದು ಹೇಳುವದರ ಅರ್ಥವು ಅದೇ ಆಗಿದೆ)? ನಾವು ಒಬ್ಬರೊಬ್ಬರು ಅರ್ಥಮಾಡಿಕೊಳ್ಳಲಾಗದಿದ್ದರೆ ಹೇಗೆ ಐಕ್ಯವಾಗಿ ಪ್ರಾರ್ಥಿಸುವದಕ್ಕೂ ಒಬ್ಬರಿಗೊಬ್ಬರು ಭಕ್ತಿವೃದ್ಧಿ ಮಾಡಿಕೊಳ್ಳುವದಕ್ಕೂ ಸಾಧ್ಯ? ಆದುದರಿಂದ, ನಾವು ಸಭೆಯಲ್ಲಿರುವಾಗ ಅರ್ಥವಾಗಬಲ್ಲ ಭಾಷೆಯಲ್ಲಿ (ನಮ್ಮ ಬುದ್ಧಿಗಳಿಂದ) ಪ್ರಾರ್ಥಿಸಬೇಕೆಂದು ಪೌಲನು ಹೇಳುತ್ತಾನೆ.

**18-19** ಪೌಲನು ಸ್ವತಃ ಯಾವದೇ ಕೊರಿಂಥದವರಿಗಿಂತಲೂ ಹೆಚ್ಚಾಗಿ ವಾಣಿಗಳನ್ನಾಡುತ್ತಿದ್ದನು. ಆದುದರಿಂದ, ಕೊರಿಂಥದವರು ವಾಣಿಗಳನ್ನಾಡುವ ವರವನ್ನು ಪಡೆದದ್ದಕ್ಕಾಗಿ ಆ ರೀತಿಯಲ್ಲಿ ಉಬ್ಬಿಕೊಳ್ಳಬಾರದು; ಇತರರು ಸಹ ವಾಣಿಗಳನ್ನಾಡಬಲ್ಲರು! ಆದರೆ ಪೌಲನು ತಾನು ಸಭೆಯಲ್ಲಿ ಮಾತಾಡುವದರ ಅರ್ಥವನ್ನು ಹೇಳುವವನಿಲ್ಲದಿದ್ದರೆ ಸಭೆಯ ಆರಾಧನೆಯಲ್ಲಿ ತನ್ನ ವಾಣಿಗಳನ್ನಾಡುವ ವರವನ್ನು ಉಪಯೋಗಿಸುವದಿಲ್ಲ ಎಂದು ಹೇಳುತ್ತಾನೆ. ಬದಲಾಗಿ ಆತನು ಬುದ್ಧಿಯಿಂದ ಮಾತುಗಳನ್ನಾಡುತ್ತಾನೆ (ವಚನ 19).

**20** ಕೊರಿಂಥದವರು ಬಾಲಕರಂತೆ ವರ್ತಿಸುತ್ತಿದ್ದರು, ಯಾಕೆಂದರೆ ಅವರು ಪವಿತ್ರಾತ್ಮನ ವರಗಳನ್ನು ಇತರರ ಪ್ರಯೋಜನಕ್ಕಿಂತಲೂ ತಮ್ಮ ಸ್ವಪ್ರಯೋಜನಕ್ಕಾಗಿಯೇ ಉಪಯೋಗಿಸುವವರಾಗಿದ್ದರು. ಅವರ ಬುದ್ಧಿಯ ವಿಷಯದಲ್ಲಿ (ವಿಚಾರದಲ್ಲಿ) ಅವರು ಪ್ರಾಯಸ್ಥರಾಗಿ – ಪರಿಪಕ್ವವು ಳ್ಳವರಂತೆ – ನಡೆದುಕೊಳ್ಳುವವರಾಗಿರಬೇಕು ಎಂದು ಪೌಲನು ಹೇಳುತ್ತಾನೆ. ಹೇಗಿದ್ದರೂ, ಕೆಟ್ಟತನದ ವಿಷಯದಲ್ಲಿ ಅವರು ಶಿಶುಗಳಾಗಿಯೇ – ಅಂದರೆ, ಮುಗ್ಧರೂ ಅನುಭವವಿಲ್ಲದರೂ– ಆಗಿರಲಿ.

**21** ಇಲ್ಲಿ ಪೌಲನು ಧರ್ಮೋಪದೇಶಕಾಂಡ ೨೮:೪೯ ಮತ್ತು ಯೆಶಾಯ 28:11-12 ರಿಂದ ಉಲ್ಲೇಖಿಸುತ್ತಾನೆ. "ನಾನು ಈ ಜನರ ಸಂಗಡ ಮಾತಾಡುವೆನು" ಎಂದು ಕರ್ತನು ಹೇಳುತ್ತಾನೆ. ಈ ಜನರು ಯೆಹೂದ್ಯರಾಗಿದ್ದಾರೆ. ಯೆಹೂದ್ಯರು ಅವಿಧೇಯರಾಗಿದ್ದರಿಂದ ದೇವರು ಅವರನ್ನು ಎಚ್ಚರಿಸಲು ಯೆಶಾಯ ನಂತಹ ಪ್ರವಾದಿಗಳನ್ನು ಕಳುಹಿಸಿದನು. ಆದರೆ ಅವರು ಪ್ರವಾದಿಗಳಿಗೆ ಕಿವಿಗೊಡಲಿಲ್ಲ. ಆದುದರಿಂದ ದೇವರು ಅವರನ್ನು ಶಿಕ್ಷಿಸಲು ಪರದೇಶಸ್ಥರನ್ನು – ಅನ್ಯ

ಭಾಷೆಯುಳ್ಳವರನ್ನು – ಕಳುಹಿಸಿದನು. ಈ ಪರದೇಶಸ್ಥರು ಅಶ್ಶೂರ್ಯರಾಗಿದ್ದರು. ಯೆಹೂದ್ಯರು ಈ ಪರದೇಶಸ್ಥರಿಗೂ ಕಿವಿಗೂಡಲಿಲ್ಲ (ಯಾಕೆಂದರೆ ಅವರು ಅಪರಿಚಿತ ಭಾಷೆಯನ್ನಾಡುತ್ತಿದ್ದರು ಮತ್ತು ಯೆಹೂದ್ಯರು ಘೋರವಾದ ಸೋಲು ಅನುಭವಿಸಿದರು. ಯೆಹೂದ್ಯರು ತಾವು ಅರ್ಥಮಾಡಿಕೊಳ್ಳ ಬಹುದಾಗಿದ್ದ ಪ್ರವಾದಿಗಳಿಗೆ ಕಿವಿಗೊಟ್ಟಿರಬೇಕಿತ್ತು!

**22** ಅನ್ಯ ಭಾಷೆಯು (ಅಥವಾ ಅಪರಿಚಿತಭಾಷೆಯು) ಅವಿಧೇಯರಿಗೂ, ಅವಿಶ್ವಾಸಿಗಳಿಗೂ ಸೂಚನೆಯಾಗಿದೆ – ದೇವರ ಶಕ್ತಿ ಹಾಗು ನ್ಯಾಯತೀರ್ಪಿಗೆ ಸೂಚನೆಯಾಗಿದೆ – ಎಂಬದನ್ನು ತೋರಿಸಲು ಪೌಲನು ಯೆಶಾಯನ ಈ ಮಾತುಗಳನ್ನು ಉಲ್ಲೇಖಿಸುತ್ತಾನೆ.

ಆದರೆ ವಿಶ್ವಾಸಿಗಳಿಗಾದರೋ ಪ್ರವಾದನೆ ಅಗತ್ಯವಾಗಿದೆ ಹೊರತು ಅನ್ಯ ಭಾಷೆಗಳಲ್ಲ. ಪ್ರವಾದನೆಯು ವಿಶ್ವಾಸಿಗಳಿಗಾಗಿಯೂ ಅನ್ಯ ಭಾಷೆಗಳು ಅವಿಶ್ವಾಸಿಗಳಿಗಾಗಿಯೂ ಇರುತ್ತವೆ. ಆದುದರಿಂದ, ಸಭೆಯಲ್ಲಿ ಅನ್ಯ ಭಾಷೆಗಳ ಬದಲಾಗಿ ಪ್ರವಾದಿಸುವಿಕೆಯ ಇರಲಿ.

**23** ಅನ್ಯ ಭಾಷೆಗಳನ್ನಾಡುವದು ಅವಿಶ್ವಾಸಿಗಳಿಗೆ ಸೂಚನೆಯಾಗಿದೆಯಾದಾಗ್ಯು ವಿಶ್ವಾಸಿಗಳೆಲ್ಲರೂ ಅವಿಶ್ವಾಸಿಗಳು ತಮ್ಮ ಸಭೆಯಲ್ಲಿ ಬರುವಾಗ ಒಂದೇ ಸಾರಿ ಒಟ್ಟಾಗಿ ಅನ್ಯ ಭಾಷೆಗಳನ್ನಾಡುವದಕ್ಕೆ ಪ್ರಾರಂಭಿಸಬಾರದು. ಇಲ್ಲವಾದರೆ, ವಿಶ್ವಾಸಿಗಳಿಗೆ ಹುಚ್ಚು ಹಿಡಿದದೆ ಎಂದು ಅವಿಶ್ವಾಸಿಗಳು ಯೋಚಿಸುವರು (ಅ.ಕೃತ್ಯ 2:4,13 ನೋಡಿರಿ). ಈ ರೀತಿಯಲ್ಲಿ ಎಲ್ಲರೂ ಏಕಕಾಲದಲ್ಲಿ ವಾಣಿಗಳನ್ನಾಡುವದು ವಾಸ್ತವದಲ್ಲಿ ಅವಿಶ್ವಾಸಿಗಳನ್ನು ವಿಮುಖಗೊಳಿಸಿ ಅವರ ಹೃದಯಗಳು ಕಠಿಣಗೊಳ್ಳುವಂತೆ ಮಾಡಬಹುದು, ಅಶ್ಶೂರ್ಯರು ಅನ್ಯ ಭಾಷೆಯನ್ನಾಡುತ್ತಾ ಬಂದಾಗ ಯೆಹೂದ್ಯರ ಹೃದಯಗಳೂ ಹೀಗೆಯೇ ಕಠಿಣಗೊಂಡಿದ್ದವು (ವಚನ 21). ದೇವರು ಮಾನವರೊಂದಿಗೆ ಅವರು ಅರ್ಥಮಾಡಿಕೊಳ್ಳಬಲ್ಲ ವಿಧಗಳಲ್ಲಿ ಮಾತಾಡಿದಾಗಲೇ ಅವರು ಆತನ ಎಚ್ಚರಿಕೆಗಳಿಗೆ ಕಿವಿಗೊಡಲಿಲ್ಲವಾದರೆ ಆತನು ಅವರಿಗೆ ಅರ್ಥವಾಗಲಾರದ ವಿಧಗಳಲ್ಲಿ ಮಾತಾಡಿದರಂತೂ ಅವರು ಖಂಡಿತವಾಗಿಯೂ ಆತನಿಗೆ ಕಿವಿಗೊಡುವದಿಲ್ಲ!

**24-25** ವಾಣಿಗಳು ಅವಿಶ್ವಾಸಿಗಳಿಗೆ ಸೂಚನೆಯಾಗಿದ್ದಾಗ್ಯು (ವಚನ 22), ಆ ವಿಶ್ವಾಸಿಗಳು ಸಹ ವಾಣಿಗಳಿಗಿಂತಲೂ ಪ್ರವಾದನೆಯಿಂದ ಹೆಚ್ಚು ಪ್ರಯೋಜನವನ್ನು ಪಡೆದುಕೊಳ್ಳುವರು. ನೆನಪಿರಲಿ, ದೇವರು ಅಪನಂಬಿಕೆಯ ಯೆಹೂದ್ಯರಿಗೆ ಎಚ್ಚರಿಸುವದಕ್ಕಾಗಿ ಮೊದಲು ಪ್ರವಾದಿಗಳನ್ನು ಕಳುಹಿಸಿದನು; ಯೆಹೂದ್ಯರು ಅವರಿಗೆ ಕಿವಿಗೊಟ್ಟಿದ್ದರೆ ಅವರು ಹೆಚ್ಚಿನ ಸಮಸ್ಯೆಯಿಂದ ತಪ್ಪಿಸಿಕೊಳ್ಳುತ್ತಿದ್ದರು. ಯಾಕೆಂದರೆ ಯೆಹೂದ್ಯರು ದೇವರಿಂದ ಕಳುಹಿಸಲ್ಪಟ್ಟ ಪ್ರವಾದಿಗಳನ್ನು ತಿರಸ್ಕರಿಸಿದ ನಂತರವಷ್ಟೇ ದೇವರು ಅವರ ಮೇಲೆ ದಾಳಿಮಾಡಲು ಅನ್ಯ ಭಾಷೆಯ ಪರದೇಶಸ್ಥರನ್ನು ಕಳುಹಿಸಿದನು.

ಆದುದರಿಂದ, 22 ನೇ ವಚನದಲ್ಲಿ ಪೌಲನು ವಾಣಿಗಳು...ನಂಬದವರಿಗೆ ಸೂಚನೆಯಾಗಿದೆ ಎಂದು ಹೇಳಿದ್ದಾನಾದಾಗ್ಯು ಸಾಮಾನ್ಯವಾಗಿ ಪ್ರವಾದನೆಯು ನಂಬದವರನ್ನು ಪಶ್ಚಾತಾಪಕ್ಕು ದೇವರೆಡೆಗೆ ತಿರುಗಿಸುವದಕ್ಕೂ ಇನ್ನೂ ಪರಿಣಾಮಕಾರಿಯಾಗಿರುತ್ತದೆ.

ಕೆಲವು ಸಮಯ ಸಭೆಯ ಆರಾಧನೆಯಲ್ಲಿ ದೇವರು ಹಾಜರಿರುವ ಅವಿಶ್ವಾಸಿಯ ವಿಷಯದಲ್ಲಿ ವಿಶ್ವಾಸಿಯೊಬ್ಬನಿಗೆ ವಿಶೇಷ ವಾಕ್ಯ ಅಥವಾ ಪ್ರವಾದನೆಯನ್ನು ನೀಡುತ್ತಾನೆ ಮತ್ತು ಆ ಪ್ರವಾದನೆಯ ಫಲಿತವಾಗಿ ಅವಿಶ್ವಾಸಿಯು ಪಶ್ಚಾತಾಪಟ್ಟು ನಂಬಿಕೆಗೆ ನಡಿಸಲ್ಪಡುವನು. ಹೀಗೆ ಸಾರಾಂಶದಲ್ಲಿ ಪ್ರವಾದನೆಯು ವಾಣಿಗಳಿಗಿಂತಲೂ ಹೆಚ್ಚು ಪ್ರಯೋಜನಕರವಾದದ್ದು, ವಿಶ್ವಾಸಿಗಳಿಗೆ ಮಾತ್ರವಲ್ಲ, ಆದರೆ ಅವಿಶ್ವಾಸಿಗಳಿಗೆ ಸಹ ಪ್ರಯೋಜನಕರವಾಗಿರುತ್ತದೆ.

## ಕ್ರಮಬದ್ಧ ಆರಾಧನೆ (14:26-40)

**26** ಕೊರಿಂಥದವರು ಕೂಡಿಬರುವಾಗಲೆಲ್ಲಾ – ಸಭೆಯಲ್ಲಾಗಲಿ, ಗೃಹ ಅನ್ಯೋನ್ಯತೆಯಲ್ಲಾಗಲಿ ಅಥವಾ ಪ್ರಾರ್ಥನಾ ಕೂಟವೊಂದರಲ್ಲಾಗಲಿ – ತಮಗೆ ಕೊಡಲ್ಪಟ್ಟ ವರಗಳನ್ನು ಉಪಯೋಗಿಸಬೇಕೆಂದು ಪೌಲನು ಪ್ರೋತ್ಸಾಹಿಸುತ್ತಾನೆ. ಪ್ರತಿಯೊಬ್ಬನು ಒಂದು ಅಥವಾ ಹೆಚ್ಚು ಆತ್ಮನವರಗಳನ್ನು ಹೊಂದಿದ್ದು ಅದರ ಮೂಲಕ ಸಭೆಯ ಭಕ್ತಿವೃದ್ಧಿಯನ್ನು ಹೊಂದಬಲ್ಲದೆಂದು ಪೌಲನು ಹೇಳುತ್ತಾನೆ. ಪೌಲನು ಪುನಃ ಈ ವರಗಳ ಕೆಲವೊಂದು ಉದಾಹರಣೆಗಳನ್ನು ನೀಡುತ್ತಾನೆ. ಎರಡು ಉದಾಹರಣೆಗಳು – ಹಾಡುವದು ಮತ್ತು ಉಪದೇಶಮಾಡುವದು – ಸ್ವಾಭಾವಿಕ ವರಗಳಾಗಿರಬಲ್ಲವು (ಎಫೆಸ 5:19; ಕೊಲೊಸ್ಸೆ 3:16). ಇತರ ವರಗಳು – ಪ್ರಕಟಣೆ, ವಾಣಿಯನ್ನಾಡುವದು, ಮತ್ತು ಅರ್ಥಹೇಳುವದು – ಸ್ಪಷ್ಟವಾಗಿ ಅಸ್ವಾಭಾವಿಕ ವರಗಳಾಗಿವೆ (1 ಕೊರಿಂಥ 12:8-10).[52]

**27-28** ಇಲ್ಲಿ ಪೌಲನು ಸಭೆಯ ಕೂಟಗಳ ವೇಳೆಯಲ್ಲಿ ವಾಣಿಗಳನ್ನಾಡುವದರ ಕುರಿತಾಗಿ ಸ್ಪಷ್ಟವಾದ ಸಲಹೆಗಳನ್ನು ನೀಡುತ್ತಾನೆ. ಯಾವದೇ ಒಂದು ಕೂಟದಲ್ಲಿ ಮೂವರಿಗಿಂತಲೂ ಹೆಚ್ಚು ಜನರು ವಾಣಿಗಳನ್ನಾಡಬಾರದು; ಮತ್ತು ಅವರು ಒಬ್ಬರಾದ ಮೇಲೆ ಒಬ್ಬರಂತೆ ಮಾತಾಡಬೇಕು ಹೊರತು ಎಲ್ಲರೂ ಒಟ್ಟಾಗಿ ಮಾತಾಡಬಾರದು. ವಾಣಿಗಳನ್ನಾಡುವ ಯಾವದೇ ಸಭೆಯಲ್ಲಿ ಸಾಮಾನ್ಯವಾಗಿ ಅದರ ಅರ್ಥವನ್ನು ಹೇಳಬಲ್ಲ ಒಬ್ಬನು ಅಥವಾ ಹೆಚ್ಚು ಜನರು ಇರುತ್ತಾರೆ. ಒಂದು ವೇಳೆ ನಿರ್ದಿಷ್ಟವಾದ ಕೂಟದಲ್ಲಿ ಅಂತಹ ಅರ್ಥಹೇಳುವವನಿಲ್ಲದಿದ್ದರೆ ವಾಣಿಗಳನ್ನಾಡುವ ವರವಿರುವ ವ್ಯಕ್ತಿಯು ಆ ಕೂಟದಲ್ಲಿ ವಾಣಿಗಳನ್ನಾಡಬಾರದು (ಸ್ವತಃ ಆತನೇ ತಾನು ಮಾತಾಡುವ ವಿಷಯದ ಅರ್ಥವನ್ನು ಹೇಳುವ ಹೊರತು) ಬದಲಾಗಿ ಆತನು ಏಕಾಂತವಾಗಿ ಪ್ರಾರ್ಥನೆಯಲ್ಲಿ ತನ್ನೊಂದಿಗೆಯೂ ದೇವರೊಂದಿಗೆಯೂ ಮಾತಾಡಿಕೊಳ್ಳಬೇಕು (ವಚನ 28).

ವಾಣಿಗಳನ್ನಾಡುವ ವರವು ನಮ್ಮ ಹತೋಟಿಯಲ್ಲಿರುತ್ತದೆಂಬದನ್ನು ಗಮನಿಸರಿ. ಪೌಲನ ಸಲಹೆಗಳಿಗನುಸಾರವಾಗಿಯೂ ಪವಿತ್ರಾತ್ಮನ ನಡಿಸುವಿಕೆಗೆನುಸಾರವಾಗಿಯೂ ನಾವು ಮಾತಾಡಬಹುದು ಇಲ್ಲವೆ ಮಾತಾಡದಿರಬಹುದು; ತೀರ್ಮಾನವು ನಮಗೆ ಸೇರಿದೆ.

**29** ಪ್ರವಾದಿಸುವ ವರವನ್ನು ಹೊಂದಿರುವವರು ಸಹ ಸರದಿಯ ಪ್ರಕಾರ ಮಾತಾಡಬೇಕು. ಮತ್ತು ಮಿಕ್ಕಾದವರು ಕೇಳಿವಿವೇಚನೆ ಮಾಡಬೇಕು. ಅದು ಅವಶ್ಯಕವೇಕೆ? ಯಾಕೆಂದರೆ ಸುಳ್ಳು ಪ್ರವಾದಿಗಳು ಸಭೆಯೊಳಗೆ ಬಂದು ವಿಶ್ವಾಸಿಗಳನ್ನು ಮೋಸಪಡಿಸಬಹುದಾದ ಅಪಾಯವು ಯಾವಾಗಲೂ ಇರುತ್ತದೆ (ಮತ್ತಾಯ 7;15; ಮಾರ್ಕ 13:22; ಅ.ಕೃತ್ಯ 20:29-30; 2 ಕೊರಿಂಥ 11:13-14). ನಾವು ಪ್ರತಿಯೊಬ್ಬ ಪ್ರವಾದಿಯು ಹೇಳುವದನ್ನು ಪರೀಕ್ಷಿಸಿ ಅದು ಸತ್ಯವೋ ಅಥವಾ ಅಲ್ಲವೋ ಎಂಬದನ್ನು ನಿರ್ದರಿಸಿಕೊಳ್ಳಬೇಕು (1 ಯೋಹಾನ 4:1). ವಿಶ್ವಾಸಿಗಳು ಸುಳ್ಳು ಪ್ರವಾದಿಗಳನ್ನು ಗುರುತಿಸುವಂತೆ ಸಹಾಯ ಮಾಡುವಕ್ಕೆ ಪವಿತ್ರಾತ್ಮನು ಸಭೆಯಲ್ಲಿರುವ ಕೆಲವರಿಗೆ ಸತ್ಯಾಸತ್ಮಗಳನ್ನು ವಿವೇಚಿಸುವ[53] ವಿಶೇಷ ವರವನ್ನು ಅನುಗ್ರಹಿಸುತ್ತಾನೆ (1 ಕೊರಿಂಥ 12:10). ಈ ವರವನ್ನು ಹೊಂದಿರುವವರು ಹೀಗೆ ಇತರ ವಿಶ್ವಾಸಿಗಳನ್ನು ಸುಳ್ಳು ಪ್ರವಾದಿಗಳ ಬೋಧನೆಯಿಂದ ಕಾಪಾಡಬಹುದು.

**30-31** ಪ್ರವಾದಿಯೊಬ್ಬನು ಮಾತಾಡುವದಕ್ಕೆ ಮುಂಚೆ ಆತನು ತಾನು ಹೇಳಲಿರುವದರ ಬಗ್ಗೆ ದೇವರಿಂದ ಪ್ರಕಟನೆಯೊಂದನ್ನು ಪಡೆದುಕೊಳ್ಳಬೇಕು. ಒಂದು ವೇಳೆ ಸಭೆಯ ಕೂಟದಲ್ಲಿ ಒಬ್ಬಗೆ ಅಂತಹ ಒಂದು ಪ್ರಕಟಣೆಯಾಗುವದಾದರೆ ಆ ವ್ಯಕ್ತಿಗೆ ಆ ಪ್ರಕಟನೆಯನ್ನು ಹಂಚಿಕೊಳ್ಳುವ ಅವಕಾಶವನ್ನು ಶೀಘ್ರವೇ ನೀಡತಕ್ಕದ್ದು. ಆದರೆ ಬೇರೊಬ್ಬನು ಈಗಾಗಲೇ ಮಾತಾಡುತ್ತಿರುವದಾದರೆ ಆ ವ್ಯಕ್ತಿಯು ತಾನು ಹೇಳುತ್ತಿರುವದನ್ನು ಬೇಗನೆ ಮುಕ್ತಾಯಗೊಳಿಸಿ ಕುಳಿತುಕೊಳ್ಳಬೇಕು; ಆಗ ಪ್ರಕಟಣೆಯನ್ನು ಹೊಂದಿಕೊಂಡಿರುವವರು ಮಾತಾಡ ಬಹುದು. ಒಂದು ಸಮಯದಲ್ಲಿ ಒಬ್ಬನು ಮಾತ್ರವೇ ಸಭೆಯನ್ನು ದ್ದೇಸಿಸಿ ಮಾತಾಡಬೇಕು[54]

**32** ವಾಣಿಗಳನ್ನಾಡುವ ವ್ಯಕ್ತಿಯು ತನ್ನನ್ನು ಸ್ವಾಧೀನದಲ್ಲಿಟ್ಟು ಕೊಳ್ಳಬೇಕಾಗಿರುವ ಹಾಗೆಯೇ ಪ್ರವಾದಿಸುವ ವ್ಯಕ್ತಿಯೂ ತನ್ನನ್ನು ಸ್ವಾಧೀನದಲ್ಲಿಟ್ಟುಕೊಳ್ಳಬೇಕು. ದೇವರು ಪ್ರಕಟಣೆಯನ್ನು ನೀಡುತ್ತಾನೆ ಆದರೆ ಪ್ರವಾದಿಯು ಕ್ರಮಬದ್ಧವಾದ ರೀತಿಯಲ್ಲಿ ಮಾತಾಡಬೇಕು.

ಪ್ರವಾದಿಗಳ ಆತ್ಮಗಳು ಸ್ವತಃ ಪ್ರವಾದಿಗಳ ಮಾನುಷ ಆತ್ಮಗಳೇ. ಪವಿತ್ರಾತ್ಮನು ಪ್ರವಾದಿಯ ಆತ್ಮವನ್ನು ಪ್ರೇರೆಪಿಸುತ್ತಾನೆ, ಆದರೆ ಪ್ರವಾದಿಯೂ ತನ್ನ ಬುದ್ಧಿಯನ್ನೂ ಚಿತ್ತವನ್ನೂ ಉಪಯೋಗಿಸಿ ತನ್ನ ಆತ್ಮವನ್ನು ಸ್ವಾದೀನದಲ್ಲಿಟ್ಟುಕೊಳ್ಳಬೇಕು.

**33** ಪೌಲನು ಸಭೆಯ ಕ್ರಮದ ವಿಷಯದಲ್ಲಿ ಈ ಎಲ್ಲಾ ಬೋಧನೆಯನ್ನು ಏಕೆ ನೀಡುತ್ತಾನೆ? ಯಾಕೆಂದರೆ ದೇವರು ಗಲಿಬಿಲಿಗೆ ಕಾರಣನಲ್ಲ. ಆತನು ಸಮಾಧಾನ ಹಾಗು ಕ್ರಮಬದ್ಧತೆಯ ದೇವರಾಗಿದ್ದಾನೆ, ಮತ್ತು ತನ್ನ ಸಭೆಯಲ್ಲಿ ಕ್ರಮವು ಪಾಲಿಸಲ್ಪಡುವದನ್ನು ಆತನು ಇಚ್ಚಿಸುತ್ತಾನೆ. ಪವಿತ್ರಾತ್ಮನ ಒಂಬತ್ತು ವರಗಳಲ್ಲಿ ಕೊನೆಯದು ಶಮೆದಮೆ ಆಗಿದೆ (ಗಲಾತ್ಯ 5:23). ಕೊರಿಂಥದ ಸಭೆಯಲ್ಲಿ ಈ ಫಲದಕೊರತೆಯಿತ್ತು; ಈ ಕಾರಣದಿಂದಲೇ ಅವರ ಕೂಟಗಳು ಗಲಿಬಿಲಿಯಿಂದ ತುಂಬಿರುತ್ತಿದ್ದವು . ಇದರ ಮೂಲಕ ಪವಿತ್ರಾತ್ಮನ ವರಗಳಿಗಿಂತಲೂ ಪವಿತ್ರಾತ್ಮನ ಫಲಗಳು ಅತ್ಯಂತ ಪ್ರಾಮುಖ್ಯವೆಂಬದನ್ನು ನಾವು ಪುನಃ ತಿಳಿದುಕೊಳ್ಳಬಹುದು. ಒಬ್ಬನು ಪವಿತ್ರಾತ್ಮನ ವರಗಳನ್ನು ಹೊಂದಿರಬಹುದು, ಆದರೆ ಆತನು ಪವಿತ್ರಾತ್ಮನ ಫಲಗಳನ್ನು ಸಹ ಹೊಂದಿರದಿದ್ದರೆ ಆತನ ನಡವಳಿಕೆಯು ದೇವರಿಗೆ ಮೆಚ್ಚಿಕೆಯಾಗಿರುವದಿಲ್ಲ.

**34** ಸ್ತ್ರೀಯರು ಸಭೆಯ ಕೂಟಗಳಲ್ಲಿ ಮೌನವಾಗಿರಬೇಕು. ಈ ದಿನಗಳಲ್ಲಿ ಈ ವಚನದ ಅರ್ಥಕುರಿತಾಗಿ ಕ್ರೈಸ್ತರ ಮಧ್ಯದಲ್ಲಿ ಹೆಚ್ಚು ವಾಗ್ವಾದವಿರುತ್ತದೆ. ಸ್ತ್ರೀಯು ಎಲ್ಲಾ ಸಮಯದಲ್ಲಿಯೂ ಮೌನವಾಗಿರಬೇಕೆಂದು ಈ ವಚನದ ಅರ್ಥವಾಗಿರಲಾರದು, ಯಾಕೆಂದರೆ ಪೌಲನು ಇದೇ ಪತ್ರಿಕೆಯಲ್ಲಿಯೇ ಸ್ತ್ರೀಯರು ಸಾರ್ವಜನಿಕವಾಗಿ ಸಭೆಯಲ್ಲಿ ಪ್ರಾರ್ಥಿಸುವಾಗ ಹಾಗು ಪ್ರವಾದನೆ ಮಾಡುವಾಗ ತಮ್ಮ ತಲೆಗೆ ಮುಸುಕನ್ನು ಹಾಕಿಕೊಳ್ಳಬೇಕೆಂದು ಬರೆದಿರುತ್ತಾನೆ (1 ಕೊರಿಂಥ 11:5). ಹೀಗೆ, ಸ್ವತಃ ಪೌಲನ ಹೇಳಿಕೆಗನುಸಾರವಾಗಿ ಸ್ತ್ರೀಯರು ಸಭೆಯಲ್ಲಿ ಗಟ್ಟಿಯಾಗಿ ಪ್ರಾರ್ಥನೆ ಹಾಗು ಪ್ರವಾದನೆ ಮಾಡುವದರಲ್ಲಿ ತಪ್ಪೇನಿಲ್ಲದಿರಬೇಕು; ಇಲ್ಲವಾದರೆ ಅವರು ತಮ್ಮ ತಲೆಗೆ ಮುಸುಕನ್ನು ಹಾಕಿಕೊಳ್ಳಬೇಕೆಂದು ಪೌಲನು ಎಂದಿಗೂ ಹೇಳಿಯೇ ಇರುತ್ತಿರಲಿಲ್ಲ. ಸ್ತ್ರೀಯರು ಸಭೆಗಳಲ್ಲಿ ಮೌನವಾಗಿರಬೇಕೆಂದು ಪೌಲನು ಹೇಳುವದರ ತಾತ್ಪರ್ಯವೇನು? ಸ್ತ್ರೀಯರು ಸಭೆಯ ಕೂಟಗಳ ವೇಳೆಯಲ್ಲಿ ಗಲಿಬಿಲಿಯನ್ನುಂಟು ಮಾಡಬಾರದೆಂಬದು ಆತನ ತಾತ್ಪರ್ಯವಾಗಿರುತ್ತದೆ. ಮಾತಾಡುವದಕ್ಕೆ ಅವರಿಗೆ ಅಪ್ಪಣೆಯಿಲ್ಲ ಎಂದು ಪೌಲನು ಹೇಳುತ್ತಾನೆ; ಅಂದರೆ ಅವರಿಗೆ ಹರಟೆಮಾತಾಡಲು ಅನುಮತಿಯಿಲ್ಲ.

ಪೌಲನ ಕಾಲದಲ್ಲಿ ಸ್ತ್ರೀಯರು ಸಭೆಯ ಒಂದು ಕಡೆಯಲ್ಲಿಯೂ ಪುರುಷರು ಇನ್ನೊಂದು ಕಡೆಯಲ್ಲಿಯೂ ಕೂತುಕೊಳ್ಳುತ್ತಿದ್ದರು. ಹೀಗೆ ಹಲವಾರು ವೇಳೆಗಳಲ್ಲಿ ಸ್ತ್ರೀಯರು ಹರಟೆ ಮಾತುಗಳನ್ನಾಡುತ್ತಾ ತಮ್ಮೊಳಗೆ ನಗುತ್ತಾ ಕೂಟದಲ್ಲಿ ಹೇಳಲ್ಪಡುವ ವಿಷಯದೆಡೆಗೆ ಗಮನವನ್ನು ಕೊಡುತ್ತಿರಲಿಲ್ಲ. ಅವರೊಂದಿಗೆ ಅನೇಕವೇಳೆಗಳಲ್ಲಿ ಮಕ್ಕಳಿದ್ದು ಅವರು ಗಲಾಟೆಮಾಡುತ್ತಾ ಗಲಿಬಿಲಿಯನ್ನುಂಟು ಮಾಡುತ್ತಿದ್ದರು. ಪೌಲನು ಖಂಡಿತವಾಗಿಯೂ ಅಂತಹ ಸ್ತ್ರೀಯರಿಗೆ ಅವರು ತಮ್ಮ ಮಕ್ಕಳನ್ನು ಸ್ವಾಧೀನದಲ್ಲಿಟ್ಟುಕೊಳ್ಳಬೇಕು ಅಥವಾ ಹೊರಗೆ ಕರಕೊಂಡು ಹೋಗಬೇಕೆಂದು ಸಲಹೆ ಮಾಡಿರುತ್ತಾನೆ. ಇಲ್ಲವಾದರೆ ಯಾರೊಬ್ಬರೂ ಹೇಳಲ್ಪಡುವ ಸಂಗತಿಯೆಡೆಗೆ ಗಮನವನ್ನು ಹರಿಸಲು ಸಾಧ್ಯವಾಗುತ್ತಿರಲಿಲ್ಲ.

ಆದುದರಿಂದ, ಸ್ತ್ರೀಯರ ವಿವೇಚನೆಯಿಲ್ಲದ ಅಥವಾ ಕ್ರಮವಿಲ್ಲದ ರೀತಿಯಲ್ಲಿ ಮಾತಾಡಬಾರದೆಂದು ಪೌಲನು ಇಲ್ಲಿ ಬೋಧಿಸುತ್ತಿದ್ದಾನೆ. ಅವರು ಕೂಟದ ನಾಯಕರ ಅಧೀನದಲ್ಲಿರಬೇಕು (ಸಾಮಾನ್ಯ ಲೇಖನ: ಸಭೆಯಲ್ಲಿ ಸ್ತ್ರೀಯರು ನೋಡಿರಿ).

ಸ್ತ್ರೀಯರ ಕುರಿತಾದ ಈ ನಿಯಮವು ಪೌಲನ ಕಾಲದ ಯೆಹೂದ್ಯರೊಳಗೆ ಇನ್ನು ಹೆಚ್ಚು ಕಟ್ಟುನಿಟ್ಟಾಗಿ ಅನ್ವಯವಾಗುತ್ತಿತ್ತು. ಯೆಹೂದ್ಯ ಪದ್ಧತಿಯ ಪ್ರಕಾರವಾಗಿ ಸ್ತ್ರೀಯರಿಗೆ ಸಭಾಮಂದಿರದಲ್ಲಿ ಮಾತಾಡುವದಕ್ಕೆ ಅನುಮತಿಯೇ ಇರಲಿಲ್ಲ. ಆದರೆ ಕ್ರಿಸ್ತನಲ್ಲಿ ಸರಿಸಮಾನರಾದ ಕಾರಣ ಕ್ರೈಸ್ತ ಸ್ತ್ರೀಯರಿಗೆ ಸಭೆಯಲ್ಲಿ ಹೆಚ್ಚು ಅವಕಾಶಗಳಿರುತ್ತಿದ್ದವು . ಹಾಗಿದ್ದರೂ, ಸ್ತ್ರೀಯರು ಸಭೆಯ ಆರಾಧನಾ ವೇಳೆಗಳಲ್ಲಿ ಮೌನವಾಗಿರುವದು ತಕ್ಕದಾಗಿರುತ್ತದೆಂದು ಪೌಲನು ಇಲ್ಲಿ ಬೋಧಿಸುತ್ತಾನೆ (1 ತಿಮೊಥೆ 2:11-12; 1 ಪೇತ್ರ 3:1-4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**35** ಒಬ್ಬ ಸ್ತ್ರೀಯು ತಾನು ಕೇಳಲಿಚ್ಛಿಸುವ ಪ್ರಶ್ನೆಯೊಂದನ್ನು ಹೊಂದಿರುವದಾದರೆ ಅವಳು ಅದನ್ನು ಕೇಳುವದಕ್ಕೆ ತಕ್ಷಣವೇ ಕೂಟದ ಮದ್ಯದಲ್ಲಿ ಜಿಗಿದು ನಿಲ್ಲಬಾರದು; ಅದು ನಾಚಿಗೆ ಗೆಟ್ಟ ಕೆಲಸವಾಗಿದೆ. ಅದು ಗಲಿಬಿಲಿಯನ್ನುಂಟು ಮಾಡಬಹುದು. ಬದಲಾಗಿ, ಅವಳು ಕಾಯ್ದುಕೊಂಡು ಹೆಚ್ಚು ತಕ್ಕದಾದ ಸಮಯದಲ್ಲಿ ತನ್ನ ಗಂಡನನ್ನು ಆ ಪ್ರಶ್ನೆ ಕೇಳಲಿ. ಪೌಲನ ಕಾಲದಲ್ಲಿ ಬಹುಪಾಲು ಸ್ತ್ರೀಯರು ಅವಿಧ್ಯಾವಂತರಾಗಿರುತ್ತಿದ್ದರು. ಸಭೆಯ ಆರಾಧನೆಯಲ್ಲಿ ಹೇಳಲ್ಪಡುತ್ತಿದ್ದೆಲ್ಲವನ್ನೂ ಅವರು ಅರ್ಥಮಾಡಿಕೊಳ್ಳದವರಾಗಿದ್ದರು. ಆದುದರಿಂದ, ಅವರಿಗೆ ಬೋಧಿಸುವದು ಅವರ ಗಂಡಂದಿರ ಕರ್ತವ್ಯವಾಗಿದೆ ಎಂದು ಪೌಲನು ಹೇಳುತ್ತಾನೆ. ಹೆಂಡತಿಯರು ಆತ್ಮೀಕ ವಿಷಯಗಳಲ್ಲಿ ಅಜ್ಞಾನಿಗಳಾಗುಳಿಯಬಾರದು. ಆತ್ಮೀಕ ತಿಳುವಳಿಕೆಯಲ್ಲಿ ಗಂಡ ಮತ್ತು ಹೆಂಡತಿ ಸರಿಸಮಾನವಾಗಿರಬೇಕು. ನಮ್ಮನ್ನು ನಾವು ಕೇಳಿಕೊಳ್ಳೋಣ: ನಮ್ಮ ಸ್ವಂತ ಸಭೆಯು ಹೇಗಿರುತ್ತದೆ? ಸ್ತ್ರೀಯರು ಮುಕ್ತವಾಗಿ ಬರುವರೋ? ಅವರು ಬೋಧನೆಯನ್ನು ಹೊಂದಿಕೊಳ್ಳುತ್ತಾರೋ? ಗಂಡಂದಿರು ತಮ್ಮ ಹೆಂಡತಿಯರಿಗೆ ಬೋಧಿಸಬೇಕಾದ ತಮ್ಮ ಕರ್ತವ್ಯವನ್ನು ಅಲಕ್ಷಿಸದಿರಲಿ.

**36** ಕೊರಿಂಥದವರು ಉಬ್ಬಿಕೊಂಡವರಾಗಿದ್ದರು. ಅವರು ಸಭೆಯ ಆರಾಧನೆಗಳಲ್ಲಿ ತಮ್ಮ ಸ್ವಂತ ನಿಯಮಗಳನ್ನು ಪಾಲಿಸುತ್ತಿದ್ದರು. ಅವರು ಭೂಮಿಯ ಮೇಲೆ ತಮ್ಮ ಸಭೆಯು ಮಾತ್ರವೇ ಇರುತ್ತದೇನೋ ಎಂಬಂತೆ ವರ್ತಿಸುತ್ತಿದ್ದರು. ಆದುದರಿಂದ, ಈ ವಚನದಲ್ಲಿ ಪೌಲನು ಕೊರಿಂಥದವರಿಗೆ ಪ್ರಪಂಚದಲ್ಲಿ ಅವರು ಮಾತ್ರವೇ ಕ್ರೈಸ್ತರಲ್ಲ ಎಂಬದನ್ನು ಜ್ಞಾಪಕಪಡಿಸುತ್ತಾನೆ. ಅವರು ಇತರ ಎಲ್ಲಾ ಸಭೆಗಳು ಪಾಲಿಸುತ್ತಿದ್ದ ನಿಯಮಗಳನ್ನೇ ಪಾಲಿಸುವವರಾಗಿರಬೇಕು (ವಚನ 33).

**37** ಕೊರಿಂಥದ ಸಭೆಯೊಳಗೆ ಯಾವನಾದರೂ ತನ್ನನ್ನು ಪ್ರವಾದಿಯೆಂದಾಗಲಿ ದೇವರಾತ್ಮನಿಂದ ನಡಿಸಲ್ಪಡುವವನೆಂದಾಗಲಿ ಭಾವಿಸಿಕೊಂಡರೆ ಪೌಲನು ಬರೆದಿರುವ ಸಲಹೆಗಳು ಸ್ವತಃ ಕರ್ತನಿಂದಲೇ ಬಂದವುಗಳಾಗಿವೆ ಎಂಬದನ್ನು ತಿಳಿದುಕೊಳ್ಳತಕ್ಕದ್ದು.

**38** ಯಾವನಾದರೂ ಪೌಲನ ಬೋಧನೆಯನ್ನು ಗುರುತಿಸದಿದ್ದರೆ ಅಥವಾ ಕಿವಿಗೊಡದಿದ್ದರೆ ಅವ್ಯಕ್ತಿಯು ಗೊತ್ತಿಗೆ ಬಾರದವನಾಗಿರಲಿ,[55] ಅವನು ಅಜ್ಞಾನಿಯೆಂದು ನಡಿಸಿಕೊಳ್ಳಲ್ಪಡಲಿ.

**39-40** ಅಂತಿಮವಾಗಿ, ಪೌಲನು ತನ್ನ ಎಲ್ಲಾ ಎಚ್ಚರಿಕೆಗಳ ಹೊರತಾಗಿಯೂ ಕೊರಿಂಥದವರನ್ನು ತಾವು ಹೊಂದಿರುವ ಆತ್ಮೀಕ ವರಗಳನ್ನು ಉಪಯೋಗಿಸುವದರಲ್ಲಿ ನಿರಾಶೆಪಡಿಸಲಿಚ್ಛಿಸುವದಿಲ್ಲ. ಅವುಗಳು ಉಪಯೋಗಿಸಲ್ಪಡಲಿ! (ವಚನ 1). ಆದರೆ ಅವುಗಳು ಮರ್ಯಾದೆಯಿಂದಲೂ ಕ್ರಮದಿಂದಲೂ ಉಪಯೋಗಿಸಲ್ಪಡಲಿ.

---

# ಅಧ್ಯಾಯ - 15

## ಕ್ರಿಸ್ತನ ಪುನರುತ್ಥಾನ (15:1-11)

**1-2** ನಾನು ಯಾವ ಸಂಗತಿಯನ್ನು ಹೇಳಿ ನಿಮಗೆ ಸುವಾರ್ತೆಯನ್ನು ತಿಳಿಸಿದೆನೋ ನೀವು ಅದನ್ನು ಘಟ್ಟಿಯಾಗಿ ಹಿಡುಕೊಂಡರೆ ಆ ಸುವಾರ್ತೆಯಿಂದ ನಿಮಗೆ ರಕ್ಷಣೆಯಾಗುತ್ತದೆ. ನಂಬುವುದೆಂದರೆ ಸುವಾರ್ತೆಯನ್ನು (ಕ್ರಿಸ್ತನನ್ನು) ಘಟ್ಟಿಯಾಗಿ ಹಿಡುಕೊಳ್ಳುವದು ಎಂದು ಅರ್ಥವಾಗಿದೆ. ಆದರ ಅರ್ಥವು ಕ್ರಿಸ್ತನಲ್ಲಿ ನೆಲೆಗೊಳ್ಳುವದೇ ಆಗಿದೆ (ಯೋಹಾನ 15:4-6). ದೇವರ ದಯೆಯನ್ನು ಆಶ್ರಯಿಸಿಕೊಂಡೇ ಇರುವದು ಅದರ ಅರ್ಥವಾಗಿದೆ (ರೋಮ 11:22). ನಾವು ಈ ರೀತಿಯಾಗಿ ನಂಬದಿರುವದಾದರೆ ನಮ್ಮ ನಂಬಿಕೆಯು ನಿರಾಧಾರವಾಗಿರುತ್ತದೆ.

ನಾವು ಕ್ರಿಸ್ತನಲ್ಲಿ ನೆಲೆಗೊಳ್ಳದಿದ್ದರೆ ನಮ್ಮ ಜೀವಿತಗಳಲ್ಲಿ ಯಾವದೇ ಆತ್ಮೀಕ ಫಲವಿರುವದಿಲ್ಲ. ಫಲವಿಲ್ಲದಿರುವದಾದರೆ ನಮ್ಮ ಮಂಬಿಕೆಯು ಸತ್ತದ್ದಾಗಿರುತ್ತದೆ (ಯಾಕೋಬ 2:14-17 ಮತ್ತು ವ್ಯಾಖ್ಯಾನ ನೋಡಿರಿ). ನಮ್ಮ ನಂಬಿಕೆಯು ಸತ್ತದ್ದಾಗಿರುವದಾದರೆ ಖಂಡಿತವಾಗಿಯೂ ನಾವು ನಿರಾಧಾರವಾಗಿ ನಂಬಿದವರಾಗುವೆವು (ವಚನ 2). ಮಾನವನು ಜೀವವಿಲ್ಲದ ನಂಬಿಕೆಯಿಂದ ರಕ್ಷಿಸಲ್ಪಡಲಾರನು!

ನಿಜವಾದ ನಂಬಿಕೆಯು ಅತಿ ಆಳವಾದ ಸಂಗತಿಯಾಗಿದೆ. ಎಷ್ಟು ಸುಲಭವಾಗಿ ನಾವು "ನಾನು ನಂಬುತ್ತೇನೆ" ಎಂದು ಹೇಳುತ್ತೇವೆ, ಆದರೆ ನಿಜವಾದ ನಂಬಿಕೆಯನ್ನು ಹೊಂದಿರುವದಿಲ್ಲ. ನಿಜವಾದ ನಂಬುವು ದೆಂದರೆ ಕ್ರಿಸ್ತನಲ್ಲಿ ನೆಲೆಗೊಳ್ಳವದೆಂಬದನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳೋಣ. ನಾವು ಕ್ರಿಸ್ತನಲ್ಲಿ ನೆಲೆಗೊಳ್ಳದಿದ್ದರೆ ನಮ್ಮ ನಂಬಿಕೆಯು ಕಳೆದುಹೋಗುವದು – ಮತ್ತು ನಮ್ಮ ಸ್ಥಿತಿಯೂ ಹಾಗೆಯೇ ಆಗುವದು.

3 ಪೌಲನು 3-4 ವಚನಗಳಲ್ಲಿ ತಾನು ಅವರಿಗೆ ಬೋಧಿಸಿದ ಸುವಾರ್ತೆಯ ಕ್ಲುಪ್ತ ಸಾರಾಂಶವನ್ನು ನೀಡುತ್ತಾನೆ (ವಚನ 1). ಶಾಸ್ತ್ರದ[56] ಪ್ರಕಾರವಾಗಿ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು (ಯೆಶಾಯ 53:1-12). ಆತನು ನಮ್ಮ ದಂಡನೆಯನ್ನು ಹೊತ್ತುಕೊಂಡನು; ಮತ್ತು ತನ್ನ ಯಜ್ಞದ ಮುಖಾಂತರ – ಅಂದರೆ, ತನ್ನ ಮರಣದ ಮೂಲಕ – ನಾವು ನಮ್ಮ ಪಾಪಗಳ ಕ್ಷಮಾಪಣೆಯನ್ನು ಹೊಂದುತ್ತೇವೆ (ಮಾರ್ಕ 10:45; 1 ಪೇತ್ರ 2:24 ಮತ್ತು ವ್ಯಾಖ್ಯಾನ ನೋಡಿರಿ).

4 ಆದರೆ ಕ್ರಿಸ್ತನು ಇತರ ಮನುಷ್ಯರಂತೆ ಸತ್ತು ಹೂಣಲ್ಪಟ್ಟವನಾಗಿಯೇ ಉಳಿಯಲಿಲ್ಲ. ಆತನ ದೇಹವು ಮೂರು ದಿನಗಳ ವರೆಗೆ ಸಮಾಧಿಯಲ್ಲಿತ್ತು ಮತ್ತು ಬಳಿಕ ಆತನು ಸತ್ತವರೊಳಗಿಂದ ಎದ್ದು ಬಂದನು. ಆತನು ಪುನಃ ಜೀವ ಪಡೆದುಕೊಂಡನು. ಆತನನ್ನು ಹೂಣಲ್ಪಟ್ಟಿದ್ದ ಸಮಾಧಿಯು ಬರಿದಾಗಿ ಕಂಡುಬಂದಿತು! ಇದು ಒಂದು ಐತಿಹಾಸಿಕ ಸತ್ಯಾಂಶವಾಗಿದೆ. ಯೇಸು ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದನಾದ್ದರಿಂದ – ಅಂದರೆ, ಆತನ ಪುನರುತ್ಥಾನದ ನಿಮಿತ್ತವಾಗಿ – ಆತನು ಜೀವಸ್ವರೂಪನಾದ ದೇವರೆಂದು ನಾವು ಬಲ್ಲೆವು. ಮತ್ತು ಆತನು ಸತ್ತವರೊಳಗಿಂದ ಎದ್ದು ಬಂದನಾದ್ದರಿಂದ ಆತನು ನಮ್ಮನ್ನು ಸಹ ಸತ್ತವರೊಳಗಿಂದ ಎಬ್ಬಿಸಿ ನಿತ್ಯ ಜೀವವನ್ನು ಕೊಡುವದಕ್ಕೆ ಶಕ್ತಿ ಹೊಂದಿರುತ್ತಾನೆ (ರೋಮ 8:11; ಎಫೆಸ 2:4-7).

ಈ ಕಾರಣಕ್ಕಾಗಿಯೇ ಕ್ರಿಸ್ತನ ಪುನರುತ್ಥಾನವು ಅಷ್ಟೊಂದು ಪ್ರಾಮುಖ್ಯವಾಗಿದೆ. ಒಂದು ಕ್ರಿಸ್ತನು ಸಮಾಧಿಯಲ್ಲಿ ಜೀವವಿಲ್ಲದವನಾಗಿ ಉಳಿದಿದ್ದರೆ ನಮ್ಮ ನಂಬಿಕೆಯು ನಿರರ್ಥಕವಾಗುತ್ತಿತ್ತು. ಸತ್ತ ರಕ್ಷಕನಿಂದ ನಮಗೆ ಪ್ರಯೋಜನವೇನು? (ವಚನ 14). ಈ ಕಾರಣಕ್ಕಾಗಿ ಯೇಸು ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದಿದ್ದಾನೆಂಬದನ್ನು ಲೋಕವೆಲ್ಲಾ ತಿಳಿದುಕೊಳ್ಳಲಿ! ಆತನು ಪಾಪ ಮರಣಗಳೆರಡನ್ನೂ ಜಯಿಸಿದ್ದಾನೆ[57]. ಆತನು ಜಯವನ್ನು ಹೊಂದಿರುತ್ತಾನೆ; ಮತ್ತು ಆತನ ಮುಖಾಂತರವಾಗಿ ನಾವು ಸಹ ಪಾಪ ಮತ್ತು ಮರಣದ ಮೇಲೆ ಜಯವನ್ನು ಪಡೆದು ಕೊಂಡಿದ್ದೇವೆ (ವಚನಗಳು 54-56).

ಶಾಸ್ತ್ರದ ಪ್ರಕಾರವೇ ಯೇಸು ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು (ಕೀರ್ತನೆಗಳು 16:10; ಯೆಶಾಯ. 53:10-12). ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟಿರುವದು ಯೋನನ ಪುಸ್ತಕದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ (ಯೋನ 1:17). ಪ್ರವಾದಿಯಾದ ಯೋನನು ದೊಡ್ಡ ಮೀನಿನಿಂದ ನುಂಗಲ್ಪಟ್ಟನು. ಯೋನನು ಮೀನಿನ ಹೊಟ್ಟೆಯೊಳಗೆ ಮೂರು ದಿನಗಳ ವರೆಗೆ ಉಳಿದನು. ಆ ಮೇಲೆ ಮೂರನೆಯ ದಿನದಲ್ಲಿ ಮೀನು ಯೋನನನ್ನು ಹೊರಗೆ ಕಾರಿಬಿಟ್ಟಿತು, ಮತ್ತು ಯೋನನು ರಕ್ಷಿಸಲ್ಪಟ್ಟನು. ಮತ್ತಾಯ 12:38-42 ರಲ್ಲಿ ಯೇಸು ತನ್ನನ್ನು ಯೋನನೊಂದಿಗೆ ಹೋಲಿಸಿಕೊಳ್ಳುತ್ತಾನೆ.

ಪ್ರಾರಂಬದಿಂದಲೂ ಯೇಸುವಿಗೆ ತಾನು ಸತ್ತು ಮೂರನೆಯ ದಿನದಲ್ಲಿ ಸತ್ತವರೊಳಗಿಂದ ಎಬ್ಬಿಸಲ್ಪಡುವನೆಂಬದು ತಿಳಿದಿತ್ತು. ಹೆಚ್ಚು ಕಡಿಮೆ ಮೂರು ಸಾರಿ ಯಾದರೂ ಆತನು ತನಗೆ ಸಂಭವಿಸಲಿರುವದರ ಬಗ್ಗೆ ತನ್ನ ಶಿಷ್ಯರಿಗೆ ಮುಂತಿಳಿಸಿದ್ದನು (ಮಾರ್ಕ 8:31; 9:31; 10:32-34).

5 ಯೇಸು ಸತ್ತವರೊಳಗಿಂದ ಎಬ್ಬಿಸಲ್ಪಟ್ಟನೆಂಬದನ್ನು ನಾವು ಖಚಿತವಾಗಿ ಹೇಗೆ ಬಲ್ಲೆವು? ಎಲ್ಲಕ್ಕಿಂತ ಮೊದಲು, ಬರಿದಾದ ಸಮಾಧಿಯ ನಿಮಿತ್ತವಾಗಿ ನಾವು ಇದನ್ನು ಬಲ್ಲೆವು. ಆದರೆ ಸ್ವತಃ ಬರಿದಾದ ಸಮಾಧಿಯೇ ಸಾಕಷ್ಟು ಆಧಾರವಾಗಿರುವದಿಲ್ಲ, ಯಾಕೆಂದರೆ ಯೇಸುವಿನ ದೇಹವು ಎಬ್ಬಿಸಲ್ಪಡಲಿಲ್ಲ, ಆದರೆ ಕದ್ದುಕೊಳ್ಳಲ್ಪಟ್ಟಿತೆಂದು ಯಾರಾದರೂ ತರ್ಕಿಸಬಹುದು! (ಮತ್ತಾಯ 28:11–15 ನೋಡಿರಿ). ಯೇಸು ಸತ್ತವರೊಳಗಿಂದ ಎದ್ದನೆಂಬುದಕ್ಕೆ ಅತಿ ದೊಡ್ಡ ಆಧಾರವೇನೆಂದರೆ ಆತನು ತನ್ನ ಮರಣದ ತರುವಾಯ ಜನರಿಗೆ ಕಾಣಿಸಿಕೊಂಡನು. ಯೇಸು ತನ್ನ ಶಿಷ್ಯರೊಳಗೆ ಪ್ರಮುಖನಾದ ಪೇತ್ರನಿಗೆ (ಕೇಫ) ಮೊದಲು ಕಾಣಿಸಿಕೊಂಡನು (ಲೂಕ 24:33-34). ಬಳಿಕ ಯೇಸು ತನ್ನ ಶಿಷ್ಯರೆಲ್ಲರೂ ಒಟ್ಟಾಗಿರುವಾಗ ಕಾಣಿಸಿಕೊಂಡನು (ಮತ್ತಾಯ 28:16; ಯೋಹಾನ 20:19). ಆತನು ಕನಸಿನಲ್ಲಾಗಲಿ ದರ್ಶನದಲ್ಲಾಗಲಿ ಕಾಣಿಸಿಕೊಳ್ಳಲಿಲ್ಲ; ಆತನು ತನ್ನ ಸ್ವಂತ ದೇಹದಲ್ಲಿ – ತನ್ನ ಪುನರುತ್ಥಾನದ ರೂಪಾಂತರಗೊಂಡ ದೇಹದಲ್ಲಿ – ಕಾಣಿಸಿಕೊಂಡನು (ಲೂಕ 24:36-39; ಯೋಹಾನ 20:24-28 ನೋಡಿರಿ).

6 ಇಷ್ಟೆಲ್ಲಾ ಹೇಳಿದ ಬಳಿಕವೂ ಅವಿಶ್ವಾಸಿಯೊಬ್ಬನು ಯೇಸುವಿನ ಹನ್ನೆರಡು ಮಂದಿ ಸುಳ್ಳಾಡುತ್ತಿದ್ದರು, ಅವರು ಯೇಸುವಿನ ಪುನರುತ್ಥಾನದ ಈ ಕಥೆಯನ್ನು ಸುಮ್ಮನೆ ಸೃಷ್ಟಿಸಿರುತ್ತಾರೆಂದು ತರ್ಕಿಸಬಹುದಾಗಿದೆ. ಆದರೆ ಈ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ತಮ್ಮ ಸ್ವಂತ ಕಣ್ಣುಗಳಿಂದ ಪುನರುತ್ಥಾನಗೊಂಡ ಯೇಸುವನ್ನು ನೋಡಿದ ಐನೂರು ಜನರು ಸುಳ್ಳಾಡಿರಲಿಕ್ಕೆ ಸಾಧ್ಯವಿಲ್ಲ. ಅಷ್ಟೊಂದು ಜನರು ಅಂತಹ ಕಥೆಯನ್ನು ಸೃಷ್ಟಿಸಿ ಅದಕ್ಕೆ ಅಂಟಿಕೊಂಡಿರಲು ಹೇಗಾದಿತು? ಅಷ್ಟೊಂದು ಜನರು ತಮ್ಮ ಕಥೆಯು ಸುಳ್ಳಾಗಿದಿದ್ದರೆ ತಾವು ಹೇಳುವ ವಿಷಯದಲ್ಲಿ ಏಕರೂಪವಾಗಿರಲು ಸಾಧ್ಯವೇ ಇರುತ್ತಿರಲಿಲ್ಲ. ಈ ಜನರೆಲ್ಲರೂ ತಿಳಿಸಿದ್ದು ಸತ್ಯವೇ ಆಗಿದೆ; ಅವರು ನಿಜವಾಗಿಯೂ ಪುನರುತ್ಥಾನಗೊಂಡ ಯೇಸುವನ್ನು ಕಣ್ಣಾರೆ ನೋಡಿದ್ದರು! ಯೇಸು ಒಂದೇ ಸಮಯದಲ್ಲಿ ಐನೂರು ಮಂದಿಗಿಂತ ಹೆಚ್ಚು ಸಹೋದರರಿಗೆ ಕಾಣಿಸಿಕೊಂಡನು – ಅವರಲ್ಲಿ ಮಕ್ಕಳು ಹಾಗು ಸ್ತ್ರೀಯರು ಸೇರಿರಲಿಲ್ಲ. ಮತ್ತು ಇಪ್ಪತ್ತು ವರ್ಷಗಳ ನಂತರ ಪೌಲನು ಕೊರಿಂಥದವರಿಗೆ ಈ ಪತ್ರಿಕೆಯನ್ನು ಬರೆಯುವ ಸಮಯದಲ್ಲಿ ಆ ಐನೂರು ಮಂದಿ ಪ್ರತ್ಯಕ್ಷದರ್ಶಿಗಳೊಳಗೆ ಬಹು ಪಾಲು ಜನರು ಇನ್ನೂ ಜೀವಂತವಾಗಿದ್ದರು. ಯೇಸು

ಸತ್ತವರೊಳಗಿಂದ ಎದ್ದೇಳದಿರುವದು ನಿಜವಾಗಿದಿದ್ದರೆ ಪೌಲನು ಈ ಮಾತುಗಳನ್ನು ಬರೆದಿರುತ್ತಿರಲಿಲ್ಲ; ಆಗಲೂ ಆತನನ್ನು ಸುಳ್ಳುಗಾರನೆಂದು ಕರೆಯುವವರು ಅನೇಕರಿದ್ದರು! ಮತ್ತು ಯಾರಾದರೂ ಪೌಲನ ಮಾತನ್ನು ಸಂಶಯಿಸಿದ್ದರೆ ಪೌಲನ ಕಥೆಯ ನಿಜಾಂಶವನ್ನು ತಿಳಿಯುವದಕ್ಕೆ ಈ ಎಲ್ಲಾ ಪ್ರತ್ಯಕ್ಷದರ್ಶಿಗಳ ಬಳಿಗೆ ಹೋಗಬಹುದಿತ್ತು. ಪೌಲನು ಈ ರೀತಿಯಲ್ಲಿ ಸುಳ್ಳಾಡುವದಕ್ಕೆ ಎಂದಿಗೂ ಧೈರ್ಯ ಮಾಡುತ್ತಿರಲಿಲ್ಲ – ಆತನು ಇಚ್ಚಿಸಿದ್ದಾಗ್ಯು ಸಹ ಹಾಗೆ ಮಾಡುತ್ತಿರಲಿಲ್ಲ. ಇಲ್ಲ, ಯೇಸುವಿನ ಪುನರುತ್ಥಾನವು ಸಂಪೂರ್ಣ ಸತ್ಯವಾಗಿದ್ದು ಇತಿಹಾಸಿಕವಾಗಿ ನಿರೂಪಿಸಲ್ಪಟ್ಟ ಸತ್ಯಾಂಶವಾಗಿದೆ. ವಾಸ್ತವದಲ್ಲಿ; ಜಗತ್ತಿನ ಇತಿಹಾಸದಲೆಲ್ಲಾ ಯೇಸು ಕ್ರಿಸ್ತನ ಪುನರುತ್ಥಾನಕ್ಕಿಂತಲೂ ದೊಡ್ಡದಾದ ಅಥವಾ ಹೆಚ್ಚು ಪ್ರಾಮುಖ್ಯವಾದ ಘಟನೆಯು ಮತ್ತೊಂದಿರುವದಿಲ್ಲ.

ಈ ಐನೂರು ಮಂದಿ ಸಹೋದರರಲ್ಲಿ ಕೆಲವರು ನಿದ್ರೆ ಹೋಗಿದ್ದಾರೆ ಎಂದು ಪೌಲನು ಹೇಳುತ್ತಾನೆ. ಕ್ರಿಸ್ತನ ವಿಶ್ವಾಸಿಗಳು ಸಾಯುವಾಗ ಅವರು ನಿಜವಾಗಿಯೂ ಸಾಯುವದಿಲ್ಲ; ಅವರು ಕೇವಲ "ನಿದ್ರೆ ಹೋದ" ಬಳಿಕ ಪುನಃ ಎಬ್ಬಿಸಲ್ಪಡುವರು (1 ಥೆಸಲೋನಿಕ 4:13-18 ನೋಡಿರಿ).

**7** ಯೇಸು ತನ್ನ ಸ್ವಂತ ಸಹೋದರನಾದ ಯಾಕೋಬನಿಗೂ ಕಾಣಿಸಿಕೊಂಡನು, ತರುವಾಯ ಆತನು ಯೆರೂಸಲೇಮಿನಲ್ಲಿನ ಸಭೆಯ ಪ್ರಮುಖ ನಾಯಕನಾದನು (ಗಲಾತ್ಯ 2:9). ಅಲ್ಲದೆ ಆತನು ಹೊಸ ಒಡಂಬಡಿಕೆಯ "ಯಾಕೋಬ" ಎಂದು ಕರೆಯಲ್ಪಡುವ ಪತ್ರಿಕೆಯನ್ನು ಸಹ ಬರೆದನು. ಪ್ರಾರಂಬದಲ್ಲಿ ಯಾಕೋಬನು ಯೇಸುವನ್ನು ನಂಬಿರಲಿಲ್ಲ (ಯೋಹಾನ 7:5). ಆದರೆ ಯೇಸುವಿನ ಪುನರುತ್ಥಾನದ ನಂತರ ಯಾಕೋಬ ಮತ್ತು ಯೇಸುವಿನ ಇತರ ತಮ್ಮಂದಿರು ಆತನಲ್ಲಿ ನಂಬಿಕೆಯಿಟ್ಟರು (ಅ.ಕೃತ್ಯ 1:14).

ಯೇಸು ಅಪೊಸ್ತಲರೆಲ್ಲರಿಗೂ ಕಾಣಿಸಿಕೊಂಡನು. ಇಲ್ಲಿ ಪೌಲನು ಹನ್ನೆರಡು ಮಂದಿ ಮೂಲ ಅಪೊಸ್ತಲರನ್ನು (ಶಿಷ್ಯರನ್ನು) ಮಾತ್ರವಲ್ಲ, ಆದರೆ ಅಪೊಸ್ತಲರೆಂದು ಪ್ರಸಿದ್ಧಿಹೊಂದಿದ ಯೆರೂಸಲೇಮಿನ ಸಭೆಯ ಇತರ ನಾಯಕರನ್ನು ಸಹ ಸೂಚಿಸುತ್ತಾನೆ.

**8** ಯೇಸು ತನ್ನ ಪುನರುತ್ತಾನದ ನಂತರ ನಾಲ್ವತ್ತು ದಿನಗಳ ವರೆಗೆ ಭೂಮಿಯ ಮೇಲಿದ್ದನು, ಆ ವೇಳೆಯಲ್ಲಿ ಆತನು ಮೇಲೆ ಪ್ರಸ್ತಾಪಿಸಲಾದ ಎಲ್ಲಾ ಜನರಿಗೆ ಕಾಣಿಸಿಕೊಂಡನು. ತರುವಾಯ ಆತನು ಪರಲೋಕಕ್ಕೆ ಏರಿಹೋದನು. ಯೇಸು ಪರಲೋಕಕ್ಕೆ ಏರಿಹೋದ ನಂತರವಷ್ಟೆ ಪೌಲನಿಗೆ ಕಾಣಿಸಿಕೊಂಡಿದ್ದನು. ಈ ಕಾರಣ ದಿಂದಲೇ ಪೌಲನು ಇಲ್ಲಿ ಕಟ್ಟಕಡೆಗೆ...ನನಗೂ ಕಾಣಿಸಿಕೊಂಡನು ಎಂದು ಹೇಳುತ್ತಾನೆ (ಅ.ಕೃತ್ಯ 9:1-9; 22:6-11; 26:12-18 ನೋಡಿರಿ).

ಪೌಲನು ತಾನು ದಿನ ತುಂಬದೆ ಹುಟ್ಟಿದವನಂತಿದ್ದನೆಂದು ಹೇಳುತ್ತಾನೆ. ಈ ಸನ್ನಿವೇಶಕ್ಕನುಗುಣವಾಗಿ ಪೌಲನು "ತಡವಾಗಿ" ಹುಟ್ಟಿದ್ದನು. ಯಾಕೆಂದರೆ ಯೇಸು ಅವನಿಗೆ ಕಟ್ಟಕಡೆಗೆ ಕಾಣಿಸಿಕೊಂಡನು. ಆದರೆ ವಾಸ್ತವದಲ್ಲಿ ಪೌಲನು ಇಲ್ಲಿ ತಾನು ಆಕಸ್ಮೀಕವಾಗಿ ತಕ್ಕ ಕಾಲಕ್ಕೆ "ಮುಂಚೆ" ಹುಟ್ಟಿದವನಂತಿದ್ದನೆಂದು ಬರೆಯುತ್ತಾನೆ. ಅಂದರೆ ಆತನು "ದಿನ ತುಂಬದೆ" ಹುಟ್ಟಿದ್ದನು. ಮತ್ತು ದಿನ ತುಂಬದೆ ಹುಟ್ಟಿದ ಮಗುವು ಸಹಜ ಮಗುವಾಗಿ ಪರಿಗಣಿಸಲ್ಪಡದಂತೆಯೇ ತಾನು ಸಹಜ ಅಪೊಸ್ತಲನೆಂದು ಕರೆಯಲ್ಪಡಲಾರೆನು – ಅಂದರೆ, ತಾನು

ಅಪೊಸ್ತಲನೆನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ – ಎಂದು ಪೌಲನು ಹೇಳುತ್ತಿದ್ದಾನೆ (ವಚನ 9). ಮತ್ತು ಪೌಲನು ತಾನು ಅಪೊಸ್ತಲನೆನಿಸಿಕೊಳ್ಳುವದಕ್ಕೆ ಯೋಗ್ಯನಲ್ಲದಿರಲು ಮುಖ್ಯಕಾರಣವೇನೆಂದರೆ ಆತನು ದೇವರ ಸಭೆಯನ್ನು ಹಿಂಸೆಪಡಿಸಿದ್ದನು ಎಂಬದೇ (ವಚನ 9).

8ನೇ ವಚನದಿಂದ ನಾವು ನಿಜವಾದ ಅಪೊಸ್ತಲನ ಚಿನ್ಹೆ ಅಥವಾ ಮುದ್ರೆಯನ್ನು ನೋಡಬಹುದು. ಅಪೊಸ್ತಲರಲ್ಲಿ[58] ಬಹುಮಂದಿ ಪುನರುತ್ಥಾನಗೊಂಡ ಕ್ರಿಸ್ತನನ್ನು ಕಣ್ಣಾರೆ ನೋಡಿದರು, ಮತ್ತು ಅವರು ಈ ಅನುಭವದಿಂದ ಜಗತ್ತಿನಲೆಲ್ಲಾ ಸಂಚರಿಸಿ ಕ್ರಿಸ್ತನ ಕುರಿತು ಸಾಕ್ಷಿ ನೀಡುವದಕ್ಕೂ ಸುವಾರ್ತೆಯನ್ನು ಸಾರುವದಕ್ಕೂ ವಿಶೇಷ ಪ್ರೇರಣೆಯನ್ನೂ ಒತ್ತಾಯವನ್ನೂ ಪಡೆದುಕೊಂಡರು.

ಅದುವರೆಗೂ ಯೇಸು ನಿಜವಾಗಿಯೂ ಸತ್ತವರೊಳಗಿಂದ ಎದ್ದನೆಂಬುದಕ್ಕೂ ಆತನ ಪುನರುತ್ಥಾನವು ಐತಿಹಾಸಿಕ ಸತ್ಯ ಎಂಬದಕ್ಕೂ ಇರುವ ಎರಡು ಆಧಾರಗಳನ್ನು ಕುರಿತು ಚರ್ಚಿಸಿದ್ದೇವೆ: ಒಂದು, ಆತನ ಸಮಾಧಿಯು ಬರಿದಾಗಿತ್ತು. ಮತ್ತು ಎರಡನೆಯದಾಗಿ, ಆತನು ತನ್ನ ಮರಣದ ತರುವಾಯ ಅನೇಕರಿಗೆ ಕಾಣಿಸಿಕೊಂಡನು. ಮೂರನೆಯ ಆಧಾರವು ಸಹ ಇರುತ್ತದೆ, ಮತ್ತು ಈ ಆಧಾರವು ಯೇಸುವಿನ ಹನ್ನೆರಡು ಮಂದಿ ಶಿಷ್ಯರ (ಅಪೊಸ್ತಲರ) ಜೀವಿತಗಳಿಂದ ದೊರೆಯುತ್ತದೆ. ನೆನಪಿಸಿಕೊಳ್ಳಿರಿ, ಯೇಸುವು ಬಂಧಿಸಲ್ಪಡುವಾಗ ಆತನ ಶಿಷ್ಯರೆಲ್ಲರೂ ಓಡಿ ಹೋಗಿ ಅಡಗಿಕೊಂಡರು (ಮತ್ತಾಯ 26:56; ಮಾರ್ಕ 14:50). ಅವರು ಭಯಗ್ರಸ್ತರಾಗಿದ್ದರು. ಅವರ ನಾಯಕನು ಸತ್ತು ಹೋಗಿದ್ದನು. ಈಗ ಅವರು ರೋಮಾಯ ಸೈನಿಕರು ತಮ್ಮನ್ನು ಸಹ ಹುಡುಕಿಕೊಂಡು ಬಂದು ಕೊಲ್ಲುವರೆಂದು ಭಯಗೊಂಡಿದ್ದರು. ಆದುದರಿಂದ ಅವರು ಒಂದು ಮನೆಯಲ್ಲಿ ಅಡಗಿಕೊಂಡು ಬಾಗಲನ್ನು ಭದ್ರಪಡಿಸಿಕೊಂಡರು (ಯೋಹಾನ 20:19).

ಆದರೆ ಆ ಮೇಲೆ ಆ ಶಿಷ್ಯರಿಗೆ ಸಂಭವಿಸಿದ್ದೇನು/ ಹೇಗೋ ಅವರ ಜೀವಿತಗಳು ನಾಟಕೀಯವಾಗಿ ಬದಲಾವಣೆಗೊಂಡವು . ಒಂದು ಕ್ಷಣ, ಅವರು ಭಯದಿಂದ ತುಂಬಿದ್ದರು; ಮರುಕ್ಷಣದಲ್ಲಿ, ಅವರು ಭಯವಿಲ್ಲದವರಾಗಿದ್ದರು. ಒಂದು ಕ್ಷಣ, ಅವರು ಅಡಗಿಕೊಂಡಿದ್ದರು; ಮರುಕ್ಷಣದಲ್ಲಿ, ಅವರು ಹೊರಹೋಗಿ ಕ್ರಿಸ್ತನಿಗೆ ಸಾಕ್ಷಿ ಹೇಳುತ್ತಿದ್ದರು! ಮತ್ತು ಪೌಲನ ವಿಷಯದಲ್ಲಾದರೋ, ಒಮ್ಮೆ ಆತನು ಸಭೆಯನ್ನು ಹಿಂಸಿಸುತ್ತಿದ್ದನು; ಮರುಕ್ಷಣ, ಆತನು ರೋಮಾಯ

ಸಾಮ್ರಾಜ್ಯದುದ್ದಕ್ಕೂ ಸುವಾರ್ತೆಯನ್ನು ಸಾರುತ್ತಿದ್ದನು. ಈ ವ್ಯಕ್ತಗಳ ಜೀವಿತಗಳು ಅಷ್ಟೊಂದು ಆಶ್ಚರ್ಯಕರವಾಗಿ ರೂಪಾಂತರಗೊಳ್ಳುವದಕ್ಕೆ ಅವರಿಗೆ ಏನು ಸಂಭವಿಸಿತು/ ಅದಕ್ಕೆ ಒಂದೇ ಒಂದು ಉತ್ತರವು ದೊರೆಯುವ ಸಾಧ್ಯತೆಯಿದೆ: ಪುನರುಥ್ಥಾನಗೊಂಡ ಕ್ರಿಸ್ತನು ಅವರಿಗೆ ಕಾಣಿಸಿಕೊಂಡಿದ್ದನು. ಅದು ಮಾತ್ರವಲ್ಲದೆ ಕ್ರಿಸ್ತನು ಪರಲೋಕಕ್ಕೆ ಏರಿಹೋದ ಬಳಿಕ ಆತನು ಅವರ ಬಳಿಗೆ ಪವಿತ್ರಾತ್ಮನನ್ನು ಕಳುಹಿಸಿಕೊಟ್ಟನು, ಅವರು ಪವಿತ್ರಾತ್ಮನ ಮೂಲಕವೇ ಜಗತ್ತಿನಲೆಲ್ಲಾ ಆತನ ಸಾಕ್ಷಿಗಳಾಗಿರುವದಕ್ಕೂ ಬಲವನ್ನು ಪಡೆದುಕೊಂಡರು (ಅ.ಕೃತ್ಯ 1:8; 2:1-4, 14, 41).

ಅಂತಿಮವಾಗಿ, ಕ್ರಿಸ್ತನ ಪುನರುಥ್ಥಾನದ ನಾಲ್ಕನೆಯ ಆಧಾರವಿರುತ್ತದೆ. ಹೆಚ್ಚುಕಡಿಮೆ ಎರಡು ಸಾವಿರ ವರ್ಷಗಳಿಂದಲೂ ಲಕ್ಷಲಕ್ಷಾಂತರ ಕ್ರೈಸ್ತರು ಸ್ವತಃ ಪವಿತ್ರಾತ್ಮನ ಮೂಲಕವಾಗಿ ಪುನರುಥ್ಥಾನಗೊಂಡ ಕ್ರಿಸ್ತನ ಪ್ರಸನ್ನತೆಯನ್ನೂ ಬಲವನ್ನೂ ಅನುಭವಿಸಿದ್ದಾರೆ. ನಮ್ಮನ್ನು ನಾವು ಕೇಳಿಕೊಳ್ಳೋಣ: ಪುನರುಥ್ಥಾನಗೊಂಡ ಕ್ರಿಸ್ತನು ನಮ್ಮಲ್ಲಿ ಜೀವಂತವಾಗಿದ್ದಾನೋ? ಇರುವದಾದರೆ, ಯೇಸು ನಿಜವಾಗಿಯೂ ಸತ್ತವರೊಳಗಿಂದ ಎದ್ದುಬಂದನೆಂಬದಕ್ಕೆ ಎಲ್ಲಕ್ಕಿಂತ ಶ್ರೇಷ್ಠವಾದ ಆಧಾರವು ನಾವೇ!

9 ಪೌಲನು ತಾನು ಪ್ರಾರಂಬದಲ್ಲಿ ಕ್ರಿಸ್ತನ ಸಭೆಯನ್ನು ಹೇಗೆ ಹಿಂಸೆ ಪಡಿಸಿದನೆಂಬದನ್ನು ಎಂದಿಗೂ ಮರೆಯಲಾಗಲಿಲ್ಲ (ಅ.ಕೃತ್ಯ 8:3; 9:1-2; 22:4-5; 26:9-11; ಗಲಾತ್ಯ 1:13). ಈ ಕಾರಣದಿಂದಲೇ ಆತನು ತಾನು ಅಪೊಸ್ತಲನೆನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ ಎಂದು ಹೇಳುತ್ತಾನೆ

10 ಪೌಲನು ತನ್ನನ್ನು ಅಪೊಸ್ತಲರಲ್ಲಿ ಕನಿಷ್ಠನು ಎಂದು ಕರೆದುಕೊಂಡಾಗ್ಯು (ವಚನ 9) ಆಗಲೂ ಆತನು ನಿಜವಾದ ಅಪೊಸ್ತಲನಾಗಿದ್ದನು. ಆತನು ಸಭೆಗಳನ್ನುದ್ದೇಶಿಸಿ ಒಬ್ಬ ಅಪೊಸ್ತಲನ ಪೂರ್ಣ ಅಧಿಕಾರದಿಂದ ಮಾತಾಡಿದನು (1 ಕೊರಿಂಥ 1:1; ಗಲಾತ್ಯ 1:1). ಆದರೆ ಪೌಲನು ತಾನು ಸಂಪೂರ್ಣವಾಗಿ ದೇವರ ಕೃಪೆ ಮತ್ತ ಕರುಣೆಯಿಂದಲೇ ಒಬ್ಬ ಅಪೊಸ್ತಲನಾದನೆಂದು ಸಹ ಹೇಳುತ್ತಾನೆ (ಗಲಾತ್ಯ 1:15-16 ನೋಡಿರಿ). ಅಷ್ಟು ಮಾತ್ರವಲ್ಲ, ದೇವರ ಕೃಪೆಯು ಪೌಲನ ಜೀವಿತದಲ್ಲಿ ನಿರಂತರವಾಗಿ ಕಾರ್ಯಮಾಡುತ್ತಿತ್ತು. ಪೌಲನು ಆವರೆಲ್ಲರಿಗಿಂತಲೂ ಹೆಚ್ಚಾಗಿ ಪ್ರಯಾಸಪಟ್ಟನು – ಅಂದರೆ, ಇತರ ಎಲ್ಲಾ ಅಪೊಸ್ತಲರಿಗಿಂತ ಹೆಚ್ಚಾಗಿ ಪ್ರಯಾಸಪಟ್ಟನು. ಆದರೆ ಪೌಲನ ಶ್ರೇಷ್ಠಕಾರ್ಯಗಳು ಅವನಿಂದ ಅಲ್ಲ, ಆದರೆ ಬದಲಾಗಿ ಆತನಲ್ಲಿ ಕಾರ್ಯಮಾಡುತ್ತಿದ್ದ ದೇವರ ಕೃಪೆಯಿಂದಲೇ ಮಾಡಲ್ಪಟ್ಟವು (ಗಲಾತ್ಯ 2:20 ನೋಡಿರಿ).

11 ಹೇಗಿದ್ದರೂ, ಸಾರುವವರು ಯಾರಾದರೇನು, ಸುವಾರ್ತೆಯು ಒಂದೇ ಎಂದು ಪೌಲನು ಹೇಳುತ್ತಾನೆ. ಮತ್ತು ನಂಬುವವರಿಗೆಲ್ಲಾ ಈ ಸುವಾರ್ತೆಯು ರಕ್ಷಣೆಯನ್ನುಂಟು ಮಾಡುವ ದೇವರ ಶಕ್ತಿಯಾಗಿದೆ (ರೋಮ 1:16; 1 ಕೊರಿಂಥ 1:18).

## ಸತ್ತವರ ಪುನರುಥ್ಥಾನ (15:12-34)

12 ಕ್ರಿಸ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟಿದ್ದಾನೆಂಬದನ್ನು ನಾವು ತಿಳಿದಿದ್ದೇವಾದ್ದರಿಂದ ಸತ್ತವರು ಸಹ ಎದ್ದು ಬರುವರೆಂದು ನಾವು ಬಲ್ಲೆವು. ಕೊರಿಂಥದವರಲ್ಲಿ ಕೆಲವರು ಸತ್ತವರಿಗೆ ಪುನರುಥ್ಥಾನವಾಗುತ್ತದೆಂಬದನ್ನು ನಂಬಲಿಲ್ಲ. ಬಹುಪಾಲು ಗ್ರೀಕರು ಮಾನವನ ಆತ್ಮವು ಮಾತ್ರವೇ ಪರಲೋಕಕ್ಕೆ ಹೋಗುತ್ತದೆಂದು ನಂಬುತ್ತಿದ್ದರು. ಮರಣದ ನಂತರ ದೇಹವು ಸಂಪೂರ್ಣವಾಗಿ ಸದಾಕಾಲವೂ ನಾಶವಾಗುವದೆಂದು ಅವರು ನಂಬಿದ್ದರ. ಆದರೆ ಆನಂಬಿಕೆಯು ಸುಳ್ಳು ಎಂದು ಪೌಲನು ಹೇಳುತ್ತಾನೆ, ಯಾಕೆಂದರೆ ಯೇಸು ಸತ್ತವರೊಳಗಿಂದ ಎದ್ದು ಬಂದಾಗ ಆತನ ದೇಹವು ಸಹ ಎದ್ದು ಬಂದಿತ್ತು.

13-14 ಕ್ರಿಸ್ತನು ಎದ್ದುಬರಲಿಲ್ಲವಾದರೆ (ವಚನ 14). ನಮ್ಮನ್ನು ರಕ್ಷಿಸಲು ಸುವಾರ್ತೆಯ ಶಕ್ತಿಯೆಲ್ಲಿದೆ? ಶಕ್ತಿಯು ಇರುವದಿಲ್ಲ. ಸುವಾರ್ತೆಯ ಶಕ್ತಿಯು ಅಸ್ತಿತ್ವದಲ್ಲಿಲ್ಲವಾದರೆ ನಮ್ಮ ನಂಬಿಕೆಯು ಹುರುಳಿಲ್ಲದ್ದು. ಆದರೆ ಕ್ರಿಸ್ತನು ನಿಜವಾಗಿಯೂ ಸತ್ತವರೊಳಗಿಂದ ಎದ್ದಿದ್ದಾನಾದ್ದರಿಂದ ಆತನು ದೇವರೇ ಎಂಬದನ್ನು ನಾವು ಖಚಿತವಾಗಿ ಬಲ್ಲೆವು. ಆತನು ಜೀವ ಸ್ವರೂಪನಾದ ಕರ್ತನೆಂದು ನಾವು ಬಲ್ಲೆವು. ಆತನ ಬೋಧನೆಯು ಸತ್ಯವೇ ಎಂಬದನ್ನು ಬಲ್ಲೆವು. ನಾವು ಆತನಲ್ಲಿ ಸಂಪೂರ್ಣವಾಗಿ ನಂಬಿಕೆಯಿಡಬಹುದು. ಮತ್ತು ನಮ್ಮ ನಂಬಿಕೆಯು ಹುರುಳಿಲ್ಲದ್ದಲ್ಲ, ಯಾಕೆಂದರೆ ನಂಬಿಕೆಯ ಮೂಲಕವಾಗಿ ನಾವು ಸಹ ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿ ದೇವರೊಂದಿಗೆ ಪರಲೋಕದಲ್ಲಿ ಕುತುಕೊಳ್ಳುವಂತೆ ಮಾಡಿದ ಅದೇ ಶಕ್ತಿಯನ್ನೇ ಪಡೆಯುವವರಾಗಿದ್ದೇವೆ (ಎಫೆಸ 1:19-21 ನೋಡಿರಿ).

15-17 ಕ್ರಿಸ್ತನು ಎದ್ದು ಬರಲಿಲ್ಲವಾದರೆ..ನೀವು ಇನ್ನೂ ನಿಮ್ಮ ಪಾಪಗಳಲ್ಲಿಯೇ ಇದ್ದೀರಿ (ವಚನ 17). ನಿಮ್ಮ ಪಾಪಗಳಲ್ಲಿಯೇ ಇರುವದೆಂದರೆ ದಂಡನೆಗೊಳಗಾಗಿಯೂ, ರಕ್ಷಣೆ ಹೊಂದದವರಾಗಿಯೂ ಇರುವದಾಗಿದೆ (ಎಫೆಸ 2:1, 4-5). ಕ್ರಿಸ್ತನು ಸತ್ತವರೊಳಗಿಂದ ಎದ್ದು ಮರಣ ಹಾಗು ಪಾಪವನ್ನು ಜಯಿಸಿದ್ದಾನಾದ್ದರಿಂದ ಆತನು ನಮ್ಮನ್ನು ನಮ್ಮ ಪಾಪಗಳಿಂದ ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ. ಕ್ರಿಸ್ತನು ಮಾನವರನ್ನು ರಕ್ಷಿಸುವದಕ್ಕೆ ಶಕ್ತಿಹೊಂದಿದ್ದಾನೆಂಬದಕ್ಕೆ ಆತನ ಪುನರುಥ್ಥಾನವೇ ಆಧಾರವಾಗಿದೆ.

18 ಪುನರುಥ್ಥಾನವೇ ಇಲ್ಲವಾದರೆ ಸತ್ತವರು ನಿಜವಾಗಿಯೂ ನಾಶವಾದರು. ಅವರು ಹೂಣಲ್ಪಟ್ಟವರಾಗಿ ಉಳಿಯುವರು. ಅವರ ನಂಬಿಕೆಯು ವ್ಯರ್ಥವಾಗುವದು! (1 ಥೆಸಲೋನಿಕ 4:14 ನೋಡಿರಿ).

19 ಮರಣದ ನಂತರ ಪುನರುತ್ಥಾನಗೊಳ್ಳುವ ನಿರೀಕ್ಷೆ ಯಿಲ್ಲದಿದ್ದರೆ ಕ್ರೈಸ್ತರು ಎಲ್ಲಾ ಮನುಷ್ಯರಲ್ಲಿಯೂ ಹೆಚ್ಚು ನಿರ್ಭಾಗ್ಯರೇ ಸರಿ. ಈ ಜೀವಿತದಲ್ಲಿ ನಿಂದನೆ ಹಾಗು ಹಿಂಸೆಗಳನ್ನು ಅನುಭವಿಸಿದ ಮೇಲೆಯೂ ಮುಂದಿನ ಜೀವಿತದಲ್ಲಿ ಪ್ರತಿಫಲದ ನಿರೀಕ್ಷೆಯಿರುವದಿಲ್ಲ. ಬದಲಾಗಿ,

ಕ್ರೈಸ್ತನಾಗಿಲ್ಲದಿರುವದೇ ಉತ್ತಮವಾದದ್ದು! ಹೇಗಿದ್ದರೂ, ೨೦ನೇ ವಚನದಲ್ಲಿ ಪೌಲನು ಹೇಳುವದೇನೆಂದರೆ: ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ. ಕ್ರೈಸ್ತರು ಇದನ್ನು ಸಂಶಯಿಸದಿರಲಿ. ಯಾಕೆಂದರೆ ಕ್ರಿಸ್ತನ ಪುನರುತ್ಥಾನವೇ ಅವರ – ನಮ್ಮ – ನಿರೀಕ್ಷೆಯಾಗಿದೆ (1 ಪೇತ್ರ 1:3).

20 ಕ್ರಿಸ್ತನು ಸತ್ತವರೊಳಗಿಂದ ಎದ್ದುಬಂದ ಪ್ರಥಮ ಮನುಷ್ಯನಾಗಿದ್ದನು. ಆದುದರಿಂದ ಪೌಲನು ಆತನನ್ನು ನಿದ್ರೆಹೋದವರಲ್ಲಿ ಪ್ರಥಮ ಫಲ ಎಂದು ಕರೆಯುತ್ತಾನೆ. ಆತನು ಸತ್ತವರೊಳಗಿಂದ ಎದ್ದು ಬಂದಿರುವದರಿಂದ ಕ್ರೈಸ್ತರೆಲ್ಲರು ಸಹ ಎದ್ದುಬರುವರು. ಅವರು "ನಂತರದ" ಫಲಗಳಾಗುವರು (ವಚನ 23). ಹಳೆ ಒಡಂಬಡಿಕೆಯ ಪ್ರಕಾರವಾಗಿ ಯೆಹೂದ್ಯರು ಪ್ರತಿಯೊಂದು ಪೈರಿನ ಪ್ರಥಮ ಫಲಗಳನ್ನು ದೇವರಿಗೆ ಅರ್ಪಿಸುತ್ತಿದ್ದರು. ಆ ಕಾಣಿಕೆಯ ಮೂಲಕವಾಗಿ ಮಿಕ್ಕಪೈರು ಪವಿತ್ರವಾಗುತ್ತಿತ್ತು (ಯಾಜಕಕಾಂಡ 23:9-14). ಆದುದರಿಂದ, ಇದರ ಮೂಲಕ ಕ್ರಿಸ್ತನು ಪೈರಿನ "ಪ್ರಥಮ ಫಲ" – ಅಂದರೆ, ಸಭೆಯ ಪ್ರಥಮಫಲ; ಮತ್ತು ಆತನ ದೇಹದಯಜ್ಞದ ಮೂಲಕ ಸಭೆಯು ಪವಿತ್ರಗೊಳಿಸಲ್ಪಟ್ಟಿತೆಂಬದನ್ನು ನಾವು ತಿಳಿದುಕೊಳ್ಳಬಹುದು.

21-22 ಪ್ರಥಮ ಮಾನವನಾದ ಆದಾಮನ ಮುಖಾಂತರ ಮರಣವು ಉಂಟಾಯಿತು. ಅದೇ ರೀತಿಯಲ್ಲಿ ದೇಹದ ಪುನರುತ್ಥಾನವು – ಅಥವಾ ದೇಹದ ವಿಮೋಚನೆಯು (ರೋಮ 8:23) – ಯೇಸು ಕ್ರಿಸ್ತನ ಮೂಲಕ ಉಂಟಾಗುವದು. ಆದಾಮನ ಪಾಪದ ನಿಮಿತ್ತವಾಗಿ ಮಾನವರೆಲ್ಲರೂ ಪಾಪಿಗಳಾಗಿ ಜನಿಸಿ ಮರಣದಂಡನೆಗೊಗಾಗಿರುತ್ತಾರೆ (ಆದಿಕಾಂಡ 2:16-17; 3:6; ರೋಮ 3:9–10). ಕ್ರಿಸ್ತನ ನೀತಿಯ ನಿಮಿತ್ತವಾಗಿ ಕ್ರಿಸ್ತನಲ್ಲಿ ಇರುವವರೆಲ್ಲರೂ (ವಚನ 22), ಅಂದರೆ– ವಿಶ್ವಾಸಿಗಳು – ನೀತಿವಂತರಾಗಿ ಮಾಡಲ್ಪಟ್ಟು ನಿತ್ಯ ಜೀವವನ್ನು ಪಡೆಯುವರು (ಯೋಹಾನ 11:25-26; ರೋಮ 5:12, 15-19; 1 ಕೊರಿಂಥ 15:45-49 ಮತ್ತು ವ್ಯಾಖ್ಯಾಗಳನ್ನು ನೋಡಿರಿ).

23 ಈ ವಚನದ ಪ್ರಕಾರವಾಗಿ ವಿಶ್ವಾಸಿಗಳಾದ ನಾವು ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ – ಅಂದರೆ, ಲೋಕಾಂತ್ಯದಲ್ಲಿ – ಎದ್ದು ಬರುವೆವು .

24-25 ಕ್ರಿಸ್ತನು ಪುನಃ ಒಂದಾಗ ಪರಲೋದಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ದೊರೆತನವನ್ನೂ ಎಲ್ಲಾ ಅಧಿಕಾರವನ್ನೂ ದುಷ್ಟ ಬಲವನ್ನೂ ನಾಶಮಾಡುವನು (ಕೀರ್ತನೆಗಳು 110:1; ಮಾರ್ಕ 13:26; ಎಫೆಸ 1:20-23; ಫಿಲಿಪ್ಪಿ 2:9-11 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಕ್ರಿಸ್ತನು ತನ್ನ ಎಲ್ಲಾ ವೈರಿಗಳನ್ನು ಜಯಿಸಿದ ಬಳಿಕೆ ತನ್ನ ರಾಜ್ಯವನ್ನು ದೇವರಿಗೆ ಒಪ್ಪಿಸಿಕೊಡುವನು (ವಚನ 24); ಅಂದರೆ, ದೇವರು ತನಗೆ ನೀಡಿದ್ದ ಎಲ್ಲಾ ಅಧಿಕಾರವನ್ನು ಪುನಃ ದೇವರಿಗೆ ನೀಡುವನು (ಮತ್ತಾಯ 28:18). ಆಗ ಲೋಕಾಂತ್ಯವಾಗುವದು.

ಹಾಗಾದರೆ ಈ ವಚನಗಳ ಪ್ರಕಾರವಾಗಿ ಲೋಕದ ಅಂತ್ಯವು ಹೀಗಿರುವದು: ಮೊದಲು, ಕ್ರಿಸ್ತನು ತಿರಿಗಿ ಬರುವನು. ಬಳಿಕ ಕ್ರಿಸ್ತನು ತನ್ನ ಎಲ್ಲ ವೈರಿಗಳು ನಾಶವಾಗುವವರೆಗೂ ಆಳುವನು. ತರುವಾಯ ಕ್ರಿಸ್ತನ ವಿಶ್ವಾಸಿಗಳೆಲ್ಲರೂ ಎಬ್ಬಿಸಲ್ಪಡುವರು. ಆದರ ನಂತರ ಲೋಕವು ಅಂತ್ಯಗೊಳ್ಳುವದು

26 ಕ್ರಿಸ್ತನು ಹೇಗೆ ಮರಣವನ್ನು "ನಾಶಮಾಡುವನು"? ಉತ್ತರವೇನೆಂದರೆ: ದೇಹದ ಪನುನರುಥ್ಥಾನದ ಮೂಲಕವೇ. ವಿಶ್ವಾಸಿಗಳು ಸಾಯುವಾಗ ಅವರು ನಿಜವಾಗಿಯೂ ಸತ್ತುಹೋಗದೆ "ನಿದ್ರೆ ಹೋಗುತ್ತಾರೆ" ಲೋಕಾಂತ್ಯದಲ್ಲಿ ನಾವು "ಎಬ್ಬಿಸಲ್ಪಡುವೆವು". ಆ ವೇಳೆಯಲ್ಲಿಯೇ ಮರಣವು ಅಂತಿಮವಾಗಿ ನಾಶಗೊಳ್ಳುವದು. ಹೀಗೆ ವಿಶ್ವಾಸಿಗಳಿಗಾದರೋ ಮರಣವು ತನ್ನ ಕೊಂಡಿ ಕಳೆದುಕೊಂಡಿದೆ (ವಚನಗಳು 55-56). ಈಗಿನಿಂದ ನಾವು ಭಯ ಪಡಬೇಕಾಗಿಲ್ಲ, ನಾವು ಹತಾಶರಾಗಬೇಕಾಗಿಲ್ಲ.

27 ಪೌಲನು ಇಲ್ಲಿ ಕೀರ್ತನೆಗಳು 8:6 ರಿಂದ ಉಲ್ಲೇಖಿಸುತ್ತಾನೆ. ದೇವರು ಸಮಸ್ತವನ್ನೂ (ಮರಣವು ಸೇರಿದಂತೆ) ಆತನ (ಕ್ರಿಸ್ತನ) ಪಾದಗಳ ಕೆಳಗೆ –ಅಂದರೆ, ಕ್ರಿಸ್ತನ ಅಧಿಕಾರದಡಿಯಲ್ಲಿ – ಹಾಕಿದ್ದಾನೆ (ಕೀರ್ತನೆಗಳು 110:1; ಇಬ್ರಿಯ 2:6-9 ನೋಡಿರಿ).

28 ಎಲ್ಲಾ ವೈರಿಗಳನ್ನೂ – ಮರಣ, ಪಾಪ, ಸೈತಾನ – ಜಯಿಸಿದ ಬಳಿಕ ಕ್ರಿಸ್ತನು ತನ್ನ ಅಧಿಕಾರವನ್ನು, ತನ್ನ ರಾಜ್ಯವನ್ನು (ವಚನ 24) ಅವರಿಗೆ ಒಪ್ಪಿಸುವನು. ಮತ್ತು ಅಂತಿಮವಾಗಿ ಆತನು ತನ್ನನ್ನು ದೇವರಿಗೆ ಒಪ್ಪಿಸಿಕೊಡುವನು; ಆತನು ತನ್ನನ್ನು ದೇವರಿಗೆ ಅಧೀನ ಮಾಡಿಕೊಳ್ಳುವನು. ದೇವರು ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವನ್ನು ಕ್ರಿಸ್ತನಿಗೆ ನೀಡಿರುತ್ತಾನೆ (ಮತ್ತಾಯ 28;18). ಆದುದರಿಂದ, ತನ್ನ ಕೆಲಸವು ಮುಗಿದ ನಂತರ ಕ್ರಿಸ್ತನು ತನ್ನ ಅಧಿಕಾರವನ್ನು ದೇವರಿಗೆ ಹಿಂತಿರುಗಿ ಕೊಡುವನು.

ದೇವರು ಸಮಸ್ತರಲ್ಲಿಯೂ ಸಮಸ್ತವೂ ಆಗಬೇಕೆಂದು ದೇವರನ್ನು ಮಹಿಮೆ ಪಡಿಸುವದೇ ಕ್ರಿಸ್ತನ ಇಡೀ ಉದ್ದೇಶವಾಗಿರುತ್ತದೆ (ರೋಮ 11:36 ನೋಡಿರಿ). ಎಲ್ಲಾ ಸೃಷ್ಟಿಯ – ಲೋಕದ ಸೃಷ್ಟಿ ಮತ್ತು ನಮ್ಮ ಸೃಷ್ಟಿಯ –

ಉದ್ದೇಶವು ಲೋಕದ ಮುಖಾಂತರವೂ ನಮ್ಮ ಮುಖಾಂತರವೂ ದೇವರು ಮಹಿಮೆ ಹೊಂದಬೇಕು ಹಾಗು ಆತನು ಸಮಸ್ತರಲ್ಲಿಯೂ ಸಮಸ್ತನಾಗಬೇಕೆಂಬುದೇ (ಮತ್ತಾಯ 5:16; ಯೋಹಾನ 17:4; 14:12-13; ಎಫೆಸ 1:12-13;ಪ್ರಕಟಣೆ 4:11 ನೋಡಿರಿ).

29 ಈ ವಚನವು ಅರ್ಥಮಾಡಿಕೊಳ್ಳುವದಕ್ಕೆ ಕಷ್ಟಕರವಾಗಿರುತ್ತದೆ. ಕೊರಿಂಥದ ಸಭೆಯಲ್ಲಿನ ಕೆಲವು ಕ್ರೈಸ್ತರು ಇನ್ನೊಬ್ಬರಿಗೆ ದೀಕ್ಷಾಸ್ನಾನ ಹೊಂದುವ ಅವಕಾಶವು ದೊರೆಯುವದಕ್ಕೆ ಮುಂಚೆಯೇ ಅವರ ಪರವಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಿದ್ದ ಸಾಧ್ಯತೆಯಿರುತ್ತದೆ. ಈ ಪದ್ಧತಿಯ ವಿಷಯದಲ್ಲಿ ಬೈಬಲಿನಲ್ಲಿ [59] ಏನೂ ಬರೆಯಲ್ಪಟ್ಟಿರುವದಿಲ್ಲ.

ಪುನರುತ್ಥಾನವು ಇಲ್ಲ ವಾದರೆ ಸತ್ತುಹೋಗಿರುವವರ ಪರವಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವದರಲ್ಲಿ ಯಾವ ಅರ್ಥವಿರುವದಿಲ್ಲ. ಇದರಿಂದ ಖಂಡಿತವಾಗಿಯೂ ಸತ್ತವ್ಯಕ್ತಿಗೆ ಯಾವ ಪ್ರಯೋಜನವಾಗುವದಿಲ್ಲ!

30 ಪುನರುತ್ಥಾನವಿಲ್ಲವಾದರೆ ಕ್ರೈಸ್ತರಾದ ನಾವು ಮರಣ ಭಯದಲ್ಲಿರುವದೇಕೆ? ಎಂದು ಪೌಲನು ಕೇಳುತ್ತಾನೆ. ಬದಲಾಗಿ, ಸಾಧ್ಯವಾದಷ್ಟು ಕಾಲದ ವರೆಗೆ ಜೀವಿಸೋಣ, ಯಾಕೆಂದರೆ ನಾವು ಸತ್ತ ಬಳಿಕ ನಿರೀಕ್ಷಿಸುವದಕ್ಕೆ ಇನ್ನೇನೂ ಇರುವದಿಲ್ಲ (ವಚನ 14).

31 ನಾನು ದಿನಾಲು ಸಾಯುತ್ತಲಿದ್ದೇನೆ ಎಂದು ಪೌಲನು ಹೇಳುತ್ತಾನೆ. ಇದಕ್ಕೆ ಎರಡು ಅರ್ಥಗಳಿರಬಲ್ಲವು. ಮೊದಲನೆಯದಾಗಿ, ಪೌಲನು ಪ್ರತಿದಿನವೂ ಸಾಯುವದಕ್ಕೆ ಸಿದ್ಧನಾಗಿದ್ದಾನೆಂದು ಇದರ ಅರ್ಥವಾಗಿರಬಲ್ಲದು. ಆತನು ಪ್ರತಿಗಳಿಗೆಯಲ್ಲಿಯೂ ಅಪಾಯಕ್ಕೊಳಪಡುತ್ತಾನೆ (ವಚನ 30). ಆತನು ದಿನವೆಲ್ಲಾ ಮರಣವನ್ನು ಎದುರಿಸುತ್ತಾನೆ (ರೋಮ 8:36).

ಎರಡನೆಯ ಅರ್ಥವು ಈ ರೀತಿಯಾಗಿರಬಹುದು: ಪೌಲನ ಪೂರ್ವಸ್ವಭಾವವು ಪ್ರತಿದಿನವೂ ಸಾಯುತ್ತಲಿದೆ (ರೋಮ 6:6). ಅಂದರೆ, ಪೌಲನು ಪ್ರತಿದಿನವೂ ತನ್ನ ಪೂರ್ವ ಸ್ವಭಾವನ್ನು ಶಿಲುಬೆಗೆ ಹಾಕುತ್ತಿದ್ದಾನೆ; ಹೀಗೆ ಆತನು ನೀತಿಯುಳ್ಳ ಜೀವನ ನಡಿಸುವದಕ್ಕೆ ಶಕ್ತನಾಗಬೇಕೆಂದು ಬಯಸುತ್ತಾನೆ. ಆತನು ತನ್ನನ್ನು "ದಿನಾಲೂ ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಳ್ಳುತ್ತಿದ್ದಾನೆ" (ಲೂಕ 9:23).

ಪೌಲನು ಕೊರಿಂಥವರನ್ನು ಕುರಿತು "ಹೆಚ್ಚಳ ಪಡುತ್ತಾನೆ". ಅವರು ಆತನ ಆತ್ಮೀಕ ಮಕ್ಕಳು ಮತ್ತು ಯಾವದೇ ತಂದೆಯಂತೆ ಆತನು ತನ್ನ ಮಕ್ಕಳ ಬಗ್ಗೆ ಹೆಚ್ಚಳ ಪಟ್ಟುಕೊಳ್ಳುತ್ತಾನೆ. ಆದರೆ ಆತನು ಕ್ರಿಸ್ತಯೇಸುವಿನಲ್ಲಿ ಅವರ ಕುರಿತು ಹೆಚ್ಚಳಪಡುತ್ತಾನೆ. ಕೊರಿಂಥದ ಸಭೆಯು ಕ್ರಿಸ್ತನಲ್ಲಿ ಪೌಲನು ಮಾಡಿದ ಕೆಲಸದ ಫಲವಾಗಿತ್ತು ಆದುದರಿಂದ ಆತನು ಅವರಿಗೋಸ್ಕರ ದಿನಾಲು ಸಾಯುವದಕ್ಕೆ ಸಿದ್ಧನಾಗಿದ್ದನು (1 ಥೆಸಲೋನಿಕ 2:19-20 ನೋಡಿರಿ).

32 ಪುನರುತ್ಥಾನವಿಲ್ಲವಾದರೆ ನಾವು ಕ್ರಿಸ್ತನಿಗೋಸ್ಕರ ಅಪಾಯಗಳನ್ನು ಏಕೆ ಎದುರಿಸಬೇಕು? ಪೌಲನು ಎಫೆಸದಲ್ಲಿ ದೊಡ್ಡ ಅಪಾಯವನ್ನು ಎದುರಿಸಿದನು[60]. ಆತನು ಮೃಗಗಳೊಂದಿಗೆಯುದ್ಧಮಾಡಿದ್ದನು. ಒಂದು ವೇಳೆ ಆತನು ಇದನ್ನು ಆತ್ಮೀಕಾಭಿಪ್ರಾಯಗಳಿಗಾಗಲ್ಲದೆ ಕೇವಲ ಮಾನುಷಾಭಿಪ್ರಾಯದಿಂದ ಮಾಡಿದ್ದರೆ ಆತನು ನಿಜವಾಗಿಯೂ ಮೂರ್ಖನೇ ಆಗಿರುತ್ತಿದ್ದನು. ಆತನು ಮೃಗಗಳಿಗೆ ಆಹಾರವಾಗುವದರಿಂದ ಆತನಿಗೆ ಏನು ಪ್ರಯೋಜನವಾಗುತ್ತಿತ್ತು!

ಪೌಲನು ಮನುಷ್ಯ.ರ ಕೈಗಳಲ್ಲಿ ಬಹಳ ಹಿಂಸೆಗೊಳಗಾಗಿದ್ದನು. ಮತ್ತು ಈ ವಚನದ ಪ್ರಕಾರವಾಗಿ ಆತನು ಮೃಗಗಳೊಂದಿಗೆ ಹೋರಾಡಲು ಒತ್ತಾಯಿಸಲ್ಪಟ್ಟಿದ್ದನು. ರೋಮಾಯ ಸಾಮ್ರಾಜ್ಯದಲ್ಲಿ ಅಪರಾಧಿಗಳನ್ನು ಸಿಂಹಗಳ ಬಾಯಿಗೆ ಒಪ್ಪಿಸಿ ಮರಣದಂಡನೆಯನ್ನು ವಿಧಿಸುವ ವಿಧಾನವಿತ್ತು.

ಇಲ್ಲಿ ಪೌಲನು ಯೆಶಾಯ 22:13ರಿಂದ ಉಲ್ಲೇಖಿಸುತ್ತಾನೆ. "ಈ ಹೊತ್ತು ಉಲ್ಲಾಸಿಸೋಣ", ಯಾಕೆಂದರೆ ನಾಳೆ ನಾವು ಸಾಯುತ್ತೇವೆ!. ಯೆಶಾಯನ ಕಾಲದಲ್ಲಿ ಸಹ ಪ್ರಾಪಂಚಿಕ ಜನರ ಮಧ್ಯದಲ್ಲಿ ಇದು ಸಾಮಾನ್ಯ ಹೇಳಿಕೆಯಾಗಿತ್ತು ಮತ್ತು ಇಂದಿನ ವರೆಗೂ ಅದು ಸಾಮಾನ್ಯ ಹೇಳಿಕೆಯೇ ಆಗಿರುತ್ತದೆ. ಮತ್ತು ನಿಜವಾಗಿಯೂ ಮುಂದಿನ ಜೀವಿತದಲ್ಲಿ ಯಾವ ಪ್ರತಿಫಲವಿಲ್ಲವಾದರೆ ಈ ಹೇಳಿಕೆಯನ್ನು ಪಾಲಿಸಿ ಈ ಜೀವಿತದಲ್ಲಿ ಎಲ್ಲಾ ಲಾಭವನ್ನು ಪಡೆದುಕೊಳ್ಳುವದರಲ್ಲಿ ಅರ್ಥವಿರುತ್ತದೆ!

ಕ್ರಿಸ್ತನಿಗಾಗಿ ಸಾಯುವದರಿಂದ ಆಗಲಿರುವ ಪ್ರಯೋಜನವೇನು? ಎಂದು ಪೌಲನು ಪ್ರಶ್ನಿಸುತ್ತಾನೆ. ಆಗಲಿರುವ ಪ್ರಯೋಜನವು ದೇಹದ ಪುನರುತ್ಥಾನ ಹಾಗು ನಿತ್ಯ ಜೀವವೇ. ಆದುದರಿಂದ, ಈ ಜೀವನದ ಸುಖಭೋಗಗಳ ಹಿಂದೆ ಓಡುವದೇ ಇರುವದು ಉತ್ತಮವಾದದ್ದು, ನಾವು ಮುಂದಿನ ಜೀವನದಲ್ಲಿ ನಮಗಾಗಿ ಕಾದಿರುವ ಪ್ರತಿಫಲವನ್ನು ಕಳೆದುಕೊಳ್ಳದಿರೋಣ.

33 ಪೌಲನು ಇಲ್ಲಿ ದುಸ್ಸಹವಾಸ ಎಂದು ಹೇಲುವಲ್ಲಿ ಮುಖ್ಯವಾಗಿ ಆತನು ಪುನರುತ್ಥಾನವನ್ನು ಅಲ್ಲಗಳೆಯುವವರ ಬಗ್ಗೆ ಯೋಚಿಸುವವನಾಗಿದ್ದಾನೆ. ಅಂತಹ ಜನರು ತಿನ್ನುವದರಲ್ಲಿಯೂ ಕುಡಿಯುವದರಲ್ಲಿಯೂ ಆನಂದಿಸುವದರಲ್ಲಿಯೂ ತಮ್ಮ ಜೀವಿತಗಳನ್ನು ಕಳೆಯುತ್ತಾರೆ. ಅವರು ಪ್ರಾಪಂಚಿಕರು; ಅವರು ಕೇವಲ ಲೋಕದ ಸಂಗತಿಗಳನ್ನೇ ಪ್ರೀತಿಸುತ್ತಾರೆ. ಅವರಿಂದ ಸದಾಚಾರವನ್ನು ಕೆಡಿಸಿಕೊಳ್ಳದಿರಿ. ಅವರ ಸಹವಾಸವನ್ನು ಮಾಡದಿರಿ. ಅವರು ನಿಮ್ಮ ನಡವಳಿಕೆಯನ್ನು ಕೆಡಿಸಿಬಿಟ್ಟಾರು ಎಂದು ಪೌಲನು ಹಿತೋಪದೇಶಮಾಡುತ್ತಾನೆ.

ಆದರೆ ವಿಶ್ವಾಸಿಗಳಾದ ನಾವು ನಮ್ಮ ಪ್ರತಿಫಲವನ್ನು ಪರಲೋಕದಲ್ಲಿ ಹುಡುಕುವವರಾಗಿದ್ದೇವೆ. ಭೂಲೋಕದಲ್ಲಿ ಮಾತ್ರವೇ ಪ್ರತಿಫಲಗಳಿರುತ್ತವೆ ಎಂದು ಹೇಳುವವರಿಂದ ನಾವು ಮೋಸಹೋಗದಿರೋಣ.

**34** ಪೌಲನು ಕೊರಿಂಥದವರಿಗೆ ಇಂಥ ಅಮಲಿನಿಂದೆಚ್ಚತ್ತುಕೊಳ್ಳಿರಿ ಎಂದು ಹೇಳುತ್ತಾನೆ. ಕೊರಿಂಥದವರು ಪುನರುತ್ಥಾನವನ್ನು ನಿರಾಕರಿಸದಿರಲಿ. ಅವರು ತಮ್ಮ ಪ್ರತಿಫಲವನ್ನು ಈ ಜೀವಿತದಲ್ಲಿ ಹುಡುಕದಿರಲಿ; ಹಾಗೆ ಮಾಡುವದು ಪಾಪವಾಗಿದೆ. ಪುನರುತ್ಥಾನವನ್ನು ನಿರಾಕರಿಸುವವರು ದೇವರ ವಾಗ್ದಾನಗಳನ್ನೇ ನಿರಾಕರಿಸುವವರಾಗಿದ್ದಾರೆ; ಅವರಿಗೆ ದೇವರ ವಿಷಯದಲ್ಲಿ ಜ್ಞಾನವೇ ಇಲ್ಲ.

## ಪುನರುತ್ಥಾನದ ದೇಹ (15:35-58)

**35** ಸತ್ತು ಹೋಗಿರುವ ದೇಹವು ಹೇಗೆ ತಿರಿಗಿ ಜೀವಂತವಾಗುವದು? ಎಂದು ಕೊರಿಂಥದವರು ಕೇಳಿದರು. ಸ್ವತಃ ಶವವೇ ಹೂಣಲ್ಪಟ್ಟ ಭೂಮಿಯಿಂದ ಎದ್ದು ಬರುವದೋ?

**36** ಪೌಲನು ಇದನ್ನು ಮೂಢ ಪ್ರಶ್ನೆ ಎಂದು ಕರೆಯುತ್ತಾನೆ. ತರುವಾಯ ಆತನು ಒಂದು ಬೀಜದ ದೃಷ್ಟಾಂತವನ್ನು ನೀಡುತ್ತಾನೆ. ನಾವು ಬೀಜವೊಂದನ್ನು ಭೂಮಿಯಲ್ಲಿ ಬಿತ್ತುವಾಗ ಮೇಲೆ ಬರುವದು ಬೀಜವಲ್ಲ, ಆದರೆ ಸಸಿಯೇ. ನಮ್ಮ ಪುನರುತ್ಥಾನದ ದೇಹಗಳು ಹಾಗೆಯೇ ಇರುತ್ತವೆ.

ನಾವು ಬೀಜವನ್ನು ಭೂಮಿಯಲ್ಲಿ ಬಿತ್ತುವಾಗ ಅದನ್ನು "ಹೂಣುತ್ತೇವೆ– ನಾವು ಶವವನ್ನು ಹೂಣುವಂತೆಯೇ". ಒಂದು ಅರ್ಥದಲ್ಲಿ ಬೀಜವು ಸಾಯುತ್ತದೆ; ಅದು ಸಾಯುತ್ತದೆ. ಆದರೆ ನಂತರ, ಸ್ವಲ್ಪಕಾಲದ ಮೇಲೆ ಆ ಬೀಜದೊಳಗಿಂದ ನೂತನ ಜೀವವು ಉಗಮವಾಗುತ್ತದೆ.

ನಮ್ಮ ಭೌತೀಕ ದೇಹಗಳು ಆ ಬೀಜದಂತಿರುತ್ತವೆ. ನಮ್ಮ ದೇಹಗಳು ಸುಡಲ್ಪಡಲಿ ಇಲ್ಲವೆ ಹೂಣಲ್ಪಡಲಿ, ಎರಡೂ ಒಂದೇ. ನಮ್ಮ ಬೌತೀಕ ದೇಹಗಳಿಗೆ ಏನೇ ಸಂಭವಿಸಿದರೂ ನಾವು ನೂತನ ಪುನರುತ್ಥಾನಗೊಂಡ ದೇಹಗಳನ್ನು ಪಡೆಯುವೆವು.

ನಮ್ಮ ಆತ್ಮೀಕ ಜೀವಿತ ವಿಷಯದಲ್ಲಿಯೂ ಹೀಗೆಯೇ ಇರುತ್ತದೆ. ಆ ಬೀಜದ ಹಾಗೆ ನಮ್ಮ ಪೂರ್ವ ಪಾಪಸ್ವಭಾವವು ಸಾಯಬೇಕು (ಯೋಹಾನ 12:24, ರೋಮ 6:3-7 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆದಾದ ಮೇಲೆ ಮಾತ್ರವೇ ನಾವು ಆತ್ಮೀಕವಾಗಿ ಹೊಸದಾಗಿ ಹುಟ್ಟಿ (ಯೋಹಾನ 3:3), ನೂತನ ಆತ್ಮೀಕ ಜೀವವನ್ನು ಪಡೆಯಬಲ್ಲೆವು (ರೋಮ 8:11).

**37-38** ಈಗ ನಾವು ಬೀಜದ ಹಾಗಿದ್ದೇವೆ. ನಾವು ಸಾಯುವಾಗ ನಮ್ಮೊಳಗಿಂದ ಒಂದು ಮಹಿಮೆಯುಳ್ಳ ಪುನರುತ್ಥಾನಗೊಂಡ ದೇಹವು ಹೊರಹೊಮ್ಮುವದು. ಗಿಡವು ಜೀಜಕ್ಕಿಂತಲೂ ಹೆಚ್ಚು ಮಹಿಮಾಕರವಾಗಿರುವ ಪ್ರಕಾರವೇ ನಮ್ಮ ಪುನರುತ್ಥಾನಗೊಂಡ ದೇಹವು ಈಗಿನ ದೇಹಕ್ಕಿಂತಲೂ ಹೆಚ್ಚು ಮಹಿಮೆಯುಳ್ಳದ್ದಾಗಿರುವದು. ದೇವರು ಪ್ರತಿಯೊಬ್ಬನಿಗೂ ನೂತನದೇಹವನ್ನು ಕೊಡುವನು. ದೇವರು ಬೀಜ ಹಾಗು ಗಿಡಗಳೆರಡನ್ನೂ ಕೊಡುವಾತನಾಗಿದ್ದಾನೆ. ದೇವರು ಎಲ್ಲಾ ಜೀವವುಳ್ಳ ಸಂಗತಿಯ ಸೃಷ್ಟಿಕರ್ತನಾಗಿದ್ದಾನೆ; ಆತನು ಎಲ್ಲಾ ಜೀವದ ಮೂಲ ಕಾರಣನಾಗಿದ್ದಾನೆ. ಕೊರಿಂಥವರು ಪುನರುತ್ಥಾನವಿದೆಯೋ ಎಂದು ಸಂಶಯಿಸಲು ಹೇಗೆ ಸಾಧ್ಯ/ ಪ್ರತಿವರ್ಷವೂ ಅವರು ಬೀಜಗಳನ್ನು ಬಿತ್ತುತ್ತಾ ಭೂಮಿಯೊಳಗಿಂದ ನೂತನ ಗಿಡಗಳು ಚಿಗುರೊಡೆಯುವದನ್ನು ನೋಡುತ್ತಿದ್ದರು. ದೇವರು ಲಯವಾಗಬಹುದಾದ ಚಿಕ್ಕ ಬೀಜದೊಳಗಿಂದ ಹೊಸ ಜೀವವನ್ನು ಹೊರಹೂಮ್ಮಿಸುವದಾದರೆ ಆತನು ನಿಶ್ಚಯವಾಗಿಯೂ ನಮ್ಮ ದೇಹಗಳಿಂದ ಹೊಸ ಜೀವವನ್ನು ಹೊರಹೊಮ್ಮಿಸಬಲ್ಲನು.

**39-41** ಅನೇಕ ವಿಧವಾದಲ್ಲಿ ದೇಹಗಳಿವೆ, ಪರಲೋಕದ ದೇಹಗಳುಂಟು, ಭೂಲೋಕದ ದೇಹಗಳೂ ಉಂಟು (ವಚನ 40). ಪ್ರತಿಯೊಂದು ದೇಹವು ತನ್ನದೆ ಆದ ಮಹಿಮೆಯನ್ನು ಹೊಂದಿರುತ್ತದೆ. ಅದೇ ರೀತಿಯಲ್ಲಿ ನಮ್ಮೊಬ್ಬೊಬ್ಬರ ಪುನರುತ್ಥಾನಗೊಂಡ ದೇಹಗಳಿಗೆ ಅವುಗಳದ್ದೇ ಆದ ಮಹಿಮೆಯಿರುತ್ತದೆ (ವಚನ 42).

**42-44** ನಮ್ಮ ಪ್ರಸ್ತುತ ದೇಹಗಳು ಶ್ರೇಘ್ರವೇ ಬಿತ್ತಲ್ಪಡಲಿರುವ ಬೀಜಗಳಂತಿವೆ – ಅಂದರೆ, ಸುಡಲ್ಪಡಬಹುದು ಅಥವಾ ಹೂಣಲ್ಪಡಬಹುದು. ಶವವು ಲಯಾವಸ್ಥೆಯಲ್ಲಿರುತ್ತದೆ (ವಚನ 42); ಅದು ಹೀನಾವಸ್ಥೆ ಮತ್ತು ನಿರ್ಬಲಾವಸ್ಥೆ ಉಳ್ಳದ್ದಾಗಿರುತ್ತದೆ (ವಚನ 43). ನಮ್ಮ ನೂತನ ದೇಹಗಳು ನಿರ್ಲಯಾವೆಸ್ಥಯಲ್ಲಿ ಇರುತ್ತವೆ; ಅವುಗಳು ಮಹಿಮೆ ಮತ್ತು ಬಲಾವಸ್ಥೆ ಉಳ್ಳವುಗಳಾಗಿರುತ್ತವೆ.

ನಮ್ಮ ನೂತನ ದೇಹಗಳು ಆತ್ಮೀಕವಾಗಿರುತ್ತವೆ (ವಚನ 44). ಅದರ ವಿವರವಾದ ಅರ್ಥವು ಏನಾಗಿರುತ್ತದೆಂಬದು ಅನಿಶ್ಚಿತವಾದದ್ದು. ಉದಾಹರಣೆಗೆ, ನಾವು ಪರಲೋಕದಲ್ಲಿ ತಿಂದು ಕುಡಿಯುವೆವೋ? ಕ್ರಿಸ್ತನು ತನ್ನ ಪುನರುತ್ಥಾನದ ಬಳಿಕ ತನ್ನ ಶಿಷ್ಯರೊಂದಿಗೆ ತಿಂದನು ಮತ್ತು ಕುಡಿದನು (ಲೂಕ 24:39-43), ಹೇಗಿದ್ದರೂ, ನಮಗೆ ಒಂದು ಮಾತ್ರ ನಿಶ್ಚಯವಾಗಿ ತಿಳಿದದೆ, ಅದೇನೆಂದರೆ ನಮ್ಮ ನೂತನ ದೇಹಗಳು ಎಂದಿಗೂ ಸಾಯುವದಿಲ್ಲ (ಯೋಹಾನ 6:40, 63; 11:25-26 ನೋಡಿರಿ).

**45** ಮೊದಲನೆಯ ಮನುಷ್ಯನಾದ ಆದಾಮನು ಬದುಕುವ ಪ್ರಾಣಿಯಾದನು – ಅಂದರೆ, ಒಬ್ಬ ಸಾಮಾನ್ಯ ಭೂಲೋಕದ ಮನುಷ್ಯನಾದನು (ಆದಿಕಾಂಡ 2:7). ಕಡೇ ಆದಾಮನೋ (ಕ್ರಿಸ್ತನು) ಬದುಕಿಸುವ ಆತ್ಮನಾದನು – ಅಂದರೆ, ಆತ್ಮೀಕ ಮನುಷ್ಯನಾದನು (ಯೋಹಾನ 5:21; 6:33-35 ನೋಡಿರಿ). ಕ್ರಿಸ್ತನು ಆತ್ಮ ಮಾತ್ರವೇ ಅಲ್ಲ; ಆತನು ಪೂರ್ಣವಾಗಿ ಮಾನವನೂ ಆಗಿದ್ದನು. ಕ್ರಿಸ್ತನು ಮನುಷ್ಯರೂಪದಲ್ಲಿ ಭೂಮಿಗೆ ಬಂದ ಸ್ವತಃ ದೇವರೇ (ಸಾಮಾನ್ಯ. ಲೋಖನ: ಯೇಸು ಕ್ರಿಸ್ತನು ನೋಡಿರಿ).

**46** ಮೊದಲು ನಾವು ಸ್ವಾಭಾವಿಕ ದೇಹಗಳನ್ನು ಪಡೆಯುತ್ತೇವೆ; ಅನಂತರ ನಮ್ಮ ಆತ್ಮೀಕ ದೇಹಗಳನ್ನು ಪಡೆಯುತ್ತೇವೆ.
**47** ಆದಾಮನು ಮಣ್ಣಿನಿಂದ ಮಾಡಲ್ಪಟ್ಟನು (ಆದಿಕಾಂಡ 2:7). ಕ್ರಿಸ್ತನು ಪವಿತ್ರಾತ್ಮನಿಂದ ಹುಟ್ಟಿದನು (ಮತ್ತಾಯ 1:18; ಯೋಹಾನ 6:33,38 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).
**48-49** ಆದಾಮನಿಂದ ನಾವು ಭೂಲೋಕದ ದೇಹವನ್ನು ಪಡೆಯುತ್ತೇವೆ. ಕ್ರಿಸ್ತನ ಮೂಲಕವಾಗಿ ನಾವು ಪರಲೋಕದ ದೇಹವನ್ನು ಪಡೆಯುತ್ತೇವೆ. ಈಗ ನಾವು ಆದಾಮನ ಹಾಗಿದ್ದೇವೆ. ನಮ್ಮ ಪುನರುತ್ಥಾನದ ನಂತರ ನಾವು ಕ್ರಿಸ್ತನಂತಾಗುವೆವು (2 ಕೊರಿಂಥ 3:18; ಫಿಲಿಪ್ಪಿ 3:20-21; 1 ಯೋಹಾನ 3:2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).
**50** ರಕ್ತಮಾಂಸವು (ಅಂದರೆ, ಅವಿಶ್ವಾಸಿಯಾಗಿರುವ ಭೂಲೋಕಮಾನವನು) ದೇವರ ರಾಜ್ಯ ಬಾಧ್ಯವಾಗಲಾರದು ಎಂದು ಪೌಲನು ಹೇಳುತ್ತಾನೆ. ಪ್ರಾಕೃತನಾದ ಭೂಲೋಕದ ಮನುಷ್ಯನು ದೇವರ ರಾಜ್ಯವನ್ನು ಪ್ರವೇಶಿಸುವದಿಲ್ಲ; ಆತನು ರಕ್ಷಣೆ ಹೊಂದುವದಿಲ್ಲ. ಯಾಕೆಂದರೆ ದೇವರ ರಾಜ್ಯವನ್ನು ಪ್ರವೇಶಿಸಲು ಮನುಷ್ಯನು ಮೊದಲು ಮಾರ್ಪಡಬೇಕು (ವಚನ 53). ಮತ್ತು ಮಾರ್ಪಡಬೇಕಾದರೆ ಆತ್ಮನಿಂದ ಹೊಸದಾಗಿ ಹುಟ್ಟುವದು ಮೊದಲ ಹೆಜ್ಜೆಯಾಗಿದೆ (ಯೋಹಾನ 3:3, 5-6 ಮತ್ತು ವ್ಯಾಖ್ಯಾನ ನೋಡಿರಿ).

ನಿಜವಾಗಿಯೂ ಯೇಸು ಕ್ರಿಸ್ತನನ್ನು ನಂಬುವವರೆಲ್ಲರೂ ಆತ್ಮೀಕವಾಗಿ ಹೊಸದಾಗಿ ಹುಟ್ಟಿದವರಾಗಿದ್ದಾರೆ. ಈ ಲೋಕದಲ್ಲಿಯೂ ನಾವು ಮಾರ್ಪಡುವ ಪ್ರಕ್ರಿಯೆಯನ್ನು ಪ್ರಾರಂಭಿಸುವವರಾಗಿದ್ದೇವೆ, ಯಾಕೆಂದರೆ, ನಾವು ಹೊಸದಾಗಿ ಹುಟ್ಟುವಾಗ ಪವಿತ್ರಾತ್ಮನ ಮುಖಾಂತರ ನೂತನ ಜೀವವನ್ನು ಪಡೆಯುವವರಾಗಿದ್ದೇವೆ. ನಾವು ಯೇಸುವನ್ನು ನಂಬಿದತಕ್ಷಣವೇ ನಿತ್ಯಜೀವವನ್ನು ಪಡೆದುಕೊಳ್ಳುವವರಾಗಿದ್ದು ಅದು ಈ ಭೂಲೋಕದಲ್ಲಿಯೇ ಪ್ರಾರಂಭಗೊಳ್ಳುತ್ತದೆ. ಆದರೆ, ನಮ್ಮ ಪುನರುತ್ಥಾನದ ದೇಹಗಳನ್ನು ಕ್ರಿಸ್ತನು ಲೋಕಾಂತ್ಯದಲ್ಲಿ ಪುನಃ ಬಂದಾಗ ಮಾತ್ರವೇ ಪಡೆದು ಕೊಳ್ಳುವವರಾಗಿದ್ದೇವೆ (ವಚನಗಳು 22-23). ಆ ಸಮಯದಲ್ಲಿ ನಾವು ಸಂಪೂರ್ಣವಾಗಿ ಮಾರ್ಪಡುವೆವು. ಈಗ ನಾವು ಪವಿತ್ರಾತ್ಮನನ್ನು ಮುಂದೆ ಬರಲಿರುವದಕ್ಕೆ ಮುಂಗಡವನ್ನಾಗಿ ಪಡೆದುಕೊಂಡಿರುತ್ತೇವೇ (2 ಕೊರಿಂಥ 1:21-22; ಎಫೆಸ 1:13-14 ನೋಡಿರಿ). ಅನಂತರ ನಾವು ನಮ್ಮ ಪೂರ್ಣ ಸ್ವಾಸ್ಥ್ಯವನ್ನು – ಅಂದರೆ, ಪುನರುತ್ಥಾನ ಅಥವಾ ನಮ್ಮ ದೇಹಗಳ ವಿಮೋಚನೆಯನ್ನು (ರೋಮ 8:23 ಮತ್ತು ವ್ಯಾಖ್ಯಾನ ನೋಡಿರಿ) – ಪಡೆಯುವೆವು.

ಕ್ರಿಸ್ತನನ್ನು ನಂಬದವರಿಗೆ ದೇಹದ ವಿಮೋಚನೆಯಿರುವದಿಲ್ಲ. ಅವರಿಗೆ ಪರಲೋಕದಲ್ಲಿ ಪುನರುತ್ಥಾನವಿರುವದಿಲ್ಲ. ಅವರು ನರಕಕ್ಕಾಗಿ ಪುನರುತ್ಥಾನಗೊಳ್ಳುವರು (ಯೋಹಾನ 5:29 ಮತ್ತು ವ್ಯಾಖ್ಯಾನ ನೋಡಿರಿ).
**51** ಇಲ್ಲಿ ಒಂದು ಹೊಸ ಪ್ರಶ್ನೆ ಎದುರಾಗುತ್ತದೆ. ಕ್ರಿಸ್ತನು ಪುನಃ ಬರುವ ವೇಳೆಯಲ್ಲಿ ಬದುಕುಳಿದಿರುವ ವಿಶ್ವಾಸಿಗಳಿಗೆ ಏನಾಗುವದು? ಅವರು ಸಹ ಪುನರುತ್ಥಾನಗೊಳ್ಳುವರೋ? ಪೌಲನು ಹೌದು ಎನ್ನುತ್ತಾನೆ.
**52** ಕ್ರಿಸ್ತನ ಎರಡನೆಯ ಬರೋಣದ ವೇಳೆಯಲ್ಲಿ ಸತ್ತವರು ತಕ್ಷಣವೇ – ಒಂದು ಕ್ಷಣದಲ್ಲೇ ಕಣ್ಣುರೆಪ್ಪೆ ಬಡಿಯುವಷ್ಟರೊಳಗಾಗಿ – ಎದ್ದು ಬರುವರು ಮತ್ತು ನಾವು (ಆ ಸಮಯದಲ್ಲಿ ಬದುಕಿರುವ ವಿಶ್ವಾಸಿಗಳು) ಮಾರ್ಪಡುವೆವು. ಸತ್ತವರಿಗೆ ಇದು "ಪುನರುತ್ಥಾನ". ಬದುಕಿರುವವರಿಗೆ ಇದು "ಮಾರ್ಪಾಟು" ಎಂದು ಕರೆಯಲ್ಪಡುವದು. ಆದರೆ ವಾಸ್ತವದಲ್ಲಿ ಅದು ಒಂದೇ ಸಂಗತಿಯಾಗಿದೆ. ಕ್ರಿಸ್ತನು ಬರುವಾಗ ಸತ್ತಿರುವವರೂ ಬದುಕಿರುವವರೂ ನೂತನದೇಹಗಳನ್ನು ಧರಿಸಿಕೊಳ್ಳುವರು. ಇದು ಕಡೇ ತುತೂರಿಯ ಧ್ವನಿಯಾಗುವಾಗ ಸಂಭವಿಸುವದು (ಪ್ರಕಟಣೆ 11:15) – ಅಂದರೆ, ಲೋಕಾಂತ್ಯದಲ್ಲಿ ಸಂಭವಿಸುವದು (ಮತ್ತಾಯ 24:27; ಮಾರ್ಕ 13:26-27; 1 ಥೆಸಲೋನಿಕ 4:14-17 ನೋಡಿರಿ).

ಯೇಸು ಸ್ವತಃ ಭೂಲೋಕದಲ್ಲಿದ್ದಾಗ ಸ್ವಲ್ಪಕಾಲ ಮಾರ್ಪಟ್ಟಿದ್ದನು (ಮಾರ್ಕ 9:2-10 ನೋಡಿರಿ). ಕ್ರಿಸ್ತನ ಎರಡನೆಯ ಬರೋಣದಲ್ಲಿ ನಾವು ಸಹ ಅದೇ ರೀತಿಯಲ್ಲಿ ಮಾರ್ಪಡುವೆವು.
**53-54** ಈ ವಚನಗಳಲ್ಲಿ ಪೌಲನು 42ನೇ ವಚನದ ವಿಚಾರವನ್ನು ಪುನರಾವರ್ತಿಸುತ್ತಾನೆ ಸತ್ತವರು ಎಬ್ಬಿಸಲ್ಪಡುವಾಗ ಮರಣವು ನಿಜವಾಗಿಯೂ ಸೋಲಿಸಲ್ಪಡುವದು.
**55** ಇಲ್ಲಿ ಪೌಲನು ಹೋಶೇಯ 13:14 ರಿಂದ ಉಲ್ಲೇಖಿಸುತ್ತಾನೆ.
**56** ಮರಣದ ಕೊಂಡಿ ಪಾಪವೇ. ಪಾಪವು ಕಣಜೀರಗೆಯ ಕೊಂಡಿಯ ಹಾಗಿರುತ್ತದೆ. ಮರಣ, ನಿತ್ಯ ಮರಣವನ್ನುಂಟು ಮಾಡುವದು ಪಾಪವೇ (ರೋಮ 5:12; 6:23 ನೋಡಿರಿ).

ಆದರೆ ಕ್ರಿಸ್ತನು "ಕೊಂಡಿ" ತೆಗೆದು ಬಿಟ್ಟಿದ್ದಾನೆ, ಯಾಕೆಂದರೆ ಆತನು ನಮ್ಮ ಪಾಪವನ್ನು ಕ್ಷಮಿಸಿ ನಮ್ಮ ದಂಡನೆಯನ್ನು ಹೊತ್ತುಕೊಂಡಿದ್ದಾನೆ – ಅಂದರೆ ಮರಣವನ್ನು ತೆಗೆದುಕೊಂಡಿದ್ದಾನೆ (ಮಾರ್ಕ 10:45; ಯೋಹಾನ 1:29; ಕೊಲೊಸ್ಸೆ 1:14; 1 ಯೋಹಾನ 1:7; 2:2; 3:5 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).
ಪಾಪದ ಬಲಕ್ಕೆ ಆಧಾರವು ಧರ್ಮಶಾಸ್ತ್ರವೇ. ಪಾಪವು ಮರಣವನ್ನು ಉಂಟುಮಾಡುವದಕ್ಕೆ ಧರ್ಮಶಾಸ್ತ್ರದಿಂದ ಬಲವನ್ನು ಪಡೆಯುತ್ತದೆ, ಯಾಕೆಂದರೆ ಧರ್ಮಶಾಸ್ತ್ರವು ಪಾಪಮಾಡುವವರಿಗೆಲ್ಲಾ ಮರಣವನ್ನು ವಿಧಿಸುತ್ತದೆ (ರೋಮ 7:10-11).
**57** ಕ್ರಿಸ್ತನು ಪುನರುತ್ಥಾನಗೊಂಡಿರುವದರಿಂದ ನಾವು ಸಹ ಪುನರುತ್ಥಾನಗೊಳ್ಳುವೆವು. ಕ್ರಿಸ್ತನು ಮರಣದ ಮೇಲೆ ಜಯವನ್ನು ಹೊಂದಿದ್ದನಾದ್ದರಿಂದ ನಾವು ಸಹ ಮರಣದ ಮೇಲೆ ಜಯವನ್ನು – ಅಂದರೆ, ಪಾಪಗಳ ಕ್ಷಮೆ ಹಾಗು ನಿತ್ಯಜೀವವನ್ನು – ಪಡೆದುಕೊಳ್ಳುವೆವು .. ದೇವರಿಗೆ ಸ್ತೋತ್ರ! (ರೋಮ 7:24-25; 8:1-2, 10-11 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**58** ಇಲ್ಲಿ ಪೌಲನು ಈ ಇಡೀ ಅಧ್ಯಾಯದ ಅಂತಿಮ ಹಾಗು ಮುಖ್ಯ ವಿಷಯಕ್ಕೆ ಬರುತ್ತಾನೆ: ಆದುದರಿಂದ, ನನ್ನ ಪ್ರೀಯ ಸಹೋದರರೇ, ಸ್ಥಿರಚಿತ್ತರಾಗಿರಿ..ನೀವು ಕರ್ತನ ಸೇವೆಯಲ್ಲಿ ಪಡುವ ಪ್ರಯಾಸವು ನಿಷ್ಫಲವಾಗುವದಿಲ್ಲ. ಕರ್ತನ ಸೇವೆಯಲ್ಲಿನ ನಮ್ಮ ಪ್ರಯಾಸವು ನಿಷ್ಫಲವಾಗುವದಿಲ್ಲ ವೇಕೆ? ಯಾಕೆಂದರೆ ನಮ್ಮ ಪ್ರಯಾಸವು ಮುಗಿದ ಬಳಿಕ ನಾವು ನಿತ್ಯ ಪ್ರತಿಫಲವನ್ನು – ಪುನರುತ್ಥಾನ ಅಥವಾ ನಮ್ಮ ದೇಹಗಳ ವಿಮೋಚನೆಯನ್ನು – ಪಡೆದುಕೊಳ್ಳುವೆವು (ರೋಮ 8:23), ಅಥವಾ, ಸರಳವಾಗಿ ಹೇಳುವದಾದರೆ ರಕ್ಷಣೆಯನ್ನು ಪಡೆಯುವೆವು.

ಆದರೆ, ನೆನಪಿರಲಿ, ನಾವು ರಕ್ಷಣೆಹೊಂದಿದ್ದು ನಮ್ಮ ಪ್ರಯಾಸದಿಂದಲ್ಲ, ಆದರೆ ಕೃಪೆಯಿಂದಲೇ ಹೊಂದಿದ್ದೇವೆ (ಎಫೆಸ 2:8-9). ನಾವು ನಮ್ಮ ಪ್ರಯಾಸದ ಕಾರಣದಿಂದ ರಕ್ಷಣೆಯನ್ನು ಹೊಂದುವದಿಲ್ಲ; ನಾವು ನಮ್ಮ ರಕ್ಷಣೆಯ ನಿಮಿತ್ತವಾಗಿ ಪ್ರಯಾಸ ಪಡುತ್ತೇವೆ.ಕ್ರಿಸ್ತನು ನಮಗಾಗಿ ಮಾಡಿರುವ ಕಾರ್ಯಕ್ಕೆ ಕೃತಜ್ಞತೆಯುಳ್ಳವರಾಗಿ ಪ್ರಯಾಸಪಡುತ್ತೇವೆ. ಮತ್ತು ನಮ್ಮ ಪ್ರತಿಫಲವು ಪರಲೋಕದಲ್ಲಿ ನಮಗಾಗಿ ಕಾಯುತ್ತಿದೆ.

ಆದದರಿಂದ ಪೌಲನು "ನಿಶ್ಚಲರಾಗಿರಿ" ಎಂದು ಹೇಳುತ್ತಾನೆ. ನಾವು ನಿರಾಶೆಗೊಳ್ಳದಿರೋಣ. ನಾವು ಸಮಸ್ಯೆ ಅಥವಾ ಸಂಕಷ್ಟ ಅಥವಾ ಹಿಂಸೆಯಿಂದ ಹತಾಶರಾಗದಿರೋಣ. ಯಾಕೆಂದರೆ ನಮ್ಮನ್ನು ಯಾವದೂ – ಮರಣವು ಸಹ ಸೋಲಿಸಲಾರದು (ರೋಮ 8:35-39 ನೋಡಿರಿ). ದೇವರು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ (ವಚನ 57) ಹಲ್ಲೆಲೂಯಾ!

---

## ಅಧ್ಯಾಯ - 16

### ದೇವಜನರಿಗಾಗಿ ಹಣಸಂಗ್ರಹಣೆ (16:1-4)

**1** ಪೌಲನು ಯೆರೂಸಲೇಮಿನಲ್ಲಿನ ಬಡಕ್ರೈಸ್ತರಿಗಾಗಿ ಹಣಸಂಗ್ರಹಣೆಮಾಡುವದರಲ್ಲಿ ಹೆಚ್ಚು ಸಮಯವನ್ನು ಕಳೆಯುತ್ತಿದ್ದನು. ಅವರನ್ನೆ ಇಲ್ಲಿ ಆತನು ದೇವ ಜನರು ಎಂದು ಕರೆಯುತ್ತಾನೆ (ರೋಮ 15:25-26 ಮತ್ತು ವ್ಯಾಖ್ಯಾನ ನೋಡಿರಿ).

**2** ಪೌಲನು ಕೊರಿಂಥದವರ ಬಳಿಗೆ ಬರುವದರೊಳಗಾಗಿ ಅವರ ಸಂಗ್ರಹಣೆಯ ಕಾರ್ಯವನ್ನು ಪೂರ್ಣಗೊಳಿಸಬೇಕೆಂದು ಇಚ್ಚಿಸುತ್ತಾನೆ. ಈ ಪತ್ರಿಕೆಯನ್ನು ಬರೆದ ಒಂದು ವರ್ಷದ ಬಳಿಕ ಪೌಲನು ಈ ಸಂಗ್ರಹಣೆಯ ವಿಷಯದಲ್ಲಿ ಕೊರಿಂಥದವರಿಗೆ ಪುನಃ ಬರೆದನು (2 ಕೊರಿಂಥ 9:1-5 ನೋಡಿರಿ).

ಇಲ್ಲಿ ಪೌಲನು ಕೊರಿಂಥದವರಿಗೆ (ಮತ್ತು ಎಲ್ಲಾ ಕ್ರೈಸ್ತರಿಗೆ ) ಹಣ ಸಂಗ್ರಹಣೆಯ ವಿಷಯದಲ್ಲಿ ಎರಡು ಅಭ್ಯಾಸಗತ ನೀತಿಸೂತ್ರಗಳನ್ನು ನೀಡುತ್ತಾನೆ. ಮೊದಲನೆಯದಾಗಿ, ಜನರು ಒಂದೇ ಸಾರಿ ಅವಸರವಾಗಿ ಎಲ್ಲಾ ಹಣವನ್ನು ಸಂಗ್ರಹಿಸುವದರ ಬದಲಾಗಿ ಪ್ರತಿವಾರವೂ ಕ್ರಮವಾಗಿ ಕೊಡುವದು ಉತ್ತಮವಾದದ್ದು. ಬಡವರ ಕೊರತೆಗಳನ್ನು ನೀಗಿಸುವದಕ್ಕೆ ಕ್ರಮವಾಗಿ ಕೊಡುವದು ಪ್ರತಿಯೊಬ್ಬ ಕ್ರೈಸ್ತನ ಕರ್ತವ್ಯವಾಗಿದೆ.

ಎರಡನೆಯ ಸೂತ್ರವೇನೆಂದರೆ ಪ್ರತಿಯೊಬ್ಬ ಕ್ರೈಸ್ತನು ತನಗೆ ಬಂದ ಸಂಪಾದನೆಯ ಮೇರೆಗೆ [61] ಕೊಡತಕ್ಕದ್ದು. ಕ್ರೈಸ್ತರು ನಿಯಮದ ಕಾರಣದಿಂದ ಕೊಡುವದಿಲ್ಲ (ಯೆಹೂದ್ಯರು ತಮ್ಮ ಆದಾಯದಲ್ಲಿ ಹತ್ತನೆಯ ಭಾಗವನ್ನು ಕೊಡುತ್ತಿದ್ದರು, ಯಾಕೆಂದರೆ ಯೆಹೂದ್ಯ ಧರ್ಮಶಾಸ್ತ್ರ ಹಾಗೆ ಕೊಡಬೇಕೆಂದು ಹೇಳುತ್ತಿತ್ತು). ಬದಲಾಗಿ, ಕ್ರೈಸ್ತರು ಪ್ರೀತಿಯ ನಿಮಿತ್ತವಾಗಿ ತಮ್ಮ ಹೃದಯ ಪೂರ್ವಕವಾಗಿ ಕೊಡುತ್ತಾರೆ. ದೇವರು ನಮಗೆ ದಾರಾಳವಾಗಿ ಕೊಟ್ಟಿರುವ ಪ್ರಕಾರವೇ ನಾವೂ ಸಹ ಇತರರಿಗೆ ದಾರಾಳವಾಗಿ ಕೊಡುವವರಾಗಿರಬೇಕು. ಪ್ರತಿಯೊಬ್ಬ ಕ್ರೈಸ್ತನು ತಾನು ಎಷ್ಟು ಕೊಡಬೇಕೆಂದು ದೇವರನ್ನು ಕೇಳಬೇಕು (ಮಾರ್ಕ 12:41-44; 2 ಕೊರಿಂಥ 8:12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**3-4** ಪೌಲನು ಕೊರಿಂಥದವರಿಗೆ ತಾವು ಸಂಗ್ರಹಿಸಿದ ಹಣವನ್ನು ತನ್ನ ಕೈಯಲ್ಲಿ ಕೊಡಬೇಕೆಂದು ಕೇಳುವದಿಲ್ಲ. ಯಾರೂ ಸಹ ಪೌಲನ ಮೇಲೆ ಆತನು ತನಗಾಗಿ ಹಣಸಂಗ್ರಹಣೆ ಮಾಡಲು ಪ್ರಯತ್ನಿಸಿದನೆಂದು ಆರೋಪಿಸುವಂತಾಗಬೇಕೆಂದು ಪೌಲನು ಬಯಸಲಿಲ್ಲ (2 ಕೊರಿಂಥ 8:19-21 ನೋಡಿರಿ). ಬದಲಾಗಿ, ಕೊರಿಂಥದವರು ತಮ್ಮೊಳಗೆ ಕೆಲವರನ್ನು ಆಯ್ಕೆ ಮಾಡಿ ಯೆರೂಸಲೇಮಿಗೆ ಹಣವನ್ನು ಅವರ ಕೈಯಲ್ಲಿ ಕೊಟ್ಟು ಕಳುಹಿಸುವಂತೆ ಸಲಹೆ ನೀಡುತ್ತಾನೆ.

### ಪೌಲನ ಯೋಜನೆ (16:5-12)

**5** ಮೆಕೆದೋನ್ಯವು ಉತ್ತರ ಗ್ರೀಸಿನ ಮುಖ್ಯ ಪ್ರಾಂತ್ಯವಾಗಿತ್ತು, ಫಿಲಿಪ್ಪಿಯ ಹಾಗು ಥೆಸಲೋನಿಕದ ಸಭೆಗಳು ಆ ಪ್ರಾಂತ್ಯದಲ್ಲಿದ್ದವು. ಎಫೆಸದಿಂದ (ಪೌಲನು ಅಲ್ಲಿಂದಲೇ ಈ ಪತ್ರಿಕೆಯನ್ನು ಬರೆದನು). ಕೊರಿಂಥಕ್ಕೆ ಭೂಮಾರ್ಗವಾಗಿ ಹೋಗಬೇಕಾದರೆ ಒಬ್ಬನು ಮೆಕೆದೋನ್ಯ ಸೀಮೆಯನ್ನು ದಾಟಿ ಹೋಗಬೇಕಾಗಿತ್ತು. ಕೊರಿಂಥವು ಅಖಾಯ ಪ್ರಾಂತ್ಯದಲ್ಲಿ ಗ್ರೀಕ್‌ನ ದಕ್ಷಿಣಬಾಗದಲ್ಲಿತ್ತು.

**6-7** ಪೌಲನು ತಾನು ಕೊರಿಂಥದವರ ಬಳಿಗೆ ಏಕೆ ಬೇಗನೆ ಬರುವದಕ್ಕೆ ಆಗುವದಿಲ್ಲವೆಂಬದನ್ನು ಅವರು ತಿಳುಕೊಳ್ಳಬೇಕೆಂದು ಬಯಸುತ್ತಾನೆ. ಆತನಿಗೆ ಆವರ ಬಗ್ಗೆ ಚಿಂತೆಯಿಲ್ಲ ಎಂಬುದಕ್ಕಾಗಿಯಲ್ಲ; ಬದಲಾಗಿ ಆತನು ಅವರ ಬಗ್ಗೆ ಚಿಂತನೆಯನ್ನು ಹೊಂದಿದ್ದನೆಂಬದಕ್ಕಾಗಿಯೇ ಆತನು ಅವರೊಂದಿಗೆ ಬಹಳ ಸಮಯ ಕಳೆಯುವದಕ್ಕೆ ಸಾಧ್ಯವಾಗಬೇಕೆಂದು ಬಯಸಿದವನಾಗಿ ಆತನು ಹೆಚ್ಚು ಸಮಯವನ್ನು ಹೊಂದಿರುವಾಗ ಬರುವದಕ್ಕೆ ತೀರ್ಮಾನಿಸುತ್ತಾನೆ (2 ಕೊರಿಂಥ 1:15-16ನೋಡಿರಿ).

ಪೌಲನು ಕರ್ತನ ಅಪ್ಪಣೆಯಾದರೆ ಕೊರಿಂಥದವರ ಸಂಗಡ ಸಮಯವನ್ನು ಕಳೆಯುವನು (ವಚನ 7). ಪೌಲನು ಏನೇ ಮಾಡಿದರೂ ಅದನ್ನು ಕರ್ತನ ಅಪ್ಪಣೆಯ ಮೇರೆಗೆ ಮಾತ್ರವೇ ಮಾಡುವವನಾಗಿದ್ದಾನೆ (ಯಾಕೋಬ 4:13-15 ಮತ್ತು ವ್ಯಾಖ್ಯಾನ ನೋಡಿರಿ).

**8-9** ಇಲ್ಲಿ ಪೌಲನು ತಾನು ತಕ್ಷಣವೇ ಕೊರಿಂಥಕ್ಕೆ ಹೋಗಲು ಯಾಕೆ ತಕ್ಕದ್ದಲ್ಲ ಎಂಬುದಕ್ಕೆ ಎರಡನೆಯ ಕಾರಣವನ್ನು ಪ್ರಸ್ತಾಪಿಸುತ್ತಾನೆ. ಎಫೆಸದಲ್ಲಿ ಆತನಿಗೆ ಕಾರ್ಯಕ್ಕೆ ಅನುಕೂಲವಾದ ಮಹಾಸಂದರ್ಭವು ದೊರಕಿತ್ತು. ಪೌಲನು ಯವಾಗಲೂ "ತೆರೆದ ದ್ವಾರಗಳಿಗಾಗಿ" ಅಂದರೆ, ಸುವಾರ್ತೆಯನ್ನು ಸಾರುವದಕ್ಕೆ ಅವಕಾಶಗಳಿಗಾಗಿ ಹುಡುಕುತ್ತಿದ್ದನು. ಸುವಾರ್ತೆಯನ್ನು ಸಾರುವದೇ ಆತನ ಅತಿದೊಡ್ಡ ಕರ್ತವ್ಯವಾಗಿತ್ತು; ಆದದರಿಂದ ಕಾರ್ಯಕ್ಕೆ ಅನುಕೂಲವಾದ ಅವಕಾಶ ವಿರುವ ಸ್ಥಳವನ್ನು ಬಿಟ್ಟು ಹೊಗುವದು ಸರಿಯೆಂದು ಅವನಿಗೆ ತೋಚಲಿಲ್ಲ.

ಪೌಲನಿಗೆ ಎಫೆಸದಲ್ಲಿದ್ದ "ಮಹಾ ಸಂದರ್ಭವು" ಅ.ಕೃತ್ಯ 19:8-12, 18-22 ರಲ್ಲಿ ಬಣ್ಣಿಸಲ್ಪಟ್ಟಿದೆ. ದ್ವಾರವನ್ನು ತೆರೆದದ್ದು ದೇವರೇ ಹೊರತು ಪೌಲನಲ್ಲ ಎಂಬದನ್ನು ಗಮನಿಸಿರಿ. ದ್ವಾರಗಳನ್ನು ತೆರೆಯುವದು ದೇವರ ಕೆಲಸ; ಅವು ಗಳನ್ನು ಹಾದು ಹೋಗುವದು ಮನುಷ್ಯನ ಕೆಲಸವಾಗಿದೆ.

ಈದಿನದಲ್ಲಿ ಕಾರ್ಯಕ್ಕೆ ಅನುಕೂಲವಾದ ಮಹಾಸಂದರ್ಭ ಯಾವು ದಾದರೂ ನಮಗಿರುತ್ತದೋ? ನಮ್ಮ ಸಭೆಗಾಗಿ? ನಾವು ಆ ಸಂದರ್ಭವನ್ನು ಉಪಯೋಗಿಸಿಕೊಳ್ಳುತ್ತಿದ್ದೇವೋ? ಪೌಲನು ತನಗೆ...ವಿರೋಧಿಗಳು ಬಹಳ ಮಂದಿ ಇದ್ದಾರೆ ಎಂದು ಪೌಲನು ಹೇಳುತ್ತಾನೆ (ವಚನ 9). ಅವಕಾಶವಿರುವಲೆಲ್ಲಾ ಅನೇಕ ವಿರೋಧಿಗಳು ಸಹ ಇದ್ದೇ ಇರುತ್ತಾರೆ. ಸೈತಾನನು ನಮ್ಮನ್ನು ಯಾವದೇ ತೆರೆದದ್ವಾರದ ಮೂಲಕ ಹಾದುಹೋಗದಂತೆ ತಡೆಯಲು ಸಾಧ್ಯವಾದಷ್ಟು ಪ್ರಯತ್ನಿಸುತ್ತಾನೆ. ಎಫೆಸದಲ್ಲಿ ಪೌಲನಿಗಿದ್ದ ಕೆಲವು ವಿರೋಧಿಗಳು ಅ.ಕೃತ್ಯ 19:23-24 ರಲ್ಲಿ ಪ್ರಸ್ತಾಪಿಸಲಾಗಿದೆ.

ಪೌಲನು ತಾನು ಪಂಚಾಶತ್ತಮದಿನದ ಹಬ್ಬದ ತನಕ ಎಫೆಸದಲ್ಲಿರಲು ಬಯಸುತ್ತಾನೆಂಬದಾಗಿ ಹೇಳುತ್ತಾನೆ. ಪಂಚಾಶತ್ತಮ ದಿನವು ಪಸ್ಕಹಬ್ಬದ ಕಡೇ ದಿನದಿಂದ ಐವತ್ತನೆಯ ದಿನದಲ್ಲಿ ಬರುತ್ತದೆ. ಯೇಸುವಿನ, ಮರಣಾನಂತರದ ಪ್ರಥಮ ಪಂಚಾಶತ್ತಮ ಹಬ್ಬದಂದೇ ಆತನ ಶಿಷ್ಯರು ಮೊದಲ ಬಾರಿಗೆ ಪವಿತ್ರಾತ್ಮನಿಂದ ತುಂಬಿಸಲ್ಪಟ್ಟಿದ್ದರು (ಅ.ಕೃತ್ಯ 2:1-4).

**10-11** ತಿಮೊಥೆಯನು ಪೌಲನ ಜೊತೆ ಕೆಲಸದವನಾಗಿದ್ದನು; ಪೌಲನು ಆತನನ್ನು ತನ್ನ ಆತ್ಮೀಕ ಮಗನೆಂದು ಪರಿಗಣಿಸಿದ್ದನು (ಅ.ಕೃತ್ಯ 16:1-5; 19:22; 1 ಕೊರಿಂಥ 4:17; ಫಿಲಿಪ್ಪಿ 2:22 ನೋಡಿರಿ).

**12** ಅಪೊಲ್ಲೋಸನು ಒಬ್ಬ ಶ್ರೇಷ್ಠ ಬೋಧಕನಾಗಿದ್ದನು ಮತ್ತು ಕೊರಿಂಥದಲ್ಲಿ ಪೌಲನ ಸ್ಥಾನವನ್ನು ವಹಿಸಿಕೊಂಡಿದ್ದನು (ಅ.ಕೃತ್ಯ 18:24-28). ಕೊರಿಂಥದವರಲ್ಲಿ ಕೆಲವರು ಆಸಕ್ತಿಯಿಂದ ಅಪೊಲ್ಲೋಸನನ್ನು ಹಿಂಬಾಲಿಸಲಾರಂಭಿಸಿದ್ದರು, ಮತ್ತು ಅದರ ಫಲಿತವಾಗಿ ಸಭೆಯಲ್ಲಿ ಭೇದವನ್ನು ಉಂಟುಮಾಡಿದ್ದರು (1 ಕೊರಿಂಥ 1:12). ಬಹುಶಃ ಅಪೊಲ್ಲೋಸನು ಆ ಸಮಯದಲ್ಲಿ ಕೊರಿಂಥಕ್ಕೆ ಹೋಗಲು ಬಯಸಲಿಲ್ಲ, ಯಾಕೆಂದರೆ ಆತನು ಅಲ್ಲಿದ್ದರೆ ಭೇದವು ಮತ್ತಷ್ಟು ಹೆಚ್ಚಾದೀತೆಂದು ಅಂಜಿದನು.

## ಅಂತಿಮ ಸಲಹೆಗಳು (16:13-24)

**13** 1 ಕೊರಿಂಥ 15:58; ಎಫೆಸ 6:10; 1 ಪೇತ್ರ 5:8-9 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

**14** ರೋಮ 13:8; 1 ಕೊರಿಂಥ 14:1; ಎಫೆಸ 5:2; ಕೊಲೊಸ್ಸೆ 3:14; 1 ಯೋಹಾನ 4:7, 11 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

**15-16** ಹೊಸ ಒಡಂಬಡಿಕೆಯ ಕಾಲದಲ್ಲಿ ಹಲವಾರು ವೇಳೆ ಇಡೀ ಕುಟುಂಬದವರು ಏಕ ಕಾಲದಲ್ಲಿ ಕ್ರಿಸ್ತನನ್ನು ನಂಬುತ್ತಿದ್ದರು (ಅ.ಕೃತ್ಯ 10:24, 48; 16:29-34 ನೋಡಿರಿ). ಸ್ತೆಫನನ ಮತ್ತು ಆತನ ಮನೆಯವರ ವಿಷಯದಲ್ಲಿ ಅದೇ ಜರುಗಿತ್ತು.

ಇರುವವರೆಲ್ಲರಿಗೂ ಒಳಗಾಗಬೇಕೆಂದು ಬೇಡಿಕೊಳ್ಳುತ್ತೇನೆ ಎಂದು ಪೌಲನು ಬರೆಯುತ್ತಾನೆ. ಪ್ರತಿಯೊಂದು ಸಭೆಯಲ್ಲಿಯೂ ಆತ್ಮೀಕ "ತಂದೆಗಳಂತೆ"ನಡೆದುಕೊಳ್ಳುವ ಸ್ತೆಫನನಂತಹ ಪರಿಪಕ್ವ ನಾಯಕರು ಸಭೆಯಲ್ಲಿ ಇರುತ್ತಾರೆ. ಅನೇಕ ಸಂದರ್ಭಗಳಲ್ಲಿ ಸ್ತೆಫನನಂತಹ ನಾಯಕರೇ ಕೆಲವೊಂದು ಸ್ಥಳದಲ್ಲಿ ಮೊದಲು ಕ್ರಿಸ್ತನ ವಿಶ್ವಾಸಿಯಾಗಿ ಮಾರ್ಪಟ್ಟಿರುತ್ತಾರೆ. ಅಥವಾ ಕೆಲವೊಂದು ಸಭೆಯಲ್ಲಿ ಅವರೇ ಪ್ರಥಮ ಸಭಾಪಾಲಕ ಅಥವಾ ಬೋಧಕರಾಗಿರುತ್ತಾರೆ. ಸಭೆಯ ಇತರ ಸದಸ್ಯರು ಈ ನಾಯಕರಿಗೆ ಒಳಗಾಗಿ ಅವರಿಗೆ ಮರ್ಯಾದೆ ಮತ್ತು ಸನ್ಮಾನವನ್ನು ಸಲ್ಲಿಸುವದು ಪ್ರಾಮುಖ್ಯವಾಗಿರುತ್ತದೆ (ಎಫೆಸ 5:21

ನೋಡಿರಿ). ಎಷ್ಟೋ ಸಾರಿ ನಾವು ಅಂತಹ ನಾಯಕರಿಗೆ ಮರ್ಯಾದೆಯನ್ನು ಸಲ್ಲಿಸುವದರ ಬದಲಾಗಿ ನಿಂದನೆ ಹಾಗು ವಿರೋಧವನ್ನು ಮಾಡುತ್ತೇವಲ್ಲವೇ[1] ಈ ದಿನಗಳಲ್ಲಿ ಯುವ ಹಾಗು ಬೆಳೆಯದ ಸದಸ್ಯರು ಹೆಚ್ಚು ಪರಿಪಕ್ವವುಳ್ಳ ಹಾಗು ಅನುಭವವುಳ್ಳ ಸದಸ್ಯರನ್ನು ಟೀಕಿಸುತ್ತಾ ವಾಗ್ದಾಳಿ ಮಾಡುವಂತದ್ದು ಸಭೆಗಳಲ್ಲಿ ಕಂಡು ಬರುವ ಸಾಮಾನ್ಯ ದೃಶ್ಯವಾಗಿರುತ್ತದೆ. ಅಂತಹ ಪರಿಪಕ್ವವಿಲ್ಲದ ಸದಸ್ಯರು ಸಭೆಗೆ ದೊಡ್ಡ ಹಾನಿಯನ್ನುಂಟು ಮಾಡುತ್ತಾರೆ. ಒಂದು ವೇಳೆ ನಾವು ಸ್ವತಃ ನಮ್ಮ ಯಾವದೇ ನಾಯಕರನ್ನು ವಿರೋಧಿಸಿದ್ದರೆ ಶೀಘ್ರವೇ ಅದಕ್ಕಾಗಿ ಪಶ್ಚಾತಾಪ ಪಟ್ಟು ದೇವರಲ್ಲಿ ಕ್ಷಮೆಯನ್ನು ಕೇಳಿಕೊಳ್ಳೋಣ.

**17-18** ಸ್ತೆಫನ ಹಾಗು ಆತನ ಇಬ್ಬರು ಸಹಪಾಠಿಗಳಾದ ಫೊರ್ತುನಾತ ಮತ್ತು ಅಖಾಯಿಕನು ಕೊರಿಂಥದಲ್ಲಿನ ಸಭೆಯಿಂದ ಒಂದು ಪತ್ರವನ್ನು ತೆಗೆದುಕೊಂಡು ಪೌಲನ ಬಳಿಗೆ ಬಂದಿದ್ದರು, ಆ ಪತ್ರಿಕೆಯಲ್ಲಿ ಕೊರಿಂಥದವರು ವಿವಾಹ ಹಾಗು ವಿಗ್ರಹಕ್ಕೆ ಅರ್ಪಿತವಾದ ಆಹಾರಗಳಂತ ವಿಷಯದ ಕುರಿತಾಗಿ ವಿವಿಧ ಪ್ರಶ್ನೆಗಳನ್ನು ಕೇಳಿದ್ದರು (1 ಕೊರಿಂಥ 7:1). ಪೌಲನು ಅವರ ಪ್ರಶ್ನೆಗಳಿಗೆ ಈ ಕೊರಿಂಥದವರಿಗೆ ಬರೆದ ಮೊದಲನೆಯ ಪತ್ರಿಕೆಯಲ್ಲಿ ಉತ್ತರಿಸಿರುತ್ತಾನೆ. ಸ್ತೆಫನ ಹಾಗು ಆತನ ಸಹಪಾಠಿಗಳು ಸ್ವತಃ ಕೊರಿಂಥದವರಾಗಿದ್ದರು. ಅವರು ಪೌಲನ ಬಳಿಗೆ ಬರುವದರ ಮೂಲಕ ಕೊರತೆಯನ್ನು ನೀಗಿಸಿದ್ದರು – ಅಂದರೆ, ವಯಕ್ತಿಕ ಅನ್ಯೋನ್ಯತೆ ಮತ್ತು ಪೌಲನಿಗೆ ಪತ್ರದಲ್ಲಿ ಬರೆದಿದ್ದ ಕೊರಿಂಥದಲ್ಲಿನ ಸಭೆಯ ಕುರಿತಾದ ಹೆಚ್ಚು ವರದಿಯನ್ನು ಸಲ್ಲಿಸಿದ್ದರು. ಈ ಮೂವರು ಪೌಲನ ಆತ್ಮವನ್ನು ಉಪಶಮನ ಮಾಡಿದರು.

**19** ರೋಮ 16:3-5 ಮತ್ತು ವ್ಯಾಖ್ಯಾನ ನೋಡಿರಿ.

**20** ರೋಮ 16:16 ಮತ್ತು ವ್ಯಾಖ್ಯಾನ ನೋಡಿರಿ.

**21** ಪೌಲನು ಪದ್ಧತಿಯಂತೆ ಗುಮಾಸ್ತನ ಕೈಯಲ್ಲಿ ತನ್ನ ಪತ್ರಿಕೆಗಳನ್ನು ಹೇಳಿಬರೆಸುತ್ತಿದ್ದನು (ರೋಮ 16:22). ಹೇಗಿದ್ದರೂ, ಪೌಲನು ಈ ಪತ್ರಿಕೆಯ ಕೊನೆಯನಾಲ್ಕು ವಚನಗಳನ್ನು ತನ್ನ ಕೈಯಿಂದ ಬರೆದನು. ಆತನು ಸ್ವತಃ ತಾನೇ ಈ ಪತ್ರಿಕೆಯ ಗ್ರಂಥಕರ್ತನೆಂಬದನ್ನು ಕೊರಿಂಥದವರಿಗೆ ನಿರೂಪಿಸುವದಕ್ಕಾಗಿ ಹೀಗೆ ಮಾಡಿದನು (2 ಥೆಸಲೋನಿಕ 3:17 ನೋಡಿರಿ).

**22** ಕರ್ತನನ್ನು ಹೊಂದಿರದವರು ಶಾಪಗ್ರಸ್ತರು;ಅಂದರೆ, ಅವರು ತಮ್ಮನ್ನು ಕರ್ತನಿಂದ ಬೇರ್ಪಡಿಸಿಕೊಂಡಿದ್ದಾರೆ ಕರ್ತನನ್ನು ಪ್ರೀತಿಸದವರು ಆತನ ಆಜ್ಞೆಗಳನ್ನು ಕೈಕೊಂಡು ನಡೆಯದವರೇ (ಯೋಹಾನ 14:15, 23-24). ಕೊರಿಂಥದವರಲ್ಲಿ ಕೆಲವರು ತಮ್ಮ ಅವಿಧೇಯತೆಯ ಮೂಲಕವಾಗಿ ತಾವು ಕರ್ತನನ್ನು ಪ್ರೀತಿಸುವದಿಲ್ಲ ಎಂಬದನ್ನು ತೋರಿಸಿದ್ದಾರೆ. ಅವರು ಎಚ್ಚರಿಸಲ್ಪಡಲಿ: ಕರ್ತನು ಬೇಗನೆ ಮತ್ತು ಎಲ್ಲಾ ಮನುಷ್ಯರಿಗೂ ತೀರ್ಪುಮಾಡುತ್ತಾನೆ. ಆತನನ್ನು ಪ್ರೀತಿಸದವರು ದಂಡನೆಗೊಳಗಾಗುವರು – ಶಾಪಗ್ರಸ್ತರಾಗುವರು.

**23** ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮೊಂದಿಗಿರಲಿ. ಕರ್ತನಕೃಪೆಯು ಆತನ ಕರುಣೆ, ಆತನ ಪ್ರೀತಿ, ಪವಿತ್ರಾತ್ಮನ ಫಲಗಳು, ಮತ್ತು ಪವಿತ್ರಾತ್ಮನ ಶಕ್ತಿಗಳನ್ನು ಒಳಗೊಂಡಿರುತ್ತದೆ. ನಾವು ನಮಗಾಗಿಯೂ ಇತರರಿಗಾಗಿಯೂ ಕರ್ತನ ಕೃಪೆಯು ದೊರೆಯ ಬೇಕೆಂದು ಪ್ರಾರ್ಥಿಸುವಾಗ ಈ ಎಲ್ಲಾ ಸಂಗತಿಗಳು ನಮಗೆ ಅನುಗ್ರಹಿಸಲ್ಪಡುತ್ತದೆ. ಇದು ನಮ್ಮೆಲ್ಲರ ಅನುಭವವಾಗಿರಲಿ!

**24** ಪೌಲನು ಕೊರಿಂಥದ ಕ್ರೈಸ್ತರಿಗೆ ಅನೇಕ ಕಠಿಣವಾದ ಎಚ್ಚರಿಕೆಗಳನ್ನೂ ಗದರಿಕೆಗಳನ್ನೂ ನೀಡಬೇಕಾಗಿ ಬಂದಿದ್ದರೂ ಆತನು ಆಗಲೂ ಅವರ ಮೇಲೆ ಕ್ರಿಸ್ತ ಯೇಸುವಿನಲ್ಲಿ ಮಹಾ ಪ್ರೀತಿಯನ್ನಿಟ್ಟಿದ್ದಾನೆ. ಪೌಲನು ಅವರನ್ನು ಆತ್ಮೀಕ ಪ್ರೀತಿಯಿಂದ ಪ್ರೀತಿಸುತ್ತಾನೆ. ಅಂದರೆ, ಆತನು ಅವರನ್ನು ಕ್ರಿಸ್ತನು ತನಗೆ ನೀಡಿದ ಆತನ ಪ್ರೀತಿಯಿಂದಲೇ ಪ್ರೀತಿಸುತ್ತಾನೆ. ಮತ್ತು ಹೀಗೆ ಪೌಲನು ಕೊರಿಂಥದವರಿಗಾಗಿ ತನಗಿರುವ ಪ್ರೀತಿಯ ಕುರಿತು ಯೋಚಿಸುತ್ತಾ ಈ ಶ್ರೇಷ್ಠ ಪತ್ರಿಕೆಯನ್ನು ಮುಕ್ತಾಯ ಮಾಡುತ್ತಾನೆ.

---

## ಟಿಪ್ಪಣಿ

[1] ಗ್ರೀಸ್ ಇಂದು ದಕ್ಷಿಣ ಐರೋಪ್ಯದ ಒಂದು ಪ್ರಾಮುಖ್ಯ ರಾಷ್ಟ್ರವಾಗಿದೆ. ಹೊಸ ಒಡಂಬಡಿಕೆಯ ಕಾಲದಲ್ಲಿ ಗ್ರೀಸ್ ರೋಮಾಯ ಸಾಮ್ರಾಜ್ಯದ ಒಂದು ಭಾಗವಾಗಿತ್ತು. ಅದಕ್ಕೆ ಮುನ್ನ ಗ್ರೀಸ್ ಪಾಶ್ಚಾತ್ಯಜಗತ್ತಿನಲ್ಲಿ ಪ್ರಮುಖ ಶಕ್ತಿಯಾಗಿದ್ದು ಪಾಶ್ಚಾತ್ಯನಾಗರೀಕತೆಯ ಉಗಮ ಸ್ಥಾನವೂ ಆಗಿತ್ತು.

[2] ಈ ಸನ್ನಿವೇಶದಲ್ಲಿ ಲೋಕ ಎಂಬ ಪದವು "ಲೋಕದ ಅವಿಶ್ವಾಸಿಗಳು" ಎಂಬ ಅರ್ಥವನ್ನು ನೀಡುತ್ತದೆ.

[4] ಇಲ್ಲಿ ಗ್ರೀಕರು ಗ್ರೀಸಿನ ನಿವಾಸಿಗಳನ್ನು ಮಾತ್ರವಲ್ಲ, ಆದರೆ ಎಲ್ಲಾ ಅನ್ಯ ಜನರನ್ನೂ ಅಥವಾ ಯೆಹೂದ್ಯೇತರರನ್ನೂ "ಒಳಗೊಂಡಿರುತ್ತಾರೆ. ಹೊಸ ಒಡಂಬಡಿಕೆಯ ಕಾಲದಲ್ಲಿ "ಗ್ರೀಕರು" ಎಂಬ ಪದವು ಹಲವಾರು ವೇಳೆ ಅನ್ಯಜನರನ್ನು ಸೂಚಿಸಲು ಉಪಯೋಗಿಸಲ್ಪಟ್ಟಿದೆ.

[5] ದೇವರ ಕುರಿತ ಸಾಕ್ಷಿಯನ್ನು ಎಂಬ ಪದಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು " ದೇವರ ಮರ್ಮವನ್ನು" ಎಂದು ಹೇಳುತ್ತವೆ, ಅದು ಮೂಲ ಗ್ರೀಕ್ ಪ್ರತಿಯ ಹೆಚ್ಚು ಅಕ್ಷರಂಶ: ಭಾಷಾಂತರವಾಗಿದೆ. ಅರ್ಥವು ಒಂದೇ ಆಗಿದೆ.

[6] ಪ್ರಾಪಂಚಿಕರು ಎಂಬ ಪದಕ್ಕೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಪಾಕೃತರು" ಅಥವಾ "ಶರೀರ ಭಾವದವರು" ಎಂದು ಹೇಳುತ್ತವೆ. ಅರ್ಥವು ಒಂದೇ ಆಗಿದೆ.

7 ಪರಲೋಕದಲ್ಲಿ ನಾವು ನಮ್ಮ ಕೆಲಸ ಅಥವಾ ಪ್ರಯಾಸಕ್ಕೆ ತಕ್ಕ ಹಾಗೆ ಪ್ರತಿಫಲವನ್ನು ಪಡೆಯುವೆವು ; ಆದರೆ ರಕ್ಷಣೆಯನ್ನು ನಾವು ನಂಬಿಕೆಯ ಮೂಲಕ ಮಾತ್ರವೇ ಪಡೆಯುತ್ತೇವೆ (ಮತ್ತಾಯ 16:27; ಎಫೆಸ 2:8-9, 2 ಕೊರಿಂಥ 10 ಮತ್ತು ವ್ಯಾಖ್ಯಾನಗಳನ್ನು; ಸಾಮಾನ್ಯ ಲೇಖನ: ರಕ್ಷಣೆಯ ಮಾರ್ಗ ನೋಡಿರಿ).

8 ಕ್ರಿಸ್ತನ ಸಾರ್ವತ್ರಿಕ ಸಭೆಯನ್ನು ಕೆಡಿಸಲು ಸಾಧ್ಯವಿಲ್ಲ, ಆದರೆ ಸ್ಥಳೀಯ ಸಭೆಯು ಅದರ ಸದಸ್ಯರ ಪಾಪಗಳ ಮುಖಾಂತರ ಕೆಡಿಸಲ್ಪಡಬಹುದು.

9 ಪೋಷಕ ಎಂಬ ಪದದ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಉಪದೇಶಕ" ಎಂದು ಹೇಳುತ್ತವೆ. ಆದರೆ ಪೋಷಕ ಎಂಬ ಪದವು ಪೌಲನ ಅರ್ಥಕ್ಕೆ ಉತ್ತಮವಾಗಿ ಹೊಂದಿಕೊಳ್ಳುತ್ತದೆ.

10 ಪೌಲನು ಒಬ್ಬ ಅಪೊಸ್ತಲನಾಗಿ ಈ ನಿರ್ದಿಷ್ಟವಾದ ಪರಿಸ್ಥಿತಿಯಲ್ಲಿ ತೀರ್ಪನ್ನು ಮಾಡುವದಕ್ಕೆ ಕ್ರಿಸ್ತನಿಂದ ವಿಶೇಷ ಅಧಿಕಾರವನ್ನು ಪಡೆದುಕೊಂಡಿದ್ದನೆಂದು ಕೆಲವರು ನಂಬುತ್ತಾರೆ. ಅಂತಹ ಅಧಿಕಾರವು ಸಾಮಾನ್ಯ ಕ್ರೈಸ್ತರಿಗೆ ಕೊಡಲ್ಪಡುವದಿಲ್ಲ ವೆಂದು ಇವರು ಹೇಳುತ್ತಾರೆ. ಹೇಗಿದ್ದರೂ, ಇತರ ಕ್ರೈಸ್ತರು ಮಾಡಬಾರದೆಂದು ನಿಷೇದಿಸಲ್ಪಟ್ಟಿರುವ ಸಂಗತಿಗಳನ್ನು ಮಾಡುವದಕ್ಕೆ ಅಪೊಸ್ತಲರಿಗೆ ಅಧಿಕಾರ ಕೊಡಲ್ಪಟ್ಟಿದೆ ಎಂಬ ವಿಚಾರಕ್ಕೆ ಬೆಂಬಲ ನೀಡುವ ಯಾವ ಸಂಗತಿಯು ಹೊಸ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿರುವದಿಲ್ಲ ಎಂದು ಇತರರು ಹೇಳುತ್ತಾರೆ,. ಅಪೊಸ್ತಲರಿಗೆ ವಿಶೇಷ ಅಧಿಕಾರ ಕೊಡಲ್ಪಟ್ಟಿರುವದೆಂಬದು ನಿಜವೇ (ಮತ್ತಾಯ 16:19; ಯೋಹಾನ 20:23), ಆದರೆ ಕ್ರಿಸ್ತನ ಆಜ್ಞೆಗಳನ್ನು ಉಲ್ಲಂಘಿಸುವ ಅಧಿಕಾರವಲ್ಲ.

11 ಪಾಪಾಧೀನ ಸ್ವಭಾವ ಎಂಬ ಪದಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಶರೀರಭಾವ" ಎಂದು ಹೇಳುತ್ತವೆ, ಅದು ಮೂಲ ಗ್ರೀಕ್ ಪ್ರತಿಯ ಅಕ್ಷರಂಶಃ ಭಾಷಾಂತರವಾಗಿದೆ ಪೌಲನು "ಶರೀರಭಾವ" ಎಂಬ ಗ್ರೀಕ್ ಪದವನ್ನು ರೀತಿಗಳಲ್ಲಿ ಉಪಯೋಗಿಸುತ್ತಾನೆ: ಮೊದಲನೆಯದಾಗಿ, ಆತನು ಅದನ್ನು "ದೇಹ" ಎಂಬ ಅರ್ಥದಲ್ಲಿ ಉಯೋಗಿಸುತ್ತಾನೆ. ದೇಹವು ಸ್ವತಃ ಪಾಪಮಯವಲ್ಲ; ಮತ್ತು ಎರಡನೆಯದಾಗಿ, ಆತನು ಈ ವಚನದಲ್ಲಿರುವ ಹಾಗೆ "ಪಾಪಾಧೀನ ಸ್ವಭಾವ " ಎಂಬ ಅರ್ಥದಲ್ಲಿ ಅದನ್ನು ಉಪಯೋಗಿಸುತ್ತಾನೆ. ಹೆಚ್ಚಿನ ಚರ್ಚೆಗಾಗಿ, ರೋಮ 7:5ರ ವ್ಯಾಖ್ಯಾನಕ್ಕೆ ನೀಡಿರುವ ಅಡಿ ಟಿಪ್ಪಣಿ; ಪದಪಟ್ಟಿ: ಶರೀರಭಾವ ನೋಡಿರಿ.

12 ಈ ವಾಕ್ಯಭಾಗದಲ್ಲಿ ನಾವು ವ್ಯಕ್ತಿಯ ಪಾಪಕ್ಕೆ ಸಂಬಂಧಿಸಿದ ಶರತ್ತುಗಳ ಕುರಿತಾಗಿ ಮಾತ್ರವೇ ಮಾತಾಡುತ್ತಿದ್ದೇವೆ. ಹೇಗಿದ್ದರೂ, ಒಬ್ಬ ವ್ಯಕ್ತಿಯು ಸಭೆಯಿಂದ ಬಹಿಷರಿಸಲ್ಪಡುವದಕ್ಕೆ ಮುನ್ನ ಸಭೆಯ ಕಡೆಯಲ್ಲಿ ಸಹ ಎರಡು ಶರತ್ತುಗಳ ಅವಶ್ಯಕತೆಯಿರುತ್ತದೆ. ಈ ಎರಡು ಶರತ್ತುಗಳು 4ನೇ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿವೆ: ಸಭೆಯು ಕರ್ತನಾದ ಯೇಸುವಿನ ಹೆಸರಿನಲ್ಲಿ – ಅಂದರೆ, ಏಕ ಮನಸ್ಸಿನಿಂದಲೂ, ಯೇಸುವಿನ ಚಿತ್ತಕ್ಕನುಗುಣವಾಗಿಯೂ – ಕೂಡಿಬಂದಿರಬೇಕು; ಮತ್ತು ಎರಡನೆಯದಾಗಿ, ಕರ್ತನ ಯೇಸುವಿನ ಸಾಮರ್ಥ್ಯವು ಹಾಜರಿರಬೇಕು. ಒಂದು ವೇಳೆ ಈ ಎರಡು ಶರತ್ತುಗಳು ಇಲ್ಲದಿರುವದಾದರೆ ಸಭೆಯು ಅಂತಹ ಕಠಿಣ ಕ್ರಮವನ್ನು ತೆಗೆದು ಕೊಳ್ಳಬಾರದು.

13 ಪಸ್ಕ ಹಬ್ಬವು ಹುಳಿಯಿಲ್ಲದ ರೊಟ್ಟಿಯ ಹಬ್ಬವೆಂದು ಸಹ ಕರೆಯಲ್ಪಡುತ್ತದೆ.

14 ಈ ಹೇಳಿಕೆಯು 1 ಕೊರಿಂಥ 5:12-13ರಲ್ಲಿನ ಪೌಲನ ಹೇಳಿಕೆಗೆ ತದ್ವಿರುದ್ಧವಾಗಿರುವಂತೆ ತೋರುತ್ತದೆ, ಅಲ್ಲಿ ಆತನು ಸಭೆಯ ಹೊರಗಿನವರನ್ನು ಕುರಿತು ತೀರ್ಪು ಮಾಡುವದು ವಿಶ್ವಾಸಿಗಳ ಕೆಲಸವಲ್ಲ...ಹೊರಗಿನವರನ್ನು ಕುರಿತು ತೀರ್ಪು ಮಾಡುವವನು. ದೇವರು ಎಂದು ಹೇಳುತ್ತಾನೆ. ಆದರೆ ೫ನೇ ಅಧ್ಯಾಯದಲ್ಲಿ ಪೌಲನು ಮುಖ್ಯವಾಗಿ ಕಡೇ ನ್ಯಾಯತೀರ್ಪನ್ನು ಕುರಿತು ಮಾತಾಡುತ್ತಿಲ್ಲ ಆದರೆ ಬದಲಾಗಿ ಭೂಲೋಕದಲ್ಲಿ ಜನರಿಗೆ ತೀರ್ಪು ಮಾಡುವದರ ಕುರಿತಾಗಿ ಮಾತಾಡುತ್ತಿದ್ದಾನೆ. ೬ನೇ ಅಧ್ಯಾಯದಲ್ಲಾದರೋ ಪೌಲನು ಲೋಕಾಂತ್ಯದಲ್ಲಿನ ಕಡೇ ನ್ಯಾಯತೀರ್ಪಿನ ಬಗ್ಗೆ ಮಾತ್ರವೇ ಮಾತಾಡುತ್ತಿದ್ದಾನೆ. ಖಂಡಿತವಾಗಿಯೂ, ಕಡೇ ನ್ಯಾಯತೀರ್ಪಿನಲ್ಲಿ ದೇವರೇ "ಮುಖ್ಯ" ನ್ಯಾಯಾಧಿಪತಿಯಾಗಿರುವನು. ಆದರೆ ದೇವರು ನ್ಯಾಯತೀರ್ಪು ಮಾಡುವ ಕೆಲಸವನ್ನು ಕ್ರಿಸ್ತನಿಗೆ ಒಪ್ಪಿಸಿದ್ದಾನೆ (ಯೋಹಾನ 5:22); ಮತ್ತು ಕ್ರಿಸ್ತನು ಒಂದು ವಿಧದಲ್ಲಿ ವಿಶ್ವಾಸಿಗಳಿಗೆ ಆ ಕೆಲಸದಲ್ಲಿ ಪಾಲು ನೀಡುತ್ತಾನೆ. ಹಾಗಾದರೆ ಈ ಅರ್ಥದಲ್ಲಿಯೇ ನಾವು ಲೋಕಕ್ಕೆ ತೀರ್ಪು ಮಾಡುವೆವು.

15 ಈ ವಚನದ ಗ್ರೀಕ್ ಪ್ರತಿಯನ್ನು ಅರ್ಥಮಾಡಿಕೊಳ್ಳಲು ಕಷ್ಟಕರವಾಗಿರುತ್ತದೆ. ಇಲ್ಲಿ ಪೌಲನ ತಾತ್ಪರ್ಯದ ಕುರಿತಾಗಿ ಬೈಬಲ್ ಪಂಡಿತರು ಎರಡು ಮುಖ್ಯ ಅಭಿಪ್ರಾಯಗಳನ್ನು ಹೊಂದಿದ್ದಾರೆ. ಈ ವಚನದ ಮೇಲಿನ ಯಾವದೇ ವ್ಯಾಖ್ಯಾನವು ಒಬ್ಬನು ಬೈಬಲಿನ ಯಾವ ಆವೃತ್ತಿಯನ್ನು ಉಪಯೋಗಿಸುತ್ತಿದ್ದಾನೆಂಬುದರ ಮೇಲೆ ಆಧಾರವಾಗಿರುತ್ತದೆ.

ಅರ್ಥದಲ್ಲಿನ ಮುಖ್ಯ ವ್ಯತ್ಯಾಸವು ಪೌಲನು ಇಲ್ಲಿ ಪ್ರಶ್ನೆಯನ್ನು ಕೇಳುತ್ತಿದ್ದಾನೋ ಅಥವಾ ಆಜ್ಞೆ ನೀಡುತ್ತಿದ್ದಾನೋ ಎಂಬದರ ವಿಷಯದಲ್ಲಿರುತ್ತದೆ. ಈ ವ್ಯಾಖ್ಯಾನ ಗ್ರಂಥದಲ್ಲಿ ಉಪಯೋಗಿಸಲಾಗಿರುವ ಆವೃತ್ತಿಯು ಪೌಲನ ಮಾತುಗಳನ್ನು ಒಂದು ಆಜ್ಞೆಯಾಗಿ ಭಾಷಾಂತರಿಸುತ್ತದೆ: ...ತೀರ್ಪು ಮಾಡುವದಕ್ಕೆ ಸಭೆಯಲ್ಲಿ ಗಣನೆಗೆ ಬಾರದವರನ್ನು ಕುಳ್ಳಿರಿಸಿಕೊಳ್ಳಿರಿ (ನೇಮಿಸಿಕೊಳ್ಳಿರಿ).

ಹೇಗಿದ್ದರೂ, ಇತರ ಆವೃತ್ತಿಗಳು ಅದೇ ಮಾತುಗಳನ್ನು ಹೀಗೆ ಭಾಷಾಂತರಿಸುತ್ತವೆ:.."ಆ ಕಾರ್ಯಗಳು ನಿಮ್ಮಲ್ಲಿದ್ದರೆ ತೀರ್ಪು ಮಾಡುವದಕ್ಕೆ ಸಭೆಯಲ್ಲಿ ಗಣನೆಗೆ ಬಾರದವರನ್ನು ಕುಳ್ಳಿರಿಸಿಕೊಳ್ಳುತ್ತೀರೋ?" ಒಂದು ವೇಳೆ ಈ ಎರಡನೆಯ ಭಾಷಾಂತರವನ್ನು ಆರಿಸಿಕೊಳ್ಳುವದಾದರೆ ಈ ಗಣನೆಗೆ ಬಾರದವರು ವಿಶ್ವಾಸಿಗಳಾಗಿರುವದಿಲ್ಲ, ಆದರೆ ಸಭೆಯ ಹೊರಗಿನ ಕ್ರಿಸ್ತಭಕ್ತರಲ್ಲದ ನ್ಯಾಯವಾದಿಗಳಾಗಿದ್ದಾರೆ. ಈ ಎರಡನೆಯ ಭಾಷಾಂತರಕ್ಕನುಗುಣವಾಗಿ ಪೌಲನ ತಾತ್ಪರ್ಯವು ಕೊರಿಂಥದವರು ವ್ಯಾಜ್ಯಗಳನ್ನು ಈ ಭಕ್ತರಲ್ಲದ ನ್ಯಾಯ ವಾದಿಗಳ ಮುಂದೆ ತರುವವರಾಗಿರಬಾರದು ಎಂಬುದೇ. ಹೀಗೆ, ಒಬ್ಬನು ಈ ಎರಡರಲ್ಲಿ ಯಾವ ಭಾಷಾಂತರವನ್ನು ಆರಿಸಿಕೊಂಡರೂ ಪೌಲನು ಹೇಳಬಯಸುವ ವಿಷಯವು ಒಂದೇ ಆಗಿದೆ.

16 ಕ್ರೈಸ್ತ ದಂಪತಿಗಳು ಒಬ್ಬರಿಗೊಬ್ಬರು ಸಾರ್ವಜನಿಕ ನ್ಯಾಯ ಸಭೆಯಲ್ಲಿ ವಿಚ್ಛೇದನ ನೀಡುವದಾದರೆ ದೇವರಿಗೆ ಎಷ್ಟು ಇಮ್ಮಡಿಯಾಗಿ ಬೇಸರವಾಗುವದೆಂದು ಯೋಚಿಸಿರಿ!

17 ವಿವಾಹವಾಗದೆ ಎಂಬ ಮಾತುಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು 'ಸ್ತ್ರೀಸಂಪರ್ಕವಿಲ್ಲದೆ' ಎಂದು ಹೇಳುತ್ತವೆ, ಇದು ಮೂಲ ಗ್ರೀಕ್ ಪ್ರತಿಯ ಅಕ್ಷರಂಶಃ ಭಾಷಾಂತರವಾಗಿದೆ. ಅರ್ಥವು ಒಂದೇ ಆಗಿದೆ.

18 ಅನೇಕ ಜನರು ಹೆಂಡತಿಯ ಮುಟ್ಟಿನ ದಿನಗಳಲ್ಲಿ ಲೈಂಗೀಕ ಸಂಪರ್ಕದಿಂದ ದೂರವಿರಬೇಕೆಂದು ನಂಬುತ್ತಾನೆ (ಯಾಜಕಕಾಂಡ 15;19, 24; 18:19). ಹೇಗಿದ್ದರೂ, ಈ ವೇಳೆಯಲ್ಲಿ ಗಂಡಹೆಂಡತಿಯರು ಬೇರ್ಪಟ್ಟು ಇರಬೇಕೆಂದು ಇದರ ಅರ್ಥವಾಗಿರುವದಿಲ್ಲ.

ಅಷ್ಟು ಮಾತ್ರವಲ್ಲದೆ ಹೆಂಡತಿಯ ಮುಟ್ಟಿನ ದಿನಗಳಲ್ಲಿ ಸಂಸರ್ಗ ಮಾಡಬಾರದೆಂಬ ವಿಷಯದಲ್ಲಿನ ಹಳೆ ಒಡಂಬಡಿಕೆಯ ನಿಯಮಗಳಿಗೆ ಕ್ರೈಸ್ತರು ಒಳಪಟ್ಟಿಲ್ಲ. ಆ ನಿಯಮಗಳು ಯೆಹೂದ್ಯರ ಶುದ್ಧತೆಯ ನಿಯಮಗಳಲ್ಲಿರುತ್ತವೆ, ಅವು ಗಳನ್ನು ಕ್ರಿಸ್ತನು ನಿವೃತ್ತಿಮಾಡಿರುತ್ತಾನೆ.

19 ಕಡ್ಡಾಯವಾದ ಸೇನಾ ಸೇವೆಯ ವಿಷಯದಲ್ಲಾದರೋ ಖಂಡಿತವಾಗಿಯೂ ಗಂಡನು ನೇಮಕವಾದ ಅವಧಿಯಲ್ಲಿ ಸೇವೆಯನ್ನು ಮಾಡಲೇಬೇಕು. ಹೇಗಿದ್ದರೂ, ಅನೇಕ ಸಂದರ್ಭಗಳಲ್ಲಿ ಯುವಕರು ಆರ್ಥಿಕ ಕಾರಣಗಳಿಗಾಗಿ ಸ್ವಂತ ಇಷ್ಟದಿಂದ ಸೇನಾಸೇವೆಗೆ ಸೇರಿಕೊಳ್ಳುತ್ತಾರೆ. ಈ ವಿಷಯದಲ್ಲಿ ಯುವ ಕ್ರೈಸ್ತ ಗಂಡನು ಅಂತಹ ತೀರ್ಮಾನವನ್ನು ಮಾಡುವದಕ್ಕೆ ಮುಂಚೆ ದೇವರಿಂದ ಬಹಳ ಸ್ಪಷ್ಟವಾದ ಮಾರ್ಗದರ್ಶನವನ್ನು ಹೊಂದತಕ್ಕದ್ದು. ಆರ್ಥಿಕ ಲಾಭಕ್ಕಾಗಿ ಪು ರುಷನೊಬ್ಬನು ತನ್ನ ದಾಂಪತ್ಯವನ್ನು ಸಂಕಷ್ಟಗೊಳಪಡಿಸುವದು ಎಂದಿಗೂ ದೇವರ ಚಿತ್ತವಾಗಿರಲಾರದು. ಹೆಚ್ಚು ವೇತನವು ಳ್ಳ ಉದ್ಯೋಗವೊಂದಕ್ಕೋಸ್ಕರ ತನ್ನ ಹೆಂಡತಿಯನ್ನು ಬಿಟ್ಟು ದೂರ ಹೋಗುವ ಗಂಡನ ವಿಷಯದಲ್ಲಿಯೂ ಇದು ಅಷ್ಟು ಸತ್ಯವಾದದ್ದು; ಸಂಪೂರ್ಣವಾಗಿ ಅತ್ಯವಶ್ಯಕವಾಗಿದ್ದರೆ ಮಾತ್ರವೇ ಕ್ರೈಸ್ತ ಗಂಡನೊಬ್ಬನು ಇದನ್ನು ಪರಿಗಣನೆಗೆ ತಂದುಕೊಳ್ಳಬೇಕಷ್ಟೇ.

20 ಅವಿವಾಹಿತರು ಎಂಬ ಪದವು ವಿಛ್ಛೇದನ ನೀಡಿರುವವರು ಎಂಬ ಅರ್ಥವನ್ನು ಸಹ ನೀಡಬಲ್ಲದ್ದರಿಂದ ಪೌಲನು 9ನೇ ವಚನದಲ್ಲಿ ವಿಛ್ಛೇದನ ಹೊಂದಿರುವ ಜನರು ಕೆಲವೊಂದು ಪರಿಸ್ಥಿತಿಗಳಲ್ಲಿ ಮರುವಿವಾಹವಾಗುವದರಲ್ಲಿ ತಪ್ಪೇನಿಲ್ಲ ಎಂದು ಬೋಧಿಸುತ್ತಿದ್ದಾನೆಂದು ಕೆಲವು ಕ್ರೈಸ್ತ ಪಂಡಿತರು ನಂಬುತ್ತಾರೆ. ಹೇಗಿದ್ದರೂ, 11ನೇ ವಚನದಲ್ಲಿ ಪೌಲನು ವಿಛ್ಛೇದನ ಹೊಂದಿರುವ ಸ್ತ್ರೀಯು ಅವಿವಾಹಿತಳಾಗಿ ಉಳಿಯಬೇಕು ಇಲ್ಲವೆ ಗಂಡನ ಸಂಗಡ ಸಮಾಧಾನವಾಗಬೇಕು ಎಂದು ಹೇಳುತ್ತಾನೆ (ಮತ್ತಾಯ 5:32; ಮಾರ್ಕ 10:6-12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

21 ವಿಛ್ಛೇದನ ಹೊಂದಿರುವ ವ್ಯಕ್ತಿಯನ್ನು ಮರುವಿವಾಹವಾಗುವಂತೆ ಅನುಮತಿಸುವ ಇನ್ನಿತರ ಶರತ್ತುಗಳೂ ಇರುತ್ತವೆಂದು ಕೆಲವು ಕ್ರೈಸ್ತರು ಹೇಳುತ್ತಾರೆ. ಒಂದು ಸಾಧ್ಯತೆಯ ಶರತ್ತು 15ನೇ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಹೇಗಿದ್ದರೂ, ಈ ಇತರ ಶರತ್ತುಗಳು ಬೈಬಲಿನಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿರುವದಿಲ್ಲ. ನಾವು ಕೋರುವದನ್ನು ಹೇಳುವಂತೆ ಮಾಡುವದಕ್ಕೆ ವಾಕ್ಯಗಳನ್ನು ನಾವು ಬಗ್ಗಿಸಬಾರದು. ಹೇಗಿದ್ದರೂ, ವಿಷಯವು ಕ್ಲೀಷ್ಠಕರವಾಗಿದ್ದು ಪ್ರಾಮಾಣಿಕ ಕ್ರೈಸ್ತ ಪಂಡಿತರು ಈ ವಿಷಯದಲ್ಲಿ ವ್ಯತ್ಯಾಸವಾದ ಅಭಿಪ್ರಾಯಗಳನ್ನು ಹೊಂದಿರುತ್ತಾರೆ. ಹೆಚ್ಚಿನ ಚರ್ಚೆಗಾಗಿ ಸಾಮಾನ್ಯ ಲೇಖನ: ಕ್ರೈಸ್ತೀಯ ವಿವಾಹ ನೋಡಿರಿ.

22 ನಾವು ಕ್ರೈಸ್ತರಾದ ಬಳಿಕ ನಮ್ಮ ಸಾಮಾಜಿಕ ಮತ್ತು ಹಣಕಾಸಿನ ಪರಿಸ್ಥಿತಿಯ ಹಲವಾರು ವೇಳೆಗಳಲ್ಲಿ ಸುಧಾರಿಸುವದು, ಆದರೆ ಎಲ್ಲಾ ವೇಳೆಗಳಲ್ಲಲ್ಲ. ದೇವರು ಕೆಲವು ವೇಳೆಗಳಲ್ಲಿ ನಮಗೆ ಶ್ರೇಷ್ಠವಾದ ಆತ್ಮೀಕ ಆಶೀರ್ವಾದಗಳನ್ನು ನೀಡುವದಕ್ಕಾಗಿ ಭೌತೀಕ ಆಶೀರ್ವಾದಗಳನ್ನು ನಮ್ಮಿಂದ ತಡೆಹಿಡಿಯುತ್ತಾನೆ.

23 ಪೌಲನು ತನ್ನ ಎಲ್ಲಾ ಪತ್ರಿಕೆಗಳನ್ನು ಗ್ರೀಕ್ ಭಾಷೆಯಲ್ಲಿ ಬರೆದನು.

24 36-38 ವಚನಗಳ ಇನ್ನೊಂದು ಭಾಷಾಂತರವು ಈ ರೀತಿಯಾಗಿರುತ್ತದೆ: "ಒಬ್ಬನು ತಾನು ತನ್ನ ಮಗಳನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಮತ್ತು ಆಕೆಗೆ ಪ್ರಾಯ ಕಳೆದು ಹೋಗುತ್ತದೆಲ್ಲಾ", ಅವಳು ಮದುವೆಯಾಗುವದು ಅವಶ್ಯವೆಂದು ಅವನಿಗೆ ಕಂಡರೆ ತನ್ನಿಷ್ಟದಂತೆ ಮಾಡಬೇಕು. ಅವನು ಪಾಪಮಾಡುವವನಾಗಿರುವದಿಲ್ಲ. ಅವರು ವಿವಾಹವಾಗಬೇಕು. 37 ಆದರೆ ಒಬ್ಬನು ದೃಢಚಿತ್ತನಾಗಿದ್ದು ಬಲವಂತವೇನೂ ಇಲ್ಲದೆ ತನ್ನಿಷ್ಟವನ್ನು ನಡಿಸುವದಕ್ಕೆ ಹಕ್ಕುಳ್ಳವನಾಗಿದ್ದು ಕನ್ನಿಕೆಯನ್ನು ಅವಿವಾಹತಳನ್ನಾಗಿ ಇಟ್ಟುಕೊಳ್ಳಲು ಮನಸ್ಸಿನಲ್ಲಿ ತೀರ್ಮಾನಿಸಿಕೊಂಡರೆ ಅವನು ಹಾಗೆ ಮಾಡುವದು ಒಳ್ಳೇದೇ. 38 ಹಾಗಾದರೆ ತನ್ನ ಕನ್ನಿಕೆಯನ್ನು ಮದುವೆಮಾಡಿಕೊಡುವವನು ಒಳ್ಳೆದನ್ನು ಮಾಡುತ್ತಾನೆ. ಆದರೆ ಆಕೆಯನ್ನು ಮದುವೆ ಮಾಡಿಕೊಡದವನು ಇನ್ನೂ ಒಳ್ಳೇದನ್ನು ಮಾಡುತ್ತಾನೆ.

ಪೌಲನ ಕಾಲದ ಬಹುಪಾಲು ರಾಷ್ಟ್ರಗಳಲ್ಲಿ ಇಂದಿನ ರಾಷ್ಟ್ರಗಳಲ್ಲಿರುವ ಪ್ರಕಾರವೇ ತನ್ನ ಮಗಳನ್ನು ವಿವಾಹ ಮಾಡಿಕೊಡುವದು ತಂದೆಯೊಬ್ಬನ ಕರ್ತವ್ಯವಾಗಿತ್ತು. ಒಂದು ವೇಳೆ ತಂದೆಯು ತನ್ನ ಮಗಳ ವಿವಾಹವನ್ನು ಸರಿಯಾಗಿ ವ್ಯವಸ್ಥೆಮಾಡದಿದ್ದರೆ ಅವಳು ಅವಮಾನಕ್ಕೊಳಗಾಗುತ್ತಿದ್ದಳು. ಹೀಗೆ ಒಬ್ಬ ತಂದೆಯು ಅವಳ ವಿವಾಹವನ್ನು ವ್ಯವಸ್ಥೆಮಾಡದಿದ್ದರೆ ಆತನು "ತನ್ನ ಮಗಳನ್ನು ಸರಿಯಾಗಿ ನೋಡಿಕೊಳ್ಳದವನಾಗಿ" ಇರುತ್ತಿದ್ದನು. ಅಂತಹ ಪರಿಸ್ಥಿತಿಗಳಲ್ಲಿ ತಂದೆಯು ತನ್ನ ಮಗಳ ವಿವಾಹಕ್ಕಾಗಿ ವ್ಯವಸ್ಥೆ ಮಾಡಬೇಕು ಎಂದು ಪೌಲನು ಹೇಳುತ್ತಾನೆ. ಹಾಗೆ ಮಾಡುವದು ಪಾಪವಾಗುವದಿಲ್ಲ (ವಚನ 36).

ಒಂದು ವೇಳೆ ತಂದೆಯೊಬ್ಬನಿಗೆ ತನ್ನ ಮಗಳು ಉತ್ತಮವಾಗಿ ಕರ್ತನ ಸೇವೆ ಮಾಡುವವಳಾಗಲು ಅವಿವಾಹಿತಳಾಗಿ ಉಳಿಯಬೇಕೆಂಬ ಮನವರಿಕೆಯಾಗುವದಾದರೆ ಆತನು ಆಕೆಯ ವಿವಾಹಕ್ಕಾಗಿ ವ್ಯವಸ್ಥೆ ಮಾಡಬಾರದು (ವಚನ 37). ತಂದೆಯು ತನ್ನ ಮಗಳಿಗೆ ವಿವಾಹ ಮಾಡಿಕೊಡಲಿ ಅಥವಾ ಕೊಡದಿರಲಿ, ಯಾವು ದನ್ನು ಮಾಡಿದರೂ "ಒಳ್ಳೇದನ್ನೇ' ಮಾಡುತ್ತಾನೆ. ಹೇಗಿದ್ದರೂ, ಆತನು ಆಕೆಗೆ ವಿವಾಹ ಮಾಡಿಕೊಡದಿದ್ದರೆ ಉತ್ತಮವಾಗಿರುತ್ತದೆಂದು ಪೌಲನು ಅಭಿಪ್ರಾಯ ಪಡುತ್ತಾನೆ ( ವಚನ 38).

25 ಹೇಗಿದ್ದರೂ, ನಾವು ನಮ್ಮ ದೇಹಗಳಿಗೆ ಹಾನಿಕರವಾಗಿರುವ ಯಾವದನ್ನಾಗಲಿ ತಿನ್ನಬಾರದು ಅಥವಾ ಕುಡಿಯಬಾರದು. ನಾವು ಮದ್ಯಪಾನ ಮಾಡಿ ಮತ್ತರಾಗಬಾರದು (ಎಫೆಸ 5:18). ನಮ್ಮ ದೇಹಗಳಿಗೆ ಹಾನಿಕರ ವೆಂದು ತೋರುವ ತಂಬಾಕುಸೇವನೆ, ಧೂಮ್ರಪಾನ ಮಾಡಬಾರದು. ನಮ್ಮ ದೇಹಗಳು ದೇವರ ಆಲಯವಾಗಿದ್ದು ದೇವರ ಆಲಯವನ್ನು ಕೆಡಿಸುವಂತ ಯಾವು ದನ್ನು ಮಾಡಬಾರದು (1 ಕೊರಿಂಥ 3:16-17).

26 ಖಂಡಿತವಾಗಿಯೂ, ಪೌಲನು ಕ್ರಿಸ್ತನಿಗೆ ಅವಮಾನವನ್ನು ತರುವಂಥ ಯವದೇ ಪದ್ಧತಿಗಳನ್ನಾಗಲಿ ಅಥವಾ ಸಂಪ್ರದಾಯಗಳನ್ನಾಗಲಿ ಪಾಲಿಸಲಿಲ್ಲ.

27 ಕ್ರೈಸ್ತರು ಯೆಹೂದ್ಯ ಆಚಾರಬದ್ಧ ನಿಯಮದ ದಾಸತ್ವದಿಂದ ಸ್ವತಂತ್ರರಾಗಿದ್ದಾಗ್ಯು ಅವರು ಹಳೆ ಒಡಂಬಡಿಕೆಯ ನೈತೀಕ ನಿಯಮದಿಂದ ಸ್ವತಂತ್ರರಲ್ಲ, ಅದು ಮುಖ್ಯವಾಗಿ ದಶಾಜ್ಞೆಗಳಲ್ಲಿನ ಎರಡು ಶ್ರೇಷ್ಠ ಆಜ್ಞೆಗಳನ್ನೊಳಗೊಂಡಿರುತ್ತದೆ (ವಿಮೋಚನ ಕಾಂಡ 20:3-17). ಒಂದು ಅರ್ಥದಲ್ಲಿ ದಶಾಜ್ಞೆಗಳು ದೇವರನ್ನು ಪ್ರೀತಿಸಬೇಕು ಹಾಗು ನೆರೆಯವನನ್ನು ಪ್ರೀತಿಸಬೇಕು ಎಂಬ ಎರಡು ಶ್ರೇಷ್ಠ ಆಜ್ಞೆಗಳ ವಿವರವಾದ ಆವೃತ್ತಿಯಾಗಿದೆ. ಯಾವನಾದರೂ ದಶಾಜ್ಞೆಗಳಲ್ಲಿ ಯಾವು ದನ್ನಾದರೂ ಉಲ್ಲಂಘಿಸುವದಾದರೆ ಆತನು ಎರಡು ಶ್ರೇಷ್ಠ ಆಜ್ಞೆಗಳನ್ನು ಸಹ ಉಲ್ಲಂಘಿಸುವವನಾಗಿದ್ದಾನೆ. ಒಬ್ಬನು ದಶಾಜ್ಞೆಗಳಲ್ಲಿ ಯಾವದನ್ನಾದರೂ ಉಲ್ಲಂಘಿಸುತ್ತಾನಾದ್ದರಿಂದ ಅವನು

ದೇವರನ್ನು ಹಾಗು ನೆರೆಯವನನ್ನು ಪ್ರೀತಿಸದವನಾಗಿದ್ದಾನೆ (ಮತ್ತಾಯ 5:17-19; ರೋಮ 13:9; ಗಲಾತ್ಯ 5:14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

28 ಮನ್ನಾ "ಆತ್ಮೀಕ (ದೈವೀಕ) ಆಹಾರ" ಮಾತ್ರವೇ ಆಗಿರಲಿಲ್ಲ; ಅದು ಯೆಹೂದ್ಯರು ತಿನ್ನಬಹುದಾಗಿದ್ದ ವಾಸ್ತವ ಆಹಾರವು ಸಹ ಆಗಿತ್ತು.

29 ಈ ರೀತಿಯ ಶೋಧನೆಯು ಹಲವಾರು ವೇಳೆ "ಪರೀಕ್ಷೆ" ಎಂದು ಕರೆಯಲ್ಪಟ್ಟಿದೆ. ಹೇಗಿದ್ದರೂ, ಬಹಿರಂಗದ ಪರೀಕ್ಷೆ (ಅಥವಾ ಪರಿಶೋಧನೆ) ಯಾವಾಗಲೂ ಹಿಂಜರಿಯುವ, ನಂಬಿಕೆಯನ್ನು ಕಳೆದುಕೊಳ್ಳುವ, ಕ್ರಿಸ್ತನನ್ನು ನಿರಾಕರಿಸುವ ಅಂತರಂಗದ ಶೋಧನೆಗೆ ನಡಿಸುತ್ತದೆ. ಈ ಕಾರಣದಿಂದಲೇ ಬಹಿರಂಗದ ಪರೀಕ್ಷೆಯ ಒಂದು ರೀತಿಯ ಶೋಧನೆ ಎಂದು ಕರೆಯಲ್ಪಡಬಹುದು.

30 ಕೆಲವು ವೇಳೆಗಳಲ್ಲಿ ಶೋಧನೆಯನ್ನು ಎದುರಿಸುವದೆಂದರೆ ಅದರಿಂದ ದೂರವಾಗಿ ಓಡಿಹೋಗಬೇಕು ಎಂಬ ಅರ್ಥವನ್ನು ಕೊಡುತ್ತದೆ (1 ಕೊರಿಂಥ 10:14; 1 ತಿಮೊಥೆ 6:11 ನೋಡಿರಿ). ಬೇರೆ ಮಾತುಗಳಲ್ಲಿ ಹೇಳುವದಾದರೆ ನಾವು ನಮ್ಮನ್ನು ಶೋಧನೆಯ ಮಾರ್ಗದಿಂದ ಕ್ರಿಯಾತ್ಮಕವಾಗಿ ಹೊರತಂದುಕೊಳ್ಳಬೇಕು.

31 ಇದರಲ್ಲಿ ನಮ್ಮ ದೇಹಗಳಿಗೆ ಹಾನಿಕರವಾದ ಅಥವಾ ನಮ್ಮನ್ನು ಶೋಧನೆಗೆ ನಡಿಸುವ ಸಂಗತಿಗಳು ಸೇರಿರುವದಿಲ್ಲ. ಅಂತಹ ಸಂಗತಿಗಳಲ್ಲಿ ತೊಡಗಿಸಿಕೊಳ್ಳುವದಕ್ಕೆ ದೇವರ ಸಮ್ಮತಿಯಿರುವದಿಲ್ಲ.

32 ತಿನ್ನುವದು, ವಿಶ್ರಾಂತಿಪಡೆಯುವದು, ಅನ್ಯೋನ್ಯತೆಯನ್ನು ಉಲ್ಲಾಸಿಸುವದು ಮತ್ತು ಅಂತಹ ಇನ್ನಿತರ ನ್ಯಾಯ ಸಮ್ಮತ ಚಟುವಟಿಕೆಯಲ್ಲಿ ತೊಡಗುವಂತದೆಲ್ಲವೂ ಅಂತಿಮವಾಗಿ ದೇವರಿಗೆ ಘನವನ್ನು ತರುತ್ತದೆ, ಯಾಕೆಂದರೆ ಈ ಚಟುವಟಿಕೆಗಳು ನಮ್ಮ ದೈಹೀಕ ಹಾಗು ಭಾವನಾತ್ಮಕ ಆರೋಗಕ್ಕೆ ಅವಶ್ಯಕವಾಗಿರುತ್ತವೆ. ನಾವು ದೈಹೀಕವಾಗಿ ಮತ್ತು ಭಾವನಾತ್ಮಕವಾಗಿ ಆರೋಗ್ಯವಾಗಿರುವಾಗ ದೇವರನ್ನು ಹೆಚ್ಚಾಗಿ ಮಹಿಮೆಪಡಿಸಬಲ್ಲೆವು .

33 ಈ ಹನ್ನೆರಡು ಮಂದಿ ಕ್ರಿಸ್ತನ ಮೂಲ ಹನ್ನೆರಡು ಮಂದಿ ಶಿಷ್ಯರಾಗಿದ್ದರು (ಇಸ್ಕರಿಯೋತ ಯೂದನನ್ನು ಬಿಟ್ಟು), ಅನಂತರದಲ್ಲಿ ಅವರ ಮೇಲೆ ಪವಿತ್ರಾತ್ಮನು ಬಂದ ಬಳಿಕ ಅವರು "ಅಪೊಸ್ತಲರು" ಎಂದು ಪರಿಚಿತರಾದರು.

34 ಹೆಚ್ಚಿನ ಚರ್ಚೆಗಾಗಿ ಸಾಮಾನ್ಯ ಲೇಖನ: ಕ್ರೈಸ್ತೀಯ ವಿವಾಹ ನೋಡಿರಿ.

35 ಕರ್ತನ ಭೋಜನದ ವಿಷಯದಲ್ಲಿನ ಹೆಚ್ಚಿನ ಚರ್ಚೆಗಾಗಿ ಸಾಮಾನ್ಯ ಲೇಖನ: ಕರ್ತನ ಭೋಜನ ನೋಡಿರಿ.

36 ಪವಿತ್ರಾತ್ಮನ ಕಾರ್ಯಗಳ ಹೆಚ್ಚಿನ ಚರ್ಚೆಗಾಗಿ ಸಾಮಾನ್ಯ ಲೇಖನ: ಪವಿತ್ರಾತ್ಮನು ನೋಡಿರಿ.

37 ಯೇಸುವು ಕರ್ತನು ಎಂಬ ಹೇಳಿಕೆಯ ಅರ್ಥವೇನೆಂದರೆ: "ಯೇಸುವು ಏಕೈಕ ಕರ್ತನು". ಒಬ್ಬನೇ ದೇವರು ಇರುವ ಪ್ರಕಾರವೇ ಕರ್ತನೂ ಒಬ್ಬನೇ – ಆತನು ದೇವಕುಮಾರನಾದ ಯೇಸುವೇ.

38 8-10 ವಚನಗಳಲ್ಲಿ ಸ್ವತಃ ವರಗಳು ಪ್ರಸ್ತಾಪಿಸಲ್ಪಟ್ಟಿವೆ. ಆದರೆ 1 ಕೊರಿಂಥ 12:28 ಮತ್ತು ಎಫೆಸ 4:11 ರಲ್ಲಿ ಸ್ವತಃ ವರಗಳು ಪ್ರಸ್ತಾಪಿಸಲ್ಪಟ್ಟಿರುವದಿಲ್ಲ, ಆದರೆ ಬದಲಾಗಿ ವರಗಳೊಂದಿಗೆ ಸಂಬಂಧಿಸಿದ ಕೆಲಸಗಾರರ ವಿಶೇಷ ವರ್ಗಗಳು ಪ್ರಸ್ತಾಪಿಸಲ್ಪಟ್ಟಿವೆ.

39 ಈ ವರವು ಸತ್ಯ ಪ್ರವಾದಿಗಳ ಹಾಗು ಸುಳ್ಳುಪ್ರವಾದಿಗಳನ್ನು ವಿವೇಚಿಸುವದಕ್ಕಾಗಿ ಸಹ ಉಪಯೋಗಿಸಲ್ಪಟ್ಟಿದೆ; ಹೇಗಿದ್ದರೂ, ಬಹಳಷ್ಟು ಸಂದರ್ಭಗಳಲ್ಲಿ ಇದನ್ನು ವಿಶೇಷ ಅಸ್ವಾಭಾವಿಕವಾದ ವರದ ಸಹಾಯವಿಲ್ಲದೆ ಮಾಡಬಹುದಾಗಿದೆ (1 ಯೋಹಾನ 4:1-3 ನೋಡಿರಿ).

40 ಈ ವಚನದಲ್ಲಿ ದಿಂದ ಎಂಬದಕ್ಕಾಗಿರುವ ಗ್ರೀಕ್ ಪದದ ಅರ್ಥವು "ದೊಂದಿಗೆ" ಅಥವಾ "ದಲ್ಲಿ" ಎಂಬದಾಗಿಯೂ ಇರಬಹುದು. ಈ ಮೂರು ಅರ್ಥಗಳಲ್ಲಿ – "ದಿಂದ", "ದೊಂದಿಗೆ" ಅಥವಾ "ದಲ್ಲಿ" – ಯಾವದು ಆರಿಸಿಕೊಳ್ಳಲ್ಪಟ್ಟಿದೆ ಎಂಬುದನ್ನು ಆಧರಿಸಿ ವಚನದ ಅರ್ಥವು ಒಂದು ರೀತಿಯಲ್ಲಿ ವ್ಯತ್ಯಾಸವಾಗಿರುವದು. ಹೆಚ್ಚಿನ ಚರ್ಚೆಗಾಗಿ , ಸಾಮಾನ್ಯ ಲೇಖನ: ಪವಿತ್ರಾತ್ಮನ ದೀಕ್ಷಾಸ್ನಾನ ನೋಡಿರಿ.

41 ಪವಿತ್ರಾತ್ಮನು ಬರುವದಾದರೆ ಸಾಕು ಆತನು ನಮ್ಮ ಜೀವಿತಗಳಲ್ಲಿ ಬರುವದನ್ನು ನಾವು ಯಾವ ಹೆಸರಿನಿಂದ ಕರೆಯುತ್ತೇವೆಂಬದು ಅಷ್ಟೊಂದು ಪ್ರಾಮುಖ್ಯವಲ್ಲವಷ್ಟೇ! ಪವಿತ್ರಾತ್ಮನು ವಿವಿಧ ವಿಶ್ವಾಸಿಗಳ ಜೀವಿತಗಳಲ್ಲಿ ತನ್ನನ್ನು ಅನೇಕ ರೀತಿಗಳಲ್ಲಿ ತೋರ್ಪಡಿಸಿಕೊಳ್ಳುತ್ತಾನೆ. ಈ ಕಾರಣದಿಂದಲೇ ಕ್ರೈಸ್ತರ ಜೀವಿತಗಳಲ್ಲಿ ಪವಿತ್ರಾತ್ಮನು ತನ್ನ ಪ್ರಸನ್ನತೆಯನ್ನು ತೋರ್ಪಡಿಸಿಕೊಳ್ಳುವ ವಿವಿಧ ಮಾರ್ಗಗಳಿಗೆ ಹೊಸ ಒಡಂಬಡಿಕೆಯಲ್ಲಿ ಬಹಳಷ್ಟು ಪದಗಳು ಕೊಡಲ್ಪಟ್ಟಿರುತ್ತವೆ.

42 ಈ "ಅಂದವಿಲ್ಲದ" ಅಂಗಗಳು ಪಿತ್ತಜನಕಾಂಗ, ಶ್ವಾಸಕೋಶ, ಕರುಳುಗಳು, ಮುಂತಾದ ಒಳ ಅಂಗಗಳನ್ನು ಸಹ ಒಳಗೊಂಡಿರುತ್ತದೆಂದು ಕೆಲವರು ಅಭಿಪ್ರಾಯಪಡುತ್ತಾರೆ.

43 ಪ್ರೀತಿಯು ಈ ಅಧ್ಯಾಯದಲ್ಲಿ ಬಣ್ಣಿಸಲ್ಪಟ್ಟಿರುವ ಇತರ "ವರಗಳಿಗಿಂತ" ವ್ಯತ್ಯಾಸವಾದದ್ದು ಪ್ರೀತಿಯು ಪವಿತ್ರಾತ್ಮನ ಒಂದು ಫಲ ಆಗಿದೆ (ಗಲಾತ್ಯ 5:22). ನಿಜವಾಗಿಯೂ, ಇದು ಅತಿ ಪ್ರಾಮುಖ್ಯವಾದ ಫಲವಾಗಿದೆ. ನಾವು ಯಾವ ವರಗಳನ್ನೇ ಹೊಂದಿದ್ದರೂ ಅವು ಗಳನ್ನು ಪ್ರೀತಿಯಲ್ಲಿ ಉಪಯೋಗಿಸಬೇಕು. ಪ್ರೀತಿಯಿಲ್ಲದೆ ಪವಿತ್ರಾತ್ಮನ ಇತರ ವರಗಳು ನಿಷ್ಪ್ರಯೋಜಕವಾಗಿದ್ದು ಹಾನಿಯನ್ನು ಸಹ ಉಂಟು ಮಾಡಬಲ್ಲದು. ನಮ್ಮ ಕ್ರೈಸ್ತ ಜೀವಿತಗಳಲ್ಲಿ ಎಲ್ಲಕ್ಕಿಂತಲೂ ಪ್ರಾಮುಖ್ಯವಾದ ಸಂಗತಿಯು ಪ್ರೀತಿಯೇ.

44 ಹೊಸ ಒಡಂಬಡಿಕೆಯ ಕೆಲವು ಭಾಷಾಂತರಗಳ ಪ್ರಕಾರವಾಗಿ ದೀನತೆ (ಅತವಾ ದಯಾಶೀಲತೆ) ಪವಿತ್ರಾತ್ಮನ ಇನ್ನೊಂದು ಫಲವಾಗಿದೆ (ಗಲಾತ್ಯ 5:23).

45 ಯಾವಾಗಲೂ ಕಾಪಾಡುತ್ತದೆ ಎಂಬ ಮಾತಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಎಲ್ಲವನ್ನೂ ಸಹಿಸಿಕೊಳ್ಳುತ್ತದೆ" ಎಂದು ಹೇಳುತ್ತವೆ. ಅರ್ಥವು ಒಂದೇ ರೀತಿಯಾಗಿರುತ್ತದೆ.

46 ಈ ರೀತಿಯಾದ ಪ್ರೀತಿಯಿಂದ ತುಂಬಿರುವ ವ್ಯಕ್ತಿಯನ್ನು ಲೋಕದ ಜನರು – ಹಾಗು ಕೆಲವು ಕ್ರೈಸ್ತರು ಸಹ – ನಿಷ್ಕಪಟ ಎಂದು ಕರೆಯುತ್ತಾರೆ. ಆದರೆ ಲೋಕವು ಯಾವದನ್ನು "ನಿಷ್ಕಪಟತನ" ವಾಸ್ತವದಲ್ಲಿ ಹಲವಾರು ವೇಳೆ ಕ್ರಿಸ್ತನ ಪ್ರೀತಿಯ ತೋರ್ಪಡಿಸುವಿಕೆಯಾಗಿರುತ್ತದೆ. ಹೌದು, ಕ್ರೈಸ್ತರು ಜಾಣತನ ಹಾಗು ವಿವೇಚನೆಯುಳ್ಳವರಾಗಿರುವದು ಉತ್ತಮವೇ, ಆದರೆ ಅದೇ ವೇಳೆಯಲ್ಲಿ ಅವರು ಪ್ರೀತಿಯಿಂದ ತುಂಬಿರಬೇಕು.

47 ಬಡವರಿಗಾಗಿ ಹಾಗು ತುಚ್ಛೀಕರಿಸಲ್ಪಟ್ಟವರಿಗಾಗಿ ಇರುವ ಮಾನವೀಯತೆಯ ಚಿಂತನೆ ವಿಷಯದಲ್ಲಿಯೂ ಹಾಗೆಯೇ ಹೇಳಬಹುದು. ಅಂತಹ ಚಿಂತನೆಯು ಯಾವಾಗಲೂ ಪ್ರಶಂಶೆ ಅಥವಾ ಮರ್ಯಾದೆಗಾಗಿನ ಸ್ವಾರ್ಥ ಇಚ್ಛೆಯಿಂದ ಕೂಡಿರುತ್ತದೆ – ಇಲ್ಲವೆ ಸ್ವಯಂ ಮೆಚ್ಚಿಕೆ ಗಳಿಸುವ ಇಚ್ಛೆಯಿಂದಾದರೂ ಕೂಡಿರುತ್ತದೆ.

48 ತನ್ನ ಆತ್ಮದೊಂದಿಗೆ ಎಂಬ ಮಾತುಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಆತ್ಮಪ್ರೇರಿತನಾಗಿ" ಎಂದು ಹೇಳುತ್ತವೆ. ಎರಡೂ ಅರ್ಥಗಳ ಸಾಧ್ಯತೆಯಿದೆ. ಹಾಗು ಎರಡೂ ಸರಿಯಾದವು ಗಳು.

49 ಹೇಗಿದ್ದರೂ, ವಾಣಿಗಳನ್ನಾಡುವ ವಯಕ್ತಿಕ ವರವು ಪ್ರಾರ್ಥಿಸುವ ವ್ಯಕ್ತಿಗೆ ಮಾತ್ರವೇ ಪ್ರಯೋಜನವನ್ನುಂಟು ಮಾಡುವದಕ್ಕಲ್ಲ. ಆ ವರವು ಇತರರಿಗಾಗಿ ಅವ್ಯಕ್ತಿಯು ಮಾಡುವ ಪ್ರಾರ್ಥನೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿಸಬೇಕು. ಮತ್ತು ವಾಣಿಗಳಲ್ಲಿ ಪ್ರಾರ್ಥಿಸುವದರ ಮೂಲಕ ವ್ಯಕ್ತಿಯ ಸ್ವಂತ ಆತ್ಮೀಕ ಜೀವನವು ಆಶೀರ್ವದಿಸಲ್ಪಡುವಾಗ ಆ ವ್ಯಕ್ತಿಯು ಇತರರ ಸೇವೆ ಮಾಡಿ ಅವರನ್ನು ಆಶೀರ್ವದಿಸಲು ಇನ್ನು ಹೆಚ್ಚು ಶಕ್ತನಾಗಿರಬೇಕು.

50 ಅರ್ಥಮಾಡಿಕೊಳ್ಳದವರು ಎಂಬ ಮಾತುಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಹೊರಗಿನವರು" ಅಥವಾ "ವಿಚಾರಿಸುವವರು" ಎಂದು ಹೇಳುತ್ತವೆ. ಈ ವಚನದ ಗ್ರೀಕ್ ಪ್ರತಿಯನ್ನು ಭಾಷಾಂತರಿಸಲು ಕಷ್ಟಕರವಾಗಿರುತ್ತದೆ.

51 "ಆಮೆನ್ ಎಂಬ ಪದದ ಅರ್ಥವು "ಹಾಗೆಯೇ ಆಗಲಿ"

52 ಕೆಲವು ವೇಳೆಗಳಲ್ಲಿ ಯಾವದು ಸ್ವಾಭಾವಿಕ ವರ ಹಾಗು ಯಾವದು ಅಸ್ವಾಭಾವಿಕ ವರ ಎಂಬುದರ ನಡುವೆ ಸ್ಪಷ್ಟವಾದ ಭೇದ ವಿರುವದಿಲ್ಲ. ಹಲವಾರು ವೇಳೆ ಪವಿತ್ರಾತ್ಮನು ಈಗಾಗಲೇ ಒಬ್ಬನು ಹೊಂದಿರುವ ಸ್ವಾಭಾವಿಕ ವರವೊಂದಕ್ಕೆ ಅಸ್ವಾಭಾವಿಕ ಅಂಶವನ್ನು ಕೂಡಿಸುತ್ತಾನೆ. ಒಂದು ಅರ್ಥದಲ್ಲಿ ಇದು ನಾವು ಕ್ರೈಸ್ತರಾಗುವಾಗ ನಮ್ಮೆಲ್ಲರಿಗೂ ಸಂಭವಿಸುತ್ತದೆ; ಪವಿತ್ರಾತ್ಮನು ನಮ್ಮ ಸ್ವಾಭಾವಿಕ ವರಗಳನ್ನು ತೆಗೆದುಕೊಂಡು ಶುದ್ಧೀಕರಿಸಿ ಅವು ಗಳನ್ನು ಉಪಯೋಗಿಸಲು ಪ್ರಾರಂಭಿಸುತ್ತಾನೆ. ನೆನಪಿನಲ್ಲಿಟ್ಟು ಕೊಳ್ಳಬೇಕಾದ ಅತಿ ಪ್ರಾಮುಖ್ಯವಾದ ಸಂಗತಿಯೇನೆಂದರೆ, ಎಲ್ಲಾ ವರಗಳು – ಸ್ವಾಭಾವಿಕ ಹಾಗು ಅಸ್ವಾಭಾವಿಕ – ಅಂತಿಮವಾಗಿ ದೇವರಿಂದಲೇ ಬರುತ್ತವೆ ಮತ್ತು ಅವು ಗಳು ಸಭೆಯ ಭಕ್ತಿವೃದ್ಧಿಗಾಗಿ ಉಪಯೋಗಿಸಲ್ಪಡಬೇಕು.

53 ಸುಳ್ಳು ಪ್ರವಾದಿಗಳು ದುರಾತ್ಮಗಳ ಅಧೀನದಲ್ಲಿರುತ್ತಾರೆ.

54 ಕೆಲವು ಪ್ರವಾದಿಗಳಲ್ಲಿ ಆರಾಧನೆಯವೇಳೆ ಪ್ರಾರ್ಥನೆಗೆ ಪ್ರತ್ಯೇಕಸಮಯವಿದ್ದು ಆ ಸಮಯದಲ್ಲಿ ಪ್ರತಿಯೊಬ್ಬರು ಏಕಕಾಲದಲ್ಲಿ ಗಟ್ಟಿಯಾಗಿ ಪ್ರಾರ್ಥಿಸುವರು. ಅಂತಹ ಪ್ರಾರ್ಥನೆಗಳು ದೇವರನ್ನುದ್ದೇಶಿಸಿ ಇರುತ್ತವೆ ಹೊರತು ಸಭಿಕರನ್ನುದ್ದೇಶಿಸಿ ಅಲ್ಲವಾದ್ದರಿಂದ ಒಂದು ಸಮಯದಲ್ಲಿ ಒಬ್ಬರಿಗಿಂತ ಹೆಚ್ಚು ಜನರು ಮಾತಾಡಬಾರದೆಂಬ ಪೌಲನ ನಿಷೇದವು ಅಂತಹ ಪ್ರಾರ್ಥನಾವೇಳೆಗಳಿಗೆ ಅನ್ವಯಿಸುವದಿಲ್ಲ.

55 ಅವನು ಹೊತ್ತಿಗೆ ಬಾರದವನಾಗುವನು ಎಂಬ ಮಾತುಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಅವನು ಇದನ್ನು ತಿಳಿಯದಿರಲಿ", ಅಥವಾ "ಅವನು ಗೊತ್ತಿಲ್ಲದವನಾಗುಳಿಯಲಿ" ಎಂದು ಹೇಳುತ್ತವೆ. ಗ್ರೀಕ್ ಪ್ರತಿಯ ಸರಿಯಾದ ಅರ್ಥವು ಖಚಿತವಾಗಿಲ್ಲ. ಈ ಮೂರರಲ್ಲಿ ಯಾವ ಅರ್ಥವಾದರೂ ಇರುವ ಸಾಧ್ಯತೆಯಿದೆ.

56 ಪೌಲನ ಕಾಲದಲ್ಲಿದ್ದ ಏಕೈಕ ಶಾಸ್ತ್ರಗಳು ಹಳೆ ಒಡಂಬಡಿಕೆಯ ವಾಕ್ಯಗಳಾಗಿದ್ದವು.

57 ಮರಣವು ಪಾಪಕ್ಕಾಗಿರುವ ದಂಡನೆಯಾಗಿದೆ (ರೋಮ 6:23).

58 ಅನಂತರದಲ್ಲಿ ಪು ನರುತ್ಥಾನಗೊಂಡ ಕ್ರಿಸ್ತನನ್ನು ನೋಡಿರದ ಕೆಲವು ಮಂದಿ ಅಪೊಸ್ತಲರು ಎದ್ದು ಬಂದರು. (1 ಥೆಸಲೋನಿಕ 2;7 ನೋಡಿರಿ).

59 ಸತ್ತವರಿಗಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಈ ಪದ್ಧತಿಯು ಒಳ್ಳೇದೋ ಅಥವಾ ಅಲ್ಲವೋ ಎಂಬುದನ್ನು ಪೌಲನು ಹೇಳುವದಿಲ್ಲ. ಇದುವರೆಗೂ ತಿಳಿದಿರುವ ಪ್ರಕಾರ ಕ್ರೈಸ್ತರ ಬೇರೆ ಇನ್ನಾವ ಗುಂಪು ಸಹ ಈ ಪದ್ಧತಿಯನ್ನು ಅಭ್ಯಾಸಿಸಲಿಲ್ಲ.

60 ಎಫೆಸವು ಇಂದಿನ ಟರ್ಕಿಯ ಪಾಶ್ಚಾತ್ಯಭಾಗದಲ್ಲಿ ಒಂದು ಪ್ರಾಮುಖ್ಯ ನಗರವಾಗಿತ್ತು. ಪೌಲನು ಎಫೆಸದಲ್ಲಿ ಹೊಂದಿದ ಕೆಲವು ಅನುಭವಗಳು ಅ.ಕೃತ್ಯ 19ನೇ ಅಧ್ಯಾಯದಲ್ಲಿ ಪ್ರಸ್ತಾಪಿಸಲ್ಪಟ್ಟಿವೆ.

61 ತನಗೆ ಬಂದ ಆದಾಯದ ಮೇರೆಗೆ ಎಂಬ ಮಾತುಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು 'ತಾನು ಅಭಿವೃದ್ಧಿಹೊಂದುವ ಪ್ರಕಾರ" ಎಂದು ಹೇಳುತ್ತವೆ. ಅರ್ಥವು ಒಂದೇ ಆಗಿದೆ. ಕ್ರೈಸ್ತರು ಪ್ರತಿವರ್ಷವೂ ಅವರ ಭೂಮಿ ಅಥವಾ ಮನೆಯ ಸ್ವಲ್ಪ ಭಾಗವನ್ನು ಮಾರಬೇಕಾಗಿರುವದಿಲ್ಲ ಹೇಗಿದ್ದರೂ, ವಿಶೇಷ ಪರಿಸ್ಥಿತಿಗಳಲ್ಲಿ ಕರ್ತನ ಕಾರ್ಯವನ್ನು ಮುಂದುವರೆಸುವದಕ್ಕಾಗಿ ಕ್ರೈಸ್ತನೊಬ್ಬನಿಗೆ ದೇವರು ಆಸ್ತಿಯ ಸ್ವಲ್ಪ ಭಾಗವನ್ನು ಅಥವಾ ಇತರ ಸ್ವತ್ತುಗಳನ್ನು ಮಾರುವಂತೆ ಹೇಳಬಹುದು. ಖಂಡಿತವಾಗಿಯೂ, ಕ್ರೈಸ್ತನೊಬ್ಬನು ತಾನು ದೇವರಿಗಿಂತಲೂ ಹೆಚ್ಚಾಗಿ ಪ್ರೀತಿಸಲಾರಂಭಿಸಿರುವ ಯಾವದೇ ಸ್ವತ್ತನ್ನು ಮಾರಬೇಕು (ಮಾರ್ಕ 10:21 ನೋಡಿರಿ).

ಕ್ರೈಸ್ತರು – ಬಡಕ್ರೈಸ್ತರು ಸಹ – ತಮ್ಮ ಆದಾಯದ ಹತ್ತನೆಯ ಭಾಗವನ್ನಾದರೂ ಕರ್ತನ ಸೇವೆಗಾಗಿ ಕೊಡುವದರಲ್ಲಿ ಉತ್ತಮವಾದ ಕಾರ್ಯಮಾಡುತ್ತಾರೆ. (ಆದಾಯವು ಹಣ ಇಲ್ಲವೆ ಯಾವು ದೇ ಉತ್ಪಾದನೆಯಾದರೂ ಆಗಿರಬಹುದು). ಆದರೆ ಕ್ರೈಸ್ತರು ಹತ್ತನೆಯ ಭಾಗಕ್ಕಿಂತಲೂ ಹೆಚ್ಚಾಗಿ ಕೊಡುವು ದಾದರೆ ದೊಡ್ಡ ಆಶೀರ್ವಾದವನ್ನು ಪಡೆಯುವರು. ಒಬ್ಬನ ಆದಾಯವು ಹೆಚ್ಚಿದಂತೆ ಆತನು ತನಗೋಸ್ಕರ ಹೆಚ್ಚು ಖರ್ಚುಮಾಡಿಕೊಳ್ಳಬೇಕೆಂದು ಅರ್ಥವಾಗಿರುವದಿಲ್ಲ; ಆತನು ಕರ್ತನಿಗಾಗಿ ಕೊಡುವದಕ್ಕೆ ಹೆಚ್ಚು ಹೊಂದಿರುವವನು ಎಂದು ಇದರ ಅರ್ಥವಾಗಿದೆ.

# ಪೌಲನು ಕೊರಿಂಥದವರಿಗೆ ಬರೆದ ಎರಡನೆಯ ಪತ್ರಿಕೆ

## ಪರಿಚಯ

ಪೌಲನು ಕೊರಿಂಥದವರಿಗೆ ಬರೆದ ಎರಡನೆಯ ಪತ್ರಿಕೆಯು ಉತ್ತರ ಗ್ರೀಕ್ ಪ್ರಾಂತ್ಯದ ಮೆಕೆದೋನ್ಯದಿಂದ ಆತನ ಮೊದಲನೆಯ ಪತ್ರಿಕೆಯ ಒಂದು ಅಥವಾ ಎರಡು ವರ್ಷಗಳ ತರುವಾಯ ಕ್ರಿಶಕ 56 ರಲ್ಲಿ ಬರೆಯಲ್ಪಟ್ಟಿತು. ಪೌಲನು ಕೊರಿಂಥದವರಿಗೆ ಮೊದಲನೆಯ ಪತ್ರಿಕೆಯನ್ನು ಬರೆದ ಸ್ವಲ್ಪಕಾಲದ ನಂತರ ಕೊರಿಂಥದಲ್ಲಿನ ಸಭೆಯ ಪರಿಸ್ಥಿತಿಯು ಮತ್ತಷ್ಟು ಕೆಟ್ಟು ಹೋಗಿದೆಯೆಂಬ ಸುದ್ದಿಯು ಅವನ ಕಿವಿಗೆ ಮುಟ್ಟಿತು. ಆದದರಿಂದ, ಆ ಸಮಯದಲ್ಲಿ ಎಫೆಸದಲ್ಲಿದ್ದ ಪೌಲನು ಕೊರಿಂಥದವರಿಗೆ ಕಠಿಣವಾದ ಪತ್ರವನ್ನು ಬರೆದು ಅದನ್ನು ತನ್ನ ಸಹಪಾಠಿಯಾದ ತೀತನ ಕೈಯಲ್ಲಿ ಕೊಟ್ಟು ಕಳುಹಿಸುತ್ತಾನೆ (2 ಕೊರಿಂಥ 2:3-4). ಈ ಎರಡನೆಯ ಪತ್ರಿಕೆಯು ಕಳೆದು ಹೋಗಿದ್ದು ಅದರ ಯಾವ ಪ್ರತಿಯೂ ಅಸ್ತಿತ್ವದಲ್ಲಿರುವದಿಲ್ಲ[1] ತೀತನು ಕೊರಿಂಥದಿಂದ ಶೀಘ್ರವಾಗಿ ಹಿಂದಿರುಗಿ ಬಾರದಿದ್ದಾಗ ಪೌಲನು ಚಿಂತೆಗೊಳಗಾಗಿ ಆತನನ್ನು ಹುಡುಕುತ್ತಾ ಮೆಕೆದೋನ್ಯಕ್ಕೆ ಪ್ರಯಾಣಿಸಿದನು (2 ಕೊರಿಂಥ 2:12-14). ಅಲ್ಲಿ ಕೊನೆಗೂ ಪೌಲನು ತೀತನನ್ನು ಕಂಡುಕೊಂಡನು ಮತ್ತು ಕೊರಿಂಥದವರು ತಮ್ಮ ತಪ್ಪುಗಳನ್ನು ಗ್ರಹಿಸಿಕೊಂಡು ತಮ್ಮ ಪಾಪಗಳಿಗಾಗಿ ಪಶ್ಚಾತಾಪ ಪಟ್ಟಿದ್ದಾರೆಂಬ ವಿಷಯವನ್ನು ಅವನ ಮೂಲಕ ತಿಳಿದುಕೊಳ್ಳುತ್ತಾನೆ. ಆ ಒಳ್ಳೇ ಸುದ್ದಿಯನ್ನು ಕೇಳಿದ ಬಳಿಕ ಈಗ ನಮಗೆ "ಕೊರಿಂಥದವರಿಗೆ ಬರೆದ ಎರಡನೆಯ ಪತ್ರಿಕೆ" [2] ಎಂದು ಪರಿಚಿತವಿರುವ ಮೂರನೆಯ ಪತ್ರಿಕೆಯನ್ನು ಪೌಲನು ಕೊರಿಂಥದವರಿಗೆ ಬರೆದನು.

ಕೊರಿಂಥದವರಿಗೆ ಬರೆದ ಎರಡನೆಯ ಪತ್ರಿಕೆಯು ಹೊಸ ಒಡಂಬಡಿಕೆಯಲ್ಲಿರುವ ಪೌಲನ ಎಲ್ಲಾ ಪತ್ರಿಕೆಗಳಲ್ಲಿಯೂ ತಮ್ಮ ಹೆಚ್ಚು ವಯಕ್ತಿಕವಾಗಿರುತ್ತದೆ. ಇಲ್ಲಿ ಪೌಲನು ಕೊರಿಂಥದವರಿಗೆ – ಮತ್ತು ನಮಗೆ – ತನ್ನ ಹೃದಯವನ್ನು ತೆರೆದಿಡುತ್ತಾನೆ. ಈ ಪತ್ರಿಕೆಯ ಮೂಲಕವಾಗಿ ಪೌಲನು ಅಂತರ್ಯದಲ್ಲಿ ಎಂಥ ವ್ಯಕ್ತಿಯೆಂಬುದ ಬಗ್ಗೆ ಬಹಳಷ್ಟು ತಿಳಿದು ಕೊಳ್ಳಬಲ್ಲೆವು . ಪೌಲನ ಜೀವಿತದ ವಿಷಯದಲ್ಲಿ ಹೆಚ್ಚಿನ ವಿವರಕ್ಕಾಗಿ ರೋಮಾಪು ರದವರಿಗೆ ಬರೆದ ಪತ್ರಿಕೆ : ಪರಿಚಯ ಭಾಗವನ್ನು ನೋಡಿರಿ.

## ಹೊರ ರೇಖೆ

ಅ. ಪೌಲನ ಇತ್ತೀಚಿನ ತಾಪತ್ರಯಗಳು ಮತ್ತು ಪ್ರಯಾಣಗಳು (1:1-2:11)
  1. ಪೌಲನ ತಾಪತ್ರಯಗಳು ಹಾಗು ಸಂತೈಸುವಿಕೆ (1:1-11)
  2. ಪೌಲನ ಪ್ರಯಾಣಯೋಜನೆಗಳ ಬದಲಾವಣೆ (1:12-2:4)
  3. ದುಃಖವನ್ನುಂಟು ಮಾಡಿದವನ ವಿಷಯದಲ್ಲಿ ಸಲಹೆ (2:5-11)

ಆ. ಕ್ರೈಸ್ತೀಯ ಸೇವೆಯ ಸ್ವಭಾವ (2:12-7:16)
  1. ಸವಾರ್ತೆಯ ಶ್ರೇಷ್ಠತೆ (2:12-4:6)
  2. ಸೇವೆಯ ಉಪದ್ರವ ಹಾಗು ಪ್ರಭಾವ (4:7-5:10)
  3. ಸೇವೆಯ ಕೆಲಸ (5:11-6:13)
  4. ಸೇವೆಯ ಆನಂದ (6:14-7:16)

ಇ. ಬಡವರಿಗಾಗಿ ಸಂಗ್ರಹಣೆ (8:1-9:15)
- 1 ಔದಾರ್ಯತನದ ಅಗತ್ಯತೆ (8:1-15)
- 2 ಸಂಗ್ರಹಣೆಗಾಗಿ ವ್ಯವಸ್ಥೆಗಳು (8:16-9:5)
- 3 ಕ್ರೈಸ್ತೀಯ ಕೂಡುವಿಕೆಯ ಸೂತ್ರಗಳು (9:6-15)

ಈ. ಪೌಲನ ಅಪೊಸ್ತಲತನದ ಅಧಿಕಾರ (10:1-13:14)
- 1 ಒಬ್ಬ ಅಪೊಸ್ತಲನ ಹಕ್ಕುಗಳು (10:1-11:15)
- 2 ಪೌಲನು ತನ್ನ ಅಪೊಸ್ತಲತ್ವದ ಕುರಿತು ಪ್ರತಿವಾದಿಸಿದ್ದು (11:16-12:10)
- 3 ಪೌಲನ ಪ್ರೀತಿ ಹಾಗು ಚಿಂತನೆ (12:11-13:14)

## ಅಧ್ಯಾಯ - 1

### ಪೌಲನ ತಾಪತ್ರಯಗಳು ಹಾಗು ಸಂತೈಸುವಿಕೆ (1:1-11)

1 ಪೌಲನು ಕೊರಿಂಥದವರಿಗೆ ಈ ಪತ್ರಿಕೆಯನ್ನು ಬರೆಯುವಾಗ ಪೌಲನ ಯುವ ಸಹಪಾಠಿಯೂ ಆತ್ಮೀಕ ಮಗನೂ ಆದ ತಿಮೊಥೆಯನು ಆತನ ಜೊತೆಯಲ್ಲಿದ್ದನು (ಅ.ಕೃತ್ಯ 16:1-5; 19:22; 1 ಕೊರಿಂಥ 4:17; ಫಿಲಿಪ್ಪಿ 2:22 ನೋಡಿರಿ).

ಆದುದರಿಂದ, ಪೌಲನು ವಂದನೆಗಳನ್ನು ತಿಳಿಸುವಾಗ ತಾನು ಹಾಗು ತಿಮೊಥೆ ಇಬ್ಬರೂ ಒಟ್ಟಾಗಿ ಬರೆಯುತ್ತಿದ್ದಾರೇನೋ ಎಂಬಂತೆ ತಿಮೊಥೆಯನ ಹೆಸರನ್ನು ಕೂಡಿಸುತ್ತಾನೆ. ಪೌಲನು ಕೊರಿಂಥದಲ್ಲಿನ ಸಭೆಗೆ ಮಾತ್ರವಲ್ಲ, ಆದರೆ ಗ್ರೀಸಿನ ದಕ್ಷಿಣ ಪ್ರಾಂತ್ಯದ ಆಖಾಯ[3] ಸೀಮೆಯಲ್ಲೆಲ್ಲಾ ಇರುವ ದೇವಜನರೆಲ್ಲರಿಗೂ (ಕ್ರೈಸ್ತರಿಗೆ) ಬರೆಯುತ್ತಾನೆ.

ಇಲ್ಲಿ ಪೌಲನ ವಂದನೆಗಳು ಆತನ ಇತರ ಪತ್ರಿಕೆಗಳಲ್ಲಿರುವಂತೆಯೇ ಇರುತ್ತದೆ (ರೋಮ 1;1; ಗಲಾತ್ಯ 1:1; ಎಫೆಸ 1:1 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

2 ರೋಮ 1:7; ಎಫೆಸ 1:2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

3-4 ಸುವಾರ್ತೆಯ ಒಂದು ಅತಿ ಪ್ರಾಮುಖ್ಯವಾದ ಬೋಧನೆಯೇನೆಂದರೆ ಲೋಕದ ಎಲ್ಲಾ ಜನರಿಗೂ ದೇವರು ಕನಿಕರವುಳ್ಳ ದೇವರು, ದೇವರು ಎಲ್ಲಾ ಸಂಕಟಗಳಲ್ಲಿ ಸಂತೈಸುವ ದೇವರಾಗಿದ್ದಾನೆಂಬದಾಗಿ ನಾವು ತಿಳಿಸಲಿಚ್ಚಿಸುತ್ತೇವೆ (ಕೀರ್ತನೆಗಳು 86:5,15; 103:13-14). ಆತನು ಎಲ್ಲಾ ಸಂಕಟಗಳಲ್ಲಿ ನಮ್ಮನ್ನು ಸಂತೈಸುತ್ತಾನೆ – ಕೆಲವು ಸಮಯಗಳಲ್ಲಲ್ಲ ಆದರೆ ಯಾವಾಗಲೂ ಸಂತೈಸುತ್ತಾನೆ. ಆತನ ಸಂತೈಸುವಿಕೆಯ ಕಾರಣದಿಂದ ನಾವು ನಮ್ಮ ಸಂಕಟಗಳನ್ನ ಸಹಿಸಿಕೊಳ್ಳಲು ಮಾತ್ರವಲ್ಲ, ಆದರೆ ಅವುಗಳ ಮದ್ಯದಲ್ಲಿ ಸಂತೋಷಿಸುವದಕ್ಕೆ ಸಹ ಶಕ್ತರಾಗಿರುತ್ತೇವೆ (2 ಕೊರಿಂಥ 12:10; ಯಾಕೋಬ 1:2-3).

ದೇವರು ನಮ್ಮನ್ನು ಎರಡು ಕಾರಣಗಳಿಗಾಗಿ ಸಂತೈಸುತ್ತಾನೆ. ಮೊದಲನೆಯದಾಗಿ ಮಾನವ ತಂದೆಯು ತನ್ನ ಮಕ್ಕಳನ್ನು ಪ್ರೀತಿಸುವಂತೆಯೇ ನಮ್ಮನ್ನು ಪ್ರೀತಿಸುತ್ತಾನಾದ್ದರಿಂದ ಆತನು ನಮ್ಮನ್ನು ಸಂತೈಸುತ್ತಾನೆ. ಎರಡನೆಯದಾಗಿ, ನಾವು ಸಂಕಟದಲ್ಲಿರುವ ಇತರರೊಂದಿಗೆ ಆತನ ಸಂತೈಸುವಿಕೆಯನ್ನು ಹಂಚಿಕೊಳ್ಳುವಂತಾಗಬೇಕೆಂದು ಆತನು ನಮ್ಮನ್ನು ಸಂತೈಸುತ್ತಾನೆ. ದೇವರು ನಮಗೆ ಆದರಣೆ ಹಾಗು ಆಶೀರ್ವಾದವನ್ನು ನೀಡಬೇಕು. ನಾವು ನೀರಿನ ಕೊಳವೆಗಳಂತಿದ್ದೇವೆ; ದೇವರ ಪ್ರೀತಿಯು ನಮ್ಮೊಳಗೆ ಹರಿಯವಂತೆಯೇ ಅದು ನಮ್ಮಿಂದ ಹೊರಗೆ ಸಹ ಹರಿಯಬೇಕು. ಉಚಿತವಾಗಿ ಹೊಂದಿದ್ದೀರಿ; ಉಚಿತವಾಗಿ ಕೊಡಿರಿ (ಮತ್ತಾಯ 10;8).

5 ದೇವರ ಪ್ರೀತಿಯ ಜೊತೆಯಲ್ಲಿ ಕ್ರಿಸ್ತನ ನಿಮಿತ್ತದ ಬಾಧೆಗಳು ಸಹ ನಮ್ಮ ಜೀವಿತಗಳೊಳಗೆ ಹರಿಯುತ್ತವೆ. ಕ್ರೈಸ್ತರು ಕ್ರಿಸ್ತನ ಬಾಧೆಗಳಲ್ಲಿ – ಆತನ ಅವಮಾನ, ಆತನ ವೇದನೆ, ಆತನ ನೋವು, ಅಲ್ಲದೆ ಆತನ ಮರಣದಲ್ಲಿ ಸಹ – ಪಾಲುಗಾರರಾಗುವದಕ್ಕೆ ಕರೆಯಲ್ಪಟ್ಟಿರುತ್ತಾರೆ (ಫಿಲಿಪ್ಪಿ 3:10; 1 ಪೇತ್ರ 4:14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಆದರೆ ಕ್ರಿಸ್ತನ ಬಾಧೆಗಳು ನಮ್ಮ ಮೇಲೆ ಎಷ್ಟರ ವರೆಗೆ ಬಂದರೂ ಅಷ್ಟರ ಮಟ್ಟಿಗೇ ದೇವರ ಆದರಣೆ ಹಾಗು ನಿರೀಕ್ಷೆಯು ಸಹ ನಮಗೆ ಬರುವದು (ರೋಮ 8:18; 2 ಕೊರಿಂಥ 4;16-17).

ನೆನಪಿರಲಿ, ನಾವು ಕ್ರಿಸ್ತನ ನಿಮಿತ್ತ ಬಾಧೆಗೊಳಗಾಗುವಾಗ ನಾವು ಆದರಣೆ ಹಾಗು ಇತರ ಶ್ರೇಷ್ಠ ಆಶೀರ್ವಾದಗಳನ್ನು ಪಡೆ.ಯುತ್ತೇವೆ; ಆದರೆ ನಾವು ನಮ್ಮ ಸ್ವಂತ ಪಾಪ ಹಾಗು ಸ್ವಾರ್ಥತೆಯ ಕಾರಣದಿಂದ ಬಾಧೆಗೊಳಗಾಗುವದಾದರೆ ನಾವು ಆದರಣೆಯನ್ನಲ್ಲ ಆದರೆ ಶಿಕ್ಷಣವನ್ನು ಪಡೆಯುತ್ತೇವೆ.

6 ಇಲ್ಲಿ ಪೌಲನು ತನ್ನ ಸ್ವಂತ ಅನುಭವದಿಂದ ಕ್ರೈಸ್ತ ಜೀವನದ ಪ್ರಾಮುಖ್ಯ ಸೂತ್ರವೊಂದನ್ನು ಹೇಳುತ್ತಾನೆ: ನಮಗೆ ಸಂಕಟ ಬರುತ್ತದೋ ಅದರಿಂದ ನಿಮಗೆ ಧೈರ್ಯವೂ (ಆದರಣೆ) ರಕ್ಷಣೆಯೂ ಉಂಟಾಗುತ್ತದೆ. ಕೊರಿಂಥದವರಿಗೆ ಸುವಾರ್ತೆಯನ್ನು ಸಾರಿ ಅವರನ್ನು ನಂಬಿಕೆಗೆ ನಡಿಸುವದಕ್ಕಾಗಿ ಪೌಲನು ಬಹಳಷ್ಟು ಸಂಕಟ ಹಾಗು ಭಾದೆಯನ್ನು ಸಹಿಸಿಕೊಳ್ಳಬೇಕಾಗಿತ್ತು. ಆತನು ಬಾಧೆಯು ಅವರ ನಿಮಿತ್ತವಾಗಿತ್ತು.

ನಾವು ಸ್ವತಃ ಬಾಧೆಯನ್ನು ಅನುಭವಿಸುವಾಗ ನಾವು ನಮ್ಮ ಬಾಧೆಗಳ ಮೂಲಕವಾಗಿ ಇತರರನ್ನು ಆದರಣೆ ಮಾಡಲು ಹಾಗು ಸ್ವಸ್ಥತೆ ನೀಡಲು ಒಂದು ವಿಶೇಷವಾದ ಸಾಮರ್ಥ್ಯವನ್ನು ಪಡೆಯುತ್ತೇವೆ. ಒಂದು ವಿಧದಲ್ಲಿ ಇದು ಒಂದು ರಹಸ್ಯವಾಗಿದೆ. ಬಹಳಷ್ಟು ಬಾಧೆಗೊಳಗಾದವನೇ ಇತರರಿಗೆ ಬಹಳಷ್ಟು ಸಹಾಯ ಹಾಗು ಆದರಣೆಯನ್ನು ನೀಡುವದಕ್ಕೆ ಸಮರ್ಥನಾಗಿರುತ್ತಾನೆ. ಕ್ರಿಸ್ತನ ವಿಷಯವಾಗಿ ಬರೆದಿರುವದೇನೆಂದರೆ;—ಆತನ ಬಾಸುಂಡೆಗಳಿಂದ ನಮಗೆ ಗುಣವಾಯಿತು (ಯೆಶಾಯ 53:5). ಬಾಧೆಯಲ್ಲಿ ಇತರರನ್ನು ಗುಣಪಡಿಸುವದಕ್ಕೆ ದೊಡ್ಡ ಬಲವಿರುತ್ತದೆ. ಇದು ಒಂದು ಪ್ರಾಮುಖ್ಯವಾದ ಆತ್ಮೀಕ ಸತ್ಯವಾಗಿದೆ.

ಆದದರಿಂದ, ನಾವು ಯಾವದೇ ರೀತಿಯ ನಿಂದನೆ, ಹಿಂಸೆ, ಅಥವಾ ಸಂಕಟವನ್ನು ಅನುಭವಿಸುವಾಗ ನಮ್ಮ ಬಾಧೆಯ ಮೂಲಕ ಇತರರನ್ನು ಗುಣಪಡಿಸುವದಕ್ಕೆ ನಮಗೆ ಬಲವು ಸಹ ಕೊಡಲ್ಪಡುವೆಂಬದನ್ನು ನೆನಪಿನಲ್ಲಿಟ್ಟುಕೊಳ್ಳೋಣ. ನಾವು ಬಾಧೆಗೊಳಗಾಗುವಾಗ ನಮ್ಮ ಪ್ರೀತಿ ಹಾಗು ದೀನತೆಯು ಬಹಳ ಸುಲಭವಾಗಿ ತೋರಿಬರಬಹುದು. ನಾವು ಸ್ವತಃ

ಬಲಹೀನರಾಗಿರುವಾಗ ನಮ್ಮೊಳಗಿರುವ ಕ್ರಿಸ್ತನ ಬಲವು ಬಹಳ ಸಿದ್ಧವಾಗಿ ನಮ್ಮಿಂದ ಇತರರಿಗೆ ಹರಿಯಬಲ್ಲದು (2 ಕೊರಿಂಥ 12:9-10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಪೌಲನು ಸಂತೈಸಲ್ಪಟ್ಟಿರುವದಾದರೆ ಕೊರಿಂಥದವರು ಸಹ ಸಂತೈಸಲ್ಪಡಬೇಕು. ಕೊರಿಂಥದವರು ಪೌಲನ ಆದರಣೆ ಹಾಗು ಸಂಕಟ, ಆತನ ಸಂತೋಷ ಹಾಗು ದುಃಖಗಳೆರಡರಲ್ಲಿಯೂ ಪಾಲುಗಾರರಾಗಿದ್ದಾರೆ (ರೋಮ 12:15). ಪೌಲನ ಸ್ವಂತ ಬಾಧೆ ಹಾಗು ಆದರಣೆಯ. ಮೂಲಕವಾಗಿ ಕೊರಿಂಥದವರು ತಮ್ಮ ಬಾಧೆಗಳನ್ನು ಸಹಿಸಿಕೊಳ್ಳುವದಕ್ಕೆ ಇನ್ನು ಚೆನ್ನಾಗಿ ಸಮರ್ಥರಾಗಿರಬೇಕು.

**7** ಕೊರಿಂಥದವರು ಪೌಲನ ಬಾಧೆ ಹಾಗು ಆದರಣೆಯಲ್ಲಿ ಪಾಲುಗಾರರಾದ ಹಾಗೆಯೇ ನಾವು ಒಬ್ಬೊಬ್ಬರು ಸಹ ಒಬ್ಬರೊಬ್ಬರ ಬಾಧೆ ಹಾಗು ಆದರಣೆಯಲ್ಲಿ ಪಾಲುಗಾರರಾಗಬೇಕು. ನಾವೆಲ್ಲರೂ ಒಂದೇ ದೇಹದ ಅಂಗಗಳಾಗಿದ್ದೇವೆ; ಒಂದು ಅಂಗಕ್ಕೆ ನೋವಾಗುವದಾದರೆ ಎಲ್ಲಾ ಅಂಗಗಳಿಗೂ ನೋವಾಗುವದು. ಒಂದು ಅಂಗಕ್ಕೆ ಆದರಣೆಯಾಗುವದಾದರೆ ಎಲ್ಲಾ ಅಂಗಗಳಿಗೂ ಆದರಣೆ ಉಂಟಾಗುವದು (1 ಕೊರಿಂಥ 12:26-27).

**8-10** ಪೌಲನು ಇಲ್ಲಿ ಆಸ್ಯ[4] ಸೀಮೆಯಲ್ಲಿ ನಮಗೆ ಸಂಭವಿಸಿದ ಸಂಕಟವನ್ನು ಕುರಿತು ಪ್ರಸ್ತಾಪಿಸುತ್ತಾನೆ (ವಚನ 8). ಈ ಸಂಕಟಗಳಾವವೆಂಬುದು ಖಚಿತವಾಗಿರುವದಿಲ್ಲ. ಬಹುಶ: ಅವು ಗಳಲ್ಲಿ ಒಂದು ಅ.ಕೃತ್ಯ 19:23-41ರಲ್ಲಿ ಬಣ್ಣಿಸಲಾಗಿರುವ ಘಟನೆಗೆ ಸಂಬಂಧಿಸಿರುತ್ತದೆ.

ಪೌಲನು ತನ್ನ ಬಾಧೆಗಳ ಮುಖಾಂತರವಾಗಿ ತನ್ನ ಮೇಲೆಯಲ್ಲ, ಆದರೆ ನಮ್ಮನ್ನು ಎಲ್ಲಾ ಸಂಕಟಗಳಿಂದ ಬಿಡಿಸಲು ಶಕ್ತನಾದ ದೇವರ ಮೇಲೆ ಭರವಸವಿಡುವದಕ್ಕೆ ಕಲಿತುಕೊಂಡನು.

ಮನುಷ್ಯನಿಗೆ ಯಾವದು ಅನಾಹುತವಾಗಿರುತ್ತದೋ ಅದು ದವೇರಿಗೆ ಒಂದು ಅವಕಾಶವಾಗಿರುತ್ತದೆ; ನಮ್ಮ ಅನಾಹುತಗಳು ದೇವರಿಗೆ ತನ್ನ ಬಲವನ್ನು ತೋರಿಸುವದಕ್ಕೆ ಒಂದು ಸದಾವಕಾಶವಾಗಿರುತ್ತದೆ. ನಾವು ಹತಾಶೆಯಲ್ಲಿರುವಾಗ, ನಮಗೆ ಯಾವ ದಾರಿಯೂ ಕಾಣಿಸಿದಿರುವಾಗ, ನಮಗೆ ಇನ್ನು ಸಹಿಸಿಕೊಳ್ಳಲಾರದವರಾದಾಗ ನಾವು ದೇವರ ಅತಿ ಶ್ರೇಷ್ಠ ಕಾರ್ಯಗಳನ್ನು ನೋಡುವದಕ್ಕೆ ನಿರೀಕ್ಷಿಸಬಹುದು.

**11** ಪೌಲನು ಕೊರಿಂಥದವರಿಗೆ "ನೀವು ನಮಗೋಸ್ಕರ ಪ್ರಾರ್ಥನೆ ಮಾಡುವವರಾಗಿ ಸಹಕಾರಿಗಳಾಗಿರುವಿರಿ" ಎಂದು ಹೇಳುತ್ತಾನೆ. ದೇವರು ಸಾಮಾನ್ಯವಾಗಿ ವಿಶ್ವಾಸಿಗಳ ಪ್ರಾರ್ಥನೆಗಳ ಅನುಸಾರವಾಗಿ ಕಾರ್ಯ ಮಾಡುತ್ತಾನೆ. ಸಮಸ್ತ ಬಲವು ದೇವರಲ್ಲಿರುತ್ತದೆ, ಆದರೆ ನಾವು ಆ ಬಲವನ್ನು ಮುಖ್ಯವಾಗಿ ಪ್ರಾರ್ಥನೆಯ ಮೂಲಕ ಹೊಂದಿಕೊಳ್ಳುತ್ತೇವೆ. ದೇವರು ಸಮಸ್ತವನ್ನೂ ಮಾಡಬಲ್ಲನು, ಆದರೆ ಆತನು ಸಾಮಾನ್ಯವಾಗಿ ನಾವು ಕೇಳಿಕೊಳ್ಳುವದನ್ನು ಮಾತ್ರವೇ ಮಾಡುತ್ತಾನೆ. ನಾವು ನಮ್ಮ ಚಿಕ್ಕ ಪ್ರಾರ್ಥನೆಗಳಿಂದ ದೇವರ ಆಶೀರ್ವಾದಗಳನ್ನು ಮೀತಿಗೊಳಿಸದಿರೋಣ!

ಹೀಗೆ ಪೌಲನ ಪರವಾಗಿ ಕೊರಿಂಥದವರ ಪ್ರಾರ್ಥನೆಗಳು ಬಹಳ ಪ್ರಾಮುಖ್ಯವಾಗಿದ್ದವು . ಕೊರಿಂಥದವರು ಪೌಲನಿಗಾಗಿ ಪ್ರಾರ್ಥಿಸಿರದಿದ್ದರೆ ಆತನು ತನ್ನ ಎಲ್ಲಾ ಸಂಕಟಗಳಿಂದ ಬಿಡಿಸಲ್ಪಡದಿರುವ ಸಾಧ್ಯತೆಯಿತ್ತು. ದೇವರು ತನ್ನ ಜನರ ಪ್ರಾರ್ಥನೆಗಳಿಗನುಸಾರವಾಗಿ ಕಾರ್ಯಮಾಡಲಿಚ್ಚಿಸುತ್ತಾನೆಂಬದನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳೋಣ. ಆದದರಿಂದ, ನಾವು ಒಬ್ಬರಿಗೋಸ್ಕರ ಒಬ್ಬರು ಪ್ರಾರ್ಥನೆ ಮಾಡುವದನ್ನು ಅಲಕ್ಷಿಸದಿರೋಣ.

ನಾವು ಹೆಚ್ಚಾಗಿ ಪ್ರಾರ್ಥಿಸುವಾಗ ಹೆಚ್ಚಾಗಿ ಪಡೆಯುತ್ತೇವೆ. ನಾವು ಹೆಚ್ಚಾಗಿ ಪಡೆಯುವಾಗ ನಾವು ಹೆಚ್ಚಾಗಿ ಕೃತಜ್ಞತೆಯನ್ನು ಸಲ್ಲಿಸಬೇಕಾಗಿರುತ್ತದೆ.

## ಪೌಲನ ಬದಲಾದ ಯೋಜನೆಗಳು (1:12-24)

**12-14** ಕೊರಿಂಥದ ಕ್ರೈಸ್ತರಲ್ಲಿ ಕೆಲವರು ಪೌಲನನ್ನು ವಿರೋಧಿಸಿ ಅವನ ಬಗ್ಗೆ ಕೆಟ್ಟದ್ದಾಗಿ ಮಾತಾಡಿದರು. ಆದರೆ ಪೌಲನು ಇಲ್ಲಿ ತಾನು ಕೊರಿಂಥದವರ ವಿಷಯದಲ್ಲಿ ಪವಿತ್ರತ್ವವೂ ನಿಷ್ಕಪಟತ್ವವೂ ಉಳ್ಳವನಾಗಿ ನಡಕೊಂಡ ನೆಂಬದನ್ನು ಅವರಿಗೆ ಜ್ಞಾಪಕಪಡಿಸುತ್ತಾನೆ. ಆತನು ಅವರ ವಿಷಯದಲ್ಲಿ ದೇವರ ಕೃಪೆಯ ಅನುಸಾರವಾಗಿ ನಡಕೊಂಡಿದ್ದಾನೆ (1 ಕೊರಿಂಥ 15:10 ನೋಡಿರಿ)... ಕೊರಿಂಥದವರೆಲ್ಲರೂ ಇದನ್ನು ಅರ್ಥಮಾಡಿಕೊಂಡು ಕರ್ತನಾದ ಯೇಸುವಿನ ಪ್ರತ್ಯಕ್ಷತೆಯಲ್ಲಿ (ವಚನ 14) – ಅಂದರೆ, ಯೇಸು ತಿರಿಗಿ ಬರುವಾಗ – ಆತನೂ ಕೊರಿಂಥದವರೂ ಪರಸ್ಪರರಿಗೆ ಉಲ್ಲಾಸಕಾರಣರಾಗಬೇಕೆಂದು ಪೌಲನು ಇಚ್ಚಿಸುತ್ತಾನೆ (1 ಥೆಸಲೋನಿಕ 2:19 ನೋಡಿರಿ).

ಪೌಲನು 12ನೇ ವಚನದಲ್ಲಿ ತಾನು ಪವಿತ್ರತ್ವವೂ ನಿಷ್ಕಪಟ್ಟತ್ವವೂ ಉಳ್ಳವನಾಗಿ ನಡಕೊಂಡನೆಂದು ಅವನ ಮನಸ್ಸು ಸಾಕ್ಷಿ ಹೇಳುತ್ತದೆ ಎಂದು ಬರೆಯುತ್ತಾನೆ. ಪೌಲನ ಮನಸ್ಸು ದೋಷವಿಲ್ಲದ್ದಾಗಿತ್ತು. ಆತನು ದೇವರೊಂದಿಗೆ ಸರಿಯಾದ ಸಂಬಂಧದಲ್ಲಿದ್ದನು; ಆತನು ದೇವರೊಂದಿಗೆ ಅನ್ಯೋನ್ಯತೆಯಲ್ಲಿದ್ದನು. ಈ ಕಾರಣಕ್ಕಾಗಿಯೇ ದೇವರ ಬಲವು ಪೌಲನ ಜೀವಿತದಲ್ಲಿ ಯಾವಾಗಲೂ ಕಂಡುಬರುತ್ತಿತ್ತು. ಒಂದು ವೇಳೆ ನಮ್ಮ ಜೀವಿತಗಳಲ್ಲಿ ಯಾವದೇ ಆತ್ಮೀಕ ಬಲವಿಲ್ಲದಿರುವದಾದರೆ ಅದಕ್ಕೆ ಕಾರಣ ನಮ್ಮ ಮನಸ್ಸಾಕ್ಷಿಯು ದೋಷವು ಳ್ಳದ್ದಾಗಿ – ಅಂದರೆ, ನಾವು ಬಿಟ್ಟುಬಿಡುವದಕ್ಕೆ ಮನಸ್ಸು ಮಾಡದಿರುವ ಪಶ್ಚಾತಾಪಪಡದ ಯಾವದಾದರೂ ಪಾಪವು ನಮ್ಮ ಜೀವಿತಗಳಲ್ಲಿರುವ – ಇರುವ ಸಾಧ್ಯತೆಯಿರುತ್ತದೆ. ನಾವು ಅದನ್ನು ಬಿಟ್ಟು ಬಿಡದಿದ್ದರೆ ದೇವರು ನಮ್ಮ ಪ್ರಾರ್ಥನೆಗಳನ್ನು ಕೇಳುವದಿಲ್ಲ ಮತ್ತು ನಾವು ಆತನಿಂದ ಯಾವದೇ ಬಲ ಅಥವಾ ಆಶಿರ್ವಾದವನ್ನು ಪಡೆಯುವದಿಲ್ಲ (ಕೀರ್ತನೆಗಳು 66:18).

**15-16** ಪೌಲನು 15ನೇ ವಚನದಲ್ಲಿ ಬರೆಯುವದೇನೆಂದರೆ: ನಾನು ಇಂಥ ಭರವಸವು ಳ್ಳವನಾಗಿದ್ದು (ಕೊರಿಂಥದವರು ಪೌಲನನ್ನು ತಮ್ಮ ನಿಜವಾದ ಅಪೊಸ್ತಲನೆಂದು ಹೆಮ್ಮೆ ಪಟ್ಟುಕೊಳ್ಳುವರೆಂಬ ಭರವಸೆ) ಮೊದಲು ನಿಮ್ಮ ಬಳಿಗೆ ಬರಲು ...ಯೋಚಿಸಿದ್ದನು. ಕೊರಿಂಥದವರು ತನ್ನನ್ನು ತಮ್ಮ ಅಪೊಸ್ತಲನಂತೆ ಸ್ವೀಕರಿಸಿಕೊಳ್ಳವರೆಂಬ ಭರವಸೆಯನ್ನು ಪೌಲನು ಹೊಂದಿದ್ದನಾದ್ದರಿಂದ ಆತನು ಮೆಕೆದೋನ್ಯಕ್ಕೆ ಹೋಗುವ ಮುಂಚೆ ಅವರನ್ನು ಬೇಟಿಯಾಗುವದಕ್ಕೆ ಇಚ್ಛಿಸಿದ್ದನು. ಆದರೆ ಆತನು ಕೊರಿಂಥದವರೊಳಗೆ ತನಗೆ ಕೆಲವು ಹೊಸ ವಿರೋಧಗಳಿರುವದರ ಕುರಿತಾಗಿ ಕೇಳಿದ ಬಳಿಕ ಆತನು ಆ ಬೇಟಿಯನ್ನು ಕೈಬಿಟ್ಟು ಮೊದಲು ಮೆಕೆದೋನ್ಯಕ್ಕೆ ಹೋಗಲು ತೀರ್ಮಾನಿಸಿಕೊಂಡನು – ಅದು ಆತನ ಮೂಲ ಯೋಜನೆಯಾಗಿತ್ತು (1 ಕೊರಿಂಥ 16:5). ತರುವಾಯ ಪೌಲನು ಮೆಕೆದೋನ್ಯ ಮತ್ತು ಕೊರಿಂಥಕ್ಕೆ ಬೇಟಿನೀಡಿದಬಳಿಕ ಯೂದಾಯದಲ್ಲಿನ ಬಡಕ್ರೈಸ್ತರಿಗಾಗಿ ಸಂಗ್ರಹಿಸಿದ್ದ ಕಾಣಿಕೆಯನ್ನು ಕೊಡುವದಕ್ಕಾಗಿ ಯೂದಾಯಕ್ಕೆ[5] ಹೋಗಲು ಯೋಚಿಸಿದನು (1 ಕೊರಿಂಥ 16:3-4).

**17** ಪೌಲನ ಬದಲಾದ ಯೋಜನೆಗಳ ನಿಮಿತ್ತವಾಗಿ ಕೊರಿಂಥದವರಲ್ಲಿ ಕೆಲವರು ಆತನ ವಿರುದ್ಧ ಮಾತಾಡುವದಕ್ಕೆ ಪ್ರಾರಂಭಿಸಿ, " ಪೌಲನು ಬರುತ್ತೇನೆಂದು ಹೇಳುತ್ತಾನೆ, ಆದರೆ ಬರುವದಿಲ್ಲ, ಇಂದು ಆತನು 'ಹೌದು' ಅನ್ನುತ್ತಾನೆ, ನಾಳೆ 'ಅಲ್ಲ' ಅನ್ನುತ್ತಾನೆ. ಅವನು ಹೇಳುವದನ್ನು ಯಾರು ನಂಬುವರು?" ಎಂದು ಹೇಳಿದರು.

**18-20** ಇಲ್ಲಿ ಪೌಲನು ಅಂತಹ ಹೇಳಿಕೆಗೆ ಉತ್ತರಿಸುತ್ತಾನೆ. ಆತನು ಕೊರಿಂಥದವರಿಗೆ ಪ್ರತ್ಯುತ್ತರವಾಗಿ ಹೇಳುವದೇನೆಂದರೆ: ನಾನು ಹೇಳುವದನ್ನು ನೀವು ಸಂಪೂರ್ಣವಾಗಿ ನಂಬಬಹುದು. ನಾನು ಕಾರಣವಿಲ್ಲದೆ ನನ್ನ ಯೋಜನೆಗಳನ್ನು ಬದಲಾಯಿಸುವದಿಲ್ಲ; ನಾನು ಪವಿತ್ರಾತ್ಮನ ನಡಿಸುವಿಕೆಯ ನಿಮಿತ್ತವಾಗಿ ನನ್ನ ಯೋಜನೆಗಳನ್ನು ಬದಲಾಯಿಸಿಕೊಂಡೆನು.

ಆದರೆ ಮನುಷ್ಯರ ಯೋಜನೆಗಳು ಬದಲಾದಾಗ್ಯು ಪೌಲ ಸೀಲ ಮತ್ತು ತಿಮೊಥೆಯರು ಸಾರುವ ಕ್ರಿಸ್ತನ ಸುವಾರ್ತೆಯು ಎಂದಿಗೂ ಬದಲಾಗುವದಿಲ್ಲ. ಕ್ರಿಸ್ತನ ಸುವಾರ್ತೆಯು ಎಂದಿಗೂ ಈ ಹೊತ್ತು "ಹೌದು" ಎಂದೂ ನಾಳೆ "ಅಲ್ಲ" ಎಂದೂ ಇರುವದಿಲ್ಲ. ಸುವಾರ್ತೆಯು ಯವಾಗಲೂ "ಹೌದು" ಎಂದಾಗಿರುತ್ತದೆ; ಅದು ಯಾವಾಗಲೂ ಸತ್ಯವೇ. ದೇವರು ನಂಬಿಗಸ್ತನು (ವಚನ 18). ದೇವರು ಕೊಟ್ಟಿರುವ ವಾಗ್ದಾನಗಳೆಲ್ಲವೂ ಕ್ರಿಸ್ತನಲ್ಲೇ 'ಹೌದು' ಎಂದಾಗಿರುತ್ತವೆ (ವಚನ 20). ಅಂದರೆ, ದೇವರ ಎಲ್ಲಾ ವಾಗ್ದಾನಗಳು ಕ್ರಿಸ್ತನಲ್ಲಿ ನೆರವೇರುತ್ತವೆ (ಲೂಕ 24:44). ಮತ್ತು ಕ್ರಿಸ್ತನು ನಮಗಾಗಿ ಮಾಡಿರುವದೆಲ್ಲಕ್ಕೂ ನಾವು "ಆಮೆನ್"[6] ಎಂದು ಹೇಳಬಹುದು.

ಸೀಲನು (ಅಥವಾ ಸಿಲ್ವಾನನು, ಇದು ಆತನ ಗ್ರೀಕ್ ಹೆಸರು) ಯೆರೂಸಲೇಮ ಸಭೆಯ ಒಬ್ಬ ನಾಯಕನಾಗಿದ್ದನು. ಸೀಲನು ಪೌಲನ ಎರಡನೆಯ ಸುವಾರ್ತಾ ಪ್ರಯಾಣದಲ್ಲಿ ಅವನ ಸಂಗಡವಿದ್ದನು (ಅ.ಕೃತ್ಯ 15:40). ಪೌಲನು ಸಭೆಯನ್ನು ಸ್ಥಾಪಿಸುವದಕ್ಕೆ ಮೊದಲು ಕೊರಿಂಥಕ್ಕೆ ಹೋದಾಗ ಸೀಲನು ಹಾಗು ತಿಮೊಥೆ ಇಬ್ಬರೂ ಅವನ ಜೊತೆಯಲ್ಲಿದ್ದರು (ಅ.ಕೃತ್ಯ 18:1,5).

**21-22** ದೇವರು ನಮ್ಮನ್ನು ಕ್ರಿಸ್ತನಲ್ಲಿ ಸ್ಥಿರ ಪಡಿಸುವನು. ದೇವರು ಪೌಲನನ್ನು ಅಭಿಷೇಕಿಸಿದ ಪ್ರಕಾರವೇ ನಮ್ಮನ್ನು ಸಹ ತನ್ನ ಪವಿತ್ರಾತ್ಮನನಿಂದ ಅಭಿಷೇಕಿಸುತ್ತಾನೆ; ಅಂದರೆ, ಆತನು ತನ್ನ ಕೆಲಸವನ್ನು ಮಾಡುವದಕ್ಕಾಗಿ ನಮ್ಮನ್ನು ನೇಮಿಸುತ್ತಾನೆ, ಸಿದ್ಧಗೊಳಿಸುತ್ತಾನೆ ಹಾಗು ಕೃಪೆಯನ್ನು ಕೊಡುತ್ತಾನೆ (ಯೋಹಾನ 20:21; 1 ಯೋಹಾನ 2:20, 27 ನೋಡಿರಿ). ಆತನು ನಮ್ಮ ಮೇಲೆ ತನ್ನ ಯಜಮಾನತ್ವದ ಮುದ್ರೆ ಹಾಕುತ್ತಾನೆ (ವಚನ 22); ಆ ಮುದ್ರೆಯು ಪವಿತ್ರಾತ್ಮನ "ಮುದ್ರೆ" ಆಗಿದೆ (ಎಫೆಸ 1:13, 4:30). ಹೊಸ ಒಡಂಬಡಿಕೆಯ ಕಾಲದಲ್ಲಿ ಒಂದು ಮುದ್ರೆಯು ಅಧಿಕಾರ ಅಥವಾ ಒಡೆಯತನದ ಚಿನ್ಹೆಯಾಗಿತ್ತು. ಒಬ್ಬ ವ್ಯಕ್ತಿಯು ಯಾವು ದಾದರ ಮೇಲೆಯಾದರೂ ತನ್ನ ಮುದ್ರೆಯನ್ನು ಹಾಕುವದಾದರೆ ಆತನು ಆ ವಸ್ತವಿನ ಒಡೆಯನೆಂದು ನಿರೂಪಿತವಾಗುತ್ತಿತ್ತು. ಅದೇ ರೀತಿಯಾಗಿ ದೇವರು ನಮ್ಮ ಮೇಲೆ ತನ್ನ ಪವಿತ್ರಾತ್ಮನ ಮುದ್ರೆಯನ್ನು ಹಾಕುವಾಗ ನಾವು ಆತನ ಸ್ವತ್ತು – ನಾವು ಆತನಿಗೆ, ಕ್ರಿಸ್ತನಿಗೆ ಸೇರಿದವರು—ಎಂಬದಕ್ಕೆ ಆಧಾರವನ್ನು ನೀಡುವವನಾಗಿದ್ದಾನೆ. ಕ್ರಿಸ್ತನು ನಮ್ಮನ್ನು ತನ್ನ ಸ್ವಂತ ರಕ್ತದಿಂದ "ಕೊಂಡುಕೊಂಡಿದ್ದಾನೆ" (1 ಕೊರಿಂಥ 6:16-20 ಮತ್ತು ವ್ಯಾಖ್ಯಾನ ನೋಡಿರಿ). ನಾವು ಪವಿತ್ರಾತ್ಮನ ಮುದ್ರೆಯನ್ನು ಹೊಂದಿದ್ದೇವಾದ್ದರಿಂದ ನಾವು ಕ್ರಿಸ್ತನಿಗೆ ಸೇರಿದ್ದೇವೆಂಬದನ್ನು ಖಚಿತವಾಗಿ ಬಲ್ಲೆವು (ರೋಮ 8:16; 1 ಯೋಹಾನ 4:13 ನೋಡಿರಿ).

ದೇವರು ತನ್ನ ಪವಿತ್ರಾತ್ಮನನ್ನು ನಮ್ಮ ಹೃದಯಗಳಲ್ಲಿಡುತ್ತಾನೆ (ವಚನ 22). ಪವಿತ್ರಾತ್ಮನು ನಮಗೆ ಪರಲೋಕದಲ್ಲಿ ದೊರೆಯುವ ಪ್ರತಿಫಲಕ್ಕೆ ಸಂಚಕಾರ, ಮುಂಗಡ ಆಗಿದ್ದಾನೆ (ಎಫೆಸ 1:14 ನೋಡಿರಿ). ಈ ಲೋಕದಲ್ಲಿ ದೇವರ ಮಕ್ಕಳಾಗಿ ನಾವು ಒಂದು ಭಾಗವನ್ನು – ಸಂಚಕಾರ – ಮಾತ್ರವೇ ಪಡೆಯುತ್ತೇವೆ; ಆದರೆ ಪರಲೋಕದಲ್ಲಿ ನಾವು ನಮ್ಮ ಇಡೀ ಸ್ವಾಸ್ತ್ಯವನ್ನು ಪಡೆಯುವೆವು (ರೋಮ 8:23).

ಹೀಗೆ, ಕ್ಲುಪ್ತವಾಗಿ ಹೇಳುವದಾದರೆ, ಕ್ರಿಸ್ತನ ವಿಶ್ವಾಸಿಯು ಪವಿತ್ರಾತ್ಮನಿಂದ ಅಭಿಷೇಕಿಸಲ್ಪಟ್ಟಿದ್ದಾನೆ, ಆತ್ಮನ ಮುದ್ರೆಯನ್ನು ಹೊಂದಿದ್ದಾನೆ, ಹಾಗು ಪರಲೋಕದಲ್ಲಿನ ತನ್ನ ಸ್ವಾಸ್ತ್ಯಕ್ಕೆಸಂಚಕಾರವಾಗಿ ಆತ್ಮನನ್ನು ಹೊಂದಿರುತ್ತಾನೆ.

**23** ಪೌಲನು ಕೊರಿಂಥದವರಿಗೆ ತನ್ನ ಮೊದಲನೆಯ ಪತ್ರಿಕೆಯನ್ನು ಬರೆದ ನಂತರ ಕೊರಿಂಥಕ್ಕೆ ಕ್ಲುಪ್ತವಾದ ಬೇಟಿಯನ್ನು ನೀಡಿದ್ದನು. ಅದು ದುಃಖಕರವಾದ ಬೇಟಿಯಾಗಿತ್ತು (2 ಕೊರಿಂಥ 2:1). ಆದುದರಿಂದ, ಪೌಲನು ಪು ನಃ ಕೊರಿಂಥಕ್ಕೆ ತಕ್ಷಣ ಬೇಟಿ ನೀಡಲು ಬಯಸಲಿಲ್ಲ; ಯಾಕೆಂದರೆ ಆತನು ತಕ್ಷಣ ಹೋಗಿದ್ದರೆ ಅವರನ್ನು ಶಿಕ್ಷಿಸಬೇಕಾಗುತ್ತಿತ್ತು. ಇದರ

ಅರ್ಥವು ಬೆತ್ತತೆಗೆದುಕೊಂಡು ಅವರ ಬಳಿಗೆ ಹೋಗುವದು ಎಂದಾಗಿತ್ತು (1 ಕೊರಿಂಥ 4:21); ಮತ್ತು ಆತನಿಗೆ ಹಾಗೆ ಮಾಡುವದಕ್ಕೆ ಇಷ್ಟ ವಿರಲಿಲ್ಲ. ಆತನು ಇನ್ನೊಂದು "ದುಃಖಕರವಾದ ಬೇಟಿಯನ್ನು" ನೀಡುವದಕ್ಕೆ ಬಯಸಿರಲಿಲ್ಲ.

24 ಪೌಲನು ಒಬ್ಬ ಅಪೊಸ್ತಲನಾಗಿ ಕೊರಿಂಥದವರ ಪಾಪಗಳಿಗೋಸ್ಕರ ಅವರನ್ನು ಶಿಕ್ಷಿಸುವದಕ್ಕೆ ಸಂಪೂರ್ಣ ಅಧಿಕಾರ ಹೊಂದಿದ್ದಾಗ್ಯು ಆತನು ಅವರ ಮೇಲೆ ದೊರೆತನ ಮಾಡುವದಕ್ಕೆ ಇಚ್ಛಿಸಲಿಲ್ಲ (1 ಪೇತ್ರ 5:2-3 ನೋಡಿರಿ). ಕ್ರಿಸ್ತನು ಮಾತ್ರವೇ ಕರ್ತನಾಗಿದ್ದಾನೆ. ಪ್ರತಿಯೊಬ್ಬನು ಕ್ರಿಸ್ತನ ಮುಂದೆ ಮಾತ್ರವೇ ನಿಲ್ಲುತ್ತಾನೆ ಇಲ್ಲವೆ ಬೀಳುತ್ತಾನೆ (ರೋಮ 14:4). ಪೌಲನು ತನ್ನನ್ನು ಕೊರಿಂಥದವರ ನಂಬಿಕೆಯ ಮೇಲೆ ಕರ್ತನನ್ನಾಗಲಿ ಅಥವಾ ನ್ಯಾಯಾಧಿಪತಿಯನ್ನಾಗಲಿ ಮಾಡಿಕೊಳ್ಳಲು ಇಚ್ಛಿಸಲಿಲ್ಲ. ಬದಲಾಗಿ, ಆತನು ಅವರ ನಂಬಿಕೆಯನ್ನು ಬಲಪಡಿಸಲು ಬಯಸಿದ್ದನು, ಯಾಕೆಂದರೆ ನಂಬಿಕೆಯ ಮುಖಾಂತರ ಅವರು ದೃಢವಾಗಿ ನಿಂತು ಕರ್ತನ ಸಂತೋಷವನ್ನು ಅನುಭವಿಸುವದಕ್ಕೆ ಶಕ್ತರಾಗುವರು (ಫಿಲಿಪ್ಪಿ 1:25-26 ನೋಡಿರಿ).

---

## ಅಧ್ಯಾಯ - 2

### ಪೌಲನ ಕಳೆದು ಹೋದ ಪತ್ರಿಕೆ (2:1-4)

1 ಪೌಲನು ಕೊರಿಂಥದವರಿಗೆ ತನ್ನ ಮೊದಲನೆಯ ಪತ್ರಿಕೆಯನ್ನು ಬರೆದ ನಂತರ ಆತನು ಕೊರಿಂಥಕ್ಕೆ ದುಃಖದಿಂದ ಬೇಟಿ ನೀಡಿದನು (2 ಕೊರಿಂಥ 13:2). ಪೌಲನು ಬೇಟಿ ನೀಡಿದ ಸಮಯದಲ್ಲಿ ಆತನನ್ನು ವಿರೋಧಿಸುವವರು ಕೊರಿಂಥದ ಸಭೆಯಲ್ಲಿ ಅನೇಕರಿದ್ದರು. ಆದ್ದರಿಂದ, ಪೌಲನು ಕೊರಿಂಥದಿಂದ ಹಿಂದಿರುಗಿದ ಬಳಿಕ ಕೊರಿಂಥದವರಿಗೆ ಒಂದು ಕಠಿಣವಾದ ಪತ್ರಿಕೆಯನ್ನು ಬರೆದನು. ಆ ಪತ್ರಿಕೆಯು ಕಳೆದು ಹೋಗಿರುತ್ತದೆ (2 ಕೊರಿಂಥವರಿಗೆಃ ಪರಿಚಯ ಭಾಗವನ್ನು ನೋಡಿರಿ).

2 ಪೌಲ ಹಾಗು ಕೊರಿಂಥದವರ ನಡುವೆ ಅಷ್ಟೊಂದು ವಿರೋಧ ಮತ್ತು ಅನಾರೋಗ್ಯಕರ ಭಾವನೆಗಳಿರುವ ವೇಳೆಯಲ್ಲಿ ಆತನು ಪು ನಃ ಕೊರಿಂಥಕ್ಕೆ ಹೋಗಲು ಬಯಸಲಿಲ್ಲ. ಒಂದು ವೇಳೆ ಪೌಲನು ಅವರ ಬಳಿಗೆ ಹೋಗುವದಾಗಿದ್ದರೆ ಅದು ಒಂದು ಸಂತೋಷವನ್ನು ಕೊಡುವ ಹಾಗು ತೆಗೆದುಕೊಳ್ಳುವ ಸಮಯವಾಗಿರಬೇಕೆಂದು ಬಯಸಿದ್ದನು. ಒಂದು ವೇಳೆ ಅವನು ಬೆತ್ತ ತೆಗೆದುಕೊಂಡು ಹೋದರೆ ಅವರು ಅವನನ್ನು ಆನಂದ ಪಡಿಸಲು ಹೇಗಾದೀತು? (1 ಕೊರಿಂಥ 4:21).

3-4 ಈ ವಚನಗಳಲ್ಲಿ ನಾವು ಪೌಲನ ಹೃದಯವನ್ನು ಕಾಣುತ್ತೇವೆ. ಪೌಲನು ನಿಜವಾದ ಕ್ರೈಸ್ತ ಸಭಾಪಾಲಕ ಅಥವಾ ಕುರುಬನ ಹೃದಯವನ್ನು ಹೊಂದಿದ್ದನು. ಆತನು ಕೊರಿಂಥದವರಿಗೆ ಕಠಿಣವಾಗಿ ಬರೆದನು ಮತ್ತು ಮಾತಾಡಿದನು, ಆದರೆ ಅದನ್ನು ಆತನು ಹೃದಯದ ಬಹುಸಂಕಟ ದಿಂದಲೂ ವ್ಯಾಕುಲದಿಂದಲೂ[7] ಬರೆದನು (ವಚನ 4). ಪೌಲನು ಅವರ ಮೇಲೆ ಇಟ್ಟಿದ್ದ ಪ್ರೀತಿಯ ನಿಮಿತ್ತದಿಂದಲೇ ಅವರಿಗೆ ಕಠಿಣವಾಗಿ ಬರೆದನು. ಅವರ ನಡುವಿನ "ದುಃಖಕರ" ವಿಷಯವು ಶೀಘ್ರ್ರವೇ ಸರಿಪಡಿಸಲ್ಪಟ್ಟು ಪು ನಃ ಅವರು ಒಬ್ಬರೊಬ್ಬರ ಸಂತೋಷದಲ್ಲಿ ಪಾಲುಗಾರರಾಗಬೇಕೆಂಬುದಕ್ಕಾಗಿ ಆತನು ಆ ರೀತಿಯಲ್ಲಿ ಬರೆದನು.

### ಪಾಪ ಮಾಡಿದವನಿಗೆ ಕ್ಷಮಾಪಣೆ (2:5-11)

5 ಕೊರಿಂಥದವರಲ್ಲಿ ಒಬ್ಬನು ದುಃಖವನ್ನು ಉಂಟುಮಾಡಿದ್ದನು – ಅಂದರೆ, ಆತನು ಪಾಪ ಮಾಡಿದ್ದನು. ಈ ವ್ಯಕ್ತಿಯು ಪೌಲನಿಗೆ ಮಾತ್ರವಲ್ಲದೇ ಕೊರಿಂಥದಲ್ಲಿನ ಸಭೆಗೆಲ್ಲಾ ದುಃಖವನ್ನು ಉಂಟುಮಾಡಿದ್ದನು. ಒಂದು ವೇಳೆ ಒಬ್ಬ ಸದಸ್ಯನು ತನ್ನ ಮೇಲೆ ಅವಮಾನವನ್ನು ತರುವವನಾಗಿದ್ದಾನೆ (1 ಕೊರಿಂಥ 12:26).

ಸಭೆಗೆ ದುಃಖವನ್ನು ಉಂಟುಮಾಡಿದ ಈ ವ್ಯಕ್ತಿಯಾರೆಂಬದು ಖಚಿತವಾಗಿರುವದಿಲ್ಲ, ಆದರೆ ಇವರು 1 ಕೊರಿಂಥ 5:1-5ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ತನ್ನ ಮಲತಾಯಿಯೊಂದಿಗೆ ಜಾರತ್ವ ಮಾಡಿದ್ದ ವ್ಯಕ್ತಿಯೇ ಆಗಿದ್ದಾನೆಂದು ಬಹುಪಾಲು ಬೈಬಲ್ ಪಂಡಿತರು ನಂಬುತ್ತಾರೆ. ಈ ವ್ಯಕ್ತಿಯು ಅವರೆಲ್ಲರನ್ನೂ ಸ್ವಲ್ಪಮಟ್ಟಿಗೆ ದುಃಖಪಡಿಸಿದ್ದಾನೆ ಎಂದು ಪೌಲನು ಕೊರಿಂಥದವರಿಗೆ ಹೇಳುತ್ತಾನೆ. ಆತನು ಅದನ್ನು ಅತಿಶಯೋಕ್ತಿಯನ್ನಾಗಿ ಮಾಡಬಾರದೆಂದು "ಸ್ವಲ್ಪಮಟ್ಟಿಗೆ" ಎಂದು ಹೇಳುತ್ತಾನೆ. ಆದುಃಖವು ಎಲ್ಲರಲ್ಲಿಯೂ ಉಂಟಾಯಿತೆಂದು ನಾನು ಹೇಳುವದಿಲ್ಲ ಎಂಬ ಹೇಳಿಕೆಯ ಅರ್ಥವು "ಅದನ್ನು ಅತಿಶಯೋಕ್ತಿಯನ್ನಾಗಿ ಮಾಡುವದಿಲ್ಲ" ಎಂದಾಗಿರುತ್ತದೆ.

6-8 ಪಾಪ ಮಾಡಿದವನು ಯಾರೇ ಆಗಿದ್ದರೂ ಅವನಿಗೆ ಸಾಕಷ್ಟು ಶಿಕ್ಷೆಯಾಗಿರುತ್ತದೆ ಎಂದು ಪೌಲನು ಹೇಳುತ್ತಾನೆ (ವಚನ 6). ಆ ವ್ಯಕ್ತಿಯು ಪಶ್ಚಾತಾಪ ಪಟ್ಟಿರುತ್ತಾನೆಂಬದನ್ನು ನಾವು ಇದರ ಮೂಲಕ ಅರ್ಥಮಾಡಿಕೊಳ್ಳಬಹುದು. ಇಲ್ಲಿ ಪೌಲನು ಎಲ್ಲಾ ಕ್ರೈಸ್ತರು ಅನುಸರಿಸಬೇಕಾದ ಪ್ರಾಮುಖ್ಯ ಸೂತ್ರವೊಂದನ್ನು ಕೊಡುತ್ತಾನೆ. ಒಬ್ಬ ಪಶ್ಚಾತಾಪ ಪಟ್ಟ ಪಾಪಿಯ ಪಾಪವು ಎಷ್ಟು ಘೋರವಾಗಿದ್ದಿದ್ದರೂ ನಾವು ಆತನನ್ನು ಮನ್ನಿಸಿ ಸಂತೈಸಲು ಸದಾಸಿದ್ಧರಾಗಿರಬೇಕು (ವಚನ 7). ನಾವು ಅವನಿಗೆ (ನಮ್ಮ) ಪ್ರೀತಿಯನ್ನು ಪು ನಃ ನಿಶ್ಚಯಪಡಿಸಬೇಕು (ವಚನ 8). ನಾವು ಹೀಗೆ ಮಾಡುವಾಗ ಆವ್ಯಕ್ತಿಯ ಮೇಲಿದ್ದ

ನಮ್ಮ ಪ್ರೀತಿಯ ಕಾರಣದಿಂದಲೇ ಅವನನ್ನು ಶಿಕ್ಷಿಸಿದೆವೆಂಬದನ್ನು ಅವನಿಗೆ ತೋರ್ಪಡಿಸಲು ಶಕ್ತರಾಗುತ್ತೇವೆ. ನಾವು ಆತನನ್ನು ದ್ವೇಷಿಸದೇ ಅವನ ಪಾಪವನ್ನೆ ಮಾತ್ರ ದ್ವೇಷಿಸಿದೆವೆಂಬದನ್ನು ತೋರ್ಪಡಿಸುವೆವು.

ಪಾಪಮಾಡಿದವನಿಗೆ ನಮ್ಮ ಪ್ರೀತಿಯನ್ನು ಪುನಃ ನಿಶ್ಚಯ ಪಡಿಸುವದರ ಒಂದು ಭಾಗವಾಗಿ ನಾವು ಆತನನ್ನು ಪುನಃ ಸಭೆಯ ಪೂರ್ಣ ಅನ್ಯೋನ್ಯತೆಗೆ ಕರೆತರಬೇಕು. ಇದೇ ಶಿಕ್ಷಿಸುವಿಕೆಯ ಪೂರ್ಣ ಉದ್ದೇಶವಾಗಿದೆ. ಶಿಕ್ಷೆಯು ಪಾಪಿಗಳನ್ನು ಸಭೆಯಿಂದ ಓಡಿಸುವದಕ್ಕಲ್ಲ. ಆದರೆ ಶಿಕ್ಷೆಯು ಅವರನ್ನು ಹಿಂದೆಳೆದುಕೊಂಡು ಪಶ್ಚಾತಾಪಕ್ಕೆ ನಡಿಸುವದಕ್ಕಾಗಿರುತ್ತದೆ (ಗಲಾತ್ಯ 6:1 ನೋಡಿರಿ).

ಹೇಗಿದ್ದರೂ, ಪಾಪಿಯು ಪಶ್ಚಾತಾಪ ಪಡಲು ನಿರಾಕರಿಸುವದಾದರೆ ಆತನು ಸಭೆಯಿಂದ ಬೇರ್ಪಟ್ಟವನಾಗಿ ಉಳಿಯಬೇಕು; ಇಲ್ಲವಾದರೆ ಸಭೆಯು ಅವನ ಪಾಪದಿಂದ ಅಶುದ್ಧವಾಗುವದು.

**9** ಪೌಲನು ಈ ಮುಂಚೆ ತನ್ನ ಮಲತಾಯಿಯ ಜೊತೆಯಲ್ಲಿ ಜಾರತ್ವಮಾಡಿದ ವ್ಯಕ್ತಿಯನ್ನು ಶಿಕ್ಷಿಸಬೇಕೆಂದು ಕೊರಿಂಥದವರಿಗೆ ಬರೆದಿದ್ದನು (1 ಕೊರಿಂಥ 5:2-5). ಈಗ ಅವರು ಅವನನ್ನು ನಿಜವಾಗಿಯೂ ಶಿಕ್ಷಿಸಿರುವದರಿಂದ ಪೌಲನು ಸಂತುಷ್ಟನಾಗಿರುತ್ತಾನೆ.

**10** ಒಂದು ವೇಳೆ ಈಗ ಕೊರಿಂಥದವರು ಈ ಪಾಪಿಯನ್ನು ಕ್ಷಮಿಸಲು ಒಪ್ಪುವದಾದರೆ ಪೌಲನು ಸಹ ಅವನನ್ನು ಕ್ಷಮಿಸುವನು. ಪೌಲನ ಪ್ರಕಾರವಾಗಿ ಆ ವಿಷಯವು ಅಷ್ಟಕ್ಕೆ ಅಂತ್ಯಗೊಂಡಂತಾಗುತ್ತದೆ.

**11** ಒಂದು ವೇಳೆ ನಾವು ಪಾಪಿಯು ಪಶ್ಚಾತಾಪ ಪಟ್ಟನಂತರ ಅವನನ್ನು ಕ್ಷಮಿಸದೇ ಅವನ ವಿರುದ್ಧವಾಗಿ ವೈಷಮ್ಯವನ್ನು ಬೆಳೆಸಿಕೊಳ್ಳುವದಾದರೆ ನಾವು ಸೈತಾನನಿಗೆ ಇಮ್ಮಡಿ ಅವಕಾಶವನ್ನು ಕೊಡುವವರಾಗಿರುತ್ತೇವೆ. ಮೊದಲನೆಯದಾಗಿ, ಪಾಪಿಯು ನಿರಾಶೆಗೊಂಡು ಸಭೆಯನ್ನು ಸಂಪೂರ್ಣವಾಗಿ ತೊರೆದು ಬಿಡುವ ಸಾಧ್ಯತೆಯಿರುತ್ತದೆ; ಹೀಗೆ ಆತನು ಕೊನೆಗೆ ಸೈತಾನನ ರಾಜ್ಯದಲ್ಲಿ ಸೇರಿಕೊಳ್ಳುವನು. ಎರಡನೆಯದಾಗಿ, ಸ್ವತಃ ನಾವು ಪಾಪದ ಹೊಣೆಗಾರರಾಗಿರುತ್ತೇವೆ, ಯಾಕೆಂದರೆ ನಾವು ಪಾಪಿಯನ್ನು ಕ್ಷಮಿಸಲು ನಿರಾಕರಿಸಿದ್ದೇವೆ; ನಾವು ಪಶ್ಚಾತಾಪಪಟ್ಟ ಸಹೋದರನನ್ನು ಕ್ಷಮಿಸದಿರುವಾಗಲೆಲ್ಲಾ ನಾವು ಆತನ ವಿರುದ್ಧ ಪಾಪಮಾಡುವವರಾಗಿದ್ದೇವೆ. ಮತ್ತು ಸೈತಾನನು ನಮ್ಮ ಪಾಪವು ಒದಗಿಸಿದ ಅವಕಾಶವನ್ನು ಉಪಯೋಗಿಸಿಕೊಂಡು ನಮ್ಮನ್ನು ಸೋಲಿಸುವದು ನಿಶ್ಚಯವಾದದ್ದು. ಆತನು ಯಾವಾಗಲೂ ನಮ್ಮ ಹೃದಯಗಳಲ್ಲಿ ಬಂದು ನಮ್ಮನ್ನು ನಮ್ಮ ಸಹೋದರನ ವಿರುಧ್ಧವಾಗಿ ನಿಲ್ಲುವಂತೆ ಮಾಡುವದಕ್ಕೆ ಮಾರ್ಗಗಳನ್ನು ಹುಡುಕುತ್ತಿದ್ದಾನೆ. ಈ ರೀತಿಯಲ್ಲಿ ಆತನು ಸಭೆಯೊಳಗೆ ಭೇದಗಳನ್ನು ಉಂಟು ಮಾಡಬಲ್ಲನು.

ಸಭೆಯ ಸದಸ್ಯರು ಒಬ್ಬರನ್ನೊಬ್ಬರು ಮುಕ್ತವಾಗಿಯೂ ಸಂಪೂರ್ಣವಾಗಿಯೂ ಕ್ಷಮಿಸಿದವರಾಗಿ ಕ್ರಿಸ್ತನಲ್ಲಿ ಐಕ್ಯತೆಯುಳ್ಳವರಾಗಿರಬೇಕು. ಪರಸ್ಪರ ಕ್ಷಮಾಪಣೆ ಹಾಗು ತಡೆಯುವದಕ್ಕೆ ನಮಗಿರುವ ಮುಖ್ಯ ಸಾಧನಗಳಾಗಿವೆ.

ಸಭೆಯಲ್ಲಿ ಎರಡು ಸಂಗತಿಗಳು ಮುಖ್ಯ ವಾಗಿರುತ್ತವೆ: ಪ್ರೀತಿ (ಅಥವಾ ಐಕ್ಯತೆ) ಹಾಗು ಪವಿತ್ರತೆ (ಅಥವಾ ಸತ್ಯ). ಈ ಎರಡು ಸಂಗತಿಗಳು ಯಾವಾಗಲೂ ಸಮತೋಲನದಲ್ಲಿರಬೇಕು. ಒಂದು ವೇಳೆ ಸಭೆಯ ಪವಿತ್ರತೆಯನ್ನು ಕಾಪಾಡುವದಕ್ಕಾಗಿ ನಾವು ಬಹಳ ಕಠೋರವಾಗುವದಾದರೆ ನಮ್ಮ ಪ್ರೀತಿ ಎಲ್ಲಿದೆ? ಇನ್ನೊಂದು ಬದಿಯಲ್ಲಿ, ಒಂದು ವೇಳೆ ನಮ್ಮ ಪ್ರೀತಿ ಹಾಗು ಮಮತೆಯ ಹೃದಯದ ಕಾರಣದಿಂದಾಗಿ ಇತರರ ಪಾಪಗಳನ್ನು ಗಮನಿಸದಿರುವದಾದರೆ ಅಥವಾ ಅಲಕ್ಷಿಸುವದಾದರೆ ನಮ್ಮ ಪವಿತ್ರತೆ ಎಲ್ಲಿದೆ? ಬದಲಾಗಿ, ನಾವು ಯಾವಾಗಲೂ ಪ್ರೀತಿ, ಪವಿತ್ರತೆಗಳೆರಡನ್ನೂ ಒಟ್ಟಾಗಿ ಕಾಪಾಡಿಕೊಳ್ಳಲು ಶ್ರಮಿಸಬೇಕು (ಇಬ್ರಿಯ 12:14 ಮತ್ತು ವ್ಯಾಖ್ಯಾನ ನೋಡಿರಿ).

## ಸುವಾರ್ತೆಯ ಪರಿಮಳ (2:12-17)

**12-13** ತ್ರೋವವು ಇಂದಿನ ಟರ್ಕಿಯ ಪಶ್ಚಿಮ ಕರಾವಳಿಯಲ್ಲಿ ಎಫೆಸದಿಂದ ಉತ್ತರಕ್ಕಿದ್ದ ಒಂದು ಪ್ರಾಮುಖ್ಯ ನಗರವಾಗಿತ್ತು, ಇದು ಎಫೆಸ ಹಾಗು ಮೆಕೆದೋನ್ಯದ ನಡುವೆ ಸುಮಾರು ಅರ್ಧ ದಾರಿಯಷ್ಟಿಟ್ಟಿತ್ತು. ತ್ರೋವದಲ್ಲಿ ಸುವಾರ್ತೆಯನ್ನು ಸಾರುವದಕ್ಕಾಗಿ ಕರ್ತನು ಒದಗಿಸಿದ್ದ ಇನ್ನೊಂದು ಒಳ್ಳೇ ಸಂದರ್ಭವು ಪೌಲನಿಗೆ ಉಂಟಾಯಿತು (1 ಕೊರಿಂಥ 16:9 ನೋಡಿರಿ). ಆದರೆ ಪೌಲನು ತ್ರೋವದಲ್ಲಿ ಸುವಾರ್ತೆಯನ್ನು ಸಾರುತ್ತಿರುವ ಅದೇ ವೇಳೆಯಲ್ಲಿ ತನ್ನ ಸಹ ಪಾಠಿಯಾದ ತೀತನು [8] ಕೊರಿಂಥದಿಂದ ಹಿಂದಿರುಗಿ ಬರುವದನ್ನು ಕಾಯುತ್ತಿದ್ದನು. ಪೌಲನು ಸ್ವಲ್ಪ ಕಾಲದ ಹಿಂದೆ ಕಠಿಣವಾದ ಪತ್ರಿಕೆಯೊಂದನ್ನು ಕೊರಿಂಥದವರಿಗೆ ಕೊಡುವದಕ್ಕಾಗಿ ತೀತನನ್ನು ಕಳುಹಿಸಿದ್ದನು, ಮತ್ತು ಪೌಲನು ಈಗ ಕೊರಿಂಥದವರು ತನ್ನ ಪತ್ರಿಕೆಯನ್ನು ಹೇಗೆ ಸ್ವೀಕರಿಸಿಕೊಂಡರೆಂಬದನ್ನು ಕೇಳುವದಕ್ಕಾಗಿ ಕಾತುರದಿಂದ ಕಾಯುತ್ತಿದ್ದನು. ಆದರೆ ತೀತನು ಪೌಲನ ನಿರೀಕ್ಷೆಯಂತೆ ಶೀಘ್ರವಾಗಿ ಹಿಂದಿರುಗಲಿಲ್ಲ. ಈ ಕಾರಣದಿಂದ ಪೌಲನಿಗೆ ಕೊರಿಂಥದವರ ವಿಷಯದಲ್ಲಿ ಚಿಂತಾಕ್ರಾಂತನಾಗಿದ್ದನು; ಆದ್ದರಿಂದ, ಆತನು ತೀತನನ್ನು ಹುಡಕುವದಕ್ಕೆ ತ್ರೋವವನ್ನು ಬಿಟ್ಟು ಉತ್ತರ ಗ್ರೀಕಿನ ಮೆಕೆದೋನ್ಯ[9] ಸೀಮೆಗೆ ಪ್ರಯಾಣಿಸಲು ತೀರ್ಮಾನಿಸಿದನು.

**14** ಇಲ್ಲಿ ಪೌಲನು ಪಕ್ಕನೇ ತನ್ನ ಕಥೆಯನ್ನು ನಿಲ್ಲಿಸಿ ದೇವರಿಗೆ ಸ್ತೋತ್ರವನ್ನು ಸಲ್ಲಿಸುತ್ತಾನೆ. ಯಾಕೆ/ ಯಾಕೆಂದರೆ ಪೌಲನು ಮೆಕೆದೋನ್ಯದಲ್ಲಿ ತೀತನನ್ನು ಕಂಡುಕೊಂಡು ಕೊರಿಂಥದವರು ತನ್ನ ಕಠಿಣವಾದ ಪತ್ರಿಕೆಯನ್ನು ಸರಿಯಾದ ಮನೋಭಾವದಿಂದ ಸ್ವೀಕರಿಸಿಕೊಂಡಿದ್ದಾರೆಂಬದನ್ನು ತೀತನ ಮೂಲಕ ತಿಳುಕೊಂಡಿದ್ದನು (2 ಕೊರಿಂಥ 7:6-7 ನೋಡಿರಿ).

ಕೊರಿಂಥದವರು ಈ ಮುಂಚೆ ತಾವು ಪೌಲನನ್ನು ವಿರೋಧಿಸಿದ್ದಕ್ಕಾಗಿ ವೇದನೆ ಗೊಂಡಿದ್ದರು. ಕೊರಿಂಥದವರ ಹಾಗು ಪೌಲನ ನಡುವೆ ಭೇದವನ್ನು ಹುಟ್ಟಿಸಬೇಕೆಂಬ ಸೈತಾನನ ಆಲೋಚನೆಯು ಭಗ್ನಗೊಂಡಿತ್ತು. ಪೌಲನು ಮತ್ತೊಮ್ಮೆ ಸೈತಾನನ ಮೇಲೆ ಜಯಶಾಲಿಯಾಗಿದ್ದನು. ನಿಜವಾಗಿಯೂ, ಪೌಲನ ಜೀವಿತವು ಒಂದು ಜಯೋತ್ಸವದ ಮೆರವಣಿಗೆ ಆಗಿತ್ತು. ಆದರೆ ಪೌಲನ ಜಯಗಳು ಯಾವಾಗಲೂ ಕ್ರಿಸ್ತನಲ್ಲಿ ಆಗಿರುತ್ತಿದ್ದವು. ಕ್ರಿಸ್ತನಿಲ್ಲದೆ ಯಾವ ಜಯವು ಇರಲಾರದು (ಯೋಹಾನ 15:5).

ಅಪೊಸ್ತಲರ ಜಯಭರಿತವಾದ ಜೀವಿತಗಳ ಮುಖಾಂತರವಾಗಿ ಆತನ (ಕ್ರಿಸ್ತನ) ಜ್ಞಾನವೆಂಬ ಸುವಾರ್ತೆಯು ಯಾವಾಗಲೂ ಎಲ್ಲಾ ಸ್ಥಳಗಳಲ್ಲಿ ವ್ಯಾಪಿಸಿತ್ತು.

**15-16** ಇತರರೊಂದಿಗೆ ಸುವಾರ್ತೆಯನ್ನು ಹಂಚಿಕೊಳ್ಳುವ ಕ್ರೈಸ್ತರು ಒಂದು ಪರಿಮಳದಂತಿರುತ್ತಾರೆ; ಅವರು ಕ್ರಿಸ್ತನ ಪರಿಮಳವಾಗಿದ್ದಾರೆ. ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ರಕ್ಷಣಾಮಾರ್ಗದಲ್ಲಿರುವವರಿಗೆ ಕ್ರಿಸ್ತನ "ಪರಿಮಳ"ವು ಜೀವವನ್ನು ಹುಟ್ಟಿಸುವ ಪರಿಮಳವಾಗಿರುತ್ತದೆ. ಅಪನಂಬಿಕೆಯಿಂದಾಗಿ ನಾಶನಮಾರ್ಗದಲ್ಲಿರುವವರಿಗೆ ಕ್ರಿಸ್ತನ "ಪರಿಮಳವು" ಮರಣವನ್ನು ಹುಟ್ಟಿಸುವ ವಾಸನೆಯಾಗಿದೆ, ಯಾಕೆಂದರೆ ನಂಬಿಕೆಯಿಲ್ಲದವರೆಲ್ಲರೂ ದಂಡಿಸಲ್ಪಟ್ಟು ಮರಣದಂಡನೆಗೊಳಗಾಗುವರು (ಯೋಹಾನ 3:36; 1 ಕೊರಿಂಥ 1:18 ನೋಡಿರಿ).

ಪ್ರತಿಯೊಬ್ಬ ಕ್ರೈಸ್ತನು ತನ್ನನ್ನು ಕೇಳಿಕೊಳ್ಳಬೇಕಾದದ್ದೇನೆಂದರೆ: ನನ್ನ ಜೀವಿತವು ಕ್ರಿಸ್ತನ ಪರಿಮಳ ಹೊಂದಿದೆಯೋ? ಅಥವಾ ಅದು ಕೇವಲ ಪಾಪ ಹಾಗು ಸ್ವಾರ್ಥತೆಯ ವಾಸನೆಯನ್ನು ಮಾತ್ರವೇ ಹೊಂದಿರುತ್ತದೋ?

ಇಂಥ ಕಾರ್ಯಗಳಿಗೆ ಯಾರು ಯೋಗ್ಯರು? ಎಂದು ಪೌಲನು ಕೇಳುತ್ತಾನೆ (ವಚನ 16). ಅಂದರೆ, ಒಬ್ಬ ಅಪೊಸ್ತಲನಾಗಿರುವದಕ್ಕಿಂತಹ ದೊಡ್ಡ ಜವಾಬ್ದಾರಿಕೆಗಾಗಿ ಸಾಕಷ್ಟು ಸಾಮರ್ಥ್ಯ ಹಾಗು ಜ್ಞಾನವು ಯಾರಿಗೆ ಇರುತ್ತದೆ? ನಿಜವಾದ ಅರ್ಥದಲ್ಲಿ ಅಪೊಸ್ತಲರು ತಮ್ಮ ಕೈಗಳಲ್ಲಿ ಅವರ ಮಾತುಗಳನ್ನು ಕೇಳುವವರ ಜೀವ ಮರಣಗಳನ್ನು ಹಿಡಿದವರಾಗಿದ್ದರು ಎಂತಹ ಒಂದು ದೊಡ್ಡ ಜವಾಬ್ದಾರಿ!ಆದುದರಿಂದ, ಅಂಥ ಕಾರ್ಯಗಳಿಗೆ ಯಾರು ಯೋಗ್ಯರು? ಪೌಲನು 2 ಕೊರಿಂಥ ೩:೫ರಲ್ಲಿ ಉತ್ತರವನ್ನು ಕೊಡುತ್ತಾನೆ:....ನಮಗಿರುವ ಸಾಮರ್ಥ್ಯವು ದೇವರಿಂದಲೇ ಬಂದದ್ದು. ಯಾರ ಸಾಮರ್ಥ್ಯವು ದೇವರಿಂದ ಬಂದಿರುತ್ತದೋ ಅವರು ಲೋಕದಲ್ಲೆಲ್ಲಾ "ಕ್ರಿಸ್ತನ ಪರಿಮಳ"ವನ್ನು ಹೊತ್ತೊಯ್ಯುವ ಕಾರ್ಯಕ್ಕೆ ಯೋಗ್ಯರಾಗಿರುತ್ತಾರೆ.

**17** ಈ ದಿನಗಳಲ್ಲಿರುವಂತೆಯೇ ಪೌಲನ ಕಾಲದಲ್ಲಿಯೂ ತಮ್ಮ ಸ್ವಪ್ರಯೋಜನಕ್ಕಾಗಿ ಸುವಾರ್ತೆಯನ್ನು ಸಾರುತ್ತಿದ್ದ ಅನೇಕರಿದ್ದರು. ಅವರು ತಮ್ಮ ಬೋಧನೆಯಿಂದ ಶ್ರೀಮಂತರಾಗುವದಕ್ಕೆ ಪ್ರಯತ್ನಿಸಿದರು. ಅವರು ಮನುಷ್ಯರಿಂದ ಮಾನವನ್ನು ಹೊಂದಿಕೊಳ್ಳಲು ತವಕಿಸುತ್ತಿದ್ದರು. ಅವರು ಜನರನ್ನು ಕ್ರಿಸ್ತನ ಶಿಷ್ಯರನ್ನಾಗಿ ಮಾಡುವದಕ್ಕೆ ಬದಲಾಗಿ ತಮ್ಮ ಶಿಷ್ಯರನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಅವರು ಸುಳ್ಳು ಅಪೊಸ್ತಲರಾಗಿದ್ದರು. ಆದರೆ ನಿಜವಾದ ಅಪೊಸ್ತಲರು ಹಾಗಿರುವದಿಲ್ಲ. ನಿಜವಾದ ಅಪೊಸ್ತಲರು ತಮ್ಮನ್ನು ತಾವೇ ನೇಮಿಸಿಕೊಳ್ಳುವದಿಲ್ಲ. ಬದಲಾಗಿ, ಅವರು ದೇವರಿಂದ ಕಳುಹಿಸಲ್ಪಟ್ಟಿರುವ ವ್ಯಕ್ತಿಗಳಾಗಿರುತ್ತಾರೆ (ಗಲಾತ್ಯ 1:1 ನೋಡಿರಿ). ಅವರು ಯಾವಾಗಲೂ ಕ್ರಿಸ್ತನ ಅನ್ಯೋನ್ಯತೆಯಲ್ಲಿದ್ದು ಮಾತಾಡುತ್ತಾರೆ, ಅವರು. ಯಾವಾಗಲೂ ದೇವರ ಸಮಕ್ಷಮದಲ್ಲಿಯೇ – ಅಂದರೆ, ದೇವರು ಕೇಳಿಸಿಕೊಳ್ಳುತ್ತಿದ್ದಾನೆಂಬ ಪರಿಜ್ಞಾನದಿಂದ – ಮಾತಾಡುತ್ತಾರೆ, ಮತ್ತು ಅವರು ಯಾವಾಗಲೂ ನಿಷ್ಕಪಟಿಗಳಾಗಿ ಮಾತಾಡುತ್ತಾರೆ. ಪೌಲ ಹಾಗು ಇತರ ನಿಜವಾದ ಅಪೊಸ್ತಲರು ಯಾವಾಗಲೂ ಈ ರೀತಿಯಲ್ಲಿಯೇ ನಡೆದುಕೊಳ್ಳುತ್ತಿದ್ದರು (2 ಕೊರಿಂಥ 1:12, 4:2 ನೋಡಿರಿ).

---

## ಅಧ್ಯಾಯ - 3

### ಹೊಸ ಒಡಂಬಡಿಕೆಯ ಸೇವಕರು (3:1-6)

**1** ಕೆಲವು ಸುಳ್ಳು ಅಪೊಸ್ತಲರು (2 ಕೊರಿಂಥ 2:17). ಸಭೆಯವರ ದೃಷ್ಟಿಯಲ್ಲಿ ತಮ್ಮನ್ನು ಹೊಗಳಿಕೊಳ್ಳುವದಕ್ಕಾಗಿ ಯೋಗ್ಯತಾಪತ್ರಗಳನ್ನು ತೆಗೆದುಕೊಂಡು ಸಭೆಯಿಂದ ಸಭೆಗೆ ತಿರುಗಾಡುತ್ತಿದ್ದರು. ಈ ಯೋಗ್ಯತಾಪತ್ರಗಳು ಅವರಿಗೆ ತಾವು ಅಪೊಸ್ತಲರೆಂಬದಕ್ಕೆ "ಆಧಾರ" ಆಗಿತ್ತು; ಆದ್ದರಿಂದ ಅವರು ತಾವು ಹೋದ ಕಡೆಯಲ್ಲೆಲ್ಲಾ ಈ ಪತ್ರಗಳನ್ನು ತೋರಿಸುತ್ತಿದ್ದರು.

ಪೌಲನು ತನ್ನನ್ನು ಹೊಗಳಿಕೊಳ್ಳುವದಕ್ಕಾಗಿ ಅಂತಹ ಒಂದು ಪತ್ರವನ್ನು ಬರೆಯುತ್ತಿದ್ದಾನೋ? ಇಲ್ಲ. ಅವನಿಗೆ ಅಂಥ ಯೋಗ್ಯತಾಪತ್ರ ಅಗತ್ಯವೋ? ಇಲ್ಲ.

**2** ಪೌಲನ ಅಪೊಸ್ತಲತನದ ಆಧಾರವೇನು? ಸ್ವತಃ ಕೊರಿಂಥದ ಸಭೆಯೇ ಆತನ ಅಪೊಸ್ತಲತನದ ಆಧಾರವಾಗಿತ್ತು. ನೀವೇ ನಮ್ಮ ಯೋಗ್ಯತಾಪತ್ರ; ಅದು ನಮ್ಮ ಹೃದಯಗಳಲ್ಲೇ ಬರೆದದೆ ಎಂದು ಪೌಲನು ಬರೆಯುತ್ತಾನೆ. ಪೌಲನು ಕೊರಿಂಥಕ್ಕೆ ಸುವಾರ್ತೆಯನ್ನು ತಂದಿದ್ದನು; ಮತ್ತು ಆತನ ಬೋಧನೆಯ ಮೂಲಕವಾಗಿ ಬಹು ಜನರ ಜೀವಿತಗಳು ರೂಪಾಂತರಗೊಂಡಿದ್ದವು. ಸುವಾರ್ತೆಯ ಶಕ್ತಿಯಿಂದ ಪುರುಷರು ಮತ್ತು ಸ್ತ್ರೀಯರು ಕತ್ತಲೆಯೆಡೆಯಿಂದ ಬೆಳಕಿಗೆ ತಿರಿಗಿಕೊಂಡಿದ್ದರು. ಇದೇ ಪೌಲನ ಯೋಗ್ಯತಾ ಪತ್ರ ಆಗಿತ್ತು. ಮತ್ತು ಈ ಪತ್ರವು ಎಲ್ಲರಿಂದ ಬಲ್ಲಂಥ ಹಾಗು ಓದಲ್ಪಡುವಂತ

ಪತ್ರವಾಗಿತ್ತು; ಅಂದರೆ, ಕೊರಿಂಥದಲ್ಲಿರವವರೆಲ್ಲರೂ ಅಲ್ಲಿನ ಕ್ರೈಸ್ತರ ಜೀವಿತಗಳಲ್ಲಾದ ಬದಲಾವಣೆಯನ್ನು ನೋಡಲು ಶಕ್ತರಾಗಿದ್ದರು.

**3** ಪೌಲನ "ಯೋಗ್ಯತಾ ಪತ್ರವು" ಮನುಷ್ಯನಿಂದಲ್ಲ, ಆದರೆ ಜೀವವುಳ್ಳ ದೇವರ ಆತ್ಮ ನಿಂದಲೇ ಬರೆದದ್ದು. ಇದು ಕಾಗದವೊಂದರ ಮೇಲೆ ಮಸಿಯಿಂದ ಅಥವಾ ಕಲ್ಲಿನ ಮೇಲೆ ಬರೆದದ್ದಾಗಿರಲಿಲ್ಲ, ಆದರೆ ಅದು ಮನುಷ್ಯರ ಹೃದಯಗಳ ಮೇಲೆ ಬರೆದದ್ದಾಗಿತ್ತು. ಮಸಿಯು ಅಳಿಸಿ ಹೋಗುವದು; ಕಲ್ಲುಗಳು ಕುಸಿದು ಮಣ್ಣಾಗುತ್ತವೆ. ಆದರೆ ಪವಿತ್ರಾತ್ಮನಿಂದ ಮಾನವ ಹೃದಯಗಳ ಮೇಲೆ ಬರೆದಿರುವಂತದ್ದು ಸದಾಕಾಲವಿರುವದು.

ದೇವರು ಯೆಹೂದ್ಯರಿಗೆ ಕೊಟ್ಟ ಹಳೆ ಒಡಂಬಡಿಕೆಯ ಧರ್ಮಶಾಸ್ತ್ರವು ಕಲ್ಲಿನ ಹಲಿಗೆಗಳ ಮೇಲೆ ಬರೆಯಲ್ಪಟ್ಟಿತ್ತು (ವಿಮೋಚನ ಕಾಂಡ 24:12; 31:18). ಆದರೆ ಕ್ರಿಸ್ತನ ಕಾಲದಿಂದ ಒಂದು ನೂತನ ಧರ್ಮಶಾಸ್ತ್ರ ಅಥವಾ ಹೊಸ ಒಡಂಬಡಿಕೆಯು (ವಚನ 6), ಪವಿತ್ರಾತ್ಮನಿಂದ ಮನುಷ್ಯ ಹೃದಯಗಳೆಂಬ ಹಲಿಗೆಗಳ ಮೇಲೆ ಬರೆಯಲ್ಪಟ್ಟಿರುತ್ತದೆ. (ಯೆರೆಮೀಯ 31:31-33; ಇಬ್ರಿಯ 8:7-10 ಮತ್ತು ವ್ಯಾಖ್ಯಾನ ನೋಡಿರಿ). ನಾವು ಪ್ರತಿಯೊಬ್ಬರು ಕ್ರಿಸ್ತನು..."ಬರಸಿಕೊಟ್ಟ ಪತ್ರದಂತಿರುತ್ತೇವೆ. ಇತರರು ನಮ್ಮಪತ್ರ" ವನ್ನು ಓದಬಲ್ಲರೋ? ಅವರು ಅಲ್ಲಿ ಏನನ್ನು ಓದುತ್ತಿದ್ದಾರೆ?

**4-5** ಪೌಲನ ಭರವಸವು ಯಾವದೇ ಯೋಗ್ಯತಾ ಪತ್ರದಲ್ಲಿರುವದಿಲ್ಲ,; ಆತನ ಭರವಸವು ಕ್ರಿಸ್ತನ ಮೂಲಕವೇ ದೇವರ ಮುಂದೆ ಇರುತ್ತದೆ. ಪೌಲನ ಸಾಮರ್ಥ್ಯವು ಅವನಿಂದಾಗಲಿ ಅಥವಾ ಇತರ ಯಾವದೇ ಮನುಷ್ಯನಿಂದಾಗಲಿ ಬರದೇ ದೇವರಿಂದಲೇ ಬರುವದಾಗಿದೆ (1 ಕೊರಿಂಥ 15:10; 2 ಕೊರಿಂಥ 4:7 ನೋಡಿರಿ).

**6** ಈ ವಚನದಲ್ಲಿ ಪೌಲನು ಹಳೆ ಒಡಂಬಡಿಕೆಯನ್ನು (ಅಥವಾ ಧರ್ಮಶಾಸ್ತ್ರವನ್ನು) ಪವಿತ್ರಾತ್ಮನಿಂದ ಬರೆಯಲ್ಪಟ್ಟಿರುವ ಹೊಸ ಒಡಂಬಡಿಕೆಯೊಂದಿಗೆ ಹೋಲಿಸುತ್ತಾನೆ. ಹಳೆ ಮತ್ತು ಹೊಸ ಒಡಂಬಡಿಕೆಗಳೆರಡು ದೇವರು ಮಾನವನಿಗೆ ನೀಡಿರುವ ಒಪ್ಪಂದಗಳು ಅಥವಾ ವಾಗ್ದಾನಗಳಾಗಿವೆ. ಈ ಒಡಂಬಡಿಕೆಗಳು ದೇವರಿಂದ ಮಾಡಲ್ಪಟ್ಟಿವೆ. ಹಳೆ ಒಡಂಬಡಿಕೆಯ ಅಡಿಯಲ್ಲಿ ದೇವರು ಯೆಹೂದ್ಯರಿಗೆ ಹೇಳಿದ್ದೇನೆಂದರೆ: ನೀವು ನನ್ನ ಆಜ್ಞಾವಿಧಿಗಳನ್ನೆಲ್ಲಾ ಕೈಕೊಂಡು ನಡೆಯುವದಾದರೆ "ನಾನು ನಿಮ್ಮನ್ನು ನನ್ನ ವಿಶೇಷ ಜನವನ್ನಾಗಿ ನಾಡಿ ಆಶೀರ್ವದಿಸುವೆನು." ಅದು ಹಳೆ ಒಡಂಬಡಿಕೆಯಾಗಿತ್ತು. ಆದರೆ ಹಳೆ ಒಡಂಬಡಿಕೆಯ ಉದ್ದೇಶವು ನೆರವೇರಿಸಲ್ಪಡಲಿಲ್ಲ. ಒಂದು ಒಡಂಬಡಿಕೆಯು ನೆರವೇರಿಸಲ್ಪಡಬೇಕಾದರೆ ಒಡಂಬಡಿಕೆಯಲ್ಲಿರುವ ಎರಡೂ ಪಕ್ಷದವರು ತಮ್ಮ ಮಾತನ್ನು ಕಾಪಾಡಿಕೊಳ್ಳಬೇಕು. ಆದರೆ ಯೆಹೂದ್ಯರು ತಮ್ಮ ಮಾತನ್ನು ಕಾಪಾಡಿಕೊಳ್ಳಲಿಲ್ಲ. ಅವರು ಸತತವಾಗಿ ದೇವರ ಆಜ್ಞಾವಿಧಿಗಳನ್ನು ಉಲ್ಲಂಘಿಸಿದರು. ಅವರು ತಮ್ಮ ಪಾಪಗಳಿಂದ ತಮ್ಮನ್ನು ಶುದ್ಧೀಕರಿಸಿಕೊಳ್ಳಲು ನಿರಂತರವಾಗಿ ಯಜ್ಞಗಳನ್ನು ಅರ್ಪಿಸಬೇಕಾಗಿತ್ತು.

ಆದರೆ ಹೊಸ ಒಡಂಬಡಿಕೆಯ ಅಡಿಯಲ್ಲಿ ನಾವು ಕ್ರಿಸ್ತನ ಸ್ವದೇಹದ ಯಜ್ಞದ ಮುಖಾಂತರವಾಗಿ ಒಂದೇ ಸಾರಿ ಪಾಪದಿಂದ ಶುದ್ಧರಾದೆವು (ಇಬ್ರಿಯ 9:15; 10:3-4, 10-18 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಕ್ರಿಸ್ತನಲ್ಲಿ ನಂಬಿಕೆಯಿಡುವದರ ನೂಲಕವಾಗಿ ನಾವು ನೀತಿವಂತರೆಂಬ ನಿರ್ಣಯವನ್ನು ಹೊಂದಿದ್ದೇವೆ (ರೋಮ 3:22-24). ಇನ್ನು ಮೇಲೆ ಹಳೆ ಧರ್ಮಶಾಸ್ತ್ರವು (ಹಳೆ ಒಡಂಬಡಿಕೆ ಅಥವಾ ಯೆಹೂದ್ಯ ಧರ್ಮಶಾಸ್ತ್ರ) ನಮ್ಮನ್ನೂ ದೋಷಿಗಳೆಂದು ನಿರ್ಣಯಿಸಲು ಸಾಧ್ಯವಿಲ್ಲ (ರೋಮ 8:1 ಮತ್ತು ವ್ಯಾಖ್ಯಾನ ನೋಡಿರಿ).

ಕ್ರಿಸ್ತನು ಬರುವದಕ್ಕೆ ಮುಂಚೆ ಜನರು ಧರ್ಮಶಾಸ್ತ್ರದಿಂದ ಅಪರಾಧ ನಿರ್ಣಯಕೊಳ್ಳಗಾಗುತ್ತಿದ್ದರು. ಯಾಕೆಂದರೆ ಅವರು ಧರ್ಮಶಾಸ್ತ್ರಕ್ಕೆ ಸಂಪೂರ್ಣವಾಗಿ ವಿಧೇಯರಾಗಲು ಅಸಮರ್ಥರಾಗಿದ್ದರು. ಲಿಖಿತರೂಪವಾದ ಪತ್ರವು – ಅಂದರೆ ಲಿಖಿತ ರೂಪದ ಹಳೆ ಒಡಂಬಡಿಕೆಯ ಧರ್ಮಶಾಸ್ತ್ರವು – ಜನರಿಗೆ ಮರಣವನ್ನುಂಟು ಮಾಡುತ್ತದೆ, ಯಾಕೆಂದರೆ ಧರ್ಮಶಾಸ್ತ್ರವು ಅವರಿಗೆ ಮರಣದಂಡನೆ ವಿಧಿಸುತ್ತದೆ (ರೋಮ 8:2 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ಈಗ ಪವಿತ್ರಾತ್ಮನ ಮೂಲಕವಾಗಿ ಮನುಷ್ಯರು ಜೀವವನ್ನು, ಅಂದರೆ ನಿತ್ಯಜೀವವನ್ನು ಪಡೆಯುತ್ತಾರೆ (ರೋಮ 6:23). ಮತ್ತು ನಿತ್ಯಜೀವದ ಜೊತೆಯಲ್ಲಿ ಮಾನವರು ಪವಿತ್ರಾತ್ಮನ ಶಕ್ತಿಯನ್ನು ಪಡೆಯುವರು. ಆತನು ಅವರನ್ನು ದೇವರ ಧರ್ಮಶಾಸ್ತ್ರಕ್ಕೆ ವಿಧೇಯರಾಗುವಂತೆ ಶಕ್ತರನ್ನಾಗಿಸುತ್ತಾನೆ ದೇವರ ಧರ್ಮಶಾಸ್ತ್ರ ಬದಲಾಗಿರುವದಿಲ್ಲ. ಅದು ಬರೆಯಲ್ಪಟ್ಟಿರುವ ಸ್ಥಳ ಮಾತ್ರವೇ ಬದಲಾಗಿರುತ್ತದೆ. ಅಂದರೆ,. ಕಲ್ಲಿನ ಹಲಿಗೆಗಳ ಮೇಲೆ ಬರೆಯಲ್ಪಡುವದಕ್ಕೆ ಬದಲಾಗಿ ಈಗ ಅದು ಪವಿತ್ರಾತ್ಮನಿಂದ ಮುನಷ್ಯರ ಹೃದಯಗಳ ಮೇಲೆ ಬರೆಯಲ್ಪಟ್ಟಿರುತ್ತದೆ. ಈ ಕಾರಣಕ್ಕಾಗಿಯೇ ಪೌಲನು ಇಲ್ಲಿ ತಾನು ಮತ್ತು ಇತರ ಅಪೊಸ್ತಲರು ಹೊಸ ಒಡಂಬಡಿಕೆಗೆ ಸೇವಕರು ಎಂದು ಹೇಳುತ್ತಾನೆ – ಈ ಒಡಂಬಡಿಕೆಯು ಲಿಖಿತರೂಪವಾದದ್ದಾಗಿರದೆ (ಹಳೆ ಧರ್ಮಶಾಸ್ತ್ರ ಅಥವಾ ಒಡಂಬಡಿಕೆ). ದೇವರಾತ್ಮ ಸಂಬಂಧವಾದದ್ದು ಆಗಿದೆ. (ಪವಿತ್ರಾತ್ಮನು ಹೊಸ ಒಡಂಬಡಿಕೆಯ "ಗ್ರಂಥಕರ್ತನು") ಕ್ರೈಸ್ತರು ಇನ್ನು ಹಳೆ ಒಡಂಬಡಿಕೆಗೆ ವಿಧೇಯರಾಗಬೇಕಾಗಿಲ್ಲ ಎಂದು ಇದರ ಅರ್ಥ ವೋ? ಇಲ್ಲ, ಆದರ ಅರ್ಥವು ಇದಾಗಿರುವದಿಲ್ಲ. ನಾವು "ನೈತೀಕ" ಧರ್ಮಶಾಸ್ತ್ರಕ್ಕೆ, ಅಂದರೆ, ಪ್ರೀತಿಯ ನಿಯಮಕ್ಕೆ ವಿಧೇಯರಾಗುತ್ತಲಿರಬೇಕು (ಕ್ರೈಸ್ತರು ಸಂಸ್ಕಾರಿಕ ಧರ್ಮಶಾಸ್ತ್ರಕ್ಕೆ – ಯಜ್ಞಗಳು ಹಾಗು ಶುದ್ಧೀಕರಣಕ್ಕೆ ಸಂಬಂಧಿಸಿದ ನಿಯಮಗಳಿಗೆ ವಿಧೇಯರಾಗಬೇಕಿಲ್ಲ, ಯಾಕೆಂದರೆ ಕ್ರಿಸ್ತನು ತನ್ನ ಸ್ವದೇಹದ ಯಜ್ಞದ ಮುಖಾಂತರ ಆ ನಿಯಮಗಳನ್ನು ವಜಾಮಾಡಿರುತ್ತಾನೆ). ನಾವು ದೇವರನ್ನು ಪ್ರೀತಿಸುವ ಹಾಗು ನೆರೆಯವನನ್ನು ಪ್ರೀತಿಸುವ ಎರಡು ಶ್ರೇಷ್ಠ ಆಜ್ಞೆಗಳಿಗೆ ವಿಧೇಯರಾಗುವಾಗ ನಾವು ಹಳೆ ಒಡಂಬಡಿಕೆಯ ನೈತೀಕ ಧರ್ಮಶಾಸ್ತ್ರವನ್ನು ಸಹ ನೆರವೇರಿಸುವವರಾಗಿದ್ದೇವೆ (ಮತ್ತಾಯ 5;17-19; ಮಾರ್ಕ 12:28-31; ರೋಮ 13:8-10; ಗಲಾತ್ಯ 5:14 ಮತ್ತು ವ್ಯಾಖ್ಯಾಗಳನ್ನು ನೋಡಿರಿ).

## ಹೊಸ ಒಡಂಬಡಿಕೆಯ ಪ್ರಭಾವ (3:7-18)

**7-8** ಮರಣ ವಿಧಿಸುವ ನಿಯಮದ ಸೇವೆಯು – ಅಂದರೆ, ಹಳೆ ಒಡಂಬಡಿಕೆಯ (ಯೆಹೂದ್ಯ) ಧರ್ಮಶಾಸ್ತ್ರವು – ಸ್ವತಃ ಮರಣವನ್ನು ಉಂಟುಮಾಡುವದಿಲ್ಲ. ಪಾಪವು ಮಾತ್ರವೇ ಮರಣವನ್ನುಂಟು ಮಾಡುತ್ತದೆ (ರೋಮ 6:23; 1 ಕೊರಿಂಥ 15:56 ನೋಡಿರಿ). ಆದರೆ ಧರ್ಮಶಾಸ್ತ್ರವು ಮನುಷ್ಯರಿಗೆ ಪಾಪಕ್ಕಾಗಿ ಮರಣದಂಡನೆಯನ್ನು ವಿಧಿಸುತ್ತದೆ (ರೋಮ 7:9-11). ಯಾರೂ ಹಳೆ ಒಡಂಬಡಿಕೆಯನ್ನು (ಹಳೆ ಒಡಂಬಡಿಕೆಯ ಧರ್ಮಶಾಸ್ತ್ರವನ್ನು)ತಾತ್ಸಾರಮಾಡಿದಿರಲಿ. ಅದು ದೇವರ ಧರ್ಮಶಾಸ್ತ್ರವೆಂಬದನ್ನು ನಾವು ನೆನಪಿನಲ್ಲಿಟ್ಟುಕೊಳ್ಳೋಣ. ಪೌಲನು ಒನೇ ವಚನದಲ್ಲಿ ಅದು ಪ್ರಭಾವದಿಂದ ಕೂಡಿದ್ದಾಗಿತ್ತು ಎಂದು ಜ್ಞಾಪಕಪಡಿಸುತ್ತಾನೆ (ವಿಮೋಚನಕಾಂಡ 34:29-30).

**9** ಹಳೆ ಒಡಂಬಡಿಕೆಯ (ಅಥವಾ ಧರ್ಮಶಾಸ್ತ್ರದ) ಸೇವೆಯು ಮನುಷ್ಯರಿಗೆ ಮರಣವನ್ನು ವಿಧಿಸಿತು (ರೋಮ 3:20). ಯೇಸು ಕ್ರಿಸ್ತನ ಹೊಸ ಒಡಂಬಡಿಕೆಯ ಸೇವೆಯು ನೀತಿಯನ್ನುಂಟು ಮಾಡುತ್ತದೆ (ರೋಮ 3:21-22; 5:16-17; 1 ಕೊರಿಂಥ 1:30 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಹೀಗೆ ಹೊಸ ಒಡಂಬಡಿಕೆಯ ಸೇವೆಯು ಹಳೆ ಒಡಂಬಡಿಕೆಯ ಸೇವೆಗಿಂತಲೂ ಎಷ್ಟೋ ಹೆಚ್ಚಾಗಿ ಪ್ರಭಾವವುಳ್ಳದ್ದಾಗಿದೆ.

**10** ಹಳೆ ಒಡಂಬಡಿಕೆಯು ಚಂದ್ರನಂತೆ ಪ್ರಭಾವವಾಗಿರುತ್ತದೆ. ಆದರೆ ಮುಂಜಾನೆಯಲ್ಲಿ ಸೂರ್ಯನ (ಯೇಸು ಕ್ರಿಸ್ತನ) ಬೆಳಕು ಬರುವಾಗ ಚಂದ್ರನ ಪ್ರಭಾವವು ಅಳಿದು ಹೋಗುತ್ತದೆ.

**11** ಈಗ ಹಳೆ ಒಡಂಬಡಿಕೆಯು ಇಲ್ಲವಾಗಿದೆ (ಇಬ್ರಿಯ 8:13). ಆದರ ಸ್ಥಾನದಲ್ಲಿ ಹೊಸ ಒಡಂಬಡಿಕೆಯು ಬಂದಿರುತ್ತದೆ, ಅದು ಎಂದಿಗೂ ಅಳಿದು ಹೋಗುವದಿಲ್ಲ. ನಮ್ಮ ರಕ್ಷಣೆಯು ನಿತ್ಯವಾದದ್ದು.

**12-13** ಆದ್ದರಿಂದ ಪೌಲನು ಇಂಥ ಭರವಸ (ನಿರೀಕ್ಷೆ) – ಅಂದರೆ, ನಿತ್ಯವಾದ ರಕ್ಷಣೆಯ ನಿರೀಕ್ಷೆ – ಉಳ್ಳವನಾಗಿರುವದರಿಂದ ಆತನು ಬಹಳ ಧೈರ್ಯದಿಂದಿರುತ್ತಾನೆ, ಆತನು ಕ್ರಿಸ್ತನ ಸುವಾರ್ತೆಯನ್ನು ದಾರಾಳವಾಗಿಯೂ ಬಹು ಧೈರ್ಯದಿಂದಲೂ ಸಾರುತ್ತಾನೆ. ಆತನು ಮೋಶೆಯಂತೆ ತನ್ನ ಮುಖದ ಮೇಲೆ ಮುಸುಕು ಹಾಕಿಕೊಳ್ಳುವದಿಲ್ಲ (ವಿಮೋಚನ ಕಾಂಡ 34:33-35).

**14-16** ಯೆಹೂದ್ಯ ಸಭಾಮಂದಿರಗಳಲ್ಲಿ ಪ್ರತಿವಾರವೂ ಹಳೆ ಒಡಂಬಡಿಕೆಯನ್ನು – ಅಂದರೆ, ಹಳೆ ಒಡಂಬಡಿಕೆಯ ಧರ್ಮಶಾಸ್ತ್ರವನ್ನು [10] – ಪಾರಾಯಣ ಮಾಡುವ ಪದ್ಧತಿಯಿತ್ತು ಮತ್ತು ಈಗಲೂ ಯೆಹೂದ್ಯರೊಳಗೆ ಅದು ಮುಂದುವರೆದಿರುತ್ತದೆ. ಮೋಶೆಯ ಗ್ರಂಥಪಾರಾಯಣವು (ಅಂದರೆ, ಹಳೆ ಒಡಂಬಡಿಕೆಯ ಮೊದಲ ಐದು ಪ್ರಸ್ತಕಗಳು)[11] ಆಗುವಾಗಲೆಲ್ಲಾ ಮುಸುಕು ಅವರ (ಯೆಹೂದ್ಯರ) ಹೃದಯದ ಮೇಲೆ ಇರುತ್ತದೆ ಎಂದು ಪೌಲನು ಹೇಳುತ್ತಾನೆ (ವಚನ 15). ಆ ಮುಸುಕು ಅಪನಂಬಿಕೆಯ "ಮುಸುಕು" ಆಗಿತ್ತು; ಯೆಹೂದ್ಯರು ನಿಜವಾಗಿಯೂ ಮೋಶೆಯನ್ನು ನಂಬಲಿಲ್ಲ, ಆದ್ದರಿಂದಲೇ ಅವರು ಕ್ರಿಸ್ತನನ್ನು ಸಹ ನಂಬಲಿಲ್ಲ (ಯೋಹಾನ 5:46-47 ನೋಡಿರಿ). ಅವರ ಅಪನಂಬಿಕೆಯ ಕಾರಣದಿಂದ ಅವರ ಬುದ್ಧಿ (ಮನಸ್ಸು) ಮಂದವಾಯಿತು (ವಚನ 14); ಅವರ ಹೃದಯಗಳು ಕತ್ತಲಾದವು (ರೋಮ 1:21; 11:8 ನೋಡಿರಿ). ಕ್ರಿಸ್ತನಲ್ಲಿ ನಂಬಿಕೆಯಿಡುವದರಿಂದ ಮಾತ್ರವೇ ಮನುಷ್ಯರ ಹೃದಯಗಳನ್ನು ಆವರಿಸಿರುವ "ಮುಸುಕು" ತೆಗೆಯಲ್ಪಡಬಹದು. ಕ್ರಿಸ್ತನಲ್ಲಿ ದೇವರ ಪ್ರಭಾವವು ಮುಸುಕಿಲ್ಲದೆ ಸಂಪೂರ್ಣವಾಗಿ ಪ್ರಕಟಗೊಂಡಿರುತ್ತದೆ (ಮಾರ್ಕ 9:2-7; ಯೋಹಾನ 17:5) ನೋಡಿರಿ). ನಾವು ಕ್ರಿಸ್ತನನ್ನು ಹಿಂಬಾಲಿಸುವಾಗ ದೇವರ ಬೆಳಕು ಹಾಗು ಮಹಿಮೆಯಲ್ಲಿ ನಡೆಯುವವರಾಗುತ್ತೇವೆ (ಯೋಹಾನ 8:12 ಮತ್ತು ವ್ಯಾಖ್ಯಾನ ನೋಡಿರಿ).

**17** ಆ ಕರ್ತನು ದೇವರಾತ್ಮನೇ. ಈ ವಚನದಲ್ಲಿ ಕರ್ತನು ಎಂಬ ಪದವು ದೇವರು ಮತ್ತು ಕ್ರಿಸ್ತನು ಇಬ್ಬರನ್ನೂ ಸೂಚಿಸಬಹುದು. ಇದು ಒಂದೇ ಸಂಗತಿಯಾಗಿದೆ,ಯಾಕೆಂದರೆ ದೇವರು, ಕ್ರಿಸ್ತನು ಮತ್ತು ಪವಿತ್ರಾತ್ಮನು ಎಲ್ಲರೂ ಒಂದೇ ದೇವರು. ಪವಿತ್ರಾತ್ಮನು ದೇವರ ಆತ್ಮನೂ, ಕ್ರಿಸ್ತನ ಆತ್ಮನೂ[12] ಆಗಿದ್ದಾನೆ. ಮತ್ತು ಆತ್ಮನು ಎಲ್ಲಿರುವನೋ ಅಲ್ಲಿ ಬಿಡುಗಡೆ ಉಂಟು. ಆದದರಿಂದ, ಕ್ರಿಸ್ತನ ಆತ್ಮನು ನಮ್ಮಲಿರುವಾಗ ನಾವು ನಿಜವಾಗಿಯೂ ಸ್ವತಂತ್ರರೇ (ಯೋಹಾನ 8:36).

ನಾವು ಹಳೆ ಯೆಹೂದ್ಯ ಧರ್ಮಶಾಸ್ತ್ರದಿಂದ ಬಿಡುಗಡೆ ಹೊಂದಿದ್ದೇವೆ (ರೋಮ 7:6; 8:2 ನೋಡಿರಿ). ನಾವು ಭಯದ ದಾಸತ್ವದಿಂದ ಮುಕ್ತರಾಗಿದ್ದೇವೆ (ರೋಮ 8:15). ನಾವು ನಾಶದ ವಶದಿಂದ ಬಿಡುಗಡೆಯಾಗಿದ್ದೇವೆ (ರೋಮ 8:21). ಕ್ರಿಸ್ತನು ನಮ್ಮನ್ನು ಸ್ವತಂತ್ರದಲ್ಲಿರಿಸಬೇಕೆಂದು ನಮಗೆ ಬಿಡುಗಡೆ ಮಾಡಿದನು. ಆದರಲ್ಲಿ ಸ್ಥಿರವಾಗಿ ನಿಲ್ಲಿರಿ; ದಾಸತ್ವದ ನೊಗದಲ್ಲಿ ತಿರಿಗಿ ಸಿಕ್ಕಿಕೊಳ್ಳಬೇಡಿರಿ (ಗಲಾತ್ಯ 5:1).

**18** ಹಳೆ ಒಡಂಬಡಿಕೆಯ ಪ್ರಕಾರವಾಗಿ ಮೋಶೆಯು ಮಾತ್ರವೇ ದೇವರ ಪ್ರಭಾವವನ್ನು ನೋಡುವದಕ್ಕೆ ಅನುಮತಿಸಲ್ಪಟ್ಟಿದ್ದನು (ವಿಮೋಚನಕಾಂಡ 34:33-35). ಆದರೆ ಕ್ರಿಸ್ತನನ್ನು ನಂಬುವವರಾದ ನಾವು ಮುಸುಕು ತೆಗೆದಿರುವ ಮುಖದಿಂದ ನಮ್ಮ ಮುಖಗಳ ಮೇಲೆ ಮುಸುಕು ಹಾಕಿಕೊಳ್ಳದೆ ದೇವರ ಪ್ರಭಾವವನ್ನು ದೃಷ್ಟಿಸಬಹುದಾಗಿದೆ: ಆ ಪ್ರಭಾವವು ಕ್ರಿಸ್ತನಲ್ಲಿ ಪ್ರಕಟಗೊಂಡಿರುತ್ತದೆ (ಯೋಹಾನ 1:14; 17:24; 2 ಕೊರಿಂಥ 4:6 ನೋಡಿರಿ).

ಅದು ಮಾತ್ರವಲ್ಲದೆ, ಚಂದ್ರನು ಸೂರ್ಯನ ಪ್ರಭಾವವನ್ನು ಪ್ರತಿಬಿಂಬಿಸುವಂತೆಯೇ ನಾವು ಸಹ ಕರ್ತನ ಪ್ರಭಾವವನ್ನು ಪ್ರತಿಬಿಂಬಿಸುತ್ತೇವೆ;[13] ಚಂದ್ರನ ಬೆಳಕು ಸೂರ್ಯನಿಂದ ಬರುತ್ತದೆ. ಅದೇ ರೀತಿಯಲ್ಲಿ ಕ್ರಿಸ್ತನ ವಿಶ್ವಾಸಿಗಳು ತಮ್ಮ ಸ್ವಮಹಿಮೆಯನ್ನಲ್ಲ, ಆದರೆ ಕ್ರಿಸ್ತನ ಮಹಿಮೆಯನ್ನೇ ಪ್ರತಿಬಿಂಬಿಸುತ್ತಾರೆ.

ಆದರೆ ಇನ್ನೊಂದು ವಿಧದಲ್ಲಿ, ನಾವು ಚಂದ್ರನಂತೆ ಇರುವದಿಲ್ಲ. ನಮ್ಮ ಮಹಿಮೆಯು ಹೆಚ್ಚು ಪ್ರಕಾಶಮಾನವಾದದ್ದು, ಯಾಕೆಂದರೆ ಅದು ನಮ್ಮೊಳಗಿಂದ, ನಮ್ಮಲ್ಲಿವಾಸಿಸುವ ಕ್ರಿಸ್ತನ ಆತ್ಮನಿಂದ ಬರುತ್ತದೆ. ಅಷ್ಟು ಮಾತ್ರವಲ್ಲದೆ, ನಮ್ಮ ಮಹಿಮೆಯು ಎಂದೆಂದೂ ಹೆಚ್ಚಾಗುತ್ತಾ ಹೋಗುತ್ತದೆ. ಪವಿತ್ರಾತ್ಮನ ಸಹಾಯದಿಂದ ನಾವು ಕ್ರಿಸ್ತನ ಪರಿಪೂರ್ಣತೆಯೆಂಬ ಪೂರ್ಣ ಪ್ರಮಾಣವನ್ನು ಮುಟ್ಟುವವರಾಗಿದ್ದೇವೆ (ಎಫೆಸ 4:13). ಮತ್ತು ಕ್ರಿಸ್ತನು ಪು ನಃ ಭೂಲೋಕಕ್ಕೆ ಬರುವಾಗ ನಾವು ಆತನನ್ನು ಮುಖಾಮುಖಿಯಾಗಿ ನೋಡಿ ಆತನಂತಾಗುವೆವು (1 ಯೋಹಾನ 3:2). ಇದು ನಮಗಾಗಿ ದೇವರು ಹೊಂದಿರುವ ಅತ್ಯುನ್ನತ ಹಾಗು ಅಂತಿಮ ಗುರಿಯಾಗಿದೆ – ಅಂದರೆ, ನಾವು ಕ್ರಿಸ್ತನ ಸಾರೂಪ್ಯವುಳ್ಳವರೇ ಆಗಬೇಕೆಂಬುದು (ರೋಮ 8:29 ಮತ್ತು ವ್ಯಾಖ್ಯಾನ ನೋಡಿರಿ).

---

## ಅಧ್ಯಾಯ - 4

### ಸುವಾರ್ತೆಯ ಬೆಳಕು (4:1-6)

1 ಪೌಲ ಮತ್ತು ಆತನ ಸಹ ಪಾಲಿಗಳು ಹೊಂದಿರುವ ಸೇವೆಯು ಹೊಸ ಒಡಂಬಡಿಕೆಯ ಸೇವೆಯಾಗಿದೆ (2 ಕೊರಿಂಥ 3:6). ಪೌಲನು ದೇವರ ಕರುಣೆಯಿಂದಲೇ ಈ ಶ್ರೇಷ್ಠವಾದ ಸೇವೆಯನ್ನು ಹೊಂದಿರುತ್ತಾನೆ (1 ತಿಮೊಥೆ 1:12-14 ನೋಡಿರಿ). ಆದದರಿಂದ ಆತನು ಧೈರ್ಯಗೆಟ್ಟು ಹಿಂದೆಗೆಯುವದಿಲ್ಲ.

2 ಪೌಲನು ಇಲ್ಲಿ ನಿಜವಾದ ಅಪೊಸ್ತಲನ ಚಿತ್ರಣವನ್ನು ನೀಡುತ್ತಾನೆ. ಪೌಲನು ಸುಳ್ಳು ಅಪೊಸ್ತಲರ ನಾಚಿಕೆಯನ್ನು ಹುಟ್ಟಿಸುವ ಮಾರ್ಗವನ್ನು ಅನುಸರಿಸುವದಿಲ್ಲ, ಅವರು ತಂತ್ರದಲ್ಲಿನಡೆದು ದೇವರವಾಕ್ಯವನ್ನು ಕೆಡಿಸುವವರಾಗಿದ್ದಾರೆ (2 ಕೊರಿಂಥ 11:13-15; 1 ಥೆಸಲೋನಿಕ 2:3-5 ನೋಡಿರಿ). ಹಾಲಿನವರು ತಮ್ಮ ಹಾಲಿಗೆ ನೀರನ್ನು ಬೆರೆಸಿ ಮಾರುವಂತೆಯೇ ಸುಳ್ಳು ಅಪೊಸ್ತಲರು ದೇವರ ವಾಕ್ಯಕ್ಕೆ ಸುಳ್ಳು ಬೋಧನೆಯನ್ನು ಕಲಬೆರಕೆಮಾಡುತ್ತಾರೆ.

ನಾವು ಹಾಗೆ ನಡೆಯದೆ. ಪ್ರತಿ ಮನುಷ್ಯನ ಮನಸ್ಸು ದೇವರ ಮುಂದೆ ಒಪ್ಪಬೇಕಾದ ರೀತಿಯಲ್ಲಿ ನಡೆಯುತ್ತೇವ ಎಂದು ಪೌಲನು ಹೇಳುತ್ತಾನೆ. ಪೌಲನ ಮಾತನ್ನು ಕೇಳಿದ ಪ್ರತಿಯೊಬ್ಬರು ಆತನ ಮಾತು ಪ್ರಾಮಾಣಿಕ ಹಾಗು ಸತ್ಯ ಎಂಬದನ್ನು ತಮ್ಮ ಹೃದಯಗಳಲ್ಲಿಯೂ ಮನಸ್ಸುಗಳಲ್ಲಿಯೂ ತಿಳಿಯತಕ್ಕದ್ದು, ಯಾಕೆಂದರೆ ಪೌಲನು ಎಲ್ಲವನ್ನೂ ದೇವರ ಮುಂದೆ (ದೃಷ್ಟಿಯಲ್ಲಿ) ಮುಕ್ತವಾಗಿ ಮಾಡುವವನಾಗಿದ್ದಾನೆ (ಯೋಹಾನ 3:20-21 ನೋಡಿರಿ).

3 ಪೌಲನ ಸುವಾರ್ತೆಯ ಸತ್ಯವನ್ನು ಕಾಣದವರು ಯಾರೆಂದರೆ, ಯಾರ ಮನಸ್ಸು ಹಾಗು ಹೃದಯಗಳು ಅಪನಂಬಿಕೆಯ "ಮುಸುಕು" ಹೊಂದಿರುತ್ತವೋ ಅವರು ಮಾತ್ರವೇ (2 ಕೊರಿಂಥ 3:14-15). ಈ ಮುಸುಕು ಸುವಾರ್ತೆಯನ್ನು ಮುಚ್ಚಿರುವದಿಲ್ಲ; ಅದು ಅವಿಶ್ವಾಸಿಗಳ ಮನಸ್ಸುಗಳನ್ನು ಮುಚ್ಚಿರುತ್ತದೆ. ಅವರ ಆತ್ಮೀಕ ಕಣ್ಣುಗಳು ಸತ್ಯವನ್ನು ಕಾಣದಂತೆ ಮಂಕಾಗಿರುತ್ತವೆ. ಅಂಥ ಜನರಿಗೆ ಸುವಾರ್ತೆಯನ್ನು ಸಾರುವು ದೆಂದರೆ ಕುರುಡನಿಗೆ ಕನ್ನಡಿಯನ್ನು ಕೊಡುವ ಹಾಗಿರುತ್ತದೆ.

4 ಈ ಪ್ರಪಂಚದ ದೇವರು ಸೈತಾನನೇ (ಯೋಹಾನ 12:31 ನೋಡಿರಿ). ಆತನು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿದ್ದಾನೆ (ಯೋಹಾನ 8:42-47; 1 ಯೋಹಾನ 4:6 ನೋಡಿರಿ). ಅಪನಂಬಿಕೆಯುಳ್ಳ ಜನರು ತಮ್ಮ ಕುರುಡುತನದ ಕಾರಣದಿಂದ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವನ್ನು ಕಾಣಲಾರರು. ಒಬ್ಬ ಅಪೊಸ್ತಲನಾಗಿ ಪೌಲನ ಮುಖ್ಯ ಕೆಲಸವು ಕುರುಡರನ್ನು ನೋಡುವಂತೆ ಮಾಡಿ ಅವರನ್ನು ಕತ್ತಲೆಯಿಂದ ದೇವರ ಮಹಿಮೆಯುಳ್ಳ ಬೆಳಕಿನೆಡೆಗೆ ತಿರಗಿಸುವದೇ ಆಗಿತ್ತು (ಅ.ಕೃತ್ಯ 26:17-18; 1 ಪೇತ್ರ 2:9 ನೋಡಿರಿ).

ಕ್ರಿಸ್ತನು ದೇವರ ಪ್ರತಿರೂಪವಾಗಿದ್ದಾನೆ. ಕ್ರಿಸ್ತನಲ್ಲಿ ಅದೃಶ್ಯ ದೇವರು ಸದೃಶ್ಯನಾಗಿ ಮಾಡಲ್ಪಟ್ಟಿದ್ದಾನೆ (ಯೋಹಾನ 14:9 ಕೊಲೊಸ್ಸೆ 1:15; ಇಬ್ರಿಯ 1:3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆದರೆ ಅಪನಂಬಿಕೆಯಿಂದ ಕುರುಡರಾಗಿಲ್ಲದವರು ಮಾತ್ರವೇ ಕ್ರಿಸ್ತನು ಯಾರೆಂಬದನ್ನು ಗುರುತಿಸಬಲ್ಲರು.

5 ಪೌಲನು ಹೇಳುವದೇನೆಂದರೆ: ನಾವು ನಮ್ಮನ್ನೇ ಪ್ರಸಿದ್ಧಿಪಡಿಸಿಕೊಳ್ಳಲಿಲ್ಲ; ಅವರು ಅಂದರೆ, ಪೌಲ ಮತ್ತು ಸಂಗಡಿಗರು ಗರ್ವದಿಂದ ತಮ್ಮನ್ನು ಉಬ್ಬಿಸಿಕೊಳ್ಳಲಿಲ್ಲ; ಅವರು ಮನುಷ್ಯ.ರಿಂದ ಹೊಗಳಿಕೆಯನ್ನು ಎದುರು ನೋಡಲಿಲ್ಲ (1 ಥೆಸಲೋನಿಕ 2:6). ಬದಲಾಗಿ ಪೌಲನು ಸತ್ಯವನ್ನು ಪರಿಷ್ಕಾರವಾಗಿ ಬೋಧಿಸುತ್ತಾ (ವಚನ 2). ಕ್ರಿಸ್ತನ ಸುವಾರ್ತೆಯನ್ನೇ ಹೊರತು ಮತ್ತೇನನ್ನೂ ಸಾರಲಿಲ್ಲ (1 ಕೊರಿಂಥ 2:1-5 ನೋಡಿರಿ).

ಅಪೊಸ್ತಲನು ಒಬ್ಬ ಅಪೊಸ್ತಲನಾಗಿದ್ದಾಗ್ಯು ಆತನು ಕೊರಿಂಥದವರ ಒಡೆಯನಾಗಿರಲಿಲ್ಲ; ಬದಲಾಗಿ ಆತನು ಅವರ ದಾಸನಾಗಿದ್ದನು (1 ಕೊರಿಂಥ 4:1 ನೋಡಿರಿ). ಒಂದು ವಿಧದಲ್ಲಿ, ಪೌಲನು ಕ್ರಿಸ್ತನಿಗೆ ಮಾತ್ರವೇ ದಾಸನಾಗಿದ್ದನೇ, ಹೊರತು ಯಾವದೇ ಮನುಷ್ಯನ ದಾಸನಾಗಿರಲಿಲ್ಲ (1 ಕೊರಿಂಥ 7:23). ಆದರೆ ಇನ್ನೊಂದು ವಿಧದಲ್ಲಿ ಪೌಲನು ಕ್ರಿಸ್ತನ ನಿಮಿತ್ತ ಎಲ್ಲರ ದಾಸನನ್ನಾಗಿ ಮಾಡಿಕೊಂಡಿದ್ದನು (1 ಕೊರಿಂಥ 9:19). ಹಿಗೆ ಮಾಡುವದರ ಮೂಲಕ ಪೌಲನು ಸ್ವತಃ

ಯೇಸುವಿನ ಮಾದರಿಯನ್ನೇ ಅನುಸರಿಸುತ್ತಿದ್ದನು, ಯೇಸು ದೇವರಿಗೆ ಸರಿಸಮಾನನಾಗಿದ್ದರೂ ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿದನು (ಫಿಲಿಪ್ಪಿ 2:5-8 ನೋಡಿರಿ).

6 ಆದಿಯಲ್ಲಿ ದೇವರು "ಬೆಳಕಾಗಲಿ" ಎಂದು ಹೇಳಿದನು (ಆದಿಕಾಂಡ 1:3). ಮತ್ತು ಈ ದಿನದ ವರೆಗೂ ದೇವರು ಎಲ್ಲಾ ಮನುಷ್ಯರಿಗೆ "ಬೆಳಕಾಗಲಿ" ಎಂದು ಹೇಳುತ್ತಲಿದ್ದಾನೆ. ದೇವರು ಬೆಳಕಾಗಿದ್ದಾನೆ ಮತ್ತು ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿಲ್ಲ. (1 ಯೋಹಾನ 1:5).

ದೇವರು ತನ್ನ ಪ್ರಕಾಶವನ್ನು ನಮ್ಮ ಹೃದಯಗಳಲ್ಲಿ ಹೊಳೆಯ ಮಾಡಿದನು. ನಾವು ಮೊದಲು ಕ್ರಿಸ್ತನನ್ನು ನಂಬಿದಾಗ ದೇವರ ಬೆಳಕು ನಮ್ಮ ಹೃದಯಗಳಲ್ಲಿ ಪ್ರಕಾಶಿಸಲು ಪ್ರಾರಂಭಿಸಿತು. ದೇವರು ಯೇಸು ಕ್ರಿಸ್ತನ ಮುಖದಲ್ಲಿತೋರುವ ತನ್ನ ಸ್ವಂತ ದೇವ ಪ್ರಭಾವವನ್ನು ನಮಗೆ ಪ್ರಕಟಗೊಳಿಸುವದಕ್ಕಾಗಿ ತನ್ನ ಬೆಳಕನ್ನು ನಮ್ಮ ಹೃದಯಗಳಲ್ಲಿ ಹೊಳೆಯುವಂತೆ ಮಾಡುತ್ತಾನೆ (ಯೋಹಾನ 1:14) ನೋಡಿರಿ). ಯೇಸು ಹೇಳಿದ್ದೇನೆಂದರೆ; "ನಾನೇ ಲೋಕಕ್ಕೆ ಬೆಳಕಾಗಿದ್ದೇನೆ. ನನ್ನನ್ನು ಹಿಂಬಾಲಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು" (ಯೋಹಾನ 8:12). ಒಂದು ದಿನ ದಮಸ್ಕದ ಮಾರ್ಗದಲ್ಲಿ ಸ್ವತಃ ಪೌಲನು ಕ್ರಿಸ್ತನ ಬೆಳಕನ್ನು ನೋಡಿದ್ದನು ಮತ್ತು ಅಂದಿನಿಂದ ಪೌಲನ ಜೀವಿತವು ಸದಾಕಾಲಕ್ಕೂ ರೂಪಾಂತರಗೊಂಡಿತ್ತು (ಅ.ಕೃತ್ಯ 9:3-5; 26:13-15).

## ಅಪೊಸ್ತಲರ ಬಲಹೀನತೆ ಹಾಗು ದೇವರ ಬಲಾಧಿಕ್ಯವು (4:7-18)

7 ಮಾನವ ರಾದ ನಾವು ಮಣ್ಣಿನ ಘಟ (ಮಡಿಕೆ)ಗಳಾಗಿದ್ದೇವೆ (ಯೇಶಾಯ 64:8). ನಾವು ಸಾಮಾನ್ಯ, ಬಲಹೀನ, ಒಡೆದು ಹೋಗಬಲ್ಲಮಡಿಕೆಗಳಾಗಿದ್ದೇವೆ. ಆದರೆ ನಮ್ಮ ಘಟಗಳಲ್ಲಿ ನಾವು ಈ ನಿಕ್ಷೇಪ ಹೊಂದಿದ್ದೇವೆ, ಅದೇನೆಂದರೆ, ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯೇ (ವಚನ 4). ಪೌಲನು ಈ "ನಿಕ್ಷೇಪ"ವನ್ನು ದೇವಪ್ರಭಾವ ಜ್ಞಾನವೆಂಬ ಪ್ರಕಾಶ ಎಂದು ಸಹ ಸೂಚಿಸುತ್ತಾನೆ (ವಚನ 6). ಸರಳವಾದ ಪದಗಳಲ್ಲಿ ಹೇಳುವದಾದರೆ ನಮ್ಮ ಘಟಗಳಲ್ಲಿ ಇರುವ ನಿಕ್ಷೇಪವು ಕ್ರಿಸ್ತನ ಸುವಾರ್ತೆಯೇ ಆಗಿದೆ. ಸುವಾರ್ತೆಯು ನಂಬುವವರಿಗೆಲ್ಲಾ ರಕ್ಷಣೆಯನ್ನುಂಟು ಮಾಡುವ ದೇವರ ಶಕ್ತಿಯಾಗಿದೆ (ರೋಮ 1:16). ಅಂಥ ಬಲಹೀನ ಘಟಗಳಲ್ಲಿ ಅಂತಹ ಶ್ರೇಷ್ಠ ಶಕ್ತಿಯೋ, ಹಾಗಿದ್ದರೂ, ದೇವರು ನಮ್ಮಂತಹ ಬಲಹೀನವಾದ "ಘಟಗಳನ್ನು" ಉಪಯೋಗಿಸುವದಕ್ಕೆ ಇಚ್ಛಿಸುತ್ತಾನೆ, ಯಾಕೆಂದರೆ ಜನರು ನಮ್ಮ ಸ್ವಂತ ಸ್ವಾಭಾವಿಕವಾದ ಬಲಹೀನತೆಯನ್ನು ಕಾಣುವಾಗ ನಮ್ಮಲ್ಲಿರುವ ಆತ್ಮೀಕ ಶಕ್ತಿಯು ನಮ್ಮೊಳಗಿಂದ ಬರದೇ ದೇವರಿಂದ ಬರುತ್ತದೆಂಬದನ್ನು ಅವರು ತಿಳುಕೊಳ್ಳುವರು (2 ಕೊರಿಂಥ 12:9 ನೋಡಿರಿ).

8-9 ಈ ವಚನಗಳಲ್ಲಿ ಪೌಲನು ತಾನು ಅನುಭವಿಸಿದ ವಿವಿಧ ತಾಪತ್ರಯಗಳನ್ನು (ಸಂಕಟಗಳನ್ನು) ಬಣ್ಣಿಸುತ್ತಾನೆ. ಪೌಲನು ಇಲ್ಲಿ ಪ್ರಸ್ತಾಪಿಸಿದ ಸಂಕಷ್ಟಗಳಲ್ಲಿ ಬಹುಪಾಲು ಮಂದಿ ಕ್ರೈಸ್ತರು ಒಂದು ಅಥವಾ ಹೆಚ್ಚಾದವು ಗಳನ್ನು ಅನುಭವಿಸಿರುವರು. ಅವರು ಇಕ್ಕಟ್ಟಿಗೊಳಗೊಂಡವರು ಹಾಗು ದಿಕ್ಕು ಕಾಣದರಾಗಿರುತ್ತಾರೆ (ವಚನ 8). ಅವರು ಹಿಂಸೆ ಪಡುವವರಾಗಿರುತ್ತಾರೆ ಹಾಗು ಕೆಡವಲ್ಪಟ್ಟವರಾಗಿರುತ್ತಾರೆ (ವಚನ 9). ಅವರು ತಮಗೆ ಯಾವ ಮಾನುಷ ಪರಿಹಾರವೂ ಇಲ್ಲದ, ತಪ್ಪಿಸಿಕೊಳ್ಳುವ ಯಾವ ಮಾರ್ಗವೂ ಇಲ್ಲದ ಸ್ಥಿತಿಗೆ ತಲುಪಿರುತ್ತಾರೆ. ಆದರೆ ದೇವರು ಯಾವಾಗಲೂ ಅವರ ಜೊತೆಯಲ್ಲಿರುತ್ತಾನೆ. ಮಾನವ ಮಾರ್ಗವು ಅಂತ್ಯಗೊಳ್ಳುವಾಗ ದೇವರ ಮಾರ್ಗಗಳು ಪ್ರಾರಂಭವಾಗುತ್ತವೆ (ಧರ್ಮೋಪದೇಶಕಾಂಡ 31:6).

ಪೌಲನ ಜೀವಿತವು ಆತನು ಇಲ್ಲಿ ಪ್ರಸ್ತಾಪಿಸುವ ತಾಪತ್ರಯಗಳಿಂದ ತುಂಬಿತ್ತು (ಅ.ಕೃತ್ಯ 4:19;2 ಕೊರಿಂಥ 11:23-28 ನೋಡಿರಿ). ಹಾಗಿದ್ದರೂ, ದೇವರು ಅವನನ್ನು ಯಾವಾಗಲೂ ಕ್ರಿಸ್ತನಲ್ಲಿ ಜಯೋತ್ಸವದೊಡನೆ ಮೆರೆಸುತ್ತಾ ಬಂದನು (2ಕೊರಿಂಥ 2:14). ಕ್ರೈಸ್ತರು ಮರಣದಲ್ಲಿಯೂ ಜಯೋತ್ಸವದೊಡನೆ ಮೆರೆಯುವರು. ಮರಣಿಸುವ ನಮ್ಮ ದೇಹವು ಅಂತ್ಯಗೊಳ್ಳುತ್ತದೆ, ಆದರೆ ಸ್ವತಃ ನಾವು ನಾಶವಾಗುವದಿಲ್ಲ ಬದಲಾಗಿ, ಮರಣದ ಮೂಲಕ ನಾವು ನಮ್ಮ ಪರಲೋಕದ ಸ್ವಾಸ್ತ್ಯವನ್ನು ಪಡೆಯುತ್ತೇವೆ, ಅದು ನಿತ್ಯಜೀವ ಹಾಗು ನೀತಿಯೆಂಬ ಜಯಮಾಲೆಯೇ (2 ತಿಮೊಥೆ 4:6 ನೋಡಿರಿ). ನಮ್ಮನ್ನು ಯಾವದೂ ದೇವರ ಪ್ರೀತಿಯಿಂದ ಅಗಲಿಸಲಾರದು (ರೋಮ 8:35-39). ನಾವು ದೇಹವನ್ನು ಮಾತ್ರವೇ ಕೊಲ್ಲಬಲ್ಲವರಾದ ಮನುಷ್ಯರಿಗೆ ಅಂಜುವ ಅಗತ್ಯವಿಲ್ಲ; ನಾವು ದೇಹವನ್ನು ಆತ್ಮವನ್ನೂ ಕೊಲ್ಲುವವನಿಗೆ ಮಾತ್ರವೇ – ಅಂದರೆ, ದೇವರಿಗೆ – ಹೆದರುವ ಅಗತ್ಯವಿರತ್ತದೆ (ಮತ್ತಾಯ 10:28).

10-11 ಪೌಲನು ಬರೆಯುವದೇನೆಂದರೆ; ಯೇಸುವಿನ ಮರಣಾವಸ್ಥೆಯನ್ನು ನಾವು ಯಾವಾಗಲೂ ದೇಹದಲ್ಲಿ ಅನುಭವಿಸುತ್ತಾ ತಿರುಗಾಡುತ್ತೇವೆ. ಪೌಲನು ಹಾಗು ಆತನ ಸಹ ಪಾಡಿಗಳು ಯೇಸುವಿನ ನಿಮಿತ್ತ ಯಾವಾಗಲೂ ಮರಣಕ್ಕೆ ಒಪ್ಪಿಸಲ್ಪಡುತ್ತಾ ಇದ್ದರು (ವಚನ 11). ಪೌಲನ ಈ ಹೇಳಿಕೆಗಳ ತಾತ್ಪರ್ಯವೇನು?

ಪೌಲನ ತಾತ್ಪರ್ಯವೇನೆಂದರೆ ಆತನು ಮತ್ತು ಆತನ ಸಹ ಪಾಡಿಗಳು ಪ್ರತಿದಿನವೂ ಮರಣ ಅಪಾಯವನ್ನು ಎದುರಿಸುತ್ತಿರುವರು ಎಂಬದೇ (1 ಕೊರಿಂಥ 15:30-31). ಪೌಲನು ಒಂದು ಅರ್ಥದಲ್ಲಿ ಸ್ವಲ್ಪ ಹೊತ್ತಿನೊಳಗೆ ಯಜ್ಞ ಮಾಡಲ್ಪಡಲಿಕ್ಕಿರುವ ಕುರಿಯಂತೆ ದಿನವೆಲ್ಲವೂ ಕ್ರಿಸ್ತನ ನಿಮಿತ್ತ ಮರಣವನ್ನು ಎದುರಿಸುವವನಾಗಿದ್ದಾನೆ (ರೋಮ 8:36). ಒಂದು ವಿಧದಲ್ಲಿ ಪೌಲನು ಲೋಕದ ಪಾಲಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿರುತ್ತಾನೆ (ಗಲಾತ್ಯ 6:14). ಯೇಸು ಮಾಡಬೇಕೆಂದು ಹೇಳಿದ್ದ ಪ್ರಕಾರವೇ ಪೌಲನು ದಿನಾಲು ತನ್ನ ಶಿಲುಬೆಯನ್ನು ಹೊತ್ತುಕೊಂಡವನಾಗಿರುತ್ತಾನೆ

(ಲೂಕ 9:23).ಪೌಲನು ಯೇಸುವಿನ ಸೇವಕನಾಗಿರುವದರಿಂದ ಆತನು ತನ್ನ ಒಡೆಯನು ಹೊಂದಿದ ಹಿಂಸೆಯನ್ನೇ ಹೊಂದುವವನಾಗಿರುತ್ತಾನೆ (ಯೋಹಾನ 15:20). ಪೌಲನು ಯೇಸುವಿನ ಬಾಧೆಗಳಲ್ಲಿ ಪಾಲುಗಾರನಾಗುವದಕ್ಕೆ ತವಕಪಡುತ್ತಾನೆ (ಫಿಲಿಪ್ಪಿ 3:10-11).

ನಾವು ಎಷ್ಟರ ಮಟ್ಟಿಗೆ ನಮಗಾಗಿ ಸಾಯುತ್ತೇವೋ ಅಷ್ಟರ ಮಟ್ಟಿಗೆ ನಾವು ಕ್ರಿಸ್ತನ ಪಾಲಿಗೆ ಜೀವಿಸುವೆವು (ಯೋಹಾನ 12:23-25 ನೋಡಿರಿ). ಕ್ರಿಸ್ತನೊಂದಿಗೆ ಸತ್ತಿರುವವನು ಕ್ರಿಸ್ತನೊಂದಿಗೆ ಜೀವಿಸುವವನು ಸಹ ಆಗಿರುವನು (ರೋಮ 6:4-5; ಫಿಲಿಪ್ಪಿ 3:20-21; 2 ತಿಮೊಥೆ 2:11-12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಆದದರಿಂದ, ಕ್ರೈಸ್ತರಾದ ನಾವು ಇಲ್ಲಿ ಪ್ರಸ್ತಾಪಿಸಲಾಗಿರುವ ವಿವಿಧ ಸಂಕಷ್ಟಗಳನ್ನು ಅನುಭವಿಸುವಾಗ ನಾವು ಅಂತಹ ಸಂಕಷ್ಟಗಳನ್ನು ಸೈರಿಸಿಕೊಳ್ಳುವದು ಮಾತ್ರವಲ್ಲ, ಆದರೆ ಅವು ಗಳಲ್ಲಿ ಸಂತೋಷವನ್ನು ಸಹ ಪಡುವೆವು , ಯಾಕೆಂದರೆ ಪರಲೋಕದಲ್ಲಿ ನಮಗೆ ಬಹಳ ಫಲಸಿಕ್ಕುವದು (ಮತ್ತಾಯ 5:11-12).

ಆದರೆ ನಾವು ಒಂದು ಸಂಗತಿಯನ್ನು ಜ್ಞಾಪಕದಲ್ಲಿಟ್ಟುಕೊಳ್ಳೋಣ: ನಾವು ಬಾಧೆಗಳನ್ನು ಅನುಭವಿಸುವದಾದರೆ ಕ್ರಿಸ್ತನ ನಿಮಿತ್ತವೇ ಅನುಭವಿಸುವವರಾಗಿದ್ದೇವೆ. ಒಂದು ವೇಳೆ ನಮ್ಮ ಬಾಧೆಯು ಕ್ರಿಸ್ತನ ನಿಮಿತ್ತವಲ್ಲವಾದರೆ ನಾವು ಸಂತೋಷ ಪಡುವದಕ್ಕೆ ಯಾವ ಸಂಗತಿಯ ಇರುವದಿಲ್ಲ.[14] ಎಲ್ಲದರಲ್ಲಿಯೂ ಎಲ್ಲಾ ಸಮಯಗಳಲ್ಲಿಯೂ ನಾವು ಕ್ರಿಸ್ತನ ನಿಮಿತ್ತ ಜೀವಿಸಬೇಕು ಹಾಗು ಆತನಿಗೆ ವಿಧೇಯರಾಗಬೇಕು. ನಾವು ಹೀಗೆ ಮಾಡುವದಾದರೆ ನಮಗೆ ಯಾವ ರೀತಿಯ ಬಾಧೆಗಳುಂಟಾದಾಗ್ಯು ನಾವು ಅದರಲ್ಲಿ ಸಂತೋಷ ಪಡುವದಕ್ಕೆ ಶಕ್ತರಾಗುತ್ತೇವೆ. ಹಾಗು ಆದರಿಂದ ಮಹಾ ಆತ್ಮೀಕ ಆಶೀರ್ವಾದವನ್ನು ಪಡೆದುಕೊಳ್ಳುವೆವು .

12 ಪೌಲನು ಕೊರಿಂಥದವರಿಗೆ ಹೇಳುವದೇನೆಂದರೆ: ಹೀಗೆ ನಮ್ಮಲ್ಲಿ ಮರಣವು ಪ್ರವರ್ತಿಸುತ್ತದೆ: ಆದರೆ ನಿಮ್ಮಲ್ಲಿ ಜೀವವು ಪ್ರವರ್ತಿಸುತ್ತದೆ. ಪೌಲನ ಬಾಧೆ ಹಾಗು ಆತನ ದಿನನಿತ್ಯದ ಮರಣದ ಮುಖಾಂತರವೇ ಜೀವದ ಸುವಾರ್ತೆಯು ಕೊರಿಂಥದವರಿಗೆ ತರಲ್ಪಟ್ಟಿರುತ್ತದೆ. ಯೇಸುವಿನಂತೆಯೇ ಪೌಲನು ಸಹ ಕೊರಿಂಥದವರು ನಿತ್ಯ ಜೀವವನ್ನು ಪಡೆಯಬೇಕೆಂದು ತನ್ನ ಶಾರೀರಿಕ ಜೀವವನ್ನು ಅರ್ಪಿಸುವವನಾಗಿದ್ದಾನೆ.

13 ಇಲ್ಲಿ ಪೌಲನು ಕೀರ್ತನೆಗಳು 116:10ರಿಂದ ಉಲ್ಲೇಖಿಸುತ್ತಾನೆ. ಕೀರ್ತನೆಗಳು 116 ಮರಣದಿಂದ ವಿಮೋಚಿಸಿದ್ದಕ್ಕಾಗಿ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುವ ಒಂದು ಸಂಕೀರ್ತನೆಯಾಗಿದೆ. ಮರಣವು ಹತ್ತಿರವಾಗಿರುವಾಗಲೂ ಪೌಲನು ದೇವರಲ್ಲಿಟ್ಟ ನಂಬಿಕೆಯು ದೃಢವಾಗಿ ಉಳಿಯುತ್ತದೆ. ಈ ನಂಬಿಕೆಯ ಭಾವದ ಕಾರಣದಿಂದ ಪೌಲನು ಯಾವಾಗಲೂ ತನ್ನ ಪರಿಸ್ಥಿತಿ ಏನೇ ಆಗಿದ್ದಾಗ್ಯು ಧೈರ್ಯದಿಂದ ಮಾತಾಡುತ್ತಾನೆ.

14 . ಪೌಲನು ಯಾಕೆ ಅಂತಹ ಧೈರ್ಯದಿಂದ ಮಾತಾಡಲು ಶಕ್ತನಾದನು/ ಯಾಕೆಂದರೆ ಕರ್ತನಾದ ಯೇಸುವನ್ನು ಎಬ್ಬಿಸಿದಾತನು ನಮ್ಮನ್ನು ಸಹ ಯೇಸುವಿನೊಂದಿಗೆ ಎಬ್ಬಿಸುವನೆಂಬದನ್ನು ಆತನು ಬಲ್ಲವನಾಗಿದ್ದಾನೆ (ರೋಮ 6:5; 8:11; ಎಫೆಸ 2:6; ಕೊಲೊಸ್ಸೆ 3:3-4 ನೋಡಿರಿ).

15 ಪೌಲನ ಈ ಬಾಧೆಗಳೆಲ್ಲಾ ಕೊರಿಂಥದವರ ಹಿತಕ್ಕಾಗಿಯೇ ಪೌಲನು ದೇವಕೃಪೆಯ[15] ಸೇವಕನಾಗಿರುತ್ತಾನೆ, ಮತ್ತು ಆ ಕೃಪೆಯು (ಕ್ರಿಸ್ತನಲ್ಲಿದೊರಕುವ ರಕ್ಷಣೆ) ಬಹು ಜನರನ್ನು ತಲುಪು ವದಾಗಿರುತ್ತದೆ, ಇದರ ಅರ್ಥವೇನೆಂದರೆ ಹೆಚ್ಚು ಹೆಚ್ಚಾದ ಜನರು ದೇವರಿಗೆ ಸ್ತೋತ್ರವನ್ನು ಸಲ್ಲಿಸುವವರಾಗುವರು. ಹೀಗೆ ದೇವಕೃಪೆಯು ಕೃತಜ್ಞತೆಯನ್ನು ಹುಟ್ಟಿಸುವದರಿಂದ ದೇವರಿಗೆ ಹೆಚ್ಚಾದ ಸ್ತೋತ್ರವನ್ನು ಉಂಟುಮಾಡುವದು.

16 ಪೌಲನ ದೇಹವು ಬಹಿರಂಗದಲ್ಲಿ ನಾಶವಾಗುತ್ತಾ ಇದ್ದರೂ – ವೃದ್ದಾಪ್ಯ ಹಾಗು ಬಳಲಿಕೆ ಮತ್ತು ಬಲಿಹೀನ ವಾಗುತ್ತಿದ್ದರೂ – ಆತನ ಆತ್ಮವು ಅಂತರ್ಯದಲ್ಲಿ ಅವನೊಳಗಿರುವ ಪವಿತ್ರಾತ್ಮನಿಂದ ದಿನೇ ದಿನೇ ಹೊಸದಾಗುತ್ತಾ ಇರುತ್ತದೆ.

17 ಪರಲೋಕದಲ್ಲಿ ನಮಗಿರುವ ಸ್ವಾಸ್ಥ್ಯಕ್ಕೆ ಹೋಲಿಸಿದರೆ ಈ ಲೋಕದಲ್ಲಿ ನಮಗಿರುವ ಬಾಧೆ ಹಾಗು ಸಂಕಟಗಳು ಕ್ಷಣಮಾತ್ರ ಹಾಗು ಹಗುರವಾದವು ಗಳಾಗಿವೆ (ರೋಮ 8;18; 1 ಕೊರಿಂಥ 2:9 ನೋಡಿರಿ) ಪೌಲನು ಇಲ್ಲಿ ನಾವು ನಮ್ಮ ಬಾಧೆಗಳ ಮೂಲಕ ಅಥವಾ ನಮ್ಮ ಬಾಧೆಗಳ ಕಾರಣದಿಂದ ನಿರಂತರವಾಗಿರುವ ಪ್ರಭಾವವನ್ನು (ರಕ್ಷಣೆ) ಪಡೆಯುತ್ತೇವೆಂದು ಹೇಳುತ್ತಿಲ್ಲ. ರಕ್ಷಣೆಯು ಕೃಪೆಯ ಮೂಲಕ ನಂಬಿಕೆಯಿಂದ ಮಾತ್ರವೇ ದೊರಕುವದಾಗಿದೆ ಹೊರತು ನಾವು ಸೈರಿಸಿಕೊಳ್ಳುವ ಯಾವದೇ ಬಾಧೆಯಿಂದಲ್ಲಿ. ಇತರ ಧರ್ಮಗಳ ಕೆಲವು ಅನುಯಾಯಿಗಲು ನಂಬುವದೇನೆಂದರೆ ಮನುಷ್ಯನು ವಿವಿಧ ರೀತಿಗಳ ಬಾಧೆಯಿಂದ ರಕ್ಷಣೆಯನ್ನು ಪಡೆದುಕೊಳ್ಳಬಹುದು ಎಂಬದೇ. ಅದು ಪೌಲನ ಬೋಧನೆಯಾಗಿರುವದಿಲ್ಲ. ಹೌದು, ನಾವು ಕ್ರಿಸ್ತನ ನಿಮಿತ್ತ ಬಾಧೆಯನ್ನನುಭವಿಸುವಾಗ "ಪ್ರತಿಫಲ" ಪಡೆಯುತ್ತೇವೆಂಬುದು ನಿಜವೇ (ಮತ್ತಾಯ 5;12; 16:27; 1 ಕೊರಿಂಥ 3:13-14 ನೋಡಿರಿ); ಆದರೆ ಸ್ವತ ರಕ್ಷಣೆಯನ್ನು ಕೃಪೆಯ ಮೂಲಕ ನಂಬಿಕೆಯಿಂದ ಮಾತ್ರವೇ ಪಡೆದುಕೊಳ್ಳಬಹುದಾಗಿದೆ (ಎಫೆಸ 2:8-9 ಮತ್ತು ವ್ಯಾಖ್ಯಾನ ನೋಡಿರಿ).

ನಮಗೆ ಬಾಧೆ ಹಾಗು ಸಂಕಟಗಳು ಬರುವಾಗ ನಾವು ಆಶ್ಚರ್ಯಪಡದಿರೋಣ. ಕ್ರಿಸ್ತನನ್ನು ಹಿಂಬಾಲಿಸುವವರೆಲ್ಲರಿಗೂ ಸಂಕಟಗಳು ಹಾಗು ಹಿಂಸೆಯು ಬರುವದು (2 ತಿಮೊಥೆ 3:12; 1 ಪೇತ್ರ 4:12-13). ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕು (ಅ.ಕೃತ್ಯ 14:22).

18 ನಾವು ಕೇವಲ ಕಣ್ಣಿಗೆ ಕಾಣುವವು ಗಳನ್ನು ಮಾತ್ರವೇ ದೃಷ್ಟಿಸುವದಾದರೆ ಬಹು ಬೇಗನೆ ನಿರಾಶರಾಗುವೆವು. ಪೌಲನ ಹೊರ ಜೀವಿತವನ್ನು ನೋಡಿರಿ. ಲೋಕದ ದೃಷ್ಟಿಯಲ್ಲಿ ಅದು ಸಂಪೂರ್ಣ ವಿಫಲಕರವಾಗಿತ್ತು. ಪ್ರಾರಂಭದಲ್ಲಿ

ಪೌಲನು ಒಬ್ಬ ಪ್ರಸಿದ್ಧ ಹಾಗು ಪ್ರಭಾವಕಾರಿ ಯೆಹೂದ್ಯನಾಗಿದ್ದನು, ಆದರೆ ಆತನು ತನ್ನ ಸ್ಥಾನಮಾನವನ್ನು ತೊರೆದು ಬಿಟ್ಟನು. ಅದರ ಬಳಿಕ ಆತನು ಜೀವತವೆಲ್ಲಾ ಎಲ್ಲಾ ರೀತಿಯ ಬಾಧೆ ಹಾಗು ಸಂಕಟವನ್ನು ಅನುಭವಿಸುತ್ತಾ ಕಳೆದನು. ಆತನ ಮಿತ್ರರೆಲ್ಲರೂ ಅವನನ್ನು ಕೈಬಿಟ್ಟರು (2 ತಿಮೊಥೆ 4:16). ಆತನಿಗೆ ಯಾವದೇ ನಿವಾಸ ಅಥವಾ ಆಸ್ತಿ ಇರಲಿಲ್ಲ. ಆತನು ತನ್ನ ಜೀವನದ ಕಡೇ ಕಾಲವನ್ನು ಸೆರೆಮನೆಯಲ್ಲಿ ಕಳೆದನು ಹಾಗು ಕೊನೆಗೆ ಆತನು ಕ್ರಿಸ್ತನಲ್ಲಿಟ್ಟ ನಂಬಿಕೆಯ ನಿಮಿತ್ತ ಕೊಲ್ಲಲ್ಪಟ್ಟನು. ಪೌಲನ ಹೊರಗಿನ ಸದೃಶ್ಯ ಜೀವನದ ಚಿತ್ರಣ ಇದಾಗಿರುತ್ತದೆ. ಆದರೆ ನಾವು ಈ ಹೊರಗಿನ ಕಾಣುವಂಥ ಸಂಗತಿಗಳನ್ನು ದೃಷ್ಟಿಸದಿರೋಣ. ಬದಲಾಗಿ, ನಾವು ಕ್ರಿಸ್ತನನ್ನೇ ದೃಷ್ಟಿಸೋಣ (ಇಬ್ರಿಯ 12:2-3). ನಾವು ಆತನ ಬಾಧೆಯಲ್ಲಿ ಪಾಲುಗಾರರಾಗುವದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವೆಂಬದನ್ನು ನಾವು ಜ್ಞಾಪಕದಲ್ಲಿಟ್ಟು ಕೊಳ್ಳೋಣ (ರೋಮ 8:17). ಆದದರಿಂದ, ದೇವರು ಕ್ರಿಸ್ತನ ಮೂಲಕವಾಗಿ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇರೋಣ (ಫಿಲಿಪ್ಪಿ 3:14).

---

## ಅಧ್ಯಾಯ - 5

### ನಮ್ಮ ಪರಲೋಕ ನಿವಾಸ (5:1-10)

1 ಇಲ್ಲಿ ಪೌಲನು ನಮ್ಮ ದೇಹವನ್ನು ಭೂಮಿಯ ಮೇಲಿರುವ ಮನೆ ಎಂದು ಕರೆಯುತ್ತಾನೆ. ಪೌಲನು 2 ಕೊರಿಂಥ 4:16 ರಲ್ಲಿ ನಾಶವಾಗುತ್ತಾ ಇದೆ ಎಂದು ಹೇಳಿದ್ದು ಈ "ಭೂಮಿಯ ಮೇಲಿರುವ ಮನೆ" ಬಗ್ಗೆಯೇ. ನಮ್ಮ ಭೂಲೋಕದ ದೇಹವು ಒಂದು ದಿನ ಮರಣದ ಮೂಲಕ ಕಿತ್ತು ಹಾಕಲ್ಪಡುವದು. ನಮ್ಮ ಭೂಲೋಕದ ದೇಹವು ಸಾಯುವಾಗ ಆತ್ಮವು ದೇಹವನ್ನು ಬಿಟ್ಟು ಹೋಗುವದು. ಆಗ ನಮ್ಮ ದೇಹವು ಕೇವಲ ಶವವಾಗುವದು. ಆದರೆ ನಮ್ಮ ಭೂಲೋಕದ ದೇಹವು ಕಿತ್ತು ಹಾಕಲ್ಪಟ್ಟರೂ ಪರಲೋಕದಲ್ಲಿ ನಿತ್ಯವಾಗಿರುವಂಥ ನಿವಾಸವನ್ನು – ಅಂದರೆ, ಒಂದು ನೂತನ ಆತ್ಮೀಕ ದೇಹವನ್ನು – ಪಡೆಯುತ್ತೇವೆ. ಆ ನೂತನದೇಹವು ನಮ್ಮ ವಿಮೋಚಿಸಲ್ಪಟ್ಟ ದೇಹವಾಗಿರುತ್ತದೆ (ರೋಮ 8:23), ಅದು ಪುನರುತ್ಥಾನ ಗೊಂಡ ದೇಹವಾಗಿರುತ್ತದೆ (1 ಕೊರಿಂಥ 15:42-44, 49) ಪೌಲನು ನಮ್ಮ ಭೂಲೋಕದ ದೇಹವನ್ನು ಒಂದು ಗುಡಾರ ಎಂದು ಕರೆಯುವದನ್ನು ಗಮನಿಸಿರಿ. ಗುಡಾರವು ಒಂದು ನಿತ್ಯವಾದ ನಿವಾಸವಲ್ಲ; ಇದು ಕೇವಲ ತಾತ್ಕಾಲಿಕವಾದ ನಿವಾಸವಾಗಿರುತ್ತದೆ. ಈ ಲೋಕದಲ್ಲಿ ಮಾನವರಾದ ನಾವು ಕೇವಲ ಪ್ರವಾಸಿಗರೂ ಪರದೇಶಸ್ಥರೂ ಆಗಿದ್ದೇವೆ (1 ಪೇತ್ರ 2:11). ನಾವು ನಮ್ಮ ಶಾಶ್ವತವಾದ ನಿವಾಸದಲ್ಲಿ, ಪರಲೋಕದಲ್ಲಿರುವ ಕಟ್ಟಡದಲ್ಲಿ ವಾಸಿಸುವ ಸಮಯಕ್ಕಾಗಿ ಕಾಯುತ್ತಿದ್ದೇವೆ, ಅದು ನಮಗಾಗಿ ದೇವರಿಂದ ಸಿದ್ಧಮಾಡಲ್ಪಟ್ಟಿರುತ್ತದೆ (ಇಬ್ರಿಯ 11:8-10 ನೋಡಿರಿ).

2 ನಾವು ಈಗಿನ ದೇಹದಲ್ಲಿರುವವರೆಗೂ ಈ ಭೂಮಿಯ ಮೇಲಿರುವ ನಿವಾಸದಲ್ಲಿ) ನರಳುತ್ತೇವೆ – ಅಂದರೆ, ಈ ಜೀವನದಲ್ಲಿ ನಾವು ಎಲ್ಲಾರೀತಿಯ ಸಮಸ್ಯೆ ಹಾಗು ನೋವು ಅನುಭವಿಸುತ್ತೇವೆ. ನಾವು ಪರಲೋಕದಿಂದ ದೊರಕುವ ನಮ್ಮ ನಿವಾಸವನ್ನು ನಾವು ದೇಹದ ಮೇಲೆ ಧರಿಸಿಕೊಳ್ಳಬೇಕೆಂದು– ಅಂದರೆ, ನಾವು ನಮ್ಮ ಹೊಸವಿಮೋಚಿಸಲ್ಪಟ್ಟ ಹಾಗು ಪುನರುತ್ಥಾನಗೊಂಡ ದೇಹವನ್ನು ಪಡೆದುಕೊಳ್ಳುವದನ್ನು ಕಾತುರದಿಂದ ಅಪೇಕ್ಷಿಸುವವರಾಗಿದ್ದೇವೆ (ರೋಮ 8:23 ನೋಡಿರಿ).

3 ಪೌಲನು ತಾನು ಬೆತ್ತಲೆಯಾಗಿ ಕಂಡುಬರದಂತೆ ಶೀಘ್ರವೇ ತನ್ನ ಪರಲೋಕದಿಂದ ದೊರಕುವ ನಿವಾಸವನ್ನು ಧರಿಸಿಕೊಳ್ಳಲು ಬಯಸುತ್ತಾನೆ. ಯಾಕೆಂದರೆ ನಾವು ಸಾಯುವಾಗ ಕ್ರಿಸ್ತನು ತಿರಿಗಿ ಬರುವತನಕ "ವೀವಸ್ತ್ರ" ಅಥವಾ ಬೆತ್ತಲೆಯಾಗಿ ಉಳಿಯಬೇಕು; ಕ್ರಿಸ್ತನು ಬಂದ ಮೇಲೆ ಮಾತ್ರವೇ ನಾವು ನಮ್ಮ ಪುನರುತ್ಥಾನಗೊಂಡ, ನಮ್ಮ ಪರಲೋಕ ನಿವಾಸವನ್ನು ಧರಿಸಿಕೊಳ್ಳುವೆವು (1 ಕೊರಿಂಥ 15:22-23 ನೋಡಿರಿ). ಆದದರಿಂದ, ಪೌಲನು ಹಾರೈಸುವದೇನೆಂದರೆ ತಾನು ಸಾಯುವದಕ್ಕೆ ಮುನ್ನವೇ ಕ್ರಿಸ್ತನು ತಿರಿಗಿ ಬರಬೇಕೆಂಬುದೇ.

4 ಇದು ಕಳಚಿಹೋಗಬೇಕೆಂಬದು (ವೀವಸ್ತ್ರ) ನಮ್ಮ ಇಷ್ಟವಲ್ಲ, ಅಂದರೆ, ಸಾಯಬೇಕೆಂದು ಇಷ್ಟವಲ್ಲ. ನಮ್ಮ ಭೂಲೋಕದ ಗುಡಾರವು (ದೇಹ) ನಿಧಾನವಾಗಿ ನಶಿಸಿಹೋಗುತ್ತಿರುವದನ್ನು ಕಾಣುತ್ತೇವೆ; ಆದದರಿಂದ ನಮ್ಮ ಬಲಹೀನ ಹಾಗು ಮರ್ತ್ಯ ದೇಹಗಳಿಂದ ನಾವು ಭಾರಹೊತ್ತು ಕೊಂಡವರಾಗಿ ನರಳುತ್ತೇವೆ. ಪೌಲನ ಕಾಲದಲ್ಲಿ ಬಹುಮಂದಿ ತಾವು ಸಾಯುವದಕ್ಕಿಂತ ಮುಂಚೆಯೇ, ಕ್ರಿಸ್ತನು ತಿರಿಗಿ ಬರುವನೆಂದು ನಂಬುತ್ತಿದ್ದರು. ಹಾಗಾಗುವದಾದರೆ ಕ್ರಿಸ್ತನು ತಿರಿಗಿ ಬಂದ ತಕ್ಷಣವೇ ಅವರು ತಮ್ಮ ನೂತನ, ಪುನರುತ್ಥಾನಗೊಂಡ, ನಿತ್ಯವಾದ ದೇಹಗಳನ್ನು ಪಡೆದುಕೊಂಡು "ಬೆತ್ತಲೆ" ಆಗಿ ಉಳಿಯಬೇಕಾಗುತ್ತಿರಲಿಲ್ಲ (1 ಕೊರಿಂಥ 15:51-52; 1 ಥೆಸಲೋನಿಕ 4:16-17 ನೋಡಿರಿ). ಈ ವಿಧದಲ್ಲಿ, ಮರ್ತ್ಯವಾದದ್ದು (ಅವರ ಭೂಲೋಕದ ದೇಹಗಳು) ನುಂಗಿಹೋಗಿ ಜೀವವೊಂದೇ ಉಳಿಯುವಂತದಾಗಿತ್ತು – ಅಂದರೆ, ಪುನರುತ್ಥಾನಗೊಂಡು ನಿತ್ಯವಾಗಿ ಜೀವಂತಗೊಳಿಸಲ್ಪಡುವದಾಗಿತ್ತು (1 ಕೊರಿಂಥ 15:54 ನೋಡಿರಿ).

5 ದೇವರು ನಂಬುವವರಾದ ನಮ್ಮೆಲ್ಲರಿಗೂ ಪುನರುತ್ಥಾನಗೊಂಡ ನೂತನ ದೇಹವನ್ನು ಕೊಡುವನು, ಹೀಗೆ ನಾವು ಸದಾಕಾಲವೂ ಆತನೊಂದಿಗೆ ಪರಲೋಕದಲ್ಲಿ ಜೀವಿಸಬಲ್ಲವರಾಗುವೆವು. ಆದರೆ ದೇವರು ಈಗಾಗಲೇ ಈ ಜೀವನದಲ್ಲಿ

ನಮಗೆ ಪವಿತ್ರಾತ್ಮನನ್ನು ಕೊಟ್ಟಿದ್ದು ಆತನು ಬರಲಿರುವ ಮುಂದಿನ ಸ್ಥಿತಿಗೆ ಸಂಚಕಾರವಾಗಿ (ಮುಂಗಡ) ಇರುತ್ತಾನೆ. ಮತ್ತು "ಬರಲಿರುವ ಮುಂದಿನ ಸ್ಥಿತಿಯು" ಏನೆಂದರೆ ನಾವು ನಿತ್ಯಜೀವವನ್ನು ಪಡೆಯುವೆವು ಎಂಬದೇ (2 ಕೊರಿಂಥ 1:22; ಎಫೆಸ 1:13-14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಒಂದು ವಿಧದಲ್ಲಿ, ನಮ್ಮ ನೂತನ ನಿತ್ಯವಾದ ಜೀವಿತವು ಈಗಾಗಲೇ ಈ ಭೂಮಿಯ ಮೇಲೆ ಪಾರಂಭವಾಗಿದೆ. ಪೌಲನು ಹೇಳುವದೇನೆಂದರೆ, ಇಲ್ಲಿಯೂ ಅಂತರ್ಯದಲ್ಲಿ ನಾವು ದಿನೇ ದಿನೇ ಹೊಸದಾಗುತ್ತಾ ಬರುತ್ತದೆ ಎಂಬದೇ (2 ಕೊರಿಂಥ 4:16). ಪವಿತ್ರಾತ್ಮನು ಈಗಲೂ ನಮ್ಮ ಮರ್ತ್ಯದೇಹಗಳನ್ನು ಬದುಕಿಸಲು ಕಾರ್ಯಮಾಡುತ್ತಾ ಇದ್ದಾನೆ (ರೋಮ 8:11). ಒಳ್ಳೇ ಕೆಲಸವನ್ನು (ನಮ್ಮಲ್ಲಿ) ಪ್ರಾರಂಭಿಸಿದಾತನು (ದೇವರು) ಅದನ್ನು ನಡಿಸಿಕೊಂಡು ಯೇಸು ಕ್ರಿಸ್ತನು ಬರುವ ದಿನದೊಳಗಾಗಿ ಸಿದ್ಧಿಗೆ ತರುವನೆಂದು ನಾವು ಭರವಸದಿಂದಿರಬಹುದು (ಫಿಲಿಪ್ಪಿ 1:6).

ದೇವರು ನಮ್ಮ ಈ ಸ್ಥಿತಿಗಾಗಿ (ಉದ್ದೇಶಕ್ಕಾಗಿಯೇ) ಸಿಧ್ಧ ಮಾಡಿರುವನು, ಏನೆಂದರೆ, ನಾವು ಪರಲೋಕದಲ್ಲಿ ನಿತ್ಯವಾದ ಸ್ವಾಸ್ತ್ಯವನ್ನು ಪಡೆದುಕೊಂಡು ಆತನೊಂದಿಗೆ ಸದಾಕಾಲವೂ ಜೀವಿಸಬೇಕೆಂಬುದೇ. ಮತ್ತು ನಮ್ಮಲ್ಲಿರುವ ಪವಿತ್ರಾತ್ಮನು ಅದು ಸತ್ಯವೆಂದು ಸಾಕ್ಷಿಹೇಳುತ್ತಾನೆ (ರೋಮ 8:16-17 ಮತ್ತು ವ್ಯಾಖ್ಯಾನ ನೋಡಿರಿ).

**6-8** ಹೀಗಿರುವದರಿಂದ ನಾವು ಯಾವಾಗಲೂ ಧೈರ್ಯವುಳ್ಳವರಾಗಿದ್ದೇವೆ. ನಾವು ಈ ಲೋಕದಲ್ಲಿ ಜೀವಿಸುವವರೆಗೂ ದೇಹವೆಂಬ ಮನೆಯಲ್ಲಿರುತ್ತೇವೆ – ಅಂದರೆ, ನಾವು ನಮ್ಮ ಭೂಲೋಕದ ದೇಹವನ್ನು ಹೊಂದಿರುತ್ತೇವೆ. ನಾವು ಸತ್ತ ಮೇಲೆ ಪರಲೋಕದ ನಿತ್ಯ ದೇಹವನ್ನು ಪಡೆದುಕೊಳ್ಳುವೆವು. ಆ ನೂತನ ದೇಹವು ನಮ್ಮ ಈಗಿನ ಭೂಲೋಕದ ದೇಹಕ್ಕಿಂತಲೂ ಹೆಚ್ಚು ಉತ್ತಮವಾಗಿರುತ್ತದೆ. ಯಾಕೆಂದರೆ, ನಮ್ಮ ಭೂಲೋಕದ ದೇಹವು ಕರ್ತನಿಗೆ ದೂರಲ್ಲಿರುತ್ತದೆ (ವಚನ 6) – ಅಂದರೆ, ಅದು ಶಾರೀರಿಕವಾಗಿ ಕರ್ತನಿಂದ ದೂರವಾಗಿರುತ್ತದೆ. ಆದರೆ ನಮ್ಮ ಪರಲೋಕದ ಹೊಸ ದೇಹಗಳು ಕರ್ತನ ಬಳಿಯಲ್ಲಿರುತ್ತವೆ (ವಚನ 8) – ಅಂದರೆ, ಅವುಗಳು ಕರ್ತನೊಂದಿಗೆ ಇರುತ್ತವೆ.

ನಾವು ನೋಡುವವರಾಗಿ ಜೀವಿಸದೆ ನಂಬುವವರಾಗಿಯೇ ಜೀವಿಸುತ್ತೇವೆ (ವಚನ 7). ಕ್ರಿಸ್ತನು ಈಗ ಪರಲೋಕದಲ್ಲಿದ್ದಾನೆ, ಆದರೆ ನಾವು ಭೂಮಿಯ ಮೇಲಿದ್ದೇವೆ. ಈಗ ನಾವು ನಂಬುವವರಾಗಿಯೇ ನಡೆಯುತ್ತೇವೆ. ನಾವು ಕ್ರಿಸ್ತನನ್ನು ನಮ್ಮ ಕಣ್ಣಾರೆ ನೋಡಲಾರೆವು. ಆದರೆ ಪರಲೋಕದಲ್ಲಿ ನಾವು ಆತನನ್ನು ಮುಖಾಮುಖಿಯಾಗಿ ನೋಡುತ್ತೇವೆ.

ಪೌಲನು ಬದುಕಿದ್ದರೂ ಅಥವಾ ಸತ್ತಿದ್ದರೂ, ಭೂಲೋಕದಲ್ಲಿದ್ದರೂ ಅಥವಾ ಪರಲೋಕದಲ್ಲಿದ್ದರೂ ಕ್ರಿಸ್ತನಿಗಾಗಿಯೇ ಜೀವಿಸುತ್ತಾನೆ. ಪೌಲನು ಫಿಲಿಪ್ಪಿಯವರಿಗೆ ಬರೆಯುವದೇನೆಂದರೆ: ಇಲ್ಲಿಂದ ಹೋಗಿ ಬಿಟ್ಟು ಕ್ರಿಸ್ತನ ಜೊತೆಯಲ್ಲಿರಬೇಕೆಂಬದೇ ನನ್ನ ಅಭಿಲಾಷೆ, ಅದು ಉತ್ತಮೋತ್ತಮ (ಫಿಲಿಪ್ಪಿ 1:23). ಆದರೆ ಪೌಲನು ಅವಶ್ಯವಾದರೆ ಸಾಧ್ಯವಾದಷ್ಟು ಕಾಲದ ವರೆಗೆ ಈ ಭೂಲೋಕದಲ್ಲಿ ಕ್ರಿಸ್ತನ ಸೇವೆಯನ್ನು ಮಾಡುವದಕ್ಕೂ ಸಿದ್ದನಾಗಿರುತ್ತಾನೆ (ಫಿಲಿಪ್ಪಿ 1:21-24 ನೋಡಿರಿ).

**9** ನಮ್ಮ ಮುಖ್ಯಗುರಿಯು ಕ್ರಿಸ್ತನನ್ನು ಮೆಚ್ಚಿಸುವದೇ ಆಗಿದೆ. ನಾವು ಬದುಕಿದ್ದರೂ ಅಥವಾ ಸತ್ತಿದ್ದರೂ, ಭೂಲೋಕದ ದೇಹದಲ್ಲಿದ್ದರೂ ಅಥವಾ ಪರಲೋಕದ ದೇಹದಲ್ಲಿದ್ದರೂ ನಾವು ದೇಹವೆಂಬ ಮನೆಯಲ್ಲಿದ್ದರೂ ಅಥವಾ ಬಿಟ್ಟಿದ್ದರೂ ಸರಿಯೇ – ಆತನಿಗೆ ಮೆಚ್ಚುವವರಾಗಿರಬೇಕೆಂಬದೇ ನಮ್ಮ ಗುರಿಯಾಗಿದೆ (ರೋಮ 14:8 ನೋಡಿರಿ).

**10** ಹೊಸ ಒಡಂಬಡಿಕೆಯ ಪ್ರಕಾರವಾಗಿ ನ್ಯಾಯತೀರ್ಪಿನ ದಿನದಲ್ಲಿ ದೇವರೂ ಕ್ರಿಸ್ತನೂ ಒಟ್ಟಾಗಿ ಎರಡು ರೀತಿಯ ನ್ಯಾಯತೀರ್ಪುಗಳನ್ನು ನೀಡುತ್ತಾರೆ. ಕ್ರಿಸ್ತನನ್ನು ನಂಬದವರಿಗೆ ನೀಡುವ ನ್ಯಾಯತೀರ್ಪು ಮೊದಲನೆಯ ವಿಧದ ನ್ಯಾಯತೀರ್ಪಾಗಿದೆ. ಆತನನ್ನು ನಂಬುವವನಿಗೆ ತೀರ್ಪು ಆಗುವದಿಲ್ಲ; ಆದರೆ ನಂಬದವನಿಗೆ ದೇವರ ಒಬ್ಬನೇ ಮಗನ ಹೆಸರನ್ನು ನಂಬದೆ ಹೋದದರಿಂದ ಆಗಲೇ ತೀರ್ಪು ಆಗಿಹೋಯಿತು (ಯೋಹಾನ 3:18). ಕ್ರಿಸ್ತನಿಗೆ ತೀರ್ಪು ಆಗುವದಿಲ್ಲ; ಆತನು ಅವಿಶ್ವಾಸಿಗಳ ಮೇಲೆ ಬರುವ ನ್ಯಾಯತೀರ್ಪಿನಿಂದ ವಿಮೋಚಿಸಲ್ಪಟ್ಟಿರುತ್ತಾನೆ (ರೋಮ 5:1; 8:1 ನೋಡಿರಿ). ಅವಿಶ್ವಾಸಿಗಳು ಪಡೆಯುವ ತೀರ್ಪು ಮರಣದಂಡನೆ, ನರಕದಲ್ಲಿ ನಿತ್ಯ ಮರಣವೇ.

ಎರಡನೆಯ ವಿಧದ ನ್ಯಾಯತೀರ್ಪು ಕ್ರಿಸ್ತನಲ್ಲಿ ವಿಶ್ವಾಸಿಸುವವರಿಗಾಗಿ ಇರುತ್ತದೆ. ಪೌಲನು ಈ ವಚನದಲ್ಲಿ ಇದೇ ವಿಧದ ನ್ಯಾಯತೀರ್ಪಿನ ಕುರಿತಾಗಿಯೇ ಮಾತಾಡುತ್ತಿದ್ದಾನೆ. ಕ್ರೈಸ್ತರಾದ ನಾವು ಸಹ ಕ್ರಿಸ್ತನ ನ್ಯಾಯಾಸ್ಥಾನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು. ನಾವು ಸ್ವತಃ ತೀರ್ಪಿಗೊಳಗಾಗುವದಿಲ್ಲ; ಬದಲಾಗಿ ನಮ್ಮ ಕಾರ್ಯಗಳಿಗೆ ತೀರ್ಪು ಆಗುವದು. ಪ್ರತಿಯೊಬ್ಬ ಕ್ರೈಸ್ತನು ತನ್ನ ದೇಹದ ಮೂಲಕ ನಡಿಸಿದ ಕಾರ್ಯಗಳಿಗೆ ಸರಿಯಾಗಿ ಪ್ರತಿಫಲವನ್ನು ಹೊಂದುವರು. ಇದು ನಮ್ಮ ಕಾರ್ಯಗಳಿಗಾಗುವ ನ್ಯಾಯ ತೀರ್ಪು ಆಗಿದೆ. ಈ ನ್ಯಾಯತೀರ್ಪು ದಂಡನೆಯನ್ನು ನೀಡುವದಕ್ಕಲ್ಲ, ಆದರೆ ಪ್ರತಿಫಲಗಳನ್ನು ಕೊಡುವದಕ್ಕಾಗಿಯೇ (ರೋಮ 14:10-12; 1 ಕೊರಿಂಥ 3:8, 13-15 ಹಾಗು ವ್ಯಾಖ್ಯಾನಗಳನ್ನು ನೋಡಿರಿ).

ನಾವು ನಮ್ಮ ಕಾರ್ಯಕ್ಕಾಗಿ ಯಾವ ರೀತಿಯ ಪ್ರತಿಫಲ ಪಡೆಯುವೆವು ಎಂಬದನ್ನು ಅರಿಯೆವು. 1 ಕೊರಿಂಥ 4:5ರಲ್ಲಿ ಪೌಲನು ಒಂದು ಸಂಗತಿಯನ್ನು ಮಾತ್ರ ಹೇಳುತ್ತಾನೆ: ಆ ಕಾಲದಲ್ಲಿ ಪ್ರತಿಯೊಬ್ಬನಿಗೆ ಬರತಕ್ಕ ಹೊಗಳಿಕೆಯು ದೇವರಿಂದ ಬರುವದು (ಲೂಕ 19:15-19 ನೋಡಿರಿ).

ಕ್ರೈಸ್ತನು ತಾನು ರಕ್ಷಣೆ ಹೊಂದಿದ್ದರಲ್ಲಿ ಮಾತ್ರವೇ ಸಂತೃಪ್ತಗೊಳ್ಳಬಾರದು. ಬದಲಾಗಿ, ತಾನು ರಕ್ಷಣೆಹೊಂದಿರುವದರಿಂದಲೂ ದೇವರು ಅವನಿಗೆ ಅಂತಹ ಶ್ರೇಷ್ಠ ಪ್ರೀತಿ ಮತ್ತು ಕರುಣೆಯನ್ನು ತೋರಿಸಿರುವದರಿಂದಲೂ

ಕ್ರಿಸ್ತನು ಇನ್ನು ಹೆಚ್ಚಾಗಿ ದೇವರನ್ನು ಘನಪಡಿಸಿ ತನ್ನ ಪೂರ್ಣ ಹೃದಯದಿಂದ ಸೇವೆ ಮಾಡುವದಕ್ಕೆ ತವಕಪಡಬೇಕು. ಯೇಸು ಹೇಳಿದ್ದೇನೆಂದರೆ: "ನೀವು ಬಹಳ ಫಲ ಕೊಡುವದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವದು" (ಯೋಹಾನ 15:8). ಆತನು ಇನ್ನೂ ಹೇಳಿದ್ದೇನೆಂದರೆ: "ನೀವು ನನ್ನನ್ನು ಆರಿಸಿ ತೆಗೆದು ಕೊಂಡಿಲ್ಲ, ಆದರೆ ನಾನು ನಿಮ್ಮನ್ನು ಆರಿಸಿತೆಗೆದು ಕೊಂಡೆನು. ನೀವು ಹೊರಟುಹೋಗಿ ಫಲಕೊಡುವವರಾಗಬೇಕೆಂದು...ನಿಮ್ಮನ್ನು ನೇಮಿಸಿದ್ದೇನೆ". (ಯೋಹಾನ 15:16).

## ಸಂಧಾನಗೊಳಿಸುವ ಸೇವೆ (5:11-21)

**11-12** ಕರ್ತನ ಭಯವು ನಮಗಿರುತ್ತದೆ (ವಚನ 11). ಯಾಕೆಂದರೆ ಒಂದು ದಿನ ನಾವು ಆತನ ನ್ಯಾಯಸ್ಥಾನದ ಮುಂದೆ ಕಾಣಿಸಿಕೊಳ್ಳಬೇಕೆಂದು ಬಲ್ಲೆವು (ವಚನ 10).

ಕೊರಿಂಥದ ಸಭೆಯಲ್ಲಿನ ಕೆಲವು ಸದಸ್ಯರು ಪೌಲನನ್ನು ವಿರೋಧಿಸಿದ್ದರು. ಪೌಲನು 12ನೇ ವಚನದಲ್ಲಿ ಆ ಜನರ ಕುರಿತಾಗಿ ಅವರು ತೋರಿಕೆಯ ವಿಷಯದಲ್ಲಿ ಹಿಗ್ಗುತ್ತಾರೆ – ಅಂದರೆ, ಅವರು ಕಾಣುವಂಥದರ ಮೇಲೆ ಗಮನಹರಿಸುತ್ತಾರೆ – ಎಂದು ಹೇಳುತ್ತಾನೆ. ಅವರು ಹೊರಗಿನ ಸಂಗತಿಗಳನ್ನು ಮಾತ್ರವೇ (ಗಣನೆಗೆ ತಂದುಕೊಂಡು ಹೃದಯದ ವಿಷಯದಲ್ಲಿ ಗಮನಕೊಡುವದಿಲ್ಲ.)

ಪೌಲನು ಕೊರಿಂಥದವರಿಗೆ ಹೇಳುವದೇನೆಂದರೆ: ನಾವು ——ನಮ್ಮ ವಿಷಯದಲ್ಲಿ ಹಿಗ್ಗುವದಕ್ಕೆ ನಿಮಗೆ ಆಸ್ಪದ ಕೊಡುತ್ತೇವೆ (ವಚನ 12). ಪೌಲನು ಇಲ್ಲಿ ತನ್ನನ್ನು ಹೊಗಳಿಕೊಳ್ಳಲು ಪ್ರಯತ್ನಿಸುತ್ತಿರುವದಿಲ್ಲ; ಆತನ ಸ್ವಜೀವಿತವು ನ್ಯಾಯವಾಗಿಯೂ ಗೌರವವುಳ್ಳದ್ದೂ ಆಗಿರುತ್ತದೆ, ಮತ್ತು ಕೊರಿಂಥದವರು ಆತನ ಜೀವಿತದ ಉದಾಹರಣೆಯನ್ನು ಉಪಯೋಗಿಸಿದ್ದರೆ ಸಾಕು ಅವರು ಆತನ ವಿರುಧ್ಧವಾಗಿ ಮಾತಾಡುವವರನ್ನು ಖಂಡಿಸಲು ಶಕ್ತರಾಗುವರೆಂದು ಮಾತ್ರವೇ ಆತನ ತಾತ್ಪರ್ಯವಾಗಿರುತ್ತದೆ. ಕೊರಿಂಥದವರು ನಿಜವಾಗಿಯೂ ಪೌಲನಲ್ಲಿ ಹೆಚ್ಚಳ ಪಟ್ಟುಕೊಳ್ಳಬಹುದು, ಯಾಕೆಂದರೆ ಆತನು ಅವರ ನಿಜವಾದ ಅಪೊಸ್ತಲನಾಗಿದ್ದಾನೆ.

ಪೌಲನು ಇಲ್ಲಿ ತನ್ನನ್ನು ವಿರೋಧಿಸುವವರೊಂದಿಗೆ ತರ್ಕಮಾಡಲು ಸಿಧ್ಧನಾಗಿದ್ದಾನೆಂಬದನ್ನು ಗಮನಿಸಿರಿ. ಪೌಲನು ತನಗೋಸ್ಕರವಾಗಿ ತನ್ನನ್ನು ಹೊಗಳಿಕೊಳ್ಳುವದಕ್ಕಾಗಲಿ ವಾದಿಸಿಕೊಳ್ಳುವದಕ್ಕಾಗಲಿ ಇಷ್ಟಪಡದೇ ಸಭೆಯಗೋಸ್ಕರವಾಗಿಯೇ ಮಾಡುವವನಾಗಿದ್ದಾನೆ. ಕ್ರೈಸ್ತರು ತಮಗೆ ವಿರುಧ್ಧವಾಗಿ ಮಾತಾಡಲ್ಪಡುವದನ್ನು ಕೇಳುವಾಗ ಅವರು ಸಾಮಾನ್ಯವಾಗಿ ಯೇಸುವಿನ ಮಾದರಿಯನ್ನು ಅನುಸರಿಸಿ ಮೌನವಾಗುಳಿಯಬೇಕು (1 ಪೇತ್ರ 2:23 ನೋಡಿರಿ). ಆದರೆ ಸಭೆಯ ನಾಯಕರು ತಮಗೆ ವಿರುದ್ಧವಾಗಿ ಮಾತುಗಳನ್ನು ಕೇಳುವಾಗ ಅವರು ತಮ್ಮ ವಿರೋಧಿಗಳಿಗೆ ಉತ್ತರಿಸಿ ಅವರ ಆರೋಪಗಳನ್ನು ಖಂಡಿಸುವದು ಪ್ರಾಮುಖ್ಯವಾಗಿರುತ್ತದೆ. ಯಾಕೆಂದರೆ ತಮ್ಮ ನಾಯಕರನ್ನು ವಿರೋಧಿಸುವವರು ಕ್ರಿಸ್ತನ ಸಭೆಯನ್ನೂ[16] ವಿರೋಧಿಸುವವರಾಗಿದ್ದಾರೆ. ಆದದರಿಂದ, ಪೌಲನು ಮಾಡಿದಂತೆಯೇ ಸಭೆಗೆ ಹಾನಿಯಾಗುವದನ್ನು ತಡೆಯುವದಕ್ಕಾಗಿ ಸಭೆಯ ನಾಯಕರು ಅಂತಹ ವಿರೋಧಿಗಳ ವಿರುದ್ಧವಾಗಿ ತಮ್ಮನ್ನು ವಾದಿಸಿಕೊಳ್ಳಬೇಕು. ಆದರೆ ಅವರು ತಮ್ಮನ್ನು ಗರ್ವದಿಂದಾಗಲಿ ಅಥವಾ ಕೋಪದಿಂದಾಗಲಿ ವಾದಿಸಿಕೊಳ್ಳಬಾರದು; ಇಲ್ಲವಾದರೆ ತಮ್ಮನ್ನು ವಿರೋಧಿಸುವವರಷ್ಟೇ ಹಾನಿಯನ್ನು ಮಾಡುವವರಾಗುತ್ತಾರೆ.

**13** ಪೌಲನ ವಿರೋಧಿಗಳಲ್ಲಿ ಕೆಲವರು ಆತನು "ಬುದ್ಧಿ ಇಲ್ಲದವನು" ಎಂದು ಹೇಳಿದ್ದರು. ಬಹುಶಚಿ ಅವರು ಆತನಿಗೆ ಅತಿಧಾರ್ಮಿಕನಾಗಿದ್ದು ಮತಾಂಧನಾಗಿದ್ದಾನೆಂದು ಹೇಳಿರಬೇಕು. ಪೌಲನು ಅಂತಹ ಆರೋಪಕ್ಕೆ ಉತ್ತರಿಸುತ್ತಾ ಹೇಳುವದೇನೆಂದರೆ, "ಸರಿ, ನಾನು ಬಹಳ ದಾರ್ಮಿಕನಂತೆಯೂ ಅಥವಾ ಬುದ್ಧಿಪರವಶನಾಗಿದ್ದರೂ ಅದೆಲ್ಲಾ ನಿಮಗೋಸ್ಕರವಾಗಿಯೇ".

ಕೆಲವು ಜನರು ಸ್ವತಃ ಯೇಸುವಿಗೆ "ಹುಚ್ಚು ಹಿಡಿದದೆ" ಎಂದು ಹೇಳಿದ್ದರು (ಮಾರ್ಕ 3:20-22 ನೋಡಿರಿ). ಜನರು ಯೇಸುವಿನ ವಿರುದ್ಧವಾಗಿ ಮಾತಾಡಿದಂತೆಯೇ ಪೌಲನ ವಿರುದ್ಧವಾಗಿಯೂ ಮಾತಾಡಿದರು (ಯೋಹಾನ 15:18,20 ಮತ್ತು ವ್ಯಾಖ್ಯಾನ ನೋಡಿರಿ).

**14** ಪೌಲನ ಜೀವಿತದಲ್ಲಿ ಕ್ರಿಸ್ತನ ಪ್ರೀತಿಯು ಒತ್ತಾಯವನ್ನುಂಟು ಮಾಡುತ್ತಿದ್ದ ದೊಡ್ಡ ಶಕ್ತಿಯಾಗಿತ್ತು. ಪೌಲನು ಕ್ರಿಸ್ತನ ಪ್ರೀತಿಯ ಕಾರಣದಿಂದಲೇ ಎಲ್ಲವನ್ನೂ ಮಾಡಿದನು. ಕ್ರಿಸ್ತನು ಪೌಲನಿಗಾಗಿ ತನ್ನ ಪ್ರಾಣವನ್ನು ಕೊಟ್ಟನು. ಆದದರಿಂದ, ಪೌಲನು ತನ್ನ ಪ್ರಾಣವನ್ನು ಕ್ರಿಸ್ತನಿಗಾಗಿ ನೀಡಲು ಬಯಸುತ್ತಾನೆ. ಆದರೆ ಕ್ರಿಸ್ತನು ತನ್ನ ಪ್ರಾಣವನ್ನು ಪೌಲನಿಗೋಸ್ಕರ ಮಾತ್ರವಲ್ಲದೆ ಎಲ್ಲಾ ಜನರಿಗಾಗಿಯೂ ಅರ್ಪಿಸಿದನು. ಅಂದರೆ, ಆತನ ಎಲ್ಲಾ ಮಾನವರಿಗೆ ಬದಲಾಗಿ ಸತ್ತನು, ಯಾಕೆಂದರೆ ಮಾನವರೆಲ್ಲರೂ ಮರಣದಂಡನೆಗೆ ಒಳಪಟ್ಟಿದ್ದರು. ಕ್ರಿಸ್ತನು ನಮ್ಮ ಸ್ಥಾನದಲ್ಲಿ ಸಾಯದಿದಿದ್ದರೆ ನಾವೆಲ್ಲರೂ ಸದಾಕಾಲವೂ ನರಕದಲ್ಲಿ ಸಾಯುವದಂಡನೆಗೆ ಒಳಗಾಗಿರುತ್ತಿದ್ದೆವು[17] (ಮಾರ್ಕ 10:45 ಮತ್ತು ವ್ಯಾಖ್ಯಾನ ನೋಡಿರಿ).

ಎಲ್ಲರೂ ಸತ್ತಂತಾಯಿತು ಎಂದು ಪೌಲನು ಹೇಳುತ್ತಾನೆ. ಒಂದು ವಿಧದಲ್ಲಿ ವಿಶ್ವಾಸಿಗಳೆಲ್ಲರೂ ಕ್ರಿಸ್ತನೊಂದಿಗೆ ಸತ್ತವರಾಗಿದ್ದಾರೆ (ರೋಮ 6:3). ನಮ್ಮ "ಪೂರ್ವ ಪಾಪಾಧೀನ ಸ್ವಭಾವವು" ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಲ್ಪಟ್ಟಿದೆ (ರೋಮ 6:6-7 ಮತ್ತು ವ್ಯಾಖ್ಯಾನ ನೋಡಿರಿ).

15 ಕ್ರಿಸ್ತನು ನಮಗೆ ಜೀವವನ್ನು ಕೊಡುವದಕ್ಕಾಗಿ ಸತ್ತನು, ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವಾಗ ನಮ್ಮ ಹಳೆಯ ಪಾಪಾಧೀನ ಸ್ವಭಾವವು ಕ್ರಿಸ್ತನ ಜೊತೆಯಲ್ಲಿ ಸಾಯುತ್ತದೆ ಮತ್ತು ನಾವು ನೂತನ ಆತ್ಮೀಕ ಜೀವವನ್ನು ಪಡೆಯುತ್ತೇವೆ (ರೋಮ 6:4-5, 8; ಗಲಾತ್ಯ ೨:೨೦ ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ನಮಗಾಗಿ ತನ್ನ ಪ್ರಾಣವನ್ನು ನೀಡುವ ವ್ಯಕ್ತಿಗಾಗಿ ಏನು ಮಾಡಬೇಕು? ನಾವು ಇನ್ನು ನಮಗೋಸ್ಕರವಾಗಿ ಜೀವಿಸದೇ ನಮಗೋಸ್ಕರ ಸತ್ತವನಿಗಾಗಿಯೇ ಜೀವಿಸಬೇಕು. ನಮ್ಮ ಜೀವಿತಗಳು ಕ್ರಿಸ್ತನ ಹಂಗಿನಲ್ಲಿದ್ದೇವೆ. 14-15 ವಚನಗಳಲ್ಲಿ ನಾವು ಕ್ರೈಸ್ತ ಜೀವನದ ಎರಡು ಪ್ರಾಮುಖ್ಯವಾದ ಹೆಜ್ಜೆಗಳನ್ನು ಕಾಣುತ್ತೇವೆ. ಮೊದಲನೆಯದಾಗಿ, ಕ್ರಿಸ್ತನು ನಮಗಾಗಿ ಸತ್ತನು (ರೋಮ 5:6,8). ಆದದರಿಂದ, ನಾವು ನಂಬಿಕೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಟ್ಟು ರಕ್ಷಣೆಯನ್ನು ಪಡೆಯುತ್ತೇವೆ (ರೋಮ 5:9-10) ಎರಡನೆಯದಾಗಿ ನಮ್ಮ "ಪೂರ್ವ ಪಾಪಾಧೀನ ಸ್ವಭಾವವು" ಕ್ರಿಸ್ತನೊಂದಿಗೆ ಸಾಯುತ್ತದೆ (ರೋಮ 6:6,8; ಗಲಾತ್ಯ 5:24). ನಾವು ನಮ್ಮ ಪೂರ್ವ ಪಾಪಾಧೀನ ಸ್ವಭಾವವನ್ನು ತೆಗೆದು ಹಾಕುವಾಗ ಕ್ರಿಸ್ತನನ್ನು "ಧರಿಸಿಕೊಂಡು" ಆತನ ಹಾಗೆ ಜೀವಿಸಲಾರಂಭಿಸುತ್ತೇವೆ (ರೋಮ 13:14; ಗಲಾತ್ಯ 3:27; ಎಫೆಸ 4:22-24 ಮತ್ತು ವ್ಯಾಖ್ಯಾನಗಳನ್ನು; ಸಾಮಾನ್ಯ ಲೇಖನ: ರಕ್ಷಣೆಯ ಮಾರ್ಗ ನೋಡಿರಿ).

16 ಹೀಗಿರಲಾಗಿ ಇಂದಿನಿಂದ ಯಾರನ್ನೂ ಲೌಕೀಕ ಮಟ್ಟಗಳಿಗನುಸಾರವಾಗಿಯೂ ಶರೀರ ಸಂಬಂಧವಾಗಿಯೂ ಅಳೆಯಬಾರದು; ಬದಲಾಗಿ; ನಾವು ಜನರನ್ನು ಆತ್ಮೀಕ ಗುಣಮಟ್ಟಗಳಿಂದ ಅಳೆಯಬೇಕು (ರೋಮ 2:11; ಗಲಾತ್ಯ 3:28 ನೋಡಿರಿ). ಪೌಲನು ಪ್ರಾರಂಭದಲ್ಲಿ ಕ್ರಿಸ್ತನನ್ನು ಲೌಕೀಕ ದೃಷ್ಟಿಕೋನದಿಂದ ಪರಿಗಣಿಸಿದ್ದನು. ನಾವು ಸಹ ನಂಬುವದಕ್ಕೆ ಮುಂಚೆ ಕ್ರಿಸ್ತನನ್ನು ಈ ರೀತಿಯಲ್ಲಿ ಪರಿಗಣಿಸಿದ್ದೆವು. ಆದರೆ ನಾವು ಈಗ ಸ್ವತಃ ಪುನರುತ್ಥಾನಗೊಂಡ ಜೀವಸ್ವರೂಪನಾದ ಕ್ರಿಸ್ತನನ್ನು ಸಂಧಿಸಿರುತ್ತೇವೆ; ಆದದರಿಂದ, ಈಗ ನಾವು ಅದನ್ನು ಆತ್ಮೀಕ ದೃಷ್ಟಿಕೋನಕ್ಕನುಸಾರವಾಗಿ, ನಂಬಿಕೆಗೆ ಅನುಸಾರವಾಗಿ ಪರಿಗಣಿಸಿದ್ದೇವೆ (ತಿಳಿಯುತ್ತವೆ).

ಕ್ರಿಸ್ತನ ಕುರಿತಾಗಿ ಕೇವಲ ತಿಳುವಳಿಕೆಯನ್ನು ಹೊಂದಿಕೊಂಡರೆ ಸಾಲದು; ನಾವು ಆತನನ್ನು ವಯಕ್ತಿಕವಾಗಿಯೂ ಆತ್ಮೀಕವಾಗಿಯೂ ತಿಳಿಯಬೇಕು. ಒಬ್ಬ ರೋಗಿಯು ಸರಿಯಾದ ಔಷಧವನ್ನು ಕಂಡುಕೊಳ್ಳುವ ಮಾತ್ರದಿಂದಲೇ ಯಾವ ಪ್ರಯೋಜನವಾಗುವದಿಲ್ಲ; ಆತನು ಅದನ್ನು ತೆಗೆದುಕೊಳ್ಳಬೇಕು! ಅದೇ ವಿಧದಲ್ಲಿ ನಾವು ಕ್ರಿಸ್ತನನ್ನು ನಂಬಿಕೆಯ ಮೂಲಕ ವಯಕ್ತಿಕವಾಗಿ ಅಂಗೀಕರಿಸಿಕೊಳ್ಳಬೇಕು; ನಾವು ಆತನನ್ನು ನಮ್ಮ ಜೀವಿತಗಳಲ್ಲಿ ಬರಮಾಡಿಕೊಳ್ಳಬೇಕು. ಉದಾಹರಣೆಗೆ, ಯೇಸುವಿನ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾದ ತೋಮನು ಪ್ರಾರಂಭದಲ್ಲಿ ಯೇಸು ಸತ್ತವರೊಳಗಿಂದ ಎದ್ದು ಬಂದಿದ್ದಾನೆಂಬದನ್ನು ನಂಬಲಿಲ್ಲ. ಆತನು ತಾನು ನಂಬುವುದಕ್ಕೆ ಮುಂಚೆ ಯೇಸುವಿನ ಗಾಯಗಳನ್ನು ನೋಡಿ ಮುಟ್ಟಬೇಕೆಂದು ಹೇಳಿದನು. ಅಂದರೆ, ಆತನು ಯೇಸುವನ್ನು ಲೌಕೀಕ ಅಥವಾ ಶರೀರ ಸಂಬಂಧವಾದ ದೃಷ್ಟಿಕೋನದಿಂದ ಪರಿಗಣಿಸಲು ಬಯಸಿದನು. ಆದರೆ ಯೇಸು ತೋಮನಿಗೆ ಹೇಳಿದ್ದೇನೆಂದರೆ, "ನಂಬದವನಾಗಿರಬೇಡ, ನಂಬುವವನಾಗು". ಮತ್ತು ತೋಮನ ಆತ್ಮೀಕ ಕಣ್ಣುಗಳು ತೆರೆಯಲ್ಪಟ್ಟು ಆತನು ಪುನರುತ್ಥಾನಗೊಂಡ ಜೀವಸ್ವರೂಪನಾದ ಕ್ರಿಸ್ತನನ್ನು ನೋಡಿದವನಾಗಿ ಆತನನ್ನು ಅಂಗೀಕರಿಸಿಕೊಂಡನು (ಯೋಹಾನ 20:24-29 ನೋಡಿರಿ).

17 ಈ ವಚನವು ಇಡೀ ಹೊಸ ಒಡಂಬಡಿಕೆಯಲ್ಲಿಯೇ ಅತೀಶ್ರೇಷ್ಠವಾದ ಹೇಳಿಕೆಯನ್ನು ಒಳಗೊಂಡಿರುತ್ತದೆ. ಇತರ ಯಾವದೇ ಧರ್ಮದ ಬೋಧನೆಯಲ್ಲಿಯೂ ಒಬ್ಬ ವ್ಯಕ್ತಿಯು ನೂತನ ಸೃಷ್ಟಿಯಾಗುವನು ಎಂಬುದನ್ನು ನಾವು ಕಂಡುಕೊಳ್ಳುವದಿಲ್ಲ. ಆದರೆ ಒಬ್ಬ ವ್ಯಕ್ತಿಯು ಕ್ರಿಸ್ತನಲ್ಲಿರುವದಾದರೆ ಅವನು ಅಥವಾ ಅವಳು ನಿಜವಾಗಿಯೂ ನೂತನ ಸೃಷ್ಟಿಯಾಗುತ್ತಾನೆ. ನಮ್ಮ "ಪೂರ್ವ ಸ್ವಭಾವ"ವು ಸಾಯುತ್ತದೆ ಮತ್ತು ನಮ್ಮ "ನೂತನ ಸ್ವಭಾವ"ವು ಜನ್ಮತಾಳುತ್ತದೆ (ಯೋಹಾನ 3:3; ರೋಮ 6:8 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಈ ವಚನದಲ್ಲಿ ಅತಿ ಪ್ರಾಮುಖ್ಯವಾದ ಪದಗಳು ಕ್ರಿಸ್ತನಲ್ಲಿ ಎಂಬ ಪದಗಳೇ. ಕ್ರಿಸ್ತನಲ್ಲಿರುವದೆಂದರೆ ಆತನನ್ನು ನಂಬುವದು, ಆತನಿಗೆ ವಿಧೇಯರಾಗುವದು, ಆತನನ್ನು ಪ್ರೀತಿಸುವದು, ಆತನನ್ನು ವಯಕ್ತಿಕವಾಗಿ ತಿಳಿಯುವದು, ಮತ್ತು ಆತನನ್ನು ಒಬ್ಬನು ತನ್ನ ಜೀವಿತದ ಕರ್ತನನ್ನಾಗಿ ಮಾಡಿಕೊಳ್ಳುವದು ಎಂಬ ಅರ್ಥವಾಗಿದೆ. ಒಂದು ಕೊಂಬೆಯು "ಗಿಡದಲ್ಲಿ" ಇರುವ ಪ್ರಕಾರವೇ ನಾವು "ಕ್ರಿಸ್ತನಲ್ಲಿ" ಇರಬೇಕು (ಯೋಹಾನ 15:4-6 ನೋಡಿರಿ). ನಾವು ಕ್ರಿಸ್ತನಲ್ಲಿರುವದಾದರೆ ಕ್ರಿಸ್ತನು ನಮ್ಮಲ್ಲಿರುವನು; ಮತ್ತು ನಮ್ಮಲ್ಲಿ ವಾಸಿಸುವ ಆತನ ಪವಿತ್ರಾತ್ಮನ ಮುಖಾಂತರ ನಾವು "ನೂತನ ಸೃಷ್ಟಿ" ಆಗುತ್ತೇವೆ (ರೋಮ 8:11).

ನಾವು "ನೂತನ ಸೃಷ್ಟಿ", ನಮ್ಮ ನೂತನ ಆತ್ಮೀಕ ಜೀವನವೂ ಉಂಟಾಗಬೇಕಾದರೆ ನಮ್ಮ "ಪೂರ್ವ ಪಾಪಾಧೀನ ಸ್ವಭಾವ"ವು ಸಾಯಬೇಕು (ರೋಮ 6:6; ಗಲಾತ್ಯ 5:24). ನಾವು ನಮ್ಮ ಪೂರ್ವ ಸ್ವಭಾವವನ್ನು ತೆಗೆದು ಹಾಕಬೇಕು (ಎಫೆಸ 4:22). ನಾವು ನೂತನ ಹೃದಯವನ್ನು ಪಡೆದುಕೊಳ್ಳುವ ಮುಂಚೆ ನಮ್ಮ ಪೂರ್ವ ಪಾಪಾಧೀನ ಹೃದಯವು ತಗೆದು ಹಾಕಲ್ಪಡಬೇಕು (ಯೆಹೆಜ್ಕೇಲ 11:19). ಹೊಸ ಎಲೆಗಳು ಬರುವದಕ್ಕೆ ಮುಂಚೆ ಹಳೆಯ ಎಲೆಗಳು ಉದುರಿಹೋಗಬೇಕು.

ಆದರೆ "ನೂತನ ಸೃಷ್ಟಿ" ಆಗಿರಬೇಕಾದರೆ ನಾವು ಕ್ರಿಸ್ತನಲ್ಲಿ ಇರಬೇಕು. ಮತ್ತು ನಾವು ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾಗಿರುವದಾದರೆ ನಮ್ಮ ಎಲ್ಲಾ ಪೂರ್ವ ಪಾಪಾಧೀನ ಅಭಿಲಾಷೆಗಳು ಮತ್ತು ಅಭ್ಯಾಸಗಳು ಅಳಿದು ಹೋಗಿರಬೇಕೆಂದು

ಅರ್ಥವಾಗಿದೆ; ಹಳೆಯದೆಲ್ಲವೂ ಹೊರಟುಹೋಗಿ ಎಲ್ಲಾ ನೂತನವಾಗಿರುತ್ತದೆ! ಒಂದು ವೇಳೆ ನಮ್ಮ ಜೀವಿತಗಳು ಪೂರ್ವ ಪಾಪಗಳಿಂದಲೂ ಅಭ್ಯಾಸಗಳಿಂದಲೂ ತುಂಬಿರುವದಾದರೆ ನಾವು ನೂತನ ಸೃಷ್ಟಿಗಳಾಗಿದ್ದೇವೆಂದು ಹೇಳಲು ಹೇಗೆ ಸಾಧ್ಯ? ನಮ್ಮನ್ನು ದೃಷ್ಟಿಸಿಕೊಳ್ಳುವಾಗ ನಾವು ನಿಜವಾಗಿಯೂ ನೂತನ ಸೃಷ್ಟಿಯೇ ಎಂದು ಹೇಳಿಕೊಳ್ಳಬಲ್ಲೆವೋ/ ನಮ್ಮ ಜೀವಿತ ಹಾಗು ನಡವಳಿಕೆಯು ನೂತನ ಸೃಷ್ಟಿಯಂತಿರುತ್ತದೋ? ಉತ್ತರವು ಇಲ್ಲ ಎಂದಾಗಿರುವದಾದರೆ ಅದಕ್ಕೆ ಒಂದೇ ಕಾರಣವು ನಾವು ಕ್ರಿಸ್ತನಲ್ಲಿ ಇಲ್ಲ ಎಂಬುದೇ ನಮ್ಮನ್ನು ನಾವು ಪರೀಕ್ಷಿಸಿಕೊಳ್ಳೋಣ.

**18** ಎಲ್ಲಾ ಸಂಗತಿಗಳಿಗೂ ದೇವರೇ ಮೂಲಕಾರಣನು; ಸಮಸ್ತ ಕಾರ್ಯವೂ ಆತನಿಂದಲೇ ಪ್ರಾರಂಭವಾಗುತ್ತದೆ. ಮೊದಲನೆಯದಾಗಿ, ಆತನು ತನಗೆ ಸಮಾಧಾನಪಡಿಸಕೊಂಡನು, ಮತ್ತು ಬಳಿಕ ಆತನು ನಮಗೆ ಇತರರನ್ನು ಸಹ ಸಮಾಧಾನಕ್ಕೆ ಕರೆಯುವ ಸೇವೆಯನ್ನು ಕೊಟ್ಟನು.

ಮಾನವನು ದೇವರೊಂದಿಗೆ ಸಮಾಧಾನಗೊಳ್ಳುವ ಅಗತ್ಯತೆ ಏಕೆ ಇರುತ್ತದೆ? ಮಾನವನ ಪಾಪದ ಕಾರಣದಿಂದಲೇ ಆತನು ದೇವರೊಂದಿಗೆ ಸಮಾಧಾನ ಪಡಿಸಿಕೊಳ್ಳುವ ಅಗತ್ಯತೆಯಿರುತ್ತದೆ. ಮಾನವನ ಪಾಪದ ಕಾರಣದಿಂದ ದೇವರ ಕೋಪಾಗ್ನಿಯು ಮಾನವಜನಾಂಗದ ಮೇಲೆ ಬಂದಿರುತ್ತದೆ (ರೋಮ 1: 18).

ಆದರೆ ಹೇಗೆ ಒಬ್ಬ ವ್ಯಕ್ತಿಯು ಸಮಾಧಾನ ಪಡಿಸಿಕೊಳ್ಳಲು ಸಾಧ್ಯ? ಉತ್ತರವೇನೆಂದರೆ: ಕ್ರಿಸ್ತನ ಮೂಲಕವೇ. ದೇವರ ಕೋಪಾಗ್ನಿಯು ನಮಗೆ ಬದಲಾಗಿ ಕ್ರಿಸ್ತನ ಮೇಲೆ ಬಿದ್ದಿತು. ಕ್ರಿಸ್ತನು ತಾನೇ ನಮ್ಮ ಪಾಪದ ದಂಡನೆಯನ್ನು ತನ್ನ ಮೇಲೆ ಹೊತ್ತು ಕೊಂಡನು (ಯೆಶಾಯ 53:5-6). ಕ್ರಿಸ್ತನು ಶಿಲುಬೆಯ ಮೇಲೆ ತನ್ನ ದೇಹವನ್ನು ಅರ್ಪಿಸುನದರ ಮೂಲಕ – ಅಂದರೆ ಆತನು ಮರಣದ ಮೂಲಕವಾಗಿ – ಆತನು ನಮಗೆ ದೇವರೊಂದಿಗೆ ಸಂಧಾನ ಗೊಳಿಸಿದನು. ಆತನು ನಮ್ಮ ಹಾಗು ದೇವರ ನಡುವೆ ಸಮಾಧಾನ ವನ್ನುಂಟು ಮಾಡಿದನು (ರೋಮ 5:1). ಯೇಸು ಕ್ರಿಸ್ತನು ದೇವರಿಗೂ ಮಾನವನಿಗೂ ನಡುವಿನ ಏಕೈಕ ಮಧ್ಯಸ್ಥನಾಗಿದ್ದಾನೆ (1 ತಿಮೊಥೆ 2:5). ಕ್ರಿಸ್ತನ ಮೂಲಕವಾಗಿ ಮಾತ್ರವೇ ನಾವು ಪರಲೋಕದ ತಂದೆಯ ಬಳಿಗೆ ಬರಬಲ್ಲೆವು (ಯೋಹಾನ 14:6).

ನಮ್ಮನ್ನು ಕೇಳಿಕೊಳ್ಳಬೇಕಾದದ್ದೇನೆಂದರೆ; ನಮ್ಮ ಹಾಗು, ನಮ್ಮ ಪಟ್ಟಣ, ರಾಷ್ಟ್ರದಲ್ಲಿ ಮಾನವನ ಅತಿದೊಡ್ಡ ಅಗತ್ಯತೆಯೇನು? ಶುದ್ಧ ನೀರಿನ ಅಗತ್ಯವೋ? ಉತ್ತಮ ಸಮತೂಕದ ಆಹಾರವೋ? ಒಳ್ಳೇ ಆರೋಗ್ಯ ಅಥವಾ ಒಳ್ಳೇ ಶಾಲೆಗಳ ಅಗತ್ಯವೋ? ಸುಧಾರಿತ ಸಂಗತಿಯೂ ಆಗಿರುವದಿಲ್ಲ. ಪ್ರತಿಯೊಬ್ಬ ಪುರುಷ. ಸ್ತ್ರೀ ಹಾಗು ಮಗುವಿನ ಏಕೈಕ ದೊಡ್ಡ ಅಗತ್ಯವು ದೇವರೊಂದಿಗೆ ಸಮಾಧಾನಗೊಳ್ಳುವದೇ! ಇದು ಮಾತ್ರವಲ್ಲದೆ, ಇನ್ನೇನು ಪ್ರಾಮುಖ್ಯವಾಗಿರುತ್ತದೆ? ಮತ್ತು ಆಶ್ಚರ್ಯಕರವಾದದ್ದೇನೆಂದರೆಃ ದೇವರು ನಮಗೆ – ಬಲಹೀನ ಹಾಗು ಸಾಮಾನ್ಯವಾದ "ಮಣ್ಣಿನ ಘಟಗಳಿಗೆ" ಆತನ ಸಮಾಧಾನ ವಿಷಯವಾದ ಅದ್ಭುತಮಯ ಸಂದೇಶವನ್ನೂ ಕ್ರಿಸ್ತನಲ್ಲಿ ನಂಬಿಕೆಯಿಡುವವರ ಮೂಲಕ ಪುರುಷ ಮತ್ತು ಸ್ತ್ರೀಯರಿಗೆ ಅವರು ಸಹ ದೇವರೊಂದಿಗೆ ಸಮಾಧಾನವಾಗಬೇಕೆಂದು ಸಾರುವ ಸೇವೆಯನ್ನೂ ನೀಡಿರುತ್ತಾನೆ.

**19** ಸಮಾಧಾನ ವಿಷಯವಾದ ಸಂದೇಶವು ಕ್ಲುಪ್ತವಾಗಿ ಹೀಗಿರುತ್ತದೆ: ಃದೇವರು... ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನ ಪಡಿಸಿಕೊಳ್ಳುತ್ತಿದ್ದನೆಂಬದೇ (ಕೊಲೊಸ್ಸೆ 1:19-20 ನೋಡಿರಿ). ಕ್ರಿಸ್ತನ ಮೂಲಕ ನಮ್ಮ ಪಾಪಗಳು ಕ್ಷಮಿಸಲ್ಪಟ್ಟು ನಮ್ಮ ದಂಡನೆಯು ತೆಗೆದು ಹಾಕಲ್ಪಟ್ಟಿರುತ್ತದೆ. ಕ್ರಿಸ್ತನು ಲೋಕದ ಪಾಪಗಳನ್ನು ನಿವಾರಣೆ ಮಾಡುವ ಯಜ್ಞದ ಕುರಿಯಾಗಿದ್ದನು (ಯೋಹಾನ 1:29 ಮತ್ತು ವ್ಯಾಖ್ಯಾನ ನೋಡಿರಿ). ಆದದರಿಂದ ಕ್ರಿಸ್ತ ಯೇಸುವಿನಲ್ಲಿ ರುವವರಿಗೆ ಹೇಳುವದಾದರೆ, ಸಮಾಧಾನ ವಿಷಯವೇ ಇಲ್ಲ (ರೋಮ 8:1). ಬೇರೆ ಮಾತುಗಳಲ್ಲಿ ಹೇಳುವದಾದರೆ, ಸಮಾಧಾನ ವಿಷಯವಾದ ಸಂದೇಶವು ಯೇಸು ಕ್ರಿಸ್ತನ ಸುವಾರ್ತೆಯೇ.

ಮತ್ತು ದೇವರು ಈ ಸಂದೇಶವನ್ನು ಸಾರುವ ಸೇವೆಗೆ ನಮ್ಮನ್ನು ನೇಮಿಸಿದ್ದಾನೆ; ಈ ಸಂದೇಶವನ್ನು ಲೋಕಕ್ಕೆ ಸಾರುವ ಜವಾಬ್ದಾರಿಯನ್ನು ದೇವರು ನಮಗೆ ಕೊಟ್ಟಿರುತ್ತಾನೆ. ದೇವರು ಈ ಜವಾಬ್ದಾರಿಯನ್ನು ಪೌಲನಿಗ ಇತರ ಅಪೊಸ್ತಲರಿಗೂ ಮಾತ್ರವೇ ಕೊಟ್ಟಿರುವದಿಲ್ಲ; ಆತನು ಇದನ್ನು ಪ್ರತಿಯೊಬ್ಬ ಕ್ರೈಸ್ತನಿಗೂ ಕೊಟ್ಟಿರುತ್ತಾನೆ. ನಾವು ಈ ಸಂದೇಶದ ವಿಷಯದಲ್ಲಿ ಏನು ಮಾಡಿರುತ್ತೇವೆ? ನಾವು ಇದನ್ನು ಇತರರೊಂದಿಗೆ ಹಂಚಿಕೊಂಡಿದ್ದೇವೋ ಅಥವಾ ನಮ್ಮಲ್ಲಿಯೇ ಇಟ್ಟುಕೊಂಡಿದ್ದೇವೋ? ನಮ್ಮ ಕುಟುಂಬ, ಸ್ನೇಹಿತರು ಹಾಗು ನೆರೆಹೊರೆಯವರು ನಿತ್ಯವಾದ ದಂಡನೆಗೊಳಗಾಗುತ್ತಿರುವದನ್ನು ನೋಡಿಯೂ ನಾವು ಮೌನವಾಗುಳಿದಿದ್ದೇವೋ?

**20** ನಾವು ಮೌನವಾಗಿ ಇರುವದು ಬೇಡ! ಪೌಲನ ಹಾಗೆ ನಾವು ಸಹ ಕ್ರಿಸ್ತನ ರಾಯಬಾರಿಗಳಾಗಿದ್ದೇವೆ. ನಾವು ಭೂಲೋಕದಲ್ಲಿ ಜೀವಿಸುತ್ತಾ ದೇವರ ವಕ್ತಾರರೂ ಪ್ರತಿನಿಧಿಗಳೂ ಆಗಿದ್ದೇವೆ. ದೇವರು ನಮ್ಮನ್ನು ತನ್ನೊಂದಿಗೆ ನಮಗೋಸ್ಕರವಾಗಿ ಮಾತ್ರವೇ ಸಮಾಧಾನಪಡಿಸಿಕೊಳ್ಳಲಿಲ್ಲ, ಆದರೆ ನಮ್ಮ ಸಾಕ್ಷಿಯ ಮುಖಾಂತರ ಇತರರು ಸಹ ಸಮಾಧಾನಗೊಳ್ಳುವಂತಾಗಬೇಕೆಂಬುದಕ್ಕಾಗಿಯೂ ನಮ್ಮನ್ನು ಸಮಾಧಾನ ಪಡಿಸಿಕೊಂಡನು.

ಒಬ್ಬ ಅರಸನ ರಾಯಭಾರಿಗಳಾಗಿರುವದು ಒಂದು ದೊಡ್ಡ ಗೌರವವೂ ಜವಾಬ್ದಾರಿಯೂ ಆಗಿದೆ. ಆದರೆ ರಾಜಾಧಿರಾಜನ, ಯೇಸು ಕ್ರಿಸ್ತನ ರಾಯಬಾರಿಗಳಾಗಿರುವದು ಇನ್ನೂ ಶ್ರೇಷ್ಟವಾದದ್ದಾಗಿದೆ (1 ತಿಮೊಥೆ 6: 15 ನೋಡಿರಿ), ಪ್ರತಿಯೊಬ್ಬ ಕ್ರೈಸ್ತನು – ಶ್ರೀಮಂತನಾಗಿರಲಿ ಅಥವಾ ಬಡವನಾಗಿರಲಿ, ವಿಧ್ಯಾವಂತನಾಗಿರಲಿ ಅಥವಾ ಅವಿಧ್ಯಾವಂತನಾಗಿರಲಿ! ಮೇಲಾಗಿರಲಿ ಅಥವಾ ಕೀಳಾಗಿರಲಿ – ಪ್ರತಿಯೊಬ್ಬನೂ ಕ್ರಿಸ್ತನ ರಾಯಭಾರಿಯಾಗಿದ್ದಾನೆ.

ಕ್ರಿಸ್ತನ ರಾಯಭಾರಿಗಳಾಗಿ ನಮ್ಮ ಕೆಲಸವು ಪುರುಷ ಮತ್ತು ಸ್ತ್ರೀಯರನ್ನು "ದೇವರೊಂದಿಗೆ ಸಮಾಧಾನವಾಗಿರೆಂದು" ಬೇಡಿಕೊಳ್ಳುವದಾಗಿದೆ. ಅಥವಾ ಬೇರೆ ಮಾತುಗಳಲ್ಲಿ ಹೇಳುವದಾದರೆ: ಕ್ರಿಸ್ತನು ಈಗಾಗಲೇ ಮಾನವ ಜನಾಂಗಕ್ಕಾಗಿ ಶಿಲುಬೆಯ ಮೇಲಿನ ತನ್ನ ಮರಣದ ಮೂಲಕ ಸಾಧಿಸಿರುವ ಸಂಧಾನವನ್ನು ನಂಬಿಕೆಯ ಮೂಲಕ ಅಂಗೀಕರಿಸಿಕೊಳ್ಳಿರಿ ಎಂದು ಬೇಡಿಕೊಳ್ಳುವದೇ (ರೋಮ 5:1, 10-11 ಮತ್ತು ವ್ಯಾಖ್ಯಾನ ನೋಡಿರಿ).

21 ಕ್ರಿಸ್ತನು ಎಂದಿಗೂ ಪಾಪ ಮಾಡಲಿಲ್ಲ (ಇಬ್ರಿಯ 4:15; 1 ಪೇತ್ರ 2:22; 1 ಯೋಹಾನ 3:5). ಕ್ರಿಸ್ತನು ಸಂಪೂರ್ಣವಾಗಿ ನಿರಪರಾಧಿಯೂ, ಸಂಪೂರ್ಣವಾಗಿ ಪಾಪರಹಿತನೂ ಆಗಿದ್ದರಿಂದಲೇ ಆತನು ನಮ್ಮ ದಂಡನೆಯನ್ನು ಹೊತ್ತುಕೊಳ್ಳಲು ಶಕ್ತನಾಗಿದ್ದನು. ಒಂದು ವೇಳೆ ಕ್ರಿಸ್ತನು ಸ್ವತಃ ಪಾಪಿಯಾಗಿದ್ದಿದ್ದರೆ ಆತನು ಕೇವಲ ತನ್ನ ದಂಡನೆಯನ್ನು ಮಾತ್ರವೇ ಹೊತ್ತು ಕೊಂಡಿರುತ್ತಿದ್ದನೇ ಹೊರತು ನಮ್ಮದನ್ನಲ್ಲ. ದೇವರು ಕ್ರಿಸ್ತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ ಮಾಡಿದನು. ಅಂದರೆ, ದೇವರ ನ್ಯಾಯತೀರ್ಪಿನ ಮುಂದೆ ದೇವರು ಕ್ರಿಸ್ತನನ್ನು ನಮ್ಮ ಸ್ಥಾನದಲ್ಲಿ ಪಾಪಿಯಾಗಿ ನಿಂತುಕೊಳ್ಳುವದಕ್ಕೆ ಕಳುಹಿಸಿದನು (ಯೆಶಾಯ 53:12).

ಕ್ರಿಸ್ತನು ನಮ್ಮ ಪಾಪಗಳಿಗಾಗಿನ ದಂಡನೆಯನ್ನು ತನ್ನ ಮೇಲೆ ಹೊತ್ತು ಕೊಳ್ಳುವದರ ಮೂಲಕ ಆತನು ನಮ್ಮ ಅಪರಾಧ, ನಮ್ಮ ಅನೀತಿಯನ್ನು ನಿವಾರಿಸಿರುತ್ತಾನೆ. ಆದದರಿಂದ ಈಗ ನಾವು ದೇವರ ಮುಂಭಾಗದಲ್ಲಿ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ. ಇಲ್ಲಿ ಪೌಲನು ಹೇಳುವದೇನೆಂದರೆ, ನಾವು ಆತನಲ್ಲಿ (ಕ್ರಿಸ್ತನಲ್ಲಿ) ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗಿದ್ದೇವೆ ; ಅಂದರೆ, ನಂಬಿಕೆಯ ಮುಖಾಂತರ ನಾವು ದೇವರ ನೀತಿಯನ್ನು ಪಡೆದುಕೊಂಡಿದ್ದೇವೆ (ರೋಮ 1:17; 3:21-22 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

---

## ಅಧ್ಯಾಯ - 6

### ಪೌಲನ ಜೀವಿತದ ಒಂದು ಚಿತ್ರಣ (6:1-13)

1 ಇಲ್ಲಿ ಹಾಗು 1 ಕೊರಿಂಥ 3:9ರಲ್ಲಿ ಪೌಲನು ತನ್ನನ್ನು ಹಾಗು ಜೊತೆಯ ಅಪೊಸ್ತಲರನ್ನು ದೇವರ ಜೊತೆ ಕೆಲಸಗಾರರು ಎಂದು ಕರೆದುಕೊಳ್ಳುತ್ತಾನೆ. ಪೌಲನು ದೇವರ ಜೊತೆ ಕೆಲಸಗಾರನಾಗಿದ್ದರಿಂದ ಕೊರಿಂಥದವರು (ಹಾಗು ನಾವು ಸಹ) ಪೌಲನು ಹೇಳುವ ವಿಷಯಗಳಿಗೆ ಕಿವಿಗೊಡಬೇಕು.

ಪೌಲನು ಕೊರಿಂಥದವರಿಗೆ ದೇವರ ಕೃಪೆಯನ್ನು ವ್ಯರ್ಥಮಾಡಿಕೊಳ್ಳುವದಕ್ಕೆ ಪಡೆದುಕೊಳ್ಳಬೇಡಿರೆಂದು ಹೇಳುತ್ತಾನೆ. ಇದಕ್ಕೆ ಎರಡು ಅರ್ಥಗಳಿರಬಹುದು. ದೇವರ ಕೃಪೆಯನ್ನು ಪಡೆದು ಕೊಂಡ ನಂತರವೂ ಪುನಃ ಅದನ್ನು ಕಳೆದುಕೊಳ್ಳುವ ಸಾಧ್ಯತೆಯಿದೆ ಎಂದು ಕೆಲವು ಕ್ರೈಸ್ತರು ಅಭಿಪ್ರಾಯ ಪಡುತ್ತಾರೆ. ದೇವರ ಕೃಪೆಯನ್ನು ಕಳೆದುಕೊಳ್ಳುವವರು ಖಂಡಿತವಾಗಿಯೂ ಅದನ್ನು ವ್ಯರ್ಥಮಾಡಿಕೊಳ್ಳುವದಕ್ಕಾಗಿ ಪಡೆದುಕೊಂಡವರಾಗುತ್ತಾರೆ! (1 ಕೊರಿಂಥ 15:2, 1 ತಿಮೊಥೆ 1:18-20, ಇಬ್ರಿಯ 6:4-6; 10:35-39 ನೋಡಿರಿ). ಯೇಸು ಸ್ವತಃ ಬಂಡೆನೆಲದಲ್ಲಿ ಬಿದ್ದು ಶೀಘ್ರವೇ ಚಿಗುರಿದರೂ ಬಳಿಕ ಒಣಗಿ ಹೋದ ಬೀಜದ ವಿಷಯದಲ್ಲಿ ಬೋಧಿಸಿದನು (ಮಾರ್ಕ 4:5-6; 16-17).

ಇತರ ಕ್ರೈಸ್ತರು ದೇವರ ಕೃಪೆಯು – ದೇವರ ರಕ್ಷಣೆಯು – ಎಂದಿಗೂ ಕಳೆದುಹೋಗಲಾರದು ಎಂದು ನಂಬುತ್ತಾರೆ (ಸಾಮಾನ್ಯ. ಲೇಖನ: ನಾವು ನಮ್ಮ ರಕ್ಷಣೆಯನ್ನು ಕಳೆದುಕೊಳ್ಳಬಹುದೋ? ನೋಡಿರಿ). ಅವರು ಹೇಳುವದೇನೆಂದರೆ, ಹೇಗಿದ್ದರೂ, ವಿಶ್ವಾಸಿಯೊಬ್ಬನ ಜೀವಿತವು ಪಾಪ ಅಥವಾ ಬೈಬಲಿನ ಬೋಧನೆಗಳ ಕುರಿತಾದ ಅಜ್ಞಾನದ ಕಾರಣದಿಂದ ಫಲವಿಲ್ಲದ್ದಾಗಬಹುದು. ಅಂತಹ ಸಂದರ್ಭದಲ್ಲಿ ಸಹ ಒಬ್ಬನು ಫಲರಹಿತ ವಿಶ್ವಾಸಿಯು ದೇವರ ಕೃಪೆಯನ್ನು ವ್ಯರ್ಥಪಡಿಸಿಕೊಳ್ಳುವದಕ್ಕೆ ಹೊಂದಿದ್ದನೆಂದು ಹೇಳಬಹುದು (ಮಾರ್ಕ 4:7, 18-19 ನೋಡಿರಿ). 1 ಕೊರಿಂಥ 3:10-15ರಲ್ಲಿ ಪೌಲನು ನಮ್ಮ ಕೆಲಸವು ಪರಿಶೋಧಿಸಲ್ಪಡುವದು; ನಮ್ಮ ಕೆಲಸವು ಉತ್ತಮವಾಗಿರದಿದ್ದರೆ ಅದು ನಾಶವಾಗುವದು, ಆದರೆ ಸ್ವತಃ ನಾವು ರಕ್ಷಣೆ ಹೊಂದುವೆವು ಎಂದು ಬೋಧಿಸುತ್ತಾನೆ (2 ಕೊರಿಂಥ 5:10 ನೋಡಿರಿ).

ಪೌಲನು ಇಲ್ಲಿ ಯಾವದೇ ಇಂಗಿತದಿಂದ ಹೇಳಿದ್ದಾಗ್ಯು (ಮತ್ತು ಬಹುಶಃ ಎರಡೂ ಆತನ ಇಂಗಿತವಾಗಿದ್ದರಬೇಕು). ನಾವು ದೇವರ ಕೃಪೆಯನ್ನು ವ್ಯರ್ಥಮಾಡಿಕೊಳ್ಳುವದಕ್ಕಾಗಿ ಪಡೆದುಕೊಂಡವರೊಳಗೆ ಇರದಿರೋಣ.

2 ಪೌಲನು ಕೊರಿಂಥದವರಿಗೆ ತಾವು ಮೊದಲು ದೇವರ ಕೃಪೆಯನ್ನು ಹೇಗೆ ಪಡೆದುಕೊಂಡಿದ್ದರೆಂಬದನ್ನು ಜ್ಞಾಪಿಸಲು ಬಯಸುತ್ತಾನೆ. ಆತನು ಇಲ್ಲಿ ಯೆಶಾಯ ೪೯:೮ ರಿಂದ ಉಲ್ಲೇಖಿಸುತ್ತಾನೆ. ಈ ವಚನದಲ್ಲಿ ಪ್ರವಾದಿಯಾದ ಯೆಶಾಯನು ದೇವರ ಮಾತುಗಳನ್ನಾಡುತ್ತಿದ್ದಾನೆ. ಆತನು ರಕ್ಷಕನಾದ ಕ್ರಿಸ್ತನ ಬರೋಣದ ವಿಷಯದಲ್ಲಿ ಪ್ರವಾದಿಸುತ್ತಿದ್ದಾನೆ. ಯೆಶಾಯನು ಕ್ರಿಸ್ತನ ಬರೋಣವನ್ನು ದೇವರ ಸುಪ್ರಸನ್ನತೆಯ ಕಾಲ; ರಕ್ಷಣೆಯ ದಿನ ಎಂಬದಾಗಿ ಬಣ್ಣಿಸುತ್ತಾನೆ. ಆದಿನ ಈಗ ಬಂದಿರುತ್ತೆಂದು ಪೌಲನು ಹೇಳುತ್ತಾನೆ. ಪುರುಷ ಮತ್ತು ಸ್ತ್ರೀಯರು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ರಕ್ಷಣೆಯನ್ನು ಪಡೆದು ಕೊಳ್ಳಬಲ್ಲ ಸಮಯವು ಬಂದಿದೆ. ಯಾರೊಬ್ಬರೂ ವಿಳಂಬ ಮಾಡದಿರಲಿ. ನಾಳೆಗಾಗಿ ಸಹ ಕಾಯಬೇಡಿರಿ. ಈಗಲೇ, ಇಂದೇ ರಕ್ಷಣೆಯನ್ನು

ಪಡೆದುಕೊಳ್ಳುವ ಅವಕಾಶವು ಬಂದಿರುತ್ತದೆ; ಇದು ಪುನಃ ನಾಳೆ ದೊರೆಯದಿರಬಹುದು. ನಾಳೆಯು ಬಹಳ ತಡವಾಗಬಹುದು. ಈ ಹೊತ್ತು ತೆರೆಯಲ್ಪಟ್ಟು ಮೃದು ವಾಗಿರುವ ಹೃದಯವು ನಾಳೆ ಮುಚ್ಚಲ್ಪಟ್ಟು ಕಠಿಣಗೊಳ್ಳಬಹುದು. ಈ ಹೊತ್ತು ಬದುಕಿರುವ ವ್ಯಕ್ತಿಯು ನಾಳೆ ಸತ್ತು ಹೋಗಬಹುದು. ಆದದರಿಂದ, ಇದೇ ಆ ರಕ್ಷಣೆಯ ದಿನ.

3 ಪೌಲನು ಯಾರೊಬ್ಬನಿಗೂ ವಿಘ್ನವಾಗುವು ದಕ್ಕೆ ಇಷ್ಟ ಪಡುವದಿಲ್ಲ; ಅಂದರೆ, ಜನರು ಕ್ರಿಸ್ತನ ಬಳಿಗೆ ಬರುವದಕ್ಕೆ ಅಡ್ಡಿಯಾಗುವಂಥ ಏನನ್ನಾದರೂ ಮಾಡುವದಕ್ಕಾಗಲಿ ಅಥವಾ ಹೇಳುವದಕ್ಕಾಗಲಿ ಆತನು ಬಯಸುವದಿಲ್ಲ. ಪೌಲನು ಯಾವಾಗಲೂ ತನ್ನ ಸ್ವಂತ ಜೀವಿತ ಹಾಗು ನಡವಳಿಕೆಯು ಆತನ ಬೋಧನೆಗಳಿಗೆ ಅನುಸಾರವಾಗಿರುವಂತೆ ಜನರು ಆತನಿಗೆ ಕಿವಿಗೊಡಲಾರದವರಾಗುತ್ತಿದ್ದರು. ಈ ವಿಷಯದಲ್ಲಿ ಪೌಲನು ನಮ್ಮೆಲ್ಲರಿಗೂ ಒಂದು ಮಾದರಿಯನ್ನು ತೋರಿಸಿದ್ದಾನೆ (2 ಕೊರಿಂಥ 1:12 ನೋಡಿರಿ).

ಕ್ರಿಸ್ತನ ಸಭೆಯು ಏಕೆ ಶೀಘ್ರವಾಗಿ ಬೆಳೆಯುವದಿಲ್ಲ? ಯಾಕೆಂದರೆ ಇತರ ಜನರು ನಮ್ಮನ್ನು ದೃಷ್ಟಿಸಿ ನಮ್ಮ ದೈನಂದಿನ ನಡವಳಿಕೆಯು ಬೈಬಲಿನ ಬೋಧನೆಗಳಿಗೆ ಸರಿಹೊಂದದಿರುವದನ್ನು ಕಾಣುತ್ತಾರೆ. ನಮ್ಮ ಜೀವಿತಗಳನ್ನು ನೋಡುವಾಗ ಒಬ್ಬ ಕ್ರೈಸ್ತನಾಗಿರುವದರ ಅರ್ಥವೇನೆಂಬದನ್ನು ಸಹ ಹೇಳಲಾರರು. ಆದುದರಿಂದ, ಅವರು "ನಾನು ಏಕೆ ಕ್ರೈಸ್ತನಾಗಬೇಕು?" ಎಂದು ಸಹಜವಾಗಿಯೇ ಪ್ರಶ್ನಿಸುತ್ತಾರೆ.

ನಮ್ಮ ಕೆಟ್ಟ ನಡವಳಿಕೆಯು ಇತರರಿಗೆ ಒಂದು ವಿಘ್ನವಾಗುತ್ತದೆ; ನಮ್ಮ ನಡವಳಿಕೆಯುು ಇತರರು ಕ್ರಿಸ್ತನ ಬಳಿಗೆ ಬರದಂತೆ ತಡೆಯಾಗುತ್ತದೆ. ಜನರು ನಮ್ಮ ನುಡಿಗೂ ನಡೆಗೂ ಅಜಗಜಾಂತರವಿರುವದನ್ನು ನೋಡುವಾಗ ಅವರು ಕ್ರಿಸ್ತನಿಂದ ವಿಮುಖರಾಗುತ್ತಾರೆ. ಅಲ್ಲದೆ, ನಮ್ಮ ಜೀವಿತಗಳು ಪವಿತ್ರವಾಗಿದ್ದರೂ ಕೆಲವು ವೇಳೆಗಳಲ್ಲಿ ಕ್ರಿಸ್ತನ ಕುರಿತಾದ ನಮ್ಮ ಸಾಕ್ಷಿಯು ಕಳಪೆಯಾಗಿ, ನಿಖರವಿಲ್ಲದ್ದಾಗಿ, ಅಥವಾ ಸುಳ್ಳಾಗಿ ಸಹ ಹೇಳಲ್ಪಡುವದಾದರೆ ಇದು ಸಹ ಇತರರಿಗೆ "ಅಡೆತಡೆ" ಆಗಿರಬಲ್ಲದು.

ಹೇಗಿದ್ದರೂ, ಜನರು ಕ್ರೈಸ್ತರಾಗದಿರುವದಕ್ಕೆ ಒಂದು ನೆಪವನ್ನು ಹುಡುಕುತ್ತಾರೆಂಬದು ಸಹ ಸತ್ಯವೇ; ಅವರು ಕ್ರಿಸ್ತನ ಬೇಡಿಕೆಗಳಿಗೆ ತಮ್ಮನ್ನು ಸಮರ್ಪಿಸಿಕೊಳ್ಳುವದಕ್ಕೆ ಇಚ್ಛಿಸುವಿದಿಲ್ಲ. ಆದ್ದರಿಂದ, ಅವರು ತಾವು ಕ್ರಿಸ್ತನಲ್ಲಿ ನಂಬಿದಿರುವದಕ್ಕೆ ನಮ್ಮ ಕೆಟ್ಟ ನಡವಳಿಕೆಯನ್ನು ಒಂದು ನೆಪವಾಗಿ ಉಪಯೋಗಿಸುತ್ತಾರೆ. ಆದರೆ ದೇವರ ದೃಷ್ಟಿಯಲ್ಲಿ ನಮ್ಮ ಕೆಟ್ಟನಡವಳಿಕೆಯು ಅವರಿಗೆ ಸಂಪೂರ್ಣವಾದ ನೆಪವಾಗಲಾರದು. ಅಂತ್ಯದಲ್ಲಿ ಅವರು ಮಾತ್ರವೇ ತಮ್ಮ ಅಪನಂಬಿಕೆಗೆ ಜವಾಬ್ದಾರರಾಗಿ ನಿಲ್ಲುತ್ತಾರೆ. ಅವರು ಸ್ವತಃ ಕ್ರಿಸ್ತನನ್ನೇ ದೃಷ್ಟಿಸಿರಬೇಕಾಗಿತ್ತು. ಕ್ರಿಸ್ತನ ಹಿಂಬಾಲಕರ ನಡವಳಿಕೆಯು ಏನೇ ಆಗಿದ್ದರೂ ಕ್ರಿಸ್ತನು ಪಾಪರಹಿತ ದೇವಕುಮಾರನಾಗಿದ್ದಾನೆ ಮತ್ತು ಆತನನ್ನು ತಿರಸ್ಕರಿಸುವವರು ದಂಡನೆಗೆ ಗುರಿಯಾಗುವರು (ಯೋಹಾನ 3:18). ಹೀಗಿರುವದರಿಂದ, ನಾವು ಹೇಳುವ ಹಾಗು ಮಾಡುವ ಸಮಸ್ತ ಕಾರ್ಯದಲ್ಲಿಯೂ ಜನರನ್ನು ನಮ್ಮ ಕಡೆಗೆ ನಡಿಸಿಕೊಳ್ಳುವ ಬದಲಾಗಿ ಕ್ರಿಸ್ತನೆಡೆಗೆ ನಡಿಸುವದಕ್ಕೆ ತವಕಪಡೋಣ. ಆದರೆ, ಅದೇ ವೇಳೆಯಲ್ಲಿ ನಮ್ಮ ಕೆಟ್ಟ ನಡವಳಿಕೆಯಿಂದ ಅವರನ್ನು ಹೊರಕ್ಕೆ ತಳ್ಳಬಾರದು.

4-5 ಪೌಲನು ಈನೇ ವಚನದಲ್ಲಿ ಹೇಳುವದೇನೆಂದರೆ:.....ಎಲ್ಲಾ ಸಂಗತಿಗಳಲ್ಲಿ ದೇವರಸೇವಕರೆಂದು ನಮ್ಮನ್ನು ಸಮ್ಮತರಾಗ ಮಾಡಿಕೊಳ್ಳುತ್ತೇವೆ. ಅಂದರೆ, ಪೌಲನು ತನ್ನನ್ನು ಎಲ್ಲಾ ವಿಧಗಳಲ್ಲಿಯೂ ನಿಜವಾದ ದೇವರ ಸೇವಕನೆಂದು ತೋರಿಸಿಕೊಳ್ಳುತ್ತಾನೆ. ಹೇಗೆ? ಕ್ರಿಸ್ತನ ನಿಮಿತ್ತವಾಗಿ ತಾನು ಅನುಭವಿಸಿದ ಅನೇಕ ತಾಪತ್ರಯಗಳಿಂದ– ಸಂಕಟಗಳು, ಇಕ್ಕಟ್ಟುಗಳು ಹಾಗು ನಿದ್ದೆಗೇಡುಗಳು–ತೋರ್ಪಡಿಸಿಕೊಳ್ಳುತ್ತಾನೆ. ಕ್ರೈಸ್ತರಿಗಾದರೋ ಅಂತಹ ಸಂಕಟಗಳು ತಾಳ್ಮೆಯನ್ನು ಸಿದ್ಧಿಗೆ ತರುತ್ತವೆ (ಯಾಕೋಬ 1:3). ಅವಿಶ್ವಾಸಿಗಳಿಗೆ ಅಥವಾ ಪ್ರಾಪಂಚಿಕ ಜನರಿಗೆ ಸಂಕಟಗಳು ವಿಷಮತೆಗೂ ನಿರಾಶೆಗೂ ನಡಿಸುತ್ತವೆ. ಆದರೆ ಕ್ರೈಸ್ತರಿಗಾದರೋ ಸಂಕಟಗಳು ತಾಳ್ಮೆಗೂ, ಅನುಭವಸಿದ್ಧಿಗೂ ಹಾಗು ನಿರೀಕ್ಷೆಗೂ ನಡಿಸುತ್ತವೆ (ರೋಮ 5:3-4). ಸಂಕಟಗಳು ನಮ್ಮ ನಂಬಿಕೆಯನ್ನು ಪರಿಶೋಧಿಸಿ ದೃಢಪಡಿಸುತ್ತವೆ (1 ಪೇತ್ರ 1:6-7).ಆದುದರಿಂದ, ಪೌಲನು ಅಂಥ ಕಷ್ಟಗಳನ್ನೂ ಬಾಧೆಯನ್ನೂ ಸೈರಿಸಿಕೊಂಡದ್ದರಿಂದ ಆತನು ನಿಜವಾಗಿಯೂ ಒಬ್ಬ ದೇವರ ನಿಜವಾದ ಸೇವಕನು ಎಂಬದನ್ನು ನಿಶ್ಚಯವಾಗಿ ತಿಳಿದುಕೊಳ್ಳಬಹುದು (ಅ.ಕೃತ್ಯ 14:19; 16:22-23; 18:12; 2 ಕೊರಿಂಥ 11:23 ನೋಡಿರಿ).

6 ಇಲ್ಲಿ ಪೌಲನು ತನ್ನ ಜೀವಿತದಲ್ಲಿ ಕಂಡುಬರುವ ಕೆಲವೊಂದು ವರಗಳನ್ನೂ ಫಲಗಳನ್ನೂ ಬಣ್ಣಿಸುತ್ತಾನೆ. ಪೌಲನು ಪವಿತ್ರಾತ್ಮನಲ್ಲಿ ಇದ್ದಾನಾದ್ದರಿಂದ ತಾನು ದೇವರ ನಿಜವಾದ ಸೇವಕನೆಂಬದನ್ನು ತೋರಿಸುತ್ತಾನೆ, ಅಂದರೆ, ಆತನು ಪವಿತ್ರಾತ್ಮನ ಅಧಿಕಾರದ ಮೇಲೆಯೂ ಅಡಿಯಲ್ಲಿಯೂ ಜೀವಿಸುತ್ತಾನೆ. ಅಲ್ಲದೆ ಪೌಲನು ಈ ಸಂಕಟಗಳನ್ನು ತಾಳಿಕೊಳ್ಳಲು ಅವಶ್ಯಕವಾದ ಪವಿತ್ರಾತ್ಮನ ಬಲವನ್ನು ಕ್ರಿಸ್ತನ ಸೇವೆ ಮಾಡಲು ಅವಶ್ಯಕವಾದ ವರಗಳನ್ನು ಪಡೆದುಕೊಂಡಿರುತ್ತಾನೆಂಬದೂ ಇದರ ಅರ್ಥವಾಗುತ್ತದೆ.

7 ಈ ವಚನದಲ್ಲಿ ಸತ್ಯವಾಕ್ಯವು ಕ್ರಿಸ್ತನ ಸುವಾರ್ತೆಯನ್ನು ಅಥವಾ ಪೌಲನ ಸತ್ಯದಿಂದ ಕೂಡಿದ ಬೋಧನೆಯನ್ನು – ಇಲ್ಲವೆ ಎರಡನ್ನೂ – ಸೂಚಿಸಬಹುದು. ಪೌಲನು ಯಾವಾಗಲೂ ಸತ್ಯವನ್ನೇ ಮಾತಾಡಿರುತ್ತಾನೆ; ಕೊರಿಂಥದವರು ಅದನ್ನು ಬಲ್ಲರು (2 ಕೊರಿಂಥ 2:17).

ಪೌಲನು ಯಾವಾಗಲೂ ದೇವರ ಮಹತ್ವದಿಂದ ಅಥವಾ ಬೇರೆ ಮಾತುಗಳಲ್ಲಿ ಹೇಳುವದಾದರೆ, ಪವಿತ್ರಾತ್ಮನ ಬಲದ ಮುಖಾಂತರ ಕಾರ್ಯ ಮಾಡಿರುತ್ತಾನೆ (1 ಕೊರಿಂಥ 2:3-5 ನೋಡಿರಿ).

ಎಡ ಬಲಗೈಗಳಲ್ಲಿ ನೀತಿಯೆಂಬ ಆಯುಧಗಳು ಎಫೆಸ 6:11-18 ರಲ್ಲಿ ಪೌಲನು ಬಣ್ಣಿಸಿರುವ ದೇವರ ಸರ್ವಾಯುಧಗಳಲ್ಲಿ ಕೆಲವು ಆಯುಧಗಳನ್ನು ಸೂಚಿಸಬಹುದು. ಎಡಗೈಯಲ್ಲಿ ನಂಬಿಕೆಯೆಂಬ ಗುರಾಣಿಯು ಇರುವದು

(ಎಫೆಸ 6:16), ಮತ್ತು ಬಲಗೈಯಲ್ಲಿ ಪವಿತ್ರಾತ್ಮನ.....ಕತ್ತಿಯು ಇರುವದು (ಎಫೆಸ 6:17). ಪೌಲನ ಆಯುಧಗಳು ಇಹಲೋಕದ ಆಯುಧಗಳಂತಿರುವದಿಲ್ಲ. ಅವು ಗಳು ಆತ್ಮೀಕ ಆಯುಧಗಳಾಗಿವೆ (2 ಕೊರಿಂಥ 16:4 ನೋಡಿರಿ).

8 ಇತರರು ನಮ್ಮ ವಿಷಯದಲ್ಲಿ ಮಾನ ಕೊಡುವಾಗ, ಅಂದರೆ, ಅವರು ನಮ್ಮ ಬಗ್ಗೆ ಉತ್ತಮವಾಗಿ ಮಾತಾಡುವ ವೇಳೆಯಲ್ಲಿ ಕ್ರಿಸ್ತನ ಸೇವಕನಾಗಿರುವದು ಸುಲಭವಾಗಿರುತ್ತದೆ. ಆದರೆ ನಾವು ಇತರರಿಂದ ಅವಮಾನ ಹೊಂದಿಕೊಳ್ಳುವಾಗ, ಅಥವಾ ಇತರರು ನಮ್ಮ ಕೆಟ್ಟದ್ದಾಗಿ ಹೇಳುವದಾದರೆ ಇಲ್ಲವೆ ನಮ್ಮನ್ನು ಮೋಸಗಾರರೆಂದು ಕರೆಯುವದಾದರೆ ನಾವು ಏನು ಮಾಡುತ್ತೇವೆ? ನಾವು ಬಹುತಾಳ್ಮೆಯನ್ನು ತೋರಿಸುತ್ತಾ (ವಚನ 4), ದೀರ್ಘಶಾಂತಿ ಹಾಗು ದಯೆಯಿಂದ ಕೂಡಿದವರಾಗಿ ಕರ್ತನ ಸೇವೆಯಲ್ಲಿ ಮುಂದುವರೆಯುತ್ತೇವೋ? (ವಚನ 6).

ಯೇಸು ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆ: "ಅವರು (ಲೋಕದ ಜನರು) ನನ್ನನ್ನು ಹಿಂಸೆ ಪಡಿಸಿದ್ದರೆ ನಿಮ್ಮನ್ನು ಸಹ ಹಿಂಸೆಪಡಿಸುವರು" (ಯೋಹಾನ 15:20). ನಾವು ಕ್ರಿಸ್ತನ ಮಾದರಿಯನ್ನು ಅನುಸರಿಸೋಣ: ಬೈಯುವವರನ್ನು ಆತನು ಪ್ರತಿಯಾಗಿ ಬೈಯಲಿಲ್ಲ...ಬದಲಾಗಿ ಆತನು ನ್ಯಾಯವಾಗಿ ತೀರ್ಪು ಮಾಡುವಾತನಿಗೆ (ದೇವರಿಗೆ) ತನ್ನ ಕಾರ್ಯವನ್ನು ಒಪ್ಪಿಸಿದನು (1 ಪೇತ್ರ 2:21-23).

9 ಪೌಲನು ತಾನು ಸ್ಥಾಪಿಸಿದ ಸಭೆಗಳಲ್ಲಿ ಪ್ರಸಿದ್ಧನಾಗಿದ್ದನು ಹಾಗು ದೇವರಿಂದಲೂ ತಿಳಿಯಲ್ಪಟ್ಟವನಾಗಿದ್ದನು. ಆತನು ತಿಮೊಥೆಯನಿಗೆ ಬರೆದದ್ದೇನೆಂದರೆ: ತನ್ನವರು ಯಾರಾರೆಂಬದನ್ನು ಕರ್ತನು ತಿಳಿದಿದ್ದಾನೆ (2 ತಿಮೊಥೆ 2:19). ಆದರೆ ಅವಿಶ್ವಾಸಿಗಳಿಗಾದರೋ ಪೌಲನು ಅಜ್ಞಾತನೆಂದು ಎಣಿಸಲ್ಪಟ್ಟಿದ್ದನು; ಅವರು ಆತನನ್ನು "ಏನೂ ಅಲ್ಲ" ಎಂದು ಪರಿಗಣಿಸಿದ್ದರು. ಪೌಲನು ಕ್ರಿಸ್ತನನ್ನು ಹಿಂಬಾಲಿಸುವದಕ್ಕೆ ತೀರ್ಮಾನಿಸಿ ಕೊಂಡಾಗ ತನ್ನ ಹೆಸರು, ಪ್ರಸಿದ್ಧಿ ಹಾಗು ಗೌರವಗಳನ್ನು ಕಳೆದುಕೊಂಡನು. ಪೌಲನು ಕ್ರಿಸ್ತನಿಗೋಸ್ಕರ ಎಲ್ಲವನ್ನು ತ್ಯಜಿಸಿದನು.

ಪೌಲನು ತಾನು ಸಾಯುವವನಾಗಿ ಇದ್ದನೆಂದು ಹೇಳುತ್ತಾನೆ. ಪೌಲನು ಯಾವಾಗಲೂ ಮರಣಕ್ಕೆ ಹತ್ತಿರವಾಗಿರುತ್ತಿದ್ದನು;ಆತನು ಬಹಿರಂಗದಲ್ಲಿ ನಾಶವಾಗುತ್ತಾ ಇದ್ದನು ( 2 ಕೊರಿಂಥ 4:16). ದಿನನಿತ್ಯವೂ ಆತನು ಮರಣದ ಅಪಾಯಕ್ಕೊಳಗಾಗುತ್ತಿದ್ದನು (ರೋಮ 8:36; 1 ಕೊರಿಂಥ 15:31; 2 ಕೊರಿಂಥ 1:8-10, 11:23-26 ನೋಡಿರಿ). ಅಂತಹ "ಸಾಯುವಿಕೆಯ" ಮುಖಾಂತರವಾಗಿ ಪೌಲನ ಜೀವಿತದಲ್ಲಿ ಕ್ರಿಸ್ತನ ಜೀವವು ಹೆಚ್ಚು ಸ್ಪಷ್ಟವಾಗಿ ತೋರಿಬರುತ್ತಿತ್ತು (2 ಕೊರಿಂಥ 4:10-12 ನೋಡಿರಿ).

ಪೌಲನು ಶಿಕ್ಷೆಹೊಂದುವವನಾಗಿದ್ದರೂ (ಹೊಡಿಸಿಕೊಳ್ಳಲ್ಪಡುವವನಾಗಿದ್ದರೂ) ಆತನು ಕೊಲ್ಲಲ್ಪಡದವನಾಗಿದ್ದನು(ಅ.ಕೃತ್ಯ 14:19-20; 2 ಕೊರಿಂಥ 4:8-9 ನೋಡಿರಿ). ಪೌಲನು ಶಿಕ್ಷೆಹೊಂದುವವನಾಗಿದ್ದರೂ ಕೊಲ್ಲಲ್ಪಡದವನು ಎಂದು ಪ್ರಸ್ತಾಪಿಸುವಾಗ ಬಹುಶಃ ಆತನು ಕೀರ್ತನೆಗಳು 118:18ನೇ ಕುರಿತು ಯೋಚಿಸುತ್ತಿದ್ದಿರಬೇಕು, ಅಲ್ಲಿ ಕೀರ್ತನೆಗಾರನು ಬರೆಯುವದೇನೆಂದರೆ: ಕರ್ತನು ನನ್ನನ್ನು ಕಠಿಣವಾಗಿ ಶಿಕ್ಷಿಸಿದನು; ಆದರೆ ಮರಣಕ್ಕೆ ಒಪ್ಪಿಸಲಿಲ್ಲ.

10 ಲೋಕದ ದೃಷ್ಟಿಗೆ ಪೌಲನು ದುಃಖ ಪಡುವವನಾಗಿ ಕಾಣಿಸಿದನು. ಆದಾಗ್ಯು, ವಾಸ್ತವದಲ್ಲಿ ಆತನು ಯಾವಾಗಲೂ ಸಂತೋಷಪಡುವವನಾಗಿದ್ದನು (ಮತ್ತಾಯ 5:11-12; ರೋಮ 5:3; ಫಿಲಿಪ್ಪಿ 4:4 ನೋಡಿರಿ). ಲೋಕದ ದೃಷ್ಟಿಯಲ್ಲಿ ಪೌಲನು ಬಡವನಾಗಿ ಕಂಡನು; ಆತನು, ಏನೂ ಇಲ್ಲದವನಾಗಿ ಕಾಣಿಸಿದನು. ಆದಾಗ್ಯು, ವಾಸ್ತವದಲ್ಲಿ ಆತನು ಎಲ್ಲಾ ಇದ್ದವನಾಗಿದ್ದನು – ಐಶ್ವರ್ಯವಂತನಾಗಿದ್ದನು – (ಎಫೆಸ 1:7; 2:7; ಫಿಲಿಪ್ಪಿ 3:7-8; 4:19 ನೋಡಿರಿ). ಆತನು ಇತರರಿಗೆ ಕ್ರಿಸ್ತನ ಅಪ್ರಮೇಯವಾದ ಐಶ್ವರ್ಯದ ವಿಷಯದಲ್ಲಿ ಬೋಧಿಸಿದನು (ಎಫೆಸ 3:8,16). ಪೌಲನು ಕ್ರಿಸ್ತನ ಮಾದರಿಯನ್ನು ಅನುಸರಿಸಿದನು: ಆತನು (ಕ್ರಿಸ್ತನು) ಐಶ್ವರ್ಯವಂತನಾಗಿದ್ದು ತಾನು ಬಡತನದಲ್ಲಿ ಸೇರುವದರಿಂದ ನೀವು ಐಶ್ವರ್ಯವಂತರಾಗಬೇಕೆಂದು ನಿಮಗೋಸ್ಕರ ಬಡವನಾದನು (2 ಕೊರಿಂಥ 8:9).

ಕ್ರೈಸ್ತರಾದ ನಮ್ಮಲ್ಲಿ ಇತರರಿಗೆ ಕೊಡುವದಕ್ಕೆ "ಬೆಳ್ಳಿ ಬಂಗಾರಗಳಾಗಲಿ "ಇಲ್ಲದಿರಬಹುದು, ಆದರೆ ನಮ್ಮಲ್ಲಿರುವಂತಹದ್ದನ್ನು ಸಮೃದ್ಧಿಯಾಗಿ ಕೊಡಬಲ್ಲೆವುಃ ಅದೇನೆಂದರೆ, ಕ್ರಿಸ್ತನ ಅಪ್ರಮೇಯವಾದ ಐಶ್ವರ್ಯಗಳು (ಅ.ಕೃ. 3:1-8,16 ನೋಡಿರಿ).

ನಮ್ಮನ್ನು ನಾವು ಕೇಳಿಕೊಳ್ಳೋಣ: ನಮ್ಮ ಜೀವಿತವು ಎಷ್ಟರ ಮಟ್ಟಿಗೆ ಪೌಲನ ಜೀವಿತದಂತಿರುತ್ತದೆ? ನಾವು ಈ ಆತ್ಮೀಕ ಐಶ್ವರ್ಯಗಳನ್ನು ಹೊಂದಿಕೊಂಡವರಂತೆ ನಡೆದು ಕೊಳ್ಳುತ್ತೇವೋ/ ನಾವು ಸಂಕಟ ಹಾಗು ಹಿಂಸೆಯು ಬರುವಾಗ ತಾಳಿಕೊಳ್ಳುತ್ತೇವೋ? ಇತರರು ನಮ್ಮ ವಿರೋಧವಾಗಿ ಪ್ರವರ್ತಿಸುವಾಗ ನಾವು ಮೌನವಾಗಿ ಸೈರಿಸಿಕೊಳ್ಳುತ್ತೇವೋ? ಪೌಲನು ನಮಗೆ ಅಂತಹ ಉನ್ನತ ಮಟ್ಟವನ್ನೂ ಅಂತಹ ಉನ್ನತವಾದ ಮಾದರಿಯನ್ನು ಮುಂದಿಟ್ಟಿದ್ದಾನೆ! ಆದರೆ ಪೌಲನ ಮಾದರಿಯು ಉನ್ನತವಾಗಿದ್ದರೂ ದೇವರ ಕೃಪೆ ಹಾಗು ಪವಿತ್ರಾತ್ಮನ ಸಹಾಯದ ಮೂಲಕವಾಗಿ ನಾವು ಅದನ್ನು ಅನುಸರಿಸಬಲ್ಲೆವು; ನಾವು ಶಕ್ತರಾಗಿರುವದಷ್ಟೇ ಅಲ್ಲ; ನಾವು ಅನುಸರಿಸಲೇಬೇಕು!

11 ಪೌಲನು ಕೊರಿಂಥದವರೊಂದಿಗೆ ದಾರಾಳವಾಗಿ ಮಾತಾಡಿದ್ದಾನೆ; ಪ್ರತಿಯೊಂದು ವಿಷಯದಲ್ಲಿಯೂ ಆತನು ಸರಳ ವಾಗಿಯೂ ಮುಕ್ತವಾಗಿಯೂ ಮಾತಾಡಿರುತ್ತಾನೆ. ಪೌಲನ ಹೃದಯವು ಕೊರಿಂಥದವರಿಗೆ ವಿಶಾಲವಾಗಿ ತೆರೆದಿತ್ತು; ಅಂದರೆ, ಆತನ ಹೃದಯವು ಅವರ ಮೇಲಿನ ಪ್ರೀತಿಯಿಂದ ತುಂಬಿರುತ್ತದೆ.

12 ಪೌಲನು ಕೊರಿಂಥದವರಿಗೆ ಬರೆಯುವದೇನೆಂದರೆ: ನಿಮ್ಮ ಮೇಲಿರುವ ನಮ್ಮ ಪ್ರೀತಿಯು ಸಂಕೋಚವಾದದ್ದಲ್ಲ; ನಾವು ನಿಮ್ಮ ಮೇಲಿರುವ ನಮ್ಮ ಪ್ರೀತಿಗೆ ಕಡಿವಾಣ ಹಾಕುತ್ತಿಲ್ಲ. ಆದರೆ ನಿಮ್ಮ ಪ್ರೀತಿಯೇ (ನಮ್ಮ ವಿಷಯದಲ್ಲಿ)

ಸಂಕೋಚವಾಗಿರುತ್ತದೆ ಎಂದು ಪೌಲನು ಕೊರಿಂಥದವರಿಗೆ ಹೇಳುತ್ತಾನೆ; ನಿಮ್ಮ ಪ್ರೀತಿಗೆ ಕಡಿವಾಣ ಹಾಕಿರುತ್ತಿರಿ. ಪೌಲನು ಕೊರಿಂಥದವರ ಮೇಲೆ ಇಟ್ಟಿರುವ ಪ್ರೀತಿಯು "ವಿಶಾಲ" ಆದರೆ ಅವರು ಆತನ ಮೇಲೆ ಇಟ್ಟಿರುವ ಪ್ರೀತಿಯು "ಸಂಕುಚಿತ" ಆಗಿದೆ.

13 ಒಬ್ಬ ತಂದೆಯು ತನ್ನ ಮಕ್ಕಳಿಂದ ಉಪಕಾರವೊಂದನ್ನು ಕೇಳುವಂತೆಯೇ ಪೌಲನು ಕೊರಿಂಥದವರಿಗೆ ಆತನ ವಿಷಯದಲ್ಲಿ ತಮ್ಮ ಹೃದಯವನ್ನು ವಿಶಾಲಮಾಡಿಕೊಳ್ಳಿರಿ–ಆತನ ಮೇಲಿರುವ ಅವರ ಪ್ರೀತಿಯನ್ನು ವಿಸ್ತಾರಮಾಡಿಕೊಳ್ಳಿರಿ – ಎಂದು ಕೇಳಿಕೊಳ್ಳುತ್ತಾನೆ.

## ಅವಿಶ್ವಾಸಿಗಳೊಂದಿಗ ಇಜ್ಜೋಡಾಗ ಬೇಡಿರಿ (6:14-18)

14 ಕ್ರಿಸ್ತನಂಬಿಕೆಯಿಲ್ಲದವರೊಂದಿಗೆ – ಅಧರ್ಮದೊಂದಿಗೆ (ಕೆಟ್ಟತನ), ಕತ್ತಲೆಯೊಂದಿಗೆ – ಇಜ್ಜೋಡಾಗಬೇಡಿರಿ ಇಲ್ಲಿ ಪೌಲನ ತಾತ್ಪರ್ಯವೇನು/ ಆತನ ತಾತ್ಪರ್ಯವೇನೆಂದರೆ: ಕ್ರೈಸ್ತರು ಕ್ರಿಸ್ತನನ್ನು ನಿರಾಕರಿಸುವವರೊಂದಿಗೆ ಸಹಬಾಗಿಗಳಾಗಿ ಜೀವಿಸಬಾರದು ಹಾಗು ಕೆಲಸಮಾಡಬಾರದು.

ಉದಾಹರಣೆಗೆ, ವಿಶ್ವಾಸಿಯೊಬ್ಬನು ಅವಿಶ್ವಾಸಿಯನ್ನು ಮದುವೆ ಮಾಡಿಕೊಳ್ಳಬಾರದು (1 ಕೊರಿಂಥ 7:39 ನೋಡಿರಿ). ಆದರೆ, ಒಬ್ಬವ್ಯಕ್ತಿಯು ವಿವಾಹವಾದ ಬಳಿಕ ಕ್ರೈಸ್ತನಾಗುವದಾದರೆ ವಿಶ್ವಾಸಿಯಾಗಿರುವ ಸಂಗಾತಿಯು ಅವನ ಅಥವಾ ಅವಳ ಸಂಗಾತಿಯನ್ನು ಬಿಟ್ಟು ಬಿಡಬಾರದು (1 ಕೊರಿಂಥ 7;12-13).

ಕ್ರೈಸ್ತರು ಅವಿಶ್ವಾಸಿಗಳ ಜೊತೆಯಲ್ಲಿ ತಿನ್ನುವದರಲ್ಲಿ ಯಾವ ತಪ್ಪಿರುವದಿಲ್ಲ ಎಂದು ಬರೆದಿರುತ್ತಾನೆ (1 ಕೊರಿಂಥ 10:27). ಅಷ್ಟು ಮಾತ್ರವಲ್ಲದೆ, ಪಾಪಿಗಳು ಹಾಗು ಕೆಟ್ಟ ಜನರೊಂದಿಗೆ ಸ್ವಲ್ಪಮಟ್ಟಿಗೆ ಸಹವಾಸವನ್ನು ಇಟ್ಟು ಕೊಳ್ಳುವದು ಅಗತ್ಯವಾಗಿರುತ್ತದೆ (1 ಕೊರಿಂಥ 5:9-10). ಆದರೆ ನಾವು ಅವರ ಪಾಪ ಹಾಗು ಕೆಟ್ಟತನದಲ್ಲಿ ಭಾಗಿಗಳಾಗಬಾರದು. ವಿಶೇಷವಾಗಿ ನಾವು ವಿಗ್ರಹಾರಾಧನೆಯಲ್ಲಿ ಯಾವ ರೀಕಿಯಿಂದಲೂ ಭಾಗಿಗಳಾಗಬಾರದು.

ಬೆಳಕು ಕತ್ತಲೆಯೊಂದಿಗೆ "ಐಕ್ಯತೆಯನ್ನು" ಹೊಂದುವದು ಅಸಾಧ್ಯ. ದೇವರು ಬೆಳಕಾಗಿದ್ದಾನೆ, ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿರುವದಿಲ್ಲ (1 ಯೋಹಾನ 1:5-7). ನಾವು ಬೆಳಕಿನ ಮಕ್ಕಳಾಗಿ ಜೀವಿಸಬೇಕು (ಎಫೆಸ 5:8). ಯೇಸು ಕ್ರಿಸ್ತನು ಮಾನವರಿಗೆ ಬೆಳಕಾಗಿದ್ದಾನೆ (ಯೋಹಾನ 1:4-5); ಆತನು ಲೋಕಕ್ಕೆ ಬೆಳಕಾಗಿದ್ದಾನೆ (ಯೋಹಾನ 8:12). ವಿಶ್ವಾಸಿಗಳು ಕ್ರಿಸ್ತನಲ್ಲಿ ಕತ್ತಲೆಯೊಳಗಿಂದ ಕರೆಯಲ್ಪಟ್ಟು ಆತನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಸಲ್ಪಟ್ಟಿರುತ್ತಾರೆ. (1 ಪೇತ್ರ 2:9) ಕ್ರಿಸ್ತನನ್ನು ತಿರಸ್ಕರಿಸುವದೆಂದರೆ ಕತ್ತಲೆಯಲ್ಲಿ ನಡೆಯುವದಾಗಿದೆ (ಯೋಹಾನ 3:19-20 ನೋಡಿರಿ).

15 ಕ್ರಿಸ್ತನಿಗೂ ಬೆಲಿಯೇಲನಿಗೂ[18] ಒಡನಾಟವೇನು? ನಂಬುವವನಿಗೂ ನಂಬದೆ ಇರುವವನಿಗೂ ಪಾಲುಗಾರಿಕೆ ಏನು? ವಿಶ್ವಾಸಿಯ ಜೀವನವು ಕ್ರಿಸ್ತನಿಗಾಗಿ ಜೀವಿಸಲ್ಪಡುತ್ತದೆ; ಅವಿಶ್ವಾಸಿಯ ಜೀವಿತವು ಸ್ವಾರ್ಥಕ್ಕಾಗಿ ಜೀವಿಸಲ್ಪಡುತ್ತದೆ. ವಿಶ್ವಾಸಿಯ ಸಂಪತ್ತು ಪರಲೋಕದಲ್ಲಿದೆ; ಅವಿಶ್ವಾಸಿಯ ಸಂಪತ್ತು ಲೋಕದಲ್ಲಿದೆ. ವಿಶ್ವಾಸಿಯು ದೇವರಿಂದ ಹೊಗಳಿಕೆಯನ್ನು ಹುಡುಕುತ್ತಾನೆ; ಅವಿಶ್ವಾಸಿಯು ಮನುಷ್ಯರ ಹೊಗಳಿಕೆಯನ್ನು ಎದುರು ನೋಡುತ್ತಾನೆ. ಹಾಗಾದರೆ ವಿಶ್ವಾಸಿಗೂ ಅವಿಶ್ವಾಸಿಗೂ ಪಾಲುಗಾರಿಕೆ ಇರಲು ಹೇಗಾದೀತು?

16 ವಿಶ್ವಾಸಿಗಳಾದ ನಾವು ದೇವರ ಪವಿತ್ರ ಆಲಯವಾಗಿದ್ದೇವೆ (1 ಕೊರಿಂಥ 3:16; 6:19; 1 ಪೇತ್ರ 2:5). "ಪವಿತ್ರ" ಎಂಬ ಪದವು ಕೆಟ್ಟತನ ಹಾಗು ಪಾಪದಿಂದ ಪ್ರತ್ಯೇಕಿಸಿಕೊಳ್ಳುವದೆಂಬ ಅರ್ಥವನ್ನು ಕೊಡುತ್ತದೆ. ನಮ್ಮೊಳಗೆ, ನಮ್ಮ "ಆಲಯದಲ್ಲಿ" ಯಾವದೇ ಕೆಟ್ಟತನ, ಅಪವಿತ್ರತೆ ಅಥವಾ ವಿಗ್ರಹಾರಾಧನೆ ಇರಬಾರದು (1 ಕೊರಿಂಥ 10:20-21 ನೋಡಿರಿ). ನಮ್ಮ ಆಲಯವು (ದೇಹವು) ಪವಿತ್ರವಾಗುಳಿಯಬೇಕು, ಯಾಕೆಂದರೆ ದೇವರು ಅಲ್ಲಿ ವಾಸಿಸುತ್ತಾನೆ.

ಪೌಲನು ಇಲ್ಲಿ ಯೆರೆಮೀಯ 32:38 ಮತ್ತು ಯೆಹೆಜ್ಕೇಲ 37:27 ರಿಂದ ಉಲ್ಲೇಖಿಸುತ್ತಾನೆ. ದೇವರ ಜನರು (ಸಭೆಯು) ಪವಿತ್ರವಾಗಿರಬೇಕು, ಯಾಕೆಂದರೆ ದೇವರು ಯಾವ ಅಶುದ್ಧತೆಯನ್ನು ಸಹಿಸಿಕೊಳ್ಳುವದಿಲ್ಲ.

17 ಆದದರಿಂದ, ಅವರ ಮಧ್ಯದಲ್ಲಿಂದ ಹೊರಟುಬಂದು ಪ್ರತ್ಯೇಕವಾಗಿರಿ (ಯೋಹಾನ 52:11). ನಾವು ಯಾರ ಮಧ್ಯದಿಂದ ಹೊರಟು ಬಂದು ಪ್ರತ್ಯೇಕವಾಗಿರಬೇಕು? ಅವಿಶ್ವಾಸಿಗಳೂ, ಕೆಟ್ಟತನವನ್ನು ನಡಿಸುವವರೂ, ಕತ್ತಲೆಯಲ್ಲಿ ನಡೆಯುವವರೂ ಆಗಿರುವದರಿಂದ ಹೊರಟು ಬರಬೇಕು. ಕತ್ತಲೆಗೆ ಸಂಬಂಧವಾದ ಕೃತ್ಯಗಳಿಂದ ಯಾವ ಪ್ರಯೋಜನವೂ ಬರಲಾರದು; ಅವುಗಳಲ್ಲಿ ಪಾಲುಗಾರರಾಗಲೇ ಬೇಡಿರಿ (ಎಫೆಸ 5:11) ಆದರೆ ಕ್ರೈಸ್ತ ಸಹೋದರನೆನಿಸಿಕೊಂಡವನು ಜಾರನಾದರೂ, ಲೋಭಿಯಾದರೂ, ವಿಗ್ರಹಾರಾಧಕನಾದರೂ, ಬೈಯುವವನಾದರೂ, ಕುಡುಕನಾದರೂ, ಸುಲುಕೊಳ್ಳುವವನಾದರೂ ಆಗಿದ್ದ ಪಕ್ಷದಲ್ಲಿ ಅವನ ಸಹವಾಸ ಮಾಡಬಾರದು, ಅಂಥವನ ಸಂಗಡ ಊಟಮಾಡಲೂ ಬಾರದು (1 ಕೊರಿಂಥ 5:11). ಒಂದು ಪಾಪವು ಒಬ್ಬ ವ್ಯಕ್ತಿಯ ಇಡೀ ಜೀವಿತವನ್ನೇ ಅಪವಿತ್ರಗೊಳಿಸಬಲ್ಲದು; ಪಶ್ಚಾತಾಪ ಪಡದ ಒಬ್ಬ ಪಾಪಿಯು ಇಡೀ ಸಭೆಯನ್ನೇ ಅಪವಿತ್ರಗೊಳಿಸಬಲ್ಲನು (1 ಕೊರಿಂಥ 5:6-7 ನೋಡಿರಿ).

ಇದೆಲ್ಲವೂ ಸತ್ಯವಾಗಿದ್ದರೂ ನಾವು ಅದನ್ನು ಹೇಗೆ ಕೈಕೊಂಡು ನಡೆಯುತ್ತೇವೆ ಎಂಬುದರಲ್ಲಿ ಜಾಗರೂಕರಾಗಿರಬೇಕು. ಯಾಕೆಂದರೆ ಆ ವಚನಗಳು ನಾವು ಒಬ್ಬ ಸಹೋದರನೊಂದಿಗೆ ಕೇವಲ ಭಿನ್ನಾಭಿಪ್ರಾಯ ಹೊಂದಿದ್ದೇವೆಂಬ ಕಾರಣಕ್ಕಾಗಿ ಮಾತ್ರವೇ ಅವನಿಂದ ದೂರವಾಗ ಬೇಕೆಂದು ಹೇಳುವದಿಲ್ಲ. ಇಲ್ಲಿ, ನಾವು ಈ ವಿಧದಲ್ಲಿ ಬೇರ್ಪಡಬಾರದು. ಸೈತಾನನು

ಸಭೆಯನ್ನು ಇಬ್ಭಾಗಿಸುವದಕ್ಕೆ ಉಪಯೋಗಿಸುವ ಒಂದು ವಿಧಾನವೇನೆಂದರೆ ಕ್ರೈಸ್ತರನ್ನು ಒಬ್ಬರಿಗೊಬ್ಬರು ತೀರ್ಪು ಮಾಡಿಕೊಂಡು, ಖಂಡಿಸುವಂತೆಯೂ ನಡಿಸುವದೇ ಆಗಿದೆ. ಇದರ ನಿಮಿತ್ತವಾಗಿ ಅನೇಕ ಸಭೆಗಳು ಒಡೆದು ಹೋಗಿರುತ್ತವೆ. ಮತ್ತು ಈ ವಿಧದಲ್ಲಿ ಸಭೆಯನ್ನು ಇಬ್ಭಾಗಿಸುವ ಜನರು ತಮ್ಮ ಕ್ರಿಯೆಗಳು ನ್ಯಾಯವಾದವು ಗಳೆಂದು ವಾದಿಸಿಕೊಳ್ಳಲು ಇದೇ ವಚನವನ್ನೇ ಉಲ್ಲೇಖಿಸುತ್ತಾರೆ:.... ಅವರೊಳಗಿಂದ ಹೊರಟು ಬಂದು ಪ್ರತ್ಯೇಕವಾಗಿರಿ. ಆದರೆ ಆಜನರು ಈ ವಚನದ ಜೊತೆಯಲ್ಲಿ ಇನ್ನೊಂದು ವಚನವನ್ನೂ ಜ್ಞಾಪಕದಲ್ಲಿಟ್ಟು ಕೊಳ್ಳಬೇಕು: "ತೀರ್ಪುಮಾಡಬೇಡಿರಿ" (ಮತ್ತಾಯ 7:11).

ಕ್ರಿಸ್ತನ ಸಭೆಯಲ್ಲಿ ಪವಿತ್ರ ಹಾಗು ಐಕ್ಯತೆ ಎರಡೂ ಪ್ರಾಮುಖ್ಯವಾಗಿವೆ. ನಾವು ಯಾವಾಗ ಒಬ್ಬ ಸಹೋದರನಿಂದ ಬೇರ್ಪಡಬೇಕು ಅಥವಾ ಸಭೆಯಿಂದ ನಾವು ಬರಬೇಕು ಎಂಬ ವಿಷಯದಲ್ಲಿ ಪವಿತ್ರಾತ್ಮನಿಂದ ಅತಿಸ್ಪಷ್ಟವಾದ ಮಾರ್ಗದರ್ಶನವನ್ನು ಹೊಂದುವ ಅಗತ್ಯವಿರುತ್ತದೆ. ಒಂದು ವೇಳೆ ನಾವು ಯಾವದೇ ಸ್ವಾರ್ಥ, ಅಪವಿತ್ರ ಅಥವಾ ಸುಳ್ಳು ಕಾರಣಕ್ಕಾಗಿ ಒಬ್ಬ ಸಹೋದರನನ್ನಾಗಲಿ ಅಥವಾ ಒಂದು ಸಭೆಯನ್ನಾಗಲಿ ಖಂಡಿಸುವದಾದರೆ ನಾವು ದೂರು ಹೇಳುತ್ತಿರುವ ಸಹೋದರನಿಗಿಂತಲೂ ಅತಿ ದೊಡ್ಡ ಪಾಪವನ್ನು ಕ್ರಿಸ್ತನ ದೇಹದ ವಿರುದ್ಧವಾಗಿ ಮಾಡುವವರಾಗುತ್ತೇವೆ. ಈ ವಿಷಯಗಳಲ್ಲಿ ನಾವು ತಗ್ಗಿ ಸಿಕೊಂಡವರಾಗಿರೋಣ; ಮತ್ತು ನಾವು ಇತರರಿಗೆ ತೀರ್ಪು ಮಾಡುವಂತೆಯೇ ದೇವರು ನಮಗೆ ತೀರ್ಪು ಮಾಡುವನೆಂಬದನ್ನು ಸಹ ನೆನಪಿನಲ್ಲಿಟ್ಟುಕೊಳ್ಳೋಣ ಆದದರಿಂದ, ನಾವು ಈ ವಚನದ ಪ್ರಾಥಮಿಕ ಬೋಧನೆಯನ್ನು ಅರ್ಥಮಾಡಿಕೊಳ್ಳಬೇಕು, ಅದೇನೆಂದರೆ: ನಾವು ಬೇರ್ಪಡಬೇಕಾಗಿರುವದು ವ್ಯಕ್ತಿಯಿಂದ ಅಲ್ಲ, ಆದರೆ ಆ ವ್ಯಕ್ತಿಯ ಪಾಪದಿಂದಲೇ ಒಂದೆಡೆಯಲ್ಲಿ, ಸಭೆಯೊಳಗೆ ಯಾವ ಪಾಪವೂ ಇರಬಾರದು; ಇನ್ನೊಂದೆಡೆಯಲ್ಲಿ, ಯಾವ ಭೇಧಗಳಾಗಲಿ ಅಥವಾ ವಾಗ್ವಾದಗಳಾಗಲಿ ಇರಬಾರದು; ನಾವು ಪಾಪಿಯನ್ನು ಹಾಗು ಸುಳ್ಳು ಬೋಧಕನನ್ನು ಪಶ್ಚಾತಾಪಪಡುವಂತೆ ಮನವೊಲಿಸಲು ಪ್ರಯತ್ನಿಸಬೇಕು, ಅವರು ಪಶ್ಚಾತಾಪ ಪಡುವು ದಕ್ಕೆ ನಿರಾಕರಿಸುವಾಗ ಮಾತ್ರವೇ ನಾವು ಅವರನ್ನು ಶಿಕ್ಷಿಸಬೇಕು ಇಲ್ಲವೆ ಅವರಿಂದ ದೂರವಾಗಬೇಕು. ಮತ್ತು ನಾವು ಏನೇ ಮಾಡಿದರೂ ಅದನ್ನು ಪ್ರೀತಿ, ದೀನತೆ ಹಾಗು ಪವಿತ್ರಾತ್ಮನ ಮಾರ್ಗದರ್ಶನದಡಿಯಲ್ಲಿ ಮಾಡಬೇಕು.

18 ಪೌಲನು ಇಲ್ಲಿ 2 ಸಮುವೇಲ 7:14 ರಿಂದ ಉಲ್ಲೇಖಿಸುತ್ತಾನೆ. ನಾವು ಪವಿತ್ರರಾಗಿ ಉಳಿಯುವದಾದರೆ ದೇವರು ನಮಗೆ ತಂದೆಯಾಗಿರುವನು ಮತ್ತು ನಾವು ಆತನ ಮಕ್ಕಳಾಗಿರುವೆವು.

---

## ಅಧ್ಯಾಯ - 7

### ಪೌಲನ ಆನಂದ ಮತ್ತು ಆದರಣೆ (7:1-7)

1 ಪೌಲನು ಈ ವಾಗ್ದಾನಗಳು ನಮಗಿರುವದರಿಂದ ಎಂದು ಹೇಳುವಾಗ ಆತನು 2 ಕೊರಿಂಥ 6:16, 18 ರಲ್ಲಿ ಪ್ರಸ್ತಾಪಿಸಿದ ವಾಗ್ದಾನಗಳನ್ನು ಸೂಚಿಸುತ್ತಿದ್ದಾನೆ. ದೇವರು ನಮ್ಮ ತಂದೆ ಹಾಗು ನಾವು ಆತನ ಮಕ್ಕಳಾಗಿರುವದರಿಂದ ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಳ್ಳೋಣ. ದೇವರು ಪರಿಶುದ್ಧನಾಗಿದ್ದಾನೆ; ಆದದರಿಂದ ನಾವೂ ಪರಿಶುದ್ಧರಾಗಿರಬೇಕು (1 ಪೇತ್ರ 1:14-16 ನೋಡಿರಿ). ದೇಹದ ಪಾಪಗಳು ಹಾಗು ಆತ್ಮದ [19] ಪಾಪಗಳು ಇರುತ್ತವೆ, ನಾವು ಎರಡೂ ರೀತಿಯ ಪಾಪದಿಂದ ಶುಚಿಮಾಡಿಕೊಳ್ಳಬೇಕು. ನಮ್ಮ ಪವಿತ್ರತ್ವವು "ಪರಿಪೂರ್ಣ" ಆಗಿರಬೇಕು.

2-4 ಪೌಲನು ಇಲ್ಲಿ ತಾನು 2 ಕೊರಿಂಥ 11-13 ರಲ್ಲಿ ಬರೆದ ವಿಚಾರಗಳನ್ನೇ ಮುಂದು ವರೆಸುತ್ತಾನೆ. ಈ ವಚನಗಳ ಮೂಲಕ ಪೌಲನು ಕೊರಿಂಥದವರ ಮೇಲೆ ಎಂಥ ದೊಡ್ಡ ಪ್ರೀತಿಯನ್ನಿಟ್ಟಿದ್ದನೆಂಬದನ್ನು ನಾವು ತಿಳಿಯಬಹುದಾಗಿದೆ. ಪೌಲನು ಕೊರಿಂಥದವರೊಂದಿಗೆ ಸಾಯುವದಕ್ಕೂ ಬದುಕುವದಕ್ಕೂ ಸಿದ್ಧನಾಗಿದ್ದಾನೆ.

5 ಪೌಲನು ಏಕೆ ಅಷ್ಟೊಂದು ಉತ್ಸಾಹವಾಗಿದ್ದಾನೆ? ಯಾಕೆಂದರೆ ಈಗಷ್ಟೇ ಆತನು ತನ್ನ ಸಹಪಾಠಿಯಾದ ತೀತನಿಂದ ಕೊರಿಂಥದವರ ವಿಷಯದಲ್ಲಿ ಒಳ್ಳೇ ವಾರ್ತೆಯನ್ನು ಕೇಳಿದ್ದಾನೆ (ವಚನ 6).

2 ಕೊರಿಂಥ 2:12-13 ರ ಪ್ರಕಾರವಾಗಿ ಪೌಲನು ತೀತನನ್ನು ಬೇಟಿ ಯಾಗಲು ಮೆಕೆದೋನ್ಯಕ್ಕೆ (ಉತ್ತರ ಗ್ರೀಸ್) ಹೋಗಿದ್ದನು. ತೀತನು ಕೇರಿಂಥಕ್ಕೆ ಬೇಟಿ ನೀಡಿ ಕೊರಿಂಥದಲ್ಲಿನ ಸಭೆಯ ವಿಷಯದಲ್ಲಿ ಸುದ್ದಿಯನ್ನು ತೆಗೆದುಕೊಂಡು ಹಿಂದಿರುಗಿ ಬರುತ್ತಿದ್ದನು. ತೀತನು ಇದಕ್ಕೆ ಮುನ್ನ ಕೊರಿಂಥದವರಿಗೆ ಪೌಲನು ಬರೆದಿದ್ದ ಕಠಿಣವಾದ ಪತ್ರವನ್ನು ತೆಗೆದು ಕೊಂಡು ಕೊರಿಂಥದ ಕ್ರೈಸ್ತರ ಬಳಿಗೆ ಹೋಗಿದ್ದನು, ಹಾಗು ಕೊರಿಂಥದವರು ತನ್ನ ಪ್ರತ್ರಿಕೆಗೆ ಯಾವ ರೀತಿಯಾಗಿ ಪ್ರತಿಕ್ರಿಯಿಸಿರುತ್ತಾರೋ ಎಂದು ಪೌಲನು ಬಹಳ ಚಿಂತಾಕ್ರಾಂತನಾಗಿದ್ದನು (2 ಕೊರಿಂಥ 2:3). ಕೊರಿಂಥದವರು ಕೋಪಗೊಂಡು ಪೌಲನನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದರೋ? ಅಥವಾ ಅವರು ಪಶ್ಚಾತಾಪಪಟ್ಟು ಪೌಲನ ಮಾತುಗಳಿಗೆ – ಪ್ರಾರಂಭದಲ್ಲಿ ಪೌಲನು ಅವರ ಮದ್ಯದಲ್ಲಿ ಕೆಲಸಮಾಡುತ್ತಿದ್ದಾಗ ಅವರು ವಿಧೇಯರಾಗುತ್ತಿದ ಪ್ರಕಾರವೇ – ವಿಧೇಯರಾಗಲು ಒಪ್ಪಿಕೊಂಡಿದ್ದರೋ? ಪೌಲನು ತೀತನನ್ನು ಹುಡುಕುತ್ತಾ ಮೆಕೆದೋನ್ಯಕ್ಕೆ ಹೊರಟಾಗ ಆತನ ಮನಸ್ಸಿನಲ್ಲಿ ಈ ಪ್ರಶ್ನೆಗಳು ತೇಲಾಡುತ್ತಿದ್ದವು.

**6-7** ತೀತನು ಕೊರಿಂಥದಿಂದ ಒಳ್ಳೇ ಸುದ್ದಿಯನ್ನು ತಂದಿದ್ದನು; ಕೊರಿಂಥದವರು ಪೌಲನಿಗಾಗಿ ಹಂಬಲಿಸಿದರು, ಚಿಂತಿತರಾಗಿದ್ದರುಗ ಅದು ಮಾತ್ರವಲ್ಲದೆ, ಅವರು ಆತನಿಗೆ ಉಂಟುಮಾಡಿದ್ದ ಸಂಕಟಕ್ಕಾಗಿ ಗೋಳಾಡಿದರು.

## ಪಶ್ಚಾತಾಪಕ್ಕೆ ನಡಿಸುವ ದುಃಖ (7:8-16)

**8** ಪೌಲನು ಮೊದಲು ಆಲೋಚಿಸಿದ್ದೇನೆಂದರೆ: "ನಾನು ಆ ಕಠಿಣವಾದ ಪತ್ರಿಕೆಯನ್ನು ಕೊರಿಂಥದವರಿಗೆ ಕಳುಹಿಸಿರಬಾರದಾಗಿತ್ತು; ಅದು ಅವರಿಗೆ ದುಃಖವನ್ನು ಮಾಡಿದೆ". ಆದರೆ ಪೌಲನು ತೀತನ ಮೂಲಕ ಒಳ್ಳೇ ಸುದ್ದಿಯನ್ನು ಕೇಳಿದ ಬಳಿಕ ಸಂತೋಷಗೊಂಡನು. ಆತನು ಪತ್ರಿಕೆಯು ಅವರಿಗೆ ದುಃಖವನ್ನುಂಟು ಮಾಡಿದ್ದಾಗ್ಯು ಅದು ಅವರನ್ನು ಪಶ್ಚಾತಾಪಕ್ಕೆ ಸಹ ನಡಿಸಿತ್ತೆಂಬುದಕ್ಕಾಗಿ ಆತನು ಸಂತೋಷಗೊಂಡಿದ್ದನು (2 ಕೊರಿಂಥ 2:2-4 ನೋಡಿರಿ).

ಇಲ್ಲಿ ನಾವು ಸಭೆಯೊಳಗಿನ ಕ್ರೈಸ್ತರನ್ನು ಶಿಸ್ತುಗೊಳಿಸುವ ಮತ್ತು ಶಿಕ್ಷಿಸುವದರ ಉದ್ದೇಶವನ್ನು ಕಾಣಬಹುದು. ಅಂತಹ ಶಿಕ್ಷೆಯು ಒಬ್ಬ ವ್ಯಕ್ತಿಯನ್ನು ನೋವು ಗೊಳಿಸಲಾಗಲಿ ಅಥವಾ ಹಾನಿಗೊಳಪಡಿಸಲಾಗಲಿ ಎಂದಿಗೂ ಕೊಡಲ್ಪಡುವದಿಲ್ಲ; ಬದಲಾಗಿ, ಅದು ಆ ವ್ಯಕ್ತಿಯನ್ನು ಪಶ್ಚಾತಾಪಕ್ಕು ಹೆಚ್ಚು ಪವಿತ್ರತ್ವಕ್ಕೂ ನಡಿಸುವದಕ್ಕಾಗಿ ಕೊಡಲ್ಪಡುತ್ತದೆ. ನಿಜವಾದ ಕ್ರೈಸ್ತೀಯ ಶಿಕ್ಷೆಯು (ಶಿಸ್ತು) ಎಂದೂ ಹಾನಿಕರವಲ್ಲ; ಅದು – ಸರಿಯಾದ ಭಾವನೆಯಿಂದ ಸ್ವೀಕರಿಸಲ್ಪಡುವದಾದರೆ – ಯಾವಾಗಲೂ ಪ್ರಯೋಜನಕರವಾಗಿರುತ್ತದೆ.

**10** ದೇವರ ಚಿತ್ತಾನುಸಾರವಾಗಿರುವ ದುಃಖವು ದೇವರಿಂದ ಬರುವ ಶಿಕ್ಷೆಯಾಗಿದೆ, ಮತ್ತು ಅದು ಜನರನ್ನು ಪಶ್ಚಾತಾಪಕ್ಕೆ ನಡಿಸುತ್ತದೆ. ಮತ್ತು ಪಶ್ಚಾತಾಪವು ಕ್ಷಮಾಪಣೆಯೂ ಮತ್ತು ನಂತರ ರಕ್ಷಣೆಯೂ ಕಾರಣವಾಗುತ್ತದೆ. ದೇವರ ಚಿತ್ತಾನುಸಾರವಾಗಿರುವ ದುಃಖವು ನಮ್ಮ ಪಾಪದ ಕಾರಣದಿಂದ ಬರುತ್ತದೆ. ಆದರೆ ಇನ್ನೊಂದೆಡೆಯಲ್ಲಿ, ಲೌಕೀಕ ದುಃಖವು . ಲೌಕೀಕ ಸಮಸ್ಯೆಗಳು ಹಾಗು ನಿರಾಶೆಗಳ ಕಾರಣದಿಂದ ಬರುತ್ತದೆ. ನಾವು ನಮ್ಮ ಹೃದಯವನ್ನು ಕಠಿಣ ಪಡಿಸಿಕೊಂಡು ದೇವರ ಶಿಕ್ಷೆಯನ್ನು ತಿರಸ್ಕರಿಸುವದಾದರೆ, ನಮ್ಮದುಃಖವು ಲೌಕೀಕ ದುಃಖವಾಗಿ ಮಾರ್ಪಡುವದು, ಆದರಿಂದ ಯಾವ ಪ್ರಯೋಜನವೂ ಆಗುವದಿಲ್ಲ. ಬದಲಾಗಿ, ಅಂಥ ಲೌಕೀಕ ದುಃಖವು ಹತಾಶೆ ಹಾಗು ನಿತ್ಯವಾದ ದಂಡನೆಯನ್ನು – ಮರಣವನ್ನು – ಉಂಟುಮಾಡುತ್ತದೆ.

**11** ಇಲ್ಲಿ ನಾವು ಪೌಲನ ಕಠಿಣವಾದ ಪತ್ರಿಕೆಯನ್ನು ಸ್ವೀಕರಿಸಿಕೊಂಡ ಬಳಿಕ ಕೊರಿಂಥದವರು ಯಾವ ರೀತಿ ಯೋಚಿಸಿಕೊಂಡರು ಹಾಗು ಪ್ರತಿಕ್ರಿಯಿಸಿದರೆಂಬುದನ್ನು ನೋಡುತ್ತೇವೆ. ಆ ಪತ್ರಿಕೆಯಲ್ಲಿ ಪೌಲನು ಕೊರಿಂಥದವರಿಗೆ ಸಭೆಯಲ್ಲಿ ಒಂದು ದೊಡ್ಡ ಪಾಪವನ್ನು ಮಾಡಿದವನಾಗಿದ್ದ ಒಬ್ಬ ವ್ಯಕ್ತಿಯ ಬಗ್ಗೆ ಎಚ್ಚರಿಸಿದ್ದನು. ಈ ವಚನದ ಪ್ರಕಾರವಾಗಿ ಕೊರಿಂಥದವರು ಈ ವ್ಯಕ್ತಿಗೆ ಯಾವದೋ ಒಂದು ವಿಧದ ಶಿಕ್ಷೆಯನ್ನು ನೀಡಿದ್ದರು ಅಥವಾ ಒಂದು ವಿಧದಲ್ಲಿ ಆತನ ಪಾಪವನ್ನು ಅವರ ಮದ್ಯದಿಂದ ತೆಗೆದುಹಾಕಿದ್ದರು ಹೀಗೆ ಅವರು ಈಗ ಈ ವ್ಯಕ್ತಿಯ ಪಾಪದಲ್ಲಿ ಯಾವರೀತಿ ಪಾಲುಗಾರಿಕೆಯಿಲ್ಲದೆ ನಿರ್ದೋಷಿಗಳಾಗಿದ್ದರು. ಆ ಕೆಟ್ಟ ಪರಿಸ್ಥಿತಿಯು ಈಗ ಸರಿಪಡಿಸಲ್ಪಟ್ಟಿತ್ತು.

**12** ಪ್ರಾರಂಭದಲ್ಲಿ ಕೊರಿಂಥವರು ಪೌಲನ ಸಲಹೆಗಳನ್ನು ಅನುಸರಿಸಲು ನಿರಾಕರಿಸಿದ್ದರು; ಅವರು ಪೌಲನ ಅಧಿಕಾರಕ್ಕೆ ವಿರುದ್ಧವಾಗಿ ನಡೆದಿದ್ದರು. ಅವರು ಪ್ರಾರಂಭದಲ್ಲಿ ಆ ಪಾಪ ಮಾಡಿದ ವ್ಯಕ್ತಿಗೆ ಯಾವದೇ ಶಿಕ್ಷೆಯನ್ನಾಗಲಿ ಅಥವಾ ದಂಡನೆಯನ್ನಾಗಲಿ ನೀಡಿರಲಿಲ್ಲ; ಅವರು ಆತನ ಪಾಪವನ್ನು ಸಹಿಸಿಕೊಂಡಿದ್ದರು (1 ಕೊರಿಂಥ 5:1-2 ನೋಡಿರಿ). ಕೊರಿಂಥದ ಕ್ರೈಸ್ತರು ಗರ್ವದಿಂದಿದ್ದರು. ಆದುದರಿಂದ, ಪೌಲನು ಅವರನ್ನು ಪಶ್ಚಾತಾಪಕ್ಕೆ ನಡಿಸಬೇಕೆಂಬ ಉದ್ದೇಶದಿಂದ ಆ ಕಠಿಣವಾದ ಪತ್ರಿಕೆಯನ್ನು ಅವರಿಗೆ ಬರೆದನು, ಅವರು ತನ್ನ ಅಧಿಕಾರಕ್ಕೆ ಗೌರವನೀಡಿ ಆತನ ಮಾತುಗಳಿಗೆ ವಿಧೇಯರಾಗುವರೆಂದು ಪೌಲನು ನಿರೀಕ್ಷಿಸಿದನು (2 ಕೊರಿಂಥ 2:9 ನೋಡಿರಿ). ಈಗ ಆತನ ನಿರೀಕ್ಷೆಯು ನೆರವೇರಿತು.

ದೇವರ ಚಿತ್ತಾನುಸಾರವಾದ ದುಃಖವು ಮತ್ತು ಅದರಿಂದುಂಟಾದ ಮಾನಸಾಂತರವು ಯಾವಾಗಲೂ ಸಂಬಂಧಪಟ್ಟ ಎಲ್ಲರಿಗೂ ಕೊನೆಯಲ್ಲಿ ಆನಂದವನ್ನುಂಟು ಮಾಡುತ್ತದೆ. ಪೌಲನು ಸಂತೋಷಪಟ್ಟನು; ತೀತನು ಸಂತೋಷಗೊಂಡಿದ್ದನು, ಮತ್ತು ಕೊರಿಂಥದವರು ಸಹ ಸಂತೋಷಗೊಂಡಿದ್ದರು. ನಾವು ಈ ಸಂತೋಷಕ್ಕೆಲ್ಲಾ ಆಶ್ಚರ್ಯ ಪಡದಿರೋಣ. ಯೇಸು ಹೇಳಿದ್ದೇನೆಂದರೆ; "ದೇವರ ಕಡೆಗೆ ತಿರುಗಿಕೊಳ್ಳುವದಕ್ಕೆ ಅವ್ಯಶ್ಯವಿಲ್ಲದ ತೊಂಭತ್ತೊಂಭತ್ತು ಮಂದಿ ನೀತಿವಂತರಿಗಿಂತ ದೇವರಕಡೆಗೆ ತಿರುಗಿಕೊಳ್ಳುವ ಒಬ್ಬ ಪಾಪಿಯ ವಿಷಯವಾಗಿ ಪರಲೋಕದಲ್ಲಿ ಸಂತೋಷ ವುಂಟಾಗುವದು! (ಲೂಕ 15:7).

**13** ಪೌಲನು ಮುಖ್ಯವಾಗಿ ಕೊರಿಂಥದವರು ತೀತನನ್ನು ಸತ್ಕರಿಸಿದ ರೀತಿಯ ವಿಷಯದಲ್ಲಿ ಸಂತೋಷಗೊಂಡಿದ್ದಾನೆ; ಅವರು ಆತನ ವಿಷಯದಲ್ಲಿ ದಯೆ ಹಾಗು ಗೌರವದಿಂದ ನಡೆದು ಕೊಂಡರು. ಅದರ ಫಲಿತವಾಗಿ ತೀತನ ಮನಸ್ಸಿಗೆ ಉಪಶಮನವಾಗಿತ್ತು. ಕ್ರೈಸ್ತರಾಗಿ ನಾವು ಒಬ್ಬರಿಗೊಬ್ಬರು ಮಾಡಬಹುದಾದ ಒಂದು ಪ್ರಾಮುಖ್ಯವಾದ ಸಂಗತಿಯೇನೆಂದರೆ ಪರಸ್ಪರರವನ್ನು ಪ್ರೋತ್ಸಾಹಿಸಿ ಉಪಶಮನ ಮಾಡುವದೇ.

**14-16** ಪೌಲನು ತೀತನಿಗೆ ಕೊರಿಂಥದ ಕ್ರೈಸ್ತರ ಕುರಿತಾಗಿ ಅನೇಕ ಒಳ್ಳೇ ಸಂಗತಿಗಳನ್ನು ಹೇಳಿದ್ದನು. ಆತನು ಅವರ ವಿಷಯದಲ್ಲಿ ಹೊಗಳಿದ್ದನು(ವಚನ 14). ಕೊರಿಂಥದವರು ತೀತನೊಂದಿಗೆ ಕೆಟ್ಟದ್ದಾಗಿ ನಡಕೊಂಡು ತಾನು ನಾಚಿಕೆ ಪಡಬೇಕಾಗಿ ಬರುವಂತೆ ಮಾಡಲಿಲ್ಲ ಎಂಬುದಕ್ಕಾಗಿ ಪೌಲನು ಸಂತೋಷ ಪಡುತ್ತಾನೆ. ಅವರು ತಮ್ಮ ಒಳ್ಳೇ ನಡವಳಿಕೆಯ ಮೂಲಕ

ಪೌಲನು ಅವರ ಕುರಿತಾಗಿ ಹೇಳಿದ ಒಳ್ಳೇ ಸಂಗತಿಗಳು ನಿಜವಾದವು ಗಳೇ ಎಂಬದನ್ನು ನಿರೂಪಿಸಿದ್ದರು. ಪೌಲನು ಮುಂತಿಳಿಸಿದ ರೀತಿಯಲ್ಲಿಯೇ ಅವರು ತೀತನ ವಿಷಯದಲ್ಲಿ ನಡೆದುಕೊಂಡಿದ್ದರು.

ಕೊರಿಂಥದವರು ತೀತನನ್ನು ಸ್ವತಃ ಪೌಲನೇ ಎಂಬಂತೆ, ಅಂದರೆ, ಮನೋಭೀತಿಯಿಂದ ನಡುಗುವವರಾಗಿ ಸೇರಿಸಿಕೊಂಡಿದ್ದರು (ವಚನ 15). ಇದರ ಮೂಲಕವಾಗಿ ಕೊರಿಂಥದವರ ಹೃದಯಗಳಲ್ಲಿ ಎಂಥ ದೊಡ್ಡ ಮಾರ್ಪಾಟು ಉಂಟಾಗಿತ್ತೆಂಬದನ್ನು ನಾವು ತಿಳಿಯಬಹುದು!

---

## ಅಧ್ಯಾಯ - 8

### ಔದಾರ್ಯವನ್ನು ಪ್ರೋತ್ಸಾಹಿಸಿದ್ದು (8:1-15)

**1-2** ಮೆಕೆದೋನ್ಯದ ಸಭೆಗಳಲ್ಲಿ ಫಿಲಿಪ್ಪಿಯದಲ್ಲಿನ ಸಭೆ ಹಾಗು ಥೆಸಲೋನಿಕದಲ್ಲಿನ ಸಭೆಗಳೆರಡೂ ಅತಿ ಪ್ರಸಿದ್ಧವಾಗಿದ್ದವು. ಥೆಸಲೋನಿಕದವರು ಮೆಕೆದೋನ್ಯ.ದಲ್ಲಿಯೂ ಅಖಾಯದಲ್ಲಿಯೂ ಕ್ರಿಸ್ತನನ್ನು ನಂಬುವವರೆಲ್ಲರಿಗೂ ಮಾದರಿಯಾಗಿದ್ದರು (1 ಥೆಸಲೋನಿಕ 1:7).

ಫಿಲಿಪ್ಪಿಯವರು ಹಾಗು ಥೆಸಲೋನಿಕದವರು ಸ್ವತಃ ಕಡು ಬಡವರಾಗಿದ್ದು ಬಹಳ ಕಠಿಣವಾದ ಹಿಂಸೆಗಳನ್ನು ಅನುಭವಿಸುವವರಾಗಿದ್ದರೂ. ಅವರು ಕೊರತೆಯಲ್ಲಿ ಇರುವ ಇತರ ಕ್ರೈಸ್ತರೆಡೆಗೆ ಔದಾರ್ಯವುಳ್ಳವರಾಗಿದ್ದರು (ವಚನ 2). ವಿಶೇಷವಾಗಿ, ಅವರು ಯೆರೂಸಲೇಮಿನಲ್ಲಿರುವ ಬಡಕ್ರೈಸ್ತರಿಗೆ ಕಳುಹಿಸುವದಕ್ಕಾಗಿ ಪೌಲನು ಗ್ರೀಸಿನ ಸಭೆಗಳಲ್ಲಿ ಸಂಗ್ರಹಿಸುತ್ತಿದ್ದ ದೇಣಿಗೆಗೆ ಬಹಳ ಔದಾರ್ಯವುಳ್ಳವರಾಗಿ ಕೊಟ್ಟಿದ್ದರು. ಕೊರಿಂಥದವರು ಮೆಕೆದೋನ್ಯಗಳಲ್ಲಿನ ಸಭೆಗಳ ಮಾದರಿಯನ್ನು ಅನುಸರಿಸಿ ಅಷ್ಟೇ ಔದಾರ್ಯದಿಂದ ಯೆರೂಸಲೇಮಿನ ಕ್ರೈಸ್ತರಿಗಾಗಿ ಕಾಣಿಕೆಯನ್ನು ಕೊಡುವರೆಂದು ಪೌಲನು ನಿರೀಕ್ಷಿಸುತ್ತಾನೆ.

ಔದಾರ್ಯವು ಒಬ್ಬನು ಎಷ್ಟು ಕೊಡುತ್ತಾನೆಂಬದರಿಂದ ಮಾತ್ರವೇ ಅಳೆಯಲ್ಪಡುವದಿಲ್ಲ; ಒಬ್ಬನು ಎಷ್ಟು ಉಳಿಸಿ ಇಟ್ಟು ಕೊಳ್ಳುತ್ತಾನೆಂಬದರಿಂದ ಸಹ ಅಳೆಯಲ್ಪಡುತ್ತದೆ! ಒಬ್ಬ ಬಡಮನುಷ್ಯನು ಎಂದಿಗೂ ಸಹ ಒಬ್ಬ ಶ್ರೀಮಂತನು ಕೊಡುವಷ್ಟು ಕೊಡಲಾರನು; ಹೇಗಿದ್ದರೂ, ಬಡವನ ಔದಾರ್ಯವು ಶ್ರೀಮಂತನ ಔದಾರ್ಯಕ್ಕಿಂತಲೂ ಶ್ರೇಷ್ಟವಾಗಿರಬಹುದು. ಯೇಸು ಒಬ್ಬ ಬಡವಿಧವೆಯ ಕುರಿತು ಹೇಳಿದ್ದನ್ನು ನೆನಪಿಸಿಕೊಳ್ಳಿರಿ; ಅವಳು ಬೊಕ್ಕಸದಲ್ಲಿ ಎರಡು ಕಾಸು ಮಾತ್ರವೇ ಹಾಕಿದಳು. ಆದರೆ ಯೇಸು ಆಕೆಯ ವಿಷಯದಲ್ಲಿ ಹೇಳಿದ್ದೇನೆಂದರೆ; "ನಿಮಗೆ ನಿಜವಾಗಿ ಹೇಳುತ್ತೇನೆ. ಬೊಕ್ಕಸದಲ್ಲಿ ಹಾಕಿದವರೆಲ್ಲರಲ್ಲಿ ಈ ಬಡ ವಿಧವೆ ಹೆಚ್ಚು ಹಾಕಿದ್ದಾಳೆ. ಹೇಗಂದರೆ, ಎಲ್ಲರು ತಮಗೆ ಸಾಕಾಗಿ ಮಿಕ್ಕದ್ದರಲ್ಲಿ ಹಾಕಿದರು; ಈಕೆಯೋ ತನ್ನ ಬಡತನದಲ್ಲಿಯೂ ತನಗಿದ್ದದ್ದನ್ನೆಲ್ಲಾ ಹಾಕಿದಳು, ತನ್ನ ಜೀವನವನ್ನೇ ಕೊಟ್ಟು ಬಿಟ್ಟಳು" (ಮಾರ್ಕ 12:41-44).

**3-4** ಮೆಕೆದೋನ್ಯ ಕ್ರೈಸ್ತರು ಯೆರೂಸಲೇಮಿನಲ್ಲಿದ್ದ ದೇವಜನರಿಗೆ – ವಿಶ್ವಾಸಿಗಳಿಗೆ – ಹಣವನ್ನು ಕಳುಹಿಸಲು ತಮಗೆ ಅವಕಾಶವನ್ನು ನೀಡಬೇಕೆಂದು ಪೌಲನನ್ನು ಬಹಳವಾಗಿ ಬೇಡಿಕೊಂಡಿದ್ದರು (ವಚನ 4).

ನಾವು ಆ ಮೆಕೆದೋನ್ಯದ ಕ್ರೈಸ್ತರಂತಿದ್ದೇವೋ? ಅಥವಾ ನಾವು ಎಷ್ಟು ಬಡವರಾಗಿದ್ದೇವೆ ಎಂಬುದರ ಬಗ್ಗೆ ದೂರು ಹೇಳುತ್ತಾ ಸಾಧ್ಯವಾದಷ್ಟು ಕಡಿಮೆಯಾಗಿ ಕೊಡುವು ದಕ್ಕೆ ಪ್ರಯತ್ನಿಸುತ್ತೇವೋ? ನಮಗಿರುವ ಹಣವು ನಮ್ಮ ಸ್ವಂತದ್ದಲ್ಲ ಎಂಬದನ್ನು ನಾವು ನೆನಪಿಸಿಕೊಳ್ಳಬೇಕಾಗಿರುತ್ತದೆ; ಇದು ಕರ್ತನಾದ ಯೇಸುವಿಗೆ ಸೇರಿರುತ್ತದೆ. ನಾವು ಎಷ್ಟು ಕೊಡಬೇಕೆಂಬುದನ್ನು ನಮ್ಮ ಸ್ವಂತ ಇಚ್ಛೆ ಅಥವಾ ಲೆಕ್ಕದ ಪ್ರಕಾರವಾಗಿ ಅಲ್ಲ, ಆದರೆ ಆತನ ಚಿತ್ತಕ್ಕನುಸಾರವಾಗಿಯೇ ತೀರ್ಮಾನಿಸಿಕೊಳ್ಳಬೇಕು.

ಇದನ್ನು ನೆನಪಿನಲ್ಲಿಟ್ಟು ಕೊಳ್ಳಿರಿ: ನಾವು ಇತರೆಡೆಗೆ ಔದಾರ್ಯವುಳ್ಳವರಾಗಿರುವದಾದರೆ ದೇವರು ನಮ್ಮ ಕಡೆಗೆ ಔಧಾರ್ಯದಿಂದಿರುವನು. ನಾವು ಹೆಚ್ಚು ಹೆಚ್ಚಾಗಿ ಕೊಡುವಾಗ ಹೆಚ್ಚು ಹೆಚ್ಚಾಗಿ ಪಡೆಯುವೆವು (2 ಕೊರಿಂಥ 9:6 ನೋಡಿರಿ). ಒಬ್ಬನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯುತ್ತಾನೆ (ಗಲಾತ್ಯ 6:7). ನಾವು ಜಿಪುಣರಾಗಿರದಿರೋಣ. ಸಂತೋಷವಾಗಿ ಕೊಡುವವನ ಮೇಲೆ ದೇವರಿಗೆ ಪ್ರೀತಿಯುಂಟು (2 ಕೊರಿಂಥ 9:7). ನಾವು ಕೊಡುವಾಗ ನಮ್ಮ ವಿಷಯದಲ್ಲಿ ಚಿಂತಿಸದಿರೋಣ, ಯಾಕೆಂದರೆ ದೇವರು ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕೆ ಹಾಗೆ (ನಮ್ಮ) ಪ್ರತಿಯೊಂದು ಕೊರತೆಯನ್ನು ನೀಗಿಸುವನು (ಫಿಲಿಪ್ಪಿ 4:19).

**5** ಮೆಕೆದೋನ್ಯದ ಕ್ರೈಸ್ತರು ತಮ್ಮ ಹಣವನ್ನು ಮಾತ್ರವೇ ಕೊಡಲಿಲ್ಲ, ಆದರೆ ತಮ್ಮನ್ನೇ ಸಹ ಒಪ್ಪಿಸಿಕೊಟ್ಟರು. ಅವರು ನಮ್ಮೆಲ್ಲರಿಗೂ ಒಂದು ಮಾದರಿಯಾಗಿರುತ್ತಾರೆ. ದೇವರು ನಮ್ಮ ಹಣಕ್ಕಿಂತಲೂ ಹೆಚ್ಚಾಗಿ ನಮ್ಮನ್ನು ಬಯಸುತ್ತಾನೆ. ಪೌಲನು ಬರೆದದ್ದೇನೆಂದರೆ: ನಾನು ನಿಮ್ಮನ್ನು ಬೇಡಿಕೊಳ್ಳುವದೇನೆಂದರೆ...ನಿಮ್ಮ ದೇಹಗಳನ್ನು ದೇವರಿಗೆ ಸಜೀವಯಜ್ಞವಾಗಿ ಅರ್ಪಿಸಿರಿ (ರೋಮ 12:1). ನಾವು ಕ್ರಿಸ್ತನಿಗೆ ಸೇರಿದವರಾಗಿದ್ದರೆ ನಮ್ಮ ಹಣವು ಸಹ ಆತನಿಗೆ ಸೇರಿರುತ್ತದೆ. ಈ ಕಾರಣದಿಂದಲೇ ಮೆಕೆದೋನ್ಯದ ಕ್ರೈಸ್ತರು ಅಷ್ಟೊಂದು ಔದಾರ್ಯವುಳ್ಳವರಾಗಿದ್ದರು: ಅವರು ಮೊದಲು ತಮ್ಮನ್ನೇ ಕರ್ತನಿಗೆ ಒಪ್ಪಿಸಿಕೊಟ್ಟರು.

ಅಲ್ಲದೆ ಅವರು ತಮ್ಮನ್ನು ದೇವರ ಚಿತ್ತಾನುಸಾರವಾಗಿ ಪೌಲನಿಗೆ ಒಬ್ಬ ಅಪೊಸ್ತಲನೆಂಬದಾಗಿ ಒಪ್ಪಿಸಿದ್ದರು – ಸಮರ್ಪಿಸಿಕೊಂಡಿದ್ದರು. ಕೊರಿಂಥದವರು ಸಹ ಹಾಗೆಯೇ ಮಾಡುವರೆಂದು ಪೌಲನು ನಿರೀಕ್ಷಿಸುತ್ತಾನೆ.

6 ಪೌಲನು ಈ ಧರ್ಮಕಾರ್ಯ ತೀರಿಸಬೇಕೆಂಬದಕ್ಕಾಗಿ ತೀತನನ್ನು ನೇಮಿಸಿದ್ದನು. ಈ ಧರ್ಮಕಾರ್ಯವು ಪೌಲನು ಯೆರೂಸಲೇಮಿಗೆ ಕಳುಹಿಸಲು ಬಡವರಿಗಾಗಿ ಸಂಗ್ರಹಿಸುತ್ತಿದ್ದ ನಿಧಿಯಾಗಿದೆ. ಪೌಲನು ಇದನ್ನೇ "ಧರ್ಮಕಾರ್ಯ." (ಕೃಪಾಕಾರ್ಯ) ಎಂದು ಕರೆಯುತ್ತಾನೆ. ಯಾಕೆಂದರೆ ದೇವರು ನಮಗೆ ಕೃಪೆಯನ್ನು ತೋರಿಸುವಂತೆಯೇ ನಾವು ಇತರರಿಗೆ ಕೃಪೆಯನ್ನು ತೋರಿಸಬೇಕು (ವಚನ 1 ನೋಡಿರಿ). ಕೃಪೆಯು ಪ್ರೀತಿ, ಕರುಣೆ, ಉಪಕಾರ, ಹಾಗು ಔದಾರ್ಯವನ್ನೊಳಗೊಂಡಿರುತ್ತದೆ. ಎಲ್ಲಾ ಕೃಪೆಯು ಮೊದಲು ದೇವರಿಂದಲೇ ಬರುತ್ತದೆ. ನಾವು ನಮ್ಮ ಸುತ್ತಲಿರುವವರಿಗೆ – ವಿಶೇಷವಾಗಿ ಬಡವರಿಗೆ – ದೇವರ ಕೃಪೆಯನ್ನು ಹಂಚಿಕೊಳ್ಳಲು ಆಸಕ್ತಿಯುಳ್ಳವರಾಗಿರೋಣ.

7 ಕೊರಿಂಥದವರಿಗೆ ದೇವರ ಕೃಪೆ, ದೇವರ ವರಗಳು ಸಮೃದ್ಧಿಯಾಗಿ ಕೊಡಲ್ಪಟ್ಟಿದ್ದವು (1 ಕೊರಿಂಥ 1:4-7 ನೋಡಿರಿ). ಆದದರಿಂದ, ಅವರು ಈ ಧರ್ಮಕಾರ್ಯದಲ್ಲಿಯೂ (ಕೊಡುವ ಕೃಪೆಯಲ್ಲಿಯೂ) ಸಮೃದ್ಧರಾಗಲಿ.

8 ಪೌಲನು ಕೊರಿಂಥದವರಿಗೆ ತಮ್ಮ ಹಣವನ್ನು ಕೊಡುವಂತೆ ಒತ್ತಾಯಿಸುವದಕ್ಕೆ ಇಚ್ಚಿಸುವದಿಲ್ಲ. ಆದರೆ ಪೌಲನು ಕೊರಿಂಥದವರ ಪ್ರೀತಿಯ ಯಥಾರ್ಥತೆಯನ್ನು ಇತರರ ಆಸಕ್ತಿಯೊಂದಿಗೆ ಹೋಲಿಸುವದರ ಮೂಲಕ – ಮುಖ್ಯವಾಗಿ, ಮೆಕೆದೋನ್ಯ ಕ್ರೈಸ್ತರ ಆಸಕ್ತಿಯೊಂದಿಗೆ ಹೋಲಿಸಿ – ಪರೀಕ್ಷಿಸುತ್ತಿದ್ದಾನೆ ( 1 ಯೋಹಾನ 3:17-18 ನೋಡಿರಿ).

9 ನಮಗೆ ಅತಿ ಶ್ರೇಷ್ಠಮಾದರಿಯು ಯಾವಾಗಲೂ ಸ್ವತಃ ಯೇಸು ಕ್ರಿಸ್ತನೇ. ಆತನು ಅಳತೆಗೂ ಮೀರಿ ಐಶ್ವರ್ಯವಂತನಾಗಿದ್ದನು. ಆತನು ದೇವರ ಎಲ್ಲಾ ಐಶ್ವರ್ಯವನ್ನ ಹೊಂದಿದ್ದನು. ಆದಾಗ್ಯು ಆತನು ಅದೆಲ್ಲವನ್ನೂ ತೊರೆದು ಬಿಟ್ಟನು. ನಮಗೋಸ್ಕರವಾಗಿ ಆತನು ಬಡವನಾದನು (ಫಿಲಿಪ್ಪಿ 2:6-7 ನೋಡಿರಿ). ಆತನ ಬಡತನದ ಮೂಲಕ – ಅಂದರೆ, ಶಿಲುಬೆಯ ಮೇಲಿನ ಆತನ ಮರಣದ [20] ಮೂಲಕ – ನಾವು ಆತ್ಮೀಕವಾಗಿ ಐಶ್ವರ್ಯವಂತರಾಗಿದ್ದೇವೆ.

ಕ್ರಿಸ್ತನು ನಮಗೋಸ್ಕರ ಅಷ್ಟೊಂದು ಮಾಡಿರುವದಾದರೆ ಕ್ರೈಸ್ತರಾದ ನಾವು ಆತನ ಮಾದರಿಯನ್ನು ಅನುಸರಿಸಿ ನಮ್ಮ ಆಸ್ತಿಗಳನ್ನೂ ನಮ್ಮನ್ನೂ ಇತರರಿಗೋಸ್ಕರವಾಗಿ ಕೊಡದಿರಲು ಸಾಧ್ಯ?

10-11 ಎಲ್ಲಾ ಗ್ರೀಕ್ ಸಭೆಗಳಲ್ಲಿಯೂ ಕೊರಿಂಥದವರು ಯೆರೂಸಲೇನಿನಲ್ಲಿದ್ದ ಬಡವರಿಗಾಗಿ ಪೌಲನು ಸಂಗ್ರಹಿಸುತ್ತಿದ್ದ ನಿಧಿಗೆ ದೇಣಿಗೆ ನೀಡಿದವರಲ್ಲಿ ಮೊದಲಿಗರಾಗಿದ್ದರು. ಆದರೆ ಅನಂತರ ಅವರು ತಮ್ಮ ದೇಣಿಗೆಗಳಲ್ಲಿ ಹಿಂದುಳಿದಿದ್ದರು; ಸಂಗ್ರಹಣೆಯು ಸ್ವಲ್ಪಕಾಲ ಮರೆತು ಹೋಗಿತ್ತು. ಈಗ ಪೌಲನು ಅವರಿಗೆ ತಾವು ಪ್ರಾರಂಭಿಸಿದ್ದನ್ನು ನೆರವೇರಿಸಿರಿ ಎಂದು ಬೇಡಿಕೊಳ್ಳುತ್ತಾನೆ.

12 ಕೊರಿಂಥದವರು ಎಷ್ಟು ಕೊಡುತ್ತಾರೆಂಬದು ಮುಖ್ಯ ಸಂಗತಿಯಲ್ಲ ಎಂದು ಪೌಲನು ಹೇಳುತ್ತಾನೆ. ಅವರು ತಮ್ಮಲ್ಲಿಲ್ಲದಿರುವದನ್ನು ಕೊಡಲಾಗುವದಿಲ್ಲ ಬದಲಾಗಿ, ಮುಖ್ಯ ಸಂಗತಿಯೇನೆಂದರೆ ಅವರು ಕೊಡುವದಕ್ಕೆ ಮನಸ್ಸು ಮಾಡುವದೇ. 11ನೇ ವಚನದಲ್ಲಿ ಪೌಲನ ಸಲಹೆ ಏನೆಂದರೆ: ನಿಮ್ಮ ನಿಮ್ಮ ಶಕ್ತ್ಯನುಸಾರವಾಗಿ ಕೊಡಿರಿ (1 ಕೊರಿಂಥ 16:2 ಮತ್ತು ವ್ಯಾಖ್ಯಾನ ನೋಡಿರಿ).

13 ಕೊರಿಂಥದವರು ತಮಗೇ ಕಷ್ಟವುಂಟಾಗುವ ಮಟ್ಟಿಗೆ ಕೊಡಬೇಕೆಂದು ಪೌಲನು ಬಯಸುವದಿಲ್ಲ. ಅವರು ಸಂಗ್ರಹಣೆಗೆ ದೇಣಿಗೆಯನ್ನು ನೀಡುವುದಕ್ಕಾಗಿ ಸಾಲಗಾರರಾಗ ಬಾರದು.

14 ಕ್ರೈಸ್ತರು ಕೊರತೆಯಲ್ಲಿರುವವರಿಗೆ ಕೊಡುವದು ಒಂದು ಸ್ವಾಭಾವಿಕ ಹಾಗು ಸಕಾರಣವಾದ ಕಾರ್ಯವಾಗಿದೆ. ಈ ಹೊತ್ತು ನಾವು ಬೇರೆ ಇನ್ನೊಬ್ಬನ ಕೊರತೆಯನ್ನು ನೀಗಿಸುವೆವು; ನಾಳೆ ಆತನು ನಮ್ಮ ಕೊರೆತೆಯನ್ನು ನೀಗಿಸುವನು. ಪೌಲನು ಸಮಾನತ್ವವಿರಬೇಕೆಂದು ಹೇಳುವದರ ತಾತ್ಪರ್ಯವು ಇದೇ ಆಗಿದೆ. ಇದು ಕಮ್ಯುನಿಸ್ಟರ ಪದ್ಧತಿಯಂತಲ್ಲ, ಆದರಲ್ಲಿ ಸರ್ಕಾರವು ಒಬ್ಬನಿಂದ ತೆಗೆದು ಕೊಂಡು ಇನ್ನೊಬ್ಬನಿಗೆ ಕೊಡುತ್ತದೆ. ಕ್ರೈಸ್ತತ್ವದಲ್ಲಿ ಪ್ರೀತಿಯೇ ನಾವು ಇತರರಿಗೆ ಕೊಡುವಂತೆ ಮಾಡುತ್ತದೆ ಹೊರತು ಸರ್ಕಾರವಲ್ಲ, ನಾವು ದಾರಾಳವಾಗಿ ಕೊಡುವದಕ್ಕೆ ಕಾನೂನು ಕಾರಣವಾಗಿರುವದಿಲ್ಲ. ಮತ್ತು ನಮ್ಮ ಶಕ್ತ್ಯನುಸಾರಕ್ಕೆ ಸಂಬಂಧಿಸಿದಂತೆ ನಾವು ಇತರರಿಗೆ ಎಷ್ಟು ಕೊಡುತ್ತೇವೆಂಬದು ಅವರ ಕೊರತೆಗಳ ಮೇಲೆ ಆಧಾರವಾಗಿರುತ್ತದೆ (ಅ.ಕೃತ್ಯ 2:44-45; 4:34-35 ನೋಡಿರಿ).

ಕ್ರೈಸ್ತರೆಲ್ಲರೂ ಸಮಾನವಾಗಿ ಹಣವನ್ನೂ ಆಸ್ತಿಗಳನ್ನೂ ಹೊಂದಿರಬೇಕೆಂದು ಪೌಲನು ಹೇಳುವದಿಲ್ಲ. ದೇವರು ಕ್ರೈಸ್ತರಿಗೆ ಅನೇಕ ವರ್ಗಗಳನ್ನೂ ವಿವಿಧ ಕೆಲಸಗಳನ್ನೂ, ವಿವಿಧ ವರಗಳನ್ನೂ ನೇಮಿಸಿದ್ದಾನೆ. ಕೆಲವರು ಶ್ರೀಮಂತರು, ಇನ್ನು ಕೆಲವರು ಬಡವರು. ಆದರೆ ಸಾಕಷ್ಟು ಹೊಂದಿರುವವರ ಹಾಗು ಹೊರದಿರುವವರ ನಡುವೆ ಯಾವಾಗಲೂ ಔದಾರ್ಯಪೂರ್ವಕ ಹಂಚಿಕೊಳ್ಳುವಿಕೆ ಇರತಕ್ಕದ್ದು.

ಯಾವದೇ ಕ್ರೈಸ್ತನು ಕೊರತೆಯಲ್ಲಿ ಉಳಿಯಬಾರದು. ಸಾಕಷ್ಟು ಹೊಂದಿರುವವರು ತಮ್ಮ ಶಕ್ತ್ಯಯನುಸಾರವಾಗಿ ಕೊಡಬೇಕು ಮತ್ತು ಸಾಕಷ್ಟನ್ನು ಹೊಂದದಿರುವವರು ತಮ್ಮ ಕೊರೆತೆಗಳಿಗೆನುಸಾರವಾಗಿ ಪಡೆದು ಕೊಳ್ಳಬೇಕು. ನಮಗಿರುವದೆಲ್ಲವೂ ದೇವರಿಂದಲೇ ಬಂದದ್ದು (1 ಕೊರಿಂಥ 4:2 ನೋಡಿರಿ). ನಾವು ಹೊಂದಿರುವದೆಲ್ಲವೂ ದೇವರದೇ ಹೊರತು ನಮ್ಮದಲ್ಲ.

15 ಪೌಲನು ಇಲ್ಲಿ ವಿಮೋಚನಕಾಂಡ 16:18 ರಿಂದ ಉಲ್ಲೇಖಿಸುತ್ತಾನೆ. ಪುರಾತನ ಯೆಹೂದ್ಯರು ಅರಣ್ಯದಲ್ಲಿ ಹೇಗೆ ಮನ್ನಾ ಕೂಡಿಸಿಕೊಂಡರೆಂಬದನ್ನು ಈ ವಚನವು ವಿವರಿಸುತ್ತದೆ. "ಮನ್ನಾ" ಒಂದು ರೀತಿಯ ಆಹಾರವಾಗಿದ್ದು

ಯೆಹೂದ್ಯರು ಅರಣ್ಯದಲ್ಲಿ ಹಸಿವೆಯಿಂದ ಬಳಲಬಾರದೆಂದು ದೇವರು ಅದನ್ನು ಪರಲೋಕದಿಂದ ಸುರಿಸುತ್ತಿದ್ದನು. ಪ್ರತಿದಿನವೂ ಯೆಹೂದ್ಯರು "ಮನ್ನಾ" ಕೂಡಸಿಕೊಳ್ಳುತ್ತಿದ್ದರು. ಯೆಹೂದ್ಯರಲ್ಲಿ ಕಿರಿಯವರೂ ಬಲಿಷ್ಟರೂ ಆಗಿದ್ದವರು ವಯಸ್ಸಾಗಿ ಬಲಹೀನರಾಗಿದ್ದವರಿಗಿಂತಲೂ ಹೆಚ್ಚಾಗಿ ಕೂಡಿಸಿಕೊಂಡರು. ಆದರೆ "ಮನ್ನಾ" ಎಲ್ಲ ಕೂಡಸಿಕೊಂಡ ಬಳಿಕ ಎಲ್ಲರಿಗೂ ಸಮಾನವಾಗಿ ವಿತರಿಸಲ್ಪಡುತ್ತಿತ್ತು. ಆದದರಿಂದ, ಬಹಳ ಕಡಿಮೆಯಾಗಿ ಕೂಡಿಸಿದವನಿಗೆ ಏನೂ ಕಡಿಮೆಯಾಗಲಿಲ್ಲ. ಯಾವ ಯೆಹೂದ್ಯನಾದರೂ ತನ್ನ ಪಾಲಿಗಿಂತಲೂ ಹೆಚ್ಚು "ಮನ್ನ"ವನ್ನು ಕೂಡಿಸಿಕೊಂಡರೆ ಅದು ಶೀಘ್ರವೇ ಕೆಟ್ಟು ಹೋಗಿ ತಿನ್ನಲು ಬಾರದ್ದಾಗುತ್ತಿತ್ತು (ವಿಮೋಚನಕಾಂಡ 16:14-20, 32).

## ತೀತನು ಕೊರಿಂಥಕ್ಕೆ ಕಳುಹಿಸಲ್ಪಟ್ಟಿದ್ದು (8:16-24)

**16-17** ತೀತನು ಸಂಗ್ರಹಣೆಯನ್ನು ಪೂರ್ತಿಗೊಳಿಸಲು ಅಂತಿಮ ವ್ಯವಸ್ಥೆಗಳನ್ನು ಮಾಡುವುದಕ್ಕೆ ಸಹಾಯ ನೀಡಲು ತನ್ನ ಸ್ವಇಷ್ಟದಿಂದ ಪುನಃ ಕೊರಿಂಥಕ್ಕೆ ಹೋಗಲು ಒಪ್ಪಿಕೊಂಡನು.

**18** ಈ ವಚನದಲ್ಲಿ ಪೌಲನು ಎಲ್ಲಾ ಸಭೆಗಳೊಳಗೆ ಕೀರ್ತಿಪಡಕೊಂಡವನಾಗಿದ್ದ ಒಬ್ಬ ಸಹೋದರನ ಬಗ್ಗೆ ಪ್ರಸ್ತಾಪಿಸುತ್ತಾನೆ. ಪೌಲನು ಇಲ್ಲಿ ಯಾವಸಹೋದರನ ಬಗ್ಗೆ ಪ್ರಸ್ತಾಪಿಸುತ್ತಿದ್ದಾನೆಂಬುದು ಖಚಿತವಾಗಿರುವದಿಲ್ಲ. ಕೆಲವರು ಈತನು ಲೂಕನೆಂದು ಅಭಿಪ್ರಾಯಪಡುತ್ತಾರೆ; ಇನ್ನು ಕೆಲವರು ಈತನು ತುಖಿಕನೆಂದು ಅಭಿಪ್ರಾಯಪಡುತ್ತಾರೆ (ಅ.ಕೃತ್ಯ 20:4; ಎಫೆಸ 6:21).

**19** ಲೂಕನ ಜೊತೆಯಲ್ಲಿ ಕೊರಿಂಥಕ್ಕೆ ಹೋದ ಈ ಸಹೋದರನು ಯಾರೇ ಆಗಿದ್ದರೂ ಆತನನ್ನು ಪೌಲನು ಆಯ್ಕೆ ಮಾಡಲಿಲ್ಲ, ಆದರೆ ಸಂಗ್ರಹಣೆಯಲ್ಲಿ ಪಾಲ್ಗೊಳ್ಳುತ್ತಿದ್ದ ಸಭೆಗಳಿಂದ ಆತನು ಆಯ್ಕೆ ಮಾಡಿಕೊಳ್ಳಲ್ಪಟ್ಟಿದ್ದನು.

**20** ಸಭೆಗಳು ಯೆರೂಸಲೇಮಿನ ಸಂಗ್ರಹಣೆಯನ್ನು ಒಯ್ಯುವುದಕ್ಕೆ ತಾವೇ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳುವದು ಪ್ರಾಮುಖ್ಯವಾಗಿತ್ತು (1 ಕೊರಿಂಥ 16:3). ಇಲ್ಲವಾದರೆ, ಜನರು ಸಂಗ್ರಹಣೆಯಾದ ನಿಧಿಯನ್ನು ಪೌಲ ಹಾಗು ಆತನ ಸಹಪಾಠಿಗಳೇ ತೆಗೆದುಕೊಂಡರೆಂದು ಸುಳ್ಳಾಗಿ ಆರೋಪಿಸಬಹುದಿತ್ತು ಮತ್ತು ಆರೋಪವನ್ನು ನಿರಾಕರಿಸುವದಕ್ಕೆ ಅವರಿಗೆ ಯಾವ ಸಾಕ್ಷಿಗಳೂ ಇರುತ್ತಿರಲಿಲ್ಲ. ಸೈತಾನನು ಒಳ್ಳೇ ಕಾರ್ಯವೊಂದರಿಂದ ಕೆಟ್ಟದ್ದನ್ನು ಬರಮಾಡುವದಕ್ಕೆ ಯಾವಾಗಲೂ ಅವಕಾಶವನ್ನು ಹುಡುಕುವವನಾಗಿದ್ದಾನೆ.

**21** ಸಂಗ್ರಹಣೆಯ ವಿಷಯದಲ್ಲಿ ಪೌಲನು ಕರ್ತನ ದೃಷ್ಟಿಯಲ್ಲಿ ಮಾತ್ರವಲ್ಲದೆ ಮನುಷ್ಯರ ದೃಷ್ಟಿಯಲ್ಲಿಯೂ ಗೌರವಾದದ್ದನ್ನೂ ಮಾಡುವುದಕ್ಕೆ ಇಚ್ಛಿಸಿದ್ದನು. ಪೌಲನು ತಾನು ಇಲ್ಲಿ ಮನುಷ್ಯರಿಂದ ಹೊಗಳಿಕೆಯನ್ನು ಹೊಂದಲು ಪ್ರಯತ್ನಿಸುತ್ತಿದ್ದನೆಂದು ಆತನ ತಾತ್ಪರ್ಯವಾಗಿರುವದಿಲ್ಲ. ಪೋಲನು ದೇವರಿಂದ ಮಾತ್ರವೇ ಹೊಗಳಿಕೆಯನ್ನು ಎದುರುನೋಡುತ್ತಿದ್ದನು. ಪೌಲನು ಏನೇ ಮಾಡಿದರೂ ಕರ್ತನಿಗಾಗಿ ಮಾತ್ರವೇ ಮಾಡಿದನು (ರೋಮ 14:7-8; ಎಫೆಸ 6:5-8 ನೋಡಿರಿ).

ಆದರೆ ಪೌಲನು ತನ್ನ ಮೇಲೆ ಅವಮಾನವನ್ನು ತಂದುಕೊಂಡರೆ ಅದು ಕ್ರಿಸ್ತನಿಗೂ ಸಹ ಅವಮಾವನವನ್ನುಂಟು ಮಾಡುವುದೆಂದು ಗೊತ್ತಿತ್ತು. ಆದದರಿಂದ, ಆತನು ಮನುಷ್ಯರ ದೃಷ್ಟಿಯಲ್ಲಿ ಅವಮಾನಕರವಾಗಿ ಕಾಣುವ ಯಾವದೇ ಸಂಗತಿಯನ್ನು ಮಾಡದಿರುವದಕ್ಕೆ ಬಯಸಿದ್ದನು. ಆತನು ತನ್ನ ಸ್ವಂತ ಗೌರವದ ಬಗ್ಗೆ ಚಿಂತೆಗೊಂಡಿರದೇ ಕ್ರಿಸ್ತನ ಗೌರವದ ಬಗ್ಗೆ ಚಿಂತೆಗೊಂಡಿದ್ದನು.

ಅದೇ ರೀತಿಯಲ್ಲಿ ಪ್ರತಿಯೊಬ್ಬ ಕ್ರೈಸ್ತನು ತನ್ನ ಗೌರವವನ್ನು ಅವಮಾನದಿಂದ – ಅವಮಾನವಾಗಿ ಕಾಣಿಸುವದರಿಂದ ಸಹ – ಕಾಪಾಡಿಕೊಳ್ಳಲು ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನಿಸಬೇಕು. ನಾವು ಕ್ರಿಸ್ತನ ನಿಮಿತ್ತ ಅವಮಾನಕ್ಕೊಳಗಾಗುವದನ್ನು ತಡೆಯಬೇಕೆಂದು ಇದರ ಅರ್ಥವಲ್ಲ: ಎಲ್ಲಾ ವಿಶ್ವಾಸಿಗಳೂ ತಾವು ಕ್ರಿಸ್ತನಲ್ಲಿಟ್ಟ ನಂಬಿಕೆಯ ಕಾರಣದಿಂದ ಅವಮಾನಕ್ಕೊಳಗಾಗುವದನ್ನು ನಿರೀಕ್ಷಿಸಬಹುದು. ಆದರೆ ನಾವು ತಪ್ಪು ಮಾಡುವದರಿಂದ ಅಥವಾ ತಪ್ಪೆಂದು ತೋರುವ ಕಾರ್ಯವನ್ನು ಮಾಡುವದರಿಂದ ಬರುವ ಅವಮಾನವನ್ನು ತಪ್ಪಿಸಬೇಕೆಂದು ಇದರ ಅರ್ಥವಾಗಿರುತ್ತದೆ. ಪೌಲನು ಬರೆಯುವದೇನೆಂದರೆ: ಸಕಲ ವಿಧವಾದ ಕೆಟ್ಟತನಕ್ಕೆ ದೂರವಾಗಿರು (1 ಥೆಸಲೋನಿಕ 5:22). ಜನರು ಕ್ರಿಸ್ತನ ಹಾಗು ಆತನ ಸುವಾರ್ತೆಯ ವಿರುದ್ಧವಾಗಿ ಮಾತಾಡುವದಕ್ಕೆ ನಾವು ಅನಾವಶ್ಯಕವಾದ ಅವಕಾಶವನ್ನು ಕೊಡಬಾರದು[21] (1 ಕೊರಿಂಥ 9:12 ನೋಡಿರಿ).

**22** ಇಲ್ಲಿ ಪೌಲನು ತೀತನೊಂದಿಗೆ ಕೊರಿಂಥಕ್ಕೆ ಹೋದ ಇನ್ನೊಬ್ಬ ಸಹೋದರನನ್ನು – ನಮ್ಮ ಸಹೋದರ – ಪ್ರಸ್ತಾಪಿಸುತ್ತಾನೆ. ಈ ಸಹೋದರನು ಯಾರಾಗಿದ್ದನೆಂಬದು ಖಚಿತವಾಗಿರುವದಿಲ್ಲ.

**23-24** ಪೌಲನು ಕೊರಿಂಥದವರಿಗೆ ತೀತನು ಹಾಗು ಈ ಇಬ್ಬರು ಸಹೋದರರು ಅವರ ಪ್ರೀತಿ ಹಾಗು ಗೌರವಕ್ಕೆ ಯೋಗ್ಯರೆಂದು ತಿಳಿಸುತ್ತಾನೆ. ತೀತನು ಸ್ವತಃ ಪೌಲನ ಪಾಲುಗಾರನೂ...ಸಹಕಾರಿಯೂ ಆಗಿದ್ದನು (ವಚನ 23). ತೀತನ ಜೊತೆಯಲ್ಲಿ ಕೊರಿಂಥಕ್ಕೆ ಹೋದ ಆ ಇಬ್ಬರು ಸಹೋದರರು ಸಭೆಗಳಿಂದ ಕಳುಹಿಸಲ್ಪಟ್ಟವರಾಗಿದ್ದರು. ಆದರೆ ಅದಕ್ಕಿಂತಲೂ ಹೆಚ್ಚಾಗಿ ಅವರು ಕ್ರಿಸ್ತನ ಮಹಿಮೆಯನ್ನು ಪ್ರಕಾಶಪಡಿಸುವವರಾಗಿದ್ದರು.

ಒಂದು ವೇಳೆ ಪೌಲನು ಈ ಹೊತ್ತು ಇಲ್ಲಿದಿದ್ದರೆ ಆತನು ನಮ್ಮ ವಿಷಯದಲ್ಲಿ ನಾವು ಕ್ರಿಸ್ತನ ಮಹಿಮೆಯನ್ನು ಪ್ರಕಾಶಪಡಿಸುವವರೆಂದು ಹೇಳುತ್ತಿದ್ದನೋ?

## ಅಧ್ಯಾಯ - 9

### ದೇವಜನರಿಗೋಸ್ಕರ ಸೇವೆ (9:1-5)

**1-2** ಈ ವಚನದಲ್ಲಿ ಪೌಲನು ತಾನು 2 ಕೊರಿಂಥ 8:10ರಲ್ಲಿ ಈ ದೇವಜನರಿಗೋಸ್ಕರ ನಡೆಯುವ ಸಹಾಯಕಾರ್ಯದ ಕುರಿತಾಗಿ – ಅಂದರೆ, ಯೆರೂಸಲೇಮಿನ ಬಡಕ್ರೈಸ್ತರಿಗಾಗಿನ ಕಾಣಿಕೆ (ಅಥವಾ ಸಂಗ್ರಹಣೆಯ) – ಕುರಿತಾಗಿ ಹೇಳಿದ ವಿಷಯಕ್ಕೆ ಹೆಚ್ಚಿನದನ್ನು ಕೂಡಿಸುತ್ತಾನೆ. ಪೌಲನು ಈ ಸಹಾಯ ಕಾರ್ಯದ ಅಥವಾ ಕಾಣಿಕೆಯ ಕುರಿತಾಗಿ ಕೊರಿಂಥದವರಿಗೆ ಇನ್ನು ಹೆಚ್ಚಾಗಿ ಬರೆಯುವ ಅವಶ್ಯವಿಲ್ಲ, ಯಾಕೆಂದರೆ ಅವರು ಸಹಾಯ ಮಾಡುವದಕ್ಕೆ ಸಿದ್ಧರಾಗಿದ್ದಾರೆಂದು ಅವನಿಗೆ ಈಗಾಗಲೇ ತಿಳಿದದೆ (ವಚನ 2). ಪ್ರಾರಂಭದಲ್ಲಿ ಕೊರಿಂಥದ ಹಾಗು ಅಖಾಯ ಸೀಮೆಯ ಸುತ್ತಲಿನ ಕ್ರೈಸ್ತರು ಈ ಕಾಣಿಕೆಯನ್ನು ಸಂಗ್ರಹಿಸಲು ಆಸಕ್ತಿಯುಳ್ಳವರಾಗಿದ್ದರು. ಮೆಕೆದೋನ್ಯದ ಕ್ರೈಸ್ತರು ಕೊರಿಂಥದವರ ಆಸಕ್ತಿಯನ್ನು ನೋಡಿದಾಗ ಅವರು ಸಹ ಸಹಾಯ ಮಾಡುವದಕ್ಕೆ ಪ್ರೇರಣೆಗೊಂಡರು.

**3-4** ಈಗ ಕೊರಿಂಥದವರು ಕಾಣಿಕೆಗಾಗಿ ಹಣವನ್ನು ಸಂಗ್ರಹಿಸುವ ಕಾರ್ಯವನ್ನು ಪೂರ್ತಿಗೊಳಿಸಬೇಕು; ಇಲ್ಲವಾದರೆ ಪೌಲನು ಕೊರಿಂಥದವರ ಆಸಕ್ತಿಯ ಬಗ್ಗೆ ಹೊಗಳಿದ್ದು ನಿರಾಧಾರವಾಗುತ್ತದೆ (ವಚನ 3); ಅದು ಪೊಳ್ಳು ಹಾಗು ಮಿಥ್ಯವೆಂದು ನಿರೂಪಿಸಲ್ಪಡುತ್ತದೆ ಎಂದು ಪೌಲನು ಕೊರಿಂಥದವರಿಗೆ ಹೇಳುತ್ತಾನೆ. ಆದದರಿಂದ, ಪೌಲನು ಸಂಗ್ರಹಣೆಯನ್ನು ಪೂರ್ತಿಗೊಳಿಸುವದಕ್ಕೆ ಕೊರಿಂಥದವರಿಗೆ ಸಹಾಯ ಮಾಡಲು ತೀತನನ್ನೂ ಇಬ್ಬರು ಸಹೋದರರನ್ನೂ ಕಳುಹಿಸಲಿರುವನು. ಕೊರಿಂಥದವರು ತಮ್ಮ ಕಾಣಿಕೆಯನ್ನು ಯೆರೂಸಲೇಮಿಗೆ ಕಳುಹಿಸಲು ಸಿದ್ಧರಾಗಿಲ್ಲದ್ದಕ್ಕಾಗಿ ಪೌಲನು ನಾಚಿಕೆ ಪಡುವಂತಾಗಲು ಇಚ್ಛಿಸುವದಿಲ್ಲ.

**5** ಅಷ್ಟು ಮಾತ್ರವಲ್ಲದೆ, ಕೊರಿಂಥದವರು ತಮ್ಮ ಹಣವನ್ನು ಸಂಗ್ರಹಣೆಗೆ ಸುಲಿಗೆಯಂತೆ ಕೊಡಬೇಕೆಂದು ಪೌಲನು ಇಷ್ಟಪಡುವದಿಲ್ಲ (ವಚನ 7). ಅವರು ಹೃದಯಪೂರ್ವಕವಾಗಿ ಔದಾರ್ಯದಿಂದ ಕೊಡಲಿ.

### ಉದಾರವಾಗಿ ಬಿತ್ತುವುದು (9:6-15)

**6** ಆದರೆ ಸ್ವಲ್ಪವಾಗಿ ಬಿತ್ತುವವನು ಪೈರನ್ನು ಸ್ವಲ್ಪವಾಗಿ ಕೊಯ್ಯುವನು. ಕರ್ತನ ಕಾರ್ಯಕ್ಕಾಗಿ ನಮ್ಮ ಹಣ ಹಾಗು ಸ್ವತ್ತುಗಳನ್ನು ಕೊಡುವದು ಭೂಮಿಯಲ್ಲಿ ಬೀಜವನ್ನು ಬಿತ್ತುವ ಹಾಗಿರುತ್ತದೆ. ನಾವು ಉದಾರವಾಗಿ ಕೊಡುವದಾದರೆ (ಬಿತ್ತುವದಾದರೆ) ದೇವರು ಪ್ರತಿಯಾಗಿ ನಮಗೆ ಉದಾರವಾಗಿ ಕೊಡುವನು (ಜ್ಞಾನೋಕ್ತಿಗಳು 22:9). ಒಬ್ಬನು ತನ್ನ ಧನವನ್ನು (ಉದಾರವಾಗಿ) ಚೆಲ್ಲಿದರೂ ಅವನಿಗೆ ವೃದ್ಧಿ; ಮತ್ತೊಬ್ಬನು ನ್ಯಾಯವಾದದ್ದನ್ನು ಬಿಗಿಹಿಡಿದರೂ ಅವನಿಗೆ ಬಡತನ. ಉದಾರಿಯು ಪುಷ್ಠನಾಗುವನು; ಇತರರಿಗೆ ಉಪಶಮನ ಮಾಡುವವನು ತಾನೇ ಉಪಶಮನ ಹೊಂದುವನು (ಜ್ಞಾನೋಕ್ತಿಗಳ 11:24-25).

ಒಬ್ಬನು ತಾನು ಬಿತ್ತಿದ್ದನ್ನೇ ಕೊಯ್ಯುತ್ತಾನೆ. ಈ ಸೂತ್ರವು ಭೌತೀಕ ಸಂಗತಿಗಳಿಗೆ ಮಾತ್ರವಲ್ಲ, ಆದರೆ ಆತ್ಮೀಕ ಸಂಗತಿಗಳಿಗೆ ಸಹ – ಉದಾಹರಣೆಗೆ, ಕ್ಷಮಾಪಣೆ, ನ್ಯಾಯ ತೀರ್ಪು ಮತ್ತು ಪಾಪ – ಅನ್ವಯವಾಗುತ್ತದೆ (ಮತ್ತಾಯ 6:12, 14-15; 7:1-2; ಗಲಾತ್ಯ 6:7-10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಯೇಸು ಹೇಳಿದ್ದೇನೆಂದರೆ: "ಮತ್ತು ಈ ಚಿಕ್ಕವರಲ್ಲಿ ಒಬ್ಬನಿಗೆ..ಒಂದು ತಂಬಿಗೆ ತಣ್ಣೀರನ್ನಾದರೂ ಕುಡಿಯುವದಕ್ಕೆ ಕೊಟ್ಟರೆ ಬರತಕ್ಕ ಪ್ರತಿಪಲವು ಅವನಿಗೆ ತಪ್ಪುವದೆ ಇಲ್ಲ" (ಮತ್ತಾಯ 10:42). ಆದರೆ ನಾವು ಕೇವಲ ಪ್ರತಿಫಲವನ್ನು ಪಡೆದುಕೊಳ್ಳಬೇಕೆಂಬ ಸ್ವಾರ್ಥದಿಂದ ಇತರರಿಗೆ ಕೊಡುವದಾದರೆ ನಾವು ಪ್ರತಿಪಲವನ್ನು ಕಳೆದುಕೊಳ್ಳುವೆವು. ನಿಸ್ವಾರ್ಥರಹಿತವಾಗಿಯೂ ಉದಾರವಾಗಿಯೂ ನಮ್ಮ ಸ್ವಂತಲಾಭದ ಬಗ್ಗೆ ಯಾವದೇ ಆಲೋಚನೆಯನ್ನಿಟ್ಟುಕೊಳ್ಳದೆ ಕೊಡಬೇಕು. ನಾವು ಈ ವಿಧದಲ್ಲಿ ಕೊಡವದಾದರೆ ಖಂಡಿತವಾಗಿಯೂ ದೇವರು ನಮ್ಮ ಈ ಲೋಕದಲ್ಲಿಯೂ ಮುಂದಿನ ಲೋಕದಲ್ಲಿಯೂ ಆಶೀರ್ವದಿಸುವನು (ಜ್ಞಾನೋಕ್ತಿಗಳು 19:17; ಮತ್ತಾಯ 25:34-40; ಲೂಕ 6:34-35; 14:12-14 ನೋಡಿರಿ).

**7** ಕೊರಿಂಥದವರು ದುಃಖದಿಂದಾಗಲಿ ಬಲತ್ಕಾರದಿಂದಾಗಲಿ ಕೊಡದೇ ತಮ್ಮ ಹೃದಯ ಪೂರ್ವಕವಾಗಿಯೂ ಪವಿತ್ರಾತ್ಮನ ಮಾರ್ಗದರ್ಶನದಿಂದಲೂ ಕೊಡಬೇಕು (ವಚನ 5 ನೋಡಿರಿ).

ನಾವು ಮನುಷ್ಯರಿಂದ ಹೊಗಳಿಕೆಯನ್ನು ಪಡೆದುಕೊಳ್ಳಲು ಕೊಡದಿರೋಣ (ಮತ್ತಾಯ 6:1-4 ಮತ್ತು ವ್ಯಾಖ್ಯಾನ ನೋಡಿರಿ). ಮತ್ತು ಖಂಡಿತವಾಗಿಯೂ ನಾವು ಕೊಡದಿದ್ದಾಗ್ಯು ಕೊಟ್ಟಿರುವೆವೆಂದು ಹೇಳದಿರೋಣ! (ಅ.ಕೃತ್ಯ 5:1-11 ನೋಡಿರಿ).

ನಮ್ಮ ಸೇವೆ, ನಮ್ಮ ಕೊಡುವಿಕೆಯು ಉದಾರವಾಗಿ ಮಾಡಲ್ಪಡಬೇಕು. ನಮ್ಮ ದಯಾಕಾರ್ಯಗಳು ಸಂತೋಷವಾಗಿ ಮಾಡಲ್ಪಡಬೇಕು (ರೋಮ 12:8). ಒಂದು ವೇಳೆ ನಾವು ಕೊಡುವಾಗ ಅದರ ವಿಷಯದಲ್ಲಿ ನಮಗೆ ಸಂತೋಷವಿಲ್ಲದಿದ್ದರೆ ನಾವು ಸರಿಯಾದ ವಿಧಾನದಲ್ಲಿ ಕೊಡುವವರಾಗಿರುವದಿಲ್ಲ. ನಾವು ಯೇಸುವಿನ ಮಾತುಗಳನ್ನು

ನೆನಪಿಗೆ ತಂದು ಕೊಳ್ಳೋಣ: ತೆಗೆದುಕೊಳ್ಳವದಕ್ಕಿಂತ ಕೊಡುವದೇ ಹೆಚ್ಚಿನ "ಭಾಗ್ಯ" (ಅ.ಕೃತ್ಯ 20:35). ಯೇಸು ಹೇಳಿದ್ದೇನೆಂದರೆ: "ಉಚಿತವಾಗಿ ಹೊಂದಿದ್ದೀರಿ; ಉಚಿತವಾಗಿ ಕೊಡಿರಿ". (ಮತ್ತಾಯ 10:8).

8 ನಾವು ಕರ್ತನಿಗೆ ಕೊಡುವದಾದರೆ ನಷ್ಟವನ್ನು ಅನುಭವಿಸುತ್ತೇವೆಂದು ಎಂದಿಗೂ ಯೋಚಿಸದಿರೋಣ. ರೈತನೊಬ್ಬನು ಭೂಮಿಯಲ್ಲಿ ಬೀಜವನ್ನು ಬಿತ್ತುವಾಗ ಆ ಬೀಜವು ನಷ್ಟವಾಗುವದಿಲ್ಲ – ಅದು ಪೈರಾಗಿ ಮಾರ್ಪಡುತ್ತದೆ! ದೇವರು ಸಕಲವಿಧವಾದ ದಾನಗಳನ್ನು – ಯಾವಾಗಲೂ ಎಲ್ಲಾ ವಿಷಯಗಳಲ್ಲಿ – ನಮಗೆ ಧಾರಾಳವಾಗಿ ಅನುಗ್ರಹಿಸುವದಕ್ಕೆ ಶಕ್ತನಾಗಿದ್ದಾನೆ (ಮತ್ತಾಯ 6:31-33; ಫಿಲಿಪ್ಪಿ 4:19 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಎಂಥ ಒಂದು ಅದ್ಭುತವಾದ ವಾಗ್ದಾನ! ದೇವರಿಗೆ ಸ್ತೋತ್ರವಾಗಲಿ!

9 ಪೌಲನು ಇಲ್ಲಿ ಕರ್ತನೆಗಳು 112:9 ರಿಂದ ಉಲ್ಲೇಖಿಸುತ್ತಾನೆ. ಒಬ್ಬನು ಬಡವರಿಗೆ ಉದಾರವಾಗಿ ಕೊಡುವಾಗ ಅವನ ನೀತಿಯ ಫಲವು ಸದಾಕಾಲವೂ ಇರುವದು.

10 ದೇವರು ಬೀಜವನ್ನೂ ಆಹಾರವನ್ನೂ ಒದಗಿಸುತ್ತಾನೆ. ಎಲ್ಲಾ ಸಂಗತಿಗಳೂ ದೇವರ ಕೃಪೆಯಿಂದ ಬರುತ್ತವೆ. ನಾವು ಇತರರಿಗೆ ಎಷ್ಟಾಗಿ ಕೊಡುತ್ತೇವೋ ದೇವರು ಅಷ್ಟಾಗಿ ನಮ್ಮನ್ನು ಹೆಚ್ಚಿಸಿ ನಮ್ಮ ನೀತಿಕಾರ್ಯಗಳಿಂದಾಗುವ ಫಲವನ್ನು ವೃದ್ಧಿಪಡಿಸುವನು. ಬೇರೆ ಮಾತುಗಳಲ್ಲಿ ಹೇಳುವದಾದರೆ, ನಾವು ಇತರರಿಗೆ ಕೊಡುವಾಗ ದೇವರು ನಮಗೆ ಪ್ರತಿಯಾಗಿ ಭೌತೀಕ ಹಾಗು ಆತ್ಮೀಕ ಆಶೀರ್ವಾದಗಳೆರಡನ್ನೂ ಕೊಡುವನು.[22]

ದೇವರ ಶಕ್ತಿಯು ಎಷ್ಟು ಅಪಾರವಾದದ್ದೆಂಬದನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟು ಕೊಳ್ಳೋಣ (ಎಫೆಸ 3:20-21). ಒಂದು ಚಿಕ್ಕ ಬೀಜದಿಂದ ದೇವರು ಒಂದು ದೊಡ್ಡ ಮರವನ್ನು ಮಾಡಬಲ್ಲನು. ಆದರೆ ನಾವು ಆ ಬೀಜವನ್ನು ಹೋಗಗೊಡಬೇಕು, ನಾವು ಅದನ್ನು ಭೂಮಿಯಲ್ಲಿ ಹೂಣಿಡಬೇಕು. ನಾವು ಬೀಜವನ್ನು ನಮ್ಮ ಹತ್ತಿರ ಭದ್ರವಾಗಿಟ್ಟುಕೊಳ್ಳುವದಾದರೆ ಅದರಿಂದ ಯಾವ ಮರವೂ ಉಂಟಾಗಲಾರದು. ಅದೇ ರೀತಿಯಲ್ಲಿ ಒಬ್ಬ ಚಿಕ್ಕ ಬಾಲಕನು ಒಮ್ಮೆ ಐದು ರೊಟ್ಟಿ, ಎರಡು ಮೀನುಗಳನ್ನು ಯೇಸುವಿಗೆ ಕೊಟ್ಟಾಗ ಯೇಸು ಅವುಗಳನ್ನು ಐದು ಸಾವಿರ ಜನರಿಗೆ ಊಟವಾಗುವಂತೆ ಮಾರ್ಪಡಿಸಿದನು (ಮಾರ್ಕ 6:35-44 ನೋಡಿರಿ).

11 ನಾವು ಎಲ್ಲಾ ವಿಷಯಗಳಲ್ಲಿ ಐಶ್ವರ್ಯವಂತರಾಗಿ ಮಾಡಲ್ಪಡುವೆವು. ನಾವು ಇತರರೆಡೆಗೆ ಎಷ್ಟಾಗಿ ಉದಾರವಾಗಿರುತ್ತೇವೋ ಅಷ್ಟರಮಟ್ಟಿಗೆ ದೇವರು ನಮ್ಮನ್ನು – ಆತ್ಮೀಕವಾಗಿಯೂ ಭೌತೀಕವಾಗಿಯೂ – ಎಲ್ಲಾ ವಿಷಯಗಳಲ್ಲಿ ಐಶ್ವರ್ಯವಂತರಾಗಿ ಮಾಡುವನು.

ದೇವರು ಯಾಕೆ ನಮ್ಮನ್ನು "ಐಶ್ವರ್ಯವಂತರಾಗಿ" ಮಾಡುವನು? ನಾವು ಇನ್ನು ಹೆಚ್ಚಾಗಿಯೂ, ನಿರಂತರವಾಗಿಯೂ ಉದಾರವಾಗಿರಬೇಕೆಂದು ದೇವರು ನಮ್ಮನ್ನು ಐಶ್ವರ್ಯವಂತರನ್ನಾಗಿ ಮಾಡುವನು. ನಾವು ಉದಾರವಾಗಿರುವದನ್ನು ನಿಲ್ಲಿಸುವ ಕ್ಷಣದಲ್ಲೇ ದೇವರು ನಮ್ಮನ್ನು ಐಶ್ವರ್ಯವಂತರನ್ನಾಗಿ ಮಾಡುವದನ್ನು ನಿಲ್ಲಿಸುವನು!

ಪೌಲನು ಕೊರಿಂಥದವರಿಗೆ ನಿಮ್ಮ ಉದಾರತೆಯು ನಮ್ಮ ಮೂಲಕ ಮತ್ತೊಬ್ಬರಿಗೆ ಸೇರಿದಾಗಿ ದೇವರಿಗೆ ಕೃತಜ್ಞತಾಸ್ತುತಿಯನ್ನು ಹುಟ್ಟಿಸುವದು ಎಂದು ಹೇಳುತ್ತಾನೆ. ಅಂದರೆ, ಪೌಲ ಹಾಗು ಆತನ ಸಹಪಾಠಿಗಳು ಕೊರಿಂಥದವರ ಕಾಣಿಕೆಯನ್ನು ಯೆರೂಸಲೇಮಿಗೆ ತರುವಾಗ ಅಲ್ಲಿನ ವಿಶ್ವಾಸಿಗಳು ಕೊರಿಂಥದವರ ಔದಾರ್ಯಕ್ಕಾಗಿ ದೇವರನ್ನು ಸ್ತುತಿಸುವರು.

12 ಇತರರು ನಮಗೆ ಮಾಡಿದ ದಾನಗಳಿಗಾಗಿ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುವದು ಅವಶ್ಯಕವಾದದ್ದು. ಆದರೆ ಅವರ ದಾನಗಳಿಗಾಗಿಯೂ, ಅವರ ಉದಾರತನಕ್ಕಾಗಿಯೂ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುವದು ಮತ್ತಷ್ಟು ಅವಶ್ಯಕವಾಗಿರುತ್ತದೆ. ಯಾಕೆಂದರೆ ಎಲ್ಲಾ ಉದಾರತೆಯೂ ದೇವರ ಕೃಪೆಯೊಳಗಿಂದ ಹೊರಡುತ್ತದೆ. ದೇವರು ಉದಾರತೆಯ "ಬೀಜವನ್ನೂ" ಅದರ "ಪೈರನ್ನೂ" ಕೊಡುತ್ತಾನೆ.

13 ಸಹಾಯ ಸೇವೆಯ (ಕಾಣಿಕೆಯ) ಮುಖಾಂತರ (ಅವರು) ಸುವಾರ್ತೆಗೆ ಮಾಡಿದ್ದ ಪ್ರತಿಜ್ಞೆಯೊಂದಿಗೆ ಅವರ ವಿಧೇಯತೆಗೆ ಕೊರಿಂಥದವರು ಆಧಾರವನ್ನು ನೀಡುವವರಾಗಿರುತ್ತಾರೆ. ನಮ್ಮ ನಂಬಿಕೆಯ ಪ್ರತಿಜ್ಞೆಯ ಜೊತೆಯಲ್ಲಿ ಯಾವಾಗಲೂ ವಿಧೇಯತೆಯು ಇರಬೇಕು; ಇಲ್ಲವಾದರೆ, ನಮ್ಮ ಪ್ರತಿಜ್ಞೆಯು ಸುಳ್ಳಾಗಿ ತೋರಿಬರುವದು. ಸುವಾರ್ತೆಗೆ ವಿಧೇಯರಾಗುವದೆಂದರೆ, ಕೊರತೆಯಲ್ಲಿರುವ ನಮ್ಮ ಸಹೋದರ ಹಾಗು ಸಹೋದರಿಯರಿಗೆ ಸಹಾಯವನ್ನು ನೀಡುವದಾಗಿದೆ (ಯಾಕೋಬ 2:14-17 ನೋಡಿರಿ). ಅಂತಹ ವಿಧೇಯತೆ ನಮ್ಮ ನಂಬಿಕೆಯು ನಿಜವಾದದ್ದೆಂಬುದಕ್ಕೆ ಆಧಾರವಾಗಿರುತ್ತದೆ.

14 ದೇವರು ಕೊರಿಂಥದವರಿಗೆ ನೀಡಿರುವ ಅತಿಶಯವಾದ ಕೃಪೆಯ (ಉದಾರತೆಯ ಕೃಪೆಯ) ಕಾರಣದಿಂದ ಯೆರೂಸಲೇಮಿನ .ಯೆಹೂದ್ಯ ಕ್ರೈಸ್ತರು ಹಾಗು ಕೊರಿಂಥದ ಅನ್ಯಜನಾಂಗದ ಕ್ರೈಸ್ತರು ಪ್ರೀತಿಯಲ್ಲಿ ಪರಸ್ಪರ ಹತ್ತಿರವಾಗಿ ಸೆಳೆಯಲ್ಪಡುವರು. ಈ ಕಾರಣದಿಂದಲೇ ಪೌಲನು ಈ ಕಾಣಿಕೆಯನ್ನು ಪ್ರಾಮುಖ್ಯವೆಂದು ಪರಿಗಣಿಸುತ್ತಾನೆ.

15 ವರ್ಣಿಸಲಶಕ್ಯವಾದ ದೇವರ ವರಕ್ಕಾಗಿ ಆತನಿಗೆ – ಆತನ ಕೃಪಾ ವರಕ್ಕಾಗಿ – ಸ್ತೋತ್ರ. ಆದರೆ ಸರಿಯಾಗಿ ದೇವರ ಕೃಪಾವರವು ಯಾವುದು? ಎಲ್ಲಕ್ಕಿಂತ ಮೇಲಾಗಿ, ಯೇಸು ಕ್ರಿಸ್ತನೇ. ದೇವರು ಎಲ್ಲಾ ಕೃಪೆ ಹಾಗು ಆಶೀರ್ವಾದಗಳು ನಮಗೆ ಕ್ರಿಸ್ತನಲ್ಲಿ ಬಂದವು (ಯೋಹಾನ 3:16; ರೋಮ 8:32; ಎಫೆಸ 1:3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಪ್ರೀಯರೇ, ದೇವರು ನಮ್ಮನ್ನು ಹೀಗೆ ಪ್ರೀತಿಸಿದ ಮೇಲೆ ನಾವು ಒಬ್ಬರನ್ನೊಬ್ಬರು ಪ್ರೀತಿಸುವ ಹಂಗಿನಲ್ಲಿದ್ದೇವೆ (1 ಯೋಹಾನ 4:11).

# ಅಧ್ಯಾಯ - 10

## ಪೌಲನು ತನ್ನ ಸೇವೆಯ ಬಗ್ಗೆ ಪ್ರತಿವಾದಿಸಿದ್ದು (10:1-18)

1 ಪೌಲನು ಕ್ರಿಸ್ತನ ಶಾಂತಮನಸ್ಸು, ಸಾತ್ವಿಕತ್ವದಿಂದ ಕೊರಿಂಥದವರಿಗೆ ಖಂಡಿತವಾಗಿ ಹೇಳುತ್ತಾನೆ. ಶಾಂತಮನಸ್ಸು ಹಾಗು ಸಾತ್ವಿಕತ್ವಗಳು ಒಬ್ಬ ಪರಿಪಕ್ವ ಕ್ರೈಸ್ತನ ಗುಣಲಕ್ಷಣಗಳಾಗಿವೆ. ಅನೇಕ ಜನರು ದೀನನಾಗಿಯೂ ಸಾತ್ವಿಕನಾಗಿಯೂ ಇರುವ ವ್ಯಕ್ತಿಯು ಬಲಹೀನ ಮನುಷ್ಯನೆಂದು ಯೋಚಿಸುತ್ತಾರೆ, ಆದರೆ ಅದು ಸತ್ಯವಲ್ಲ. ದೀನತೆ ಹಾಗು ಸಾತ್ವಿಕತ್ವಗಳು ಬಲದ ಗುರುತುಗಳಾಗಿವೆ. ಇತಿಹಾಸದಲ್ಲಿಯೇ ಅತಿ ಶ್ರೇಷ್ಟನೂ ಬಲಿಷ್ಟನೂ ಆಗಿರುವ ಯೇಸು ಕ್ರಿಸ್ತನು ದೀನನಾಗಿಯೂ ಸಾತ್ವಿಕನಾಗಿಯೂ ಇದ್ದನು. ಮತ್ತು ಪೌಲನು ಹಾಗೆಯೇ ಇದ್ದನು ಯಾಕೆಂದರೆ ಆತನು ಕ್ರಿಸ್ತನ ಆತ್ಮವನ್ನು ಪಡೆದುಕೊಂಡಿದ್ದನು.

ಆದರೆ ಯೇಸು ಕ್ರಿಸ್ತನು ದೀನನಾಗಿಯೂ ಸಾತ್ವಿಕನಾಗಿಯೂ ಇದ್ದನಾದಾಗ್ಯು ಆತನು ಪಾಪವನ್ನು ಧೈರ್ಯದಿಂದಲೂ ಕಠೋರವಾಗಿಯೂ ವಿರೋಧಿಸುತ್ತಿದ್ದನು (ಮತ್ತಾಯ 23:13-36; ಯೋಹಾನ 2:14-16 ನೋಡಿರಿ). ಅದೇ ವಿಧದಲ್ಲಿ ಪೌಲನು ಶಾಂತಮನಸ್ಸುಳ್ಳವನೂ ಸಾತ್ವಿಕನೂ ಆಗಿದ್ದನಾದರೂ ಪೌಲನು ಕೊರಿಂಥದವರ ಪಾಪಕ್ಕಾಗಿ ಅವರನ್ನು ಧೈರ್ಯವಾಗಿ ಗದರಿಸಿದನು. ಆದರೆ ಪೌಲನ ಧೈರ್ಯವು ಅವನಿಂದಲೇ ಬಂದಿರಲಿಲ್ಲ, ಆದರೆ ಅದು ಕ್ರಿಸ್ತನಿಂದಲೇ ಬಂದದ್ದಾಗಿತ್ತು.

ಕೊರಿಂಥದ ಸಭೆಯಲ್ಲಿದ್ದ ಪೌಲನ ವೈರಿಗಳು ಪೌಲನನ್ನು ಟೀಕಿಸುತ್ತಾ ಅವನು ಕೊರಿಂಥದಿಂದ ದೂರವಾಗಿರುವಾಗ ದಿಟ್ಟತನ ತೋರಿಸುವವನಾಗಿಯೂ ಕೊರಿಂಥದಲ್ಲಿರುವಾಗ ದೀನನಾಗಿ ನಡಕೊಳ್ಳುವವನಾಗಿಯೂ ಇರುತ್ತಾನೆಂದು ಮಾತಾಡಿದರು. ಅಂದರೆ, ಆತನು ತನ್ನ ಪತ್ರದಲ್ಲಿ ಮಾತ್ರವೇ ದಿಟ್ಟನಾಗಿರುತ್ತಾನೆ ಹೊರತು ಸಾಕ್ಷಾತ್ತಾಗಿ ಬಂದರೆ ದಿಟ್ಟನಾಗಿರುವದಿಲ್ಲ (ವಚನ 10). ದೂರದಿಂದ ಮಾತ್ರವೇ ಬೊಗಳುವ ಅಂಜುಬುರುಕು ನಾಯಿಯಂತೆ ಪೌಲನು ಕೊರಿಂಥದವರೊಂದಿಗೆ ಮುಖಾಮುಖಿಯಾಗಿ ಮಾತಾಡುವದಕ್ಕೆ ಅವನಿಗೆ ಧೈರ್ಯವಿರಲಿಲ್ಲ ಎಂದು ಅವರು ಮಾತಾಡಿಕೊಳ್ಳುತ್ತಿದ್ದರು. ಈ ವಚನದಲ್ಲಿ ಪೌಲನು ಮಾರ್ಮಿಕವಾಗಿ ಅವರ ಟೀಕೆಗಳನ್ನು ಪು ನರಾವರ್ತಿಸುತ್ತಾನೆ.

ಒಂದು ವಿಧದಲ್ಲಿ ಪೌಲನ ವೈರಿಗಳ ಟೀಕೆಯು ನಿಜವಾಗಿತ್ತು, ಯಾಕೆಂದರೆ ಆತನು ಮೊದಲು ಕೊರಿಂಥಕ್ಕೆ ಬಂದಾಗ ಬಲಹೀನನೂ ಭಯಪಡುವವನೂ ಆಗಿ ಬಂದನು (1 ಕೊರಿಂಥ 2:3). ಆದರೆ ಈ ವೈರಿಗಳು ಒಂದು ಸಂಗತಿಯನ್ನು ಮರೆತಿದ್ದರು: ಅದೇನೆಂದರೆ, ಪೌಲನ ಬೋಧನೆಯಲ್ಲಿ ದೇವರಾತ್ಮನ ಬಲವನ್ನು ತೋರ್ಪಡಿಸುವದಾಗಿತ್ತು (1 ಕೊರಿಂಥ 2:4). ಪೌಲನ ವೈರಿಗಳು ಅರ್ಧ ಸತ್ಯವನ್ನು ಬಿಟ್ಟವರಾಗಿ ಆತನ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಿದ್ದರು. ಇದು ನಿಂದೆಗಾರರ ಒಂದು ಚಟವಾಗಿರುತ್ತದೆ: ಅವರು ಇಡೀ ಸತ್ಯವನ್ನು ಮಾತಾಡದೆ ಕೇವಲ ಅದರ ಒಂದು ಭಾಗವನ್ನು ಮಾತ್ರವೇ ಉಪಯೋಗಿಸಿ ಮಾತಾಡುತ್ತಾರೆ. ನಾವು ಈ ರೀತಿಯಾಗಿ ಇತರರ ವಿರುದ್ಧಮಾತಾಡದಂತೆ ಇದನ್ನು ಗಮನಕ್ಕೆ ತಂದುಕೊಳ್ಳೋಣ.

2 ಕೊರಿಂಥದಲ್ಲಿನ ಪೌಲನ ವೈರಿಗಳು ಆತನನ್ನು ಕುರಿತು ಅವನು ಲೋಕಾನುಸಾರವಾಗಿ ಜೀವಿಸುತ್ತಾನೆಂದು ಹೇಳಿದರು. ಈಗ ಪೌಲನು ಅವಶ್ಯಕವಾದರೆ ಈ ವೈರಿಗಳನ್ನು ದಿಟ್ಟವಾದ ಧೈರ್ಯದಿಂದ ಎದುರಿಸಲು ಸಿದ್ಧನಾಗಿರುತ್ತಾನೆ. ಹೇಗಿದ್ದರೂ, ಪೌಲನು ಕೊರಿಂಥದವರೊಂದಿಗೆ ಧೈರ್ಯವಾಗಿಯೂ ಕಠಿಣವಾಗಿಯೂ ನಡೆದುಕೊಳ್ಳಲು ಇಷ್ಟಪಡುವದಿಲ್ಲ. ಬದಲಾಗಿ, ಆತನು ತಾನು ಕೊರಿಂಥಕ್ಕೆ ಬರುವಾಗ ಈ ವೈರಿಗಳನ್ನು ಗದರಿಸಬೇಕಾದ ಅಗತ್ಯಬಾರದಂತೆ ಅವರು ಪಶ್ಚಾತಾಪ ಪಡುವರೆಂದು ನಿರೀಕ್ಷಿಸುತ್ತಾನೆ.

3 ಈ ಲೋಕದಲ್ಲಿ ಜೀವಿಸುವದು ಲೋಕಾನುಸಾರವಾಗಿ ಜೀವಿಸುವದಕ್ಕಿಂತಲೂ ವ್ಯತ್ಯಾಸವಾಗಿರುತ್ತದೆ (ವಚನ 2). ಪೌಲನು ನಾವು ಲೋಕದಲ್ಲಿದ್ದರೂ ಎಂದು ಹೇಳುವಲ್ಲಿ ಆತನ ತಾತ್ಪರ್ಯವೇನೆಂದರೆ ಮನುಷ್ಯರಾಗಿ ನಾವು ದೇಹಗಳನ್ನು ಹೊಂದಿದ್ದು ದೇಹದ ಬಲಹೀನತೆಯನ್ನು ಸೈರಿಸಿಕೊಳ್ಳಲೇಬೇಕೆಂಬದೇ. ಪೌಲನು ತಿನ್ನಬೇಕು; ಆತನು ನಿದ್ರಿಸಬೇಕು. ಆತನು ಬಳಲುತ್ತಾನೆ; ಚಿಂತೆಗೊಳಗಾಗುತ್ತಾನೆ. ಆದರೆ ಪೌಲನು ಲೋಕದಲ್ಲಿದ್ದರೂ–ದೇಹದಲ್ಲಿ–ಆತನು ಲೋಕಾನುಸಾರವಾಗಿ ಜೀವಿಸುವದೂ ಇಲ್ಲ, ಲೋಕಾನುಸಾರವಾಗಿ ಯುದ್ಧ ಮಾಡುವದೂ ಇಲ್ಲ (ವಚನ 3). "ಲೋಕಾನುಸಾರವಾಗಿ ಜೀವಿಸುವದು" ಎಂಬ ಹೇಳಿಕೆಯು ಒಬ್ಬನ ಪೂರ್ವ ಸ್ವಭಾವದ ಅನುಸಾರವಾಗಿ ಜೀವಿಸುವದು (ರೋಮ 6:6). ಅಥವಾ ಶರೀರಾಧೀನ ಸ್ವಭಾವದ ಅನುಸಾರವಾಗಿ ಜೀವಿಸುವದು (ರೋಮ 8:4-5) ಎಂಬ ಅರ್ಥವನ್ನು ಕೊಡುತ್ತದೆ. ಪೌಲನು ಕ್ರೈಸ್ತನಾಗುವದಕ್ಕೆ ಮುಂಚೆ ತನ್ನ "ಪೂರ್ವಸ್ವಭಾವದ" ಅನುಸಾರವಾಗಿ ಜೀವಿಸಿದ್ದನು ಹಾಗು ಯುದ್ಧಮಾಡಿದ್ದನು. ಆದರೆ ಪೌಲನು ಈಗ ಕ್ರಿಸ್ತನಲ್ಲಿ ನೂತನ ಸೃಷ್ಟಿಯಾಗಿರುತ್ತಾನೆ (2 ಕೊರಿಂಥ 5:17); ಆದದರಿಂದ, ಆತನು ಇಹಲೋಕಾನುಸಾರವಾಗಿ ಜೀವಿಸದೆ ಆತ್ಮನ ಭಾವದಿಂದ ಜೀವಿಸುತ್ತಾನೆ (ಗಲಾತ್ಯ 5:16). ಹೇಗಿದ್ದರೂ, ಪೌಲನ ದೇಹವು ನೂತನವಾಗಿರುವದಿಲ್ಲ. ಪೌಲನು ಸಾಯುವತನಕ ತನ್ನ ದೇಹದಲ್ಲಿ – ಲೋಕದಲ್ಲಿ – ಉಳಿಯಬೇಕು. ಪೌಲನು ಲೋಕದಂತೆ ಯುದ್ಧಮಾಡುವದಿಲ್ಲ – ಅಂದರೆ, ಆತನು ಲೋಕಸಂಬಂಧವಾದ ಆಯುಧಗಳಿಂದ ಯುದ್ಧ ಮಾಡುವದಿಲ್ಲ.

ಪೌಲನು ಇತರ ಜನರಂತೆ ಹೋರಾಡುವದಿಲ್ಲ. ಪೌಲನು ಮೋಸತನವನ್ನು ಉಪಯೋಗಿಸುವದಿಲ್ಲ; ಆತನು ಇತರರ ಬಗ್ಗೆ ನಿಂದೆ ಮಾಡುವದಿಲ್ಲ. ಆತನು ಕತ್ತಿ ಹಾಗು ಬಾಣಗಳಿಂದ ಹೋರಾಟ ಮಾಡುವದಿಲ್ಲ.

4 ಪೌಲನು ಲೋಕಸಂಬಂಧವಾದ ಆಯುಧಗಳಿಂದ ಯುದ್ಧಮಾಡುವದಿಲ್ಲ; ಆತನ ಆಯುಧಳು ಆತ್ಮೀಕ (ರೋಮ 13:12; 2 ಕೊರಿಂಥ 6:7; ಎಫೆಸ 6:13-18 ನೋಡಿರಿ). ಈ ಆತ್ಮೀಕ ಆಯುಧಗಳು ದೈವಿಕ ಬಲವನ್ನು ಹೊಂದಿರುತ್ತವೆ. ಅವು ಗಳು ಸೈತಾನನ ಕೊತ್ತಲಗಳನ್ನು ಕೆಡವಿಹಾಕುವ ಬಲವನ್ನು ಹೊಂದಿವೆ. ಅವು ಗಳು ಸೈತಾನನ ತಂತ್ರೋಪಾಯಗಳನ್ನು ಹಾಳುಮಾಡುತ್ತವೆ (ಎಫೆಸ 6:11). ನಮ್ಮ ವೈರಿಯು ಮನುಷ್ಯನಲ್ಲ, ಆದರೆ ಸೈತಾನನೇ (ಎಫೆಸ 6:12). ಮನುಷ್ಯರ ವಿರುದ್ಧವಾಗಿ ಮಾತ್ರವೇ ಕೆಲಸಕ್ಕೆ ಬರುವ ಆಯುಧಗಳಿಂದ ಸೈತಾನನೊಂದಿಗೆ ಹೋರಾಡುವದು ನಿಷ್ಪ್ರಯೋಜನವಾಗಿರುತ್ತದೆ.
5 ಇಹಲೋಕಾನುಸಾರವಾಗಿ ಜೀವಿಸುವ ಮನುಷ್ಯರ ಯೋಚನೆಗಳು ದೇವರಯೋಚನೆಗಳಂತಿರುವದಿಲ್ಲ. ಕ್ರಿಸ್ತನಲ್ಲಿ ನೂತನ ಸೃಷ್ಟಿಯಾಗಿರುವ ಮನುಷ್ಯನು ಮಾತ್ರವೇ ಕ್ರಿಸ್ತನ ಹಾಗು ದೇವರ ಯೋಜನೆಗಳಂತೆ ಜೀವಿಸಬಲ್ಲನು ( 1ಕೊರಿಂಥ 2:16 ನೋಡಿರಿ). ಸ್ವಾಭಾವಿಕ ಹಾಗು ಪ್ರಾಪಂಚಿಕ ಮನುಷ್ಯರ ವಿತರ್ಕಗಳು ಎಲ್ಲಾ ಅವಿಧೇಯತ್ವವೂ ದೇವಜ್ಞಾನಕ್ಕೆ ವಿರೋಧವಾಗಿರುತ್ತವೆ. ಒಂದು ವಿಧದಲ್ಲಿ ಸ್ವಾಭಾವಿಕ ಮಾನವನ ಮನಸ್ಸು ಸೈತಾನನ "ಕೊತ್ತಲು" ಹಾಗು ಸ್ವಾಭಾವಿಕ ಮಾನವನ ಸೋಚನೆಗಳು ಸೈತಾನನ ದೂತರು ಹಾಗು ಸಿಪಾಯಿಗಳು ಎಂದು ಹೇಳಬಹುದು. ಪೌಲನು ದೇವರ ಆತ್ಮೀಕ ಆಯುಧಗಳಿಂದ ಮಾತ್ರವೇ ಸೈತಾನನ ಕೊತ್ತಲುಗಳನ್ನು ಕೆಡವಿಹಾಕಿ ಮನುಷ್ಯನ ಕೆಟ್ಟ ಆಲೋಚನೆಗಳನ್ನು ಸೆರೆಹಿಡಿಯಲು (ಹತೋಟಿಗೆ ತರುವದಕ್ಕೆ) ಸಾಧ್ಯವಾಗಬಹುದು.

ನಮ್ಮನ್ನು ನಾವು ಕೇಳಿಕೊಳ್ಳಬೇಕಾದದ್ದೇನೆಂದರೆ: ನಮ್ಮ ಎಲ್ಲಾ ಯೋಚನೆಗಳು "ಸೆರೆ ಹಿಡಿಯಲ್ಪಟ್ಟು" ಕ್ರಿಸ್ತನ ಹತೋಟಿಗೆ ತರಲ್ಪಟ್ಟಿರುತ್ತವೋ? ಬಹುಶಃ ನಾವು ಬಹಿರಗದಲ್ಲಿ ಕ್ರಿಸ್ತನಿಗೆ ವಿಧೇಯರಾಗುತ್ತೇವೆ ; ಆದರೆ ನಾವು ನಮ್ಮ ಯೋಚನೆಗಳಲ್ಲಿ ಸಹ ಕ್ರಿಸ್ತನಿಗೆ ವಿಧೇಯರಾಗುತ್ತೇವೋ?

ಕೆಟ್ಟ ವಿಚಾರವನ್ನು ಮಾತಾಡುವದು ತಪ್ಪು ಎಂಬದಾಗಿ ಪ್ರತಿಯೊಬ್ಬರೂ ಒಪ್ಪಿಕೊಳ್ಳುತ್ತಾರೆ. ಆದರೆ ಅಂಥ ಯೋಚನೆಗಳನ್ನು ನಮ್ಮ ಮನಸ್ಸುಗಳಲ್ಲಿ ಇಟ್ಟು ಕೊಳ್ಳುವದು ಸಹ ತಪ್ಪಾಗಿರುತ್ತೆ. ನಾವು ನಮ್ಮ ಯೋಚನೆಗಳನ್ನು ಇತರ ಜನರಿಂದ ಅಡಿಗಿಸಿಕೊಳ್ಳಬಹುದು, ಆದರೆ ನಾವು ಅವು ಗಳನ್ನು ದೇವರಿಂದ ಅಡಿಗಿಸಿಟ್ಟುಕೊಳ್ಳಲು ಸಾಧ್ಯವಿಲ್ಲ. ಆದರೆ ಆಗಾಗ ಕೆಟ್ಟ ಯೋಚನೆಗಳು ಪಕ್ಕನೇ ನಮ್ಮ ಮನಸ್ಸುಗಳಲ್ಲಿ ಬರುತ್ತವೆ. ನಾವು ಹೇಗೆ ಈ ಯೋಚನೆಗಳನ್ನು ತೊಲಗಿಸಿಕೊಳ್ಳಬಲ್ಲೆವು ? ನಾವು ಅವು ಗಳನ್ನು "ಸೆರೆ ಹಿಡಿಯಬಹುದು". ಅಂದರೆ, ನಾವು ಅವು ಗಳನ್ನು ಕ್ರಿಸ್ತನ ಹತೋಟಿಗೆ ತರಬಹುದು. ಕೆಟ್ಟ ಯೋಚನೆಗಳು ಸೈತಾನನ ಸಿಪಾಯಿಗಳು. ನಾವು ಈ ಯೋಚನೆಗಳನ್ನು ನೀತಿ, ಬೆಳಕು, ಹಾಗು ನಂಬಿಕೆಯ ಆತ್ಮೀಕ ಆಯುಧಗಳಿಂದಲೂ ಅದರೊಂದಿಗೆ ದೇವರ ವಾಕ್ಯವೆಂಬ ಕತ್ತಿಯನ್ನು ಹಿಡಿದವರಾಗಿಯೂ ಜಯಿಸಬಹುದು (ಎಫೆಸ 6:17).

ಉದಾಹರಣೆಗೆ, ಈ ಕೆಟ್ಟಯೋಚನೆಗಳು – ಕೋಪ, ಹೊಟ್ಟೆಕಿಚ್ಚು, ದುರಾಶೆ, ಅನೀತಿ. ಚಿಂತೆ,. ಮುಂತಾದವು ಗಳ ಯೋಚನೆಗಳು – ನಮ್ಮ ತಲೆಯ ಸುತ್ತಲೂ ಹಾರಾಡುವ ಪಕ್ಷಿಗಳಂತಿರುತ್ತವೆ. ನಾವು ಪಕ್ಷಿಗಳನ್ನು ನಮ್ಮ ತಲೆಯ ಮೇಲೆ ಹಾರಾಡದಂತೆ ತಡೆಯಲಾರೆವು , ಆದರೆ ಅವು ಗಳು ನಮ್ಮ ಕೂದಲುಗಳಲ್ಲಿ ಗೂಡನ್ನು ಕಟ್ಟದಂತೆ ನಾವು ಖಂಡಿತವಾಗಿಯೂ ತಡೆಯಬಲ್ಲೆವು ! (ಯಾಕೋಬ 1:15 ಮತ್ತು ವ್ಯಾಖ್ಯಾನ ನೋಡಿರಿ).
6 ಬಹು ಪಾಲು ಕೊರಿಂಥದವರು ತಮ್ಮ ಸಭೆಯೊಳಗೆ ಬಂದಿರುವ ಸುಳ್ಳು ಬೋಧಕರನ್ನು ತಿರಸ್ಕರಿಸುವರೆಂದು ಪೌಲನು ನಿರೀಕ್ಷೆಯನ್ನು ಹಾಗು ವಿಶ್ವಾಸವನ್ನು ಹೊಂದಿರುತ್ತಾನೆ. ಕೊರಿಂಥದವರೊಳಗೆ ನಿಜವಾದ ಕ್ರೈಸ್ತರು ಪಶ್ಚಾತಾಪ ಪಟ್ಟು ಸುಳ್ಳು ಬೋಧಕರಿಂದ ವಿಮುಖರಾಗುವದನ್ನು ಪೌಲನು ಎದುರು ನೋಡುತ್ತಿದ್ದಾನೆ. ಅಂದರೆ, ಆತನು ಅವರ ವಿಧೇಯತ್ವವು ಪರಿಪೂರ್ಣವಾಗುವದಕ್ಕಾಗಿ ಕಾಯುತ್ತಿದ್ದಾನೆ. ಕೊರಿಂಥದವರು ಈ ಸುಳ್ಳು ಬೋಧಕರಿಂದ ವಿಮುಖರಾದ ಬಳಿಕ ಮಾತ್ರವೇ ಪೌಲನು ಕೊರಿಂಥಕ್ಕೆ ಹೋಗುವನು. ಮತ್ತು ಪೌಲನು ಕೊರಿಂಥಕ್ಕೆ ಹೋದರೆ ಆತನು ಖಂಡಿತವಾಗಿಯೂ ಈ ಸುಳ್ಳು ಬೋಧಕರನ್ನು ಶಿಕ್ಷಿಸಿ ಅವರನ್ನು ಸಭೆಯಿಂದ ಹೊರ ಹಾಕುವನು.
7 ಕೊರಿಂಥದ ಸಭೆಯಲ್ಲಿ ಕೆಲವರು ಹೇಳಿದ್ದೇನೆಂದರೆ; "ನಾವು ಕ್ರಿಸ್ತನ ಪಕ್ಷದವರು". ಹೀಗೆ ಹೇಳುವಲ್ಲಿ ಅವರು ಸಭೆಯಲ್ಲಿನ ಇತರರನ್ನು ಕೀಳಾಗಿ ಕಂಡರು; ಅವರು ತಮ್ಮನ್ನು ಮಾತ್ರವೇ ನಿಜವಾದ ಕ್ರೈಸ್ತರು ಎಂದು ಪರಿಗಣಿಸಿಕೊಂಡರು (1 ಕೊರಿಂಥ 1:12 ನೋಡಿರಿ). ಇದೇ ಜನರು ಪೌಲನಿಗೆ ತೀರ್ಪುಮಾಡುತ್ತಾ ಮುಖದ ಮುಂದೆ ಇರುವಂಥದನ್ನು ಮಾತ್ರವೇ ನೋಡುವವರಾಗಿದ್ದರು; ಅವರು ಬಹಿರಂಗದ ಸಂಗತಿಗಳ ಆಧಾರದಿಂದ ಮಾತ್ರವೇ ತೀರ್ಪುಮಾಡುತ್ತಿದ್ದರು. ಪೌಲನು ಅವರಿಗೆ "ನನ್ನ ಕುರಿತು ತೀರ್ಪು ಮಾಡಬೇಡಿರಿ, ನೀವು ಕ್ರಿಸ್ತನಿಗೆ ಸೇರಿರುವಂತೆಯೇ ನಾನೂ ಸೇರಿದ್ದೇನೆ" ಎಂದು ಹೇಳುತ್ತಾನೆ.

ಈ ವಚನದಲ್ಲಿ ನಮ್ಮೆಲ್ಲರಿಗೂ ಒಂದು ಪ್ರಾಮುಖ್ಯನಾದ ಪಾಠ ವಿರುತ್ತದೆ. ನಾವು ಮುಖ್ಯವಾಗಿ ಬಹಿರಂಗದ ಸಂಗತಿಗಳನ್ನು ನೋಡುತ್ತೇನೆ. ಬಹುಶಃ ನಾವು ಒಬ್ಬ ಸಹೋದರನನ್ನು ನೋಡಿ ಆತನು ಮಾಡುವದನ್ನು ಇಷ್ಟ ಪಡುವದಿಲ್ಲ; ನಾವು ಆತನ ನಡವಳಿಕೆಯನ್ನು ಇಷ್ಟಪಡುವದಿಲ್ಲ. ನಾವು ಆತನಿಗೆ ತೀರ್ಪುಮಾಡುತ್ತೇವೆ; "ಅವನು ನಮ್ಮಲ್ಲಿ ಒಬ್ಬನಲ್ಲ" ಎಂದು ಹೇಳುತ್ತೇವೆ. ಅಥವಾ "ಆತನು ಒಳ್ಳೆಯವನಲ್ಲ" ಎಂದು ಹೇಳುತ್ತೇವೆ. ಆದರೆ ಆ ಸಹೋದರನು ಸಹ ಕ್ರಿಸ್ತನಿಗೆ ಸೇರಿದವನೆಂಬದನ್ನು ನಾವು ಮರೆತುಬಿಡುತ್ತೇವೆ. ನಮ್ಮ ಹಾಗೆಯೇ ಆತನೂ ಕ್ರಿಸ್ತನ ಸೇವಕನು. ಅವನಲ್ಲಿಯೂ ಪವಿತ್ರಾತ್ಮನು ಇರುತ್ತಾನೆ. ಆದದರಿಂದ, ನಾವು ಕೇವಲ ಬಹಿರಂಗದ ಸಂಗತಿಗಳನ್ನಷ್ಟೇ ನೋಡಿದಿರೋಣ, ಆದರೆ ಸಾಧ್ಯವಾದಷ್ಟು ಮಟ್ಟಿಗೆ ನಾವು ಅಂತರ್ಯದ ಸಂಗತಿಗಳನ್ನು ನೋಡೋಣ. ನಮ್ಮ ಸಹೋದರನ ಇಂಗಿತಗಳು, ಉದ್ದೇಶಗಳು, ಆತನ ಅಭಿಲಾಷೆಗಳನ್ನು ಪರಿಗಣಿಸೋಣ. ನಾವು ಹೀಗೆ ಮಾಡುವದಾದರೆ ನಮ್ಮ ಸಹೋದರನು ತಾನು ಮಾಡುವ ಕಾರ್ಯಗಳನ್ನು ಏಕೆ

ಮಾಡುತ್ತಾನೆಂಬದನ್ನು ಉತ್ತಮವಾಗಿ ಅರ್ಥ ಮಾಡಿಕೊಳ್ಳುವೆವು. ನಾವು ಆತನಿಗೆ ತೀರ್ಪು ಮಾಡುವದಕ್ಕೆ ಅಷ್ಟಾಗಿ ಸಿದ್ಧರಾಗಿರುವದಿಲ್ಲ!

**8** ಪೌಲನು ತನ್ನ ಅಧಿಕಾರದ ಬಗ್ಗೆ, ಹೊಗಳಿಕೊಳ್ಳುತ್ತಾನೆ. ಯಾಕೆಂದರೆ, ಅದು ಆತನಿಗೆ ಕರ್ತನಿಂದ ಕೊಡಲ್ಪಟ್ಟಿರುತ್ತದೆ. ಪೌಲನ ಅಧಿಕಾರವು ಅವನ ಸ್ವಂತದ್ದಲ್ಲ, ಅದು ಕ್ರಿಸ್ತನಿಂದ ಬರುತ್ತದೆ.

ಕ್ರಿಸ್ತನು ಸಭಾಪಾಲಕರಿಗೂ, ಹಿರಿಯರಿಗೂ, ಬೋಧಕರಿಗೂ ಅವರು ಕ್ರೈಸ್ತರನ್ನು ಛಿದ್ರ ಮಾಡದೆ ಭಕ್ತಿವೃದ್ಧಿಮಾಡಬೇಕೆಂಬುದಕ್ಕಾಗಿ ತನ್ನ ಅಧಿಕಾರವನ್ನು ಕೊಡುತ್ತಾನೆಂಬದನ್ನು ಗಮನಿಸಿರಿ (2 ಕೊರಿಂಥ 13:10 ನೋಡಿರಿ).

**9-11** ಪೌಲನು ಈ ಮುಂಚೆ ಕೊರಿಂಥದವರೊಂದಿಗೆ ಶಾಂತಮನಸ್ಸು ಹಾಗು ಸಾತ್ವಿಕತ್ವ ದಿಂದ ನಡೆದುಕೊಂಡಿದ್ದನು (ವಚನ 1); ಆತನು ಬಲಹೀನನಾಗಿಯೂ ಭಯಪಡುವವನಾಗಿಯೂ ಅವರ ಬಳಿಗೆ ಬಂದಿದ್ದನು (1 ಕೊರಿಂಥ 2:3). ಆದರೆ ಕೊರಿಂಥದವರು ತಮಗೆ ಆತನು ಹೆದರುತ್ತಾನೆಂದು ಯೋಚಿಸದಿರಲಿ. ಪೌಲನು ಎಲ್ಲಾ ಅವಿಧೇಯತ್ವಕ್ಕೆ ಶಿಕ್ಷೆ ನೀಡಲಿರುವನು (ವಚನ 6). ಹೇಗಿದ್ದರೂ, ಪೌಲನು ಕೊರಿಂಥಕ್ಕೆ ಬಂದಾಗಿ ತಾನು ಅವರೆಡೆಗೆ ಕಠಿಣವಾಗಿ ನಡಕೊಳ್ಳಬೇಕಾಗುವದಿಲ್ಲ ಎಂದು ನಿರೀಕ್ಷಿಸುತ್ತಾನೆ.

**12** ಈ ವಚನದಲ್ಲಿ ಪೌಲನು ಪುನಃ ಕೊರಿಂಥದವರಿಗೆ ಮಾರ್ಮಿಕವಾದ ರೀತಿಯಲ್ಲಿ ಬರೆಯುತ್ತಾನೆ. ಆತನು ಕೊರಿಂಥದಲ್ಲಿರುವ ಜನರು ತಮ್ಮ ಶ್ರೇಷ್ಠರನ್ನಾಗಿ ಮಾಡಿಕೊಳ್ಳುವವರಂತೆ ತಾನು "ಶ್ರೇಷ್ಠ" ಅಲ್ಲ ಎಂದು ಹೇಳುತ್ತಾನೆ. ಕೊರಿಂಥದಲ್ಲಿನ ಸುಳ್ಳುಬೋಧಕರು ತಮ್ಮನ್ನು ತಾವೇ "ಹೊಗಳಿಕೊಳ್ಳುತ್ತಿದ್ದರು" ಅವರು ಗರ್ವದಿಂದ ಉಬ್ಬಿಕೊಂಡಿದ್ದರು. ಅವರು ತಮ್ಮ ತಮ್ಮೊಳಗೆ ತಮ್ಮನ್ನು ಅಳತೆಮಾಡಿಕೊಳ್ಳುತ್ತಿದ್ದರು – ಅಂದರೆ, ಅವರು ತಮ್ಮನ್ನು ತಾವೇ ತಮ್ಮದೇ ಆದ ಅಳತೆಯಿಂದ, ತಮ್ಮದೇ ಮಟ್ಟಗಳಿಂದ, ಲೋಕಾನುಸಾರವಾಗಿ ಅಳತೆಮಾಡಿಕೊಂಡರು. ಆದರೆ ಅವರು ಎಷ್ಟು ಮಾರ್ಖರಾಗಿದ್ದರು! ನಮ್ಮನ್ನು ನಾವು ಅಳತೆ ಮಾಡಿಕೊಳ್ಳಬೇಕಾದ ಒಂದೇ ಅಳತೆ, ಒಂದೇ ಮಟ್ಟವು ಇರುತ್ತದೆ, ಆ ಮಟ್ಟವು ಯೇಸು ಕ್ರಿಸ್ತನದೇ. ನಾವು ನಮ್ಮನ್ನು ಕ್ರಿಸ್ತನೊಂದಿಗೆ ಹೋಲಿಸಿಕೊಳ್ಳುವಾಗ ನಮ್ಮನ್ನು ನಿಖರವಾಗಿ ಅಳತೆಮಾಡಿಕೊಳ್ಳಲು ಶಕ್ತರಾಗುತ್ತೇವೆ. ಮತ್ತು ನಮ್ಮನ್ನು ಕ್ರಿಸ್ತನೊಂದಿಗೆ ಹೋಲಿಸಿಕೊಳ್ಳುವಾಗ ನಾವು ಎಷ್ಟು ಅಪಾತ್ರರಾಗಿ ಕಾಣಿಸುತ್ತೇವಲ್ಲವೇ!

**13-14** ಪೌಲನು ತನ್ನಲ್ಲಿ ಹೊಗಳಿಕೊಳ್ಳುವದಿಲ್ಲ. ಆತನು ಸರಿಯಾದ ಮೇರೆದಪ್ಪಿಹೊಗಳಿಕೊಳ್ಳುವದಿಲ್ಲ (ವಚನ 13). ಬದಲಾಗಿ, ಆತನು ದೇವರು ತನಗೆ ನೇಮಿಸಿರುವ ಮೇರೆಯೊಳಗಿದ್ದು ಹೊಗಳಿಕೊಳ್ಳುತ್ತಾನೆ. ಅಂದರೆ, ಆತನು ತನಗೆ ದೇವರು ನೀಡಿರುವ ಕೆಲಸದ ಕ್ಷೇತ್ರದಲ್ಲಿ ಮಾತ್ರವೇ ಹೊಗಳಿಕೊಳ್ಳುತ್ತಾನೆ. ಆ ಕೆಲಸದ ಕ್ಷೇತ್ರವು ಅನ್ಯಜನರಿಗೆ ಸುವಾರ್ತೆಯನ್ನು ಸಾರುವದೇ (ಅ.ಕೃತ್ಯ 9:15; ರೋಮ 1:5 ನೋಡಿರಿ). ಪೌಲನ "ಮೇರೆಯು" ಕೊರಿಂಥದವರೆಗೂ ವಿಸ್ತರಿಸಲ್ಪಟ್ಟಿದೆ.

**15-16** ಪೌಲನು ಇತರ ಅಪೊಸ್ತಲರ ಹಾಗು ಭೋಧಕರ ಕೆಲಸದಲ್ಲಿ ಹೊಗಳಿಕೊಳ್ಳುವದಿಲ್ಲ ಅಥವಾ ನಮ್ಮದು ಎಂಬ ಪ್ರಶಂಸೆಯನ್ನು ತೆಗೆದುಕೊಳ್ಳುವದಿಲ್ಲ. ಆತನು ಮತ್ತೊಬ್ಬರು ಹೋಗದಿರುವ ಸ್ಥಳಗಳಿಗೆ ಮಾತ್ರವೇ ಹೋಗುತ್ತಾನೆ (ರೋಮ 15:20). ಕೊರಿಂಥವು ಒಂದು ಕೇಂದ್ರ ಸ್ಥಾನವಾಗಿ ಸುವಾರ್ತೆಯು ಪಶ್ಚಿಮದೆಡೆಗೆ ಹೆಚ್ಚು ಹರಡುವಂತಾಗಬೇಕೆಂದು ಪೌಲನು ನಿರೀಕ್ಷಿಸುತ್ತಾನೆ. ಆದರೆ, ಮೊದಲು ಕೊರಿಂಥದವರ ನಂಬಿಕೆಯು ಬೆಳೆಯುವದು ಅವಶ್ಯಕವಾಗಿರುತ್ತದೆ; ಅವರು ಪರಿಪಕ್ವಗೊಳ್ಳಬೇಕು. ಇಲ್ಲವಾದರೆ ಅವರ ಸಭೆಯು ಸುವಾರ್ತೆಯನ್ನು ಹರಡಿಸುವದಕ್ಕಾಗಿ ಕೇಂದ್ರ ಸ್ಥಾನವಾಗದು, ಮತ್ತು ಅವರು ಪೌಲನಿಗೆ ಆತನ ಸುವಾರ್ತಾ ಬೋಧನೆಯ ಕೆಲಸದಲ್ಲಿ ಹೆಚ್ಚು ಸಹಾಯವನ್ನು ನೀಡುವದಕ್ಕೆ ಶಕ್ತರಾಗುವದಿಲ್ಲ. ಕಾರಣವೇನೆಂದರೆ, ಪಂಗಡಗಳಾಗಿ ಇಬ್ಭಾಗಿಸಲ್ಪಟ್ಟಿರುವ ಅಥವಾ ಪಾಪ ಹಾಗು ಸುಳ್ಳು ಬೋಧನೆಗಳಿಂದ ತುಂಬಿರುವ ಸಭೆಯಲ್ಲಿ ಕ್ರಿಸ್ತನು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಿಲ್ಲ.

**17-18** ಪೌಲನು ಇಲ್ಲಿ ಯೆರೆಮೀಯ. 9:24 ರಿಂದ ಉಲ್ಲೇಖಿಸುತ್ತಾನೆ (1 ಕೊರಿಂಥ 1:31 ನೋಡಿರಿ). ನಮ್ಮನ್ನು ನಾವು ಹೊಗಳಿಕೊಳ್ಳದಿರೋಣ. ಅದು ಗರ್ವಿಷ್ಟರೂ ಪ್ರಾಪಂಚಿಕರೂ ಆಗಿರುವ ಜನರ ಅಭ್ಯಾಸವಾಗಿದೆ. ಅಷ್ಟು ಮಾತ್ರವಲ್ಲದೆ, ನಾವು ಜನರ ಹೊಗಳಿಕೆ ಹಾಗು ಪ್ರಶಂಸೆಯನ್ನು ಹೊಂದಲು ತವಕಪಡದಿರೋಣ (ಯೋಹಾನ 5:44; 12:43 ನೋಡಿರಿ). ಬದಲಾಗಿ, ನಾವು ದೇವರ ಹೊಗಳಿಕೆಯನ್ನು ಮಾತ್ರವೇ ಎದುರು ನೋಡೋಣ, ಯಾಕೆಂದರೆ ದೇವರಿಂದ ಮಾತ್ರವೇ ನಾವು ಯೋಗ್ಯರು ಎಂಬ ಮನ್ನಣೆಯನ್ನು ಪಡೆಯಬಲ್ಲೆವು.

---

## ಅಧ್ಯಾಯ - 11

### ಪೌಲ ಹಾಗು ಸುಳ್ಳು ಅಪೊಸ್ತಲರು (11:1-15)

**1** ಪೌಲನು ತನ್ನ ಕುರಿತು ಮಾತಾಡುವದು ಆತನ ಬುದ್ಧಿಹೀನತೆ ಆಗಿದೆ. ಪೌಲನು ಈಗ ತನ್ನ ಹೃದಯವನ್ನು ಕೊರಿಂಥದವರ ಮುಂದೆ ತೆರೆಯಲಿದ್ದಾನೆ. ಸಾಮಾನ್ಯವಾಗಿ, ನಾವು "ಬುದ್ಧಿಹೀನ" ರಾಗಿ ಕಾಣಿಸಿಕೊಳ್ಳುವ ಭಯದಿಂದ ಈ ವಿಧದಲ್ಲಿ ಮಾತಾಡುವದಿಲ್ಲ. ಆದರೆ ಪೌಲನು ಕೊರಿಂಥದವರನ್ನು ಎಷ್ಟಾಗಿ ಪ್ರೀತಿಸುತ್ತಾನೆಂದರೆ ಆತನು ತನ್ನ ಹೃದಯವನ್ನು ಅವರ ಮುಂದೆ ತೆರೆಯುವದರ ಮೂಲಕ ಅವರ ದೃಷ್ಟಿಯಲ್ಲಿ ಬುದ್ಧಿಹೀನನಾಗಿ ಕಾಣಿಸಿಕೊಳ್ಳಲು ಸಿದ್ಧನಾಗಿದ್ದಾನೆ.

**2** ಸಭೆಯು ಕ್ರಿಸ್ತನ ಮದಲಗಿತ್ತಿ (ಎಫೆಸ 5:23-27 ನೋಡಿರಿ). ಕೊರಿಂಥದ ಸಭೆಯನ್ನು ಪೌಲನೇ ಸ್ಥಾಪಿಸಿದ್ದರಿಂದ ಆತನು ಅದಕ್ಕೆ ತಂದೆಯಂತೆ ಇದ್ದನು (1 ಕೊರಿಂಥ 4:15). ಆದದರಿಂದ ತನ್ನ "ಮಗಳಾದ" ಕೊರಿಂಥದ ಸಭೆಯನ್ನು ಶುದ್ಧಕನ್ಯೆಯಾಗಿ ಅವಳ ಮದಲಿಂಗನಾದ ಕ್ರಿಸ್ತನಿಗೆ ಒಪ್ಪಿಸುವದು ಆತನ ಕರ್ತವ್ಯವಾಗಿತ್ತು ಕೊರಿಂಥದ ಸಭೆಯು ಕ್ರಿಸ್ತನು ತಿರುಗಿಬರುವ ತನಕ ಶುದ್ಧವಾಗಿ ಉಳಿಯಬೇಕೆಂಬದು ಪೌಲನ ದೊಡ್ಡ ಚಿಂತನೆಯಾಗಿತ್ತು.

**3** ಕೊರಿಂಥದವರು ಶುದ್ಧರಾಗಿ, ಕ್ರಿಸ್ತನಿಗೆ ನಂಬಿಗಸ್ಥರಾಗಿ ಉಳಿಯುವದಿಲ್ಲ ವೇನೋ ಎಂಬದು ಪೌಲನ ಹೆದರಿಕೆಯಾಗಿತ್ತು. ಆತನು ಹೆದರುವದಕ್ಕೆ ಕಾರಣವೇನೆಂದರೆ, ಸುಳ್ಳುಬೋಧಕರು ಸಭೆಯನ್ನು ಪ್ರವೇಶಿಸಿ ಎದೆನ್ ತೋಟದಲ್ಲಿ ಸರ್ಪವು ಹವ್ವಳನ್ನು ವಂಚಿಸಿದಂತೆಯೇ (ಆದಿಕಾಂಡ 3:1-3) ಅವರು ಕೊರಿಂಥದವರನ್ನು ಮಾರ್ಗತಪ್ಪಿಸಲು ಪ್ರಯತ್ನಿಸುತ್ತಿದ್ದುದೇ ಆಗಿತ್ತು (ವಚನಗಳು 13-15).

**4** ಕೊರಿಂಥದವರು ಇತರ ಗ್ರೀಕರಂತೆಯೇ ಯಾವದೇ ರೀತಿಯ ಹೊಸಬೋಧನೆಯನ್ನು ಕೇಳುವದಕ್ಕೆ ಯಾವಾಗಲೂ ಆಸಕ್ತಿ ಯುಳ್ಳವರಾಗಿದ್ದರು (ಅ.ಕೃತ್ಯ 17:18-21 ನೋಡಿರಿ). ಆದದರಿಂದ, ಅವರು ಸುಲಭವಾಗಿ ಬುದ್ಧಿಹೀನತೆಗೊಳಗಾಗಿ ಪೌಲನಿಂದ ನೀಡಲ್ಪಟ್ಟ ಸತ್ಯಬೋಧನೆಯಿಂದ ವಿಮುಖರಾಗಬಹುದಿತ್ತು (2 ತಿಮೊಥೆ 4:3-4 ನೋಡಿರಿ). ಆದರೆ ಒಬ್ಬನೇ ಕ್ರಿಸ್ತನು ಹಾಗು ಒಬ್ಬನೇ ಆತ್ಮನು (ಪವಿತ್ರಾತ್ಮನು) ಮತ್ತು ಒಂದೇ ಸುವಾರ್ತೆ ಇತ್ತು. ಕೊರಿಂಥದವರು ಸುಳ್ಳ ಕ್ರೈಸ್ತರನ್ನೂ ಸುಳ್ಳ ಆತ್ಮಗಳನ್ನೂ ಹಿಂಬಾಲಿಸದಿರಲಿ ಎಂದು ಪೌಲನು ಎಚ್ಚರಿಸುತ್ತಾನೆ (1 ಯೋಹಾನ 4:1-3 ನೋಡಿರಿ). ಕೊರಿಂಥದವರು ಗಲಾತ್ಯದವರಂತೆ ಸತ್ಯಸುವಾರ್ತೆಯಿಂದ ವಿಮುಖರಾಗುವದು ಪೌಲನಿಗೆ ಇಷ್ಟವಿರುವದಿಲ್ಲ (ಗಲಾತ್ಯ 1:6-9 ನೋಡಿರಿ). ಪೌಲನ ತಾತ್ಪರ್ಯವೇನೆಂದರೆ; ಕೊರಿಂಥದವರು ಬಹಳ ಸುಲಭವಾಗಿ ಸುಳ್ಳುಬೋಧಕರನ್ನು ಸಹಿಸಿಕೊಳ್ಳುತ್ತಿರುವರು, ಮತ್ತು ಹೀಗೆ ಮಾಡುವಲ್ಲಿ ಅವರು ದೊಡ್ಡ ತಪ್ಪನ್ನು ಮಾಡಿದವರಾಗಿದ್ದರು.

**5** ಇಲ್ಲಿ ಪು ನಃ ಪೌಲನು ಮಾರ್ಮಿಕವಾಗಿ ಮಾತಾಡುತ್ತಾ. ಸುಳ್ಳು ಬೋಧಕರನ್ನು ಅತಿಶ್ರೇಷ್ಠ ಅಪೊಸ್ತಲರು ಎಂದು ಕರೆಯುತ್ತಾನೆ (ವಚನ 13). ವಾಸ್ತವದಲ್ಲಿ, ಈ ಬೋಧಕರು "ಅತಿಶ್ರೇಷ್ಠ ಅಪೊಸ್ತಲರು" ಆಗಿರಲಿಲ್ಲ; ಅವರು ಸುಳ್ಳು ಅಪೊಸ್ತಲರಾಗಿದ್ದರು.

**6** ಪೌಲನ ಭಾಷೆಯು ಸ್ಪಷ್ಟ ಹಾಗು ಸರಳವಾಗಿತ್ತು. ಆದದರಿಂದ, ಕೊರಿಂಥದವರಲ್ಲಿ ಕೆಲವರು ಪೌಲನ ಮಾತುಗಳನ್ನು ಕೇಳಿದಾಗ ಆತನು ಅಷ್ಟೇನು ಜ್ಞಾನಿಯೇನಲ್ಲ ಎಂದು ಊಹಿಸಿಕೊಂಡರು. ಆದರೆ ಪೌಲನು ನಿಜವಾದ ಜ್ಞಾನವನ್ನು – ದೇವರಿಂದ ತಿಳುವಳಿಕೆ ಹಾಗು ಜ್ಞಾನವನ್ನು – ಹೊಂದಿದ್ದನು (1 ಕೊರಿಂಥ 2:4-7 ನೋಡಿರಿ).

**7** ಪೌಲನ ಕಾಲದಲ್ಲಿ ಬಹು ಪಾಲು ತತ್ವ ಜ್ಞಾನಿಗಳು ಹಾಗು ಬೋದಕರು ತಮ್ಮ ಭೋದನೆಗಾಗಿ ವೇತನವನ್ನು ಪಡೆದುಕೊಳ್ಳುತ್ತಿದ್ದರು (2 ಕೊರಿಂಥ 2:17). ಪೌಲನು ತನ್ನ ಬೋಧನೆಗಾಗಿ ವೇತನವನ್ನು ಕೇಳಲಿಲ್ಲವಾದ್ದರಿಂದ (ಅವನು ಗುಡಾರಗಳನ್ನು ಮಾಡುವದರ ಮೂಲಕ ಜೀವನೋಪಾಯ ನೋಡಿಕೊಳ್ಳುತ್ತಿದ್ದನು). ಕೊರಿಂಥದವರೊಳಗಿದ್ದ ಆತನ ವೈರಿಗಳು ಅವನ ಬೋಧನೆಯು ಅಯೋಗ್ಯವಾದದ್ದೆಂದು ಹೇಳಿದರು.

ಆದದರಿಂದ, ಪೌಲನು ಕೊರಿಂಥದವರಿಗೆ ಮಾರ್ಮಿಕವಾಗಿ ಕೇಳುವದೇನೆಂದರೆ: ನಾನು ನನ್ನ ಬೋಧನೆಗಾಗಿ ವೇತನವನ್ನು ಕೇಳದಿದ್ದದು ಪಾಪಕೃತ್ಯವೋ? ಪೌಲನಿಗೆ ವೇತನವನ್ನು ಕೇಳುವ ಹಕ್ಕು ಇತ್ತು (1 ಕೊರಿಂಥ 9:14). ಆದರೆ ಪೌಲನು ತನ್ನನ್ನು ಹಣದ ದುರಾಶೆಯುಳ್ಳವನೆಂದು ಯಾರೂ ತಪ್ಪು ಹೊರಿಸಬಾರದೆಂದು ತನ್ನ ಹಕ್ಕನ್ನು ತೊರೆದು ಬಿಟ್ಟಿದ್ದನು (1 ಕೊರಿಂಥ 9:12; 15, 8; 1 ಥೆಸಲೋನಿಕ 2:9; 2 ಥೆಸಲೋನಿಕ 3:7-9 ನೋಡಿರಿ).

**8** ಪೌಲನು ಇತರ ಸಭೆಗಳಿಂದ ಸಂಬಳ, ಆರ್ಥಿಕ ಸಹಾಯವನ್ನು ಪಡೆದುಕೊಂಡನು. ಇಲ್ಲಿ ಆತನು ಈ ಸಭೆಗಳನ್ನು ಸುಲುಕೊಂಡೆನು ಎಂದು ಹೇಳುತ್ತಾನೆ. ಪೌಲನು ತಾನು ಸ್ಥಾಪಿಸಿದ ಸಭೆಗಳಿಂದ ಸಹಾಯವನ್ನು ಪಡೆದುಕೊಳ್ಳಲು ಇಷ್ಟಪಡಲಿಲ್ಲ ಆತನ ಮನಸ್ಸಿಗೆ ಅದು ಅವರನ್ನು "ಸುಲುಕೊಳ್ಳುವ" ಹಾಗಿರುತ್ತಿತ್ತು.

**9** ಪೌಲನು ಕೊರಿಂಥದಲ್ಲಿರುವಾಗಲೂ ಕೊರತೆಯ ವೇಳೆಗಳಲ್ಲಿ ಮೆಕೆದೋನ್ಯದ ಕ್ರೈಸ್ತರಿಂದ ಸಹಾಯವನ್ನು ಪಡೆದುಕೊಂಡನು, ವಿಶೇಷವಾಗಿ ಪಿಲಿಪ್ಪಿಯವರಿಂದ ಪಡೆದುಕೊಂಡನೇ ಹೊರತು ಕೊರಿಂಥದವರಿಂದಲ್ಲ (ಪಿಲಿಪ್ಪಿ 4:15-16 ನೋಡಿರಿ).

**10** 1 ಕೊರಿಂಥ 9:15 ಮತ್ತು ವ್ಯಾಖ್ಯಾನ ನೋಡಿರಿ.

**11** ಕೊರಿಂಥದವರಿಂದ ಹಣವನ್ನು ತೆಗೆದುಕೊಳ್ಳಲು ನಿರಾಕರಿಸುವದರ ಮೂಲಕ ಪೌಲನು ಅವರ ಮೇಲಿನ ತನ್ನ ಪ್ರೀತಿಯನ್ನು ನಿರೂಪಿಸಿದ್ದನು. ಪೌಲನು ಕೊರಿಂಥದವರನ್ನು ಪ್ರೀತಿಸುತ್ತಾನೆಂಬದನ್ನು ದೇವರೇ ಬಲ್ಲನು.

**12** ಕೊರಿಂಥದಲ್ಲಿನ ಸುಳ್ಳು ಬೋಧಕರು ಪೌಲನೊಂದಿಗೆ ಸರಿಸಮಾನರಾಗಿ ಪರಿಗಣಿಸಲ್ಪಡುವದಕ್ಕೆ ಅವಕಾಶವನ್ನು ಹುಡುಕುತ್ತಿದ್ದರು; ಅಂದರೆ, ಅವರು ಪೌಲನೊಂದಿಗೆ ಸರಿಸಮಾನರಾಗಿ ಕಂಡುಬರುವದಕ್ಕೆ ಇಚ್ಛಿಸಿದ್ದರು. ಅವರು ತಮ್ಮ ಬೋಧನೆಗೆ ವೇತನವನ್ನು ಪಡೆದುಕೊಳ್ಳುತ್ತಿದ್ದರು ಮತ್ತು ಅವರ ಹಾಗು ಪೌಲನ ನಡುವೆ ಯಾವ ತಾರತಮ್ಯವಿಲ್ಲದಿರುವ ಹಾಗೆ ಆತನು ಸಹ ವೇತನವನ್ನು ಪಡೆಯಬೇಕೆಂದು ಹಾರೈಸಿದರು. ಆದರೆ ಪೌಲನು ಅವರ ಹಾಗೆ ವೇತನವನ್ನು ಸ್ವೀಕರಿಸಿಕೊಳ್ಳಲು ಒಪ್ಪುವದಿಲ್ಲ. ಈ ಸುಳ್ಳುಬೋಧಕರು ತನ್ನೊಂದಿಗೆ ಸರಿಸಮಾನರಾಗಿ ಕಂಡುಬರುವದಕ್ಕೆ ಪೌಲನು ಅವರಿಗೆ ಯಾವದೇ ಅವಕಾಶವನ್ನು ಕೊಡಲಿಚ್ಛಿಸುವದಿಲ್ಲ.

**13** ಈ ಸುಳ್ಳುಬೋಧಕರು ವಾಸ್ತವದಲ್ಲಿ ಪೌಲನೊಂದಿಗೆ ಸರಸಮಾನರಾಗಿರಲಿಲ್ಲ. ಪೌಲನು ಒಬ್ಬ ನಿಜವಾದ ಅಪೊಸ್ತಲನಾಗಿದ್ದನು, ಆದರೆ ಅವರು ಸುಳ್ಳು ಅಪೊಸ್ತಲರಾಗಿದ್ದರು.

ಪೌಲನ ಕಾಲದಿಂದ ಇಂದಿನ ಸಮಯದ ತನಕ ಅನೇಕ ಸುಳ್ಳು ಅಪೊಸ್ತಲರು ಕ್ರಿಸ್ತನ ಸಭೆಯೊಳಗೆ ನುಸುಳಿರುತ್ತಾರೆ (ಮಾರ್ಕ 13:22; ಅ.ಕೃತ್ಯ 20:29-30, ರೋಮ 16:17-18; ಗಲಾತ್ಯ 1:7; 1 ತಿಮೊಥೆ 4:1-2; ತೀತನು 1:10-11 ನೋಡಿರಿ). ನಾವು ನಮ್ಮನ್ನು ಈ ಸುಳ್ಳು ಅಪೊಸ್ತಲರಿಂದ ವಂಚಿಸಲ್ಪಡದಂತೆ ಕಾಪಾಡಿಕೊಳ್ಳುವದು ಹೇಗೆ? ಉತ್ತರವೇನೆಂದರೆ; ದೇವರ ವಾಕ್ಯವನ್ನು – ಬೈಬಲ್ ಅಭ್ಯಾಸಿಸಿ ಆತನ ವಾಕ್ಯವನ್ನು ನಮ್ಮ ಹೃದಯಗಳಲ್ಲಿ ಇಟ್ಟುಕೊಳ್ಳುವದರ ಮೂಲಕವೇ.

**14** ಈ ಸುಳ್ಳು ಅಪೊಸ್ತಲರು ಸೈತಾನನ ಸೇವಕರಾಗಿದ್ದಾರೆ. ಸೈತಾನನು ತಾನೇ ಪ್ರಕಾಶರೂಪವುಳ್ಳ ದೇವದೂತನ ವೇಷವನ್ನು ಹಾಕಿಕೊಳ್ಳುತ್ತಾನೆ ಮತ್ತು ಈ ಮಾರ್ಗದ ಮೂಲಕ ಅನೇಕರನ್ನು ವಂಚಿಸುತ್ತಾನೆ. (ಮತ್ತಾಯ 7:15 ಮತ್ತು ವ್ಯಾಖ್ಯಾನ ನೋಡಿರಿ).

**15** ಈ ಸುಳ್ಳು ಅಪೊಸ್ತಲರು ತಮ್ಮ ಯಜಮಾನನಾದ ಸೈತಾನನ ಹಾಗೆ ನೀತಿಗೆ ಸೇವಕರಾಗಿ ಕಾಣಿಸುವದಕ್ಕೆ ವೇಷ ಹಾಕಿಕೊಳ್ಳುವರು. ನಾವು ಅವರನ್ನು ಹೇಗೆ ಗುರುತಿಸಬಲ್ಲೆವು? ನಾವು ಅವರನ್ನು ಅವರ ಕಾರ್ಯಗಳಿಂದ, ಅವರ ಫಲಗಳಿಂದ ಗುರುತಿಸಬಲ್ಲೆವು (ಮತ್ತಾಯ 7:16-20 ಮತ್ತು ವ್ಯಾಖ್ಯಾನ ನೋಡಿರಿ).

ನ್ಯಾಯತೀರ್ಪಿನ ದಿನದಲ್ಲಿ ಈ ಸುಳ್ಳು ಅಪೊಸ್ತಲರು ತಮ್ಮ ಕೃತ್ಯಗಳಿಗೆ ತಕ್ಕಹಾಗೆಯೇ ದಂಡನೆಯನ್ನು ಪಡೆಯುವರು (ಮತ್ತಾಯ 7:19;2ಥೆಸಲೋನಿಕ 1:8-9).

## ಪೌಲನು ತನ್ನ ಶ್ರಮೆಗಳ ಬಗ್ಗೆ ಹೊಗಳಿಕೊಂಡಿದ್ದು (11:16-33)

**16** ಪೌಲನು ಬುದ್ಧಿಹೀನನಲ್ಲ, ಆದರೆ, ಕೊರಿಂಥದವರು ಆತನನ್ನು ಬುದ್ಧಿಹೀನನೆಂದು ನೆನಸುವದಕ್ಕೆ ಇಚ್ಛಿಸುವದಾದರೆ ಹಾಗೆಯೇ ಮಾಡಲಿ. ಪೌಲನು ಕೊರಿಂಥದವರಿಗೆ ಹೇಳುವದೇನೆಂದರೆ: "ನೀವು ನನ್ನನ್ನು ಬುದ್ಧಿಹೀನನೆಂದು ನೆನಸುತ್ತಿರುವದರಿಂದ ನಾನು ಬುದ್ಧಿಹೀನನಂತೆಯೇ ಮಾತಾಡುತ್ತಾ ನನ್ನ ಬಗ್ಗೆ ಹೊಗಳಿಕೊಳ್ಳಲಿದ್ದೇನೆ" (ವಚನ 1 ನೋಡಿರಿ).

**17-18** ಈ ಭಾಗದಲ್ಲಿ ಪೌಲನು ತಾನು ಕ್ರಿಸ್ತನು ಮಾತಾಡುವಂತೆ ಮಾತಾಡದೆ ಬುದ್ಧಿ ಹೀನನಂತೆ ಮಾತಾಡುತ್ತೇನೆಂದು ಹೇಳುತ್ತಾನೆ. ವಾಸ್ತವದಲ್ಲಿ, ಆತನು ಆ ಸುಳ್ಳು ಅಪೊಸ್ತಲರ ಹಾಗೆಯೇ ಮಾತಾಡುತ್ತಿದ್ದಾನೆ. ಸುಳ್ಳು ಅಪೊಸ್ತಲರು ತಮ್ಮ ಕುರಿತಾಗಿ ಹೊಗಳಿಕೊಂಡಿದ್ದರು. ಸುಳ್ಳು ಅಪೊಸ್ತಲರ ಬುದ್ಧಿಹೀನತೆಯನ್ನು ಬಯಲಿಗೆ ತರುವದಕ್ಕೋಸ್ಕರ ಪೌಲನು ಈ ಭಾಗದಲ್ಲಿ ಅವರದೇ ಆದ ಮಾತಿನ ಹಾಗು ತರ್ಕದ ಶೈಲಿಯನ್ನೇ ಅನುಕರಿಸುತ್ತಿದ್ದಾನೆ. ಈ ಕಾರಣದಿಂದಲೇ ಪೌಲನು ಇಲ್ಲಿ ತನ್ನನ್ನು ಕುರಿತು ಹೊಗಳಿಕೊಳ್ಳುತ್ತಾನೆ: ಆತನು ಸುಳ್ಳು ಅಪೊಸ್ತಲರನ್ನು ಕೇವಲ ಅನುಕರಿಸುತ್ತಿದ್ದಾನಷ್ಟೇ. ಅದೇ ಸಮಯದಲ್ಲಿ, ಪೌಲನು ಯಾವುದರ ಕುರಿತಾಗಿ ಹೊಗಳಿಕೊಳ್ಳುತ್ತಾನೋ ಅದೆಲ್ಲವೂ ವಾಸ್ತವದಲ್ಲಿ ಸತ್ಯವೇ ಎಂಬದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

**19** ಇಲ್ಲಿ ಪೌಲನು ಕೊರಿಂಥದವರೊಂದಿಗೆ ಪುನಃ ಮಾರ್ಮಿಕವಾಗಿ ಮಾತಾಡುತ್ತಾನೆ. ಕೊರಿಂಥದವರು ತಾವು ಎಲ್ಲಾ ರೀತಿಯ ಬೋಧಕರ ಮಾತುಗಳನ್ನು ಕೇಳಿಸಿಕೊಳ್ಳಲು ಇಷ್ಟ ಪಡುತ್ತಿದ್ದರಾದ್ದರಿಂದ ತಮ್ಮನ್ನು ಬುದ್ಧಿವಂತರು ಎಂದು ಪರಿಗಣಿಸಿಕೊಂಡಿದ್ದರು. ಆದರೆ ಅವರು "ಬುದ್ಧಿವಂತರು" ಆಗಿದ್ದರೂ ಸುಳ್ಳು ಅಪೊಸ್ತಲರ ಬೋಧನೆಯನ್ನು ಅಂಗೀಕರಿಸಿಕೊಂಡಿದ್ದರು, ಮತ್ತು ಆ ಬೋಧನೆಯು ಅವರಿಗೆ ದೊಡ್ಡ ಆತ್ಮೀಕ ಹಾನಿಯನ್ನು ಮಾಡಿತ್ತು.

**20** ಸುಳ್ಳು ಅಪೊಸ್ತಲರು ತಮ್ಮ ಬೋಧನೆಯ ಮೂಲಕ ಕೊರಿಂಥದವರನ್ನು ಸೈತಾನನಹಿಡಿತಕ್ಕೊಳಪಡಿಸುತ್ತಿದ್ದರು. ಕೊರಿಂಥದವರು "ಗುಲಾಮರಾಗಿ" ಮಾಡಲ್ಪಟ್ಟಿದ್ದರು. ಸುಳ್ಳು ಅಪೊಸ್ತಲರು ಕೊರಿಂಥದವರನ್ನು ಕ್ರಿಸ್ತನಲ್ಲಿ ಅವರಿಗಿದ್ದ ಸ್ವಾತಂತ್ರ್ಯದಿಂದ ವಿಮುಖಗೊಳಿಸುತ್ತಿದ್ದರು (ಗಲಾತ್ಯ 5:1 ನೋಡಿರಿ).

ಈ ಸುಳ್ಳು ಅಪೊಸ್ತಲರು ತಮ್ಮ ಬೋಧನೆಗೆ ವೇತನವನ್ನು ತೆಗೆದುಕೊಳ್ಳುವದರ ಮೂಲಕ ಕೊರಿಂಥದವರನ್ನು "ಸ್ವಾರ್ಥಕ್ಕೆ ಬಳಸಿಕೊಂಡು" ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆಂದು ಪೌಲನು ಹೇಳುತ್ತಾನೆ. ಈ ಸುಳ್ಳು ಅಪೊಸ್ತಲರು ತಮ್ಮ ಸುಳ್ಳು ಬೋಧನೆಯ ಮೂಲಕ ಒಂದು ಅರ್ಥದಲ್ಲಿ ಕೊರಿಂಥದವರ ಮುಖದ ಮೇಲೆ "ಹೊಡೆಯುವವರಾಗಿದ್ದರು".

**21** ಪೌಲನು ಇಲ್ಲಿ ಮಾರ್ಮಿಕವಾಗಿ ಹೇಳುವದೇನೆಂದರೆ; "ಈ ಸುಳ್ಳು ಅಪೊಸ್ತಲರು ಮಾಡುತ್ತಿರುವ ಕಾರ್ಯವನ್ನು ಮಾಡುವದಕ್ಕೆ ನಾನು ಬಲವಿಲ್ಲದವನಾಗಿದ್ದೇನೆ; ನಾನು ಅವರ ಹಾಗೆ ಬಲಿಷ್ಠನೂ ಧೈರ್ಯವುಳ್ಳವನೂ ಆಗಿರುವದಿಲ್ಲ". ಇದರ ಮೂಲಕ ಪೌಲನು ತಾನು ಸ್ವತಃ ಕೊರಿಂಥದವರನ್ನು ಯಾವದೇ ರೀತಿಯಲ್ಲಿ ಸ್ವಾರ್ಥಕ್ಕೆ ಬಳಸಿಕೊಂಡಿಲ್ಲ ಅಥವಾ ದಾಸರನ್ನಾಗಿ ಮಾಡಿಕೊಂಡಿಲ್ಲ ಎಂದು ಸೂಚಿಸುತ್ತಾನೆ. ಪೌಲನು ಎಷ್ಟು "ಬಲಹೀನ" ಎಂಬದನ್ನು ಇದು ತೋರಿಸುತ್ತದೆ!

ಆದರೆ ಈ ಸುಳ್ಳು ಅಪೊಸ್ತಲರು ತಮ್ಮನ್ನು ಕುರಿತು ಹೊಗಳಿಕೊಳ್ಳಲಿರುವದಾದರೆ ಪೌಲನೂ ತನ್ನ ಕುರಿತಾಗಿ ಹೊಗಳಿಕೊಳ್ಳುವನು. ಅವರು ತನಗಿಂತಲೂ ಉತ್ತಮರೇನಲ್ಲ ಎಂಬದನ್ನು ಪೌಲನು ನಿರೂಪಿಸುವದಕ್ಕೆ ಸಿದ್ಧನಾಗಿದ್ದಾನೆ. ಆತನು ಅವರ ಗರ್ವ ಹಾಗು ಬುದ್ಧಿಹೀನ ರೀತಿಯಲ್ಲಿಯೇ ಮಾತಾಡುವನು!

**22** ಸುಳ್ಳು ಅಪೊಸ್ತಲರು ತಾವು ನಿಜವಾದ ಇಬ್ರಿಯರು – ಅಂದರೆ, ಇಸ್ರಾಯೇಲ್ಯರು (ಯೆಹೂದ್ಯರು) – ಎಂದು ಹೊಗಳಿಕೊಂಡರು. ಪೌಲನು "ನಾನೂ ಒಬ್ಬ ನಿಜವಾದ ಯೆಹೂದ್ಯನು" ಎಂದು ಹೇಳುತ್ತಾನೆ.

23 ಸುಳ್ಳು ಅಪೊಸ್ತಲರು ತಮ್ಮನ್ನು ಕ್ರಿಸ್ತನ ಅಪೊಸ್ತಲರೆಂದು ಹೇಳಿಕೊಂಡರು (ವಚನ 13). ಆದರೆ ಕ್ರಿಸ್ತನಿಗಾಗಿ ಪೌಲನು ಶ್ರಮೆಯನ್ನು ಅನುಭವಿಸಿದ್ದಂತೆ ಅವರು ಅನುಭವಿಸಿರಲಿಲ್ಲ. ಪೌಲನು ಕ್ರಿಸ್ತನ ಒಬ್ಬ ನಿಜವಾದ ಅಪೊಸ್ತಲನಾಗಿದ್ದನು, ಯಾಕೆಂದರೆ, ಆತನು ಕ್ರಿಸ್ತನಿಗಾಗಿ ಶ್ರಮೆಯನ್ನು ಅನುಭವಿಸಿದ್ದನು.

ಅಪೊಸ್ತಲರ ಕೃತ್ಯಗಳು ಪುಸ್ತಕದ ಪ್ರಕಾರವಾಗಿ ಪೌಲನು ಹೆಚ್ಚು ಕಡಿಮೆ ನಾಲ್ಕು ಸಾರಿ ಸೆರೆಮನೆಗೆ ಹಾಕಲ್ಪಟ್ಟಿದ್ದನು (ಅ.ಕೃತ್ಯ 16:23; 22:29; 23:35; 28:16). ಪೌಲನು ಏಳು ಸಾರಿಯಷ್ಟಾದರೂ ಸೆರೆಮನೆಗೆ ಹಾಕಲ್ಪಟ್ಟನೆಂದು ಕೆಲವು ಮಂದಿ ಇತಿಹಾಸಕಾರರು ಹೇಳುತ್ತಾರೆ.

ಪೌಲನು ಕೊರಡೆಗಳಿಂದ ಹೊಡೆಯಲ್ಪಟ್ಟಿದ್ದು ಈ 24ನೇ ವಚನ ಹಾಗು ಅ.ಕೃತ್ಯ 16:22-23 ರಲ್ಲಿ ಪ್ರಸ್ತಾಪಿಸಲ್ಪಟ್ಟಿದೆ.

ಪೌಲನು ಪುನಃ ಮರಣದ ಬಾಯೊಳಗೆ ಸಿಕ್ಕಿಕೊಂಡಿದ್ದನು; ಅಂದರೆ, ಆತನು ನಿರಂತರವಾಗಿ ಮರಣದ ಅಪಾಯವನ್ನು ಎದುರಿಸಿದನು (ಅ.ಕೃತ್ಯ 14:19; ರೋಮ 8:36; 1 ಕೊರಿಂಥ ೧೫:೩೦–31; 2 ಕೊರಿಂಥ 1:8-9 ನೋಡಿರಿ).

24 ಧರ್ಮೋಪದೇಶಕಾಂಡ 25:2-3 ರ ಪ್ರಕಾರವಾಗಿ ಅಪರಾಧಿಯೊಬ್ಬನು ಕೊರಡೆಯಿಂದ ನಾಲ್ವತ್ತಕ್ಕಿಂತಲೂ ಹೆಚ್ಚು ಏಟುಗಳನ್ನು ಪಡೆಯಬಾರದಾಗಿತ್ತು. ಆದದರಿಂದ, ಅಕಸ್ಮೀಕವಾಗಿ (ತಪ್ಪುಲೆಕ್ಕದಿಂದ) ನಾಲ್ವಕ್ಕಿಂತಲೂ ಹೆಚ್ಚು ಏಟುಗಳನ್ನು ನೀಡುವಂತಾಗಬಾರದೆಂದು ಯೆಹೂದ್ಯರು ಯಾವಾಗಲೂ ಒಂದು ಕಡಿಮೆ ನಾಲ್ವತ್ತು – ಅಂದರೆ, ಮೂವತ್ತೊಂಭತ್ತು – ಏಟುಗಳನ್ನು ನೀಡುತ್ತಿದ್ದರು.

ಯೇಸು ತನ್ನ ಶಿಷ್ಯರಿಗೆ ಅವರು ಯೆಹೂದ್ಯರ ಕೊರಡೆ ಏಟುಗಳಿಗೆ ಒಳಗಾಗುವರೆಂದು ಎಚ್ಚರಿಸಿದ್ದನು (ಮಾರ್ಕ 13:9). ಪೌಲನು ತಾನೇ ಪುನರುಥ್ಥಾನಗೊಂಡ ಕ್ರಿಸ್ತನನ್ನು ಸಂಧಿಸುವದಕ್ಕೆ ಮುಂಚೆ ಕ್ರೈಸ್ತರನ್ನು ಯೆಹೂದ್ಯ ಸಭಾಮಂದಿರಗಳಲ್ಲಿ ಕೊರಡೆಗಳಿಂದ ಹೊಡೆಯಿಸುವದಕ್ಕೆ ಕಾರಣನಾಗಿದ್ದನು (ಅ.ಕೃತ್ಯ 26:11).

25 ಯೆಹೂದ್ಯರು ಜನರನ್ನು ಕೊರಡೆಗಳಿಂದ ಹೊಡೆಯುತ್ತಿದ್ದರು. ಅನ್ಯ ಜನರು (ಗ್ರೀಕರು ಹಾಗು ರೋಮಾಯರು) ಜನರನ್ನು ಛಡಿಗಳಿಂದ ಹೊಡೆಯುತ್ತಿದ್ದರು (ಅ.ಕೃತ್ಯ 16:22).

ಯೆಹೂದ್ಯರು ಕಲ್ಲೆಸೆದು ಅಪರಾಧಿಗಳಿಗೆ ಮರಣವನ್ನು ವಿಧಿಸುತ್ತಿದ್ದರು (ಯಾಜಕಕಾಂಡ 24:16; ಅ.ಕೃತ್ಯ 7:57-58). ಪೌಲನಿಗೆ ಕಲ್ಲೆಸೆಯಲ್ಪಟ್ಟಿದ್ದು ಅ.ಕೃತ್ಯ 14:19 ರಲ್ಲಿ ಪ್ರಸ್ತಾಪಿಸಲ್ಪಟ್ಟಿದೆ.

26 ಪೌಲನು ನಿರಂತರವಾಗಿ ಅಪಾಯದಲ್ಲಿದ್ದನು (2 ಕೊರಿಂಥ 4:8-9 ನೋಡಿರಿ). ಪೌಲನು ಕೊನೆಯಲ್ಲಿ ಪ್ರಸ್ತಾಪಿಸುವ ಅಪಾಯವು ಸುಳ್ಳು ಸಹೋದರರೊಳಗೆ ಇರುವಾಗ ಅಪಾಯವನ್ನು ಕುರಿತು ಪ್ರಸ್ತಾಪಿಸುವದನ್ನು ಗಮನಿಸಿರಿ. ಅನೇಕ ಕ್ರೈಸ್ತರ ತಮ್ಮ ಸ್ವಂತ ಅನುಭವಗಳಿಂದ ಇದು ಎಲ್ಲಕ್ಕಿಂತ ಒಂದು ದೊಡ್ಡ ಮರಣಾಂತೀಕ ಅಪಾಯ ಎಂದು ಸಾಕ್ಷಿ ಹೇಳಬಲ್ಲರು (ಕೀರ್ತನೆಗಳು 55:12-14).

27 26ನೇ ವಚನದಲ್ಲಿ ಪೌಲನು ವಿವಿಧ ಅಪಾಯಗಳನ್ನು ಪ್ರಸ್ತಾಪಿಸಿದ್ದಾನೆ. ಈ ೨೭ನೇ ವಚನದಲ್ಲಿ ಪೌಲನು ತಾನು ಎದುರಿಸಿದ ಕೆಲವೊಂದು ಸಂಕಷ್ಟಗಳನ್ನು ಪ್ರಸ್ತಾಪಿಸುತ್ತಾನೆ. ಇದರ ಮೂಲಕ ಪೌಲನು ಎಷ್ಟೊಂದು ಶ್ರಮೆ ಅನುಭವಿಸಿದನೆಂಬದನ್ನು ನಾವು ತಿಳುಕೊಳ್ಳಬಹುದು. ಪೌಲನು ಹಸಿವೆ ಬಾಯಾರಿಕೆಗಳನ್ನು ಮಾತ್ರವಲ್ಲ, ಆದರೆ ಆತನು ಚಳಿಯಲ್ಲಿಯೂ ವಸ್ತ್ರವಿಲ್ಲದೆಯೂ ಇರಬೇಕಾದ ಪರಿಸ್ಥಿತಿಗಳನ್ನು ಸಹ ಅನುಭವಿಸಿದ್ದಾನೆ (1 ಕೊರಿಂಥ 4:11-13; 2 ಕೊರಿಂಥ 6:4-10; 1 ಥೆಸಲೋನಿಕ 2:9 ನೋಡಿರಿ).

28 ಪೌಲನು ಈ "ಬಹಿರಂಗದ" ಅಪಾಯ ಹಾಗು ಪ್ರಯಾಸ ಪರಿಶ್ರಮಗಳ ಜೊತೆಯಲ್ಲಿ ಎಲ್ಲಾ ಸಭೆಗಳ ವಿಷಯವಾದ ಚಿಂತೆಯಿಂದ "ಅಂತರ್ಯದಲ್ಲಿ" ಒತ್ತಡಕ್ಕೊಳಗಾಗಿದ್ದನು. ತಂದೆಯು ತನ್ನ ಮಕ್ಕಳ ಬಗ್ಗೆ ಚಿಂತೆಯನ್ನು ಹೊಂದಿರುವ ಪ್ರಕಾರವೇ ಪೌಲನು ಸಭೆಗಳಿಗಾಗಿ ಚಿಂತೆಯನ್ನು ಹೊಂದಿದ್ದನು. ಪೌಲನು ಎಲ್ಲಕ್ಕಿಂತ ಹೆಚ್ಚಾಗಿ ಸಭೆಯನ್ನು ಪ್ರವೇಶಿಸಲು ಯಾವಾಗಲೂ ಪ್ರಯತ್ನಿಸುತ್ತಿದ್ದ ಸುಳ್ಳು ಅಪೊಸ್ತಲರು ಹಾಗು ಬೋಧಕರ – ಕ್ರೂರ ತೋಳಗಳ – ವಿಷಯವಾಗಿ ಚಿಂತೆಗೊಳಗಾಗಿದ್ದನು (ಮತ್ತಾಯ 7:15; ಅ.ಕೃತ್ಯ 20:29 ನೋಡಿರಿ).

29 ಇಲ್ಲಿ ಪುನಃ ನಾವು ಪೌಲನ ಹೃದಯದ ಒಳಭಾಗವನ್ನು ಕಾಣಬಹುದು. ಕೊರಿಂಥದವರು ಪೌಲನ ಆತ್ಮೀಕ ಮಕ್ಕಳಂತಿದ್ದರು. ಅವರು ಬಲವಿಲ್ಲದವರಾದರೆ ಪೌಲನು ಸಹ ಅವರೊಂದಿಗೆ ಬಲ್ಲವಿಲ್ಲದವನಾಗುತ್ತಾನೆ. ಅವರು ಪಾಪದಲ್ಲಿ ಸಿಕ್ಕಿಕೊಂಡರೆ ಪೌಲನು ಅವರನ್ನು ಪಾಪಕ್ಕೆ ನಡಿಸಿದ ವ್ಯಕ್ತಿಯ ವಿರುದ್ಧವಾಗಿ ಅಂತರ್ಯದಲ್ಲಿ ತಾಪಪಡುತ್ತಾನೆ.

30 ಪೌಲನು ತನ್ನ ಸ್ವಂತ ಬಲದಲ್ಲಿ ಹೊಗಳಿಕೊಳ್ಳುವದಿಲ್ಲ. ಬದಲಾಗಿ, ಆತನು ತನ್ನ ಬಲಹೀನತೆಯನ್ನು ತೋರ್ಪಡಿಸುವ ವಿಷಯಗಳಲ್ಲಿ – ಉದಾಹರಣೆಗೆ, ಆತನ ಶ್ರಮೆಗಳು ಆತನ ಚಿಂತೆಗಳು, ಆತನ ಅಪಾಯಗಳು, ಆತನ ಹಸಿವೆ ಬಾಯಾರಿಕೆಗಳು– ಹೊಗಳಿಕೊಳ್ಳುತ್ತಾನೆ.

ಪೌಲನು ತನ್ನಲ್ಲಿ ಹೊಗಳಿಕೊಳ್ಳುವದಿಲ್ಲ, ಆತನು ಕೊರಿಂಥದವರಿಗೆ "ನಾನು ಅವರೆಲ್ಲರಿಗಿಂತಲೂ ಹೆಚ್ಚಾಗಿ ಪ್ರಯಾಸಪಟ್ಟೆನು" ಎಂದು ಹೇಳಿದ್ದು ನಿಜವೇ. ಆದರೆ ಆತನು ತಕ್ಷಣವೇ "—ಆದಾಗ್ಯು ಪ್ರಯಾಸಪಟ್ಟವನು ನಾನಲ್ಲ, ನನ್ನೊಂದಿಗಿರುವ ದೇವರ ಕೃಪೆಯೇ" ಎಂದು ಹೇಳುತ್ತಾನೆ (1 ಕೊರಿಂಥ 15:16). ಕೆಲವು ಸಮಯಗಳಲ್ಲಿ ಕ್ರೈಸ್ತರು ತಮ್ಮ

ಜೀವಿತಗಳಲ್ಲಿ ದೇವರು ಮಾಡಿರುವಂಥ ಕಾರ್ಯಗಳ ಬಗ್ಗೆ "ಹೊಗಳಿಕೊಳ್ಳುವದು" ಸಮಂಜಸವಾಗಿರುತ್ತದೆ. ಆದರೆ ಯಾವಾಗಲೂ ನಾವು ದೇವರು ಮಾಡಿರುವದರ ಬಗ್ಗೆ ಹೊಗಳಿಕೊಳ್ಳಬೇಕೇಹೊರತು ನಾವು ಮಾಡಿದ್ದ ಕಾರ್ಯದ ವಿಷಯದಲ್ಲಿ ಹೊಗಳಿಕೊಳ್ಳಬಾರದು.

**31** ಕೊರಿಂಥದಲ್ಲಿನ ಪೌಲನ ವೈರಿಗಳು ಪೌಲನು ತನ್ನ ಎಲ್ಲಾ ಶ್ರಮೆ ಹಾಗು ಕಷ್ಟಗಳ ಬಗ್ಗೆ ಸುಳ್ಳಾಡುತ್ತಿದ್ದಾನೆಂದು ಹೇಳಬಹುದು. ಆದರೆ ಆತನು ಸುಳ್ಳಾಡುತ್ತಿಲ್ಲ ಎಂದು ದೇವರು ಬಲ್ಲನು.

**32-33** ಇಲ್ಲಿ ಪೌಲನು ಇನ್ನೂ ಒಂದು ಅನುಭವದ ಬಗ್ಗೆ ಜ್ಞಾಪಿಸಿಕೊಂಡು ಅದನ್ನು ಈ ವಚನಗಳಲ್ಲಿ ಪ್ರಸ್ತಾಪಿಸುತ್ತಾನೆ. ಇದು ಆತನ ಜೀವಿತದಲ್ಲಿ ಒಂದು ಪ್ರಾಮುಖ್ಯ ಘಟನೆಯಾಗಿತ್ತು. ಪೌಲನು ಆಗಷ್ಟೇ ದಮಸ್ಕದ[23] ಮಾರ್ಗದಲ್ಲಿ ಪು ನರುತ್ಥಾನಗೊಂಡ ಕ್ರಿಸ್ತನನ್ನು ಸಂಧಿಸಿ ಪರಿವರ್ತನೆಗೊಂಡವನಾಗಿದ್ದನು (ಅ.ಕೃತ್ಯ 9:1-8 ನೋಡಿರಿ). ಅವನು ದಮಸ್ಕಕ್ಕೆ ಬಂದ ಬಳಿಕ ದೀಕ್ಷಾಸ್ನಾನ ಮಾಡಿಸಿಕೊಂಡವನಾಗಿ ಪೌಲನು ಕ್ರಿಸ್ತನ ವಿಷಯವಾಗಿ ಬೋಧಿಸಲಾರಂಭಿಸಿದನು. ಆದರೆ ಮೂಲತಃ ಆತನು ಕ್ರಿಸ್ತನ ಹಿಂಬಾಲಕರನ್ನು ಸೆರೆಹಿಡಿದು ದಂಡಿಸುವದಕ್ಕೋಸ್ಕರ ದಮಸ್ಕಕ್ಕೆ ಹೋಗಿದ್ದನು. ಆತನ ಜೀವಿತದಲ್ಲಿ ಎಂಥ ನಾಟಕೀಯ ಪರಿವರ್ತನೆ ಉಂಟಾಗಿತ್ತಲ್ಲವೇ! ಆತನು ದಮಸ್ಕಕ್ಕೆ ಪ್ರಯಾಣವನ್ನು ಪ್ರಾರಂಭಿಸಿದಾಗ ಕ್ರೈಸ್ತರನ್ನು ಹುಡುಕುತ್ತಾ ಹೊರಟ ಗರ್ವಿಷ್ಠನಾದ ಯೆಹೂದ್ಯನಾಗಿದ್ದನು. ಆದರೆ ದಮಸ್ಕದಿಂದ ಹೊರಟಾಗ ಆತನು ಚೀಲದಲ್ಲಿ ಬಚ್ಚಿಟ್ಟುಕೊಂಡಿದ್ದ ಒಬ್ಬ ದೀನ ಕ್ರೈಸ್ತನಾಗಿದ್ದನು! (ಅ.ಕೃತ್ಯ 9:20-25 ನೋಡಿರಿ).

---

## ಅಧ್ಯಾಯ - 12

### ಪೌಲನ ದರ್ಶನ ಹಾಗು ಆತನ ಮುಳ್ಳು (12:1-10)

**1-2** ಪೌಲನು ಈ ಪತ್ರಿಕೆಯನ್ನು ಬರೆಯುವದಕ್ಕೆ ಹದಿನಾಲ್ಕು ವರ್ಷಗಳ ಮುಂಚೆ ಆತನು ಪರಲೋಕದ ಒಂದು ದರ್ಶನ ಅಥವಾ ಪ್ರಕಟಣೆಯನ್ನು ಹೊಂದಿದ್ದನು. ಆ ದರ್ಶನವು ಎಷ್ಟು ಆಶ್ಚರ್ಯಕರವಾಗಿತ್ತೆಂದರೆ ಪೌಲನು ಅದನ್ನು ಕುರಿತು ಸಾಮಾನ್ಯವಾದ ರೀತಿಯಲ್ಲಿ ಮಾತಾಡಲಾರದವನಾಗಿದ್ದಾನೆ. "ನಾನು ಒಂದು ದರ್ಶನ ಕಂಡೆನು" ಎಂದು ಹೇಳುವದಕ್ಕೆ ಬದಲಾಗಿ ಪೌಲನು "ಕ್ರಿಸ್ತನಲ್ಲಿದ್ದ ಒಬ್ಬ ಮನುಷ್ಯನನ್ನು ಬಲ್ಲೆನು, ಅವನು ಒಂದು ದರ್ಶನ ಕಂಡನು" ಎಂದು ಹೇಳುತ್ತಾನೆ (ವಚನ 2). ಪೌಲನು ಹೀಗೆ ಹೇಳುವಾಗ ತನ್ನನ್ನೇ ಕುರಿತು ಸೂಚಿಸುತ್ತಾನೆಂಬದನ್ನು ನಾವು ಬಲ್ಲೆವು, ಯಾಕೆಂದರೆ ೭ನೇ ವಚನದಲ್ಲಿ ಬರೆಯುವದೇನೆಂದರೆ; ನನಗೆ ತಿಳಿಸಲ್ಪಟ್ಟ ರಹಸ್ಯಗಳು ಬಹು ವಿಶೇಷವಾಗಿರುವದರಿಂದಲೂ, ನನ್ನನ್ನು ಅತಿಶಯವಾಗಿ ಹೆಚ್ಚಿಸಿಕೊಳ್ಳಬಾರದೆಂದು ಒಂದು ಮುಳ್ಳು ನನ್ನ ಶರೀರದಲ್ಲಿ ನಾಟಿದೆ.... ಆ ಪ್ರಕಟಣೆ (ದರ್ಶನ) ಯಾವದೆಂದರೆ: ಒಬ್ಬ ಮನುಷ್ಯನು (ಪೌಲನು) ಮೂರನೆಯ ಆಕಾಶದ ಪರ್ಯಂತರಕ್ಕೂ ಒಯ್ಯಲ್ಪಟ್ಟನು (ವಚನ 2). ಮೂರನೆಯ ಆಕಾಶವು ಯೆಹೂದ್ಯರು ಹೇಳುವಂಥ ಮಾತಾಗಿದ್ದು ದೇವರು ಪ್ರಸನ್ನನಾಗಿರುವ ಸ್ಥಳ ಎಂದು ಅರ್ಥವಾಗಿರುತ್ತದೆ. ಪೌಲನ ಕಾಲದಲ್ಲಿ ಯೆಹೂದ್ಯರ ನಂಬಿಕೆಯ ಪ್ರಕಾರವಾಗಿ ಆಕಾಶವು "ಮೊದಲನೆಯ ಪರಲೋಕ" ಮತ್ತು ವಿಶ್ವವು "ಎರಡನೆಯ ಪರಲೋಕ" ಆಗಿತ್ತು. ಹಾಗಾದರೆ ಮೂರನೆಯ ಪರಲೋಕವು ಕ್ರಿಸ್ತನು ದೇವರ ಬಲಗಡೆಯಲ್ಲಿ ಕುಳಿತುಕೊಳ್ಳುವ ಆತ್ಮೀಕ ಪರಲೋಕವನ್ನು ಸೂಚಿಸುತ್ತದೆ (ಅ.ಕೃತ್ಯ 1:10-11; ಎಫೆಸ 1:20 ನೋಡಿರಿ). ಮತ್ತು ಅಲ್ಲಿ ಕ್ರಿಸ್ತನ ವಿಶ್ವಾಸಿಗಳು ಸದಾಕಾಲವೂ ದೇವರೊಂದಿಗೆ ಜೀವಿಸುವವರಾಗಿದ್ದಾರೆ. ಈ ದರ್ಶನದಲ್ಲಿ ಪೌಲನ ದೇಹವು ಮೂರನೆಯ ಆಕಾಶಕ್ಕೆ (ಪರಲೋಕಕ್ಕೆ) ಒಯ್ಯಲ್ಪಟ್ಟಿತ್ತೋ ಅಥವಾ ಆತನ ಆತ್ಮವು ಒಯ್ಯಲ್ಪಟ್ಟಿತ್ತೋ ಎಂಬದು ಪೌಲನಿಗೆ ಖಚಿತವಾಗಿ ಗೊತ್ತಿರುವದಿಲ್ಲ.

**3-4** ಪರದೈಸ ಅಂದರೇನು/ (ವಚನ 4). ಪರದೈಸವು ಲೂಕ 23:43 ಮತ್ತು ಪ್ರಕಟಣೆ 2:7 ರಲ್ಲಿ ಸಹ ಪ್ರಸ್ತಾಪಿಸಲ್ಪಟ್ಟಿದೆ. ಪರದೈಸವು ಕ್ರಿಸ್ತನಲ್ಲಿ ವಿಶ್ವಾಸಿಸುವವರು ಸತ್ತ ಕೂಡಲೇ ಹೋಗುವ ಸ್ಥಳವಾಗಿದೆ ಎಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ. ಅಲ್ಲಿ ದೇಹದ ಹೊರತಾಗಿ ವಿಸ್ವಾಸಿಗಳ ಪ್ರಾಣ ಮತ್ತು ಆತ್ಮಗಳು ಕ್ರಿಸ್ತನು ಪು ನಃ ಬಂದು ಪ್ರತಿಯೊಬ್ಬ ವಿಶ್ವಾಸಿಗೆ ಪು ನರುತ್ಥಾನದ ಹೊಸ ದೇಹವನ್ನು ಕೊಡುವ ಸಮಯದ ವರೆಗೂ ಇರುತ್ತವೆ (ರೋಮ 8:23; 1 ಕೊರಿಂಥ 15:42-44; 1 ಥೆಸಲೋನಿಕ 4:16-17 ನೋಡಿರಿ). ಆಗ ವಿಶ್ವಾಸಿಗಳು ತಮ್ಮ ಹೊಸ ಪು ನರುತ್ಥಾನಗೊಂಡ ದೇಹಗಳನ್ನು ಪಡೆದವರಾಗಿ ಪರಲೋಕವನ್ನು – ಮೂರನೆಯ ಪರಲೋಕ (ಆಕಾಶ) – ಪ್ರವೇಶಿಸಿ ದೇವರ ಹಾಗು ಕ್ರಿಸ್ತನ ಸಂಗಡ ಸದಾಕಾಲವೂ ಜೀವಿಸುವರು.

ಪೌಲನು[4]ನೇ ವಚನದಲ್ಲಿ ತಾನು ಪರದೈಸಕ್ಕೆ (ಒಳಕ್ಕೆ) ಒಯ್ಯಲ್ಪಟ್ಟನು ಎಂದು ಹೇಳುತ್ತಾನೆ, ಆದರೆ ೨ನೇ ವಚನದಲ್ಲಿ ಮೂರನೆಯ ಆಕಾಶದ (ಪರಲೋಕದ) ಪರ್ಯಂತರಕ್ಕೂ (ವರೆಗೂ) ಒಯ್ಯಲ್ಪಟ್ಟನೆಂದು ಹೇಳುವದನ್ನು ಗಮನಿಸಿರಿ. ಗ್ರೀಕ್‌ನಲ್ಲಿ ಪೌಲನು "ಕ್ಕೆ" ಎಂಬುದಕ್ಕೆ ಈ ವಚನಗಳಲ್ಲಿ ಎರಡು ಬೇರೆ ಬೇರೆ ಪದಗಳನ್ನು ಉಪಯೋಗಿಸುತ್ತಾನೆ. ಅಂದರೆ ಆತನು ಪರದೈಸದೊಳಕ್ಕೆ ಒಯಲ್ಪಟ್ಟನು, ಆದರೆ ಆತನು ಮೂರನೆಯ ಪರಲೋಕದ "ವರೆಗೆ" ಮಾತ್ರ ತಲುಪಿದನು, ಅದರೊಳಕ್ಕೆ ಒಯ್ಯಲ್ಪಡಲಿಲ್ಲ ಎಂದು ಪೌಲನು ಹೇಳುತ್ತಿರುವಂತೆ ತೋರುತ್ತದೆ. ಇದು ಮೂರನೆಯ ಪರಲೋಕ ಮತ್ತು ಪರದೈಸ ಎರಡು ಬೇರೆ ಬೇರೆ ಸ್ಥಳಗಳೆಂಬದನ್ನು ತೋರಿಸುತ್ತದೆ ಎಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ.

ಆದರೆ ಇತರ ಕೆಲವು ಪಂಡಿತರು ಪರದೈಸ್ ಮತ್ತು ಮೂರನೆಯ ಪರಲೋಕ ನಿಜವಾಗಿಯೂ ಒಂದೇ ಸ್ಥಳವೆಂದು ನಂಬುತ್ತಾರೆ. ಬೈಬಲ್ ನಮಗೆ ಮರಣಾನಂತರದ ಜೀವಿತದ ಬಗ್ಗೆ ಅತಿ ಸ್ವಲ್ಪ ವಿವರಣೆಯನ್ನು ನೀಡುತ್ತದೆ. ಆದದರಿಂದ, ಈ ವಿಷಯದ ಬಗ್ಗೆ ಖಚಿತವಾಗಿ ತಿಳಿಯುವದು ಅಸಾಧ್ಯವಾಗಿರುತ್ತದೆ. ಪೌಲನು ತನಗೆ ಅದರ ಕುರಿತಾಗಿ ಮಾತಾಡಲು ಸಹ ಅನುಮತಿಯಿಲ್ಲ ಎಂದು ಹೇಳುತ್ತಾನೆ (ವಚನ 4).

**5** ಪೌಲನು ಬರೆಯುವದೇನೆಂದರೆ: ಅಂಥವನನ್ನು ಕುರಿತು ಹೆಚ್ಚಳಪಡುವೆನು; ಅಂದರೆ, ಪೌಲನು ತನಗೆ ದೇವರು ನೀಡಿದ ದರ್ಶನದ ಬಗ್ಗೆ ಹೆಚ್ಚಳಪಡುವನು. ಆದರೆ ಪೌಲನು ತನ್ನಲ್ಲೇ ಹೆಚ್ಚಳ ಪಡುವದಿಲ್ಲ. ಪೌಲನು ತನ್ನ ಕುರಿತು ಹೆಚ್ಚಳ ಪಡುವದಾದರೆ ತನ್ನ ನಿರ್ಬಲಾವಸ್ಥೆಗಳಲ್ಲಿಯೇ ಹೆಚ್ಚಳ ಪಡುವನು (ವಚನಗಳು 9-10 ನೋಡಿರಿ).

**6** ಪೌಲನು ನ್ಯಾಯ ಸಮ್ಮತವಾಗಿಯೇ ತನ್ನ ಸಾಧನೆಗಳ ಕುರಿತಾಗಿ ಹೊಗಳಿಕೊಳ್ಳಬಹುದಿತ್ತು,ಯಾಕೆಂದರೆ ಆತನ ಹೊಗಳಿಕೆಯು ಸಂಪೂರ್ಣವಾಗಿ – ಸತ್ಯವಾಗಿ–ಇರುತ್ತಿತ್ತು. ಪೌಲನ ಸಾಧನೆಗಳು ನಿಜವಾಗಿಯೂ ಶ್ರೇಷ್ಟವಾಗಿದ್ದವು . ಆತನು ಅನೇಕ ಸಭೆಗಳನ್ನು ಸ್ಥಾಪಿಸಿದ್ದನು. ಆತನು ಪವಿತ್ರಾತ್ಮನಿಂದ ಅನೇಕವರಗಳನ್ನ ಪಡೆದುಕೊಂಡಿದ್ದನು. ಆತನು ಅನೇಕ ಸೂಚಕಕಾರ್ಯಗಳನ್ನೂ ಅದ್ಭುತಗಳನ್ನೂ ಮಹಾತ್ಕಾರ್ಯಗಳನ್ನೂ ಮಾಡಿದ್ದನು (ವಚನ 12). ಆದರೆ ಇದೆಲ್ಲವೂ ಸತ್ಯವಾಗಿದ್ದರೂ ಇತರರು ದೇವರನ್ನು ಕೊಂಡಾಡುವದಕ್ಕೆ ಬದಲಾಗಿ ತನ್ನನ್ನು ಕೊಂಡಾಡುವದಕ್ಕೆ ಪ್ರಾರಂಭಿಸಬಾರದೆಂದು ಪೌಲನು ಅದರ ಬಗ್ಗೆ ಹೊಗಳಿಕೊಳ್ಳುವದಿಲ್ಲ (2 ಕೊರಿಂಥ 3:5). ಪೌಲನು ತನ್ನನ್ನು ಹೆಚ್ಚಿಸಿಕೊಳ್ಳಲು ಬಯಸುವದಿಲ್ಲ. ಆತನು ಕ್ರಿಸ್ತನು ಬೋಧನೆಯನ್ನು ನೆನಪಿನಲ್ಲಿಟ್ಟು ಕೊಂಡಿರುತ್ತಾನೆ: "ತನ್ನನ್ನು ಹೆಚ್ಚಿಸಿಕೊಳ್ಳುವವನು ತಗ್ಗಿಸಲ್ಪಡುವನು, ತನ್ನನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು" (ಮತ್ತಾಯ 23:12; ಲೂಕ 14:11).

**7** ಇಲ್ಲಿ ಪ್ರಸ್ತಾಪಿಸಲಾಗಿರುವ ಪೌಲನ ಶರೀರ ದಲ್ಲಿನ ಮುಳ್ಳು ಮತ್ತು ಸೈತಾನನ ದೂತ ಎರಡೂ ಒಂದೇ ಆಗಿದೆ. ಪೌಲನು ಶರೀರದಲ್ಲಿನ ಮುಳ್ಳು ಏನೆಂಬದನ್ನು ಹೇಳುವದಿಲ್ಲ. ಆದರೆ ಅದು ಪೌಲನಿಗೆ ಬಾಧೆಯನ್ನುಂಟು ಮಾಡಿದ ಒಂದು ರೀತಿಯ ತಾಪತ್ರಯ ಅಥವಾ ಮಾನುಷ ಬಲಹೀನತೆ ಆಗಿತ್ತೆಂಬದನ್ನು ನಾವು ತಿಳಿದು ಕೊಳ್ಳಬಹುದು. ಕೆಲವರು ಅದೊಂದು ಕಣ್ಣಿನ ಕಾಯಿಲೆ ಆಗಿತ್ತೆಂದು ನಂಬುತ್ತಾರೆ; ಇನ್ನು ಕೆಲವರು ಅದೊಂದು ಮಲೇರಿಯಾ ಜ್ವರ ಅಥವಾ ಅಪಸ್ಮರ ಅಥವಾ ಒಂದು ರೂಪದ ಕೊರಗು ಆಗಿತ್ತೆಂದು ಅಭಿಪ್ರಾಯಪಡುತ್ತಾರೆ. ಇನ್ನೂ ಕೆಲವರು ಅದು ಗಲಾತ್ಯ 4:13-14 ರಲ್ಲಿ ಪ್ರಸ್ತಾಪಿಸಿರುವ ಬೇನೆಯೇ ಆಗಿತ್ತು ಎಂದು ನಂಬುತ್ತಾನೆ, ಆ ಬೇನೆ ಏನೇ ಆಗಿರಬಹುದು. ಆ ಮುಳ್ಳು ಪೌಲನಿಗೆ ಕಷ್ಟದ ಸಮಯಗಳಲ್ಲಿ ಆಗಾಗ ಬರುತ್ತಲೇ ಇದ್ದ ಒಂದು ವಿಧದ ಶೋಧನೆಯಾಗಿತ್ತೆಂದು ಕೆಲವರು ನಂಬುತ್ತಾರೆ.

ಪೌಲನು ತನ್ನ ಮುಳ್ಳು ಯಾವು ದಾಗಿತ್ತೆಂಬದನ್ನು ನಿಖರವಾಗಿ ಹೇಳದಿರುವದು ನಮ್ಮ ಪ್ರಯೋಜನಾರ್ಥವಾಗಿಯೇ ಇರುತ್ತದೆ. ಯಾಕೆಂದರೆ ಪೌಲನ ಮುಳ್ಳ ಏನಾಗಿತ್ತೆಂಬದನ್ನು ನಿಖರವಾಗಿ ತಿಳಿದಿದ್ದರೆ ನಾವು "ನನಗೆ ಆ ರೀತಿಯ ಯಾವದೇ ಮುಳ್ಳು ಇಲ್ಲ; ಆದದರಿಂದ, ತನ್ನ ಮುಳ್ಳಿನ ಕುರಿತಾಗಿ ಇಲ್ಲಿ ಪೌಲನು ತಿಳಿಸುತ್ತಿರುವ ಬೋಧನೆಗೂ ನನಗೂ ಯಾವ ಸಂಬಂಧವಿಲ್ಲ" ಎಂದು ಹೇಳಬಹುದಾದ ಶೋಧನೆಗೆ ಒಳಗಾಗುತ್ತೇವೆ.

ಆದರೆ, ವಾಸ್ತವದಲ್ಲಿ, ಪೌಲನ ಮುಳ್ಳಿನ ವಿಷಯವಾದ ಈ ಬೋಧನೆಯು ನಮಗೆ ಅತಿ ಪ್ರಾಮುಖ್ಯವಾಗಿರುತ್ತದೆ, ಯಾಕೆಂದರೆ ಪ್ರತಿಯೊಬ್ಬ ಕ್ರೈಸ್ತನು ಒಂದಿಲ್ಲಾ ಒಂದು ರೀತಿಯ "ಮುಳ್ಳು" ಅಥವಾ "ಮುಳ್ಳುಗಳನ್ನು" ಹೊಂದಿದ್ದಾನೆ. ಅಂದರೆ, ನಮ್ಮಲ್ಲಿ ಪ್ರತಿಯೊಬ್ಬರೂ ಒಂದಿಲ್ಲಾ ಒಂದು ರೀತಿಯ ಶಾರೀರಿಕ ಅಥವಾ ಮಾನಸಿಕ ಬಲಹೀನತೆಯನ್ನು ಹೊಂದಿರುತ್ತೇವೆ. ಈ ಬಲಹೀನತೆಯ ಮೂಲಕ ನಾವು ದೀನರಾಗಿ ಮಾಡಲ್ಪಟ್ಟಿದ್ದೇವೆ. ದೇವರು ಜಂಭ ಹಾಗು ಗರ್ವವುಳ್ಳ ವ್ಯಕ್ತಿಯ ಮುಖಾಂತರ ಸುಲಭವಾಗಿ ಕಾರ್ಯಮಾಡಲು ಸಾಧ್ಯವಿಲ್ಲ. ಹೀಗೆ, ದೇವರು ಪೌಲನಿಗೆ ಆಶ್ಚರ್ಯಕರವಾದ ವರಗಳು ಹಾಗು ಅನುಭವಗಳನ್ನು ಕೊಟ್ಟಾಗ್ಯು ಅದೇ ಸಮಯದಲ್ಲಿ ಆತನು ಪೌಲನನ್ನು ದೀನನಾಗಿ ಇರುವಂತೆ ಮಾಡಲು ಆತನಿಗೆ ಒಂದು "ಮುಳ್ಳನ್ನೂ" ಕೊಟ್ಟನೆಂಬದನ್ನು ನಾವು ನೋಡಬಹುದು.

ಆದದರಿಂದ, ನಮ್ಮ "ಮುಳ್ಳು" ಏನೇ ಆಗಿರಬಹುದಾದರೂ ಅದರ ಬಗ್ಗೆ ನಾವು ಗುಣಗುಟ್ಟದಿರೋಣ. ಆ ಮುಳ್ಳು ನಮಗೆ ನಮ್ಮ ಆತ್ಮೀಕ ಪ್ರಯೋಜನಕ್ಕಾಗಿ ಕೊಡಲ್ಪಟ್ಟಿದೆ (ಇಬ್ರಿಯ 12:10-11). ನಮ್ಮ ಮುಳ್ಳು, ನಮ್ಮ ಬಲಹೀನತೆಯ ಕಾರಣದಿಂದ ದೇವರ ಬಲವು ನಮ್ಮ ಜೀವಿತಗಳಲ್ಲಿ ಇನ್ನು ಹೆಚ್ಚಾಗಿ ತೋರಿಬರುತ್ತದೆ (2 ಕೊರಿಂಥ 4:7 ಮತ್ತು ವ್ಯಾಖ್ಯಾನ ನೋಡಿರಿ).

ಪೌಲನು ಇಲ್ಲಿ ತನ್ನ ಮುಳ್ಳು ಸೈತಾನನ ದೂತರಲ್ಲಿ ಒಬ್ಬನು ಎಂದು ಹೇಳುತ್ತಾನೆ; ಅಂದರೆ, ಆತನ ಮುಳ್ಳು ಸೈತಾನನಿಂದ ಕಳುಹಿಸಲ್ಪಟ್ಟಿತ್ತು. ಉದಾಹರಣೆಗೆ, ಸೈತಾನನು ವಿವಿಧ ರೋಗಗಳನ್ನುಂಟು ಮಾಡಬಲ್ಲನೆಂದು ನಮಗೆ ಗೊತ್ತಿದೆ (ಲೂಕ 13:16). ಆದರೆ ಸೈತಾನನು ಯಾವಾಗಲೂ ದೇವರ ಅಂತಿಮ ಹತೋಟಿಯಲ್ಲಿ ಇದ್ದಾನೆಂಬದನ್ನು ನಾವು ಮರೆಯದಿರೋಣ. ಸೈತಾನನು ದೇವರ ಅಪ್ಪಣೆಯಿಲ್ಲದೆ ನಮಗೆ ಯಾವದೇ ರೀತಿಯ "ಮುಳ್ಳನ್ನು" – ಯಾವದೇ ರೀತಿಯ ಕಷ್ಟ ಅಥವಾ ಭಾಧೆಯನ್ನು – ಕಳುಹಿಸಲು ಸಾಧ್ಯವಿಲ್ಲ. (ಯೋಬನು 1:6-22; 2:1-10). ದೇವರು ತನ್ನನ್ನು ಪ್ರೀತಿಸುವವರ ಜೀವಿತಗಳಲ್ಲಿನ ಒಳ್ಳೇತನದಿಂದ ಯಾವಾಗಲೂ ಕೆಟ್ಟತನವನ್ನು ಸೋಲಿಸುತ್ತಾನೆ (ಆದಿಕಾಂಡ 37:28; 45:4,8; 50:20; ರೋಮ 8:28 ಮತ್ತು ವ್ಯಾಖ್ಯಾನ ನೋಡಿರಿ).

**8-9** ಗೇತ್ಸೆಮನೆ ತೋಟದಲ್ಲಿ ಯೇಸು ಮೂರು ಸಾರಿ ಪ್ರಾರ್ಥಿಸಿದನು: "ನನ್ನ ತಂದೆಯೇ, ಸಾಧ್ಯವಾಗಿದ್ದರೆ ಈ ಪಾತ್ರೆಯು (ಶಿಲುಬೆಯ ಮೇಲಿನ ಮರಣ) ನನ್ನನ್ನು ಬಿಟ್ಟುಹೋಗಲಿ" (ಮತ್ತಾಯ 26:39, 42,44). ದೇವರು ಯೇಸುವಿನ

ಪ್ರಾರ್ಥನೆಗೆ ಉತ್ತರಿಸಲಿಲ್ಲವೋ? ಹೌದು, ಆತನು ಅದಕ್ಕೆ ಉತ್ತರ ನೀಡಿದನು. ಆದರೆ ಆತನು ಅದಕ್ಕೆ "ಹೌದು" ಎಂದು ಉತ್ತರಿಸದೇ "ಇಲ್ಲ" ಎಂಬುದರೊಂದಿಗೆ ಉತ್ತರಿಸಿದನು. ದೇವರು ನಮ್ಮ ಎಲ್ಲಾ ಪ್ರರ್ಥನೆಗಳಿಗೂ ಉತ್ತರ ನೀಡುವನು, ಆದರೆ ನಾವು ನೀರಿಕ್ಷಿಸಿದ್ದ ಉತ್ತರವನ್ನು ಕೊಡದಿರಬಹುದು. ನಾವು ಯಾವುದನ್ನು ನಿರೀಕ್ಷಿಸಿದ್ದೇವೋ ಅದಕ್ಕಿಂತಲೂ ಆತನ ಉತ್ತರವು ನಮಗೆ ಉತ್ತಮವಾಗಿರುತ್ತದೆ. ದೇವರು ನಾವು ಕೇಳುವ ವಿಧದಲ್ಲಿ ನಮ್ಮ ಪ್ರಾರ್ಥನೆಗೆ ಉತ್ತರಿಸುವದಿಲ್ಲ, ಆದರೆ ನಮಗೆ ಅತ್ಯಂತ ಒಳಿತನ್ನು ಮಾಡುವ ವಿಧದಲ್ಲಿ ಉತ್ತರಿಸುತ್ತಾನೆ. ಮತ್ತು ನಮ್ಮ ಉತ್ತಮತೆಯನ್ನು ಹೇಗೆ ಸಾಧಿಸಿಕೊಳ್ಳಬೇಕೆಂದು ನಾವು ತಿಳಿದಿರುವದಕ್ಕಿಂತಲೂ ಆತನು ಎಷ್ಟೋ ಉತ್ತಮವಾಗಿ ತಿಳಿದಿರುತ್ತಾನೆ. ದೇವರು ಯಾವಾಗಲೂ ತನ್ನ ಮಕ್ಕಳಿಗೆ ಒಳ್ಳೇ ವರಗಳನ್ನು ಕೊಡುತ್ತಾನೆ (ಮತ್ತಾಯ 7:9-11). ಪೌಲನಿಗೆ ಮುಳ್ಳು ಒಂದು "ದೇವರ ವರ" ಆಗಿತ್ತು. ನಾವು ನಮ್ಮ ಮುಳ್ಳು ತೆಗೆದು ಹಾಕಲ್ಪಡಬೇಕೆಂದು ಪ್ರಾರ್ಥಿಸುವದು ತಕ್ಕದ್ದೋ? ಹೌದು, ಅದು ತಕ್ಕದ್ದಾಗಿದೆ. ಪೌಲನ ಹಾಗೆ ನಾವು ನಮ್ಮ ಮುಳ್ಳುತೆಗೆದು ಹಾಕಲ್ಪಡಬೇಕೆಂದು ಪ್ರಾರ್ಥಿಸಬಹುದು. ಬಹುಶಃ ದೇವರು ನಮ್ಮ ಒಂದು ಅಥವಾ ಹೆಚ್ಚು ಮುಳ್ಳುಗಳನ್ನು ತೆಗೆದು ಹಾಕುವನು. ಆದರೆ ದೇವರು ಒಂದು ಮುಳ್ಳನ್ನಾದರೂ ನಮ್ಮಲ್ಲಿ ಬಿಡುವನು. ಹೀಗೆ ನಾವು ಯಾವಾಗಲೂ ದೀನರಾಗಿದ್ದು ದೇವರಬಲದ ಮೇಲೆಯೇ ಅವಲಂಭನೆಗೊಳ್ಳಬೇಕೆಂದು ಆತನು ಬಯಸುತ್ತಾನೆ.

ನಮ್ಮ ಬಲಹೀನತೆಯು ಏನೇ ಆಗಿದ್ದರೂ ದೇವರು ತನ್ನ ಚಿತ್ತವನ್ನು ಮಾಡಲು ನಮಗೆ ಯಾವಾಗಲೂ ಸಾಕಷ್ಟು ಕೃಪೆಯನ್ನು ಕೊಡುವನು (ಫಿಲಿಪ್ಪಿ 4:13). ನಾವು ಎಷ್ಟು ಬಲಹೀನರಾಗಿರುತ್ತೇವೋ ದೇವರ ಬಲವು ನಮ್ಮಲ್ಲಿ ಅಷ್ಟೇ ಹೆಚ್ಚಾಗಿ ನಮ್ಮಲ್ಲಿ ಇರುವದು (2 ಕೊರಿಂಥ 4:7). ಆದದರಿಂದ, ಪೌಲನು ತನ್ನ ನಿರ್ಬಲಾವಸ್ಥೆಗಳ ವಿಷಯದಲ್ಲಿ ಬಹು ಸಂತೋಷವಾಗಿ ಹೆಚ್ಚಳ ಪಡುತ್ತಾನೆ (ವಚನ 5).

ನಾವು ಎಂದಿಗೂ ದೇವರ ವಿರುದ್ಧವಾಗಿ ಗುಣಗುಟ್ಟದಿರೋಣ. ಬದಲಾಗಿ ಆತನು ನಮ್ಮ ಜೀವಿತಗಳಲ್ಲಿ ಅನುಮತಿಸುವ ಪ್ರತಿಯೊಂದು ಸಮಸ್ಯೆ, ಪ್ರತಿಯೊಂದು ಕಷ್ಟ, ಪ್ರತಿಯೊಂದು ಕೊರತೆಗಾಗಿ ಆತನಿಗೆ ಸ್ತೋತ್ರವನ್ನು ಸಲ್ಲಿಸೋಣ (ಯೋಬ 1: 21-22).

10 ಪೌಲನು ನಿರ್ಬಲಾವಸ್ಥೆ, ತಿರಸ್ಕಾರ, ಕೊರತೆ, ಹಿಂಸೆ, ಇಕ್ಕಟ್ಟುಗಳನ್ನು ಸೈರಿಸಿಕೊಳ್ಳುವದು ಮಾತ್ರವಲ್ಲ; ಆತನು ಅವುಗಳಲ್ಲಿ ಸಂತುಷ್ಟನಾಗಿರುತ್ತಾನೆ! ಪೌಲನು ಅವುಗಳಲ್ಲಿ ಸಂತೋಷಿಸುತ್ತಾನೆ, ಯಾಕಂದರೆ ಆತನು ನಿರ್ಬಲನಾಗಿರುವಾಗಲೇ ಬಲವುಳ್ಳವನಾಗಿರುತ್ತಾನೆ. ಪೌಲನು ಈ ಎಲ್ಲಾ ಸಂಕಟಗಳಲ್ಲಿ ಉಲ್ಲಾಸಿಸುತ್ತಾನೆ, ಯಾಕೆಂದರೆ ಅವುಗಳ ಮೂಲಕ ಕ್ರಿಸ್ತನ ಸಂತೈಸುವಿಕೆಯು ಅವನ ಜೀವನದಲ್ಲಿ ಹೇರಳವಾಗಿ ಹರಿಯುತ್ತದೆ (2 ಕೊರಿಂಥ 1:5). ಪೌಲನು ಅವುಗಳಲ್ಲಿ ಸಂತೋಷಿಸುತ್ತಾನೆ, ಯಾಕೆಂದರೆ ಅವುಗಳ ಮೂಲಕ ಯೇಸುವಿನ ಜೀವವು ಅವನ ದೇಹದಲ್ಲಿ ತೋರಿಬರುತ್ತದೆ (2 ಕೊರಿಂಥ 4:8-10).

ಪೌಲನು ಕ್ರಿಸ್ತನ ನಿಮಿತ್ತ ತನ್ನ ನಿರ್ಬಲಾವಸ್ಥೆಗಳಲ್ಲಿ ಸಂತೋಷಿಸುತ್ತಾನೆ. ಪೌಲನು ಇತರ ಧರ್ಮಗಳ ಅನುಯಾಯಿಗಳು ಮಾಡುವಂತೆ ಅಂತಹ ಸಂಕಟ ಹಾಗು ಸಮಸ್ಯೆಗಳನ್ನು ತನ್ನ ಸ್ವಂತ ಆತ್ಮೀಕ ಲಾಭಕ್ಕಾಗಿ ಹಾರೈಸುವದಿಲ್ಲ. ಬದಲಾಗಿ, ಪೌಲನು ಸಮಸ್ತವನ್ನೂ ಕ್ರಿಸ್ತನ ನಿಮಿತ್ತ ಮಾತ್ರವೇ ಹಾರೈಸುತ್ತಾನೆ. ನಾವು ಕ್ರಿಸ್ತನ ನಿಮಿತ್ತ ಮಾಡುವಂತಹ ಹಾಗು ಸೈರಿಸಿಕೊಳ್ಳುವ ಸಂಗತಿಗಳಿಗಾಗಿ ಮಾತ್ರವೇ ದೇವರು ನಮಗೆ ಪ್ರತಿಫಲವನ್ನು ಕೊಡುವನು (ಮತ್ತಾಯ 5:11; 19:29 ನೋಡಿರಿ).

ಕೊರಿಂಥದವರಿಗಾಗಿ ಪೌಲನ ಚಿಂತನೆ (12:11-21)

11 ಪೌಲನು ಹೊಗಳಿಕೊಳ್ಳುವದರ ಮೂಲಕ ತನ್ನನ್ನು "ಬುದ್ಧಿಹೀನ" ಮಾಡಿಕೊಂಡಿದ್ದಾನೆ. ಆದರೂ ಕೊರಿಂಥದವರೇ ಪೌಲನನ್ನು ಆ ರೀತಿಯಲ್ಲಿ ಬರೆಯುವಂತೆ ಒತ್ತಾಯಿಸಿದ್ದರು. ಅವರೇ ಪೌಲನ ವಿಷಯದಲ್ಲಿ ಹೊಗಳುವವರಾಗಿರಬೇಕಿತ್ತು! ಅವರು ಪೌಲನನ್ನು ಹೊಗಳಲಿಲ್ಲವಾದ್ದರಿಂದ ಪೌಲನು ಸ್ವತಃ ತನ್ನನ್ನು ಹೊಗಳಿಕೊಳ್ಳಬೇಕಾಯಿತು. ಇಲ್ಲವಾದರೆ, ಆ ಸುಳ್ಳು ಅಪೊಸ್ತಲರನ್ನು, "ಅತಿಶ್ರೇಷ್ಠರಾದ ಅಪೊಸ್ತಲರ" ಹೇಳಿಕೆಗಳನ್ನು ಖಂಡಿಸುವದಕ್ಕೆ ಯಾರೂ ಇರುತ್ತಿರಲಿಲ್ಲ.

ಪೌಲನು ಸ್ವತ ಅಲ್ಪನಾದವನು; ಅವನು ಕೇವಲ ನಿರ್ಬಲ ಹಾಗು ದೌರ್ಬಲ್ಯದ ವ್ಯಕ್ತಿ ಮಾತ್ರವೇ. ಹಾಗಿದ್ದರೂ, ಆತನು ಆ "ಅತಿಶ್ರೇಷ್ಠರಾದ ಅಪೊಸ್ತಲರಿಗಿಂತ" ಒಂದರಲ್ಲಿ ಯಾದರೂ ಕಡಿಮೆಯಾಗಲಿಲ್ಲ ( 2 ಕೊರಿಂಥ 11:5).

12 ಪೌಲನು ತಾನು ನಡಿಸಿದ ಸೂಚಕ ಕಾರ್ಯಗಳೂ, ಅದ್ಭುತಗಳೂ, ಮಹತ್ಕಾರ್ಯಗಳೂ ಇವುಗಳ ಮೂಲಕ ಹಾಗು ಆತನ ಬೋಧನೆಯಿಂದ ಉಂಟಾದ ಫಲದಿಂದಲೂ ಸಹ ಅವನು ಒಬ್ಬ ನಿಜವಾದ ಅಪೊಸ್ತಲನೆಂಬದನ್ನು ನಿರೂಪಿಸಿದ್ದಾನೆ (1 ಕೊರಿಂಥ 9:2 ನೋಡಿರಿ).

13 ಈ ಸೂಚಕಕಾರ್ಯಗಳು ಹಾಗು ಅದ್ಭುತಗಳಲ್ಲಿ ಹೆಚ್ಚಿನವುಗಳು ಕೊರಿಂಥದಲ್ಲಿ ನಡಿಸಲ್ಪಟ್ಟಿದ್ದವು . ಕೊರಿಂಥದಲ್ಲಿನ ಸಭೆಯು ಕ್ರಿಸ್ತನ ನಿಜವಾದ ಅಪೊಸ್ತಲನಿಂದ ಸ್ಥಾಪಿಸಲ್ಪಟ್ಟಿತ್ತು. ಆದದರಿಂದ, ಕೊರಿಂಥ ಸಭೆಯು ಇತರ ಯಾವದೇ ಸಭೆಗಿಂತ ಕಡಿಮೆಯಾಗಿರಲಿಲ್ಲ – ಒಂದು ಸಂಗತಿಯನ್ನು ಹೊರತು ಪಡಿಸಿ: ಅವರು ತಮ್ಮ ಅಪೊಸ್ತಲನಾದ ಪೌಲನಿಗೆ ಯಾವದೇ ಬೆಂಬಲವನ್ನು ನೀಡಿರಲಿಲ್ಲ. ಪೌಲನು ಅವರಿಂದ ಯಾವದೇ ಸಹಾಯವನ್ನು ಪಡೆದುಕೊಳ್ಳಲು ನಿರಾಕರಿಸುವದರ ಮೂಲಕ ಅವರು ತಾವು ಅವನಿಗೆ ಸಹಾಯ ಮಾಡಿದ್ದೇನೆಂದು ಹೆಚ್ಚಳಪಟ್ಟುಕೊಳ್ಳುವ ಅವಕಾಶದಿಂದ ಅವರನ್ನು ಪೌಲನು ವಂಚಿತಗೊಳಿಸಿದ್ದನು. ಪೌಲನು ಹೊಗಳಿಕೊಳ್ಳುವ ಅವಕಾಶದಿಂದ ಅವರನ್ನು ವಂಚಿತರನ್ನಾಗಿಸಿದ್ದರಿಂದ ಈ ಅನ್ಯಾಯಕ್ಕಾಗಿ ತನ್ನನ್ನು ಕ್ಷಮಿಸಬೇಕೆಂದು ಪೌಲನು ಅವರನ್ನು ಮಾರ್ಮಿಕವಾಗಿ ಕೇಳಿಕೊಳ್ಳುತ್ತಾನೆ.

**14** ಪೌಲನು ಕೊರಿಂಥಕ್ಕೆ ನೀಡಿದ ಮೊದಲನೆಯ ಬೇಟಿಯಲ್ಲಿಯೇ ಅಲ್ಲಿ ಸಭೆಯನ್ನು ಸ್ಥಾಪಿಸಿದ್ದನು (ಅ.ಕೃತ್ಯ 18:1). ಪೌಲನು ಎರಡನೆಯ ಸಾರಿ ಕೊರಿಂಥಕ್ಕೆ ದುಃಖದಿಂದ ಹೋಗಿದ್ದನು (2 ಕೊರಿಂಥ 2:1). ಪೌಲನು ಕೊರಿಂಥದವರ ಸೊತ್ತುಗಳನ್ನು ಆಶಿಸುವದಿಲ್ಲ. ಬದಲಾಗಿ ಪೌಲನು ಸ್ವತಃ ಕೊರಿಂಥದವರನ್ನೇ – ಅಂದರೆ, ಅವರ ಪ್ರೀತಿ, ಅವರ ಹೃದಯಗಳನ್ನು – ಆಶಿಸಿಸುತ್ತಾನೆ. ಅವರ ಆತ್ಮೀಕ ತಂದೆಯಾಗಿ ಪೌಲನು ಅವರ ಸಹಾಯವನ್ನು ಪಡೆಯುವದಕ್ಕೆ ಅವರ ಬಳಿಗೆ ಬರುತ್ತಿಲ್ಲ, ಆದರೆ ಬದಲಾಗಿ ಅವರಿಗೆ ಸಹಾಯವನ್ನು ನೀಡುವದಕ್ಕೆ ಬರುತ್ತಾನೆ.

**15** ಯಾವದೇ ಮಾನವ ತಂದೆಯು ತನ್ನ ಮಕ್ಕಳಿಂದ ಪ್ರೀತಿಸಲ್ಪಡಬೇಕೆಂದು ಅಭಿಲಾಷಿಸುತ್ತಾನೆ. ಆತನು ತಾನು ತನ್ನ ಮಕ್ಕಳನ್ನು ಪ್ರೀತಿಸಿದಂತೆಯೇ ಆತನ ಮಕ್ಕಳೂ ಪ್ರತಿಯಾಗಿ ತನ್ನನ್ನು ಪ್ರೀತಿಸಬೇಕೆಂದು ಅಪೇಕ್ಷಿಸುತ್ತಾನೆ. ಆದರೆ ಮಕ್ಕಳು ತಮ್ಮ ತಂದೆಗೆ ಯಾವದೇ ಪ್ರೀತಿಯನ್ನು ತೋರಿಸದಿದ್ದರೂ ಆತನು ಆಗಲೂ ಕಣ್ಣೀರಿನಿಂದ ಅವರನ್ನು ಇನ್ನು ಹೆಚ್ಚಾಗಿ ಪ್ರೀತಿಸುತ್ತಲೇ ಇರುವನು. ಪೌಲನು ಕೊರಿಂಥದವರ ಮೇಲೆ ಅದೇ ರೀತಿಯಾದ ಪ್ರೀತಿಯನ್ನಿಟ್ಟಿದ್ದನು.

**16** ಪೌಲನು ಕೊರಿಂಥದವರಿಂದ ಯಾವದೇ ಹಣವನ್ನು ತೆಗೆದುಕೊಳ್ಳಲಿಲ್ಲ (2 ಕೊರಿಂಥ 11:9). ಆದಾಗ್ಯು ಆತನ ವೈರಿಗಳು ಅವನನ್ನು ಯುಕ್ತಿಯುಳ್ಳವನು ಎಂದು ಆರೋಪಿಸಿದರು. ಪೌಲನು ಯೆರೂಸಲೇಮಿನಲ್ಲಿನ ಬಡ ವಿಶ್ವಾಸಿಗಳಿಗಾಗಿ ಸಂಗ್ರಹಿಸುತ್ತಿರುವದು ಒಂದು ಉಪಾಯ – ಅಂದರೆ, ಪೌಲನು ತನಗೋಸ್ಕರವೇ ಹಣವನ್ನು ಸಂಗ್ರಹಿಸುತ್ತಿದ್ದಾನೆ! – ಎಂದು ಹೇಳಿದರು. ಈ ವಚನದಲ್ಲಿ ಪೌಲನು ಅವರ ಆರೋಪವನ್ನು ಒಪ್ಪಿಕೊಂಡಿದ್ದಾನೋ ಎಂಬಂತೆ ಅವರ ಸುಳ್ಳು ಆರೋಪವನ್ನು ಹಾಸ್ಯಮಯವಾಗಿ ಪು ನರುಚ್ಚರಿಸುತ್ತಾನೆ.

**17-18** ಕೊರಿಂಥದವರಿಗೆ ಸಂಗ್ರ ಹಣೆಯನ್ನು ಪೂರ್ತಿಗೊಳಿಸಲು ಸಹಾಯ ಮಾಡುವದಕ್ಕೆ ಪೌಲನು ತೀತನನ್ನೂ ಸಹೋದರರಲ್ಲಿ ಒಬ್ಬನನ್ನೂ ಕೊರಿಂಥಕ್ಕೆ ಕಳುಹಿಸಿದ್ದನು (2 ಕೊರಿಂಥ 8:16-18; 9:5). ಪೌಲನು ಕೊರಿಂಥವರನ್ನು ಪ್ರಶ್ನಿಸುವದೇನೆಂದರೆ: ತೀತನಾಗಲಿ ಈ ಸಹೋದರನಾಗಲಿ ನಿಮ್ಮನ್ನು ವಂಚಿಸಿ ಏನಾದರೂ ತೆಗೆದುಕೊಂಡರೋ? ಉತ್ತರವು ಇಲ್ಲ ಎಂದಾಗಿದೆ.

**19** ಪೌಲನು ತನ್ನ ಕುರಿತು ನ್ಯಾಯವಾದಿಯ ಮುಂದೆ ಪ್ರತಿವಾದ ಮಾಡಿಕೊಳ್ಳುವ ರೀತಿಯಲ್ಲಿಯೇ ಕೊರಿಂಥದವರ ಎದುರಿನಲ್ಲಿ ಪ್ರತಿವಾದ ಮಾಡಿಕೊಳ್ಳುತ್ತಿಲ್ಲ (1 ಕೊರಿಂಥ 4:3 ನೋಡಿರಿ). ಪೌಲನು ಇಲ್ಲಿ ದೇವರ ಸನ್ನಿಧಾನದಲ್ಲಿಯೇ ಮಾತ್ರ ಮಾತಾಡುತ್ತಿದ್ದಾನೆ. ಪೌಲನು ಈ ವಿಧದಲ್ಲಿ ತನಗೋಸ್ಕರವಲ್ಲ, ಆದರೆ ಕೊರಿಂಥದವರ ಭಕ್ತಿ ವೃದ್ಧಿಗೋಸ್ಕರವೇ ಮಾತಾಡಿದ್ದಾನೆ.

**20** ಪೌಲನು ಕೊರಿಂಥದವರನ್ನು ಸಂಧಿಸಲು ಹೋಗುವಾಗ ಅವರು ಇನ್ನು ಪ್ರಾಪಂಚಿಕರಾಗಿಯೇ ಇರುತ್ತಾರೇನೋ ಎಂದು ಸಂಶಯ ಪಡುತ್ತಾನೆ (1 ಕೊರಿಂಥ 3;1-3 ನೋಡಿರಿ). ಈ ವಿಷಯವು ಇದಾಗಿರುವದಾದರೆ ಕೊರಿಂಥದವರೂ ಪೌಲನನ್ನು ತಮ್ಮ ಇಷ್ಟದ ಪ್ರಕಾರ ಕಂಡುಕೊಳ್ಳದವರಾಗಲಿರುವರು! ಯಾಕೆಂದರೆ, ಪೌಲನು ಬೆತ್ತ ಹಿಡಿದವನಾಗಿ ಬರಲಿರುವನು (1 ಕೊರಿಂಥ 4:21).

ಪೌಲನು ಇಲ್ಲಿ ಬರೆಯುವ ಪಾಪಗಳ ಪಟ್ಟಿಯಿಂದ ನಮ್ಮನ್ನು ಪರೀಕ್ಷೆಮಾಡಿಕೊಳ್ಳೋಣ. ಈ ಪಾಪಗಳಲ್ಲಿ ಯಾವದಾದರೂ ನಮ್ಮ ಸಭೆಯಲ್ಲಿ ಇರುತ್ತದೋ? (ಮಾರ್ಕ 7:21-23; ಗಲಾತ್ಯ 5:19-21 ನೋಡಿರಿ).

**21** ಪೌಲನು ಕೊರಿಂಥದವರಲ್ಲಿ ಬಹಳ ಹೆಚ್ಚಳ ಪಟ್ಟು ಕೊಂಡಿದ್ದಾನೆ (2 ಕೊರಿಂಥ 7:4). ಆದರೆ ಅವರು ತಮ್ಮ ಪಾಪಗಳಿಗಾಗಿ ಪಶ್ಚಾತಾಪಪಡುವದಕ್ಕೆ ನಿರಾಕರಿಸಿ ತಮ್ಮ ಹೃದಯಗಳನ್ನು ಪೌಲನ ವಿರುದ್ಧವಾಗಿ ಕಠಿಣಮಾಡಿಕೊಳ್ಳುವದಾದರೆ ಪೌಲನು ಖಂಡಿತವಾಗಿಯೂ ಅವರ ಎದುರಿನಲ್ಲಿ ನಾಚಿಕೆಗೆ ಗುರಿಮಾಡಲ್ಪಡುವನು; ಆತನು ದುಃಖಪಡಬೇಕಾಗುವದು ಮಾನವ ತಂದೆಯು ಮಾರ್ಗತಪ್ಪಿದವನಾಗಿಯೂ ಅವಿಧೇಯನಾಗಿಯೂ ಇರುವ ತನ್ನ ಮಗನ ವಿಷಯದಲ್ಲಿ ದುಃಖಪಡುವ ಪ್ರಕಾರವೇ ಪೌಲನು ತಾನು ತನ್ನ ಪ್ರಿಯರಾದ ಕೊರಿಂಥದವರ ವಿಷಯದಲ್ಲಿ ದುಃಖಪಡಬೇಕಾದೀತೆಂದು ಭಯಗೊಂಡಿದ್ದನು.

---

## ಅಧ್ಯಾಯ - 13

### ಅಂತಿಮ ಎಚ್ಚರಿಕೆಗಳು (13:1-10)

**1** ಈ ಭಾಗದಲ್ಲಿ ಪೌಲನು ಕೊರಿಂಥದವರಿಗೆ ತನ್ನ ಕೊನೆಯ ಎಚ್ಚರಿಕೆಗಳನ್ನು ನೀಡುತ್ತಾನೆ. ಪೌಲನು ಕೊರಿಂಥಕ್ಕೆ ಬಂದಾಗಿ ತಮ್ಮ ಪಾಪಗಳಿಗಾಗಿ ಪಶ್ಚಾತಾಪ ಪಡದವರನ್ನು ಶಿಕ್ಷಿಸುವನು. ಆದರೆ ಆತನು ಸ್ಥಾಪಿತವಾಗದ ಆರೋಪಗಳಿಗೆ ಕಿವಿಗೊಡುವದಿಲ್ಲ. ಇಬ್ಬರು ಮೂವರು ಸಾಕ್ಷಿಗಳ ಬಾಯಿಂದ ಪ್ರತಿಯೊಂದು ಸಂಗತಿ – ಅಂದರೆ, ಪ್ರತಿಯೊಂದು ಆರೋಪ – ಸ್ಥಾಪಿತವಾಗಲೇ ಬೇಕು (ಧರ್ಮೋಪದೇಶಕಾಂಡ 19:15; ಮತ್ತಾಯ 18:16). ಒಬ್ಬನೇ ವ್ಯಕ್ತಿಯಿಂದ ಮಾಡಲ್ಪಟ್ಟ ಆರೋಪವನ್ನು ಪೌಲನು ಕೇಳಿಸಿಕೊಳ್ಳುವದಿಲ್ಲ.

ಒಬ್ಬ ನಿಜವಾದ "ಸಾಕ್ಷಿಯು" ಮತ್ತೊಬ್ಬನ ಆರೋಪವನ್ನು ಕೇವಲ ಪು ನರುಚ್ಚರಿಸುವ ಒಬ್ಬ ವ್ಯಕ್ತಿಯಲ್ಲ; ಬದಲಾಗಿ, ಆತನು ಯಾವದಾದರೂ ಸಂಗತಿಯನ್ನು ತನ್ನ ಕಣ್ಣಾರೆ ನೋಡಿರುವ ಅಥವಾ ಅದನ್ನು ತನ್ನ ಕಿವಿಯಾರೆ ಕೇಳಿರುವ ಒಬ್ಬ

ವ್ಯಕ್ತಿಯಾಗಿದ್ದಾನೆಂಬದನ್ನು ಇಲ್ಲಿ ಹೇಳಬೇಕಾಗಿರುತ್ತದೆ. ಮತ್ತೊಬ್ಬನ ಟೀಕಾತ್ಮಕ ಸಂಭಾಷಣೆಯನ್ನು ಪುನರುಚ್ಚರಿಸುವವರು ನಿಜವಾದ ಸಾಕ್ಷಿಗಳಲ್ಲ; ಬದಲಾಗಿ, ಅವರು ಕಿವಿಊದುವವರೂ ಚಾಡಿಹೇಳುವವರೂ ಆಗಿರುತ್ತಾರೆ (ರೋಮ 1:29-30; 2 ಕೊರಿಂಥ 12:20 ನೋಡಿರಿ).

ಅದು ಮಾತ್ರವಲ್ಲದೆ, ಸಾಕ್ಷಿಗಳು ಏಕಮನಸ್ಸುಳ್ಳವರಾಗಿರಬೇಕು; ಅವರ ಸಾಕ್ಷಿಯು ಒಂದಕ್ಕೊಂದು ಒಪ್ಪುವಂತದ್ದಾಗಿರಬೇಕು. ಸಾಕ್ಷಿಗಳು ಪರಸ್ಪರ ಹೋಲಿಕೆಯುಳ್ಳರಾಗಿರದಿದ್ದರೆ ಯಾವ ತೀರ್ಪನ್ನಾಗಲಿ ಅಥವಾ ತೀರ್ಮಾನವನ್ನಾಗಲಿ ಮಾಡಬಾರದು. ಸಾಕ್ಷಿಯೊಬ್ಬನು ಒಬ್ಬ ವಿಶ್ವಾಸಿಯ ಮೇಲೆ ಸುಳ್ಳಾದ ಆರೋಪವನ್ನು ಮಾಡಲು ಪ್ರಯತ್ನಿಸುವ ಅಪಾಯವು ಯಾವಾಗಲೂ ಇರುತ್ತದೆ (ಕೀರ್ತನೆಗಳು 27:12; ಮಾರ್ಕ 14:55-56; ಅ.ಕೃತ್ಯ 6:12-13 ನೋಡಿರಿ). ಇತರ ಕ್ರೈಸ್ತರ ಮೇಲೆ ಸುಳ್ಳು ಆರೋಪಗಳನ್ನು ಹೇಳುವ ಸಾಕ್ಷಿಗಳನ್ನು ಸಭೆಯೊಳಗೆ ಸಹ ಕಾಣಬಹುದು; ಅವರು ಸಭೆಗೆ ದೊಡ್ಡ ಹಾನಿಯನ್ನು ಉಂಟುಮಾಡುತ್ತಾರೆ.

2 ಪೌಲನು ಬಂದಾಗ ಪಶ್ಚಾತಾಪ ಪಡದಿರುವ ಪಾಪಿಗಳನ್ನು ಶಿಕ್ಷಿಸುವನು ಎಂದು ಕೊರಿಂಥದವರಿಗೆ ಮುಂಚೆ ಎಚ್ಚರಿಸಿದ್ದನು. ಈಗ ಪೌಲನು ಅವರಿಗೆ ಕೊನೆಯ ಎಚ್ಚರಿಕೆಯನ್ನು ಕೊಡುತ್ತಾನೆ.
ದೇವರು ಪಶ್ಚಾತಾಪ ಪಡದಿರುವ ಪಾಪಿಯನ್ನು ಸೈರಿಸಿಕೊಳ್ಳುವನು, ಆದರೆ ಸದಾಕಾಲವೂ ಅಲ್ಲ!

3 ಪೌಲನು ಕ್ರಿಸ್ತನ ನಿಜವಾದ ಅಪೊಸ್ತಲನೆಂಬದಕ್ಕೆ ಆಧಾರವನ್ನು ನೀಡಬೇಕೆಂದು ಕೊರಿಂಥದವರು ಕೇಳಿದ್ದರು. ಪೌಲನು "ಆಗಲಿ, ನಾನು ನಿಮಗೆ ಆಧಾರವನ್ನು ಕೊಡುತ್ತೇನೆ. ನೀವು ಪಶ್ಚಾತಾಪಪಡದಿದ್ದರೆ ನಾನು ಕ್ರಿಸ್ತನ ಪೂರ್ಣ ಬಲ ಹಾಗು ಅಧಿಕಾರವನ್ನು ಹೊಂದಿದ್ದೇನೆಂಬದನ್ನು ನೀವು ಶೀಘ್ರವೇ ಕಂಡುಕೊಳ್ಳುವಿರಿ! ನಾನು ಆತನ ನಿಜವಾದ ಅಪೊಸ್ತಲನೆಂಬದನ್ನು ಅದು ನಿಮಗೆ ನಿರೂಪಿಸುವದು" ಎಂದು ಹೇಳುತ್ತಾನೆ.

4 ಕ್ರಿಸ್ತನು ಶಿಲುಬೆಗೆ ಹಾಕಲ್ಪಟ್ಟಾಗ ಆತನು ಇತರ ಜನರಂತೆ ಬಲಹೀನನಾಗಿ ಕಾಣಿಸಿಕೊಂಡನು. ಆದರೆ ಕ್ರಿಸ್ತನು ದೇವರ ಮಹಾಬಲದ ಮೂಲಕ ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು, ಮತ್ತು ಇಂದು ಆತನು ದೇವರ ಬಲದಿಂದ ಜೀವಿಸುತ್ತಾನೆ. ಅದೇ ವಿಧದಲ್ಲಿ, ಪೌಲನು ಬಲಹೀನನಾಗಿ ತೋರುತ್ತಾನೆ; ಆದರೆ ಆತನು ಸಹ ದೇವರ ಬಲದಿಂದ ಬದುಕುತ್ತಾನೆ (ರೋಮ 6:5, 8; ಗಲಾತ್ಯ 2:20 ನೋಡಿರಿ). ಪೌಲನು ಮೊದಲು ಕೊರಿಂಥಕ್ಕೆ ಬಲಹೀನನಾಗಿಯೂ, ಶಾಂತಮನಸ್ಸೂ, ಸಾತ್ವಿಕತ್ವವೂ ಉಳ್ಳವನಾಗಿ ಬಂದನು (1 ಕೊರಿಂಥ 2:3; 2 ಕೊರಿಂಥ 10:1). ಆದರೆ ಈಗ ಪೌಲನು ಕೊರಿಂಥದವರ ಬಳಿಗೆ ಸ್ವತಃ ಕ್ರಿಸ್ತನ ಬಲ ಹಾಗು ಅಧಿಕಾರದಿಂದ ಬರುವದಕ್ಕೆ ಸಿದ್ಧನಾಗಿದ್ದಾನೆ.

ಇಂದು ಪೌಲನು ನಮ್ಮ ಸಭೆಗೆ ಬರುವದಾದರೆ ಆತನು ಕಾಣುವು ದೇನು? ಆತನು ಹೇಗೆ ಬರುವನು? ಆತನು ಬೆತ್ತಹಿಡಿದವನಾಗಿ ಬರುವನೋ ಅಥವಾ ಸೌಮ್ಯಭಾವದಿಂದ ಕೂಡಿದವನಾಗಿ ಬರುವನೋ? (1 ಕೊರಿಂಥ 4:21).

5 ನಮ್ಮ ಕ್ರೈಸ್ತ ಜೀವನದಲ್ಲಿ ನಾವು ಮಾಡಬೇಕಾದ ಒಂದು ಪ್ರಾಮುಖ್ಯ ಸಂಗತಿಯೇನೆಂದರೆ ಕ್ರಮವಾಗಿ ನಮ್ಮನ್ನು ಪರೀಕ್ಷಿಸಿಕೊಳ್ಳುವದೇ (1 ಕೊರಿಂಥ 11:28 ನೋಡಿರಿ). ನಾವು ಕ್ರಿಸ್ತನಂಬಿಕೆಯಲ್ಲಿದ್ದೇವೋ? ನಂಬಿಕೆಯ ಫಲಗಳು ನಮ್ಮ ಜೀವಿತಗಳಲ್ಲಿ ಕಂಡು ಬರುತ್ತವೋ/ ಕ್ರಿಸ್ತನು ನಮ್ಮಲ್ಲಿ ಜೀವಿಸುವದನ್ನು ನಾವು ಅನುಭವಿಸುತ್ತಿದ್ದೇವೋ? ಅಥವಾ ನಾವು ಪರೀಕ್ಷೆಯಲ್ಲಿ ವಿಫಲರಾಗುತ್ತೇವೋ? ನಾವು ಈ ಪ್ರಶ್ನೆಗಳನ್ನು ನಮಗೆ ಕೇಳಿಕೊಳ್ಳಬೇಕು.

ಆದರೆ ನಾವು ನಮ್ಮನ್ನು ಪರೀಕ್ಷಿಸಿಕೊಳ್ಳುವದರ ಬದಲಾಗಿ ನಾವು ಹೆಚ್ಚು ಸಮಯವನ್ನು ನಮ್ಮ ಸಹೋದರನನ್ನು ಪರೀಕ್ಷಿಸುವದರಲ್ಲಿ ಕಳೆಯುತ್ತೇವೆ! ನಮ್ಮ ನಮ್ಮ ಪಾಪವನ್ನು ಹುಡುಕಿಕೊಂಡು ಅದಕ್ಕಾಗಿ ಪಶ್ಚಾತಾಪ ಪಡುವದಕ್ಕೆ ಬದಲಾಗಿ ನಾವು ನಮ್ಮ ಸಹೋದರನ ಪಾಪವನ್ನು ಹುಡುಕುವದಕ್ಕೆ ಪ್ರಾಮುಖ್ಯತೆ ಕೊಡುತ್ತೇವೆ. ನಾವು ನಮ್ಮನ್ನು "ನೇರವಾದವರು" ಎಂದೂ ನಮ್ಮ ಸಹೋದರನನ್ನು "ವಕ್ರನು" ಎಂದು ಪರಿಗಣಿಸುತ್ತೇವೆ. ನಾವು ಈ ಸಂಗತಿಗಳನ್ನು ಮಾಡುವದಾದರೆ ನಮ್ಮ ಪಾಪವು ಎಷ್ಟೋ ದೊಡ್ಡದು!

6 ಒಂದು ವೇಳೆ ಕೊರಿಂಥದವರು ತಮ್ಮನ್ನು ಪರೀಕ್ಷೆ ಮಾಡಿಕೊಳ್ಳುವಾಗ ಅವರು ತಾವು ಪರೀಕ್ಷೆಯಲ್ಲಿ ವಿಫಲರಲ್ಲ ಎಂಬದನ್ನು ಕಂಡುಕೊಳ್ಳುವದಾದರೆ ಪೌಲನು ಸಹ ಪರೀಕ್ಷೆಯಲ್ಲಿ ವಿಫಲನಾಗಿರುವದಿಲ್ಲ ಎಂಬದನ್ನು ಅದೇ ಸಮಯದಲ್ಲಿ ಅವರು ಕಂಡು ಹಿಡಿಯುವರು. ಕಾರಣವೇನೆಂದರೆ ಪೌಲನ ಬೋಧನೆಯಿಂದಲೇ ಅವರ ನಂಬಿಕೆಯು ಬಂದಿರುತ್ತದೆಂಬದು ನಿಸ್ಸಂದೇಹವಾದದ್ದು. ಅವರ ನಂಬಿಕೆಯು ನಿಜವಾದ್ದದಾಗಿರುವದಾದರೆ ಪೌಲನ ನಂಬಿಕೆಯು ಸಹ ನಿಜವಾದದ್ದಾಗಿರಬೇಕು. ಅವರು ಕ್ರಿಸ್ತನಲ್ಲಿರುವದಾದರೆ ಪೌಲನು ಸಹ ಕ್ರಿಸ್ತನಲ್ಲಿರಬೇಕು.

7 ಕೊರಿಂಥದವರು ಕೆಟ್ಟದ್ದೇನೂ ಮಾಡಬಾರದೆಂದು ಪ್ರಾರ್ಥಿಸುತ್ತಾರೆ – ಅಂದರೆ, ಅವರು ತಮ್ಮ ಪಾಪಗಳಿಗೆ ಪಶ್ಚಾತಾಪಪಟ್ಟು ತಮ್ಮ ಸಭೆಯನ್ನು ಪವಿತ್ರವಾಗಿಟ್ಟವರೆಂದು ಪ್ರಾರ್ಥಿಸುತ್ತಾರೆ. ಅವರು ಇದನ್ನು ಮಾಡುವದಾದರೆ ಪೌಲನು ಪಾಪಿಗಳನ್ನು ಶಿಕ್ಷಿಸುವದಕ್ಕಾಗಿ ತನ್ನ ಬಲ ಹಾಗು ಅಧಿಕಾರವನ್ನು ಉಪಯೋಗಿಸಬೇಕಾಗುವದಿಲ್ಲ. ಪೌಲನು ತನ್ನ ಬಲವನ್ನು ಉಪಯೋಗಿಸದಿದ್ದರೆ ಆತನಲ್ಲಿ ಯಾವ ಬಲವೂ ಇಲ್ಲವೇನೋ ಎಂಬಂತೆ ತೋರುವದು ಅಂದರೆ, ಪೌಲನು ಕ್ರಿಸ್ತನಲ್ಲಿಲ್ಲವೇನೋ ಎಂಬಂತೆ ತೋರುವದು; ಆತನು ಪರೀಕ್ಷೆಯಲ್ಲಿ ವಿಫಲನಾಗಿದ್ದಾನೇನೋ ಎಂಬಂತೆ ತೋರುವದು. ಹಾಗಾದರೆ, ಜನರಿಗೆ ಈ ರೀತಿಯಾಗಿ ತೋರುವದಾದರೆ ಹಾಗೆಯೇ ಆಗಿಲಿ. ಪೌಲನ ಒಂದೇ ಅಭಿಲಾಷೆ ಏನೆಂದರೆ ಆತನು ಕೊರಿಂಥದವರ ಬಳಿಗೆ "ಬೆತ್ತ ಹಿಡಿದವನಾಗಿ" ಬರುವ ಅಗತ್ಯ ಬಾರದಂತೆ ಅವರು ಪಶ್ಚಾತಾಪ ಪಡಬೇಕೆಂಬದೇ.

**8** ಒಂದು ವೇಳೆ ಪೌಲನು ಬರುವಷ್ಟರಲ್ಲಿ ಕೊರಿಂಥದ ಸಭೆಯಲ್ಲಿ ಸತ್ಯವು ಸ್ಥಾಪಿಸಲ್ಪಟ್ಟಿರುವದಾದರೆ ಆತನು ತನ್ನ ಬಲ ಹಾಗು ಅಧಿಕಾರವನ್ನು ಉಪಯೋಗಿಸ ಬೇಕಾಗುವದಿಲ್ಲ. ಪೌಲನ ಬಲವು ಸತ್ಯವನ್ನು ವಿರೋಧಿಸುವದಕ್ಕಲ್ಲ, ಆದರೆ ಪಾಪ ಹಾಗು ಸುಳ್ಳುತನವನ್ನು ವಿರೋಧಿಸುವದಕ್ಕಾಗಿಯೇ ಇರುತ್ತದೆ. ಕೊರಿಂಥದವರು ಪಾಪ ಮಾಡುತ್ತಿಲ್ಲವಾದರೆ ಪೌಲನು ಅವರ ವಿರುದ್ಧವಾಗಿ ಏನನ್ನೂ ಮಾಡಲಾಗದು.

**9** ಕೊರಿಂಥದವರು ಬಲಿಷ್ಠರಾಗಿ – ಅಂದರೆ, ಪರಿಪೂರ್ಣರೂ, ಪವಿತ್ರರೂ ನಂಬಿಕೆಯಲ್ಲಿ ಬಲಿಷ್ಠರೂ ಆಗಿ – ಇರಬೇಕೆಂಬುದೇ ಪೌಲನ ಪ್ರಾರ್ಥನೆ ಹಾಗು ನಿರೀಕ್ಷೆಯಾಗಿರುತ್ತದೆ. ಒಂದು ವೇಳೆ ಕೊರಿಂಥದವರು ಈ ರೀತಿಯಲ್ಲಿ ಬಲಿಷ್ಠರಾಗಿರುವದಾದರೆ ಪೌಲನು ತನ್ನ ಅಧಿಕಾರವನ್ನು ಉಪಯೋಗಿಸಬೇಕಾಗುವದಿಲ್ಲ; ಅಂದರೆ ಅವನು ಬಲಹೀನನಾಗಿ ಕಾಣಿಸಿಕೊಳ್ಳುವನು. ಈ ಕಾರಣದಿಂದಲೇ, ಪೌಲನು "ಬಲಹೀನನಾಗಿ" ಹಾಗು ಕೊರಿಂಥದವರು "ಬಲಿಷ್ಠರಾಗಿ" ಇರುವಾಗ ತಾನು ಸಂತೋಷವಾಗಿದ್ದೇನೆ ಎಂದು ಹೇಳುತ್ತಾನೆ. ಪೌಲನು ತನ್ನಇಷ್ಟದಂತೆ ಅದಿಕಾರವನ್ನು ಉಪಯೋಗಿಸುವದಿಲ್ಲ ಎಂಬದನ್ನು ಗಮನಿಸಿರಿ. ಅಧಿಕಾರ ಹೊಂದಿರುವವರು ಅದನ್ನು ದುರುಯೋಗ ಮಾಡಿಕೊಳ್ಳದಂತೆ ಬಹಳ ಜಾಗರೂಕರಾಗಿರಬೇಕು. ಅಧಿಕಾರವು ಸ್ವಂತಕ್ಕಾಗಿ ತೆಗೆದು ಕೊಂಡು ಉಪಯೋಗಿಸುವ ಸಂಗತಿಯಾಗಿರುವದಿಲ್ಲ. ಎಲ್ಲಾ ಅಧಿಕಾರವೂ ದೇವರಿಂದಲೇ ಬರುತ್ತದೆ ಮತ್ತು ಅದು ಇತರರ ಸೇವೆಗಾಗಿ ಮಾತ್ರವೇ ಉಪಯೋಗಿಸಲ್ಪಡಬೇಕು (ಮಾರ್ಕ 10:42-45 ನೋಡಿರಿ).

**10** ಪೌಲನು ಕೂರಿಂಥದವರಿಗೆ ಬರೆಯಲು ಮುಖ್ಯ ಉದ್ದೇಶವೇನೆಂಬದನ್ನು ಇಲ್ಲಿ ಕಾಣಬಹುದುಃ ಅದೇನೆಂದರೆ, ಕೊರಿಂಥದವರೆಡೆಗೆ ತಾನು ಕಾಠಿಣ್ಯವನ್ನು ತೋರಿಸುವಂತಾಗದಂತೆ ಅವರು ಪಶ್ಚಾತಾಪ ಪಡಬೇಕೆಂಬುದೇ.

ಇಲ್ಲಿ ಪು ನಃ ನಾವು ಅಧಿಕಾರದ ಉದ್ದೇಶವನ್ನು ಕಾಣುತ್ತೇವೆ: ಅದು ಜನರ ಭಕ್ತಿವೃದ್ಧಿಯನ್ನು ಮಾಡುವದಕ್ಕಾಗಿಯೇ ಹೊರತು ಅವರನ್ನು ಒಡೆಯುವದಕ್ಕಲ್ಲ (2 ಕೊರಿಂಥ 10:8 ನೋಡಿರಿ).

ಅಂತಿಮ ವಂದನೆಗಳು (13:11-14)

**11** ಕ್ರಮಪಡಿಸಿಕೊಳ್ಳಿರಿ. ಅಂದರೆ ಪರಿಪೂರ್ಣತೆಯನ್ನು ನಿಮ್ಮ ಗುರಿಯನ್ನಾಗಿಟ್ಟುಕೊಳ್ಳಿರಿ. ೯ನೇ ವಚನದಲ್ಲಿ ಕೊರಿಂತದವರಿಗಾಗಿ ಪೌಲನ ಪ್ರಾರ್ಥನೆ ಇದೇ ಆಗಿದೆ. ಅದು ಮಾತ್ರವಲ್ಲದೆ, ಇದು ಕ್ರಿಸ್ತನು ಕೊಟ್ಟ ಆಜ್ಞೆಯೂ ಆಗಿದೆ: "ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರಿ" (ಮತ್ತಾಯ 5:48).ಒಂದೇ ಮನಸ್ಸುಳ್ಳವರಾಗಿರಿ (ರೋಮ 15:5; 1 ಕೊರಿಂಥ 1:10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**12-13** ದೇವಜನರೆಲ್ಲರೂ ಪೌಲನು ಈ ಪತ್ರಿಕೆಯನ್ನು ಬರೆಯುವ ಸಮಯದಲ್ಲಿ ಆತನೊಂದಿಗಿದ್ದ ಎಲ್ಲಾ ಕ್ರೈಸ್ತರಾಗಿದ್ದಾರೆ (ರೋಮ 16:16; 1 ಕೊರಿಂಥ 16:20 ನೋಡಿರಿ).

**14** ಬಹುಶಃ ಈ ವಚನವು ಇಡೀ ಬೈಬಲಿನಲ್ಲಿಯೇ ಹೆಚ್ಚಾಗಿ ಉಲ್ಲೇಖಿಸಲ್ಪಟ್ಟ ವಚನವಾಗಿದೆ. ಇಲ್ಲಿ ಒಬ್ಬನೇ ಸತ್ಯದೇವರ ಮೂರು ರೂಪಗಳು ಅಥವಾ ವ್ಯಕ್ತಿಗಳು [24] ಪ್ರಸ್ತಾಪಿಸಲ್ಪಟ್ಟಿದ್ದಾರೆ; ಯಾರಾರೆಂದರೆ, ಮಗನಾದ ಯೇಸು ಕ್ರಿಸ್ತನು, ತಂದೆಯಾದ ದೇವರು, ಮತ್ತು ಪವಿತ್ರಾತ್ಮನು. ಈ ಮೂವರು ಒಂದೇ. ಅವರು ಏನೇ ಮಾಡಿದರೂ ಒಟ್ಟಾಗಿ ಮಾಡುತ್ತಾರೆ.

ಇಲ್ಲಿ ಪೌಲನು ಏನು ಬರೆಯುತ್ತಾನೆಂಬದನ್ನು ಗಮನಿಸಿರಿ. ಮೊದಲನೆಯದಾಗಿ, ಕರ್ತನಾದ ಯೇಸು ಕ್ರಿಸ್ತನ ಕೃಪೆಯೂ; ಎರಡನೆಯದಾಗಿ, ದೇವರ ಪ್ರೀತಿಯೂ; ಮತ್ತು ಮೂರನೆಯದಾಗ, ಪವಿತ್ರಾತ್ಮನ ಅನ್ಯೋನ್ಯತೆಯೂ ಬರುತ್ತದೆ. ಒಂದು ಅರ್ಥದಲ್ಲಿ, ನಾವು ದೇವರನ್ನು ಆ ಕ್ರಮದಲ್ಲಿ ಅನುಭವಿಸುತ್ತೇವೆಂದು ಹೇಳಬಹುದು. ಮೊದಲನೆಯಾಗಿ, ನಾವು ಕ್ರಿಸ್ತನ ಕೃಪೆ, ಆತನ ಕ್ಷಮಾಪಣೆ, ಆತನ ನೀತಿಯನ್ನು ಪಡೆಯುತ್ತೇವೆ. ನಂತರ, ನಾವು ದೇವರ ಪ್ರೀತಿಯು ನಮ್ಮ ಹೃದಯಗಳನ್ನು ತುಂಬುವದನ್ನು ಅನುಭವಿಸುತ್ತೇವೆ. ಮತ್ತು ಮೂರನೆಯದಾಗಿ, ನಾವು ಪವಿತ್ರಾತ್ಮನನ್ನು ಪಡೆದುಕೊಳ್ಳುತ್ತೇವೆ, ಆತನು ನಮ್ಮಲ್ಲಿ ವಾಸಿಸುತ್ತಾ ನಮಗೆ ಅನ್ಯೋನ್ಯತೆಯನ್ನು ನೀಡುತ್ತಾನೆ. ಆದರೆ ನಾವು ಕೃಪೆ, ಪ್ರೀತಿ ಮತ್ತು ಅನೋನ್ಯತೆಯನ್ನು ಬೇರ್ಪಡಿಸುವ ಅಗತ್ಯವಿಲ್ಲ. ಇವೆಲ್ಲವೂ ಒಬ್ಬನೇ ದೇವರ ಒಂದೇ ಕಾರ್ಯವಾಗಿದೆ. ಮತ್ತು ಈ ಮೂರು ಸಂಗತಿಗಳೂ – ಕೃಪೆಯೂ, ಪ್ರೀತಿಯೂ ಅನ್ಯೋನ್ಯತೆಯೂ – ನಮ್ಮ ಪ್ರತಿಕ್ಷಣದ ಜೀವಿತಗಳಿಗೆ ಅಗತ್ಯವಾಗಿರುತ್ತವೆ.

ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯೂ ದೇವರ ಪ್ರೀತಿಯೂ ಪವಿತ್ರಾತ್ಮನ ಅನ್ಯೋನ್ಯತೆಯೂ ನಿಮ್ಮೆಲ್ಲರ ಸಂಗಡವಿರಲಿ.

---

## ಟಿಪ್ಪಣಿ

[1] ವಾಸ್ತವದಲ್ಲಿ, ಈ "ಕಠಿಣವಾದ" ಪತ್ರಿಕೆಯು ಪೌಲನು ಕೊರಿಂಥದವರಿಗೆ ಬರೆದ ಮೊದಲನೆಯ ಪತ್ರಿಕೆಯಾಗಿತ್ತೆಂದು ಕೆಲವು ಬೈಬಲ್ ಪಂಡಿತರು ನಂಬುತ್ತಾರೆ. ಆದರೆ ಬಹು ಪಾಲು ಪಂಡಿತರು ಅದು ಬೇರೆ ಪತ್ರಿಕೆಯಾಗಿದ್ದು ಈಗ ಕಳೆದು ಹೋಗಿರುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ.

[2] ನಾವು ಪೌಲನ ಮೂರನೆಯ ಪತ್ರಿಕೆಯನ್ನು" ಕೊರಿಂಥದವರಿಗೆ ಬರೆದ ಎರಡನೆಯ ಪತ್ರಿಕೆ" ಎಂದು ಕರೆಯುತ್ತೇವೆ, ಯಾಕೆಂದರೆ ಆತನು ಬರೆದ ನಿಜವಾದ ಎರಡನೆಯ ಪತ್ರಿಕೆಯು ಕಳೆದು ಹೋಗಿರುತ್ತದೆ.

[3] ಕೊರಿಂಥವು ಅಖಾಯ ಸೀಮೆಯ ರಾಜಧಾನಿಯಾಗಿತ್ತು.

4 ಅಸ್ಯ ಸೀಮೆಯು ಇಂದಿನ ಆಧುನಿಕ ಟರ್ಕಿಯ ಪಾಶ್ಚಾತ್ಯಬಾಗದಲ್ಲಿತ್ತು. ಎಫೆಸವು ಅದರ ಪ್ರಮುಖ ನಗರವಾಗಿತ್ತು.

5 ಯೂದಾಯವು ಇಸ್ರಾಯೇಲಿನ ದಕ್ಷಿಣ ಸೀಮೆಯಾಗಿದೆ; ಯೆರೂಸಲೇಮು ಅದರ ಮುಖ್ಯ ಪಟ್ಟಣ.

6 ಯೆಹೂದ್ಯರ ಭಾಷೆಯಾದ ಇಬ್ರಿಯ ಭಾಷೆಯಲ್ಲಿ "ಹೌದು" ಎಂಬುದಕ್ಕೆ ಬದಲಾಗಿ ಆಮೆನ್ ಎಂದು ಹೇಳಲ್ಪಡುತ್ತದೆ.

7 ಪೌಲನು ತನ್ನ ಮಕ್ಕಳನ್ನು ಶಿಸ್ತುಗೊಳಿಸುವ ಕರ್ತವ್ಯ ಹೊಂದಿರುವ ತಂದೆಯಂತಿದ್ದನು. ಪ್ರೀತಿಯ ತಂದೆಯು ತನ್ನ ಮಕ್ಕಳ ಮೇಲೆ ಪ್ರಯೋಗಿಸುವ ನೋವನ್ನು ತಾನೂ ಯಾವಾಗಲೂ ಅನುಭವಿಸುತ್ತಾನೆ.

8 ತೀತನು ಪೌಲನ ಆಪ್ತ ಸಹಪಾಠಿಯಾಗಿದ್ದನು (ಗಲಾತ್ಯ 2:1,3 ಮತ್ತು ವ್ಯಾಖ್ಯಾನ ನೋಡಿರಿ).

9 ಮೆಕೆದೋನ್ಯವು ಉತ್ತರ ಗ್ರೀಕಿನ ಒಂದು ಮುಖ್ಯ ಪ್ರಾಂತ್ಯವಾಗಿತ್ತು. ಮೆಕೆದೋನ್ಯ ಹಾಗು ಅಖಾಯಗಳು ಒಟ್ಟಾಗಿ ಸೇರಿ (ದಕ್ಷಿಣ ಪ್ರಾಂತ್ಯ) ಗ್ರೀಕ್ ರಾಷ್ಟ್ರ ಬಹು ಪಾಲು ಭಾಗವನ್ನು ಆಕ್ರಮಿಸಿದ್ದವು .

10 ಹಳೆ ಒಡಂಬಡಿಕೆಯ ಮೊದಲ ಐದು ಪುಸ್ತಕಗಳು ಹಲವಾರುವೆಳೆ "ಧರ್ಮಶಾಸ್ತ್ರ" ಅಥವಾ "ಮೋಶೆಯ ಧರ್ಮಶಾಸ್ತ್ರ" ಎಂದು ಕರೆಯಲ್ಪಟ್ಟಿವೆ. ಅನೇಕ ವೇಳೆಗಳಲ್ಲಿ ಪೌಲನು "ಧರ್ಮಶಾಸ್ತ್ರ" ಹಾಗು "ಒಡಂಬಡಿಕೆ" ಎಂಬ ಪದಗಳನ್ನು ಅದಲುಬದಲಾಗಿ ಉಪಯೋಗಿಸುತ್ತಾನೆ. ಯೆಹೂದ್ಯ ಧರ್ಮಶಾಸ್ತ್ರ; ಯೆಹೂದ್ಯರು ಹಾಗು ದೇವರ ನಡುವಿನ ಒಡಂಬಡಿಕೆಯ ಸಂಬಂಧಗಳೆರಡೂ ಹಳೆ ಒಡಂಬಡಿಕೆಯ ಮೊದಲ ಐದು ಪುಸ್ತಕಗಳಲ್ಲಿ ಅಡಕವಾಗಿದ್ದವು . ಹೆಚ್ಚಿನ ಚರ್ಚೆಗಾಗಿ ಪದಪಟ್ಟಿ: ಧರ್ಮಶಾಸ್ತ್ರ ನೋಡಿರಿ).

11 ಹಳೆ ಒಡಂಬಡಿಕೆಯ ಮೊದಲ ಐದು ಪುಸ್ತಕಗಳು ಮೋಶೆಯಿಂದ ಬರೆಯಲ್ಪಟ್ಟಿದ್ದವು .

12 ಹೆಚ್ಚಿನ ಚರ್ಚೆಗಾಗಿ, ಸಾಮಾನ್ಯ ಲೇಖನಗಳು: ಯೇಸು ಕ್ರಿಸ್ತನು, ಪವಿತ್ರಾತ್ಮನು ನೋಡಿರಿ.

13 ಕರ್ತನ ಪ್ರಭಾವವನ್ನು ಪ್ರತಿಬಿಂಬಿಸಿರಿ. ಎಂಬ ಮಾತುಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಕರ್ತನ ಪ್ರಭಾವವನ್ನು ದೃಷ್ಟಿಸು" ಎಂದು ಹೇಳುತ್ತವೆ. ಗ್ರೀಕ್ ಮೂಲ ಪ್ರತಿಯಲ್ಲಿ ಪೌಲನು ಯಾವ ಅರ್ಥವನ್ನು ಮನಸ್ಸಿನಲ್ಲಿ ಹೊಂದಿದ್ದನೆಂಬದು ಖಚಿತವಾಗಿರುವದಿಲ್ಲ. ಎರಡೂ ಭಾಷಾಂತರಗಳು ಇರುವ ಸಾಧ್ಯತೆಯಿದೆ ಹಾಗು ಎರಡೂ ಒಳ್ಳೇ ಅರ್ಥವನ್ನು ನೀಡುತ್ತವೆ.

14 ನಾವು ನಮ್ಮ ಪಾಪ ಅಥವಾ ಮೂರ್ಖತನದ ನಿಮಿತ್ತ ಬಾಧೆಗೊಳಗಾಗುವದಾದರೆ ನಮ್ಮ ಬಾಧೆಯು ದೇವರಿಂದ ಕೊಡಲ್ಪಡುತ್ತಿರುವ ಒಂದು ವಿಧದ ಶಿಕ್ಷೆಯಾಗಿರುತ್ತದೆ. ನಾವು ನಮ್ಮ ಪಾಪಕ್ಕಾಗಿ ಪಶ್ಚಾತಾಪ ಪಟ್ಟು ದೇವರ ಶಿಕ್ಷೆಯನ್ನು ಸ್ವೀಕರಿಸಿಕೊಳ್ಳುವದಾದರೆ ಈ ವಿಧದ ಬಾಧೆಯು ಸಹ ಅಂತ್ಯದಲ್ಲಿ ದೊಡ್ಡ ಆತ್ಮೀಕ ಆಶೀರ್ವಾದವನ್ನು ತರುತ್ತದೆ (ಇಬ್ರಿಯ 12:11 ನೋಡಿರಿ).

15 2 ಕೊರಿಂಥ 3:6 ರಲ್ಲಿ ಪೌಲನು ತನ್ನನ್ನು "ಹೊಸ ಒಡಂಬಡಿಕೆಯ ಸೇವಕ" ಎಂದು ಕರೆದುಕೊಳ್ಳುತ್ತಾನೆ. ಆ ಹೊಸ ಒಡಂಬಡಿಕೆಯು ಕೃಪೆಯ ಒಡಂಬಡಿಕೆಯಾಗಿದೆ. ಹೀಗೆ. ಹೊಸ ಒಡಂಬಡಿಕೆಗೆ ಸೇವಕನಾಗಿರುವದು ಹಾಗು ಕೃಪೆಯ ಸೇವಕನಾಗಿರುವದು ಎರಡೂ ಒಂದೇ ಆಗಿದೆ.

16 ಖಂಡಿತವಾಗಿಯೂ, ಕೆಲವು ವೇಳೆಗಳಲ್ಲಿ ನಾಯಕರೂ ಪಾಪದಲ್ಲಿ ಬೀಳುತ್ತಾರೆ. ಹೀಗಾಗುವಾಗ, ನಾಯಕನೊಬ್ಬನ ಮೇಲೆ ಯಾವದೇ ಆರೋಪವನ್ನು ಹೊರಿಸುವದಕ್ಕೆ ಮುನ್ನ ಇಬ್ಬರು ಸಾಕ್ಷಿಗಳಾದರೂ ಅಗತ್ಯವಾಗಿರುತ್ತದೆ (1 ತಿಮೊಥೆ 5:19-20 ನೋಡಿರಿ). ಆರೋಪಗಳು ಸ್ಪಷ್ಟವಾಗಿ ನಿರೂಪಿಸಲ್ಪಡಬೇಕು ಇಲ್ಲವೆ ಕೈಬಿಡಲ್ಪಡಬೇಕು.

17 ನರಕದಲ್ಲಿರುವವರು ಮರಣದಂತಿರುವ ಒಂದು ಸ್ಥಿತಿಯಲ್ಲಿರುತ್ತಾರೆ, ಯಾಕೆಂದರೆ ನರಕದಲ್ಲಿ ಅವರು ದೇವರಿಂದಲೂ ಕ್ರಿಸ್ತನಿಂದಲೂ ಅಗಲಿಸಲ್ಪಟ್ಟವರಾಗಿರುತ್ತಾರೆ. ದೇವರಿಂದ ಹಾಗು ಕ್ರಿಸ್ತನಿಂದ ಬೇರ್ಪಟ್ಟವರು ಯಾವ ನಿಜವಾದ ಆತ್ಮೀಕ ಜೀವವನ್ನು ಹೊಂದಲಾರರು.

18 ಬೆಲಿಯೇಲ ಎಂಬದು ಸೈತಾನನ ಇನ್ನೊಂದು ಹೆಸರು.

19 ಆತ್ಮದ ಪಾಪಗಳಾವವೆಂದರೆ, ಅಪನಂಬಿಕೆ, ಅಹಂಕಾರ, ಅತೃಪ್ತಿ, ಟೀಕೆ, ವಿಗ್ರಹಾರಾಧನೆ ಮುಂತಾದವು ಗಳು. ಇಲ್ಲಿ ಪ್ರಸ್ತಾಪಿಸಿರುವ ಆತ್ಮವು ಮಾನುಷ ಆತ್ಮವಾಗಿದೆ. ಎಲ್ಲಾ ಪಾಪಗಳು ಮಾನವನ ಹೃದಯ ಮತ್ತು ಮನಸ್ಸಿನಲ್ಲಿ ಉದ್ಭವವಾಗುತ್ತವೆ, ಆದರೆ ಕೆಲವು ಪಾಪಗಳು ವಿಶೇಷವಾಗಿ ಮಾನವ ದೇಹಕ್ಕೆ ಸಂಬಂಧಪಟ್ಟಿರುತ್ತದೆ.

20 ಭೌತೀಕ ಅರ್ಥದಲ್ಲಿ ಮರಣವು ಬಡತನದ ಅಂತಿಮ ಸ್ಥಿತಿಯಾಗಿದೆ. ಮರಣದ ಮೂಲಕ ನಾವು ನಮ್ಮ ಸೊತ್ತುಗಳನ್ನಷ್ಟೆ ಅಲ್ಲ, ಆದರೆ ನಮ್ಮ ದೇಹಗಳನ್ನೂ ಕಳೆದುಕೊಳ್ಳುತ್ತೇವೆ.

21 ಪೌಲನು ಇಲ್ಲಿ ಸೂಚಿಸುತ್ತಿರುವ ನಿರ್ದಿಷ್ಟವಾದ ವಿಷಯವು ಹಣಕಾಸಿನ ವಿಷಯವಾಗಿದೆ. ಎಲ್ಲಾ ಸಭಾನಾಯಕರು ತಮ್ಮ ಹಾಗು ತಮ್ಮ ಕೆಲಸದ ವಿಷಯದಲ್ಲಿ, ವಿಶೇಷವಾಗಿ ಹಣಕಾಸಿನ ವಿಷಯಗಳಲ್ಲಿ ಇತರ ಕ್ರೈಸ್ತರಿಗೆ ಜವಾಬುದಾರರಾಗಿರಬೇಕು. "ನಾನು ದೇವರೊಬ್ಬನಿಗೆ ಜವಾಬುದಾರನು" ಎಂದು ಹೇಳಿದರೆ ಸಾಕಾಗುವದಿಲ್ಲ ಇತರ ವಿಶ್ವಾಸಿಗಳಿಗೆ ಜವಾಬುದಾರನಾಗಿರಲು ನಿರಾಕರಿಸುವ ನಾಯಕನನ್ನು ಸೈತಾನನು ನಿಶ್ಚಯವಾಗಿಯೂ ಮುಗ್ಗರಿಸುವಂತೆ ಮಾಡುವನು.

22 ಸಾಮಾನ್ಯವಾಗಿ ದೇವರು ಕ್ರೈಸ್ತರಿಗೆ ಆತ್ಮೀಕ ಆಶೀರ್ವಾದಗಳ ಜೊತೆಯಲ್ಲಿ ಭೌತೀಕ ಆಶೀರ್ವಾದಗಳನ್ನೂ ನೀಡುತ್ತಾನಾದಾಗ್ಯು ಆತನು ಯಾವಾಗಲೂ ಹಾಗೆ ಮಾಡುವು ದಿಲ್ಲ. ಕೆಲವು ವೇಳೆಗಳಲ್ಲಿ ದೇವರು ನಮ್ಮನ್ನು ಪರೀಕ್ಷಿಸುವದಕ್ಕಾಗಿ ಅಥವಾ ನಮಗೆ ಇನ್ನು ಶ್ರೇಷ್ಠವಾದ ಆತ್ಮೀಕ ಆಶೀರ್ವಾದಗಳನ್ನು ನೀಡಬೇಕೆಂಬ ಉದ್ದೇಶದಿಂದ ನಮ್ಮನ್ನು ಕಷ್ಟಗಳಿಗೆ ಒಳಪಡಿಸುತ್ತಾನೆ.

23 ದಮಸ್ಕವು ಮಧ್ಯಪೂರ್ವಾತ್ಯ ರಾಷ್ಟ್ರವಾದ ಸಿರಿಯಾದ ರಾಜಧಾನಿಯಾಗಿದೆ.

24 ದೇವರನ್ನು ಸೂಚಿಸಿ ಮಾತಾಡುವಾಗ ಆತನ ಮೂರು "ರೂಪಗಳು" ಅಥವಾ "ವ್ಯಕ್ತಿಗಳು" ಗಿಂತಲೂ ಆತನ ಮೂರು "ಅಸ್ತಿತ್ವದ ವಿಧಿಗಳ" ಕುರಿತಾಗಿ ಮಾತಾಡುವದು ಹೆಚ್ಚು ನಿಖರವಾಗಿರುತ್ತದೆ. ಹೇಗಿದ್ದರೂ, ಸರಳತೆಯ ಉದ್ದೇಶದಿಂದ ಈ ವ್ಯಾಖ್ಯಾನ ಗ್ರಂಥವು "ರೂಪ" ಎಂಬ ಪದವನ್ನು ಉಪಯೋಗಿಸುತ್ತದೆ.

# ಪೌಲನು ಗಲಾತ್ಯದವರಿಗೆ ಬರೆದ ಪತ್ರಿಕೆ

## ಪರಿಚಯ

ಗಲಾತ್ಯವು ರೋಮಾಯ ಸಾಮ್ರಾಜ್ಯದ ಒಂದು ಪ್ರಾಂತ್ಯವಾಗಿದ್ದು. ಈಗ ಆಧುನಿಕ ಟರ್ಕಿಯಿರುವ ಸ್ಥಳದಲ್ಲಿತ್ತು. ಪೌಲನು ಗಲಾತ್ಯದವರಿಗೆ ಬರೆದ ಪತ್ರಿಕೆಯು ಒಂದು ಸಭೆಗೆ ಮಾತ್ರವೇ ಅಲ್ಲ, ಆದರೆ ಹಲವಾರು ಸಭೆಗಳಿಗೆ ಬರೆಯಲ್ಪಟ್ಟಿತ್ತು, ಆ ಸಭೆಗಳನ್ನೆಲ್ಲಾ ಕೆಲವು ವರ್ಷಗಳ ಮುಂಚೆ ಪೌಲನು ತಾನೇ ಸ್ಥಾಪಿಸಿದ್ದನು. ಈ ಪತ್ರಿಕೆಯಲ್ಲಿ ಯಾವ ಸಭೆಯ ಹೆಸರು ಪ್ರಸ್ತಾಪಿಸಲ್ಪಡದಿರುವದರಿಂದ ಪೌಲನು ನಿರ್ದಿಷ್ಟವಾಗಿ ಯಾವ ಸಭೆಗೆ ಹೆಸರು ಪ್ರಸ್ತಾಪಿಸಲ್ಪಡದಿರುವದರಿಂದ ಪೌಲನು ನಿರ್ದಿಷ್ಟವಾಗಿ ಯಾವ ಸಭೆಗೆ ಬರೆದನೆಂಬದು ಖಚಿತವಾಗಿರುವದಿಲ್ಲ. ಅಲ್ಲದೆ, ಈ ಪತ್ರಿಕೆಯು ಯಾವ ಸಭೆಗೆ ಬರೆದನೆಂಬದು ಖಚಿತವಾಗಿರುವದಿಲ್ಲ. ಅಲ್ಲದೆ, ಈ ಪತ್ರಿಕೆಯು ಯಾವ ವರ್ಷದಲ್ಲಿ ಬರೆಯಲ್ಪಟ್ಟಿತ್ತೆಂಬದು ಸಹ ಖಚಿತವಾಗಿರುವದಿಲ್ಲ. ಕೆಲವರು ಕ್ರಿ.ಶಕ 54-56 ಎಂದೂ, ಇನ್ನು ಕೆಲವರು ಕ್ರಿ.ಶಕ 48-49 ಎಂದು ಹೇಳುತ್ತಾರೆ.

ಪೌಲನು ಈ ಪತ್ರಿಕೆಯನ್ನು ಬರೆಯುವದಕ್ಕೆ ಕಾರಣವು ಪತ್ರಿಕೆಯಲ್ಲಿಯೇ ಕಂಡುಬರುತ್ತದೆ. ಆತನು ಈ ಅನ್ಯಜನಾಂಗದ ಸಭೆಗಳನ್ನು ಸ್ಥಾಪಿಸಿದ ಸ್ವಲ್ಪ ಸಮಯದಲ್ಲಿಯೇ ಕೆಲವು ಯೆಹೂದಿಕ್ರೈಸ್ತರು ಬಂದು ಪೌಲನ ಬೋಧನೆಯನ್ನು ವಿರೋಧಿಸಲು ಪ್ರಾರಂಭಿಸಿದರು. ಮನುಷ್ಯನು ಕೃಪೆಯ ಮೂಲಕ ನಂಬಿಕೆಯಿಂದಲೇ ರಕ್ಷಣೆ ಹೊಂದುತ್ತಾನೆಂದು ಪೌಲನು ಕಲಿಸಿದನು (ಎಫೆಸ 2:8), ಆದರೆ ಈ ಯೆಹೂದ್ಯ ಕ್ರೈಸ್ತರು ರಕ್ಷಣೆಹೊಂದಬೇಕಾದರೆ ಯೆಹೂದ್ಯಧರ್ಮಶಾಸ್ತ್ರವನ್ನು ಪಾಲಿಸುವದು ಸಹ ಅವಶ್ಯಕವಾಗಿದೆ ಎಂದು ಹೇಳಿದರು. ಈ ಯೆಹೂದ್ಯ ಕ್ರೈಸ್ತ ಬೋಧನೆಗಳು ತಳವೂರುವದಾದರೆ ಪೌಲನ ಕೃಪೆಯು ಸುವಾರ್ತೆಯ ಗಣನೆಗೆ ಬಾರದ್ದಾಗುತ್ತಿತ್ತು. ಹೀಗೆ ಯೆಹೂದ್ಯ ಕ್ರೈಸ್ತರ ಸುಳ್ಳುಬೋಧನೆಗಳನ್ನು ಖಂಡಿಸಿ ಗಲಾತ್ಯದ ಸಭೆಗಳ ಯುವ ಕ್ರೈಸ್ತರನ್ನು ಮಾರ್ಗ ತಪ್ಪಿಹೋಗದಂತೆ ಕಾಪಾಡುವದಕ್ಕಾಗಿ ಪೌಲನು ಈ ಪತ್ರಿಕೆಯನ್ನು ಬರೆಯುವದಕ್ಕೆ ಒತ್ತಾಯಿಸಲ್ಪಟ್ಟನು. ಗಲಾತ್ಯದವರು ಧರ್ಮಶಾಸ್ತ್ರದ ಕಾರ್ಯಗಳ ಮೂಲಕ ರಕ್ಷಣೆಯನ್ನು ಪಡೆಯುವದಕ್ಕೆ ಪ್ರಾರಂಭಿಸಿದ್ದಾದರೆ ಅವರು ತಾವು ಹೊಂದಿಕೊಂಡ ಕೃಪೆಯನ್ನು ಕಳೆದುಕೊಳ್ಳುವ ಅಪಾಯದಲ್ಲಿರುತ್ತಿದ್ದರು.

ಕ್ರೈಸ್ತ ಸಭಾಚರಿತ್ರೆಯಲ್ಲಿ ಪೌಲನು ಗದಲಾತ್ಯದವರಿಗೆ ಬರೆದ ಪತ್ರಿಕೆಯು ಅತ್ಯಂತ ಪ್ರಾಮುಖ್ಯವಾಗಿರುತ್ತದೆ. ಮಾರ್ಟಿನ್ ಲೂಥರನು ಹದಿನಾರನೆಯ ಶತಮಾನದಲ್ಲಿ ಈ ಪತ್ರಿಕೆಯನ್ನು ಅಬ್ಯಾಸಿಸಿದ ಬಳಿಕವೇ ಆ ಸಮಯದಲ್ಲಿ ರೋಮನ್ ಕ್ಯಾಥೋಲಿಕ ಸಭೆಯ ಸುಳ್ಳುಬೋಧನೆಯನ್ನು ಗುರುತಿಸಿಕೊಂಡು ಪ್ರೊಟೆಸ್ಟೆಂಟ್ ಚಳುವಳಿಯನ್ನು ಪ್ರಾರಂಭಿಸಿದನು. ಈ ಪತ್ರಿಕೆಯನ್ನು ಅಭ್ಯಾಸಿಸುವದರ ಮೂಲಕವೇ ಲೂಥರನು ಕ್ರೈಸ್ತಸುವಾರ್ತೆಯ ಕೇಂದ್ರ ಸತ್ಯವನ್ನು ಕಂಡು ಹಿಡಿದನು: ಅದೇನೆಂದರೆ, ಮಾನವನು ರಕ್ಷಣೆಯನ್ನು ಯಾವದೇ ಸಭೆಯ ಮೂಲಕವಾಗಲಿ ಅಥವಾ ಯಾವದೇ ಧರ್ಮಶಾಸ್ತ್ರವನ್ನು ಅನುಸರಿಸುವದರಿಂದಾಗಲಿ ಪಡೆಯುವದಿಲ್ಲ; ಬದಲಾಗಿ, ನಂಬಿಕೆಯ ಮೂಲಕ ಹೊಂದಿದ ಕೃಪೆಯಿಂದಲೇ ಮಾತ್ರವೇ ರಕ್ಷಣೆಯನ್ನು ಪಡೆದುಕೊಳ್ಳುತ್ತಾನೆ. ಲೋಕದ ಜನರು ರಕ್ಷಣೆಯನ್ನು ತಮ್ಮ ಸ್ವಂತ ಕಾರ್ಯ ಹಾಗು ಪ್ರಯತ್ನದಿದ ಹುಡುಕುತ್ತಾರೆ. ಅವರು ವಿವಿಧ ಧಾರ್ಮಿಕ ನಿಯಮಗಳನ್ನೂ; ಆಚಾರಗಳನ್ನು ಪಾಲಿಸುವದರ ಮೂಲಕ ದೇವರನ್ನು ಮೆಚ್ಚಿಸಲು ಪ್ರಯತ್ನಿಸುತ್ತಾರೆ. ಅವರು ತಮ್ಮ ಸ್ವಂತ ಬಲದಿಂದ ಪವಿತ್ರರಾಗಲು ಪ್ರಯಾಸಪಡುತ್ತಾರೆ. ಆದರೆ ಅವರ ಪ್ರಯಾಸಗಳೆಲ್ಲಾ ವ್ಯರ್ಥವಾಗಿವೆ. ಕೃಪೆಯ ಮೂಲಕ ಮಾತ್ರವೇ (ಮನುಷ್ಯನು ದೇವರ ದೃಷ್ಟಿಯಲ್ಲಿ ಸ್ವೀಕರಿಸಲ್ಪಡುತ್ತಾನೆ. ದೇವರು ತನ್ನ ಮಹಾ ಪ್ರೀತಿ ಹಾಗು ಕರುಣೆಯಿಂದ ಪಾಪಿ ಮನುಷ್ಯನಿಗಾಗಿ ಪರಲೋಕಕ್ಕೆ ಬರುವ ದ್ವಾರವನ್ನು ತೆರೆದಿದ್ದಾನೆ. ಕ್ರಿಸ್ತನನ್ನು ನಂಬುವದರ ಮೂಲಕ ನಾವು ಆ ದ್ವಾರವನ್ನು ಪ್ರವೇಶಿಸಬಹುದು. ಇದು ಗಲಾತ್ಯದವರಿಗೆ ಬರೆದ ಪ್ರತ್ರಿಕೆಯ ಮುಖ್ಯ ಬೋಧನೆಯಾಗಿದೆ.

ಪೌಲನ ಜೀವಿತದ ಕುರಿತಾದ ಹೆಚ್ಚಿನ ವಿವರಕ್ಕಾಗಿ ರೋಮಾಪುರದವರಿಗೆ ಬರೆದ ಪತ್ರಿಕೆ: ಪರಿಚಯ ಭಾಗವನ್ನು ನೋಡಿರಿ.

## ಹೊರ ರೇಖೆ

ಅ. ಪೀಠಿಕೆ (1:1-10)

1. ವಂದನೆಗಳು (1:1-5)
2 ಪತ್ರಿಕೆಯ ಕಾರಣ (1:6-10)

ಆ. ಪೌಲನು ತನ್ನ ಅಪೊಸ್ತಲತನದ ಬಗ್ಗೆ ಪ್ರತಿವಾದ ಮಾಡಿದ್ದು (1:11-2:21)

1. ಪೌಲನ ಸುವಾರ್ತೆಯು ನೇರವಾಗಿ ದೇವರಿಂದ ಸ್ವೀಕರಿಸಲ್ಪಟ್ಟದ್ದು (1:11-24)
2. ಇತರ ಅಪೊಸ್ತಲರೊಂದಿಗೆ ಪೌಲನ ಸಂಬಂಧ (2:1-14)
3. ಯೆಹೂದ್ಯ ಧರ್ಮಶಾಸ್ತ್ರದ ವಿಫಲತೆ (2:15-21)

ಇ. ಸುವಾರ್ತೆಯ ಬಗ್ಗೆ ಪೌಲನ ಪ್ರತಿವಾದ (3:1-4:31)

1. ನಂಬಿಕೆಯಿಂದ ನೀತಿವಂತರೆಂಬ ನಿರ್ಣಯ (3:1-14)
2. ಧರ್ಮಶಾಸ್ತ್ರ ಮತ್ತು ವಾಗ್ದಾನ (3:15-29)
3. ಗಲಾತ್ಯದವರಿಗೆ ಪೌಲನ ವಿನಂತಿ (4:1-31)

ಈ. ಭಕ್ತಿ ಜೀವಿತಕ್ಕೆ ಕರೆ (5:1-6:18)

1. ಕೃಪೆಯಿಂದ ಬಿದ್ದು ಹೋಗುವ ಅಪಾಯ (5;1-12)
2. ಪವಿತ್ರಾತ್ಮನಿಗೆ ಅನುಗುಣವಾದ ಜೀವನ (5:13-26)
3. ಎರಡು ಅಭ್ಯಾಸಗತ ಪ್ರಬೋಧನೆಗಳು (6:1-10)
4. ಮುಕ್ತಾಯ (6:11-18)

## ಅಧ್ಯಾಯ - 1

### ವಂದನೆಗಳು (1:1-5)

1 ಪೌಲನು ದೇವರಿಂದಲೂ ಯೇಸು ಕ್ರಿಸ್ತನಿಂದಲೂ ನೇರವಾಗಿ ನೇಮಿಸಲ್ಪಟ್ಟ ಒಬ್ಬ ಅಪೊಸ್ತಲನಾಗಿದ್ದನು. ಆತನು ಈ ನೇಮಿಸುವಿಕೆಯನ್ನು ಯಾವದೇ ಮನುಷ್ಯನಿಂದ ಹೊಂದಲಿಲ್ಲ. ಹೊಸ ಒಂಡಂಬಡಿಕೆಯಲ್ಲಿ ಒಬ್ಬ ಅಪೊಸ್ತಲನು ಸುವಾರ್ತೆಯನ್ನು ಸಾರಿ ಸಭೆಗಳನ್ನು ಸ್ಥಾಪಿಸುವದಕ್ಕೆ ವಿಶೇಷ ಅಧಿಕಾರವನ್ನು ಕ್ರಿಸ್ತನಿಂದ ಪಡೆದುಕೊಂಡಿದ್ದ ವ್ಯಕ್ತಿಯಾಗಿದ್ದನು. ಹೊಸ ಒಡಂಬಡಿಕೆಯ ಬಹು ಪಾಲು ಅಪೊಸ್ತಲರು ಪು ನರುತ್ಥಾನಗೊಂಡ ಕ್ರಿಸ್ತನನ್ನು ತಮ್ಮ ಕಣ್ಣಾರೆ ನೋಡಿದ್ದರು. ಪೌಲನು ದಮಸ್ಕದಲ್ಲಿದ್ದ ಕ್ರೈಸ್ತರನ್ನು ಹಿಂಸಿಸುವದಕ್ಕಾಗಿ ಅಲ್ಲಿಗೆ ಪ್ರಯಾಣಿಸುತ್ತಿರುವಾಗ ಯೇಸುವನ್ನು ಕಂಡಿದ್ದನು (ಅ.ಕೃತ್ಯ 9:3-6; 26:12-15; 1 ಕೊರಿಂಥ 15:8 ನೋಡಿರಿ). ಆ ಸಮಯದಲ್ಲಿ ಆತನು ಅನ್ಯಜನರಿಗೆ, ಅಂದರೆ, ಯೆಹೂದ್ಯೇತರರೆಲ್ಲರಿಗೂ ಅಪೊಸ್ತನಾಗಿರುವದಕ್ಕೆ ಕ್ರಿಸ್ತನಿಂದ ನೇಮಿಸಲ್ಪಟ್ಟನು (ಅ.ಕೃತ್ಯ 9:15; 26:16-18) ಮತ್ತು ಈಗ ಪೌಲನು ಕರ್ತನಾದ ಯೇಸು ಕ್ರಿಸ್ತನ ಪೂರ್ಣ ಅಧಿಕಾರದೊಂದಿಗೆ ಗಲಾತ್ಯದವರಿಗೆ – ಮತ್ತು ನಮಗೆ – ಬರೆಯುತ್ತಾನೆ. ಅದದರಿಂದ, ಗಲಾತ್ಯದವರು ಪೌಲನ ಮಾತುಗಳಿಗೆ ಕಿವಿಗೊಡಲಿ. ಮತ್ತು ನಾವು ಸಹ ಕಿವಿಗೊಡೋಣ (ರೋಮ 1:1; ಎಫೆಸ 1;1 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಇಲ್ಲಿ ಪೌಲನು ಯೇಸು ಕ್ರಿಸ್ತನಿಂದಲೂ ತಂದೆಯಾದ ದೇವರಿಂದಲೂ ಕರೆಯಲ್ಪಟ್ಟಿದ್ದಾನೆಂಬದನ್ನು ಗಮನಿಸಿರಿ. ಕ್ರಿಸ್ತನೂ ತಂದೆಯೂ ಒಂದಾಗಿದ್ದಾರೆ. ಅವರು ಯಾವಾಗಲೂ ಸಮಸ್ತವನ್ನೂ ಒಟ್ಟಾಗಿ ಮಾಡುತ್ತಾರೆ. ಕೆಲವು ವಚನಗಳಲ್ಲಿ ಕ್ರಿಸ್ತನು ಮತ್ತು ಕೆಲವು ವಚನಗಳಲ್ಲಿ ದೇವರು ಮಾತ್ರವೇ ಪ್ರಸ್ತಾಪಿಸಲ್ಪಟ್ಟಿದ್ದರೂ ಅವರು ಯಾವಾಗಲೂ ಒಟ್ಟಾಗಿ ಕಾರ್ಯಮಾಡುತ್ತಾರೆಂಬದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ಇಂದು ಕ್ರೈಸ್ತರಾದ ನಾವು ಸಹ ಪೌಲನಂತೆ ಕ್ರಿಸ್ತನ ಸೇವೆಗಾಗಿ ಕರೆಯಲ್ಪಟ್ಟಿದ್ದೇವೆ. ನಮಗೆ ಪೌಲನು ಹೊದಿದ್ದ ವಿಶೇಷವಾದ ಅಧಿಕಾರವು ಇಲ್ಲದಿದ್ದಾಗ್ಯು ನಾವೆಲ್ಲರೂ ಕ್ರಿಸ್ತನ ಶಿಷ್ಯರೂ ಸಹಬಾಧ್ಯರೂ ಆಗಿ ನೇಮಿಸಲ್ಪಟ್ಟಿರುತ್ತೇವೆ. ವಿಶೇಷ ಅಪೊಸ್ತಲರು ಮಾತ್ರವೇ ಕ್ರಿಸ್ತನ ಕೆಲಸವನ್ನು ಮಾಡಬಲ್ಲರೆಂದು ನಾವು ಊಹಿಸಿಕೊಳ್ಳದಿರೋಣ. ದೇವರು ನಮ್ಮೊಬ್ಬೊಬ್ಬರಿಗೂ ಆತನಿಗಾಗಿ ಮಾಡಬೇಕಾದ ಕೆಲಸವನ್ನು ಕೊಟ್ಟಿದ್ದಾನೆ ಹಾಗು ಆ ಕಾರ್ಯವನ್ನು ಮಾಡುವದಕ್ಕೆ ಅವಷ್ಯಕವಾದ ಕೃಪೆ ಹಾಗು ಬಲವನ್ನು ಸಹ ಪವಿತ್ರಾತ್ಮನ ಮೂಲಕವಾಗಿ ಆತನು ನಮಗೆ ಕೊಡುತ್ತಾನೆ. ಯೇಸು ತಾನೇ ಹೇಳಿದ್ದೇನೆಂದರೆ: "...ನನ್ನನ್ನು ನಂಬುವವನು ನಾನು ನಡಿಸುವ ಕ್ರಿಯೆಗಳನ್ನು ತಾನೂ ನಡಿಸುವನು; ಮತ್ತು ಅವು ಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡಿಸುವನು. ಯಾಕೆಂದರೆ ನಾನು ತಂದೆಯ ಬಳಿಗೆ ಹೋಗುತ್ತೇನೆ" (ಯೋಹಾನ 14:12).

2 ಈ ವಚನದಲ್ಲಿ ಪೌಲನು ಗಲಾತ್ಯದ ಸಭೆಗಳಲ್ಲಿ ಯಾವು ದನ್ನು ಉದ್ದೇಶಿಸಿ ಮಾತಾಡುತ್ತಿದ್ದಾನೆಂಬುದು ಖಚಿತವಾಗಿರುವದಿಲ್ಲ. ಪೌಲನು ಇಲ್ಲಿ ದಕ್ಷಿಣಗಲಾತ್ಯದ ಪಟ್ಟಣಗಳಾದ ಪಿಸಿದ್ಯದ ಅಂತಿಯೋಕ್ಯ, ಇಕೋನ್ಯ, ಲುಸ್ತ್ರ, ಮತ್ತು ದೆರ್ಬೆ ಗಳಲ್ಲಿನ ಸಭೆಗಳಿಗೆ ಬರೆಯುತ್ತಿದ್ದಾನೆಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ (ಅ.ಕೃತ್ಯ 13:14; 14:1,6, 21-22; 16:1-2 ನೋಡಿರಿ). ಪೌಲನು ಈ ಎಲ್ಲಾ ಸಭೆಗಳನ್ನು ತನ್ನ ಪ್ರಥಮ ಹಾಗು ಎರಡನೆಯ ಸುವಾರ್ತಾ ಪ್ರಯಾಣಗಳಲ್ಲಿ ಸಂಧಿಸಿದ್ದನು.

3 ಪೌಲನು ತನ್ನ ವಾಚಕರಿಗೆ ಕೃಪೆಯೂ ಶಾಂತಿಯೂ ಆಗಲಿ ಎಂದು ಪ್ರಾರ್ಥಿಸುತ್ತಾನೆ. ಕೃಪೆ, ಶಾಂತಿ (ಸಮಾಧಾನ)ಗಳು ಸುವಾರ್ತೆಯ ಎರಡು ಮುಖ್ಯ. ಸ್ತಂಭಗಳಾಗಿವೆ. ಮೊದಲು ಕೃಪೆ, ನಂತರ ಶಾಂತಿ. ಕೃಪೆಯು ಯಾವಾಗಲೂ ಅಗ್ರಸ್ಥಾನದಲ್ಲಿರುತ್ತದೆ. ಸಮಸ್ತ್ರವೂ ಅಂತಿಮವಾಗಿ ದೇವರ ಕೃಪೆಯಿಂದಲೇ ಬರುತ್ತದೆ. ಕೃಪೆಯಿಂದಲೇ ನಾವು ಕರೆಯಲ್ಪಟ್ಟಿದ್ದೇವೆ. ಕೃಪೆಯಿಂದಲೇ ನಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ. ನಾವು ಕೃಪೆಯಿಂದಲೇ ರಕ್ಷಿಸಲ್ಪಟ್ಟಿದ್ದೇವೆ. ಕೃಪೆಯಿಂದಲೇ ನಾವು ನೀತಿವಂತರೆಂದು ನಿರ್ಣಯಹೊಂದಿ ಪರಿಶುದ್ಧರಾಗಿ ಮಾಡಲ್ಪಟ್ಟಿದ್ದೇವೆ, ಮತ್ತು ಕೃಪೆಯೀಂದಲೇ ನಾವು ದೇವರೊಂದಿಗೆ ಸಮಾಧಾನ ಹೊಂದಿದ್ದೇವೆ. ಕೃಪೆಯಿಲ್ಲದೆ ಕ್ರಿಸ್ತನ ಸುವಾರ್ತೆಯು ಇರುವದಿಲ್ಲ. ದೇವರ ಕೃಪೆಯ ಕಾರಣದಿಂದಲೇ ಕ್ರಿಸ್ತನು ಈ ಲೋಕಕ್ಕೆ ಬಂದು ನಮ್ಮ ಪಾಪಗಳ ದೆಸೆಯಿಂದ ತನ್ನನ್ನು ಒಪ್ಪಿಸಿದನು (ವಚನ 4). ಕೃಪೆಯು ಅಪ್ರಶಸ್ತವಾದದ್ದೂ, ಅಪರಿಮಿತವಾದದ್ದೂ, ಉಚಿತವಾಗಿ ಕೊಡಲ್ಪಡುವ ದೇವರ ಪ್ರೀತಿ ಮತ್ತು ಕರುಣೆಯಾಗಿದೆ. ದೇವರ ಕೃಪೆಯ ಮಹಿಮೆಗಾಗಿ ನಾವು ಆತನನ್ನು ಎಡೆಬಿಡದೆ ಸ್ತುತಿಸುತ್ತಿರೋಣ (ರೋಮ 1:7; ಎಫೆಸ 1;2,6 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಕೃಪೆ ಮತ್ತು ಸಮಾಧಾನ (ಶಾಂತಿ)ಗಳು ಒಟ್ಟಾಗಿ ತಂದೆಯಾದ ದೇವರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ ಬರುತ್ತವೆಂಬದನ್ನು ಪು ನಃ ಗಮನಿಸಿರಿ. ದೇವರೂ ಕ್ರಿಸ್ತನೂ ಒಂದಾಗಿದ್ದಾರೆ (ಯೋಹಾನ 10:30 ಮತ್ತು ವ್ಯಾಖ್ಯಾನ; ಸಾಮಾನ್ಯ ಲೇಖನಃ ಯೇಸು ಕ್ರಿಸ್ತನು ನೋಡಿರಿ).

4-5 ಕ್ರಿಸ್ತನು ನಮ್ಮ ಪಾಪಗಳ ದೆಸೆಯಿಂದ ತನ್ನನು ಒಪ್ಪಿಸಿದನು. ಆತನ ಯಜ್ಞವು ನಮ್ಮ ರಕ್ಷಣೆಗಾಗಿ ಸಂಪೂರ್ಣವೂ ಪೂರ್ಣವಾಗಿ ಸಾಕಾದದ್ದೂ ಆಗಿದೆ. ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವದನ್ನೇ ಹೊರತು ಮತ್ತೇನನ್ನೂ ಮಾಡುವ ಆಗತ್ಯವಿಲ್ಲ.

ಕ್ರಿಸ್ತನು ನಮ್ಮನ್ನು ಕೆಟ್ಟದ್ದಾಗಿರುವ ಪ್ರಪಂಚದೊಳಗಿಂದ ಬಿಡಿಸುವನು – ಅಂದರೆ, ಲೋಕದಿಂದ ಬಿಡಿಸುವನು. ಲೋಕವು ಸೈತಾನನ ರಾಜ್ಯವಾಗಿದೆ; ಸೈತಾನನು ಇಹ ಲೋಕಾಧಿಪತಿಯಾಗಿದ್ದಾನೆ (ಯೋಹಾನ 16:11). ಕ್ರಿಸ್ತನು ನಮ್ಮನ್ನು

ಲೋಕದೊಳಗಿಂದ ತೆಗೆದು ಕೊಳ್ಳುವದಿಲ್ಲ; ಬದಲಾಗಿ, ಆತನು ನಮ್ಮನ್ನು ಲೋಕದ ಕೆಟ್ಟತನದಿಂದ ತಪ್ಪಿಸಿ ಕಾಪಾಡುತ್ತಾನೆ (ಯೋಹಾನ 17:15).

## ಇನ್ನಾವ ಸುವಾರ್ತೆಯೂ ಇಲ್ಲ (1:6-10)

**6-7** ಪೌಲನು ಗಲಾತ್ಯದವರ ನಡವಳಿಕೆಗೆ ಆಶ್ಚರ್ಯ ಪಡುತ್ತಾನೆ. ಗಲಾತ್ಯದವರು ಇತ್ತೀಚಿಗಷ್ಟೇ ಕೃಪಾಸುವಾರ್ತೆಯನ್ನು ಪಡೆದುಕೊಂಡಿದ್ದರು, ಮತ್ತು ಈಗ ಅವರು ಇಷ್ಟು ಬೇಗನೆ ಅದರಿಂದ ವಿಮುಖರಾಗಲು ಪ್ರಾರಂಭಿಸಿದ್ದರು. ಯೆರೂಸಲೇಮಿನಿಂದ ಬಂದು ಕೆಲವು ಯೆಹೂದ್ಯ ಕ್ರೈಸ್ತರು ಬೇರೆ ಸುವಾರ್ತೆಯನ್ನು, ಕೃಪೆಯ ಮೂಲಕ ರಕ್ಷಣೆಯ ಬದಲಾಗಿ ಸ್ವಕಾರ್ಯಗಳ ಮೂಲಕ ರಕ್ಷಣೆ ಎಂಬ (ಸುವಾರ್ತೆ)ಯನ್ನು ಹಿಂಬಾಲಿಸುವಂತೆ ಗಲಾತ್ಯದ ನೂತನ ವಿಶ್ವಾಸಿಗಳ ಮನವೊಲಿಸಲು ಪ್ರಯತ್ನಿಸುತ್ತಿದ್ದರು, ಮತ್ತು ಹೀಗೆ ಅವರು ಗಲಾತ್ಯದವರಲ್ಲಿ ಬೇಧವನ್ನು ಹುಟ್ಟಿಸುತ್ತಿದ್ದರು (ವಚನ 7). ಆದರೆ ಅವರ ಸುವಾರ್ತೆಯು ಸುವಾರ್ತೆಯೇ ಅಲ್ಲ ಎಂದು ಪೌಲನು ಹೇಳುತ್ತಾನೆ. ಒಂದೇ ಒಂದು ಸುವಾರ್ತೆಯಿರುತ್ತದೆ – ಅದು ಕೃಪೆಯಿಂದಲೇ ರಕ್ಷಣೆ ಎಂಬ ಸುವಾರ್ತೆ.

ಈ ಗಲಾತ್ಯದವರು ಎಂಥ ಒಂದು ದುಃಖಕರ ಹಾಗು ಭಯಾನಕ ಕಾರ್ಯವನ್ನು ಮಾಡುತ್ತಿದ್ದಾರೆ. ಅವರು ಪೌಲನ ಬೋಧನೆ. ಮುಖಾಂತರವಾಗಿ ದೇವರ ಉಚಿತಾರ್ಥ ಹಾಗು ಅಪರಿಮಿತ ಕೃಪೆಯನ್ನು ಪಡೆದು ಕೊಂಡಿದ್ದರು. ಈಗ ಅವರು ಪೌಲನನ್ನೂ ಅವರನ್ನು ಕರೆದ ದೇವರನ್ನೂ ಬಿಟ್ಟುಹೋಗುವವರಾಗಿದ್ದರು. ಅವರು ದೇವರ ಕೃಪೆಯನ್ನು ನಿರಾಕರಿಸುವವರೂ ಬಿಸಾಡುವವರೂ ಆಗಿದ್ದರು.

ಪೌಲನು ಕ್ರಿಸ್ತನ ಸುವಾರ್ತೆಯನ್ನು ಮಾರ್ಪಡಿಸುವದಕ್ಕೆ ಪ್ರಯತ್ನಿಸುತ್ತಿದ್ದ ಈ ಸುಳ್ಳು ಬೋಧಕರನ್ನು ವಿರೋಧಿಸುವದಕ್ಕೆ ಬರೆಯುತ್ತಿದ್ದಾನೆ. ಕ್ರಿಸ್ತನು ಒಬ್ಬನೇ ಮನುಷ್ಯರನ್ನು ರಕ್ಷಿಸಲಾರನು, ಆದರೆ ರಕ್ಷಣೆ ಹೊಂದುವದಕ್ಕೆ ಯೆಹೂದ್ಯ ಧರ್ಮಶಾಸ್ತ್ರವನ್ನು ಸಹ ಕೈಕೊಂಡು ನಡೆಯಬೇಕಾದ ಅವಶ್ಯಕತೆಯಿರುತ್ತದೆಂದು ಅವರು ಬೋಧಿಸುತ್ತಿದ್ದರು. ಅಂಥ ಬೋಧನೆಯು ಕ್ರಿಸ್ತನ ಸುವಾರ್ತೆಯನ್ನು ನಿರರ್ಥಕಗೊಳಿಸುತ್ತದೆ. ಸುವಾರ್ತೆಯಿಂದ ಕೃಪೆಯು ತೆಗೆಯಲ್ಪಡುವದಾದರೆ ಯಾವ ಸುವಾರ್ತೆಯೂ ಉಳಿಯುವದಿಲ್ಲ. ಪೌಲನು ತನ್ನ ಆತ್ಮೀಕ ಮಕ್ಕಳು ಈ ರೀತಿಯಲ್ಲಿ ನಿಜವಾದ ಸುವಾರ್ತೆಯಿಂದ ವಿಮುಖರಾಗುವದನ್ನು ನೋಡಲಿಚ್ಚಿಸುವದಿಲ್ಲ.

ಈ ಪತ್ರಿಕೆಯನ್ನು ಓದುವಾಗ ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ಒಂದು ಸಂಗತಿಯಿರುತ್ತದೆ. ಗಲಾತ್ಯದವರಿಗೆ ರಕ್ಷಣೆ ಹೊಂದುವದಕ್ಕಾಗಿ ಯೆಹೂದ್ಯ ಧರ್ಮಶಾಸ್ತ್ರಕ್ಕೆ ವಿಧೇಯರಾಗುವದು ಅವಶ್ಯಕವಾಗಿದೆಯೆಂದು ಸುಳ್ಳು ಬೋಧನೆಯನ್ನು ನೀಡುತ್ತಿದ್ದ ಕೆಲವು ಯೆಹೂದ್ಯ ಕ್ರೈಸ್ತರನ್ನು ಕುರಿತು ಪೌಲನು ಇಲ್ಲಿ ಬರೆಯುತ್ತಿದ್ದಾನೆ. ನಮಗಾದರೋ ಇದು ಈ ದಿನದ ವರೆಗೂ ಕ್ರೈಸ್ತ ಸಭೆಗಳಿಗೆ ದಕ್ಕೆಯನ್ನುಂಟು ಮಾಡುತ್ತಿರುವ ಅದೇ ರೀತಿಯ ಸುಳ್ಳು ಬೋಧನೆಗೆ ಒಂದು ಉದಾಹರಣೆಯಾಗಿರುತ್ತದೆ. ನಾವು ಯಾವ ರಾಷ್ಟ್ರದವರೇ ಆಗಿರಬಹುದು, ರಕ್ಷಣೆಹೊಂದುವದಕ್ಕೆ ಬೇರೆ ಒಂದು ಧರ್ಮಶಾಸ್ತ್ರ, ಅಥವಾ ಯಾವದಾದರೂ ಧಾರ್ಮಿಕ ಪದ್ಧತಿ ಅಥವಾ ಆಚಾರವನ್ನು ಹಿಂಬಾಲಿಸುವದು ಅವಶ್ಯಕವೆಂದು ಬೋಧಿಸುವ ಅನೇಕರು ಯಾವಾಗಲೂ ಹಿಂಬಾಲಿಸುವದು ಅವಶ್ಯಕವೆಂದು ಬೋಧಿಸುವ ಅನೇಕರು ಯಾವಾಗಲೂ ಇದ್ದೇ ಇರುತ್ತಾರೆ. ಇದು ಒಂದು ಸಂಪೂರ್ಣ ಸುಳ್ಳಾದ ಹಾಗು ಅಪಾಯಕರವಾದ ಬೋಧನೆಯಾಗಿದೆ. ಸತ್ಯವೇನೆಂದರೆ ದೇವರ ಕೃಪೆಯಿಂದಲೇ ಮನುಷ್ಯನು ರಕ್ಷಣೆ ಹೊಂದುವನು. ಇದು ಕ್ರಿಸ್ತನ ಸುವಾರ್ತೆಯ ತಿರುಳಾಗಿದೆ.

**8-9** ಈ ವಚನಗಳಿಂದ ದೇವರ ಕಾರ್ಯ, ದೇವರ ಸುವಾರ್ತೆ ಎಷ್ಟು ಪ್ರಾಮುಖ್ಯವಾದದ್ದೆಂಬದನ್ನು ನಾವು ಕಲಿತುಕೊಳ್ಳುತ್ತೇವೆ. ನಾವು ದೇವರ ಸುವಾರ್ತೆಯನ್ನು ಯಾವದೇ ವಿಧದಲ್ಲಿಯೂ ಮಾರ್ಪಡಿಸುವದಕ್ಕೆ ಧೈರ್ಯ ಮಾಡದಿರೋಣ. ಯಾವ ಬೋಧಕನಾಗಲಿ ಅಥವಾ ಉಪದೇಶಕನಾಗಲಿ – ಒಬ್ಬ ದೇವದೂತನಿಗೇ ಆಗಲಿ – ದೇವರ ವಾಕ್ಯವನ್ನು ಬದಲಾಯಿಸುವ ಅಧಿಕಾರವಿರುವದಿಲ್ಲ. ದೇವರ ವಾಕ್ಯವನ್ನು ಬೋಧಿಸುವದು ಹಾಗು ಉಪದೇಶಿಸುವದು ಒಂದು ಭಾರವಾದ ಹಾಗು ಗಂಭೀರವಾದ ಜವಾಬ್ದಾರಿಯಾಗಿದೆ. ನಾವು ಅದನ್ನು ನಂಬಿಗಸ್ಥರಾಗಿ ಬೋಧಿಸಿ ಉಪದೇಶಿಸಬೇಕು, ಯಾಕೆಂದರೆ ಬೈಬಲಿನಲ್ಲಿರುವಕ್ಕೆ ವಿರುದ್ಧವಾದ ಸುವಾರ್ತೆಯನ್ನು ಸಾರುವದಾದರೆ ನಾವು ದೇವರಿಂದ ನಿತ್ಯವಾದ ದಂಡನೆಗೊಳಗಾಗುವೆವು .

ಅಲ್ಲದೆ ವಾಕ್ಯವನ್ನು ಕೇಳುವವರು ಸಹ ಒಂದೇ ಸತ್ಯಸುವಾರ್ತೆಯನ್ನು ಸ್ಥಿರವಾಗಿ ಹಿಡಿದುಕೊಂಡು ತಮ್ಮನ್ನು ಸುಳ್ಳುಬೋಧಕರ ವಂಚನೆಗೊಳಪಡಿಸಿಕೊಳ್ಳದಂತೆ ಕಿವಿಗೊಡಲಿ.

**10** ಗಲಾತ್ಯದಲ್ಲಿದ್ದ ಪೌಲನ ವೈರಿಗಳು, ಅಂದರೆ ಯೆಹೂದ್ಯ ಕ್ರೈಸ್ತರು ಪೌಲನ ಮೇಲೆ ಅವನು ಮನುಷ್ಯರನ್ನು ಮೆಚ್ಚಿಸುವದಕ್ಕೆ ಮಾತ್ರವೇ ಪ್ರಯತ್ನಿಸುತ್ತಿದ್ದಾನೆಂದು ಆರೋಪಹೊರಿಸಿದರು. ಪೌಲನು ಯೆಹೂದ್ಯ ಧರ್ಮಶಾಸ್ತ್ರವನ್ನು ಅನುಸರಿಸುವದು ಅವಶ್ಯಕವಿಲ್ಲ ಎಂದು ಬೋಧಿಸುವಾಗ ಅವನು ಕೇವಲ ಗಲಾತ್ಯದಲ್ಲಿನ ಅನ್ಯಜನಾಂಗದ ವಿಶ್ವಾಸಿಗಳನ್ನು ಸಂತೋಷಪಡಿಸಲಷ್ಟೇ ಪ್ರಯತ್ನಿಸುತ್ತಿದ್ದನು; ಆತನು ಅವರಿಗೆ ರಕ್ಷಣೆಯನ್ನು ಹೊಂದಿಕೊಳ್ಳುವದನ್ನು ಸುಲಭಗೊಳಿಸಲು ಪ್ರಯತ್ನಿಸುತ್ತಿದ್ದನೆಂದು ಅವರು ಹೇಳಿದರು.

ಆದರೆ ಇಲ್ಲಿ ಪೌಲನು ತಾನು ಮನುಷ್ಯರನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸುತ್ತಿಲ್ಲ ಎಂದು ಹೇಳುತ್ತಾನೆ (1 ತಿಮೊಥೆ 2:6 ನೋಡಿರಿ). ವಾಸ್ತವದಲ್ಲಿ, ಪೌಲನು ಈ ಪತ್ರಿಕೆಯಲ್ಲಿ ಗಲಾತ್ಯದವರನ್ನು ಕಠಿಣವಾಗಿ ಗದರಿಸುವದಕ್ಕಿದ್ದಾನೆ. ಮನುಷ್ಯರನ್ನು ಮೆಚ್ಚಿಸುವದು ಹಾಗು ಅದೇ ವೇಳೆಯಲ್ಲಿ ಕ್ರಿಸ್ತನ ದಾಸನಾಗಿರುವದು ಒಂದು ಅತಿ ಕಷ್ಟಕರವಾದ ಸಂಗತಿಯಾಗಿದೆ ಎಂದು ಪೌಲನು ಇಲ್ಲಿ ಹೇಳುತ್ತಾನೆ. ಇತರ ಜನರು ಏನೇ ಅಂದುಕೊಂಡರೂ ಕ್ರಿಸ್ತನ ದಾಸನೊಬ್ಬನು ನಂಬಿಗಸ್ಥನಾಗಿ ಸುವಾರ್ತೆಯನ್ನು ಸಾರತಕ್ಕದ್ದು (1 ಥೆಸಲೋನಿಕ 2:4). ಬೋಧಕನ ಅತಿ ಶ್ರೇಷ್ಠ ಉದ್ದೇಶವೇನೆಂದರೆ; ಕ್ರಿಸ್ತನನ್ನು ಘನಪಡಿಸಿ ಜನರನ್ನು ರಕ್ಷಣೆಯ ಮಾರ್ಗಕ್ಕೆ ನಡಿಸುವದೇ (1 ಕೊರಿಂಥ 9:19, 22-23).

## ದೇವರಿಂದ ಕರೆಯಲ್ಪಟ್ಟ ಪೌಲನು (1:11-24)

**11-12** ಈ ವಚನಗಳಲ್ಲಿ ಪೌಲನು ತಾನು ಒಬ್ಬ ನಿಜವಾದ ಅಪೊಸ್ತಲನೆಂದು ಗಲಾತ್ಯದವರಿಗೆ ಹೇಳುತ್ತಾನೆ. ಆತನು ನಿಜವಾದ ಸುವಾರ್ತೆಯನ್ನು ಸಾರುತ್ತಾನೆ, ಅದನ್ನು ಆತನಿಗೆ ನೇರವಾಗಿ ಯೇಸು ಕ್ರಿಸ್ತನೇ ಪ್ರಕಟಿಸಿದನು (ವಚನ ೧೨). ಪೌಲನು ಮೊದಲು ಈ ಪ್ರಕಟಣೆಯನ್ನು ದಮಸ್ಕದ ಮಾರ್ಗದಲ್ಲಿ ಪುನರುತ್ಥಾಗೊಂಡ ಕ್ರಿಸ್ತನು ಅವನಿಗೆ ಕಾಣಿಸಿಕೊಂಡಾಗ ಪಡೆದುಕೊಂಡನು (ಅ.ಕೃತ್ಯ 9:3-5).

ಕ್ರಿಸ್ತನ ಸುವಾರ್ತೆಯು ಒಂದು ಮನುಷ್ಯ ಕಲ್ಪನೆಯ ಸಂಗತಿಯಲ್ಲ. ಯೆಹೂದ್ಯ ಮತ ಹಾಗು ಕ್ರೈಸ್ತತ್ವವನ್ನು ಹೊರತು ಪಡಿಸಿ ಪ್ರಪಂಚದ ಇತರ ಧರ್ಮಗಳು ಮನುಷ್ಯರ ತತ್ವಜ್ಞಾನ ವಿಚಾರಗಳಿಂದ ಸೆಳೆಯಲ್ಪಟ್ಟಿವೆ. ಆದರೆ ಕ್ರಿಸ್ತನ ಸುವಾರ್ತೆಯು ಆ ವಿಧದಲ್ಲಿರುವದಿಲ್ಲ. ಇದು ಸ್ವತಃ ದೇವರು ಏನು ಮಾಡಿದ್ದಾನೆಂಬುದರ ಶುಭ ವಾರ್ತೆಯಾಗಿದೆ. ಇದು ದೇವರ ಕುರಿತಾಗಿಯೂ ರಕ್ಷಣೆಯನ್ನು ಪಡೆದುಕೊಳ್ಳುವ ಮಾರ್ಗದ ಕುರಿತಾಗಿಯೂ ಪರಿಪೂರ್ಣ ಹಾಗು ಅಂತಿಮ ಪ್ರಕಟಣೆಯಾಗಿದೆ. ಸಾಮಾನ್ಯವಾಗಿ ಕ್ರೈಸ್ತರಾದ ನಾವು ಮೊದಲು ಸುವಾರ್ತೆಯನ್ನು ಇತರರ ಬೋಧನೆ ಅಥವಾ ಬೈಬಲನ್ನು ಓದುವದರಿಂದ ಪಡೆದುಕೊಳ್ಳುತ್ತೇವೆ. ಕೆಲವು ವೇಳೆಗಳಲ್ಲಿ ನಾವು ಬೋಧನೆಯನ್ನು ನೇರವಾಗಿ ಕ್ರಿಸ್ತನಿಂದ ಆತನ ಪವಿತ್ರಾತ್ಮನ ಮೂಲಕ ಪಡೆಯುತ್ತೇವೆ. ನಾವು ಪವಿತ್ರಾತ್ಮನಿಂದ ನೇರವಾಗಿ ಬೋಧನೆಯನ್ನು ಹೊಂದಿಕೊಳ್ಳುವಾಗಲೆಲ್ಲಾ, ಅದು ಎಂದಿಗೂ ಹೊಸದಾದ ಅಥವಾ ವ್ಯತ್ಯಾಸವಾದ ಬೋಧನೆಯಾಗಿರುವದಿಲ್ಲ. ಪವಿತ್ರಾತ್ಮನು ಯಾವಾಗಲೂ ಬೈಬಲಿನಲ್ಲಿ ಬರೆಯಲ್ಪಟ್ಟಿರುವದರೊಂದಿಗೆ ಹೊಂದಾಣಿಕೆಯಲ್ಲಿರುತ್ತಾನೆ.೧ ಹೇಗಿದ್ದರೂ, ಪೌಲನು ಹೊಸ ಒಡಂಬಡಿಕೆಯ ಬರೆಯಲ್ಪಡುವದಕ್ಕೆ ಮುಂಚೆಯೇ ಸುವಾರ್ತೆಯನ್ನು ನೇರವಾಗಿ ಕ್ರಿಸ್ತನಿಂದಲೇ ಹೊಂದಿಕೊಂಡನು. ಪೌಲನು ಸುವಾರ್ತೆಯನ್ನು ಬೇರೆ ಯಾವಾದಾದರೂ ವ್ಯಕ್ತಿಯಿಂದ ಹೊಂದಿಕೊಂಡಿದ್ದರೆ ಆತನು ಒಂದು ವಿಧದಲ್ಲಿ ಆ ವ್ಯಕ್ತಿಗಿಂತಲೂ (ಅಲ್ಪನಾಗಿರುತ್ತಿದ್ದನು). ಆತನು ಒಬ್ಬ (ವಿದ್ಯಾರ್ಥಿ ಅಪೊಸ್ತಲ) ಅಥವಾ ಒಬ್ಬ (ಅಪೊಸ್ತಲನಾಗಬೇಕಾಗಿರುವ) ವ್ಯಕ್ತಿಯಾಗಿರುತ್ತಿದ್ದನು. ಆದರೆ ಆತನು ಪೇತ್ರ (ಕೇಫ), ಯೋಹಾನ, ಹಾಗು ಯಾಕೋಬರಂತಹ (ವಚನ 9) ಇತರ ಅಪೊಸ್ತಲರೊಂದಿಗೆ ಸಂಪೂರ್ಣ ಸರಿಸಮಾನನಾಗಿದ್ದನು. ಆತನಿಗೆ ಯಾವ ಮನುಷ್ಯನೂ ಸುವಾರ್ತೆಯನ್ನು ಕಲಿಸಿಕೊಡಲಿಲ್ಲ. ಆತನು ನಿಜವಾದ ಅಪೊಸ್ತಲನು ಹಾಗು ಆತನು ನಿಜವಾದ ಸುವಾರ್ತೆಯನ್ನು ಸಾರುತ್ತಾನೆ. ಗಲಾತ್ಯದವರು ಅದನ್ನು ಸಂಶಯಿಸದಿರಲಿ! ಮತ್ತು ಈ ಪತ್ರಿಕೆಯನ್ನು ಅಭ್ಯಾಸಿಸುವವರಾಗಲಿ ಸಹ ಅದನ್ನು ಸಂಶಯಿಸದಿರಲಿ. ಇಂದು ಪ್ರಪಂಚದಲ್ಲಿ ಅನೇಕ ಸಂಶಯಗಾರರೂ ಅಜ್ಞೇಯವಾದಿಗಳೂ ಇದ್ದಾರೆ. ಅವರು ಹೇಳುವದೇನೆಂದರೆ: "ಮನುಷ್ಯನು ಸತ್ಯವನ್ನು ಹೇಗೆ ತಿಳಿಯಬಲ್ಲನು? ಅವನಿಗೆ ಸಾಧ್ಯವಿಲ್ಲ". ಅಲ್ಲದೆ ಅವರು ಇನ್ನೂ ಹೇಳುವದೇನೆಂದರೆ: "ಎಲ್ಲಾ ಧರ್ಮಗಳು ಒಳ್ಳೆಯವು ಹಾಗು ಪ್ರಯೋಜನಕವಾಗಿವೆ, ಮತ್ತು ಎಲ್ಲಾ ಧರ್ಮಗಳು ಮನುಷ್ಯರನ್ನು ಪರಲೋಕಕ್ಕೆ ನಡಿಸುತ್ತವೆ". ಆದರೆ ಅಂಥ ಜನರು ತಪ್ಪಾಗಿ ಯೋಚಿಸುತ್ತಾರೆ. ಕ್ರಿಸ್ತನ ಸುವಾರ್ತೆಯು ಏಕೈಕ ಸತ್ಯ ಸುವಾರ್ತೆಯಾಗಿದೆ. ಯೇಸು ಹೇಳಿದ್ದೇನೆಂದರೆ "ನಾನೇ ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ" (ಯೋಹಾನ 14:6).

**13-14** ಪೌಲನು ತನ್ನ ಜೀವಿತದಲ್ಲಿ ಉಂಟಾಗಿದ್ದ ದೊಡ್ಡ ಮಾರ್ಪಾಟನ್ನು ಕುರಿತು ಗಲಾತ್ಯದವರಿಗೆ ಇಲ್ಲಿ ಜ್ಞಾಪಕಪಡಿಸುತ್ತಾನೆ. ಪೌಲನು ಪ್ರಾರಂಭದಲ್ಲಿ ಅಂಥ ಅತಿ ಕಠಿಣವಾದ ಹಾಗು ಕ್ರೂರವಾದ ರೀತಿಯಲ್ಲಿ ಕ್ರಿಸ್ತನ ಸಭೆಯನ್ನು ಹಿಂಸೆಪಡಿಸಿದ್ದನು! (ಅ.ಕೃತ್ಯ 8:3; 9:1-2; 22:4). ಅವನು ಎಷ್ಟೊಂದು ಕಟ್ಟು ನಿಟ್ಟಾಗಿ ಮತ್ತು ಅಭಿಮಾನವುಳ್ಳವನಾಗಿ ಯೆಹೂದ್ಯ ಮತವನ್ನು[2] ಹಿಂಬಾಲಿಸಿದ್ದನು (ಅ.ಕೃತ್ಯ 22:3; ಫಿಲಿಪ್ಪಿ 3:4-6). ಮನುಷ್ಯನು ಯೆಹೂದ್ಯ ಧರ್ಮಶಾಸ್ತ್ರಕ್ಕೆ ವಿಧೆಯನಾಗುವದರಿಂದ ಮಾತ್ರವೇ ರಕ್ಷಣೆದೊಂದಬಲ್ಲನೆಂದು ಯೆಹೂದ್ಯರು ನಂಬುತ್ತಿದ್ದರು ಮತ್ತು ಪೌಲನು ಈ ನಂಬಿಕೆಯಲ್ಲಿ ಸಂಪೂರ್ಣವಾಗಿ ಪಾಲುಗಾರನಾಗಿದ್ದನು. ಆದರೆ ಈಗ ಪೌಲನ ಮುಖ್ಯ ಬೋಧನೆಯು ಏನೆಂದರೆ ಮನುಷ್ಯನು ಕೃಪೆಯ ಮೂಲಕ ಕ್ರಿಸ್ತನಲ್ಲಿ ನಂಬಿಕೆಯಿಡುವದರಿಂದ ಮಾತ್ರವೇ ರಕ್ಷಣೆ ಹೊಂದಬಲ್ಲನೆಂಬದೇ. ಇದೇ ಕ್ರಿಸ್ತನ ಹಿಂಬಾಲಕರನ್ನು ಆತನು ಪ್ರಾರಂಭದಲ್ಲಿ ಬಹುಘೋರವಾಗಿ ಹಿಂಸೆಪಡಿಸಿದ್ದನು. ದೇವರು ಮಾತ್ರವೇ ಪೌಲನ ಜೀವಿತದಲ್ಲಿ ಅಂತಹ ದೊಡ್ಡ ಮಾರ್ಪಾಟನ್ನು ತಂದಿರಲಿಕ್ಕೆ ಸಾಧ್ಯ.

**15** ಪೌಲನು ಹುಟ್ಟುವದಕ್ಕಿಂತ ಮುಂಚೆಯೇ ದೇವರು ಅವನನ್ನು ತನ್ನ ಅಪೊಸ್ತಲನನ್ನಾಗಿ ನೇಮಿಸಿದ್ದನು. ಅದೇ ರೀತಿಯಲ್ಲಿ ದೇವರು ನಮ್ಮೊಬ್ಬೊಬ್ಬರನ್ನೂ ಜನ್ಮದಿಂದಲೇ – ವಾಸ್ತವದಲ್ಲಿ, ತಾಯಿಯ ಗರ್ಭದಲ್ಲಿದ್ದಾಗಲೇ – ನೇಮಿಸುತ್ತಾನೆ (ಕೀರ್ತನೆಗಳು 139:13-16). ವಾಸ್ತವದಲ್ಲಿ, ಆತನು ನಮ್ಮನ್ನು ಜಗದುತ್ಪತ್ತಿಗೆ ಮುಂಚೆಯೇ ಆರಿಸಿಕೊಂಡಿರುತ್ತಾನೆ

(ಎಫೆಸ 1:4). ದೇವರು ನಮ್ಮನ್ನು ನಮ್ಮ ಸ್ವಂತ ಕಾರ್ಯಗಳು ಅಥವಾ ಯೋಗ್ಯತೆಗೆ ಅನುಸಾರವಾಗಿ ಆರಿಸಿಕೊಳ್ಳುವದಿಲ್ಲ, ಆದರೆ ತನ್ನ ಕೃಪೆಗನುಸಾರವಾಗಿ ಮಾತ್ರವೇ ಆರಿಸಿಕೊಳ್ಳುತ್ತಾನೆ. ಇಲ್ಲಿ ಪೌಲನು ಹೇಳುವದೇನೆಂದರೆ: ದೇವರು ನನ್ನನ್ನು ತನ್ನ ಕೃಪೆಯಿಂದ ಕರೆದನು (1 ಕೊರಿಂಥ 15:9-10 ನೋಡಿರಿ). ನಾವು ನಮ್ಮ ಕರೆಯನ್ನು ಸಂಪಾದಿಸಿಕೊಳ್ಳುವದಿಲ್ಲ ಅಥವಾ ಯೋಗ್ಯರನ್ನಾಗಿಸಿಕೊಳ್ಳುವದಿಲ್ಲ; ನಾವು ಹುಟ್ಟುವದಕ್ಕೆ ಮುಂಚೆಯೇ ದೇವರು ನಮ್ಮನ್ನು ಕರೆಯುತ್ತಾನೆ.

ದೇವರು ನಮ್ಮನ್ನು ಏತಕ್ಕಾಗಿ ಕರೆಯುತ್ತಾನೆ? ಮೊದಲನೆಯದಾಗಿ, ಆತನು ರಕ್ಷಣೆ ಹೊಂದುವವರಾಗಿರುವದಕ್ಕೆ ಕರೆಯುತ್ತಾನೆ. ಎರಡನೆಯದಾಗಿ, ರಕ್ಷಣೆ ಹೊಂದಿದವರಾಗಿರುವದರ ಜೊತೆಗೆ ನಮ್ಮನ್ನು ಆತನು ತನ್ನ ಮಕ್ಕಳಾಗಿರುವದಕ್ಕೆ ಕರೆಯುತ್ತಾನೆ (ಎಫೆಸ 1:5), ಕ್ರಿಸ್ತನ ಜೊತೆ ಬಾಧ್ಯರಾಗಿರುವದಕ್ಕೆ ಕರೆಯುತ್ತಾನೆ (ರೋಮ 8:17). ಮೂರನೆಯದಾಗಿ, ದೇವರು ನಮ್ಮನ್ನು ಆತನು ನಮಗಾಗಿ ಆತನು ಸಿದ್ಧಮಾಡಿರುವ ಒಂದು ಕೆಲಸ ಅಥವಾ ಸೇವೆಗಾಗಿ ಕರೆಯುತ್ತಾನೆ (ಎಫೆಸ 2:10). ಪೌಲನ ವಿಶೇಷಸೇವೆಯು ಅನ್ಯಜನರಿಗೆ ಸುವಾರ್ತೆಯನ್ನು ಸಾರುವದಾಗಿತ್ತು (ವಚನ 16).

16 ಪೌಲನು ಇಲ್ಲಿ ಬರೆಯುವದೇನೆಂದರೆ: ದೇವರು ತನ್ನ ಮಗನನ್ನು ನನ್ನೊಳಗೆ [3] ಪ್ರಕಟಿಸುವದಕ್ಕೆ ಇಚ್ಛಿಸಿದನು. ಕ್ರಿಸ್ತನು ನಮಗೆ ಪ್ರಕಟಗೊಳ್ಳುವದು ಸಾಕಾಗದು; ಆತನು ನಮ್ಮೊಳಗೆ ಸಹ ಪ್ರಕಟಗೊಳ್ಳಬೇಕು. ಕ್ರಿಸ್ತನು – ಅಂದರೆ, ಕ್ರಿಸ್ತನ ಪವಿತ್ರಾತ್ಮನು – ನಮ್ಮ ಒಳಗೆ ವಾಸಿಸಬೇಕು, ಇಲ್ಲವಾದರೆ ನಮ್ಮ ಧರ್ಮವು ಕೇವಲ ಪೊಳ್ಳಾದ ರೂಪದಲ್ಲಿರುತ್ತದೆ ಮತ್ತು ನಮ್ಮ ಜೀವಿತಗಳಲ್ಲಿ ಯಾವ ಆತ್ಮೀಕ ಬಲವೂ ಇರುವದಿಲ್ಲ.

17 ಪೌಲನು ತನ್ನ ಪರಿವರ್ತನೆಯ ಬಳಿಕ ಮೂರು ವರ್ಷಗಳ ವರೆಗೆ ಪೇತ್ರ, ಯಾಕೋಬರಂತಹ (ಕರ್ತನ ಸಹೋದರ) ಇತರ ಯಾವದೇ ಅಪೊಸ್ತಲರನ್ನು ಬೇಟಿಯಾಗಲಿಲ್ಲ. ಆತನು ಇತರ ಯಾವದೇ ಮನುಷ್ಯನಿಂದ ಬೋಧನೆಯನ್ನು ಹೊಂದಲಿಲ್ಲ. ಆತನು ನೇರವಾಗಿ ದೇವರು ಹಾಗು ಕ್ರಿಸ್ತನಿಂದಲೇ ಬೋಧಿಸಲ್ಪಟ್ಟನು.

ಪೌಲನು ತನ್ನ ಪರಿವರ್ತನೆಯ ನಂತರ ಸ್ವಲ್ಪಕಾಲದ ವರೆಗೆ ಅರಬಸ್ಥಾನಕ್ಕೆ ಹೋದನು. ಆದರೆ ಅಲ್ಲಿ ಆತನು ಏನು ಮಾಡಿದನೆಂಬದನ್ನು ತಿಳಿದುಬಂದಿರುವದಿಲ್ಲ. ಬಹುಶಃ ಆತನು ಪ್ರಾರ್ಥನೆ ಹಾಗು ಹಳೆ ಒಡಂಬಡಿಕೆಯ ವಾಕ್ಯಗಳ ಧ್ಯಾನಮಾಡುವದರಲ್ಲಿ ಸಮಯಕಳೆದಿರಬೇಕು, ಆ ಅವಧಿಯಲ್ಲಿ ಆತನು ಯಾವ ಕೆಲಸಕ್ಕಾಗಿ ದೇವರು ತನ್ನನ್ನು ಕರೆದನೆಂಬದನ್ನು ಕುರಿತು ಹೆಚ್ಚಾಗಿ ತಿಳುಕೊಂಡನು.

ಅರಬಸ್ಥಾನದಲ್ಲಿ ಕಾಲ ಕಳೆದ ನಂತರ ಪೌಲನು ದಮಸ್ಕಕ್ಕೆ[4] ಹಿಂದಿರುಗಿದನು, ಆತನು ತನ್ನ ಪರಿವರ್ತನೆಯ ನಂತರ ಹೋದ ಪ್ರಥಮ ಸ್ಥಳ ಅದೇ ಆಗಿತ್ತು. ತರುವಾಯ ದಮಸ್ಕದಲ್ಲಿ ಮೂರು ವರ್ಷಗಳ ಕಾಲವಿದ್ದ ನಂತರ ಪೌಲನು ಅಂತಿಮವಾಗಿ ಯೆರೂಸಲೇಮಿಗೆ [5] ಹೋದನು (ವಚನ 18).

ಇದರ ಮೂಲಕವಾಗಿ ಪೌಲನಿಗೆ ಸಿದ್ಧತೆಗಾಗಿ ಸಮಯ ಅಗತ್ಯವಾಗಿತೆಂಬದನ್ನು ನಾವು ತಿಳಿಯುತ್ತೇವೆ. ನಮ್ಮೆಲ್ಲರ ವಿಷಯದಲ್ಲಿ ಸಹ ನಿಶ್ಚಯವಾಗಿಯೂ ಇದು ಅಷ್ಟೇ ಸತ್ಯವಾದದ್ದು. ನಾವು ತಕ್ಷಣವೇ ಪರಿಪಕ್ವ ಕ್ರೈಸ್ತರಾಗುವದಿಲ್ಲ. ದೇವರು ನಮ್ಮೊಬ್ಬೊರನ್ನೂ ಸಿದ್ಧಗೊಳಿಸಲು ಬಯಸುತ್ತಾನೆ, ಮತ್ತು ಅದಕ್ಕೆ ಸಮಯ ಹಿಡಿಯುತ್ತದೆ. ಹಳೆ ಒಡಂಬಡಿಕೆಯ ಶ್ರೇಷ್ಠ ಯೆಹೂದ್ಯ ನಾಯಕನಾದ ಮೋಶೆಗೆ ಸಿದ್ಧತೆಯ ವಿಶೇಷಸಮಯಕ್ಕಾಗಿ ನಾಲ್ವತ್ತು ವರ್ಷಗಳು ಬೇಕಾಗಿದ್ದವು . ವಾಸ್ತವದಲ್ಲಿ, ಮೋಶೆಯು ಎಂಭತ್ತು ವರ್ಷಗಳ ವಯಸ್ಸಿನವನಾಗುವವರೆಗೂ ದೇವರು ಅವನನ್ನು ಕರೆದ ಕೆಲಸವನ್ನು ಮಾಡುವದಕ್ಕೆ ಅವನು ಸಿದ್ಧನಾಗಿರಲಿಲ್ಲ (ವಿಮೋಚನಕಾಂಡ 7:7; ಅ.ಕೃತ್ಯ 7:23-30). ಆದದರಿಂದ, ನಾವು ತಕ್ಷಣವೇ ಸಿದ್ಧರಾಗಿರಬಲ್ಲೆವು ಎಂದು ಯೋಚಿಸದಿರೋಣ! ನಾವು ದೇವರ ಕೃಪೆಯಿಂದ ಕರೆಯಲ್ಪಟ್ಟಿದ್ದೇವೆ. ದೇವರ ಕೃಪೆಯಿಂದಲೇ ನಾವು ಸಿದ್ಧಗೊಳಿಸಲ್ಪಡುತ್ತೇವೆ. ನಮ್ಮಲ್ಲಿ ಪ್ರತಿಯೊಬ್ಬರೂ ದಿನನಿತ್ಯವೂ ನಿರಂತರವಾಗಿ ಸಿದ್ಧಗೊಳಿಸಲ್ಪಡುತ್ತಿದ್ದೇವೆ, ಮತ್ತು ನಾವು ಸಾಯುವ ತನಕವೂ ಹಾಗೆಯೇ ಸಿದ್ಧಗೊಳಿಸಲ್ಪಡುತ್ತಿದ್ದೇವೆ, ನಾವೆಲ್ಲರೂ ದೇವರ ಕೃಪೆಯ ಅಂತರಾಳಗಳ ಬಗ್ಗೆ ಹೆಚ್ಚು ಹೆಚ್ಚಾಗಿ ಕಲಿತುಕೊಳ್ಳುವ ಅಗತ್ಯವಿರುತ್ತದೆ.

ಸಮಸ್ತವೂ ಕೃಪೆಯಿಂದಲೇ. ದೇವರ ಕೃಪೆಯಿಂದಲೇ ನಕ್ಷತ್ರಗಳು ಹಾಗು ಗ್ರಹಗಳು ತಮ್ಮ ಗತಿವಿಧಿಗಳಿಗೆ ಅಂಟಿಕೊಂಡಿರುತ್ತವೆ. ದೇವರ ಕೃಪೆಯಿಂದಲೇ ನಾವು ಉಷ್ಣದಿಂದ ಬೆಂದು ಹೋಗದಂತೆಯೂ ಚಳಿಯಿಂದ ಕೊರೆಯಲ್ಪಡದಂತೆಯು ಭೂಮಿ ಹಾಗು ಸೂರ್ಯನ ನಡುವೆ ಸರಿಯಾದ ಅಂತರವು ಸಂರಕ್ಷಿಸಲ್ಪಟ್ಟಿರುತ್ತದೆ. ದೇವರು ಕೃಪೆಯಿಂದ ನಾವು ಉಸಿರಾಡುತ್ತೇವೆ, ತಿನ್ನುತ್ತೇವೆ, ನಗುತ್ತೇವೆ, ಜೀವಿಸುತ್ತೇವೆ. ದೇವರು ತನ್ನ ಉದ್ದೇಶಗಳನ್ನು ನೆರವೇರಿಸುವದಕ್ಕಾಗಿ ಆತನಿಗೆ ಮನುಷ್ಯನ ನಿಶ್ಯಕ್ತ ಪ್ರಯತ್ನಗಳ ಅಗತ್ಯವಿಲ್ಲ. ಸಮಸ್ತವೂ ಆತನ ಕೃಪೆಯಿಂದ ನೆರವೇರಿಸಲ್ಪಡುತ್ತದೆ. ಅಲ್ಲದೆ ದೇವರು ನಮ್ಮ ಮೇಲೆ ಇಟ್ಟಿರುವ ಪ್ರೀತಿಯು ನಾವು ಆತನಿಗೆ ಏನು ಮಾಡುತ್ತೇವೆಂಬುದರ ಮೇಲೆ ಆಧಾರವಾಗಿರುವದೂ ಇಲ್ಲ. ಆತನು ನಮ್ಮನ್ನು ನಾವು ಏನು ಮಾಡುತ್ತೇವೆಂಬದಕ್ಕಾಗಿ ಪ್ರೀತಿಸುವದಿಲ್ಲ; ನಾವು ಯಾರಾಗಿದ್ದೇವೆಂಬುದಕ್ಕಾಗಿ – ಅಂದರೆ, ಆತನು ಸ್ವಂತ ಮಕ್ಕಳು – ಆತನು ನಮ್ಮನ್ನು ಪ್ರೀತಿಸುತ್ತಾನೆ. ಮತ್ತು ನಾವು ಸಂಪೂರ್ಣವಾಗಿ ಆತನ ಕೃಪೆಯಿಂದಲೇ ಆತನು ಮಕ್ಕಳಾಗಿದ್ದೇವೆ. ಆದದರಿಂದ, ಸಹೋದರ ಸಹೋದರಿಯರೇ, ನಾವು ಆತನ ಮಹಿಮೆಯುಳ್ಳ ಕೃಪೆಯ ಘನತೆಗಾಗಿಯೇ ಜೀವಿಸುವದಕ್ಕೆ ತವಕಡೋಣ (ಎಫೆಸ 1:6).

18 ಪೌಲನು ತನ್ನ ಪರಿವರ್ತನೆಯ ಮೂರುವರ್ಷಗಳ ಬಳಿಕ ಅಂತಿಮವಾಗಿ ಪೇತ್ರನನ್ನು [6] ಬೇಟಿಯಾದನು. ಪೌಲನು ಒಬ್ಬ ಅಪೊಸ್ತಲನಾಗಿರುವದನ್ನು ಪೇತ್ರನಿಂದ ತಿಳುಕೊಳ್ಳಲಿಲ್ಲ. ಅಪೊಸ್ತಲತ್ವದ ಅಧಿಕಾರದಲ್ಲಿ ಪೌಲ ಮತ್ತು ಪೇತ್ರ

ಸರಿಸಮಾನರಾಗಿದ್ದರು. ಆದರೆ ಇದನ್ನು ಬರೆಯುವದು ಅಗತ್ಯವೆಂದು ಪೌಲನಿಗೆ ಏಕೆ ತೋಚಿತು/ ಕಾರಣವೇನೆಂದರೆ ಗಲಾತ್ಯದಲ್ಲಿದ್ದ ಪೌಲನ ವೈರಿಗಳು ಪೇತ್ರನು ಒಬ್ಬ ನಿಜವಾದ ಅಪೊಸ್ತಲನು, ಆದರೆ ಪೌಲನು ನಿಜವಾದವನಲ್ಲ ಎಂದು ಹೇಳುತ್ತಿದ್ದರು. ಪೌಲನು ಪೇತ್ರನನ್ನು ಮೊದಲನೆಯ ಬೇಟಿಮಾಡುವ ಈ ಘಟನೆಯು ಅ.ಕೃತ್ಯ 26-30 ರಲ್ಲಿ ಸಹ ಬಣ್ಣಿಸಲ್ಪಟ್ಟಿದೆ.

**19-20** ಇಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಅಪೊಸ್ತಲರಲ್ಲಿ ಬೇರೆಯವರು ಮುಖ್ಯವಾಗಿ ಯೇಸುವಿನ ಹನ್ನೆರಡು ಮೂಲ ಶಿಷ್ಯರಾಗಿದ್ದಾರೆ (ಇಸ್ಕರಿಯೋತ ಯೂಧನನ್ನು ಹೊರತು ಪಡಿಸಿ). ಆದರೆ ಹನ್ನೆರಡು ಮಂದಿಯ ಜೊತೆಗೆ, ಇನ್ನು ಕೆಲವು ಮಂದಿ ಅಪೊಸ್ತಲರು ಸಹ ಇದ್ದರು, ಅವರೊಳಗೆ ಯೇಸುವಿನ ತಮ್ಮನಾದ ಯಾಕೋಬನು ಒಬ್ಬನಾಗಿದ್ದನು (1 ಕೊರಿಂಥ 15:7). ಪೌಲನು ಗಲಾತ್ಯದವರಿಗೆ ಈ ಪತ್ರಿಕೆಯನ್ನು ಬರೆಯುವ ಹೊತ್ತಿಗೆ ಯಾಕೋಬನು ಯೆರೂಸಲೇಮಿನಲ್ಲಿದ್ದ "ತಾಯಿಸಭೆಯ" ಮುಖ್ಯನಾಯಕನಾಗಿದ್ದನು (ಅ.ಕೃತ್ಯ 21:18; ಗಲಾತ್ಯ 2:9). ಇಲ್ಲಿ ಪೌಲನು ತಾನು ಆ ಬೇಟಿಯಲ್ಲಿ ಯಾಕೋಬನನ್ನು ಹೊರತು ಪಡಿಸಿ ಅಪೊಸ್ತಲರಲ್ಲಿ ಬೇರೆ ಯಾರನ್ನೂ ಸಂಧಿಸಲಿಲ್ಲ ಎಂದು ಹೇಳುತ್ತಾನೆ.

**21** ಪೌಲನು ಯೆರೂಸಲೇಮಿನಲ್ಲಿ ಹದಿನೈದು ದಿವಸಗಳವರೆಗೆ ಮಾತ್ರವೇ ಇದ್ದನು (ವಚನ 18). ಆತನು ಯೂದಾಯದ ಸುತ್ತಲಿನ ಪ್ರಾಂತ್ಯದಲ್ಲಿ ಬೋಧಿಸಲಿಲ್ಲ. ಬದಲಾಗಿ, ಆತನು ಆ ಸ್ಥಳವನ್ನು ಬಿಟ್ಟು ಸಿರಿಯ ಮತ್ತು ಕಿಲಿಕ್ಯ[7] ಪ್ರಾಂತ್ಯಗಳಲ್ಲಿನ ಅನ್ಯಜನರಿಗೆ ಬೋಧಿಸುವದಕ್ಕಾಗಿ ಹೋದನು.

**22-24** ಇಸ್ರಾಯೇಲಿನ ದಕ್ಷಿಣ ಪ್ರಾಂತ್ಯವಾದ ಯೂದಾಯದ ಸಭೆಗಳು ಪೌಲನನ್ನು (ಸೌಲ) ಒಬ್ಬ ಹಿಂಸಕನೆಂದು ನೆನಪಿನಲ್ಲಿಟ್ಟುಕೊಂಡಿದ್ದವು . ಅವರು ಆತನ ಎಲ್ಲಾ ಕೆಟ್ಟಕಾರ್ಯಗಳ ಬಗ್ಗೆ ಕೇಳಿದ್ದರು. ಆದರೆ ಪೌಲನು ಯೂದಾಯದಲ್ಲಿ ಬೋಧಿಸದಿದ್ದರಿಂದ ಯೂದಾಯದ ಕ್ರೈಸ್ತರಿಗೆ ಕ್ರಿಸ್ತನ ಅಪೊಸ್ತಲನಾದ ನೂತನ ಪೌಲನನ್ನು ಪರಿಚಿತಿ ಮಾಡಿಕೊಳ್ಳುವ ಅವಕಾಶ ದೊರೆಯಲಿಲ್ಲ. ಹಾಗಿದ್ದರೂ, ಪೌಲನು ಸಿರಿಯ ಮತ್ತು ಕಿಲಿಕ್ಯಗಳಲ್ಲಿ ಸುವಾರ್ತೆಯನ್ನು ಸಾರುತ್ತಿದ್ದಾನೆಂಬದನ್ನು ಅವರು ಕೇಳಿ ಆತನಿಗಾಗಿ ದೇವರನ್ನು ಕೊಂಡಾಡಿದರು. ಪೌಲನಿಂದ ಒಮ್ಮೆ ಹಿಂಸೆಗೊಳಗಾಗಿದ್ದವರು ಈಗ ಅವನಿಗೋಸ್ಕರ ದೇವರನ್ನು ಕೊಂಡಾಡುತ್ತಿದ್ದಾರೆ. ಆದರೆ ಪೌಲನು ಎಂದಿಗೂ ಹಿಂಸೆಪಡಿಸದಿದ್ದ ಗಲಾತ್ಯದ ನೂತನ ಕ್ರೈಸ್ತರು ಅವನಿಂದ ವಿಮುಖರಾಗುತ್ತಿದ್ದಾರೆ. ಪ್ರಾರಂಭದಿಂದಲೂ ಆತನು ಒಬ್ಬ ತಂದೆಯಂತೆ ಪ್ರೀತಿಸಿದ ಅವರು ಈಗ ಆತನನ್ನು ತಿರಸ್ಕರಿಸುವದಕ್ಕೆ ಪ್ರಾರಂಬಿಸಿದ್ದರು.

---

# ಅಧ್ಯಾಯ - 2

## ಪೌಲನು ಅಪೊಸ್ತಲರಿಂದ ಸೇರಿಸಿಕೊಳ್ಳಲ್ಪಟ್ಟದ್ದು (2:1-10)

**1** ಈ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಯೆರೂಸಲೇಮಿಗೆ ಪ್ರಯಾಣ ಮತ್ತು ಅ.ಕೃತ್ಯ 15:1-29ರಲ್ಲಿ[8] ಬಣ್ಣಿಸಲ್ಪಟ್ಟಿರುವದು ಒಂದೇ ಆಗಿದೆ. ಈ ಪ್ರಯಾಣದಲ್ಲಿ ಪೌಲನ ಸಂಗಡ ಇದ್ದವರಲ್ಲಿ ಬಾರ್ನಬನು ಒಬ್ಬ ನಾಗಿದ್ದನು, ಇವನು ಪೌಲನ ಮೊದಲನೆಯ ಸುವಾರ್ತಾ ಪ್ರಯಾಣದಲ್ಲಿ ಆತನ ಸಂಗಡವಿದ್ದ ಆಪ್ತಸಹಪಾಠಿಯಾಗಿದ್ದನು (ಅ.ಕೃತ್ಯ 9:27; 1:22-26; 13:2-3 ನೋಡಿರಿ). ಇನ್ನೊಬ್ಬ ಸಂಗಡಿಗ ನಾದ ತೀತನು ಪೌಲನ ಯುವ ಸಹಪಾಠಿಯಾಗಿದ್ದು ಆತನ ಬಗ್ಗೆ 2 ಕೊರಿಂಥ 7:6-7, 13; 8:16-17, 23 ರಲ್ಲಿ ಪ್ರಸ್ತಾಪಿಸಲಾಗಿದೆ. ತರುವಾಯ, ಪೌಲನು ಆತನಿಗೆ ಹೊಸ ಒಡಂಬಡಿಕೆಯ 'ತೀತನು" ಎಂಬ ಪತ್ರಿಕೆಯನ್ನು ಬರೆದನು.

ಯೆರೂಸಲೇಮಿಗೆ ಮಾಡಿದ ಈ ಪ್ರಯಾಣದ ಕಾರಣವು ಅ.ಕೃತ್ಯ 15:1-2 ರಲ್ಲಿ ಸ್ಪಷ್ಟವಾಗಿ ವಿವರಿಸಲ್ಪಟ್ಟಿದೆ. ಪೌಲನ ಕಾಲದಲ್ಲಿ ಮೂಲತಃ ಯೆಹೂದ್ಯರಾಗಿದ್ದ ಕ್ರೈಸ್ತರ ನಡುವೆಯೂ ಹಾಗು ಅನ್ಯಜನರಾಗಿದ್ದ ಕ್ರೈಸ್ತರ ನಡುವೆಯೂ ಒಂದು ದೊಡ್ಡ ಭಿನ್ನಾಭಿಪ್ರಾಯವು ಉಂಟಾಗಿತ್ತು. ಅನ್ಯ ಜನಾಂಗದ ಕ್ರೈಸ್ತರು ಯೆಹೂದ್ಯಧರ್ಮಶಾಸ್ತ್ರ, ಮೋಶೆಯ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದು ಅವಶ್ಯಕವಾಗಿದೆ ಎಂದು ಯೆಹೂದ್ಯ ಕ್ರೈಸ್ತರು ವಾದಿಸಿದರು. (ಅ.ಕೃತ್ಯ 15:1,5). ಆದರೆ ಪೌಲನು ಅನ್ಯ.ಜನಾಂಗ ವಿಶ್ವಾಸಿಗಳ ಪಕ್ಷವನ್ನು ವಹಿಸಿಕೊಂಡು ಯೆಹೂದ್ಯ ಕ್ರೈಸ್ತರ ಬೋಧನೆಯನ್ನು ಬಲವಾಗಿ ವಿರೋಧಿಸಿದನು. ಅನ್ಯಜನಾಂಗದ ಕ್ರೈಸ್ತರು ಯೆಹೂದ್ಯಧರ್ಮಶಾಸ್ತ್ರವನ್ನು ಅನುಸರಿಸುವದಕ್ಕೆ ಒತ್ತಾಯಿಸಲ್ಪಡಬಾರದೆಂದು ಆತನು ವಾದಿಸಿದವು . ಆದದರಿಂದ, ಯೆರೂಸಲೇಮ ಮತ್ತು ಯೂದಾಯ ಪ್ರಾಂತ್ಯದ ಸುತ್ತಲಿನಿಂದ ಗಲಾತ್ಯಕ್ಕೆ ಬಂದ ಯೆಹೂದ್ಯ ಕ್ರೈಸ್ತರು ಅಲ್ಲಿನ ಅನ್ಯ ಜನಾಂಗದ ವಿಶ್ವಾಸಿಗಳಿಗೆ ಅವರು ಮೋಶೆಯ ಧರ್ಮಶಾಸ್ತ್ರಕ್ಕೆ ವಿಧೇಯರಾಗಬೇಕೆಂದು ಬೋಧಿಸುವದಕ್ಕೆ ಪ್ರಾರಂಭಿಸಿದಾಗ ಪೌಲನು ಯೆರೂಸಲೇಮಿನ ಸಭೆಯ ನಾಯಕರ ಎದುರಿನಲ್ಲಿ ಅವರ ಸುಳ್ಳು ಬೋಧನೆಯನ್ನು ಖಂಡಿಸುವದಕ್ಕೆ ಯೆರೂಸಲೇಮಿಗೆ ಹೋಗಲು ತೀರ್ಮಾನಿಸಿಕೊಂಡನು.

**2** ಪೌಲನು ಯೆರೂಸಲೇಮಿಗೆ ದೈವಪ್ರೇರಣೆಗನುಸಾರವಾಗಿ ಹೋದನು; ಅಂದರೆ, ಆತನು ತಾನು ಯೆರೂಸಲೇಮಿಗೆ ಹೋಗಬೇಕೆಂದು ಸೂಚಿಸುವ ಪ್ರಕಟಣೆಯನ್ನು ಪವಿತ್ರಾತ್ಮನಿಂದ ಹೊಂದಿದ್ದನು. ಪೌಲನು ತನ್ನ ಜೀವಿತ ಕಾಲವೆಲ್ಲಾ ಪ್ರಾಮುಖ್ಯ ವಿಷಯಗಳಲ್ಲಿ ಸತತವಾಗಿ ಪವಿತ್ರಾತ್ಮನಿಂದ ವಿಶೇಷ ಪ್ರಕಟಣೆಗಳನ್ನು ಹೊಂದಿದವನಾಗಿ ಮಾರ್ಗದರ್ಶಿಸಲ್ಪಟ್ಟನು (ಅ.ಕೃತ್ಯ 16:6,-10; 22:17-18; 27:23-26 ನೋಡಿರಿ).

ಪೌಲನು ಯೆರೂಸಲೇಮಿನ ಸಭೆಯ ನಾಯಕರ ಮುಂದೆ ಅನ್ಯಜನರಲ್ಲಿ ನಾನು ಸಾರುವ ಸುವಾರ್ತೆಯು ಏನೆಂಬದನ್ನು ಸ್ಪಷ್ಟಪಡಿಸಿದನು. ಆ ಸುವಾರ್ತೆಯು ಏನಾಗಿತ್ತು? ಅದು ಕ್ರಿಸ್ತ ಕೃಪೆಯ ಸುವಾರ್ತೆಯಾಗಿದ್ದು ಅದು ಮಾನವನು ಯೆಹೂದ್ಯ ಧರ್ಮವನ್ನು ಪಾಲಿಸುವದರಿಂದಲ್ಲ, ಆದರೆ ಕೃಪೆಯಿಂದಲೇ ನಂಬಿಕೆಯ ಮೂಲಕ ರಕ್ಷಣೆ ಹೊಂದುವನೆಂದು ಹೇಳುವದಾಗಿದೆ. ಒಂದು ವೇಳೆ ಯೆರೂಸಲೇಮಿನಲ್ಲಿದ್ದ ಯೆಹೂದ್ಯ ಕ್ರೈಸ್ತನಾಯಕರು ಪೌಲನ ಬೋಧನೆಯನ್ನು ಒಪ್ಪಿಕೊಳ್ಳಲಿಲ್ಲವಾಗಿದ್ದರೆ ಆತನು ಸಾರುವದು ನಿಜವಾಗಿಯೂ ನಿರರ್ಥಕವಾಗುತ್ತಿತ್ತು. ಆತನು ನಿಜವಾಗಿಯೂ ಆತನು ಓಡುತ್ತಿರುವ ಓಟವು ನಿಷ್ಫಲವಾಗುತ್ತಿತ್ತು.

ಪೌಲನು ಯೆರೂಸಲೇಮಿನ ಸಭೆಯ ನಾಯಕರೊಂದಿಗೆ ಏಕಾಂತದಲ್ಲಿ ಮಾತಾಡಿದನು. ಆತನು ಪಟ್ಟಣದ ಸಾಮಾನ್ಯ ಯೆಹೂದ್ಯ ಕ್ರೈಸ್ತರ ಮಧ್ಯದಲ್ಲಿ ಯಾವದೇ ಅನಾವಶ್ಯಕವಾದ ಕೋಲಾಹಲ ಅಥವಾ ವಿರೋಧವನ್ನು ಎಬ್ಬಿಸುವದಕ್ಕೆ ಬಯಸಲಿಲ್ಲ.

3 ಯೆರೂಸಲೇಮಿನ ನಾಯಕರೊಂದಿಗೆ ಪೌಲನ ಬೇಟಿಯು ಯಶಸ್ವಿಕರವಾಗಿತ್ತು. ಆ ಚರ್ಚೆಯಲ್ಲಿದ್ದ ಒಂದು ಮುಖ್ಯ ಅಂಶವೇನಾಗಿತ್ತೆಂದರೆ ಯೆಹೂದ್ಯ ಧರ್ಮಶಾಸ್ತ್ರಕ್ಕನುಸಾರವಾಗಿ ಕ್ರೈಸ್ತರಿಗೆ ಸುನ್ನತಿಯಾಗಬೇಕೋ[9] ಅಥವಾ ಬೇಡವೋ ಎಂಬದೇ. ಯೆಹೂದ್ಯ ಕ್ರೈಸ್ತರು ಅದು ಅವಶ್ಯಕವಾದದ್ದೆಂದು ಹೇಳಿದರು ಮತ್ತು ಪೌಲನು ಅದು ಅವಶ್ಯಕವಿಲ್ಲ ಎಂದು ಹೇಳಿದನು. ಕೊನೆಗೆ ಯೆರೂಸಲೇಮಿನ ಸಭಾನಾಯಕರು ಪೌಲನ ಪಕ್ಷವನ್ನು ವಹಿಸಿಕೊಂಡರು. ಅದಕ್ಕೆ ಸಾಕ್ಷಿಯಾಗಿ ಅವರು ತೀತನನ್ನು ಸುನ್ನತಿ ಮಾಡಿಸಿಕೊಳ್ಳ ಬೇಕೆಂದು ಒತ್ತಾಯಿಸಲಿಲ್ಲ (ತೀತನು ಒಬ್ಬ ಗ್ರೀಕ್[10] ಅನ್ಯ ಜನಾಂಗದವನಾಗಿದ್ದನು, ಯೆಹೂದ್ಯನಲ್ಲ). ಆತನಿಗೆ ಸುನ್ನತಿಯಾಗಿರದಿದ್ದರೂ ಅವರು ಆತನನ್ನು ಒಬ್ಬ ಪೂರ್ಣ ಕ್ರೈಸ್ತ ಸಹೋದರನನ್ನಾಗಿ ಸ್ವೀಕರಿಸಿಕೊಂಡರು.

ಇಂದು ನಮಗೆ ಇದು ಒಂದು ಚಿಕ್ಕ ವಿಷಯವಾಗಿ ಕಾಣುತ್ತದೆ. ಆದರೆ ಕ್ರೈಸ್ತಧರ್ಮದ ಇತಿಹಾಸದಲ್ಲಿ ಯೆರೂಸಲೇಮಿನಲ್ಲಿ ಈ ಕೂಟವು ಒಂದು ದೊಡ್ಡ ಪ್ರಾಮುಖ್ಯತೆಯನ್ನು ಪಡೆದ ಘಟನೆಯಾಗಿತ್ತು. ಯಾಕೆಂದರೆ ಆ ಸಮಯದಿಂದ ಮನುಷ್ಯನು ಯಾವದೇ ಧರ್ಮಶಾಸ್ತ್ರವನ್ನಾಗಲಿ ಅಥವಾ ಮನುಷ್ಯನಿರ್ಮಿತ ಆಚಾರದಿಂದಾಗಲಿ ರಕ್ಷಿಸಲ್ಪಡುವದಿಲ್ಲ, ಆದರೆ ಕೃಪೆಯಿಂದಲೇ ನಂಬಿಕೆಯ ಮೂಲಕ ರಕ್ಷಿಸಲ್ಪಡುವನೆಂಬದು ಇಡೀ ಸಭೆಯಿಂದ – ಯೆಹೂದ್ಯ ಕ್ರೈಸ್ತರಿಂದಲೂ ಅನ್ಯಜನಾಂಗದ ಕ್ರೈಸ್ತರಿಂದಲೂ – ಅಧಿಕೃತವಾಗಿ ಸ್ಥಾಪಿಸಲ್ಪಟ್ಟಿತ್ತು. ಇದೇ ಕ್ರೈಸ್ತೀಯ ಸುವಾರ್ತೆಯಾಗಿದೆ. ಇದೇ ಕ್ರೈಸ್ತಧರ್ಮವನ್ನು ಪ್ರಪಂಚದ ಇತರ ಎಲ್ಲಾ ಧರ್ಮಗಳಿಂದ ವಿಭಿನ್ನವಾಗಿಸುತ್ತದೆ. ಇತರ ಎಲ್ಲಾ ಧರ್ಮಗಳ ಬೋಧನೆಯ ಪ್ರಕಾರವಾಗಿ ಮನುಷ್ಯನು ರಕ್ಷಣೆ ಹೊಂದುವದಕ್ಕಾಗಿ ಕೆಲವೊಂದು ಕರ್ತವ್ಯಗಳನ್ನು ಮಾಡಬೇಕು ಹಾಗು ಕೆಲವೊಂದು ಪದ್ಧತಿಗಳನ್ನೂ ನೇಮನಿಷ್ಠೆಗಳನ್ನೂ ಪಾಲಿಸಬೇಕಾಗಿರುತ್ತದೆ. ಈ ಧರ್ಮಗಳು ಒಬ್ಬನು ತನ್ನ ಸ್ವಪ್ರಯತ್ನಗಳಿಂದ ಅರ್ಹತೆಯನ್ನು ಪಡೆದು ಕೊಳ್ಳುವದರ ಮೇಲೆ ಆಧಾರವಾಗಿರುತ್ತವೆ. ಆದರೆ ಕ್ರೈಸ್ತ ಧರ್ಮವು ಸಂಪೂರ್ಣ ವ್ಯತ್ಯಾಸವಾದದ್ದು. ಕ್ರಿಸ್ತ ಸುವಾರ್ತೆಯ ಪ್ರಕಾರವಾಗಿ ಯಾವನೂ ತನ್ನ ಸ್ವಕಾರ್ಯಗಳಿಂದ ರಕ್ಷಣೆಯನ್ನು ಸಂಪಾದಿಸಿಕೊಳ್ಳಲಾರನು. ರಕ್ಷಣೆಯು ದೇವರ ಕೃಪೆಯ ಉಚಿತಾರ್ಥವರವಾಗಿದ್ದು ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಡುವದರ ಮೂಲಕ ಪಡೆದುಕೊಳ್ಳಲ್ಪಡುವದಾಗಿದೆ.

4 ರಕ್ಷಣೆಗಾಗಿ ಯೆಹೂದ್ಯ ಧರ್ಮಶಾಸ್ತ್ರವನ್ನು ಪಾಲಿಸುವದು ಅವಶ್ಯಕವೆಂದು ಬೋಧಿಸುತ್ತಿದ್ದವರನ್ನು ಪೌಲನು ಸುಳ್ಳು ಸಹೋದರು ಎಂದು ಕರೆಯುತ್ತಾನೆ. ಅವರು ನಿಜವಾದ ಕ್ರೈಸ್ತರಾಗಿರಲಿಲ್ಲ. ಪೌಲನು ಬರೆಯವದೇನೆಂದರೆ: ಅವರು ನಮ್ಮ ದರ್ಜೆಗಳಿಗೆ ನುಸುಳಿದ್ದಾರೆ; ಅಂದರೆ, ಅವರು ಗೂಢಚಾರರಂತೆ ಸಭೆಗಳಲ್ಲಿ ಕಳ್ಳತನದಿಂದ ಸೇರಿಕೊಂಡಿದ್ದರು. ಅವರು ಕುರಿಯ ವೇಷದಲ್ಲಿರುವ ತೋಳಗಳ ಹಾಗಿದ್ದರು (ಮತ್ತಾಯ 7:15). ಅವರು ಸೈತಾನನ ಸೇವಕರಾಗಿದ್ದರು. ಅವರು ಇತ್ತೀಚಿಗಷ್ಟೇ ಸೈತಾನನ ರಾಜ್ಯದೊಳಗಿಂದ ತಪ್ಪಿಸಿಕೊಂಡಿದ್ದ ನೂತನ ಕ್ರೈಸ್ತರನ್ನು ಪು ನಃ ಸೈತಾನನ ದಾಸತ್ವದೊಳಗೆ ಸಿಕ್ಕಿಸಬೇಕೆಂದು ಬಲಾತ್ಕಾರ ಮಾಡುತ್ತಿದ್ದರು. ಅವರು ನೂತನ ಕ್ರೈಸ್ತರ ಸ್ವಾತಂತ್ರ್ಯವನ್ನು ತೆಗೆದುಬಿಟ್ಟು ಅವರನ್ನು ಪು ನಃ ಧರ್ಮಶಾಸ್ತ್ರದ ದಾಸತ್ವಕ್ಕೊಳಪಡಿಸುವದಕ್ಕೆ ಪ್ರಯತ್ನಿಸುತ್ತಿದ್ದರು. ಸೈತಾನನು ನಮ್ಮ ರಕ್ಷಣೆಯನ್ನು ತೆಗೆದು ಬಿಡುವದಕ್ಕೆ ಎಂದಿಗೂ ಸಾಧ್ಯವಿಲ್ಲವೆಂದು ಬಲ್ಲನು (ಯೋಹಾನ 10:27-29). ಆದದರಿಂದ, ಆತನು ಅದಕ್ಕೆ ಬದಲಾಗಿ ನಮ್ಮ ಸ್ವಾತಂತ್ರ್ಯವನ್ನೂ ಸಂತೋಷವನ್ನೂ ತೆಗೆದು ಬಿಡುವದಕ್ಕೆ ಪ್ರಯತ್ನಿಸುತ್ತಾನೆ.

ನಾವು ಸುಳ್ಳು ಸಹೋದರರನ್ನೂ ಅಥವಾ ಸುಳ್ಳು ಪ್ರವಾದಿಗಳು ಹಾಗು ಬೋಧಕರನ್ನು ಹೇಗೆ ಗುರುತಿಸಬಹುದು? ಎರಡು ಮಾರ್ಗಗಳಿರುತ್ತವೆ. ಮೊದಲನೆಯದಾಗಿ, ನಾವು ಅವರನ್ನು ಅವರು ಹೇಳುವ ಸಂಗತಿಗಳಿಂದ ಗುರುತಿಸಬಹುದು (೧ ಯೋಹಾನ 4: 1-3). ಯಾವನಾದರೂ ನಂಬಿಕೆಯ ಮೂಲಕ ಕ್ರಿಸ್ತನು ದೇವರ ಮಗನು ಮತ್ತು ಆತನು ಶರೀರಧಾರಿಯಾಗಿ ಬಂದನೆಂಬದನ್ನು ಒಪ್ಪಿಕೊಳ್ಳುವವನು ನಿಜವಾದ ಸಹೋದರನಾಗಿದ್ದಾನೆ (ರೋಮ ೧೦:೯ ನೋಡಿರಿ). ಎರಡನೆಯದಾಗಿ, ನಾವು ಸುಳ್ಳು ಸಹೋದರರನ್ನು ಅವರು ಮಾಡುವ ಕಾರ್ಯದ ಮೂಲಕ – ಅಂದರೆ, ಅವರ ಫಲಗಳು, ಅವರ ಕೆಲಸದ ಮೂಲಕ – ಗುರುತಿಸಬಹುದು (ಮತ್ತಾಯ 7:16-18).

ನಿಜವಾದ ಸಹೋದರರು ತಪ್ಪಾದ ಯೋಚನೆಗೊಳಗಾಗುವ ಸಾಧ್ಯತೆಯಿದೆಯೋ/ ಹೌದು, ಖಂಡಿತವಾಗಿಯೂ ಇರುತ್ತದೆ. ಯೇಸುವಿನ ಶಿಷ್ಯರಲ್ಲಿ ಪ್ರಮುಖನಾದ ಸ್ವತಃ ಪೇತ್ರನೇ ಬಾರ್ನಬನ ಜೊತೆಗೂಡಿ ಅನಂತರದಲ್ಲಿ ಇದೇ ಸುಳ್ಳು ಯೆಹೂದ್ಯ ಬೋಧಕರಿಂದ ಮಾರ್ಗ ತಪ್ಪಿಸಲ್ಪಟ್ಟನು (ವಚನಗಳು 11-13). ಆದಾಗ್ಯು, ಪೇತ್ರ, ಬಾರ್ನಬರು ಒಂದು ವಿಷಯದಲ್ಲಿ ತಪ್ಪು ಮಾಡಿದ್ದರೆಂಬ ಕಾರಣಕ್ಕಾಗಿ ಮಾತ್ರವೇ ಸುಳ್ಳು ಸಹೋದರರಾಗಲಿಲ್ಲ. ಈ ವಿಷಯದಲ್ಲಿ ನಾವು ಬಹಳ

ಎಚ್ಚರಿಕೆಯನ್ನು ಅನುಸರಿಸಬೇಕು ಒಬ್ಬ ಸಹೋದರನು ತಪ್ಪಿನಲ್ಲಿ ಬೀಳುವಾಗ ಆತನನ್ನು ಸರಿಪಡಿಸುವದು ನಮ್ಮ ಕರ್ತವ್ಯವಾಗಿದೆ, ಆದರೆ ನಾವು ಆತನನ್ನು ಒಬ್ಬ ಸುಳ್ಳು ಸಹೋದರನೆಂದು ಕರೆಯುವದಕ್ಕೆ ಅವಸರ ಪಡಬಾರದು. ಯೇಸು ಕ್ರಿಸ್ತನು ದೇವಕುಮಾರನಾಗಿದ್ದು ಶರೀರ ಧಾರಿಯಾಗಿ ಈ ಲೋಕಕ್ಕೆ ಬಂದನೆಂಬದನ್ನು ನಿರಾಕರಿಸುವವರನ್ನು ಮಾತ್ರವೇ ನಾವು ಸುಳ್ಳು ಸಹೋದರರೆಂದು ಕರೆಯಬಹುದು.

ಹಾಗಿದ್ದರೂ, ತಮಗೆ ಹಾಗು ಒಬ್ಬ ಸಹೋದರನ ನಡುವ ಯಾವದೇ ಭಿನ್ನಾಭಿಪ್ರಾಯ ಉಂಟಾಗುವದಾದರೆ ಆ ಸಹೋದರನಿಗೆ ತಕ್ಷಣವೇ ಸುಳ್ಳು ಎಂಬ ಚೀಟಿಯನ್ನು ಅಂಟಿಸುವದಕ್ಕೆ ಸಿದ್ಧರಾಗಿರುವ ಕೆಲವರು ಸಭೆಯಲ್ಲಿ ಯಾವಾಗಲೂ ಇದ್ದೇ ಇರುತ್ತಾರೆ. ನಾವು ನಮ್ಮ ಸಹೋದರನಿಗೆ ಈ ರೀತಿಯಾಗಿ ತೀರ್ಪುಮಾಡಬಾರದು (ಮತ್ತಾಯ 7:1). ಅಂತಿಮವಾಗಿ, ದೇವರು ಮಾತ್ರವೇ ಮನುಷ್ಯನ ಹೃದಯವನ್ನು ಬಲ್ಲನು (ಮತ್ತಾಯ 13:24-30 ನೋಡಿರಿ).

**5** ಪೌಲನು ಯೆಹೂದ್ಯರ ಸಹೋದರ ಸುಳ್ಳು ಬೋಧನೆಗಳನ್ನು ವಿರೋಧಿಸುವದರಲ್ಲಿ ದೃಢವಾಗಿ ನಿಂತನು. ಆತನು ಸುವಾರ್ತೆಯ ಸತ್ಯಕ್ಕಾಗಿ ಪ್ರತಿಪಾದಿಸಿದನು. ಹೀಗೆ ಗಲಾತ್ಯದವರಲ್ಲಿ ಮಾತ್ರವಲ್ಲ, ಆದರೆ ಎಲ್ಲಾ ತಲೆಮಾರುಗಳ ಕ್ರೈಸ್ತರ ಮದ್ಯದಲ್ಲಿಯೂ ಸತ್ಯವು ಸಂರಕ್ಷಿಸಲ್ಪಡಬೇಕೆಂದು ಆತನ ಇಂಗಿತವಾಗಿತ್ತು.

**6** ಪೌಲನು ಯೆರೂಸಲೇಮಿಗೆ ಹೋದಾಗ ಮಾನಿಷ್ಠರೆನಿಸಿ ಕೊಂಡವರು – ಅಂದರೆ, ಯೆರೂಸಲೇಮಿನ ಸಭಾನಾಯಕರು – ಪೌಲನ ಸಂದೇಶಕ್ಕೆ ಏನನ್ನೂ ಕೂಡಿಸಲಿಲ್ಲ. ಅವರು ಪೌಲನ ವಾದವನ್ನು ಒಪ್ಪಿಕೊಂಡರು. ಅನ್ಯಜನಾಂಗದ ಕ್ರೈಸ್ತರು ಯೆಹೂದ್ಯ ಧರ್ಮಶಾಸ್ತ್ರವನ್ನು ಅನುಸರಿಸಬೇಕೆಂದು ಅವರು ಹೇಳಲಿಲ್ಲ.

ಪೌಲನು ಈ ಯೆರೂಸಲೇಮಿನ ನಾಯಕರನ್ನು ಹಾಗು ಅಪೊಸ್ತಲರನ್ನು ತನಗೆ ಉನ್ನತರೆಂಬದಾಗಿ ಪರಿಗಣಿಸುವದಿಲ್ಲ ಎಂಬದನ್ನು ಇಲ್ಲಿ ಗಮನಿಸಿರಿ. ಪೌಲನು ತನ್ನ ಅಪೊಸ್ತಲತನದ ಅಧಿಕಾರವನ್ನು ಅವರಿಂದ ಪಡೆದುಕೊಳ್ಳಲಿಲ್ಲ. ಆತನು ತನ್ನ ಅಧಿಕಾರವನ್ನು ನೇರವಾಗಿ ದೇವರಿಂದಲೇ ಪಡೆದುಕೊಂಡನು. ಬಹುಶಃ ಅವರು ಜನರ ದೃಷ್ಟಿಯಲ್ಲಿ ಮಾನಿಷ್ಠರಾಗಿ ಕಂಡಿರಬೇಕು, ಆದರೆ ಅದು ಪೌಲನಿಗೆ ಯಾವ ಅರ್ಥವನ್ನು ಕೊಡುವದಿಲ್ಲ. ದೇವರು ಮನುಷ್ಯರನ್ನು ಅವರ ಅಂತರ್ಯದ ಆತ್ಮೀಕ ಸ್ಥಿತಿಯ ಅನುಗುಣವಾಗಿ ದೃಷ್ಟಿಸುತ್ತಾನೆ ಹೊರತು ಲೋಕದಲ್ಲಿ ಅವರಿಗಿರುವ ಬಹಿರಂಗದ ಸ್ಥಾನಮಾನಗಳ ಅನುಗುಣವಾಗಿ ಅಲ್ಲ. ನಾವು ನಮ್ಮ ನಾಯಕರನ್ನು ಗೌರವಿಸುವ ಹಾಗು ವಿಧೇಯರಾಗುವ ಅಗತ್ಯವಿಲ್ಲ ಎಂದು ಪೌಲನು ಇಲ್ಲಿ ಬೋಧಿಸುವದಿಲ್ಲ. ಬದಲಾಗಿ, ಪೌಲನು ಇಲ್ಲಿ ತಾನೇ ಒಬ್ಬ ನಾಯಕ ಹಾಗು ಅಪೊಸ್ತಲನೂ, ಪೇತ್ರ, ಯಾಕೋಬ ಹಾಗು ಯೆರೂಸಲೇಮಿನಲ್ಲಿದ್ದ ಇತರ ಅಪೊಸ್ತಲರೆಲ್ಲರಿಗೆ ಸರಿಸಮಾನನೂ ಆಗಿದ್ದಾನೆಂಬದನ್ನು ನಿಶ್ಚಯಪಡಿಸುತ್ತಿದ್ದಾನೆ. ಆದದರಿಂದ, ಆತನು ಅವರ ತೀರ್ಮಾನಗಳನ್ನು ಅನುಸರಿಸಬೇಕೆಂಬ ನಿರ್ಬಂಧಕ್ಕೊಳಪಟ್ಟವನಲ್ಲ. ಹೇಗಿದ್ದರೂ,

ಸಾಮಾನ್ಯ ಕ್ರೈಸ್ತರಾದ ನಾವು ನಮ್ಮ ನಾಯಕರಿಗೆ ವಿಧೇಯರಾಗುವ ಅಗತ್ಯವಿರುತ್ತದೆ. ನಾವು ನಮ್ಮ ಸಭೆಯೊಳಗಿನ ನಾಯಕರಿಗೆ ಮಾತ್ರವಲ್ಲ, ಆದರೆ ನಾವು ವಾಸಿಸುವ ಹಾಗು ಕೆಲಸಮಾಡುವ ಸ್ಥಳಗಳಲ್ಲಿನ ನಮ್ಮ ಕೆಲಸಗಾರರಿಗೂ ಸರ್ಕಾರಿನಾಯಕರಿಗೂ ವಿಧೇಯರಾಗಬೇಕು (ರೋಮ 13:1-2; 1 ಪೇತ್ರ 5:5 ನೋಡಿರಿ).

**7-8** ಪೇತ್ರ ಹಾಗು ಯೆರೂಸಲೇಮಿನ ಇತರ ನಾಯಕರ ವಶಕ್ಕೆ ಸುವಾರ್ತೆಯು ಒಪ್ಪಿಸಲ್ಪಟ್ಟಿದ್ದ ಪ್ರಕಾರವೇ ಪೌಲನ ವಶಕ್ಕೂ ಒಪ್ಪಿಸಲ್ಪಟ್ಟಿತ್ತು. ಯೆರೂಸಲೇಮಿನ ಅಪೊಸ್ತರು ಯೆಹೂದ್ಯರಲ್ಲಿ[11] ಸುವಾರ್ತೆಯನ್ನು ಸಾರುವದಕ್ಕೆ ನೇಮಿಸಲ್ಪಟ್ಟಿದ್ದ ಪ್ರಕಾರವೇ ಪೌಲನು ಅನ್ಯಜನರಲ್ಲಿ[12] ಸಾರುವದಕ್ಕೆ ನೇಮಿಸಲ್ಪಟ್ಟಿದ್ದನು. ಆದದರಿಂದ, ದೇವರು ಇತರ ಅಪೊಸ್ತಲರ ಮುಖಾಂತರ ಕಾರ್ಯಮಾಡುತ್ತಿದ್ದ ವಿಧದಲ್ಲಿಯೇ ಪೌಲನ ಮುಖಾಂತರವೂ ಕಾರ್ಯ ಮಾಡುತ್ತಿದ್ದನು. ಪೌಲನು ಹಾಗು ಇತರರು ಒಂದೇ ಸುವಾರ್ತೆಯನ್ನು ಸಾರಿದರು ಹೊರತು ಎರಡು ಸುವಾರ್ತೆಗಳನ್ನಲ್ಲ.

**9** ಸಂತೋಷಕರವಾಗಿ, ಯೆರೂಸಲೇಮಿನ ಸಭಾನಾಯಕರು ಪೌಲ ಬಾರ್ನಬರ ಅಪೊಸ್ತಲತನವನ್ನು ಸಂಪೂರ್ಣವಾಗಿ ಅಂಗೀಕಾರ ಮಾಡಿಕೊಂಡು ಐಕ್ಯವನ್ನು ತೋರಿಸುವದಕ್ಕಾಗಿ ಅವರಿಗೆ ಬಲಗೈಕೊಟ್ಟರು.[13] ಪೌಲನು ಹೇಳುವದೇನೆಂದರೆ: ದೇವರು ನನಗೆ ದಯಪಾಲಿಸಿರುವ ವರವನ್ನು (ಕೃಪೆಯನ್ನು) – ಅಂದರೆ, ಅಪೊಸ್ತಲತನ ಕೃಪೆ – ಗುರುತಿಸಿದರು (ಎಫೆಸ 3:7-8 ನೋಡಿರಿ).

ಆ ಸಮಯದಲ್ಲಿ ಯೆರೂಸಲೇಮಿನ ಸಭೆಯ ನಾಯಕರಲ್ಲಿ ಯಾಕೋಬ, ಪೇತ್ರ (ಕೇಫ) ಹಾಗು ಯೋಹಾನರು ಪ್ರಮುಖರಾಗಿದ್ದರು. ಪೌಲನು ಸಭಾ ಸ್ತಂಭಾಗಳೆಂದು ಹೆಸರು ಗೊಂಡಿರುವವರು ಎಂದು ಹೇಳಿದ್ದು ಇವರ ಕುರಿತಾಗಿಯೇ. ಯೋಹಾನನು ಯೇಸುವಿನ ಪ್ರಿಯನಾದ ಶಿಷ್ಯ.ನೆಂದು ಹೆಸರುಗೊಂಡಿದ್ದನು; ತರುವಾಯ ಇವನು ಯೋಹಾನನ ಸುವಾರ್ತೆ ಹಾಗು ಆತನ ಹೆಸರನ್ನು ಹೊಂದಿರುವ ಹೊಸ ಒಡಂಬಡಿಕೆಯ ಮೂರು ಪತ್ರಿಕೆಗಳನ್ನು ಬರೆದನು. ಅಲ್ಲದೆ, ಪೌಲ ಬಾರ್ನಬರು ಮುಖ್ಯವಾಗಿ ಅನ್ಯಜನರಲ್ಲಿಯೂ, ಯೆರೂಸಲೇಮಿನ ಅಪೊಸ್ತಲರು ಮುಖ್ಯವಾಗಿ ಯೆಹೂದ್ಯರಲ್ಲಿಯೂ ಕೆಲಸ ಮಾಡಬೇಕೆಂಬದನ್ನು ಸಹ ಸಮಂಜಸವಾದ ಏರ್ಪಾಡು ಆಗಿತ್ತು. ಕೆಲವು ಕ್ರೈಸ್ತರು ಒಂದು ರೀತಿಯ ಕೆಲಸಕ್ಕಾಗಿ ಕರೆಯಲ್ಪಟ್ಟಿದ್ದರೆ. ಇನ್ನು ಕೆಲವರು ಬೇರೊಂದು ರೀತಿಯ ಕೆಲಸಕ್ಕಾಗಿ ಕರೆಯಲ್ಪಟ್ಟಿರುತ್ತಾರೆ. ನಾವು ಪ್ರತಿಯೊಬ್ಬರು ದೇವರಿಂದ ಬೇರೆ ಬೇರೆ ಕೆಲಸಗಳನ್ನು ಹೊಂದಿಕೊಂಡಿರುತ್ತೇವೆ. ಆತನು ನಮ್ಮನ್ನು ಕಳುಹಿಸುವಲ್ಲಿಗೆ ಹೋಗುವದಕ್ಕೆ ನಾವು ಸಿದ್ಧರಾಗಿರಬೇಕು.

**10** ಯೆರೂಸಲೇಮಿನ ಸಭಾನಾಯಕರು ಪೌಲನಿಗೆ ಒಂದೇ ಒಂದು ಮನವಿಯನ್ನು ಮಾಡಿಕೊಂಡರು: ಅದೇನೆಂದರೆ, ಆತನು ಬಡವರನ್ನು ಜ್ಞಾಪಕಮಾಡಿಕೊಳ್ಳುತ್ತಲಿರಬೇಕು ಎಂಬದೇ. ನಾಯಕರು ಯೆರೂಸಲೇಮಿನಲ್ಲಿದ್ದ ಬಡವಿಶ್ವಾಸಿಗಳನ್ನು

ಸೂಚಿಸಿ ಹೇಳಿದ್ದರು. ಹೊಸ ಒಡಂಬಡಿಕೆಯ ಬೇರೆ ಕೆಲವು ಕಡೆಗಳಲ್ಲಿ ಓದುವದರ ಮೂಲಕ ಪೌಲನು ಯೆರೂಸಲೇಮಿನಲ್ಲಿದ್ದ ಕೊರತೆಯುಳ್ಳ ವಿಶ್ವಾಸಿಗಳಿಗಾಗಿ ಅನ್ಯಜನಾಂಗದ ಸಭೆಗಳಲ್ಲಿ ಹಣಸಂಗ್ರಹಿಸುವ ಕಾರ್ಯಕ್ಕಾಗಿ ಹೆಚ್ಚು ಸಮಯವನ್ನು ನೀಡಿ ಪ್ರಯಾಸಪಟ್ಟನೆಂಬದನ್ನು ನಾವು ತಿಳುಕೊಳ್ಳುತ್ತೇವೆ (ಅ.ಕೃತ್ಯ 11:29-30; ರೋಮ 15:25-26 ನೋಡಿರಿ).

## ಪೌಲನು ಪೇತ್ರನನ್ನು ವಿರೋಧಿಸಿದ್ದು (2:11-14)

**11** ಪೇತ್ರನು ಅಂತಿಯೋಕ್ಯಕ್ಕೆ[14] ಬಂದಾಗ....ನಾನು ಅವನನ್ನು ಮುಖಾಮುಖಿಯಾಗಿ ಎದುರಿಸಿದೆನು. ಈ ಭಾಗದಲ್ಲಿ ನಾವು ಪೌಲ ಹಾಗು ಪೇತ್ರನ ನಡುವಿನ ದೊಡ್ಡ ಭಿನ್ನಾಭಿಪ್ರಾಯದ ಬಗ್ಗೆ ಓದುತ್ತೇವೆ. ಪೌಲನು ಪೇತ್ರನನ್ನು ಮುಖಾಮುಖಿಯಾಗಿ ಎದುರಿಸುತ್ತಾನೆ ಹೊರತು ಆತನ ಬೆನ್ನುಹಿಂದೆ ಅಲ್ಲ ಎಂಬುದನ್ನು ನಾವು ಗಮನಿಸಿತಕ್ಕದ್ದು. ಅದೇ ರೀತಿಯಲ್ಲಿ, ನಾವು ಸಹ ನಮ್ಮ ಸಹೋದರನೊಂದಿಗೆ ಯಾವದೇ ಭಿನ್ನಾಭಿಪ್ರಾಯ ಹೊಂದಿರುವದಾದರೆ ಅತನೊಂದಿಗೆ ಯಾವಾಗಲೂ ಮುಖಾಮುಖಿಯಾಗಿ ಮಾತಾಡುವದರಲ್ಲಿ ಜಾಗ್ರತೆಯಿಂದಿರೋಣ. ನಾವು ಸಹೋದರನೊಬ್ಬನ ವಿರುದ್ಧವಾಗಿ ಆತನ ಹಿಂದೆ ಮಾತಾಡುವ ಪಾಪದಲ್ಲಿ ಬೀಳದಿರೋಣ. ಪೇತ್ರನು ದೋಷಿಯಾಗಿ ಕಾಣಿಸಿಕೊಂಡಿದ್ದನು. ಆತನು ಸ್ವಯಂದೋಷಿಯಾಗಿ ತೋರಲ್ಪಟ್ಟನು. ಆತನ ತಪ್ಪು ಎಲ್ಲರಿಗೂ – ಅವನಿಗೂ ಸಹ ಕಾಣಿಸುವಂಥದ್ದಾಗಿತ್ತು.

**12** ಪೌಲ ಹಾಗು ಪೇತ್ರನ ನಡುವಿನ ಭಿನ್ನಾಭಿಪ್ರಾಯವು ಪ್ರಾಥಮಿಕವಾಗಿ ಸಿದ್ಧಾಂತದ ವಿಷಯದಲ್ಲಾಗಿರಲಿಲ್ಲ; ಅದು ಮುಖ್ಯವಾಗಿ ಸಾಮಾಜಿಕ ನಡವಳಿಕೆಯ ವಿಷಯದಲ್ಲಾಗಿತ್ತು. ಅನ್ಯ ಜನಾಂಗದ ಕ್ರೈಸ್ತರು ಯೆಹೂದ್ಯ ಆಚಾರ ಬದ್ಧ ನೇಮ ನಿಷ್ಠೆಗಳಿಗೆ ವಿಧೇಯರಾಗುವ ಅಗತ್ಯವಿಲ್ಲ ಎಂಬುದನ್ನು ಪೇತ್ರನು ಈಗಾಗಲೇ ಒಪ್ಪಿಕೊಂಡಿದ್ದನು. ವಾಸ್ತವದಲ್ಲಿ, ಪೇತ್ರನು ಸ್ವತಃ ಒಬ್ಬ ಯೆಹೂದ್ಯನಾಗಿ ಯೆಹೂದ್ಯ ಪದ್ಧತಿಗಳನ್ನು ಪಾಲಿಸುವವನಾಗಿರಲಿಲ್ಲ. ನಿಜವಾಗಿಯೂ, ಆತನು ಒಬ್ಬ ಅನ್ಯ ಜನಾಂಗದವನ ಹಾಗೆ ಜೀವಿಸುತ್ತಿದ್ದನು (ವಚನ 14).

ಪೇತ್ರನು ಯಾವ ವಿಧದಲ್ಲಿ ದೋಷಿಯಾಗಿದ್ದನು/ ಆತನು ಅಂತಿಯೋಕ್ಯದಲ್ಲಿ ಅನ್ಯಜನಾಂಗದ ಕ್ರೈಸ್ತರೊಂದಿಗೆ ಊಟಮಾಡುವದನ್ನು ನಿಲ್ಲಿಸಿದ್ದನು. ಆತನು ಹೀಗೆ ಮಾಡಿದ್ದೇಕೆ? ಯಾಕೆಂದರೆ, ಅನ್ಯಜನರ ಸಂಗಡ ಊಟಮಾಡುವದು ಸರಿಯಲ್ಲ ಎಂದು ಹೇಳುತ್ತಾ ಯೆಹರೂಸಲೇಮಿನಿಂದ ಕೆಲವು ಯೆಹೂದ್ಯ "ಸಹೋದರರು" ಅಂತಿಯೋಕ್ಯಕ್ಕೆ ಬಂದಿದ್ದರು. ಈ ಜನರು ಸುನ್ನತಿಯಾದವರ ಗುಂಪಿಗೆ ಸೇರಿದ್ದರು. ಅಂದರೆ, ಅವರು ಯೆಹೂದ್ಯರಾಗಿದ್ದರು; ಮನುಷ್ಯನು ರಕ್ಷಣೆಹೊಂದಬೇಕಾದರೆ ಸುನ್ನತಿಮಾಡಿಸಿಕೊಳ್ಳಬೇಕೆಂದು ಅವರು ಬೋಧಿಸುವವರಾಗಿದ್ದರು...ಮತ್ತು ಪೇತ್ರನು ಇವರಿಗೆ ಭಯಪಟ್ಟು ಅನ್ಯ ಜನಾಂಗದ ಕ್ರೈಸ್ತರನ್ನು ಬಿಟ್ಟು ತನ್ನನ್ನು ಪ್ರತ್ಯೇಕಿಸಿಕೊಳ್ಳಲು ಪ್ರಾರಂಭಿಸಿದನು.

ಯೆಹೂದ್ಯರ ಮನಸ್ಸಿನಲ್ಲಿ ಅನ್ಯಜನರು ಅಶುದ್ಧರಾಗಿದ್ದರು. ಆದದರಿಂದ, ಯೆಹೂದ್ಯರು ತಾವು ಅನ್ಯಜನರೊಂದಿಗೆ ಊಟ ಮಾಡುವದರಿಂದ ಅಶುದ್ಧರಾಗುತ್ತಾರೆಂದು ಊಹಿಸಿಕೊಂಡರು. ಯೆಹೂದ್ಯ ನೊಬ್ಬನು ಕ್ರೈಸ್ತನಾದ ಬಳಿಕವೂ ಅಂಥ ತಪ್ಪು ವಿಚಾರವು ಶೀಘ್ರವೇ ಅಳಿದು ಹೋಗಲಿಲ್ಲ. ಪೇತ್ರನು ತನ್ನನ್ನು ಅನ್ಯಜನಾಂಗದ ಕ್ರೈಸ್ತರಿಂದ ಬೇರ್ಪಡಿಸಿಕೊಳ್ಳುವದು ತಪ್ಪೆಂದು ಬಲ್ಲವನಾಗಿದ್ದನು. ಯೆಹೂದ್ಯ ಹಾಗು ಅನ್ಯಜನಾಂಗದ ಕ್ರೈಸ್ತರು ದೇವರ ದೃಷ್ಟಿಯಲ್ಲಿ ಸಮಾನರು; ಅವರು ಕ್ರಿಸ್ತನಲ್ಲಿ ಒಂದೇ ಆಗಿದ್ದಾರೆಂಬದು ಆತನಿಗೆ ಗೊತ್ತಿತ್ತು (ಅ.ಕೃತ್ಯ 10:27-28; 15:7-9; ಗಲಾತ್ಯ 3:28; ಕೊಲೊಸ್ಸೆ 3:11 ನೋಡಿರಿ). ಆದರೆ ಪೇತ್ರನ ಹಳೆಯ. ಭಯಗಳು ಹಾಗು ಪದ್ಧತಿಗಳು ಅವನನ್ನು ಸೋಲಿಸಿದವು ಮತ್ತು ಅವನು ತಪ್ಪನ್ನು ಮಾಡಿದನು. ನಾವು ಸಹ ನಮ್ಮ ಜೊತೆ ಕ್ರೈಸ್ತನ ಜಾತಿ ಅಥವಾ ಚರ್ಮದ ಬಣ್ಣದ ಕಾರಣದಿಂದ ಅವನೊಂದಿಗೆ ಸಹವಾಸವಿಟ್ಟುಕೊಳ್ಳಲು ಅಥವಾ ಊಟಮಾಡಲು ನಿರಾಕರಿಸುವದಾದರೆ ಕ್ರಿಸ್ತನ ವಿರುದ್ಧವಾಗಿ ಪಾಪಮಾಡುವವರಾಗಿದ್ದೇವೆ.

**13** ಅಂತಿಯೋಕ್ಯದಲ್ಲಿದ್ದ ಇತರ ಯೆಹೂದ್ಯ ಕ್ರೈಸ್ತರು ಸಹ ಪೇತ್ರನೋಂದಿಗೆ ಸೇರಿ ಕಪಟಮಾಡಿದರು. ಇದು ಒಂದು ಕಪಟತನವಾಗಿತ್ತು, ಯಾಕೆಂದರೆ ಮಾತುಗಳಲ್ಲಿ ಅವರು ಯೆಹೂದ್ಯ ಹಾಗು ಅನ್ಯಜನರು ಕ್ರಿಸ್ತನಲ್ಲಿ ಒಂದೇ ಎಂದು ಹೇಳಿದರು, ಆದರೆ ತಮ್ಮ ಕ್ರಿಯೆಗಳಲ್ಲಿ ಅನ್ಯಜನಾಂಗದ ಕೈಸ್ತರನ್ನು ತಮಗಿಂತ ಕೀಳಾದವರು ಅತವಾ ಅಶುದ್ಧರೇನೋ ಎಂಬಂತೆ ನಡಿಸಿಕೊಂಡರು.

ಈ ದುಃಖಕರವಾದ ಘಟನೆಯ ಮೂಲಕ ನಾವು ವಿವಿಧ ರೀತಿಗಳಲ್ಲಿ ಮಾರ್ಗತಪ್ಪಿಸಲ್ಪಡುವದು ಎಷ್ಟು ಸುಲಭ ಎಂಬದನ್ನು ಕಲಿತು ಕೊಳ್ಳೋಣ. ಪೇತ್ರ ಬಾರ್ನಬರಂತಹ ದೊಡ್ಡನಾಯಕರು ಸಹ ತಪ್ಪಿನಲ್ಲಿ ಬೀಳಬಹುದು. ಮತ್ತು ನಾಯಕರು ತಪ್ಪಿನಲ್ಲಿ ಬೀಳುವಾಗ ಇತರ ಅನೇಕರನ್ನು ಸಹ ತಪ್ಪಿನೊಳಗೆ ನಡಿಸುವರು. ನಾಯಕರು ಒಳ್ಳೆ ಮಾದರಿಯನ್ನು ತೋರಿಸುವದು ಎಷ್ಟು ಪ್ರಾಮುಖ್ಯವಾಗಿರುತ್ತದೆ – ವಿಶೇಷವಾಗಿ ನೂತನ ಕ್ರೈಸ್ತರಿಗೋಸ್ಕರವಾಗಿ ಮಾದರಿಯನ್ನು ತೋರಿಸಬೇಕಾಗುತ್ತದೆ (ಮಾರ್ಕ 9:42)

**14** ಅ.ಕೃತ್ಯ 15:13-14, 19 ಕ್ಕನುಸಾರವಾಗಿ ಅನ್ಯ ಜನಾಂಗದ ಕ್ರೈಸ್ತರು ಯೆಹೂದ್ಯ ಧರ್ಮಶಾಸ್ತ್ರವನ್ನು ಅನುಸರಿಸುವದು ಅವಶ್ಯಕವಾಗಿರುವದಿಲ್ಲ ಎಂದು ಯೆರೂಸಲೇಮಿನ ನಾಯಕರು ಒಪ್ಪಿಕೊಂಡಿದ್ದರು. ಸುವಾರ್ತೆಯ ಸತ್ವರ್ಥವೇನೆಂದರೆ ಯೆಹೂದ್ಯರೂ ಅನ್ಯಜನರೂ ಕೃಪೆಯಿಂದ ಕ್ರೈಸ್ತನಲ್ಲಿ ನಂಬಿಕೆಯಿಡುವದರ ಮೂಲಕವೇ ರಕ್ಷಣೆ ಹೊಂದಿದ್ದಾರೆ. ಪೇತ್ರನು ಇದನ್ನು ಒಪ್ಪಿಕೊಂಡಿದ್ದನು (ಅ.ಕೃತ್ಯ 15-11). ಅಷ್ಟೇ ಅಲ್ಲದೆ, ಅವನು ಒಬ್ಬ ಅನ್ಯಜನಾಂಗದವನಂತೆ ಜೀವಿಸುತ್ತಿದ್ದನು. ಆದರೆ ಈಗ ಆತನು ಪುನಃ ಕ್ರೈಸ್ತ ಅನ್ಯಜನರೊಂದಿಗೆ ಊಟಮಾಡುವದಕ್ಕೆ ನಿರಾಕರಿಸುತ್ತಿದ್ದನು, ಯಾಕೆಂದರೆ ಅವರು

ಸುನ್ನತಿಯಿಲ್ಲದವರು ಹಾಗು ಸಂಸ್ಕಾರಿಕವಾಗಿ (ಅಶುದ್ಧರಾಗಿದ್ದರು. ಪೇತ್ರನು ನಮ್ಮ ನಡವಳಿಕೆಯ ಮೂಲಕ ಅನ್ಯಜನರಿಗೆ "ನೀವು ಯೆಹೂದ್ಯ ಧರ್ಮಶಾಸ್ತ್ರವನ್ನು ಅನುಸರಿಸದಿದ್ದರೆ ನಾನು ನಿಮ್ಮೊಂದಿಗೆ ಊಟಮಾಡುವದಿಲ್ಲ" ಎಂದು ಹೇಳುತ್ತಿದ್ದಾನೆ. ತತ್ಫಲವಾಗಿ ಆತನು ಈ ವಿಧದಲ್ಲಿ ಅನ್ಯಜನಾಂಗದ ಕ್ರೈಸ್ತರನ್ನು ಯೆಹೂದ್ಯ ಪದ್ಧತಿಗಳನ್ನು ಅನುಸರಿಸಬೇಕೆಂದು ಬಲತ್ಕಾರ ಮಾಡುವವನಾಗಿದ್ದನು.

## ಯೆಹೂದ್ಯ ಧರ್ಮಶಾಸ್ತ್ರದ ವಿಫಲ (2:15-21)

**15-16** ಪೌಲನು ಇಲ್ಲಿ ಪೇತ್ರ ಹಾಗು ಗಲಾತ್ಯದಲ್ಲಿನ ಇತರ ಯೆಹೂದ್ಯ ಕ್ರೈಸ್ತರನ್ನು ದ್ದೇಶಿಸಿ ಮಾತಾಡುವದನ್ನು ಮುಂದುವರೆಸುತ್ತಾನೆ. ಆತನು "ಹೌದು, ನಾವು ಯೆಹೂದ್ಯರು, ಪಾಪಿಗಳೆನಿಸಿಕೊಂಡ ಅನ್ಯಜನರಲ್ಲ" ಎಂದು ಹೇಳುತ್ತಾನೆ (ಯೆಹೂದ್ಯರು ಎಲ್ಲಾ ಅನ್ಯಜನರನ್ನು ಪಾಪಿಗಳೆಂದು ಪರಿಗಣಿಸಿದ್ದರು, ಯಾಕೆಂದರೆ, ಅವರು ಯೆಹೂದ್ಯ ಧರ್ಮಶಾಸ್ತ್ರವನ್ನು ಅನುಸರಿಸುತ್ತಿದ್ದಿಲ್ಲ. ಪೌಲನು ಇಲ್ಲಿ ಯೆಹೂದ್ಯ ಶೈಲಿಯಲ್ಲಿ ಮಾತಾಡುತ್ತಿದ್ದಾನೆ. ಪೌಲನು ತನ್ನ ಮಾತನ್ನು ಮುಂದುವರೆಸುತ್ತಾ "ಆದರೆ, ಯೆಹೂದ್ಯ ಕ್ರೈಸ್ತರಾದ ನಾವು ಯಾವನಾದರೂ ನೇಮನಿಷ್ಠೆಗಳನ್ನು (ಧರ್ಮಶಾಸ್ತ್ರ) ಅನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ ವೆಂಬದು ನಮಗೆ ತಿಳಿದಿರುತ್ತದೆ" ಎಂದು ಹೇಳುತ್ತಾನೆ. ಅನ್ಯಜನರೊಂದಿಗೆ ಯೆಹೂದ್ಯರು ಸಹ ಯೇಸು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ಮಾತ್ರ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದಾರೆ (ಅ.ಕೃತ 15:11 ನೋಡಿರಿ). ಪೌಲನು ಪ್ರಾರಂಭದಿಂದಲೂ ಗಲಾತ್ಯದವರಿಗೆ ಉಪದೇಶಿಸಿದ ನಿಜವಾದ ಸುವಾರ್ತೆ ಇದಾಗಿದೆ. ಈಗಾಗಲೇ ಕ್ರಿಸ್ತನ ಮೇಲಣ ನಂಬಿಕೆಯಿಂನಲೇ ನೀತಿವಂತರೆಂದು ನಿರ್ಣಯಿಸಲ್ಪಟ್ಟ ಮೇಲೆ ಈಗಲಾತ್ಯದವರು ಈಗ ನೀತಿವಂತರೆಂದು ನಿರ್ಣಯಿಸಲ್ಪಡುವದ್ಕಕೆ ಯೆಹೂದ್ಯ ಧರ್ಮಶಾಸ್ತ್ರಕ್ಕೆ ವಿಧೇಯರಾಗುವದು ಅವಶ್ಯಕವೆಂದು ನಂಬುವದು ಹೇಗೆ? ಇದು ಆಗಬಾರದು! ಈ ವೇಳೆಗೆ ಒಬ್ಬ ಪುರುಷ ಅಥವಾ ಸ್ತ್ರೀಗೆ ರಕ್ಷಣೆಯನ್ನು ಪಡೆದುಕೊಳ್ಳುವದಕ್ಕೆ ನಿರ್ದಿಷ್ಟವಾಗಿ ಏನು ಅವಶ್ಯಕವಾಗಿದೆಂಬದನ್ನು ನಾವು ಪುನಃ ಅವಲೋಕಿಸುವದು ಉತ್ತಮವಾಗಿರುತ್ತದೆ. ನೆನಪಿನಲ್ಲಿಟ್ಟು ಕೊಳ್ಳಬೇಕಾದ ಪ್ರಥಮ ಹಾಗು ಅತಿ ಪ್ರಾಮುಖ್ಯವಾದ ಸಂಗತಿಯೇನೆಂದರೆ ಎಲ್ಲಾ ಒಳ್ಳೇ ಸಂಗತಿಗಳು ದೇವರ ಕೃಪೆಯಿಂದಲೇ ಬರುವವು. ದೇವರ ಕೃಪೆಯ ಕಾರಣದಿಂದ, ಅಂದರೆ, ಆತನ ಪ್ರೀತಿಯ ನಿಮಿತ್ತವೇ ಕ್ರಿಸ್ತನು ಪುರುಷ ಮತ್ತು ಸ್ತ್ರೀಯರನ್ನು ರಕ್ಷಿಸುವದಕ್ಕಾಗಿ ಲೋಕಕ್ಕೆ ಬಂದನು (ಯೋಹಾನ 3:16). ಎಲ್ಲಾ ಮಾನವರು ಪಾಪಿಗಳಾಗಿದ್ದಾರೆ. ಯೆಹೂದ್ಯನಾಗಿರಲಿ ಅಥವಾ ಅನ್ಯಜನಾಂಗದವನಾಗಿರಲಿ ಪ್ರತಿಯೊಬ್ಬನು ಪಾಪಿಯೇ (ರೋಮ 3:9-10); ಆದದರಿಂದ, ಎಲ್ಲಾ ಮಾನವರಿಗೂ ಸಮಾನವಾಗಿ ಅವರನ್ನು ಅವರ ಪಾಪಗಳ ದಂಡನೆಯಾದ ನಿತ್ಯಮರಣದಿಂದ ರಕ್ಷಿಸಲು ರಕ್ಷಕನೊಬ್ಬನ ಅಗತ್ಯತೆಯಿರುತ್ತದೆ (ರೋಮ 6:23). ನಾವು ಇನ್ನೂ ಅನರ್ಹ ಪಾಪಿಗಳಾಗಿದ್ದಾಗಲೇ ಕ್ರಿಸ್ತನು ನಮಗೋಸ್ಕರ ಸತ್ತನು (ರೋಮ 5:6,8). ಕ್ರಿಸ್ತನು ನಮ್ಮ ಪಾಪಗಳ ದಂಡನೆಯನ್ನು ತಾನೇ ಹೊತ್ತು ಕೊಂಡದ್ದರಿಂದ ಆತನಲ್ಲಿ ನಂಬಿಕೆಯಿಡುವವರಾದ ನಾವು ಇನ್ನು ಅಪರಾಧ ನಿರ್ಣಯಕ್ಕೆ ಒಳಗಾದವರಲ್ಲ, ಆದರೆ ದೇವರ ಮುಂಭಾಗದಲ್ಲಿ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ (ರೋಮ 3:23-24). ಇದೆಲ್ಲವೂ ದೇವರ ಕೃಪೆಯ ಫಲಿತವಾಗಿದೆ.

ಹಾಗಾದರೆ ಒಬ್ಬ ವ್ಯಕ್ತಿಯು ರಕ್ಷಣೆ ಹೊಂದುವದಕ್ಕಾಗಿ ಏನು ಮಾಡಬೇಕು? ಆತನು ಕ್ರಿಸ್ತನಲ್ಲಿ ನಂಬಿಕೆಯಿಡಬೇಕು – ಅಷ್ಟೇ. ಆತನು ದೇವರ ಕೃಪೆಯನ್ನು ಪಡೆದುಕೊಳ್ಳಬೇಕು – ತನ್ನದಾಗಿಸಿಕೊಳ್ಳಬೇಕು. ದೇವರು ತನ್ನ ಕೈಯನ್ನು ಚಾಚುತ್ತಾನೆ, ಆದರೆ ಆತನ ಕೈಯೊಳಗಿಂದ ವರವನ್ನು ನಾವು ತೆಗೆದು ಕೊಳ್ಳಬೇಕು. ನಂಬಿಕೆಯು ಹತ್ತಿರ ಬಂದು ದೇವರ ಕೃಪಾವರವನ್ನು ತೆಗೆದುಕೊಳ್ಳುವ ಸರಳಕ್ರಿಯೆಯಾಗಿದೆ. ಈ ಕಾರಣದಿಂದಲೇ ಪೌಲನು ಎಫೆಸದವರಿಗೆ ಬರೆದದ್ದೇನೆಂದರೆ: ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, ಅದು ದೇವರ ವರವೇ (ಎಫೆಸ 2:8). ನಮ್ಮ ರಕ್ಷಣೆಗಾಗಿ ಸ್ವಂತ ನಂಬಿಕೆ ಹಾಗು ದೇವರ ಕೃಪೆ ಎರಡೂ ಅವ್ಯಕವಾಗಿವೆ.

ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವಾಗ ಆತನ ನೀತಿಯನ್ನು ಪಡೆದುಕೊಳ್ಳುತ್ತೇವೆ; ಅಂದರೆ, ನಾವು ನಿರಪರಾಧಿಗಳೆಂದು ನಿರ್ಣಯಿಸಲ್ಪಡುತ್ತೇವೆ ಹಾಗು ನೀತಿವಂತರಾಗುತ್ತೇವೆ (ರೋಮ 5:1-2). ಆದದರಿಂದ, ಇನ್ನು ದೇವರು ನಮ್ಮನ್ನು ನಮ್ಮ ಪಾಪಗಳಿಗೋಸ್ಕರ ದಂಡಿಸಬೇಕಾಗಿರುವದಿಲ್ಲ. ಬದಲಾಗಿ, ಆತನು ನಮ್ಮನ್ನು ಕ್ಷಮಿಸಿ ತನ್ನ ಮಕ್ಕಳನ್ನಾಗಿ ಮಾಡಿಕೊಳ್ಳುತ್ತಾನೆ. ತಕ್ಷಣದಲ್ಲಿ ನಾವು ನೀತಿವಂತರೆಂದು ನಿರ್ಣಯಿಸಲ್ಪಟ್ಟು ನಮ್ಮ ರಕ್ಷಣೆಯನ್ನು ಪಡೆದುಕೊಳ್ಳುತ್ತೇವೆ (ರೋಮ 5:9-10). ಮತ್ತು ರಕ್ಷಣೆಯೊಂದಿಗೆ ನಾವು ನಿತ್ಯಜೀವವನ್ನು ಪಡೆದುಕೊಳ್ಳುತ್ತೇವೆ.

ಆದದರಿಂದ, ರಕ್ಷಣೆ ಹೊಂದುವದಕ್ಕಾಗಿ ನಾವು ಮೊದಲು ನೀತಿವಂತರೆಂದು ನಿರ್ಣಯಿಸಲ್ಪಡಬೇಕು. ನೀತಿವಂತರೆಂದು ನಿರ್ಣಯಿಸಲ್ಪಡಬೇಕಾದರೆ ನಾವು ಕ್ರಿಸ್ತನಲ್ಲಿ ನಂಬಿಕೆಯಿಡಬೇಕು. ಕ್ರಿಸ್ತನಲ್ಲಿ ನಂಬಿಕೆಯಿಡುವದಕ್ಕಾಗಿ ನಾವು ಮೊದಲು ದೇವರ ಕೃಪೆಯನ್ನು ಪಡೆದುಕೊಂಡಿರಬೇಕು ದೇವರು ನಮ್ಮನ್ನು ಜಗದುತ್ಪತ್ತಿಗೆ ಮುಂಚೆಯೇ ಕರೆದಿರುತ್ತಾನೆ (ಎಫೆಸ 1:4). ನಮ್ಮ ರಕ್ಷಣೆ, ನಮ್ಮ ನೀತಿವಂತರೆಂಬ ನಿರ್ಣಯ, ನಮ್ಮ ನಂಬಿಕೆ, ನಮ್ಮ ಕರೆಯುವಿಕೆ ಎಲ್ಲವೂ ದೇವರ ಕೃಪೆಯ ಅಪರಿಮಿತ ಅಂತರಾಳಗಳಲ್ಲಿಯೇ ಪ್ರಾರಂಭಗೊಂಡಿತು. ಇದೆಲ್ಲವೂ ದೇವರ ಕೃಪೆಯ ಒಂದೇ ಶ್ರೇಷ್ಠ ಕಾರ್ಯವಾಗಿದೆ (ಸಾಮಾನ್ಯ ಲೇಖನಃ ರಕ್ಷಣೆಯ ಮಾರ್ಗ ನೋಡಿರಿ).

ಆದದರಿಂದ, ನಾವು ಯಾವದೇ ನೇಮನಿಷ್ಠೆ ಅಥವಾ ಮನುಷ್ಯ ಕಲ್ಪಿತ ಪದ್ಧತಿಯನ್ನು ಅನುಸರಿಸುವದರಿಂದ ರಕ್ಷಣೆಯನ್ನು ಪಡೆದುಕೊಳ್ಳುವದಕ್ಕೆ ಎಂದಿಗೂ ಪ್ರಯತ್ನಿಸದಿರೋಣ. ನಾವು ಅರ್ಹತೆಯನ್ನು ಕೂಡಿಸಿಕೊಳ್ಳುವದರ ಮೂಲಕ ರಕ್ಷಣೆಯನ್ನು ಸಂಪಾದಿಸಿಕೊಳ್ಳಲು ಸಾಧ್ಯವಿಲ್ಲ. ಆದರಿಂದ ಯಾವ ಪ್ರಯೋಜನವೂ ಇರುವದಿಲ್ಲ. ನಾವು ನಮ್ಮ ಸ್ವಕಾರ್ಯಗಳಿಂದ ರಕ್ಷಣೆಯನ್ನು ಪಡೆದುಕೊಳ್ಳಲು ಅಪೇಕ್ಷಿಸುವಾಗಲೆಲ್ಲಾ ತತ್ಫಲವಾಗಿ ಕ್ರಿಸ್ತನ ಕೃಪಾಕಾರ್ಯವನ್ನು ನಿರಾಕರಿಸುವವರಾಗಿರುತ್ತೇವೆ (ರೋಮ: 3:20, 28 ನೋಡಿರಿ). ಪೌಲನು 16ನೇ ವಚನದ ಕೊನೆಯಲ್ಲಿ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ. ಅದು ಹಾಗೇಕೆ? ಯಾಕೆಂದರೆ ಯಾವನೂ ಸಹ ಧರ್ಮಶಾಸ್ತ್ರದ ಪ್ರತಿಯೊಂದು ಅಂಶವನ್ನೂ ಎಲ್ಲಾ ಸಮಯದಲ್ಲೂ ನಂಬಿಗಸ್ಥನಾಗಿ ಕೈಕೊಂಡು ನಡೆಯಲಾರನು. ಯಾಕೋಬ ಬರೆದದ್ದೇನೆಂದರೆ: ಯಾಕೆಂದರೆ ಯಾವನಾದರೂ ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ನಡೆದು ಒಂದೇ ಒಂದರಲ್ಲಿ ತಪ್ಪಿದರೆ ಅವನು ಎಲ್ಲಾ ವಿಷಯದಲ್ಲಿಯೂ ಅಪರಾಧಿಯಾಗುತ್ತಾನೆ (ಯಾಕೋಬ 2:10).

ನಾವು ಸಹ ಪೂರ್ಣವಾಗಿ ವಿಧೇಯರಾಗಲು ಸಾಧ್ಯವಿಲ್ಲದಿರುವ ಆ ನಿರ್ದಿಷ್ಟವಾದ ಒಂದು ಆಜ್ಞೆ ಯಾವದು/ ನೀವು ಮತ್ತೊಬ್ಬನದನ್ನು ಆಶಿಸಬಾರದು (ವಿಮೋಚನಕಾಂಡ 20:17). ಬಹುಶಃ ನಾವು ದಶಾಜ್ಞೆಗಳಲ್ಲಿ ಮೊದಲು ಒಂಭತ್ತು ಆಜ್ಞೆಗಳಿಗೆ ವಿಧೇಯರಾಗ ಬಹುದು, ಆದರೆ ನಾವು ಹತ್ತನೆಯ ಆಜ್ಞೆಗೆ ವಿಧೇಯರಾಗಲಾರೆವು ನೀವು ಮತ್ತೊಬ್ಬನದನ್ನು ಆಶಿಸಬಾರದು ಎಂಬದು ಮುಖ್ಯವಾಗಿ ನಾವು ಯಾವದೇ ದುರಾಶೆಗಳನ್ನು ಹೊಂದಿರಬಾರದೆಂದು ಅರ್ಥ ನೀಡುತ್ತದೆ. ಯಾವನಾದರೂ ಆ ಆಜ್ಞೆಗೆ ಇದುವರೆಗೂ ಸಂಪೂರ್ಣವಾಗಿ ವಿಧೇಯನಾಗಿದ್ದಾನೋ/ ಯಾರೂ ಇಲ್ಲ! ಆದುದರಿಂದ

ಯಾವನಾದರೂ ಯೆಹೂದ್ಯ ಧರ್ಮಶಾಸ್ತ್ರ ಅಥವಾ ಇತರ ಯಾವದೇ ನೇಮನಿಷ್ಠೆಗಳನ್ನು ಅನುಸರಿಸುವದರಿಂದ ನೀತಿವಂತನಾಗುವದಿಲ್ಲ; ಅದು ಅಸಾಧ್ಯವಾಗಿದೆ (ರೋಮ 7:6-11 ನೋಡಿರಿ).

**17** ಇಲ್ಲಿ ಪೌಲನು ಇನ್ನೂ ಯೆಹೂದ್ಯ. ವಿಶ್ವಾಸಿಗಳನ್ನುದ್ದೇಶಿಸಿ ಮಾತಾಡುತ್ತಿದ್ದಾನೆ. ಯೆಹೂದ್ಯ ಕ್ರೈಸ್ತರು ತಾವು ಯೆಹೂದ್ಯ ಧಾರ್ಮಿಕ ನೇಮನಿಷ್ಠೆಗಳನ್ನು ಅನುಸರಿಸುವದನ್ನು ನಿಲ್ಲಿಸುವದಾದರೆ ನಿಶ್ಚಯವಾಗಿಯೂ ಅವರ ಪಾಪಗಳು ಹೆಚ್ಚಾಗುವವೆಂದು ಭಯಪಡುತ್ತಿದ್ದರು. ಇದು ನಿಜವಾಗಿದ್ದಿದ್ದರೆ ಕ್ರಿಸ್ತನಲ್ಲಿ ನಂಬಿಕೆಯಿಡುವದು ಕೇವಲ ಮತ್ತಷ್ಟು ಪಾಪಕ್ಕೆ ನಡಿಸುವದಾಗಿ ತೋರಿಬರುತ್ತಿತ್ತು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಕ್ರಿಸ್ತನು ಪಾಪಕ್ಕೆ ಸಹಾಯಕನೆಂಬಂತೆ ತೋರಿಬರುತ್ತಿತ್ತು. ಆದರೆ ಹಾಗೆ ಎಂದಿಗೂ ಇಲ್ಲ; ವಾಸ್ತವದಲ್ಲಿ, ಅದು ಅದಕ್ಕೆ ತದ್ವಿರುದ್ಧವಾಗಿರುತ್ತದೆ ಎಂದು ಪೌಲನು ಹೇಳುತ್ತಾನೆ. ಒಂದು ವೇಳೆ ಅವರು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ನೀತಿವಂತರೆಂಬ ನಿರ್ಣಯಹೊಂದುವ ಅಪೇಕ್ಷೆಯನ್ನು ಕೈಬಿಡುವದಾದರೆ ದೇವರ ದೃಷ್ಟಿಯಲ್ಲಿ ಅವರು ಮತ್ತಷ್ಟು ಪಾಪಿಗಳಾಗಿರುತ್ತಾರೆ. ಪರಿಶುದ್ಧರಾಗಿ ಮಾಡಲ್ಪಡುವದಕ್ಕಿರುವ ಏಕೈಕ ಮಾರ್ಗವೆಂದರೆ ಕ್ರಿಸ್ತನಲ್ಲಿ ನಂಬಿಕೆಯಿಟ್ಟು ಆತನ ನೀತಿಯನ್ನು ಪಡೆದುಕೊಳ್ಳುವದೇ.

**18** ಧರ್ಮಶಾಸ್ತ್ರವನ್ನು ಅವಲಂಭನೆ ಮಾಡಿಕೊಳ್ಳುವದು ನಮ್ಮನ್ನು ಘೋರ ಪಾಪಿಗಳನ್ನಾಗಿಸುತ್ತದೆ ಎಂದು ಪೌಲನು ಹೇಳುತ್ತಾನೆ. ಪೌಲನು ತಾನು ಕೆಡವಿದ್ದನ್ನು ತಿರಿಗಿ ಕಟ್ಟುವದಿಲ್ಲ. ಅಂದರೆ, ಪೌಲನು ತಾನು "ಕೆಡವಿಬಿಟ್ಟ" – ಅಂದರೆ ಅನಾವಶ್ಯಕ ಎಂದು ತೀರ್ಮಾನಿಸಿದ – ನೇಮನಿಷ್ಠೆಗಳನ್ನು ಪುನಃ ರೂಪಿಸುವದಿಲ್ಲ. ಆತನು ಪುನಃ ಈ ನೇಮ ನಿಷ್ಠೆಗಳನ್ನು ರೂಪಿಸಿದ್ದಾದರೆ ಆತನು "ಕೃಪೆಯನೇಮ"ವನ್ನು ಗಣನೆಗೆ ಬಾರದಂತೆ ಮಾಡುವವನಾಗುತ್ತಾನೆ. ಆತನು ಕ್ರಿಸ್ತನ ಕಾರ್ಯ ಹಾಗು ಯಜ್ಞವನ್ನು ನಿರಾಕರಿಸುವವನಾಗಿರುತ್ತಾನೆ, ಅದರ ಮೂಲಕ ಮಾತ್ರವೇ ಎಲ್ಲಾ ಮಾನವರು ನೀತಿವಂತರೆಂದು ನಿರ್ಣಯಿಸಲ್ಪಡಬಹುದಾಗಿದೆ. ಆತನು ಕ್ರಿಸ್ತನ ನೀತಿಯನ್ನು ಬಿಟ್ಟು ಅಚೇತನವಾದ ಧರ್ಮಶಾಸ್ತ್ರದ ಮೂಲಕ ನೀತಿವಂತನಾಗಲು ಅಪೇಕ್ಷಿಸುವವನಾಗುತ್ತಾನೆ. ಆತನು ಹೀಗೆ ಮಾಡುವದಾಗಿದ್ದರೆ ನಿಶ್ಚಯವಾಗಿಯೂ ಆತನು ದೇವರ ದೃಷ್ಟಿಯಲ್ಲಿ ಧರ್ಮಶಾಸ್ತ್ರವನ್ನು ಮೀರುವವನಾಗಿರುತ್ತಾನೆ, ಯಾಕೆಂದರೆ ಯಾವನಾದರೂ ನೇಮ ನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಸಲ್ಪಡುವದಿಲ್ಲ (ವಚನ 16).

**19** ಧರ್ಮಶಾಸ್ತ್ರವು ಪಾಪಿಮಾನವನಿಗೆ ನೂತನ ಜೀವವನ್ನು ನೀಡಲಾರದು; ಅದು ಮನುಷ್ಯನನ್ನು ಅಪರಾಧಿಯೆಂದು ನಿರ್ಣಯಿಸುತ್ತದಷ್ಟೇ. ಧರ್ಮಶಾಸ್ತ್ರವು ಪೌಲನಿಗೆ ಮರಣವನ್ನು ವಿಧಿಸಿತು. ಪೌಲನು ಹೇಳುವದೇನೆಂದರೆ: ಧರ್ಮ ಪ್ರಮಾಣದ ಮೂಲಕವಾಗಿ ಸತ್ತೆನು. ಆದರೆ ಆತನು ಸತ್ತಾಗ ಧರ್ಮಶಾಸ್ತ್ರದಿಂದ ಸ್ವತಂತ್ರನಾದನು. ಒಮ್ಮೆ ನ್ಯಾಯಾಧಿಪತಿಯು ತೀರ್ಪು ನೀಡುವದಾದರೆ ಆತನ ಕೆಲಸವು ಮುಗಿಯುತ್ತದೆ. ಅಪರಾಧಿಯ ಮೇಲಣ ಆತನ ಅಧಿಕಾರವು ಅಂತ್ಯಗೊಳ್ಳುತ್ತದೆ. ಅಪರಾಧಿಯು ತಾನು ಹೊಂದಿದ ತೀರ್ಪನ್ನು ಪೂರ್ತಿಗೊಳಿಸುವದರಿಂದ ನ್ಯಾಯಾಧಿಪತಿಯಿಂದ(ಮುಕ್ತ)ಆಗುತ್ತಾನೆ. ಅದೇ ರೀತಿಯಲ್ಲಿ ಪೌಲನು ಧರ್ಮಶಾಸ್ತ್ರದ ವಶದಿಂದ ಸ್ವತಂತ್ರನಾಗಿರುತ್ತಾನೆ; ಪೌಲನು ಧರ್ಮಶಾಸ್ತ್ರದ ಪಾಲಿಗೆ ಸತ್ತನು. ಪೌಲನಿಗೆ ಮರಣದ ತೀರ್ಪನ್ನು ನೀಡಿದ ಬಲಿಕ ಧರ್ಮಶಾಸ್ತ್ರವು ಇನ್ನು ಪೌಲನನ್ನು ಮುಟ್ಟಲಾರದು. ಪೌಲನು ತನ್ನ ಮರಣದ ಮುಖಾಂತರ ಯಜಮಾನನಿಂದ ಸ್ವತಂತ್ರನಾಗುವದಾಸನಂತಿದ್ದಾನೆ. ಮತ್ತು ಈಗ ತನ್ನ ಹಳೆಯ ಯಜಮಾನನಿಂದ ಬಿಡುಗಡೆ ಹೊಂದಿದವನಾಗಿ ಪೌಲನು ಕ್ರಿಸ್ತನನ್ನು ಸೇವಿಸುವದಕ್ಕೆ, ದೇವರಿಗಾಗಿ ಜೀವಿಸುವದಕ್ಕೋಸ್ಕರ ಸ್ವತಂತ್ರನಾಗಿದ್ದಾನೆ (ರೋಮ 7:4, 6-7; 8:1-2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಪೌಲನು ಈಗ ದೇವರಿಗಾಗಿ ಜೀವಿಸುವದಕ್ಕೆ ಸ್ವತಂತ್ರನಾಗಿರುವದು ಮಾತ್ರವಲ್ಲ, ಆದರೆ ಆತನು ದೇವರಿಗಾಗಿ ಜೀವಿಸುವದಕ್ಕೆ ಬಲವನ್ನು ಸಹ ಹೊಂದಿದ್ದಾನೆ, ಯಾಕೆಂದರೆ ಈಗ ಯೇಸು ಕ್ರಿಸ್ತನು ಅವನಲ್ಲಿ ಜೀವಿಸುತ್ತಾನೆ (ವಚನ 20).

**20** ನಾನು ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ. ಪೌಲನು ಇಲ್ಲಿ ಎಂಥ ಆಳವಾದ ಹಾಗು ಆಶ್ಚರ್ಯಕರವಾದ ಸಾಕ್ಷಿಯನ್ನು ನೀಡುತ್ತಾನೆಗ ಯಾವನಾದರೂ ನೂತನ ಆತ್ಮೀಕ ಜೀವವನ್ನು ಪಡೆದುಕೊಳ್ಳುವದಕ್ಕೆ ಮುಂಚೆ ಅವನು ಸಾಯಬೇಕು. ಅಂದರೆ, ಆತನು ಪೂರ್ವಸ್ವಭಾವವು ಸಾಯಬೇಕು; ಅದು ಶಿಲುಬೆಗೆ ಹಾಕಲ್ಪಡಬೇಕು (ರೋಮ 6:6). ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಳ್ಳುವದೆಂದರೆ ನಮ್ಮ ಪೂರ್ವ ಪಾಪಾಧೀನ ಸ್ವಭಾವವು ಸಾಯುವದಾಗಿದೆ. ಆಗ ಕ್ರಿಸ್ತನ ಸ್ವಭಾವ ಹಾಗು ಗುಣಲಕ್ಷಣ ನಮ್ಮ ಜೀವಿತಗಳನ್ನು ತುಂಬಬಲ್ಲದು. ಆತನ ಆತ್ಮನಾದ ಪವಿತ್ರಾತ್ಮನು ನಮ್ಮನ್ನು ಪ್ರವೇಶಿಸುತ್ತಾನೆ, ಮತ್ತು ಪವಿತ್ರಾತ್ಮನ ಮುಖಾಂತರ ನಾವು ಪರಿಶುದ್ಧ ಹಾಗು ನೀತಿಯುಳ್ಳ ಜೀವಿತವನ್ನು ನಡೆಸುವದಕ್ಕೆ ಬಲವನ್ನು ಪಡೆಯುತ್ತೇವೆ. ಆದರೆ ಜೀವಿಸುವದು ನಾವಲ್ಲ; – ನಮ್ಮ ಪೂರ್ವ ಸ್ವಭಾವವಲ್ಲ – ಕ್ರಿಸ್ತನು ನಮ್ಮಲ್ಲಿ ಜೀವಿಸುತ್ತಾನೆ ನಮ್ಮ ಪೂರ್ವ ಪಾಪಾಧೀನ ಸ್ವಭಾವವು ಸತ್ತಿರುತ್ತದೆ. ನಾವು ಅದರಿಂದ ಸ್ವತಂತ್ರರಾಗಿರುತ್ತೇವೆ. ಇನ್ನು ನಾವು ನಮ್ಮ ಪಾಪಾಧೀನ ಸ್ವಭಾವದ ಬಲದಡಿಯಲ್ಲಿ ಇರುವದಿಲ್ಲ (ರೋಮ 6:3-8 ಮತ್ತು ವ್ಯಾಖ್ಯಾನ ನೋಡಿರಿ). ಪೌಲನು ಹೇಳುವದೇವೆಂದರೆ: ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ. ನಮ್ಮ ವಿಷಯದಲ್ಲಿಯೂ ನಾವು ಹಾಗೆ ಹೇಳಬಲ್ಲೆವೋ? ನಾವು ಪ್ರತಿಯೊಬ್ಬರೂ ಕೇಳಿಕೊಳ್ಳಬೇಕಾದದ್ದೇನೆಂದರೆ: ನನ್ನ ದೇಹದಲ್ಲಿ ಯಾರು ಜೀವಿಸುತ್ತಿದ್ದಾರೆ? ನನ್ನ ಪೂರ್ವ ಸ್ವಭಾವವೋ ಅಥವಾ ಕ್ರಿಸ್ತನೋ/ ನಾವು ಸಹ ಪೌಲನೊಂದಿಗೆ "ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ" ಎಂದು ಹೇಳಬಲ್ಲೆವೋ?

ಇದೇ ಕ್ರೈಸ್ತ ಜೀವಿತದ ನಿಜವಾದ ಅರ್ಥವಾಗಿರುತ್ತದೆ: ಕ್ರಿಸ್ತನು ವಿಶ್ವಾಸಿಯಲ್ಲಿ ಜೀವಿಸುವದು. ನಾವು ನಮ್ಮ ಸ್ವಂತ ಆಧಾರದ ಮೇಲೆ ಜೀವಿಸಬೇಕಾಗಿರುವದಿಲ್ಲ. ಬದಲಾಗಿ ನಂಬಿಕೆಯ ಮೂಲಕ ನಾವು ಕ್ರಿಸ್ತನನ್ನು ನಮ್ಮಲ್ಲಿ ಜೀವಿಸುವದಕ್ಕೆ ಅನುಮತಿಸುತ್ತೇವೆ. ಯೇಸು ಹೇಳಿದ್ದೇನೆಂದರೆ: "ನೀವು ನನ್ನಲ್ಲಿ ನೆಲೆಗೊಂಡಿರಿ; ನಾನು ನಿಮ್ಮಲ್ಲಿ ನೆಲೆಗೊಂಡಿರುವೆನು" (ಯೋಹಾನ 15:4-5). ಯೇಸು ನಮ್ಮಲ್ಲಿ ಜೀವಿಸುತ್ತಾನಾದ್ದರಿಂದ ನಾವು ಯೇಸುವಿನ ಹಾಗೆ ಜೀವಿಸಲು ಶಕ್ತರಾಗುವೆವು. ಆಗ ಇತರ ಜನರು ಕ್ರಿಸ್ತನನ್ನು ನಮ್ಮಲ್ಲಿ ನೋಡುವದಕ್ಕೆ ಶಕ್ತರಾಗಿ ಅವರು ಸಹ ಕ್ರೈಸ್ತರಾಗುವದಕ್ಕೆ ಬಯಸುವರು. ಪೌಲನು ಹೇಳುವದೇನೆಂದರ: ಈಗ ಶರೀರದಲ್ಲಿರುವ[15] ನಾನು ಜೀವಿಸುವದು ಹೇಗಂದರೆ ದೇವಕುಮಾರನ ಮೇಲಣ ನಂಬಿಕೆಯಲ್ಲಿಯೇ. ದೇವಕುಮಾರನು ಯಾರೆಂದರೆ ನಾವು ರಕ್ಷಣೆಯನ್ನು ಹಾಗು ನಿತ್ಯಜೀವವನ್ನು ಪಡೆಯಬೇಕೆಂದು ನಮ್ಮ ಪಾಪಗಳಿಗಾಗಿ ಸಾಯುವದಕ್ಕಾಗಿ ಈ ಲೋಕಕ್ಕೆ ಬಂದ ಯೇಸು ಕ್ರಿಸ್ತನೇ (ಮಾರ್ಕ 10:45 ಮತ್ತು ವ್ಯಾಖ್ಯಾನ ನೋಡಿರಿ).

**21** ನಾನು ದೇವರ ಕೃಪೆಯನ್ನು ನಿರರ್ಥಕಮಾಡುವದಿಲ್ಲ. ಅಂದರೆ, ಪೌಲನು ಪು ನಃ ಯಾವದೇ ನೇಮನಿಷ್ಠೆಗಳನ್ನು ಅನುಸರಿಸಿ ರಕ್ಷಣೆಯನ್ನು ಪಡೆಯುವದಕ್ಕೆ ಪ್ರಯತ್ನಮಾಡುವದಿಲ್ಲ. ಮನುಷ್ಯನು ಕ್ರಿಸ್ತನಲ್ಲಿ ನಂಬಿಕೆಯಿಡದೆ ಧರ್ಮಶಾಸ್ತ್ರದಿಂದ ರಕ್ಷಣೆ ಹೊಂದಬಲ್ಲವನಾದರೆ ಖಂಡಿತವಾಗಿಯೂ ಕ್ರಿಸ್ತನು ಮರಣವನ್ನು ಹೊಂದಿದ್ದಕ್ಕೆ ಕಾರಣವೇ ಇಲ್ಲದಂತಾಗುತ್ತದೆ!

---

## ಅಧ್ಯಾಯ - 3

### ನಂಬಿಕೆಯೋ ಅಥವಾ ನೇಮನಿಷ್ಠೆಗಳನ್ನನ್ನು ಸರಿಸುವದೋ (3:1-14)

1 ಬುದ್ಧಿಯಿಲ್ಲದ ಗಲಾತ್ಯದ ವಿಶ್ವಾಸಿಗಳು ಮರಳುಗೊಳಿಸಲ್ಪಟ್ಟಿದ್ದಾರೆ. ಅವರು ಕ್ರಿಸ್ತನ ಶಿಲುಬೆಯ ಮೇಲಣ ಮರಣದ ಮೂಲಕ ರಕ್ಷಣೆ ಹೊಂದಿರುತ್ತಾರೆಂದ ಪೌಲನು ಅವರಿಗೆ ಸ್ಪಷ್ಟವಾಗಿ ಉಪದೇಶಿಸಿದ್ದನು. ಅವರ ಕಣ್ಣಿದುರಿನಲ್ಲಿಯೇ ಕ್ರಿಸ್ತನು ಶಿಲುಬೆಗೆ ಹಾಕಿಸಿಕೊಂಡವನಾಗಿ ವರ್ಣಿಸಲ್ಪಟ್ಟಿದ್ದನು (1 ಕೊರಿಂಥ 1:23-24; 2:2 ನೋಡಿರಿ). ಈಗ ಏಕೆ ಅವರು ತಮ್ಮ ಸ್ವಕಾರ್ಯಗಳನ್ನು ಅವಲಂಭಿಸುವದಕ್ಕೆ ಪ್ರಾರಂಭಿಸಬೇಕು?

2 ಪೌಲನು ಗಲಾತ್ಯದವರಿಗೆ ಒಂದು ಪ್ರಶ್ನೆಯನ್ನು ಮಾತ್ರವೇ ಕೇಳುತ್ತಾನೆ: "ನೀವು ದೇವರಾತ್ಮನನ್ನು ಹೇಗೆ ಹೊಂದಿದ್ದೀರಿ? ನೀವು ಹೇಗೆ ಕ್ರೈಸ್ತರಾದಿರಿ?" ಗಲಾತ್ಯದವರು ಉತ್ತರವನ್ನು ಬಲ್ಲವರಾಗಿದ್ದರು. ಅವರು ದೇವರಾತ್ಮನನ್ನು ಕೇಳಿನಂಬಿದ್ದರಿಂದಲೇ – ಅಂದರೆ, ಪೌಲನ ಸಂದೇಶವನ್ನು ನಂಬಿದ್ದರಿಂದಲೇ – ಹೊಂದಿದ್ದರು. ನಾವು ಮೊದಲು ಕೇಳುತ್ತೇವೆ; ನಂತರ ನಂಬುತ್ತೇವೆ ಮತ್ತು ಅನಂತರ ನಾವು ಪವಿತ್ರಾತ್ಮನನ್ನು ಪಡೆದುಕೊಳ್ಳುತ್ತೇವೆ (ಅ.ಕೃತ್ಯ 2:38; ರೋಮ 10:14; ಎಫೆಸ 1:13 ನೋಡಿರಿ).

3 ಪ್ರಾರಂಭದಲ್ಲಿ ಗಲಾತ್ಯದವರು ಪವಿತ್ರಾತ್ಮನನ್ನು ನಂಬಿಕೆಯ ಮೂಲಕ ಹೊಂದಿದ್ದರು. ಅವರು ಕ್ರಿಸ್ತನಲ್ಲಿ ನೂತನ ಜೀವಿತವನ್ನು ಪಡೆದುಕೊಂಡಿದ್ದರು. ಆದದರಿಂದ, ಪೌಲನು, "ಈಗ ಏಕೆ ನೀವು ಬಹಿರಾಚಾರಗಳಿಂದ ಸಿದ್ಧಿಗೆ ಬರಬೇಕೆಂದಿದ್ದೀರಾ"?[16] ಎಂದು ಕೇಳುತ್ತಾನೆ. ಅಂದರೆ, ಈಗ ಗಲಾತ್ಯದವರು ಏಕೆ ತಮ್ಮ ಸ್ವಂತ ಪ್ರಯತ್ನಗಳಿಂದ, ಸ್ವಕಾರ್ಯಗಳಿಂದ ಪರಿಶುದ್ಧರಾಗುವದಕ್ಕೆ ಪ್ರಯತ್ನಿಸುತ್ತಿದ್ದಾರೆ? ಮನುಷ್ಯನು ನಂಬಿಕೆಯಿಂದ ಮಾತ್ರವೇ ಪವಿತ್ರಾನಾಗ ಬಲ್ಲನು (ನೀತಿವಂತನೆಂದು ನಿರ್ಣಯಿಸಲ್ಪಡಬಲ್ಲನು) ಎಂಬದನ್ನು ಈಗಾಗಲೇ ಅವರು ತಿಳುಕೊಂಡಿದ್ದರು. ಈಗ ಈಗಲಾತ್ಯದವರು ದೇವರಾತ್ಮನ ಬಲದಿಂದ ವಿಮುಖರಾಗಿ ಮನುಷ್ಯನ ಬಲಹೀನತೆಯನ್ನು ಅವಲಂಭಿಸುವವರಾಗಿದ್ದರು. ಅವರು ತಮ್ಮ ಸ್ವಕಾರ್ಯಗಳಿಂದ ತಾವು ಎಷ್ಟು ನೀತಿವಂತರೆಂಬದನ್ನು ದೇವರಿಂದ ನಿರೂಪಿಸುವದಕ್ಕೆ ಪ್ರಯತ್ನಿಸುತ್ತಿದ್ದಾರೆ. ಆದರೆ ದೇವರ ದೃಷ್ಟಿಯಲ್ಲಿ ಯಾವನಾದರೂ ಸ್ವಕಾರ್ಯಗಳ ಕಾರಣದಿಂದ ನೀತಿವಂತನಾಗುವದಿಲ್ಲ (ಗಲಾತ್ಯ 2:16).

4 ಗಲಾತ್ಯದವರು ಕ್ರಿಸ್ತನಲ್ಲಿನ ತಮ್ಮ ನಂಬಿಕೆಯ ಕಾರಣದಿಂದ ಈಗಾಗಲೇ ಬಹಳಷ್ಟು ಬಾಧೆಗಳನ್ನು ಅನುಭವಿಸಿದ್ದರು. ಈಗ ಅವರು ಆ ನಂಬಿಕೆಯನ್ನು ಬಿಟ್ಟು ಬಿಡುವದಾದರೆ ಅವರ ಬಾಧೆಗಳನ್ನು ಅನುಭವಿಸಿದ್ದು ವ್ಯರ್ಥವಾಗುತ್ತಿತ್ತು. ಪೌಲನು ಮುಂದುವರೆಸುತ್ತಾ "....ವ್ಯರ್ಥವೇ ಎಂದು ಹೇಳಬೇಕೇನು?" ಎಂದು ಹೇಳುತ್ತಾನೆ. ಹೀಗೆ ಹೇಳುವದರ ಮೂಲಕ ನಿಜವಾಗಿಯೂ ಅವರ ಬಾಧೆಗಳು ವ್ಯರ್ಥಕ್ಕಾಗಿರುವದಿಲ್ಲ ಎಂಬ ನಿರೀಕ್ಷೆಯನ್ನು ವ್ಯಕ್ತಪಡಿಸುತ್ತಿದ್ದಾನೆ.

5 ಪೌಲನು ಇಲ್ಲಿ 2ನೇ ವಚನದ ಪ್ರಶ್ನೆಯನ್ನು ಪುನರಾವರ್ತಿಸುತ್ತಾನೆ. ದೇವರು ಗಲಾತ್ಯದವರಿಗೆ ತನ್ನ ಆತ್ಮನನ್ನು ನೀಡಿ ಅವರ ಮಧ್ಯದಲ್ಲಿ ಮಹತ್ಕಾರ್ಯಗಳನ್ನು ನಡಿಸಿದ್ದು ಅವರ ನೇಮನಿಷ್ಠೆಗಳ ಕಾರಣದಿಂದಲ್ಲ; ಅವರ ನಂಬಿಕೆಯ ಕಾರಣದಿಂದಲೇ ಎಂಬುದು ಅವರಿಗೆ ತಿಳಿದದೆ. ಪೌಲನು ಅವರು ಈಗಾಗಲೇ ತಿಳುಕೊಂಡಿರುವದನ್ನೇ ಅವರಿಗೆ ಜ್ಞಾಪಕಪಡಿಸುತ್ತಾನೆ. ದೇವರಿಂದ ಅಂಥ ಆಶಿರ್ವಾದವನ್ನು ಪಡೆದುಕೊಂಡು ಆತನು ಅವರೊಳಗೆ ನಡಿಸಿದ ಕೃಪೆಯ ಮಹತ್ಕಾರ್ಯಗಳನ್ನು ನೋಡಿದ ಬಳಿಕವೂ ಗಲಾತ್ಯದವರು ಈಗ ಆತನ ಕೃಪೆಯನ್ನು ತಿರಸ್ಕರಿಸಿ ನೇಮನಿಷ್ಟೆಗಳನ್ನು ಅವಲಂಭಿಸಲು ಹೇಗೆ ಸಾಧ್ಯ?

6 ಯೆಹೂದ್ಯರ ಪಿತೃವಾದ ಅಬ್ರಹಾಮನು ಎಲ್ಲಾ ಮನುಷ್ಯರಿಗೂ ಒಂದು ಮಾದರಿಯಾಗಿದ್ದಾನೆ. ಆತನು ನಂಬಿಕೆಯಿಂದ ನೀತಿವಂತನೆಂದು ನಿರ್ಣಯಿಸಲ್ಪಟ್ಟನು ಹೊರತು ಕಾರ್ಯಗಳಿಂದಲ್ಲ. ಅಬ್ರಹಾಮನ ನಂಬಿಕೆಯು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು (ರೋಮ 4:1-3 ಮತ್ತು ವ್ಯಾಖ್ಯಾನ ನೋಡಿರಿ). ಒಬ್ಬನು ನೀತಿವಂತನೆಂದು ನಿರ್ಣಯಸಲ್ಪಡಬೇಕಾದರೆ ಆತನು ಸುನ್ನತಿ ಮಾಡಿಸಿಕೊಂಡವನಾಗಿ ಯೆಹೂದ್ಯ ಧರ್ಮಶಾಸ್ತ್ರವನ್ನು ಅನುಸರಿಸುವದು ಅವಶ್ಯಕವಾದದ್ದೆಂದು ಗಲಾತ್ಯದಲ್ಲಿದ್ದ ಯೆಹೂದ್ಯ ಬೋಧಕರು ಬೋಧಿಸುತ್ತಿದ್ದರು. ಅಲ್ಲದೆ ಅವರು ದೇವರ ದೃಷ್ಟಿಯಲ್ಲಿ ನೀತಿವಂತರಾಗಬೇಕಾದರೆ ಒಬ್ಬನು ಶರೀರಸಂಬಂಧವಾಗಿ ಅಬ್ರಹಾಮನ ಸಂತತಿಯಾಗಿರಬೇಕು; ಅಂದರೆ ಆತನು ಒಬ್ಬ ಯೆಹೂದ್ಯ ನಾಗಿರಬೇಕು ಎಂದು ಸಹ ಹೇಳಿಕೊಂಡರು. ಆದರೆ ಪೌಲನು ಯೆಹೂದ್ಯ ಧರ್ಮ ಗ್ರಂಥ ದಿಂದಲೇ (ಹಳೆ ಒಡಂಬಡಿಕೆ) ಮನುಷ್ಯನು ನಂಬಿಕೆಯಿಂದಲೇ ದೇವರಿಂದ ನೀತಿವಂತನೆಂದು ನಿರ್ಣಯಿಸುತ್ತಾನೆಂಬದನ್ನು ನಿರೂಪಿಸುತ್ತಾನೆ.

7 ಕ್ರಿಸ್ತನಲ್ಲಿ ನಂಬಿಕೆಯಿಡುವವರೆಲ್ಲರೂ ಆಬ್ರಹಾಮನ ಆತ್ಮೀಕ ಸಂತಾನವಾಗಿದ್ದಾರೆ. ದೇವರು ಅಬ್ರಹಾಮನಿಗೂ ಆತನ ಸಂತತಿಯವರಿಗೂ ವಾಗ್ದಾನ ಮಾಡಿದ ಆಶಿರ್ವಾದಗಳಿಗೆ ಅನ್ಯಜನರು ನಂಬಿಕೆಯ ಮೂಲಕ ಬಾಧ್ಯತೆ ಹೊಂದುವರು. ಆದದರಿಂದ, ಶರೀರ ಸಂಬಂಧವಾಗಿ ಹುಟ್ಟಿದವರು (ಯೆಹೂದ್ಯರು) ಅಬ್ರಹಾಮನ ನಿಜವಾದ ಸಂತತಿಯಲ್ಲ, ಆದರೆ ಕ್ರಿಸ್ತನಲ್ಲಿ ನಂಬಿಕೆಯಿಡುವವರೇ ಅಬ್ರಹಾಮನ ನಿಜವಾದ ಸಂತತಿಯವರು (ರೋಮ 4:11, 13, 16 ಮತ್ತು ವ್ಯಾಖ್ಯಾನ ನೋಡಿರಿ).

8 ದೇವರು ಅಬ್ರಹಾಮನಿಗೆ ಆತನ ಮೂಲಕ ಎಲ್ಲಾ ಜನಾಂಗಗಳು ಆಶೀರ್ವದಿಸಲ್ಪಡುವವೆಂದು ವಾಗ್ದಾನ ಮಾಡಿದನೆಂಬದನ್ನು ತೋರಿಸುವದಕ್ಕಾಗಿ ಪೌಲನು ಆದಿಕಾಂಡ ಪುಸ್ತಕದಿಂದ ಉಲ್ಲೇಖಿಸುತ್ತಾನೆ (ಆದಿಕಾಂಡ 12:3; 18:18; 22:17-18). ಎಲ್ಲಾ ಜನಾಂಗಗಳು ಎಂದರೆ ಯೆಹೂದ್ಯರು ಮಾತ್ರವಲ್ಲ, ಆದರೆ ಅನ್ಯಜನರು ಸಹ ಸೇರಿದ್ದಾರೆ. ಯೆಹೂದ್ಯರು ತಾವು ಮಾತ್ರವೇ ಅಬ್ರಹಾಮನಿಗೆ ವಾಗ್ದಾನ ಮಾಡಲ್ಪಟ್ಟ ಆಶಿರ್ವಾದಗಳಿಗೆ ಬಾಧ್ಯರಾಗುತ್ತಾರೆಂದು ನಂಬಿದ್ದರು, ಯಾಕೆಂದರೆ ಅವರು ಮಾತ್ರವೇ ಅಬ್ರಹಾಮನಿಗೆ ಶರೀರ ಸಂಬಂಧವಾಗಿಹುಟ್ಟಿದ ಸ್ವಾಭಾವಿಕ ಸಂತತಿಯಾಗಿದ್ದರು. ಆದರೆ ಯಾವನಾದರೂ ಶರೀರಸಂಬಂಧವಾಗಿ, ಅಂದರೆ, ಸ್ವಾಭಾವಿಕ ಜನ್ಮದ ಮೂಲಕ ಆತ್ಮೀಕ ಆಶಿರ್ವಾದಗಳಿಗೆ ಬಾಧ್ಯನಾಗಲಾರನು. ನಂಬಿಕೆಯ ಮೂಲಕ ಮಾತ್ರವೇ ಒಬ್ಬನು ಆತ್ಮೀಕ ಆಶಿರ್ವಾದಗಳನ್ನು ಪಡೆದುಕೊಳ್ಳಬಲ್ಲನು. ಆದದರಿಂದ, ಅನ್ಯಜನಾಂಕದ ವಿಶ್ವಾಸಿಗಳು ಆ ಎಲ್ಲಾ ಆಶಿರ್ವಾದಗಳನ್ನು ನಂಬಿಕೆಯ ಮೂಲಕ ಪಡೆದುಕೊಳ್ಳುವರು.

9 ಪೌಲನು ಇಲ್ಲಿ 7ನೇ ವಚನದ ವಿಚಾರವನ್ನು ಪುನರಾವರ್ತಿಸುತ್ತಾನೆ. ಅಬ್ರಹಾಮನು ಸುನ್ನತಿಯ ಆಧಾರದ ಮೇಲೆ ನೀತಿವಂತನೆಂದ ನಿರ್ಣಯಿಸಲ್ಪಡಲಿಲ್ಲ, ಯಾಕೆಂದರೆ, ಅಬ್ರಹಾಮನು ಮೊದಲು ನಂಬಿದಾಗ ಆತನಿಗೆ ಇನ್ನೂ ಸುನ್ನತಿಯಾಗಿರಲಿಲ್ಲ (ರೋಮ 4:9-11).ಅಲ್ಲದೆ, ಆತನು ಧರ್ಮಶಾಸ್ತ್ರಕ್ಕೆ ವಿಧೇಯನಾಗುವದರ ಮೂಲಕ ನೀತಿವಂತನೆಂದು ನಿರ್ಣಯಿಸಲ್ಪಡಲಿಲ್ಲ, ಯಾಕೆಂದರೆ, ಅಬ್ರಹಾಮನ ಕಾಲದಲ್ಲಿ ಧರ್ಮಶಾಸ್ತ್ರವು ಇನ್ನೂ ಕೊಡಲ್ಪಟ್ಟಿರಲಿಲ್ಲ (ರೋಮ 4:13). ಧರ್ಮಶಾಸ್ತ್ರವು 430 ವರ್ಷಗಳ ಬಳಿಕ ಮೋಶೆಯ ಕಾಲದಲ್ಲಿ ಮಾತ್ರವೇ ಬಂದಿತು (ವಚನ 17). ಆದದರಿಂದ, ನಂಬಿಕೆಯಿಂದಲೇ ಅಬ್ರಹಾಮನು ನೀತಿವಂತನೆಂದು ನಿರ್ಣಯಿಸಲ್ಪಟ್ಟನು. ಅದೇ ರೀತಿಯಲ್ಲಿ ನಾವು ಸಹ ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ದೇವರ ದೃಷ್ಟಿಯಲ್ಲಿ ನೀತಿವಂತರೆಂದು ನಿರ್ಣಯಿಸಲ್ಪಡಬಲ್ಲೆವು (ಅ.ಕೃತ್ಯ 13:38-39; ರೋಮ 5:1 ನೋಡಿರಿ).

10 ನಾವು ಧರ್ಮಶಾಸ್ತ್ರದಲ್ಲಿ ಬರೆದಿರುವವು ಗಳನ್ನೆಲ್ಲಾ ಕೈಕೊಂಡು ನಡೆಯಿದಿದ್ದರೆ ಆದು ನಮ್ಮನ್ನು ಅಪರಾಧಿಗಳೆಂದು ನಿರ್ಣಯಿಸುತ್ತದೆ (ಯಾಕೋಬ 2:10 ನೋಡಿರಿ). ಆದದರಿಂದ, ನಾವು ಧರ್ಮಶಾಸ್ತ್ರವನ್ನು ಅವಲಂಭಿಸುವದಾದರೆ ಶಾಪಗ್ರಸ್ಥರಾಗುವೆವು – ಅಂದರೆ, ಮರಣದಂಡನೆಗೊಳಗಾಗುವೆವು . ನಾವು ಮರಣದಂಡನೆಯನ್ನು ಹೊಂದುವೆವು .. ಯಾಕೆ? ಯಾಕೆಂದರೆ ಯಾವನೂ ಸಹ ಧರ್ಮಶಾಸ್ತ್ರದಲ್ಲಿರುವದನ್ನೆಲ್ಲಾ ನಿರಂತರವಾಗಿ ತಪ್ಪದೆ ಕೈಕೊಂಡುನಡೆಯುವದಕ್ಕೆ ಸಾಧ್ಯವಿಲ್ಲ. ಪೌಲನು ಇಲ್ಲಿ ಧರ್ಮೋಪದೇಶಕಾಂಡ 27:26 ರಿಂದ ಉಲ್ಲೇಖಿಸುತ್ತಾನೆ.

11 ಯಾವನೂ ಧರ್ಮಶಾಸ್ತ್ರದಿಂದ ನೀತಿವಂತನಾಗುವದಿಲ್ಲ, ಯಾಕೆಂದರೆ ಯಾವನೂ ಅದನ್ನು ಪೂರ್ತಿಯಾಗಿ ಕೈಕೊಂಡು ನಡೆಯಲಾರನು. ಪೌಲನು ಹಳೆ ಒಡಂಬಡಿಕೆಯ ಪ್ರವಾದಿಯಾದ ಹಬಕ್ಕೂಕನ ಮಾತುಗಳಿಂದ ಉಲ್ಲೇಖಿಸುತ್ತಾನೆ: ನೀತಿವಂತನು ನಂಬಿಕೆಯಿಂದಲೇ ಬದುಕುವನು ಹೊರತು ನೇಮನಿಷ್ಟೆಗಳಿಂದಲ್ಲ (ಹಬಕ್ಕೂಕ 2:4; ರೋಮ 1:17).

12 ಇಲ್ಲಿ ಪೌಲನು ಯಾಜಕಕಾಂಡ 18:5 ರಿಂದ ಉಲ್ಲೇಖಿಸುತ್ತಾನೆ. ಅದರ ನೇಮಗಳನ್ನು (ಧರ್ಮಶಾಸ್ತ್ರದ ಕಾರ್ಯಗಳನ್ನು) ಆಚರಿಸಿದವನೇ ಅವುಗಳ ಮೂಲಕ ಬದುಕುವನು (ರೋಮ 10:5 ನೋಡಿರಿ). ಯಾವನಾದರೂ ಧರ್ಮಶಾಸ್ತ್ರಕ್ಕೆ ಪರಿಪೂರ್ಣವಾಗಿ ವಿಧೇಯನಾಗುವದಾದರೆ (ಅದು ಅಸಾಧ್ಯವೇ) ಆತನು ಬದುಕುವನು. ಇಲ್ಲವಾದರೆ, ಆತನು ದಂಡನೆಗೊಳಗಾಗುವನು. ಆದದರಿಂದ ಧರ್ಮಶಾಸ್ತ್ರವು ನಂಬಿಕೆಯ ಮೇಲಲ್ಲ,. ಆದರೆ ಮನುಷ್ಯನ ಕಾರ್ಯಗಳು ಹಾಗು ವಿಧೇಯತೆಯ ಮೇಲೆ ಆಧಾರವಾಗಿರುತ್ತದೆ.

13 ಇಲ್ಲಿ ಪ್ರಸ್ತಾಪಿಸಲಾಗಿರುವ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪವು ಮರಣದಂಡನೆಯಾಗಿದೆ. ಕ್ರಿಸ್ತನು ಮರಣದಂಡನೆಯನ್ನು ತನ್ನ ಮೇಲೆ ಹೊತ್ತುಕೊಳ್ಳುವದರ ಮೂಲಕ ನಮ್ಮನ್ನು ಬಿಡಿಸಿದನು. ದಂಡನೆಯು ನಮ್ಮಿಂದ ತೆಗೆಯಲ್ಪಟ್ಟಿರುವದರಿಂದ ನಾವು ದೇವರ ಮುಂಬಾಗದಲ್ಲಿ ನಿರಪರಾಧಿಗಳೂ ನೀತಿವಂತರೂ ಆಗುತ್ತೇವೆ.

ದೇವರು ಹೇಳುವದೇನೆಂದರೆ: "ಮನುಷ್ಯನು ಪಾಪಕ್ಕಾಗಿ ದಂಡಿಸಲ್ಪಡಲೇಬೇಕು. ನಾನು ಯಾರನ್ನು ಶಿಕ್ಷಿಸಲಿ?" ಯೇಸು ನಮ್ಮ ಸ್ಥಾನದಲ್ಲಿ ನಿಂತುಕೊಂಡು "ಅವರ ಬದಲಾಗಿ ನನ್ನನ್ನು ದಂಡಿಸು. ಅವರು ಬಿಡುಗಡೆ ಹೊಂದಲಿ" ಎಂದು ಹೇಳುತ್ತಾನೆ (ಮಾರ್ಕ 10:45 ನೋಡಿರಿ). ಕ್ರಿಸ್ತನು...ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಇನ್ನೊಂದು ದೃಷ್ಟಾಂತವನ್ನು ಉಪಯೋಗಿಸಿ ನಾವು ಇದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ನಾವು ಒಮ್ಮೆ ದಾಸತ್ವದಲ್ಲಿದ್ದ ದಾಸರಂತಿದ್ದೇವೆ, ಮತ್ತು ಯೆಹೂದ್ಯ ಧರ್ಮಶಾಸ್ತ್ರವು ನಮ್ಮ ಯಜಮಾನನಾಗಿತ್ತು. ನಮಗೆ ಸ್ವಾತಂತ್ರ್ಯವನ್ನು ಒದಗಿಸುವದಕ್ಕಾಗಿ ಬೇರೊಬ್ಬರು ನಮ್ಮ ಯಜಮಾನನಿಗೆ ಒಂದು ಈಡನ್ನು ಅಥವಾ ಬಿಡುಗಡೆ ಹಣವನ್ನು ಕೊಡಬೇಕಾಗಿತ್ತು. ಯೇಸು ನಮಗಾಗಿ ಆ ಬೆಲೆಯನ್ನು ಸಂದಾಯ ಮಾಡಿದನು. ಆತನು ಕೊಟ್ಟ ಈಡು ಆತನ ಸ್ವಂತ ರಕ್ತವೇ, ಅಂದರೆ, ಆತನ ಸ್ವಂತ ಪ್ರಾಣವನ್ನೇಕೊಟ್ಟನು. ಆತನು ನಮಗಾಗಿ ತನ್ನ ಪ್ರಾಣವನ್ನು ಕೊಟ್ಟನು. ಈಗ ನಾವು ಇನ್ನು ಧರ್ಮಶಾಸ್ತ್ರದ ಅಧಿಕಾರಕ್ಕೊಳಪಟ್ಟಿರುವದಿಲ್ಲ; ನಾವು ಕ್ರಿಸ್ತನಿಗೆ ಸೇರಿರುತ್ತೇವೆ. ಆತನು ನಮಗಾಗಿ ಬೆಲೆಯನ್ನು ಸಂದಾಯ ಮಾಡಿದ್ದಾನೆ; ಆತನು ನಮ್ಮನ್ನು ಕೊಂಡುಕೊಂಡನು. ನಾವು ಆತನವರು (1 ಕೊರಿಂಥ 6:19-20, 7:23, 1 ಪೇತ್ರ 1:18-19 ನೋಡಿರಿ). ಪೌಲನು ಇಲ್ಲಿ ಧರ್ಮೋಪದೇಶಕಾಂಡ 21:23 ರಿಂದ ಉಲ್ಲೇಖಿಸುತ್ತಾನೆ. ಇದು ಶಿಲುಬೆಯ ಮೇಲೆ – ಮರಕ್ಕೆ – ಕ್ರಿಸ್ತನು ಸಾಯುವದರ ವಿಷಯದಲ್ಲಿ ಪ್ರವಾದನೆಯಾಗಿದೆ. ಆತನು ತನ್ನ ಮರಣದ ಮೂಲಕ ನಮ್ಮ ನಿಮಿತ್ತ ಶಾಪವಾದನು. ಧರ್ಮೋಪದೇಶಕಾಂಡ ಪುಸ್ತಕವು ಬರೆಯಲ್ಪಡುವ ಸಮಯದಲ್ಲಿ ಅಪರಾಧಿಗಳ ತಮ್ಮ "ಶಾಪ", ಅವಮಾನದ ಗುರುತಾಗಿ ಮರಕ್ಕೆ ತೂಗುಹಾಕಲ್ಪಡುತ್ತಿದ್ದರು. ಕ್ರಿಸ್ತನು ಮರಕ್ಕೆ ಬದಲಾಗಿ ಮರದಶಿಲುಬೆಯ ಮೇಲೆ ತೂಗಹಾಕಲ್ಪಟ್ಟನು, ಹೇಗಿದ್ದರೂ ಸೂತ್ರವು ಒಂದೇ ಆಗಿದೆ.[17]

14 ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದ ಕಾರಣದಿಂದ (ವಚನ 13), ಆದಿಕಾಂಡ 12:3 ರಲ್ಲಿ ಅಬ್ರಹಾಮನಿಗೆ ವಾಗ್ದಾನಮಾಡಲ್ಪಟ್ಟ ಆಶೀರ್ವಾದವು ಹಳೆ ಒಡಂಬಡಿಕೆಯ ಕಾಲದಲ್ಲಿ ನೆರವೇರಲೇ ಇಲ್ಲ. ಆದರೆ ಕ್ರಿಸ್ತನು ಬಂದು ಶಾಪವನ್ನು ತೆಗೆದುಬಿಟ್ಟನು. ಈಗ ಶಿಲುಬೆಯ ಮೇಲಿನ ಕ್ರಿಸ್ತನ ಯಜ್ಞದ ಕಾರಣದಿಂದ ನಾವು ಆತನಲ್ಲಿ ನಂಬಿಕೆಯಿಡುವದರ ಮೂಲಕ ಅಬ್ರಹಾಮನಿಗೆ ವಾಗ್ದಾನ ಮಾಡಲ್ಪಟ್ಟ ಆಶೀರ್ವಾದಗಳನ್ನು ಪಡೆದುಕೊಳ್ಳಬಹುದು. ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ನಾವು ಅಬ್ರಹಾಮನ ನಿಜವಾದ ಮಕ್ಕಳು ಮಾತ್ರವೇ ಆಗುವದಿಲ್ಲ; ನಾವು ದೇವರ ನಿಜವಾದ ಮಕ್ಕಳು ಸಹ ಆಗುತ್ತೇವೆ (ರೋಮ 8:16). ಅದು ಮಾತ್ರವಲ್ಲದೆ ನಾವು ಪವಿತ್ರಾತ್ಮನ ವಾಗ್ದಾನವನ್ನು ಸಹ ಪಡೆದುಕೊಳ್ಳುತ್ತೇವೆ. ಆತನು ನಮಗಾಗಿ ಪರಲೋಕದಲ್ಲಿ ಇಡಲ್ಪಟ್ಟಿರುವ ಬಾಧ್ಯತೆಗೆ ಮುಂಗಡದಂತೆ ಇರುತ್ತಾನೆ(2 ಕೊರಿಂಥ 1:21-22, 5:5, ಎಫೆಸ್ 1:13-14 ನೋಡಿರಿ).

ಈ ವಚನದಿಂದ ನಾವು ಅಬ್ರಹಾಮನಿಗೆ ಮತ್ತು ಆತನ ಸಂತತಿಯವರಿಗೆ ದೇವರು ಮಾಡಿದ ವಾಗ್ದಾನವೇನೆಂಬದನ್ನು ತಿಳಿಯಬಹುದು. ಅದು ರಕ್ಷಣೆಯೇ. ಇದು ಪವಿತ್ರಾತ್ಮನ ಮೂಲಕ ಕ್ರಿಸ್ತನಲ್ಲಿ ನೂತನ ಆತ್ಮೀಕ ಜೀವನವಾಗಿದೆ, ಇದು ನಾವು ನಂಬುವ ಕ್ಷಣದಿಂದಲೇ ಪ್ರಾರಂಭವಾಗಿ ಎಂದಿಗೂ ಅಂತ್ಯವಾಗದೆ ನೂತನ ಜೀವವಾಗಿದೆ.

## ಧರ್ಮಶಾಸ್ತ್ರ ಮತ್ತು ವಾಗ್ದಾನ (3:15-20)

15 ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವನ್ನು ಬಣ್ಣಿಸುವದಕ್ಕಾಗಿ ಪೌಲನು ಜೀವನದಿಂದ ಬಂದು ಸಾಧಾರಣ ದೃಷ್ಟಾಂತವನ್ನು ಉಪಯೋಗಿಸುತ್ತಾನೆ. ಮನುಷ್ಯರು ಒಬ್ಬರೊಂದಿಗೊಬ್ಬರು ವಿವಿಧ ಒಡಂಬಡಿಕೆಗಳನ್ನು ಮಾಡುತ್ತಾರೆ. ಒಮ್ಮೆ ಒಡಂಬಡಿಕೆಯು ಮಾಡಲ್ಪಟ್ಟಿತ್ತೆಂದರೆ ಅದು ರದ್ದು ಮಾಡಲ್ಪಡುವದಿಲ್ಲ, ಅದು ಸ್ಥಿರಪಡಿಸಲ್ಪಡುತ್ತದೆ. ಆದನ್ನು ಸುಲಭವಾಗಿ ಮಾರ್ಪಡಿಸಲು ಸಾಧ್ಯವಿಲ್ಲ.

16 ಅದೇ ರೀತಿಯಲ್ಲಿ, ದೇವರು ಅಬ್ರಹಾಮನೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡನು. ದೇವರು ಅಬ್ರಹಾಮನಿಗೂ ಅವನ ಸಂತತಿಗೂ ಖಚಿತವಾದ ವಾಗ್ದಾನಗಳನ್ನು ಮಾಡಿದನು. ಆ ವಾಗ್ದಾನವೇನೆಂದರೆ ಅಬ್ರಹಾಮನ

ಸಂತತಿಯವರು ರಕ್ಷಣೆಯನ್ನು ಪವಿತ್ರಾತ್ಮನನ್ನೂ ಹೊಂದಿಕೊಳ್ಳುವರು ಎಂಬದೇ. ಆದದರಿಂದ, ಸಂತತಿಯೆಂದರೆ ಕ್ರಿಸ್ತನು ಹಾಗು ಆತನಲ್ಲಿ ತಮ್ಮ ನಂಬಿಕೆಯನ್ನಿಡುವ ಎಲ್ಲರೂ ಆಗಿದ್ದಾರೆ. ಕ್ರಿಸ್ತನು ಜೇಷ್ಠ ಪು ತ್ರನು, ನೂತನ ಆತ್ಮೀಕ ಕುಟುಂಬದ ಅಥವಾ ಜನಾಂಗದ ಪ್ರಥಮ ಫಲ ಆಗಿದ್ದಾನೆ (ರೋಮ 8:29; 1 ಕೊರಿಂಥ 15:20 ನೋಡಿರಿ). ವಾಗ್ದಾನಗಳು ಎಲ್ಲಾ ಸಂತತಿಗೂ, ಅಂದರೆ, ಅಬ್ರಹಾಮನ ಎಲ್ಲಾ ಸ್ವಾಭಾವಿಕ ಸಂತಾನದವರಿಗೂ – ಮಾಡಲ್ಪಡಲಿಲ್ಲ, ಆದರೆ ಕ್ರಿಸ್ತನಿಗೆ ಮತ್ತು ಕ್ರಿಸ್ತನ ಮುಖಾಂತರ ಆತನಲ್ಲಿ ನಂಬಿಕೆಯನ್ನಿಡುವವರಿಗೆ ಮಾತ್ರವೇ ಮಾಡಲ್ಪಟ್ಟವು. ದೇವರು ಅಬ್ರಹಾಮನಿಗೆ ಹೇಳಿದ್ದೇನೆಂದರೆ: ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದವುಂಟಾಗುವದು (ಆದಿಕಾಂಡ 22:18) ಆದ್ದರಿಂದ ಕ್ರಿಸ್ತನಲ್ಲಿ ದೇವರು ಅಬ್ರಹಾಮನಿಗೆ ನೀಡಿದ ವಾಗ್ದಾನವು ನೆರವೇರಿತು.

17 ಇಲ್ಲಿ ಪೌಲನು ತನ್ನ ಮುಖ್ಯ ವಿಷಯವನ್ನು ವ್ಯಕ್ತಪಡಿಸುತ್ತಾನೆ. ಧರ್ಮಶಾಸ್ತ್ರವು ಪರಿಚಯಿಸಲ್ಪಡುವದಕ್ಕೆ 430 ವರ್ಷಗಳ ಮುಂಚೆಯೇ ದೇವರು ಅಬ್ರಹಾಮನಿಗೆ ರಕ್ಷಣೆಯ ವಾಗ್ದಾನವನ್ನು ನೀಡಿದನು (ವಿಮೋಚನಕಾಂಡ 12:40). ಹಾಗಾದರೆ, ಗಲಾತ್ಯದಲ್ಲಿನ ಯೆಹೂದ್ಯ ಬೋಧಕರು ರಕ್ಷಣೆಯ ವಾಗ್ದಾನವು ಯಾವ ವಿಧದಲ್ಲಿಯೂ ಧರ್ಮಶಾಸ್ತ್ರದ ಮೇಲೆ ಆಧಾರವಾಗಿರುವದಿಲ್ಲ; ಅಲ್ಲದೆ ಧರ್ಮಶಾಸ್ತ್ರದ ಬರುವಿಕೆಯು ಯಾವದೇ ರೀತಿಯಲ್ಲಿಯೂ ವಾಗ್ದಾನದ ಮೇಲೆ ಪರಿಣಾಮವನ್ನು ಬೀರುವದೂ ಇಲ್ಲ.

18 ಬಾಧ್ಯತೆಯನ್ನು (ಅಂದರೆ, ರಕ್ಷಣೆಯನ್ನು) ಹೊಂದಿಕೊಳ್ಳಲು ಧರ್ಮಶಾಸ್ತ್ರವು ಅವಶ್ಯಕವಾಗಿರುವದಾದರೆ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವು ವ್ಯರ್ಥವಾಗುತ್ತದೆ. ರಕ್ಷಮೆಯನ್ನು ಪಡೆದುಕೊಳ್ಳುವದಕ್ಕೆ ಧರ್ಮಶಾಸ್ತ್ರವು ಅವಶ್ಯಕವಾಗಿರುವದಾದರೆ ದೇವರು ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯು ಮಾರ್ಪಡಿಸಲ್ಪಡುತ್ತದೆ – ವಾಸ್ತವದಲ್ಲಿ, ರದ್ದಾಗುತ್ತದೆ. ಆದರೆ ಅದನ್ನು ಮಾಡುವದು ಅಸಾಧ್ಯ (ವಚನ 5). ದೇವರ ವಾಗ್ದಾನವನ್ನು ಎಂದಿಗೂ ರದ್ದು ಮಾಡಲು ಸಾಧ್ಯವಿಲ್ಲ. ದೇವರು ಅಬ್ರಹಾಮನಿಗೂ ಆತನ ಆತ್ಮೀಕ ಸಂತತಿಯವರಿಗೂ ಆತ್ಮೀಕ ಬಾಧ್ಯತೆಯನ್ನು (ರಕ್ಷಣೆಯನ್ನು) ಅನಂತರದಲ್ಲಿ ಬರಲಿದ್ದ ಧರ್ಮಶಾಸ್ತ್ರದ ಮುಖಾಂತರಕೊಡಲಿಲ್ಲ, ಆದರೆ ದೇವರ ಕೃಪೆಯಿಂದ ಉಂಟಾದ ವಾಗ್ದಾನದ ಮೂಲಕವಾಗಿಯೇ ದಯಪಾಲಿಸಿದನು ಮತ್ತು ಅದು ನಂಬಿಕೆಯ ಮುಖಾಂತರಪಡೆದು ಕೊಳ್ಳಲ್ಪಡುತ್ತದೆ ಎಂಬದಾಗಿ ಪೌಲನು ಹೇಳುತ್ತಿದ್ದಾನೆ (ರೋಮ 4:14, 16 ನೋಡಿರಿ). ರಕ್ಷಣೆಯು ಮನುಷ್ಯನಿಗೆ ಕೃಪೆಯಿಂದಲೇ ಕೊಡಲ್ಪಟ್ಟಿದೆ. ನಾವು ಅದನ್ನು ಯೆಹೂದ್ಯ ಧರ್ಮಶಾಸ್ತ್ರ ಅಥವಾ ಇತರ ಯಾವದೇ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದರಿಂದ ಸಂಪಾದಿಸಿಕೊಳ್ಳಲು ಸಾಧ್ಯವಿಲ್ಲ (ರೋಮ 11:6 ನೋಡಿರಿ).

19 ಆದದರಿಂದ, ಧರ್ಮಶಾಸ್ತ್ರದ ಉದ್ದೇಶವೇನು? ಎಂದು ಕೇಳುವದು ಸ್ವಾಭಾವಿಕವಾದದ್ದು. ಅದು ಇಂಥಿಂಥದು ಅಪರಾಧವೆಂದು ತೋರಿಸುವದಕ್ಕಾಗಿ ಕೊಡಲ್ಪಟ್ಟಿತು. ಪಾಪವನ್ನು ಬೆಳಕಿಗೆ ತರುವದಕ್ಕಾಗಿ ಧರ್ಮಶಾಸ್ತ್ರವು ದೇವರಿಂದ ಕೊಡಲ್ಪಟ್ಟಿತು (ರೋಮ 5:20 ಮತ್ತು ವ್ಯಾಖ್ಯಾನವನ್ನು ನೋಡಿರಿ). ಧರ್ಮಶಾಸ್ತ್ರವು ಕೊಡಲ್ಪಡುವದಕ್ಕೆ ಮುಂಚೆ ಮನುಷ್ಯನು ಗುರುತಿಸದಿದ್ದ ಪಾಪಗಳಿದ್ದವು, ಉದಾಹರಣೆಗೆ, ಆಶಿಸುವದು. ಮಾನವರೆಲ್ಲರೂ ತಮ್ಮ ಪಾಪಗಳನ್ನು ಕಾಣುವಂತಾಗಬೇಕೆಂದು, ಪ್ರತಿಯೊಬ್ಬ ಮಾನವನು ತಾನೊಬ್ಬ ಪಾಪಿಯೆಂಬದನ್ನು ಅರ್ಥಮಾಡಿಕೊಳ್ಳುವಂತಾಗಬೇಕೆಂದು ದೇವರು ಧರ್ಮಶಾಸ್ತ್ರವನ್ನು ಕೊಟ್ಟನು (ರೋಮ 3:20, 7:7 ನೋಡಿರಿ).

ಮಾನವನು ತನ್ನನ್ನು ರಕ್ಷಿಸಿಕೊಳ್ಳಲಾರನು ಇಲ್ಲವೆ ತನ್ನನ್ನು ನೀತಿವಂತನನ್ನಾಗಿಯೂ ಮಾಡಿಕೊಳ್ಳಲಾರನೆಂಬದನ್ನು ಧರ್ಮಶಾಸ್ತ್ರವು ಸ್ಪಷ್ಟವಾಗಿ ತೋರ್ಪಡಿಸಿತು. ಎಲ್ಲಾ ಮಾನವರಿಗೆ ರಕ್ಷಕನೊಬ್ಬನ, ಅಂದರೆ ಕ್ರಿಸ್ತನ ಅಗ್ಯತೆಯಿದೆಂಬದನ್ನು ಧರ್ಮಶಾಸ್ತ್ರವು ತೋರಿಸಿತು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಧರ್ಮಶಾಸ್ತ್ರವು ಕ್ರಿಸ್ತನೆಡೆಗೆ ಬೆರಳುಮಾಡುತ್ತಾ ವಾಗ್ದಾನದಲ್ಲಿ ಸೂಚಿತನಾದವನು (ಕ್ರಿಸ್ತನು) ಹುಟ್ಟಿಬರುವ ತನಕ ಕ್ರಿಯಾಶೀಲವಾಗಿತ್ತು. ಕ್ರಿಸ್ತನು ಬಂದ ಬಳಿಕ ಇನ್ನು ಧರ್ಮಶಾಸ್ತ್ರವು ಅವಶ್ಯಕವಾಗಿರಲಿಲ್ಲ.

ಹಾಗಿದ್ದರೂ, ಧರ್ಮಶಾಸ್ತ್ರವು ಒಂದು ಪ್ರಾಮುಖ್ಯವಾದ ಕಾರ್ಯದಲ್ಲಿ ಮುಂದು ವರೆಯುತ್ತದೆ: ಅದು ಪಾಪ ಏನೆಂಬದನ್ನು ನಮಗೆ ತೋರಿಸುತ್ತದೆ. ಯೇಸು ತಾನೇ ತನ್ನ ಬಹುಪಾಲು ಬೋಧನೆಗೆ ಯೆಹೂದ್ಯ ಧರ್ಮಶಾಸ್ತ್ರವನ್ನು ಆಧಾರಮಾಡಿಕೊಂಡನು (ಮತ್ತಾಯ 5:21-22, 27-28, 38-39, 43-44 ನೋಡಿರಿ).

ಧರ್ಮಶಾಸ್ತ್ರವು ವಾಗ್ದಾನದ ಮುಂದೆ ಅಲ್ಪವಾಗಿರುತ್ತದೆ. ಧರ್ಮಶಾಸ್ತ್ರವು ತಾತ್ಕಾಲಿಕವಾಗಿತ್ತು. ಅದು ಕ್ರಿಸ್ತನ ಬರೋಣದ ತನಕ ಮಾತ್ರವೇ ಜಾರಿಯಲ್ಲಿತ್ತು. ಈ ಕ್ರಿಸ್ತನು ನಮ್ಮನ್ನು ದಂಡನೆಯಿಂದ, ಧರ್ಮಶಾಸ್ತ್ರದ ಶಾಪದೊಳಗಿಂದ ರಕ್ಷಿಸಿರುತ್ತಾನೆ.

ಧರ್ಮಶಾಸ್ತ್ರವು ವಾಗ್ದಾನದ ಹಾಗೆ ದೇವರಿಂದ ನೇರವಾಗಿ ಮನುಷ್ಯನಿಗೆ ಕೊಡಲ್ಪಟ್ಟಿರಲಿಲ್ಲ. ಧರ್ಮಶಾಸ್ತ್ರವು ದೇವದೂತನ ಸಹಾಯದೊಂದಿಗೆ ಮಧ್ಯಸ್ಥನಿಗೆ – ಅಂದರೆ, ಮೋಶೆಗೆ [18] – ಕೊಡಲ್ಪಟ್ಟಿತ್ತು (ವಿಮೋಚನಕಾಂಡ 31:18; ಅ.ಕೃತ್ಯ 7:53). ಆದ್ದರಿಂದ, ವಾಗ್ದಾನವು ನೇರವಾಗಿ ದೇವರಿಂದ (ಒಬ್ಬ ಮನುಷ್ಯನ ಮುಖಾಂತರ ಬರದೆ) ಬಂದದ್ದರಿಂದ ಇದು ಮೋಶೆ ಹಾಗು ದೇವದೂತನ ಮೂಲಕ ಬಂದ ಧರ್ಮಶಾಸ್ತ್ರಕ್ಕಿಂತಲೂ ಶ್ರೇಷ್ಠವಾದದ್ದಾಗಿದೆ.

20 ಮಧ್ಯಸ್ಥನು ಒಬ್ಬ ಪಕ್ಷವನ್ನಲ್ಲ, ಆದರೆ ಎರಡು ಪಕ್ಷಗಳನ್ನು ಪ್ರತಿನಿಧಿಸುತ್ತಾನೆ. ಮಧ್ಯಸ್ಥನು ಎರಡೂ ಪಕ್ಷಗಳ ಪರವನ್ನು ವಹಿಸಿಕೊಂಡು ಅವರನ್ನು ಒಂದು ಒಪ್ಪಂದಕ್ಕೆ ಬರುವಂತೆ ಸಹಾಯ ಮಾಡುತ್ತಾನೆ. ಧರ್ಮಶಾಸ್ತ್ರವು ಮಧ್ಯಸ್ಥನಾದ

ಮೋಶೆಯ ಮುಖಾಂತರ ಯೆಹೂದ್ಯರಿಗೆ ಕೊಡಲ್ಪಡುವದು ಎರಡು ಪಕ್ಷಗಳ ನಡುವಿನ ಒಂದು ಒಪ್ಪಂದದ ಹಾಗಿತ್ತು. ದೇವರು ಧರ್ಮಶಾಸ್ತ್ರವನ್ನು ಕೊಟ್ಟನು, ಮನುಷ್ಯನು ಅದಕ್ಕೆ ವಿಧೇಯನಾಗಬೇಕಿತ್ತು. ದೇವರು ಒಂದು ಕಾರ್ಯವನ್ನು ಮಾಡಿದನು, ಮತ್ತು ಮನುಷ್ಯನು ಅದಕ್ಕೆ ಪ್ರತಿಯಾಗಿ ಒಂದು ಕಾರ್ಯವನ್ನು ಮಾಡಬೇಕಾಗಿತ್ತು – ಅಂದರೆ, ವಿಧೇಯನಾಗಬೇಕಿತ್ತು. ಒಡಂಬಡಿಕೆಯು ಮಾಡಲ್ಪಡಬೇಕಾದರೆ ಎರಡೂ ಪಕ್ಷಗಳು ಪಾಲ್ಗೊಳ್ಳಬೇಕು. ಹೀಗೆ ಮನುಷ್ಯ ಹಾಗು ದೇವರ ನಡುವೆ ಹಳೆ ಒಡಂಬಡಿಕೆಯು ಒಬ್ಬ ಮಧ್ಯಸ್ಥನು (ಮೋಶೆಯು) ಅಗತ್ಯವಾಗಿತ್ತು. ಆದರೆ ವಾಗ್ದಾನವು ಒಂದು ಒಡಂಬಡಿಕೆ ಅಥವಾ ಒಪ್ಪಂದದಿಂದ ವ್ಯತ್ಯಾಸವಾಗಿದೆ. ವಾಗ್ದಾನ ವೊಂದು ಮಾಡಲ್ಪಡಬೇಕಾದರೆ, ಒಂದು ಪಕ್ಷದ – ಅಂದರೆ, ದೇವರ ಅವಸ್ಯಕತೆ ಮಾತ್ರವೇ ಇರುತ್ತದೆ. ದೇವರು ವಾಗ್ದಾನವೊಂದನ್ನು ಮಾಡುವಾಗ ಆತನು ಒಬ್ಬನೇ ಕ್ರಿಯಾಶೀಲನಾಗುತ್ತಾನೆ. ಆತನು ವಾಗ್ದಾನವನ್ನು ಉಚಿತವಾಗಿ ಕೊಡುವನು. ಪು ರುಷ ಮತ್ತು ಸ್ತ್ರೀಯರು ಮಾಡಬೇಕಾದದ್ದು ಇಷ್ಟೇ ಏನೆಂದರೆ ಅವರು ಅದನ್ನು ಸ್ವೀಕರಿಸಬೇಕು. ಯಾವದೇ ಮಾನವನ ಅಥವಾ ದೇವದೂತರ ಮಧ್ಯಸ್ಥಿಕೆಯಿಲ್ಲದೆ [19] ದೇವರು ನಮ್ಮ ಬಳಿಗೆ ಬಂದು ರಕ್ಷಮೆ ಹಾಗು ಪವಿತ್ರಾತ್ಮನ ವಾಗ್ದಾನವನ್ನು ನೀಡುತ್ತಾನೆ. ಮತ್ತು ಪವಿತ್ರಾತ್ಮನ ಮೂಲಕ, ಅಂದರೆ, ನಮ್ಮಲ್ಲಿ ವಾಸಿಸುವ ಕ್ರಿಸ್ತನ ಮೂಲಕ ನಾವು ಧರ್ಮಶಾಸ್ತ್ರಕ್ಕೆ ವಿಧೇಯರಾಗಲು ಬಲವನ್ನು ಪಡೆದುಕೊಳ್ಳುವೆವು. ವಾಗ್ದಾನದ ಜೊತೆಯಲ್ಲಿ ಬಲವೂ ಬರುತ್ತದೆ.

## ಧರ್ಮಶಾಸ್ತ್ರದ ಉದ್ದೇಶ (3:21-29)

**21** ಧರ್ಮಶಾಸ್ತ್ರವು ವಾಗ್ದಾನವನ್ನು ವಿರೋಧಿಸುವದಿಲ್ಲ. ಧರ್ಮಶಾಸ್ತ್ರ ಮತ್ತು ವಾಗ್ದಾನದ ನಡುವೆ ಇರುವ ಒಂದೇ ವ್ಯತ್ಯಾಸವೇನೆಂದರೆ: ಧರ್ಮಶಾಸ್ತ್ರಕ್ಕೆ ಯಾವ ಬಲವಿರುವದಿಲ್ಲ. ಆದರೆ ವಾಗ್ದಾನಕ್ಕೆ ಇರುತ್ತದೆ. ಧರ್ಮಶಾಸ್ತ್ರವು ಬದುಕಿಸುವದಕ್ಕೆ ಶಕ್ತವಾಗಿರುವದಿಲ್ಲ. ಆದರೆ ವಾಗ್ದಾನವು ಶಕ್ತವಾಗಿರುತ್ತದೆ. ಬದುಕಿಸುವದು ಎಂದರೆ ಜೀವವನ್ನು ನೀಡುವದೆಂದು ಅರ್ಥವಾಗಿದೆ – ಆತ್ಮೀಕವಾಗಿದೆ. ಒಂದು ವೇಳೆ ಧರ್ಮಶಾಸ್ತ್ರವು ನಮಗೆ ಆತ್ಮೀಕ ಜೀವ ಹಾಗು ಬಲವನ್ನು ಕೊಡುವದಕ್ಕೆ ಶಕ್ತವಾಗಿರುತ್ತಿದ್ದರೆ ನಾವು ಧರ್ಮಶಾಸ್ತ್ರದ ಮೂಲಕ ನೀತಿವಂತರಾಗಬಹುದಾಗಿತ್ತು. ಆದರೆ ಧರ್ಮಶಾಸ್ತ್ರಕ್ಕೆ ಸಾಧ್ಯವಾಗಲಿಲ್ಲ (ರೋಮ 8:3 ನೋಡಿರಿ). ಮತ್ತು ಧರ್ಮಶಾಸ್ತ್ರವು ಜೀವವನ್ನು ಬಲವನ್ನೂ ನೀಡಲಾಗಲಿಲ್ಲ ವಾದ್ದರಿಂದ ಯಾವನೂ ಅದನ್ನು ಪಾಲಿಸುವದರಿಂದ ನೀತಿವಂತನಾಗಲಿಲ್ಲ. ಕೃಪೆಯಿಂದಲೇ ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ಒಬ್ಬನು ದೇವರ ದೃಷ್ಟಿಯಲ್ಲಿ ನೀತಿವಂತನಾಗಿ ಮಾಡಲ್ಪಟ್ಟು ರಕ್ಷಣೆಯನ್ನು ಹೊಂದಿಕೊಳ್ಳಬಲ್ಲನು (ಎಫೆಸ 2:8).

**22** ಆದರೆ ಶಾಸ್ತ್ರವು (ದೇವರು) ಸಮಸ್ತವನ್ನೂ (ಎಲ್ಲಾ ಮಾನವ ಜನಾಂಗ) ಪಾಪಕ್ಕೊಳಗಾಗಿದೆಯೆಂದು ತೀರ್ಮಾನಿಸಿತು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಮನುಷ್ಯರು ದೇವರ ವಿರುದ್ಧವಾಗಿ ನಡೆದದ್ದರಿಂದ ಆತನು ಅವರನ್ನು ಪಾಪದ ದಾಸತ್ವಕ್ಕೊಳ ಪಡಿಸಿದನು (ರೋಮ 3:9-10; 11:32). ಮಾನವರು ದೇವರ ವಿರುಧ್ಧವಾಗಿ ಪಾಪ ಮಾಡಿದ್ದರಿಂದ ಆತನು ಅವರನ್ನು ಧರ್ಮಶಾಸ್ತ್ರದ ಮೂಲಕ ಅಪರಾಧಿಗಳೆಂದು ನಿರ್ಣಯಿಸಿದನು. ಆದರೆ ಈಗ ದೇವರು ಮಾನವನಿಗೆ ತಪ್ಪಿಸಿಕೊಳ್ಳುವ ಒಂದು ಮಾರ್ಗವನ್ನು, ರಕ್ಷಣೆಯವಾಗ್ದಾನವನ್ನು ನೀಡಿರುತ್ತಾನೆ, ನಾವು ಆವಾಗ್ದಾನವನ್ನು ಕ್ರಿಸ್ತನಲ್ಲಿ ನಂಬಿಕೆಯಿಡುವದ ಮೂಲಕ ಹೊಂದುತ್ತೇವೆ.ಆದದರಿಂದ, ಗಲಾತ್ಯದಲ್ಲಿನ ಯೆಹೂದ್ಯ ಬೋಧಕರು ಧರ್ಮಶಾಸ್ತ್ರವನ್ನು ಅನುಸರಿಸುವದೇ ರಕ್ಷಣೆಯ ಮಾರ್ಗವೆಂದು ಹೇಗೆ ಹೇಳಬಲ್ಲರು? ಧರ್ಮಶಾಸ್ತ್ರವು ಕೇವಲ ದಂಡನೆಯನ್ನು ನೀಡುತ್ತದೆ (ರೋಮ 7:10) ಅವರ ಬೋಧನೆಯು ಸತ್ಯಕ್ಕೆ ತದ್ವಿರುದ್ಧವಾಗಿರುತ್ತದೆ.

**23** ಪೌಲನು ಇಲ್ಲಿ 22ನೇ ವಚನದ ವಿಚಾರವನ್ನು ಪು ನರಾವರ್ತಿಸುತ್ತಾನೆ. ಈ ಕ್ರಿಸ್ತನಂಬಿಕೆಯ ಕಾಲ (ಕ್ರಿಸ್ತನ ಸುವಾರ್ತೆಯು) ಬರುವದಕ್ಕೆ ಮೊದಲು ನಾವು ....ಧರ್ಮಶಾಸ್ತ್ರದ ಕೈಕೆಳಗೆ ಕಾವಲಲ್ಲಿ ಮುಚ್ಚಲ್ಪಟ್ಟಿದ್ದೆವು (ಬಂಧಿಗಳಾಗಿದ್ದೇವು). ಪೌಲನು 22ನೇ ವಚನದಲ್ಲಿ ನಾವು ಪಾಪಕ್ಕೊಳಗಾಗಿದ್ದೇವು ಎಂದು ಹೇಳಿದನು. ಅರ್ಥವು ಒಂದೇ ಆಗಿದೆ: ಧರ್ಮಶಾಸ್ತ್ರದ ಬಂಧಿಗಳಾಗಿರುವದು ಹಾಗು ಪಾಪದ ಬಂಧಿಗಳಾಗಿರುವದು ಒಂದೇ ಸಂಗತಿಯಾಗಿದೆ. ಪಾಪ ಮತ್ತು ಧರ್ಮಶಾಸ್ತ್ರಗಳು ಒಟ್ಟಾಗಿ ಕಾರ್ಯಮಾಡಿ ನಮ್ಮನ್ನು ದಂಡನೆಗೆ ಗುರಿಮಾಡುತ್ತವೆ. ಪಾಪವು ಧರ್ಮಶಾಸ್ತ್ರದ ಬಲವನ್ನು ಪಡೆಯುತ್ತದೆ (ರೋಮ 7:8-11; 1 ಕೊರಿಂಥ 15:56 ನೋಡಿರಿ).

**25** ಈಗ ಸುವಾರ್ತೆ ಬಂದು ನಾವು ಯೇಸುವನ್ನು ನಂಬಿದ್ದೇವೆ. ನಮಗೆ ಧರ್ಮಕಾಸ್ತ್ರದ ಅಗತ್ಯತೆ ಅಂದರೆ ಮೇಲ್ವಿಚಾರಕನು ಬೇಕಾಗಿಲ್ಲ.

**24** ಮಾನವನ ಪಾಪದ ಕಾರಣ ದಿಂದಾಗಿ ಆತನು ಮತ್ತೊಬ್ಬರ ಹತೋಟಿಯಲ್ಲಿರುವದು ಅವಶ್ಯಕವಾಗಿತ್ತು. ಪೌಲನ ಕಾಲದಲ್ಲಿ ಶ್ರೀಮಂತ ಕುಟುಂಬಗಳು ತಮ್ಮ ಮಕ್ಕಳನ್ನು ನೋಡಿಕೊಳ್ಳುವದಕ್ಕಾಗಿ ವಿಶೇಷ ಉಪಾಧ್ಯಾಯರನ್ನು ಅಥವಾ ಮೇಲ್ವಿಚಾರಕರನ್ನು ಬಾಡಿಗೆಗೆ ತೆಗೆದುಕೊಳ್ಳುತ್ತಿದ್ದರು. ಮಕ್ಕಳು ಮೇಲ್ವಿಚಾರಕರ ಅಧಿಕಾರದಡಿಯಲ್ಲಿ ಇಡಲ್ಪಡುತ್ತಿದ್ದರು. ಅದೇ ವಿಧದಲ್ಲಿ, ಧರ್ಮಶಾಸ್ತ್ರವು ನಮ್ಮ ಮೇಲ್ವಿಚಾರಕನಂತೆ ನೇಮಿಸಲ್ಪಟ್ಟಿತ್ತು; ಅದು ನಮ್ಮನ್ನು ನೋಡಿಕೊಳ್ಳುವದಾಗಿತ್ತು. ಮೇಲ್ವಿಚಾರಕನು (ಪಾರುಪತ್ಯಗಾರನು) ತನ್ನ ಅಧೀನದಲ್ಲಿರುವ ಮಕ್ಕಳನ್ನು ನಾವು ಕ್ರಿಸ್ತನಲ್ಲಿ ನಂಬಿಕೆಯಿಟ್ಟಿರುವದರಿಂದ ಇನ್ನೂ ನಾವು ಧರ್ಮಶಾಸ್ತ್ರದ ಕೈಕೆಳಗಿರುವವರಲ್ಲ – ಅಂದರೆ, ಅಂದರೆ, ಇನ್ನು ನಮಗೆ ಮೇಲ್ವಿಚಾರಕನ ಅಗತ್ಯವಿರುವದಿಲ್ಲ.

**26** ಪೌಲನ ಕಾಲದಲ್ಲಿ ಮಗನೊಬ್ಬನು ತನ್ನ ಸರಿಯಾದ ವಯಸ್ಸಿಗೆ ಬರುವತನಕ ಮಗನಾಗಿ ತನ್ನ ಪೂರ್ಣ ಹಕ್ಕು ಹಾಗು ಅಧಿಕಾರವನ್ನು ಪಡೆಯುತ್ತಿರಲಿಲ್ಲ. ಅದಕ್ಕೆ ಮುಂಚೆ ಆತನು ಮೇಲ್ವಿಚಾರಕನ ಅಧೀನದಲ್ಲಿ ಉಳಿಯುತ್ತಿದ್ದನು (ಗಲಾತ್ಯ 4:1-2). ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟಿರುವವರು ವಯಸ್ಸಿಗೆ ಬಂದಿರುವ ಮಕ್ಕಳಂತಿರುತ್ತಾರೆ; ಈಗ ಅವರು ಸಂಪೂರ್ಣವಾಗಿ ಮಕ್ಕಳಾಗಿರುತ್ತಾರೆ. ಅವರು ದೇವರ ಪುತ್ರರಾಗಿರುತ್ತಾರೆ (ಯೋಹಾನ 1:12-13; ಗಲಾತ್ಯ 4:7). ಪೌಲನು ಗಲಾತ್ಯದ ಕ್ರೈಸ್ತರಿಗೆ ಹೇಳುವದೇನೆಂದರೆ: ನೀವೆಲ್ಲರು ...ದೇವರ ಪುತ್ರರಾಗಿದ್ದೀರಿ – ನೀವು ಯೆಹೂದ್ಯ. ಅಥವಾ ಅನ್ಯಜನಾಂಗದವರು, ದಾಸನು ಅಥವಾ ಸ್ವತಂತ್ರ, ಗಂಡು ಅಥವಾ ಹೆಣ್ಣು ಎಂಬ ಬೇಧವಿಲ್ಲದೆ ದೇವರ ಪುತ್ರರು (ವಚನ 28 ನೋಡಿರಿ).

**27** ನಾವು ವಯಸ್ಸಿಗೆ ಬಂದು ಪೂರ್ಣ ಪುತ್ರರಾಗುವಾಗ ನಮ್ಮ ಹಳೆಯ ವಿಧ್ಯಾರ್ಥಿ ಸಮವಸ್ತ್ರವನ್ನು ತೆಗೆದು ಬಿಟ್ಟು ಹೊಸ ವಸ್ತ್ರವನ್ನು ಧರಿಸಿಕೊಳ್ಳುತ್ತೇವೆ. ಅದೇ ರೀತಿಯಲ್ಲಿ, ನಾವು ಕ್ರಿಸ್ತನನ್ನು ನಂಬುವಾಗ ನಮ್ಮ ಹಳೆ ವಸ್ತ್ರಗಳನ್ನು ತೆಗೆದು ಹಾಕಿ ಕ್ರಿಸ್ತನನ್ನು ಧರಿಸಿಕೊಳ್ಳುತ್ತೇವೆ – ಅಂದರೆ, ನಾವು ಆತನ ನೀತಿಯನ್ನು ಧರಿಸಿಕೊಳ್ಳುತ್ತೇವೆ. ನಾವು ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ ಕ್ರಿಸ್ತನನ್ನೂ ಧರಿಸಿಕೊಂಡವರಾಗಿತ್ತೇವೆ. ಇದೇ ದೀಕ್ಷಾಸ್ನಾದ ನಿಜವಾದ ಅರ್ಥವಾಗಿದೆ. ನಾವು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ ನಮ್ಮ ಪೂರ್ವ ಪಾಪಾರ್ಧಿನ ಸ್ವಭಾವವನ್ನು ತೆಗೆದು ಬಿಟ್ಟು ನೂತನ ಸ್ವಭಾವವನ್ನು, ಕ್ರಿಸ್ತನಲ್ಲಿ ನೂತನ ಆತ್ಮೀಕ ಜೀವಿತವನ್ನು ಧರಿಸಿಕೊಳ್ಳುತ್ತೇವೆ (ರೋಮ 6:3-4, 6; 2 ಕೊರಿಂಥ 5:17; ಎಫೆಸ 4:22-24 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**28** ಹಾಗಾದರೆ, ಯಾರು ನಂಬಿಕೆಯಲ್ಲಿ ಕ್ರಿಸ್ತನ ಬಳಿಗೆ ಬರಬಹುದು? ಎಲ್ಲರೂ ಬರಬಹುದು. ಆತ್ಮೀಕವಾಗಿ ಜನರ ನಡುವೆ ಯಾವ ವ್ಯತ್ಯಾಸವಿರುವದಿಲ್ಲ. ಎಲ್ಲರೂ ನಂಬಿಕೆಯ ಮೂಲಕ ದೇವರ ಪುತ್ರ ಹಾಗು ಪುತ್ರಿಯರಾಗುವದಕ್ಕೆ ಸಮಾನವಾದ ಅವಕಾಶವಿರುತ್ತದೆ. ಮತ್ತು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ, ನಾವು ಕ್ರಿಸ್ತನನ್ನು ಧರಿಸಿಕೊಂಡಾಗ ಒಂದೇ ಕುಟುಂಬ, ಅಲ್ಲದೆ ಒಂದೇ ದೇಹವಾಗುತ್ತೇವೆ (1 ಕೊರಿಂಥ 12:13 ಮತ್ತು ವ್ಯಾಖ್ಯಾನ ನೋಡಿರಿ). ನಾವೆಲ್ಲರೂ – ಯೆಹೂದ್ಯನು, ಗ್ರೀಕನು, ಆಳು, ಒಡೆಯ, ಗಂಡು ಮತ್ತು ಹೆಣ್ಣು – ಕ್ರಿಸ್ತ ಯೇಸುವಿನಲ್ಲಿ ಒಂದೇ: ಆಗಿರುವೆವು. ಪೌಲನ ಕಾಲದಲ್ಲಿ ಯೆಹೂದ್ಯ ಮತ್ತು ಅನ್ಯಜನಾಂಗದವನ, ಒಡೆಯ ಹಾಗು ಆಳು, ಪುರುಷರ ಮತ್ತು ಸ್ತ್ರೀಯರ ನಡುವೆ ಇದ್ದ ಒಂದು ದೊಡ್ಡ ವ್ಯತ್ಯಾಸದ ಬಗ್ಗೆ ಯೋಚಿಸಿರಿ. ಯೆಹೂದ್ಯರು ಅನ್ಯಜನರನ್ನು ಉದಾಸೀನ ಮಾಡುತ್ತಿದ್ದರು; ಆಳುಗಳು ಒಡೆಯನ ದಬ್ಬಾಳಿಕೆಗೊಳಗಾಗಿದ್ದರು; ಪುರುಷರು ಸ್ತ್ರೀಯರನ್ನು ಕೀಳಾಗಿ ಕಾಣುತ್ತಿದ್ದರು, ಅವರನ್ನು ತಮಗಿಂತ ಅಲ್ಪರಾದವರೆಂದು ಎಣಿಸುತ್ತಿದ್ದರು. ಆದಾಗ್ಯು ಕ್ರಿಸ್ತನಲ್ಲಿ ಅವರಾರೊಳಗೂ ಬೇಧವಿರಲಿಲ್ಲ. ಕ್ರಿಸ್ತನಲ್ಲಿ ಎಲ್ಲರೂ ಒಂದಾದರು (ಕೊಲೊಸ್ಸೆ 3:9-11 ನೋಡಿರಿ).

ಕ್ರೈಸ್ತರೊಳಗೆ ಮೇಲ್ಜಾತಿ ಹಾಗು ಕೀಳು ಜಾತಿನಡುವೆ, ಶ್ರೀಮಂತರು ಹಾಗು ಬಡವರ ನಡುವೆ, ಪರದೇಶಿಯ ಹಾಗು ದೇಶಿಯರ ನಡುವೆಯಾವ ಬೇಧವೂ ಇರಲಾರದು. ನಾವು ನಮ್ಮ ಸಭೆಗಳಲ್ಲಿ ನಮ್ಮ ಕುರಿತು ನೋಡುವಾಗ ನಾವು ಈ ಯಾವದೇ ಬೇಧಗಳನ್ನು ಕಾಣುತ್ತೇವೋ? ಸ್ತ್ರೀಯರು ಪುರುಷರಷ್ಟೇಯೇ ಗೌರವಿಸಲ್ಪಡುತ್ತಾರೋ? ದೇಶಿಯರು "ಇದು ನಮ್ಮ ಸಭೆ; ಪರದೇಶಿಯನು ಕೇವಲ ಅಥಿತಿಯಾಗಿದ್ದಾನೆ" ಎಂದು ಹೇಳುತ್ತಾರೋ? ಆದರೆ, ಅಂಥ ಬೇಧಗಳು ಇರಬಾರದು. ಸಭೆಯು ಒಂದು ಅಥವಾ ಇನ್ನೊಂದು ಗುಂಪಿಗೆ ಸಂಬಂಧಪಟ್ಟಿರುವದಿಲ್ಲ; ಅದು ಕ್ರಿಸ್ತನಿಗೆ ಸೇರಿರುತ್ತದೆ! ಸಭೆಯು ಕ್ರಿಸ್ತನ ದೇಹವಾಗಿದೆ (1 ಕೊರಿಂಥ 12:27; ಎಫೆಸ 1:22-23). ಪ್ರತಿಯೊಂದು ಸ್ಥಳೀಯ ಸಭೆಯಲ್ಲಿ ನಾವೆಲ್ಲರೂ ಕ್ರಿಸ್ತನಲ್ಲಿ ಒಂದೇ ಆಗಿದ್ದೇವೆ. ಮೇಲ್ಜಾತಿ ಹಾಗು ಕೀಳು ಜಾತಿ, ಪರದೇಶಿ. ಹಾಗು ದೇಶಿಯನ ನಡುವೆ ವ್ಯತ್ಯಾಸವೇಲ್ಲಿದೆ? ನಮ್ಮ ಪೌರತ್ವವು ಪರಲೋಕದಲ್ಲಿ ರುತ್ತದೆ ಹೊರತು ಈ ಲೋಕದಲ್ಲಿ ಅಲ್ಲ. ಪರಲೋಕದಲ್ಲಿ ಯಾವದೇ ಜಾತಿ ಗಳೆಂಬುದಾಗಲಿ, ಪರದೇಶಿಗಳೆಂಬದಾಗಲಿ ಇರುವದಿಲ್ಲ. ನಾವು ಈ ಯಾವದೇ ಬೇಧಗಳನ್ನು ನಮ್ಮ ಸಭೆಯಲ್ಲಿ ಉಳಿಯುವಂತೆ ಬಿಡುವದಾದರೆ ನಾವು ಕ್ರಿಸ್ತನ ದೇಹವನ್ನು ಭಾಗಭಾಗಗಳಾಗಿ ಇಬ್ಭಾಗಿಸಿದ ಅಪರಾಧಕ್ಕೊಳಗಾದವರಾಗುತ್ತೇವೆ.

**29** ಕ್ರಿಸ್ತನು ಅಬ್ರಹಾಮನ ನಿಜವಾದ ಸಂತತಿಯಾಗಿದ್ದಾನೆ (ವಚನ 16). ಆದದರಿಂದ, ಕ್ರಿಸ್ತನಲ್ಲಿ ನಂಬಿಕೆಯಿಡುವಾಗ ನಾವು ಸಹ ಅಬ್ರಹಾಮನ ನಿಜವಾದ ಸಂತತಿಯಾಗುತ್ತೇವೆ (ವಚನ 7). ನಾವು ಬಾಧ್ಯರು – ಕ್ರಿಸ್ತನ ಜೊತೆಯಲ್ಲಿ ಬಾಧ್ಯರು – ಆಗುತ್ತೇವೆ (ರೋಮ 8:17). ನಾವು ವಾಗ್ದಾನಕ್ಕೆ – ರಕ್ಷಣೆಯ, ನಿತ್ಯಜೀವದ ವಾಗ್ದಾನಕ್ಕೆ ಬಾಧ್ಯರಾಗುತ್ತೇವೆ.

---

## ಅಧ್ಯಾಯ - 4

### ನಂಬಿಕೆಯ ಮೂಲಕ ಬಾಧ್ಯರು (4:1-7)

**1-2** ಪೌಲನ ಕಾಲದಲ್ಲಿ ವಯಸ್ಸಿಗೆ ಬರದ ಬಾಧ್ಯಸ್ಥನು ಮನೆಯವರ ಆಳಿಗಿಂತಲೂ ಹೆಚ್ಚು ಅಧಿಕಾರವನ್ನೇನು ಹೊಂದಿದನಾಗಿರುತ್ತಿರಲಿಲ್ಲ. ಆತನು ಸಂಪೂರ್ಣವಾಗಿ ಪಾಲಕರ ಮತ್ತು ಮನೆವಾರ್ತೆಯವರ ಕೈಕೆಳಗೆ ಉಳಿಯುತ್ತಿದ್ದನು.

**3** ಕ್ರಿಸ್ತನು ಬರುವದಕ್ಕೆ ಮುಂಚೆ ನಾವು ಸಹ ಲೋಕದವರ ಬಾಲಬೋಧಗೆ ಅಧೀನರಾಗಿದ್ದೇವು. ಅಂದರೆ, ನಾವು ಲೋಕದ ನಂಬಿಕೆಗಳು ಹಾಗು ಅನುಚಾರಗಳಿಗೆ ಅಧೀನರಾಗಿದ್ದೇವು; ವಾಸ್ತವದಲ್ಲಿ, ನಾವು ಸೈತಾನ ಹಾಗು ಆತನ ದುರಾತ್ಮಗಳಿಗೆ

ದಾಸರಾಗಿದ್ದೇವು (ಗಲಾತ್ಯ 3:23; ಕೊಲೊಸ್ಸೆ 2:20). ನಾವು ವಯಸ್ಸಿಗೆ ಬಾರದ ಬಾಧ್ಯಸ್ಥರಂತಿದ್ದೇವು. ನಾವು "ಪಾಲಿಕನ", ಅಂದರೆ, ಧರ್ಮಶಾಸ್ತ್ರದ ಕೈಕೆಳಗಿದ್ದೇವು. ಆದರೆ ಅದೇ ವೇಳೆಯಲ್ಲಿ ನಾವು ಲೋಕದವರ ಬಾಲಬೋಧೆಗೆ ಅಧೀನರಾಗಿದ್ದೇವು.

ಪೌಲನು ಇಲ್ಲಿ ಪ್ರಸ್ತಾಪಿಸುವ ಬಾಲಬೋಧೆಯು ಮಾನವನ ಎಲ್ಲಾ ಆಚಾರಗಳು, ಸಂಪ್ರದಾಯಗಳು, ಹಾಗು ಪದ್ಧತಿಗಳು ಆಗಿವೆ. ಇದರೊಳಗೆ ವಿಗ್ರಹರಾಧನೆ, ಹಾಗು ಮನುಷ್ಯರಿಂದ ಸ್ಥಾಪಿಸಲ್ಪಟ್ಟ ಎಲ್ಲಾ ಧಾರ್ಮಿಕ ನೇಮನಿಷ್ಠೆಗಳು ಹಾಗು ನೀತಿಸೂತ್ರಗಳೂ ಸೇರಿರುತ್ತವೆ. ಅಲ್ಲದೆ ಇದರಲ್ಲಿ ಮನುಷ್ಯನ ಎಲ್ಲಾ ಧರ್ಮಶಾಸ್ತ್ರದ ಕಾರ್ಯಗಳು ಹಾಗು ತನ್ನಷ್ಟಕ್ಕೆ ತಾನೇ ಪರಿಶುದ್ಧಕ್ಕಾಗಿ ಮಾಡುವ ಆತನ ಎಲ್ಲಾ ಪ್ರಯತ್ನಗಳೂ ಸೇರಿರುತ್ತವೆ. ಹಾಗು ಇದರೊಂದಿಗೆ ದುರಾತ್ಮಗಳು ಸಹ ಸೇರಿರುತ್ತವೆ, ಅವುಗಳ ದಾಸತ್ವಕ್ಕೊಳಗಾಗಿಯೇ ಮಾನವನು ಆ ಎಲ್ಲಾ ಕಾರ್ಯಗಳನ್ನು ಮಾಡುತ್ತಾನೆ (ಗಲಾತ್ಯ 4:8-9; ಎಫೆಸ 2:1-2 ನೋಡಿರಿ).

4 ಆದೆರ ಕಾಲವು ಪರಿಪೂರ್ಣವಾದಾಗ – ಅಂದರೆ, ಬಾಧ್ಯಸ್ಥರಾದ ನಾವು ವಯಸ್ಸಿಗೆ ಬಂದಾಗ – ದೇವರು ತನ್ನ ಮಗನನ್ನು ಕಳುಸಿಸಿಕೊಟ್ಟನು, ಅಂದರೆ, ಕ್ರಿಸ್ತನನ್ನು ಕಳುಹಿಸಿಕೊಟ್ಟನು (ರೋಮ 5:6 ನೋಡಿರಿ), ಕ್ರಿಸ್ತನು ನಮ್ಮಹಾಗೆಯೇ ಸ್ತ್ರೀಯಲ್ಲಿ ಹುಟ್ಟಿದವನಾಗಿದ್ದನು (ಮತ್ತಾಯ 1: 18; ಫಿಲಿಪ್ಪಿ 2:6-8 ನೋಡಿರಿ). ಆತನು ಮಾನವನ ಎಲ್ಲಾ ಶೋಧನೆಗಳನ್ನೂ ಬಲಹೀನತೆಯಗಳನ್ನೂ ಅನುಭವಿಸಿದನು (ಇಬ್ರಿಯ 2:15, 18; 4;15). ಆತನು ಧರ್ಮಶಾಸ್ತ್ರಾಧೀನನಾಗಿ ಹುಟ್ಟಿದನು. ಧರ್ಮಶಾಸ್ತ್ರವನ್ನು ದಯಪಾಲಿಸಿದ ದೇವರು ಮನುಷ್ಯನಾಗಿ ಲೋಕಕ್ಕೆ ಬಂದು ತನ್ನನ್ನು ತನ್ನ ಸ್ವಂತ ಧರ್ಮಶಾಸ್ತ್ರಕ್ಕೆ ಅಧೀನ ಪಡಿಸಿಕೊಂಡನು. ಈ ವಿಧದಲ್ಲಿ ಆತನು ಧರ್ಮಶಾಸ್ತ್ರವನ್ನು ಸಂಪೂರ್ಣವಾಗಿ ನೆರವೇರಿಸುವದಕ್ಕೆ ಶಕ್ತನಾಗಿದ್ದನು.

ಅದು ಮಾತ್ರವಲ್ಲದೆ, ಆತನು ಧರ್ಮಶಾಸ್ತ್ರಕ್ಕನುಸಾರವಾಗಿ ನಮ್ಮ ಪಾಪಗಳಿಗಾಗಿ ಈಡನ್ನು ಸಹ ಕೊಟ್ಟನು. ಆ ಈಡು ಏನೆಂದರೆ ಆತನ ಸ್ವಪ್ರಾಣವೇ – ಯಾಕೆಂದರೆ ಪಾಪದ ಸಂಬಳ ಮರಣ ಈಗಿದೆ (ರೋಮ 6;23).

5 ದೇವರು ತನ್ನ ಮಗನನ್ನು ಏಕೆ ಕಳುಹಿಸಿದನು/ ಆತನು ಅವನನ್ನು ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂದು – ಅಂದರೆ, ಲೋಕದವರ ಬಲಬೋಧೆಗೆ ಅದೀನರಾದ ಯೆಹೂದ್ಯರು ಹಾಗು ಅನ್ಯಜನರು ಇಬ್ಬರನ್ನು ವಿಮೋಚಿಸುವದಕ್ಕಾಗಿ – ಕಳುಹಿಸಿದನು. ಒಮ್ಮೆ ನಾವು ದಾಸರಂತಿದ್ದೇವು, ಮತ್ತು ಇಹಲೋಕಾಧಿಪತಿಯಾದ ಸೈತಾನನು ನಮ್ಮ ಯಜಮಾನನಾಗಿದ್ದನು (ಯೋಹಾನ 12:31). ಆದದರಿಂದ, ನಾವು ಸೈತಾನನ ಸೊತ್ತಾಗಿದ್ದದರಿಂದ ಕ್ರಿಸ್ತನು ನಮ್ಮನ್ನು ಸೈತಾನನಿಂದ ವಿಮೋಚಿಸುವದಕ್ಕಾಗಿ ಬೆಲೆಯನ್ನು ನೀಡಬೇಕಾಯಿತು (ಗಲಾತ್ಯ 3:13).

ಆದರೆ ಕ್ರಿಸ್ತನು ನಮ್ಮನ್ನು "ಕೊಂಡುಕೊಳ್ಳುವಾಗ" ಇನ್ನು ನಾವು ಮೊದಲಿನಂತೆ ದಾಸರಾಗಿರುವದಿಲ್ಲ. ನಾವು ಕ್ರಿಸ್ತನ ಸಹೋದರರು ಹಾಗು ಸಹೋದರಿಯರು ಆಗುತ್ತೇವೆ, ಅಂದರೆ, ದೇವರ ಪುತ್ರರಾಗಿ ಸ್ವೀಕರಿಸಲ್ಪಟ್ಟವರೂ ಬಾಧ್ಯರೂ ಆಗುತ್ತೇವೆ (ಎಫೆಸ 1:5; 1 ಯೋಹಾನ 3;1).

ದೇವರ ಪುತ್ರರಾಗಿ ಸ್ವೀಕರಿಸಲ್ಪಡುವದೆಂದರೇನು/ ಒಬ್ಬ ದತ್ತು ಪುತ್ರನು ತನ್ನ ಸ್ವಾಭಾವಿಕ ತಂದೆಯಲ್ಲದ ಒಬ್ಬನಿಗೆ ಬಾಧ್ಯಸ್ಥನಾಗಿ ಮಾಡಲ್ಪಟ್ಟವನಾಗಿರುತ್ತಾನೆ. ಆತನು ಇನ್ನೊಬ್ಬ ವ್ಯಕ್ತಿಯ ಸ್ವಾಭಾವಿಕ ಪುತ್ರನಾಗಿದ್ದರೂ ದತ್ತು ಪುತ್ರನು ತನ್ನ ನೂತನ ತಂದೆಯ ಪೂರ್ಣ ಸ್ವಾಸ್ತ್ಯವನ್ನು ಪಡೆಯುತ್ತಾನೆ.

ಆದೇ ರೀತಿಯಾಗಿ ಒಂದು ಆತ್ಮೀಕ ಅರ್ಥದಲ್ಲಿ ಕ್ರಿಸ್ತನ ವಿಶ್ವಾಸಿಗಳು ಸಹ ದತ್ತು ಮಕ್ಕಳಾಗಿದ್ದಾರೆ. ಮೊದಲನೆಯದಾಗಿ, ಶಾರೀರಿಕ ಸಂಬಂಧದ ಅನುಸಾರವಾಗಿ ಅಲ್ಲ, ಆದರೆ ಆತ್ಮನಿಗನುಸಾರವಾಗಿಯೇ. ನಾವು ಪೂರ್ಣವಾಗಿ ಪುತ್ರರ ಪದವಿಯನ್ನು ಹೊಂದಿದವರಾಗಿದ್ದೇವೆ – ಅಂದರೆ, ನಾವು ದತ್ತು ಪುತ್ರರಾಗಿರುತ್ತೇವೆ (ಯೋಹಾನ 1:12-13 ನೋಡಿರಿ).

ಇಲ್ಲಿ ನಾವು ಒಂದು ಸಂಗತಿಯನ್ನು ಜ್ಞಾಪಕದಲ್ಲಿಟ್ಟುಕೊಳ್ಳೋಣ. ನಾವು ಲೋಕದವರ ಬಾಲಬೋಧೆಯನ್ನು ಸೈತಾನನ ರಾಜ್ಯವನ್ನು ಬಿಡುವದಕ್ಕೆ ತೀರ್ಮಾನಿಸಿಕೊಳ್ಳದಿರುವದಾದರೆ ಕ್ರಿಸ್ತನು ನಮ್ಮನ್ನು ಕೊಂಡು ಕೊಳ್ಳುವದಿಲ್ಲ. ಆತನು ನಂಬಿಕೆಯಲ್ಲಿ ತನ್ನೆಡೆಗೆ ತಿರಿಗಿಕೊಳ್ಳುವವರನ್ನು ಮಾತ್ರವೇ ವಿಮೋಚಿಸುವನು. ಜನರು ತಮ್ಮ ಚಿತ್ತಕ್ಕೆ ವಿರುದ್ಧವಾಗಿ ಆತನ ರಾಜ್ಯವನ್ನು ಪ್ರವೇಶಿಸಬೇಕೆಂದು ಆತನು ಎಂದಿಗೂ ಒತ್ತಾಯವನ್ನು ಮಾಡುವದಿಲ್ಲ.

6 ದತ್ತು ಪುತ್ರರಾದ ಬಳಿಕ ನಮ್ಮ ಸ್ವಾಸ್ತ್ಯವೇನು/ ನಮ್ಮ ಸ್ವಾಸ್ತ್ಯವು ಪರಲೋಕಲ್ಲಿರುವ ನಿತ್ಯಜೀವವೇ. ನಾವು ಈ ಜೀವನದಲ್ಲಿ ಸಹ ಯಾವದಾದರೂ ಸ್ವಾಸ್ತ್ಯವನ್ನು ಪಡೆಯುತ್ತೇವೋ/ ಹೌದು, ಈಗ ನಾವು ಪವಿತ್ರಾತ್ಮನನ್ನು ನಮ್ಮ ಪೂರ್ಣ ಸ್ವಾಸ್ತ್ಯಕ್ಕೆ ಒಂದು ಮುಂಗಡ ಎಂಬಂತೆ ಪಡೆದುಕೊಳ್ಳುತ್ತೇವೆ. ಮತ್ತು ಪವಿತ್ರಾತ್ಮನು ಪರಲೋಕದಲ್ಲಿನ ನಮ್ಮ ಸ್ವಾಸ್ತ್ಯಕ್ಕೆ ಮುಂಗಡ ಮಾತ್ರವೇ ಅಲ್ಲ; ನಾವು ಹೇಗೆ ಮತ್ತು ಸದಾಕಾಲವು ದೇವರ ದತ್ತು ಮಕ್ಕಳು ಎಂಬುದಕ್ಕೆ ಸಾಕ್ಷಿ ನೀಡುವ ಒಂದು ಗುರುತೂ, ಮುದ್ರೆಯೂ ಆತನಾಗಿದ್ದಾನೆ (2 ಕೊರಿಂಥ 1:21-22 ಎಫೆಸ 1:13-14 ನೋಡಿರಿ).

ಕ್ರಿಸ್ತನು ನಮ್ಮನ್ನು ವಿಮೋಚಿಸಿದ ತಕ್ಷಣವೇ ದೇವರು ತನ್ನ ಮಗನ ಆತ್ಮನನ್ನು (ಪವಿತ್ರಾತ್ಮನನ್ನು) ನಮ್ಮ ಹೃದಯಗಳಲ್ಲಿ ಕಳುಹಿಸಿಕೊಡುತ್ತಾನೆ. ರಕ್ಷಣೆಯನ್ನು ಹೊಂದಿಕೊಳ್ಳುವದು, ದೇವರ ದತ್ತು ಪುತ್ರರಾಗುವದು, ಪವಿತ್ರಾತ್ಮನನ್ನು ಪಡೆದುಕೊಳ್ಳುವದು ಇವುಗಳೆಲ್ಲವೂ ಯಾವಾಗಲೂ ಒಟ್ಟಾಗಿ ಸಾಗುತ್ತವೆ. ಅವೆಲ್ಲವೂ ಒಂದೇ ರಕ್ಷಣೆಯ ನೋಟಗಳಾಗಿವೆ. ಪವಿತ್ರಾತ್ಮನ ಮೂಲಕವಾಗಿ ನಾವು ದೇವರ ಮಕ್ಕಳಾಗಿದ್ದೇವೆಂಬದನ್ನು ತಂದೆಯು ಪ್ರಸನ್ನತೆಯನ್ನು ನಮ್ಮ ಜೀವಿತಗಳಲ್ಲಿ ವಯಕ್ತಿಕವಾಗಿ ಅನುಭವಿಸುತ್ತೇವೆ ನಾವು ಆತನನ್ನು "ಅಪ್ಪಾ[20] ತಂದೆಯೇ" ಎಂದು ಕೂಗಬಹುದು. ನಮ್ಮ ಹೃದಯಗಳಲ್ಲಿ

ಪವಿತ್ರಾತ್ಮನು ನೀಡುವ ಸಾಕ್ಷಿಯ ಕಾರಣದಿಂದ ನಾವು ಪೂರ್ಣವಾಗಿ ದೇವರ ಮಕ್ಕಳೆಂಬುದರಲ್ಲಿ ನಮಗೆ ಯಾವ ಸಂಶಯವೂ ಇರುವದಿಲ್ಲ (ರೋಮ 8:14-16 ನೋಡಿರಿ).

7 ಪವಿತ್ರಾತ್ಮನು (ಕ್ರಿಸ್ತನ ಆತ್ಮನು) ನಮ್ಮ ಹೃದಯಗಳನ್ನು ಪ್ರವೇಶಿಸುವ ಕ್ಷಣದಲ್ಲಿಯೇ ನಾವು ಬಿಡುಗಡೆಗೊಳ್ಳುತ್ತೇವೆ. ನಾವು ಇನ್ನು ದಾಸರಲ್ಲ; ಆದರೆ ಪುತ್ರರಾಗಿರುತ್ತೇವೆ. ಮತ್ತು ನಾವು ಪುತ್ರರಾಗಿದ್ದರೆ ಬಾಧ್ಯರೂ ಆಗಿರುತ್ತೇವೆ (ರೋಮ 8:17). ದೇವರ ಸೂತ್ರಗಳ ಅಪಾರತೆಯ ಬಗ್ಗೆ ಯೋಚಿಸಿರಿ. ಮತ್ತು ನಾವು ಅವುಗಳಿಗೆ ಬಾಧ್ಯರಾಗಿರುತ್ತೇವೆ! ಸ್ವತಃ ದೇವರ ದತ್ತು ಪುತ್ರ ಅಥವಾ ಪುತ್ರಿಯಾಗಿರುವದು ಎಂದರೇನೆಂಬದನ್ನು ಒಂದು ಕ್ಷಣ ಆಲೋಚಿಸಿಕೊಳ್ಳೋಣ. ಇದು ದೇವರು ನಮಗೆ ಕೊಡುವ ಎಲ್ಲ ಆಶೀರ್ವಾದಗಳಲ್ಲಿ ಅತ್ಯುನ್ನತವಾಗಿದೆ. ಕೆಲವು ಜನರು ಮಾನವರೆಲ್ಲರೂ ದೇವರ ಮಕ್ಕಳೆಂದು ನಂಬುತ್ತಾರೆ, ಆದರೆ ಇದು ಸತ್ಯವಾದದ್ದಲ್ಲ. ದೇವರು ಎಲ್ಲಾ ಮಾನವರ ಸೃಷ್ಟಿಕರ್ತನೆಂಬದು, ನಿಜವೇ, ಆದರೆ ಆತನು ಮಾನವರೆಲ್ಲರ ತಂದೆಯಲ್ಲ. ಕ್ರಿಸ್ತನಲ್ಲಿ ನಂಬಿಕೆಯಿಡುವವರು ಮಾತ್ರವೇ ನ್ಯಾಯ ಸಮ್ಮತವಾಗಿ ದೇವರನ್ನು ತಮ್ಮ ತಂದೆ ಎಂದು ಕರೆಯಬಹುದು (ಯೋಹಾನ 1:12-13; ಗಲಾತ್ಯ 3;16 ನೋಡಿರಿ).

ಬೇರೆ ಯಾವದೇ ಧರ್ಮದಲ್ಲಿಯೂ ದೇವರು ತಂದೆಯೆಂಬದಾಗಿ ಕರೆಯಲ್ಪಟ್ಟಿರುವದಿಲ್ಲ. ಇತರ ದರ್ಮಗಳ ಅನುಯಾಯಿಗಳು ದೇವರನ್ನು ಪೂರ್ಣವಾಗಿ ತಿಳುಕೊಳ್ಳಲಾರರು, ಯಾಕೆಂದರೆ ಅವರು ಆತನನ್ನು ತಂದೆಯಾಗಿ ತಿಳುಕೊಂಡವರಾಗಿರುವದಿಲ್ಲ. ಹೌದು, ಅವರು ದೇವರನ್ನು ಜೀವಸ್ವರೂಪನೂ, ಪರಿಶುದ್ಧನೂ, ಸರ್ವಶಕ್ತನೂ, ಸರ್ವಜ್ಞಾನಿಯೂ, ಎಂದು ಬಲ್ಲರೆಂಬದು ನಿಜವೇ. ಆದರೆ ದೇವರು ಇದೆಲ್ಲಕ್ಕಿಂತಲೂ ಹೆಚ್ಚಾದವನಾಗಿದ್ದಾನೆ. ದೇವರು ನಮ್ಮ ಪ್ರೀತಿಸ್ವರೂಪ ಹಾಗು ಕರುಣೆಯುಳ್ಳ ಪರಲೋಕ ತಂದೆ ಸಹ ಆಗಿದ್ದಾನೆ. ಮತ್ತು ಕ್ರಿಸ್ತನಲ್ಲಿ ನಂಬುವವರಾದ ನಾವು ಆತನ ಮಕ್ಕಳಾಗಿದ್ದೇವೆ.

## ಗಲಾತ್ಯದವರಿಗಾಗಿ ಪೌಲನ ಚಿಂತನೆ (4:8-20)

**8-9** ಗಲಾತ್ಯದವರು ಪೂರ್ವಕಾಲದಲ್ಲಿ ಸೈತಾನ ಹಾಗು ಆತನ ದುರಾತ್ಮಗಳಿಗೆ ದಾಸರಾಗಿದ್ದರು. ಅವರು ದೇವರಲ್ಲದವುಗಳಾಗಿದ್ದ ವಿಗ್ರಹಗಳನ್ನು ಆರಾಧಿಸುತ್ತಿದ್ದರು (1 ಕೊರಿಂಥ 8:4), ಮತ್ತು ಆ ವಿಗ್ರಹಗಳು ಅವರ ಕೂಗನ್ನು ಕೇಳಲಾಗಲಿ. ಅವರಿಗೆ ಯಾವದೇ ರೀತಿಯಲ್ಲಿ ಸಹಾಯ ಮಾಡಲಾಗಲಿ ಅಶಕ್ತವಾಗಿದ್ದವು ಅವರು ಲೋಕದವರ ಬಾಲಬೋಧೆಗೆ ಅಧೀನರಾಗಿದ್ದರು (ವಚನ 3).

ಆದರೆ ಈಗ ಅವರು ನಿಜವಾದ ಜೀವಸ್ವರೂಪ ದೇವರನ್ನು ತಿಳುಕೊಂಡವರಾಗಿದ್ದಾರೆ. ಆತನು ಅವರ ತಂದೆಯಾಗಿದ್ದಾನೆ. ಆತನು ಅವರನ್ನು ತನ್ನ ಸ್ವಂತ ಮಕ್ಕಳನ್ನಾಗಿಯೂ ತನ್ನ ಎಲ್ಲಾ ಆತ್ಮೀಕ ಸೂತ್ರಗಳಿಗೆ ಬಾಧ್ಯಸ್ಥರನ್ನಾಗಿಯೂ ಮಾಡಿರುತ್ತಾನೆ. ಆತನು ಅವರಿಗೆ ಸ್ವಾತಂತ್ರ್ಯವನ್ನು ಕೊಟ್ಟಿರುತ್ತಾನೆ. ಆತನು ಅವರಿಗೆ ನಿತ್ಯಜೀವವನ್ನು ಕೊಟ್ಟಿರುತ್ತಾನೆ. ಹಾಗಾದರೆ ಗಲಾತ್ಯದವರು ವಿಮುಖರಾಗಿ ಪುನಃ ತಮ್ಮನ್ನು ರಕ್ಷಿಸಲು ಶಕ್ತಿಯಿಲ್ಲದ ಈ ಕೆಲಸಕ್ಕೆ ಬಾರದ ದರಿದ್ರ ಬಾಲಬೋಧೆಗೆ (ವಚನ 9) ಅದೀರನ್ನಾಗಿಮಾಡಿಕೊಳ್ಳುವದು ಹೇಗೆ ಸಾಧ್ಯ/ (ಕೊಲೊಸ್ಸೆ 2:8 ನೋಡಿರಿ). ಪೌಲನು ಇಲ್ಲಿ ಪ್ರಸ್ತಾಪಿಸುವ ಕೆಲಸಕ್ಕೆ ಬಾರದ ದರಿದ್ರ ಬಾಲಬೋಧೆ 3ನೇ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟ ಲೋಕದವರ ಬಾಲಬೋಧೆ ಎರಡೂ ಒಂದೇ ಆಗಿದೆ. ವಿಶೇಷವಾಗಿ ಪೌಲನು ಇಲ್ಲಿ ಯೆಹೂದ್ಯ ಧರ್ಮಶಾಸ್ತ್ರದ ಆಚಾರಬದ್ಧ ನೇಮನಿಷ್ಠೆಗಳ ಕುರಿತಾಗಿ ಯೋಚಿಸುತ್ತಿದ್ದಾನೆ.

ಇಲ್ಲಿ ಒಂದು ಪ್ರಾಮುಖ್ಯವಾದ ಪ್ರಶ್ನೆ ಉದ್ಭವಿಸುತ್ತದೆ. ಜನರು ದೇವರನ್ನು ಮೆಚ್ಚಿಸುವದಕ್ಕೆ ಅಪೇಕ್ಷಿಸಲು ಕಾರಣವೇನು? ಇತರ ಧರ್ಮಗಳ ಅನುಯಾಯಿಗಳು ತಮಗಾಗಿ ಆಶೀರ್ವಾದಗಳನ್ನು ಹೊಂದಿಕೊಳ್ಳುವದಕ್ಕಾಗಿ ದೇವರನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸುತ್ತಾರೆ. ಆದರೆ ಕ್ರಿಸ್ತನ ವಿಶ್ವಾಸಿಗಳಾದ ನಾವು ಈಗಾಗಲೇ ಆತನು ನೀಡಿರುವ ಆಶೀರ್ವಾದಗಳಿಗಾಗಿ ಆತನನ್ನು ಮೆಚ್ಚಿಸುವದಕ್ಕೆ ಅಪೇಕ್ಷಿಸುತ್ತೇವೆ. ನಾವು ಆತನ ಮಕ್ಕಳಾಗಿರುವದರಿಂದ ಆತನಂತೆ ನಡೆದುಕೊಳ್ಳಲು ಇಚ್ಚಿಸುತ್ತೇವೆ. ಪೌಲನು ಎಫೆಸದವರಿಗೆ ಬರೆದದ್ದೇನೆಂದರೆಟ ... ನೀವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದೀರಿ. ಬೆಳಕಿನವರಂತೆ ನಡೆದುಕೊಳ್ಳಿರಿ (ಎಫೆಸ 5:8). ಇದರ ಮೂಲಕ ನಾವು ಕ್ರೈಸ್ತ ಧರ್ಮ ಹಾಗು ಇತರ ಎಲ್ಲಾ ಧರ್ಮಗಳ ನಡುವಿನ ವ್ಯತ್ಯಾಸವನ್ನು ಕಾಣಬಹುದು. ಇತರ ಧರ್ಮಗಳು ಹೇಳುವದೇನೆಂದರೆ; ನೀವು ರಕ್ಷಣೆ ಹೊಂದಬೇಕೆಂಬದಾಗಿ ವಿಧೇಯರಾಗಿರಿ" ಎಂದು ಹೇಳುತ್ತದೆ. ಒಂದು ಕಡೆಯಲ್ಲಿ, ಜನರು ದೇವರಿಂದ ಯಾವದಾದರೂ ಲಾಭವನ್ನು ಪಡೆದುಕೊಳ್ಳುವದಕ್ಕಾಗಿ ವಿಧೇಯರಾಗುತ್ತಾರೆ. ಇನ್ನೊಂದು ಕಡೆಯಲ್ಲಿ, ಕ್ರೈಸ್ತರು ಈಗಾಗಲೇ ಪ್ರಯೋಜನವನ್ನು ಪಡೆದವರಾಗಿ ತಮ್ಮ ಕೃತಜ್ಞತೆಯನ್ನು ತೋರ್ಪಡಿಸುವದಕ್ಕೆ ದೇವರಿಗೆ ವಿಧೇಯರಾಗುತ್ತಾರೆ.

ಆದರೆ ಇತರ ಧರ್ಮಗಳ ಅನುಯಾಯಿಗಳು ಮಾರ್ಗತಪ್ಪಿಸಲ್ಪಟ್ಟಿರುತ್ತಾರೆ, ಯಾಕೆಂದರೆ ಧಾರ್ಮಿಕ ನೇಮನಿಷ್ಠೆಗಳನ್ನು ಅನುರಿಸುವದರಿಂದ ಮನುಷ್ಯನು ರಕ್ಷಣೆ ಹೊಂದುವದಕ್ಕೆ ಅಸಾಧ್ಯವಾಗಿದೆ. ಒಂದು ಧರ್ಮವನ್ನು ಅನುಸರಿಸುವದರ ಮೂಲಕ ರಕ್ಷಣೆಯನ್ನು ಹೊಂದುವದಕ್ಕೆ ಪ್ರಯತ್ನಿಸುವದು ನಿಷ್ಪ್ರಯೋಜಕರವಾಗಿದೆ. ರಕ್ಷಣೆಯು ಕೃಪೆಯ ಮೂಲ ನಂಬಿಕೆಯಿಂದಲೇ ಹೊಂದಿಕೊಳ್ಳಲ್ಪಡುತ್ತದೆ (ಎಫೆಸ 2:8). ಗಲಾತ್ಯದವರು ಈಗಾಗಲೇ ಅದನ್ನು ಮರೆಯಲಾರಂಬಿಸಿದ್ದರು. ಆದದರಿಂದ, ನಾವು ನಮ್ಮನ್ನು, "ನಾವು ಯಾಕೆ ದೇವರನ್ನು ಮೆಚ್ಚಿಸಲಿಕ್ಕೆ ಪ್ರಯತ್ನಿಸುತ್ತೇವೆ?" ಎಂದು ಕೇಳಿಕೊಳ್ಳೋಣ. ನಾವು ಯಾಕೆ ಆತನ ಚಿತ್ತವನ್ನು ಮಾಡುವದಕ್ಕೆ ಪ್ರಯತ್ನಿಸುತ್ತೇವೆ? ರಕ್ಷಣೆಯನ್ನು ಪಡೆದುಕೊಳ್ಳುವದಕ್ಕಾಗಿಯೇ? ಯಾವದಾದರೂ

ಆಶೀರ್ವಾದವನ್ನು ಪಡೆದುಕೊಳ್ಳುವದಕ್ಕಾಗಿಯೋ? ಎಂದು ನಮ್ಮನ್ನು ಪ್ರಶ್ನಿಸಿಕೊಳ್ಳೋಣ. ಅದು ನಿಜವಾಗಿರುವದಾದರೆ ನಾವು ಬುದ್ಧಿಹೀನ ಗಲಾತ್ಯದವರಂತೆ ನಡೆದುಕೊಳ್ಳುವವರಾಗಿರುತ್ತೇವೆ (ಗಲಾತ್ಯ 3:1). ಬದಲಾಗಿ , ನಾವು ದೇವರು ನಮ್ಮ ಮೇಲೆ ಸುರಿಸಿರುವ ಕೃಪೆಯ ನಿಮಿತ್ತದಿಂದ ಆತನಿಗೆ ವಿಧೇಯರಾಗುವವರಾಗಿರಬೇಕು. ಅಪೊಸ್ತಲನಾದ ಯೋಹಾನನು ಬರೆದಿರುವ ದೇನೆಂದರೆ; ಆತನು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಆತನನ್ನು ಪ್ರೀತಿಸುತ್ತೇವೆ (1 ಯೋಹಾನ 4:19) ದೇವರ ಪ್ರೀತಿ ಕೃಪೆಗಳು ಮೊದಲು ನಮ್ಮ ಮೇಲೆ ಸುರಿಸಲ್ಪಡದಿದ್ದರೆ ನಾವು ಎಂದಿಗೂ ಆತನನ್ನು ಮೆಚ್ಚಿಸುವದಕ್ಕೆ ಶಕ್ತರಾಗಿರುತ್ತಿರಲಿಲ್ಲ.

ಬಹಿರಂಗವಾಗಿ ಕ್ರಿಸ್ತನ ನಡವಳಿಕೆ ಹಾಗು ಇತರ ಧರ್ಮಗಳ ಹಿಂಬಾಲಕರನಡವಳಿಕೆಯು ಒಂದೇಯಾಗಿ ಕಾಣಬಹುದು. ಅವರಿಬ್ಬರೂ ದೇವರನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸುತ್ತಿದ್ದಾರೆ. ಆದರೆ ದೇವರನ್ನು ಮೆಚ್ಚಿಸುವದಕ್ಕಾಗಿ ಅವರಿಗಿರುವ ಕಾರಣ ಅಥವಾ ಉದ್ದೇಶದಲ್ಲಿಯೇ ವ್ಯತ್ಯಾಸವಿರುತ್ತದೆ. ಇತರ ಧರ್ಮಗಳ ಅನುಯಾಯಿಗಳು ತಮಗೋಸ್ಕರವಾಗಿ ದೇವರನ್ನು ಮೆಚ್ಚಿಸಲು ಪ್ರಯತ್ನಿಸುತ್ತಾರೆ. ಕ್ರಿಸ್ತನ ಅನುಯಾಯಿಗಳಾದರೋ ದೇವರಿಗೋಸ್ಕರವಾಗಿ ದೇವರನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸುತ್ತಾರೆ.

**10-11** ಈ ವಚನಗಳಲ್ಲಿ ಪೌಲನ ಗಲಾತ್ಯದವರ ಮೇಲಿನ ತನ್ನ ಹತಾಶೆಯನ್ನು ವ್ಯಕ್ತ ಪಡಿಸುತ್ತಾನೆ. ಅವರು ಪು ನಃ ಯೆಹೂದ್ಯ ಪದ್ಧತಿ ಆಚಾರಗಳನ್ನು ಹಿಂಬಾಲಿಸುವದಕ್ಕೆ ಪ್ರಾರಂಭಿಸಿದ್ದಾರೆ. ಅವರು ಯೆಹೂದ್ಯರ ಎಲ್ಲಾ ವಿಶೇಷದಿವಸಗಳನ್ನೂ ಆಚಾರಗಳನ್ನೂ ಪಾಲಿಸುತ್ತಿದ್ದಾರೆ (ಕೊಲೊಸ್ಸೆ 2:20 ನೋಡಿರಿ). ಪೌಲನು ತಾನು ಅವರೊಳಗೆ ಪಟ್ಟ ಪ್ರಯಾಸವು ನಿಷ್ಫಲವಾಯಿತೋ ಏನೋ ಎಂದು ಭಯಪಡುತ್ತಾನೆ.

**12** ...ನೀವು ನನ್ನ ಹಾಗೆ ಆಗಬೇಕು (1 ಕೊರಿಂಥ 11:1 ನೋಡಿರಿ) "ನನ್ನ ಹಾಗೆ ಆಗಬೇಕು' ಎಂದು ಪೌಲನು ಹೇಳುತ್ತಾನೆ'. ನಾನು ಧರ್ಮಶಾಸ್ತ್ರದಿಂದಲೂ ಲೋಕದವರ ಬಾಲಭೋಧೆಯಿಂದಲೂ ಸ್ವತಂತ್ರನಾಗಿದ್ದೇನೆ (ವಚನ 3). ನೀವು ಸಹ ಸ್ವತಂತ್ರರಾಗಿರಬಹುದು. ಯೆಹೂದ್ಯರ ಹಾಗೆ ಆಗಬೇಕೆಂದು ಅಪೇಕ್ಷಿಸಬೇಡಿರಿ' ಎಂದು ಹೇಳುತ್ತಾನೆ.ನಂತರ ಪೌಲನು ಮುಂದುವರೆಸಿ 'ನಾನು ನಿಮ್ಮ ಹಾಗೆ ಆದದ್ದರಿಂದ' ಎಂದು ಸೇರಿಸುತ್ತಾನೆ. ಅಂದರೆ, "ಯೆಹೂದ್ಯನಾದ ನಾನು ಅನ್ಯಜನರಾಗಿ ನಿಮ್ಮ ಹಾಗೆ ಆದೆನು. ನಾನು ಇನ್ನು ಧರ್ಮಶಾಸ್ತ್ರದ ಕಾರ್ಯಗಳನ್ನು ಅವಲಂಭಿಸುವದಿಲ್ಲ; ಅನ್ಯಜನಾಂಗದ ಗಲಾತ್ಯದವರಾದ ನಿಮ್ಮ ಹಾಗೆಯೇ ನಾನು ಕ್ರಿಸ್ತನನ್ನು ನಂಬಿಕೆಯ ಮೂಲಕವೇ "ಸ್ವೀಕರಿಸಿಕೊಂಡಿದ್ದೇನೆ" ಎಂದು ಹೇಳುತ್ತಿದ್ದಾನೆ. ಗಲಾತ್ಯದವರು ಪೌಲನಿಗೆ ಏನೂ ಅನ್ಯಾಯ ಮಾಡಿರಲಿಲ್ಲ. ಬದಲಾಗಿ ಅವರು ಆತನನ್ನು ಪ್ರೀತಿಸಿದ್ದರು. ಈಗ ಪೌಲನು ಅವರಿಗೆ ತಾವು ಮೊದಲು ಆತನನ್ನು ಪ್ರೀತಿಸಿದ್ದಂತೆಯೇ ಪ್ರೀತಿಸಬೇಕು, ಆದರೆ ಯಾವ ವಿರೋಧವನ್ನು ಮಾಡಬಾರದೆಂದು ಕೇಳಿಕೊಳ್ಳುತ್ತಾನೆ.

**13** ಪೌಲನು ಮೊದಲು ಗಲಾತ್ಯಕ್ಕೆ ಹೋದಾಗ ಅಸೌಖ್ಯವನ್ನು ಹೊಂದಿದನು. ಬಹುಶಃ ಈ ಅಸೌಖ್ಯದ ಕಾರಣದಿಂದಾಗಿ ಆತನು ಪ್ರಯಾಣವನ್ನು ಮುಂದುವರೆಸಲು ಅಶಕ್ತನಾಗಿ ಚೇತರಿಸಿಕೊಳ್ಳುವದಕ್ಕೆ ಗಲಾತ್ಯದಲ್ಲಿಯೇ ಉಳಿಯ ಬೇಕಾಗಿ ಬಂದಿತ್ತು. ಹೀಗೆ ಗಲಾತ್ಯದವರು ಪೌಲನ ಸುವಾರ್ತೆಯನ್ನು ಕೇಳುವ ಅವಕಾಶವನ್ನು ದೊರಕಿಸಿಕೊಂಡಿದ್ದರು.

ಪೌಲನ ಅನಾರೋಗ್ಯವು ಏನಾಗಿತ್ತೆಂಬದು ಖಚಿತವಾಗಿ ತಿಳಿದು ಬಂದಿರುವದಿಲ್ಲ. ಇದು ಗಲಾತ್ಯದ ಲುಸ್ತ್ರ ಎಂಬ ಊರಿನಲ್ಲಿ ಅವನಿಗೆ ಕಲ್ಲೆಸೆಯಲ್ಪಟ್ಟಿದ್ದರ ಫಲಿತವಾಗಿತ್ತು ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ (ಅ.ಕೃತ್ಯ 14:19-21). ಇನ್ನು ಕೆಲವರು 2 ಕೊರಿಂಥ 12:7 ರಲ್ಲಿ ಪೌಲನು ಪ್ರಸ್ತಾಪಿಸಿದ ಮುಳ್ಳು ಇದಾಗಿತ್ತೆಂದು ಅಭಿಪ್ರಾಯ ಪಡುತ್ತಾರೆ.

**14** ಪೌಲನ ಅನಾರೋಗ್ಯ ಹಾಗು ಬಲಹೀನತೆಯ ಹೊರತಾಗಿಯೂ ಗಲಾತ್ಯದವರು ಆತನ ಜೀವಿತ ಹಾಗು ಬೋಧನೆಯಲ್ಲಿ ಕ್ರಿಸ್ತನ ಶಕ್ತಿಯನ್ನು ಕಾಣುವದಕ್ಕೆ ಶಕ್ತರಾಗಿದ್ದರು (1 ಕೊರಿಂಥ 2:3-4; 2 ಕೊರಿಂಥ 4:7). ದೇವರು ಪೌಲನಿಗೆ ಹೇಳಿದ್ದೇನೆಂದರೆ: "ನನ್ನ ಕೃಪೆಯೇ ನಿನಗೆ ಸಾಕು; ಬಲಹೀನತೆಯಲ್ಲಿಯೇ ನನ್ನ ಬಲವು ಪೂರ್ಣಸಾಧಕವಾಗುತ್ತದೆ" (2 ಕೊರಿಂಥ 12:9-10). ಗಲಾತ್ಯದವರು ಪೌಲನನ್ನು ಆತನು ಒಬ್ಬ ದೇವದೂತನೆಂಬಂತೆಯೂ, ಸ್ವತಃ ಕ್ರಿಸ್ತನೇ ಎಂಬಂತೆಯೂ ಪರಿಗಣಿಸಿದ್ದರು (ಅ.ಕೃತ್ಯ 14:8-15 ನೋಡಿರಿ). ಹಾಗಾದರೆ ಈಗ ಅವರು ಆತನಿಂದ ವಿಮುಖರಾಗುವದೇಕೆ?

**15-16** ನಿಮ್ಮ ಎಲ್ಲಾ ಸಂಭ್ರಮವು ಎಲ್ಲಿ ಹೋಯಿತು? ಎಂದು ಪೌಲನು ಕೇಳುತ್ತಾನೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಗಲಾತ್ಯದ ನೂತನ ಸ್ವಾತಂತ್ರ್ಯ ಅವರ ರಕ್ಷಣೆಯಲ್ಲಿ ಅವರಿಗಿದ್ದ ಸಂಭ್ರಮವು ಎಲ್ಲಿ ಹೋಯಿತು? ಒಮ್ಮೆ ಅವರು ಸಂತೋಷವುಳ್ಳವರೂ ಸ್ವತಂತ್ರರೂ ಆಗಿದ್ದರು. ಆಗ ಸೈತಾನನು ಅವರ ಸಂತೋಷವನ್ನು ತೆಗೆದು ಬಿಟ್ಟಿದ್ದನು. ಸೈತಾನನು ಕ್ರೈಸ್ತನ ರಕ್ಷಣೆಯನ್ನು ತೆಗೆದು ಬಿಡಲು ಸಾಧ್ಯವಿಲ್ಲ (ಯೋಹಾನ 10:18), ಆದರೆ ನಿಶ್ಚಯವಾಗಿಯೂ ಆತನು ಕ್ರೈಸ್ತನ ಸಂತೋಷ ಹಾಗು ಸ್ವಾತಂತ್ರ್ಯದ ಭಾವನೆಯನ್ನು ತೆಗೆದು ಹಾಕಬಲ್ಲನು.

ಪೌಲನು ಇಲ್ಲಿ ಸಂತೋಷದ ಬಗ್ಗೆ ಮಾತಾಡುವಾಗ ನಿಜವಾಗಿಯೂ ಆತನು ಆತ್ಮೀಕದ ಕುರಿತಾಗಿ ಲೋಕದ ಪರಿಸ್ಥಿತಿಗಳ ಮೇಲೆ ಅವಲಂಭಿತವಾಗಿರದ ಸಂತೋಷದ ಕುರಿತಾಗಿ ಮಾತಾಡುತ್ತಿದ್ದಾನೆ. ಸಂತೋಷವು ಪವಿತ್ರಾತ್ಮನ ಫಲಗಳಲ್ಲಿ ಒಂದಾಗಿದೆ (ಗಲಾತ್ಯ 5:22).ನಾವು ಇನ್ನೆಂದಿಗೂ ಧರ್ಮಶಾಸ್ತ್ರಕ್ಕೆ, ಲೋಕಕ್ಕೆ ಅಧೀನರಾಗಿಲ್ಲದಿರುವದರಿಂದ ಸಂತೋಷವನ್ನು ಅನುಭವಿಸುತ್ತೇವೆ. ಆದರೆ ಈಗ ಈ ಗಲಾತ್ಯದವರು "ಲೋಕದವರ ಬಾಲಬೋಧೆ", ಯೆಹೂದಿಯ ನೇಮ ನಿಷ್ಠೆಗಳೆಡೆಗೆ ಪು ನಃ ತಿರಿಗಿಕೊಳ್ಳುವದಕ್ಕೆ ಪ್ರಾರಂಭಿಸಿದ್ದರು, ಮತ್ತು ಅದರ ಫಲಿತವಾಗಿ ಅವರು ತಮ್ಮ ಸಂತೋಷವನ್ನು ಕಳೆದು ಕೊಂಡಿದ್ದರು.

ನಾವು ಇತರ ಧರ್ಮಗಳ ಅನುಯಾಯಿಗಳು ತಮ್ಮ ವಿವಿಧ ರೀತಿಯ ಆಚಾರಗಳನ್ನು ಕೈಕೊಂಡು ನಡೆಯುವದನ್ನು ನೋಡುವಾಗ ಅವರ ಮುಖಗಳಲ್ಲಿ ಸಂತೋಷ ಹಾಗು ಸಂತೃಪ್ತಿಯನ್ನು ಕಾಣುತ್ತೇವೋ? ಇಲ್ಲ, ಬಹಳಷ್ಟು ವೇಳೆಗಳಲ್ಲಿ ನಾವು ಭಯವನ್ನು ಕಾಣುತ್ತೇವೆ. ಅವರು ತಾವು ಎಲ್ಲಿ ಕೆಲವು ನೇಮ ಅಥವಾ ಆಚಾರಗಳನ್ನು ಪಾಲಿಸುವದಕ್ಕೆ ವಿಫಲರಾಗಿ ತಮ್ಮ ದೇವರುಗಳಿಗೆ ಕೋಪವನ್ನು ತರುತ್ತೇವೋ ಎಂದು ಭಯಪಡುತ್ತಾರೆ.

ಆದರೆ, ಕ್ರಿಸ್ತನಲ್ಲಿರುವವರಿಗೆ ಅಂಥ ಭಯ ಇರುವದಿಲ್ಲ. ದೇವರು ಅವರ ಪ್ರೀತಿಯುಳ್ಳ ತಂದೆಯಾಗಿದ್ದಾನೆ. ಅವರಿಗೆ ನೇಮಗಳು ಹಾಗು ಆಚಾರಗಳು ಇನ್ನು ಅವಶ್ಯಕವಾಗಿರುವದಿಲ್ಲ. ದೇವರ ಕುಟುಂಬದಲ್ಲಿ ಸ್ವಾತಂತ್ರ್ಯ ಹಾಗು ಸಂತೋಷ ಇರುತ್ತದೆ. ಗಲಾತ್ಯದವರು ಈ ಸ್ವಾತಂತ್ರ್ಯ ಹಾಗು ಸಂತೋಷ ಕಳೆದುಕೊಳ್ಳುವದನ್ನು ನೋಡುವದಕ್ಕೆ ಪೌಲನು ಇಚ್ಛಿಸುವದಿಲ್ಲ.

ಇತರ ಧರ್ಮಗಳವರು ಅನೇಕ ವೇಳೆ ಕ್ರೈಸ್ತಧರ್ಮವು ಹಿಂಬಾಲಿಸುವದಕ್ಕೆ ಬಹಳ ಸರಳವಾದದ್ದೆಂದು ಊಹಿಸಿಕೊಳ್ಳುತ್ತಾರೆ: ಅದರಲ್ಲಿ ಯಾವ ನೇಮಗಳೇ ಇಲ್ಲ! ಮತ್ತು ಒಂದು ವಿಧದಲ್ಲಿ ಅವರ ಊಹಿಕೆ ಸರಿಯಾದದ್ದೇ (ಮತ್ತಾಯ 11:28-29 ನೋಡಿರಿ). ಆದರೆ ನೇಮಗಳಲ್ಲಿ ಎಂಬ ಕಾರಣಕ್ಕಾಗಿ ಕ್ರಿಸ್ತನನ್ನು ಹಿಂಬಾಲಿಸುವದು ಸುಲಭವಾಗಿರುವದಿಲ್ಲ. ಬದಲಾಗಿ, ಕ್ರಿಸ್ತನನ್ನು ಹಿಂಬಾಲಿಸುವದು ಸುಲಭವಾಗಿರುವದಕ್ಕೆ ಕಾರಣವೇನೆಂದರೆ ಆತನು ತನ್ನನ್ನು ಹಿಂಬಾಲಿಸುವದಕ್ಕೆ ಬಲವನ್ನು ಹಾಗು ಹಿಂಬಾಲಿಸುವದರಲ್ಲಿ ಸಂತೋಷವನ್ನು ಸಹ ಪವಿತ್ರಾತ್ಮನ ಮೂಲಕ ನಮಗೆ ನೀಡುತ್ತಾನೆ.

ಪ್ರಾರಂಭದಲ್ಲಿ ಗಲಾತ್ಯದವರು ಪೌಲನ ಸುವಾರ್ತೆಯನ್ನು ಕೇಳಿದ್ದಕ್ಕಾಗಿ ಬಹಳಷ್ಟು ಸಂತೋಷ ವುಳ್ಳವರೂ ಕೃತಜ್ಞತೆಯುಳ್ಳವರೂ ಆಗಿದ್ದು ಪೌಲನಿಗೋಸ್ಕರ ಏನನ್ನೂ ಬೇಕಾದರೂ ಮಾಡುವದಕ್ಕೆ ಸಿದ್ಧರಾಗಿರುತ್ತಿದ್ದರು. ಅವರು ಸಾಧ್ಯವಾಗಿದ್ದರೆ ತಮ್ಮ ಕಣ್ಣುಗಳನ್ನಾದರೂ ಕಿತ್ತು[21] ಅವನಿಗೆ ಕೊಡುತ್ತಿದ್ದರು. ಪೌಲನು ಅವರ ತಪ್ಪುಗಳ ವಿಷಯದಲ್ಲಿ ಸತ್ಯವನ್ನು ಹೇಳಿದ ಕಾರಣಕ್ಕಾಗಿ ಮಾತ್ರದಿಂದ ಈಗ ಅವರು ತನ್ನ ವೈರಿಗಳಾಗುವದಿಲ್ಲ ಎಂದು ನಿರೀಕ್ಷಿಸುತ್ತಾನೆ.

ಒಮ್ಮೆ ನಮ್ಮ ಸ್ನೇಹಿತರಾಗಿದ್ದವರು ನಮಗೆ ವೈರಿಗಳಾಗಿ ಮಾರ್ಪಡುವದು ಎಷ್ಟು ಸುಲಭವಲ್ಲವೇ! ಮತ್ತು ನಮ್ಮ ತಪ್ಪುಗಳ ಬಗ್ಗೆ ನಮಗೆ ಸತ್ಯವನ್ನು ಹೇಳುವವರನ್ನು ಎಷ್ಟು ಶೀಘ್ರವೇ ನಾವು ವೈರಿಗಳೆಂದು ಪರಿಗಣಿಸುತ್ತೇವಲ್ಲವೇ!.

ಹಾಗಿದ್ದರೂ, ನಾವು ಪ್ರೀತಿಯಿಂದ ಸತ್ಯವನ್ನು ಮಾತಾಡುವದಕ್ಕೆ ಯಾವಾಗಲೂ ಸಿದ್ಧರಾಗಿರಬೇಕು (ಎಫೆಸ 4:15), ಹಾಗೆ ಮಾಡುವದರಿಂದ ನಮಗೆ ಒಬ್ಬನು ವೈರಿಯಾಗುವದಾಗಿದ್ದರೂ ನಾವು ಹಿಂಜರಿಯಬಾರದು. ಆದರೆ ನಾವು ಹೇಳುವದು ಸತ್ಯವೇ ಎಂಬದನ್ನು ಖಚಿತಪಡಿಸಿಕೊಳ್ಳೋಣ! ಮತ್ತು ನಾವು ಪ್ರೀತಿಯಿಂದ ಮುಖಾಮುಖಿಯಾಗಿಯೇ ಹೊರತು ವ್ಯಕ್ತಿಯ ಬೆನ್ನ ಹಿಂದೆ ಮಾತಾಡದಂತೆ ಜಾಗರೂಕರಾಗಿರೋಣ. ನಾವು ಈ ಮುನ್ನೆಚ್ಚರಿಕೆಗಳನ್ನು ಅನುಸರಿಸುವದಾದರೆ ಅನೇಕ ಅವಿವೇಕ ಹಾಗು ಹಾನಿಕರವಾದ ಮಾತುಗಳಿಂದ ದೂರ ವಿರುವೆವು.

**17** ಪೌಲನು ಹೇಳುವದೇನೆಂದರೆ: ಅವರು (ಯೆಹೂದ್ಯ ಸುಳ್ಳು ಬೋಧಕರು) ನಿಮ್ಮನ್ನು ಮೆಚ್ಚಿಸುವದಕ್ಕೆ ಅಸಕ್ತರಾಗಿದ್ದಾರೆ. ಈ ಬೋಧಕರು ತಮ್ಮನ್ನು ಅನುಸರಿಸುವಂತೆ ಗಲಾತ್ಯದವರ ಮುಸ್ಸಿಗಳನ್ನು ಗೆದ್ದಕೊಳ್ಳಲು ಆಸಕ್ತರಾಗಿದ್ದರು. ಅವರು ದೊಡ್ಡವರೂ ಪ್ರಾಮುಖ್ಯರೂ ಹಾಗು ಬಹು ಮಂದಿ ಶಿಷ್ಯರನ್ನು ಹೊಂದಿದವರಾಗಿರುವದಕ್ಕು ಬಯಸಿದ್ದರು. ಗಲಾತ್ಯದವರು ಪೌಲನನ್ನು ಸೇವಿಸುವದಕ್ಕೆ ಬದಲಾಗಿ ತಮ್ಮನ್ನು ಸೇವಿಸುವವರಾಗಿರಬೇಕೆಂದು ಅವರು ಇಚ್ಛಿಸಿದ್ದರು. ಆದದರಿಂದ, ಅವರು ಗಲಾತ್ಯದವರನ್ನು ನಮ್ಮಿಂದ ಅಗಲಿಸುವದಕ್ಕೆ ಪ್ರಯತ್ನಿಸಿದರು; ಅಂದರೆ ಗಲಾತ್ಯದವರು ತಮ್ಮನ್ನೇ ಮೆಚ್ಚಿಸುವವರಾಗಬೇಕೆಂದು ಅವರನ್ನು ಪೌಲನಿಂದ ಅಗಲಿಸುವದಕ್ಕೆ ಅವರು ಪ್ರಯತ್ನಿಸಿದರು.

**18** ಪ್ರಾರಂಭದಲ್ಲಿ ಗಲಾತ್ಯದವರು ಪೌಲನಿಗಾಗಿ ಆಸಕ್ತಿಯುಳ್ಳವರಾಗಿದ್ದರು. ಅವರು ಆತನ ಸುವಾರ್ತೆಯನ್ನು ಕೇಳುವದಕ್ಕೆ ಆಸಕ್ತಿಯಿಂದ ಅಪೇಕ್ಷಿಸಿದ್ದರು. ಆದರೆ ಈಗ ಪೌಲನು ಅವರೊಂದಿಗಿಲ್ಲದ್ದರಿಂದ ಅವರು ಒಳ್ಳೇ ಅಭಿಪ್ರಾಯ ಇಲ್ಲದ ಈ ಸುಳ್ಳು ಬೋಧಕರಿಗಾಗಿ ಆಸಕ್ತಿಯುಳ್ಳವರಾಗಿರುವದಕ್ಕೆ ಪ್ರಾರಂಭಿಸಿದ್ದರು (ವಚನ 17). ಹೀಗಾಗದಿರಲಿ, ಎಂದು ಪೌಲನು ಬೇಡಿಕೊಳ್ಳುತ್ತಾನೆ. ಈಗ ಆತನು ಅವರ ಸಂಗಡ ಇಲ್ಲದಿದ್ದಾಗ್ಯು ಅವರು ತಮಗೆ ಆತನು ನೀಡಿರುವ ಸತ್ಯಬೋಧನೆಯನ್ನು ಬಿಡದಿರಲಿ.

**19-20** ಪೌಲನು ತಾಯಿಯಂತೆ ಗಲಾತ್ಯದಲ್ಲಿನ ಸಭೆಗಳಿಗೆ ಜನ್ಮ ನೀಡಿರುತ್ತಾನೆ. ಆದರೆ ಈಗ ಪು ನಃ ಆತನು ಪ್ರಸವವೇದನೆ ಪಡುವವನಾಗಿದ್ದಾನೆ. ಗಲಾತ್ಯದವರು ಸುವಾರ್ತೆಯಿಂದ ವಿಮುಖರಾಗಿರುವದೇ ಅದಕ್ಕೆ ಕಾರಣವಾಗಿರುತ್ತದೆ. ಅವರು ತಿರಿಗೊಂದಾವರ್ತಿ 'ಹುಟ್ಟುವದು' ಅಗತ್ಯವಾಗುವದು. ಪೌಲನ ಮುಖ್ಯ ಗುರಿ ಹಾಗು ಅಭಿಲಾಷೆ ಏನೆಂದರೆ ಗಲಾತ್ಯದವರಲ್ಲಿ ಕ್ರಿಸ್ತನಸಾರೂಪ್ಯವು ಉಂಟಾಗಬೇಕೆಂಬದೇ (ವಚನ 19). ಪ್ರತಿಯೊಬ್ಬ ನಿಜವಾದ ಸಭಾಪಾಲಕ ಮತ್ತು ಬೋಧಕನ ಗುರಿಯು ಇದೇ ಆಗಿದೆ. ಒಬ್ಬ ತಾಯಿಯ ಪ್ರಸವ ವೇದನೆಯು ಮಗುವಿನ ಸಾರೂಪ್ಯ ಉಂಟಾಗುವ ತನಕ (ಜನ್ಮದ ತನಕ) ಹೇಗೆ ನಿಲ್ಲುವದಿಲ್ಲವೋ ಹಾಗೆಯೇ ಪೌಲನ ಪ್ರಸವ ವೇದನೆಯು ಗಲಾತ್ಯದವರಲ್ಲಿ ಕ್ರಿಸ್ತನ ಸಾರೂಪ್ಯ ಉಂಟಾಗುವ ತನಕ ನಿಲ್ಲುವದಿಲ್ಲ.

...ಕ್ರಿಸ್ತನ ಸಾರೂಪ್ಯವು ನಿಮ್ಮಲ್ಲಿ ಉಂಟಾಗುವ ತನಕ. ಕ್ರಿಸ್ತನ ಸಾರೂಪ್ಯವು ನಮಲ್ಲಿ ಉಂಟಾಗುವದೆಂದರೆ ಕ್ರಿಸ್ತನು ತನ್ನ ಆತ್ಮನ ಮೂಲಕವಾಗಿ ನಮ್ಮಲ್ಲಿ ಜೀವಿಸುವದೇಎಂಬ ಅರ್ಥವಾಗಿದೆ (ರೋಮ 8:10-11). ನಾವು ಕ್ರಿಸ್ತನ ಸಾರೂಪ್ಯವು ಳ್ಳವರಾಗಬೇಕೆಂಬದು ಸಹ ಇದರ ಅರ್ಥವಾಗಿದೆ (ರೋಮ 8:29; 2 ಕೊರಿಂಥ 3;18). ಮತ್ತು ಅಂತಿಮವಾಗಿ, ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಂಬ ಪ್ರಮಾಣವನ್ನು ಮುಟ್ಟಬೇಕೆಂದು ಇದರ ಅರ್ಥವಾಗಿದೆ (ಎಫೆಸ4:13)..

## ಹಾಗರಳು ಮತ್ತು ಸಾರಳ ಉದಾಹರಣೆ (4:21-31)

21 ಬುದ್ಧಿಹೀನ ಗಲಾತ್ಯದವರು ನಿಜವಾಗಿಯೂ ಪುನಃ ಯೆಹೂದ್ಯ ಧರ್ಮಶಾಸ್ತ್ರಾಧೀನರಾಗಿ ಜೀವಿಸುವದಕ್ಕೆ ಬಯಸುವದಾದರೆ ಧರ್ಮಶಾಸ್ತ್ರವು ಏನು ಹೇಳುತ್ತದೆ ಎಂಬದನ್ನು ಅವರು ಕಲಿತಿದ್ದರೆ ಉತ್ತಮವಾಗಿತ್ತು! ಇಲ್ಲಿ[22] ಧರ್ಮಶಾಸ್ತ್ರ ಎಂಬ ಪದದಿಂದ ಪೌಲನು ಹಳೆ ಒಡಂಬಡಿಕೆಯ ಮೊದಲಿನ ಐದು ಪುಸ್ತಕಗಳನ್ನು ಸೂಚಿಸಿ ಹೇಳುತ್ತಾನೆ.

22-23 ಇಲ್ಲಿ ಪೌಲನು ಇಬ್ಬರು ಸ್ತ್ರೀಯರನ್ನು ಪ್ರಸ್ತಾಪಿಸುತ್ತಾನೆ, ಒಬ್ಬಳು ದಾಸಿಯು, ಇನ್ನೊಬ್ಬಳು ಸ್ವತಂತ್ರಳು. ದಾಸಿಯಾದ ಸ್ತ್ರೀಯು ಹಾಗರಳಾಗಿದ್ದಾಳೆ, ಅವಳು ಅಬ್ರಹಾಮನ ಹೆಂಡತಿಯಾದ ಸಾರಯಳ ದಾಸಿಯಾಗಿದ್ದಳು. ಅಬ್ರಹಾಮನ ಮೊದಲನೆಯ ಮಗನು ಹಾಗರಳಿಂದ ಹುಟ್ಟಿದ್ದನು (ಆದಿಕಾಂಡ 16:1-4, 15).

ಸ್ವತಂತ್ರಳು ಸಾರಯಳಾಗಿದ್ದಾಳೆ. ಸಾರಯಳು ತನ್ನ ಜೀವಿತ ಕಾಲವೆಲ್ಲಾ ಬಂಜೆಯಾಗಿದ್ದಳು. ಅವಳು ತೊಂಭತ್ತು ವರ್ಷ ವಯಸ್ಸಿನವಳಾಗಿದ್ದಳು. ಶಾರೀರಿಕವಾಗಿ ಅವಳಿಗೆ ಮಕ್ಕಳು ಹುಟ್ಟುವದು ಅಸಾಧ್ಯವಾಗಿತ್ತು (ಆದಿಕಾಂಡ 16;1; 17:17). ಅದಾಗ್ಯು ಅವಳು ಗರ್ಭಿಣಿಯಾಗಿ ಅಬ್ರಹಾಮನಿಗೆ ಒಬ್ಬ ಮಗನನ್ನು ಹಡೆಯುವಳೆಂದು ದೇವರು ವಾಗ್ದಾನ ಮಾಡಿದ್ದನು (ಆದಿಕಾಂಡ 17:15-16). ಸಾರಯಳ ಮಗನು ದೇವರಾತ್ಮನ ಬಲದಿಂದ ಹುಟ್ಟಿದ್ದನು (ವಚನ 29), ಅಂದರೆ, ದೇವರ ಬಲದಿಂದ ಹುಟ್ಟಿದ್ದನು. ಆತನ ಹೆಸರು ಇಸಾಕ (ಆದಿಕಾಂಡ 21:1-3).

24-25 ಹಾಗರಳು ಧರ್ಮಶಾಸ್ತ್ರವನ್ನು, ಅಂದರೆ, ಹಳೆ ಒಡಂಬಡಿಕೆಯನ್ನು ಪ್ರತಿನಿಧಿಸುತ್ತಾಳೆ. ಸಾರಯಳು ಕೃಪೆಯನ್ನು, ಅಂದರೆ, ಹೊಸ ಒಡಂಬಡಿಕೆಯನ್ನು ಪ್ರತಿನಿಧಿಸುತ್ತಾಳೆ.

ಹಾಗರ್ ಅಂದರೆ ಸೀನಾಯಿ ಪರ್ವತ (ವಚನ 25); ಅಂದರೆ, ಅವಳು ಸೀನಾಯಿ ಪರ್ವತವನ್ನು ಪ್ರತಿನಿಧಿಸುತ್ತಾಳೆ. ಸೀನಾಯಿ ಪರ್ವತದ ತುದಿಯಲ್ಲಿಯೇ ದೇವರು ಮೋಶೆಗೆ ಯೆಹೂದ್ಯ ಧರ್ಮಶಾಸ್ತ್ರವನ್ನು ಕೊಟ್ಟಿದ್ದನು (ವಿಮೋಚನಕಾಂಡ 31:18). ಆದ್ದರಿಂದ, ಹಾಗರಳು ಧರ್ಮಶಾಸ್ತ್ರದ ಅಧೀನದಲ್ಲಿರುವವರೆಲ್ಲರನ್ನೂ, ವಿಶೇಷವಾಗಿ, ಯೆಹೂದ್ಯರನ್ನು ಪ್ರತಿನಿಧಿಸುತ್ತಾಳೆ, ಅಲ್ಲದೆ ಅವಳು ಯೆರೂಸಲೇಮನ್ನು ಸಹ ಪ್ರತಿಸಿಧಿಸುತ್ತಾಳೆ, ಯಾಕೆಂದರೆ, ಯೆರೂಸಲೇಮ್ ಯೆಹೂದ್ಯರ ಪವಿತ್ರ ನಗರವಾಗಿದೆ (ಯೆಹೂದ್ಯ ಸುಳ್ಳು ಬೋಧಕರು ಮೊದಲನೆಯದಾಗಿ ಯೆರೂಸಲೇಮಿನಿಂದಲೇ ಗಲಾತ್ಯಕ್ಕೆ ಬಂದಿದ್ದರು; ಅವರ ಕಾರಣದಿಂದಲೇ ಪೌಲನು ಈ ಪತ್ರಿಕೆಯನ್ನು ಬರೆದಿದ್ದಾನೆಂಬದನ್ನು ಜ್ಞಾಪಿಸಿಕೊಳ್ಳಿರಿ).

ಹಾಗರಳು ದಾಸಿಯಾಗಿದ್ದರಿಂದ ಅವಳ ಮಕ್ಕಳು ಸಹ ದಾಸರಾಗಿದ್ದರು. ಅವರು ಧರ್ಮಶಾಸ್ತ್ರಕ್ಕೆ ದಾಸರು. ಯೆಹೂದ್ಯರು ತಾವು ಶಾರೀರಿಕ ಸಂಬಂಧವಾಗಿ, ಅಂದರೆ, ಸ್ವಾಭಾವಿಕ ಸಂತತಿಯ ಮೂಲಕ ಅಬ್ರಹಾಮನ ನಿಜವಾದ ಮಕ್ಕಳಾಗಿದ್ದಾರೆಂದು ತಮ್ಮಲ್ಲಿ ಉಬ್ಬಿಕೊಂಡಿದ್ದರು. ಆದರೆ ಇಲ್ಲಿ ಪೌಲನು ಅವರು ಮಕ್ಕಳಲ್ಲ ಆದರೆ, ದಾಸರು ಎಂದು ಹೇಳುತ್ತಾನೆ. ಅವರು ದಾಸಿಯ ಪುತ್ರರಂತಿದ್ದಾರೆ.

26 ಆದರೆ ಮೇಲಣ ಯೆರೂಸಲೇಮ್ ಎಂಬವಳು ಸ್ವತಂತ್ರಳು. ಮೇಲಣ ಯೆರೂಸಲೇಮ್ ಪರಲೋಕದ ಯೆರೂಸಲೇಮ್ – ಅಂದರೆ, ದೇವರ ರಾಜ್ಯ – ಆಗಿದೆ (ಇಬ್ರಿಯ 12:22; ಪ್ರಕಟಣೆ 21:2 ನೋಡಿರಿ). ಇದು ಕ್ರಿಸ್ತನು ಜೀವಿಸುವ ಮತ್ತು ಧರ್ಮಶಾಸ್ತ್ರದಿಂದ ಸ್ವತಂತ್ರತೆಯಿರುವ ನಗರವಾಗಿದೆ. ಸಾರಯಳು ಮೇಲಣ ಯೆರೂಸಲೇಮನ್ನು ಸೂಚಿಸುತ್ತಾಳೆ. ಅವರು ಕ್ರಿಸ್ತನ ವಿಶ್ವಾಸಿಗಳೆಲ್ಲರ "ತಾಯಿ" ಆಗಿದ್ದಾಳೆ.ಅವಳು ವಾಗ್ದಾನದ ಫಲವಾಗಿ ಹುಟ್ಟಿದ ಅಬ್ರಹಾಮನ ನಿಜವಾದ ಬಾಧ್ಯಸ್ಥರಿಗೆಲ್ಲಾ ತಾಯಿಯಾಗಿದ್ದಾಳೆ (ವಚನ 23), – ಅಂದರೆ, ದೇವರು ಅಬ್ರಹಾಮ ಹಾಗು ಸಾರಯಳಿಗೆ ಅವರು ಒಂದು ಮಗುವನ್ನು ಪಡೆಯುವರೆಂದು ದಯಪಾಲಿಸಿದ ವಾಗ್ದಾನದ ಫಲವಾಗಿ ಹುಟ್ಟಿದವರು.

27 ಇಲ್ಲಿ ಪೌಲನು ಯೆಶಾಯ 54:1 ರಿಂದ ಉಲ್ಲೇಖಿಸುತ್ತಾನೆ. ಹೆರದ ಬಂಜೆಯು ಸಾರಳಾಗಿದ್ದಾಳೆ. ಅವಳು ಆನಂದವಾಗಿ ಸ್ವರವೆತ್ತಿ ಕೂಗಲಿ. ಯಾಕೆಂದರೆ ಅವಳು ಗಂಡನುಳ್ಳ[23] ಹಾಗರಳಿಗಿಂತಲೂ ಹೆಚ್ಚು ಮಕ್ಕಳನ್ನು ಪಡೆಯುವಳು.

28 ದೇವರ ವಾಗ್ದಾನವು – ಅಂದರೆ, ಆತನ ಮಾತು – ಬಲವುಳ್ಳದ್ದಾಗಿದೆ. ಅದು ಜೀವವುಳ್ಳ ವಾಕ್ಯವಾಗಿದೆ. ಅದು ಜೀವವನ್ನು ನೀಡುತ್ತದೆ. ಸಾರಯಳು ತೊಂಭತ್ತು ವಯಸ್ಸಿನವಳಾಗಿದ್ದಾಗ್ಯು ದೇವರ ಮಾತಿನ ಮುಖಾಂತರ ಇಸಾಕನೆಂಬ ಮಗುವಿಗೆ ಜನ್ಮ ನೀಡಿದಳು! ಅದೇ ರೀತಿಯಾಗಿ ದೇವರ ಕೃಪೆಯ ವಾಕ್ಯದ ಮುಖಾಂತರ ಗಲಾತ್ಯದವರು ದೇವರಾತ್ಮನ ಬಲದಿಂದ ಹುಟ್ಟಿದವರಾಗಿದ್ದಾರೆ (ವಚನ 29). ಅವರು ಸಹ ಪರಲೋಕದ ಯೆರೂಸಲೇಮಿನ ಸಂಸ್ಥಾನದವರೂ ಅಬ್ರಹಾಮನ ನಿಜವಾದ ಮಕ್ಕಳೂ ಆಗಿದ್ದಾರೆ. ಸ್ವಾಭಾವಿಕ ಸಂತಾನದಿಂದಲ್ಲ ಆದರೆ ದೇವರ ಕೃಪೆಯ ಮೂಲಕವೇ. ಗಲಾತ್ಯದವರು ತಿರಿಗಿ ದಾಸಿಯಾದ ಹಾಗರಳ ಮಕ್ಕಳಂತೆ ಜೀವಿಸುವದಕ್ಕೆ ಅಪೇಕ್ಷಿಸುವದೇಕೆ?

29 ಆದಿಕಾಂಡ 21:9ರ ಪ್ರಕಾರವಾಗಿ ಸ್ವಾಭಾವಿಕವಾಗಿ ಶರೀರ ಸಂಬಂಧದಲ್ಲಿ ಹಾಗರಳಿಗೆ ಹುಟ್ಟಿದ ಇಷ್ಮಾಯೇಲನು ದೇವರಾತ್ಮ ಬಲದಿಂದ ಸಾರಳಿಗೆ ಹುಟ್ಟಿದ ಇಸಾಕನನ್ನು ಹಿಂಸೆಪಡಿಸಿದನು. ಅದು ಈಗಲೂ ಅದೇ ಎಂದು ಪೌಲನು ಹೇಳುತ್ತಾನೆ. ಪೌಲನ ಕಾಲದಲ್ಲಿ ದೇವರಾತ್ಮನಿಗನುಸಾರವಾಗಿ ಹುಟ್ಟಿದ ಕ್ರಿಸ್ತನ ವಿಶ್ವಾಸಿಗಳು ಶರೀರಸುಬಂಧವಾಗಿ ಹುಟ್ಟಿದ ರೋಮಾಯರಿಂದಲೂ ಯೆಹೂದ್ಯರಿಂದಲೂ ಹಿಂಸೆಪಡಿಸಲ್ಪಟ್ಟರು. ಶರೀರಸಂಬಂಧವಾದ ಬಾಧ್ಯಸ್ಥರು ಯಾವಾಗಲೂ ದೇವರಾತ್ಮ ಸಂಬಂಧದ ಬಾಧ್ಯಸ್ಥರನ್ನು ಹಿಂಸೆಪಡಿಸುತ್ತಾರೆ.

30 ಇಲ್ಲಿ ಪೌಲನು ಆದಿಕಾಂಡ 21:10 ರಿಂದ ಉಲ್ಲೇಖಿಸಿ ಹೇಳುವ ಪ್ರಕಾರವಾಗಿ ಸಾರಳು ಅಬ್ರಹಾಮನಿಗೆ ಹೇಳಿದ್ದೇನೆಂದರೆ: ಈ ದಾಸಿಯನ್ನೂ (ಹಾಗರಳು) ಅವಳ ಮಗನನ್ನೂ (ಇಷ್ಮಾಯೇಲ) ಹೊರಗೆ ಹಾಕು". ಮತ್ತು ಸಾರಳು

ಹೇಳಿದಂತೆಯೇ ಅಬ್ರಹಾಮನು ಮಾಡಿದನು (ಆದಿಕಾಂಡ 21:12-14). ಅದೇ ರೀತಿಯಲ್ಲಿ ಗಲಾತ್ಯದವರು ಶರೀರಸಂಬಂಧದ ಮಕ್ಕಳಾಗಿರುವ ಯೆಹೂದ್ಯ ಸುಳ್ಳು ಬೋಧಕರನ್ನು ಹೊರಗೆ ಹಾಕಬೇಕು.

31 ಕ್ರಿಸ್ತನಲ್ಲಿ ವಿಶ್ವಾಸಿಸುವದಾದರೆ ನಾವು ಸ್ವತಂತ್ರಳಾದ ಸಾರಳ ಮಕ್ಕಳಾಗಿದ್ದೇವೆ. ನಾವು ವಾಗ್ದಾನಕ್ಕನುಸಾರವಾಗಿ ಹುಟ್ಟಿರುವ ಮಕ್ಕಳಾಗಿದ್ದೇವೆ (ವಚನ 28). ನಾವು ದೇವರ ಕೃಪೆಯಿಂದ, ಅಂದರೆ, ದೇವರ ವರದ ಮೂಲಕ ದೇವರ ಮಕ್ಕಳಾಗಿದ್ದೇವೆ. ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಪಡೆದುಕೊಂಡಿರುವ (ಗಲಾತ್ಯ 3:26). ಪವಿತ್ರಾತ್ಮನ ಬಲದಿಂದಲೇ ಆತನ ಮಕ್ಕಳಾಗಿ ಮಾಡಲ್ಪಟ್ಟಿದ್ದೇವೆ (ರೋಮ 8:14).

ಆದದರಿಂದ, ಅಂಥ ಶ್ರೇಷ್ಠ ವರವನ್ನು ಹೊರ ಬಿಸಾಡದಿರೋಣ. ನಾವು ಯಾವದೇ ಧರ್ಮಶಾಸ್ತ್ರ ಅಥವಾ ಯಾವದೇ ಧರ್ಮದ ಕಾರ್ಯಗಳಲ್ಲಿ ನಂಬಿಕೆಯಿಡುವದರ ಮೂಲಕ ದೇವರ ಕೃಪೆಯನ್ನು ಬಿಸಾಡಿಬಿಡದಿರೋಣ. ನಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿ, ಆತನಲ್ಲಿ ಮಾತ್ರವೇ ಇಡುವವರಾಗಿರೋಣ.

---

## ಅಧ್ಯಾಯ - 5

### ಕ್ರಿಸ್ತನಲ್ಲಿ ಸ್ವಾತಂತ್ರ್ಯ (5:1-12)

1 ಕ್ರಿಸ್ತನು ನಮ್ಮನ್ನು... ಬಿಡುಗಡೆಮಾಡಿದನು. ಆತನು ನಮ್ಮನ್ನು ಧರ್ಮಶಾಸ್ತ್ರದ ಶಾಪದೊಳಗಿಂದ, ಮರಣದಂಡನೆಯೊಳಗಿಂದ ವಿಮೋಚಿಸಿದ್ದಾನೆ (ಗಲಾತ್ಯ 3;13). ನಾವು ಮರಣಕ್ಕಾಗಿ ಕಾಯುತ್ತಿದ್ದ ಸೆರೆಮನೆಯಲ್ಲಿನ ಅಪರಾಧಿಗಳಂತಿದ್ದೆವು . ಆಗ ಕ್ರಿಸ್ತನು ನಮ್ಮ ಸ್ಥಾನದಲ್ಲಿ ಸಾಯುವದರ ಮೂಲಕ ನಮ್ಮನ್ನು ಬಿಡುಗಡೆಮಾಡಿದನು. (ರೋಮ 7:6). ಈ ರೀತಿಯಾಗಿ ಬಿಡುಗಡೆಮಾಡಲ್ಪಟ್ಟಿರುವ ಯಾವನಾದರೂ ಪು ನಃ ಸೆರೆಮನೆಯೊಳಗೆ ಹೋಗಲು ಪ್ರಯತ್ನಿಸುವದಾದರೆ ಅಂಥವನು ನಿಜವಾಗಿಯೂ ಹುಚ್ಚನೇ ಸರಿ! ಆದರೆ ಗಲಾತ್ಯದವರು ಆ ಕಾರ್ಯವನ್ನೇ ಮಾಡುತ್ತಿದ್ದರು. ಧರ್ಮಶಾಸ್ತ್ರದ ಸೆರೆಮನೆಯೊಳಗಿಂದ ಬಿಡುಗಡೆ ಮಾಡಲ್ಪಟ್ಟವರಾಗಿ ಅವರು ತಿರಿಗೊಮ್ಮೆ ಅದೇ ದಾಸತ್ವಕ್ಕೆ ತಮ್ಮನ್ನು ಒಳಪಡಿಸಿಕೊಳ್ಳುವವರಾಗಿದ್ದರು. ಹಾಗಾದರೆ ಅದರಲ್ಲಿ ಸ್ಥಿರವಾಗಿ ನಿಲ್ಲಿರಿ ಎಂದು ಹೇಳುತ್ತಾನೆ. ಇದು ಸಂಭವಿಸುವದಕ್ಕೆ ಬಿಡಬೇಡಿರಿ!

2 ಗಲಾತ್ಯದವರು ತಮ್ಮನ್ನು ಒಳಪಡಿಸಿಕೊಳ್ಳುತ್ತಿದ್ದ ಒಂದು ವಿಧವಾದ ದಾಸತ್ವವು ಸುನ್ನತಿ ಮಾಡಿಸಿಕೊಳ್ಳುವದಾಗಿತ್ತು. ಸುನ್ನತಿ ಮಾಡಿಸಿಕೊಳ್ಳುವದು ತಪ್ಪಲ್ಲ (ಅ.ಕೃತ್ಯ 16:3 ನೋಡಿರಿ). ಆದರೆ ಅದರಿಂದ ರಕ್ಷಣೆಯನ್ನು ಪಡೆಯುತ್ತೇವೆಂಬ ಯೋಚನೆಯೊಂದಿಗೆ ಸುನ್ನತಿ ಮಾಡಿಸಿಕೊಳ್ಳುವದು ತಪ್ಪಾದದ್ದು. ಸುನ್ನತಿಯಿಂದಾಗಲಿ ಅಥವಾ ಧರ್ಮಶಾಸ್ತ್ರದ ಇತರ ಯಾವದೇ ಕಾರ್ಯಗಳಿಂದ ರಕ್ಷಣೆ ಹೊಂದಬಹುದೆಂದು ಊಹಿಸುವದಾದರೆ ನಾವು ಕ್ರಿಸ್ತನ ಕಾರ್ಯವನ್ನು ಗಣನೆಗೆ ಬಾರದ್ದನ್ನಾಗಿ ಮಾಡುತ್ತೇವೆ. ನಾವು ಕ್ರಿಸ್ತನನ್ನು ನಿರಾಕರಿಸುವವರಾಗಿದ್ದೇವೆ. ಕ್ರಿಸ್ತನನ್ನು ಸ್ವೀಕರಿಸಿಕೊಂಡದ್ದರಲ್ಲಿ ಯಾವ ಪ್ರಯೋಜನವೂ ಇರುವದಿಲ್ಲ. ನಾವು ಕ್ರಿಸ್ತನಲ್ಲಿ ಮಾತ್ರವೇ ನಂಬಿಕೆಯಿಡದಿದ್ದರೆ ಆತನು ನಮ್ಮನ್ನು ರಕ್ಷಿಸುವದಿಲ್ಲ. ನಾವು ಕ್ರಿಸ್ತನು ಹಾಗು ಧರ್ಮಶಾಸ್ತ್ರದ ಮೂಲಕವಾಗಿ ರಕ್ಷಣೆ ಹೊಂದಿರುವದಿಲ್ಲ ನಾವು ಕ್ರಿಸ್ತನ ಮೂಲಕ ಮಾತ್ರವೇ ರಕ್ಷಣೆ ಹೊಂದಿದ್ದೇವೆ.

3 ಸ್ವತಃ ಸುನ್ನತಿ ಮಾಡಿಸಿಕೊಳ್ಳುವದರಲ್ಲಿ ಯಾವ ಪ್ರಯೋಜವಿರುವದಿಲ್ಲ ಎಂದು ಪೌಲನು ಗಲಾತ್ಯದವರಿಗೆ ಹೇಳುತ್ತಾನೆ. ಒಂದು ವೇಳೆ ಅವರು ಧರ್ಮಶಾಸ್ತ್ರದ ಮೂಲಕ ರಕ್ಷಣೆ ಹೊಂದಲು ನಿರೀಕ್ಷಿಸುತ್ತಿರುವದಾದರೆ ಅವರು ಆಗ ಧರ್ಮಶಾಸ್ತ್ರದಲ್ಲಿ ಹೇಳಿರುವದನ್ನೆಲ್ಲಾ ಪಾಲಿಸಬೇಕಾಗುತ್ತದೆ ಹೊರತು ಅದರ ಸ್ವಲ್ಪಭಾಗವನ್ನು ಮಾತ್ರವೆ ಅಲ್ಲ. ಮತ್ತು ಯೆಹೂದ್ಯ ಧರ್ಮಶಾಸ್ತ್ರದಲ್ಲಿ ಆರು ನೂರಕ್ಕಿಂತಲೂ ಹೆಚ್ಚು ವಿವಿಧ ಆಜ್ಞೆಗಳು ಹಾಗು ನೇಮಗಳು ಇರುತ್ತವೆ. ಎಲ್ಲಾ ಸಮಯಗಳಲ್ಲಿಯೂ ಇವು ಗಳಿಗೆಲ್ಲಾ ದೋಷವಿಲ್ಲದೆ ವಿಧೇಯರಾಗುವದು ಅಸಾಧ್ಯವಾಗಿರುತ್ತದೆ (ಗಲಾತ್ಯ 2:15-16; 3:10 ನೋಡಿರಿ).

4 ಧರ್ಮಶಾಸ್ತ್ರ ಮತ್ತು ಕೃಪೆ ಒಂದಕ್ಕೊಂದು ತದ್ವಿರುದ್ಧವಾಗಿರುತ್ತವೆ. ನಾವು ಧರ್ಮಶಾಸ್ತ್ರ ಮತ್ತು ಕೃಪೆಯನ್ನು ಒಟ್ಟಾಗಿ ಬೆರಿಸುವದಕ್ಕೆ ಸಾಧ್ಯವಿಲ್ಲ. ಗಲಾತ್ಯದವರು ಕೃಪೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಟ್ಟು ರಕ್ಷಣೆ ಹೊಂದಿರುತ್ತಾರೆ. ಆದರೆಈಗ ಅವರು ಧರ್ಮಶಾಸ್ತ್ರದಲ್ಲಿ, ತಮ್ಮ ಸ್ವಂತ ಕರ್ಮ ಹಾಗು ಪ್ರಯತ್ನಗಳಲ್ಲಿ ಭರವಸವಿಡುವದಕ್ಕೆ ಪ್ರಾರಂಭಿಸಿದ್ದಾರೆ. ಅವರು ಹೀಗೆಯೇ ಮುಂದುವರೆಯುವದಾದರೆ ಕೃಪೆಯನ್ನು ಕಳೆದುಕೊಳ್ಳುವರು. ಅವರು ತಮ್ಮ ರಕ್ಷಕನಾದ ಯೇಸು ಕ್ರಿಸ್ತನಿಂದ ಅಗಲಿಹೋಗುವರು.

ಕೆಲವು ಜನರು ಕ್ರಿಸ್ತನನ್ನು ಕೃಪೆಯ ಮೂಲಕ ಸ್ವೀಕರಿಸಿಕೊಳ್ಳುತ್ತಾರೆ, ಆದರೆ ಸ್ವಲ್ಪಕಾಲದ ನಂತರ ಆತನಿಂದ ವಿಮುಖರಾಗುತ್ತಾರೆ (ಮಾರ್ಕ 4:16-17). ಅವರು ತಮ್ಮ ಹಿಂದಿನ ಧರ್ಮಕ್ಕೆ ಹಿಂದಿರುಗುತ್ತಾರೆ. ಹೀಗೆ ಮಾಡುವವರು ಗಲಾತ್ಯದವರಂತೆ ಕೃಪಾಶ್ರಯದೊಳಗಿಂದ ಬಿದ್ದು ಹೋದರು. ಸ್ಥಿರವಾಗಿ ನಿಲ್ಲಿರಿ ಎಂದು ಪೌಲನು ಹೇಳುತ್ತಾನೆ (ವಚನ 1). ಇದು ಸಂಭವಿಸದಂತೆ ನೋಡಿಕೊಳ್ಳಿರಿ.

ನಾವು ಕ್ರೈಸ್ತತ್ವವನ್ನು ಇತರ ಧರ್ಮಗಳೊಂದಿಗೆ ಕಲಬೆರಕೆ ಮಾಡಲಾಗದು. ಕ್ರಿಸ್ತನನ್ನು ಕೇವಲ ನಾವು ಪೂರ್ವದಲ್ಲಿ ಆರಾಧಿಸಿದ ದೇವರುಗಳೊಂದಿಗೆ ಸೇರಿಸಲು ಸಾಧ್ಯವಿಲ್ಲ. ನಾವು ಕ್ರಿಸ್ತನಲ್ಲಿ ನಂಬಿಕೆಯಿಡುತ್ತೇವೆ ಅಥವಾ ನಮ್ಮಪೂರ್ವ ಧರ್ಮದಲ್ಲಿ ನಂಬಿಕೆಯಿಡುತ್ತೇವೆ, ಆದರೆ ಎರಡನ್ನೂ ಮಾಡಲಾಗುವದಿಲ್ಲ. ಕ್ರಿಸ್ತನು ಪರಲೋಕಕ್ಕೆ ಹೋಗುವ ಅನೇಕ ಮಾರ್ಗಗಳಲ್ಲಿ ಒಂದು ಮಾರ್ಗವಾಗಿರುವದಿಲ್ಲ; ಆತನು ಏಕೈಕ ಮಾರ್ಗವಾಗಿದ್ದಾನೆ (ಯೋಹಾನ 14:6 ಮತ್ತು ವ್ಯಾಖ್ಯಾನ ನೋಡಿರಿ).

ಒಬ್ಬ ಮನುಷ್ಯನು ಏಕಕಾಲಕ್ಕೆಲ್ಲ ಎರಡು ಮಾರ್ಗಗಳಲ್ಲಿ ನಡೆಯಲಾರನು. ಒಬ್ಬನು ತಾನು ರಕ್ಷಣೆಗಾಗಿ ಕ್ರಿಸ್ತನನ್ನು ನಂಬಬಹುದು ಹಾಗು ತನ್ನ ಪೂರ್ವ ಧರ್ಮದಲ್ಲಿ ಭರವಸವಿಡುವದನ್ನು ಮುಂದು ವರೆಸಬಹುದೆಂದು ಯೋಚಿಸುವವನು ತನ್ನನ್ನು ಮೂರ್ಖನನ್ನಾಗಿ ಮಾಡಿಕೊಳ್ಳುವವನಾಗಿದ್ದಾನೆ. ಹೀಗೆ ಮಾಡುವದಕ್ಕೆ ಪ್ರಯತ್ನಿಸುವ ಯಾವನಾದರೂ ನಿಜವಾಗಿಯೂ ಕ್ರಿಸ್ತನನ್ನು ನಂಬದವನಾಗಿರುತ್ತಾನೆ. ಅಂಥ ವ್ಯಕ್ತಿಯು ರಕ್ಷಣೆಯನ್ನು ಕಂಡುಕೊಳ್ಳುವದಿಲ್ಲ.[24]

5 ಗಲಾತ್ಯದಲ್ಲಿದ್ದ ಯೆಹೂದ್ಯ ಬೋಧಕರು ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದರ ಮೂಲಕ ಮನುಷ್ಯನು ನೀತಿವಂತನಾಗುತ್ತಾನೆಂದು ಬೋಧಿಸುತ್ತಿದ್ದರು. ಆದರೆ ಪೌಲನು ದೇವರಾತ್ಮನ ಮೂಲಕ ನಂಬಿಕೆಯಿಂದ ಮಾತ್ರವೇ ನೀತಿಯನ್ನು ಪಡೆದುಕೊಳ್ಳಬಹುದು – ಅಂದರೆ, ಕ್ರಿಸ್ತನ ನೀತಿಯನ್ನು – ಎಂದು ಹೇಳುತ್ತಾನೆ. ಕ್ರಿಸ್ತನಲ್ಲಿ ನಂಬಿಕೆಯಿಟ್ಟದ್ದರಿಂದಲೇ ನಾವು ನೀತಿವಂತರೆಂದು ನಿರ್ಣಯಿಸಲ್ಪಟ್ಟಿರುತ್ತೇವೆ (ರೋಮ 5:1-2), ಮತ್ತು ಅದರ ಮೂಲಕ ಅಪರಾಧ ನಿರ್ಣಯದಿಂದ ತಪ್ಪಿಸಿಕೊಳ್ಳುತ್ತೇವೆ (ರೋಮ 8:1).

6 ಕ್ರಿಸ್ತಯೇಸುವಿನಲ್ಲಿ ರಕ್ಷಣೆಯನ್ನು ಪಡೆದುಕೊಳ್ಳುವದಕ್ಕೆ ಒಬ್ಬನಿಗೆ ಸುನ್ನತಿಯಾದರೂ ಪ್ರಯೋಜನವಿಲ್ಲ, ಆಗದಿದ್ದರೂ ಪ್ರಯೋಜನವಿಲ್ಲ. ಸುನ್ನತಿ ಆಗಿದ್ದರೂ, ಆಗದಿದ್ದರೂ ಯಾವ ವ್ಯತ್ಯಾಸವಿರುವದಿಲ್ಲ (ಗಲಾತ್ಯ 6:15). ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವದರಿಂದ ಮಾತ್ರವೇ ರಕ್ಷಿಸಲ್ಪಟ್ಟಿರುತ್ತೇವೆ.

ಇಲ್ಲಿ ಒಂದು ಪ್ರಾಮುಖ್ಯವಾದ ಪ್ರಶ್ನೆಯು ಉದ್ಭವವಾಗುತ್ತದೆ: ನಂಬಿಕೆ ಎಂದರೇನು? ಅನೇಕ ಜನರು "ನಾನು ನಂಬುತ್ತೇನೆ, ನಾನು ನಂಬುತ್ತೇನೆ" ಎಂದು ಹೇಳುತ್ತಾರೆ. ಆದರೆ ಅದಕ್ಕೆ ಯಾವ ಅರ್ಥವೂ ಇರುವದಿಲ್ಲ (ಮತ್ತಾಯ 7:21 ಮತ್ತು ವ್ಯಾಖ್ಯಾನ ನೋಡಿರಿ). ಯಾಕೆ ಅದಕ್ಕೆ ಯಾವ ಅರ್ಥವೂ ಇರುವದಿಲ್ಲ? ಯಾಕೆಂದರೆ ಅವರ ನಂಬಿಕೆಯು ನೈಜತೆಯಿಂದ ಕೂಡಿರುವದಿಲ್ಲ. ನಂಬಿಕೆಯು ತನ್ನನ್ನು ಪ್ರೀತಿಯ ಮೂಲಕ ವ್ಯಕ್ತಪಡಿಸಿಕೊಳ್ಳಬೇಕು. ಇಲ್ಲವಾದರೆ ಅದು ಸುಳ್ಳುನಂಬಿಕೆ ಆಗಿರುತ್ತದೆ (ಯಾಕೋಬ 2:14, 17 ಮತ್ತು ವ್ಯಾಖ್ಯಾನ ನೋಡಿರಿ).

ನಾವು ಕ್ರಿಸ್ತನನ್ನು ನಂಬುವಾಗ ಪವಿತ್ರಾತ್ಮನು ನಮ್ಮ ಜೀವಿತಗಳಲ್ಲಿ ಬರುತ್ತಾನೆ ಮತ್ತು ದೇವರಾತ್ಮನ ಮೂಲಕ ದೇವರ ಪ್ರೀತಿಯು ನಮ್ಮ ಹೃದಯಗಳಲ್ಲಿ ಸುರಿಸಲ್ಪಡುತ್ತದೆ (ರೋಮ 5:5). ಪ್ರೀತಿಯು ಪವಿತ್ರಾತ್ಮನ ಪ್ರಥಮ ಹಾಗು ಅತಿ ಪ್ರಾಮುಖ್ಯವಾದ ಫಲವಾಗಿದೆ (ವಚನ 22). ಆದ್ದರಿಂದ, ನಿಜವಾದ ನಂಬಿಕೆಯೂ ಯಾವಾಗಲೂ ನಮ್ಮ ಹೃದಯಗಳಲ್ಲಿ ದೇವರಿಗಾಗಿಯೂ ನಮ್ಮ ನೆರೆಯವನಿಗಾಗಿಯೂ ಪ್ರೀತಿಯನ್ನುಂಟುಮಾಡುತ್ತದೆ. ಮತ್ತು ನಮ್ಮ ಹೃದಯಗಳಲ್ಲಿ ಪ್ರೀತಿಯು ಇರುವದಾದರೆ ಅದು ನಮ್ಮ ಜೀವಿತದಿಂದ ಇತರರ ಜೀವಿತಗಳೊಳಗೆ ಹರಿಯಬೇಕು. ಬೇರೆ ಮಾತುಗಳಲ್ಲಿ ಹೇಳುವದಾದರೆ ನಾವು ನಮ್ಮ ಬಹಿರಂಗದ ಪ್ರೀತಿಯನ್ನು ನಮ್ಮ ನೆರೆಯವನಿಗೆ ತೋರ್ಪಡಿಸಬೇಕು. ನೈಜವಾದ ನಂಬಿಕೆಯು ಯಾವಾಗಲೂ ಪ್ರೀತಿಯಿಂದ ಕೆಲಸ ನಡಿಸುತ್ತದೆ.

7 ಕ್ರೈಸ್ತನ ಜೀವಿತವು ಒಂದು ಓಟದಂತಿರುತ್ತದೆ (2 ತಿಮೊಥೆ 4;7; ಇಬ್ರಿಯ 12:1). ಗಲಾತ್ಯದವರು ಉತ್ತಮವಾಗಿಯೇ ಪ್ರಾರಂಭಿಸಿದ್ದರು. ಆದರೆ ಸುಳ್ಳುಬೋಧಕರು ಅವರಿಗೆ ವಿಘ್ನವಾಗಿದ್ದರು. ಅದು ಮಾತ್ರವಲ್ಲದೆ, ಗಲಾತ್ಯದವರು ತಪ್ಪಾದ ದಿಕ್ಕಿನೆಡೆಗೆ ಓಡುವದಕ್ಕೆ ಪ್ರಾರಂಭಿಸಿದ್ದರು! ಅವರು ಯೇಸುವಿನ ಮೇಲಿದ್ದ ತಮ್ಮ ದೃಷ್ಟಿಯನ್ನು ತೆಗೆದು ಬಿಟ್ಟಿದ್ದರು (ಇಬ್ರಿಯ 12:2). ಗಲಾತ್ಯದವರು ಸುವಾರ್ತೆಯ ಸತ್ಯವನ್ನು ಅನುವರ್ತಿಸುವದನ್ನು ನಿಲ್ಲಿಸಿದ್ದರು. ಸತ್ಯವನ್ನು ನಂಬುವದು ಮಾತ್ರವಲ್ಲದೆ, ವಿಧೇಯರೂ ಸಹ ಆಗಿರಬೇಕು.

8 ಪೌಲನು ಗಲಾತ್ಯದವರಿಗೆ ಹೇಳುವದೇನೆಂದರೆ: ಈ ಬೋಧನೆಯು (ರಕ್ಷಣೆಗಾಗಿ ಧರ್ಮಶಾಸ್ತ್ರದ ನೇಮನಿಷ್ಟೆಗಳು ಅವಶ್ಯಕ ಎಂಬ ಸುಳ್ಳು ಬೋಧನೆಯು) ನಿಮ್ಮನ್ನು ಕರೆದಾತನಿಂದ ಹುಟ್ಟಿದ್ದಲ್ಲ. ಅಂದರೆ, ದೇವರಿಂದ ಹುಟ್ಟಿದ್ದಲ್ಲ.

9 ಅಂಥ ಸ್ವಲ್ಪ ಸುಳ್ಳು ಬೋಧನೆಯು ಲೆಕ್ಕಿಸಲಾರದಷ್ಟು ಹಾನಿಯನ್ನು ಮಾಡಬಲ್ಲದು. ಸ್ವಲ್ಪ ಹುಳಿಯಿಂದ (ಸುಳ್ಳು ಬೋಧನೆಯಿಂದ ಕಣಕವೆಲ್ಲಾ ಹುಳಿಯಾಗುವದು ಅದು ಇಡೀ ಸಭೆಯಲ್ಲೆಲ್ಲಾ ಹರಡಿಕೊಳ್ಳತ್ತದೆ (1 ಕೊರಿಂಥ 5:6 ಮತ್ತು ವ್ಯಾಖ್ಯಾನ ನೋಡಿರಿ).

10 ಆದಾಗ್ಯು ಪೌಲನು ಗಲಾತ್ಯದವರ ಮೇಲಿನ ನಿರೀಕ್ಷೆಯನ್ನು ಕಳೆದುಕೊಂಡಿಲ್ಲ. ಅವರು ತನ್ನ ಅಭಿಪ್ರಾಯವನ್ನು ಬಿಟ್ಟು ಬೇರೆ ಅಭಿಪ್ರಾಯವನ್ನು ಹಿಡಿಯುವದಿಲ್ಲವೆಂದು, ಅಂದರೆ, ಅವರು ನಿಜವಾದ ಸುವಾರ್ತೆಯಿಂದ ವಿಮುಖರಾಗುವದಿಲ್ಲವೆಂದು ಆತನು ಭರವಸೆ ಹೊಂದಿರುತ್ತಾನೆ. ಗಲಾತ್ಯದವರಲ್ಲಿ ಭೇದವನ್ನು (ಗಲಿಬಿಲಿಯನ್ನು) ಹುಟ್ಟಿಸುವ ಈ ಸುಳ್ಳುಬೋಧಕರು ಬರುವ ದಂಡನೆಯನ್ನು ಅನುಭವಿಸುವರು – ಅಂದರೆ, ಅವರು ದೇವರಿಂದ ಶಿಕ್ಷಿಸಲ್ಪಡುವರು.

11 ಗಲಾತ್ಯದವರು ಬಹಳಷ್ಟು ಗೊಂದಲಕ್ಕೊಳಗಾಗಿ ಪೌಲನೇ ಸುನ್ನತಿಮಾಡಿಸಿಕೊಳ್ಳುವದು ಅವಶ್ಯಕವೆಂಬದಾಗಿ ಬೋಧಿಸಿದ್ದಾನೆಂದು ಆರೋಪಿಸಿದ್ದರು! ಆದರೆ ಅದು ನಿಜವಾಗಿದ್ದರೆ ಯೆಹೂದ್ಯರು ಆತನನ್ನು ಹಿಂಸಿಸುತ್ತಿರಲಿಲ್ಲ ಎಂದು

ಪೌಲನು ಉತ್ತರಿಸುತ್ತಾನೆ. ಆದರೂ, ಯೆಹೂದ್ಯರು ಆತನನ್ನು ಎಡೆಬಿಡದೆ ಹಿಂಸಿಸುತ್ತಿದ್ದರಾದ್ದರಿಂದ ಅವರ ಆರೋಪವು ಸುಳ್ಳಾಗಿರುತ್ತದೆ.

ಪೌಲನು ಸುನ್ನತಿಯಾಗಬೇಕೆಂದು ಬೋಧಿಸುತ್ತಿದ್ದಿದ್ದರೆ ಶಿಲುಬೆಯ ದೆಸೆಯಿಂದ ಉಂಟಾದ ಆಕ್ಷೇಪವು ಹೋಗುವದಾಗಿತ್ತು. ಮನುಷ್ಯರು ಸುನ್ನತಿಯಾಗುವದರಿಂದ ರಕ್ಷಿಸಲ್ಪಡುವವರಾಗಿದ್ದರೆ ಶಿಲುಬೆಯ ಮೇಲೆ ಕ್ರಿಸ್ತನು ಹೊಂದಿದ ಮರಣದ ಕುರಿತು ಬೋಧಿಸುವ ಅಗತ್ಯವಿರುತ್ತಿರಲಿಲ್ಲ. ಯೆಹೂದ್ಯರಿಗೆ ಕ್ರಿಸ್ತನ ಶಿಲುಬೆಯು ಒಂದು ಬೇಸರದ ಸಂಗತಿ, ಅಂದರೆ, ಒಂದು ವಿಘ್ನವಾಗಿತ್ತು (1 ಕೊರಿಂಥ 1:23). ಯೆಹೂದ್ಯರು ಕುಚೋದ್ಯಮಾಡುತ್ತಾ "ಶಿಲುಬೆಯ ಮೇಲೆ ನೇತಾಡಿದ ಮೃತ ಅಪರಾಧಿಯು ನಮ್ಮನ್ನು ಹೇಗೆ ರಕ್ಷಿಸಬಲ್ಲನು? ಅದು ಹಾಸ್ಯಾಸ್ಪದವಾದದು!" ಎಂದು ಹೇಳುತ್ತಿದ್ದರು. ಆದದರಿಂದ, ಅವರು ಪೌಲನನ್ನು ವಿರೋಧಿಸಿದರು, ಯಾಕೆಂದರೆ ಆತನು ಮನುಷ್ಯನೊಬ್ಬನು ಸುನ್ನತಿ ಮಾಡಿಸಿಕೊಳ್ಳುವದರಿಂದಲ್ಲ, ಆದರೆ ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನಲ್ಲಿ ನಂಬಿಕೆಯಿಡುವದರಿಂದಲೇ ರಕ್ಷಿಸಲ್ಪಡುತ್ತಾನೆಂದು ಬೋಧಿಸುತ್ತಿದ್ದರು.

ಜನರು ಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಕೇಳುವದಕ್ಕೆ ಇಷ್ಟಪಡುವದಿಲ್ಲ. ಕ್ರಿಸ್ತನು ಶಿಲುಬೆಯ ಮೇಲಿಂದ ನೋಡಿ "ನನ್ನಲ್ಲಿ ನಂಬಿಕೆಯಿಡಿರಿ, ನಾನು ನಿಮ್ಮನ್ನು ರಕ್ಷಿಸುತ್ತೇನೆ" ಎಂದು ಹೇಳುತ್ತಾನೆ. ಆದರೆ ಮನುಷ್ಯರು ಉತ್ತರಿಸುತ್ತಾರೆ "ನಾನು ನನ್ನನ್ನು ರಕ್ಷಿಸಿಕೊಳ್ಳಬಲ್ಲೆನು. ನನಗೆ ಯಾರ ಸಹಾಯವೂ ಬೇಕಾಗಿಲ್ಲ. ನಾನು ಸಂಪೂರ್ಣ ಅರ್ಹನಾಗಿದ್ದೇನೆ. ನಾನು ಧರ್ಮಶಾಸ್ತ್ರವನ್ನು ಪಾಲಿಸಬಲ್ಲೆನು" ಎಂದು ಹೇಳುತ್ತಾರೆ. ಆದದರಿಂದ, ಹಾಗೆ ಹೇಳುವದರಲ್ಲಿ ಮನುಷ್ಯನು ಶಿಲುಬೆಯನ್ನು ವಿರೋದಿಸುತ್ತಾನೆ. ಶಿಲುಬೆಯು ಆತನಿಗೆ ಒಂದು 'ವಿಘ್ನ' ಆಗಿರುತ್ತದೆ.

12 ರಕ್ಷಣೆ ಹೊಂದುವದಕ್ಕೆ ಸುನ್ನತಿಮಾಡಿಸಿಕೊಳ್ಳಬೇಕೆಂದು ಹೇಳುವದರ ಮೂಲಕ ಗಲಾತ್ಯದವರನ್ನು ಮಾರ್ಗ ತಪ್ಪಿಸುತ್ತಿದ್ದ ಯೆಹೂದ್ಯ ಬೋಧಕರಾದ ಆ ಕಳವಳಪಡಿಸುವವರ ವಿಷಯದಲ್ಲಿ ಪೌಲನು ಕೆಲವು ಕಠೋರವಾದ ಮಾತುಗಳನ್ನು ಉಪಯೋಗಿಸುತ್ತಾನೆ. ಪೌಲನು ಹೇಳುವದೇನೆಂದರೆ : " ಅಂಥ ಬೋಧಕರು ಸುನ್ನತಿಯನ್ನು ಮಾತ್ರವೇ ಮಾಡಿಸಿಕೊಳ್ಳದೆ ತಮ್ಮ ಅಂಗಚ್ಛೇದನೆಯನ್ನು ಸಹ ಮಾಡಿಕೊಳ್ಳಲಿ! ಪೌಲನ ಕಾಲದಲ್ಲಿ ವಿಗ್ರಹಾರಾಧಕ ದೇಶಗಳಲ್ಲಿನ ಕೆಲವು ಜನರು ತಮ್ಮ ದೇವರುಗಳನ್ನು ಮೆಚ್ಚಿಸುವದಕ್ಕೆ ಅಂಗಛೇದನೆಯನ್ನು ಮಾಡಿಕೊಳ್ಳುತ್ತಿದ್ದರು. ಯೆಹೂದ್ಯ ಸುಳ್ಳುಬೋಧಕರು ಸಹ ಹಾಗೆಯೇ ಮಾಡಿಕೊಳ್ಳಲಿ!

## ಪವಿತ್ರಾತ್ಮನಿಗೆ ಅನುಗುಣವಾದ ಜೀವಿತ (5:13-26)

13 ದೇವರು ಮಾನವನನ್ನು ಸ್ವತಂತ್ರನಾಗಿರಬೆಕೆಂದು ಸೃಷ್ಟಿಸಿದನು. ಮಾನವನು ಸ್ವಾತಂತ್ರ್ಯಕ್ಕಾಗಿ ನಿರ್ಮಿಸಲ್ಪಟ್ಟನು ಹೊರತು ದಾಸತ್ವಕ್ಕಾಗಿ ಅಲ್ಲ (ಯೋಹಾನ 8:32, 36; ರೋಮ 8:2; ಗಲಾತ್ಯ 5:1). ಆದರೆ ನಿಮಗಿರುವ ಸ್ವಾತಂತ್ರ್ಯವನ್ನು ಪಾಪಾಧೀನ ಸ್ವಭಾವಕ್ಕೆ [25] ಆಸ್ಪದವಾಗಿ ಬಳಸಬೇಡಿರಿ ಎಂದು ಪೌಲನು ಹೇಳುತ್ತಾನೆ.

ಕ್ರೈಸ್ತರಾದ ನಾವು ನಿಜವಾಗಿಯೂ ಸ್ವತಂತ್ರರೇ. ಹೇಗಿದ್ದರೂ,. ನಾವು ಪಾಪಮಾಡುವದಕ್ಕೆ ಸ್ವತಂತ್ರರಾಗಿರುವದಿಲ್ಲ (ರೋಮ 6:1-2, 12-14). ನಾವು ಧರ್ಮಶಾಸ್ತ್ರದ ದಾಸತ್ವದೊಳಗಿಂದ ಸ್ವತಂತ್ರರಾಗಿದ್ದೇವೆ, ಆದರೆ ಧರ್ಮಶಾಸ್ತ್ರವನ್ನು ಉಲ್ಲಂಘಿಸುವದಕ್ಕೆ ನಾವು ಸ್ವತಂತ್ರರಲ್ಲ. ನಾವು ಸ್ವತಂತ್ರರಾಗಿದ್ದರೂ ನಮ್ಮ ಜೀವಿತಗಳು ಪರಿಶುದ್ಧ ಹಾಗು ದೋಷವಿಲ್ಲದವು ಗಳಾಗಿ ಉಳಿಯಬೇಕು (ಮತ್ತಾಯ 5:48; 1 ಪೇತ್ರ 1:15-16).

ಹಲವಾರು ವೇಳೆಗಳಲ್ಲಿ ಇತರ ಧರ್ಮಗಳ ಅನುಯಾಯಿಗಳು ಕ್ರೈಸ್ತರನ್ನು ಇವರು ಯಾವದೇ ನೇಮವಿಲ್ಲದ ಸಡಿಲವಾದ ಜೀವಿತಗಳನ್ನು ನಡಿಸುತ್ತಾರೆಂದು ಆರೋಪಿಸುತ್ತಾರೆ. ಕ್ರೈಸ್ತರು ಇತರರ ಬಗ್ಗೆ ಚಿಂತೆಯಿಲ್ಲದಂತೆ ತಮ್ಮ ಇಷ್ಟ ಬಂದ ಹಾಗೆ ಮಾಡುತ್ತಾರೆ, ಕೆಟ್ಟ ನಡವಳಿಕೆಯನ್ನು ಹೊಂದಿರುತ್ತಾರೆ ಎಂಬದಾಗಿ ಅವರು ದೂರುತ್ತಾರೆ. ಮತ್ತು ಬಹಳಷ್ಟು ವೇಳೆಗಳಲ್ಲಿ ಅಂಥ ಆರೋಪಗಳು ಸತ್ಯವಾದವು ಗಳೇ ಆಗಿರುತ್ತವೆ ಎಂದು ಹೇಳಬೇಕಾಗುತ್ತದೆ! ಆದರೆ ಅದು ಜರುಗಬಾರದು.

ಕ್ರೈಸ್ತರಾದ ನಾವು ಸ್ವತಂತ್ರರಾಗಿದ್ದೇವೆ. ಆದರೂ ನಾವು ನಿಯಮಕ್ಕನುಸಾರವಾಗಿ ಜೀವಿಸುತ್ತೇವೆ. (ಮಾರ್ಕ 12:29-31; ಯೋಹಾನ 13;34-35 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಸೇವೆ ಮಾಡುವದಕ್ಕೆ ಸ್ವತಂತ್ರರಾಗಿದ್ದೇವೆ. ಒಬ್ಬ ದಾಸನು ತನ್ನ ಯಜಮಾನನಿಗೆ ಪ್ರೀತಿಯ ನಿಮಿತ್ತದಿಂದ ಸೇವೆಮಾಡುವದಿಲ್ಲ, ಆದರೆ ಬದಲಾಗಿ, ಕರ್ತವ್ಯ ಹಾಗು ಭಯದಿಂದ ಮಾಡುತ್ತಾನೆ. ಆದರೆ, ನಾವು , ಸ್ವತಂತ್ರರಾದವರಾಗಿ ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಸೇವೆಮಾಡುತ್ತೇವೆ. ಸ್ವತಂತ್ರರಾಗಿರುವವರು ಮಾತ್ರವೇ ಉಚಿತವಾಗಿ ಪ್ರೀತಿಸಬಲ್ಲರು.

ಕ್ರೈಸ್ತರಾದ ನಾವು ಪಾಪದಿಂದ ಸ್ವತಂತ್ರ ಗೊಳಿಸಲ್ಪಟ್ಟಿರುತ್ತೇವೆ, ಆದರೆ ಅದೇ ವೇಳೆಯಲ್ಲಿ ನಾವು ನಮ್ಮನ್ನು ದೇವರಿಗೆ ದಾಸರನ್ನಾಗಿ ಮಾಡಿಕೊಂಡಿದ್ದೇವೆ (ರೋಮ 6:22). ನಾವು ನಮ್ಮ ಪೂರ್ವ ಯಜಮಾನನಾದ ಧರ್ಮಶಾಸ್ತ್ರದಿಂದ ಬಿಡಗಡೆಗೊಳಿಸಲ್ಪಟ್ಟಿದ್ದೇವೆ, ಅದು ಮರಣವನ್ನು ಮಾಡುವದಾಗಿದೆ; ಆದರೆ ನಾವು ಒಬ್ಬ ಹೊಸ ಯಜಮಾನನಾದ ಕ್ರಿಸ್ತನಿಗೆ ಸೇವಕರಾಗಿದ್ದೇವೆ, ಆತನು ನಮ್ಮನ್ನು ಜೀವಕ್ಕೆ ನಡಿಸುತ್ತಾನೆ. ನಾವು ಭಯದ ಕಾರಣದಿಂದ ಧರ್ಮಶಾಸ್ತ್ರಕ್ಕೆ ವಿಧೇಯರಾಗುತ್ತಿದ್ದೆವು . ಆದರೆ ಈಗ ನಾವು ಕ್ರಿಸ್ತನಿಗೆ ಭಯದ ಕಾರಣದಿಂದಲ್ಲ, ಆದರೆ ನಾವು ಆತನನ್ನು ಪ್ರೀತಿಸುತ್ತೇವೆಂಬ ಕಾರಣಕ್ಕಾಗಿ ವಿಧೇಯರಾಗುತ್ತೇವೆ (ಯೋಹಾನ 14:15, 21; 1 ಯೋಹಾನ 4:18).

14 ಗಲಾತ್ಯದಲ್ಲಿನ ಯೆಹೂದ್ಯ ನಾಯಕರು ಪ್ರೀತಿಯ ವಿಷಯದಲ್ಲಿ ಎಲ್ಲವನ್ನು ತಿಳಿದಿರಬೇಕಾಗಿತ್ತು, ಅವರು ಸ್ವಂತ ಯೆಹೂದ್ಯ ಧರ್ಮಶಾಸ್ತ್ರವೆಲ್ಲಾ ಒಂದೇ ಆಜ್ಞೆಯಲ್ಲಿ ಅಡಕವಾಗಿದೆ: "ನಿನ್ನ ನರೆಯವನನ್ನು ನಿನ್ನಂತೆಯೇ ಪ್ರೀತಿಸು" (ಯಾಜಕಕಾಂಡ 19:18; ಮತ್ತಾಯ 22:35-40; ಮಾರ್ಕ 12:31; ರೋಮ 13:8-9; ಗಲಾತ್ಯ 6:2).

ಒಂದು ಪ್ರಶ್ನೆ ಉದ್ಭವಿಸುತ್ತದೆ: ಇಲ್ಲಿ ಪೌಲನು ನಾವು ಹಿಂಬಾಲಿಸಬೇಕೆಂದು ಯೆಹೂದ್ಯ ಧರ್ಮಶಾಸ್ತ್ರದಂತೆಯೇ ಇನ್ನೊಂದು ಹೊಸ ಧರ್ಮಶಾಸ್ತ್ರವನ್ನು ಕೊಡುತ್ತಿರುವನೇ? ಆತನು ನಮಗೆ ಇನ್ನೊಂದು ಧರ್ಮಶಾಸ್ತ್ರವನ್ನು ಕೊಡುತ್ತಿರುವದಾದರೆ ಕ್ರೈಸ್ತರಾದ ನಾವು ಯೆಹೂದ್ಯರಿಗಿಂತ ವ್ಯತ್ಯಾಸವೇನಾಗಿರುವದಿಲ್ಲ. ಆದರೆ ಈ ಪ್ರೀತಿಯ ಹೊಸ ಧರ್ಮಶಾಸ್ತ್ರವು ಹಳೆಯ ಯೆಹೂದ್ಯ ಧರ್ಮಶಾಸ್ತ್ರದ ಹಾಗಿರುವದಿಲ್ಲ, ಇಲ್ಲವೆ ಇದು ಇತರ ಧರ್ಮಗಳ ನೇಮ ನಿಷ್ಟೆಗಳ ಹಾಗೆಯೂ ಇರುವದಿಲ್ಲ. ಮೊಟ್ಟಮೊದಲನೆಯದಾಗಿ, .ಯೆಹೂದ್ಯರು ಹಾಗು ಇತರ ಧರ್ಮಗಳ ಅನುಯಾಯಿಗಳು ರಕ್ಷಣೆಯನ್ನು ಹೊಂದುವದಕ್ಕಾಗಿ ತಮ್ಮ ನೇಮನಿಷ್ಠೆ ಹಾಗು ಸಂಪ್ರದಾಯಗಳನ್ನು ಪಾಲಿಸುತ್ತಾರೆ. ಆದರೆ ಕ್ರೈಸ್ತರಾದ ನಾವು ರಕ್ಷಣೆ ಹೊಂದಿಕೊಳ್ಳಬೇಕೆಂಬದಾಗಿ ಪ್ರೀತಿಯ ನೇಮವನ್ನು ಪಾಲಿಸುವದಿಲ್ಲ. ಬದಲಾಗಿ, ನಾವು ಈಗಾಗಲೇ ರಕ್ಷಣೆ ಹೊಂದಿದ್ದೇವೆಂಬದಕ್ಕಾಗಿ ಅದನ್ನು ಪಾಲಿಸುತ್ತೇವೆ. ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವದರಿಂದಲೇ ರಕ್ಷಣೆ ಹೊಂದಿದ್ದೇವೆ. ಹೊರತು ನಾವು ಯಾವದೇ ಧರ್ಮಶಾಸ್ತ್ರವನ್ನು ಹಿಂಬಾಲಿಸುತ್ತೇವೆ ಎಂಬುದರ ನಿಮಿತ್ತದಿಂದಲ್ಲ. ಕ್ರೈಸ್ತ ಧರ್ಮದ ನೇಮಗಳಿಗೆ ವಿಧೇಯರಾಗುತ್ತೇವೆಂಬ ಕಾರಣಕ್ಕಾಗಿ ನಾವು ರಕ್ಷಿಸಲ್ಪಟ್ಟಿರುವದಿಲ್ಲ. ನಾವು ರಕ್ಷಕನಾದ ಕ್ರಿಸ್ತನನ್ನು ಹಿಂಬಾಲಿಸುತ್ತೇವೆಂಬುದಕ್ಕಾಗಿ ರಕ್ಷಿಸಲ್ಪಟ್ಟಿದ್ದೇವೆ. ನಮ್ಮ ರಕ್ಷಣೆಯು ಧರ್ಮದಿಂದಲ್ಲ, ಆದರೆ ಒಬ್ಬ ವ್ಯಕ್ತಿಯಿಂದ – ಯೇಸು ಕ್ರಿಸ್ತನಿಂದ – ಬರುವದಾಗಿದೆ.

ಎರಡನೆಯ ವ್ಯತ್ಯಾಸವೇನೆಂದರೆ; ಯೆಹೂದ್ಯರು ಹಾಗು ಇತರ ಧರ್ಮಗಳವರು ತಮ್ಮ ನೇಮನಿಷ್ಠೆ ಹಾಗು ಸಂಪ್ರದಾಯಗಳನ್ನು ತಮ್ಮ ಸ್ವಸಾಮರ್ಥ್ಯದಲ್ಲಿ ಪಾಲಿಸುವದಕ್ಕೆ ಪ್ರಯತ್ನಿಸುತ್ತಾರೆ. ಆದರೆ ಕ್ರೈಸ್ತರಾದ ನಾವು ಪ್ರೀತಿಯ ನಿಯಮವನ್ನು ನಮ್ಮ ಸ್ವಂತ ಶಕ್ತಿಯಲ್ಲಿ ಕೈಕೊಂಡು ನಡೆಯುವದಿಲ್ಲ. ನಾವು ಕ್ರಿಸ್ತನ ಪವಿತ್ರಾತ್ಮನನ್ನು ಹೊಂದಿಕೊಂಡಿರುತ್ತೇವೆ; ದೇವರಾತ್ಮನ ಬಲದಿಂದ ಮಾತ್ರವೇ ನಾವು ಪ್ರೀತಿಯ ನಿಯಮವನ್ನು ಕೈಕೊಂಡು ನಡೆಯುತ್ತೇವೆ. ನಮ್ಮ ಪ್ರೀತಿಯು ನಮ್ಮ ಸ್ವಂತ ಸ್ವಭಾವದಿಂದ ಬರುವದಿಲ್ಲ, ಆದರೆ ನಮ್ಮಲ್ಲಿ ವಾಸಿಸುವ ಪವಿತ್ರಾತ್ಮನಿಂದಲೇ ಬರುತ್ತದೆ. ಪವಿತ್ರಾತ್ಮನ ಮೂಲಕವಾಗಿ ನಮ್ಮ ಹೃದಯಗಳಲ್ಲಿ ಸುರಿಸಲ್ಪಟ್ಟಿರುವ ಪ್ರೀತಿಯ ಕಾರಣದಿಂದಲೇ ನಾವು ಇತರರನ್ನು ಪ್ರೀತಿಸುತ್ತೇವೆ (ರೋಮ 5:5).

ಹೌದು, ಕ್ರೈಸ್ತರು ನಿಜವಾಗಿಯೂ ಪ್ರೀತಿಯ ನಿಯಮಕ್ಕೆ ವಿಧೇಯರಾಗಬೇಕು. ಆದರೆ, ವಿಧೇಯರಾಗುವದಕ್ಕೆ ಬಲವನ್ನು ದೇವರು ಪವಿತ್ರಾತ್ಮನ ಮುಖಾಂತರ ನಮಗೆ ದಯಪಾಲಿಸುತ್ತಾನೆ. ನಾವು ಮಾಡುವದೆಲ್ಲವೂ ದೇವರ ಕೃಪೆ ಹಾಗು ಬಲದ ಮುಖಾಂತರವೇ ಮಾಡಲ್ಪಡುತ್ತದೆ. ಇಲ್ಲಿ ಇನ್ನೊಂದು ಪ್ರಶ್ನೆಯು ಉದ್ಭವಿಸುತ್ತದೆ. ಧರ್ಮಶಾಸ್ತ್ರವು "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು" ಎಂದು ಹೇಳುತ್ತದೆ. ನಿನ್ನಂತೆಯೇ ಎಂದರೆ ಅರ್ಥವೇನು? ನಾವು ನಮ್ಮನ್ನೂ, ನಮ್ಮ ನೆರೆಯವರನ್ನೂ ಸರಿಸಮಾನವಾಗಿ ಪ್ರೀತಿಸಬೇಕು ಎಂದು ಇದರ ಅರ್ಥವೋ?

ಇಲ್ಲ, ಇದು ಅದರ ಅರ್ಥವಲ್ಲ. ನಾವು ನಮ್ಮನ್ನು ಪ್ರೀತಿಸುವದಕ್ಕಿಂತಲೂ ಹೆಚ್ಚಾಗಿ ನಮ್ಮ ನೆರೆಯವನನ್ನು ಪ್ರೀತಿಸಬೇಕು. ಕ್ರಿಸ್ತನು ಹೇಳಿದ್ದೇನೆಂದರೆ: "ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ" (ಮಾರ್ಕ 8:34). ಸ್ವತಃ ಯೇಸುವಿನ ಮಾದರಿಯನ್ನು ಅನುಸರಿಸುತ್ತಾ ನಾವು ಇತರರಿಗಾಗಿ ನಮ್ಮ ಪ್ರಾಣಗಳನ್ನು ಕೊಡುವದಕ್ಕೂ ಸಿದ್ಧರಾಗಿರಬೇಕು (ಯೋಹಾನ 15:13). ಆದದರಿಂದ, ನಿನ್ನಂತೆಯೇ ಎಂಬುದರ ಅರ್ಥವು ಹೀಗಿರುತ್ತದೆ: ಸ್ವಾಭಾವಿಕ ಮನುಷ್ಯನು ತನ್ನನ್ನು ಪ್ರೀತಿಸಿಕೊಳ್ಳುವಷ್ಟೇ ಆತ್ಮೀಕರಾದ ನಾವು ಇತರರನ್ನು ಪ್ರೀತಿಸಬೇಕು. ಸ್ವಾಭಾವಿಕ ಮನುಷ್ಯನು ಎಲ್ಲ ಕ್ಕಿಂತ ಮೊದಲು – ಇತರರಿಗಿಂತ ಮೇಲಾಗಿ – ತನ್ನನ್ನು ಪ್ರೀತಿಸಿಕೊಳ್ಳುತ್ತಾನೆ. ಆದದರಿಂದ, ಆತ್ಮೀಕವಾದ ನಾವು ಇತರರನ್ನು ಎಲ್ಲಕ್ಕಿಂತ ಮೊದಲು – ನಮಗಿಂತ ಮೇಲಾಗಿ ಪ್ರೀತಿಸಬೇಕು.

ಪೌಲನು ಇಲ್ಲಿ ಮೊದಲನೆಯ ಆಜ್ಞೆಯನ್ನು ಪ್ರಸ್ತಾಪಿಸುವದಿಲ್ಲ; ನಿನ್ನ ದೇವರಾದ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ, ಪೂರ್ಣ ಪ್ರಾಣದಿಂದಲೂ, ಪೂರ್ಣ ಬುದ್ಧಿಯಿಂದಲೂ, ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು (ಮಾರ್ಕ 12:30). ಇದು ಪ್ರಥಮ ಹಾಗು ಅತಿ ಶ್ರೇಷ್ಠ ಆಜ್ಞೆಯೆಂಬದನ್ನು ಪ್ರತಿಯೊಬ್ಬ ಯೆಹೂದ್ಯನು ತಿಳಿದವನಾಗಿದ್ದನು. ಪೌಲನು ಅದನ್ನು ಪ್ರಸ್ತಾಪಿಸುವ ಅಗತ್ಯವು ಸಹ ಇರುವದಿಲ್ಲ ಹೇಗಿದ್ದರೂ, ನಾವು ದೇವರನ್ನು ಪ್ರೀತಿಸದಿದ್ದರೆ ಖಂಡಿತವಾಗಿಯೂ ನಮ್ಮ ನೆರೆಯವನನ್ನು ಪ್ರೀತಿಸುವದಕ್ಕೆ ಶಕ್ತರಾಗುವದಿಲ್ಲ ಎಂಬದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳುವ ಅಗತ್ಯವಿರುತ್ತದೆ. ದೇವರನ್ನು ಪ್ರೀತಿಸುವದು ಯಾವಾಗಲೂ ಅಗ್ರಸ್ಥಾನದಲ್ಲಿರುತ್ತದೆ.

ಆದಾಗ್ಯು, ಇನ್ನೊಂದೆಡೆಯಲ್ಲಿ ನಾವು ನಮ್ಮ ನೆರೆಯವನ್ನು ಪ್ರೀತಿಸದಿದ್ದರೆ ದೇವರನ್ನು ಪ್ರೀತಿಸುತ್ತೇವೆಂದು ಹೇಳಲು ಸಾಧ್ಯವಿಲ್ಲ. ದೇವರ ಮೇಲಣ ನಿಜವಾದ ಪ್ರೀತಿಯು ಯಾವಾಗಲೂ ನೆರೆಯವನ ಮೇಲಣ ಪ್ರೀತಿಯಲ್ಲಿ ಫಲಿತಗೊಳ್ಳುತ್ತದೆ (1 ಯೋಹಾನ 4:20-21) ಮತ್ತು ನಮ್ಮ ನೆರೆಯವನು ಯಾರು? ಕೊರತೆಯಲ್ಲಿರುವ ಯಾವದೇ ವ್ಯಕ್ತಿಯು ನಮ್ಮ ನೆರೆಯವನಾಗಿದ್ದಾನೆ (ಲೂಕ 10:25-37 ನೋಡಿರಿ). ಹಾಗಾದರೆ, ಪ್ರತಿಯೊಬ್ಬನು ನಮ್ಮ ನೆರೆಯವನಾಗಿದ್ದಾನೆ.

15 ಪವಿತ್ರಾತ್ಮನಿಲ್ಲದಿರುವಲ್ಲಿ ಪ್ರೀತಿಯು ಇರುವದಿಲ್ಲ. ಎಲ್ಲಿ ಪ್ರೀತಿಯಿರುವದಿಲ್ಲವೋ ಅಲ್ಲಿ ಜನರು ಒಬ್ಬರನ್ನೊಬ್ಬರು ಕಚ್ಚಿ ಹರಕೊಂಡು ನುಂಗುವವರಾಗುತ್ತಾರೆ – ಅಂದರೆ, ಅವರು ಒಬ್ಬರನ್ನೊಬ್ಬರು ವಿರೋಧಿಸುವವರೂ, ಆರೋಪಿಸುವವರೂ, ನಿಂದನೆ ಮಾಡುವವರೂ ಆಗಿರುತ್ತಾರೆ.

ನಾವು ಒಬ್ಬರನ್ನೊಬ್ಬರು ಆರೋಪಿಸುತ್ತಾ ನಿಂದನೆ ಮಾಡುವದಾದರೆ ನಮ್ಮ ಸಭೆಯು ನಾಶವಾಗುವದು. ಯೇಸು ಹೇಳಿದ್ದೇನೆಂದರೆ: "ಒಂದು ಮನೆಯಲ್ಲಿ ಭೇದ ಹುಟ್ಟಿದರೆ ಆ ಮನೆಯು ನಿಲ್ಲಲಾರದು" (ಮಾರ್ಕ 3:25). ಒಂದು ವೇಳೆ ನಾವು ಇನ್ನೊಬ್ಬರ ವಿಷಯದಲ್ಲಿ ಹೇಳುವ ನಕಾರಾತ್ಮಕ ಸಂಗತಿಗಳು ಸತ್ಯವಾಗಿದ್ದಾಗ್ಯು ಸಹ ಅದು ಸಭೆಯನ್ನು ನಾಶಮಾಡುವದು. ಆಗಲೂ ಅದು ನಿಂದನೆಯೇ. ನಾವು ನಮ್ಮ ಸಹೋದರನ ವಿರುದ್ಧವಾಗಿ ಹೇಳುವ ಯಾವದೇ ಸಂಗತಿಯು ನಿಂದನೆಯಾಗಿದೆ, ಅದು ಸತ್ಯವೇ ಆಗಿರಬಹುದು ಇಲ್ಲವೆ ಸುಳ್ಳಾಗಿರಬಹುದು. ನಮ್ಮ ಸಹೋದರನು ತಪ್ಪಿನಲ್ಲಿ ಅಥವಾ ಪಾಪದಲ್ಲಿ ಬಿದ್ದಿರುವಾಗ ನಾವು ಆತನ ಮೇಲೆ ತಪ್ಪು ಹೊರಿಸಲೇಬೇಕಾಗಿ ಬರುವದಾದರೆ ನಾವು ಮೊದಲು ಏಕಾಂತದಲ್ಲಿ ಆತನ ಮುಖದೆದುರಿಗೆ ಮಾಡಬೇಕು. ಆತನು ತಾನೇ ಉತ್ತರ ನೀಡುವಂತೆ ನಾವು ಅವನಿಗೆ ಒಂದು ಅವಕಾಶವನ್ನು ನೀಡಬೇಕು (ಮತ್ತಾಯ. ೧೮:೧೫ ಮತ್ತು ವ್ಯಾಖ್ಯಾನ ನೋಡಿರಿ). ಆದರ ನಂತರ ಮಾತ್ರವೇ ನಾವು ನಮ್ಮ ದೂರಿನೊಂದಿಗೆ ಸಭೆಯಲ್ಲಿನ ಹಿರಿಯರ ಬಳಿಗೆ ಹೋಗಬಹುದಾಗಿದೆ (ಮತ್ತಾಯ 18:16 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ನಮ್ಮೊಳಗೆ ಇನ್ನೊಬ್ಬ ಸಹೋದರ ಅಥವಾ ಸಹೋದರಿಯ ವಿರುದ್ಧವಾಗಿ ಮಾತಾಡಿಕೊಳ್ಳುವ ಹಕ್ಕು ನಮಗಿರುವದಿಲ್ಲ.

16 ಪವಿತ್ರಾತ್ಮನನ್ನು ಹೊಂದಿಕೊಂಡವರಾದ ನಾವು ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಬೇಕು. ನಾವು ಆತ್ಮನಿಂದ ನಡಿಸಲ್ಪಡಬೇಕು. ನಾವು ನಮ್ಮ ಪಾಪಾಧೀನ ಸ್ವಭಾವವನ್ನು (ನಮ್ಮ ಶರೀರಭಾವ) ಪವಿತ್ರಾತ್ಮನಿಗೆ ಅದೀನ ಪಡಿಸಬೇಕು. ನಾವು ಹೀಗೆ ಮಾಡುವದಾದರೆ ಪಾಪಾಧೀನ ಸ್ವಭಾವದ ಅಭಿಲಾಷೆಗಳನ್ನು ನೆರವೇರಿಸುವದರಿಂದ ದೂರವಿರುವೆವು . ಬೇರೆ ಮಾತುಗಳಲ್ಲಿ ಹೇಳುವದಾದರೆ. ನಾವು ಪಾಪದಲ್ಲಿ ಬೀಳದಂತೆ ಪವಿತ್ರಾತ್ಮನು ನಮ್ಮನ್ನು ಕಾಪಾಡುವನು. ಆದರೆ ಪಾಪದಲ್ಲಿ ಬೀಳದಂತೆ ತಪ್ಪಿಸಿಕೊಳ್ಳಬೇಕಾದರೆ ನಾವು ನಿರಂತರವಾಗಿ ಪವಿತ್ರಾತ್ಮನಿಗೆ ನಮ್ಮನ್ನು ಒಪ್ಪಿಸಿಕೊಳ್ಳಬೇಕು. ನಾವು ಎಲ್ಲಾ ಸಮಯಗಳಲ್ಲಿಯೂ ಪವಿತ್ರಾತ್ಮನನ್ನು ಅವಲಂಭಿಸಿ ನಡೆದುಕೊಳ್ಳಬೇಕು. ಮತ್ತು ಅಂತಿಮವಾಗಿ, ನಾವು ಪವಿತ್ರಾತ್ಮನಿಗನುಸಾರವಾಗಿ ಜೀವಿಸದಿದ್ದರೆ, ಆತ್ಮನಿಂದ ನಡೆಸಿಕೊಳ್ಳಲ್ಪಡದಿದ್ದರೆ ನಮ್ಮನ್ನು ದೇವರ ಪುತ್ರರು ಹಾಗು ಪುತ್ರಿಯರೆಂದು ಕರೆದು ಕೊಳ್ಳುವದಕ್ಕೆ ಶಕ್ತರಾಗುವದಿಲ್ಲ (ರೋಮ 8:14 ನೋಡಿರಿ).

17 ನಾವು ಕ್ರಿಸ್ತನಲ್ಲಿ ನಂಬಿಕೆಯಿಟ್ಟು ಪವಿತ್ರಾತ್ಮನನ್ನು ಪಡೆದುಕೊಂಡಿದ್ದರೂ ನಮ್ಮ ಪೂರ್ವ ಪಾಪಾಧೀನ ಸ್ವಭಾವವು ಸಂಪೂರ್ಣವಾಗಿ ಸಾಯುವದಿಲ್ಲ ಹಾಗು ಅಳಿದು ಹೋಗುವದಿಲ್ಲ. ಅದು ಪವಿತ್ರಾತ್ಮನ ಅದೀನಕ್ಕೊಳಪಡಿಸಲ್ಪಟ್ಟಿದ್ದರೂ ಯಾವಾಗಲೂ ನಮ್ಮಲ್ಲಿ ಇರುತ್ತದೆ. ಮತ್ತು ಅದು ಯಾವಾಗಲೂ ಪವಿತ್ರಾತ್ಮನನ್ನು ವಿರೋಧಿಸುತ್ತದೆ. ಅದು ನೂತನ ಸ್ವಭಾವವನ್ನು, ನಾವು ನಂಬಿದಾಗ ಹೊಂದಿಕೊಂಡ ನೂತನ ಆತ್ಮೀಕ ಜೀವಿತವನ್ನೂ ವಿರೋಧಿಸುತ್ತದೆ.

ಆದ್ದರಿಂದ, ನಮ್ಮ ಪ್ರಾಣಗಳಲ್ಲಿ ನಿರಂತರವಾದ ಹೋರಾಟವು ಇರುತ್ತದೆ, ಮತ್ತು ಈ ಹೋರಾಟವು ನಾವು ಸಾಯುವ ತನಕ ಇರುತ್ತದೆ. ನೂತನ ಆತ್ಮೀಕ ಸ್ವಭಾವವು ಒಳ್ಳೇದನ್ನು ಮಾಡುವದಕ್ಕೆ ಅಪೇಕ್ಷಿಸುತ್ತದೆ, ಆದರೆ ಪೂರ್ವ ಪಾಪಾಧೀನ ಸ್ವಭಾವವು ಆತನನ್ನು ವಿರೋಧ ಮಾಡುತ್ತದೆ (ರೋಮ 7;18-19).

ನಾವು ಆತ್ಮನನ್ನು ಅನುಸರಿಸಿ ಜೀವಿಸುವವರೆಗೂ (ವಚನ 16), ನಮ್ಮ ಪಾಪಾಧೀನ ಸ್ವಭಾವವು ಆತ್ಮನಿಗೆ ಆಧೀನವಾಗಿ ಇಡಲ್ಪಡುತ್ತದೆ. ನಾವು ಆತ್ಮನನ್ನು ಅನುಸರಿಸಿ ಜೀವಿಸುವಾಗ ನಮ್ಮ ಪಾಪಾಧೀನ ಸ್ವಭಾವವು ಶಿಲುಬೆಗೆ ಹಾಕಲ್ಪಡುತ್ತದೆ; ಅಂದರೆ, ಅದು ನಿಷ್ಕ್ರೀಯಗೊಳಿಸಲ್ಪಡುತ್ತದೆ (ರೋಮ 6:6-7, 12-14; ಗಲಾತ್ಯ 2;20; 5:24 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ಪವಿತ್ರಾತ್ಮನನ್ನು ಅನುಸರಿಸಿ ಜೀವಿಸುವಾಗ ಪಾಪಮಾಡುವದರ ಮೂಲಕ ಪಾಪಾಧೀನ ಸ್ವಭಾವದ ಅಭಿಲಾಷೆಗಳನ್ನು ನೆರವೇರಿಸುವದು ಅಗತ್ಯವಾಗಿರುವದಿಲ್ಲ, ಯಾಕೆಂದರೆ ಪಾಪಾಧೀನ ಸ್ವಭಾವಕ್ಕೆ ನಮ್ಮ ಮೇಲೆ ಯಾವ ಬಲವೂ ಇರುವದಿಲ್ಲ. ನಾವು ಪಾಪದ ಬಲದಿಂದ ಬಿಡುಗಡೆಗೊಂಡವರಾಗಿದ್ದೇವೆ. ಇದು ಕ್ರಿಸ್ತನಲ್ಲಿ ನಮಗಿರುವ ಸ್ವಾತಂತ್ರ್ಯದ ಅತಿ ಆಳವಾದ ಅರ್ಥವಾಗಿದೆ.

ಹೇಗಿದ್ದರೂ, ನಾವು ಪವಿತ್ರಾತ್ಮನಿಗೆ ಅನುಗುಣವಾಗಿ ಜೀವಿಸುವದನ್ನುನಿಲ್ಲಿಸುವದಾದರೆ, ನಾವು ಪವಿತ್ರಾತ್ಮನ ಮೇಲೆ ಆತುಕೊಳ್ಳುವದನ್ನು ನಿಲ್ಲಿಸುವದಾದರೆ ತಕ್ಷಣವೇ ನಮ್ಮ ಪೂರ್ವ ಪಾಪಾಧೀನ ಸ್ವಭಾವವು ಜೀವ ಪಡೆದುಕೊಂಡು ನಾವು ಅದನ್ನು ಇಟ್ಟಂಥ ಶಿಲುಬೆಯ ಮೇಲಿಂದ ಕೆಳಗಿಳಿದು ಬರುತ್ತದೆ; ಆಗ ನಾವು ತಿರಿಗೊಮ್ಮೆ ಅದರ ಹತೋಟಿಗೆ ಒಳಗಾಗುತ್ತೇವೆ. ಇದು ಸಂಭವಿಸುವದಾದರೆ ನಾವು ನಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ತಿರಿಗೊಂದಾವರ್ತಿ ಪಾಪಕ್ಕೆ ದಾಸರಾಗುತ್ತೇವೆ.

18 ಆದರೆ ನೀವು ಆತ್ಮನಿಂದ ನಡಿಸಿಕೊಳ್ಳುವವರಾದರೆ ಇನ್ನು ನೇಮನಿಷ್ಠೆಗಳಿಗೆ (ಧರ್ಮಶಾಸ್ತ್ರಕ್ಕೆ) ಅಧೀನರಲ್ಲ. ಇಲ್ಲಿ ನೇಮ ನಿಷ್ಠೆಯು ಯೆಹೂದ್ಯ ಧರ್ಮಶಾಸ್ತ್ರವಾಗಿದೆ, ಅದನ್ನು ಪೌಲನು ಇನ್ನೊಂದು ಕಡೆಯಲ್ಲಿ ಪಾಪಮರಣಗಳಿಗೆ ಕಾರಣವಾದ ನಿಯಮ (ಧರ್ಮಶಾಸ್ತ್ರ) ಎಂದು ಕರೆಯುತ್ತಾನೆ (ರೋಮ 8:2). ಈ ಧರ್ಮಶಾಸ್ತ್ರದ ಅಧೀನದಲ್ಲಿರುವದೆಂದರೆ ಶಾಪದ ಅಧೀನದಲ್ಲಿ ಇರುವದು ಎಂಬ ಅರ್ಥವಾಗಿದೆ (ಗಲಾತ್ಯ 3:13) ಇದು ಮರಣದಂಡನೆಯ ಅಡಿಯಲ್ಲಿರುವದು; ಪಾಪದ ಬಲಕ್ಕೆ ಅದೀನರಾಗಿರುವದು ಎಂದು ಅರ್ಥವಾಗಿದೆ. ಪೌಲನು ಅಂಥ ಧರ್ಮಶಾಸ್ತ್ರದ ಅದೀನದಲ್ಲಿ ಇರಬೇಕಾದ ಅಗತ್ಯವಿರುವದಿಲ್ಲ ಎಂಬದೇ. ಹೌದು, ನಮ್ಮ ಪ್ರಾಣಗಳಲ್ಲಿ ಶರೀರಭಾವ ಹಾಗು ಆತ್ಮನ ಭಾವದ ನಡುವೆ ಒಂದು ಹೋರಾಟ ಇರುತ್ತದೆಂಬದು ನಿಜವೇ, ಆದರೆ ನಾವು ಆ ಹೋರಾಟದಲ್ಲಿ ಪ್ರತಿದಿನವೂ ಜಯಶಾಲಿಗಳಾಗಿರಬಹುದು. ನಾವು ಪಾಪದಿಂದ ಸೋಲಿಸಲ್ಪಡಬೇಕಾದ ಅಗತ್ಯವಿರುವದಿಲ್ಲ.

ಹಾಗಾದರೆ ನಾವು ಈ ಜಯವನ್ನು ಹೇಗೆ ಪಡಕೊಳ್ಳುತ್ತೇವೆ? ನಾವು ನಮ್ಮನ್ನು ನಡಿಸುವಂತೆ ಪವಿತ್ರಾತ್ಮನಿಗೆ ನಿರಂತರವಾಗಿ ಅನುಮತಿಸುವದರ ಮೂಲಕ ಈ ಜಯವನ್ನು ಪಡಕೊಳ್ಳುತ್ತೇವೆ. ನಾವು ನಮ್ಮಷ್ಟಕ್ಕೆ ಹೋರಾಡಬೇಕಾಗಿಲ್ಲ. ಆದರೆ ನಾವು ನಮ್ಮನ್ನು ಪವಿತ್ರಾತ್ಮನ ಬಲದ ಮುಖಾಂತರ ನಾವು ಜಯಶಾಲಿಗಳಾಗಿ
ಉಳಿಯುವೆವು .

ಯೆಹೂದ್ಯರು ಹಾಗು ಇತರ ಧರ್ಮಗಳ ಅನುಯಾಯಿಗಳು ತಾವು ನೇಮನಿಷ್ಟೆ ಹಾಗು ಸಂಪ್ರದಾಯಗಳನ್ನು ಪಾಲಿಸುವದರ ಮೂಲಕ ತಮ್ಮನ್ನು ಪಾಪದಲ್ಲಿ ಬೀಳುವದರಿಂದ ತಡೆಯಬಹುದೆಂದು ನಂಬುತ್ತಾರೆ. ಆದರೆ ಇದು ಸತ್ಯವಲ್ಲ. ಮನುಷ್ಯರನ್ನು ಪಾಪದಿಂದ ಕಾಪಾಡುವದಕ್ಕೆ ನೇಮ ನಿಷ್ಟೆಗಳಿಗೆ ಬಲವಿರುವದಿಲ್ಲ. ಹೌದು ನೇಮ ನಿಷ್ಟೆಗಳು ಕೆಲವು ಬಹಿರಂಗದ ಪಾಪಗಳನ್ನು ಮಾಡದಂತೆ ಮನುಷ್ಯರನ್ನು ಕಾಪಾಡಬಲ್ಲದು, ಆದರೆ ಅಂತರ್ಯದ ಪಾಪಗಳನ್ನು ಮಾಡದಂತೆ ನೇಮ ನಿಷ್ಠೆಗಳು ಮನುಷ್ಯರನ್ನು ದೂರವಿರಿಸಲಾರವು . ನೇಮನಿಷ್ಠೆಗಳು ಮನುಷ್ಯರ ಹೃದಯಗಳನ್ನು ಪಾಪಮಯ ಅಭಿಲಾಷೆಗಳಿಂದ ಶುದ್ಧೀ ಮಾಡಲಾರವು . ನಮ್ಮಲ್ಲಿ ವಾಸಿಸುವ ಪವಿತ್ರಾತ್ಮನ ಬಲದ ಮುಖಾಂತರ ಮಾತ್ರವೇ ನಾವು ನಮ್ಮ ಹೃದಯಗಳ ಅಂತರ್ಯದ ಪಾಪಗಳ ಮೇಲೆ ಜಯಶಾಲಿಗಳಾಗಬಹುದು. ಮತ್ತು ನಾವು ಇದನ್ನು ನೆನಪಿನಲ್ಲಿಟ್ಟುಕೊಳ್ಳೋಣ: ದೇವರು ಪ್ರಾಥಮಿಕವಾಗಿ ನಮ್ಮ ಹೃದಯಗಳನ್ನು ನೋಡುತ್ತಾನೆ ಹೊರತು ನಮ್ಮ ಹೊರಗಿನ ಕ್ರಿಯೆಗಳನ್ನಲ್ಲ (1 ಪೂ.ಕಾಲವೃತ್ತಾಂತ 28:9; ಯೆರೆಮೀಯ 17:10; ಮಾರ್ಕ 7:6).

ನಾವು ಇಲ್ಲಿ ಕೇಳಿಕೊಳ್ಳಬೇಕಾದದ್ದೇನೆಂದರೆ: ಕ್ರೈಸ್ತರು ಬಹಳಷ್ಟು ವೇಳೆಗಳಲ್ಲಿ ಯಾಕೆ ಪಾಪ ಮಾಡುತ್ತಾರೆ? ಅವರು ಪಾಪ ಮಾಡಲಿಚ್ಚಿಸುತ್ತಾರಾದ್ದರಿಂದ ಪಾಪಮಾಡುತ್ತಾರೆ. ಅವರು ಪಾಪಮಾಡಲು ತೀರ್ಮಾನಿಸುತ್ತಾರಾದ್ದರಿಂದ ಪಾಪ ಮಾಡುತ್ತಾರೆ. ಶೋಧನೆಯು ಬರುವಾಗ ದೇವರಾತ್ಮನು ನಮಗೆ "ನನ್ನ ಬಳಿಗೆ ಬಾ' ಎಂದು ಹೇಳುತ್ತಾರೆ. ಆದರೆ ನಾವು ನಿರಾಕರಿಸುತ್ತೇವೆ. ಮತ್ತು ಒಮ್ಮೆಲೆ ನಾವು ಪಾಪದಲ್ಲಿ ಬೀಳುತ್ತೇವೆ. ನಾವು ಪಾಪದಲ್ಲಿ ಮಾತ್ರವೇ ಬೀಳುವದಿಲ್ಲ, ಆದರೆ ಇನ್ನೊಂದು ಸಂಗತಿಯು ಸಂಭವಿಸುತ್ತದೆ: ಪವಿತ್ರಾತ್ಮನು ನಮ್ಮನ್ನು ಬಿಟ್ಟು ಹೋಗುತ್ತಾನೆ. ದೇವರಾತ್ಮನು ಅಪರಿಶುದ್ಧವಾದ ದೇಹದಲ್ಲಿ ನೆಲೆಸುವದಕ್ಕೆ ಬಯಸುವದಿಲ್ಲ. ಪವಿತ್ರಾತ್ಮನು ನೊಂದು ಕೊಂಡಿರುತ್ತಾನೆ. ಪೌಲನು ಎಫೆಸದವರಿಗೆ ಬರೆಯುವಾಗ ಆತನ ತಾತ್ಪರ್ಯವು ಇದೇ ಆಗಿತ್ತು: ದೇವರ ಪವಿತ್ರಾತ್ಮನನ್ನು ದುಃಖ ಪಡಿಸಬೇಡಿರಿ (ಎಫೆಸ 4:30). ನಾವು ನಮ್ಮ ಪಾಪವನ್ನು ಅರಿಕೆ ಮಾಡಿ ಅದಕ್ಕಾಗಿ ಪಶ್ಚಾತಾಪಪಟ್ಟ ನಂತರವಷ್ಟೇ ಪವಿತ್ರಾತ್ಮನು ಪು ನಃ ನಮ್ಮ ಬಳಿಗೆ ಹಿಂದಿರುಗುವನು.

ನಮ್ಮಲ್ಲಿ ಯಾವನಾದರೂ ಒಣಗಿ ಹೋಗಿರುವ ಅಥವಾ ಬಾಡಿ ಹೋಗಿರುವ ಆತ್ಮೀಕ ಜೀವಿತವುಳ್ಳವನು, ಆತ್ಮೀಕ ಬಲವಿಲ್ಲದೆ ಇರುವವನು ಇದ್ದಾನೋ? ಇರುವದಾದರೆ, ಆತನು ತನ್ನ ಹೃದಯವನ್ನು ದೃಷ್ಠಿಸಿ ಪವಿತ್ರಾತ್ಮನನ್ನು ದೂರವಾಗುವದಕ್ಕೆ ಕಾರಣವಾದ ಗುಪ್ತ ಪಾಪವನ್ನು ಕಂಡು ಕೊಳ್ಳಲಿ. ಮತ್ತು ಆತನು ಆ ಪಾಪವನ್ನು ಬೆಳಕಿಗೆ ತಂದು ಅದರಿಂದ ವಿಮುಖನಾಗಲಿ. ಯಾಕೆಂದರೆ, ನಾವು ಹಿಡಿಯಲಾರದಷ್ಟು ದೂರವೇನಾಗಿರುವದಿಲ್ಲ: ಯಾವಾಗಲೂ ಅದಕ್ಕೆ ನಮ್ಮ ಹೃದಯದಲ್ಲಿರುವ ಯಾವದಾದರೂ ಗುಪ್ತಪಾಪವೇ (ಅಥವಾ ಅಷ್ಟೊಂದು ಗುಪ್ತವಾಗಿರದ ಪಾಪವೇ) ಕಾರಣವಾಗಿರುತ್ತದೆ (ಸಾಮಾನ್ಯ ಲೇಖನ: ಉಜ್ಜೀವನ ನೋಡಿರಿ).

**19-21** ಈಗ ಪೌಲನು ನಮ್ಮನ್ನು ದೇವರಿಂದ ಅಗಲಿಸುವ ಕೆಲವು ಪಾಪಗಳ ಪಟ್ಟಿಯನ್ನು ಮಾಡುತ್ತಾನೆ. ಈ ಪ್ರತಿಯೊಂದು ಶರೀರಭಾವದ ಕರ್ಮಗಳನ್ನು ನಾವು ಜಾಗರೂಕತೆಯಿಂದ ಗಮನಿಸೋಣ. ಅವು ಗಳಲ್ಲಿ ಯಾವು ದಾದರೂ ನಮ್ಮ ಜೀವಿತಗಳಲ್ಲಿರುವದನ್ನು ನಾವು ಗುರುತಿಸಬಲ್ಲೆವೋ? (ರೋಮ 1:29-31 ನೋಡಿರಿ).

ನಾವು ಶೀಘ್ರ್ರವಾಗಿಯೂ ಸುಲಭವಾಗಿಯೂ ಇತರ ಜನರಲ್ಲಿ ಪಾಪಗಳನ್ನು ಕಾಣುತ್ತೇವೆ. ಆದರೆ ಅದೇ ಪಾಪಗಳನ್ನು ನಮ್ಮ ಸ್ವಂತ ಜೀವಿತಗಳಲ್ಲಿ ನಾವು ಅಷ್ಟೊಂದು ಶೀಘ್ರ್ರವಾಗಿ ಕಾಣುವದಿಲ್ಲ. ನಮ್ಮ ಸ್ವಂತ ದೃಷ್ಟಿಗೆ ನಾವು ನೀತಿವಂತರೆಂದು ತೋರುತ್ತೇವೆ.

ಆದರೆ ನಾವು ಇತರರ ಪಾಪಗಳನ್ನು ದೃಷ್ಟಿಸಕೂಡದು – ನಾವು ನಮ್ಮ ಎಲ್ಲಾ ಗುಪ್ತ ಪಾಪಗಳನ್ನು ನಮಗೆ ಸ್ಪಷ್ಟವಾಗಿ ತೋರಿಸುವಂತೆ ನಾವು ಪ್ರಾರ್ಥಿಸೋಣ (ಕೀರ್ತನೆಗಳು 139:23-24). ಇಲ್ಲಿ ಪ್ರಸ್ತಾಪಿಸಲಾಗಿರುವ ಹದಿನೈದು ಪಾಪಗಳಲ್ಲಿ ಎಂಟು ಪಾಪಗಳು ಕ್ರೈಸ್ತರ ಮಧ್ಯದಲ್ಲಿನ ಭೇದ ಹಾಗು ಕಲಹಕ್ಕೆ ಸಂಬಂಧಪಟ್ಟಿರುತ್ತವೆ; ಅಂದರೆ, ಅವು ಗಳು ನಮ್ಮ

ಒಬ್ಬರನ್ನೊಬ್ಬರು ಕಚ್ಚಿಹರಕೊಂಡು ನುಂಗುವದರ ವಿಷಯಕ್ಕೆ ಸಂಬಂಧಿಸಿರುತ್ತವೆ (ವಚನ 15).

ಒಬ್ಬ ಸಹೋದರನನ್ನು ವಿರೋಧಿಸುವದಕ್ಕೆ ಅಥವಾ ಆತನಿಂದ ಬೇರ್ಪಟ್ಟು ಉಳಿಯುವದಕ್ಕೆ ಸಭೆಯೊಳಗೆ ಕೇವಲ ಎರಡು ನ್ಯಾಯ ಸಮ್ಮತ ಕಾರಣಗಳು ಮಾತ್ರವೇ ಇರುತ್ತವೆ. ಮೊದನೆಯದಾಗಿ, ಒಬ್ಬ ಸಹೋದರನು ಪಶ್ಚಾತಾಪಪಡದೆಯೇ ಸಾರ್ವಜನಿಕ ಹಾಗು ಹಾನಿಕಾರಕವಾದ ಘೋರ ಪಾಪದಲ್ಲಿ ಮುಂದುವರೆಯುವದು (1 ಕೊರಿಂಥ 5:11). ಎರಡನೆಯ ಕಾರಣವೇನೆಂದರೆ, ಒಬ್ಬ ಸಹೋದರನು ಯೇಸುವೇ ದೇವರೆಂಬದನ್ನು, ಆತನು ಶರೀರಧಾರಿಯಾಗಿ ಬಂದನೆಂಬದನ್ನು ನಿರಾಕರಿಸುವದಾದರೆ: ಅಂದರೆ ಒಬ್ಬ ಸಹೋದರನು ಯೇಸು ಕ್ರಿಸ್ತನ ಕುರಿತಾಗಿ ಸತ್ಯವನ್ನು ಬೋಧಿಸದಿರುವಾಗ ಆತನನ್ನು ವಿರೋಧಿಸಬಹುದು (1 ಯೋಹಾನ 4:2).

ನಾವು ಯಾವದೇ ಸಹೋದರನನ್ನು ಈ ಕಾರಣಗಳಿಗಳಲ್ಲದೆ ಬೇರೆ ಕಾರಣಕ್ಕಾಗಿ ವಿರೋದಿಸುವದಾದರೆ ನಾವು ಈ ವಚನಗಳಲ್ಲಿ ಪೌಲನು ಪ್ರಸ್ತಾಪಿಸಿರುವ ಪಾಪಗಳಲ್ಲಿ ಒಂದು ಅಥವಾ ಹೆಚ್ಚು ಪಾಪಗಳನ್ನು ಮಾಡಿದ ಅಪರಾಧಕ್ಕೆ ಒಳಗಾಗುತ್ತೇವೆ...ಇಂಥ ಕಾರ್ಯಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ. ಅಂದರೆ, ಈ ಪಾಪಗಳನ್ನು ಸತತವಾಗಿ ಮಾಡುತ್ತಾ ಪಶ್ಚಾತಾಪವಿಲ್ಲದವರಾಗಿರುವವರು ದೇವರ ರಾಜ್ಯವನ್ನು ಪ್ರವೇಶಿಸುವದಿಲ್ಲ. ಕಾಲ ಕಾಲಕ್ಕೆ ನಾವೆಲ್ಲರೂ ಈ ಕೆಲವು ಪಾಪಗಳಲ್ಲಿ ಬೀಳುತ್ತೇವೆ, ಮತ್ತು ನಾವು ಪಾಪದಲ್ಲಿ ಬೀಳುವದಾದರೆ ತಕ್ಷಣವೇ ಪಶ್ಚಾತಾಪಪಟ್ಟು ರಕ್ಷಣೆಯನ್ನು ಕೇಳಿಕೊಳ್ಳಬಹುದು ಮತ್ತು ದೇವರು ನಮ್ಮನ್ನು ಶುದ್ಧೀಪಡಿಸುವನು (1 ಯೋಹಾನ 1:9). ಆದರೆ ಗೊತ್ತಿದ್ದೂ ಪಾಪದಲ್ಲಿ ಮುಂದುವರೆದು ಪಶ್ಚಾತಾಪವಿಲ್ಲದವನಾಗಿರುವವನು ದೇವರ ರಾಜ್ಯಕ್ಕೆ ಬಾಧ್ಯನಾಗುವದಿಲ್ಲ – ಅಂದರೆ, ಅವನು ರಕ್ಷಣೆ ಹೊಂದುವದಿಲ್ಲ.

**22-23** ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳುವವರು (ವಚನ 16). ತಮ್ಮ ಜೀವಿತಗಳಲ್ಲಿ ಪವಿತ್ರಾತ್ಮನಿಂದ ಉಂಟಾಗುವ ಫಲವನ್ನು ತೋರ್ಪಡಿಸುವರು. ಈ ಫಲವು ಕ್ರಿಸ್ತನಲ್ಲಿ ನೆಲೆಗೊಳ್ಳುವವರ ಜೀವಿತಗಳಲ್ಲಿ ತೋರುವದು (ಯೋಹಾನ 15:4-5). ಈ ಪ್ರಾಮುಖ್ಯವಾದ ವಚನಗಳಲ್ಲಿ ಈ ಫಲಗಳಾವವೆಂಬದನ್ನು ಪೌಲನು ನಮಗೆ ತಿಳಿಸುತ್ತಾನೆ.

ಹೇಗಿದ್ದರೂ, ನಾವು ಮೊದಲು ನೆನಪಿನಲ್ಲಿಟ್ಟುಕೊಳ್ಳಬೇಕಾದದ್ದೇನೆಂದರೆ ಪವಿತ್ರಾತ್ಮನ ಫಲಗಳು ಹಾಗು ಪವಿತ್ರಾತ್ಮನ ವರಗಳು ಬೇರೆ ಬೇರೆ ಆಗಿರುತ್ತವೆ. ಪವಿತ್ರಾತ್ಮನ ವರಗಳು ವಿವಿಧ ಕ್ರೈಸ್ತರಿಗೆ ವಿವಿಧ ಸಮಯಗಳಲ್ಲಿ ಪವಿತ್ರಾತ್ಮನ ಚಿತ್ತಕ್ಕನುಸಾರವಾಗಿ ಕೊಡಲ್ಪಡುತ್ತವೆ (1 ಕೊರಿಂಥ 12:7-11 ನೋಡಿರಿ). ಆದರೆ ಪವಿತ್ರಾತ್ಮನ ಫಲಗಳು ಎಲ್ಲಾ ಕ್ರೈಸ್ತರಲ್ಲಿಯೂ ಎಲ್ಲಾ ಸಮಯಗಳಲ್ಲಿ ತೋರಿಬರಬೇಕು. ನಮ್ಮ ಸಭೆಯಲ್ಲಿಯೂ ನಮ್ಮ ವಯಕ್ತಿಕ ಜೀವಿತಗಳಲ್ಲಿಯೂ ಪವಿತ್ರಾತ್ಮನ ಫಲಗಳು ಅತಿ ಪ್ರಾಮುಖ್ಯವಾಗಿರುತ್ತವೆ ಹಾಗು ಪವಿತ್ರಾತ್ಮನ ವರಗಳಿಗಿಂತಲೂ ಹೆಚ್ಚು ಅವಶ್ಯಕವಾಗಿರುತ್ತವೆ.

ಪೌಲನು ಮೊದಲನೆಯದಾಗಿ ಪ್ರಸ್ತಾಪಿಸುವ ಪವಿತ್ರಾತ್ಮನ ಫಲವು ಪ್ರೀತಿಯೇ, ದೇವರಿಗಾಗಿ ಮತ್ತು ನೆರೆಯವನಿಗಾಗಿ ಪ್ರೀತಿ ಇದಾಗಿದೆ (ವಚನಗಳು 13-14 ಮತ್ತು ವ್ಯಾಖ್ಯಾನ ನೋಡಿರಿ).

ಎರಡನೆಯ ಫಲವು ಸಂತೋಷ – ಅಂದರೆ, ಆತ್ಮೀಕ ಸಂತೋಷ. ಈ ಸಂತೋಷವು ಕಷ್ಟ ಹಿಂಸೆಗಳಲ್ಲಿ.ಯೂ ಮುಂದುವರೆಯುತ್ತದೆ. ಇದು ನಮಗೆ ದೇವರ ಕೃಪೆಯಿಂದ ಬರುವ ಸಂತೋಷವಾಗಿದೆ; ಇದು ನಮ್ಮ ರಕ್ಷಣೆಯ ಸಂತೋಷವಾಗಿದೆ (ಯೋಹಾನ 15:11; ಫಿಲಿಪ್ಪಿ 4:4).

ಮೂರನೆಯ ಫಲವು, ಸಮಾಧಾನ, ದೇವರೊಂದಿಗಿನ ಎಲ್ಲಾ ಸಮಾಧಾನದಲ್ಲಿ ಇದು ಪ್ರಥಮವಾಗಿದೆ. ನಾವು ಸಮಾಧಾನವನ್ನು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮುಖಾಂತರ ಹೊಂದುತ್ತೇವೆ (ರೋಮ 5:1; ಫಿಲಿಪ್ಪಿ 4:7). ಮೊದಲು ದೇವರೊಂದಿಗೆ ಸಮಾಧಾನ ಹೊಂದಿಕೊಂಡವರಾಗಿ ನಾವು ಬಳಿಕ ಸಭೆಯಲ್ಲಿನ ಸಹೋದರ ಹಾಗು ಸಹೋದರಿಯರೊಂದಿಗೆ ಸಮಾಧಾನವನ್ನು ಬೆಳೆಸಿಕೊಳ್ಳಲು ಪ್ರಯಾಸ ಪಡಬೇಕು (ರೋಮ 14:19; ಎಫೆಸ 4:3).

ನಾಲ್ಕನೆಯ ಫಲವು, ದೀರ್ಘಶಾಂತಿ, ಇದು ತಾಪತ್ರಯ ಹಾಗು ಕಷ್ಟಗಳನ್ನು ಸೈರಿಸಿಕೊಳ್ಳುವದಾಗಿದೆ. ನಮ್ಮ ಸಹೋದರಿನಿಗಾಗಿ ಕಾರುಣ್ಯ ಹಾಗು ತಿಳುವಳಿಕೆಯನ್ನು ಹೊಂದಿರಬೇಕೆಂದು ಸಹ ಇದರ ಅರ್ಥವಾಗಿದೆ. ನಾವು ನಮ್ಮ ಸಹೋದರನ ಬಲಹೀನತೆಗಳು ಹಾಗು ಪಾಪಗಳ ವಿಷಯದಲ್ಲಿ ದೀರ್ಘಶಾಂತಿಯಿಂದಿರಬೇಕು (ಎಫೆಸ 4:2). ಯೇಸು ನಮ್ಮೊಂದಿಗೆ ದೀರ್ಘಶಾಂತಿಯಿಂದಿರುವ ಪ್ರಕಾರವೇ ನಾವು ಸಹ ಒಬ್ಬರೊಂದಿಗೊಬ್ಬರು ದೀರ್ಘಶಾಂತಿಯಿಂದಿರೋಣ (1 ತಿಮೊಥೆ 1:16).

ಪೌಲನ ನಂತರ ದಯೆ, ಉಪಕಾರ, ಮತ್ತು ನಂಬಿಗಸ್ಥಿಕೆಗಳನ್ನು ಪ್ರಸ್ತಾಪಿಸುತ್ತಾನೆ. ದಯೆ ಅಂದರೆ ಕರುಣೆಯುಳ್ಳವರು ಹಾಗು ಕ್ಷಮಿಸುವವರು ಆಗಿರಬೇಕು ಎಂಬ ಅರ್ಥವಾಗಿದೆ (ಮತ್ತಾಯ 18:21-22) ಉಪಕಾರ ಎಂದರೆ ಎಲ್ಲಾ ಜನರಿಗೂ ಒಳ್ಳೇದನ್ನು ಮಾಡಲು ಅವಕಾಶಗಳಿಗಾಗಿ ಹುಡುವದೆಂದು ಅರ್ಥವಾಗಿದೆ. ನಂಬಿಗಸ್ಥಿಕೆ ಎಂದರೆ ನಂಬಿಗಸ್ಥರು ಹಾಗು ವಿಶ್ವಾಸರ್ಹರು ಆಗಿರಬೇಕೆಂದು ಅರ್ಥವಾಗಿದೆ.

ತರುವಾಯ 23ನೇ ವಚನದಲ್ಲಿ ಎಂಟನೆಯ ಫಲ ಬರುತ್ತದೆ; ಸಾಧುತ್ವ. ಸಾಧುತ್ವ ಎಂದರೆ ನಮ್ಮ ಹೊರಗಿನ ನಡವಳಿಕೆಯಲ್ಲಿ ಮಾತ್ರವೇ ಸಾಧುತ್ವದಿಂದಿರುವದಲ್ಲ, ಆದರೆ ನಮ್ಮ ಅಂತರಾತ್ಮದಲ್ಲಿಯೂ ಸಾಧುತ್ವದಿಂದಿರಬೇಕು. ಎಂಬ ಅರ್ಥವಾಗಿದೆ. ಅಂತರ್ಯದ ಸಾಧುತ್ವವೂ ದೀನತೆಯೂ ಒಂದೇ ಆಗಿದೆ. ಇದು ಪವಿತ್ರಾತ್ಮನ ಫಲಗಳಲ್ಲಿ ಅತ್ಯಂತ ಸೂಕ್ಷ್ಮವಾದದ್ದಾಗಿದ್ದು ಸುಲಭವಾಗಿ ನಾಶವಾಗುತ್ತದೆ. ಮನುಷ್ಯನು ಜಯಿಸುವದಕ್ಕೆ ಅತ್ಯಂತ ಕಠಿಣವಾದ ಪಾಪವು ಗರ್ವವೇ ಆಗಿದ್ದು ಅದು ಸಾಧುತ್ವ ಅಥವಾ ದೀನತೆಯ ಪ್ರಮುಖ ವೈರಿಯಾಗಿದೆ. ನಾವು ಸಾಮಾನ್ಯವಾಗಿ ನಮ್ಮ ಗರ್ವವನ್ನು ಗುರುತಿಸುವದೂ ಇಲ್ಲ, ಆದರೆ ಅದು ಯಾವಾಗಲೂ ಇರುತ್ತದೆ. ಮತ್ತು ನಾವು ಅದನ್ನು ಜಯಿಸಿದ್ದೇವೆಂದು ಭಾವಿಸುವದಾದರೆ ಅದು ಸುಳ್ಳೆಂದು ಮಾತ್ರವೇ ನಿರೂಪಿತವಾಗುತ್ತದೆ! ಅಥವಾ ಬಹುಶಃ ನಾವು ದೀನತೆಯುಳ್ಳವರೆಂದು ಯೋಚಿಸಿಕೊಳ್ಳುತ್ತೇವೆ, ಆದರೆ ತಕ್ಷಣವೇ ಯಾರಾದರೂ ನಮ್ಮನ್ನು ಅವಮಾನಗೊಳಿಸುವಾಗ ನಮಗೆ ನೋವು ಹಾಗು ಬೇಸರ ಉಂಟಾಗುತ್ತದೆ. ಯಾಕೆ? ಯಾಕೆಂದರೆ ಗರ್ವದ ನಿಮಿತ್ತವೇ.ನಮ್ಮಲ್ಲಿ ಗರ್ವವಿಲ್ಲದಿದ್ದರೆ ನಾವು ಬೇಸರಗೊಳ್ಳುತ್ತಿರಲಿಲ್ಲ. ನಾವು ನಮ್ಮ ಘನತೆಯನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುವಾಗಲೆಲ್ಲಾ ಅದಕ್ಕೆ ಗರ್ವವೇ ಕಾರಣವಾಗಿರುತ್ತದೆ. ದೀನನಾದವನು, ಸಾಧುತ್ವವುಳ್ಳವನು ತನ್ನ ಮರ್ಯದೆಯ ಬಗ್ಗೆ ಚಿಂತಿಸುವದಿಲ್ಲ. ಆತನು ಕ್ರಿಸ್ತನ ಘನತೆಯ[26] ಕುರಿತು ಮಾತ್ರವೇ ಚಿಂತಿಸುತ್ತಾನೆ.

ನಾವು ನಮ್ಮಗರ್ವವನ್ನು ಹೊರ ದೊಬ್ಬುವದಕ್ಕೆ ಸಾಧ್ಯವಿಲ್ಲ; ಪವಿತ್ರಾತ್ಮನು ಮಾತ್ರವೇ ಅದನ್ನು ಮಾಡಬಲ್ಲನು. ಪವಿತ್ರಾತ್ಮನು ಮಾತ್ರವೇ ನಮ್ಮನ್ನು ಅಂತರ್ಯದಲ್ಲಿ ಸಾಧುತ್ವ ಹಾಗು ದೀನತೆಯುಳ್ಳವರನ್ನಾಗಿ [27] ಮಾಡಬಲ್ಲನು. ನಾವು ದೀನತೆಯಗೋಸ್ಕರ ನಿರಂತರವಾಗಿ ಪ್ರಾರ್ಥಿಸಬೇಕಾಗಿರುತ್ತದೆ. ಆದರೆ ನಮ್ಮನ್ನು ದೀನರನ್ನಾಗಿ ಮಾಡುವದಕ್ಕಾಗಿ ಪವಿತ್ರಾತ್ಮನು ನಮ್ಮ ಗರ್ವಕ್ಕೆ ಯಾವದಾದರೂ ನೋವನ್ನುಂಟು ಮಾಡಬೇಕಾಗುತ್ತದೆಂಬದನ್ನು ಸಹ ನಾವು ಮನಸ್ಸಿನಲ್ಲಿಟ್ಟು ಕೊಳ್ಳಬೇಕು. ನಾವು ಪವಿತ್ರಾತ್ಮನ ದೀನತೆಯನ್ನುಂಟು ಮಾಡುವ ಕಾರ್ಯವನ್ನು ಸಹಿಸಿಕೊಳ್ಳಲು ಸಿದ್ಧರಾಗಿದ್ದೇವೋ?

ಪವಿತ್ರಾತ್ಮನ ಫಲಗಳಲ್ಲಿ ಅಂತಿಮವಾದದ್ದು ಶಮೆದಮೆ. ಇದರ ಅರ್ಥವೇನೆಂದರೆ ನಮ್ಮ ಪೂರ್ವ ಪಾಪಾದೀನ ಸ್ವಭಾವವನ್ನು ಪವಿತ್ರಾತ್ಮನ ಅಧೀನಕೊಳ್ಳಪಡಿಸುವದು ಎಂಬದೇ. ನಮ್ಮ ಪಾಪಾಧೀನ ಭಾವದ ಅಭಿಲಾಷೆಗಳನ್ನು ನೆರವೇರಿಸದಿರುವದು ಎಂದು ಇದರ ಅರ್ಥವಾಗಿದೆ (ವಚನ 16).

ಪವಿತ್ರಾತ್ಮನ ಫಲವು ನಮ್ಮ ಜೀವಿತಗಳಲ್ಲಿ ಪೂರ್ಣವಾಗಿ "ಪರಿಪಕ್ವ" ಹೊಂದಿದೆಯೋ ಎಂದು ನಾವು ಹೇಗೆ ಹೇಳಬಲ್ಲೆವು ? ನಾವು ಯಾವದೇ ಹಣ್ಣು ಪರಿಪಕ್ವ ಗೊಂಡಿದೆಯೋ ಎಂದು ಹೇಳಲು ಉಪಯೋಗಿಸುವ ವಿಧಾನದಲ್ಲಿಯೇ ಇದನ್ನು ಹೇಳಬಹುದು; ಅಂದರೆ ಹಣ್ಣನ್ನು ಕಿವು ಚುವದರ ಪ್ರಕಾರವೇ. ನಮ್ಮ ಪರಿಸ್ಥಿತಿಗಳು ಸಂತೋಷಕರವಾಗಿರುವ ವರೆಗೂ ಕ್ರೈಸ್ತನಾಗಿರುವದು ಸುಲಭವಾಗಿರುತ್ತದೆ. ನಮ್ಮ ಜೀವಿತಗಳಲ್ಲಿ ಪವಿತ್ರಾತ್ಮನ ಫಲಗಳು ಸಂಪೂರ್ಣ ಪರಿಪಕ್ವವಾಗಿರುವಂತೆ ತೋರಬಹುದು. ಸಮಸ್ಯೆಗಳು ಬರುವಾಗ ಮಾತ್ರವೇ – ನಾವು "ಕಿವು ಚಲ್ಪಟ್ಟಾಗ" – ನಮ್ಮಲ್ಲಿರುವ ಪವಿತ್ರಾತ್ಮನ ಫಲವು ಪರಿಪಕ್ವವಾಗಿದೆಯೋ ಅಥವಾ ಇಲ್ಲವೋ ಎಂದು ಪರೀಕ್ಷಿಸಬಹುದು. ನಮ್ಮ ಮೇಲೆ ಬೈಗುಳ, ನಿಂದನೆ, ಹಿಂಸೆ ಹಾಗು ಇತರ ಸಂಕಷ್ಟಗಳು ಬರುವಾಗ ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ? ನಮ್ಮ ಫಲವು ಕಿವು ಚಲ್ಪಟ್ಟಾಗ ಯಾವ ರೀತಿಯ ರಸವು ಬರುತ್ತದೆ? ನೋವು ಅಥವಾ ಗರ್ವದ ರಸವೋ? ಅಥವಾ ಪ್ರೀತಿ, ಸಂತೋಷ, ದೀರ್ಘಶಾಂತಿ, ದೀನತೆಯ ಸಿಹಿಯಾದ ರಸವೋ/ ನಾವು ಕಿವು ಚಲ್ಪಡುವಾಗ ಮಾತ್ರವೇ ನಮ್ಮ ಜೀವಿತಗಳು ಪರೀಕ್ಷಿಸಲ್ಪಡುತ್ತವೆ.

ಈ ಒಂಭತ್ತು ವರಗಳು ನಮ್ಮ ಕಾರ್ಯ ಹಾಗು ಪ್ರಯತ್ನದಿಂದ ಉಂಟಾಗುವದಿಲ್ಲ, ಆದರೆ ನಮ್ಮಲ್ಲಿ ವಾಸಿಸುವ ಪವಿತ್ರಾತ್ಮನಿಂದಲೇ ಎಂಬದನ್ನು ನಾವು ನೆನಪಿನಲ್ಲಿಟ್ಟುಕೊಳ್ಳೋಣ. ಈ ಫಲಗಳು ನಮ್ಮ ಜೀವಿತಗಳಲ್ಲಿ ಕಂಡುಬರುವದಾದರೆ ನಾವು ದೇವರ ಧರ್ಮಶಾಸ್ತ್ರವನ್ನು ನಮ್ಮ ಜೀವಿತಗಳಲ್ಲಿ ನೆರವೇರಿಸುವವರಾಗಿರುತ್ತೇವೆ. ಈ ಫಲಗಳು ನಮ್ಮ ಜೀವಿತಗಳಲ್ಲಿ ಇರುವದಾದರೆ ನಾವು ಪರಿಶುದ್ಧರೂ ನೀತಿವಂತರೂ ಆಗಿರುತ್ತೇವೆ, ಮತ್ತು ಯಾವ ಧರ್ಮಶಾಸ್ತ್ರವೂ ನಮ್ಮನ್ನು ಅಪರಾಧಿಗಳೆಂದು ನಿರ್ಣಯಿಸುವದಿಲ್ಲ. ಈ ಫಲಗಳು ಕೆಟ್ಟವು ಗಳೆಂದು ಹೇಳುವ ಎಂದು ಯಾವ ಧರ್ಮಶಾಸ್ತ್ರವೂ ಹೇಳುವದಿಲ್ಲ. ಇಂಥವು ಗಳನ್ನು (ಪವಿತ್ರಾತ್ಮನ ಒಂಭತ್ತು ವರಗಳನ್ನು) ಯಾವ ಧರ್ಮಶಾಸ್ತ್ರವೂ ಆಕ್ಷೇಪಿಸುವದಿಲ್ಲ (ವಚನ 23).

**24** ಪವಿತ್ರಾತ್ಮನು ನಮ್ಮ ಜೀವಿತಗಳಲ್ಲಿ ಸಂಪೂರ್ಣವಾಗಿ ಬರಬೇಕಾದರೆ ನಮ್ಮ ಪಾಪಾಧೀನ ಸ್ವಭಾವವು ಶಿಲುಬೆಗೆ ಹಾಕಲ್ಪಡಬೇಕು. ಪೌಲನು ರೋಮಾಪು ರದವರಿಗೆ ಬರೆದ ಪತ್ರಿಕೆಯಲ್ಲಿ ಬೋಧಿಸಿದ ಪ್ರಕಾರವಾಗಿ ಶಿಲುಬೆಗೆ ಹಾಕಲ್ಪಟ್ಟಿರುವದು ನಮ್ಮ ಪೂರ್ವ ಸ್ವಭಾವ (ಅದು ಪಾಪಾಧೀನ ಸ್ವಭಾವದ ಅಧೀನದಲ್ಲಿರುತ್ತದೆ) ಆಗಿರುತ್ತದೆ (ರೋಮ 6;6). ಇಲ್ಲಿ ಪೌಲನು ನಮ್ಮ ಪಾಪಾಧೀನ ಸ್ವಭಾವವೇ ಶಿಲುಬೆಗೆ ಹಾಕಲ್ಪಡಬೇಕೆಂದು ಹೇಳುತ್ತಾನೆ. ಒಂದು ಅರ್ಥದಲ್ಲಿ ನಮ್ಮ ಪೂರ್ವ ಸ್ವಭಾವವು ಸಾಯಬೇಕು, ಆದರೆ ಇನ್ನೊಂದು ಅರ್ಥದಲ್ಲಿ ನಮ್ಮ ಪಾಪಾಧೀನ ಸ್ವಭಾವವು ಸಾಯಬೇಕು. ಆದರೆ ಇನ್ನೊಂದಿ ಅರ್ಥದಲ್ಲಿ, ನಮ್ಮ ಪಾಪಾಧೀನ ಸ್ವಭಾವವು ಸಂಪೂರ್ಣವಾಗಿ ಸಾಯುವದಿಲ್ಲ. ನಾವು ನಮ್ಮ ಪಾಪಾದೀನ ಸ್ವಭಾವವನ್ನು ನಿರಂತರವಾಗಿ "ಶಿಲುಬೆಹಾಕುತ್ತಾ" ಇರಬೇಕು. ಪ್ರತಿದಿನವೂ ನಾವು ನಮ್ಮ ಪೂರ್ವ ಸ್ವಭಾವವನ್ನು ಶಿಲುಬೆಗೇರಿಸಬೇಕು (ಲೂಕ 9;23) ಮತ್ತು ನಾವು ಅದನ್ನು ಅಲ್ಲಿಯೇ ಬಿಡಬೇಕು[28]!

ನಮ್ಮ ಪೂರ್ವಸ್ವಭಾವವು ಶಿಲುಬೆಗೆ ಹಾಕಲ್ಪಟ್ಟು ಸಂತೋಷವಾಗಿರುತ್ತದೋ? ಖಂಡಿತವಾಗಿಯೂ ಇಲ್ಲ! ಶಿಲುಬೆಗೆ ಹಾಕಲ್ಪಡುವದು ಉಲ್ಲಾಸಕರವಾದ ಸಂಗತಿಯಲ್ಲ. ಅದನ್ನು ಸೈರಿಸಿಕೊಳ್ಳುವದು ಸುಲಭವಾಗಿರುವದಿಲ್ಲ. ಅದುದರಿಂದ, ಕ್ರೈಸ್ತ ಜೀವಿತವನ್ನು ನಡಿಸುವದು ಸುಲಭವಾದದ್ದಲ್ಲ. ವಾಸ್ತವದಲ್ಲಿ ಅದು ಅಸಾಧ್ಯವಾಗಿರುತ್ತದೆ!

ಆದರೆ ದೇವರು ನಮ್ಮಿಂದ "ಕ್ರೈಸ್ತ ಜೀವಿತವನ್ನು ಜೀವಿಸಬೇಕು" ಎಂದು ಕೇಳುವದಿಲ್ಲ ದೇವರು ನಮಗೆ " ಆತ್ಮನನ್ನು ಅನುಸರಿಸಿ ನಡೆಯಬೇಕು" – ದಿನದಲ್ಲಿ ಒಂದು ಕ್ಷಣ ಎಂದಷ್ಟೇ ಹೇಳುತ್ತಾನೆ (ವಚನಗಳು 16, 25). ನಾವು ಪವಿತ್ರಾತ್ಮನನ್ನು ಅವಲಂಭಿಸಿ ನಡೆಯಬೇಕು – ಒಂದು ಸಾರಿ ಒಂದು ಹೆಜ್ಜೆ. ಆತ್ಮನಿಂದ ಮಾತ್ರವೇ ನಾವು ದೇವರಿಗೆ ಮೆಚ್ಚಿಕೆಯಾದ ಜೀವಿತಗಳನ್ನು ನಡಿಸಬಲ್ಲೆವು .

**25** ನಾವು ಆತ್ಮದಿಂದ ಜೀವಿಸುತ್ತಿರಲಾಗಿ ಆತ್ಮನನ್ನು ಅನುಸರಿಸಿ ನಡೆಯೋಣ. ನಾವು ಪವಿತ್ರಾತ್ಮನ ಹತೋಟಿಯಲ್ಲಿರುವದಾದರೆ ಆತನ ಹತೋಟಿಯಲ್ಲಿದ್ದೇವೆಂಬಂತೆ ನಡೆದುಕೊಳ್ಳಬೇಕು! ನಾವು ನಿಜವಾಗಿಯೂ ದೇವರ ಮಕ್ಕಳಾಗಿರುವದಾದರೆ ದೇವರ ಮಕ್ಕಳೆಂಬಂತೆಯೇ ನಡೆದುಕೊಳ್ಳಬೇಕಿ!

ಇಲ್ಲಿ ಒಂದು ಪ್ರಾಮುಖ್ಯವಾದ ಪ್ರಶ್ನೆ ಉದ್ಭವಿಸುತ್ತದೆ. ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವ ಕ್ಷಣದಲ್ಲಿಯೇ ದೇವರ ದೃಷ್ಟಿಯಲ್ಲಿ ನೀತಿವಂತರಾಗಿ ನಿರ್ಣಯಿಸಲ್ಪಡುತ್ತೇವೆಂಬದನ್ನು ನಾವು ಬಲ್ಲೆವು . ಇದು ಸಂಪೂರ್ಣವಾಗಿ ಸತ್ಯವಾದ್ದದು. ಆದರೆ ನಮ್ಮ ಪ್ರತಿದಿನದ ನಡವಳಿಕೆಯು ಯಾವಾಗಲೂ ನೀತಿಯುಳ್ಳದ್ದಾಗಿರುವದಿಲ್ಲ ಎಂಬದನ್ನು ಸಹ ನಮ್ಮ ಅನುಭವದಿಂದ ತಿಳಿದುಕೊಂಡಿರುತ್ತೇವೆ. ನಾವು ಈ ಎರಡೂ ಅಂಶಗಳನ್ನು ಒಂದು ಸರಳವಾದ ದೃಷ್ಟಾಂತದಿಂದ ವಿವರಿಸಬಹುದು. ನಾವು ಮರದಲ್ಲಿ ಹಣ್ಣಾಗುತ್ತಿರುವ ಫಲದ ಹಾಗಿದ್ದೇವೆ. ಪ್ರಾರಂಭದಲ್ಲಿ ಫಲವು ಹಸಿರಾಗಿಯೂ ಗಟ್ಟಿಯಾಗಿಯೂ ಇರುತ್ತದೆ. ಆದರೆ

ಕಾಲಕ್ರಮೇಣವಾಗಿ ಸೂರ್ಯನ ಕಿರಣ ಹಾಗು ಮಳೆಯಿಂದ ಫಲವು ಪರಿಪಕ್ವವಾಗುತ್ತದೆ. ಫಲವು ಪರಿಪಕ್ವಗೊಳ್ಳುವಂತೆಯೇ ನಾವು ಸಹ ಕೊನೆಯಲ್ಲಿ ಪೂರ್ಣವಾಗಿ ಪರಿಪಕ್ವಗೊಳ್ಳುತ್ತೇವೆಂಬದನ್ನು ದೇವರು ಬಲ್ಲನು. ಈ ಕಾರಣಕ್ಕಾಗಿ ಆತನು ಈಗಲೂ ನಮ್ಮನ್ನು ಈಗಾಗಲೇ ಪೂರ್ಣವಾಗಿ ಪರಿಪಕ್ವಗೊಂಡವರೆಂಬಂತೆ ಪರಿಗಣಿಸಬಲ್ಲನು. ಆದರೆ ನಮ್ಮ ದೃಷ್ಟಿಯಲ್ಲಿ ನಾವು ಮರದಲ್ಲಿ ನೇತಾಡುತ್ತಾ ಅರ್ಧ ಹಸಿರಾಗಿಯೂ ಗಟ್ಟಿಯಾಗಿಯೂ ಇರುತ್ತೇವೆ.

ದೇವರ ಕೃಪೆಯಿಂದಲೇ ನಾವು ನಮ್ಮ ಕ್ರೈಸ್ತ ಜೀವನವನ್ನು ಪ್ರಾರಂಭಿಸಿರುತ್ತೇವೆ. ನಾವು ಆತನ ಕೃಪೆ, ಆತನ ಮಳೆ ಹಾಗು ಸೂರ್ಯನಿಂದಲೇ ಪರಿಪಕ್ವಗೊಳ್ಳುತ್ತಿದ್ದೇವೆ – ಅಂದರೆ, ಪರಿಶುದ್ಧರೂ ದೋಷವಿಲ್ಲದವರೂ ಆಗುತ್ತಿದ್ದೇವೆ. ಮತ್ತು ದೇವರ ಕೃಪೆಯಿಂದಲೇ ನಾವು ಕ್ರಿಸ್ತನಂತೆಯೇ ಪೂರ್ಣ ಪರಿಪಕ್ವ ಹಾಗು ದೋಷವಿಲ್ಲದವರಾಗುವ ಒಂದು ದಿನ ಬರುತ್ತದೆ, ಮತ್ತು ನಾವು ಸಂತೋಷದಿಂದ ಆತನ ರಾಜ್ಯದೊಳಗ ಪ್ರವೇಶಿಸುವೆವು . ಸಹೋದರ ಹಾಗು ಸಹೋದರಿಯರೇ, ದೇವರ ಕೃಪೆಯ ಮಹಿಮೆಗಾಗಿ ಆತನನ್ನು ಸ್ತುತಿಸುವದನ್ನು ಎಂದಿಗೂ ನಿಲ್ಲಿಸದಿರೋಣ! (ಎಫೆಸ 1:6).

**26** ಪೌಲನು ಇಲ್ಲಿ ಪವಿತ್ರಾತ್ಮನಿಗೆ ಸಂಬಂಧ ಪಡದ ನಡವಳಿಕೆಗಳ ಮೂರು ಉದಾಹರಣೆಗಳನ್ನು ನೀಡುತ್ತಾನೆ,. ಮೊದಲನೆಯದಾಗಿ, ಅಹಂಕಾರಿಗಳಾಗಿರುವದು, ಇದರರ್ಥವು ಮತ್ತೊಬ್ಬರ ದೃಷ್ಟಿಯಲ್ಲಿ ಉತ್ತಮರಾಗಿ ಕಾಣಿಸಿಕೊಳ್ಳಲು ಬಯಸುವದು. ಎರಡನೆಯದಾಗಿ, ಇತರರನ್ನು ಕೆಣಕುವವರು ಎಂದರೆ ಅವರನ್ನು ಕೀಳಾಗಿ ಕಾಣುವದು ಎಂಬ ಅರ್ಥವಾಗಿದೆ. ಮೂರನೆಯದಾಗಿ ಮತ್ಸರವುಳ್ಳವರಾಗಿರುವದು ಎಂದರೆ, ಇತರರು ನಮಗಿಂತಲೂ ಹೆಚ್ಚು ಉತ್ತಮರಾಗಿ ಅಥವಾ ಹೆಚ್ಚು ಅದೃಷ್ಟಶಾಲಿಗಳಾಗಿ ಕಾಣುತ್ತಾರೆಂಬದಕ್ಕೆ ಅಸೂಯೆಪಡುವದು ಎಂದು ಅರ್ಥವಾಗಿದೆ. ಅಹಂಕಾರ, ಮತ್ಸರದ ಕಾರಣದಿಂದ ಇತರರನ್ನು ಕೆಣುಕುವದಕ್ಕೂ, ಅವರನ್ನು ಅವಮಾನಿಸುವದಕ್ಕೂ ಅಪೇಕ್ಷಿಸುತ್ತೇವೆ. ಹೀಗೆ ಮಾಡುವದರ ಮೂಲಕ ನಾವು ನಮ್ಮನ್ನು ಹೆಚ್ಚಿಸಿಕೊಳ್ಳಲು ಯೋಚಿಸುತ್ತೇವೆ.

ಆದರೆ ನಾವು ಹೀಗೆ ಮಾಡುವದಾದರೆ ಅದರ ಫಲಿತವು ನಾವು ನಿರೀಕ್ಷಿಸಿದ್ದಕ್ಕೆ ತದ್ವಿರುದ್ಧವಾಗಿರುತ್ತದೆ ಎಂಬದನ್ನು ಯೇಸು ಕಲಿಸಿಕೊಟ್ಟನು:" ತನ್ನನ್ನು ಹೆಚ್ಚಿಸಿಕೊಳ್ಳುವವನು ತಗ್ಗಿಸಲ್ಪಡುವನು, ತನ್ನ ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು' (ಮತ್ತಾಯ 23:12). ಆದದರಿಂದ, ನಾವು ನಮ್ಮ ಸಹೋದರ ಹಾಗು ಸಹೋದರಿಯನ್ನು ಹೆಚ್ಚಿಸುವವರೂ ನಮ್ಮನ್ನು ತಗ್ಗಸಿಕೊಳ್ಳುವವರೂ ಆಗಿರೋಣ.

---

## ಅಧ್ಯಾಯ - 6

### ಎಲ್ಲರಿಗೆ ಒಳ್ಳೇದನ್ನು ಮಾಡುವದು (6:1-10)

**1** ಸಹೋದರರೇ, ನಿಮ್ಮಲ್ಲಿ ಯಾರಾದರೂ ಯಾವದೋ ದೋಷದಲ್ಲಿ (ಪಾಪದಲ್ಲಿ) ಸಿಕ್ಕಿದರೆ ಅಂಥವನನ್ನು ಆತ್ಮನಿಂದ ನಡಿಸಿಕೊಳ್ಳುವ ಶಾಂತಭಾವದಿಂದ ತಿದ್ದಿ ಸರಿಮಾಡಿರಿ. ಆತ್ಮನಿಂದ ನಡಿಸಿಕೊಳ್ಳುವವರು ಆತ್ಮನಿಂದ ಜೀವಿಸುವವರಾಗಿದ್ದಾರೆ (ಗಲಾತ್ಯ 5:16,25). ಆತ್ಮೀಕರಾದ ನಾವು ಸಭೆಯಲ್ಲಿ ನಮ್ಮ ಸಹವಿಶ್ವಾಸಿಗಳಿಗಾಗಿ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಅವರು ಪಾಪದಲ್ಲಿ ಬೀಳುವದಾದರೆ ನಾವು ಮೊದಲು ಅವರನ್ನು ಗದರಿಸದೆ ಶಾಂತಭಾವದಿಂದ ತಿದ್ದಿ ಸರಿಮಾಡುವದಕ್ಕೆ ಪ್ರಯತ್ನಿಸಬೇಕು. ನಮ್ಮ ಸಹೋದರನು ಬೀಳುವಾಗ ನಾವು ಎಂದಿಗೂ ಮನಸ್ಸಿನೊಳಗೆ ಗುಪ್ತವಾಗಿ ಸಂಭ್ರಮಪಡಬಾರದು. ಬದಲಾಗಿ, ನಾವು ನಮ್ಮನ್ನು ದೃಷ್ಟಿಸಿಕೊಳ್ಳುತ್ತಾ – ಅಂದರೆ, ನಮ್ಮ ಸ್ವಂತ ಬಲಹೀನತೆಗಳನ್ನು ಮನಸ್ಸಿನಲ್ಲಿಕೊಂಡವರಾಗಿ – ಆತನನ್ನು ದೀನ ಭಾವದಿಂದ ತಿದ್ದಿ ಸರಿಮಾಡಬೇಕು ಯಾಕೆಂದರೆ ಇಂದು ನಮ್ಮ ಸಹೋದರನಿಗೆ ಬರುವ ಶೋಧನೆಯು ನಾಳೆ ನಮ್ಮ ಮೇಲೆಯೂ ಬರಬಹುದು. ಸಹೋದರನೊಬ್ಬನು ಪಾಪದಲ್ಲಿ ಬೀಳುವದನ್ನು ನೋಡುವಾಗ ನಾವು ಅಲ್ಲಿಗೆ ದೇವರ ಕೃಪೆಗಾಗಿ ಮಾತ್ರವೇ ಹೋಗುವೆನು ಎಂಬದನ್ನು ಯಾವಾಗಲೂ ಜ್ಞಾಪಕದಲ್ಲಿಟ್ಟುಕೊಳ್ಳೋಣ. (1 ಕೊರಿಂಥ 10:12 ನೋಡಿರಿ). ನಾವು ಯೋಚಿಸಿಕೊಳ್ಳೋಣ: "ಒಂದು ವೇಳೆ ನಾನು ಪಾಪದಲ್ಲಿ ಬೀಳುವದಾದರೆ ನಾನು ಹೇಗೆ ನಡಿಸಿಕೊಳ್ಳಬೇಕೆಂದು ಇಚ್ಚಿಸುವೆನು?" ಹಾಗಾದರೆ ನಮ್ಮ ಸಹೋದರನನ್ನು ಅದೇ ರೀತಿಯಲ್ಲಿಯೇ ನಡಿಸಿಕೊಳ್ಳೋಣ.

**2** ಒಬ್ಬರು ಮತ್ತೊಬ್ಬರ ಭಾರಗಳನ್ನು ಹೊತ್ತುಕೊಳ್ಳಲಿ. ಈ ಭಾರಗಳು ಯಾವವು ? ಕೆಲವು ಭಾರಗಳಿಗೆ ಒಬ್ಬನ ಕೆಲಸ ಹಾಗು ಜವಾಬ್ದಾರಿಗಳೇ ಕಾರಣವಾಗಿರುತ್ತದೆ. ಬಹುಶಃ ನಮ್ಮ ಸಹೋದರನ ಕೆಲಸವು ಕಷ್ಟಕರವಾದದ್ದು. ಆತನು ಬಳಲಿದ್ದಾನೆ. ಆದದರಿಂದ, ನಾವು ಆತನ ಭಾರವನ್ನು ಹೊತ್ತುಕೊಳ್ಳಲು ಸಹಾಯ ಮಾಡಬೇಕು.

ಇತರ ಭಾರಗಳು ಚಿಂತೆ, ನಿರಾಶೆ, ದುಃಖ, ಬಲಹೀನತೆ, ಅನಾರೋಗ್ಯಗಳಂತಹ ಸಂಗತಿಗಳಾಗಿವೆ. ಈ ಭಾರಗಳು ದೇಹ, ಆತ್ಮಗಳೆರಡಕ್ಕ ಸಂಬಂಧಿಸಿರಬಹುದಾಗಿದೆ.

ಮೂರನೆಯ ವಿಧದ ಭಾರವು ಪಾಪ ಆಗಿರುತ್ತದೆ. ನಮ್ಮ ಸಹೋದರನಿಗೆ ಆತನ ಪಾಪವು ಒಂದು ಭಾರವಾಗಿರುತ್ತದೆ. ಬಹುಶಃ ಆತನಲ್ಲಿ ಕೋಪವಿರುತ್ತದೆ. ಕೋಪಮಾಡಿಕೊಳ್ಳುವದು ಒಂದು ಪಾಪವೆಂಬದನ್ನು ಆತನು ಬಲ್ಲನು. ಹಾಗಿದ್ದರೂ, ಆತನು ಆಗಾಗ ಕೋಪಮಾಡಿಕೊಳ್ಳುತ್ತಾನೆ. ಆತನಿಗೆ ಇದು ಒಂದು ದೊಡ್ಡ ಭಾರವಾಗಿರುತ್ತದೆ. ಆತನು ಈ ಭಾರವನ್ನು ಹೊತ್ತಕೊಳ್ಳುವಂತೆ ನಾವು ಹೇಗೆ ಸಹಾಯ ಮಾಡಬಹುದು? ನಾವು ಆತನನ್ನು ಕ್ಷಮಿಸುವದರ ಮೂಲಕ, ಬುದ್ಧಿವಾದ

ಹೇಳಿ ಶಾಂತಭಾವದಿಂದ ತಿದ್ದುವದರ ಮೂಲಕ ಹಾಗು ಆತನ ಪಾಪದ ಹೊರತಾಗಿಯೂ ಅವನನ್ನು ಪ್ರೀತಿಯಿಂದ ಸೇರಿಸಿಕೊಳ್ಳುವದರ ಮೂಲಕವೂ ತನ್ನ ಭಾರವನ್ನು ಹೊತ್ತುಕೊಳ್ಳುವಂತೆ ನಾವು ಆತನಿಗೆ ಸಹಾಯ ಮಾಡಬಹದು. ನಾವು ಎಂದಿಗೂ "ನನ್ನ ಸಹೋದರ ಕೆಟ್ಟ ಕೋಪ ಹಾಗು ಕೆಟ್ಟ ಅಭ್ಯಾಸಗಳು ಸರಿಪಡಿಸಲ್ಪಟ್ಟ ನಂತರವಷ್ಟೇ ನಾನು ಆತನನ್ನು ಸ್ವೀಕರಿಸಿಕೊಳ್ಳುವೆನು" ಎಂದು ಹೇಳದಿರೋಣ. ನೆನಪಿರಲಿ, ಕ್ರಿಸ್ತನು ನಮ್ಮ ವಿಷಯದಲ್ಲಿ ಹಾಗೆ ಹೇಳಲಿಲ್ಲ. ಆತನು ನಮ್ಮನ್ನು ನಮ್ಮ ಎಲ್ಲಾ ಬಲಹೀನತೆಗಳು ಹಾಗು ಪಾಪಗಳ ಹೊರತಾಗಿಯೂ ಸ್ವೀಕರಿಸಿಕೊಂಡಿದ್ದಾನೆ. ಕ್ರಿಸ್ತನು ನಮ್ಮ ಭಾರಗಳನ್ನು ಶಿಲುಬೆಯ ಮೇಲೆ ಹೊತ್ತುಕೊಂಡನು.

ನಮ್ಮ ಸಹೋದರನು ಪಾಪಮಾಡುವಾಗ ಆತನಿಗೆ ನಾಚಿಕೆ ಹಾಗು ಅವಮಾನ ಉಂಟಾಗುತ್ತದೆ. ಆದರೆ ಕೆಲವು ವೇಳೆಗಳಲ್ಲಿ ಆತನ ಪಾಪದ ಕಾರಣದಿಂದ ನಾಚಿಕೆ, ಅವಮಾನಗಳು ನಮ್ಮ ಮೇಲೆಯೂ ಬರುತ್ತವೆ – ಸಭೆಯ ಮೇಲೆ ಬರುತ್ತದೆ. ಸಭೆಗೆ ಅವಮಾನವು ಂಟಾಗುತ್ತದೆ. ಈ ರೀತಿಯಲ್ಲಿ ನಮ್ಮ ಸಹೋದರನು ನಮ್ಮ ವಿರುದ್ಧವಾಗಿ ಸಹ ಪಾಪಮಾಡುವವನಾಗಿದ್ದಾನೆ. ಆತನ ಪಾಪದ ಫಲಿತವಾಗಿ ನಾವು ಕಷ್ಟ ನೋವು ಗಳನ್ನು ಹೊಂದುತ್ತೇವೆ. ನಾವು ಅದನ್ನು ಸಹ ಸಹಿಸಿಕೊಳ್ಳಬೇಕೋ?

ಹೌದು, ಖಂಡಿತವಾಗಿಯೂ ನಾವು ಅದನ್ನು ಸೈರಿಸಿಕೊಳ್ಳಬೇಕು. ಈ ವಚನದ ಅತಿ ಆಳವಾದ ಅರ್ಥವು ಅದೇ ಆಗಿದೆ. ಅಂದರೆ, ನಾವು ನಮ್ಮ ಸಹೋದರನ ಪಾಪದ ಭಾರವನ್ನು ಸಹಿಸಿಕೊಳ್ಳುವದು ಮಾತ್ರವಲ್ಲ, ಆದರೆ ಅದರ ಕಾರಣದಿಂದ ಬಾಧೆಗೊಳಗಾಗುವದಕ್ಕೆ ಸಹ ಸಿದ್ಧರಾಗಿರಬೇಕು. ಕ್ರಿಸ್ತನು ನಮಗಾಗಿ ಅದನ್ನೇ ಮಾಡಿದನು. ಆದದರಿಂದ, ನಾವು ನಮ್ಮ ಸಹೋದರನ ಪಾಪಕ್ಕಾಗಿ ಬಾಧೆಗೊಳಗಾಗುವದಕ್ಕೆ ಸಿದ್ಧರಾಗಿರೋಣ. ನಾವು ಹಾಗೆ ಮಾಡುವದಾದರೆ ಕ್ರಿಸ್ತನ ನಿಯಮವನ್ನು ನೆರವೇರಿಸುವೆವು. ಕಾರಣ ಯೇಸು ಹೇಳಿದ್ದೇನಂದರೆ: "ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವೂ ಒಬ್ಬರನ್ನೊಬ್ಬರು ಪ್ರೀತಿಸಿರಿ" (ಯೋಹಾನ 15:12).

3 ದೇವರೊಂದಿಗೆ ಹೋಲಿಸಿದರೆ ಮಾನವನು ಏನೂ ಅಲ್ಲ (ಕೀರ್ತನೆಗಳು 8:4).ಆದದರಿಂದ, ನಾವು ಏನು ಅಲ್ಲ ದವರಾಗಿರುವಾಗ ನಮ್ಮನ್ನು ದೊಡ್ಡವರೆಂದು ಭಾವಿಸಿಕೊಳ್ಳದಿರೋಣ. ನಾವು ಒಳ್ಳೇಯವರೂ, ಯೋಗ್ಯರೂ, ಮಾನಿಷ್ಠರೂ ಎಂದು ಯೋಚಿಸಿಕೊಳ್ಳದಿರೋಣ, ಇಲ್ಲವಾದರೆ ನಾವು ಗರ್ವದ ಮೂಲಕ ನಮ್ಮನ್ನೇ ಮೋಸಪಡಿಸಿಕೊಂಡವರಾಗುವೆವು.

ನಮ್ಮನ್ನು ನಾವು ಎಂದಿಗೂ ಇತರರೊಂದಿಗೆ ಹೋಲಿಸಿಕೊಳ್ಳದಿರೋಣ. ನಾವು ಹಾಗೆ ಮಾಡುವದಾದರೆ, ಯಾವಾಗಲೂ ಅವರಿಗಿಂತಲೂ ಉತ್ತಮರಾಗಿ ಕಾಣಿಸಿಕೊಳ್ಳಲು ಪ್ರಯಾಸಪಡುವವರಾಗುವೆವು. ಬದಲಾಗಿ, ನಮ್ಮನ್ನು ನಾವು ಯೇಸುವಿನೊಂದಿಗೆ ಮಾತ್ರವೇ ಹೋಲಿಸಿಕೊಳ್ಳೋಣ ನಾವು ಹೀಗೆ ಮಾಡುವದಾದರೆ ಹೆಚ್ಚು ದೀನರಾಗಿ ಉಳಿಯುವೆವು!

4 ನಾವು ಪ್ರತಿಯೊಬ್ಬರೂ ನಮ್ಮ ಕಾರ್ಯಗಳಿಗೆ, ನಮ್ಮ ನಡವಳಿಕೆಗೆ ನಾವೇ ಜವಾಬ್ದಾರರಾಗಿದ್ದೇವೆ. ನಾವು ನಮ್ಮ ಕಾರ್ಯಗಳನ್ನು ಪರಿಶೋಧಿಸಿಕೊಳ್ಳಬೇಕು. ಒಂದು ಮರಕ್ಕೆ ಅದರ ಫಲವೇ ಸಾಕ್ಷಿಯಾಗಿರುವ ಪ್ರಕಾರ ನಮ್ಮ ಕಾರ್ಯಗಳು, ನಮ್ಮ ನಡವಳಿಕೆಗಳು ನಮ್ಮ ನಂಬಿಕೆಗೆ ಸಾಕ್ಷಿಯಾಗಿರುತ್ತವೆ. ಒಬ್ಬ ವ್ಯಕ್ತಿಯ ಕೆಲಸ ಹಾಗು ಕ್ರಿಯೆಗಳು ಉತ್ತಮವಾಗಿರುವದಾದರೆ ಅವನು ತನ್ನ ನಿಮಿತ್ತದಿಂದ ಹೆಚ್ಚಳ ಪಡುವದಕ್ಕೆ ಶಕ್ತನಾಗುವನು ಎಂದು ಪೌಲನು ಹೇಳುತ್ತಾನೆ. ಇಲ್ಲಿ ಪೌಲನ ತಾತ್ಪರ್ಯವು ನಾವು ನಮ್ಮಲ್ಲಿಗರ್ವವನ್ನಿಟ್ಟುಕೊಳ್ಳಬೇಕೆಂಬದಲ್ಲ, ಯಾಕೆಂದರೆ ನಮ್ಮ ಒಳ್ಳೇ ಕಾರ್ಯಗಳು ದೇವರ ಕೃಪೆಯಿಂದ ಮಾತ್ರವೇ ಮಾಡಲ್ಪಡುತ್ತವೆಂಬದನ್ನು ನಾವು ಬಲ್ಲೆವು (1 ಕೊರಿಂಥ 15:10). ನಾವು ಇತರರೊಂದಿಗೆ ಹೋಲಿಸಿಕೊಳ್ಳ ಬಾರದೆಂದಷ್ಟೇ ಪೌಲನ ತಾತ್ಪರ್ಯವಾಗಿರುತ್ತದೆ. ನಮ್ಮ ಸಹೋದರನು ನಮಗಿಂತಲೂ ಬಲಹೀನನು ಅಥವಾ ಹೆಚ್ಚು ಪಾಪಿಯಾಗಿರುತ್ತಾನೆಂಬ ಅಂಶದಲ್ಲಿ ನಾವು ಹೆಚ್ಚಳ ಪಡುವದಕ್ಕೆ ಸಾದ್ಯವಿಲ್ಲ. ಬದಲಾಗಿ, ನಮ್ಮ ಕೆಲಸ ಹಾಗು ಕ್ರಿಯೆಗಳು ದೇವರಿಗೆ ಮೆಚ್ಚಿಕೆಯಾಗಿರುವದಾದರೆ ಮಾತ್ರವೇ ನಾವು ಹೆಚ್ಚಳ ಪಡುವದಕ್ಕೆ – ಅಂದರೆ, ಸಂತೋಷಿಸುವದಕ್ಕೆ – ಸಾಧ್ಯವಿರುತ್ತದೆ (2 ಕೊರಿಂಥ 10:17-18).

ನಾವು ನಮ್ಮನ್ನು ಕ್ರಿಸ್ತನೊಂದಿಗೆ ಮಾತ್ರವೇ ಹೋಲಿಸಿಕೊಳ್ಳೋಣ. ನಾವು ನಮ್ಮನ್ನು ಕ್ರಿಸ್ತನೊಂದಿಗೆ ಹೋಲಿಸಿಕೊಂಡಾಗ ನಾವು ನಿಜವಾಗಿಯೂ ಎಷ್ಟು ಬಲಹೀನರೂ ಪಾಪಿಗಳೂ ಆಗಿದ್ದೇವೆಂಬದನ್ನು ತಿಳಿದುಕೊಳ್ಳುವದಕ್ಕೆ ಶಕ್ತರಾಗುತ್ತೇವೆ, ಮತ್ತು ಅದರ ಫಲಿತವಾಗಿ, ನಾವು ಇತರರನ್ನು ಕೀಳಾಗಿ ಕಾಣುವದಕ್ಕೆ ಅಷ್ಟೊಂದು ತ್ವರೆಪಡುವದಿಲ್ಲ.

5 ಪೌಲನು 2ನೇ ವಚನದಲ್ಲಿ "ಒಬ್ಬರು ಮತ್ತೊಬ್ಬರ ಭಾರಗಳನ್ನು ಹೊತ್ತು ಕೊಳ್ಳಲಿ" ಎಂದು ಹೇಳುತ್ತಾನೆ. ಇಲ್ಲಿ ಆತನು ಹೇಳುವದೇನೆಂದರೆ; ಪ್ರತಿಯೊಬ್ಬನು ಸ್ವಂತ ಹೊರೆಯನ್ನು ಹೊತ್ತುಕೊಳ್ಳಬೇಕು. ಪೌಲನು ತಾನೇ ತದ್ವಿರುದ್ಧವಾಗಿ ಹೇಳಿಕೊಳ್ಳುತ್ತಿದ್ದಾನೋ? ಇಲ್ಲ. ಈ 5ನೇ ವಚನದಲ್ಲಿ ಪ್ರಸ್ತಾಪಿಸಲಾಗಿರುವ ಹೊರೆ ಹಾಗು 2ನೇ ವಚನದಲ್ಲಿರುವ ಭಾರ ಎರಡೂ ವ್ಯತ್ಯಾಸವಾಗಿವೆ. ಈ 5ನೇ ವಚನದಲ್ಲಿ ಹೊರೆ ಎಂಬದು ಕರ್ತವ್ಯ ಅಥವಾ ಜವಾಬ್ದಾರಿ ಎಂಬ ಅರ್ಥವನ್ನು ನೀಡುತ್ತದೆ. ನಾವು ಪ್ರತಿಯೊಬ್ಬರು ನಮ್ಮ ಕರ್ತವ್ಯವು ಏನೇ ಆಗಿದ್ದರೂ ಅದನ್ನು ನಾವೇ ಮಾಡಬೇಕು. ದೇವರು ನಮಗೆ ಕೊಟ್ಟಿರುವ ಜವಾಬ್ದಾರಿಯನ್ನು ನಾವೆಲ್ಲರೂ ನೆರವೇರಿಸಬೇಕು. ನಮ್ಮಲ್ಲಿ ಪ್ರತಿಯೊಬ್ಬರೂ ನಾವು ಈ ಲೋಕದಲ್ಲಿ ಮಾಡಿದ ಕಾರ್ಯಕ್ಕೆ ಸ್ವತಃ ನಾವೇ ಲೆಕ್ಕವನ್ನು ಒಪ್ಪಿಸಬೇಕು (ರೋಮ 14:12;2 ಕೊರಿಂಥ 5:10).

6 ಬೋಧಕರು ಅಥವಾ ಸಭಾಪಾಲಕರು ಅಥವಾ ದೇವರವಾಕ್ಯವನ್ನು ಬೋಧಿಸುವ ಇತರರು ಬಡವರಾಗಿರಬಹುದು. ಅವರು ಭೌತೀಕ ಅಗತ್ಯತೆಗೆ ಒಳಗಾಗಬಹುದು. ಹಾಗಾಗುವದಾದರೆ ಅವರ ಪ್ರಭೋಧನೆಯಿಂದ ಅಶಿರ್ವಧಿಸಲ್ಪಟ್ಟಿರುವ

ನಾವು ಅವರಿಗೆ ಸಹಾಯ ಮಾಡುವದಕ್ಕೆ ಸಿದ್ಧರಾಗಿಯೂ ಆಸಕ್ತಿಯುಳ್ಳವರಾಗಿಯೂ ಇರಬೇಕು, ಮತ್ತು ಎಲ್ಲಾ ಒಳ್ಳೇಯವು ಗಳಲ್ಲಿ ಪಾಲುಕೊಡುವವರಾಗಿರಬೇಕು (ರೋಮ 15:26-27; 2 ಕೊರಿಂಥ 9:11-12 ನೋಡಿರಿ).

7 ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು ಈ ನಿಯಮವೂ ಸ್ವಾಭಾವಿಕ ಜಗತ್ತು, ಆತ್ಮೀಕ ಜಗತ್ತು ಎರಡರಲ್ಲಿಯೂ ಸ್ಥಾಪಿಸಲ್ಪಟ್ಟಿರುತ್ತದೆ. ಈ ನಿಯಮವು ಎಲ್ಲಾ ಮನುಷ್ಯರಿಗೂ ಅನ್ವಯವಾಗುತ್ತದೆ. ನಾವು ದೇವರನ್ನು ವಂಚಿಸಲಾರೆವು : ನಾವು ಏನು ಬಿತ್ತಿದ್ದೇವೆಂಬದನ್ನು ಆತನು ಬಲ್ಲನು. ನಾವು ಇತರರಿಗೆ ಎಷ್ಟೊಂದು ಕೊಡುತ್ತೇವೋ ಅಷ್ಟೊಂದನ್ನು ನಾವು ಪು ನಃ ದೇವರಿಂದ ಪಡಕೊಳ್ಳುತ್ತೇವೆ (ಜ್ಞಾನೋಕ್ತಿಗಳು 11:25; 2 ಕೊರಿಂಥ 9:6).

8 ತನ್ನ ಪಾಪಾಧೀನ ಸ್ವಭಾವವನ್ನು ಕುರಿತು ಬಿತ್ತುವವನು – ಅಂದರೆ, ತನ್ನ ಪಾಪಾಧೀನ ಸ್ವಭಾವವನ್ನು ಸೇವಿಸುವವನು – ಪಾಪಾದೀನ ಸ್ವಭಾವದ ಫಲವನ್ನು ಪಡಕೊಳ್ಳುವನು; ನಾಶನ (ಮರಣ. ಆತ್ಮನನ್ನು ಮೆಚ್ಚಿಸಲು ಬಿತ್ತುವವನು ಆತ್ಮನ ಫಲವನ್ನು ಪಡಕೊಳ್ಳುವನು; ನಿತ್ಯಜೀವ (ರೋಮ 6;21-23, 1ಯೋಹಾನ 2:17 ನೋಡಿರಿ). ಒಬ್ಬನು ಆತ್ಮೀಕ ಫಲವನ್ನು ಕೊಯ್ಯಲಿಚ್ಚಿಸುವದಾದರೆ ಆತನು ಆತ್ಮೀಕ ಕೆಲಸವನ್ನು ಮಾಡಬೇಕು. ಒಂದು ವೇಳೆ ಒಬ್ಬನು ಪಾಪಾಧೀನ ಸ್ವಭಾವ ಫಲವಾದ ಮರಣವನ್ನು ಕೊಯ್ಯುವದಕ್ಕೆ ಬಯಸುವದಾದರೆ ಆತನು ಪಾಪಾಧೀನ ಸ್ವಭಾವದ ಕರ್ಮಗಳನ್ನು ಮಾಡಲಿ (ಗಲಾತ್ಯ 5:19-21). ದೇವರು ಯಾವಾಗಲೂ ನ್ಯಾಯವಂತನಾಗಿದ್ದಾನೆ. ದೇವರು ನಮ್ಮ ಕೆಲಸಕ್ಕೆ ಅನುಗುಣವಾಗಿ ಪ್ರತಿಫಲಗಳನ್ನು ಕೊಡುವನು. ಆತನು ಯವಾಗಲೂ ನಾವು ಯಾವು ದಕ್ಕಾಗಿ ಕೆಲಸಮಾಡಿದ್ದೇವೋ ಅದನ್ನೇ ಕೊಡುತ್ತಾನೆ!

9 ಅನೇಕ ಕ್ರೈಸ್ತರು ತಮ್ಮ ಕ್ರೈಸ್ತೀಯ ಜೀವಿತಗಳನ್ನು ಆಸಕ್ತಿಯಿಂದಲೂ ವೈರಾಗ್ಯದಿಂದಲೂ ಪ್ರಾರಂಭಿಸುತ್ತಾರೆ. ಆದರೆ ಅನಂತರ ಅವರು ನಿಧಾನವಾಗಿ ಬೇಸರಗೊಳ್ಳುತ್ತಾರೆ. ಕೆಲವರಂತೂ ಓಡುವು ದನ್ನೇ ನಿಲ್ಲಿಸಿಬಿಡುತ್ತಾರೆ (ಗಲಾತ್ಯ 5:7). ನಮ್ಮಲ್ಲಿ ಯಾರಾದರೂ ಬೇಸರಗೊಂಡು ಇದ್ದಾರೋ? ಅವರು ದಣಿದವರಿಗೆ ಬಲವನ್ನು ಕೊಡುವವನಾದ ಕ್ರಿಸ್ತನನ್ನು ಬೇಡಿಕೊಳ್ಳಲಿ (ಯೆಶಾಯ 40:29-31). ಅವರು ತಾವು ಮನಗುಂದಿದವರಾಗಿ ಬೇಸರಗೊಳ್ಳದಂತೆ ಯೇಸುವಿನ ಮೇಲೆ ತಮ್ಮ ದೃಷ್ಟಿಯನ್ನಿಡಲಿ (ಇಬ್ರಿಯ 12:3). ಅವರು ತಮಗಾಗಿ ಪರಲೋಕದಲ್ಲಿ ಇಡಲ್ಪಟ್ಟಿರುವ ಪ್ರತಿಫಲವನ್ನು ನೆನಪಿಸಿಕೊಳ್ಳಲಿ (1 ಪೇತ್ರ 1:3-4). ಅವರು ಮನಗುಂದದಿದ್ದರೆ ಈ ಲೋಕದಲ್ಲಿ ನೀತಿಯೆಂಬ ಬೆಳೆಯನ್ನು ಮತ್ತು ಬರಲಿರುವ ಲೋಕದಲ್ಲಿ ನಿತ್ಯಜೀವವನ್ನೂ ಕೊಯ್ಯುವರು (2 ತಿಮೊಥೆ 4:7-8 ನೋಡಿರಿ).

10 ಪೌಲನು 10ನೇ ವಚನದಲ್ಲಿ ಹೇಳುವದೇನೆಂದರೆ: ಒಳ್ಳೇದನ್ನು ಮಾಡುವದರಲ್ಲಿ ಮನಗುಂದದಿರೋಣ. ಒಳ್ಳೇದನ್ನು ಮಾಡುವದು" ಎಂದರೆ ಎಲ್ಲರಿಗೂ ಒಳ್ಳೇದನ್ನು ಮಾಡುವದು ಎಂದು ಅರ್ಥವಾಗಿದೆ; ಬೇರೆ ಮಾತುಗಳಲ್ಲಿ ಹೇಳುವದಾದರೆ, ನಮ್ಮ ನೆರೆಯವನನ್ನು ನಮ್ಮಂತೆಯೇ ಪ್ರೀತಿಸುವದು ಎಂದು ಇದರ ಅರ್ಥವಾಗಿದೆ

(ಗಲಾತ್ಯ 5:14). ನಾವು ಸಮಯವಿರಲಾಗಿ ಎಲ್ಲರಿಗೂ ಒಳ್ಳೇದನ್ನು ಮಾಡಬೇಕು ನಮಗೆ ಅನುಕೂಲವಾಗಿರುವಾಗ ಎಂದು ಅದರ ಅರ್ಥವಾಗಿರುವದಿಲ್ಲ. ಈ ದಿನ ನಾವು ಒಳ್ಳೇದನ್ನು ಮಾಡುವದಕ್ಕೆ ದೂರೆತ ಎಷ್ಟು ಅವಕಾಶಗಳನ್ನು ಕಳೆದುಕೊಂಡಿದ್ದೇವೆ/ ದೇವರು ನಮ್ಮನ್ನು ಕ್ಷಮಿಸಲಿ!

ನಾವು ಎಲ್ಲಾ ಜನರಿಗೆ ಒಳ್ಳೇದನ್ನು ಮಾಡಬೇಕು, ಆದರೆ ವಿಶೇಷವಾಗಿ ಒಂದೇ ಮನೆಯವರಂತಿರುವ ಕ್ರಿಸ್ತ ನಂಬಿಕೆಯುಳ್ಳವರಿಗೆ – ಅಂದರೆ, ದೇವರ ಕುಟುಂಬವಾದ ಸಭೆಗೆ ಸೇರಿದವರಿಗೆ – ಮಾಡಬೇಕು (ಯೋಹಾನ 13:34-35 ನೋಡಿರಿ).

## ಸುನ್ನತಿಯಲ್ಲ ಆದರೆ ನೂತನ ಸೃಷ್ಟಿಯೇ (6:11-18)

11 ಇಲ್ಲಿಂದ ಈಚೆಗೆ ಈ ಪತ್ರಿಕೆಯ ಉಳಿದ ಭಾಗವನ್ನು ಪೌಲನು ತನ್ನ ಸ್ವಂತ ಕೈಯಿಂದ ಬರೆದಿರುತ್ತಾನೆ (1 ಕೊರಿಂಥ 16:21; 2 ಥೆಸಲೋನಿಕ 3:17 ನೋಡಿರಿ).

12 ಯೆರೂಸಲೇಮಿನಿಂದ ಬಂದಿದ್ದ ಸುಳ್ಳು ಬೋಧಕರು (ಗಲಾತ್ಯ 2:4,12), ಗಲಾತ್ಯದಲ್ಲಿ ವಾಸವಾಗಿದ್ದ ಯೆಹೂದ್ಯರ ಮೂಲಕ ಬಹಿರಾಚಾರಗಳಿಂದ ಮಾನಪಡೆಯಬೇಕೆಂದು ಪ್ರಯತ್ನಿಸುತ್ತಿದ್ದರು. ಅವರು ಈ ಯೆಹೂದ್ಯರ ಮೆಚ್ಚಿಗೆ ಹಾಗು ಮನ್ನನೆಯನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಿದ್ದರು, ಯಾಕೆಂದರೆ ಅವರು ತಮ್ಮನ್ನು ಹಿಂಸಿಸಲ್ಪಡದಂತೆ ತಪ್ಪಿಸಿಕೊಳ್ಳಲು ಬಯಸಿದ್ದರು. ಈ ಕಾರಣಕ್ಕಾಗಿ ಅವರು ಗಲಾತ್ಯದಲ್ಲಿನ ಅನ್ಯಜನರಿಗೆ ರಕ್ಷಣೆ ಹೊಂದಬೇಕಾದರೆ ಸುನ್ನತಿ ಮಾಡಿಸಿಕೊಳ್ಳಬೇಕೆಂದು ಬೋಧಿಸಿದರು. ಒಬ್ಬನು ಸುನ್ನತಿಮಾಡಿಸಿಕೊಂಡವನಾಗಿ ಧರ್ಮಶಾಸ್ತ್ರಕ್ಕೆವಿಧೇಯನಾಗುವದರ ಮೂಲಕ ಮಾತ್ರವೇ ರಕ್ಷಣೆಹೊಂದುವನೆಂದು ಯೆಹೂದ್ಯರು ನಂಬಿದ್ದರು. ಆದರೆ ಕ್ರಿಸ್ತನ ಶಿಲುಬೆಯ ಬೋಧನೆಗನುಸಾರವಾಗಿ ಮನುಷ್ಯನು ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ರಕ್ಷಣೆ ಹೊಂದುವನು. ಆದದರಿಂದ ಶಿಲುಬೆಯು ಯೆಹೂದ್ಯರಿಗೆ ಒಂದು ಬೇಸರವನ್ನುಂಟು ಮಾಡುವ ಸಂಗತಿಯಾಗಿತ್ತು ಮತ್ತು ಅವರು ಅದರ ಬಗ್ಗೆ ಬೋಧಿಸುವವರನ್ನೆಲ್ಲಾ ಹಿಂಸಿಸುತ್ತಿದ್ದರು. (ಗಲಾತ್ಯ 5;11 ನೋಡಿರಿ).

13 ಯೆಹೂದ್ಯ ಸುಳ್ಳು ಬೋಧಕರು – ಅಂದರೆ, ಸುನ್ನತಿಮಾಡಿಸಿಕೊಂಡವರು – ಸ್ವತಃ ತಾವೇ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯಲಿಲ್ಲ. ಅವರು ಗಲಾತ್ಯದ ಅನ್ಯಜನರನ್ನು ಸುನ್ನತಿಮಾಡಿಸಿಕೊಳ್ಳಬೇಕೆಂದು ಮನವೊಲಿಸಲು ಪ್ರಯತ್ನಿಸಿದರು,

ಅವರು ಧರ್ಮಶಾಸ್ತ್ರಕ್ಕೆ ಗೌರವವನ್ನು ಹೊಂದಿದ್ದರಿಂದಲ್ಲ ಆದರೆ ತಾವು ಗಲಾತ್ಯದವರನ್ನು ಯೆಹೂದ್ಯರಂತೆ ಮಾಡಿದ್ದೇವೆಂದು ಹೆಚ್ಚಳ ಪಡುವುದಕ್ಕಾಗಿಯೇ ಈ ಬೋಧಕರು ಕಪಟಿಗಳಾಗಿದ್ದರು. ರಕ್ಷಣೆಗಾಗಿ ಸುನ್ನತಿಯು ಅವಶ್ಯಕವೆಂದು ಬೋಧಿಸುವದರ ಮೂಲಕ ಅವರು ವಾಸ್ತವದಲ್ಲಿ ಗಲಾತ್ಯದವರನ್ನು ನಿಜವಾದ ರಕ್ಷಣೆಯನ್ನು ಹೊಂದಿಕೊಳ್ಳದಂತೆ ತಡೆಯುವವರಾಗಿದ್ದರು (ಮತ್ತಾಯ 23:13; ಲೂಕ 11:46 ನೋಡಿರಿ).

14 ಯೆಹೂದ್ಯರು ಸುನ್ನತಿ ಹಾಗು ಧರ್ಮಶಾಸ್ತ್ರದ ಕಾರ್ಯಗಳಲ್ಲಿ ಹೆಚ್ಚಳ ಪಟ್ಟುಕೊಂಡರು. ಹೇಗಿದ್ದರೂ, ಪೌಲನು ಕ್ರಿಸ್ತನ ಶಿಲುಬೆಯಲ್ಲಿ ಮಾತ್ರವೇ – ಅಂದರೆ, ಕ್ರಿಸ್ತನ ಕಾರ್ಯದಲ್ಲಿಯೂ, ಆತನ ಯಜ್ಞದಲ್ಲಿಯೂ – ಹೆಚ್ಚಳ ಪಡುತ್ತಾನೆ.

ನಾವು ಶಿಲುಬೆಯ ಬಗ್ಗೆ ಆಲೋಚಿಸೋಣ.. ರೋಮಾಯ ಜಗತ್ತಿನ ದೃಷ್ಟಿಯಲ್ಲಿ ಶಿಲುಬೆಯು ಎಲ್ಲಾ ಅವಮಾನವನ್ನೂ, ತಿರಸ್ಕಾರವನ್ನೂ ಪ್ರತಿನಿಧಿಸುವದಾಗಿತ್ತು. ಶಿಲುಬೆಯು ಎಲ್ಲಾ ಅವಮಾನವನ್ನೂ, ತಿರಸ್ಕಾರವನ್ನೂ ಪ್ರತಿನಿಧಿಸುವದಾಗಿತ್ತು. ಹಾಗಿದ್ದರೂ, ಈ ಶಿಲುಬೆಯಲ್ಲಿಯೇ ಪೌಲನು ಹೆಚ್ಚಳ ಪಟ್ಟನು! ಯಾಕೆಂದರೆ ಶಿಲುಬೆಯ ಮೇಲೆ ಕ್ರಿಸ್ತನು ಹೊಂದಿದ ಮರಣದ ಮೂಲಕ ಮಾತ್ರವೇ ಪು ರುಷರು ಹಾಗು ಸ್ತ್ರೀಯರು ರಕ್ಷಣೆಯನ್ನು ಪಡೆದುಕೊಳ್ಳಬಲ್ಲರು.

ಪೌಲನ, ಪಾಲಿಗಾದರೋ ಲೋಕವು ಶಿಲುಬೆಗೆ ಹಾಕಿಸಿಕೊಂಡದ್ದಾಗಿದೆ – ಅಂದರೆ, ಅವನ ಪಾಲಿಗೆ ಲೋಕದ ಎಲ್ಲಾ ಯೋಚನೆಗಳೂ ಅಭಿಲಾಷೆಗಳೂ ಸತ್ತಿರುತ್ತವೆ. ಪೌಲನು ಲೋಕದಲ್ಲಾಗಲಿ ಅಥವಾ ಅದರ ಯಾವದೇ ಸಂಗತಿಯಲ್ಲಾಗಲಿ ಭರವಸೆಯನ್ನು ಇಡುವದಿಲ್ಲ. ಆತನು ಶಿಲುಬೆಯಲ್ಲಿ ಮಾತ್ರವೇ ತನ್ನ ನಂಬಿಕೆಯನ್ನಿಟ್ಟಿರುತ್ತಾನೆ (1 ಕೊರಿಂಥ 1:18; ಫಿಲಿಪ್ಪಿ 3:7-8 ನೋಡಿರಿ).

ಲೋಕವು ಪೌಲನ ಪಾಲಿಗೆ ಶಿಲುಬೆಗೆ ಹಾಕಿಸಿಕೊಂಡಿರುವದಷ್ಟೆ ಅಲ್ಲ, ಆದರೆ ಪೌಲನು ಸಹ ಶಿಲುಬೆಗೆ ಹಾಕಿಸಿಕೊಂಡು ಲೋಕದ ಪಾಲಿಗೆ ಸತ್ತವನಾಗಿದ್ದಾನೆ. ಇದರ ಮೂಲಕ ಪೌಲನ ತಾತ್ಪರ್ಯವೇನೆಂದರೆ ಆತನ ಪೂರ್ವ ಸ್ವಭಾವವು ಕ್ರಿಸ್ತನ ಜೊತೆಯಲ್ಲಿ ಶಿಲುಬೆಯ ಮೇಲೆ ಸತ್ತಿರುತ್ತದೆ ಎಂಬದೇ (ರೋಮ 6:6; ಗಲಾತ್ಯ 2:20).

15 ಗಲಾತ್ಯ 5:6 ರಲ್ಲಿ ಪೌಲನು ಹೇಳುವದೇನೆಂದರೆ ಆತನಿಗೆ ನಂಬಿಕೆಯೊಂದೇ ರಕ್ಷಣೆ ಹೊಂದಿವದಕ್ಕೆ ಪ್ರಯೋಜನವಾಗಿರುತ್ತದೆ ಎಂಬದೇ (ಗಲಾತ್ಯ 5"6 ಮತ್ತು ವ್ಯಾಖ್ಯಾನ ನೋಡಿರಿ). ಇಲ್ಲಿ ಪೌಲನು ಅದೇ ವಿಷಯವನ್ನು ಬೇರೆ ಮಾತುಗಳಲ್ಲಿ ಹೇಳುತ್ತಾನೆ: ಕ್ರಿಸ್ತನಲ್ಲಿ ನಂಬಿಕೆಯುಡುವದರ ಮೂಲಕ ನಾವು ಹೊಸ ಸೃಷ್ಟಿ ಆಗುತ್ತೇವೆ – ಅಂದರೆ, ನಾವು ನೂತನ ಆತ್ಮೀಕ ವ್ಯಕ್ತಿಗಳೂ ದೇವರ ಮಕ್ಕಳೂ ಆಗುತ್ತೇವೆ (2 ಕೊರಿಂತ 5:17 ಮತ್ತು ವ್ಯಾಖ್ಯಾನ ನೋಡಿರಿ). ನಾವು ಹೊಸದಾಗಿ ಹುಟ್ಟಿದವರಾಗುತ್ತೇವೆ (ಯೋಹಾನ 3:5). ರಕ್ಷಣೆ ಎಂದರೆ ಹೊಸಸೃಷ್ಟಿ ಆಗುವದೇ ಆಗಿದೆ; ಅದಷ್ಟೇ ಪ್ರಾಮುಖ್ಯವಾಗಿರುತ್ತದೆ.

16 ಈ ಸೂತ್ರಕ್ಕೆ ಸರಿಯಾಗಿ ನಡೆಯುವವರೆಲ್ಲರು ಅಂದರೆ ಈ ಪತ್ರಿಕೆಯ ಬೋಧನೆಗೆ ಸರಿಯಾಗಿ ನಡೆಯುವವರೆಲ್ಲರು ಎಂಬದೇ. ಪೌಲನು ಬರೆದಿರುವದು ಕ್ರಿಸ್ತನ ಸತ್ಯ ಸುವಾರ್ತೆ ಆಗಿದೆ.. ಈ ಸೂತ್ರಕ್ಕೆ ಸರಿಯಾಗಿ ನಡೆಯುವವರು ನಿಜವಾದ ದೇವರ ಇಸ್ರಾಯೇಲ್ಯರು[29] – ಅಂದರೆ, ಅವರು ದೇವರ ನಿಜವಾದ ಕುಟುಂಬ – ಆಗಿದ್ದಾರೆ. ಅಬ್ರಹಾಮನಿಗೆ ಶರೀರಸಂಬಂಧವಾಗಿ ಹುಟ್ಟಿರುವವರು ನಿಜವಾದ ಇಸ್ರಾಯೇಲ್ಯರಲ್ಲ, ಆದರೆ ಬದಲಾಗಿ, ಕ್ರಿಸ್ತನಲ್ಲಿ ನಂಬಿಕೆಯಿಟ್ಟವರೇ ನಿಜವಾದ ಇಸ್ರಾಯೇಲ್ಯರು.

17 ಇನ್ನು ಮೇಲೆ ಯಾರೂ ನನ್ನನ್ನು ತೊಂದರೆ ಪಡಿಸಬಾರದು ಎಂದು ಪೌಲನು ಬರೆಯುತ್ತಾನೆ. ಪೌಲನು ತನ್ನ ದೇಹದಲ್ಲಿ ಯೇಸುವಿನ ಮುದ್ರೆಗಳನ್ನು ಹೊಂದಿರುತ್ತಾನೆ, ಅಂದರೆ, ಆತನು ಕ್ರಿಸ್ತನ ನಿಮಿತ್ಯವಾಗಿ ಕೊರಡೆ ಏಟುಗಳು ಹಾಗು ಹೊಡೆತಗಳ ಗಾಯಗಳೇ (2 ಕೊರಿಂಥ 11:23-28) ಯಾವನಾದರೂ ಪೌಲನನ್ನು ತೊಂದರೆ ಪಡಿಸುವದಾದರೆ ಕ್ರಿಸ್ತನನ್ನು ಸಹ ತೊಂದರೆ ಪಡಿಸುವವನಾಗಿದ್ದಾನೆ. ಆದದರಿಂದ, ಗಲಾತ್ಯದವರು ಪೌಲನನ್ನು ವಿರೋಧಿಸುವದನ್ನು ನಿಲ್ಲಿಸಲಿ. ಅವರು ಸುಳ್ಳು ಬೋಧಕರಿಂದ ವಿಮುಖರಾಗಿ ತಿರಿಗೊಮ್ಮೆ ಸತ್ಯಸುವಾರ್ತೆಯನ್ನು ಹಿಂಬಾಲಿಸುವವರಾಗಿರಲಿ.

18 ಪೌಲನು ಈ ಪತ್ರಿಕೆಯಲ್ಲಿ ಗಲಾತ್ಯದವರನ್ನು ಕಠಿಣವಾಗಿ ಗದರಿಸಿದ್ದರೂ ಈ ಕಡೇ ವಚನದಲ್ಲಿ ಪೌಲನು ಅವರನ್ನು ಸಹೋದರರೇ ಎಂದು ಕರೆಯುತ್ತಾನೆ. ಅವರು ಮಾರ್ಗತಪ್ಪಿದ್ದ ಕುರಿಗಳಂತಿದ್ದರು. ಅವರು ಸುಳ್ಳುಕುರುಬರ ಹಿಂದೆ ಹೋಗಿದ್ದರು. ಆದರೆ ಪೌಲನು ಅವರನ್ನು ಈಗಲೂ ಪ್ರೀತಿಸುತ್ತಾನೆ. ಮತ್ತು ಅವರು ಎಲ್ಲದಕ್ಕಿಂತಲೂ ಉನ್ನತವಾದ ಆಶೀರ್ವಾದವನ್ನು ಪಡೆದಿಕೊಳ್ಳುವಂತೆ ಪ್ರಾರ್ಥಿಸುತ್ತಾನೆ – ಆದೇನೆಂದರೆ, ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು.

---

## ಟಿಪ್ಪಣಿ

1 ಪವಿತ್ರಾತ್ಮನು ಯಾವಾಗಲೂ ಬೈಬಲನೊಂದಿಗೆ ಸಮ್ಮತಿಸುವವನಾಗಿದ್ದಾನೆ, ಯಾಕೆಂದರೆ ಬೈಬಲ್ ಪವಿತ್ರಾತ್ಮನ ಪ್ರೇರಣೆಯ ಮುಖಾಂತರವೇ ಬರೆಯಲ್ಪಟ್ಟಿತು. ಹೆಚ್ಚಿನ ಚರ್ಚೆಗಾಗಿ, ಸಾಮಾನ್ಯ ಲೇಖನಃ ನಾವು ನಮ್ಮ ಬೈಬಲನ್ನು ಹೇಗೆ ಪಡೆದುಕೊಂಡೆವು ನೋಡಿರಿ.

2 ಯೆಹೂದ್ಯ ಮತವು ಯೆಹೂದ್ಯರ ಧರ್ಮ ಹಾಗು ಜೀವನ ಶೈಲಿಯಾಗಿರುತ್ತದೆ. ಕ್ರಿಸ್ತನಿಗಿಂತ ಸುಮಾರು ಎರಡು ಸಾವಿರ ವರ್ಷಗಳಿಗೆ ಮುಂಚೆ ದೇವರು ಅಬ್ರಹಾಮನನ್ನು ಯೆಹೂದ್ಯರ ಪಿತೃವಾಗಿರುವದಕ್ಕೆ ಕರೆದನು. ದೇವರು ಯೆಹೂದ್ಯರನ್ನು ತನ್ನ ವಿಶೇಷ

ಜನಾಂಗವಾಗಿರುವದಕ್ಕೆ ಆದು ಕೊಂಡನು. ಆತನು ಅವರಿಗೆ ವಿಧೇಯರಾಗುವದಕ್ಕೆ ತನ್ನ ಧರ್ಮಶಾಸ್ತ್ರ – ಯೆಹೂದ್ಯಧರ್ಮಶಾಸ್ತ್ರ – ಕೊಟ್ಟನು. ಯೆಹೂದ್ಯರ ಧರ್ಮಗ್ರಂಥಗಳು ಹಳೆ ಒಡಂಬಡಿಕೆಯಲ್ಲಿ ಅಡಕವಾಗಿದ್ದವು . ಹಳೆ ಒಡಂಬಡಿಕೆಯು ಯೆಹೂದ್ಯರ ಚರಿತ್ರೆಯನ್ನು ವಿವರಿಸುತ್ತದೆ; ಮತ್ತು ಅದು ಯೆಹೂದ್ಯ ಧರ್ಮಶಾಸ್ತ್ರವನ್ನು ಯೆಹೂದ್ಯ ಪ್ರವಾದಿಗಳ ಗ್ರಂಥಗಳನ್ನೂ ಒಳಗೊಂಡಿರುತ್ತದೆ (ಸಾಮಾನ್ಯಲೇಖನ: ಹಳೆ ಒಡಂಬಡಿಕೆಯ ಸಾರಾಂಶ ನೋಡಿರಿ).

3 ನನ್ನಲ್ಲಿ ಎಂಬ ಪದಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ನನಗೆ" ಎಂದು ಹೇಳುತ್ತವೆ. ಹೇಗಿದ್ದರೂ, ಗ್ರೀಕ್ ಭಾಷೆಯಲ್ಲಿ ಈ ಪದಗಳ ಅರ್ಥವು ನನ್ನಲ್ಲಿ ಎಂದಾಗಿರುತ್ತದೆ. ವಾಸ್ತವದಲ್ಲಿ ಪೌಲನು ಇದನ್ನೇ ಬರೆದನು.

4 ದಮಸ್ಕವು ಮಧ್ಯ ಪೂರ್ವಾತ್ಯ ರಾಷ್ಟ್ರವಾದ ಸಿರಿಯಾದ ರಾಜಧಾನಿಯಾಗಿದೆ.

5 ಯೆರೂಸಲೇಮ ಇಸ್ರಾಯೇಲಿನ ದಕ್ಷಿಣ ಪ್ರಾಂತ್ಯವಾದ ಯೂದಾಯ ಸೀಮೆಯ ರಾಜಧಾನಿಯಾಗಿತ್ತು. ಯೆರೂಸಲೇಮ ಯೆಹೂದ್ಯರ ಪ್ರಮುಖ ನಗರವಾಗಿತ್ತು; ಅದು ಅವರ ಪರಿಶುದ್ಧ ನಗರವೂ, ಅವರ ಧಾರ್ಮಿಕ ಜೀವನದ ಕೇಂದ್ರವೂ ಆಗಿತ್ತು. ಮತ್ತು ಈ ದಿನದ ವರೆಗೂ ಯೆಹೂದ್ಯರಿಗೆ ಅದು ಪರಿಶುದ್ಧನಗರವಾಗಿಯೇ ಉಳಿದಿರುತ್ತದೆ. ಇಂದು ಯೆರೂಸಲೇಮು ಇಸ್ರಾಯೇಲಿನ ಆಧುನಿಕ ರಾಷ್ಟ್ರದಲ್ಲಿ ಒಂದು ಪ್ರಾಮುಖ್ಯ ನಗರವಾಗಿರುತ್ತದೆ.

6 ಪೇತ್ರ ಎಂಬ ಹೆಸರಿನ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಕೇಫ" ಎಂದು ಹೇಳುತ್ತವೆ. ಕೇಫ ಎಂಬದು ಗ್ರೀಕ್ ಪದವಾಗಿದ್ದು ಪೇತ್ರ ಎಂಬ ಅರ್ಥವನ್ನು ಕೊಡುತ್ತದೆ.

7 ಕಿಲಿಕ್ಯವು ಒಂದು ರೋಮಾಯ ಪ್ರಾಂತ್ಯವಾಗಿದ್ದು ಸಿರಿಯದ ಉತ್ತರ ಭಾಗದಲ್ಲಿತ್ತು (ಈಗ ದಕ್ಷಿಣ ಟರ್ಕಿ ಆಗಿರುತ್ತದೆ).

8 ಹೇಗಿದ್ದರೂ, ಕೆಲವು ಬೈಬಲ್ ಪಂಡಿತರು ಈ ಅಭಿಪ್ರಾಯವನ್ನು ಒಪ್ಪಿಕೊಳ್ಳುವದಿಲ್ಲ. ಈ ವಚನದಲ್ಲಿ ಪ್ರಸ್ತಾಪಿಸಲಾಗಿರುವ ಯೆರೂಸಲೇಮಿಗೆ ಪ್ರಯಾಣವು ಅ.ಕೃತ್ಯ 11:29-30 ರಲ್ಲಿ ಪ್ರಸ್ತಾಪಿಸಲಾಗಿರುವ ಪ್ರಯಾಣವಾಗಿರುತ್ತದೆ ಎಂದು ಅವರು ಹೇಳುತ್ತಾರೆ.

9 ಸುನ್ನತಿಯು ಒಂದು ಸಣ್ಣ ಶಸ್ತ್ರ ಚಿಕಿತ್ಸಾರೂಪದ ವಿಧಾನವಾಗಿದ್ದು ಅದರಲ್ಲಿ ಶಿಶ್ನದ ತುದಿಯಲ್ಲಿರುವ ಹೆಚ್ಚಿನ ಚರ್ಮವನ್ನು ಕತ್ತರಿಸಲಾಗುತ್ತದೆ. ಯೆಹೂದ್ಯ ಪುರುಷರೆಲ್ಲರೂ ಹುಟ್ಟಿದ ಎಂಟನೆಯ ದಿನದಲ್ಲಿ ಸುನ್ನತಿಯನ್ನು ಮಾಡಿಸಿಕೊಳ್ಳುವ ಕಟ್ಟಾಯವಿತ್ತು (ಆದಿಕಾಂಡ 17:9-14). ಪೌಲನ ಕಾಲದಲ್ಲಿ ಸುನ್ನತಿಯು ಯೆಹೂದ್ಯನಾಗಿರುವದಕ್ಕೆ ಒಂದು ಮುಖ್ಯನಾದ ಹೊರಗಿನ ಸಂಕೇತವಾಗಿತ್ತು. ಹೆಚ್ಚಿನ ಚರ್ಚೆಗಾಗಿ, ಪದಪಟ್ಟಿ; ಸುನ್ನತಿ ನೋಡಿರಿ.

10 ಗ್ರೀಕರು ದಕ್ಷಿಣ ಐರೋಪ್ಯದ ರಾಷ್ಟ್ರವಾದ ಗ್ರೀಸಿನ ನಿವಾಸಿಗಳಾಗಿದ್ದರು. ಹೊಸ ಒಡಂಬಡಿಕೆಯ ಕಾಲದಲ್ಲಿ ಗ್ರೀಸ್ ರೋಮಾಯ ಸಾಮ್ರಾಜ್ಯದ ಭಾಗವಾಗಿತ್ತು, ಗ್ರೀಕರು ಅನ್ಯ ಜನರಾಗಿದ್ದರು – ಅಂದರೆ, ಯೆಹೂದ್ಯೇತರಾಗಿದ್ದರು. ಗ್ರೀಕರು ಅತ್ಯಂತ ಸಂಸ್ಕೃತ ಜನರಾಗಿದ್ದರು. ಪೌಲನ ಕಾಲದಲ್ಲಿ ಮಧ್ಯಪೂರ್ವದಲೆಲ್ಲಾ ಇದ್ದ ಬಹುಪಾಲು ವಿಧ್ಯಾವಂತರು ಗ್ರೀಕ್ ಭಾಷೆಯನ್ನಾಡುತ್ತಿದ್ದರು. ಹೊಸ ಒಡಂಬಡಿಕೆಯು ಮೂಲತಃ ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟಿತು.

11 ಯೆಹೂದ್ಯರು ಎಂಬ ಪಗದ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು 'ಸುನ್ನತಿಯವರು' ಎಂದು ಹೇಳುತ್ತವೆ, ಅದು ಮೂಲ ಗ್ರೀಕ್ ಪ್ರತಿಯಲ್ಲಿ ಉಪಯೋಗಿಸಲಾದ ನಿಜವಾದ ಪದವಾಗಿದೆ. ಅರ್ಥ ವಂತೂ ಒಂದೇ ಆಗಿದೆ.

12 ಇಲ್ಲಿ ಸಹ ಅನ್ಯಜನರು ಎಂಬದಕ್ಕೆ ಗ್ರೀಕ್ ಪ್ರತಿಯಲ್ಲಿರುವ ವಾಸ್ತವವಾದ ಪದವು "ಸುನ್ನತಿಯಿಲ್ಲದವರು" ಎಂದಿರುತ್ತದೆ. ಅರ್ಥವು ಒಂದೇ ಆಗಿದೆ.

13 ಜಗತ್ತಿನ ಅನೇಕ ಜನರೊಳಗೆ ಒಬ್ಬನ ಬಲಗೈಯನ್ನು ಕುಲುಕುವದು ಅನ್ಯೋನ್ಯತೆಯ ಒಂದು ಸಂಕೇತವಾಗಿದೆ. ಪೌಲನ ದಿನದಲ್ಲಿಯೂ ಹಾಗೆಯೇ ಇತ್ತು.

14 ಅಂತಿಯೋಕ್ಯವು ಉತ್ತರ ಸಿರಿಯಾದ ಒಂದು ಪ್ರಾಮುಖ್ಯವಾದ ನಗರವಾಗಿದೆ. ಅಂತಿಯೋಕ್ಯದಲ್ಲಿ ಸಭೆಯು ಸ್ಥಾಪಿಸಲ್ಪಟ್ಟದ್ದು ಅ.ಕೃತ್ 11:19-26 ರಲ್ಲಿ ಬಣ್ಣಿಸಲಾಗಿದೆ.

15 ದೇಹ ಎಂಬ ಪದದ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಶರೀರ ಭಾವ" ಎಂದು ಹೇಳುತ್ತವೆ. ಇಲ್ಲಿ ಅರ್ಥವು ಭೌತೀಕ ದೇಹ ಎಂದಾಗಿರುತ್ತದೆ. ಹೊಸ ಒಡಂಬಡಿಕೆಯ ಇತರ ವಚನಗಳಲ್ಲಿ "ಶರೀರಭಾವ" ಎಂಬ ಪದವು ಮನುಷ್ಯನ ಪಾಪಾಧೀನ ಸ್ವಭಾವವನ್ನು ಸೂಚಿಸುವದಕ್ಕೆ ಉಪಯೋಗಿಸಲ್ಪಟ್ಟಿದೆ (ರೋಮ 8:3-13; ಗಲಾತ್ಯ 5:16-19); ಆದರೆ ಇಲ್ಲಿ ಆ ಅರ್ಥವಿರುವದಿಲ್ಲ. ಹೆಚ್ಚಿನ ಚರ್ಚೆಗಾಗಿ, ಪದಪಟ್ಟಿ: ಶರೀರಭಾವ ನೋಡಿರಿ.

16 ಬಹಿರಾಚಾರಗಳಿಂದ ಸಿದ್ಧಿಗೆ ಬರಬೇಕೆಂದಿದ್ದೀರಾ ಎಂಬ ಮಾತುಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಶರೀರಭಾವದಲ್ಲಿ ಅಂತ್ಯಗೊಳ್ಳುವದು" ಎಂದು ಹೇಳುತ್ತವೆ, ಅದು ಗ್ರೀಕ್ ಪ್ರತಿಯ ಅಕ್ಷರಂಶ; ಭಾಷಾಂತರವಾಗಿದೆ. ಅರ್ಥವು ಒಂದೇ ಆಗಿದೆ. ಈ ವಚನದಲ್ಲಿ "ಶರೀರಭಾವ" ಎಂಬದಕ್ಕೆ ಉಪಯೋಗಿಸುವ ಗ್ರೀಕ್ ಪದವು ನಮ್ಮ ಪಾಪಾಧೀನ ಸ್ವಭಾವ ಎಂಬ ಅರ್ಥವನ್ನು ಕೊಡುತ್ತದೆ. ಹೆಚ್ಚಿನ ಚರ್ಚೆಗಾಗಿ, ಗಲಾತ್ಯ 2:20ಕ್ಕೆ ನೀಡಲಾಗಿರುವ ಅಡಿಟಿಪ್ಪಣಿ; ಪದ ಪಟ್ಟಿ; ಶರೀರಭಾವ ನೋಡಿರಿ.

17 ರೋಮಾಯ ಸಾಮ್ರಾಜ್ಯದಕಾಲದಲ್ಲಿ (ಅಂದರೆ, ಕ್ರಿಸ್ತನ ಕಾಲದಲ್ಲಿ) ಅಪರಾಧಿಗಳಿಗೆ ಶಿಲುಬೆಯೊಂದರ ಮೇಲೆ ನೇತು ಹಾಕುವದರ ಮೂಲಕ ಮರಣ ಶಿಕ್ಷೆ ನೀಡಲಾಗುತ್ತಿತ್ತು.

18 ಮೋಶೆಯು ಯೆಹೂದ್ಯರ ಶ್ರೇಷ್ಠನಾಯಕರಲ್ಲಿ ಒಬ್ಬನಾಗಿದ್ದನು. ಆತನು ಅಬ್ರಹಾಮನ ಕಾಲದ ತರುವಾಯ ಸುಮಾರು ನಾನ್ನೂರು ವರ್ಷಗಳ ನಂತರ ಹುಟ್ಟಿದ್ದನು. ಆತನು ಸೀನಾಯ ಪರ್ವತದ ತುದಿಯಲ್ಲಿ ದೇವರಿಂದ ಧರ್ಮಶಾಸ್ತ್ರವನ್ನು ಪಡೆದುಕೊಂಡು ಅದನ್ನು ಯೆಹೂದ್ಯರಿಗೆ ಹಸ್ತಾಂತರಿಸಿದನು. ಹಾಗಾದರೆ ಯೆಹೂದ್ಯರು ಧರ್ಮಶಾಸ್ತ್ರವನ್ನು ಮೋಶೆಯ ಮುಖಾಂತರ ಪಡೆದುಕೊಂಡರು. ಈ ಕಾರಣದಿಂದಲೇ ಮೋಶೆಯು ಮಧ್ಯಸ್ಥನು ಎಂದು ಕರೆಯಲ್ಪಟ್ಟಿದ್ದಾನೆ.

19 ಪೌಲನು 1 ತಿಮೋಥೆ 2:5 ರಲ್ಲಿ ಬರೆಯುವದೇನೆಂದರೆ: ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ;
ಆತನು ಮನುಷ್ಯನಾಗಿರುವ ಕ್ರಿಸ್ತಯೇಸುವೇ. ಆದರೆ ನೆನಪಿರಲಿ, ಯೇಸುಕ್ರಿಸ್ತನು ಒಬ್ಬ ಮನುಷ್ಯ ಮಾತ್ರವೇ ಆಗಿರಲಿಲ್ಲ; ಆತನು ಸ್ವತಃ ದೇವರು ಆಗಿದ್ದನು. ಆದದರಿಂದ, ಮನುಷ್ಯರಿಗೆ ಕೊಡಲಾಗಿರುವ ರಕ್ಷಣೆ ವಾಗ್ದಾನಕ್ಕೆ ಸ್ವ ದೇವರೇ ಮಧ್ಯಸ್ಥನಾಗಿದ್ದಾನೆ. ಬೇರೆ ಇನ್ನಾವ ಮಧ್ಯಸ್ಥನ ಅವಶ್ಯಕತೆಯೂ ಇರುವದಿಲ್ಲ.

[20] ಅಪ್ಪಾ ಎಂಬದು ಒಂದು ಅನೌಪಚಾರಿಕವಾದ ಅರಾಮಿಕ ಹೇಳಿಕೆಯಾಗಿದ್ದು ಅದರ ಅರ್ಥವು "ನನ್ನ ತಂದೆಯೇ" ಎಂದಾಗಿತ್ತು. ಅರಾಮಿಕ ಹೊಸ ಒಡಂಬಡಿಕೆಯ ಸಮಯಗಳಲ್ಲಿ ಮಧ್ಯಪೂರ್ವದಲ್ಲಿನ ಬಹು ಪಾಲು ಸಾಮಾನ್ಯ ಜನರಿಂದ ಮಾತಾಡಲ್ಪಡುತ್ತಿದ್ದ ಭಾಷೆಯಾಗಿತ್ತು; ಇದು ಯೇಸು ಮತ್ತು ಆತನ ಶಿಷ್ಯರಿಂದ ಮಾತಾಡಲ್ಪಟ್ಟ ಭಾಷೆಯಾಗಿತ್ತು (ಮಾರ್ಕ 14;36 ನೋಡಿರಿ).

[21] ಇದು ಮಧ್ಯಪೂರ್ವ ರಾಷ್ಟ್ರಗಳಲ್ಲಿ ಒಂದು ಸಾಮಾನ್ಯ ನಾಣ್ಣುಡಿಯಾಗಿತ್ತು. ಒಬ್ಬನು ಇನ್ನೊಬ್ಬನಿಗೆ ಏನು ಬೇಕಾದರೂ ಮಾಡುವನು ಎಂಬದು ಇದರ ಅರ್ಥವಾಗಿರುತ್ತದೆ.

[22] ಹಳೆ ಒಡಂಬಡಿಕೆಯ ಮೊದಲ ಐದು ಪುಸ್ತಕಗಳು ಹಲವಾರು ವೇಳೆ ಧರ್ಮಶಾಸ್ತ್ರ ಅಥವಾ ಮೋಶೆಯ ಧರ್ಮಶಾಸ್ತ್ರ ಎಂದು ಕರೆಯಲ್ಪಟ್ಟಿದೆ.

[23] ಸಾರಳಿಗೆ ಮಕ್ಕಳಾಗದಿದ್ದಾಗ ಅಬ್ರಹಾಮನು ಹಾಗರಳನ್ನು ತನ್ನ ಎರಡನೆಯ "ಹೆಂಡತಿ' ಆಗಿ ತೆಗೆದು ಕೊಂಡನು (ಆದಿಕಾಂಡ 16:1-4). ಆದದರಿಂದ, ಸಾರಳು 'ಗಂಡಬಿಟ್ಟವಳ' ಹಾಗೆಯೂ ಅದೇ ವೇಳೆಯಲ್ಲಿ ದಾಸಿಯಾದ ಹಾಗರಳು ಗಂಡನುಳ್ಳವಳೂ ಆದಳು.

[24] ಬಹಳಷ್ಟು ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿಯು ಕ್ರಿಸ್ತನ ಹಿಂಬಾಲಕನಾಗುವಾಗ ಆತನು ತನ್ನ ಪೂರ್ವ ಧರ್ಮದಿಂದ ಸಂಪೂರ್ಣವಿಮುಖನಾಗಬೇಕು. ಹೇಗಿದ್ದರೂ, ಈ ನಿಯಮಕ್ಕೆ ಯೆಹೂದ್ಯರು ಹೊರತಾಗಿರುತ್ತಾರೆ. ಯೆಹೂದ್ಯರು ಕ್ರೈಸ್ತರಾಗುವಾಗ ಅವರು ಯೆಹೂದ್ಯ ಮತದಿಂದ "ವಿಮುಖರಾಗುವ' ಅಗತ್ಯವಿರುವದಿಲ್ಲ. ಪೌಲ ಹಾಗು ಇತರ ಅಪೊಸ್ತಲರು "ಯೆಹೂದ್ಯರಾಗಿ' ಉಳಿದಿದ್ದರು. ಕ್ರಿಸ್ತನು ತಾನೇ ಒಬ್ಬ ಯೆಹೂದ್ಯನಾಗಿದ್ದನು. ಕ್ರಿಸ್ತನಲ್ಲಿ ನಂಬಿಕೆಯಿಡುವ ಯೆಹೂದ್ಯನು ವಿಮುಖನಾಗಬೇಕಾದ ಒಂದು ಸಂಗತಿಯೇನೆಂದರೆ, ರಕ್ಷಣೆಗೆ ಒಂದು ಮಾರ್ಗ ವೆಂಬಂತೆ ಧರ್ಮಶಾಸ್ತ್ರದ ನೇಮ ನಿಷ್ಠೆಗಳ ಮೇಲಿನ ತನ್ನ ಅವಲಂಭನೆಯಿಂದ ವಿಮುಖನಾಗಬೇಕು ಎಂಬದೇ; ಆತನು ತನ್ನ ಪೂರ್ಣ ಭರವಸೆಯನ್ನು ಕ್ರಿಸ್ತನಲ್ಲಿಡಬೇಕು. ಇನ್ನೊಂದೂ ಆಕ್ಷೇಪಣೆ ಇರುವ ಸಾಧ್ಯತೆಯಿದೆ: ಇಸ್ಲಾಂ. ಮುಸ್ಲಿಮನೊಬ್ಬನು ಕ್ರಿಸ್ತನ ಹಿಂಬಾಲಕನಾಗುವಾಗ ಆತನು ಇಸ್ಲಾಮಿನ ಎಲ್ಲಾ ಆಚಾರಗಳನ್ನು ಬಿಟ್ಟು ಬೀಡಬೇಕಾದ ಅಗತ್ಯವಿರುವದಿಲ್ಲ ಎಂದು ಕೆಲವು ಕ್ರೈಸ್ತರು ನಂಬುತ್ತಾರೆ. ಆದರೆ ಮುಸ್ಲಿಮನು (ಯೆಹೂದ್ಯನಂತೆ) ಕ್ರಿಸ್ತನ ವಿಷಯದಲ್ಲಿನ ತನ್ನ ನಂಬಿಕೆಯನ್ನು ಮಾರ್ಪಡಿಸಿಕೊಳ್ಳಬೇಕು. ನಿಜವಾದ ಕ್ರೈಸ್ತನಾಗಿರಬೇಕಾದರೆ ಒಬ್ಬನು ಯೇಸುವೇ ಶರೀರ ಧಾರಿಯಾಗಿ ಬಂದ ದೇವರೂ ಮಾನವಜನಾಂಗದ ಏಕೈಕ ರಕ್ಷಕನೂ ಆಗಿದ್ದಾನೆಂದು ನಂಬಬೇಕು.

[25] ಪಾಪಾಧೀನ ಸ್ವಭಾವ ಎಂಬ ಪದಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಶರೀರ ಭಾವ" ಎಂದು ಹೇಳುತ್ತವೆ, ಅದು ಮೂಲ ಗ್ರೀಕ್ ಪ್ರತಿಯ ಅಕ್ಷರಂಶ; ಭಾಷಾಂತರವಾಗಿದೆ. ಅರ್ಥವು ಒಂದೇ ಆಗಿದೆ. ಈ ಅಧ್ಯಾಯದಲ್ಲಿ "ಶರೀರಬಾವ" ಎಂಬುದಕ್ಕೆ ಉಪಯೋಗಿಸಲಾಗಿರುವ ಗ್ರೀಕ್ ಪದವು ಪಾಪಾಧೀನ ಸ್ವಭಾವ ಎಂದು ಭಾಷಾಂತರಿಸಲ್ಪಟ್ಟಿದೆ, ರೋಮಾಪು ರದವರಿಗೆ ಬರೆದ ಪತ್ರಿಕೆ ಆನೇ ಅಧ್ಯಾಯದಲ್ಲಿಯೂ ಹೀಗೆಯೇ ಇರುತ್ತದೆ. ಹೆಚ್ಚಿನ ಚರ್ಚೆಗಾಗಿ, ಪದಪಟ್ಟಿ: ಶರೀರಭಾವ ನೋಡಿರಿ.

[26] ಹೇಗಿದ್ದರೂ, ನಾವು ಅವಮಾನ ಕ್ಕೊಳಗಾಗುವಾಗ ಕ್ರಿಸ್ತನು ಸಹ ಅವಮಾನಕ್ಕೊಳಗಾಗುತ್ತಾನೆಂಬುದು ನಿಜವೇ. ಆದದರಿಂದ, ಕ್ರಿಸ್ತನಿಗೋಸ್ಕರ (ನಮಗೋಸ್ಕರವಲ್ಲ) ನಾವು ನಮ್ಮ ಮೇಲೆ ಅವಮಾನ ತಂದುಕೊಳ್ಳದಿರುವದಕ್ಕೆ ಪ್ರಯತ್ನಿಸಬೇಕು.

[27] ದೇವರಾತ್ಮನ ಕಾರ್ಯವು ನಮ್ಮನ್ನು ದೀನರನ್ನಾಗಿ ಮಾಡುವದಾಗಿದೆ. ನಮ್ಮನ್ನು ತಗ್ಗಿಸಿಕೊಳ್ಳುವದು ನಮ್ಮ ಕೆಲಸವಾಗಿದೆ (1 ಪೇತ್ರ 5:5-6).

[28] ಹೊಸ ಒಡಂಬಡಿಕೆಯು ವಿಶ್ವಾಸಿಗಾಗಿ ಎರಡು ರೀತಿಯ ಶಿಲುಬೆಗೆ ಹಾಕಿಸಿಕೊಳ್ಳುವಿಕೆಯ ಬಗ್ಗೆ ಮಾತಾಡುತ್ತದೆ: ನಿಷ್ಕ್ರೀಯ ಹಾಗು ಸಕ್ರಿಯ. ರೋಮ 6:6 ಮತ್ತು ಗಲಾತ್ಯ 2;20 ರಲ್ಲಿ ನಮ್ಮಪೂರ್ವ ಸ್ವಭಾವವು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಶಿಲುಬೆಗೆ ಹಾಕಲ್ಪಟ್ಟಿರುತ್ತದೆ; ಇದು ನಮ್ಮ 'ನಿಷ್ಕ್ರೀಯ ಶಿಲುಬೆಗೆ ಹಾಕಿಸಿಕೊಳ್ಳುವಿಕೆ'. ಆದರೆ ಅದರ ಜೊತೆಗೆ, ಮಾರ್ಕ 8:34 ರೋಮ 8:13 ಮತ್ತು ಇಲ್ಲಿ ಗಲಾತ್ಯ 5:24ರ ಪ್ರಕಾರವಾಗಿ ನಮ್ಮ "ಪಾಪಾಧೀನ ಸ್ವಭಾವದ ಒಂದು ಸಕ್ರಿಯ ಶಿಲುಬೆಗೆ ಹಾಕಿಸಿಕೊಳ್ಳುವಿಕೆ" ಸಹ ಇರುತ್ತದೆ,. ಅದನ್ನು ಸ್ವತಃ ನಾವೇ ಪ್ರತಿದಿನ ಜಾರಿಗೆ ತರಬೇಕು.

[29] ಇಸ್ರಾಯೇಲ ಯೆಹೂದ್ಯ ರಾಷ್ಟ್ರ ಹೆಸರಾಗಿದೆ. ಆದರೆ ಈಗ, ಕ್ರಿಸ್ತನಲ್ಲಿ ವಿಶ್ವಾಸಿಸುವವರಾದ ನಾವು "ನಿಜವಾದ ಇಸ್ರಾಯೇಲ' ಎಂದು ಕರೆಯಲ್ಪಟ್ಟಿದ್ದೇವೆ, ಯಾಕೆಂದರೆ ಅವರೇ ನಿಜವಾಗಿಯೂ ದೇವರ ಜನರಾಗಿರುತ್ತಾರೆ.

# ಪೌಲನು ಎಫೆಸದವರಿಗೆ ಬರೆದ ಪತ್ರಿಕೆ

## ಪರಿಚಯ

ಪೌಲನು ರೋಮಾಪು ರದ ಸೆರೆಮನೆಯಲ್ಲಿರುವ ವೇಳೆಯಲ್ಲಿ ಎಫೆಸದವರಿಗೆ ಈ ಪತ್ರಿಕೆಯನ್ನು ಕ್ರಿ.ಶಕ 60-61 ರಲ್ಲಿ ಬರೆದನು. ಪೌಲನು ಸೆರೆಮನೆಯಲ್ಲಿದ್ದ ಅದೇ ಕಾಲದಲ್ಲಿ ಹೊಸ ಒಡಂಬಡಿಕೆಯ ಪಿಲಿಪ್ಪಿಯವರಿಗೆ, ಕೊಲೊಸ್ಸೆಯವರಿಗೆ, ಮತ್ತು ಫಿಲಮೋನನಿಗೆ ಪತ್ರಿಕೆಗಳನ್ನು ಸಹ ಬರೆದನು. ಹೊಸ ಒಡಂಬಡಿಕೆಯ ಕಾಲದಲ್ಲಿ ಎಫೆಸವು ಮಧ್ಯಪೂರ್ವದ ಒಂದು ಪ್ರಾಮುಖ್ಯನಗರವಾಗಿತ್ತು. ಇದು ರೋಮಾಯದ ಅಸ್ಯಸೀಮೆಯ ಪ್ರಮುಖ ನಗರವಾಗಿತ್ತು (ಈಗ ಆಧುನಿಕ ಟರ್ಕಿಯ ಪಾಶ್ಚಾತ್ಯಭಾಗವಾಗಿದೆ). ಅಲ್ಲದೆ ಎಫೆಸವು ಒಂದು ಪ್ರಮುಖ ವ್ಯಾಪಾರ ಕೇಂದ್ರವೂ ಆಗಿತ್ತು, ಮತ್ತು ಮಧ್ಯಪೂರ್ವದ ಎಲ್ಲಾ ಕಡೆಗಳಿಂದಲೂ ಜನರು ವ್ಯಾಪಾರ ವಹಿವಾಟುಗಳಿಗಾಗಿ ಅಲ್ಲಿಗೆ ಬರುತ್ತಿದ್ದರು (ಅ.ಕೃ. 18-19 ನೋಡಿರಿ).

ಪೌಲನು ಸ್ವತಃ ಕ್ರಿ.ಶಕ 53ರಿಂದ 55ರ ವರೆಗೆ ಎಫೆಸದಲ್ಲಿ ನೆಲೆಸಿದ್ದನು. ಈ ವೇಳೆಯಲ್ಲಿ ಆತನು ಪ್ರತಿದಿನವೂ ತರ್ಕ ಶಾಲೆಗೆ ಹೋಗಿ ಉಪದೇಷಿಸುತ್ತಿದ್ದನು, ಹಾಗು ಅನೇಕ ಜನರು ಆತನ ಬೋಧನೆಯನ್ನು ಕೇಳುವದಕ್ಕೆ ಬರುತ್ತಿದ್ದರು. ಕೆಲವರು ಯೇಸುವಿನಲ್ಲಿ ನಂಬಿಕೆಯಿಟ್ಟರು, ಮತ್ತು ಶೀಘ್ರವೇ ಎಫೆಸದಲ್ಲಿ ಒಂದು ಸಭೆಯು ಸ್ಥಾಪಿಸಲ್ಪಟ್ಟಿತ್ತು. ಅದು ಮಾತ್ರವಲ್ಲದೆ, ಬೇರೆ ಸ್ಥಳಗಳಿಂದ ವ್ಯಾಪಾರಕ್ಕಾಗಿ ಎಫೆಸಕ್ಕೆ ಬಂದಿದ್ದವರಲ್ಲಿ ಸಹ ಅನೇಕರು ಪೌಲನ ಬೋಧನೆಯನ್ನು ಕೇಳಿ ನಂಬಿದವರಾಗಿ ಸುವಾರ್ತೆಯನ್ನು ತಮ್ಮ ಸ್ವಂತ ಊರುಗಳಿಗೆ ತೆಗೆದು ಕೊಂಡು ಹೋದರು. ಈ ರೀತಿಯಲ್ಲಿ ಕ್ರಿಸ್ತನ ಸುವಾರ್ತೆಯು ಎಫೆಸದ ಸುತ್ತ ಮುತ್ತಲಿನ ಭಾಗದವರೆಗೆ ಹರಡಿಕೊಂಡಿತು (ಅ.ಕೃ. 19:8-10)

ಎಪೆಸದವರಿಗೆ ಬರೆದ ಪೌಲನ ಪತ್ರಿಕೆಯು ಎಪೆಸದ ಕ್ರೈಸ್ತರಿಗೆ ಮಾತ್ರವಲ್ಲ, ಆದರೆ ಎಫೆಸದಲ್ಲಿ ಪೌಲನು ಎರಡು ವರ್ಷಗಳ ಕಾಲ ಮಾಡಿದ ಬೋಧನೆಯ ಫಲಿತವಾಗಿ ಚಿಗುರೊಡೆದಿದ್ದ ಸುತ್ತಲಿನ ಊರುಗಳಲ್ಲಿನ ಸಭೆಗಳಿಗೆ ಸಹ ಬರೆಯಲ್ಪಟ್ಟಿದೆ ಎಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ. ಹೊಸ ಒಡಂಬಡಿಕೆಯಲ್ಲಿರುವ ಪೌಲನ ಬಹುಪಾಲು ಪತ್ರಿಕೆಗಳು ವ್ಯಕ್ತಿಗತ ಸಭೆಗಳಿಗೆ ವಯಕ್ತಿಕ ಶೈಲಿಯಲ್ಲಿ ಬರೆಯಲ್ಪಟ್ಟಿವೆ, ಆದರೆ ಈ ಪತ್ರಿಕೆಯು ವಿಭಿನ್ನವಾಗಿರುತ್ತದೆ. ಈ ಪತ್ರಿಕೆಯಲ್ಲಿ ಪೌಲನು ಹೆಚ್ಚು ಕಡಿಮೆ ಸ್ವತಃ ಎಫೆಸದವರನ್ನು ಸೂಚಿಸದೆಯೇ ವಿಶಾಲವಾದ ಹಾಗು ಸಾಮಾನ್ಯವಾದ ವಿಷಯಗಳ ಬಗ್ಗೆ ಬರೆಯುತ್ತಾನೆ, ಈ ಪತ್ರಿಕೆಯು ಸಭೆಯಿಂದ ಸಭೆಗೆ ಹಸ್ತಾಂತರಿಸಲ್ಪಡಬೇಕಾದ ಒಂದು ಸುತ್ತೋಲೆ ಪತ್ರಿಕೆಯಾಗಿ ಬರೆಯಲ್ಪಟ್ಟಿತ್ತೆಂದು ಅನೇಕ ಪಂಡಿತರು ನಂಬುತ್ತಾರೆ. ಪೌಲನ ಜೀವಿತದ ವಿಷಯದಲ್ಲಿ ಹೆಚ್ಚಿನ ಮಾಹಿತಿಗಾಗಿ ರೋಮಾಪು ರದವರಿಗೆ ಬರೆದ ಪತ್ರಿಕೆಯ ಪರಿಚಯ ಭಾಗವನ್ನು ನೋಡಿರಿ.

## ಹೊರ ರೇಖೆ

ಅ. ಕ್ರಿಸ್ತನಲ್ಲಿ ವಿಶ್ವಾಸಿಗಳ ಸ್ಥಾನ (1:1-3:21)
1. ಕ್ರಿಸ್ತನಲ್ಲಿ ಆತ್ಮೀಕ ಆಶೀರ್ವಾದಗಳು (1:1-14)
2. ಒಂದು ಮಧ್ಯಸ್ಥಿಕೆಯ ಪ್ರಾರ್ಥನೆ (1:15-23)
3. ಕೃಪೆಯಿಂದ ನಂಬಿಕೆಯ ಮೂಲಕ ರಕ್ಷಣೆ (2:1-10)
4. ಯೆಹೂದ್ಯರು ಹಾಗು ಅನ್ಯಜನರು ಕ್ರಿಸ್ತನಲ್ಲಿ ಸಮಾಧಾನ ಪಡಿಸಲ್ಪಟ್ಟಿರುತ್ತಾರೆ (2:11-22)

5. ಗುಪ್ತವಾಗಿದ್ದ ಸಂಗತಿಯ ಪ್ರಕಟನೆ (3:1-13)
6. ಪೌಲನ ಎರಡನೆಯ ಪ್ರಾರ್ಥನೆ (3;14-21)

ಆ. ಲೋಕದಲ್ಲಿ ವಿಶ್ವಾಸಿಗಳ ನಡವಳಿಕೆ (4:1-6:24)

1. ಸಭೆಯ ಐಕ್ಯತೆ (4;1-16)
2. ಮಾರ್ಪಾಟಾದ ಜೀವನ (4:17-32)
3. ಬೆಳಕಿನ ಮಕ್ಕಳಾಗಿ ಜೀವಿಸುವದು (5:1-21)
4. ಕ್ರೈಸ್ತೀಯ ವಿವಾಹ (5:22-33)
5. ಕ್ರೈಸ್ತೀಯ ಪೋಷಕತ್ವ (6:1-4)
6. ಕ್ರೈಸ್ತೀಯ ಉದ್ಯೋಗ (6:5-9)
7. ಕ್ರೈಸ್ತೀಯ ಹೋರಾಟ (6:10-24)

# ಅಧ್ಯಾಯ - 1

## ಕ್ರಿಸ್ತನಲ್ಲಿನ ಆತ್ಮೀಕ ಆಶೀರ್ವಾದಗಳು (1:1-14)

1 ಪೌಲನು ಈ ಪತ್ರಿಕೆಯನ್ನು ಕ್ರಿಸ್ತ ಯೇಸುವಿನ ಒಬ್ಬ ಅಪೊಸ್ತಲನಾಗಿ ಬರೆಯುತ್ತಾನೆ; ಆತನು ಕ್ರಿಸ್ತನ ಪೂರ್ಣ ಅಧಿಕಾರದೊಂದಿಗೆ ಬರೆಯುತ್ತಾನೆ. ಪೌಲನು ಮನುಷ್ಯನ ಚಿತ್ತಕ್ಕನುಸಾರವಾಗಿ ಅಲ್ಲ, ಆದರೆ ದೇವರ ಚಿತ್ತಾನುಸಾರವಾಗಿಯೇ ಅಪೊಸ್ತಲನಾಗಿ ನೇಮಿಸಲ್ಪಟ್ಟಿದ್ದನು. ನಾವು ಪತ್ರಿಕೆಯನ್ನು ಅಭ್ಯಾಸಿಸುವ ಹಾಗೆ ಸ್ವತಃ ದೇವರೇ ತನ್ನ ಅಪೊಸ್ತಲನ[2] ಮುಖಾಂತರ ಮಾತಾಡುತ್ತಿದ್ದಾನೆಂಬದನ್ನು ನಾವು ಅರ್ಥಮಾಡಿಕೊಳ್ಳಬೇಕು.

ಪೌಲನು ಈ ಪತ್ರಿಕೆಯನ್ನು ಎಫೆಸದಲ್ಲಿರುವ ದೇವಜನರನ್ನುದ್ದೇಶಿಸಿ ಬರೆಯುತ್ತಾನೆ, ಅಂದರೆ, ಕ್ರಿಸ್ತಯೇಸುವಿನಲ್ಲಿ ನಂಬಿಕೆಯಿಟ್ಟವರಿಗೆ ಬರೆಯುತ್ತಾನೆ. ಹೊಸ ಒಡಂಬಡಿಕೆಯ ಕಾಲದಲ್ಲಿ ಕ್ರಿಸ್ತನಲ್ಲಿ ವಿಶ್ವಾಸವಿಟ್ಟವರು ಹಲವಾರು ವೇಳೆಗಳಲ್ಲಿ "ದೇವಜನರು' ಎಂದು ಕರೆಯಲ್ಪಟ್ಟಿರುತ್ತಾರೆ. ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ತನ್ನ ಪಾಪಗಳಿಂದ ಕ್ಷಮಿಸಲ್ಪಟ್ಟು ಶುದ್ಧೀಕರಿಸಲ್ಪಟ್ಟಿರುವ ಯಾವದೇ ವ್ಯಕ್ತಿಯು ದೇವಜನವಾಗಿದ್ದಾನೆ (ರೋಮ 1:7; ಫಿಲಿಪ್ಪಿ 1:1 ನೋಡಿರಿ).

ಈ ಪತ್ರಿಕೆಯು ಕೇವಲ ಎಫೆಸದಲ್ಲಿಯೂ ಸುತ್ತಲಲ್ಲಿಯೂ ಇರುವ ಸಭೆಗಳಿಗೆ ಮಾತ್ರವೇ ಬರೆಯಲ್ಪಟ್ಟಿರದೇ ನಮ್ಮ ಸಭೆಗೂ ಸಹ ಬರೆಯಲ್ಪಟ್ಟಿರುತ್ತದೆಂಬದನ್ನು ನಾವು ನೆನಪಿನಲ್ಲಿಟ್ಟು ವಿಶ್ವಾಸಿಗಳಿಗೆ ಎಷ್ಟು ಪ್ರಾಮುಖ್ಯವಾಗಿತ್ತೋ ಇಂದು ನಮಗೂ ಅಷ್ಟೇ ಪ್ರಾಮುಖ್ಯವಾಗಿರುತ್ತದೆ. ನಾವು ಇದನ್ನು ಓದುವ ಹಾಗೆ ದೇವರು ನಮಗೆ ಏನು ಹೇಳುತ್ತಿದ್ದಾನೆಂಬದನ್ನು ಕಿವಿಗೊಟ್ಟು ಕೇಳೋಣ.

2 ಪೌಲನು ತನ್ನ ವಾಚಕರು ದೇವರ ಕೃಪೆ ಮತ್ತು ಶಾಂತಿಯನ್ನು (ಸಮಾಧಾನ) ಅನುಭವಿಸುವಂತಾಗಬೇಕೆಂದು ಪ್ರಾರ್ಥಿಸುತ್ತಾನೆ.

ಕೃಪೆಯು ದೇವರ ಕರುಣೆ ಮತ್ತು ಪ್ರೀತಿಯಾಗಿದ್ದು ದೇವರು ಅದನ್ನು ಮನುಷ್ಯರಿಗೆ ಉಚಿತವಾಗಿ ದಯಪಾಲಿಸುತ್ತಾನೆ. ಮನುಷ್ಯನು ದೇವರ ಕೃಪೆಗೆ ಅರ್ಹನೂ ಅಲ್ಲ. ಆತನು ಅದನ್ನು ಒಳ್ಳೇಕಾರ್ಯಗಳನ್ನು ಮಾಡುವದರ ಮೂಲಕ ಸಂಪಾದಿಸಿಕೊಳ್ಳುವದು ಇಲ್ಲ; ದೇವರು ಪುರುಷರು ಮತ್ತು ಸ್ತ್ರೀಯರನ್ನು ಪ್ರೀಸುತ್ತಾನೆಂಬದಕ್ಕಾಗಿ ಮಾತ್ರವೇ ಅವರ ಮೇಲೆ ತನ್ನ ಕೃಪೆಯನ್ನು ಸುರಿಸುತ್ತಾನೆ.

ದೇವರ ಈ ಕೃಪೆಯ ಮೂಲಕ ಮನುಷ್ಯರು ದೇವರೊಂದಿಗೂ ಒಬ್ಬರೊಂದಿಗೊಬ್ಬರೂ ಸಮಾಧಾನವನ್ನು ಹೊಂದಿಕೊಳ್ಳುತ್ತಾರೆ. ಪೌಲನು ಎಫೆಸದವರಿಗೆ ಬರೆದ ಈ ಪತ್ರಿಕೆಯನ್ನು "ಕೃಪೆಯ ಮುಖಾಂತರ ಸಮಾಧಾನ" ಎಂದು ಕರೆಯಬಹುದು, ಕಾರಣ ಪ್ರಾರಂಭದಿಂದಲೂ ಕಡೆಯವರೆಗೂ ಇದೇ ಮುಖ್ಯವಿಷಯವಾಗಿರುತ್ತದೆ.

3 ದೇವರು ವಿಶ್ವಾಸಿಗಳನ್ನು ಸಕಲ ಆತ್ಮೀಕ ವರಗಳಿಂದ ಆಶಿರ್ವಧಿಸುತ್ತಾನೆ. ದೇವರು "ನಮ್ಮನ್ನು ಆಶಿರ್ವದಿಸುವನು" ಎಂದು ಪೌಲನು ಹೇಳುವದಿಲ್ಲ; ಆತನು ಈಗಾಗಲೇ ದೇವರು ನಮ್ಮನ್ನು ಆಶಿರ್ವದಿಸಿದ್ದಾನೆ ಅಥವಾ ಅನುಗ್ರಹಿಸಿದ್ದಾನೆ ಎಂದು ಹೇಳುತ್ತಾನೆ.

ದೇವರು ಕ್ರಿಸ್ತಯೇಸುವಿನಲ್ಲಿ ನಮ್ಮನ್ನು ಆಶಿರ್ವದಿಸಿದ್ದಾನೆ. ಸಕಲ ಆತ್ಮೀಕ ಆಶೀರ್ವಾದವು ನಮಗೆ ಕ್ರಿಸ್ತನ ಮುಖಾಂತರ ಬರುತ್ತದೆ. ನಾವು ಕ್ರಿಸ್ತನಲ್ಲಿ ಇದ್ದೇವೆಂಬ ಕಾರಣಕ್ಕಾಗಿ ಮಾತ್ರವೇ ಈ ಆಶೀರ್ವಾದಗಳನ್ನು ಪಡಕೊಳ್ಳಬಹುದು; ನಾವು ಕ್ರಿಸ್ತನಲ್ಲಿ ಇಲ್ಲದಿದ್ದರೆ ನಾವು ಕ್ರಿಸ್ತನನ್ನು ನಮ್ಮ ಕರ್ತನನ್ನಾಗಿಯೂ ರಕ್ಷಕನನ್ನಾಗಿಯೂ ಸ್ವೀಕರಿಸಿಕೊಂಡು ನಂಬಿಕೆಯ ಮೂಲಕ ಆತನೊಂದಿಗೆ ಐಕ್ಯವಾಗಿ ನಮ್ಮ ಜೀವಿತಗಳನ್ನು ಆತನ ಅಧಿಕಾರಕ್ಕೊಳಪಡಿಸುತ್ತೇವೆ. ದೇವರು ಈಗಾಗಲೇ ಈ ಆಶೀರ್ವಾದಗಳನ್ನು ನಮಗೆ ದೊರೆಯುವಂತೆ ಮಾಡಿದ್ದರೂ ನಾವು " ಮುಂದೆ ಹೋಗಿ' ಅವುಗಳನ್ನು ನಂಬಿಕೆಯಿಂದ ತೆಗೆದುಕೊಳ್ಳಬೇಕು; ಬೇರೆ ಮಾತುಗಳಲ್ಲಿ ಹೇಳುವದಾದರೆ, ನಾವು ಅನುಗ್ರಹಿಸಲ್ಪಟ್ಟಿರುವದನ್ನು ನಂಬಿಕೆಯಿಂದ ನಮ್ಮದಾಗಿಸಿಕೊಳ್ಳಬೇಕು. ನಾವು ನಂಬಿಕೆಯನ್ನು ಪ್ರಯೋಗಿಸದಿದ್ದರೆ ಏನನ್ನೂ ಪಡೆದುಕೊಳ್ಳುವದಿಲ್ಲ.

ಈ ಆತ್ಮೀಕ ಆಶೀರ್ವಾದಗಳಾವವು ? ಮೊದಲನೆಯ ಆಶೀರ್ವಾದವೇನೆಂದರೆ ದೇವರು ನಮ್ಮನ್ನು ಆರಿಸಿಕೊಂಡನು (ವಚನ 4). ಮತ್ತು ನಮ್ಮನ್ನು ಪುತ್ರರನ್ನಾಗಿ ಸ್ವೀಕರಿಸಿದನು (ವಚನ 5). ಎರಡನೆಯ ಆಶೀರ್ವಾದವೇನೆಂದರೆ ದೇವರು ತನ್ನ ಕೃಪೆಯನ್ನು ನಮಗೆ ಉಚಿತವಾಗಿ ದಯಪಾಲಿಸಿದ್ದಾನೆ (ವಚನ 6). ಆ ಕೃಪೆಯಿಂದ ನಾವು ಅಪರಾಧಗಳ ಪರಿಹಾರ ಹಾಗು ಬಿಡುಗಡೆ ಪಡೆದುಕೊಳ್ಳುತ್ತೇವೆ (ವಚನ 7). ಮೂರನೆಯ ಆಶೀರ್ವಾದವೇನೆಂದರೆ ದೇವರು ರಹಸ್ಯವಾದ ತನ್ನ ಸಂಕಲ್ಪವನ್ನು ನಮಗೆ ತಿಳಿಯಪಡಿಸಿದ್ದಾನೆ (ವಚನ 9). ನಾಲ್ಕನೆಯದಾಗಿ ನಾವು ಸುವಾರ್ತೆಯೆಂಬ ಸತ್ಯವಾಕ್ಯವನ್ನು ಕೇಳಿದ್ದೇವೆ (ವಚನ 13); ಮತ್ತು ನಾವು ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದ್ದೇವೆ (ವಚನ 13); ಆ ಆತ್ಮನು ನಮ್ಮ ಬಾಧ್ಯತೆಗೆ ಸಂಚಕಾರವಾಗಿದ್ದಾನೆ (ವಚನ 14). ಹಾಗಾದರೆ ಇವುಗಳು ಪರಲೋಕದಲ್ಲಿನ ಆತ್ಮೀಕ ಆಶೀರ್ವಾದಗಳಾಗಿದ್ದು ಅವುಗಳನ್ನು ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಪಡೆದುಕೊಳ್ಳುತ್ತೇವೆ.

4 ದೇವರು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಆರಿಸಿಕೊಂಡನು. ಅದರ ಬಗ್ಗೆ ಯೋಚಿಸಿರಿ! ಆಗ ಭೂಲೋಕವು ಇರಲಿಲ್ಲ; ದೇವರು ಮಾತ್ರವೇ ಇದ್ದನು. ಆ ಸಮಯದಲ್ಲಿ ದೇವರು ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ

(ವಚನ 5) ಒಂದು ನಿತ್ಯ ಸಂಕಲ್ಪವನ್ನು ಮಾಡಿದನು; ಮತ್ತು ಆ ಸಂಕಲ್ಪದಲ್ಲಿ ಕ್ರಿಸ್ತನನ್ನು ವಿಶ್ವಾಸಿಸುವವರಾದ ನಮ್ಮನ್ನು "ಆರಿಸಿಕೊಳ್ಳುವದು" ಒಂದು ಭಾಗವಾಗಿತ್ತು. 5ನೇ ವಚನದ ಪ್ರಕಾರವಾಗಿ ನಾವು ಆತನ ಮಕ್ಕಳಾಗಿರಬೇಕೆಂದು ಮೊದಲೇ ಸಂಕಲ್ಪಮಾಡಿದ್ದನು; "ಆರಿಸಿಕೊಳ್ಳುವದು? ಎಂಬದರ ಅರ್ಥವು ಅದೇ ಆಗಿದೆ. ಇದು ಒಂದು ಪ್ರಾಮುಖ್ಯ ಸತ್ಯವಾಗಿದೆ. ಮೊದಲನೆಯದಾಗಿ, ಯಾವುದೂ ಸಂಭವಿಸದಿರುವದಕ್ಕೆ ಮುಂಚೆ ದೇವರು ನಮ್ಮನ್ನು ಆರಿಸಿಕೊಂಡನು. ಕೆಲವು ವೇಳೆಗಳಲ್ಲಿ ನಾವು ದೇವರನ್ನು ಮೊದಲು ನಾವೇ ಆರಿಸಿಕೊಂಡಿದ್ದೇವೆಂದು ಯೋಚಿಸಿಕೊಳ್ಳುತ್ತೇವೆ, ಆದರೆ ಅದು ಸುಳ್ಳಾಗಿರುತ್ತದೆ. ಆತನು ಮೊದಲು ನಮ್ಮನ್ನು ಆರಿಸಿಕೊಂಡಿದ್ದಾನೆ; ಮತ್ತು ಇದರ ಕಾರಣದಿಂದ ಮಾತ್ರವೇ ನಾವು ಬಳಿಕ ಆತನೆಡೆಗೆ ತಿರುಗಿಕೊಂಡು ಆತನನ್ನು 'ಆರಿಸಿಕೊಳ್ಳಲು' ಸಾಧ್ಯವಿರುತ್ತದೆ. ಮತ್ತು ದೇವರು ನಮ್ಮನ್ನು ಈ ರೀತಿಯಾಗಿ ಆರಿಸಿಕೊಂಡಿರುವದರಲ್ಲಿ ಹೆಚ್ಚಳ ಪಟ್ಟುಕೊಳ್ಳುವದಕ್ಕೆ ನಮಗೆ ಯಾವ ಕಾರಣವೂ ಇರುವದಿಲ್ಲ. ಅದಕ್ಕೆ ನಾವು ಯೋಗ್ಯರಾಗಿರಲಿಲ್ಲ; ನಾವು ಹುಟ್ಟುವದಕ್ಕೆ ಬಹುಕಾಲದ ಮುಂಚೆಯೇ ದೇವರು ನಮ್ಮನ್ನು ಆರಿಸಿಕೊಂಡನು! ನಾವು ದೇವರ ಕುಟುಂಬದಲ್ಲಿ ನಮ್ಮ ಸ್ಥಾನವನ್ನು ಸಂಪಾದಿಸಿಕೊಳ್ಳಲಿಲ್ಲ; ದೇವರು ದಯಪೂರ್ವಕವಾದ ತನ್ನ ಚಿತ್ತಾನುಸಾರವಾಗಿಯೇ (ವಚನ 5). ನಾವು ಆತನ ಮಕ್ಕಳಾಗಿರಬೇಕೆಂದು ಮೊದಲೇ ಸಂಕಲ್ಪಮಾಡಿರುತ್ತಾನೆ. ಆದದರಿಂದ, ವಾಸ್ತವದಲ್ಲಿ ನಾವು ದೇವರಿಗೆ "ಸಾಲಗಾರರು" ಆಗಿದ್ದೇವೆ. ನಮ್ಮಲ್ಲಿಯೇ ಹೆಚ್ಚಳಪಟ್ಟುಕೊಳ್ಳುವದಕ್ಕೆ ಬದಲಾಗಿ ದೇವರು ನಮಗೆ ತೋರಿಸುವ ಮಹಾಕೃಪೆಗಾಗಿ ಆತನನ್ನು ದೀನತೆಯಿಂದ ಕೃತಜ್ಞತಾಸ್ತುತಿಯನ್ನು ಸಲ್ಲಿಸುವವರಾಗಿರಬೇಕು.

ಕೆಲವು ಧರ್ಮಗಳಲ್ಲಿ ಒಂದು ನಂಬಿಕೆಯಿರುತ್ತದೇನೆಂದರೆ ಮಗುವೊಂದು ಹುಟ್ಟುವಾಗ ಒಂದು ಆತ್ಮವು ಬಂದು ಮಗುವಿನ ಭವಿಷ್ಯತ್ತನ್ನು ನಿರ್ಧರಿಸುತ್ತದೆ ಎಂಬದೇ. ಆದರೆ ಇದು ಸತ್ಯವಲ್ಲ. ಜಗದುತ್ಪತ್ತಿಗೆ ಮುಂಚಿನಿಂದಲೇ ದೇವರು ಪ್ರತಿಯೊಬ್ಬ ಮಾನವ ಜೀವಿಯ ಭವಿಷ್ಯತ್ತನ್ನು ನಿಷ್ಕರ್ಷೆ ಮಾಡಿರುತ್ತಾನೆ.

ಅನೇಕ ಕ್ರೈಸ್ತರು ಈ ವಚನವನ್ನು ತೆಗೆದು ಕೊಂಡು ದೇವರು ಕೆಲವರನ್ನು ತನ್ನ ಮಕ್ಕಳಾಗಿರುವದಕ್ಕೆ "ಆರಿಸಿಕೊಳ್ಳುತ್ತಾನೆ", ಇತರರನ್ನು ಆರಿಸಿಕೊಳ್ಳುವದಿಲ್ಲ ಎಂದು ಹೇಳುತ್ತಾರೆ.

ದೇವರು ಯಾಕೆ ಕೆಲವರನ್ನು ಆರಿಸಿಕೊಳ್ಳಬೇಕು ಮತ್ತು ಇತರರನ್ನು ಬಿಡಬೇಕೆಂಬದರ ಕಾರಣವನ್ನು ಅರ್ಥಮಾಡಿಕೊಳ್ಳುವದು ಹಾಗು ಸ್ವೀಕರಿಸಿಕೊಳ್ಳಲು ಕಷ್ಟಕರವಾಗಿರುತ್ತದೆ. 1 ತಿಮೊಥೆ 2:4 ರಲ್ಲಿ ದೇವರು ಎಲ್ಲಾ ಮನುಷ್ಯರು ರಕ್ಷಣೆ ಹೊಂದಬೇಕು ಎಂದು ಬಯಸುತ್ತಾನೆಂಬದಾಗಿ ಪೌಲನು ಬರೆಯುತ್ತಾನೆ; ಆದಾಗ್ಯು ಇತರ ಅನೇಕ ವಚನಗಳ ಪ್ರಕಾರವಾಗಿ ಎಲ್ಲಾ ಮನುಷ್ಯರು ಏಕಾಏಕಿ ರಕ್ಷಣೆ ಹೊಂದುವದಿಲ್ಲ. ಹೇಗಿದ್ದರೂ, ಇಲ್ಲಿ ಜ್ಞಾಪಕದಲ್ಲಿಟ್ಟು ಕೊಳ್ಳಬೇಕಾದ ಪ್ರಾಮುಖ್ಯ ಸಂಗತಿಯೇನೆಂದರೆ, ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ದೇವರಿಂದ ಆರಿಸಿಕೊಳ್ಳಲ್ಪಟ್ಟವನಾಗಿದ್ದಾನೆ (ರೋಮ 9:14-21 ಮತ್ತು ವ್ಯಾಖ್ಯಾನ; ಸಾಮಾನ್ಯ ಲೇಖನ: ರಕ್ಷಣೆ – ದೇವರ ಆಯ್ಕೆಯೋ ಅಥವಾ ಮಾನವನ ಆಯ್ಕೆಯೋ? ನೋಡಿರಿ).

ಒಂದು ಪ್ರಶ್ನೆ ಉದ್ಭವಿಸುತ್ತದೆ: ದೇವರು ನಮ್ಮನ್ನು ಯಾಕೆ ಆರಿಸಿಕೊಂಡನು? ಆತನು ನಮ್ಮನ್ನು ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ಆರಿಸಿಕೊಳ್ಳುತ್ತಾನೆ. ನಾವು ದೇವರಿಂದ ಆರಿಸಿಕೊಳ್ಳಲ್ಪಟ್ಟಿದ್ದೇವೆಂಬ ಕಾರಣಕ್ಕಾಗಿ ಈಗ ನಾವು ನಮ್ಮ ಇಷ್ಟದಂತೆ ಯಾವದನ್ನಾದರೂ ಮಾಡಬಹುದೆಂದು ನಾವು ಎಂದಿಗೂ ಯೋಚಿಸದಿರೋಣ; ಅದು ಸುಳ್ಳಾಗಿರುತ್ತದೆ. ನಮ್ಮ ಜೀವಿತಗಳಲ್ಲಿ ಯಾವದೇ ಪಾಪ ಅಥವಾ ಅಶುದ್ಧತೆ ಇರಬಾರದು, ಯಾಕೆಂದರೆ ದೇವರು ನಮ್ಮನ್ನು ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ಕರೆದಿರುತ್ತಾನೆ (1 ಪೇತ್ರ 1:15-16 ನೋಡಿರಿ).

5 ದೇವರು ನಮ್ಮನ್ನು ಆತನ ಪುತ್ರರನ್ನಾಗಿ[3] ಮಾಡಿಕೊಳ್ಳಬೇಕೆಂದು ಮೊದಲೇಸಂಕಲ್ಪಮಾಡಿಕೊಂಡಿದ್ದಾನೆ. ಒಂದು ಆತ್ಮೀಕ ವಿಧದಲ್ಲಿ ಕ್ರಿಸ್ತನ ವಿಶ್ವಾಸಿಗಳು ದೇವರ ಪುತ್ರರು ಹಾಗು ಪುತ್ರಿಯರು ಆಗುತ್ತಾರೆ.

ಒಂದು ಕಡೆಯಲ್ಲಿ, ದೇವರ ಪುತ್ರರಾಗಿ ಸ್ವೀಕರಿಸಿಕೊಳ್ಳಲ್ಪಟ್ಟಿರುವ ನಾವು ಕ್ಷಮಾಪಣೆ, ರಕ್ಷಣೆ, ಪರಲೋಕದಲ್ಲಿ ಸ್ವಾಸ್ಥ್ಯವನ್ನು ಮತ್ತು ಇನ್ನು ಅನೇಕ ಮಹಾ ಆಶೀರ್ವಾದಗಳನ್ನು ಪಡಕೊಳ್ಳುತ್ತೇವೆ. ಆದರೆ ಇನ್ನೊಂದೆಡೆಯಲ್ಲಿ, ಮಕ್ಕಳಾದ ನಮಗೆ ಒಂದು ಮಹಾ ಜವಾಬ್ದಾರಿಯು ಕೊಡಲ್ಪಟ್ಟಿರುತ್ತದೆ: ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂಬುದೆ (ವಚನ 4).

ನಾವು ಯೇಸು ಕ್ರಿಸ್ತನ ಮೂಲಕ ಪುತ್ರರಾಗಿ ಸ್ವೀಕರಿಸಿಕೊಳ್ಳಲ್ಪಟ್ಟಿದ್ದೇವೆ. ನಾವು ಕ್ರಿಸ್ತನನ್ನು ನಮ್ಮ ಕರ್ತನನ್ನಾಗಿ ಅಂಗೀಕರಿಸಿಕೊಂಡು ಆತನ ಹೆಸರಿನಲ್ಲಿ ನಂಬಿಕೆಯಿಡುವಾಗಲೇ ನಾವು ದೇವರ ಪುತ್ರರಾಗಿ ಸ್ವೀಕರಿಸಿಕೊಳ್ಳಲ್ಪಟ್ಟವರೂ ಆತನ ಕುಟುಂಬದ ಸದಸ್ಯರೂ ಆಗುತ್ತೇವೆ (ಯೋಹಾನ 1:12; ಗಲಾತ್ಯ 3:26; 4:5 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

6 ನಮ್ಮನ್ನು ತನ್ನ ಮಕ್ಕಳನ್ನಾಗಿ ಮಾಡಿಕೊಳ್ಳುವದರಲ್ಲಿನ ದೇವರ ಆಶ್ಚರ್ಯಕರವಾದ ಕೃಪೆಯ ಬಗ್ಗೆ ಪೌಲನು ಯೋಚಿಸಿಕೊಳ್ಳುವಾಗ ಆತನ ಹೃದಯವು ಸ್ತುತಿಯಿಂದ ತುಂಬುತ್ತದೆ. ದೇವರು ಇದೆಲ್ಲವನ್ನೂ ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ಮಾಡಿದ್ದಾನೆ ಎಂಬದಾಗಿ ಪೌಲನು ಹೇಳುತ್ತಾನೆ. ದೇವರು ಈ ಮಹಿಮಾಕರವಾದ ಕೃಪೆಯನ್ನು ನಮಗೆ ದಾನವಾಗಿ ಕೊಟ್ಟಿದ್ದಾನೆ; ನಾವು ಅದನ್ನು ಸಂಪಾದಿಸಿ ಕೊಳ್ಳುವದಕ್ಕೆ ಏನನ್ನೂ ಮಾಡಲಿಲ್ಲ. ಮತ್ತು, ದೇವರು ಈ ಕೃಪೆಯನ್ನು ತನ್ನ ಪ್ರೀಯನಲ್ಲಿಯೇ (ಮೂಲಕವೇ) ಅಂದರೆ, ಕ್ರಿಸ್ತನಲ್ಲಿ – ನಮಗೆ ನೀಡಿರುತ್ತಾನೆ.

**7** ದೇವರು ತನ್ನ ಮಗನಾದ ಯೇಸು ಕ್ರಿಸ್ತನನ್ನು ಭೂಲೋಕಕ್ಕೆ ಕಳುಹಿಸಲು ಮುಖ್ಯಕಾರಣವು ನಮ್ಮ ಬಿಡುಗಡೆ [4] ಅಥವಾ ರಕ್ಷಣೆಯನ್ನು ಜಾರಿಗೆ ತರುವದಕ್ಕಾಗಿಯೇ ಆಗಿತ್ತು. ಪುರುಷ ಮತ್ತು ಸ್ತ್ರೀಯರನ್ನು ರಕ್ಷಿಸುವದಕ್ಕಾಗಿಯೇ ಯೇಸು ಭೂಲೋಕಕ್ಕೆ ಕಳುಹಿಸಲ್ಪಟ್ಟನು. ಬಿಡುಗಡೆಯಿಲ್ಲದೆ ನಾವು ದೇವರ ಪುತ್ರರಾಗಿ ಸ್ವೀಕರಿಸಲ್ಪಡುವದಕ್ಕೆ ಸಾಧ್ಯವಿಲ್ಲ. ದೇವರ ಬಿಡುಗಡೆಯ ಕಾರ್ಯವು ಆತನಸೃಷ್ಟಿ ಕಾರ್ಯಕ್ಕಿಂತಲೂ ಶ್ರೇಷ್ಠವಾದದ್ದು, ಯಾಕೆಂದರೆ ಜಗತ್ತನ್ನು ಸೃಷ್ಟಿಸುವದಕ್ಕೆ ದೇವರು ಕೇವಲ ನುಡಿಯುವದಷ್ಟೇ ಮಾಡಬೇಕಾಗಿತ್ತು, ಆದರೆ ಮನುಷ್ಯರನ್ನು ರಕ್ಷಿಸಲು ದೇವರು ಸಾಯಬೇಕಾಗಿತ್ತು; ಆತನು ನಮ್ಮ ಬಿಡುಗಡೆಗಾಗಿ ತನ್ನ ಸ್ವಂತ ಮಗನಾದ ಯೇಸುವನ್ನು ಯಜ್ಞವಾಗಿ ನೀಡಬೇಕಾಗಿತ್ತು.

ಆತನಲ್ಲಿಯೇ ನಮಗೆ ಬಿಡುಗಡೆಯಾಯಿತು ಎಂದು ಪೌಲನು ಹೇಳುತ್ತಾನೆ. ಪೌಲನು ಹಲವಾರು ವೇಳೆ 'ಆತನಲ್ಲಿ' ಅಥವಾ "ಕ್ರಿಸ್ತನಲ್ಲಿ" ಅಥವಾ "ಆತನ ಪ್ರೀಯನಲ್ಲಿ" ಎಂದು ಬರೆಯುತ್ತಾನೆ (ವಚನಗಳು2,3,4,6,7,8,10,11,13 ನೋಡಿರಿ). ಇದು ಪೌಲನ ಮುಖ್ಯ ಬೋಧನೆಗಳಲ್ಲಿ ಒಂದಾಗಿದೆ; "ಕ್ರಿಸ್ತನಲ್ಲಿ". ಸಕಲವಿಧವಾದ ಆತ್ಮೀಕ ಆಶೀರ್ವಾದವು ಕ್ರಿಸ್ತನಲ್ಲಿ ಇರುತ್ತದೆ. ಎಲ್ಲಾ ಬಲವು ಸಹ ಕ್ರಿಸ್ತನಲ್ಲಿರುತ್ತದೆ. ಮತ್ತು ಇಲ್ಲಿ 7ನೇ ವಚನದ ಪ್ರಕಾರವಾಗಿ ನಾವು ಬಿಡುಗಡೆಯು ಸಹ ಆತನಲ್ಲಿರುತ್ತದೆ. ನಮ್ಮ ಬಿಡುಗಡೆಯು ಆತನ ರಕ್ತದ ಮೂಲಕವೇ, ಅಂದರೆ. ಆತನ ಯಜ್ಞರೂಪದ ಮರಣದ ಮೂಲಕವೇ. ಯೇಸು ಕ್ರಿಸ್ತನು ನಮ್ಮ ಪಾಪಗಳ ದಂಡನೆಯನ್ನು ತನ್ನ ಮೇಲೆ ಹೊತ್ತು ಕೊಳ್ಳಲು ಶಿಲುಬೆಯ ಮೇಲೆ ಮರಣಿಸಿದನು; ಆತನು ನಮ್ಮ ಪಾಪಗಳಿಗಾಗಿ ಪ್ರಾಯಶ್ಚಿತ್ತಯಜ್ಞವಾಗಿದ್ದಾನೆ (ಮಾರ್ಕ 10:45; ರೋಮ 3:23-25; 1 ಪೇತ್ರ 1:18-19 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಪಾಪಗಳ ಕ್ಷಮಾಪಣೆಯು (ಅಪರಾಧಗಳ ಪರಿಹಾರವು) ನಮ್ಮ ಬಿಡಗಡೆಯ (ಅಥವಾ ರಕ್ಷಣೆಯ) ಒಂದು ಕೋನವಾಗಿದೆ. ಪುನಃ ನಾವು ಈ ವಚನದಿಂದ ತಿಳಿಯುವದೇನೆಂದರೆ ನಾವು ದೇವರ ಕೃಪೆಗೆ ಸ್ವತಃ ಯೋಗ್ಯರಲ್ಲದಿದ್ದಾಗ್ಯು ದೇವರ ಕೃಪೆಯ ಮೂಲಕ ಅದನ್ನು ಪಡೆದುಕೊಳ್ಳುತ್ತೇವೆ.

**8** ದೇವರು ಜನರ ಮೇಲೆ ತನ್ನ ಕೃಪೆಯನ್ನು ಸುರಿಸುವಾಗ ಆತನು ಅದನ್ನು ಚಿಕ್ಕ ಹನಿಗಳಾಗಿ ಸುರಿಸುವದಿಲ್ಲ. ದೇವರು ತನ್ನ ಕೃಪೆಯನ್ನು ನಮ್ಮ ಮೇಲೆ ಹೇರಳವಾಗಿ ಸುರಿಸಿದ್ದಾನೆ. ನಾವು ಆತನ ಮಹಿಮಾಕರವಾದ ಕೃಪೆಗಾಗಿ ಆತನನ್ನು ಸ್ತುತಿಸುವದಕ್ಕೆ ಎಂದಿಗೂ ವಿಫಲರಾಗದಿರೋಣ (ವಚನ 6).

**9-10** ದೇವರು ಕ್ರಿಸ್ತನ ಬೋಧನೆಗಳ ಮೂಲಕ ತನ್ನ ಸಂಕಲ್ಪದ ಮರ್ಮವನ್ನು ನಮಗೆ ತಿಳಿಯಪಡಿಸಿದ್ದಾನೆ. ದೇವರ ಸಂಕಲ್ಪವು ಸಮಸ್ತವನ್ನೂ ಕ್ರಿಸ್ತನಲ್ಲಿ ಒಂದಾಗಿ ಕೂಡಿಸಬೇಕೆಂಬದೇ (ವಚನ 10). ಅಂದರೆ, ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಕ್ರಿಸ್ತನ ಒಡೆಯತ್ವ ಹಾಗು ಅಧಿಕಾರದ ಅಡಿಯಲ್ಲಿ ತರಬೇಕೆಂಬದೇ ದೇವರ ಉದ್ದೇಶವಾಗಿದೆ. (ಫಿಲಿಪ್ಪಿ 2:9-11; ಕೊಲೊಸ್ಸೆ 1:15-20 ನೋಡಿರಿ).

ಇದು ಯಾವಾಗ ಸಂಭವಿಸುವದು? ಇದು ಕಾಲವು ಪರಿಪೂರ್ಣವಾದಾಗ ಅಂದರೆ, ದೇವರಿಂದ ಆರಿಸಿಕೊಳ್ಳಲ್ಪಟ್ಟ ತಕ್ಕ ಸಮಯದಲ್ಲಿಯೇ – ಸಂಭವಿಸುವದು. ಆ ಸಮಯವು ಯಾವಾಗ ಬರುತ್ತದೆಂಬದನ್ನು ದೇವರೇ ಹೊರತು ಮತ್ತಾರೂ ತಿಳಿಯರು. ಪೌಲನ ದರ್ಶನವು ಎಷ್ಟು ದೊಡ್ಡದು! ಅದು ಜಗದುತ್ಪತ್ತಿಗೆ ಮುಂಚೆನಿಂದ (ವಚನ 4) ಕಾಲವು ಪರಿಪೂರ್ಣವಾಗುವ ವರೆಗೂ ವಿಸ್ತರಿಸುತ್ತದೆ. ಭೂಪರಲೋಕಗಳಲ್ಲಿ ಇರುವದೆಲ್ಲವೂ ಪೌಲನ ಧರ್ಶನದಲ್ಲಿ ಅಡಕವಾಗಿರುತ್ತದೆ. ಆದಾಗ್ಯು ಪೌಲನು ಈ ಪತ್ರಿಕೆಯನ್ನು ಬರೆದಾಗ ಸೆರೆಮನೆಯಲ್ಲಿ ಕುಳಿತಿದ್ದನು. ಆತನು ತನ್ನ ದೈಹೀಕ ಕಣ್ಣುಗಳಿಂದ ತನ್ನ ಬಂಧಿಕೋಣೆಯ ನಾಲ್ಕು ಗೋಡೆಗಳನ್ನು ಮಾತ್ರವೇ ನೋಡಬಹುದಾಗಿತ್ತು. ಹೇಗಿದ್ದರೂ, ಆತನು ತನ್ನ ಆತ್ಮೀಕ ಕಣ್ಣುಗಳಿಂದ ದೇವರ ಸಂಪೂರ್ಣ ಚಿತ್ತ ಹಾಗು ಉದ್ದೇಶವನ್ನೆಲ್ಲಾ ನೋಡಬಹುದಾಗಿತ್ತು!

ಕೆಲವು ವೇಳೆಗಳಲ್ಲಿ ನಮ್ಮ ಜೀವಿತಗಳು ಸೆರೆಮನೆಯೊಳಗಿರುವಂತೆ ಆಗುತ್ತವೆ. ನಾವು ನಮ್ಮ ಆತ್ಮೀಕಕಣ್ಣುಗಳನ್ನು ತೆರೆದು ದೇವರ ಸಂಕಲ್ಪದ ಮರ್ಮವನ್ನು ನೋಡುವ ಆಗತ್ಯವಿರುತ್ತದೆ. ಮರ್ಮವು ಏನೆಂದರೆ; ನಾವು ಪಾಪಗಳ ಬಿಡುಗಡೆ ಹಾಗು ಕ್ಷಮಾಪಣೆಯನ್ನು ಪಡೆದು ದೇವರ ಪರಿಶುದ್ಧ ಹಾಗು ದೋಷವಿಲ್ಲದ ಮಕ್ಕಳಾಬೇಕೆಂಬದಾಗಿ ದೇವರು ತನ್ನ ಮಗನಾದ ಯೇಸು ಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು ಎಂಬದೇ. ಅಂಥ ಬಲಹೀನ ಹಾಗು ಪಾಪಿಗಳಾದ ನಾವು ಈ ಮಹಿಮಾಕರವಾದ ಆಶೀರ್ವಾದಗಳನ್ನು ಪಡೆದುಕೊಳ್ಳುವದು ನಿಜವಾಗಿಯೂ ಒಂದು ಮರ್ಮವೇ!

**11-12** ಈ ಎರಡು ವಚನಗಳಲ್ಲಿ ಪೌಲನು ಯೆಹೂದ್ಯರ [5] ಕುರಿತಾಗಿ ಮಾತಾಡುತ್ತಾನೆ ಪೌಲನು ಸ್ವತಃ ಒಬ್ಬ ಯೆಹೂದ್ಯನಾಗಿದ್ದನು. ಪೌಲನು 11ನೇ ವಚನದಲ್ಲಿ ಹೇಳುವದೇನೆಂದರೆ; ಆತನಲ್ಲಿ (ಕ್ರಿಸ್ತನಲ್ಲಿ) ನಾವು (ಯೆಹೂದ್ಯರು) ಸಹ ಆರಿಸಿಕೊಳ್ಳಲ್ಪಟ್ಟೆವು [6] ನಂತರ 12ನೇ ವಚನದಲ್ಲಿ ಯೆಹೂದ್ಯರು ಆತನ ಮಹಿಮೆಯನ್ನು ಪ್ರಖ್ಯಾತಿ ಪಡಿಸಬೇಕೆಂದು ಆರಿಸಿಕೊಳ್ಳಲ್ಪಟ್ಟರೆಂದು ಪೌಲನು ವಿವರಿಸುತ್ತಾನೆ. ಕ್ರಿಸ್ತನಿಗಿಂತ ಬಹು ಕಾಲದ ಮುಂಚೆಯೇ ಯೆಹೂದ್ಯರು ರಕ್ಷಕನೊಬ್ಬನು ಬರುವದನ್ನು ಎದುರು ನೋಡುತ್ತಿದ್ದರು; ರಕ್ಷಕನ ಬರೋಣವು ಹಳೆ ಒಡಂಬಡಿಕೆಯ ಯೆಹೂದ್ಯ ಪ್ರವಾದಿಗಳಿಂದ ಮುಂತಿಳಿಸಲ್ಪಟ್ಟಿತ್ತು. ಈ ಕಾರಣದಿಂದಲೇ 12ನೇ ವಚನದಲ್ಲಿ ಪೌಲನು ಕ್ರಿಸ್ತನಲ್ಲಿ ಮೊದಲು ನಿರೀಕ್ಷೆಯಿಟ್ಟವರು ಯೆಹೂದ್ಯರೇ ಎಂದು ಹೇಳುತ್ತಾನೆ.

**13** ಈಗ ಪೌಲನು ಯೆಹೂದ್ಯರಲ್ಲದಿದ್ದ ಎಫೆಸದವರೆಡೆಗೆ ತನ್ನ ಗಮನವನ್ನು ತಿರುಗಿಸುತ್ತಾನೆ. ಪೌಲನು ಬರೆಯುವದೇನೆಂದರೆ: ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ಸೇರಿದ್ದಿರಿ. ಅಂದರೆ, ಎಫೆಸದವರಿಗೆ ಸಹ ಕ್ರಿಸ್ತನಲ್ಲಿ

ನಂಬಿಕೆಯಿಡುವದರ ಮೂಲಕ ರಕ್ಷಣೆಯನ್ನು ಪಡೆದುಕೊಳ್ಳುವ ಅವಕಾಶವು ಕೊಡಲ್ಪಟ್ಟಿತ್ತು. ಎಫೆಸದ ವಿಶ್ವಾಸಿಗಳು ಸಹ ಕ್ರಿಸ್ತನಲ್ಲಿ ಸೇರಿದವರಾಗಿದ್ದರು, ಯಾಕೆಂದರೆ ಅವರು (ತಮ್ಮ) ರಕ್ಷಣೆಯ ವಿಷಯವಾದ ಸುವಾರ್ತೆಯೆಂಬ ಸತ್ಯವಾಕ್ಯವನ್ನು ಕೇಳಿ ನಂಬಿಕೆಯಿಟ್ಟಿದ್ದರು.

ಎಪೆಸದವರು ಕ್ರಿಸ್ತನಲ್ಲಿ ಸೇರಿದವರಾಗಿದ್ದರೆಂಬುದಕ್ಕೆ ಆಧಾರವೇನೆಂದರೆ ಅವರು ಕ್ರಿಸ್ತನಲ್ಲಿ ಮುದ್ರೆಯನ್ನು ಹೊಂದಿದ್ದರು. ಆ 'ಮುದ್ರೆಯು' ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನೇ.. ಪವಿತ್ರಾತ್ಮನು ವಾಗ್ದಾನ ಮಾಡಲ್ಪಟ್ಟನು ಎಂದು ಹೇಳುತ್ತಾನೆ, ಯಾಕೆಂದರೆ, ಯೇಸು ತನ್ನ ಶಿಷ್ಯರಿಗೆ ದೇವರ ಬಳಿಯಿಂದ ಪವಿತ್ರಾತ್ಮನು ಕಳುಹಿಸಲ್ಪಡುವನೆಂದು ವಾಗ್ದಾನ ಮಾಡಿದ್ದನು (ಯೋಹಾನ 14:26 ನೋಡಿರಿ).

ಹಾಗಾದರೆ, ಪವಿತ್ರಾತ್ಮನ ಮುದ್ರೆ ಎಂದರೇನು? ಹೊಸ ಒಡಂಬಡಿಕೆಯ ಕಾಲದಲ್ಲಿ, ಒಬ್ಬ ರಾಜನು ತನ್ನ ಪತ್ರಗಳ ಮೇಲೆ ಮುದ್ರೆಯನ್ನು ಹಾಕುತ್ತಿದ್ದನು, ಹೀಗೆ. ಅದನ್ನು ಪಡೆದುಕೊಳ್ಳುವ ವ್ಯಕ್ತಿಯು ಅದು ನಿಜವಾಗಿಯೂ ರಾಜನ ಪತ್ರವೇ ಎಂದು ಯಾವ ಸಂಶಯವಿಲ್ಲದೆ ತಿಳುಕೊಳ್ಳಬಹುದಾಗಿತ್ತು ರಾಜನ ಮುದ್ರೆಯನ್ನು ಹೊಂದಿದ್ದ ಪತ್ರಕ್ಕೆ ರಾಜನ ಅಧಿಕಾರವು ಇರುತ್ತಿತ್ತು. ಅದೇ ರೀತಿಯಾಗಿ, ಒಬ್ಬ ವ್ಯಕ್ತಿಯು ಪವಿತ್ರಾತ್ಮನ "ಮುದ್ರೆಯನ್ನು ಹೊಂದಿರುವಾಗ" ಆ ವ್ಯಕ್ತಿಯು ಕ್ರಿಸ್ತನಿಗೆ ಸೇರಿದವನಾಗಿದ್ದು ಕ್ರಿಸ್ತನ ಅಧಿಕಾರವನ್ನು ಹೊಂದಿದ್ದಾನೆಂದು ನಾವು ತಿಳಿಯಬಹುದು.

ಅಲ್ಲದೆ ಇಲ್ಲಿ ಗಮನಿಸಬೇಕಾದ್ದೇನೆಂದರೆ ಕ್ರೈಸ್ತನಾಗಿ ಪವಿತ್ರಾತ್ಮನನ್ನು ಪಡೆದುಕೊಳ್ಳಬೇಕಾದರೆ (ಆತ್ಮನ "ಮುದ್ರೆಯನ್ನು ಹೊಂದಿಕೊಳ್ಳಬೇಕಾದರೆ) ಎರಡು ಸಂಗತಿಗಳು ಅವಶ್ಯಕವಾಗಿರುತ್ತವೆ. ಮೊದಲನೆಯದಾಗಿ, ನಾವು ಸುವಾರ್ತೆಯನ್ನು ಕೇಳಿ ಇರಬೇಕು. ಎರಡೆಯದಾಗಿ, ನಾವು ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾಗಿರಬೇಕು.

**14** ಪವಿತ್ರಾತ್ಮನು ದೇವರ ಆತ್ಮನು ಕ್ರಿಸ್ತನ ಆತ್ಮನು ಆಗಿದ್ದಾನೆ. ಪವಿತ್ರಾತ್ಮನು ದೇವರ ರೂಪಗಳಲ್ಲಿ[7] ಒಬ್ಬನು ಎಂದು (ಸರಳ ಪದಗಳಲ್ಲಿ) ಹೇಳಬಹುದು. ದೇವರು ಪವಿತ್ರಾತ್ಮನ 'ರೂಪದಲ್ಲಿಯೇ' ನಮ್ಮ ಹೃದಯಗಳನ್ನು ಪ್ರವೇಶಿಸಿ ನಮ್ಮ ಜೀವಿತಗಳನ್ನು ಮಾರ್ಪಡಿಸುತ್ತಾನೆ. ಪವಿತ್ರಾತ್ಮನ ಮುಖಾಂತರ ನಾವು ಪರಲೋಕದ ಒಂದು ಸವಿಯನ್ನು ಮುಂದಾಗಿ ಅನುಭವಿಸಬಹುದು; ಅಂದರೆ, ಪವಿತ್ರಾತ್ಮನು ಪರಲೋಕದಲ್ಲಿ ನಮಗಾಗಿ ಕಾಯ್ದಿರಿಸಲಾಗಿರುವ ನಮ್ಮ ಪರಲೋಕದ ಪೂರ್ಣ ಸ್ವಾಸ್ತ್ಯಕ್ಕೆ ನೀಡಲಾಗಿರುವ ಸಂಚಕಾರ ಅಥವಾ ಮುಂಗಡದಂತೆ ಇರುತ್ತಾನೆ. ಈ ಲೋಕದಲ್ಲಿ ನಾವು ನಮ್ಮ ಪರಲೌಕಿಕವಾದ ಪೂರ್ಣ ಸ್ವಾಸ್ತ್ಯವನ್ನು ಪಡಕೊಳ್ಳುವದಿಲ್ಲ, ಆದರೆ ನಾವು ಅದರ ಒಂದು ಮುಂಗಡವನ್ನಂತೂ ಪಡೆದುಕೊಳ್ಳುತ್ತೇವೆ, ಉಳಿದದ್ದನ್ನು ನಾವು ಪರಲೋಕದಲ್ಲಿ ಪಡೆಯುತ್ತೇವೆಂಬದನ್ನು ನಿಶ್ಚಯಪಡಿಸುವ ಸಂಚಕಾರ (ಮುಂಗಡ) ಅದಾಗಿರುತ್ತದೆ. ಸಂಚಕಾರ ವನ್ನು ಪಡೆದವರಾಗಿ – ಪವಿತ್ರಾತ್ಮನನ್ನು – ಒಂದು ದಿನ ನಾವು ನಮ್ಮ ಪೂರ್ಣ ಬಾಧ್ಯತೆಯನ್ನು ಪಡೆಯುತ್ತೇವೆಂಬದನ್ನು ಸಂಶಯವಿಲ್ಲದೆ ತಿಳುಕೊಳ್ಳಬಹುದು (ರೋಮ 8:16-17; 2 ಕೊರಿಂಥ 1;22 ನೋಡಿರಿ).

ಪೌಲನು ನಮ್ಮ ಪರಲೋಕದ ಬಾಧ್ಯತೆಯ ಬಗ್ಗೆ ಮಾತಾಡುತ್ತಾ ನಾವು ಈಗಾಗಲೇ ಪಡೆದುಕೊಂಡಿರುವ ಮತ್ತು ಇನ್ನೂ ಪರಲೋಕದಲ್ಲಿ ಪಡೆದುಕೊಳ್ಳಲಿರುವ ಆಶೀರ್ವಾದಗಳು ದೇವರ ಮಹಿಮೆಗೆ ಪ್ರಖ್ಯಾತಿಯನ್ನು ಉಂಟು ಮಾಡುವದಕ್ಕಾಗಿಯೇ ಎಂಬದನ್ನು ಪು ನಃ ನಮಗೆ ಜ್ಞಾಪಕಪಡಿಸುತ್ತಾನೆ. ಪೌಲನು ಈ ಹೇಳಿಕೆಯನ್ನು ಮೂರು ಸಾರಿ ಈ ಅಧ್ಯಾಯದಲ್ಲಿ ಪು ನರುಚ್ಚರಿಸುತ್ತಾನೆ (ವಚನಗಳು 6,12,14). ಈ ಅಂಶಗಳಿಗೆ ಒತ್ತು ಕೊಡುವದರಲ್ಲಿ ಪೌಲನು ನಮಗೆ ಸಮಸ್ತವೂ ದೇವರ ಇಷ್ಟ ಮತ್ತು ಸಂಕಲ್ಪದಿಂದ ಪ್ರಾರಂಭವಾಗಿ ಆತನಿಗೆ ಮಹಿಮೆ ಉಂಟುಮಾಡುವದರಲ್ಲಿ ಅಂತ್ಯಗೊಳ್ಳುತ್ತದೆಂಬದನ್ನು ತೋರ್ಪಡಿಸುತ್ತಾನೆ. ಇಲ್ಲಿ ಸಹ ನಾವು ನಮ್ಮ ಜೀವಿತಗಳ ಇಡೀ ಅರ್ಥ ಮತ್ತು ಉದ್ದೇಶವನ್ನು ಕಾಣಬಹುದು. ದೇವರ ಇಷ್ಟ ಮತ್ತು ಚಿತ್ತಾನುಸಾರವಾಗಿ ನಾವು ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾಗಿ ದೇವರ ಕುಟುಂಬದೊಳಗೆ ತರಲ್ಪಟ್ಟಿದ್ದೇವೆ. ಆದದರಿಂದ, ಈಗ ನಾವು ಆತನ ಮಹಿಮೆಯ ಪ್ರಖ್ಯಾತಿಗಾಗಿ ಜೀವಿಸಬೇಕು.

ಲೋಕದ ಜನರು ಆ ಹೇಳುವದೇನೆಂದರೆ; ನಾನು ನನ್ನ ಜೀವಿತವನ್ನು ನನ್ನ ಸ್ವಂತ ಚಿತ್ತಾನುಸಾರವಾಗಿಯೂ ನನ್ನ ಸ್ವಂತ ಮಹಿಮೆಗಾಗಿಯೂ ಜೀವಿಸುತ್ತೇನೆ."ಆದರೆ ಕ್ರಿಸ್ತನಲ್ಲಿ ವಿಶ್ವಾಸಿಸುವವರು ಹೇಳುವದೇನೆಂದರೆ;" ನಾನು ನನ್ನ ಜೀವಿತವನ್ನು ದೇವರ ಚಿತ್ತಾನುಸಾರವಾಗಿಯೂ ಆತನ ಮಹಿಮೆಗಾಗಿಯೂ ಜೀವಿಸುತ್ತೇನೆ. "ಲೋಕದ ವ್ಯಕ್ತಿಯ ಮನಸ್ಸು ಮತ್ತು ಕ್ರೈಸ್ತನ ಮನಸ್ಸು ಎಷ್ಟು ವ್ಯತ್ಯಾಸವಾಗಿರುತ್ತದಲ್ಲವೇ!

## ಕೃತಜ್ಞತಾ ಸ್ತುತಿ ಮತ್ತು ಪ್ರಾರ್ಥನೆ (1:15-23)

**15-16** ಪೌಲನು ಈ ಪತ್ರಿಕೆಯನ್ನು ಹೆಚ್ಚು ಕಡಿಮೆ ಎರಡು ಸಾವಿರ ವರ್ಷಗಳ ಹಿಂದೆ ಎಫೆಸದವರಿಗೆ ಬರೆದಿದ್ದಾನಾದರೂ ಇದು ಇಂದು ನಮಗೆ ಸಹ ಬರೆಯಲ್ಪಟ್ಟಿದೆ. ಇಲ್ಲಿ ಪೌಲನ ಪ್ರಾರ್ಥನೆಯು ಎಪೆಸದವರಿಗಾಗಿ ಮಾತ್ರವಲ್ಲ; ನಮಗೋಸ್ಕರವಾಗಿಯೂ ಇರುತ್ತದೆ. ಒಂದು ವೇಳೆ ಪೌಲನು ಈ ದಿನ ಬದುಕಿದ್ದಿದ್ದರೆ ಆತನು ನಮ್ಮ ನಂಬಿಕೆಯನ್ನೂ ಮತ್ತು ದೇವಜನರೆಲ್ಲರಿಗೆ ನಾವು ತೋರಿಸುವ ಪ್ರೀತಿಯನ್ನೂ ಕುರಿತು ಏನು ಕೇಳಿರುತ್ತಿದ್ದನು? ಆತನು ನಮ್ಮ ನಂಬಿಕೆ ಹಾಗು ಪ್ರೀತಿಗಾಗಿ ಸ್ತೋತ್ರ ಮಾಡುವದಕ್ಕೆ ಶಕ್ತನಾಗುವನೋ?

**17** ಎಫೆಸದವರಿಗಾಗಿ (ಮತ್ತು ನಮಗಾಗಿ) ಮಾಡಿದ ಈ ಪ್ರಾರ್ಥನೆಯಲ್ಲಿ ಪೌಲನು ಯಾವು ದಕ್ಕಾಗಿ ಪ್ರಾರ್ಥಿಸುತ್ತಾನೆ? ಆತನು ನಮಗೆ ಮತ್ತು ಎಪೆಸದವರಿಗೆ ಸತ್ಯಾರ್ಥಗಳನ್ನು ತಿಳುಕೊಳ್ಳುವ ಜ್ಞಾನವು ಳ್ಳ ಆತ್ಮ[9] ಕೊಡಲ್ಪಡಬೇಕೆಂದು ಪ್ರಾರ್ಥಿಸುತ್ತಾನೆ.

ನಾವು ದೇವರು ಉತ್ತಮವಾಗಿ ತಿಳುಕೊಳ್ಳುವಂತಾಗಲು ಜ್ಞಾನವು ಅಗತ್ಯವಾಗಿರುತ್ತದೆ. ತಿಳಿವಳಿಕೆ, ಜ್ಞಾನಗಳು ಯಾವಾಗಲೂ ದೇವರಿಂದಲೇ ಬರುತ್ತವೆ ಹೊರತು ಮನುಷ್ಯನಿಂದಲ್ಲ. ಈ ಜ್ಞಾನದ ಮೂಲಕ ನಾವು ಮತ್ತು ಎಫೆಸದವರು ಮೂರು ಸಂಗತಿಗಳನ್ನು ತಿಳುಕೊಳ್ಳುವಂತಾಗಬೇಕೆಂದು ಪೌಲನು ತನ್ನ ಪ್ರಾರ್ಥನೆಯನ್ನು ಮುಂದುವರೆಸಿ ಬೇಡಿಕೊಳ್ಳುತ್ತಾನೆ: ಮೊದಲನೆಯದಾಗಿ, ದೇವರು ನಮ್ಮನ್ನು ಕರೆದ ನಿರೀಕ್ಷೆ (ವಚನ 18); ಎರಡನೆಯದಾಗಿ, ಆತನ ಸ್ವಾಸ್ತ್ಯದ ಮಹಿಮಾತಿಶಯ (ವಚನ 18), ಮತ್ತು ಮೂರನೆಯದಾಗಿ ಆತನು ಸಾಧಿಸುವ ಪರಾಕ್ರಮವು ಎಷ್ಟು ಅತಿಶಯವಾದದ್ದೆಂಬದನ್ನು ತಿಳಕೊಳ್ಳುವದು (ವಚನ 19).

**18** ನಾವು ಕರೆಯಲ್ಪಟ್ಟಿರುವ ನಿರೀಕ್ಷೆ ಯಾವದು? ನಮ್ಮ ನಿರೀಕ್ಷೆಯು ಈಗಾಗಲೇ ಪೌಲನು ಈ ಅಧ್ಯಾಯದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಸಂಗತಿಗಳಲ್ಲಿಯೇ ಇರುತ್ತದೆ. ನಾವು ಪಾಪದಿಂದ ಮುಕ್ತರಾಗಿರಲು ನಿರೀಕ್ಷಿಸುತ್ತೇವೆ; ನಾವು ಪರಿಶುದ್ಧರೂ ಕ್ರಿಸ್ತನಲ್ಲಿ ನೆಲೆಗೊಂಡವರೂ ಆಗಿರುವದಕ್ಕೆ ನಿರೀಕ್ಷಿಸುತ್ತೇವೆ. ನಾವು ಈ ಎಲ್ಲಾ ಸಂಗತಿಗಳಿಗಾಗಿ ಕರೆಯಲ್ಪಟ್ಟಿದ್ದೇವೆ, ಮತ್ತು ಈ ಕಾರಣದಿಂದ ನಾವು ಅವುಗಳಲ್ಲಿ ನಮ್ಮ ನಿರೀಕ್ಷೆ ಇಡಬಹುದು. ದೇವರು ನಮಗೆ ವಾಗ್ದಾನ ಮಾಡಿರುವ ಮಹಿಮಾತಿಶಯವಾದ ಸ್ವಾಸ್ಥ್ಯ ಯಾವುದು? ನಾವು ಈಗಾಗಲೇ ಈ ಸ್ವಾಸ್ಥ್ಯದ ಸಂಚಕಾರವನ್ನು – ಪವಿತ್ರಾತ್ಮನನ್ನು – ಪಡೆದುಕೊಂಡಿದ್ದೇವೆ (ವಚನ 14). ನಮ್ಮ ಸ್ವಾಸ್ಥ್ಯದ ಉಳಿಕೆ ಪರಲೋಕದಲ್ಲಿ ನಮಗಾಗಿ ಕಾಯುತ್ತಿದೆ. ನಮ್ಮ ಪರಲೋಕದ ಸ್ವಾಸ್ಥ್ಯದ ಅತಿ ಅದ್ಭುತಕರವಾದ ಭಾಗವು ದೇವರೊಂದಿಗೂ ಕ್ರಿಸ್ತನೊಂದಿಗೂ ಸದಾಕಾಲ ಜೀವಿಸುವದಾಗಿರುತ್ತದೆ. ಅದರ ಜೊತೆಗೆ ನಾವು ಕ್ರಿಸ್ತನ ಹಾಗೆ ಆಗುವೆವು (1 ಯೋಹಾನ 3:2, ಮತ್ತು ನಾವು ಕ್ರಿಸ್ತನೊಂದಿಗೆ ಆಳುವೆವು (2 ತಿಮೊಥೆ 2:12).

**19** ನಮ್ಮ ಕ್ರೈಸ್ತ ಜೀವಿತಗಳ ಪ್ರಾರಂಭದಲ್ಲಿ ನಾವು ಕರೆಯಲ್ಪಟ್ಟೆವು. ನಮ್ಮ ಕ್ರೈಸ್ತ ಜೀವಿತಗಳ ಅಂತ್ಯದಲ್ಲಿ ನಾವು ಮಹಿಮಾತಿಶಯವಾದ ಸ್ವಾಸ್ಥ್ಯವನ್ನು ಪಡೆದುಕೊಳ್ಳುವೆವು. ಮತ್ತು ನಮ್ಮ ಜೀವಿತಗಳ ಪ್ರಾರಂಭ ಹಾಗು ಅಂತ್ಯಗಳ ನಡುವೆ ನಾವು ಆತನ ಅತಿಶಯವಾದ ಪರಾಕ್ರಮ ಬಲಾತಿಶಯದಿಂದ ಪರಾಂಭರಿಸಲ್ಪಡುತ್ತೇವೆ. ದೇವರ ಬಲಕ್ಕೆ ಯಾವ ಮಿತಿಯಿರುವದಿಲ್ಲ, ಮತ್ತು ಈ ಬಲವು ನಮ್ಮ ಕ್ರೈಸ್ತೀಯ ಜೀವಿತಗಳ ಕಾಲವೆಲ್ಲಾ ನಮಗೆ ದೊರೆಯುವದಾಗಿದೆ.

**20-21** ಆ ಬಲವು ಎಷ್ಟೋ ಮಹತ್ತಾದದ್ದು! ಆ ಬಲದಿಂದಲೇ ದೇವರು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದನು. ಆ ಬಲದ ಮೂಲಕವೇ ಕ್ರಿಸ್ತನು ಪರಲೋಕದೊಳಗೆ ಸಕಲ ರಾಜತ್ವ ಅಧಿಕಾರ ಮಹತ್ವ ಪ್ರಭುತ್ವಾದಿಗಳ ಮೇಲೆ ದೊರೆತನ ಮಾಡುವನು (ವಚನ 21). ಆತನು ಸೈತಾನನ ಮೇಲೆಯೂ ಆತನ ಸಕಲ ದುರಾತ್ಮಗಳು ಹಾಗು ದೆವ್ವಗಳ ಮೇಲೆಯೂ ದೊರೆತನ ಮಾಡುವನು. ಆತನು ಪರಲೋಕದಲ್ಲಿಯೂ ಭೂಲೋಕದಲ್ಲಿಯೂ, ಈಗಲೂ ಮುಂದೆಯೂ ಇರುವ ಸಮಸ್ತವನ್ನೂ ಆಳುವನು. ಆತನು ಇಂದು ಆಳುತ್ತಿದ್ದಾನೆ ಸಮಸ್ಯವೂ ದೇವರ ಬಲದ ಮುಖಾಂತರವೇ.ಮತ್ತು ಸದಾಕಾಲವೂ ಆಳುವನು– ಸಮಸ್ತವೂ ದೇವರ ಬಲದ ಮುಖಾಂತರವೇ.

ಯಾವದೇ ಮಾನುಷ ಶಕ್ತಿಯು ಸತ್ತವ್ಯಕ್ತಿಯನ್ನು ಬದುಕಿಸಬಲ್ಲದೋ? ಇಲ್ಲ. ಆದರೆ ದೇವರ ಶಕ್ತಿಯು ಬಹುಕಿಸಬಲ್ಲದು. ದೇವರಿಗೆ ಯಾವದೂ ಅಸಾಧ್ಯವಲ್ಲ (ಮಾರ್ಕ 10:27). ಮತ್ತು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ ಅದೇ ಬಲವು ನಂಬುವವರಾದ ನಮಗೆ ದೊರೆಯುವದಾಗಿದೆ. ಅದೇ ಬಲದ ಮೂಲಕವೇ ಒಮ್ಮೆ ನಮ್ಮ ಪಾಪಗಳಲ್ಲಿ ಸತ್ತವರಾಗಿದ್ದ ನಾವು (ಎಫೆಸ 2;1). ಈಗ ಕ್ರಿಸ್ತನಲ್ಲಿ ಬದುಕಿಸಲ್ಪಟ್ಟಿದ್ದೇವೆ (ಎಪೆಸ 2:4-5) ಮತ್ತು ಆತನೊಂದಿಗೆ ಪರಲೋಕದಲ್ಲಿ ಕೂಡ್ರಿಸಲ್ಪಟ್ಟಿದ್ದೇವೆ (ಎಫೆಸ 2:6). ಮತ್ತು ಆ ಬಲವು ಅನುದಿನವೂ ಪವಿತ್ರಾತ್ಮನ ಮುಖಾಂತರ ನಮಗೆ ದೊರೆಯುವದಾಗಿದೆ; ಆದದರಿಂದ, ನಾವು ಅದಕ್ಕಾಗಿ ಬೇಡಿಕೊಳ್ಳುವದಕ್ಕೆ ವಿಫಲರಾಗದಿರೋಣ.

**22-23** ಸಮಸ್ತವೂ ಕ್ರಿಸ್ತನ ಪಾದಗಳ ಕೆಳಗೆ ಹಾಕಲ್ಪಟ್ಟಿದೆ – ಅಂದರೆ, ಆತನ ಅಧಿಕಾರಕ್ಕೊಳಪಡಿಸಲಾಗಿದೆ (ವಚನ 22). ನಾವು ಪಾಪದಿಂದ, ಬಲಹೀನತೆಯಿಂದ, ಭಯ ಮತ್ತು ಚಿಂತೆಯಿಂದ ಆವರಿಸಲ್ಪಟ್ಟವರಾಗಿ ಕಂಡುಬರುವಾಗ ಸಮಸ್ತವೂ ಆಗಾಗಲೇ ಕ್ರಿಸ್ತನ ಪಾದಗಳ ಕೆಳಗೆ ಹಾಕಲ್ಪಟ್ಟಿವೆ ಎಂಬದನ್ನು ನಾವು ಜ್ಞಾಪಕಪಡಿಸಿಕೊಳ್ಳೋಣ. ಮತ್ತು ಅವುಗಳು ಕ್ರಿಸ್ತನ ಪಾದಗಳ ಕೆಳಗೆ ಇರುವದಾದರೆ ಅವುಗಳು ನಮ್ಮ ಪಾದಗಳ ಕೆಳಗೂ ಇರುತ್ತವೆ!

ಕ್ರಿಸ್ತನು ಎಲ್ಲಾದರ ಮೇಲೆ ಇರಿಸಲ್ಪಟ್ಟು ಸಭೆಗೆ ಶಿರಸ್ಸಾಗಿದ್ದಾನೆ ಎಂದು ಪೌಲನು ಇಲ್ಲಿ ಹೇಳುತ್ತಾನೆ. ಎಫೆಸ 5:23ರಲ್ಲಿ ಪೌಲನು ಕ್ರಿಸ್ತನನ್ನು ಸಭೆಗೆ ಶಿರಸ್ಸು ಎಂದು ಮಾತ್ರವೇ ಕರೆಯುತ್ತಾನೆ. ಕ್ರಿಸ್ತನು ಶಿರಸ್ಸಾಗಿ ಇರುವದಾದರೆ ಸಭೆಯು ಆತನ ದೇಹ ಆಗಿದೆ (ವಚನ 23). ಮತ್ತು ಸಭೆಯು ಕ್ರಿಸ್ತನ ದೇಹ ಆಗಿರುವದಾದರೆ ವಿಶ್ವಾಸಿಗಳಾದ ನಾವು ಆತನ ದೇಹದ ಅಂಗಗಳಾಗಿದ್ದೇವೆ (ರೋಮ 12:4-5; 1 ಕೊರಿಂಥ 12:12,27 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಸಭೆಯು ಕ್ರಿಸ್ತನ ಪರಿಪೂರ್ಣತೆ ಆಗಿದೆ. ಒಂದು ರಾಜ್ಯವು ರಾಜನೊಬ್ಬನ "ಪರಿಪೂರ್ಣತೆ' ಎಂದು ಕರೆಯಲ್ಪಡಬಹುದಾದ ಪ್ರಕಾರವೇ ಸಭೆಯು ಕ್ರಿಸ್ತನ 'ಪರಿಪೂರ್ಣತೆ' ಆಗಿದೆ; ಕ್ರಿಸ್ತನು ಸ್ವತಃ ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುತ್ತಾನೆ (ವಚನ 23). ನಾವೆಲ್ಲರು ಆತನ (ಕ್ರಿಸ್ತನ) ಕೃಪೆಯ ಪರಿಪೂರ್ಣತೆ ಯೊಳಗಿಂದ ಆಶಿರ್ವಾದದ ಮೇಲೆ ಆಶಿರ್ವಾದವನ್ನು ಹೊಂದಿದ್ದೇವೆ (ಯೋಹಾನ 1:16).ಇದು ನಮಗೆ ವಿಸ್ಮಯವನ್ನುಂಟು ಮಾಡಬಾರದು, ಯಾಕೆಂದರೆ ಕ್ರಿಸ್ತನು ಸ್ವತಃ ದೇವರಾಗಿದ್ದಾನೆ (ಯೋಹಾನ 10:30; ಕೊಲೊಸ್ಸೆ 1:15-20; ಸಾಮಾನ್ಯ ಲೇಖನಃ ಯೇಸು ಕ್ರಿಸ್ತನು ನೋಡಿರಿ).

## ಅಧ್ಯಾಯ -2

### ಕ್ರಿಸ್ತನಲ್ಲಿ ಬದುಕಿಸಲ್ಪಟ್ಟಿದ್ದು (2:1-16)

1 ಎಫೆಸದವರು ಒಮ್ಮೆ ತಮ್ಮ ಅಪರಾಧಗಳು ಮತ್ತು ಪಾಪಗಳಲ್ಲಿ ಸತ್ತವರಾಗಿದ್ದರು ಎಂಬದನ್ನು ಪೌಲನು ಅವರಿಗೆ ಜ್ಞಾಪಕಪಡಿಸುತ್ತಾನೆ. ಅವರು ಯಾವ ವಿಧದಲ್ಲಿ ಸತ್ತವರಾಗಿದ್ದರು? ಅವರು ಆತ್ಮೀಕವಾಗಿ ಸತ್ತಿದ್ದರು; ಅಂದರೆ, ಅವರು ದೇವರಿಂದ ಬೇರ್ಪಟ್ಟಿದ್ದರು (ಎಫೆಸ 4:18 ನೋಡಿರಿ). ನಮ್ಮ ಪಾಪಗಳು ನಮ್ಮನ್ನು ದೇವರಿಂದ ಅಗಲಿಸುತ್ತವೆ; ಪಾಪಿ ಮನುಷ್ಯನು ದೇವರೊಂದಿಗೆ ಅನ್ಯೋನ್ಯತೆಯನ್ನು ಹೊಂದುವದು ಅಸಾಧ್ಯವಾಗಿರುತ್ತದೆ. ದೇವರಿಂದ ಬೇರ್ಪಡುವದೇ ಆತ್ಮೀಕ ಮರಣವಾಗಿದೆ.

2 ಈ ಎಫೆಸದವರು ಕ್ರಿಸ್ತನನ್ನು ನಂಬುವದಕ್ಕೆ ಮುಂಚೆ ಒಂದು ಕೆಟ್ಟದಾದ ಹಾಗು ದುರವಸ್ಥೆಯುಳ್ಳ ಸ್ಥಿತಿಯಲ್ಲಿದ್ದರು. ಅವರ ಇಡೀ ಸ್ವಭಾವವು ಕೆಟ್ಟದ್ದಾಗಿತ್ತು, ಅವರು ಇಹಲೋಕದ ಮಾರ್ಗಗಳನ್ನು ಅನುಸರಿಸುತ್ತಿದ್ದರು. ಅಂದರೆ ಅವರು ತಮ್ಮ ಸ್ವಂತ ಚಿತ್ತಾನುಸಾರವಾಗಿಯೂ ಸ್ವಂತ ಮಹಿಮೆಗಾಗಿಯೂ ಜೀವಿಸುತ್ತಿದ್ದರು (ಎಫೆಸ 1:14 ಮತ್ತು ವ್ಯಾಖ್ಯಾನವನ್ನು ನೋಡಿರಿ). ಇಹಲೋಕದ ಜನರು ತಮ್ಮನ್ನೇ ಸಂತೋಷಪಡಿಸಿಕೊಳ್ಳಲು ಜೀವಿಸುತ್ತಾರೆ, ಆದರೆ ದೇವರು ಮನುಷ್ಯನು ತನ್ನನ್ನು ಮೆಚ್ಚಿಸುವದಕ್ಕಾಗಿ ಜೀವಿಸಬೇಕೆಂದು ಹೇಳುತ್ತಾನೆ. ಆದದರಿಂದ, ನಾವು ಇಹಲೋಕಾಚಾರಗಳಿಗೆ ಅನುಸಾರವಾಗಿ ನಡೆಯುವದಾದರೆ ನಾವು ದೇವರಿಗೆ ಅವಿಧೇಯರಾಗುತ್ತೇವೆ. ನಾವು ದೇವರಿಗೆ ವೈರಿಗಳಾಗುತ್ತೇವೆ.

ಪೌಲನು ಇಲ್ಲಿ ಪ್ರಸ್ತಾಪಿಸುವ ವಾಯುಮಂಡಲದಲ್ಲಿ ಅಧಿಕಾರ ನಡಿಸುವ ಅಧಿಪತಿಯು ಅಲ್ಲಿ ದುರಾತ್ಮಗಳಿಗೆ ಮುಖ್ಯಸ್ಥನಾಗಿರುವ ಸೈತಾನನೇ, ಯೇಸು ಸೈತಾನನನ್ನು ಇಹಲೋಕಾಧಿಪತಿ ಎಂದು ಕರೆಯುತ್ತಾನೆ (ಯೋಹಾನ 12:31), ಯಾಕೆಂದರೆ ಸೈತಾನನು ಇಹಲೋಕದ ಮಾರ್ಗಗಳನ್ನು ಅನುಸರಿಸಿ ದೇವರಿಂದ ವಿಧೇಯರಾಗದವರ ಜೀವಿತಗಳಲ್ಲಿ ಅಧಿಕಾರ ನಡಿಸುತ್ತಾನೆ.

3 ಕ್ರೈಸ್ತರಾದ ನಾವು ಸಹ ಕ್ರಿಸ್ತನಲ್ಲಿ ನಂಬಿಕೆಯಿಡುವದಕ್ಕೆ ಮುಂಚೆ ಇದೇ ರೀತಿಯಾಗಿ ಪಾಪದಲ್ಲಿ ಜೀವಿಸುತ್ತಿದ್ದೇವು. ನಾವು ಸಹ ಸ್ವಭಾವ ಸಿದ್ದವಾಗಿದೇವರ ಕೋಪಕ್ಕೆ ಗುರಿಯಾಗಿದ್ದೇವು.–ಅಂದರೆ, ನಾವು ದೇವರ ಕೋಪಾಗ್ನಿ ಮತ್ತು ದಂಡನೆಗೆ ಯೋಗ್ಯರಾಗಿದ್ದೇವು. ದೇವರ ಕೋಪವು ಮನುಷ್ಯನ ಸಿಟ್ಟಿನಂತೆ ಇರುವದಿಲ್ಲ. ದೇವರು ಪಾಪದ ಮೇಲೆ ಒಂದು ದಿನ ಕೋಪಗೊಂಡು ಮರುದಿನ ಮರೆತು ಬಿಡುವವನಲ್ಲ. ದೇವರು ಸಂಪೂರ್ಣವಾಗಿ ಪರಿಶುದ್ಧನಾಗಿದ್ದಾನೆ, ಆತನು ಅಪರಿಶುದ್ಧತೆಯನ್ನು ಸಹಿಸಿಕೊಳ್ಳಲಾರನು. ಆದುದರಿಂದ, ಆತನು ಎಲ್ಲಾ ದುಷ್ಟತನವನ್ನೂ ದುಷ್ಟತನದಲ್ಲಿ ತಲ್ಲೀನರಾಗಿರುವವರನ್ನೂ ನಾಶಮಾಡುವದಕ್ಕೆ ತೀರ್ಮಾನಿಸಿಕೊಂಡನು.

ಇದರ ಮೂಲಕವಾಗಿ ನಾವು ಅರ್ಥಮಾಡಿಕೊಳ್ಳಬಹುದೇನೆಂದರೆ, ಕ್ರಿಸ್ತನನ್ನು ಅಂಗೀಕರಿಸಿಕೊಳ್ಳಲು ನಿರಾಕರಿಸುವ ಪ್ರಾಕೃತರು[10] ಹಾಗು ಪ್ರಾಪಂಚಿಕ ಜನರ ಪರಸ್ಥಿತಿಯು ಅತಿ ಅಪಾಯಕರವೂ ಭಯಾನಕವೂ ಆಗಿರುತ್ತದೆ. ಕ್ರಿಸ್ತನನ್ನು ಅಂಗೀಕರಿಸಿಕೊಳ್ಳದಿರುವ ನಮ್ಮ ಎಲ್ಲಾ ಸ್ನೇಹಿತರೂ, ನೆರೆಯವರೂ, ಬಂಧುಗಳೂ ಆತ್ಮೀಕವಾಗಿ ಸತ್ತವರಾಗಿದ್ದಾರೆ, ದೇವರಿಂದ ಬೇರ್ಪಟ್ಟವರಾಗಿ ದೇವರ ಕೋಪಕ್ಕೆ ಗುರಿಯಾಗಿರುತ್ತಾರೆ, ನಿಜ, ಅವರು ಬದುಕಿದರಾಗಿಯೂ ಅವರ ದೇಹಗಳು ಚಟುವಟಿಕೆಯಲ್ಲಿಯೂ ಇರುವಂತೆ ಕಾಣುತ್ತದೆ, ಆದರೆ ಆತ್ಮೀಕವಾಗಿ ಅವರು ಸತ್ತವರಾಗಿದ್ದಾರೆ. ಅವರು ಪರಲೋಕದಲ್ಲಿ ನಿತ್ಯಜೀವವನ್ನು ಪಡೆದುಕೊಳ್ಳುವದಿಲ್ಲ. ಆದಾಗ್ಯು, ಅವರು ಬದುಕಿಕೊಂಡು ನಿತ್ಯಜೀವವನ್ನು ಹೊಂದಿಕೊಳ್ಳಬೇಕಾದರೆ ಅವರು ರಕ್ಷಣೆಯ ವಿಷಯವಾದ ಸುವಾರ್ತೆಯೆಂಬ ಸತ್ಯವಾಕ್ಯವನ್ನು ಕೇಳಿ (ಎಫೆಸ್1:13), ಅದನ್ನು ನಂಬಬೇಕಷ್ಟೇ. ಈಗಾಗಲೇ ನಂಬಿದವರಾದ ನಾವು ಅವರಿಗೆ ಕೇಳುವದಕ್ಕೆ ಒಂದು ಅವಕಾಶವನ್ನು ಒದಗಿಸುವ ಅಗತ್ಯವಿರುತ್ತದೆ.

ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆಃ ವಿಶ್ವಾಸಿಗಳಲ್ಲದವರು ಹಾಗು ಇಹಲೋಕದ ಮಾರ್ಗಗಳನ್ನು ಅನುಸರಿಸುವವರು ಸಂಪೂರ್ಣವಾಗಿ ಕೆಟ್ಟವರೋ? ಮಾನವನು ಸ್ವಭಾವ ಸಿದ್ದವಾಗಿ ಸಂಪೂರ್ಣ ಕೆಟ್ಟವನೋ? ಉತ್ತರವು ಅಲ್ಲ ಎಂದಾಗಿರುತ್ತದೆ. ಎಲ್ಲಾ ಮನುಷ್ಯರು ದೇವರ ಸ್ವರೂಪದಲ್ಲಿ ನಿರ್ಮಿಸಲ್ಪಟ್ಟಿದ್ದಾರೆ (ಆದಿಕಾಂಡ 1:27). ಅನೇಕ ಜನರು ಆಸಕ್ತಿಯಿಂದ ದೇವರಿಗಾಗಿ ತವಕಪಡುತ್ತಾ ಆತನನ್ನು ಮೆಚ್ಚಿಸಲು ಪ್ರಯಾಸಪಡುತ್ತಾರೆ. ಆದರೆ ಮುಖ್ಯ ವಿಷಯವೇನೆಂದರೆಃ ಮನುಷ್ಯನ ಪಾಪಗಳನ್ನು ನಿವಾರಿಸಲು ಶಿಲುಬೆಯ ಮೇಲೆ ಮರಣಿಸಿದ ಕ್ರಿಸ್ತನಲ್ಲಿ ನಂಬಿಕೆಯನ್ನಿಡದ ಹೊರತು ಯಾವ ಮನುಷ್ಯನೂ ದೇವರನ್ನು ಮೆಚ್ಚಿಸಲಾರನು (ಯೋಹಾನ 3:18,36, 14:6, ಅ.ಕೃ. 4:12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

4-5 ಮನುಷ್ಯನು ಸ್ವಭಾವದಿಂದಲೇ ಎಷ್ಟು ದುಷ್ಟನೂ ಕೆಟ್ಟು ಹೋಗಿರುವವನೂ ಆಗಿದ್ದಾನೆಂಬದನ್ನು ನಾವು ನೋಡಿದ್ದೇವೆ (ರೋಮ 3:10-12). ಅವನು ಆತ್ಮೀಕವಾಗಿ ಎಷ್ಟು "ರೋಗಗ್ರಸ್ತ" ಆಗಿದ್ದಾನೆ–ವಾಸ್ತವದಲ್ಲಿ ಆತನು ಈಗಾಗಲೇ ಸತ್ತಿದ್ದಾನೆ.– ಎಂಬದನ್ನು ನಾವು ನೋಡಿದ್ದೇವೆ. ಅಂತಹ ನಿರೀಕ್ಷೆ ರಹಿತರೋಗಿಗೆ ಯಾವ ಸಾಮಾನ್ಯ ಔಷಧ ಅಥವಾ ಸಾಮಾನ್ಯ ವೈದ್ಯನಿಂದ ಸಹಾಯವಾಗಲಾರದು. ಸತ್ತ ರೋಗಿಗೆ ಸಹಾಯ ಮಾಡಬಲ್ಲ ಒಬ್ಬನೇ ಒಬ್ಬ ವೈದ್ಯನಿರುತ್ತಾನೆ, ಆತನು ದೇವರೇ. ಮತ್ತು ದೇವರ ಔಷಧಿಯು ಪ್ರೀತಿಯೇ. ಆತನು ತನ್ನ ಕೃಪೆಯ ಕಾರಣದಿಂದಲೇ ಪಾಪಿಗಳಾದ ಮನುಷ್ಯರ ಮೇಲೆ ತನ್ನ ಕೃಪೆ ಹಾಗು ಕರುಣೆಯನ್ನು ಸುರಿಸುವದಕ್ಕೆ ಸಿದ್ಧನಾಗಿರುತ್ತಾನೆ. ಈ ಮೂರು ಪದಗಳು–ಪ್ರೀತಿ, ಕೃಪೆ ಮತ್ತು ಕರುಣೆ–ಯಾವಾಗಲೂ

ಜೊತೆಯಾಗಿ ಸಾಗುತ್ತವೆ, ಅವುಗಳು ದೇವರ ಪ್ರೀತಿಯ ಒಂದೇ ದೊಡ್ಡ ಕಾರ್ಯದಂತೆ ಇರುತ್ತದೆ. ಏಕೈಕ ಸತ್ಯ ದೇವರು ಇತರ ಧರ್ಮಗಳ ದೇವ ದೇವತೆಗಳಿಗಿಂತ ಎಷ್ಟು ವ್ಯತ್ಯಾಸವಾಗಿದ್ದಾನೆ, ದೇವರು ನಮ್ಮ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನಾದ ಯೇಸುವನ್ನು ನಮಗಾಗಿ ಮರಣಿಸುವದಕ್ಕಾಗಿ ಲೋಕಕ್ಕೆ ಕಳುಹಿಸಿಕೊಟ್ಟನು (ಯೋಹಾನ 3:16 ಮತ್ತು ವ್ಯಾಖ್ಯಾನ ನೋಡಿರಿ).

6 ದೇವರು ಈ ಲೋಕದಲ್ಲಿ ನಮ್ಮನ್ನು ಕೇವಲ ಬದುಕಿಸುವದು ಮಾತ್ರವಲ್ಲ, ಆದರೆ ನಮ್ಮನ್ನು ಕ್ರಿಸ್ತನೊಂದಿಗೆ ಪರಲೋಕದಲ್ಲಿ ಸಹ ಕೂಡ್ರಿಸುತ್ತಾನೆ. ಮತ್ತು ಕ್ರಿಸ್ತನೊಂದಿಗೆ ಪರಲೋಕದಲ್ಲಿ ಕುಳಿತಿರುವದಾದರೆ ನಾವು ಯಾವುದರ ಮೇಲೆ ಕುಳಿತಿದ್ದೇವೆ? ಸಿಂಹಾಸನಗಳು, (ಪ್ರಕಟಣೆ 3:21 ನೋಡಿರಿ). ಪೌಲನು ಪರಲೋಕದಲ್ಲಿ ವಿಶ್ವಾಸಿಯ ಸ್ಥಾನದ ಬಗ್ಗೆ ಎಷ್ಟೊಂದು ಭರವಸವುಳ್ಳವನಾಗಿದ್ದಾನೆಂದರೆಆತನು ಇಲ್ಲಿ ಭೂತಕಾಲ ರೂಪದಲ್ಲಿ ಬರೆಯುತ್ತಾನೆ. ನಾವು ಈಗಾಗಲೇ ಅಲ್ಲಿ ಕುಳಿತಿದ್ದೇವೇನೋ ಎಂಬಂತೆ ದೇವರು ನಮ್ಮನ್ನು ಕ್ರಿಸ್ತನೊಂದಿಗೆ ಪರಲೋಕದಲ್ಲಿ ಕೂಡ್ರಿಸಿದ್ದಾನೆ ಎಂದು ಆತನು ಬರೆಯುತ್ತಾನೆ (ರೋಮ 8:30 ಮತ್ತು ವ್ಯಾಖ್ಯಾನ ನೋಡಿರಿ).

7 ದೇವರು ಯಾಕೆ ನಮ್ಮನ್ನು ಕ್ರಿಸ್ತನೊಂದಿಗೆ ಎಬ್ಬಿಸಿ ಆತನೊಂದಿಗೆ ಪರಲೋಕದಲ್ಲಿ ಕೂಡ್ರಿಸುತ್ತಾನೆ? ಆತನು ಇದನ್ನು ಮುಂದಣ ಯುಗಗಳಲ್ಲಿ ಬರುವತಲೆಮಾರುಗಳಿಗೆತನ್ನಶ್ರೇಷ್ಠವಾದಪ್ರೀತಿಯನ್ನುತೋರಿಸುವದಕ್ಕಾಗಿ–ಅವರಿಗೆ ತನ್ನ ಅಪಾರವಾದ ಕೃಪಾತಿಶಯವನ್ನು ತೋರಿಸಲು–ಮಾಡುತ್ತಾನೆ.

8 ಇಲ್ಲಿ ನಾವು ಇಡೀ ಬೈಬಲಿನಲ್ಲಿಯೇ ಅತಿ ಪ್ರಾಮುಖ್ಯವಾದ ವಚನವೊಂದಕ್ಕೆ ಬರುತ್ತೇವೆ. ಈ ವಚನದಲ್ಲಿ ಎರಡು ಮುಖ್ಯವಾದ ಪದಗಳಿರುತ್ತವೆಃ ಕೃಪೆ ಮತ್ತು ನಂಬಿಕೆ. ಇದನ್ನು ಸರಳವಾದ ಪದಗಳಲ್ಲಿ ಹೇಳುವದಾದರೆ, ಕೃಪೆಯು ಯೇಸುಕ್ರಿಸ್ತನಲ್ಲಿ ದೊರೆಯುವ ರಕ್ಷಣೆಯೆಂಬ ದೇವರ ಉಚಿತಾರ್ಥ ವರವಾಗಿದೆ, ಆ ವರವನ್ನು ಪಡೆದುಕೊಳ್ಳುವದೇ ನಂಬಿಕೆ ಆಗಿದೆ. ನಂಬಿಕೆ ಎಂದರೆ "ಮಾಡುವದಲ್ಲ" ಇದು "ಪಡೆದುಕೊಳ್ಳುವದೇ". ಸ್ವತಃನಂಬಿಕೆಯೇ ದೇವರ ವರವಾಗಿದೆ, ಮತ್ತು ಅದು ದೇವರ ವಾಕ್ಯವನ್ನು ಕೇಳುವದರಿಂದ ಬರುತ್ತದೆ (ರೋಮ 10:17). ಆದದರಿಂದ, ರಕ್ಷಣೆಯು ಸಂಪೂರ್ಣವಾಗಿ ದೇವರ ಒಂದು ವರವಾಗಿದೆ ಎಂಬದನ್ನು ನಾವು ಇದರ ಮೂಲಕ ತಿಳಿದುಕೊಳ್ಳಬಹುದು, ನಾವು ಅದನ್ನು ಸಂಪಾದಿಸಿಕೊಳ್ಳುವದಕ್ಕೆ ಏನನ್ನೂ ಮಾಡಲಾರೆವು, ನಾವು ಯಾವ ಕಾರ್ಯವನ್ನಾದರೂ ಮಾಡುವದರಿಂದ ನಮ್ಮನ್ನು ಅದಕ್ಕೆ ಯೋಗ್ಯರನ್ನಾಗಿ ಮಾಡಿಕೊಳ್ಳಲಾರೆವು.

ಅಲ್ಲದೆ ಇದರ ಮೂಲಕ ನಾವು ಕ್ರೈಸ್ತತ್ವವು ಇತರ ಧರ್ಮಗಳಿಂದ ಎಷ್ಟು ವ್ಯತ್ಯಾಸವಾದದ್ದೆಂಬದನ್ನು ಸಹ ತಿಳಿಯಬಹುದು. ಇತರ ಧರ್ಮಗಳು ರಕ್ಷಣೆಯನ್ನು ಹೊಂದಬೇಕಾದರೆ ಮನುಷ್ಯನು ಒಳ್ಳೇಕಾರ್ಯಗಳನ್ನು ಮಾಡುವದರ ಮೂಲಕ ಅರ್ಹತೆಯನ್ನು ಸಂಪಾದಿಸಿಕೊಳ್ಳಬೇಕೆಂದು ಭೋಧಿಸುತ್ತವೆ. ಮಾನವನ ಪಾಪಾಧೀನ ಸ್ವಭಾವವು ಕೆಲವೊಂದು ನೇಮ ನಿಷ್ಠೆ ಹಾಗು ಆಚಾರಗಳನ್ನು ಪಾಲಿಸುವದರ ಮೂಲಕ "ಪವಿತ್ರಗೊಳಿಸಲ್ಪಡಲು" ಸಾಧ್ಯವಾಗುತ್ತದೆಂದು ಆ ಧರ್ಮಗಳು ಭೋಧಿಸುತ್ತವೆ. ಆದರೆ ಈ ಭೋಧನೆಗಳು ಸತ್ಯವಲ್ಲ. ನಮ್ಮ ಅಂತರಾತ್ಮವು ಬಹಿರಂಗದ ಕರ್ಮಗಳಿಂದ ಶುದ್ಧಿಗೊಳ್ಳಲಾರದು. ಮತ್ತು ನಾವು ಎಷ್ಟೇ ಒಳ್ಳೇಕಾರ್ಯಗಳನ್ನು ಮಾಡಿದಾಗ್ಯು ನಮ್ಮ ಅಂತರ್ಯವು ಶುದ್ಧಿಕರಿಸಲ್ಪಡದಿದ್ದರೆ ಅಥವಾ ನೀತಿಯುಳ್ಳದ್ದಾಗಿ ಮಾಡಲ್ಪಡುವ ತನಕವೂ ನಾವು ದೇವರನ್ನು ಮೆಚ್ಚಿಸಲಾರೆವು. ಅಥವಾ ರಕ್ಷಣೆಯನ್ನುಪಡೆದುಕೊಳ್ಳಲಾರೆವು (ಗಲಾತ್ಯ 2:15-16ಮತ್ತು ವ್ಯಾಖ್ಯಾನ,ಸಾಮಾನ್ಯ ಲೇಖನಃ ರಕ್ಷಣೆಯ ಮಾರ್ಗ ನೋಡಿರಿ)

9 ನಾವು ನಮ್ಮ ಸ್ವಂತ ಕಾರ್ಯ ಅಥವಾ ಪ್ರಯತ್ನದಿಂದ ರಕ್ಷಣೆಯನ್ನು ಹೊಂದಿಕೊಳ್ಳಲಾರೆವು ಎಂಬದನ್ನು ಪೌಲನು ಇಲ್ಲಿ ಪುನರುಚ್ಚರಿಸುತ್ತಾನೆ. ಯಾವನೂ "ನಾನು ನನ್ನ ಸ್ವಂತ ಕಾರ್ಯದಿಂದ ಪರಲೋಕಕ್ಕೆ ಸೇರಿದ್ದೇನೆ "ಎಂದು ಎಂದಿಗೂ ಹೇಳಲಾರನು. ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ಒಬ್ಬನು ರಕ್ಷಣೆಯನ್ನು ಹೊಂದಿಕೊಳ್ಳಬಲ್ಲನು. ಕ್ರಿಸ್ತನು ಒಬ್ಬನೇ ನಮ್ಮ ರಕ್ಷಕನು. ಆತನು ನಮ್ಮ ಪಾಪಗಳಿಗಾಗಿ ಮರಣದಂಡನೆಯನ್ನು ಹೊಂದಿಕೊಳ್ಳುವದರ ಮೂಲಕ ನಮ್ಮನ್ನು ರಕ್ಷಿಸಿದನು. ಆತನು ನಮ್ಮ ಸ್ಥಾನದಲ್ಲಿ ಮರಣಿಸಿದನು. ಕ್ರಿಸ್ತನಲ್ಲಿ ನಂಬಿಕೆಯಿಡುವದರಿಂದ ನಾವು ನಮ್ಮ ಪಾಪಗಳಿಗಾಗಿ ಕ್ಷಮಾಪಣೆಯನ್ನು ಪಡೆದುಕೊಂಡು ದ್ವರ ದೃಷ್ಟಿಯಲ್ಲಿ ನೀತಿವಂತರೆಂದು ನಿರ್ಣಯಿಸಲ್ಪಡಬಹುದಾಗಿದೆ (ರೋಮ 3:22-24, 8:1, ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ಶುದ್ಧೀಕರಿಸಲ್ಪಟ್ಟು ಪರಿಶುದ್ಧರಾಗಿ ಮಾಡಲ್ಪಟ್ಟ ನಂತರವಷ್ಟೇ ದೇವರು ನಮ್ಮನ್ನು ತನ್ನ ಮಕ್ಕಳನ್ನಾಗಿ ಸ್ವೀಕರಿಸಿಕೊಳ್ಳುವನು. ನಾವು ಹೇಗೆ ಶುದ್ಧೀಕರಿಸಲ್ಪಟ್ಟು ಪರಿಶುದ್ಧರಾಗಿ ಮಾಡಲ್ಪಡುವೆವು? ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕವೇ.

10 ಈ ವಚನದಲ್ಲಿ ನಾವು ನಮ್ಮನ್ನು ರಕ್ಷಿಸುವದರಲ್ಲಿ ದೇವರು ಹೊಂದಿರುವ ಎರಡನೆಯ ಉದ್ದೇಶವನ್ನು ನೋಡುತ್ತೇವೆ (ಮೊದಲನೆಯ ಉದ್ದೇಶವು 7 ನೇ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ, ಏನೆಂದರೆ ಮುಂದಣ ತಲೆಮಾರುಗಳಿಗೆ ಆತನ ಕೃಪೆಯನ್ನು ತೋರ್ಪಡಿಸಬೇಕೆಂಬದಕ್ಕಾಗಿಯೇ). ನಮ್ಮ ರಕ್ಷಣೆಗಾಗಿ ಎರಡನೆಯ ಉದ್ದೇಶವೇನೆಂದರೆ, ಒಮ್ಮೆ ರಕ್ಷಣೆ ಹೊಂದಿದ ಮೇಲೆ ನಾವು ಸತ್ಕಾರ್ಯಗಳನ್ನು ಮಾಡುವದಕ್ಕಾಗಿಯೇ ಜೀವಿಸಬೇಕೆಂಬದು. ನಾವು ರಕ್ಷಣೆ ಹೊಂದುವದಕ್ಕಾಗಿ ಸತ್ಕಾರ್ಯಗಳನ್ನು ಮಾಡುವದಿಲ್ಲ ಎಂಬದನ್ನು ಇಲ್ಲಿ ಗಮನಿಸಿರಿ. ಬದಲಾಗಿ, ನಾವು ಸತ್ಕಾರ್ಯಗಳನ್ನು ಮಾಡುವದಕ್ಕಾಗಿಯೇ ರಕ್ಷಿಸಲ್ಪಟ್ಟಿದ್ದೇವೆ. ನಾವು ನಮ್ಮ ಸತ್ಕಾರ್ಯಗಳ ಕಾರಣದಿಂದ ರಕ್ಷಣೆ ಹೊಂದಲಿಲ್ಲ, ಬದಲಾಗಿ, ನಾವು ರಕ್ಷಣೆ ಹೊಂದಿದ್ದೇವೆಂಬ ಕಾರಣಕ್ಕಾಗಿ ಸತ್ಕಾರ್ಯಗಳನ್ನು ಮಾಡುತ್ತೇವೆ.

ದೇವರು ಪ್ರತಿಯೊಬ್ಬ ಕ್ರೈಸ್ತನಿಗೂ ಮಾಡುವದಕ್ಕಾಗಿ ಸತ್ಕಾರ್ಯಗಳನ್ನು ಮುಂದಾಗಿಯೇ ಸಿದ್ಧಪಡಿಸಿದ್ದಾನೆ. ಯಾವ ಕ್ರೈಸ್ತನೂ "ನಾನು ಕೃಪೆಯಿಂದ ರಕ್ಷಣೆ ಹೊಂದಿದ್ದೇನೆ, ಆದದರಿಂದ ನಾನು ಯಾವದೇ ಸತ್ಕಾರ್ಯಗಲನ್ನು ಮಾಡುವದು ಅಗತ್ಯವಿಲ್ಲ" ಎಂದು ಭಾವಿಸದಿರಲಿ. ರಕ್ಷಣೆಯು ಮೊದಲು ಬರುತ್ತದೆ ಎಂಬದು ನಿಜವೇ, ಆದರೆ ರಕ್ಷಣೆಯ ನಂತರ ಸತ್ಕಾರ್ಯಗಳಿರಬೇಕು. ಮೊದಲು, ನಾವು ಕ್ರಿಸ್ತನಲ್ಲಿ ನೂತನ ಜೀವಿತವನ್ನು ಹೊಂದಿಕೊಳ್ಳುತ್ತೇವೆ. ಅನಂತರ ನಾವು ನೂತನ ಜೀವಿತವನ್ನು ಜೀವಿಸಲಾರಂಭಿಸಬೇಕು (2 ಕೊರಿಂಥ 5:17, ಎಫೆಸ್ 4:1ಮತ್ತು ವ್ಯಾಖ್ಯಾನ ನೋಡಿರಿ).

## ಕ್ರಿಸ್ತನಲ್ಲಿ ಸಮಭಾಗಿಗಳು (2:11-22)

11 ಯೆಹೂದ್ಯರಲ್ಲದವರೆಲ್ಲರೂ ಅನ್ಯಜನರಾಗಿದ್ದಾರೆ. ಪೌಲನ ಕಾಲದಲ್ಲಿ ಯೆಹೂದ್ಯರು ಅನ್ಯಜನರನ್ನು ಸುನ್ನತಿಯಿಲ್ಲದವರು ಎಂದು ಕರೆಯುತ್ತಿದ್ದರು, ಯಾಕೆಂದರೆ, ಅವರು ಯೆಹೂದ್ಯರಂತೆ ಸುನ್ನತಿಯ ಆಚಾರವನ್ನು ಪಾಲಿಸುತ್ತಿರಲಿಲ್ಲ. ದೇವರ ಆಜ್ಞೆಯ ಅನುಸಾರವಾಗಿ ಹುಟ್ಟಿದ ಎಂಟನೆಯ ದಿನದಲ್ಲಿ ಪ್ರತಿಯೊಬ್ಬ ಯೆಹೂದ್ಯ ಪುರುಷನು ತನ್ನ ಶಿಶ್ನದ ತುದಿಯಲ್ಲಿರುವ ಹೆಚ್ಚಿನ ಚರ್ಮವನ್ನು ಕತ್ತರಿಸಿಕೊಳ್ಳುತ್ತಿದ್ದನುಃ ಅದು ಸುನ್ನತಿ ಎಂದು ಕರೆಯಲ್ಪಡುತ್ತದೆ (ಆದಿಕಾಂಡ 17:9-14). ಒಬ್ಬ ಯೆಹೂದ್ಯನಾಗಿರುವದಕ್ಕೆ ಸುನ್ನತಿಯು ಒಂದು ಹೊರಗಿನ ಗುರುತಾಗಿದೆ, ಹೀಗೆ ಪೌಲನ ಕಾಲದ ಯೆಹೂದ್ಯರು ತಮ್ಮನ್ನು ಸುನ್ನತಿಯವರು ಎಂದು ಕರೆದುಕೊಳ್ಳುತ್ತಿದ್ದರು.

12 ಈ ವಚನದಲ್ಲಿ ಪೌಲನು ಎಫೆಸದವರಿಗೆ ಅವರ ಪೂರ್ವ ಸ್ಥಿತಿಯನ್ನು ಜ್ಞಾಪಕಪಡಿಸುತ್ತಾನೆ. ಮೊಟ್ಟ ಮೊದಲನೆಯದಾಗಿ, ಅವರು ಕ್ರಿಸ್ತನ ಕುರಿತಾಗಿ ಕೇಳಿರದವರಾಗಿದ್ದರು. ಎರಡನೆಯದಾಗಿ, ಅವರು ಇಸ್ರಾಯೇಲ್ ಹಕ್ಕಿನಲ್ಲಿ ಪಾಲಿಲ್ಲದವರಾಗಿದ್ದರು, ಅಂದರೆ ಯೆಹೂದ್ಯ ರಾಷ್ಟ್ರದ ಪ್ರಜೆಗಳಾಗಿರಲಿಲ್ಲ. ಮೂರನೆಯದಾಗಿ, ಅವರು ಯೆಹೂದ್ಯರೊಂದಿಗೆ ದೇವರು ಮಾಡಿಕೊಂಡಿದ್ದ ವಾಗ್ದಾನಕ್ಕೆ ಸಂಬಂಧವಾದ ಒಡಂಬಡಿಕೆಯಲ್ಲಿ ಸೇರದವರಾಗಿದ್ದರು. ದೇವರು ಯೆಹೂದ್ಯರಿಗೆ ಮಾಡಿದ ಅತಿ ಶ್ರೇಷ್ಠ ವಾಗ್ದಾನವೇನೆಂದರೆ, ಆತನು ಅವರ ಬಳಿಗೆ ಒಬ್ಬ ರಕ್ಷಕನನ್ನು ಕಳುಹಿಸುವನು ಎಂಬದೇ. ಆದದರಿಂದ, ಈ ಮೂರು ಕಾರಣಗಳಿಂದಾಗಿ ಯೆಹೂದ್ಯರ ದೃಷ್ಟಿಗೆ ಈ ಎಫೆಸದ ಅನ್ಯ ಜನರು ಯಾವ ನಿರೀಕ್ಷೆಯಿಲ್ಲದವರೂ ದೇವರನ್ನರಿಯದವರೂ ಆಗಿದ್ದರು. ಅವರು ಏಕೈಕ ಸತ್ಯ ದೇವರನ್ನು ತಿಳಿದಿರಲಿಲ್ಲ. ಅವರು ದೂರವಾಗಿದ್ದರು (ವಚನ 13).

13 ಆದರೆ ಯೇಸುಕ್ರಿಸ್ತನು, ಸ್ವತಃ ತಾನೊಬ್ಬ ಯೆಹೂದ್ಯನಾಗಿದ್ದರೂ ಆತನು ಯೆಹೂದ್ಯರನ್ನು ಮಾತ್ರವೇ ಅಲ್ಲ, ಆದರೆ ಅನ್ಯಜನರಿಗೂ–ರಕ್ಷಕನಾಗಿರುವದಕ್ಕಾಗಿ ಈ ಲೋಕಕ್ಕೆ ಬಂದನು. ಕ್ರಿಸ್ತನ ರಕ್ತದ ಮೂಲಕ (ಕ್ರಿಸ್ತನ ಯಜ್ಞರೂಪದ ಮರಣದ ಮೂಲಕ) ಎಲ್ಲಾ ವಿಶ್ವಾಸಿಗಳೂ ಸಮಿಪಸ್ಥರಾದರು–ಅಂದರೆ, ಅವರು ದೇವರ ಕುಟುಂಬದೊಳಗೆ ಸೇರಿಸಲ್ಪಟ್ಟಿದ್ದಾರೆ. ಹೀಗೆ ಯೆಹೂದ್ಯರು ಅನ್ಯ ಜನರೂ ಒಮ್ಮೆ ಯೇಸುವಿನಲ್ಲಿ ನಂಬಿಕೆಯಿಡುವಾಗ ಅವರು ಒಂದೇ ಆತ್ಮೀಕ ಕುಟುಂಬದಲ್ಲಿ ಒಂದು ಮಾಡಲ್ಪಡುತ್ತಾರೆ (ಗಲಾತ್ಯ 3:24 ಮತ್ತು ವ್ಯಾಖ್ಯಾನ ನೋಡಿರಿ).

14 ಕ್ರಿಸ್ತನು ನಮ್ಮ ಸಮಾಧಾನ ಕರ್ತವಾಗಿದ್ದಾನೆ. ಕ್ರಿಸ್ತನು ದೇವರಿಗೂ ಮನುಷ್ಯನಿಗೂ ನಡುವೆ ಸಮಾಧಾನ ಉಂಟುಮಾಡುತ್ತಾನೆ, ಮತ್ತು ಮನುಷ್ಯನಿಗೂ ಮನುಷ್ಯನಿಗೂ ಮಧ್ಯದಲ್ಲಿ ಸಹ ಸಮಾಧಾನ ಮಾಡುತ್ತಾನೆ, ಆತನು ಯೆಹೂದ್ಯರು ಹಾಗು ಅನ್ಯ ಜನರನಡುವೆ ಸಮಾಧಾನ ಮಾಡುತ್ತಾನೆ. ಆತನು ಯೆಹೂದ್ಯರ ಮತ್ತು ಅನ್ಯ ಜನರ ನಡುವೆ, ಮೇಲ್ಜಾತಿ ಮತ್ತು ಕೀಳುಜಾತಿ ನಡುವೆ, ಶ್ರೀಮಂತರೂ ಹಾಗು ಬಡವರ ನಡುವೆ, ವಿವಿಧ ಜನಾಂಗ ಮತ್ತು ವಿವಿಧ ರಾಷ್ಟ್ರಗಳ ನಡುವೆ ಇರುವ ದ್ವೇಷವನ್ನು[11]- ಭೇದ, ಅಸೂಯೆ ಮತ್ತು ವೈರತ್ವಗಳನ್ನು–ಮುಗಿಸಿ ಅಗಲಿಸಿದ ಅಡ್ಡಗೋಡೆಯನ್ನು ಕೆಡವಿ ಹಾಕುತ್ತಾನೆ. ಖಂಡಿತವಾಗಿಯೂ ಈ ವಚನದಲ್ಲಿ ಪೌಲನು ಮುಖ್ಯವಾಗಿ ಯೆಹೂದ್ಯರು ಹಾಗು ಅನ್ಯ ಜನರ ನಡುವಿನ ದ್ವೇಷವನ್ನು ಕುರಿತು ಮಾತಾಡುತ್ತಿದ್ದಾನೆ. ಯೆಹೂದ್ಯರು ತಮ್ಮನ್ನು ಅನ್ಯ ಜನರಿಗಿಂತಲೂ ಶ್ರೇಷ್ಠರೆಂದು ಎಣಿಸಿಕೊಳ್ಳುತ್ತಿದ್ದರು. ಯೆಹೂದ್ಯರು ಅನ್ಯ ಜನರೊಂದಿಗೆ ಸಹವಾಸವನ್ನು ಇಟ್ಟುಕೊಳ್ಳುತ್ತಿರಲಿಲ್ಲ, ಯಾಕೆಂದರೆ, ಅವರ ದೃಷ್ಟಿಯಲ್ಲಿ ಅನ್ಯ ಜನರು ಹೊಲೆಯಾಗಿದ್ದರು.

15 ಯೆಹೂದ್ಯರು ಅನೇಕ ಆಜ್ಞೆಗಳನ್ನು ಹಾಗು ವಿಧಿಗಳನ್ನು ಪಾಲಿಸುತ್ತಿದ್ದರು. ಅವು ಗಳು ಯೆಹೂದ್ಯ ಧರ್ಮಶಾಸ್ತ್ರದಲ್ಲಿ ಅಡಕವಾಗಿದ್ದವು . ಯೆಹೂದ್ಯರು ತಾವು ಧರ್ಮಶಾಸ್ತ್ರಕ್ಕೆ ವಿಧೇಯರಾಗುವದರ ಮೂಲಕ ರಕ್ಷಣೆಯನ್ನು ಪಡೆದುಕೊಳ್ಳಬಲ್ಲರೆಂದು ಭಾವಿಸಿದ್ದರು. ಯೆಹೂದ್ಯ ಧರ್ಮಶಾಸ್ತ್ರವು ಎರಡು ಮುಖ್ಯ ಭಾಗಗಳನ್ನು ಹೊಂದಿತ್ತುಃ ಮೊದಲನೆಯದಾಗಿ, "ನೈತಿಕ ಧರ್ಮಶಾಸ್ತ್ರ", ವಿಶೇಷವಾಗಿ ದಶಾಜ್ಞೆಗಳು (ವಿಮೋಚನ ಕಾಂಡ 20:1,-17), ಮತ್ತು ಎರಡನೆಯದಾಗಿ, "ಸಂಸ್ಕಾರಿಕ ಧರ್ಮಶಾಸ್ತ್ರ", ಅದು ತಿನ್ನುವ ಹಾಗು ತೊಳೆದುಕೊಳ್ಳುವ ಕುರಿತಾದ, ಹಾಗು ಯಜ್ಞಗಳ ಅರ್ಪಿಸುವಿಕೆಯ ಕುರಿತಾದ ಎಲ್ಲಾ ನೇಮಗಳನ್ನೊಳಗೊಂಡಿತ್ತು. ಸಂಸ್ಕಾರಿಕ ಧರ್ಮಶಾಸ್ತ್ರದ ಮಟ್ಟದಿಂದ ಅನ್ಯಜನರು ಅಪವಿತ್ರರಾಗಿದ್ದರು, ಹೀಗಿರುವದರಿಂದ, ಅವರು ಯೆಹೂದ್ಯ ದೇವಾಲಯದ ಒಳ ಅಂಗಳವನ್ನು ಪ್ರವೇಶಿಸಿ ಹೊಲೆ ಮಾಡಿಯಾರೆಂದು ಅವರಿಗೆ ಅಲ್ಲಿ ಪ್ರವೇಶಿಸುವದಕ್ಕೆ ಅನುಮತಿಯಿರಲಿಲ್ಲ. ಈ ಕಾರಣಕ್ಕಾಗಿ ಸ್ವತಃ ಯೆಹೂದ್ಯ ಧರ್ಮಶಾಸ್ತ್ರವೇ ಒಂದು ವಿಘ್ನ ಅಥವಾ ದ್ವೇಷದಿಂದ ಕೂಡಿದ ಅಗಲಿಸುವ ಅಡ್ಡಗೋಡೆಯಾಗಿತ್ತು (ವಚನ 14).

ಕ್ರಿಸ್ತನು (ಸಂಸ್ಕಾರಿಕ)ಧರ್ಮಶಾಸ್ತ್ರವನ್ನು[12], ತೆಗೆದು ಹಾಕಿ ಆ ಅಡ್ಡಗೋಡೆಯನ್ನು ಕೆಡವಿ ಹಾಕಿದನು. ಮನುಷ್ಯನು ಧರ್ಮಶಾಸ್ತ್ರಕ್ಕೆ ವಿಧೇಯನಾಗುವದರಿಂದಲ್ಲ, ಆದರೆ ತನ್ನಲ್ಲಿ ನಂಬಿಕೆಯಿಡುವದರ ಮೂಲಕವೇ ರಕ್ಷಣೆ ಹೊಂದುತ್ತಾನೆಂದು ಕ್ರಿಸ್ತನು ಬೋಧಿಸಿದನು (ಗಲಾತ್ಯ 2:15-16 ಮತ್ತು ವ್ಯಾಖ್ಯಾನ ನೋಡಿರಿ). ಆದದರಿಂದ, ಸಂಸ್ಕಾರಿಕ ಧರ್ಮಶಾಸ್ತ್ರವನ್ನು ತೆಗೆದು ಹಾಕುವದರ ಮೂಲಕ ಹಾಗು ಯೆಹೂದ್ಯರಿಗೂ ಅನ್ಯಜನರಿಗೂ ನಡುವೆ ಇದ್ದ ಅಡ್ಡಗೋಡೆಯನ್ನು ಕೆಡವಿ ಹಾಕುವದರ

ಮೂಲಕ ಕ್ರಿಸ್ತನು ಉಭಯರನ್ನೂ ತನ್ನಲ್ಲಿ ಒಬ್ಬ ನೂತನ ಪುರುಷನನ್ನಾಗಿ ನಿರ್ಮಿಸಿದ್ದಾನೆ. ಅಂದರೆ, ಆತನು ಎರಡು ಜನರೊಳಗಿಂದ (ಯೆಹೂದ್ಯರು ಮತ್ತು ಅನ್ಯ ಜನರು) ಒಂದು ನೂತನ ಜನವನ್ನು(ವಿಶ್ವಾಸಿಗಳು) ನಿರ್ಮಿಸಿದನು. ಕ್ರಿಸ್ತನಲ್ಲಿ ನಂಬಿಕೆಯಿಡುವವರೆಲ್ಲರೂ-ಯೆಹೂದ್ಯ ಅಥವಾ ಅನ್ಯನಾಗಿರಲಿ, ಮೇಲ್ಜಾತಿ ಅಥವಾ ಕೀಳುಜಾತಿಯಾಗಿರಲಿ, ಪುರುಷ ಅತವಾ ಸ್ತ್ರೀಯಾಗಿರಲಿ-ಎಲ್ಲರೂ ಆತನಲ್ಲಿ ಒಂದೇಆಗಿದ್ದಾರೆ (ಗಲಾತ್ಯ 3:28, ನೋಡಿರಿ). ಅವರೆಲ್ಲರೂ ಒಂದೇ ದೇಹದ ಸದಸ್ಯರಾಗಿದ್ದಾರೆ (ವಚನ 16). ಆ ದೇಹದ ಶಿರಸ್ಸು ಕ್ರಿಸ್ತನೇ (1 ಕೊರಿಂಥ 12:13.27, ಎಫೆಸ್ 5:23 ನೋಡಿರಿ).

**16** ಕ್ರಿಸ್ತನು ಯೆಹೂದ್ಯ ಹಾಗು ಅನ್ಯ ಜನರ ನಡುವೆ ಮಾತ್ರವೇ ಸಮಾಧಾನ ಮಾಡಲಿಲ್ಲ, ಆತನು ಅವರಿಬ್ಬರ ಹಾಗು ದೇವರ ನಡುವೆ ಸಹ ಸಮಾಧಾನವನ್ನು ಮಾಡಿದನು (ರೋಮ 18-20, 5:1 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಕ್ರಿಸ್ತನು ಶಿಲುಬೆಯ ಮೂಲಕ (ಶಿಲುಬೆಯ ಮೇಲಿನ ತನ್ನ ಮರಣದ ಮೂಲಕ) ಎಲ್ಲಾ ವಿಶ್ವಾಸಿಗಳನ್ನು ದೇವರ ಕುಟುಂಬವಾದ ಸಭೆಯೊಳಗೆ ತಂದಿರುತ್ತಾನೆ. ದೇವರು ತನ್ನ ಎಲ್ಲಾ ಮಕ್ಕಳನ್ನು ಸಮಾನವಾಗಿ ಕಾಣುತ್ತಾನೆ. ಆತನು ಒಬ್ಬರನ್ನೂ ಬಿಟ್ಟು ಇನ್ನೊಬ್ಬರಿಗೆ ಪಕ್ಷಪಾತ ತೋರಿಸುವದಿಲ್ಲ. ಮತ್ತು ಆತನು ಅವರ ಮಧ್ಯದಲ್ಲಿ ಯಾವದೇ ದ್ವೇಷ, ಅಡ್ಡಗೋಡೆ ಉದ್ಭವಿಸಬಾರದೆಂದು ಇಚ್ಚಿಸುತ್ತಾನೆ.

ಆದದರಿಂದ, ನಾವು ನಮ್ಮ ಸಭೆಯಲ್ಲಿ ಯಾವ "ದ್ವೇಷದ ಅಡ್ಡಗೋಡೆ" ಸಹ ಉದಭವಿಸದಂತೆ ಜಾಗರೂಕರಾಗಿರೋಣ. ಮತ್ತು ಅವುಗಳು ಉದಭವವಾಗುವದಾದರೆನಾವು ಶೀಘ್ರ್ರವೇ ಅವುಗಳನ್ನು ಕೆಡುವಿ ಹಾಕೋಣ. ನಾವು ಎಚ್ಚರಿಕೆಯಿಂದ ಇರದಿದ್ದರೆ ಅಂಥ ಅಗಲಿಸುವ ಅಡ್ಡಗೋಡೆಗಳು ಶ್ರೀಮಂತ ಅಥವಾ ಬಡವ ವಿದ್ಯಾವಂತ ಹಾಗು ಅವಿಧ್ಯಾವಂತ, ಪುರುಷರು ಮತ್ತು ಸ್ತ್ರೀಯರ, ಪರದೇಶಿಯನು ಮತ್ತು ಸ್ವದೇಶಿಯವನ, ಮೇಲ್ಜಾತಿ ಹಾಗು ಕೀಳುಜಾತಿಯವರ ಮದ್ಯದಲ್ಲಿ ಸುಲಭವಾಗಿ ಉಧ್ಭವಿಸಬಹುದು. ಇದು ಸಂಭವಿಸದಿರಲಿ.

**17-18** ದೂರವಾಗಿದ್ದವರು (ಅನ್ಯಜನರು) ಮತ್ತು ಸಮೀಪವಾಗಿದ್ದವರು (ಯೆಹೂದ್ಯರು) ಈಗ ಸಮಾನವಾಗಿ ದೇವರ ಸಮೀಪಕ್ಕೆ ಬರಲು ಶಕ್ತರಾಗಿದ್ದಾರೆ, ಅವರು ದೇವರ ಬಳಿಗೆ ಪ್ರವೇಶಿಸುವದಕ್ಕೆ ಸಮಾನ ಹಕ್ಕನ್ನು ಹೊಂದಿದ್ದಾರೆ. ಪೌಲನು 18ನೇ ವಚನದಲ್ಲಿ ದೇವರ ಮೂರು ರೂಪಗಳು ಅಥವಾ ಅಸ್ಥಿತ್ವದ ವಿಧಗಳನ್ನು ಪ್ರಸ್ತಾಪಿಸುತ್ತಾನೆಃ ಆತನ (ಕ್ರಿಸ್ತನು ಮಗನಾದ ದೇವರು) ಮೂಲಕವಾಗಿ ನಾವೂ ನೀವೂ ಒಬ್ಬ ಆತ್ಮನನ್ನೇ (ದೇವರಾದ ಪವಿತ್ರಾತ್ಮನು) ಹೊಂದಿದವರಾಗಿ ತಂದೆಯ ಬಳಿಗೆ (ತಂದೆಯಾದ ದೇವರು) ಪ್ರವೇಶಿಸುವದಕ್ಕೆ ಮಾರ್ಗವಾಯಿತು. ಆದರೆ ದೇವರು ಮೂರು ರೂಪಗಳನ್ನು ಹೊಂದಿದ್ದರೂ-ತಂದೆ-ಮಗ-ಮತ್ತು ಪವಿತ್ರಾತ್ಮನು-ಆತನು ಒಬ್ಬನೇ ದೇವರಾಗಿದ್ದಾನೆ. ಕ್ರೈಸ್ತರು ದೇವರ ಈ ಮೂರು ರೂಪಗಳನ್ನು ಒಟ್ಟಾಗಿ "ತ್ರೈಯೆಕತ್ವ" ಎಂದು ಸೂಚಿಸುತ್ತಾರೆ.

**19** ಇಲ್ಲಿ ಪೌಲನು ಎಫೆಸದವರಿಗೆ ಈಗ ಅವರು ದೇವಜನರೊಂದಿಗೆ (ಯೆಹೂದ್ಯರು) ಒಂದೇ ಸಂಸ್ಥಾನದವರು ದೇವರ ಮನೆಯವರೂ (ಸಭೆ) ಆಗಿದ್ದಾರೆಂದು ಹೇಳುತ್ತಾನೆ. ಮತ್ತು ಪೌಲನು ಇಂದು ನಮಗೆ ಸಹ ಅದೇ ಸಂಗತಿಯನ್ನು ಹೇಳುತ್ತಿದ್ದಾನೆ. ನಾವು ಸಹ ಒಮ್ಮೆ ಪರದೇಶದವರೂ ಅನ್ಯರೂ ಆಗಿದ್ದೇವು. ನಾವು ಸಹ ಕ್ರಿಸ್ತನನ್ನು ತಿಳಿಯದವರಾಗಿದ್ದೇವು. ಆದರೆ ಈಗ ಆತನಲ್ಲಿ ನಂಬಿಕೆಯಿಡುವದರಮೂಲಕ ದೇವರ ಕುಟುಂಬದ ಸದಸ್ಯರೂ ಆತನ ರಾಜ್ಯದ ಸಂಸ್ಥಾನದವರೂ ಆಗಿದ್ದೇವೆ (ಲೂಕ 12:32).

**20** ಈ ವಚನದಲ್ಲಿ ಪೌಲನು ದೇವರ ಮನೆಯಾದ ಸಭೆಯ ಬಗ್ಗೆ ಕೆಲವು ಪ್ರಾಮುಖ್ಯವಾದ ಸಂಗತಿಗಳನ್ನು ಹೇಳುತ್ತಾನೆ. ಇದು ಅಪೊಸ್ತಲರೂ ಪ್ರವಾದಿಗಳೂ ಎಂಬ ಅಸ್ತಿವಾರದ ಮೇಲೆ-ಅಂದರೆ, ಹೊಸ ಒಡಂಬಡಿಕೆಯ ಅಪೊಸ್ತಲರೂ ಮತ್ತು ಹಳೆ ಒಡಂಬಡಿಕೆಯ ಪ್ರವಾದಿಗಳೂ-ಕಟ್ಟಲ್ಪಟ್ಟಿದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಸಭೆಯು ಹಳೆ ಒಡಂಬಡಿಕೆಯ ಅಸ್ತಿವಾರದ-ಬೈಬಲ್-ಮೇಲೆ ಕಟ್ಟಲ್ಪಟ್ಟಿದೆ. ಅತಿ ಸರಳ ಪದಗಳಲ್ಲಿ, ಸಭೆಯ ಅಸ್ತಿವಾರವು ದೇವರ ವಾಕ್ಯವಾಗಿದೆ. ಮತ್ತು ವಾಕ್ಯವು (ಅಸ್ತಿವಾರವು) ನಮಗೋಸ್ಕರವಾಗಿ ಅಪೊಸ್ತಲರು ಮತ್ತು ಪ್ರವಾದಿಗಳ ಮೂಲಕ ಬರೆಯಲ್ಪಟ್ಟಿದೆ.

ನಂತರ ಪೌಲನು ಸಭೆಯ ಮುಖ್ಯವಾದ ಮೂಲೆಗಲ್ಲು[13] ಯೇಸು ಕ್ರಿಸ್ತನೇ ಎಂದು ಹೇಳುತ್ತಾನೆ. ಅಂಥ ಮೂಲೆಗಲ್ಲು ಇಲ್ಲದಿದ್ದರೆ ಕಟ್ಟಡವು ಕುಸಿದು ಬೀಳುವದು.

**21** ಯೆರೂಸಲೇಮಿನಲ್ಲಿನ ಯೆಹೂದ್ಯ ದೇವಾಲಯವು ಇನ್ನು ಅಸ್ತಿತ್ವದಲ್ಲಿರುವದಿಲ್ಲ, ಈಗ ಸಭೆಯು ದೇವರ ಪರಿಶುದ್ಧ ದೇವಾಲಯ ಆಗಿರುತ್ತದೆ. ಮತ್ತು ಈ ದೇವಾಲಯವು ಕ್ರಿಸ್ತನಲ್ಲಿ ಹೊಂದಿಕೆಯಾಗಿ ಕಟ್ಟಲ್ಪಡುತ್ತಾ ಒಂದೇ ಕಟ್ಟಡ, ಸಭೆಯಾಗುತ್ತದೆ. ಈ ಕಟ್ಟಡದ ಎಲ್ಲಾ ಭಾಗಗಳು ಆತನಲ್ಲಿ ಒಂದಕ್ಕೊಂದು ಹೊಂದಿಕೆಯಾಗಿರುತ್ತವೆ. ಕ್ರಿಸ್ತನು ಸಭೆಯ "ಮೂಲೆಗಲ್ಲು" ಮಾತ್ರವಲ್ಲ, ಆತನು ಅದರ ಶಿರಸ್ಸಾಗಿದ್ದಾನೆ.

**22** ವಿಶ್ವಾಸಿಗಳಾದ ನಾವು ಕಲ್ಲುಗಳಂತಿದ್ದೇವೆ, ಅವುಗಳಿಂದ ದೇವರು ತನ್ನ ದೇವಾಲಯವನ್ನು ಕಟ್ಟಿದ್ದಾನೆ. ನಾವು ಒಂದೇ ಕಟ್ಟಡ, ಒಂದೇ ಸಭೆಯಾಗಿ ಕಟ್ಟಲ್ಪಡುತ್ತಾ ಇದ್ದೇವೆ. ನಾವು ಒಬ್ಬರೊಂದಿಗೊಬ್ಬರು ಐಕ್ಯವಾಗಿದ್ದೇವೆ. ದೇವರ ಪವಿತ್ರಾತ್ಮನು ಈ ದೇವಾಲಯದಲ್ಲಿ ವಾಸಿಸುತ್ತಾನೆ. ನಾವು ಅದರ ಕಲ್ಲುಗಳಾಗಿದ್ದೇವೆ (1 ಕೊರಿಂಥ 3:16, 1ಪೇತ್ರ 2:5 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ದೇವರು ತನ್ನ ದೇವಾಲಯದಲ್ಲಿ ನೆಲೆಸುವದಕ್ಕಾಗಿ ಅದನ್ನು ಕಟ್ಟಿರುತ್ತಾನೆ.

ಇಂದು ನಮ್ಮ ಸಭೆಯು ಹೇಗಿರುತ್ತದೆ? ಇದರ ಸದಸ್ಯರ ಐಕ್ಯತೆಯಲ್ಲಿ ಹೊಂದಿಕೆಯಾಗಿದ್ದಾರೋ? ನಾವು ಒಂದೇ ಮನೆಯವರಂತೆ ಪ್ರೀತಿಯಲ್ಲಿ ಜೀವಿಸುತ್ತಿದ್ದೇವೋ? ಇತರ ಜನರು ನಮ್ಮ ಸಭೆಯನ್ನು ನೋಡುವಾಗ ಏನನ್ನು ಕಾಣುತ್ತಾರೆ? ದೇವರು ಏನನ್ನು ಕಾಣುತ್ತಾನೆ?.

# ಅಧ್ಯಾಯ - 3

## ಅನ್ಯ ಜನರಿಗೆ ಬೋಧಕನಾದ ಪೌಲನು (3:1-13)

**1-2** ಪೌಲನು ತನ್ನನ್ನು ಸೆರೆಯವನು ಎಂದು ಕರೆದುಕೊಳ್ಳುತ್ತಾನೆ, ಯಾಕೆಂದರೆ ಆತನು ಈ ಪತ್ರಿಕೆಯನ್ನು ರೋಮಾಪುರದ ಸೆರೆಮನೆಯೊಂದರಲ್ಲಿ ಬಂಧಿಸಲ್ಪಟ್ಟನಾಗಿದ್ದುಕೊಂಡು ಬರೆಯುತ್ತಿದ್ದಾನೆ. ಆತನು ಅನ್ಯ ಜನರಾದ ನಿಮ್ಮ ನಿಮಿತ್ಯ ಸೆರೆಯವನಾಗಿದ್ದನೆಂದು ಆತನು ಎಫೆಸದವರಿಗೆ ಹೇಳುತ್ತಾನೆ. ಪೌಲನು ಅನ್ಯ ಜನರಿಗೆ ಬೋಧಿಸಿದ್ದರಿಂದಲೇ ಸೆರೆಮನೆಗೆ ಹಾಕಲ್ಪಟ್ಟಿದ್ದನು.

ಇನ್ನೊಂದು ಅರ್ಥದಲ್ಲಿ ಪೌಲನು ಸೆರೆಮನೆಯಲ್ಲಿದ್ದರೂ, ಇಲ್ಲದಿದ್ದರೂ ಆತನು ಯೇಸು ಕ್ರಿಸ್ತನ "ಸೆರೆಯವನಾಗಿದ್ದನು" ಆತನು ಎಲ್ಲಾ ಸಮಯಗಳಲ್ಲಿಯೂ ಎಲ್ಲಾ ಸ್ಥಳಗಳಲ್ಲಿಯೂ ಯೇಸುವನ್ನು ತನ್ನ ಜೀವಿತದ ಅಧಿಕಾರಿ ಮತ್ತು ಕರ್ತನನ್ನಾಗಿ ಮಾಡಿಕೊಂಡಿದ್ದನು.

ಅನ್ಯ ಜನರಿಗೆ ಬೋಧಿಸುವದು ಪೌಲನ ವಿಶೇಷ ಕೆಲಸವಾಗಿತ್ತು (ಅ.ಕೃ. 22:21,ರೋಮ 15:15-16 ನೋಡಿರಿ). ಪೌಲನು ಈ ಕೆಲಸವನ್ನು ನಿರ್ವಹಿಸುವದಕ್ಕೆ ಒಂದು ವಿಶೇಷವಾದ ಕೃಪೆಯನ್ನು ದೇವರಿಂದ ಹೊಂದಿದ್ದನು (ವಚನ 2).

**3** ಇಲ್ಲಿ ಪೌಲನು ತನಗೆ ಪ್ರಕಟವಾಗಿರುವ ಗುಪ್ತವಾಗಿದ್ದ ಸಂಗತಿಯನ್ನು ಕುರಿತು ಮಾತಾಡುತ್ತಾನೆ, ಮತ್ತು ಅದನ್ನು ಈಗಾಗಲೇ ಆತನು ಎಫೆಸ 1:9-10ರಲ್ಲಿ ಪ್ರಸ್ತಾಪಿಸಿದ್ದಾನೆ, ಅದೇನೆಂದರೆ, ದೇವರು ಒಂದು ದಿನ ಸಮಸ್ತವನ್ನೂ ಕ್ರಿಸ್ತನಲ್ಲಿ ಒಂದುಗೂಡಿಸುವನೆಂಬ "ಮರ್ಮ" ಎಫೆಸದವರಿಗೆ ಬರೆದ ಪತ್ರಿಕೆ 2ನೇ ಅಧ್ಯಾಯದಲ್ಲಿ ಯೆಹೂದ್ಯರು ಮತ್ತು ಅನ್ಯ ಜನರು ಈಗಾಗಲೇ ಹೇಗೆ ಕ್ರಿಸ್ತನಲ್ಲಿ ಒಂದುಗೂಡಿಸಲ್ಪಟ್ಟಿದ್ದಾರೆಂಬದನ್ನು ಪೌಲನು ತಿಳಿಯಪಡಿಸಿರುತ್ತಾನೆ. ಪೌಲನು ಈ ಗುಪ್ತವಾಗಿದ್ದ ಸಂಗತಿಯ ಬಗ್ಗೆ ಯಾವದೇ ಮನುಷ್ಯನಿಂದ ತಿಳಿದುಕೊಳ್ಳಲಿಲ್ಲ, ಬದಲಾಗಿ, ಗುಪ್ತವಾಗಿದ್ದ ಸಂಗತಿಯು ಆತನಿಗೆ ನೇರವಾಗಿ ದೇವರಿಂದ ಬಂದ ಪ್ರಕಟಣೆಯಿಂದ ತಿಳಿಸಲ್ಪಟ್ಟಿತು.

**4** ಎಫೆಸದವರಿಗೆ ಬರೆದ ಪತ್ರಿಕೆಯ 1-2 ಅಧ್ಯಾಯಗಳಲ್ಲಿ ಓದಿದ ಬಳಿಕ ಪೌಲನು ಈ ಗುಪ್ತವಾಗಿದ್ದ ಸಂಗತಿಯು ಏನೆಂಬದರ ಕುರಿತು ನಿಜವಾಗಿಯೂ ಗ್ರಹಿಕೆಯನ್ನು ಹೊಂದಿದ್ದಾನೆಂಬದನ್ನು ಎಫೆಸದವರು ನಿಶ್ಚಯವಾಗಿಯೂ ತಿಳಿಯುವರು. ಈಗುಪ್ತವಾಗಿದ್ದ ಸಂಗತಿಯು ಕ್ರಿಸ್ತನ ವಿಷಯವಾದ ಮರ್ಮ ಆಗಿದೆಃ ಅದೇನೆಂದರೆ, ಕ್ರಿಸ್ತನು ಸಮಸ್ತಕ್ಕೂ ಶಿರಸ್ಸಾಗಿದ್ದಾನೆ (ಎಫೆಸ್ 1:22), ಮತ್ತು ಈಗ ಕ್ರಿಸ್ತನಲ್ಲಿ ಯೆಹೂದ್ಯರು ಮತ್ತು ಅನ್ಯ ಜನರು ಒಂದೇ ದೇಹವಾಗಿ, ಸಭೆಯಾಗಿ ಒಂದುಗೂಡಿಸಲ್ಪಟ್ಟಿದ್ದಾರೆ (1 ಕೊರಿಂಥ 12:12-13, 27, ಎಫೆಸ್ 2:16-17, 3:6).

**5** ಈ ಮರ್ಮವು ಬೇರೆ ಕಾಲಗಳಲ್ಲಿದ್ದ ಜನರಿಗೆ ತಿಳಿಸಲ್ಪಡಲಿಲ್ಲ. ಅಂದರೆ, ಈ ಕ್ರಿಸ್ತನ ವಿಶಯವಾದ ಮರ್ಮವು ಕ್ರಿಸ್ತನ ಕಾಲಕ್ಕಿಂತ ಮುಂಚೆ ಜೀವಿಸಿದ್ದ ಜನರಿಗೆ ಪ್ರಕಟವಾಗಲಿಲ್ಲ. ಕ್ರಿಸ್ತನು ಭೂಲೋಕಕ್ಕೆ ಬಂದ ನಂತರವಷ್ಟೇ ಮರ್ಮವು ಪರಿಶುದ್ಧ ಅಪೊಸ್ತಲರಿಗೂ ಪ್ರವಾಧಿಗಳಿಗೂ [14] ಪೂರ್ಣವಾಗಿ ತಿಳಿಸಲ್ಪಟ್ಟಿತು. ಮರ್ಮವು ಅವರಿಗೆ ಪವಿತ್ರಾತ್ಮನಿಂದ ತಿಳಿಸಲ್ಪಟ್ಟಿತು.

**6** ಮರ್ಮವು ಏನೆಂಬದನ್ನು ಪೌಲನು ಇಲ್ಲಿ ಪುನಃ ಹೇಳುತ್ತಾನೆಃ ಅನ್ಯ ಜನಾಂಗದ ವಿಶ್ವಾಸಿಗಳು ಇಸ್ರಾಯೇಲರೊಂದಿಗೆ, ಯೆಹೂದ್ಯರೊಂದಿಗೆ ಬಾಧ್ಯರೂ.....ಅಂಗಗಳೂ.....ಪಾಲುಗಾರರೂ ಆಗಿದ್ದಾರೆ (ಎಫೆಸ್ 2:19 ಮತ್ತು ವ್ಯಾಖ್ಯಾನ ನೋಡಿರಿ). ಯೆಹೂದ್ಯ ಹಾಗು ಅನ್ಯ ಜನಾಂಗದ ವಿಶ್ವಾಸಿಗಳು ಕ್ರಿಸ್ತನಲ್ಲಿ ಒಂದಾಗಿದ್ದಾರೆ, ಅವರು ದೇವರ ದೃಷ್ಟಿಯಲ್ಲಿ ಸರಿಸಮಾನರಾಗಿದ್ದಾರೆ. ಇದರ ಅರ್ಥವೇನೆಂದರೆ ದೇವರ ದೃಷ್ಟಿಯಲ್ಲಿ ಮೇಲ್ಜಾತಿ ಹಾಗು ಕೀಳುಜಾತಿ, ಮೇಲ್ವರ್ಗ ಹಾಗು ಕೆಳವರ್ಗ ಎಂಬುದಿರುವದಿಲ್ಲ. ಯೆಹೂದ್ಯರು ಅನ್ಯ ಜನರನ್ನು "ಕೀಳುಜಾತಿ" ಎಂದೂ ತಮ್ಮನ್ನು "ಮೇಲ್ಜಾತಿ" ಎಂಬದಾಗಿಯೂ ಪರಿಗಣಿಸಿದ್ದರು. ಆದರೆ ಈಗ ಕ್ರಿಸ್ತನಲ್ಲಿ ಯಾವ ಜಾತಿ ಇರುವದಿಲ್ಲ, ಎಲ್ಲರೂ ಒಂದೇ ಆಗಿರುವರು.

ಅನ್ಯಜನರು ಯೆಹೂದ್ಯರೊಂದಿಗೆ ಬಾಧ್ಯರಾಗಿದ್ದಾರೆ. ಇದರ ಅರ್ಥವೇನೆಂದರೆ, ಯೆಹೂದ್ಯರೊಂದಿಗೆ ಅವರು ದೇವರ ರಾಜ್ಯದ ಸಹ ಸಂಸ್ಥಾನದವರಾಗಿದ್ದಾರೆ. ದೇವರು ಇಸ್ರಾಯೇಲರೊಂದಿಗೆ ಸ್ಥಾಪಿಸಿದ ಒಡಂಬಡಿಕೆಯಲ್ಲಿ ಈಗ ಅನ್ಯಜನರು ಪಾಲುಗಾರರಾಗಿದ್ದಾರೆ. ಆ ಒಡಂಬಡಿಕೆಯ ಪ್ರಕಾರವಾಗಿ ಯೆಹೂದ್ಯರು ದೇವರನ್ನು ಆರಾಧಿಸುವವರೂ ಆತನಿಗೆ ವಿಧೇಯರೂ ಆಗಿರಬೇಕಾಗಿತ್ತು, ಮತ್ತು ಪ್ರತಿಯಾಗಿ ದೇವರು ಅವರನ್ನುತನ್ನ ವಿಶೇಷ ಜನರನ್ನಾಗಿ ಮಾಡಿಕೊಳ್ಳುವವನಾಗಿದ್ದನು. ಈಗ ಕ್ರಿಸ್ತನ ವಿಶ್ವಾಸಿಗಳು–ಯೆಹೂದ್ಯರೂ– ಅನ್ಯ ಜನರೂ ದೇವರ ವಿಶೇಷ ಜನರಾಗಿರುತ್ತಾರೆ.

ಅನ್ಯಜನರು ಒಂದೇ ದೇಹದೊಳಗಣ ಅಂಗಗಳು ಆಗಿದ್ದಾರೆ. ಇದರ ಅರ್ಥವೇನೆಂದರೆ, ಅನ್ಯಜನಾಂಗಗಳ ವಿಶ್ವಾಸಿಗಳು ಯೆಹೂದ್ಯ ವಿಶ್ವಾಸಿಗಳ ಜೊತೆಯಲ್ಲಿ ಕ್ರಿಸ್ತನ ದೇಹದ ಅಂಗಗಳಾಗಿದ್ದಾರೆ (1 ಕೊರಿಂಥ 12:27).

ಅನ್ಯಜನರು ವಾಗ್ದಾನದಲ್ಲಿ ಪಾಲುಗಾರರೂ ಆಗಿದ್ದಾರೆ–ಅಂದರೆ, ಕ್ರಿಸ್ತನಲ್ಲಿ ನಂಬಿಕೆಯ ಮೂಲಕ ರಕ್ಷಣೆಯಾಗುತ್ತದೆಂಬ ವಾಗ್ದಾನ. ದೇವರು ಯೆಹೂದ್ಯರ ಬಳಿಗೆ ಒಬ್ಬ ರಕ್ಷನನ್ನು ಕಳುಹಿಸುವೆನೆಂದು ವಾಗ್ದಾನ ಮಾಡಿದ್ದನು. ಆದರೆ ಕೊನೆಗೂ ರಕ್ಷಕನು (ಕ್ರಿಸ್ತನು) ಬಂದಾಗ ಬಹುಪಾಲು ಯೆಹೂದ್ಯರು ಆತನನ್ನು ತಿರಸ್ಕರಿಸಿದರು. ಆದದರಿಂದ, ದೇವರು ಕ್ರಿಸ್ತನ ರಕ್ಷಣಾ ಕಾರ್ಯವನ್ನು ನಂಬಿಕೆಯ ಮೂಲಕ ಅನ್ಯಜನರಿಗೆ ದೊರೆಯುವಂತೆ ಮಾಡಿದನು. ಈ ರೀತಿಯಾಗಿ ಅನ್ಯಜನರು ರಕ್ಷಣೆಯ ವಾಗ್ದಾನದಲ್ಲಿ ಪಾಲುಗಾರರಾದರು.

7 ಪೌಲನು ತನ್ನನ್ನು ದೇವರ ಶಕ್ತಿಯ ಪ್ರಯೋಗದ ಮೂಲಕ ಮತ್ತು ಆತನ(ದೇವರ) ಉಚಿತಾರ್ಥಅನುಗ್ರಹದ (ಕೃಪೆಯ) ಮೂಲಕ ಸುವಾರ್ತೆಗೆ ಸೇವಕನನ್ನಾಗಿ ಮಾಡಿಕೊಂಡನು. ಕ್ರಿಸ್ತನಲ್ಲಿ ನಂಬಿಕೆಯಿಟ್ಟು ಆತನಿಗೆ ವಿಧೇಯರಾಗುವ ನಾವೆಲ್ಲರೂ ಪೌಲನ ಹಾಗೆ ದೇವರ ಕೃಪೆ ಮತ್ತು ಶಕ್ತಿಯ ಮೂಲಕ ಸುವಾರ್ತೆಗೆ ಸೇವಕರಾಗಿ ಮಾಡಲ್ಪಟ್ಟಿದ್ದೇವೆ. ದೇವರು ನಮಗೆ ಆತನ ಸೇವಕರಾಗಿರುವದಕ್ಕೆ ಅಗತ್ಯವಾದ ಎಲ್ಲಾ ಕೃಪೆಯನ್ನು ದಯಪಾಲಿಸಿರುತ್ತಾನೆ. ನಾವು ನಮ್ಮನ್ನೂ ಕೇಳಿಕೊಳ್ಳಬೇಕಾದದ್ದೇನೆಂದರೆಃ "ನಾನು ಯಾರ ಸೇವಕನು? ನನ್ನ ಹೆಚ್ಚಾದ ಸಮಯವನ್ನು ನಾನು ಯಾರ ಸೇವೆಯಲ್ಲಿ ಕಳೆಯುತ್ತೇನೆ? ನಾನು ನನ್ನ ಒಡೆಯನಾದ ಕ್ರಿಸ್ತನನ್ನು ಆತನ ಸುವಾರ್ತೆಯನ್ನೂ ಎಷ್ಟು ಪ್ರೀತಿಸುತ್ತೇನೆ?".

8 ಪೌಲನು ತನ್ನನ್ನು ಹೆಚ್ಚಿಸಿಕೊಳ್ಳುವದಿಲ್ಲ. ಒಂದು ವೇಳೆ ಪೌಲನು ಇಂದು ನಮ್ಮ ಮಧ್ಯದಲ್ಲಿ ಕಾಣಿಸಿಕೊಳ್ಳುವದಾದರೆ ಖಂಡಿತವಾಗಿಯೂ ಆತನು ನಮಗೆ "ನಾನು ನಿಮ್ಮೊಳಗೆ ಅತ್ಯಲ್ಪನಾಗಿದ್ದೇನೆ" ಎಂದು ಹೇಳುವನು.

ದೇವರು ಪೌಲನಿಗೆ ಮಾಡುವದಕ್ಕೆ ನೀಡಿದ ವಿಶೇಷ ಕೆಲಸವೇನೆಂದರೆಃ ಕ್ರಿಸ್ತನ ಅಪ್ರಮೇಯವಾದ ಐಶ್ವರ್ಯದ ವಿಷಯವಾಗಿ ....ಅನ್ಯಜನರಿಗೆ ಪ್ರಸಿದ್ಧಿ ಪಡಿಸುವದೇ. ಕ್ರಿಸ್ತನ ಆತ್ಮೀಕ ಐಶ್ವರ್ಯಗಳು ಅಪ್ರಮೇಯವಾಗಿವೆ– ಅಪರಿಮಿತವಾಗಿಯೂ ಅಸಂಖ್ಯವಾಗಿಯೂ ಇರುತ್ತವೆ. ಈ ಅಪ್ರಮೇಯವಾದ ಐಶ್ವರ್ಯಗಳು ಮತ್ತು ಪೌಲನು ಎಫೆಸ್ 1:3ರಲ್ಲಿ ಪ್ರಸ್ತಾಪಿಸಿದ ಆತ್ಮೀಕ ಆಶೀರ್ವಾದಗಳು ಒಂದೇ ಆಗಿವೆ (ಕೊಲೊಸ್ಸೆ 1:24-27 ನೋಡಿರಿ).

ನಾವು ನಮ್ಮ ಸ್ನೇಹಿತರು ಹಾಗು ನೆರೆಯವರೊಂದಿಗೆ ಮಾತಾಡುವಾಗ ಕ್ರಿಸ್ತನಲ್ಲಿ ಅಪ್ರಮೇಯವಾದ ಐಶ್ವರ್ಯಗಳ ವಿಷಯದಲ್ಲಿ ಎಂದಾದರೂ ಅವರಿಗೆ ಹೇಳುತ್ತೇವೋ? ನಾವು ಅವರಿಗೆ ಆತನ ಸ್ವಾಸ್ಥ್ಯದ ಮಹಿಮಾತಿಶಯದ ಬಗ್ಗೆ ಹೇಳುತ್ತೇವೋ? (ಎಫೆಸ 1:18). ಅಥವಾ ಆತನ ಪರಾಕ್ರಮವು ಎಷ್ಟು ಅತಿಶಯವಾದದ್ದು ಎಂಬದನ್ನು ಕಿರಿತು ಹೇಳುತ್ತೇವೋ? (ಎಫೆಸ 1:19). ಸ್ವತಃ ನಾವು ಈ ಐಶ್ವರ್ಯಗಳನ್ನು ಪಡಕೊಂಡಿದ್ದೇವೋ? ಅಥವಾ ನಾವು ಔತಣಕ್ಕೆ ಕರೆಯಲ್ಪಟ್ಟು ಮೇಜಿನ ಬಳಿಯಲ್ಲಿ ಕುಳಿತುಕೊಂಡು ಏನನ್ನೂ ತಿನ್ನದಿರುವ ಅಥಿತಿಯಂತೆ ಇದ್ದೇವೋ?

ಇಹಲೋಕದ ಜನರು ನಶಿಸಿಹೋಗುವ ಐಶ್ವರ್ಯಗಳಿಗೆ ತವಕಪಡುತ್ತಾರೆ. ಆದರೆ ನಾವು ಸದಾಕಾಲವೂ ಉಳಿಯುವ ಸಂಪತ್ತನ್ನು ಕಂಡುಕೊಂಡಿದ್ದೇವೆ. ನಾವು ಇತರರಿಗೆ ಈ ಐಶ್ವರ್ಯದ ಬಗ್ಗೆ ಹೇಳಬಾರದೋ?

ಕೆಲವು ವೇಳೆಗಳಲ್ಲಿ ನಮಗೆ ಯಾವ ಆತ್ಮೀಕ ಐಶ್ವರ್ಯವು ಇರಲಿಲ್ಲವೇನೋ ಎಂಬಂತೆ ವರ್ತಿಸುತ್ತೇವೆ. ನಾವು "ನಾವೇನು ಮಾಡಬಲ್ಲೆವು? ನಮ್ಮ ಸಭೆ ಬಡತನ ಹಾಗು ಬಲಹೀನವುಳ್ಳದ್ದು" ಎಂದು ಹೇಳುತ್ತೇವೆ. ಬಡತನ ಹಾಗು ಬಲಹೀನತೆ, ಅದು ಹೇಗೆ ಸಾಧ್ಯ?. ಪ್ರತಿಯೊಂದು ಸಭೆಯು ಕ್ರಿಸ್ತನ ಅಪ್ರಮೇಯವಾದ ಐಶ್ವರ್ಯವನ್ನು ಹೊಂದಿರುತ್ತದೆ, ಇದು ಆತನ ಅತಿಶಯವಾದ ಪರಾಕ್ರಮವನ್ನು ಹೊಂದಿರುತ್ತದೆ. ನಾವು ಪ್ರತಿಯೊಬ್ಬರೊಂದಿಗೆ ಹಂಚಿಕೊಳ್ಳಲು ಸಾಕಾದಷ್ಟು ಆತ್ಮೀಕ ಸಂಪತ್ತು ಹಾಗು ಬಲವನ್ನು ಹೊಂದಿದ್ದೇವೆ. ನಮ್ಮ ಒದಗಿಸುವಿಕೆಗೆ ಮಿತಿಯಿರುವದಿಲ್ಲ.

ನಾವು ಹಂಚಿಕೊಳ್ಳಬೇಕಾದ ಕ್ರಿಸ್ತನ ಐಶ್ವರ್ಯಗಳಾವವು? ಅವುಗಳು ಆತನ ಎಲ್ಲಾ ಕೃಪೆ, ವರಗಳು ಮತ್ತು ಆತ್ಮೀಕ ಆಶೀರ್ವಾದಗಳನ್ನು ಒಳಗೊಂಡಿರುತ್ತವೆ (ಎಫೆಸ 1:3), ಜೊತೆಗೆ ದೇವರ ಶಕ್ತಿಯಾಗಿರುವ ಆತನ ರಕ್ಷಣೆಯ ಸುವಾರ್ತೆಯನ್ನು ಒಳಗೊಂಡಿರುತ್ತವೆ (1 ಕೊರಿಂಥ 1;18). ಆದರೆ ನಾವು ಹಂಚಿಕೊಳ್ಳಬೇಕಾದ ಅತಿಶ್ರೇಷ್ಟ ಸಂಗತಿಯೇನೆಂದರೆ ಸ್ವತಃ ಕ್ರಿಸ್ತನೇ, ಆತನೇ ಎಲ್ಲಾ ಆತ್ಮೀಕ ಆಶೀರ್ವಾದಗಳ ತಿರುಳಾಗಿದ್ದಾನೆ (ರೋಮ 32 ನೋಡಿರಿ).

9 ಅನ್ಯಜನರಿಗೆ ಬೋಧಿಸುವದರ ಜೊತೆಗೆ ಪೌಲನು ಈ ಮರ್ಮವು ಪ್ರಕಟವಾಗುವ ವಿಧವು ಎಂಥದೆಂದು ತಿಳಿಸುವ ಹಾಗೆಯೂ ದೇವರಿಂದ ನೇಮಿಸಲ್ಪಟ್ಟಿದ್ದನು. ಕ್ರಿಸ್ತನ ಕಾಲಕ್ಕಿಂತ ಮುಂಚೆ ಈ ಮರ್ಮವು ಆದಿಯಿಂದ ಮರೆಯಾಗಿ ಇಡಲ್ಪಟ್ಟಿತ್ತು, ಆದರೆ ಈಗ ಕೊನೆಗೂ ಅದು ಪ್ರಕಟಗೊಂಡಿರುತ್ತದೆ (ವಚನ 5). ನಾವು ಮುಂಚೆ ನೋಡಿರುವ ಹಾಗೆ ಮರ್ಮವು ಏನಾಗಿತ್ತೆಂದರೆ ದೇವರು ಸಮಸ್ತವನ್ನೂ ಕ್ರಿಸ್ತನಿಗೆ ಅಧೀನಪಡಿಸಲಿದ್ದಾನೆ ಎಂಬದೆ (ಎಫೆಸ 1;10). ಅದರಲ್ಲಿ ಒಂದು ನೂತನ ಆತ್ಮೀಕ ಜನಾಂಗವನ್ನು ಅಂದರೆ, ಸಭೆಯನ್ನು ನಿರ್ಮಿಸುವದು ಸೇರಿತ್ತು, ಭೂಮಿಯಲ್ಲಿರುವ ಪ್ರತಿಯೊಬ್ಬರು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಅದರ ಸದಸ್ಯರಾಗಬಹುದಾಗಿದೆ. ಹಾಗಾದರೆ, ಇದು ದೇವರು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಅನಾದಿಕಾಲದಿಂದ ಮಾಡಿದ ಆತನ ಸಂಕಲ್ಪವಾಗಿದೆ (ವಚನ 11), ಇದನ್ನು ಆತನು ಕ್ರಿಸ್ತನಲ್ಲಿ ನೆರವೇರಿಸಿದನು.

10 ಈ ಮರ್ಮವನ್ನು ಬಯಲು ಪಡಿಸುವದರಲ್ಲಿ ದೇವರ ಉದ್ದೇಶವೇನಾಗಿತ್ತು? ಪರಲೋಕದಲ್ಲಿರುವ ರಾಜತ್ವಗಳಿಗೂ ಅಧಿಕಾರಗಳಿಗೂ ತನ್ನ ಜ್ಞಾನವನ್ನೂ ಗೊತ್ತು ಮಾಡಬೇಕೆಂಬದು ಆತನ ಇಂಗಿತವಾಗಿತ್ತು. "ರಾಜತ್ವಗಳೂ ಅಧಿಕಾರಗಳೂ" ದೇವದೂತರು ಹಾಗು ದುರಾತ್ಮಗಳು ಇಬ್ಬರನ್ನೂ ಒಳಗೊಂಡಿರುತ್ತವೆ (ಎಫೆಸ 2:2 ನೋಡಿರಿ).

ಮತ್ತು ದೇವರು ಈ ರಾಜತ್ವಗಳಿಗೂ ಅಧಿಕಾರಗಳಿಗೂ ತನ್ನ ಜ್ಞಾನವನ್ನು ಹೇಗೆ ತೋರಿಸುವನು? ಆತನು ಅದನ್ನು ಸಭೆಯ ಮೂಲಕ ಮಾಡುವನು. ಇದನ್ನು ಆಲೋಚಿಸಿರಿ. ಪ್ರತಿಯೊಂದು ಚಿಕ್ಕ ಸಭೆಯ ಮೂಲಕ ದೇವರು ತನ್ನ ನಾನಾವಿಧವಾದ ಜ್ಞಾನವನ್ನು ಪರಲೋಕದಲ್ಲಿ ಎಲ್ಲಾ ರಾಜತ್ವಗಳಿಗೂ ಅಧಿಕಾರಗಳಿಗೂ ತೋರಿಸುತ್ತಿದ್ದಾನೆ. ಸಭೆಯಲ್ಲಿ ದೇವರ ಜ್ಞಾನವು ಕಂಡುಬರಬಹುದು, ಮನುಷ್ಯರ ಮೂಲಕ ಮಾತ್ರವಲ್ಲ, ಆದರೆ ದೇವದೂತರು ಹಾಗು ಆತ್ಮಗಳ ಮೂಲಕ– ಸ್ವತಃ ಸೈತಾನನ –ಮೂಲಕವೂ–ತೋರಿಬರಬಹುದು. ಕ್ರಿಸ್ತನ ದೇಹವಾದ ಸಭೆಯು ಸೈತಾನನ ಅಧಿಕಾರವನ್ನು ಜಯಿಸಿರುತ್ತದೆ.

11-12 ದೇವರ ಅನಾದಿಕಾಲದ ....ಸಂಕಲ್ಪ ಏನೆಂದರೆ, ಎಲ್ಲಾ ಜನರು – ಯೆಹೂದ್ಯರೂ ಅನ್ಯಜನರೂ–ಆತನ ಸಾನಿಧ್ಯವನ್ನು ಧೈರ್ಯದಿಂದ ಪ್ರವೇಶಿಸಿ ಆತನ ಕುಟುಂಬವಾದ ಸಭೆಯ ಅಂಗಗಳಾಗಬೇಕೆಂಬದೇ (ಇಬ್ರಿಯ 4:16, 10:19-22 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ನಾವು ಈ ಸಭೆಯ ಬಗ್ಗೆ ಆಲೋಚಿಸಿಕೊಳ್ಳೋಣ. ಸಭೆಯು ಜಗತ್ತಿನಲ್ಲಿ ಅತಿಪ್ರಾಮುಖ್ಯವಾದ ಸಂಗತಿಯಾಗಿದೆ, ಯಾಕೆಂದರೆ ಇದು ದೇವರ ಅನಾದಿಕಾಲದ ಸಂಕಲ್ಪದ ನೆರವೇರಿಕೆಯಾಗಿದೆ. ಕ್ರಿಸ್ತನ ಮರಣ ಮತ್ತು ಪು ನರುಥ್ಥಾನದ ನಂತರ ಎರಡನೆಯ ಸ್ಥಾನದಲ್ಲಷ್ಟೇ ಇರುವ ಕ್ರಿಸ್ತನ ಸಭೆಯ ಸ್ಥಾಪನೆಯು ಮಾನವ ಜನಾಂಗದ ಇತಿಹಾಸದಲ್ಲಿಯೇ ಅತ್ಯಂತ ಮಹತ್ವದ ಬೆಳವಣಿಗೆಯಾಗಿ ಇರುತ್ತದೆ (ಮತ್ತು ಮುಂದೆಯು ಇರುವದಾಗಿದೆ).

ಲೋಕದ ಇತಿಹಾಸಕಾರರು ರಾಜರ ಮತ್ತು ರಾಣಿಯರ, ಮಂತ್ರಿಗಳ ಮತ್ತು ಮಾನಿಷ್ಟರ ಮತ್ತು ಇತರ ಪ್ರಸಿದ್ಧ ಜನರ ವಿಷಯದಲ್ಲಿ ಬರೆದರು. ಆದರೆ ಬೈಬಲ್ ಇತಿಹಾಸಕಾರರು[15] ನಮ್ಮಂತ ಸಾಮಾನ್ಯ ಮತ್ತು ಅಸಾಧಾರಣ ಜನರ ವಿಷಯದಲ್ಲಿ ಬರೆದರು. ಜಗತ್ತಿನ ಇತಿಹಾಸಕಾರರು ಯುದ್ಧಗಳು ಶಾಂತಿ ಒಪ್ಪಂದಗಳು ಮತ್ತು ಇನ್ನು ಹೆಚ್ಚು ಯುದ್ಧಗಳ ವಿಷಯದಲ್ಲಿ ಬರೆದರು. ಆದರೆ, ಬೈಬಲ್ ಇತಿಹಾಸಕಾರರು ಕ್ರಿಸ್ತನು ಮತ್ತು ಸೈತಾನನ ನಡುವಿನ ಯುದ್ಧದ ಬಗ್ಗೆ – ಒಳ್ಳೇದರ ಮತ್ತು ಕೆಟ್ಟದ್ದರ ನಡುವಿನ ಯುದ್ಧ–ಯೇಸು ಕ್ರಿಸ್ತನು ಗೆದ್ದುಕೊಂ ಒಂದು ಯುದ್ಧದ ಬಗ್ಗೆ ಬರೆದನು. ಮತ್ತು ಬೈಬಲಿನಲ್ಲಿ ನಾವು ಎಲ್ಲಾ ಶಾಂತಿ ಒಪ್ಪಂದಗಳಿಗಿಂತಲೂ ಅತಿಶ್ರೇಷ್ಠವಾದ "ಶಾಂತಿ ಒಪ್ಪಂದ" ದ ಬಗ್ಗೆ ಓದುತ್ತೇವೆ, ಅದು ಕ್ರಿಸ್ತನ ಮಧ್ಯಸ್ಥಿಕೆಯಿಂದಾಗಿ ದೇವರು ಮತ್ತು ಮನುಷ್ಯನ ನಡುವಿನ ಶಾಂತಿ ಒಪ್ಪಂದವಾಗಿದೆ. ಜಗತ್ತಿನ ಇತಿಹಾಸಕಾರರು ಸೂರ್ಯನ ಹಾಗೆ ಉದಯಿಸಿ ಮುಳುಗಿ ಹೋಗುವ ರಾಜ್ಯಗಳ ವಿಷಯದಲ್ಲಿ ಬರೆಯುತ್ತಾರೆ. ಆದರೆ ಬೈಬಲ ಇತಾಹಾಸಕಾರರು ಉದಯಿಸಿ ಎಂದಿಗೂ ಅಳಿದು ಹೋಗದ ಆತ್ಮೀಕ ರಾಜ್ಯವೊಂದರ ವಿಷಯದಲ್ಲಿ ಬರೆಯುತ್ತಾರೆ. ಈ ರಾಜ್ಯಕ್ಕೆ ಮೇರೆಗಳಿಲ್ಲ, ಇದು ಜಗತ್ತಿನಾದ್ಯಂತವೂ ವಿಸ್ತರಿಸುತ್ತದೆ. ಈ ರಾಜ್ಯವು ಕ್ರಿಸ್ತನ ಸಭೆಯೇ ಆಗಿದೆ.

13 ಪೌಲನು ಸೆರೆಮನೆಯಲ್ಲಿದ್ದರೂ ಎಫೆಸದವರು ಧೈರ್ಯಗೆಡಬಾರದು. ಸೂದಲಾಗಿ, ಅವರು ತಮಗೆ ಘನವನ್ನುಂಟು ಮಾಡುವ ಕ್ರಿಸ್ತನ ಅಪ್ರಮೇಯವಾದ ಐಶ್ವರ್ಯಗಳ ಕುರಿತು ಧ್ಯಾನಿಸಬೇಕು.

## ಎಫೆಸದವರಿಗಾಗಿ ಪೌಲನ ಪ್ರಾರ್ಥನೆ (3:14-21)

14-15 ಭೂಪರಲೋಕಗಳಲ್ಲಿರುವ ಇಡೀ ಕುಟುಂಬವು – ಅಂದರೆ,ಸಭೆಯಾಗಿರುವ ವಿಶ್ವಾಸಿಗಳ ಕುಟುಂಬವೆಲ್ಲವೂ– ತನ್ನ ಹೆಸರನ್ನು ತಂದೆಯಾದ ದೇವರಿಂದ ತೆಗೆದುಕೊಳ್ಳುತ್ತದೆ. ಸಭೆಯು ದೇವರ ಕುಟುಂಬವಾಗಿದೆ, ಆದ್ದರಿಂದ ಅದು ದೇವರ ಹೆಸರನ್ನು ತೆಗೆದುಕೊಳ್ಳುತ್ತದೆ.

ಸಭೆಯು ದೇವರ ಕುಟುಂಬವಾಗಿರುವದರಿಂದ ಪಲನು ಇಲ್ಲಿ ಕುಟುಂಬದ ತಂದೆಗೆ ಪ್ರಾರ್ಥಿಸುತ್ತಾನೆ. ದೇವರು ಎಫೆಸದವರಿಗೆ ತನ್ನ ಆತ್ಮನ ಮೂಲಕ (ಅವರ) ಅಂತರ್ಯದಲ್ಲಿ ವಿಶೇಷ ಬಲವನ್ನು ನೀಡಬೇಕು ಮತ್ತು ಕ್ರಿಸ್ತನು (ಅವರ)ನಂಬಿಕೆಯ ಮೂಲಕ (ಅವರ) ಹೃದಯಗಳಲ್ಲಿ ವಾಸಮಾಡುವ ಹಾಗೆ ಅನುಗ್ರಹಿಸಬೇಕೆಂಬದು ಪೌಲನ ಪ್ರಾರ್ಥನೆಯಾಗಿರುತ್ತದೆ (ವಚನಗಳು 16,17). ಮತ್ತು ನಾವು ಈ ಪ್ರಾರ್ಥನೆಯನ್ನು ಓದುತ್ತಿರುವ ಹಾಗೆ ಇದು ಎಫೆಸದವರಿಗಾಗಿ ಮಾತ್ರವೇ ಅಲ್ಲ, ಆದರೆ ನಮಗಾಗಿ ಸಹ ಬರೆಯಲ್ಪಟ್ಟಿದೆಯೆಂಬದನ್ನು ನೆನಪಿನಲ್ಲಿಟ್ಟುಕೊಳ್ಳೋಣ.

16 ಪೌಲನು ಇಲ್ಲಿ ಯಾವ ಬಲಕ್ಕಾಗಿ ಪ್ರಾರ್ಥಿಸುತ್ತಿದ್ದಾನೋ ಅದು ಆತ್ಮೀಕ ಬಲವಾಗಿದೆ. ಈ ವಿಧದ ಬಲವು ಯಾವಾಗಲೂ ಅಂತರಂಗದ್ದಾಗಿದ್ದು ವ್ಯಕ್ತಿಯ ಹೃದಯದಲ್ಲಿ, ಆತನ ಅಂತರ್ಯದಲ್ಲಿ ಇರುತ್ತದೆ. ಮತ್ತು ಅದು ದೇವರಾತ್ಮನ ಮೂಲಕ ಮಾತ್ರವೇ ಬರುತ್ತದೆ. ಈ ಬಲವು ಎಫೆಸ 1:19 ರಲ್ಲಿ ಪೌಲನು ಪ್ರಸ್ತಾಪಿಸಿದ ಪರಾಕ್ರಮವಾಗಿದೆ, ಮತ್ತು ಪೌಲನು ಸ್ವತಃ ಅದನ್ನು ನಿರಂತರವಾಗಿ ಅನುಭವಿಸಿದನು (ಫಿಲಿಪ್ಪಿ.4:13).

17 ಪೌಲನ ಪ್ರಾರ್ಥನೆಯ ಎರಡನೆಯ ಭಾಗವೇನೆಂದರೆ, ಕ್ರಿಸ್ತನು (ಅಂದರೆ, ಕ್ರಿಸ್ತನ ಆತ್ಮನಾದ ಪವಿತ್ರಾತ್ಮನು). ಎಫೆಸದವರ ಹೃದಯಗಳಲ್ಲಿ ವಾಸಮಾಡುವಂತಾಗಬೇಕೆಂಬದೇ. ಕ್ರಿಸ್ತನು ನಮ್ಮ ಹೃದಯಗಳಲ್ಲಿ ನೆಲೆಸುವಾಗ ನಾವು ಹೆಚ್ಚು ಹೆಚ್ಚಾಗಿ ಆತನಂತಾಗುವೆವು . ನಮ್ಮೊಳಗಿರುವ ಕ್ರಿಸ್ತನ ಆತ್ಮನ ಮೂಲಕ ನಮ್ಮ ಹೃದಯಗಳು ಆತನ ಪ್ರೀತಿಯಿಂದ ತುಂಬಿರುತ್ತವೆ (ರೋಮ 5:5 ನೋಡಿರಿ).

18 ಕ್ರಿಸ್ತನು ನಮ್ಮೊಳಗೆ ವಾಸಿಸುವದಾದರೆ, ನಾವು ನಿಜವಾಗಿಯೂ ಪ್ರೀತಿಯಲ್ಲಿ ಬೇರೂರಿ ನೆಲೆಗೊಳ್ಳುವೆವು . ನಾವು ಒಂದು ಮರದಂತಿದ್ದು ಅದರ ಬೇರುಗಳು ಪ್ರೀತಿಯಲ್ಲಿ ಆಳವಾಗಿ ನೆಡಲ್ಪಟ್ಟಿರುತ್ತವೆ. ಅಥವಾ ನಾವು ಪ್ರೀತಿಯಲ್ಲಿ ಅಸ್ತಿವಾರ ಹಾಕಲ್ಪಟ್ಟ ಮನೆಯಂತಿರುತ್ತೇವೆ. ಎಫೆಸದವರು ಕ್ರಿಸ್ತನ ಪ್ರೀತಿಯು ಎಷ್ಟು ಶ್ರೇಷ್ಟ – ಎಷ್ಟು ಅಗಲ ಉದ್ದ ಎತ್ತರ ಆಳ– ಎಂಬದನ್ನು ಗ್ರಹಿಸುವಂತಾಗಬೇಕೆಂದು ಪೌಲನು ಪ್ರಾರ್ಥಿಸುತ್ತಾನೆ. ಕ್ರಿಸ್ತನ ಪ್ರೀತಿಯು ಎಲ್ಲಾ ಜನರನ್ನು ಸೇರಿಕೊಳ್ಳುವಷ್ಟು ಅಗಲವಾಗಿದೆ. ಆತನ ಪ್ರೀತಿಯು ಸದಾಕಾಲ ಉಳಿಯುವದಕ್ಕೆ ಸಾಕಷ್ಟು ಉದ್ದ ಆಗಿದೆ. ಅದು ಅತಿ ಕಡು ಪಾಪಿಯನ್ನು ತಲುಪು ವಷ್ಟು ಆಳ ಆಗಿದೆ. ಮತ್ತು ಅದು ಆ ಪಾಪಿಯನ್ನು ಪರಲೋಕಕ್ಕೆ ಎತ್ತುವಷ್ಟು ಎತ್ತರ ಆಗಿದೆ.

ಶಿಲುಬೆಯು ಕ್ರಿಸ್ತನ ಪ್ರೀತಿಯ ಅತಿಶ್ರೇಷ್ಠ ಸಂಕೇತವಾಗಿದೆ. ಶಿಲುಬೆಯ ಸಮನಾಂತರ ತೋಲೆಯು ಪೂರ್ವದಿಂದ ಪಶ್ಚಿಮವನ್ನು ಸಂಧಿಸುತ್ತದೆ. ಶಿಲುಬೆಯ ಮೇಲ್ಮುಖ ಕಂಬವು ಭೂಲೋಕದಿಂದ ಪರಲೋಕವನ್ನು ಮುಟ್ಟುತ್ತದೆ. ಕ್ರಿಸ್ತನ ಪ್ರೀತಿಯು ಎಲ್ಲೆಲ್ಲಿಯೂ ಇರುವ ಎಲ್ಲರನ್ನು ಸಂಧಿಸುವಷ್ಟು ದೊಡ್ಡದಾಗಿದೆ.

19 ಎಫೆಸದವರು ಕ್ರಿಸ್ತನ ಪ್ರೀತಿಯು ಎಷ್ಟು ದೊಡ್ಡದೆಂಬದನ್ನು ಅರ್ಥಮಾಡಿಕೊಳ್ಳುವದು ಮಾತ್ರವಲ್ಲ, ಆದರೆ ಅವರು ಕ್ರಿಸ್ತನ ಪ್ರೀತಿಯನ್ನು ತಿಳುಕೊಳ್ಳಲು ಸಹ–ಅಂದರೆ, ಅವರು ತಮ್ಮ ಜೀವಿತಗಳಲ್ಲಿ ಈ ಪ್ರೀತಿಯನ್ನು

ಅನುಭವಿಸುವಂತಾಗಬೇಕೆಂದು ಸಹ ಪೌಲನು ಇಲ್ಲಿ ಪ್ರಾರ್ಥಿಸುತ್ತಾನೆ. ಕ್ರಿಸ್ತನ ಪ್ರೀತಿಯು (ದೇವರ ಪ್ರೀತಿಯು) ಜ್ಞಾನಕ್ಕೆ ಮೀರುವಷ್ಟು ಶ್ರೇಷ್ಟವಾಗಿರುತ್ತದೆ. ಹೇಗಿದ್ದರೂ, ನಾವೊಬ್ಬಬ್ಬರೂ ಈ ಪ್ರೀತಿಯನ್ನು ನಮ್ಮ ಹೃದಯಗಳಲ್ಲಿ ಅನುಭವಿಸಬಹುದಾಗಿದೆ. ಮತ್ತು ಅದನ್ನು ಅನುಭವಿಸಿದವರಾಗಿ ನಾವು ದೇವರ ಸಂಪೂರ್ಣತೆಯ ಮಟ್ಟಿಗೂ ಪರಿಪೂರ್ಣರಾಗುತ್ತೇವೆ.

ದೇವರ ಸಂಪೂರ್ಣತೆಯ ಮಟ್ಟಿಗೂ ತುಂಬಿದವರಾಗುವದೆಂದರೇನು? ದೇವರ ಸಂಪೂರ್ಣತೆಯು ಪರಲೋಕದಲ್ಲಿನ ಸಕಲ ಆತ್ಮೀಕ ಆಶೀರ್ವಾದವನ್ನು ಒಳಗೊಂಡಿರುತ್ತವೆ (ಎಫೆಸ 1;3), ಅದು ಆತನ ಸ್ವಾಸ್ಥ್ಯದ ಮಹಿಮಾತಿಶಯವನ್ನು ಒಳಗೊಂಡಿರುತ್ತದೆ (ಎಫೆಸ 1:18), ಅದು ಆತನ ಅಪ್ರಮೇಯವಾದ ಐಶ್ವರ್ಯವನ್ನು ಒಳಗೊಂಡಿರುತ್ತದೆ (ವಚನ 8). ಅಂತಿಮವಾಗಿ, ಅದು ಆತನ ಶ್ರೇಷ್ಟ ಪ್ರೀತಿಯನ್ನು ಒಳಗೊಂಡಿದ್ದು ಅದು ನಮ್ಮ ಹೃದಯಗಳಲ್ಲಿ ಆತನ ಪವಿತ್ರಾತ್ಮನ ಮೂಲಕ ಸುರಿಸಲ್ಪಟ್ಟಿದೆ (ರೋಮ 5:5). ಮತ್ತು ಕ್ರಿಸ್ತನು ನಂಬಿಕೆಯ ಮೂಲಕ ನಮ್ಮ ಹೃದಯಗಳಲ್ಲಿ ವಾಸಿಸುವದಾದರೆ ಇದೆಲ್ಲವೂ – ದೇವರ ಸಂಪೂರ್ಣತೆಯು – ನಮ್ಮದಾಗುವದು.

ನಾವು ನಿರಂತರವಾಗಿ ದೇವರ ಸರ್ವಸಂಪೂರ್ಣತೆಯಿಂದ ತುಂಬಿದವರಾಗಿರಬೇಕೆಂಬದು ನಮ್ಮ ಸಭೆಗಾಗಿಯೂ ಒಬ್ಬರಿಗೊಬ್ಬರಿಗಾಗಿಯೂ ಇದು ನಮ್ಮ ಎಡೆಬಿಡದ ಪ್ರಾರ್ಥನೆಯಾಗಿರಲಿ. ನಮ್ಮ ಪ್ರಾರ್ಥನೆಗಳನ್ನು ಚಿಕ್ಕಸಂಗತಿಗಳಿಗಷ್ಟೇ ಸೀಮಿತಗೊಳುಸದಿರೋಣ, ಬದಲಾಗಿ, ಪೌಲನ ಹಾಗೆ ನಾವು ಊಹಿಸಲು ಸಾಧ್ಯವಾದ ಶ್ರೇಷ್ಟ ಸಂಗತಿಗಾಗಿ ಪ್ರಾರ್ಥಿಸೋಣ– ದೇವರ ಸಂಪೂರ್ಣತೆ.

ಪೌಲನು ಎಫೆಸದವರಿಗಾಗಿ – ಮತ್ತು ನಮಗೋಸ್ಕರವಾಗಿ – ಎಂಥ ಒಂದು ಆಶ್ಚರ್ಯಕರ ಪ್ರಾರ್ಥನೆಯನ್ನು ಮಾಡಿದ್ದಾನೆ. ಆತನು ಬಲಕ್ಕಾಗಿ, ಪ್ರೀತಿಗಾಗಿ, ತಿಳುವಳಿಕೆಗಾಗಿ,ದೇವರ ಸಂಪೂರ್ಣತೆಗಾಗಿ ಪ್ರಾರ್ಥಿಸಿದ್ದಾನೆ. ದೇವರು ಅಂಥ ಒಂದು ಪ್ರಾರ್ಥನೆಗೆ ಉತ್ತರಿಸಬಲ್ಲನೋ? ಅಂಥ ಪ್ರಾರ್ಥನೆಯೊಂದನ್ನು ನೆರವೇರಿಸುವದಕ್ಕೆ ದೇವರು ಬಲವನ್ನು ಹೊಂದಿರುವನೋ? ಆತನು ನಿಶ್ಚಯವಾಗಿಯೂ ಮಾಡುತ್ತಾನೆ (ವಚನ 20 ನೋಡಿರಿ).

**20-21** ದೇವರ ಬಲವು ನಾವು ಏನೇ ಬೇಡಿಕೊಂಡರೂ ಮಾಡುವಷ್ಟು ಶ್ರೇಷ್ಟವಾಗಿರುತ್ತದೆ. ಅದು ಮಾತ್ರವಲ್ಲ, ದೇವರು ನಾವು ಊಹಿಸುವದಕ್ಕಿಂತಲೂ ಹೆಚ್ಚಾದದ್ದನ್ನು ಮಾಡಬಲ್ಲನು. ಮತ್ತು ದೇವರ ಇದೇ ಬಲವು ನಮ್ಮಲ್ಲಿ ಕಾರ್ಯ ಸಾಧಿಸುತ್ತದೆ (ವಚನ 20). ದೇವರ ಪ್ರೀತಿಯು ನಮ್ಮ ಜ್ಞಾನಕ್ಕೆ ಮೀರಿದ್ದಾಗಿ ಇರುವ ಪ್ರಕಾರವೇ (ವಚನ 19). ಆತನ ಶಕ್ತಿಯೂ ನಮ್ಮ ಯೋಚನೆಯನ್ನು ಮೀರುವದಾಗಿದೆ. ಅಪರಿಮಿತ ಪ್ರೀತಿ, ಅಪರಿಮಿತ ಶಕ್ತಿ. ನಮ್ಮ ದೇವರು ಎಷ್ಟು ದೊಡ್ಡವನು. ಆತನು ಅಪರಿಮಿತ ಸ್ತುತಿಗೆ ಯೋಗ್ಯನು, ಆತನಿಗೆ ಸಭೆಯಲ್ಲಿಯೂ ಕ್ರಿಸ್ತ ಯೇಸುವಿನಲ್ಲಿಯೂ ತಲತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರ!

---

## ಅಧ್ಯಾಯ - 4

### ಕ್ರಿಸ್ತನ ದೇಹದಲ್ಲಿ ಐಕ್ಯತೆ (4:1-16)

**1** ಈ ಪತ್ರಿಕೆಯ ಮೊದಲ ಮೂರು ಅಧ್ಯಾಯಗಳಲ್ಲಿ ಪೌಲನು ದೇವರ ಅನಾದಿಕಾಲದ ಸಂಕಲ್ಪ, (ಎಫೆಸ 3:11), ದೇವರು ಸ್ಥಾಪಿಸಿರುವ ಒಬ್ಬ ನೂತನ ಪುರುಷ –ಸಭೆ–ವಿಷಯದಲ್ಲಿ (ಎಫೆಸ 2:15), ಮತ್ತು ದೇವರ ಮಕ್ಕಳಾಗಿರುವದಕ್ಕೆ ನಾವು ಕರೆಯಲ್ಪಟ್ಟಿರುವದರ ವಿಷಯದಲ್ಲಿಯೂ (ಎಫೆಸ 1:5) ಬರೆದಿರುತ್ತಾನೆ. ಈಗ ಈ ಕಡೆಯ ಮೂರು ಅಧ್ಯಾಯಗಳಲ್ಲಿ ಪೌಲನು ಅನುದಿನದ ಜೀವಿತದಲ್ಲಿ ನಾವು ಹೇಗೆ ನಡೆದುಕೊಳ್ಳಬೇಕೆಂಬದರ ಕುರಿತಾಗಿ ಬರೆಯುತ್ತಾನೆ. ನಾವು ದೇವರ ಮಕ್ಕಳಾಗಿರುವದಕ್ಕೆ ಕರೆಯಲ್ಪಟ್ಟಿರುವದರಿಂದ ದೇವರ ಮಕ್ಕಳು ಹೇಗೆ ನಡೆದುಕೊಳ್ಳಬೇಕೆಂಬದನ್ನು ನಾವು ತಿಳಿದುಕೊಳ್ಳುವ ಅಗತ್ಯವಿರುತ್ತದೆ. ಯಾಕೆಂದರೆ, ನಾವು ದೇವರ ಮಕ್ಕಳಾಗಿರುವದಾದರೆ ದೇವರ ಮಕ್ಕಳ ಹಾಗೆಯೇ ನಡೆದುಕೊಳ್ಳಬೇಕು!

ಆದದರಿಂದ, ಈ 1ನೇ ವಚನದಲ್ಲಿ ಪೌಲನು ನಮ್ಮನ್ನು ಕರೆಯಲ್ಪಟ್ಟವರಾದ ಕಾರಣ ಯೋಗ್ಯರಾಗಿ ನಡೆದುಕೊಳ್ಳಿರಿ ಎಂದು ಪ್ರಭೋಧಿಸುತ್ತಾನೆ–ನಾವು ಆತನ ಮಕ್ಕಳಾಗಿರುವದಕ್ಕೆ ಕರೆಯಲ್ಪಟ್ಟಿದ್ದೇವೆ (ಪಿಲಿಪ್ಪಿ 1:27,ಕೊಲೆಸ್ಸೆ 1:10 ನೋಡಿರಿ). ಮತ್ತು 2-16 ವಚನಗಳಲ್ಲಿ ನಾವು ಒಂದು ನೂತನ ಜನರಾಗಿಯೂ, ಒಂದೇ ಕುಟುಂಬವಾದ ಸಭೆಯ ಸದಸ್ಯರಾಗಿಯೂ ಇರುವದಕ್ಕಾಗಿ ಕರೆಯಲ್ಪಟ್ಟಿದ್ದೇವೆ ಎಂಬದನ್ನು ಪೌಲನು ನಮ್ಮ ಜ್ಞಾಪಕಕ್ಕೆ ತರುತ್ತಾನೆ. ಈ ಕರೆಗೆ ಯೋಗ್ಯರಾಗಿರಬೇಕಾದರೆ ನಾವು ಐಕ್ಯತೆಯಿಂದಿರಬೇಕು!

**2** ಕ್ರೈಸ್ತರಾದ ನಾವು ಒಬ್ಬರೊಂದಿಗೊಬ್ಬರು ಹೇಗೆ ಐಕ್ಯವಾಗಿ ಉಳಿಯುತ್ತೇವೆ? ಮೊದಲನೆಯದಾಗಿ, ವಿನಯದಿಂದ[16] ಇರುವದರ ಮೂಲಕವೇ. ನಮ್ಮ ಸಭೆಗಳಲ್ಲಿ ಭೇಧಗಳುಂಟಾಗಲು ಕಾರಣವೇನು? ಅದಕ್ಕೆ ಸಾಮಾನ್ಯವಾಗಿ ಗರ್ವವೇ ಕಾರಣವಾಗಿರುತ್ತದೆ. ನಮ್ಮ ಗರ್ವದಿಂದ ಎರಡು ಕೆಟ್ಟ ಸಂಗತಿಗಳು ಉದ್ಭವಿಸುತ್ತವೆ. ಮೊದಲನೆಯದಾಗಿ, ನಮ್ಮಲ್ಲಿ ಕೆಲವರು ಗರ್ವದಿಂದ ನಾಯಕರಾಗಿರುವದಕ್ಕೆ ಅಪೇಕ್ಷೆ ಪಡುತ್ತೇವೆ, ಮತ್ತು ನಮಗೆ ನಾಯಕತ್ವ ಕೊಡಲ್ಪಡದಿದ್ದರೆ ನಾವು ಕೋಪಗೊಂಡು ಸಭೆಯಲ್ಲಿ ಭೇಧವನ್ನುಂಟು ಮಾಡುತ್ತೇವೆ. ನಮ್ಮ ಗರ್ವದಿಂದ ಉದ್ಭವಿಸುವ ಎರಡನೆಯ ಸಂಗತಿಯೇನೆಂದರೆಃ ಯಾರಾದರು

ನಮ್ಮ ವಿರೋಧಿಸುವದಾದರೆ ಅಥವಾ ಯಾವದೋ ವಿಧದಲ್ಲಿ ನಮ್ಮನ್ನು ವಂಚಿಸುವದಾದರೆ ನಮ್ಮ ಗರ್ವಕ್ಕೆ ನೋವು ಂಟಾಗಿ ನಾವು ಆ ವ್ಯಕ್ತಿಯೊಂದಿಗೆ ಸಿಟ್ಟುಗೊಂಡು ಆತನ ಜೊತೆಯಲ್ಲಿ ಸಹವಾಸವಿಟ್ಟುಕೊಳ್ಳಲು ನಿರಾಕರಿಸುತ್ತೇವೆ. ನಾವು ಈ ರೀತಿಯಲ್ಲಿ ನೋವು ಅನುಭವಿಸುವಾಗಲೆಲ್ಲಾ ಅದಕ್ಕೆ ಗರ್ವವೇ ಕಾರಣವಾಗಿರುತ್ತದೆ, ಆದದರಿಂದ, ಸಭೆಯಲ್ಲಿಯೂ ಒಬ್ಬರಿಂದೊಬ್ಬರಿಗೂ ಐಕ್ಯತೆಯನ್ನು ಕಾಪಾಡಿಕೊಳ್ಳಬೇಕಾದರೆ ನಮಗೆ ಮೊದಲು ವಿನಯ ಅಗತ್ಯವೆಂದು ಪೌಲನು ಹೇಳುತ್ತಾನೆ. ಕೆಲವು ಜನರು ವಿನಯವುಳ್ಳ ವ್ಯಕ್ತಿಯು ಬಲಹೀನ ಮನುಷ್ಯನೆಂದು ಭಾವಿಸುತ್ತಾನೆ. ಆದರೆ ಇದು ಸಂಪೂರ್ಣ ಸುಳ್ಳಾದದ್ದು.

ವಾಸ್ತವದಲ್ಲಿ ದೀನ ಮನುಷ್ಯನು ಒಬ್ಬ ಬಲಿಷ್ಟನಾಗಿದ್ದಾನೆ. ಆತನು ತನಗೇ ಒಡೆಯನು, ಅದೇ ವೇಳೆಯಲ್ಲಿ ಆತನು ಸಂತೋಷವಾಗಿ ತನ್ನನ್ನು ಇತರರ ಸೇವಕನನ್ನಾಗಿ ಮಾಡಿಕೊಳ್ಳುತ್ತಾನೆ.

ನಾವು ದೀನತೆವುಳ್ಳವರೋ ಎಂದು ಹೇಗೆ ಹೇಳಬಲ್ಲೆವು? ನಾವು ನಮ್ಮ ದೀನತೆಯನ್ನು ಪರೀಕ್ಷಿಸಬಹುದೋ? ನಾವು ಪ್ರಾರ್ಥಿಸುವಾಗ ನಮ್ಮನ್ನು ಪಾಪಿಗಳೆಂದು ಕರೆದುಕೊಳ್ಳುವದು ಸುಲಭವಾಗಿರುತ್ತದೆ. ಅದು ಪರೀಕ್ಷೆಯಲ್ಲ. ಇನ್ನೊಬ್ಬ ವ್ಯಕ್ತಿಯು ನಮ್ಮನ್ನು– ವಿಶೇಷವಾಗಿ, ಬೇರೆಯವರ ಮುಂದೆ–ಪಾಪಿ ಎಂದು ಕರೆಯುವಾಗಲೇ ನಿಜವಾದ ಪರೀಕ್ಷೆ ಬರುತ್ತದೆ! ನಾವು ಅದನ್ನು ಹೇಗೆ ಸ್ವೀಕರಿಸಿಕೊಳ್ಳುತ್ತೇವೆ? ನಾವು ಅದನ್ನು ಸಂತೋಷವಾಗಿಯೂ, ಕೃಪೆಯಿಂದಲೂ ಸ್ವೀಕರಿಸಿಕೊಳ್ಳುತ್ತೇವೋ? ನಾವು ಹಾಗೇ ಮಾಡದಿದ್ದರೆ ವಿನಯವುಳ್ಳವರಲ್ಲ. ನಾವು ಪರೀಕ್ಷೆಯಲ್ಲಿ ವಿಫಲರಾಗುತ್ತೇವೆ.

ಸಭೆಯಲ್ಲಿ ಐಕ್ಯತೆಯನ್ನು ಸಂರಕ್ಷಿಸಿಕೊಳ್ಳಲು ಅಗತ್ಯವಾದ ಎರಡನೆಯ ಸಂಗತಿಯು ದೀರ್ಘಶಾಂತಿ. ನಾವು ಪರಸ್ಪರ ಐಕ್ಯತೆಯಿಂದ ಉಳಿಯಬೇಕಾದರೆ, ಒಬ್ಬರೊಂದಿಗೊಬ್ಬರು ದೀರ್ಘಶಾಂತಿ ಹೊಂದಿರಬೇಕು. ನಮ್ಮಲ್ಲಿ ಪ್ರತಿಯೊಬ್ಬರು ದೋಷಗಳನ್ನೂ ಬಲಹೀನತೆಗಳನ್ನೂ ಹೊಂದಿದ್ದೇವೆ. ಸಾಮಾನ್ಯವಾಗಿ ನಾವು ಇತರರು ನಮ್ಮತಪ್ಪುಗಳೆಡೆಗೆ ದೀರ್ಘಶಾಂತಿಯಿಂದಿರಬೇಕೆಂದು ಬಯಸುತ್ತೇವೆ, ನಮ್ಮ ನ್ಯೂನ್ಯತೆಗಳ ಹೊರತಾಗಿಯೂ ಇತರರು ನಮ್ಮನ್ನು ಸ್ವೀಕರಿಸಿಕೊಳ್ಳಬೇಕೆಂದು ನಾವು ಇಚ್ಚಿಸುತ್ತೇವೆ. ಆದದರಿಂದ, ನಾವು ಇತರರೆಡೆಗೆ ದಾರ್ಘಶಾಂತಿಯಿಂದಿದ್ದು ಅವರ ನ್ಯೂನ್ಯತೆಗಳ ಹೊರತಾಗಿಯೂ ಅವರನ್ನು ಸ್ವೀಕರಿಸುವ ಅಗತ್ಯವಿರುತ್ತದೆ. ಸಭೆಯಲ್ಲಿ ಬೇಧಗಳುಂಟಾಗುವದಕ್ಕೆ ಗರ್ವದ ನಂತರ ಟೀಕೆ ಹಾಗು ನಿಂದನೆಗಳು ಎರಡನೆಯ ಮುಖ್ಯ ಕಾರಣವಾಗಿರುತ್ತದೆ. ನಮ್ಮ ಐಕ್ಯತೆಯನ್ನು ಹಾಳು ಮಾಡುವದಕ್ಕೆ ಇದು ಸೈತಾನನ ಮುಖ್ಯ ವಿಧಾನವಾಗಿದೆ. ಇತರರು ನಮ್ಮ ವಿರುದ್ಧವಾಗಿ ಮಾತಾಡಿದಾಗ್ಯೂ ನಾವು ಅವರೆಡೆಗೆ ದೀರ್ಘಶಾಂತಿಯಿಂದಿರಬೇಕು. ಅಂಥ ವಿರೋಧವು ಸಾಮಾನ್ಯವಾಗಿ ದೀರ್ಘಶಾಂತಿಯಿಂದ ಸುಲಭವಾಗಿ ಪರಾಜಯಗೊಳ್ಳುತ್ತದೆ.

ಐಕ್ಯತೆಯನ್ನು ಕಾಪಾಡಿಕೊಳ್ಳಲು ಮೂರನೆಯ ಸಂಗತಿಯೊಂದು ಅಗತ್ಯವಾಗಿರುತ್ತದೆ. ಅದು ಪ್ರೀತಿಯೇ. ಕ್ರಿಸ್ತನು ನಮ್ಮನ್ನು ಪ್ರೀತಿಯಲ್ಲಿ ಸಹಿಸಿಕೊಳ್ಳುವ ಪ್ರಕಾರವೇ ನಾವೂ ಒಬ್ಬರನ್ನೊಬ್ಬರು ಪ್ರೀತಿಯಲ್ಲಿ ಸಹಿಸಿಕೊಳ್ಳಬೇಕೆಂದು ಪೌಲನು ಇಲ್ಲಿ ನಮಗೆ ಹೇಳುತ್ತಾನೆ. ಕ್ರಿಸ್ತನು ನಮ್ಮನ್ನು ಕ್ಷಮಿಸಿದ ಪ್ರಕಾರವೇ ನಾವು ಕ್ಷಮಿಸಬೇಕು (ಎಫೆಸ 4:32).

ಹೀಗೆ, ನಮ್ಮ ಐಕ್ಯತೆಯನ್ನು ಕಾಪಾಡಿಕೊಳ್ಳಲು ಮೂರು ಸಂಗತಿಗಳು ಅವಶ್ಯಕವಾಗಿವೆಃ ವಿನಯ ಸಾತ್ವಿಕತ್ವ, ದೀರ್ಘಶಾಂತಿ, ಮತ್ತು ಪ್ರೀತಿ. ಪೌಲನು ಇದಕ್ಕೆ ಮುಂಚೆ ವಿಶ್ವಾಸಿಗಳು ದೇವರ ಆಲಯದ ಕಲ್ಲುಗಳಂತಿದ್ದಾರೆ ಎಂದು ಬರೆದನು (ಎಫೆಸ 2:22 ನೋಡಿರಿ). ನಾವು ಕಲ್ಲುಗಳಾಗಿರುವದಾದರೆ, ವಿನಯ ಸಾತ್ವಿಕತ್ವ, ದೀರ್ಘಶಾಂತಿ ಮತ್ತು ಪ್ರೀತಿಗಳು ನಮ್ಮನ್ನು ಒಂದುಗೂಡಿಸುವ ಸಿಮೆಂಟು ಆಗಿದೆ (ಕೊಲೊಸ್ಸೆ 3:12-14 ನೋಡಿರಿ).

**3** ನಮ್ಮ ಐಕ್ಯತೆಯು ಪವಿತ್ರಾತ್ಮನಿಂದುಂಟಾಗುವದು. ದೇವರ ಪವಿತ್ರಾತ್ಮನು ನಮ್ಮ ಸಭೆಯಲ್ಲಿ ವಾಸಿಸುತ್ತಾನೆ (ಎಫೆಸ 2:22). ಪವಿತ್ರಾತ್ಮನೇ ನಮ್ಮನ್ನು ಒಂದುಗೂಡಿಸುತ್ತಾನೆ. ಆದದರಿಂದ, ನಮ್ಮ ಐಕ್ಯತೆಯು ಒಂದು ಆತ್ಮೀಕ ಐಕ್ಯವಾಗಿದೆ. ನಮ್ಮ ಕೆಲಸ ಮತ್ತು ಶೈಲಿಗಳು ಹಾಗು ಪದ್ದತಿಗಳು ವ್ಯತ್ಯಾಸವಾಗಿರಬಹುದು, ಆದರೆ ಆತ್ಮದಲ್ಲಿ –ನಮ್ಮ ಅಂತರಂಗ ಮತ್ತು ಮನಸ್ಸುಗಳಲ್ಲಿ – ನಾವು ಸಂಪೂರ್ಣವಾಗಿ ಒಂದೇ ಆಗಿರಬೇಕು.

ಐಕ್ಯತೆಯು ಏಕಾಏಕಿ ಸಂಭವಿಸುವದಿಲ್ಲ. ಐಕ್ಯವಾಗಿ ಇರಬೇಕಾದರೆ, ನಾವು ಶ್ರಮಿಸಬೇಕಾಗುತ್ತದೆ. ಸೈತಾನನು ನಮ್ಮನ್ನು ಇಬ್ಭಾಗಿಸಲು ಯಾವಾಗಲೂ ಪ್ರಯತ್ನಿಸುತ್ತಿರುತ್ತಾನೆ. ನಮ್ಮ ಐಕ್ಯವನ್ನು ಕಾಪಾಡಿಕೊಳ್ಳುವದಕ್ಕೆ ನಾವು ಆಸಕ್ತರಾಗಿದ್ದು ಎಲ್ಲಾ ಪ್ರಯತ್ನಗಳನ್ನು ಮಾಡಬೇಕು (1 ಕೊರಿಂಥ 1:10 ಮತ್ತು ವ್ಯಾಖ್ಯಾನ ನೋಡಿರಿ). ಐಕ್ಯವಾಗಿ ಇರುವದಕ್ಕಾಗಿ ನಾವು ನಮ್ಮನ್ನು ಸಮಾಧಾನ ಬಂಧನದಿಂದ ಕಟ್ಟಲ್ಪಡಬೇಕು. ಯೇಸು ಕ್ರಿಸ್ತನು ನಮ್ಮ ಸಮಾಧಾನ ಕರ್ತ್ರವಾಗಿದ್ದಾನೆ (ಎಫೆಸ 2:14), ಆತನು ನಮ್ಮನ್ನು ಒಟ್ಟಾಗಿ ಕೂಡಿಸುತ್ತಾನೆ. ಆದದರಿಂದ, ನಾವು ಕ್ರಿಸ್ತನಲ್ಲಿ ಒಟ್ಟಾಗಿ ಕಟ್ಟಲ್ಪಟ್ಟವರಾಗಿರೋಣ.

**4** ನಾವು ಒಂದೇ ಪದವಿಯನ್ನು ನಿರೀಕ್ಷಿಸುವದಕ್ಕೆ ಕರೆಯಲ್ಪಟ್ಟವರು. ನಮ್ಮ ನಿರೀಕ್ಷೆಯೇನೆಂದರೆ, ದೇವರ ಮಕ್ಕಳಾದ ನಾವು ಪರಲೋಕದಲ್ಲಿ ಒಂದು ಸ್ವಾಸ್ಥ್ಯವನ್ನು ಪಡೆದುಕೊಂಡು ಸದಾಕಾಲವೂ ಆತನೊಂದಿರೆ ಜೀವಿಸುತ್ತೇವೆಂಬದೇ. ಇದು ಪ್ರತಿಯೊಬ್ಬ ವಿಶ್ವಾಸಿಯ ನಿರೀಕ್ಷೆಯಾಗಿದೆ.

ಒಂದೇ ಆತ್ಮ, ಮತ್ತು ಒಂದೇ ದೇಹ,ಇರುತ್ತದೆ. ನಮ್ಮೆಲ್ಲರಲ್ಲಿಯೂ ಒಂದೇ ಆತ್ಮ ಇರುವದರಿಂದ ನಾವು ಒಂದೇ ದೇಹವಾಗಿದ್ದೇವೆ. ಮೊದಲು ಒಂದೇ ಆತ್ಮ, ನಂತರ ಆತನ ಮೂಲಕ ಒಂದೇ ದೇಹ (1ಕೊರಿಂಥ 12:13 ಮತ್ತು ವ್ಯಾಖ್ಯಾನ ನೋಡಿರಿ).

**5** ನಾವು ಒಬ್ಬನೇ ಕರ್ತನನ್ನು ಹೊಂದಿರುವದರಿಂದ ನಮಗೆ ಒಂದೇ ನಂಬಿಕೆ ಇರುತ್ತದೆ. ಅಂದರೆ, ನಾವು ಒಬ್ಬನೇ ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುತ್ತೇವೆ. ಮತ್ತು ನಮಗೆ ಒಬ್ಬನೇ ಕರ್ತನಿರುವದರಿಂದ ನಮಗಿರುವ ಸ್ನಾನದೀಕ್ಷೆ (ದೀಕ್ಷಾಸ್ನಾನವು )ಯೂ ಒಂದೇ ಆಗಿದೆ–ಅಂದರೆ, ನಾವು ಒಬ್ಬನೇ ಕರ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದಿದ್ದೇವೆ.

6 ಒಬ್ಬನೇ ಸತ್ಯ ದೇವರು ಇದ್ದಾನೆ (1 ಕೊರಿಂಥ 8:5-6 ಮತ್ತು ವ್ಯಾಖ್ಯಾನ ನೋಡಿರಿ). ದೇವರು ನಮ್ಮ ತಂದೆಯಾಗಿದ್ದಾನೆ. ಒಬ್ಬನೇ ತಂದೆಯಿಂದ ಒಂದೇ ಕುಟುಂಬ, ಒಂದೇ ಸಭೆ ಬಂದಿರುತ್ತದೆ. ತಂದೆ, ಮಗ (ಕರ್ತನಾದ ಯೇಸು ಕ್ರಿಸ್ತನು), ಮತ್ತು ಪವಿತ್ರಾತ್ಮನ ನಡುವೆ ಸಂಪೂರ್ಣ ಐಕ್ಯವಿರುತ್ತದೆ. ದೇವರ ಐಕ್ಯತೆಯ ಕಾರಣದಿಂದ ಸಭೆಯಲ್ಲಿಯೂ ಐಕ್ಯವಿರಬೇಕು.

ನಿಜವಾದ ಆತ್ಮೀಕ ಸಭೆಯು ಇಬ್ಭಾಗವಾಗಲು ಸಾಧ್ಯವಿಲ್ಲ. ಹಾಗಿದ್ದರೂ, ನಮ್ಮ ಸಭೆಯನ್ನು ನೋಡುವಾಗ ಭೇದ ಹಾಗು ಪಂಗಡವನ್ನು ಕಾಣುತ್ತೇವೆ. ಅದು ಹೇಗೆ ಸಾಧ್ಯ? ಒಂದೆಡೆಯಲ್ಲಿ, ನಮ್ಮ ಸಭೆಯು ಇಬ್ಭಾಗಿಸಲ್ಪಡಲಾಗದ ಒಂದು ದೇಹವಾಗಿದೆ. ಆದರೆ, ಇನ್ನೊಂದೆಡೆಯಲ್ಲಿ, ನಾವು ಅದನ್ನು ದೃಷ್ಟಿಸುವಾಗ ಅದು ಇಬ್ಭಾಗಿಸಲ್ಪಟ್ಟದ್ದಾಗಿ ಕಾಣುತ್ತದೆ. ಹಾಗಾಗುವದಕ್ಕೆ ಹೇಗೆ ಸಾಧ್ಯ?

ನಾವು ತಂದೆ, ತಾಯಿ ಮತ್ತು ಮೂವರು ಮಕ್ಕಳನ್ನೊಳಗೊಂಡ ಸಾಮಾನ್ಯ ಮಾನವ ಕುಟುಂಬದ ದೃಷ್ಟಾಂತವನ್ನು ಉಪಯೋಗಿಸಿ ಈ ಸಮಸ್ಯೆವನ್ನು ವಿವರಿಸಬಹುದು. ತಂದೆ ಮತ್ತು ತಾಯಿ ಒಬ್ಬರನ್ನೊಬ್ಬರು ಪರಿತ್ಯಾಗ ಮಾಡಿದ್ದಾರೆಂದು ಊಹಿಸಿಕೊಳ್ಳೋಣ. ಅಲ್ಲದೆ ಮಕ್ಕಳು ತಮ್ಮೊಳಗೆ ಜಗಳಮಾಡಿಕೊಂಡು ತಮ್ಮ ಸ್ವಂತ ಮಾರ್ಗವನ್ನು ಹಿಡಿಯುತ್ತಾರೆಂದು ಸಹ ನಾವು ಊಹಿಸಿಕೊಳ್ಳೋಣ. ಹೀಗೆ ಕುಟುಂಬವು ಸಂಪೂರ್ಣವಾಗಿ ಒಡೆದು ಹೋಗುತ್ತದೆ. ಅವರು ಈಗಲೂ ಒಂದೇ ಕುಟುಂಬವೋ ಅಥವಾ ಅಲ್ಲವೋ? ಆ ಮಕ್ಕಳು ಈಗಲೂ ಅವರ ತಾಯಿ ಮತ್ತು ತಂದೆಯ ಮಕ್ಕಳೋ? ಹೌದು ಅವರ ಮಕ್ಕಳೇ. ಕುಟುಂಬವು ಈಗಲೂ ಒಂದೇ ಕುಟುಂಬವಾಗಿದೆ, ಅದು ಕೇವಲ ಇಬ್ಭಾಗಿಸಲ್ಪಟ್ಟಿದೆಯಷ್ಟೇ.

ನಮ್ಮ ಸಭೆಯು ಒಂದು ಮಾನವ ಕುಟುಂಬದಂತಿದೆ, ವಾಗ್ವಾದ ಹಾಗು ಬೇಧವಿದ್ದಾಗಲೂ ನಾವು ಒಂದೇ ಸಭೆಯಾಗಿದ್ದೇವೆ. ಕೆಲವು ವೇಳೆಗಳಲ್ಲಿ ಒಂದು ಸಭಿಕರಲ್ಲಿ ಭೇಧವಿರುತ್ತದೆ. ಕೆಲವು ವೇಳೆಗಳಲ್ಲಿ ವಿವಿಧ ಸಭಿಕರ ನಡುವೆ ಭೇದಗಳಿರುತ್ತವೆ. ಕೆಲವು ವೇಳೆಗಳಲ್ಲಿ ಒಂದು ಸ್ಥಳದ ಸಭೆಗಳು ಇನ್ನೊಂದು ಸ್ಥಳದ ಸಭೆಗಳನ್ನು ಸೇರಿಸಿಕೊಳ್ಳಲು ನಿರಾಕರಿಸುತ್ತವೆ. ಆದರೆ ಯಾವ ವಿಧವಾದ ಒಡಕು ಉದ್ಭವಿಸಿದರೂ ಈ ಎಲ್ಲಾ ಪರಸ್ಥಿತಿಗಳಲ್ಲಿಯೂ ಸಭೆಯು ಒಂದೇ ಆಗಿದೆ, ಅದು ಈಗಲೂ ಯೇಸು ಕ್ರಿಸ್ತನ ಒಂದೇ ಸಭೆಯಾಗಿದೆ.

ಆದರೆ, ಒಂದು ಮಾನವ ಕುಟುಂಬದಲ್ಲಿರುವ ಹಾಗೆಯೇ ಸಭೆಯ ಸದಸ್ಯರು ಪವಿತ್ರಾತ್ಮನಿಂದುಂಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವದಕ್ಕೆ ಆಸಕ್ತರಾಗಿರಬೇಕು (ವಚನ 3). ಒಂದು ಕುಟುಂಬದಲ್ಲಿನ ಒಡಕು ಮಾನವ ತಂದೆಗೆ ವೇದನೆಯನ್ನು ತರುವ ಪ್ರಕಾರವೇ ಸಭೆಯಲ್ಲಿನ ಒಡಕು ನಮ್ಮ ಪರಲೋಕದ ತಂದೆಗೆ ವೇದನೆಯನ್ನುಂಟು ಮಾಡುತ್ತದೆ. ಸಭೆಯಲ್ಲಿನ ಬೇಧವು ಯಾವಾಗಲೂ ಸೈತಾನನ ಕೆಲಸವಾಗಿರುತ್ತದೆ. ಸೈತಾನನು ಎಲ್ಲೆಲ್ಲಿ ಸಭೆಯ ಸದಸ್ಯರ ಮದ್ಯದೊಳಗೆ ವಿನಯ, ದೀರ್ಘಶಾಂತಿ, ಮತ್ತು ಪ್ರೀತಿಗಳ ಕೊರತೆಯಿರುವದನ್ನು ಕಂಡುಕೊಳ್ಳುತ್ತಾನೋ ಅಲ್ಲಿ ಆತನಿಗೆ ಭೇದವನ್ನುಂಟು ಮಾಡುವದಕ್ಕೆ ಅವಕಾಶವು ದೊರೆಯುತ್ತದೆ.

ವಿವಿಧ ಸ್ಥಳಗಳಲ್ಲಿ ಬೇರೆ ಬೇರೆ ಸಭೆಗಳನ್ನು ಸ್ಥಾಪಿಸುವದರಲ್ಲಿ ತಪ್ಪೇನಿಲ್ಲ. ಪ್ರತಿಯೊಂದು ಗ್ರಾಮಕ್ಕೂ ಅದರ ಸ್ವಂತ ಸಭೆಯ ಅಗತ್ಯವಿದೆ. ಒಂದು ದೊಡ್ಡ ಪಟ್ಟಣದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಹಲವಾರು ಸಭೆಗಳ ಅಗತ್ಯವಿರುತ್ತದೆ. ಹೀಗೆ ವಿಶ್ವಾಸಿಗಳು ಅವರಿಗೆ ಸಮೀಪವಿರುವ ಸ್ಥಳೀಯ ಸಭೆಯನ್ನು ಸುಲಭವಾಗಿ ಸೇರಿಕೊಳ್ಳಬಹುದಾಗಿದೆ. ಅಲ್ಲದೆ ವಿಶೇಷ ಪರಸ್ಥಿತಿಗಳಲ್ಲಿ ವಿವಿಧ ರೀತಿಯ ಸಭೆಗಳನ್ನು ಒಂದೇ ಸ್ಥಳದಲ್ಲಿ ಹೊಂದಿದ್ದರೂ ತಪ್ಪೇನಿಲ್ಲ–ಅವರ ನಡುವೆ ಭಿನ್ನಾಭಿಪ್ರಾಯ ಅಥವಾ ವಿರೋಧ ಇಲ್ಲದಿದ್ದರೆ ಸಾಕಷ್ಟೇ.

ಆದರೆ ಒಂದು ಸ್ಥಳದಲ್ಲಿನ ಎರಡು ಅಥವಾ ಮೂರು ಸಭೆಗಳು ಒಬ್ಬರೊಂದಿಗೊಬ್ಬರು ಅನ್ನೋನ್ಯತೆಯನ್ನು ನಿಲ್ಲಿಸುವದಾದರೆ, ಅಥವಾ ಪರಸ್ಪರ ಸಹಕಾರವನ್ನು ನೂಡಲು ನಿರಾಕರಿಸುವದಾದರೆ ಅಲ್ಲಿ ಭೇಧ ಅಥವಾ ಒಡಕು ಇರುತ್ತದೆ. ಮತ್ತು ದೇವರು ಅಸಮಾಧಾನಗೊಳ್ಳುತ್ತಾನೆ. ದೇವರು ನಮ್ಮನ್ನು ಕ್ಷಮಿಸಿ ಶುದ್ಧೀಕರಿಸಲಿ. ಮತ್ತು ನಮ್ಮ ಗುಣಪಡಿಸಲಿ!

7 ಆದರೆ ಕ್ರಿಸ್ತನು ನಮ್ಮಲ್ಲಿ ಒಬ್ಬೊಬ್ಬನಿಗೆ ಅನುಗ್ರಹಿಸಿದ ಪ್ರಕಾರವೇ ಅವನವನಿಗೆ ಕೃಪಾವರವು ದೊರಕಿದೆ. ಪೌಲನು ಈ ಪತ್ರಿಕೆಯಲ್ಲಿ ಕೃಪೆ ಎಂಬ ಪದವನ್ನು ಎರಡು ಬೇರೆ ಬೇರೆ ವಿಧದಲ್ಲಿ ಉಪಯೋಗಿಸುತ್ತಾನೆ. ಈ ಕೃಪೆ ಎಂಬ ಪದದ ಸಾಮಾನ್ಯ ಅರ್ಥವು "ರಕ್ಷಣೆಯನ್ನುಂಟು ಮಾಡುವ ಕೃಪೆ" ಎಂದಾಗಿರುತ್ತದೆ. ಅದನ್ನೇ ಎಫೆಸ 2:8 ರಲ್ಲಿ ಕಾಣಬಹುದು, ಅದು ಪ್ರತಿಯೊಬ್ಬ ವಿಶ್ವಾಸಿಗೂ ಸಮಾನವಾಗಿ ದೊರೆಯುತ್ತದೆ. ಆದರ ಎರಡನೆಯ ವಿಧದ ಕೃಪೆಯು "ದಾನಗಳ (ವರಗಳ) ಕೃಪೆ" ಆಗಿದೆ (ವಚನ 8), ಅದು ವಿಶ್ವಾಸಿಗೆ ಕ್ರಿಸ್ತನು ನೇಮಿಸುವ ಪ್ರಕಾರ ಕೊಡಲ್ಪಡುತ್ತದೆ. ಇದು ಎಲ್ಲಾ ವಿಶ್ವಾಸಿಗಳಿಗೂ ಸಮಾನವಾಗಿ ಕೊಡಲ್ಪಡುವದಿಲ್ಲ. ಇಲ್ಲಿ ಸೂಚಿಸಲಾಗಿರುವ ದಾನಗಳು (ವರಗಳು) ಭೋಧನೆ ಮತ್ತು ಉಪದೇಶ, ಸ್ವಸ್ಥತೆಯ ವರ, ಉಪಚಾರದ ವರ, ಮುಂತಾದ ವರಗಳಂತಹ ವಿಶೇಷ ತಲಾಂತುಗಳು ಹಾಗು ಸಾಮರ್ಥ್ಯಗಳಾಗಿವೆ. ನಾವು ಇತರರ ಸೇವೆ ಮಾಡುವಂತಾಗಲು ಕ್ರಿಸ್ತನು ಈ ವರಗಳನ್ನು ನಮಗೆ ನೇಮಕಗೊಳಿಸಿದ್ದಾನೆ. "ರಕ್ಷಣೆಯನ್ನುಂಟು ಮಾಡುವ ಕೃಪೆ" ಯ ಕಾರಣದಿಂದ ವಿಶ್ವಾಸಿಗಳಾದ ನಾವೆಲ್ಲರೂ ಸಮಾನವಾಗಿ ದೇವರ ಮಕ್ಕಳಾಗಿದ್ದೇವೆ.

"ದಾನಗಳ ಕೃಪೆ" (ಅಥವಾ ಸೇವೆಯ ಕೃಪೆ) ಯ ಕಾರಣದಿಂದ ನಾವು ಪ್ರತಿಯೊಬ್ಬರು ನಮಗೆ ನೇಮಕವಾದ ವಿವಿಧ ವರಗಳನ್ನು ವಿವಿಧ ಕಾರ್ಯಗಳನ್ನು – ಒಂದು ಕುಟುಂಬದಲ್ಲಿ ಮಕ್ಕಳು ಬೇರೆ ಬೇರೆ ವರಗಳನ್ನೂ ತಲಾಂತುಗಳನ್ನೂ ಹೊಂದಿರುವ ಪ್ರಕಾರವೇ ಹೊಂದಿರುತ್ತೇವೆ.

ಈ ಎರಡೂ ವಿಧವಾದ ಕೃಪೆ-"ರಕ್ಷಣೆಯುಂಟು ಮಾಡುವ ಕೃಪೆ" ಮತ್ತು "ದಾನಗಳ ಕೃಪೆ "ಪವಿತ್ರಾತ್ಮನಿಂದ ಕೊಡಲ್ಪಟ್ಟುತ್ತವೆ. ಇದರ ಮೂಲಕವಾಗಿ ನಾವು ಕ್ರಿಸ್ತನು ನಮಗೆ ದಯಪಾಲಿಸುವ ಅತಿ ಶ್ರೇಷ್ಟವಾದ ವರವು ಸ್ವತಃ ಪವಿತ್ರಾತ್ಮನೇ ಎಂಬದನ್ನು ತಿಳಿಯಬಹುದು. ಯಾಕೆಂದರೆಸ ಪವಿತ್ರಾತ್ಮನಿಂದಲೇ ಆ ಇತರ ಎಲ್ಲಾ ವರಗಳು ವಿತರಿಸಲ್ಪಡುತ್ತವೆ. ದೇವರು ನಮಗೆ ಕ್ರಿಸ್ತನನ್ನು ಕೊಟ್ಟನು. ಕ್ರಿಸ್ತನು ನಮಗೆ ಪವಿತ್ರಾತ್ಮನನ್ನು ಕೊಟ್ಟನು, ಮತ್ತು ಮೂವರು ಒಟ್ಟಾಗಿ-ತಂದೆ-ಮಗ-ಮತ್ತು ಪವಿತ್ರಾತ್ಮನು-ನಮಗೆ ಈ ಇತರ ಎಲ್ಲಾ ವರಗಳನ್ನು ಕೊಡುತ್ತಾನೆ.

**8** ಇಲ್ಲಿ ಪೌಲನು ಕೀರ್ತನೆಗಳು 68:18 ರಿಂದ ಉಲ್ಲೇಖಿಸುತ್ತಾನೆ. ಈ ಉಲ್ಲೇಖದಲ್ಲಿ ದೇವರು ಕೀರ್ತನೆಗಾರನ ಮುಖಾಂತರ ಕ್ರಿಸ್ತನ ಪರಲೋಕಾರೋಹಣದ ಬಗ್ಗೆ ಪ್ರವಾಧಿಸುತ್ತಾನೆ.

ಕ್ರಿಸ್ತನು ಪರಲೋಕಕ್ಕೆ ಆರೋಹಣವಾದಾಗ ತನ್ನೊಂದಿಗೆ ಬಹುಜನರನ್ನು ಸೆರೆಹಿಡುಕೊಂಡು ಹೋದನು. ಅಂದರೆ, ಕ್ರಿಸ್ತನು ಪೂರ್ವದಲ್ಲಿ ನಮ್ಮನ್ನು ಸೆರೆಹಿಡುಕೊಂಡಿದ್ದ ಎಲ್ಲಾ ಸಂಗತಿಗಳನ್ನು ಸೆರೆಹಿಡುಕೊಂಡನು. ಅವು ಗಳಾವವೆಂದರೆ, ಪಾಪ, ಮರಣ, ಮತ್ತು ಸೈತಾನ. ಕ್ರಿಸ್ತನು ಇವೆಲ್ಲವು ಗಳನ್ನು ಜಯಿಸಿ ಸೆರೆಹಿಡುಕೊಂಡನು. ಮತ್ತು ಆತನು ಪರಲೋಕವನ್ನು ತಲುಪಿದಾಗ ಮನುಷ್ಯರಿಗೆ – ಸಭೆಗೆ – ದಾನಗಳನ್ನು ಮಾಡಿದನು.

**9-10** ಕ್ರಿಸ್ತನು ಮರಣಿಸಿದಾಗ ಮೊದಲು ಆತನು ಭೂಮಿಯ ಅದೋ ಭಾಗಕ್ಕೆ ಇಳಿದಿದ್ದನು (ವಚನ 9). ಮತ್ತು ಮೂರು ದಿವಸಗಳ ನಂತರ ಆತನು ಮೇಲಣ ಎಲ್ಲಾ ಲೋಕಗಳಿಗಿಂತ ಉನ್ನತವಾಗಿ ಏರಿಹೋದನು (ವಚನ 10), ಅಲ್ಲಿ ಈಗ ಆತನು ದೇವರೊಂದಿಗೆ ಭೂಪರಲೋಕಗಳಲ್ಲಿರುವ ಸಮಸ್ತ ಸಂಗತಿಗಳ ಮೇಲೆ ದೊರೆತನ ಮಾಡುತ್ತಾನೆ (ಎಫೆಸ 1:22-23 ನೋಡಿರಿ).

**11-12** ಈ ವಚನಗಳಲ್ಲಿ ಪೌಲನು ಸಭೆಯಲ್ಲಿರುವ ವಿವಿಧ ವ್ಯಕ್ತಿಗಳಿಗೆ ಕ್ರಿಸ್ತನು ನೀಡಿರುವ ಐದು "ವರಗಳು" ಅಥವಾ ನೇಮಕಗಳನ್ನು ಪ್ರಸ್ತಾಪಿಸುತ್ತಾನೆ. ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾಧಿಗಳನ್ನಾಗಿಯೂ ಕೆಲವರನ್ನು ಸುವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದ್ದಾನೆ. ಖಂಡಿತವಾಗಿಯೂ ಈ ಐದು ವರಗಳಿಗಿಂತಲೂ ಇನ್ನು ಹೆಚ್ಚು ವರಗಳಿರುತ್ತವೆ. ಇವು ಗಳು ಕೇವಲ ಉದಾಹರಣೆಗಳಷ್ಟೇ (1 ಕೊರಿಂಥ 12:27-28,ರೋಮ 12:4-8 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಆದರೆ ಪೌಲನು ಇಲ್ಲಿ ಪಟ್ಟಿ ಮಾಡುವ ಐದು ನೇಮಕಾತಿಗಳು ಸಭೆಗಾಗಿ ಅತ್ಯಂತ ಪ್ರಾಮುಖ್ಯವಾಗಿರುತ್ತವೆ. ಇಲ್ಲಿ ಪಟ್ಟಿಮಾಡಲಾಗಿರುವ ಐದು "ವರಗಳು" ನಿಜವಾಗಿಯೂ ಐದು ವಿವಿಧ ರೀತಿಯ ನಾಯಕರುಗಳಾಗಿದ್ದು ವಿಶೇಷವಾಗಿ ಕ್ರಿಸ್ತನು ಅವರನ್ನು ಸಬೆಯ ಸ್ಥಾಪನೆ ಹಾಗು ಭಕ್ತಿವೃದ್ಧಿಗಾಗಿ ಅನುಗ್ರಹಿಸಿರುತ್ತಾನೆ. ಈ ಐದು "ವರಗಳು" 1ಕೊರಿಂಥ 12:7-10 ರಲ್ಲಿ ಪ್ರಸ್ತಾಪಿಸಲಾದ ದೇವರಾತ್ಮನ ವರಗಳೊಂದಿಗೆ ಸಂಬಂಧ ಹೊಂದಿರುವದಿಲ್ಲ ಎಂದು ಕೆಲವು ಬೈಬಲ ಪಂಡಿತರು ಹೇಳುತ್ತಾರೆ. ಆದರೆ ಅವು ಗಳು ಸಂಬಂಧಿಸಿವೆಯೋ ಅಥವಾ ಇಲ್ಲವೋ ಒಟ್ಟಿನಲ್ಲಿ ಎಲ್ಲಾ ವರಗಳು ಹಾಗು ನೇಮಕಾತಿಗಳು ಕ್ರಿಸ್ತನಿಂದಲೂ ಪವಿತ್ರಾತ್ಮನಿಂದಲೂ ಒಟ್ಟಾಗಿ ಕೊಡಲ್ಪಟ್ಟಿವೆ. ಮತ್ತು ಅವು ಗಳೆಲ್ಲವೂ ಸಭೆಯ ಭಕ್ತಿವೃದ್ಧಿಗಾಗಿ ಅನುಗ್ರಹಿಸಲ್ಪಟ್ಟಿವೆ.

ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆಃ ಇಲ್ಲಿ ಪ್ರಸ್ತಾಪಿಸಲಾಗಿರುವ ವರಗಳು ಜನ್ಮದಿಂದಲೇ ಪಡೆದುಕೊಳ್ಳುವ ಸ್ವಾಭಾವಿಕ ವರಗಳೋ, ಅಥವಾ ಅನಂತರದಲ್ಲಿ ಪವಿತ್ರಾತ್ಮನಿಂದ ಕೊಡಲ್ಪಬುವ ಅಸ್ವಾಭಾವಿಕ ವರಗಳೋ? ಉತ್ತರವೇನೆಂದರೆ, ಈ ವರಗಳು ಸ್ವಾಭಾವಿಕ ಭಾಗವನ್ನು ಮತ್ತು ಅಸ್ವಾಭಾವಿಕ ಭಾಗವನ್ನು ಹೊಂದಿರುತ್ತವೆ. ದೇವರು ಪ್ರತಿಯೊಬ್ಬ ವ್ಯಕ್ತಿಗೆ ಹುಟ್ಟುವಾಗಲೇ ಕೆಲವೊಂದು ಸ್ವಾಭಾವಿಕ ವರಗಳನ್ನು ಮತ್ತು ತಲಾಂತುಗಳನ್ನು ಕೊಟ್ಟಿರುತ್ತಾನೆ. ಆದರೆ ಒಬ್ಬ ವ್ಯಕ್ತಿಯು ಕ್ರೈಸ್ತನಾಗುವಾಗ ಪವಿತ್ರಾತ್ಮನು ಆ ಸ್ವಾಭಾವಿಕ ವರಗಳನ್ನು ಉಪಯೋಗಿಸುವದಕ್ಕೆ ಪ್ರಾರಂಭಿಸುತ್ತಾನೆ. ಮತ್ತು ಅದರ ಮೂಲಕ ಪವಿತ್ರಾತ್ಮನು ಆ ವರಗಳನ್ನು ದೇವರ ಸೇವೆಗೋಸ್ಕರ ವಿಸ್ತರಿಸಿ, ಪರಿಶೋಧಿಸಿ ಶುದ್ಧೀಕರಿಸುತ್ತಾನೆ.

ಹೇಗಿದ್ದರೂ, ಇತರ ವರಗಳೂ ಇರುತ್ತವೆ. ವಿಶೇಷವಾಗಿ 1 ಕೊರಿಂಥ 12:8-10 ರಲ್ಲಿ ಪ್ರಸ್ತಾಪಿಸಲಾಗಿರುವ ವರಗಳು ಪ್ರಾಥಮಿಕವಾಗಿ ಅಸ್ವಾಭಾವಿಕ ವರಗಳಾಗಿದ್ದು ಅವು ಗಳು ಒಬ್ಬ ವ್ಯಕ್ತಿಯು ಕ್ರೈಸ್ತನಾದ ಬಳಿಕವಷ್ಟೇ ಕೊಡಲ್ಪಡುತ್ತವೆ. (1 ಕೊರಿಂಥ 12:7-11 ಮತ್ತು ವ್ಯಾಖ್ಯಾನ, ಸಾಮಾನ್ಯ ಲೇಖನಃ ಪವಿತ್ರಾತ್ಮನ ದೀಕ್ಷಾಸ್ನಾನ ನೋಡಿರಿ).

ಈ ವರಗಳು ಏಕೆ ಕೊಡಲ್ಪಟ್ಟಿವೆ ? ಅವು ಗಳು ದೇವಜನರನ್ನು ಸೇವೆಯ ಕಾರ್ಯಗಳಿಗಾಗಿ ಸಿದ್ಧಗೊಳಿಸಲು ಕೊಡಲ್ಪಟ್ಟಿವೆ (ವಚನ 12). ಈ ರೀತಿಯಲ್ಲಿ ಕ್ರಿಸ್ತನ ದೇಹವು (ಸಭೆಯು) ಅಭಿವೃದ್ಧಿಯಾಗುವದು. ಈ ವರಗಳು ಮುಖ್ಯವಾಗಿ ನಮ್ಮ ಸ್ವಂತ ಪ್ರಯೋಜನಕ್ಕೋಸ್ಕರ ಕೊಡಲ್ಪಟ್ಟಿಲ್ಲ. ಆದರೆ ಬದಲಾಗಿ ಅವು ಗಳು ಸಭೆಯ ಭಕ್ತಿವೃದ್ಧಿಗಾಗಿಯೂ, ಸರ್ವರ ಪ್ರಯೋಜನಾರ್ಥವಾಗಿಯೂ ಕೊಡಲ್ಪಟ್ಟಿವೆ (1ಕೊರಿಂಥ 12:7). ಈ ವರಗಳು ನಮಗೆ ಇತರರ ಸೇವೆಗಾಗಿ ಉಪಯೋಗಿಸಲು ಕೊಡಲ್ಪಟ್ಟಿವೆ. ಉದಾಹರಣೆಗಾಗಿ ಒಬ್ಬ ಸಭಾಪಾಲಕನು ತನ್ನ ಸಭೆಯ ಅಧಿಪತಿಯಲ್ಲ, ಬದಲಾಗಿ ಆತನು ಅದರ ಸೇವಕನಾಗಿದ್ದಾನೆ! ಉಪದೇಶಕನು ತನ್ನ ವಿಧ್ಯಾರ್ಥಿಗಳ ಒಡೆಯನಲ್ಲ, ಆತನು ಅವರ ಸೇವಕನಾಗಿದ್ದಾನೆ. ಕ್ರಿಸ್ತನು ನಮ್ಮ ಮಾದರಿಯಾಗಿದ್ದಾನೆಃ ಆತನು ನಮ್ಮ ಕರ್ತನಾಗಿದ್ದಾಗ್ಯು ಆತನು ಲೋಕಕ್ಕೆ ಸೇವೆ ಮಾಡಿಕೊಳ್ಳುವದಕ್ಕಾಗಿ ಬರದೇ ಸೇವೆ ಮಾಡುವದಕ್ಕೆ ಬಂದನು (ಮಾರ್ಕ10:43-45 ಮತ್ತು ವ್ಯಾಖ್ಯಾನ ನೋಡಿರಿ).

ನಾವು ಪಡೆದುಕೊಂಡಿರುವ ವರಗಳನ್ನು ಸಭೆಯ ಅಭಿವೃದ್ಧಿಗೋಸ್ಕರ ಉಪಯೋಗಿಸದಿದ್ದರೆ ನಮ್ಮ ವರಗಳನ್ನು ದುರುಪಯೋಗಪಡಿಸಿಕೊಳ್ಳುವವರಾಗಿದ್ದೇವೆ ಮತ್ತು ದೇವರು ಅದನ್ನು ಮೆಚ್ಚಿಕೊಳ್ಳುವದಿಲ್ಲ.

13 ಈ ವಚನದಲ್ಲಿ ನಾವು ಈ ವರಗಳು ಸಭೆಯೆಡೆಗೆ ಹೊಂದಿರುವ ಎರಡು ಅಂತಿಮ ಗುರಿಗಳನ್ನು ಕುರಿತು ನೋಡುತ್ತೇವೆ. ಮೊದಲನೆಯ ಗುರಿಯೇನೆಂದರೆ, ನಾವು–ಸಭೆಯ ಪ್ರತಿಯೊಬ್ಬ–ಸದಸ್ಯನು–ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯತೆಯನ್ನು ಹೊಂದಬೇಕೆಂಬದೇ. ಎರಡನೆಯ ಗುರಿಯೇನೆಂದರೆ, ನಾವು ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವವರಾಗಬೇಕೆಂಬದೇ. ಈ ಎರಡನೆಯ ಗುರಿಯು ದೇವರು ತನ್ನ ಮಕ್ಕಳಲ್ಲಿ ಪ್ರತಿಯೊಬ್ಬರಿಗಾಗಿಯೂ ನೇಮಿಸಿರುವ ಅಂತಿಮ ಹಾಗು ಅತಿ ದೊಡ್ಡ ಗುರಿಯಾಗಿದೆ, ಇದು ನಮ್ಮ ಜೀವಿತದ ಕೊನೆ ಉದ್ದೇಶವಾಗಿದೆ–ಯೇಸು ಕ್ರಿಸ್ತನ ಸಾರೂಪ್ಯವುಳ್ಳವರಾಗುವದೇ (ರೋಮ 8:29 ಮತ್ತು ವ್ಯಾಖ್ಯಾನ ನೋಡಿರಿ) ಈ ಜೀವಿತದಲ್ಲಿ ನಾವು ಎಂದಿಗೂ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವದಿಲ್ಲ, ಈ ಜೀವಿತದಲ್ಲಿ ನಾವು ಬೆಳೆಯುತ್ತಿದ್ದೇವೆ, ಬೆಳೆಯುತ್ತಲೇ ಇರುತ್ತೇವೆ. ಆದರೆ ಭೂಲೋಕದಲ್ಲಿ ನಾವು ಕ್ರಿಸ್ತನ ಪರಿಪೂರ್ಣತೆಯೆಲ್ಲವನ್ನೂ ಮುಟ್ಟಲಾರೆವಾದಾಗ್ಯೂ ನಾವು ಆ ಗುರಿಯೆಡೆಗೆ ಎಡಬಿಡದೇ ಸಾಗುತ್ತಲಿರಬೇಕು. ನಾವು ಹೆಚ್ಚು ಹೆಚ್ಚಾಗಿ ಪ್ರವೀಣತೆಗೆ (ಪರಿಪಕ್ವತೆಗೆ) ಬೆಳೆಯುತ್ತಲಿರಬೇಕು, ನಾವು ಆತ್ಮೀಕವಾಗಿ ಬಾಲಕರಾಗುಳಿಯಬಾರದು (ವಚನ 14).

14 ಬಾಲಕರು ಚಂಚಲರಾಗಿರುತ್ತಾರೆ. ಅವರು ತಾವು ಕೇಳಿದ್ದೆಲ್ಲವನ್ನು ನಂಬುತ್ತಾರೆ. ಅವರು ಸುಲಭವಾಗಿ ವಂಚಿಸಲ್ಪಡುತ್ತಾರೆ. ಅವರು ಗಾಳುಯಿಂದ ಅತ್ತ ಇತ್ತ ತೂರಲ್ಪಡುವ ಎಲೆಗಳಿಂತಿದ್ದಾರೆ. ಕೂಸುಗಲ ಹಾಗಿರಬೇಡಿರೆಂದು ಪೌಲನು ಹೇಳುತ್ತಾನೆ.[17]

15 ಸತ್ಯವು ನಮ್ಮನ್ನು ಸ್ಥಿರಪಡಿಸುತ್ತದೆ. ಸತ್ಯವು ಪ್ರೀತಿಯಿಂದ ಮಾತಾಡಲ್ಪಡಬೇಕು. ಕೆಲವು ಜನರು ಪ್ರೀತಿಯಿಲ್ಲದೆ ಸತ್ಯವನ್ನು ಮಾತಾಡುತ್ತಿದ್ದಾರೆ. ಅಂಥ ಜನರು ಕಲಹವನ್ನುಂಟು ಮಾಡಿ ಸಭೆಯನ್ನು ಇಬ್ಭಾಗಿಸುತ್ತಾರೆ. ಇತರ ಕ್ರೈಸ್ತರು ಅದಕ್ಕೆ ತದ್ವಿರುದ್ಧವಾದ ತಪ್ಪನ್ನು ಮಾಡುತ್ತಾರೆ. ಅವರು ಸತ್ಯವು ಪ್ರೀತಿಯಷ್ಟು ಪ್ರಾಮುಖ್ಯವಾಗಿರುವದಿಲ್ಲ ಎಂದು ನಂಬುತ್ತಾರೆ, ಅದರ ಫಲಿತವಾಗಿ ಅವರು ಹಲವಾರು ವೇಳೆ ಮತ್ತೊಬ್ಬರ ಭಾವನೆಗಳಿಗೆ ನೋವುಂಟು ಮಾಡಬಾರದೆಂದು ಸತ್ಯವನ್ನು ನುಡಿದಿರುತ್ತಾರೆ. ವಾಸ್ತವದಲ್ಲಿ, ಸತ್ಯ ಮತ್ತು ಪ್ರೀತಿ ಎರಡೂ ಅವಶ್ಯಕವಾಗಿರುತ್ತದೆ. ಪ್ರೀತಿಯಿಲ್ಲದ ಸತ್ಯ ಬಹಳ ಕಠೋರವಾಗಿರುತ್ತದೆ. ಸತ್ಯವಿಲ್ಲದ ಪ್ರೀತಿ ಬಹಳ ಮೃದುವಾಗಿರುತ್ತದೆ. ಸಭೆಯಲ್ಲಿ ಸತ್ಯ ಪ್ರೀತಿಗಳೆರಡೂ ಇರುವದಾದರೆ ಆ ಸಭೆ ಮತ್ತು ಆದರ ಸದಸ್ಯರು ಕ್ರಿಸ್ತನಲ್ಲಿ ಬೆಳೆಯುವರು.

ಕೆಲವು ಜನರು ಇತರರಿಗೆ ನೋವುಂಟು ಮಾಡದಿರಲು ಆಗಾಗ ಸ್ವಲ್ಪ ಸುಳ್ಳುಗಳನ್ನು ಹೇಳುವದೂ ಅವಶ್ಯಕವಾಗಿರುತ್ತದೆಂದು ನಂಬುತ್ತಾರೆ. ಆದರೆ ಆ ನಂಬಿಕೆ ಸರಿಯಾದದ್ದಲ್ಲ. ನೋವುಂಟು ಮಾಡುವ ವಿಷಯದ ಕುರಿತಾಗಿ ಮೌನವನ್ನು ಕಾಪಾಡಿಕೊಳ್ಳುವದರಲ್ಲಿ ತಪ್ಪೇನಿಲ್ಲ, ಆದರೆ ನಾವು ಅದರ ಕುರಿತಾಗಿ ಮಾತಾಡಲಿರುವದಾದರೆ ಸತ್ಯವನ್ನು ಮಾತ್ರವೇ ನುಡಿಯಬೇಕು.

16 ಇಲ್ಲಿ ಪೌಲನು ಪುನಃ ಕ್ರಿಸ್ತನ ಸಭೆಯನ್ನು ಒಂದು ದೇಹಕ್ಕೆ ಹೋಲಿಸುತ್ತಾನೆ. ಅದರ ಶಿರಸ್ಸು ಕ್ರಿಸ್ತನೇ. ದೇಹದ ಎಲ್ಲಾ ಅಂಗಗಳು ಶಿರಸ್ಸಾಗಿರುವ ಕ್ರಿಸ್ತನ ಅಧೀನದಲ್ಲಿರುತ್ತವೆ. (ವಚನ 15). ಚಿಕ್ಕ ಮಗುವು ಬೆಳೆಯುವ ಪ್ರಕಾರವೇ ಸಭೆಯು ಬೆಳೆಯುತ್ತದೆ. ಪ್ರತಿಯೊಂದು ಅಂದವು ಐಕ್ಯವಾಗಿದ್ದು ಬೆಳೆಯುತ್ತದೆ. ಪ್ರತಿಯೊಂದು ಸಹಾಯದ ನೆರವು ದೇಹದ ಇತರ ಭಾಗಗಳ ಜೊತೆಗೂಡಿ ಸಾಮರಸ್ಯದಿಂದ ಬೆಳೆಯಲು ಸಹಾಯ ಮಾಡುತ್ತದೆ. ಪ್ರತಿಯೊಂದು ನರವು ದೇಹದ ಅಂಗಗಳ ನಡುವೆ ಸಮಾಧಾನದ ಬಂಧನವಾಗಿರುತ್ತದೆ (ವಚನ 3). ಮತ್ತು ಒಂದು ಸ್ವಾಭಾವಿಕ ದೇಹದಂತೆಯೇ ಸಭೆಯ ಸದಸ್ಯರು ಸಮಾಧಾನದಲ್ಲಿ ಬಿಗಿಯಾಗಿ ಜೋಡಿಸಲ್ಪಟ್ಟು ಇರದಿದ್ದರೆ ಸಭೆಯು ಸರಿಯಾಗಿ ಚಟುವಟಿಕೆ ಮಾಡಲಾರದು ಮತ್ತು ಅದರ ಬೆಳವಣಿಗೆಯು ನಿಂತು ಹೋಗುತ್ತದೆ.

## ಪೂರ್ವಸ್ವಭಾವ ಮತ್ತು ನೂತನ ಸ್ವಭಾವ (4:17-32)

17 ಈ ಭಾಗದಲ್ಲಿ ಪೌಲನು ಒಂದು ಹೊಸ ವಿಷಯವನ್ನು ಪ್ರಾರಂಭಿಸುತ್ತಾನೆ. ಆತನು 1-16 ವಚನಗಳಲ್ಲಿ ಸಬೆಯ ಐಕ್ಯತೆಯ ಬಗ್ಗೆ ಮಾತಾಡಿದ್ದಾನೆ. ಈಗ ಪೌಲನು ಈ ವಚನದಿಂದ ಮೊದಲ್ಗೊಂಡು ಎಫೆಸ 5:21 ರವರೆಗೆ ಸಭೆಯ ಪವಿತ್ರತೆಯ ಬಗ್ಗೆ ಮಾತಾಡುತ್ತಾನೆ. ಈ ಎರಡೂ ಸಂಗತಿಗಳು ಸಭೆಗೆ ಎಲ್ಲಕ್ಕಿಂತಲೂ ಪ್ರಾಮುಖ್ಯವಾಗಿರುತ್ತದೆಃ ಐಕ್ಯತೆ ಮತ್ತು ಪವಿತ್ರತೆ.

ಪೌಲನು ಎಫೆಸದ ಕ್ರೈಸ್ತರಿಗೆ ಇನ್ನು ಅವರು ಅನ್ಯಜನರ.... ಪ್ರಕಾರ ನಡೆದುಕೊಳ್ಳಬಾರದೆಂದು ಪ್ರಭೋಧಿಸುತ್ತಾನೆ. ಪೌಲನ ಕಾಲದ ಬಹುಪಾಲು ಅನ್ಯಜನರು ಒಬ್ಬನೇ ಸತ್ಯ ದೇವರನ್ನು ನಂಬುತ್ತಿರಲಿಲ್ಲ, ಬದಲಾಗಿ, ಅವರು ವಿಗ್ರಹಾರಾಧನೆ ಮಾಡುತ್ತಾ ಎಲ್ಲಾ ವಿಧದ ಅನೈತಿಕ ಅಭ್ಯಾಸಗಳಲ್ಲಿ ತೊಡಗಿಸಿಕೊಂಡವರಾಗಿದ್ದರು. ಅವರ ಮನಸ್ಸುಗಳಲ್ಲಿ ವ್ಯರ್ಥ ಹಾಗು ನಿಷ್ಪ್ರಯೋಜಕವಾದ ಆಲೋಚನೆಗಳು ತುಂಬಿದ್ದವು, ನಿಶ್ಚಯವಾಗಿಯೂ, ಎಲ್ಲಾ ಕಾಲದ ಪ್ರಾಪಂಚಿಕ ಜನರು ಪೌಲನ ದಿನಗಳಲ್ಲಿದ್ದ ಅನ್ಯಜನರಂತೆಯೇ ಇದ್ದಾರೆ. ನಾವು ಪ್ರಾಪಂಚಿಕ ಜನರ ಹಾಗೆ ಇರದಿರೋಣ. ನಾವು ಇನ್ನು ಲೋಕದ ಮಕ್ಕಳಲ್ಲ, ನಾವು ದೇವರ ಮಕ್ಕಳು. ಆದದರಿಂದ, ನಾವು ದೇವರ ಮಕ್ಕಳಂತೆ ನಡೆದುಕೊಳ್ಳಬೇಕು. ನಾವು ಒಂದು ನೂತನ ಜನವಾಗಿದ್ದೇವೆ, ಮತ್ತು ನೂತನ ಜನರು ನೂತನ ಜೀವಿತವನ್ನು ನಡಿಸುವ ಅಗತ್ಯವಿರುತ್ತದೆ (ಗಲಾತ್ಯ 3:27, ಮತ್ತು ವ್ಯಾಖ್ಯಾನ ನೋಡಿರಿ).

**18-19** ಪ್ರಾಪಂಚಿಕ ಜನರಿಗೆ ಕ್ರಮೇಣವಾಗಿ ಏನು ಸಂಭವಿಸುವದೆಂಬದನ್ನು ನಾವು ಈ ವಚನಗಳಿಂದ ತಿಳುಕೊಳ್ಳಬಹುದು. ಅವರು ಹೆಚ್ಚು ಹೆಚ್ಚಾಗಿ ದೇವರಿಂದ ದೂರವಾಗುತ್ತಾರೆ. ಅವರ ಹೃದಯಗಳು ಕಠಿಣವಾಗುತ್ತವೆ (ವಚನ 18). ಅವರ ಹೃದಯದ ಕಾಠಿಣ್ಯದ ನಿಮಿತ್ತದಿಂದ ಅವರು ಎಲ್ಲಾ ಪರಿಜ್ಞಾನವನ್ನು ಕಳೆದುಕೊಳ್ಳುತ್ತಾರೆ. ಅವರು ಇನ್ನೂ ಸರಿ ಮತ್ತು ತಪ್ಪುಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವದರ ಬಗ್ಗೆ ಚಿಂತೆಯನ್ನೇ ಮಾಡುವದಿಲ್ಲ. ಅವರು ಎಲ್ಲಾ ವಿಧವಾದ ಅಶುದ್ಧಕೃತ್ಯಗಳಲ್ಲಿ ಸುಖವನ್ನು ಹುಡುಕುತ್ತಾರೆ, ಆದರೆ ಅವರು ಸಂತೃಪ್ತಿಯನ್ನು ಕಂಡುಕೊಳ್ಳಲಾರರು. ಆದದರಿಂದ, ಅವರು ನಿರಂತರವಾಗಿ ಅತ್ಯಾಶಯವುಳ್ಳವರಾಗಿ ಇರುತ್ತಾರೆ (ವಚನ 10).

**20-21** ನೀವಾದರೋ ಕ್ರಿಸ್ತನನ್ನು ಅಂಥ ವಿಧದಲ್ಲಿ ಕಲಿತುಕೊಳ್ಳಲಿಲ್ಲ. ಅಂದರೆ, ಎಫೆಸದವರು ಅಂಥ ನಡುವಳಿಕೆಯನ್ನು ಕ್ರಿಸ್ತನ ಭೋಧನೆಗಳಿಂದಾಗಲಿ ಅಥವಾ ಆತನ ಮಾದರಿಯಿಂದಾಗಲಿ ಕಲಿತುಕೊಳ್ಳಲಿಲ್ಲ. ಅಂಥ ನಡುವಳಿಕೆಯು ಸುಳ್ಳುತನದ ಮೇಲೆ ಆಧಾರವಾಗಿರುತ್ತದೆ, ಅದು ಕ್ರಿಸ್ತನ ಭೋಧನೆಗಳ ಸತ್ಯೋಪದೇಶವನ್ನು ನಿರಾಕರಿಸುವದರ ಮೇಲೆ ಆಧಾರವಾಗಿರುತ್ತದೆ. ಎಫೆಸದವರು ಆ ಸತ್ಯೋಪದೇಶವನ್ನು ಗಟ್ಟಿಯಾಗಿ ಹಿಡಿದುಕೊಂಡು ಲೋಕದ ಮೋಸಕರವಾದ ಮಾರ್ಗಗಳನ್ನು ಅನುಸರಿಸದಿರಲಿ.

**22** ಎಫೆಸದವರು ಕ್ರಿಸ್ತನಿಂದ ಏನನ್ನು ಕಲಿತುಕೊಂಡರು? ಅವರು ತಮ್ಮ ಪೂರ್ವಸ್ವಭಾವವನ್ನು ತೆಗೆದುಹಾಕಿ ಬಿಡಬೇಕು – ಅಂದರೆ, ಅವರು ತಮ್ಮ ಪೂರ್ವ ಸ್ವಭಾವದ ಆಲೋಚನೆಗಳು, ಅಭಿಲಾಷೆಗಳು ಮತ್ತು ಕೃತ್ಯಗಳನ್ನು ತೆಗೆದುಹಾಕಿ ಬಿಡಬೇಕು– ಎಂಬದನ್ನು ಕಲಿತುಕೊಂಡರು. ನಮ್ಮಲ್ಲಿ ಪ್ರತಿಯಬ್ಬರೂ ಪಾಪಾಧೀನ ಸ್ವಭಾವವುಳ್ಳವರಾಗಿ ಹುಟ್ಟಿದ್ದೇವೆ, ಮತ್ತು ನಾವು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವ ತನಕವೂ ಆ ಪಾಪಾಧೀನ ಸ್ವಭಾದ ಅಧೀನದಲ್ಲಿರುತ್ತೇವೆ. ನಮ್ಮ ಪೂರ್ವ ಸ್ವಭಾವವು ಹಿಂದೆ ನಾವು ಪಾಪಧೀನ ಸ್ವಭಾವದ ಅಧೀನದಲ್ಲಿ ಜೀವಿಸುತ್ತಿದ್ದಾಗಿನ ನಮ್ಮ ವ್ಯಕ್ತಿತ್ವವೇ ಆಗಿದ್ದಾನೆ. ಆದದರಿಂದ, ನಾವು ನೂತನ ಸ್ವಭಾವವನ್ನು ಧರಿಸಿಕೊಳ್ಳುವದಕ್ಕೆ ಮುಂಚೆ (ವಚನ 24) ನಮ್ಮ ಪೂರ್ವಸ್ವಭಾವವನ್ನು ಮೊದಲಿ ತೆಗೆದು ಹಾಕಿ ಬಿಡಬೇಕು. ಅಥವಾ ಮರಣಕ್ಕೊಳಪಡಿಸಬೇಕು (ರೋಮ 6:6, 8:13 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**23** ಪೌಲನು ಎಫೆಸದವರಿಗೆ ಅವರ ಮನಸ್ಸುಗಳ ಮನೋಭಾವದಲ್ಲಿ [18] ಹೊಸಬರಾಗಬೇಕೆಂದು ಹೇಳುತ್ತಾನೆ (ರೋಮ 12:2 ಮತ್ತು ವ್ಯಾಖ್ಯಾನ ನೋಡಿರಿ).

ನೆನಪಿರಲಿ, ಪೌಲನು ಈಗಾಗಲೇ ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ನೂತನ ಆತ್ಮೀಕ ಜೀವಿತವನ್ನು ಪಡೆದುಕೊಂಡಿದ್ದರು. ಅವರು ಈಗಾಗಲೇ ಹೊಸದಾಗಿ ಹುಟ್ಟಿದವರಾಗಿದ್ದರು (ಯೋಹಾನ 3:3-5ಮತ್ತು ವ್ಯಾಖ್ಯಾನ ನೋಡಿರಿ). ಹೊಸದಾಗಿ ಹುಟ್ಟಿದವರಾಗಿಲ್ಲದ ಜನರಿಗೆ "ನಿಮ್ಮ ಮನಸ್ಸುಗಳ ಮನೋಭಾವದಲ್ಲಿ ಹೊಸಬರಾಗಿರಿ" ಎಂದು ಹೇಳುವದರಲ್ಲಿ ಯಾವ ಪ್ರಯೋಜನವಿರುವದಿಲ್ಲ. ಇದು ಅಸಾಧ್ಯವಾಗಿದೆ. ಅವರು ತಮ್ಮಷ್ಟಕ್ಕೆ ತಾವೇ "ನೂತನ ಮನಸ್ಸನ್ನು" ಸೃಷ್ಟಿಸಿಕೊಳ್ಳಲಾರರು. ಮೊದಲಿ ಅವರು ಕ್ರಿಸ್ತನಲ್ಲಿ ನಂಬಿಕೆಯಿಡಬೇಕು. ಮತ್ತು ನೂತನ ಆತ್ಮೀಕ ಜೀವಿತವನ್ನು ಪಡೆದುಕೊಳ್ಳಬೇಕು. ಅದರ ನಂತರವಷ್ಟೇ ಅವರಿಗೆ ನೂತನ ಮನಸ್ಸನ್ನು ಸಹ ಹೊಂದಿಕೊಳ್ಳಲು ಸಾಧ್ಯವಾಗುತ್ತದೆ.

ಈ ಎಫೆಸದ ಕ್ರೈಸ್ತರು ನೂತನ ಆತ್ಮೀಕ ಜೀವಿತವನ್ನು ಹೊಂದಿದ್ದರಾದ್ದರಿಂದ ಈಗ ಅವರಿಗೆ ನೂತನ ಮನಸ್ಸುಗಳ ಅಗತ್ಯವಾಗಿತ್ತು. ನೂತನ ಜನನ, ನೂತನ ಜೀವನ, ನೂತನ ಮನಸ್ಸು. "ನೂತನ ಮನಸ್ಸು" ಹೊಂದಿದವರಾಗಿ ನಾವು ದೇವರ ವಾಕ್ಯವನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಶಕ್ತರಾಗುತ್ತೇವೆ. ನಾವು ಕತ್ತಲೆಯಲ್ಲಲ್ಲ; ಆದರೆ ಬೆಳಕಿನಲ್ಲಿ ನಡೆಯುವದಕ್ಕೂ, ಅಜ್ಞಾನದಲ್ಲಲ್ಲ, ಆದರೆ ಸತ್ಯದಲ್ಲಿ ನಡೆಯುವದಕ್ಕೆ ಹೆಚ್ಚು ಶಕ್ತರಾಗುತ್ತೇವೆ.

**24** ಪೂರ್ವಪಾಪಾಧೀನ ಸ್ವಭಾವವನ್ನು ತೆಗೆದುಹಾಕಿಬಿಟ್ಟವರಾಗಿ ನಾವು ನಂತರ ನೂತನ ಸ್ವಭಾವವನ್ನು ಧರಿಸಿಕೊಳ್ಳಬೇಕು. ಅಂದರೆ, ನಾವು ನಮ್ಮ ನೂತನ ಆತ್ಮೀಕ ಜೀವನದ ಆಲೋಚನೆಗಳು, ಅಭಿಲಾಷೆಗಳು,ಮತ್ತು ಕೃತ್ಯಗಳನ್ನು "ಧರಿಸಿಕೊಳ್ಳಬೇಕು", ಆ ನೂತನ ಆತ್ಮೀಕ ಜೀವನವು ಪವಿತ್ರಾತ್ಮನ ಅಧೀನದಲ್ಲಿರುತ್ತದೆ. ಒಂದು ವೇಳೆ ಪೂರ್ವಸ್ವಭಾವವನ್ನು ತೆಗೆದುಹಾಕಿ ನೂತನ ಸ್ವಭಾವವನ್ನು ಧರಿಸಿಕೊಳ್ಳದಿದ್ದರೆ, ನಾವು ಬೆತ್ತಲೆಯಾಗಿರುವೆವು ! ಅನೇಕ ಜನರು ಪೂರ್ವಸ್ವಭಾವವನ್ನು ತೆಗೆದುಹಾಕಲು ಪ್ರಯತ್ನಿಸುತ್ತಾರೆ. ಆದರೆ ಅವರು ನೂತನ ಸ್ವಭಾವವನ್ನು ಧರಿಸಿಕೊಳ್ಳುವದಕ್ಕೆ ಸಂದೇಹ ಪಡುತ್ತಾರೆ. ಅವರು ತಮ್ಮ ಪೂರ್ವ ಧರ್ಮ, ತಮ್ಮ ಪೂರ್ವ ನಂಬಿಕೆಗಳು,ತಮ್ಮ ಪೂರ್ವ ಮಾರ್ಗಗಳನ್ನು ಬಿಟ್ಟುಬಿಡುತ್ತಾರೆ. ಆದರೆ ನಂತರ ಅವರು ನೂತನ ಮಾರ್ಗವನ್ನು ಅನುಸರಿಸುವದಿಲ್ಲ. ಅವರು ಅಲ್ಲಿಯೂ ಇಲ್ಲ, ಇಲ್ಲಿಯೂ ಇರುವದಿಲ್ಲ, ಅವರು ಉದ್ದೇಶರಹಿತರಾಗಿ ಜಾರಿಕೊಳ್ಳುತ್ತಾರೆ ಮತ್ತು ಕ್ರಮೇಣವಾಗಿ ಅವರು ತಮ್ಮ ಹಳೆಯ ಜೀವಿತದೊಳಗೆ ಎಳೆಯಲ್ಪಡುತ್ತಾರೆ. ಮತ್ತು ಅವರ ಅಂತಿಮ ಸ್ಥಿತಿಯು ಮೊದಲಿನಕ್ಕಿಂತಲೂ ಕೆಟ್ಟದ್ದಾಗಿರುತ್ತದೆ (ಮತ್ತಾಯ 12:43-45, 2 ಪೇತ್ರ 2:20 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಯೇಸುವಿನಲ್ಲಿ ನಂಬಿಕೆಯಿಟ್ಟು ಹೊಸದಾಗಿ ಹುಟ್ಟಿರುವವರಾದ ನಾವೆಲ್ಲರೂ ಈಗಾಗಲೇ "ನೂತನ ಜನರು" ನೂತನ ಸೃಷ್ಟಿಗಳೂ ಆಗಿದ್ದೇವೆ (2 ಕೊರಿಂಥ 5:17). ಆದರೆ ಈಗ ನಾವು ನೂತನ ಜನರಂತೆ–ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳವರಾಗಿಯೂ ಪರಿಶುದ್ಧತೆಯುಳ್ಳವರಾಗಿಯೂ ನಿರ್ಮಿಸಲ್ಪಟ್ಟಿರುವ ನೂತನ ಜನರಂತೆ– ಜೀವಿಸಬೇಕು.

ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ ಎಂದು ಪೌಲನು ಹೇಳುತ್ತಾನೆ. ನಾವು ಈ "ನೂತನ ಸ್ವಭಾವವನ್ನು" ಒಂದು ನೂತನ ಸಮವಸ್ತ್ರಕ್ಕೆ ಹೋಲಿಸಬಹುದು. ಆಸ್ಪತ್ರೆಯಲ್ಲಿ ದಾಯಿಗಳು ತಮ್ಮದೇ ಆದ ವಿಶೇಷ ಸಮವಸ್ತ್ರಗಲನ್ನು

ಧರಿಸುತ್ತಾರೆ. ಆರಕ್ಷಕರಿಗೆ ಅವರ ಸಮವಸ್ತ್ರಗಳಿರುತ್ತವೆ. ಸೆರೆಮನೆಯಲ್ಲಿ ಬಂಧಿಗಳು ತಮ್ಮ ಸಮವಸ್ತ್ರಗಲನ್ನು ಹೊಂದಿರುತ್ತಾರೆ. ಮತ್ತು ಕ್ರೈಸ್ತರು–ಅಂದರೆ, ನೂತನ ಪು ರುಷರು ಮತ್ತು ಸ್ತ್ರೀಯರು–ತಮ್ಮದೇ ಆಗಿರುವ "ಸಮವಸ್ತ್ರಗಳನ್ನು" ಹೊಂದಿದ್ದಾರೆ. ಕ್ರಿಸ್ತನ ಸಮವಸ್ತ್ರವು ಯೇಸು ಕ್ರಿಸ್ತನೇ–ಕ್ರಿಸ್ತನ ಮನಸ್ಸು, ಕ್ರಿಸ್ತನ-ನಡವಳಿಕೆ. ಕ್ರೈಸ್ತರು ತಮ್ಮನ್ನು ಕ್ರಿಸ್ತನಿಂದ "ಧರಿಸಿಕೊಳ್ಳಬೇಕು".

ಒಬ್ಬನ ಸಮವಸ್ತ್ರವು ಆತನ ವೃತ್ತಿಗೆ ಸ್ರಿಹೊಂದುವ ಪ್ರಕಾರವೇ ಒಬ್ಬ ಕ್ರೈಸ್ತನ ನಡವಳಿಕೆಯು (ಸಮವಸ್ತ್ರವು) ಆತನ "ವೃತ್ತಿಯನ್ನು" ಹೋಲಬೇಕು, ಅದೇನೆಂದರೆ, ದೇವರ ಮಗುವಾಗಿರುವದೇ. ಒಬ್ಬ ವ್ಯಕ್ತಿಯು ಧರಿಸುವಂಥ ಸಮ ವಸ್ತ್ರದಿಂದಲೇ ಆತನ ವೃತ್ತಿಯೇನೆಂಬುದನ್ನು ನಾವು ಹೇಳಬಲ್ಲೆವು . ಕ್ರೈಸ್ತರಾದ ನಾವು ಒಬ್ಬ ಕ್ರೈಸ್ತನ "ಸಮವಸ್ತ್ರ"(ನಡವಳಿಕೆ) ಧರಿಸಿಕೊಳ್ಳದಿದ್ದರೆ ಜನರು ನಮ್ಮನ್ನು ಕ್ರೈಸ್ತರೆಂದು ಹೇಗೆ ಹೇಳುವರು? ಅವರಿಗೆ ಸಾಧ್ಯವಾಗುವದಿಲ್ಲ. ಒಬ್ಬ "ನೂತನ ಮನುಷ್ಯನು" ನೂತನ ವಸ್ತ್ರಗಳನ್ನು ಧರಿಸಿಕೊಳ್ಳಬೇಕು. ಒಬ್ಬ ಕೈದಿಯು ಸೆರೆಮನೆಯಿಂದ ಬಿಡುಗಡೆಗೊಳಿಸಲ್ಪಡುವಾಗ ಆತನು ಮೊದಲು ಮಾಡುವ ಸಂಗತಿಯಾವು ದು?ಆತನು ತನ್ನ ಸೆರೆಮನೆಯ ವಸ್ತ್ರಗಳನ್ನು ತೆಗೆದುಹಾಕಿ ನೂತನ ವಸ್ತ್ರಗಳನ್ನು ಧರಿಸಿಕೊಳ್ಳುತ್ತಾನೆ! ಅದೇ ರೀತಿಯಲ್ಲಿ, ಪಾಪ ಮತ್ತು ಸೈತಾನನ "ಸೆರೆಮನೆಯಿಂದ" ಬಿಡಿಸಲ್ಪಟ್ಟಿರುವ ವಿಶ್ವಾಸಿಗಳಾದ ನಾವು ನಮ್ಮ ಸೆರೆಮನೆಯ ವಸ್ತ್ರಗಳನ್ನು ತೆಗೆದುಹಾಕಿ ಕ್ರಿಸ್ತನನ್ನು–ನಮ್ಮ ನೂತನ ವಸ್ತ್ರಗಳನ್ನು–ಧರಿಸಿಕೊಳ್ಳಬೇಕು (ರೋಮ 13:14 ಮತ್ತು ವ್ಯಾಖ್ಯಾನ ನೋಡಿರಿ).

**25** ಈಗ ಪೌಲನು ನಾವು ತೆಗೆದುಹಾಕಬೇಕಾದ ಪೂರ್ವಸ್ವಭಾವದ ಮತ್ತು ನಾವು "ಧರಿಸಿಕೊಳ್ಳಬೇಕಾದ" ನೂತನ ನಡವಳಿಕೆಗೆ ಸಂಬಂಧಿಸಿದ ಕೆಲವು ಉದಾಹರಣೆಗಳನ್ನು ನೀಡಿತ್ತಾನೆ.

ಮೊದಲನೆಯದಾಗಿ, ಸುಳ್ಳಾಡುವದನ್ನು ಬಿಟ್ಟುಬಿಡಬೇಕು ಎಂದು ಪೌಲನು ಹೇಳುತ್ತಾನೆ. ಬದಲಾಗಿ, ಸತ್ಯವನ್ನೇ ಆಡಬೇಕು. ನಾವು ಯಾವಾಗಲೂ ಪ್ರತಿಯೊಂದು ಪರಸ್ಥಿತಿಯಲ್ಲಿಯೂ ಸತ್ಯವನ್ನಾಡಬೇಕು. ಎಷ್ಟು ಸಾರಿ ನಾವು ನಮ್ಮ ದೋಷಗಳನ್ನು ಹಾಗು ಪಾಪಗಳನ್ನು ಬಚ್ಚಿಟ್ಟುಕೊಳ್ಳಬೇಕೆಂದು ಸತ್ಯವನ್ನು ಅಪಾರ್ಥಗೊಳಿಸುತ್ತೇವೆ! ಇದು ಜರಿಗದಿರಲಿ, ಸತ್ಯವನ್ನು ಅಪಾರ್ಥಗೊಳಿಸುವದೆಂದರೆ ಸುಳ್ಳಾಡಿದ ಹಾಗಿರುತ್ತದೆ.

ಸುಳ್ಳಾಡುವದರಿಂದ ದೂರವಿದ್ದರೆ ಮಾತ್ರ ಸಾಲದು, ನಾವು ಇಡೀ ಸತ್ಯವನ್ನು ಮಾತಾಡಬೇಕು–ನಾವು ಸತ್ಯದ ಅರ್ಧಭಾಗವನ್ನು ಹಿಡಿದಿಟ್ಟುಕೊಳ್ಳುವಾಗ ಹಲವಾರು ವೇಳೆ ನಾವು – ವಾಸ್ತವದಲ್ಲಿ ನಾವು ಸುಳ್ಳಾಡಿರದಿದ್ದಾಗ್ಯು–ಇತರರನ್ನು ಒಂದು ಸುಳ್ಳನ್ನು ನಂಬುವಂತೆ ನಡಿಸುತ್ತೇವೆ.

ನಾವು ಸತ್ಯದ ಅರ್ಧಭಾಗವನ್ನು ಬಚ್ಚಿಟ್ಟುಕೊಳ್ಳುವದರ ಮೂಲಕ ಇತರರನ್ನು ವಂಚಿಸುತ್ತೇವೆ. ಈ ರೀತಿಯಲ್ಲಿ ಬೇಕೆಂದೇ ಇತರರನ್ನು ವಂಚಿಸುವದು ಸುಳ್ಳನ್ನು ಹೇಳುವಂತೆಯೇ ಇರುತ್ತದೆ. ಸತ್ಯವನ್ನು ಆಡುವದಕ್ಕೆ ಇನ್ನೊಂದು ಅರ್ಥವಿರುತ್ತದೆಃ ಇದರ ಅರ್ಥವೇನೆಂದರೆ, ನಮ್ಮ ಮಾತನ್ನು, ನಮ್ಮ ವಾಗ್ದಾನಗಳನ್ನು ಕಾಪಾಡಿಕೊಳ್ಳುವದೇ. ನಮ್ಮ ನಡುವೆ ವಿಶ್ವಾಸವಿರಬೇಕು. ಮತ್ತು ಒಬ್ಬನ ಮಾತನ್ನು ಕಾಪಾಡಿಕೊಳ್ಳುವದೇ ವಿಶ್ವಾಸದ ಆಸ್ತಿವಾರವಾಗಿದೆ.

**26** ನಿಮ್ಮ ಕೋಪದಲ್ಲಿ ಪಾಪಮಾಡಬೇಡಿರಿ. ಇದು ಕೀರ್ತನೆಗಳುಳ:ಳ ರಲ್ಲಿನ ಉಲ್ಲೇಖವಾಗಿದೆ. ನಾವು ಕೋಪಮಾಡಿಕೊಂಡಾಗ ನಮ್ಮ ಕೋಪವು ತಪ್ಪಿನ ಮೇಲೆಯೇ ಹೊರತು ತಪ್ಪುಮಾಡಿದವನ ಮೇಲಲ್ಲ, ಎಂಬದನ್ನು ನಾವು ಖಚಿತಪಡಿಸಿಕೊಳ್ಳಬೇಕು. ಒಬ್ಬ ವ್ಯಕ್ತಿಯ ಮೇಲೆ ಕೋಪಮಾಡಿಕೊಳ್ಳುವದು–ಆತನ ತಪ್ಪು ಎಷ್ಟೇ ದೊಡ್ಡದಾಗಿದ್ದರೂ ಚಿಂತೆಯಿಲ್ಲ–ಅದು ನಮ್ಮ ಭಾಗಕ್ಕೆ ಯಾವಾಗಲೂ ಒಂದು ಪಾಪವಾಗಿರುತ್ತದೆ[19] ನಾವು ತಪ್ಪುಮಾಡಿದವನನ್ನು ಕ್ಷಮಿಸಬೇಕೆ ಹೊರತು ಆತನೊಂದಿಗೆ ಕೋಪಮಾಡಿಕೊಳ್ಳಬಾರದು. ನಾವು ಪಾಪವನ್ನು ದ್ವೇಶಿಸಬೇಕು, ಆದರೆ ಪಾಪಿಯನ್ನು ಪ್ರೀತಿಸಬೇಕು. ಕ್ರಿಸ್ತನು ನಮ್ಮ ವಿಷಯದಲ್ಲಿ ಹಾಗೆಯೇ ನಡೆದುಕೊಂಡನು. ಒಬ್ಬ ವ್ಯಕ್ತಿಯು ಪಾಪ ಅಥವಾ ತಪ್ಪಿನ ವಿಷಯದಲ್ಲಿ ನಮ್ಮ ಕೋಪವು ಸರಿಯಾದದ್ದೇ ಆಗಿದ್ದರೂ ನಾವು ನಮ್ಮ ಕೋಪವನ್ನು ದೀರ್ಘಕಾಲ ಇಟ್ಟುಕೊಳ್ಳಬಾರದು. ನಮ್ಮ ಕೋಪವು ಸೂರ್ಯನು ಮುಳುಗುವಷ್ಟರಲ್ಲಿ ಅಂತ್ಯಗೊಳ್ಳಬೇಕು. ಇಲ್ಲವಾದರೆ, ಸೈತಾನನು ನಮ್ಮ ಹೃದಯದೊಳಗೆ ಪ್ರವೇಶಿಸುವದಕ್ಕೆ ಅವಕಾಶವನ್ನು ಪಡೆದು ನಮ್ಮ ನೀತಿಯುಳ್ಳ ಕೋಪವನ್ನು ಪಾಪಮಯ ಕೋಪವಾಗಿ ಪರಿವರ್ತಿಸುವನು. ನಾವು ನಮ್ಮ ಕೋಪವನ್ನು ಹೇಗೆ ಅಂತ್ಯಗೊಳಿಸಬಲ್ಲೆವು ? ತಪ್ಪು ಮಾಡಿದವನನ್ನು ನಮ್ಮ ಹೃದಯಪೂರ್ವಕವಾಗಿ ಸಂಪೂರ್ಣ ಕ್ಷಮಿಸುವದರ ಮೂಲಕವೇ.

**27** ಸೈತಾನನು ನಮ್ಮ ಕೋಪವನ್ನು ತನ್ನ ಉದ್ದೇಶಗಳಿಗಾಗಿ ಉಪಯೋಗಿಸುವ ಅವಕಾಶಕ್ಕಾಗಿ ಯಾವಾಗಲೂ ಹುಡುಕುತ್ತಿರುತ್ತಾನೆ. ನಾವು ಕೋಪಗೊಳ್ಳುವಾಗ ಸಾಮಾನ್ಯವಾಗಿ ನಮಗೆ ಕೋಪವು ಂಟುಮಾಡಿದ ವ್ಯಕ್ತಿಯ ವಿರುದ್ಧವಾಗಿ ಮಾತಾಡಲಾರಂಬಿಸುತ್ತೇವೆ. ಇತರರು ನಮ್ಮ ಮಾತುಗಳನ್ನು ಕೇಳಿ ಆ ವ್ಯಕ್ತಿಯ ವಿಷಯದಲ್ಲಿ ಕೆಟ್ಟ ವರದಿಗಳನ್ನು ಹಬ್ಬಿಸುತ್ತಾರೆ. ಇದು ಸಂಭವಿಸುವಾಗ ಸೈತಾನನಿಗೆ ಬಹಳ ಸಂತೋಷವಾಗುತ್ತದೆ. ಯಾಕೆಂದರೆ, ಶೀಘ್ರ್ರವೇ ಹೆಚ್ಚು ಹೆಚ್ಚು ಕ್ರೈಸ್ತರು ಒಬ್ಬರಿಗೊಬ್ಬರು ವಿರೋಧವಾಗಿ ಮಾತಾಡಲಾರಂಭಿಸುವರು. ಇದು ಸಭೆ ಅಥವಾ ಕ್ರೈಸ್ತ ತಂಡವನ್ನು ಇಬ್ಭಾಗಿಸಲು ಸೈತಾನನ ಅತಿಪರಿಣಾಮಕಾರಿಯಾದ ವಿಧಾನವಾಗಿರುತ್ತದೆ.

ಇತರರ ವಿರುದ್ಧವಾಗಿ ಮಾತಾಡುವದು ತಪ್ಪು ಮಾತ್ರವೇ ಅಲ್ಲ, ಅಂಥ ಮಾತುಗಳನ್ನು ಕೇಳಿಸಿಕೊಳ್ಳುವದು ಸಹ ತಪ್ಪಾಗಿರುತ್ತದೆ. ಇನ್ನೊಬ್ಬ ವ್ಯಕ್ತಿಯ ಬಗ್ಗೆ ನಕಾರಾತ್ಮಕವಾಗಿ ಮಾತಾಡುವದು – ಅದು ಸತ್ಯವಾಗಿದ್ದರೂ–ನಿಂದನೆಯಾಗುತ್ತದೆ. ಮತ್ತು ನಿಂದನೆ ಮಾಡುವದು ಘೋರ ಪಾಪವಾಗಿದೆ (ರೋಮ 1:30,1 ಕೊರಿಂಥ 5:11,ಎಫೆಸ 4:31). ಸೈತಾನನು

ಯಾವಾಗಲೂ ಸಭೆಯನ್ನು ಹಾಳು ಮಾಡುವದಕ್ಕೆ ನಮ್ಮ ನಿಂದನೆ ಮಾಡುವಿಕೆಯನ್ನು ಒಂದು ಸಾಧನವನ್ನಾಗಿ ಉಪಯೋಗಿಸುತ್ತಾನೆ.

**28** ಪೌಲನು "ಪೂರ್ವ ನಡವಳಿಕೆಯ" ಗೆ ನೀಡುವ ಎರಡನೆಯ ಉದಾಹರಣೆಯು ಕಳ್ಳತನ. ನತನ ನಡವಳಿಕೆಯು ಕೆಲಸವಾಗಿದೆ-ಯಾವದಾದರೊಂದು ಒಳ್ಳೇ ಉದ್ಯೋಗವನ್ನು ಮಾಡುವದಾಗಿದೆ. ಕೇವಲ ಕಳ್ಳತನವನ್ನು ಬಿಟ್ಟರೆ ಸಾಕಾಗದು, ಒಬ್ಬನು ಕೆಲಸ ಮಾಡಲಾರಂಭಿಸಬೇಕು. ಸೋಮಾರಿತನಕ್ಕೆ ಸ್ಥಳವಿಲ್ಲ. ನಾವು ನಮ್ಮ ಕುಟುಂಬಗಳಿಗೆ ಒದಗಿಸುವದಕ್ಕಾಗಿ ಮಾತ್ರವೇ ದುಡಿಯದೇ ಕೊರತೆಯಲ್ಲಿರುವ ಇತರರಿಗೆ ಒದಗಿಸುವದಕ್ಕಾಗಿ ಸಹ ದುಡಿಯಬೇಕು. ಒಂದು ಕ್ಷಣ ಕಳ್ಳತನ ಮಾಡುವದು, ಅನಂತರ ಇನ್ನೊಬ್ಬರಿಗೆ ಕೊಡುವದು: ಅಂಥ ವ್ಯಕ್ತಿಯ ಜೀವಿತವನ್ನು ಕ್ರಿಸ್ತನ ಶಕ್ತಿ ಮಾತ್ರವೇ ಬದಲಾಯಿಸಬಲ್ಲದು!

**29** "ಪೂರ್ವ ನಡವಳಿಕೆಯ" ಮೂರನೆಯ ಉದಾಹರಣೆಯು ಕೆಟ್ಟ ಮಾತನ್ನಾಡುವದು. ನೂತನ ನಡವಳಿಕೆಯು ಭಕ್ತಿವೃದ್ಧಿಯನ್ನು ಮಾಡುವಂಥ ಕಾಲೋಚಿತವಾದ ಮಾತನ್ನು.... ಕೇಳುವವರ ಹಿತಕ್ಕಾಗಿ ಆಡುವದಾಗಿದೆ. ನಾವು ಮಾತಾಡುವದೆಲ್ಲವೂ ಈ ಮಟ್ಟದಿಂದ ವಿವೇಚಿಸಲ್ಪಡಲಿ: ಇದು ಯಾವ ವಿಧದಲ್ಲಿಯಾದರೂ ಇತರರಿಗೆ ಭಕ್ತಿವೃದ್ಧಿಯನ್ನು, ಪ್ರೋತ್ಸಾಹ, ಪ್ರಯೋಜನವನ್ನು ಉಂಟು ಮಾಡುವಲ್ಲಿ ಸಹಾಯವಾಗುತ್ತದೋ? ಹಾಗೆ ಮಾಡುವದಾದರೆ ನಾವು ಅದನ್ನು ಆಡೋಣ, ಇಲ್ಲವಾದರೆ ನಾವು ಮೌನವಾಗಿರೋಣ.

**30** "ಪೂರ್ವ ಸ್ವಭಾವದ" ಇನ್ನೊಂದು ಉದಾಹರಣೆಯು ಬಹಳ ವಿಶಾಲವಾಗಿರುತ್ತದೆ. ನಿಜವಾಗಿಯೂ ಇದು ನಮ್ಮ ಎಲ್ಲಾ "ಪೂರ್ವ ನಡಾವಳಿಗಳ" ಸಮಗ್ರತೆಯಾಗಿದೆ. ಪೌಲನು ಅದನ್ನು ಪವಿತ್ರಾತ್ಮನಿಗೆ "ದುಃಖಪಡಿಸುವದು" ಎಂದು ಕರೆಯುತ್ತಾನೆ. ದೇವರ ಪವಿತ್ರಾತ್ಮನನ್ನು ದುಃಖಪಡಿಸಬೇಡಿರಿ ಎಂದು ಪೌಲನು ಬರೆಯುತ್ತಾನೆ. ನಾವು ಪಾಪಮಾಡಿದಾಗಲೆಲ್ಲಾ ಪವಿತ್ರಾತ್ಮನನ್ನು ದುಃಖಪಡಿಸುವವರಾಗಿದ್ದೇವೆ. ಅಂದರೆ, ನಾವು ಪವಿತ್ರಾತ್ಮನನ್ನು ತೊಂದರೆ ಪಡಿಸಿ, ನಿರಾಶೆಗೊಳಿಸಿ ಅವಮಾನಿಸುವವರಾಗಿದ್ದೇವೆ. ಪವಿತ್ರಾತ್ಮನು ಪ್ರತಿಯೊಂದು ರೀತಿಯ ಅಶುದ್ಧತೆಯಿಂದ ದುಃಖಪಡುವವನಾಗಿದ್ದಾನೆ.

ನಾವು ಪವಿತ್ರಾತ್ಮನನ್ನು ದುಃಖಪಡಿಸುವಾಗಲೆಲ್ಲಾ ಆತನು ನಮ್ಮಿಂದ ದೂರಹೋಗುತ್ತಾನೆ. ಕ್ರೈಸ್ತರಾದ ನಾವು ನಮ್ಮ ಆತ್ಮೀಕ ಜೀವಿತಗಳಲ್ಲಿ ಉಗುರು ಬೆಚ್ಚಗಾಗುವಾಗಲೆಲ್ಲಾ ನಮ್ಮ ಅಭಿಮಾನ ಅಥವಾ ಉತ್ಸಾಹ ಕಡಿಮೆಯಾಗುವಾಗಲೆಲ್ಲಾ ಅದಕ್ಕೆ ಒಂದೇ ಕಾರಣವಿರಬಹುದಾಗಿದೆ, ಅದೇನೆಂದರೆ, ಒಂದಿಲ್ಲಾ ಒಂದು ವಿಧದಲ್ಲಿ ನಾವು ಪವಿತ್ರಾತ್ಮನನ್ನು ದುಃಖಪಡಿಸಿದ್ದೇ ಆಗಿರುತ್ತದೆ (ಯೇಶಾಯ 63:10). ನೆನಪಿರಲಿ, ನಾವು ಪವಿತ್ರಾತ್ಮನ ಮುದ್ರೆಯನ್ನು ಹೊಂದಿದವರಾಗಿದ್ದೇವೆ (ಎಫೆಸ 1:13). ಇಲ್ಲಿ ಪೌಲನು ಅದನ್ನೇ ಹೇಳುತ್ತಾನೆ. ನಾವು ಪವಿತ್ರಾತ್ಮನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆಹೊಂದಿದವರಾಗಿದ್ದೇವೆ [20] –ರಕ್ಷಣೆಯ ದಿನಕ್ಕಾಗಿ ಮುದ್ರೆ ಹೊಂದಿದ್ದೇವೆ. ಪವಿತ್ರಾತ್ಮನ ಮುದ್ರೆಯು ಪರಲೋಕಕ್ಕೆ ಹೋಗಲು ನಮ್ಮ ಪರವಾನಿಗೆಯ ಪತ್ರವಾಗಿದೆ. ನಾವು ಅದನ್ನು ಕಳೆದುಕೊಳ್ಳದಿರೋಣ!.

**31-32** ಪೌಲನು 31ನೇ ವಚನದಲ್ಲಿ ಪೂರ್ವ ನಡವಳಿಕೆಯ ಮತ್ತೊಂದು ಉದಾಹರಣೆನ್ನು ಕೊಡುತ್ತಾನೆ, 32ನೇ ವಚನದಲ್ಲಿ ಆತನು ನೂತನ ನಡವಳಿಕೆಯ ಉದಾಹರಣೆಯನ್ನು ಕೊಡುತ್ತಾನೆ (ಕೊಲೆಸ್ಸೆ 3:12-13 ಮತ್ತು ವ್ಯಾಖ್ಯಾನ ನೋಡಿರಿ). ನಾವು ಇನ್ನೂ ಪಾಪಿಗಳಾಗಿದ್ದಾಗಲೇ ದೇವರು ನಮ್ಮನ್ನು ಪ್ರೀತಿಸಿದನು (ರೋಮ 5:8 ಮತ್ತು ವ್ಯಾಖ್ಯಾನ ನೋಡಿರಿ). ಆತನು ಕ್ರಿಸ್ತನ ನಿಮಿತ್ಯವಾಗಿ ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಾವು ಇತರರನ್ನು ಕ್ಷಮಿಸದಿದ್ದರೆ ದೇವರು ನಮ್ಮನ್ನೂ ಕ್ಷಮಿಸುವದಿಲ್ಲ ಎಂದು ಯೇಸು ನಮಗೆ ಎಚ್ಚರಿಸುತ್ತಾನೆ (ಮತ್ತಾಯ 6:12,14-15 ಮತ್ತು ವ್ಯಾಖ್ಯಾನ ನೋಡಿರಿ). ಈ ಎಚ್ಚರಿಕೆಗೆ ಕಿವಿಗೊಡೋಣ.

---

## ಅಧ್ಯಾಯ - 5

### ಬೆಳಕಿನ ಮಕ್ಕಳಂತೆ ಜೀವಿಸುವದು (5:1-21)

**1-2** ದೇವರು ನಮ್ಮೆಡೆಗೆ ಕೃಪೆಯಿಂದ ನಡೆದುಕೊಂಡಿರುವ ಪ್ರಕಾರವೇ ನಾವು ಸಹ ದೇವರನ್ನು ಅನುಸರಿಸುವವರಾಗಿ ಇತರರೆಡೆಗೆ ಕೃಪೆಯಿಂದ ವರ್ತಿಸಬೇಕು. ಕ್ರಿಸ್ತನು ನಮ್ಮನ್ನು ಪ್ರೀತಿಸಿರುವಂತೆಯೇ ನಾವೂ ಇತರರನ್ನು ಪ್ರೀತಿಸಬೇಕು. ಕ್ರಿಸ್ತನು ನಮ್ಮೆಲ್ಲರಿಗೋಸ್ಕರ ತನ್ನನ್ನೇ ದೇವರಿಗೆ ಕಾಣಿಕೆಯಾಗಿಯೂ ಯಜ್ಞವಾಗಿಯೂ ಅರ್ಪಿಸಿಕೊಂಡದ್ದೇ ಆತನ ಪ್ರೀತಿಗೆ ಅತಿ ದೊಡ್ಡ ಸಾಕ್ಷಿಯಾಗಿತ್ತು. ಅದೇ ರೀತಿಯಾಗಿನಾವು ಸಹ ಇತರರಿಗಾಗಿ ನಮ್ಮನ್ನು ಒಪ್ಪಿಸಿಕೊಟ್ಟು ನಮ್ಮ ಜೀವಿತಗಳನ್ನು ದೇಹಗಳನ್ನೂ ದೇವರಿಗೆ ಕಾಣಿಕೆಯಾಗಿಯೂ ಯಜ್ಞವಾಗಿಯೂಅರ್ಪಿಸಿಕೊಳ್ಳಬೇಕು (ರೋಮ 12:1 ಮತ್ತು ವ್ಯಾಖ್ಯಾನ ನೋಡಿರಿ).

**3** ಈ ವಚನದಲ್ಲಿ ಪೌಲನು ಜಾರತ್ವ, ಬಂಡುತನ, ಮತ್ತು ದ್ರವ್ಯಾಸೆ ಇವುಗಳನ್ನು ಪ್ರಸ್ತಾಪಿಸುತ್ತಾನೆ. ಆತನು ಎಫೆಸದವರಿಗೆ ಅಂತಹಪಾಪಗಳನ್ನು ಮಾಡಬಾರದೆಂದಷ್ಟೇ ಹೇಳುವದಿಲ್ಲ, ಅವರ ಜೀವಿತಗಳಲ್ಲಿ ಈ ಕೆಟ್ಟಕಾರ್ಯಗಳು

ಸುದ್ದಿ ಅಥವಾ ಸುಳಿಯು ಸಹ ಇರಬಾರದು ಎಂದು ಅವರಿಗೆ ಹೇಳುತ್ತಾನೆ. ಈ ದುಷ್ಟಕಾರ್ಯಗಳ ಹೆಸರಾದರೂ ಅವರೊಳಗೆ ಇರಬಾರದು. ನಾವು ದೇವರ ಮಕ್ಕಳಾಗಿರುವದರಿಂದ ಪರಿಶುದ್ಧರಾಗಿ ಮಾಡಲ್ಪಟ್ಟಿದ್ದೇವೆ. ಆದದರಿಂದ, ನಾವು ಪರಿಶುದ್ಧವಾದ ಜೀವಿತಗಲನ್ನು ನಡೆಸಬೇಕು. ನಾವು ಯಾವದಾದರೂ ಅಶುದ್ಧವಾದುದನ್ನು ಮಾಡುವ ಶೀಧನೆಗೊಳಗಾಗುವ ಕ್ಷಣದಲ್ಲಿ ತಕ್ಷಣವೇ ನಾವು ಯಾರಾಗಿದ್ದೇವೆಂಬದನ್ನು ಜ್ಞಾಪಿಸಿಕೊಳ್ಳಬೇಕು. ನಾವು ದೇವರ ಪರಿಶುದ್ಧ ಜನರಾಗಿದ್ದೇವೆ. ನಾವು ಆತನ ಮಕ್ಕಳು. ನಾವು ಇದನ್ನು ಯಾವಾಗಲೂ ನಮ್ಮಮನಸ್ಸುಗಳಲ್ಲಿ ಇಟ್ಟು ಕೊಳ್ಳುವದಾದರೆ ಶೋಧನೆಯನ್ನು ಜಯಿಸುವದರಲ್ಲಿ ನಮಗೆ ಸಹಾಯ ಸಿಕ್ಕುತ್ತದೆ. ದೇವರು ನಮ್ಮೊಬ್ಬೊಬ್ಬರಿಗೂ ಹೇಳುವದೇನೆಂದರೆ, "ನೀನು ನನ್ನ ಮಗು, ಆದದರಿಂದ, ನನ್ನ ಮಗುವಿನಂತೆ ನಡೆದುಕೊ" (2 ಕೊರಿಂಥ 6:17-18 ಮತ್ತು ವ್ಯಾಖ್ಯಾನ ನೋಡಿರಿ).

4 ಕ್ರೈಸ್ತರು ಹೊಲಸು ಮಾತು, ಹುಚ್ಚು ಮಾತು, ಕುಚೋದ್ಯದ ಮಾತು ಇವುಗಳಲ್ಲಿ ತೊಡಗಿರಬಾರದು. ಪೌಲನು ಇಲ್ಲಿ ಸೂಚಿಸುವ ಕುಚೋದ್ಯವು ಯಾವ ರೀತಿಯದ್ದೆಂದರೆ, ಅದು ಒರಟುತನವುಳ್ಳದ್ದೂ ಇತರರಿಗೆ ನೋವುಂಟು ಮಾಡುವ ಹಾಗು ಪರಿಹಾಸ್ಯ ಮಾಡುವಂಥದ್ದೂ ಆಗಿದೆ. ಹೇಗಿದ್ದರೂ, ಕ್ರೈಸ್ತರು ಯಾವದೇ ರೀತಿಯ ಹಾಸ್ಯಗಳನ್ನು ಮಾಡಲೇಬಾರದೆಂದು ಪೌಲನ ತಾತ್ಪರ್ಯವಲ್ಲ. ಪ್ರತಿಯೊಬ್ಬರನ್ನೂ–ಹಾಸ್ಯದ ವಿಷಯವಾಗಿರುವ ವ್ಯಕ್ತಿಯನ್ನು ಸಹ–ನಗುವಂತೆ ಮಾಡುವ ಒಂದು ವಿಧದ ಹಾಸ್ಯ ಇರುತ್ತದೆ. ಕ್ರೈಸ್ತರು ಎಲ್ಲಾ ವೇಳೆಗಳಲ್ಲೂ ಖಿನ್ನರಾಗಿಯೂ ಗಂಬೀರವಾಗಿಯೂ ಇರಬೇಕಾಗಿಲ್ಲ. ಕ್ರೈಸ್ತರು ನಗುತ್ತಾ ಸಂತೋಷದಿಂದ ಕಾಲಕಳೆಯುತ್ತಾ ಒಬ್ಬರ ಮೇಲೊಬ್ಬರು ಹಾಸ್ಯ ಮಾಡುವದರಲ್ಲಿಯೂ ಯಾವ ತಪ್ಪೂ ಇರುವದಿಲ್ಲ. ಒಂದೇ ನಿಯಮವೇನೆಂದರೆ ನಮ್ಮ ಹಾಸ್ಯವು ಕುಚೋದ್ಯವಾಗಿಯೂ ನೋವುಂಟು ಮಾಡುವದಾಗಿಯೂ ಇರಬಾರದು ಎಂಬದೇ. ಈ ವಚನದಲ್ಲಿ ಪೌಲನು ಎಲ್ಲಾ ವಿಧವಾದ ಭಕ್ತಿಹೀನ ಸಂಭಾಷಣೆಗಳಿಗೆ ದೂರವಾಗಿರಬೇಕೆಂದು ಕ್ರೈಸ್ತರನ್ನು ಎಚ್ಚರಿಸುತ್ತಾನೆ. ನಾವು ನಿರ್ಲಕ್ಷವಾಗಿ ಮಾತಾಡುವ ಪ್ರತಿಯೊಂದು ಮಾತನ್ನು ದೇವರು ಲೆಕ್ಕಕ್ಕೆ ತೆಗೆದುಕೊಳ್ಳುತ್ತಾನೆ (ಮತ್ತಾಯ 7:36-37 ಮತ್ತು ವ್ಯಾಖ್ಯಾನ ನೋಡಿರಿ). ನಾವು ಅರ್ಥಹೀನವಾದ ಪ್ರಾಪಂಚಿಕ ಸಂಭಾಷಣೆಗಳಲ್ಲಿ ತೊಡಗಿರುವದರ ಬದಲಾಗಿ ದೇವರು ಯೇಸು ಕ್ರಿಸ್ತನಲ್ಲಿ ನಮಗೆ ತೋರಿಸುವ ಆತನ ಮಹಾ ಪ್ರೀತಿ ಹಾಗು ಕೃಪೆಗಾಗಿ ಆತನಿಗೆ ಸಂತೋಷದಿಂದ ಉಪಕಾರ ಸ್ತುತಿ ಮಾಡುವವರಾಗಿರಬೇಕು.

5 ಲೋಭಿಯಾದ ವ್ಯಕ್ತಿಯು ವಿಗ್ರಹಾರಾಧಕನಾಗಿದ್ದಾನೆ ಎಂದು ಪೌಲನು ಹೇಳುತ್ತಾನೆ. ಲೋಭಿಯಾದ (ದ್ರವ್ಯಾಶೆಯುಳ್ಳ) ವ್ಯಕ್ತಿಯು ದೇವರಿಗೆ ಬದಲಾಗಿ ಹಣ ಮತ್ತು ಆಸ್ತಿಗಳನ್ನು "ಆರಾಧಿಸುತ್ತಾನೆ". ಆತನಿಗಾದರೋ ಹಣ ಮತ್ತು ಆಸ್ತಿಗಳು ಒಂದು ವಿಗ್ರಹದಂತಿರುತ್ತವೆ (1ಯೋಹಾನ 5:21 ಮತ್ತು ವ್ಯಾಖ್ಯಾನ ನೋಡಿರಿ). ಜಾರರು ದುರಾಚಾರಿಗಳು ವಿಗ್ರಹಾರಾಧಕರಂತಿರುವ ಲೋಭಿಗಳು ಇವರಲ್ಲಿ ಯಾರೊಬ್ಬರೂ ಕ್ರಿಸ್ತನ ಮತ್ತು ದೇವರ ರಾಜ್ಯದಲ್ಲಿ ಪ್ರವೇಶಿಸಲು ಶಕ್ತರಾಗುವದಿಲ್ಲ (1ಕೊರಿಂಥ 6:9-11, ಗಲಾತ್ಯ 5:19-21 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಖಂಡಿತವಾಗಿಯೂ ವಿಶ್ವಾಸಿಗಳಾದ ನಾವು ಅಂತಹ ದುಷ್ಕೃತ್ಯಗಳಲ್ಲಿ ತೊಡಗಿಸಿಕೊಳ್ಳಬಾರದು,ಇಲ್ಲವಾದರೆ ನಾವು ಪರಲೋಕದಲ್ಲಿರುವನಮ್ಮ ಆಧ್ಯತೆಯನ್ನುಕಳೆದುಕೊಳ್ಳುವ ಅಪಾಯಕ್ಕೆಈಡಾಗುವವರಾಗಿರುತ್ತೇವೆ (ಮತ್ತಾಯ7:21, 1ಯೋಹಾನ 2:15-17 ಮತ್ತುವ್ಯಾಖ್ಯಾನ ನೋಡಿರಿ).

6-7 ಹುರುಳಿಲ್ಲದ ಮಾತುಗಳಿಂದ ಜನರು ನಮ್ಮ ಮೋಸಗೊಳಿಸುವದಕ್ಕೆ ಯಾವಾಗಲೂ ಪ್ರಯತ್ನಿಸುತ್ತಿದ್ದಾರೆ. (ವಚನ 6). ಅವರು ನಮಗೆ "ನೀನು ಇಚ್ಚಿಸುವದನ್ನು ಮಾಡುವದರಲ್ಲಿಯೂ ಮೋಜು ಮಾಡುವದರಲ್ಲಿಯೂ ತಪ್ಪೇನಿರುವದಿಲ್ಲ. ನೀನು ಸ್ವಲ್ಪ ಪಾಪಮಾಡಿದರೇನಾಗುವದು. ಅದರ ಬಗ್ಗೆ ಚಿಂಚಿಸಬೇಡಾ. ಏನೂ ಆಗುವದಿಲ್ಲ". ಎಂದು ಹೇಳುತ್ತಾರೆ.

ಆದರೆ ಅಂಥ ಮಾತುಗಳು ಸತ್ಯದಿಂದ ಸಂಪೂರ್ಣ ದೂರವಾದವುಗಳು. ನಾವು ಪಾಪಮಾಡುವದಾದರೆ ಒಂದು ಸಂಗತಿಯಂತು ನಿಶ್ಚಯವಾಗಿ ಜರುಗುತ್ತದೆ: ದೇವರ ಕೋಪವು ನಮ್ಮ ಮೇಲೆ ಬರುತ್ತದೆ! ನಮ್ಮ ಪಾಪಗಳು ನಿತ್ಯವಾದ ಫಲಿತಗಳನ್ನು ಹೊಂದಿರುತ್ತವೆ. ದೇವರು ಪ್ರತಿಯೊಬ್ಬರಿಗೂ–ವಿಶ್ವಾಸಿಗಳಿಗೂ ಅವಿಶ್ವಾಸಿಗಳಿಗೂ–ಅವರು ಮಾಡಿದ ಎಲ್ಲಾ ಪಾಪಗಳಿಗೂ ನ್ಯಾಯ ತೀರಿಸುವನು (ರೋಮ 14:12,2ಕೊರಿಂಥ 5:10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆದದರಿಂದ, ನಾವು ಹುರುಳಿಲ್ಲದ ಮಾತುಗಳಿಂದ ಮೋಸಹೋಗದಿರೋಣ. ಹಾಗಿದ್ದರೂ, ಕ್ರೈಸ್ತರು ಆಗಾಗ ಪ್ಪವನ್ನು ಮಾಡುತ್ತಾರೆ. ನಮ್ಮಲ್ಲಿ ಯಾರೊಬ್ಬರೂ ಪಾಪವಿಲ್ಲದವರಾಗಿಲ್ಲ (1 ಯೋಹಾನ 1:8). ಆದರೆ ನಾವು ನಮ್ಮ ಪಾಪಕ್ಕಾಗಿ ಕೂಡಲೇ ಪಶ್ಚಾತಾಪ ಪಡುವದಾದರೆ ನಾವು ಕ್ಷಮಾಪಣೆಯನ್ನು ಹೊಂದಿ ಶುದ್ಧೀಕರಿಸಲ್ಪಡುವೆವು ಮತ್ತು ದೇವರ ಕೋಪವು ನಮ್ಮ ಮೇಲೆ ಬರುವದಿಲ್ಲ (ಜ್ಞಾನೋಕ್ತಿಗಳು 28:13, 1ಯೋಹಾನ 1:9). ಆದರೆ ಪಶ್ಚಾತಾಪ ಪಡದೆ ಅವಿಧೇಯರಾಗಿ ಮುಂದುವರೆಯುವವರೆಲ್ಲರ ಮೇಲೆ ಖಂಡಿತವಾಗಿಯೂ ದೇವರ ಕೋಪವು ಬರುತ್ತದೆ. ದುಷ್ಟತನವನ್ನು ನಡಿಸುವವರು ಹಲವಾರು ವೇಳೆಗಳಲ್ಲಿ ಇತರ ಕ್ರೈಸ್ತರನ್ನು ತಮ್ಮ ದುಷ್ಕೃತ್ಯದಲ್ಲಿ ಪಾಲುಗಾರರಾಗುವಂತೆ ಮನವೊಲಿಸಲು ಪ್ರಯತ್ನಿಸುತ್ತಾರೆ. ಕ್ರಿಸ್ತನನ್ನು ನಂಬುವದಕ್ಕೆ ಮುಂಚೆ ನಾವು ಸಹ ದುಷ್ಕೃತ್ಯವನ್ನು ನಡೆಸುವವರಾಗಿದ್ದೇವು . ವಿಶೇಷವಾಗಿ ನಮ್ಮ ಹಳೆಯ ಸ್ನೇಹಿತರು ಹಿಂದೆ ಒಮ್ಮೆ ನಾವು ಅವರೊಂದಿಗೆ ಮಾಡುತ್ತಿದ್ದ ಕಾರ್ಯಗಳನ್ನು ಮಾಡುವ ಹಾಗೆ ನಮ್ಮನ್ನೂ ಪ್ರಚೋದಿಸಲು ಪ್ರಯತ್ನಿಸುತ್ತಾರೆ. ನಾವು ಹಾಗೆ ಮಾಡಲು ನಿರಾಕರಿಸಬೇಕು. ನಾವು ದುಷ್ಕೃತ್ಯದಲ್ಲಿ ಅವರೊಂದಿಗೆ ಪಾಲುಗಾರರಾಗಬಾರದು (ವಚನ 7).

8-9 ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದೀರಿ. ಅಂದರೆ, ನೀವು ಒಮ್ಮೆ ಕತ್ತಲೆಯಲ್ಲಿ ಜೀವಿಸುತ್ತಿದ್ದೀರಿ. ಪೌಲನು ಇದಕ್ಕೆ ಎಫೆಸದವರ ಮನಸ್ಸು ಮೊಬ್ಬಾಗಿ ಹೊಗಿತ್ತು ಎಂದು ಬರೆದನು (ಎಫೆಸ 4:18). ಯೇಸುಕ್ರಿಸ್ತನು ಲೋಕಕ್ಕೆ ಬೆಳಕಾಗಿದ್ದಾನೆ. ಆದದರಿಂದ, ಆತನನ್ನು ಬಿಂಬಾಲಿಸುವವರು ಬೆಳಕಿನಲ್ಲಿ ನಡೆಯುತ್ತಾರೆ (ಯೋಹಾನ 8:12 ಮತ್ತು ವ್ಯಾಖ್ಯಾನ ನೋಡಿರಿ).

ಅದು ಮಾತ್ರವಲ್ಲ, ಆತನ ಬೆಳಕು ನಮ್ಮ ಜೀವಿತಗಳೊಳಗಿಂದ ಪ್ರಕಾಶಿಸಿ ಇತರರು ಅನುಸರಿಸಲು ಮಾರ್ಗಕ್ಕೆ ಬೆಳಕು ನೀಡುತ್ತದೆ. ಆದದರಿಂದ, ಪೌಲನು ಇಲ್ಲಿ ನಾವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದೇವೆಂದು ಹೇಳುತ್ತಾನೆ (ವಚನ 8). ನಾವು ಬೆಳಕಿನವರಾಗಿದ್ದೇವೆ–ಬೆಳಕಿನ ಮಕ್ಕಳಾಗಿದ್ದೇವೆ (ಯೋಹಾನ 12:35-36, 1 ಥೆಸಲೋನಿಕ 5:5, 1 ಪೇತ್ರ 2:9 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

10 ಕ್ರೈಸ್ತರು ಭಯದಿಂದಲ್ಲ, ಆದರೆ ಕರ್ತನನ್ನು ಮೆಚ್ಚಿಸಬೇಕೆಂಬ ಅಭಿಲಾಷೆಯಿಂದಲೇ ಒಳ್ಳೇದನ್ನು ಮಾಡುತ್ತಾರೆ. ಅವರು ತಮ್ಮ ತಂದೆ–ತಾಯಿಗಳನ್ನು ಸಂತೋಷಪಡಿಸುವದಕ್ಕೆ ಅಭಿಲಾಷಿಸುವ ವಿಧೇಯವುಳ್ಳ ಮಕ್ಕಳ ಹಾಗಿರುತ್ತಾರೆ. ಆದದರಿಂದ, ಪೌಲನು ಕರ್ತನಿಗೆ ಮೆಚ್ಚಿಕೆಯಾದದ್ದು ಏನೆಂಬದನ್ನು ಪರಿಶೋಧಿಸಿ ತಿಳುಕೊಳ್ಳಿರಿ ಎಂದು ಹೇಳುತ್ತಾನೆ. ಮತ್ತು ಕರ್ತನಿಗೆ ಮೆಚ್ಚಿಕೆಯಾದದ್ದೇನೆಂದರೆಃ ತನ್ನ ಮಕ್ಕಳು ಬೆಳಕಿನಲ್ಲಿ ನಡೆದು ಕತ್ತಲೆಗೆ ಸಂಬಂಧವಾದ ಕೃತ್ಯಗಳೊಂದಿಗೆ ಯಾವ ಪಾಲುಗಾರತೆಯನ್ನು ಹೊಂದದವರಾಗಿರಬೇಕೆಂಬದೇ. ಬದಲಾಗಿ, ನಮ್ಮ ಬೆಳಕಿನಿಂದ ನ್ವು ಕತ್ತಲೆಗೆ ಸಂಬಂಧವಾದ ಕೃತ್ಯಗಳನ್ನು ಬೈಲಿಗೆ ತರಬೇಕು (ವಚನ 11). ದುಷ್ಕೃತ್ಯಗಳನ್ನು ಮಾಡುವವರು ಕತ್ತಲೆಯಲ್ಲಿ ಮಾಡುತ್ತಾರೆ, ತಮ್ಮ ದುಷ್ಕೃತ್ಯಗಳು ಬೈಲಿಗೆ ಬಂದಾವೆಂದು ಹೆದರಿ ಅವರು ಬೆಳಕಿನೊಳಗೆ ಬರುವದಿಲ್ಲ (ಯೋಹಾನ 3:19-20 ಮತ್ತು ವ್ಯಾಖ್ಯಾನ ನೋಡಿರು).

11 ಯಾವ ಪ್ರಯೋಜನವೂ ಇಲ್ಲದ ಕೃತ್ಯಗಳಲ್ಲಿ ಪಾಲುಗಾರರಾಗಿರದೇ ಅವುಗಳನ್ನು ಬೈಲಿಗೆ ತಂದು ಖಂಡಿಸಿರಿ. ಕತ್ತಲೆಗೆ ಸಂಬಂಧವಾದ ಕೃತ್ಯಗಳನ್ನು ಬೈಲಿಗೆ ತರುವದಕ್ಕೆ ನಾವು ಏನು ಮಾಡಬೇಕು? ನಾವು ನಮ್ಮ ಬೆಳಕನ್ನು ಪ್ರಕಾಶಿಸಲು ಬಿಡಬೇಕಷ್ಟೇ–ಅಂದರೆ, ನಾವು ಮೌನವಾಗಿ ನೀತಿಯುಳ್ಳ ಮಾದರಿಯನ್ನು ತೋರಿಸುವವರಾಗಿರಬೇಕು. ಕತ್ತಲೆಯ (ದುಷ್ಟ) ಕೃತ್ಯಗಳನ್ನು ಬೈಲಿಗೆ ತರುವದಕ್ಕೆ ಇದು ಮಾತ್ರ ಸಾಕಾಗಿರುತ್ತದೆ. ಆದರೆ ಸಾಮಾನ್ಯವಾಗಿ ನಾವು ಮಾಡಬೇಕಾದದ್ದು ಇಷ್ಟೇ ಏನೆಂದರೆ ನಮ್ಮ ಬೆಳಕನ್ನು ಪ್ರಕಾಶಿಸುವದೇ, ಅದು ಯಾವಾಗಲೂ ದುಷ್ಟತನವನ್ನು ಬೈಲಿಗೆ ತರುವ ನಮ್ಮ ದಾರಿಯಾಗಿರುತ್ತದೆ.

ನಾವು ಕತ್ತಲೆಗೆ ಸಂಬಂಧವಾದ ಕೃತ್ಯಗಳಲ್ಲಿ ಪಾಲುಗಾರರಾಗಿರಲೇಬಾರದೆಂದು ಪೌಲನು ಹೇಳುವದನ್ನು ಗಮನಿಸಿರಿ, ನಾವು ಅಂತಹ ಕೃತ್ಯಗಳನ್ನು ಮಾಡುವವರೊಂದಿಗೆ ಯಾವದೇ ಸಂಬಂಧವಿಟ್ಟುಕೊಳ್ಳಬಾರದೆಂದು ಆತನು ಹೇಳುವದಿಲ್ಲ ಕೆಲವು ಕ್ರೈಸ್ತರು ಬೇರೆ ಜನರು ಮಾಡುವಂತಹ ದುಷ್ಟಕಾರ್ಯಗಳಿಂದ ಎಷ್ಟಾಗಿ ಬೇಸರಗೊಳ್ಳುತ್ತಾರೆಂದರೆ ಅವರೊಂದಿಗೆ ಮಾತಾಡುವದಕ್ಕೂ ನಿರಾಕರಿಸುತ್ತಾರೆ, ಆದರೆ ಪೌಲನು ಈ ವಚನದಲ್ಲಿ ಹಾಗೆ ಮಾಡಬೇಕೆಂದು ಹೇಳುತ್ತಿಲ್ಲ. ಸ್ವತಃ ಯೇಸುವೇ ಪಾಪಿಗಳೊಂದಿಗೆ ಊಟಮಾಡಿದನಲ್ಲಾ (ಮಾರ್ಕ 2:15-17, 1 ಕೊರಿಂಥ 5:9-11, 2 ಕೊರಿಂಥ 6:14-18 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

12 ಕೆಲವು ವೇಳೆಗಳಲ್ಲಿ ಮನುಷ್ಯನ ದುಷ್ಕೃತ್ಯವು ಎಷ್ಟೊಂದು ಕೆಟ್ಟದ್ದಾಗಿರುತ್ತದೆಂದರೆ ಅದರ ವಿಷಯದಲ್ಲಿ ಮಾತಾಡುವದಕ್ಕೆ ನಾಚಿಕೆಯಾಗುತ್ತದೆ!

13-14 ಪೌಲನು 14ನೇ ವಚನದಲ್ಲಿ ತನ್ನ ಕಾಲದಲ್ಲಿ ಬರೆಯಲ್ಪಟ್ಟಿದ್ದ ಒಂದು ಪದ್ಯದ ಪದಗಳನ್ನು ಉಲ್ಲೇಖಿಸುತ್ತಾನೆ. ಈ ಪದ್ಯದಲ್ಲಿ ಪ್ರಸ್ತಾಪಿಸಲಾಗಿರುವ ನಿದ್ರೆ ಮಾಡುವವನು ತನ್ನ ಪಾಪಗಳಲ್ಲಿ ಸತ್ತಿರುವ ಒಬ್ಬ ವ್ಯಕ್ತಿಯಾಗಿದ್ದಾನೆ (ರೋಮ 13:11, ಎಫೆಸ 2:2).

15 ಆದಕಾರಣ ನೀವು ನಡಕೊಳ್ಳುವ ರೀತಿಯನ್ನು ಕುರಿತು ಬಹು ಜಾಗರೂಕರಾಗಿರಿ. ನಾವು ನಡಕೊಳ್ಳುವ "ರೀತಿ" ಖಂಡಿತವಾಗಿಯೂ ನಮ್ಮ ಜೀವಿತಗಳಲ್ಲಿ ಅತಿಪ್ರಾಮುಖ್ಯವಾದ ಅಭ್ಯಾಸಗತ ವಿಷಯವಾಗಿದೆ. ನಾವು ಜ್ಞಾನವಂತರಾಗಿ ಜೀವಿಸುವದಕ್ಕೆ ಜಾಗರೂಕರಾಗಿರಬೇಕು–ಶ್ರದ್ಧೆಯಿಂದಿರಬೇಕು. ಜ್ಞಾನವಿಲ್ಲದವನು ತಾನು ಹೇಗೆ ಜೀವಿಸುತ್ತಾನೆಂಬದನ್ನು ಲಕ್ಷಿಸುವದಿಲ್ಲ ಆದರೆ ಜ್ಞಾನವಂತನು ಲಕ್ಷಿಸುತ್ತಾನೆ.

16 ಪೌಲನು ನಮಗೆ ನಮ್ಮ ಸಮಯವನ್ನು ಪೂರ್ಣವಾಗಿಯೂ, ಬರುವಂತ ಪ್ರತಿಯೊಂದು ಅವಕಾಶವನ್ನು ಉಪಯೋಗಿಸಿಕೊಳ್ಳಬೇಕೆಂದು ಹೇಳುತ್ತಾನೆ. ಅಂದರೆ, ನಾವು ದೇವರುನ್ನು ಮೆಚ್ಚಿಸುವದಕ್ಕೆ ಮತ್ತು ಆತನ ಚಿತ್ತವನ್ನು ಮಾಡುವದಕ್ಕೆ ಯಾವದೇ ಅವಕಾಶವನ್ನು ಕಳೆದುಕೊಳ್ಳಬಾರದು. ಒಮ್ಮೆ ಸಮಯವು ಹೊರಟು ಹೋದರೆ ಅದು ಇನ್ನೆಂದಿಗೂ ತಿರಿಗಿ ಬರುವದಿಲ್ಲ (ಇನ್ನೊಂದು ಅವಕಾಶವು ಪುನಃ ಬರಬಹುದು, ಆದರೆ ಕಳೆದು ಹೋಗಿರುವ ಅವಕಾಶವು ಬರಲಾರದು.). ಜ್ಞಾನವಂತನು ತನ್ನ ಸಮಯವನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದರ ಬಗ್ಗೆ ಆಲೋಚನೆ ಮಾಡುತ್ತಾನೆ. ಸಮಯವು ದೇವರಿಂದ ಕೊಡಲ್ಪಡುವ ಒಂದು ವರವಾಗಿದೆ, ನಾವು ಅದನ್ನು ವ್ಯರ್ಥಮಾಡಬಾರದು. ಈ ದಿನ ನಾವು ನಮ್ಮ ಸಮಯವನ್ನು ಬುದ್ಧಿವಂತಿಕೆಯಿಂದ ಉಪಯೋಗಿಸಿದ್ದೇವೋ? ದೇವರು ಒಂದು ದಿನ ನಾವು ನಮ್ಮ ಜೀವಿತಕಾಲದಲ್ಲಿ ನಮ್ಮ ಸಮಯವನ್ನು ಹೇಗೆ ಉಪಯೋಗಿಸಿದ್ದೇವೆಂಬದರ ಬಗ್ಗೆ ಲೆಕ್ಕವನ್ನು ಕೇಳುತ್ತಾನೆ. ಯಾಕೆಂದರೆ, ಈ ದಿನಗಳು ಕೆಟ್ಟವುಗಳಾಗಿವೆ. ಮಾನವನ ದಿನಗಳು ಈ ಲೋಕದಲ್ಲಿ ಸಂಕಷ್ಟ ಹಾಗು ಶ್ರಮೆಯಿಂದ ತುಂಬಿರುತ್ತವೆಂದು ಇದರ ತಾತ್ಪರ್ಯವಾಗಿದೆ, ವಿಶೇಷವಾಗಿ, ಪೌಲನ ಕಾಲದಲ್ಲಿ ಕ್ರೈಸ್ತರು ಸೆರೆಮನೆಗೆ ಹಾಕಲ್ಪಡುತ್ತಿದ್ದರು. ಹಾಗು ಕೊಲ್ಲಲ್ಪಡುತ್ತಿದ್ದರು. ಆದದರಿಂದ, ದೇವರಿಗೆ ಸೇವೆಮಾಡುವದಕ್ಕೆ ಸಮಯವಿರುವವರೆಗೂ ಕ್ರೈಸ್ತರು ಪ್ರತಿಯೊಂದು ಅವಕಾಶವನ್ನು ಉಪಯೋಗಿಸಿಕೊಂಡು ಸೇವೆ ಮಾಡುವವರಾಗಿರಲಿ. ಯಾಕೆಂದರೆ, ಇನ್ನೂ ನಮಗೆ ಅವಕಾಶವೇ ಇಲ್ಲದಿರುವಂಥ ದಿನವು ಶೀಘ್ರವೇ ಬರಬಹುದು (ಯೋಹಾನ 4).

17 ನಾವು ಕರ್ತನ ಚಿತ್ತವೇನೆಂಬದನ್ನು ವಿಚಾರಿಸಿ ತಿಳುಕೊಳ್ಳಬೇಕು. ದೇವರ ಚಿತ್ತವನ್ನು ತಿಳುಕೊಳ್ಳುವದಕ್ಕೆ ಮೊದಲ ಹೆಜ್ಜೆಯೇನೆಂದರೆ, ಆತನಿಗೆ ಭಯಪಡುವದೇ. ಕರ್ತನ ಭಯವೇ ಜ್ಞಾನಕ್ಕೆ ಮೂಲ (ಜ್ಞಾನೋಕ್ತಿಗಳು 1:7). ಬುದ್ಧಿಹೀನನು ದೇವರಿಗೆ ಭಯ ಪಡುವದೂ ಇಲ್ಲ, ದೇವರ ಚಿತ್ತದ ಬಗ್ಗೆ ಚಿಂತಿಸುವದೂ ಇಲ್ಲ, ಜ್ಞಾನವಂತನು ಹಾಗಿರುವದಿಲ್ಲ.

ನಮ್ಮ ಜೀವಿತಗಳಿಗೆ ದೇವರ ಚಿತ್ತವೇನೆಂಬದನ್ನು ನಾವು ಹೇಗೆ ತಿಳುಕೊಳ್ಳಬಲ್ಲೆವು? ನಾವು ಅನುದಿನವೂ ಆತನ ಚಿತ್ತವನ್ನು ಹೇಗೆ ತಿಳುಕೊಳ್ಳಬಲ್ಲೆವು? ದೇವರ ಚಿತ್ತವು ಎರಡು ಭಾಗಗಳನ್ನು ಹೊಂದಿದೆಃ ಮೊದಲನೆಯದಾಗಿ, ಆತನ "ಸಾಮಾನ್ಯ ಚಿತ್ತ" ಮತ್ತು ಎರಡನೆಯದಾಗಿ, ಆತನ "ನಿರ್ಧಿಷ್ಟವಾದ ಚಿತ್ತ" ಎಲ್ಲಾ ಕ್ರೈಸ್ತರಿಗೂ ದೇವರ ಸಾಮಾನ್ಯ ಚಿತ್ತವು ಒಂದೇ ಆಗಿರುತ್ತದೆ. ಆದರೆ ನಾವು ಪರಿಶುದ್ಧರಾಗಿಯೂ,ಕ್ರಿಸ್ತನಂತೆಯೂ ಇರಬೇಕೆಂದು ಆತನು ಬಯಸುತ್ತಾನೆ. ದೇವರ ಸಾಮಾನ್ಯ ಚಿತ್ತವೇನೆಂಬದನ್ನು ನಾವು ದೇವರ ವಾಕ್ಯವಾದ ಬೈಬಲ ಓದುವದರ ಮೂಲಕ ಕಂಡು ಕೊಳ್ಳಬಹುದು. ದೇವರ ಚಿತ್ತದ ಎರಡನೆಯ ಭಾಗವು , ಆತನ ನಿರ್ಧಿಷ್ಟವಾದ ಚಿತ್ತವು ಪ್ರತಿಯೊಬ್ಬ ಕ್ರೈಸ್ತನಿಗೆ ಏಕರೀತಿಯಾಗಿರುವದಿಲ್ಲ. ಅದು ಪ್ರತಿಯೊಬ್ಬ ಕ್ರೈಸ್ತನಿಗೂ ಪ್ರತಿಯೊಂದು ಪರಸ್ಥಿತಿಯಲ್ಲಿಯೂ ವ್ಯತ್ಯಾಸವನ್ನು ಹೊಂದಿರುತ್ತದೆ. ಉದಾಹರಣೆಗೆಃ ಒಬ್ಬ ವ್ಯಕ್ತಿಯು ಯಾರನ್ನು ವಿವಾಹವಾಗಬೇಕು? ಒಬ್ಬನು ಯಾವ ಕೋರ್ಸನ್ನು ಅಭ್ಯಾಸಿಸಬೇಕು? ಒಬ್ಬನು ಎಲ್ಲಿಗೆ ಹೋಗಬೇಕು? ಇಂತಹ ವಿಷಯಗಳಲ್ಲಿ ಪ್ರತಿಯೊಬ್ಬ ಕ್ರೈಸ್ತನಿಗೂ ದೇವರ ಚಿತ್ತವು ವ್ಯತ್ಯಾಸವಾಗಿರುತ್ತದೆ. ಇಂಥವು ಗಳ ಪ್ರಶ್ನೆಗಳಿಗೆ ಬೈಬಲಿನಲ್ಲಿ ನೇರವಾದ ಉತ್ತರಗಳು ಸಿಕ್ಕುವದಿಲ್ಲ.

ಆದದರಿಂದ, ನಾವು ಇಂಥ ವಿಷಯಗಳಲ್ಲಿ ದೇವರ "ನಿರ್ಧಿಷ್ಟವಾದ ಚಿತ್ತ" ಏನೆಂಬದನ್ನು ಹೇಗೆ ತಿಳಕೊಳ್ಳಬಲ್ಲೆವು?

ಮೊದಲನೆಯದಾಗಿ ಪ್ರಾರ್ಥಿಸುವದರ ಮೂಲಕ. ನಾವು ಪವಿತ್ರಾತ್ಮನನ್ನು ಬೇಡಿಕೊಳ್ಳುವದಾದರೆ ಆತನು ನಮಗೆ ಮಾರ್ಗದರ್ಶನ ನೀಡುತ್ತಾನೆ. ಎರಡನೆಯದಾಗಿ, ನಾವು ನಮ್ಮ ಸಭಾಪಾಲಕರು, ನಮ್ಮ ತಂದೆ ತಾಯಿಗಳು[21], ಅಥವಾ ಇತರ ಕ್ರೈಸ್ತ ಸ್ನೇಹಿತರು ಹಾಗು ಹಿರಿಯರ ಆಲೋಚನೆಗಳನ್ನು ಪಡೆದುಕೊಳ್ಳುವದರ ಮೂಲಕ ನಾವು ದೇವರ ನಿರ್ಧಿಷ್ಟವಾದ ಚಿತ್ತವನ್ನು ತಿಳುಕೊಳ್ಳಬಹುದು. ಮೂರನೆದಾಗಿ, ಬೈಬಲನ್ನು ಅಭ್ಯಾಸಿಸುವದರ ಮೂಲಕ ತಿಳುಕೊಳ್ಳಬಹುದು. ನಾವು ಬೈಬಲನ್ನು ಅಭ್ಯಾಸಿಸುವಾಗ ದೇವರ "ಸಾಮಾನ್ಯ ಚಿತ್ತ" ವನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳುವೆವು ಮತ್ತು ಇದು ಪ್ರತಿಯಾಗಿ ನಮಗೆ ಆತನ ನಿರ್ಧಿಷ್ಟವಾದ ಚಿತ್ತವನ್ನು ವಿವೇಚಿಸುವಂತೆ ಸಹಾಯ ಮಾಡುವದು. ಉದಾಹರಣೆಗೆ, ಬೈಬಲ್ ನಮಗೆ ನಾವು ಯಾವ ಹುಡಿಗಿಯನ್ನು ಅತವಾ ಹುಡುಗನನ್ನು ವಿವಾಹವಾಗಬೇಕು ಎಂಬದನ್ನು ಖಂಡಿತವಾಗಿ ಹೇಳುತ್ತದೆ (2 ಕೊರಿಂಥ 6:14). ನಾವು ಪ್ರಾರ್ಥಿಸಿ, ಸಲಹೆ ಪಡೆದು ಬೈಬಲನ್ನು ಅಭ್ಯಾಸಿಸುತ್ತಿರುವ ಹಾಗೆ ನಾವು ನಮ್ಮ ಬುದ್ಧಿಗಳನ್ನು ಉಪಯೋಗಿಸಿ ದೇವರ ಚಿತ್ತವೇನೆಂಬದನ್ನು ನಿರ್ಧರಿಸಬೇಕು. ದೇವರು ನಮಗೆ ಬುದ್ಧಿ ಹಾಗು ವಿವೇಚನಾಶಕ್ತಿಯನ್ನು ಕೊಟ್ಟನು. ಆತನು ನಮ್ಮನ್ನು ತಿಳಿವಳಿಕೆಯಿಲ್ಲದ ಒಂದು ಕುದುರೆ ಅಥವಾ ಹೇಸರಗತ್ತೆಗಳಾಗಿದ್ದೇವೋ ಎಂಬಂತೆ ನಡಿಸುವದಿಲ್ಲ (ಕೀರ್ತನೆಗಳು 3:8-9). ದೇವರು ನಮಗೆ ಜ್ಞಾನ ಹಾಗು ಮಾರ್ಗದರ್ಶನವನ್ನು ನೀಡುವನು, ಆದರೆ ಅದನ್ನು ಪಡೆದುಕೊಳ್ಳಲು ನಾವು ನಮ್ಮ ಬುದ್ಧಿಗಳನ್ನು ಉಪಯೋಗಿಸಬೇಕು.

**18** ಕ್ರೈಸ್ತರು ಮದ್ಯಪಾನ ಮಾಡಿ ಮತ್ತರಾಗಬಾರದು.– ಅಥವಾ ಇತರ ಯಾವದೇ ಸರೆಯಿಯನ್ನು ಕುಡಿಯಬಾರದು. ಕ್ರೈಸ್ತರು ಯಾವದೇ ಮದ್ಯವನ್ನು ಎಂದಿಗೂ ಕುಡಿಯಲೇಬಾರದು ಎಂದು ಪೌಲನು ಹೇಳುವದಿಲ್ಲ (ಕೀರ್ತನೆಗಳು 104:15). ಆದರೆ ಒಬ್ಬನು ಕ್ರೈಸ್ತನು ಎಂದಿಗೂ ಮತ್ತನಾಗಬಾರದೆಂದು [22] ಹೇಳುತ್ತಾನೆ. ಒಬ್ಬ ಕ್ರೈಸ್ತನು ಸ್ವಲ್ಪವಾದರೂ ಮತ್ತನಾಗಲೇಬಾರದು. ಕೆಲವು ಜನರು, ವಿಶೇಷವಾಗಿ ಕೆಲವು ಬುಡಕಟ್ಟು ಜನಾಂಗಗಳಲ್ಲಿ ವಿಪರೀತವಾಗಿ ಕುಡಿದು ಮತ್ತರಾಗುವದು ಪದ್ಧತಿಯಿಂದ ಬಂದಿರುತ್ತದೆ. ಆದರೆ ದೇವರು ಅವರಿಗೂ ಹೇಳುವದೇನೆಂದರೆಃ ಮದ್ಯಪಾನ ಮಾಡಿ ಮತ್ತರಾಗಬೇಡಿರಿ. ಮತ್ತನಾಗುವದು ಒಂದು ಪಾಪವಾಗಿದೆ. ಮತ್ತು ಒಮ್ಮೆ ವ್ಯಕ್ತಿಯು ಮತ್ತನಾದನೆಂದರೆ ಅವನು ಅದಕ್ಕಿಂತಲೂ ಕೆಟ್ಟದಾದ ಪಾಪಗಳನ್ನು ಮಾಡುವಂತೆ ನಡಿಸಲ್ಪಡುತ್ತಾನೆ. ಮತ್ತು ಮದ್ಯಪಾನ ಮಾಡಬೇಕೆಂಬ ಅವನ ಅಭಿಲಾಷೆಯು ಬೆಳೆಯಿತ್ತಲೇ ಹೋಗುವದು. ಮತ್ತು ಕ್ರಮೇಣವಾಗಿ ಅದು ಅವನನ್ನು ಗುಲಾಮನನ್ನಾಗಿ ಮಾಡಿಕೊಳ್ಳುತ್ತದೆ.

ಜನರು ಸಂತೋಷವನ್ನು ಅಥವಾ ಪ್ರೋತ್ಸಾಹವನ್ನು ಕಂಡುಕೊಳ್ಳುವದಕ್ಕೆ ಕುಡಿಯುತ್ತಾರೆ, ಆದರೆ ಅವರ ಸಂತೋಷ ಹಾಗು ಪ್ರೋತ್ಸಾಹವು ಅತಿ ಕ್ಲುಪ್ತ ಕಾಲದವರೆಗೆ ಮಾತ್ರವೇ ಇರುತ್ತವೆ. ಮತ್ತು ಅವರು ಅಂತಹ ತಾತ್ಕಾಲಿಕ ಸುಖಕ್ಕಾಗಿ ದೊಡ್ಡ ಬೆಲೆಯನ್ನು ಕಟ್ಟುತ್ತಾರೆ, ಮದ್ಯಪಾನಕ್ಕಾಗಿ ಅವರ ಹಣವನ್ನಷ್ಟೇ ಅಲ್ಲ, ಆದರೆ ಅವರ ಆರೋಗ್ಯವನ್ನು ಸಹ ದುಂದುವೆಚ್ಚ ಮಾಡುತ್ತಾರೆ. ಶಾಸ್ವತವಾದ ಆನಂದ, ಉಲ್ಲಾಸ, ಹಾಗು ಪ್ರೋತ್ಸಾಹವನ್ನು ಪಡೆದುಕೊಳ್ಳುವದಕ್ಕೆ ಒಂದೇ ಮಾರ್ಗವಿರುತ್ತದೆ, ಅದೇನೆಂದರೆ ಪವಿತ್ರಾತ್ಮಭರಿತರಾಗಿರುವದೇ.

......ಪವಿತ್ರಾತ್ಮನಿಂದ ಭರಿತರಾಗಿರಿ[23] ಅದು ಒಂದು ಸಲಹೆಯಲ್ಲ, ಅದು ಆಜ್ಞೆಯಾಗಿರುತ್ತದೆ. ಮತ್ತು ವಾಸ್ತವದಲ್ಲಿ ಪೌಲನು ಇಲ್ಲಿ ನಾವು ಪವಿತ್ರಾತ್ಮನಿಂದ "ಭರಿತರಾಗುತ್ತಾ ಇರಬೇಕು"–ಅಂದರೆ, ಈ ಹೊತ್ತು ಮತ್ತು ನಾಳೆ ಮಾತ್ರವಲ್ಲ, ಆದರೆ ಎಲ್ಲಾ ವಾರ, ಎಲ್ಲಾ ತಿಂಗಳು, ಎಲ್ಲಾ ವರ್ಷಗಳು, ನಮ್ಮ ಜೀವಿತಕಾಲವೆಲ್ಲಾ ಭರಿತರಾಗುತ್ತಿರಬೇಕು!–ಎಂದು ಬರೆದನು.

ನಾವು ಪವಿತ್ರಾತ್ಮನಿಂದ ಭರಿತರಾಗಿದ್ದೇವೋ ಎಂಬದನ್ನು ಹೇಗೆ ತಿಳಿದುಕೊಳ್ಳಬಹುದು? ನಾವು ನಮ್ಮ ಜೀವಿತಗಳಲ್ಲಿ ಆತ್ಮನ ಫಲಗಳನ್ನು – ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶಮೆದಮೆ– ಕಾಣುವಾಗ ನಾವು ಪವಿತ್ರಾತ್ಮಭರಿತರಾಗಿದ್ದೇವೆಂಬದನ್ನು ತಿಳುಕೊಳ್ಳಬಹುದು (ಗಲಾತ್ಯ 5:22-23). ಮದ್ಯಪಾನದಿಂದ ತುಂಬಿರುವವನು ಮದ್ಯದ ಹತೋಟಿಯಲ್ಲಿರುತ್ತಾನೆ, ಪವಿತ್ರಾತ್ಮನಿಂದ ತುಂಬಿರುವ ವ್ಯಕ್ತಿಯು ಪವಿತ್ರಾತ್ಮನ ಹತೋಟಿಯಲ್ಲಿರುತ್ತಾನೆ. ಮದ್ಯದಿಂದ ತುಂಬಿರುವ ವ್ಯಕ್ತಿಯು ತನ್ನನ್ನು ಹತೋಟಿಗೆ ತಂದುಕೊಳ್ಳಲಾರನು. ಆತನಲ್ಲಿ ಶಮೆದಮೆ

ಇರುವದಿಲ್ಲ. ಆದರೆ ಪವಿತ್ರಾತ್ಮಭರಿತನಾದವನು ಶಮೆದಮೆ ಹೊಂದಿರುತ್ತಾನೆ. ಆದು ಪವಿತ್ರಾತ್ಮನ ಒಂಭತ್ತನೆಯ ಫಲವಾಗಿರುತ್ತದೆ. ಮನುಷ್ಯರೊಳಗಿನ ಗಲಭೆ ಮತ್ತು ಮೃಗೀಯ ನಡವಳಿಕೆಯು ಎಂದಿಗೂ ಪವಿತ್ರಾತ್ಮನಿಂದ ಉಂಟಾಗುವದಿಲ್ಲ.

**19** ಹೇಗಿದ್ದರೂ, ಪವಿತ್ರಾತ್ಮನು ನಮ್ಮಲ್ಲಿ ಉಂಟುಮಾಡುವದು ಮಹಾಸಂತೋಷವೇ, ನಾವು ಕರ್ತನಿಗೆ ಹಾಡುತ್ತಾ ಗಾನ ಮಾಡುವಂತೆ ಆತ್ಮನು ನಮ್ಮನ್ನು ನಡಿಸುತ್ತಾನೆ. ಆದದರಿಂದ, ನಾವು ಒಟ್ಟಾಗಿ ದೇವರನ್ನು ಕೀರ್ತನೆಗಳಿಂದಲೂ, ಆತ್ಮಸಂಬಂಧವಾದ ಹಾಡುಗಳಿಂದಲೂ ಪದಗಳಿಂದಲೂ ಸ್ತುತಿಸೋಣ, ನಮ್ಮ ತುಟಿಗಳಿಂದ ಮಾತ್ರವಲ್ಲ, ಆದರೆ ನಮ್ಮ ಹೃದಯಗಳಿಂದಲೂ ಸ್ತುತಿಸೋಣ (ಕೊಲೊಸ್ಸೆ 3:16).

**20** ನಾವು ಯಾವಾಗಲೂ ದೇವರಿಗೆ ಎಲ್ಲಾ ಕಾರ್ಯಗಳಲ್ಲಿ ಸ್ತೋತ್ರ ಮಾಡಬೇಕು. ಎಲ್ಲಾ ಕಾರ್ಯಗಳಿಗಾಗಿಯೋ? ಅನಾರೋಗ್ಯಕ್ಕಾಗಿಯೋ? ಬಿರುಗಾಳಿ ಹಾಗು ದುರಂತಗಳಿಗಾಗಿಯೋ? ಸಂಕಷ್ಟ ಹಾಗು ಸಮಸ್ಯೆಗಳಿಗಾಗಿಯೋ? ಹೌದು, ಇವೆಲ್ಲವುಗಳಿಗಾಗಿಯೂ ಸ್ತುತಿಸಬೇಕು. ನಾವು ದೇವರನ್ನು ಎಲ್ಲಾ ಕಾರ್ಯಗಳಿಗಾಗಿ–ಒಳ್ಳೇದಿರಲಿ ಅಥವಾ ಕೆಟ್ಟದ್ದಿರಲಿ–ಸ್ತೋತ್ರ ಮಾಡಬೇಕು. ಯಾಕೆ?

ಯಾಕೆಂದರೆ, ದೇವರು ನಮ್ಮ ಪ್ರೀತಿಯುಳ್ಳಪರಲೋಕದ ತಂದೆಯಾಗಿದ್ದಾನೆ. ನಮ್ಮ ಮೇಲೆ ಆತನು ಯಾವ ಕಷ್ಟಗಳನ್ನು ಹಾಗು ಸಮಸ್ಯೆಗಳನ್ನು ಬರಮಾಡಿದರೂ ಸಹ ದೇವರು ಅಂತ್ಯದಲ್ಲಿ ಅದನ್ನು ನಮ್ಮ ಒಳ್ಳೇದಕ್ಕಾಗಿ ಆಗುವಂತೆ ಮಾಡುತ್ತಾನೆಂಬದನ್ನು ನಾವು ನಿಶ್ಚಯವಾಗಿ ಬಲ್ಲೆವು. ದೇವರು ತನ್ನನ್ನು ಪ್ರೀತಿಸಿ ತನ್ನ ಸೇವೆಯನ್ನು ಮಾಡುವ ಮಕ್ಕಳಿಗೆ ಒಳ್ಳೇದನ್ನೇ ಮಾಡುತ್ತಾನೆ (ರೋಮ 8:28 ಮತ್ತು ವ್ಯಾಖ್ಯಾನ ನೋಡಿರಿ). ಈ ಕಾರಣಕ್ಕಾಗಿಯೇ ನಾವು ದೇವರಿಗೆ ಎಲ್ಲಾ ಕಾರ್ಯಗಳಲ್ಲಿ ಸ್ತೋತ್ರವನ್ನು ಸಲ್ಲಿಸಬೇಕು.

**21** ನಾವು ಇತರರನ್ನು ಅಧೀನದಲ್ಲಿಟ್ಟುಕೊಳ್ಳಲು ಪ್ರಯತ್ನಿಸುವಾಗ ವಾಗ್ವಾದಗಳೂ ಭೇದಗಳೂ ಉದ್ಭವಿಸುತ್ತವೆ. ಆದದರಿಂದ, ನಾವು ಒಬ್ಬರನ್ನೊಬ್ಬರು ಅಧೀನದಲ್ಲಿಟ್ಟುಕೊಳ್ಳಲು ಪ್ರಯತ್ನಿಸುವದರ ಬದಲಾಗಿ ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದುಕೊಳ್ಳೋಣ. ಈ ರೀತಿಯಾಗಿ ನಡೆದುಕೊಳ್ಳುವದರಿಂದ ವಾಗ್ವಾದಗಳಿಗೂ ಭೇದಗಳಿಗೂ ಅವಕಾಶವೇ ಇರುವದಿಲ್ಲ. ನಮ್ಮನ್ನು ನಾವು ಒಬ್ಬರಿಗೊಬ್ಬರ ಸೇವಕರಂತೆ ಮಾಡಿಕೊಳ್ಳೋಣ. ಯೇಸು ತನ್ನ ಶಿಷ್ಯರ ಪಾದಗಳನ್ನು ತೊಳೆದು ನಮಗೆ ಇದೇ ಮಾದರಿಯನ್ನು ತೋರಿಸಿದನು (ಯೋಹಾನ 13:12-15 ಮತ್ತು ವ್ಯಾಖ್ಯಾನ ನೋಡಿರಿ).

## ಹೆಂಡತಿಯರು ಮತ್ತು ಗಂಡಂದಿರು (5:22-23)

**22** ದೇವರು ಗಂಡಂದಿರಿಗೆ ತಮ್ಮ ಹೆಂಡತಿಯರ ಮೇಲೆ ಅಧಿಕಾರವನ್ನು ಕೊಟ್ಟಿರುತ್ತಾನೆ. ಆದೇ ರೀತಿಯಲ್ಲಿ ಆತನು ತಂದೆ ತಾಯಿಗಳಿಗೆ ತಮ್ಮ ಮಕ್ಕಳ ಮೇಲೆ ಅಧಿಕಾರವನ್ನು ಕೊಟ್ಟಿರುತ್ತಾನೆ (ಎಫೆಸ 6:1), ಮತ್ತು ಧನಿಗಳಿಗೆ ತಮ್ಮ ನೌಕರರ ಮೇಲೆ ಅಧಿಕಾರವನ್ನು ಕೊಟ್ಟಿರುತ್ತಾನೆ (ಎಫೆಸ 6:5). ಈ ಮೂರು ಸಂದರ್ಭಗಳಲ್ಲಿ–ಗಂಡಂದಿರು ಮತ್ತು ಹೆಂಡತಿಯರು, ತಂದೇ ತಾಯಿಗಳು ಮತ್ತು ಮಕ್ಕಳು, ಧನಿಗಳು ಮತ್ತು ನೌಕರರು–ಪ್ರತಿಯೊಬ್ಬ ವ್ಯಕ್ತಿಯು ಒಬ್ಬ ವ್ಯಕ್ತಿ ಪರನಂತೆ ದೇವರ ದೃಷ್ಟಿಯಲ್ಲಿ ಸರಿಸಮಾನನಾಗಿದ್ದಾನೆ. ಆದರೆ ದೇವರು ಪ್ರತಿಯೊಬ್ಬನಿಗೂ ಒಂದೇ ರೀತಿಯಾದ ಅಧಿಕಾರ,ಜವಾಬ್ದಾರಿಕೆ, ಕೆಲಸ ನೀಡಿರುವದಿಲ್ಲ, ದೇವರು ಗಂಡನಿಗೆ ಕುಟುಂಬದಲ್ಲಿ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದಾನೆಂದಷ್ಟೇ ಆತನು ಹೇಳುತ್ತಾನೆ (ಸಾಮಾನ್ಯ ಲೇಖನಃ ಕ್ರೈಸ್ತೀಯ ವಿವಾಹ ನೋಡಿರಿ). ಗಂಡನಿಗೆ ತನ್ನ ಹೆಂಡತಿಯ ಮೇಲೆ ಅಧಿಕಾರವನ್ನು ಕೊಡಲ್ಪಟ್ಟಿರುವದು ಆತನ ಸ್ವಂತ ಪ್ರಯೋಜನಕ್ಕಾಗಯಲ್ಲ, ಆದರೆ ಇಡೀ ಕುಟುಂಬದ ಪ್ರಯೋಜನಾರ್ಥವಾಗಿಯೇ. ಆತನ ಅಧಿಕಾರವು ಕುಟುಂಬದೊಳಗೆ ಶಿಕ್ಷಣ, ಶಿಸ್ತು ಮತ್ತು ಸಮಾಧಾನಗಳನ್ನು ಕಾಪಾಡುವದಕ್ಕಾಗಿ ಉಪಯೋಗಿಸಲ್ಪಡಬೇಕು. ಗಂಡನಿಗೆ ತನ್ನ ಹೆಂಡತಿಯನ್ನು ಶೋಷಣೆಗೊಳಿಸಲು ಯಾವ ಅಧಿಕಾರವು ಇರುವದಿಲ್ಲ. ಬದಲಾಗಿ ಕ್ರಿಸ್ತನು ನಮ್ಮ ವಿಷಯದಲ್ಲಿ ಪ್ರೀತಿ ಹಾಗು ಕರುಣೆಯಿಂದ ನಡೆದುಕೊಂಡಿರುವ ಪ್ರಕಾರವೇ ಗಂಡನು ಹೆಂಡತಿಯೊಂದಿಗೆ ವರ್ತಿಸಬೇಕು. ದೇವರು ಗಂಡಂದಿರಿಗೆ ಅಧಿಕಾರವನ್ನು ನೀಡಿರುವದು ಒಳ್ಳೇದನ್ನು ಮಾಡುವದಕ್ಕಾಗಿಯೇ ಹೊರತು ಕೆಟ್ಟದ್ದನ್ನಲ್ಲ.

**23-24** ಕ್ರಿಸ್ತನು ಸಭೆ ಹಾಗು ಅದರ ಸದಸ್ಯರ ಮೇಲೆ ಅಧಿಕಾರವನ್ನು ಹೊಂದಿರುವ ಪ್ರಕಾರವೇ ಗಂಡಂದಿರು ತಮ್ಮ ಹೆಂಡತಿಯರ ಮೇಲೆ ಅಧಿಕಾರವನ್ನು ಹೊಂದಿರುತ್ತಾರೆ. ಮತ್ತು ಕ್ರೈಸ್ತರೆಲ್ಲರೂ ಕ್ರಿಸ್ತನ ಅಧೀನದಲ್ಲಿರಬೇಕಾದ ಪ್ರಕಾರವೇ ಹೆಂಡತಿಯರು ತಮ್ಮ ಗಂಡಂದಿರಿಗೆ ಅಧೀನರಾಗಿರಬೇಕು (ಕೊಲೊಸ್ಸೆ 3:18,1 ಪೇತ್ರ 3:1-2 ಮತ್ತು ವ್ಯಾಖ್ಯಾನ ನೋಡಿರಿ). ಗಂಡನ ಅಧಿಕಾರವು ಅವನ ಸ್ವಂತದ್ದಲ್ಲ, ಅದು ಕ್ರಿಸ್ತನದಾಗಿದೆ. ಹೆಂಡತಿಯರು ತಮ್ಮ ಗಂಡಂದಿರಲ್ಲಿ ಕ್ರಿಸ್ತನನ್ನು – ಅಂದರೆ, ಕ್ರಿಸ್ತನ ಗುಣಲಕ್ಷಣಗಳನ್ನು – ಕಾಣುವದಕ್ಕೆ ಶಕ್ತರಾಗಬೇಕು. ಒಂದು ವೇಳೆ ಹೆಂಡತಿಯು ತನ್ನ ಗಂಡನಲ್ಲಿ ಕ್ರಿಸ್ತನನ್ನು ಕಾಣುವದಕ್ಕೆ ಶಕ್ತಳಾಗುವದಾದರೆ ಆತನ ಅಧಿಕಾರದಡಯಲ್ಲಿ ಇರುವದಕ್ಕೆ ಅವಳಿಗೆ ಯಾವ ಸಮಸ್ಯೆಯು ಇರಕೂಡದು!

ನೆನಪಿರಲಿ, ಹೆಂಡತಿಯರು ತಮ್ಮ ಗಂಡಂದಿರ ಆದೀನದಲ್ಲಿ ಮಾತ್ರವೇ ಇರುತ್ತಾರೆ, ಹೊರತು ಇತರ ಪುರುಷರ ಅಧೀನದಲ್ಲಲ್ಲ. ಅಷ್ಟು ಮಾತ್ರವಲ್ಲದೆ, ಹೆಂಡತಿಯರು ಸೇವಕರಂತಾಗಲಿ ಅಥವಾ ಗುಲಾಮರಂತಾಗಲಿ ನಡಿಸಿಕೊಳ್ಳಲ್ಪಡಬಾರದು. ಅವರು ಕುಟುಂಬದ ಆಸ್ತಿಯ ಒಂದು ವಸ್ತುವೋ ಎಂಬಂತೆ ಪರಿಗಣಿಸಲ್ಪಡಬೇಕು. ಹೆಂಡತಿಯು ತನ್ನ ಗಂಡಂನೊಂದಿಗೆ ಜೀವಸ್ವರೂಪನಾದ ದೇವರ ಸೃಷ್ಟಿಯಲ್ಲಿ ಒಂದು ಸರಿಸಮಾನವಾಗಿ ಸೌಂದರ್ಯ ಹಾಗು ಮೌಲ್ಯವುಳ್ಳವಳಾಗಿದ್ದಾಳೆ, ಅವಳು ಯಾವದೇ ರೀತಿಯಲ್ಲಿ ಕಡಿಮೆಯಾದಳೆಂದು ನಡಿಸಿಕೊಳ್ಳಲ್ಪಡಬಾರದು. ಬದಲಾಗಿ, ಗಂಡನು ತನ್ನ ದೇಹವನ್ನು ಪ್ರೀತಿಸಿ

ಪೋಷಿಸುವಂತೆಯೇ ತನ್ನ ಹೆಂಡತಿಯನ್ನು ನೋಡಿಕೊಳ್ಳಬೇಕು (ಎಫೆಸ 5:28, 1 ಪೇತ್ರ 3:7 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಆದರೆ ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆಃ ಹೆಂಡತಿಯೊಬ್ಬಳು ಕೆಟ್ಟವನಾಗಿರುವ ಗಂಡನೆಡೆಗೆ ಯಾವ ರೀತಿ ನಡೆದುಕೊಳ್ಳಬೇಕು? ಆತನು ಮದ್ಯಪಾನದಿಂದ ಮತ್ತನಾಗಿ ಆಕೆಯನ್ನು ಹೊಡೆಯುವವನೂ ದೇವರ ವಾಕ್ಯಕ್ಕೆ ವಿರುದ್ಧವಾದ ಸಂಗತಿಗಳನ್ನು ಮಾಡುವಂತೆಯೂ ಹೇಳುತ್ತಾನೆಂದು ಊಹಿಸಿಕೊಳ್ಳಿರಿ. ಆಕೆಯು ಅಂಥ ಸಂದರ್ಭದಲ್ಲಿ ಆತನಿಗೆ ವಿಧೇಯಳಾಗಬೇಕೋ ಅಥವಾ ಬೇಡವೋ? ಇಲ್ಲ, ಆಕೆಯು ದೇವರ ವಾಕ್ಯಕ್ಕೆ ವಿರುದ್ಧವಾದ ಗಂಡನ ಯಾವದೇ ಆಜ್ಞೆಗೆ ವಿಧೇಯಳಾಗಬಾರದು. ಆಕೆಯ ಮೇಲಿರುವ ಗಂಡನ ಅಧಿಕಾರವು ನಿಜವಾಗಿಯೂ ದೇವರ ಅಧಿಕಾರವಾಗಿದೆ ಎಂಬದನ್ನು ಅವಳು ನೆನಪಿನಲ್ಲಿಟ್ಟುಕೊಳ್ಳಬೇಕು. ಗಂಡನೊಬ್ಬನು ತನ್ನ ಹೆಂಡತ್ಯನ್ನುದೇವರ ಚಿತ್ತಕ್ಕೆ ವಿರುದ್ಧವಾದ ಸಂಗತಿಯೊಂದನ್ನು ಮಾಡುವಂತೆ ಒತ್ತಾಯಿಸುವದಾದರೆ ಆತನು ಇಲ್ಲು ಮೇಲೆ ಆ ವಿಷಯದಲ್ಲಿ ದೇವರ ಅಧಿಕಾರ ಹೊಂದಿದ್ದೇನೆಂದು ಹೇಳಿಕೊಳ್ಳಲು ಸಾಧ್ಯವಿಲ್ಲ. ಅಂಥ ಪರಸ್ಥಿತಿಯಲ್ಲಿ ಹೆಂಡತಿಯು ಗಂಡನಿಗೆ ಬದಲಾಗಿ ದೇವರಿಗೇ ವಿಧೇಯಳಾಗಬೇಕು.

ಇದೇ ಸೂತ್ರವು ತಂದೆ, ತಾಯಿ ಮತ್ತು ಮಗುವಿನ, ಧನಿ ಮತ್ತು ನೌಕರನ, ಹಾಗು ಯಾವದೇ ಸರಕಾರ ಮತ್ತು ಇದರ ನಾಗರಿಕರ ನಡುವಿನ ಸಂಬಂಧಕ್ಕು ಅನ್ವಯಿಸುತ್ತದೆ. ಅಧಿಕಾರದಲ್ಲಿರುವವರು–ತಂದೆ ತಾಯಿಗಳಾಗಿರಲಿ, ಧನಿಗಳಾಗಿರಲಿ ಅಥವಾ ಸರ್ಕಾರಿ ಅಧಿಕಾರಿಗಳಾಗಿರಲಿ–ಎಲ್ಲಿಯವರೆಗೂ ದೇವರ ನಿಯಮಕ್ಕೆ ವಿಧೇಯರಾಗಿರುತ್ತಾರೋ ನಾವು ಅವರ ಅಧಿಕಾರಕ್ಕೆ ಎಲ್ಲಾ ವಿಷಯಗಳಲ್ಲಿ–ಅಧೀನರಾಗಿರಬೇಕು. ಆದರೆ ಅವರು ದೇವರ ವಾಕ್ಯಕ್ಕೆ ವಿರುದ್ಧವಾದ ಯಾವದೇ ವಿಷಯವನ್ನು ಮಾಡುವದಕ್ಕೆ ಆಜ್ಞಾಪಿಸುವದಾದರೆ ಆ ಸಂಗತಿಯನ್ನು ಮಾಡುವದಕ್ಕೆ ನಾವು ಒಪ್ಪಿಕೊಳ್ಳಬಾರದು. ದೇವರ ಆಜ್ಞೆಯು ಯಾವಾಗಲೂ ಮನುಷ್ಯನ ಆಜ್ಞೆಗಿಂತಲೂ ಉನ್ನತವಾಗಿರುತ್ತದೆ (ಅ.ಕೃ. 4:18, ರೋಮ 13:1-5 ಮತ್ತು ವ್ಯಾಖ್ಯಾನ ನೋಡಿರಿ).

**25** ಪೌಲನು 22-24 ವಚನಗಳಲ್ಲಿ ಹೆಂಡತಿಯ ಕರ್ತವ್ಯದ ಬಗ್ಗೆ ಮಾತಾಡಿದನೆಂಬದನ್ನು ಗಮನಿಸಿರಿಃ ತನ್ನ ಗಂಡನಿಗೆ ಅಧೀನಳಾಗಿರುವದು. ಈಗ ಪೌಲನು 25-28 ವಚನಗಳಲ್ಲಿ ಹೆಂಡತಿಯೆಡೆಗೆ ಗಂಡನ ಕರ್ತವ್ಯದ ಬಗ್ಗೆ ಮಾತಾಡುತ್ತಾನೆಃ ಅವಳನ್ನು ಪ್ರೀತಿಸಬೇಕು! ಗಂಡನು ತನ್ನ ಹೆಂಡತಿಯನ್ನು ಹೇಗೆ ಪ್ರೀತಿಸಬೇಕು? ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ಗಂಡನು ಹೆಂಡತಿಯನ್ನು ಪ್ರೀತಿಸಬೇಕು. ಕ್ರಿಸ್ತನು ಸಭೆಗಾಗಿ ತನ್ನನ್ನು ಒಪ್ಪಿಸಿಕೊಟ್ಟ ಪ್ರಕಾರವೇ ಗಂಡನು ತನ್ನ ಹೆಂಡತಿಗಾಗಿ "ತನ್ನನ್ನು ಒಪ್ಪಿಸಿಕೊಡಬೇಕು". ಅದರ ಬಗ್ಗೆ ಆಲೋಚಿಸಿರಿ, ಗಂಡನ ಕರ್ತವ್ಯವು ನೆರವೇರಿಸುವದಕ್ಕೆ ಅಷ್ಟು ಸುಲಭವಾಗಿರುವದಿಲ್ಲ! (ಕೊಲೆಸ್ಸೆ 3:19).

**26-27** ಕ್ರಿಸ್ತನು ಮತ್ತು ಆತನ ಸಭೆಯನ್ನು ಒಬ್ಬ ಗಂಡ ಮತ್ತು ಆತನ ಮದಲಗಿತ್ತಿಗೆ ಹೋಲಿಸಬಹುದು. ಪೌಲನು ಕೊರಿಂಥದ ಸಭೆಗೆ ಬರೆದದ್ದೇನೆಂದರೆಃ ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಶುದ್ಧ ಕನ್ಯೆಯಾಗಿ ಒಪ್ಪಿಸಬೇಕೆಂದು ನಿಮ್ಮನ್ನು ಆತನಿಗೆ ನಿಶ್ಚಯ ಮಾಡಿದೆನಲ್ಲಾ (2 ಕೊರಿಂಥ 11:2). ಕ್ರಿಸ್ತನು ತನ್ನ ಸಭೆಯನ್ನು ಆಕೆಯ ಅಶುದ್ಧತೆ ಹಾಗು ಅಪರಿಪೂರ್ಣತೆಯ ಹೊರತಾಗಿಯೂ ಪ್ರೀತಿಸಿದನು. ಆದರೆ ಅದಕ್ಕಿಂತಲೂ ಹೆಚ್ಚಾಗಿ ಆತನು ಆಕೆಯನ್ನು ವಾಕ್ಯೋಪದೇಶ ಸಹಿತವಾದ ಜನಸ್ನಾನದಿಂದ ತೊಳೆದು ಶುದ್ಧಮಾಡಿದನು (ವಚನ 26)-ಅಂದರೆ, ದೀಕ್ಷಾಸ್ನಾನ [24] ಮತ್ತು ತನ್ನ ವಾಕ್ಯದ ಮೂಲಕ ಶುದ್ಧಮಾಡಿದನು (ಯೋಹಾನ 15:3 ಮತ್ತು ವ್ಯಾಖ್ಯಾನ ನೋಡಿರಿ). ಕ್ರಿಸ್ತನು ತನ್ನ ಸಭೆಯು ಕಳಂಕ ಸುಕ್ಕು ಮುಂತಾದ್ದೊಂದು ಇಲ್ಲದಿರಬೇಕೆಂದು ಇಚ್ಛಿಸುತ್ತಾನೆ (ವಚನ 27).

**28-29** ಇಲ್ಲಿ ಪೌಲನು ಗಂಡಂದಿರು ತಮ್ಮ ಹೆಂಡತಿಯರನ್ನು ಪ್ರೀತಿಸಬೇಕಾದ ಎರಡನೆಯ ರೀತಿಯನ್ನು – ಅಂದರೆ, ಸ್ವಂತ ಶರೀರಗಳನ್ನು ಪ್ರೀತಿಸಿಕೊಳ್ಳುವ ಪ್ರಕಾರ – ಕುರಿತು ಬಣ್ಣಿಸುತ್ತಾನೆ. ವಿವಾಹದ ನಂತರ ಗಂಡಹೆಂಡರು ಒಂದೇ ಶರೀರ ಆಗುತ್ತಾರೆ (ವಚನ 31), ಆದದರಿಂದ, ಗಂಡನೊಬ್ಬನು ತನ್ನ ಸ್ವಂತ ಶರೀರವನ್ನು, ತನ್ನು ಪ್ರೀತಿಸಿಕೊಳ್ಳುವ ರೀತಿಯಲ್ಲಿಯೇ ತನ್ನ ಹೆಂಡತಿಯನ್ನು ಪ್ರೀತಿಸಬೇಕಾಗಿರುತ್ತದೆ.

**30** ನಾವು ನಮ್ಮ ಸ್ವಂತ ಶರೀರದ ಅಂಗಾಗಳ ಬಗ್ಗೆ ಕಾಳಜಿವಹಿಸುವಂತೆಯೇ ಕ್ರಿಸ್ತನು ತನ್ನ ದೇಹವಾದ ಸಭೆಯ ಬಗ್ಗೆ ಚಿಂತಿಸುವವನಾಗಿದ್ದಾನೆ.

**31-33** ಪೌಲನು ಇಲ್ಲಿ ಆದಿಕಾಂಡ 2:24 ರಿಂದ ಉಲ್ಲೇಖಿಸುತ್ತಾನೆ. ಅಲ್ಲಿ ದ್ವರು ಪುರುಷ ಮತ್ತು ಸ್ತ್ರೀಯರ ನಡುವೆ ವಿವಾಹ ಸಂಬಂಧವನ್ನು ಸ್ಥಾಪಿಸಿದನು. ಗಂಡ ಹೆಂಡರ ನಡುವಿನ ಸಂಬಂಧವು ಎಲ್ಲಾ ಸಂಬಂಧಗಳಿಗಿಂತ ಅತಿ ಆಪ್ತವಾದದ್ದು, ತಾಯಿ ಮತ್ತು ಮಗುವಿನ ಸಂಬಂಧಕ್ಕಿಂತಲೂ[25] ಆಪ್ತವಾದದ್ದು.

ಒಬ್ಬ ಪುರುಷನು ತನ್ನ ತಾಯಿ ಮತ್ತು ತಂದೆಯನ್ನು ಬಿಟ್ಟು ತನ್ನ ವಧುವಿನೊಂದಿಗೆ ಐಕ್ಯವಾಗುವ ಪ್ರಕಾರವೇ ಕ್ರಿಸ್ತನು ತನ್ನ ಮೊದಲಗಿತ್ತಿಯಾದ ಸಭೆಯೊಂದಿಗೆ ಒಂದಾಗಲು ತನ್ನ ಪರಲೋಕನಿವಾಸವನ್ನು ತೊರೆದು ಈ ಲೋಕಕ್ಕೆ ಬಂದನು. ಕ್ರಿಸ್ತನು ಮತ್ತು ಆತನ ಸಭೆಯ ನಡುವೆ ಅಸ್ತಿಸ್ವದಲ್ಲಿರುವ ಸಂಬಂಧವೇ ಗಂಡ ಮತ್ತು ಹೆಂಡತಿಯ ನಡುವೆ ಇರುವದಾಗಲಿ ಅಂದರೆ, ಸಭೆಯು ಕ್ರಿಸ್ತನಿಗೆ ಅಧೀನವಾಗಿರುವ ಪ್ರಕಾರವೇ ಹೆಂಡತಿಯು ಗಂಡನಿಗೆ ಅಧೀನಳಾಗಿರಲಿ, ಮತ್ತು ಕ್ರಿಸ್ತನು ಸಭೆಯನ್ನು ಪ್ರೀತಿಸುವ ಪ್ರಕಾರವೇ ಗಂಡನು ಕ್ರಿಸ್ತನನ್ನು ಪ್ರೀತಿಸಲಿ. ಇದು ಸುಖಮಯ ಹಾಗು ಯಶಸ್ವಿಕರ ಸಂಸಾರಕ್ಕೆ ಒಂದು ಖಚಿತವಾದ ಸಲಹೆಯಾಗಿರುತ್ತದೆ.

ಸಭೆಯನ್ನು ಒಬ್ಬ ಮದಲಗಿತ್ತಿಗೆ ಹೋಲಿಸುವಿಕೆಯ ಈ ಉದಾಹರಣೆಯಿಂದ ನಾವು ಸಭೆಯ ಸ್ಥಾನದ ಬಗ್ಗೆ ಒಂದು ವಿಷಯವನ್ನು ತಿಳಿದುಕೊಳ್ಳಬಹುದು. ತನ್ನ ಕರ್ತನಿಗೆ ಅವಿಧೇಯವಾಗುವ ಸಭೆಯು ವ್ಯಭಿಚಾರವನ್ನು ಮಾಡುವಂಥ ಅಪನಂಬಿಗಸ್ಥ ಹೆಂಡತಿಯಂತಿರುತ್ತದೆ. ನಮ್ಮ ಸಭೆಯ ವಿಷಯದಲ್ಲಿ ಹೀಗೆ ಇರದಿರಲಿ!

---

## ಅಧ್ಯಾಯ - 6

### ಮಕ್ಕಳು ಮತ್ತು ತಂದೆತಾಯಿಗಳು (6:1-4)

1 ಈವಚನವು ಪ್ರಾಥಮಿಕವಾಗಿ ಯೌವನಸ್ಥ ಬಾಲಕರಿಗೆ ಅನ್ವಯಿಸುತ್ತದೆ ಹೊರತು ಪ್ರಾಯಸ್ಥರಿಗಲ್ಲ. ಪ್ರಾಯಕ್ಕೆ ಬಂದಿರುವ ಮಕ್ಕಳು ತಮ್ಮ ತಂಗೆದೆತಾಯಿಗಳಿಗೆ ವಿಧೇಯರಾಗಬೇಕೆಂದು ಪೌಲನ ತಾತ್ಪರ್ಯವಾಗಿರುವದಿಲ್ಲ. ಪೌಲನು ಹೇಳುವದೇನೆಂದರೆ, ಇನ್ನೂ ಅವಲಂಭಿತರಾಗಿರುವ ಬಾಲಕರು ತಮ್ಮ ತಂದೆ ತಾಯಿಗಳಿಗೆ ವಿಧೇಯರಾಗಬೇಕೆಂಬುದೇ (ಜ್ಞಾನೋಕ್ತಿಗಳು 8:32-33, 15:5).

2-3 ಪೇಗಿದ್ದರೂ, ನಾವು ಯಾವ ವಯಸ್ಸಿನವರಾಗಿದ್ದರೂ ನಮ್ಮ ತಂದೆತಾಯಿಗಳನ್ನು ಗೌರವಿಸುವವರಾಗರಬೇಕು. ಹಳೆ ಒಡಂಬಡಿಕೆಯ ದಶಾಜ್ಞೆಗಳಲ್ಲಿ ಒಬ್ಬನ ತಂದೆತಾಯಿಗಳನ್ನು ಗೌರವಿಸಬೇಕೆಂಬದು ಐದನೆಯ ಆಜ್ಞೆಯಾಗಿದೆ (ವಿಮೋಚನ ಕಾಂಡ 20:12, ಧರ್ಮೋಪದೇಶಕಾಂಡ 5:16). ಆದರೆ ಅದರೊಂದಿಗೆ ವಾಗ್ದಾನವನ್ನು ಹೊಂದಿರುವ ಪ್ರಥಮ ಆಜ್ಞೆ ಇದಾಗಿದೆ. ಒಬ್ಬನು ಈ ಆಜ್ಞೆಗೆ ವಿಧೇಯನಾಗುವದಾದರೆ ಆತನಿಗೆ ಮೇಲಾಗುವದು ಮತ್ತು ಬಹುಕಾಲ ಬಾಳುವನು ಎಂದು ದೇವರು ವಾಗ್ದಾನ ಮಾಡುತ್ತಾನೆ (ವಚನ 3)

4 ಮಕ್ಕಳ ಕರ್ತವ್ಯದ ವಿಷಯದಲ್ಲಿ ಮಾತಾಡಿದ ಬಳಿಕ ಈಗ ಪೌಲನು ತಂದೆತಾಯಿಗಳ ಕರ್ತವ್ಯದ ಬಗ್ಗೆ ಮಾತಾಡುತ್ತಾನೆ. ಅಂದರೆ, ತಂದೆತಾಯಿಗಳು ತಮ್ಮ ಮಕ್ಕಳನ್ನು ಕರ್ತನಿಗೆ ಮೆಚ್ಚಿಕೆಯಾಗಿರುವ ಬಾಲಶಿಕ್ಷೆಯನ್ನು ಬಾಲೋಪದೇಶವನ್ನು ಮಾಡುತ್ತಾ ಅವರನ್ನು ಸಾಕಿಸಲಹಬೇಕು. ಮಕ್ಕಳು ಬಾಲ್ಯದಲ್ಲಿ ತಮ್ಮ ತಂದೆತಾಯಿಗಳಿಗೆ ವಿಧೇಯರಾಗಿದ್ದ ಪ್ರಕಾರವೇ ಅವರು ಬೆಳೆದಾಗ ಕರ್ತನಿಗೆ ವಿಧೇಯರಾಗುವ ಹಾಗೆ ಮಕ್ಕಳಿಗೆ ವಿಧೇಯತೆಯನ್ನು ಕಲಿಸಿಕೊಡುವದು ತಂದೆತಾಯಿಗಳ ಗುರಿಯಾಗಿರುತ್ತದೆ (ಜ್ಞಾನೋಕ್ತಿಗಳು 22:6).

ಅವರಿಗೆ ವಿಧೇಯತೆಯನ್ನು ಕಲಿಸುವದರ ಜೊತೆಗೆ ತಂದೆತಾಯಿಗಳು ತಮ್ಮ ಮಕ್ಕಳೆಡೆಗೆ ಪ್ರೀತಿ ಹಾಗು ಮಮತೆಯುಳ್ಳವರಾಗಿ ಸಹ ಇರಬೇಕು. ಅವರು ತಮ್ಮ ಮಕ್ಕಳೊಂದಿಗೆ ಪಕ್ಷಪಾತವಿಲ್ಲದವರಾಗಿ ನಡೆದುಕೊಳ್ಳಬೇಕು. ಅವರು ತಮ್ಮ ಮಕ್ಕಳಿಗೆ ಕೋಪವನ್ನೆಬ್ಬಿಸಬಾರದು, ಅಂದರೆ, ಅವರು ಮಕ್ಕಳನ್ನು ಅನಾವಶ್ಯಕವಾಗಿ ಗದರಿಸಬಾರದು. ಅಥವಾ ಶಿಕ್ಷಿಸಿಬಾರದು, ಇಲ್ಲವೆ ಅವರ ಮೇಲೆ ಇತರ ಅನಾವಶ್ಯಕ ಸಂಕಷ್ಟಗಳನ್ನು ಹೊರಿಸಬಾರದು. ತಂದೆತಾಯಿಗಳು ಯಾವ ಕಾರಣವೂ ಇಲ್ಲದೆ ತಮ್ಮ ಮಕ್ಕಳಿಗೆ ಕೋಪವನ್ನು ತರಬಾರದು. ನಿಜ, ನಾವು ನಮ್ಮ ಮಕ್ಕಳನ್ನು ಶಿಕ್ಷಿಸಬೇಕು, ಆದರೆ ಅದು ಯಾವಾಗಲೂ ಅವರ ಭವಿಷ್ಯತ್ತಿನ ಹಿತಕ್ಕಾಗಿಯೇ ಆಗಿರಬೇಕು. ಮತ್ತು ನಾವು ಯಾವಾಗಲೂ ಅವರನ್ನು ಪ್ರೀತಿಯಲ್ಲಿ ಶಿಕ್ಷಿಸಬೇಕು. ಪ್ರೀತಿ ಮತ್ತು ಶಿಕ್ಷೆ ಯಾವಾಗಲೂ ಜೊತೆಯಾಗಿ ಸಮಾನತೆಯಿಂದ ಸಾಗಬೇಕು. ನಾವು ಮಕ್ಕಳಿಗೆ ಅವರು ಯಾವ ತಪ್ಪನ್ನು ಮಾಡಿದ್ದಾರೆ ಮತ್ತು ನಾವು ಯಾವುದಕ್ಕಾಗಿ ಅವರನ್ನು ಶಿಕ್ಷಿಸುತ್ತಿದ್ದೇವೆಂಬದನ್ನು ವಿವರವಾಗಿ ತಿಳಿಸಿದ ನಂತರವಷ್ಟೇ ಅವರನ್ನು ಶಿಕ್ಷಿಸಬೇಕು. ನಾವು ಶಿಕ್ಷಿಸುವದು ಅತಿ ಕಠಿಣವಾಗಿರಬಾರದು. ನಾವು ನಮ್ಮ ಮಕ್ಕಳ ಮೃದು ಹೃದಯಗಳನ್ನು ದುಃಖಪಡಿಸದಂತೆ ಅಥವಾ ಕಠಿಣಗೊಳಿಸದಂತೆ ಎಚ್ಚರಿಕೆ ವಹಿಸಬೇಕು. ನಾವು ಎಂದಿಗೂ ಕೋಪದಲ್ಲಿಯಾಗಲೀ ಅಥವಾ ತಾಳ್ಮೆ ಕಳೆದುಕೊಂಡವರಾಗಿ ಆಗಲಿ ನಮ್ಮ ಮಕ್ಕಳನ್ನು ಶಿಕ್ಷಿಸಬಾರದು. ಯಾವದೋ ತಪ್ಪಿಗಾಗಿ ನ್ವು ನಮ್ಮ ಮಕ್ಕಳ ಮೇಲೆ ಕೋಪಗೊಂಡಿದ್ದರೆ ಅಥವಾ ಬೇಸರಗೊಂಡಿರುವದಾದರೆ ನಾವು ಅವರನ್ನು ಶಿಕ್ಷಿಸುವದಕ್ಕೆ ಮುಂಚೆ ನಮ್ಮ ಕೋಪವು ತಣ್ಣಗಾಗುವವರೆಗೂ ಕಾಯಬೇಕು (ಕೊಲೊಸ್ಸೆ 3:21). ದೇವರು ಗಂಡಂದಿರಿಗೆ ಅಧಿಕಾರವನ್ನು ತಮ್ಮ ಹೆಂಡತಿಯರ ಪ್ರಯೋಜನಾರ್ಥವಾಗಿ ನೀಡಿರುವ ಪ್ರಕಾರವೇ ದೇವರು ತಂದೆತಾಯಿಗೆ ಅಧಿಕಾರವನ್ನು ಅವರ ಮಕ್ಕಳ ಪ್ರಯೋಜನಕ್ಕಾಗಿ ಉಪಯೋಗಿಸಬೇಕೆಂದು ನೀಡಿರುತ್ತಾನೆ (ಧರ್ಮೋಪದೇಶಕಾಂಡ 6:6-7,2 ಕೊರಿಂಥ12:14, 1 ತಿಮೊಥೆ 3:4, ತೀತನು 2:4).

### ದಾಸರು ಮತ್ತು ಯಜಮಾನರು (6:5-9)

5 ಹೊಸ ಒಡಂಬಡಿಕಯ ಕಾಲದಲ್ಲಿ ದಾಸತ್ವದ ಪದ್ಧತಿಯು ರೋಮಾಯಸಾಮ್ರಾಜ್ಯದುದ್ದಕ್ಕೂ ವ್ಯಾಪಕವಾಗಿ ಹರಡಿಕೊಂಡಿತ್ತು ಗುಲಾಮರನ್ನು ಬಹಳ ಕೆಟ್ಟದ್ದಾಗಿ ನಡಿಸಿಕೊಳ್ಳುತ್ತಿದ್ದರು. ಅವರಿಗೆ ಯಾವದೇ ಸ್ವಾತಂತ್ರ್ಯ, ಯಾವ ಹಕ್ಕುಗಳೂ ಇರಲಿಲ್ಲ, ಅವರನ್ನು ಪ್ರಾಣಿಗಳಂತೆ ನಡೆಸಿಕೊಳ್ಳುತ್ತಿದ್ದರು. ಅವರು ಎಲ್ಲಾ ಕಾರ್ಯಗಳಲ್ಲಿಯೂ ತಮ್ಮ ಯಜಮಾನರಿಗೆ ವಿಧೇಯರಾಗಬೇಕಿತ್ತು. ಅನೇಕ ಗುಲಾಮರು ಕ್ರೈಸ್ತರಾದರು. ಯಾಕೆಂದರೆ, ಅವರು ಕ್ರಿಸ್ತನ ಸುವಾರ್ತೆ ಕ್ರಿಸ್ತನ ರಕ್ಷಣೆ ಮತ್ತು

ನಿತ್ಯಜೀವದ ವಾಗ್ದಾನದ ಮೂಲಕ ಸಮಾಧಾನ ಮತ್ತು ನಿರೀಕ್ಷೆಯನ್ನು ಪಡೆದುಕೊಂಡಿದ್ದರು. ಹೇಗಿದ್ದರೂ, ಗುಲಾಮರಾಗಿರುವ ಅವರ ಪರಸ್ಥಿತಿಯು ಬಹಳ ದುಃಖಕರವಾಗಿದ್ದರೂ ಅವರು ತಮ್ಮ ಯಜಮಾನರಿಗೆ ವಿಧೇಯರಾಗಿರಬೇಕೆಂದು ಪೌಲನು ಹೇಳುತ್ತಾನೆ.

ಇಂದಿನ ಜಗತ್ತಿನಲ್ಲಿ ಗುಲಾಮರನ್ನಿಟ್ಟುಕೊಳ್ಳುವ ಪದ್ಧತಿಯು ವಿರಳವಾಗಿ ಕಂಡುಬರುತ್ತದೆ. ಹೇಗಿದ್ದರೂ, ಪೌಲನ ಕಾಲದಲ್ಲಿ ಯಜಮಾನರು ಹಾಗು ಗುಲಾಮರಿಗೆ ಅನ್ವಯಿಸಿದ ಅದೇ ಸೂತ್ರಗಳೇ ಇಂದು ನಮ್ಮ ಕಾಲದಲ್ಲಿನ ಧನಿಗಳು ಹಾಗು ನೌಕರರಿಗೆ ಅನ್ವಯವಾಗಬಲ್ಲದು. ಕ್ರೈಸ್ತ ನೌಕರರು ಕ್ರಿಸ್ತನಿಗೆ ವಿಧೇಯರಾಗುವ ಪ್ರಕಾರವೇ ತಮ್ಮ ಧನಿಗಳಿಗೆ (ಕೆಲಸದ ಪರಸ್ಥಿತಿತಯಲ್ಲಿ) ವಿಧೇಯರಾಗಬೇಕು (ಕೊಲೊಸ್ಸೆ 3:22-24).

**6** ನಾವು ಒಳ್ಳೇ ಕಾರ್ಯವನ್ನು ಮನುಷ್ಯರ ಮೆಚ್ಚಿಕೆಗಾಗಿ ಮಾಡದೆ ದೇವರ ಮೆಚ್ಚಿಕೆಯನ್ನು ಗಳಿಸುವದಕ್ಕಾಗಿ ಮಾಡಬೇಕು. ನಾವು ಸರಳ ಹೃದಯದವರಾಗಿ (ವಚನ 5) ಕೆಲಸ ಮಾಡಬೇಕು. ಮನುಷ್ಯರ ದೃಷ್ಟಿಗೆ ಒಳ್ಳೆಯವರಾಗಿ ಕಾಣಿಸಿಕೊಳ್ಳುವದಕ್ಕಲ್ಲ, ಆದರೆ ದೇವರನ್ನು ಮೆಚ್ಚಿಸುವದಕ್ಕಾಗಿಯೇ.

**7-8** ಯಜಮಾನ ಅಥವಾ ಧನಿಯ ಅಧಿಕಾರವು ದೇವರಿಂದ ಬರುತ್ತದೆ. ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ.....ಆಳು ಒಡೆಯ ಎಂದೂ....ಭೇಧವಿಲ್ಲ (ಗಲಾತ್ಯ 3:28). ದೇವರ ದೃಷ್ಟಿಯಲ್ಲಿ ಎಲ್ಲಾ ಕ್ರೈಸ್ತರು ಸಮಾನರಾಗಿದ್ದಾರೆ. ಭೂಲೋಕದಲ್ಲಿ ಅವರ ಸ್ಥಾನ ಮಾನಗಳು ವ್ಯತ್ಯಾಸವಾಗಿರಬಹುದು, ಆದರೆ ಪರಲೋಕದಲ್ಲಿ ನಾವೆಲ್ಲರೂ ಸರಿಸಮಾನರಾಗಿ ಒಬ್ಬನೇ ಕರ್ತನ ಸೇವಕರಾಗಿರುತ್ತೇವೆ (ವಚನ 9). ದೇವರು ಜನರನ್ನು ಬೇರೆ ಬೇರೆ ಕರೆಗಳಿಗೆ ನೇಮಿಸಿದ್ದಾನೆ, ಕೆಲವರನ್ನು ಆತನು ಧನಿಗಳಾಗಿರಲು ಕರೆದನು. ಇತರರನ್ನು ನೌಕರರಾಗಿರಲು[26] ಕರೆದನು.

ಆದದರಿಂದ, ದೇವರು ನೇಮಕ ಮಾಡಿರುವ ಅಧಿಕಾರಿಗಳ ವಿರುದ್ಧವಾಗಿ ಗುಣಗುಟ್ಟದೆಯೂ ದೂರು ಹೇಳದೆಯೂ ಇರೋಣ. ನಾವು ಕ್ರಿಸ್ತನ ಅಧಿಕಾರಕ್ಕೆ ಮನಃಪೂರ್ವಕವಾಗಿ ಒಪ್ಪಿಸಿಕೊಳ್ಳುವ ಪ್ರಕಾರವೇ ಧನಿಗಳ ಅಧಿಕಾರಕ್ಕೆ ಅಥವಾ ಸರಕಾರ ಇಲ್ಲವೆ ಸಭೆಯಲ್ಲಿ ನಮ್ಮ ನಾಯಕರ ಅಧಿಕಾರಕ್ಕೆ ನಮ್ಮನ್ನು ಮನಃಪೂರ್ವಕವಾಗಿ ಒಪ್ಪಿಸಿಕೊಳ್ಳಬೇಕು (ತೀತನು 2:9-10 ಮತ್ತು ವ್ಯಾಖ್ಯಾನ ನೋಡಿರಿ). ನಾವು ಚಿತ್ತಪೂರ್ವಕವಾಗಿ ನಮ್ಮ ಯಜಮಾನರೆಡೆಗಿರುವ ನಮ್ಮ ಎಲ್ಲಾ ಕರ್ತವ್ಯಗಳನ್ನು ನೆರವೇರಿಸುವದಾದರೆ ನಮಗೆ ಪ್ರಫಲ ದೊರೆಯುತ್ತದೆಂದು ದಂವರು ವಾಗ್ದಾನ ಮಾಡಿದ್ದಾನೆ (ಮತ್ತಾಯ 16:27, 2 ಕೊರಿಂಥ 5:10 ನೋಡಿರಿ).

**9** ನೌಕರನ ಕರ್ತವ್ಯವು ವಿಧೇಯನಾಗುವದೇ. ಈಗ ಪೌಲನು ಧನಿಯ ಅಥವಾ ಯಜಮಾನನ ಕರ್ತವ್ಯವನ್ನು ಕುರಿತು ಹೇಳುತ್ತಾನೆ. ಯಜಮಾನನು ಪರಲೋಕದಲ್ಲಿರುವ ಆತನ ಯಜಮಾನನಾದ ಕ್ರಿಸ್ತನು ತನ್ನು ನಡಿಸಿಕೊಳ್ಳಬೇಕೆಂದು ನಿರೀಕ್ಷಿಸುವ ವಿಧದಲ್ಲಿಯೇ ತನ್ನ ಕೈಕೆಳಗಿರುವವರನ್ನು ಅದೇ ರೀತಿಯಾಗಿ ನಡೆಸಿಕೊಳ್ಳಬೇಕು. ಅಂದರೆ, ಧನಿಯು ತನ್ನ ನೌಕರರನ್ನು ದಯೆಯಿಂದಲೂ ಗೌರವದಿಂದಲೂ ಕಾಣಬೇಕು. ಧನಿಯು ತನ್ನ ನೌಕರರಿಗೆ ನ್ಯಾಯವಾದಸಂಬಳವನ್ನು ನೀಡಬೇಕು, ಆತನು ಅವರನ್ನು ಶೋಷಣೆ ಮಾಡಬಾರದು. ಆತನು ಅವರಿಗೆ ತಕ್ಕ ಕೆಲಸವನ್ನು ಮತ್ತು ಸರಿಯಾದ ಕೆಲಸದ ನಿಬಂಧನೆಗಳನ್ನು ಒದಗಿಸಬೇಕು. ಧನಿ ಅಥವಾ ಯಜಮಾನನು ತನ್ನ ಕೆಲಸಗಾರರನ್ನು ತನ್ನ ಸ್ವಾರ್ಥ ಅಥವಾ ದುರಾಶೆಯನ್ನು ತೃಪ್ತಿಪಡಿಸಿಕೊಳ್ಳುವದಕ್ಕಾಗಿ ದುಡಿಯುವಂತೆ ಮಾಡಬಾರದು. ದೇವರು ನಮಗೆ ಕರುಣೆ, ಪ್ರೀತಿ ಮತ್ತು ಕ್ಷಮಾಪಣೆಯನ್ನು ಅನುಗ್ರಹಿಸಿರುತ್ತಾನೆ. ಧನಿ ಅಥವಾ ಯಜಮಾನನು ತನ್ನ ಕೆಲಸಗಾರರನ್ನು ಅಧೇ ರೀತಿಯಾಗಿ ನಡೆಸಿಕೊಳ್ಳಬೇಕು. ನೌಕರನು ತನ್ನ ಯಜಮಾನನಿಗೆ ವಿಧೇಯನಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸಿದ್ದಕ್ಕೆ ಪ್ರಫಲವನ್ನು ಪಡೆದುಕೊಳ್ಳುವ ಪ್ರಕಾರವೇ ಯಜಮಾನನು ತನ್ನ ನೌಕರರೆಡೆಗಿನ ತನ್ನ ಕರ್ತವ್ಯಗಳನ್ನು ನೆರವೇರಿಸುವದಕ್ಕಾಗಿ ಪರಲೋಕದಿಂದ ಪ್ರತಿಫಲವನ್ನು ಪಡೆಯುವನು. ಭೂಲೋಕದ ಯಜಮಾನನು ತಮಗೊಬ್ಬ ಪರಲೋಕದ ಯಜಮಾನನು ಇರುತ್ತಾನೆಂಬದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಲಿ! (ಕೊಲೊಸ್ಸೆ 4:1). ನಾವೆಲ್ಲರೂ ಕ್ರಿಸ್ತನ ಜೊತೆ ಸೇವಕರು ಮತ್ತು ನಮ್ಮಲ್ಲಿ ಪ್ರತಿಯೊಬ್ಬರಿಗೂ – ಯಜಮಾನನಾಗಲಿ ಅಥವಾ ಸೇವಕನಾಗಲೀ, ಧನಿಯಾಗಲಿ ಅಥವಾ ನೌಕರನಾಗಲೀ–ಈ ಲೋಕದಲ್ಲಿ ನಾವು ಕ್ರಿಸ್ತನಿಗೆ ಎಷ್ಟು ಉತ್ತಮವಾಗಿ ವಿಧೇಯರಾಗಿದ್ದೇವೆಂಬದಕ್ಕೆ ಅನುಸಾರವಾಗಿ ಪರಲೋಕದಲ್ಲಿ ಪ್ರತಿಫಲವನ್ನು ಪಡೆಯುವೆವು.

ಪ್ರತಿಯೊಬ್ಬನು ಇತರರೆಡೆಗಿನ ತನ್ನ ಕರ್ತವ್ಯಗಳ ಬಗ್ಗೆ ಮಾತ್ರವೇ ಯೋಚಿಸಲಿ. ನಾವು ಇತರರಿಂದ ಏನನ್ನು ಪಡೆದುಕೊಳ್ಳಬಲ್ಲೆವೆಂಬದರ ಬಗ್ಗೆ ಯೋಚಿಸದೇ ಬದಲಾಗಿ ನಾವು ಅವರಿಗೆ ಏನನ್ನು ನೀಡಬಲ್ಲೆವು ಎಂಬದನ್ನು ಕುರಿತು ಯೋಚಿಸೋಣ. ನೌಕರರು ಪ್ರಾಥಮಿಕವಾಗಿ ತಾವು ಯಾವ ಲಾಭ ಅಥವಾ ಸಂಬಳವನ್ನು ಹೊಂದುವರೆಂಬದನ್ನು ಕುರಿತು ಯೋಚಿಸದೇ, ಬದಲಾಗಿ ಅವರು ತಮ್ಮ ಧನಿಗಾಗಿ ಎಷ್ಟು ಉತ್ತಮವಾಗಿ ಕೆಲಸ ಮಾಡಬಲ್ಲರೆಂಬದನ್ನು ಕುರಿತು ಯೋಚಿಸಲಿ. ಧನಿಕರು ತಾವು ತಮ್ಮ ನೌಕರರಿಂದ ಎಷ್ಟು ಕೆಲಸವನ್ನು ಮಾಡಿಸಿಕೊಳ್ಳಬಲ್ಲರೆಂಬದನ್ನು ಯೋಚಿಸದಿರಲಿ, ಆದರೆ ಬದಲಾಗಿ ಅವರು ಪ್ರಾಥಮಿಕವಾಗಿ ತಮ್ಮ ನೌಕರರಿಗೆ ನ್ಯಾಯವಾದ ಸಂಬಳ ಹಾಗು ಕೆಲಸಕ್ಕೆ ಒಳ್ಳೇ ಸೌಕರ್ಯಗಳನ್ನು ಒದಗಿಸುವದರ ಕುರಿತು ಯೋಚಿಸಲಿ. ಇದು ಕ್ರೈಸ್ತೀಯ ಮಾರ್ಗವಾಗಿದೆ. ಎರಡೂ ಪಕ್ಷಗಳಲ್ಲಿನ ಜನರು ಯಾವಾಗಲೂ ತಮ್ಮ ಹಕ್ಕುಗಳ ಬಗ್ಗೆ ಚಿಂತೆಯನ್ನು ಮಾಡುವದರ ಬದಲಾಗಿ ಅವರು ಮುಖ್ಯವಗಿ ತಮ್ಮ ಕರ್ತವ್ಯಗಳ ಬಗ್ಗೆ ಗಮನ ಹರಿಸುವದಾದರೆ ಇನ್ನು ಮೇಲೆ ದೂರುಗಳು, ಭಿನ್ನಾಭಿಪ್ರಾಯಗಳು, ಪ್ರತಿಭಟನೆ ಪ್ರದರ್ಶನಗಳು ಮತ್ತು ಮುಷ್ಕರಗಳು ಇರುವದಿಲ್ಲ. ಯೇಸು ನಮ್ಮೆಲ್ಲರಿಗೂ ನಾವು ನಮ್ಮ ಕುರಿತು ಚಿಂತಿಸುವದಕ್ಕಿಂತಲೂ ಪರರಿಗಾಗಿ ಚಿಂತಿಸಬೇಕೆಂದು ಕಲಿಸಿದನು.

## ದೇವರ ಸರ್ವಾಯುಧಗಳು (6:10-24)

10 ...ಬಲಗೊಳ್ಳಿರಿ. ಅದು ಒಂದು ಸಲಹೆ ಅಲ್ಲ,ಅದು ಒಂದು ಆಜ್ಞೆಯಾಗಿದೆ. ನಾವು ಈ ಆಜ್ಞೆಗೆ ಹೇಗೆ ವಿಧೇಯರಾಗಬಲ್ಲೆವು? ನಾವು ಹೇಗೆ ಬಲಗೊಳ್ಳಬಹುದು? ದೇವರು ದಯಪಾಲಿಸುವ ಸರ್ವಾಯುಧಗಳನ್ನು ಧರಿಸಿಕೊಳ್ಳುವದರ ಮೂಲಕವೇ (ವಚನ 11).

11 ನಾವು ಎಷ್ಟು ಬಲಹೀನರಾಗಿದ್ದೇವೆಂಬದರ ಕುರಿತು ಚಿಂತಿಸುವದರಲ್ಲಿ ಯಾವ ಅರ್ಥವಿಲ್ಲ. ಖಂಡಿತವಾಗಿಯೂ, ನಾವು ಬಲಹೀನರೇ! ಈ ಕಾರಣದಿಂದಲೇ ದೇವರು ನಮಗೆ ತನ್ನ ಸರ್ವಾಯುಧಗಳನ್ನು ನೀಡಿರುತ್ತಾನೆ. ಹೀಗೆ ನಾವು ಬಲಗೊಂಡು ವೈರಿಯೊಂದಿಗೆ ಹೋರಾಡಲು ಸನ್ನದ್ಧರಾಗುತ್ತೇವೆ. ಆದದರಿಂದ, ಪೌಲನು ನಮಗೆ ಹೇಳುವದೇನೆಂದರೆಃ ಈ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ. ದೇವರು ನಮಗೆ ತನ್ನ ಸರ್ವಾಯುಧಗಳನ್ನು ನೀಡಿರುತ್ತಾನೆ. ಇದು ಆತ್ಮೀಕ ಸರ್ವಾಯುಧವಾಗಿದ್ದು ನಮ್ಮ ಮುಖ್ಯ ಆತ್ಮೀಕ ವೈರಿಯಾದ ಸೈತಾನನಿಂದ ನಮ್ಮನ್ನು ಸಂರಕ್ಷಿಸುತ್ತದೆ.

12 ಈ ಲೋಕದಲ್ಲಿ ನಮ್ಮ ಕ್ರೈಸ್ತೀಯ ಜೀವಿತವು ಒಂದು ಹೋರಾಟ ಅಥವಾ ಯುದ್ಧದಂತೆ ಇರುತ್ತದೆ. ಯುದ್ಧದಲ್ಲಿ ಜಯಶಾಲಿಗಳಾಗುವದಕ್ಕೆ ಅವಶ್ಯಕವಾದ ಮೊದಲನೆಯ ಸಂಗತಿಯೇನೆಂದರೆ, ಒಬ್ಬನು ತನ್ನ ಸರ್ವಾಯುಧಗಳನ್ನು ಧರಿಸಿಕೊಳ್ಳಬೇಕೆಂಬದೇ. ಅವಶ್ಯಕವಾದ ಎರಡನೆಯ ಸಂಗತಿಯೇನೆಂದರೆ, ಒಬ್ಬನು ತನ್ನ ವೈರಿಯನ್ನು ಮತ್ತು ಆತನು ಎಷ್ಟು ಬಲಿಷ್ಟನಾಗಿದ್ದಾನೆಂಬದನ್ನು ಅರ್ಥಮಾಡಿಕೊಳ್ಳುವದು....ನಾವು ಸೈತಾನನು ಬಲಿಷ್ಟನಲ್ಲ ಎಂದು ಊಹಿಸಿಕೊಳ್ಳುವ ತಪ್ಪನ್ನು ಮಾಡದಿರೋಣ, ಆತನು ಬಹಳ ಬಲಿಷ್ಟನು. ಸೈತಾನನು ಬಲಿಷ್ಟನಲ್ಲ ಎಂದು ನಾವು ಭಾವಿಸುವದಾದರೆ ಆತನು ನಿಶ್ಚಯವಾಗಿಯೂ ನಮ್ಮನ್ನು ಪರಾಭವಗೊಳಿಸುವನು. ಆತನು ನಮಗಿಂತಲೂ ಬಲಿಷ್ಟನಾಗಿರುತ್ತಾನೆ! ನಾವು ನಮ್ಮ ಸರ್ವಾಯುಧಗಳಿಲ್ಲದೆ ಇರುವದಾದರೆ ಆತನು ಸುಲಭವಾಗಿ ನಮ್ಮನ್ನು ಸೋಲಿಸುತ್ತಾನೆ.

ಮತ್ತು ಸೈತಾನನು ಒಬ್ಬಂಡಿಗನಲ್ಲ. ಆತನ ಸಂಗಡ ಭೂಲೋಕದಲ್ಲಿನ ರಾಜತ್ವಗಳು, ಅಧಿಕಾರಗಳು, ಲೋಕಾಧಿಪತಿಗಳು ಮತ್ತು ಆಕಾಶಮಂಡಲದಲ್ಲಿರುವ ದುರಾತ್ಮಸೇನೆಯು ಇರುತ್ತವೆ. ಈ ಅಧಿಕಾರಗಳು ಮತ್ತು ಲೋಕಾಧಿಪತಿಗಳ ಮೇಲೆಯೇ ಕ್ರಿಸ್ತನು ಈಗ ಪರಲೋಕದಲ್ಲಿ ದೊರೆತನ ಮಾಡುತ್ತಾನೆ (ಎಫೆಸ 1:20-21), ದೇವರು ಇದೇ ರಾಜತ್ವಗಳು ಮತ್ತು ಅಧಿಕಾರಗಳಿಗೆ ತನ್ನ ಸಭೆಯ ಮೂಲಕ ತನ್ನ ನಾನಾವಿಧವಾದ ಜ್ಞಾನವನ್ನು ತಿಳಿಯಪಡಿಸುತ್ತಿದ್ದಾನೆ (ಎಫೆಸ 3:10). ಹೇಗಿದ್ದರೂ, ಈ ಭೂಲೋಕದಲ್ಲಿ ಈ ಎಲ್ಲಾ ರಾಜತ್ವಗಳ ಹಾಗು ಅಧಿಕಾರಗಳ ಶಕ್ತಿಯು ಈಗಲೂ ಅತಿದೊಡ್ಡದಾಗಿರುತ್ತದೆ. ಮತ್ತು ಈ ಕಾರಣದಿಂದ ಅವು ಗಳನ್ನು ಎದುರಿಸಿ ನಿಲ್ಲುವದಕ್ಕೆ ನಮಗೆ ದೇವರ ಸರ್ವಾಯುಧಗಳ ಅಗತ್ಯವಿರುತ್ತದೆ.

ಆದದರಿಂದ, ನಮ್ಮ ಸರ್ವಾಯುಧಗಳನ್ನು ಧರಿಸಿಕೊಂಡವರಾಗಿ ನಾವು ನಮ್ಮ ಭಯಂಕರ ವೈರಿಯಾದ ಸೈತಾನನ ಬಗ್ಗೆ ಏನನ್ನು ತಿಳಿದುಕೊಳ್ಳಬೇಕಾಗಿರುತ್ತದೆ? ಮೊದಲನೆಯದಾಗಿ, ಆತನು ಅದೃಶ್ಯನಾಗಿರುವವನು, ಆತನು ಒಂದು ಆತ್ಮವಾಗಿದ್ದಾನೆ. ಎರಡನೆಯದಾಗಿ, ಈಗಾಗಲೆ ಹೇಳಿರುವಂತೆಯೇ ಆತನು ಬಲಿಷ್ಟನಾಗಿದ್ದಾನೆ. ಮೂರನೆಯದಾಗಿ, ಆತನು ದುಷ್ಟನಾಗಿದ್ದಾನೆ, ಆತನು ಎಲ್ಲಾ ದುರಾತ್ಮ ಸೇನೆಗೆ ನಾಯಕನಾಗಿರುತ್ತಾನೆ. ಸೈತಾನನಲ್ಲಿ ಯಾವ ಒಳ್ಳೇತನ,ಯಾವ ಕರುಣೆ ಇರುವದಿಲ್ಲ. ಆತನು ಸಾಧ್ಯವಾದ ಯಾವದೇ ರೀತಿಯಿಂದಾದರೂ, ಪ್ರತಿಯೊಬ್ಬ ಕ್ರೈಸ್ತನ ಆತ್ಮೀಕ ಜೀವಿತವನ್ನು ನಾಶಮಾಡುವದೇ ಆತನ ಏಕೈಕ ಅಭಿಲಾಷೆ ಮತ್ತು ಗುರಿಯಾಗಿರುತ್ತದೆ.

ಸೈತಾನನ ಕುರಿತು ತಿಳಿಯಬೇಕಾದ ನಾಲ್ಕನೆ ಸಂಗತಿಯೇನೆಂದರೆ, ಆತನು ಕುತಂತ್ರಿ ಹಾಗು ಕುಟಿಲನಾಗಿದ್ದಾನೆ. ಸೈತಾನನು ಗರ್ಜಿಸುವ ಸಿಂಹೋಪಾದಿಯಲ್ಲಿ ಯಾರನ್ನೂ ನುಂಗಲಿ ಎಂದು ಹುಡುಕುತ್ತಿರುತ್ತಾನೆ ಎಂಬದಾಗಿ ಪೇತ್ರನು ಹೇಳುತ್ತಾನೆ (1 ಪೇತ್ರ 5:8). ಅದು ಸತ್ಯ, ಆದರೆ ಅತಿಸಹಜವಾಗಿ ಸೈತಾನನು ಗರ್ಜಿಸುವದಿಲ್ಲ. ನಾವು ಎಚ್ಚರಿಕೆಯಿಲ್ಲದಿರುವ ವೇಳೆ ಆತನು ಮೌನವಾಗಿ ನಮ್ಮ ಮೇಲೆ ಕದ್ದು ಬರುತ್ತಾನೆ. ಅಥವಾ ನಾವು ಆತನನ್ನು ಗುರುತಿಸಲಾರದಂದತೆ ಆತನು ತನ್ನನ್ನು ವೇಷಮರೆಸಿಕಗಳ್ಳುತ್ತಾನೆ (2 ಕೊರಿಂಥ 11:14). ಆತನು ಕುರಿವೇಷದಲ್ಲಿರುವ ತೋಳದಂತಿರುತ್ತಾನೆ, ಕುರಿಯು ಆತನು ಸಹ ಒಂದು ಕುರಿ ಅಷ್ಟೇ ಎಂದು ಭಾವಿಸಿ ತನ್ನ ಹಿಂಡಿನೊಳಗೆ ಬರಲು ಬಿಡುತ್ತದೆ (ಮತ್ತಾಯ 7:15 ಮತ್ತು ವ್ಯಾಖ್ಯಾನ ನೋಡಿರಿ). ಅಂಥ ಭಯಂಕರವಾದ ವೈರಿಯ ವಿರುದ್ಧ ಹೇಗೆ ಹೋರಾಡಬಲ್ಲೆವು?

13 ನಾವು ದೇವರ ಶಕ್ತಿಯನ್ನು ಆಶ್ರಯಿಸಿಕೊಂಡು ಸೈತಾನನ ವಿರುದ್ಧ ಹೋರಾಡಬಲ್ಲೆವು, ಯಾಕೆಂದರೆ ದೇವರ ಶಕ್ತಿಯು ಸೈತಾನನ ಶಕ್ತಿಗಿಂತಲೂ ಅತಿ ದೊಡ್ಡದಾಗಿರುತ್ತದೆ. (1 ಯೋಹಾನ 4:4 ಮತ್ತು ವ್ಯಾಖ್ಯಾನ ನೋಡಿರಿ). ನಾವು ದೇವರ ಸರ್ವಾಯುಧಗಳನ್ನು ಧರಿಸಿಕೊಂಡು ಎದುರಿಸಿ ನಿಲ್ಲುವದರ ಮೂಲಕ ಸೈತಾನನು ಓಡಿಹೋಗುವಂತೆ ಮಾಡಬಲ್ಲೆವು (ಯಾಕೋಬ 4:7 ಮತ್ತು ವ್ಯಾಖ್ಯಾನ ನೋಡಿರಿ). 11ನೇ ವಚನದಲ್ಲಿರುವಂತೆಯೇ ಇಲ್ಲಿ ಪೌಲನು ಪುನಃ ನಮಗೆ ದೇವರು ದಯಪಾಲಿಸುವ ಸರ್ವಾಯುಧಗಳನ್ನೂ ಧರಿಸಿಕೊಳ್ಳಬೇಕೆಂದು ಹೇಳುತ್ತಾನೆ. ಸರ್ವಾಯುಧಗಳಲ್ಲಿ ಒಂದು ಆಯುಧವು ಇಲ್ಲದಿದ್ದರೆ ಸಹ ಸೈತಾನನು ಆ ಸಂರಕ್ಷಣೆ ಯಿಲ್ಲದ ಕ್ಷೇತ್ರದಲ್ಲಿ ನಮ್ಮನ್ನು ಶೀಘ್ರವೇ ಗಾಯಗೊಳಿಸುವನು. ಕಠಿಣ ಯುದ್ಧವು ನಡೆಯುವ ದಿವಸದಲ್ಲಿ ಸೈತಾನನನ್ನು ಎದುರಿಸುವದಕ್ಕೆ ಸಿದ್ಧರಾಗಿರಬೇಕೆಂದು ಪೌಲನು ನಮಗೆ ಹೇಳುತ್ತಾನೆ. ಕಠಿಣ ದಿವಸವು ಶೋಧನೆಯ, ಹಿಂಸೆಯ ದಿನವಾಗಿದೆ. ವಿಶೇಷವಾಗಿ, ಸೈತಾನನು ನಮ್ಮ ಮೇಲೆ ದಾಳಿ ಮಾಡುವ ಯಾವದೇ ದಿನ ಆದಾಗಿರುತ್ತದೆ.

14 ಪೌಲನು 14-17 ವಚನಗಳಲ್ಲಿ ದೇವರ ಸರ್ವಾಯುಧಗಳ ಆರು ಭಾಗಗಳನ್ನು ಪ್ರಸ್ತಾಪಿಸುತ್ತಾನೆ: ನಡುಕಟ್ಟು ಮತ್ತು ವಜ್ರಕವಚ (ವಚನ 12) ಪಾದಗಳಿಗೆ "ಕೆರಗಳು"–ಪಾದರಕ್ಷೆಗಳು–(ವಚನ 17), ಗುರಾಣಿ (ವಚನ 16), ಶಿರಸ್ತ್ರಾಣ ಮತ್ತು ಕತ್ತಿ–ಖಡ್ಗ–(ವಚನ 17). ಪೌಲನ ಕಾಲದಲ್ಲಿ ಸೈನಿಕನ ಸರ್ವಾಯುಧವು ಈ ಆರು ಭಾಗಗಳನ್ನೊಳಗೊಂಡಿರುತಿತ್ತು. ಪೌಲನು ಈ ಪತ್ರಿಕೆಯನ್ನು ರೋಮಾಪುರದಲ್ಲಿ ಸೆರೆಯಾಳಾಗಿರುವಾಗ ಬರೆದನು, ಬಹುಶಃ ಆತನನ್ನುಕಾಯುವದಕ್ಕೆ ಇದೇ ರೀತಿಯ ಸರ್ವಾಯುಧಗಳನ್ನು ಧರಿಸಿದ್ದ ಸೈನಿಕನೊಬ್ಬನನ್ನು ಇಡಲಾಗಿತ್ತು. ಬಹುಶಃ ಪೌಲನು ತನ್ನ ಕಾವಲುಗಾರನ ಸರ್ವಾಯುಧಗಳನ್ನು ಆಧರಿಸಿ ದೇವರ ಸರ್ವಾಯುಧಗಳನ್ನು ಬಣ್ಣಿಸಿರಬೇಕು. ಈಗ ನಾವು ಈ ಸರ್ವಾಯುಧದ ಪ್ರತಿಯೊಂದು ಭಾಗವನ್ನು ಪರೀಕ್ಷಿಸೋಣ. ಮೊದಲನೆಯದಾಗಿ, ಪೌಲನು ಸತ್ಯವೆಂಬ ನಡುಕಟ್ಟನ್ನು ಪ್ರಸ್ತಾಪಿಸುತ್ತಾನೆ. ಸೈತಾನನು ಸುಳ್ಳುಗಳಿಗೆ ತಂದೆಯಾಗಿದ್ದಾನೆ (ಯೋಹಾನ 8:44), ಮತ್ತು ಸತ್ಯವು ಮಾತ್ರವೇ ಆತನ ಸುಳ್ಳುಗಳನ್ನು ಪರಾಭವಗೊಳಿಸಬಲ್ಲದು. ಸತ್ಯ ಎಂಬದು ವಿಶ್ವಾಸಾರ್ಹತೆ ಎಂಬ ಅರ್ಥವನ್ನು ಸಹ ಕೊಡುತ್ತದೆ, ಯಾಕಂದರೆ, ಸೈತಾನನೊಂದಿಗಿನ ನಮ್ಮ ಹೋರಾಟದಲ್ಲಿ ನಾವು ಸರ್ವಾಯುಧದ ಎರಡನೆಯ ವಸ್ತುವೇನೆಂದರೆ, ನೀತಿಯೆಂಬ ವಜ್ರಕವಚ (ಯೇಶಾಯ 59:17). ದೇವರು ವಿಶ್ವಾಸಿಗಳನ್ನು ಕ್ರಿಸ್ತನಲ್ಲಿ ನೀತಿವಂತರೆಂದು ನಿರ್ಣಯಿಸಿರುತ್ತಾನೆ. ನಾವು ಕ್ರಿಸ್ತನ ನೀತಿಯನ್ನು ಪಡೆದುಕೊಂಡಿರುತ್ತೇವೆ. ಕ್ರಿಸ್ತನು ನಮ್ಮ ಪಾಪಗಲ ದಂಡನೆ.ನ್ನು ತನ್ನ ಮೇಲೆ ಹೊತ್ತಕೊಂಡನಾದ್ದರಿಂದ ನಾವು ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ, ಆತನಲ್ಲಿ ನಂಬಿಕೆಯಿಡುವದರ ಮೂಲಕ ಇನ್ನು ಮೇಲೆ ನಮ್ಮಲ್ಲಿ ಪಾಪದ ಅಪರಾಧವಿರುವದಿಲ್ಲ (ಮಾರ್ಕ 14:45 ಮತ್ತು ವ್ಯಾಖ್ಯಾನ ನೋಡಿರಿ). ನಾವು ನೀತಿಯೆಂಬ ವಜ್ರಕವಚವನ್ನು ಧರಿಸಿಕೊಳ್ಳಬೇಕು, ಇಲ್ಲವಾದರೆ, ನಾವು ಅನೀತಿವಂತರಾಗಿದ್ದೇವೆಂದು ಸೈತಾನನು ನಮ್ಮ ಮೇಲೆ ದೂರು ಹೇಳುವನು. ನೀತಿಯಿಲ್ಲದೆ ನಾವು ದೇವರ ದೃಷ್ಟಿಯಲ್ಲಿ ನಮ್ಮ ಸ್ಥಾನವನ್ನು ಕಳೆದುಕೊಳ್ಳುವೆವು ....ಸೈತಾನನು ಮಹಾ ದೂರುಗಾರನಾಗಿದ್ದಾನೆ. ಆತನು ನಮ್ಮ ಸಹೋದರರ....ದೂರುಗಾರನು ಎಂದು ಕರೆಯಲ್ಪಟ್ಟಿದ್ದಾನೆ (ಪ್ರಕಟಣೆ 12:10). ನಾವು ನಿಜವಾಗಿಯೂ ರಕ್ಷಣೆ ಹೊಂದಿದ್ದೇವೋಎಂದು ಸೈತಾನನು ನಮ್ಮನ್ನು ಸಂಶಯಕ್ಕೊಳಪಡಿಸುತ್ತಾನೆ. ನಮ್ಮ ಮನಸ್ಸುಗಳಲ್ಲಿ ಸಕಲ ವಿಧವಾದ ಸಂಶಯಗಳನ್ನು ಸೃಷ್ಟಿಸಿ ನಮ್ಮ ನಂಬಿಕೆಯನ್ನು ಅಲುಗಾಡಿಸುವದು ಸೈತಾನನ ಒಂದು ಮುಖ್ಯ ತಂತ್ರವಾಗಿದೆ. ದೇವರೊಂದಿಗಿನ ನಮ್ಮ ನೆಲೆಯನ್ನು ನಾವು ಸಂಶಯಿಸುವಂತೆ ಮಾಡಲು ಆತನು ಪ್ರಯತ್ನಿಸುತ್ತಾನೆ. ದೇವರು ನಮ್ಮ ಪಕ್ಷದಲ್ಲಿ ಇದ್ದಾನೆ ಎಂಬದನ್ನು ನಾವು ಸಂಶಯಪಡುವಂತೆ ಆತನು ಪ್ರಯತ್ನಿಸುತ್ತಾನೆ. ಆತನು ನಮಗೆ ಹೇಳುವದೇನೆಂದರೆ: "ನೀನು ಕೇವಲ ಒಬ್ಬ ಪಾಪಿ, ನೀನು ಅನೀತಿವಂತನು. ದೇವರು ನಿನ್ನ ಪಕ್ಷವನ್ನು ವಹಿಸುವದಿಲ್ಲ." ಸೈತಾನನು ಈ ರೀತಿಯಾಗಿ ಮಾತಾಡುವಾಗ ನಾವು ಕಿವಿಗೊಡದಿರೋಣ. ಬದಲಾಗಿ, ನಾವು ನೀತಿಯೆಂಬ ವಜ್ರ– ಕವಚವನ್ನು ಧರಿಸಿಕೊಳ್ಳೋಣ, ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ನಾವು ನಿಜವಾಗಿಯೂ ದೇವರ ದೃಷ್ಟಿಯಲ್ಲಿ ನೀತಿವಂತರಾಗಿ ನಿರ್ಣಯಿಸಲ್ಪಟ್ಟಿದ್ದೇವೆಂಬ ನಮ್ಮ ನಂಬಿಕೆಯನ್ನು ಬಿಗಿಯಾಗಿ ಹಿಡಿದುಕೊಳ್ಳೋಣ.

15 ದೇವರ ಸರ್ವಾಯುಧಗಳ ಮೂರನೆಯ ಭಾಗವು ಪಾದರಕ್ಷೆಗಳು ನಾವು ಸಮಾಧಾನದ ವಿಷಯವಾದ ಸುವಾರ್ತೆಯಿಂದ ಬರುವ ಸಿದ್ಧವಾದ ಮನಸ್ಸೆಂಬ "ಪಾದರಕ್ಷೆಗಳನ್ನು" ಮೆಟ್ಟಿಕೊಳ್ಳಬೇಕು. ಅಂದರೆ, ನಾವು ಕ್ರಿಸ್ತನ ಸುವಾರ್ತೆಯನ್ನು ಇತರರೆಡೆಗೆ ಹೊತ್ತೊಯ್ಯಲು ಸಿದ್ಧರಾಗಿರಬೇಕು. ಒಬ್ಬ ವ್ಯವಸಾಯಗಾರನಿಗೆ ಪಾದರಕ್ಷೆಗಳ ಅಗತ್ಯವಿರುವದಿಲ್ಲ. ಆದರೆ ಸೈನಿಕನೊಬ್ಬನಿಗೆ ಅಗತ್ಯವಾಗಿರುತ್ತದೆ. ನಾವು ಎಡವಿ ಬೀಳದಂತೆ ನಮ್ಮನ್ನು ಕಾಪಾಡಿಕೊಳ್ಳುವದಕ್ಕೆ ಪಾದರಕ್ಷೆಗಳು ಸಹಾಯ ಮಾಡುತ್ತವೆ. ಪಾದರಕ್ಷೆಗಳು ನಮಗೆ ಸಿದ್ಧವಾಗಿರುವದಕ್ಕೆ ಸಹಾಯ ಮಾಡುತ್ತವೆ. ಅವುಗಳು ನಮ್ಮನ್ನು ಸಿದ್ಧಮನಸ್ಸಿನಲ್ಲಿಡುತ್ತವೆ. ಪಾದರಕ್ಷೆಗಳನ್ನು ಮೆಟ್ಟಿಕೊಂಡವರಾಗಿ ನಾವು ಸುವಾರ್ತೆಯನ್ನು ಹೊತ್ತೊಯ್ಯಲು ಸಿದ್ಧರಾಗಿರುತ್ತೇವೆ. ಮತ್ತು ನಾವು ಮಾರ್ಗದಲ್ಲಿ ಎಡವುದಿಲ್ಲ. ನಮ್ಮ ಪಾದರಕ್ಷೆಗಳು ಹೋಗುವ ಕಡೆಯಲೆಲ್ಲಾ ಸಮಾಧಾನದ ವಿಷಯವಾದ ಸುವಾರ್ತೆ–ಕ್ರಿಸ್ತನ ಸುವಾರ್ತೆಯು ಸಹ ಹೋಗುವದು! ಇಲ್ಲಿ ಪೌಲನು ಸುವಾರ್ತೆಯನ್ನು ಸಮಾಧಾನ ವಿಷಯವಾದ ಸುವಾರ್ತೆ ಎಂದು ಕರೆಯುತ್ತಾನೆ. ಯಾಕೆಂದರೆ ಅದರ ಮುಖಾಂತರ ಮನುಷ್ಯ ಮತ್ತು ದೇವರ ನಡುವೆ ಸಮಾಧಾನ ಉಂಟಾಗಬಲ್ಲದು (ರೋಮ 5:1 ಮತ್ತು ವ್ಯಾಖ್ಯಾನ ನೋಡಿರಿ).

16 ಸರ್ವಾಯುಧದ ನಾಲ್ಕನೆಯ ವಸ್ತುವು ನಂಬಿಕೆಯೆಂಬ ಗುರಾಣಿ. ಗುರಾಣಿಯು ದೇವರಲ್ಲಿಟ್ಟಿರುವ ನಮ್ಮ ನಂಬಿಕೆಯಾಗಿದೆ. ನಮ್ಮ ಗುರಾಣಿಯನ್ನು ಮೇಲೆತ್ತುವಾಗ ನಾವು ದೇವರ ಶಕ್ತಿಯಲ್ಲಿ ಸಂಪೂರ್ಣ ಭರವಸೆ ಹೊಂದಬಹುದು. ಪೌಲನ ಕಾಲದಲ್ಲಿ ಸೈನುಕನೊಬ್ಬನ ಗುರಾಣಿಯು ನಾಲ್ಕೂವರೆ ಅಡಿ ಉದ್ದ ಮತ್ತು ಎರಡೂವರೆ ಅಡಿಗಳಷ್ಟು ಅಗಲವಾಗಿರುತ್ತಿತ್ತು. ಅದು ಇಡೀ ದೇಹವನ್ನು ಸಂರಕ್ಷಿಸಿಕೊಳ್ಳುವಷ್ಟು ದೊಡ್ಡದಾಗಿತ್ತು. ಅದೇ ರೀತಿಯಲ್ಲಿ ನಾವು ನಮ್ಮ "ಆತ್ಮೀಕ ಗುರಾಣಿ"ಯನ್ನು ಎತ್ತಿಹಿಡಿಯುವಾಗ ಸೈತಾನನ ಅಗ್ನಿ ಬಾಣಗಳಿಂದ ಸಂಪೂರ್ಣವಾಗಿ ಸಂರಕ್ಷಿಸಲ್ಪಡುತ್ತೇವೆ. ಸೈತಾನನ "ಅಗ್ನಿ ಬಾಣಗಳು" ಅಂಜಿಕೆ, ನಿರಾಶೆ, ಗೊಂದಲ ಹಾಗು ಸಂಶಯಗಳಂತಹ ಸಂಗತಿಗಳಾಗಿವೆ. ನಮ್ಮ ನಂಬಿಕೆಯೆಂಬ ಗುರಾಣಿಯು ಎತ್ತಿ ಹಿಡಿಯಲ್ಪಟ್ಟಾಗ ಈ ಸಂಗತಿಗಳು ನಮ್ಮನ್ನು ಮುಟ್ಟಲಾರವು.

17 ದೇವರ ಸರ್ವಾಯುಧಗಳಲ್ಲಿ ಐದನೆಯ ವಸ್ತುವು ರಕ್ಷಣೆಯೆಂಬ ಶಿರಸ್ತ್ರಾಣ (ಯೆಶಾಯ 59:17). ಸೈನಿಕನ ಲೋಹದ ಶಿರಸ್ತ್ರಾಣವು ಅವನ ತಲೆಯನ್ನು ಕಾಪಾಡುತ್ತದೆ. ಹೀಗೆ, ಆತನ ವೈರಿಯು ಅವನನ್ನು ಕೊಲ್ಲಲಾಗದು. ಅದೇ ರೀತಿಯಲ್ಲಿ ರಕ್ಷಣೆಯೆಂಬ ಶಿರಸ್ತ್ರಾಣವು ಸೈತಾನನಿಂದ ಆತ್ಮೀಕವಾಗಿ ನಾವು ಕೊಲ್ಲಲ್ಪಡದಂತೆ ನಮ್ಮನ್ನು ಕಾಪಾಡುತ್ತದೆ.

ಶಿರಸ್ತ್ರಾಣವು ನಮ್ಮ ರಕ್ಷಣೆಯ, ನಮ್ಮ ನಿತ್ಯಜೀವದ ಭರವಸೆಯಾಗಿದೆ. ಶಿರಸ್ತ್ರಾಣ ಧರಿಸಿಕೊಂಡವರಾದ ನಮ್ಮ ಜೀವವನ್ನು ಸೈತಾನನು ಕಸಕೊಳ್ಳಲಾರನು.

ದೇವರ ಸರ್ವಾಯುಧಗಳ ಆರನೆಯ ಭಾಗವು ಪವಿತ್ರಾತ್ಮನು ಕೊಡುವ ಕತ್ತಿ. ಸರ್ವಾಯುಧಗಳ ಮೊದಲಿನ ಐದು ವಸ್ತುಗಳು ಸಂರಕ್ಷಣೆಯ ಸ್ವಭಾವದವುಗಳಾಗಿವೆ ಎಂಬದನ್ನು ಗಮನಿಸಿರು. ಆದರೆ, ಆರನೆಯ ಭಾಗವಾದ ಕತ್ತಿಯು ಆಕ್ರಮಣಕ್ಕಾಗಿರುತ್ತದೆ. ಅದು ಸೈತಾನನ ಮೇಲೆ ದಾಳಿ ಮಾಡುವದಕ್ಕಾಗಿರುತ್ತದೆ. ನಾವು ಕತ್ತಿಯಿಲ್ಲದೆ ಸೈತಾನನ್ನು ಸೋಲಿಸಲಾರೆವು . ಈ ಕತ್ತಿಯು ಯಾವದು? ಇದು ದೇವರ ವಾಕ್ಯವೇ.

ನೆನಪಿರಲಿ, ದೇವರು ತನ್ನ ವಾಕ್ಯದಿಂದಲೇ ಇಡೀ ಭೂಲೋಕವನ್ನು, ಜಗತ್ತನ್ನೂ ಸೃಷ್ಟಿಸಿದನು. ಆತನು ತನ್ನ ವಾಕ್ಯದಿಂದ 12ನೇ ವಚನದಲ್ಲಿ ಪ್ರಸ್ತಾಪಿಸಲಾಗಿರುವ ರಾಜತ್ವಗಳು, ಅಧಿಕಾರಗಳು, ಮತ್ತು ಲೋಕಾಧಿಪತಿಗಳನ್ನು ಸಹ ಸೃಷ್ಟಿಸಿದನು. ಅವುಗಳ ಅನಂತರ ಆತನನ್ನು ವಿರೋಧಿಸುವದಕ್ಕೆ ಪ್ರಾರಂಭಿಸಿದವು . ದೇವರ ವಾಕ್ಯವು ಪರಿಣಾಮಕಾರಿಯಾದದ್ದು, ಅದು ಶಕ್ತಿಯುತವಾಗಿದೆ! ಅದು ಭೂಲೋಕದಲ್ಲಿರುವ ಯಾವದೇ ಸಂಗತಿಗಿತಲೂ ಅತಿ ಶಕ್ತಿಯುತವಾಗಿದೆ. ಮತ್ತು ಪವಿತ್ರಾತ್ಮನು ಕೊಡುವ ಕತ್ತಿಯನ್ನು ನಮ್ಮ ಕೈಗಳಲ್ಲಿ ಹಿಡಿದುಕೊಳ್ಳುವಾಗ ಆ ಶಕ್ತಿಯು ನಮ್ಮದಾಗುತ್ತದೆ.!

ಕತ್ತಿಯು ಪವಿತ್ರಾತ್ಮನ ಕತ್ತಿಯಾಗಿದೆ. ಪವಿತ್ರಾತ್ಮನು ನಮಗೆ ದೇವರ ವಾಕ್ಯವನ್ನು ಉಪಯೋಗಿಸಿ ಸೈತಾನನನ್ನು ಸೋಲಿಸಬೇಕೆಂದು ಆತನ ಅಭಿಲಾಷೆಯಾಗಿರುತ್ತದೆ. ದೇವರ ವಾಕ್ಯವನ್ನು "ಕತ್ತಿಯ" ಹಾಗೆ ಉಪಯೋಗಿಸುವದರ ಉತ್ತಮ ಉದಾಹರಣೆಯು ಯೇಸು ತನ್ನ ಶೋಧನೆಯ ವೇಳೆಯಲ್ಲಿ ಸೈತಾನನಿಗೆ ನೀಡಿದ ಉತ್ತರಗಳಲ್ಲಿ ಕಾಣಬಹುದು

**(ಮತ್ತಾಯ 4:1-11 ನೋಡಿರಿ).**

**18** ನಾವು ನಮ್ಮ ಎಲ್ಲಾ ಸರ್ವಾಯುಧಗಳನ್ನು ಪ್ರಾರ್ಥನೆಯೊಂದಿಗೆ ಧರಿಸಿಕೊಳ್ಳಬೇಕು. ಕೆಲವು ಜನರು ಪ್ರಾರ್ಥನೆಯನ್ನು ನಮ್ಮ ಸರ್ವಾಯುಧಗಳ ಏಳನೆಯ ಭಾಗವೆಂದು ಕರೆಯುತ್ತಾರೆ. ಪ್ರಾರ್ಥನೆಯಿಲ್ಲದೆ ನಮ್ಮ ಸರ್ವಾಯುಧಗಳು ನಿಷ್ಪ್ರಯೋಜನವಾಗುತ್ತವೆ. ನಮ್ಮ ಪ್ರಾರ್ಥನೆಗಳು ನಮಗೋಸ್ಕರವಾಗಿ ಮಾತ್ರವೇ ಇರಬಾರದು, ಆದರೆ ನಮ್ಮ ಇತರ ಕ್ರೈಸ್ತ ಸಹೋದರ ಹಾಗು ಸಹೋದರಿಯರು ಸೈತಾನನ ದಾಳಿಗಳನ್ನು ಎದುರಿಸಿ ನಿಂತು ಆತನನ್ನು ಸೋಲಿಸುವಂತೆ ಪ್ರಾರ್ಥಿಸವವರಾಗಿರಬೇಕು. ನಾವು ಅವರಿಗಾಗಿ ಪ್ರಾರ್ಥಿಸುವದನ್ನು ಅಲಕ್ಷಿಸುವದಾದರೆ ಅವರು ಸೋಲಿಸಲ್ಪಡುವರು. ನಾವು ಎಲ್ಲಾ ಸಮಯಗಳಲ್ಲಿ......ದೇವರ ಜನರೆಲ್ಲರ ವಿಷಯದಲ್ಲಿ ವಿಜ್ಞಾಪನೆ ಮಾಡುತ್ತಾ ಇರಬೇಕು.

ಪೌಲನು ನಮಗೆ ಆತ್ಮದಲ್ಲಿ–ಅಂದರೆ, ಪವಿತ್ರಾತ್ಮನ ಸಹಾಯ ಹಾಗು ಪ್ರೇರಣೆಯೊಂದಿಗೆ –ಪ್ರಾರ್ಥಿಸಬೇಕೆಂದು ಹೇಳುತ್ತಾನೆ. ದೇವರಾತ್ಮನು ನಮ್ಮ ಪ್ರಾರ್ಥನೆಗಳನ್ನು ಪ್ರೇರೇಪಿಸಿ ನಾವು ಯಾವುದಕ್ಕಾಗಿ ಪ್ರಾರ್ಥಿಸಬೇಕೆಂಬದನ್ನು ಕಲಿಸಿಕೊಡುತ್ತಾನೆ ((ರೋಮ 8:26).

**19-20** ಅತಿ ಶ್ರೇಷ್ಟರಾದ ನಾಯಕರು ಹಾಗು ಬೋಧಕರಿಗೆ ಸಹ ನಮ್ಮ ಪ್ರಾರ್ಥನೆಗಳ ಅಗತ್ಯವಿರುತ್ತದೆ. ಪೌಲನು ತಾನು ಮಾಡಿದ ಶ್ರೇಷ್ಟ ಕಾರ್ಯಗಳನ್ನು ತನ್ನ ಸಹ ಕ್ರೈಸ್ತರ ಪ್ರಾರ್ಥನೆಗಳ ಕಾರಣದಿಂದಲೇ ಮಾಡುವದಕ್ಕೆ ಶಕ್ತನಾಗಿದ್ದನು. ಪೌಲನು 20ನೇ ವಚನದಲ್ಲಿ ತನ್ನನ್ನು ಒಬ್ಬ ರಾಯಬಾಗಿ ಎಂದು ಕರೆದುಕೊಳ್ಳುತ್ತಾನೆ (2 ಕೊರಿಂಥ 5:20). ಅದಾಗ್ಯು ಪೌಲನು ರಾಜಾದಿರಾಜನ ರಾಯಭಾರಿಯಾಗಿದ್ದರೂ ಆತನು ರೋಮಾಪುರದ ಸೆರೆಮನೆಯಲ್ಲಿ ಬೇಡಿಯಲ್ಲಿ ಬಿದ್ದಿದ್ದನು.!

**21-22** ತುಖಿಕನು ಪೌಲನ ಸಹಪಾಠಿಗಳಲ್ಲಿ ಒಬ್ಬನಾಗಿದ್ದು ರೋಮಾಪುರದಲ್ಲಿನ ಆತನ ಸೆರೆವಾಸದ ವೇಳೆಯಲ್ಲಿ ತುಖಿಕನು ಸ್ವಲ್ಪ ಕಾಲ ಆತನೊಂದಿಗೆ ಇದ್ದನು. ತುಖಿಕನು ಪೌಲನ ಈ ಪತ್ರಿಕೆಯನ್ನು ಎಫೆಸದವರಿಗೆ ತಲುಪಿಸುವದರ ಜೊತೆಯಲ್ಲಿ ಕೊಲೊಸ್ಸೆದವರಿಗೆ ಸಹ ಪೌಲನ ಪತ್ರಿಕೆಯನ್ನು ಕೊಂಡೊಯ್ದು ಸೇರಿಸಿದ್ದನು (ಕೊಲೊಸ್ಸೆ 4:7-8).

**23-24** ಪೌಲನು ತನ್ನ ಪತ್ರಿಕೆಯನ್ನು ಎಫೆಸದವರಿಗೆ ದೇವರ ಸಮಾಧಾನವನ್ನು ಅನುಭವಿಸಬೇಕೆಂದು ತನ್ನ ಅಭಿಲಾಷೆಯನ್ನು ವ್ಯಕ್ತಪಡಿಸುವದರ ಮೂಲಕ ಪ್ರಾರಂಭಿಸಿದನು (ಎಫೆಸ 1:2). ಈಗ ಪೌಲನು ತನ್ನ ಪತ್ರಿಕೆಯನ್ನು ಎಫೆಸದವರಿಗೆ ಸಮಾಧಾನ (ಶಾಂತಿ) ಮತ್ತು ಕೃಪೆ (ವಚನ 24) ಆಗಲಿ ಎಂಬ ಅಂತ್ಯಾಶಿರ್ವಾದದೊಂದಿಗೆ ಮುಕ್ತಾಯಗೊಳಿಸುತ್ತಾನೆ (ವಚನ 23). ಇದರ ಮೂಲಕ ಈ ಶ್ರೇಷ್ಟ ಪತ್ರಿಕೆಯ ಶ್ರೇಷ್ಟ ವಿಷಯಾಂಶವು ನಮಗೆ ಪುನಃ ಜ್ಞಾಪಕಪಡಿಸಲ್ಪಡುತ್ತದೆಃ ಕೃಪೆಯ ಮೂಲಕ ಸಮಾಧಾನ (ಎಫೆಸ 1:2 ಮತ್ತು ವ್ಯಾಖ್ಯಾನ ನೋಡಿರಿ). ನಾವು ಮಹಾ ಆತ್ಮೀಕ ಹೋರಾಟದ ಮಧ್ಯದಲ್ಲಿದ್ದಾಗ್ಯು ನಾವು ದೇವರ ಸಮಾಧಾನವನ್ನು ಮತ್ತು ನಮ್ಮ ಸಭೆಯೊಳಗೂ, ನಮ್ಮ ಹೃದಯಗಳೊಳಗೂ ಸಮಾಧಾನವನ್ನು ಹೊಂದಿರುತ್ತೇವೆ.

ನಮ್ಮ ಕರ್ತನಾದ ಯೇಸುಕ್ರಿಸ್ತನನ್ನು...ಪ್ರೀತಿಸುವವರೆಲ್ಲರ ಮೇಲೆ ...ಕೃಪೆಯು ಇರಲಿ. ಕರ್ತನನ್ನು ಪ್ರೀತಿಸದವರು ಆತನ ಪ್ರೀತಿಯನ್ನು ಹಾಗು ಆತನ ಕೃಪೆಯನ್ನು ಅನುಭವಿಸಿರುವದಿಲ್ಲ. ದೇವರ ಕೃಪೆಯನ್ನು ಪಡೆದುಕೊಂಡಿರುವ ಯಾವನಾದರೂ ಆತನ ಮಗನಾದ ಯೇಸುವನ್ನು ಪ್ರೀತಿಸುವನು. ಕಾರಣ ಯೇಸುವಿನ ಮೂಲಕವೇ ನಮಗೆ ದೇವರ ಕೃಪೆಯು ದೊರೆತಿರುತ್ತದೆ. ಆದದರಿಂದ, ನಮ್ಮ ಕರ್ತನನ್ನು ನಿರಂತರವಾದ ಪ್ರೀತಿಯಿಂದ ಪ್ರೀತಿಸೋಣ. ಮತ್ತು ನಮ್ಮ ಜೀವಿತಗಳನ್ನು ಆತನ ಕೃಪೆಯ ಮಹಿಮೆಯನ್ನು ಪ್ರಖ್ಯಾತಿಗೆ ತರುವದಕ್ಕಾಗಿ ಜೀವಿಸೋಣ!

## ಟಿಪ್ಪಣಿ

1 1ನೇ ವಚನದಲ್ಲಿ ಎಫೆಸದಲ್ಲಿರುವ ಎಂಬ ಪದಗಳು ಎಲ್ಲಾ ಪುರಾತನ ಸಭೆಯಲ್ಲಷ್ಟೇ ಅಲ್ಲದೆ ಇತರ ಸಭೆಗಳಲ್ಲೂ ಓದಲ್ಪಡಬೇಕಾಗಿತ್ತೆಂದು ಇದು ಸೂಚಿಸುತ್ತದೆ.

2 ಖಂಡಿತವಾಗಿಯೂ, ಇದೇ ಸೂತ್ರವು ನಮ್ಮ ಇಡೀ ಬೈಬಲ್ ಅಧ್ಯಾಯನಕ್ಕೂ ಸಹ ಅನ್ವಯಿಸುತ್ತದೆ. ಬೈಬಲ್ ದೇವರ ಸ್ವಂತ ವಾಕ್ಯವಾಗಿದ್ದು ಆತನು ನಮ್ಮೊಂದಿಗೆ ಪ್ರತಿಯೊಂದು ವಚನದ ಮೂಲಕ ಮಾತಾಡುತ್ತಾನೆ.

3 ಪುತ್ರರಾಗಿ ಸ್ವೀಕರಿಸಲ್ಪಡುವದೆಂದರೆ ಸ್ವಾಭಾವಿಕ ಅರ್ಥದಲ್ಲಿ ಒಬ್ಬನು ತನ್ನ ಸ್ವಾಭಾವಿಕ ತಂದೆ ತಾಯಿಗಳಲ್ಲದವರಿಗೆ ಕಾನೂನ ಬದ್ಧವಾದ ಮಗುವಾಗುವದಾಗಿದೆ. ಸ್ವಾಭಾವಿಕ ಬಾಧ್ಯಸ್ಥನು ಪಡೆದುಕೊಳ್ಳಬಹುದಾದ ಎಲ್ಲಾ ಹಕ್ಕಗಳು ಹಾಗು ಅವಕಾಶಗಳನ್ನು ದತ್ತುಪುತ್ರನು ಪಡೆದುಕೊಳ್ಳುತ್ತಾನೆ. ಆತ್ಮೀಕ ಅರ್ಥದಲ್ಲಿ ದೇವರಿಂದ ಪುತ್ರರಾಗಿ ಸ್ವೀಕರಿಸಲ್ಪಡುವದೆಂದರೆ ಪರಲೋಕದಲ್ಲಿರುವ ಎಲ್ಲಾ ಆಶೀರ್ವಾದಗಳಿಗೆ ಹಕ್ಕುದಾರರಾಗುವದೇ. ದೇವರ ಸ್ವಂತ ಕುಟುಂಬದ ಸದಸ್ಯರಾಗುವದೆಂದು ಇದರ ಅರ್ಥವಾಗಿದೆ. ಹೆಚ್ಚಿನ ಚರ್ಚೆಗಾಗಿ, ಪದಪಟ್ಟಿಃ ಪುತ್ರಸ್ವೀಕಾರ ನೋಡಿರಿ.

4 ಹೊಸ ಒಡಂಬಡಿಕೆಯಲ್ಲಿ ಬಿಡುಗಡೆ ಎಂಬ ಪದದ ಅರ್ಥವು ಒಬ್ಬ ವ್ಯಕ್ತಿಯನ್ನು ಒಂದು ಈಡು ಕೊಡುವದರ ಮೂಲಕ ಅಥವಾ ಯಜ್ಞವೊಂಗನ್ನು ಅರ್ಪಿಸುವದರ ಮೂಲಕ ಪಾಪದ ದಂಡನೆಯಿಂದ ಮುಕ್ತಗೊಳಿಸುವದು ಅಥವಾ ವಿಮೋಚಿಸುವದು ಎಂಬದೇ. ಇದು ನಮ್ಮ ರಕ್ಷಣೆಯ ಒಂದು ಕೋನವಾಗಿದೆ. ಹೆಚ್ಚಿನ ಚರ್ಚೆಗಾಗಿ, ಪದಪಟ್ಟಿಃ ಬಿಡುಗಡೆ ನೋಡಿರಿ.

5 ಯೆಹೂದ್ಯರು ಮಧ್ಯಪೂರ್ವದಲ್ಲಿ ವಾಸಿಸುತ್ತಿದ್ದ ಒಂದು ಜನಾಂಗವಾಗಿದ್ದು, ಅವರು ಪ್ರಾರಂಭದಿಂದಲೂ
ಒಬ್ಬನೇ ಸತ್ಯದೇವರನ್ನು ಆರಾಧಿಸುತ್ತಿದ್ದರು. ದೇವರು ಯೆಹೂದ್ಯರನ್ನು ತನ್ನ ವಿಶೇಷ ಸ್ವಕೀಯ ಜನಾಂಗವಾಗಿರುವದಕ್ಕೆ ಆದುಕೊಂಡಿದ್ದನು. ಯೇಸು ಸ್ವತಃ ಒಬ್ಬ ಯೆಹೂದ್ಯವಾಗಿದ್ದನು. ಹೆಚ್ಚಿನ ಚರ್ಚೆಗಾಗಿ, ಪದಪಟ್ಟಿಃ ಯೆಹೂದ್ಯರು ನೋಡಿರಿ.

6 ಆರಿಸಿಕೊಳ್ಳಲ್ಪಟ್ಟರು ಎಂಬ ಪದಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಬಾಧ್ಯರಾಗಿ ಮಾಡಲ್ಪಟ್ಟರು" ಎಂದುಹೇಳುತ್ತದೆ.ಅರ್ಥವು ಒಂದೇಆಗಿದೆ.ಯೆಹೂದ್ಯರು"ಬಾಧ್ಯರಾಗಿರುವದಕ್ಕೆಆರಿಸಿಕೊಳ್ಳಲಪಟ್ಟಿದ್ದರು".

7 "ರೂಪಗಳು" ಎಂದು ಪದದ ಬದಲಾಗಿ "ಅಸ್ತಿತ್ವದ ವಿಧಗಳು" ಎಂದು ಹೇಳುವದು. ಹೆಚ್ಚು ನಿಖರವಾಗಿರುತ್ತದೆ. ಪವಿತ್ರಾತ್ಮನ ಬಗ್ಗೆ ಹೆಚ್ಚಿನ ಚರ್ಚೆಗಾಗಿ, ಸಾಮಾನ್ಯ ಲೇಖನಃ ಪವಿತ್ರಾತ್ಮನು ನೋಡಿರಿ.

8 ಪ್ರಾಪಂಚಿಕರು ದೇವರಿಗಿಂತಲೂ ಹೆಚ್ಚಾಗಿ ಲೋಕವನ್ನು ಲೋಕದ ಸಂಗತಿಗಳನ್ನು ಪ್ರೀತಿಸುವ ಜನರಾಗಿದ್ದಾರೆ.

9 ಪೌಲನು ಇಲ್ಲಿ ಪವಿತ್ರಾತ್ಮನನ್ನು ಸೂಚಿಸುತ್ತಿದ್ದಾನೋ ಅಥವಾ "ಮಾನವ ಆತ್ಮನನ್ನು" ಮಾತ್ರವೇ ಸೂಚಿಸುತ್ತಿದ್ದಾನೋ ಎಂಬದು ಖಚಿತವಾಗಿರುವದಿಲ್ಲ. ಮೂಲ ಗ್ರೀಕ ಪ್ರತಿಯಲ್ಲಿ ಆಂಗ್ಲ ಭಾಷೆಯಲ್ಲಿರುವಂತೆ ಆತ್ಮನನ್ನು ದೊಡ್ಡ "S" ಹಾಗು ಸಣ್ಣ "s" ನೊಂದಿಗೆ ಪ್ರತ್ಯೇಕವಾಗಿ ಗುರಿತಿಸುವ ಯಾವ ಮಾರ್ಗವೂ ಇರುವದಿಲ್ಲ. ಹೇಗಿದ್ದರೂ, ಎರಡೂ ವಿಧದಲ್ಲಿಯೂ ಹೆಚ್ಚು ವ್ಯತ್ಯಾಸವೇನಿರುವದಿಲ್ಲ, ಯಾಕೆಂದರೆ, ಮೊದಲನೇಯದಾಗಿ, ಎಲ್ಲಾ ನಿಜವಾದ ಜ್ಞಾನ ಹಾಗು ಪ್ರಕಟಣೆಯು ಪವಿತ್ರಾತ್ಮನಿಂದಲೇ ಬರುತ್ತದೆ.

10 ಪ್ರಾಕೃತ ಮನುಷ್ಯನುತನ್ನ ಹೃದಯದ ಪ್ರಾಕೃತ ಹಾಗು ಸ್ವಾರ್ಥ ಅಭಿಲಾಷೆಗಳನ್ನು ಅನುಸಿರಿಸುತ್ತಾನೆ. ಆತನು ತನ್ನ ಪಾಪಾಧೀನ ಸ್ವಭಾವದ ಅಭಿಲಾಷೆಗಳನ್ನು ನೆರವೇರಿಸುವದನ್ನೇ ಹೊರತು ಇನ್ನಾವ ನಿಯಮವನ್ನು ತಿಳಿದಿರುವದಿಲ್ಲ. ಎಲ್ಲಾ ಮಾನವರು ಸ್ವಭಾವತಃ ಪಾಪಿಗಳಾಗಿದ್ದಾರೆ (ರೋಮ 3:10-12 ನೋಡಿರಿ).

11 ಯೆರೂಸಲೇಮಿನಲ್ಲಿನ ಯೆಹೂದ್ಯದೇವಾಲಯದ ಒಳ ಆವರಣದ ಸುತ್ತಲೂ, ಒಂದು ಅಡ್ಡಗೋಡೆ ಅಥವಾ ತಡೆಯನ್ನು ಹಾಕಲಾಗಿತ್ತು. ಅನ್ಯಜನರು ಅದನ್ನು ದಾಟಿ ಬರುವದಕ್ಕೆ ಅನುಮತಿಯಿರಲಿಲ್ಲ. ಈ ವಚನದಲ್ಲಿ ಪೌಲನು ಅದನ್ನು ದ್ವೇಷವುಳ್ಳ ಅಗಲಿಸುವ ಅಡ್ಡಗೋಡೆ ಎಂದು ಕರೆಯುತ್ತಾನೆ. ಯಾಕೆಂದರೆ, ಆ ಗೋಡೆಯು ಒಂದು ಅರ್ಥದಲ್ಲಿ ಯೆಹೂದ್ಯರು ಮತ್ತು ಅನ್ಯಜನರ ನಡುವಿನ ದ್ವೇಷಕ್ಕೆ ಒಂದು ಗುರುತಾಗಿತ್ತು. ಅಲ್ಲದೆ, ಇದು ಅನ್ಯಜನರು ದೇವರ ಬಳಿಗೆ ಬರಲಾರದಷ್ಟು ದೂರವಾಗಿದ್ದರು (ವಚನ 13) ಎಂಬದರ ಸಂಕೇತವೂ ಆಗಿತ್ತು.

ಕ್ರಿಸ್ತನು ಆ ಗೋಡೆಯನ್ನು ಕೆಡವಿಹಾಕಿದನು ಎಂದು ಪೌಲನು ಹೇಳುವದರ ತಾತ್ಪರ್ಯವೇನೆಂದರೆ, ಕ್ರಿಸ್ತನು ಗೋಡೆಯ ಮಹತ್ವವನ್ನು ಕೆಡುವಿಹಾಕಿದನೇ ಹೊರತು ಸ್ವತಃ ಗೋಡೆಯನ್ನೇ ಅಲ್ಲ ಎಂಬದೇ. ಗೋಡೆಯ ಮೂಲ ಉದ್ದೇಶವು ಅಶುದ್ಧರಾದ ಅನ್ಯ ಜನರನ್ನು ಪರಿಶುದ್ಧ ದೇವರ ಬಳಿಗೆ ಬರದಂತೆ ತಡೆಯುವದೇ ಆಗಿತ್ತು. ಈಗ ಕ್ರಿಸ್ತನು ಅನ್ಯಜನರಿಗೆ ನಂಬಿಕೆಯ ಮೂಲಕ ತಮ್ಮನ್ನು ಶುದ್ಧಿಪಡಿಸಿಕೊಳ್ಳುವದರ ಮೂಲಕ ದೇವರ ಸನ್ನಿದಿಯೊಳಗೆ ಬರಿವದನ್ನೂ ಸಾಧ್ಯವಾಗಿಸಿದ್ದಾನೆ. ಇನ್ನು ಮೇಲೆ ಗೋಡೋಯು ಅವಶ್ಯಕವಾಗಿರುವದಿಲ್ಲ. ಕ್ರಿಸ್ತನು ಅನ್ಯಜನರನ್ನು ದೇವರಿಂದ ದೂರವಿಡುವ ಅಡ್ಡಗೋಡೆಯನ್ನು ಕೆಡವಿಹಾಕಿದ್ದಾನೆ. ಆತನ ಮರಣದ ಮುಖಾಂತರ ಅನ್ಯಜನರು ಈಗ ದೇವರಿಗೆ ಸಮೀಪವಾಗಿರುತ್ತಾರೆ (ವಚನ 13).

12 ಹೇಗಿದ್ದರೂ, ಕ್ರಿಸ್ತನು "ನೈತಿಕ ಧರ್ಮಶಾಸ್ತ್ರ" ವನ್ನು ಅಳಿಸಿಹಾಕಲಿಲ್ಲ. ಹೆಚ್ಚಿನ ಚರ್ಚೆಗಾಗಿ, ಮತ್ತಾಯ 5:7-20 ಮತ್ತು ವ್ಯಾಖ್ಯಾನ ನೋಡಿರಿ.

13 ಪೌಲನು ಇಲ್ಲಿ ಸೂಚಿಸುವ ಮೂಲೆಗಲ್ಲು ಎರಡು ಗೋಡೆಗಳು ಒಟ್ಟಾಗಿ ಸೇರಿಕೊಳ್ಳುವಸರಿಯಾದ ಕೋನವನ್ನು ಆವರಿಸುವ ಮೂಲೆಗಲ್ಲಾಗಿರುತ್ತದೆ. ಅಂತಹ ಮೂಲೆಗಲ್ಲು ಇಲ್ಲದೆ ಗೋಡೆಯು ಬಿದ್ದುಹೋಗುವದು.

14 ಅವರು ಹೊಸ ಒಡಂಬಡಿಕೆಯ ಪ್ರವಾದಿಗಳೇ ಹೊರತು ಹಳೆ ಒಡಂಬಡಿಕೆಯ ಪ್ರವಾದಿಗಳಲ್ಲ.

15 ಬೈಬಲ್ ಕೇವಲ ಧರ್ಮಶಾಸ್ತ್ರ ಹಾಗು ಪ್ರವಾದನೆಗಳ ಪುಸ್ತಕ ಮಾತ್ರವಲ್ಲ, ಇದು ಒಂದು ಇತಿಹಾಸದ
ಪುಸ್ತಕವೂ ಆಗಿದೆ ಎಂಬದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಮತ್ತು ಬೈಬಲಿನಲ್ಲಿ ಬರೆದಿರುವ ಇತಿಹಾಸವು ಸಂಪೂರ್ಣ ನಿಖರವಾದದ್ದು.

16 ನಾವು ವಿನಯ (ದೀನ) ಸಾತ್ವಿಕತ್ವ ಉಳ್ಳವರಾಗಿರಬೇಕೆಂದು ಪೌಲನು ಹೇಳುತ್ತಾನೆ. ಸಾತ್ವಿಕತ್ವವು (ಸಾಧುತ್ವ) ಯಾವಾಗಲೂ ದೀನತೆಯೊಂದಿಗೆ ಜೊತೆಯಾಗಿ ಸಾಗುತ್ತದೆ. ಪವಿತ್ರಾತ್ಮನ ಎಂಟನೆಯ ಫಲವು ಸಾಧುತ್ವವಾಗಿದೆ (ಗಲಾತ್ಯ 5;23). ವಾಸ್ತವದಲ್ಲಿ, ಬೈಬಲಿನ ಕೆಲವು ಭಾಷಾಂತರಗಳು ಪವಿತ್ರಾತ್ಮನ ಎಂಟನೆಯ ಫಲವನ್ನು "ಸಾಧುತ್ವ" ದ ಬದಲಾಗಿ "ದೀನತೆ" ಎಂದು ಕರೆಯುತ್ತೇವೆ.

17 ಹೇಗಿದ್ದರೂ, ಇನ್ನೊಂದು ಅರ್ಥದಲ್ಲಿ ಕ್ರೈಸ್ತರು ಮಕ್ಕಳಂತೆ ಇರಬೇಕು. ವಿಶೇಷವಾಗಿ, ನ್ವು ಮಕ್ಕಳ ನಿಷ್ಕಪಟ ಹಾಗು ಭರವಸೆಯ ಪ್ರವೃತ್ತಿಯನ್ನು ಹೊಂದಿರಬೇಕು. ನಾವು ಮಗುವಿನಂತಹ ನಂಬಿಕೆಯನ್ನು ಹೊಂದಿರಬೇಕು (ಮಾರ್ಕ 10:15 ಮತ್ತು ವ್ಯಾಖ್ಯಾನ ನೋಡಿರಿ).

18 ಮನೋಭಾವ ಎಂಬ ಪದದ ಬದಲಾಗಿ, ಬೈಬಲಿನ ಕೆಲವು ಭಾಷಾಂತರಗಳು "ಆತ್ಮ" ಎಂದು ಹೇಳುತ್ತವೆ. ಈ ಸನ್ನಿವೇಷದಲ್ಲಿ, ಅರ್ಥವು ಒಂದೇ ಆಗಿದೆ.

19 ನಾವು ತಪ್ಪಿನ ವಿಷಯದಲ್ಲಿ ಕೋಪಗೊಂಡಿರುವಾಗ ನಮ್ಮ ಕೋಪವನ್ನು ತಪ್ಪುಗಾರನ ಪ್ರಯೋಜನಕ್ಕೆ ಉಪಯೋಗಿಸುತ್ತೇವೆ. ಆದರೆ ನಾವು ತಪ್ಪುಗಾರನ ಮೇಲೆ ಕೋಪಗೊಂಡಿರುವಾಗ ಆತನಿಗೆ ಪ್ರಯೋಜನವನ್ನುಂಟು
ಮಾಡುವದರ ಬದಲಾಗಿ ನೋವುಂಟು ಮಾಡಲು ಅಭಿಲಾಷಿಸುತ್ತೇವೆ. ಅದು ಒಂದು ಪಾಪವಾಗಿರುತ್ತದೆ.

20 ಬಿಡುಗಡೆಯ ಕುರಿತಾದ ಹೆಚ್ಚಿನ ಚರ್ಚೆಗಾಗಿ, ಎಫೆಸ 1:7 ರ ವ್ಯಾಖ್ಯಾನ ಮತ್ತು ವ್ಯಾಖ್ಯಾನದ ಅಡಿಟಿಪ್ಪಣಿಯನ್ನು ನೋಡಿರಿ.

21 ಒಂದು ವೇಳೆ ತಂದೆತಾಯಿಗಳು ಕ್ರೈಸ್ತರಾಗಿರದೇ ದೇವರ ವಾಕ್ಯಕ್ಕೆ ವಿರುದ್ಧವಾದ ಸಲಹೆಯನ್ನು ನೀಡುವದಾದರೆ ನಾವು ಆ ನಿರ್ದಿಷ್ಟವಾದ ವಿಷಯದಲ್ಲಿ ಅವರ ಸಲಹೆಯನ್ನು ಅನುಸರಿಸಬಾರದು.

22 ದೇವರು ಕೆಲವು ಕ್ರೈಸ್ತರನ್ನು ಮದ್ಯಪದಾರ್ಥಗಳಿಂದ ಸಂಪೂರ್ಣವಾಗಿ ದೂರವಿರುವಂತೆ ನಡೆಸುತ್ತಾನೆ (ಲೂಕ 1:15 ನೋಡಿರಿ). ಖಂಡಿತವಾಗಿಯೂ, ಯಾವದೇ ವಿಶ್ವಾಸಿಯು ತಾನು ಕ್ರೈಸ್ತನಾಗಿರುವದಕ್ಕೆ ಮುಂಚೆ ಮದ್ಯಸೇವನೆ
ಯ ಸಮಸ್ಯೆಯನ್ನು ಹೊಂದಿದ್ದರೆ ಕುಡಿಯುವದನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕು.

23 ಗ್ರೀಕ ಪ್ರತಿಯಲ್ಲಿ "ಭರಿತರಾಗಿರಿ" ಎಂಬ ಪದಗಳು "ಭರಿತರಾಗುತ್ತಾ ಇರ್ರಿ" ಎಂಬ ಅರ್ಥವನ್ನು ನೀಡುತ್ತವೆ.

24 ನಮ್ಮನ್ನು ಪಾಪದಿಂದ ಶುದ್ಧಪಡಿಸುವದರಲ್ಲಿನ ದೀಕ್ಷಾಸ್ನಾನದ ಪಾತ್ರದ ಕುರಿತಾಗಿ ಹೆಚ್ಚಿನ ಚರ್ಚೆಗಾಗಿ, ಸಾಮಾನ್ಯ ಲೇಖನಃ ನೀರಿನ ದೀಕ್ಷಾಸ್ನಾನ ನೋಡಿರಿ.

25 ಜನನದ ನಂತರ ತಾಯಿ ಮತ್ತು ಮಗು ಎರಡು ಶರೀರವಾಗುತ್ತಾರೆ, ಹೊರತು ಒಂದೇ ಶರೀರವಲ್ಲ.

26 ಬಹು ಪಾಲು ಕ್ರೈಸ್ತರ ಜೀವಿತಾವಧಿಯಲ್ಲಿ ದೇವರು ಅವರಿಗೆ ಅಭಿವೃದ್ಧಿಗೊಳ್ಳಲು ಅವಕಾಶಗಳನ್ನು ಕೊಡುತ್ತಾನೆ. ಕ್ರೈಸ್ತರು ತಮ್ಮ ಜೀವನ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ದೇವರು ಕೊಡುವ ಈ ಅವಕಾಶಗಳನ್ನು ಉಪಯೋಗಿಸುವದು ಸಮಂಜಸವಾಗಿರುತ್ತದೆ. ಆದರೆ ಮುಖ್ಯ ಸಂಗತಿಯೇನೆಂದರೆಃ ನಮ್ಮ ಜೀವಿತಕ್ಕೆ ದೇವರ ಚಿತ್ತ ಏನೇ ಆಗಿದ್ದರೂ ನಾವು ಅದನ್ನು ಸ್ವೀಕರಿಸಿಕೊಳ್ಳಬೇಕು. ನಾವು ಎಂದಿಗೂ ದೇವರ ವಿರುದ್ಧ ಗುಣಗುಟ್ಟಬಾರದು (1 ಕೊರಿಂಥ 7:17-24, 10:10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

# ಪೌಲನು ಫಿಲಿಪ್ಪಿಯವರಿಗೆ ಬರೆದ ಪತ್ರಿಕೆ

## ಪರಿಚಯ

ಫಿಲಿಪ್ಪಿಯು ಗ್ರೀಸಿನ[1] ಉತ್ತರ ಪ್ರಾಂತ್ಯವಾದ ಮೆಕೆದೋನ್ಯದ ಒಂದು ಪ್ರಮುಖ ನಗರವಾಗಿತ್ತು. ಅಲ್ಲಿ ಬಹುಮಂದಿ ರೋಮಾಯ ನಾಗರೀಕರು ಮತ್ತು ರೋಮಾಯ ಸೈನಿಕರು ನೆಲೆಸಿದ್ದರಾದ ಕಾರಣ ಅದು ಒಂದು ರೋಮಾಯ ವಸಾಹತುವಾಗಿ ಮಾಡಲ್ಪಟ್ಟಿತ್ತು.

ಪೌಲನು ತನ್ನ ಎರಡನೆಯ ಸುವಾರ್ತಾ ಪ್ರಯಾಣದ ವೇಳೆಯಲ್ಲಿ ಪ್ರಥಮ ಬಾರಿಗೆ ಫಿಲಿಪ್ಪಿಗೆ ಬಂದನು. ಐರೋಪ್ಯ ಖಂಡದಲ್ಲಿ ಸುವಾರ್ತೆ ಸಾರಲ್ಪಟ್ಟದ್ದು ಅದೇ ಮೊದಲನೆಯ ಸಾರಿಯಾಗಿತ್ತು. ಹಾಗಾದರೆ, ಫಿಲಿಪ್ಪಿಯಲ್ಲಿಯೇಸುವಾರ್ತೆಯು ಅಸ್ಯದಿಂದ ಐರೋಪ್ಯಕ್ಕೆ ಪ್ರಥಮ ಬಾರಿಗೆ ಹರಡಿಸಲ್ಪಟ್ಟಿತ್ತೆಂದು ಹೇಳಬಹುದು. ನೆನಪಿರಲಿ, ಕ್ರೈಸ್ತತ್ವವು ಒಂದು ಐರೋಪ್ಯದ ಅಥವಾ ಪಾಶ್ಚಾತ್ಯ ಧರ್ಮವಲ್ಲಃ ಇದು ಏಶ್ಯಾದಲ್ಲಿಯೇ ಪ್ರಾರಂಭವಾಯಿತು.

ಪೌಲನು ತಾನು ಹೊಂದಿದ ದರ್ಶನದ ಕಾರಣದಿಂದ ಮೊದಲ ಸಾರಿ ಫಿಲಿಪ್ಪಿಗೆ ಹೋದನು. ಆ ದರ್ಶನದಲ್ಲಿ ಮೆಕೆದೋನ್ಯದಿಂದ ಬಂದ ಒಬ್ಬ ಮನುಷ್ಯನು ಆತನಿಗೆ ಹೇಳಿದ್ದೇನೆಂದರೆಃ "ನೀನು ಸಮುದ್ರವನ್ನು ದಾಟಿ ಮೆಕೆದೋನ್ಯಕ್ಕೆ ಬಂದು ನಮಗೆ ನೆರವಾಗಬೇಕು" (ಅ.ಕೃ. 16:9-10).

ಪೌಲನು ಫಿಲಿಪ್ಪಿಗೆ ನೀಡಿದ ಮೊದಲನೆಯ ಬೇಟಿಯು ಅ.ಕೃ. 16:11-40 ರಲ್ಲಿ ಬಣ್ಣಿಸಲ್ಪಟ್ಟಿದೆ. ತರುವಾಯ, ಪೌಲನು ತನ್ನ ಮೂರನೆಯ ಸುವಾರ್ತಾ ಪ್ರಯಾಣದಲ್ಲಿ ಪುನಃ ಫಿಲಿಪ್ಪಿಗೆ ಬೇಟಿನೀಡಿದನು (ಅ.ಕೃ. 20:1,6).

ಪೌಲನು ರೋಮಾಪುರದಲ್ಲಿ ಸೆರೆಯಾಳಾಗಿ ಇರುವ ವೇಳೆಯಲ್ಲಿ ಸುಮಾರು ಕ್ರಿ.ಶಕ. 60-61 ರಲ್ಲಿ ಫಿಲಿಪ್ಪಿಯವರಿಗೆ ಈ ಪತ್ರಿಕೆಯನ್ನು ಬರೆದನೆಂದು ಬಹುಪಾಲು ಬೈಬಲ್ ಪಂಡಿತರು ನಂಬುತ್ತಾರೆ. ಪೌಲನು ಅದೇ ಸೆರೆವಾಸದ ವೇಳೆಯಲ್ಲಿಯೇ ಎಫೆಸದವರಿಗೆ, ಕೊಲೊಸ್ಸೆಯವರಿಗೆ, ಮತ್ತು ಫಿಲಮೋನನಿಗೆ ತನ್ನ ಪತ್ರಿಕೆಗಳನ್ನು ಬರೆದನೆಂದು ಈ ಪಂಡಿತರ ನಂಬಿಕೆಯಾಗಿದೆ.

ಪೌಲನ ಜೀವಿತದ ಹೆಚ್ಚಿನ ಮಾಹಿತಿಗಾಗಿ ರೋಮಾಪುರದವರಿಗೆ ಬರೆದ ಪತ್ರಿಕೆಯ ಪರಿಚಯ ಭಾಗವನ್ನು ನೋಡಿರಿ.

## ಹೊರ ರೇಖೆ

ಅ. ಪೀಠಿಕೆ (1:1-26)
   1. ಕೃತಜ್ಞತಾ ಸ್ತುತಿ ಮತ್ತು ಪ್ರಾರ್ಥನೆ (1:1-11).
   2. ರೋಮಾಪುರದಲ್ಲಿ ಪೌಲನ ಸ್ಥಿತಿ (1:12-26).

ಆ. ಪ್ರಬೋಧನೆಗಳು (1:27-2:18).
   1. ದೃಡವಾಗಿ ನಿಂತು ಐಕ್ಯತೆಯಿಂದಿರಬೇಕೆಂದು ಪ್ರಬೋಧನೆ (1:27-2:4).
   2. ಕ್ರಿಸ್ತನ ಮಾದರಿ (2:5-2:11).
   3. ಒಬ್ಬನು ತನ್ನ ರಕ್ಷಣೆಯನ್ನು ಸಾಧಿಸಿಕೊಳ್ಳಬೇಕೆಂದು ಪ್ರಬೋಧನೆ (1:12-2:18).

ಇ. ಯೋಜನೆಗಳು ಮತ್ತು ಎಚ್ಚರಿಕೆಗಳು (2:19-3:21).
    1. ಬರಲಿರುವ ಬೇಟಿಗಳ ಯೋಜನೆಗಳು (2:19-30
    2. ಸುಳ್ಳು ಬೋಧಕರ ವಿರುದ್ಧ ಎಚ್ಚರಿಕೆಗಳು (3:1-21).

ಈ. ಮುಕ್ತಾಯದ ಹೇಳಿಕೆಗಳು (4:1-23).
    1. ಅಂತಿಮ ಪ್ರಬೋಧನೆಗಳು (4:1-9).
    2. ಪೌಲನಿಗೆ ಫಿಲಿಪ್ಪಿಯವರ ಕಾಣಿಕೆಗಳು (4:10-23).

# ಅಧ್ಯಾಯ - 1

## ಕೃತಜ್ಞತಾಸ್ತುತಿ ಮತ್ತು ಪ್ರಾರ್ಥನೆ (1:1-11)

1 ಪೌಲನು ತನ್ನ ಪತ್ರಿಕೆಗಳಂತೆಯೇ ಈ ಪತ್ರಿಕೆಯನ್ನು ಫಿಲಿಪ್ಪಿಯವರಿಗೆ ವಂದನೆಯನ್ನು ತಿಳಿಸುತ್ತಾ ಪ್ರಾರಂಭಿಸುತ್ತಾನೆ (2 ಕೊರಿಂಥ 1:1,ಎಫೆಸ 1:1 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಪೌಲನು ಈ ಪತ್ರಿಕೆಯನ್ನು ಬರೆದಾಗ ತಿಮೊಥೆಯನು ಅವನ ಜೊತೆಯಲ್ಲಿದ್ದನು(ಕೊಲೊಸ್ಸೆ 1:1 ನೋಡಿರು).

ಪೌಲ ಮತ್ತು ತಿಮೊಥೆಯರು ಸಭೆಯಲ್ಲಿ ಯಜಮಾನರಲ್ಲ, ಬದಲಾಗಿ, ಅವರು ಕ್ರಿಸ್ತನ ದಾಸರು ಎಂಬದನ್ನು ಗಮನಿಸಿರಿ.

ಕ್ರಿಸ್ತನ ದಾಸನಾಗಿರುವದಕ್ಕಿಂತಲೂ ಉನ್ನತವಾದ ಸ್ಥಾನ ಮತ್ತೊಂದಿರುವದಿಲ್ಲ. ಈ ಪತ್ರಿಕೆಯು ಫಿಲಿಪ್ಪಿಯಲ್ಲಿ ದೇವಜನರಾಗಿರುವ –ಅಂದರೆ, ವಿಶ್ವಾಸಿಗಳು–ಎಲ್ಲರನ್ನುದ್ದೇಶಿಸಿ ಬರೆಯಲ್ಪಟ್ಟಿದೆ. ಕ್ರೈಸ್ತರು ಸ್ವತಃ ತಮ್ಮೊಳಗೆ "ದೇವಜನ"(ಪರಿಶುದ್ದರು) ಅಲ್ಲ. ಕ್ರಿಸ್ತನಲ್ಲಿ ಮಾತ್ರವೇ ಅವರು ಪರಿಶುದ್ಧರಾಗಿದ್ದಾರೆ. ವಿಶ್ವಾಸಿಗಳು ಕ್ರಿಸ್ತನ ಪರಿಶುದ್ಧತೆ ಅಥವಾ ನೀತಿಯನ್ನು ತಮ್ಮ ಸ್ವಂತ ಯೋಗ್ಯತೆಯಿಂದಲ್ಲ, ಆದರೆ ದೇವರ ಕೃಪೆಯಿಂದಲೇ ಪಡೆದುಕೊಳ್ಳುತ್ತಾರೆ.

ದೇವಜನ ಅಥವಾ ಪರಿಶುದ್ಧನಾಗಿರುವದೆಂದರೆ ಎಲ್ಲಾ ದುಷ್ಟತನ ಹಾಗು ಅಶುದ್ಧತೆಯಿಂದ ಬೇರ್ಪಟ್ಟು ದೇವರಿಗಾಗಿ ಪ್ರತಿಷ್ಠಿಸಿಕೊಳ್ಳುವದು ಎಂಬ ಅರ್ಥವಾಗಿದೆ.

ಈ ಪತ್ರಿಕೆಯು ಫಿಲಿಪ್ಪಿಯದಲ್ಲಿನ ಸಭೆಯ ಸಭಾಧ್ಯಕ್ಷರಿಗೂ[2] ಸಭಾಸೇವಕರಿಗೂ ಬರೆಯಲ್ಪಟ್ಟಿದೆ. ಸಭಾಧ್ಯಕ್ಷರು ಸಭೆಯಲ್ಲಿ ಮುಖ್ಯನಾಯಕರಾಗಿದ್ದರು. ಕೆಲವು ವೇಳೆ ಹೊಸ ಒಡಂಬಡಿಕೆಯಲ್ಲಿ ಅವರನ್ನು ಸಭಾ ಹಿರಿಯರು ಎಂದು ಕರೆಯಲಾಗಿದೆ (ಅ.ಕೃ. 14:23, 20:17, 1 ತಿಮೊಥೆ 3:1, ತೀತನು 1:5-7 ಮತ್ತು ವ್ಯಾಖ್ಯಾನಗಳನ್ನು, ಸಾಮಾನ್ಯ ಲೇಖನಃ ಸಭೆಯ ಆಡಳಿತ ನೋಡಿರಿ). ಸಭಾಸೇವಕರು ವಿಶೇಷವಾಗಿ ನೇಮಕಗೊಂಡಿರುವ ಸಭಾಸದಸ್ಯರಾಗಿದ್ದು ಅವರಿಗೆ ಸಭೆಯ ಹಣಕಾಸಿನ ವ್ಯವಹಾರ ಮತ್ತು ಕಾರುಣ್ಯ ಕೆಲಸದ ಜವಾಬ್ದಾರಿಯು ಕೊಡಲ್ಪಟ್ಟಿರುತ್ತದೆ (ಅ.ಕೃ. 6:1-6, 1 ತಿಮೊಥೆ 3:8 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

2 ರೋಮ 1:7, ಎಫೆಸ 1:2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

3-5 ಪೌಲನು 3ನೇ ವಚನದಲ್ಲಿ ಫಿಲಿಪ್ಪಿಯದ ವಿಶ್ವಾಸಿಗಳಿಗಾಗಿ ಕೃತಜ್ಞತಾಸ್ತುತಿ ಮಾಡುತ್ತಾನೆ (ರೋಮ 1:8-10, 1 ಕೊರಿಂಥ 1:4, ಕೊಲೊಸ್ಸೆ 1:3-4, 8 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಅವರುಸುವಾರ್ತೆಯಲ್ಲಿ– ಅಂದರೆ, ಸುವಾರ್ತಾ ಪ್ರಚಾರದಲ್ಲಿ ಪೌಲನೊಂದಿಗೆ ಪಾಲುಗಾರರಾಗಿದ್ದಾರೆ (ವಚನ 5). ಗ್ರೀಕ ಭಾಷೆಯಲ್ಲಿ (ಪೌಲನು ತನ್ನ ಎಲ್ಲಾ ಪತ್ರಿಕೆಗಳನ್ನು ಬರೆದ ಭಾಷೆ ). ಪಾಲುಗಾರತೆ ಮತ್ತು ಅನ್ಯೋನ್ಯತೆ ಎಂಬದಕ್ಕಾಗಿನ ಪದಗಳು ಒಂದೇ ಮೂಲ ಪದದಿಂದ ಬಂದಿರುತ್ತವೆ. ಇದರ ಮೂಲಕ ನಾವು ತಿಳಿದುಕೊಳ್ಳಬಹುದೇನೆಂದರೆ "ಅನ್ಯೋನ್ಯತೆಯು" ಕೇವಲ ಒಟ್ಟಾಗಿ ಕೂಡಿ ಬರುವದು ಮಾತ್ರವಲ್ಲ, ಇದು ಒಟ್ಟಾಗಿ ಕೆಲಸ ಮಾಡುವದು–ಸುವಾರ್ತೆಗೋಸ್ಕರ ಒಟ್ಟಾಗಿ ಕೆಲಸ ಮಾಡುವದು–ಆಗಿದೆ. ಅನ್ಯೋನ್ಯತೆಯು ಕೇವಲ ಸಂತೋಷದಿಂದ ಸಮಯವನ್ನು ಕಳೆಯುವದಷ್ಟೇ ಅಲ್ಲ, ಇದು ಕ್ರಿಸ್ತನ ಸೇವೆ ಮಾಡುವದಕ್ಕೆ ಆತನ ನೊಗದಲ್ಲಿ ಒಟ್ಟಾಗಿ ಸಿಕ್ಕಿಕೊಳ್ಳುವದಾಗಿದೆ.

ಪೌಲನು ಫಿಲಿಪ್ಪಿಯವರಿಗಾಗಿ ಸಂತೋಷದಿಂದ ಪ್ರಾರ್ಥಿಸುತ್ತಾನೆ (ವಚನ 4). ಈ ಪತ್ರಿಕೆಯು "ಸಂತೋಷದ ಪತ್ರಿಕೆ"ಎಂದು ಕರೆಲ್ಪಟ್ಟಿದೆ, ಯಾಕೆಂದರೆ, ಇದರಲ್ಲಿ ಪೌಲನು "ಸಂತೋಷ" ಎಂಬ ಪದವನ್ನು ಹದಿನೈದು ಸಾರಿ ಪ್ರಸ್ತಾಪಿಸುತ್ತಾನೆ.

6 ದೇವರು ತನ್ನ ಕೃಪೆಯಿಂದ ನಮ್ಮ ಪ್ರತಿಯೊಬ್ಬರಲ್ಲಿಯೂ ಒಂದು ಒಳ್ಳೇ ಕೆಲಸವನ್ನು ಪ್ರಾರಂಭಿಸಿದ್ದಾನೆ. ದೇವರು ನಮಗೆ ಕ್ರಿಸ್ತನ ಆತ್ಮ, ಕ್ರಿಸ್ತನ ನೀತಿಯನ್ನು ಕೊಡುವದರ ಮೂಲಕ ಆ "ಒಳ್ಳೇಕೆಲಸವು " ಪ್ರಾರಂಭಗೊಂಡಿತು. ಬೇರೆ ಮಾತುಗಳಲ್ಲಿ ಹೇಳುವದಾದರೆ ದೇವರ "ಒಳ್ಳೇಕೆಲಸವು " ನಮ್ಮನ್ನು ನೂತನ ಸೃಷ್ಟಿಯಾಗಿ ಮಾಡುವದೇ ಆಗಿತ್ತು (2 ಕೊರಿಂಥ 5:17). ಅದು ದೇವರ ಕೆಲಸದ ಪ್ರಾರಂಭವಾಗಿತ್ತು. ಅಂತ್ಯದಲ್ಲಿ ಹಣ್ಣು ಮರದಲ್ಲಿ ಪರಿಪಕ್ವವಾಗುವ ಪ್ರಕಾರವೇ ದೇವರು ತನ್ನ "ನೂತನ ಸೃಷ್ಟಿಯನ್ನು" ಸಿದ್ದಿಗೆ – ಪರಿಪೂರ್ಣತೆಗೆ ತರುವನು[3].

ನಾವು ನಮ್ಮನ್ನು ಹಾಗು ಇತರರನ್ನು ದೃಷ್ಟಿಸಿಕೊಳ್ಳುವದಾದರೆ ನಮ್ಮ ಜೀವಿತಗಳು "ಸಿದ್ದಿಗೆ" ಅಥವಾ ಪರಿಪೂರ್ಣತೆಗೆ ಬಹಳ ದೂರವಾಗಿವೆ ಎಂಬದನ್ನು ನಾವು ಕಾಣಬಹುದು. ಆದರೆ ನಾವು ನಮ್ಮ ವಿಷಯದಲ್ಲಿಯೂ ಪರಸ್ಪರರೊಂದಿಗೂ ತಾಳ್ಮೆಯಿಂದಿರಬೇಕು. ಫಲವು ಪರಿಪಕ್ವಗೊಳ್ಳುವದಕ್ಕೆ ಸಮಯಬೇಕಾಗುತ್ತದೆ. ಅದೇ ರೀತಿಯಾಗಿ ನಮ್ಮನ್ನು ಪರಿಪೂರ್ಣರಾಗಿಯೂ ಪರಿಶುದ್ಧರಾಗಿಯೂ ಮಾಡುವದಕ್ಕೆ ದೇವರಿಗೆ ಸಮಯ ಹಿಡಿಯುತ್ತದೆ (ಫಿಲಿಪ್ಪಿ 3:12). ನಿಜ, ನಾವು ನಂಬಿಕೆಯಿಡುವ ಕ್ಷಣದಲ್ಲಿಯೇ ದೇವರು ನಮ್ಮನ್ನು ಕ್ರಿಸ್ತನಲ್ಲಿ ನೀತಿವಂತರೆಂದೂ ಪರಿಶುದ್ಧರೆಂದೂ ನಿರ್ಣ–ಯಿಸುತ್ತಾನೆ (ವಚನ 1). ಅದಕ್ಕೆ ಕಾರಣ ಕಾಲ ಕಳೆದಂತೆ ನಾವು "ಪರಿಪಕ್ವಗೊಳ್ಳುವೆವು " ಎಂಬದನ್ನು ದೇವರು ಬಲ್ಲನುಎಂಬದೇ. ಅಂತ್ಯದಲ್ಲಿ ನಾವು ಪರಿಪೂರ್ಣರಾಗುತ್ತೇವೆ. ಎಂದು ಆತನು ಬಲ್ಲನು. ಆದದರಿಂದ, ದೇವರು ಈಗ ನಮ್ಮನ್ನು ನಾವು ಈಗಾಗಲೇ ಪರಶುದ್ಧರೂ ನೀತಿವಂತರೂ ಆಗಿದ್ದೇವೆಂಬಂತೆ ಪರಿಗಣಿಸುತ್ತಾನೆ. ಆದರೆ ಆತನು ನಮ್ಮ ಅನುದಿನದ ಜೀವಿತಗಳನ್ನು ನಿಜವಾಗಿಯೂ ಪರಿಪೂರ್ಣಗೊಳಿಸುವದಕ್ಕೆ ಕ್ರಮೇಣವಾಗಿ ಕಾರ್ಯಮಾಡುತ್ತಾನೆ. ಈ ವಚನದಿಂದ ನಾವು ಬಹಳಷ್ಟು

ನಿರೀಕ್ಷೆಯನ್ನು ಪಡೆದುಕೊಳ್ಳಬಹುದು. ಬಹುಶಃ ನಮ್ಮಲ್ಲಿ ಕೆಲವರು ನಿರಾಶೆಯಲ್ಲಿದ್ದೇವೆ, ಯಾಕೆಂದರೆ ನಮ್ಮ ದೈನಂದಿನ ಜೀವಿತವು ಬಹಳಷ್ಟು ಅಪರಿಪೂರ್ಣವಾಗಿರುತ್ತದೆ. ಬಹುಶಃ ನಾವು ಪರಾಭವಗೊಳಿಸಲಾಗದ ಒಂದು ಕೆಟ್ಟ ಅಥವಾ ಪಾಪಮಯ ಚಟವು ನಮ್ಮಲ್ಲಿ ಇರುತ್ತದೆ. ಆದರೆ ದೇವರು ನಿರಂತರವಾಗಿ ನಮ್ಮಲ್ಲಿ ಕಾರ್ಯಮಾಡುತ್ತಿದ್ದಾನೆಂಬದನ್ನು ನೆನಪಿನಲ್ಲಿಟ್ಟುಕೊಳ್ಳೋಣ (ಫಿಲಿಪ್ಪಿ 2:13). ನಾವು ನಂಬಿಕೆಯನ್ನು ಕಳಕೊಳ್ಳದಿರುವದಾದರೆ ದೇವರು ನಮ್ಮನ್ನು ಪರಿಶುದ್ಧರನ್ನಾಗಿಸುವ ಕೆಲಸವನ್ನು ನಿಶ್ಚಯವಾಗಿಯೂಪೂರ್ತಿಗೊಳಿಸುವನು (ರೋಮ 11:22, ಕೊಲೊಸ್ಸೆ 1:22-23,28 ಮತ್ತು ವ್ಯಾಖ್ಯಾನಗಳನ್ನು ನೋಡಿರಿ) ನಮ್ಮ ಜೀವಿತಗಳಲ್ಲಿ ದೇವರ ಕೆಲಸವು ಯಾವಾಗ ಪೂರ್ತಿಗೊಳ್ಳುವದು? ಅದು ಯೇಸು ಕ್ರಿಸ್ತನ ದಿನದೊಳಗೆ–ಅಂದರೆ, ಲೋಕಾಂತ್ಯದಲ್ಲಿ[4] ಯೇಸು ತಿರುಗಿ ಬರುವ ದಿನದಲ್ಲಿ–ಪೂರ್ತಿಗೊಳ್ಳುವದು. ಕ್ರಿಸ್ತನು ಮಹಿಮೆಯೊಂದಿಗೆ ಎರಡನೆಯ ಸಾರಿ ಬಂದನಂತರವಷ್ಟೇ ದೇವರು ನಮ್ಮ ಜೀವಿತಗಳಲ್ಲಿ ಪ್ರಾರಂಭಿಸಿದ ಕೆಲಸವು ಪೂರ್ತಿಗೊಳ್ಳುವದು ಆ ಸಮಯದಲ್ಲಿ ನಮ್ಮ ದೇಹಗಳ ವಿಮೋಚನೆಯು ಸಂಭವಿಸುತ್ತದೆ (ರೋಮ 8:23). ಮತ್ತು ನಾವು ಕ್ರಿಸ್ತನಂತಾಗುವೆವು (ರೋಮ 8:29, 2 ಕೊರಿಂಥ 3:18, 1 ಯೋಹಾನ 3:2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**7-8** ಪೌಲನು ಫಿಲಿಪ್ಪಿಯವರನ್ನು ಎಷ್ಟೊಂದು ಪ್ರೀತಿಸಿದನೆಂಬದನ್ನು ಈ ವಚನಗಳಿಂದ ನಾವು ತಿಳಿಯಬಹುದು. ಪೌಲನು ಅವರನ್ನು ಮಾನುಷ ಪ್ರೀತಿಯಿಂದ ಮಾತ್ರವೇ ಪ್ರೀತಿಸಲಿಲ್ಲ, ಆದರೆ ಕ್ರಿಸ್ತ ಯೇಸುವಿಗಿರುವಂಥ ಕನಿಕರದಿಂದ ಪ್ರೀತಿಸಿದನು (ವಚನ 8). ಪೌಲನು ಫಿಲಿಪ್ಪಿಯವರನ್ನು ಸಹಕಾರಿಗಳು ಎಂದು ಮಾತ್ರವೇ ಕರೆಯದೆ ದೇವರ ಕೃಪೆಯಲ್ಲಿ ಪಾಲುಗಾರರೆಂದು ಸಹ ಕರೆಯುತ್ತಾನೆ. ಪೌಲನು ಸೆರೆಮನೆಯಲ್ಲಿರಲಿ ಅಥವಾ ಇಲ್ಲದಿರಲಿ ಫಿಲಿಪ್ಪಿಯವರಂತೂ ಎಲ್ಲಾ ಸಂಗತಿಗಳಲ್ಲಿ–ಆತನ ಸಂತೋಷದಲ್ಲಿ, ಆತನ ಬಾಧೆಗಳಲ್ಲಿ, ಮತ್ತು ಸುವಾರ್ತಾಕಾರ್ಯಗಳಲ್ಲಿ–ಪೌಲನ ಸಹಕಾರಿಗಳೂ ಪಾಲುಗಾರರೂ ಆಗಿದ್ದಾರೆ (ವಚನಗಳು 29-30 ನೋಡಿರಿ).

**9** ಫಿಲಿಪ್ಪಿಯವರ ಪ್ರೀತಿಯು ಹೆಚ್ಚುತ್ತಾ ಹೆಚ್ಚುತ್ತಾ ಬರಬೇಕೆಂದು ಪ್ರಾರ್ಥಿಸುತ್ತಾನೆ. ಅವರು ತಿಳುವಳಿಕೆಯಿಲ್ಲದೆ ಅಥವಾ ಅಜ್ಞಾನದಲ್ಲಿ ಪ್ರೀತಿಸಬಾರದು, ಆದರೆ ಅವರು ಪೂರ್ಣ ಜ್ಞಾನ ವಿವೇಕಗಳಿಂದ ಕೂಡಿ ಪ್ರೀತಿಸುವವರಾಗಿರಬೇಕೆಂದು ಪೌಲನು ಪ್ರಾರ್ಥಿಸುತ್ತಾನೆ. ಕೇವಲ ಪ್ರೀತಿಸಿದರೆ ಸಾಲದು, ನಾವು ಜ್ಞಾನಪೂರ್ವಕವಾಗಿ ಪ್ರೀತಿಸಬೇಕು (ಕೊಲೊಸ್ಸೆ 1:9ನೋಡಿರಿ).

**10** ನಮಗೆ ಪೂರ್ಣ ಜ್ಞಾನ ವಿವೇಕಗಳು ಏಕೆ ಅಗತ್ಯವಾಗಿವೆ? (ವಚನ 9). ಉತ್ತರವೇನೆಂದರೆ, ನಾವು ಉತ್ತಮ ಕಾರ್ಯಗಳು ಯಾವವೆಂದು ವಿವೇಚಿಸುವವರಾಗಬೇಕೆಂಬದಕ್ಕಾಗಿಯೇ. ನಾವು ಉತ್ತಮವಾದದ್ದನ್ನು ಮಾಡುವದಕ್ಕೆ ಮುಂಚೆ ಯಾವು ದು ಉತ್ತಮವಾದದ್ದೆಂಬದನ್ನು ತಿಳಿಯಬೇಕಾಗಿರುತ್ತದೆ! ಆಗ ಮಾತ್ರವೇ ನಮ್ಮ ಜೀವಿತವು ಸರಳವಾಗಿ ಯೂ ನಿರ್ಮಲವಾಗಿಯೂ ಇರುತ್ತದೆ. ಆಗ ಮಾತ್ರವೇ ಅದು ಸುನೀತಿಯೆಂಬ ಫಲದಿಂದ ತುಂಬಿರಬಲ್ಲದು (ವಚನ 11). ಹೀಗೆ ಪೌಲನು ಫಿಲಿಪ್ಪಿಯವರಿಗಾಗಿ ಅವರು ಕ್ರಿಸ್ತನು ಬರುವ ದಿನದಲ್ಲಿ ಸರಳರಾಗಿಯೂ ನಿರ್ಮಲರಾಗಿಯೂ ಇರಬೇಕೆಂದು ಪ್ರಾರ್ಥಿಸುತ್ತಾನೆ, ಲೋಕಾಂತ್ಯದ ಆ ದಿನದಲ್ಲಿ ಕ್ರಿಸ್ತನು ಎಲ್ಲಾ ಮಾನವರಿಗೂ ನ್ಯಾಯತೀರಿಸಲು ಬರುತ್ತಾನೆ (1 ಕೊರಿಂಥ 1:8, ಫಿಲಿಪ್ಪಿ 1:6 ನೋಡಿರಿ).

**11** ದೇವರು ನಮ್ಮನ್ನು ಫಲ ಕೊಡಬೇಕೆಂದು ನೇಮಿಸಿದ್ದಾನೆ (ಯೋಹಾನ 15:16). ಯಾವ ರೀತಿಯ ಫಲ? ನಾವು ಕೊಡಬೇಕಾಗಿರುವ ಎರಡು ರೀತಿಯ ಫಲಗಳಿರುತ್ತವೆ. ಮೊದಲನೆಯ ವಿಧದ "ಫಲವು" ಹೊಸ ಶಿಷ್ಯರು, ಇವರು ನಮ್ಮ ಸಾಕ್ಷಿಯ ಮೂಲಕ ಕ್ರಿಸ್ತನ ನಂಬಿಕೆಗೆ ಬರುತ್ತಾರೆ. ಎರಡನೆ ವಿಧದ ಫಲ ಯಾವದೆಂದರೆ, ಅದು ಪೌಲನು ಇಲ್ಲಿ ಮುಖ್ಯವಾಗಿ ಯೋಚಿಸುತ್ತಿರುವ ಸುನೀತಿಯೆಂಬ ಫಲ ಆಗಿದೆ, ಅದು ಕ್ರಿಸ್ತನ ಮೂಲಕ ಮಾತ್ರವೇಬರುತ್ತದೆ (ಯೋಹಾನ 15:4-5). ನಮ್ಮಸ್ವಂತ ನೀತಿಯು ದೇವರ ದೃಷ್ಟಿಯಲ್ಲಿ ನಿಷ್ಪ್ರಯೋಜನಕರವಾಗಿದೆ, ಆತನಿಗೆ ನಮ್ಮ ಎಲ್ಲಾ ಕೃತ್ಯಗಳು ಹೊಲಸು ಬಟ್ಟೆಗಳಂತಿರುತ್ತವೆ (ಯೆಶಾಯ 64:6). ನಾವು ಕ್ರಿಸ್ತನ ಮೂಲಕ ಪಡೆದುಕೊಳ್ಳುವ ನೀತಿಯು ಮಾತ್ರವೇ ದೇವರಿಗೆ ಘನತೆಯನ್ನು ಸ್ತೋತ್ರವನ್ನೂ ತರುತ್ತದೆ. ನೀತಿಯೆಂಬ ಫಲವು ಪವಿತ್ರಾತ್ಮನ ಫಲದಂತೆಯೇ ಇರುತ್ತದೆ (ಗಲಾತ್ಯ 5:22-23). ಈ ಫಲವು ನಿಗಮ್ಮ ಒಳ್ಳೇ ಪ್ರವೃತ್ತಿ ಹಾಗು ನಮ್ಮ ಒಳ್ಳೇ ಕಾರ್ಯಗಳಲ್ಲಿಯೂ, ನಾವು ಇತರರಿಗೆ ನೀಡುವ ಆಶೀರ್ವಾದಗಳು ಹಾಗು ಪ್ರೀತಿಪೂರ್ವಕವಾದ ಸಹಾಯದಲ್ಲಿಯೂ ತೋರಿಬರುತ್ತದೆ. ಪೌಲನು ಕೊಲೊಸ್ಸೆಯವರಿಗಾಗಿ ಅವರು ಸಕಲ ಸತ್ಕಾರ್ಯಗಳಲ್ಲಿ ಫಲ ಕೊಡುವವರಾಗಿರಬೇಕೆಂದು ಪ್ರಾರ್ಥಿಸುತ್ತಾನೆ (ಕೊಲೊಸ್ಸೆ 1:10). ನಮಗಾಗಿಯೂ ಇತರರಿಗಾಗಿಯೂ ನಮ್ಮ ಪ್ರಾರ್ಥನೆ ಸಹ ಅದೇ ಆಗಿರಲಿ!.

## ಪೌಲನ ಬೇಡಿಗಳುಸುವಾರ್ತೆಯನ್ನು ಪ್ರೇರಣೆ ಮಾಡಿದ್ದು (1:12-26)

**12-14** ಪೌಲನು ಈ ಪತ್ರಿಕೆಯನ್ನು ಬರೆಯುವ ವೇಳೆಯಲ್ಲಿ ಆತನು ರೋಮಾಪು ರದಲ್ಲಿ ಸೆರೆಯಾಳಾಗಿದ್ದನು (ಅ.ಕೃ.28:16, ಫಿಲಿಪ್ಪಿಯವರಿಗೆಃ ಪರಿಚಯ ನೋಡಿರಿ). ಆದರೆ ಪೌಲನ ವಯಕ್ತಿಕ ಸ್ಥಿತಿಗಳು ಕೆಟ್ಟದ್ದಾಗಿತ್ತಾದರೂ ದೇವರು ಅವು ಗಳಿಂದ ಒಳ್ಳೇದನ್ನು ಹೊರತರುತ್ತಿದ್ದನು. ಪೌಲನ ಬಾಧೆಗಳಿಂದ ಸುವಾರ್ತೆಯ ಪ್ರಸಾರಣೆಗೆ ಸಹಾಯವಾಗಿತ್ತು (ವಚನ 12). ಅಷ್ಟು ಮಾತ್ರವಲ್ಲದೆ, ಪೌಲನ ಸೆರೆವಾಸದ ಕಾರಣದಿಂದ ರೋಮಾಪು ರದಲ್ಲಿನ ಆತನ ಜೊತೆ ಕ್ರೈಸ್ತರು ದೇವರ ವಾಕ್ಯವನ್ನು ನಿರ್ಭಯದಿಂದ ಹೇಳುವದಕ್ಕೆ ಇನ್ನೂ ವಿಶೇಷ ಧೈರ್ಯ ಹೊಂದಿದ್ದರು. (ವಚನ 14). ನಾವು ಸ್ವತಃ

ಕ್ರಿಸ್ತನ ನಿಮಿತ್ಯವಾಗಿ ಸಂಕಷ್ಟ ಮತ್ತು ಹಿಂಸೆಯನ್ನು ಎದುರಿಸುತ್ತಿರುವಾಗ ನಾವು ಪೌಲನ ಈ ಮಾತುಗಳನ್ನು ಜ್ಞಾಪಕಪಡಿಸಿಕೊಳ್ಳೋಣ. ಯಾಕೆಂದರೆ, ದೇವರು ನಿಶ್ಚಯವಾಗಿಯೂ ನಮ್ಮ ಬಾಧೆಯೊಳಗಿಂದ ಸಹ ಒಳ್ಳೇದನ್ನು ಬರಮಾಡುವನು (2 ತಿಮೊಥೆ 2:9 ನೋಡಿರಿ).

**15-17** ರೋಮಾಪುರದಲ್ಲಿದ್ದ ಸುವಾರ್ತಾ ಬೋಧಕರೊಳಗೆ ಪೌಲನು ಒಬ್ಬ ಅಪೊಸ್ತಲನಾಗಿ ಅತಿ ಪ್ರಸಿದ್ಧಿಗಳಿಸಿದ್ದನು. ಆದದರಿಂದ, ಇತರ ಬೋಧಕರಲ್ಲಿ ಕೆಲವರು ಪೌಲನ ಮೇಲೆ ಹೊಟ್ಟೆಕಿಚ್ಚು ಪಡುತ್ತಿದ್ದರು. ಅವರು ಪೌಲನು ಕೆಳಕ್ಕೆ ದೊಬ್ಬಿ ಅದೇವೇಳೆಯಲ್ಲಿ ತಮ್ಮನ್ನು ಉಬ್ಬಿಸಿಕೊಳ್ಳುವ ಅವಕಾಶಕ್ಕಾಗಿ ಹುಡುಕುತ್ತಿದ್ದರು. ಅವರು ಕ್ರಿಸ್ತನನ್ನು ಪ್ರಚರಪಡಿಸಿದ್ದು (ವಚನ 15)–ಅಂದರೆ, ಕ್ರಿಸ್ತನ ನಿಜವಾದಸುವಾರ್ತೆಯನ್ನು ಸಾರಿದ್ದು ನಿಜವೇ. ಆದರೆ ಅವರ ಉದ್ದೇಶ ಹಾಗು ಗುರಿಗಳು ತಪ್ಪಾಗಿದ್ದವು . ಅವರು ಕ್ರಿಸ್ತನನ್ನು ಯಥಾರ್ಥವಾಗಿ ಪ್ರಸಿದ್ಧಿಪಡಿಸದೆ ಕಕ್ಷಿಭಾವದಿಂದ ಪ್ರಸಿದ್ಧಿ ಪಡಿಸುತ್ತಾರೆ (ವಚನ 17).

ಕ್ರಿಸ್ತನ ಎಲ್ಲಾ ಬೋಧಕರು ಮತ್ತು ಸೇವಕರೆಲ್ಲರೂ ತಮ್ಮನ್ನು ಪರೀಕ್ಷಿಸಿಕೊಳ್ಳಲಿ. ನಾವು ಯಾಕೆ ಬೋಧಿಸುತ್ತಿದ್ದೇವೆ? ನಾವು ಯಾಕೆ ಕೆಲಸ ಮಾಡುತ್ತಿದ್ದೇವೆ ? ಇದು ನಮ್ಮ ಸ್ವಂತ ಘನತೆಯನ್ನು ಹೆಚ್ಚಿಸುವದಕ್ಕಾಗಿಯೋ ಅಥವಾ ಕ್ರಿಸ್ತನ ಘನತೆಗಾಗಿಯೋ? ನಮ್ಮೊಳಗೆ ಯಾವ ಹೊಟ್ಟೆಕಿಚ್ಚು ಹಾಗು ಕಕ್ಷಿಭಾವ ಇಲ್ಲದಿರಲಿ! ಇವು ಗಳು ಪಾಪಾಧೀನ ಸ್ವಭಾವದ ಕಾರ್ಯಗಳಾಗಿವೆ, ಮತ್ತು ಅಂಥವು ಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ (ಗಲಾತ್ಯ 5:19-21). ಹೇಗಿದ್ದರೂ, ಪ್ರೀತಿಯಿಂದಸುವಾರ್ತೆಯನ್ನು ಸಾರುತ್ತಿದ್ದ ಇತರ ಬೋಧಕರೂ ರೋಮಾಪುರದಲ್ಲಿದ್ದರು.

(ವಚನ 16). ಅವರು ಪೌಲನಿಗೆ ಮರ್ಯಾದೆಯನ್ನು ತೋರಿಸುತ್ತಿದ್ದರಿ. ಪೌಲನು ಕ್ರಿಸ್ತನಸುವಾರ್ತೆಗಾಗಿ ಶ್ರಮಿಸಿದ್ದರಿಂದಲೇ ಸೆರೆಮನೆಗೆ ಹಾಕಲ್ಪಟ್ಟಿದ್ದಾನೆಂಬದನ್ನು ಅವರು ಬಲ್ಲವರಾಗಿದ್ದರು.

**18** ಪೌಲನ ಹೃದಯವು ವಿಶಾಲವಾದದ್ದು. ಪೌಲನು ಕ್ರಿಸ್ತನಸುವಾರ್ತೆಯು ಸಾರಲ್ಪಡುವದಾದರೆ–ಅದು ಆತನ ವೈರಿಗಳಿಂದ ಸಾರಲ್ಪಟ್ಟರೂ–ಸಂತೋಷಪಡುವವನಾಗಿದ್ದಾನೆ. ಆತನು ಅವರನ್ನು ವಿರೋಧಿಸುವದಕ್ಕೆ ಏನನ್ನೂ ಮಾಡುವದಿಲ್ಲ ಈ ವಿಷಯದಲ್ಲಿ ನಾವು ಪೌಲನ ಮಾದರಿಯನ್ನು ಅನುಸರಿಸೋಣ. ಯಾವನೋ ಒಬ್ಬ ಕ್ರಿಸ್ತಸಹೋದರನು ನಮ್ಮನ್ನುಯಾವದೋ ಕಾರಣಕ್ಕಾಗಿ ತಪ್ಪಾದ ರೀತಿಯಲ್ಲಿ ವಿರೋಧಿಸುತ್ತಿದ್ದಾನೆಂದು ನಮಗೆ ತಿಳಿದು ಬರುತ್ತದೆಂದು ಊಹಿಸಿಕೊಳ್ಳೋಣ. ಒಂದು ವೇಳೆ ಆತನು ಅದೇ ವೇಳೆಯಲ್ಲಿ ನಿಜವಾಗಿಯೂ ಕರ್ತನಿಗೋಸ್ಕರ ಕೆಲಸ ಮಾಡುತ್ತಿರುವದಾದರೆ ನಾವು ಪ್ರತಿಯಾಗಿ ಆತನನ್ನು ವಿರೋಧಿಸಬಾರದು. ಅಥವಾ ಆತನ ವಿರುದ್ಧವಾಗಿ ಮಾತಾಡಬಾರದು. ನಾವು "ಸೇಡು ತೀರಿಸಿಕೊಳ್ಳಲು" ಸಹ ಪ್ರಯತ್ನಿಸಬಾರದು. ಬದಲಾಗಿ, ನಮ್ಮ ಸ್ವಂತ ಗೌರವ ಹಾಗು ಪ್ರಸಿದ್ಧಿಯನ್ನು ಮರೆತವರಾಗಿ ಆ ಸಹೋದರನು ಕರ್ತನಿಗಾಗಿ ಮಾಡುವ ಕೆಲಸದಲ್ಲಿ ಆತನನ್ನು ನಾವು ಬೆಂಬಲಿಸಿ ಪ್ರೋತ್ಸಾಹ ಮಾಡಬೇಕು.

**19** ಪೌಲನು ತನಗೆ ಏನೇ ಸಂಭವಿಸಿದರೂ ಅದು ಆತನ ಹಿತಕ್ಕೆ, ಆತನ ವಿಮೋಚನೆ ಅಥವಾ ರಕ್ಷಣೆಗಾಗಿ ಅನುಕೂಲಿಸುವದೆಂದು ಸಂಪೂರ್ಣ ನಂಬಿಕೆಯನ್ನು ಹೊಂದಿದ್ದನು (ರೋಮ 8:28). "ವಿಮೋಚನೆ" ಎಂದು ಹೇಳು–ವದರ ಮೂಲಕ ಪೌಲನು ಸೆರೆವಾಸದಿಂದ ವಿಮೋಚನೆಯನ್ನು ಮಾತ್ರವೇ ಸೂಚಿಸದೆ–ಮುಂಬರುವ ಜೀವಿತದಲ್ಲಿ ತನಗಾಗುವ ರಕ್ಷಣೆಯನ್ನು ಸಹ ಸೂಚಿಸುತ್ತಾನೆ (2 ತಿಮೊಥೆ 4:18 ನೋಡಿರಿ). ಪೌಲನ ರಕ್ಷಣೆಯು ಫಿಲಿಪ್ಪಿಯವರಂತಹ ಆತನ ಸ್ನೇಹಿತರ ವಿಜ್ಞಾಪನೆಗಳ ಮೂಲಕ ಹಾಗು ಕ್ರಿಸ್ತನು ದಯಪಾಲಿಸುವ ಆತ್ಮನಿಂದಲೂ–ಅಂದರೆ, ಪವಿತ್ರಾತ್ಮನ ಮೂಲಕವೂ–ಬರುತ್ತದೆ ಈ ವಚನವನ್ನು ಓದಿದ ಬಳಿಕ ಕರ್ತನ ಉದ್ದೇಶಗಳನ್ನು ನೆರವೇರಿಸುವಲ್ಲಿ ನಮ್ಮ ಪ್ರಾರ್ಥನೆಗಳು ಎಷ್ಟು ಪ್ರಾಮುಖ್ಯವಾಗಿವೆಂಬದನ್ನು ನಾವು ಯಾವಾಗಲೂ ಮನಸ್ಸಿನಲ್ಲಿ ಇಟ್ಟುಕೊಳ್ಳೋಣ. ಇಲ್ಲಿ ಕ್ರೈಸ್ತರ ವಿಜ್ಞಾಪನೆಯೂ ಸ್ವತಃ ಪವಿತ್ರಾತ್ಮನ ಕಾರ್ಯದ ಜೊತೆಯಲ್ಲಿಯೇ ಪ್ರಸ್ತಾಪಿಸಲ್ಪಟ್ಟಿರುವದನ್ನು ನಾವು ಕಾಣುತ್ತೇವೆ.

**20** ಪೌಲನು ತಾನು ಬದುಕಿದರೂ ಸರಿಯೇ ಮರದಂಡನೆಗೊಳಗಾದರೂ ಸರಿಯೇ ಆತನು ತನ್ನ ದೇಹದಲ್ಲಿ ಕ್ರಿಸ್ತನಿಗೆ ಮಹಿಮೆಯುಂಟಾಗುವದೆಂದು ಅಪೇಕ್ಷಿಸಿ ನಿರೀಕ್ಷಿಸುತ್ತಾನೆ. ಆತನು ಬದುಕುವದಾದರೆ ಆತನ ಜೀವಿತವು ಕ್ರಿಸ್ತನ ಮಹಿಮೆಗಾಗಿ ಇರುವದು, ಆತನು ಸಾಯುವದಾದರೆ ಅವನ ಮರಣವು ಕ್ರಿಸ್ತನ ಮಹಿಮೆಗೋಸ್ಕರ ಇರುವದು (ರೋಮ 14:8).

**21** ನನಗಂತೂ ಬದುಕುವದೆಂದರೆ ಕ್ರಿಸ್ತನೇ. ಪೌಲನು ಏನೇ ಮಾಡಿದ್ದರೂ ಅದನ್ನು ಕ್ರಿಸ್ತನಿಗೋಸ್ಕರವಾಗಿಯೂ ಕ್ರಿಸ್ತನ ಆತ್ಮನ ಮೂಲಕವಾಗಿಯೂ ಮಾಡಿದನು. ಕ್ರಿಸ್ತನಿಲ್ಲದೆ ಪೌಲನು ಏನೂ ಅಲ್ಲದವನಾಗಿದ್ದನು. ಕ್ರಿಸ್ತನ ಸೇವೆಯನ್ನು ಮಾಡಿ ಆತನನ್ನು ಮಹಿಮೆ ಪಡಿಸುವದೇ ಪೌಲನ ಜೀವಿತದಲ್ಲಿದ್ದ ಏಕೈಕ ಉದ್ದೇಶವಾಗಿತ್ತು. ಕ್ರಿಸ್ತನ ಕೃಪೆ ಹಾಗು ಬಲವಿಲ್ಲದೆ ಪೌಲನು ಜೀವಿಸಲಾಗಲಿಲ್ಲ (ಗಲಾತ್ಯ 2:20).

ಹಾಗಿದ್ದರೂ, ಪೌಲನು ಕ್ರಿಸ್ತನಿಗಾಗಿ ಸಾಯುವದಕ್ಕೂ ಸಂತೋಷವುಳ್ಳವನಾಗಿದ್ದಾನೆ. ಕ್ರಿಸ್ತನಲ್ಲಿ ವಿಶ್ವಾಸಿಸುವವರಿಗೆ ಜೀವಿಸುವದಕ್ಕಿಂತ ಸಾಯುವದೇ ಹೆಚ್ಚು ಲಾಭಕರವಾಗಿರುತ್ತದೆ (ವಚನ 23). ಪೌಲನು ಪರಲೋಕಕ್ಕೆ ಹೋಗುವನು. ಪರಲೋಕದಲ್ಲಿ ಯಾವ ಬೇಡಿಗಳು, ಸೆರೆಮನೆಯಾಗಲಿ, ಯಾವ ನೋವಾಗಲಿ, ಯಾವ ಪಾಪ ಅಥವಾ ಬಲಹೀನತೆಯಾಗಲಿ ಇರುವದಿಲ್ಲ. ಅಲ್ಲಿ ನಿತ್ಯವಾದ ಸಂತೋಷ ಮತ್ತು ಕ್ರಿಸ್ತನೊಂದಿಗೆ ಅನ್ಯೋನ್ಯತೆ ಮಾತ್ರವೇ ಇರುತ್ತದೆ. ಅದು ಲಾಭವೇ ಸರಿ! (2 ಕೊರಿಂಥ 5:8 ನೋಡಿರಿ).

**22-23** ಒಂದು ವೇಳೆ ಪೌಲನು ಬದುಕುವದಾದರೆ ಆತನು ಫಲದಾಯಕ ಕೆಲಸದಲ್ಲಿ ತೊಡಗುವನು (ವಚನ 22). ಆತನು ಸಾಯುವದಾದರೆ ಕ್ರಿಸ್ತನ ಜೊತೆಯಲ್ಲಿರುವನು (ವಚನ 23). ಅದು ಆತನಿಗೆ ಉತ್ತಮೋತ್ತಮ ಆಗಿರುತ್ತದೆ. ಪೌಲನಿಗೆ ಬದುಕುವದು ಮತ್ತು ಸಾಯುವದರ ನಡುವೆ ಯಾವದನ್ನು ಆರಿಸಿಕೊಳ್ಳಬೇಕೆಂದು ತೋಚಲಿಲ್ಲ, ಎರಡೂ ಉತ್ತಮವಾದವು ಗಳೇ.

**24** ಆದರೆ ಪೌಲನು ಫಿಲಿಪ್ಪಿಯದ ಸಭೆ ಮತ್ತು ತಾನು ಸ್ಥಾಪಿಸಿದ ಇತರ ಸಭೆಗಳ ಬಗ್ಗೆ ಯೋಚಿಸುತ್ತಾನೆ. ಅವರ ನಿಮಿತ್ಯವಾಗಿ ತಾನು ಬದುಕುವದು-ಶರೀರದಲ್ಲಿ ವಾಸಮಾಡಿಕೊಂಡಿರುವದೇ-ಉತ್ತಮವೆಂದು ನಿರ್ಧರಿಸುತ್ತಾನೆ. ಆತನು ತನ್ನ ನಿಮಿತ್ಯವಾಗಿ ಸಾಯುವದು ಉತ್ತಮ, ಆದರೆ ಅವರಿಗೋಸ್ಕರ ಆತನು ಬದುಕುವದು ಅವಶ್ಯಕವಾಗಿರುತ್ತದೆ.

**25-26** ಇಲ್ಲಿ ಪೌಲನು ತಾನು ಪುನಃ ಫಿಲಿಪ್ಪಿಯವರನ್ನು ಬೇಟಿಮಾಡಲು ಶಕ್ತನಾಗುತ್ತಾನೆಂದು ತನ್ನ ನಿರೀಕ್ಷೆಯನ್ನು ವ್ಯಕ್ತಪಡಿಸುತ್ತಾನೆ (ಫಿಲಿಪ್ಪಿ 2:24 ನೋಡಿರಿ). ಆತನು ಅವರ ಮಧ್ಯದಲ್ಲಿ ಇರುವದರ ಫಲಿತವಾಗಿ ಅವರು ನಂಬಿಕೆಯಲ್ಲಿಯೂ ಆನಂದದಲ್ಲಿಯೂ ಅಭಿವೃದ್ಧಿಗೊಳ್ಳುವರೆಂದು ಆತನು ನಿರೀಕ್ಷಿಸುತ್ತಾನೆ. ಪೌಲನು ನಂತರ ಎಂದಾದರೂ ತನ್ನ ಬಿಡುಗಡೆಯನ್ನು ಪಡೆದುಕೊಂಡನೋ ಅಥವಾ ಇಲ್ಲವೋ ಎಂಬದನ್ನು ತಿಳಿದಿರುವದಿಲ್ಲ. ಪೌಲನು ಕೆಲವು ವರ್ಷಗಳಿಗಾಗಿ ಬಿಡುಗಡೆಗೊಳಿಸಲ್ಪಟ್ಟನೆಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ. ಬಹುಶಃ ಆತನು ಇನ್ನೂ ಒಂದು ಅಥವಾ ಎರಡು ಸಾರಿ ಫಿಲಿಪ್ಪಿಯವರ ಬಳಿಗೆ ಹೋಗಲು ಶಕ್ತನಾಗಿರಬೇಕು. ಆದರೆ ಈ ಪತ್ರಿಕೆಯನ್ನು ಬರೆದ ಬಳಿಕ ಪೌಲನಿಗೆ ಏನು ಸಂಭವಿಸಿತೆಂಬದನ್ನು ಬೈಬಲ್ ನಿಖರವಾಗಿ ಹೇಳುವದಿಲ್ಲ. ಪೌಲನ ವಿಷಯದಲ್ಲಿ ನಮಗೆ ಖಚಿತವಾಗಿ ಗೊತ್ತಿರುವ ಕೊನೆಯ ಸಂಗತಿಯೇನೆಂದರೆ, ಪೌಲನು ಇನ್ನೂ ರೋಮಾಪುರದಲ್ಲಿ ಸೆರೆಯಾಳಾಗಿ ಇದ್ದಾನೆಂಬದನ್ನು ಅಪೊಸ್ತಲರ ಕೃತ್ಯಗಳ ಪುಸ್ತಕದ ಕೊನೆಯ ಸಾಲುಗಳಿಂದ ತಿಳಿದು ಬರುತ್ತದೆ (ಅ.ಕೃ. 28:16,30-31).

## ದೃಡವಾಗಿ ನಿಲ್ಲಬೇಕೆಂದು ಪ್ರಬೋಧನೆ (1:27-30)

**27** ಕ್ರಿಸ್ತನಸುವಾರ್ತೆಗೆ ಯೋಗ್ಯರಾಗಿ ನಡೆದುಕೊಳ್ಳಿರಿ. ಕ್ರಿಸ್ತನ ಸುವಾರ್ತೆಗೆ ಯೋಗ್ಯರಾಗಿನಡೆದು ಕೊಳ್ಳಬೇಕಾದರೆ ನಾವು ಕ್ರಿಸ್ತನನ್ನು ಅನುಕರಣೆಮಾಡಿ ಪರಿಶುದ್ಧರಾಗಿ ಜೀವಿಸಬೇಕು. ಕ್ರಿಸ್ತನಸುವಾರ್ತೆಯು ಅತಿ ಪ್ರಭಾವಶಾಲಿಯಾಗಿ "ಬೋಧಿಸಲ್ಪಡುವದು" ನಮ್ಮ ಬಾಯಿಗಳಿಂದಲ್ಲ, ಆದರೆ ನಮ್ಮ ಜೀವಿತಗಳಿಂದಲೇ (ಎಫೆಸ 4:1 ಮತ್ತು ವ್ಯಾಖ್ಯಾನ ನೋಡಿರಿ).

ಫಿಲಿಪ್ಪಿಯವರ ನಡವಳಿಕೆಯುಸುವಾರ್ತೆಗೆ ಯೋಗ್ಯವಾಗಿರುವದಾದರೆ ಅವರು ಒಂದೇ ಆತ್ಮದಲ್ಲಿ ದೃಡವಾಗಿ ನಿಂತು ನಂಬಿಕೆಗೋಸ್ಕರ-ಅಂದರೆ, ಕ್ರಿಸ್ತನಿಗೋಸ್ಕರ-ಐಕ್ಯಮತದಿಂದ ಹೋರಾಡುವವರಾಗಿದ್ದಾರೆಂದು ಪೌಲನು ತಿಳಿದುಕೊಳ್ಳುವನು.

ನಾವು ಸುವಾರ್ತೆಗೆ ಯೋಗ್ಯವಾದ ರೀತಿಯಲ್ಲಿ ನಡೆದುಕೊಳ್ಳಬೇಕಾದರೆ ಮೊದಲು ನಾವು ಐಕ್ಯತೆಯಿಂದಿರಬೇಕು. ನಾವು ಒಂದೇ ಆತ್ಮದಲ್ಲಿ ದೃಡವಾಗಿ ನಿಲ್ಲಬೇಕು ಮತ್ತು ಐಕ್ಯಮತ್ಯದಿಂದ ಹೋರಾಡಬೇಕು.

ನಾವು ಐಕ್ಯಮತ್ಯದಿಂದ ಹೋರಾಡುವದಕ್ಕೆ ಮುಂಚೆ ನಾವು ಮೊದಲು ಒಂದೇ ಆತ್ಮದಲ್ಲಿ ಐಕ್ಯವಾಗಿರಬೇಕು. ನಿಜ, ನಾವು ಒಂದು ಅರ್ಥದಲ್ಲಿ ಈಗಾಗಲೇ ಪವಿತ್ರಾತ್ಮನ ಮೂಲಕ ಕ್ರಿಸ್ತನಲ್ಲಿ ಆತ್ಮೀಕವಾಗಿ ಐಕ್ಯವಾಗಿದ್ದೇವೆ. ಆದರೆ, ಇನ್ನೊಂದು ಅರ್ಥದಲ್ಲಿ, ನಾವು ಒಟ್ಟಾಗಿ ಜೀವಿಸುವಾಗ ಮತ್ತು ಕಾರ್ಯಮಾಡುತ್ತಿರುವ ಹಾಗೆ ಸ್ವತಃ ನಾವೇ ಆತ್ಮೀಕ ಐಕ್ಯತೆಯನ್ನು ಕಾಪಾಡಿ ಉಳಿಸಿಕೊಂಡು ಹೋಗಬೇಕು (ಎಫೆಸ 4:3).

ನಮ್ಮ ಆತ್ಮೀಕ ಐಕ್ಯತೆಯನ್ನು ಸಂರಕ್ಷಿಸಿಕೊಳ್ಳಬೇಕಾದರೆ ಸಭೆಯ ಪ್ರತಿಯೊಬ್ಬ ಸದಸ್ಯರ ನಡುವೆ ವಯಕ್ತಿಕ ಪ್ರೀತಿ ಮತ್ತು ಸಾಮರಸ್ಯ ಇರತಕ್ಕದ್ದು. ಅನೇಕ ಜನರು ತಾವು ಕೇವಲ ಒಂದು ಯೋಜನೆ ಅಥವಾ ಕಾರ್ಯಕ್ರಮದಲ್ಲಿ ಒಟ್ಟಾಗಿ ಕೆಲಸ ಮಾಡುವದಕ್ಕೆ ಪ್ರಾರಂಭಿಸುವದಾದರೆ ಐಕ್ಯತೆಯು ತನ್ನಿಂದ ತಾನೇ ಬರುತ್ತದೆಂದು ತಪ್ಪಾಗಿ ಊಹಿಸಿಕೊಳ್ಳುತ್ತಾರೆ. ಆದರೆ ಅದು ಹಾಗಾಗುವದಿಲ್ಲ. ಮೊಟ್ಟ ಮೊದಲನೇದಾಗಿ ನಾವು ನಮ್ಮೊಳಗೆ ಉದ್ಭವಿಸಿರಬಹುದಾದ ಎಲ್ಲಾ ವಯಕ್ತಿಕ ನೋವು, ಕೋಪ, ಹೊಟ್ಟೆಕಿಚ್ಚು, ಮತ್ತು ನಿಂದನೆಗಳನ್ನು ಬಿಟ್ಟುಬಿಡಬೇಕು. ನಾವು ಪರಸ್ಪರ ಕ್ಷಮೆಯಾಚಿಸಬೇಕು-ಮತ್ತು ಕ್ಷಮೆಯನ್ನು ಕೇಳುವವರಿಗೆ ಕ್ಷಮೆ ನೀಡುವವರಾಗಿರಬೇಕು. ಆಗ ಮಾತ್ರವೇ ನಾವು ಐಕ್ಯಮತ್ಯದಿಂದ ಹೋರಾಡುವದಕ್ಕೂ ಕೆಲಸ ಮಾಡುವದಕ್ಕೂ ಶಕ್ತರಾಗುವೆವು. ನಾವು ಒಂದೇ ಆತ್ಮದಲ್ಲಿ ಒಟ್ಟಾಗಿ ಸೇರಿದಾಗ ಮಾತ್ರವೇ ನಮ್ಮ ಕೆಲಸವು ದೇವರಿಗೆ ಮೆಚ್ಚಿಕೆಯಾಗಿರುತ್ತದೆ (ಮತ್ತಾಯ 5:23-24 ನೋಡಿರಿ).

**28** ನಾವು ಸುವಾರ್ತೆಗೆ ಯೋಗ್ಯವಾದ ರೀತಿಯಲ್ಲಿ ನಡೆದುಕೊಳ್ಳಬೇಕಾದರೆ (ವಚನ 27). ನಾವು ಕ್ರಿಸ್ತನಲ್ಲಿ ಧೈರ್ಯವುಳ್ಳವರಾಗಿಯೂ ಬಲಿಷ್ಟರಾಗಿಯೂ ಇರಬೇಕು (1 ಕೊರಿಂಥ 16:13, ಎಫೆ 6:10). ಫಿಲಿಪ್ಪಿಯವರು ತಮ್ಮನ್ನು ವಿರೋಧಿಸುವವರಿಗೆ ಹೆದರದಿರಬೇಕೆಂದು ಪೌಲನು ಹೇಳುತ್ತಾನೆ. ಫಿಲಿಪ್ಪಿಯದ ಸಭೆಯು ಹೊಸದಾಗಿ ಸ್ಥಾಪಿಸಲ್ಪಟ್ಟದ್ದಾಗಿತ್ತು, ಅದು ಚಿಕ್ಕದಾಗಿತ್ತು. ಫಿಲಿಪ್ಪಿಯು ದೊಡ್ಡ ಹಾಗು ಪ್ರಾಮುಖ್ಯನಗರವಾಗಿತ್ತು, ಅದು ಒಂದು ರೋಮಾಯ ವಸಾಹತುವಾಗಿತ್ತು. ರೋಮಾಯರು ಕ್ರೈಸ್ತರನ್ನು ಬಲವಾಗಿ ವಿರೋಧಿಸುತ್ತಿದ್ದರು. ಹೀಗೆ ಫಿಲಿಪ್ಪಿಯವರು ಎಲ್ಲಾ ಕಡೆಗಳಲ್ಲಿ ಬಲಿಷ್ಟ ವೈರಿಗಳಿಂದ ಸುತ್ತುವರೆಯಲ್ಪಟ್ಟಿದ್ದರು. ಆದರೆ ಅವರ ನಂಬಿಕೆ ಮತ್ತು ದೃಡತೆಯು ಅವರು ರಕ್ಷಣೆಯನ್ನು ಹೊಂದಿ ಅವರ ವೈರಿಗಳು ನಾಶವಾಗುವರು ಎಂಬದಕ್ಕೆ ಒಂದು ಸಂಕೇತ ಅಥವಾ ಪ್ರಮಾಣವಾಗುವದೆಂದು ಪೌಲನ ಭರವಸೆಯಾಗಿತ್ತು. ಫಿಲಿಪ್ಪಿಯವರನ್ನು ವಿರೋಧಿಸುವವರು ದೇವರನ್ನು ಸಹ ವಿರೋಧಿಸುವವರಾಗಿದ್ದರು (ಅ.ಕೃ.5:38-39).

**29-30** ಕ್ರಿಸ್ತನಿಗೋಸ್ಕರ ಬಾಧೆಯನ್ನನುಭವಿಸುವದು ಫಿಲಿಪ್ಪಿಯವರಿಗೆ ಅನುಗ್ರಹವಾಗಿ ದೊರೆತ್ತಿರುತ್ತದೆ. ಅವರು ಇದರಲ್ಲಿ ಸಂತೋಷಪಡಲಿ (ಮತ್ತಾಯ 5:10-11, ಅ.ಕೃ. 5:41, ಫಿಲಿಪ್ಪಿ 2:17-18, ಕೊಲೊಸ್ಸೆ 1:24 ನೋಡಿರಿ). ನಾವು ಕ್ರಿಸ್ತನ ಬಾಧೆಯಲ್ಲಿ ಪಾಲುಗಾರರಾಗುವದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು (ರೋಮ 8:17).

ಪೌಲನು ಫಿಲಿಪ್ಪಿಯವರಿಗೆ ಒಂದು ಮಾದರಿಯಾಗಿದ್ದನು. ಆತನು ಮೊದಲನೆಯ ಸಾರಿ ಫಿಲಿಪ್ಪಿಗೆ ಬಂದಾಗ ಅನುಭವಿಸಿದ ಬಾಧೆಯನ್ನು ಅವರು ನೋಡಿದ್ದರು (ಅ.ಕೃ. 16:19-24, 1 ಥೆಸಲೊನಿಕ 2:2). ಈಗ ಪೌಲನು ಬೇಡಿಗಳಲ್ಲಿದ್ದಾನೆ. ಆದಾಗ್ಯು ಆತನು ಸಂತೋಷ ಹಾಗು ನಿರೀಕ್ಷೆಯಿಂದ ತುಂಬಿದವನಾಗಿಯೇ ಇರುತ್ತಾನೆ. ಫಿಲಿಪ್ಪಿಯವರು ಆತನ ಮಾದರಿಯಿಂದ ಧೈರ್ಯಹೊಂದಿಕೊಳ್ಳಲಿ! (ವಚನ 14 ನೋಡಿರಿ).

---

## ಅಧ್ಯಾಯ - 2

### ಐಕ್ಯಮತವುಳ್ಳವರಾಗಿರಬೇಕೆಂದು ಪ್ರಬೋಧನೆ (2:1-4)

**1-2** ಈ ವಚನದಲ್ಲಿ ಪೌಲನು ಫಿಲಿಪ್ಪಿಯವರೊಳಗೆ ಐಕ್ಯತೆಯು ಇರಬೇಕೆಂದು ಅವರನ್ನು ತುರ್ತಾಗಿ ಬೇಡಿಕೊಳ್ಳುತ್ತಾನೆ. ಒಂದು ವಿಧದಲ್ಲಿ ಕ್ರೈಸ್ತರೆಲ್ಲರೂ ಕ್ರಿಸ್ತನಲ್ಲಿ ಐಕ್ಯವಾಗಿರುತ್ತಾರೆ. ಅಂದರೆ, ಅವರೆಲ್ಲರೂ ಆತನ ದೇಹವಾದ ಸಭೆಯ ಅಂಗಗಳಾಗಿದ್ದಾರೆ (1 ಕೊರಿಂಥ 12:13, 27). ಆದರೆ ಅವರ ದೈನಂದಿನ ಜೀವಿತಗಳಲ್ಲಿ, ವಿಶೇಷವಾಗಿ ಪರಸ್ಪರ–ರೆಡೆಗಿನ ಅವರ ನಡಾವಳಿಯಲ್ಲಿ ಕ್ರೈಸ್ತರು ಐಕ್ಯಮತ್ಯವುಳ್ಳವರ ಹಾಗೆ ನಡೆದುಕೊಳ್ಳುವದಿಲ್ಲ. ಒಂದೇ ಕುಟುಂಬವಾದಾಗ್ಯು ಇಬ್ಬರು ಸಹೋದರರು ಒಬ್ಬರಿಗೊಬ್ಬರ ವಿರುದ್ಧವಾಗಿ ಇಬ್ಭಾಗಿಸಲ್ಪಡಬಹುದಾದ ಪ್ರಕಾರವೇ ಒಂದು ಸಭೆಯು ಒಂದೇ ಆತ್ಮೀಕ ಕುಟುಂಬವಾಗಿದ್ದಾಗ್ಯು ಅದರ ಸದಸ್ಯರು ಪರಸ್ಪರರೆಡೆಗಿನ ತಮ್ಮ ನಡವಳಿಕೆಯಲ್ಲಿ ಇಬ್ಭಾಗಿಸಲ್ಪಡಬಹುದಾಗಿದೆ.

ಈ ಕಾರಣದಿಂದ ಪೌಲನು ಫಿಲಿಪ್ಪಿಯವರನ್ನು ಒಂದೇ ಮನಸ್ಸುಳ್ಳವರಾಗಿಯೂ ಅನ್ಯೋನ್ಯಭಾವವುಳ್ಳವರೂ ಒಂದೇ ಗುರಿಯಿಟ್ಟುಕೊಂಡವರೂ ಆಗಿರಬೇಕೆಂದು ಪ್ರಬೋಧಿಸುತ್ತಾನೆ (ವಚನ 2). ನಾವು ಎಲ್ಲಾ ಮುಖ್ಯ ವಿಷಯಗಳಲ್ಲಿ ಒಂದೇ ಮನಸ್ಸುಳ್ಳವರಾಗಿರಬೇಕು. ಚಿಕ್ಕ ದ್ವಿತೀಯ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದರೆ ತಪ್ಪೇನಿಲ್ಲ, ಆದರೆ ಚಿಕ್ಕ ವಿಷಯಗಳಲ್ಲಿ ನಮ್ಮ ಅಭಿಪ್ರಾಯಗಳು ಬೇರೆ ಬೇರೆ ಆಗಿರುವಾಗಲೂ ನಾವು ಅನ್ಯೋನ್ಯಭಾವವುಳ್ಳವರೂ ಒಂದೇ ಗುರಿಯಿಟ್ಟುಕೊಂಡವರೂ ಆಗಿರುತ್ತೇವೆ. ನಾವು ಸಮಾಧಾನವೆಂಬ ಬಂಧನದಿಂದ ಕಟ್ಟಲ್ಪಟ್ಟವರಾಗಿದ್ದು ಪವಿತ್ರಾತ್ಮನಿಂದ–ಉಂಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಬೇಕು (ಎಫೆಸ 4:3).

ಒಂದೇ ಮನಸ್ಸುಳ್ಳವರೂ ಅನ್ಯೋನ್ಯಭಾವವುಳ್ಳವರೂ ಆಗಿರಬೇಕಾದರೆ ನಾವು ಏಕರೀತಿಯಾದ ಗುರಿ ಮತ್ತು ಉದ್ದೇಶವನ್ನು ಹೊಂದಿರಬೇಕುಃ ಅದೇನೆಂದರೆ, ಕ್ರಿಸ್ತನನ್ನು ಪ್ರೀತಿಸಿ ವಿಧೇಯರಾಗುವದು ಮತ್ತು ಆತನನ್ನು ಮಹಿಮೆಪಡಿಸುವದು. ಇದು ನಮ್ಮಲ್ಲಿ ಪ್ರತಿಯೊಬ್ಬರ ಜೀವಿತದ ಉದ್ದೇಶವಾಗಿರಬೇಕು. ಆದರೆ, ಖಂಡಿತವಾಗಿಯೂ, ಉದ್ದೇಶವನ್ನು ಸಾಧಿಸಬೇಕಾದರೆ ಅನೇಕ ದಾರಿಗಳಿರುತ್ತವೆ (1 ಕೊರಿಂಥ 1:10 ಮತ್ತು ವ್ಯಾಖ್ಯಾನ ನೋಡಿರಿ). ಪೌಲನು 1ನೇ ವಚನದಲ್ಲಿ ಎಲ್ಲಾ ಕ್ರೈಸ್ತರು ಪವಿತ್ರಾತ್ಮನ ಮುಖಾಂತರ ಅನುಭವಿಸಬೇಕಾದ ನಾಲ್ಕು ಆಶೀರ್ವಾದಗಳನ್ನು ಪ್ರಸ್ತಾಪಿಸುತ್ತಾನೆಃ ಕ್ರಿಸ್ತನೊಂದಿಗಿನ ಅನ್ಯೋನ್ಯತೆಯಿಂದ ಉತ್ತೇಜನ...... ಆತನ ಪ್ರೀತಿಯಿಂದ ಆಧರಣೆ....ಪವಿತ್ರಾತ್ಮನ ಅನ್ಯೋನ್ಯತೆ ........ಕಾರುಣ್ಯ ದಯಾರಸಗಳು. ಫಿಲಿಪ್ಪಿಯವರು ಈ ಆಶೀರ್ವಾದಗಳನ್ನು ಈಗಾಗಲೇ ಪಡೆದುಕೊಂಡಿದ್ದಾರೆಂಬದನ್ನು ಪೌಲನು ಬಲ್ಲವನಾಗಿದ್ದಾನೆ. ಅವರು ತಮ್ಮ ಮಧ್ಯದಲ್ಲಿ ಪವಿತ್ರಾತ್ಮನ ಕಾರ್ಯವನ್ನು ಅನುಭವಿಸಿದ್ದಾರೆ. ಇದು ನಿಜವಾಗಿರುವದಾದರೆ, ಅವರು ಐಕ್ಯಮತವುಳ್ಳವರಂತೆ ನಡೆದುಕೊಳ್ಳಲಿ. ಅವರು ನಿಜವಾಗಿಯೂ ಪವಿತ್ರಾತ್ಮನನ್ನು ಹೊಂದಿಕೊಂಡಿರುವದಾದರೆ ಪವಿತ್ರಾತ್ಮನನ್ನು ಹೊಂದಿಕೊಂಡವರ ಹಾಗೆಯೇ ಪ್ರವರ್ತಿಸಲಿ! ಅವರು ಈ ಪ್ರತಿಯೊಂದು ಆಶೀರ್ವಾದಗಳನ್ನು ಒಬ್ಬರೊಂದಿಗೆ ಹಂಚಿಕೊಳ್ಳಲಿ. ಫಿಲಿಪ್ಪಿಯವರು ಹೀಗೆ ನಡೆದುಕೊಳ್ಳುವದಾದರೆ ಅವರು ಪೌಲನ ಸಂತೋಷವನ್ನು ಪರಿಪೂರ್ಣ ಮಾಡುವರು.

ಇಂದು ಯೇಸು ನಮ್ಮ ಸಭೆಯನ್ನು ನೋಡುವಾಗ ಆತನಿಗೆ ಯಾವದು ಸಂತೋಷವನ್ನುಂಟು ಮಾಡುತ್ತದೆ? ನಮ್ಮ ಕಾರ್ಯಕ್ರಮಗಳೋ? ನಮ್ಮ ಕೆಲಸಗಳೋ? ನಮ್ಮ ಸಭೆಯ ಗಾತ್ರವೋ? ಇಲ್ಲ, ಈ ಸಂಗತಿಗಳಲ್ಲ. ನಮ್ಮ ಐಕ್ಯಮತವೇ[6] ಆತನಿಗೆ ಸಂತೋಷವನ್ನು ತರುತ್ತದೆ. ಆದದರಿಂದ, ನಾವು ಒಂದೇ ಮನಸ್ಸುಳ್ಳವರೂ ಒಂದೇ ಪ್ರೀತಿಯುಳ್ಳವರೂ, ಅನ್ಯೋನ್ಯಭಾವ ಒಂದೇ ಗುರಿಯಿಟ್ಟುಕೊಂಡವರೂ ಆಗಿರೋಣ.

ನಾವು ಐಕ್ಯಮತ್ಯದ ಮನಸ್ಸನ್ನು ಹೊಂದಿರದಿದ್ದರೆ ನಮ್ಮ ಕೆಲಸದಲ್ಲಿ ಐಕ್ಯತೆಯನ್ನು ಹೊಂದಲಾರೆವು . ಐಕ್ಯತೆಯು ಸಭೆಯಲ್ಲಿನ ಸಹೋದರ ಹಾಗು ಸಹೋದರಿಯರ ನಡುವಿನ ವಯಕ್ತಿಕ ಪ್ರೀತಿ ಮತ್ತು ಆಪ್ತತೆಯೊಳಗಿಂದ ಉದ್ಭವಿಸುತ್ತದೆ.

ನಾವು ಆತ್ಮೀಕವಾಗಿ ಐಕ್ಯಮತ್ಯವುಳ್ಳವರಾಗಿದ್ದೇವೆಂದು ಹೇಳಿದರೂ ನಮ್ಮೊಳಗೆ ವಯಕ್ತಿಕ ಐಕ್ಯವು ಇಲ್ಲದಿರುವದಾದರೆ ನಮ್ಮ "ಆತ್ಮೀಕ ಐಕ್ಯಮತ್ಯ" ಎಂಬದು ಅರ್ಥಹೀನವಾದದ್ದು. ಸತ್ಕ್ರೀಯೆಗಳು ನಮ್ಮ ನಂಬಿಕೆಗೆ ಆಧಾರವಾಗಿರುವ ಪ್ರಕಾರವೇ (ಯಾಕೋಬ 2:14, 17-18), ನಾವು ಒಬ್ಬರನೊಬ್ಬರು ಪ್ರೀತಿಪೂರ್ವಕವಾಗಿ ಸೇರಿಸಿಕೊಳ್ಳುವದು ನಮ್ಮ ಐಕ್ಯತೆಗೆ ಆಧಾರವಾಗಿರುತ್ತದೆ.

**3** ನಮ್ಮ ಐಕ್ಯವನ್ನು ಕಾಪಾಡಿ ಉಳಿಸಿಕೊಂಡು ಹೋಗಬೇಕಾದರೆ ನಮಗೆ ಅಗತ್ಯವಾದ ಅತಿ ಪ್ರಾಮುಖ್ಯ ಗುಣಲಕ್ಷಣವು ದೀನತೆಯಾಗಿದೆ. ಸಭೆಯಲ್ಲಿ ಸಹೋದರರು ಅಥವಾ ಸಹೋದರಿಯರ ನಡುವೆ ಭೇದಗಳಿರುವಾಗಲೆಲ್ಲಾ ಹೆಚ್ಚು ಕಡಿಮೆ ಅದಕ್ಕೆ ಮುಖ್ಯ ಕಾರಣವು ಯಾವಾಗಲೂ ಗರ್ವವೇ ಆಗಿರುತ್ತದೆ. ಗರ್ವವು ಸಾಮಾನ್ಯವಾಗಿ ನಮ್ಮ ಮನಸ್ಸುಗಳಲ್ಲಿ ಅಡಗಿಕೊಂಡು

ಇರುತ್ತದೆ. ಹೀಗಿರುವದರಿಂದ, ನಾವು ನಮ್ಮ ಗರ್ವವನ್ನು ನೋಡುವದಕ್ಕಾಗದು. ನಮ್ಮ ಒಳಗಿನ ಗರ್ವದ ಕಾರಣದಿಂದ ನಾವು ಇತರರಿಗೆ ನೋವುಂಟು ಮಾಡುತ್ತೇವೆ. ಅದು ಮಾತ್ರವಲ್ಲದೆ, ನಮ್ಮ ಒಳಗಿನ ಗರ್ವದ ಕಾರಣದಿಂದಲೇ ನಾವು ಇತರರ ಮೇಲೆ ಬೇಸರಪಟ್ಟುಕೊಳ್ಳುತ್ತೇವೆ. ನಮ್ಮ ಭಾವನೆಗಳಿಗೆ ನೋವುಂಟಾಗುವದು ಅಥವಾ ನಾವು ತಾತ್ಸಾರ ಮಾಡಲ್ಪಟ್ಟಿದ್ದೇವೆಂದು ಭಾವಿಸುವದಕ್ಕೆ ಗರ್ವವೇ ಕಾರಣವಾಗಿರುತ್ತದೆ. ಆದದರಿಂದ, ಬೇಸರವನ್ನುಂಟು ಮಾಡುವ ಹಾಗು ಬೇಸರಪಟ್ಟುಕೊಳ್ಳುವ ಎರಡೂ ಬಂದಾಗ ಗರ್ವವೇ ಮುಖ್ಯಕಾರಣವಾಗಿರುತ್ತದೆ. (ಎಫೆಸ 4:2 ನೋಡಿರಿ).

ಇತರರನ್ನು ನಮ್ಮೊಂದಿಗೆ ಸಮಾನರೆಂದೆಣಿಸುವದಷ್ಟೇ ಸಾಕಾಗುವದಿಲ್ಲ, ನಾವು ಅವರನ್ನು ನಮಗಿಂತಲೂ ಶ್ರೇಷ್ಠರೆಂದು ಎಣಿಸಬೇಕು. (ರೋಮ 12:10). ನಾವು ನಮ್ಮ ಸ್ವಂತ ದೋಷಗಳನ್ನೂ ಪಾಪಗಳನ್ನೂ ಕಠಿಣವಾಗಿ ತೀರ್ಪುಮಾಡಬೇಕು, ಆದರೆ ನಮ್ಮ ಸಹೋದರರ ಪಾಪಗಳು ಹಾಗು ಬಲಹೀನತೆಗಳನ್ನು ಅಂತಃಕರುಣೆ ಹಾಗು ಅರ್ಥ–ಮಾಡಿಕೊಳ್ಳುವಿಕೆಯಿಂದ ದೃಷ್ಟಿಸಬೇಕು.

**4** ನಾವು ನಮ್ಮ ಸ್ವಹಿತವನ್ನು ಮಾತ್ರವೇ ನೋಡದೆ ಪರಹಿತವನ್ನು ಸಹ ನೋಡಬೇಕು. ನಾವು ನೋಡಬೇಕಾಗಿರುವ ಈ ಪರಹಿತ ಯಾವುದು? ಅದು ಇತರ ಕೊರತೆಗಳು, ಒಳಿತು ಆಗಿದೆ (ರೋಮ 15:2, 1 ಕೊರಿಂಥ 10:24,33, ಗಲಾತ್ಯ 6:2). ನಾವು ಯಾವಾಗಲೂ ಇತರರ ವ್ಯವಹಾರಗಳಲ್ಲಿ ಮಧ್ಯಪ್ರವೇಶಿಸುವವರು ಅಥವಾ ಅವರ ಮೇಲೆ ದೊರೆತನ ಮಾಡಲು ಪ್ರಯತ್ನಿಸುವವರು ಆಗಿರಬೇಕೆಂದು ಇಲ್ಲಿ ಪೌಲನ ತಾತ್ಪರ್ಯವಾಗಿರುವದಿಲ್ಲ, ಬದಲಾಗಿ, ನಾವು ಇತರರಿಗೆ ಸಹಾಯ ಹಾಗು ಪ್ರೋತ್ಸಾಹವನ್ನು ನೀಡುವದಕ್ಕಾಗಿ ಪ್ರತಿಯೊಂದು ಅವಕಾಶಕ್ಕಾಗಿ ಹುಡುಕುವವರಾಗಿರಬೇಕೆಂದು ಆತನು ಹೇಳುತ್ತಿದ್ದಾನೆ.

## ಕ್ರಿಸ್ತನ ಮಾದರಿ (2:5-11)

**5** ದೀನತೆಗೆ ಅತಿಶ್ರೇಷ್ಠ ಮಾದರಿಯು ಸ್ವತಃ ಯೇಸು ಕ್ರಿಸ್ತನೇ. ಆತನು ಎಲ್ಲರಿಗಿಂತಲೂ ಅತ್ಯುನ್ನತ ಮಾನವನ – ಹೌದು ಸ್ವತಃ ದೇವರಾಗಿದ್ದರೂ–ಆಗಿದ್ದಾಗ್ಯು ಆತನು ತನ್ನನ್ನು ತಗ್ಗಿಸಿಕೊಂಡು ನಮಗೋಸ್ಕರ ಸೇವಕನನ್ನಾಗಿ ಮಾಡಿಕೊಂಡನು. ಕ್ರಿಸ್ತನಲ್ಲಿದ್ದಂಥ ಮನೋಭಾವವು ನಮ್ಮಲ್ಲಿಯೂ ಇರಲಿ!.

**6-7** ಕ್ರಿಸ್ತನು ಸ್ವತಃ ದೇವರ ಸ್ವರೂಪನಾಗಿದ್ದನು. ಇದರರ್ಥವೇನೆಂದರೆ, ದೇವರ ಸಂಪೂರ್ಣ ಸ್ವಭಾವ, ಗುಣಲಕ್ಷಣ, ಮತ್ತು ಗುಣಧರ್ಮಗಳು ಕ್ರಿಸ್ತನಲ್ಲಿರುತ್ತವೆ ಎಂಬದೇ. ಆದರೆ ಕ್ರಿಸ್ತನು ದೇವರಿಗೆ ಸರಿಸಮಾನನಾಗಿದ್ದರೂ ಆತನು ಸ್ವಂತ ಇಷ್ಟದಿಂದ ತನ್ನನ್ನು ಈ ಎಲ್ಲಾ ದೈವೀಕ ಗುಣಧರ್ಮಗಳಿಂದ ಬರಿದು ಮಾಡಿಕೊಂಡನು ಮತ್ತು ತನ್ನನ್ನು ಶೂನ್ಯವಾಗಿ ಮಾಡಿಕೊಂಡನು. ಆತನು ಸಂಪೂರ್ಣ ದೇವರಾಗಿದ್ದರೂ ಸಂಪೂರ್ಣ ಮಾನವನಾದನು. ಅಂದರೆ, ಆತನು ಮಾನವನ ರೂಪವನ್ನು–ವಾಸ್ತವದಲ್ಲಿ, ದಾಸನ ರೂಪವನ್ನು–ಧರಿಸಿಕೊಂಡನು (ಮಾರ್ಕ 10:43-45, 2 ಕೊರಿಂಥ 8:9 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಕ್ರಿಸ್ತನು ದೇವರೊಂದಿಗಿನ ಸರಿಸಮಾನನಾಗಿರುವ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸುವದು ಬೇಕಾಗಿರಲಿಲ್ಲ, ಹಾಗೆ ನೋಡಿದರೆ, ಅದು ಆತನದೇ ಆಗಿತ್ತು ಕ್ರಿಸ್ತನು ದೇವರೊಂದಿಗೆ ಸರಿಸಮಾನನಾಗಿದ್ದನು ಮತ್ತು ಆಗಿರುತ್ತಾನೆ. ಆತನು ದೇವರಾಗಿದ್ದಾನೆ. ಒಬ್ಬ ಬಾಧ್ಯಸ್ಥನು ತನ್ನ ಸ್ವಾಸ್ಥ್ಯಕ್ಕಾಗಿ ಪಟ್ಟುಹಿಡಿಯಬೇಕಾಗಿಲ್ಲ, ಅದು ಆತನದೇ ಆಗಿದ್ದು ಆತನಿಗಾಗಿಕಾಯ್ದಿರಿಸಲ್ಪಟ್ಟಿರುತ್ತದೆ.

ಕ್ರಿಸ್ತನು ಭೂಮಿಗೆ ಮನುಷ್ಯನ ರೂಪದಲ್ಲಿ ಬಂದನು (ವಚನ 7). ಕ್ರಿಸ್ತನು ಸಕಲ ವಿಧಗಳಲ್ಲಿಯೂ ನಮ್ಮ ಹಾಗೆ ಒಬ್ಬ ಮನುಷ್ಯನಾಗಿದ್ದನು–ಒಂದನ್ನು ಹೊರತುಪಡಿಸಿಃ ಆತನು ಎಂದಿಗೂ ಪಾಪಮಾಡಲಿಲ್ಲ (ಇಬ್ರಿಯ 2:14, 4:15).

ಆದರೆ ಕ್ರಿಸ್ತನು ಈ ಭೂಲೋಕದಲ್ಲಿರುವ ವೇಳೆ ಮಾನವ ರೂಪದಲ್ಲಿದ್ದಾಗ್ಯು ಆತನು ದೇವರಾಗಿರುವದನ್ನು ನಿಲ್ಲಿಸಲಿಲ್ಲ.

ಸ್ವತಃ ದೇವರೇ ಮನುಷ್ಯನಾದ ಕ್ರಿಸ್ತನ ರೂಪದಲ್ಲಿ ಭೂಮಿಗೆ ಬಂದವನಾಗಿದ್ದನು. ದೇವರೂ ಕ್ರಿಸ್ತನೂ ಒಂದಾಗಿದ್ದಾರೆ (ಯೋಹಾನ 1:1,14,10:30 ಮತ್ತು ವ್ಯಾಖ್ಯಾನಗಳನ್ನು, ಸಾಮಾನ್ಯ ಲೇಖನಃ ಯೇಸು ಕ್ರಿಸ್ತನು ನೋಡಿರಿ).

**8** ಕ್ರಿಸ್ತನು ಮನುಷ್ಯನ ರೂಪವನ್ನು ಮಾತ್ರವೇ ಧರಿಸಿಕೊಳ್ಳಲಿಲ್ಲ, ಆತನು ತನ್ನನ್ನು ಅದಕ್ಕಿಂತಲೂ ಕಡಿಮೆಯಾಗಿ ಮಾಡಿಕೊಂಡನು. ಆತನು ತನ್ನನ್ನು ಶಿಲುಬೆಯ ಮೇಲೆ ಅಪರಾಧಿಯಾಗಿ ಸಾಯುವದಕ್ಕೆ ಅನುಮತಿಸಿಕೊಂಡನು. ಕ್ರಿಸ್ತನ ಕಾಲದಲ್ಲಿ ಶಿಲುಬೆಯ ಮೇಲೆ ಸಾಯುವದು ಒಬ್ಬನಿಗೆ ಸಂಭವಿಸಬಹುದಾದ ಅತಿ ತಿರಸ್ಕಾರದ ಸಂಗತಿಯಾಗಿತ್ತು. ರೋಮಾಯರು ಅತಿ ಕೆಟ್ಟವರಾದ ಅಪರಾಧಿಗಳನ್ನು ಮಾತ್ರವೇ ಶಿಲುಬೆಗೇರಿಸುತ್ತಿದ್ದರು. ಶಿಲುಬೆಗೆ ಹಾಕಲ್ಪಟ್ಟ ಅಪರಾಧಿಗಳಿಗಿಂತಲೂ ಕೀಳಾದದ್ದು ಮತ್ತೊಂದಿರಲಿಲ್ಲ. ಆದಾಗ್ಯು ಕ್ರೈಸ್ತನು ಎಲ್ಲದಕ್ಕಿಂತಲೂ ಉನ್ನತವಾದ ಸ್ಥಾನದಿಂದ ಇಳಿದು ಬಂದು ತನ್ನನ್ನು ಎಲ್ಲಕ್ಕಿಂತ ಕೀಳಾದ ಸ್ಥಾನದಲ್ಲಿ–ನಮಗೋಸ್ಕರವಾಗಿ–ಇಟ್ಟುಕೊಂಡನು.

**9-11** ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿದನು. ಕ್ರಿಸ್ತನು ಮೊದನು ತನ್ನನ್ನೂ ತಗ್ಗಿಸಿಕೊಂಡಿದ್ದೇ ದೇವರು ಆತನನ್ನು ಉನ್ನತಕ್ಕೇರಿಸಲು ಕಾರಣವಾಗಿತ್ತು (ಮತ್ತಾಯ 23:12, ಯಾಕೋಬ 4:10, 1 ಪೇತ್ರ 5:6). ಅತ್ಯುನ್ನತ ಸ್ಥಾನವು ಪರಲೋಕದಲ್ಲಿ ದೇವರ ಬಲಗಡೆಯಾಗಿದ್ದು, ಈಗ ಕ್ರಿಸ್ತನು ಅಲ್ಲಿ ಕುಳಿತಿರುತ್ತಾನೆ (ಎಫೆಸ 1:20-23, ಇಬ್ರಿಯ 1:8-9 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಮತ್ತು ಲೋಕಾಂತ್ಯದಲ್ಲಿ ಪ್ರತಿಯೊಂದು ಮೊಣಕಾಲು (ಪ್ರತಿಯೊಬ್ಬ ವ್ಯಕ್ತಿಯು)–ಸತ್ತಿರುವವರಾಗಲಿ ಅಥವಾ ಬದುಕಿರುವವರಾಗಲಿ, ಕ್ರಿಸ್ತನ ವಿಶ್ವಾಸಿಯಾದರೂ ಸರಿಯೇ ಅಥವಾ ಅವಿಶ್ವಾಸಿಯಾದರೂ ಸರಿಯೇ–ಅಡ್ಡಬಿದ್ದು (ವಚನ 10). ಪ್ರತಿಯೊಂದು ನಾಲಿಗೆ (ಪ್ರತಿಯೊಬ್ಬ ವ್ಯಕ್ತಿಯೂ) ಯೇಸುಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡುವದು.

## ನಕ್ಷತ್ರಗಳಂತೆ ಹೊಳೆಯುವದು (2:12-18)

**12** ಕ್ರಿಸ್ತನು ನಮಗೆ ದೀನತೆಯ ಒಂದು ಮಾದರಿಯಷ್ಟೇ ಅಲ್ಲ, ಆದರೆ ವಿಧೇಯತೆಯ ಮಾದರಿಯೂ ಆಗಿದ್ದಾನೆ (ಫಿಲಿಪ್ಪಿ 2:8, ಇಬ್ರಿಯ 5:8). ಇಲ್ಲಿ ಪೌಲನು ವಿಧೇಯರಾಗಿರಬೇಕೆಂದು ಫಿಲಿಪ್ಪಿಯವರನ್ನು ಪ್ರಬೋಧಿಸುತ್ತಾನೆ.

ಪೌಲನು ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳುತ್ತಲಿರಿ ಎಂದು ಹೇಳುವದರ ತಾತ್ಪರ್ಯವೇನೆಂದರೆ, ನಾವು ಕ್ರಿಸ್ತನಿಗೆ ವಿಧೇಯರಾಗಿ ದೇವರ ಚಿತ್ತವನ್ನು ಮಾಡಬೇಕು ಎಂಬದೇ. ನಾವು ಕ್ರಿಸ್ತನ ಮಾದರಿಯನ್ನು ಅನುಸರಿಸುತ್ತಾ ಇರಬೇಕು.

ನಾಮ್ಮ ಜೀವಿತಗಳು ಹೆಚ್ಚು ಹೆಚ್ಚು ಪರಿಶುದ್ಧವಾಗಬೇಕು. ಯೇಸು ಹೇಳಿದ್ದೇನೆಂದರೆಃ "ಆದದರಿಂದ, ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರಿ" (ಮತ್ತಾಯ 5:48). ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ ಎಂಬದರ ಅರ್ಥವು ಇದೇ ಆಗಿದೆ.

ನಾವು ನಮ್ಮ ರಕ್ಷಣೆಯನ್ನು ಮನೋಭೀತಿಯಿಂದ ನಡಗುವವರಾಗಿ ಸಾಧಿಸಿಕೊಳ್ಳಬೇಕು. ನಾವು ಬಲಹೀನರೂ ಪಾಪಿಗಳೂ ಆಗಿದ್ದೇವೆ. ನಾವು ಎಡವು ತ್ತೇವೆ. ಮತ್ತು ಮಾರ್ಗ ತಪ್ಪುತ್ತೇವೆ. ನಾವು ನಮ್ಮ ಪಾಪಗಳಿಗಾಗಿಯೂ ಬಲಹೀನ–ತೆಗಳಿಗಾಗಿಯೂ "ಭೀತಿ"ಯುಳ್ಳವರಾಗಿರಬೇಕು. ಒಂದು ಮಗುವು ತನ್ನ ತಂದೆಗೆ ಅಸಮಾಧಾನವನ್ನುಂಟು ಮಾಡುವದಕ್ಕೆ ಭೀತಿಪಡುವ ಪ್ರಕಾರವೇ ನಾವು ಎಲ್ಲಿ ದೇವರಿಗೆ ಅಸಮಾಧಾನವನ್ನುಂಟು ಮಾಡುತ್ತೇವೋ ಎಂದು ಭೀತಿಯುಳ್ಳವರಾಗಿರಬೇಕು 7. ಯಾಕೆಂದರೆ, ನಾವು ಈ ಜೀವನದಲ್ಲಿ ಮಾಡಿರುವ ಎಲ್ಲಾ ಸಂಗತಿಗಳಿಗಾಗಿ ಒಂದು ದಿನ ಕ್ರಿಸ್ತನಿಂದ ನ್ಯಾಯತೀರ್ಪಿಗೊಳಗಾಗಲಿದ್ದೇವೆ (2 ಕೊರಿಂಥ 5:10). ನಾವು ನಮ್ಮ ಬಲಹೀನತೆಗಳು ಹಾಗು ಅಯೋಗ್ಯತನವನ್ನು ಎಡೆಬಿಡದೆ ದೇವರ ಮುಂದೆ ಅರಿಕೆಮಾಡುವವರಾಗಿರಬೇಕು. ಆದರೆ ಅದೇ ವೇಳೆಯಲ್ಲಿ ನಾವು ಕ್ರಿಸ್ತನಲ್ಲಿ ಯೋಗ್ಯರೂ ನೀತಿವಂತರಾಗಿಯೂ ನಿರ್ಣಯಿಸಲ್ಪಟ್ಟಿರುವದಕ್ಕೆ ಕಾರಣವಾದ ದೇವರ ಕೃಪೆಗಾಗಿ ನಿರಂತರವೂ ಆತನಿಗೆ ಸ್ತುತಿಯನ್ನು ಕೃತಜ್ಞತೆಯನ್ನು ಸಲ್ಲಿಸಬೇಕು.

**13** ನಾವು ಸ್ವಂತ ಸಾಮರ್ಥ್ಯದಿಂದ "ನಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಲು" ಸಾಧ್ಯವಿಲ್ಲ. ದೇವರು ನಮ್ಮ ಕೆಲಸ ಮಾಡುತ್ತಿರುವದರಿಂದ ಮಾತ್ರವೇ ನಾವು ಅದನ್ನು ಸಾಧಿಸಿಕೊಳ್ಳಲು ಶಕ್ತರಾಗುತ್ತೇವೆ (ಯೋಹಾನ 15:5). ದೇವರು ನಮಗೆ ತನ್ನ ಚಿತ್ತವನ್ನು ಮಾಡುವದಕ್ಕೆ ಬಲವನ್ನು ಕೊಡುವದು ಮಾತ್ರವಲ್ಲದೆ ಅದನ್ನು ಮಾಡುವದಕ್ಕೆ ಅಭಿಲಾಷೆಯನ್ನು ಆತನು ನಮಗೆ ಅನುಗ್ರಹಿಸುತ್ತಾನೆ. ನಿಜ, ನಾವೇ ಆತನ ಚಿತ್ತವನ್ನು ಸಾಗಿಸಿಕೊಂಡು ಹೋಗಬೇಕು, ವಾಸ್ತವದಲ್ಲಿ ನಾವೇ ಕೆಲಸವನ್ನು ಮಾಡಬೇಕು. ಆದರೆ ದೇವರ ಕೃಪೆ ಹಾಗು ಬಲದಿಂದ ಮಾತ್ರವೇ ನಾವು ಅದನ್ನು ಮಾಡಬಲ್ಲೆವು. ನಾವು ಮಾಡುವದೆಲ್ಲವೂ ದೇವರ ಕೃಪೆಯಿಂದಲೇ ಆಗುತ್ತದೆ (1 ಕೊರಿಂಥ 15:10). ಎಲ್ಲಾ ಸ್ತುತಿಯೂ ದೇವರಿಗೆ ಸಲ್ಲುತ್ತದೆ!

ಆದರೆ ಇದು ನೆನಪಿರಲಿಃ ನಾವು ದೇವರ ಕೃಪೆಯನ್ನು ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿದ್ದೇವೆ. ನಾವು ದೇವರ ಚಿತ್ತಕ್ಕೆ ವಿಧೇಯರಾಗಲು ನಿರಾಕರಿಸಬಹುದು, ನಾವು ಪಶ್ಚಾತಾಪ ಪಡದೆ ಪಾಪದಲ್ಲಿ ಮುಂದುವರೆಯಬಹುದು. ಅದು ನಮ್ಮನ್ನು ಅವಲಂಭಿಸಿರುತ್ತದೆ. ಅದು ನಮ್ಮ ಆಯ್ಕೆ. ಆದರೆ ನಾವು ದೇವರ ಕೃಪೆಯನ್ನು ಸ್ವೀಕರಿಸಲು ಮತ್ತು ಆತನಿಗೆ ವಿಧೇಯರಾಗಲು ತೀರ್ಮಾನಿಸುವದಾದರೆ ದೇವರು ನಮಗೆ ಸಹಾಯ ಮಾಡುವನೆಂದು ವಾಗ್ದಾನ ನೀಡಿರುತ್ತಾನೆ.

ನಾವು ನಮ್ಮ ಹೃದಯಗಳನ್ನು ಪರೀಕ್ಷಿಸಿಕೊಳ್ಳೋಣ. ನಮ್ಮ ಜೀವಿತದ ಯಾವದೇ ಕ್ಷೇತ್ರದಲ್ಲಿ ನಾವು ದೇವರಿಗೆ ವಿಧೇಯರಾಗಲು ನಿರಾಕರಿಸುತ್ತಿದ್ದೇವೋ? ಆ ಅವಿಧೇಯತೆಗಾಗಿ ನಾವು ಪಶ್ಚಾತಾಪಪಡೋಣ, ನಾವು ದೇವರ ಕೃಪೆಯನ್ನು ಉದಾಸೀನ ಮಾಡದಿರೋಣ!

**14** ದೇವರ ದೃಷ್ಟಿಯಲ್ಲಿ ನಮ್ಮ ಬಹಿರಂಗದ ಕ್ರಿಯೆಗಳಿಗಿಂತಲೂ ನಮ್ಮ ಒಳ ಮನಸ್ಸುಗಳು ಮತ್ತು ಅಂತರಾತ್ಮಗಳು ಬಹಳ ಪ್ರಾಮುಖ್ಯವಾಗಿರುತ್ತವೆ. (1 ಸಮುವೇಲ 16:7). ನಮ್ಮ ಮನಸ್ಸುಗಳು ಹಾಗು ಆತ್ಮಗಳಲ್ಲಿ ಯಾವದೇ ಮೌನ ವಾದ ಗುಣಗುಟ್ಟುವಿಕೆ ಅಥವಾ ವಿವಾದವೂ ಇರಬಾರದು. ಯಾಕೆಂದರೆ, ನಿಜವಾಗಿಯೂ ಅದು ದೇವರ ವಿರುದ್ಧವಾಗಿ ಗುಣಗುಟ್ಟಿ ವಿವಾದ ಮಾಡುವಾಗ ನಮ್ಮ ಜೀವಿತಗಾಗಿನ ಆತನ ಕೃಪೆ ಹಾಗು ಆತನ ಚಿತ್ತವನ್ನು ತಿರಸ್ಕರಿಸುವವರಾಗಿದ್ದೇವೆ.

**15** ನಮ್ಮ ಮನಸ್ಸುಗಳಲ್ಲಿ ಹಾಗು ಆತ್ಮಗಳಲ್ಲಿ ಗುಣಗುಟ್ಟುವಿಕೆ ಅಥವಾ ವಿವಾದ ಇಲ್ಲದಿರುವದಾದರೆ ನಾವು ನಿರ್ದೋಷಿಗಳು ಯಥಾರ್ಥ ಮನಸ್ಸುಳ್ಳವರೂ ಆಗಿರುವೆವು. ನಾವು ದೇವರ ಮಕ್ಕಳಾಗಿ ಪರಿಶುದ್ಧರೂ ದೋಷವಿಲ್ಲದವರೂ ಆಗಿಬೇಕೆಂದು ಆರಿಸಿಕೊಳ್ಳಲ್ಪಟ್ಟಿದ್ದೇವೆ (ಎಫೆಸ 1:4). ನಾವು ನಮ್ಮ ಮನಸ್ಸುಗಳಲ್ಲಿ ನಿರ್ದೋಷಿಗಳೂ ನಿರ್ಮಲರೂ ಆಗಿರುವದಾದರೆ ನಮ್ಮ ಹೊರಗಿನ ನಡವಳಿಕೆಯಲ್ಲಿಯೂ ನಿರ್ದೋಷಿಗಳೂ ನಿರ್ಮಲರೂ ಆಗಿರುತ್ತೇವೆ. ನಮ್ಮ ಹೊರಗಿನ ನಡವಳಿಕೆಯ ಪರಿಶುದ್ಧತೆಯು ನಮ್ಮ ಅಂತರ್ಯದ ಪರಿಶುದ್ಧತೆಯ ಆಧಾರವೂ ಫಲಿತವೂ ಆಗಿರುತ್ತದೆ.

ನಾವು ನಮ್ಮನ್ನು ಪರೀಕ್ಷಿಸಿಕೊಳ್ಳೋಣ. ನಿರ್ದೋಷಿಗಳೂ ನಿರ್ಮಲರೂ ಆಗಿದ್ದೇವೋ? ನಾವು ಲೋಕದೊಳಗೆ ಹೊಳೆಯುವ ತಾರೆಗಳಂತೆ ಇದ್ದೇವೋ? ಅದು ಫಿಲಿಪ್ಪಿಯವರಿಗಾಗಿ ಪೌಲನ ನಿರೀಕ್ಷೆ ಹಾಗು ಅಪೇಕ್ಷೆಯಾಗಿರುತ್ತದೆ. ಮತ್ತು ನಮಗಾಗಿ ಕ್ರಿಸ್ತನ ನಿರೀಕ್ಷೆ ಹಾಗು ಅಪೇಕ್ಷೆಯೂ ಇದೇ ಆಗಿದೆ (ಮತ್ತಾಯ 5:14,16, ಎಫೆಸ 5:8).

**16** ನಾವು ಇತರ ಜನರಿಗೆ ಹೊಳೆಯುವ ತಾರೆಗಳಂತೆ "ಕಾಣಿಸಬೇಕಾಗಿರುವದು ಮಾತ್ರವಲ್ಲ, ಆದರೆ ಇತರ ಜನರು ಕೇಳುವದಕ್ಕಾಗಿ ಜೀವದಾಯಕ ದೇವರ ವಾಕ್ಯವನ್ನು ತೋರಿಸಿಕೊಡುವವರೂ ಆಗಿರಬೇಕು. ವಾಕ್ಯವು ಕ್ರಿಸ್ತನ ವಾಕ್ಯವಾಗಿದ್ದು ಅದು ಜಾವವನ್ನು ನೀಡುತ್ತದೆ (ಯೋಹಾನ 6:63). ವಾಕ್ಯವು ಸುವಾರ್ತೆ ಸಹ ಆಗಿದ್ದು, ಅದು ನಂಬುವವರಿಗೆಲ್ಲರಿಗೂ ರಕ್ಷಣೆಯನ್ನುಂಟು ಮಾಡುವ ದೇವರ ಶಕ್ತಿಯಾಗಿದೆ (ರೋಮ 1:16). ಹೇಗಿದ್ದರೂ, ನಮ್ಮ ಜೀವಿತಗಳಲ್ಲಿ ಕ್ರಿಸ್ತನ ಬೆಳಕು ಗೋಚರವಾಗದಿರುವದಾದರೆ ಕ್ರಿಸ್ತನ ವಾಕ್ಯದ ವಿಷಯದಲ್ಲಿನ ನಮ್ಮ ಬೋಧನೆಯಿಂದ ಸ್ವಲ್ಪ ಪ್ರಯೋಜನವಷ್ಟೇ ಆಗುತ್ತದೆ. ಫಿಲಿಪ್ಪಿಯವರು "ತಾರೆಗಳಂತೆ ಹೊಳೆದು" ಜೀವದಾಯಕ ವಾಕ್ಯವನ್ನು ಪ್ರಚುರ ಪಡಿಸುವದಾದರೆ ಪೌಲನು ಅವರ ಮಧ್ಯದಲ್ಲಿ ಪ್ರಯಾಸ ಪಟ್ಟದ್ದು ವ್ಯರ್ಥವಾಗಿರುವದಿಲ್ಲ. ಆತನು ಕ್ರಿಸ್ತನ ದಿನದಲ್ಲಿ ಫಿಲಿಪ್ಪಿಯವರ ಕುರಿತು ಹೆಚ್ಚಳ ಪಡುವದಕ್ಕೆ ಶಕ್ತವಾಗುವನು (ಫಿಲಿಪ್ಪಿ 1:6, 1 ಥೆಸಲೋನಿಕ 2:19-20 ನೋಡಿರಿ).

**17-18** ಫಿಲಿಪ್ಪಿಯವರು ಈಗಾಗಲೇ ದೇವರಿಗೆ ತಮ್ಮ ಯಜ್ಞವನ್ನು ಹಾಗು ಸೇವೆಯನ್ನು ಅರ್ಪಿಸುತ್ತಿದ್ದರು (ವಚನ 17). ಈಗ ಪೌಲನು ಅವರ ಯಜ್ಞದ ಜೊತೆಯಲ್ಲಿ ತನ್ನ ಸ್ವ ಪ್ರಾಣವನ್ನೂ ಯಜ್ಞವಾಗಿ ಅರ್ಪಿಸಬೇಕಾಬಹುದಿತ್ತು.

ಆದರೆ ಆತನು ಅದನ್ನು ಮಾಡುವದಕ್ಕೆ ಸಂತೋಷವು ಳ್ಳವನಾಗಿದ್ದಾನೆ. ಆತನು ಮರಣಶಿಕ್ಷೆಯನ್ನು ಹೊಂದಬೇಕಾದ ಸಂದರ್ಭವಿತ್ತು. ಆದರೆ ಆತನು ಮರಣಶಿಕ್ಷೆಗೊಳಗಾದರೂ ತನ್ನ ಮರಮದ ಮೂಲಕ ಯೇಸುವಿಗೆ ಮಹಿಮೆಯಾಗುವದೆಂದು ಪೌಲನು ಸಂತೋಷ ಹಾಗು ಸಂಭ್ರಮ ಪಡಬಲ್ಲನು (ಫಿಲಿಪ್ಪಿ 1:20). ಪೌಲನು ಮರಣ ಶಿಕ್ಷೆಗೆ ಒಳಗಾದರೂ ಸರಿಯೇ ಆಗದಿದ್ದರೂ ಸರಿಯೇ, ಫಿಲಿಪ್ಪಿಯವರು ಆತನೊಂದಿಗೆ ಸಂತೋಷಿಸಲಿ!.

ತಿಮೊಥೆ ಮತ್ತು ಎಪಪ್ರೋದೀತನು (2:19-30)

**19** ತಿಮೊಥೆಯನು ಫಿಲಿಪ್ಪಿಯಲ್ಲಿ ಸಭೆಯನ್ನು ಸ್ಥಾಪಿಸಲು ಪೌಲನಿಗೆ ಸಹಾಯ ಮಾಡಿದ್ದನು (ಅ.ಕೃ. 16:13).

ಪೌಲನು ಈ ಪತ್ರಿಕೆಯನ್ನು ಬರೆದಾಗ ತಿಮೊಥೆಯನು ರೋಮಾಪು ರದಲ್ಲಿ ಆತನೊಂದಿಗಿದ್ದನು (ಫಿಲಿಪ್ಪಿ 1:1). ಪೌಲನು ತಿಮೊಥೆಯನನ್ನು ಫಿಲಿಪ್ಪಿಗೆ ಕಳುಹಿಸಬೇಕೆಂದು ಕರ್ತನಲ್ಲಿ ನಿರೀಕ್ಷಿಸುತ್ತಾನೆ. ಪೌಲನ ಎಲ್ಲಾ ನಿರೀಕ್ಷೆಗಳು ಕರ್ತನಲ್ಲಿ ಇರುತ್ತವೆ (ವಚನ 24). ಆದರೆ ಕರ್ತನ ಚಿತ್ತ ಏನೇಯಾದರೂ ಪೌಲನು ಸ್ವೀಕರಿಸುವದಕ್ಕೆ ಸಿದ್ಧನಾಗಿದ್ದಾನೆ (ಯಾಕೋಬ 4:13-16 ನೋಡಿರಿ).

**20-22** ತಿಮೊಥೆಯನು ಪೌಲನಿಗೆ ಅಂಥ ಮಹತ್ವವು ಳ್ಳ ಸಹಪಾಠಿಯಾಗಿದ್ದಕ್ಕೆ ಕಾರಣವೇನು? ಕಾರಣವೇನೆಂದರೆ ತಿಮೊಥೆಯನು ಯಾವಾಗಲೂ ಇತರರ ಆಸಕ್ತಿಗಳಿಗಾಗಿಯೂ ಇತರರ ಹಿತಕ್ಕಾಗಿಯೂ ತವಕಪಡುತ್ತಿದ್ದನು. ತಿಮೊಥೆಯನು ಫಿಲಿಪ್ಪಿಯವರಿಗಾಗಿ ಬಹಳಷ್ಟು ಚಿಂತಿಸುತ್ತಿದ್ದನು. ಮಗನು ತಂದೆಗೆ ಹೋಗೋ ಹಾಗೆಯೇ ತಿಮೊಥೆಯನು ಪೌಲನೊಂದಿಗೆ ಸೇವೆ ಮಾಡಿದ್ದನು (ವಚನ 22). ಪೌಲನು ಇಲ್ಲಿ ತಿಮೊಥೆಯನು ತನ್ನ "ಸೇವೆ ಮಾಡಿದ" ನೆಂಬದಾಗಿ ಹೇಳದೆ "ತನ್ನ ಜೊತೆಯಲ್ಲಿ ಸೇವೆ ಮಾಡಿದನು" ಎಂದು ಹೇಳುವದನ್ನು ಗಮನಿಸಿರಿ. ತಿಮೊಥೆಯನು ಪೌಲನ ಸೇವೆಯನ್ನು ಮಾಡಲಿಲ್ಲ, ಬದಲಾಗಿ, ಆತನು ಪೌಲನ ಜೊತೆಯಲ್ಲಿ ಕ್ರಿಸ್ತನ ಸೇವೆಯನ್ನು ಮಾಡಿದನು. ಇತರ ಎಲ್ಲರೂ ತಮ್ಮ ಸ್ವಕಾರ್ಯಗಳ ಮೇಲೆ ಮನಸ್ಸಿಡುತ್ತಾರೆ. ಅಂದರೆ, ಅವರು ಎಲ್ಲದರಲ್ಲಿಯೂ ತಮ್ಮ ಸ್ವಲಾಭವನ್ನು ಮೊದಲು ನೋಡಿಕೊಳ್ಳುತ್ತಾರೆ. ಎಂದು ಪೌಲನು ಬರೆಯುತ್ತಾನೆ. ತಾಮೊಥೆಯನು ಆ ರೀತಿಯಾಗಿ ಇರಲಿಲ್ಲ. ತಿಮೊಥೆಯನು ಎಲ್ಲಕ್ಕಿಂತಲೂ ಮೊದಲು ಕ್ರಿಸ್ತನ ಕಾರ್ಯಗಳ ಮೇಲೆ ಮನಸ್ಸಿಟ್ಟಿದ್ದನು. ನಮ್ಮ ಸಭೆಯಲ್ಲಿ ತಿಮೊಥೆಯನಂತೆ ಎಷ್ಟು ಜನರಿದ್ದಾರೆ? ನಾವು ಯಾರ ಆಸಕ್ತಿಗಳ ಮೇಲೆ ಮೊದಲು ಮನಸ್ಸಿಡುತ್ತೇವೆ–ನಮ್ಮದೋ ಅಥವಾ ಕ್ರಿಸ್ತನವು ಗಳೋ?.

**23-24** ತಿಮೊಥೆಯನು ಪೌಲನ ಸಂಗತಿಯು ಹೇಗಾಗುವದೋ ಎಂಬುದರ ಬಗ್ಗೆ – ಅಂದರೆ, ಆತನು ಬಿಡುಗಡೆಗೊಂಡನೋ ಅಥವಾ ಮರಣಶಿಕ್ಷೆಗೊಳಗಾದನೋ ಎಂಬುದರ ಬಗ್ಗೆ–ಫಿಲಿಪ್ಪಿಯವರಿಗೆ ಸುದ್ದಿ ತಿಳಿಸಲು ಶಕ್ತನಾಗುವನು. ಪೌಲನು ತಾನು ಬಿಡುಗಡೆಗೊಳಿಸಲ್ಪಟ್ಟು ಫಿಲಿಪ್ಪಿಯವರ ಬಳಿಗೆ ಬರುವದಕ್ಕೆ ಶಕ್ತನಾಗುವನೆಂಬದಾಗಿ ಕರ್ತನಲ್ಲಿ ದೃಡವಾಗಿ ನಂಬಿದ್ದನು (ಫಿಲಿಪ್ಪಿ 1:25).

**25** ಎಪಫ್ರೋಧೀತನು ಫಿಲಿಪ್ಪಿಯದವನಾಗಿದ್ದು ಪೌಲನಿಗೆ ಸಹಾಯ ಮಾಡುವದಕ್ಕೂ ಸಭೆಯಿಂದ ಪೌಲನಿಗೆ ಕಾಣಿಕೆಯೊಂದನ್ನು ನೀಡುವದಕ್ಕೂ ಫಿಲಿಪ್ಪಿಯದ ಸಭೆಯಿಂದ ರೋಮಾಪು ರಕ್ಕೆ ಕಳುಹಿಸಲ್ಪಟ್ಟಿದ್ದನು (ಫಿಲಿಪ್ಪಿ 4:18). ಎಪಫ್ರೋಧೀತನು ಸ್ವಲ್ಪ ಕಾಲದವರೆಗೆ ರೋಮಾಪು ರದಲ್ಲಿ ಪೌಲನೊಂದಿಗೆ ಉಳಿದುಕೊಂಡಿದ್ದನು, ಆದ್ದರಿಂದಲೇ ಪೌಲನು ಅವನನ್ನು ನನ್ನ ಸಹೋದರನೂ ಜೊತೆ ಕೆಲಸದವನೂ ಸಹ ಭಟನೂ ಎಂದು ಕರೆಯುತ್ತಾನೆ.

**26-28** ಎಪಫ್ರೋಧೀತನು ರೋಮಾಪು ರದಲ್ಲಿರುವ ವೇಳೆಯಲ್ಲಿ ಅಸ್ವಸ್ಥನಾದನು. ಫಿಲಿಪ್ಪಿಯವರು ಇದರ ಬಗ್ಗೆ ಕೇಳಿದಾಗ ಬಹಳವಾಗಿ ವ್ಯಸನಪಟ್ಟನು. ಎಪಫ್ರೋಧೀತನು ಚೇತರಿಸಿಕೊಂಡ ಬಳಿಕ ತಾನು ಫಿಲಿಪ್ಪಿಗೆ ಹಿಂದಿರುಗಿ ತನ್ನ ಪರವಾಗಿ ಫಿಲಿಪ್ಪಿಯವರಿಗಿದ್ದ ಚಿಂತೆಯನ್ನು ನಿವಾರಿಸುವದಕ್ಕೆ ಬಯಸಿದ್ದನು. ಫಿಲಿಪ್ಪಿಯವರ ನಿಮಿತ್ತವಾಗಿ ಪೌಲನು ತನ್ನ ಸಹಾಯಕನಾದ ಎಪಫ್ರೋಧೀತನನ್ನು ಕಳುಹಿಸಿಕೊಡುವದಕ್ಕೆ ಸಿದ್ಧನಾಗಿದ್ದನು.

**29-30** ಕ್ರಿಸ್ತನಿಗೋಸ್ಕರ ತಮ್ಮ ಜೀವಿತಗಳನ್ನು ಅಪಾಯಕ್ಕೊಳಪಡಿಸುವವರೆಲ್ಲರೂ ಇತರ ಕ್ರೈಸ್ತರ ಮರ್ಯಾದೆಗೆ ಮಾನ್ಯರಾಗಿದ್ದಾರೆ. ಪ್ರತಿಯೊಬ್ಬ ಕ್ರಿಸ್ತನ ಸೇವಕನಿಗೆ ಮಾನವನ್ನು ಸಲ್ಲಿಸುವದು ಯಾವಾಗಲೂ ಪೌಲನ ಪದ್ಧತಿಯಾಗಿತ್ತು. ಪ್ರಾಮಾಣಿಕವಾಗಿ ಕ್ರಿಸ್ತನ ಸೇವೆ ಮಾಡುವವರೆಲ್ಲರ ವಿಷಯದಲ್ಲಿ ಪೌಲನು ಯಾವಾಗಲೂ ಉತ್ತಮವಾಗಿ ಮಾತಾಡುತ್ತಾನೆ.

ನೀವೇ (ಫಿಲಿಪ್ಪಿಯವರು) ನನಗೆ ಮಾಡಬೇಕೆಂದಿರುವ ಉಪಚಾರದಲ್ಲಿ ಕಡಿಮೆಯಾದದ್ದನ್ನು ಪೂರ್ತಿಮಾಡುವದಕ್ಕಾಗಿ ಎಪಫ್ರೋಧೀತನು ತನ್ನ ಜೀವವನ್ನು ಅಪಾಯಕ್ಕೆ ಗುರಿಮಾಡಿಕೊಂಡನೆಂದು ಪೌಲನು ಬರೆಯುತ್ತಾನೆ (ವಚನ 30). ಪೌಲನ ತಾತ್ಪರ್ಯವೇನೆಂದರೆ,ಫಿಲಿಪ್ಪಿಯವರೆಲ್ಲರೂ ಪೌಲನಿಗೆ ಸಹಾಯ ಮಾಡುವದಕ್ಕೆ ವಯಕ್ತಿಕವಾಗಿ ರೋಮಾಪು ರಕ್ಕೆ ಬರಲಾಗದ್ದರಿಂದ ಅವರು ಸ್ವತಃ ತಾವೇ ಬಂದು ಮಾಡಲಾಗದ್ದನ್ನು ಮಾಡುವದಕ್ಕೆ ತಮ್ಮ ಪ್ರತಿನಿಧಿಯನ್ನು ಕಳುಹಿಸಿದ್ದರು ಎಂಬದೇ.

---

## ಅಧ್ಯಾಯ - 3

### ಶರೀರ ಸಂಬಂಧವಾದವು ಗಳಲ್ಲಿ ಭರವಸವಿಲ್ಲ (3:1-11).

1 ಕರ್ತನಲ್ಲಿ ಸಂತೋಷಪಡಿರಿ! ನಾವು ಸಂತೋಷಪಡುವದು ಯಾಕೆ ಅಷ್ಟೊಂದು ಪ್ರಾಮುಖ್ಯವಾದದ್ದು? ಅದಕ್ಕೆ ಮೂರು ಕಾರಣಗಳು ಇವೆ. ಮೊದಲನೆಯದಾಗಿ, ಸಂತೋಷವು ಪವಿತ್ರಾತ್ಮನ ಫಲಗಳಲ್ಲಿ ಒಂದಾಗಿದೆ (ಗಲಾತ್ಯ 5:22). ಆದದರಿಂದ, ನಾವು ಸಂತೋಷಪಡುವದು ಪವಿತ್ರಾತ್ಮನು ನಮ್ಮಲ್ಲಿ ವಾಸಿಸುತ್ತಿದ್ದಾನೆಂಬದಕ್ಕೆ ಆಧಾರವಾಗಿರುತ್ತದೆ. ಎರಡನೆಯದಾಗಿ, ನಾವು ಯಾವಾಗಲೂ ಸಂತೋಷ ಪಡುವದಾದರೆ ಸಮಸ್ಯೆಗಳು ಉದ್ಭವವಾಗುವಾಗ ದೇವರ ವಿರುದ್ಧ ದೂರು ಹೇಳುವ ಹಾಗು ಗುಣಗುಟ್ಟುವ ಪಾಪದಿಂದ ನಾವು ದೂರವಿರಬಹುದು. ಮೂರನೆಯದಾಗಿ, ನಮ್ಮ ಸಂತೋಷದ ಕಾರಣದಿಂದ ಇತರರು ಸಹ ಯೇಸುಕ್ರಿಸ್ತನನ್ನು ತಿಳಿದುಕೊಳ್ಳುವದಕ್ಕೆ ಬಯಸುವರು. ನಮ್ಮ ಮುಖಗಳು ಯಾವಾಗಲೂ ಕಪ್ಪಾಗಿಯೂ ದುಃಖದಿಂದಲೂ ತುಂಬಿರುವದಾದರೆ ಯಾವನು ಕ್ರೈಸ್ತನಾಗಲಿಚ್ಚಿಸುತ್ತಾನೆ?

ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಕ್ರಿಸ್ತನ ಸಭೆಯು ಕ್ಷಿಪ್ರವಾಗಿ ಬೆಳೆಯುತ್ತಿದೆ. ಇದಕ್ಕೆ ಮುಖ್ಯವಾದ ಕಾರಣಗಳಲ್ಲಿ ಒಂದು ಕಾರಣವೇನೆಂದರೆ, ಆ ರಾಷ್ಟ್ರಗಳಲ್ಲಿನ ಕ್ರೈಸ್ತರು–ಅವರು ಹಿಂಸೆಗೊಳಗಾಗುತ್ತಿದ್ದಾಗ್ಯು!–ಸಂತೋಷದಿಂದಿರುತ್ತಾರೆ.

ನಮ್ಮ ಸಂತೋಷವು ಯಾವು ದರಲ್ಲಿದೆ? ಅದು ಕರ್ತನಲ್ಲಿರುತ್ತದೆ.ಅದು ಆತನ ಆಶೀರ್ವಾದಗಳಲ್ಲಿಯೂ, ಆತನ ಕೃಪೆಯಲ್ಲಿಯೂ, ಆತನ ಅನ್ಯೋನ್ಯತೆಯಲ್ಲಿಯೂ ಇರುತ್ತದೆ. ಆದ್ದರಿಂದಲೇ ಕಷ್ಟಗಳು ಹಾಗು ಹಿಂಸೆಗಳು ನಮ್ಮ ಸಂತೋಷವನ್ನು ತೆಗೆದುಬಿಡಲು ಸಾಧ್ಯವಿಲ್ಲ. ನಮ್ಮ ಸಂತೋಷವು ಈ ಲೋಕದಲ್ಲಿ ಅಲ್ಲ, ಅದು ಕ್ರಿಸ್ತನಲ್ಲಿಯೇ.

2 ಈ ವಚನದಲ್ಲಿ ಪೌಲನು ನಾಯಿಗಳು.....ದುರ್ಮನಿಸ್ಸಿನಿಂದ ಕೆಲಸ ಮಾಡುವವರು ....ಅಂಗಚ್ಛೇಧನ ಮಾಡುವವರು ........ಎಂದು ಪ್ರಸ್ತಾಪಿಸುತ್ತಾನೆ. ಇವು ಗಳು ಕೇವಲ ಒಂದೇ ಗುಂಪಿನ ಜನರ ಮೂರು ಬೇರೆ ಬೇರೆ ಹೆಸರುಗಳೇ ಆಗಿವೆಃ ಯಾವವೆಂದರೆ, ಸುಳ್ಳುಬೋಧಕರು, ಹಾಗು ಸುಳ್ಳು ಪ್ರವಾದಿಗಳು. ಪೌಲನ ಕಾಲದಲ್ಲಿ ಸಭೆಯೊಳಗಿದ್ದ ಬಹುಪಾಲು ಸುಳ್ಳುಬೋದಕರು ಯೆಹೂದ್ಯರಾಗಿದ್ದರು. ಅವರು ನೂತನ ವಿಶ್ವಾಸಿಗಳಿಗೆ ರಕ್ಷಣೆಯನ್ನು ಹೊಂದಿಕೊಳ್ಳಬೇಕಾದರೆ ಅವರು ಸುನ್ನತಿಯನ್ನು ಮಾಡಿಸಿಕೊಳ್ಳಬೇಕೆಂದು ಬೋಧಿಸುವದಕ್ಕೆ ಪ್ರಯತ್ನಿಸುತ್ತಿದ್ದರು. ಆದರೆ ಪೌಲನು ಸುನ್ನತಿಮಾಡಿಸಿ–ಕೊಂಡಿರುವದರಲ್ಲಿ ಯಾವ ಆತ್ಮೀಕ ಪ್ರಯೋಜನವೂ ಇರುವದಿಲ್ಲ ಎಂದು ಸ್ಪಷ್ಟವಾಗಿ ಬೋಧಿಸಿದನು (1ಕೊರಿಂಥ 7:19, ಗಲಾತ್ಯ 5:2,6).

ನಿಜವಾದ ಸುನ್ನತಿಯವರು ಯಾರೆಂದರೆ .....ನಾವೇ. ಅಂದರೆ, ಕ್ರಿಸ್ತನಲ್ಲಿ ವಿಶ್ವಾಸಿಗಳಾದ ನಾವು ನಿಜವಾದ ಸುನ್ನತಿಯವರು, ನಿಜವಾದ ಇಸ್ರಾಯೇಲ್ಯರು ಎಂದು ಪೌಲನು ಹೇಳುತ್ತಾನೆ. ಯೆಹೂದ್ಯರು ತಾವು ಪ್ರಥಮ ಯೆಹೂದ್ಯನಾದ ಅಬ್ರಹಾಮನಿಗೆ ಶರೀರ ಸಂಬಂಧವಾಗಿ ಹುಟ್ಟಿದ ಸಂತತಿಯವರೂ ಸುನ್ನತಿ ಮಾಡಿಸಿಕೊಂಡವರೂ ಆಗಿರುವದರಿಂದ ಅವರು ಮಾತ್ರವೇ "ನಿಜವಾದ ಯೆಹೂದ್ಯರು" "ಸುನ್ನತಿಯವರು" ಎಂದು ನಂಬಿದ್ದರು. ಆದರೆ ಪೌಲನು ಇದನ್ನು ನಿರಾಕರಿಸಿದನು. ಬದಲಾಗಿ, ಆತನು ಹೃದಯಗಳಲ್ಲಿ "ಸುನ್ನತಿಮಾಡಿಸಿಕೊಂಡವರೇ" ಅಂದರೆ, ಅಂತರ್ಯದಲ್ಲಿ, ಆತ್ಮೀಕವಾಗಿ ಸುನ್ನತಿ ಹೊಂದಿರುವವರೇ "ನಿಜವಾದ ಸುನ್ನತಿಯವರು" ಎಂಬದಾಗಿ ಬೋಧಿಸಿದನು. "ನಿಜವಾದ ಸುನ್ನತಿಯವರು? ಯಾಕೆಂದರೆ, ದೇವರಾತ್ಮನಿಂದ ಪ್ರೇರಿತರಾಗಿ ಆರಾಧಿಸುವವರೂ ಕ್ರಿಸ್ತಯೇಸುವಿನಲ್ಲಿ ಹರ್ಷಗೊಳ್ಳು–ವವರು ಇಂಥವರೇ. ಶರೀರ ಸಂಬಂಧವಾದವು ಗಳಲ್ಲಿ ಭರವಸವಿಲ್ಲದವರು – ಅಂದರೆ, ಸ್ವತಃ ಸುನ್ನತಿಯ ಕ್ರಿಯೆಯಲ್ಲಿ (ಶಿಶ್ನದ ತುದಿಯಲ್ಲಿನ "ಮಾಂಸ" ವನ್ನು ಕತ್ತರಿಸಿ ಹಾಕುವ ಕ್ರಿಯೆ) ಯಾವ ಭರವಸವಿಡದವರು –"ನಿಜವಾದ ಸುನ್ನತಿಯವರು" ಅವರು ಯೇಸು ಕ್ರಿಸ್ತನಲ್ಲಿಯೇ ತಮ್ಮ ಭರವಸವಿಡುವವರಾಗಿದ್ದಾರೆ (ರೋಮ 2:25-29, ಕೊಲೊಸ್ಸೆ 2:11 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

4 ಯೋಹೂದ್ಯ ಸುಳ್ಳುಬೋದಕರು ತಮ್ಮ ಭರವಸವನ್ನು ಶರೀರ ಸಂಬಂಧವಾದವು ಗಳಲ್ಲಿ ಇಡುತ್ತಾರೆ ಅಂದರೆ, ಅವರು ತಾವು ಅಬ್ರಹಾಮನ ಸ್ವಾಭಾವಿಕ ಸಂತತಿಯವರೂ ಸುನ್ನತಿ ಮಾಡಿಸಿಕೊಳ್ಳಲ್ಪಟ್ಟವರು ಎಂಬ ಅಂಶದಲ್ಲಿ ಭರವಸವಿಡುತ್ತಾರೆ. "ನಾವು ನಿಜವಾದ ಯೆಹೂದ್ಯರು" ಎಂದು ಅವರು ಹೆಚ್ಚಳ ಪಡುತ್ತಿದ್ದರು.

ಆದರೆ ಶರೀರ ಸಂಬಂಧವಾಗಿ ಪೌಲನು ಸಹ ಒಬ್ಬ ನಿಜವಾದ ಯೆಹೂದ್ಯನಾಗಿದ್ದನು. ಈ ಯೆಹೂದ್ಯ ಸುಳ್ಳುಬೋದಕರು ಶರೀರ ಸಂಬಂಧವಾದವು ಗಳಲ್ಲಿ ಭರವಸವಿಡಬಹುದೆಂದು ಯೋಚಿಸಿದ್ದರೆ ಪೌಲನು ಅವರಿಗಿಂತಲೂ ಹೆಚ್ಚಾಗಿ ಶರೀರ ಸಂಬಂಧವಾದವು ಗಳಲ್ಲಿ ಭರವಸವಿಡಬಹುದಾಗಿತ್ತು.

5 ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರವಾಗಿ ಪೌಲನಿಗೆ ಹುಟ್ಟಿದ ಎಂಟನೆಯ ದಿನದಲ್ಲಿ ಸುನ್ನತಿಯಾಯಿತು (ಆದಿಕಾಂಡ 17:12). ಪೌಲನು ಇಸ್ರಾಯೇಲ್ (ಯೆಹೂದ್ಯ) ಜನಾಂಗಕ್ಕೆ ಸೇರಿದವನು. ಅಂದರೆ, ಆತನು ಶರೀರಕ್ಕನುಸಾರವಾಗಿ ಒಬ್ಬ ಯೆಹೂದ್ಯನಾಗಿದ್ದನು. ಪೌಲನು ಯಾಕೋಬನ ಕಿರಿಯ ಮಗನಾದ ಬೆನ್ಯಾಮೀನನ ಕುಲದವನಾಗಿದ್ದನು. ಯಾಕೋಬನು ಅಬ್ರಹಾಮನ ಮೊಮ್ಮಗನಾಗಿದ್ದು ಆತನಿಗೆ ಹನ್ನೆರಡು ಮಂದಿ ಗಂಡು ಮಕ್ಕಳು ಇದ್ದರು. ಅವರಿಂದಲೇ ಇಸ್ರಾಯೇಲಿನ ಹನ್ನೆರಡು ಕುಲಗಳು ಹುಟ್ಟಿರುತ್ತವೆ. ಪೌಲನು ಇಬ್ರಿಯರಿಂದ[9] ಹುಟ್ಟಿದ ಇಬ್ರಿಯನಾಗಿದ್ದನು. ಅಂದರೆ, ಆತನು ನಿಜವಾದ ಇಬ್ರಿಯ (ಯೆಹೂದ್ಯ) ನಾಗಿದ್ದನು. ಆತನು ಇಬ್ರಿಯ ಭಾಷೆಯನ್ನಾಡಿದನು. ಹಾಗು ಇಬ್ರಿಯ ಪದ್ಧತಿಗಳನ್ನು ಅನುಸರಿಸಿದನು (2 ಕೊರಿಂಥ 11:22). ಅದು ಮಾತ್ರವಲ್ಲ ಪೌಲನು ಒಬ್ಬ ಫರಿಸಾಯನು ಸಹ ಆಗಿದ್ದನು, ಫರಿಸಾಯರು ಯೆಹೂದ್ಯರಲ್ಲಿ ಅತಿ ಕಟ್ಟುನಿಟ್ಟಿನ ಪಂಥವಾಗಿದ್ದರು.

6 ಪೌಲನು ಒಬ್ಬ ಯೆಹೂದ್ಯನಾಗಿ ಎಷ್ಟೊಂದು ಕಟ್ಟುನಿಟ್ಟು ಹಾಗು ವೈರಾಗ್ಯವುಳ್ಳವನಾಗಿದ್ದನೆಂದರೆ ಆತನು ಸಭೆಯನ್ನೇ,ಅಂದರೆ ಕ್ರಿಸ್ತನ ವಿಶ್ವಾಸಿಗಳನ್ನೇ ಹಿಂಸಿಸುವದಕ್ಕೆ ಪ್ರಾರಂಭಿಸಿದ್ದನು (ಅ.ಕೃ.9:1-2, 22:3-4, 26: 9-11, ಗಲಾತ್ಯ 1:13-14 ನೋಡಿರಿ). ಧರ್ಮಶಾಸ್ತ್ರದಲ್ಲಿ ಹೇಳಿರುವ ನೀತಿಯನ್ನು ನೋಡಿದರೆ ತಾನು ನಿರ್ದೋಷಿ ಅಂದರೆ, ತಾನು ಬಹಿರಂಗವಾಗಿ ಯೆಹೂದ್ಯ ಧರ್ಮಶಾಸ್ತ್ರದ ಎಲ್ಲಾ ನೇಮ ನಿಷ್ಟೆಗಳನ್ನು ಕೈಕೊಂಡು ನಡೆದೆನೆಂದು ಪೌಲನು ಹೇಳುತ್ತಾನೆ.

7 ಆದರೆ ನನಗೆ ಲಾಭವಾಗಿದ್ದಂಥವುಗಳನ್ನು–ಅಂದರೆ, ಪೌಲನು 5-6 ವಚನಗಳಲ್ಲಿ ಬರೆದಿರುವ ಸಂಗತಿಗಳನ್ನೆಲ್ಲಾ– ಈಗ ಪೌಲನು ನಿಷ್ಪ್ರಯೋಜಕರ ಎಂದು ಪರಿಗಣಿಸುತ್ತಾರೆ. ವಾಸ್ತವದಲ್ಲಿ, ಪೌಲನು ಈಗ ಅವುಗಳನ್ನು ನಷ್ಟವೆಂದೆಣಿಸುತ್ತಾನೆ., ಹಾನಿಕಾರಕ, ನಿಷ್ಪ್ರಯೋಜನಕಾರಿ ಎಂದು ಎಣಿಸುತ್ತಾನೆ. ಈ ಸಂಗತಿಗಳು (ಒಬ್ಬ ಯೆಹೂದ್ಯ, ಇಬ್ರಿಯ, ಫರಿಸಾಯ ಮುಂತಾದವುಗಳು). ನಿಷ್ಪ್ರಯೋಜನಕರವಾಗಿದ್ದವು, ಯಾಕೆಂದರೆ ಅವುಗಳು ಪೌಲನನ್ನು ಆತನ ಭರವಸವನ್ನು ಕ್ರಿಸ್ತನಲ್ಲಿಡದಂತೆ ದೂರಮಾಡಿದ್ದವು. ಈಗ ಕ್ರಿಸ್ತನ ನಿಮಿತ್ಯ–ಅಥವಾ, ಕ್ರಿಸ್ತನ ಕಾರಣದಿಂದ –ಪೌಲನು ಈ ಎಲ್ಲಾ ಯೆಹೂದ್ಯ ಹಳೆಯ ಸಂಗತಿಗಳನ್ನು ಬಿಟ್ಟು ಬಿಟ್ಟಿರುತ್ತಾರೆ.

8 ಯೇಸು ಕ್ರಿಸ್ತನನ್ನು ವಯಕ್ತಿಕವಾಗಿ ಅರಿತುಕೊಳ್ಳುವದಕ್ಕಿಂತಲೂ ಹೆಚ್ಚು ಅಮೂಲ್ಯವಾದ ಸಂಗತಿಯು ಈ ಲೋಕದಲ್ಲಿ ಇನ್ನಾವದೂ ಇರುವದಿಲ್ಲ. ಇನ್ನಾವದೂ ಒಬ್ಬ ವ್ಯಕ್ತಿಗೆ ರಕ್ಷಣೆಯನ್ನು ನಿತ್ಯ ಜೀವವನ್ನು ಕೊಡಲಾರದು. ಕ್ರಿಸ್ತನನ್ನು ಅರಿತುಕೊಂಡು ಆತನನ್ನು ನಮ್ಮ ವಯಕ್ತಿಕ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವದರಿಂದ ಮಾತ್ರವೇ ನಾವು ರಕ್ಷಣೆಯನ್ನು ಸಂಪಾದಿಸಿಕೊಳ್ಳಬಲ್ಲೆವು.

ಒಂದು ದೃಷ್ಟಾಂತವಾಗಿ, ನಾವು ದೋಣಿಯೊಂದನ್ನು ಊಹಿಸಿಕೊಳ್ಳೋಣ. ದೋಣಿಯು ಬೆಲೆಯುಳ್ಳ ದಾಸ್ತಾನುಗಳಿಂದ ತುಂಬಿಸಲ್ಪಟ್ಟಿದೆದೋಣಿಯು ಸಮುದ್ರವನ್ನು ದಾಟುತ್ತಿರುವಾಗ ಒಂದು ದೊಡ್ಡ ಬಿರುಗಾಳಿಯು ಬರುತ್ತದೆ. ದೋಣಿಯು ಮುಳುಗಲಾರಂಭಿಸಿತು. ದೋಣಿಯಲ್ಲಿರುವ ಪ್ರಯಾಣಿಕರು ತಮ್ಮನ್ನು ರಕ್ಷಿಸಿಕೊಳ್ಳಲು ಏನು ಮಾಡಬೇಕು? ಅವರು ಆ ಎಲ್ಲಾ ಅಮೂಲ್ಯವಾದ ಸರಕುಗಳನ್ನು ಸಮುದ್ರದಲ್ಲಿ ಎಸೆಯಬೇಕು ನಿಜ, ಸರಕುಗಳು ಅಮೂಲ್ಯವಾಗಿವೆ, ಆದರೆ ಸರಕುಗಳ ಭಾರದಿಂದ ದೋಣಿಯು ಮುಳುಗುತ್ತಿದೆ ಹಾಗು ಜನರೂ ಮುಳುಗಿ ಹೋಗಲಿದ್ದರು.

ಅದೆ ವಿಧದಲ್ಲಿ, ಪೌಲನು ತನ್ನ ಎಲ್ಲಾ ಹಳೆಯ ಧಾರ್ಮಿಕ "ಸರಕುಗಳನ್ನು" – ಉದಾಹರಣೆಗೆ, ಯೆಹೂದ್ಯ ಹಿನ್ನೆಲೆ, ಆತನ ಸುನ್ನತಿ, ಆತನ ಧರ್ಮಶಾಸ್ತ್ರಕ್ಕನುಸಾರವಾದ ನೀತಿ (ವಚನ 6). –"ಸಮುದ್ರದಲ್ಲಿ ಎಸೆಯ" ಬೇಕಾಗಿತ್ತು. ಪೌಲನು ತಾನು ಕ್ರಿಸ್ತನನ್ನು ಸಂಪಾದಿಸಿಕೊಳ್ಳಬೇಕೆಂದು – ಆತನು ರಕ್ಷಣೆಹೊಂದುವಂತಾಗಬೇಕೆಂದು – ಈ ಎಲ್ಲಾ ಸಂಗತಿಗಳನ್ನು ಕಳೆದುಕೊಂಡಿರುತ್ತಾನೆ.

ಈ ವಿಷಯದಲ್ಲಿ, ಯೇಸು ಎರಡು ಸಾಮ್ಯಗಳನ್ನು ಹೇಳಿದನು. ಆ ಸಾಮ್ಯಗಳಲ್ಲಿದ್ದ ವ್ಯಕ್ತಿಗಳು ಇನ್ನೂ ಹೆಚ್ಚು ಅಮೂಲ್ಯವಾದದ್ದೊಂದನ್ನು ಕೊಂಡುಕೊಳ್ಳುವದಕ್ಕೆ ತಮ್ಮಲ್ಲಿದ್ದದ್ದನ್ನೆಲ್ಲಾ... ಮಾರಿದರು (ಮತ್ತಾಯ 13:44-45). ಯೇಸು ಕ್ರಿಸ್ತನೇ ಆ "ಅಮೂಲ್ಯವಾದದ್ದೊಂದಾಗಿದ್ದಾನೆ" ಈ ಲೋಕದಲ್ಲಿರುವದೆಲ್ಲವನ್ನೂ ಒಟ್ಟುಗೂಡಿಸಿದಾಗ್ಯು ಅದೆಲ್ಲದಕ್ಕಿಂತ ಆತನು ಹೆಚ್ಚು ಅಮೂಲ್ಯವಾಗಿದ್ದಾನೆ.

9 ಪೌಲನು ನೇಮ ನಿಷ್ಟೆಗಳ ಫಲವಾಗಿರುವ – ಅಂದರೆ, ಧರ್ಮಶಾಸ್ತ್ರಕ್ಕೆ ವಿಧೇಯವಾಗುವದರಿಂದ ಬರುವ – ನೀತಿಯನ್ನು ಆಶ್ರಯಿಸಲು ಬಯಸುವದಿಲ್ಲ. ಅಂಥ ನೀತಿಯು ನಿಜವಾದ ನೀತಿಯಾಗಿರುವದಿಲ್ಲ (ಗಲಾತ್ಯ 2:15–16 ನೋಡಿರಿ).

ಬದಲಾಗಿ,ಪೌಲನು ಕ್ರಿಸ್ತನ ನೀತಿಯನ್ನು–ಅಂದರೆ, ಕ್ರಿಸ್ತನ ಮೇಲಣ ನಂಬಿಕೆ ಆಧಾರದಿಂದ ದೇವರು ಕೊಡುವಂಥ ನೀತಿಯನ್ನು – ಹೊಂದುವದಕ್ಕೆ ಇಚ್ಛಿಸುತ್ತಾನೆ (ರೋಮ 1:17,21-24 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಇದು ಮಾತ್ರವೇ ನಿಜವಾದ ನೀತಿಯಾಗಿದೆ. ನಿಜವಾದ ನೀತಿಯು ಯಾವಾಗಲೂ ದೇವರಿಂದ ಬರುವ ಒಂದು ವರವಾಗಿದೆ. ಇದು ನಮ್ಮ ಸ್ವಂತ ಕಾರ್ಯ ಅಥವಾ ಪ್ರಯತ್ನದ ಆಧಾರದ ಮೇಲೆ ಕೊಡಲ್ಪಡುವದಿಲ್ಲ, ಇದು ನಮಗೆ ದೇವರ ಕೃಪೆಯಿಂದಲೇ ಕೊಡಲ್ಪಡುತ್ತದೆ (ಎಫೆಸ 2:8-9 ಮತ್ತು ವ್ಯಾಖ್ಯಾನ ನೋಡಿರಿ).

10 ಪೌಲನು ಕ್ರಿಸ್ತನ ನೀತಿಯನ್ನು ಮಾತ್ರವೇ ಅಪೇಕ್ಷಿಸುವದಿಲ್ಲ, ಆದರೆ ಆತನು ಕ್ರಿಸ್ತನನ್ನು ತಿಳಿಯಲೂ ಸಹ – ಕ್ರಿಸ್ತನನ್ನೂ ಆತನ ಪುನರುತ್ಥಾನದಲ್ಲಿರುವ ಶಕ್ತಿಯನ್ನು ತಿಳಿದುಕೊಳ್ಳಬೇಕೆಂದು –ಅಪೇಕ್ಷಿಸುತ್ತಾನೆ. ಪೌಲನು ಕ್ರಿಸ್ತನನ್ನು

ವಯಕ್ತಿಕವಾಗಿ ತಿಳುಕೊಳ್ಳಲು ಬಯಸುತ್ತಾನೆ, ಕ್ರಿಸ್ತನು ತನ್ನೊಳಗೆ ನೆಲೆಸಬೇಕೆಂದು ಆತನು ಇಚ್ಚಿಸುತ್ತಾನೆ (ಯೋಹಾನ 15:5). ಪೌಲನು ಕ್ರಿಸ್ತನ ಪು ನರುಥ್ಥಾನದ ಶಕ್ತಿಯನ್ನು ಅನುಭವಿಸಲು ಬಯಸುತ್ತಾನೆ, ಅದು ಕ್ರಿಸ್ತನ ಪವಿತ್ರಾತ್ಮನ ಮೂಲಕ ಕೊಡಲ್ಪಡುತ್ತದೆ. ಕ್ಲುಪ್ತವಾಗಿ ಹೇಳುವದಾದರೆ, ಪೌಲನು ನೂತನ ಜೀವಿತವನ್ನು ಹೊಂದಿಕೊಳ್ಳಲು ಬಯಸುತ್ತಾನೆ (ರೋಮ 6:4, 8:11, ಎಫೆಸ 2:4-6 ನೋಡಿರಿ).

ಕ್ರಿಸ್ತನ ಜೀವದಲ್ಲಿಯೂ ಬಲದಲ್ಲಿಯೂ ಪಾಲುಗಾರರಾಗಬೇಕಾದರೆ ನಾವು ಆತನ ಬಾಧೆಗಳಲ್ಲಿ ಸಹ ಪಾಲುಗಾರರಾಗಬೇಕು. ಆದದರಿಂದ, ಪೌಲನು ಆತನ ಬಾಧೆಗಳಲ್ಲಿ ಪಾಲುಗಾರನಾಗಿರುವ ಪದವಿಯನ್ನು ತಿಳಿಕೊಳ್ಳ-ಬೇಕೆಂದು ಅಪೇಕ್ಷಿಸುತ್ತಾನೆ.

ಅದು ಮಾತ್ರವಲ್ಲ, ಪೌಲನು ಆತನ (ಕ್ರಿಸ್ತನ) ಮರಣದ ವಿಷಯದಲ್ಲಿ ಆತನಿಗೆ ಸರೂಪನಾಗಬೇಕೆಂದು ಬಯಸುತ್ತಾನೆ. ಮೊದಲನೆಯದಾಗಿ, ಪೌಲನು ತನ್ನ "ಪೂರ್ವ ಪಾಪಾಧೀನ ಸ್ವಭಾವವು" ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಲ್ಪಡಬೇಕೆಂದು ಬಯಸುತ್ತಾನೆ (ರೋಮ 6:6, ಗಲಾತ್ಯ 2:20, 5:24 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಎರಡನೆಯದಾಗಿ ಪೌಲನು ಪ್ರತಿದಿನವೂ ಕ್ರಿಸ್ತನೊಂದಿಗೆ ಸಾಯುವದಕ್ಕೆ ಸಿದ್ಧನಾಗಿದ್ದಾನೆ (1 ಕೊರಿಂಥ 15:31). ಪೌಲನು ಬರೆದದ್ದೇನೆಂದರೆಃ ಯೇಸುವಿನ ಮರಣಾವಸ್ಥೆಯನ್ನು ನಾವು ಯಾವಾಗಲೂ ದೇಹದಲ್ಲಿ ಅನುಭವಿಸುತ್ತಾ ತಿರುಗಾಡುತ್ತೇವೆ (2 ಕೊರಿಂಥ 4:10-11). ಪೌಲನು ಕ್ರಿಸ್ತನ ನಿಮಿತ್ಯವಾಗಿ ತನ್ನ ಪ್ರಾಣವನ್ನು ಕಳೆದುಕೊಳ್ಳುವದಕ್ಕೆ ಸಿದ್ಧನಾಗಿದ್ದಾನೆ (ಮಾರ್ಕ 8:34-35).

ಆದುದರಿಂದ, ಆತನ (ಕ್ರಿಸ್ತನ). ಬಾಧೆಗಳಲ್ಲಿ ಪಾಲುಗಾರನಾಗುವ ಪದವಿಯನ್ನು ತಿಳಿಯುವದು ಎಂದರೆ ಬಹಿರಂಗವಾಗಿ ಕ್ರಿಸ್ತನ ನಿಮಿತ್ಯ ಕಷ್ಟ ಹಾಗು ಹಿಂಸೆಯನ್ನು ಅನುಭವಿಸುವದೆಂದು ಮಾತ್ರವೇ ಅರ್ಥವಲ್ಲ, ಆದರೆ ಅಂತರ್ಯದಲ್ಲಿ ಪೂರ್ವಪಾಪಾಧೀನ ಸ್ವಭಾವವನ್ನು ಅದರ ಅಭಿಲಾಷೆಗಳನ್ನು ಶಿಲುಬೆಗೆ ಹಾಕುವದು–ದೇಹದ ದುರಭ್ಯಾಸಗಳನ್ನು ನಾಶಮಾಡುವದು (ರೋಮ 8:13)–ಎಂದು ಸಹ ಅರ್ಥವಾಗಿದೆ.

11 ಕ್ರಿಸ್ತನೊಂದಿಗೆ ಸತ್ತವನಾಗಿ ಪೌಲನು ಸತ್ತವರಿಗಾಗುವ ಪು ನರುಥ್ಥಾನವನ್ನು ಹೊಂದಿಕೊಳ್ಳಲು ನಿರೀಕ್ಷಿಸುತ್ತಾನೆ (ರೋಮ 6:4-5, 8 ಮತ್ತು ವ್ಯಾಖ್ಯಾನ ನೋಡಿರಿ).

## ಗುರಿಯೆಡೆಗೆ ಓಡುತ್ತಲಿರುವದು (3:12-16)

12 ಪೌಲನು ಇನ್ನೂ ಕ್ರಿಸ್ತನ ವಿಷಯವಾದ ಪೂರ್ಣತಿಳುವಳಿಕೆಯನ್ನು ಪೂರ್ಣ ನೀತಿಯನ್ನು ಪಡೆದುಕೊಂಡಿರುವದಿಲ್ಲ. ಆತನು ಇನ್ನೂ ಸಿದ್ಧಿಗೆ (ಪರಿಪೂರ್ಣತೆಗೆ) ಬಂದವನಲ್ಲ. ಆದರೆ ಪೌಲನು ಯಾವದನ್ನು ಹೊಂದುವದಕ್ಕಾಗಿ ಕ್ರಿಸ್ತಯೇಸು (ಅವನನ್ನೂ) ಹಿಡಿದುಕೊಂಡನೋ ಅದನ್ನು ಹಿಡಿದುಕೊಳ್ಳುವದಕ್ಕೋಸ್ಕರ–ಅಂದರೆ, ಪರಿಶುದ್ಧತೆ, ಪರಿಪೂರ್ಣತೆ, ಮತ್ತು ಪರಿಪಕ್ವತೆಯನ್ನು ಹಿಡಿದುಕೊಳ್ಳುವಕ್ಕೋಸ್ಕರ–ಓಡುತ್ತಾ ಇರುತ್ತಾನೆ (ಎಫೆಸ 4:13). ಯಾಕೆಂದರೆ, ಈ ಕಾರಣಕ್ಕಾಗಿಯೇ–ಪೌಲನು ಪರಿಶುದ್ಧನೂ ದೋಷವಿಲ್ಲದವನೂ ಆಗಿರಬೇಕೆಂದು (ಎಫೆಸ 1:4)–ಕ್ರಿಸ್ತನು ಪೌಲನನ್ನು ಹಿಡಿದುಕೊಂಡನು.

ನೆನಪಿರಲಿ, ಮೊದಲು ಕ್ರಿಸ್ತನು ನಮ್ಮನ್ನು "ಹಿಡಿದುಕೊಂಡನು" ಈ ಕಾರಣದಿಂದ ನಾವು ಆತನನ್ನು "ಹಿಡಿದುಕೊಳ್ಳ" ಬಹುದು. ನಾವು ಆತ್ಮೀಕ ಅರ್ಥಲ್ಲಿ ಆತನನ್ನು ಪಡೆದುಕೊಂಡು ಆತನ್ನು ಆತುಕೊಂಡವರಾಗಿರಬಹುದು. ಮತ್ತು ನಾವು ಆತನು ಹಿಡಿದುಕೊಂಡಿರುವಾಗ್ಯು ನಮ್ಮ ಹಿಡಿತವು ಬಲಹೀನವಾಗಿರುವದು, ಆತನ ಹಿಡಿತವು ನಮ್ಮ ಮೇಲೆ ಬಲಿಷ್ಟವಾಗಿರುತ್ತದೆ. ಆತನು ನಮ್ಮನ್ನು ತನ್ನ ಕೈಗಳೊಳಗಿಂದ ಜಾರಿ ಹೋಗುವದಕ್ಕೆ ಬಿಡುವದಿಲ್ಲ.

13-14 ಆದರೆ ಈ ಒಂದು ಕಾರ್ಯವನ್ನು ಮಾಡುತ್ತೇನೆ. ಪೌಲನು ಒಂದೇ ಗುರಿಯನ್ನು ಇಟ್ಟುಕೊಂಡಿರುತ್ತಾನೆ. ಆತನು ತನ್ನನ್ನು ತನ್ನ ಉದ್ದೇಶದಿಂದ ಅತ್ತ ಇತ್ತ ದೃಷ್ಟಿಹರಿಸಲು ಅನುಮತಿಸಿಕೊಳ್ಳುವದಿಲ್ಲ. ಆತನು ದ್ವಿತಿಯ ವಿಷಯ–ಗಳಿಗಾಗಿ ತನ್ನ ಬಲವನ್ನು ವ್ಯಯಮಾಡಿಕೊಳ್ಳುವದಿಲ್ಲ. ಹಿಂದಿನ ಸಂಗತಿಗಳನ್ನು ಮರೆತುಬಿಟ್ಟು....ಪೌಲನು ಹಿಂದಿನ ಸಂಗತಿಗಳನ್ನು ಮರೆಯುತ್ತಾನೆ. ಅಂದರೆ, ಆತನು ಹಿಂದೆ ತಿರಿಗಿ ನೋಡುವದಿಲ್ಲ. ಆತನು ತನ್ನ ವಿಫಲತೆಗಳು, ದೋಷಗಳು ಹಾಗು ಪಾಪಗಳ ಕುರಿತಾಗಿ ಜಿಗುಪ್ಸೆಪಟ್ಟುಕೊಳ್ಳುವದಿಲ್ಲ. ಈ ಗತಿಸಿಹೋದ ಸಂಗತಿಗಳ ವಿಷಯದಲ್ಲಿ ಚಿಂತಿಸುವದು ನಿಷ್ಪ್ರಯೋಜಕರವಾಗಿದೆ. ಪೌಲನು ಓಟದಲ್ಲಿನ ಒಬ್ಬ ಓಟಗಾರನಾಗಿದ್ದಾನೆಃ ಆತನು ಮುಂದಿನ ಗುರಿಯನ್ನೇ ದೃಷ್ಟಿಸುತ್ತಾನೆ. (ಲೂಕ 9:62, ಇಬ್ರಿಯ 12:1-2 ನೋಡಿರಿ). ಓಟಗಾರನೊಬ್ಬನು ಹಿಂದೆ ನೋಡಿದರೆ ನಿಧಾನಗೊಳಿಸಲ್ಪಡುತ್ತಾನೆ

ನಂತರ ಪೌಲನು ಹೇಳುವದೇನೆಂದರೆಃ...ಮುಂದಿನವು ಗಳ ಕಡೆಗೆ ಎದೆಬೊಗ್ಗಿದವನಾಗಿ ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ. ಪೌಲನು ಒಬ್ಬ ನಿಷ್ಕ್ರೀಯ ಕ್ರೈಸ್ತನಲ್ಲ, ಆತನು ಸಕ್ರೀಯವಾಗಿ – ಪರಿಶ್ರಮದಿಂದ–ಕ್ರಿಸ್ತನಂತಾಗುವ ಗುರಿಯನ್ನು ಸಂಪಾದಿಸಿಕೊಳ್ಳುತ್ತಾನೆ.

ಅನೇಕ ಕ್ರೈಸ್ತರು ಈ ಅಂಶದ ಬಗ್ಗೆ ಗಲಿಬಿಲಿ ಹೊಂದಿರುತ್ತಾರೆ. ಅವರು ಹೇಳುವದೇನೆಂದರೆಃ "ಸಮಸ್ತವೂ ದೇವರ ಕೃಪೆ–ಯಿಂದಲೇ ಆಗುವದು. ನಮ್ಮ ನೀತಿಕರಣವು ಮಾತ್ರವಲ್ಲ, ಆದರೆ ನಮ್ಮ ಶುದ್ಧೀಕರಣವು ಸಹ ದೇವರ ಕೃಪೆಯಿಂದಲೇ ಆಗುವದಾಗಿದೆ. ಮರದಲ್ಲಿ ಫಲವು ಹಣ್ಣಾಗುವ ಪ್ರಕಾರವೇ ನಾವು ಕ್ರಿಸ್ತನಂತೆ ಆಗುವೆವು. ನಾವು ಪ್ರಯಾಸಪಟ್ಟು ಹೋರಾಡಬೇಕಾದ ಆಗತ್ಯವಿಲ್ಲ." ಈ ಕ್ರೈಸ್ತರ ಹೇಳಿಕೆಯು ಸ್ವಲ್ಪ ಮಟ್ಟಿಗೆ ಸರಿಯಾದದ್ದು. ಸಮಸ್ತವೂ ದೇವರ ಕೃಪೆಯಿಂದಲೇ

ಆಗದ್ದು ನಾವು ನಮ್ಮ ಸ್ವಂತ ಬಲದಿಂದ ಪ್ರಯಾಸಪಟ್ಟು ಹೋರಾಡುವದರ ಅಗತ್ಯವಿಲ್ಲ ಎಂದು ಹೇಳುವದು ಸರಿಯಾದದ್ದೇ ಆಗಿದೆ. ಹೇಗಿದ್ದರೂ, ಸತ್ಯದ ಇನ್ನೊಂದು ಮುಖವಿರುತ್ತದೆ. ಅದನ್ನೇ ಪೌಲನು ಈ ವಚನಗಳಲ್ಲಿ ನಮ್ಮ ಮುಂದಿಡುತ್ತಾನೆ. ಮನುಷ್ಯರು ಹೆಚ್ಚಾಗಿ ಮರದಲ್ಲಿನ ಫಲದಂತಿರುವದಿಲ್ಲ. ಫಲಗಳು ಪರಿಪಕ್ವ ಪ್ರಕ್ರಿಯೆಗೆ ಸ್ವಾಭಾವಿಕವಾಗಿ ಅಧೀನವಾಗುತ್ತವೆ, ಮನುಷ್ಯರು ಆಗುವದಿಲ್ಲ. ಮನುಷ್ಯರು ಸಕ್ರಿಯವಾಗಿ ದೇವರಿಗೆ ಅಧೀನರಾಗಿ ಆತನಿಗೆ ವಿಧೇಯರಾಗಬೇಕು. ಅವರು ಸಕ್ರಿಯವಾಗಿ ತಮಗೆ ಅಭ್ಯಂತರ ಮಾಡುವ ಎಲ್ಲವನ್ನೂ ತೆಗೆದುಹಾಕಿ....ಅವರಿಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡಬೇಕು (ಇಬ್ರಿಯ 12:1). ಕ್ರೈಸ್ತೀಯ ಜೀವಿತವು ಒಂದು ಓಟವಾಗಿದೆ, ಮತ್ತು ನಾವು ಅದನ್ನು ಓಡಬೇಕು. ಯಾವನೂ ದಾರಿಯ ಮಗ್ಗುಲಲ್ಲಿ ಕುಳಿತುಕೊಳ್ಳುವದರ ಮೂಲಕ ಎಂದಿಗೂ ಓಟದಲ್ಲಿ ಜಯಿಸಿರುವದಿಲ್ಲ.

ಪೌಲನು ಓಟದ ಮುಕ್ತಾಯದಲ್ಲಿ ಪಡೆದುಕೊಳ್ಳಲಿಚ್ಚಿಸುವ ಬಿರುದು (ವಚನ 14). ಕ್ರಿಸ್ತನೊಂದಿಗಿನ ಪೂರ್ಣ ಅನ್ಯೋನ್ಯತೆಯೇ ಆಗಿದೆ. ಅಲ್ಲದೆ ಪೌಲನು ಕ್ರಿಸ್ತನ "ಜೊತೆ ಬಾಧ್ಯನೂ" ಆತನ ಮಹಿಮೆಯಲ್ಲಿ ಪಾಲುಗಾರನೂ ಆಗಬೇಕೆಂದು ನಿರೀಕ್ಷಿಸುತ್ತಾನೆ (ರೋಮ 8:17, 1 ಕೊರಿಂಥ 9:24-25, ಯಾಕೋಬ 1:12).

15 ಪೌಲನು ಇಲ್ಲಿ ಪ್ರಸ್ತಾಪಿಸುವ ಪ್ರವೀಣರು (ಪರಿಪಕ್ವವು ಳ್ಳವರು) ಯಾರಾಗಿದ್ದಾರೆ? ಪೌಲನು 12ನೇ ವಚನದಲ್ಲಿ ತಾನು ಇನ್ನೂ ಸಿದ್ಧಿಗೆ ಬಂದಿರುವದಿಲ್ಲ ಎಂದು ಹೇಳುತ್ತಾನೆ. ಕ್ರೈಸ್ತರು ಈ ಜೀವಿತದಲ್ಲಿ "ಸಿದ್ಧಿಗೆ" (ಪರಿಪೂರ್ಣತೆಗೆ) ಬರಲಾರರು, ಆದರೆ ಅವರು "ಪ್ರವೀಣರು" ಆಗಬಹುದಾಗಿದೆ. ಹಿಂದಿನ ಸಂಗತಿಗಳನ್ನು ಮರೆತುಬಿಟ್ಟು ಮುಂದಿನವು ಗಳನ್ನು ಹಿಡಿದುಕೊಳ್ಳಲು ಓಡುವವರೇ ಪ್ರವೀಣರಾಗಿದ್ದಾರೆ (ವಚನ 13). ಹಿಂದೆ ನೋಡುವದು ವ್ಯರ್ಥವಾದದ್ದು, ಹಾನಿಕರವೂ ಆದದ್ದು ಎಂದು ಅವರು ನಂಬುತ್ತಾರೆ. ಏಕಚಿತ್ತವನ್ನು ಹೊಂದಿರುವವರು ಪ್ರವೀಣರಾಗಿದ್ದಾರೆ, ಅವರು ಪೌಲನ ಹಾಗೆ ಜೀವಿತದಲ್ಲಿ ಏಕೈಕ ಅಭಿಲಾಷೆಯನ್ನು ಹೊಂದಿರುತ್ತಾರೆಃ ಕ್ರಿಸ್ತನನ್ನು ತಿಳಿಯುವದು (ವಚನ 10) ಮತ್ತು ಆತನಂತೆ ಆಗುವದು (ರೋಮ 8:29). ಪ್ರವೀಣರಾದ ಎಲ್ಲಾ ಕ್ರೈಸ್ತರು ಇದೇ ಅಭಿಪ್ರಾಯವು ಳ್ಳವರಾಗಿರಬೇಕು. ಫಿಲಿಪ್ಪಿಯವರಲ್ಲಿ ಯಾರಾದರೂ ಒಂದು ವಿಷಯದಲ್ಲಿ ಬೇರೆ ಅಭಿಪ್ರಾಯವು ಳ್ಳವರಾಗಿದ್ದರೆ ಪೌಲನ ಬೋಧನೆಯು ಸರಿಯಾದದ್ದೆಂಬದನ್ನು ದೇವರು ಅವರಿಗೆ ತೋರಿಸಿಕೊಡುವನು ಎಂಬ ಭರವಸವನ್ನು ಪೌಲನು ಹೊಂದಿರುತ್ತಾನೆ.

16 ಆದರೆ ನಾವು ಯಾವ ಸೂತ್ರವನ್ನನುಸರಿಸಿ ಇಲ್ಲಿಯವರೆಗೆ ಬಂದೆವೋ ಅದನ್ನೇ ಅನುಸರಿಸಿ ನಡೆಯೋಣ. ನಮ್ಮಲ್ಲಿ ಪ್ರತಿಯೊಬ್ಬರು ಅವನು ಅಥವಾ ಅವಳು ದೇವರಿಂದ ಹೊಂದಿದ ಕೃಪೆಗನುಸಾರವಾಗಿ ಜೀವಿಸಬೇಕೆಂದು ಪೌಲನು ಹೇಳುತ್ತಾನೆ. ನಾವು ಒಂದೇ ಸಾರಿ ದೇವರ ಪೂರ್ಣಕೃಪೆಯನ್ನು ಪಡೆದುಕೊಳ್ಳುವದಿಲ್ಲ, ನಾವು ಒಮ್ಮೆಲೆ ಪ್ರವೀಣರಾಗುವದಿಲ್ಲ. ದೇವರು ಪವಿತ್ರಾತ್ಮನ ಮೂಲಕ ನಮ್ಮಲ್ಲಿ ಅಡಗಿರುವ ಪಾಪಗಳನ್ನು ಬಲಹೀನತೆಗಳನ್ನೂ ಒಂದೊಂದಾಗಿ ನಮಗೆ ತೋರಿಸಿಕೊಡುತ್ತಾನೆ. ನಮಗೆ ಅರಿವಿಲ್ಲದ ಪಾಪಗಳನ್ನು ಹಾಗು ದೋಷಗಳನ್ನು ನಾವು ತಿದ್ದಿಕೊಳ್ಳಲು ಆಗುವದಿಲ್ಲ. ಆದದರಿಂದ, ಪೌಲನು ಇಲ್ಲಿ ದೇವರು ನಮ್ಮೊಬ್ಬೊಬ್ಬರಿಗೆ ಅನುಗ್ರಹಿಸಿರುವ ಕೃಪೆ, ತಿಳುವಳಿಕೆ ಹಾಗು ಶಕ್ತಿಗಳಿಗನುಸಾರವಾಗಿ ನಡೆದುಕೊಳ್ಳಬೇಕೆಂದು ಹೇಳುತ್ತಾನೆ. ಪವಿತ್ರಾತ್ಮನು ನಮ್ಮ ಜೀವಿತದಲ್ಲಿರುವ ಒಂದು ಪಾಪವನ್ನು ನಮಗೆ ಬಯಲು ಪಡಿಸುವದಾದರೆ ನಾವು ಆ ಪಾಪದಿಂದ ವಿಮುಖರಾಗಬೇಕು. ಪಾಪವನ್ನು ಜಯಿಸಲು ದೇವರು ನಮಗೆ ದಿನದಿಂದ ದಿನಕ್ಕೆ ಸಾಕಷ್ಟು ಕೃಪೆಯನ್ನು ನೀಡುತ್ತಾನೆ. ನಾವು ಆ ಕೃಪೆಗೆ ಅನುಸಾರವಾಗಿ ಜೀವಿಸಬೇಕು. ನಾವು ಯಾವ (ಕೃಪೆಯನ್ನು) ಅನುಸರಿಸಿ ಇಲ್ಲಿಯವರೆಗೆ ಬಂದೆವೋ ಅದನ್ನೇ ಅನುಸರಿಸಿ ನಡೆಯಬೇಕು.

## ಶಿಲುಬೆಯ ವೈರಿಗಳು (3:17-21)

17 ಕ್ರಿಸ್ತನ ಕುರಿತು ಬೋಧಿಸಿದರೆ ಮಾತ್ರ ಸಾಕಾಗುವದಿಲ್ಲ, ನಾವು ಕ್ರಿಸ್ತನಂತೆ ಜೀವಿಸುವವರು ಆಗಿರಬೇಕು. ವಿಶೇಷವಾಗಿ, ನೂತನ ಕ್ರೈಸ್ತರಿಗೆ ಅನುಸರಿಸುವದಕ್ಕಾಗಿ ಕ್ರಿಸ್ತನಂತೆ ಜೀವಿಸುವದರ ಉದಾಹರಣೆಗಳ ಅಗತ್ಯವಿರುತ್ತದೆ (1ಕೊರಿಂಥ 11:1 ನೋಡಿರಿ). ಫಿಲಿಪ್ಪಿಯವರು ಪೌಲನ ಮಾದರಿಯನ್ನು ಮಾತ್ರವಲ್ಲ, ಆದರೆ ಪೌಲನಿಂದ ಕೊಡಲ್ಪಟ್ಟ ಮಾದರಿಯ ಪ್ರಕಾರ ನಡೆದುಕೊಳ್ಳುವವರ ಉದಾಹರಣೆಯನ್ನೂ ಅನುಸರಿಸುವವರಾಗಿರಬೇಕು. ಪೌಲನ ಸ್ವಂತ ಮಾದರಿಯು ಕ್ರಿಸ್ತನಂತೆ ಜೀವಿಸುವದಕ್ಕೆ ಅನೇಕರನ್ನು ಪ್ರೇರೇಪಿಸಿರುತ್ತದೆ, ಈಗ ಪ್ರತಿಯಾಗಿ ಅವರು ಇನ್ನಿತರ ಅನೇಕರ ಮೇಲೆ ಪ್ರಭಾವ ಬೀರುತ್ತಿದ್ದಾರೆ. ನಮ್ಮ ಮಾದರಿಯ ಪ್ರಭಾವವು ನಾವು ಎಂದಿಗೂ ಸಂಧಿಸದಿರುವವರ ವರೆಗೂ ಹರಡುವದಾಗಿದೆ! ಆದದರಿಂದ, ನಾವು ನಮ್ಮನ್ನು ಕೇಳಿಕೊಳ್ಳಬೇಕಾದದ್ದೇನೆಂದರೆಃ ನಾವು ಯಾವ ರೀತಿಯ ಮಾದರಿಯನ್ನು ತೋರಿಸುತ್ತಿದ್ದೇವೆ?.

18 ಫಿಲಿಪ್ಪಿಯವರು ಶಿಲುಬೆಗೆ ವಿರೋಧಿಗಳಾಗಿ ನಡೆಯುವವರ ಮಾದರಿಯನ್ನು ಅನುಸರಿಸದಿರಲಿ. ಶಿಲುಬೆಯ ಮೇಲಿನ ಕ್ರಿಸ್ತನ ಮರಣವು ಮನುಷ್ಯರನ್ನು ರಕ್ಷಿಸುವದಕ್ಕೆ ಸಾಕಾಗುವದಿಲ್ಲ, ಎಂದು ಹೇಳುವವರು ಶಿಲುಬೆಗೆ ವಿರೋಧಿಗಳಾಗಿದ್ದಾರೆ. ಅಂಥ ವಿರೋಧಿಗಳು ತಮ್ಮನ್ನು ಕ್ರೈಸ್ತರೆಂದು ಹೇಳಿಕೊಳ್ಳುತ್ತಾರೆ, ಆದರೆ ಅವರು ಕ್ರೈಸ್ತರಲ್ಲ! ಅವರು ಸುಳ್ಳುಬೋಧಕರಾಗಿದ್ದಾರೆ (ಮತ್ತಾಯ 7:15, ಮಾರ್ಕ 13:22, ಅ.ಕೃ. 20:29-30, 2 ಕೊರಿಂಥ 11:13, 2 ತಿಮೊಥೆ 4:1-2). ಅವರು ತಮ್ಮ ಸ್ವಕಾರ್ಯಗಳ ಮೇಲೆ ಮನಸ್ಸಿಡುವ ಜನರಾಗಿದ್ದಾರೆ (ಫಿಲಿಪ್ಪಿ.2:21).

19 ಇಲ್ಲಿ ಪೌಲನು ಈ ಶಿಲುಬೆಯ ವಿರೋಧಿಗಳ ವಿಷಯದಲ್ಲಿ ನಾಲ್ಕು ಸಂಗತಿಗಳನ್ನು ಬರೆಯುತ್ತಾನೆ. ಮೊದಲನೆಯದಾಗಿ, ಅವರು ನಾಶಗೊಳ್ಳುವರು. ನಾಶನವೇ ಅವರ ಅಂತ್ಯಾವಸ್ಥೆ. ಅವರು ನ್ಯಾಯತೀರ್ಪಿನ ದಿನದಲ್ಲಿ ನಿತ್ಯವಾದ

ದಂಡನೆಯನ್ನು ಹೊಂದುವರು. ಎರಡನೆಯದಾಗಿ, ಹೊಟ್ಟೆಯೇ ಅವರ ದೇವರು. ಅಂದರೆ, ಅವರು ತಮ್ಮ ಸ್ವಂತ ಅಭಿಲಾಷೆಗಳು ಮತ್ತು ಹಸಿವೆಗಳ ಸೇವೆ ಮಾಡುತ್ತಾರೆ. ಅವರು ಕ್ರಿಸ್ತನ ಸೇವೆಯನ್ನು ಮಾಡುವದಿಲ್ಲ (ರೋಮ 16:18). ಮೂರನೆಯದಾಗಿ,ನಾಚಿಕೆ ಕೆಲಸಗಳಲ್ಲಿಯೇ ಅವರ ಗೌರವವು, ಅವರ ತಮ್ಮ ನಾಚಿಕೆಕರವಾದ ಆಶೆಗಳಲ್ಲಿಯೂ ಕ್ರಿಯೆಗಳಲ್ಲಿಯೂ[10] ಹೆಚ್ಚಳ ಪಟ್ಟುಕೊಳ್ಳುತ್ತಾರೆ. ನಾಲ್ಕನೆಯದಾಗಿ, ಅವರು ಪ್ರಾಪಂಚಿಕ ಕಾರ್ಯಗಳ ಮೇಲೆ ಮನಸ್ಸಿಡುತ್ತಾರೆ ಹೊರತು ಆತ್ಮೀಕ ಕಾರ್ಯಗಳ ಮೇಲಲ್ಲ (ರೋಮ 8:5-6). ಅಂಥ ಮನುಷ್ಯರು ನಿಜವಾಗಿಯೂ ಶಿಲುಬೆಗೆ ವೈರಿಗಳೇ.

20 ಆದರೆ ಕ್ರೈಸ್ತರು ಈ ರೀತಿಯಾಗಿ ಇರಬಾರದು. ಫಿಲಿಪ್ಪಿಯವರು ಮೇಲಿರುವಂಥವು ಗಳ ಮೇಲೆ ಮನಸ್ಸಿಡಬೇಕು, ಭೂಸಂಬಂಧವಾದವು ಗಳ ಮೇಲೆ ಇಡದಿರಲಿ (ಕೊಲೊಸ್ಸೆ 3:2). ನಾವಾದರೋ ಪರಲೋಕ ಸಂಸ್ಥಾನದವರು ಎಂದು ಪೌಲನು ಹೇಳುತ್ತಾನೆ. ದೇವರು ನಮ್ಮನ್ನು ....ಪರಲೋಕದಲ್ಲಿ ಆತನೊಂದಿಗೆ (ಕ್ರಿಸ್ತನು) ಕೂಡ್ರಿಸಿದ್ದಾನೆ (ಎಫೆಸ 2:6). ಈ ಲೋಕದಲ್ಲಿ ನಾವು ಕೇವಲ ಪ್ರವಾಸಿಗಳೂ ಪರದೇಶಸ್ಥರೂ ಆಗಿದ್ದೇವೆ (1 ಪೇತ್ರ 2:11). ಆದದರಿಂದ, ವಿಶ್ವಾಸಿಗಳು ತಮ್ಮ ರಾಷ್ಟ್ರೀಯತೆಯ ಮೇಲೆ, ತಾವು "ದೇಶಿಯರೋ" ಅಥವಾ "ಪರದೇಶಿಯರೋ" ಎಂಬದರ ಮೇಲೆ ಯಾವದೇ ಮಹತ್ವವನ್ನು ಇಡದಿರಲಿ. ಯಾಕೆಂದರೆ ಈ ಲೋಕದಲ್ಲಿ ವಿಶ್ವಾಸಿಗಳೆಲ್ಲರೂ ಪರದೇಶಸ್ಥರಾಗಿದ್ದಾರೆ. ಆದರೆ ಪರಲೋಕದಲ್ಲಿ ನಾವೆಲ್ಲರೂ "ದೇಶಿಯರು" ಆಗಿರುತ್ತೇವೆ, ಕಾರಣ ಅಲ್ಲಿಯೇ ನಮ್ಮ ಸಂಸ್ಥಾನತೆ (ಪೌರತ್ವ) ಇರುತ್ತದೆ.

ಕರ್ತನಾದ ಯೇಸುಕ್ರಿಸ್ತನು (ಪರಲೋಕದಿಂದ) ರಕ್ಷಕನಾಗಿ ಬರುವದನ್ನು ಎದುರುನೋಡುತ್ತಾ ಇದ್ದೇವೆ. ಲೋಕಾಂತ್ಯದಲ್ಲಿ ಯೇಸು ಕ್ರಿಸ್ತನು ತಿರುಗಿ ಬರುವನೆಂಬದನ್ನು ಕ್ರೈಸ್ತರು ಬಲ್ಲವರಾಗಿದ್ದಾರೆ. ನಾವು ಆತನ ಬರೋಣವನ್ನು ಕುತೂಹಲದಿಂದ ಎದುರು ನೋಡೋಣ.

21 ಕ್ರಿಸ್ತನು ಪು ನಃ ಬಂದನಂತರ ದೀನಾವಸ್ಥೆವು ಳ್ಳ ನಮ್ಮ ದೇಹಗಳು ರೂಪಾಂತರಗೊಳ್ಳುವವು . ಬೇರೆ ಮಾತುಗಳಲ್ಲಿ ಹೇಳುವದಾದರೆ, ಆಗ ನಮ್ಮ ದೇಹಗಳ ವಿಮೋಚನೆಯು ಅಥವಾ ಪು ನರುತ್ಥಾನವು ಸಂಭವಿಸುವದು (ರೋಮ 8:23, 1 ಕೊರಿಂಥ 15:42-44, 49, ಕೊಲೊಸ್ಸೆ 3:4, 1 ಯೋಹಾನ 3:2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಮ್ಮ ಪು ನರುತ್ಥಾನವು ಪು ನರುತ್ಥಾನಗೊಂಡ ಕ್ರಿಸ್ತನ ಬಲದ ಮೂಲಕ ಸಂಭವಿಸುವದು (ಎಫೆಸ 1:19-22).

---

## ಅಧ್ಯಾಯ - 4

### ಅಂತಿಮ ಪ್ರಬೋಧನೆಗಳು (4:1-9).

1 ಫಿಲಿಪ್ಪಿಯದ ವಿಶ್ವಾಸಿಗಳು ಹೇಗೆ "ಓಡುತ್ತಾ ಇರಬೇಕು" ಮತ್ತು ಹಿಂದಕ್ಕೆ ನೋಡಬಾರದು, ಅವರು ಪ್ರವೀಣ ಕ್ರೈಸ್ತರು ಕ್ರಿಸ್ತನ ಬರೋಣವನ್ನು ಹೇಗೆ ಎದುರು ನೋಡುತ್ತಿದ್ದಾರೆಂಬ ಅವರ ಮಾದರಿಯನ್ನು ಅನುಸರಿಸಬೇಕು ಎಂಬದನ್ನು ಫಿಲಿಪ್ಪಿ 3:12-21, ವಚನಗಳಲ್ಲಿ ವಿವರಿಸಿದ ಬಳಿಕ ಪೌಲನು ಈಗ ಬರೆಯುವದೇನೆಂದರೆಃ ಹೀಗಿರಲಾಗಿ....ನಾನು ಹೇಳಿದಂತೆಕರ್ತನಲ್ಲಿ ದೃಢವಾಗಿ ನಿಲ್ಲಿರಿ.

ನಾವು ಕರ್ತನಲ್ಲಿ, ಆತನ ಬಲ ಹಾಗು ಕೃಪೆಯಲ್ಲಿ ದೃಢವಾಗಿ ನಿಲ್ಲಬೇಕು. ಯೇಸು ಪು ನಃ ಬಂದು ನಮ್ಮ ದೇಹಗಳನ್ನು ತನ್ನ ಸಾರೂಪ್ಯದಲ್ಲಿ ರೂಪಾಂತರಗೊಳಿಸುವನೆಂಬ ನಮ್ಮ ನಂಬಿಕೆಯೇ ದೃಢವಾಗಿ ನಿಲ್ಲುವದಕ್ಕೆ ನಮಗೊಂದು ಅತಿ ದೊಡ್ಡ ಸಹಾಯವಾಗಿರುತ್ತದೆ (ಫಿಲಿಪ್ಪಿ 3:20-21).

ಫಿಲಿಪ್ಪಿಯವರು ಪೌಲನ ಸಂತೋಷವೂ ಜಯಮಾಲೆಯೂ ಆಗಿದ್ದಾರೆ (1 ಥೆಸಲೋನಿಕ 2:19 ನೋಡಿರಿ). ಅವರು ಪೌಲನ ಪರಿಶ್ರಮದ ಫಲವಾಗಿದ್ದಾರೆ. ಅವರು ಆತನ "ಜಯಮಾಲೆ" ಆಗಿದ್ದಾರೆ, ಅದು ಓಟಗಾರನು ಓಟವನ್ನು ಗೆಲ್ಲುವಾಗ ಪಡೆಯುವ ಕಿರೀಟವಾಗಿದೆ (1 ಕೊರಿಂಥ 9:25).

2 ಫಿಲಿಪ್ಪಿಯದ ಸಭೆಯಲ್ಲಿದ್ದ ಇಬ್ಬರು ಪ್ರಮುಖ ಸ್ತ್ರೀಯರು ಭಿನ್ನಾಭಿಪ್ರಾಯ ಹೊಂದಿದ್ದರೆಂದು ಇಲ್ಲಿ ಓದುತ್ತೇವೆ. ಆ ಭಿನ್ನಾಭಿಪ್ರಾಯವು ಯಾವ ವಿಷಯದಲ್ಲಿ ಎಂಬದನ್ನು ಪೌಲನು ನಮಗೆ ಹೇಳುವದಿಲ್ಲ. ಅವರು ಪರಸ್ಪರ ಸಮ್ಮತಿಹೊಂದಿ ಒಂದೇ ಮನಸ್ಸುಳ್ಳವರಾಗಬೇಕೆಂದಷ್ಟೇ ಆತನು ಅವರನ್ನು ಬೇಡಿಕೊಳ್ಳುತ್ತಾನೆ (ಫಿಲಿಪ್ಪಿ 2:2 ನೋಡಿರಿ). ಸಭೆಯಲ್ಲಿ ಐಕ್ಯಮತ್ಯ ಇರಬೇಕೆಂಬದು ಪೌಲನ ಮಹಾದಾಶೆಯಾಗಿರುತ್ತದೆ.

ಸಭೆಯಲ್ಲಿ ಐಕ್ಯಮತ್ಯವು ಎರಡು ಸಂಗತಿಗಳ ಮೇಲೆ ಆಧಾರವಾಗಿರುತ್ತದೆಃ ನಿಜವಾದ ಬೋಧನೆ ಮತ್ತು ಪವಿತ್ರವಾದ ಜೀವಿತ. ಸುಳ್ಳನ್ನು ಬೋಧಿಸುವವರನ್ನು ಪಶ್ಚಾತಾಪವಿಲ್ಲದೆ ಪಾಪದಲ್ಲಿ ಜೀವಿಸುತ್ತಿರುವವರನ್ನೂ ಖಂಡಿಸುವದು ಪ್ರಾಮುಖ್ಯವಾಗಿರುತ್ತದೆ. ಅಂತಹ ಜನರು ಕ್ರಿಸ್ತನ ದೇಹವಾದ ಸಭೆಯಲ್ಲಿ ಒಂದು "ಹುಣ್ಣು" (ಕ್ಯಾನ್ಸರ) ಆಗಿರುತ್ತಾರೆ, ಮತ್ತು ಆ "ಹುಣ್ಣು" ಕತ್ತರಿಸಿ ತೆಗೆದು ಹಾಕಲ್ಪಡಬೇಕಾಗುತ್ತದೆ.

ಆದರೆ ನಮ್ಮೊಂದಿಗೆ ವಯಕ್ತಿಕ ವಿಷಯದಲ್ಲಿ ಭಿನ್ನಾಭಿಪ್ರಾಯ ಹೊಂದಿರುವದಕ್ಕೋಸ್ಕರ ಸಭೆಯಲ್ಲಿರುವವರನ್ನು ವಿರೋಧಿಸುವದು ಒಂದು ಪಾಪವಾಗಿದೆ. ಅಂಥ ಕಾರಣಕ್ಕಾಗಿ ಒಬ್ಬ ಸಹೋದರ ಅಥವಾ ಸಹೋದರಿಯನ್ನು ವಿರೋ–

ಧಿಸುವದು ಪಾಪಾಧೀನ ಸ್ವಭಾವದ ಕಾರ್ಯವಾಗಿದೆ, ಅದು ಹೊಲಸು ಕೃತ್ಯವಾಗಿದೆ. ಅಂತಹ ವಿರೋಧವು ಕ್ರಿಸ್ತನ ದೇಹವನ್ನು ಘಾಯಗೊಳಿಸುತ್ತದೆ. ಅದು ಸಭೆಯನ್ನು ಹಾಳು ಮಾಡಬಲ್ಲದು, ಸಭೆಯಲ್ಲಿರುವ ಯಾವದಾದರೂ ಸಹೋದರ ಅಥವಾ ಸಹೋದರಿಯನ್ನು ವಿರೋಧಿಸಬೇಕಾದ ಒತ್ತಾಯಕ್ಕೊಳಗಾಗುವ ವೇಳೆಯಲೆಲ್ಲಾ ನಾವು ಆ ವ್ಯಕ್ತಿಯನ್ನು ಕ್ರಿಸ್ತನ ನಿಮಿತ್ಯವಾಗಿ ವಿರೋಧಿಸುತ್ತಿದ್ದೇವೆ ಹೊರತು ನಮ್ಮ ನಿಮಿತ್ಯವಾಗಿ ಅಲ್ಲ ಎಂಬದನ್ನು ಬಹು ಖಚಿತಪಡಿಸಿಕೊಳ್ಳೋಣ. ಇಲ್ಲವಾದರೆ, ನಾವು ಸ್ವತಃ ಕ್ರಿಸ್ತನನ್ನೇ ವಿರೋಧಿಸುವವರಾಗುತ್ತೇವೆ. ಪೌಲನು ಈ ಇಬ್ಬರು ಸ್ತ್ರೀಯರಿಗೆ ಕರ್ತನಲ್ಲಿ ಪರಸ್ಪರ ಸಮ್ಮತಿ ಹೊಂದಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಾನೆ. ಕ್ರೈಸ್ತರ ನಡುವೆನಿಜವಾದ ಸಮ್ಮತಿಯು ಇರಬೇಕಾದರೆ ಪ್ರತಿಯೊಂದು ಪಕ್ಷದವರು ಕ್ರಿಸ್ತನ ಒಡೆಯತ್ವವನ್ನೂ ಅಧಿಕಾರವನ್ನೂ ಸ್ವೀಕರಿಸಿ–ಕೊಳ್ಳಬೇಕು. ನಾವು ಕರ್ತನಲ್ಲಿ ಸಹೋದರರು ಹಾಗು ಸಹೋದರಿಯರಿಗಾಗಿ ಮಾತ್ರವೇ ನಾವು ಪರಸ್ಪರರೊಂದಿಗೆಒಂದೇ ಮನಸುಳ್ಳವರಾಗಿರಬಲ್ಲೆವು. ನಾವು ಕರ್ತನಲ್ಲಿ ಇರದವರೊಂದಿಗೆ ಯಾವದೇ ಪ್ರಮುಖವಿಷಯಗಳಲ್ಲಿ ಒಂದೇ ಮನಸ್ಸುಳ್ಳವರಾಗಿರಲು ಆಗುವದಿಲ್ಲ.

3 ಪೌಲನು ಇಲ್ಲಿ 2ನೇ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಇಬ್ಬರು ಸ್ತ್ರೀಯರ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊ–ಳ್ಳುವದಕ್ಕೆ ಸಹಾಯ ಮಾಡಬೇಕೆಂದು ಫಿಲಿಪ್ಪಿಯದ ಸಭೆಯ ಇನ್ನೊಬ್ಬ ಸದಸ್ಯನನ್ನು ಕೇಳಿಕೊಳ್ಳುತ್ತಾನೆ. ಪೌಲನು ಈ ವ್ಯಕ್ತಿಯನ್ನು ತನ್ನ ಸತ್ಯಸಯುಜನೇ ಎಂದು ಕರೆಯುತ್ತಾನೆ. ಈ ವ್ಯಕ್ತಿ ಯಾರಾಗಿದ್ದನೆಂಬದು ತಿಳಿದುಬಂದಿರುವದಿಲ್ಲ. ಪೌಲನು ಕ್ಲೇಮೆನ್ಸ[11] ಮತ್ತು ಜೀವಬಾಧ್ಯರ ಪಟ್ಟಿಯಲ್ಲಿ ಬರೆಯಲ್ಪಟ್ಟಿರುವ ಇತರ ಜೊತೆ ಕೆಲಸದವರನ್ನು ಸಹ ಪ್ರಸ್ತಾಪಿಸುತ್ತಾನೆ (ಲೂಕ 10:20, ಪ್ರಕಟಣೆ 3:5 ನೋಡಿರಿ).

4 ಪೌಲನು ಫಿಲಿಪ್ಪಿಯವರಿಗೆ ಕರ್ತನಲ್ಲಿ ಸಂತೋಷಪಡಿರಿ ಎಂದು ತಿರಿಗಿ ಹೇಳುತ್ತಾನೆ (ಫಿಲಿಪ್ಪಿ 3:1 ಮತ್ತು ವ್ಯಾಖ್ಯಾನ ನೋಡಿರಿ). ಸಂತೋಷ ಪಡಿರಿ! ಇದು ಒಂದು ಸಲಹೆ ಅಲ್ಲ, ಇದು ಒಂದು ಆಜ್ಞೆಯಾಗಿದೆ. ನಾವು ಯಾವಾಗಲೂ ದುಃಖದಲ್ಲಿರುವದಾದರೆ ದೇವರ ವಾಕ್ಯಕ್ಕೆ ಅವಿಧೇಯರಾಗುವವರಾಗಿದ್ದೇವೆ. ಹಾಗಿದ್ದರೂ, ಕಣ್ಣೀರಿಡಬೇಕಾದ ಕೆಲವು ಸಮಯಗಳು ಉಂಟು ಮತ್ತು ಅಂತಹ ಸಮಯಗಳಲ್ಲಿ ದುಃಖದಿಂದಿರುವದು ಪಾಪವಲ್ಲ. ಮತ್ತು ನಾವು ನಮ್ಮ ಪಾಪಕ್ಕಾಗಿಯೂ ಇತರರ ಪಾಪಕ್ಕಾಗಿಯೂ ಯಾವಾಗಲೂ ದುಃಖಪಡುವವರಾಗಿರಬೇಕು (ಮತ್ತಾಯ 5:4, ರೋಮ 12:15 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

5 ಪೌಲನು ಇಲ್ಲಿ ಉಪಯೋಗಿಸುವ ಸೈರಣೆ ಎಂಬ ಪದವು ಅತಿ ವಿಶಾಲವಾದ ಅರ್ಥವನ್ನು ಹೊಂದಿರುತ್ತದೆ. ಇದು ಸೈರಣೆ, ಮಾತ್ರವಲ್ಲದೆ ದೀರ್ಘಶಾಂತಿ, ದಯೆ ಮತ್ತು ಉಪಕಾರಗಳನ್ನೂ ಒಳಗೊಂಡಿರುತ್ತದೆ–ಇವೆಲ್ಲವೂ ಪವಿತ್ರಾತ್ಮನ ಫಲಗಳಾಗಿವೆ (ಗಲಾತ್ಯ 5:22-23). ಸೈರಣೆಯುಳ್ಳ ವ್ಯಕ್ತಿಯು ದಾರಾಳತನದ ವ್ಯಕ್ತಿಯೂ ಆಗಿದ್ದಾನೆ. ಅಂಥ ವ್ಯಕ್ತಿಯು ತನ್ನ ಸ್ವಕಾರ್ಯಗಳನ್ನು ಮಾತ್ರವಲ್ಲ, ಆದರೆ ಪರರ ಕಾರ್ಯಗಳ ಮೇಲೆಯೂ ಮನಸ್ಸಿಡುತ್ತಾನೆ (ಫಿಲಿಪ್ಪಿ 2:20-21). ನಮ್ಮ ಸೈರಣೆಯು ಎಲ್ಲಾ ಮನುಷ್ಯರಿಗೂ ಗೊತ್ತಾಗಲಿ. ಸೈರಣೆಯು ಪರಸ್ಪರರಿಗಾಗಿಇರುವ ನಮ್ಮ ಪ್ರೀತಿಗೆ ಒಂದು ಸಾಕ್ಷಿಯಾಗಿದೆ (ಯೋಹಾನ 13:35 ನೋಡಿರಿ).

ಕರ್ತನು ಹತ್ತಿರವಾಗಿದ್ದಾನೆ. ಕರ್ತನು ಫಿಲಿಪ್ಪಿಯವರಿಗೆ ಹತ್ತಿರವಾಗಿದ್ದು ಅವರನ್ನೂ ನೋಡುತ್ತಿದ್ದಾನೆ ಎಂದು ಪೌಲನ ಅರ್ಥವಾಗಿದೆ. ಕ್ರಿಸ್ತನು ಫಿಲಿಪ್ಪಿಯಲ್ಲಿನ ತನ್ನ ಸಭೆಯನ್ನು ನಿರಂತರವಾಗಿ ಪವಿತ್ರಗೊಳಿಸುತ್ತಿದ್ದಾನೆ. ಆದರೆ ಕರ್ತನು ಹತ್ತಿರವಾಗಿದ್ದಾನೆ ಎಂಬ ಪೌಲನ ಹೇಳುಕೆಗೆ ಇನ್ನೊಂದು ಅರ್ಥವಿರುತ್ತದೆಃ ಅದೇನೆಂದರೆ, ಕರ್ತನು ತಿರಿಗಿ ಬರಲಿದ್ದಾನೆ ಎಂಬದೇ (ಯಾಕೋಬ 5:8). ಕೆಲವು ಜನರು ಕೇಳುವದೇನೆಂದರೆಃ "ಕರ್ತನು ಬರುವದಕ್ಕೆ ವಿಳಂಬ ಮಾಡುತ್ತಿದ್ದಾನೋ? ಪೌಲನು ಈ ಪತ್ರಿಕೆಯನ್ನು ಬರೆದಾಗ ಕರ್ತನ ಬರೋಣವು ಹತ್ತಿರವಾಗಿದ್ದರೆ ಆತನು ಇನ್ನೂ ಬಂದಿಲ್ಲವೇಕೆ?" ಆದರೆ ನಾವು ಆತನ ಬರೋಣದ ವಿಷಯದಲ್ಲಿ ಸಂಶಯ ಪಡದಿರೋಣ. ಬದಲಾಗಿ,ಕರ್ತನ ದೃಷ್ಟಿಯಲ್ಲಿ ಒಂದು ದಿನವೂ ಸಾವಿರ ವರ್ಷಗಳಂತೆಯೂ ಸಾವಿರ ವರ್ಷಗಳು ಒಂದು ದಿನದಂತೆಯೂ ಅದೆ ಎಂಬದನ್ನು ನಾವು ನೆನಪಿನಲ್ಲಿಟ್ಟುಕೊಳ್ಳೋಣ (2 ಪೇತ್ರ 3:8).

6 ಯಾವ ಸಂಬಂಧವಾಗಿಯೂ ಚಿಂತೆ ಮಾಡದಿರಿ. ಇದು ಒಂದು ಆಜ್ಞೆಯಾಗಿದೆ. ಚಿಂತೆ ಮಾಡುವದು ಯಾವಾಗಲೂ ಒಂದು ಪಾಪವಾಗಿದೆ ಯಾಕೆಂದರೆ ಚಿಂತೆಯು ನಂಬಿಕೆಯ ಕೊರತೆಗೆ ಗುರುತಾಗಿದೆ (ರೋಮ 14:23). ದೇವರು ಪರಲೋಕದಲ್ಲಿರುವ ಪ್ರೀತಿಸ್ವರೂಪಿ ಹಾಗು ಸರ್ವಶಕ್ತಿಯುಳ್ಳ ನಮ್ಮ ತಂದೆಯಾಗಿದ್ದಾನೆ. ಆತನು ತನ್ನ ಮಕ್ಕಳನ್ನು ಪರಾಂಭರಿಸುವನು (1 ಪೇತ್ರ 5:7). ನಾವು ಚಿಂತೆ ಮಾಡಬಾರದು (ಮತ್ತಾಯ 6:25-34 ನೋಡಿರಿ).

ಹೇಗಿದ್ದರೂ, ನಮಗೆ ಯಾವದಾದರೂ ಕೊರತೆಯಿರುವದಾದರೆ ನಾವು ಅದಕ್ಕಾಗಿ ದೇವರನ್ನು ಬೇಡಿಕೊಳ್ಳಬೇಕು (ಮತ್ತಾಯ 6:11, 7:7-8). ನಾವು ಬೇಡುವದಕ್ಕೆ ಮುಂಚೆಯೇ ನಮ್ಮ ಅಗತ್ಯತೆಯೇನೆಂಬದು ದೇವರಿಗೆ ತಿಳಿದಿರುತ್ತದೆ. ಹಾಗಿದ್ದರೂ, ಮಾನವ ತಂದೆಯು ತನ್ನ ಮಕ್ಕಳ ಮನವಿಗಳನ್ನು ಕೇಳಿಸಿಕೊಳ್ಳುವ ಪ್ರಕಾರವೇ ನಮ್ಮ ಪರಲೋಕದಲ್ಲಿರುವ ತಂದೆಯೂ ನಮ್ಮ ಬೇಡಿಕೆಗಳನ್ನು ಕೇಳಿಸಿಕೊಳ್ಳಲು ಇಚ್ಛಿಸುತ್ತಾನೆ. ಆದರೆ ನಾವು ದೇವರನ್ನು ನಂಬಿಕೆಯಿಂದ ಪ್ರಾರ್ಥಿಸಬೇಕು (ಯಾಕೋಬ 1:6-8). ಅದು ಮಾತ್ರವಲ್ಲ, ನಾವು ಕೃತಜ್ಞತಾಸ್ತುತಿಯೊಂದಿಗೆ ಬೇಡಿಕೊಳ್ಳಬೇಕು (5:20, ಫಿಲಿಪ್ಪಿ 1:3). ದೇವರು ನಮ್ಮ ಪ್ರಾರ್ಥನೆಗಳನ್ನು ಕೇಳುತ್ತಾನೆ, ಮತ್ತು ಆತನು ಯಾವಾಗಲೂ ನಮಗೆ ಉತ್ತರವನ್ನು ಕೊಡುತ್ತಾನೆ. ಆದದರಿಂದ, ನಾವು ಪ್ರಾರ್ಥಿಸುವ ವೇಳೆಯಲ್ಲಿಯೇ ಉತ್ತರವೊಂದನ್ನು ನಿರೀಕ್ಷಿಸಬಹುದು (1 ಯೋಹಾನ 5:14-15 ಮತ್ತು ವ್ಯಾಖ್ಯಾನ ನೋಡಿರಿ).

7 ದೇವಶಾಂತಿಯು ಪವಿತ್ರಾತ್ಮನ ಒಂಭತ್ತು ಫಲಗಳಲ್ಲಿ ಒಂದಾಗಿದೆ (ಗಲಾತ್ಯ 5:22). ದೇವಶಾಂತಿಯು ನಮ್ಮಮನಸ್ಸುಗಳನ್ನು ಪ್ರವೇಶಿಸುವಾಗ ಚಿಂತೆಯು ಹೊರಚು ಹೋಗುವದು. ಶಾಂತಿ ಮತ್ತು ಚಿಂತೆ ಒಂದಕ್ಕೊಂದು ತದ್ವಿರುದ್ಧವಾಗಿವೆ. ದೇವರ ಶಾಂತಿಯು ನಮ್ಮ ತಿಳುವಳಿಕೆಗಿಂತಲೂ ದೊಡ್ಡದಾಗಿದೆ. ಅದು ಎಲ್ಲಾ ಗ್ರಹಿಕೆಯನ್ನು ಮೀರುವದಾಗಿದೆ. ನಮ್ಮ ತಿಳುವಳಿಕೆಯಿಂದ ನಾವು ನಮ್ಮನ್ನು ಚಿಂತೆಗೊಳಪಡಿಸುವ ಸಂಗತಿಗಳನ್ನು ಕಾಣುತ್ತಾವೆ. ಆದರೆ ದೇವಶಾಂತಿಯು ಬಂದಾಗ ನಮ್ಮಚಿಂತೆಯನ್ನು ಜಯಿಸುತ್ತೇವೆ. ದೇವರ ಶಾಂತಿ (ಸಮಾಧಾನ) ನಿಮ್ಮ ಹೃದಯಗಳನ್ನೂ ಮನಸ್ಸುಗಳನ್ನೂ ಪ್ರತಿಯೊಂದು ಚಿಂತೆಯಿಂದ ಕಾಯುವದು. ಚಿಂತೆಗಳು ಸೈತಾನನ ಆಯುಧಗಳಾಗಿವೆ. ಆದರೆ ದೇವರ ಶಾಂತಿಯು ಕ್ರಿಸ್ತಯೇಸುವಿನಲ್ಲಿ ಮಾತ್ರವೇ ದೊರೆಯುತ್ತದೆ. ಕ್ರಿಸ್ತನನ್ನು ಹೊರತುಪಡಿಸಿ ಪವಿತ್ರಾತ್ಮನು ನಮ್ಮೊಳಗೆ ವಾಸಿಸುವದಿಲ್ಲ. ಮತ್ತು ಪವಿತ್ರಾತ್ಮನು ನಮ್ಮ ಜೀವಿತದಲ್ಲಿ ಇಲ್ಲದಿದ್ದರೆ ಶಾಂತಿಯೂ ಇರುವದಿಲ್ಲ.

8 ನಾವು ಯಾವ ರೀತಿಯ ಸಂಗತಿಗಳ ಬಗ್ಗೆ ಯೋಚಿಸುತ್ತೇವೆ, ನಾವು ಯಾವುದರ ಮೇಲೆ ಲಕ್ಷವಿಡುತ್ತೇವೆ? ನಾವು ಹೆಚ್ಚು ಸಮಯವನ್ನು ಇತರರಲ್ಲಿ ತಪ್ಪುಗಳನ್ನು ಹುಡುಕುವದರಲ್ಲಿ ಕಳೆಯುತ್ತೇವೋ? ನಾವು ಅದನ್ನು ನಿಲ್ಲಿಸೋಣ. ಬದಲಾಗಿ, ನಾವು ಸತ್ಯವೂ, ಮಾನ್ಯವೂ, ಶುದ್ಧವೂ, ಪ್ರೀತಿಕರವೂ, ಮನೋಹರವೂ, ಆಗಿದೆಯೋ....ಅವೆಲ್ಲವೂಗಳನ್ನು ಲಕ್ಷಕ್ಕೆ ತಂದುಕೊಳ್ಳೋಣ.

9 ನಾವು ಬೈಬಲಿನಿಂದ ಓದುವ ಅಥವಾ ಕೇಳುವ ಸತ್ಯ ಬೋಧನೆಯು ಯಾವದಿದ್ದರೂ ಅದನ್ನು ಆಚರಣೆಗೆ ತರುವವರಾಗಿರಬೇಕುಃ ವಾಕ್ಯದ ಪ್ರಕಾರ ನಡೆಯುವವರಾಗಿರಿ, ಅದನ್ನು ಕೇಳುವವರು ಮಾತ್ರವೇ ಆಗಿರಬೇಡಿರಿ (ಯಾಕೋಬ 1:22,25). ನಾವು ದೇವರ ವಾಕ್ಯಕ್ಕೆ ವಿಧೇಯರಾಗುವದಾದರೆ ದೇವಶಾಂತಿ ಮಾತ್ರವಲ್ಲ (ವಚನ7) ಆದರೆ ಶಾಂತಿದಾಯಕನಾದ ದೇವರು–ಸ್ವತಃ ದೇವರೇ!–ನಮ್ಮ ಸಂಗಡ ಇರುವನು.

## ಅವರ ಕಾಣಿಕೆಗಳಿಗಾಗಿ ಕೃತಜ್ಞತೆಗಳು (4:10-23)

**10** ಫಿಲಿಪ್ಪಿಯವರು ತನಗೆ ತೋರಿದ ಪ್ರೀತಿ ಹಾಗು ಔದಾರ್ಯಕ್ಕಾಗಿ ಪೌಲನು ಸಂತೋಷ ಪಡುತ್ತಾನೆ. ಎಪಫ್ರೋಧೀತನು ಇತ್ತೀಚಿಗಷ್ಟೇ ಪೌಲನಿಗಾಗಿ ಫಿಲಿಪ್ಪಿಯವರಿಂದ ಕಾಣಿಕೆಯನ್ನು ತಂದಿರುತ್ತಾನೆ (ವಚನ 18).

**11-12** ಆದರೆ ಪೌಲನು 10ನೇ ವಚನದಲ್ಲಿ ತಾನು ಇನ್ನೂ ಕೊರತೆಯಲ್ಲಿದ್ದಾನೆ ಹಾಗು ಫಿಲಿಪ್ಪಿಯವರಿಂದ ಮತ್ತಷ್ಟು ಹೆಚ್ಚು ಸಹಾಯವನ್ನು ಪಡೆಯುವ ನಿರೀಕ್ಷೆ ಹೊಂದಿದ್ದಾನೆಂಬ ಕಾರಣಕ್ಕಾಗಿ ಬರೆದಿರುವದಿಲ್ಲ. ಆತನು ಫಿಲಿಪ್ಪಿಯವರ ಮುಖಸ್ತುತಿ ಮಾಡುವದಕ್ಕಲ್ಲ, ಆದರೆ ಕೇವಲ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುವದಕ್ಕಾಗಿ ಬರೆಯುತ್ತಿದ್ದಾನೆ. ಪೌಲನು ಯಾವದೇ ಪರಸ್ಥಿತಿಗಳಿದ್ದರೂ ಸಂತುಷ್ಟನಾಗಿರುವದನ್ನು ಕಲಿತುಕೊಂಡಿದ್ದಾನೆ (1 ತಿಮೊಥೆ 6:6). ಬೇರೆ ಮಾತುಗಳಲ್ಲಿ ಹೇಳುವದಾದರೆ, ಪೌಲನ ಸಂತುಷ್ಟತೆಯು ಹೊರಗಿನ ಪರಸ್ಥಿತಿಗಳ ಮೇಲೆ ಅವಲಂಭಿತವಾಗಿರುವದಿಲ್ಲ. ಆತನು ದೇವಶಾಂತಿಯಿಂದ ತುಂಬಿರುತ್ತಾನೆ. (ವಚನ 7). ನಾವು ಪೌಲನಂತೆ ಯಾವಾಗಲೂ ಸಂತುಷ್ಟರಾಗಿರುವದಕ್ಕೆ ಕಲಿತುಕೊಳ್ಳೋಣ. ನಾವು ಸಮೃದ್ಧರಾಗಿರುವದಾದರೆ ದೇವರಿಗೆ ಸ್ತೋತ್ರ ಸಲ್ಲಿಸುತ್ತಾ ನಿರ್ದೋಷ ಮನಸಾಕ್ಷಿಯೊಂದಿಗೆ ಅದನ್ನು ದೀನತೆಯಿಂದ ಸ್ವೀಕರಿಸಿಕೊಳ್ಳೋಣ. ನಮಗೆ ಅಲ್ಪವಾಗಿರುವದಾದರೆ ನಾವು ದೇವರ ವಿರುದ್ಧ ದೂರು ಹೇಳುವರಾಗಿರದೇ ಎಲ್ಲಾ ಸಂಗತಿಗಳಲ್ಲಿನ ಆತನ ಪೂರ್ಣ ಚಿತ್ತವನ್ನು ಸ್ವೀಕರಿಸಿಕೊಳ್ಳೋಣ (ಯೋಬ 1:21-22).

ಪ್ರಾಪಂಚಿಕ ಜನರು – ದೇವರಿಗಿಂತಲೂ ಹೆಚ್ಚಾಗಿ ಲೋಕವನ್ನು ಪ್ರೀತಿಸುವರು–ಯಾವಾಗಲೂ ಶಾರೀರಿಕ ಸುಖ–ಭೋಗಗಳನ್ನು ಹುಡುಕುತ್ತಾರೆ. ಆದರೆ ಕ್ರಿಸ್ತನ ವಿಶ್ವಾಸಿಗಳಾದ ನಾವು ನಮ್ಮ ದೈಹೀಕ ಅಗತ್ಯತೆಗಳಿಗಾಗಿ ಮಾತ್ರವೇ ತವಕಪಡಬೇಕು. ನಮ್ಮ ದೈಹೀಕ ಜೀವಿತಗಳಿಗೆ ಸಂಬಂಧಿಸಿದಂತೆ ನಾವು ನಮ್ಮ ಜೀವಿತದಹಿತಕ್ಕಾಗಿ ಅವಶ್ಯಕವಾಗಿರುವಂಥವುಗಳಿಗೋಸ್ಕರ ಮಾತ್ರವೇ ದೇವರನ್ನು ಬೇಡಿಕೊಳ್ಳಬೇಕು. ಆದರೆ ನಮ್ಮ ಆತ್ಮೀಕ ಜೀವಿತಗಳಿಗೆ ಸಂಬಂಧಪಟ್ಟಂತೆ ನಾವು ದೇವರಿಂದ ಯಾವುದಕ್ಕಾಗಿ ಕೇಳಿಕೊಳ್ಳುತ್ತೇವೆಂಬುದಕ್ಕೆ ಮಿತಿಯಿರುವದಿಲ್ಲ. ದೇವರು ನಮಗೆ ಆತ್ಮೀಕ ವರಗಳನ್ನು ಆಶಿರ್ವಾದಗಳನ್ನೂ ಹೇರಳವಾಗಿ ದಯಪಾಲಿಸುವದಕ್ಕೆ ಸಿದ್ಧನಾಗಿದ್ದಾನೆ.

**13** ಪೌಲನು 12ನೇ ವಚನದಲ್ಲಿ ತಾನು ಸಂತುಷ್ಟನಾಗಿರುವದರ ಗುಟ್ಟನ್ನು ತಿಳಿದವನಾಗಿದ್ದಾನೆಂದು ಹೇಳಿದನು. ಆ"ಗುಟ್ಟು" ಯಾವದು?ಪೌಲನ ಮಾತುಗಳಲ್ಲಿ ಆ ಗುಟ್ಟು ಏನೆಂದರೆಃ ನನ್ನನ್ನು ಬಲಪಡಿಸುವಾತನಲ್ಲಿ ಇದ್ದುಕೊಂಡು (ಕ್ರಿಸ್ತನು) ಎಲ್ಲಕ್ಕೂ ಶಕ್ತನಾಗಿದ್ದೇನೆ. ಕ್ರಿಸ್ತನು ಕೊಡುವದಕ್ಕೆ ಸಾಧ್ಯವಿಲ್ಲದ್ದು ಯಾವದೂ ಇರುವದಿಲ್ಲ. ಕ್ರಿಸ್ತನು ನಮ್ಮನ್ನು ಇಂಥ ಕಾರ್ಯವನ್ನು ಮಾಡುವದಕ್ಕೆ ಶಕ್ತರನ್ನಾಗಿಸಲು ಸಾಧ್ಯವಿಲ್ಲ ಎಂದು ಹೇಳುವ ಯಾವ ಕಾರ್ಯವೂ ಇರಿವದಿಲ್ಲ (2 ಕೊರಿಂಥ 12:9 ನೋಡಿರಿ). ಈ ಕಾರಣದಿಂದ ನಾವು ಕ್ರಿಸ್ತನ ಮುಖಾಂತರ ಎಲ್ಲವನ್ನೂ ಮಾಡುವದಕ್ಕೆ ಶಕ್ತರಾಗಿದ್ದೇವೆ (ಎಫೆಸ 3:20-21 ನೋಡಿರಿ).

**14** ಪೌಲನು ಫಿಲಿಪ್ಪಿಯವರ ಸಹಾಯವಿಲ್ಲದೆ ನಿಭಾಯಿಸಿಕೊಂಡಿರಬಹುದಿತ್ತಾದರೂ ಅವರು ಆತನ ಕಷ್ಟಗಳಲ್ಲಿ ಪಾಲುಗಾರರಾಗಿದ್ದಾರೆಂಬದಕ್ಕೆ ಕೃತಜ್ಞತೆಯುಳ್ಳವನಾಗಿದ್ದಾನೆ.

**15-16** ಇಲ್ಲಿ ಪೌಲನು ಫಿಲಿಪ್ಪಿಯವರ ಮುಂಚಿನ ಔದಾರ್ಯತೆ ಹಾಗು ಸಹಾಯವನ್ನು ನೆನಪಿಸಿಕೊಂಡು ಪ್ರಶಂಸಿ–ಸುತ್ತಾನೆ (ಫಿಲಿಪ್ಪಿ 1:4-5).

**17** ಪೌಲನು ಫಿಲಿಪ್ಪಿಯವರಿಂದ ಮತ್ತಷ್ಟು ಸಹಾಯವನ್ನು ಪಡೆಯಬೇಕೆಂಬ ಉದ್ದೇಶದಿಂದ ಅವರನ್ನು ಹೊಗಳುತ್ತಿಲ್ಲ ಬದಲಾಗಿ, ಅವರು ತನಗೆ ತೋರಿದ ಔದಾರ್ಯಕ್ಕಾಗಿ ಆತ್ಮೀಕ ಪ್ರತಿಫಲವನ್ನು ಪಡೆಯುವಂತಾಗಬೇಕೆಂದು ಅಪೇಕ್ಷಿಸು-ವವನಾಗಿದ್ದಾನೆ. ಅವರು ತಮ್ಮ ಔದಾರ್ಯಕ್ಕಾಗಿ ಆತ್ಮೀಕವಾಗಿ ಆಶೀರ್ವಧಿಸಲ್ಪಡಬೇಕೆಂದು ಆತನು ಇಚ್ಛಿಸುತ್ತಾನೆ. ಅವರ ಔದಾರ್ಯತೆಯು ಅವರ ಲೆಕ್ಕಕ್ಕೆ ಎಣಿಸಲ್ಪಡಬೇಕೆಂದು ಬಯಸುತ್ತಾನೆ.

**18** ಎಪಫ್ರೋಧೀತನು ಇತ್ತೀಚೆಗಷ್ಟೇ ಫಿಲಿಪ್ಪಿಯವರಿಂದ ತಂದಿದ್ದ ಕಾಣಿಕೆಯಿಂದಾಗಿ ಪೌಲನು ಈಗ ಸಮೃದ್ಧಿಯಾಗಿ ಒದಗಿಸಲ್ಪಟ್ಟಿರುತ್ತಾನೆ. ಅವರು ಕಳುಹಿಸಿದ ಕಾಣಿಕೆಯು ದೇವರಿಗೆ ಮೆಚ್ಚಿಕೆಯಾದದ್ದು, ಸುಗಂಧವಾಸನೆಯೇ, ಇಷ್ಟಯಜ್ಞವೇ ಆಗಿದೆ ಎಂದು ಹೇಳುತ್ತಾನೆ. ನಾವು ಇತರರಿಗೆ, ವಿಶೇಷವಾಗಿ ಕ್ರೈಸ್ತ ಸೇವೆಯಲ್ಲಿರುವವರಿಗೆ ಸಹಾಯ ಮಾಡುವಾಗಲೆಲ್ಲಾ ದೇವರಿಗೆ ಸುಗಂಧವಾಸನೆಯ ಕಾಣಿಕೆಯನ್ನು ಅರ್ಪಿಸುವವರಾಗಿದ್ದೇವೆ (ಇಬ್ರಿಯ 13:16 ನೋಡಿರಿ). ಈ ರೀತೀಯ ಕಾಣಿಕೆಯು ದೇವರಿಗೆ ಮೆಚ್ಚಿಕೆಯಾದದ್ದಾಗಿರುತ್ತದೆ. ನಾವು ನಮ್ಮ ಸಹೋದರರಿಗೆ ಏನೇ ಮಾಡಿದರೂ ಕ್ರಿಸ್ತನಿಗೂ ಮಾಡಿದವರಾಗುತ್ತೇವೆ (ಮತ್ತಾಯ 25:40). ಆದರೆ ನಮ್ಮ ಹಣದ ಯಜ್ಞಕ್ಕಿಂತಲೂ ಹೆಚ್ಚಾಗಿ ದೇವರು ಎಂದೆಂದಿಗೂ ನಮ್ಮ, ನಮ್ಮ ಜೀವಿತಗಳನ್ನೇ ತನಗೆ ಯಜ್ಞವಾಗಿ ಅರ್ಪಿಸಬೇಕೆಂದು ಬಯಸುತ್ತಾನೆ.

ನಾವು ಆತನಿಗೆ ವಿಧೇಯತೆಯಿಂದ ನಮ್ಮನ್ನೇ ಸಜೀವ ಯಜ್ಞವಾಗಿ ಅರ್ಪಿಸಬೇಕೆಂದು ದೇವರು ಬಯಸುತ್ತಾನೆ (ರೋಮ 12:1, ಇಬ್ರಿಯ 10:5-7).

**19-20** ಪೌಲನು 19ನೇ ವಚನದಲ್ಲಿ ಬರೆಯುವ ವಾಗ್ದಾನವು ಬೈಬಲ್ಲಿರುವ ಅತಿ ಶ್ರೇಷ್ಟವಾಗ್ದಾನಗಳಲ್ಲಿ ಒಂದಾಗಿದೆಃ ದೇವರು ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು. ದೇವರು ನಿಮ್ಮ ಪ್ರತಿಯೊಂದು ಕೊರತೆಯನ್ನು–ಶಾರೀರಿಕ ಹಾಗು ಆತ್ಮೀಕ !– ನೀಗಿಸುವನು. ಸಹೋದರ ಹಾಗು ಸಹೋದರಿಯರೇ, ನಿಮ್ಮಲ್ಲಿ ಯಾರಾದರೂ ಯಾವದೇ ಕೊರತೆಯಲ್ಲಿದ್ದೀರೋ? ದೇವರಲ್ಲಿಯೂ ಆತನ ವಾಗ್ದಾನಗಳಲ್ಲಿಯೂ ಭರವಸವಿಡಿರಷ್ಟೇ. ಆತನು ಹೇಳುವದೇನೆಂದರೆಃ "ನಾನು ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವೆನು" (2 ಕೊರಿಂಥ 9:8 ನೋಡಿರಿ).

ದೇವರು ನಿಮ್ಮ ಪ್ರತಿಯೊಂದು ಕೊರತೆಯನ್ನು ಕ್ರಿಸ್ತ ಯೇಸುವಿನಲ್ಲಿ ನೀಗಿಸುವನು. ಕ್ರಿಸ್ತನ ಹೊರತು ನಾವು ದೇವರ ಯಾವದೇ ವಾಗ್ದಾನಗಳನ್ನು ಪಡೆದುಕೊಳ್ಳುವದಿಲ್ಲ. ನಮ್ಮ ಪ್ರತಿಯೊಂದು ಕೊರತೆಯು ಕ್ರಿಸ್ತನಲ್ಲಿ ಹಾಗು ಕ್ರಿಸ್ತನ ಮೂಲಕ ನೀಗಿಸಲ್ಪಡುವದು. ಕ್ರಿಸ್ತನ ಜೊತೆಯಲ್ಲಿ ಈ ಎಲ್ಲಾ ಸಂಗತಿಗಳನ್ನು ದೇವರು ನಮಗೆ ಉಚಿತವಾಗಿ ಕೊಡುತ್ತಾನೆ, ಆದರೆ ನಾವು ಕ್ರಿಸ್ತನಲ್ಲಿಲ್ಲದಿದ್ದರೆ ಏನನ್ನೂ ಪಡೆದುಕೊಳ್ಳುವದಿಲ್ಲ (ಮತ್ತಾಯ 6:33, ರೋಮ 8:32 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ದೇವರು ನಮಗೆ ಸ್ವಲ್ಪವನ್ನೇ ಕೊಡುವನೋ? ಆತನು ನಮಗೆ ಕೇವಲ ಸಾಕಾಗುವಷ್ಟನ್ನೇ ಕೊಡುವನೋ? ಇಲ್ಲ, ಆತನು ನಮಗೆ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ಕೊಡುವನು! (ಎಫೆಸ 1:3, 3:8,20-21 ನೋಡಿರಿ).

ಕ್ರಿಸ್ತನ ಪ್ರಭಾವದ ಐಶ್ವರ್ಯಕ್ಕೆ ಮೀತಿಯಿರುವದಿಲ್ಲ. ಮತ್ತು ಈ ಐಶ್ವರ್ಯವು ಆತನಲ್ಲಿ ನಮ್ಮದಾಗಿದೆ! ದೇವರಿಗೆ ಸ್ತೋತ್ರವಾಗಲಿ! ಆದರೆ ಇಲ್ಲಿ ಒಂದು ಎಚ್ಚರಿಕೆಯ ಮಾತು ಅವಶ್ಯಕವಾಗಿದೆ. ಪೌಲನು 19ನೇ ವಚನದಲ್ಲಿ ಸೂಚಿಸುವ ಪ್ರಭಾವದ ಐಶ್ವರ್ಯವು ಪ್ರಾಥಮಿಕವಾಗಿ ಆತ್ಮೀಕ ಐಶ್ವರ್ಯವೇ ಹೊರತು ಭೌತೀಕ ಐಶ್ವರ್ಯವಲ್ಲ. ಭೌತೀಕ ಸಂಗತಿಗಳಲ್ಲಿ ದೇವರು ನಮ್ಮ ಕೊರತೆಗಳನ್ನು ಮಾತ್ರವೇ–ನಮಗೆ ಬೇಕಾದವುಗಳನ್ನಲ್ಲ!–ನೀಗಿಸುವದಕ್ಕೆ ವಾಗ್ದಾನಮಾಡಿದ್ದಾನೆ ಆದರೆ ಆತ್ಮೀಕ ಸಂಗತಿಗಳಲ್ಲಿ ದೇವರು ಸಮೃದ್ಧಿಯಾಗಿ ಆಶೀರ್ವಧಿಸುತ್ತೇನೆಂದು ವಾಗ್ದಾನ ಮಾಡಿದ್ದಾನೆ.

**21-22** ಪೌಲನು ಇಲ್ಲಿ ಫಿಲಿಪ್ಪಿಯವರಿಗೆ ರೋಮಾಪುರದಲ್ಲಿರುವ ವಿವಿಧ ಕ್ರೈಸ್ತರಿಂದ ವಂದನೆಗಳನ್ನು ತಿಳಿಸುತ್ತಾನೆ. ಕೈಸರನ ಅರಮನೆಗೆ ಸೇರಿದವರು. ಕೈಸರನ 13 ಕೆಲವು ಮಂದಿ ಸೇವಕರು ಹಾಗು ಅರಮನೆಯ ಅಧಿಕಾರಿಗಳಾಗಿದ್ದಾರೆ. ಪೌಲನು ಕೈಸರನ ಬಂಧಿಯಾಗಿದ್ದನಾದ್ದರಿಂದ ಆತನು ಕೈಸರನ ಮನೆಯವರಲ್ಲಿ ಕೆಲವರ ಸಂಪರ್ಕ ಹೊಂದಿದ್ದನು. ಆತನ ಸಾಕ್ಷಿಯ ಮುಖಾಂತರ ಕೆಲವರು ಕ್ರೈಸ್ತರಾಗಿದ್ದರು (ಫಿಲಿಪ್ಪಿ 1:13 ನೋಡಿರಿ).

**23** 1 ಕೊರಿಂಥ 16:23 ಮತ್ತು ವ್ಯಾಖ್ಯಾನ ನೋಡಿರಿ.

---

## ಟಿಪ್ಪಣಿ

[1] ಗ್ರೀಸ ದಕ್ಷಿಣ ಐರೋಪ್ಯದ ಒಂದು ಮುಖ್ಯವಾದ ರಾಷ್ಟ್ರವಾಗಿತ್ತು. ಹೊಸ ಒಡಂಬಡಿಕೆಯ ಕಾಲದಲ್ಲಿ ಅದು ರೋಮಾಯ ಸಾಮ್ರಾಜ್ಯದ ಆಡಳಿತಕ್ಕೆ ಒಳಪಟ್ಟಿತ್ತು. ಹಾಗಿದಿದರೂ, ಅದು ಸಂಸ್ಕೃತಿ ಹಾಗು ವಿದ್ಯೆಯ ಕೇಂದ್ರವಾಗಿ ಉಳಿದಿತ್ತು. ಹೊಸ ಒಡಂಬಡಿಕೆಯ ಕಾಲದಲ್ಲಿದ್ದ ಬಹುಪಾಲು ವಿದ್ಯಾವಂತರು ಗ್ರೀಕ ಭಾಷೆಯನ್ನಾಡುತ್ತಿದ್ದರು. ಸ್ವತಃ ಹೊಸ ಒಡಂಬಡಿಕೆಯೇ ಮೂಲತಃ ಗ್ರೀಕ ಭಾಷೆಯಲ್ಲಿ ಬರೆಯಲ್ಪಟ್ಟಿತ್ತು.

[2] ಸಭಾಧ್ಯಕ್ಷರು ಎಂಬ ಪದಕ್ಕೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಸಭಾ ಹಿರಿಯರು" (ಬಿಷೋಪ) ಎಂದು ಹೇಳುತ್ತವೆ. ಅರ್ಥವು ಒಂದೇ ಆಗಿದೆ , "ಬಿಷೋಪ" ಸಭಾಧ್ಯಕ್ಷನಿಗಿರುವ ಹೆಸರಾಗಿದೆಯಷ್ಟೇ. ಹೇಗಿದ್ದರೂ ಸಭಾಚರಿತ್ರೆಯ ಅನಂತರದ ಕಾಲದಲ್ಲಿ "ಬಿಷೋಪ" (ಸಭಾಹಿರಿಯರು) ಎಂಬ ಪದವು ಸಭೆಯ ವಿಶೇಷ ಉನ್ನತ ವರ್ಗದ ನಾಯಕ ಎಂಬ ಅರ್ಥವನ್ನು ಕೊಡುವದಾಯಿತು.

[3] ಈ ಒಂದು ಕ್ಲುಪ್ತ ವಚನದಲ್ಲಿ ನಾವು ಎತಡು ದೊಡ್ಡ ಸಿದ್ದಾಂತಗಳಾದ ನೀತಿಕರಣ ಮತ್ತು ಶುದ್ಧೀಕರಣಗಳನ್ನು ಕಾಣ–ಬಹುದಾಗಿದೆ. ನೀತಿಕರಣವು ದೇವರು ನಮ್ಮಲ್ಲಿ ಪ್ರಾರಂಭಿಸಿದ ಒಳ್ಳೇ ಕೆಲಸವಾಗಿದೆ. ನಾವು ದೇವರ ಉಚಿತಾರ್ಥಕೃಪೆಯಿಂದಲೇ ನೀತಿವಂತರೆಂದು ನಿರ್ಣಯ ಹೊಂದಿದ್ದೇವೆ(ರೋಮ 3:24). ಶುದ್ಧೀಕರಣವು ಆ ಕೆಲಸವನ್ನು ಸಿದ್ಧಿಗೆ ತರುವದು, ಸಂಪೂರ್ಣ ಪರಿಶುದ್ಧತೆಗೆ ತರುವದೇ ಆಗಿದೆ. ನಮ್ಮ ನೀತಿಕರಣವು ಈಗಾಗಲೇ ಸಂಭವಿಸಿರುತ್ತದೆ–ಕೃಪೆಯಮೂಲಕ ನಂಬಿಕೆಯಿಂದಲೇ. ನಮ್ಮ ಶುದ್ಧೀಕರಣವು –ಕೃಪೆಯ ಮೂಲಕ ನಂಬಿಕೆಯಿಂದಲೇ–ನಮ್ಮ ಜೀವಿತ ಕಾಲವೆಲ್ಲಾ ನಡೆಯುತ್ತಿರುತ್ತದೆ. ಹೆಚ್ಚಿನ ಚರ್ಚೆಗಾಗಿ, ಸಾಮಾನ್ಯ ಲೇಖನಃ ರಕ್ಷಣೆಯ ಮಾರ್ಗ, ಪವಿತ್ರಾತ್ಮನು ನೋಡಿರಿ.

[4] ಕ್ರಿಸ್ತನ ದಿನವು ನ್ಯಾಯತೀರ್ಪಿನ ದಿನ ಎಂದು ಸಹ ಅರ್ಥ ನೀಡುತ್ತಾರೆ, ಆಗ ಕ್ರಿಸ್ತನು ಪ್ರತಿಯೊಬ್ಬ ಮನುಷ್ಯನಿಗೂ ನ್ಯಾಯ ತೀರಿಸುವನು (ಯೋಹಾನ 5:22, 2 ಕೊರಿಂಥ 5:10). ನ್ಯಾಯ ತೀರ್ಪಿನ ದಿನವು ಲೋಕಾಂತ್ಯದಲ್ಲಿ ಕ್ರಿಸ್ತನು ತಿರಿಗಿ ಬರುವಾಗ ಸಂಭವಿಸುತ್ತದೆ.

[5] ಬಿಡುಗಡೆ ಎಂಬ ಪದದ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ರಕ್ಷಣೆ" ಎಂದು ಹೇಳುತ್ತವೆ.

[6] ಐಕಮತ್ಯದ ಹೊರತಾಗಿ ಯೇಸುವಿಗೆ ವಿಶೇಷ ಸಂತೋಷವನ್ನು ಇನ್ನೊಂದು ಸಂಗತಿ ನಮ್ಮ ಪವಿತ್ರತೆ. ಪವಿತ್ರತೆಮತ್ತು ಐಕಮತ್ಯಗಳೆರಡೂ ಸಭೆಗೆ ಸಮಾನವಾಗಿ ಅತ್ಯವಶ್ಯಕವಾಗಿವೆ.

[7] ಕ್ರೈಸ್ತರು ದೇವರ ದಂಡನೆಯ ಬಗ್ಗೆ ಭಯಪಡುವ ಆಗತ್ಯವಿಲ್ಲ, ಆದರೆ ಅವರು ದೇವರಿಗೆ ಅಸಮಾಧಾನ ಹಾಗು ನಿರಾಶೆಯುಂಟು ಮಾಡುವದರ ಬಗ್ಗೆ ಭಯಪಡುವ ಅಗತ್ಯವಿರುತ್ತದೆ.

[8] ತೋರಿಸಿಕೊಡುವವರು ಎಂಬ ಮಾತುಗಳಿಗೆ ಬದಲಾಗಿ ಕೆಲವು ಭಾಷಾಂತರಗಳು "ಹಿಡಿದಿಟ್ಟುಕೊಂಡಿರುವವರು" ಎಂದು ಹೇಳುತ್ತವೆ. ಎರಡು ಅರ್ಥಗಳು ಬೇರೆ ಬೇರೆ ಆಗಿದ್ದಾಗ್ಯು ಅವೆರಡೂ ಸರಿಯಾದವುಗಳು. ಪೌಲನು ಯಾವ ಅರ್ಥವನ್ನು ಮನಸ್ಸಿನಲ್ಲಿಟ್ಟು–ಕೊಂಡಿದ್ದನೆಂಬದು ಖಚಿತವಾಗಿರುವದಿಲ್ಲ.

[9] ಇಬ್ರಿಯರು ಯೆಹೂದ್ಯರಾಗಿದ್ದು ಅವರು ಇಬ್ರಿಯ ಅಥವಾ ಅರಾಮಿಕ್ ಭಾಷೆಗಳನ್ನಾಡುತ್ತಿದ್ದರು. ಪೌಲನ ಕಾಲದಲ್ಲಿ ಯೆಹೂದ್ಯರಲ್ಲಿ ಮುಖ್ಯವಾದ ಎರಡು ವಿಧಗಳ ಜನರಿದ್ದರುಃ ಗ್ರೀಕ ಭಾಷೆಗಳನ್ನಾಡುತ್ತಿದ್ದವರು ಮತ್ತು ಇಬ್ರಿಯ ಅಥವಾ ಅರಾಮಿಕ್ ಭಾಷೆಯನ್ನಾಡುತ್ತಿದ್ದವರು (ಅ.ಕೃ. 6:1). ಪೌಲನು ಮಾತಾಡಬಲ್ಲವನಾಗಿದ್ದಾಗ್ಯು ಆತನು ಸ್ವತಃ ಒಬ್ಬ ಯೆಹೂದ್ಯನಾಗಿದ್ದನು. ಇಬ್ರಿಯರು ತಮ್ಮನ್ನು ಎಲ್ಲರಲ್ಲಿಯೂ ಅತಿ ನಿಜವಾದ ಯೆಹೂದ್ಯರೆಂದು ಪರಿಗಣಿಸಿಕೊಳ್ಳು ತ್ತಿದ್ದರು.

[10] ಶಿಲುಬೆಯ ವಿರೋಧಿಗಳೊಳಗೆ ಯೆಹೂದ್ಯರಾಗಿದ್ದವರು ಸಹ ತಮ್ಮ ಶರೀರ ಸಂಬಂಧವಾದ ವಿಷಯದಲ್ಲಿ, ಅಂದರೆ,ಸುನ್ನತಿಯಲ್ಲಿ ಹೆಮ್ಮೆಪಟ್ಟುಕೊಳ್ಳುತ್ತಿದ್ದರು (ವಚನ 3).

[11] ಕ್ಲೇಮೆನ್ನ ಬಗ್ಗೆ ಹೊಸ ಒಡಂಬಡಿಕೆ ಯಲ್ಲಿ ಬೇರೆ ಇನ್ನಾವ ಕಡೆಯಲ್ಲಿಯೂ ಪ್ರಸ್ತಾಪಿಸಲ್ಪಟ್ಟಿರುವದಿಲ್ಲ. ಆತನು ಯಾರಾಗಿದ್ದನೆಂಬುದು ತಿಳಿದುಬಂದಿರುವದಿಲ್ಲ.

[12] ಯೆಹೂದ್ಯ ಧರ್ಮಶಾಸ್ತ್ರಕ್ಕೆ ಅನುಗುಣವಾಗಿ ಯೆಹೂದ್ಯರು ತಾವು ಯಜ್ಞಗಳನ್ನು ಅರ್ಪಿಸುವಾಗ ಸುಗಂಧಧೂಪವನ್ನು ಉರಿಸುತ್ತಿದ್ದರು.

[13] ಎಲ್ಲಾ ರೋಮಾಯ ಚಕ್ರವರ್ತಿಗಳಿಗೆ ಕೈಸರ ಎಂಬ ಬಿರುದು ಇತ್ತು "ಕೈಸರ" ಎಂದರೆ ಚಕ್ರವರ್ತಿ.

# ಪೌಲನು ಕೊಲೆಸ್ಸೆಯವರಿಗೆ ಬರೆದ ಪತ್ರಿಕೆ

## ಪರಿಚಯ

ಕೊಲೆಸ್ಸೆಯು ರೋಮಾಯ ಸಾಮ್ರಾಜ್ಯದ ಒಂದು ಚಿಕ್ಕ ನಗರವಾಗಿದ್ದು ಇಂದಿನ ಆಧುನಿಕ ಟರ್ಕಿಯ ಸ್ಥಳದಲ್ಲಿತ್ತು. ಅದು ಎಫೆಸದಿಂದ ಸುಮಾರು ನೂರು ಮೈಲಿಗಳಷ್ಟು ದೂರವಿತ್ತು. ಪೌಲನು ಎಫೆಸದಲ್ಲಿರುವ ವೇಳೆಯಲ್ಲಿ ಕೊಲೊಸ್ಸೆಯಿಂದ ಬಂದ ಕೆಲವು ಜನರು ಆತನ ಬೋಧನೆಯನ್ನು ಕೇಳಿದ್ದರು (ಎಫೆಸದವರಿಗೆಃ ಪರಿಚಯ ಭಾಗವನ್ನು ನೋಡಿರಿ). ಈ ಕೊಲೆಸ್ಸೆಯ ಸಂದರ್ಶಕರಲ್ಲಿ ಒಬ್ಬನ ಹೆಸರು ಎಪಫ್ರನು (ಕೊಲೊಸ್ಸೆ 1:7-8), ಈತನು ಪೌಲನಸುವಾರ್ತೆಯನ್ನು ನಂಬಿದವನಾಗಿ ಕೊಲೊಸ್ಸೆಗೆ ಹಿಂದಿರುಗಿ ಅಲ್ಲಿ ಒಂದು ನೂತನ ಸಭೆಯನ್ನು ಪ್ರಾರಂಭಿಸಿದನು.

ಈ ನೂತನ ಕೊಲೊಸ್ಸೆ ಸಭೆಯಲ್ಲಿ ಕೆಲವು ಸುಳ್ಳು ಬೋಧನೆಗಳು ಉದ್ಭವಿಸಿದ್ದಂತೆ ಕಾಣುತ್ತದೆ. ಆದದರಿಂದ, ಎಪಫ್ರನು ಸುಳ್ಳುಬೋಧನೆಯನ್ನು ಖಂಡಿಸಿ ಕ್ರಿಸ್ತನ ಸತ್ಯಸುವಾರ್ತೆಯನ್ನು ತಿಳಿಸುತ್ತಾ ಸಭೆಗೆ ಒಂದು ಪತ್ರಿಕೆಯನ್ನು ಕಳುಹಿಸಬೇಕೆಂದು ಪೌಲನನ್ನು ಕೇಳಿಕೊಂಡನು. ಮಧ್ಯಪೂರ್ವದಲ್ಲಿದ್ದ ಕ್ರೈಸ್ತರೆಲ್ಲರೂ ಪೌಲನ ಬೋಧನೆಯನ್ನು ಕೇಳಿದ್ದರಾದ್ದರಿಂದ ಕೊಲೆಸ್ಸೆಯಲ್ಲಿರುವ ವಿಶ್ವಾಸಿಗಳು ಇಂತಹ ಒಬ್ಬ ಪ್ರಾಮುಖ್ಯ ನಾಯಕನ ಬುದ್ಧಿವಾದಗಳಿಗೆ ಕಿವಿಕೊಡುವರೆಂದು ಎಪಫ್ರನು–ನಿರೀಕ್ಷಿಸಿದನು.

ಆದದರಿಂದ, ಕೊಲೊಸ್ಸೆಯವರಿಗೆ ಬರೆದ ಈ ಪತ್ರಿಕೆಯ ಮೊದಲಿನ ಎರಡು ಅಧ್ಯಾಯಗಳಲ್ಲಿ ಪೌಲನುಸುವಾರ್ತೆಯ ಮೂಲ ಬೋಧನೆಗಳನ್ನು ನೀಡುತ್ತಾನೆ ಮತ್ತು ಕೊಲೊಸ್ಸೆಯಲ್ಲಿ ಉದ್ಭವಿಸಿದ್ದ ಸುಳ್ಳುಬೋಧನೆಯನ್ನು ಖಂಡಿಸುತ್ತಾನೆ.

ನಂತರ, ಕೊನೆಯ ಎರಡು ಅಧ್ಯಾಯಗಳಲ್ಲಿ ಒಬ್ಬನು ಕ್ರೈಸ್ತ ಜೀವಿತವನ್ನು ಹೇಗೆ ಜೀವಿಸಬೇಕೆಂಬದರ ಬಗ್ಗೆಅಭ್ಯಾಸಗತ ಸಲಹೆಯನ್ನು ನೀಡುತ್ತಾನೆ. ಪೌಲನು ಈ ಪತ್ರಿಕೆಯನ್ನು ತಾನು ರೋಮಾಪುರದಲ್ಲಿ ಸೆರೆಯಾಗಿದ್ದಾಗ ಸುಮಾರು ಕ್ರಿ.ಶಕ. 60-61ರಲ್ಲಿ ಬರೆದನೆಂದು ಬಹುಪಾಲು ಪಂಡಿತರು ನಂಬುತ್ತಾರೆ. ಪೌಲನ ಸಹಪಾಠಿಯೊಬ್ಬನಾದ ತುಖಿಕನು ಈಪತ್ರಿಕೆಯನ್ನು ಕೊಲೆಸ್ಸೆಯವರ ಬಳಿಗೆ ಕೊಂಡೊಯ್ದನು, ಇದರ ಜೊತೆಯಲ್ಲಿ ಆತನು ಎಫೆಸದವರಿಗೆ ಬರೆದ ಪೌಲನ ಪತ್ರಿಕೆಯನ್ನೂ ಕೊಂಡೊಯ್ದನು. ಪೌಲನ ಜೀವಿತದ ಹೆಚ್ಚಿನ ಮಾಹಿತಿಗಾಗಿ ರೋಮಾಪುರದವರಿಗೆಃ ಪರಿಚಯ ಭಾಗವನ್ನು ನೋಡಿರಿ.

## ಹೊರ ರೇಖೆ

ಅ. ಕೃತಜ್ಞತಾಸ್ತುತಿ ಮತ್ತು ಪ್ರಾರ್ಥನೆ (1:1-14)
   1. ಕೊಲೊಸ್ಸೆಯವರ ನಂಬಿಕೆಗಾಗಿ ಕೃತಜ್ಞತಾಸ್ತುತಿ (1:1-8).
   2. ಕೊಲೊಸ್ಸೆಯವರ ಆತ್ಮೀಕ ಬೆಳವಣಿಗಾಗಿ ಪ್ರಾರ್ಥನೆ (1:9-14).

ಆ. ಕ್ರಿಸ್ತನ ಉತ್ಕೃಷ್ಟತೆ (1:15-2:23).
   1. ಕ್ರಿಸ್ತನು ಸೃಷ್ಟಿಯ ಒಡೆಯನು (1:15-23).
   2. ಕ್ರಿಸ್ತನಿಗಾಗಿ ಪೌಲನ ಸೇವೆ (1:24-2:5)
   3. ಕ್ರಿಸ್ತನಲ್ಲಿ ಜೀವನದ ಸರ್ವಸಂಪೂರ್ಣತೆ (2:6-23).

ಇ. ಪರಿಶುದ್ಧ ಜೀವನಕ್ಕೆ ನಿಯಮಗಳು (3:1-4:18)

1. ಪೂರ್ವ ಜೀವಿತದ ಪಾಪಗಳನ್ನು ತೊರೆಯುವದು (3:1-11)
2. ನೂತನ ಜೀವನವನ್ನು ಧರಿಸಿಕೊಳ್ಳುವದು (3:12-17)
3. ಕ್ರೈಸ್ತೀಯ ಕುಟುಂಬದವರಿಗೆ ನಿಯಮಗಳು (3:18-25)
4. ಹೆಚ್ಚಿನ ಸಲಹೆಗಳು (4:1-6)
5. ಅಂತಿಮ ವಂದನೆಗಳು (4:7-18)

## ಅಧ್ಯಾಯ - 1

### ಕೃತಜ್ಞತಾಸ್ತುತಿ ಮತ್ತು ಪ್ರಾರ್ಥನೆ (1:1-14)

**1-2** ತಿಮೊಥೆಯು ಪೌಲನ ಆಪ್ತ ಮಿತ್ರನೂ ಶಿಷ್ಯನೂ ಆಗದ್ದನು, ಆತನು ಅಪೊಸ್ತಲನಾದ ಪೌಲ ಕೆಲಸದಲ್ಲಿ ಹೆಚ್ಚಾಗಿಪಾಲುಗಾರನಾಗಿದ್ದನು (ಅ.ಕೃ. 16:1-3, 1 ತಿಮೊಥೆ 1:2 ನೋಡಿರಿ). ಪೌಲನು ಈ ಪತ್ರಿಕೆಯನ್ನು ಬರೆಯುವಾಗ ತಿಮೊಥೆಯು ಅವನೊಂದಿಗಿದ್ದನು; ಹೀಗೆ ಪೌಲನು ಕೊಲೊಸ್ಸೆಯವರಿಗೆ ವಂದನೆಗಳನ್ನು ಹೇಳುವಾಗ ತಿಮೊಥೆಯನ ಹೆಸರನ್ನೂ ಸೇರಿಸುತ್ತಾನೆ (ಎಫೆಸ 1:1-2, ಫಿಲಿಪ್ಪಿ 1:1-2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**3-4** ಪೌಲನು ಕೊಲೊಸ್ಸೆಯವರ ನಂಬಿಕೆ ಹಾಗು ಪ್ರೀತಿಗಾಗಿ ಸ್ತೋತ್ರ ಮಾಡುತ್ತಾನೆ. ನಾವು ಸಹ ಪೌಲನ ಹಾಗೆ ಪರಸ್ಪರರಿಗಾಗಿ ದೇವರಿಗೆ ಸ್ತೋತ್ರ ಸಲ್ಲಿಸುವ ಅಭ್ಯಾಸವನ್ನು ಬೆಲೆಸಿಕೊಳ್ಳಬೇಕಾಗಿರುತ್ತದೆ. ಎಷ್ಟು ಸಾರಿ ನಾವು ಒಬ್ಬರಿಗೊಬ್ಬರ ವಿಷಯದಲ್ಲಿ ಕೇವಲ ದೂರಿ ಹೇಳಿಕೊಳ್ಳುತ್ತೇವೆ! ದೇವರ ದೃಷ್ಟಿಯಲ್ಲಿ ಇದು ಪಾಪವಾಗಿದೆ; ಆತನು ಇತರ ಕುರಿತ ನಮ್ಮ ದೂರುಗಳನ್ನು ಕೆಲಲು ಇಚ್ಚಿಸುವದಿಲ್ಲ. ಅದಕ್ಕೆ ಬದಲಾಗಿ, ನಾವು ಪ್ರತಿಯೊಬ್ಬ ವಿಶ್ವಾಸಿಗೋಸ್ಕರ ದೇವರಿಗೆ ಸ್ತೋತ್ರವನ್ನು ಸಲ್ಲಿಸೋಣ (ಎಫೆಸ 1:15-16, ಮತ್ತು ವ್ಯಾಖ್ಯಾನ ನೋಡಿರಿ)

ಪೌಲನು ವಿಶೇಷವಾಗಿ ಕೊಲೊಸ್ಸೆಯವರ ನಂಬಿಕೆ ಮತ್ತು ಎಲ್ಲಾ ದೇವಜನರ ಮೇಲಿರುವ ಅವರ ಪ್ರೀತಿಯ ವಿಷಯವಾಗಿ ದೇವರಿಗೆ ಸ್ತೋತ್ರ ಮಾಡುತ್ತಾನೆ. ಪ್ರೀತಿಯಿಲ್ಲದ ನಂಬಿಕೆ – ಅಥವಾ ಕ್ರಿಯೆಗಳಿಲ್ಲದ ನಂಬಿಕೆ – ಸುಳ್ಳು ನಂಬಿಕೆಯಾಗಿದೆ; ನಮ್ಮ ನಂಬಿಕೆಯ ಆಧಾರವು ಪ್ರೀತಿ ಹಾಗು ಸತ್ಕ್ರೀಯೆಗಳಾಗಿವೆ. ಪ್ರೀತಿಯ ಕಾರ್ಯಗಳಿಲ್ಲದಿದ್ದರೆ ನಂಬಿಕೆಯೇ ಇಲ್ಲ (ಗಲಾತ್ಯ 5:6; ಯಾಕೋಬ 2:14-17 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ನಮ್ಮನ್ನು ನಾವು ಪ್ರಶ್ನಿಸಿಕೊಳ್ಳೋಣಃ ಒಂದು ವೇಳೆ ಪೌಲನು ಇಂದು ಬದುಕಿದಿದ್ದರೆ ಆತನು ನಮ್ಮ ಪ್ರೀತಿ ಹಾಗು ನಂಬಿಕೆಗಾಗಿ ದೇವರಿಗೆ ಸ್ತೋತ್ರ ಮಾಡುವದಕ್ಕೆ ಶಕ್ತನಾಗುವನೋ?

**5** ನಂಬಿಕೆ ಮತ್ತು ಪ್ರೀತಿಯು ಪರಲೋಕದಲ್ಲಿ ಸಿದ್ಧವಾಗಿರುವ ಮಹಾ ಪದವಿಯ ನಿರೀಕ್ಷೆಯಿಂದ ಹೊರಹೊಮ್ಮುತ್ತದೆಂದು ಪೌಲನು ಹೇಳುತ್ತಾನೆ. ಆ ನಿರೀಕ್ಷೆ ಯಾವದು? ಅದು ರಕ್ಷಣೆಯ, ನಿತ್ಯಜೀವದ, ಪರಲೋಕ-ದಲ್ಲಿರುವ ಸ್ವಾಸ್ಥ್ಯದ ನಿರೀಕ್ಷೆಯಾಗಿದೆ; ಈ ಸಂಗತಿಗಳಿಗಾಗಿಯೇ ಕ್ರೈಸ್ತರು ನಿರೀಕ್ಷಿಸುತ್ತಾರೆ. ನಮ್ಮ ನಿರೀಕ್ಷೆಯು ಬಲಹೀನ ಹಾಗು ಸಂದೇಹಾಸ್ಪದವಲ್ಲ; ಅದು ಬಲಿಷ್ಠ ಹಾಗು ದೃಡವಾದದ್ದು. ನಮ್ಮ ನಿರೀಕ್ಷೆಯು ಬಲಿಷ್ಟವಾದದ್ದು, ಯಾಕೆಂದರೆ ಅದು ಕ್ರಿಸ್ತನಿಂದ ಬರುತ್ತದೆ ಮತ್ತು ಆತನಲ್ಲಿರುತ್ತದೆ. ಕ್ರಿಸ್ತನೇ ನಮ್ಮ ನಿರೀಕ್ಷೆಯಾಗಿದ್ದಾನೆ, ಯಾಕೆಂದರೆ, ಆತನಿಂದ ಮತ್ತು ಆತನಲ್ಲಿಯೇ ನಾವು ಸಕಲ ಆತ್ಮೀಕ ಆಶೀರ್ವಾದವನ್ನು ಪಡೆಯುತ್ತೇವೆ (ಎಫೆಸ 1:3). ನಾವು ಕ್ರಿಸ್ತನನ್ನು ಸ್ವೀಕರಿಸಿರುವದಾದರೆ ಇತರ ಪ್ರತಿಯೊಂದು ಆತ್ಮೀಕ ಆಶೀರ್ವಾದವನ್ನು ಸ್ವೀಕರಿಸಿಕೊಂಡವರಾಗಿರುತ್ತೇವೆ (ರೋಮ 8:32 ಮತ್ತು ವ್ಯಾಖ್ಯಾನ ನೋಡಿರಿ).

ಕೊಲೊಸ್ಸೆಯವರು ಸುವಾರ್ತೆಯ ಸತ್ಯವಾಕ್ಯವನ್ನು ಕೇಳಿದಾಗ ತಮ್ಮ ನಿರೀಕ್ಷೆಯನ್ನು ಪಡೆದುಕೊಂಡರು. ಕ್ರಿಸ್ತನಸುವಾರ್ತೆಯು ಸತ್ಯ ಆಗದೆ. ಅದು ಮನುಷ್ಯ ವಿಚಾರಗಳಿಂದ ಬರುವದಿಲ್ಲ. ಅದು ಮನುಷ್ಯನಿಂದ ಸೃಷ್ಟಿಸಲ್ಪಟ್ಟ ಅಥವಾ ಕಲ್ಪಿತವಾದ ಸಂಗತಿಯಲ್ಲ. ಸುವಾರ್ತೆಯು ದೇವರ ಸತ್ಯವಾಕ್ಯವಾಗಿದೆ. ಇದು ಬೈಬಲಿನ ಕೇಂದ್ರ ಸಂದೇಶವಾಗಿದೆ.

ಬೈಬಲ ಮನುಷ್ಯ ಜ್ಞಾನ ಹಾಗು ತಿಳುವಳಿಕೆಯ ಅನುಸಾರವಾಗಿ ಬರೆಯಲ್ಪಟ್ಟಿರುವ ಒಂದು ಸಾಮಾನ್ಯ ಪು ಸ್ತಕವಲ್ಲ. ಬದಲಾಗಿ, ಬೈಬಲ ಸ್ವತಃ ದೇವರ ವಾಕ್ಯವಾಗಿದೆ[1] ಆದದರಿಂದ, ನಾವು ಬೈಬಲನ್ನು ಸಂಪೂರ್ಣವಾಗಿ ಅವಲಂಬಿಸಬಹುದು ಹಾಗು ನಂಬಿಕೆಯಿಡಬಹುದು. ಇದರಿಂದಲೇ ನಾವು ನಮ್ಮ ರಕ್ಷಣೆಯ ಹಾಗು ನಿತ್ಯಜೀವದ ನಿರೀಕ್ಷೆಯನ್ನು ಪಡೆಯುತ್ತೇವೆ (ಯೋಹಾನ 5:39-40; 6:68 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಕ್ರೈಸ್ತರಾದ ನಾವು ಪರಲೋಕದಲ್ಲಿ ನಮಗಾಗಿ ಸಿದ್ಧವಾಗಿರುವ ಮಹಾಪದವಿಯ ನಿರೀಕ್ಷೆಯ ಬಗ್ಗೆ ಹೆಚ್ಚು ಯೋಚಿಸುವದಾದರೆ ಉತ್ತಮವಾಗಿರುತ್ತದೆ. ನಾವು ಹಾಗೆ ಮಾಡುವದಾದರೆ ನಾವು ಭೂಲೋಕದಲ್ಲಿ ನಮಗಾಗಿ ಐಶ್ವರ್ಯ ಹಾಗು ಆಸ್ತಿಗಳನ್ನು ಕೂಡಿಸಿಟ್ಟುಕೊಳ್ಳುವದು ಕುರಿತು ಕಡಿಮೆ ಯೋಚಿಸಬಹುದು (ಮತ್ತಾಯ 6:19-21ಕೊಲೊಸ್ಸೆ 3:1-2; 1 ಪೇತ್ರ 1:3-4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಹಾಗಾದರೆ 4-5 ವಚನಗಳಲ್ಲಿ ದೇವರು ನಮಗೆ ದಯಪಾಲಿಸಿರುವ ಮೂರು ಅತಿಶ್ರೇಷ್ಠ ವರಗಳು, ಅಥವಾ ಕೃಪೆಗಳನ್ನು ನೋಡುತ್ತೇವೆ, ಮತ್ತು ಅವು ಗಳಿಗಾಗಿ ಪೌಲನು ಇಲ್ಲಿ ಸ್ತೋತ್ರ ಮಾಡುತ್ತಾನೆ ಅವು ಗಳಾವವೆಂದರೆ, ನಂಬಿಕೆ, ಪ್ರೀತಿ, ಮತ್ತು ನಿರೀಕ್ಷೆ (1 ಕೊರಿಂಥ 13:13; 1 ಥೆಸಲೋನಿಕ 1:2-3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**6** ಪೌಲನು ಇಲ್ಲಿ ಹೇಳುವದೇನೆಂದರೆಃ ಸುವಾರ್ತೆಯು... ಲೋಕದಲ್ಲೆಲ್ಲಾ ಹಬ್ಬಿ ಫಲಕೊಟ್ಟು ವೃದ್ಧಿಯಾಗುತ್ತಾ ಬರುತ್ತದೆ ಮತ್ತು ಸುವಾರ್ತೆಯು ಕೊಲೊಸ್ಸೆಯವರೊಳಗೆ ಸಹ ಫಲಕೊಟ್ಟು ವೃದ್ಧಿಯಾಗುತ್ತಿದೆ ಎಂದೂ ಪೌಲನು ಹೇಳುತ್ತಾನೆ. ನಾವು ನಮ್ಮನ್ನು ಕೇಳಿಕೊಳ್ಳಬೇಕಾದದ್ದೇನೆಂದರೆಃ ನಮ್ಮ ಸ್ವಂತ ಕ್ಷೇತ್ರದಲ್ಲಿಯೂ ಸಭೆಯಲ್ಲಿಯೂ ಸುವಾರ್ತೆಯು ಫಲಕೊಟ್ಟು ವೃದ್ಧಿಯಾಗುತ್ತಿದೆಯೋ? ನಾವು ನಿಜವಾಗಿಸುವಾರ್ತೆಯನ್ನು ಸ್ವೀಕರಿಸಿ ನಂಬಿರುವದಾದರೆ, ಅದರ ಫಲವು ನಮ್ಮ ಜೀವಿತಗಳಲ್ಲಿಯೂ ಸಭೆಗಳಲ್ಲಿಯೂ ಹೆಚ್ಚಾಗುತ್ತಲಿರಬೇಕು.

ಸುವಾರ್ತೆಯು ದೇವರ ಕೃಪೆಯಲ್ಲಿ, ದೇವರ ಉಚಿತಾರ್ಥವಾದ ಪ್ರೀತಿ ಹಾಗು ಕರುಣೆಯಲ್ಲಿ ಸ್ಥಾಪಿಸಲ್ಪಟ್ಟಿತೆಂದು ಪೌಲನು ಇಲ್ಲಿ ನಮಗೆ ಜ್ಞಾಪಕಪಡಿಸುತ್ತಾನೆ. ನಾವು ಸುವಾರ್ತೆಯನ್ನು ಕೇಳುವಾಗ ದೇವರ ಕೃಪೆಯನ್ನು ಕುರಿತು ಸತ್ಯಾರ್ಥವನ್ನೆಲ್ಲಾ ಅರ್ಥಮಾಡಿಕೊಳ್ಳಬಲ್ಲೆವು . ಸುವಾರ್ತೆಯು ಪುರುಷರು ಹಾಗು ಸ್ತ್ರೀಯರಿಗೆ ದೇವರ ಕೃಪೆಯ "ಶುಭವಾರ್ತೆ" ಆಗಿದೆ.

7-8 ಎಪಫ್ರನು ಕ್ರಿಸ್ತನ ನಂಬಿಗಸ್ತ ಸೇವಕ ಆಗಿದ್ದನು; ಅಂದರೆ, ಆತನುಸುವಾರ್ತೆಯನ್ನು ಸಾರುವದಕ್ಕೆ ಕ್ರಿಸ್ತನ ಸಂಪೂರ್ಣವಾದ ಅಧಿಕಾರವನ್ನು ಪಡೆದುಕೊಂಡಿದ್ದನು. ಎಪಫ್ರನು ಪೌಲನ ಜೊತೆದಾಸನಾಗಿದ್ದನು. ಪೌಲ, ಎಪಫ್ರನು ಒಬ್ಬನೇ ಯಜಮಾನನಾದ ಕ್ರಿಸ್ತನ ದಾಸರಾಗಿದ್ದರು. ಎಪಫ್ರನನ್ನು ಕೊಲೊಸ್ಸೆಯಲ್ಲಿ ಸಭೆಯನ್ನು ಸ್ಥಾಪಿಸುವದಕ್ಕೆ ಮೂಲತಃ ಪೌಲನೇ ಕಳುಹಿಸಿದ್ದನು ಎಂದು ಬಹುಪಾಲು ಬೈಬಲ ಪಂಡಿತರು ನಂಬುತ್ತಾರೆ.

ಪೌಲನು ಕೊಲೊಸ್ಸೆಯವರ ಪವಿತ್ರಾತ್ಮ ಪ್ರೇರಿತವಾದ ಪ್ರೀತಿಯ ವಿಷಯದಲ್ಲಿ ಎಪಫ್ರನಿಂದ ತಿಳಿದುಕೊಂಡಿದ್ದನು (ವಚನ 8). ನಮ್ಮ ಜೀವಿತಗಳಲ್ಲಿ ಈ ರೀತಿಯ ಪ್ರೀತಿಯು ಇರಬೇಕಾದರೆ ಪವಿತ್ರಾತ್ಮನು ಸಹ ಇರಬೇಕು ಪವಿತ್ರಾತ್ಮನ ಮೂಲಕವೇ ದೇವರು ಈ ಪ್ರೀತಿಯನ್ನು ನಮ್ಮ ಹೃದಯಗಳಲ್ಲಿ ಸುರಿಸುತ್ತಾನೆ (ರೋಮ 5:5). ಈ ಪ್ರೀತಿಯು ಪವಿತ್ರಾತ್ಮನ ಒಂಭತ್ತು ಫಲಗಳಲ್ಲಿ ಮೊದಲನೆದಾಗಿದೆ (ಗಲಾತ್ಯ 5:22-23). ಪೌಲನು ಕೊಲೊಸ್ಸೆಯವರ ವಿಷಯದಲ್ಲಿ ಎಪಫ್ರನಿಂದ ಒಳ್ಳೇ ಸಂಗತಿಗಳನ್ನು ತಿಳಿದುಕೊಂಡನು ನಮ್ಮವಿಷಯದಲ್ಲಿ ಇತರರು ಯಾವ ರೀತಿಯ ಸಂಗತಿಗಳನ್ನು ಕೇಳುತ್ತಿದ್ದಾರೆಂಬದನ್ನು ಕುರಿತು ಯೋಚಿಸೋಣ!

9 ಪೌಲನು ಈಗ ಕೊಲೊಸ್ಸೆಯವರಿಗಾಗಿ ಅವರು ಕರ್ತನ ಚಿತ್ತದ ವಿಷಯವಾದ ತಿಳುವಳಿಕೆಯಿಂದ ತುಂಬಿದವರಾಗಿರಬೇಕೆಂದು ಪ್ರಾರ್ಥಿಸುತ್ತಾನೆ. ತಿಳುವಳಿಕೆಗಳಲ್ಲಿ ಅನೇಕ ವಿಧಗಳುಂಟು, ಆದರೆ ಎಲ್ಲವು ಗಳಿಗಿಂತಲೂ ಪ್ರಾಮುಕ್ಯವಾದದ್ದು ದೇವರ ಚಿತ್ತದ ವಿಷಯವಾದ ತಿಳುವಳಿಕೆಯೇ. ಒಬ್ಬನು ದೇವರ ಚಿತ್ತದ ವಿಷಯವಾದ ತಿಳುವಳಿಕೆಯನ್ನು ಹೊಂದಿಲ್ಲವಾದರೆ ಇತರ ಎಲ್ಲಾ ತಿಳುವಳಿಕೆಗಳು ನಿಷ್ಪ್ರಯೋಜಕಗಳಾಗುವವು (ಎಫೆಸ 1:15-17 ಮತ್ತು ವ್ಯಾಖ್ಯಾನ ನೋಡಿರಿ).

ಆತ್ಮೀಕ ತಿಳುವಳಿಕೆ ಅಥವಾ ಜ್ಞಾನವನ್ನು ಹೊಂದಿಕೊಳ್ಳುವದಕ್ಕೆ ಮೊದನೆಯ ಹೆಜ್ಜೆಯು ದೇವರಿಗೆ ಭಯಪಡುವದೇ (ಕೀರ್ತನೆಗಳು 111:10; ಜ್ಞಾನೋಕ್ತಿಗಳು 1:7). ಆದರೆ ನೆನಪಿರಲಿ, ಸೈತಾನ ಹಾಗು ಆತನ ದುರಾತ್ಮಗಳು ಸಹ ದೇವರಿಗೆ ಭಯಪಡುತ್ತವೆ (ಯಾಕೋಬ 2:19). ಆದದರಿಂದ, ಅವರು ಸಹ ಜ್ಞಾನದ ಮೊದಲ ಭಾಗ ಅಥವಾ "ಪ್ರಾರಂಭ"(ಮೂಲ) ಹೊಂದಿವೆ. ಆದರೆ ಅವರಿಗೆ ಅದಷ್ಟೇ ಇರುತ್ತದೆ, ಯಾಕೆಂದರೆ ಅವರು ಜ್ಞಾನಕ್ಕೆ ಕಿವಿಗೊಡಲು ನಿರಾಕರಿಸುತ್ತಾರೆ. ಅವರು ದೇವರಿಗೆ ಭಯಪಡುತ್ತಾರೆ, ಆದರೆ ಆತನಿಗೆ ವಿಧೇಯರಾಗುವದಿಲ್ಲ[2] ಹಾಗಾದರೆ, ಆತ್ಮೀಕ ತಿಳುವಳಿಕೆ ಅಥವಾ ಜ್ಞಾನವನ್ನು ಪಡೆದುಕೊಳ್ಳಲು ಎರಡನೆಯ ಹೆಜ್ಜೆಯು ದೇವರಿಗೆ ವಿಧೇಯರಾಗುವದೇ. ದೇವರಿಗೆ ವಿಧೇಯರಾಗುವವರೂ ಆತನ ಮಾರ್ಗದಲ್ಲಿ ನಡೆಯುವವರೂ ಮಾತ್ರವೇ ಸಕಲ ಆತ್ಮೀಯ ಜ್ಞಾನವನ್ನೂ ಗ್ರಹಿಕೆಯನ್ನೂ (ತಿಳುವಳಿಕೆ) ಹೊಂದಿಕೊಳ್ಳುವರು.

10 ಹೀಗೆ ದೇವರ ಚಿತ್ತದ ತಿಳುವಳಿಕೆಯನ್ನು ಹೊಂದಿದ್ದರೆ ಮಾತ್ರವೇ ಸಾಕಾಗುವದಿಲ್ಲ, ನಾವು ಆತನ ಚಿತ್ತಕ್ಕೆ ವಿಧೇಯರೂ ಆಗಬೇಕೆಂಬದನ್ನು ನೋಡುತ್ತೇವೆ (ಯಾಕೋಬ 1:22 ನೋಡಿರಿ). ನಾವು ದೇವರ ತಿಳುವಳಿಕೆಗೆ ಅನುಸಾರವಾಗಿ ಜೀವಿಸದ ಹೊರತು ಆ ತಿಳುವಳಿಕೆಯು ವ್ಯರ್ಥವಾಗಿರುತ್ತದೆ. ದೇವರ ಚಿತ್ತವೇನು? ಇದು ಕರ್ತನಿಗೆ ಯೋಗ್ಯರಾಗಿ ನಡೆದುಕೊಳ್ಳುವದೇ ಆಗದೆ (ಎಪೆಸ 4:1 ಮತ್ತು ವ್ಯಾಖ್ಯಾನ ನೋಡಿರಿ). ಮತ್ತು "ಕರ್ತನಿಗೆ ಯೋಗ್ಯರಾಗಿ ನಡೆದುಕೊಳ್ಳುವದು" ಎಂಬದರ ಅರ್ಥವೇನು? ಸಕಲ ಸತ್ಕಾರ್ಯಗಳಲ್ಲಿ ಫಲ ಕೊಡುವದು ಮತ್ತು ದೇವಜ್ಞಾನದಲ್ಲಿ ಅಭಿವೃದ್ಧಿಯಾಗುವದು ಎಂಬ ಅರ್ಥವಾಗಿದೆ.

ನಾವು ಯಾವ ವಿಧದ ಫಲವನ್ನು ಕೊಡಬೇಕೆಂದು ದೇವರು ಬಯಸುತ್ತಾನೆ? ಮೊದನೆಯದಾಗಿ, ನಾವು ಪವಿತ್ರಾತ್ಮನ ಒಂಭತ್ತು ಫಲಗಳನ್ನು ಕೊಡುವವರಾಗಿರಬೇಕೆಂದು ಆತನು ಇಚ್ಛಿಸುತ್ತಾನೆ (ಗಲಾತ್ಯ 5:22-23 ಮತ್ತು ವ್ಯಾಖ್ಯಾನ ನೋಡಿರಿ). ಎರಡನೇಯದಾಗಿ, ನಮ್ಮ ಸಾಕ್ಷಿ ಹಾಗು ಮಾದರಿಯ ಮುಖಾಂತರ ಹೊಸ ವಿಶ್ವಾಸಿಗಳನ್ನು, ನೂತನ ಶಿಷ್ಯರನ್ನು ಆತನಿಗಾಗಿ ಹೊಸ ಮಕ್ಕಳನ್ನು ಕೊಡಬೇಕು ಅಥವಾ ಸನ್ನದ್ಧುಗೊಳಿಸಬೇಕೆಂದು ದೇವರು ಭಯಸುತ್ತಾನೆ; ಈ ವಿಧದ "ಫಲವು " ಸಹ ಆತನಿಗೆ ಮೆಚ್ಚಿಕೆಯಾದದ್ದು (ಯೋಹಾನ 15:16; ಫಿಲಿಪ್ಪಿ 1:9-11 ಮತ್ತು ವ್ಯಾಖ್ಯಾನ ಗಳನ್ನು ನೋಡಿರಿ).

ನಾವು ದೇವಜ್ಞಾನದಲ್ಲಿ ಅಭಿವೃದ್ಧಿಯಾಗಬೇಕೆಂದು ಪೌಲನು ಹೇಳುವದನ್ನು ಗಮನಿಸಿರಿ. ಒಂದು ಮರವು ಬೆಳೆಯುತ್ತದೆ, ಇಲ್ಲವೇ ಒಣಗಿ ಹೋಗುತ್ತದೆ. ನಾವು ಬೆಳೆಯುವದನ್ನೂ ಫಲಕೊಡುವದನ್ನೂ ನಿಲ್ಲಿಸಿರುವ ಮರವೊಂದನ್ನು ನೋಡುವದಾದರೆ ಆ ಮರವು ಇನ್ನೇನು ಒಣಗಿ ಹೋಗಲಿದೆ ಎಂಬದನ್ನು ತಿಳಿಯುತ್ತೇವೆ. ನಮ್ಮ ಕ್ರೈಸ್ತೀಯ ಜೀವಿತಗಳು ಎಂದಿಗೂ ಆ ಸ್ಥಿತಿಯನ್ನು ತಲುಪದಿರಲಿ!.

11 ಮೊದಲನೆಯದಾಗಿ, ಕೊಲೊಸ್ಸೆಯವರು ದೇವರ ಚಿತ್ತದ ವಿಷಯವಾದ ತಿಳುವಳಿಕೆಯನ್ನು ಹೊಂದಬೇಕೆಂದು ಪೌಲನು ಪ್ರಾರ್ಥಿಸಿದ್ದಾನೆ (ವಚನ 9). ಈಗ ಆತನು ಅವರು ದೇವರ ಚಿತ್ತವನ್ನು ಕಾರ್ಯರೂಪಕ್ಕೆ ತರುವದಕ್ಕಾಗಿ ಪರಿಪೂರ್ಣಬಲಹೊಂದಿ ಬಲಿಷ್ಟರಾಗಬೇಕೆಂದು ಪ್ರಾರ್ಥಿಸುತ್ತಾನೆ. ಪೌಲನು ಎಫೆಸದವರಿಗೋಸ್ಕರ ಸಹ ಅದನ್ನೇ ಪ್ರಾರ್ಥಿಸಿದನು (ಎಫೆಸ 3:14-16; 20-21 ನೋಡಿರಿ).

ನಾವು ಮಾಡಬೇಕಾದದಿಷ್ಟೇ ಏನೆಂದರೆ ನಂಬಿಕೆಯಿಂದ ಈ ಬಲಕ್ಕಾಗಿ ಪ್ರಾರ್ಥಿಸಬೇಕು, ಮತ್ತು ದೇವರು ಅದನ್ನು ನಮಗೆ ಅನುಗ್ರಹಿಸುತ್ತಾನೆ. ಆದರೆ ಇನ್ನೊಂದು ಅರ್ಥದಲ್ಲಿ ನಾವು ಈಗಾಗಲೇ ಈ ಬಲವನ್ನು ಪಡೆದುಕೊಂಡಿದ್ದೇವೆ. ಈ ಕಾರಣದಿಂದಲೇ ಪೌಲನು ನಮಗೆ ಈ ಆಜ್ಞೆಯನ್ನು ನೀಡಿರುತ್ತಾನೇ.... ಕರ್ತನನ್ನೂ ಆತನ ಅತ್ಯಧಿಕವಾದ ಶಕ್ತಿಯನ್ನೂ

ಆಶ್ರಯಿಸಿಕೊಂಡವರಾಗಿ ಬಲಗೊಳ್ಳಿರಿ (ಎಫೆಸ 6:10). ನಿಜ, ಒಂದೆಡೆಯಲ್ಲಿ ನಾವು ನಿರಂತರವೂ ಬಲಕ್ಕಾಗಿ ದೇವರನ್ನು ಬೇಡಿಕೊಳ್ಳಬೇಕು. ಆದರೆ ಇನ್ನೊಂದೇಡೆಯಲ್ಲಿ, ದೇವರು ನಮಗೆ ಹೇಳುವದೇನೆಂದರೆಃ ನಾವು ನಿಮಗೆ ಈಗಾಗಲೇ ಬಲವನ್ನು ಕೊಟ್ಟಿದ್ದೇನೆ; ಅದನ್ನು ಉಪಯೋಗಿಸು!"ಪರಿಪೂರ್ಣ ಬಲಹೊಂದಿ ಬಲಿಷ್ಠರಾದ ಬಳಿಕ ನಾವು ಎಲ್ಲಾ ರೀತಿಯ ಕಷ್ಟಗಳನ್ನು ಆನಂದಪೂರ್ವಕವಾಗಿ ತಾಳ್ಮೆಯಿಂದಲೂ ದೀರ್ಘಶಾಂತಿಯಿಂದಲೂ ಸೈರಿಸಿಕೊಳ್ಳುವದಕ್ಕೆ ಶಕ್ತರಾಗುವೆವು.

**12-14** ಪೌಲನು ಇಲ್ಲಿ ಕೊಲೊಸ್ಸೆಯವರು–ಮತ್ತು ನಾವು ಸಹ–ದೇವರಿಗೆ ಸ್ತೋತ್ರ ಮಾಡಬೇಕಾದ ಮೂರು ಸಂಗತಿ–ಗಳನ್ನು ಪ್ರಸ್ತಾಪಿಸುತ್ತಾನೆ. ಮೊದನೆಯದಾಗಿ, ನಾವು ಬೆಳಕಿನ ರಾಜ್ಯದೊಳಗೆ –ದೇವರರಾಜ್ಯ–ದೇವಜನರ ಬಾಧ್ಯತೆಯಲ್ಲಿ ಪಾಲುಗಾರರಾಗುವದಕ್ಕೆ....ಯೋಗ್ಯರಾಗಿ ಮಾಡಲ್ಪಟ್ಟಿದ್ದೇವೆಂಬದಕ್ಕಾಗಿದೇವರಿಗೆ ಸ್ತೋತ್ರ ಸಲ್ಲಿಸಬೇಕು. ಅಂದರೆ, ನಾವು ದೇವರ ರಾಜ್ಯದ ಪೂರ್ಣಪ್ರಜೆಗಳಾಗಿ ಮಾಡಲ್ಪಟ್ಟಿದ್ದೇವೆ.

ನಾವು ದೇವರಿಗೆ ಸ್ತೋತ್ರ ಸಲ್ಲಿಸಬೇಕಾದ ಎರಡನೆಯ ಸಂಗತಿಯೇನೆಂದರೆ, ನಾವು ಅಂಧಕಾರದ ದೊರೆತನದಿಂದ ಬಿಡಿಸಲ್ಪಟ್ಟಿದ್ದೇವೆ (ವಚನ 13). ಅಂದರೆ, ಸೈತಾನನ ರಾಜ್ಯದೊಳಗಿಂದ ಬಿಡಿಸಲ್ಪಟ್ಟಿದ್ದೇವೆ ಎಂಬದೇ. ಮತ್ತು ನಾವು ಪ್ರಿಯಕುಮಾರನ (ಕ್ರಿಸ್ತನ) ರಾಜ್ಯದೊಳಗೆ ಸೇರಿಸಲ್ಪಟ್ಟಿದ್ದೇವೆ, ಇದು ಹಾಗು ದೇವರರಾಜ್ಯ ಒಂದೇ ಆಗಿದೆ (1 ಪೇತ್ರ2:9).

ಮೂರನೆಯದಾಗಿ, ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು ಎಂಬದಕ್ಕಾಗಿ ದೇವರನ್ನು ಸ್ತುತಿಸಬೇಕು (ವಚನ 14). ಬಿಡುಗಡೆ ಎಂದರೆ ಕ್ರಿಸ್ತನ ಯಜ್ಞದ ಮುಖಾಂತರ ಪಾಪದ ದಂಡನೆಯಿಂದ ವಿಮೋಚನೆ ಎಂದು ಅರ್ಥವಾಗಿದೆ; ಇದು ನಮ್ಮ ರಕ್ಷಣೆಯ ಮುಖ್ಯಕೋನಗಳಲ್ಲಿ ಒಂದಾಗಿದೆ (ರೋಮ 3:24; ಎಫೆಸ 1:7 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ಇನ್ನು ಮೇಲೆ ಸೈತಾನನ ದಾಸರಲ್ಲ, ನಾವು ಇನ್ನೆಂದಿಗೂ ಆತನ ರಾಜ್ಯದಲ್ಲಿ ಬಂಧಿಗಳಲ್ಲ. ನಾವು ಬಿಡುಗಡೆಗೊಳಿಸಲ್ಪಟ್ಟು ದೇವರ ರಾಜ್ಯದ ಪ್ರಜೆಗಳಾಗಿದ್ದೇವೆ (ಎಫೆಸ 2:19 ಮತ್ತು ವ್ಯಾಖ್ಯಾನ ನೋಡಿರಿ).

ಈ ಮೂರು ಶ್ರೇಷ್ಟ ಆಶಿರ್ವಾದಗಳು ನಾವು ಕೇವಲ ಭವಿಷ್ಯತ್ತಿನಲ್ಲಿ ಹೊಂದಿಕೊಳ್ಳುವ ಸಂಗತಿಗಳಲ್ಲ; ನಾವು ಈಗಾಗಲೇ ಈ ಆಶಿರ್ವಾದಗಳನ್ನು ಪಡೆದುಕೊಂಡಿದ್ದೇವೆ! ನಾವು ನಿಜವಾಗಿಯೂ ದೇವರಿಗೆ ಕೃತಜ್ಞತಾಸ್ತೋತ್ರಗಳನ್ನು ಅರ್ಪಿಸೋಣ!.

## ಕ್ರಿಸ್ತನ ಉತ್ಕೃಷ್ಟತೆ (1:15-23)

**15** ಆತನು (ಕ್ರಿಸ್ತನು) ಅದೃಶ್ಯನಾದ ದೇವರ ಪ್ರತಿರೂಪನು. ಯಾವ ಮನುಷ್ಯನು ತನ್ನ ಸ್ವಾಭಾವಿಕ ಕಣ್ಣುಗಳಿಂದ ದವರನ್ನು ನೋಡಲಾರರು. ಆದರೆ ಯೇಸುಕ್ರಿಸ್ತನು ಭೂಲೋಕದಲ್ಲಿರುವ ವೇಳೆ ಜನರು ಆತನನ್ನು ಸ್ಪಷ್ಟವಾಗಿ ನೋಡುವದಕ್ಕೆ ಶಕ್ತರಾಗಿದ್ದರು (ಯೋಹಾನ 1:18; ಇಬ್ರಿಯ 1:3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಯೇಸುವನ್ನು ದೃಷ್ಟಿಸುವದರ ಮೂಲಕ ನಾವು ಸ್ವತಃ ದೇವರ ಗುಣಲಕ್ಷಣಗಳು ಹಾಗು ಗುಣಧರ್ಮಗಳನ್ನೇ ನೋಡಬಹುದಾಗಿದೆ.

ಆದರೆ ಇದಕ್ಕಿಂತಲೂ ಹೆಚ್ಚಾಗಿ, ನಾವು ಯೇಸುವನ್ನು ನೋಡುವಾಗ ವಾಸ್ತವದಲ್ಲಿ ಸ್ವತಃ ದೇವರನ್ನೇ ಆತನ ಒಬ್ಬನೇ ಮಗನ ರೂಪದಲ್ಲಿ ಕಾಣುವವರಾಗಿದ್ದೇವೆ (ಯೋಹಾನ 14:9 ಮತ್ತು ವ್ಯಾಖ್ಯಾನ ನೋಡಿರಿ). ಕ್ರಿಸ್ತನು ದೇವರ ಪ್ರತಿರೂಪನೂ ಮಾತ್ರವೇ ಅಲ್ಲ; ಆತನು ದೇವರ ಏಕೈಕ ಸತ್ಯವಾದ ನರಾವತಾರವಾಗಿದ್ದಾನೆ. ಆತನು ಭೂಲೋಕಕ್ಕೆ ಇಳಿದು ಬಂದ ಏಕೈಕ ಸತ್ಯದೇವರಾಗಿದ್ದಾನೆ. ಆತನು ಸ್ವತಃ ದೇವರೇ (ಯೋಹಾನ 10:30 ಮತ್ತು ವ್ಯಾಖ್ಯಾನ; ಸಾಮಾನ್ಯ ಲೇಖನಃ ಯೇಸು ಕ್ರಿಸ್ತನು ನೋಡಿರಿ).

ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ (ಪ್ರತಿರೂಪ) ಉಂಟುಮಾಡಿದ್ದಾನೆ (ಆದಿಕಾಂಡ 1:27). ಈ ಕಾರಣ– ದಿಂದಲೇ, ದೇವರು ಭೂಲೋಕಕ್ಕೆ ಇಳಿದು ಬರುವದಕ್ಕೆ ತೀರ್ಮಾನಿಸಿದಾಗ ಆತನು ಮನುಷ್ಯರೂಪದಲ್ಲಿ – ಯೇಸುಕ್ರಿಸ್ತ ನಾಗಿ – ಬಂದನು. ಯೇಸು ಸೃಷ್ಟಿಗೆಲ್ಲಾ ಜೇಷ್ಟ ಪು ತ್ರನಾಗಿದ್ದಾನೆ. ಆತನು ನಮ್ಮ ಹಿರಿಯಸಹೋದರನು (ರೋಮ 8:29). ಯೇಸು ಜೇಷ್ಟಪು ತ್ರನಾದ್ದರಿಂದ ಆತನು ತಂದೆಯ ಸ್ವಾಸ್ತ್ಯವನ್ನು ಪಡೆದುಕೊಳ್ಳುತ್ತಾನೆ. ಯೇಸು ಎಲ್ಲದಕ್ಕೂ ಬಾಧ್ಯನಾಗಿದ್ದಾನೆ (ಇಬ್ರಿಯ 1:2). ನಾವು ಸಹ ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿದ್ದೇವೆ, ಮತ್ತು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ನಾವೂ ಆತನ ಜೊತೆಯಲ್ಲಿ ಸಹಬಾಧ್ಯರು ಆಗಬಲ್ಲೆವು (ರೋಮ 8:17 ಮತ್ತು ವ್ಯಾಖ್ಯಾನ ನೋಡಿರಿ).

**16-17** ಕ್ರಿಸ್ತನು ಸೃಷ್ಟಿಗೆಲ್ಲಾ ಜೇಷ್ಟಪು ತ್ರನೂ ಮಾತ್ರವಲ್ಲ (ವಚನ 15). ಆತನು ಸೃಷ್ಟಿಕರ್ತನು ಸರ್ವವು ಆತನ ಮುಖಾಂತರವಾಗಿ ಸೃಷ್ಟಿಸಲ್ಪಟ್ಟಿತು. ಕ್ರಿಸ್ತನು ಜಗದುತ್ಪತ್ತಿಗೆ ಮುಂಚಿನಿಂದಲೂ ಅಸ್ತಿತ್ವದಲ್ಲಿದ್ದಾನೆ (ಯೋಹಾನ 1:1-3 ಮತ್ತು ವ್ಯಾಖ್ಯಾನ ನೋಡಿರಿ).

ಕ್ರಿಸ್ತನು ಸಮಸ್ತವನ್ನೂ ಸೃಷ್ಟಿಸಿದ್ದಾನೆ. ಆದದರಿಂದ, ಆತನು ಎಲ್ಲಾ ಸಂಗತಿಗಳ ಮೇಲೆ–ಪರಲೋಕದಲ್ಲಿಯೂ ಭೂಲೋಕದಲ್ಲಿಯೂ–ಅಧಿಕಾರ ಹೊಂದಿದ್ದಾನೆ. ಕ್ರಿಸ್ತನು ಸಿಂಹಾಸನಗಳಾಗಲಿ, ಪ್ರಭುತ್ವಗಳಾಗಲಿ, ದೊರೆತನಗಳನ್ನಾಗಲಿ ಅಧಿಕಾರಗಳಾಗಲಿ ಇವೆಲ್ಲವು ಗಳ ಮೇಲೆಯೂ ದೊರೆತನ ಮಾಡುತ್ತಾನೆ (ಎಫೆಸ 1:21 ನೋಡಿರಿ). ಆತನು ಎಲ್ಲಾ ದುರಾತ್ಮಗಳು ಹಾಗು ದೇವದೇವತೆಗಳ ಮೇಲೆಯೂ ಸ್ವತಃ ಸೈತಾನನ ಮೇಲೆಯೂ ದೊರೆತನ ಮಾಡುತ್ತಾನೆ. ಸಮಸ್ತರಲ್ಲಿಯೂ ದೇವರು ಆವನಿಗೆ ಉತ್ಕೃಷ್ಟ ಸ್ಥಾನವನ್ನು (ಪ್ರಮುಖತನ) ನೀಡಿರುತ್ತಾನೆ (ವಚನ 18). ಕ್ರಿಸ್ತನು ನಿಜವಾಗಿಯೂ ಕರ್ತರ ಕರ್ತನೂ ರಾಜಾಧಿರಾಜನೂ ಆಗಿದ್ದಾನೆ (ಪ್ರಕಟಣೆ 17:14).

**18** ಕ್ರಿಸ್ತನು ಸಭೆಯೆಂಬದೇಹಕ್ಕೆ ಶಿರಸ್ಸು ಆಗಿದ್ದಾನೆ (ಎಫೆಸ 1:22-23; ಮತ್ತು ವ್ಯಾಖ್ಯಾನ ನೋಡಿರಿ). ಶಿರಸ್ಸಿಲ್ಲದೆ ಯಾವನೂ ಜೀವಿಸಲಾರನು. ಒಂದು ವೇಳೆ ನಾವು ನಮ್ಮ ದೇಹಗಳ ಒಂದು ಅಂಗವನ್ನು–ಉದಾಹರಣೆಗೆ, ಒಂದು ಕೈ ಅಥವಾ ಕಾಲು ಅಥವಾ ಒಂದು ಕಣ್ಣನ್ನು –ಕಳೆದುಕೊಳ್ಳುವದಾದರೆ ಆಗಲೂ ನಾವು ಜೀವಿಸುತ್ತೇವೆ. ಆದರೆ ಶಿರಸ್ಸಿಲ್ಲದಿದ್ದರೆ ಜೀವವೂ ಇರದು!.

ಕ್ರಿಸ್ತನು ಜಗತ್ತನ್ನು ಅದರಲ್ಲಿರುವ ಸಮಸ್ತವನ್ನೂ ಮಾತ್ರವೇ ಸೃಷ್ಟಿಸಲಿಲ್ಲ, ಆದರೆ ಆತನು "ನೂತನ ಪುರುಷ" ಒಂದು "ನೂತನ ಜನ" – ಅಂದರೆ, ಸಭೆಯನ್ನು ಸಹ ಸೃಷ್ಟಿಸಿದನು. ಕ್ರಿಸ್ತನು ತನ್ನ ಸಭೆಯ ಮುಖಾಂತರ ಇಂದು ಲೋಕದಲ್ಲಿ ತನ್ನ ಕಾರ್ಯವನ್ನು ಮುಂದುವರೆಸಿದ್ದಾನೆ. ಇಂದು ಜನರು ಕ್ರಿಸ್ತನನ್ನು ನೋಡಲಾರರು (ಯಾಕೆಂದರೆ ಆತನು ಪರಲೋಕದೊಳಗೆ ಏರಿ ಹೋಗಿರುತ್ತಾನೆ), ಆದರೆ ಅವರು ಕ್ರಿಸ್ತನ ಸಭೆಯಾದ ನಮ್ಮನ್ನು ನೋಡಬಲ್ಲರು. ಆದದರಿಂದ, ಅವರು ನಮ್ಮಲ್ಲಿ ಕ್ರಿಸ್ತನನ್ನು ಕಾಣುವದಕ್ಕೆ ಶಕ್ತರಾಗಬೇಕು. ಮತ್ತು ಅದೇ ನಮ್ಮ ಗುರಿಯಾಗಿರಬೇಕು. ನಾವು ಕ್ರಿಸ್ತನ ಹಾಗೆ ಜೀವಿಸಬೇಕು, ಆಗ ಇತರ ಜನರು ನಮ್ಮನ್ನು ನೋಡುವಾಗ ನಿಜವಾಗಿಯೂ ಅವರು ನಮ್ಮ ಜೀವಿತಗಳಲ್ಲಿ ಕ್ರಿಸ್ತನನ್ನು ಕಾಣುತ್ತಾರೆ ನಮ್ಮೊಳಗೆ ವಾಸಿಸುವ ಪವಿತ್ರಾತ್ಮನು ನಮ್ಮ ಅನುದಿನದ ಮಾತು ಹಾಗು ನಡವಳಿಕೆಯಲ್ಲಿ ಪ್ರಕಾಶಿಸಬೇಕು. ಜನರು ಕ್ರಿಸ್ತನ ಮೂಲಕ ದೇವರನ್ನು ತಿಳಿಯುವರು. ಮತ್ತು ಜನರು ನಮ್ಮ ಮುಖಾಂತರ–ಅಂದರೆ, ನಮ್ಮಲ್ಲಿ ವಾಸಿಸುವ ಪವಿತ್ರಾತ್ಮನ ಮುಖಾಂತರ–ದೇವರನ್ನು ತಿಳಿಯುವರು (1 ಕೊರಿಂಥ 3:16; ಮತ್ತು 2:20; ಎಫೆಸ 2:22 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ನಮ್ಮನ್ನು ನಾವು ಪರೀಕ್ಷಿಸಿಕೊಳ್ಳೋಣಃ ಇತರರು ನಮ್ಮ ಸಭೆಯಲ್ಲಿ ಕ್ರಿಸ್ತನನ್ನು ನೋಡಬಲ್ಲರೋ? ನಮ್ಮೊಬ್ಬೊಬ್ಬರಲ್ಲಿ ಕಾಣುವರೋ? ಕ್ರಿಸ್ತನು ನಿಜವಾಗಿಯೂನಮ್ಮ ಶಿರಸ್ಸಾಗಿದ್ದಾನೋ? ಅಥವಾ ನಾವು ತಲೆಕತ್ತರಿಸಲ್ಪಟ್ಟು ಅತ್ತ ಇತ್ತ ಓಡಾಡಿ ಶೀಘ್ರವೇ ಸಾಯಲಿರುವ ಕೋಳಿಯಂತೆ ಇದ್ದೇವೋ? (1 ಯೋಹಾನ 5:12 ನೋಡಿರಿ).

ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದವನಾಗಿದ್ದಾನೆ (ಪ್ರಥಮ ಫಲವಾಗಿದ್ದಾನೆ). ದೇವರು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದನು. ಮತ್ತು ದೇವರು ಕ್ರಿಸ್ತನಲ್ಲಿ ನಿಜವಾಗಿಯೂ ನಂಬಿಕೆಯಿಡುವವರೆಲ್ಲರನ್ನೂ ಸತ್ತವರೊಳಗಿಂದ ಎಬ್ಬಿಸುವನು.

ನಂಬಿಕೆಯಿಡುವವರು ದೇವರ ಮಕ್ಕಳಾಗಿರುವದಕ್ಕೂ ಆತನ ಕುಟುಂಬದ ಸದಸ್ಯರಾಗಿರುವದಕ್ಕೂ ಆತನಿಂದ ಆದುಕೊಳ್ಳ ಲ್ಪಟ್ಟಿದ್ದಾರೆ. ಮತ್ತು ನಾವು ದೇವರ ಮಕ್ಕಳಾಗಿರುವದರಿಂದ ಕ್ರಿಸ್ತನು ನಮ್ಮ ಹಿರಿಯ ಸಹೋದರನು (ರೋಮ 8:11; 29 ಮತ್ತು ವ್ಯಾಖ್ಯಾನ ನೋಡಿರಿ).

**19** ದೇವರು ತನ್ನ ಎಲ್ಲಾ ಶಕ್ತಿ, ಅಧಿಕಾರ ಮತ್ತು ದೊರೆತನವನ್ನು ಕ್ರಿಸ್ತನಿಗೆ ನೀಡಿರುತ್ತಾನೆ (ಕೊಲೊಸ್ಸೆ 2:9-10 ಮತ್ತು ವ್ಯಾಖ್ಯಾನ ನೋಡಿರಿ). ಅಂದರೆ, ದೇವರು ತನ್ನ ಸರ್ವಸಂಪೂರ್ಣತೆಯನ್ನು ಕ್ರಿಸ್ತನಿಗೆ ನೀಡಿರುತ್ತಾನೆ. ಮತ್ತು ಪವಿತ್ರಾತ್ಮನು ನಮ್ಮಲ್ಲಿ ನೆಲೆಸಿ ತುಂಬಿಸುವದರ ಮೂಲಕ ನಾವು ಸಹ ಆ ಸಂಪೂರ್ಣತೆಯನ್ನು ಹೊಂದಿಕೊಳ್ಳಬಹುದು.

**20** ಕ್ರಿಸ್ತನನ್ನು ಎಲ್ಲಾದರಲ್ಲಿಯೂ ಪ್ರಮುಖನನ್ನಾಗಿ ಮಾಡಿದ್ದರಲ್ಲಿನ ದೇವರ ಉದ್ದೇಶವನ್ನು ಇಲ್ಲಿ ಕಾಣಬಹುದು (ವಚನ 18). ದೇವರ ಉದ್ದೇಶವೇನಾಗಿತ್ತೆಂದರೆ, ಸಮಸ್ತವನ್ನೂ ಆತನ (ಕ್ರಿಸ್ತನ) ಮೂಲಕ ತನಗೆ (ದೇವರ) ಸಂಧಾನಪಡಿಸಿಕೊಳ್ಳಬೇಕೆಂಬದೇ.

ಕ್ರಿಸ್ತನ ದೇಹದ ಯಜ್ಞದ ಮೂಲಕ–ಅಂದರೆ, ಕ್ರಿಸ್ತನು ಶಿಲುಬೆಯ ಮೇಲೆ ಹೊಂದಿದ ಮರಣದ ಮೂಲಕ ದೇವರು ನಮ್ಮ ಪಾಪಗಳಾಗಿನ ದಂಡನೆಯನ್ನು ಕ್ರಿಸ್ತನಿಗೆ ಪಲ್ಲಾಯಿಸಿದನು. ಆದದರಿಂದ, ಕ್ರಿಸ್ತನನ್ನು ನಂಬುವವರಾದ ನಮಗೆ ಇನ್ನು ಮೇಲೆ ಅಪರಾಧ ನಿರ್ಣಯವಿರುವದಿಲ್ಲ; ನಾವು ನಮ್ಮ ಪಾಪಗಳಿಗಾಗಿ ಕ್ಷಮಾಪಣೆಯನ್ನು ಪಡೆದುಕೊಂಡಿದ್ದೇವೆ (ಎಫೆಸ 1:7; ಕೊಲೊಸ್ಸೆ 1:14ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಮ್ಮ ಪಾಪಗಳು ತೊಳೆಯಲ್ಪಟ್ಟಿರುವದು ಮಾತ್ರವಲ್ಲ, ಆದರೆ ನಾವು ದೇವರೊಂದಿಗೆ ಸಂಧಾನವನ್ನು ಹೊಂದಿದ್ದೇವೆ. ಈಗ ನಮ್ಮಹಾಗು ದೇವರ ನಡುವೆ ಸಮಾಧಾನವಿರುತ್ತದೆ. ಹೀಗೆ ಇಲ್ಲಿ ನಾವು ನಮ್ಮ ರಕ್ಷಣೆಯ ಎರಡು ಮುಖ್ಯ ಕೋನಗಳನ್ನು ಕಾಣುತ್ತೇವೆಃ ಪಾಪಗಳ ಕ್ಷಮಾಪಣೆ ಹಾಗು ದೇವರೊಂದಿಗೆ ಸಂಧಾನ. ಮತ್ತು ಇದೆಲ್ಲವೂ–ನಮ್ಮ ಕ್ಷಮಾಪಣೆ ಹಾಗು ನಮ್ಮ ಸಂಧಾನ–ಕ್ರಿಸ್ತನ ರಕ್ತದ ಮೂಲಕ–ಅಂದರೆ, ಶಿಲುಬೆಯ ಮೇಲಿನ ಆತನ ಮರಣದ ಮೂಲಕ–ಸಾಧ್ಯವಾಗಿಸಲ್ಪಟ್ಟಿದೆ (ರೋಮ 5:9-11 ಎಫೆಸ 2:13 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಪೌಲನು ಇಲ್ಲಿ ಸಮಸ್ತವನ್ನೂ ತನಗೆ ಸಂಧಾನಪಡಿಸಿಕೊಳ್ಳುವದು ದೇವರ ಸಂಕಲ್ಪವಾಗಿತ್ತೆಂದು ಹೇಳುತ್ತಾನೆ. ಇದರ ಅರ್ಥವೇನು? ಸೈತಾನ ಹಾಗು ಆತನ ದುರಾತ್ಮಗಳು ದೇವರೊಂದಿಗೆ ಸಂಧಾನಗೊಳಿಸಲ್ಪಟ್ಟು ರಕ್ಷಣೆಯನ್ನು ಪಡೆಯುವವೆಂದು ಇದರ ಅರ್ಥವೋ? ಇಲ್ಲ, ಇದು ಅದರ ಅರ್ಥವಲ್ಲ, ಇಡೀ ಸೃಷ್ಟಿಯು ಕ್ರಿಸ್ತನ ಅಧಿಕಾರ ಹಾಗು ದೊರೆತನದ ಅಧೀನಕ್ಕೊಳಪಡಿಸಲ್ಪಡಲಿದೆ ಎಂದು ಇದರ ತಾತ್ಪರ್ಯವಾಗಿದೆ. ಆದದರಿಂದ, ಸೈತಾನನು ಹಾಗು ಆತನ ದುರಾತ್ಮಗಳು ನಿತ್ಯದಂಡನೆಯನ್ನು ಹೊಂದಿದವರಾಗಿ ಅವುಗಳು ಸಹ ಕ್ರಿಸ್ತನ ಅಧಿಕಾರದ ಅಧೀನದೊಳಗೆ ತರಲ್ಪಡುವದು (ಎಫೆಸ 1:22).

**21** ಎಲ್ಲಾ ಮನುಷ್ಯರು ಮೊದಲು ದೇವರಿಂದ ಬೇರ್ಪಟ್ಟಿದ್ದರು. ಮನುಷ್ಯರು ತಮ್ಮ ದುಷ್ಟತನ ಹಾಗು ಸ್ವಾರ್ಥದಿಂದ ಕೂಡಿದ ನಡವಳಿಕೆಯ ಕಾರಣದಿಂದ ದೇವರಿಗೆ ದ್ವೇಷ ಮನಸ್ಸುಳ್ಳವರಾಗಿದ್ದರು. ಎಲ್ಲಾ ಮನುಷ್ಯರು ಮೂಲತಃ ಸ್ವಾಭಾವಿಕವಾಗಿ

ಒಳ್ಳೇಯವರೆಂದು ಕೆಲವು ಜನರು ಭಾವಿಸುತ್ತಾರೆ, ಆದರೆ ಪೌಲನು ಅದಕ್ಕೆ ಒಪ್ಪುವದಿಲ್ಲ. ನಾವೆಲ್ಲರೂ ಒಂದು ಕಾಲದಲ್ಲಿ ಸ್ವಭಾವತಃ ದೇವರಿಗೆ ವೈರಿಗಳಾಗಿದ್ದೇವು ಎಂದು ಹೇಳುತ್ತಾನೆ.

22 ಹೇಗಿದ್ದರೂ, ಈಗ ಶಿಲುಬೆಯ ಮೇಲೆ ಕ್ರಿಸ್ತನ ದೇಹದಲ್ಲಿ ಉಂಟಾದ ಮರಣದ ಮೂಲಕ ನಾವು ನಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಪಡೆದು, ನಮ್ಮ ಅಶುದ್ಧತೆಗಳಿಂದ ಶುದ್ಧೀಕರಿಸಲ್ಪಟ್ಟು ನಮಗೆ ಆಗಬೇಕಾಗಿದ್ದ ದಂಡನೆಯಿಂದ ಬಿಡುಗಡೆ ಹೊಂದಿದ್ದೇವೆ. ಹೀಗೆ ನಾವು ಈಗ ಸಂಪೂರ್ಣವಾಗಿ ದೇವರೊಂದಿಗೆ ಸಂಧಾನಗೊಳಿಸಲ್ಪ–ಟ್ಟಿದ್ದೇವೆ (ಎಫೆಸ 2:13 ಮತ್ತು ವ್ಯಾಖ್ಯಾನ ನೋಡಿರಿ).

23 ಒಮ್ಮೆ ದೇವರೊಂದಿಗೆ ಸಂಧಾನಗೊಳಿಸಲ್ಪಟ್ಟು ಅನಂತರದಲ್ಲಿ ನಮ್ಮ ರಕ್ಷಣೆಯನ್ನು ಕಳೆದುಕೊಳ್ಳುವದು ಸಾಧ್ಯವಿರುತ್ತದೋ? ನಾವು ನಂಬಿಕೆಯನ್ನು ಬಿಟ್ಟು ಬಿಡುವದಾದರೆ ನಿಶ್ಚಯವಾಗಿಯೂ ನಮ್ಮ ರಕ್ಷಣೆಯನ್ನು ಕಳೆದುಕೊಳ್ಳುವೆವು ಎಂದು ಈ ವಚನವು ಹೇಳುವಂತೆ ತೋರುತ್ತದೆ. ನಾವು ನಮ್ಮ ನಂಬಿಕೆಯಲ್ಲಿ ನೆಲೆಗೊಂಡಿರಬೇಕು, ಇಲ್ಲವಾದರೆ ಕ್ರಿಸ್ತನ ಮರಣವು ನಮಗೆ ನಿಷ್ಪ್ರಯೋಜವಾಗುವದು. ನಾವು ನಂಬಿಕೆಯ ಮೂಲಕ ರಕ್ಷಣೆ ಹೊಂದಿದ್ದೇವೆ (ಎಫೆಸ 2:8), ಆದದರಿಂದ, ನಾವು ನಂಬಿಕೆಯನ್ನು ಬಿಟ್ಟು ತೊಲಗುವದಾದರೆ ನಾವು ನಮ್ಮ ರಕ್ಷಣೆಯನ್ನು ನಷ್ಟಪಡಿಸಿಕೊಳ್ಳುವೆವು. ಆದರೆ ಅನೇಕ ಕ್ರೈಸ್ತರು ನಂಬುವದೇನೆಂದರೆ, ಒಮ್ಮೆ ಒಬ್ಬ ವ್ಯಕ್ತಿಯು ನಿಜವಾಗಿಯೂ ರಕ್ಷಣೆ ಹೊಂದಿದರೆ ಆ ರಕ್ಷಣೆಯನ್ನು ಎಂದಿಗೂ ಕಳೆದುಕೊಳ್ಳಲು ಸಾಧ್ಯವಿಲ್ಲ ಎಂಬದೇ. ಅವರು ಯೋಹಾನ 10:28 ನ್ನು ಉಲ್ಲೇಖಿಸುತ್ತಾರೆ, ಅಲ್ಲಿ ಯೇಸು ಹೇಳುವದೇನೆಂದರೆಃ "ನಾವು ಅವುಗಳಿಗೆ ನಿತ್ಯಜೀವವನ್ನು ಕೊಡುತ್ತೇನೆ; ಅವು ಎಂದಿಗೂ ನಾಶವಾಗುವದೇ ಇಲ್ಲ ಅವುಗಳನ್ನು ಯಾರೂ ನ್ನ ಕೈಯೊಳಗಿಂದ ಕಸಕೊಳ್ಳರು" ಇದು ಸತ್ಯ. ಆದರೆ ಯಾರೂ ನಮ್ಮನ್ನು ಕ್ರಿಸ್ತನ ಕೈಯೊಳಗಿಂದ ಕಸಕೊಳ್ಳರು ಎಂಬದು ನಿಜವಾದಾಗ್ಯು ಸ್ವತಃ ನಾವೇ ಆತನ ಕೈಯೊಳಗಿಂದ ಜಗಿಯುವದಕ್ಕೆ ತೀರ್ಮಾನಿಸಬಹುದುಃ ಅಂದರೆ, ನಾವು ನಮ್ಮ ನಂಬಿಕೆಯನ್ನು ಬಿಟ್ಟು ತೊಲಗುವದಕ್ಕೆ ಇಚ್ಚಿಸಬಹುದು 3 ಎಂದು ಇತರರು ಉತ್ತರಿಸುತ್ತಾರೆ. ಇಷ್ಟು ಮಾತ್ರವನ್ನು ನಾವು ಖಚಿತವಾಗಿ ಹೇಳಬಹುದುಃ ನಾವು ನಂಬಿಕೆಯನ್ನು ಬಿಡುವದಾದರೆ ನಮ್ಮ ಸ್ಥಿತಿಯು ಅತ್ಯಂತ ಅಪಾಯಕರವಾಗುವದು (ಲೂಕ 9:62; 2 ಪೇತ್ರ 2:20-22 ಮತ್ತು ವ್ಯಾಖ್ಯಾನಗಳು, ಸಾಮಾನ್ಯ ಲೇಖನಃ ನಾವು ನಮ್ಮ ರಕ್ಷಣೆಯನ್ನು ಕಳೆದುಕೊಳ್ಳಬಹುದೋ? ನೋಡಿರಿ).

ಇಲ್ಲಿ ಇನ್ನೊಂದು ಪ್ರಶ್ನೆ ಉದ್ಭವಿಸುತ್ತದೆ. ಕೆಲವು ಕ್ರೈಸ್ತರು ಪ್ರಾರಂಭದಲ್ಲಿ ತಮ್ಮ ನಂಬಿಕೆಯೊಳಗೆ ಬಹಳ ದೃಡವಾಗಿರುವಂತೆ ಕಾಣುತ್ತಾರೆ, ಆದರೆ ಅನಂತರದಲ್ಲಿ ಅವರು ಬಿದ್ದು ಹೋಗುವವರಂತೆ ತೋರುತ್ತಾರೆ, ಅವರು ಸಭೆಗೆ ಬರುವದನ್ನು ನಿಲ್ಲಿಸುತ್ತಾರೆ; ಅವರು ಕ್ರೈಸ್ತರಂತೆ ವರ್ತಿಸುವದಿಲ್ಲ; ಅವರು ಇನ್ನು ಮೇಲೆ ನಂಬಿಕೆಯ ಕಾರ್ಯಗಳನ್ನು ಮಾಡದವರಾಗುತ್ತಾರೆ. ಆದರೆ ಅವರು "ನಾನು ನಂಬುತ್ತೇನೆ; ನಾನು ನಂಬಿಕೆಯನ್ನು ಬಿಟ್ಟಿರುವದಿಲ್ಲ ಎಂದು ಹೇಳುತ್ತಾರೆ.

ಆದರೆ ಅವರು ಯಾವ ವಿಧವಾದ "ನಂಬಿಕೆ" ಹೊಂದಿದ್ದಾರೆ? ಅದು ಒಂದು ಮಿಥ್ಯ ನಂಬಿಕೆಯಾಗಿದೆ. ನಿಜವಾದ ನಂಬಿಕೆಯು ಯಾವಾಗಲೂ ಸತ್ಕ್ರಿಯೆಗಳಲ್ಲಿಯೂ, ಪ್ರೀತಿಯ ಕೃತ್ಯಗಳಲ್ಲಿಯೂ ನಾಂದಿಯಾಗುತ್ತದೆ. ನಮ್ಮ ನಂಬಿಕೆಯು ಸತ್ಕ್ರಿಯೆಗಳಲ್ಲಿಫಲಿತವಾಗದಿದ್ದರೆ ಅದು ಮೃತನಂಬಿಕೆಯಾಗಿದೆ (ಯಾಕೋಬ 2:14-24 ಮತ್ತು ವ್ಯಾಖ್ಯಾನ ನೋಡಿರಿ).

ಆದದರಿಂದ, ನಾವು ಅಸ್ತಿವಾರದ ಮೇಲೆ ನಿಂತು ಸ್ಥಿರವಾಗಿದ್ದು ನಮ್ಮ ನಂಬಿಕೆಯಲ್ಲಿ ನೆಲೆಗೊಂಡವರಾಗಿರೋಣ, ನಮ್ಮ ನಿರೀಕ್ಷೆಯನ್ನು ಬಿಟ್ಟು ತೊಲಗಿಹೋಗದಿರೋಣ; ನಮ್ಮನಿರೀಕ್ಷೆಯು ಕ್ರಿಸ್ತನಸುವಾರ್ತೆಯಿಂದ ಉಂಟಾದದ್ದು ಅಥವಾ ಪ್ರಕಟಗೊಂಡಿರುತ್ತದೆ. ಮತ್ತು ಕ್ರಿಸ್ತನ ಈ ಸುವಾರ್ತೆಯು ಆಕಾಶದ ಕೆಳಗಿರುವ ಸರ್ವಸೃಷ್ಟಿಗೆ ಸಾರಲ್ಪಟ್ಟಿರುತ್ತದೆ. ಅಂದರೆ, ಕ್ರಿಸ್ತನಸುವಾರ್ತೆಯು ಭೂಮಿಯ ಮೇಲಿರುವ ಪ್ರತಿಯೊಬ್ಬ ಪುರುಷ ಹಾಗು ಸ್ತ್ರೀಗಾಗಿ ಇರುತ್ತದೆ.

## ಸಭೆಗಾಗಿ ಪೌಲನ ಪರಿಶ್ರಮ (1:24-29)

24 ದೇವರ ನಿಜವಾದ ಸೇವಕರು ಕ್ರಿಸ್ತನಿಗೋಸ್ಕರವೂ ಆತನ ಸಭೆಗೋಸ್ಕರವೂ ಅನುಭವಿಸಿರುವ ಬಾಧೆಗಳಲ್ಲಿ ಸಂತೋಷ ಪಡುತ್ತಾರೆ (ಮತ್ತಾಯ 5:11-12; ಅ.ಕೃ.5:41-42; ರೋಮ 5:3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಪೌಲನು ಸೆರೆಮನೆಯಲ್ಲಿದ್ದುಕೊಂಡು ಈ ಪತ್ರಿಕೆಯನ್ನು ಬರೆಯುತ್ತಿದ್ದನಾದರೂ ಆತನು ಸಂತೋಷ ಪಡುತ್ತಿದ್ದಾನೆ!.

ಕ್ರಿಸ್ತನು ನಮಗೋಸ್ಕರ ಅನುಭವಿಸಿದ ಬಾಧೆಯಲ್ಲಿ ಯಾವ ಕೊರತೆಯೂ ಇರುವದಿಲ್ಲ. ಆತನು ನಮ್ಮ ಪಾಪಗಳ ಪೂರ್ಣಭಾರವನ್ನು ತನ್ನ ಮೇಲೆ ಹೊತ್ತುಕೊಂಡು ನಿಧಾನವಾದ ಹಾಗು ಸಂಕಟಮಯವಾದ ಮರಣವನ್ನು ಶಿಲುಬೆಯ ಮೇಲೆ ಅನುಭವಿಸಿದನು. ಆತನ ಬಾಧೆಯು ಪರಿಪೂರ್ಣವಾದದ್ದು. ಆದರೆ ಪೌಲನ ಬಾಧೆಯು ಇನ್ನೂ ಪರಿಪೂರ್ಣವಾಗಿರುವದಿಲ್ಲ; ಆತನು ಇನ್ನು ಸ್ವಲ್ಪ ಬಾಧೆಪಡುವದು ಉಳಿದಿರುತ್ತದೆ [4] ಪೌಲನು ಕ್ರಿಸ್ತನ ದೇಹವೆಂಬ ಸಭೆಯ ನಿಮಿತ್ಯವಾಗಿ ಬಹಳಷ್ಟು ಬಾಧೆಯನ್ನು ಅನುಭವಿಸಿದ್ದಾನೆ (1ಕೊರಿಂಥ 4:9-13 2ಕೊರಿಂಥ 11:23-28). ಪೌಲನು ಕೊಲೊಸ್ಸೆಯವರನ್ನು ಇದುವರೆಗೂ ಬೇಟಿಯೇ ಆಗದಿದ್ದಾಗ್ಯು (ಆತನು ಎಪಫ್ರನ ವರದಿಯ ಮೂಲಕವಷ್ಟೇ ಅವರ ಕುರಿತು ಆತನು ತಿಳಿದಿರುತ್ತಾನೆ). ಆತನು ಅವರಿಗಾಗಿ ಸಹ ಬಾಧೆಯನ್ನು ಅನುಭವಿಸಿದನು.

ಇಲ್ಲಿ ಪೌಲನ ಜೀವಿತದ ಮೂಲಕ ನಾವು ಒಂದು ಸಂಗತಿಯನ್ನು ಕಲಿತುಕೊಳ್ಳಬೇಕುಃ ಅದೇನೆಂದರೆ, ನಾವು ಕ್ರಿಸ್ತನನ್ನು ಹಿಂಬಾಲಿಸಲು ಬಯಸುವದಾದರೆ ಆತನಿಗಾಗಿ ಬಾಧೆಯನ್ನು ಅನುಭವಿಸುವದಕ್ಕೂ ನಾವು ಸಿದ್ಧರಾಗಿರಬೇಕು. ಪೌಲನು ತಿಮೊಥೆಯನಿಗೆ ಬರೆದದ್ದೇನೆಂದರೆಃ ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೊಳಗಾಗುವರು (2 ತಿಮೊಥೆ 3:12). ನಾವು ಬಾಧೆಯನ್ನನುಭವಿಸಲು ಸಿದ್ಧರಾಗಿದ್ದೇವೋ?ಹೌದು ಎಂದು ಹೇಳುವದು ಸುಲಭ–ಹಿಂಸೆಯು ಬರುವದಕ್ಕೆ ಮುಂಚೆ! ಮತ್ತು ಬಾಧೆಯು ನಮ್ಮ ವೈರಿಗಳಿಂದ ಮಾತ್ರವೇ ಬರುವದಿಲ್ಲ, ಅನೇಕ ವೇಳೆ ಅದು ನಮ್ಮ ಸ್ನೇಹಿತರಾಗಿರಬೇಕಾದವರಿಂದ, ಸಭೆಯಲ್ಲಿರುವ ನಮ್ಮ ಸಹೋದರರು ಹಾಗು ಸಹೋದರಿಯರಿಂದ ಬರುತ್ತದೆ. ಪೌಲನು ಸ್ವಂತ ಅನುಭವ ಅದೇ ಆಗಿತ್ತು (2 ತಿಮೊಥೆ 1:15).

**25** ಕೊಲೊಸ್ಸೆ ಸಭೆಯಲ್ಲಿ ಉದ್ಭವಿಸಿದ್ದ ಸುಳ್ಳುಬೋಧನೆಯನ್ನು ಜಯಿಸುವದಕ್ಕಾಗಿ ಪೌಲನು ಇಲ್ಲಿ ಕೊಲೊಸ್ಸೆಯವರಿಗೆ ತನ್ನ ಅಪೊಸ್ತಲತ್ವದ ಅಧಿಕಾರವನ್ನು ಜ್ಞಾಪಕಪಡಿಸುತ್ತಾನೆ; ತಾನು ಕ್ರಿಸ್ತನ ಪೂರ್ಣಸುವಾರ್ತೆಯನ್ನು ಸಾರುವದಕ್ಕೂ ಸಭೆಗಳಲ್ಲಿನ ತಪ್ಪುಗಳನ್ನು ಬಯಲಿಗೆ ತರುವದಕ್ಕೂ ವಿಶೇಷವಾಗಿ ನೇಮಕ ಮಾಡಲ್ಪಟ್ಟಿದ್ದಾನೆಂಬದನ್ನು ಆತನು ಅವರಿಗೆ ಜ್ಞಾಪಕಪಡಿಸುತ್ತಾನೆ. ಪೌಲನು ಬರೆಯುವದೆಲ್ಲವೂ ಸತ್ಯ ಹಾಗು ವಿಶ್ವಾಸಾರ್ಹವಾದದ್ದು; ಆದದರಿಂದ, ಕೊಲೊಸ್ಸೆಯವರು ಈ ಪತ್ರಿಕೆಯಲ್ಲಿ ಬರೆದಿರುವ ಸಂಗತಿಗಳಿಗೆ ಕಿವಿಗೊಡುವವರಾಗಿರಲಿ! (ಎಫೆಸ 3:7; 2 ತಿಮೊಥೆ 1:11).

**26-27** ಒಂದು ವಿಧದಲ್ಲಿ, ದೇವರ ವಾಕ್ಯವು ಮರ್ಮದ ಹಾಗಿರುತ್ತದೆ, ಯಾಕೆಂದರೆ ಇದರ ಅರ್ಥವು ಅನೇಕ ಜನರಿಗೆ ಮರೆಯಾಗಿದೆ. ಆದರೆ "ಮರ್ಮವು" ದೇವಜನರಿಗೆ –ಅಂದರೆ, ಮುಕ್ತ ಹೃದಯಗಳನ್ನು ಹೊಂದಿ ನಂಬುವದಕ್ಕೆ ಸಿದ್ಧರಾಗಿರುವವರಿಗೆ ತಿಳಿಸಲ್ಪಟ್ಟಿದೆ. ಇನ್ನೊಂದು ಪತ್ರಿಕೆಯಲ್ಲಿ ಪೌಲನು ಈ ಮರ್ಮ ಏನೆಂಬದನ್ನು ಸ್ಪಷ್ಟವಾಗಿ ಬರೆದಿದ್ದಾನೆಃ ಅದೇನೆಂದರೆ, ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನ ಪಡಿಸಿಕೊಳ್ಳುತ್ತಿದ್ದನೆಂಬದೇ (2 ಕೊರಿಂಥ 5:19). ಮತ್ತು ಈಗಲೂ ಸಹ ನಮ್ಮೊಳಗೆ ವಾಸಿಸುವ ಪವಿತ್ರಾತ್ಮನ ಮೂಲಕ ಕ್ರಿಸ್ತನು ನಮ್ಮನ್ನು ದೇವರೊಂದಿಗೂ ಒಬ್ಬರಿಂದೊಬ್ಬರಿಗೂ ಸಮಾಧಾನಪಡಿಸುತ್ತಿದ್ದಾನೆ. ಮತ್ತು ನಾವು ಯಾವದರಿಂದ ನಮ್ಮ ರಕ್ಷಣೆಯ ನಿರೀಕ್ಷೆಯನ್ನು ಪಡೆದುಕೊಳ್ಳುತ್ತೇವೋ ಆಸುವಾರ್ತೆಯು – ಪ್ರಭಾವದ ನಿರೀಕ್ಷೆ (ವಚನ 27)–ಯೆಹೂದ್ಯರಿಗಾಗಿ ಮಾತ್ರವಲ್ಲ, ಆದರೆ ಕೊಲೊಸ್ಸೆಯವರಂತಹ ಅನ್ಯ ಜನರಿಗಾಗಿಯೂ ಇರುತ್ತದೆ (ಎಫೆಸ 3:8-9).

**28** ಇಲ್ಲಿ ನಾವು ಪೌಲನ ಎಲ್ಲಾ ಬೋಧನೆಯ ಮುಖ್ಯ ವಿಷಯವನ್ನು ನೋಡುತ್ತೇವೆಃ ಯೇಸುಕ್ರಿಸ್ತನು. ನಾವು ಆತನನ್ನು (ಕ್ರಿಸ್ತನು) ಪ್ರಸಿದ್ಧಿಪಡಿಸುತ್ತೇವೆ. ಮತ್ತು ಎಲ್ಲಾ ಬೋಧನೆ ಹಾಗು ಉಪದೇಶದ ಮುಖ್ಯ ಗುರಿ ಹಾಗು ಉದ್ದೇಶವನ್ನು ಸಹ ಇಲ್ಲಿ ಕಾಣಬಹುದುಃ ಅದೇನೆಂದರೆ, ನಾವು ......ಎಲ್ಲರನ್ನೂ ಕ್ರಿಸ್ತನಲ್ಲಿ ಪ್ರವೀಣರನ್ನಾಗಿ (ಪರಿಪೂರ್ಣರನ್ನಾಗಿ) ನಿಲ್ಲಿಸುವದಕ್ಕೆ ಪ್ರಯತ್ನಿಸುತ್ತಿದ್ದೇವೆ, ಇಲ್ಲಿ "ಎಲ್ಲರನ್ನು" ಎಂಬ ಪದದ ಅರ್ಥವು "ಪ್ರತಿಯೊಬ್ಬ ವಿಶ್ವಾಸಿಯನ್ನು" ಎಂದಾಗಿರುತ್ತದೆ. ಕಾರಣ ಅವಿಶ್ವಾಸಿಯೊಬ್ಬನನ್ನು ಕ್ರಿಸ್ತನಲ್ಲಿ ಪರಿಪೂರ್ಣನನ್ನಾಗಿ ನಿಲ್ಲಿಸುವದು ಅಸಾಧ್ಯವಾಗಿರುತ್ತದೆ. ಮತ್ತು ವಿಶ್ವಾಸಿಗಳಾದ ನಾವು ಪರಲೋಕದಲ್ಲಿ ಕ್ರಿಸ್ತನ ಸಿಂಹಾಸನದ ಮುಂದೆ ಪ್ರವೀಣರಾಗಿ
(ಪರಿಪೂರ್ಣರಾಗಿ) ನಿಲ್ಲಿಸಲ್ಪಡುವೆವು .

**29** ಪೌಲನು ಪ್ರಯಾಸಪಡುತ್ತಾನೆ, ಹೋರಾಡುತ್ತಾನೆ. ಆತನ ಪ್ರಯಾಸ ಹಾಗು ಹೋರಾಟಗಳು ಆತನ ಸ್ವಂತ ಶಕ್ತಿಯಿಂದಲ್ಲ, ಆದರೆ ಕ್ರಿಸ್ತನ ಶಕ್ತಿಯಿಂದಲೇ. ನಾವು ಸಹ ಪೌಲನ ಹಾಗೆ ನಮ್ಮ ಸ್ವಂತ ಬಲದದಿಂದ ಏನನ್ನೂ ಮಾಡಲು ಪ್ರಯತ್ನಿಸದಿರೋಣ; ಇಲ್ಲವಾದರೆ, ನಾವು ಮಾಡುವದೆಲ್ಲಾ ವ್ಯರ್ಥವಾಗುವದು. ಕ್ರಿಸ್ತನ ಬಲವಿಲ್ಲದೆ ನಾವು ದೇವರಿಗಾಗಿ ಯೋಗ್ಯವಾದದ್ದೇನನ್ನೂ ಮಾಡಲಾರೆವು (ಯೋಹಾನ 15:5 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ಕ್ರಿಸ್ತನ ಬಲದಿಂದ ನಾವು ಏನನ್ನಾದರೂ ಮಾಡಬಲ್ಲೆವು (ಫಿಲಿಪ್ಪಿ 4:13).

---

## ಅಧ್ಯಾಯ - 2

### ಕೊಲೊಸ್ಸೆಯವರಿಗಾಗಿ ಪೌಲನ ಹೋರಾಟ (2:1-5)

**1-3** ಪೌಲನು ಕೊಲೊಸ್ಸೆ ಹಾಗು ಲವೊದಿಕೀಯ[5] ಊರುಗಳಲ್ಲಿನ ಕ್ರೈಸ್ತರನ್ನು ಎಂದಿಗೂ ಬೇಟಿಯಾಗಿರಲಿಲ್ಲ; ಹಾಗಿದ್ದರೂ, ಆತನು ಅವರಿಗಾಗಿ ಪ್ರಯಾಸಪಟ್ಟನು, ಹೋರಾಡಿದನು. ವಿಶೇಷವಾಗಿ ಕೊಲೊಸ್ಸೆಯ ವಿಶ್ವಾಸಿಗಳು ಆತನು ಹೃದಯಕ್ಕೆ ಪ್ರಿಯರಾಗಿದ್ದರು. ಆತನು ಅವರ ಸಭಾಪಾಲಕನಾಗಿದ್ದಾನೇನೋ ಎಂಬಂತೆ ಈ ಪತ್ರಿಕೆಯನ್ನು ಬರೆಯುತ್ತಾನೆ. ಪೌಲನ ಹೋರಾಟದ ಉದ್ದೇಶವೇನೆಂದರೆ, ಆತನು ಎಂದಿಗೂ ಬೇಟಿಯಾಗದ ಈ ವಿಶ್ವಾಸಿಗಳು ಹೃದಯದಲ್ಲಿ ಪ್ರೋತ್ಸಾಹ ಹೊಂದಿ ಪ್ರೀತಿಯಲ್ಲಿ ಹೊಂದಿಕೆಯಾಗಿದ್ದು ದೇವರು ತಿಳಿಸಿರುವ ಮರ್ಮವನ್ನು, ಅಂದರೆ....ಕ್ರಿಸ್ತನನ್ನು ತಿಳಕೊಂಡವರಾಗಿರಬೇಕೆಂಬದೇ (ವಚನ 2).

ಕ್ರೈಸ್ತ ಧರ್ಮದ ತಿರುಳು ಕ್ರಿಸ್ತನನ್ನು ...ತಿಳಕೊಂಡಿರುವದೇ ಆಗಿದೆ. ಕ್ರೈಸ್ತರಾದ ನಾವು ಧರ್ಮದ ಅನುಯಾಯಿಗಳಲ್ಲ; ನಾವು ವ್ಯಕ್ತಿಯ, ಯೇಸುಕ್ರಿಸ್ತನ ಅನುಯಾಯಿಗಳಾಗಿದ್ದೇವೆ. ನಮ್ಮ ಧರ್ಮವು ಯಾವದೋ ಒಂದು ತತ್ವಜ್ಞಾನ ಅಥವಾ

ವಿಚಾರಗಳ ವ್ಯವಸ್ಥೆಯಲ್ಲ; ಅದು ವ್ಯಕ್ತಿಯಾದ ಕ್ರಿಸ್ತನೇ, ನಾವು ಆತನ್ನು ವಯಕ್ತಿಕವಾಗಿ ತಿಳಿದುಕೊಳ್ಳಬಹುದು. ನಾವು ಕ್ರಿಸ್ತನನ್ನು ವಯಕ್ತಿಕವಾಗಿ ತಿಳಿಯದಿದ್ದರೆ ನಮ್ಮನ್ನೂ ಕ್ರೈಸ್ತರೆಂದು ಕರೆದುಕೊಳ್ಳಲು ಸಾಧ್ಯವಿಲ್ಲ.

ನಾವು ಕ್ರಿಸ್ತನನ್ನು ನಂಬಿಕೆಯ ಮೂಲಕ ತಿಳುಕೊಳ್ಳಬಹುದು. ನಂಬಿಕೆಯಿಲ್ಲದ ವ್ಯಕ್ತಿಗಾದರೋ ಕ್ರಿಸ್ತನು ಕೇವಲ ಮರ್ಮ ಆಗಿರುತ್ತಾನೆ. ಆದರೆ ನಾವು ನಂಬಿಕೆಯನ್ನು ಹೊಂದಿರುವದಾದರೆ ಆ "ಮರ್ಮವು" ಬಯಲುಪಡಿಸಲ್ಪಡುತ್ತದೆ. ನಾವು ನಂಬಿಕೆಯನ್ನಿಟ್ಟ ಕೂಡಲೇ ಕ್ರಿಸ್ತನ ಆತ್ಮನು (ಪವಿತ್ರಾತ್ಮನು) ನಮ್ಮ ಜೀವಿತಗಳನ್ನು ಪ್ರವೇಶಿಸುತ್ತಾನೆ; ನಂತರ ಪವಿತ್ರಾತ್ಮನ ಮೂಲಕ ನಾವು ಸ್ವತಃ ಯೇಸುವಿನೊಂದಿಗೆ ಅನ್ಯೋನ್ಯತೆಯನ್ನು ಅನುಭವಿಸುತ್ತೇವೆ. ಕ್ರಿಸ್ತನನ್ನು ತಿಳಿಯುವಾಗ ನಾವು ಜ್ಞಾನ ವಿಧ್ಯಾಸಂಬಂಧವಾದ ನಿಕ್ಷೇಪಗಳನ್ನೆಲ್ಲಾ ಪಡೆದು ಕೊಳ್ಳುವೆವು, ಅವು ಆತನಲ್ಲಿಯೇ ಅಡಗಿರುತ್ತವೆ (ವಚನ 3). ಹೀಗೆ ಕ್ರಿಸ್ತನನ್ನು ತಿಳಿಯುವದೆಂದರೆ ನಾವು ತಿಳಿಯಬೇಕಾದದ್ದೆಲ್ಲವನ್ನೂ ತಿಳಿಯುವದಾಗಿದೆ!.

**4** ಪೌಲನು ತನ್ನ ವಾಚಕರು ಸುಳ್ಳು ಬೋಧಕರಿಂದ ವಂಚಿಸಲ್ಪಡದ ಹಾಗೆ ಕ್ರಿಸ್ತನನ್ನು ಅರಿತುಕೊಳ್ಳಬೇಕೆಂದು ಇಚ್ಚಿಸುತ್ತಾನೆ. ಸುಳ್ಳುಬೋಧಕರು ಯಾವ ಸಂಗತಿಗಳನ್ನು ಬೋಧಿಸುತ್ತಾರೆ? ಕ್ರಿಸ್ತನು ದೇವಕುಮಾರನಲ್ಲ ಎಂದು ಅವರು ಬೋಧಿಸುತ್ತಾರೆ. ಅಥವಾ ಅವರು ತಾವು ಕ್ರಿಸ್ತನನ್ನು ಅರಿತುಕೊಳ್ಳದೆಯೇ ಆತ್ಮೀಕ ಜ್ಞಾನ ತಿಳುವಳಿಕೆಯನ್ನು ಸಂಪಾದಿಸಿಕೊಳ್ಳಬಲ್ಲರೆಂದು ಬೋಧಿಸುತ್ತಾರೆ. ಅಂತಹ ಬೋಧಕರು ರಂಜನೆಯಾದ ಮಾತುಗಳನ್ನು (ತರ್ಕಗಳನ್ನು) ಉಪಯೋಗಿಸುತ್ತಾರೆ; ಆದರೆ ಅವರ "ಜ್ಞಾನವು" ದೇವರಿಂದ ಬಂದದ್ದಲ್ಲ, ಅದು ಮನುಷ್ಯನಿಂದ ಬಂದದ್ದಾಗಿದೆ (ವಚನ 8).

**5** ಪೌಲನು ಹೆಚ್ಚು ಕಡಿಮೆ ಕೊಲೊಸ್ಸೆಯವರೊಂದಿಗೆ ಇದ್ದಾನೇನೋ ಎನ್ನುವಷ್ಟರ ಮಟ್ಟಿಗೆ ಅವರಿಗಾಗಿ ಚಿಂತಿಸುತ್ತಾನೆ, ಮತ್ತು ನಿಜವಾಗಿಯೂ ಆತನು ಆತ್ಮದಿಂದ ಅವರೊಂದಿಗಿದ್ದನು. ಅದೇ ರೀತಿಯಲ್ಲಿ, ನಾವು ಇತರರಿಗಾಗಿ ಪ್ರೀತಿಯನ್ನು ಚಿಂತನೆಯನ್ನೂ ಹೊಂದಿರುವಾಗ ನಾವು ಅವರಿಂದ ಅನೇಕ ಮೈಲುಗಳಷ್ಟು ದೂರದಲ್ಲಿದ್ದರೂ-ಹಾಗು ನಾವು ಎಂದಿಗೂ ಬೇಟಿಯಾಗದಿದ್ದಾಗ್ಯು-ಆತ್ಮದಿಂದ ಅವರೊಂದಿಗೆ ಇರುವವರಾಗಿರುತ್ತೇವೆ.

## ಕ್ರಿಸ್ತನಲ್ಲಿನ ಜೀವನದ ಸರ್ವಸಂಪೂರ್ಣತೆ (2:6-23)

**6-7** ......ನೀವು ಕ್ರಿಸ್ತ ಯೇಸುವನ್ನು ಕರ್ತನನ್ನಾಗಿ ಅಂಗೀಕರಿಸಿಕೊಂಡಂತೆಯೇ ಆತನಲ್ಲಿದ್ದವರಾಗಿ ನಡೆದುಕೊಳ್ಳಿರಿ. ನಾವು ಕ್ರಿಸ್ತನ್ನು ನಂಬಿಕೆಯ ಮೂಲಕ ಅಂಗೀಕರಿಸಿಕೊಂಡ ಪ್ರಕಾರವೇ ನಾವು ನಂಬಿಕೆಯ ಮೂಲಕ ಆತನಲ್ಲಿದ್ದವರಾಗಿ ಜೀವಿಸಬೇಕು.

ನಾವು ಮೊದಲು ಯಾವಾಗ ಕ್ರಿಸ್ತನನ್ನು ನಮ್ಮ ಕರ್ತನನ್ನಾಗಿ ಅಂಗೀಕರಿಸಿಕೊಂಡೆವೆಂಬದನ್ನು ನೆನಪಿಸಿಕೊಳ್ಳಬಲ್ಲೆವೋ? ಅದು ಯಾವ ರೀತಿಯಾಗಿತ್ತು? ನಾವು ಸಂತೋಷ, ಸಮಾಧಾನ ಹಾಗು ಪ್ರೀತಿಯಿಂದ ತುಂಬಿದ್ದೆವು, ಅಲ್ಲವೋ ಈಗ, ಪೌಲನು, ಅದೇ ವಿಧದಲ್ಲಿ ಜೀವಿಸುತ್ತೀರಿ! ಎಂದು ಹೇಳುತ್ತಾನೆ.

ನೀವು ಕ್ರಿಸ್ತನನ್ನು ಅಂಗೀಕರಿಸಿಕೊಂಡಂತೆಯೇ ಜೀವಿಸುತ್ತೀರಿ. ನಾವು ಆತನಲ್ಲಿ ಬೇರೂರಿಕೊಂಡು ಭಕ್ತಿವೃದ್ಧಿಯನ್ನು ಹೊಂದಿ (ವಚನ 7). ಜೀವಿಸುತ್ತಾ ಇರಬೇಕು. ಕ್ರಿಸ್ತನು ದ್ರಾಕ್ಷೆಬಳ್ಳಿ; ನಾವು ಕೊಂಬೆಗಳು. ನಾವು ಆತನಿಂದ ಬೇರ್ಪಡುವದಾದರೆ ಸತ್ತು ಹೋಗುವೆವು (ಒಣಗಿ ಹೋಗುವೆವು)-(ಯೋಹಾನ 15:4-5 ಮತ್ತು ವ್ಯಾಖ್ಯಾನ ನೋಡಿರಿ).

ನಾವು ಮಣ್ಣಿಲ್ಲದ ಬಂಡೆಯ ನೆಲದಂತೆ ಇರದಿರೋಣ, ಅಲ್ಲಿ ಬಿತ್ತಲ್ಪಟ್ಟ ಬೀಜವು (ದೇವರ ವಾಕ್ಯ) ಬೇಗನೆ ಮೊಳೆಯುತ್ತದೆ, ಆದರೆ ಅಲ್ಲಿ ಮಣ್ಣು ಬಹಳ ತೆಳ್ಳಗಿದ್ದದರಿಂದ ಅದು ಶೀಘ್ರವೇ ಒಣಗಿ ಹೋಗುತ್ತದೆ (ಮಾರ್ಕ 4:5-6 16-17 ಮತ್ತು ವ್ಯಾಖ್ಯಾನ ನೋಡಿರಿ). ಅಥವಾ ನಾವು ಮುಳ್ಳು ಗಿಡಗಳುಳ್ಳ ನೆಲದಂತೆ ಇರದಿರೋಣ, ಅಲ್ಲಿ ಬೀಜವು ಕ್ಷೀಪ್ರವಾಗಿ ಬೆಳೆಯುತ್ತದೆ, ಆದರೆ ಬಳಿಕ ಅದು ಮುಳ್ಳುಗಳಿಂದ-ಅಂದರೆ, ಪ್ರಪಂಚದ ಚಿಂತೆಗಳೂ ಐಶ್ವರ್ಯದಿಂದುಂಟಾಗುವ ಮೋಸವು ಇತರ ವಿಷಯಗಳ ಮೇಲಣ ಆಶೆಗಳಿಂದಲೂ-ಅಡಗಿಸಲ್ಪಡುತ್ತದೆ (ಮಾರ್ಕ 4:7,18-19 ಮತ್ತು ವ್ಯಾಖ್ಯಾನ ನೋಡಿರಿ).

**8** ಪೌಲನು ಇಲ್ಲಿ ಎರಡು ವಿಧವಾದ ಜ್ಞಾನಗಳನ್ನು ಪ್ರಸ್ತಾಪಿಸುತ್ತಾನೆಃ ಮೊದಲನೆಯದಾಗಿ, ಕ್ರಿಸ್ತನಿಂದ ಬರುವ ಜ್ಞಾನ ಮತ್ತು ಎರಡನೆಯದಾಗಿ, ಪ್ರಪಂಚದಿಂದ, ಮನುಷ್ಯನಿಂದ ಬರುವ ಜ್ಞಾನ. ಮಾನುಷ ಅಥವಾ ಪ್ರಾಪಂಚಿಕ ತತ್ವಜ್ಞಾನ ಬೋಧನೆಯು ನಮ್ಮ ಸುತ್ತಲೆಲ್ಲಾ ಇರುತ್ತದೆ, ಆದರೆ ಕ್ರಿಸ್ತನಲ್ಲಿರುವ ಜ್ಞಾನ ವಿಧ್ಯೆಗಳಿಗೆ ಹೋಲಿಸಿದರೆ ಪ್ರಪಂಚದ ತತ್ವಜ್ಞಾನವು ಮೋಸ ಹಾಗು ನಿರರ್ಥಕ ಆಗಿದೆ. "ಕ್ರೈಸ್ತ" ತತ್ವಜ್ಞಾನಗಳೆಂದು ಕರೆಯಲ್ಪಡುವ ಅನೇಕ ವಿಧವಾದ ತತ್ವಜ್ಞಾನಗಳು ಇರುತ್ತವೆ. ಅವು ಗಳು ಕ್ರೈಸ್ತರೆಂದು ಹೇಳಿಕೊಳ್ಳುವವರಿಂದ ಮುಂದಿಡಲ್ಪಡುತ್ತವೆ, ಆದರೆ ಅವರ ಬೋಧನೆಯು ಮಿಥ್ಯವಾಗಿರುತ್ತದೆ. ಆ ಜನರು ಯೇಸುವು ದೇವಕುಮಾರನೆಂಬದನ್ನೂ ಜೀವಸ್ವರೂಪನಾದ ದೇವರ ಏಕೈಕ ಸತ್ಯವಾದ ನರಾವತಾರನೆಂಬದನ್ನೂ ಅಲ್ಲಗಳೆಯುತ್ತಾರೆ. ನಿಜವಾದ ಕ್ರೈಸ್ತರು ಸಹ ಅಂತಹ ಜನರ ಮೋಸವಾದ ನಿರರ್ಥಕ ತತ್ವಜ್ಞಾನದಿಂದ ವಂಚಿಸಲ್ಪಡಬಹುದು.

**9** ಈ ವಚನದಲ್ಲಿ ಪೌಲನು ದೇವರ ನಿಜವಾದ ನರಾವತಾರವಾಗಿರುವದೆಂದರೆ ಏನೆಂಬದನ್ನು ತಿಳಿಸುತ್ತಾನೆಃ ಕ್ರಿಸ್ತನಲ್ಲಿಯೇ ದೇವರ ಸರ್ವಸಂಪೂರ್ಣತೆಯು ಅವತರಿಸಿ ವಾಸಮಾಡುತ್ತದೆ. ಯೇಸು ಕ್ರಿಸ್ತನು ದೇವರ ಒಂದು ಸ್ವರೂಪವಲ್ಲ. ಆತನು ದೇವರ ಒಂದು ರೂಪ ಅಥವಾ ಒಂದು ಉದಾಹರಣೆಯಲ್ಲ. ಆತನು ದೇವರ ಒಬ್ಬ ರಾಯಭಾರಿ ಅಥವಾ

ಪ್ರತಿನಿಧಿಯಲ್ಲ. ಆತನು ಇವುಗಳಲ್ಲಿ ಯಾವದೂ ಅಲ್ಲ. ಯೇಸುಕ್ರಿಸ್ತನು ಸ್ವತಃ ದೇವರೇ ಆಗಿದ್ದಾನೆ! ಕ್ರಿಸ್ತನಲ್ಲಿಯೇ ದೇವರ ಸರ್ವ ಸಂಪೂರ್ಣತೆಯು ವಾಸಿಸುತ್ತದೆ (ಕೊಲೊಸ್ಸೆ 1:19 ನೋಡಿರಿ).

ದೇವರ ಸರ್ವಸಂಪೂರ್ಣತೆ ಅಂದರೇನು? ಇದು ಎಲ್ಲಾ ಗುಣಲಕ್ಷಣಗಳ ಸಾರಾಂಶವಾಗಿದೆ–ಉದಾಹರಣೆಗೆ, ಪ್ರೀತಿ, ಬೆಳಕು, ಸತ್ಯ, ಶಕ್ತಿ, ಜ್ಞಾನ, ಪರಿಶುದ್ಧತೆ, ಮುಂತಾದವುಗಳು. ದೇವರ ಈ ಎಲ್ಲಾ ಗುಣಲಕ್ಷಣಗಳು ಯೇಸುಕ್ರಿಸ್ತನಲ್ಲಿರುತ್ತವೆ.

ದೇವರ ಸರ್ವಸಂಪೂರ್ಣತೆಯು ಕ್ರಿಸ್ತನಲ್ಲಿ ವಾಸಿಸುತ್ತದೆಂಬದನ್ನು ಇಲ್ಲಿ ಗಮನಿಸಿರಿ. ದೇವರು ಈಗಲೂ ಕ್ರಿಸ್ತನಲ್ಲಿ ಜೀವಿಸುತ್ತಾನೆ. ಕ್ರಿಸ್ತನು ಇಂದಿಗೂ ದೇವರ ಏಕೈಕ ಸತ್ಯವಾದ ನರಾವತಾರವಾಗಿರುತ್ತಾನೆ. ಕ್ರಿಸ್ತನು ಜೀವಸ್ವರೂಪನಾದ ದೇವರಾಗಿದ್ದಾನೆ, ಆತನು ಆದಿಯಿಂದಲೇ ಅಸ್ತಿತ್ವದಲ್ಲಿರುತ್ತಾನೆ. ಮತ್ತು ಸದಾಕಾಲವೂ ಇರುವನು.

**10** ನಾವು ಸಹ ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಆ ಸರ್ವಸಂಪೂರ್ಣತೆಯಲ್ಲಿ ಪಾಲುಗಾರರಾಗಬಹುದು. (ಎಫೆಸ 3:19). ನಾವು ಸಹ ಪವಿತ್ರಾತ್ಮನ ಮುಖಾಂತರ ದೇವರ ಎಲ್ಲಾ ಗುಣಲಕ್ಷಣಗಳಿಂದ ತುಂಬಿಸಲ್ಪಡುವವರಾಗುವೆವು. ಮತ್ತು ನಾವು ದೇವರ ಎಲ್ಲಾ ಗುಣಲಕ್ಷಣಗಳಿಂದ ತುಂಬಿಸಲ್ಪಡುವದಾದರೆ ನಿಜವಾಗಿಯೂ ಸಿದ್ಧಿಗೆ ಬಂದವರೂ ಪರಿಪೂರ್ಣರೂ ಆಗುವೆವು! ಇದಕ್ಕೆ ಹೋಲಿಸಿದರೆ ದಿವರು ಹಾಗು ಕ್ರಿಸ್ತನಿಂದ ಬೇರ್ಪಟ್ಟ ಜೀವಿತವು ಶೂನ್ಯವು ಅರ್ಥಹೀನವು ಆಗಿರುತ್ತದೆ. ಕ್ರಿಸ್ತನು ಶಿರಸ್ಸು, ಒಡೆಯನು, ಕರ್ತನು ಎಂಬದಾಗಿ ಪೌಲನು ಅನೇಕಸಾರಿ ಬರೆಯುತ್ತಾನೆ. ಕ್ರಿಸ್ತನು ಉತ್ಕೃಷ್ಟನಾಗಿದ್ದಾನೆ; ಆತನು ಎಲ್ಲಾ ದೊರೆತನಗಳಿಗೂ ಅಧಿಕಾರಗಳಿಗೂ ಒಡೆಯನಾಗಿರುತ್ತಾನೆ (ಎಫೆಸ 1:20-22; ಫಿಲಿಪ್ಪಿ 2:9-11, ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಅನೇಕ ಜನರು ತಪ್ಪಾಗಿ ಯೋಚಿಸುವದೇನೆಂದರೆ, ಕ್ರಿಸ್ತನು ಅನೇಕ ಕಲ್ಪಿತ ದೇವರ ನರಾವತಾರಗಳಲ್ಲಿ ಒಬ್ಬನು ಮಾತ್ರವೇ, ಅಥವಾ ಆತನು ಬುದ್ಧ ಅಥವಾ ಮಹಮ್ಮದನಂತೆ ಕೇವಲ ಇನ್ನೊಬ್ಬ ಧಾರ್ಮಿಕ ನಾಯಕನಷ್ಟೇ ಎಂಬದಾಗಿ. ಇನ್ನೂ ಅನೇಕರು ಕ್ರಿಸ್ತನು ಒಬ್ಬ ಶ್ರೇಷ್ಟ ಬೋಧಕನೂ, ಒಬ್ಬ ಶ್ರೇಷ್ಟ ಪ್ರವಾದಿ ಮಾತ್ರವೇ ಎಂದು ತಪ್ಪಾಗಿ ಯೋಚಿಸುತ್ತಾರೆ. ಆದರೆ ಕ್ರಿಸ್ತನು ಎಲ್ಲಕ್ಕೂ ಪ್ರಮುಖನಾಗಿದ್ದಾನೆ, ಕ್ರಿಸ್ತನ ಬಲ ಹಾಗು ಅಧಿಕಾರದಂತೆ ಇನ್ನೊಂದಿರುವದಿಲ್ಲ; ಎಲ್ಲಾ ಸಂಗತಿಗಳು ಆತನ ಪಾದಗಳ ಕೆಳಗೆ ಇರುತ್ತವೆಂದು ಪೌಲನು ಹೇಳುತ್ತಾನೆ (ಎಫೆಸ 1:22). ಆತನನ್ನು ಬೇರೆ ಇನ್ನಾರೊಂದಿಗೂ ಹೋಲಿಸಲು ಸಾಧ್ಯವಿಲ್ಲ (ಮಾರ್ಕ 8:27-29 ಮತ್ತು ವ್ಯಾಖ್ಯಾನ ನೋಡಿರಿ).

**11** ನೀವು ಆತನಲ್ಲಿ (ಕ್ರಿಸ್ತನಲ್ಲಿ) ಸುನ್ನತಿಯನ್ನು ಹೊಂದಿದಿರಿ. ಸುನ್ನತಿಯು ಶಿಶ್ನದ ತುದಿಯಲ್ಲಿರುವ ಹೆಚ್ಚಿನ ಚರ್ಮವನ್ನು ಕತ್ತರಿಸಿ ಹಾಕುವ ಕ್ರಿಯೆಯಾಗಿದೆ. ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರವಾಗಿ ಎಲ್ಲಾ ಪುರುಷರು ಹುಟ್ಟಿದ ಎಂಟನೆಯ ದಿನದಲ್ಲಿ ಸುನ್ನತಿ ಹೊಂದಬೇಕು. ಪೌಲನ ಕಾಲದಲ್ಲಿ ಒಬ್ಬನು ಯೆಹೂದ್ಯನಾಗಿರುವದಕ್ಕೆ ಸುನ್ನತಿಯು ವಿಶೇಷವಾದ ಬಹಿರಂಗದ ಗುರುತಾಗಿತ್ತು (ಆದಿಕಾಂಡ 17:9-14).

ಇಲ್ಲಿ ಪೌಲನು ಸುನ್ನತಿಯನ್ನು ಒಂದು ದೃಷ್ಟಾಂತವಾಗಿ ಉಪಯೋಗಿಸಿ ಪಾಪಾಧೀನ ಸ್ವಭಾವ[6] ಅಥವಾ ಪಾಪಾಧೀನ ಶರೀರವನ್ನು[7] "ಕತ್ತರಿಸಿ ಹಾಕಬೇಕು" ಎಂದು ಹೇಳುತ್ತಾನೆ. ಕ್ರಿಸ್ತನಿಂದ ಸುನ್ನತಿ ಹೊಂದುವದೆಂದರೆ ಆತ್ಮೀಕವಾಗಿ ಸುನ್ನತಿ ಮಾಡಿಸಿಕೊಳ್ಳುವದೂ, ನಮ್ಮ ಹೃದಯಗಳಲ್ಲಿ ಪರಿಶುದ್ಧರಾಗಲ್ಪಡುವದೂ ಎಂಬ ಅರ್ಥವಾಗಿದೆ (ಯೆರೆಮೀಯ 4:4; ರೋಮ 2:28-29 ಮತ್ತು ವ್ಯಾಖ್ಯಾನ ನೋಡಿರಿ).

**12** ವಿಶ್ವಾಸಿಯು ಕ್ರಿಸ್ತನಲ್ಲಿ ಸುನ್ನತಿಹೊಂದಿರುವದು ಮಾತ್ರವಲ್ಲ, ಆತನು ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿರೆ ಹೂಣಲ್ಪಟ್ಟವನೂ ಆಗಿದ್ದಾನೆ. ದೀಕ್ಷಾಸ್ನಾನವು ನಮ್ಮ ಪಾಪಗಳು ತೊಳೆಯಲ್ಪಡುವಿಕೆಯನ್ನು ಸೂಚಿಸುತ್ತವೆ. ದೀಕ್ಷಾಸ್ನಾನದಲ್ಲಿ ನಾವು ನಂಬಿಕೆಯ ಮೂಲಕ ಪಾಪದಿಂದ ಶುದ್ಧೀಕರಿಸಲ್ಪಡುತ್ತೇವೆ; ನಾವು ಪವಿತ್ರರಾಗಿ ಮಾಡಲ್ಪಡುತ್ತೇವೆ.

ನಾವು ಕ್ರಿಸ್ತನಲ್ಲಿ ನೂತನ ಜೀವಿತವನ್ನು ಪ್ರಾರಂಭಿಸುವಂತೆ ನಮ್ಮ ಪೂರ್ವ ಸ್ವಭಾವ ಹಾಗು ಅದರ ಪಾಪಗಳು "ಕತ್ತರಿಸಿ ಹಾಕಲ್ಪಡಬೇಕು" ಅಥವಾ "ತೊಳೆಯಲ್ಪಡಬೇಕು" ಎಂಬದನ್ನು ಬಣ್ಣಿಸಲು ಪೌಲನು ಸುನ್ನತಿ ಹಾಗು ದೀಕ್ಷಾಸ್ನಾನಗಳ ಉದಾಹರಣೆಯನ್ನು ಉಪಯೋಗಿಸುತ್ತಾನೆ.

ಈ ವಚನದ ಸನ್ನಿವೇಶದಲ್ಲಿ, ದೀಕ್ಷಾಸ್ನಾನಕ್ಕೆ ಎರಡನೆಯ ಹಾಗು ಸಂಬಂಧಿತ ಅರ್ಥವಿರುತ್ತದೆಃ ಇದು ನಮ್ಮ ಪೂರ್ವ ಸ್ವಭಾವದ " ಮರಣ" ವನ್ನು ಸೂಚಿಸುತ್ತದೆ. ವಿಶ್ವಾಸಿಗಳು ದೀಕ್ಷಾಸ್ನಾನದಲ್ಲಿ .... ಹೂಣಲ್ಪಟ್ಟಿರುತ್ತಾರೆ. ಹೀಗೆ ನಾವು ಕ್ರಿಸ್ತನಲ್ಲಿ ನೂತನ ಜೀವಿತದೊಳಗೆ ಪ್ರವೇಶಿಸುವದಕ್ಕೆ ಮುಂಚೆ ನಾವು ತೊಳೆಯಲ್ಪಡಬೇಕಾಗಿರುವದು ಮಾತ್ರವಲ್ಲ, ನಾವು ಸಾಯುವವರೂ ಆಗಿರಬೇಕು! ನಮ್ಮ ಪೂರ್ವ ಪಾಪಾಧೀನ ಸ್ವಭಾವವು ಸತ್ತನಂತರವಷ್ಟೇ ನಾವು ನೂತನ ಆತ್ಮೀಕ ಜೀವಿತವನ್ನು ಪಡೆಯಬಲ್ಲೆವು. ನಮ್ಮ ನೂತನ ಸ್ವಭಾವವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಡುವದಕ್ಕೆ ಮುಂಚೆ ನಮ್ಮ ಪೂರ್ವ ಸ್ವಭಾವವು "ಕ್ರಿಸ್ತನೊಂದಿಗೆ ಹೂಣಲ್ಪಡಬೇಕು" (ರೋಮ 6:3-6, 8; ಗಲಾತ್ಯ 2:20; ಎಫೆಸ 4:22-24 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಹೀಗೆ ಇಲ್ಲಿ ನಾವು ಆತ್ಮೀಕ ಪರಿವರ್ತನೆಯ ನಿಜವಾದ ಅರ್ಥವನ್ನು ಕಾಣುತ್ತೇವೆ. ಒಬ್ಬನೂ ಕ್ರೈಸ್ತನಾಗಿ "ಹುಟ್ಟಿದವರು" ಅಲ್ಲವೇಕೆಂಬದನ್ನು ಇಲ್ಲಿ ತಿಳಿಯುತ್ತೇವೆ. ಕ್ರೈಸ್ತನಾಗಬೇಕಾದರೆ ನಾವು ಮೊದಲು ಸಾಯಬೇಕು, ಮತ್ತು ನಂತರ ಹೊಸದಾಗಿ ಹುಟ್ಟಬೇಕು (ಯೋಹಾನ 3:3, 5 ಮತ್ತು ವ್ಯಾಖ್ಯಾನ ನೋಡಿರಿ).

ತರುವಾಯ ಪೌಲನು ಹೇಳುವದೇನೆಂದರೆ, ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟವರಾದ ಮೇಲೆ ನಾವು ..... ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ಮೂಲಕ ಆದರಲ್ಲಿ ಆತನೊಂದಿಗೆ ಎದ್ದು ಬಂದೆವು ಎಂಬದೇ. ಕ್ರಿಸ್ತನ್ನು

ಸತ್ತವರೊಳಗಿಂದ ಎಬ್ಬಿಸಿದ ಅದೇ ದೇವರ ಬಲವೇ ನಮ್ಮನ್ನು ಆತ್ಮೀಕ ಮರಣದೊಳಗಿಂದ ನೂತನ ಜೀವಕ್ಕೆ ಎಬ್ಬಿಸುತ್ತದೆ. ಮತ್ತು ಇದು ನಮ್ಮ ನಂಬಿಕೆಯ ಮೂಲಕ ಸಂಭವಿಸುತ್ತದೆ.

**13** ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವದಕ್ಕೆ ಮುಂಚೆ ಆತ್ಮೀಕವಾಗಿ ಸತ್ತವರಾಗಿದ್ದೆವು. ನಾವು ನಮ್ಮ ಅಪರಾಧಗಳಲ್ಲಿಯೂ ಸುನ್ನತಿಯಿಲ್ಲದ (ನಮ್ಮ) ಪಾಪಾಧೀನ ಸ್ವಭಾವದಲ್ಲಿಯೂ ಸತ್ತವರಾಗಿದ್ದೇವು. ಸನ್ನತಿಯಿಲ್ಲದ (ನಮ್ಮ) ಪಾಪಾಧೀನ ಸ್ವಭಾವವು ಕ್ರಿಸ್ತನ ಮೂಲಕ ನಮ್ಮ ಪಾಪಾಧೀನ ಸ್ವಭಾವವು "ಸುನ್ನತಿಮಾಡಲ್ಪಡುವ" ಅಥವಾ "ಕತ್ತರಿಸಿ ಹಾಕಲ್ಪಡುವ" ಮುಂಚೆ ಇದ್ದ ನಮ್ಮ ಸ್ಥಿತಿಯಾಗಿದೆ. ಅನಂತರ ದೇವರು ತನ್ನ ಕೃಪೆಯ ಮೂಲಕ ನಮ್ಮನ್ನು ಬದುಕಿಸಿದನು. ಮತ್ತು ನಮ್ಮ ಅಪರಾಧಗಳನ್ನೆಲ್ಲಾ ಕ್ಷಮಿಸಿದನು. ಆತನ ಕೃಪೆಯ ಮೂಲಕ ನಂಬಿಕೆಯಿಂದ ನಾವು ನೂತನ ಜೀವವನ್ನು, ನಿತ್ಯಜೀವವನ್ನು ಪಡೆದುಕೊಂಡಿದ್ದೇವೆ (ಎಫೆಸ 2:1, 4-6,8 ಮತ್ತು ವ್ಯಾಖ್ಯಾನ ನೋಡಿರಿ).

**14** ಈ ವಚನದಲ್ಲಿ ಪ್ರಸ್ತಾಪಿಸಲಾಗಿರುವ ಆಜ್ಞಾರೂಪಗಳಾಗಿದ್ದಂಥ ಪತ್ರವು ಯೆಹೂದ್ಯ ಧರ್ಮಶಾಸ್ತ್ರವಾಗಿದೆ, ಅದು ಹಳೆ ಒಡಂಬಡಿಕೆಯಲ್ಲಿ[8] ಬರೆಯಲ್ಪಟ್ಟಿದೆ. ಈ ಧರ್ಮಶಾಸ್ತ್ರದ ಪ್ರಕಾರವಾಗಿ ಯಾವನಾದರೂ ಅದರ ನಿಯಮಗಳಲ್ಲಿ ಒಂದನ್ನು ಉಲ್ಲಂಘಿಸುವದಾಗಿದ್ದರೂ ಆತನು ಇಡೀ ಧರ್ಮಶಾಸ್ತ್ರವನ್ನು ಉಲ್ಲಂಘಿಸಿದ ಅಪರಾಧಕ್ಕೊಳಗಾಗುತ್ತಿದ್ದನು (ಯಾಕೋಬ 2:10). ಅಂತಹ ವ್ಯಕ್ತಿಯು ದಂಡನೆಗೆ ಗುರಿಯಾಗುತ್ತಿದ್ದನು; ಧರ್ಮಶಾಸ್ತ್ರವು ಆತನ್ನು ಕ್ಷಮಿಸುತ್ತಿರಲಿಲ್ಲ.

ಆದರೆ ದೇವರು ನಮ್ಮ ಮೇಲೆ ಇಟ್ಟಿರುವ ತನ್ನ ಮಹಾ ಕರುಣೆ ಹಾಗು ಪ್ರೀತಿಯ ನಿಮಿತ್ಯವಾಗಿ ಆಜ್ಞಾರೂಪವಾಗಿದ್ದಂಥ ಪತ್ರವನ್ನು ಕೆಡಿಸಿದನು (ವಜಾಮಾಡಿದನು)–ಅಂದರೆ, ಆತನು ಯೆಹೂದ್ಯಧರ್ಮಶಾಸ್ತ್ರದ ದಂಡನೆಯನ್ನು ವಜಾಮಾಡಿದನು. ಕ್ರಿಸ್ತನು ಶಿಲುಬೆಗೆ ಜಡಿಯಲ್ಪಟ್ಟ ಪ್ರಕಾರವೇ ಆಜ್ಞಾರೂಪವಾಗಿದ್ದಂಥ ಪತ್ರವು ಹಾಗು ಅದರ ದಂಡನೆಯು "ಶಿಲುಬೆಗೆ ಜಡಿಯಲ್ಪಟ್ಟಿರುತ್ತವೆ" – ಅಂದರೆ, ಕೆಡಿಸಲ್ಪಟ್ಟಿದೆ, ವಜಾಮಾಡಲ್ಪಟ್ಟಿರುತ್ತದೆ. ಆದರೆ ಧರ್ಮಶಾಸ್ತ್ರವು ಸುಮ್ಮನೆ ವಜಾ–ಮಾಡಲ್ಪಡಲು ಸಾಧ್ಯವಾಗಲಿಲ್ಲ; ಧರ್ಮಶಾಸ್ತ್ರವು ಅಪೇಕ್ಷಿಸಿದ ದಂಡನೆಗೆ ಒಬ್ಬನು ಬೆಲೆಕಟ್ಟಬೇಕಾಗಿತ್ತು; ಮಾನವನ ಪಾಪಕ್ಕಾಗಿದ್ದ ದಂಡನೆಯನ್ನು ಒಬ್ಬನು ಅನುಭವಿಸಬೇಕಾಗಿತ್ತು. ಮತ್ತು ಒಬ್ಬನು ಅದನ್ನು ಅನುಭವಿಸಿದನು – ಆತನು ಯೇಸುಕ್ರಿಸ್ತನೇ. ಹೀಗೆ ಆತನು ಶಿಲುಬೆಗೆ ಜಡಿಯಲ್ಪಟ್ಟಾಗ ಧರ್ಮಶಾಸ್ತ್ರವು ಆತನ ಜೊತೆಯಲ್ಲಿ ಶಿಲುಬೆಗೆ ಜಡಿಯಲ್ಪಟ್ಟಿತು. ಆತನು ನಮ್ಮ ದಂಡನೆಯನ್ನು ತನ್ನ ಮೇಲೆ ಹೊತ್ತುಕೊಂಡನು. ಧರ್ಮಶಾಸ್ತ್ರವು ಇನ್ನು ಮೇಲೆ ಅಪರಾಧಿಗಳೆಂದು ನಮ್ಮನ್ನು ದಂಡಿಸುವದಿಲ್ಲ (ರೋಮ 8:1 ಮತ್ತು ವ್ಯಾಖ್ಯಾನ ನೋಡಿರಿ).

**15** ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದಾಗ ಎಲ್ಲಾ ದೊರೆತನಗಳನ್ನು ಅಧಿಕಾರಗಳನ್ನೂ ನಿರಾಯುಧರನ್ನಾಗಿ ಮಾಡಿ ಜಯಿಸಲ್ಪಟ್ಟನು. ಈ ದೊರೆತನಗಳೂ ಅಧಿಕಾರಗಳೂ ಸೈತಾನ ಮತ್ತು ಆತನ ದುರಾತ್ಮಗಳಾಗಿವೆ (ಎಫೆಸ 6:12). ನಾವು ಪೂರ್ವದಲ್ಲಿ ಒಮ್ಮೆ ಅವುಗಳ ಬಂಧಿಗಳಾಗಿದ್ದೆವು; ಈಗ ಕ್ರಿಸ್ತನು ಅವುಗಳನ್ನು ಜಯಿಸಿರುವದರಿಂದ ನಾವು ಅವುಗಳ ಹತೋಟಿಯೊಳಗಿಂದ ಮುಕ್ತಗೊಳಿಸಲ್ಪಟ್ಟಿದ್ದೇವೆ. ನಾವು ಸೈತಾನನ ಹತೋಟಿಯಲ್ಲಿದ್ದಾಗ ಆತ್ಮೀಕವಾಗಿ ಸತ್ತವರಾಗಿದ್ದೇವು ಆದರೆ ಯೇಸು ಶಿಲುಬೆಯ ಮೇಲೆ ಮರಣವನ್ನು ಜಯಿಸಿದನು (ರೋಮ 6:9; 2 ತಿಮೊಥೆ 1:10), ಮತ್ತು ಅದರ ಮೂಲಕ ಆತನು ನಮ್ಮನ್ನೂ ಸಹ ಆತ್ಮೀಕ ಮರಣದಿಂದ ರಕ್ಷಿಸಿದನು. ಈ ರೀತಿಯಲ್ಲಿ ಕ್ರಿಸ್ತನು ಸೈತಾನ ಹಾಗು ಆತನ ದುರಾತ್ಮಗಳನು–ಈ ದೊರೆತನಗಳನ್ನು ಅಧಿಕಾರಗಳನ್ನೂ – ಜಯಿಸಲ್ಪಟ್ಟವುಗಳನ್ನಾಗಿ ಮೆರಸುತ್ತಾ ತೋರಿಸಿದನು. ಬೇರೆ ಮಾತುಗಳಲ್ಲಿ ಹೇಳುವದಾದರೆ ಆತನು ಅವುಗಳನ್ನು ನಾಚಿಕೆಗೆ ಗುರಿಮಾಡಿದನು.

**16-17** ಯೆಹೂದ್ಯ ಧರ್ಮಶಾಸ್ತ್ರವು ಎರಡು ಮುಖ್ಯ ಭಾಗಗಳನ್ನು ಹೊಂದಿತ್ತುಃ "ನೈತೀಕ ಧರ್ಮಶಾಸ್ತ್ರ' (ಉದಾಹರಣೆಗೆ, ದಶಾಜ್ಞೆಗಳು ); ಮತ್ತು "ಆಚಾರಬದ್ಧ ಧರ್ಮಶಾಸ್ತ್ರ" ಅದು ಯಜ್ಞಗಳ ಕುರಿತಾದ ಎಲ್ಲಾ ನೇಮನಿಷ್ಟೆಗಳನ್ನೂ, ಶುದ್ಧೀಕರಣದ ಆಚಾರಗಳನ್ನೂ ಹಾಗು ಯೆಹೂದ್ಯ ಹಬ್ಬಗಳ ಸರಿಯಾದ ಪಾಲನೆಗಳನ್ನೂ ಒಳಗೊಂಡಿತ್ತು. ಆಚಾರಬದ್ಧ ಧರ್ಮಶಾಸ್ತ್ರವು ಇಂತಹ ನೂರಾರು ನೇಮ ನಿಷ್ಟೆಗಳನ್ನು ಒಳಗೊಂಡಿತ್ತು (ಮಾರ್ಕ 7:1-4; ಎಫೆಸ 2:15 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಕ್ರಿಸ್ತನು ಈ ಆಚಾರಬದ್ಧ ಧರ್ಮಶಾಸ್ತ್ರಹಾಗು ಅದರ ಎಲ್ಲಾ ನೇಮ ನಿಷ್ಟೆಗಳನ್ನು ವಜಾಮಾಡಿದನು (ವಚನ 14). ಹೇಗಿದ್ದರೂ, ಕೊಲೊಸ್ಸೆಯಲ್ಲಿ ಕೆಲವು ವಿಶ್ವಾಸಿಗಳು ಇನ್ನೂ ಈ ನೇಮ ನಿಷ್ಟೆಗಳನ್ನು ಪಾಲಿಸುತ್ತಿದ್ದರು. ಅದು ಮಾತ್ರವಲ್ಲದೆ ಅವರು ಸಭೆಯಲ್ಲಿ ಅವುಗಳನ್ನು ಪಾಲಿಸದಿದ್ದವರನ್ನು ಕುರಿತು ತೀರ್ಪು ಮಾಡುವವರು ಅಪರಾಧಿಗಳೆಂದು ಹೇಳುವವರೂ ಆಗಿದ್ದರು. ಒಬ್ಬನು ಈ ಎಲ್ಲಾ ನೇಮನಿಷ್ಟೆಗಳನ್ನು ಪಾಲಿಸಿದ ಹೊರತು ಅವನು ರಕ್ಷಣೆ ಹೊಂದಲಾರನೆಂದು ಅವರು ಬೋಧಿಸುತ್ತಿದ್ದರು.

ಆದರೆ ಪೌಲನು ಹೇಳುವದೇನೆಂದರೆಃ ಅಂಥ ಸುಳ್ಳುತನವನ್ನು ಬೋಧಿಸುವವರಿಗೆ ಕಿವಿಗೊಡಬೇಡಿರಿ! ಮನುಷ್ಯನು ದೇವರ ಕೃಪೆಯ ಮೂಲಕ ಕ್ರಿಸ್ತನಲ್ಲಿ ನಂಬಿಕೆಯಿಡುವದರಿಂದಲೇ ರಕ್ಷಿಸಲ್ಪಡುತ್ತಾನೆ. ಕ್ರಿಸ್ತನು ಈ ನೇಮ ನಿಷ್ಟೆಗಳನ್ನು ವಜಾಮಾಡಿರುತ್ತಾನೆ; ಇನ್ನೂ ಈ ನೇಮಗಳಿಗೆ ಯಾವ ಅರ್ಥವೂ ಇರುವದಿಲ್ಲ. ಅವುಗಳು ಮುಂದೆ ಬರಬೇಕಾಗಿದ್ದ ಕಾರ್ಯಗಳ ಛಾಯೆಯಾಗಿದೆ (ವಚನ 17); ಅಂದರೆ, ಕ್ರಿಸ್ತನ "ಛಾಯೆ" ಹೊರತು ಮತ್ತೇನಲ್ಲ. ನಮಗೆ ಒಂದೇ ಒಂದು ನೇಮ, ಒಂದೇ ಧರ್ಮಶಾಸ್ತ್ರವಿದೆ, ಅದು ಕ್ರಿಸ್ತನಿಗೆ ವಿಧೇಯವಾಗುವದೇ. ಇದರಲ್ಲಿ ನಾವು ಕ್ರೈಸ್ತತ್ವ ಹಾಗು ಇತರ ಎಲ್ಲಾ ಧರ್ಮಗಳ ನಡುವಿನ ಒಂದು ದೊಡ್ಡ ವ್ಯತ್ಯಾಸವನ್ನು ಕಾಣುತ್ತೇವೆ. ಇತರ ಧರ್ಮಗಳು ನೇಮಗಳನ್ನು ಆಚಾರಗಳನ್ನು ಹೊಂದಿವೆ. ಈ ಧರ್ಮಗಳ ಅನುಯಾಯಿಗಳು ತಾವು ಅಂತಹ ನೇಮಗಳಿಗೆ ವಿಧೇಯರಾಗುವದರ ಮೂಲಕ ಪರಲೋಕವನ್ನು ತಲುಪಬಹುದೆಂದು ನಂಬುತ್ತಾರೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಅವರಿಗೆ ಈ ನೇಮಗಳು ಪರಲೋಕಕ್ಕೆ ದಾರಿಯಂತೆ ಇರುತ್ತವೆ.

ಆದರೆ ಕ್ರೈಸ್ತ ಧರ್ಮದಲ್ಲಿ ಅಂಥ ನೇಮಗಳು ಪ್ರಾಮುಖ್ಯವಾದ ಸಂಗತಿಯಲ್ಲ; ಕ್ರಿಸ್ತನು ಮಾತ್ರವೇ ಪ್ರಾಮುಖ್ಯವಾಗಿರುತ್ತಾನೆ ಸ್ವತಃ ಕ್ರಿಸ್ತನೇ ಪರಲೋಕಕ್ಕೆ ಮಾರ್ಗವಾಗಿದ್ದಾನೆ (ಯೋಹಾನ 14:6 ಮತ್ತು ವ್ಯಾಖ್ಯಾನ ನೋಡಿರಿ). ಮನುಷ್ಯನು ನೇಮಗಳನ್ನು ಅನುಸರಿಸುವದರಿಂದ ಪರಲೋಕಕ್ಕೆ ಸೇರುವದಿಲ್ಲ, ಆದರೆ ಕ್ರಿಸ್ತನನ್ನು ಅನುಸರಿಸುವದರಿಂದ ಮಾತ್ರವೇ.

ಕ್ರಿಸ್ತನನ್ನು ಬಿಟ್ಟು ಮನುಷ್ಯನು ರಕ್ಷಣೆ ಹೊಂದಬಹುದಾದ ಬೇರೆ ಇನ್ನಾವ ಮಾರ್ಗವೂ ಇರುವದಿಲ್ಲ (ಅ.ಕೃ.4:12).

18 ಕೊಲೊಸ್ಸೆಯಲ್ಲಿದ್ದ ಈ ಸುಳ್ಳುಬೋಧಕರಲ್ಲಿ ಕೆಲವರು ರಕ್ಷಣೆಯನ್ನು ಹೊಂದುವದಕ್ಕಾಗಿ ಒಂದು ರೀತಿಯ ವಿಶೇಷ ತಪಸ್ಸು ಅಥವಾ ಒಂದು ವಿಶೇಷ ಕಷ್ಟ ಇಲ್ಲವೆ ತೇಜೋವಧೆಯನ್ನು ಮಾಡಿಕೊಳ್ಳುವದು ಅವಶ್ಯಕವೆಂದು ಹೇಳುತ್ತಿದ್ದರು ಅದರ ಜೊತೆಯಲ್ಲಿ ಈ ಬೋಧಕರು ದೇವದೂತರನ್ನು ಪೂಜಿಸುವದು ಅವಶ್ಯಕವೆಂದು ಹೇಳುತ್ತಿದ್ದರು; ದೇವದೂತರು ದೇವರು ಹಾಗು ಮನುಷ್ಯರ ನಡುವೆ ಮಧ್ಯಸ್ಥರಂತೆ ವರ್ತಿಸುವವರಾಗಿದ್ದರೆಂದು ಅವರು ಹೇಳಿಕೊಳ್ಳುತ್ತಿದ್ದರು. ಅಲ್ಲದೆ ಈ ಬೋಧಕರು ತಮಗೆ ದರ್ಶನಗಳಾದವೆಂದೂ ಪರವಶತೆಯ ಅನುಭವವಾಯಿತೆಂದೂ ಹೇಳಿಕೊಳ್ಳುತ್ತಾ ಅಂತಹ ಅನುಭವಗಳನ್ನು ಹೊಂದದಿದ್ದವರನ್ನು ಕೀಳಾಗಿ ನೋಡುತ್ತಿದ್ದರು. ಆದರೆ ಪೌಲನು ಅಂಥ ಬೋಧನೆ ಹಾಗು ಅಂತಹ ನಡವಳಿಕೆ ತಪ್ಪಾದದ್ದೆಂದು ಹೇಳುತ್ತಾನೆ. ಮನುಷ್ಯನು ಅತಿ ವಿನಯ ತೆ ದೇವದೂತರ ಪೂಜೆ ಹಾಗು ವಿಶೇಷ ಆತ್ಮೀಕ ಅನುಭವಗಳಿಂದ ರಕ್ಷಣೆ ಹೊಂದುವದಿಲ್ಲ. ಮನುಷ್ಯನು ಕ್ರಿಸ್ತನಲ್ಲಿ ನಂಬಿಕೆಯಿಡುವದರಿಂದಲೇ ರಕ್ಷಣೆ ಹೊಂದುತ್ತಾನೆ. ದೇವದೂತರು ದೇವರ ಹಾಗು ಮನುಷ್ಯನ ನಡುವೆ ಮಧ್ಯಸ್ಥರಲ್ಲ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಯೇಸು ಕ್ರಿಸ್ತನೇ (1 ತಿಮೊಥೆ 2:5; 1 ಯೋಹಾನ 2:1 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ಮೋಸಹೋಗದಿರೋಣ. ನಾವು ಕ್ರಿಸ್ತನಿಂದ ನಮ್ಮ ನಂಬಿಕೆಯನ್ನು ತೆಗೆದುಬಿಟ್ಟು ಈ ಸುಳ್ಳಾದ ಹಾಗು ಅಯೋಗ್ಯವಾದ ಸಂಗತಿಗಳಲ್ಲಿ ಇಡದಿರೋಣ. ನಾವು ಹಾಗೆ ಮಾಡುವದಾದರೆ ನಮ್ಮ ಪ್ರತಿಫಲವನ್ನು, ನಮ್ಮ ರಕ್ಷಣೆಯನ್ನು ಕಳೆದುಕೊಳ್ಳುವ ಅಪಾಯದಲ್ಲಿರುತ್ತೇವೆ.

19 ಪೌಲನು 18ನೇ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಂತಹ ಸುಳ್ಳು ಬೋಧಕರು ಕ್ರಿಸ್ತನೆಂಬ ಶಿರಸ್ಸಿನ ಹೊಂದಿಕೆಯನ್ನು ಬಿಟ್ಟವರಾಗಿದ್ದಾರೆ. ಅವರು ನಿರಾಧಾರವಾಗಿರುವ ವಿಷಯಗಳನ್ನು ಅನುಸರಿಸುವವರಾಗಿದ್ದಾರೆ (ವಚನ 18). ಈ ರೀತಿಯ ಸುಳ್ಳುಬೋಧಕರು ಸಭೆಯಲ್ಲಿ ದೊಡ್ಡ ಹಾನಿಯನ್ನು ಮಾಡುತ್ತಾರೆ. ಸಭೆಯು ಒಂದು ದೇಹದಂತಿದೆ; ಆದದರಿಂದ, ಪ್ರತಿಯೊಂದು ಅಂಗವು ಕ್ರಿಸ್ತನೆಂಬ ಶಿರಸ್ಸಿನ ಅಧೀನದಲ್ಲಿರುವದು ಪ್ರಾಮುಖ್ಯವಾಗಿರುತ್ತದೆ. ಇಲ್ಲವಾದರೆ, ದೇಹದ ಅಂಗಗಳು ಒಟ್ಟಾಗಿ ಕಾರ್ಯಮಾಡಲಾಗದು, ಮತ್ತು ದೇಹವು ವೃದ್ಧಿಯಾಗುವದಿಲ್ಲ (ಎಫೆಸ 4:15-16).

20-21 ಹೊಸ ಒಡಂಬಡಿಕೆಯ ಕಾಲದಲ್ಲಿ ಬಹುಮಂದಿ ಗುಲಾಮರಿದ್ದರು. ಈ ಗುಲಾಮರಿಗೆ ಯಾವ ಸ್ವಾತಂತ್ರ್ಯವೇ ಇರಲಿಲ್ಲ; ಅವರು ತಮ್ಮ ಯಜಮಾನರ ಸೊತ್ತಾಗಿದ್ದರು, ಮತ್ತು ಅವರು ಜೀವಿತಕಾಲವೆಲ್ಲಾ ತಮ್ಮ ಯಜಮಾನರ ಸೇವೆ ಮಾಡಬೇಕಾಗಿತ್ತು. ವಾಸ್ತವದಲ್ಲಿ, ಅವರು ತಮ್ಮ "ಸ್ವಾತಂತ್ರ್ಯ" ಪಡೆದುಕೊಳ್ಳುವದಕ್ಕೆ ಒಂದೇ ಮಾರ್ಗವಿತ್ತು, ಅದೇನೆಂದರೆ ಅವರು ಸಾಯಬೇಕಾಗಿತ್ತು! ಒಮ್ಮೆ ಅವರು ಸತ್ತರೆಂದರೆ ತಮ್ಮ ಯಜಮಾನರಿಂದ "ಮುಕ್ತ" ರಾಗುತ್ತಿದ್ದರು.

ಇಲ್ಲಿ ಪೌಲನು ಗುಲಾಮರ ಈ ಸ್ಥಿತಿಯ ದೃಷ್ಟಾಂತವನ್ನು ಉಪಯೋಗಿಸಿ ಕೊಲೊಸ್ಸೆಯವರಿಗೆ ಆತ್ಮೀಕವಾಗಿ ಏನು ಸಂಭವಿಸುತ್ತದೆ ಎಂಬದನ್ನು ತಿಳಿಸುತ್ತಾನೆ. ಪೌಲನು ಅವರಿಗೆ ಹೇಳುವದೇನೆಂದರೆ: "ನೀವು ಕ್ರಿಸ್ತನೊಂದಿಗೆ ಸತ್ತವರಾಗಿದ್ದೀರಿ" (ವಚನ 20). ಆದದರಿಂದ, ನೀವು ಈಗ ನಿಮ್ಮ ಹಳೆಯ ಯಜಮಾನನಾದ ಸೈತಾನನಿಂದ

ವಿಮುಕ್ತರಾಗಿದ್ದೀರಿ. ನೀವು ಇನ್ನೂ ನಿಮ್ಮನ್ನು ಏಕೆ ಸೈತಾನನ ದಾಸರನ್ನಾಗಿ ಮಾಡಿಕೊಳ್ಳುತ್ತಿರುವಿರಿ? ನೀವು ಈ ಪ್ರಾಪಂಚಿಕ ಬಾಲಬೋಧೆಯಿಂದ ಬಿಡಿಸಲ್ಪಟ್ಟಿದ್ದೀರಿ. ಆದದರಿಂದ, ನೀವು ಇನ್ನೂ ಇದರ ನಿಬಂಧನೆಗಳಿಗೆ ನಿಮ್ಮನ್ನು ಒಳಗಾಗಮಾಡಿಕೊಳ್ಳುವದೇಕೆ?" (ರೋಮ 6:6-7; 4-6; 8:1-2; ಗಲಾತ್ಯ 4:8-11 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಅನೇಕ ಜನರು ತಾವು ಕ್ರಿಸ್ತನಲ್ಲಿ ನಂಬಿಕೆಯಿಟ್ಟ ಮೇಲೆಯೂ ತಮ್ಮ ಹಳೆಯ ಧರ್ಮದ ಎಲ್ಲಾ ನೇಮಗಳನ್ನೂ ಆಚಾರಗಳನ್ನೂ ಬಿಟ್ಟುಬಿಡುವದಕ್ಕೆ ಕಷ್ಟಪಡುವವರಾಗಿ ಕಂಡು ಬರುತ್ತಾರೆ. ಅವರು ತಾವು ಕ್ರಿಸ್ತನನ್ನು ನಂಬುತ್ತೇವೆಂದು ಹೇಳುತ್ತಾರೆ, ಆದರೆ ಅವರು ತಮ್ಮ ಹಳೆಯ ಮಾರ್ಗಗಳನ್ನು ಬಿಡುವದಿಲ್ಲ. ಆದರೆ ಏಕಕಾಲದಲ್ಲಿ ಕ್ರಿಸ್ತನನ್ನೂ ಒಬ್ಬನ ಹಳೆ ಧರ್ಮವನ್ನು ನಂಬುವದು ಅಸಾಧ್ಯವಾಗಿರುತ್ತದೆ. ಒಮ್ಮೆ ನಾವು ಕ್ರೈಸ್ತರಾದ ಮೇಲೆ ನಮ್ಮಪ್ರಾಪಂಚಿಕ ಬಾಲಬೋಧೆಯನ್ನು ಬಿಟ್ಟು ಬಿಡಬೇಕು. ಅಂದರೆ, ನಾವು ನಮ್ಮ ಪೂರ್ವ ಧಾರ್ಮಿಕ ನೇಮನಿಷ್ಟೆಗಳನ್ನು ಆಚಾರಗಳನ್ನು ಪರಲೋಕವನ್ನು ಸೇರುವ ಮಾರ್ಗವೆಂದು ನಂಬುವದನ್ನು ನಿಲ್ಲಿಸಬೇಕು.

22 ಮನುಷ್ಯರ ಸಂಪ್ರದಾಯಗಳೂ ನೇಮನಿಷ್ಟೆಗಳೂ ನಾಶವಾಗುವ ಆಹಾರದಂತಹ ಸಂತಿಗಳು, ಸ್ಥಿರವಾಗಿ ಉಳಿಯದ ಸಂಗತಿಗಳಿಗೆ ಸಂಬಂಧಿಸಿರುತ್ತವೆ. ಮತ್ತು ಈ ಸಂಪ್ರದಾಯಗಳಾಗಲಿ ಇಲ್ಲವೆ ನೇಮಗಳಾಗಲಿ ಸ್ಥಿರವಾಗಿ ಉಳಿಯುವದಿಲ್ಲ; ಅವೆಲ್ಲವೂ ನಾಶವಾಗುತ್ತವೆ. ದೇವರ ವಾಕ್ಯವೊಂದೇ ಸದಾಕಾಲವೂ ಉಳಿಯುವದು.

ಯೇಸು ಮತ್ತು ಆತನ ಶಿಷ್ಯರು ಯೆಹೂದ್ಯ ಧಾರ್ಮಿಕ ನೇಮನಿಷ್ಟೆಗಳನ್ನು ಪಾಲಿಸಲಿಲ್ಲವೆಂಬ ಕಾರಣಕ್ಕಾಗಿ ಯೆಹೂದ್ಯ ನಾಯಕರು ಅವರನ್ನು ಖಂಡಿಸುವದಕ್ಕೆ ಪ್ರಯತ್ನಿಸಿದರು. ಆದರೆ ಯೇಸು ಯೆಹೂದ್ಯರಿಗೆ ಹೇಳಿದ್ದೇನೆಂದರೆ: "ನೀವು ದೇವರ ಆಜ್ಞೆಗಳನ್ನು ಬಿಟ್ಟು ಮನುಷ್ಯರು ಕಲ್ಪಿಸಿದ ಸಂಪ್ರದಾಯಗಳನ್ನು ಹಿಡಿದಿದ್ದೀರಿ" (ಮಾರ್ಕ 7:8).

23 ನಾವು ಸಂತರನ್ನೂ, ಸನ್ಯಾಸಿಗಳನ್ನೂ ಪವಿತ್ರಯಾತ್ರಿಗಳನ್ನೂ ನೋಡುವಾಗ ಹಲವಾರು ವೇಳೆಗಳಲ್ಲಿ ಯೋಚಿಸುವದೇನೆಂದರೆ: "ಅವರು ಎಷ್ಟು ಧಾರ್ಮಿಕರು!" ಅವರು ತಮ್ಮನ್ನು ಅತಿ ವಿನಯರಾಗಿ ಮಾಡಿಕೊಳ್ಳುತ್ತಾರೆ; ಅವರು

ಸತ್ಕ್ರೀಯೆಗಳನ್ನು ಮಾಡುತ್ತಾರೆ; ಅವರು ತಮ್ಮ ದೇಹಗಳನ್ನು ಶಿಕ್ಷಿಸಿಕೊಳ್ಳುತ್ತಾರೆ; ಅವರು ಅತಿಕಟ್ಟುನಿಟ್ಟಾದ ನಿಯಮಗಳನ್ನು ಪಾಲಿಸುತ್ತಾರೆ. ನಿಶ್ಚಯವಾಗಿಯೂ ಅವರು ಅತಿಪರಿಶುದ್ಧರೂ ಜ್ಞಾನಿಗಳೂ ಆಗಿರಬೇಕೆಂದು ನಾವು ಯೋಚಿಸುತ್ತೇವೆ. ಆದರೆ ಪರಿಶುದ್ಧತೆಯ ತೋರಿಕೆಯನ್ನು ಮಾತ್ರವೇ ಹೊಂದಿದ್ದಾರೆ, ಅವರು ಹೆಸರಿಗೆ ಮಾತ್ರ ಜ್ಞಾನವನ್ನು ಹೊಂದಿರುತ್ತಾರೆ. ಅವರ ಆಚರಣೆಗಳು ಆತ್ಮೀಕವಾಗಿರುವದಿಲ್ಲ; ಬದಲಾಗಿ, ಅಂಥ ಉಪದೇಶಗಳು ಹಾಗು ಆಜ್ಞೆಗಳು ಮನುಷ್ಯಕಲ್ಪಿತಾಧಾರವಾಗಿರುತ್ತವೆ (ವಚನ 22).

ಅಷ್ಟು ಮಾತ್ರವಲ್ಲದೆ, ಅವರ ಆಚರಣೆಗಳು ಶಾರೀರಿಕ ಇಚ್ಛೆಗಳನ್ನು ನಿಗ್ರಹಿಸುವದರಲ್ಲಿ ಯಾವ ಪ್ರಯೋಜನಕ್ಕೂ ಬರುವದಿಲ್ಲ; ಅಂದರೆ, ಅವುಗಳು ಇಂದ್ರೀಯ ಇಚ್ಛೆಗಳನ್ನು ಜಯಿಸುವದರಲ್ಲಿ ಯಾವ ಪ್ರಯೋಜನಕ್ಕೂ ಬರುವದಿಲ್ಲ. ಅವು ರಕ್ಷಣೆಯನ್ನು ಸಂಪಾಧಿಸಿಕೊಳ್ಳುವದಕ್ಕೆ ಯಾವ ಪ್ರಯೋಜನವನ್ನೂ ತರುವದಿಲ್ಲ. ನಾವು ರಕ್ಷಣೆ ಹೊಂದುವದಕ್ಕೆ ನಮ್ಮ ಸ್ವಂತ ಪ್ರಯತ್ನಗಳನ್ನು ಹಾಗು ಸತ್ಕ್ರೀಯೆಗಳನ್ನು ಅವಲಂಭಿಸುವದಾದರೆ ನಾವು ಅತಿ ನಿರಾಶೆಗಾದರೂ ಒಳಗಾಗುತ್ತೇವೆ ಇಲ್ಲವೇ ಅತಿ ಗರ್ವಿಷ್ಟರಾದರೂ ಆಗುತ್ತೇವೆ; ಎರಡೂ ವಿಷಯದಲ್ಲಿಯೂ ನಾವು ಅಯೋಗ್ಯವಾದದ್ದನ್ನೆ ಅವಲಂಭಿಸುವವರಾಗಿರುತ್ತೇವೆ. ಕ್ರಿಸ್ತನ ಮೇಲೆಯೂ ಆತನ ನೀತಿಯ ಮೇಲೆಯೂ ಅವಲಂಭನೆಗೊಳ್ಳುವದರ ಮೂಲಕ ಮಾತ್ರವೇ ನಾವು ನಮ್ಮ ಪಾಪಾಧೀನ ಸ್ವಭಾವವನ್ನು ನಿಗ್ರಹಿಸಿ ರಕ್ಷಣೆಯನ್ನು ಪಡೆದುಕೊಳ್ಳಬಲ್ಲೆವು.

---

## ಅಧ್ಯಾಯ - 3

### ಪರಿಶುದ್ಧ ಜೀವನಕ್ಕೆ ನಿಯಮಗಳು (3:1-17)

**1** ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದದ್ದು ಒಂದು ಆಶ್ಚರ್ಯಕರ ಘಟನೆಯಾಗಿರುತ್ತದೆ. ಆದರೆ ವಿಶ್ವಾಸಿಗಳಾದ ನಾವು ಸಹ ಎಬ್ಬಿಸಲ್ಪಟ್ಟಿದ್ದೇವೆಂಬದೂ ಅಷ್ಟೇ ಆಶ್ಚರ್ಯಕರವಾದ ಸತ್ಯಾಂಶವಾಗಿದೆ! (ರೋಮ 6:8; ಕೊಲೊಸ್ಸೆ 2:12 ನೋಡಿರಿ). ಮತ್ತು ಎಬ್ಬಿಸಲ್ಪಟ್ಟವರಾಗಿ ನಾವು ಎಂದಿಗೂ ಕೊನೆಗೊಳ್ಳದ ನೂತನ ಜೀವಿತವನ್ನು ಪಡೆಯುತ್ತೇವೆ. ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ನಾವು ಮರಣದಿಂದ ಜೀವಕ್ಕೂ ಕತ್ತಲೆಯಿಂದ ಬೆಳಕಿಗೂ, ಸೈತಾನನ ರಾಜ್ಯದಿಂದ ದೇವರ ರಾಜ್ಯಕ್ಕೂ ವರ್ಗಾಯಿಸಲ್ಪಡುತ್ತೇವೆ. ಆದದರಿಂದ, ಪೌಲನು ಇಲ್ಲಿ ಹೇಳುವದೇನೆಂದರೆಃ ಆದಕಾರಣ ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿದ್ದರಿಂದ ಮೇಲಿರುವವುಗಳನ್ನೇ ಹುಡುಕಿರಿ–ಅಂದರೆ, ದೇವರ ರಾಜ್ಯದ ಸಂಗತಿಗಳ ಮೇಲೆ ಮನಸ್ಸಿಡಿರಿ. ವಿಶೇಷವಾಗಿ, ನಮ್ಮ ಹೃದಯಗಳನ್ನು ಕ್ರಿಸ್ತನ ಮೇಲಿಡೋಣ. ನಾವು ಇಹಲೋಕವನ್ನಾಗಲಿ ಪ್ರಾಪಂಚಿಕ ಇಚ್ಛೆಗಳು ಹಾಗು ಸ್ವತ್ತುಗಳನ್ನಾಗಲಿ ಪ್ರೀತಿಸದಿರೋಣ, ಯಾಕೆಂದರೆ ನಾವು ಹೆಚ್ಚಾಗಿ ಲೋಕವನ್ನು ಪ್ರೀತಿಸಿದಷ್ಟು ದೇವರನ್ನು ಕಡಿಮೆಯಾಗಿ ಪ್ರೀತಿಸುತ್ತೇವೆ. ಏಕಕಾಲದಲ್ಲಿ ದೇವರನ್ನೂ ಲೋಕವನ್ನೂ ಪ್ರೀತಿಸಲು ಸಾಧ್ಯವಿಲ್ಲ (ಮತ್ತಾಯ 6:19-21, 1 ಯೋಹಾನ 2:15-17 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**2** ಕ್ರಿಸ್ತನಲ್ಲಿ ನೂತನ ಜೀವಿತವನ್ನು ಪಡೆದುಕೊಂಡವರಾಗಿ ನಾವು ನೂತನ ಮನಸ್ಸನ್ನೂ ಪಡೆದುಕೊಳ್ಳಬೇಕು. ನಾವು ಇನ್ನು ಮೇಲೆ ಪೂರ್ವದಲ್ಲಿ ಪ್ರಾಪಂಚಿಕರಾಗಿದ್ದಾಗ ಯೋಚಿಸುತ್ತಿದ್ದ ಹಾಗೆ ಯೋಚಿಸಬಹುದು. ನಾವು ಲೋಕಕ್ಕೆ ಸೇರಿದವರಾಗಿದ್ದಾಗ ನಮ್ಮ ಪೂರ್ವ ಪ್ರಾಪಂಚಿಕ ಸ್ವಭಾವಕ್ಕನುಸಾರವಾಗಿ ನಡೆದುಕೊಂಡೆವು. ಆದರೆ ಈಗ, ಪವಿತ್ರಾತ್ಮನ ಮೂಲಕ ನೂತನ ಆತ್ಮೀಕ ಸ್ವಭಾವವನ್ನು ಪಡೆದವರಾಗಿರುವ ನಾವು ಆ ನೂತನ ಸ್ವಭಾವಕ್ಕನುಸಾರವಾಗಿ ನಡೆದುಕೊಳ್ಳಬೇಕೆಂದು ಪೌಲನು ಹೇಳುತ್ತಾನೆ (ಗಲಾತ್ಯ 5:25 ಮತ್ತು ವ್ಯಾಖ್ಯಾನ ನೋಡಿರಿ).

**3** ಸತ್ತ ಮನುಷ್ಯನಿಗೆ ಪ್ರಪಂಚದ ಸಂಗತಿಗಳಿಗಾಗಿ ಅಭಿಲಾಷೆ ಅಥವಾ ಹಾರೈಕೆ ಇರುವದೋ? ಇಲ್ಲ, ಹಾತೊರೆಯುವದಿಲ್ಲ. ಮತ್ತು ನಾವೂ ಹಾಗೆ ಮಾಡಬಾರದು. ಯಾಕೆಂದರೆ, ನಾವೂ ಸಹ ಪ್ರಪಂಚದ ಪಾಲಿಗೆ ಸತ್ತವರಾ–ಗಿದ್ದೇವೆ. ಆದದರಿಂದ, ನಾವು ಪ್ರಪಂಚದ ಸಂಗತಿಗಳ ಮೇಲೆ ಮನಸ್ಸಿಡಬಾರದು. ನಮ್ಮ ಪಾಪಾಧೀನ ಜೀವ ಅಂತ್ಯಗೊಂಡಿದೆ; ಈಗ ನಾವು ನೂತನ ಆತ್ಮೀಕ ಜೀವಿತವನ್ನು ಪಡೆದಿದ್ದೇವೆ, ಅದು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟಿದೆ.

ನಮ್ಮ ನೂತನ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟಿದೆ ಎಂದು ಪೌಲನು ಹೇಳುತ್ತಾನೆ. ಆತ್ಮೀಕ ಸಂಗತಿಗಳು ಪ್ರಾಪಂಚಿಕ ಜನರಿಗೆ [10] "ಮರೆಯಾಗಿ" ಇಡಲ್ಪಟ್ಟಿರುತ್ತದೆ. ಪ್ರಾಪಂಚಕಿರು ಕ್ರಿಸ್ತನನ್ನು ಕ್ರಿಸ್ತನಲ್ಲಿರುವ ನಮ್ಮ ನೂತನ ಜೀವಿತದ ಫಲಗಳನ್ನು ಸಂತೋಷವನ್ನು ನೋಡಬಲ್ಲರು.
ಪ್ರಾಪಂಚಿಕರು ಕ್ರಿಸ್ತನನ್ನು ನೋಡಲಾರರು, ಆದರೆ ನಾವು ಆತನನ್ನು ನೋಡಬಲ್ಲೆವು (ಯೋಹಾನ 14:19-20 ಮತ್ತು ವ್ಯಾಖ್ಯಾನ ನೋಡಿರಿ).

**4** ಕ್ರಿಸ್ತನು ಈಗ ಜನರ ಶಾರೀರಿಕ ಕಣ್ಣುಗಳಿಗೆ ಮರೆಯಾಗಿರುತ್ತಾನೆ; ಆದರೆ ಒಂದು ದಿನ ಆತನು ತಿರುಗಿ ಬರುವನು, ಆಗ ಆತನು ಎಲ್ಲಾ ಜನರಿಗೆ ಕಾಣಿಸಿಕೊಳ್ಳುವನು (ಮಾರ್ಕ 13:26; 14:61-62 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಮತ್ತು ನಾವು ಸಹ ಪ್ರಭಾವದಿಂದ ಕೂಡಿದವರಾಗಿ ಪ್ರತ್ಯಕ್ಷರಾಗುವೆವು. ಅದರ ನಂತರ ಯಾವದೂ ಮರೆಯಾಗಿರುವದಿಲ್ಲ (ರೋಮ 8:18-19). ಕ್ರಿಸ್ತನು ನಮ್ಮ ಜೀವವಾಗಿದ್ದಾನೆಂದು ಪೌಲನು ಇಲ್ಲಿ ಹೇಳುತ್ತಾನೆ.

ಕ್ರಿಸ್ತನು ನಮ್ಮ ಜೀವದ ಮೂಲವಾಗಿದ್ದಾನೆ; ಆತನು ನಮ್ಮ ಜೀವಿತದ ಗುರಿ, ಉದ್ದೇಶ, ನೆರವೇರಿಕೆ, ಆಶೀರ್ವಾದ ಆಗಿದ್ದಾನೆ ನಮ್ಮ ಜೀವ ಆತನಲ್ಲಿದೆ; ಆತನ ಜೀವ ನಮ್ಮಲ್ಲಿದೆ.

ಇದು ನಿಜವಾಗದ್ದರೆ, ನಾವು ಆತನ ಮೇಲೆಯೇ ಮನಸ್ಸಿಡೋಣ! ನಮ್ಮ ಕರ್ತನು, ನಮ್ಮ ನಿತ್ಯ ನಿವಾಸ,ನಮ್ಮ ಸ್ವಾಸ್ಥ್ಯ ಹಾಗು ಪ್ರತಿಫಲ, ಇವೆಲ್ಲವೂ ಪರಲೋಕದಲ್ಲಿರುತ್ತವೆ. ಆದದರಿಂದ, ನಮ್ಮ ಮನಸ್ಸು ಹಾಗು ಹೃದಯಗಳನ್ನು ಮೇಲಿರು- ವಂಥವು ಗಳ ಮೇಲೆ ಇಡೋಣ. ಭೂಸಂಬಂಧವಾದವು ಗಳನ್ನು ದೃಷ್ಟಿಸುವದೇಕೆ? (ವಚನ 2).

5 ಆದದರಿಂದ, ನಮ್ಮಲ್ಲಿರುವ ಭೂಸಂಬಂಧವಾದ ಭಾವನೆಗಳನ್ನೆಲ್ಲಾ ಸಾಯಿಸಿರಿ – ಅಂದರೆ, ನಿಮ್ಮ ಪೂರ್ವ ಪಾಪಾಧೀನ ಸ್ವಭಾವದ ಅಭಿಲಾಷೆಗಳನ್ನೂ ಕೃತ್ಯಗಳನ್ನೂ "ಸಾಯಿಸಿರಿ". ಪಾಪವು ನಮ್ಮ ಹೃದಯಗಳಲ್ಲಿ, ನಮ್ಮ ಪಾಪಾಧೀನ ಸ್ವಭಾವಗಳಲ್ಲಿ ಪ್ರಾರಂಬವಾಗುತ್ತದೆ. ಆದರೆ ಅನಂತರ ನಮ್ಮ ದೇಹಗಳು ವಿವಿಧ ಅಂಗಗಳು ವಾಸ್ತವದಲ್ಲಿ ಪಾಪವನ್ನು ಜಾರಿಗೆ ತರುತ್ತವೆ. ಆದದರಿಂದ, ಎಲ್ಲಕ್ಕಿಂತ ಪ್ರಾಮುಖ್ಯವಾಗಿ ನಾವು ನಮ್ಮ ಪಾಪಾಧೀನ ಸ್ವಭಾವವನ್ನು ಅದರ ವಿಷಯಾಭಿಲಾಷೆ ಸ್ವೆಚ್ಛಾಭಿಲಾಷೆ ಸಹಿತ "ಸಾಯಿಸಬೇಕು" (ಗಲಾತ್ಯ 5:24 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ನಾವು ನಮ್ಮ ಅಂಗಗಳನ್ನು ನಿಗ್ರಹಿಸಿ ಹತೋಟಿಗೆ ಸಹ ತರಬೇಕು; ಒಂದು ಅರ್ಥದಲ್ಲಿ ನಾವು "ಅವು ಗಳನ್ನೂ ಸಾಯಿಸಬೇಕು". ಯೇಸು ಹೇಳಿದ್ದೇನೆಂದರೆಃ "ನಿನ್ನ ಕೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕತ್ತರಿಸಿ ಬಿಡು" (ಮಾರ್ಕ 9:43). ಹೀಗೆ ಪೌಲನು ಇಲ್ಲಿ ನಮ್ಮನ್ನು ಪಾಪಕ್ಕೆ ನಡಿಸುವ ನಮ್ಮ ಎಲ್ಲಾ ಭಾಗವನ್ನು ನಾವು ನಿಗ್ರಹಿಸಿಕೊಳ್ಳಬೇಕು ಅಥವಾ "ಸಾಯಿಸಬೇಕು" ಎಂದು ಹೇಳುತ್ತಿದ್ದಾನೆ.

ನಮ್ಮ ಅಂಗಗಳು ಪೂರ್ವದಲ್ಲಿ ಕೆಟ್ಟದ್ದನ್ನು ಮಾಡುತ್ತಾ ಸೈತಾನನ್ನು ಸೇವಿಸುತ್ತಿದ್ದವು . ಆದರೆ ಈಗ ನಾವು ಲೋಕದೊಳಗಿಂದ ಪರಲೋಕ ರಾಜ್ಯಕ್ಕೆ ಕರೆಯಲ್ಪಟ್ಟಿದ್ದೆವೆ. ನಮ್ಮ ಪೂರ್ವ ಸ್ವಭಾವವು (ವಚನ 9). ಕ್ರಿಸ್ತನೊಂದಿಗೆ ಸತ್ತಿರುತ್ತದೆ (ರೋಮ 6:6; ಎಫೆಸ 4:22 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆದದರಿಂದ, ನಮ್ಮ ಪೂರ್ವ ಪಾಪಾಧೀನ ಸ್ವಭಾವವು ಸತ್ತಿರುವದಾದರೆ ನಮ್ಮ ಪೂರ್ವ ಅಭಿಲಾಷೆಗಳು ಹಾಗು ಕೃತ್ಯಗಲು ಸಹ ಸಾಯಿಸಲ್ಪಡಬೇಕು–ಅಂದರೆ, ಅವು ಗಳು ನಿಗ್ರಹಿಸಲ್ಪಡಬೇಕು (ಮಾರ್ಕ 9:43-47; ರೋಮ 6:11-13; 8:13 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಪೌಲನು ಇಲ್ಲಿ ಕೆಲವೊಂದು ಪ್ರಮುಖ ಪಾಪಗಳನ್ನು ಪ್ರಸ್ತಾಪಿಸುತ್ತಾನೆ. ಆತನು ವಿಗ್ರಹಾರಾಧನೆಯು ಲೋಭಕ್ಕೆ ಸಮಾನ ವಾದದ್ದು ಎಂದು ಹೇಳುತ್ತಾನೆ, ಯಾಕೆಂದರೆ ಯಾವ ವಿಷಯಕ್ಕಾದರೂ ಲೋಬವು ಳ್ಳವರಾಗಿರುವದೆಂದರೆ ನಾವು ಆ ಸಂಗತಿಯನ್ನು ದೇವರಿಗಿಂತಲೂ ಹೆಚ್ಚಾಗಿ ಪ್ರೀತಿಸುತ್ತೇವೆಂದು ಅರ್ಥವಾಗಿದೆ; ಮತ್ತು ಯಾವಾಗ ಒಂದು ಸಂಗತಿಯನ್ನು ದೇವರಿಗಿಂತಲೂ ಹೆಚ್ಚಾಗಿ ಪ್ರೀತಿಸುತ್ತೇವೋ ಆ ಸಂಗತಿಯೂ ನಮಗೆ ಒಂದು ವಿಗ್ರಹವಾಗುತ್ತದೆ (ಎಫೆಸ 5:5 ನೋಡಿರಿ).

ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆಃ ಪೌಲನು 3ನೇ ವಚನದಲ್ಲಿ ಹೇಳುವದೇನೆಂದರೆಃ ನೀವು ಸತ್ತಿರಲ್ಲಾ. ಆದರೆ ೫ನೇ ವಚನದಲ್ಲಿ ಆತನು ಹೇಳುವದೇನೆಂದರೆಃ......ನಿಮ್ಮಲ್ಲಿರುವ ಭೂಸಂಬಂಧವಾದ ಭಾಗಗಳನ್ನು ಸಾಯಿಸಿರಿ. ನಮ್ಮ ಭೂಸಂಬಂಧವಾದ ಸ್ವಭಾವವು ಸತ್ತಿರುವದಾದರೆ ನಾವು ಹೇಗೆ "ಅದನ್ನು ಸಾಯಿಸಬಲ್ಲೆವು "?. ಈಗಾಗಲೇ ಸತ್ತಿರಬೇಕಾದ ಸಂಗತಿಯೊಂದನ್ನು ನಿಗ್ರಹಿಸಬೇಕೆಂದು ಪೌಲನು ನಮಗೆ ಹೇಳುವದೇಕೆ?. 3ನೇ ವಚನದಲ್ಲಿ, ನಮ್ಮ ಪೂರ್ವ ಸ್ವಭಾವವು ಸತ್ತಿದೆ; ೫ನೇ ವಚನದಲ್ಲಿ ಅದು ಎಲ್ಲಾ ವಿಧವಾದ ಪಾಪಗಳನ್ನೂ ಮಾಡುತ್ತಿದೆ! ಒಂದು ಕ್ಷಣ, ಅದು ಸತ್ತಿದೆ, ಇನ್ನೊಂದು ಕ್ಷಣದಲ್ಲಿ ಅದು ಬದುಕಿರುವಂತೆಯೇ ತೋರುತ್ತದೆ. ಅದು ಸಾಧ್ಯವೋ? ಹೌದು, ಎರಡೂ ಸಂಗತಿಗಳು ಸತ್ಯ. ಒಂದು ವಿಧದಲ್ಲಿ ನಮ್ಮ ಪೂರ್ವಸ್ವಭಾವವು ಸತ್ತಿದೆ; ನಾವು ಕ್ಷಮಿಸಲ್ಪಟಿಟದ್ದೇವೆ; ನಾವು ರಕ್ಷಣೆಯನ್ನು ಪಡೆದು ಸೈತಾನನ ರಾಜ್ಯದೊಳಗಿಂದ ಬಿಡಿಸಲ್ಪಟ್ಟಿದ್ದೇವೆ. ಆದರೆ ಇದೆಲ್ಲವೂ ಸತ್ಯವಾದಾಗ್ಯು ನಮ್ಮ ಬೌತಿಕ ದೇಹಗಳು ನಾವು ವಾಸ್ತವದಲ್ಲಿ ಸಾಯುವ ತನಕ ಭೂಮಿಯ ಮೇಲೆ ಇರುತ್ತವೆ. ಹೀಗೆ ನಮ್ಮ ಸುತ್ತಲೆಲ್ಲಾ ಯಾವಾಗಲು ಪಾಪವು ಇದ್ದೇ ಇರುತ್ತದೆ. ಕೆಲವು ವೇಳೆಗಳಲ್ಲಿ ನಾವು ಪಾಪದಲ್ಲಿ ಬೀಳುತ್ತೇವೆ. ಶೋಧನೆ ಬರುತ್ತದೆ.

ಸೈತಾನನು ನಮ್ಮನ್ನು ಪರಾಭವಗೊಳಿಸಲು ಯಾವಾಗಲೂ ಪ್ರಯತ್ನಿಸುತ್ತಿದ್ದಾನೆ; ನಾವು ನಾವು ಹೋರಾಟದಲ್ಲಿರುತ್ತೇವೆ.

ಒಂದು ಅರ್ಥದಲ್ಲಿ ನಾವು ಏಕಕಾಲದಲ್ಲಿ ಎರಡು ಪ್ರಪಂಚದೊಳಗೆ ಇರುತ್ತೇವೆಃ ಆತ್ಮೀಕ ಪ್ರಪಂಚ ಅಥವಾ ದೇವರ ರಾಜ್ಯ; ಮತ್ತು ಭೌತೀಕ ಪ್ರಪಂಚ, ಅಥವಾ ಸೈತಾನನ ರಾಜ್ಯ 11. ಶಾರೀರಿಕ ಅರ್ಥದಲ್ಲಿ, ನಾವು ಭೌತೀಕ ಪ್ರಪಂಚದ ಅಂಗವಾಗಿರುತ್ತೇವೆ. ಆದರೆ ಮುಖ್ಯ ಸಂಗತಿಯೇನೆಂದರೆ, ಆತ್ಮೀಕ ಅರ್ಥದಲ್ಲಿ, ನಾವು ಕ್ರಿಸ್ತನಲ್ಲಿ ಬದುಕಿದವರಾಗಿದ್ದೇವೆ.

ನಾವು ನೂತನ ಜನವೂ ದೇವರ ರಾಜ್ಯದ ಪ್ರಜೆಗಳೂ ಆಗಿದ್ದೇವೆ; ನಾವು ದೇವರ ಕುಟುಂಬದ ಮಕ್ಕಳಾಗಿ ಮಾಡಲ್ಪಟ್ಟಿದ್ದೇವೆ. ಆದದರಿಂದ, ನಾವು ನಿಜವಾಗಿಯೂ ದೇವರ ರಾಜ್ಯದ ಪ್ರಜೆಗಳೂ ಆತನ ಕುಟುಂಬದ ಮಕ್ಕಳೂ ಆಗಿರುವದಾದರೆ ನಾವು ಆತನ ಮಕ್ಕಳಂತೆಯೂ ವರ್ತಿಸುವವರಾಗಿರಬೇಕು. ನಿಜ, ಸೈತಾನನು ನಮ್ಮನ್ನು ಶೋಧನೆಯೊಳಗೆ ನಡಿಸಲು ಪ್ರಯತ್ನಿಸುತ್ತಲೇ ಇರುತ್ತಾನೆ, ಮತ್ತು ಆತನು ನಮ್ಮ ದೇಹಗಳನ್ನು ಕೆಟ್ಟತನಕ್ಕೆ ನಡಿಸುವಂತೆ ಮಾಡಲು ಪ್ರಯತ್ನ ಮಾಡುವನು. ಆದರೆ ನಾವು ಆತನಿಗೆ ಒಳಗಾಗದೆ ಆತನನ್ನು ಎದುರಿಸಬೇಕು (ಯಾಕೋಬ 4:7 ಮತ್ತು ವ್ಯಾಖ್ಯಾನ ನೋಡಿರಿ). ಸೈತಾನನಿಗೆ ಒಳಪಡುವದಕ್ಕೆ ಬದಲಾಗಿ ನಾವು ದೇವರಿಗೆ ಅಧೀನರಾಗಬೇಕು. ನಾವು ದೇವರ ಮಕ್ಕಳು, ಮತ್ತು ದೇವರ ಮಕ್ಕಳು ತಮ್ಮ ತಂದೆಯ ಸ್ವಭಾವವನ್ನು ಪ್ರತಿಬಿಂಬಿಸಬೇಕು (1 ಪೇತ್ರ 1:15-16 ನೋಡಿರಿ).

ಕೆಲವು ವರ್ಷಗಳ ಹಿಂದೆ ಒಬ್ಬ ಆಂಗ್ಲ ಅರಸನ ಕಥೆಯು ಹೇಳಲ್ಪಟ್ಟಿತು, ಆತನ ಅವಿಧೇಯನಾದ ಹಠಮಾರಿ ಮಗನು ತನ್ನ ಸ್ನೇಹಿತರೊಂದಿಗೆ ಹೋಗಿ ಮೋಜು ಮಾಡುತ್ತಾ ಅವರು ಮಾಡುವ ಎಲ್ಲಾ ಸಂಗತಿಗಳನ್ನು ಮಾಡುವದಕ್ಕೆ ಬಯಸಿದ್ದನು. ಅರಸನು ಅದರ ಬಗ್ಗೆ ಕೇಳಿದವನಾಗಿ ತನ್ನ ಮಗನನ್ನು ಕರೆದು ಒಂದು ಕಾರ್ಯವನ್ನು ಮಾಡುವಂತೆ ಆತನಿಗೆ ಹೇಳಿದನುಃ "ನೀನು ಯಾರೆಂಬದನ್ನು ನೆನಪಿಸಿಕೋ".

ಅದೇ ರೀತಿಯಾಗಿ, ಕ್ರಿಸ್ತನ್ನು ನಂಬುವವರಾದ ನಾವು ಯಾರಾಗಿದ್ದೇವೆಂಬದನ್ನು ನೆನಪಿಸಿಕೊಳ್ಳುವ ಅಗತ್ಯವಿರುತ್ತದೆ. ನಾವು ಮಹಾ ಅರಸನ ಮಕ್ಕಳಾಗಿದ್ದೇವೆ – ರಾಜಾಧಿರಾಜನ ಮಕ್ಕಳು! ನಾವು ಆತನ ಮಕ್ಕಳಂತೆ ನಡೆದುಕೊಳ್ಳುತ್ತಿದ್ದೇವೋ?

**6** .......ದೇವರ ಕೋಪವು ಉಂಟಾಗುತ್ತದೆ. ಕ್ರೈಸ್ತರಾದ ನಾವು ಹೆಚ್ಚಾಗಿ ದೇವರ ಪ್ರೀತಿಯ ಕುರಿತು ಮಾತಾಡಲು ಇಷ್ಟಪಡುತ್ತೇವೆ; ಮತ್ತು ಅದರಲ್ಲಿ ಯಾವ ದೋಷವು ಇರುವದಿಲ್ಲ, ಯಾಕೆಂದರೆ ದೇವರು ಪ್ರೀತಿಸ್ವರೂಪನಾಗಿದ್ದಾನೆ (1ಯೋಹಾನ 4:8). ದೇವರು ತನ್ನ ಪ್ರೀತಿಯ ನಿಮಿತ್ಯದಿಂದಲೇ ನಮಗಾಗಿ ತನ್ನ ಮಗನನ್ನು ಯಜ್ಞವಾಗಿ ಅರ್ಪಿಸಿದನು(ಯೋಹಾನ 3:16). ಆದರೆ ನಾವು ದೇವರ ಕೋಪದ ಬಗ್ಗೆ ಮರೆಯದಿರೋಣ. ಯಾಕೆಂದರೆ ಆತನಿಗೆ ಅವಿಧೇಯರಾಗುವವರ ಮೇಲೆಯೂ ಕೆಟ್ಟದ್ದನ್ನು ನಡಿಸುವ ಹಾಗು ಆತನ ಮಗನಲ್ಲಿ ನಂಬಿಕೆಯಿಡುವದಕ್ಕೆ ನಿರಾಕರಿಸುವವರ ಮೇಲೆಯೂ ದೇವರ ಕೋಪವು ಬರುತ್ತದೆ (ಎಫೆಸ 5:6 ನೋಡಿರಿ). ದೇವರು ನಿಶ್ಚಯವಾಗಿಯೂ ಈ ಎಲ್ಲಾ ಜನರನ್ನು ಶಿಕ್ಷಿಸುವನು.

**7** ನಾವು ಸಹ ಒಮ್ಮೆ ಅವಿಧೇಯರಾಗಿದ್ದೇವು ಮತ್ತು ೫ನೇ ವಚನದಲ್ಲಿ ಪ್ರಸ್ತಾಪಿಸಿರುವ ಪಾಪಗಳಲ್ಲಿ ತೊಡಗಿರುವವರಾಗಿದ್ದೇವು (ಎಫೆಸ 2:1-3 ಮತ್ತು ವ್ಯಾಖ್ಯಾನ ನೋಡಿರಿ).

**8-9** ಈಗಲಾದರೋ ....ಅಂಥವುಗಳನ್ನು ವಿಸರ್ಜಿಸಿಬಿಡಿರಿ (ವಚನ 8), ಯಾಕೆಂದರೆ ನೀವು ಪೂರ್ವಸ್ವಭಾವವನ್ನು... ತೆಗೆದುಬಿಟ್ಟಿದ್ದೀರಿ (ವಚನ 9). 8ನೇ ವಚನದ ಪ್ರಕಾರವಾಗಿ ನಾವು ನಮ್ಮ ಪೂರ್ವಸ್ವಭಾವದ ಮಾರ್ಗಗಳನ್ನು ವಿಸರ್ಜಿಸಬೇಕು, ಆದರೆ 9ನೇ ವಚನದ ಪ್ರಕಾರವಾಗಿ, ನಾವು ಈಗಾಗಲೇ ಪೂರ್ವಸ್ವಭಾವವನ್ನು ತೆಗೆದುಬಿಟ್ಟಿದ್ದೇವೆ.

ಇಲ್ಲಿ ಪೌಲನ ತಾತ್ಪರ್ಯವೇನೆಂದರೆ, ನಾವು ಪೂರ್ವಸ್ವಭಾವವನ್ನು ತೆಗೆದುಬಿಟ್ಟಿರುವದರಿಂದ ಈಗ ನಾವು ಅದರ ಕೆಟ್ಟಕೃತ್ಯಗಳನ್ನು ಸಹ ತೆಗೆದು ಬಿಡಬೇಕು.

**10** ನಮ್ಮ ಪೂರ್ವಸ್ವಭಾವವು ಕ್ರಿಸ್ತನೊಂದಿಗ ಸತ್ತಿರುತ್ತದೆ. ಈಗ ನಾವು ನೂತನ ಜನವೂ ನೂತನ ಸೃಷ್ಟಿಯೂ ಆಗಿದ್ದೇವೆ; ಅಂದರೆ, ನಾವು ನೂತನ ಸ್ವಭಾವವನ್ನು ಧರಿಸಿಕೊಂಡಿದ್ದೇವೆ (2 ಕೊರಿಂಥ 5:17; ಎಫೆಸ 4:22-24 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಮ್ಮ ನೂತನ ಸ್ವಭಾವವು ಅದನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ....ನೂತನವಾಗಬೇಕು – ಅಂದರೆ, ದೇವರ ಹಾಗು ಕ್ರಿಸ್ತನ ಇಬ್ಬರ ಹೋಲಿಕೆಯ ಮೇರೆಗೂ ನೂತನವಾಗಬೇಕು.

ಪೌಲನು ಎಫೆಸದವರಿಗೆ ಬರೆದ ತನ್ನ ಪತ್ರಿಕೆಯಂತೆಯೇ ಇಲ್ಲಿಯೂ ನಮ್ಮ ದೈನಂದಿನ ನಡವಳಿಕೆಯನ್ನು ಒಂದು ಜೊತೆ ವಸ್ತ್ರದಂತೆ ಬಣ್ಣಿಸುತ್ತಾನೆ. ನಾವು ಹಳೆಯ ವಸ್ತ್ರಗಳನ್ನು ತೆಗೆದು ಶುಭ್ರವಾದ ನೂತನ ವಸ್ತ್ರಗಳನ್ನು ಧರಿಸಿಕೊಳ್ಳುವ ಪ್ರಕಾರವೇ ನಾವು ನಮ್ಮ ಪೂರ್ವನಡವಳಿಕೆಯನ್ನು "ತೆಗೆದಿಟ್ಟು" ನೂತನ ನಡವಳಿಕೆಯನ್ನು "ಧರಿಸಿಕೊಳ್ಳಬೇಕು". ನಮ್ಮ ನಮ್ಮ ನೂತನ ನಡವಳಿಕೆಯು ಕಿರಸ್ತನ ನಡವಳಿಕೆಯಂತಿರಬೇಕು; ಬೇರೆ ಮಾತುಗಳಲ್ಲಿ ಹೇಳುವದಾದರೆ, ನಾವು ಕ್ರಿಸ್ತನನ್ನು ಧರಿಸಿಕೊಳ್ಳಬೇಕು (ರೋಮ 13:14; ಗಲಾತ್ಯ 3:27 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಜನರು ನಮ್ಮ ಜೀವಿತಗಳನ್ನು ನೋಡುವಾಗ ಅವರು ಕ್ರಿಸ್ತನನ್ನು ಕಾಣುವದಕ್ಕೆ ಶಕ್ತರಾಗಬೇಕು. ನಮ್ಮ ನೂತನ ಸ್ವಭಾವವು ನೂತನವಾಗುತ್ತಾ ಪೂರ್ಣಜ್ಞಾನವನ್ನು ಹೊಂದುತ್ತದೆ. ಒಬ್ಬ "ನೂತನ ಮನುಷ್ಯ" ನಿಗೆ ನೂತನವಸ್ತ್ರಗಳು ಹಾಗು ನೂತನ ನಡವಳಿಕೆಯು ಮಾತ್ರವೇ ಅಗತ್ಯವಾಗಿರುವದಿಲ್ಲ; ಆತನಿಗೆ ನೂತನ ಜ್ಞಾನವು ಅಗತ್ಯವಿರುತ್ತದೆ.

ಕ್ರೈಸ್ತರಾದ ಬಳಿಕ ನಾವು ಇತರ ಜನರಂತೆ ಯೋಚಿಸಬೇಕಾಗಿಲ್ಲ; ನಮ್ಮ ಅಂತರ್ಯದ ನಡವಳಿಕೆ ಮಾತ್ರವಲ್ಲ ಆದರೆ ನಮ್ಮ ಅಂತರ್ಯದ ಮನೋಭಾವಗಳು ಸಹ ಬದಲಾವಣೆಗೊಂಡಿರುತ್ತವೆ. ನಮ್ಮ ಹೊರಗಿನ ಸ್ವಭಾವವು ಮಾತ್ರವಲ್ಲ, ಆದರೆ ನಮ್ಮ ಅಂತರ್ಯದ ಸ್ವಭಾವವು – ನಮ್ಮ ಮನಸ್ಸು – ಸಹ ಮಾರ್ಪಾಟಾಗಿರುತ್ತದೆ. ನಾವು ಕ್ರಿಸ್ತನನ್ನು ಧರಿಸಿಕೊಂ–ಡಾಗ ಆತನ ಮನಸ್ಸು ಹಾಗು ಆತನ ಜ್ಞಾನವನ್ನು ಸಹ ಧರಿಸಿಕೊಳ್ಳುತ್ತೇವೆ (ರೋಮ 12:2 ಮತ್ತು ವ್ಯಾಖ್ಯಾನ ನೋಡಿರಿ).

**11** ನಾವು ನಮ್ಮ ನೂತನ "ವಸ್ತ್ರಗಳನ್ನು" (ನೂತನ ನಡವಳಿಕೆ ಹಾಗು ನೂತನಮನಸ್ಸು) ಧರಿಸಿಕೊಂಡ ಬಳಿಕ ವಿಶ್ವಾಸಿಗಳಾದ ನಾವೆಲ್ಲರೂ ಸ್ವಲ್ಪಮಟ್ಟಿಗೆ ಒಂದೇ ರೀತಿಯಾಗಿ ಕಾಣುತ್ತೇವೆ. ನಾವೆಲ್ಲರೂ ಕ್ರಿಸ್ತನಂತೆ ಕಾಣುತ್ತೇವೆ, ಯಾಕೆಂದರೆ ನಮ್ಮ ನೂತನ ವಸ್ತ್ರಗಳು ವಾಸ್ತವದಲ್ಲಿ ಆತನ ವಸ್ತ್ರಗಳೇ ಆಗಿವೆ. ನಮ್ಮ ಹಳೆಯ ವಸ್ತ್ರಗಳ ಕಾರಣದಿಂದ ನಾವು ಇಬ್ಭಾಗಿಸಲ್ಪಟ್ಟಿದ್ದೆವುಃ ಮೇಲ್ಜಾತಿ ಹಾಗು ಕೀಳ್ಜಾತಿ, ವಿಧ್ಯಾವಂತ ಹಾಗು ಅವಿಧ್ಯಾವಂತ, ಶ್ರೀಮಂತ ಹಾಗು ಬಡವ, ಪುರುಷ ಹಾಗು ಸ್ತ್ರೀ. ಆದರೆ ನಾವು ಕ್ರಿಸ್ತನನ್ನು ಧರಿಸಿಕೊಂಡ ಬಳಿಕ ಇನ್ನು ಮೇಲೆ ನಾವು ಈ ಸಂಗತಿಗಳಲ್ಲಿ ಇಬ್ಭಾಗಿಸಲ್ಪಡುವದಿಲ್ಲ. ನಾವೆಲ್ಲರೂ ಒಂದೇ ಆಗಿದ್ದು ಒಂದೇ ಕುಟುಂಬದಲ್ಲಿ ಅನ್ಯೋನ್ಯವಾಗಿರುವೆವು. ಕ್ರೈಸ್ತರೊಳಗೆ ಯಾವ ಬೇಧಗಳಿರುವದಿಲ್ಲ (ಗಲಾತ್ಯ 3:26-28 ಮತ್ತು ವ್ಯಾಖ್ಯಾನ ನೋಡಿರಿ).

ಕ್ರಿಸ್ತನಲ್ಲಿ ನಮ್ಮ ಐಕಮತ್ಯವು ಎಷ್ಟು ಆಶ್ಚರ್ಯಕರ! ಪೌಲನ ಕಾಲದಲ್ಲಿ, ಜನರ ವಿವಿಧ ವರ್ಗಗಳ ನಡುವೆ ದೊಡ್ಡ ವ್ಯತ್ಯಾಸಗಳು ಮಾಡಲ್ಪಟ್ಟಿದ್ದವುಃ ಸುನ್ನತಿ ಮಾಡಿಸಿಕೊಂಡವರ (ಯೆಹೂದ್ಯರ) ಹಾಗು ಸುನ್ನತಿ ಮಾಡಿಸಿಕೊಳ್ಳದವರ

(ಅನ್ಯ ಜನರ) ನಡುವೆ, ಆಳು ಮತ್ತು ಒಡೆಯನ ನಡುವೆ, ಉನ್ನತ ನಾಗರೀಕತೆಯುಳ್ಳ ಗ್ರೀಕರ ಹಾಗು ಅನಾಗರೀಕರಾದ ಮ್ಲೆಚ್ಚ[12] ಹೂಣರ[13] ನಡುವೆ. ಅಷ್ಟು ಮಾತ್ರವಲ್ಲದೆ, ಈ ಗುಂಪು ಗಳ ನಡುವೆ ಅನಾರೋಗ್ಯಕರ ಭಾವನೆಗಳಿದ್ದವು.

ಹಾಗಾದರೆ, ಇಂಥ ವಿವಿಧ ವರ್ಗಗಳ ಜನರು ಒಂದೇ ಕುಟುಂಬ, ಒಂದೇ ದೇಹದಲ್ಲಿ ಅನ್ಯೋನ್ಯವಾಗಿರಲು ಹೇಗೆ ಸಾಧ್ಯ? ಅಂಥ ದೊಡ್ಡ ಬೇಧಗಳನ್ನು ಹೇಗೆ ನಿವಾರಿಸುವದು? ಕ್ರಿಸ್ತನ ಮುಖಾಂತರ ಮಾತ್ರವೇ ಇದು ಸಾಧ್ಯವಿರುತ್ತದೆ. ನಮ್ಮನ್ನು ಒಂದುಗೂಡಿಸುವವನು ಕ್ರಿಸ್ತನೇ. ಕ್ರಿಸ್ತನೇ ಸಮಸ್ತವೂ ಆಗಿದ್ದಾನೆ. ಅಂದರೆ, ಕ್ರಿಸ್ತನು ಸಮಸ್ತವೂ ಒಂದೇ ದೇಹವಾಗಿದ್ದಾನೆ.

ಮತ್ತು ಕ್ರಿಸ್ತನು ಸಮಸ್ತರಲ್ಲಿಯೂ ಇದ್ದಾನೆ–ದೇಹದ ಎಲ್ಲಾ ಅಂಗಗಳಲ್ಲಿಯೂ ಇದ್ದಾನೆ. ನಾವು ಕ್ರಿಸ್ತನಲ್ಲಿದ್ದೇವೆ, ಮತ್ತು ಕ್ರಿಸ್ತನು ನಮ್ಮಲ್ಲಿದ್ದಾನೆ. ಆದದರಿಂದ, ನಾವೆಲ್ಲರೂ ಕ್ರಿಸ್ತನಲ್ಲಿ ಒಂದೇ ಆಗಿದ್ದೇವೆ (ಗಲಾತ್ಯ 3:28).

ಆದರೆ ಕ್ರಿಸ್ತನಲ್ಲಿ ಒಂದೇ ಆಗಿದ್ದರೂ, ಒಂದೇ ಕುಟುಂಬದ ಸಮಾನವಾದ ಹಾಗು ಐಕ್ಯವಾದ ಅಂಗಗಳಾಗಿದ್ದರೂ ಮತ್ತು ಒಮ್ಮೆ ನಡುವೆ ಇದ್ದ ಬೇಧಗಳು ನಿವಾರಿಸಲ್ಪಟ್ಟಿದ್ದಾಗ್ಯು ನಾವು ಎಲ್ಲರೂ ಒಂದೇ ರೀತಿಯಾಗಿ ಇರುವದಿಲ್ಲವಷ್ಟೇ. ನಮಗೆ ಬೇರೆ ಬೇರೆ ವರಗಳು ಹಾಗು ವಿವಿಧ ಜವಾಬ್ದಾರಿಗಳು ಕೊಡಲ್ಪಟ್ಟಿರುತ್ತವೆ. ನಮ್ಮ ಪರಸ್ಥಿತಿಗಳು ಸಹ ಬೇರೆ ಬೇರೆಯಾಗಿ–ರುತ್ತವೆ. ವಾಸ್ತವದಲ್ಲಿ, ಕ್ರೈಸ್ತರೊಳಗೆ ಕೆಲವರು ಶ್ರೀಮಂತರು ಹಾಗು ಬಡವರು ಆಗಿರುತ್ತಾರೆ, ಕೆಲವರು ವಿಧ್ಯಾವಂತರು, ಹಾಗು ಇನ್ನು ಕೆಲವರು ಅವಿಧ್ಯಾವಂತರು; ಕೆಲವರು ಪುರುಷರು ಹಾಗು ಕೆಲವರು ಸ್ತ್ರೀಯರು ಆಗಿರುತ್ತಾರೆ. ಹೇಗಿದ್ದರೂ, ಈ ವಿವಿಧ ಗುಂಪುಗಳು ಇಬ್ಭಾಗಿಸಲ್ಪಟ್ಟಿರುವದಿಲ್ಲ; ಒಂದು ಗುಂಪು ಇನ್ನೊಂದಕ್ಕಿಂತ ಹೆಚ್ಚಿಸಿಕೊಳ್ಳುವಂತದ್ದು ಇರುವದಿಲ್ಲ.

ಆತ್ಮೀಕವಾಗಿ ಅವರೆಲ್ಲರೂ ಸಭೆಯಲ್ಲಿಯೂ ದೇವರ ಮುಂದೆಯೂ ಸರಿಸಮಾನವಾದ ಸ್ಥಾನವನ್ನು ಹೊಂದಿರುತ್ತಾರೆ; ಅವರೆಲ್ಲರೂ ಕ್ರಿಸ್ತನಲ್ಲಿ ಒಂದೇ ಆಗಿದ್ದಾರೆ.

ನಾವು ನಮ್ಮ ಸಭೆಯನ್ನು ದೃಷ್ಟಿಸುವಾಗ ನಾವು ಏನನ್ನು ಕಾಣುತ್ತೇವೆ? ಅಲ್ಲಿ ಭೇದಗಳು ಇರುತ್ತವೋ? ಒಬ್ಬರಿಗೊಬ್ಬರ ನಡುವೆ ನಮ್ಮ ಹೃದಯಗಳಲ್ಲಿ ಭೇದಗಳು ಇರುತ್ತವೋ?.

12 ಪೌಲನು 10ನೇ ವಚನದಲ್ಲಿ ನಾವು ನೂತನ ಸ್ವಭಾವವನ್ನು ಧರಿಸಿಕೊಂಡಿದ್ದೇವೆ ಎಂದು ಹೇಳುತ್ತಾನೆ. ಈಗ 12-17 ವಚನಗಳಲ್ಲಿ ಪೌಲನು ಈ "ನೂತನ ಸ್ವಭಾವ" ವನ್ನು ಬಣ್ಣಿಸುತ್ತಾನೆ. 12ನೇ ವಚನದಲ್ಲಿ ಪಟ್ಟಿ ಮಾಡಲ್ಪಟ್ಟಿರುವ ಗುಣಗಳು – ಕನಿಕರ, ದಯೆ, ದೀನಭಾವ, ಸಾತ್ವಿಕತ್ವ, ದೀರ್ಘಶಾಂತಿ–ಪೌಲನು ಅನೇ ವಚನದಲ್ಲಿ ಪಟ್ಟಿ ಮಾಡಿರುವ ಪೂರ್ವಸ್ವಭಾವದ ಗುಣಗಳಿಗೆ ತದ್ವಿರುದ್ಧವಾಗಿರುವದನ್ನು ಗಮನಿಸಿರಿ. ಈ ನೂತನ ಗುಣಗಳು ಪವಿತ್ರಾತ್ಮನ ಫಲಗಳಾಗಿರುತ್ತವೆ (ಗಲಾತ್ಯ 5:22-23). ಈ ನೂತನ ಗುಣಗಳು ನಮ್ಮ ಐಕಮತ್ಯಕ್ಕು ನಮ್ಮ ಸಭೆಗೂ ಪ್ರಾಮುಖ್ಯವಾಗಿರುತ್ತವೆ (ಎಫೆಸ 4:2-3 ಮತ್ತು ವ್ಯಾಖ್ಯಾನ ನೋಡಿರಿ).

ಕ್ರೈಸ್ತರಾದ ನಾವು ಯಾಕೆ ಈ ಗುಣಗಳನ್ನು ಧರಿಸಿಕೊಳ್ಳಬೇಕು? ಯಾಕೆಂದರೆ ನಾವು ದೇವರಿಂದ ಆತನ ಪ್ರತಿಷ್ಠಿತರೂ ಪ್ರಿಯರೂ ಆದ ಜನರಾಗಿ ಆರಿಸಿಕೊಳ್ಳಲ್ಪಟ್ಟಿದ್ದೇವೆ. ನಾವು ದೇವರ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು (ಎಫೆಸ 1:4). ದೇವರು ನಮ್ಮನ್ನು ಯಾವದಕ್ಕಾಗಿ ಆರಿಸಿಕೊಂಡನೋ ಅದನ್ನು ಹುಸಿಮಾಡದಿರೋಣ!.

13 ಇತರರು ನಮ್ಮನ್ನು ಸಹಿಸಿಕೊಳ್ಳುವದಕ್ಕೆ ಕಷ್ಟವಾಗುವಂಥ ಕೆಲವು ಕೆಟ್ಟ ಗುಣಗಳನ್ನು ನಾವು ಪ್ರತಿಯೊಬ್ಬರು ಹೊಂದಿದ್ದೇವೆ. ಇತರರು ನಮ್ಮನ್ನು ಸಹಿಸಿಕೊಳ್ಳಬೇಕು, ನಮ್ಮ ವಿಷಯದಲ್ಲಿ ತಾಳ್ಮೆಯಿಂದಿರಬೇಕು, ನಮ್ಮನ್ನು ಸ್ವೀಕರಿಸಿ ಕೊಳ್ಳಬೇಕು ಎಂದು ನಾವು ಇಚ್ಛಿಸುತ್ತೇವೋ? ಹೌದು ಖಂಡಿತವಾಗಿಯೂ ಇಚ್ಛಿಸುತ್ತೇವೆ. ಹಾಗಾದರೆ, ಅವರು ನಮ್ಮ ಕೆಟ್ಟ ಗುಣಗಳನ್ನು ಸೈರಿಸಿಕೊಳ್ಳಬೇಕೆಂದು ನಾವು ಇಚ್ಛಿಸುವದಾದರೆ ನಾವೂ ಇತರರನ್ನು ಸೈರಿಸಿಕೊಳ್ಳಲು ಮನಸ್ಸುಳ್ಳವರಾಗ–ಬೇಕು (ಎಫೆಸ 4:2-3).

ಇತರರು ನಮ್ಮನ್ನು ಕ್ಷಮಿಸಬೇಕೆಂದು ಇಷ್ಟಪಡುತ್ತೇವೋ? ಖಂಡಿತವಾಗಿಯೂ ಇಷ್ಟಪಡುತ್ತೇವೆ, ಹಾಗಾದರೆ ಅವರು ನಮ್ಮನ್ನು ಕ್ಷಮಿಸಬೇಕೆಂದು ನಾವು ಇಚ್ಛಿಸುವದಾದರೆ ನಾವೂ ಅವರನ್ನು ಕ್ಷಮಿಸಬೇಕಾಗುವದು. ಕ್ಷಮಾಪಣೆಯು ಕೇವಲ ತುಟಿಗಳಿಂದ ನೂಡುವಂತದ್ದಲ್ಲ; ಅದು ಹೃದಯದಿಂದ ನೀಡಲ್ಪಡುತ್ತದೆ. ನಾವು ನಮ್ಮ ಸಹೋದರನನ್ನು ಯಾವದೋ ತಪ್ಪಿಗಾಗಿ ಕ್ಷಮಿಸಿದ ಬಳಿಕ ಆ ವಿಷಯವು ಇನ್ನೂ ನಮ್ಮ ಹೃದಯಗಳಲ್ಲಿ ಉಳಿಯುತ್ತದೋ? ನಾವು ಸ್ವಲ್ಪಕೋಪ, ನೋವು ಉಳ್ಳವರಾಗಿರುತ್ತೇವೋ? ಹಾಗಿರುವದಾದರೆ ನಾವು ನಮ್ಮ ಸಹೋದರನನ್ನು ಸಂಪೂರ್ಣವಾಗಿ ಕ್ಷಮಿಸಿರುವದಿಲ್ಲ.

ನಾವು ಇತರರನ್ನು ಸಂಪೂರ್ಣವಾಗಿ ಕ್ಷಮಿಸಲು ನಿರಾಕರಿಸುವದಾದರೆ ನಾವು ನಿಜವಾಗಿಯೂ ನಮಗೇ ನೋವುಂಟುಮಾಡಿಕೊಳ್ಳುವವರಾಗಿದ್ದೇವೆ. ಸಮಾಧಾನಕ್ಕೆ ಬದಲಾಗಿ ನಮ್ಮ ಹೃದಯಗಳಲ್ಲಿ ಕೋಪ ಹಾಗು ಕಹಿಭಾವನೆ ಇರುತ್ತದೆ. ಅದು ಮಾತ್ರವಲ್ಲ, ನಾವು ಇತರರನ್ನು ಕ್ಷಮಿಸದಿದ್ದರೆ ದೇವರೂ ನಮ್ಮನ್ನು ಕ್ಷಮಿಸುವದಿಲ್ಲ (ಮತ್ತಾಯ 6:12 14-15 ಮತ್ತು ವ್ಯಾಖ್ಯಾನ ನೋಡಿರಿ).

ಒಂದು ಕ್ಷಣ ಯೋಚಿಸಿರಿಃ ಎಷ್ಟು ಸಾರಿ ದೇವರು ಈಗಾಗಲೇ ನಿಮ್ಮನ್ನು ಕ್ಷಮಿಸಿದ್ದಾನೆ? ಇನ್ನು ಎಷ್ಟು ಸಾರಿ ದೇವರು ನಿಮ್ಮನ್ನು ಕ್ಷಮಿಸಬೇಕೆಂದು ನೀವು ಇಷ್ಟಪಡುವಿರಿ? ಹೇಗೂ, ದೇವರು ಎಷ್ಟು ಸಾರಿ ನಿಮ್ಮನ್ನು ಕ್ಷಮಿಸಬೇಕೆಂದು ಬಯಸುತ್ತೀರೋ ಅಷ್ಟು ಸಾರಿ ನೀವು ನಿಮ್ಮ ಸಹೋದರನನ್ನು ಕ್ಷಮಿಸಬೇಕು! (ಮತ್ತಾಯ 18;21-22).

ದೇವರು ನಮಗೆ ಎಷ್ಟೊಂದು ಕರುಣೆ ತೋರಿಸಿದ್ದಾನೆಂಬದನ್ನು ಮರೆಯದಿರೋಣ. ಹಾಗಾದರೆ, ಅದೇ ಕರುಣೆಯನ್ನು ಇತರರಿಗೆ ತೋರಿಸೋಣ. ಕರ್ತನು ನಿಮ್ಮನ್ನು ಕ್ಷಮಿಸಿದಂತೆಯೇ ನೀವೂ ಕ್ಷಮಿಸಿರಿ (ಎಫೆಸ 4:32 ನೋಡಿರಿ).

**14** ಇದೆಲ್ಲಾದರ ಮೇಲೆ ಪ್ರೀತಿಯನ್ನು ಧರಿಸಿಕೊಳ್ಳಿರಿ. ಪ್ರೀತಿಯು ಈ ಎಲ್ಲಾ ಗುಣಗಳನ್ನು ಸಂಪೂರ್ಣಮಾಡುವ ಬಂಧವಾಗಿದೆ ಅಥವಾ "ಹಗ್ಗ"ದಂತೆ ಇರುತ್ತದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಈ ನೂತನ ಸ್ವಭಾವದ ಗುಣಗಳೆಲ್ಲವೂ (ವಚನ 13). ಪ್ರೀತಿಯಲ್ಲಿ ಅಡಕವಾಗಿದೆ. ಪ್ರೀತಿಯು ದೇವರ ಹಾಗು ಕ್ರಿಸ್ತನ ಗುಣವಾಗಿದೆ. ಇತರ ಎಲ್ಲಾ ಗುಣಗಳು ಪ್ರೀತಿಯೊಳಗಿಂದ ಹೊರಹೊಮ್ಮುತ್ತವೆ; ಪ್ರೀತಿಯು ಅವೆಲ್ಲವು ಗಳ ಮೂಲವಾಗಿದೆ. ಅದೇ ರೀತಿಯಾಗಿ ದೇವರನ್ನು ಪ್ರೀತಿಸುವದು ಹಾಗು ನಮ್ಮ ನೆರೆಯವನನ್ನು ಪ್ರೀತಿಸುವದು ಎರಡು ಅತಿಶ್ರೇಷ್ಟ ಅಜ್ಞೆಗಳಾಗಿದ್ದು (ಮಾರ್ಕ 12:30-31), ಈ ಎರಡು ಆಜ್ಞೆಗಳಿಂದಲೇ ಉಳಿದೆಲ್ಲಾ ಅಜ್ಞೆಗಳು ಸೇಳೆಲ್ಪಟ್ಟಿರುತ್ತವೆ (ರೋಮ 13:9-10 ಗಲಾತ್ಯ ೫:೧೪ ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**15** ಪ್ರೀತಿಯಂತೆಯೇ ಸಮಾಧಾನವು ಸಹ ನಮ್ಮನ್ನು ಐಕಮತ್ಯದಲ್ಲಿ ಬಂಧಿಸುವ ಒಂದು 'ಹಗ್ಗ'ದ ಹಾಗಿರುತ್ತದೆ. (ಎಫೆಸ 4:3). ಪ್ರೀತಿಯಿರುವಲೆಲ್ಲಾ ಸಮಾಧಾನವು ಇರುತ್ತದೆ. ನಮ್ಮ ಸಭೆಯಲ್ಲಿ ಸಮಾಧಾನದ ಕೊರತೆ ಇರುವದಾದರೆ ಅಲ್ಲಿ ಪ್ರೀತಿಯ ಕೊರತೆಯೂ ಇರಬೇಕಷ್ಟೇ. ಸಮಾಧಾನವು ಚಿಂತೆ ಮತ್ತು ಭಯದಿಂದ ಸ್ವಾತಂತ್ರ್ಯವೂ ಆಗಿದೆ. ಸಮಾಧಾನವೂ – ಶಾಂತಿಯೂ – ಕ್ರಿಸ್ತನ ಒಂದು ವರವಾಗಿದೆ (ಯೋಹಾನ 14:27 ಮತ್ತು ವ್ಯಾಖ್ಯಾನ ನೋಡಿರಿ). ಕ್ರಿಸ್ತನ ಸಮಾಧಾನವು ನಮ್ಮ ಹೃದಯಗಳಲ್ಲಿ ಆಳುವದಾದರೆ ಚಿಂತೆ, ಭಯ ಹಾಗು ಕಲಹಗಳು ಉದ್ಭವಿಸಲುಸಾಧ್ಯವಿಲ್ಲ.

ಇದಲ್ಲದೆ ಕೃತಜ್ಞತೆಯುಳ್ಳವರಾಗಿರಿ. ನಾವು ಯಾಕೆ ಕೃತಜ್ಞತೆಯುಳ್ಳವರಾಗಿರಬೇಕು? ಯಾಕೆಂದರೆ, ದೇವರು ನಮಗಾಗಿ ಎಲ್ಲವನ್ನೂ ಮಾಡಿರುತ್ತಾನೆ! ಆತನು ನಮಗೆ ನೂತನ ಜೀವ, ಕೃಪೆ, ಪ್ರೀತಿ, ಸಮಾಧಾನ, ಕ್ಷಮಾಪಣೆ, ರಕ್ಷಣೆ, ಮುಂತಾದವು ಗಳನ್ನೆಲ್ಲಾ ಅನುಗ್ರಹಿಸಿರುತ್ತಾನೆ. ಆದರೆ ಇದೆಲ್ಲದಕ್ಕಿಂತ ಹೆಚ್ಚಾಗಿ ಆತನು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಆತನೊಂದಿಗೆ ಸಕಲ ಆತ್ಮೀಕ ಆಶಿರ್ವಾದಗಳನ್ನು ನಮಗೆ ನೀಡಿರುತ್ತಾನೆ (ರೋಮ 8:32; ಎಫೆಸ 1:3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆದದರಿಂದ, ನಾವು ದೇವರಿಗೆ ಕೃತಜ್ಞತೆಯನ್ನು ಸಲ್ಲಿಸದಿರಲು ಹೇಗೆ ಸಾಧ್ಯ?

**16** ಈ ಅಧ್ಯಾಯದಲ್ಲಿ ಪೌಲನು "ನೂತನ ಆತ್ಮೀಕ ಮನುಷ್ಯ" ನನ್ನು ಬಣ್ಣಿಸಿರುತ್ತಾನೆ. ಆದರೆ ಆತ್ಮೀಕ ಮನುಷ್ಯನಿಗೆ ಆತ್ಮೀಕ ಅಹಾರದ ಅಗತ್ಯತೆಯಿರುತ್ತದೆ. ಆತ್ಮೀಕ ಆಹಾರ ಎಂದರೇನು? ಅದು ಕ್ರಿಸ್ತನ ವಾಕ್ಯ – ಅಂದರೆ, ದೇವರ ವಾಕ್ಯ, ನಮ್ಮ ಬೈಬಲ್. ಕ್ರಿಸ್ತನ ವಾಕ್ಯವು ನಮ್ಮಲ್ಲಿ ವಾಸಿಸುವಂತೆ ನಾವು ಹೇಗೆ ಅನುಮತಿಸಬಲ್ಲೆವು? ಬೈಬಲನ್ನು ಓದುವದರ ಹಾಗು ಅಭ್ಯಾಸಿಸುವದರ ಮೂಲಕವೇ (ಯೆಹೋಶುವ 1:8; ಕೀರ್ತನೆಗಳು 1:2). ಬೈಬಲನ್ನು ಅಭ್ಯಾಸಿಸು ವದರ ಮೂಲಕ ನಾವು ಸಕಲ ಜ್ಞಾನದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು ಉಪದೇಶ ಮಾಡಿಕೊಳ್ಳಲು ಬುದ್ದಿಹೇಳಿಕೊಳ್ಳಲು ಶಕ್ತರಾಗುತ್ತೇವೆ.

ನಮ್ಮ ಸಭೆಯ ಆರಾಧನೆಗಳು ಹಾಗು ಗ್ರಹಕೂಟಗಳು ಹೇಗಿರತಕ್ಕದೆಂಬದನ್ನು ಇಲ್ಲಿ ಕಾಣುತ್ತೇವೆ! ನಾವು ಒಬ್ಬರಿಗೊಬ್ಬರು ಉಪದೇಶಮಾಡಿಕೊಳ್ಳುವವರು ಬುದ್ಧಿಹೇಳಿಕೊಳ್ಳುವವರೂ ಮಾತ್ರವೇ ಆಗಿರುವದಿಲ್ಲ, ಆದರೆ ನಾವು ಕೀರ್ತನೆಗಳಿಂದಲೂ ಸಂಗೀತಗಳಿಂದಲೂ ಆತ್ಮಸಂಬಂಧವಾದ ಹಾಡುಗಳಿಂದಲೂ .......ದೇವರಿಗೆ ಗಾನಮಾಡುವವರೂ ಆಗಿರಬೇಕು (ಎಫೆಸ 5:19-20 ನೋಡಿರಿ).

**17** ಪೌಲನು ಕೊಲೊಸ್ಸೆಯವರಿಗೆ ಹೇಳುವದೇನೆಂದರೆಃ ನೀವು .....ಏನುಮಾಡಿದರೂ ಅದೆಲ್ಲವನ್ನೂ ಕರ್ತನಾದ ಯೇಸುವಿನ ಹೆಸರಿನಲ್ಲಿಯೇ ಮಾಡಿರಿ. ನಾವು "ಏನು ಮಾಡಿದರೂ" ಎಂದರೆ ನಾವು ಮಾಡುವ "ಸಮಸ್ತವೂ" ಎಂದು ಅರ್ಥವಾಗಿದೆ. ಅಂದರೆ, ನಾವು ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸುವದು ಅಷ್ಟೇ ಅಲ್ಲ; ನಾವು ಎಲ್ಲವನ್ನೂ–ನಡೆಯಿಂದಾಗಲಿ ನುಡಿಯಿಂದಾಗಲಿ – ಆತನ ಹೆಸರಿನಲ್ಲಿ ಮಾಡಬೇಕು (ಆದರೆ, ಆತನ ಹೆಸರಿಗೆ ಅವಮಾನ ತರುವಂತಹ ಕಾರ್ಯವನ್ನು ನಾವು ಮಾಡಬಾರದಷ್ಟೇ!).ನಮ್ಮ ಇಡೀ ಜೀವಿತಗಳು ಆತನ ಹೆಸರಿಗೆ ಯೋಗ್ಯವಾಗಿರಬೇಕು.

..........ಕರ್ತನಾದ ಯೇಸುವಿನ ಹೆಸರಿನಲ್ಲಿಯೇ ಮಾಡಿರಿ. ಇದು ಒಂದು ರೀತಿಯ ಮಾಂತ್ರಿಕ ಸೂತ್ರವಲ್ಲ. "ಕರ್ತನಾದ ಯೇಸುವಿನ ಹೆಸರಿನಲ್ಲಿ" ಎಂದರೆ "ಯೇಸುವಿನ ನಿಮಿತ್ಯ" ಹಾಗು "ಯೇಸುವಿನ ಅಧಿಕಾರದೊಂದಿಗೆ" ಎಂದು ಅರ್ಥವಾಗಿದೆ. ನೆನಪಿರಲಿ, ಯೇಸುವಿನಲ್ಲಿ ನಂಬಿಕೆಯಿಡುವವರಾದ ನಾವೆಲ್ಲರೂ ಆತನ ರಾಯಭಾರಿಗಳು ಅಥವಾ ಪ್ರತಿನಿಧಿಗಳಾಗಿದ್ದೇವೆ (2ಕೊರಿಂಥ 5:20). ಯೇಸು ತನ್ನ ಕೆಲಸವನ್ನು ಆತನ ಹೆಸರಿನಲ್ಲಿ ಮಾಡುವದಕ್ಕೆ ನಮಗೆ ಸಂಪೂರ್ಣವಾದ ಅಧಿಕಾರವನ್ನು ಕೊಟ್ಟಿರುತ್ತಾನೆ. ಒಬ್ಬ ರಾಯಭಾರಿಯು ಎಲ್ಲವನ್ನೂ ತನ್ನ ಅರಸ ಅಥವಾ ಅಧ್ಯಕ್ಷನ ಹೆಸರಿನಲ್ಲಿ ಮಾಡಬೇಕಾಗಿರುವ ಪ್ರಕಾರವೇ ಕ್ರೈಸ್ತರಾದ ನಾವು ಅದೇ ವಿಧದಲ್ಲಿ ಎಲ್ಲವನ್ನೂ ಯೇಸುವಿನ ಹೆಸರಿನಲ್ಲಿ ಮಾಡಬೇಕು.

**12-17** ವಚನಗಳಲ್ಲಿ ನಾವು "ನೂತನ ಮನುಷ್ಯನ" ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವ ಮನುಷ್ಯನ ಚಿತ್ರಣವನ್ನು ನೋಡಿ–ದ್ದೇವೆ. ನಾವು ಇಲ್ಲಿ ಬಣ್ಣಿಸಲಾಗಿರುವ "ನೂತನ ಮನುಷ್ಯ" ನಂತೆ ಇದ್ದೇವೋ? ಪ್ರತಿಯೊಬ್ಬನು ತನ್ನನ್ನು ಪರೀಕ್ಷಿಸಿಕೊಳ್ಳಲಿ

ಕ್ರೈಸ್ತೀಯ ಕುಟುಂಬದವರಿಗಾಗಿ ನಿಯಮಗಳು (3:18-25).

**18** ಎಫೆಸ 5:22-24 ಮತ್ತು ವ್ಯಾಖ್ಯಾನ ನೋಡಿರಿ.

**19** ಎಫೆಸ 5:25, 28 ಮತ್ತು ವ್ಯಾಖ್ಯಾನ ನೋಡಿರಿ.

**20** ಎಫೆಸ 6:1 ಮತ್ತು ವ್ಯಾಖ್ಯಾನ ನೋಡಿರಿ.

**21** ಎಫೆಸ 6:4 ಮತ್ತು ವ್ಯಾಖ್ಯಾನ ನೋಡಿರಿ.

**22-24** ನಾವು ಕರ್ತನಾದ ಯೇಸುವಿಗೆ ವಿಧೇಯರಾಗುವ ಪ್ರಕಾರವೇ ನಮ್ಮ ಲೋಕದಲ್ಲಿನ ಯಜಮಾನರಿಗೆ – ದೇವರು ನಮ್ಮ ಮೇಲೆ ನೇಮಿಸಿರುವ ಅಧಿಕಾರಗಳಿಗೂ ಧನಿಗಳಿಗೂ – ವಿಧೇಯರಾಗಬೇಕು. ನಾವು ಮಾಡುವದೆಲ್ಲವನ್ನು ಕರ್ತನು

ನೋಡುತ್ತಾನೆ. ನಮ್ಮ "ಲೋಕದಲ್ಲಿನ ಯಜಮಾನರು" ನೋಡುತ್ತಿರುವಾಗ ಮಾತ್ರ ಒಳ್ಳೇದನ್ನು ಮಾಡುವದರಲ್ಲಿಯಾವ ಪ್ರಯೋಜನವಿಲ್ಲ – ಯಾಕೆಂದರೆ ಪರಲೋಕದಲ್ಲಿನ ನಮ್ಮ ಯಜಮಾನನು ಯವಾಗಲೂ ನೋಡುತ್ತಿರುತ್ತಾನೆ!

ಆದದರಿಂದ, ನಾವು ಯಾವಾಗಲೂ ಎಲ್ಲವನ್ನೂ ಕರ್ತನಿಗೋಸ್ಕರವೇ ಎಂದು ನಮ್ಮ ಮನಃಪೂರ್ವಕವಾಗಿ ಮಾಡೋಣ (ರೋಮ 12:11; ಎಫೆಸ 6:5-8; ತೀತನು 2:9-10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಪೌಲನ ಕಾಲದಲ್ಲಿ ದಾಸರಿಗೆ ಯಾವ ಹಕ್ಕುಗಳಾಗಲಿ ಆಸ್ತಿಯಾಗಲಿ ಇರುತ್ತಿರಲಿಲ್ಲ; ಅವರಿಗೆ ಯಾವ ಸ್ವಾಸ್ಥ್ಯವೂ ದೊರೆಯುತ್ತಿರಲಿಲ್ಲ. ಆದರೆ ಪೌಲನು ಇಲ್ಲಿ ಅವರಿಗೆ ಒಂದು ಶ್ರೇಷ್ಠ ವಾಗ್ದಾನವನ್ನು ಕೊಡುತ್ತಾನೆಃ ಅವರು ಲೋಕದಲ್ಲಿನ ತಮ್ಮ ಯಜಮಾನರಿಗೆ ಪ್ರಾಮಾಣಿಕರಾಗಿ ಸೇವೆಮಾಡುವದಾದರೆ ಅವರು ಕರ್ತನಿಂದ ಪರಲೋಕ ಬಾಧ್ಯತೆಯೆಂಬ ಪ್ರತಿಫಲವನ್ನು ಹೊಂದುವರು. ಅವರಿಗೆ ಭೂಲೋಕದಲ್ಲಿ ಯಾವ ಬಾಧ್ಯತೆಯು ಇಲ್ಲದಿದ್ದಾಗ್ಯು ಅವರು ಒಂದು ನಿತ್ಯವಾದ ಬಾಧ್ಯತೆಯನ್ನು ದೇವರಿಂದ ಹೊಂದಿಕೊಳ್ಳುವರು.

ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆಃ ಪೌಲನು ತನ್ನ ಬರಹಗಳಲ್ಲಿ ಗುಲಾಮತನದ ಪದ್ಧತಿಯನ್ನು ಹೆಚ್ಚು ಸ್ಪಷ್ಟವಾಗಿ ವಿರೋಧಿಸಲಿಲ್ಲವೇಕೆ ? ಪೌಲನು ವಯಕ್ತಿಕವಾಗಿ ಗುಲಾಮತನವನ್ನು ವಿರೋಧಿಸುವವನಾಗಿದ್ದನೆಂಬದನ್ನು ನಾವು ಖಚಿತವಾಗಿ ತಿಳಿಯಬಹುದು.

ಹೇಗಿದ್ದರೂ, ಪೌಲನ ಮುಖ್ಯ ಗುರಿಯು ಸಮಾಜವನ್ನು ಬದಲಾಯಿಸುವದಾಗಿರಲಿಲ್ಲ, ಆದರೆ ಜನರ ಹೃದಯಗಳನ್ನು ಬದಲಾಯಿಸುವದೇ ಆಗಿತ್ತು. ಜನರ ಹೃದಯಗಳು ಬದಲಾವಣೆ ಹೊಂದುವದಾದರೆ ಸಮಾಜವು ಸಹ ಬದಲಾವಣೆಯಾಗುವದು. ಆದದರಿಂದ, ಯಜಮಾನರನ್ನು ತಮ್ಮ ದಾಸರನ್ನು ದಯೆಯಿಂದಲೂ ನ್ಯಾಯವಾಗಿಯೂ ನಡೆಸಿಕೊಳ್ಳಬೇಕೆಂಬದು (ಕೊಲೊಸ್ಸೆ 4:1). ಮತ್ತು ದಾಸರು ತಮ್ಮ ಯಜಮಾನರಿಗೆ ಪ್ರಾಮಾಣಿಕರಾಗಿಯೂ ಸರಳ ಹೃದಯದಿಂದಲೂ ಸೇವೆ ಮಾಡಬೇಕೆಂಬದು ಪೌಲನ ಮುಖ್ಯ ಚಿಂತನೆಯಾಗಿತ್ತು (ವಚನ 22). ಯಜಮಾನ ಹಾಗು ದಾಸನ ನಡುವಿನ ಬಾಂಧವ್ಯವು ಪರಸ್ಪರ ಪ್ರೀತಿ ಹಾಗು ಗೌರವದ ಮೇಲೆ ಆಧಾರವಾಗಿದ್ದರೆ ಗುಲಾಮತನದ ಪದ್ಧತಿಯು ಶೀಘ್ರವೇ ಅಂತ್ಯಗೊಳ್ಳುವದೇಬದನ್ನು ಪೌಲನು ಬಲ್ಲವನಾಗಿದ್ದನು (1 ತಿಮೊಥೆ 6:1-2; ತೀತನು 2:9-10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

25 ದೇವರು ಎಲ್ಲಾ ಜನರಿಗೂ ಪಕ್ಷಪಾತವಿಲ್ಲದೆ ನ್ಯಾಯತೀರಿಸುವನು, ಗಂಡನಾಗಿರಲಿ ಅಥವಾ ಹೆಂಡತಿಯಾಗಿರಲಿ, ತಂದೆ–ತಾಯಿಯಾಗಿರಲಿ ಅಥವಾ ಮಗನಾಗಿರಲಿ, ಯಜಮಾನನಾಗಿರಲಿ ಅಥವಾ ದಾಸನಾಗಿರಲಿ, ಯಾವ ಭೇದಭಾವವಿರುವದಿಲ್ಲ. ಕ್ರಿಸ್ತನಲ್ಲಿ ನಾವೆಲ್ಲರೂ ಸಮಾನರಾಗಿದ್ದೇವೆ. ಮತ್ತು ನಾವು ಪಕ್ಷಪಾತವಿಲ್ಲದೆ ತಕ್ಕಪ್ರತಿಫಲವನ್ನು ಹೊಂದುವೆವು. ದೇವರಲ್ಲಿ ಯಾವ ಪಕ್ಷಪಾತವಿರುವದಿಲ್ಲ. ನಾವು ಮಾಡಿದ ಒಳ್ಳೇದಕ್ಕಾಗಿ ಮಾತ್ರವಲ್ಲ (ಎಫೆಸ 6:8), ಆದರೆ ನಾವು ಅನ್ಯಾಯಕ್ಕಾಗಿ ಸಹ ಪ್ರತಿಫಲವನ್ನು ಹೊಂದುವೆವು.

---

## ಅಧ್ಯಾಯ - 4

### ಹೆಚ್ಚಿನ ಸಲಹೆಗಳು (4:1-6)

1 ಪ್ರಪಂಚದ ದೃಷ್ಟಿಯಲ್ಲಿ, ಕೆಲವರು ಯಜಮಾನರು ಹಾಗು ಕೆಲವರು ದಾಸರು ಅಥವಾ ಸೇವಕರು. ಆದರೆ ದೇವರ ದೃಷ್ಟಿಯಲ್ಲಿ, ಎಲ್ಲಾ ಮಾನವರೂ ಸೇವಕರಾಗಿದ್ದಾರೆ. ಆದದರಿಂದ, ಲೋಕದಲ್ಲಿನ ಯಜಮಾನರು ಎಚ್ಚರಿಕೆಯಾಗಿರಲಿ! ಅವರು ಭೂಲೋಕದಲ್ಲಿ ತಮ್ಮ ದಾಸರೆಡೆಗೆ ನಡೆದುಕೊಳ್ಳುವ ಪ್ರಕಾರವೇ ಪರಲೋಕದಲ್ಲಿ ದೇವರು ಅವರೆಡೆಗೆ ನಡೆದುಕೊಳ್ಳುವನು (ಎಫೆಸ 6:9 ಮತ್ತು ವ್ಯಾಖ್ಯಾನ ನೋಡಿರಿ).

2 ಇಲ್ಲಿ ಪೌಲನು ಕೊಲೊಸ್ಸೆಯವರಿಗೆ ಹೇಳುವದೇನೆಂದರೆಃ ಪ್ರಾರ್ಥನೆಯನ್ನು ತಪ್ಪದೆ ಮಾಡುವವರಾಗಿರಿ. ಕ್ರೈಸ್ತರು ತಕ್ಕ ಸಂದರ್ಭ ಇರುವಾಗಲೆಲ್ಲಾ ಪ್ರತಿಯೊಂದು ಅವಕಾಶವನ್ನು ಉಪಯೋಗಿಸಿಕೊಂಡು ಪ್ರಾರ್ಥಿಸಬೇಕು. ಇದು ಪ್ರತಿಯೊಬ್ಬ ಕ್ರೈಸ್ತನ ಜವಾಬ್ದಾರಿಯಾಗಿದೆ. ನಾವು ಪ್ರಾರ್ಥಿಸದಿದ್ದರೆ ಪವಿತ್ರಾತ್ಮನಿಂದ ಸ್ವಲ್ಪ ಸಹಾಯ ಅಥವಾ ಆಶೀರ್ವಾದವನ್ನು ಪಡೆಯುತ್ತೇವೆ. ಪ್ರಾರ್ಥನೆಯೇ ಇಲ್ಲವಾದರೆ ನಿಶ್ಚಯವಾಗಿಯೂ ಪ್ರಾರ್ಥನೆಗೆ ಯಾವದೇ ಉತ್ತರಗಳು ಸಹ ಇರಲಾರವು. ನಾವು ಪ್ರಾರ್ಥಿಸುತ್ತಾ ಎಚ್ಚರವಾಗಿರಬೇಕು. ಯಾವದಕ್ಕಾಗಿ ಎಚ್ಚರವಾಗಿರಬೇಕು? ಮೊದಲನೆಯದಾಗಿ, ನಾವು ನಮ್ಮ ಪ್ರಾರ್ಥನೆಗಳ ಅಗತ್ಯವಿರುವವರಿಗಾಗಿ – ವಿಶ್ವಾಸಿಗಳಿಗೂ ಅವಿಶ್ವಾಸಿಗಳಿಗೂ – ಎಚ್ಚರವಾಗಿದ್ದು ಗಮನಿಸಬೇಕು; ನಾವು ಇತರರ ಅಗತ್ಯಗಳು ಹಾಗು ಹಿತಕ್ಕಾಗಿ ಎಚ್ಚರವಾಗಿರಬೇಕು. ಎರಡನೆಯದಾಗಿ, ನಾವು ಸೈತಾನನು ನಮ್ಮನ್ನು ಬಲೆಗೆ ಹಾಕದಂತೆ ಎಚ್ಚರವಾಗಿಬೇಕು (ಮಾರ್ಕ 14:38; ಎಫೆಸ 6:18; 1ಪೇತ್ರ 5:8 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

3 ದೇವರು ವಾಕ್ಯವಾದ ಸುವಾರ್ತೆಯನ್ನು ಸಾರುವದಕ್ಕೆ ಆತನು ಅನುಕೂಲವಾದ ಸಂದರ್ಭವನ್ನು ಒದಗಿಸುವಂತೆಯೂ, ಅದರ ಮೂಲಕ ಕ್ರಿಸ್ತನ ಸುವಾರ್ತೆಯು ಪ್ರಪಂಚದ ಮೂಲೆ ಮೂಲೆಗೂ ತಲುಪಿ ಪ್ರತಿಯೊಬ್ಬ ಪುರುಷ ಹಾಗು ಸ್ತ್ರೀಗೆ ಸುವಾರ್ತೆಯನ್ನು ಕೇಳುವ ಅವಕಾಶ ದೊರೆಯುವಂತಾಗಲು ಕ್ರೈಸ್ತರೆಲ್ಲರೂ ನಿರಂತರವಾಗಿ ಪ್ರಾರ್ಥಿಸಬೇಕು.

**4** ಪೌಲನು ಒಬ್ಬ ಶ್ರೇಷ್ಟ ಹಾಗು ಪರಿಣಾಮಕಾರಿ ಬೋಧಕನೂ ಉಪದೇಶಕನೂ ಆಗಿದ್ದನು. ಆದರೆ ಪೌಲನು ತನ್ನ ಪರಿಣಾಮತನಕ್ಕೆ ಕಾರಣ ಜೊತೆ ವಿಶ್ವಾಸಿಗಳ ಪ್ರಾರ್ಥನೆಗಳೇ ಎಂಬದನ್ನು ಚನ್ನಾಗಿ ಬಲ್ಲವನಾಗಿದ್ದನು. ಆದದರಿಂದ, ಕೊಲೊಸ್ಸೆಯವರ ಪ್ರಾರ್ಥನೆಗಳು ಕಡಿಮೆಯಾಗುವದಾದರೆ ತನ್ನ ಪರಿಣಾಮತೆಯು ಕಡಿಮೆಯಾಗುವದೆಂದು ತಿಳಿದಿದ್ದ ಪೌಲನು ಅವರಿಗೆ ಪ್ರಾರ್ಥಿಸಬೇಕೆಂದು ಕೇಳಿಕೊಳ್ಳುವದನ್ನು ಮುಂದುವರೆಸುತ್ತಾನೆ. ದೇವರು ತನ್ನ ಕಾರ್ಯವನ್ನು ನಮ್ಮ ವಶಕ್ಕೆ ನೀಡಿರುತ್ತಾನೆ. ನಿಜ, ದೇವರು ಸ್ವತಃ ಸಮಸ್ತವನ್ನೂ ಮಾಡಬಲ್ಲನು, ಆದರೆ ಆತನು ತನ್ನ ಕಾರ್ಯವನ್ನು ತಮ್ಮ ಮಕ್ಕಳಾದ ನಮ್ಮ ಮೂಲಕ ಮಾಡುವದಕ್ಕೆ ಇಷ್ಟಪಟ್ಟಿರುತ್ತಾನೆ. ನಾವು ಕಾರ್ಯ ಹಾಗು ಪ್ರಾರ್ಥನೆ ಮಾಡುವ ನಮ್ಮ ಜವಾಬ್ದಾರಿಗಳನ್ನು ಜಾಗಿಗೆ ತರುವಲ್ಲಿ ವಿಫಲರಾಗುವದಾದರೆ ದೇವರು ಕೆಲಸವು ನಷ್ಟವನ್ನು ಅನುಭವಿಸುತ್ತದೆ. ಆದದರಿಂದ, ನಾವು ಒಬ್ಬರಿಗೊಬ್ಬರಿಗಾಗಿ ತಪ್ಪದೆ ಪ್ರಾರ್ಥನೆ ಮಾಡುತ್ತಲಿರೋಣ ಹಾಗು ಪೌಲನ ಹಾಗೆ ನಾವು ಸಹ ದೇವರ ಕೆಲಸ ಮಾಡುವಲ್ಲಿ ಪರಿಣಾಮಕಾರಿಯಾಗಿರುವಂತಾಗಲು ಇತರರನ್ನು ಪ್ರಾರ್ಥಿಸುವಂತೆ ಕೇಳಿಕೊಳ್ಳುತ್ತಲಿರೋಣ (ಎಫೆಸ 6:19-20).

**5** ಪೌಲನು ಇಲ್ಲಿ ನಾವು ಸಮಯವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿಕೊಳ್ಳಬೇಕು–ಅಂದರೆ, ಸಾಕ್ಷಿನೀಡುವದಕ್ಕಾಗಿ ದೊರೆಯುವ ಎಲ್ಲಾ ಸದಾವಕಾಶಗಳನ್ನು ಉಪಯೋಗಿಸಿಕೊಳ್ಳವೇಕು – ಎಂದು ಹೇಳುತ್ತಾನೆ. ನಾವು ದೊರೆಯುವಂತ ಅವಕಾಶಗಳನ್ನು ಕಳಕೊಳ್ಳದಿರೋಣ. ನಾವು ಹೊರಗಿನವರೊಂದಿಗೆ –ಅಂದರೆ, ಅವಿಶ್ವಾಸಿಗಳೊಂದಿಗೆ – ಸುವಾರ್ತೆಯನ್ನು ಹಂಚಿಕೊಳ್ಳಲು ಪ್ರತಿಯೊಂದು ಅವಕಾಶವನ್ನು ತೆಗೆದುಕೊಳ್ಳಬೇಕು (ಎಫೆಸ 5:15-16; 2 ತಿಮೊಥೆ 4:2).

**6** ಒಬ್ಬನ ಸಂಭಾಷಣೆಗಳು ಪ್ರೀತಿಪೂರ್ವಕವಾಗಿಯೂ ಹಾಗು ಇಂಪಾಗಿ ಇರಬಲ್ಲದು. ಅಥವಾ ಕಠೋರವಾಗಿಯೂ ಕಹಿಯಾಗಿಯೂ ಇರಬಲ್ಲದು. ನಮ್ಮ ಸಂಭಾಷಣೆಯು ಇಂಪಾಗಿ ಇರಲಿ.

ನಮ್ಮ ಸಂಭಾಷಣೆಯು ಉಪ್ಪಾಗಿಯೂ ಇರಬೇಕಾಗಿರುತ್ತದೆ. "ಉಪ್ಪಾಗಿ" (ರಸವತ್ತಾಗಿ) ಇರುವ ಸಂಭಾಷಣೆಯು ಜ್ಞಾನವುಳ್ಳದ್ದೂ, ಪ್ರೋತ್ಸಾಹಕರವೂ ಹಾಗು ಧೈರ್ಯಗೊಳಿಸುವಂತಹದ್ದೂ ಆಗಿರುತ್ತದೆ. ವಿಶೇಷವಾಗಿ, ನಮ್ಮ ಸಂಭಾಷಣೆಯು ಜ್ಞಾನದಿಂದ "ಹುರಿಯಲ್ಪಟ್ಟು" ಇರಬೇಕಾದ ಅಗತ್ಯವಿರುತ್ತದೆ. ನಾವು ಜ್ಞಾನವುಳ್ಳವರಾಗಿ ಸಾಕ್ಷಿ ನೀಡ– ಬೇಕಾಗಿರುತ್ತದೆ. ಸುವಾರ್ತೆಯನ್ನು ಹಂಚಿಕೊಳ್ಳುವದಕ್ಕೆ ವಿವಿಧ ಮಾರ್ಗಗಳಿರುತ್ತವೆ. ಒಬ್ಬನಿಗೆ ಒಂದು ಮಾರ್ಗವು ಕಾರ್ಯಮಾಡಿದರೆ ಇನ್ನೊಬ್ಬನಿಗೆ ವ್ಯಕ್ತಿಯೊಂದಿಗೆ ಇನ್ನೊಂದು ಮಾರ್ಗವು ಕಾರ್ಯಮಾಡುತ್ತದೆ. ಆದದರಿಂದ, ನಾವು ಮಾತಾಡುತ್ತಿರುವ ವ್ಯಕ್ತಿಯನ್ನು ಅರ್ಥಮಾಡಿಕೊಳ್ಳಬೇಕು, ಆಗ ನಾವು ಅತಿ ಪರಿಣಾಮಕಾರಿಯಾದ ಮಾರ್ಗದಲ್ಲಿ ಮಾತಾಡಬಹುದು. ಜನರು ನಮ್ಮ ಸಮಂಜಸವಲ್ಲದ ಸಂಭಾಷಣೆಯ ಕಾರಣದಿಂದ ಕ್ರಿಸ್ತನಿಗೆ ವಿಮುಖರಾಗದಿರಲಿ (1 ಪೇತ್ರ 3:15 ನೋಡಿರಿ).

## ಅಂತಿಮ ವಂದನೆಗಳು (4:7-18)

**7-8** ಪೌಲನು ರೋಮಾಪುರದ ಸೆರೆಯಲ್ಲಿರುವಾಗ ಈ ಪತ್ರಿಕೆಯನ್ನು ಬರೆದನು. ತರುವಾಯ ಪೌಲನ ಜೊತೆ ಕೆಲಸದವನಾದ ತುಖಿಕನು ಅದನ್ನು ಕೊಲೊಸ್ಸೆಯವರಿಗೆ ತಲುಪಿಸಿದನು (ಎಫೆಸ 6:21-22).

**9** ಒನೇಸಿಮನು ಕೊಲೊಸ್ಸೆ ಊರಿನ ಒಬ್ಬ ದಾಸನಾಗಿದ್ದು ತನ್ನ ಯಜಮಾನನಾದ ಫಿಲೆಮೋನನ ಬಳಿಯಿಂದ ರೋಮಾಪುರಕ್ಕೆ ಓಡಿಹೋಗಿದ್ದನು. ರೋಮಾಪುರದಲ್ಲಿ ಆತನು ಪೌಲನನ್ನು ಸಂಧಿಸಿ ಒಬ್ಬ ವಿಶ್ವಾಸಿಯಾಗಿದ್ದನು. ಈಗ ಪೌಲನು ಒನೇಸಿಮನನ್ನು ತಿರಿಗಿ ಆತನ ಯಜಮಾನನಾದ ಫಿಲೆಮೋನನ ಬಳಿಗೆ ಕಳುಹಿಸುತ್ತಿದ್ದಾನೆ (ಫಿಲೆಮೋನ 10-16 ನೋಡಿರಿ).

**10-11** ಅರಿಸ್ತಾರ್ಕನು ಎಫೆಸದಲ್ಲಿ ಪೌಲನ ಜೊತೆಯಲ್ಲಿದ್ದನು (ಅ.ಕೃ. 19:29). ಆದರ ನಂತರ, ಆತನು ಪೌಲನೊಂದಿಗೆ ರೋಮಾಪುರಕ್ಕೆ ಹೋದನು (ಅ,ಕೃ. 27:2).

ಮಾರ್ಕನು ಮಾರ್ಕನ ಸುವಾರ್ತೆಯ ಬರಹಗಾರನಾಗಿದ್ದಾನೆ. ಕೆಲವು ವರ್ಷಗಳ ಹಿಂದೆ ಪೌಲನು ಮಾರ್ಕನ ವಿಷಯದಲ್ಲಿ ಬಹಳ ಅಸಮಾಧಾನಗೊಂಡಿದ್ದನು. ಯಾಕೆಂದರೆ, ಮಾರ್ಕನು ಸುವಾರ್ತಾ ಪ್ರಯಾಣದ ಮಧ್ಯದಲ್ಲಿಯೇ ಪೌಲನನ್ನು ತೊರೆದು ಹೋಗಿದ್ದನು. ಆದರ ತರುವಾಯ ಪೌಲನು ಇನ್ನು ಮೇಲೆ ಮಾರ್ಕನನ್ನು ತನ್ನ ಪ್ರಯಾಣಗಳಲ್ಲಿ ತನ್ನೊಂದಿಗೆ ಕರೆದುಕೊಂಡು ಹೋಗಲು ನಿರಾಕರಿಸಿದ್ದನು (ಅ.ಕೃ. 15:36-40). ಈಗ, ಆತನ ಪತ್ರಿಕೆಯ ಮೂಲಕ ನಾವು ತಿಳಿಯಬಹುದೇನೆಂದರೆ ಪೌಲನು ಮಾರ್ಕನನ್ನು ಕ್ಷಮಿಸಿ ಆತನ ಹಿಂದಿನ ತಪ್ಪಿನ ವಿಷಯದಲ್ಲಿ ಮರೆತಿರುತ್ತಾನೆ.

ಇದರ ಮೂಲಕ ನಾವು ಒಂದು ಪ್ರಾಮುಖ್ಯ ಪಾಠವನ್ನು ಕಲಿಯಬಹುದು. ಯಾರಾದರೂ ಒಂದು ದೊಡ್ಡ ತಪ್ಪನ್ನು ಮಾಡಿದಾಗ್ಯು ನಾವು ಯಾವಾಗಲೂ ಆತನ ವಿರುದ್ಧವಾಗಿ ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳಬಾರದು. ನಾವು ಆ ವ್ಯಕ್ತಿಯನ್ನು ಆತನ ತಪ್ಪಿಗಾಗಿ ಕ್ಷಮಿಸುವದು ಮಾತ್ರವಲ್ಲ ನಾವು ಅದನ್ನು ಮರೆತು ಬಿಡಬೇಕು. ಮಾರ್ಕನು ಆ ಮುಂಚಿನ ತಪ್ಪನ್ನು ಮಾಡಿದ ಬಳಿಕ ಅವನಿಗೆ ಏನು ಸಂಭವಿಸಿತೆಂಬದನ್ನು ಆಲೋಚಿಸಿರಿ. ಆತನು ಕ್ಷಮಿಸಲ್ಪಟ್ಟವನಾಗಿ ಕಾಲಕ್ರಮೇಣ ಪೌಲನ ನಂಬಿಗಸ್ಥ ಜೊತೆ ಕೆಲಸದವನಾದನು (2 ತಿಮೊಥೆ 4:11). ಮತ್ತು ಮಾರ್ಕನು ಯೇಸುವಿನ ಜೀವನ ಚರಿತ್ರೆಯನ್ನು ಬರೆಯುವ ಪ್ರಥಮ ವ್ಯಕ್ತಿಯನ್ನಾಗಿ ದೇವರು ಆರಿಸಿಕೊಂಡನು[14]. ನಾವು ಯಾರನ್ನಾಗಲಿ ಹಿಂದೆ ಮಾಡಿದ ತಪ್ಪಿಗಾಗಿ ಎಂದಿಗೂ

ನಿರಂತರವಾಗಿ ದೂಷಿಸುತ್ತಾ ಇರಬಾರದು. ನಾವು ಹಾಗೆ ಮಾಡುವದಾದರೆ ಸ್ವತಃ ಪಾಪವನ್ನು ಮಾಡುವವರಾಗಿದ್ದೇವೆ ! ನಾವು ಕ್ಷಮಿಸಲು ನಿರಾಕರಿಸುವಾಗ ದೇವರನ್ನು ವಿರೋಧಿಸುವವರೂ ನಮ್ಮ ಮೇಲೆ ನ್ಯಾಯತೀರ್ಪನ್ನು ಆಹ್ವಾನಿಸಿಕೊಳ್ಳುವವರೂ ಆಗಿರುತ್ತೇವೆ (ಮತ್ತಾಯ 6:14-15 ನೋಡಿರಿ). ಯೂಸ್ತನೆನಿಸಿಕೊಳ್ಳುವ ಯೇಸು (ವಚನ 11), ಈತನ ವಿಷಯದಲ್ಲಿ ಇಲ್ಲಿ ಬರೆದಿರುವದನ್ನು ಹೊರತು ಪಡಿಸಿ ಇನ್ನಾವ ಸಂಗತಿಯು ತಿಳಿದು ಬಂದಿರುವದಿಲ್ಲ.

**12-13** ಎಪಫ್ರನು ಕೊಲೊಸ್ಸೆಯಲ್ಲಿನ ಸಭೆಯ ಸ್ಥಾಪಕರಲ್ಲಿ ಒಬ್ಬನಾಗಿದ್ದನು (ಕೊಲೊಸ್ಸೆ 1:7). ನಾವು ಸಹ ಎಪಫ್ರನ ಹಾಗೆ ಒಬ್ಬರಿಗೊಬ್ಬರಿಗಾಗಿ ಪ್ರಾರ್ಥನೆಯಲ್ಲಿ ಹೋರಾಡೋಣ ((ವಚನ 12). ಸೈತಾನನ್ನು ಜಯಿಸಬೇಕಾದರೆ ನಾವು ಪ್ರಾರ್ಥನೆಯಲ್ಲಿ "ಹೋರಾಡಬೇಕು"; ನಾವು ಸೈತಾನನೊಂದಿಗೆ ಆತ್ಮೀಕ ಯುದ್ಧ ಮಾಡುವವರಾಗಿದ್ದೇವೆ, ಮತ್ತು ಪ್ರಾರ್ಥನೆಯು ಅತಿ ಪರಿಣಾಮಕಾರಿ ಆಯುಧಗಳಲ್ಲಿ ಒಂದಾಗಿದೆ (ಎಫೆಸ 6:18 ಮತ್ತು ವ್ಯಾಖ್ಯಾನ ನೋಡಿರಿ). ಎಪಫ್ರನು ಕೊಲೊಸ್ಸೆಯವರಿಗಾಗಿ ಮಾಡಿದ ಪ್ರಾರ್ಥನೆಗಳು ನಮಗಾಗಿಯೂ ಇರಲಿಃ ನಾವು ಪ್ರವೀಣರಾಗಿಯೂ ಎಲ್ಲಾವಿಷಯಗಳಲ್ಲಿ ದೇವರ ಚಿತ್ತವನ್ನು ಕುರಿತು ಪೂರ್ಣನಿಶ್ಚಯವುಳ್ಳವರಾಗಿಯೂ ನಿಂತಿರಬೇಕೆಂಬದೇ.

**14** ಲೂಕನು ಲೂಕನ ಸುವಾರ್ತೆ ಹಾಗು ಅಪೊಸ್ತಲರ ಕೃತ್ಯಗಳು ಪುಸ್ತಕದ ಬರಹಗಾರನಾಗಿದ್ದಾನೆ. ಆತನು ಪೌಲನ ಆಪ್ತ ಸಹಪಾಠಿಯಾಗಿದ್ದು ಪೌಲನೊಂದಿಗೆ ರೋಮಾಪುರಕ್ಕೆ ಪ್ರಯಾಣಿಸಿದನು.

ದೇಮನು ಆನಂತರದಲ್ಲಿ ಪೌಲನನ್ನು ತೊರೆದು ಹೋದನು, ಯಾಕೆಂದರೆ ಆತನು ಇಹಲೋಕವನ್ನು ಪ್ರೀತಿಸಿದನು (2 ತಿಮೊಥೆ 4:10). ದೇಮನು ಪಶ್ಚಾತಾಪಪಟ್ಟು ಪುನಃ ಕರ್ತನ ಸೇವೆಯನ್ನು ಮಾಡಲು ಪ್ರಾರಂಭಿಸಿದನೆಂದು ಇನ್ನಾವ ಕಡೆಯಲ್ಲಿಯೂ ಬರೆಯಲ್ಪಟ್ಟಿರುವದಿಲ್ಲ. ಕೆಲವರು ಮಾರ್ಕನ ಹಾಗೆ ಪುನಃ ಕರ್ತನ ಸೇವೆಗೆ ಹಿಂದಿರುಗುತ್ತಾರೆ; ಇತರ ಕೆಲವರು ದೇಮನ ಹಾಗೆ ಬಿದ್ದುಹೋಗಿ ಪುನಃ ಹಿಂದಿರುಗುವದಿಲ್ಲ.

ನಮ್ಮಲ್ಲಿ ಯಾರೊಬ್ಬರೂ ದೇಮನಂತಾಗದಂತೆ ಎಚ್ಚರವಾಗಿರೋಣ. ಆತನು ನಮಗೊಂದು ಎಚ್ಚರಿಕೆಯಾಗಿದ್ದಾನೆ.

**15** ಲವೊದಿಕೀಯವು ಕೊಲೊಸ್ಸೆಯದ ಹತ್ತಿರವಿದ್ದ ಒಂದು ಊರಾಗಿತ್ತು. ಅಲ್ಲಿ ಸಹ ಒಂದು ಸಭೆಯಿತ್ತು. ಯೇಸು ಕ್ರಿಸ್ತನು ಪ್ರಕಟಣೆ ಪುಸ್ತಕದಲ್ಲಿ ಅಪೊಸ್ತಲನಾದ ಯೋಹಾನನ ಮೂಲಕ ಎಚ್ಚರಿಕೆಯ ಪತ್ರಿಕೆಗಳನ್ನು ಕಳುಹಿಸಿದ ಏಳು ಸಭೆಗಳಲ್ಲಿ ಲವೊದಿಕೀಯವು ಸಹ ಒಂದಾಗಿತ್ತು (ಪ್ರಕಟಣೆ 3:14-22).

ಹೊಸ ಒಡಂಬಡಿಕೆಯ ಕಾಲದಲ್ಲಿ ಬಹುಪಾಲುಕ್ರೈಸ್ತ ಸಭೆಗಳು "ಗೃಹ ಸಭೆಗಳು" ಅಥವಾ "ಗೃಹ ಅನ್ಯೋನ್ಯತೆಗಳು" ಆಗಿದ್ದವು (ಫಿಲೆಮೋನ 1-2). ಬಹುಶಃ ಕ್ರೈಸ್ತರ ವಿರುದ್ಧ ಹೆಚ್ಚು ಹಿಂಸೆ ಇರುವ ಸ್ಥಳಗಳಲ್ಲಿ ವಿಶ್ವಾಸಿಗಳು ಇತರರ ಗಮನ ಸೆಳೆಯಬಾರದೆಂದು ಮನೆಗಳಲ್ಲಿ ಕೂಡಿಬರುತ್ತಿದ್ದರು. ಆದರೆ ಪ್ರಾಯಶಃ ಬಹುಪಾಲು ಸಂದರ್ಭಗಳಲ್ಲಿ ಅವರು ಬೇರೆಯಾದ ಸಭಾಕಟ್ಟಡವನ್ನು ನಿರ್ಮಿಸಲಿಕ್ಕೆ ಸಾಕಷ್ಟು ಹಣವಿಲ್ಲದ ಕಾರಣ ಮನೆಗಳಲ್ಲಿ ಕೂಡಿಬರುತ್ತಿದ್ದಿರಬೇಕು.

**16** ಇಲ್ಲಿ ಪ್ರಸ್ತಾಪಿಸಲಾಗಿರುವ ಪೌಲನು ಲವೊದಿಕೀಯವರಿಗೆ ಬರೆದ ಪತ್ರಿಕೆಯು ಕಳೆದು ಹೋಗಿರುತ್ತದೆ.

**17** ಪೌಲನು ಇಲ್ಲಿ ಕೊಲೊಸ್ಸೆ ಸಭೆಯ ಒಬ್ಬ ಸದಸ್ಯನಾದ ಅರ್ಖಿಪ್ಪನಿಗೆ ವಿಶೇಷ, ಬುದ್ದಿವಾದವನ್ನು ಹೇಳುತ್ತಾನೆ. ಪೌಲನು ಅರ್ಖಿಪ್ಪನಿಗೆ ಹೇಳಿದ ಮಾತುಗಳು ನಮಗೂ ಇರಲಿಃ ನೀನು ಕರ್ತನಿಂದ ಹೊಂದಿರುವ ಸೇವೆಯನ್ನು ನೆರವೇರಿಸುವದಕ್ಕೆ ಎಚ್ಚರವಾಗಿರಿ. ಮತ್ತು ನಾವು ಸಹ ನಮ್ಮ ಜೀವಿತಗಳ ಅಂತ್ಯದಲ್ಲಿ ಪೌಲನ ಮಾತುಗಳನ್ನು ಹೇಳುವದಕ್ಕೆ ಶಕ್ತರಾಗಿರೋಣಃ ನಾನು ಶ್ರೇಷ್ಟವಾದ ಹೋರಾಟವನ್ನು ಮಾಡಿದ್ದೇನೆ. ನನ್ನ ಓಟವನ್ನು ಕಡೆಗಾಣಿಸಿದ್ದೇನೆ, ಕ್ರಿಸ್ತನಂಬಿಕೆಯನ್ನು ಕಾಪಾಡಿಕೊಂಡಿದ್ದೇನೆ (2 ತಿಮೊಥೆ 4:7).

**18** ಪೌಲನು 17ನೇ ವಚನವರೆಗೂ ಈ ಪತ್ರಿಕೆಯನ್ನು ಗುಮಾಸ್ತನಿಗೆ ಹೇಳಿಬರೆಯಿಸಿದ್ದಾನೆ. ಆದರೆ ಈಗ 18ನೇ ವಚನದಲ್ಲಿ ಆತನು ತನ್ನ ಸ್ವಂತ ಕೈಯಿಂದ ಬರೆಯುತ್ತಾನೆ, ಹೀಗೆ ಈ ಪತ್ರಿಕೆಯು ನಿಜವಾಗಿಯೂ ಪೌಲನಿಂದ ಕಳುಹಿಸಲ್ಪಟ್ಟಿದೆಯೆಂಬದನ್ನು ಕೊಲೊಸ್ಸೆಯವರು ತಿಳಿದುಕೊಳ್ಳುವರು.

ಪೌಲನು ಬರೆಯುವದೇನೆಂದರೆಃ ನಾನು ಸೆರೆಯಲ್ಲಿದ್ದೇನೆಂಬದನ್ನು ಜ್ಞಾಪಕ ಮಾಡಿಕೊಳ್ಳಿರಿ. ಪೌಲನು ಹೆಚ್ಚು ಕಡಿಮೆ ತನ್ನ ಎಲ್ಲಾ ಪತ್ರಿಕೆಗಳಲ್ಲಿಯೂ ತನಗೋಸ್ಕರ ಪ್ರಾರ್ಥಿಸಬೇಕೆಂದು ತನ್ನ ವಾಚಕರನ್ನು ಕೇಳಿಕೊಳ್ಳುತ್ತಾನೆ. ವಿಶೇಷವಾಗಿ ನಾವು ಸೆರೆಯಲ್ಲಿರುವವರಿಗಾಗಿ ಪ್ರಾರ್ಥಿಸಬೇಕು ಮತ್ತು ನಮಗೆ ಸಾಧ್ಯವಾಗುವಾಗಲೆಲ್ಲಾ ಅವರ ಅಗತ್ಯತೆಗಳಿಗೆ ಸೇವೆಸಲ್ಲಿಸಬೇಕು (ಮತ್ತಾಯ 25:36; ಇಬ್ರಿಯ 13:3 ನೋಡಿರಿ).

---

## ಟಿಪ್ಪಣಿ

[1] ಹೆಚ್ಚಿನ ಚರ್ಚೆಗಾಗಿ, ಸಾಮಾನ್ಯ ಲೇಖನಃ ನಮಗೆ ಬೈಬಲ್ ಹೇಗೆ ದೊರಕಿತು ನೋಡಿರಿ.

[2] ಸೈತಾನ ಹಾಗು ಆತನ ದುರಾತ್ಮಗಳು ದೇವರಿಗೆ ಭಯಪಡುತ್ತವೆ. ಯಾಕೆಂದರೆ ತಾವು ಅಂತ್ಯದಲ್ಲಿ ಶಿಕ್ಷಿಸಲ್ಪಟ್ಟು ನಾಶವಾಗುವರೆಂದು ಬಲ್ಲವು. ಹೇಗಿದ್ದರೂ, ವಿಶ್ವಾಸಿಗಳು ರಕ್ಷಣೆ ಹಾಗು ನಿತ್ಯಜೀವದ ನಿಶ್ಚಯತೆಯನ್ನು ಹೊಂದಿದ್ದಾರೆ ಹೀಗೆ ಅವರಿಗೆ ನಿತ್ಯದಂಡನೆಯ ಬಗ್ಗೆ ಯಾವ ಭಯವೂ ಇಲ್ಲ. ದೇವರ ಭಯವು ಜ್ಞಾನಕ್ಕೆ ಪ್ರಥಮ ಹೆಜ್ಜೆ ಮಾತ್ರವೇ ಆಗಿದೆ; ಒಮ್ಮೆ ನಾವು ನಂಬಿದ ಬಳಿಕ ನಮ್ಮ

ದೇವರ ಭಯವು ಆತನ ಮೇಲಿನ ಪ್ರೀತಿಯಿಂದ ಸ್ಥಳಾಂತರಿಸಲ್ಪಡುತ್ತದೆ (ಕೀರ್ತನೆಗಳು 2:11; 1 ಯೋಹಾನ 4:18 ಮತ್ತು ವ್ಯಾಖ್ಯಾನ ನೋಡಿರಿ).

3 ಯಾವನಾದರೂ "ನಂಬಿಕೆಯನ್ನು ತೊರೆಯುವದಾದರೆ" ಆತನು ನಿಜವಾಗಿಯೂ ನಂಬಿರಲೇಇಲ್ಲ ಎಂದು ಕೆಲವು ಜನರು ಉತ್ತರಿಸುತ್ತಾರೆ. ಇದು ನಿಜವಾಗಿರಬಹುದು; ದೇವರು ಮಾತ್ರವೇ ಮನುಷ್ಯರ ಹೃದಯಗಳಿಗೆ ತೀರ್ಪುಮಾಡಬಲ್ಲನು

4 ಕ್ರಿಸ್ತನ ಬಾಧೆ ಹಾಗು ವಿಶ್ವಾಸಿಯ ಬಾಧೆಗಳ ನಡುವೆ ಒಂದು ವ್ಯತ್ಯಾಸವಿರುತ್ತದೆ. ಕ್ರಿಸ್ತನು ನಮ್ಮ ಬಿಡುಗಡೆಗಾಗಿ ನಮ್ಮ ರಕ್ಷಣೆಗಾಗಿ ಬಾಧೆಪಟ್ಟನು. ಇನ್ನೊಂದೆಡೆಯಲ್ಲಿ ನಮ್ಮ ಬಾಧೆಯು ಸುವಾರ್ತೆಯ ಪ್ರಸರಣೆಗಾಗಿ ಇರುತ್ತದೆ. ನಮ್ಮ ಬಾಧೆಯು ಸಂಪೂರ್ಣವಲ್ಲ, ಯಾಕೆಂದರೆ ಪ್ರಪಂಚದಲ್ಲೆಲ್ಲಾ ಸುವಾರ್ತೆಯನ್ನು ಹರಡಿಸುವದಕ್ಕೆ ಮಾಡಬೇಕಾದ ಕೆಲಸವು ಇನ್ನೂ ಸಾಕಷ್ಟಿರುತ್ತದೆ. ಸುವಾರ್ತೆಯು ವಿಶ್ವಾಸಿಗಳ ಬಾಧೆಯ ಮೂಲಕ ಅತಿ ಕ್ಷೀಪ್ರವಾಗಿ ಹರಡುತ್ತದೆ.

5 ಲವೊದಿಕೀಯವು ಕೊಲೊಸ್ಸೆಯಿಂದ ಹನ್ನೊಂದು ಮೈಲುಗಳಷ್ಟು ದೂರದಲ್ಲಿತ್ತು. ಪೌಲನು ಈ ಪತ್ರವು ಅಲ್ಲಿರುವ ಸಭೆಯಲ್ಲಿಯೂ ಓದಲ್ಪಡಬೇಕೆಂದು ಇಚ್ಛಿಸಿದ್ದನು (ಕೊಲೊಸ್ಸೆ 4:15-16 ಮತ್ತು ವ್ಯಾಖ್ಯಾನ ನೋಡಿರಿ).

6 ಪಾಪಾಧೀನ ಸ್ವಭಾವ ಎಂಬ ಪದಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಶರೀರಭಾವ" ಎಂದು ಹೇಳುತ್ತವೆ, ಅದು ಗ್ರೀಕನ ಅಕ್ಷರಶಃ ಭಾಷಾಂತರವಾಗಿದೆ. ಹೆಚ್ಚಿನ ಚರ್ಚೆಗಾಗಿ, ಗಲಾತ್ಯ 5:13, 16-17, 24; ಪದಪಟ್ಟಿಃ ಶರೀರಭಾವ ನೋಡಿರಿ.

7 ಒಂದು ಅರ್ಥದಲ್ಲಿ, ನಾವು ಈ ಭೂಮಿಯಲ್ಲಿ ಇರುವ ತನಕ ನಮ್ಮ ಪಾಪಾಧೀನ ಸ್ವಭಾವವನ್ನು ಸಂಪೂರ್ಣವಾಗಿ "ಕತ್ತರಿಸಿಹಾಕಲು" ಅಥವಾ "ತೆಗೆದು ಬಿಡಲು" ಸಾಧ್ಯವಿಲ್ಲ. ನಮ್ಮ ಜೀವಿತಗಳಲ್ಲಿ ಆಳುವ ಪವಿತ್ರಾತ್ಮನ ಬಲದ ಹೊರತಾಗಿ ನಮ್ಮ ಪಾಪಾಧೀನ ಸ್ವಭಾವವು ಯಾವಾಗಲೂ ತನ್ನ ಇರುವಿಕೆಯನ್ನು ಪು ನಃ ಖಚಿತಪಡಿಸಿಕೊಳ್ಳಲು ಪ್ರಯತ್ನಿಸುತ್ತದೆ. ಆದರೆ ಇನ್ನೊಂದು ಅರ್ಥದಲ್ಲಿ, ದೇವರಾತ್ಮನ ಮೂಲಕ ನಾವು ಪಾಪಾಧೀನ ಸ್ವಭಾವವನ್ನು ನಿರ್ಬಲಗೊಳಿಸಬಲ್ಲೆವು, ನಾವು ಅದನ್ನು "ಶಿಲುಬೆಗೆ ಹಾಕಬಲ್ಲೆವು" (ಗಲಾತ್ಯ 5:24). ಪಾಪಾಧೀನ ಸ್ವಭಾವವನ್ನು ವಿಸರ್ಜಿಸುವದು ಎಂದು ಹೇಳುವದರಲ್ಲಿ ಪೌಲನ ತಾತ್ಪರ್ಯವು ಇದೇ ಆಗಿದೆ. ನಮ್ಮ ಜೀವಿತಗಳಲ್ಲಿ ಇರುವ ಪಾಪಾಧೀನ ಸ್ವಭಾವದ ಬಲ ಹಾಗು ಹತೋಟಿಯನ್ನು ವಿಸರ್ಜಿಸುವದೇ ಎಂದು ಇದರ ಅರ್ಥವಾಗಿದೆ.

8 ಯೆಹೂದ್ಯ ಧರ್ಮಶಾಸ್ತ್ರವು ವಿಮೋಚನಕಾಂಡ, ಯಾಜಕಕಾಂಡ, ಅರಣ್ಯಕಾಂಡ ಮತ್ತು ಧರ್ಮೋಪದೇಶಕಾಂಡ ಪುಸ್ತಕಗಳಲ್ಲಿ ಬರೆಯಲ್ಪಟ್ಟಿದೆ. ಇದು ದೇವರು ಯೆಹೂದ್ಯರಿಗೆ ನೀಡಿದ ಧರ್ಮಶಾಸ್ತ್ರವಾಗಿದೆ. ಹೆಚ್ಚಿನ ಚರ್ಚೆಗಾಗಿ, ಪದಪಟ್ಟಿಃ ಧರ್ಮಶಾಸ್ತ್ರ ನೋಡಿರಿ.

9 ಸೈತಾನನು ಇಹಲೋಕಾಧಿಪತಿ ಆಗಿದ್ದಾನೆ (ಯೋಹಾನ 12:31). ಹೆಚ್ಚಿನ ಚರ್ಚೆಗಾಗಿ, ಪದಪಟ್ಟಿಃ ಸೈತಾನನೋಡಿರಿ.

10 ಪ್ರಾಪಂಚಿಕರು ದೇವರಿಗಿಂತಲೂ ಹೆಚ್ಚಾಗಿ ಲೋಕವನ್ನು ಪ್ರೀತಿಸುವ ಜನರಾಗಿದ್ದಾರೆ.

11 "ಸೈತಾನನ ರಾಜ್ಯ" ಎಂಬ ಹೇಳಿಕೆಗೆ ಎರಡು ಅರ್ಥಗಳಿರುತ್ತವೆ, ಅವು ಗಳು ಒಂದಕ್ಕೊಂಡು ಆಪ್ತಸಂಬಂಧವನ್ನು ಹೊಂದಿರುತ್ತವೆ. ಮೊದಲನೆಯದಾಗಿ, ಸೈತಾನನ ಅಧಿಕಾರ ಹಾಗು ಬಲ ಎಂದು ಇದರ ಅರ್ಥವಾಗಿದೆ. ಎರಡನೆಯದಾಗಿ, ಪ್ರಪಂಚ ಎಂದು ಇದರ ಅರ್ಥವಾಗಿದೆ; ಯಾಕೆಂದರೆ, ಪ್ರಪಂಚದಲ್ಲಿಯೇ ಸೈತಾನನು ತನ್ನ ಅಧಿಕಾರವನ್ನು ಉಪಯೋಗಿಸುತ್ತಾನೆ. ಹೇಗಿದ್ದರೂ, ಗಮನಿಸತಕ್ಕದ್ದು ಏನೆಂದರೆ, "ಸೈತಾನನ ರಾಜ್ಯ" ಭೌತೀಕ ಪ್ರಪಂಚಕ್ಕೆ ಸೀಮಿತವಾಗಿರುತ್ತದೆ. ಸೈತಾನನು ಆಕಾಶಮಂಡಲದಲ್ಲಿರುವ ದುರಾತ್ಮ ಸೇನೆಗಳ ಮೇಲೆಯೂ ಧೊರೆತನ ಮಾಡುತ್ತಾನೆ (ಎಫೆಸ 6:12).

12 ಮ್ಲೇಚ್ಛ (ಬಾರ್ಬೆರಿಯನ್) ಎಂಬ ಪದದ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಇತರ ಭಾಷೆಗಳನ್ನಾ- ಡುವವರು" ಎಂದು ಹೇಳುತ್ತದೆ. ಇದು ಗ್ರೀಕ ಪ್ರತಿಯ ಅಕ್ಷರಶಃ ಭಾಷಾಂತರವಾಗಿದೆ. ಅರ್ಥವು ಮುಖ್ಯವಾಗಿ ಒಂದೇ ಆಗಿದೆ. ಹೊಸ ಒಡಂಬಡಿಕೆಯ ಕಾಲದ ವಿಧ್ಯಾವಂತ ಗ್ರೀಕರು ಗ್ರೀಕ ಭಾಷೆಯನ್ನಾಡದ ಯಾವದೇ ವ್ಯಕ್ತಿಯನ್ನು ಮ್ಲೇಚ್ಛ ಎಂದು ಪರಿಗಣಿಸುತ್ತಿದ್ದರು.

13 ಹೂಣರು (ಸ್ಕೈಲೆಯನ್ಸ) ಸ್ಕೈಲೆಯಾ ಎಂಬ ಅನಾಗರೀಕ ರಾಷ್ಟ್ರದ ನಿವಾಸಿಗಳಾಗದ್ದರು, ಈಗ ಅದು ದಕ್ಷಿಣ ರಷ್ಯದ ಭಾಗವಾಗಿರುತ್ತದೆ.

14 ಮಾರ್ಕನ ಸುವಾರ್ತೆಯು ಹೊಸ ಒಡಂಬಡಿಕೆಯಲ್ಲಿ ಎರಡನೆಯ ಸುವಾರ್ತೆಯಾಗಿದ್ದರೂ ವಾಸ್ತವದಲ್ಲಿ ಅದು ಮೊಟ್ಟಮೊದಲು ಬರೆಯಲ್ಪಟ್ಟಿತೆಂದು ಬಹುಪಾಲು ಬೈಬಲ್ ಪಂಡಿತರು ನಂಬುತ್ತಾರೆ.

# ಪೌಲನು ಥೆಸಲೊನಿಕದವರಿಗೆ ಬರೆದ ಮೊದಲನೆಯ ಪತ್ರಿಕೆ

## ಪರಿಚಯ

ಥೆಸಲೋನಿಕವು ಉತ್ತರ ಗ್ರೀಸಿನ ಪ್ರಾಂತ್ಯವಾದ ಮೆಕೆದೋನ್ಯದ ರಾಜಧಾನಿಯಾಗಿತ್ತು. ಪೌಲನು ತನ್ನ ಎರಡನೆಯ ಸುವಾರ್ತಾ ಪ್ರಯಾಣದ ವೇಳೆಯಲ್ಲಿ ಪ್ರಥಮ ಬಾರಿಗೆ ಥೆಸಲೋನಿಕಕ್ಕೆ ಹೋದದ್ದು ಅ.ಕೃ. 17:1-9ರಲ್ಲಿ ಬಣ್ಣಿಸಲ್ಪಟ್ಟಿದೆ. ಈ ಪತ್ರಿಕೆಯು ಪೌಲನು ಥೆಸಲೋನಿಕಕ್ಕೆ ಬೇಟಿ ನೀಡಿದ ಸ್ವಲ್ಪಕಾಲದ ನಂತರ ಸುಮಾರು ೫೦ ರಲ್ಲಿ ಕೊರಿಂಥದಿಂದ ಬರೆಯಲ್ಪಟ್ಟಿತು. ಜನರ ಗುಂಪಿನ ವಿರೋಧದ ಕಾರಣದಿಂದ ಪೌಲನು ಕೆಲವು ವಾರಗಳನ್ನು ಮಾತ್ರವೇ ಥೆಸಲೋನಿಕದಲ್ಲಿ ಕಳೆಯಲು ಸಾಧ್ಯವಾಗಿತ್ತು. ಆತನು ಶೀಘ್ರವೇ ಊರನ್ನು ತೊರೆಯುವಂತೆ ಒತ್ತಾಯಿಸಲ್ಪಟ್ಟಿದ್ದನು. ಆತನು ಹೊರಟು ಹೋದ ಬಳಿಕ ಅಲ್ಲಿರುವ ನೂತನ ಕ್ರೈಸ್ತರಿಗೆ ಕಷ್ಟ ಹಿಂಸೆಗಳು ಉಂಟಾದವು ..ಪೌಲನು ಅವರಿಗೆ ಧೈರ್ಯಪಡಿಸುವದಕ್ಕೂಅನೇಕ ಅಂಶಗಳ ಕುರಿತು ಹೆಚ್ಚಿನ ಉಪದೇಶವನ್ನು ನೀಡುವದಕ್ಕೂ ಈ ಪತ್ರಿಕೆಯನ್ನು ಬರೆದನು.

ಅದರ ಜೊತೆಯಲ್ಲಿ, ಪೌಲನಿಗೆ ಥೆಸಲೋನಿಕದಲ್ಲಿ ಯೆಹೂದ್ಯರೊಳಗೂ ಅನ್ಯ ಜನರೊಳಗೂ ಅನೇಕ ಮಂದಿ ವೈರಿಗಳಿದ್ದರು.

ಕ್ರಿಸ್ತನ ಸುವಾರ್ತೆಯ ಮೌಲ್ಯವನ್ನು ತಗ್ಗಿಸುವದಕ್ಕಾಗಿ ಈ ವೈರಿಗಳು ಪೌಲನಿಗೆ ನಿಂದನೆ ಮಾಡುವದಕ್ಕೂ ಆತನ ಮೇಲೆ ಸುಳ್ಳು ಅಪವಾದಗಳನ್ನು ಮಾಡುವದಕ್ಕೂ ಪ್ರಾರಂಭಿಸಿದರು. ಪೌಲನು ತಾನು ಈ ಸುಳ್ಳು ಅಪವಾದಗಳಿಂದ ಅವಮಾನಕ್ಕೊಳಗಾಗುವದಾದರೆ, ಥೆಸಲೋನಿಕದಲ್ಲಿನ ನೂತನ ವಿಶ್ವಾಸಿಗಳು ತಮ್ಮ ನಂಬಿಕೆಯಲ್ಲಿ ಕುಂದಿ ಹೋಗುವರೆಂದು ಭಯಪಟ್ಟನು. ಆದದರಿಂದ, ಈ ಪತ್ರಿಕೆಯಲ್ಲಿ ಪೌಲನು ತನ್ನ ವೈರಿಗಳನ್ನು ಎದುರಿಸಿ ಅವರ ಸುಳ್ಳು ಅಪವಾದಗಳನ್ನು ಖಂಡಿಸುತ್ತಾನೆ.

ಈ ಪತ್ರಿಕೆ ಹಾಗು 2ಥೆಸಲೋನಿಕದವರಿಗೆ ಪತ್ರಿಕೆಯ ಜೊತೆಯಲ್ಲಿ ಗಲಾತ್ಯದವರಿಗೆ ಬರೆದ ಪತ್ರಿಕೆಯು ಪೌಲನು ಬರೆದ ಪ್ರಾಚೀನ ಪತ್ರಿಕೆಗಳಾಗಿವೆ. ಈ ಮೂರು ಪತ್ರಿಕೆಗಳು ಹೊಸ ಒಡಂಬಡಿಕೆಯ ಪ್ರಥಮ ಪುಸ್ತಕಗಳಾಗಿ ಬರೆಯಲ್ಪಟ್ಟಿರುತ್ತವೆ.

ಪೌಲನ ಜೀವಿತದ ಹೆಚ್ಚಿನ ಚರ್ಚೆಗಾಗಿ ರೋಮಾಪುರದವರಿಗೆ ಬರೆದ ಪತ್ರಿಕೆ: ಪರಿಚಯ ನೋಡಿರಿ.

## ಹೊರ ರೇಖೆ:

ಅ. ವಯಕ್ತಿಕ ವಿಚಾರಗಳು (1:1-3:13)
   1. ಥೆಸಲೋನಿಕದವರಿಗಾಗಿ ಕೃತಜ್ಞತಾ ಸ್ತುತಿ (1:1-10)
   2. ಥೆಸಲೋನಿಕದಲ್ಲಿ ಪೌಲನ ಸಭಾ ಸ್ಥಾಪನೆ (2:1-20)
   3. ತಿಮೊಥೆಯನು ಸಭೆಯನ್ನು ದೃಡಪಡಿಸಿದ್ದು (3:1-13)

ಆ. ಅಭ್ಯಾಸಗತ ಪ್ರಬೋಧನೆಗಳು (4:1-5:28)
   1. ಪರಿಶುದ್ಧ ಜೀವಿತದ ವಿಷಯದಲ್ಲಿ ಪ್ರಬೋಧನೆ (4:1-12)
   2. ಕ್ರಿಸ್ತನ ಎರಡನೆಯ ಬರೋಣದ ವಿಷಯದಲ್ಲಿ ಪ್ರಬೋಧನೆ (4:13-5:11)
   3. ಅಂತಿಮ ಸಲಹೆಗಳು (5:12-28).

# ಅಧ್ಯಾಯ - 1

## ಥೆಸಲೋನಿಕದವರಿಗಾಗಿ ಕೃತಜ್ಞತಾಸ್ತುತಿ (1:1-10)

1 ಸೀಲ ಅಥವಾ (ಸಿಲ್ವಾನ) ತಿಮೊಥೆಯರು ಪೌಲನು ಈ ಪತ್ರಿಕೆಯನ್ನು ಬರೆದಾಗ ಆತನೊಂದಿಗೆ ಇದ್ದರು (2 ಕೊರಿಂಥ 1:1-2, 19 ಮತ್ತು ವ್ಯಾಖ್ಯಾನ ನೋಡಿರಿ).

2 ಎಫೆಸ್ 15-16, ಕೊಲೊಸ್ಸೆ 1:3-5, 2 ಥೆಸಲೋನಿಕ 1:3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

3 ಇಲ್ಲಿ ಪೌಲನು ಥೆಸಲೋನಿಕದವರ ಬಗ್ಗೆ ಮೂರು ಸಂಗತಿಗಳನ್ನು ಜ್ಞಾಪಕಕ್ಕೆ ತಂದುಕೊಳ್ಳುತ್ತಾನೆ. ಮೊದಲನೆಯದಾಗಿ, ಆತನು ಅವರ ನಂಬಿಕೆಯ ಫಲವಾದ ಕೆಲಸವನ್ನು – ಅಂದರೆ, ಅವರು ತಮ್ಮ ನಂಬಿಕೆಯ ಫಲಿತವಾಗಿ ಮಾಡಿದ ಕೆಲಸ – ಜ್ಞಾಪಿಸಿಕೊಳ್ಳುತ್ತಾನೆ (ಯಾಕೋಬ 2:17 ನೋಡಿರಿ). ಎರಡನೆಯದಾಗಿ, ಪೌಲನುಅವರ ಪ್ರೀತಿಪೂರ್ವಕವಾದ ಪ್ರಯಾಸವನ್ನು ಜ್ಞಾಪಿಸಿಕೊಳ್ಳುತ್ತಾನೆ. ನಿಜವಾದ ನಂಬಿಕೆಯು ಒಳ್ಳೇಕಾರ್ಯಗಳಲ್ಲಿ ತೋರಿಬರಬೇಕಾಗಿರುವ ಪ್ರಕಾರವೇ ನಿಜವಾದ ಪ್ರೀತಿಯು ಪ್ರಯಾಸ ಅಥವಾ ಪ್ರೀತಿಯ ಕಾರ್ಯದಲ್ಲಿ ತೋರಿಬರಬೇಕು. ಮೂರನೆಯದಾಗಿ, ಪೌಲನು ಅವರ ನಿರೀಕ್ಷೆಯಿಂದುಂಟಾದ ಸ್ಥಿರಣೆಯನ್ನು ಜ್ಞಾಪಕ ಮಾಡಿಕೊಳ್ಳುತ್ತಾನೆ. ಯಾರ ನಿರೀಕ್ಷೆಯು ಕ್ರಿಸ್ತನ ಮೇಲಿರುತ್ತದೋ ಅವರು ಸ್ಥಿರಣೆಯನ್ನು ಹೊಂದುವರು. ಹೀಗೆ ಥೆಸಲೋನಿಕದವರಕೆಲಸ, ಪ್ರಯಾಸ, ಹಾಗು ಸ್ಥಿರಣೆಗಳು ಅವರ ನಂಬಿಕೆ, ಪ್ರೀತಿ, ಹಾಗು ನಿರೀಕ್ಷೆಗಳ ಫಲಿತವಾಗಿರುತ್ತವೆ, ಅವು ಗಳು ನಮ್ಮ ಕ್ರೈಸ್ತೀಯ ಜೀವಿತಗಳಲ್ಲಿ ಮೂರು ಅತಿ ಪ್ರಾಮುಖ್ಯ ಸಂಗತಿಗಳಾಗಿವೆ ಎಂದು ಪೌಲನು ಹೇಳುತ್ತಾನೆ[1] (1 ಕೊರಿಂಥ 13:13 ಮತ್ತು ವ್ಯಾಖ್ಯಾನ ನೋಡಿರಿ).

4 ಥೆಸಲೋನಿಕದವರು ದೇವರಿಂದ ಆದುಕೊಂಡವರೂ ಪ್ರೀತಿಸಲ್ಪಟ್ಟವರೂ ಆಗಿದ್ದಾರೆಂಬದನ್ನು ಪೌಲನು ಅವರಿಗೆ ಜ್ಞಾಪಕಪಡಿಸುತ್ತಾನೆ (ಎಫೆಸ 1:4-5; 2ಥೆಸಲೋನಿಕ 2:13; ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಪೌಲನು ಥೆಸಲೋನಿಕದವರನ್ನು "ಸಹೋದರರೇ" ಎಂದು ಕರೆಯುತ್ತಾನೆ, ಯಾಕೆಂದರೆ ಅವರು ದೇವರ ಮಕ್ಕಳಾಗಿರುವದಕ್ಕೆ ಆತನಿಂದ ಆದುಕೊಳ್ಳಲ್ಪಟ್ಟಿದ್ದಾರೆ. ಪೌಲನು ಸಹ ಒಬ್ಬ ದೇವರ ಮಗನಾಗಿರುವದರಿಂದ ಅದು ಆತನನ್ನೂ ಥೆಸಲೋನಿ–ಕದವರನ್ನೂ "ಸಹೋದರರಾಗಿ" ಮಾಡುತ್ತದೆ. ಹೇಗದ್ದರೂ, ಎಲ್ಲಾ ಜನರು ಸಹೋದರರೆಂದು ಹೇಳಲಾಗದು; ಕ್ರಿಸ್ತನಲ್ಲಿನಂಬಿಕೆಯಿಡುವದರ ಮೂಲಕ ದೇವರ ಕುಟುಂಬಕ್ಕೆ ಸೇರಿದವರು ಮಾತ್ರವೇ ಒಬ್ಬರಿಗೊಬ್ಬರು ನಿಜವಾದ ಸಹೋದರರು ಹಾಗು ಸಹೋದರಿಯರು ಆಗಿರುತ್ತಾರೆ. "ದೇವರ ಪಿತೃತ್ವ" ವನ್ನು ಒಪ್ಪಿಕೊಳ್ಳದವರಿಗೆ "ಮನುಷ್ಯಸಹೋದರತ್ವ" ವು ಇರಲಾರದು.

5 ಪೌಲನು ಇಲ್ಲಿ ಸುವಾರ್ತೆಯನ್ನು ನಾವು ಸಾರಿದ ಸುವಾರ್ತೆಯೆಂದು ಕರೆಯುತ್ತಾನೆ. ಅಂದರೆ, ಅದು ಪೌಲ, ಸೀಲ ಹಾಗು ತಿಮೊಥೆಯಿಂದ ಸಾರಲ್ಪಟ್ಟ ಕ್ರಿಸ್ತನ ಸುವಾರ್ತೆಯಾಗಿತ್ತು.

ಸುವಾರ್ತೆಯು ಥೆಸಲೋನಿಕದವರಲ್ಲಿ ಶಕ್ತಿಯೊಡನೆ ಬಂದಿತು. ಸುವಾರ್ತಯು ......ರಕ್ಷಣೆಯನ್ನುಂಟು ಮಾಡುವ ದೇವರ ಶಕ್ತಿಯಾಗಿದೆ (ರೋಮ 1:16). ಪೌಲನು ಸುವಾರ್ತಯನ್ನು ಸಾರಿದಾಗ ಆತನ ಮಾತುಗಳು ದೇವರ ಶಕ್ತಿಯೊಡನೆ ಬಂದವು (1 ಕೊರಿಂಥ 2:4-5 ಮತ್ತು ವ್ಯಾಖ್ಯಾನ ನೋಡಿರಿ).

ಈ ಸುವಾರ್ತೆಯು ಥೆಸಲೋನಿಕದವರಿಗೆ ಪವಿತ್ರಾತ್ಮದೊಡನೆಯೂ ಬಂದಿತು. ಪವಿತ್ರಾತ್ಮದೊಡನೆ ಬರದ ಯಾವದೇ ಮಾತು ಮೃತ ಮಾತು ಅಥವಾ ಮೃತ ಶಬ್ದವಾಗಿದೆ. ಮತ್ತು ಲಿಖಿತ ರೂಪವಾದದ್ದು ಮರಣವನ್ನುಂಟು ಮಾಡುತ್ತದೆ.

ಆದರೆ ದೇವರಾತ್ಮ ಸಂಬಂಧವಾದದ್ದು ಜೀವವನ್ನುಂಟು ಮಾಡುತ್ತದೆ (2 ಕೊರಿಂಥ 3:6). ಸುವಾರ್ತೆಯ ಶಕ್ತಿಯು ಪವಿತ್ರಾತ್ಮನಿಂದ ಬರುತ್ತದೆ. ಪವಿತ್ರಾತ್ಮನು ಪೌಲನಲ್ಲಿ ಇದ್ದನು. ಮತ್ತು ಥೆಸಲೋನಿಕದವರು ಸುವಾರ್ತೆಯನ್ನು ಸ್ವೀಕರಿಸಿಕೊಂಡು ನಂಬಿದಾಗ ಪವಿತ್ರಾತ್ಮನು ಅವರೊಳಗೂ ವಾಸಿಸಲಾರಂಭಿಸಿದನು.

ಪೌಲನು ಸುವಾರ್ತೆಯನ್ನು ಬಹು ನಿಶ್ಚಯದೊಡನೆ ಸಾರಿದನು; ಮತ್ತು ಥೆಸಲೋನಿಕದವರು ಅದನ್ನು ಬಹು ನಿಶ್ಚಯದೊಡನೆ ನಂಬಿದರು. ಪೌಲ, ಸೀಲ ಹಾಗು ತಿಮೊಥೆಯರು ಎಂಥವರೆಂಬದನ್ನು ಥೆಸಲೋನಿಕದವರು ಬಲ್ಲರು. ಅವರು ಪವಿತ್ರಾತ್ಮ ಭರಿತರಾದ ವ್ಯಕ್ತಿಗಳೆಂಬದನ್ನು ಥೆಸಲೋನಿಕದವರು ಕಂಡಿದ್ದಾರೆ (1 ಥೆಸಲೋನಿಕ 2:10).

6 ಥೆಸಲೋನಿಕದಲ್ಲಿನ ನೂತನ ವಿಶ್ವಾಸಿಗಳು ಮೊದಲು ಪೌಲ, ಸೀಲ ಹಾಗುತಿಮೊಥೆಯರನ್ನು ಅನುಸರಿಸುವವರಾದರು ತರುವಾಯ ಈ ಮೂವರಿಂದ ಥೆಸಲೋನಿಕದವರು ಕ್ರಿಸ್ತನನ್ನೇ ಅನುಸರಿಸಲು ಕಲಿತುಕೊಂಡರು. ಸ್ವತಃ ಪೌಲ, ಸೀಲ ಹಾಗು ತಿಮೊಥೆಯರು ಹೇಗೆ ಕ್ರಿಸ್ತನನ್ನು ಅನುಸರಿಸುವವರಾಗಿದ್ದರೆಂಬದನ್ನು ಅವರು ಕಾಣಬಹುದಾಗಿತ್ತು (1 ಕೊರಿಂಥ 4:16, 11:1).

ನಾವು ಸ್ವತಃ ಹೊಸ ವಿಶ್ವಾಸಿಗಳಿಗೆ ಯಾವ ರೀತಿಯ ಮಾದರಿಯನ್ನು ನೀಡುತ್ತೇವೆ? ನಮ್ಮಲ್ಲಿ ಯಾರಾದರೂ ಇನ್ನೊಬ್ಬ ವ್ಯಕ್ತಿಗೆ "ನೀನು ನನ್ನನ್ನು ಅನುಸರಿಸಿದರೆ ಕ್ರಿಸ್ತನನ್ನು ಅನುಸರಿಸುವವನಾಗುವಿ" ಎಂದು ಹೇಳಬಲ್ಲೆವೋ? ನಾವು ಹಾಗೆ ಹೇಳುವದಕ್ಕೆ ಶಕ್ತರಾಗತಕ್ಕದ್ದು! ನಿಜ, ನಮ್ಮ ತುಟಿಗಳಿಂದ ಸಾಕ್ಷಿ ಹೇಳುವದು ಪ್ರಾಮುಖ್ಯವಾದದ್ದು; ಆದರೆ ನಮ್ಮ ಜೀವಿತಗಳ ಸಾಕ್ಷಿಯು ಇನ್ನೂ ಹೆಚ್ಚು ಪ್ರಾಮುಖ್ಯವಾಗಿರುತ್ತದೆ.

ಪ್ರಾರಂಭದಿಂದಲೂ ಥೆಸಲೋನಿಕದಲ್ಲಿರುವ ನೂತನ ವಿಶ್ವಾಸಿಗಳು ತಮ್ಮ ಸುತ್ತಲಿನ ಸಮಾಜದಿಂದ ಹಿಂಸೆಗೊಳಗಾಗಿದ್ದರು ಪೌಲನು ಅಲ್ಲಿ ಸುವಾರ್ತೆಸಾರುತ್ತಿದ್ದಾಗಲೂ ಕ್ರೈಸ್ತರ ವಿರುದ್ಧವಾಗಿ ಒಂದು ದೊಂಬಿ ಉಂಟಾಗಿತ್ತು

(ಅ.ಕೃ. 17:5-7). ಹಾಗಿದ್ದರೂ,ಥೆಸಲೋನಿಕ ವಿಶ್ವಾಸಿಗಳು ಪೌಲನ ಸಂದೇಶವನ್ನು ಪವಿತ್ರಾತ್ಮನಿಂದುಂಟಾದ ಆನಂದದೊಡನೆ ಸ್ವೀಕರಿಸಿ ಕೊಂಡರು (ಯೋಹಾನ 16:22; ಗಲಾತ್ಯ 5:22 ನೋಡಿರಿ).

ಕ್ರೈಸ್ತರಾದ ನಾವು ಕಷ್ಟ ಅಥವಾ ಹಿಂಸೆಯನ್ನು ಎದುರಿಸಲು ಇಷ್ಟಪಡುವದಿಲ್ಲ. ಜಗತ್ತಿನ ಪ್ರತಿಯೊಂದು ರಾಷ್ಟ್ರದಲ್ಲಿಯೂ ಕ್ರೈಸ್ತರು ತಾವು ತಮ್ಮ ಧರ್ಮವನ್ನು ಯಾವ ಹಿಂಸೆಗೊಳಗಾಗದೆ ಆಚರಣೆ ಮಾಡುವದಕ್ಕಾಗಿ ಧಾರ್ಮಿಕ ಸ್ವಾತಂತ್ರ್ಯವನ್ನು ಅಪೇಕ್ಷಿಸುತ್ತಾರೆ. ಆದರೆ ಹೊಸ ಒಡಂಬಡಿಕೆಯ ಬೋಧನೆಗೆ ಅನುಸಾರವಾಗಿ ಕ್ರಿಸ್ತನ ನಿಮಿತ್ಯ ಹಿಂಸೆಯನ್ನು ತಾಳಿಕೊಳ್ಳುವದು ಒಂದು ಸಂತೋಷದಾಯಕ ಸದಾವಕಾಶವಾಗಿದೇ (ಅ.ಕೃ. 5:41; 1 ಪೇತ್ರ 4:13). ಹಿಂಸೆಯನ್ನು ಸಂತೋಷವಾಗಿ ಸಹಿಸಿಕೊಳ್ಳುವ ಸಭೆಯು ಒಂದು ಬಲಿಷ್ಟ ಸಭೆಯಾಗಿರುತ್ತದೆ, ಮತ್ತು ಅದರ ಸಾಕ್ಷಿಯು ಬಲಯುತವಾಗಿರುತ್ತದೆ. ನಾವು ಸುಲಭವಾದ ಮಾರ್ಗವನ್ನು ಹುಡುಕದಿರೋಣ (ಮತ್ತಾಯ 7:13-14 ನೋಡಿರಿ).

ನಾವು ಕ್ರಿಸ್ತನ ನಿಮಿತ್ಯ ಬಾಧೆಯನ್ನು ಸೈರಿಸಿಕೊಳ್ಳುವದರ ಮೂಲಕ ದೇವರಿಗೆ ಮಹಿಮೆಯಾಗುವದು ಮತ್ತು ಸಭೆಯು ದೃಡಪಡಿಸಲ್ಪಡುವದು.

**7** ಈ ಥೆಸಲೋನಿಕದ ಕ್ರೈಸ್ತರು ಅಂತಹ ಆನಂದದಿಂದ ಹಿಂಸೆಯನ್ನು ಅನುಭವಿಸುವವರೂ ಕ್ರಿಸ್ತನನ್ನು ನಂಬಿಗಸ್ತರಾಗಿ ಅನುಸರಿಸುವವರೂ ಆಗಿದ್ದರಿಂದ ಅವರು ಗ್ರೀಸಿನ ಉತ್ತರ ಪ್ರಾಂತ್ಯದ ಮೆಕೆದೋನ್ಯದಲ್ಲಿ ವಾಸಿಸುತ್ತಿದ್ದ ಇತರ ಎಲ್ಲಾ ವಿಶ್ವಾಸಿಗಳೆಲ್ಲರಿಗೂ ಒಂದು ಮಾದರಿ, ಒಂದು ಉದಾಹರಣೆಯಾಗಿದ್ದರು. ಈ ಥೆಸಲೋನಿಕದ ಕ್ರೈಸ್ತರು ನಮಗೂ ಒಂದು ಆಗಿರಲಿ ! ಆಗ ಪ್ರತಿಯಾಗಿ ನಾವೂ ಸಹ ಇತರರಿಗೆ ಮಾದರಿಯಾಗುವೆವು.

**8** ಕರ್ತನ ಸಂದೇಶವು ಥೆಸಲೋನಿಕ ಸಭೆಯಿಂದಲೇ ಘೋಷಿತವಾಯಿತೆಂದು ಹೇಳುತ್ತಾನೆ. ಈಗ ಅದರ ಫಲಿತವಾಗಿ, ದೇವರ ಮೇಲೆ ಅವರು ಇಟ್ಟಿರುವ ನಂಬಿಕೆಯು ಎಲ್ಲಾ ಸ್ಥಳಗಳಲ್ಲಿಯೂ – ಮೆಕೆದೋನ್ಯ ಮತ್ತು ಅಖಾಯ[2] ದಲ್ಲಿ ಮಾತ್ರವಲ್ಲ, ಆದರೆ ಇತರ ರಾಷ್ಟ್ರಗಳಲ್ಲಿ ಸಹ – ಪ್ರಸಿದ್ದವಾಯಿತು, ನೆನಪಿರಲಿ, ಪೌಲನು ಈ ಪತ್ರಿಕೆಯನ್ನು ಬರೆದ ವೇಳೆಯಲ್ಲಿ ಈ ಸಬೆಯು ಒಂದು ವರ್ಷದಷ್ಟು ಹಳೆಯದು ಸಹ ಆಗಿರಲಿಲ್ಲ, ಇದು ಒಂದು ಚಿಕ್ಕ ಸಭೆಯು ಹಿಂಸೆಗೊ ಳಗಾದ ಸಭೆಯು ಆಗಿತ್ತು. ಹಾಗಿದ್ದರೂ, ಅವರ ನಂಬಿಕೆಯು ಎಲ್ಲಾ ಸ್ಥಳಗಳಲ್ಲಿಯೂ ಪ್ರಸಿದ್ದವಾಗಿತ್ತು.

ಇಂದು ನಮ್ಮ ಸಭೆಗಳು ಹೇಗೆ ಈ ಚಿಕ್ಕ ಥೆಸಲೋನಿಕ ಸಭೆಯೊಂದಿಗೆ ಹೋಲುತ್ತವೆ? ನಮ್ಮ ಸಭೆಗಳು ಬೃಹತ್ತಾದವುಗಳೂ ಐಶ್ವರ್ಯವುಳ್ಳವುಗಳೂ ದೀರ್ಘಕಾಲದಿಂದ ಸ್ಥಾಪಿಸಲ್ಪಟ್ಟವುಗಳೂ ಆಗಿವೆ; ಆದರೆ ಥೆಸಲೋನಿಕ ಸಭೆಯಲ್ಲಾದಂತೆ ಸುವಾರ್ತೆಯು ನಮ್ಮ ಸಭೆಗಳಿಂದ "ಘೋಷಿತವಾಗುತ್ತಾ" ಇದೆಯೋ? ಓ, ಸಹೋದರ ಹಾಗು ಸಹೋದರಿಯರೇ, ಹಾಗಿಲ್ಲದಿರುವದಾದರೆ ಅದು ಈಗಲೇ ಹಾಗೆ ಮಾಡಲು ಪ್ರಾರಂಭಿಸಲಿ, ತಡವಾಗದಿರಲಿ!

**9** ಪೌಲನು ಹೋದ ಕಡೆಯಲೆಲ್ಲಾ ಜನರು ಥೆಸಲೋನಿಕದವರ ನಂಬಿಕೆ ಕುರಿತಾಗಿ, ವಿಶೇಷವಾಗಿ ಅವರು ಹೇಗೆ ವಿಗ್ರಹಗಳನ್ನು ಬಿಟ್ಟು ಬಿಟ್ಟು ದೇವರ ಕಡೆಗೆ ತಿರುಗಿಕೊಂಡು ಜೀವವುಳ್ಳ ಸತ್ಯದೇವರನ್ನು ಸೇವಿಸುವವರಾದರೆಂತಲೂ ಮಾತಾಡುವದನ್ನು ಕೇಳುತ್ತಾನೆ.

ಥೆಸಲೋನಿಕದವರು ಎಂಥ ಬಲವಾದ ಸಾಕ್ಷಿಯನ್ನು ಹೊಂದಿದ್ದರಲ್ಲವೇ! ಜನರು ನಮ್ಮ ಕುರಿತಾಗಿ ಏನು ಹೇಳುತ್ತಾರೆ?.

**10** ಥೆಸಲೋನಿಕದವರು ವಿಗ್ರಹಗಳನ್ನು ಬಿಟ್ಟು ಬಿಟ್ಟು ಜೀವವುಳ್ಳ ಸತ್ಯದೇವರ ಕಡೆಗೂ (ವಚನ 9). ಮತ್ತು ಪರಲೋ– ಕದಿಂದ ಬರುವಂಥ ಆತನ ಕುಮಾರನನ್ನು (ಕ್ರಿಸ್ತನನ್ನು) ಎದುರು ನೋಡುವವರೂ ಆದರು. ಅವರ ಕಣ್ಣುಗಳನ್ನು ಪರಲೋಕದೆಡೆಗೆ ಎತ್ತಲ್ಪಟ್ಟವು . ಅವರ ನಿರೀಕ್ಷೆಯು ಈ ಜೀವಿತದಲ್ಲಿ ಇರಲಿಲ್ಲ. ಅವರ ನಿರೀಕ್ಷೆಯು ದೇವರು ಸತ್ತವರೊಳಗಿಂದ ಎಬ್ಬಿಸಿದಂಥ ಹಾಗು ಮುಂದೆ ಬರುವ ದೈವಕೋಪದಿಂದ – ದೇವರ ನ್ಯಾಯತೀರ್ಪಿನಿಂದ – ತಪ್ಪಿಸಿವದಕ್ಕೆ ಬರಲಿರುವ ಯೇಸುವಿನಲ್ಲಿತ್ತು. ಸುವಾರ್ತೆಯು ಅವರಿಂದ ಘೋಷಿತವಾದದ್ದರಲ್ಲಿ ಆಶ್ಚರ್ಯವೇನಿಲ್ಲ!

---

## ಅಧ್ಯಾಯ - 2

### ಥೆಸಲೋನಿಕದಲ್ಲಿ ಪೌಲನ ಸೇವೆ (2:1-12)

**1-2** ಪೌಲನು ಕೇವಲ ಹಣವನ್ನು ಸಂಪಾದಿಸುವದಕ್ಕಾಗಿಯೇ ಸುವಾರ್ತೆಯನ್ನು ಸಾರುತ್ತಿದ್ದನೆಂದು ಆತನ ವಿರೋ– ಧಿಗಳಲ್ಲಿ ಕೆಲವರು ಸುಳ್ಳು ಅಪಾದನೆಗಳನ್ನು ಮಾಡಿದ್ದರು. ಹೊಸ ಒಡಂಬಡಿಕೆಯ ಕಾಲದಲ್ಲಿ ಹಣಕ್ಕಾಗಿ ದುರಾಶೆಯುಳ್ಳವ 'ರಾಗಿದ್ದ ಹಾಗು ತಮ್ಮ ಸ್ವಲಾಭಕ್ಕಾಗಿ ಸುವಾರ್ತೆಯನ್ನು ಸಾರುತ್ತಿದ್ದ ಸುಳ್ಳುಬೋಧಕರು ಅನೇಕರಿದ್ದರು. ಪೌಲನ ಬೋಧನೆಯು ಹಾಗಿರಲಿಲ್ಲ ಎಂದು ಥೆಸಲೋನಿಕದವರು ಬಲ್ಲವರಾಗಿದ್ದರು. ಆತನ ಬೋಧನೆಯು ಪವಿತ್ರಾತ್ಮನ ಬಲದಿಂದ ಕೂಡಿತ್ತು (1 ಥೆಸಲೋನಿಕ 1:5). ಪೌಲನು ಸುಮ್ಮಸುಮ್ಮನೆ ಥೆಸಲೋನಿಕಕ್ಕೆ ಬರಲಿಲ್ಲವೆಂಬದನ್ನು ಅವರು ಬಲ್ಲವರಾಗಿದ್ದರು (ವಚನ 1). ಅದು ಅಲ್ಲಿ ಸಭೆಯೊಂದನ್ನು ಸ್ಥಾಪಿಸಲ್ಪಡುವದಕ್ಕೆ ಕಾರಣವಾಗಿತ್ತು. ಅಷ್ಟುಮಾತ್ರವಲ್ಲದೆ, ಪೌಲನು ಸುವಾರ್ತೆಗೋಸ್ಕರ ಬಾಧೆಪಟ್ಟ ವಿಧದ ಕಾರಣದಿಂದ ಆತನು ತನ್ನ ಸ್ವಪ್ರಯೋಜನಕ್ಕಾಗಿ ಸುವಾರ್ತೆ ಸಾರಲಿಲ್ಲ ಎಂಬದನ್ನು

ಥೆಸಲೋನಿಕದವರು ಕಾಣುವದಕ್ಕೆ ಸಾಧ್ಯವಾಗಿತ್ತು. ಪೌಲನು ಫಿಲಿಪ್ಪಿಯಲ್ಲಿ ಬಹಳಷ್ಟು ಬಾಧೆಪಟ್ಟಿದ್ದನೆಂಬದನ್ನು ಅವರು ತಿಳಿದವರಾಗಿದ್ದರು (ಅ.ಕೃ. 16:19-24). ಆದರೆ ಆದರ ಹೊರತಾಗಿಯೂ, ಪೌಲನು ಕೂಡಲೇ ಥೆಸಲೋನಿಕಕ್ಕೆ ಬಂದು ಅಲ್ಲಿ ಬಹು ವಿರೋಧವಿದ್ದಾಗ್ಯು ಸುವಾರ್ತೆಯನ್ನು ಸಾರಲು ಪ್ರಾರಂಭಿಸಿದನು (ಅ.ಕೃ. 17:5-6). ಯಾವ ಸುಳ್ಳು ಬೋಧಕನೂ ಅದನ್ನು ಮಾಡಿರುತ್ತಿರಲಿಲ್ಲ.

3 ಇಲ್ಲಿ ಪೌಲನು ತಾನು ಸ್ವಾರ್ಥ ಹಾಗು ಅಶುದ್ಧ ಉದ್ದೇಶಗಳಿಂದ ಸುವಾರ್ತೆಯನ್ನು ಸಾರಿದನೆಂಬ ಸುಳ್ಳು ಆರೋಪಗಳನ್ನು ಖಂಡಿಸುತ್ತಾನೆ. ಪೌಲನ ಬೋಧನೆಯು – ಆತನು ಸುವಾರ್ತೆಯನ್ನು ಸಾರಿದ್ದು – ಅಬದ್ಧವಲ್ಲ, ಅಶುದ್ಧ ವಲ್ಲ, ಅಥವಾ ಜನರನ್ನು ಮೋಸಮಾಡಬೇಕೆಂಬ ಬಯಕೆಯಿಂದಲೂ ಆಗಿರಲಿಲ್ಲ.

4 ಪೌಲನು ಯಾವ ಅಸತ್ಯವಾದದ್ದನ್ನೂ ಆಡಲಿಲ್ಲ ಯಾಕೆಂದರೆ ದೇವರು ತನ್ನ ಸತ್ಯವನ್ನು ಸುವಾರ್ತೆಯನ್ನು ಪೌಲನ ವಶಕ್ಕೆ ಒಪ್ಪಿಸಿದ್ದನು. ಪೌಲನು ಮಾತಾಡಿದ ಮಾತುಗಳು ದೇವರ ಮಾತುಗಳಾಗಿದ್ದವೇ ಹೊರತು ಆತನ ಸ್ವಂತ ಮಾತುಗಳಾಗಿರಲಿಲ್ಲ. ಅಷ್ಟುಮಾತ್ರವಲ್ಲದೇ, ಪೌಲನ ಉದ್ದೇಶಗಳು ಅಶುದ್ಧವಾಗಿರಲಿಲ್ಲ, ಯಾಕೆಂದರೆ ಆತನು ದೇವರಿಂದ ಮೆಚ್ಚಲ್ಪಟ್ಟಿದ್ದನು (ರೋಮ 1:1, 5; 1ಕೊರಿಂಥ 4:1; 2 ಕೊರಿಂಥ 2:17; ಎಫೆಸ 3:7 ನೋಡಿರಿ).

ಪೌಲನು ಎಂದಿಗೂ ಜನರನ್ನು ಮೋಸ ಅಥವಾ ವಂಚನೆ ಮಾಡಲು ಪ್ರಯತ್ನಿಸಲಿಲ್ಲ; ಆತನು ಯಾವಾಗಲೂ ಮನುಷ್ಯರನ್ನು ಮೆಚ್ಚಿಸದೇ ದೇವರನ್ನು ಮಾತ್ರವೇ ಮೆಚ್ಚಿಸಲು ಅಪೇಕ್ಷಿಸಿದನು. ಬೇರೆ ಮಾತುಗಲಲ್ಲಿ ಹೇಳುವದಾದರೆ, ಆತನು ಮನುಷ್ಯರನ್ನು ಮೆಚ್ಚಿಸಬೇಕೆಂದು ಅಥವಾ ಅವರ ಮನ್ನನೆಯನ್ನು ಗಳಿಸಿಕೊಳ್ಳಬೇಕೆಂದು ಸುಳ್ಳು ವೇಷವನ್ನು ಹಾಕಿಕೊಳ್ಳಲು ಎಂದಿಗೂ ಪ್ರಯತ್ನಿಸಲಿಲ್ಲ (ಗಲಾತ್ಯ 1:10 ನೋಡಿರಿ).

ಕ್ರಿಸ್ತನ ಸುವಾರ್ತೆಯು ಪ್ರಾಕೃತ ಅಥವಾ ಪಾಪಿಮನುಷ್ಯನನ್ನು ಎಂದಿಗೂ "ಮೆಚ್ಚಿಸದು". ಪ್ರಾಕೃತ, ಪ್ರಾಪಂಚಿಕ ಜನರು ಯಾವಾಗಲೂ ಸುವಾರ್ತೆಯನ್ನು ವಿರೋಧಿಸುತ್ತಾರೆ. ನಾವು ಕ್ರಿಸ್ತನ ವಿಷಯವಾಗಿ ಸಾರುವಾಗ ಎಂದಿಗೂ ಮನುಷ್ಯರನ್ನು ಮೆಚ್ಚಿಸಬೇಕೆಂದು ಪ್ರಯತ್ನಿಸಬಾರದು;ಒಂದು ವೇಳೆ ನಾವು ಹಾಗೆ ಮಾಡಿದರೆ ನಮ್ಮ "ಸುವಾರ್ತೆ" ಯು ಸತ್ಯಸುವಾರ್ತೆಯಲ್ಲ, ಆದರೆ ಮಿತ್ಯಸುವಾರ್ತೆಯಾಗುವದು. ನಾವು ಸತ್ಯವನ್ನು ಧೈರ್ಯವಾಗಿ ಮಾತಾಡಬೇಕು, ನಾವು ಪಾಪ ಹಾಗು ಕೆಟ್ಟತನದ ವಿರುದ್ಧ ಮಾತಾಡಬೇಕು. ನಾವು ಜನರ ವಿರೋಧಗಳಿಗೆ ಹೆದರಬಾರದು (2 ಕೊರಿಂಥ 4:1-2,5 ನೋಡಿರಿ).

5 ಪೌಲನು ಎಂದಿಗೂ ಮುಖಸ್ತುತಿಯನ್ನು ಮಾಡಲಿಲ್ಲ. ಪೌಲನು ಜನರ ಪಾಪಗಳನ್ನು ಚಿಕ್ಕದಾಗಿಸುವದರ ಮೂಲಕ ಅವರು ತಮ್ಮ ಪಾಪಗಳಿಗಾಗಿ ಯಾವ ಚಿಂತೆ ಮಾಡಬೇಕಾಗಿಲ್ಲ ಎಂದು ಹೇಳುವದರ ಮೂಲಕ ಎಂದಿಗೂ ಮುಖಸ್ತುತಿಯನ್ನು ಮಾಡಲು ಪ್ರಯತ್ನಿಸಲಿಲ್ಲ. ಆತನು ಜನರಿಗೆ ಎಂದಿಗೂ ಹುಸಿ ನಿರೀಕ್ಷೆಯನ್ನಾಗಲಿ ಅಲ್ಲವೆ ಸುಳ್ಳು ವಾಗ್ದಾನಗಳನ್ನಾಗಲಿ ನೀಡಲಿಲಲ್ಲ. ಕ್ರಿಸ್ತನನ್ನು ಹಿಂಬಾಲಿಸುವದು ಸರಳವಾದದ್ದೆಂದು ಆತನು ಜನರಿಗೆ ಎಂದಿಗೂ ಹೇಳಲಿಲ್ಲ.

6 ಪೌಲ ಹಾಗು ಆತನ ಜೊತೆ ಬೋಧಕರು ಮನುಷ್ಯರ ಪ್ರಶಂಸೆಯನ್ನು ಬಯಸದೆ ದೇವರಿಂದ ಮಾತ್ರವೇ ಪ್ರಶಂಸೆಯ ನ್ನು ಅಪೇಕ್ಷಿಸಿದರು (ಯೋಹಾನ 12:42-43 ನೋಡಿರಿ). ಪೌಲನು 7ನೇ ವಚನದಲ್ಲಿ[3] ತನ್ನೊಂದಿಗೆ ಸೀಲ, ತಿಮೋಥೆಯರನ್ನು ಅಪೊಸ್ತಲರು ಎಂದು ಕರೆಯುತ್ತಾನೆ. ಹೊಸ ಒಡಂಬಡಿಕೆಯಕಾಲದಲ್ಲಿ ಸುವಾರ್ತೆಯನ್ನು ಸಾರುವದಕ್ಕೂ ಸಭೆಗಳನ್ನು ಸ್ಥಾಪಿಸುವದಕ್ಕೂ ದೇವರಿಂದ ನೇಮಿಸಲ್ಪಟ್ಟ ವ್ಯಕ್ತಿಗಳು ಅಪೊಸ್ತಲರಾಗಿದ್ದರು (ಅ.ಕೃ. 14:4, 1 ಕೊರಿಂಥ 15:5, 7).

ಪೌಲ, ಸೀಲ ಹಾಗು ತಿಮೊಥೆಯರು ಅಪೊಸ್ತಲರಾಗಿದ್ದರಾದ್ದರಿಂದ ಅವರು ಥೆಸಲೋನಿಕದಲ್ಲಿನ ನೂತನ ವಿಶ್ವಾಸಿಗಳಿಂದ ಸಹಾಯವನ್ನು ಅಪೇಕ್ಷಿಸುವ ಹಕ್ಕನ್ನು ಹೊಂದಿದ್ದರು (1 ಕೊರಿಂಥ 9:12-14; 2 ಥೆಸಲೋನಿಕ 3:8-9). ಹೇಗಿದ್ದರೂ, ಅವರು ಸಹಾಯವನ್ನು ಕೇಳಿ ಯಾರ ಮೇಲೆಯೂ ಭಾರ ಹಾಕಿರಲಿಲ್ಲ (ವಚನ 9). ಆದದರಿಂದ, ಅವರು ಹಣಕ್ಕಾಗಿ ಸುವಾರ್ತೆ ಸಾರಿದರೆಂದು ಯಾರೂ ಅವರ ಮೇಲೆ ತಪ್ಪು ಹೊರಿಸಲಾಗಲಿಲ್ಲ!.

7-8 ಈ ವಚನಗಳಲ್ಲಿ ಬಣ್ಣಿಸಲ್ಪಟ್ಟಿರುವ ಪೌಲ, ಸೀಲ ಹಾಗು ತಿಮೊಥೆಯರ ನಡವಳಿಕೆಯನ್ನು ನೋಡೋಣ. ಎಲ್ಲಾ ಸಭಾಪಾಲಕರು, ಬೋಧಕರು ಹಾಗು ಹಿರಿಯರು ಅವರ ಮಾದರಿಯನ್ನು ಅನುಸರಿಸಲಿ. ಈ ಅಪೊಸ್ತಲರು ಥೆಸಲೋನಿಕ ದವರೊಂದಿಗೆ ಸುವಾರ್ತೆಯನ್ನು ಮಾತ್ರವೇ ಹಂಚಿಕೊಳ್ಳಲಿಲ್ಲ. ಅವರು ತಮ್ಮ ಪ್ರಾಣವನ್ನು ಸಹ ಹಂಚಿಕೊಂಡರು (2ಕೊರಿಂಥ 12:15; 1 ಯೋಹಾನ 3:16).

9 ಪೌಲನು ಒಬ್ಬ ಅಪೊಸ್ತಲನಾಗಿ ಪ್ರಯಾಣಿಸಿದ ಸ್ಥಳಗಳಲೆಲ್ಲಾ ದುಡಿದು ಜೀವನ ಮಾಡಿಕೊಳ್ಳುವದು ಆತನ ಪದ್ಧತಿಯಾಗಿತ್ತು. ಆತನು ತಾನು ಸ್ಥಾಪಿಸಿದ ಸಭೆಗಳಿಂದ ಹಣವನ್ನಾಗಲಿ ಅಥವಾ ಸಹಾಯವನ್ನಾಗಲಿ ಕೇಳಲಿಲ್ಲ (ಅ.ಕೃ. 18:3; 20:33-34, 2 ಥೆಸಲೋನಿಕ 3:8 ನೋಡಿರಿ).

10-12 ಇಲ್ಲಿ ಪು ನಃ ನಾವು ಪೌಲ, ಸೀಲ ಹಾಗು ತಿಮೊಥೆಯರ ನಡುವಳಿಕೆಯನ್ನು ಕಾಣುತ್ತೇವೆ. ಎಲ್ಲಾ ಕ್ರೈಸ್ತ ನಾಯಕರು ಅವರ ಮಾದರಿಯನ್ನು ಅನುಸರಿಸಲಿ. ದೇವರು ನಮ್ಮನ್ನು ತನ್ನ ರಾಜ್ಯಪ್ರಭಾವಗಳಲ್ಲಿ ಪಾಲುಗಾರರಾಗುವದಕ್ಕೆ ಕರೆಯುತ್ತಾನೆ (ವಚನ 12). ನಾವು ಕ್ರಿಸ್ತನನ್ನು ನಂಬಿದ ಕೂಡಲೇ ದೇವರ ರಾಜ್ಯವನ್ನು ಪ್ರವೇಶಿಸುತ್ತೇವೆ; ಅಂದರೆ, ನಾವು ದೇವರ ಧೊರೆತನ ಹಾಗು ಅಧಿಕಾರದಡೆಯಲ್ಲಿ ಬರುತ್ತೇವೆ. ಮತ್ತು ಕ್ರಿಸ್ತನು ತಿರುಗಿ ಬರುವಾಗ ನಾವು ದೇವರ ಪ್ರಭಾವದಲ್ಲಿ ಪ್ರವೇಶಿಸುವೆವು (1 ಪೇತ್ರ 5:10 ನೋಡಿರಿ). ಆದರೆ ನಾವು ಇದನ್ನು ನೆನಪಿನಲ್ಲಿಟ್ಟುಕೊಳ್ಳೋಣಃ ದೇವರ ರಾಜ್ಯ ಹಾಗು ಪ್ರಭಾವದಲ್ಲಿ ಪ್ರವೇಶಿಸುವದು ನಮ್ಮ ಸದಾವಕಾಶವಾಗಿರುವದಾದರೆ ದೇವರಿಗೆ ಯೋಗ್ಯರಾಗಿ ನಡೆಯಬೇಕೆಂಬದು ನಮ್ಮ

ಕರ್ತವ್ಯವಾಗಿರುತ್ತದೆ! ನಾವು ಆತನ ರಾಜ್ಯ ಪ್ರಭಾವಗಳಲ್ಲಿ ಪ್ರವೇಶಿಸುವದಕ್ಕೆ ಬಯಸುವದಾದರೆ ನಮ್ಮನ್ನು ಕರೆದಿರುವಾತನಿಗೆ ಯೋಗ್ಯರಾಗಿ ನಡೆದುಕೊಳ್ಳಬೇಕು ನಾವು ಹಾಗೆ ಮಾಡದಿದ್ದರೆ ಪ್ರಭಾವಕ್ಕೆ ಬದಲಾಗಿ ದಂಡನೆಯನ್ನು ಪಡೆದುಕೊಳ್ಳುವೆವು .

## ಥೆಸಲೋನಿಕದವರು ಪೌಲನ ಮಹಿಮೆಯಾಗಿದ್ದಾರೆ (2:13-20).

**13** ಥೆಸಲೋನಿಕದವರು ಪೌಲನ ಬೋಧನೆಯನ್ನು ದೇವರ ವಾಕ್ಯವೆಂದು ಅಂಗಿಕರಿಸಿದ್ದರು. ಪೌಲನ ಉದ್ದೇಶವು ದೇವರ ವಾಕ್ಯವನ್ನು ತಿಳಿಯಪಡಿಸುವದಾಗಿತ್ತು ಹೊರತು ಮನುಷ್ಯನ ವಾಕ್ಯವನ್ನಲ್ಲ. ಹೀಗೆ ತನ್ನ ಶ್ರೋತೃಗಳು ತನ್ನ ವಾಕ್ಯವನ್ನು ದೇವರಿಂದ ಬಂದದ್ದೆಂಬದಾಗಿ ಅಂಗಿಕರಿಸಿಕೊಳ್ಳುವರೆಂಬದು ಯಾವಾಗಲೂ ಆತನ ನಿರೀಕ್ಷೆಯಾಗಿತ್ತು (1 ಕೊರಿಂಥ 2:4-5; ಗಲಾತ್ಯ 1:11-12).

ದೇವರ ವಾಕ್ಯವು ಜೀವವುಳ್ಳ ವಾಕ್ಯವಾಗಿದ್ದು ನಂಬುವವರೊಳಗೆ ಕೆಲಸ ನಡಿಸುವದಾಗಿದೆ (ಇಬ್ರಿಯ 4:12; 1ಪೇತ್ರ 1:23 ನೋಡಿರಿ).

**14** ಎಲ್ಲಾ ಕ್ರೈಸ್ತರು ಕ್ರಿಸ್ತನಿಗೋಸ್ಕರ ಬಾಧೆಯನ್ನನುಭವಿಸಲು ಸಿದ್ಧರಾಗಿರಬೇಕು (2 ತಿಮೊಥೆ 3:12). ನಮ್ಮ ನಂಬಿಕೆಯು ಬಾಧೆಯ ಮೂಲಕ ಪರಿಶೋಧಿಸಲ್ಪಡುತ್ತದೆ (ಯಾಕೋಬ 1:2-3, 1 ಪೇತ್ರ 1:6-7). ಹೀಗೆ ಥೆಸಲೋನಿಕದವರು ನಂಬಿಕೆ ನಿಜವಾದದ್ದೆಂದು ಪೌಲನುಬಲ್ಲವನಾಗಿದ್ದಾನೆ, ಯಾಕೆಂದರೆ ಬಹಳಷ್ಟು ಬಾಧೆಯನ್ನು ಅನುಭವಿಸಿದಾಗ್ಯು ಅವರ ನಂಬಿಕೆ ದೃಡವಾಗಿ ಉಳಿದಿರುತ್ತದೆ.

ಥೆಸಲೋನಿಕದವರು ಯೂದಾಯದಲ್ಲಿರುವ ದೇವರ ಸಭೆಗಳನ್ನು ಅನುಸರುಸುವವರಾಗಿದ್ದರು. ಯೂದಾಯವು ಇಸ್ರಾಯೇಲಿನ ದಕ್ಷಿಣ ಪ್ರಾಂತ್ಯವಾಗಿತ್ತು. ಯೆರೂಸಲೇಮ ಅದರ ರಾಜಧಾನಿಯಾಗಿತ್ತು. ಯೂದಾಯದಲ್ಲಿನ ಸಭೆಗಳು ಯೆಹೂದ್ಯರಿಂದ ಕಠಿಣವಾದ ಹಿಂಸೆಯನ್ನು ಅನುಭವಿಸಿದ್ದವು . ಸ್ವತಃ ಪೌಲನು ಮುಖ್ಯ ಹಿಂಸಕರಲ್ಲಿ ಒಬ್ಬನಾಗಿದ್ದನು (ಅ.ಕೃ. 8:1,3). ಯೂದಾಯದಲ್ಲಿರುವ ಸಭೆಗಳು ಹಿಂಸೆಯನ್ನು ಸೈರಿಸಿಕೊಂಡ ಪ್ರಕಾರವೇ ಥೆಸಲೋನಿಕದವರು ಹಿಂಸೆಯನ್ನು ಸೈರಿಸಿಕೊಂಡಿದ್ದರು. ಹಾಗಾದರೆ, ಈ ರೀತಿಯಲ್ಲಿ ಥೆಸಲೋನಿಕದವರು ಯೂದಾಯದಲ್ಲಿರುವ ಕ್ರೈಸ್ತರನ್ನು ಅನುಸರಿಸುವವರಾಗಿದ್ದರು.

**15-16** ಪೌಲನು ಹೋದ ಸ್ಥಳಗಳಲೆಲ್ಲಾ ಯೆಹೂದ್ಯರು ಆತನನ್ನು ಕಟುವಾಗಿ ವಿರೋಧಿಸಿದರು (ಅ.ಕೃ. 9:23, 13:45; 14:19; 18:12; 21:27). ಯೆಹೂದ್ಯರು ವಿಶೇಷವಾಗಿ, ಪೌಲನು ಒಮ್ಮೆ ಅವರಲ್ಲೊಬ್ಬನಾಗಿದ್ದು ಈಗ ಕ್ರೈಸ್ತನಾಗಿದ್ದಾನೆ ಎಂಬ ಕಾರಣಕ್ಕಾಗಿ ಆತನನ್ನು ದ್ವೇಷಿಸಿದರು; ಅವರ ದೃಷ್ಟಿಯಲ್ಲಿ ಆತನು ಒಬ್ಬ ವಿಶ್ವಾಸಭ್ರಷ್ಟನೂ ದ್ರೋಹಿಯೂ ಆಗಿದ್ದನು.

ಯೆಹೂದ್ಯರು ಕರ್ತನಾದ ಯೇಸುವನ್ನು ...... ಕೊಂದರು (ವಚನ 15). ಅಂದರೆ, ಯೆಹೂದ್ಯರು ರೋಮಾಯ ದೇಶಾಧಿಪತಿಯ ಎದುರಿನಲ್ಲಿ ಯೇಸುವಿನ ತಪ್ಪು ಹೊರಿಸಿ ಆತನಿಗೆ ಮರಣದಂಡನೆಯನ್ನು ವಿಧಿಸಬೇಕೆಂದು ದೇಶಾಧಿಪತಿಯ ಮನವೊಲಿಸಿದರು (ಮಾರ್ಕ 15:1, ಯೋಹಾನ 18:28; ಅ,ಕೃ. 2:22-23). ಯೆಹೂದ್ಯರು ಯೆಸುವಿನ ಮರಣಕ್ಕೆ ಸಂಪೂರ್ಣಜವಾಬ್ದಾರರಾಗಿದ್ದರು.

ಯೆಹೂದ್ಯರು ಹಳೆ ಒಡಂಬಡಿಕೆಯ ತಮ್ಮ ಪ್ರವಾಧಿಗಳನ್ನೂ ಕೊಂದಿದ್ದರು (ಅ.ಕೃ. 7:51-52). ಅಪೊಸ್ತಲರು ಹೋದಕಡೆಗಳಲೆಲ್ಲಾ ಯೆಹೂದ್ಯರು ಅವರನ್ನು ವಿರೋಧಿಸಿ ಆ ಸ್ಥಳದಿಂದ ಅಟ್ಟಿಬಿಡುವದಕ್ಕೆ ಪ್ರಯತ್ನಿಸಿದರು (ಅ.ಕೃ. 13:50, 17:5, 13-14). ಅನ್ಯಜನರಿಗೆ ಸುವಾರ್ತೆಯನ್ನು ಹೇಳದಂತೆ ಯೆಹೂದ್ಯರುಪೌಲನಿಗೆ ತಡೆಯನ್ನೊಡ್ಡಲು ಪ್ರಯತ್ನಿಸಿದರು. ಹೀಗೆ ಮಾಡುವದರಲ್ಲಿ ಯೆಹೂದ್ಯರು ಸ್ವತಃ ದೇವರನ್ನೇ ವಿರೋಧಿಸಿದರು. ದೇವರ ಕೋಪವು ಅವರ ಮೇಲೆ ಸಂಪೂರ್ಣವಾಗುತ್ತಾ ಬಂತು ಎಂದು ಪೌಲನು ಹೇಳುತ್ತಾನೆ (ವಚನ 16). ಪೌಲನು ಇಲ್ಲಿ ಅಂತಿಮ ನ್ಯಾಯತೀರ್ಪಿನ ಬಗ್ಗೆ ಮಾತಾಡುತ್ತಿದ್ದಾನೆ; ಯೆಹೂದ್ಯರಿಗೆ ದೇವರ ನ್ಯಾಯತೀರ್ಪು ಕೋಪದ ಹಾಗೆ ತೋರುವದು. ಅದು ಅವರ ಮೇಲೆ ಬರುವದು ಎಷ್ಟು ಖಚಿತವಾಗಿತ್ತೆಂದರೆ ಈಗಾಗಲೇ ಅದು ಸಂಭವಿಸಿದೆ ಎಂಬಂತೆ ಪೌಲನು ಮಾತಾಡುತ್ತಾನೆ. ವಾಸ್ತವದಲ್ಲಿ, ಈ ಪತ್ರಿಕೆಯು ಬರೆಯಲ್ಪಟ್ಟ ಇಪ್ಪತ್ತು ವರ್ಷಗಲ ತರುವಾಯ ಯೆಹೂದ್ಯರು ದೇವರ ನ್ಯಾಯತೀರ್ಪಿನ ರುಚಿಯನ್ನು ಕಂಡರು; ಆಗ ಯೆಹೂದ್ಯರ ರಾಜಧಾನಿಯಾದ ಯೆರೂಸಲೇಮ ರೋಮಾಯರಿಂದ ಸಂಪೂರ್ಣವಾಗಿ ನಾಶವಾಯಿತು. ಹಾಗು ಮರಣದಿಂದ ಪಾರಾದ ಕೆಲವು ಮಂದಿ ಯೆಹೂದ್ಯರು ಚದುರಿಸಲ್ಪಟ್ಟರು.

**17-18** ಪೌಲನು ಥೆಸಲೋನಿಕದವರಿಂದ ಅಗಲಿಸಲ್ಪಟ್ಟಿದ್ದನು. ಯಾಕೆಂದರೆ, ಅಲ್ಲಿದ್ದ ಆತನ ವಿರೋಧಿಗಳು ಊರನ್ನು ಬಿಟ್ಟು ಹೋಗುವಂತೆ ಆತನನ್ನು ಒತ್ತಾಯಿಸಿದ್ದರು (ಅ.ಕೃ. 17:5-9 ನೋಡಿರಿ).

ಸೈತಾನನು ಯಾವಾಗಲೂದೇವರ ಸೇವಕರನ್ನು ವಿರೋಧಿಸುತ್ತಾನೆ ಹಾಗು ಅವರು ದೇವರ ಕೆಲಸವನ್ನು ಮಾಡದಂತೆ ಅಡ್ಡಿಪಡಿಸಲು ಪ್ರಯತ್ನಿಸುತ್ತಾನೆ. ಸೈತಾನನು ದೇವರ ಅಂತಿಮ ಅಧಿಕಾರದಡಿಯಲ್ಲಿರುತ್ತಾನೆ – ಯಾಕೆಂದರೆ, ಜಗತ್ತಿನಲ್ಲಿ ಇರುವದೆಲ್ಲವೂ ದೇವರ ಅಧಿಕಾರದಡಿಯಲ್ಲಿರುತ್ತದೆ. ಹಾಗಿದ್ದರೂ, ಸೈತಾನನು ದೊಡ್ಡ ಶಕ್ತಿಯನ್ನು ಹೊಂದಿದ್ದು ಆತನು ಅದನ್ನು ದ್ವರ ಕಾರ್ಯಕ್ಕೆ ಅಭ್ಯಂತರ ಪಡಿಸಲು ಉಪಯೋಗಿಸುತ್ತಾನೆ.

ಪೌಲನು ಥೆಸಲೋನಿಕಕ್ಕೆ ಹಿಂದಿರುಗಿ ಹೋಗಲಿಲ್ಲವೇಕೆ? ಯಾಕೆಂದರೆ, ಪೌಲನನ್ನು ಬಂಧನದಿಂದ ಬಿಡುಗಡೆಗೊಳಿಸಿ ಊರನ್ನು ಬಿಟ್ಟು ಹೋಗುವಂತೆ ಮಾಡಲು ಯಾಸೋನ ಹಾಗು ಥೆಸಲೋನಿಕದ ಇತರ ಕೆಲವು ವಿಶ್ವಾಸಿಗಳು

"ಜಾಮೀನು" ನೀಡಿದ್ದರು (ಅ.ಕೃ. 17:9). ಪೌಲನು ಪುನಃ ಥೆಸಲೋನಿಕಕ್ಕೆ ಹೋಗಿದ್ದರೆ ಆ ಜಾಮೀನು (ಹೊಣೆ) ಇಲ್ಲದಂತಾಗಿ ಯಾಸೋನ ಹಾಗು ಆತನ ಸಹಚರರು ದೊಡ್ಡ ನಷ್ಟವನ್ನು ಅನುಭವಿಸುತ್ತಿದ್ದರು. ಹೀಗೆ, ಜಾಮೀನಿನ ಮುಖಾಂತರವಾಗಿ ಊರಿನ ಅಧಿಕಾರಿಗಳು ಪೌಲನನ್ನು ತಮ್ಮ ಊರಿಗೆ ಹಿಂದಿರುಗಿ ಬಾರದಂತೆ ಶಕ್ತರಾಗಿದ್ದರು.

**19-20** ಪೌಲನು ಕರ್ತನಾದ ಯೇಸುವಿನ ನ್ಯಾಯತೀರ್ಪಿನ ಸಿಂಹಾಸನದ ಮುಂದೆ ನಿಂತುಕೊಳ್ಳುವಾಗ ಅವನು ಥೆಸಲೋನಿಕದ ವಿಶ್ವಾಸಿಗಳಲ್ಲಿ ಹೊಗಳಿಕೊಳ್ಳುವದಕ್ಕೆ ಶಕ್ತನಾಗುವನು. ಅವರು ಆತನ ಸಂತೋಷವೂ.. ಜಯಮಾಲೆಯೂ ಆಗುವರು (ಫಿಲಿಪ್ಪಿ 2:16, 4:1). ಪೌಲನ ಕಾಲದಲ್ಲಿ ಓಟದೊಳಗೆ ಜಯಶಾಲಿಯಾದವರಿಗೆ ವಿಶೇಷ ಎಲೆಗಳಿಂದ ಮಾಡಿದ "ಜಯಮಾಲೆ" ಯನ್ನು ಕೊಡಲಾಗುತ್ತಿತ್ತು, ಆದರೆ ಶೀಘ್ರವೇ ಬಾಡಿಹೋಗುವ ಎಲೆಗಳ ಜಯಮಾಲೆಯಂ- ತಲ್ಲದೆ ಪೌಲನ ಜಯಮಾಲೆಯು ಸದಾಕಾಲವೂ ಉಳಿಯುವದು. ಮತ್ತು ಪ್ರತಿಯೊಬ್ಬ ವಿಶ್ವಾಸಿಯ ಜಯಮಾಲೆಯು ಹಾಗೆಯೇ ಇರುವದು (1 ಕೊರಿಂಥ 9:24-25).

---

## ಅಧ್ಯಾಯ - 3

### ತಿಮೊಥೆಯನು ಸಭೆಯನ್ನು ದೃಡಪಡಿಸಿದ್ದು (3:1-13)

**1** ಪೌಲನು ಥೆಸಲೋನಿಕದಿಂದ ಬೆರೋಯ ಊರಿಗೆ ಹೊರಟಿದ್ದನು. ಅಲ್ಲಿಂದ ಆತನು ಗ್ರೀಸಿನ ರಾಜಧಾನಿಯಾದ ಅಥೇನೆಗೆ ಪ್ರಯಾಣಿಸಿದನು (ಅ.ಕೃ. 17:13-15). ಪೌಲನು ಥೆಸಲೋನಿಕದಲ್ಲಿನ ನೂತನ ವಿಶ್ವಾಸಿಗಳ ಕುರಿತು ಬಹಳ ಚಿಂತಾಕ್ರಾಂತನಾಗಿದ್ದನು. ಪೌಲನು ಅತಿ ಶೀಘ್ರವಾಗಿ ಅವರನ್ನು ಬಿಟ್ಟುಹೋಗಲು ಒತ್ತಾಯಿಸಲ್ಪಟ್ಟಿದ್ದನು. ಅವರು ಕ್ರಿಸ್ತನಲ್ಲಿ ಕೂಸುಗಳಷ್ಟೇ ಆಗಿದ್ದರು. ಈಗಾಗಲೇ ಅವರ ಮೇಲೆ ಹಿಂಸೆಯು ಬಂದಿತ್ತು, ಮತ್ತು ಅವರಿಗೆ ಸಹಾಯ ಮಾಡುವದಕ್ಕೆ ಪೌಲನು ಅಲ್ಲಿ ಇರಲು ಆಗಲಿಲ್ಲ. ಅವರು ನಂಬಿಕೆಯಲ್ಲಿ ದೃಡವಾಗಿ ನಿಂತಿದ್ದಾರೋ ಅಥವಾ ಇಲ್ಲವೋ ಎಂಬದರ ಕುರಿತು ಚಿಂತೆಗೊಳಗಾಗಿದ್ದನು.

**2** ಆದದರಿಂದ, ಅವರನ್ನು ದೃಡಪಡಿಸುವದಕ್ಕೂ ಪ್ರಬೋಧಿಸುವದಕ್ಕೂ ಪೌಲನು ತಿಮೊಥೆಯನ್ನು ಕಳುಹಿಸಿದನು.

**3-4** ಸಂಕಟಗಳು ಬರಲೇಬೇಕು ಎಂಬದನ್ನು ಥೆಸಲೋನಿಕದವರು ಬಲ್ಲವರಾಗಿದ್ದರು; ಅವು ಗಳು ಬರುವದು ನಿಶ್ಚಯ ಎಂಬದಾಗಿ ಪೌಲನು ಅವರನ್ನು ಎಚ್ಚರಿಸಿದ್ದನು. ಮತ್ತು ಸಂಕಟಗಳು ಬಂದೇ ಇದ್ದವು. ಆದ್ದರಿಂದ, ಥೆಸಲೋನಿಕದವರು ವಿಸ್ಮಯಗೊಳ್ಳದಿರಲಿ ಅಥವಾ ನಿರಾಸರಾಗದಿರಲಿ. ನಾವು ಸಂಕಟಗಳನ್ನು ಅನುಭವಿಸುವದಕ್ಕೆ ನೇಮಿಸಲ್ಪಟ್ಟವರು; ವಾಸ್ತವದಲ್ಲಿ, ಅಂಥ ಸಂಕಟಗಳು ನಮ್ಮ ಹಿತಕ್ಕಾಗಿಯೇ ಇರುತ್ತವೆ (ರೋಮ 5:3; ಯಾಕೋಬ 1:2-3; 1 ಪೇತ್ರ 3:12-13 ನೋಡಿರಿ). ಭೂಲೋಕದಲ್ಲಿ ಕ್ರಿಸ್ತನಿಗೋಸ್ಕರ ಬಾಧೆಯನ್ನು ಅನುಭವಿಸುವವರು ಪರಲೋಕದಲ್ಲಿ ಆತನ ಮಹಿಮೆಯೊಳಗೆ ಪಾಲುಗಾರರಾಗುವರು (ಮತ್ತಾಯ 10:22; ಅ.ಕೃ. 14:22; ರೋಮ 8:17-18, 2 ತಿಮೊಥೆ 2:12). ಆದದರಿಂದ, ನಾವು ಕ್ರಿಸ್ತನ ನಿಮಿತ್ತ ಅನುಭವಿಸುವ ಬಾಧೆಗಳಲ್ಲಿ ಸಂತೋಷಪಡೋಣ, ಪರಲೋಕದಲ್ಲಿ ನಮಗೆ ಬಹಳ ಪ್ರತಿಫಲ ದೊರೆಯುವದು (ಮತ್ತಾಯ 5:10-12; ಯೋಹಾನ 16:33).

**5** ಪೌಲನು ಇಲ್ಲಿ ಪ್ರಸ್ತಾಪಿಸುವ ಶೋಧಕನು ಸೈತಾನನಾಗಿದ್ದಾನೆ (ಮತ್ತಾಯ 4:3, 10). ವಿಶ್ವಾಸಿಗಳು ತಮ್ಮ ನಂಬಿಕೆಯನ್ನು ತೊರೆಯುವಂತೆ ಸೈತಾನನು ಅವರನ್ನು ಶೋಧಿಸಲು ಪ್ರಯತ್ನಿಸುತ್ತಾನೆ. ಸೈತಾನನು ಯಾವಾಗಲೂ ಕೆಲಸದಲ್ಲಿ ನಿರತನಾಗಿದ್ದಾನೆ. ವಿಶೇಷವಾಗಿ, ಆತನು ಇತ್ತೀಚೆಗಷ್ಟೇ ತನ್ನ ರಾಜ್ಯದಿಂದ ಪಾರಾಗಿರುವ ಹಾಗು ಇನ್ನೂ ಬಲಹೀನವಾದ ನಂಬಿಕೆಯಲ್ಲಿರುವ ನೂತನ ವಿಶ್ವಾಸಿಗಳ ಮೇಲೆ ದಾಳಿ ಮಾಡುತ್ತಾನೆ.

ಸೈತಾನನು ವಿಶ್ವಾಸಿಗಲನ್ನು ಶೋಧನೆಗೊಳಪಡಿಸುವದರ ಮೂಲಕ ಕಾರ್ಯಮಾಡುತ್ತಾನೆ (ಮತ್ತಾಯ 6:13). ಶೋಧನೆ ಗಳು ಅನೇಕ ವಿಧಗಳಲ್ಲಿರುತ್ತವೆ. ಉದಾಹರಣೆಗೆ, ಒಬ್ಬ ನೂತನ ವಿಶ್ವಾಸಿಯು ತನ್ನ ಹಿಂದಿನ ಧರ್ಮಕ್ಕೆ ಸಂಬಂಧಿಸಿದ ಯಾವದಾದರೂ ಆಚಾರವನ್ನು ನಡೆಸುವಂತೆ ಒತ್ತಾಯಸಲ್ಪಡಬಹುದು. ಅವನು ತಾನು ಹಾಗೆ ಮಾಡಲು ನಿರಾಕರಿಸುವ- ದಾದರೆ ತನ್ನ ಕುಟುಂಬದ ಸ್ವಾಸ್ಥ್ಯವನ್ನು ಕಳೆದುಕೊಳ್ಳುವೆನೆಂದು ಭಯಪಡುತ್ತಾನೆ. ಹೀಗೆ ಆತನು ವಿಮುಖನಾಗಿ ತನ್ನ ಪೂರ್ವದ.ದೇವರುಗಳನ್ನು ಪೂಜಿಸುವ ಶೋಧನೆಗೆ ಒಳಗಾಗುತ್ತಾನೆ. ಆದರೆ ಆತನು ಅಂಥಹ ಶೋಧನೆಯನ್ನು ಎದುರಿಸಬೇಕು. ನಮ್ಮನ್ನು ಪರಲೋಕದಲ್ಲಿ ಸ್ವಾಸ್ಥವನ್ನು ಕಳೆದುಕೊಳ್ಳುವ ಅಪಾಯಕ್ಕೆ ಗುರಿಮಾಡಿಕೊಳ್ಳುವದಕ್ಕಿಂತಲೂ ನಮ್ಮ ಭೂಲೋಕದ ಸ್ವಾಸ್ಥ್ಯವನ್ನು ಕಳೆದುಕೊಳ್ಳುವದು ಎಷ್ಟೋ ಉತ್ತಮವಾದದ್ದು. ನೂತನ ವಿಶ್ವಾಸಿಗಳಿಗೆ ಇತರ ಕೆಲವು ಶೋಧನೆಗಳಿರುತ್ತವೆ. ಉದಾಹರಣೆ, ಸೆರೆಯಲ್ಲಿ ಹಾಕಲ್ಪಡುವ ಭಯ, ಉದ್ಯೋಗ ಕಳೆದುಕೊಳ್ಳುವ ಭಯ, ತನ್ನ ಸ್ನೇಹಿತರ-ರಿಂದಲೇ ಅಪಹಾಸ್ಯಕ್ಕೊಳಗಾಗುತ್ತೇವೆಂಬ ಹೆದರಿಕೆ, ಮುಂತಾದವು ಗಳು. ಈ ಎಲ್ಲಾ ಶೋಧನೆಗಳನ್ನು ನಮ್ಮ ಮೇಲೆ ಬರುವದಕ್ಕೆ ಅನುಮತಿಸುತ್ತಾನೆ. ಖಂಡಿತವಾಗಿಯೂ, ಇತರ ಅನೇಕ ಶೋಧನೆಗಳಿರುತ್ತವೆಃ ಸಂಶಯ, ಭಯ, ಅನಾರೋಗ್ಯ ಮುಂತಾದವು ಗಳು. ಸೈತಾನನು ನಮ್ಮ ನಂಬಿಕೆಯನ್ನು ಹಾಳುಮಾಡಿ ಕ್ರಿಸ್ತನ ಕೆಲಸವನ್ನು ತಡೆಯುವದಕ್ಕೆ ಪ್ರಯತ್ನಿಸಲು

ನಾನಾ ವಿಧಾನಗಳನ್ನು ಉಪಯೋಗಿಸುತ್ತಾನೆ (ಮತ್ತಾಯ 13:39; ಮಾರ್ಕ 4:15; ಲೂಕ 22:3; 1 ಕೊರಿಂಥ 7:5; 2 ಕೊರಿಂಥ 4:4; 12:7; 2 ಥೆಸಲೋನಿಕ 2;9 ನೋಡಿರಿ).

ಆದರೂ ಈ ದೊಡ್ಡ ವೈರಿಯಾದ ಸೈತಾನನು ಈಗಾಗಲೇ ಯೇಸುಕ್ರಿಸ್ತನಿಂದ ಪರಾಭವಗೊಳಿಸಲ್ಪಟ್ಟಿದ್ದಾನೆ (ಕೊಲಸ್ಸೆ 2:15 ಮತ್ತು ಕ್ರಿಸ್ತನ ಬಲದಲ್ಲಿ ನಾವು ಸಹ ನಂಬಿಕೆಯೆಂಬ ಗುರಾಣಿಯನ್ನು ಹಿಡಿದುಕೊಳ್ಳುವದರ ಮೂಲಕ ಸೈತಾನನ್ನು ಸೋಲಿಸಬಲ್ಲೆವು (ಎಫೆಸ 6:16).

**6-7** ನಿಜವಾದ ಸಭಾಪಾಲಕ ಅಥವಾ ಬೋಧಕನ ಮುಖ್ಯ ಗುರಿಯೇನೆಂದರೆ, ಜನರನ್ನು ಕ್ರಿಸ್ತನ ಬಳಿಗೆ ನಡೆಸಿ, ನಂತರ ವಿಶ್ವಾಸ ಪ್ರೀತಿಗಳಲ್ಲಿ ಬೆಳೆಯುವಂತೆ ಅವರಿಗೆ ಸಹಾಯ ಮಾಡುವದೇ. ಒಬ್ಬ ಸಭಾಪಾಲಕ ಅಥವಾ ಬೋಧಕನು ನೂತನ ವಿಶ್ವಾಸಿಗಳಿಗೆ ತಂದೆಯಂತೆ ಇರುತ್ತಾನೆ (ಗಲಾತ್ಯ 4:19; 1 ಥೆಸಲೋನಿಕ 2:8, 11). ಈ ಕಾರಣದಿಂದಲೇ ಪೌಲನು ಥೆಸಲೋನಿಕದಲ್ಲಿರುವ ತನ್ನ ಆತ್ಮೀಕ ಮಕ್ಕಳ ವಿಷಯದಲ್ಲಿ ಒಳ್ಳೇಯ ಸುದ್ದಿಯನ್ನು ಕೇಳಿ ಬಹಳ ಸಂತೋಷಗೊಂಡಿದ್ದನು. ತಿಮೊಥೆಯನು ಥೆಸಲೋನಿಕದವರ ವಿಶ್ವಾಸ ಪ್ರೀತಿಗಳ ವಿಷಯದಲ್ಲಿ ಒಳ್ಳೇಯ ಸುದ್ದಿಯನ್ನು ತಂದನೆಂಬದನ್ನು ಗಮನಿಸಿರಿ (ವಚನ 6). ವಿಶ್ವಾಸ (ನಂಬಿಕೆ) ಮತ್ತು ಪ್ರೀತಿ ನಮ್ಮ ಜೀವಿತಗಳಲ್ಲಿ ಅತಿ ಅವಶ್ಯಕ ಹಾಗು ಪ್ರಾಮುಖ್ಯವಾದ ಎರಡು ಸಂಗತಿಗಳಾಗಿವೆ. ಒಂದು ವೇಳೆ ನಾವು ಕ್ರಿಸ್ತೀಯ ಜೀವಿತವನ್ನು ಕೇವಲ ಎರಡು ಶಬ್ದಗಳಲ್ಲಿ ಬಣ್ಣಿಸಬೇಕಾಗುವದಾದರೆ ನಾವು ವಿಶ್ವಾಸ ಮತ್ತು ಪ್ರೀತಿ ಎಂಬ ಪದಗಳಿಂದ ಅದನ್ನು ಬಣ್ಣಿಸಬಲ್ಲೆವು (ಗಲಾತ್ಯ 5:6 ಮತ್ತು ವ್ಯಾಖ್ಯಾನ ನೋಡಿರಿ).

**8** ಈಗ ನಮಗೆ ಜೀವಕಳೆ. ಒಂದು ಕಡೆಯಲ್ಲಿ, ಪೌಲನು ಹೇಳಿದ್ದೇನೆಂದರೆಃ ನನಗಂತು ಬದುಕುವದೆಂದರೆ ಕ್ರಿಸ್ತನೇ (ಫಿಲಿಪ್ಪಿ 1:21). ಇನ್ನೊಂದೆಡೆಯಲ್ಲಿ ಪೌಲನು ತನ್ನ ಆತ್ಮೀಕ ಮಕ್ಕಳಲ್ಲಿ "ಜೀವಿಸುತ್ತಾನೆ". ಕರ್ತನಲ್ಲಿ ದೃಢವಾಗಿ ನಿಲ್ಲುವದಾದರೆ ಅದು ಪೌಲನಿಗೆ "ಜೀವಕಳೆ" ಆಗಿರುವದು.

**9-10** ಪೌಲನು ಥೆಸಲೋನಿಕದವರ ನಂಬಿಕೆಯ ಕೊರತೆಗಳನ್ನು ನೀಗಿಸುವದಕ್ಕೆ ಪುನಃ ಅವರ ಬಳಿಗೆ ಹೋಗಲು ಇಚ್ಛಿಸಿದನು (ರೋಮ 1:11 ನೋಡಿರಿ). ಈ ನೂತನ ವಿಶ್ವಾಸಿಗಳಿಗೆ ಆತ್ಮೀಕ ಜ್ಞಾನದ ಹಾಗು ಗಟ್ಟಿಯಾದ ಆಹಾರದ ಅಗತ್ಯತೆಯಿತ್ತು (ಇಬ್ರಿಯ 5:13-14; 6:1 ನೋಡಿರಿ). ಅವರು ಕ್ರಿಸ್ತನಲ್ಲಿ ಪರಿಪೂರ್ಣರಾಗುತ್ತಾ ಹೋಗಬೇಕಾಗಿತ್ತು (ಎಫೆಸ 4:12-13).

**11** ಪೌಲನು ಇಲ್ಲಿ ದೇವರನ್ನು ನಮ್ಮ ತಂದೆಯಾದ ದೇವರು ಎಂದು ಕರೆಯುತ್ತಾನೆ. ಕ್ರೈಸ್ತರಿಗೆ ದೇವರನ್ನೂ "ನಮ್ಮ ತಂದೆ" ಎಂದು ಕರೆಯುವ ಹಕ್ಕಿರುತ್ತದೆ. ದೇವರು ಎಲ್ಲಾ ಮನುಷ್ಯರ ನಿರ್ಮಾನಿಕನಾಗಿದ್ದಾರೆ, ಆದರೆ ಎಲ್ಲಾ ಮನುಷ್ಯರ ತಂದೆಯಲ್ಲ. ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ದೇವರ ಕುಟುಂಬದಲ್ಲಿ ಸ್ವೀಕಾರ ಮಾಡಿಕೊಳ್ಳಲ್ಪಟ್ಟವರಿಗೆ ಮಾತ್ರವೇ ಆತನು ತಂದೆಯಾಗಿದ್ದಾನೆ (ರೋಮ 8:15-16; 4:6-7).

ಪೌಲನು ತಾನು ಥೆಸಲೋನಿಕಕ್ಕೆ ಹೋಗಲು ದೇವರು ಮಾರ್ಗವನ್ನು ಸರಾಗ ಮಾಡಲಿ ಎಂದು ಪ್ರಾರ್ಥಿಸುತ್ತಾನೆ. ಪೌಲನು ಅತ್ತ ಇತ್ತ ತನ್ನ ಸ್ವಂತ ಇಚ್ಛೆ ಹಾಗು ಯೋಜನೆಯಂತೆ ಪ್ರಯಾಣಿಸಲಿಲ್ಲ. ದೇವರು "ಮಾರ್ಗವನ್ನು ಸರಾಗ ಮಾಡಿದ" ಸ್ಥಳಗಳಿಗೆ ಮಾತ್ರವೇ ಪೌಲನು ಹೋದನು; ಆತನು ದೇವರ ಮಾರ್ಗದರ್ಶನಕ್ಕನುಸಾರವಾಗಿ ಮಾತ್ರವೇ ಹೋದನು.

**12** ದೇವರು ಥೆಸಲೋನಿಕದ ಪ್ರೀತಿಯು ಅಭಿವೃದ್ಧಿಯಾಗುವಂತೆ ಮಾಡಲಿ ಎಂದು ಪೌಲನು ಪ್ರಾರ್ಥಿಸುತ್ತಾನೆ. ಕ್ರೈಸ್ತರಾದ ನಾವು ಆತ್ಮೀಕ ಗುಣಗಳಲ್ಲಿ ಯಾವಾಗಲೂ ಅಭಿವೃದ್ಧಿಗೊಳ್ಳುವವರೂ ಯಾವಾಗಲೂ ಬೆಳೆಯುತ್ತಿರುವವರೂ ಆಗಿರಬೇಕು. ನಾವು ಒಂದೇ ಸ್ಥಿತಿಯಲ್ಲಿ ಇರಲು ಸಾಧ್ಯವಿಲ್ಲ. ನಾವು ಬೆಳೆಯಬೇಕು ಇಲ್ಲವೆ ಒಣಗಿ ಹೋಗಬೇಕು. ನಮ್ಮ ಪ್ರೀತಿಯು ಬೆಳೆಯುತ್ತಿರುವಂತೆ ಅದು ಒಬ್ಬರೊಬ್ಬರ ಮೇಲೆ ಮಾತ್ರವಲ್ಲ, ಆದರೆ ಎಲ್ಲಾ ಮನುಷ್ಯರ ಮೇಲೆಯೂ ಅಭಿವೃದ್ಧಿ ಹೊಂದಬೇಕು.

**13** ಕರ್ತನಾದ ಯೇಸು ನಿಮ್ಮಹೃದಯಗಳಲ್ಲಿ ದೃಢಪಡಿಸಿ. ನೀವು ಪರಿಶುದ್ಧರೂ ನಿರ್ದೋಷಿಗಳೂ ಆಗಿರುವಂತೆ ಮಾಡಲಿ. ಒಬ್ಬನ ಹೃದಯವನ್ನು ದೃಢಪಡಿಸುವದೆಂದರೆ ಆತನ ನಂಬಿಕೆಯನ್ನು ದೃಢಪಡಿಸುವದೆಂದು ಅರ್ಥವಾಗಿದೆ. (1 ಕೊರಿಂಥ 1:8 ನೋಡಿರಿ). ನಮ್ಮ ಗುರಿಯು ಪರಶುದ್ಧರೂ ನಿರ್ದೋಷಿಗಳೂ ಆಗಿರುವದೇ; ಅದಕ್ಕಿಂತಲೂ ಕಡಿಮೆಯಾದದ್ದು ದೇವರಿಗೆ ಸಂತೃಪ್ತಿಯನ್ನು ತರುವದಿಲ್ಲ (ಮತ್ತಾಯ 5:8, 48; ಎಫೆಸ 1:4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಪರಿಶುದ್ಧರಾಗಿ ಇರುವದೆಂದರೆ ದೇವರಿಗಾಗಿ "ಪ್ರತ್ಯೇಕಿಸಲ್ಪಡುವದು" ಎಂಬ ಅರ್ಥವಾಗಿದೆ. ಈ ಕಾರಣದಿಂದಲೇ ಹೊಸ ಒಡಂಬಡಿಕೆಯಲ್ಲಿ ಕ್ರೈಸ್ತರು ಹಲವಾರು ವೇಳೆಗಳಲ್ಲಿ "ದೇವಜನರು" ಅಥವಾ "ಪರಿಶುದ್ಧರೂ' ಎಂದುಕರೆಯಲ್ಪಟ್ಟಿದ್ದಾರೆ. ಹೊಸ ಒಡಂಬಡಿಕೆಯಲ್ಲಿ ದೇವದೂತರು ಸಹ ಪರಿಶುದ್ಧರು ಎಂದು ಕರೆಯಲ್ಪಟ್ಟಿರುತ್ತಾರೆ. ನಮ್ಮ ಕರ್ತನಾದ ಯೇಸು ಭೂಮಿಗೆ ತಿರಿಗಿ ಬರುವಾಗ ದೇವದೂತರು ಆತನ ಜೊತೆಯಲ್ಲಿರುವರು (ಮಾರ್ಕ 8:38; 2 ಥೆಸಲೋನಿಕ 1:7). ಯೇಸು ಎಲ್ಲಾ ಮನುಷ್ಯರಿಗೆ ನ್ಯಾಯತೀರಿಸಲು ಬರುವನು (ಯೋಹಾನ 5:22, 2 ತಿಮೊಥೆ 4:1). ಆದದರಿಂದ, ಒಂದು ದಿನ ನಾವು ಕ್ರಿಸ್ತನ ನ್ಯಾಯತೀರ್ಪಿನ ಸಿಂಹಾಸನದ ಎದುರಿನಲ್ಲಿ ನಿಂತುಕೊಳ್ಳಬೇಕೆಂದನ್ನು ನೆನಪಿನಲ್ಲಿಟ್ಟುಕೊಂಡು ಪರಿಶುದ್ಧರೂ ನಿರ್ದೋಷಿಗಳೂ ಆಗಿರುವದಕ್ಕೆ ಕ್ರಿಸ್ತನ ಸಾಮರ್ಥ್ಯದಲ್ಲಿ ಪ್ರಯಾಸ ಪಡೋಣ (ರೋಮ 14:10; 2 ಕೊರಿಂಥ 5:10; 1 ಯೋಹಾನ 2:28).

## ಅಧ್ಯಾಯ - 4

### ದೇವರನ್ನು ಮೆಚ್ಚಿಸಲು ಜೀವಿಸುವದು (4:1-12).

**1-2** ಮನುಷ್ಯನ ಜೀವಿತಕ್ಕೆ ಒಂದೇ ಅಂತಿಮ ಉದ್ದೇಶವಿರುತ್ತದೆ, ಅದು ದೇವರನ್ನು ಮೆಚ್ಚಿಸುವದು ಹಾಗು ಮಹಿಮೆ ಪಡಿಸುವದೇ. ಥೆಸಲೋನಿಕದವರು ದೇವರನ್ನು ಮೆಚ್ಚಿಸಲು ಹೇಗೆ ಜೀವಿಸಬೇಕೆಂಬದನ್ನು ಪೌಲನು ಅವರಿಗೆ ಬೋಧಿಸಿದ್ದನು, ಆದರೆ ಈಗ ಆತನು ಹಾಗೆಯೇ ಇನ್ನೂ ಹೆಚ್ಚಾಗಿ ನಡೆಯಬೇಕೆಂದು ಅವರನ್ನು ಬೇಡಿಕೊಳ್ಳುತ್ತಾನೆ (ವಚನ 1). ಪೌಲನು 1 ಥೆಸಲೋನಿಕ 3:12 ರಲ್ಲಿನ ಹಾಗೆಯೇ ಇಲ್ಲಿ ಪು ನಃ ತನ್ನ ಆತ್ಮೀಕ ಮಕ್ಕಳನ್ನು ಕರ್ತನಲ್ಲಿ ಬೆಳೆಯಬೇಕೆಂದು ಪ್ರಬೋಧಿಸುತ್ತಾನೆ.

ಪೌಲನು ತಾನು ತನ್ನ ಸ್ವಂತ ಅಧಿಕಾರದಿಂದಲ್ಲ, ಆದರೆ ಕರ್ತನಾದ ಯೇಸುವಿನ ಅಧಿಕಾರದಿಂದ ಮಾತಾಡುತ್ತಾನೆಂದು ಥೆಸಲೋನಿಕದವರಿಗೆ ಜ್ಞಾಪಕಪಡಿಸುತ್ತಾನೆ.

**3** ಯಾವ ರೀತಿಯ ಜೀವಿತ ದೇವರಿಗೆ ಮೆಚ್ಚಿಕೆಯಾಗಿರುತ್ತದೆ? ಪರಿಶುದ್ಧ ಜೀವಿತವೇ ದೇವರಿಗೆ ಮೆಚ್ಚಿಕೆಯನ್ನುಂಟು ಮಾಡುವ ಜೀವಿತವಾಗಿದೆ (ವಚನ 7). ನಾವು ಪರಿಶುದ್ಧರಾಗಿರಬೇಕೆಂಬದು ದೇವರ ಚಿತ್ತವಾಗಿದೆ. ಆತನು ನಮ್ಮನ್ನು ಪರಿಶುದ್ಧರೂ ನಿರ್ದೋಷಿಗಳಾಗಿರಬೇಕೆಂದು ಆರಿಸಿಕೊಂಡಿದ್ದಾನೆ (ಎಫೆಸ 1:4). ಹೃದಯದಲ್ಲಿ ಪರಿಶುದ್ಧರೂ ನಿರ್ಮಲರೂ ಆಗಿರುವವರು ಮಾತ್ರವೇ ದೇವರನ್ನು ಕಾಣುವರು (ಮತ್ತಾಯ 5;8; ಇಬ್ರಿಯ 12:14). ದೇವರು ಹೇಳುವದೇನೆಂದರೆಃ "ನಾನು ಪರಿಶುದ್ಧನಾಗಿರುವದರಿಂದ ನೀವೂ ಪರಿಶುದ್ಧರಾಗಿರಬೇಕು" (1 ಪೇತ್ರ 1:15-16).

......ಹಾದರಕ್ಕೆ ದೂರವಾಗಿರಬೇಕು. ಪೌಲನ ಕಾತದಲ್ಲಿ ಗ್ರೀಕರು ಲೈಂಗಿಕ ಪಾಪಗಳನ್ನು ಹಗುರವಾಗಿ ಪರಿಗಣಿಸಿದ್ದರು; ಅವರು ಅವು ಗಳನ್ನು ದೊಡ್ಡ ಪಾಪಗಳೆಂದು ಎಣಿಸಲಿಲ್ಲ. ಅವರ ಮಧ್ಯದಲ್ಲಿ ಎಲ್ಲಾ ರೀತಿಯ ಜಾರತ್ವವು ರೂಡಿಯಲ್ಲಿತ್ತು. ಆದದರಿಂದ, ಥೆಸಲೋನಿಕದಲ್ಲಿದ್ದ ನೂತನ ಗ್ರೀಕ ವಿಶ್ವಾಸಿಗಳು ತಮ್ಮ ಸುತ್ತಲಿನ ಸಮಾಜದಿಂದ ಸ್ವೀಕರಿಸಲ್ಪಟ್ಟಿದ್ದ ಈ ಎಲ್ಲಾ ಪಾಪಮಯ ಲೈಂಗಿಕ ಅಭ್ಯಾಸಗಳನ್ನು ಸಂಪೂರ್ಣವಾಗಿ ಬಿಟ್ಟು ಬಿಡುವದು ಅವಶ್ಯಕವಾಗಿತ್ತು (ಎಫೆಸ 4:17-19; 1 ಪೇತ್ರ 1:14). ದೇವರು ಎಲ್ಲಾ ವಿಧವಾದ ಹಾದರತನವನ್ನು ದಂಡಿಸುತ್ತಾನೆ. ಥೆಸಲೋನಿಕದವರು ದೇವರ ಆಜ್ಞೆಯ ನ್ನು ಪಾಲಿಸಿ ಆತನಿಗೆ ಮೆಚ್ಚಿಕೆಯಾದದ್ದನ್ನೇ ಮಾಡಬೇಕು (1 ಕೊರಿಂಥ 6:18-20; ಗಲಾತ್ಯ 5:19; ಎಫೆಸ 5:35).

**4** ......ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ದೇಹವನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳಲು ತಿಳಿಯಬೇಕು[4] ಪ್ರತಿಯೊಬ್ಬ ಕ್ರೈಸ್ತನು ತನ್ನ ಶಾರೀರಿಕ ಅಭಿಲಾಷೆಗಳನ್ನು, ವಿಶೇಷವಾಗಿ ಕಾಮಾಭಿಲಾಷೆಗಳನ್ನು ಹೇಗೆ ಸ್ವಾಧೀನದಲ್ಲಿ ಇಟ್ಟುಕೊಳ್ಳಬೇಕೆಂಬದನ್ನು ಕಲಿತುಕೊಳ್ಳುವದು ಅವಶ್ಯಕವಾಗಿದೆ. ನಾವು ನಮ್ಮ ದೇಹಗಳನ್ನು ಪವಿತ್ರ ಹಾಗು ಘನತೆಯಿಂದ ಕಾಪಾಡಿಕೊಳ್ಳಬೇಕು. ನಮ್ಮ ಜೀವಿತಗಳಲ್ಲಿನ ಯಾವದೇ ಅಶುದ್ಧತೆಯು ನಮ್ಮ ದೇಹಗಳ ಮೇಲೆಯೂ ಕರ್ತನ ಮೇಲೆಯೂ ಅವಮಾನವನ್ನು ತರುತ್ತದೆ. ನಾವು ನಮ್ಮ ಸ್ವಂತ ಸೊತ್ತಲ್ಲ; ಕ್ರಿಸ್ತನ ಸೊತ್ತಾಗಿದ್ದೇವೆಂಬದನ್ನು ನೆನಪಿನಲ್ಲಿಟ್ಟುಕೊಳ್ಳೋಣ (1 ಕೊರಿಂಥ 6:19).

**5** ಪೌಲನು ಕ್ರಿಸ್ತನಲ್ಲಿ ನಂಬಿಕೆಯಿಡದವರನ್ನು ಸೂಚಿಸುವದಕ್ಕಾಗಿ ಇಲ್ಲಿ ಅನ್ಯಜನರು ಎಂಬ ಪದವನ್ನು ಉಪಯೋಗಿಸುತ್ತಾನೆ. ಕ್ರೈಸ್ತರು "ಅನ್ಯಜನಗಳಂತೆ" ಜೀವಿಸಬಾರದು. ಅನ್ಯಜನರು ಕಾಮಾಭಿಲಾಷೆಗೆ ಒಳಪಟ್ಟು ಜೀವಿಸುತ್ತಾರೆ. ಅವರು ದೇವರನ್ನು ಅರಿಯರು. ಆದಾಗ್ಯು ಅವರು ದೇವರನ್ನು ಅರಿಯದಿರುವದಕ್ಕೆ ಯಾವ ನೆಪವೂ ಇಲ್ಲದವರಾಗಿದ್ದಾರೆ. ಯಾಕೆಂದರೆ, ದೇವರು ಅವರನ್ನು ಜಾರತ್ವಕ್ಕೂ (ರೋಮ 1:24). ಮತ್ತು ಬಂಡುತನಕ್ಕೂ ಒಪ್ಪಿಸಿ–ಕೊಟ್ಟಿರುತ್ತಾನೆ (ರೋಮ 1:28).

**6** ಈ ವಿಷಯದಲ್ಲಿ – ಜಾರತ್ವದ ವಿಷಯದಲ್ಲಿ – ಯಾರೂ ತನ್ನ ಸಹೋದರನನ್ನು ವಂಚಿಸಿ ಕೇಡು ಮಾಡಬಾರದು. ಉದಾಹರಣೆಗೆ, ನಾವು ಮತ್ತೊಬ್ಬನ ಹೆಂಡತಿಯೊಂದಿಗೆ ವ್ಯಭಿಚಾರ ಮಾಡುವದಾದರೆ ಆ ಮನುಷ್ಯನಿಗೆ ನಾವು ಕೇಡು ಮಾಡುವವರು ಆಗಿರುತ್ತೇವೆ. ನಾವು ಒಬ್ಬ ಅವಿವಾಹಿತ ವ್ಯಕ್ತಿಯೊಂದಿಗೆ ಸಂಸರ್ಗ ಮಾಡುವದಾದರೆ ಆ ವ್ಯಕ್ತಿಗೆ ಮಾತ್ರವಲ್ಲದೆ ಆ ವ್ಯಕ್ತಿಯು ಅನಂತರದಲ್ಲಿ ವಿವಾಹವಾಗ ವ್ಯಕ್ತಿಗೂ ವಂಚನೆ ಮಾಡುವವರಾಗಿದ್ದೇವೆ. ಅಂಥವು ಗಳನ್ನು ನಡಿಸುವವನಿಗೆ ದೇವರು ದಂಡನೆಯನ್ನು[5] ನೀಡುವನು (ಎಫೆಸ 5:5-6; 2 ಥೆಸಲೋನಿಕ 1:8; ಇಬ್ರಿಯ 13:4).

**7** ಇಲ್ಲಿ ಪೌಲನು 3ನೇ ವಚನದ ವಿಚಾರವನ್ನು ಪು ನರಾವರ್ತಿಸುತ್ತಾನೆ. ನೆನಪಿರಲಿ, ಪರಿಶುದ್ಧ ಜೀವಿತವನ್ನು ನಡೆಸುವದಕ್ಕೆ ಮೊದಲು ಸ್ವತಃ ನಾವೇ ತೀರ್ಮಾನಿಸಿಕೊಳ್ಳಲಿಲ್ಲ. ಆದಿಯಲ್ಲಿ ಮೊದಲು ನಮ್ಮನ್ನು ದೇವರೇ ಕರೆದನು. ನಾವು ಇನ್ನೂ ಪಾಪಿಗಳಾಗಿದ್ದಾಗಲೇ ಕ್ರಿಸ್ತನು ನಮಗೋಸ್ಕರ ಸತ್ತನು (ರೋಮ 5:8).

ಒಂದು ವಿಧದಲ್ಲಿ, ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ದೇವರ ದೃಷ್ಟಿಯಲ್ಲಿ ಈಗಾಗಲೇ ಪರಿಶುದ್ಧರಾಗಿ ಅಥವಾ ನೀತಿವಂತರಾಗಿ ಮಾಡಲ್ಪಟ್ಟಿದ್ದೇವೆ (ರೋಮ 3:24, 28). ಆದರೆ ಇನ್ನೊಂದು ವಿಧದಲ್ಲಿ, ನಾವು ಪವಿತ್ರಾತ್ಮನ ಬಲದ ಮುಖಾಂತರ ಹೆಚ್ಚು ಹೆಚ್ಚಾಗಿ ಪರಿಶುದ್ಧ ಜೀವಿತಗಳನ್ನು ನಡೆಸಬೇಕು. ಇದು ನಮ್ಮ ಜವಾಬ್ದಾರಿಯಾಗಿದೆ. ದೇವರು ನಮ್ಮನ್ನು ಪರಿಶುದ್ಧರಾಗಿರುವದಕ್ಕೆ ಕರೆದಿರುವದಾದರೆ ನಾವು ಆ ಪರಿಶುದ್ಧತೆಗಳನ್ನು ನಮ್ಮ ಜೀವಿತಗಳಲ್ಲಿ ತೋರ್ಪಡಿಸುವ–ದಕ್ಕೆ ದೃಢನಿರ್ಧಾರ ಮಾಡಿಕೊಳ್ಳಬೇಕು (ಎಫೆಸ 5:3).

**8** ನಾವು ಈ ಮಾತನ್ನು (ಸಲಹೆಯನ್ನು) – ಅಂದರೆ, ಮೇಲಿನ ವಚನಗಳಲ್ಲಿರುವ ಪೌಲನ ಬೋಧನೆಯನ್ನು ತಾತ್ಸಾರಮಾಡುವದಾದರೆ ದೇವರನ್ನೇ ತಾತ್ಸಾರಮಾಡುವವರು ಆತನಿಗೆ ಅವಿಧೇಯರಾಗುವವರೂ ಆಗುತ್ತೇವೆ. ನಾವು

ನಮಗೆ ದೇವರು ನೀಡಿರುವ ಪವಿತ್ರಾತ್ಮನನ್ನು ದುಃಖಪಡಿಸುವವರಾಗಿದ್ದೇವೆ (ಎಫೆಸ 4:30). ನಮ್ಮನ್ನು ಪರಿಶುದ್ಧ ಪಡಿಸುವವನು ಪವಿತ್ರಾತ್ಮನೇ (2 ಥೆಸಲೋನಿಕ 2:13). ಹೀಗೆ ನಾವು ಪವಿತ್ರಾತ್ಮನನ್ನು ದುಃಖಪಡಿಸುವಾಗಲೆಲ್ಲಾ ಪರಿಶುದ್ಧರಾಗಿರುವದನ್ನು ಬಿಟ್ಟುಬಿಡುವವರೂ ದೇವರಿಂದ ನಮ್ಮನ್ನು ಬೇರ್ಪಡಿಸಿಕೊಳ್ಳುವವರೂ ಆಗುತ್ತೇವೆ. ಆದದರಿಂದ ಥೆಸಲೋನಿಕದವರು – ಮತ್ತು ನಾವು ಸಹ – ಎಲ್ಲಾ ಅಶುದ್ದತೆ ಹಾಗು ಹೊಲಸುತನದಿಂದ ಸಂಪೂರ್ಣವಾಗಿ ವಿಮುಕರಾಗಬೇಕು ಮತ್ತು ನಮ್ಮನ್ನು ಪೂರ್ಣವಾಗಿ ದೇವರಿಗೆ ಮೆಚ್ಚಿಕೆಯಾಗುವಂತ ವಿಷಯಕ್ಕೆ ಒಪ್ಪಿಸಿಕೊಡಬೇಕು.

**9-10** ಹೊಸ ಒಡಂಬಡಿಕೆಯಲ್ಲಿ ಪ್ರಸ್ತಾಪಿಸಲಾಗಿರುವ ಪ್ರೀತಿಯೂ ಆತ್ಮೀಕ ಪ್ರೀತಿಯಾಗಿದೆ. ಇದು ದೇವರ ಪ್ರೀತಿ. ನಾವು ಕ್ರಿಸ್ತನನ್ನು ನಂಬುವಾಗ ದೇವರು ತನ್ನ ಪ್ರೀತಿಯನ್ನು ಪವಿತ್ರಾತ್ಮನ ಮೂಲಕ ನಮ್ಮ ಹೃದಯಗಳಲ್ಲಿ ಸುರಿಸುತ್ತಾನೆ (ರೋಮ 5:5).

ನಾವು ಪಾಪಿಗಳೂ ಅಯೋಗ್ಯರು ಆಗಿದ್ದಾಗಲೂ ದೇವರು ನಮ್ಮನ್ನು ಪ್ರೀತಿಸಿದನು. (ರೋಮ 5:8; 1 ಯೋಹಾನ 4:9-10). ದೇವರು ನಮ್ಮನ್ನು ಪ್ರೀತಿಸಿದ ಪ್ರಕಾರವೇ ನಾವು ನಮ್ಮ ನೆರೆಯವನನ್ನು – ನಮ್ಮ ನೆರೆಯವನು ನಮ್ಮ ಪ್ರೀತಿಗೆ ಯೋಗ್ಯನಾಗಿದ್ದರೂ ಸರಿಯೇ ಅಲ್ಲದಿದ್ದರೂ ಸರಿಯೇ – ಪ್ರೀತಿಸಬೇಕು! ನಾವು ನಮ್ಮ ವೈರಿಗಳನ್ನೂ ಪ್ರೀತಿಸಬೇಕು (ಮತ್ತಾಯ 5:44). ಆದರೆ ನಮ್ಮ ನೆರೆಯವರು ಹಾಗು ವೈರಿಗಳಿಗಿಂತಲೂ ಹೆಚ್ಚಾಗಿ ನಮ್ಮ ಕ್ರೈಸ್ತ ಸಹೋದರು ಹಾಗು ಸಹೋದರಿಯರನ್ನು ಪ್ರೀತಿಸಬೇಕು (1ಥೆಸಲೋನಿಕ 3:12; 1 ಯೋಹಾನ 4:11). ಇದು ಯೇಸು ನಮಗೆ ನೀಡಿದ ಮೂರನೆಯ ಶ್ರೇಷ್ಟ ಆಜ್ಞೆಯಾಗಿದೆ (ಯೋಹಾನ 13:34). ನಾವು ನಮ್ಮ ಜೊತೆ ವಿಶ್ವಾಸಿಗಳನ್ನು ಪ್ರೀತಿಸಬೇಕೆಂಬ ಈ ಮೂರನೆಯ ಶ್ರೇಷ್ಟ ಆಜ್ಞೆಗೆ ವಿಧೇಯರಾದರೆ ನಾವು ಯೇಸುವಿನ ಶಿಷ್ಯರೆಂಬದನ್ನು ಎಲ್ಲಾ ಮನುಷ್ಯರು ತಿಳಿದುಕೊಳ್ಳುವರು (ಯೋಹಾನ 13:35). ನಾವು ನಮ್ಮ ಸಹೋದರರನ್ನು ಪ್ರೀತಿಸುವಾಗ ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದೇವೆಂಬದನ್ನು ನಾವು ತಿಳಿಯುವೆವು (1 ಯೋಹಾನ 3:14).

**11-12** ಇಲ್ಲಿ ಪೌಲನು ನಮ್ಮೆಲ್ಲರಿಗೂ ಒಂದು ಪ್ರಾಮುಖ್ಯವಾದ ಸಲಹೆಯನ್ನು ನೀಡುತ್ತಾನೆಃ ನೀವು .....ಸುಮ್ಮಗಿದ್ದು... ಜೀವಿಸುವದೇ ಮಾನವೆಂದೆಣಿಸಿರಿ (ವಚನ 11). ಆದರರ್ಥವೇನೆಂದರೆಃ ನಿಮ್ಮ ಜೀವಿತವು ಅವಿಶ್ರಾಂತ, ಕಳವಳ ಅಥವಾ ವೇದನೆಗಳಿಂದ ತುಂಬಿರುವಂತೆ ಬಿಡದಿರಲು ಪ್ರಯತ್ನಿಸಿರಿ. ನಂತರ ಪೌಲನು ಹೇಳುವದೇನೆಂದರೆಃ ಸ್ವಂತಕಾರ್ಯವನ್ನೇ ನಡೆಸಿಕೊಳ್ಳಿರಿ. ಅಂದರೆ, ಯಾವಾಗಲೂ ಇತರರನ್ನು ಟೀಕಿಸುವವರು ಮತ್ತೊಬ್ಬರ ಕಾರ್ಯಗಳಲ್ಲಿ ತಲೆಹಾಕುವವರೂ ಆಗಿರಬೇಡಿರಿ. ಅದಾದಮೇಲೆ ಪೌಲನು ".......ನಿಮ್ಮ ಕೈಯಾರೆ ಕೆಲಸ ಮಾಡಿರಿ" ಎಂದುಹೇಳುತ್ತಾನೆ ಅದರ ಅರ್ಥವೇನೆಂದರೆಃ ನಿಮ್ಮ ಸ್ವಂತ ಕೈಗಳ ಪ್ರಯಾಸದಿಂದ ಜೀವನ ಮಾಡಿಕೊಳ್ಳಿರಿ. ಬಹುಶಃ ಥೆಸಲೋನಿಕದವರು ಈ ಸಲಹೆಯ ಕಡೇ ಅಂಶಕ್ಕೆ ವಿಸ್ಮಯ ಪಟ್ಟಿರಬೇಕು, ಯಾಕೆಂದರೆ ಬಹುಪಾಲು ಉನ್ನತ ವಿದ್ಯಾವಂತರಾಗಿದ್ದು ತಮ್ಮ ಕೈಯಾರೆ ಕೆಲಸ ಮಾಡುವದನ್ನು ಇಷ್ಟಪಡುತ್ತಿರಲಿಲ್ಲ. ಅವರು ಅಂಥ ಕೆಲಸವನ್ನು ದಾಸರಿಗೆ ಮಾಡಲು ಹೇಳುತ್ತಿದ್ದರು! ಆದರೆ ಪೌಲನು ಅವರಿಗೆ "ನಿಮ್ಮ ಕೈಯಾರೆ ಕೆಲಸ ಮಾಡಿರಿ" ಎಂದು ಹೇಳುತ್ತಾನೆ! (ಥೆಸಲೋನಿಕ 3:11-12 ನೋಡಿರಿ).

ಕ್ರೈಸ್ತರು ವಿದ್ಯಾವಂತರಾದಾಗ ಅವರು ಸಹ ಥೆಸಲೋನಿಕದವರ ಹಾಗೆ ವ್ಯವಸಾಯ ಹಾಗು ಕರಕುಶಲಗಳಂತಹ ಕೈ ಪ್ರಯಾಸವನ್ನು ಕೀಳಾಗಿ ಕಾಣಲು ಪ್ರಾರಂಭಿಸುವರು. ಆದರೆ ಇದು ಸಂಬವಿಸದಿರಲಿ. ಪೌಲನು ಜೀವನೋಪಾಯಕ್ಕಾಗಿ ಗುಡಾರಗಳನ್ನು ಮಾಡುತ್ತಿದ್ದನು (ಅ.ಕೃ. 18:3). ಮತ್ತು ಸ್ವತಃ ಯೇಸು ತನ್ನ ಬಹುಪಾಲು ಜೀವಿತವನ್ನು ಬಡಗಿಯನಾಗಿ ಕಳೆದನು (ಮಾರ್ಕ 6:3).

ನಮ್ಮ ದೈನಂದಿನ ಜೀವಿತದ ಎಲ್ಲಾ ಕಾರ್ಯಗಳಲ್ಲಿ ನಾವು ಹೊರಗಿನವರ ಅಂದರೆ, ಅವಿಶ್ವಾಸಿಗಳ ಎದುರಿನಲ್ಲಿ ಸಜ್ಜನರಾಗಿ ನಡೆದುಕೊಳ್ಳಬೇಕು (ವಚನ 12). ಎಲ್ಲಾ ಸಂಗತಿಗಳಲ್ಲಿ ನಮ್ಮ ಜೀವಿತವೂ ಗೌರವಕರವೂ ಪ್ರಶಂಸನೀಯವೂ ಆಗಿರಬೇಕು. ನಾವು ಸೋಮಾರಿಗಳೂ, ಸಮಯವನ್ನು ವ್ಯರ್ಥಮಾಡುವವರೂ ಕೆಲಸವಿಲ್ಲದ ಚಾಡಿಹೇಳುವದರಲ್ಲಿ ತೊಡಗಿರುವವರೂ, ಇವರಂತೆ ಇರದಿರೋಣ. ಬದಲಾಗಿ, ದೇವರು ನಮಗೆ ಮಾಡುವದಕ್ಕೆ ನೀಡಿರುವ ಕೆಲಸದಲ್ಲಿ ತೊಡಗಿಸಿಕೊಳ್ಳುವದರಲ್ಲಿ ಆಸಕ್ತರಾಗಿರಬೇಕು. ಯಾರಾದರೂ ನಮಗೆ ಸಹಾಯ ನೀಡುವರು ಅಥವಾ ಕೈ ನೀಡುವರೆಂದು ನಾವು ಯಾವಾಗಲೂ ಎದರು ನೋಡಬಾರದು. ನಾವು ಯಾರನ್ನೂ – ದೇವರ ಹೊರತಾಗಿ – ಅವಲಂಭಿಸಬಾರದು.

## ಕರ್ತನ ಬರೋಣ (4:13-18)

**13** ಥೆಸಲೋನಿಕದವರು ತಾವೆಲ್ಲರೂ ಇನ್ನೂ ಬದುಕಿರುವಾಗಲೇ ಕ್ರಿಸ್ತನು ತಿರುಗಿ ಬರಲಿದ್ದಾನೆಂದು ಊಹಿಸಿಕೊಂಡಿದ್ದರು. ಹೇಗಿದ್ದರೂ, ಥೆಸಲೋನಿಕದವರಲ್ಲಿ ಕೆಲವರು ಇತ್ತೀಚಿಗಷ್ಟೇ ಸತ್ತಿದ್ದರು. ಆದದರಿಂದ, ಥೆಸಲೋನಿಕದವರು ಗೊಂದಲಕ್ಕೊಳಗಾಗಿ ಸತ್ತು ಹೋಗಿರುವವರಿಗೆ ಏನು ಸಂಭವಿಸಲಿದೆ ಎಂಬದನ್ನು ತಿಳಿದುಕೊಳ್ಳಲು ಇಚ್ಚಿಸಿದ್ದರು. ಈ ಭಾಗದಲ್ಲಿ, ಪೌಲನು ಅವರ ಪ್ರಶ್ನೆಗಳಿಗೆ ಉತ್ತರಿಸುತ್ತಾನೆ.

ಪೌಲನು ನಿದ್ರೆಹೋಗುವವರು ಎಂದು ಪ್ರಸ್ತಾಪಿಸುವಾಗ ಸತ್ತುಹೋಗಿರುವ ವಿಶ್ವಾಸಿಗಳನ್ನು ಸೂಚಿಸುತ್ತಾನೆ. ಅವರು ಸದಾಕಾಲವೂ "ಸತ್ತವರಾಗಿ" ಉಳಿಯುವದಿಲ್ಲ. ಕ್ರೈಸ್ತರಾದ ನಾವು ನಮ್ಮ ಲೋಕದ ಶರೀರಗಳು ಸತ್ತ ಬಳಿಕ ಜೀವಿಸುವವರಾಗುವೆವೆಂದು ನಿಶ್ಚಯವಾದ ನಿರೀಕ್ಷೆ ಹಾಗು ನಂಬಿಕೆಯನ್ನು ಹೊಂದಿದ್ದೇವೆ. ಆದದರಿಂದ, ಥೆಸಲೋನಿಕದ–

ವರು ಸತ್ತುಹೋಗಿರುವವರ ಬಗ್ಗೆ ಯಾವ ಚಿಂತೆಯನ್ನು ಮಾಡಬೇಕಾಗಿಲ್ಲ. ಅವರು ಈಗ "ನಿದ್ರೆಹೋಗಿರುತ್ತಾರೆ" ಆದರೆ ಶೀಘ್ರವೇ "ಎದ್ದೇಳುವರು".

ಒಂದು ಅರ್ಥದಲ್ಲಿ, ಸಾಯುವ ವಿಶ್ವಾಸಿಗಳಿಗಾಗಿ ನಾವು ಪ್ರಲಾಪಿಸುವ ಅಗತ್ಯವಿಲ್ಲ. ನಾವು ನಮ್ಮ ಜೊತೆ ವಿಶ್ವಾಸಿಯೊಬ್ಬನ ಮರಣದ ಬಗ್ಗೆ ಗೋಳಾಡುವಾಗ ನಿಜವಾಗಿಯೂ ನಾವು ನಮ್ಮ ಸ್ವಂತ ನಷ್ಟಕ್ಕಾಗಿಯೂ ಗೋಳಾಡುವವ–ರಾಗಿದ್ದೇವೆ, ಅದು ಸಹಜವಾದದ್ದು. ಆದರೆ ನಾವು ಗೋಳಾಡುತ್ತಿರುವಾಗಲೂ ನಮ್ಮ ನಿತ್ಯ ಜೀವದ ನಿರೀಕ್ಷೆಯು ನಮ್ಮ ದುಃಖವನ್ನು ಜಯಿಸುವದಾಗಲಿ. ನಮ್ಮಪ್ರಿಯರು ಈಗ ಕ್ರಿಸ್ತನ ಕೈಗಳಲ್ಲಿರುತ್ತಾರೆಂಬದಕ್ಕಾಗಿ ಉಲ್ಲಾಸ ಪಡೋಣ.

**14** ನಾವು ಎಬ್ಬಿಸಲ್ಪಡುವೆವು ಎಂಬದನ್ನು ಹೇಗೆ ಬಲ್ಲೆವು? ಸ್ವತಃ ಕ್ರಿಸ್ತನು ಸತ್ತು ಪುನಃ ಎದ್ದು ಬಂದಿರುವದರಿಂದ ಅದು ನಮಗೆ ತಿಳಿದಿರುತ್ತದೆ. ಯೇಸು ಸತ್ತು ಎದ್ದು ಬಂದಿರುವದಾದರೆ (ಆತನು ಖಂಡಿತವಾಗಿಯೂ ಎದ್ದು ಬಂದನಷ್ಟೇ) ನಾವು ಸಹ ಸತ್ತ ಬಳಿಕ ನಿಶ್ಚಯವಾಗಿಯೂ ತಿರಿಗಿ ಎದ್ದು ಬರುವೆವು (ರೋಮ 8:11; 1 ಕೊರಿಂಥ 15:17-18, 20, 22- 23; 2 ಕೊರಿಂಥ 4:14).

**15** ಇಲ್ಲಿ ಹಾಗು 16ನೇ ವಚನದಲ್ಲಿ ಪೌಲನು ಹೇಳುವದೇನೆಂದರೆ, ಕ್ರಿಸ್ತನು ತಿರುಗಿ ಬರುವಾಗ ನಿದ್ರೆಹೋಗಿರುವ–ವರಾದ (ಸತ್ತಿರುವ) ವಿಶ್ವಾಸಿಗಳು ಎದ್ದು ಬಂದು ಮೊದಲು ಪರಲೋಕಕ್ಕೆ ಒಯ್ಯಲ್ಪಡುವರು, ಆಗ, ಅವರ ನಂತರ ಕ್ರಿಸ್ತನ ಬರೋಣದಲ್ಲಿ ಜೀವದಿಂದಿರುವವರು ಪರಲೋಕಕ್ಕೆ ಒಯ್ಯಲ್ಪಡುವೆವು. ಹೀಗೆ, ಸತ್ತಿರುವವರು ಎಲ್ಲರಿಗಿಂತ ಮೊದಲು ಪರಲೋಕವನ್ನು ಪ್ರವೇಶಿಸುವರು, ಅವರು ಯಾವ ನಷ್ಟದಲ್ಲಿಯೂ ಇರುವದಿಲ್ಲ! ಥೆಸಲೋನಿಕದವರು ಅವರ ಬಗ್ಗೆ ಚಿಂತೆಮಾಡಬೇಕಾದ ಅಗತ್ಯವಿಲ್ಲ. ಪೌಲನು ತಾನು ಇಲ್ಲಿ ಬರೆದಿರುವದನ್ನು ಕರ್ತನ ಮಾತಿನ ಆಧಾರದಿಂದ ಬರೆದಿದ್ದಾನೆಂದು ಹೇಳುತ್ತಾನೆ. ಹೊಸ ಒಡಂಬಡಿಕೆಯಲ್ಲಿ ಈ ಒಂದು ಸ್ಥಳದಲ್ಲಿ ಮಾತ್ರವೇ ಈ ವಿಷಯದ ಮೇಲೆ ಕರ್ತನ ಮಾತು ಪ್ರಸ್ತಾಪಿಸಲ್ಪಟ್ಟಿದೆ.

**16** ಈ ವಚನದಲ್ಲಿ ಪೌಲನು ಕ್ರಿಸ್ತನ ಎರಡನೆಯ ಬರೋಣದ ವೇಳೆ ಏನು ಸಂಭವಿಸುತ್ತದೆಂಬದನ್ನು ಬಣ್ಣಿಸಿರುತ್ತಾನೆ (ಮಾರ್ಕ 13:24-27; ಯೋಹಾನ 5:28-29; 1 ಕೊರಿಂಥ 15:51-52 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**17-18** ಕ್ರಿಸ್ತನ ಬರೋಣದ ವೇಳೆಯಲ್ಲಿ ಜೀವದಿಂದುಳಿದಿರುವವರು ಪಕ್ಕನೇ ಎತ್ತಲ್ಪಟ್ಟು ಪರಲೋಕಕ್ಕೆ ಒಯ್ಯಲ್ಪಡುವೆವು. ಮತ್ತು ಆ ಸಮಯದಲ್ಲಿ ಜೀವದಿಂದುಳಿದಿರುವವರು ಸತ್ತವರನ್ನು ಪುನಃ ಸೇರಿಕೊಳ್ಳುವರು, ಮತ್ತು ಅಂದಿನಿಂದ ವಿಶ್ವಾಸಿಗಳೆಲ್ಲರೂ ಕರ್ತನ ಜೊತೆಯಲ್ಲಿ ಸದಾಕಾಲವೂ ಜೀವಿಸುವರು. ಆದಕಾರಣ ಈ ಮಾತುಗಳಿಂದ ಒಬ್ಬರನ್ನೊಬ್ಬರು ಸಂತೈಸಿರಿ! (ವಚನ 18).

ಕ್ರಿಸ್ತನು ತಿರಿಗಿ ಬರುವಾಗ ಏನು ಸಂಭವಿಸುತ್ತದೆಂಬದನ್ನು ಹೊಸ ಒಡಂಬಡಿಕೆಯು ವಿವರವಾಗಿ ಹೇಳುವದಿಲ್ಲ. ವಾಸ್ತವದಲ್ಲಿ, ಹೊಸ ಒಡಂಬಡಿಕೆಯು ಈ ವಿಷಯದ ಕುರಿತಾಗಿ ಅತಿ ಸ್ವಲ್ಪ ಬೋಧನೆಯನ್ನು ಮಾತ್ರವೇ ಒಲಗೊಂಡಿರುತ್ತದೆ. ನಾವು ಜರುಗಲಿರುವ ಎಲ್ಲಾ ಸಂಗತಿಗಳನ್ನು ತಿಳಿಯೆವು ಅಷ್ಟೇ; ಮತ್ತು ಇದರ ಕುರಿತಾಗಿ ಊಹಾಪೋಹ ಹಾಗು ತರ್ಕಮಾಡುವದರಲ್ಲಿ ಯಾವ ಅರ್ಥವಿರುವದಿಲ್ಲ.

ಕ್ರಿಸ್ತನು ತಿರುಗಿ ಬರುವ ದಿನವನ್ನು ಯಾರೂ ತಿಳಿದಿರುವದಿಲ್ಲ, ಆದರೆ ನಾವು ಒಂದು ಸಂಗತಿಯನ್ನಂತೂ ಬಲ್ಲೆವು. ಅದೇನೆಂದರೆ, ಎಲ್ಲಾ ವಿಶ್ವಾಸಿಗಳು ಆ ದಿನಕ್ಕಾಗಿ ಯಾವಾಗಲೂ ಸಿದ್ಧರಾಗಿರಬೇಕು ಎಂಬದೇ (ಮಾರ್ಕ 13:32-33; 1 ಥೆಸಲೋನಿಕ 5:1-2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಕರ್ತನು ಬರುವಾಗ ನಾವು ಯಾವ ಸ್ಥಿತಿಯಲ್ಲಿರುವದನ್ನು ಕಾಣುತ್ತಾನೆ?.

---

## ಅಧ್ಯಾಯ - 5

### ಕ್ರಿಸ್ತನ ಎರಡನೆಯ ಬರೋಣ (5:1-11)

**1-2** ರಾತ್ರಿಯಲ್ಲಿ ಕಳ್ಳನು ಯಾವ ಗಳಿಗೆಯಲ್ಲಿ ಬರುತ್ತಾನೆಂಬದನ್ನು ಯಾರೂ ತಿಳಿಯರು. ಒಬ್ಬ ಕಳ್ಳನು ಪಕ್ಕನೇ ಬರುತ್ತಾನೆ. ಕರ್ತನ ದಿನವು – ಕ್ರಿಸ್ತನ ಎರಡನೆಯ ಬರೋಣವು – ಅದೇ ರೀತಿಯಲ್ಲಿರುವದು (ಮತ್ತಾಯ 24:42-44 ಮಾರ್ಕ 13:34-36; ಅ.ಕೃ. 1:7; ಪ್ರಕಟಣೆ 3:2-3 ನೋಡಿರಿ). ಈ ಎರಡನೆಯ ವಚನದಲ್ಲಿ ಪೌಲನು ಕ್ರಿಸ್ತನ ಎರಡನೆಯ ಬರೋಣವನ್ನು ಕರ್ತನ ದಿನವು ಎಂದು ಕರೆಯುತ್ತಾನೆ. ಹೊಸ ಒಡಂಬಡಿಕೆಯ ಇತರ ವಚನಗಳಲ್ಲಿ ಇದು ನ್ಯಾಯತೀರ್ಪಿನ ದಿನ (2 ಪೇತ್ರ 2:9). ಕೋಪದ......ಮಹಾದಿನ (ಪ್ರಕಟಣೆ 6:17), ವಿಮೋಚನೆಯ ದಿನ (ಎಫೆಸ 4:30), ಕಡೇ ದಿನ (ಯೋಹಾನ 6:39), ಹಾಗು ಮಹಾದಿನ (ಯೂದನು 6) ಎಂದು ಕರೆಯಲ್ಪಟ್ಟಿದೆ.

**3** ಪ್ರಾಪಂಚಿಕ ಜನರು ನ್ಯಾಯತೀರ್ಪಿನ ದಿನದ ಬಗ್ಗೆ ಯೋಚಿಸುವದಿಲ್ಲ; ಅವರು ಅದರ ಬಗ್ಗೆ ಗಮನವನ್ನು ಕೊಡುವದಿಲ್ಲ. ಅವರು ಲೋಕ ಹಾಗು ಅದರ ಸುಖ–ಭೋಗಗಳ ಬಗ್ಗೆ ಮಾತ್ರವೇ ಯೋಚಿಸುತ್ತಾರೆ. ಅವರು "ಸಮಾಧಾನ ಹಾಗು ನಿರ್ಭಯ ಎಲ್ಲವೂ ಚನ್ನಾಗಿಯೇ ಇದೆ. ಯಾವದರ ಬಗ್ಗೆಯೂ ಚಿಂತಿಸಬೇಕಾಗಿಲ್ಲ" ಎಂದು ಹೇಳುತ್ತಾರೆ.

ಆದರೆ ನಾಶನವು ಅಥವಾ ದೇವರ ಕೋಪವು ಅವರ ಮೇಲೆ ಪಕ್ಕನೇ ಬರುವದು (2 ಥೆಸಲೋನಿಕ 1:9). ಗರ್ಭಿಣಿಗೆ ಪ್ರಸವ ವೇದನೆಯು ಅನಿವಾರ್ಯವಾಗಿ ಬರುವ ಪ್ರಕಾರವೇ ಕ್ರಿಸ್ತನನ್ನು ನಂಬಿದವರ ಮೇಲೆ ದೇವರ ಕೋಪವು ಬರುತ್ತದೆ (ಮಾರ್ಕ 13:8 ನೋಡಿರಿ).

**4-5** ಥೆಸಲೋನಿಕ ಕ್ರೈಸ್ತರು ಕರ್ತನ ದಿನಕ್ಕೆ ಭಯಪಡುವ ಅಗತ್ಯವಿಲ್ಲ. ಅವರು ದೇವರ ಮಕ್ಕಳು; ಅವರಿ ಬೆಳಕಿನವರೂ ದಿನದವರೂ (ಕರ್ತನ ದಿನದವರೂ) ಆಗಿದ್ದಾರೆ. ಅವರು ಕತ್ತಲೆಯ ರಾಜ್ಯಕ್ಕೆ ಸೇರಿದವರಲ್ಲ, ದೇವರ ಕೋಪವು ಕತ್ತಲೆಯ ರಾಜ್ಯದ ಮೇಲೆ ಬರುವದು (ಎಫೆಸ 5:8 ಮತ್ತು ವ್ಯಾಖ್ಯಾನ ನೋಡಿರಿ).

**6-8** ನಾವು ಆತ್ಮೀಕವಾಗಿ ನಿದ್ರೆ ಮಾಡುವ ಜನರಂತೆ ಇರದಿರೋಣ. ಅವರು ಬರಲಿರುವ ಕೋಪದ ಬಗ್ಗೆ ಅರಿಯದವರಾಗಿದ್ದಾರೆ. ನಾವು ಅಮಲೇರಿದವರಂತೆ ಇರದಿರೋಣ, ಅವರು ಇಹಲೋಕದ ಅಭಿಲಾಷೆಗಳು ಹಾಗು ಆಶೆಗಳಿಂದ "ಅಮಲೇರಿ" ಇರುತ್ತಾರೆ. ಬದಲಾಗಿ, ನಾವು ಬೆಳಕಿನ ಆಯುಧಗಳನ್ನು ಧರಿಸಿಕೋಳ್ಳೋಣ (ರೋಮ 13:12). ನಮ್ಮ ಆಯುಧಗಳು ಯಾವವು? ಪೌಲನು ಈ 8ನೇ ವಚನದಲ್ಲಿ ವಿಶ್ವಾಸ (ನಂಬಿಕೆ), ಪ್ರೀತಿ ಹಾಗು ನಿರೀಕ್ಷೆ ಎಂದು ಹೇಳುತ್ತಾನೆ (1 ಕೊರಿಂಥ 13:13; 1 ಥೆಸಲೋನಿಕ 1:3 ನೋಡಿರಿ). ಎಫೆಸದವರಿಗೆ 6:14-17 ರಲ್ಲಿ ಪೌಲನು ನಮ್ಮ ಆಯುಧಗಳ ಬಗ್ಗೆ ಇಲ್ಲಿ ನೀಡಿರುವ ಚಿತ್ರಣಕ್ಕಿಂತಲೂ ಸ್ವಲ್ಪ ವ್ಯತ್ಯಾಸವಾದ ಚಿತ್ರಣವನ್ನು ನೀಡುತ್ತಾನೆ, ಆದರೆ ಮೂಲವಿಚಾರವು ಒಂದೇ ಆಗಿದೆ. ಪೌಲನು ನಮ್ಮ ಜೀವಿತದಲ್ಲಿ ಅವಶ್ಯಕವಾಗಿರುವ ಆತ್ಮೀಕ ಗುಣಗಳನ್ನು ಬಣ್ಣಿಸಲು ಸೈನಿಕನ ಆಯುಧಗಳ ದೃಷ್ಟಾಂತವನ್ನು ಉಪಯೋಗಿಸುತ್ತಾನೆ.

ಪೌಲನು 8ನೇ ವಚನದಲ್ಲಿ ರಕ್ಷಣೆಯ ನಿರೀಕ್ಷೆಯನ್ನು ಪ್ರಸ್ತಾಪಿಸುತ್ತಾನೆ. ಒಂದು ವಿಧದಲ್ಲಿ, ನಾವು ಈಗಾಗಲೇ ರಕ್ಷಣೆಯನ್ನು ಪಡೆದುಕೊಂಡಿದ್ದೇವೆ; ಆದದರಿಂದ, ಅದಕ್ಕಾಗಿ ನಿರೀಕ್ಷಿಸುವ ಅಗತ್ಯವಿರುವದಿಲ್ಲ! ಆದರೆ ಇನ್ನೊಂದು ವಿಧದಲ್ಲಿ ನಾವು ನಮ್ಮ ಸಂಪೂರ್ಣರಕ್ಷಣೆಯನ್ನು ಇನ್ನೂ ಪಡೆದುಕೊಂಡಿರುವದಿಲ್ಲ; ಕ್ರಿಸ್ತನು ತಿರಿಗಿ ಬರುವಾಗ ಮಾತ್ರವೇ ನಾವು ನಮ್ಮ ಪೂರ್ಣ ರಕ್ಷಣೆಯನ್ನೂ ನಾವು ಎದುರು ನೋಡುವ ನಮ್ಮ ಪರಲೋಕದ ಪೂರ್ಣಸ್ವಾಸ್ಥ್ಯವನ್ನು ಪಡೆದುಕೊಳ್ಳುವೆವು.

ಮತ್ತು ನಮ್ಮ ನಿರೀಕ್ಷೆಯು ಇತರ ಜನರ ನಿರೀಕ್ಷೆಯಂತೆ ಇರುವದಿಲ್ಲ. ಕ್ರೈಸ್ತನ ನಿರೀಕ್ಷೆಯು ಸಂದೇಹಾಸ್ಪದ ವಿಷಯದಲ್ಲಿ ಅಲ್ಲ; ಅದು ಸಂಪೂರ್ಣ ಖಚಿತ ಹಾಗು ನಿಶ್ಚಯವಾದ ಸಂಗತಿಯೊಂದರ ಮೇಲೆ ಕೇಂದ್ರಿಕೃತವಾಗಿರುತ್ತದೆಃ ಏನೆಂದರೆ, ಯೇಸು ಎದ್ದುಬಂದು ಸದಾಕಾಲವು ಆತನೊಂದಿಗೆ ಜಿವಿಸುವೆವು.

**9** ಈ ವಚನದಲ್ಲಿ, ಪೌಲನು ಕ್ರಿಸ್ತನ ಮಹಿಮೆಯುಳ್ಳ ಸಿವಾರ್ತೆಯನ್ನು ಒಂದು ವಾಕ್ಯದಲ್ಲಿ ಸಾರಾಂಶಿಸುತ್ತಾನೆಃ ಕ್ರಿಸ್ತನನ್ನು ನಂಬುವವರು ದೇವರ ಕೋಪಕ್ಕೆ ಗುರಿಯಾಗುವದಿಲ್ಲ. ಆದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕವಾಗಿ ರಕ್ಷಣೆಯನ್ನು ಸಂಪಾದಿಸಿಕೊಳ್ಳುವರು. ಇತರ ಧರ್ಮಗಳ ಬೋಧನೆಗೆ ಅನುಸಾರವಾಗಿ ಮನುಷ್ಯನು ರಕ್ಷಣೆಯನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಒಳ್ಳೇ ಕಾರ್ಯಗಳನ್ನು ಮಾಡಬೇಕು. ಆದರೆ ರಕ್ಷಣೆಯನ್ನು ಈ ದಾರಿಗಳ ಮೂಲಕ ಸಂಪಾದಿಸಿಕೊಳ್ಳಲು ಸಾಧ್ಯವಿಲ್ಲ ಯೇಸುಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ರಕ್ಷಣೆಯನ್ನು ಸಂಪಾದಿಸಿಕೊಳ್ಳಬಹುದು. ಆದರೆ ಯಾವನೂ ತನ್ನ ನಂಬಿಕೆಯನ್ನು ಹೆಚ್ಚಳಪಟ್ಟುಕೊಳ್ಳುತ್ತಾ "ನಾನೇ ಸ್ವತಃ ನಂಬಿದೆನು"ಎಂದು ಹೇಳದಿರಲಿ. ಯಾಕೆಂದರೆ ನಂಬಿಕೆಯು ಮನುಷ್ಯನೊಳಗಿಂದ ಬರುವದಿಲ್ಲ; ಅದರ ದೇವರ ವರವಾಗಿದೆ (ಎಫೆಸ2:8). ನಾವು ನಂಬಿಕೆಯಿಟ್ಟು ರಕ್ಷಣೆಯನ್ನು ಪಡೆದುಕೊಳ್ಳುವದಕ್ಕಾಗಿ ದೇವರು ನಮ್ಮನ್ನು "ನೇಮಿಸಿದನು" ಎಂದು ಪೌಲನು ಇಲ್ಲಿ ಹೇಳುತ್ತಾನೆ.

**10-11** ಕ್ರಿಸ್ತನು ನಮಗೋಸ್ಕರ ಸತ್ತನು (ರೋಮ 5:6,8 ನೋಡಿರಿ). ಆತನು ನಮ್ಮ ಸ್ಥಾನದಲ್ಲಿ ದೇವರ ಕೋಪವನ್ನು ಅನುಭವಿಸಿದನು (ಮಾರ್ಕ 10:45, ರೋಮ 3:23-25; 5:9; 1 ಥೆಸಲೋನಿಕ 1:10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ಕ್ರಿಸ್ತನ ಜೊತೆಯಲ್ಲಿಯೇ ಜೀವಿಸಬೇಕೆಂದು ಆತನು ನಮಗೋಸ್ಕರ ಸತ್ತನು. ಆತನ ಎರಡನೆಯ ಬರೋಣದ ವೇಳೆ ನಾವು ಸತ್ತಿದ್ದರೂ ಸರಿಯೇ ಜೀವದಿಂದಿದ್ದರೂ ಸರಿಯೇ ನಾವೆಲ್ಲರೂ ಎದ್ದು ಬರುವೆವು (ರೋಮ 14:9), ಮತ್ತು ನಾವು ಆತನ ಜೊತೆಯಲ್ಲಿ ಪರಕಲೋಕದೊಳಗೆ ಸದಾಕಾಲವೂ ಜೀವಿಸುವೆವು. ಹಲ್ಲೆಲೂಯಾ!.

## ಅಂತಿಮ ಸಲಹೆಗಳು (5:12-28)

**12-13** ಪೌಲನು 12ನೇ ವಚನದಲ್ಲಿ ಸಭಾನಾಯಕರ ಚಿತ್ರಣವನ್ನು ನೀಡುತ್ತಾ ಅವರನ್ನು ಸನ್ಮಾನ ಮಾಡಬೇಕೆಂದು ಥೆಸಲೋನಿಕದವರಿಗೆ ಹೇಳುತ್ತಾನೆ. ಪೌಲನು ಹೇಳುವದೇನೆಂದರೆಃ ಯಾರು ನಿಮ್ಮಲ್ಲಿ ಪ್ರಯಾಸಪಟ್ಟು ಕರ್ತನ ಕಾರ್ಯಗಳಲ್ಲಿ ನಿಮ್ಮ ಮೇಲೆ ಮುಖ್ಯಸ್ಥರಾಗಿದ್ದು ನಿಮಗೆ ಬುದ್ಧಿಹೇಳುತ್ತಾರೋ ಅವರು ನಿಮ್ಮ ಗೌರವಕ್ಕೆ ಯೋಗ್ಯರಾಗಿದ್ದಾರೆ ಅನೇಕ ಸಭೆಗಳಲ್ಲಿ ಕಿರಿಯವರಾಗಿಯೂ ಪರಿಪಕ್ವವಿಲ್ಲದವರೂ ಆಗಿರುವ ಕ್ರೈಸ್ತರು ತಮ್ಮ ನಾಯಕರನ್ನು ಗೌರವಿಸದಿರುವದನ್ನು ಕಾಣಬಹುದು. ಈ ಪರಿಪಕ್ವವಿಲ್ಲದ ಕ್ರೈಸ್ತರು ತಮ್ಮ ಸಭಾಪಾಲಕರಲ್ಲಿ ಅಥವಾ ಅವರ ನಾಯಕರಲ್ಲಿ ತಪ್ಪುಗಳನ್ನೂ ಬಲಹೀನತೆಗಳನ್ನೂ ನೋಡುತ್ತಾರೆ. ಹಾಗು ಯಾವಾಗಲೂ ಅವರ ಮೇಲೆ ಅಪವಾದ ಹೊರಿಸಿ ಟೀಕಿಸಲು ತ್ವರೆಪಡುತ್ತಾರೆ. ಅವರ ಮನಸ್ಸುಗಳಲ್ಲಿ ತಾವು ಮಾಡುತ್ತಿರುವದು ಸರಿಯಾದದ್ದೆಂದು ನಿಶ್ಚಯ ಹೊಂದಿರುತ್ತಾರೆ, ಆದರೆ ವಾಸ್ತವದಲ್ಲಿ ಅವರು ದೊಡ್ಡ ತಪ್ಪನ್ನು

ಮಾಡುವವರಾಗಿದ್ದಾರೆ. ಯಾವನಾದರೂ ಸಭೆಯ ನಾಯಕನ ಮೇಲೆ ತಪ್ಪು ಹೊರಿಸಲು ಬಯಸುವದಾದರೆ ಅಂಥವನು ಮೊದಲು ಈ ವಚನಗಳಲ್ಲಿ ಧ್ಯಾನಿಸಲಿ. ಒಂದೇ ಒಂದು ಪರಸ್ಥಿತಿಯಲ್ಲಿ ಮಾತ್ರವೇ ಒಬ್ಬ ನಾಯಕನನ್ನು ವಿರೋಧಿಸುವದು ಅಥವಾ ತಪ್ಪು ಹೊರಿಸುವದು ಸಮಂಜಸವಾಗಿರುತ್ತಾರೆ, ಮತ್ತು ಅದು ಯಾವಾಗ ಎಂದರೆ, ನಾಯಕನು ದೇವರ ಅಜ್ಞೆಗಳಲ್ಲೊಂದನ್ನು ಉಲ್ಲಂಘಿಸಿದಾಗ ಮಾತ್ರವೇ. ಆದರೆ ಆ ನಾಯಕನ ಮೇಲೆ ತಪ್ಪು ಹೊರಿಸುವ ಅಥವಾ ವಿರೋಧಿಸುವ ಮುನ್ನ ಆತನ ತಪ್ಪು ಮಾಡಿದ್ದಾ–ನೆಂಬದಕ್ಕೆ ನಾವು ಸಾಕ್ಷಿಯನ್ನು ಹೊಂದಿರಬೇಕು. ಇಬ್ಬರು ಅಥವಾ ಹೆಚ್ಚು ವಿಶ್ವಾಸರ್ಹ ಪ್ರತ್ಯಕ್ಷ ಸಾಕ್ಷಿಗಳು ತಪ್ಪನ್ನು ಧೃಡ ಪಡಿಸುವ ಕಡ್ಡಾಯವಾಗಿರುತ್ತದೆ. ನಾವು ವದಂತಿಗಳು ಅಥವಾ ಎರಡನೆಯವರ ಚಾಡಿಹೇಳುವಿಕೆಗೆ ಕಿವಿಗೊಡಲೂ ಬಾರದು! (1 ತಿಮೊಥೆ 5:19).

ಪೌಲನು ಇಲ್ಲಿ ನೀಡಿರುವ ನಿಯಮಗಳಿಗೆ ಕ್ರೈಸ್ತರೆಲ್ಲರೂ ವಿಧೇಯರಾಗುವದಾದರೆ ನಮ್ಮ ಸಭೆಗಳಲ್ಲಿ ಸಮಾಧಾನ ಇರುವದು ನೆನಪಿರಲಿ, ಈ ನಾಯಕರು ಕರ್ತನಲ್ಲಿ (ವಚನ 12). ನಮ್ಮ ನಾಯಕರಾಗಿರುತ್ತಾರೆ. ಅವರ ಅಧಿಕಾರವು ಕರ್ತನ ಅಧಿಕಾರವಾಗಿದೆ. ಅದು ಆತ್ಮೀಕ ಒಳತಿಗಾಗಿ ಉಪಯೋಗಿಸಲ್ಪಡುವದಾಗಿದೆ. ನಾವು ನಮ್ಮ ನಾಯಕರನ್ನು ವಿರೋಧಿಸುವಾಗ ಕ್ರಿಸ್ತನನ್ನೇ ವಿರೋಧಿಸುವವರಾಗಿದ್ದೇವೆ (ರೋಮ 13:1-3 ಮತ್ತು ವ್ಯಾಖ್ಯಾನ ನೋಡಿರಿ).

ನಾವು ಏಕೆ ನಮ್ಮ ನಾಯಕರನ್ನು ಪ್ರೀತಿಯಿಂದ ಬಹಳವಾಗಿ ಸನ್ಮಾನ ಮಾಡಬೇಕು? (ವಚನ 13). ಕಾರಣವೇನೆಂದರೆಃ ಅವರ ಕೆಲಸದ ನಿಮಿತ್ಯ. ನಾವು ವಯಕ್ತಿಕವಾಗಿ ಯಾವದೇ ಒಬ್ಬ ನಾಯಕನನ್ನು ಇಷ್ಟಪಡದಿದ್ದಾಗಲೂ, ಆ ನಾಯಕನು ದೋಷಗಳು ಹಾಗು ಬಲಹೀನತೆಗಳನ್ನು ಹೊಂದಿರುವಾಗಲೂ (ಪ್ರತಿಯೊಬ್ಬ ನಾಯಕನು ದೋಷಗಳನ್ನು ಹಾಗು ಬಲಹೀನ ತೆಗಳನ್ನು ಹೊಂದಿರುತ್ತಾನೆ). ನಾವು ಆ ನಾಯಕನನ್ನು ಪ್ರೀತಿಯಿಂದ ಬಹಳವಾಗಿ ಸನ್ಮಾನ ಮಾಡಬೇಕು – ಆತನ ಕೆಲಸದ ನಿಮಿತ್ಯ. ನಾವು ನಮ್ಮ ನಾಯಕರನ್ನು ಟೀಕಿಸುವದಾದರೆ ಅಥವಾ ವಿರೋಧಸುವದಾದರೆ ಅವರು ತಮ್ಮ ಕೆಲಸವನ್ನು ಯಶಸ್ವಿಯಾಗಿ ಮಾಡಲಾರರು. ಅದರ ಫಲಿತವಾಗಿ ಕ್ರಿಸ್ತನ ಕೆಲಸಕ್ಕೆ ದಕ್ಕೆಯಾಗುತ್ತದೆ. ನಾವು ನಮ್ಮ ನಾಯಕರನ್ನು ವಿರೋಧಿಸುವದಕ್ಕೆ ಭಯಪಡಬೇಕು! ನಾವು ಕ್ರಿಸ್ತನ ಕೆಲಸವನ್ನು ಹಾಳುಮಾಡುವದಕ್ಕೆ ಬಯಸುತ್ತೇವೋ? (1ತಿಮೊಥೆ 5:17; ಇಬ್ರಿಯ 13:17 ನೋಡಿರಿ). ಒಬ್ಬ ನಾಯಕನು ಹೇಳಿದ ಅಥವಾ ಮಾಡಿದ ಯಾವ ಸಂಗತಿಯನ್ನಾದರೂ ವಿರೋಧಿಸುವದು ಅತ್ಯವಶ್ಯಕವಾಗಿರು–ವದಾದರೆ ನಾವು ಮೊದಲು ಆ ನಾಯಕನ ಬಳಿಗೆ ಏಕಾಂತದಲ್ಲಿ ಹೋಗಬೇಕು, ಮುಖಾಮುಖಿಯಾಗಿ ಅದರ ಕುರಿತು ಆತನೊಂದಿಗೆ ಮಾತಾಡಬೇಕು (ಮತ್ತಾಯ 18:15 ಮತ್ತು ವ್ಯಾಖ್ಯಾನ ನೋಡಿರಿ). ಇಲ್ಲವಾದರೆ, ನಾವು ಕ್ರಿಸ್ತನನ್ನು ವಿರೋಧಿಸುವವರಾಗಿರುತ್ತೇವೆ.

**14** .....ಅಕ್ರಮವಾಗಿ (ಮೈಳ್ಳರಾಗಿ) ನಡೆಯುವವರನ್ನು ಎಚ್ಚರಿಸಿರಿ (ಥೆಸಲೋನಿಕ 4:11ಮತ್ತು ವ್ಯಾಖ್ಯಾನ ನೋಡಿರಿ)..... ಮನಗುಂದಿದವರನ್ನು ಧೈರ್ಯಪಡಿಸಿರಿ, ಬಲಹೀನರಿಗೆ ಸಹಾಯಮಾಡಿರಿ (ರೋಮ 15:1-2; ಗಲಾತ್ಯ 6:2; 1 ಥೆಸಲೋನಿಕ 2:11-12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). .........ಎಲ್ಲರಲ್ಲಿಯೂ ದೀರ್ಘಶಾಂತರಾಗಿರಿ (ಎಫೆಸ 4:2 ಮತ್ತು ವ್ಯಾಖ್ಯಾನ ನೋಡಿರಿ).

**15** ಯಾರೂ ಅಪಕಾರಕ್ಕೆ ಅಪಕಾರಮಾಡದಂತೆ ನೋಡಿಕೊಳ್ಳಿರಿ (ಮತ್ತಾಯ 5:38-42; 18:21-22; ರೋಮ 12:17, 19-21; 1 ಪೇತ್ರ 3:9 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಬದಲಾಗಿ, ಯಾವಾಗಲೂ ನೀವು ಒಬ್ಬರಿಗೊಬ್ಬರು ಕರುಣೆಯುಳ್ಳವರಾಗಿರುವದಕ್ಕೆ ಪ್ರಯತ್ನಿಸಿರಿ. ನಮಗೆ ತಪ್ಪು ಮಾಡುವವರಿಗೆ ನಾವು ಕರುಣೆಯುಳ್ಳವರಾಗಿ ರಬೇಕು ಎಂಬದು ಇಲ್ಲಿ ಪೌಲನ ತಾತ್ಪರ್ಯವಾಗಿದೆ.

**16-18** ಯಾವಾಗಲೂ ಸಂತೋಷಿಸಿರಿ (ಫಿಲಿಪ್ಪಿ 3:1, 4:4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). .....ಎಡಬಿಡದೇ ಪ್ರಾರ್ಥನೆ ಮಾಡಿರಿ. ನಾವು ಪ್ರತಿದಿನದ ಪ್ರತಿಯೊಂದು ಗಳಿಗೆಯಲ್ಲಿಯೂ ದೇವರನ್ನು ಅವಲಂಭಿಸಿ ಜೀವಿಸುತ್ತೇವೆ. ನಾವು ಒಂದು ದಿನವಾದರೂ ಪ್ರಾರ್ಥಿಸುವದನ್ನು ಬಿಡಬಾರದು (ಮತ್ತಾಯ 7:7-8; ಎಫೆಸ 6:18, ಫಿಲಿಪ್ಪಿ 4:6 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

.........ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿ ಮಾಡಿರಿ (ಎಫೆಸ 5:20; ಕೊಲೊಸ್ಸೆ 3:17; 4:2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಯಾವಾಗಲೂ ಸಂತೋಷಿಸುವದು, ಎಡಬಿಡದೆ ಪ್ರಾರ್ಥಿಸುವದು ಹಾಗು ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿ ಮಾಡುವದು – ಇದು ನಮ್ಮ ವಿಷಯವಾಗಿ ಕ್ರಿಸ್ತಯೇಸುವಿನಲ್ಲಿ ತೋರಿಬಂದ ದೇವರ ಚಿತ್ತ.

**19** ಪವಿತ್ರಾತ್ಮನ ಅಗ್ನಿಯನ್ನು ನಂದಿಸಬೇಡಿರಿ (ಎಪೆಸ 4:30 ನೋಡಿರಿ). ಪವಿತ್ರಾತ್ಮನು ಅಗ್ನಿಯಂತೆ ಇರುತ್ತಾನೆ. (ಮತ್ತಾಯ 3:11; ಅ.ಕೃ. 2:3-4). ನಾವು ಆ ಅಗ್ನಿಯನ್ನು ನಂದಿಸಬಾರದು! ಯಾವದು ಅಗ್ನಿಯನ್ನು ನಂದಿಸುತ್ತದೆ? ಪಾಪ, ಪಾಪ ಯಾವಾಗಲೂ ನಮ್ಮ ಜೀವಿತಗಳಲ್ಲಿನ ಆತ್ಮನ ಅಗ್ನಿಯನ್ನು ನಂದಿಸುತ್ತದೆ. ಮತ್ತು ಯಾವದು ಅಗ್ನಿಯನ್ನು ಇನ್ನಷ್ಟು ಪ್ರಕಾಶಮಾನವಾಗಿ ಉರಿಯುವಂತೆ ಮಾಡುತ್ತದೆ? ಸಂತೋಷ, ಪ್ರಾರ್ಥನೆ ಹಾಗು ಕೃತಜ್ಞತಾಸ್ತುತಿ (ವಚನಗಳು 16-18).

ಈ ವಚನಕ್ಕೆ ಇನ್ನೊಂದು ಅರ್ಥವಿರುತ್ತದೆ. ಪವಿತ್ರಾತ್ಮನು ಜನರಿಗೆ ವಿವಿಧ ವರಗಳನ್ನು ಅನುಗ್ರಹಿಸುತ್ತಾನೆ (1 ಕೊರಿಂಥ 12:7-11). ಪವಿತ್ರಾತ್ಮನುನಮಗೆ ನೀಡುವ ವರಗಳನ್ನು ನಾವು ಉಪಯೋಗಿಸಬೇಕು. ನಾವು ಅವು ಗಳನ್ನು ಉಪಯೋಗಿಸಲು ವಿಫಲರಾಗುವದಾದರೆ ಪವಿತ್ರಾತ್ಮನ ಅಗ್ನಿಯನ್ನು ನಂದಿಸುವವರಾಗುತ್ತೇವೆ.

**20-21** ಥೆಸಲೋನಿಕದ ವಿಶ್ವಾಸಿಗಳಲ್ಲಿ ಕೆಲವರಿಗೆ ಪ್ರವಾದನಾ ವರವು ಕೊಡಲ್ಪಟ್ಟಿತ್ತು (1ಕೊರಿಂಥ 14:1,3). ಆದರೆ ಸಭೆಯಲ್ಲಿದ್ದ ಇತರರು ಈ ಪ್ರವಾದನೆಗಳಿಗೆ ಕಿವಿಗೊಡುತ್ತಿರಲಿಲ್ಲ. ಹೀಗಿರುವದರಿಂದ, ಪೌಲನು ಥೆಸಲೋನಿಕದವರಿಗೆ ಪ್ರವಾದನೆಗಳನ್ನು ಹೀನೈಸಬೇಡಿರಿ ಎಂದು ಪ್ರಬೋಧಿಸುತ್ತಾನೆ. ಹೇಗಿದ್ದರೂ, ಅವರು ಏಕಾಏಕಿ ಎಲ್ಲಾ ಪ್ರವಾದನೆಯನ್ನು ಸ್ವೀಕರಿಸಿಕೊಳ್ಳಬಾರದು. ಮೊದಲು ಪ್ರತಿಯೊಂದು ಪ್ರವಾದನೆಯನ್ನು ವಿವೇಚಿಸಿ ಪರೀಕ್ಷಿಸುವದು ಅವಶ್ಯಕರವಾಗಿರುತ್ತದೆ (1 ಕೊರಿಂಥ 14:29; 1 ಯೋಹಾನ 4:1). ಈ ದಿನದಲ್ಲೂ ನಾವು ಕೇಳುವ ಅಥವಾ ಓದುವ ಪ್ರತಿಯೊಂದು ಪ್ರವಾದನೆಯನ್ನು ಬೈಬಲ್ಲಿನಲ್ಲಿ ಬರೆದಿರುವ ಸಂಗತಿಗಳೊಂದಿಗೆ ಹೋಲಿಸಿ ತೂಕಮಾಡಿ ಪರೀಕ್ಷಿಸಬೇಕು. ಪ್ರವಾದನೆಯು ಬೈಬಲ್ಲಿನ ಬೋಧನೆಗಳಿಗೆ ಒಪ್ಪುವಂತಿದ್ದರೆ ಆ ಪ್ರವಾದನೆಯು ಪವಿತ್ರಾತ್ಮನಿಂದ ಬಂದದ್ದು ಎಂಬ ನಿಶ್ಚಯವನ್ನು ನಾವು ಹೊಂದಬಹುದು. ಪವಿತ್ರಾತ್ಮನು ದೇವರ ಲಿಖಿತ ವಾಕ್ಯವಾದ ಬೈಬಲ್ಲನ್ನು ವಿರೋಧಿಸುವಂತ ಯಾವದನ್ನೂ ಎಂದಿಗೂ ಮಾಡುವದಿಲ್ಲ. ಈ ವಚನದಲ್ಲಿ ಉಪಯೋಗಿಸಲ್ಪಟ್ಟಿರುವಂತೆ ಪ್ರವಾದನೆಗಳು ಎಂಬ ಪದಕ್ಕೆ ಎರಡನೆಯ ಅರ್ಥವೊಂದು ಇರುತ್ತದೆಃ ಅದೇನೆಂದರೆ, ಬೋಧಿಸುವದು. ಬೋಧಿಸಲ್ಪಡುವ ಸಂದೇಶಗಳನ್ನು ಕೇಳುವಾಗ ನಾವು ಅವು ಗಳನ್ನು ಹೀನೈಸಬಾರದು. ಬೋಧಕನ ಶೈಲಿಯು ನಮಗೆ ಇಷ್ಟವಾಗದಿದ್ದಾಗ್ಯು ಅಥವಾ ನಾವು ಯಾವ ಹೊಸ ವಿಷಯವನ್ನು ಕಲಿಯದಿದ್ದಾಗ್ಯು ಆತನ ಮಾತುಗಳನ್ನು ಗೌರವಪೂರ್ವ ಕವಾಗಿ ಕೇಳಿಸಿಕೊಳ್ಳಬೇಕು.

**22** ಸಕಲವಿಧವಾದ ಕೆಟ್ಟತನಕ್ಕೆ ದೂರವಾಗಿರಿ (ರೋಮ 1:29-31; ಗಲಾತ್ಯ 5:19-21; ಎಫೆಸ 4:31; 5:3-4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**23** ದೇವರ ಜನರು ಪರಿಶುದ್ಧರಾಗಿರಬೇಕು. ಆದರೆ ಈ ವಚನದಲ್ಲಿ ನಮ್ಮನ್ನು ಪವಿತ್ರಮಾಡುವವನು ದೇವರು ತಾನೇ ಎಂಬದನ್ನು ಕಾಣುತ್ತೇವೆ. ನಾವು ನಮ್ಮ ಸ್ವಂತ ಪ್ರಯತ್ನಗಳಿಂದ ನಮ್ಮನ್ನು ಪವಿತ್ರಮಾಡಿಕೊಳ್ಳಲು ಸಾಧ್ಯವಿಲ್ಲ. ನಾವು ಪರಿಸುದ್ದರಾಗುವದಕ್ಕೆ ನಮಗೆ ದೇವರ ಪವಿತ್ರಾತ್ಮನ ಸಹಾಯ ಹಾಗು ಬಲದ ಅಗತ್ಯವಿರುತ್ತದೆ (ಫಿಲಿಪ್ಪಿ 1:10; 1 ಥೆಸಲೋನಿಕ 3:13 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ನಮ್ಮ ಇಡೀ ಆತ್ಮ ಪ್ರಾಣ ಶರೀರಗಳು ದೋಷವಿಲ್ಲದೆ ಕಾಪಾಡಲ್ಪಡಬೇಕು. ಪೌಲನ ತಾತ್ಪರ್ಯವೇನೆಂದರೆ ನಮ್ಮ ಜೀವಿತಗಳ ಪ್ರತಿಯೊಂದು ಭಾಗವೂ – ಆತ್ಮ ಪ್ರಾಣ ಶರೀರಗಳು – ಪವಿತ್ರವಾಗಿರಬೇಕು.

ಮಾನವನು ಮೂರು ಬೇರೆ ಬೇರೆ ಭಾಗಗಳಿಂದ – ಆತ್ಮ, ಪ್ರಾಣ, ಶರೀರ – ಮಾಡಲ್ಪಟ್ಟಿದ್ದಾನೆಂಬದನ್ನು ಈ ವಚನವು ಕಲಿಸುತ್ತದೆಂದು ಕೆಲವು ಕ್ರೈಸ್ತ ಪಂಡಿತರು ನಂಬುತ್ತಾರೆ. ನಮ್ಮ ಆತಮವು ದೇವರೊಂದಿಗೆ ನೇರವಾದ ಸಂಪರ್ಕ ಹಾಗು ಅನ್ಯೋನ್ಯತೆಯನ್ನು ಹೊಂದಿರುವ ಭಾಗವಾಗಿದೆ (ರೋಮ 8:16). ನಮ್ಮ ಪ್ರಾಣವು ನಮ್ಮ ಭಾವನೆಗಳು,ಆಲೋಚನೆಗಳು ಹಾಗು ಅಭಿಲಾಷೆಗಳು ಉದ್ಭವಿಸುವ ನಮ್ಮ ಭಾಗವಾಗಿದೆ. ಪಾಪವು ಸಹ ಪ್ರಾಣದಲ್ಲಿ ಉದ್ಭವಿಸುತ್ತದೆ (ಯಾಕೋಬ 1:14-15). ಅನೇಕವೇಳೆ ಬೈಬಲ್ ಪ್ರಾಣವನ್ನು "ಹೃದಯ" ಅಥವಾ "ಮನಸ್ಸು" ಎಂದು ಕರೆಯುತ್ತದೆ. ನಂತರ, ಮೂರನೆಯ ಭಾಗವಾದ ನಮ್ಮ ಶರೀರವು ನಮ್ಮ ಭೌತಿಕ ಭಾಗವಾಗಿದೆ. ನಮ್ಮ ಶರೀರವು ನಮ್ಮ ಆತ್ಮ ಹಾಗು ಪ್ರಾಣದ ಮಾರ್ಗದರ್ಶನದ ಅಡಿಯಲ್ಲಿ ಇರುತ್ತದೆ, ನಮ್ಮ ಆತ್ಮ ಹಾಗು ಪ್ರಾಣ ಮಾಡಬೇಕೆಂದು ಹೇಳುವದನ್ನೆಲ್ಲಾ ನಮ್ಮ ಶರೀರವು ಮಾಡುತ್ತದೆ (ರೋಮ 6:13).

ನಾವು ದೇವರ ದೃಷ್ಟಿಯಲ್ಲಿ ಪೂರ್ಣ ಪವಿತ್ರರೂ ಆರೋಗ್ಯವಂತರೂ ಆಗಬೇಕಾದರೆ ನಮ್ಮ ಜೀವತಗಳ ಮೂರು ಭಾಗಗ ಳೆಲ್ಲವೂ ಪವಿತ್ರ ಹಾಗು ಆರೋಗ್ಯಕರವಾಗಿ ಇರತಕ್ಕದ್ದು. ನಮ್ಮ ಪ್ರಾಣವು ಪಾಪದಿಂದ ಅನಾರೋಗ್ಯವು ಳ್ಳದ್ದು ನಮ್ಮ ಆತ್ಮವು ದೇವರಿಂದ ಬೇರ್ಪಟ್ಟದ್ದೂ ಆಗಿರುವದಾದರೆ ನಾವು ನಮ್ಮ ಶರೀರವನ್ನು ಗುಣಪಡಿಸುವದಕ್ಕೆ ತೆಗೆದುಕೊಳ್ಳುವ ಔಷದಿಯಿಂದ ಅಷ್ಟೇನು ಹಿತವಾಗುವದಿಲ್ಲ.

ವಾಸ್ತವದಲ್ಲಿ, ನಮ್ಮ ಭೌತೀಕ ಶರೀರವು ಅತ್ಯಲ್ಪ ಪ್ರಾಮುಖ್ಯತೆಯುಳ್ಳ ನಮ್ಮ ಭಾಗವಾಗಿದೆ, ನಮ್ಮ ಆತ್ಮ ಪ್ರಾಣಗಳು ಆರೋಗ್ಯಕರವಾಗಿರುವದು ಅತ್ಯಂತ ಹೆಚ್ಚು ಪ್ರಾಮುಖ್ಯವಾಗಿರುತ್ತದೆ, ಯಾಕೆಂದರೆ ನಮ್ಮ ಈ ಭಾಗಗಳೇ ಸದಾಕಾಲವೂ ಉಲಿಯುವಂತವು ಗಳಾಗಿವೆ. ನಾವು ಪರಲೋಕವನ್ನು ಪ್ರವೇಶಿಸುವದಕ್ಕೆ ನಮಗೆ ಆರೋಗ್ಯಕರ ದೇಹಗಳ ಅಗತ್ಯವಿರುವದಿಲ್ಲ! (ಮಾರ್ಕ 9:43-48 ನೋಡಿರಿ).

**24** ದೇವರನ್ನು ನಮ್ಮನ್ನು ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ಆರಿಸಿಕೊಂಡಿರುತ್ತಾನೆ (ಎಫೆಸ 1:4). ಆತನು ನಮ್ಮನ್ನು ಪರಿಶುದ್ಧ ಜೀವನ ನಡೆಸಲು ಕರೆದಿರುತ್ತಾನೆ (1 ಥೆಸಲೋನಿಕ 4:7). ದೇವರು ನಂಬಿಗಸ್ತನು. ಆತನು ನಮ್ಮಲ್ಲಿ ಪ್ರಾರಂಭಿಸಿರುವ ಕೆಲಸವನ್ನು ಖಂಡಿತವಾಗಿಯೂ ಸಿದ್ದಿಗೆ ತರುವನು (ಅರಣ್ಯಕಾಂಡ 23:19; 1 ಕೊರಿಂಥ 1:8; ಫಿಲಿಪ್ಪಿ 1:6, 2:13; ಯೂದನು 24-25 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**25-27** ರೋಮ 16:16 ಮತ್ತು ವ್ಯಾಖ್ಯಾನ ನೋಡಿರಿ.

**28** 1 ಕೊರಿಂಥ 16:23 ಮತ್ತು ವ್ಯಾಖ್ಯಾನ ನೋಡಿರಿ.

## ಟಿಪ್ಪಣಿ

1 ಎರಡು ಅತಿ ಪ್ರಾಮುಖ್ಯವಾದ ಸಂಗತಿಗಳು ನಂಬಿಕೆ (ವಿಶ್ವಾಸ) ಮತ್ತು ಪ್ರೀತಿ (ಗಲಾತ್ಯ 5:6; 1 ಥೆಸಲೋನಿಕ 3:6 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಮೂರನೆಯ ಅತಿ ಪ್ರಾಮುಖ್ಯವಾದ ಸಂಗತಿಯು ನಿರೀಕ್ಷೆ.

2 ಅಖಾಯವು ಗ್ರೀಸಿನ ದಕ್ಷಿಣ ಪ್ರಾಂತ್ಯವಾಗಿತ್ತು. ಮೆಕೆದೊನ್ಯ ಹಾಗು ಅಖಾಯಗಳು ಜೊತೆಯಾಗಿ ಗ್ರೀಕರಾಷ್ಟ್ರದ ಬಹುಪಾಲು ಕ್ಷೇತ್ರವನ್ನು ವ್ಯಾಪಿಸಿದ್ದವು .

3 ಬೈಬಲಿನ ಕೆಲವು ಆವೃತ್ತಿಗಳಲ್ಲಿ ಅಪೊಸ್ತಲರು ಎಂಬದು 6ನೇ ವಚನದ ಭಾಗವಾಗಿ ಸೇರಿಸಲ್ಪಟ್ಟಿರುತ್ತದೆ.

4 ತನ್ನ ಸ್ವಂತ ದೇಹವನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರಲು ಎಂಬ ಮಾತುಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ತನ್ನ ಸ್ವಂತ ಹೆಂಡತಿಯೊಂದಿಗೆ ಜೀವಿಸಲು ಕಲಿತುಕೊಳ್ಳಬೇಕು" ಅಥವಾ "ಧರ್ಮಪತ್ನಿಯನ್ನು ಸಂಪಾದಿಸಿಕೊಳ್ಳಲು ತಿಳಿಯಬೇಕು" ಎಂದು ಹೇಳುತ್ತವೆ. ಮೂಲ ಗ್ರೀಕ ಪ್ರತಿಯು ಈ ಮೂರರಲ್ಲಿ ಯಾವ ಅರ್ಥವನ್ನಾದರೂ ನೀಡಬಹುದು; ಇದು ಹೇಗೆ ಭಾಷಾಂತರಿಸಲ್ಪಡಬೇಕೆಂಬದು ಖಚಿತವಾಗಿರುವದಿಲ್ಲ. ಹೇಗಿದ್ದರೂ, ಯಾವ ಭಾಷಾಂತರವು ಉಪಯೋಗಿಸಲ್ಪಟ್ಟರೂ ಸರಿಯೇ, ಪೌಲನ ತಾತ್ಪರ್ಯವು ಪ್ರಾಮುಖ್ಯವಾಗಿ ಒಂದೇ ಆಗಿರುತ್ತದೆಃ ಒಬ್ಬನು ತನ್ನ ಕಾಮಾಭಿಲಾಷೆಯನ್ನು ಸ್ವಾಧೀನದಲ್ಲಿಟ್ಟುಕೊಳ್ಳಬೇಕು. ದೇವರು ಇದಕ್ಕಾಗಿ ನಮಗೆ ಸ್ವಾಭಾವಿಕ ಮಾರ್ಗವನ್ನು ಅನುಗ್ರಹಿಸಿರುತ್ತಾನೆಃ ಅದೇನೆಂದರೆ, ಪತ್ನಿಯನ್ನು ಸಂಪಾದಿಸಿಕೊಂಡು ಅವಳೊಂದಿಗೆ ಪರಸ್ಪರ ಒಪ್ಪಿಗೆ ಹಾಗು ಗೌರವದಲ್ಲಿ ಜೀವಿಸುವದನ್ನು ಕಲಿಯಬೇಕು (1 ಪೇತ್ರ 3:7).

5 ದಂಡಿಸುವನು ಎಂಬ ಪದದ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಮುಯ್ಯಿಗೆ ಮುಯ್ಯಿ ತೀರಿಸುವನು" ಎಂದು ಹೇಳುತ್ತವೆ, ಅದು ಗ್ರೀಕ ಪ್ರತಿಯ ಅಕ್ಷರಸಃ ಭಾಷಾಂತರವಾಗಿದೆ. ಅರ್ಥವು ಒಂದೇ ಆಗಿದೆ.

# ಪೌಲನು ಥೆಸಲೋನಿಕದವರಿಗೆ ಬರೆದ ಎರಡನೆಯ ಪತ್ರಿಕೆ

## ಪರಿಚಯ

ಪೌಲನು ಥೆಸಲೋನಿಕದವರಿಗೆ ಬರೆದ ಎರಡನೆಯ ಪತ್ರಿಕೆಯು ಆತನು ತನ್ನ ಮೊದಲನೆಯ ಪತ್ರಿಕೆಯನ್ನು ಬರೆದ ಸ್ವಲ್ಪಕಾಲದ ನಂತರವಷ್ಟೇ ಕೊರಿಂಥದಿಂದ ಬರೆಯಲ್ಪಟ್ಟಿತು.

ಥೆಸಲೋನಿಕದ ವಿಶ್ವಾಸಿಗಳಲ್ಲಿ ಕೆಲವರು ಪೌಲನ ಮೊದಲನೆಯ ಪತ್ರಿಕೆಯನ್ನು ಓದಿದ ಬಳಿಕ ಯೇಸು ಅತಿ ಶೀಘ್ರದಲ್ಲಿಯೇ ತಿರಿಗಿ ಬರುವನೆಂಬ ವಾಚಾರವನ್ನು ಪಡೆದುಕೊಂಡರು. ಪೌಲನು ಈ ಮುಂಚೆ ಅಂತ್ಯವು ಪಕ್ಕನೆ ಬರುವದೆಂದು ಬರೆದಿದ್ದನು (1 ಥೆಸಲೋನಿಕ 5:3); ಆದರೆ ಥೆಸಲೋನಿಕದವರು ಇದರಿಂದ ಯೇಸು ತಕ್ಷಣವೇ ಬರಲಿದ್ದಾನೆಂದು ಅರ್ಥಮಾಡಿಕೊಂಡಿದ್ದರು. ಈ ಕಾರಣಕ್ಕಾಗಿ ಥೆಸಲೋನಿಕದವರಲ್ಲಿ ಅನೇಕರು ದುಡಿಯುವದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟು ಕರ್ತನ ಪ್ರತ್ಯಕ್ಷತೆಗಾಗಿ ಎದುರು ನೋಡುತ್ತಾ ಸುಮ್ಮನೆ ಕುಳಿತುಕೊಂಡಿದ್ದರು! ಆದದರಿಂದ, ಪೌಲನು ಥೆಸಲೋನಿಕದವರ ತಪ್ಪಾದ ಯೋಚನೆ ಹಾಗು ನಡವಳಿಕೆಯನ್ನು ತಿದ್ದುವದಕ್ಕಾಗಿ ಈ ಎರಡನೆಯ ಪತ್ರಿಕೆಯನ್ನು ಬರೆದನು. ಪೌಲನು ಈ ಕಾರ್ಯಕ್ಕಾಗಿ ಅವರಿಗೆ "ಎದ್ದೇಳಿರಿ, ಕೆಲಸಕ್ಕೆ ಹಿಂದುರಿಗಿರಿ, ಸೋಮಾರಿಗಳಾಗಿರಬೇಡಿರಿ" ಎಂದು ಹೇಳುತ್ತಾ ಬರೆಯುತ್ತಾನೆ.

## ಹೊರ ರೇಖೆ

ಅ. ಕೃತಜ್ಞತಾಸ್ತುತಿ ಹಾಗು ಪ್ರಾರ್ಥನೆ (1:1-12).

1. ಹಿಂಸೆಯಲ್ಲಿ ತಾಳ್ಮೆಯಿಂದಿರುವದಕ್ಕಾಗಿ ಕೃತಜ್ಞತಾಸ್ತುತಿ (1:1-10).
2. ಥೆಸಲೋನಿಕದವರಿಗಾಗಿ ಪ್ರಾರ್ಥನೆ (1:11-12)

ಆ. ಸಲಹೆಗಳು ಹಾಗು ಪ್ರಬೋಧನೆಗಳು (2:1-3:18)

1. ಕರ್ತನ ಬರೋಣದ ವಿಷಯದಲ್ಲಿ ಸಲಹೆಗಳು (2:1-17)
2. ಪ್ರಾರ್ಥನೆ ಹಾಗು ಕೆಲಸ ಮಾಡಬೇಕೆಂದು ಪ್ರಬೋಧನೆಗಳು (3:1-18)

## ಅಧ್ಯಾಯ - 1

### ಕೃತಜ್ಞತಾಸ್ತುತಿ ಮತ್ತು ಪ್ರಾರ್ಥನೆ (1:1-12)

**1-2** 1 ಥೆಸಲೋನಿಕ 1:1 ಮತ್ತು ವ್ಯಾಖ್ಯಾನ ನೋಡಿರಿ.

**3** ಈ ವಚನದ ಪ್ರಕಾರವಾಗಿ ಪೌಲನು 1 ಥೆಸಲೋನಿಕ 3:12 ರಲ್ಲಿ ಮಾಡಿದ ಪ್ರಾರ್ಥನೆಯು ಸಂಪೂರ್ಣವಾಗಿ ಉತ್ತರಿಸಲ್ಪಟ್ಟಿರುತ್ತದೆ (ಎಫೆಸ 1:15-16; ಕೊಲೊಸ್ಸೆ 1:3-4, 1 ಥೆಸಲೋನಿಕ 1:2-3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**4** ಥೆಸಲೋನಿಕದ ವಿಶ್ವಾಸಿಗಳು ಬಹಳಷ್ಟು ಹಿಂಸೆಗಳನ್ನು ಹೊಂದಿದಾಗ್ಯು ಅವರ ನಂಬಿಕೆ ಚಂಚಲವಾಗದೆ ಸಂರಕ್ಷಿಸಲ್ಪಟ್ಟಿತ್ತು. ಅವರ ಆತ್ಮೀಕ ತಂದೆಯಾಗಿದ್ದ ಪೌಲನಿಗೆ ಇದು ಮಹಾ ಸಂತೋಷಕ್ಕೆ ಕಾರಣವಾಗಿತ್ತು (1 ಥೆಸಲೋನಿಕ 1:6 ನೋಡಿರಿ). ಅವರ ನಂಬಿಕೆಯು ಅಚಲವಾಗಿದ್ದದ್ದು ಮಾತ್ರವಲ್ಲ, ಆದರೆ ಅವರು ಅನುಭವಿಸುತ್ತಿದ್ದ ಹಿಂಸೆಯ ಕಾರಣದಿಂದ ಆ ನಂಬಿಕೆಯು ಇನ್ನು ಬಲಿಷ್ಟವಾಗಿ ಬೆಳೆಯುತ್ತಿತ್ತು (ಯಾಕೋಬ 1:2-3).

**5** ಥೆಸಲೋನಿಕದವರ ಮೇಲೆ ಬಂದಿರುವ ಹಿಂಸೆಯು ದೇವರು ನ್ಯಾಯವಾದ ತೀರ್ಪು ಮಾಡುತ್ತಾನೆಂಬದಕ್ಕೆ ಸ್ಪಷ್ಟ ನಿದರ್ಶನವಾಗಿದೆ ಎಂದು ಪೌಲನು ಹೇಳುತ್ತಾನೆ. ಪೌಲನ ತಾತ್ಪರ್ಯವೇನು? ಪೌಲನ ತಾತ್ಪರ್ಯವೇನೆಂದರೆ, ದೇವರ ನಿತ್ಯ ಸಂಕಲ್ಪ ಹಾಗು ನ್ಯಾಯತೀರ್ಪಿನ ಅನುಸಾರವಾಗಿ ಬಾಧೆ ಮತ್ತು ಹಿಂಸೆಯು ಪ್ರತಿಯೊಬ್ಬ ಕ್ರೈಸ್ತನ ಮೇಲೆ ಒಂದಿಲ್ಲಾ ಒಂದು ಸಮಯದಲ್ಲಿ ಬರಲೇಬೇಕು (1 ಥೆಸಲೋನಿಕ 3:3; 2 ತಿಮೊಥೆ 3:12). ನಮ್ಮ ಸಂಕಟ ಹಾಗು ಬಾಧೆಗಳ ಮೂಲಕವಾಗಿ ದೇವರು ನಮಗೆ ಮಾತ್ರವಲ್ಲದೆ ಇತರರಿಗೂ ಸಹ ದೊಡ್ಡ ಪ್ರಯೋಜನವನ್ನು ಉಂಟುಮಾಡುತ್ತಾನೆ. ಕ್ರಿಸ್ತನ ಬಾಧೆಗಳ ಮೂಲಕ ದೇವರು ನಮ್ಮನ್ನು ಗುಣಪಡಿಸಿದನು (ಯೆಶಾಯ 53:5). ನಮ್ಮ ಬಾಧೆಗಳ ಮೂಲಕ ಇತರ ಜನರು ನಮ್ಮ ತಾಳ್ಮೆ ನಂಬಿಕೆಗಳನ್ನು ಸ್ಪಷ್ಟವಾಗಿ ಕಾಣಬಲ್ಲವರಾಗಿರುತ್ತಾರೆ. ಥೆಸಲೋನಿಕದವರ ತಾಳ್ಮೆ ನಂಬಿಕೆಗಳು ಸಹ ಸ್ಪಷ್ಟವಾಗಿ ಕಾಣುತ್ತಿದ್ದವು (ವಚನ 4), ಮತ್ತು ಈ ಕಾರಣದಿಂದಲೇ ಅವರು ಇತರ ವಿಶ್ವಾಸಿಗಳಿಗೆ ಅಂಥ ಉತ್ತಮ ಮಾದರಿಯಾಗಿದ್ದರು (1 ಥೆಸಲೋನಿಕ 1:7). ಬಾಧೆಯ ಮೂಲಕ ದೇವರು ನಮ್ಮನ್ನು ಶಿಕ್ಷಿಸುತ್ತಾನೆ ಹಾಗು ಪರಿಶುದ್ಧರನ್ನಾಗಿಯೂ ದೋಷವಿಲ್ಲದವರನ್ನಾಗಿಯೂ ಮಾಡುತ್ತಾನೆ (ಇಬ್ರಿಯ 12:10) ಅಲ್ಲದೆ, ಸ್ವತಃ ಕ್ರಿಸ್ತನು ಬಾಧೆಯ ಮೂಲಕ ಪರಿಪೂರ್ಣ–ಗೊಳಿಸಲ್ಪಟ್ಟಿದ್ದನು (ಇಬ್ರಿಯ 5:8-9).

ಆದದರಿಂದ, ಈ ಎಲ್ಲಾ ಕಾರಣಗಳಿಗಾಗಿ ದೇವರು ನ್ಯಾಯವಾದ ತೀರ್ಪು ಮಾಡುತ್ತಾನೆಂಬದಕ್ಕೆ ಥೆಸಲೋನಿಕದವರ ಸಂಕಟಗಳು ಹಾಗು ಬಾಧೆಗಳು ಸ್ಪಷ್ಟ ನಿದರ್ಶನವಾಗಿದೆ. ವಾಸ್ತವದಲ್ಲಿ, ಬಾಧೆ ಮತ್ತು ಹಿಂಸೆಗಳು ದೇವರು ನಮ್ಮ ಕಡೆಗೆ ಇದ್ದಾನೆ ಎಂಬದಕ್ಕೆ ನಿದರ್ಶನವಾಗಿದೆ ಹೊರತು ನಮ್ಮ ವಿರುದ್ಧವಾಗಿ ಇದ್ದಾನೆಂಬದಕ್ಕಲ್ಲ (1 ಪೇತ್ರ 4:14). ಹೀಗೆ ಥೆಸಲೋನಿಕದವರು ಸುಮ್ಮನೆ ಬಾಧೆಯನ್ನು ಸೈರಿಸಿಕೊಂಡಿರಲಿಲ್ಲ. ಅವರು ಅದನ್ನು ತಾಳ್ಮೆಯೊಂದಿಗೆ ಅನುಭವಿಸಿದ್ದರು. ದೇವರು ಥೆಸಲೋನಿಕದವರ ಜೀವಿತಗಳಲ್ಲಿ ತನ್ನ ನಿತ್ಯ ಉದ್ದೇಶಗಲನ್ನು ನೆರವೇರಿಸುತ್ತಿದ್ದನೆಂಬದಕ್ಕೆ ಇದು ಹೆಚ್ಚಿನ ನಿದರ್ಶನವಾಗಿದೆ. ಅವರು ಹಿಂಸೆಯಲ್ಲಿ ತೋರಿದ ತಾಳ್ಮೆಯ ದೆಶೆಯಿಂದ ಥೆಸಲೋನಿಕದವರು ದೇವರ ರಾಜ್ಯಕ್ಕೆ ....ಯೋಗ್ಯರಾಗುವರು (ಮತ್ತಾಯ 5:10-12; ರೋಮ 8:17 ನೋಡಿರಿ).

ನೆನಪಿರಲಿ, ಯೇಸುಕ್ರಿಸ್ತನು ಯೋಗ್ಯನಾಗಿದ್ದಾನೆ. ನಮ್ಮನ್ನು ತನಗಾಗಿ ಬಾಧೆಯನ್ನು ಅನುಭವಿಸುವಂತೆ ಮಾಡಲು ಆತನು ಯೋಗ್ಯನು. ಮತ್ತು ನಾವು ಆತನಿಗಾಗಿ ಬಾಧೆಯನ್ನನುಭವಿಸುವದಾದರೆ ಸ್ವತಃ ನಾವು ಆತನಿಗೆ ಯೋಗ್ಯರಾಗುವೆವು.

**6** ನಾವು ಲೋಕವನ್ನು ದೃಷ್ಟಿಸುವಾಗ ನಮ್ಮ ಸುತ್ತಲೆಲ್ಲಾ ಹೆಚ್ಚು ಅನ್ಯಾಯವಿರುವದನ್ನು ಕಾಣುತ್ತೇವೆ. ಬಲಿಷ್ಟರು ಬಲಹೀನರನ್ನು ವಿರೋಧಿಸುತ್ತಾರೆ. ಶ್ರೀಮಂತರು ಬಡವರನ್ನು ಶೋಷಣೆಮಾಡುತ್ತಾರೆ. ಕೆಟ್ಟವರು ಮುಗ್ದರನ್ನು ಹಿಂಸಿಸುತ್ತಾರೆ. ಹೇಗಿದ್ದರೂ, ನಾವು ದೇವರನ್ನು ಅನ್ಯಾಯಗಾರನೆಂದು ಹೇಳಬಾರದು. ಕಡೇನ್ಯಾಯತೀರ್ಪಿನ ದಿನದಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ಅವನವನ ಕೃತ್ಯಗಳಿಗೆ ತಕ್ಕ ಪ್ರತಿಫಲವು ಸಿಕ್ಕುವದು (ಮತ್ತಾಯ 16:27; 2 ಕೊರಿಂಥ 5:10 ಕೊಲೊಸ್ಸೆ 3:25). ದೇವರು ಎಲ್ಲಾ ಕೆಟ್ಟದ್ದಕ್ಕೂ ಮುಯ್ಯಿ ತೀರಿಸುವನು (ರೋಮ 12:19).

**7** ಆದದರಿಂದ, ಥೆಸಲೋನಿಕದವರು ತಾಳ್ಮೆ ಹಾಗು ಸ್ಥಿರಚಿತ್ತದಿಂದ ಇರಲಿ. ಹಿಂಸೆ ಹಾಗು ಬಾಧೆಯ ನಂತರ ಉಪ ಶಮನನೀಡುವನೆಂದು ವಾಗ್ದಾನ ಮಾಡುವದಿಲ್ಲ. ಕರ್ತನಾದ ಯೇಸುಕ್ರಿಸ್ತನು ಆಕಾಶದಿಂದ ಪ್ರತ್ಯಕ್ಷನಾಗುವ ಕಾಲದಲ್ಲಿ – ಅಂದರೆ, ಕರ್ತನಾದ ಯೇಸು ತಿರಿಗಿ ಬರುವಾಗ – ನಮಗೆ ಉಪಶಮನ ಬರುತ್ತದೆ. ನಮ್ಮ ಉಪಶಮನವು – ನಮ್ಮ "ಪ್ರತಿಫಲ" ಅಥವಾ ರಕ್ಷಣೆಯು[1] –ಈ ಬೂಮಿಯಲ್ಲಿ ನಮಗೆ ಬಂದ ಎಲ್ಲಾ ಬಾಧೆಗಳಿಗಿಂತಲೂ ಎಷ್ಟೇ ಹೆಚ್ಚು ಶ್ರೇಷ್ಟವಾಗಿರುವದು (ರೋಮ 8:18). ಇಲ್ಲಿ ಇನ್ನು ಒಂದು ಸಂಗತಿಯನ್ನು ಸೇರಿಸುವದು ಅವಶ್ಯಕವಾದದ್ದುಃ ದೇವರು ಈ ಭೂಲೋಕದಲ್ಲಿ ನಮಗೆ ಪೂರ್ಣ "ಉಪಶಮನ" ನೀಡದಿರಬಹುದಾದರೂ ಆತನು ನಮ್ಮ ಹೃದಯಗಳಲ್ಲಂತೂ ಸಮಾಧಾನವನ್ನು ಖಂಡಿತವಾಗಿಯೂ ನೀಡುವನು. ಸಮಾಧಾನವು ಪವಿತ್ರಾತ್ಮನ ಫಲಗಳಲ್ಲಿ ಒಂದಾಗಿದೆ. ಕ್ರೈಸ್ತನಿಗಾದರೋಹೊರಗಡೆಯಲ್ಲಿ ಸಮಾಧಾನವಿಲ್ಲದ ವೇಳೆಯಲ್ಲಿಯೂ ಅಂತರ್ಯದಲ್ಲಿ ಯಾವಾಗಲೂ ಸಮಾಧಾನ ಇರುತ್ತದೆ

(ಫಿಲಿಪ್ಪಿ 4:7 ನೋಡಿರಿ). ಕರ್ತನಾದ ಯೇಸು ಆಕಾಶದಿಂದ ಪ್ರತ್ಯಕ್ಷನಾಗುವನು. ಈ ಪ್ರಸ್ತುತ ಕಾಲದಲ್ಲಿ ಯೇಸು ನಂಬಿಕೆಯಿಲ್ಲದವರಿಗೆ ಮರೆಯಾಗಿರುತ್ತಾನೆ. ಆದರೆ ಆತನು ತಿರಿಗಿ ಬರುವಾಗ ಎಲ್ಲಾ ಜನರಿಗೂ ಪೂರ್ಣವಾಗಿ ಬಯಲಾಗುವನು. ಆ ದಿನದಲ್ಲಿ ಪ್ರತಿಯೊಂದು ನಾಲಿಗೆಯು – ಅಂದರೆ, ಪ್ರತಿಯೊಬ್ಬ ಮನುಷ್ಯನು – ಯೇಸು ಕ್ರಿಸ್ತನನ್ನು ಕರ್ತನೆಂದು ಪ್ರತಿಜ್ಞೆ ಮಾಡುವದು (ಫಿಲಿಪ್ಪಿ 2:9-11 ನೋಡಿರಿ).

ಯೇಸು ದೇವದೂತರಿಂದ ಕೂಡಿದವನಾಗಿ ಉರಿಯುವ ಬೆಂಕಿಯಲ್ಲಿ ಕಾಣಿಸಿಕೊಳ್ಳುವನು (ಮಾರ್ಕ 8:38; 1 ಥೆಸಲೋ ನಿಕ 3:13; 2 ಪೇತ್ರ 3:10 ನೋಡಿರಿ). ಹೊಸ ಒಡಂಬಡಿಕೆಯಲ್ಲಿ ಬೆಂಕಿಯು ದೇವರ ಪವಿತ್ರಾತ್ಮನ ಪ್ರಸನ್ನತೆಯ ಒಂದು ಗುರುತಾಗಿರುತ್ತದೆ (ಅ.ಕೃ. 2:3 ನೋಡಿರಿ). ಈ ಬೆಂಕಿಯು ಕ್ರಿಸ್ತನನ್ನು ನಂಬದವರೆಲ್ಲರನ್ನೂ ನಾಶಮಾಡುವದು ಆದರೆ ಅದು ನಂಬುವವರೆಲ್ಲರನ್ನೂ ಶುದ್ಧೀಕರಿಸುವದು. ಕ್ರಿಸ್ತನಂಬಿಕೆಯಿಲ್ಲದವರು ಕ್ರಿಸ್ತನ ಬರೋಣದ ವೇಳೆಭಯದಿಂದ ನಡಗುವರು, ಆದರೆ ವಿಶ್ವಾಸಿಗಳು ಸಂತೋಷಗೊಳ್ಳುವರು ಹಾಗು "ಆಶ್ಚರ್ಯ" ಪಡುವರು (ವಚನ 10).

8 ದೇವರನ್ನರಿಯದವರು ಹಾಗು ಕರ್ತನಾದ ಯೇಸುವಿನ ಸುವಾರ್ತೆಗೆ ಒಳಪಡದವರು ಒಂದೇ ಗುಂಪಿಗೆ ಸೇರಿದವರಾಗಿದ್ದಾರೆ. ಸುವಾರ್ತೆಗೆ ವಿಧೇಯರಾಗಿದಿರುವದೆಂದರೆ ನಂಬದಿರುವದಕ್ಕೆ ಸಮಾನವಾಗಿದೆ. ಯೇಸುವಿನಲ್ಲಿ ನಂಬಿಕೆಯಿಡದವರು ದೇವರನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ (ಯೋಹಾನ 1:18; 14:7,9). ಆದದರಿಂದ, ಇಲ್ಲಿ ಪೌಲನು ಅದಕ್ಕೆ ತಕ್ಕಂತೆ ಹೇಳುವದೇನೆಂದರೆ, ಯೇಸುವಿನಲ್ಲ ನಂಬಿಕೆಯಿಡದವರೆಲ್ಲರನ್ನೂ ದೇವರು ದಂಡಿಸುವನು ಎಂಬದೇ (ಯೋಹಾನ 3:18, 36).

9 ದೇವರ ದಂಡನೆ ಯಾವದು? ಅದು ನಿತ್ಯನಾಶನವೇ. ಇದು ನಿತ್ಯಜೀವಕ್ಕೆ ತದ್ವಿರುದ್ಧವಾದದ್ದು. ಇದು ದೇವರಿಂದ ಬೇರ್ಪಟ್ಟು ನರಕದಲ್ಲಿ ಇರುವದಾಗಿದೆ. ಅಂತಹ ಸ್ಥಿತಿಯು ಮರಣದಂತಿರುತ್ತದೆ.

ಆದದರಿಂದ, ಕ್ರಿಸ್ತನನ್ನು ತಿರಸ್ಕರಿಸುವದು ಮತ್ತು ಆತನ ಸುವಾರ್ತೆಗೆ ಅವಿಧೇಯರಾಗುವದು ನಿಜವಾಗಿಯೂ ಒಂದು ಭಯಾನಕ ಸಂಗತಿಯೇ ಎಂಬದನ್ನು ನಾವು ಅರ್ಥಮಾಡಿಕೊಳ್ಳಬಲ್ಲೆವು. ಯಾಕೆಂದರೆ, ಕ್ರಿಸ್ತನನ್ನು ತಿರಸ್ಕರಿಸುವದರ ಫಲಿತವು ನಿತ್ಯಮರಣವೇ–ನಿತ್ಯನಾಶನವೇ–ಆಗಿದೆ.

10 ಆತನು (ಯೇಸು) ಪ್ರಭಾವಹೊಂದುವವನಾಗಿ ಬರುವ ದಿನದಲ್ಲಿ ಅವಿಶ್ವಾಸಿಗಳ ಮೇಲೆ ನಾಶನವು ಬರುವದು. ಯೇಸು ತನ್ನ ಪವಿತ್ರರಲ್ಲಿ – ಅಂದರೆ, ವಿಶ್ವಾಸಿಗಳಲ್ಲಿ – ಪ್ರಭಾವ (ಮಹಿಮೆ) ಹೊಂದುವನು. ಆತನು ನಮ್ಮಲ್ಲಿ ಮಹಿಮೆ ಹೊಂದುವನು, ಮತ್ತು ನಾವು ಆತನೊಂದಿಗೆ ಮಹಿಮೆ ಹೊಂದಿವೆವು (ರೋಮ 8:17,19). ಕ್ರಿಸ್ತನು ಈಗಲೂ ತಮ್ಮ ನಂಬಿಕೆಯಲ್ಲಿ ಅಚಲವಾಗಿರುವವರ ಮೂಲಕ ಮಹಿಮೆ ಹೊಂದುತ್ತಿರುವನು (ಯೋಹಾನ 17:10).

11 ಈ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು ಥೆಸಲೋನಿಕದವರು ಕ್ರಿಸ್ತನ ಮಹಿಮೆಯಲ್ಲಿ ಪಾಲುಗಾರರಾಗು–ವರೆಂಬದನ್ನು – ಪೌಲನು ಅವರಿಗಾಗಿ ಯಾವಾಗಲೂ ಪ್ರಾರ್ಥಿಸುತ್ತಾನೆ. ದೇವರು ಥೆಸಲೋನಿಕದವರನ್ನುತಾನು ಕರೆದಿದ್ದಕ್ಕೆ ಯೋಗ್ಯರೆಂದು ಎಣಿಸಬೇಕೆಂಬದಾಗಿ ಪೌಲನು ಮೊದಲು ಪ್ರಾರ್ಥಿಸುತ್ತಾನೆ ಎಫೆಸ 4:1; 1ಥೆಸಲೋನಿಕ 2:12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ದೇವರಿಂದ ಕರೆಯಲ್ಪಟ್ಟಿದ್ದೇವೆಂಬದನ್ನು ಎಂದಿಗೂ ಮರೆಯದಿರೋಣ. ನಾವು ಆತನ ಪುತ್ರರೂ ಬಾಧ್ಯರೂ ಆಗಿದ್ದೇವೆ (ಗಲಾತ್ಯ 4:7; ಎಫೆಸ 1:5). ನಾವು ಕ್ರಿಸ್ತನ ಮಹಿಮೆಯಲ್ಲಿ ಪಾಲುಗಾರರಾಗುವದಕ್ಕೆ ಕರೆಯಲ್ಪಟ್ಟಿದ್ದೇವೆ (2 ಥೆಸಲೋನಿಕ 2:14; 1ಪೇತ್ರ 5:10).

ನಾವು ಅಂಥ ಕರೆಯುವಿಕೆಗೆ ಯೋಗ್ಯರಾಗಿ ಉಳಿಯಬೇಕೆಂಬದು ನಮ್ಮ ಎಡಬಿಡದ ಪ್ರಾರ್ಥನೆಯಾಗಿರಲಿ! ಎರಡನೆಯದಾಗಿ, ದೇವರು ಥೆಸಲೋನಿಕದವರ ಸಕಲ ಆಲೋಚನೆಯನ್ನು ನಂಬಿಕೆಯ ಫಲವಾದ (ಅವರ) ಕೆಲಸವನ್ನು ತನ್ನ ಶಕ್ತಿಪೂರ್ವಕವಾಗಿ ಸಿದ್ಧಿಗೆ ತರಬೇಕೆಂತಲೂ ಪೌಲನು ಬೇಡಿಕೊಳ್ಳುತ್ತಾನೆ (ಫಿಲಿಪ್ಪಿ 2:13 ಮತ್ತು ವ್ಯಾಖ್ಯಾನ ನೋಡಿರಿ). ದೇವರು ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರ ತನ್ನ ಉದ್ಧೇಶಗಳನ್ನು ನೆರವೇರಿಸುವನು (ಎಫೆಸ 3:20-21).

12 ಪೌಲನು ಹೀಗೆ ಪ್ರಾರ್ಥಿಸಿದ್ದಕ್ಕೆ ಕಾರಣವೇನು? ಥೆಸಲೋನಿಕದವರ ಮೂಲಕ ಕರ್ತನಾದ ಯೇಸುವಿನ ಹೆಸರಿಗೆ ಮಹಿಮೆ ಉಂಟಾಗಬೇಕೆಂಬದಕ್ಕಾಗಿ ಪೌಲನು ಈ ಪ್ರಾರ್ಥನೆಯನ್ನು ಮಾಡುತ್ತಾನೆ. ಇದಕ್ಕಾಗಿಯೇ ನಾವು ಕರೆಯಲ್ಪಟ್ಟಿದ್ದೇವೆ. ಯೇಸುಕ್ರಿಸ್ತನ ಹೆಸರನ್ನು ಮಹಿಮೆಪಡಿಸುವದು ನಮ್ಮ ಕರ್ತವ್ಯ ಹಾಗು ಕರೆಯುವಿಕೆ ಆಗಿದೆ. (ಮತ್ತಾಯ 5:16 ನೋಡಿರಿ).

ನಾವು ನಮ್ಮ ನಂಬಿಕೆಯಲ್ಲಿ ದೃಢವಾಗಿ ನಿಲ್ಲುವಾಗ, ನಾವು ಕ್ರಿಸ್ತನ ಪ್ರೀತಿಯಿಂದ ಇತರರನ್ನು ಪ್ರೀತಿಸುವಾಗ, ನಾವು ಕ್ರಿಸ್ತನಿಗಾಗಿ ತಾಳ್ಮೆಯಿಂದ ಬಾಧೆಯನ್ನನುಭವಿಸುವಾಗ ಆತನ ಹೆಸರಿಗೆ ಮಹಿಮೆಯನ್ನು ತರುವವರಾಗಿರುತ್ತೇವೆ. ಮತ್ತು ಯೇಸು ನಮ್ಮಲ್ಲಿ ಮಹಿಮೆ ಹೊಂದುವದಾದರೆ ನಾವು ಸಹ ಆತನಲ್ಲಿ ಮಹಿಮೆ ಹೊಂದುವೆವು (ರೋಮ 8:30). ನಾವು ನಮ್ಮ ದೇವರ ಮತ್ತು ಕರ್ತನಾದ ಯೇಸುಕ್ರಿಸ್ತನ ಕೃಪೆಯ ಅನುಸಾರವಾಗಿ ಮಹಿಮೆ ಹೊಂದುವೆವು. ನಮ್ಮ ಜೀವಿತಗಳು ಪ್ರತಿದಿನವೂ ಆತನ ಕೃಪೆಯ ಮಹಿಮೆಯನ್ನು ಪ್ರತಿಬಿಂಬಿಸಲಿ! (ಎಫೆಸ 1:6).

## ಅಧ್ಯಾಯ - 2

### ಅಧರ್ಮಸ್ವರೂಪ ಮನುಷ್ಯನು (2:1-2)

**1-2** ಥೆಸಲೋನಿಕದವರು ಕೆಲವು ಸಂಗತಿಗಳನ್ನು ಕೇಳಿದಾಗ ಕರ್ತನ ದಿನವು ಈಗಾಗಲೇ ಪ್ರಾರಂಭವಾಗಿದೆ ಎಂದು ಯೋಚಿಸಲಾರಂಬಿಸಿದರು (ವಚನ 2). ಕ್ರಿಸ್ತನು ಶೀಘ್ರ್ರವೇ ಬರಲಿದ್ದನೆಂದು ಅವರು ಊಹಿಸಿಕೊಂಡರು. ಆದರೆ, ಪೌಲನು ಅವರಿಗೆ ಅಂಥಹಮಾತುಗಳಿಂದ ಮೋಸಹೋಗಬಾರದೆಂದು ಹೇಳುತ್ತಾನೆ. "ಅಂಥ ಮಾತುಗಳನ್ನು ನಾನು ನುಡಿಯಲಿಲ್ಲ" ಎಂದು ಪೌಲನು ಹೇಳುತ್ತಾನೆ (1 ಥೆಸಲೋನಿಕ 5:1-2 ಮತ್ತು ವ್ಯಾಖ್ಯಾನ ನೋಡಿರಿ). ಪೌಲನ ಕಾಲದಲ್ಲಿ ಅಜ್ಞಾನಿಗಳಾದ ಸುಳ್ಳುಬೋಧಕರು ಅನೇಕರಿದ್ದರು, ಅವರು ಪ್ರವಾದನೆ[2] ವರದಿ ಅಥವಾ ಬರಹದ ಮೂಲಕ ನೂತನ ವಿಶ್ವಾಸಿಗಳಿಗೆ ಕಳವಳ ಹಾಗು ಗೊಂದಲವನ್ನುಂಟು ಮಾಡುತ್ತಿದ್ದರು. ಥೆಸಲೋನಿಕದವರು ಅಂಥ ಬೋಧಕರ ನಿಮಿತ್ಯ ಗಲಿಬಿಲಿಗೊಳಗಾಗಿದ್ದರು.

**3** ಇಲ್ಲಿ ಪೌಲನು ಆ ದಿನವು – ಅಂದರೆ, ಕರ್ತನ ದಿನವು (ವಚನ 2) – ಇನ್ನು ಬಂದಿಲ್ಲವೆಂಬದಕ್ಕೆ ಕಾರಣವನ್ನು ನೀಡುತ್ತಾನೆಃ ಏನೆಂದರೆ, ಆದಿನವು ಬರುವದಕ್ಕೆ ಮುಂಚೆ ಮತಭ್ರಷ್ಟತೆಯು ಮೊದಲು ಸಂಭವಿಸಬೇಕು. ಮತಭ್ರಷ್ಟತೆಯು ಉಂಟಾಗಿಲ್ಲವಾದ್ದರಿಂದ ಕರ್ತನ ದಿನವು ಇನ್ನು ಬಂದಿರುವದಿಲ್ಲ ಎಂಬದನ್ನು ಥೆಸಲೋನಿಕದವರು ತಿಳಿದುಕೊಳ್ಳಬಹುದು ಮತಭ್ರಷ್ಟತೆಯು ಉಂಟಾಗುವಾಗ ಅಧರ್ಮಸ್ವರೂಪನು ಬಯಲಿಗೆ ಬರುವನು (ದಾನಿಯೇಲ 8:23-25). ಪೌಲನು ಇಲ್ಲಿ ಲೋಕಾಂತ್ಯದ ಕುರಿತು ಮಾತಾಡುತ್ತಿದ್ದಾನೆಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ. ಕ್ರಿಸ್ತನು ಲೋಕಾಂತ್ಯದಲ್ಲಿ ಬರುವದಕ್ಕೆ ಸ್ವಲ್ಪಕಾಲ ಮುಂಚೆಯೇ ದೇವರ ವಿರುದ್ಧ ಮತಭ್ರಷ್ಟತೆಯು ಉಂಟಾಗುವದು. ಮತ್ತು ಮತಭ್ರಷ್ಟತೆಯ ನಾಯಕನು ಒಬ್ಬ ದುಷ್ಟನೂ ಬಲಿಷ್ಟನೂ ಆಗಿದ್ದು ಪೌಲನು ಆ ವ್ಯಕ್ತಿಯನ್ನು ಅಧರ್ಮಸ್ವರೂಪನು ಎಂದು ಕರೆಯುತ್ತಾನೆ.

ಈ "ಅಧರ್ಮಸ್ವರೂಪನು" ನಿರ್ಧಿಷ್ಟವಾಗಿ ಯಾರೆಂಬದನ್ನು ಪೌಲನು ನಮಗೆ ಹೇಳುವದಿಲ್ಲ. ಬಹುಶಃ ಈತನು ಅಪೊಸ್ತಲನಾದ ಯೋಹಾನನಿಂದ ಪ್ರಾಸ್ತಾಪಿಸಲ್ಪಟ್ಟಿರುವ ಕ್ರಿಸ್ತ ವಿರೋಧಿಯೇ ಆಗಿರಬೇಕು (1 ಯೋಹಾನ 2:18 ನೋಡಿರಿ). ಅಲ್ಲದೆ ಪೌಲನು "ಅಧರ್ಮ ಸ್ವರೂಪ" ನನ್ನು ನಾಶನಕ್ಕೆ ಆಧೀನನಾದ ಪು ರುಷನು ಎಂದು ಸಹ ಕರೆಯುತ್ತಾನೆ. ಅಂದರೆ, ಈ ವ್ಯಕ್ತಿಯು ಅನೇಕರಿಗೆ ನಾಶನವನ್ನು ಉಂಟುಮಾಡುವದಲ್ಲದೆ ತನೂ ನಾಶನಕ್ಕೊಳಗಾಗುವನು. ಆತನು ಕ್ರಿಸ್ತನನ್ನು ಪರಾಭವಗೊಳಿಸಲು ಶಕ್ತನಾಗುವದಿಲ್ಲ (ವಚನ 8).

**4** ಅಧರ್ಮಸ್ವರೂಪನು ತನ್ನನ್ನು ದೇವರೆಂದು ಕರೆದುಕೊಳ್ಳುವನು. ಆತನು ದೇವರ ಪರಿಶುದ್ಧ ಸ್ಥಳದಲ್ಲಿ, ದೇವರ ಗರ್ಭಗುಡಿಯಲ್ಲಿ[3] ಕುಳಿತುಕೊಳ್ಳುವನು. ಆತನು ದೇವರನ್ನು ವಿರೋಧಿಸುವನು (ದಾನಿಯೇಲ 11:36; ಮಾರ್ಕ 13:14 ನೋಡಿರಿ).

**5-6** ಪೌಲನು ಥೆಸಲೋನಿಕದವರಿಗೆ ಕರ್ತನ ದಿನದ ಕುರಿತು ಕೆಲವು ಸಂಗತಿಗಳನ್ನು ಕಲಿಸಿಕೊಟ್ಟಿರುತ್ತಾನೆ, ಆದರೆ ಈ ವಚನಗಳಲ್ಲಿ ಪೌಲನು ತಾನು ಅವರಿಗೆ ಬೋಧಿಸಿದ ವಿಷಯಗಳಲ್ಲಿ ಕೆಲವೊಂದನ್ನು ಮಾತ್ರವೇ ಪ್ರಸ್ತಾಪಿಸುತ್ತಾನೆ. ಉದಾಹರಣೆಗೆ, ಆ ಮನುಷ್ಯನಿಗೆ (ಅಧರ್ಮ ಸ್ವರೂಪನಿಗೆ) ಬೈಲಿಗೆ ಬರುವದಕ್ಕೆ ಏನು ಅಡ್ಡಿಮಾಡುತ್ತದೆ ಎಂಬದನ್ನು ಥೆಸಲೋನಿಕದವರಿಗೆ ತಿಳಿದಿತ್ತು. ಆದರೆ ಪೌಲನು ಅದು ಏನು ಅಥವಾ ಯಾರು?[4] ಎಂಬದನ್ನು ಈ ಪತ್ರಿಕೆಯಲ್ಲಿ ಹೇಳುವದಿಲ್ಲ. ನಾವು ಒಂದು ಸಂಗತಿಯನ್ನು ಮಾತ್ರಹೇಳಬಲ್ಲೆವೇನೆಂದರೆ, ಯಾವದೋ ಒಂದು ಸಂಗತಿ ಅಥವಾಒಬ್ಬ ವ್ಯಕ್ತಿ ಅಧರ್ಮಸ್ವರೂಪನು ಬೈಲಿಗೆ ಬರುವದಕ್ಕೆ ಯಾವದೋ ಒಂದುವಿಧದಲ್ಲಿ ಅಡ್ಡಿ ಮಾಡುತ್ತಿದೆ; ಯಾವದೋ ಒಂದು ಸಂಗತಿ ಅಥವಾ ವ್ಯಕ್ತಿ ಆತನನ್ನು ತನ್ನ ಹತೋಟಿಯಲ್ಲಿಟ್ಟುಕೊಂಡಿರುತ್ತದೆ. ಈ ಕಾರಣದಿಂದಲೇ ಅಧರ್ಮಸ್ವರೂಪನು ಇನ್ನೂ ಪೂರ್ಣವಾಗಿ ಬೈಲಿಗೆ ಬಂದಿರುವದಿಲ್ಲ.

**7** ಪೌಲನು ಇಲ್ಲಿ ಅಧರ್ಮಸ್ವರೂಪದ ಗುಪ್ತಶಕ್ತಿಯು[5] ಈಗಾಗಲೇ ಲೋಕದಲ್ಲಿ ಕಾರ್ಯಮಾಡುತ್ತಿದೆ ಎಂದು ಹೇಳುತ್ತಾನೆ. ಅಪೊಸ್ತಲನಾದ ಯೋಹಾನನು ಸಹ ಇದೇ ವಿಷಯವನ್ನು ಹೇಳುತ್ತಾ ಈಗಲೂ ಕ್ರಿಸ್ತ ವಿರೋಧಿಗಳು ಬಹುಮಂದಿ ಎದ್ದಿದ್ದಾರೆಂದು ಬರೆಯುತ್ತಾನೆ (1 ಯೋಹಾನ 2:18). ಯೋಹಾನನು ಇದೇ ವಿಚಾರವನ್ನು ಕುರಿತು ಪು ನಃ ಬರೆಯುವದೇನೆಂದರೆಃ ಅದು ಕ್ರಿಸ್ತ ವಿರೋಧಿಯ ಆತ್ಮವಾಗಿದೆ. ಅದು ಬರುವದೆಂಬದನ್ನು ನೀವು ಕೇಳಿದ್ದೀರಲ್ಲಾ ಈಗಲೂ ಲೋಕದಲ್ಲಿ ಅದೆ (1 ಯೋಹಾನ 4:3).

ಆದರೆ ಪ್ರಸ್ತುತ ಕಾಲದಲ್ಲಾದರೋ "ಅಧರ್ಮಸ್ವರೂಪ" ನನ್ನು ಅಡ್ಡಿಮಾಡುವವನು ತಾನು ತೆಗೆದುಬಿಡಲ್ಪಡುವ ತನಕ ಅಡ್ಡಿ ಮಾಡುತ್ತಲೂ ತಡೆಯೊಡ್ಡುತ್ತಲೂ ಇರುವನು ಎಂದು ಪೌಲನು ಹೇಳುತ್ತಾನೆ. ಆದರೆ ಒಂದು ದಿನ ಬರುತ್ತದೆ. ಆಗ "ಅಧರ್ಮಸ್ವರೂಪ" ನನ್ನೂ ಅಡ್ಡಿ ಮಾಡುವವನು ತೆಗೆದುಬಿಡಲ್ಪಡುವನು ಮತ್ತು ಅನಂತರ "ಅಧರ್ಮಸ್ವರೂಪನು" ಪೂರ್ಣ ವಾಗಿ ಬಯಲಿಗೆ ಬರುವನು.

"ಅಧರ್ಮಸ್ವರೂಪ" ನನ್ನು ಅಡ್ಡಿಪಡಿಸುವವನು ಯಾರೆಂಬದು ತಿಳಿದು ಬಂದಿರುವದಿಲ್ಲ. ಕೆಲವು ಬೈಬಲ್ ಪಂಡಿತರ ಅಭಿಪ್ರಾಯದ ಪ್ರಕಾರ ಪೌಲನು ಇಲ್ಲಿ ರೋಮಾಯ ಸಾಮ್ರಾಜ್ಯಅಥವಾ ರೋಮಾಯ ಚಕ್ರವರ್ತಿಗಳಲ್ಲೊಬ್ಬನನ್ನು ಸೂಚಿಸುತ್ತಿದ್ದಾನೆ. ಇನ್ನು ಕೆಲವರು "ಅಧರ್ಮಸ್ವರೂಪನಿಗೆ" ಅಡ್ಡಿಮಾಡುವವನು ಒಬ್ಬ ದೇವದೂತನೆಂದು ಅಭಿಪ್ರಾಯ

ಪಡುತ್ತಾರೆ. ಇನ್ನು ಕೆಲವರು ಅದು ಪವಿತ್ರಾತ್ಮನೆಂದು ಯೋಚಿಸುತ್ತಾರೆ. ಆದರೆ ಪೌಲನು ನಮಗೆ ಹೇಳುವದಿಲ್ಲ, ಮತ್ತು ಈ ಕಾರಣದಿಂದ ನಾವು ಆತನ ತಾತ್ಪರ್ಯವೇನೆಂಬದನ್ನು ಖಚಿತವಾಗಿ ಹೇಳಲಾಗುವದಿಲ್ಲ.

**8** ಕರ್ತನಾದ ಯೇಸು "ಅಧರ್ಮಸ್ವರೂಪ" ನನ್ನು ತನ್ನ ಬಾಯ ಉಸುರಿನಿಂದ – ಅಂದರೆ, ತನ್ನ ಮಾತಿನಿಂದ – ಕೊಲ್ಲುವನು ಹಾಗು ತನ್ನ ಪ್ರತ್ಯಕ್ಷತೆಯ ಪ್ರಕಾಶದಿಂದ ಸಂಹರಿಸುವನು ಎಂದು ಪೌಲನು ಹೇಳುತ್ತಾನೆ. "ಅಧರ್ಮಸ್ವರೂಪನು" ಕ್ರಿಸ್ತನ ಪ್ರಸನ್ನತೆ ಮಾತ್ರದಿಂದಲೇ ಸಂಹರಿಸಲ್ಪಡುವನು. "ಅಧರ್ಮಸ್ವರೂಪನು" ನಿಜವಾಗಿಯೂ ನಾಶನಕ್ಕೆ ಅದೀನನು ಸರಿಯೇ (ವಚನ 3).

**9-10** ಈ ಅಧರ್ಮಸ್ವರೂಪನು ಸೈತಾನನಲ್ಲ, ಆದರೆ ಆತನ ಕೆಲಸವು ಸೈತಾನನ ಮಾಟಕ್ಕನುಗುಣವಾಗಿರುವದು. ಅಧರ್ಮಸ್ವರೂಪನು ಸೈತಾನನ ಪ್ರತಿನಿಧಿಯಾಗಿದ್ದಾನೆ.

ಅಧರ್ಮಸ್ವರೂಪನ ಬರೋಣದ ಜೊತೆಯಲ್ಲಿ ಮೋಸಗೊಳಿಸುವ ಸಕಲವಿಧವಾದ ಸಹತ್ಕಾರ್ಯ ಸೂಚಕಕಾರ್ಯ ಅದ್ಭುತಕಾರ್ಯಗಳು ಸಂಭವಿಸುವವು. ಆತನು ಅನೇಕರನ್ನು ಮೋಸಗೊಳಿಸುವನು (ಮಾರ್ಕ 13:22). ಆದರೆ ಆತನು ನಾಶನದ ಮಾರ್ಗದಲ್ಲಿರುವವರನ್ನು – ಅಂದರೆ, ಸತ್ಯವನ್ನು (ಕ್ರಿಸ್ತನ ಸುವಾರ್ತೆಯನ್ನು) ಸ್ವೀಕರಿಸಿದ ಹಾಗು ಪ್ರೀತಿಯನ್ನಿಡದವರನ್ನು – ಮಾತ್ರವೇ ಮೋಸಗೊಳಿಸುವನು. ಅಧರ್ಮಸ್ವರೂಪನನ್ನು ಹಿಂಬಾಲಿಸುವವರೆಲ್ಲರೂ ಆತನೊಂದಿಗೆ ನಾಶವಾಗುತ್ತಾರೆ.

**11** ಅಧರ್ಮಸ್ವರೂನನ್ನು ಹಿಂಬಾಲಿಸುವವರ ಮೇಲೆ ದೇವರು ಅಸತ್ಯ ನಡಿಸುವ ಭ್ರಮೆಯನ್ನು ಕಳುಹಿಸುವನು. ದೇವರು ಆ ಸುಳ್ಳನ್ನು ನಂಬುವಂತೆ ಅವರನ್ನು ಬಿಡುವದಕ್ಕೆ ಅವರ ತಿಳಿವಳಿಕೆಯನ್ನು ಮಂಕುಗೊಳಿಸುವನು, ಆ ಸುಳ್ಳು ಯಾವದೆಂದರೆ, "ಅಧರ್ಮಸ್ವರೂಪನು" ದೇವರು ಎಂಬದೇ.

ಇದೆಲ್ಲದರ ಮೂಲಕ ನಾವು ಅರ್ಥಮಾಡಿಕೊಳ್ಳಬಹುದೇನೆಂದರೆ, ದೇವರು ಎಲ್ಲಾ ದುಷ್ಟಶಕ್ತಿಗಳಿಗಿಂತಲೂ ಹೆಚ್ಚು ಬಲವುಳ್ಳವನಾಗಿದ್ದಾನೆ ಎಂಬದೇ. ಅಷ್ಟು ಮಾತ್ರವಲ್ಲದೆ, ದೇವರು ದುಷ್ಟತನ ನಡೆಸುವವರ ದುಷ್ಟತನವನ್ನು ಉಪಯೋಗಿಸಿಯೇ ಅವರನ್ನು ದಂಡಿಸುವನು. ಹೀಗೆ ದುಷ್ಕೃತ್ಯ ನಡೆಸುವವರು ತಮ್ಮ ದುಷ್ಟತನದಿಂದ ತಮ್ಮ ದಂಡನೆಯನ್ನು ಬರಮಾಡಿಕೊಳ್ಳುತ್ತಾರೆ.

ದೇವರು ಸರ್ವಶಕ್ತಿಯನ್ನು ಹೊಂದಿದ್ದಾನೆ. ಅಂತ್ಯದಲ್ಲಿ ದೇವರು ಸೈತಾನನನ್ನು ಸಹ ತನ್ನ ಉದ್ದೇಶಗಳನ್ನು ನೆರವೇರಿಸುವಂತೆ ಮಾಡುತ್ತಾನೆ. ಸತ್ಯವನ್ನು ನಂಬದವರೆಲ್ಲರೂ ಈ ಪ್ರಕಾರ ನ್ಯಾಯತೀರ್ಪಿಗೆ ಒಳಗಾಗಬೇಕೆಂಬದು ದೇವರ ಉದ್ದೇಶಗಳಲ್ಲಿ ಒಂದಾಗಿದೆ. ಸತ್ಯವು ಕ್ರಿಸ್ತನ ಸುವಾರ್ತೆ ಮಾತ್ರವಲ್ಲ, ಅದು ಸ್ವತಃ ಕ್ರಿಸ್ತನೇ ಆಗದೆ (ಯೋಹಾನ 14:6). ಆತನಲ್ಲಿ ನಂಬಿಕೆಯಿಡದವರೆಲ್ಲರೂ ನಾಶನಕ್ಕೊಳಗಾಗುವರು (ಯೋಹಾನ 3:18-19; 36 ನೋಡಿರಿ).

ಪ್ರಪಂಚದಲ್ಲಿ ಮೂಲತಃ ಎರಡು ವಿಧದ ಜನರು ಮಾತ್ರವೇ ಇರುತ್ತಾರೆಃ ಸತ್ಯವನ್ನು ನಂಬುವವರು ಹಾಗು ದುಷ್ಟತನದಲ್ಲಿ ಆನಂದಿಸುವವರು. ಒಬ್ಬ ಮನುಷ್ಯನು ಸತ್ಯವನ್ನು (ಕ್ರಿಸ್ತನನ್ನು) ತಿರಸ್ಕರಿಸುವದರೊಂದಿಗೆ ಪ್ರಾರಂಭಿಸುವದಾದರೆ ಆತನು ದುಷ್ಟತನದಲ್ಲಿ ಆನಂದಿಸುವವನಾಗಿ ಅಂತ್ಯಗೊಳ್ಳುವನು. ಇದು ಆತ್ಮೀಕ ಸೂತ್ರವಾಗಿದೆ. ನಾವು ತಪ್ಪು ದಾರಿಯಲ್ಲಿ ನಡೆಯಲು ಪ್ರಾರಂಭಿಸುವದಾದರೆ ದೇವರಿಂದ ಹೆಚ್ಚು ದೂರ ದೂರವಾಗಿ ಹೋಗುತ್ತೇವೆ. ನಾವು ಬೆಳಕನ್ನು ತಿರಸ್ಕರಿಸುವದಾದರೆ ನಾವು ಕತ್ತಲೆಯೊಳಗೆ ಹೆಚ್ಚು ಆಳ ಆಳಕ್ಕೆ ಸಂಚರಿಸುವೆವು. ದೇವರು ನಮ್ಮನ್ನು ದುಷ್ಟತನಕ್ಕೆ "ಒಪ್ಪಿಸಿಕೊಡುವನು" (ರೋಮ 1:2; 24-26, 28 ಹಾಗು ವ್ಯಾಖ್ಯಾನ ನೋಡಿರಿ).

## ದೃಡವಾಗಿ ನಿಲ್ಲಿರಿ (2:13-17)

**13** ಪೌಲನು ಥೆಸಲೋನಿಕದವರನ್ನು ಕರ್ತನಿಗೆ ಪ್ರಿಯರಾಗಿರುವ ಸಹೋದರರೇ, ಎಂದು ಕರೆಯುತ್ತಾನೆ. ನಾವು ಸಹ "ಕರ್ತನಿಗೆ ಪ್ರಿಯರಾಗಿರುವ" ಸಹೋದರರು (ಮತ್ತು ಸಹೋದರಿಯರು) ಆಗಿದ್ದೇವೆ. ಆದದರಿಂದ, ನಾವು ಒಬ್ಬ ಸಹೋದರನನ್ನು ಟೀಕಿಸುವ ಅತವಾ ತಪ್ಪು ಹೊರಿಸುವದಕ್ಕೆ ಮುನ್ನ, ಆತನು ಕರ್ತನಿಗೆ ಪ್ರಿಯನಾಗಿರುವ ಸಹೋದರನೆಂಬದನ್ನು ಜ್ಞಾಪಿಸಿಕೊಳ್ಳೋಣ. ಆದಿಯಿಂದ ದೇವರು ನಮ್ಮನ್ನು ರಕ್ಷಣೆಯನ್ನು ಪಡೆಯುವದಕ್ಕಾಗಿ ಆರಿಸಿಕೊಂಡನು. ನಮ್ಮ ರಕ್ಷಣೆಯು ದೇವರ ಕೃಪೆಯಿಂದ ಉದಯಿಸುತ್ತದೆ. ನಾವು ಮೊದಲು ಆತನನ್ನು ಆರಿಸಿಕೊಳ್ಳಲಿಲ್ಲ, ಆತನೇ ಮೊದಲು ನಮ್ಮನ್ನು ಆರಿಸಿಕೊಂಡನು (ಎಫೆಸ 1:4). ನಾವು ಪರಿಶುದ್ಧರಾಗಿದ್ದೇವೆಂಬದಕ್ಕಾಗಿ ದೇವರು ನಮ್ಮನ್ನು ಆರಿಸಿಕೊಳ್ಳಲಿಲ್ಲ. ಆತನು ನಮ್ಮನ್ನು ಪರಿಶುದ್ಧರನ್ನಾಗಿ ಮಾಡುವದಕ್ಕಾಗಿ ಆರಿಸಿಕೊಂಡನು. ಇಲ್ಲಿ ಪೌಲನು ನಮ್ಮ ರಕ್ಷಣೆಯ ಬಗ್ಗೆ ಎರಡು ಸಂಗತಿಗಳನ್ನು ಬರೆಯುತ್ತಾನೆ. ಮೊದಲನೆಯದಾಗಿ, ನಾವು ಪವಿತ್ರಾತ್ಮನ ಶುದ್ಧೀಕರಿಸಲ್ಪಡುವ ಕಾರ್ಯದ ಮೂಲಕ ರಕ್ಷಣೆಹೊಂದಿದೆವು. ಪವಿತ್ರಾತ್ಮನು ನಮ್ಮನ್ನು ಹೆಚ್ಚು ಹೆಚ್ಚಾಗಿ ಪರಿಶುದ್ಧರನ್ನಾಗಿಯೂ ದೋಷವಿಲ್ಲದವರನ್ನಾಗಿಯೂ ಮಾಡುತ್ತಲಿದ್ದಾನೆ. ಪವಿತ್ರಾತ್ಮನು ನಮ್ಮನ್ನು ಕ್ರಿಸ್ತನ ಸಂಧಿಸುವಿಕೆಗೆ ಸಿದ್ದಗೊಳಿಸುತ್ತಿದ್ದಾನೆ. ನಾವು ಇನ್ನೂ ಪರಿಪೂರ್ಣರಾಗಿರುವದಿಲ್ಲ. ಆದರೆ ಕ್ರಿಸ್ತನ ಎರಡನೆಯ ಬರೋಣದ ವೇಳೆ ನಾವು ನಮ್ಮ ಪೂರ್ಣ ರಕ್ಷಣೆಯನ್ನು ಪಡೆಯುವಾಗ ಆ ವೇಳೆಗಾಗಲೇ ಪವಿತ್ರಾತ್ಮನು ನಮ್ಮನ್ನು ಪರಿಪೂರ್ಣರನ್ನಾಗಿ ಮಾಡಿರು– ತ್ತಾನೆ (ಫಿಲಿಪ್ಪಿ 1:6 ಮತ್ತು ವ್ಯಾಖ್ಯಾನ, ಸಾಮಾನ್ಯ ಲೇಖನಃ ರಕ್ಷಣೆಯ ಮಾರ್ಗ ನೋಡಿರಿ). ಪೌಲನು ನಮ್ಮ ರಕ್ಷಣೆಯ ಕುರಿತು ಹೇಳುವ ಎರಡನೆಯ ಸಂಗತಿಯೇನೆಂದರೆ, ನಾವು ಸತ್ಯದ ಮೇಲೆ ನಂಬಿಕೆಯನ್ನು

ಇಟ್ಟು ರಕ್ಷಣೆ ಹೊಂದಿದೆವು. ನಂಬುವದು ಮನುಷ್ಯನ ಜವಾಬ್ದಾರಿಯಾಗಿದೆ. ನಾವು ಸತ್ಯದ ಮೇಲೆ ನಂಬಿಕೆಯಿಡಬೇಕು. ಅಂದರೆ ಕ್ರಿಸ್ತನ ಮೇಲೆ ನಂಬಿಕೆಯಿಡಬೇಕು. ಮನುಷ್ಯನ ರಕ್ಷಣಾ ಕಾರ್ಯವು ಆದಿಯಿಂದ ಅಂತ್ಯದವರೆಗೂ ದೇವರ ಕಾರ್ಯವಾಗಿದೆ. ಆದರೆ ದೇವರರಕ್ಷಣಾ ಕಾರ್ಯವು ಸಂಪೂರ್ಣವಾಗಬೇಕಾದರೆ ನಾವು ಆತನ ಮಗನಾದ ಯೇಸುವನ್ನು ನಂಬಬೇಕು (ಸಾಮಾನ್ಯ ಲೇಖನಃ ರಕ್ಷಣೆ–ದೇವರ ಆಯ್ಕೆಯೋ ಅಥವಾ ಮನುಷ್ಯನ ಆಯ್ಕೆಯೋ? ನೋಡಿರಿ).

**14** ನೀವು ಹೀಗೆ ರಕ್ಷಿಸಲ್ಪಡಬೇಕೆಂದು (ದೇವರು) ನಿಮ್ಮನ್ನು ಕರೆದನು. ನಾವು ನಮ್ಮ ಕರ್ತನಾದ ಯೇಸುಕ್ರಿಸ್ತನ ಪ್ರಭಾವದಲ್ಲಿ ಪಾಲುಗಾರರಾಗಬೇಕೆಂದು ದೇವರ ಉದ್ದೇಶವಾಗಿದೆ. ಅದು ನಮ್ಮ ರಕ್ಷಣೆಯ ಅಂತಿಮ ಘಟ್ಟವಾಗಿದೆ (ರೋಮ 8:17,30; 2 ಥೆಸಲೋನಿಕ 1:12; 1 ಪೇತ್ರ 5:10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**15** ರಕ್ಷಣೆ ಹಾಗು ಪ್ರಭಾವದ ಈ ಮಹಾನಿರೀಕ್ಷೆಯ ಕಾರಣದಿಂದ ಥೆಸಲೋನಿಕದವರಿಗೆ ದೃಢವಾಗಿ ನಿಲ್ಲಿರಿ ಎಂದು ಪೌಲನು ಹೇಳುತ್ತಾನೆ. ಹೊಸ ಒಡಂಬಡಿಕೆಯಲ್ಲಿ ದೃಢವಾಗಿ ನಿಲ್ಲಿರಿ ಎಂದು ನಮಗೆ ಪದೇ ಪದೇ ಹೇಳಲ್ಪಡುತ್ತದೆ (ಮತ್ತಾಯ 10:22; 1ಕೊರಿಂಥ 16:13; ಗಲಾತ್ಯ 5:1; ಎಫೆಸ 6:10; 13; ಫಿಲಿಪ್ಪಿ 4:1).

ದೃಢವಾಗಿ ನಿಲ್ಲಬೇಕಾದರೆ ನಾವು ಬೈಬಲ್ ಬೋಧನೆಗಳನ್ನು ಭದ್ರವಾಗಿ ಹಿಡಿದುಕೊಳ್ಳಬೇಕು. ಪೌಲನು ಥೆಸಲೋನಿಕದವರಿಗೆ ನಾವು ನಿಮಗೆ ತಿಳಿಸಿದ ಬೋಧನೆಗಳನ್ನು ಭದ್ರವಾಗಿ ಹಿಡಿದುಕೊಂಡಿರಿ ಎಂದು ಹೇಳುತ್ತಾನೆ. ಪೌಲನ ಕಾಲದಲ್ಲಿ ಹೊಸ ಒಡಂಬಡಿಕೆಯು ಇನ್ನೂ ಪೂರ್ಣವಾಗಿ ಬರೆಯಲ್ಪಟ್ಟಿರಲಿಲ್ಲ, ಆದದರಿಂದ,ಥೆಸಲೋನಿಕದವರು ಪೌಲನು ಹೇಳಿದ ಮಾತುಗಳನ್ನು ಹಿಡಿದುಕೊಂಡಿರುವ ಅಗತ್ಯತೆಯಿತ್ತು (1 ಕೊರಿಂಥ 11:2 ನೋಡಿರಿ).

**16-17** ದೃಢವಾಗಿ ನಿಲ್ಲುವದಕ್ಕಾಗಿ ನಮಗೆ ದೇವರ ಮತ್ತು ಕ್ರಿಸ್ತನ ಕೃಪೆ, ಹಾಗು ಸಾಮರ್ಥ್ಯ, ಪ್ರೋತ್ಸಾಹಗಳ ಅಗತ್ಯವಿರುತ್ತದೆ. ಈ ವಚನಗಳಲ್ಲಿ ಬರೆಯಲ್ಪಟ್ಟಿರುವ ಪ್ರಾರ್ಥನೆಯನ್ನು ನಾವು ಒಬ್ಬರಿಗೋಸ್ಕರ ಒಬ್ಬರು ನಿರಂತರವಾಗಿ ಪ್ರಾರ್ಥಿಸೋಣ (2 ಕೊರಿಂಥ 1:3-4; 1 ಥೆಸಲೋನಿಕ 3;13; 1 ಪೇತ್ರ 5:10 ನೋಡಿರಿ).

---

## ಅಧ್ಯಾಯ - 3

### ಅಂತಿಮ ಪ್ರಭೋಧನೆಗಳು (3:1-18)

**1** ಪೌಲನು ಒಬ್ಬ ಶ್ರೇಷ್ಠ ಪ್ರಾಭಾವಶಾಲಿ ಅಪೊಸ್ತಲನಾಗಿದ್ದನು. ಹಾಗಿದ್ದರೂ, ಆತನ ಯಶಸ್ಸು ಸ್ವಂತ ಬಲ ಹಾಗು ಸಾಮರ್ಥ್ಯದ ಮೇಲೆ ಅವಲಂಭವಾಗಿರಲಿಲ್ಲ, ಬದಲಾಗಿ, ಅದು ದೇವರ ಕೃಪೆ ಹಾಗು ಇತರ ಕ್ರೈಸ್ತರ ಪ್ರಾರ್ಥನೆಗಳನ್ನು ಅವಲಂಭಿಸಿತ್ತು (ಕೊಲೊಸ್ಸೆ 4:3-4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**2** ಪೌಲನು ಇಲ್ಲಿ ಪ್ರಾಸ್ತಾಪಿಸುವ ಮೂರ್ಖರಾದ ದುಷ್ಟಜನರು ಮುಖ್ಯವಾಗಿ ಯೇಹೂದ್ಯರಾಗಿದ್ದಾರೆ, ಅವರು ಸುವಾರ್ತೆಯನ್ನು ವಿರೋಧಿಸಿ ಪೌಲನನ್ನು ಎಲ್ಲಾ ಸ್ಥಳಗಳಲ್ಲಿಯೂ ಹಿಂಸಿಸುವರಾಗಿದ್ದರು. ಪೌಲನು ಈ ಪತ್ರಿಕೆಯನ್ನು ಕೊರಿಂಥದಿಂದ ಬರೆದನು. ಅಲ್ಲಿ ಆತನು ಯೆಹೂದ್ಯರಿಂದ ಮಹಾ ಸಂಕಷ್ಟವನ್ನು ಅನುಭವಿಸಿದ್ದನು. (ಅ.ಕೃ. 18:12). ಅನಂತರದಿಂದ ಪೌಲನು ತಾನು ಅವಿಶ್ವಾಸಿಗಳ ಕೈಗೆ ತಪ್ಪಿಸಿಕೊಳ್ಳುವಂತೆ – ಅಂದರೆ, ಯೂದಾಯದಲ್ಲಿನ ಯೆಹೂದ್ಯರಿಂದ – ಪ್ರಾರ್ಥಿಸಬೇಕೆಂದು ರೋಮಾಪು ರದ ವಿಶ್ವಾಸಿಗಳನ್ನು ಕೇಳಿಕೊಂಡನು (ರೋಮ 15:31).

**3** ಕರ್ತನು ಥೆಸಲೋನಿಕದವರನ್ನು ಕೆಡುಕನ ಕೈಗೆ – ಅಂದರೆ, ಸೈತಾನನ ಕೈಗೆ – ಸಿಕ್ಕದಂತೆ ಕಾಪಾಡುತ್ತಾನೆಂಬ ಭರವಸವು ಪೌಲನಿಗಿತ್ತು (ಮತ್ತಾಯ 6:13).

**4** ಪೌಲನು ತನ್ನ ಜೊತೆ ಕ್ರೈಸ್ತರನ್ನು ಯಾವಾಗಲೂ ಪ್ರಶಂಸಿಸುತ್ತಾನೆ. ಆದರೆ ಆತನ ಭರವಸವು ಸ್ವತಃ ಥೆಸಲೋನಿಕ–ಥವರಲ್ಲಿ ಅಲ್ಲ, ಆದರೆ ಕರ್ತನಲ್ಲಿ ಇರುತ್ತದೆ ಎಂಬದನ್ನು ಗಮನಿಸಿರಿ. ಥೆಸಲೋನಿಕದವರನ್ನು ಧೈರ್ಯಪಡಿಸಿ ಸೈತಾನನ ಕೈಗೆ ಸಿಕ್ಕದಂತೆ ಕಾಪಾಡುವವನು ಕರ್ತನೇ. ಮತ್ತು ಕರ್ತನು ನಂಬಿಗಸ್ಥನು (ವಚನ3).

**5** ಥೆಸಲೋನಿಕದವರು ಹೃದಯಗಳು ದೇವರ ಪ್ರೀತಿಯಿಂದ ತುಂಬಿಸಲ್ಪಡಲಿ ಎಂತಲೂ ಅವರ ಕ್ರಿಸ್ತನ ತಾಳ್ಮೆಯಿಂದ ಧೈರ್ಯ ಪಡಿಸಲ್ಪಡಲಿ ಎಂತಲೂ ಪೌಲನು ಪ್ರಾರ್ಥಿಸುತ್ತಾನೆ.

**6** ಪೌಲನು ಇಲ್ಲಿ ಕ್ರಿಸ್ತನ ಅಪೊಸ್ತಲನ ಪೂರ್ಣ ಅಧಿಕಾರದೊಂದಿಗೆ ಬರೆಯುತ್ತಾನೆ; ಅಂದರೆ, ಆತನು ಕ್ರಿಸ್ತನ ಸ್ವ–ಅಧಿಕಾರದಿಂದ ಬರೆಯುತ್ತಾನೆ. ಪೌಲನು ಥೆಸಲೋನಿಕದವರಿಗೆ ಅಕ್ರಮವಾಗಿ (ಮೈಗಳ್ಳನಾಗಿ) ನಡೆಯುವ ಪ್ರತಿ ಸಹೋದರನಿಗೆ ದೂರವಾಗಿರಬೇಕೆಂದು ಅಜ್ಞಾಪಿಸುತ್ತಾನೆ. ಅಂಥಸಹೋದರರು 1 ಥೆಸಲೋನಿಕ 5:14 ರಲ್ಲಿ ಪೌಲನು ಪ್ರಸ್ತಾಪಿಸಿದ ಸಹೋದರರು ಒಂದೇ ಆಗಿದ್ದಾರೆ. ಅವರು ಪೌಲನು ನೀಡಿದ್ದ ಬೋಧನೆಯನ್ನು ಅನುಸರಿಸದೇ ಜೀವಿಸುವವರಾಗಿದ್ದಾರೆ. ಅವರು ಕರ್ತನು ಶೀಘ್ರವೇ ಬರುವದನ್ನು ನಿರೀಕ್ಷಿಸುವವರಾಗಿದ್ದರು. ಆದದರಿಂದ, ಅವರು ಕೆಲಸ ಮಾಡುವದನ್ನು ನಿಲ್ಲಿಸಿದ್ದರು. ಇನ್ನು ಮೇಲೆ ಅವರು ದುಡಿದು ಜೀವನ ಮಾಡದವರಾಗಿದ್ದರು. ಅವರು ಮೈಗಳ್ಳರಾಗಿದ್ದರು ಹಾಗು ದುಡಿಯುವದನ್ನು ಮುಂದುವರೆಸಿದ್ದ ಇತರರಿಂದ ಸಹಾಯಕ್ಕಾಗಿ ಕೇಳುತ್ತಿದ್ದರು. ಪೌಲನು ಥೆಸಲೋನಿಕದವರಿಗೆ ಬರೆದ ಮೊದಲನೆಯ ಪತ್ರಿಕೆಯಲ್ಲಿ

ಈ ವಿಷಯಗಳ ಕುರಿತು ಈಗಾಗಲೇ ಬೋಧನೆಯನ್ನು ಹೊಂದಿಕೊಂಡಿದ್ದರು. ಈಗ, ಅವರು ಪೌಲನ ಆಜ್ಞೆಗೆ ವಿಧೇಯರಾಗುವದಕ್ಕೆ ನಿರಾಕರಿಸುವದಾದರೆ ಅವರು ಸಭೆಯ ಅನ್ಯೋನ್ಯತೆಯಿಂದ ಹೊರಹಾಕಲ್ಪಡಬೇಕು. ಪಶ್ಚಾತಾಪ ಪಡದೇ ಗೊತ್ತಿದ್ದೂ ಪಾಪದಲ್ಲಿ ಮುಂದುವರೆಯುವವರೊಂದಿಗೆ ನಾವು ಯಾವ ಸಹವಾಸವನ್ನೂ ಇಟ್ಟುಕೊಳ್ಳಬಾರದು (1 ಕೊರಿಂಥ 5;11 ನೋಡಿರಿ).

ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ. ಯಾವ ವಿಧವಾದ ಪಾಪಕ್ಕಾಗಿ ನಾವು ನಮ್ಮ ಸಹೋದರನನ್ನು ದೂರವಿಡಬೇಕು? ಯಾಕೆಂದರೆ ಹೊಸ ಡಂಬಡಿಕೆಯ ಅನೇಕ ವಚನಗಳು ನಮ್ಮ ಸಹೋದರನೊಂದಿಗೆ ಸಮಾಧಾನದಿಂದ ಇರಬೇಕೆಂದು ಆದರೆ ಕೆಲವು ವಚನಗಳು ಮಾತ್ರವೇ ಆತನಿಂದ ದೂರವಾಗಿರಬೇಕೆಂದು ನಮಗೆ ಹೇಳುತ್ತವೆ. ಇದು ಒಂದು ಕಠಿಣವಾದ ಪ್ರಶ್ನೆಯಾಗಿದೆ. ಇವೆರಡೂ ಸಂದರ್ಭಗಳನ್ನು ಪ್ರತ್ಯೇಕವಾಗಿ ನೋಡತಕ್ಕದ್ದು. ನಮ್ಮ ಸಹೋದರನಿಂದ ಬೇರ್ಪಟ್ಟು ಉಳಿಯುವದಕ್ಕೆ ಎರಡು ಉದ್ದೇಶಗಳು ಇರುತ್ತವೆ. ಮೊದಲನೆಯದಾಗಿ, ನಮ್ಮ ಸಬೋದರನಲ್ಲಿ ಪಶ್ಚಾತಾಪ ಉಂಟು ಮಾಡುವದಕ್ಕಾಗಿ, ಮತ್ತು ಎರಡನೆಯದಾಗಿ, ಸಭೆಯನ್ನು ಪವಿತ್ರವಾಗಿಟ್ಟುಕೊಳ್ಳುವದಕ್ಕಾಗಿ. ಪಾಪಮಾಡುತ್ತಿರುವ ಸಹೋದರನೆಡೆಗೆ ಹೇಗೆ ನಾವು ವರ್ತಿಸಬೇಕೆಂಬದನ್ನು ತೀರ್ಮಾನಿಸಿಕೊಳ್ಳುವದಕ್ಕೆ ನಮಗೆ ಪವಿತ್ರಾತ್ಮನ ಜ್ಞಾನ ಹಾಗು ಮಾರ್ಗದರ್ಶನ ಅಗತ್ಯವಾಗಿರುತ್ತದೆ.

**7-9** ಪೌಲ, ತಿಮೊಥೆ ಹಾಗು ಸೀಲರು ಥೆಸಲೋನಿಕದಲ್ಲಿ ನೆಲೆಸಿದ ವೇಳೆಯಲ್ಲಿ ಅವರು ಸ್ವತಃ ದುಡಿದು ಜೀವನ ಮಾಡಿ ಕೊಂಡರು. ಹಾಗಾದರೆ, ನಿಶ್ಚಯವಾಗಿಯೂ ಥೆಸಲೋನಿಕದವರು ಹಾಗೆಯೇ ಮಾಡತಕ್ಕದ್ದು! ವಾಸ್ತವದಲ್ಲಿ, ಪೌಲನು ಥೆಸಲೋನಿಕದವರಿಗೆ ಆವರು ಆತನ ಮಾದರಿಯನ್ನು ಅನುಸರಿಸುವವರಾಗಿಬೇಕೆಂದು ಹೇಳುತ್ತಾನೆ. ಪೌಲನು ಮಾತಿನಿಂದ ಮಾತ್ರವಲ್ಲ, ಆದರೆ ತನ್ನ ಸ್ವಂತ ಜೀವನದ ಮಾದರಿಯಿಂದಲೂ ಕಲಿಸಿಕೊಟ್ಟನು. ನಮ್ಮ ಜೀವಿತಗಳು ನಮ್ಮ ಬೋಧನೆಯನ್ನು ಹೋಲುವದಾದರೆ ಜನರು ನಾವು ಹೇಳುವದನ್ನು ಹೆಚ್ಚು ಸಿದ್ದ ಮನಸ್ಸಿನಿಂದ ಕೇಳುವ ಸಾಧ್ಯತೆಯಿರುತ್ತದೆ (1 ಕೊರಿಂಥ 9:4; 12, 14; 1 ಥೆಸಲೋನಿಕ 2:7-9 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**10** ಬೈಬಲ್ಲಿನ ಬೋಧನೆಯ ಪ್ರಕಾರವಾಗಿ ಭಿಕ್ಷೆ ಬೇಡುವದು ತಪ್ಪಾಗಿರುತ್ತದೆ. ಒಬ್ಬನಿಗೆ ದುಡಿಯುವದಕ್ಕೆ ಬಲವಿರುವದಾದರೆ ಅವನು ದುಡಿಯತಕ್ಕದ್ದು. ಒಂದು ವೇಳೆ ಕೆಲಸ ಮಾಡಲು ಸಾಕಷ್ಟು ಸಾಮರ್ಥ್ಯವುಳ್ಳ ವ್ಯಕ್ತಿಯು ಅದನ್ನು ಮಾಡುವದಕ್ಕೆ ನಿರಾಕರಿಸುವದಾದರೆ ಅಂಥವನು ಊಟಮಾಡದಿರಲಿ ಎಂದು ಪೌಲನು ಹೇಳುತ್ತಾನೆ. ಮೈಗಳ್ಳನಾಗಿರುವದು ಒಂದು ಪಾಪ ಎಂಬದನ್ನು [6] ಕ್ರೈಸ್ತರೆಲ್ಲರೂ ಜ್ಞಾಪಕದಲ್ಲಿಟ್ಟುಕೊಳ್ಳಲಿ.

**11** ಥೆಸಲೋನಿಕದವರಲ್ಲಿ ಕೆಲವರು ಸೋಮಾರಿಗಳಾಗಿದ್ದು ಯಾವ ಕೆಲಸವನ್ನು ಮಾಡದೇ ಸುಮ್ಮನೇ ಕುಳಿತುಕೊಂಡಿದ್ದರು ಅಥವಾ ತಿರುಗಾಡುತ್ತಿದ್ದರು. ಅವರು ಅಕ್ರಮವಾಗಿ ನಡೆಯುತ್ತಿದ್ದರು. ಯಾವಾಗ ಒಬ್ಬ ವ್ಯಕ್ತಿಯು ಮಾಡುವದಕ್ಕೆ ಯಾವ ಕೆಲಸವನ್ನು ಹೊಂದಿರುವದಿಲ್ಲವೋ ಸಾಮಾನ್ಯವಾಗಿ ಅಂಥವನು ತನ್ನ ನೆರೆಯವನ ಕೆಲಸದಲ್ಲಿ ತಲೆ ಹಾಕುತ್ತಾನೆ.

ನಾವು ಸೋಮಾರಿಗಳಾಗಿರುವದಾದರೆ ಸೈತಾನನಿಗೆ ಏನಾದರೂ ಮಾಡಲು ಅವಕಾಶ ಸಿಕ್ಕುತ್ತದೆ! ನಮ್ಮ ಮನಸ್ಸುಗಳು ನಿರಂತರವಾಗಿ ಕ್ರಿಯಾಶೀಲವಾಗಿರುತ್ತವೆ. ನಾವು ಒಳ್ಳೇದನ್ನು ಮಾಡುವಲ್ಲಿ ನಿರತರಾಗಿರದಿದ್ದರೆ ನಾವು ಶೀಘ್ರವಾಗಿ ಕೆಟ್ಟದ್ದನ್ನು ಮಾಡುವದರಲ್ಲಿ ನಿರತರಾಗುವೆವು !

**12** ಇಲ್ಲಿ ಪೌಲನು ಸೋಮಾರಿಗಳಾಗಿರುವವರನ್ನು ವಿಶೇಷವಾಗಿ ಪ್ರಬೋಧಿಸುತ್ತಾನೆ. ಇಂಥವರು ತಮ್ಮ ಕೆಲಸವನ್ನು ನೋಡುತ್ತಾ ತಾವೇ ಸಂಪಾದಿಸಿದ್ದನ್ನು ಊಟ ಮಾಡಬೇಕೆಂದು[7] ಅಜ್ಞಾಪಿಸಿ ಪ್ರಬೋಧಿಸುತ್ತೇವೆ (1 ಥೆಸಲೋನಿಕ 4:11 ನೋಡಿರಿ). ಪೌಲನು ಜನರನ್ನು ಅವಮಾನಿಸಬೇಕೆಂದು ಪ್ರಬೋಧಿಸಲಿಲ್ಲ, ಆದರೆ ಅವರು ತಮ್ಮ ಜೀವಿತಗಳನ್ನು ಸುಧಾರಿಸಿಕೊಳ್ಳಲು ಸಹಾಯ ಮಾಡುವದಕ್ಕಾಗಿಯೇ ಪ್ರಬೋಧಿಸಿದನು. ಪೌಲನು ಯಾರನ್ನೂ ಸಭೆಯಿಂದ ಶಾಶ್ವತವಾಗಿ ಹೊರಹಾಕುವದಕ್ಕೆ ಇಚ್ಚಿಸಲಿಲ್ಲ.

**13** ಸೋಮಾರಿಗಳಾದ ಜನರು ಪೌಲನ ಪ್ರಬೋಧನೆಗೆ ಕಿವಿಗೊಡದಿದ್ದಾಗ್ಯು ಇತರ ಥೆಸಲೋನಿಕದವರಾದರೂ ಅದಕ್ಕೆ ಕಿವಿಗೊಟ್ಟು ಒಳ್ಳೇದನ್ನು ಮಾಡುವದರಲ್ಲಿ ನಿರತರಾಗಿರಲಿ! ಅವರು ಪೌಲನ ಮಾದರಿಯನ್ನು ಅನುಸರಿಸುವವರಾಗಿ ಪ್ರಯಾಸದಿಂದ ದುಡಿಯಲಿ (ಗಲಾತ್ಯ 6:9 ನೋಡಿರಿ).

**14** ಪೌಲನು ಇಲ್ಲಿ 6ನೇ ವಚನದ ವಿಚಾರವನ್ನು ಪು ನರಾವರ್ತಿಸುತ್ತಾನೆ. ನಾವು ಗೊತ್ತಿದ್ದೂ ಪಾಪದಲ್ಲಿ ಮುಂದುವರೆಯುವ ಸಹೋದರನಿಗೆ ನಾಚಿಕೆಯಾಗುವಂತೆ ಅವನ ಸಹವಾಸದಲ್ಲಿ ಸೇರದಿರಬೇಕು. ಒಮ್ಮೆ ಅವನು ನಾಚಿಕೆ ಪಟ್ಟರೆ ಪಶ್ಚಾತಾಪಪಟ್ಟು ತನ್ನ ಪಾಪದಿಂದ ತೊಳೆಯಲ್ಪಡುವನೆಂಬ ನಿರೀಕ್ಷೆಯಿರುತ್ತದೆ.

**15** ಹೇಗಿದ್ದರೂ, ನಾವು ಸಹ ಪಾಪಮಾಡುವ ಸಹೋದರನನ್ನು ವೈರಿಯೆಂದು ಎಣಿಸದೇ ಸಹೋದರನೆಂದು ಕಾಣಬೇಕು. ಆತನು ಈಗಲೂ ಕರ್ತನಿಗೆ ಪ್ರಿಯನಾಗಿರುವ ಸಹೋದರನಾಗಿದ್ದಾನೆ. ಎಲ್ಲಾ ಶಿಕ್ಷೆಯು ಪ್ರೀತಿಯಲ್ಲಿಯೂ ಪ್ರೀತಿಯ ಕಾರಣದಿಂದಲೂ ಕೊಡಲ್ಪಡಬೇಕು.

**16** ಫಿಲಿಪ್ಪಿ 4:7 ಮತ್ತು ವ್ಯಾಖ್ಯಾನ ನೋಡಿರಿ.

**17** ಗಲಾತ್ಯ 6:11; ಕೊಲೊಸ್ಸೆ 4:18 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

**18** 1 ಕೊರಿಂಥ 16:23 ಮತ್ತು ವ್ಯಾಖ್ಯಾನ ನೋಡಿರಿ.

## ಟಿಪ್ಪಣಿ

1 ವಿಶ್ವಾಸಿಗಳಿಗೆ ಸತ್ತ್ರೀಯೆಗಳಿಗಾಗಿನ ಪ್ರತಿಫಲವು ಅವರ ರಕ್ಷಣೆಯೊಂದಿಗೆ ಜೊತೆಗೂಡಿ ದೊರೆಯುವ ಹೆಚ್ಚಿನ ಪ್ರತಿಫಲಗಳು. ಸ್ವತಃ ರಕ್ಷಣೆಯು ಸತ್ತ್ರೀಯೆಗಳ ಮೇಲೆ ಆಧಾರವಾಗಿರದೇ ನಂಬಿಕೆಯ ಮೇಲೆ ಆಧಾರವಾಗಿದೆ.

2 ಪ್ರವಾದನೆ ಎಂಬ ಪದದ ಬದಲಾಗಿ, ಬೈಬಲ್ಲಿನ ಕೆಲವು ಭಾಷಾಂತರಗಳು "ಆತ್ಮ" ಅಂದರೆ, ಮನುಷ್ಯನ ಮಾನುಷ ಆತ್ಮ ಎಂದು ಹೇಳುತ್ತವೆ. ಮನುಷ್ಯನ ಆತ್ಮದಿಂದ ಬರುವ ಪ್ರವಾದನೆಯು ಸುಳ್ಳು ಪ್ರವಾದನೆಯಾಗಿರುತ್ತದೆ. ದೇವರ ಪವಿತ್ರಾತ್ಮನಿಂದ ಬರುವ ಪ್ರವಾದನೆ ಮಾತ್ರವೇ ವಿಶ್ವಾಸರ್ಹವಾದದ್ದು. ಹೆಚ್ಚಿನ ಚರ್ಚೆಗಾಗಿ, ಪದಪಟ್ಟಿ: ಪ್ರವಾದನೆ ನೋಡಿರಿ.

3 ಇಲ್ಲಿ ಪೌಲನು ಯಾವ ಗರ್ಭಗುಡಿಗೆ (ದೇವಾಲಯ) ಯನ್ನು ಮನಸ್ಸಿನಲ್ಲಿಟ್ಟುಕೊಂಡಿರುತ್ತಾನೆಂಬದು ಖಚಿತವಾಗಿರುವದಿಲ್ಲ.

4 "ಅಧರ್ಮಸ್ವರೂಪ" ನನ್ನು ಇದುವರೆಗೂ ಅಡ್ಡಿ ಮಾಡುತ್ತಿರುವ ಸಂಗತಿ ಅಥವಾ ವ್ಯಕ್ತಿಯೂ 7 ನೇ ವಚನದಲ್ಲಿ ಅಧರ್ಮಸ್ವರೂಪನ ಶಕ್ತಿಯನ್ನು ಈಗ ಅಡ್ಡಿ ಮಾಡುವವನೂ ಒಂದೇ ವ್ಯಕ್ತಿಯಾಗರುತ್ತಾನೆ. (ವಚನ 7 ಮತ್ತು ವ್ಯಾಖ್ಯಾನ ನೋಡಿರಿ).

5 ಅಧರ್ಮದ ಗುಪ್ತ ಶಕ್ತಿ ಎಂಬ ಮಾತುಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಅಧರ್ಮದ ಮರ್ಮ" ಎಂದು ಹೇಳುತ್ತವೆ, ಅರ್ಥವು ಒಂದೇ ಆಗಿದೆ.

6 ಅಂಗವಿಕಲರಾಗಿರುವವರೂ ತಮ್ಮ ಜೀವನೋಪಾಯಕ್ಕಾಗಿ ಏನಾದರೂ ಕೆಲಸವನ್ನು ಮಾಡುತ್ತಾರೆ. ನಿಶ್ಚಯವಾಗಿಯೂ, ತಮ್ಮ ಸ್ವಂತ ಅಗತ್ಯತೆಗಳನ್ನು ಸಂಧಿಸಿಕೊಳ್ಳಲು ನಿಜವಾಗಿ ಅಸಮರ್ಥರಾಗಿರುವವರಿಗೆ ಇತರರ ಸಹಾಯ ಬೇಕಾಗುತ್ತದೆ. ಆದರೆ, ಅವರು ವಿಶ್ವಾಸಿಗಳಾಗಿರುವದಾದರೆ ಭಿಕ್ಷೆಬೇಡುವದನ್ನು ಮಾಡಬಾರದು.

7 ರೊಟ್ಟಿಯು (ಬ್ರೆಡ್) ಮಧ್ಯಪೂರ್ವಾತ್ಯ ದೇಶಗಳ ಮುಖ್ಯ ಆಹಾರವಾಗಿದೆ.

# ಪೌಲನು ತಿಮೊಥೆಯನಿಗೆ ಬರೆದ ಮೊದಲನೆಯ ಪತ್ರಿಕೆ

## ಪರಿಚಯ

ತಿಮೊಥೆಯನು ಲುಸ್ತ್ರ ಎಂಬ ಊರಿನ ಒಬ್ಬ ಯೌವ್ವನಸ್ಥನಾಗಿದ್ದನು. ಲುಸ್ತ್ರವು ಈಗಿನ ದಕ್ಷಿಣ ಟರ್ಕಿಯಲ್ಲಿತ್ತು. ತಿಮೊಥೆಯನು ಪೌಲನ ಪ್ರಿಯನಾದ ಸಹಪಾಠಿಯೂ ಜೊತೆ ಕೆಲಸದವನೂ ಆಗಿದ್ದನು. (ಅ.ಕೃತ್ಯ 16:1-4) ತಿಮೊಥೆಯನು ಪೌಲನ ಅತಿ ಆಪ್ತ ಶಿಷ್ಯನಾಗಿದ್ದನು; ಪೌಲನು ಆತನನ್ನು ನಂಬಿಕೆಯ ವಿಷಯದಲ್ಲಿ (ತನ್ನ) ನಿಜ ಕುಮಾರ ಎಂದು ಕರೆದನು (1 ತಿಮೊಥೆ 1:2). ಪೌಲನು ತಿಮೊಥೆಯನಿಗೆ ತನ್ನ ಎರಡು ಪತ್ರಿಕೆಗಳನ್ನು ಅಪೊಸ್ತಲರ ಕೃತ್ಯಗಳ ಪು ಸ್ತಕದಲ್ಲಿ ಬಣ್ಣಿಸಲ್ಪಟ್ಟಿರುವ ಘಟನೆಗಳೆಲ್ಲವೂ ಸಂಭವಿಸಿದ್ದ ಬಳಿಕ ಬರೆದನೆಂದು ಬಹುಪಾಲು ಬೈಬಲ್ ಪಂಡಿತರು ನಂಬುತ್ತಾರೆ. ಪೌಲನು ಎರಡು ವರ್ಷಗಳ ಕಾಲ ಗೃಹ ಬಂಧನದಲ್ಲಿ ಕಳೆದ ಬಳಿಕ (ಅ.ಕೃತ್ಯ 28:16,30) ಆತನು ಬಿಡುಗಡೆಗೊಂಡು ಒಂದು ಅಥವಾ ಎರಡು ವರ್ಷಗಳವರೆಗೆ ತನ್ನ ಬೋಧನೆಯನ್ನೂ ಪ್ರಯಾಣವನ್ನು ಮುಂದುವರೆಸಿದನೆಂದು ಈ ಪಂಡಿತರಲ್ಲಿ ಕೆಲವರು ನಂಬುತ್ತಾರೆ. ಆತನು ತಿಮೊಥೆಯನಿಗೆ ಈ ಪತ್ರಿಕೆಗಳನ್ನು ಆ ಅವಧಿಯಲ್ಲಿ ಬರೆದಿರಬಹುದು.

ಪೌಲನು ತಿಮೊಥೆಯನಿಗೆ ಬರೆದಾಗ ತಾನು ವೃದ್ಧನಾಗುತ್ತಿದ್ದನು. ಪೌಲನು ತನ್ನ ಅಪೊಸ್ತಲತನದ ಅಧಿಕಾರವನ್ನು ತಿಮೊಥೆ ಹಾಗು ತೀತನಂತಹ ಕೆಲವು ಯುವ ನಾಯಕರಿಗೆ ಹಸ್ತಾಂತರಿಸಬೇಕೆಂಬದನ್ನು ಆತನು ಗ್ರಹಿಸಿಕೊಂಡಿದ್ದನು. ಈ ಪತ್ರಿಕೆಯನ್ನು ಬರೆಯುವದಕ್ಕೆ ಮುಂಚೆಯೇ ಪೌಲನು ತಿಮೊಥೆಯನನ್ನು ಎಫೆಸದಲ್ಲಿದ್ದ ಸಭೆಯ ನಾಯಕನನ್ನಾಗಿ ನೇಮಕಮಾಡಿದ್ದನು (1 ತಿಮೊಥೆ 1:3) ಪೌಲನು ತಿಮೊಥೆಯನ್ನು ಅವನ ಕರ್ತವ್ಯಗಳಲ್ಲಿ ಧೈರ್ಯಪಡಿಸಿ ಸಲಹೆಗಳನ್ನು ನೀಡುವದಕ್ಕಾಗಿ ಈ ಪತ್ರಿಕೆಯನ್ನು ತಿಮೊಥೆಯನಿಗೆ ಬರೆದನು. ಈ ಕಾರಣದಿಂದಲೇ ಈ ಪತ್ರಿಕೆಯು ತಿಮೊಥೆಯ ಕಾಲದಿಂದ ಇಂದಿನ ತನಕವೂ ಸಭಾನಾಯಕರಿಗೆ ಮಾತ್ರವಲ್ಲದೆ ಅವರ ಅಧೀನದಲ್ಲಿರುವವರಿಗೂ – ಅತಿ ಪ್ರಾಮುಖ್ಯವಾದದ್ದೂ ಸಹಾಯಕರವಾದದ್ದು ಆಗಿರುತ್ತದೆ.
ಪೌಲನ ಜೀವಿತದ ಕುರಿತು ಹೆಚ್ಚಿನ ಮಾಹಿತಿಗಾಗಿ ರೋಮಾಪು ರದವರಿಗೆ ಬರೆದ ಪತ್ರಿಕೆಃ ಪರಿಚಯ ಭಾಗ ನೋಡಿರಿ

## ಹೊರ ರೇಖೆ

ಅ. ಎಫೆಸದಲ್ಲಿ ತಿಮೊಥೆಯನಿಗೆ ವಿದಿಸಿದ್ದ ಕೆಲಸ (1: 1-20)
- 1. ಸುಳ್ಳು ಬೋಧಕರ ವಿರುದ್ದ ಎಚ್ಚರಿಕೆ (1:1-11)
- 2. ಪೌಲನು ದೇವರಿಗೆ ಕೃತಜ್ಞತಾಸ್ತುತಿಮಾಡಿದ್ದು (1:12-20)

ಆ. ಸಲಹೆಗಳು ಮತ್ತು ಬುದ್ಧಿವಾದಗಳು (2:1-5:25)
- 1. ಸಭೆಗೆ ಸಲಹೆಗಳು (2:1-3:16)
- 2. ತಿಮೊಥೆಯನಿಗೆ ಸಲಹೆಗಳು (4: 1-16)
- 3. ವಿಶೇಷವಾದ ಗುಂಪು ಗಳ ವಿಷಯದಲ್ಲಿ ಬುದ್ದಿವಾದ (5:1-25)

ಇ. ಅಂತಿಮ ಪ್ರಬೋಧನೆಗಳು (6:1-21)
- 1. ನಾನಾವಿಧವಾದ ಬೋಧನೆಗಳು (6:1-10)
- 2. ತಿಮೊಥೆಯನಿಗೆ ಪೌಲನ ನಿಯೋಗ (6:11-21)

## ಅಧ್ಯಾಯ - 1

### ಸುಳ್ಳು ಬೋಧಕರ ವಿರುದ್ಧ ಎಚ್ಚರಿಕೆ (1:1-11)

1 ಪೌಲನು ಇಲ್ಲಿ ತಾನು ದೇವರಿಂದಲೂ ಕ್ರಿಸ್ತನಿಂದಲೂ ನೇಮಿಸಲ್ಪಟ್ಟ ಕ್ರಿಸ್ತನ ಅಪೋಸ್ತಲನು ಎಂದು ಹೇಳಿಕೊಳ್ಳುತ್ತಾನೆ. ಪೌಲನು ತನ್ನ ಸ್ವಂತ ತೀರ್ಮಾನ ಅಥವಾ ಇಚ್ಛೆಯಿಂದಾಗಲಿ ಅಥವಾ ಇತರ ಯಾವು ದೇ ಮನುಷ್ಯನ ಅಭಿಲಾಷೆಯಿಂದಾಗಲಿ ಅಪೋಸ್ತಲನಾಗಿರಲಿಲ್ಲ. ಬದಲಾಗಿ ಸ್ವಂತ ದೇವರೇ ಆತನನ್ನು ಕ್ರಿಸ್ತ ಯೇಸುವಿನ ದಾಸನಾಗಿ ನೇಮಿಸಿದ್ದನು (ರೋಮ 1:1) ಪೌಲನು ಕ್ರಿಸ್ತನ ಸೈನಿಕನಾಗಿದ್ದನು; ಅತನು ಕ್ರಿಸ್ತನ ಅಧಿಕಾರಕ್ಕೆ ಒಳಪಟ್ಟಿದ್ದನು.

ಪೌಲನು ಇಲ್ಲಿ ದೇವರನ್ನು ನಮ್ಮ ರಕ್ಷಕನು ಎಂದು ಕರೆಯುತ್ತಾನೆ. ಸಾಮಾನ್ಯವಾಗಿ ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನು ರಕ್ಷಕನೆಂದು ಕರೆಯಲ್ಪಟ್ಟಿರುತ್ತಾನೆ. ಆದರೆ ದೇವರನ್ನು "ನಮ್ಮ ರಕ್ಷಕ" ಎಂದು ಕರೆಯುವದು ಸಹ ಸರಿಯಾದದ್ದು, ಯಾಕೆಂದರೆ ದೇವರೂ ಕ್ರಿಸ್ತನೂ ಒಂದೇ ಆಗಿದ್ದಾರೆ (ಯೋಹಾನ 10:30 ಮತ್ತು ವ್ಯಾಖ್ಯಾನ; ಸಾಮಾನ್ಯ ಲೇಖನಃ ಯೇಸುಕ್ರಿಸ್ತನು ನೋಡಿರಿ)

2 ತಿಮೊಥೆಯನು ಕ್ರಿಸ್ತನಂಬಿಕೆಯಲ್ಲಿ ಪೌಲನ ನಿಜಕುಮಾರನಾಗಿದ್ದನು. ತಿಮೊಥೆಯನು ಪೌಲನನ್ನು ಬೇಟಿಯಾಗುವದಕ್ಕೆ ಮುಂಚೆಯೇ ಕ್ರೈಸ್ತನಾಗಿದ್ದನು (ಅ.ಕೃತ್ಯ 16:1) ಆದರೆ ಪೌಲನು ತಿಮೊಥೆಯನನ್ನು ನಂಬಿಕೆಯಲ್ಲಿ ಪೋಷಿಸಿ ಬಲ ಪಡಿಸಿದ್ದನು; ಒಬ್ಬ ತಂದೆಯು ತನ್ನ ಸ್ವಾಭಾವಿಕ ಮಗನನ್ನು ಪ್ರೀತಿಸಿ ಪರಾಂಭರಿಸುವಂತೆಯೇ ಆತನು ತಿಮೊಥೆಯನನ್ನೂ ಪ್ರೀತಿಸಿ ಪರಾಂಭರಿಸಿದ್ದನು (1ಕೊರಿಂಥ 4:17 ನೋಡಿರಿ). ಈಗ ತಿಮೊಥೆಯನು ಪರಿಪಕ್ವಗೊಂಡ ಮನುಷ್ಯನಾಗಿದ್ದನು, ಮತ್ತು ಸಭೆಯಲ್ಲಿ ಒಬ್ಬ ನಾಯಕನಾಗಿ ಪೌಲನ ಸ್ಥಾನದಲ್ಲಿ ನಿಂತುಕೊಳ್ಳಲು ಸಿದ್ಧನಾಗಿದ್ದನು.

ತಿಮೊಥೆಯನು ದೇವರಿಂದ ಕೃಪೆ ಕರುಣೆ ಮತ್ತು ಶಾಂತಿಯನ್ನು ಅನುಭವಿಸುವಂತಾಗಲಿ ಎಂದು ಪೌಲನು ಪ್ರಾರ್ಥಿಸುತ್ತಾನೆ (ರೋಮ 1:7; ಎಫೆಸ 1:2ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಇಲ್ಲಿ ಹಾಗೂ ಪೌಲನು ತಿಮೊಥೆಯನಿಗೆ ಬರೆದ ಎರಡನೆಯ ಪತ್ರಿಕೆಯಲ್ಲಿ ಪೌಲನು ತಾನು ಸಾಮಾನ್ಯವಾಗಿ ಕೃಪೆ ಮತ್ತು ಶಾಂತಿಗಾಗಿ ಮಾಡುವ ಪ್ರಾರ್ಥನೆಗೆ ಕರುಣೆಯನ್ನು ಸೇರಿಸುತ್ತಾನೆ. ಕರುಣೆಯು ದೇವರ ಕೃಪೆಯ ಒಂದು ಭಾಗವಾಗಿದೆ. ದೇವರ ಕರುಣೆಯ ಕಾರಣದಿಂದಲೇ ನಾವು ನಮ್ಮ ಪಾಪಗಳ ಕ್ಷಮಾಪಣೆಗಳಿಲ್ಲದೆ ನಾವು ದೇವರ ಶಾಂತಿಯನ್ನು (ಸಮಾಧಾನವನ್ನು) ಸಂಪಾದಿಸಿಕೊಳ್ಳಲು ಸಾಧ್ಯವಿಲ್ಲ.

3 ಪೌಲನು ಈ ಪತ್ರಿಕೆಯು ಬರೆಯಲ್ಪಡುವದಕ್ಕೆ ಹತ್ತು ವರ್ಷಗಳ ಮುಂಚೆ ಎಫೆಸದಲ್ಲಿನ ಸಭೆಯನ್ನು ಸ್ಥಾಪಿಸಿದನು (ಅ.ಕೃತ್ಯ 19:1-10 ನೋಡಿರಿ). ಆದರೆ, ಆ ಕ್ಲುಪ್ತ ಅವಧಿಯಲ್ಲಿಯೂ ಕೆಲವು ವ್ಯಕ್ತಿಗಳು ಪೌಲನು ಬೋದಿಸಿದ್ದ ಸತ್ಯಕ್ಕೆ ವ್ಯತ್ಯಾಸವಾದ ಬೋಧನೆಗಳನ್ನು ಸುಳ್ಳು ಸಿದ್ಧಾಂತಗಳನ್ನು – ಬೋಧಿಸಲು ಪ್ರಾರಂಭಿಸಿದ್ದರು. ಇಲ್ಲಿ ಪೌಲನು ತಿಮೊಥೆಯನಿಗೆ ಎಫೆಸದ ಸಭಾನಾಯಕನಾಗಿ ಸಭೆಯಲ್ಲಿ ಅಂಥ ಸುಳ್ಳು ಸಿದ್ಧಾಂತಗಳನ್ನು ಬೋಧಿಸದಂತೆ ಈ ಜನರನ್ನು ತಡೆಯುವದಕ್ಕೆ ಸಂಪೂರ್ಣ ಅಧಿಕಾರವನ್ನು ನೀಡುತ್ತಾನೆ.

4 ಸುಳ್ಳು ಸಿದ್ಧಾಂತಗಳನ್ನು ಬೋಧಿಸುವದರ ಜೊತೆಗೆ ಈ ಜನರು ಯೆಹೂದ್ಯ ಕಲ್ಪನಾ ಕಥೆಗಳನ್ನು ಕೊನೆ ಮೊದಲಿಲ್ಲದ ವಂಶಾವಳಿಗಳನ್ನೂ ಬೋಧಿಸುತ್ತಿದ್ದರು. ಯೆಹೂದ್ಯರಿಗೆ ವಂಶಾವಳಿಗಳು ಬಹಳ ಪ್ರಾಮುಖ್ಯವಾಗಿದ್ದವು ಒಬ್ಬ ಯೆಹೂದ್ಯನು ಪ್ರಥಮ ಯೆಹೂದ್ಯನಾದ ಅಬ್ರಹಾಮನ ತನಕ ತನ್ನ ವಂಶಾವಳಿಯನ್ನು ಗುರುತಿಸುವದು ಪ್ರಾಮುಖ್ಯವಾಗಿರುತಿತ್ತು. ಯೆಹೂದ್ಯರು ಅಬ್ರಹಾಮನಿಗೆ ಸ್ವಾಭಾವಿಕವಾಗಿ ಹುಟ್ಟಿದ ಸಂತತಿಯಾಗಿದ್ದರಿಂದ ತಾವು ರಕ್ಷಣೆಯನ್ನು ಪಡೆದುಕೊಳ್ಳುವರೆಂದು ನಂಬುತ್ತಿದ್ದರು. ಆದರೆ ಪೌಲನು ಯಾವದೇ ವಂಶಾವಳಿಯ ಮೇಲೆ ಅಥವಾ ತನ್ನ ಪೂರ್ವಜರು ಯಾರೆಂಬದರ ಮೇಲ ಅವಲಂಭವಾಗಿರುವದು ನಿಷ್ಪ್ರಯೋಜಕರವೆಂದು ಹೇಳುತ್ತಾನೆ. ವಂಶಾವಳಿಗಳು ಒಳ್ಳೇ ಕಾರ್ಯಗಳಿಗೆ ಆಸ್ಪದವಾಗುವದಿಲ್ಲ; ಅವುಗಳು ರಕ್ಷಣೆಗೆ ನಡಿಸುವದಿಲ್ಲ. ದೇವರ ಕೆಲಸವು – ಅಂದರೆ ಮನುಷ್ಯನನ್ನು ರಕ್ಷಿಸುವ ದೇವರ ಕೆಲಸವು ನಂಬಿಕೆಯ ಮೇಲೆ ಅವಲಂಭವಾಗಿರುತ್ತದೆ. ಹೊರತು ನಮ್ಮ ಪೂರ್ವಜರು ಯಾರೆಂಬದರ ಮೇಲಲ್ಲ. ಬದಲಾಗಿ ಕಲ್ಪನಾ ಕಥೆಗಳು ಹಾಗೂ ವಂಶಾವಳಿಗಳಂತಹ ಸಂಗತಿಗಳು ವಿವಾದಕ್ಕೆ ಆಸ್ಪದವಾಗುತ್ತದೆ. ಮತ್ತು ಅಂಥ ವಿವಾದಗಳು ಯಾವ ಪ್ರಯೋಜನವನ್ನೂ ಉಂಟುಮಾಡುವದಿಲ್ಲ.

ಜನರು ಹೊಸದಾದ ಹಾಗೂ ಆಸಕ್ತಿಕೆರಳಿಸುವ ಸಂಗತಿಗಳನ್ನು ಕೇಳುವದಕ್ಕೆ ಯಾವಾಗಲೂ ಕುತೂಹಲವುಳ್ಳವರಾಗಿರುತ್ತಾರೆ. ಆದರೆ ನಾವು ಕೇಳಿಸಿಕೊಳ್ಳುವ ಯಾವದೇ ಹೊಸ ಬೋಧನೆಯನ್ನು ಬೈಬಲಿನಲ್ಲಿ ಬರೆದಿರುವ ಸಂಗತಿಗೆ ಹೋಲಿಸಿ ನೋಡಬೇಕು. ಹೊಸ ಬೋಧನೆಯು ಬೈಬಲಿನಲ್ಲಿ ಬರೆದಿರುವ ಸಂಗತಿಗೆ ಸರಿಹೊಂದದಿದ್ದರೆ ನಾವು ಆ ಬೋಧನೆಯನ್ನು ತಿರಸ್ಕರಿಸಬೇಕು ನಾವು ಅದಕ್ಕೆ ಕಿವಿಗೊಡಬಾರದು.

ಕೆಲವು ಜನರು ಯಾವಾಗಲೂ ಸತ್ಯವನ್ನು ಹುಡುತ್ತಿದ್ದಾರೆ ಆದರೆ ಅದನ್ನು ಕಂಡುಕೊಳ್ಳದೆ ಹೋಗಿದ್ದಾರೆ. ಅವರು ಪ್ರಶ್ನೆಗಳನ್ನು ಕೇಳುತ್ತಾರೆ ಆದರೆ ಯಾವ ಉತ್ತರಗಳನ್ನು ಪಡೆಯುವದಿಲ್ಲ. ಯಾಕೆಂದರೆ ಅವರು ಬೈಬಲಿನಲ್ಲಿ ಬರೆದಿರುವ ಸತ್ಯವನ್ನು ಸ್ವೀಕರಿಸದವರಾಗಿದ್ದಾರೆ. ಅಂಥ ಜನರು ತಾವೇ ತಪ್ಪಿನೊಳಗೆ ಬೀಳುವದಲ್ಲದೆ ಇತರರನ್ನು ತಪ್ಪಿನೊಳಗೆ ನಡಿಸುತ್ತಾರೆ. ಹೀಗಿರುವದರಿಂದ ಅಂಥ ಸುಳ್ಳು ಬೋಧನೆಯನ್ನು ಸಭೆಯಿಂದ ಅಳಿಸಹಾಕಬೇಕೆಂದು ತಿಮೊಥೆಯನಿಗೆ ಕಡ್ಡಾಯವಾಗಿ

ಸೂಚಿಸುತ್ತದೆ. ಹೀಗೆ ವಿಶ್ವಾಸಿಗಳು ತಪ್ಪಿನೊಳಗೆ ಬೀಳದೆ ಸತ್ಯವನ್ನು ಭದ್ರವಾಗಿ ಹಿಡಿದುಕೊಂಡು ನಂಬಿಕೆಯಲ್ಲಿಯೂ ಪ್ರೀತಿಯ ಕಾರ್ಯಗಳಲ್ಲಿಯೂ ಬೆಳೆಯುವರು.

5 ಪ್ರೀತಿಯೇ ಈ ಆಜ್ಞೆಯ ಗುರಿಯಾಗಿದೆ. ಆಜ್ಞೆಯು ಸಭೆಯಲ್ಲಿನ ಸುಳ್ಳು ಸಿದ್ಧಾಂತಗಳ ಬೋಧನೆಯನ್ನು ತಡೆಯಬೇಕೆಂಬ ಆಜ್ಞೆಯಾಗಿದೆ. ಆಜ್ಞೆಯ ಗುರಿಯೇನೆಂದರೆ ವಿಶ್ವಾಸಿಗಳು ಪ್ರೀತಿಯಲ್ಲಿ ಬೆಳೆಯ ಬೇಕೆಂಬುದೇ ಸತ್ಯ ಸಿದ್ಧಾಂತಗಳು ಜನರನ್ನು ಪ್ರೀತಿಯಿಂದ ತುಂಬಿದ ಜೀವಿತಕ್ಕೆ ನಡಿಸುತ್ತವೆ (ಗಲಾತ್ಯ 5 :6 ನೋಡಿರಿ). ದೇವರ ಪ್ರೀತಿಯು ನಮ್ಮ ಜೀವಿತಗಳನ್ನು ತುಂಬುವದಕ್ಕೆ ಮೂರು ಸಂಗತಿಗಳು ಅವಶ್ಯಕವಾಗಿವೆಃ ಶುದ್ಧ ಹೃದಯ, ಒಳ್ಳೇ ಮನಸಾಕ್ಷಿ ಮತ್ತು ನಿಷ್ಕಪಟವಾದ ನಂಬಿಕೆ. ನಮ್ಮ ನಂಬಿಕೆಯು ಕ್ರಿಸ್ತನಲ್ಲಿಯೂ ಆತನ ಸತ್ಯದಲ್ಲಿಯೂ ಇರಬೇಕು. ಹೊರತು ಸುಳ್ಳು ಸಿದ್ಧಾಂತಗಳಲಲ್ಲ. ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ನಮ್ಮ ಹೃದಯಗಳು ಶುದ್ಧವಾಗಿ ಮಾಡಲ್ಪಟ್ಟಿರುತ್ತವೆ (ಯೋಹಾನ 15 :3; 6 ಅ.ಕೃತ್ಯ 15 :9 ನೋಡಿರಿ) ಶುದ್ಧ ಹೃದಯದ ಜೊತೆಗೆ ನಾವು ಒಳ್ಳೇ ಮನಸಾಕ್ಷಿಯನ್ನು ಹೊಂದಬೇಕು. ಅಂದರೆ ನಾವು ನಮ್ಮ ಮನಸಾಕ್ಷಿಯನ್ನು ನಿರ್ದೋಷವಾಗಿ ಕಾಪಾಡಿಕೊಳ್ಳಬೇಕು (ಅ.ಕೃತ್ಯ 24:16); ಇಲ್ಲವಾದರೆ, ಪವಿತ್ರಾತ್ಮನು ನಮ್ಮ ಜೀವಿತಗಳಲ್ಲಿ ಕಾರ್ಯಮಾಡಲಾಗುವದಿಲ್ಲ ಹಾಗೂ ನಮ್ಮ ಪ್ರೀತಿಯು ಒಣಗಿ ಹೋಗುವದು.

6 ಶುದ್ಧ ಹೃದಯ, ಒಳ್ಳೇಮನಸಾಕ್ಷಿ ಹಾಗೂ ನಿಷ್ಕಪಟವಾದ ನಂಬಿಕೆಗಳಿಲ್ಲದೆ ಜನರು ಸತ್ಯದಿಂದ "ಅಲೆದಾಡಿ" ಹೋಗಿ ಮಾರ್ಗ ತಪ್ಪುವರು. ಅವರು ಬದಲಾಗಿ ವ್ಯರ್ಥವಾದ ವಿಚಾರಗಳಿಗೆ ತಿರಿಗಿಕೊಳ್ಳುವರು, ಉದಾಹರಣೆಗೆ, 3-4 ವಚನಗಳಲ್ಲಿ ಪ್ರಸ್ತಾಪಿಸಲಾಗಿರುವ ಸುಳ್ಳು ಸಿದ್ಧಾಂತಗಳು ಹಾಗು ವಿವಾದಗಳು (1 ತಿಮೊಥೆ 6:3-5 ನೋಡಿರಿ).

7 ಬಹುಪಾಲು ಸುಳ್ಳು ಬೋಧಕರು ನಯವಾದವರೂ ಚಾಣಾಕ್ಷ ಮಾತುಗಾರರೂ ಆಗಿರುತ್ತಾರೆ ಅವರು ಮುಖ್ಯಸ್ಥಾನ ಮಾನಗಳನ್ನು ಹುಡುಕುತ್ತಾರೆ. ಅವರು ಧರ್ಮೋಪದೇಶಕರಾಗಿರಬೇಕೆಂದು ಇಚ್ಛಿಸುತ್ತಾರೆ. ಆದರೆ, ವಾಸ್ತವದಲ್ಲಿ, ಅವರು ಸತ್ಯವನ್ನು ತಿಳಿಯದವರಾಗಿದ್ದಾರೆ. ಅಂಥ ಬೋಧಕರು ಸಭೆಗೆ ದೊಡ್ಡ ಹಾನಿಗಳಾಗಿರುತ್ತಾರೆ. ಅವರು ಕುರಿಯ ವೇಷದಲ್ಲಿರುವ ತೋಳಗಳಾಗಿದ್ದಾರೆ (ಮತ್ತಾಯ 7:15).

8 ಧರ್ಮೋಪದೇಶಕರಾಗಿರಬೇಕೆಂದು ಅಪೇಕ್ಷಿಸುವವ ಸುಳ್ಳು ಬೋಧಕರನ್ನು ಖಂಡಿಸಿದ ಬಳಿಕ ಪೌಲನು ತಿಮೊಥೆಯನಿಗೆ ಧರ್ಮಶಾಸ್ತ್ರವು ಸ್ವತಃ ಒಳ್ಳೇದೆಂದು ಪುನಃ ದೃಢಪಡಿಸುತ್ತಾನೆ. ಆದರೆ ಧರ್ಮಶಾಸ್ತ್ರವು ಸರಿಯಾಗಿ ಉಪಯೋಗಿಸಲ್ಪಡಬೇಕು. ಧರ್ಮಶಾಸ್ತ್ರದ ಸರಿಯಾದ ಉಪಯೋಗವು ಜನರನ್ನು ಕೆಟ್ಟತನಮಾಡದಂತೆ ತಡೆಯುವದಕ್ಕಾಗಿರುತ್ತದೆ.

9-11 ನಿಯಮಗಳು ಹಾಗೂ ಆಜ್ಞೆಗಳು ವಿಧೇಯರಿಗೆ ಕೊಡಲ್ಪಟ್ಟಿರುವದಿಲ್ಲ; ಬದಲಾಗಿ, ಅವು ಗಳು ಅವಿಧೇಯರನ್ನು ತಿದ್ದಿಸರಿಪಡಿಸಲು ಕೊಡಲ್ಪಟ್ಟಿರುತ್ತವೆ.

ಪೌಲನು ಇಲ್ಲಿ ವಿವಿಧ ರೀತಿಯ ದುಷ್ಕೃತ್ಯಮಾಡುವವರ ಉದಾಹರಣೆಗಳನ್ನು ನೀಡುತ್ತಾನೆ. ನಂತರ ಪಟ್ಟಿಯ ಕೊನೆಯಲ್ಲಿ ಪೌಲನು ಬರೆಯುವದೇನೆಂದರೆಃ ...... ಸ್ವಸ್ಥ ಬೋಧನೆಗೆ ಪ್ರತಿಕೂಲವಾಗಿ ಬೇರೆ ಏನಾದರೂ ಇದ್ದರೆ ಅದನ್ನು ಮಾಡುವವರು (ವಚನ 10) ಬೈಬಲಿನ ಬೋಧನೆಗೆ ಪ್ರತಿಕೂಲವಾಗಿ ಇರುವ ಎಲ್ಲವೂ–ಅದು ಎಷ್ಟು ಚಿಕ್ಕದಾಗಿದ್ದರೂ ಸರಿಯೇ – ಕೆಟ್ಟದ್ದಾಗಿದೆ. ಆದರೆ ಸ್ವಸ್ಥಬೋಧನೆಯು ದೇವರ ಮಹಿಮೆಯ ಸುವಾರ್ತೆಗೆ ಅನುಸಾರವಾಗಿದೆ. ಅಂದರೆ, ಕ್ರಿಸ್ತನ ಹಾಗೂ ಆತನ ಅಪೊಸ್ತಲರ ಬೋಧನೆಗೆ ಅನುಸಾರವಾಗಿದೆ.

ಪೌಲನಿಗೆ ಕರ್ತನ ಕೃಪೆ (1:12-20)

12- 13 ಪೌಲನು ಹಿಂದೊಮ್ಮೆ ತಾನು ಹೇಗೆ ಕ್ರಿಸ್ತನ ಸಭೆಯನ್ನು ಹಿಂಸಿಸುತ್ತಿದ್ದನೆಂಬದನ್ನು ಎಂದಿಗೂ ಮರೆಯಲಾಗುವದಿಲ್ಲ (ಅ.ಕೃತ್ಯ 8:3; 9:1-2; 26: 9-11; ಗಲಾತ್ಯ 1:13). ಹಾಗಿದ್ದರೂ, ಆತನು ತಿಳಿಯದೆ ಹಾಗೆ ಮಾಡಿದ್ದರಿಂದ ದೇವರು ಆತನಿಗೆ ಕರುಣೆಯನ್ನು ತೋರಿಸಿದ್ದನು. ದೇವರು ಪೌಲನ ಪಾಪಗಳನ್ನು ಕ್ಷಮಿಸಿದ್ದು ಮಾತ್ರವಲ್ಲ ಆತನನ್ನು ನಂಬಿಗಸ್ಥನೆಂದು ಎಣಿಸಿದನು (ವಚನ 12). ದೇವರು ಪೌಲನನ್ನು ಎಷ್ಟೋ "ನಂಬಿಗಸ್ಥನೆಂದು" ಪರಿಗಣಿಸಿ ಆತನನ್ನು ಒಬ್ಬ ಅಪೊಸ್ತಲನಾಗಿ ನೇಮಿಸಿದನು. ಒಂದು ವೇಳೆ ದೇವರು ಪೌಲನಂತಹ ಕ್ರಿಸ್ತನ ಕಠೋರ ವಿರೋಧಿಯಲ್ಲಿ ಅಂಥ ದೊಡ್ಡ ಬದಲಾವಣೆಯನ್ನು ಮಾಡಬಲ್ಲವನಾಗಿದ್ದ ಮೇಲೆ ನಿಶ್ಚಯವಾಗಿಯೂ ಆತನು ಯಾವದೇ ಮನುಷ್ಯನನ್ನು ಮಾರ್ಪಡಿಸಬಲ್ಲನು!

ಆದರೆ, ದೇವರು ತನ್ನ ವಿರುದ್ಧವಾಗಿ ಗೊತ್ತಿದ್ದೂ ಪಾಪದಲ್ಲಿ ಮುಂದುವರೆಯುವವರಿಗೆ ಕರುಣೆಯನ್ನು ತೋರಿಸುವದಿಲ್ಲ ಎಂಬದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಹಳೆ ಒಡಂಬಡಿಕೆಯ ಬೋಧನೆಗನುಸಾರವಾಗಿ ಗೊತ್ತಿದ್ದೂ ಮಾಡಿದ ಪಾಪಗಳನ್ನು ನಿವಾರಿಸುವದಕ್ಕೆ ಯಾವ ಯಜ್ಞವೂ ಇರಲಿಲ್ಲ (ಇಬ್ರಿಯ 10:26-29 ಮತ್ತು ವ್ಯಾಖ್ಯಾನ ನೋಡಿರಿ). ಪೌಲನು ಅವಿಶ್ವಾಸಿಯಾಗಿ ತಿಳಿಯದೆ ಸಭೆಯನ್ನು ಹಿಂಸಿಸಿದ್ದರಿಂದ (ವಚನ 13), ಆತನು ದೇವರಿಂದ' ಕರುಣೆ ಹಾಗೂ ಕ್ಷಮಾಪಣೆಯನ್ನು ಪಡೆದುಕೊಂಡಿದ್ದನು.

14 ಪೌಲನು ತನ್ನ ಜೀವಿತದಲ್ಲಿ ದೇವರು ಎಷ್ಟೋ ಸಮೃದ್ಧಿಯಾಗಿ ಸುರಿಸಿದ್ದ ಕೃಪೆಯ ಬಗ್ಗೆ ಆಶ್ಚರ್ಯಗೊಳ್ಳಲೂ ಎಂದಿಗೂ ವಿಫಲನಾಗಲಿಲ್ಲ. ಮತ್ತು ಅದಕ್ಕಾಗಿ ಆತನು ದೇವರನ್ನು ಕೊಂಡಾಡುವದನ್ನು ನಿಲ್ಲಿಸಲೇ ಇಲ್ಲ. ಆ ಕೃಪೆಯ ಕಾರಣದಿಂದಾಗಿ ಪೌಲನ ಜೀವಿತವು ಕ್ರಿಸ್ತ ಯೇಸುವಿನಲ್ಲಿರುವ ನಂಬಿಕೆಯಿಂದಲೂ ಪ್ರೀತಿಯಿಂದಲೂ ತುಂಬಿತ್ತು.

**15** ಪೌಲನು ಇಲ್ಲಿ ಕ್ರಿಸ್ತನ ಸುವಾರ್ತೆಗೆ ಒಂದು ವಾಕ್ಯದ ಸಾರಾಂಶವನ್ನು ನೀಡುತ್ತಾನೆಃ ಕ್ರಿಸ್ತ ಯೇಸು ಪಾಪಿಗಳನ್ನು ರಕ್ಷಿಸುವದಕ್ಕಾಗಿ ಈ ಲೋಕಕ್ಕೆ ಬಂದನು (ಮಾರ್ಕ 2:17ನೋಡಿರಿ), ಎಲ್ಲಾ ಮನುಷ್ಯರೂ ಪಾಪಿಗಳಾಗಿದ್ದಾರೆ (ರೋಮ 3:9- 10). ಆದ್ದರಿಂದ, ಎಲ್ಲಾ ಜನರಿಗೂ ಒಬ್ಬ ರಕ್ಷಕನ ಅಗತ್ಯವಿರುತ್ತದೆ. ಯೇಸುಕ್ರಿಸ್ತನು ಭೂಮಿಯ ಮೇಲೆ ಪ್ರತಿಯೊಂದು ರಾಷ್ಟ್ರ ಹಾಗೂ ಕುಲದ ಪ್ರತಿಯೊಬ್ಬ ಪುರುಷ ಹಾಗೂ ಸ್ತ್ರೀಯನ್ನು ರಕ್ಷಿಸುವದಕ್ಕೆ ಬಂದನು. ಆತನನ್ನು ನಂಬುವವರೆಲ್ಲರೂ ರಕ್ಷಣೆ ಹೊಂದುವರು (ಯೋಹಾನ 3:16).

**16** ದೇವರನ್ನು ಹುಡುಕುವವರಾಗಿ ಕ್ರಿಸ್ತನಲ್ಲಿ ನಂಬಿಕೆಯಿಡುವ ಎಲ್ಲರಿಗೂ ಪೌಲನು ದೃಷ್ಟಾಂತವಾಗಿರುತ್ತಾನೆ. ಕ್ರಿಸ್ತನು ಪಾಪಿಗಳಲ್ಲಿ ಮುಖ್ಯಪಾಪಿಯಾದ ಪೌಲನೆಡೆಗೆ ಅಂಥ ದೀರ್ಘ ಶಾಂತಿಯನ್ನು ತೋರ್ಪಡಿಸಿರುವದಾದರೆ ಖಂಡಿತವಾಗಿಯೂ ಆತನು ನಮ್ಮ ಕಡೆಗೆ ಸಹ ದೀರ್ಘಶಾಂತಿಯನ್ನು ತೋರಿಸುವನು.

ಪೌಲನು ಕ್ರಿಸ್ತನ ಒಬ್ಬ ಭಕ್ತಿವಂತ ಹಾಗೂ ನೀತಿಯುಳ್ಳ ಅಪೊಸ್ತಲನಾಗಿದ್ದನು. ಹಾಗಿದ್ದರೂ, ಆತನು ತನ್ನನ್ನು ಮುಖ್ಯ ಪಾಪಿ ಎಂದು ಕರೆದುಕೊಳ್ಳುತ್ತಾನೆ. ಕ್ರೈಸ್ತನು ಹೆಚ್ಚು ಪರಿಶುದ್ಧನಾದಂತೆ ತನ್ನನ್ನು ಹೆಚ್ಚು ಸಮೀಪವಾಗುತ್ತಾ ಹೋದಂತೆ ನಮ್ಮ ಅಶುದ್ಧತೆಯನ್ನು ಹೆಚ್ಚು ಸ್ಪಷ್ಟವಾಗಿ ಕಾಣುತ್ತೇವೆ. ದೇವರ ಪರಿಶುದ್ಧತೆಯ ಬೆಳಕಿನಲ್ಲಿ ನಮ್ಮ ಸ್ವಜೀವಿತಗಳು ಅಶುದ್ಧ ಹಾಗೂ ಅನೀತಿಯುಳ್ಳವುಗಳಾಗಿ –ಅವು ವಾಸ್ತವದಲ್ಲಿರುವಂತೆಯೇ– ಕಂಡುಬರುವವು. ಯಾವಾನಾದರೂ "ನಾನು ಪಾಪಿಯಲ್ಲ; ನಾನು ಪರಿಶುದ್ಧನು" ಎಂದು ಹೇಳುವವನು ದೇವರಿಂದ ಅತಿದೂರವಾಗಿರುತ್ತಾನೆ.

**17** ದೇವರು ತನ್ನ ತೋರಿರುವ ಕರುಣೆ ಹಾಗೂ ಕೃಪೆಯನ್ನು ತೋರ್ಪಡಿಸಿರುವದರ ಕುರಿತಾಗೆ ಯೋಚಿಸುವಾಗ ಪೌಲನು ಅಂಥ ಆಶ್ಚರ್ಯ ಹಾಗೂ ಅದ್ಭುತಮಯನಾದ ದೇವರಿಗೆ ಸ್ತುತಿಸುವುದನ್ನು ಬಿಡಲಾಗದವನಾಗಿದ್ದಾನೆ– ಸರ್ವಯುಗಗಳ ಅರಸನೂ ನಿರ್ಲಯನೂ ಅದೃಶ್ಯನೂ ಆಗಿರುವ ಏಕದೇವರಿಗೆ ಯುಗಯುಗಾಂತರಗಳಲ್ಲಿಯೂ ಮಾನ ಪ್ರಭಾವಗಳಿರಲಿ! ಎಂದು ಹೃದಯ ತುಂಬಿ ಸ್ತುತಿಸುತ್ತಾನೆ.

**18** ಪೌಲನು ತಿಮೊಥೆಯನ ವಿಷಯದಲ್ಲಿ ಮುಂಚೆ ಪ್ರವಾದನೆಗಳನ್ನು ಹೊಂದಿಕೊಂಡಿದ್ದನು, ಮತ್ತು ಈ ಪ್ರವಾದನೆಗಳ ಕಾರಣದಿಂದ ದೇವರು ತಿಮೊಥೆಯನನ್ನು ಸಭೆಯಲ್ಲಿ ನಾಯಕನಾಗಿರುವದಕ್ಕೆ ಆರಿಸಿಕೊಂಡಿದ್ದಾನೆಂಬದನ್ನು ಪೌಲನು ಖಚಿತವಾಗಿ ತಿಳುದುಕೊಂಡಿದ್ದನು. ಈಗ, ತಿಮೊಥೆಯನ್ನು ಧೈರ್ಯಗೊಳ್ಳುವಂತಾಗಬೇಕೆಂದು ಪೌಲನು ಆತನಿಗೆ ಈ ಪ್ರವಾದನೆಗಳನ್ನು ಜ್ಞಾಪಕಪಡಿಸುತ್ತಾನೆ. ಒಬ್ಬ ಯುವ ಸಭಾಪಾಲಕನಾಗಿ ತಿಮೊಥೆಯನು ಅನೇಕ ಹೋರಾಟಗಳನ್ನು ಎದುರಿಸಬೇಕಾಗುವದೆಂಬದನ್ನು ಪೌಲನು ಬಲ್ಲವನಾಗಿದ್ದನು. ಆದರೆ ತಿಮೊಥೆಯನು ಸ್ವತಃ ದೇವರೇ ಅವನನ್ನು ನಾಯಕತ್ವಕ್ಕೆ ನೇಮಕ ಮಾಡಿರುತ್ತಾನೆಂಬದನ್ನು ನೆನಪಿಸಿಕೊಳ್ಳುವದಾದರೆ ಆತನು ಒಳ್ಳೇ ಹೋರಾಟವನ್ನು ಮಾಡುವದಕ್ಕೆ ಧೈರ್ಯಗೊಳ್ಳುವನು.

**19-20** ತಿಮೊಥೆಯನು ತನ್ನ ಕುರಿತಾದ ಪ್ರವಾದನೆಗಳನ್ನು ಜ್ಞಾಪಿಸಿಕೊಳ್ಳುವದರ ಮೂಲಕ ಆತನು ಯುದ್ಧವನ್ನು ನಡಿಸುವದಕ್ಕೆ ಹೆಚ್ಚು ಶಕ್ತನಾಗುವದಷ್ಟೇ ಅಲ್ಲ, ಆದರೆ ಆತನು ನಂಬಿಕೆಯನ್ನು ಬಿಡದೆ ಹಿಡಿದುಕೊಳ್ಳುವದಕ್ಕೂ ಒಳ್ಳೆ ಮನಃಸಾಕ್ಷಿಯನ್ನು ಕಾಪಾಡಿಕೊಳ್ಳುವದಕ್ಕೂ ಹೆಚ್ಚು ಶಕ್ತನಾಗುವನು (ವಚನ 19). ನಂಬಿಕೆ ಹಾಗೂ ನಿರ್ದೋಷ ಮನಸಾಕ್ಷಿಯಾವಾಗಲೂ ಜೊತೆಯಾಗಿ ಸಾಗುತ್ತವೆ. ನಮ್ಮ ನಂಬಿಕೆಯು ನೈಜವಾದದ್ದಾಗಿರದಿದ್ದರೆ ನಾವು ಪಾಪದೊಳಗೆ ನಡಿಸಲ್ಪಟ್ಟು ನಮ್ಮ ನಿರ್ದೋಷಮನಸಾಕ್ಷಿಯನ್ನು ಕಳೆದುಕೊಳ್ಳುವೆವು.

ಅದೇ ಸಮಯದಲ್ಲಿ, ನಾವು ಪಾಪಮಾಡಿ ಪಶ್ಚಾತ್ತಾಪಪಡದಿದ್ದರೆ ನಿಜವಾದ ನಂಬಿಕೆಯನ್ನು ಬಿಟ್ಟು ಸುಳ್ಳು ಸಿದ್ದಾಂತಗಳ ಕಡೆಗೆ ತಿರಿಗಿ ಕೊಳ್ಳುವೆವು. ನಮ್ಮ ನಂಬಿಕೆ ಹಾಗೂ ನಮ್ಮ ನಡವಳಿಕೆ ಯಾವಾಗಲೂ ಪರಸ್ಪರ ಒಪ್ಪುವಂತಿರಬೇಕು.

ಪೌಲನು ಇಬ್ಬರು ವ್ಯಕ್ತಿಗಳನ್ನು ಕುರಿತು ಪ್ರಸ್ತಾಪಿಸುತ್ತಾನೆ, ಹುಮೆನಾಯನೂ ಹಾಗೂ ಅಲೆಗ್ಸಾಂದ್ರನು, ಇವರು ಕ್ರಿಸ್ತನಂಬಿಕೆಯ ವಿಷಯದಲ್ಲಿ ಹಡಗು ಒಡೆದು ನಷ್ಟ ಪಟ್ಟವರಂತೆ ಇದ್ದರು –ಅಂದರೆ, ಅವರು ಸತ್ಯನಂಬಿಕೆಯಿಂದ ವಿಮುಖರಾಗಿದ್ದರು. ಈ ಇಬ್ಬರ ವ್ಯಕ್ತಿಗಳು ತಮ್ಮ ಒಳ್ಳೇ ಮನಸಾಕ್ಷಿಯನ್ನು ಕಳೆದುಕೊಂಡು ದೇವರ ವಿರುದ್ಧದೂಷಣೆ ಮಾಡಲಾರಂಭಿಸಿದ್ದರು. ಪೌಲನು ಅವರನ್ನು ಸಭೆಯಿಂದ ಬಹಿಷ್ಕರಿಸಿ ಸೈತಾನನಿಗೆ ಒಪ್ಪಿಸಿಕೊಟ್ಟಿದ್ದನು (1ಕೊರಿಂಥ 5: 5 ಮತ್ತು ವ್ಯಾಖ್ಯಾನ ನೋಡಿರಿ). ಸೈತಾನನು ಅವರಿಗೆ ಯಾವದಾದರೂ ರೋಗವನ್ನು ಅಥವಾ ಇತರ ಸಂಕಷ್ಟನ್ನು ಬರಮಾಡಿ ಬಾಧಿಸುವನೆಂದು ಪೌಲನು ನಿರೀಕ್ಷಿಸಿದ್ದನು (ಅ.ಕೃತ್ಯ 13:9-11ನೋಡಿರಿ). ಈ ಶಿಕ್ಷೆಯ ಫಲಿತವಾಗಿ ಅವರು ಪಶ್ಚಾತ್ತಾಪಕ್ಕೆ ನಡಿಸಲ್ಪಡುವರೆಂಬುದು ಪೌಲನ ನಿರೀಕ್ಷೆಯಾಗಿತ್ತು. ಈ ಇಬ್ಬರ ವಿಷಯದಲ್ಲಿ ಇನ್ನಾವಸಂಗತಿಯೂ ತಿಳಿದುಬಂದಿರುವದಿಲ್ಲ. ಇತರ ಇಬ್ಬರು ಅಲೆಗ್ಸಾಂದ್ರರ ಬಗ್ಗೆ ಹೊಸ ಡಂಬಡಿಕೆಯಲ್ಲಿ ಪ್ರಸ್ತಾಪಿಸಲಾಗಿದೆ (ಅ.ಕೃ. 19:33; 2 ತಿಮೊಥೆ 4:14) ಆದರೆ, ಅವರು ಇಲ್ಲಿ ಪ್ರಸ್ತಾಪಿಸಲಾಗಿರುವ ಅಲೆಗ್ಸಾಂದ್ರನಿಗಿಂತ ಬೇರೆಯಾಗಿದ್ದಾರೆ ಎಂದು ಅನೇಕ ಪಂಡಿತರು ನಂಬುತ್ತಾರೆ.

ಪ್ರತಿಯೊಬ್ಬ ಕ್ರೈಸ್ತನಿಗೆ ಒಳ್ಳೇಮನಸಾಕ್ಷಿಯು (ಅಥವಾ, ನಿರ್ದೋಷ ಮನಸಾಕ್ಷಿ) ಅತ್ಯವಶ್ಯಕವಾದದ್ದು. ನಮ್ಮ ಕ್ರೈಸ್ತ ಜೀವಿತಗಳು ಏಕೆ ಬಹು ಶೀಘ್ರವೇ ಒಣಗಿಹೋಗುತ್ತವೆ? ನಾವು ಕರ್ತನಿಗಾಗಿ ನಮ್ಮ ವೈರಾಗ್ಯವನ್ನು ಯಾಕೆ ಕಳೆದುಕೊಳ್ಳುತ್ತೇವೆ? ಯಾಕೆ ನಮ್ಮ ಪ್ರೀತಿಯು ಅತಿ ಸುಲಭವಾಗಿ ತಣ್ಣಗಾಗುತ್ತವೆ? ಅದಕ್ಕೆ ಯಾವಾಗಲೂ ಒಂದೇ ಕಾರಣವಿರುತ್ತದೆಃ ಏನೆಂದರೆ, ನಮ್ಮ ಮನಸಾಕ್ಷಿಯು ಯಾವದೋ ಪಾಪದ ನಿಮಿತ್ತ ಅಶುದ್ಧವಾಗಿರುತ್ತದೆ. ನಾವು ನಮ್ಮ ಪಾಪಮಾಡಿ ಪಶ್ಚಾತ್ತಾಪಪಟ್ಟಿಲ್ಲವಾದರೆ ನಾವು ಕರ್ತನ ಸೇವೆ ಮಾಡುವ ಅಭಿಲಾಷೆಯನ್ನೂ ಪ್ರೀತಿಸುವದಕ್ಕೆ ಬಲವನ್ನೂ ಕಳೆದುಕೊಳ್ಳುತ್ತೇವೆ.

## ಅಧ್ಯಾಯ - 2

### ಆರಾಧನೆಯ ವಿಷಯದಲ್ಲಿ ಸಲಹೆಗಳು (2:1-8)

1 ಈ ಭಾಗದಲ್ಲಿ ಪೌಲನು ತಿಮೊಥೆಯನಿಗೆ ಸಭೆಯಲ್ಲಿನ ಆರಾಧನೆಯ ಬಗ್ಗೆ ಸಲಹೆಗಳನ್ನು ನೀಡುತ್ತಾನೆ. ಪೌಲನು ತನ್ನ ಸಲಹೆಗಳನ್ನು ಎಲ್ಲಾದಕ್ಕಿಂತ ಮೊದಲು ಪ್ರಾರ್ಥನೆಯೊಂದಿಗೆ ಪ್ರಾರಂಭಿಸುತ್ತಾನೆ. ಪೌಲನ ಮನಸ್ಸಿನಲ್ಲಿ ಪ್ರಾರ್ಥನೆಗಿಂತಲೂ ಪ್ರಾಮುಖ್ಯವಾದ ಸಂಗತಿಯು ಸಭೆಯ ಹಾಗೂ ವ್ಯಕ್ತಿಪರ ಜೀವಿತದಲ್ಲಿ ಇನ್ನಾವದೂ ಇರುವದಿಲ್ಲ. ಸಭೆಗೆ ಸತ್ಯಸಿದ್ಧಾಂತ ಹಾಗೂ ಬೋಧನೆಗಳು ಅತ್ಯವಶ್ಯಕವಾಗಿರುವ ಪ್ರಕಾರವೇ ಪ್ರಾರ್ಥನೆಯೂ ಅತ್ಯವಶ್ಯಕವಾದದ್ದು ಪ್ರಾರ್ಥನೆಯಲ್ಲಿ ಅನೇಕ ವಿಧಗಳುಂಟು ಪೌಲನು ಪ್ರಾಸ್ತಾಪಿಸುವ ಮೊದಲನೆಯ ವಿಧವು ವಿಜ್ಞಾಪನೆಗಳು, ಇವು ಗಳು ಒಂದು ಬಯಕೆ ಅಥವಾ ಅಗತ್ಯತೆಯ ಕುರಿತ ಸರಳ ಹೇಳಿಕೆಗಳಾಗಿವೆ. ದೇವರು ನಮ್ಮ ವಿಜ್ಞಾಪನೆಗಳನ್ನು ಕೇಳುವದಕ್ಕೆ ಯಾವಾಗಲೂ ಸಿದ್ಧನಾಗಿರುತ್ತಾನೆ. ಪೌಲನು ನಂತರ ಪ್ರಾರ್ಥನೆಗಳನ್ನು ಪ್ರಸ್ತಾಪಿಸುತ್ತಾನೆ; ಇದು ದೇವರಿಗೆ ಏಕಾಂತದಲ್ಲಿ ಹಾಗೂ ಸಾರ್ವಜನಿಕವಾಗಿ ಮಾಡುವ ಪ್ರಾರ್ಥನೆಗೆ ಒಂದು ಸಾಮಾನ್ಯ ಪದವಾಗಿರುತ್ತದೆ.

ಅನಂತರ ಪೌಲನು ಮನವೆಗಳನ್ನು ಪ್ರಸ್ತಾಪಿಸುತ್ತಾನೆ, ಇದು ಪ್ರಾಥಮಿಕವಾಗಿ ಇತರರಿಗೋಸ್ಕರ ಪ್ರಾರ್ಥಿಸುವದಾಗಿದೆ. ಮನವೆ (ಮಧ್ಯಸ್ಥಿಕೆ ಪ್ರಾರ್ಥನೆ) ಯು ಒಂದು ದಿಟ್ಟ ಹಾಗೂ ಮುಕ್ತ ರೀತಿಯ ಪ್ರಾರ್ಥನೆಯಾಗಿದ್ದು ಅದರಲ್ಲಿ ಮನವೆ ಮಾಡುವವನು ಇನ್ನೊಬ್ಬರ ಪರವಾಗಿ ದೇವರನ್ನು ಬೇಡಿಕೊಳ್ಳುತ್ತಾನೆ.

ಅಂತಿಮವಾಗಿ, ಪೌಲನು ಕೃತಜ್ಞತಾಸ್ತುತಿಗಳನ್ನು ಪ್ರಸ್ತಾಪಿಸಿ ಮುಕ್ತಾಯಗೊಳಿಸುತ್ತಾನೆ, ಇದು ಪ್ರತಿಯೊಂದು ಪ್ರಾರ್ಥನೆಯ ಒಂದು ಪ್ರಾಮುಖ್ಯ ಭಾಗವಾಗಿದೆ. (ರೋಮ 1:8; ಎಫೆಸ 5 :20 ಫಿಲಿಪ್ಪಿ 1:3; 4:6, 1ಥೆಸಲೋನಿಕ 5:17- 18 ನೋಡಿರಿ). ನಾವು ಎಲ್ಲಾ ಕಡೆಗಳಲ್ಲಿರುವ ಮನುಷ್ಯರೆಲ್ಲರಿಗೋಸ್ಕರ ಪ್ರಾರ್ಥನೆ ಮಾಡಬೇಕೆಂದು ಪೌಲನು ಹೇಳುತ್ತಾನೆ (ಲೂಕ 6:27-28 ನೋಡಿರಿ).

2 ನಾವು ಪ್ರಾರ್ಥಿಸಬೇಕಾಗಿರುವ ಎಲ್ಲಾ ಮನುಷ್ಯರೊಳಗೆ ಪೌಲನು ಇಲ್ಲ ಅರಸುಗಳಿಗೂ ಎಲ್ಲಾ ಅಧಿಕಾರಿಗಳಿಗಾಗಿಯೂ ಎಂದು ಪ್ರಸ್ತಾಪಿಸುತ್ತಾನೆ. ಪೌಲ, ಪೇತ್ರ ಇಬ್ಬರೂ ತಮ್ಮ ಪತ್ರಿಕೆಗಳಲ್ಲಿ ನಾವು ಅಧಿಕಾರದಲ್ಲಿರುವವರಿಗೆ ಅಧೀನರಾಗಿರಬೇಕೆಂದು ಬೋಧಿಸುತ್ತಾರೆ (ರೋಮ 13:1; 5; 1 ಪೇತ್ರ 2:13-17). ಆದರೆ ಪೌಲನು ಇಲ್ಲಿ ನಾವು ಅವರಿಗೋಸ್ಕರ ಪ್ರಾರ್ಥನೆಯನ್ನು ಮಾಡಬೇಕೆಂದು ಕಲಿಸುತ್ತಾನೆ. ಮತ್ತು ಒಳ್ಳೇ ನಾಯಕರಿಗಾಗಿ ಮಾತ್ರವಲ್ಲ, ಆದರೆ ನಾವು ಕೆಟ್ಟ ಹಾಗೂ ಭ್ರಷ್ಟ ನಾಯಕರಿಗಾಗಿಯೂ ಪ್ರಾರ್ಥಿಸಬೇಕು. ಅವರು ದೇವರ ಕಡೆಗೆ ತಿರಿಗಿಕೊಂಡು ಆತನ ಚಿತ್ತವನ್ನು ಮಾಡಲು ಪ್ರಾರಂಭಿಸುವಂತೆಯೂ, ಹೀಗೆ ಸಮಾಧಾನಗಳು ಉಂಟಾಗಿ ನಾವು ಪೂರ್ಣಭಕ್ತಿಯಿಂದಲೂ ಪರಿಶುದ್ಧತೆಯಿಂದಲೂ ಕಾಲಕ್ಷೇಪಮಾಡುವಂತಾಗಲೂ ಪ್ರಾರ್ಥಿಸಬೇಕು. ನಮ್ಮ ನಾಯಕರಿಗಾಗಿ ಪ್ರಾರ್ಥಿಸುವದರ ಮುಖ್ಯ ಉದ್ದೇಶವು ನಾವು ಸುಲಭ ಹಾಗೂ ಸುಖಮಯ ಜೀವಿತಗಳನ್ನು ನಡಿಸುವದಕ್ಕಲ್ಲ, ಆದರೆ ನಾವು ಪೂರ್ಣಭಕ್ತಿಯಿಂದಲೂ ಪರಿಶುದ್ಧತೆಯಿಂದಲೂ ಜೀವಿಸುವದಕ್ಕಾಗಿಯೇ.

3-4 ಮನುಷ್ಯರೆಲ್ಲರಿಗೋಸ್ಕರ ಪ್ರಾರ್ಥಿಸುವು ದು (ವಚನ 1). ದೇವರ ದೃಷ್ಟಿಯಲ್ಲಿ ಯೋಗ್ಯವಾಗಿ ಇರುತ್ತದೆ. ಅದು ಆತನಿಗೆ ಮೆಚ್ಚಿಕೆಯಾಗಿರುತ್ತದೆ, ಯಾಕೆಂದರೆ ಎಲ್ಲಾ ಮನುಷ್ಯರು ರಕ್ಷಣೆಯನ್ನು [2]ಹೊಂದಬೇಕೆಂದು ಆತನ ಚಿತ್ತವಾಗಿದೆ. ಪ್ರತಿಯೊಬ್ಬ ಪು ರುಷ ಮತ್ತು ಸ್ತ್ರೀಯು ವಾಸ್ತವದಲ್ಲಿ ರಕ್ಷಿಲ್ಪಡುವರೆಂದು ದೇವರು ನಿಷ್ಕರ್ಷೆ ಮಾಡಿದ್ದಾನೆಂದು ಇದರ ಅರ್ಥವಲ್ಲ. ಎಲ್ಲಾ ಜನರು ರಕ್ಷಣೆಹೊಂದುವದನ್ನು ಕಾಣುವದು ದೇವರ ಸಾಮಾನ್ಯ ಅಭಿಲಾಷೆಯಾಗಿದೆ ಎಂದು ಇದು ಅರ್ಥಕೊಡುತ್ತದೆ. ದೇವರ ರಕ್ಷಣೆಯು– ಯೆಹೂದ್ಯರು ತಪ್ಪಾಗಿ ಭಾವಿಸಿದ್ದ ಪ್ರಕಾರ– ಒಂದೇ ಕುಲ ಅಥವಾ ರಾಷ್ಟ್ರಕ್ಕಾಗಿ ಮಾತ್ರವೇ ಇರುವು ದಿಲ್ಲ. ಬದಲಾಗಿ, ದೇವರ ರಕ್ಷಣೆಯು ನಂಬುವವರೆಲ್ಲರಿಗಾಗಿಯೂ ಇರುತ್ತದೆ. ಈ ಕಾರಣದಿಂದಲೇ ನಾವು ಎಲ್ಲಾ ಜನರು ಸತ್ಯದ ಜ್ಞಾನಕ್ಕೆ ಸೇರಬೇಕೆಂದು –ಅಂದರೆ, ಕ್ರಿಸ್ತನ ಸತ್ಯ– ಮತ್ತು ಹೀಗೆ ರಕ್ಷಣೆಯನ್ನು ಕಂಡುಕೊಳ್ಳುವಂತಾಗಬೇಕೆಂದು ಪ್ರಾರ್ಥಿಸಬೇಕು ಎಂಬದಾಗಿ ಪೌಲನು ಹೇಳುತ್ತಾನೆ (1 ತಿಮೊಥೆ 4:9-10 ಮತ್ತು ವ್ಯಾಖ್ಯಾನ ನೋಡಿರಿ).

5-6 ಕ್ರಿಸ್ತನು ನಮ್ಮನ್ನು ರಕ್ಷಿಸಲು ಶಕ್ತಿನಾಗಿದ್ದಾನೆ, ಯಾಕೆಂದರೆ ಆತನು ಒಬ್ಬನೇ ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು. ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಮಾತ್ರವೇ ನಾವು ದೇವರಿಂದ ಕ್ಷಮಾಪಣೆಯನ್ನು ಪಡೆದು ಆತನೊಂದಿಗೆ ಸಂಧಾನಗೊಳ್ಳಬಲ್ಲೆವು (ರೋಮ 5:1).

ಕ್ರಿಸ್ತನು ಹೇಗೆ ನಮ್ಮ ಮಧ್ಯಸ್ಥನಾದನು? ಆತನು ನಮ್ಮ ಪಾಪಗಳ ದಂಡನೆಯನ್ನು ತನ್ನ ಮೇಲೆ ಹೊತ್ತುಕೊಂಡನು. ಆಶನು ತನ್ನನ್ನೇ ಒಪ್ಪಿಸಿಕೊಟ್ಟು ನಮ್ಮ ಪಾಪಗಳಿಗೆ ಈಡು ಕೊಟ್ಟನು. ಆ ಈಡು (ಬೆಲೆ) ಆತನ ಸ್ವಪ್ರಾಣವೇ, ಅದನ್ನು ನಾವು ದಂಡನೆಯಿಂದ –ನಿತ್ಯಮರಣದಿಂದ– ರಕ್ಷಿಸಲ್ಪಡುವದಕ್ಕಾಗಿ ಅರ್ಪಿಸಿದನು (ಮಾರ್ಕ 10: 45; ರೋಮ 6: 23; ಇಬ್ರಿಯ 9:15 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಕ್ರಿಸ್ತನ ಸಾಕ್ಷಿಯು ಏನೆಂದರೆ, ಅತನು ತಕ್ಕ ಸಮಯದಲ್ಲಿ ಪಾಪಿಗಳನ್ನು ರಕ್ಷಿಸಲು ತನ್ನನ್ನು ಒಪ್ಪಿಸಿಕೊಟ್ಟನೆಂಬದೇ (ಗಲಾತ್ಯ 4:4-5ಮತ್ತು ವ್ಯಾಖ್ಯಾನ ನೋಡಿರಿ). ಕ್ರಿಸ್ತನು ನೀಡಿದ ಬೆಲೆ ಅಥವಾ

ಈಡು –ಅಂದರೆ, ಆತನ ಸ್ವಪ್ರಾಣವು – ಎಲ್ಲಾ ಮನುಷ್ಯರನ್ನು ರಕ್ಷಿಸಲು ಸಾಕಾದಷ್ಟು ದೊಡ್ಡದಾಗಿರುತ್ತದೆ. ಆದರೆ ಎಲ್ಲಾ ಮನುಷ್ಯರೂ ತಮಗಾಗಿ ಕ್ರಿಸ್ತನು ಮಾಡಿರುವದನ್ನು ತಮ್ಮದಾಗಿಸಿಕೊಳ್ಳುವದಿಲ್ಲ.

ಅವರು ಆತನಲ್ಲಿ ನಂಬಿಕೆಯಿಡುವದಿಲ್ಲ, ಅವರು ದೇವರಿಗೆ ವಿಧೇಯರಾಗಲು ನಿರಾಕರಿಸುತ್ತಾರೆ.

ರಕ್ಷಣೆಯನ್ನು ದೊಡ್ಡ ಔತಣಕ್ಕೆ ಹೋಲಿಸಬಹುದು. ಔತಣವು ಪೂರ್ಣವಾಗಿ ಸಿದ್ಧಗೊಳಿಸಲ್ಪಟ್ಟಿದೆ, ಆದರೆ ಒಬ್ಬ ಮನುಷ್ಯನು ಊಟಮಾಡದ ಹೊರತು ಆತನು ಹಸಿವೆಯಿಂದ ಉಳಿಯುವನು. ಅಲ್ಲದೆ ರಕ್ಷಣೆಯನ್ನು ಬಲಯುತ ಔಷಧಿಗೆ ಹೋಲಿಸಬಹುದು. ಔಷಧಿಯು ಯಾವು ದೇ ವ್ಯಾಧಿಯನ್ನು ಗುಣಪಡಿಸಬಲ್ಲದು; ಆದರೆ ಒಬ್ಬನು ಔಷಧಿಯನ್ನು ತೆಗೆದುಕೊಳ್ಳದ ಹೊರತು ವ್ಯಾಧಿಪೀಡಿತನಾಗಿಯೇ ಉಳಿಯುವನು.

ಪೌಲನು 5ನೇ ವಚನದಲ್ಲಿ ಕ್ರಿಸ್ತನನ್ನು ಮನುಷ್ಯನಾಗಿರುವ ಕ್ರಿಸ್ತಯೇಸುವೇ ಎಂದು ಕರೆಯುವದನ್ನು ಗಮನಿಸಿರಿ. ಯೇಸು ಪೂರ್ಣ ಮನುಷ್ಯನೂ ಪೂರ್ಣದೇವರೂ ಆಗಿದ್ದನು (ಕೊಲೊಸ್ಸೆ 2:9). ಈ ಕಾರಣದಿಂದ ಯೇಸು ನಮಗೂ ದೇವರಿಗೂ ಏಕೈಕ ಹಾಗೂ ಪರಿಪೂರ್ಣ ಮಧ್ಯಸ್ಥನಾಗಿದ್ದಾನೆ.

7 ಯೇಸು ಎಲ್ಲಾ ಮನುಷ್ಯರನ್ನು ರಕ್ಷಿಸುವದಕ್ಕಾಗಿ ಬಂದನು, ಹೊರತು ಯೆಹೂದ್ಯರನ್ನು ಮಾತ್ರವಲ್ಲ. ಈ ಕಾರಣಕ್ಕಾಗಿ ಪೌಲನು ಯೆಹೂದ್ಯೇತರಿಗೆ ಅಥವಾ ಅನ್ಯಜನರಿಗೆ ಕ್ರಿಸ್ತನ ಸುವಾರ್ತೆಯನ್ನು ಸಾರುವದಕ್ಕಾಗಿ ನೇಮಿಸಲ್ಪಟ್ಟಿದ್ದನು (ಗಲಾತ್ಯ 2 :7 ನೋಡಿರಿ).

8 ನಾವು ಪ್ರಾರ್ಥನೆ ಮಾಡಬೇಕೆಂದು ದೇವರು ಇಚ್ಛಿಸುತ್ತಾನೆ, ಆದರೆ ನಾವು ನಮ್ಮ ತುಟಿಗಳಿಂದ ಮಾತ್ರವೇ ಪ್ರಾರ್ಥಿಸಬೇಕೆಂದು ಆತನು ಇಚ್ಛಿಸುವದಿಲ್ಲ. ನಾವು ಪರಿಶುದ್ಧ ಕೈಗಳನ್ನೆತ್ತಿ– ಅಂದರೆ, ನಿರ್ಮಲ ಹೃದಯಗಳಿಂದ– ಸಹ ಪ್ರಾರ್ಥಿಸಬೇಕೆಂದು ಆತನು ಬಯಸುತ್ತಾನೆ. ನಾವು ನಮ್ಮ ಹೃದಯಗಳಲ್ಲಿ ಯಾವದೇ ಪಾಪ ಅಥವಾ ಕೆಟ್ಟತನವನ್ನು ಇಟ್ಟುಕೊಂಡಿದ್ದರೆ ದೇವರು ನಮ್ಮ ಪ್ರಾರ್ಥನೆಗಳನ್ನು ಕೇಳುವದಿಲ್ಲ (ಕೀರ್ತನೆಗಳು 26:6-7; 66:18, ಮಾರ್ಕ 7:6). ನಾವು ನಮ್ಮ ಸಹೋದರನ ಮೇಲೆ ಕೋಪ ಹೊಂದಿದ್ದರೆ ಅಥವಾ ಆತನ ವಿರುದ್ಧ ಯಾವದೇ ವಿಧದಲ್ಲಿ ಪಾಪ ಮಡಿರುವದಾದರೆ ನಾವು ಮೊದಲು ಹೋಗಿ ಆ ಸಹೋದರನೊಂದಿಗೆ ಸಮಾಧಾನಗೊಳ್ಳಬೇಕು; ನಾವು ಕ್ಷಮಿಸಬೇಕು ಹಾಗೂ ಕ್ಷಮಿಸಲ್ಪಡಬೇಕು. ಅನಂತರವಷ್ಟೇ ದೇವರು ನಮ್ಮ ಪ್ರಾರ್ಥನೆಗಳನ್ನೂ ಕಾಣಿಕೆಗಳನ್ನೂ ಸ್ವೀಕರಿಸಿಕೊಳ್ಳುವನು (ಮತ್ತಾಯ 5 :23-24 ನೋಡಿರಿ).

## ಸ್ತ್ರೀಯರಿಗೆ ಯುಕ್ತವಾದ ನಡವಳಿಕೆ (2 :9-15 )

**9-10** ಪೌಲನ ಕಾಲದಲ್ಲಿ ಡಂಭದ ಹಾಗೂ ಪ್ರಾಪಂಚಿಕ ಸ್ತ್ರೀಯರು ತಮ್ಮ ಕೂದಲುಗಳನ್ನು ಜಡೆ ಹಣೆದುಕೊಂಡು ಬಣ್ಣದ ಪಟ್ಟಿಗಳನ್ನು ಕಟ್ಟಿಕೊಳ್ಳುತ್ತಿದ್ದರು. ಅವರು ಬೆಲೆಯುಳ್ಳ ಚಿನ್ನದ ಆಭರಣ ಹಾಗೂ ವಸ್ತ್ರಗಳನ್ನು ತೊಡುತ್ತಿದ್ದರು. ಅಂಥ ಸ್ತ್ರೀಯರು ತಾವು ಐಶ್ವರ್ಯವಂತರು ಹಾಗೂ ಮುಖ್ಯವಾದವರೆಂಬದನ್ನು ಇತರರಿಗೆ ತೋರಿಸುವದಕ್ಕೆ ಹೀಗೆ ಮಾಡುತ್ತಿದ್ದರು. ಪೌಲನು ಇಲ್ಲಿ ಅಂಥ ಜಂಭದ ಹಾಗೂ ಡಂಭಾಚಾರದ ನಡವಳಿಕೆ ತಪ್ಪಾದದ್ದು ಎಂದು ಬೋದಿಸುತ್ತಾನೆ. ಬದಲಾಗಿ, ಸ್ತ್ರೀಯರು ಸಾಮಾನ್ಯವಾದ ಹಾಗೂ ಮರ್ಯಾದೆಗೆ ತಕ್ಕ ಉಡುಪನ್ನುಟ್ಟುಕೊಳ್ಳಬೇಕು. ಸತ್ಕ್ರಿಯೆಗಳೇ ಒಬ್ಬ ಸ್ತ್ರೀಯ ಅತ್ಯುತ್ತಮ "ಉಡುಪಾಗಿರುತ್ತದೆ" (ವಚನ 10); ಆಕೆಯು ಇವು ಗಳನ್ನು ತೊಟ್ಟುಕೊಳ್ಳಲಿ (1ಪೇತ್ರ 3:3-4 ನೋಡಿರಿ).

**11** ಸ್ತ್ರೀಯರು ಪು ರುಷರಿಗೆ ಅಧೀನರಾಗಿರಬೇಕೆಂದು ಪೌಲನು ಹೇಳುತ್ತಾನೆ. ಈ ನಿಯಮವು ಗಂಡ ಹೆಂಡರಿಗೂ ಅನ್ವಯಿಸುತ್ತದೆ (ಎಫೆಸ 5 :22-24 ಮತ್ತು ವ್ಯಾಖ್ಯಾನ ನೋಡಿರಿ). ಇದು ಸಭೆಯೊಳಗೆ ಸಹ ಅನ್ವಯಿಸುತ್ತದೆ (1 ಕೊರಿಂಥ 14: 34- 35 ಮತ್ತು ವ್ಯಾಖ್ಯಾನ ನೋಡಿರಿ).

**12** ಪೌಲನು ಇಲ್ಲಿ ಸ್ತ್ರೀಯರು ಕಲಿತುಕೊಳ್ಳುವದು ಸರಿಯಾದದ್ದೇ, ಆದರೆ ಸ್ತ್ರೀಯರು ಪು ರುಷರಿಗೆ ಉಪದೇಶಮಾಡುವದು ಸರಿಯಾದದ್ದಲ್ಲ ಎಂದು ಬರೆಯುತ್ತಾನೆ. ಸಭೆಯಲ್ಲಿ ಸ್ತ್ರೀಯರು ಪು ರುಷರ ಮೇಲೆ ಅಧಿಕಾರ ನಡಿಸಬಾರದು; ಈ ಸನ್ನಿವೇಶದಲ್ಲಿ ಉಪದೇಶಕರಾಗಿರುವದೆಂದರೆ ಅಧಿಕಾರ ನಡಿಸುವದು ಎಂಬ ಅರ್ಥನೀಡುತ್ತದೆ. ಹೇಗಿದ್ದರೂ, ಸ್ತ್ರೀಯರು ಮಕ್ಕಳಿಗೂ ಇತರ ಸ್ತ್ರೀಯರಿಗೂ ಉಪದೇಶಿಸುವದನ್ನು ಪೌಲನು ನಿಷೇಧಿಸುವದಿಲ್ಲ (ತೀತನು 2 :3-4)

ಪೌಲನು 9-12 ವಚನಗಳಲ್ಲಿ ಹೇಳಿದ ಮಾತುಗಳ ಆತನು ಜೀವಿಸಿದ ಕಾಲ ಹಾಗೂ ಸಂಸ್ಕೃತಿಗೆ ಮಾತ್ರವೇ ಸೂಚಿತವಾಗಿವೆಯೆಂದು ಅನೇಕ ಕ್ರೈಸ್ತರು ನಂಬುತ್ತಾರೆ; ಈ ವಚನಗಳಲ್ಲಿನ ಆತನ ಬೋಧನೆಯು ಇತಿಹಾಸದ ಎಲ್ಲಾ ಸಂಸ್ಕೃತಿ ಹಾಗೂ ಕಾಲಕ್ಕೆ ಅನ್ವಯಿಸುವದಿಲ್ಲ ಎಂದು ಅವರು ಹೇಳುತ್ತಾರೆ. ಪೌಲನ ಕಾಲದಲ್ಲಿ ಸ್ತ್ರೀಯು ಸಾಮಾನ್ಯವಾಗಿ ಪು ರುಷದೊರೆತನದ ಸಮಾಜದಿಂದ ಶೋಷಣೆಗೆ ಗುರಿಯಾಗಿ ಕೀಳುದೃಷ್ಟಿಯಿಂದ ಕಾಣಲ್ಪಡುತ್ತಿದ್ದರು. ಆದದರಿಂದ, ಸ್ತ್ರೀಯರು ಪು ರುಷರಿಗೆ ಉಪದೇಶಿಸುವದು ಆ ಕಾಲದ ಸಂಸ್ಕೃತಿ ಹಾಗೂ ಪದ್ಧತಿಗೆ ವಿರುದ್ಧವಾಗಿದ್ದಂತೆ ತೋರುತ್ತದೆ. ಹಾಗಾದರೆ, ಈ ಮೊದಲನೆಯ ಅಭಿಪ್ರಾಯದ ಪ್ರಕಾರವಾಗಿ ಪೌಲನು ತನ್ನ ಕಾಲದ ಮನೋಭಾವಗಳನ್ನು ಪ್ರತಿಬಿಂಬಿಸುತ್ತಿದ್ದಾನಷ್ಟೇ.

ಹೇಗಿದ್ದರೂ, ಇತರ ಅನೇಕ ಕ್ರೈಸ್ತರು ಈ ದೃಷ್ಟಿಕೋನವನ್ನು ಒಪ್ಪಿಕೊಳ್ಳುವದಿಲ್ಲ. ಇಲ್ಲಿರುವ ಪೌಲನ ಬೋಧನೆಯು ಎಲ್ಲಾ ಕಾಲಗಳಲ್ಲಿಯೂ ಎಲ್ಲಾ ಸಂಸ್ಕೃತಿಗಳಿಗೂ ಅನ್ವಯಿಸುತ್ತದೆಂದು ಅವರು ಹೇಳುತ್ತಾರೆ. ನಾವು ಸಹ ಈ ಪ್ರಸ್ತುತ ಕಾಲದಲ್ಲಿ ಪೌಲನು ಬರೆದಿರುವದನ್ನು ಅನುಸರಿಸಬೇಕು ಎಂದು ಅವರು ಹೇಳುತ್ತಾರೆ (1 ಕೊರಿಂಥ 11:5; 14:34-35; 2 ತಿಮೊಥೆ 3:6-7 ಮತ್ತು ವ್ಯಾಖ್ಯಾನಗಳನ್ನು; ಸಾಮಾನ್ಯ ಲೇಖನಃ ಸಭೆಯಲ್ಲಿ ಸ್ತ್ರೀಯರು ನೋಡಿರಿ).

13 ಪೌಲನು ಈಗ ಮನೆಯಲ್ಲಿಯೂ ಸಭೆಯಲ್ಲಿಯೂ ಸ್ತ್ರೀಯರು ಏಕೆ ಪುರುಷರ ಅಧೀನದಲ್ಲಿರಬೇಕೆಂಬದಕ್ಕೆ ಕಾರಣ ನೀಡುತ್ತಾನೆಃ ಏನೆಂದರೆ, ಅವರು ಪುರುಷನು ಸೃಷ್ಟಿಸಲ್ಪಟ್ಟ ನಂತರ ಸೃಷ್ಟಿಸಲ್ಪಟ್ಟಿರುವದಕ್ಕಾಗಿಯೇ. ದೇವರು ಪ್ರಥಮ ಸ್ತ್ರೀಯಾದ ಹವ್ವಳನ್ನು ಪ್ರಥಮ ಪುರುಷನಾದ ಆದಾಮನ ಪಕ್ಕೆಲುಬಿನಿಂದ ಸೃಷ್ಟಿಸಿದನು (ಆದಿಕಾಂಡ 2:21- 22; 1 ಕೊರಿಂಥ 11:8-9). ಆದ್ದರಿಂದ, ಪುರುಷನು ಸ್ತ್ರೀಗೆ ಶಿರಸ್ಸಾಗಿದ್ದಾನೆ (1 ಕೊರಿಂಥ 11:3 ಮತ್ತು ವ್ಯಾಖ್ಯಾನ ನೋಡಿರಿ).

14 ಪೌಲನು ಇಲ್ಲಿ ಸ್ತ್ರೀಯರು ಏಕೆ ಪುರುಷರಿಗೆ ಉಪದೇಶಿಸಬಾರದು ಹಾಗೂ ಅಧಿಕಾರ ನಡಿಸಬಾರದೆಂಬದಕ್ಕೆ ಎರಡನೆಯ ಕಾರಣವನ್ನು ನೀಡುತ್ತಾನೆ; ಏನೆಂದರೆ, ಸ್ತ್ರೀಯರು ಪುರುಷರಿಗಿಂತಲೂ ಹೆಚ್ಚು ಸುಲಭವಾಗಿ ಸುಳ್ಳು ಬೋಧನೆಯ ವಂಚನೆಗೊಳಗಾಗುತ್ತಾರಾದ್ದರಿಂದಲೇ. ಏದೇನ್ ತೋಟದಲ್ಲಿ ದುಷ್ಟ ಸರ್ಪನಾದ ಸೈತಾನನು ಹವ್ವಳನ್ನು ವಂಚಿಸಿದನೇ ಹೊರತು ಆದಾಮನನ್ನಲ್ಲ (ಆದಿಕಾಂಡ 3:1- 6). ಆದಾಮನು ಹವ್ವಳ ಪಾಪದಲ್ಲಿ ಪಾಲುಗಾರನಾದನೆಂಬದು ನಿಜವೇ, ಆದರೆ ಹವ್ವಳು ಮೊದಲು ವಂಚನೆಗೊಳಗಾಗಿದ್ದರಿಂದಲೇ ಅವರು ಪಾಪದೊಳಗೆ ಬಿದ್ದರು.

ಹೇಗಿದ್ದರೂ, ಈ ವಚನದ ಆಧಾರದ ಮೇಲೆ ಸ್ತ್ರೀಯರು ಪುರುಷರಿಗಿಂತಲೂ ಹೆಚ್ಚು ಪಾಪಿಗಳೆಂದು ನಾವು ಹೇಳಲಾಗದು! ಯಾಕೆಂದರೆ, ಹವ್ವಳು ಇನ್ನೂ ವಂಚನೆ ಗೊಳಗಾಗುವದಕ್ಕೆ ಮುಂಚೆಯೇ ದೇವರು ಆ ನಿರ್ದಿಷ್ಟವಾದ ಮರದ ಹಣ್ಣನ್ನು ತಿನ್ನಬಾರದೆಂದು ಆದಾಮನಿಗೆ ನೇರವಾಗಿ ಹೇಳಿದನು (ಆದಿಕಾಂಡ 2:16-17). ಆ ಹಣ್ಣನ್ನು ತಿನ್ನುವದು ಪಾಪವೆಂದು ಆದಾಮನಿಗೆ ಚೆನ್ನಾಗಿ ತಿಳಿದಿತ್ತು; ಹವ್ವಳು ಆತನನ್ನು ಮೋಸಗೊಳಿಸಿದಳೆಂದು ನಾವು ಹೇಳಲು ಸಾಧ್ಯವಿಲ್ಲ. ಆದಾಮನು ಉತ್ತರವಿಲ್ಲದವನಾಗಿದ್ದನು.

15 ಹವ್ವಳ ಪಾಪದ ನಿಮಿತ್ತ ದೇವರು ಆಕೆಯನ್ನು ದಂಡಿಸುತ್ತಾ ಹೇಳಿದ್ದೇನೆಂದರೆಃ "ನೀನು ಗರ್ಭಿಣಿಯಾಗಿರುವ ಕಾಲದಲ್ಲಿ ಬಹು ಸಂಕಟ ಪಡಬೇಕೆಂದು ನಾನು ನೇಮಿಸಿದ್ದೇನೆ"(ಆದಿಕಾಂಡ 3:16). ಆದರೆ ಈಗ ಪೌಲನು ಸ್ತ್ರೀಯರಿಗೆ ಅವರು ನಂಬಿಕೆಯಲ್ಲಿಯೂ ಪ್ರೀತಿಯಲ್ಲಿಯೂ ಪರಿಶುದ್ಧತೆಯಲ್ಲಿಯೂ ನೆಲೆಗೊಂಡಿದ್ದರೆ ದೇವರು ಅವರನ್ನು ಪ್ರಸವವೇದನೆಯೊಳಗಿಂದ ಸಂರಕ್ಷಿಸುವನೆಂದು ವಾಗ್ದಾನ ನೀಡುತ್ತಾನೆ ಮತ್ತು ನಿಜವಾಗಿಯೂ, ಇದು ಸತ್ಯವೆಂಬದಾಗಿ ನಿರೂಪಿಸಲ್ಪಟ್ಟಿದೆ. ಪೌಲನ ಕಾಲದಿಂದ ಪ್ರಸ್ತುತ ಕಾಲದ ತನಕವೂ ಸ್ತ್ರೀಯರು– ಪುರುಷರಿಗಿಂತ ದೊಡ್ಡ ಪ್ರಮಾಣದಲ್ಲಿ– ತಮ್ಮ ಜೀವಿತಗಳಲ್ಲಿ ಈ ಮೂರು ಉತ್ಕೃಷ್ಟಗುಣಗಳಾದ ನಂಬಿಕೆ, ಪ್ರೀತಿ ಮತ್ತು ಪರಿಶುದ್ಧತೆಗಳನ್ನು ತೋರ್ಪಡಿಸಿದ್ದಾರೆ. ಹೀಗೆ ಈ ನಾಣ್ಣುಡಿಯಲ್ಲಿ ಸತ್ಯವಿರುತ್ತದೆಃ ಪುರುಷರೊಂದಿಗೆ ಸಮಾನತೆಯನ್ನು ಹಾರೈಸುವ ಸ್ತ್ರೀಯರು ಅತಿ ಕಡಿಮೆಯಾದದ್ದನ್ನು ಹಾರೈಸುವವರಾಗಿದ್ದಾರೆ!

---

## ಅಧ್ಯಾಯ - 3

### ಸಭೆಯಲ್ಲಿ ಹಿರಿಯರು (3:1-7)

1 ಪೌಲನು 3ನೇ ಅಧ್ಯಾಯದಲ್ಲಿ ಪ್ರತಿಯೊಂದು ಸ್ಥಳೀಯ ಸಭೆಯು ಹೇಗೆ ಆಡಳಿತ ಮಾಡಿಕೊಳ್ಳಲ್ಪಡಬೇಕೆಂಬದರ ಕುರಿತು ಬರೆಯುತ್ತಾನೆ. ಈ ಭಾಗದಲ್ಲಿ, ಪೌಲನು ಸಭೆಯ ಮುಖ್ಯ ನಾಯಕನನ್ನೂ ಸಭಾಸೇವಕ [3] ಅಥವಾ "ಸಭಾಧ್ಯಕ್ಷ"[3] ಎಂದು ಕರೆಯುತ್ತಾನೆ. ಹೊಸ ಒಡಂಬಡಿಕೆಯ ಇತರ ಸ್ಥಳದಲ್ಲಿ ಅಂಥ ನಾಯಕನು "ಹಿರಿಯನು" ಎಂದು ಸಹ ಕರೆಯಲ್ಪಟ್ಟಿರುತ್ತಾನೆ ಈ ದಿನ ಆತನನ್ನು ಕೆಲವು ವೇಳೆಗಳಲ್ಲಿ "ಸೇವಕ" ಅಥವಾ "ಸಭಾಪಾಲಕ" ಎಂದು ಕರೆಯಲಾಗುತ್ತದೆ (1 ತಿಮೊಥೆ 4:6; 1 ಪೇತ್ರ 5:2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ; ಸಾಮಾನ್ಯ ಲೇಖನಃ ಸಭಾ ಆಡಳಿತ ನೋಡಿರಿ).

ಒಬ್ಬ ಸಭಾ ಸೇವಕ ಅಥವಾ ಸಭಾಪಾಲಕನಾಗಿರುವದು ಒಂದು ಉನ್ನತ ಕರೆಯುವಿಕೆಯಾಗಿದೆ. ಒಬ್ಬನು ದೇವರಿಂದ ನಿಜವಾಗಿಯೂ ಆ ಕೆಲಸಕ್ಕೆ ಕರೆಯಲ್ಪಟ್ಟಿರುವದಾದರೆ ಸಭೆಯಲ್ಲಿ ನಾಯಕನಾಗಿರುವದಕ್ಕೆ ಇಚ್ಛೆ ಪಡುವದು ಉತ್ತಮವಾದದ್ದೇ. ಆದರೆ ಜಂಭದ ನಿಮಿತ್ತ ಅಂಥ ಸ್ಥಾನವೊಂದಕ್ಕೆ ಅಪೇಕ್ಷಿಸುವದು ಸರಿಯಾದದ್ದಲ್ಲ. ಸಭೆಯಲ್ಲಿ ನಾಯಕತ್ವವನ್ನು ಅಪೇಕ್ಷಿಸುವವರಿಗೆ ಗರ್ವವು ಬಹುಶಃ ಒಂದು ಅತಿದೊಡ್ಡ ಶೋಧನೆಯಾಗಿರಬಲ್ಲದು. ಬದಲಾಗಿ, ದೇವರಿಗೆ ತನ್ನ ಸಭೆಗಾಗಿ ನಾಯಕರನ್ನು ಆರಿಸಿಕೊಳ್ಳಲು ಬಿಡುವದು ಅತ್ಯುತ್ತಮವಾದದ್ದು. ನಾವು ಎಂದಿಗೂ ಉನ್ನತ ಸ್ಥಾನಕ್ಕಾಗಿ ಪ್ರಯಾಸ ಪಡದಿರೋಣ ಅಥವಾ ಹೋರಾಡದಿರೋಣ. ನಮ್ಮನ್ನು ಅಭಿವೃದ್ಧಿಪಡಿಸಿಕೊಳ್ಳುವದಕ್ಕಾಗಿ ಎಂದಿಗೂ ಇತರ ಸಹೋದರನೊಬ್ಬನನ್ನು ಟೀಕಿಸುವದನ್ನಾಗಲಿ ಅಥವಾ ಅವಮಾನಿಸುವದನ್ನಾಗಲಿ ಮಾಡದಿರೋಣ ದೇವರು ಅಂಥ ವರ್ತನೆಯನ್ನು ಮೆಚ್ಚುವದಿಲ್ಲ.

2-3 ಸಭಾಸೇವಕರು ಅಥವಾ ಸಭಾಪಾಲಕರು ಆಗಿರುವದಕ್ಕಾಗಿಯಾವ ರೀತಿಯ ವ್ಯಕ್ತಿಗಳು ತಕ್ಕವರಾಗಿರುತ್ತಾರೆ? ಮೊದಲನೆಯದಾಗಿ, ಅವರು ದೋಷಾರೋಪಣೆಯಿಲ್ಲದ ವ್ಯಕ್ತಿಗಳಾಗಿರಬೇಕು. ಅಂದರೆ, ಅವರ ಜೀವಿತಗಳಲ್ಲಿ ಯಾವದೇ ಪಶ್ಚಾತಾಪ ಪಡದಿರುವ ಪಾಪ ಅಥವಾ ದೋಷಗಳು ಇರಬಾರದು. ಅದು ಮಾತ್ರವಲ್ಲ, ಅವರು ದುಷ್ಟಟ ಅಥವಾ ಗುಣದೋಷಗಳನ್ನು ಹೊಂದಿರಬಾರದು. ಇಲ್ಲವಾದರೆ, ಅವರು ಇತರರ ದೋಷಾರೋಪಗಳಿಗೆ ಗುರಿಯಾಗುವರು, ಮತ್ತು ಇದು ಅವರಿಗೂ ಸಭೆಗೂ ಅವಮಾನವನ್ನು ಮಾಡುವದು.

ಎರಡನೆಯದಾಗಿ, ಒಬ್ಬ ಸಭಾಸೇವಕ ಅಥವಾ ಸಭಾಪಾಲಕನು ಏಕಪತ್ನಿಯುಳ್ಳವನು ಆಗಿರಬೇಕು– ಅಂದರೆ, ಒಬ್ಬಳಿಗಿಂತಲೂ ಹೆಚ್ಚು ಪತ್ನಿಯರನ್ನು ಹೊಂದಿರಬಾರದು. ಪೌಲನ ಕಾಲದಲ್ಲಿ ಅನ್ಯ ಜನರು ಬಹುಪತ್ನಿಯರನ್ನು ಹೊಂದಿರುತ್ತಿದ್ದರು. ಅಂಥ ಜನರು ಕ್ರೈಸ್ತರಾದಾಗ ಅವರಿಗೆ ಸಭಾಸೇವಕರು ಅಥವಾ ಸಭಾಪಾಲಕರಾಗುವದಕ್ಕೆ ಅನುಮತಿ ನೀಡುತ್ತಿರಲಿಲ್ಲ. ಒಬ್ಬರಿಗಿಂತಲು ಹೆಚ್ಚು ಪತ್ನಿಯುಳ್ಳವರು ತಮ್ಮ ಹೆಚ್ಚಿನ ಪತ್ನಿಯರನ್ನು ಬಿಟ್ಟು ಬಿಡಬೇಕೆಂದು ಪೌಲನು ಬೇಳುವದಿಲ್ಲ; ಬೈಬಲಿನಲ್ಲಿ ಎಲ್ಲಿಯೂ ಆ ರೀತಿ ಮಾಡಬೇಕೆಂದು ಹೇಳಲ್ಪಟ್ಟಿರುವದಿಲ್ಲ. ಅದು ಒಂದು ತಪ್ಪನ್ನು ಸರಿಪಡಿಸಲು ಹೋಗಿ ಇನ್ನೊಂದು ತಪ್ಪನ್ನು ಮಾಡಿದ ಹಾಗಿರುವದು. ಒಬ್ಬಳಿಗಿಂತಲೂ ಹೆಚ್ಚು ಪತ್ನಿಯರನ್ನು ಹೊಂದಿರುವವನು ಸಭಾಸೇವಕ ಅಥವಾ ಸಭಾಪಾಲಕನಾಗಿರಲು ಸಾಧ್ಯವಿಲ್ಲ; ಅವನು ಸಭಾಹಿರಿಯನು ಸಹ ಆಗಿರುವದಕ್ಕೆ (ವಚನ 12) ಸಾಧ್ಯವಿಲ್ಲ ಎಂದು ಮಾತ್ರವೇ ಪೌಲನು ಹೇಳುತ್ತಾನೆ. ಪೌಲನು 2 -3 ವಚನಗಳಲ್ಲಿ ಪಟ್ಟಿಮಾಡುವ ಉಳಿದ ಗುಣಗಳು ಸಹ ಸಮಾನವಾದ ಪ್ರಾಮುಖ್ಯತೆಯನ್ನು ಹೊಂದಿರುತ್ತವೆ. ಒಬ್ಬನು ಸಭೆಯಲ್ಲಿ ಅಧ್ಯಕ್ಷನಾಗಿರಬೇಕಾದರೆ ಅವೆಲ್ಲವೂ ಅವಶ್ಯಕವಾಗಿವೆ (ತೀತನು 1: 6- 9 ನೋಡಿರಿ).

4-5 ಸಭಾಧ್ಯಕ್ಷನೊಬ್ಬನನ್ನು ಆರಿಸಿಕೊಳ್ಳುವದಕ್ಕೆ ಮುಂಚೆ ಆತನ ಕುಟುಂಬದ ಬಗ್ಗೆ ತಿಳಿಯುವದು ಅವಶ್ಯಕವಾದದ್ದು. ಆತನು ತನ್ನ ಮಕ್ಕಳನ್ನು ಅಧೀನದಲ್ಲಿಟ್ಟುಕೊಳ್ಳಲೂ ತನ್ನ ಸ್ವಂತ ಕುಟುಂಬದಲ್ಲಿ ತನ್ನ ಅಧಿಕಾರವನ್ನು ಸರಿಯಾಗಿ ಉಪಯೋಗಿಸಿಕೊಳ್ಳಲೂ ಆಗದಿದ್ದರೆ ಆತನು ಸಭೆಯಲ್ಲಿಯೂ ತನ್ನ ಅಧಿಕಾರವನ್ನು ಸರಿಯಾಗಿ ಉಪಯೋಗಿಸಿಕೊಳ್ಳಲಾರನು (ತೀತನು 1:6). ದೇವರು ಸಮರ್ಥನಾಯಕರಿಗೆ ಮೊದಲು ಚಿಕ್ಕ ಜವಾಬ್ದಾರಿಗಳನ್ನು– ಉದಾಹರಣೆ, ಅವರ ಕುಟುಂಬದ ಜವಾಬ್ದಾರಿ– ಕೊಡುವದರ ಮೂಲಕ ಪರೀಕ್ಷಿಸುತ್ತಾನೆ. ಒಂದು ವೇಳೆ ಅವರು ಚಿಕ್ಕ ಜವಾಬ್ದಾರಿಗಳನ್ನು– ಯಶಸ್ವಿಯಾಗಿ ನೆರವೇರಿಸುವದಾದರೆ ದೇವರು ನಂತರ ಅವರಿಗೆ ಇನ್ನು ಹೆಚ್ಚಾದ ಜವಾಬ್ದಾರಿಯನ್ನು –ಉದಾಹರಣೆಗೆ, ಸಭೆಯಲ್ಲಿ ನಾಯಕತ್ವವನ್ನು ಕೊಡುತ್ತಾನೆ (ಮತ್ತಾಯ 25 :21 ನೋಡಿರಿ).

6 ಹೊಸದಾಗಿ ಸಭೆಯಲ್ಲಿ ಸೇರಿದವನಿಗೆ, ಇತ್ತೀಚೆಗಷ್ಟೇ ಕ್ರೈಸ್ತನಾಗಿರುವವನಿಗೆ ನಾಯಕತ್ವವನ್ನು ನೀಡುವದು ಒಳ್ಳೇದಲ್ಲ ಎಲ್ಲಾ ಕ್ರೈಸ್ತರು ಮೊದಲು ಇತರರಿಗೆ ವಿನಯತೆಯಿಂದ ಅಧೀನರಾಗುವದಕ್ಕೆ ಕಲಿತು ಕೊಳ್ಳಬೇಕು. ಅನಂತರವಷ್ಟೆ ಅವರು ಸ್ವಂತ ಅಧಿಕಾರ ನಡೆಸಲು ಸಿದ್ಧರಾಗುವರು.

ಒಂದು ವೇಳೆ ಹೊಸದಾಗಿ ಸಭೆಯಲ್ಲಿ ಸೇರಿದವನು ಅತಿ ಶೀಘ್ರವಾಗಿ ನಾಯಕತ್ವದ ಸ್ಥಾನವನ್ನು ಪಡೆದುಕೊಳ್ಳುವದಾದರೆ, ಆತನು ಹೆಚ್ಚು ಕಡಿಮೆ ಯಾವಾಗಲೂ ಗರ್ವಿಷ್ಠನಾಗುವನು. ಆಗ ಆತನು ಗರ್ವದ[4] ಕಾರಣದಿಂದ ಸೈತಾನನಿಗೆ ಪ್ರಾಪ್ತವಾದ ಶಿಕ್ಷಾವಿಧಿಯನ್ನೇ ಪಡೆದುಕೊಳ್ಳುವನು.

7 ಸಭಾಧ್ಯಕ್ಷ ಅಥವಾ ಸಭಾಪಾಲಕನು ಸಭೆಯ ಹೊರಗಿನವರ ಮಧ್ಯದಲ್ಲಿಯೂ ಒಳ್ಳೇ ಹೆಸರನ್ನು ಹೊಂದಿರಬೇಕು. ಕ್ರೈಸ್ತ್ಯೇತರರು ಯಾವಾಗಲೂ ನಮ್ಮಲ್ಲಿ ದೋಷಗಳನ್ನು ಹುಡುಕುವವರಾಗಿದ್ದಾರೆ ಮತ್ತು ದೋಷಗಳು ಕಂಡುಬರುವಾಗ ಅವರು ಬಹುಬೇಗನೆ ದೋಷಾರೋಪಣೆ ಮಾಡುತ್ತಾರೆ. ಸಹೋದರರ ಮೇಲೆ ದೂರು ಹೇಳುವ ದೂರುಗಾರನು, ಸೈತಾನನು (ಪ್ರಕಟಣೆ 12:10), ಒಬ್ಬ ಕ್ರೈಸ್ತನಲ್ಲಿ– ವಿಶೇಷವಾಗಿ, ನಾಯಕನಲ್ಲಿ –ತಪ್ಪನ್ನು ಕಾಣುವಾಗಲೆಲ್ಲಾ ಆತನು ಆ ವ್ಯಕ್ತಿಯ ವಿರುದ್ಧವಾಗಿ ಗುಣಗುಟ್ಟುವಿಕೆ ಹಾಗೂ ಕೆಟ್ಟಮಾತುಗಳನ್ನು ಪ್ರಚೋದಿಸಲು ಪ್ರಾರಂಭಿಸುತ್ತಾನೆ; ಈ ವಿಧದಲ್ಲಿ ಆ ವ್ಯಕ್ತಿಯು ಸೈತಾನನ ಉರ್ಲಿನೊಳಗೆ ಸಿಕ್ಕಿಬೀಳುತ್ತಾನೆ. ಅಂಥ ಗುಣಗುಟ್ಟುವಿಕೆ ಮತ್ತು ನಿಂಧನೆ ಮಾತುಗಳು ಸಭೆಯ ಹೊರಗಿನವರೊಳಗೆ ಮಾತ್ರವೇ ಉದ್ಭವಿಸುವು ದಿಲ್ಲ; ದುಃಖಕರವೆಂದರೆ, ಅದು ಸಭೆಯೊಳಗೆ ಸಹ ಉದ್ಭವಿಸುತ್ತದೆ. ಇದು ಸೈತಾನನ ಅತಿದೊಡ್ಡ ಆಯುಧಗಳಲ್ಲಿ ಒಂದಾಗಿದೆಃ ಒಂದು ವೇಳೆ ಸೈತಾನನು ಕ್ರೈಸ್ತರನ್ನು ಅವರ ಸ್ವಂತ ನಾಯಕರ ವಿರುದ್ಧ ಗುಣಗುಟ್ಟುವಂತೆಯೂ ಕೆಟ್ಟಮಾತುಗಳನ್ನಾಡುವಂತೆಯೂ ಮಾಡುವದಕ್ಕೆ ಸಫಲನಾಗುವದಾದರೆ ಆತನು ಆ ನಾಯಕರ ಕೆಲಸ ಹಾಗೂ ಫಲಕಾರಿತನವನ್ನು ಮಾತ್ರವಲ್ಲದೆ ಸಭೆಯ ಕೆಲಸ ಹಾಗೂ ಫಲಭರಿತವನ್ನು ಸಹ ಹಾಳುಮಾಡಬಲ್ಲವನಾಗುತ್ತಾನೆ. ಈ ಕಾರಣದಿಂದಲೇ ಸಭಾನಾಯಕರು ದೋಷಾರೋಪಣೆಯಿಲ್ಲವರು ಆಗಿರುವದು ಬಹಳ ಪ್ರಾಮುಖ್ಯವಾಗಿರುತ್ತದೆ (ವಚನ2). ಸಾಧ್ಯವಾದಷ್ಟು ಮಟ್ಟಿಗೆ ನಾವು ಸೈತಾನನಿಗೆ ನಿಂಧನೆಗಳನ್ನು ಮಾಡುವದಕ್ಕೆ ಅವಕಾಶವನ್ನು ನೀಡಬಾರದು.

## ಸಭೆಯಲ್ಲಿನ ಇತರ ನಾಯಕರು (3: 8-16)

8 ಸಭಾಸೇವಕರು ಸಭೆಯ ನಾಯಕರಲ್ಲಿ ಎರಡನೆಯ ಮುಖ್ಯ ಗುಂಪಾಗಿದ್ದಾರೆ. ಅವರು ಮುಖ್ಯ ಕೆಲಸವು ಕೊರತೆಯಲ್ಲಿರುವವರಿಗೆ ಸಹಾಯಮಾಡುವದು ಸಭೆಯ ಸೊತ್ತು ಹಾಗೂ ಹಣಕಾಸಿನ ವ್ಯವಹಾರಗಳನ್ನು ನೋಡಿಕೊಳ್ಳುವದು ಆಗಿದೆ. ಈ ಸಂಗತಿಗಳನ್ನು ಮಾಡುವದರ ಮೂಲಕ ಸಭಾಸೇವಕರು ಸಭಾಧ್ಯಕ್ಷರನ್ನೂ ಹಿರಿಯರನ್ನೂ ಅವರ ಮುಖ್ಯ ಕೆಲಸದಲ್ಲಿ ಗಮನ ಹರಿಸುವಂತೆ ಮುಕ್ತಗೊಳಿಸುತ್ತಾರೆ, ಅದೇನೆಂದರೆ, ಪ್ರಾರ್ಥಿಸುವದು, ಬೋಧಿಸುವದು ಹಾಗೂ ಉಪದೇಶಿಸುವದು (ಅ.ಕೃತ್ಯ 6: 1-4 ನೋಡಿರಿ).

ಸಭಾಧ್ಯಕ್ಷರಂತೆಯೇ ಸಭಾಸೇವಕರು ಒಳ್ಳೇ ನಡತೆಯುಳ್ಳವರಾಗಿರಬೇಕು. ಅವರು ಸಭೆಯ ಹಣಕಾಸಿನ ಜವಾಬ್ದಾರಿಯನ್ನು ಹೊಂದಿರುತ್ತಾರಾದ್ದರಿಂದ ಅವರು ನೀಚಲಾಭವನ್ನು ಅಪೇಕ್ಷಿಸುವವರು ಆಗಿರಬಾರದು– ಯೂದನಂತಿರಬಾರದು, ಆತನು ಯೇಸು ಹಾಗೂ ಆತನ ಶಿಷ್ಯರ ಹಣವನ್ನು ನಿಭಾಯಿಸುತ್ತಿದ್ದನು (ಯೋಹಾನ 12:4-6).

9 ಸಭಾಪಾಲಕರು ಸಾಮಾನ್ಯವಾಗಿ ಬೋಧನೆಯ ಹಾಗೂ ಉಪದೇಶಗಳನ್ನು [5] ಮಾಡುವದಿಲ್ಲವಾದಾಗ್ಯೂ ಅವರು ಸತ್ಯನಂಬಿಕೆಯನ್ನು ಗಟ್ಟಿಯಾಗಿ ಹಿಡುಕೊಂಡಿರಬೇಕು. ಅವರು ನಂಬಿಕೆಯ ಆಳವಾದ ಸತ್ಯಗಳನ್ನು[6] ಕೈಕೊಳ್ಳುವವರಾಗಿರಬೇಕು. ಅವರು ಶುದ್ಧಮನಸಾಕ್ಷಿಯನ್ನು ಸಹ ಹೊಂದಿರಬೇಕು –ಅಂದರೆ, ಅವರ ಜೀವಿತದಲ್ಲಿ ಪಶ್ಚಾತ್ತಾಪ ಪಡದಿರುವ ಯಾವ ಪಾಪವೂ ಇರಬಾರದು (1 ತಿಮೊಥೆ 1:19ನೋಡಿರಿ).

10 ಕೆಲವು ಜನರು ಸಭಾಸೇವಕನ ಕೆಲಸವು ಅಷ್ಟೇನು ಪ್ರಾಮುಖ್ಯವಲ್ಲವಾದ್ದರಿಂದ ಯಾರು ಬೇಕಾದರೂ ಸಭಾಸೇವಕನಾಗಬಹುದು ಎಂದು ತಪ್ಪಾಗಿಯೋಚಿಸುತ್ತಾರೆ. ಆದರೆ ಅದು ಖಂಡಿತವಾಗಿಯೂ ಸತ್ಯವಲ್ಲ. ಒಬ್ಬ ಸಭಾಸೇವಕನ ಕೆಲವ ಅತ್ಯಂತ ಪ್ರಾಮುಖ್ಯವಾದ್ದು. ಯಾರನ್ನೇ ಆಗಲಿ ಸಭಾಸೇವಕನನ್ನಾಗಿ ನೇಮಕ ಮಾಡುವದಕ್ಕೆ ಮುಂಚೆ ಆತನು ಜಾಗರೂಕತೆಯಿಂದ ಪರೀಕ್ಷಿಸಲ್ಪಡಬೇಕು. ಆತನು ದೋಷರಹಿತನಾಗಿ ಕಂಡುಬಂದರೆ ಮಾತ್ರವೇ ನೇಮಿಸಲ್ಪಡಬೇಕು. ಈ ಪರೀಕ್ಷೆಯು ಸಭಿಕರಿಂದ ನಡಿಸಲ್ಪಡಬೇಕು (ಅ.ಕೃತ್ಯ 6:3ನೋಡಿರಿ). ಸಭಾಸೇವಕರು ಸಾಧಾರಣವಾಗಿ ಸಭಿಕರಿಂದ ಆರಿಸಲ್ಪಡುತ್ತಾರೆ; ಹೇಗಿದ್ದರೂ, ಸಭಾಪಾಲಕರು ಹಾಗೂ ಸಭಾಧ್ಯಕ್ಷರು ಸಾಧಾರಣವಾಗಿ ಇತರ ಸಭಾಧ್ಯಕ್ಷ ರಿಂದ ನೇಮಿಸಲ್ಪಡುತ್ತಾರೆ (ಅ.ಕೃತ್ಯ 14:23; ತೀತನು 1:5 ನೋಡಿರಿ).

11 ಈ ವಚನದಲ್ಲಿ ಪೌಲನು ಸಭಾಸೇವಕರ ಹೆಂಡತಿಯರನ್ನು ಪ್ರಸ್ತಾಪಿಸುತ್ತಾನೆ. ಹೇಗಿದ್ದರೂ, ಪೌಲನು ಇಲ್ಲಿ ಸಭಾಸೇವಕಿಯ ಕೆಲಸಕ್ಕೆ ಕರೆಯಲ್ಪಟ್ಟಿರುವ ಯಾವದೇ ಸ್ತ್ರೀಯನ್ನು ಸೂಚಿಸುತ್ತಿರುವ ಸಾಧ್ಯತೆಯೂ ಇದೆ; ಗ್ರೀಕ್ ಪ್ರತಿಯಲ್ಲಿ ಎರಡೂ ಅರ್ಥಗಳನ್ನು ಹೊಂದಿರಬಲ್ಲದು. ಯಾವ ವಿಧದಲ್ಲಿಯೂ ಸರಿಯೇ ಅಂಥ ಸ್ತ್ರೀಯರು ಸಹ ತಮ್ಮ ಪುರುಷ ಸೇವಕರಂತೆಯೇ ಗೌರವವುಳ್ಳವರಾಗಿರಬೇಕು. ವಿಶೇಷವಾಗಿ ಸಭಾಸೇವಕರ (ಮತ್ತು ಸಭಾಧ್ಯಕ್ಷರ) ಹೆಂಡತಿಯರು ಒಳ್ಳೇ ಗುಣವಂತೆಯರಾಗಿರಬೇಕು. ಅವರು ಚಾಡಿ ಹೇಳುವವರಾಗಿರಬಾರದು; ಬದಲಾಗಿ, ಅವರು ಸೌಮ್ಯವಾದವರೂ ಎಲ್ಲಾ ವಿಷಯಗಳಲ್ಲಿ ನಂಬಿಗಸ್ಥರಾಗಿಯೂ ಇರಬೇಕು. ಇಲ್ಲವಾದರೆ ಅವರು ತಮ್ಮ ಗಂಡಂದಿರಿಗೆ ಅವಮಾನವನ್ನು ತಂದು ಅವರ ಸೇವೆಗಳನ್ನು ಹಾಳುಮಾಡುವರು.

12 ವಚನ ಗಳು 2, 4-5 ಮತ್ತು ವ್ಯಾಖ್ಯಾನ ನೋಡಿರಿ.

13 ಸಭಾಧ್ಯಕ್ಷ ಕೆಲಸವು ಒಳ್ಳೇದಾಗಿರುವ ಪ್ರಕಾರವೇ (ವಚನ 1) ಸಭಾಸೇವಕನ ಕೆಲಸವೂ ಒಳ್ಳೆದೇ ಆಗಿರುತ್ತದೆ. ನಂಬಿಗಸ್ಥರಾಗಿ ಕೆಲಸ ಮಾಡುವ ಸಭಾಸೇವಕರು ತಮ್ಮ ನಂಬಿಗಸ್ಥಿಕೆಗೆ ಪ್ರತಿಫಲವನ್ನು ಹೊಂದುವರುಃ ಅದೇನೆಂದರೆ, ಪರಲೋಕರಾಜ್ಯದಲ್ಲಿ ಖಚಿತವಾದ ಸ್ಥಾನ ಹಾಗೂ ಪ್ರಭಾವವೆಂಬ ಜಯಮಾಲೆಯನ್ನು ಹೊಂದುವರು (1 ಪೇತ್ರ 5:1- 4). ಅವರು ಮನುಷ್ಯರ ದೃಷ್ಟಿಯಲ್ಲಿ ಒಳ್ಳೇ ಪದವಿಯನ್ನು ಹಾಗೂ ಅವರು ಕ್ರಿಸ್ತನಿಗೆ ಸಾಕ್ಷಿ ನೀಡುವಾಗ ನಂಬಿಕೆಯ ಸಂಬಂಧವಾಗಿ ಬಹು ಧೈರ್ಯವನ್ನೂ ಸಂಪಾದಿಸಿಕೊಳ್ಳುತ್ತಾರೆ.

14-15 ಸಭೆಯು ಚೆನ್ನಾಗಿ ಆಳಲ್ಪಡುವದು ಹಾಗೂ ನಾಯಕತ್ವದಲ್ಲಿರುವವರು ಒಳ್ಳೇ ಹೆಸರನ್ನು ಹೊಂದಿರುವದು ಅತಿ ಪ್ರಾಮುಖ್ಯವಾಗಿರುತ್ತದೆ. ಇದಕ್ಕೆ ಕಾರಣವೇನೆಂದರೆ ಸಭೆಯು ಯಾವುದೋ ಮೃತ ವಿಗ್ರಹದ ವಾಸಸ್ಥಳವಲ್ಲ; ಇದು ಜೀವಸ್ವರೂಪನಾದ ದೇವರ ಸಭೆ (ವಚನ 15). ಇದು ದೇವರ ಮನೆ (ಕುಟುಂಬ); ದೇವರು ತಾನೇ ಸಭೆಯಲ್ಲಿ ವಾಸಿಸುತ್ತಾನೆ (ಎಫೆಸ 2 :19-22 ನೋಡಿರಿ)

ಅಲ್ಲದೆ ಸಭೆಯು ಸತ್ಯದ ಸ್ತಂಭವೂ ಆಗಿದೆ. ಸಭೆಯು ಸತ್ಯವನ್ನು ಪ್ರಚುರ ಪಡಿಸುತ್ತದೆ ಮತ್ತು ಹೀಗೆ ಅದು ಮನುಷ್ಯರೊಳಗೆ ನ್ಯಾಯ ನೀತಿಗಳನ್ನು ಬೆಂಬಲಿಸುವ "ಸ್ತಂಭವಾಗಿ" ನಿಲ್ಲುತ್ತದೆ. ಸಭೆಯು ಸತ್ಯದ ಆಸ್ತಿವಾರವೂ ಆಗಿದೆ; ಅಂದರೆ, ಅದು ಸತ್ಯವನ್ನು ಕಾಪಾಡಿಕೊಂಡು ಸಂರಕ್ಷಿಸುತ್ತದೆ.

16 ಈ ವಚನದಲ್ಲಿ ಪೌಲನು ಕ್ರಿಸ್ತನನ್ನು ಸ್ತುತಿಸುವ ಒಂದು ಪದ್ಯ ಅಥವಾ ಕೀರ್ತನೆಯನ್ನು ಬರೆದಿರುತ್ತಾನೆ. ದೇವಭಕ್ತಿಗೆ ಆಧಾರವಾಗಿರುವ ಸತ್ಯಾರ್ಥವು ಸ್ವತಃ ಕ್ರಿಸ್ತನೇ ಕ್ರಿಸ್ತನು ಅವಿಶ್ವಾಸಿಗಳಿಗೆ ಮರೆಯಾಗಿರುವ "ಮರ್ಮ" ಆಗಿದ್ದಾನೆ. ಆದರೆ ನಂಬುವವರಿಗೆ ಪ್ರಕಟವಾಗಿರುತ್ತಾನೆ (ಕೊಲೊಸ್ಸೆ 1:26-27 ನೋಡಿರಿ).

ಕ್ರಿಸ್ತನು ಶರೀರಧಾರಿಯಾಗಿ ಪ್ರತ್ಯಕ್ಷನಾದನು (ಯೋಹಾನ 1:14 ನೋಡಿರಿ). ಆತನು ಆತ್ಮನಿಂದ ಕ್ರಿಸ್ತನೇ ಎಂದು ಸ್ಥಾಪಿಸಲ್ಪಟ್ಟನು; ಅಂದರೆ ಆತನು ಸತ್ತವರೊಳಗಿಂದ ಎದ್ದು ಬಂದಾಗ ದೇವಕುಮಾರನೆಂದು ತೋರಿಸಲ್ಪಟ್ಟನು (ರೋಮ 1:4). ಆತನು ದೇವದೂತರಿಗೆ ಕಾಣಿಸಿಕೊಂಡನು. ದೇವರು ಪುನರುತ್ಥಾನಗೊಂಡ ಕ್ರಿಸ್ತನನ್ನು ಪರಲೋಕದಲ್ಲಿರುವ ದೇವದೂತರೆಲ್ಲರಿಗೂ ತೋರ್ಪಡಿಸಿದನು (ಎಫೆಸ 3:10). ಆದರೆ ಕ್ರಿಸ್ತನು ಪರಲೋಕದಲ್ಲಿ ಮಾತ್ರವೇ ತೋರ್ಪಡಿಸಲ್ಪಟ್ಟಿರುವದಿಲ್ಲ. ಆತನು ಜನಾಂಗಗಳಲ್ಲಿ ಪ್ರಸಿದ್ಧಿಮಾಡಲ್ಪಟ್ಟನು. ಈ ಯೇಸು– ಒಬ್ಬ ಯೆಹೂದಿ ಬಡಗಿಯನೂ, ಅಪರಾಧಿಯಾಗಿ ಮರಣ ಶಿಕ್ಷೆಗೊಳಗಾದವನೂ– ಲೋಕದಲೆಲ್ಲಾ ಪ್ರಸಿದ್ಧಿಗೊಳಿಸಲ್ಪಟ್ಟವನಾಗಿದ್ದಾನೆ. ಭೂಮಿಯ ಮೇಲಿನ ಪ್ರತಿಯೊಂದು ರಾಷ್ಟ್ರದ ಪುರುಷ ಮತ್ತು ಸ್ತ್ರೀಯರು ಆತನಲ್ಲಿ ನಂಬಿಕೆಯಿಟ್ಟಿದ್ದಾರೆ. ಆತನು ಎಲ್ಲಾ ಕಾಲದ ಎಲ್ಲಾ ಜನರಿಗೂ ರಕ್ಷಕನಾಗಿದ್ದಾನೆ.

ಅಂತಿಮವಾಗಿ, ಯೇಸು ತನ್ನ ಭೂಲೋಕದ ಜೀವಿತದ ಅಂತ್ಯದಲ್ಲಿ ಪ್ರಭಾವಸ್ಥಾನದಲ್ಲಿ ಸೇರಿಸಲ್ಪಟ್ಟನು. ಮತ್ತು ಈಗ ಆತನು ಸ್ವಂತ ದೇವರ ಬಲಗಡೆಯಲ್ಲಿ ಕುಳಿತುಕೊಂಡಿದ್ದಾನೆ (ಎಫೆಸ 1:20-21).

## ಅಧ್ಯಾಯ - 4

### ಸುಳ್ಳು ಬೋಧಕರ ಕುರಿತಾಗಿ (4 :1-5)

1 ಎಲ್ಲಾ ಸುಳ್ಳುಬೋಧನೆಯು ಸೈತಾನ ಹಾಗೂ ಆತನು ದೆವ್ವಗಳಿಂದ (ದುರಾತ್ಮಗಳಿಂದ) ಬರುತ್ತದೆ. ಸೈತಾನನು ಸುಳ್ಳುಗಳಿಗೆ ತಂದೆಯಾಗಿದ್ದಾನೆ (ಯೋಹಾನ 8:44). ಜನರು ಸುಳ್ಳುಬೋಧನೆಯಿಂದ ವಂಚಿಸಲ್ಪಡುವದೇ ಅದರಲ್ಲಿನ ಮುಖ್ಯ ಅಪಾಯವಾಗಿದೆ. ಇಲ್ಲಿ ಪೌಲನು ಸೈತಾನನ ದೆವ್ವಗಳನ್ನು ವಂಚಿಸುವ ಆತ್ಮಗಳು ಎಂದು ಕರೆಯುತ್ತಾನೆ. ಅವು ಗಳ ಬೋಧನೆಯು ಸತ್ಯವೆಂಬಂತೆ ತೋರುತ್ತದೆ. ಆದ್ದರಿಂದ ಜನರು ವಂಚನೆಗೊಳಗಾಗಿ ಅದನ್ನು ಅನುಸರಿಸುತ್ತಾರೆ (2 ತಿಮೊಥೆ 2:17-18 ಮತ್ತು ವ್ಯಾಖ್ಯಾನ ನೋಡಿರಿ).

ಇಲ್ಲಿ ಪ್ರಸ್ತಾಪಿಸಲಾಗಿರುವ ಮುಂದಣದಿನಗಳು ಪೌಲನ ಕಾಲದ ನಂತರ ಬರುವ ದಿನಗಳಾಗಿವೆ. ತಿಮೊಥೆಯನ ಕಾಲದಿಂದ ಇಂದಿನ ಸಮಯದವರೆಗೂ ಸುಳ್ಳುಬೋಧಕರು ಹಾಗೂ ಸುಳ್ಳು ಪ್ರವಾದಿಗಳು ಕ್ರೈಸ್ತರನ್ನು ವಂಚಿಸುವದಕ್ಕೂ ಮಾರ್ಗತಪ್ಪಿಸುವದಕ್ಕೂ ಪ್ರಯತ್ನಿಸುತ್ತಿದ್ದಾರೆ. ಯೇಸು ತಾನೇ ಇದು ಸಂಭವಿಸುವದೆಂದು ಸ್ಪಷ್ಟವಾಗಿ ಎಚ್ಚರಿಸಿಧನು (ಮಾರ್ಕ 13;22). ಹೊಸ ಒಡಂಬಡಿಕೆಯ ಇತರ ವಚನಗಳಲ್ಲಿಯೂ ಸುಳ್ಳುಬೋಧಕರ ವಿಷಯದಲ್ಲಿ ನಮಗೆ ಎಚ್ಚರಿಸಲಾಗಿದೆ (ಅ.ಕೃತ್ಯ 20:29-31; 1 ಯೋಹಾನ 4:1-3).

2 1ನೇ ವಚನದಲ್ಲಿ ಪ್ರಸ್ತಾಪಿಸಿರುವ ವಂಚಿಸುವ ಆತ್ಮಗಳು ಮಾನುಷ ಬೋಧಕರ ಮೂಲಕ ಬೋಧಿಸುತ್ತವೆ; ಪೌಲನು ಇಲ್ಲ ಅಂಥ ಬೋಧಕರನ್ನು ಕಪಟತನವು ಳ್ಳ ಸುಳ್ಳುಗಾರರು ಎಂದು ಕರೆಯುತ್ತಾನೆ. ಅಂಥ ಮನುಷ್ಯರು ಶುದ್ಧ ಮನಸಾಕ್ಷಿಗಳನ್ನು ಹೊಂದಿರುವದಿಲ್ಲ. ಬದಲಾಗಿ, ಅವರ ಮನಸ್ಸುಗಳು ಸುಡುವ ಲೋಹದಿಂದಲೋ ಎಂಬಂತೆ ಬರೆಯುಳ್ಳವು ಗಳು ಆಗಿವೆ. ಸುಡುವ ಲೋಹವು ಚರ್ಮವನ್ನು ತಾಕುವಾಗ ಅತ್ಯಧಿಕ ನೋವು ಉಂಟಾಗುತ್ತದೆ. ಆದರೆ ಸ್ವಲ್ಪ ಸಮಯನಂತರ ನೋವು ಕಡಿಮೆಯಾಗುತ್ತದೆ, ಯಾಕೆಂದರೆ ನೋವಿನ ನರಗಳು ಬಿಸಿಯಿಂದಾಗಿ ಹಾಳಾಗಿರುತ್ತವೆ. ಅಂತ್ಯದಲ್ಲಿ ಸುಡುವ ಲೋಹವು ಯಾವ ನೋವನ್ನೂ ಉಂಟುಮಾಡುವದಿಲ್ಲ. ನಮ್ಮ ಮನಸಾಕ್ಷಿಗಳು ಒಂದು ವಿಧದಲ್ಲಿ ಚರ್ಮದಂತೆ ಇರುತ್ತವೆ. ಮೊದಮೊದಲಲ್ಲಿ ನಮ್ಮ ಮನಸಾಕ್ಷಿಯು ಪ್ರತಿಯೊಂದು ಪಾಪವನ್ನು ವಿವೇಚಿಸಲು ಹಾಗೂ "ತಿಳಿಯಲು" ಶಕ್ತವಾಗಿರಬಲ್ಲದು. ಆದರೆ ಯಾವದಾದರೂ ಪಾಪ ನಮ್ಮಲ್ಲಿ ಸ್ವಲ್ಪ ಕಾಲ ಉಳಿಯುವದಾದರೆ ನಮ್ಮ ಮನಸಾಕ್ಷಿಯು ಕ್ರಮೇಣವಾಗಿ ಆ ಪಾಪದ "ಸ್ಪರ್ಶವನ್ನು" (ತಿಳಿಯುವದನ್ನು) ನಿಲ್ಲಿಸಿಬಿಡುತ್ತದೆ. ಕಾಲಕ್ರಮೇಣವಾಗಿ ನಮ್ಮ ಮನಸಾಕ್ಷಿಯು ಯಾವ ಸ್ಪರ್ಶವನ್ನು ಹೊಂಡಿರುವದಿಲ್ಲ; ಅದು ನಾಶವಾಗಿರುತ್ತದೆ– ಬರೆಯುಳ್ಳದ್ದಾಗಿರುತ್ತದೆ. ಯಾವಾಗ ಈ ಸ್ಥಿತಿಯು ಸಂಭವಿಸುತ್ತದೋ ಆಗ ಮನುಷ್ಯನು ಸರಿತಪ್ಪುಗಳ ವ್ಯತ್ಯಾಸವನ್ನು ಗುರುತಿಸಲಾರನು– ಮತ್ತು ಇನ್ನು ಮೇಲೆ ಆದರ ಚಿಂತೆಯನ್ನು ಮಾಡುವದಿಲ್ಲ ಹೀಗೆ ಆತನು ಪಾಪದಲ್ಲಿ ಹೆಚ್ಚು ಆಳದಿಂದ ಆಳಕ್ಕೆ ಹೋಗುತ್ತಾನೆ.

3 ಒಬ್ಬನು ದೇವರ ದೃಷ್ಟಿಯಲ್ಲಿ ಸ್ವೀಕೃತನಾಗಿರಬೇಕಾದರೆ ವಿವಾಹಮಾಡಿಕೊಳ್ಳಬೇಕು ಅಥವಾ ಕೆಲವೊಂದು ಆಹಾರಗಳನ್ನು ತಿನ್ನಬೇಕು ಎಂಬದಾಗಿ ಸುಳ್ಳುಬೋಧಕರು ಬೋಧಿಸುತ್ತಿದ್ದರು. ಆದರೆ ಈ ಬೋಧನೆಯು ಸಂಪೂರ್ಣಸುಳ್ಳಾಗಿದೆ. ಎಲ್ಲಕ್ಕಿಂತ ಮೊದಲು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕವೇ ಮನುಷ್ಯನು ದೇವರಿಗೆ ಸ್ವೀಕೃತವಾಗುತ್ತಾನೆ. ಎರಡನೆಯದಾಗಿ, ಮದುವೆ, ಆಹಾರಗಳು ನಮ್ಮ ಪ್ರಯೋಜನಕ್ಕಾಗಿ ದೇವರಿಂದ ನಮಗೆ ಕೊಡಲ್ಪಟ್ಟಿರುತ್ತವೆ ನಾವು ಈ ವರಗಳನ್ನು ಕೃತಜ್ಞತಾಸ್ತುತಿಯೊಂದಿಗೆ ಸ್ವೀಕರಿಸಿ ಅನುಭವಿಸುವದು ಯುಕ್ತವಾಗಿರುತ್ತದೆ. ದೇವರು ಈ ಸಂಗತಿಗಳನ್ನು ಎಲ್ಲಾ ಮನುಷ್ಯರಿಗಾಗಿ ನಿರ್ಮಿಸಿದ್ದಾನೆ. ಆದದರಿಂದ, ದೇವರ ಮಕ್ಕಳು ಯಾರು ನಂಬವವರಾಗಿದ್ದು ಸತ್ಯವನ್ನು ಗ್ರಹಿಸಿದ್ದಾರೋ[7] ಅವರು– ನ್ಯಾಯವಾಗಿಯೇ ಅವು ಗಳಲ್ಲಿ ಪಾಲುಗಾರರಾಗಬಹುದು.

4 ಆದರೆ ನಾವು ಕೃತಕ್ಷತಾಸ್ತುತಿಯೊಂದಿಗೆ, ಎಲ್ಲಾ ಸಂಗತಿಗಳಿಗೂ ದೇವರೇ ಸೃಷ್ಟಿ ಕರ್ತನೆಂಬದನ್ನು ನೆನಪಿನಲ್ಲಿಟ್ಟುಕೊಂಡು ದೇವರ ವರಗಳಲ್ಲಿ ಪಾಲು ಹೊಂದಬೇಕು. ದೇವರಿಂದ ಸೃಷ್ಟಿಸಲ್ಪಟ್ಟದೆಲ್ಲವೂ ಶುದ್ಧ ಹಾಗೂ ಒಳ್ಳೆಯದಾಗಿದೆ (ಮಾರ್ಕ 7:18- 19; ರೋಮ 14:14 ನೋಡಿರಿ).

5 ಕ್ರೈಸ್ತರು ಏನೇ ಮಾಡಿದರೂ ಕೃತಜ್ಞತಾಸ್ತುತಿಯೊಂದಿಗೆ, (ವಚನ 4), ಮತ್ತು ದೇವರ ವಾಕ್ಯ ಹೇಳಿ ಮತ್ತು ಪ್ರಾರ್ಥನೆಯೊಂದಿಗೆ ಮಾಡತಕ್ಕದ್ದು. ದೇವರ ವಾಕ್ಯವು ನಮ್ಮನ್ನು ಎಲ್ಲಾ ಸಂಗತಿಗಳನ್ನೂ ಶುಚಿಮಾಡುತ್ತದೆ (ಯೋಹಾನ 15:3). ನಾವು ಏನೇ ಮಾಡಿದರೂ (ಪಾಪವನ್ನು ಹೊರತು ಪಡಿಸಿ), ಏನೇ ತಿಂದರೂ ಅದೆಲ್ಲವೂ ಪ್ರಾರ್ಥನೆ ಹಾಗೂ ದೇವರವಾಕ್ಯದಿಂದ ಪವಿತ್ರವಾಗುತ್ತದೆ ಅಥವಾ ಶುಚಿಗೊಳ್ಳುತ್ತದೆ. ಇದು ಕ್ರೈಸ್ತರು ಊಟಮಾಡುವ ಮುಂಚೆ ಪ್ರಾರ್ಥಿಸುವದಕ್ಕೆ ಒಂದು ಕಾರಣವಾಗಿದೆ [8]. ಪೌಲನ ಕಾಲದಲ್ಲಿ ಕ್ರೈಸ್ತರು ಊಟಮಾಡುವ ಮುಂಚೆ ಹಳೆ ಒಡಂಬಡಿಕೆಯ ವಾಕ್ಯವನ್ನು ಸಹ ಓದುತ್ತಿದ್ದರೆಂದು ಕೆಲವು ಪಂಡಿತರು ಹೇಳುತ್ತಾರೆ.

### ತಿಮೊಥೆಯನಿಗೆ ಸಲಹೆಗಳು (4:6-16).

6 ತಿಮೊಥೆಯನು ಈ ಸುಳ್ಳುಬೋಧಕರ ವಿಷಯದಲ್ಲಿ ಸಹೋದರರಿಗೆ (ವಿಶ್ವಾಸಿಗಳಿಗೆ)ಎಚ್ಚರಿಸುದಾದರೆ ಹಾಗೂ ಸತ್ಯವನ್ನು ನಂಬಿಗಸ್ಥನಾಗಿ ಬೋಧಿಸುವವನಾದರೆ ಆತನು ಕ್ರಿಸ್ತ ಯೇಸುವಿನ ಒಳ್ಳೇ ಸೇವಕನಾಗುವನು. ಸುಳ್ಳುಬೋಧನೆಯನ್ನು ಖಂಡಿಸುವದಷ್ಟೇ ಸಾಲದು; ಸತ್ಯವನ್ನು ಸ್ಪಷ್ಟವಾಗಿಯೂ ಕಡ್ಡಾಯವಾಗಿಯೂ ಬೋಧಿಸುವದು ಸಹ ಅವಶ್ಯಕವಾದದ್ದು.

ಪೌಲನು ಇಲ್ಲಿ ತಿಮೊಥೆಯನನ್ನು ಸೇವಕ ಎಂದು ಕರೆಯುತ್ತಾನೆ. ಇಂದು ಅನೇಕ ಸಭೆಗಳಲ್ಲಿ ಸಭಾಪಾಲಕನು "ಸೇವಕ" ಎಂದು ಕರೆಯಲ್ಪಡುತ್ತಾನೆ, ಅದರ ಅರ್ಥವು ದಾಸನು ಎಂದಾಗಿರುತ್ತದೆ. ಇದು ಸಮಂಜಸವಾದದ್ದು ಯಾಕೆಂದರೆ ಸ್ವತಃ ಯೇಸುವೇ ಒಬ್ಬನು ನಾಯಕನಾಗಿರಬೇಕಾದರೆ ಮೊದಲು ಸೇವಕನಾಗಿರಬೇಕೆಂದೆ ಬೋಧಿಸಿದನು. (ಮಾರ್ಕ 10:43-45 ನೋಡಿರಿ). ಎಲ್ಲಾ ನಿಜವಾದ ಕ್ರೈಸ್ತನಾಯಕರು ತಮ್ಮ ಅಧೀನದಲ್ಲಿರುವ ಜನರ ಸೇವಕರಾಗಿದ್ದಾರೆ.

**7- 8** ಪೌಲನು 7ನೇ ವಚನದಲ್ಲಿ ಸುಳ್ಳುಬೋಧನೆಯನ್ನು ಅಜ್ಜೀ ಕಥೆಗಳಂತಿರುವ ಕೇವಲ ಪ್ರಾಪಂಚಿಕವಾದ ಕಥೆಗಳು ಎಂದು ಕರೆಯುತ್ತಾನೆ (1 ತಿಮೊಥೆ 1:3-4 ನೋಡಿರಿ). ಈ ಸುಳ್ಳುಬೋಧನೆಗಳು ಅಜ್ಞಾನಿ ಹಾಗೂ ಅವಿಶ್ವಾಸಿಗಳಾದ ಸ್ತ್ರೀಯರು ಕೇಳುವದಕ್ಕೆ ಇಷ್ಟಪಡುವ ಕಥೆಗಳಿಗಿಂತಲೂ ಅಂತೆಕಂತೆ ಮಾತುಗಳಂತೆಯೂ ಇರುತ್ತವೆ. ತಿಮೊಥೆಯನು ಅಂಥ ಬೋಧನೆಯನ್ನೆಲ್ಲಾ ತಳ್ಳಿಬಿಡಬೇಕು.

ಬದಲಾಗಿ, ತಿಮೊಥೆಯನು ತಾನು ಬೆಳೆದುಬಂದ ಕ್ರಿಸ್ತನಂಬಿಕೆಯ ಸತ್ಯಗಳಲ್ಲಿ ಗಮನಹರಿಸಬೇಕು (ವಚನ 6). ಆತನು ಈ ಸತ್ಯಗಳನ್ನು ಇತರರಿಗೆ ಬೋಧಿಸುವದು ತನ್ನನ್ನು ದೇವಭಕ್ತಿಯ ವಿಷಯದಲ್ಲಿ ತರಬೇತಿಗೊಳಿಸಿಕೊಳ್ಳಬೇಕು (ವಚನ 7). ಕ್ರೈಸ್ತರಿಗೆ ಆತ್ಮೀಕ ತರಬೇತಿ ಹಾಗೂ ಸಾಧನೆ ಅಗತ್ಯವಾಗಿರುತ್ತದೆ. ಕ್ರಿಸ್ತನನ್ನು ಹಿಂಬಾಲಿಸುವದು ವಿರಾಮ ಕಾಲದ ವಿಹಾರಯಾನವಲ್ಲ! ಕೆಲವು ವೇಳೆಗಳಲ್ಲಿ ನಮ್ಮ ಕ್ರೈಸ್ತ ಜೀವಿತವು ಒಂದು ಸೇನಾಯುದ್ಧದಂತಿರುತ್ತದೆ; ಇನ್ನೂ ಕೆಲವು ಸಮಯಗಳಲ್ಲಿ ಅದು ಒಂದು ಓಟದಂತೆ ಇರುತ್ತದೆ. (1 ಕೊರಿಂಥ 9:24-27; 2 ತಿಮೊಥೆ 4:7ನೋಡಿರಿ). ದೈಹೀಕ ಸಾಧನೆಯು (ತರಬೇತಿಯು) ನಮ್ಮ ದೇಹಗಳನ್ನು ಆರೋಗ್ಯಕರವಾಗಿ ಮಾಡುವದಾದರೆ ಆತ್ಮೀಕವಾಗಿ ದೇವಭಕ್ತಿಯಲ್ಲಿ ಸಾಧನೆಮಾಡಿಕೊಳ್ಳುವದು ನಮ್ಮನ್ನು ದೇಹ, ಪ್ರಾಣ, ಆತ್ಮಗಳಲ್ಲಿ –ಈ ಜೀವಿತದಲ್ಲಿಯೂ ಮುಂದಿನ ಜೀವಿತದಲ್ಲಿಯೂ – ಸಂಪೂರ್ಣ ಆರೋಗ್ಯಕರವಾಗಿ ಮಾಡುತ್ತವೆ.

**9- 10** ಪೌಲನು ಇಲ್ಲಿ ತಿಮೊಥೆಯನಿಗೆ ಕ್ರೈಸ್ತರು ತಮ್ಮ ನಿರೀಕ್ಷೆಯನ್ನು ಪುರಾಣಗಳು ಹಾಗೂ ಅಜ್ಜಿಕಥೆಗಳಲ್ಲಲ್ಲ (ವಚನ 7). ಆದರೆ ಜೀವವುಳ್ಳದೇವರ ಮೇಲೆ ಇಟ್ಟಿರುತ್ತಾರೆ. ಆ ನಿರೀಕ್ಷೆಯ ಕಾರಣದಿಂದಲೇ ನಾವು ಕಷ್ಟಪಡುತ್ತೇವೆ ಹೋರಾಡುತ್ತೇವೆ.

ಇಲ್ಲಿ ಪೌಲನು ಪುನಃ ದೇವರನ್ನು ರಕ್ಷಕನು ಎಂದು ಕರೆಯುತ್ತಾನೆ (1 ತಿಮೊಥೆ 1:1; 2:3ನೋಡಿರಿ). ಹೇಗಿದ್ದರೂ, ಈ ವಚನದಲ್ಲಿ ಅರ್ಥವು ವ್ಯತ್ಯಾಸವಾಗಿರುತ್ತದೆ. ಇಲ್ಲಿ "ರಕ್ಷಕನು" ಎಂದರೆ ಎಲ್ಲಾ ಜೀವವುಳ್ಳ ಸಂಗತಿಗಳ ಸಂರಕ್ಷಕನು ಹಾಗೂ ಪರಾಂಭರಿಸುವನು ಎಂಬ ಅರ್ಥವಾಗಿರುತ್ತದೆ (ಮತ್ತಾಯ 5 :45; 6:26). ಆದರೆ ವಿಶ್ವಾಸಿಗಳ ವಿಷಯದಲ್ಲಾದರೋ ದೇವರು ಅವರನ್ನು ದೈಹೀಕವಾಗಿ ಸಂರಕ್ಷಿಸಿ ಪರಾಂಭರಿಸುವದು ಮಾತ್ರವಲ್ಲದೆ ಅವರಿಗೆ ಸದಾಕಾಲವೂ ಇರುವ ಆತ್ಮೀಕ ಜೀವವನ್ನು ನೀಡುತ್ತಾನೆ.

**11-12** ಪ್ರತಿಯೊಂದು ಪೀಳಿಗೆಯಲ್ಲಿಯೂ ಹಿರಿಯರು ಯುವಜನರನ್ನು ಉದಾಸೀನವಾಗಿ ನೋಡುವವರಗಿರುತ್ತಾರೆ. ಯುವಕರಿಗೆ ಗೌರವ ನೀಡಲ್ಪಡುವದಿಲ್ಲ. ಆದರೆ ಕ್ರೈಸ್ತರೊಳಗೆ ಇದು ಸಂಭವಿಸದಿರಲಿ ಎಂದು ಪೌಲನು ಹೇಳುತ್ತಾನೆ. ತಿಮೊಥೆಯನು ತನ್ನ ಒಳ್ಳೇ ಜೀವನ ಹಾಗೂ ಮಾದರಿಯ ಮೂಲಕ ಹಿರಿಯರ ಗೌರವವನ್ನು ಗಳಿಸಿಕೊಳ್ಳಲಿ.

ತಿಮೊಥೆಯನು ಐದು ಕ್ಷೇತ್ರಗಳಲ್ಲಿ ಒಳ್ಳೇ ಮಾದರಿಯನ್ನು ತೋರಬೇಕಾಗಿರುತ್ತದೆಃ ನಡೆ, ನುಡಿ, ಪ್ರೀತಿ, ನಂಬಿಕೆ, ಹಾಗು ಶುದ್ಧತ್ವ ಇವುಗಳಲ್ಲಿ (ವಚನ 12). ಸಭೆಯಲ್ಲಿ ನಾಯಕತ್ವವು ಒಬ್ಬ ವ್ಯಕ್ತಿಗೆ ಆತನ ವಯಸ್ಸಿಗನುಸಾರವಾಗಿ ಅಲ್ಲ ಆದರೆ ಈ ಐದು ಕ್ಷೇತ್ರಗಳಲ್ಲಿನ ಆತನ ನಡತೆಯ ಗುಣಮಟ್ಟಕ್ಕೆ ಅನುಸಾರಾಗಿ ಕೊಡಲ್ಪಡುತ್ತದೆ. ನಾಯಕತ್ವಕ್ಕಾಗಿ ಹಾರೈಸುವ ಯಾವದೇ ಯೌವನಸ್ಥನು ಮೊದಲು ತನ್ನನ್ನು ಈ ಐದು ಕ್ಷೇತ್ರಗಳಲ್ಲಿ ತನ್ನನ್ನು ಪರೀಕ್ಷೆಮಾಡಿಕೊಳ್ಳಲಿ.

ಪೌಲನು ತಿಮೊಥೆಯನನ್ನು ಪ್ರಬೋದಿಸುವದಷ್ಟೆ ಅಲ್ಲದೆ ಆತನನ್ನು ಧೈರ್ಯಪಡಿಸುತ್ತಾನೆ. ಪೌಲನು ಅವನಿಗೆ ಹೇಳುವದೇನೆಂದರೆಃ ಯೌವನಸ್ಥನೆಂದು ನಿನ್ನನ್ನು ಅಸಡ್ಡೆಮಾಡುವದಕ್ಕೆ ಅವಕಾಶಕೊಡಬೇಡ. ತಿಮೊಥೆಯನು ಅಂಜಿಕೆಯ ಸ್ವಭಾವದವನಾಗಿದ್ದನು; ಆತನಿಗೆ ಪ್ರೋತ್ಸಾಹ ಹಾಗೂ ಬೆಂಬಲ ಅಗತ್ಯವಾಗಿದೆಯೆಂಬುದು ಪೌಲನಿಗೆ ಗೊತ್ತಿತ್ತು (1 ಕೊರಿಂಥ 16; 10-11 ನೋಡಿರಿ).

**13** ಪೌಲನು ಇಲ್ಲಿ ಸಭಾಧ್ಯಕ್ಷನ ಅಥವಾ ಸಭಾಪಾಲಕನ ಉದ್ಯೋಗದ ಮೂರು ಪ್ರಾಮುಖ್ಯಭಾಗಗಳನ್ನು ಬಣ್ಣಿಸುತ್ತಾನೆಃ ಮೊದಲನೆಯದಾಗಿ, ವೇದಪಾರಾಯಣ ಅದು ಪೌಲನ ಕಾಲದಲ್ಲಿ ಹಳೆ ಒಡಂಬಡಿಕೆಯಾಗಿತ್ತು. (ಹೊಸ ಒಡಂಬಡಿಕೆಯು ಇನ್ನೂ ಬರೆಯಲ್ಪಟ್ಟಿರಲಿಲ್ಲ). ಎರಡನೆಯದಾಗಿ, ಪ್ರಸಂಗ –ಅಂದರೆ, ಹಳೆ ಒಡಂಬಡಿಕೆಯ ಪಾರಾಯಣದ ಮೇಲೆ ಸಂದೇಶವನ್ನು ನೀಡುವದು; ಮತ್ತು ಮೂರನೆಯದಾಗಿ, ಕ್ರೈಸ್ತೀಯ ಸಿದ್ಧಾಂತಗಳ ಉಪದೇಶವನ್ನು ಮಾಡುವದು. ಈ ಚಟುವಟಿಕೆಗಳಲ್ಲಿನ ಮೊದಲು ಎರಡು ಕಾರ್ಯಗಳು ಪೌಲನ ಕಾಲದಲ್ಲಿ ಪ್ರತಿ ಸಬ್ಬತ್ ದಿನದಂದು (ಶನಿವಾರದಂದು) ಯೆಹೂದ್ಯಸಭಾಮಂದಿರಗಳಲ್ಲಿ ಜರುಗುತ್ತಿದ್ದವು , ಈ ಪದ್ಧತಿಯನ್ನು ಹೊಸಕ್ರೈಸ್ತಸಭೆಗಳು ಸಹ ಅನುಸರಿಸುತ್ತಿದ್ದವು (ಲೂಕ 4:16-21; ಅ.ಕೃತ್ಯ 13:14-15). ಆದರೆ ಉಪದೇಶ ಮಾಡುವ ಮೂರನೆಯ ಚಟುವಟಿಕೆಯು ಕ್ರೈಸ್ತ ಆರಾಧನಾ ಕೂಟಗಳ ಒಂದು ನೂತನ ಹಾಗೂ ವಿಭಿನ್ನವಾದ ಲಕ್ಷಣವಾಯಿತು.

ಪೌಲನು ತಿಮೊಥೆಯನಿಗೆ ಈ ಚಟುವಟಿಕೆಗಳಲ್ಲಿ ಆಸಕ್ತನಾಗಿರು ಎಂದು ಸಲಹೆ ನೀಡುತ್ತಾನೆ; ಅಂದರೆ, ತಿಮೊಥೆಯನು ಈ ಚಟುವಟಿಕೆಗಳಿಗೆ "ತನ್ನನ್ನು ಒಪ್ಪಿಸಿ"ಕೊಡಬೇಕು. ಒಬ್ಬ ಸಭಾಪಾಲಕ ಅಥವಾ ಇತರ ಸಭಾನಾಯಕನು ತನ್ನನ್ನು ಕ್ರಿಸ್ತನ ಹಾಗೂ ಸಭೆಯ ಸೇವೆಗೆ ಸಂಪೂರ್ಣವಾಗಿ ಒಪ್ಪಿಸಿಕೊಡಬೇಕು (ವಚನ 15 ನೋಡಿರಿ).

**14** ತಿಮೊಥೆಯನಿಗೆ ಒಂದು ವರವು ಕೊಡಲ್ಪಟ್ಟಿತ್ತು, ಅದು ಬೋಧನೆ, ಉಪದೇಶ ಹಾಗೂ ನಡೆಸುವಿಕೆಯ ವರವಾಗಿತ್ತು. ವರವು ದೇವರಿಂದ ಉಚಿತವಾಗಿ ಕೊಡಲ್ಪಟ್ಟಿತ್ತಾದರೂ ತಿಮೊಥೆಯನು ಈಗ ಅದನ್ನು ತೆಗೆದುಕೊಂಡು ಉಪಯೋಗಿಸಬೇಕು (2 ತಿಮೊಥೆ 1:6). ದೇವರು ನಮಗೆ ನೀಡಿರುವ ವರಗಳನ್ನು ಉಪಯೋಗಿಸದಿದ್ದರೆ ಅವುಗಳು ಯಾವ ಫಲವನ್ನೂ ಉಂಟುಮಾಡುವದಿಲ್ಲ (ಮತ್ತಾಯ 25:14 -18ನೋಡಿರಿ).

ತಿಮೊಥೆಯನು ಮೊದಲು ಸಭೆಯಲ್ಲಿ ಸೇವೆಗಾಗಿ ಕರೆಯಲ್ಪಟ್ಟ ವೇಳೆಯಲ್ಲಿ ಆತನ ಕುರಿತು ಪ್ರವಾಧನೆಗಳು ನುಡಿಯಲ್ಪಟ್ಟವು (1 ತಿಮೊಥೆ 1:18ನೋಡಿರಿ). ಆ ಸಂದರ್ಭದಲ್ಲಿ ಹಿರಿಯರು ಆತನ ಮೇಲೆ ತಮ್ಮ ಕೈಗಳ ನಿಟ್ಟು ಆತನನ್ನು ನಾಯಕನನ್ನಾಗಿ ನೇಮಕಮಾಡಿದರು (ಅ.ಕೃತ್ಯ 6:6; 13:1-3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**15- 16** ಈಗ ತಿಮೊಥೆಯನು ಹೇಗೆ ತನ್ನ ವರವನ್ನು ಪೋಷಿಸಿ ಅಭಿವೃದ್ಧಿಪಡಿಸಿಕೊಳ್ಳಬೇಕೆಂಬದನ್ನು ಪೌಲನು ತಿಳಿಸುತ್ತಾನೆ. ತಿಮೊಥೆಯನು ತನ್ನ ವರವನ್ನು ಉಪಯೋಗಿಸುವುದರಲ್ಲಿ ಎಚ್ಚರಿಕೆಯಾಗಿರಬೇಕು (1 ಪೇತ್ರ 1:10). ಆತನು ವೇದ ಪಾರಾಯಣ, ಪ್ರಸಂಗವನ್ನೂ, ಉಪದೇಶವನ್ನೂ ಮಾಡುವದರಲ್ಲಿ (ವಚನ 13) ಮತ್ತು ದೇವಭಕ್ತನಾಗಿರುವ ವಿಷಯದಲ್ಲಿ (ವಚನ 7) ಆತನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿರಬೇಕು. ಆತನು ನಾಯಕನಾಗಿದ್ದಾಗ್ಯು ಆತನ ಕ್ರೈಸ್ತೀಯ ಜೀವಿತದಲ್ಲಿ ಇತರರಿಗೆ ಕಂಡುಬರುವಂತೆ ಅಭಿವೃದ್ಧಿ ಇರತಕ್ಕದ್ದು (ವಚನ 15) ತಿಮೊಥೆಯನು ಬೋದನೆಯಲ್ಲಿ ಪರಿಣಿತನಾಗಿರುವದು ಮಾತ್ರವಲ್ಲದೆ ಆತನ ಗುಣ ಲಕ್ಷಣಗಳು ಹಾಗೂ ನಡವಳಿಕೆಯ ಆತನ ಬೋಧನೆಗೆ ಸರಿಹೊಂದುವಂತಿರಬೇಕು.

ಪೌಲನು ತಿಮೊಥೆಯನಿಗೆ ನಿನ್ನ ಜೀವಿತವನ್ನು ಉಪದೇಶವನ್ನೂ (ಸಿದ್ಧಾಂತವನ್ನು) ಗಮನಿಸು ಎಂದು ಹೇಳುತ್ತಾನೆ. (1 ಥೆಸಲೋನಿಕ 5:6; 1 ಪೇತ್ರ 5 :8 ನೋಡಿರಿ). ಅವುಗಳನ್ನು ಸಂರಕ್ಷಿಸು; ಅಂದರೆ, ನಂಬಿಕೆಯಲ್ಲಿ ದೃಢವಾಗಿ ನಿಂತುಕೊ (1 ಕೊರಿಂಥ 15;58; 16:13; ಗಲಾತ್ಯ 6;9; 2 ಥೆಸಲೋನಿಕ 5:21). ತಿಮೊಥೆಯನ್ನು ಹೀಗೆ ಮಾಡುವದಾದರೆ ಆತನು ತನ್ನ ಉಪದೇಶ ಕೇಳುವವರನ್ನು ರಕ್ಷಣೆಗೆ ನಡಿಸುವದಷ್ಟೆ ಅಲ್ಲದೆ ತನ್ನನ್ನು ಸಹ ರಕ್ಷಿಸಿಕೊಳ್ಳುವನು –ಅಂದರೆ, ಆತನು ತನ್ನ ರಕ್ಷಣೆಯನ್ನು ಸಾಧಿಸಿಕೊಳ್ಳುವನು (ಫಿಲಿಪ್ಪಿ 2:12 ಮತ್ತು ವ್ಯಾಖ್ಯಾನ ನೋಡಿರಿ). ಅಲ್ಲದೆ, ಸ್ವತಃ ಪೌಲನು ಇತರರಿಗೆ ಬೋಧಿಸಿದ ನಂತರ ತಾನೇ ಬಿರುದನ್ನು ಹೊಂದುವದಕ್ಕೆ ಅಯೋಗ್ಯನೆನಿಸಿಕೊಂಡಾನೆನೋ ಎಂಬ ಭಯದಿಂದ ಎಚ್ಚರಿಕೆಯಾಗಿರಬೇಕಿತ್ತು (1 ಕೊರಿಂಥ 9:27).

---

## ಅಧ್ಯಾಯ - 5

### ವಿಧವೆಯರು ಹಿರಿಯರು ಮತ್ತು ದಾಸರಕುರಿತು ಸಲಹೆಗಳು (5 :1-25).

**1-2** ಈ ಅಧ್ಯಾಯದಲ್ಲಿ ಪೌಲನು ತಿಮೊಥೆಯನಿಗೆ ಸಭೆಯಲ್ಲಿರುವ ವಿವಿಧ ಗುಂಪುಗಳ ಜನರೊಂದಿಗೆ ಹೇಗೆ ನಡೆದುಕೊಳ್ಳಬೇಕೆಂಬ ವಿಷಯದಲ್ಲಿ ಅನೇಕ ಸಲಹೆಗಳನ್ನು ನೀಡುತ್ತಾನೆ.

ಸಭೆಯಲ್ಲಿನ ಪಾಪವನ್ನು ತೊಡೆದು ಹಾಕಿ ಸದಸ್ಯರನ್ನು ಶಿಕ್ಷೆಗೊಳಿಸುವದು ಸಭಾಧ್ಯಕ್ಷರ (ಹಿರಿಯರ) ಹಾಗೂ ಸಭಾಪಾಲಕರ ಜವಾಬ್ದಾರಿಯಾಗಿದೆ. ಹೇಗಿದ್ದರೂ, ಒಬ್ಬ ವೃದ್ಧನನ್ನು ಗದರಿಸುವದು ಎಂದಿಗೂ ತಕ್ಕದಾದದ್ದಲ್ಲ. ಬದಲಾಗಿ, ಸಭಾಪಾಲಕನು ತನ್ನ ತಂದೆತಾಯಿರನ್ನು ಗೌರವಿಸುವ ಪ್ರಕಾರವೇ ವೃದ್ಧರೊಂದಿಗೆ ಗೌರವದಿಂದ ನಡೆದುಕೊಳ್ಳಬೇಕು.

ತಿಮೊಥೆಯನು ಸಭೆಯ ಯೌವನಸ್ಥ ಸದಸ್ಯರನ್ನು ತನ್ನ ಸ್ವಂತ ಸಹೋದರರು ಹಾಗೂ ಸಹೋದರಿಯರೆಂದೆಣಿಸಿ ಬುದ್ಧಿ ಹೇಳುವವನೂ ಪ್ರಭೋದಿಸುವವನೂ ಆಗಿರಬೇಕು. ಹೇಗಿದ್ದರೂ, ಅವನು ಯೌವನ ಸ್ತ್ರೀಯರೊಂದಿಗೆ ಪೂರ್ಣ ಶುದ್ಧಭಾವದಿಂದ ವರ್ತಿಸಬೇಕು. ಸಭಾಪಾಲಕನು ಯೌವನ ಸ್ತ್ರೀಯರಿಗೆ ಉಪದೇಶಿಸುವ ಹಾಗೂ ಸಮಾಲೋಚನೆ ವಹಿಸುವದು ಅತ್ಯುತ್ತಮವಾದದ್ದು; ಈ ರೀತಿಯಲ್ಲಿ ಸಭಾಪಾಲಕನು ಶೋಧನೆಯಿಂದ ದೂರವಿರಬಹುದು (ತೀತನು 2:3-5).

**3** ವಿಧವೆಯರನ್ನು ಪರಾಂಭರಿಸುವದು ಒಂದು ಪ್ರಾಮುಖ್ಯವಾದ ಕ್ರೈಸ್ತೀಯ ಕರ್ತವ್ಯವಾಗಿದೆ (ಯಾಕೋಬ 1:27). ಅನೇಕ ವಿಧವೆಯರಿಗೆ ತಮ್ಮ ಸಹಾಯಮಾಡಿಕೊಳ್ಳಲು ಯಾವ ಮಾರ್ಗವೂ ಇರುವದಿಲ್ಲ. ಒಬ್ಬ ವಿದವೆಗೆ ಅವಳನ್ನು ನೋಡಿಕೊಳ್ಳುವದಕ್ಕೆ ಕುಟುಂಬದ ಯಾವ ಸದಸ್ಯರೂ ಇಲ್ಲದಿರುವದಾದರೆ ಸಭೆಯು ಆಕೆಯ ಹಿತರಕ್ಷಣೆಗೆ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಪೌಲನು ವಿಧವೆಯರಿಗೆ ಸರಿಯಾದ ಮನ್ನಣೆಯನ್ನು ನೀಡಬೇಕೆಂದು ಹೇಳುವಾಗ ಆತನ ತಾತ್ಪರ್ಯವೇನಂದರೆ, ಸಭೆಯು ವಿಧವೆಯರಿಗಾಗಿ ಕಾಳಜಿವಹಿಸಿಕೊಂಡು ಅವರ ಎಲ್ಲಾ ನ್ಯಾಯ ಸಮ್ಮತವಾದ ಅಗತ್ಯತೆಗಳನ್ನು ಸಂಧಿಸಬೇಕು ಎಂಬುದೇ. ಆದರೆ ಸಭೆಯು ನಿಜವಾಗಿಯೂ ಕೊರತೆಯಲ್ಲಿರುವ [9] ವಿಧವೆಯರನ್ನು ಮಾತ್ರವೇ ಪರಾಂಭರಿಸುವ ಅಗತ್ಯವಿರುತ್ತದೆ.

**4** ವಿಧವೆಯೊಬ್ಬಳಿಗೆ ಮಕ್ಕಳಾಗಲಿ ಮೊಮ್ಮಕ್ಕಳಾಗಲಿ ಇರುವದಾದರೆ ಅವರೇ ಆಕೆಯನ್ನು ನೋಡಿಕೊಳ್ಳಬೇಕು ಹೊರತು ಸಭೆಯಲ್ಲ. ವಯಸ್ಸಾಗುತ್ತಿರುವ ತಮ್ಮ ತಂದೆ ತಾಯಿಗಳನ್ನು ಅಜ್ಜ ಅಜ್ಜಿಯರನ್ನೂ ಗೌರವಿಸಿ ಪರಾಂಭರಿಸುವದು ಮಕ್ಕಳ ಜವಾಬ್ದಾರಿಯಾಗಿದೆ. (ವಿಮೋಚನ ಕಾಂಡ 20: 12; ಎಫೆಸ 6:2). ನಾವು ನಮ್ಮ ತಂದೆ ತಾಯಿಗಳ ಅಗತ್ಯತೆಗಳ ಬಗ್ಗೆ ಚಿಂತನೆಯನ್ನು ಮಾಡದಿರುವದಾದರೆ ಅವರನ್ನು ಗೌರವಿಸುತ್ತೇವೆಂದು ಹೇಳಲು ಸಾಧ್ಯವಿಲ್ಲ.

**5** ಒಬ್ಬ ವಿಧವೆಯು ಸಭೆಯಿಂದ ಸಹಾಯವನ್ನು ಪಡೆದುಕೊಳ್ಳಬೇಕಾದರೆ ಮೊದಲನೆಯದಾಗಿ ಅವಳು ನಿಜವಾಗಿಯೂ ಅಗತ್ಯತೆಯಲ್ಲಿರಬೇಕು[10], ಮತ್ತು ಎರಡನೆಯದಾಗಿ, ಅವಳು ಸ್ವತಃ ಸಹಾಯವನ್ನು ಪಡೆಯುವದಕ್ಕೆ ಯೋಗ್ಯಳಾಗಿರಬೇಕು. ಅವಳು ಕರ್ತನಲ್ಲಿ ನಿರೀಕ್ಷೆಯಿಟ್ಟು ಹಗಲಿರುಳು ಪ್ರಾರ್ಥನೆಯಲ್ಲಿ ನೆಲೆಗೊಂಡವಳಾಗಿರಬೇಕು.

**6** ಹೇಗಿದ್ದರೂ, ಕೆಲವು ವಿಧವೆಯರು ಅನೈತೀಕ ಜೀವಿತಗಳನ್ನು ನಡಿಸುತ್ತಾರೆ. ಕೆಲವರಂತೂ ತಮ್ಮ ಜೀವನೋಪಾಯಕ್ಕೆ ವೇಶ್ಯೆಯರೂ ಆಗುತ್ತಾರೆ. ಅಂಥ ವಿಧವೆಯರು ಸಭೆಯಿಂದ ಸಹಾಯ ಪಡೆಯುವದಕ್ಕೆ ಯೋಗ್ಯರಲ್ಲ. ಅವರ ದೇಹಗಳು ಬದುಕ್ಕಿದ್ದರೂ ಆತ್ಮಗಳು ಸತ್ತವು ಗಳಾಗಿವೆ.

**7** ತಿಮೊಥೆಯನು ಈ ಸಲಹೆಗಳನ್ನು ವಿಧವೆಯರಿಗೂ ಅವರ ಕುಟುಂಬದವರಿಗೂ ನೀಡತಕ್ಕದ್ದು, ಹೀಗೆ ಅವರೆಲ್ಲರೂ ಯೋಗ್ಯವಾಗಿ ನಡೆದುಕೊಂಡು ದೋಷವಿಲ್ಲದವರಾಗಿವರು.

**8** ಯಾವದೇ ಕ್ರೈಸ್ತನು ತನ್ನ ತಂದೆತಾಯಿಗಳನ್ನೂ, ಅಜ್ಜ ಅಜ್ಜಿಯರನ್ನೂ, ತನ್ನ ಆಪ್ತ ಸಂಬಂಧಿಗಳನ್ನೂ ಸಂರಕ್ಷಿಸದೆ ಹೋದರೆ ಅವನು ಕ್ರಿಸ್ತನಂಬಿಕೆಯಲ್ಲಿ ಇಲ್ಲದವನಿಗಿಂತಲೂ ಕಡೇ ಆಗಿರುವನು. ಅವಿಶ್ವಾಸಿಗಳು ಸಹ ತಮ್ಮ ತಂದೆತಾಯಿಗಳನ್ನು ಸಂರಕ್ಷಿಸುತ್ತಾರೆ.

**9- 10** ಪೌಲನ ಕಾಲದಲ್ಲಿ, ಸಭೆಯಿಂದ ಸಹಾಯ ಪಡೆಯಲು ಯೋಗ್ಯರಾದ ವಿಧವೆಯರನ್ನು ಪಟ್ಟಿಯಲ್ಲಿ ಸೇರಿಸಲಾಗುತ್ತಿತ್ತು. ಪಟ್ಟಿಯಲ್ಲಿ ಸೇರಿಸಲ್ಪಡುವದಕ್ಕಾಗಿ ಒಬ್ಬ ವಿಧವೆಯು ಕೆಳಗಿನ ಅರ್ಹತೆಗಳನ್ನು ಹೊಂದಿರಬೇಕಾಗಿತ್ತು. ಅವರು ಅರವತ್ತಕ್ಕಿಂತ ಹೆಚ್ಚು ವಯಸ್ಸಿನವಳಾಗಿರಬೇಕು, ಅವಳು ತನ್ನ ಗಂಡನಿಗೆ ನಂಬಿಗಸ್ಥಳಾಗಿದ್ದವಳು ಆಗಿರಬೇಕು ಮತ್ತು ಅವಳು ತನ್ನ ಸತ್ಕ್ರಿಯೆಗಳಿಗಾಗಿ ಹೆಸರು ಗೊಂಡವಳಾಗಿರಬೇಕು. ಈ ಅರ್ಹತೆಗಳನ್ನು ಹೊಂದಿದ್ದ ವಿಧವೆಯರಿಗೆ ಸಭೆಯಲ್ಲಿ ನಿರ್ವಹಿಸುವದಕ್ಕಾಗಿ ವಿಶೇಷ ಕರ್ತವ್ಯಗಳನ್ನು ನೀಡಲಾಗುತ್ತಿತ್ತು. ಬಹುಶಃ ಅವರು ಈಗಾಗಲೇ ಯಾವ ಕೆಲಸಕ್ಕಾಗಿ ಹೆಸರುಗೊಂಡಿದ್ದರೋ ಅದೇ ಕೆಲಸವನ್ನು ಸಭೆಯಲ್ಲಿ ನಿರ್ವಹಿಸವದಕ್ಕೆ ಕೊಟ್ಟಿರಬಹುದು— ಉದಾಹರಣೆಗೆ ಮಕ್ಕಳಿಗಾಗಿ ಆರೈಕೆ ಮಾಡುವದು, ಅತಿಥಿ ಸತ್ಕಾರವನ್ನು ಮಾಡುವದು, ಕಷ್ಟದಲ್ಲಿದ್ದವರಿಗೆ ಸಹಾಯಮಾಡುವದು, ಅಥವಾ ಇತರ ಸ್ತ್ರೀಯರಿಗೆ ಉಪದೇಶಿಸುವದು[11].

**11- 12** ಪಟ್ಟಿಯಲ್ಲಿ ಸೇರಿಸಲಾಗಿದ್ದ ವಿಧವೆಯರು ಸಂಪೂರ್ಣವಾಗಿ ಕ್ರಿಸ್ತನ ಸೇವೆಗೆ ಸಮರ್ಪಿತರಾಗಳಿಯಬೇಕು. ಅವರು ಮರುವಿವಾಹವಾಗುವದಿಲ್ಲ ಎಂಬ ಒಂದು ರೀತಿಯ ಹರಕೆ ಅಥವಾ ಪ್ರಮಾಣವನ್ನು ಮಾಡಿದ್ದಂತೆ ತೋರುತ್ತದೆ. ಆದದರಿಂದ, ಯೌವನಸ್ಥ ವಿಧವೆಯರನ್ನು ಪಟ್ಟಿಯಲ್ಲಿ ಸೇರಿಸದಿರುವದು ಉತ್ತಮವಾಗಿತ್ತು, ಯಾಕೆಂದರೆ ಅವರು ಸಾಮಾನ್ಯವಾಗಿ ಮರುವಿವಾಹವಾಗುವದಕ್ಕೆ ಇಷ್ಟಪಡುತ್ತಾರೆ. ಒಂದು ವೇಳೆ ಪಟ್ಟಿಯಲ್ಲಿ ಸೇರಿಸಲ್ಪಟ್ಟವರಾಗಿದ್ದ ಮೇಲೆ ಅವರು ತಮ್ಮ ಪ್ರಮಾಣವನ್ನು ಉಲ್ಲಂಘಿಸಿ ಮರುವಿವಾಹ ಮಾಡಿಕೊಳ್ಳುವದಾದರೆ ಅವರು ತಮ್ಮ ಮೇಲೆ ನ್ಯಾಯಾ ತೀರ್ಪನ್ನು ಬರಮಾಡಿಕೊಳ್ಳುತ್ತಾರೆ[12]. ಆದದರಿಂದ, ಪೌಲನು ತಿಮೊಥೆಯನಿಗೆ ಪ್ರಾಯದ ವಿಧವೆಯರನ್ನು ಪಟ್ಟಿಯಲ್ಲಿಯೇ ಸರಿಸಬೇಡ ಎಂದು ಸಲಹೆ ನೀಡುತ್ತಾನೆ.

**13- 14** ಅಷ್ಟು ಮಾತ್ರವಲ್ಲದೆ, ಪ್ರಾಯದ ವಿಧವೆಯರು ಅನೇಕ ವೇಳೆಗಳಲ್ಲಿ ಮೈಗಳ್ಳರಾಗಿ ಹರಟೆಮಾತಾಡುವವರೂ ಆಡಬಾರದ ಮಾತುಗಳನ್ನಾಡುವವರೂ ಆಗುತ್ತಾರೆ. ಎಂದು ಪೌಲನು ಹೇಳುತ್ತಾನೆ. ಬದಲಾಗಿ, ಆ ಪ್ರಾಯದ ವಿಧವೆಯರು ಮರುವಿವಾಹ ಮಾಡಿಕೊಂಡು ತಮ್ಮ ಕುಟುಂಬಗಳನ್ನು ನೋಡಿಕೊಳ್ಳುವದರಲ್ಲಿ ನಿರತರಾಗಲಿ; ಈ ರೀತಿಯಾಗಿ, ಅವರು ಪಾಪದಲ್ಲಿ ಬೀಳದಂತೆ ದೂರವಿರುವರು ಹಾಗೂ ಅವರ ಮೇಲೆ ದೂರು ಹೇಳುವದಕ್ಕೆ ಸೈತಾನನಿಗೆ ಆಸ್ಪದವಾಗುವದಿಲ್ಲ (1 ಕೊರಿಂಥ 7:39-40ನೋಡಿರಿ).

**15** ಕೆಲವು ಪ್ರಾಯದ ವಿಧವೆಯರು ಈಗಾಗಲೇ ಪಟ್ಟಿಯಲ್ಲಿ ಸೇರಿಸಲ್ಪಟ್ಟವರಾಗಿದ್ದು ಅಷ್ಟರೊಳಗೆ ದಾರಿಬಿಟ್ಟು ಸೈತಾನನನ್ನು ಹಿಂಬಾಲಿಸಿದ್ದರು –ಅಂದರೆ, ಅವರು ಪಾಪದಲ್ಲಿ ಬಿದ್ದಿದ್ದರು. ಈ ಕಾರಣದಿಂದಲೇ ಪೌಲನು ತಿಮೊಥೆಯನಿಗೆ ಪ್ರಾಯದ ವಿಧವೆಯರನ್ನು ಪಟ್ಟಿಯಲ್ಲಿ ಸೇರಿಸಬೇಡ ಎಂದು ಬೇಡಿಕೊಳ್ಳುತ್ತಾನೆಃ ಬೇರೆ ಯಾರಾದರೂ ದೇವರಿಗೆ ಮಾಡಿದ ಹರಕೆಯನ್ನು ಉಲ್ಲಂಘಿಸಿ ಪಾಪದಲ್ಲಿ ಬೀಳುವ ಶೋಧನೆಗೊಳಗಾಗುವದು ಪೌಲನಿಗೆ ಇಷ್ಟವಿಲ್ಲ.

**16** ಮಕ್ಕಳು ತಮ್ಮ ವಿಧವಾ ತಾಯಿಯರನ್ನೂ ಅಜ್ಜಿಯರನ್ನೂ ಪರಾಂಭರಿಸಬೇಕಾಗಿರುವ ಪ್ರಕಾರವೇ ಕುಟುಂಬದ ಸ್ತ್ರೀಯು ಕುಟುಂಬದಲ್ಲಿರುವ ಇತರ ಯಾವದೇ ವಿಧವೆಯರನ್ನು ನೋಡಿಕೊಳ್ಳಬೇಕು, ಉದಾಹರಣೆ, ವಿಧವಾ ಸಹೋದರಿಯರು, ವಿಧವಾ ನಾದಿನಿಯರು, ಪುತ್ರಿಯರು, ವಿಧವಾ ಸೊಸೆಯರು, ಮುಂತಾದವರು. ಕುಟುಂಬದಲ್ಲಿ ತಮ್ಮನ್ನು ಸಂರಕ್ಷಿಸಲು ಇನ್ನೊಬ್ಬ ಸ್ತ್ರೀಯನ್ನು ಹೊಂದಿರುವ ಅಂಥ ವಿಧವೆಯರನ್ನು ಸಭೆಯ ವಿಧವೆಯರ ಪಟ್ಟಿಯಲ್ಲಿ ಸೇರಿಸಬಾರದು ಎಂದು ಪೌಲನು ಹೇಳುತ್ತಾನೆ. ಸಭೆಯು ದಿಕ್ಕಿಲ್ಲದೆ ನಿಜವಾಗಿಯೂ ಅಗತ್ಯತೆಯಲ್ಲಿರುವ [13] ವಿಧವೆಯರಿಗೆ ಮಾತ್ರವೇ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು.

**17** ತಿಮೊಥೆಯನು ಸಭೆಯ ಹಿರಿಯರನ್ನು ನೋಡಿಕೊಳ್ಳುವ ಹಾಗೂ ವೇತನ ನೀಡುವ ಜವಾಬ್ದಾರಿಯನ್ನು ಹೊಂದಿರುತ್ತಾನೆ. ಸಭಾಪಾಲಕರ ಜೊತೆಯಲ್ಲಿ ಹಿರಿಯರೂ ಸ್ಥಳೀಯ ಸಭೆಯು ಮುಖ್ಯ ನಾಯಕರಾಗಿದ್ದಾರೆ[14] (ಅ.ಕೃತ್ಯ 20:17,28; ತೀತನು 1:5 -9; 1 ಪೇತ್ರ 5:1-3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ತಮ್ಮ ಕೆಲಸವನ್ನು ಉತ್ತಮವಾಗಿ ನಿರ್ವಹಿಸುವ ಹಿರಿಯರು ಇಮ್ಮಡಿಯಾದ ಮಾನಕ್ಕೆ ಯೋಗ್ಯರಾಗಿದ್ದಾರೆ– ಅಂದರೆ, ಅವರು ತಮ್ಮ ಕೆಲಸಕ್ಕಾಗಿ ಮಾನಪಡೆಯುವದಕ್ಕೂ ವೇತನ ಪಡೆಯುವದಕ್ಕೂ ಯೋಗ್ಯರಾಗಿದ್ದಾರೆ.

**18** ಸಭೆಯಲ್ಲಿನ ಕೆಲಸಗಾರರು ತಮ್ಮ ಕೆಲಸಕ್ಕೆ ಕೂಲಿ ಪಡೆಯಲು ಅರ್ಹರಾಗಿದ್ದಾರೆ. ಈ ಸೂತ್ರವನ್ನು ದೃಢಪಡಿಸುವದಕ್ಕೆ ಪೌಲನು ಧರ್ಮೋಪದೇಶಕಾಂಡ 25 :4ರಿಂದ ಉಲ್ಲೇಖಿಸುತ್ತಾನೆ (1 ಕೊರಿಂಥ 9:7-9 ಮತ್ತು ವ್ಯಾಖ್ಯಾನ ನೋಡಿರಿ). ನಾಶವಾಗುವ ಧಾನ್ಯದ ಕಣತುಳಿಯುವ ಎತ್ತಿಗೆ ಆಹಾರ ನೀಡುವದು ಸರಿಯಾದದ್ದಾಗಿರುವದಾದರೆ ನಮಗೆ ಎಂದಿಗೂ ನಾಶವಾಗದ ಜೀವವುಳ್ಳ ರೊಟ್ಟಿಯನ್ನು ಊಣಬಡಿಸುವ ಸಭಾಪಾಲಕರ ಅಥವಾ ಹಿರಿಯನಿಗೆ ವೇತನ ನೀಡುವದು ಖಂಡಿತವಾಗಿಯೂ ನ್ಯಾಯವಾದದ್ದು.

ಅಲ್ಲದೆ ಪೌಲನು ಇಲ್ಲಿ ಲೂಕ 10:7ರಿಂದಲೂ ಉಲ್ಲೇಖಿಸುತ್ತಾನೆ (1 ಕೊರಿಂಥ 9:14 ನೋಡಿರಿ). ಹಿರಿಯರು ಹಣದಾಶೆಗಾಗಿ ಕೆಲಸ ಮಾಡಬಾರದೆಂಬುದು ನಿಜವೇ (1 ಪೇತ್ರ 5 :2); ಆದರೆ ಅವರಿಗೆ ನ್ಯಾಯವಾಗಿ ಕೂಲಿ ನೀಡುವದು ಸಭೆಯು ಜವಾಬ್ದಾರಿಯಾಗಿರುತ್ತದೆ.

**19** ಕಾಲಕಾಲಕ್ಕೆ ಹಿರಿಯನೊಬ್ಬನ ವಿರುದ್ಧವಾಗಿ ದೋಷಾರೋಪಣೆಗಳು ಮಾಡಲ್ಪಡಬಹುದು. ಅಂಥದೂರು ಇಬ್ಬರು ಮೂವರು ಸಾಕ್ಷಿಗಳಿಂದ ದೃಢಪಟ್ಟಹೊರತಾಗಿ ಅದನ್ನು ಮನಸ್ಸಿಗೆ ತೆಗೆದುಕೊಳ್ಳಲೂಬಾರದು ಅಂದರೆ ಕಿವಿಗೊಡಲೂ ಬಾರದು (ಧರ್ಮೋಪದೇಶಕಾಂಡ 19:15; ಮತ್ತಾಯ 18:16; 2 ಕೊರಿಂಥ 13:1 ನೋಡಿರಿ).

**20** ಒಂದು ವೇಳೆ ಒಬ್ಬ ಹಿರಿಯನ ವಿರುದ್ಧದ ಆರೋಪವು ನಿರೂಪಿಸಲ್ಪಟ್ಟರೆ ಅಂಥವನನ್ನು ಎಲ್ಲರ ಮುಂದೆಯೇ ಗದರಿಸಬೇಕು[15]. ಇದು ಮಿಕ್ಕಾದವರಿಗೆ ಪಾಪ ಮಾಡದಿರುವಂತೆ ಒಂದು ಎಚ್ಚರಿಕೆಯಾಗಿರುವದು.

**21-22** ತಿಮೊಥೆಯನು ಇತರ ವಿಷಯದಲ್ಲಿ ವ್ಯವಹರಿಸುವಾಗ ಭೇದಭಾವ ಅಥವಾ ಪಕ್ಷಪಾತ ತೋರಿಸಬಾರದು. ಹಸ್ತವನ್ನಿಡುವ ಮುಂಚೆ– ಅಂದರೆ, ಯಾರನ್ನಾದರೂ ಸಭೆಯಲ್ಲಿನ ಒಂದು ಹುದ್ದೆಗೆ ನೇಮಿಸುವದಕ್ಕೆ ಮುಂಚೆ– ತಿಮೊಥೆಯನು ಆ ವ್ಯಕ್ತಿಯನ್ನು ಯೋಗ್ಯನೊ ಎಂಬದನ್ನು ಜಾಗರೂಕತೆಯಿಂದ ಪರೀಕ್ಷಿಸಬೇಕು (ಅ.ಕೃತ್ಯ 6:6 ಮತ್ತು ವ್ಯಾಖ್ಯಾನ ನೋಡಿರಿ). ಅನಂತರದಲ್ಲಿ ಆ ವ್ಯಕ್ತಿಯು ಪಾಪಮಾಡಿದವನೆಂದು ನಿರೂಪಿತಗೊಂಡರೆ ತಿಮೊಥೆಯನು ಅವನ ಪಾಪಕ್ಕೆ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುವದು, ಯಾಕೆಂದರೆ, ಆತನೇ ಆ ವ್ಯಕ್ತಿಯನ್ನು ನೇಮಕಮಾಡಿದವನಾಗಿರುತ್ತಾನೆ. ಆ ವ್ಯಕ್ತಿಯ ಪಾಪದ ಕಾರಣದಿಂದ ಸ್ವತಃ ತಿಮೊಥೆಯ ಸೇವೆಗೆ ಕಳಂಕ ಬರುವದು. ಮತ್ತು ಖಂಡಿತವಾಗಿಯೂ ತಿಮೊಥೆಯನು ಸ್ವತಃ ಇನ್ನೊಬ್ಬರ ಪಾಪದಲ್ಲಿ ಪಾಲುಗಾರರನಾಗಬಾರದು; ಅವನು ತನ್ನನ್ನು ಶುದ್ಧನಾಗಿರುವ ಹಾಗೆ ನೋಡಿಕೊಳ್ಳಬೇಕು.

**23** ಈ ವಚನದ ಮೂಲಕವಾಗಿ ನಾವು ತಿಮೊಥೆಯನು ದೈಹೀಕವಾಗಿ ಬಲಿಷ್ಠನೂ ಆರೋಗ್ಯಕರ ವ್ಯಕ್ತಿಯೂ ಆಗಿರಲಿಲ್ಲ ಎಂಬದನ್ನು ತಿಳಿದುಕೊಳ್ಳುತ್ತೇವೆ. ಆತನು ಅನೇಕ ರೋಗಗಳನ್ನು ಹೊಂದಿದ್ದನು. ಹೊಸ ಒಡಂಬಡಿಕೆಯ ಕಾಲದಲ್ಲಿ ಸ್ವಲ್ಪ ದ್ರಾಕ್ಷಾರಸವನ್ನು ತೆಗೆದುಕೊಳ್ಳುವದು ಒಬ್ಬನ ಹೊಟ್ಟೆಗೆ ಒಳ್ಳೇದೆಂದು ಪರಿಗಣಿಸಲಾಗಿತ್ತು[16].

**24-25** ಈ ವಚನಗಳು 22ನೇ ವಚನದೊಂದಿಗೆ ಸಂಬಂಧ ಹೊಂದಿರುತ್ತವೆ. ಜನರನ್ನು ಸಭೆಯ ಉದ್ಯೋಗಕ್ಕೆ ನೇಮಿಸುವದರಲ್ಲಿ ಸುಲಭವಾಗಿ ಮೋಸಹೋಗಬಹುದಾಗಿದೆ. ಕೆಲವು ಜನರ ಪಾಪಗಳು ಸಿದ್ಧವಾಗಿ ಕಂಡುಬರುತ್ತವೆ. ಅಂಥ ವ್ಯಕ್ತಿಗಳ ಪಾಪಗಳು ತಕ್ಷಣವೇ ನ್ಯಾಯಲಯದ ಗಮನಕ್ಕೆ ಬರುತ್ತವೆ.

ಹೇಗಿದ್ದರೂ, ಇತರ ವ್ಯಕ್ತಿಗಳು ಬಹಿರಂಗವಾಗಿ ಒಳ್ಳೆಯವರೆಂದು ತೋರುತ್ತಾರೆ ಆದರೆ ಅಂತರ್ಯದಲ್ಲಿ ಅವರು ಪಾಪಿಗಳಾಗಿರುತ್ತಾರೆ. ಅಂಥ ಅನೇಕ ವ್ಯಕ್ತಿಗಳು ಸಭೆಯಲ್ಲಿ ನಾಯಕತ್ವಕ್ಕೆ ನೇಮಕಗೊಳಿಸಲ್ಪಟ್ಟಿರುತ್ತಾರೆ, ಮತ್ತು ಅದರ ಫಲಿತವಾಗಿ ಸಭೆಯು ದೊಡ್ಡ ಹಾನಿಯನ್ನು ಅನುಭವಿಸಿರುತ್ತದೆ.

ಅದೇ ರೀತಿಯಲ್ಲಿ, ಕೆಲವು ಸತ್ಕ್ರಿಯೆಗಳು ಶೀಘ್ರವೇ ತೋರಿಬರುತ್ತವೆ. ಅದೇ ವೇಳೆ ಇತರ ಸತ್ಕ್ರಿಯೆಗಳು ತಡವಾಗಿ ಮಾತ್ರವೇ ಬೆಳಕಿಗೆ ಬರುತ್ತವೆ. ಹೀಗೆ ನಾಯಕರಾಗಿರುವದಕ್ಕೆ ಯೋಗ್ಯರಾಗಿರುವ ಅನೇಕ ವ್ಯಕ್ತಿಗಳು ಆರಿಸಲ್ಪಟ್ಟಿರುವದಿಲ್ಲ ಯಾಕೆಂದರೆ, ಪ್ರಾರಂಭದಲ್ಲಿ ಅವರ ಸತ್ಕ್ರಿಯೆಗಳು ಕಂಡುಬರುವದಿಲ್ಲ. ಅನಂತರವಷ್ಟೇ ಅವರು ನಿಜವಾಗಿಯೂ ನಾಯಕರಾಗಿರುವದಕ್ಕೆ ಯೋಗ್ಯರೆಂಬುದು ಸ್ಪಷ್ಟವಾಗುತ್ತದೆ.

ಅಂತಿಮವಾಗಿ, ಅನೇಕ ಜನರ ಯೋಗ್ಯತೆಯು ಪರಲೋಕದಲ್ಲಿ ಮಾತ್ರವೇ ಪೂರ್ಣವಾಗಿ ತೋರಿಬರುವದು. ಎಷ್ಟು ಮಂದಿ ಕ್ರೈಸ್ತರು ಎಲೆಮರೆಯ ಕಾಯಿಯಂತೆ ಮೌನವಾಗಿ ಸತ್ಕಾರ್ಯವನ್ನೂ ತ್ಯಾಗವನ್ನು ಪ್ರಾರ್ಥನೆಯನ್ನು ಮಾಡುತ್ತಾರೆ– ಆದರೆ ಅವರ ಬಗ್ಗೆ ಯಾರು ಕೇಳಿರುವದಿಲ್ಲ! ಖಂಡಿತವಾಗಿಯೂ, ಈ ದೇವಜನರು ಒಂದು ದಿನ ತಮ್ಮ ಪೂರ್ಣ ಪ್ರತಿಫಲವನ್ನು ಪಡೆದುಕೊಳ್ಳುವರು.

---

# ಅಧ್ಯಾಯ - 6

## ನಾನಾ ವಿಧವಾದ ಉಪದೇಶಗಳು (6 :1-10)

**1** ದಾಸತ್ವವು ರೋಮಾಯ ಸಾಮ್ರಾಜ್ಯದಲ್ಲೆಲ್ಲಾ ವ್ಯಾಪಕವಾಗಿ ಹರಡಿತ್ತು; ಹೊಸ ಒಡಂಬಡಿಕೆಯ ಕಾಲದಲ್ಲಿ ಅನೇಕ ದಾಸರಿದ್ದರು. ಕ್ರಿಸ್ತನ ವಿಶ್ವಾಸಿಗಳಾಗಿದ್ದ ದಾಸರು ಸಭೆಯಲ್ಲಿ ಉಳಿದವರೆಲ್ಲರೊಂದಿಗೆ ಸರಿಸಮಾನರಾಗಿದ್ದರು. ಆದರೆ ಅವರು ತಮ್ಮ ಯಜಮಾನರ ಮನೆಯಲ್ಲಿ ಪ್ರಾಣಿಗಳಿಗಿಂತಲೂ ಸ್ವಲ್ಪ ಉತ್ತಮವಾಗಿ ನಡಿಸಿಕೊಳ್ಳಲ್ಪಡುತ್ತಿದ್ದರು.

ವಿಶ್ವಾಸಿಗಳಾಗಿರುವ ದಾಸರು ತಮ್ಮ ಯಜಮಾನರಿಗೆ ವಿಧೇಯರಾಗಿ ಗೌರವಿಸಬೇಕೆಂದು ಪೌಲನು ಹೇಳುತ್ತಾನೆ. ಯಜಮಾನನು ದುಷ್ಟ ಹಾಗೂ ಕ್ರೂರಿಯಾಗಿದ್ದಾಗಲೂ ಕ್ರೈಸ್ತ ದಾಸನು ಅವನಿಗೆ ಮಾರ್ಯಾದೆಯನ್ನು ತೋರಿಸಬೇಕಾಗಿತ್ತು. ತನ್ನ ಯಜಮಾನನಿಗೆ ಮಾರ್ಯದೆಯನ್ನು ತೋರಿಸಿದ್ದ ದಾಸನು ತಪ್ಪು ಮಾಡಿದವನೆಂದು ಪರಿಗಣಿಸಲಾಗುತ್ತಿತ್ತು, ಮತ್ತು ಹೀಗೆ ದೇವರ ನಾಮಕ್ಕೂ ಅಪೊಸ್ತಲರ ಉಪದೇಶಕ್ಕೂ ಅವಮಾನವನ್ನು ಉಂಟುಮಾಡುವವನಾಗಿದ್ದನು (ಎಫೆಸ 6:5- 8; ತೀತನು 2:9-10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

2 ಕೆಲವು ಕ್ರೈಸ್ತದಾಸರ ಯಜಮಾನರು ಸಹ ವಿಶ್ವಾಸಿಗಳಾಗಿದ್ದರು. ಕ್ರೈಸ್ತದಾಸರಲ್ಲಿ ಕೆಲವರು ತಮ್ಮ ಕ್ರೈಸ್ತ ಯಜಮಾನರಿಗೆ ಪೂರ್ಣಮಾನವನ್ನು ತೋರಿಸಲಿಲ್ಲ; ಅವರು ತಮ್ಮ ಯಜಮಾನರೊಂದಿಗೆ ಸೇವಕರಂತೆ ವರ್ತಿಸದೆ ಸಹೋದರರಂತೆ ವರ್ತಿಸುತ್ತಿದ್ದರು. ಈ ದಾಸರು ತಮ್ಮ ಯಜಮಾನರಿಗಾಗಿ ಶ್ರಮವಹಿಸಿ ದುಡಿಯಲಿಲ್ಲ. ಆದರೆ ಪೌಲನು ಇಲ್ಲಿ ವಿಶ್ವಾಸಿಗಳಾದ ದಾಸರು ಕ್ರೈಸ್ತ ಯಜಮಾನರಿಗೆ ಕ್ರೈಸ್ತ್ಯೇತರ ಯಜಮಾನರಿಗಿಂತಲೂ ಹೆಚ್ಚಾಗಿ ಮರ್ಯಾದೆಯನ್ನು ತೋರಿಸಿಬೇಕೆಂದು ಹೇಳುತ್ತಾನೆ. ವಿಶ್ವಾಸಿಗಳಾದ ದಾಸರು ಕ್ರೈಸ್ತ ಯಜಮಾನನೊಬ್ಬನಿಗಾಗಿ ಹೆಚ್ಚು ಶ್ರಮವಹಿಸಿ ದುಡಿಯಬೇಕು, ಯಾಕೆಂದರೆ ಆತನು ಜೊತೆ ಕ್ರೈಸ್ತನಾಗಿದ್ದಾನಷ್ಟೆ. ಆತನು ತನ್ನ ಯಜಮಾನನಿಗೆ ಒತ್ತಾಯದಿಂದಲ್ಲ, ಆದರೆ ಪ್ರೀತಿಯಿಂದ ಸೇವೆ ಮಾಡಬೇಕು. ಆತನು ತನ್ನ ಯಜಮಾನನಿಗೆ ಅನಿವಾರ್ಯದಿಂದಲ್ಲ ಅದರೆ ಇಷ್ಟಪಟ್ಟು ಸೇವೆ ಮಾಡಬೇಕು.

3-5 ಯಾವನಾದರೂ ಕ್ರಿಸ್ತನ ಉಪದೇಶಕ್ಕ ಕಿವಿಗೊಡದೆ ಹೋದರೆ ಅವನು ಮದದಿಂದ ಕಣ್ಣುಗಾಣದವನಾಗಿದ್ದಾನೆ (ವಚನ 4). ಮದದಿಂದ ತುಂಬಿರುವ ವ್ಯಕ್ತಿಯು ಸಾಮಾನ್ಯವಾಗಿ ಅಜ್ಞಾನಿಯಾಗಿರುತ್ತಾನೆ. ಅವನು ತನಗೆ ಬಹಳಷ್ಟು ಗೊತ್ತಿದೆ ಎಂದು ಭಾವಿಸುತ್ತಾನೆ, ಅದರೆ ವಾಸ್ತವದಲ್ಲಿ ಅವನು ಒಂದನ್ನೂ ತಿಳಿಯದವನು (1 ತಿಮೊಥೆ 1:7 ನೋಡಿರಿ).

ಕೆಟ್ಟ ಮರವು ಕೆಟ್ಟ ಫಲವನ್ನೇ ನೀಡುತ್ತದೆ (ಮತ್ತಾಯ 7:17- 18). ಅದೇ ರೀತಿಯಾಗಿ, ಸುಳ್ಳುಬೋಧಕನೊಬ್ಬನು ಹೊಟ್ಟೆಕಿಚ್ಚು, ಜಗಳ, ದೋಷಣೆ, ದುಸ್ಸಂಶಯ, ಲಾಭಸಾಧನವೆಂದೆಣಿಸುವ ಕಚ್ಚಾಟಗಳ ಫಲಗಳನ್ನೇ ಕೊಡುತ್ತಾರೆ (1 ತಿಮೊಥೆ 1:3-4 ನೋಡಿರಿ). ನಮ್ಮ ಉಪದೇಶ ಹಾಗೂ ಸಿದ್ಧಾಂತಗಳು ಸುಳ್ಳು ಹಾಗೂ ಅಶುದ್ಧವಾಗಿರುವದಾದರೆ ನಮ್ಮ ಜೀವಿತಗಳು ಸಹ ಹಾಗೆಯೇ ಇರುವವು . ಅದೇ ಪ್ರಕಾರವಾಗಿ ಒಬ್ಬನ ಜೀವಿತವು ಹೊಟ್ಟೆಕಿಚ್ಚು, ಜಗಳ, ಕಚ್ಚಾಟಗಳಿಂದ ತುಂಬಿರುವದಾದರೆ ಆತನ ಉಪದೇಶವೂ ಸುಳ್ಳಾಗಿಯೂ, ಅಶುದ್ಧವಾಗಿಯೂ ಇರುತ್ತದೆಂಬದನ್ನು ನಾವು ಖಚಿತವಾಗಿ ತಿಳುಕೊಳ್ಳಬಹುದು. ಯೇಸು ಹೇಳಿದ್ದೇನೆಂದರೆಃ "ಅವರ ಫಲಗಳಿಂದಲೇ ಅವರನ್ನು ತಿಳಿದುಕೊಳ್ಳುವಿರಿ" (ಮತ್ತಾಯ 7:20).

ಅನೇಕ ಸುಳ್ಳು ಬೋಧಕರು ಕೇವಲ ವಾಗ್ವಾನಗಳನ್ನು ಗೆಲ್ಲುವದರಲ್ಲಿ ಅಥವಾ ಇನ್ನೊಬ್ಬರನ್ನು ತುಳಿದು ತಮ್ಮನ್ನು ಹೆಚ್ಚಿಸಿಕೊಳ್ಳುವದರಲ್ಲಿ ಮಾತ್ರವೇ ಆಸಕ್ತಿಯುಳ್ಳವರಾಗಿರುತ್ತಾರೆ. ಅವರಿಗೆ ಸತ್ಯವನ್ನು ಸಂರಕ್ಷಿಸುವದರ ಬಗ್ಗೆ ಚಿಂತೆಯಿರುವದಿಲ್ಲ. ಇನ್ನು ಕೆಲವು ಸುಳ್ಳು ಬೋಧಕರು ಮುಖ್ಯವಾಗಿ ತಮ್ಮ ಬೋಧನೆಯಿಂದ ಹಣಮಾಡಿಕೊಳ್ಳಲು ಆಸಕ್ತಿ ಹೊಂದಿರುತ್ತಾರೆ. ಅವರ ಮನಸ್ಸಿನಲ್ಲಿ ದೇವಭಕ್ತಿಯು ಹಣದ ಲಾಭಕ್ಕೆ ಸಾಧನವಾಗಿರುತ್ತದೆ. ಹೊಟ್ಟೆಕಿಚ್ಚು, ಜಗಳ, ಹಾಗೂ ಹೊಲಸು ಮಾತುಗಳು ಸುಳ್ಳು ಬೋಧಕರಿಂದ ಮಾತ್ರವೇ ಬರುವದಿಲ್ಲ; ಅದು ಸಭೆಯೊಳಗಿನ ಪರಿಪಕ್ವವಿಲ್ಲದ ಕ್ರೈಸ್ತರಿಂದಲೂ ಉದ್ಭವಿಸುತ್ತದೆ. ಅಂಥ ನಡವಳಿಕೆಯು ಕಂಡುಬರುವಾಗ ಸಭೆಯು ಬಲಹೀನಗೊಂಡು ಫಲಕೊಡುವದನ್ನು ನಿಲ್ಲಿಸುತ್ತದೆ.

6 ಖಂಡಿತವಾಗಿಯೂ ಭಕ್ತಿಯು ದೊಡ್ಡ ಲಾಭ ತರುತ್ತದೆ– ಆದರೆ ಲಾಭವು ಆತ್ಮೀಕವಾದ್ದು ಹೊರತು ಭೌತೀಕವಲ್ಲ. ಭಕ್ತಿಯಿಂದ ಬರುವ ಲಾಭವು ಬಹಿರಂಗದ ಅಥವಾ ಭೌತೀಕ ಪರಿಸ್ಥಿತಿಗಳ ಮೇಲೆ ಅವಲಂಭವಾಗಿರುವದಿಲ್ಲ. ನಾವು ಸಂತುಷ್ಟಿ ಹೊಂದಿರುವಾಗ ಮಾತ್ರವೇ ದುರಾಶೆ, ಚಿಂತೆ, ಮತ್ತು ಐಶ್ವರ್ಯದ ಮೇಲಿನ ಪ್ರೀತಿಗಳಿಂದ ಮುಕ್ತರಾಗುತ್ತೇವೆ; ಮತ್ತು ಆಗ ಮಾತ್ರವೇ ನಾವು ಭಕ್ತಿಯ ಪೂರ್ಣಪ್ರಯೋಜನ ಹಾಗೂ ಆಶೀರ್ವಾದವನ್ನು ಪಡೆದುಕೊಳ್ಳಬಲ್ಲೆವು (ಮಾರ್ಕ 4:18-19; ಫಿಲಿಪ್ಪಿ 4:11 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

7 ಭೂಲೋಕದಲ್ಲಿ ಐಶ್ವರ್ಯವನ್ನು ಕೂಡಿಸಿಟ್ಟುಕೊಳ್ಳುವದು ವ್ಯರ್ಥವಾದದ್ದು. ನಾವು ಸತ್ತುಹೋಗುವ ದಿನದಲ್ಲಿ ಅವು ಗಳನ್ನೆಲ್ಲಾ ಕಳೆದುಕೊಳ್ಳುವೆವು (ಯೋಬ 1:21; ಪ್ರಸಂಗಿ 5:15; ಲೂಕ 12:16-21 ಮತ್ತು ವ್ಯಾಖ್ಯಾನ ನೋಡಿರಿ).

8 ನಾವು ನಮಗೆ ಅಗತ್ಯವಾದ ಅನ್ನ ವಸ್ತ್ರ ಹಾಗೂ ಆಶ್ರಯಗಳಿದ್ದರೆ ಸಂತೃಪ್ತರಾಗಿರಬೇಕು. ನಮಗೆ ಅಗತ್ಯವಾದದ್ದಕ್ಕಿಂತಲೂ ಹೆಚ್ಚಿನದನ್ನು ಆಶಿಸುವು ದು ಸರಿಯಾದದ್ದಲ್ಲ. ದೇವರು ನಮ್ಮ ಕೊರತೆಗಳನ್ನೆಲ್ಲಾ ನೀಗಿಸುವನೆಂದು ವಾಗ್ದಾನ ಮಾಡಿದ್ದಾನೆ (ಮತ್ತಾಯ 6: 33 ಮತ್ತು ವ್ಯಾಖ್ಯಾನ ನೋಡಿರಿ). ದೇವರು ನಮಗೆ ದಯಪಾಲಿಸಿರುವ ಭೌತೀಕ ದಾನಗಳಲ್ಲಿ ಅಸಂತುಷ್ಟರಾಗಿರುವದು ಪಾಪವಾಗಿದೆ. ಅಸಂತುಷ್ಟರಾಗಿರುವದೆಂದರೆ ದೇವರ ವಿರುದ್ಧ ಗುಣಗುಟ್ಟುವದಾಗಿದೆ.

ಹೇಗಿದ್ದರೂ, ನಾವು ಹೊಂದಿರುವ ಆತ್ಮೀಕ ವರಗಳ ವಿಷಯಗಳಲ್ಲಿ ನಾವು "ಸಂತುಷ್ಟ "ರಾಗಿರಬಾರದು; ನಾವು ಹೆಚ್ಚುಹೆಚ್ಚಾಗಿ ಪಡೆದುಕೊಳ್ಳುವದಕ್ಕೆ ಆಸಕ್ತಿಯಿಂದ ಅಭಿಲಾಷಿಸುವವರಾಗಿರಬೇಕು (1 ಕೊರಿಂಥ 14:1). ದೇವರು ನಮ್ಮ ಮೇಲೆ ಹೆಚ್ಚು ದೊಡ್ಡ ದೊಡ್ಡ ಆಶೀರ್ವಾದಗಳನ್ನು ಸುರಿಸಲು ಇಷ್ಟಪಡುತ್ತಾನೆ. ನಾವು ನಮ್ಮ ಆತ್ಮೀಕ ಸ್ಥಿತಿಯೊಂದಿಗೆ ತೃಪ್ತರಾಗಬಾರದು; ಬದಲಾಗಿ, ಪವಿತ್ರತ್ಮಾನ ಫಲಗಳು ಹಾಗು ವರಗಳು ನಮ್ಮ ಜೀವಿತಗಳಲ್ಲಿ ಹೆಚ್ಚು ಸಮೃದ್ಧಿಯಾಗಿ ತೋರಿಬರುವಂತಾಗಲು ನಾವು ಪವಿತ್ರಾತ್ಮನಿಂದ ಹೆಚ್ಚು ಹೆಚ್ಚಾಗಿ ತುಂಬಿಸಲ್ಪಡುವದಕ್ಕೆ ಅಪೇಕ್ಷಿಸಬೇಕು (1 ಕೊರಿಂಥ 12:7-11; ಗಲಾತ್ಯ 5:22 -23).

9 ಸ್ವಂತ ಐಶ್ವರ್ಯಗಳು ಕೆಟ್ಟದ್ದಲ್ಲ. ಹೇಗಿದ್ದರೂ, ಐಶ್ವರ್ಯಗಳ ಮೇಲಿನ ಪ್ರೀತಿ ಹಾಗೂ ಅವು ಗಳನ್ನು ಕೂಡಿಸಿಟ್ಟುಕೊಳ್ಳಲು ಬಯಸುವದೇ ಕೆಟ್ಟದ್ದಾಗಿದೆ (ವಚನ 10). ಐಶ್ವರ್ಯಗಳನ್ನು ಪ್ರೀತಿಸಿ ಕೂಡಿಸಿಟ್ಟುಕೊಳ್ಳುವ ಜನರಿಗೆ

ಮೂರು ಸಂಗತಿಗಳು ಸಂಭವಿಸುತ್ತವೆ. ಮೊದಲನೆಯದಾಗಿ, ಅವರು ಆಶೆಗಳಲ್ಲಿ (ಶೋಧನೆಗಳಲ್ಲಿ) ಬೀಳುತ್ತಾರೆ. ಎರಡನೆಯದಾಗಿ, ಅವರು ಸೈತಾನನ ಉರ್ಲಿನಲ್ಲಿ ಸಿಕ್ಕಿಕೊಳ್ಳುತ್ತಾರೆ- ಅಂದರೆ, ಅವರು ಬುದ್ಧಿವಿರುದ್ಧವಾಗಿಯೂ ಹಾನಿಕರವಾಗಿಯೂ ಇರುವ ಅನೇಕ ಆಶೆಗಳಲ್ಲಿ ಬೀಳುತ್ತಾರೆ; ಮತ್ತು ಕೊನೆಯಲ್ಲಿ ಮೂರನೆಯದಾಗಿ, ಅವರು ಸಂಹಾರ ನಾಶನಗಳಲ್ಲಿ ಮುಳುಗುತ್ತಾರೆ, ಅದರೊಳಗಿಂದ ಅವರ ಜೀವಿತಗಳು ಯಥಾಸ್ಥಿತಿಗೆ ಬರಲಾರವು (ಯಾಕೋಬ 1:14- 15 ನೋಡಿರಿ).

**10** ಹಣದಾಸೆಯು ಸಕಲವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ (ಬೇರು ಆಗಿದೆ) ಬೇರು ಬೆಳೆಯುವಾಗ ಅದು ಎಲ್ಲಾ ವಿಧವಾದ ಕೆಟ್ಟ ಫಲವನ್ನೂ ಕೊಡುತ್ತದೆ. ಹಣವಲ್ಲ, ಆದರೆ ಹಣದಾಸೆಯೇ ಕೆಟ್ಟತನಕ್ಕೆ ನಡಿಸುತ್ತದೆಂದು ಪೌಲನು ಹೇಳುವದನ್ನು ಗಮನಿಸಿರಿ.

ಹಣವನ್ನು ಪ್ರೀತಿಸುವವರು ಯಾವಾಗಲೂ ಕ್ರಿಸ್ತನಂಬಿಕೆಯನ್ನು ಬಿಟ್ಟು ಅಲೆದಾಡುತ್ತಾರೆ (ಮಾರ್ಕ 10:23-25 ನೋಡಿರಿ). ದೇವರನ್ನೂ ಐಶ್ವರ್ಯವನ್ನೂ ಏಕಕಾಲದಲ್ಲಿ ಪ್ರೀತಿಸಲು ಸಾಧ್ಯವಿಲ್ಲ (ಮತ್ತಾಯ 6:24-25 ಮತ್ತು ವ್ಯಾಖ್ಯಾನ ನೋಡಿರಿ). ಅದು ಮಾತ್ರವಲ್ಲ, ಒಬ್ಬ ಎಷ್ಟೇ ಐಶ್ವರ್ಯವಂತನಾದರೂ ಸರಿಯೇ ಆತನು ಎಂದಿಗೂ ಸಂತೃಪ್ತಿ ಹೊಂದುವದಿಲ್ಲ. ಒಬ್ಬನು ನಿಜವಾದ ಸಮಾಧಾನ ಅಥವಾ ಸಂತೋಷ ಅಥವಾ ಸಂತುಷ್ಟಿಗಳನ್ನು ಐಶ್ವರ್ಯದ ಮೂಲಕ ಪಡೆಯಲು ಎಂದಿಗೂ ಸಾಧ್ಯವಿಲ್ಲ. ಬದಲಾಗಿ ಐಶ್ವರ್ಯವು ಚಿಂತೆಗೀಡು ಮಾಡುತ್ತದೆ; ಐಶ್ವರ್ಯಗಳನ್ನು ಹೊಂದಿರುವ ವ್ಯಕ್ತಿಯೂ ಅವು ಗಳನ್ನು ಕಳೆದುಕೊಳ್ಳುವ ಭಯದಿಂದ ನಿರಂತರವಾಗಿ ಚಿಂತೆಗೊಳಗಾಗಿರುತ್ತಾನೆ. ಅವನ ಐಶ್ವರ್ಯಗಳು ಒಂದು ಶಾಪವಾಗಿರುತ್ತದೆ ಹೊರತು ಆಶೀರ್ವಾದವಲ್ಲ. ಆತನು ಅನೇಕ ವೇದನೆಗಳಿಂದ ...... ತಿವಿಸಿಕೊಳ್ಳುತ್ತಾನೆ.

## ತಿಮೊಥೆಯನಿಗೆ ಪೌಲನ ನಿಯೋಗ (6:11-21)

**11** ಎಲೈ ದೇವರ ಮನುಷ್ಯನೇ, ನೀನಾದರೋ ಇವು ಗಳಿಗೆ ದೂರವಾಗಿರು (ಪಲಾಯನ ಮಾಡು) ಎಂದು ಪೌಲನು ಇಲ್ಲ ತಿಮೊಥೆಯನಿಗೆ ಮಾತ್ರವಲ್ಲ, ಆದರೆ ನಂಬುವವರಾದ ನಮ್ಮೆಲ್ಲರಿಗೂ ಬರೆಯುತ್ತಾನೆ. ನೀನಾದರೋ ಇವು ಗಳಿಗೆ ದೂರವಾಗಿರು- ಅಂದರೆ, ಹಣ ಹಾಗೂ ಐಶ್ವರ್ಯದ ಮೇಲಿನ ಪ್ರೀತಿಯಿಂದ- ಮತ್ತು ನೀತಿ (ಮತ್ತಾಯ 6:33), ಭಕ್ತಿ (1 ತಿಮೊಥೆ 4:7- 8), ನಂಬಿಕೆ (ಇಬ್ರಿಯ 11:6), ಪ್ರೀತಿ, ಸ್ಥಿರಚಿತ್ತ, ಸಾತ್ವಿಕತ್ವ (ಗಲಾತ್ಯ 5:22 -23) ಇವು ಗಳನ್ನು ಸಂಪಾದಿಸಿಕೊಳ್ಳುವದಕ್ಕೆ ಪ್ರಯಾಸಪಡು. ಪೌಲನು ಇಲ್ಲಿ ಪಲಾಯನ ಮಾಡು (ಓಡಿಹೋಗು) ಎಂಬ ಬಲವಾದ ಪದವನ್ನು ಉಪಯೋಗಿಸುತ್ತಾನೆ. ಈ ಪ್ರಾಪಂಚಿಕ ಸಂಗತಿಗಳಿಂದ ಪಲಾಯನ ಮಾಡು –ಓಡಿಹೋಗು. ಸಕಲವಿಧವಾದ ಕೆಟ್ಟತನದಿಂದ ಓಡಿಹೋಗು –ದೂರವಾಗಿರು–(1 ತಿಮೊಥೆ 2:22). ಸೈತಾನನು ನಮ್ಮನ್ನು ಶೋಧನೆಯೊಳಗೆ ನಡಿಸಲು– ತನ್ನ ಉರ್ಲಿನೊಳಗೆ ಬೀಳಿಸಲು– ಯಾವಾಗಲೂ ಪ್ರಯತ್ನಿಸುವವನಾಗಿದ್ದಾನೆ, ಆಗ ಆತನು ನಮ್ಮನ್ನು ನುಂಗುವದಕ್ಕೆ ಸುಲಭವಾಗುತ್ತದೆಂದು ಬಯಸುತ್ತಾನೆ (1 ಪೇತ್ರ 5:8).

ನಾವು ಭೌತೀಕ ಆಸ್ತಿಗಳ ಪ್ರೀತಿಯ ಕಡೆಯಿಂದ ಪಲಾಯನ ಮಾಡುವ ಅದೇ ವೇಳೆಯಲ್ಲಿ ಆತ್ಮೀಕ ಆಸ್ತಿಗಳನ್ನು ಸಂಪಾದಿಸಿಕೊಳ್ಳಲು ಪ್ರಯಾಸಪಡಬೇಕು. "ನನಗೆ ಆತ್ಮೀಕ ಆಶೀರ್ವಾದಗಳು ಕೊಡಲ್ಪಡುವದಾದರೆ ನಾನು ಅವು ಗಳನ್ನು ಸ್ವೀಕರಿಸುವೆನು" ಎಂದು ಹೇಳುವು ದು ಸಾಕಾಗುವದಿಲ್ಲ. ಇಲ್ಲ, ನಾವು ಆತ್ಮೀಕ ಆಶೀರ್ವಾದಗಳನ್ನು ಸಂಪಾದಿಕೊಳ್ಳುವದಕ್ಕೆ ಪ್ರಯಾಸಪಡಬೇಕು. ಮತ್ತು ಆಗ ದೇವರು ಅವು ಗಳನ್ನು ನಮಗೆ ಕೊಡುವನು (ಮತ್ತಾಯ 7:7-8, 11; ಲೂಕ 11:13; ಫಿಲಿಪ್ಪಿ 3:12- 14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**12** ಕ್ರಿಸ್ತನಂಬಿಕೆಯ ಶ್ರೇಷ್ಠ ಹೋರಾಟವನ್ನು ಮಾಡು. ಕ್ರೈಸ್ತರು ನಿರಂತರವಾದ ಆತ್ಮೀಕ ಯುದ್ಧದಲ್ಲಿ ತೊಡಗಿರುತ್ತಾರೆ (ಎಫೆಸ 6:10-12; 2 ತಿಮೊಥೆ 4:7ನೋಡಿರಿ). ಈ ವಚನದಲ್ಲಿ ಕ್ರಿಸ್ತನಂಬಿಕೆ ಎಂಬ ಪದವು ಕ್ರಿಸ್ತನ ಬೋಧನೆಗಳು ಸುವಾರ್ತೆ ಎಂದು ಅರ್ಥವನ್ನು ನೀಡುತ್ತದೆ. ಆದರೆ ಅದು ನಮ್ಮ ವೈಯಕ್ತಿಕ ನಂಬಿಕೆ ಎಂಬ ಅರ್ಥವನ್ನೂ ಕೊಡಬಲ್ಲದು; ಸೈತಾನನು ನಮ್ಮ ಮನಸ್ಸುಗಳಲ್ಲಿ ಸಂಶಯವನ್ನು ಸೃಷ್ಟಿಸುವದರ ಮೂಲಕ ನಮ್ಮ ನಂಬಿಕೆಯನ್ನು ಹಾಳುಮಾಡುವದಕ್ಕೆ ಯಾವಾಗಲೂ ಪ್ರಯತ್ನಿಸುವವನಾಗಿದ್ದಾನೆ. ಸೈತಾನನ ವಿರುದ್ಧದ ನಮ್ಮ ಹೋರಾಟದಲ್ಲಿ ನಂಬಿಕೆಯು ನಮ್ಮ ಮುಖ್ಯ ಆಯುಧಗಳಲ್ಲಿ ಒಂದಾಗಿದೆ (ಎಫೆಸ 6:16). ಸಂಶಯವು ಸೈತಾನನ ಆಯುಧವಾಗಿದೆ.

ನಿತ್ಯಜೀವವನ್ನು ಹಿಡಿದುಕೋ ನಮ್ಮ ನಿತ್ಯ ಜೀವವು ನಾವು ನಂಬುವ ಕ್ಷಣದಿಂದ ಪ್ರಾರಂಭಗೊಳ್ಳುತ್ತದೆ. ಹೇಗಿದ್ದರೂ ನಾವು ನಂಬಿಕೆಯ ಮೂಲಕವಾಗಿ ಅದನ್ನು "ಹಿಡಿದುಕೊಳ್ಳಬೇಕು". ಸೈತಾನನು ನಮ್ಮ ನಿತ್ಯಜೀವವನ್ನು ನಮ್ಮಿಂದ ಕಸಕೊಳ್ಳಲು ಪ್ರಯತ್ನಿಸುತ್ತಾರೆ; ಆದರೆ ನಾವು ನಂಬಕೆಯ ಮುಖಾಂತರ ಅದನ್ನು ಹಿಡಿದುಕೊಂಡಿರುವದಾದರೆ ಸೈತಾನನು ಯಶಸ್ವಿಗೊಳ್ಳಲು ಶಕ್ತನಾಗುವದಿಲ್ಲ (ಯೋಹಾನ 10:28-29 ಮತ್ತು ವ್ಯಾಖ್ಯಾನ ನೋಡಿರಿ). ತಿಮೊಥೆಯನು ಒಳ್ಳೆ ಪ್ರತಿಜ್ಞೆಯನ್ನು ಮಾಡಿದ ವೇಳೆಯಲ್ಲಿ– ಅಂದರೆ, ಆತನು ದೀಕ್ಷಾಸ್ನಾನ ಹೊಂದಿದಾಗ– ನಿತ್ಯ ಜೀವಕ್ಕಾಗಿ ಕರೆಯಲ್ಪಟ್ಟನು.

**13-14** ಪೌಲನು ತಿಮೊಥೆಯನಿಗೆ ವಿಧಿಯನ್ನು ನಿಷ್ಕಳಂಕವಾಗಿಯೂ – ನಿಂದಾರಹಿತವಾಗಿಯೂ – ಕಾಪಾಡಬೇಕು ಎಂದು ಖಂಡಿತವಾಗಿ ಹೇಳುತ್ತಾನೆ – ನಿಯೋಗಿಸುತ್ತಾನೆ (ವಚನ 14). ಈ ವಿಧಿಯು ಕೆಟ್ಟತನದ ಕಡೆಯಿಂದ ಓಡಿಹೋಗಿ ನೀತಿಯನ್ನು ಸಂಪಾದಿಸಿಕೊಳ್ಳಬೇಕೆಂದು ಪೌಲನು 11-12 ವಚನಗಳಲ್ಲಿ ಬರೆದಿರುವ ಆಜ್ಞೆಯನ್ನು ಸೂಚಿಸುತ್ತದೆ. ಈ

ವಿಧಿಯು ತಿಮೊಥೆಯನಿಗೆ ಅವನ ದೀಕ್ಷಾಸ್ನಾನದ ವೇಳೆಗಳಲ್ಲಿ ನೀಡಲಾಗಿದ್ದ ಕ್ರಿಸ್ತನನ್ನು ಹಿಂಬಾಲಿಸಬೇಕೆಂಬ ಆಜ್ಞೆಯನ್ನು ಸೂಚಿಸುತ್ತದೆ.

ಪೌಲನು ಈ ವಿಧಿಯನ್ನು ತಿಮೊಥೆಯನಿಗೆ ದೇವರ ಮುಂದೆಯೂ ಕ್ರಿಸ್ತ ಯೇಸುವಿನ ಮುಂದೆಯೂ ಕೊಡುತ್ತಾನೆ. (ವಚನ 13). ನಾವು ಮಾಡುವದೆಲ್ಲಕ್ಕೂ ದೇವರು ಯಾವಾಗಲೂ ಸಾಕ್ಷಿಯಾಗಿ ಪ್ರಸನ್ನನಾಗಿರುತ್ತಾನೆ. ಕ್ರಿಸ್ತನು ನಮ್ಮ ಪಾಪಗಳಿಗಾಗಿ ರೋಮಾಯದೇಶಾಧಿಪತಿಯಾದ ಪೊಂತ್ಯ ಪಿಲಾತನ ಕೈಗಳಲ್ಲಿ ಬಾಧೆಯನ್ನನುಭವಿಸಿದ ವೇಳೆಯಲ್ಲಿ ಸಾಕ್ಷಿಯಾಗಿ ಈ ಪ್ರತಿಜ್ಞೆಯನ್ನು ಮಾಡಿದನು (ಯೋಹಾನ 18:37). ತಿಮೊಥೆಯನು ಕ್ರಿಸ್ತನ ಮಾದರಿಯನ್ನೇ ಅನುಸರಿಸಿ ನಂಬಿಗಸ್ಥನಾಗಿ ಕ್ರಿಸ್ತನನ್ನು ಪ್ರತಿಜ್ಞೆಮಾಡಿ ಆತನಿಗೋಸ್ಕರ ಬಾಧೆಯನ್ನನುಭವಿಸಲು ಸಿದ್ಧನಾಗಿರಲಿ.

ತಿಮೊಥೆಯನು ಕ್ರಿಸ್ತನ ಎರಡನೆಯ ಬರೋಣದ ತನಕ ಈ ವಿಧಿಯನ್ನು ನಿಷ್ಕಳಂಕವಾಗಿಯೂ ನಿಂದಾರಹಿತವಾಗಿಯೂ ಕಾಪಾಡಬೇಕು. ತಿಮೊಥೆಯನು ಈ ವಿಧಿಯನ್ನು ದೋಷವಿಲ್ಲದೆಕಾಪಾಡಿಕೊಳ್ಳುವದು ಮಾತ್ರವಲ್ಲದೆ ಸ್ವತಃ ತಾನೇ ದೋಷವಿಲ್ಲದವನಾಗಿರಬೇಕು (1 ಥೆಸಲೋನಿಕ 3:13; 5:23 ನೋಡಿರಿ).

**15- 16** ದೇವರು ಕ್ರಿಸ್ತನನ್ನು ತನ್ನ ಕ್ಲುಪ್ತ ಸಮಯದಲ್ಲೆ ಭೂಲೋಕಕ್ಕೆ ತಿರುಗಿ ಕಳುಹಿಸುವನು, ಮತ್ತು ಸ್ವತಃ ದೇವರನ್ನು ಹೊರತುಪಡಿಸಿ ಆ ಸಮಯವನ್ನು ಯಾರು ತಿಳಿಯರು (ಮಾರ್ಕ 13:32)

ಈ ಎರಡು ವಚನಗಳಲ್ಲಿ ಪೌಲನು ತನ್ನ ಅಭ್ಯಾಸಗತ ಸಲಹೆಗಳನ್ನು ನಿಲ್ಲಿಸಿ ದೇವರನ್ನು ಸ್ತುತಿಸುತ್ತಾನೆ. ಪೌಲನ ದೇವರು ಒಂದು ಕಲ್ಲಾಗಲಿ ವಿಗ್ರಹವಾಗಲಿ ಒಂದು ಕಲ್ಪನಾಕಥೆಯಾಗಲಿ ಆಗಿರುವದಿಲ್ಲ. ಬದಲಾಗಿ, ಪೌಲನ ದೇವರು ರಾಜಾಧಿರಾಜನೂ ಕರ್ತರ ಕರ್ತನೂ ಆಗಿದ್ದಾನೆ (ಪ್ರಕಟಣೆ 17:14; 19:16), ಈ ಹೆಸರನ್ನೇ ಕ್ರಿಸ್ತನಿಗೂ ಕೊಡಲಾಗಿದೆ ಯಾಕೆಂದರೆ, ಕ್ರಿಸ್ತನೂ ದೇವರೂ ಒಂದಾಗಿದ್ದಾರೆ (ಯೋಹಾನ 10:30).

ದೇವರು ಅಮರತ್ವವುಳ್ಳವನು ಆತನಿಗೆ ಆದಿಅಂತ್ಯ ಇರುವದಿಲ್ಲ. ದೇವರು ಎಷ್ಟೊಂದು ದೊಡ್ಡವನೂ ಉನ್ನತನೂ ಹಾಗೂ ಪರಿಶುದ್ಧನೂ ಆಗಿದ್ದಾನೆಂದರೆ ನಾವು ಆತನ ಬೆಳಕನ್ನು ಸಮೀಪಿಸಲೂ ಸಾಧ್ಯವಿಲ್ಲ (ವಿಮೋಚನಕಾಂಡ 33:18-23). ದೇವರನ್ನು ಯಾರೂ ಕಾಣಲಿಲ್ಲ, ಕಾಣುವದೂ ಇಲ್ಲ (ವಚನ 16). ಆದರೆ ದೇವಕುಮಾರನಾದ ಕ್ರಿಸ್ತನು ತಂದೆಯ ಎದೆಯಲ್ಲಿದ್ದಾನೋ ಆತನೇ ಅವನನ್ನು ತಿಳಿಯಪಡಿಸಿದನು (ಯೋಹಾನ 1:18). ಆತನಿಗ ಮಾನವೂ ನಿತ್ಯಾಧಿಪತ್ಯವೂ ಇರಲಿ.

ನೀವು ಆರಾಧಿಸುವ ದೇವರು ಎಷ್ಟು ದೊಡ್ಡವನು? ನಾವು ಚಿಕ್ಕ ದೇವರನ್ನು ನಂಬುವದಾದರೆ ನಮ್ಮ ನಂಬಿಕೆಯೂ ಚಿಕ್ಕದಾಗಿರುವುದು ನಾವು ನಿರ್ಬಲದೇವರಲ್ಲಿ ನಂಬಕೆಯಿಡುವದಾದರೆ ನಮ್ಮ ಜೀವಿತಗಳು ಸಹ ನಿರ್ಬಲವಾಗಿರುವವು. ಆದರೆ ನಮ್ಮ ದೇವರು ಚಿಕ್ಕವನೂ ನಿರ್ಬಲವೂ ಆಗಿರುವದಿಲ್ಲ. ಆತನು ರಾಜಾಧಿರಾಜನೂ ಕರ್ತರ ಕರ್ತನೂ ಆಗಿದ್ದಾನೆ. ಆತನು ಸರ್ವಸೃಷ್ಟಿಗೆ ಜೀವಾಧಾರಕನಾದ ದೇವರು (ವಚನ 13). ಆತನ ನಾಮಕ್ಕೆ ಸ್ತೋತ್ರವಾಗಲಿ! ಸರ್ವಯುಗಗಳ ಅರಸನೂ, ನಿರ್ಲಯನೂ, ಅದೃಶ್ಯನೂ ಆಗಿರುವ ಏಕದೇವರಿಗೆ ಅರಸನೂ, ನಿರ್ಲಯನೂ, ಅದೃಶ್ಯನೂ ಆಗಿರುವ ಏಕದೇವರಿಗೆ ಯುಗಯುಗಾಂತರಗಳಲ್ಲಿಯೂ ಮಾನಪ್ರಭಾವಗಳಿರಲಿ (1 ತಿಮೊಥೆ 1:17).

**17** ಪೌಲನು 9-10 ವಚನಗಳಲ್ಲಿ ಐಶ್ವರ್ಯವಂತರಾಗಬೇಕೆಂದು ಮನಸ್ಸುಮಾಡುವವರ ಕುರಿತು ಬರೆದನು. ಇಲ್ಲಿ ಪೌಲನು ಈಗಾಗಲೇ ಐಶ್ವರ್ಯವಂತರಾಗಿರುವ ಕ್ರೈಸ್ತರನ್ನುದ್ದೇಶಿಸಿ ಮಾತಾಡುತ್ತಾನೆ. ಅವರು ಅಹಂಕಾರಿಗಳಾಗಿರದಿರಲಿ. ಅವರಿಗಿರುವದೆಲ್ಲವೂ ದೇವರಿಂದ ಕೊಡಲ್ಪಟ್ಟಿರುತ್ತದೆ. ಅವರು ತಮ್ಮ ಐಶ್ವರ್ಯದ ಮೇಲೆ ನಿರೀಕ್ಷೆಯನ್ನಿಡಬಾರದು (ಮತ್ತಾಯ 6:19-21 ಮತ್ತು ವ್ಯಾಖ್ಯಾನ ನೋಡಿರಿ).

ಹಣ ಹಾಗೂ ಐಶ್ವರ್ಯಗಳು ಸ್ವತಃ ಕೆಟ್ಟವುಗಳಲ್ಲ. ದೇವರು ನಮ್ಮ ಅನುಭೋಗಕ್ಕೋಸ್ಕರ ನಮಗೆ ಎಲ್ಲವನ್ನೂ ಕೊಟ್ಟಿರುತ್ತಾನೆ. ಆದದರಿಂದ, ನಾವು ಆತನ ಭೌತೀಕ ಆಶೀರ್ವಾದಗಳನ್ನು ಕೃತಜ್ಞತಾಸ್ತುತಿಯೊಂದಿಗೆ ಸ್ವೀಕರಿಸಿಕೊಳ್ಳಬಹುದು. ಆದರೆ ನಾವು ನಮ್ಮ ಭೌತೀಕ ಆಶೀರ್ವಾದಗಳನ್ನು ಪ್ರೀತಿಸಲಾರಂಭಿಸಿದರೆ ಅವುಗಳನ್ನು ಮಾರಿಬಿಡುವದು ಉತ್ತಮವಾದದ್ದು; ಇಲ್ಲವಾದರೆ ನಾವು ಪರಲೋಕದಲ್ಲಿ ನಮಗೆ ಸಿದ್ಧಮಾಡಿಟ್ಟಿರುವ ಆತ್ಮೀಕ ಆಶೀರ್ವಾದಗಳನ್ನು ಕಳೆದುಕೊಳ್ಳುವ ಅಪಾಯಕ್ಕೆ ಸಿಲುಕಿಕೊಳ್ಳುತ್ತೇವೆ (ಮಾರ್ಕ 10:21-23 ಮತ್ತು ವ್ಯಾಖ್ಯಾನ ನೋಡಿರಿ).

**18- 19** ಒಬ್ಬನು ಹಣದ ಬದಲಾಗಿ ಸತ್ಕಾರ್ಯಗಳಲ್ಲಿ ಐಶ್ವರ್ಯವಂತನಾಗಿರಲಿ ಇಹಲೋಕದ ಐಶ್ವರ್ಯವು ನಾಶವಾಗವದು, ಆದರೆ ದೇವರಿಗಾಗಿ ಮಾಡಿದ ಪ್ರತಿಯೊಂದು ಸತ್ಕಾರ್ಯ ಸದಾಕಾಲವೂ ಉಳಿಯುವದು. ಈ ಜೀವನದಲ್ಲಿ ಸತ್ಕಾರ್ಯಗಳನ್ನು ಮಾಡುವದರ ಮೂಲಕ ವಿಶ್ವಾಸಿಯು ತನಗಾಗಿ ಪರಲೋಕದಲ್ಲಿ ಸಂಪತ್ತನ್ನು ಕೂಡಿಸಿಟ್ಟುಕೊಳ್ಳುತ್ತಾನೆ[17]. ಆದದರಿಂದ, ಐಶ್ವರ್ಯವಂತ ವಿಶ್ವಾಸಿಗಳು ದಾನಧರ್ಮಗಳನ್ನು ಮಾಡುವವರೂ ಪರೋಪಕಾರ ಮಾಡುವವರೂ ಆಗಿರಲಿ (ವಚನ 18). ಆತನು ಇದಕ್ಕೆ ಕಿವಿಗೊಡುವದಾದರೆ ವಾಸ್ತವವಾದ ಜೀವವನ್ನು –ಪರಲೋಕದಲ್ಲಿನ ನಿತ್ಯಜೀವವನ್ನು – ಪಡೆದುಕೊಳ್ಳುವನು.

ಪೌಲನು ಇಹಲೋಕದ ವಿಷಯದಲ್ಲಿ ಐಶ್ವರ್ಯವುಳ್ಳವರ ಬಗ್ಗೆ ಮಾತಾಡುವಾಗ ಆತನ ತಾತ್ಪರ್ಯವೇನು? ಆತನು ತಮ್ಮ ಅಗತ್ಯತೆಗಳಿಗಿಂತಲೂ ಹೆಚ್ಚಾಗಿ ಹೊಂದಿರುವವರೆಲ್ಲರನ್ನು ಸೂಚಿಸುತ್ತಾನೆ. ಹೊಸ ಒಡಂಬಡಿಕೆಯ ಮಟ್ಟಕ್ಕನುಗುಣವಾಗಿ ಯಾವನಾದರೂ ತನ್ನ ಅಗತ್ಯತೆಗಳಿಗಿಂತ ಹೆಚ್ಚಿನವುಗಳನ್ನು ಹೊಂದಿರುವದಾದರೆ ಅವನು ಐಶ್ವರ್ಯವಂತನು.

**20- 21** ತಿಮೊಥೆಯನು ತನ್ನ ವಶಕ್ಕೆ ಕೊಟ್ಟಿರುವದನ್ನು ಕಾಪಾಡಬೇಕು; ಅಂದರೆ, ಆತನು ತನಗೆ ಅಪೊಸ್ತಲರಿಂದ ಕೊಡಲ್ಪಟ್ಟಿರುವ ಕ್ರಿಸ್ತನ ಸಿದ್ದಾಂತಗಳನ್ನು ಸತ್ಯ ಉಪದೇಶಗಳನ್ನೂ ಸಂರಕ್ಷಿಸಬೇಕು. ಆತನು ಅವು ಗಳನ್ನು ಮಾರ್ಪಡುವದಕ್ಕೆ ಅಥವಾ ತಿರುಚುವದಕ್ಕೂ ಅನುಮತಿಸಬಾರದು. ಆತನು ಯಾವದೇ ಸುಳ್ಳುಬೋಧನೆಯು ಸಭೆಯನ್ನು ಪ್ರವೇಶಿಸುವಂತೆ ಬಿಡಬಾರದು. ಬದಲಾಗಿ, ಯಾವದೇ ಸುಳ್ಳು ಬೋಧನೆಯು ಪ್ರವೇಶಿಸುವದಾದರೆ ಅದನ್ನು ಶೀಘ್ರ್ರವೇ ಖಂಡಿಸಬೇಕು ಮತ್ತು ಅದರಿಂದ ವಿಮುಖನಾಗಬೇಕು (1 ತಿಮೊಥೆ 1:3; 4:7; 2 ತಿಮೊಥೆ 2:16- 18 ನೋಡಿರಿ).

---

## ಟಿಪ್ಪಣಿ

1 ಪೌಲನು ಇಲ್ಲಿ ಅವಿಶ್ವಾಸಿಯಾಗಿ ತಿಳಿಯದೆ ನಡೆದುಕೊಳ್ಳುವ ಎಲ್ಲಾ ಜನರು ಏಕಾಏಕಿ ದೇವರ ಕರುಣೆಯನ್ನು ಪಡೆದುಕೊಳ್ಳುವರೆಂದು ಹೇಳುತ್ತಿಲ್ಲ. ಯಾವ ಮನುಷ್ಯನು ಸರಿ ಹಾಗೂ ತಪ್ಪುಗಳ ಬಗ್ಗೆ ಸಂಪೂರ್ಣವಾಗಿ ತಿಳಿಯದವನಾಗಿರುವದಿಲ್ಲ; ಯಾವ ಮನುಷ್ಯನೂ ದೇವರ ಕುರಿತು ಸಂಪೂರ್ಣ ಅಜ್ಞಾನಿಯಾಗಿರುವದಿಲ್ಲ (ರೋಮ 1:18-21 ಮತ್ತು ವ್ಯಾಖ್ಯಾನ ನೋಡಿರಿ). ಪೌಲನು ಆಗಲೂ ತನ್ನ ಪಾಪಗಳ ಬಗ್ಗೆ ಪಶ್ಚಾತ್ತಾಪಪಟ್ಟು ಕ್ರಿಸ್ತನಲ್ಲಿ ನಂಬಿಕೆಯಿಡುವ ಅಗತ್ಯವಿತ್ತು. ಆದರೆ ದೇವರು ಕಡಿಮೆ ತಿಳುವಳಿಕೆಯನ್ನು ಹೊಂದಿರುವವರೆಡೆಗೆ ಹೆಚ್ಚು ಕರುಣೆಯನ್ನೂ ತಾಳ್ಮೆಯನ್ನು ತೋರುವನು; ಮತ್ತು ಹೆಚ್ಚು ತಿಳುವಳಿಕೆಯುಳ್ಳವರಿಗೆ ಆತನು ಹೆಚ್ಚು ಕಠಿಣವಾಗಿ ನ್ಯಾಯ ತೀರಿಸುವನು (ಲೂಕ 12:47-48 ಮತ್ತು ವ್ಯಾಖ್ಯಾನ ನೋಡಿರಿ).

2 ಹೆಚ್ಚಿನ ಚರ್ಚೆಗಾಗಿ, ಸಾಮಾನ್ಯ ಲೇಖನಗಳು: ರಕ್ಷಣೆಯ ಮಾರ್ಗ– ದೇವರ ಆಯ್ಕೆಯೋ? ಅಥವಾ ಮನುಷ್ಯನ ಆಯ್ಕೆಯೋ? ನೋಡಿರಿ.

3 ಸಭಾಧ್ಯಕ್ಷ ಎಂಬ ಪದದ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಬಿಷೋಪ್" ಎಂದು ಹೇಳುತ್ತೇವೆ. ಅರ್ಥವು ಒಂದೇ ಆಗಿದೆ. ಗ್ರೀಕ್ ಭಾಷೆಯಲ್ಲಿ "ಬಿಷೋಪ್" ಎಂದರೆ ಸಭಾಧ್ಯಕ್ಷ ಎಂದು ಅರ್ಥವಾಗಿದೆ.

4 ಯೇಶಾಯ 14:12-15ರಲ್ಲಿ ಪ್ರವಾದಿಯಾದ ಯೇಶಾಯನು ಹೇಗೆ ಸೈತಾನನು (ಯೇಶಾಯ ಇತನನ್ನು ಉದಯ ನಕ್ಷತ್ರ ಎಂದು ಸಹಕರೆಯುತ್ತಾನೆ). ತನ್ನನ್ನು ದೇವರೊಂದಿಗೆ ಸರಿಸಮಾನ ಮಾಡಿಕೊಳ್ಳಲು ಪ್ರಯತ್ನಿಸಿದನೆಂಬದನ್ನು ವಿವರಿಸುತ್ತಾನೆ. ಈ ಕಾರಣದಿಂದ ದೇವರ ನ್ಯಾಯತೀರ್ಪು ಸೈತಾನನ ಮೇಲೆ ಬಂದು ಆತನು ಪರಲೋಕದಿಂದ ಹೊರಕ್ಕೆ ದೊಬ್ಬಲ್ಪಟ್ಟನು.

5 ಬೋಧಿಸುವದರಲ್ಲಿ ಪ್ರವೀಣನಾಗಿರುವದು (ವಚನ 2) ಇಲ್ಲಿ ಸಭಾಹಿರಿಯರ ಅರ್ಹತೆಗಳ ಪಟ್ಟಿಯಲ್ಲಿ ಸೇರಿಸಲ್ಪಟ್ಟಿರುವದಿಲ್ಲ. ಹಾಗಿದ್ದರೂ, ಉಪದೇಶ ಮಾಡುವದರಲ್ಲಿ ಶ್ರೇಷ್ಠರಾಗಿರುವ ಹಿರಿಯರು ಸಹ ಅನೇಕರಿದ್ದಾರೆ, ಅವರು ತಮ್ಮ ಉಪದೇಶದ ವರಗಳನ್ನು ಉಪಯೋಗಿಸಬೇಕು. ಈ ಹಿರಿಯರಲ್ಲಿ ಅನೇಕರು ಅನಂತರದಲ್ಲಿ ಸಭಾಧ್ಯಕ್ಷರೂ ಸಭಾಪಾಲಕರೂ ಆಗುವರು.

6 ಆಳವಾದ ಸತ್ಯಾರ್ಥಗಳು ಎಂಬದಕ್ಕೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಮರ್ಮ" ಎಂದು ಹೇಳುತ್ತೇವೆ. ಅರ್ಥವು ಒಂದೇ ಆಗಿದೆ. ಕ್ರೈಸ್ತನಂಬಿಕೆಯ ಆಳವಾದ ಆತ್ಮೀಕ ಸತ್ಯಗಳು ಪ್ರಾಕೃತರಿಗೆ, ಪ್ರಾಪಂಚಿಕ ಜನರಿಗೆ ಒಂದು "ಮರ್ಮ" ದಂತೆ ಇರುತ್ತವೆ.

7 ಇದೆಲ್ಲವೂ ಸತ್ಯವಾದಾಗ್ಯು ಕೆಲವು ಕ್ರೈಸ್ತರು ಮದುವೆಯನ್ನೇ ಮಾಡಿಕೊಳ್ಳದಿರುವದಕ್ಕೆ ದೇವರಿಂದ ವಿಶೇಷ ಕರೆಯೊಂದನ್ನು ಪಡೆದುಕೊಳ್ಳುತ್ತಾರೆ ಎಂದು ಹೇಳಬಹುದಾಗಿದೆ. ಅಂಥ ಜನರು ಒಬ್ಬಂಟಿಗರಾಗುಳಿಯುವದರ ಮೂಲಕ ದೇವರನ್ನು ಇನ್ನೂ ಹೆಚ್ಚಾಗಿ ಮಹಿಮೆಪಡಿಸಲು ಶಕ್ತರಾಗುವರು.
(ಮತ್ತಾಯ 19:12; 1 ಕೊರಿಂಥ 7:7-8 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

8 ಕ್ರೈಸ್ತರು ಊಟಮಾಡುವ ಮುನ್ನ ಪ್ರಾರ್ಥಿಸುವದಕ್ಕೆ ಎರಡನೆಯ ಕಾರಣವು ಕೃತಜ್ಞತಾಸ್ತುತಿ ಅರ್ಪಿಸುವದಕ್ಕಾಗಿಯೇ (ವಚನ 4).

9 ನಿಜವಾದ ಅಗತ್ಯತೆಯಲ್ಲಿರುವವರು ಎಂಬ ಮಾತುಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ದಿಕ್ಕಿಲ್ಲದವರು" ಎಂದು ಹೇಳುತ್ತೇವೆ. ಇದು ಗ್ರೀಕ್ ಪ್ರತಿಯ ಅಕ್ಷರಶಃ ಭಾಷಾಂತರವಾಗಿದೆ. ಈ ವಚನದ ಸನ್ನಿವೇಶದಲ್ಲಿ ಅರ್ಥವು ಒಂದೇ ಆಗಿದೆ. ಇದೇ ವಾಕ್ಯವು 5 ಮತ್ತು 16 ವಚನಗಳಲ್ಲಿ ಸಹ ಕಂಡುಬರುತ್ತದೆ.

10 3ನೇ ವಚನದ ವ್ಯಾಖ್ಯಾನಕ್ಕೆ ನೀಡಲಾದ ಅಡಿ ಟಿಪ್ಪಣಿಯನ್ನು ನೋಡಿರಿ.

11 ಕೆಲವು ಸಭೆಗಳಲ್ಲಿ ಸೇವೆಯ ವಿವಿಧ ಕಾರ್ಯಗಳನ್ನು ನಿಭಾಯಿಸುವದಕ್ಕೆ ಜವಾಬ್ದಾರಿ ಹಾಗೂ ಅಧಿಕಾರವನ್ನು ನೀಡಲಾಗಿರುವ ಸ್ತ್ರೀಯರ ಒಂದು ವಿಶೇಷ ಗುಂಪು ಇರುತ್ತದೆ. (ಸಾಮಾನ್ಯ ಲೇಖನ; ಸಭೆಯಲ್ಲಿ ಸ್ತ್ರೀಯರು ನೋಡಿರಿ).

12 ನಾವು ದೇವರಿಗೆ ಯಾವದೇ ವಿಧದ ಪ್ರಮಾಣ ಅಥವಾ ವಾಗ್ದಾನ ಮಾಡುವದಾದರೆ ಅದನ್ನು ಅಲ್ಲಂಘಿಸದಂತೆ ಜಾಗರೂಕರಾಗಿರಬೇಕು; ಇಲ್ಲವಾದರೆ ನಾವು ದೇವರ ನ್ಯಾಯತೀರ್ಪಿಗೊಳಗಾಗುತ್ತೇವೆ (ಅರಣ್ಯಕಾಂಡ 30:2; ಧರ್ಮೋಪದೇಶಕಾಂಡ 23:21-22; ಪ್ರಸಂಗಿ 5 :4-5; ಅ.ಕೃತ್ಯ 5:1-5 )

13 3ನೇ ವಚನದ ವ್ಯಾಖ್ಯಾನಕ್ಕೆ ನೀಡಲಾಗಿರುವ ಅಡಿಟಿಪ್ಪಣಿಯನ್ನು ನೋಡಿರಿ

14 ಪೌಲನು ಈ ವಚನದಲ್ಲಿ ಎರಡು ವಿವಿಧ ರೀತಿಯ ಹಿರಿಯರ ಬಗ್ಗೆ ಮಾತಾಡುತ್ತಿದ್ದಾನೆಂದು ಕೆಲವು ಬೈಬಲ್ ಪಂಡಿತರು ಅಭಿಪ್ರಾಯಪಡುತ್ತಾರೆ: ಸಭೆಯ ವ್ಯವಹಾರಗಳನ್ನು ಹಿರಿಯರು ಮತ್ತು ಪ್ರಸಂಗದ ಹಾಗೂ ಉಪದೇಶದ ಕೆಲಸವನ್ನು ಹೊಂದಿರುವ ಹಿರಿಯರು. ಅವರವರ ವರಗಳಿಗನುಗುಣವಾಗಿ ಬೇರೆ ಬೇರೆ ಜವಾಬ್ದಾರಿಗಳನ್ನು ಕೊಡಲ್ಪಟ್ಟಿರುವ ವಿವಿಧ ರೀತಿಯ ಹಿರಿಯರು ಇರುವದು ನ್ಯಾಯವಾದದ್ದು. ಹೆಚ್ಚಿನ ಚರ್ಚೆಗಾಗಿ, ಸಾಮಾನ್ಯ ಲೇಖನ: ಸಭಾ ಆಡಳಿತ ನೋಡಿರಿ.

15 ಎಲ್ಲರ ಎದುರಿನಲ್ಲಿ ಎಂಬ ಮಾತುಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಸಾರ್ವಜನಿಕವಾಗಿ" ಎಂದು ಹೇಳುತ್ತದೆ. ಪೌಲನು ಅಪರಾಧಿಗಳೆಂದು ಕಂಡುಬಂದ ಹಿರಿಯನನು ಸಭೆಯ "ಎಲ್ಲಾ" ಸದಸ್ಯರ ಎದುರಿನಲ್ಲಿ ಗದರಿಸಲ್ಪಡಬೇಕೆಂದು ಹೇಳುತ್ತಿದ್ದಾನೋ ಅಥವಾ ಇತರ "ಎಲ್ಲಾ" ಹಿರಿಯರ ಎದುರಿನಲ್ಲಿ ಮಾತ್ರವೇ ಗದರಿಸಲ್ಪಡಬೇಕೆಂದು ಹೇಳುತ್ತಿದ್ದಾನೋ ಎಂಬದು ಖಚಿತವಾಗಿರುವದಿಲ್ಲ. ಎರಡು ಅರ್ಥಗಳ ಸಾಧ್ಯತೆಯಿದೆ.

16 ಈ ದಿನಗಳಲ್ಲಿ ಒಬ್ಬನ ಹೊಟ್ಟೆ ನೋವಿಗಾಗಿ ಅನೇಕ ರೀತಿಯ ಔಷಧಿಗಳು ಇರುತ್ತವೆ; ಆದದರಿಂದ,ದ್ರಾಕ್ಷಾರಸ (ಮಧ್ಯ)ವನ್ನು ಕುಡಿಯುವ ಅವಶ್ಯಕತೆಯಿರುವದಿಲ್ಲ. ಪೌಲನು ತಿಮೊಥೆಯನಿಗೆ ದ್ರಾಕ್ಷರಸವನ್ನು ಸ್ವಲ್ಪವಾಗಿ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾನೆಯೇ ಹೊರತು ಬಹಳಷ್ಟು ಅಲ್ಲ ಎಂಬದನ್ನು ಗಮನಿಸಿರಿ.

17 ಆದರೆ ಮನುಷ್ಯನು ಸತ್ಕ್ರಿಯೆಗಳನ್ನು ಮಾಡುವದರ ಮೂಲಕ ರಕ್ಷಿಸಲ್ಪಡುವದಿಲ್ಲ; ಆತನಿಗೆ ಅವನ ಸತ್ಕ್ರಿಯೆಗಳಿಗಾಗಿ ಪ್ರತಿಫಲವಷ್ಟೇ ದೊರೆಯುತ್ತದೆ (ಮತ್ತಾಯ 16:27). ರಕ್ಷಣೆಯು ಕೃಪೆಯ ಮೂಲಕ ನಂಬಿಕೆಯಿಂದ ಮಾತ್ರವೇ ದೊರೆಯುವದು (ಎಫೆಸ 2:8- 10 ಮತ್ತು ವ್ಯಾಖ್ಯಾನ ನೋಡಿರಿ).

# ಪೌಲನು ತಿಮೊಥೆಯನಿಗೆ ಬರೆದ ಎರಡನೆಯ ಪತ್ರಿಕೆ

## ಪರಿಚಯ

ಪೌಲನು ತಿಮೊಥೆಯನಿಗೆ ತನ್ನ ಎರಡನೆಯ ಪತ್ರಿಕೆಯನ್ನು ರೋಮಪುರದಲ್ಲಿನ ಆತನ ಎರಡನೆಯ ಹಾಗೂ ಅಂತಿಮ ಸೆರೆವಾಸದ ವೇಳೆಯಲ್ಲಿ ಬರೆದನೆಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ. ಆಸಮಯದಲ್ಲಿ ತಿಮೊಥೆಯನು ಎಫೆಸ ಸಭೆಯಲ್ಲಿ ಪ್ರಮುಖನಾಯಕನಾಗಿದ್ದನು (1 ತಿಮೊಥೆಯನಿಗೆಃ ಪರಿಚಯ ನೋಡಿರಿ).

ಪೌಲನು ರೋಮಪುರದಲ್ಲಿನ ತನ್ನ ಮೊದಲನೆಯ ಸೆರೆವಾಸದಿಂದ ಬಿಡುಗಡೆಗೊಂಡಿದ್ದನೆಂದು ಈ ಪಂಡಿತರು ನಂಬುತ್ತಾರೆ (ಅ.ಕೃತ್ಯ 28:16-30). ಆದರೆ ಸ್ವಲ್ಪ ಕಾಲದ ನಂತರ ಪೌಲನು ಪುನಃ ಬಂಧಿಸಲ್ಪಟ್ಟು ಕಾಲಕ್ರಮೇಣದಲ್ಲಿ ರೋಮಾಯರಿಂದ ಕೊಲ್ಲಲ್ಪಟ್ಟನೆಂದು ಇವರು ಹೇಳುತ್ತಾರೆ.

ಪೌಲನು ಈ ಪತ್ರಿಕೆಯನ್ನು ಬರೆಯುತ್ತಿರುವ ಹಾಗೆ ತನ್ನ ಮರಣವು ಹತ್ತಿರವಾಗಿದೆ ಎಂಬದನ್ನು ಬಲ್ಲವನಾಗಿದ್ದನು (2 ತಿಮೊಥೆ 4:6). ಇದು ಪೌಲನ ಹೊಸ ಒಡಂಬಡಿಕೆಯ ಪತ್ರಿಕೆಗಳಲ್ಲಿ ಕೊನೆಯದಾಗಿದೆ.

## ಹೊರ ರೇಖೆ

ಅ. ಪಿಠೀಕೆ (1:1-18).
 1. ವಂದನೆಗಳು ಹಾಗೂ ಕೃತಜ್ಞತಾಸ್ತುತಿ (1:1-7).
 2. ನಂಬಿಗಸ್ಥನಾಗಿರಬೇಕೆಂದು ಪ್ರೋತ್ಸಾಹಿಸಿದ್ದು (1:8-18).

ಆ. ಕ್ರೈಸ್ತ ನಾಯಕ (2:1-3:17).
 1. ಕ್ರಿಸ್ತನ ಸೈನಿಕ (2:1-13).
 2. ದೇವರಿಂದ ಅನುಮೋದಿತನಾದ ಕೆಲಸಗಾರ (2:14-26).
 3. ಸುವಾರ್ತೆಯ ಪೋಷಕ (3:1-17).

ಇ. ಮುಕ್ತಾಯ (4:1-22).
 1. ತಿಮೊಥೆಯನಿಗೆ ಪೌಲನ ಅಂತಿಮ ನಿಯೋಗ (4:1-8).
 2. ವಯಕ್ತಿಕ ಹೇಳಿಕೆಗಳು (4:9-22).

## ಅಧ್ಯಾಯ - 1

### ಕೃತಜ್ಞತಾಸ್ತುತಿ ಮತ್ತು ಪ್ರೋತ್ಸಾಹ (1:1-18)

1 ಪೌಲನು ತನ್ನ ಬಹುಪಾಲು ಪತ್ರಿಕೆಗಳಲ್ಲಿ ತಾನು ಮನುಷ್ಯನ ಚಿತ್ತಕ್ಕನುಸಾರವಾಗಿ ಅಲ್ಲ, ಆದರೆ ದೇವರ ಚಿತ್ತಾನುಸಾರವಾಗಿ ಅಪೊಸ್ತಲನಾಗಿರುತ್ತಾನೆ ಎಂಬುದನ್ನು ತನ್ನ ವಾಚಕರಿಗೆ ಜ್ಞಾಪಕಪಡಿಸುತ್ತಾನೆ. (1 ಕೊರಿಂಥ 1:1; ಎಫೆಸ 1:1; 1 ತಿಮೊಥೆ 1:1 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

2 ರೋಮ 1:7; ಎಫೆಸ 1:2; 1 ತಿಮೊಥೆ 1:2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

3 ಪೌಲನು ಇಲ್ಲಿ ತಿಮೊಥೆಯನಿಗಾಗಿ ಸ್ತೋತ್ರ ಸಲ್ಲಿಸುತ್ತಾನೆ (ರೋಮ 1:8; ಎಫೆಸ 1:15-16; ಕೊಲೊಸ್ಸೆ 1:3-4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಪೌಲನು ತಿಮೊಥೆಯನನ್ನು ಹಗಲಿರುಳು ತನ್ನ ಪ್ರಾರ್ಥನೆಗಳಲ್ಲಿ ಜ್ಞಾಪಿಸಿಕೊಳ್ಳುತ್ತಾನೆ (ಅ.ಕೃತ್ಯ 20:31). ಪೌಲನು ತಿಮೊಥೆಯನಿಗೆ ಬರೆದ ಮೊದಲನೆಯ ಪತ್ರಿಕೆಯಲ್ಲಿ ತಿಳಿಸಿರುವ ಪ್ರಕಾರವೇ ಇಲ್ಲಿ ಪುನಃ ಒಳ್ಳೇ ಮನಸಾಕ್ಷಿ ಬಗ್ಗಿ ಪ್ರಸ್ತಾಪಿಸುತ್ತಾನೆ. ಪೌಲನ ಅನುಭವದಲ್ಲಿ, ಫಲದಾಯಕ ಹಾಗೂ ಆತ್ಮಭರಿತ ಕ್ರೈಸ್ತ ಜೀವನ ನಡಿಸುವದಕ್ಕೆ ಶುದ್ಧಮನಸಾಕ್ಷಿಯು ಅತ್ಯಂತ ಅವಶ್ಯಕವಾಗಿತ್ತು (1 ತಿಮೊಥೆ 1:5 ;19 ಮತ್ತು ವ್ಯಾಖ್ಯಾನ ನೋಡಿರಿ).

4 ಪೌಲನು ತಿಮೊಥೆಯನ ಕಣ್ಣೀರುಗಳನ್ನು ನೆನಪಿಗೆ ತಂದುಕೊಳ್ಳುತ್ತಾನೆ. ಪೌಲನು ಇಲ್ಲಿ ತಾನು ಎಫೆಸ ಸಭೆಯ ಹಿರಿಯರಿಗೆ ನೀಡಿದ ಅಂತಿಮ ವಿದಾಯದ ಕುರಿತಾಗಿ ಯೋಚಿಸುತ್ತಿರುವ ಸಾಧ್ಯತೆಯಿದೆ; ಬಹುಶಃ ಅವರೊಳಗೆ ತಿಮೊಥೆಯನೂ ಸೇರಿದ್ದನು (ಅ.ಕೃತ್ಯ 20:37).

5 ಅನೇಕ ಕ್ರೈಸ್ತರು ಪ್ರಾರಂಭದಲ್ಲಿ ತಾವು ತಮ್ಮ ಭಕ್ತಿವಂತ ಸಹಪಾಠಿಗಳ ಪ್ರಭಾವ ಹಾಗೂ ಮಾದರಿಯ ಮೂಲಕವಾಗಿ ಕ್ರಿಸ್ತನಲ್ಲಿ ನಂಬಿಕೆಯಿಟ್ಟರೆಂದು ಸಾಕ್ಷಿ ನೀಡುತ್ತಾರೆ. ತಿಮೊಥೆಯನ ವಿಷಯದಲ್ಲಿಯೂ ಹಾಗೆಯೇ ಆಗಿತ್ತು. ಪೌಲನು ಇಲ್ಲಿ ತಿಮೊಥೆಯನ ತಾಯಿ ಮತ್ತು ಅಜ್ಜಿಯ ನಂಬಿಕೆಯನ್ನು ನೆನಪಿಗೆ ತಂದುಕೊಳ್ಳುತ್ತಾನೆ; ಅವರ ನಂಬಿಕೆಯ ಮುಖಾಂತರ ಸ್ವತಃ ತಿಮೊಥೆಯನು ಕ್ರಿಸ್ತನಲ್ಲಿ ನಂಬಿಕೆಯಿಡುವಂತೆ ನಡಿಸಲ್ಪಟ್ಟಿದ್ದನು (ಅ.ಕೃತ್ಯ 16:1). ಒಬ್ಬನು ತನ್ನ ತಂದೆ ತಾಯಿಗಳ ನಂಬಿಕೆಯ ನಿಮಿತ್ತವಾಗಿ ಏಕಾಏಕಿ ಕ್ರೈಸ್ತನಾಗುವದಿಲ್ಲ. ನಾವು ಪ್ರತಿಯೊಬ್ಬರು ಸ್ವತಃ ನಂಬುವವರಾಗಿ ನೂತನ ಆತ್ಮೀಕ ಜೀವಿತವನ್ನು ಪಡೆದುಕೊಳ್ಳಬೇಕು (ಯೋಹಾನ 3:3). ಆದರೆ ಇದು ನಿಜವಾಗಿದ್ದಾಗ್ಯು, ಮಕ್ಕಳು ಕ್ರಿಸ್ತನಂಬಿಕೆಯುಳ್ಳ ತಮ್ಮ ತಂದೆತಾಯಿಗಳ ಮಾದರಿಯನ್ನು ಅನುಸರಿಸಬೇಕೆಂದು ದೇವರ ಅಭಿಲಾಷೆಯೂ ಯೋಜನೆಯೂ ಆಗಿದೆ.

6 ಪೌಲನು ತಿಮೊಥೆಯನಿಗೆ ದೇವರು ಅವನಿಗೆ ನೀಡಿರುವ ವರವನ್ನು ಪ್ರಜ್ವಲಿಸುವಂತೆ ಮಾಡಬೇಕೆಂದು ಪ್ರಬೋಧಿಸುತ್ತಾನೆ. ತಿಮೊಥೆಯನಿಗೆ ಸಭೆಯ ನಾಯಕನಾಗಿರುವದಕ್ಕೆ ಹೊಸ ವರವೊಂದರ ಅಗತ್ಯವಿರುವದಿಲ್ಲ; ಆತನು ಈಗಾಗಲೇ ತನಗೆ ನೀಡಲಾಗಿರುವ ವರವನ್ನು ಜೀವಂತವಾಗಿಟ್ಟುಕೊಳ್ಳುವ ಅಗತ್ಯವಷ್ಟೇ ಇರುತ್ತದೆ. ಆತನು ಅದರ ಜ್ವಾಲೆ ಉರಿಯುತ್ತಿರುವ ಹಾಗೆ ಕಾಪಾಡಿಕೊಳ್ಳಬೇಕಾಗಿರುತ್ತದೆ. ಅದೇ ರೀತಿಯಾಗಿ ನಾವು , ದೇವರು ನಮಗೆ ನೀಡಿರುವ ವರಗಳನ್ನು ಉಪಯೋಗಿಸಿ ಅಭಿವೃದ್ಧಿ ಪಡಿಸತಕ್ಕದ್ದು. ಯಾವನು ತನ್ನ ವರವನ್ನು ಉಪಯೋಗಿಸುವದಿಲ್ಲವೋ ಆತನು ದೀಪವನ್ನು ಪಡೆದುಕೊಂಡು ನಂತರ ಅದು ನಂದಿಹೋಗುವಂತೆ ಬಿಟ್ಟು ಕತ್ತಲೆಯಲ್ಲಿ ಕುಳಿತುಕೊಂಡಾವನಾಗಿರುವ ಮನುಷ್ಯನಂತಿರುತ್ತಾನೆ.

ತಿಮೊಥೆಯನು ಸಭಾನಾಯಕನಾಗಿರುವದಕ್ಕಾಗಿನ ವರ ಅಥವಾ ಅಭಿಷೇಕವನ್ನು ಪೌಲನು ಇತರ ಕೆಲವು ಹಿರಿಯರ ಜೊತೆಯೊಂದಿಗೆ ಆತನ ಮೇಲೆ ಕೈಗಳನ್ನಿಟ್ಟು ಸಭೆಯಲ್ಲಿ ನಾಯಕನಾಗಿರುವದಕ್ಕೆ ನೇಮಕ ಮಾಡಿದಾಗ ಪಡೆದುಕೊಂಡಿದ್ದನು (1 ತಿಮೊಥೆ 4:14 ಮತ್ತು ವ್ಯಾಖ್ಯಾನ ನೋಡಿರಿ).

ಪ್ರತಿಯೊಬ್ಬ ಕ್ರೈಸ್ತನೂ ಅವನು ಅಥವಾ ಅವಳಿಗೆ ದೇವರು ನೇಮಿಸಿದ ಕೆಲಸವನ್ನು ಮಾಡುವು ದಕ್ಕೆ ಅವಶ್ಯಕವಾದ ಆತ್ಮೀಕ ಹಾಗೂ ಸ್ವಾಭಾವಿಕ ವರಗಳನ್ನು ಪಡೆದುಕೊಂಡಿರುತ್ತಾನೆ. ದೇವರು ನಮ್ಮನ್ನು ಸಿದ್ಧಮಾಡಿದ ಹಾಗೂ ಸನ್ನದ್ದುಗೊಳಿಸಿರದ ಕೆಲಸವನ್ನು ಮಾಡುವಂತೆ ನಮಗೆ ಎಂದಿಗೂ ಹೇಳುವದಿಲ್ಲ.

7 ತಿಮೊಥೆಯನು ಸ್ವಭಾವತಃ ಒಬ್ಬ ಹೇಡಿ ಹಾಗೂ ಅಂಜುಬುರುಕ ವ್ಯಕ್ತಿಯಾಗಿದ್ದನು. ಪೌಲನು ತಿಮೊಥೆಯನಿಗೆ ಜ್ಞಾಪಕಪಡಿಸುವದೇನೆಂದರೆ, ಆತನ ಸ್ವಾಭಾವಿಕ ಹೇಡಿತನದ ಸ್ಥಾನದಲ್ಲಿ ದೇವರು ಪವಿತ್ರಾತ್ಮನ ಮೂಲಕ ಅವನಿಗೆ ಬಲ ಪ್ರೀತಿ ಶಿಕ್ಷಣಗಳ ಆತ್ಮವನ್ನು ಕೊಡವನೆಂಬದೇ ಇತಿಹಾಸದುದ್ದಕ್ಕೂ ದೇವರು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟಿರುವ ಸ್ವಭಾವತಃ ಹೇಡಿಗಳಾದ ಜನರ ಮುಖಾಂತರ ದೊಡ್ಡ ಹಾಗೂ ಆಶ್ಚರ್ಯಕರವಾದ ಸಂಗತಿಗಳನ್ನು ನೆರವೇರಿಸಿರುತ್ತಾನೆ.

ಯಾವದೇ ನಾಯಕನಿಗೆ ಸ್ವಶಿಕ್ಷಣ ಹಾಗೂ ಶಮೆದಮೆಗಳು ಅತಿಪ್ರಾಮುಖ್ಯವಾಗಿರುತ್ತವೆ. ಒಬ್ಬ ನಾಯಕನು ಇತರರಿಗೆ ಶಿಕ್ಷಣ ನೀಡುವದಕ್ಕೆ ಮುಂಚೆ ತನಗೆ ಶಿಕ್ಷಣ ನೀಡಿಕೊಳ್ಳಲು ಶಕ್ತನಾಗಿರಬೇಕು.

8 ಆದದರಿಂದ, ಪೌಲನು ತಿಮೊಥೆಯನಿಗೆ ಸ್ವಾಭಾವಿಕವಾದ ಯಾವದೇ ಅಂಜಿಕೆ ಹಾಗೂ ನಾಚಿಕೆಯನ್ನು ತೊರೆದುಬಿಟ್ಟು ಕ್ರಿಸ್ತನ ವಿಷಯವಾಗಿ ಧೈರ್ಯದಿಂದ ಸಾಕ್ಷಿ ಹೇಳಬೇಕು ಎಂದು ಪ್ರೋತ್ಸಾಹಿಸುತ್ತಾನೆ. ತಿಮೊಥೆಯನು ಪೌಲನೊಂದಿಗೆ ಸುವಾರ್ತೆಗೋಸ್ಕರ ಶ್ರಮೆಯನ್ನನುಭವಿಸಲು ಸಿದ್ಧನಾಗಿರಲಿ ಪೌಲನ ಕಾಲದಲ್ಲಿ ಕ್ರೈಸ್ತಬೋಧಕರು ಹಾಗೂ ಸಭಾಪಾಲಕರು ಸೆರೆಮನೆಗೆ ಹಾಕಲ್ಪಟ್ಟರು, ಹೊಡಿಸಿಕೊಳ್ಳಲ್ಪಟ್ಟರು, ಅಲ್ಲದೆ ಕೊಲ್ಲಲ್ಪಟ್ಟರು. ಆದರೆ ತಿಮೊಥೆಯನು ದೇವರ

ಬಲವನ್ನು ಆಶ್ರಯಿಸಿ–ಅಂದರೆ, ಪವಿತ್ರಾತ್ಮನ ಮೂಲಕ ಅವನಿಗೆ ಕೊಡಲ್ಪಟ್ಟಿದ್ದ ಬಲದ ಮೂಲಕ –ಅಂಥ ಶ್ರಮೆಯನ್ನು ಸೈರಿಸಿಕೊಳ್ಳಲು ಶಕ್ತನಾಗುವು ದು (ವಚನ 7).

ಪೌಲನು ತಿಮೊಥೆಯನಿಗೆ ಮಾಡಿದ ವಯಕ್ತಿಕ ಮನವಿಯನ್ನು ಗಮನಿಸಿರಿ. ಶ್ರೇಷ್ಠ ಅಪೊಸ್ತಲ, ರೋಮಪು ರದಲ್ಲಿ ಸೆರೆಯಾಳಾಗಿರುವವನು ತನ್ನ ಆತ್ಮೀಕ ಮಗನಾದ ತಿಮೊಥೆಯನಿಗೆ ಬರೆದು ನನ್ನ ವಿಷಯದಲ್ಲಿ ನಾಚಿಕೆ ಪಡದೆ ಇರಬೇಕೆಂದು ಕೇಳಿಕೊಳ್ಳುತ್ತಾನೆ. ಪೌಲನು ತನಗಿಂತ ಮುಂಚೆ ಯೇಸು ಅಪರಾಧಿಯಂತೆ ಮರಣಕ್ಕೊಳಗಾದ ಹಾಗೆಯೇ ಈಗ ಕೊಲ್ಲಲ್ಪಡಲಿಕ್ಕಿದ್ದನು. ಲೋಕದ ದೃಷ್ಟಿಯಲ್ಲಿ ಪೌಲನು ತಿರಸ್ಕೃತನೂ ಅವಮಾನ ಕ್ಕೊಳಗಾದವನೂ ಆಗಿದ್ದನು. ಆದರೆ ತಿಮೊಥೆಯನು ಪೌಲನು ತಾತ್ಸಾರ ಮಾಡದಿರಲಿ. ಬದಲಾಗಿ, ಆತನು ಪೌಲನ ಹೆಜ್ಜೆ ಜಾಡುಗಳನ್ನು ಅನುಸರಿಸಿ ಕ್ರಿಸ್ತನಿಗೋಸ್ಕರ ಶ್ರಮೆಯನ್ನನುಭವಿಸಲು ಸಿದ್ಧನಾಗಿರಲಿ.

**9** ಪೌಲನು 9-10 ವಚನಗಳಲ್ಲಿ ಸ್ವಲ್ಪ ಕಾಲ ತನ್ನ ಬೋಧನೆಯನ್ನು ನಿಲ್ಲಿಸಿ ಯೇಸುಕ್ರಿಸ್ತನ ಮುಖಾಂತರ ನಮ್ಮನ್ನು ರಕ್ಷಿಸಿದ ದೇವರನ್ನು ಸ್ತುತಿಸುತ್ತಾನೆ (1 ತಿಮೊಥೆ 1:1ಮತ್ತು ವ್ಯಾಖ್ಯಾನ ನೋಡಿರಿ). ದೇವರು ನಮ್ಮನ್ನು ರಕ್ಷಿಸಿರುವದು ಮಾತ್ರವಲ್ಲದೆ ಆತನು ನಮ್ಮನ್ನು ಪರಿಶುದ್ಧರಾಗುವದಕ್ಕೆ ಸಹ ಕರೆದನು (ಎಫೆಸ 1:4; 2:10; 1 ಪೇತ್ರ 1:15-16 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಈ ಕೃಪೆಯು ನಮಗೆ ಅನಾದಿಕಾಲದಲ್ಲಿ– ಅಂದರೆ, ಜಗದುತ್ಪತ್ತಿಗೆ ಮುಂಚೆ (ಎಫೆಸ 1:4)ಕೊಡಲ್ಪಟ್ಟಿತು.

**10** ಈ ಕೃಪೆಯು ಲೋಕದಲ್ಲಿ ಮೊದಲು ನಮ್ಮ ರಕ್ಷಕನಾದ ಕ್ರಿಸ್ತ ಯೇಸುವಿನ ಪ್ರತ್ಯಕ್ಷತೆಯ ಮೂಲಕ ಪ್ರಕಾಶಗೊಂಡಿತು; ಅಂದರೆ, ದೇವರ ಕೃಪೆಯು ಕ್ರಿಸ್ತನ ರೂಪದಲ್ಲಿ ಲೋಕದೊಳಗೆ ಬಂದಿತು (ತೀತನು 2:11). ಕ್ರಿಸ್ತನು ನಮ್ಮ ಕಡೇ ವೈರಿಯಾದ ಮರಣವನ್ನು ನಾಶಮಾಡಿದನು (1 ಕೊರಿಂಥ 15:26). ಈಗ ನಾವು ಇನ್ನು ಮೇಲೆ ಮರಣಕ್ಕೆ ಭಯ ಪಡಬೇಕಾಗಿಲ್ಲ (2 ಕೊರಿಂಥ 15:55-56; ಇಬ್ರಿಯ 2:14-15). ಯೇಸು ಜೀವವನ್ನೂ ನಿರ್ಲಯತ್ವವನ್ನು– ಅಂದರೆ, ನಿತ್ಯ ಜೀವವನ್ನು– ಪ್ರಕಾಶಗೊಳಿಸಿದನು. ಈ ನಿತ್ಯ ಜೀವ ಅಥವಾ ರಕ್ಷಣೆಯು ಪ್ರಾರಂಭದಲ್ಲಿ ಮನುಷ್ಯರಿಗೆ ಮರೆಯಾಗಿತ್ತು; ಇದು ಒಂದು "ಮರ್ಮ" ದಂತಿತ್ತು. ಆದರೆ ಈಗ ನಂಬುವವರಿಗೆಲ್ಲಾ ಇದು ಪ್ರಕಟವಾಗಿರುತ್ತದೆ; ಅದು ಪ್ರಕಾಶಗೊಳಿಸಲ್ಪಟ್ಟಿರುತ್ತದೆ. (ರೋಮ 16:25-26; ಎಫೆಸ 3:4-5 ನೋಡಿರಿ). ಈ ಮರ್ಮವು ಸುವಾರ್ತೆಯ ಮೂಲಕ ಪ್ರಕಾಶಕ್ಕೆ ತರಲ್ಪಟ್ಟಿರುತ್ತದೆ. ವಾಸ್ತವದಲ್ಲಿ 9-10 ವಚನಗಳೇ ಕ್ರಿಸ್ತನ ಸುವಾರ್ತೆಯ ಕ್ಲುಪ್ತಸಾರಾಂಶವಾಗಿದೆ.

**11** ಪೌಲನು ತಾನು ಹೀಗೆ ಮಹಾಸುವಾರ್ತೆಗೋಸ್ಕರ ಸಾರುವವನಾಗಿಯೂ ಅಪೊಸ್ತಲನಾಗಿಯೂ ಉಪದೇಶಕನಾಗಿಯೂ ನೇಮಿಸಲ್ಪಟ್ಟನೆಂಬದನ್ನು ಎಂದಿಗೂ ಮರೆಯಲಾರನು (೧ ತಿಮೊಥೆ 2:7). ಆದರೆ ಈಗ ತಿಮೊಥೆಯನು ಪೌಲನ ಸ್ಥಾನವನ್ನು ವಹಿಸಿಕೊಳ್ಳಬೇಕು.

**12** ಪೌಲನು ಕ್ರಿಸ್ತನ ಸುವಾರ್ತೆಯನ್ನು ಸಾರುವಿಕೆಯ ನಿಮಿತ್ತದಿಂದಲೇ ಶ್ರಮೆಯನ್ನು ಅನುಭವಿಸಬೇಕಾಗಿತ್ತು. ಹೇಗಿದ್ದರೂ, ಕ್ರಿಸ್ತನಿಗೋಸ್ಕರ ಶ್ರಮೆಯನ್ನನುಭವಿಸುವದರಲ್ಲಿ ನಾಚಿಕೆ ಪಡುವಂತದ್ದೇನೂ ಇರುವದಿಲ್ಲ; ಇದು ಒಬ್ಬ ಪು ರುಷ ಅಥವಾ ಸ್ತ್ರೀಯು ಪಡೆದುಕೊಳ್ಳಬಹುದಾದ ಒಂದು ಅತ್ಯುನ್ನತ ಶ್ಲಾಘ್ಯವಾಗಿದೆ (1 ಪೇತ್ರ 4:12-16 ನೋಡಿರಿ).

ಪೌಲನು ತಾನು ನಂಬಿರುವಾತನನ್ನು ಬಲ್ಲವನಾಗಿದ್ದಾನೆ. ಆತನು ದೇವರನ್ನು ವಯಕ್ತಿಕವಾಗಿ ಬಲ್ಲನು; ಆತನು ಅವನನ್ನು ಸಂಧಿಸಿರುತ್ತಾನೆ! ಪೌಲನು ದೇವರಲ್ಲಿ ಪೂರ್ಣಭರವಸೆಯನ್ನು ಹೊಂದಿದ್ದಾನೆ. ಆದದರಿಂದ, ಆತನು ತನ್ನ ಆತ್ಮ, ಪ್ರಾಣ, ತನ್ನ ರಕ್ಷಣೆ ಹಾಗೂ ಎಲ್ಲಾ ಕೆಲಸ, ಪರಿಶ್ರಮವನ್ನು ಸಂಪೂರ್ಣವಾಗಿ ದೇವರ ವಶಕ್ಕೆನೀಡಿರುತ್ತಾನೆ. ಪೌಲನು ದೇವರ ವಶಕ್ಕೆ ಕೊಟ್ಟಿರುವದೆಲ್ಲವನ್ನೂ ಆತನು ಕಾಪಾಡುವನು ಎಂದು

ಬಲ್ಲವನಾಗಿದ್ದಾನೆ. ದೇವರು ಅದನ್ನು ಆ ದಿನಕ್ಕಾಗಿ –ಅಂದರೆ, ಲೋಕಾಂತ್ಯದ ವೇಳೆ ಕ್ರಿಸ್ತನು ತಿರಿಗಿ ಬರುವದಿನಕ್ಕಾಗಿ– ಕಾಪಾಡುವನು. ಆದಿನದಲ್ಲಿ, ಪೌಲನು ತನ್ನ ಪೂರ್ಣಪ್ರತಿಫಲವನ್ನು ಪಡೆದುಕೊಳ್ಳುವನು.

**13** ಪೌಲನು ತಿಮೊಥೆಯನಿಗೆ ಸ್ವಸ್ಥ ಬೋಧನಾ ವಾಕ್ಯಗಳ ಮಾದರಿಯನ್ನು ನೀಡಿದ್ದನು; ಆತನು ತಿಮೊಥೆಯನಿಗೆ ಕ್ರೈಸ್ತೀಯ ನಂಬಿಕೆಯ ಮೂಲ ಸಿದ್ಧಾಂತಗಳನ್ನು ಹಸ್ತಾಂತರಿಸಿರುತ್ತಾನೆ. ಈಗ ತಿಮೊಥೆಯನ್ನು ಆ ಮಾದರಿಯನ್ನು ಅನುಸರಿಸಿ ಇತರರಿಗೆ ಅದನ್ನು ನಂಬಿಕೆಯೂ ಪ್ರೀತಿಯೂ ಉಳ್ಳವನಾಗಿ ಪ್ರಾಮಾಣಿಕತೆಯಿಂದ ಬೋಧಿಸಿ ಉಪದೇಶಿಸಬೇಕು.

**14** ಸ್ವಸ್ಥಬೋಧನಾ ವಾಕ್ಯಗಳ ಮಾದರಿಯು (ವಚನ 13) ಕ್ರಿಸ್ತನ ಸುವಾರ್ತೆಯೇ ಆಗಿದೆ, ಇಲ್ಲಿ ಪೌಲನು ಅದನ್ನು ಶ್ರೇಷ್ಠ ಮುಂಗಡ ಎಂದು ಕರೆಯುತ್ತಾನೆ. ತಿಮೊಥೆಯನು ಈ ಸುವಾರ್ತೆಯನ್ನು ಈ ಮುಂಗಡವನ್ನು ತಪ್ಪುಗಳಿಂದಲೂ ಸುಳ್ಳು ಬೋಧಕರಿಂದಲೂ ಕಾಪಾಡಬೇಕಾಗಿರುತ್ತದೆ. ಸುವಾರ್ತೆಯನ್ನು ಬೋಧಿಸುವವರ ರೀತಿಯಲ್ಲಿಯೇ ಅದನ್ನು ಕಾಪಾಡುವದರಲ್ಲಿಯೂ ತಿಮೊಥೆಯನು ಪವಿತ್ರಾತ್ಮನ ಸಹಾಯದ ಮೇಲೆ ಆತುಕೊಳ್ಳಬೇಕು.

**15** ಈ ದಿನಗಳಲ್ಲಿ, ನಾವು ಪೌಲನ ಕುರಿತಾಗಿ ಓದುವಾಗ ಆತನು ಶ್ರೇಷ್ಠ ಅಪೋಸ್ತಲನು– ಬಹುಶಃ ಎಲ್ಲರಿಗಿಂತಲೂ ಶ್ರೇಷ್ಠನು– ಎಂಬದನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ಆದರೆ ಪೌಲನ ಕಾಲದಲ್ಲಿ, ಬಹುಪಾಲು ಜನರು ಆ ಅಭಿಪ್ರಾಯವನ್ನು ಹೊಂದಿರಲಿಲ್ಲ. ಬಹು ಜನರು ಪೌಲನನ್ನು ತಾತ್ಸಾರಮಾಡಿ ಆತನ ಬೋಧನೆ ಅಥವಾ ಅಧಿಕಾರವನ್ನು ಸ್ವೀಕರಿಸಿಕೊಳ್ಳಲಿಲ್ಲ. ಆತನ ಸ್ವಂತ ಕ್ರೈಸ್ತ ಸಹೋದರರು ಆತನಿಗೆ ದ್ರೋಹ ಮಾಡಿದರು. ಆತನು ಇಲ್ಲಿ ಬರೆಯುವದೇನೆಂದರೆಃ ಅಸ್ಯ[1] ಸೀಮೆಯಲ್ಲಿರುವವರೆಲ್ಲರೂ ನನ್ನನ್ನು ಕೈಬಿಟ್ಟರು...... (2 ತಿಮೊಥೆ 4:16 ನೋಡಿರಿ).

ಕ್ರಿಸ್ತನು ಸಹ ತನ್ನ ಶಿಷ್ಯರಿಂದ ಕೈಬಿಡಲ್ಪಟ್ಟನು (ಮಾರ್ಕ 14:50). ಆದರೆ ಅಂಥಯಾವದೇ ಸಂಗತಿ ಇಂದು ನಮ್ಮ ಸಭೆಗಳಲ್ಲಿ ಸಂಭವಿಸದಿರಲಿ. ನಾವು ಎಂದಿಗೂ ನಮ್ಮ ನಾಯಕರನ್ನು ಕೈಬಿಡುವದನ್ನಾಗಲಿ ಅಥವಾ ವಿರೋಧಿಸುವದನ್ನಾಗಲಿ ಅಥವಾ ಅವರ ಬಗ್ಗೆ ನಿಂದೆಯ ಮಾತುಗಳನ್ನಾಡುವದನ್ನಾಗಲಿ ಮಾಡದಿರೋಣ. ತಮ್ಮ ನಾಯಕರನ್ನು ವಿರೋಧಿಸುವ ಅಥವಾ ಅವರ ವಿರುದ್ಧವಾಗಿ ಮಾತಾಡುವ ಕ್ರೈಸ್ತರ ಆತ್ಮೀಕ ಜೀವಿತಗಳಿಗೆ ದೊಡ್ಡಹಾನಿ ಉಂಟಾಗುವುದು; ಅನೇಕರು ತಮ್ಮ ನಂಬಿಕೆಯನ್ನು ಸಹ ತೊರೆಯಬಹುದು.

ಫುಗೇಲನೂ ಹೆರ್ಮೊಗೇನನೂ ಅಂಥ ಇಬ್ಬರೂ ವ್ಯಕ್ತಿಗಳಾಗಿದ್ದರು. ಅವರ ವಿಷಯವಾಗಿ ಈ ವಚನದಲ್ಲಿ ಬರೆಯಲ್ಪಟ್ಟಿರುವದನ್ನು ಹೊರತು ಪಡಿಸಿ ಬೇರೆ ಇನ್ನಾವ ಸಂಗತಿಯು ತಿಳಿದುಬಂದಿರುವದಿಲ್ಲ. ಅವರು ತಮ್ಮ ನಾಯಕನಾದ ಪೌಲನನ್ನು ಕೈಬಿಟ್ಟರೆಂಬದಕ್ಕಾಗಿ ಮಾತ್ರವೇ ನೆನಪಿನಲ್ಲಿ ಉಳಿದಿರುತ್ತಾರೆ. ಜನರು ನಮ್ಮನ್ನು ನೆನಪಿನಲ್ಲಿಟ್ಟುಕೊಳ್ಳುವದಕ್ಕೆ ಇದು ಕಾರಣವಾಗದಿರಲಿ!

**16-18** ಬದಲಾಗಿ, ನಾವು ಒನೇಸಿಫೊರನ ಹಾಗೆ ನಮ್ಮ ನಂಬಿಗಸ್ಥಿಕೆಗಾಗಿ ನೆನಪಿಸಿಕೊಳ್ಳಲ್ಪಡೋಣ ಹೀಗಾಗುವದಾದರೆ ನಾವು ಆದಿನದಲ್ಲಿ –ಕ್ರಿಸ್ತನ ಪುನಃ ಬರುವ ದಿನಗಳಲ್ಲಿ–ಕರುಣೆಯನ್ನುಹೊಂದಿ–ಕೊಳ್ಳುವವರಾಗುವೆವು.

---

# ಅಧ್ಯಾಯ - 2

## ಕ್ರಿಸ್ತನ ಸೈನಿಕ (2:1-13)

**1** ಪೌಲನು ತಿಮೊಥೆಯನಿಗೆ ಬಲಹೊಂದಿದವನಾಗು ಎಂದು ಹೇಳುತ್ತಾನೆ (ಎಫೆಸ 6:10 ಮತ್ತು ವ್ಯಾಖ್ಯಾನ ನೋಡಿರಿ). ತಿಮೊಥೆಯನು ತನ್ನಲ್ಲಿ ಅಲ್ಲ, ಆದರೆ ಕ್ರಿಸ್ತ ಯೇಸುವಿನ್ನಲ್ಲಿರುವ ಕೃಪೆಯಿಂದ ಬಲಹೊಂದಿದನಾಗಬೇಕು. ದೇವರು ನಮಗೆ ನೀಡುವ ಆತನ ಎಲ್ಲಾ ವರಗಳು ಆತನ ಕೃಪೆಯಲ್ಲಿ ಅಡಕವಾಗಿರುತ್ತವೆಃ ಪವಿತ್ರಾತ್ಮ, ರಕ್ಷಣೆ, ಕರುಣೆ, ಬಲ, ಎಲ್ಲಾ ವಿಧವಾದ ಸಹಾಯ– ಇವುಗಳೆಲ್ಲವೂ ದೇವರ ಕೃಪೆಯಿಂದ ದೊರೆಯುತ್ತವೆ. ಮತ್ತು ದೇವರ ಕೃಪೆಯು ನಮಗೆ ಕ್ರಿಸ್ತ ಯೇಸುವಿನಲ್ಲಿ ಕೊಡಲ್ಪಟ್ಟಿರುತ್ತದೆ. ಎಲ್ಲಕ್ಕಿಂತಲೂ ಶ್ರೇಷ್ಠವಾದ ವರವು ಯೇಸುಕ್ರಿಸ್ತನೇ.

**2** ಗತವರ್ಷಗಳಲ್ಲಿ ಪೌಲನು ತಿಮೊಥೆಯನಿಗೆ ಅನೇಕ ಜನರ ಅಥವಾ ಸಾಕ್ಷಿಗಳ ಎದುರಿನಲ್ಲಿ ಅನೇಕ ಸಂಗತಿಗಳನ್ನು ಕಲಿಸಿಕೊಟ್ಟಿರುತ್ತಾನೆ. ಈಗ ತಿಮೊಥೆಯನು ಆ ಸಂಗತಿಗಳನ್ನು ಸ್ವತಃ ಬೋಧಿಸ ಶಕ್ತರಾದ ಆಯ್ದ ಜನರಿಗೆ ಒಪ್ಪಿಸಿಕೊಡಬೇಕು. ಈ ವ್ಯಕ್ತಿಗಳಿಗೆ ಎರಡು ಅರ್ಹತೆಗಳಿರಬೇಕಾಗಿರುತ್ತದೆಃ ಮೊದಲನೆಯದಾಗಿ, ಅವರು ನಂಬಿಗಸ್ಥ– (ವಿಶ್ವಾಸರ್ಹ)ರಾಗಿರಬೇಕು; ಮತ್ತು ಎರಡನೆಯದಾಗಿ, ಅವರು ಇತರರಿಗೆ ಬೋಧಿಸಲು ಶಕ್ತರಾಗಿರಬೇಕು –ಅರ್ಹರಾಗಿರಬೇಕು (1 ತಿಮೊಥೆ 3:2 ನೋಡಿರಿ). ಈ ವಿಧದಲ್ಲಿ ಸುವಾರ್ತೆ ಹಾಗೂ ನಂಬಿಕೆಯ ಸತ್ಯ ಸಿದ್ಧಾಂತಗಳು ಪೀಳಿಗೆಯಿಂದ ಪೀಳಿಗೆಗೆ ಹಸ್ತಾಂತರಿಸಲ್ಪಡುವವು.

**3-4** ತಿಮೊಥೆಯನು ಒಬ್ಬ ಸೈನಿಕನಂತೆ ಶ್ರಮೆಯನ್ನನುಭವಿಸಬೇಕೆಂದು ಪೌಲನು ಇಲ್ಲಿ ಬರೆಯುತ್ತಾನೆ. ಅದು ಮಾತ್ರವಲ್ಲ ಹೇಗೆ ಒಬ್ಬ ಸೈನಿಕನು ಲೋಕವ್ಯವಹಾರದಲಿ ಸಿಕ್ಕಿಕೊಳ್ಳದೆ ಇರತಕ್ಕದ್ದೋ ಹಾಗೆಯೇ ಸಭೆಯಲ್ಲಿ ನಾಯಕನಾಗಿರುವಾತನು ಪ್ರಪಂಚದ ಸಂಗತಿಗಳಲ್ಲಿ ಸಿಕ್ಕಿಕೊಳ್ಳಬಾರದು. ಲೋಕವ್ಯವಹಾರಗಳು ಸ್ವತಃ ಕೆಟ್ಟವುಗಳಲ್ಲ; ಆದರೆ ಅವುಗಳು ನಮ್ಮನ್ನು ಸಿಕ್ಕಿಸಿಕೊಂಡು ದಾರಿ ತಪ್ಪಿಸುವದಾದರೆ ಅವುಗಳನ್ನು ಬಿಸಾಡತಕ್ಕದ್ದು (ಮಾರ್ಕ 4:18 ಇಬ್ರಿಯ 12:1 ನೋಡಿರಿ). ಸೈನಿಕನು ಎಲ್ಲಕ್ಕಿಂತ ಮೊದಲು ತನ್ನನ್ನು ಸೈನದಲ್ಲಿ ಸೇರಿಸಿಕೊಂಡವನನ್ನು ಮೆಚ್ಚಿಸುವದಕ್ಕೆ ತವಕಪಡುವ ಪ್ರಕಾರವೇ ಕ್ರಿಸ್ತನ "ಸೈನಿಕನು" ಎಲ್ಲಕ್ಕಿಂತ ಮೊದಲು ಕ್ರಿಸ್ತನನ್ನು ಮೆಚ್ಚಿಸಲು ಅಪೇಕ್ಷಿಸಬೇಕು. ಒಬ್ಬ ನಿಜವಾದ ಸೈನಿಕನ ಸ್ವಂತ ಅಭಿಲಾಷೆ ಏನೇ ಆಗಿದ್ದರೂ ಸರಿಯೇ ಆತನು ಯಾವಾಗಲೂ ಎಲ್ಲಾ ಸ್ಥಳಗಳಿಗೆ ಹೋಗುವದಕ್ಕೆ ಏನನ್ನೇ ಆಗಲಿ ಮಾಡುವದಕ್ಕೂ ಸಿದ್ಧನಾಗಿರುತ್ತಾನೆ. ಕ್ರಿಸ್ತನ ಸೈನಿಕರು ಹಾಗೆಯೇ ಇರಬೇಕು.

**5** ಪೌಲನು ಇಲ್ಲಿ ಒಬ್ಬ ಕ್ರೈಸ್ತನು ರಂಗಸ್ಥಳದಲ್ಲಿ ಸ್ಪರ್ಧಿಸುವವನ ಹಾಗಿರುತ್ತಾನೆಂದು ಹೇಳುತ್ತಾನೆ. ಕ್ರೀಡೆಗಳಲ್ಲಿ ಸ್ಪರ್ಧಿಸುವ ಕ್ರೀಡಾ ಪಟುವು ತನ್ನನ್ನು ಕಠಿಣವಾಗಿ ತರಬೇತಿಗೊಳಿಸಿಕೊಳ್ಳುತ್ತಾನೆ; ಆತನು ಅಚಲಮನಸ್ಸಿನವನಾಗಿರಬೇಕು. ಕ್ರೀಡೆಗಳಲ್ಲಿ ಆತನು ತನ್ನ ಎಲ್ಲಾ ಸಾಮರ್ಥ್ಯ ಹಾಗೂ ಚತುರತೆಗಳಿಂದ ಸ್ಪರ್ಧಿಸಬೇಕು. ಪೌಲನ ಕಾಲದಲ್ಲಿ ಕ್ರೀಡಾಪಟುಗಳೆಲ್ಲರೂ ಕೆಲವೊಂದು ಸಮಯದ ತನಕ ಒಂದು ವಿಧದಲ್ಲಾ ತರಬೇತಿ ಹೊಂದುತ್ತಿದ್ದರು. ನಿಯಮದ ಪ್ರಕಾರ ತರಬೇತಿಗೊಳ್ಳದ ಕ್ರೀಡಾ ಪಟುವು ಕ್ರೀಡೆಗಳಲ್ಲಿ ಗೆಲ್ಲುವದಕ್ಕೆ ಶಕ್ತನಾಗುವದಿಲ್ಲ. ಅದೇ ರೀತಿಯಲ್ಲಿ ಕ್ರೈಸ್ತರು ಕ್ರಿಸ್ತನಿಂದಲೂ ಆತನ ಅಪೊಸ್ತಲರಿಂದಲೂ ನೀಡಲ್ಪಟ್ಟ ನಿಯಮಗಳ ಪ್ರಕಾರ ಜೀವಿಸಬೇಕು. ಹಾಗೆ ಮಾಡುವವರು ಜಯಮಾಲೆಯನ್ನು ಪಡೆದುಕೊಳ್ಳುವರು (1 ಕೊರಿಂಥ 9:25; 2 ತಿಮೊಥೆ 4:7-8 ).

**6** ಇಲ್ಲಿ ಪೌಲನು ಕ್ರೈಸ್ತ ಸೇವಕನ ಮೂರನೆಯ ಚಿತ್ರಣವನ್ನು ಕೊಡುತ್ತಾನೆಃ ಆತನು ಪರಿಶ್ರಮಿಯಾದ ವ್ಯವಸಾಯಗಾರನ ಹಾಗಿರುತ್ತಾನೆ. ವ್ಯವಸಾಯಗಾರನು ಬೆಳೆಯಲ್ಲಿ ಪಾಲು ಹೊಂದುವದಕ್ಕೆ ಅರ್ಹನು. ಒಬ್ಬ ಸಭಾಪಾಲಕ ಅಥವಾ ಇತರ ಪೂರ್ಣಾವದಿ ಕ್ರೈಸ್ತ ಕೆಲಸಗಾರರು ಸಭೆಯಿಂದ ವೇತನ ಅಥವಾ ಸಹಾಯವನ್ನು ಪಡೆಯತಕ್ಕವರು ಎಂದು ಇದರ ಅರ್ಥವಾಗಿದೆ

(1 ಕೊರಿಂಥ 9:10-11, 14 ನೋಡಿರಿ). ಹೇಗಿದ್ದರೂ, ಒಂದು ವೇಳೆ ವ್ಯವಸಾಯಗಾರನು ಪರಿಶ್ರಮದಿಂದ ದುಡಿಯದವನಾಗಿದ್ದರೆ, ಅವನಿಗೆ ಪಾಲು ಹೊಂದುವದಕ್ಕೆ ಬೆಳೆಯೇ ಇರುವದಿಲ್ಲ. ಮತ್ತು ಕ್ರೈಸ್ತ ಕೆಲಸಗಾರರ ವಿಷಯದಲ್ಲೂ ಹಾಗೆಯೇ ಇರುತ್ತದೆ. ಪರಿಶ್ರಮವಿಲ್ಲದೆ ಯಾವ ಆತ್ಮೀಕ ಫಲವೂ ಇರುವದಿಲ್ಲ.

7 ನಾನು ಹೇಳುವು ದನ್ನು ಯೋಚಿಸು ಎಂದು ಪೌಲನು ತಿಮೊಥೆಯನಿಗೆ ಬರೆಯುತ್ತಾನೆ. ನಾವು ಎಷ್ಟರ ಮಟ್ಟಿಗೆ ಬೈಬಲಿನ ಬೋಧನೆಗಳನ್ನು ಯೋಚಿಸಿ ಧ್ಯಾನ ಮಾಡುತ್ತೇವೋ ಅಷ್ಟರ ಮಟ್ಟಿಗೆ ದೇವರು ನಮ್ಮ ತಿಳುವಳಿಕೆಯನ್ನು ಹೆಚ್ಚಿಸುವನು. ಆದರೆ ಸ್ವತಃ ನಾವೇ ಬೈಬಲನ್ನು ಅನ್ವಯಿಸಿಕೊಂಡು ಅಭ್ಯಾಸಿಸಬೇಕು; ಮತ್ತು ನಾವು ಹಾಗೆ ಮಾಡುವಾಗ ದೇವರು ಆತನ ಸತ್ಯವನ್ನು ಹೆಚ್ಚು ಹೆಚ್ಚಾಗಿ ಸ್ವೀಕರಿಸಿಕೊಳ್ಳುವದಕ್ಕೆ ನಮ್ಮ ಮನಸ್ಸುಗಳನ್ನು ನಿರಂತರವಾಗಿ ತೆರೆಯುವನು.

8 ಹಳೆ ಒಡಂಬಡಿಕೆಯ ಪ್ರವಾದಿಗಳ ಪ್ರವಾದನೆಗಳಿಗನುಸಾರವಾಗಿ ಯೇಸುಕ್ರಿಸ್ತನು ಯೆಹೂದ್ಯರ ಅತಿ ಪ್ರಸಿದ್ಧ ಅರಸನಾದ ದಾವೀದನ ವಂಶದಲ್ಲಿ ಹುಟ್ಟಿದನು (ಮತ್ತಾಯ 1:1; ಲೂಕ 1:32; ರೋಮ 1:3-4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಯೇಸುಕ್ರಿಸ್ತನನ್ನು ಜ್ಞಾಪಕ ಮಾಡಿಕೋ ನಾವು ಮಾಡುವಂತದೆಲ್ಲವರಲ್ಲಿಯೂ ಅದು ಯಾವ ರೀತಿಯ ಕೆಲವಾಗಿದ್ದರೂ ನಾವು ಯೇಸುವನ್ನು ಜ್ಞಾಪಕಮಾಡಿಕೊಂಡು ಆತನ ಮೇಲೆ ನಮ್ಮ ದೃಷ್ಟಿಯನ್ನಿಡೋಣ (ಇಬ್ರಿಯ 12:2).

9 ರೋಮಯರು ಪೌಲನನ್ನು ಬೇಡಿಗಳಿಂದ ಕಟ್ಟುವದಕ್ಕೆ ಶಕ್ತರಾಗಿದ್ದರು, ಆದರೆ ಅವರು ದೇವರ ವಾಕ್ಯವನ್ನು, ಸುವಾರ್ತೆಯನ್ನು ಸಂಕೋಲೆಗಳಿಂದ ಬಂಧಿಸಲಾಗಲಿಲ್ಲ. ಸಭಾ ಪಾಲಕರು ಹಾಗೂ ಬೋಧಕರು ಸೆರೆಮನೆಗೆ ಹಾಕಲ್ಪಡಬಹುದು, ಆದರೆ ದೇವರ ವಾಕ್ಯವು ಇನ್ನು ಹೆಚ್ಚಾಗಿ ಹರಡಿಕೊಳ್ಳುತ್ತಲಿರುವದು (ಫಿಲಿಪ್ಪಿ 1:12-14 ನೋಡಿರಿ).

10 ಪೌಲನು ಆದುಕೊಂಡುವರ ನಿಮಿತ್ತವಾಗಿ ಎಲ್ಲವನ್ನೂ ತಾಳಿಕೊಳ್ಳುತ್ತಾನೆ. ಆದುಕೊಂಡವರು ರಕ್ಷಣೆಹೊಂದುವದಕ್ಕಾಗಿ ದೇವರಿಂದ ಆರಿಸಿಕೊಳ್ಳಲ್ಪಟ್ಟವರು, ಆದರೆ ಇನ್ನೂ ಅವರು ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾಗಿರುವದಿಲ್ಲ (ಅ.ಕೃತ್ಯ 13:48 ಮತ್ತು ವ್ಯಾಖ್ಯಾನ ನೋಡಿರಿ). ಇತರರಿಗೆ ಸುವಾರ್ತೆಯನ್ನು ಹಂಚಿಕೊಂಡು ಆದಿಯಲ್ಲಿ ದೇವರಿಂದ ಕರೆಯಲ್ಪಟ್ಟವರು ಕೇಳಿ ನಂಬುವಂತಾಗಬೇಕೆಂದು ಕ್ರಿಸ್ತನಿಗಾಗಿ ಸಾಕ್ಷಿ ನೀಡುವದು ಪ್ರತಿಯೊಬ್ಬ ಕ್ರೈಸ್ತನ ಕರ್ತವ್ಯವಾಗಿದೆ. ಆದುಕೊಂಡವರು ರಕ್ಷಣೆಯನ್ನು ಪಡೆಯುವಂತೆ ವಾಸ್ತವವಾಗಿ ಅವರನ್ನು ನಂಬಿಕೆಗೆ ನಡಿಸುವ ಜವಾಬ್ದಾರಿಯನ್ನು ದೇವರು ನಮಗೆ ಕೊಟ್ಟಿರುತ್ತಾನೆ (ಮತ್ತಾಯ 9:36-38 ಮತ್ತು ವ್ಯಾಖ್ಯಾನ ನೋಡಿರಿ).

11 ನಾವು ದೀಕ್ಷಾಸ್ನಾನ ಮೂಲಕ ಕ್ರಿಸ್ತನೊಂದಿಗೆ ಸತ್ತಿರುವದಾದರೆ ಆತನ ಪುನರುತ್ಥಾನದಲ್ಲಿ ಆತನೊಡನೆ ಜೀವಿಸುವವರೂ ಆಗುತ್ತೇವೆ. (ರೋಮ 6:3-5 ಮತ್ತು ವ್ಯಾಖ್ಯಾನ ನೋಡಿರಿ).

12 ಕ್ರಿಸ್ತನೊಡನೆ ಆಳುವದಕ್ಕಾಗಿ ನಾವು ಕಷ್ಟಗಳ ಮಧ್ಯದಲ್ಲಿ ದೃಢವಾಗಿದ್ದು ಕಡೇವರೆಗೂ ತಾಳಿಕೊಳ್ಳತಕ್ಕದ್ದು (ಮಾರ್ಕ 13:13; ರೋಮ 8:17, ಪ್ರಕಟಣೆ 3:21 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

13 ನಾವು ಅಪನಂಬಿಗಸ್ಥರಾಗಿದ್ದರೂ ಆತನು ನಂಬಿಗಸ್ಥನಾಗಿಯೇ ಇರುವನು. ಈ ಹೇಳಿಕೆಗೆ ಎರಡು ಅರ್ಥಗಳಿರಬಲ್ಲವು. ಮೊದಲನೆಯದಾಗಿ, ನಾವು ಎಡವಿ ಪಾಪದಲ್ಲಿ ಬಿದ್ದರೂ ದೇವರು ನಮ್ಮನ್ನು ಕ್ಷಮಿಸಿಶುದ್ಧೀಕರಿಸಲು –ನಾವು ಪಶ್ಚಾತ್ತಾಪಪಡುವದಾದರೆ– ನಂಬಿಗಸ್ಥನಾಗಿಯೇ ಇರುವನೆಂದು ಇದರ ಅರ್ಥವಾಗಬಹುದು (1 ಯೋಹಾನ 1:9). ಎರಡನೆಯ ಅರ್ಥದ ಸಾಧ್ಯತೆಯೇನೆಂದರೆ: ನಾವು ದೇವರು ಇಲ್ಲವೆಂದು ಹೇಳುವು ದಾದರೆ ಆತನೂ ನಮ್ಮನ್ನು ನಿಶ್ಚಯವಾಗಿ ತನ್ನವರಲ್ಲವೆಂದು ಹೇಳುವನು, ಯಾಕೆಂದರೆ ಆತನು ತನಗೆ ನಂಬಿಗಸ್ಥನಾಗಿ ಇರಬೇಕು; ಆತನು ತನ್ನನ್ನು ತಿರಸ್ಕರಿಸುವ ಯಾವನನ್ನೂ ಸ್ವೀಕರಿಸುವದಕ್ಕೆ ಸಾಧ್ಯವಿಲ್ಲ (ರೋಮ 3:3-4 ಮತ್ತು ವ್ಯಾಖ್ಯಾನ ನೋಡಿರಿ). ಈ ಎರಡು ಅರ್ಥಗಳು ತದ್ವಿರುದ್ಧವಲ್ಲ: ಎರಡೂ ಸತ್ಯವಾದವುಗಳು.

## ದೇವರಿಂದ ಅನುಮೋದಿತನಾದ ಕೆಲಸಗಾರನು (2:14-26)

14 ತಿಮೊಥೆಯನು ಈ ಸಂಗತಿಗಳನ್ನು –ಅಂದರೆ, ಪೌಲನು ಈ ಪತ್ರಿಕೆಯಲ್ಲಿ ಬರೆಯಲ್ಲಿರುವ ಸಂಗತಿಗಳನ್ನು – ಯಾವಾಗಲೂ ಸಭೆಯ ಸದಸ್ಯರ ಜ್ಞಾಪಕಕ್ಕೆ ತರುತ್ತಿರಬೇಕು.

ಪೌಲನು ಇಲ್ಲಿ ವಿಶೇಷವಾಗಿ ತಮ್ಮ ಹೆಚ್ಚಿನ ಸಮಯವನ್ನು ವಾಕ್ಯಗಳ ಕುರಿತು ವಾಗ್ವಾದಗಳನ್ನು ಮಾಡುವದರಲ್ಲಿ ಕಳೆಯುತ್ತಿದ್ದ ಜನರ ವಿಷಯದಲ್ಲಿ ಮಾತಾಡುತ್ತಿದ್ದಾನೆ. ನಾವು ಒಟ್ಟಾಗಿ ಸತ್ಯವನ್ನು ಅರ್ಥಮಾಡಿಕೊಳ್ಳಲು ಅಪೇಕ್ಷಿಸುತ್ತಿರುವಾಗ –ಪ್ರೀತಿಯಿಂದ– ಬೈಬಲಿನ ವಾಕ್ಯಗಳ ಅರ್ಥವನ್ನು ಚರ್ಚಿಸಿವಾದ ಮಾಡುವದು ಸಮಂಜಸವಾದದ್ದು,ಆದರೆ ನಾವು ಅವರ ಬಗ್ಗೆ ವಾಗ್ವಾದ ಮಾಡಬಾರದು. ಲಿಖಿತ ರೂಪವಾದದ್ದು ಮರಣವನ್ನುಂಟುಮಾಡುತ್ತದೆ, ಆದರೆ ಆತ್ಮನು ಜೀವವನ್ನುಂಟುಮಾಡುತ್ತಾನೆ (2 ಕೊರಿಂಥ 3:6). ನಾವು ವಾಗ್ವಾದ ಮಾಡದೆ ಚರ್ಚಿಸುವದನ್ನೂ ವಾದಿಸುವದನ್ನು ಕಲಿತುಕೊಳ್ಳಬೇಕು. ವಾಗ್ವಾದವು ಪವಿತ್ರಾತ್ಮನಿಗೆ ದುಃಖವನ್ನುಂಟುಮಾಡುತ್ತದೆ. ಹಾಗೂ ನಮ್ಮ ಅನ್ಯೋನ್ಯತೆಯನ್ನು ಹಾಳುಮಾಡುವದು ಅಂಥ ವಾಗ್ವಾದಗಳು ಜನರನ್ನು ಮಾರ್ಗ ತಪ್ಪಿಸುತ್ತದೆ ಹಾಗೂ ಕೇಳುವವರಿಗೆ ಕೇಡನ್ನುಂಟುಮಾಡುತ್ತದೆ (1 ತಿಮೊಥೆ 1:3-6 ವ್ಯಾಖ್ಯಾನ ನೋಡಿರಿ).

**15** ಕೆಲಸಗಾರನು ಮಾಡುವ ಯಾವದಾದರೂ ಸಂಗತಿಯು ಅನಂತರ ದೋಷವುಳ್ಳದ್ದಾಗಿ ಕಂಡುಬಂದರೆ ಕೆಲಸಗಾರನಿಗೆ ಅವಮಾನವಾಗುವದು. ಸಭೆಯ ನಾಯಕರ ವಿಷಯದಲ್ಲೂ ಅದು ಅಷ್ಟೇ ಸತ್ಯ. ಅವರ ಕೆಲಸವು ದೋಷವುಳ್ಳದ್ದಾಗಿರದಿರಲಿ. ವಿಶೇಷವಾಗಿ, ಅವರು ಸತ್ಯವಾಕ್ಯವನ್ನು ಸರಿಯಾಗಿ ನಿಭಾಯಿಸಿಕೊಳ್ಳಲಿ; ಅಂದರೆ, ಅವರು ದೇವರ ವಾಕ್ಯವನ್ನು ಪ್ರಾಮಾಣಿಕವಾಗಿಯೂ ನಿಖರವಾಗಿಯೂ ಬೋಧಿಸಿ ಉಪದೇಶಿಸಲಿ.

**16** ಪೌಲನು ಇಲ್ಲಿ 14ನೇ ವಚನದ ವಿಚಾರವನ್ನ ಪುನರಾವರ್ತಿಸುತ್ತಾನೆ (1 ತಿಮೊಥೆ 6:20-21 ನೋಡಿರಿ). ಪ್ರಾಪಂಚಿಕವಾದ ಹರಟೆಮಾತುಗಳಲ್ಲಿ ತೊಡಗುವವರು ದೇವರಿಂದ ದೂರದೂರಕ್ಕೆ ಹೋಗುವರು.

**17-18** ಈ ಎರಡು ವಚನಗಳಲ್ಲಿ ಪೌಲನು ಪ್ರಾಪಂಚಿಕವಾದ ಹರಟೆ ಮಾತುಗಳನ್ನು ಕುರಿತು ಮಾತ್ರವೇ ಯೋಚಿಸುತ್ತಿಲ್ಲ (ವಚನ 16). ಆದರೆ ಸುಳ್ಳು ಬೋಧನೆಯ ಕುರಿತಾಗಿಯೂ ಯೋಚಿಸುತ್ತಿದ್ದಾನೆ. ಯಾಕೆ ಸುಳ್ಳುಬೋಧನೆಯು ಅಷ್ಟೊಂದು ಅಪಾಯಕರ ಹಾಗೂ ಹಾನಿಕರವಾದದ್ದು? ಕಾರಣವೇನೆಂದರೆಃ ಸುಳ್ಳುಬೋಧನೆಯೂ ನಿಜವಾಗಿಯೂ ಸುಳ್ಳು ಎಂಬುದನ್ನು ಜನರು ಸುಲಭವಾಗಿ ಗುರುತಿಸುವದಿಲ್ಲ; ಅವರು ಅದರಿಂದ ವಂಚಿಸಲ್ಪಡುತ್ತಾರೆ. ಅದು ಸತ್ಯದಂತೆ ತೋರುತ್ತದೆ. ಅವರು ಸುಲಭವಾಗಿ ಸುಳ್ಳುಬೋಧನೆಯನ್ನು ಗುರುತಿಸುವದಾದರೆ ಅದು ಯಾವ ಹಾನಿಯನ್ನೂ ಮಾಡುವದಿಲ್ಲ (1 ತಿಮೊಥೆ 4:1 ಮತ್ತು ವ್ಯಾಖ್ಯಾನ ನೋಡಿರಿ). ಈ ಕಾರಣದಿಂದಲೇ ಪೌಲನು ಸುಳ್ಳು ಬೋಧಕರ ಬೋಧನೆಯು ಕೊಳಕು ಹುಣ್ಣಿನಂತೆ ಹರಡಿಕೊಳ್ಳುವದು ಎಂದು ಹೇಳುತ್ತಾನೆ (ವಚನ 17). ಕೊಳಕು ಹುಣ್ಣು ಹೇಗೆ ಹರಡುತ್ತದೆ? ನಿಧಾನವಾಗಿ ಒಳಗೊಳಗೇ ಹರಡುತ್ತದೆ. ಅದೇ ವಿಧದಲ್ಲಿ ಸುಳ್ಳು ಬೋಧನೆಯ 'ಕೊಳಕು ಹುಣ್ಣು" ನಮ್ಮ ಮನಸ್ಸುಗಳನ್ನು ಪ್ರವೇಶಿಸಿ ಹರಡುತ್ತದೆ. ಮತ್ತು ಅದರ ಬಗ್ಗೆ ನಮಗೆ ಗೊತ್ತಾಗುವ ಮುನ್ನವೇ ಅದು ನಮ್ಮನ್ನು ಹಾಳುಮಾಡಿರುತ್ತದೆ. ಯೇಸು ಸುಳ್ಳು ಬೋಧನೆಯನ್ನು ಹುಳಿಗೆ ಹೋಲಿಸಿದನು (ಮತ್ತಾಯ 16:6; 11-12). ಸ್ವಲ್ಪ ಹುಳಿಯು ನಿಧಾನವಾಗಿ ಒಳಗೊಳಗೆ ಇಡೀ ಹಿಟ್ಟಿನ ಕಣಕದಲ್ಲೆಲ್ಲಾ ಹರಡಿಕೊಳ್ಳುವದು (ಗಲಾತ್ಯ 5:9).

ಸುಳ್ಳುಬೋಧನೆಯು ವಿಷದಂತೆಯೂ ಇರುತ್ತದೆ. ತಂಬಿಗೆಯಲ್ಲಿ ನೀರಿಗೆ ಒಂದು ಹನಿ ವಿಷವನ್ನು ಕೂಡಿಸಿದರೆ ತಂಬಿಗೆಯಲ್ಲಿನ ನೀರೆಲ್ಲಾ ವಿಷಮಯವಾಗುವದು ಮತ್ತು ಅದನ್ನು ಕುಡಿಯುವವನು ಸಾಯುತ್ತಾನೆ. ಪೌಲನ ಕಾಲದಲ್ಲಿ ಹುಮೆನಾಯನೂ ಫಿಲೇತನೂ ಅಂಥಸುಳ್ಳುಬೋಧಕರಲ್ಲಿ ಇಬ್ಬರಾಗಿದ್ದರು (1 ತಿಮೊಥೆ 1:20). ಅವರು ಪುನರುತ್ಥಾನವು ಈಗಾಗಲೇ ಆಗಿ ಹೋಯಿತೆಂದು ಬೋಧಿಸುತ್ತಿದ್ದರು; ಅಂದರೆ, ಅವರು ದೇಹದ ನಿಜವಾದ ಪುನರುತ್ಥಾನವೇ ಇಲ್ಲ ಎಂದು ಬೋದಿಸಿದರು "ಪುನರುತ್ಥಾನ" ಎನ್ನುವಂತದು ವಿಶ್ವಾಸಿಗಳು ಈಗಾಗಲೇ ಹೊಂದಿರುವ ಒಂದು ಆತ್ಮೀಕ ಅನುಭವ ಮಾತ್ರವೇ ಎಂದು ಅವರು ಹೇಳುತ್ತಿದ್ದರು. ಆದರೆ ಅವರ ಬೋಧನೆಯು ಸಂಪೂರ್ಣ ಮಿಥ್ಯವಾಗಿತ್ತು. ದೇಹಕ್ಕೆ ನಿಜವಾದ ಪುನರುತ್ಥಾನ ಇಲ್ಲವಾದರೆ ಕ್ರಿಸ್ತನು ಸ್ವತಃ ಸತ್ತವರೊಳಗಿಂದ ಎದ್ದು ಬರಲಿಲ್ಲವೆಂದಾಗುತ್ತದೆ. ಮತ್ತು ಕ್ರಿಸ್ತನು ಎದ್ದುಬರಲಿಲ್ಲವಾದರೆ ನಮ್ಮ ನಂಬಿಕೆಯು ಹುರಳಿಲ್ಲದ್ದಾಗಿದೆ. ಅಂಥ ಸುಳ್ಳು ಬೋಧನೆಯು ಖಂಡಿತವಾಗಿಯೂ ಮನುಷ್ಯರ ನಂಬಿಕೆಯನ್ನು ಹಾಳುಮಾಡುತ್ತದೆ (1 ಕೊರಿಂಥ 15:12-17 ನೋಡಿರಿ).

**19** ಸುಳ್ಳು ಬೋಧಕರು ಮನುಷ್ಯರನ್ನು ಮೋಸಮಾಡುವರು, ಆದರೆ ಅವರು ದೇವರನ್ನು ಮೋಸಮಾಡಲಾರರು. ದೇವರ ಸಭೆ ಹಾಗೂ ಅದರ ಅಸ್ತಿವಾರವು ಕದಲಿಸಲ್ಪಡುವದಿಲ್ಲ (ಎಫೆಸ 2:19-22). ದೇವರು ತನ್ನ ನಿಜವಾದ ಸೇವಕರಾರೆಂಬದನ್ನು ತಿಳಿದಿದ್ದಾನೆ. ಕರ್ತನು ತನ್ನವರು ಯಾರೆಂಬದನ್ನು ತಿಳಿದಿದ್ದಾನೆ. ಯಾರು ಸುಳ್ಳು ಕ್ರೈಸ್ತರೆಂಬದನ್ನೂ ಯಾರಾರು ನಿಜವಾದ ಕ್ರೈಸ್ತರೆಂಬದನ್ನು ಆತನು ಬಲ್ಲವನಾಗಿದ್ದನು. ದುರ್ಮಾರ್ಗತನವನ್ನು ಬಿಟ್ಟು ವಿಮುಖರಾಗದವರು ಸುಳ್ಳು ಕ್ರೈಸ್ತರಾಗಿದ್ದಾರೆ ಅವರು ದೇವರ ಕುಟುಂಬದ ನಿಜವಾದ ಸದಸ್ಯರಲ್ಲ.

**20** ಯಾವದೇ ಸಭೆಯಲ್ಲಿ ಯೋಗ್ಯವಾದರೂ ಉತ್ತಮರೂ ಆದ ಸದಸ್ಯರಿರುತ್ತಾರೆ, ಮತ್ತು ಇತರ ಸದಸ್ಯರು ಆಯೋಗ್ಯರೂ ಹೀನವಾದವರೂ ಆಗಿರುತ್ತಾರೆ.

**21** ಪ್ರತಿಯೊಬ್ಬ ನಿಜವಾದ ವಿಶ್ವಾಸಿಯು ತನ್ನನ್ನು ಹೊಲಸಿನಿಂದ ಶುದ್ಧಮಾಡಿಕೊಳ್ಳಲಿ –ಅಂದರೆ, ಸುಳ್ಳಾದವರೂ ಹೀನವಾದವರೂ ಆಗಿರುವ ಸಭಾಸದಸ್ಯರನ್ನು ಬಿಟ್ಟು ಶುದ್ಧಮಾಡಿಕೊಳ್ಳಲಿ. ನಿಜವಾದ ವಿಶ್ವಾಸಿಯು ಸುಳ್ಳುಸಹೋದರರನ್ನೂ ಸುಳ್ಳುಬೋಧನೆಯನ್ನು ತೊರೆದು ತನ್ನನ್ನು ಶುದ್ಧಮಾಡಿಕೊಳ್ಳುವದರ ಮೂಲಕ ಅವನು ಉತ್ತಮವಾದ ಬಳಕೆಗೆ ಯೋಗ್ಯನಾಗಿರುವನು.... ಪ್ರತಿಷ್ಠಿತನಾಗಿಯೂ (ಪರಿಶುದ್ಧನಾಗಿಯೂ) ಉಪಯುಕ್ತನಾಗಿಯೂ ಸಕಲ ಸತ್ಕ್ರಿಯೆಗಳನ್ನು ಮಾಡುವದಕ್ಕೆ ಸಿದ್ಧನಾಗಿಯೂ ಇರುವನು[2]

**22** ಆದದರಿಂದ, ಪೌಲನು ತಿಮೊಥೆಯನಿಗೆ ಬರೆಯುವದೇನೆಂದರೆಃ ನೀನು ಯೌವ್ವನದ ಇಚ್ಛೆಗಳಿಗೆ ದೂರವಾಗಿರು– ಉದಾಹರಣೆಗೆ, ಜಾರುತ್ವ, ಗರ್ವ, ಜಗಳ ಮುಂತಾದವುಗಳಿಂದ ಓಡಿ ಹೋಗು. ಅದಕ್ಕೆ ಬದಲಾಗಿ ಇತರ ನಿಜವಾದ ಕ್ರೈಸ್ತರ ಸಂಗಡ ನೀತಿ, ವಿಶ್ವಾಸ, ಪ್ರೀತಿ ಸಮಾಧಾನಗಳನ್ನು ಸಂಪಾದಿಸುವದಕ್ಕೆ ಪ್ರಯಾಸಪಡು (1 ತಿಮೊಥೆ 6:11; 1 ಪೇತ್ರ 2:11 ಮತ್ತು ವ್ಯಾಖ್ಯಾನಗಳು ನೋಡಿರಿ).

**23** ವ್ಯರ್ಥವಾದ ಸಂಭಾಷಣೆ ಹಾಗೂ ಮಾತುಗಳನ್ನು ಆಡಬಾರದು ಯಾಕೆಂದರೆ ಅದು ಬಗಳವನ್ನುಂಟು ಮಾಡುತ್ತದೆ. (1 ತಿಮೊ 6:20-21, 2 ತಿಮಾ 2:14,16 ವ್ಯಾಕ್ಯಾನ ನೋಡಿರಿ)

**24** ಕರ್ತನ ದಾಸನು –ಅಂದರೆ, ಸಭೆಯ ಪಾಲಕನು ಅಥವಾ ನಾಯಕನು– ಎಂದಿಗೂ ವಾಗ್ವಾದಗಳಲ್ಲಿಯೂ ಜಗಳಗಳಲ್ಲಿಯೂ ತಲೆ ಹಾಕಬಾರದು. ಬದಲಾಗಿ, ಆತನು ಸಾಧುವಾಗಿರಬೇಕು (ದಯೆಯುಳ್ಳವನಾಗಿರಬೇಕು).

ಜಗಳವಾಡುವದರ ಬದಲಾಗಿ ಆತನು ಬೋಧಿಸುವದರಲ್ಲಿ ಪ್ರವೀಣ ಆಗಿರಬೇಕು. ಇತರರು ಆತನನ್ನು ವಿರೋಧಿಸುವಾಗ ಆತನು ಕಠೋರವಾಗಿಯೂ ವೈಮನಸ್ಸುಳ್ಳವನಾಗಿಯೂ ನಡೆದುಕೊಳ್ಳಬಾರದು; ಇಲ್ಲವಾದರೆ, ಅವರ ವಿರೋಧವು ಹೆಚ್ಚಾಗುತ್ತದೆ.

**25-26** ಸಭಾನಾಯಕನು ತನ್ನನ್ನು ವಿರೋದಿಸುವವರನ್ನೂ ತಪ್ಪಿನಲ್ಲಿ ಬೀಳುವವರನ್ನೂ ನಿಧಾನದಿಂದ ತಿದ್ದುವವನಾಗಿರಬೇಕು. ಇದನ್ನು ದೀನಭಾವದಿಂದ ಮಾಡುವದು ಅವಶ್ಯಕವಾದದ್ದು; ಇಲ್ಲವಾದರೆ, ನಾಯಕನು ಯಾರನ್ನು ತಿದ್ದಲು ಪ್ರಯತ್ನಿಸುತ್ತಿದ್ದಾನೋ ಅವರು ಕೋಪಗೊಂಡು ಕಠಿಣವಾಗುವರು, ಮತ್ತು ಅವರೊಂದಿಗೆ ಸಮಾಧಾನಗೊಳ್ಳುವ ಮತ್ತಷ್ಟು ಕಷ್ಟವಾಗುವದು. ಮತ್ತು ಅವರೊಂದಿಗೆ ಸಮಾಧಾನಗೊಳ್ಳುವದು ಮತ್ತಷ್ಟು ಕಷ್ಟವಾಗುವದು. ಅವರು ಪಶ್ಚಾತ್ತಾಪಪಟ್ಟು ಸತ್ಯದ ಕಡೆಗೆ ತಿರುಗಿಕೊಂಡು ಸೈತಾನನ ಉರ್ಲಿನೊಳಗಿಂದ ತಪ್ಪಿಸಿಕೊಳ್ಳುವಂತಾಗಬೇಕು ಎಂಬದು ನಾಯಕನ ಅಪೇಕ್ಷೆಯಾಗಿರಬೇಕು.

ಇಲ್ಲಿ ಪಶ್ಚಾತ್ತಾಪ ದೇವರಿಂದ ದಯಪಾಲಿಸಲ್ಪಡುತ್ತದೆಂಬದನ್ನು ಗಮನಿಸಿರಿ; ಇದು ದೇವರ ವರವಾಗಿದೆ. ನಾವು ಮೊದಲು ದೇವರ ಮೂಲಕ ನಂಬಿಕೆಯಿಟ್ಟ ಪ್ರಕಾರವೇ ನಾವು ದೇವರಕೃಪೆಯ ಮೂಲಕ ಪತ್ಸಾತ್ತಾಪ ಪಡುತ್ತೇವೆ. ದೇವರ ಕೃಪೆಯಿಲ್ಲದೆ ನಾವು ಆತನಿಗೆ ಮೆಚ್ಚಿಕೆಯಾಗುವ ಯಾವು ದನ್ನು ಮಾಡಲಾರೆವು.

ಒಬ್ಬ ವ್ಯಕ್ತಿಯು ದೇವರಿಂದ ಪಡೆದುಕೊಳ್ಳುವ ಮೊದಲನೆಯ ವರವೇನೆಂದರೆ, ತನ್ನ ಪಾಪವನ್ನು ಗ್ರಹಿಸಿಕೊಂಡು ಅದಕ್ಕಾಗಿ ಪಶ್ಚಾತ್ತಾಪ ಪಡುವದೇ (ಮಾರ್ಕ 1:4 ಮತ್ತು ವ್ಯಾಖ್ಯಾನ ನೋಡಿರಿ). ದೇವರನ್ನು ಮೆಚ್ಚಿಸುವದಕ್ಕು ಪರಿಶುದ್ಧ ಜೀವನ ನಡಿಸುವದಕ್ಕೂ ಅವಶ್ಯಕವಾದ ಪ್ರಥಮ ಹೆಜ್ಜೆಯೇನೆಂದರೆ ಒಬ್ಬನು ತನ್ನ ಪಾಪವನ್ನು ಒಪ್ಪಿಕೊಂಡು ಅದಕ್ಕಾಗಿ ಪಶ್ಚಾತ್ತಾಪ ಪಡುವದಾಗಿದೆ (1 ಯೋಹಾನ 1:9 ಮತ್ತು ವ್ಯಾಖ್ಯಾನ ನೋಡಿರಿ). ಆದದರಿಂದ, ಮಾರ್ಗ ತಪ್ಪಿರುವವರನ್ನು ಪಶ್ಚಾತ್ತಾಪಕ್ಕೆ ಕರೆತರುವದೇ ಸಭಾನಾಯಕನ ಮುಖ್ಯ ಕರ್ತವ್ಯಗಳಲ್ಲಿಯೂ ಗುರಿಗಳಲ್ಲಿಯೂ ಒಂದಾಗಿದೆ.

---

## ಅಧ್ಯಾಯ - 3

### ಕಡೇ ದಿವಸಗಳಲ್ಲಿ ಭಕ್ತಿಹೀನತೆ (3:1-9)

**1** ಹೊಸ ಒಡಂಬಡಿಕೆಯಲ್ಲಿ ಕಡೇ ದಿವಸಗಳು ಎಂಬುದು ಸಾಮಾನ್ಯವಾಗಿ ಕ್ರಿಸ್ತನ ಎರಡನೆಯ ಬರೋಣದ ಮುಂಚಿನ ಕಾಲಾವಧಿ ಎಂಬ ಅರ್ಥ ನೀಡುತ್ತದೆ. ಆದರೆ ಪೌಲನು ಇಲ್ಲಿ "ಕಡೇ ದಿವಸಗಳು" ಈಗಾಗಲೇ ಪ್ರಾರಂಭವಾಗಿಯೋ ಎಂಬಂತೆ ಬರೆಯುತ್ತಾನೆ. ವಾಸ್ತವದಲ್ಲಿ, ಪೌಲನು ಇಲ್ಲಿ ನೀಡುವ "ಕಡೇ ದಿವಸಗಳ" ಚಿತ್ರಣವು ಪೌಲನ ಕಾಲದಿಂದ ಪ್ರಸ್ತುತ ಕಾಲದ ತನಕದ ಪ್ರತಿಯೊಂದು ಮಾನವ ಪೀಳಿಗೆಗೂ ಸುಲಭವಾಗಿ ಅನ್ವಯವಾಗಬಲ್ಲದು ಆದದರಿಂದ, ಈ ವಚನದಲ್ಲಿ ಕಡೇ ದಿವಸಗಳು ಎಂಬ ಹೇಳಿಕೆಯು ಕ್ರಿಸ್ತನ ಮೊದಲನೆಯ ಬರೋಣ ಹಾಗೂ ಆತನ ಎರಡನೆಯ ಬರೋಣದ ನಡುವಿನ ಅವಧಿ ಎಂಬ ಅರ್ಥವನ್ನು ಕೊಡುತ್ತದೆ. ಇದು ಹೊಸ ಒಡಂಬಡಿಕೆಯಲ್ಲಿ ಕಂಡುಬರುವ "ಕಡೇ ದಿವಸಗಳ" ಎರಡನೆಯ ಅರ್ಥವಾಗಿದೆ (ಇಬ್ರಿಯ 1:2 ನೋಡಿರಿ)..

**2-5** ಪೌಲನು ಇಲ್ಲಿ ವಿವಿಧ ದುಷ್ಕೃತ್ಯಗಳ ಕೆಲವು ಉದಾಹರಣೆಗಳನ್ನು ನೀಡುತ್ತಾನೆ. ಈ ದುಷ್ಕೃತ್ಯಗಳು ಈಗಾಗಲೇ ಪೌಲನ ಕಾಲದಲ್ಲಿ ವ್ಯಾಪಕವಾಗಿ ಹರಡಿದ್ದವು . ವಾಸ್ತವದಲ್ಲಿ, ಅವು ಗಳಲ್ಲಿ ಬಹುಪಾಲು ಕೃತ್ಯಗಳು ಜಗತ್ತಿನ ಪ್ರಾರಂಭದಿಂದಲೇ ಮನುಷ್ಯರೊಳಗೆ ಕಂಡು ಬಂದಿರುವವು ಗಳಾಗಿವೆ (ಆದಿಕಾಂಡ 6:5; ರೋಮ 1:29-31 ನೋಡಿರಿ). ಪೌಲನು ಗಲಾತ್ಯದವರಿಗೆ ಅಂಥವು ಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ ಎಂದು ಎಚ್ಚರಿಸಿದನು (ಗಲಾತ್ಯ 5:19-21 ನೋಡಿರಿ). ಮತ್ತು ಪೌಲನು ಮುಂಚೆ ತಿಮೊಥೆಯನಿಗೆ ಕ್ರೈಸ್ತರು ದುರ್ಮಾರ್ಗತನವನ್ನು ಬಿಟ್ಟುಬಿಡಬೇಕು ಎಂದು ಬರೆದಿದ್ದನು (2 ತಿಮೊಥೆ 2:19) ಇಲ್ಲಿ ಸಹ ಪೌಲನು ಕ್ರೈಸ್ತರು ದುರ್ಮಾರ್ಗಿಗಳ ಸಂಗಡ ಸಹವಾಸವನ್ನೂ ಮಾಡದಿರಬೇಕೆಂದು ಹೇಳುತ್ತಾನೆ (ವಚನ 5). ಹೇಗಿದ್ದರೂ, ಪೌಲನು 2 ತಿಮೊಥೆ 2:25ರಲ್ಲಿ ಸಭಾನಾಯಕನು ತನ್ನನ್ನು ಹಾಗೂ ಸತ್ಯವನು ವಿರೋಧಿಸುವವರನ್ನು ನಿಧಾನವಾಗಿ ತಿದ್ದಬೇಕೆಂದು ಬರೆದಿರುತ್ತಾನೆ. ಎರಡೂ ಸಂಗತಿಗಳು ಸತ್ಯವಾದವು ಗಳು ಮೊದಲನೆಯದಾಗಿ ನಾಯಕನು ಪಾಪದಲ್ಲಿಯೂ ದೋಷದಲ್ಲಿಯೂ ಬಿದ್ದಿರುವವರನ್ನು ಪಶ್ಚಾತಾಪಕ್ಕೆ ನಡಿಸಲು ಪ್ರಯತ್ನಿಸಬೇಕು. ಆದರೆ ಅವರು ಪಶ್ಚಾತ್ತಾಪ ನಡಿಸಲು ಪ್ರಯತ್ನಿಸಬೇಕು. ಆದರೆ ಅವರು ಪಶ್ಚಾತ್ತಾಪಪಡುವದಕ್ಕೆ ನಿರಾಕರಿಸುವದಾದರೆ.ನಾಯಕರು ಅವರ ಸಹವಾಸವನ್ನೂ ಮಾಡಬಾರದು.

ಪೌಲನು 2-5 ವಚನಗಳಲ್ಲಿ ಸಭೆಯ ಹೊರಗಿನ ದುರ್ಮಾರ್ಗಿಗಳ ಕುರಿತಾಗಿ ಮಾತ್ರವಲ್ಲ, ಆದರೆ ಸಭೆಯ ಒಳಗಿನ ದುರ್ಮಾರ್ಗಿಗಳ ಬಗ್ಗೆಯೂ ಬರೆಯುತ್ತಿದ್ದಾನೆ. ವಾಸ್ತವದಲ್ಲಿ, ಆತನು ಮುಖ್ಯವಾಗಿ ಕ್ರೈಸ್ತರೆಂದು ಹೇಳಿಕೊಂಡು ಪಶ್ಚಾತಾಪಪಡಲು ನಿರಾಕರಿಸಿ ಪಾಪದಲ್ಲಿ ಜೀವಿಸುವವರನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತಾಡುತ್ತಿದ್ದಾನೆ ಈ ಸುಳ್ಳು ಕ್ರೈಸ್ತರ ಸಂಗಡವೇ ನಾವು ಯಾವ ಸಹವಾಸವನ್ನು ಇಟ್ಟು ಕೊಳ್ಳಬಾರದು(1 ಕೊರಿಂಥ 5:9-11 ಮತ್ತು ವ್ಯಾಖ್ಯಾನ ನೋಡಿರಿ). ಸಭೆಯಲ್ಲಿರುವವರೇ ಕ್ರಿಸ್ತನ ಅತಿ ಅಪಾಯಕಾರಿ ವೈರಿಗಳಾಗಿದ್ದಾರೆ! ಸಭೆಯ ಹೊರಗಿನ ಎರಡುಸಾವಿರ ವೈರಿಗಳಿಗಿಂತಲೂ

ಸಭೆಯ ಒಳಗಿನ ಇಬ್ಬರು ವೈರಿಗಳು ಹೆಚ್ಚು ಹಾನಿಯನ್ನು ಮಾಡಬಲ್ಲರು. ಪೌಲನು 5ನೇ ವಚನದಲ್ಲಿ ಈ ದುರ್ಮಾರ್ಗಿಗಳು ಭಕ್ತಿಯ ವೇಷವುಳ್ಳವರು ಎಂದು ಬರೆಯುತ್ತಾನೆ. ಅವರು ನೀತಿವಂತರಾಗಿ ಕಾಣಿಸಿಕೊಳ್ಳುತ್ತಾರೆ. ಆದರೆ ಅವರ ಹೃದಯಗಳಲ್ಲಿರುವ ಕೆಟ್ಟತನದ ನಿಮಿತ್ತ ಪವಿತ್ರಾತ್ಮನು ಅವರಲ್ಲಿ ವಾಸಿಸುವದಿಲ್ಲ. ಈ ಕಾರಣಕ್ಕಾಗಿ ಅವರಲ್ಲಿ ಯಾವ ನಿಜವಾದ ಆತ್ಮೀಕ ಬಲವೂ ಇರುವದಿಲ್ಲ. ಅವರು ಪರಿಶುದ್ಧರಾಗಿರಲು ಅಥವಾ ದೇವರ ಚಿತ್ತಕ್ಕೆ ವಿಧೇಯರಾಗಲು ಬಲವನ್ನು ಹೊಂದಿರುವದಿಲ್ಲ. ಪವಿತ್ರಾತ್ಮನು ನಮ್ಮಲ್ಲಿ ನೆಲೆಸುವಾಗ ಮಾತ್ರವೇ ನಾವು ಆತ್ಮೀಕ ಬಲವನ್ನು ಪಡೆದುಕೊಳ್ಳುತ್ತೇವೆ. ನಾವು ಪಶ್ಚಾತ್ತಾಪ ಪಡದೆ ಪಾಪದಲ್ಲಿ ಜೀವಿಸುತ್ತಿರುವದರ ಮೂಲಕ ಪವಿತ್ರಾತ್ಮನಿಗೆ ದುಃಖ ಉಂಟುಮಾಡುವದಾದರೆ ಆತನು ನಮ್ಮನ್ನು ಬಿಟ್ಟುಹೋಗುವನು (ಜ್ಞಾನೋಕ್ತಿಗಳು 1:24-28; ಯೇಶಾಯ 63:10, ಎಫೆಸ 4:30, ಮತ್ತು ವ್ಯಾಖ್ಯಾನ ನೋಡಿರಿ). ದುಷ್ಕೃತ್ಯಗಳನ್ನು ನಡಿಸುವವರು ಕೆಲವು ವೇಳೆಗಳಲ್ಲಿ ಬಹಳ ಪರಿಣಾಮಕಾರಿಯಾಗಿ ಬೋಧಿಸಬಹುದು ಹಾಗೂ ಮಹಾ ಅದ್ಭುತಗಳನ್ನು ಮಾಡಬಹುದು. ಅಲ್ಲದೆ ಅವರು ಈ ಸಂಗತಿಗಳನ್ನು ಕ್ರಿಸ್ತನ ಹೆಸರಿನಲ್ಲಿ ಸಹ ಮಾಡಬಹುದು. ಅವರು ತಮ್ಮನ್ನೂ ಕ್ರೈಸ್ತರೆಂದು ಹೇಳಿಕೊಳ್ಳುತ್ತಾರೆ ಅವರು ಸಭೆಯ ಸದಸ್ಯರಾಗಿರುತ್ತಾರೆ. (ತೀತನು 1:16). ಆದರೆ ಅಂತ್ಯದಲ್ಲಿ ಕ್ರಿಸ್ತನು ಅವರನ್ನು ತಿರಸ್ಕರಿಸುವನು (ಮತ್ತಾಯ 7:22-23; 13:24-30, 47-56 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ತನ್ನವರು ಯಾರಾರೆಂಬದನ್ನು ಕರ್ತನು ತಿಳಿದಿದ್ದಾನೆ (2 ತಿಮೊಥೆ 2:19).. ಆದದರಿಂದ, ಅಂಥ ದುರ್ಮಾರ್ಗಿಗಳು ಸುಳ್ಳು ಬಲವನ್ನು ಪ್ರದರ್ಶಿಸುವದು ಮಾತ್ರವಲ್ಲದೆ ಪವಿತ್ರಾತ್ಮನ ನಿಜವಾದ ಬಲವನ್ನು ಅಲ್ಲಗಳೆಯುವವರೂ ಆಗಿದ್ದಾರೆ. ಒಬ್ಬನು ಬಹಿರಂಗವಾಗಿ ನೋಡಿದರೆ ಅವರು ಭಕ್ತಿವಂತರಾಗಿ ಕಾಣುತ್ತಾರೆ ಆದರೆ ಅಂತರ್ಯದಲ್ಲಿ ಅವರು ಯಾವ ಆತ್ಮೀಕ ಬಲವನ್ನು ಹೊಂದಿಲ್ಲ; ಅವರು ಆತ್ಮೀಕವಾಗಿ ಸತ್ತವರಾಗಿದ್ದಾರೆ.

**6-7** ಹಾಗಿದ್ದರೂ, ಈ ಸುಳ್ಳುಕ್ರೈಸ್ತರು ಅನೇಕರನ್ನು ಮೋಸಗೊಳಿಸುತ್ತಾರೆ. ಅವರು ವಿಶೇಷವಾಗಿ ಸ್ತ್ರೀಯರನ್ನು ವಂಚಿಸುತ್ತಾರೆ (1 ತಿಮೊಥೆ 2:14). ಅದರಲ್ಲೂ ಮುಖ್ಯವಾಗಿ ನಿರ್ಬಲ ನಂಬಿಕೆಯುಳ್ಳವರೂ ದೇವರ ವಾಕ್ಯದ ಸತ್ಯವನ್ನು ತಿಳಿಯದ ಸ್ತ್ರೀಯರನ್ನು ವಂಚಿಸುತ್ತಾರೆ. ಅಂಥ ಸ್ತ್ರೀಯರು ಪಾಪಗಳಿಂದ ತುಂಬಿದವರಾಗಿದ್ದಾರೆ (ವಚನ 6). ಅಂದರೆ, ಅವರು ಅಪರಾಧ ಹಾಗೂ ಅಶುದ್ಧ ಮನಸಾಕ್ಷಿಯನ್ನು ಹೊತ್ತುಕೊಂಡವರಾಗಿರುತ್ತಾರೆ. ಈ ಸ್ತ್ರೀಯರು ನಾನಾ ವಿಧವಾದ ಇಚ್ಛೆಗಳಿಂದಲೂ ಸಕಲ ವಿಧವಾದ ಹೊಸ ಬೋಧನೆಯಿಂದ ಪ್ರೇರಿತರು ಆಗಿರುವರು ಅವರು ಯಾವಾಗಲೂ ಉಪದೇಶ ಕೇಳುತ್ತಿದ್ದರೂ ಸತ್ಯವನ್ನು ಗ್ರಹಿಸಲಾರದವರು.

ಪೌಲನ ದಿನಗಳಲ್ಲಿ, ಸ್ತ್ರೀಯರು ಸುಳ್ಳುಬೋಧಕರಿಂದ ಸುಲಭವಾಗಿ ಹಾಗೆ ತಪ್ಪುತ್ತಿದ್ದರು, ಯಾಕೆಂದರೆ ಪುರುಷರಿಗೆ ಸತ್ಯವನ್ನು ತಿಳಿದುಕೊಳ್ಳಲು ದೊರೆಯುತ್ತಿದ್ದಷ್ಟೇ ಅವಕಾಶವು ಸ್ತ್ರೀಯರಿಗೆ ದೊರಕುತ್ತಿರಲಿಲ್ಲ. ಹೊಸ ಒಡಂಬಡಿಕೆಯ ಕಾಲದಲ್ಲಿ ಸ್ತ್ರೀಯರನ್ನು ಅಜ್ಞಾನಿಗಳೂ ತಿಳುವಳಿಕೆಯಲ್ಲಿ ನಿರ್ಬಲರೂ ಎಂದು ಪರಿಗಣಿಸಲಾಗುತ್ತಿತ್ತು. ಆದರೆ ಸ್ತ್ರೀಯರಿಗೆ ಕಲಿಯುವದಕ್ಕೆ ಸಮಾನವಾದ ಅವಕಾಶ ನೀಡಲ್ಪಟ್ಟಿರುವ ರಾಷ್ಟ್ರಗಳಲ್ಲಿ ಸ್ತ್ರೀಯರು ಅಷ್ಟು ಸುಲಭವಾಗಿ ವಂಚಿಸಲ್ಪಡುವದಿಲ್ಲ. ಮತ್ತು ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾದ ವಿಷಯವೇನೆಂದರೆ, ಪೌಲನು ಇಲ್ಲಿ ಪ್ರಸ್ತಾಪಿಸಿರುವ ಸ್ತ್ರೀಯರಂತೆಯೇ ಸುಲಭವಾಗಿ ವಂಚನೆಗೊಳಗಾಗುವ ಅನೇಕ ಪುರುಷರೂ ಇದ್ದಾರೆ!.

**8** ಕೆಲವು ಪುರಾತನ ಇತಿಹಾಸಕಾರರ ಪ್ರಕಾರವಾಗಿ ಯನ್ನ ಹಾಗೂ ಯಂಬ್ರ ಎಂಬವರು ಮೋಶೆಯನ್ನು ವಿರೋಧಿಸಲು ಪ್ರಯತ್ನಿಸಿದ ಪರೋಹನ ಮಾಂತ್ರಿಕರಾಗಿದ್ದರು (ವಿಮೋಚನಕಾಂಡ 7:10-12).

ದುರ್ಮಾರ್ಗಿಗಳು ಹಾಗೂ ಸುಳ್ಳು ಕ್ರೈಸ್ತರು ಬುದ್ಧಿಗೆಟ್ಟವರು –ಅಂದರೆ, ಅವರು ಸತ್ಯವನ್ನು ತಿಳಿಯುವದೂ ಇಲ್ಲ; ಅದನ್ನು ಹುಡುಕುವದೂ ಇಲ್ಲ (ರೋಮ 1:21; ಎಫೆಸ 4:17-18). ದೇವರು ಅಂಥವರನ್ನು ಸಂಪೂರ್ಣವಾಗಿ ತಿರಸ್ಕರಿಸುವನು.

**9** ಈ ದುರ್ಮಾರ್ಗಿಗಳು ಹಾಗೂ ಸುಳ್ಳು ಕ್ರೈಸ್ತರು ಸ್ವಲ್ಪ ಕಾಲದ ವರೆಗೆ ಇತರರನ್ನು ಮೋಸಮಾಡಬಲ್ಲರು, ಆದರೆ ಕೊನೆಗೆ ಅವರ ದುಷ್ಕೃತ್ಯ ಹಾಗೂ ಕೆಟ್ಟ ನಡತೆಯು ಎಲ್ಲರಿಗೂ ಸ್ಪಷ್ಟವಾಗಿ ತಿಳಿದುಬರುವದು. ಅಂತಿಮ ಸಲಹೆಗಳು (3:10-17).

**10-11** ಪೌಲನ ಜೀವಿತ ಹಾಗೂ ನಡವಳಿಕೆಯು ಯಾವ ವಿಧದಲ್ಲಿತ್ತೆಂಬದು ತಿಮೊಥೆಯನಿಗೆ ತಿಳಿದಿತ್ತು. ಪೌಲನು ತಿಮೊಥೆಯನಿಗೆ ಅನುಸರಿಸುವದಕ್ಕೆ ತನ್ನ ಜೀವಿತದ ಮಾದರಿಯನ್ನು ನೀಡುತ್ತಾನೆ. ಪೌಲನು ತನ್ನಲ್ಲಿ ಹೆಚ್ಚಳ ಪಡುವದಿಲ್ಲ; ಆತನ ಎಲ್ಲಾ ಒಳ್ಳೇ ಗುಣಗಳು ಹಾಗೂ ಸತ್ಕ್ರಿಯೆಗಳು ದೇವರ ಕೃಪೆಯ ಫಲಿತಗಳೇ ಆಗಿವೆ (1 ಕೊರಿಂಥ 15:10). ಪೌಲನು ಎಲ್ಲಕ್ಕಿಂತ ಮೊದಲು ತನ್ನ ಬೋಧನೆ ಬಗ್ಗೆ ಪ್ರಸ್ತಾಪಿಸುತ್ತಾನೆ. ಪೌಲನ ಜೀವಿತದಲ್ಲಿನ ಇತರ ಎಲ್ಲಾ ಸಂಗತಿಗಳು ಆ ಬೋಧನೆಯಿಂದ ಹೊರಹೊಮ್ಮುತ್ತವೆ. ಪೌಲನು ತನ್ನ ಜೀವಿದಲ್ಲಿ ಇತರರಿಗೆ ನೀಡುವ ಬೋಧನೆಯನ್ನೇ ಅನುಸರಿಸುವವನಾಗಿದ್ದಾನೆ. ಪೌಲನು ತಾನು ಬೋಧಿಸಿದಂತೆಯೇ ಜೀವಿಸಿದ್ದಾನೆಂಬದನ್ನು ತಿಮೊಥೆಯನು ಬಲ್ಲವನಾಗಿದ್ದನು. ಎಲ್ಲಾ ಉಪದೇಶಕರೂ ಹಾಗೆಯೇ ಮಾಡಲಿ.

ಪೌಲನು ತನಗೆ ಅಂತಿಯೋಕ್ಯ, ಇಕೋನ್ಯ, ಲುಸ್ತ್ರ ಪಟ್ಟಣಗಳಲ್ಲಿ ಏನು ಸಂಭವಿಸಿತೆಂಬದರ ಬಗ್ಗೆ ತಿಮೊಥೆಯನಿಗೆ ಜ್ಞಾಪಕಪಡಿಸುತ್ತಾನೆ (ಅ.ಕೃತ್ಯ 13:49-52; 14:1-20). ತಿಮೊಥೆಯನು ಆ ಸಮಯದಲ್ಲಿ ಲುಸ್ತ್ರದಲ್ಲಿದ್ದನು (ಅ.ಕೃತ್ಯ 16:1). ನಿಶ್ಚಯವಾಗಿಯೂ ತಿಮೊಥೆಯನು ಪೌಲನ ಬೋಧನೆಯನ್ನು ಕೇಳಿ ಜನರ ಗುಂಪು ಆತನಿಗೆ ಕಲ್ಲೆಸೆಯುವದನ್ನು ನೋಡಿದ್ದನು (ಅ.ಕೃತ್ಯ 14:19). ಪೌಲನು ಅನೇಕ ಹಿಂಸೆಗಳನ್ನು ಸಹಿಸಿಕೊಂಡನು (2 ತಿಮೊಥೆ 2:12); ಆದರೆ, ಆತನು

11 ನೇ ವಚನದಲ್ಲಿ ವಚನದಲ್ಲಿ ತಿಮೊಥೆಯನಿಗೆ ಅವೆಲ್ಲವು ಗಳೊಳಗಿಂದ ಕರ್ತನು ನನ್ನನ್ನು ಬಿಡಿಸಿದನು ಎಂದು ಹೇಳುತ್ತಾನೆ (ಕೀರ್ತನೆಗಳು 34:17).

**12** ಇಲ್ಲಿ ಪೌಲನು ತಿಮೊಥೆಯನಿಗೆ ನಿಜವಾಗಿಯೂ ಒಂದು ಅತಿಪ್ರಾಮುಖ್ಯವಾದ ಸಂಗತಿಯನ್ನು ನೆನಪಿಗೆ ತರುತ್ತಾನೆಃ ಕ್ರಿಸ್ತನನ್ನು ನಿಜವಾಗಿಯೂ ಹಿಂಬಾಲಿಸುವ ಪ್ರತಿಯೊಬ್ಬರು ಶೀಘ್ರವಾಗಿ ಅಥವಾ ತಡವಾಗಿಯಾದರೂ ಹಿಂಸೆಗೊಳಗಾಗುವರು ಅನೇಕ ವರ್ಷಗಳ ಮುಂಚೆ ಪೌಲನು "ಲುಸ್ತ್ರದಲ್ಲಿ ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕು" ಎಂದು ಹೇಳುವದನ್ನು ತಿಮೊಥೆಯನ್ನು ಕೇಳಿದ್ದಿರಬಹುದಾಗಿದೆ (ಅ.ಕೃತ್ಯ 14:22 ಕ್ರಿಸ್ತನ ಸಮಯದಿಂದ ಇಂದಿನ ತನಕವೂ ಎಲ್ಲಾ ನಿಜಕ್ರೈಸ್ತರು ಒಂದೆಲ್ಲಾ ಒಂದು ಸಂಕಟಗಳನ್ನೂ ಶ್ರಮೆಯನ್ನೂ ಅನುಭವಿಸಿದ್ದಾರೆ. ಯೇಸು ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆಃ "ನನ್ನ ನಿಮಿತ್ತಾ ಎಲ್ಲರೂ ನಿಮ್ಮನ್ನು ಹಗೆ ಮಾಡುವರು" (ಮತ್ತಾಯ 10:22). "ಅವರು ನನ್ನನ್ನು ಹಿಂಸೆಪಡಿಸಿದರೆ ನಿಮ್ಮನ್ನು ಸಹ ಹಿಂಸೆಪಡಿಸುವರು"(ಯೋಹಾನ 15:20).

**13** ಒಮ್ಮೆ ಒಬ್ಬನು ದುಮಾರ್ಗವನ್ನು ಹಿಡಿಯಲು ಪ್ರಾರಂಭಿಸಿದರೆ ಅವನ ಜೀವಿತವು ಹೆಚ್ಚು ಹೆಚ್ಚು ಕೆಟ್ಟದ್ದಾಗುತ್ತದೆ (ರೋಮ 1:21-28; ಎಫೆಸ 4:17-19 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**14-15** ಆದರೆ ಪೌಲನು ತಿಮೊಥೆಯನಿಗೆ ನೀನಾದರೋ ಕಲಿತು ದೃಢವಾಗಿ ನಂಬಿದ ಬೋಧನೆಗಳಲ್ಲಿ ನೆಲೆಯಾಗಿರು ಎಂದು ಹೇಳುತ್ತಾನೆ. ಕೇವಲ ಕಲಿಯುವದು ಮಾತ್ರವೇ ಸಾಕಾಗದು; ನಾವು ಯಾವದನ್ನು ಕಲಿತಿದ್ದೇವೋ ಅದರಲ್ಲಿ ನೆಲೆಯಾಗಿರಬೇಕು. ತಿಮೊಥೆಯನು ತಾನು ಕಲಿತಿರುವದನ್ನು ಸತ್ಯವೆಂದು ದೃಢವಾಗಿ ನಂಬಬಹುದು, ಯಾಕೆಂದರೆ, ಆತನು ತನ್ನ ಉಪದೇಶಕರಲ್ಲಿ ಭರವಸೆವಿಡಬಹುದಾಗಿದೆ– ಉದಾಹರಣೆಗೆ, ಪೌಲನು, ಆತನ ತಾಯಿ, ಹಾಗೂ ಆತನ ಅಜ್ಜಿ (2 ತಿಮೊಥೆ 1:5). ಪುನಃ ತಿಮೊಥೆಯನು ಅವರು ಕಲಿಸಿಕೊಟ್ಟಿರುವದರಲ್ಲಿ ಭರವಸೆವಿಡಬಹುದು, ಯಾಕೆಂದರೆ ಅದು ದೇವರ ವಾಕ್ಯದಲ್ಲಿ ಬರೆದಿರುವದರೊಂದಿಗೆ ಸರಿಹೊಂದುವದಾಗಿದೆ. ಒಂದು ಬೋಧನೆಯು ದೇವರ ವಾಕ್ಯದೊಂದಿಗೆ ಸಮ್ಮತಿಸುವದಾದರೆ ಅದು ಸತ್ಯ ಉಪದೇಶವೆಂಬದನ್ನು ತಿಮೊಥೆಯನು ನಿಶ್ಚಯಮಾಡಿಕೊಳ್ಳಬಹುದು ಪೌಲನು ಬರೆಯುವದೇನೆಂದರೆಃ ಪರಿಶುದ್ಧ ಗ್ರಂಥಗಳು ರಕ್ಷಣೆಯನ್ನು ಹೊಂದಿಸುವ ಜ್ಞಾನವನ್ನು ಕೊಡುವದಕ್ಕೆ ಶಕ್ತವಾಗಿದೆ (ವಚನ 16). ಅಂದರೆ, ದೇವರ ಪರಿಶುದ್ಧಗ್ರಂಥಗಳು [3]ಹೇಗೆ ರಕ್ಷಣೆಯನ್ನು ಪಡೆದುಕೊಳ್ಳಬೇಕೆಂಬದನ್ನು ನಮಗೆ ತಿಳಿಸುತ್ತವೆ. ರಕ್ಷಣೆಯನ್ನು ಹೇಗೆ ಪಡೆದುಕೊಳ್ಳಬಹುದು? ಅದು ಕ್ರಿಸ್ತ ಯೇಸುವಿನಲ್ಲಿರುವ ನಂಬಿಕೆಯ ಮೂಲಕ ಪಡೆದುಕೊಳ್ಳಲ್ಪಡಬಹುದು. ಮತ್ತು ಪೌಲನು ಮಾತಾಡುತ್ತಿರುವ ಗ್ರಂಥಗಳು ಹಳೆ ಒಡಂಬಡಿಕೆಯ ಕುರಿತಾಗಿದೆ. ಹಳೆ ಒಡಂಬಡಿಕೆಯು ನಮಗೆ ರಕ್ಷಣೆಯ ಮಾರ್ಗವನ್ನು ತೋರಿಸುವದಾದರೆ ಹೊಸ ಡಂಬಡಿಕೆಯು ಆಮಾರ್ಗವನ್ನು ಇನ್ನೂ ಎಷ್ಟೋ ಹೆಚ್ಚಾಗಿ ತೋರಿಸಬೇಕಲ್ಲವೇ!

**16** ಇದು ಇಡೀ ಬೈಬಲಿನಲ್ಲಿಯೇ ಅತಿಪ್ರಾಮುಖ್ಯವಾದ ವಚನಗಳಲ್ಲಿ ಒಂದಾಗಿದೆ. ಪ್ರತಿಯೊಂದು ಶಾಸ್ತ್ರವು – ಅಂದರೆ, ಬೈಬಲಿನಲ್ಲಿ ಹಳೆ ಒಡಂಬಡಿಕೆ ಹಾಗೂ ಹೊಸ ಒಡಂಬಡಿಕೆಗಳೆರಡರ ಪ್ರತಿಯೊಂದು ವಚನವು – ದೇವರ ಪ್ರೇರಣೆ ಹಾಗೂ ಮಾರ್ಗದರ್ಶನದಿಂದ ಬರೆಯಲ್ಪಟ್ಟಿದೆ (2 ಪೇತ್ರ 1:20-21 ಮತ್ತು ವ್ಯಾಖ್ಯಾನ ನೋಡಿರಿ). ಜಗತ್ತಿನಲ್ಲೆಲ್ಲಾ ಬೈಬಲಿನಂತಹ ಪುಸ್ತಕವು ಮತ್ತಾವುದೂ ಇಲ್ಲ. ಇತರ ಪುಸ್ತಕಗಳು ಸತ್ಯ, ಜ್ಞಾನವುಳ್ಳ ಹಾಗೂ ಸಹಾಯಕರವಾದ ಸಂಗತಿಗಳನ್ನು ಒಳಗೊಂಡಿರಬಹುದು, ಆದರೆ ಸ್ವತಃ ದೇವರ ವಾಕ್ಯವನ್ನೊಳಗೊಂಡಿರುವ ಏಕೈಕ ಪುಸ್ತಕವಿರುತ್ತದೆ, ಅದು ಬೈಬಲ್. ಬೈಬಲ್ ಮಾತ್ರವೇ ದೇವರ ನೇರವಾದ ಪ್ರೇರಣೆಯಿಂದ ಬರೆಯಲ್ಪಟ್ಟಿದೆ; ಅದು ದೈವ ಪ್ರೇರಿತವಾದದ್ದು. ನಾವು ಬೈಬಲಿನಲ್ಲಿರುವ ಪ್ರತಿಯೊಂದು ಮಾತನ್ನೂ ಸಂಪೂರ್ಣವಾಗಿ ವಿಶ್ವಾಸಿಸಬಹುದು ಅದು ನಿಜವಾಗಿಯೂ ದೇವರ ಸ್ವಂತ ವಾಕ್ಯವಾಗಿದೆ(ಸಾಮಾನ್ಯ ಲೇಖನಃ ನಮಗೆ ಬೈಬಲ್ ಹೇಗೆ ದೊರೆಯಿತು ನೋಡಿರಿ). ಬೈಬಲ್ ದೇವರ ವಾಕ್ಯ ಅಗಿರುವದರಿಂದ, ಅದು ಉಪದೇಶಕ್ಕೂ, ಖಂಡನೆಗೂ, ತಿದ್ದುಪಾಟಿಗೂ, ನೀತಿಶಿಕ್ಷೆಗೂ ಉಪಯುಕ್ತವಾಗಿದೆ. ಬೈಬಲ್ ನಮಗೆ ನೀತಿಯ ನಿಜಮಾರ್ಗವನ್ನು ತೋರುತ್ತದೆ, ಮತ್ತು ಜೊತೆಗೆ ಅದರಲ್ಲಿ ನಡೆಯುವದಕ್ಕೆ ನಮಗೆ ಸಹಾಯಮಾಡುತ್ತದೆ.

**17** ಬೈಬಲಿನಿಂದ ಬರುವ ಉಪದೇಶ, ಖಂಡನೆ, ತಿದ್ದುಪಾಟು, ಶಿಕ್ಷಣಗಳ ಮೂಲಕ ದೇವರ ಮನುಷ್ಯನು ಸಕಲ ಸತ್ಕಾರ್ಯಕ್ಕೆ ಸನ್ನದ್ಧನಾಗುವನು. ಇಲ್ಲಿ, ದೇವರ ಮನುಷ್ಯನು ಎಂಬ ಹೇಳಿಕೆಯು ತಿಮೊಥೆಯನಂತ ಸಭಾಪಾಲಕ ಅಥವಾ ಸಭೆಯ ನಾಯಕ ಎಂದು ಅರ್ಥನೀಡುತ್ತದೆ. ಆದರೆ ಈ ವಾಕ್ಯವು ಎಲ್ಲೆಡೆಯೂ ಇರುವ ಕ್ರೈಸ್ತರೆಲ್ಲರಿಗೂ, ಪುರುಷ ಮತ್ತು ಸ್ತ್ರೀಯರಿಬ್ಬರಿಗೂ ಸಮಾನವಾಗಿ ಅನ್ವಯಿಸುತ್ತದೆ.

---

## ಅಧ್ಯಾಯ - 4

### ತಿಮೊಥೆಯನಿಗೆ ಪೌಲನ ನಿಯೋಗ (4:1-8)

**1** ಪೌಲನು ತಿಮೊಥೆಯನಿಗೆ ಈ ಖಂಡಿತವಾದ ಮಾತನ್ನು ನೀಡುವಾಗ (ನಿಯೋಗಿಸುವಾಗ) ಅತನು ಇದನ್ನು ದೇವರ ಮುಂದೆ ಮತ್ತು ಕ್ರಿಸ್ತಯೇಸುವಿನ ಮುಂದೆ ನೀಡುತ್ತಿರುವನೆಂದು ತಿಮೊಥೆಯನಿಗೆ ಜ್ಞಾಪಕಪಡಿಸುತ್ತಾನೆ. ಅಂದರೆ, ಪೌಲನು ಈಗ ಕೊಡಲಿದ್ದ ನಿಯೋಗಕ್ಕೆ (ಖಂಡಿತವಾದ ಮಾತಿಗೆ) ದೇವರೂ ಕ್ರಿಸ್ತನೂ ತಮ್ಮ ಒಪ್ಪಿಗೆಯನ್ನು

ನೀಡಿದರು. ತಿಮೊಥೆಯನು ಪೌಲನ ಮಾತುಗಳಿಗೆ ಕಿವಿಗೊಡುವನೋ ಅಥವಾ ಇಲ್ಲವೋ ಎಂಬುದಾಗಿ ಅವರನ್ನು ಪರೀಕ್ಷಿಸುವನು. ತಿಮೊಥೆಯನು ಒಂದು ದಿನ ತನ್ನ ಕೆಲಸದ ಲೆಕ್ಕವನ್ನು ದೇವರಿಗೂ ಕ್ರಿಸ್ತನಿಗೂ ಕೊಡಬೇಕಾಗುವದೆಂಬದನ್ನು ನೆನಪಿನಲ್ಲಿಟ್ಟುಕೊಳ್ಳಲಿ (ರೋಮ 14:12 ;2 ಕೊರಿಂಥ 5:10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಯೇಸುಕ್ರಿಸ್ತನು ಲೋಕರಕ್ಷಕನು ಮಾತ್ರವಲ್ಲ; ಆತನು ಲೋಕಕ್ಕೆ ನ್ಯಾಯಾಧಿಪತಿಯೂ ಆಗಿದ್ದಾನೆ (ಯೋಹಾನ 5:22-23, ಅ.ಕೃತ್ಯ 10:42; 17:31). ಆತನು ತಿರುಗಿಬರುವಾಗ ಆ ವೇಳೆಯಲ್ಲಿ ಬದುಕಿರುವವರಿಗೂ ಈಗಾಗಲೇ ಸತ್ತು ಹೋಗಿರುವವರಿಗೂ ನ್ಯಾಯ ತೀರಿಸುವನು.

**2** ಪೌಲನು ಇಲ್ಲಿ ತಿಮೊಥೆಯನಿಗೆ – ಅವನಿಗೆ ಮಾತ್ರವಲ್ಲ ಆದರೆ ಎಲ್ಲಾ ಕ್ರೈಸ್ತ ನಾಯಕರಿಗೆ – ಐದು ಕಾರ್ಯಗಳನ್ನು ನಿಯೋಗಿಸುತ್ತಾನೆ. ದೇವರ ವಾಕ್ಯವನ್ನು ಸಾರು – ಅಂದರೆ, ಸುವಾರ್ತೆ ಎಲ್ಲಾ ಸಮಯಗಳಲ್ಲಿ ಸಿದ್ಧನಾಗಿರು (ಆಸಕ್ತನಾಗಿರು) – ಕರ್ತವ್ಯದಲ್ಲಿ ನಿರತನಾಗಿರು; ಖಂಡಿಸು, ಗದರಿಸು, ಎಚ್ಚರಿಸು (ಪ್ರೋತ್ಸಾಹಿಸು) ಸಭಾ ನಾಯಕನು ಅನುಕೂಲವಾದ ಕಾಲದಲ್ಲಿಯೂ ಅನಾನುಕೂಲವಾದ ಕಾಲದಲ್ಲಿಯೂ ಸುವಾರ್ತೆಯನ್ನು ಸಾರುವದಕ್ಕೆ ಸಿದ್ಧನಾಗಿರಬೇಕು. ಅನೇಕ ಕ್ರೈಸ್ತರು ಒಬ್ಬ ವ್ಯಕ್ತಿಯೊಂದಿಗೆ ಸುವಾರ್ತೆಯನ್ನು ಸಾರುವದಕ್ಕೆ ಮುಂಚೆ "ಸರಿಯಾದ ಸಂದರ್ಭಕ್ಕಾಗಿ" ಮಾತ್ರವೇ ಕಾಯುತ್ತಾರೆ; ಆದರೆ ಅನೇಕ ವೇಳೆ "ಸರಿಯಾದ ಸಂದರ್ಭವು " ಎಂದಿಗೂ ಬರುವದೇ ಇಲ್ಲ, ಮತ್ತು ಹೀಗೆ ಆ ವ್ಯಕ್ತಿಯು ರಕ್ಷಣೆಯ ಮಾರ್ಗದ ಬಗ್ಗೆ ಕೇಳುವ ಅವಕಾಶದಿಂದ ವಂಚಿತನಾಗುತ್ತಾನೆ. ಆದದರಿಂದ, ಪವಿತ್ರಾತ್ಮನ ಮಾರ್ಗದರ್ಶನ ದಡಿಯಲ್ಲಿ ನಾವು ಇತರರೊಂದಿಗೆ ಸುವಾರ್ತೆಯನ್ನು ಹಂಚಿಕೊಳ್ಳಲು ಯಾವಾಗಲೂ, ಸಮಸ್ಯೆ ಹಾಗೂ ಅನುಕೂಲವಿಲ್ಲದ ಸಮಯಗಳಲ್ಲಿಯೂ ಸಿದ್ಧನಾಗಿರಬೇಕು. ಸಭಾನಾಯಕನು ಅವಶ್ಯಕವಾದರೆ ತಪ್ಪು ಮಾಡುವವರನ್ನು ತಿದ್ದುವದಕ್ಕೂ ಗದರಿಸುವದಕ್ಕೂ ಸಿದ್ಧನಾಗಿರಬೇಕು. ಇದು ನಮ್ಮ ಕಿವಿಗಳಿಗೆ ಕಠೋರವಾಗಿ ತೋರಬಹುದು ಹಾಗಿದ್ದರೂ, ಇದು ಸಭಾನಾಯಕನ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿದೆ (1 ತಿಮೊಥೆ 5:20; ತೀತನು 1:13; 2:15). ಅಂಥ ಶಿಸ್ತು ಶಿಕ್ಷಣವಿಲ್ಲದಿದ್ದರೆ ಸಭೆಯು ನಿರ್ಬಲವಾಗುತ್ತದೆ. ಹಾಗೂ ದುಮಾರ್ಗಿಗಳೂ, ಸುಳ್ಳು ಕ್ರೈಸ್ತರೂ ಸಭೆಯನ್ನು ಪ್ರವೇಶಿಸಿ ಅಧಿಕವಾಗಿ ಬೆಳೆಯುವಲ್ಲಿ ಸಫಲರಾಗುವರು. ಹೇಗಿದ್ದರೂ, ಒಬ್ಬ ನಾಯಕನು ಖಂಡಿಸಿ ಗದರಿಸುವಾಗ ಅದನ್ನು ಪೂರ್ಣದೀರ್ಘಶಾಂತಿಯಿಂದ ಉಪದೇಶಿಸುತ್ತಾ ಮಾಡಬೇಕು. ಒಬ್ಬ ನಾಯಕನು ವ್ಯಕ್ತಿಗೆ ಅತನು ತಪ್ಪುದಾರಿಯಲ್ಲಿದ್ದಾನೆಂದು ಹೇಳುವದು ಮಾತ್ರವಲ್ಲದೆ ಆ ವ್ಯಕ್ತಿಗೆ ಸರಿಯಾದ ದಾರಿಯನ್ನೂ ತೋರಿಸಬೇಕು. ಆತನು ಇದನ್ನು ದೀರ್ಘಶಾಂತಿಯಿಂದ ಮಾಡಬೇಕು. ಒಬ್ಬ ತಂದೆಯು ಹೇಗೆ ತನ್ನ ಮಕ್ಕಳನ್ನು ಪ್ರೀತಿ ಹಾಗೂ ತಾಳ್ಮೆಯಿಂದ ಗದರಿಸುತ್ತಾನೋ ಹಾಗೆಯೇ ಸಭೆಯ ನಾಯಕನು ಮಾರ್ಗತಪ್ಪಿದವರನ್ನು ಪ್ರೀತಿ ಹಾಗೂ ತಾಳ್ಮೆಯಿಂದ ತಿದ್ದುವವನೂ ಗದರಿಸುವವನೂ ಆಗಿರಬೇಕು.

**3-4** ತಿಮೊಥೆಯನು ಸುವಾರ್ತೆಯನ್ನು ಆಸಕ್ತನಾಗಿ ಬೋಧಿಸಬೇಕು, ಯಾಕೆಂದರೆ ಜನರು ಸತ್ಯವನ್ನು ಸ್ವೀಕರಿಸಿಕೊಳ್ಳದ ಕಾಲವು ಬರುತ್ತದೆ (1 ತಿಮೊಥೆ 4:1; 2 ತಿಮೊಥೆ 3:1, ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಅವರು ತಮಗೆ ಇಷ್ಟವಾಗುವದನ್ನು ಮಾತ್ರವೇ ಕೇಳುವರು. ಅವರು ತೀಟೆ ಕಿವಿಯುಳ್ಳವರಾಗುವರು (ವಚನ 4)- ಅಂದರೆ, ಯಾವದೇ ಹೊಸ ಹಾಗೂ ಕುತೂಹಲಕಾರಿ ಬೋಧನೆಯನ್ನು ಕೇಳುವದಕ್ಕೆ ಉತ್ಸುಕವಾದ ಕಿವಿಯುಳ್ಳವರಾಗುವರು. ಅವರು ಕಲ್ಪನಾ ಕಥೆಗಳನ್ನು ಕೇಳುವದಕ್ಕೆ ಹೋಗುವರು, ಯಾಕೆಂದರೆ ಕಟ್ಟುಕಥೆಗಳು ಮನರಂಜನಾತ್ಮಕವೂ ಮನಮೋಹಕವೂ ಆಗಿರುತ್ತವೆ. ಅವರು ತಾವು ಸತ್ಯವನ್ನು ಬಿಟ್ಟು ಅಲೆದಾಡುತ್ತಿರುವರೆಂಬದನ್ನೂ ತಿಳಿಯದವರಾಗುವರು.

**5** ಆದರೆ ತಿಮೊಥೆಯನು ಅಂಥ ಹೊಸ ಹಾಗು ಮನಮೋಹಕ ಬೋಧನೆಯಿಂದ ದಾರಿತಪ್ಪದವನಾಗಿರಬೇಕು; ಆತನು ಸತ್ಯವನ್ನು ಮಾತ್ರವೇ ಮಾತಾಡಬೇಕು ಹಾಗೂ ಬೋಧಿಸಬೇಕು. ಆತನ ಸಂಕಷ್ಟಗಳನ್ನೂ ವಿರೋಧವನ್ನೂ ತಾಳಿಕೊಳ್ಳಬೇಕು (2 ತಿಮೊಥೆ 2:3). ಆತನು ಸಭಾಪಾಲಕನ ಎಲ್ಲ ಕರ್ತವ್ಯಗಳನ್ನು ಲೋಪವಿಲ್ಲದೆ ನೆರವೇರಿಸಬೇಕು (ವಚನ 2). ಪೌಲನು ಹೊರಟು ಹೋಗಬೇಕಾದ ಕಾಲವು ಸಮೀಪವಾದದ್ದರಿಂದ (ವಚನ3), ಪೌಲನು ತನ್ನ ಹೆಜ್ಜೆ ಜಾಡಿಗಳಲ್ಲಿ ನಡೆದು ತನ್ನ ಸ್ಥಾನದಲ್ಲಿ ಕೆಲಸವನ್ನು ಮುಂದುವರೆಸಿಕೊಂಡು ಹೋಗಬೇಕೆಂದು ತಿಮೊಥೆಯನನ್ನು ಪ್ರಬೋಧಿಸುತ್ತಾನೆ.

**6** ಪೌಲನು ಪಾನ ದ್ರವ್ಯದಂತೆ ಅರ್ಪಿಸಲ್ಪಡಲಿದ್ದನು (ಫಿಲಿಪ್ಪಿ 2:17, ನೋಡಿರಿ). ಕ್ರಿಸ್ತನು ಸಹ ನಮಗೋಸ್ಕರ ಯಜ್ಞವಾಗಿ ಅರ್ಪಿಸಲ್ಪಟ್ಟನು (ಇಬ್ರಿಯ 9:14,28; 10:10) ಅದೇ ವಿಧದಲ್ಲಿ, ಕ್ರಿಸ್ತನ ಸೇವಕರು ಆತನಿಗೋಸ್ಕರ ಇತರರಿಗೋಸ್ಕರವೂ ತಮ್ಮನ್ನು ಅರ್ಪಿಸಿಕೊಳ್ಳಬೇಕು.

**7** ಪೌಲನು ಈಗ ಸಂತೃಪ್ತಿಯಿಂದ ತನ್ನ ಜೀವಿತವನ್ನು ಹಿಂದಿರುಗಿನೋಡಬಹುದು. ಆತನು ತನಗೆ ಕ್ರಿಸ್ತನು ನೇಮಿಸಿದ ಕೆಲಸವನ್ನೆಲ್ಲಾ ನೆರವೇರಿಸಿದ್ದಾನೆ. ಆತನ ಹೋರಾಟವು ಮುಗಿದಿದೆ; ಈಗ ಆತನ ಸ್ಥಾನದಲ್ಲಿ ತಿಮೊಥೆಯನು ಹೋರಾಟವನ್ನು ಮುಂದುವರೆಸಬೇಕು (1ತಿಮೊಥೆ 6:12). ಪೌಲನು ಓಟವನ್ನು ಕಡೆಗಾಣಿಸಿದ್ದಾನೆ; ಆತನು ಸಾಯುವ ತನಕವೂ ನಂಬಿಗಸ್ಥನಾಗಿ ಉಳಿದಿದ್ದಾನೆ (ಅ.ಕೃತ್ಯ 20:24).

ನಾನು ಕ್ರಿಸ್ತನಂಬಿಕೆಯನ್ನು ಕಾಪಾಡಿಕೊಂಡಿದ್ದೇನೆ. ಎಂದು ಪೌಲನು ಹೇಳುತ್ತಾನೆ. ಪೌಲನು ನಂಬಿಕೆಯನ್ನು – ಅಂದರೆ, ಸುವಾರ್ತೆಯನ್ನು ಕಾಪಾಡಿದ್ದಾನೆ [4] –ಎಂದು ಇದರ ಅರ್ಥವಾಗಬಹುದು. ಆತನು ತನ್ನ ಬೋಧನೆಯೊಳಗೆ ಯಾವ ದೋಷ ಅಥವಾ ಸುಳ್ಳುತನವು ಪ್ರವೇಶಿಸುವಂತೆ ಬಿಟ್ಟಿರುವದಿಲ್ಲ. ಆತನು ಸುವಾರ್ತೆಯನ್ನು ಶುದ್ಧವಾಗಿಯೂ ಸತ್ಯವಾಗಿಯೂ ಕಾಪಾಡಿದ್ದಾನೆ (2 ತಿಮೊಥೆ 1:14, ಮತ್ತು ವ್ಯಾಖ್ಯಾನ ನೋಡಿರಿ).

ಆದರೆ ಪೌಲನು ನಾನು ಕ್ರಿಸ್ತನಂಬಿಕೆಯನ್ನು ಕಾಪಾಡಿಕೊಂಡಿದ್ದೇನೆ ಎಂದು ಹೇಳುವಾಗ ಆತನು ಕೊನೆಯ ತನಕವೂ ನಂಬಿಗಸ್ಥನಾಗಿದ್ದಾನೆ; ಕ್ರಿಸ್ತನಲ್ಲಿನ ಆತನ ನಂಬಿಕೆ ಚಂಚಲವಾಗಲಿಲ್ಲ ಎಂದು ಸಹ ಆತನ ತಾತ್ಪರ್ಯವಾಗಿದೆ. ಪೌಲನಿಗಾದರೋ ಯೇಸುವಿನ ವಾಗ್ದಾನವು ಶೀಘ್ರವೇ ನೆರವೇರುವದುಃ "......ಕಡೇವರೆಗೂ ದೃಢವಾಗಿ ನಿಲ್ಲುವವನು ರಕ್ಷಣೆ ಹೊಂದುವನು" (ಮಾರ್ಕ 13:13).

8 ಎಲ್ಲಾ ಜನರನ್ನು ನೀತಿಗನುಗುಣವಾಗಿಯೂ ನ್ಯಾಯವಾಗಿಯೂ ತೀರ್ಪುಮಾಡುವ ಕರ್ತನಾದ ಯೇಸುವು ಆ ದಿನದಲ್ಲಿ –ಅಂದರೆ, ನ್ಯಾಯತೀರ್ಪಿನದಿನದಲ್ಲಿ –ಪೌಲನಿಗೆ ಪ್ರತಿಫಲ ನೀಡುವನು. ಪೌಲನು ಇನ್ನೂ ಹೇಳುವದೇನೆಂದರೆ, ಯೇಸು ತನ್ನ ಪ್ರತ್ಯಕ್ಷತೆಯನ್ನು ಹಾತೊರೆಯುವವರೆಲ್ಲರಿಗೂ –ಅಂದಲೆ, ಯೇಸುವನ್ನು ಪ್ರೀತಿಸಿ ಹಿಂಬಾಲಿಸುವವರೆಲ್ಲರಿಗೂ– ಪ್ರತಿಫಲ ಕೊಡುವನು.

ಪೌಲನು ಈ ಪ್ರತಿಫಲವನ್ನು ನೀತಿಯೆಂಬ ಜಯಮಾಲೆ ಎಂದು ಕರೆಯುತ್ತಾನೆ. ಪೌಲನ ಕಾಲದಲ್ಲಿ ಕ್ರೀಡಾ ಸ್ಪರ್ಧೆಯಲ್ಲಿ ಗೆಲ್ಲುವವನಿಗೆ ಎಲೆಗಳಿಂದ ಮಾಡಿದ ಜಯಮಾಲೆಯನ್ನು ಕೊಡಲಾಗುತ್ತಿತ್ತು (1 ಕೊರಿಂಥ 9:25). ಅರಸರುಗಳು ರಾಜ್ಯಕ್ಕೆ ಸಲ್ಲಿಸಿದ ಯಾವದಾದರೂ ವಿಶೇಷ ಸೇವೆಗಾಗಿ ಜನರಿಗೆ ಜಯಮಾಲೆಗಳನ್ನು ಕೊಡುತ್ತಿದ್ದರು. ಹೀಗೆ ಹೊಸ ಒಡಂಬಡಿಕೆಯ ಕಾಲಗಳಲ್ಲಿ ಜನರು ಪದಕದ ಬದಲಿಗೆ ಜಯಾಮಾಲೆಯನ್ನು ಬಹುಮಾನವಾಗಿ ಪಡೆಯುತ್ತಿದ್ದರು. ಆದ್ದರಿಂದ, ನೀತಿಯೆಂಬ ಜಯಮಾಲೆಯು ನೀತಿವಂತರಾಗಿರುವವರೆಲ್ಲರಿಗೂ ಕೊಡಲಾಗುವ ಬಹುಮಾನವಾಗಿದೆ. ದೇವರೊಂದಿಗೆ ನಿತ್ಯವಾಗಿ ಜೀವಿಸುವದು ಆ ಬಿರುದಾಗಿದೆ.

## ವಯಕ್ತಿಕ ಹೇಳಿಕೆಗಳು (4:9-22)

9-12 ನಾವು ಪೌಲನ ಪರಿಸ್ಥಿತಿಯನ್ನು ಕಲ್ಪಿಸಿಕೊಳ್ಳೋಣ. ಆತನು ವೃದ್ಧನೂ, ನಿರ್ಬಲನೂ, ಆಗಿದ್ದು ರೋಮಪುರದ ಸೆರೆಮನೆಯಲ್ಲಿದ್ದಾನೆ. ಬಹುಶಃ ಆತನು ಆಗಲೇ ಮರಣದಂಡನೆಯನ್ನು ಪಡೆದುಕೊಂಡಿದ್ದನು. ಲೂಕನನ್ನು[5] ಹೊರತು ಪಡಿಸಿದರೆ ಪೌಲನು ಒಂಟಿಯಾಗಿದ್ದಾನೆ (ವಚನ 11). ಪೌಲನ ಮಾಜಿ ಸಹಪಾಠಿಯಾದ ದೇಮನು (ಕೊಲೊಸ್ಸೆ 4:14) ಅವನನ್ನು ಬಿಟ್ಟು ಹೋಗಿದ್ದನು. ಪೌಲನು ತನ್ನ ಇತರ ಸಹಪಾಠಿಗಳಾದ ಕ್ರೆಸ್ಕನು[6], ತೀತನು [7], ಹಾಗೂ ತುಖಿಕ[8], ಇವರನ್ನು ವಿವಿಧಕಾರಣಗಳ ನಿಮಿತ್ತ ಬೇರೆ ಬೇರೆ ಸ್ಥಳಗಳಿಗೆ ಕಳುಹಿಸಿದ್ದನು. ಪೌಲನು ತಿಮೊಥೆಯನಿಗೆ ಮಾರ್ಕನನ್ನು ಜೊತೆಯಲ್ಲಿ ಕರೆದುಕೊಂಡು ತನ್ನ ಬಳಿಗೆ ಬರಬೇಕೆಂದು ಕೇಳಿಕೊಳ್ಳುತ್ತಾನೆ (ವಚನ 11). ಮಾರ್ಕನು ಯೌವನಸ್ಥನಾಗಿದ್ದಾಗ ಪೌಲನಿಗೆ ಬಹಳ ದುಃಖವನ್ನುಂಟುಮಾಡಿದ್ದನು (ಅ.ಕೃತ್ಯ 15:37-40). ಆದರೆ ಈಗ ಆತನು ಒಬ್ಬ ನಂಬಿಗಸ್ಥ ಹಾಗೂ ಉಪಯುಕ್ತ ಶಿಷ್ಯನಾಗಿದ್ದಾನೆ (ಕೊಲೊಸ್ಸೆ 4:10).

13 ಚಳಿಗಾಲವು ಬರಲಿತ್ತಾದ್ದರಿಂದ ಪೌಲನಿಗೆ ತನ್ನ ಮೇಲಂಗಿಯು ಅಗತ್ಯವಾಗಿತ್ತು. ಪೌಲನು ತೆಗೆದುಕೊಂಡು ಬರಲು ಕೇಳಿಕೊಂಡ ಸುರಳಿಗಳು (ಪುಸ್ತಕಗಳು) ಹಾಗೂ ಚರ್ಮದ ಕಾಗದಗಳ ಬಗ್ಗೆ ಯಾವ ಮಾಹಿತಿಯೂ ಇರುವದಿಲ್ಲ. ಬಹುಶಃ ಸುರುಳಿಗಳು ಹಳೆ ಒಡಂಬಡಿಕೆಯ ಪುಸ್ತಕಗಳ ಅಥವಾ ಸ್ವತಃ ಪೌಲನು ಬರೆದಿದ್ದ ಲೇಖನಗಳ ಪ್ರತಿಗಳಾಗಿದ್ದಿರಬಹುದು. ಬಹುಶಃ ಚರ್ಮದ ಕಾಗದಗಳೊಳಗೆ ಪೌಲನ ರೋಮಾಪುರದ ಹಕ್ಕುತನದ ಪ್ರಮಾಣ ಪತ್ರವಿದ್ದಿರಬಹುದಾಗಿದೆ.

14-15 ಅಲೆಗ್ಸಾಂದ್ರನು [9] ಎಂಬ ಹೆಸರಿನ ವ್ಯಕ್ತಿಯು ಅ.ಕೃತ್ಯ 19:33-34 ಮತ್ತು 1 ತಿಮೊಥೆ 1:20ರಲ್ಲಿ ಸಹ ಪ್ರಸ್ತಾಪಿಸಲ್ಪಟ್ಟಿದ್ದಾನೆ. ಅಲೆಗ್ಸಾಂದ್ರನು ಪೌಲನ ವಿಚಾರಣೆಯ ವೇಳೆಯಲ್ಲಿ ಆತನ ವಿರುದ್ಧವಾಗಿ ಸಾಕ್ಷಿನೀಡಿರಬಹುದಾಗಿದೆ. ಆತನು ಸುವಾರ್ತೆಯನ್ನು ವಿರೋದಿಸಿದನು. ಕರ್ತನು— ಅವನಿಗೆ ಪ್ರತಿಫಲವನ್ನು ಕೊಡುವನು (ಕೀರ್ತನೆಗಳು 62:12; ರೋಮ 12:19 ಮತ್ತು ವ್ಯಾಖ್ಯಾನ ನೋಡಿರಿ).

16 ರೋಮಾಯ ಕಾನೂನಿನ ಪ್ರಕಾರವಾಗಿ ಕೈದಿ ಅಥವಾ ವಿಚಾರಣಾಧೀನ ವ್ಯಕ್ತಿಗೆ ನ್ಯಾಯಾಲಯದ ಎದುರಿನಲ್ಲಿ ತನ್ನ ಪ್ರತಿವಾದವನ್ನು ಮಂಡಿಸುವ ಅವಕಾಶ ನೀಡಲಾಗುತ್ತಿತ್ತು. ಆ ಸಮಯದಲ್ಲಿ, ವಿಚಾರಣಾದೀನ ವ್ಯಕ್ತಿಯು ತನ್ನ ಪರವಾಗಿ ಮಾತಾಡುವ ಸಾಕ್ಷಿಗಳನ್ನು ಕರೆಯಬಹುದಾಗಿತ್ತು. ಆದರೆ ಪೌಲನಿಗೆ ತನ್ನ ಪಕ್ಷವನ್ನು ವಹಿಸಿಕೊಳ್ಳಲು ಯಾವ ಸಾಕ್ಷಿಗಳೂ ದೊರೆಯಲಿಲ್ಲ; ಆತನ ವಿಚಾರಣೆಯಲ್ಲಿ ಪೌಲನು ಎಲ್ಲರಿಂದಲೂ ಕೈಬಿಡಲ್ಪಟ್ಟಿದ್ದನು. ಆ ವೇಳೆಯಲ್ಲಿ ರೋಮಾಪುರದೊಳಗೆ ನೆಲೆಸಿದ್ದ ಇತರ ಕ್ರೈಸ್ತರು ಪೌಲನ ಪರವಾಗಿ ಪ್ರತಿವಾದಿಸಲು ಹೆದರಿದ್ದರು. ಅವರು ಕ್ಷಮಿಸಲ್ಪಡಲಿ ಎಂದು ಪೌಲನು ಬೇಡಿಕೊಳ್ಳುತ್ತಾನೆ (ಲೂಕ 23:34; ಅ.ಕೃತ್ಯ 7:60 ನೋಡಿರಿ).

17 ಆದರೆ ಪೌಲನ ಸಹಪಾಠಿಗಳೂ ಜೊತೆ ಕ್ರೈಸ್ತರೂ ಅವನನ್ನು ಕೈಬಿಟ್ಟು ಹೋಗಿದ್ದರೂ ಕರ್ತನು ಅವನನ್ನು ತೊರೆಯಲಿಲ್ಲ. ಆದರೆ ಕರ್ತನು ನನ್ನ ಬಳಿಯಲ್ಲಿ ನಿಂತನು ಎಂದು ಪೌಲನು ಬರೆಯುತ್ತಾನೆ. ದೇವರ ಸಹಾಯದೊಂದಿಗೆ ಪೌಲನು ಅನ್ಯಜನರೆಲ್ಲರೂ ಸುವಾರ್ತೆಯನ್ನು ಕೇಳುವಂತೆ ನ್ಯಾಯಾಲಯದ ಒಳಗೆ ಮಾತ್ರವಲ್ಲ ಆದರೆ ನ್ಯಾಯಲಯದ ಹೊರಗೆ ಸಹ ಸುವಾರ್ತೆಯನ್ನು ಸಾರುವದಕ್ಕೆ ಶಕ್ತನಾದನು (ರೋಮ 1:5 ನೋಡಿರಿ). ಪೌಲನು ತನ್ನ ಪರವಾಗಿ ಪ್ರತಿವಾದವನ್ನು ಮಾಡುವದರ ಬಗ್ಗೆ ಚಿಂತಿಸಲಿಲ್ಲ; ಆತನು ಸುವಾರ್ತೆಯ ಕುರಿತು ಪ್ರತಿವಾದಿಸಲು ಮಾತ್ರವೇ ಚಿಂತಿಸಿದನು. ಎಲ್ಲಾ ಅನ್ಯಜನಾಂಗಗಳಿಗೆ ಕೇಂದ್ರವೂ ರೋಮಾಯ ಸಾಮ್ರಾಜ್ಯದ ರಾಜಧಾನಿಯೂ ಆಗಿದ್ದ ರೋಮಾಪುರದಲ್ಲಿಯೇ ಅಪೊಸ್ತಲನಾದ ಪೌಲನು ಕೈದಿಯಾಗಿಯೂ ಕ್ರಿಸ್ತನ ಸುವಾರ್ತೆಯನ್ನು ಸಂಪೂರ್ಣವಾಗಿ ಸಾರಿದನು. (ಅ.ಕೃತ್ಯ 28:30-31 ನೋಡಿರಿ).

ಪೌಲನು ಹೇಳುವದೇನೆಂದರೆಃ ನಾನು ಸಿಂಹದ ಬಾಯೊಳಗಿಂದ ತಪ್ಪಿಸಲ್ಪಟ್ಟೆನು –ಅಂದರೆ, ಮರಣಶಿಕ್ಷೆಯಿಂದ ತಪ್ಪಿಸಲ್ಪಟ್ಟನು. ಈ ವಿಮೋಚನೆಯು ಯಾವಾಗ ಮತ್ತು ಹೇಗೆ ಸಂಭವಿಸಿತೆಂಬುದು ಖಚಿತವಾಗಿರುವು ದಿಲ್ಲ. ಪೌಲನು ಇಲ್ಲಿ ರೋಮಾಪು ರದಲ್ಲಿನ ತನ್ನ ಮೊದಲನೆಯ ಸೆರೆವಾಸದ ಬಿಡುಗಡೆಯನ್ನು ಸೂಚಿಸುತ್ತಿರಬಹುದಾದ ಸಾಧ್ಯತೆಯಿದೆ. ಅ.ಕೃತ್ಯ 28:30; 1 ತಿಮೊಥೆಯನಿಗೆ ಪರಿಚಯ; 2 ತಿಮೊಥೆಯನಿಗೆ ಪರಿಚಯ ನೋಡಿರಿ).

**18** ಈಗ ಪೌಲನು ರೋಮಾಪು ರದಲ್ಲಿ ಎರಡನೆಯ ಹಾಗೂ ಕೊನೆಯ ಬಾರಿಗೆ ಸೆರೆಯಲ್ಲಿದ್ದನು. ಆತನಿಗೆ ತಾನು ಸೆರೆಮನೆಯಿಂದ ಹಾಗೂ ಮರಣದಿಂದ ಬಿಡುಗಡೆಗೊಳ್ಳುವ ಯಾವ ನಿರೀಕ್ಷೆಯೂ ಇರಲಿಲ್ಲ. ಆತನು ಸಾಯುವದಕ್ಕೆ ಸಿದ್ಧನಾಗಿದ್ದನು. (ವಚನ 6 ನೋಡಿರಿ). ಆದರೆ ಪೌಲನು ತನ್ನನ್ನು ದೇವರು ಸೈತಾನನ ಪ್ರತಿಯೊಂದು ದುಷ್ಕೃತ್ಯಗಳ ದಾಳಿಯಿಂದ ಪೌಲನನ್ನು ತಪ್ಪಿಸಿ ತನ್ನ ರಾಜ್ಯಕ್ಕೆ ಸೇರಿಸುವನೆಂದು ದೃಢವಾಗಿ ನಂಬಿದ್ದನು. ಪೌಲನಿಗಾದರೋ ಮರಣವು ಒಂದು ಅಂತ್ಯವಲ್ಲ, ಆದರೆ ಪ್ರಾರಂಭವಾಗಿದೆ ಆತನು ಸೋಲಿಸಲ್ಪಟ್ಟಿರಲಿಲ್ಲ; ಅದು ಜಯವೂ ರಕ್ಷಣೆಯೂ ಆಗಿತ್ತು. (1 ಕೊರಿಂಥ 15:54 ಮತ್ತು ವ್ಯಾಖ್ಯಾನ ನೋಡಿರಿ).

**19** ಪ್ರಿಸ್ಕಳು ಅಕ್ವಿಲರು ಅ.ಕೃತ್ಯ 18:2, 18, 26 ಮತ್ತು ರೋಮ 16:3ರಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾರೆ. ಒನೇಸಿಫೊರನು ಈಗಾಗಲೇ 2 ತಿಮೊಥೆ 1:16ರಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾನೆ.

**20** ಎರಸ್ತನು ಅ.ಕೃತ್ಯ 19:22 ರಲ್ಲಿಯೂ ಹಾಗೂ ತ್ರೊಫಿಮನು ಅ.ಕೃತ್ಯ 20:4 ಮತ್ತು 21:29 ರಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾರೆ.

**21-22** ಪೌಲನು ಪು ನಃ ತಿಮೊಥೆಯನಿಗೆ ಶೀಘ್ರವಾಗಿ ಬರಬೇಕೆಂದು ಕೇಳಿಕೊಳ್ಳುತ್ತಾನೆ. ಚಳಿಗಾಲವು ಹತ್ತಿರವಾಗಿತ್ತು, ಮತ್ತು ಚಳಿಗಾಲದ ಬಿರುಗಾಳಿಗಳ ದೆಸೆಯಿಂದ ಮೆಡಿಟರಿನಿಯನ್ ಸಮುದ್ರದ ಮೂಲಕ ಎಫೆಸದಿಂದ ಪ್ರಮಾಣಿಸುವದು ಅಸಾಧ್ಯವಾಗಲಿಕ್ಕಿತ್ತು (ಅ.ಕೃತ್ಯ 27:9-12 ಮತ್ತು ವ್ಯಾಖ್ಯಾನ ನೋಡಿರಿ).

21ನೇ ವಚನದಲ್ಲಿ ಪ್ರಸ್ತಾಪಿಸಲಾಗಿರುವ ನಾಲ್ಕು ವ್ಯಕ್ತಿಗಳ ಕುರಿತಾಗಿ ಹೊಸ ಒಡಂಬಡಿಕೆಯಲ್ಲಿ ಇನ್ನಾವ ಕಡೆಯಲ್ಲಿಯೂ ಬರೆಯಲ್ಪಟ್ಟಿಲ್ಲ. ಈ ನಾಲ್ಕು ವ್ಯಕ್ತಿಗಳ ಜೊತೆಗೆ ಉಳಿದ ಸಹೋದರರೆಲ್ಲರೂ ತಿಮೊಥೆಯನಿಗೆ ವಂದನೆ ತಿಳಿಸುತ್ತಾರೆ. ಹಾಗಿದ್ದರೂ, ಇದೇ ಸಹೋದರರು ಪೌಲನ ವಿಚಾರಣೆಯಲ್ಲಿ ಆತನ ಪಕ್ಷವನ್ನು ವಹಿಸಿಕೊಳ್ಳಲು ನಿರಾಕರಿಸಿದ್ದರು. ಬಹುಶಃ ಈಗ ಅವರು ಪೌಲನ ಕಷ್ಟ ಸಮಯದಲ್ಲಿ ಆತನನ್ನು ತೊರೆದಿದ್ದದಕ್ಕೆ ಪಶ್ಚಾತ್ತಾಪ ಪಟ್ಟಿರಬಹುದು. ಯಾವದೇ ಘಟನೆಯಲ್ಲಿಯೂ ಅವರು ತಮ್ಮ ನಂಬಿಕೆಯನ್ನು ತೊರೆಯಲಿಲ್ಲ. ಈಗ ಅವರು ಪೌಲನ ಜೊತೆಯಲ್ಲಿದ್ದಾರೆ ಮತ್ತು ತಿಮೊಥೆಯನಿಗೆ ತಮ್ಮ ವಂದನೆಗಳನ್ನು ತಿಳಿಸುತ್ತಾರೆ.

---

## ಟಿಪ್ಪಣಿ

[1] ಅಸ್ಯವು ರೋಮಾಯ ಸಾಮ್ರಾಜ್ಯದ ಪ್ರಾಂತ್ಯವಾಗಿದ್ದು ಆಧುನಿಕ ಟರ್ಕಿಯ ಪಶ್ಚಿಮ ಭಾಗದಲ್ಲಿತ್ತು. ಎಫೆಸವು ಅದರ ಪ್ರಮುಖನಗರವಾಗಿತ್ತು.

[2] ಈ ವಚನಕ್ಕೆ ಎರಡನೆಯ ಅರ್ಥದ ಸಾಧ್ಯತೆಯಿದೆ. ಒಬ್ಬನು ತನ್ನನ್ನು ಹೊಲಸಿನಿಂದ ಶುದ್ಧಮಾಡಿಕೊಳ್ಳುವದು ಎಂಬದು ಒಬ್ಬನು ತನ್ನನ್ನು ಹೀನವಾದ ಉದ್ದೇಶಗಳನ್ನು ಬಿಟ್ಟು (ಹೀನವಾದ ಪಾತ್ರೆಗಳ ಬದಲಾಗಿ) ಶುದ್ಧ ಮಾಡಿಕೊಳ್ಳಬೇಕು ಎಂದು ಅರ್ಥ ನೀಡುತ್ತದೆ. ಹಾಗಾದರೆ ಪೌಲನ ಅರ್ಥವು ಒಬ್ಬನು ತನ್ನನ್ನು (ಸುಳ್ಳುಬೋಧಕರನ್ನು ಬಿಟ್ಟು ಶುದ್ಧಮಾಡಿಕೊಳ್ಳುವ ಬದಲಾಗಿ). ಸುಳ್ಳು ಬೋಧನೆಯಾ ಸಹವಾಸಬಿಟ್ಟು ಶುದ್ಧಮಾಡಿಕೊಳ್ಳಬೇಕು ಎಂದಾಗುತ್ತದೆ. ಖಂಡಿತವಾಗಿಯೂ ಪೌಲನು ಎರಡೂ ಅರ್ಥಗಳ ಇಂಗಿತವನ್ನು ಹೊಂದಿರುವ ಸಾಧ್ಯತೆಯಿದೆ.

[3] ಪೌಲನ ಕಾಲದಲ್ಲಿ ಪರಿಶುದ್ಧ ಗ್ರಂಥಗಳು ಹಳೆ ಒಡಂಬಡಿಕೆಯನ್ನು ಮಾತ್ರವೇ ಒಳಗೊಂಡಿದ್ದವು. ಹೊಸ ಒಡಂಬಡಿಕೆಯು ಇನ್ನೂ ಬರೆಯಲ್ಪಟ್ಟಿರಲಿಲ್ಲ.

[4] ಸಾಮಾನ್ಯ ಅರ್ಥದ ಜೊತೆಯಲ್ಲಿ ನಂಬಿಕೆ ಎಂಬ ಪದವು ಸುವಾರ್ತೆ ಅಥವಾ ಕ್ರೈಸ್ತ ಧರ್ಮದ ಸತ್ಯಸಿದ್ಧಾಂತಗಳು ಎಂದು ಸಹ ಅರ್ಥವನ್ನು ನೀಡಬಹುದು.

[5] ಲೂಕನು ಪೌಲನು ಪ್ರಿಯ ಮಿತ್ರನೂ ವೈದ್ಯನೂ ಆಗಿದ್ದನು (ಕೊಲೊಸ್ಸೆ 4:14). ಆತನು ಪೌಲನ ಕೆಲವು ಸುವಾರ್ತಾ ಪ್ರಯಾಣದಲ್ಲಿ ಆತನ ಸಹಪಾಠಿಯೂ ಆಗಿದ್ದನು. ಆನಂತರ ಆತನು ಲೂಕನು ಬರೆದ ಸುವಾರ್ತೆ ಹಾಗೂ ಅಪೊಸ್ತಲರ ಕೃತ್ಯಗಳು ಪುಸ್ತಕವನ್ನು ಬರೆದನು.

[6] ಕ್ರೆಸ್ಕನು ಹೊಸ ಒಡಂಬಡಿಕೆಯಲ್ಲಿ ಇನ್ನಾವ ಕಡೆಯಲ್ಲಿಯೂ ಪ್ರಸ್ತಾಪಿಸಲ್ಪಟ್ಟಿಲ್ಲ.

[7] ತೀತನು ಪೌಲನ ಆಪ್ತ ಸಹಪಾಠಿಯಾಗಿದ್ದನು, ಆತನಿಗೆ ಪೌಲನು ಹೊಸ ಒಡಂಬಡಿಕೆಯ "ತೀತನಿಗೆ ಬರೆದ ಪತ್ರಿಕೆಯನ್ನು" ಬರೆದನು (ತೀತನ ಪರಿಚಯ ನೋಡಿರಿ)

[8] ತುಖಿಕನು ಎಫೆಸ 6:21 ಮತ್ತು ಕೊಲೊಸ್ಸೆ 4:7ರಲ್ಲಿ ಸಹ ಪ್ರಸ್ತಾಪಿಸಲ್ಪಟ್ಟಿದ್ದಾನೆ.

[9] ಈ ಮೂವರು ಅಲೆಗ್ಸಾಂದ್ರರು ಬೇರೆ ಬೇರೆ ವ್ಯಕ್ತಿಗಳು ಎಂದು ಕೆಲವು ಬೈಬಲ್ ಪಂಡಿತರು ನಂಬುತ್ತಾರೆ.

# ಪೌಲನು ತೀತನಿಗೆ ಬರೆದ ಪತ್ರಿಕೆ

## ಪರಿಚಯ

ತಿಮೊಥೆಯನ ಹಾಗೆಯೇ ತೀತನು ಪೌಲನ ಯುವ ಸಹಪಾಠಿಯಾಗಿದ್ದನು, ಪೌಲನು ಆತನನ್ನು ಆತ್ಮೀಕ ಅರ್ಥದಲ್ಲಿ ನಿಜಕುಮಾರನು ಎಂದು ಕರೆಯುತ್ತಾನೆ (ತೀತನು 1:4). ಪೌಲನು ತೀತನನ್ನು ನನ್ನ ಪಾಲುಗಾರನೂ ಜೊತೆ ಕೆಲಸದವನೂ ಎಂದು ಸಹ ಕರೆದನು (2 ಕೊರಿಂಥ 8:23). ಪೌಲನು ತೀತನನ್ನು ಕೊರಿಂಥದವರು ಯೇರುಸಲೇಮಿನ ಕ್ರೈಸ್ತರಿಗಾಗಿ ಪ್ರಾರಂಭಿಸಿದ್ದ ಹಣ ಸಂಗ್ರಹಣೆಯ ಕಾರ್ಯವನ್ನು ಪೂರ್ತಿಗೊಳಿಸುವಂತೆ ಸಹಾಯಮಾಡವದಕ್ಕಾಗಿ ಕೊರಿಂಥಕ್ಕೆ ಕಳುಹಿಸಿದ್ದನು (2 ಕೊರಿಂಥ 8:16-17; 9:5 ;12:18). ಅದರ ನಂತರ, ಪೌಲನು ತೀತನನ್ನು ಕ್ರೇತಾ ದ್ವೀಪದಲ್ಲಿ ಬಿಟ್ಟು ವಿವಿಧ ಕೆಲಸಗಳನ್ನು ನೋಡಿಕೊಳ್ಳುವಂತೆಯೂ ಅಲ್ಲಿ ಇತ್ತೀಚಿಗೆ ಸ್ಥಾಪಿತವಾಗಿದ್ದ ಸಭೆಗಳಿಗೆ ಹಿರಿಯರನ್ನು ನೇಮಿಸುವಂತೆಯೂ ಅವನಿಗೆ ಹೇಳಿದ್ದನು (ತೀತನು 1:5), ಈ ಪತ್ರಿಕೆಯು ತೀತನಿಗೆ ಆತನು ಇನ್ನೂ ಕ್ರೇತ್ರದ್ವೀಪದಲ್ಲಿರುವಾಗ ಕಳುಹಿಸಲ್ಪಟ್ಟಿತ್ತು. 2 ತಿಮೊಥೆ 4:10 ಪ್ರಕಾರವಾಗಿ ತೀತನು ಕ್ರೇತ್ರದಲ್ಲಿನ ತನ್ನ ಕೆಲಸವನ್ನು ಪೂರ್ತಿಗೊಳಿಸಿದ್ದ ಬಳಿಕ ಪೌಲನು ಅವನನ್ನು ದಲ್ಮಾತ್ಯಕ್ಕೆ (ಆಧುನಿಕ ಯೂಗೋಸ್ಲಾವಿಯಕ್ಕೆ) ಕಳುಹಿಸಿದನು. ಹೊಸ ಒಡಂಬಡಿಕೆಯಲ್ಲಿ ದಲ್ಮಾತ್ಯವು ಇಲ್ಲೂರಿಕ ಎಂದು ಸಹ ಕರೆಯಲ್ಪಟ್ಟಿದೆ (ರೋಮ 15:19).

## ಹೊರ ರೇಖೆ

ಅ. ಹಿರಿಯರು ಹಾಗೂ ಸುಳ್ಳುಬೋಧಕರ ಕುರಿತಾಗಿ (1:1-16).
  1. ಹಿರಿಯರ ನೇಮಕ (1:1-9).
  2. ಸುಳ್ಳು ಬೋಧಕರ ಖಂಡನೆ (1:10-16).

ಆ. ಹಿರಿಯರ ಕೆಲಸ (2:1-3:15).
  1. ಸ್ವಸ್ಥ ಬೋಧನೆಯ ಸಾರುವಿಕೆ (2:1-15).
  2. ಸ್ವಸ್ಥ ಬೋಧನೆಯ ತೋರ್ಪಡಿಸುವಿಕೆ (3:1-15).

# ಅಧ್ಯಾಯ - 1

## ಕ್ಷೇತ್ರದಲ್ಲಿ ತೀತನಿಗೆ ವಿಧಿಸಿದ ಕೆಲಸ (1:1-9)

**1-3** ಈ ವಚನಗಳಲ್ಲಿನ ವಂದನೆ ತಿಳಿಸುವಿಕೆಯು ದೀರ್ಘ ಹಾಗೂ ಔಪಚಾರಿಕವಾದದ್ದು, ಕಾರಣ ಇದು ಒಂದು ವಯಕ್ತಿಕ ಪತ್ರಿಕೆಯಾಗಿದೆ. ಹೇಗಿದ್ದರೂ, ಬಹುಶಃ ಪೌಲನು ಪತ್ರಿಕೆಯು ತೀತನ ಅಧೀನದಲ್ಲಿರುವ ಸಭೆಗಳಲ್ಲಿ ಓದಲ್ಪಡಬೇಕೆಂದು ಇಚ್ಛಿಸಿದ್ದನು; ಈ ಕಾರಣದಿಂದಲೇ ವಂದನೆ ತಿಳಿಸುವಿಕೆಯು ಸಾಧಾರಣವಾಗಿರುವದಕ್ಕಿಂತಲೂ ದೀರ್ಘವಾಗಿದೆ.

ಪೌಲನು 1ನೇ ವಚನದಲ್ಲಿ ತನ್ನನ್ನು ದೇವರ ದಾಸನೂ ಯೇಸುಕ್ರಿಸ್ತನ ಅಪೊಸ್ತಲನೂ ಎಂದು ಕರೆದುಕೊಳ್ಳುತ್ತಾನೆ (ರೋಮ 1:1 ಮತ್ತು ವ್ಯಾಖ್ಯಾನ ನೋಡಿರಿ). ಪೌಲನು ದೇವರಾದುಕೊಂಡವರನ್ನು ನಂಬಿಕೆಗೂ ಸತ್ಯದ ಪರಿಜ್ಞಾನಕ್ಕೂ (ವಚನ 1). ಅಂದರೆ, ಕ್ರಿಸ್ತನ ಪರಿಜ್ಞಾನಕ್ಕೂ– ತರುವಂತೆ ನಮ್ಮ ರಕ್ಷಕನಾದ ದೇವರ ಅಪ್ಪಣೆಯ ಪ್ರಕಾರ (ವಚನ 3). ಅಪೊಸ್ತಲನಾಗಿ ನೇಮಿಸಲ್ಪಟ್ಟಿದ್ದನು (ಅ.ಕೃತ್ಯ 13:48; 1 ತಿಮೊಥೆ 1:1; 2 ತಿಮೊಥೆ 2:10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಂಬಿಕೆಯೂ ಸತ್ಯದ ಪರಿಜ್ಞಾನವೂ..... ಭಯ ಭಕ್ತಿಯನ್ನುಂಟು ಮಾಡಿ ನಿತ್ಯ ಜೀವದ ನಿರೀಕ್ಷೆಗೆ ನಡಿಸುತ್ತದೆ (ವಚನ 2), ದೇವರು ಅದನ್ನು ಕ್ರಿಸ್ತನಲ್ಲಿ ನಂಬಿಕೆಯಿಡುವವರೆಲ್ಲರಿಗೂ ವಾಗ್ದಾನ ಮಾಡಿರುತ್ತಾನೆ.

**4** ಪೌಲನು 3ನೇ ವಚನದಲ್ಲಿ ದೇವರನ್ನು ನಮ್ಮ ರಕ್ಷಕನಾದ ದೇವರು ಎಂದು ಕರೆಯುತ್ತಾನೆ. ಇಲ್ಲಿ ೪ನೇ ವಚನದಲ್ಲಿ ಆತನು ಯೇಸುವನ್ನು ನಮ್ಮ ರಕ್ಷಕನು ಎಂದು ಕರೆಯುತ್ತಾನೆ. ಎರಡೂ ಅಷ್ಟೇ ಸತ್ಯವಾಗಿವೆ ಯಾಕೆಂದರೆ ದೇವರೂ ಕ್ರಿಸ್ತನೂ ಒಂದಾಗಿದ್ದಾರೆ (ಯೋಹಾನ 10:30).

ಪೌಲನು ತೀತನನ್ನು ಎಲ್ಲರಿಗೆ ಹುದುವಾಗಿರುವ ನಂಬಿಕೆಯ ಸಂಬಂಧದಲ್ಲಿ ನನ್ನ ನಿಜಕುಮಾರನು ಎಂದು ಕರೆಯುತ್ತಾನೆ. ಪೌಲನು ಒಬ್ಬ ಯೆಹೂದ್ಯನು ಹಾಗೂ ತೀತನು ಒಬ್ಬ ಗ್ರೀಕನಾಗಿದ್ದನು (ಗಲಾತ್ಯ 2:3). ಹೇಗಿದ್ದರೂ, ಕ್ರಿಸ್ತನಲ್ಲಿ ಯೆಹೂದ್ಯನೂ ಗ್ರೀಕನೂ ಎಂಬ ಬೇಧವಿಲ್ಲ (ಗಲಾತ್ಯ 3:28). ದೇವರ ಕುಟುಂಬದೊಳಗೆ ಪೌಲ ತೀತರು ಆತ್ಮೀಕವಾಗಿ ತಂದೆ ಮಗ ಆಗಿದ್ದರು.

**5** ಪೌಲನು ತನ್ನ ಪ್ರಥಮ ರೋಮಾಯ ಸೆರೆವಾಸದಿಂದ ಬಿಡುಗಡೆಗೊಂಡ ಬಳಿಕ ಪೌಲ ಹಾಗೂ ತೀತನು ಇಬ್ಬರೂ ಜೊತೆಯಾಗಿ ಕ್ರೇತಕ್ಕೆ [1], ಹೋಗಿ ಸುವಾರ್ತೆಯನ್ನು ಸಾರಿದರು ಎಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ (ತೀತನುಃ ಪರಿಚಯ ನೋಡಿರಿ). ಈಗ, ಪತ್ರಿಕೆಯನ್ನು ಬರೆಯುತ್ತಿರುವ ವೇಳೆಯಲ್ಲಿ ಪೌಲನು ಕ್ರೇತದಲ್ಲಿ ಇತ್ತೀಚೆಗೆ ಸ್ಥಾಪಿಸಲ್ಪಟ್ಟಿದ್ದ ಸಭೆಗಳಲ್ಲಿನ ಕೆಲವು ವಿಷಯಗಳನ್ನು ಕ್ರಮಪಡಿಸುವದಕ್ಕಾಗಿ ತೀತನನ್ನು ಅಲ್ಲಿ ಬಿಟ್ಟು ಬಂದಿದ್ದನು. ತೀತನು ಸಭೆಯಿರುವ ಪಟ್ಟಣಪಟ್ಟಣಗಳಲ್ಲೂ ಸಭೆಯ ಹಿರಿಯರನ್ನು ನೇಮಿಸಲು ಪೌಲನಿಂದ ಅಧಿಕಾರವನ್ನು ಪಡೆದುಕೊಂಡಿದ್ದಾನೆಂಬದನ್ನು ಗಮನಿಸಿರಿ. ಹಿರಿಯರು ಸಭೆಯ ಸದಸ್ಯರಿಂದ ಆಯ್ಕೆ ಮಾಡಲ್ಪಟ್ಟಿರುವದ ಬಗ್ಗೆ ಇಲ್ಲಿ ಯಾವ ಪ್ರಸ್ತಾಪವಿರುವದಿಲ್ಲ ಈ ವಚನಕ್ಕನುಸಾರವಾಗಿ ಹಿರಿಯರ ಅಧಿಕಾರವು ಸಭಿಕರಿಂದ ಬರುವದಿಲ್ಲ; ಅದು ಅಪೊಸ್ತಲನಾದ ಪೌಲನಿಂದ ಆತನ ಶಿಷ್ಯನಾದ ತೀತನ ಮೂಲಕ ಬರುತ್ತದೆ (ಅ.ಕೃತ್ಯ 14:23 ಮತ್ತು ವ್ಯಾಖ್ಯಾನ ನೋಡಿರಿ).

**6-7** ಹೊಸ ಒಡಂಬಡಿಕೆಯಲ್ಲಿ ಸಭಾನಾಯಕರು ಹೆಚ್ಚುಸಾಮಾನ್ಯವಾಗಿ ಹಿರಿಯರು[2] ಎಂದು ಕರೆಯಲ್ಪಟ್ಟಿದ್ದಾರೆ. ಅವರ ಇನ್ನೊಂದು ಹೆಸರು ಸಭಾಧ್ಯಕ್ಷರು (1 ತಿಮೊಥೆ 3:1 ಮತ್ತು ವ್ಯಾಖ್ಯಾನ ನೋಡಿರಿ). 1 ತಿಮೊಥೆ 3:2-5 ರಲ್ಲಿ ಪ್ರಸ್ತಾಪಿಸಲಾಗಿರುವ ಸಭಾಧ್ಯಕ್ಷರ ಅರ್ಹತೆಗಳೂ ಪೌಲನ ಇಲ್ಲಿ ಹಿರಿಯರಿಗಾಗಿ ಪ್ರಸ್ತಾಪಿಸುವ ಅರ್ಹತೆಗಳೂ ಮುಖ್ಯವಾಗಿ ಒಂದೇ ರೀತಿಯಾಗಿದೆ.

ಹಿರಿಯರು ಹಾಗೂ ಸಭಾಧ್ಯಕ್ಷರು ನಿಂದಾರಹಿತರೂ (ದೋಷಾರೋಪಣೆಯಿಲ್ಲದವರು) ಆಗಿರಬೇಕು, ಯಾಕೆಂದರೆ ಅವರು ದೇವರ ಕೆಲಸದ ಮನೆವಾರ್ತೆಯವರಾಗಿರುತ್ತಾರೆ. (ವಚನ 7). ಅಂದರೆ, ವಶಕ್ಕೆ ದೇವರ ಸಭೆಯ ಜವಾಬ್ದಾರಿಯು ಕೊಡಲ್ಪಟ್ಟಿರುತ್ತದೆ.

6ನೇ ವಚನದಲ್ಲಿ ಹಿರಿಯರ ಮಕ್ಕಳು ದುರ್ಮಾರ್ಗಸ್ಥರೆನಿಸಿಕೊಂಡವರಾಗಲಿ ಅಧಿಕಾರಕ್ಕೆ ಒಳಗಾಗದವರಾಗಲಿ ಆಗಿರಬಾರದು, ಅಷ್ಟು ಮಾತ್ರವಲ್ಲದೆ ಅವರು ಕ್ರಿಸ್ತನನ್ನು ನಂಬುವವರಾಗಿರಬೇಕು ಎಂಬದನ್ನು ಗಮನಿಸಿರಿ (1 ತಿಮೊಥೆ 3:4 ನೋಡಿರಿ).

**8-9** ಪೌಲನು 7ನೇ ವಚನದಲ್ಲಿ ಸಭೆಯ ಹಿರಿಯರಲ್ಲಿ ಇರಬಾರದಂತಹ ಕೆಲವೊಂದು ಕೆಟ್ಟಗುಣಗಳ ಪಟ್ಟಿ ಮಾಡುತ್ತಾನೆ. ಈಗ 8-9 ವಚನಗಳಲ್ಲಿ ಪೌಲನು ಒಬ್ಬ ಸಭಾ ನಾಯಕನು ಹೊಂದಿರಬೇಕಾದ ಕೆಲವೊಂದು ಒಳ್ಳೇ ಗುಣಗಳನ್ನು ಪ್ರಸ್ತಾಪಿಸುತ್ತಾನೆ (1 ತಿಮೊಥೆ 3:3 ನೋಡಿರಿ). ನಾಯಕನು ಪೌಲ ಹಾಗೂ ಇತರ ಅಪೊಸ್ತಲರಿಂದ ಕಲಿಸಲ್ಪಟ್ಟ ಕ್ರಿಸ್ತ ಬೋಧಾನುಸಾರವಾದ ನಂಬತಕ್ಕ ವಾಕ್ಯವನ್ನು ದೃಢವಾಗಿ ಹಿಡಿದುಕೊಂಡವನಾಗಿರಬೇಕು (2 ತಿಮೊಥೆ 31:14 ನೋಡಿರಿ). ನಾಯಕನು ವಾಕ್ಯವನ್ನು ಇತರರಿಗೆ ಉಪದೇಶಿಸಲು ಶಕ್ತನಾಗಿರಬೇಕು (2 ತಿಮೊಥೆ 2:2) ವಾಕ್ಯವು (ಸಂದೇಶವು) ದೇವರ ವಾಕ್ಯವಾಗಿದೆ, ಅದರ ಮೂಲಕ ನಾಯಕರು ಇತರರನ್ನು ನೀತಿಯುಳ್ಳ ಮಾರ್ಗದಲ್ಲಿ ನಡಿಸುವದಕ್ಕೂ ಸುಳ್ಳು ಬೋಧನೆಯನ್ನು ಖಂಡಿಸುವದಕ್ಕೂ ಶಕ್ತನಾಗಿರುತ್ತಾನೆ.

## ಕ್ರೇತದ ಜನರ ಕುರಿತಾಗಿ (1:10- 16)

**10-11** ಹೊಸ ಒಡಂಬಡಿಕೆಯಲ್ಲಿ ಪ್ರಸ್ತಾಪಿಸಲಾಗಿರುವ ಹೆಚ್ಚು ಕಡಿಮೆ ಎಲ್ಲಾ ಸಭೆಗಳಲ್ಲಿದ್ದಂತಯೇ ಸುಳ್ಳು ಬೋಧಕರು ಕ್ರೇತದಲ್ಲಿನ ಸಭೆಗಳಲ್ಲೂ ಬೋಧಿಸಲು ಪ್ರಾರಂಭಿಸಿದ್ದರು. ಅವರೊಳಗೆ ಕೆಲವರು ಸುನ್ನತಿಯರ ಗುಂಪಿಗೆ ಸೇರಿದ್ದ ಯೆಹೂದ್ಯ ವಿಶ್ವಾಸಿಗಳಾಗಿದ್ದರು (ವಚನ 10). ಅವರು ರಕ್ಷಣೆಹೊಂದುವದಕ್ಕಾಗಿ ಒಬ್ಬನು ಯೆಹೂದ್ಯ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯಬೇಕೆಂದು ಸುಳ್ಳಾಗಿ ಬೋಧಿಸುತ್ತಿದ್ದರು (ಗಲಾತ್ಯ 2:11-14 ಮತ್ತು ವ್ಯಾಖ್ಯಾನ ನೋಡಿರಿ). ಬಹಿರಂಗವಾಗಿ ಈ ಸುಳ್ಳು ಬೋಧಕರು ಕ್ರೈಸ್ತರಂತೆ ತೋರುತ್ತಿದ್ದರು, ಆದರೆ ಅಂತರ್ಯದಲ್ಲಿ ಅವರು ಅಧಿಕಾರಕ್ಕೆ ಒಳಗಾಗದವರಾಗಿದ್ದರು – ಅಂದರೆ, ಅವರು ಸುವಾರ್ತೆಯ ಸತ್ಯಕ್ಕೆ ಕಿವಿಗೊಡಲಿಲ್ಲ ಮತ್ತು ಸಭೆಯ ನಾಯಕರಿಗೆ ಅಧೀನರಾಗಲಿಲ್ಲ. ಅವರು ತಮ್ಮ ಬೋಧನೆಯನ್ನು ನಂಬುತ್ತಿದ್ದ ಮುಗ್ಧ ಜನರಿಂದ ಹಣವನ್ನು ಪಡೆಯುವದಕ್ಕಾಗಿ ಮಾತ್ರವೇ ಬೋಧಿಸುತ್ತಿದ್ದರು (ವಚನ 11). ಈ ಸುಳ್ಳು ಬೋಧಕರ ಬಾಯಿ ಮುಚ್ಚಿಸಬೇಕಾಗಿದೆ ಎಂದು ಪೌಲನು ಹೇಳುತ್ತಾನೆ.

**12** ಇಲ್ಲಿ ಪೌಲನು ಸ್ವತಃ ಕ್ರೇತದವರಿಂದ ಪ್ರವಾದಿಯೆಂದು ಪರಿಗಣಿಸಲ್ಪಟ್ಟಿದ್ದ ಕ್ರೇತ ಪ್ರಸಿದ್ಧ ತತ್ವಜ್ಞಾನಿಗಳಲ್ಲೊಬ್ಬನಿಂದ ಬರೆಯಲ್ಪಟ್ಟ ಸಂಗತಿಯೊಂದನ್ನು ಉಲ್ಲೇಖಿಸುತ್ತಾನೆ. ಅವರ ಸ್ವಂತ ಪ್ರವಾದಿಯೇ ಕ್ರೇತದವರನ್ನು ಸುಳ್ಳುಗಾರರೂ ದುಷ್ಟಮೃಗಗಳೂ ಸೋಮಾರಿಗಳಾದ ಹೊಟ್ಟೇಬಾಕರೂ! ಎಂದು ಕರೆದಿದ್ದನು

**13-14** ಈ ಪ್ರವಾದಿಯು ಕ್ರೇತದವರ ಬಗ್ಗೆ ಬರೆದಿರುವದು ನಿಜವಾದದ್ದೇ ಎಂದು ಪೌಲನು ದೃಢಪಡಿಸುತ್ತಾನೆ. ಆದದರಿಂದ, ಪೌಲನು ತಿಮೊಥೆಯನಿಗೆ ಕ್ರೇತದವರು ಸುಳ್ಳು ಬೋಧನೆಯನ್ನು ಹಿಂಬಾಲಿಸದೆ ನಂಬಿಕೆಯಲ್ಲಿ ಸ್ವಸ್ಥ ಚಿತ್ತರಾಗಿರುವಂತೆ ಅವರನ್ನು ಕ್ರೇತದ ವಿಶ್ವಾಸಿಗಳನ್ನು ಕಠಿಣವಾಗಿ ಖಂಡಿಸು ಎಂದು ಹೇಳುತ್ತಾನೆ. ಕೆಲವು ಸಂರ್ಭಗಳಲ್ಲಿ ಕೆಲವರನ್ನು ಕಠಿಣವಾಗಿ ಖಂಡಿಸುವು ದು ಅವಶ್ಯಕವಾದದ್ದು, ಆದರೆ ಸಾಮಾನ್ಯವಾಗಿ ಅವರನ್ನು ನಿಧಾನವಾಗಿ ಪ್ರಬೋಧಿಸುವದು ಉತ್ತಮವಾದದ್ದು. ಸಭಾನಾಯಕನು ಜನರಿಗೆ ನೋವುಂಟು ಮಾಡುವದಕ್ಕಾಗಿ ಅಲ್ಲ, ಆದರೆ ಅವರಿಗೆ ಸಹಾಯ ಮಾಡುವದಕ್ಕಾಗಿಯೇ ಖಂಡಿಸುತ್ತಾನೆ. ಆತನು ಇದನ್ನು ಅವರ ಹಿತಕ್ಕಾಗಿಯೇ ಮಾಡುತ್ತಾನೆ ಹೊರತು ಅವರ ಹಾನಿಗಾಗಿ ಅಲ್ಲ (2 ತಿಮೊಥೆ 2:24-25; 4:2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**15** ಅಂತರ್ಯದಲ್ಲಿ ಶುದ್ಧರಿಗೆ ಎಲ್ಲವೂ– ಆಹಾರ, ದಾಂಪತ್ಯ, ಮುಂತಾದವು ಗಳು– ಸಹ ಶುದ್ಧವೇ (1 ತಿಮೊಥೆ 4:3-4 ಮತ್ತು ವ್ಯಾಖ್ಯಾನ ನೋಡಿರಿ). ಶುದ್ಧತ್ವವು ಒಳಗಿನಿಂದ ಬರುತ್ತದೆ; ಆಹಾರದಂತಹ ಹೊರಗಿನ ಸಂಗತಿಗಳು ನಮ್ಮನ್ನು ಅಶುದ್ಧರನ್ನಾಗಿ ಮಾಡುವದಿಲ್ಲ (ಮಾರ್ಕ 7:15-23 ಮತ್ತು ವ್ಯಾಖ್ಯಾನ ನೋಡಿರಿ). ಅದೇ ಪ್ರಕಾರ, ಒಬ್ಬನು ಅಂತರ್ಯದಲ್ಲಿ ಅಶುದ್ಧನಾಗಿದ್ದರೆ ಆತನು ಹೊರಗೆ ತನ್ನನ್ನು ಎಷ್ಟು ತೊಳೆದುಕೊಂಡರೂ ಸರಿಯೇ ಅಶುದ್ಧವಾಗಿ ಇರುವನು. ಬಹಿರಂಗವಾಗಿ, ತೊಳೆದುಕೊಳ್ಳುವದಾಗಲಿ ಮನುಷ್ಯನ ಹೃದಯವನ್ನು ಎಂದಿಗೂ ಶುದ್ಧಮಾಡಲಾರದು (ಮತ್ತಾಯ 23:25-26; ಇಬ್ರಿಯ 10:1-4, 11).

ಹೃದಯದಲ್ಲಿ ಅಶುದ್ಧರಾಗಿರುವವರು ತಾವು ಮಾಡವದೆಲ್ಲವನ್ನೂ ಅಶುದ್ಧವಾಗಿಸುತ್ತಾರೆ. ಮುನುಷ್ಯನ ಉದ್ದೇಶಗಳು ಅಶುದ್ಧವಾಗಿದ್ದರೆ ಆತನ ಕೃತ್ಯಗಳು ಸಹ ಅಶುದ್ಧವಾಗಿರುವು ದಿಲ್ಲ. ಅಂಥ ಜನರ ಬುದ್ಧಿಗಳು ಅಶುದ್ಧವಾಗಿರುವದು ಮಾತ್ರವಲ್ಲ. ಆದರೆ ಅವರ ಮನಸಾಕ್ಷಿಗಳೂ ಮಲಿನವಾಗಿದೆ. ಯಾವನ ಮನಸಾಕ್ಷಿಯೂ ಮಲಿನವಾಗಿರುತ್ತದೋ ಆತನು ದೇವರ ಸ್ವರಕ್ಕೆ ಕಿವಿಗೊಡಲಾರನು; ಆತನು ಸತ್ಯವನ್ನು ವಿವೇಚಿಸಲಾರನು. ಆದದರಿಂದ, ಆತನು ಏನೇ ಮಾಡಿದರೂ ಅದು ಅಶುದ್ಧ ಹಾಗೂ ಮಲಿನವಾಗಿರುತ್ತದೆ (1 ತಿಮೊಥೆ 4:2 ಮತ್ತು ವ್ಯಾಖ್ಯಾನ ನೋಡಿರಿ).

**16** ಈ ಸುಳ್ಳ ಬೋಧಕರು ಹಾಗೂ ದುರ್ಮಾರ್ಗಿಗಳು ತಾವು ದೇವರನ್ನು ಅರಿತವರೆಂದು ಹೇಳಿಕೊಳ್ಳುತ್ತಾರೆ, ಆದರೆ ಅವರು ದೇವರನ್ನು ಅರಿಯೆವೆಂದು ತಮ್ಮ ಕಾರ್ಯಗಳಿಂದ ಹೇಳುತ್ತಾರೆ (ಮತ್ತಾಯ 7:21; ಮಾರ್ಕ 7: 6-7; ರೋಮ 1:21-22 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಅಂಥ ಕಪಟಿಗಳು ದೇವರ ದೃಷ್ಟಿಯಲ್ಲಿ ಅಸಹ್ಯರು; ಅವರು ಯಾವದೇ ಸತ್ಕಾರ್ಯಕ್ಕೆ ಅಪ್ರಯೋಜಕರು.

---

# ಅಧ್ಯಾಯ - 2

## ಸ್ವಸ್ಥ ಬೋಧನೆ (2:1-15)

**1** ತೀತನು 1:9 ಮತ್ತು ವ್ಯಾಖ್ಯಾನ ನೋಡಿರಿ.

**2** ಸಭೆಯಲ್ಲಿನ ವೃದ್ಧರು ಪರಿಪಕ್ವವುಳ್ಳ ತಂದೆಗಳಂತೆಯೂ ಹಿರಿಯ ಸಹೋದರರಂತೆಯೂ ವರ್ತಿಸಬೇಕು. ಅವರು ಸಭಾಧ್ಯಕ್ಷರಿಗೂ ಹಿರಿಯರಿಗೂ ಇರಬೇಕಾದ ಗುಣಗಳನ್ನೇ ಪ್ರದರ್ಶಿಸುವವರಾಗಿರಬೇಕು (1 ತಿಮೊಥೆ 3:3, 8:9ನೋಡಿರಿ). ವಾಸ್ತವದಲ್ಲಿ, ವಿಶ್ವಾಸಿಗಳೆಲ್ಲರೂ ಈ ಗುಣಗಳನ್ನು ತಮ್ಮಲ್ಲಿ ತೋರ್ಪಡಿಸಿಕೊಳ್ಳಬೇಕು; ಆದರೆ ವಿಶೇಷವಾಗಿ ಸಭಾನಾಯಕರು

ಹಾಗೂ ವೃದ್ಧರು ಈ ರೀತಿಯಾಗಿ ಮಾಡುವದು ಪ್ರಾಮುಖ್ಯವಾದದ್ದು, ಯಾಕೆಂದರೆ ಅವರು ಮಿಕ್ಕವರೆಲ್ಲರಿಗೂ ಮಾದರಿಯನ್ನು ತೋರುವವರಾಗಿರುತ್ತಾರೆ.

**3** ಸ್ತ್ರೀಯರು ಸಭೆಯಲ್ಲಿ ಪುರುಷರಿಗೆ ಉಪದೇಶಿಸಬಾರದೆಂದು ಪೌಲನು ಬರೆದಿರುತ್ತಾನೆ (1 ತಿಮೊಥೆ 2:12 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ವೃದ್ಧ ಸ್ತ್ರೀಯರು ಯೌವ್ವನ ಸ್ತ್ರೀಯರಿಗೂ ಮಕ್ಕಳಿಗೂ ಉಪದೇಶಿಸುವದು ಸರಿಯಾದದ್ದಾಗಿದೆ. ವೃದ್ಧ ಸ್ತ್ರೀಯರು ದೇವಭಕ್ತೆಯರಿಗೆ ಯೋಗ್ಯವಾದ ನಡತೆಯುಳ್ಳವರಾಗಿರಬೇಕು. ಅವರು ಇತರರ ಬಗ್ಗೆ ಚಾಡಿ ಹೇಳುವವರು ಆಗಿರಬಾರದು (1ತಿಮೊಥೆ 3:11). ವಿಷಾದಕರವಾಗಿ, ಚಾಡಿ ಹೇಳುವ ಪಾಪವು ಸಭೆಯಲ್ಲಿ ಸ್ತ್ರೀಯರೊಳಗೆ ಮಾತ್ರವಲ್ಲ, ಆದರೆ ಪುರುಷರೊಳಗೂ ಕಂಡುಬರುತ್ತದೆ. ಇದು ಇರದಿರಲಿ! (ತೀತನು 3:2 ಮತ್ತು ವ್ಯಾಖ್ಯಾನ ನೋಡಿರಿ).

**4-5** ಪೌಲನು ಇಲ್ಲಿ ಕ್ರೈಸ್ತ ಸ್ತ್ರೀಗೆ ಅವಶ್ಯಕವಾದ ಗುಣಗಳನ್ನು ಬಣ್ಣಿಸುತ್ತಾನೆ. ವೃದ್ಧ ಸ್ತ್ರೀಯರು ಈ ಗುಣಗಳನ್ನು ಹೇಗೆ ಬೆಳೆಸಿಕೊಳ್ಳಬೇಕೆಂಬುದನ್ನು ಹಾಗು ಭಕ್ತಿ ಜೀವಿತಗಳನ್ನು ಹೇಗೆ ನಡಿಸಬೇಕೆಂಬದನ್ನೂ ಪ್ರಾಯದ ಸ್ತ್ರೀಯರಿಗೆ ಬೋಧಿಸಬೇಕು. ವಿವಾಹಿತ ಯೌವ್ವನ ಸ್ತ್ರೀಯರ ಮುಖ್ಯ ಜವಾಬ್ದಾರಿಯೇನೆಂದರೆ ತಮ್ಮ ಗಂಡಂದಿರಿಗೆ ಸಹಾಯ ಮಾಡುವದು ಹಾಗೂ ತಮ್ಮ ಮಕ್ಕಳನ್ನು ಜೋಪಾನಮಾಡುವದು ಆಗಿದೆ. ಅದು ಅಂತಹ ಒಂದು ಪ್ರಾಮುಖ್ಯವಾದ ಜವಾಬ್ದಾರಿಯಾಗಿದೆ! ಯಾರೂ ಸ್ತ್ರೀಯು ಮನೆಯಲ್ಲಿ ಮಾಡುವ ಕೆಲಸವನ್ನು ಕೀಳಾಗಿ ನೋಡದಿರಲಿ. ನೆನಪಿರಲಿ, ತಿಮೊಥೆಯನ ತಾಯಿ ಹಾಗು ಅಜ್ಜಿಯ ನಂಬಿಕೆಯ ಮುಖಾಂತರವೇ ಸ್ವತಃ ತಿಮೊಥೆಯನು ಕ್ರಿಸ್ತನಲ್ಲಿ ನಂಬಿಕೆಯಿಡುವವನಾದನು (2 ತಿಮೊಥೆ 1:5), ಮತ್ತು ಇತಿಹಾಸದುದ್ದಕ್ಕೂ ಅಸಂಖ್ಯಾತ ಕ್ರೈಸ್ತರ ವಿಷಯದಲ್ಲಿಯೂ ಇದು ಅಷ್ಟೇ ಸತ್ಯವಾಗಿದೆ.

ಒಂದು ವೇಳೆ ಪ್ರಾಯದ ಸ್ತ್ರೀಯರು ತಮ್ಮ ಕರ್ತವ್ಯಗಳನ್ನು ಅಲಕ್ಷಿಸಿ ಹರಟೆ ಮಾತಾಡುತ್ತಾ ಜನರ ವಿಷಯದಲ್ಲಿ ಚಾಡಿ ಹೇಳುತ್ತಾ ತಿರುಗಾಡುವದಾದರೆ ಅವರ ನಡತೆಯ ಕಾರಣದಿಂದ ಇತರರು ದೇವರ ವಾಕ್ಯಕ್ಕೆ ದೋಷಣೆ ಮಾಡುವರು. ದೇವರ ವಾಕ್ಯಕ್ಕೆ ಅವಮಾನವುಂಟಾಗುವದು (1 ತಿಮೊಥೆ 5:13-14). ಕ್ರಿಸ್ತನ ಹಿಂಬಾಲಕರು ಭಕ್ತಿಯುಳ್ಳವರಾಗಿ ಜೀವಿಸದಿದ್ದರೆ ಕ್ರಿಸ್ತನ ಹೆಸರಿಗೆ ಅವಮಾನವಾಗುವುದು. ಅವಿಶ್ವಾಸಿಗಳು ಯಾವಾಗಲೂ ನಾವು ಹೇಗೆ ನಡೆದುಕೊಳ್ಳುತ್ತೇವೆ ಎಂಬದನ್ನು ನೋಡುತ್ತಿರುತ್ತಾರೆ. ನಮ್ಮನ್ನು ಪ್ರಾಪಂಚಿಕ ಜನರೊಳಗಿಂದ ಪ್ರತ್ಯೇಕಿಸುವಂತಹ ಯಾವದೇ ಸಂಗತಿಯನ್ನು ಅವರು ನಮ್ಮ ಜೀವಿತಗಳಲ್ಲಿಯೂ ನಡತೆಯಲ್ಲಿಯೂ ಕಾಣುತ್ತಾರೋ? ಅಥವಾ ನಾವು ಅವಿಶ್ವಾಸಿಗಳಂತೆಯೇ ವರ್ತಿಸುತ್ತೇವೋ? (ಮತ್ತಾಯ 5:46-48 ಮತ್ತು ವ್ಯಾಖ್ಯಾನ ನೋಡಿರಿ).

**6** ಯೌವನಸ್ಥರಿಗೆ ಅಗತ್ಯವಿರಬೇಕಾದ ಅತಿಪ್ರಾಮುಖ್ಯವಾದ ಸಂಗತಿಗಳಲ್ಲಿ ಜಿತೇಂದ್ರಿಯರಾಗಿರುವದು ಒಂದಾಗಿದೆ, ಜಿತೇಂದ್ರಿಯತೆಯು (ಶಮೆದಮೆ) ಪವಿತ್ರಾತ್ಮನ ಫಲಗಳಲ್ಲಿ ಒಂದಾಗಿದೆ(ಗಲಾತ್ಯ 5:23).

**7-8** ತೀತನು ಸಭೆಯಲ್ಲಿರುವ ಇತರರಿಗೆ ಎಲ್ಲಾ ವಿಷಯಗಳಲ್ಲೂ ಮಾದರಿಯಾಗಿರಬೇಕು (1 ತಿಮೊಥೆ 4:12 ಮತ್ತು ವ್ಯಾಖ್ಯಾನ ನೋಡಿರಿ). ತೀತನ ಜೀವನ ಹಾಗೂ ಉಪದೇಶಗಳೆರಡೂ ದೋಷವಿಲ್ಲದ್ದಾಗಿರಬೇಕು; ಆಗ ಆತನ ವಿರೋಧಿಗಳು ಆತನ ವಿಷಯದಲ್ಲಿ ಕೆಟ್ಟದ್ದೇನೂ ಹೇಳುವದಕ್ಕೆ ಅವಕಾಶವಿರುವದಿಲ್ಲ ಮತ್ತು ಹೀಗೆ ಅವರು ನಾಚಿಕೆಗೊಳಗಾಗುವರು (ರೋಮ 12:20-21; 1 ಪೇತ್ರ 2:15; 3:16 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**9-10** ಪೌಲನು ಇಲ್ಲಿ ದಾಸರ (ಗುಲಾಮರ) ವಿಷಯದಲ್ಲಿ ಕೆಲವೊಂದು ಬೋಧನೆಯನ್ನು ಅದು ಹೊಸ ಒಡಂಬಡಿಕೆಯ ಇತರ ಭಾಗಗಳಲ್ಲಿ ಕಂಡು ಬರುವ ಬೋಧನೆಯನ್ನು ಹೋಲುತ್ತದೆ (ಎಫೆಸ 6:5-8; 1 ಪೇತ್ರ 2:18-20 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ದಾಸರ ವಿಷಯದಲ್ಲಿ ಪೌಲನನು ನೀಡುವ ಬಹುಪಾಲು ಬೋಧನೆಯು ಇತರ ರೀತಿಯ ಕೆಲಸಗಾರರಿಗೂ ನೌಕರರಿಗೂ ಅನ್ವಯಿಸುತ್ತದೆ.

ಪೌಲನ ಕಾಲದಲ್ಲಿ ದಾಸತ್ವ ಪದ್ಧತಿಯು ವ್ಯಾಪಕವಾಗಿ ಹರಡಿತ್ತು; ಅದು ಶೋಷಣೆ ಹಾಗೂ ಕೆಟ್ಟತನದಿಂದ ಕೂಡಿತ್ತು. ಆದರೆ ಹೊಸ ಒಡಂಬಡಿಕೆಯು ದಾಸತ್ವ ಪದ್ಧತಿಗೆ ನೇರವಾಗಿ ವಿರೋಧಿಸುವದರ ಬಗ್ಗೆ ಅಷ್ಟಾಗಿ ಹೇಳುವದಿಲ್ಲ. ಅದಕ್ಕೆ ಕಾರಣವೇನೆಂದರೆ ದಾಸತ್ವದಂತಹ ಕೆಟ್ಟ ಪದ್ಧತಿಯು ಬದಲಾಯಿಸಲ್ಪಡುವದಕ್ಕೆ ಮುನ್ನ ಮನುಷ್ಯರ ಹೃದಯಗಳೂ ಉದ್ದೇಶಗಳೂ ಬದಲಾಗುವದು ಅವಶ್ಯವಾಗಿದೆ. ಆದದರಿಂದ, ಹೊಸ ಒಡಂಬಡಿಕೆಯ ಬರಹಗಾರರು ಎಲ್ಲಕ್ಕಿಂತ ಮೊದಲು ಜನರು ತಮ್ಮ ಅಂತರ್ಯದ ಜೀವಿತಗಳನ್ನು ಬದಲಾಯಿಸಿಕೊಳ್ಳುವಂತೆ ಮಾಡುವದರ ಮೇಲೆ ಗಮನ ನೀಡಿದರು.

ಯಾವಾಗ ಒಬ್ಬ ವ್ಯಕ್ತಿಯ ಅಂತರ್ಯದ ಸ್ಥಿತಿಯು ದೇವರ ದೃಷ್ಟಿಯಲ್ಲಿ ಸರಿಯಾಗಿರುತ್ತದೋ ಆಗ ದೇವರು ಸಹಜವಾಗಿ ವ್ಯಕ್ತಿಯ ಬಹಿರಂಗದ ಸ್ಥಿತಿಯನ್ನು ಬದಲಾಯಿಸುವನು. ದಾಸರು ತಮ್ಮ ಕರ್ತವ್ಯಗಳ ಮೇಲೆಯೂ ಸರಿಯಾದದ್ದನ್ನು ಮಾಡುವದರ ಮೇಲೆಯೂ ಗಮನ ಹರಿಸಬೇಕು. ದಾಸನ ಕರ್ತವ್ಯಗಳು ತನ್ನ ಯಜಮಾನನಿಗೆ ವಿಧೇಯನಾಗಿ ಗೌರವಿಸುವದು, ವಿಶ್ವಾಸರ್ಹನಾಗಿರುವದು, ಹಾಗೂ ಆಸಕ್ತಿಯಿಂದ ಕೆಲಸಮಾಡುವದು ಆಗಿವೆ. ಹೇಗಿದ್ದರೂ, ಒಬ್ಬ ದಾಸನು ತನ್ನ ಹೊರಗಿನ ಪರಿಸ್ಥಿತಿಗಳನ್ನು ಸುಧಾರಿಸಿಕೊಳ್ಳುವದಕ್ಕಾಗಿ ತನ್ನ ಯಜಮಾನ ವಿರುದ್ಧ ಬಂಡಾಯವೇಳುವದಾದರೆ ಆತನು ಕ್ರಿಸ್ತನಿಗೂ ಆತನ ಸುವಾರ್ತೆಗೂ ಕಳಂಕವನ್ನು ತರುವವನಾಗುವನು (1 ಕೊರಿಂಥ 7:17,20-22; 1 ತಿಮೊಥೆ 6:1 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆದರೆ ಪೌಲನು ಹೇಳುವುದೇನೆಂದರೆ: ಒಬ್ಬ ಕ್ರೈಸ್ತ ದಾಸನು ತನ್ನ ಕೆಲಸವನ್ನು ಉತ್ತಮವಾಗಿ ಮಾಡುವದಾದರೆ ಆತನ ಕ್ರಿಸ್ತನಂಬಿಕೆಯಿಲ್ಲದ ಯಜಮಾನನು ಆತನ ಕ್ರಿಸ್ತನಂಬಿಕೆಯೇ ಆತನನ್ನು ಇತರ ದಾಸರಿಗಿಂದ

ವಿಭಿನ್ನವಾಗಿಸಿದೆ ಎಂದು ತಿಳುಕೊಳ್ಳುವನು. ಆತನ ನಂಬಿಕೆಯ ನಿಮಿತ್ತವಾಗಿ ಕ್ರಿಸ್ತನ ಸುವಾರ್ತೆ ಹಾಗೂ ಸಿದ್ಧಾಂತವು ಜನರ ದೃಷ್ಟಿಗೆ ಆಕರ್ಷಕವಾಗಿ (ಅಲಂಕಾರವಾಗಿ) ಮಾಡಲ್ಪಡುವದು, ಮತ್ತು ಕ್ರಿಸ್ತನಿಗೆ ಘನವುಂಟಾಗುವದು (ಮತ್ತಾಯ 5:16; 1 ಪೇತ್ರ 2:12).

ದಾಸನು ಎಲ್ಲಾದರಲ್ಲಿ ತನ್ನ ಯಜಮಾನನಿಗೆ ಅಧೀನನಾಗಿರಬೇಕು. ಹೇಗಿದ್ದರೂ, ಒಬ್ಬ ಯಜಮಾನನು ತನ್ನ ದಾಸನಿಗೆ ದೇವರ ಆಜ್ಞೆಯೊಂದಕ್ಕೆ ಅವಿಧೇಯನಾಗುವಂತೆ ಹೇಳುವದಾದರೆ ದಾಸನು ಆ ವಿಷಯದಲ್ಲಿ ತನ್ನ ಯಜಮಾನನಿಗೆ ವಿಧೇಯನಾಗಬಾರದು; ಬದಲಾಗಿ, ಆತನು ದೇವರಿಗೆ ವಿಧೇಯನಾಗಬೇಕು (ರೋಮ 13:1-2 ಮತ್ತು ವ್ಯಾಖ್ಯಾನ ನೋಡಿರಿ).

ಪೌಲನು ಇಲ್ಲಿ ಒಬ್ಬ ದಾಸನು ತನ್ನ ಯಜಮಾನನಿಗೆ ಎದುರು ಮಾತನ್ನಾಡಬಾರದು ಎಂದು ಹೇಳುತ್ತಾನೆ. ಉದಾಹರಣೆಗೆ, ಒಬ್ಬ ದಾಸನು (ಅಥವಾ ಇತರ ಕೆಲಸಗಾರನು). ಯಾವದಾದರೂ ತಪ್ಪನ್ನು ಮಾಡಿದಾಗ, ಆತನು ಅದನ್ನು ನಿರಾಕರಿಸುವದಕ್ಕೆ ಅಥವಾ ಅದಕ್ಕಾಗಿ ನೆಪ ಹೇಳುವುದಕ್ಕೆ ಪ್ರಯತ್ನಿಸಬಾರದು; ಆತನು ಹಾಗೆ ಮಾಡಿದರೆ ಅದು ಆತನ ತಪ್ಪನ್ನು ಎರಡರಷ್ಟು ಕೆಟ್ಟದ್ದಾಗಿಸುತ್ತದೆ ಮತ್ತು ಈ ನಿಯಮವು ದಾಸರಿಗೆ ಮಾತ್ರವಲ್ಲದೆ ಯಾವದೇ ಕೆಲಸಗಾರ ಅಥವಾ ನೌಕರನಿಗೂ ಅನ್ವಯಿಸುತ್ತದೆ.

**11** ಪೌಲನು 1-10 ವಚನಗಳಲ್ಲಿ ಸಭೆಯೊಳಗಿನ ವಿವಿಧ ಗುಂಪುಗಳ ಸರಿಯಾದ ನಡವಳಿಕೆಯ ಕುರಿತು ಕಲಿಸಿದ್ದಾನೆ. ಈಗ 11-14 ಗಳಲ್ಲಿ ಪೌಲನು ಆ ಸರಿಯಾದ ನಡವಳಿಕೆಗೆ ಕಾರಣವನ್ನು ನೀಡುತ್ತಾನೆಃ ಯಾಕೆಂದರೆ ಎಲ್ಲಾ ಮನುಷ್ಯರಿಗೆ – ಪುರುಷರು ಹಾಗೂ ಸ್ತ್ರೀಯರಿಗೆ, ದಾಸರು, ಹಾಗೂ ಯಜಮಾನರಿಗೆ, ಯೆಹೂದ್ಯರು ಹಾಗೂ ಅನ್ಯಜನರಿಗೆ – ರಕ್ಷಣೆಯನ್ನುಂಟುಮಾಡುವ ದೇವರ ಕೃಪೆಯು ಪ್ರತ್ಯಕ್ಷವಾಯಿತು (2 ತಿಮೊಥೆ 1:9-10ನೋಡಿರಿ). ದೇವರ ಕೃಪೆಯು ನಮ್ಮನ್ನು ರಕ್ಷಿಸುತ್ತದೆ. ಮತ್ತು ನಮ್ಮೊಳಗೆ ಭಕ್ತಿಯನ್ನೂ ನೂತನ ಆತ್ಮೀಕ ಜೀವನವನ್ನೂ ಉಂಟುಮಾಡುತ್ತದೆ. ನಮ್ಮ ರೂಪಾಂತರವು ನಾವು ಪರಲೋಕವನ್ನು ಸೇರಿದ ಬಳಿಕ ಮಾತ್ರವೇ ಸಂಭವಿಸುವದಿಲ್ಲ, ಆದರೆ ಅದು ಕೃಪೆಯ ಮೂಲಕ ಈ ಜೀವಿತದಲ್ಲಿಯೇ ಪ್ರಾರಂಭಗೊಳ್ಳುತ್ತದೆ. ಒಂದು ವೇಳೆ ನಮ್ಮ ಜೀವಿತದಲ್ಲಿ ಯಾವ ಮಾರ್ಪಾಟೂ ಇಲ್ಲದಿರುವದಾದರೆ ನಾವು ಇನ್ನೂ ದೇವರ ಕೃಪೆಯನ್ನು ಪಡೆದುಕೊಂಡಿಲ್ಲ.

ಎಲ್ಲಾದರಲ್ಲಿಯೂ ನಾವು ಸಂಪೂರ್ಣವಾಗಿ ದೇವರ ಕೃಪೆಯನ್ನು ಅವಲಂಬಿಸಿದ್ದೇವೆ (1 ಕೊರಿಂಥ 15:10) ದೇವರ ಕೃಪೆಯನ್ನು ಹೊರತು ಪಡಿಸಿ ಇನ್ನಾವ ರಕ್ಷಣೆಯಾಗಲಿ, ಸತ್ಕ್ರಿಯೆಯಾಗಲಿ ಇರುವದಿಲ್ಲ (ಎಫೆಸ 2:8-10 ಮತ್ತು ವ್ಯಾಖ್ಯಾನ; ಸಾಮಾನ್ಯ ಲೇಖನಃ ರಕ್ಷಣೆಯ ಮಾರ್ಗ ನೋಡಿರಿ)

**12** ದೇವರು ನಮಗೆ ತನ್ನ ಕೃಪೆಯನ್ನು ನೀಡಿರುವದರಿಂದ ನಾವು ಅದಕ್ಕೆ ಅನುಸಾರವಾಗಿ ಜೀವಿಸಬೇಕು. ನಾವು ದೇವರನ್ನು ಪ್ರೀತಿಸಿ ಆತನಿಗೆ ವಿಧೇಯರಾಗಬೇಕು (ಯೋಹಾನ 14:15), ನಾವು ಭಕ್ತಿಹೀನತೆಗೂ ಲೋಕದ ಆಶೆಗಳಿಗೂ "ಇಲ್ಲ" ಎಂದು ಹೇಳಬೇಕು (ವಿಸರ್ಜಿಸಬೇಕು). ನಾವು ಈ ಸಂಗತಿಗಳಿಗೆ ದೂರವಾಗಿ ನೀತಿಯನ್ನು ಸಂಪಾದಿಸಿಕೊಳ್ಳುವದಕ್ಕೆ ಪ್ರಯಾಸ ಪಡಬೇಕು (1 ತಿಮೊಥೆ 6:11; 2 ತಿಮೊಥೆ 2:22 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**13** ದೇವರ ಕೃಪೆಯು ಯೇಸುಕ್ರಿಸ್ತನಲ್ಲಿ ಪ್ರಕಟವಾಗಿರುತ್ತದೆ. ಕ್ರಿಸ್ತನು ಭೂಲೋಕಕ್ಕೆ ಬಂದಾಗಲೇ ಕೃಪೆಯು ಪುರುಷ ಮತ್ತು ಸ್ತ್ರೀಯರಿಗೆ ಬಂದಿತು. ಈಗ ನಾವು ನಮ್ಮ ಮಹಾದೇವರು ಹಾಗೂ ರಕ್ಷಕನಾದ ಯೇಸುಕ್ರಿಸ್ತನು ಎರಡನೆಯ ಸಾರಿ ಭೂಲೋಕಕ್ಕೆ ಬರುವತನಕ ಎದುರು ನೋಡುವವರಾಗಿದ್ದೇವೆ. ಕ್ರಿಸ್ತನು ನಮ್ಮ ಆಶೀರ್ವಾದಕರ ನಿರೀಕ್ಷೆಯಾಗಿದ್ದಾನೆ (1 ತಿಮೊಥೆ 1:1). ಆತನಲ್ಲಿ ನಂಬಿಕೆಯಿಡುವದರ ಮೂಲಕ ನಾವು ರಕ್ಷಣೆಯನ್ನು ಪಡೆಯುತ್ತೇವೆ ಆತನ ಮುಖಾಂತರ ನಮಗೆ ನಿತ್ಯಜೀವವು ದೊರೆಯುತ್ತದೆ.

**14** ಕ್ರಿಸ್ತನು ಏಕೆ ನಮಗೋಸ್ಕರ ತನ್ನನ್ನು ಒಪ್ಪಿಸಿಕೊಟ್ಟನು? ಅಂದರೆ, ಕ್ರಿಸ್ತನು ಏಕೆ ನಮಗೋಸ್ಕರ ಯಜ್ಞವಾಗಿ ಸತ್ತನು? ಮೊದಲನೆಯದಾಗಿ, ಆತನು ನಮ್ಮನ್ನು ಸಕಲ ಅಧರ್ಮದಿಂದ ವಿಮೋಚಿಸುವದಕ್ಕೆ ಸತ್ತನು (ಮಾರ್ಕ 10:45; 1 ತಿಮೊಥೆ 2:6 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಎರಡನೆಯದಾಗಿ, ನಾವು ಆತನ ಶುದ್ಧ ಹಾಗೂ ಕಳಂಕವಿಲ್ಲದ ಜನರು ಅಥವಾ ಸಭೆಯಾಗುವದಕ್ಕಾಗಿ ಆತನ ವಾಕ್ಯದ ಮೂಲಕ ಅಂತರ್ಯದಲ್ಲಿ ಶುದ್ಧೀಕರಿಸಲ್ಪಡುವಂತೆ ಆತನು ಸತ್ತನು (ಧರ್ಮೋಪದೇಶಕಾಂಡ 14:2; ಯೆಹೆಜ್ಕೇಲ 37:23, ಎಫೆಸ 5:25-27; 1 ಪೇತ್ರ 2:9 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**15** ಪೂರ್ಣ ಅಧಿಕಾರದಿಂದ ಎಚ್ಚರಿಸುತ್ತಾ (ಪ್ರೋತ್ಸಾಹಿಸುತ್ತಾ) ಖಂಡಿಸುತ್ತಾ ಇರು (1 ತಿಮೊಥೆ 4:12; 2 ತಿಮೊಥೆ 4:2, ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಪೌಲನು ತೀತನಿಗೆ ಬರೆಯುವದೇನೆಂದರೆಃ ಯಾರೂ ನಿನ್ನನ್ನು ತಿರಸ್ಕರಿಸದ ಹಾಗೆ ನೋಡಿಕೋ. ತೀತನ ಜೀವಿತವು ಶುದ್ಧವಾಗಿಯೂ ಆತನ ಉಪದೇಶವು ಸತ್ಯವಾಗಿಯೂ ಇರಲಿ, ಮತ್ತು ಈ ರೀತಿಯಲ್ಲಿ ಜನರಿಗೆ ಆತನನ್ನು ತಿರಸ್ಕಾರ ಮಾಡಲು ಯಾವ ನ್ಯಾಯ ಸಮ್ಮತ ಕಾರಣವೂ ದೊರೆಯುವದಿಲ್ಲ (ವಚನಗಳು 7:8).

## ಅಧ್ಯಾಯ - 3

### ಒಳ್ಳೇದನ್ನು ಮಾಡುವದು (3:1-15)

1 ಹೊಸ ಒಡಂಬಡಿಕೆಯ ಇತರ ಕಡೆಯಲ್ಲಿ ಕಲ್ಪಿಸಲ್ಪಟ್ಟಿರುವ ಹಾಗೆಯೇ ಪೌಲನು ಇಲ್ಲಿ ವಿಶ್ವಾಸಿಗಳು ಅಧಿಪತಿಗಳಿಗೂ ಅಧಿಕಾರಿಗಳಿಗೂ ಅಧೀನರಾಗಿರಬೇಕು ಎಂದು ಕಲಿಸುತ್ತಾನೆ (ರೋಮ 13:1-5; 1 ಪೇತ್ರ 2:13 -14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಸಕಲ ಸತ್ಕಾರ್ಯಗಳನ್ನು ಮಾಡುವದಕ್ಕೆ ಸಿದ್ಧರಾಗಿರಬೇಕೆಂದು...... ಜನರಿಗೆ ಜ್ಞಾಪಕಕೊಡು. ಕ್ರೈಸ್ತರು ತಮ್ಮ ಗ್ರಾಮದವರ ಹಾಗೂ ಸಮುದಾಯದವರ ಹಿತ ರಕ್ಷಣೆಗಾಗಿ ದುಡಿಯುವದಕ್ಕೆ ಮಾರ್ಗಗಳನ್ನು ಹುಡಕಬೇಕು. ಅವರು ಯೋಗ್ಯವಾದ ಸಮುದಾಯ ಯೋಜನೆಗಳಿಗೆ ಬೆಂಬಲ ನೀಡಬೇಕು. ಅವರು ತಾವು ಹೇಗೆ ಇತರರಿಗೆ ಸಹಾಯಕಾರಿಯಾಗಿರಬೇಕೆಂಬದರ ಬಗ್ಗೆ ಆಲೋಚಿಸಬೇಕು.

ಪೌಲನ ಕಾಲದಲ್ಲಿ, ಕ್ರೈಸ್ತರು ರೋಮಾಯ ಸಾಮ್ರಾಜ್ಯದ ವೈರಿಗಳು ಎಂದು ಅನೇಕ ಜನರು ತಪ್ಪಾಗಿ ಪರಿಗಣಿಸಿದ್ದರು. ಇಂದಿಗೂ ಸಹ ಕೆಲವು ರಾಷ್ಟ್ರಗಳಲ್ಲಿ ಕ್ರೈಸ್ತರು ಸಮಾಜದ ವಿರೋಧಿಗಳು ಎಂದು ಪರಿಗಣಿಸಲ್ಪಟ್ಟಿರುತ್ತಾರೆ. ದುರಾದೃಷ್ಟಕರವಾಗಿ, ಕೆಲವು ಸಂದರ್ಭದಲ್ಲಿ ಸ್ವತಃ ಕ್ರೈಸ್ತರೇ ತಮ್ಮ ಸರ್ಕಾರಗಳಿಗೆ ದಾರಿತಪ್ಪಿದ ವಿರೋಧ ಮಾಡುವದರ ಮೂಲಕ ಆ ಭಾವನೆಗೆ ಕುಮ್ಮಕ್ಕು ನೀಡಿರುತ್ತಾರೆ. ಆದರೆ ಕ್ರೈಸ್ತರು ಕಾನೂನು ಪಾಲಕರು ಎಂದು ಗುರುತಿಸಲ್ಪಡಬಹುದಾದ ಹಕ್ಕನ್ನು ಹೊಂದಿದ್ದಾರೆ. ಆದದರಿಂದ, ಸಾಧ್ಯವಾದಷ್ಟು ಮಟ್ಟಿಗೆ ಕ್ರೈಸ್ತರು ಕಾನೂನಿಗೆ ವಿಧೇಯರಾಗುವದು ಹಾಗೂ ತಮ್ಮ ಸರ್ಕಾರಕ್ಕೆ ಬೆಂಬಲ ನೀಡುವದು ಪ್ರಾಮುಖ್ಯವಾಗಿರುತ್ತದೆ. ನಾವು ಎಲ್ಲಾ ವಿಧದಲ್ಲಿಯೂ ಒಳ್ಳೇ ಪೌರರಾಗುವದಕ್ಕೆ ಪ್ರಯತ್ನಿಸಬೇಕು.

2 ........ಯಾರನ್ನೂ ದೂಷಿಸಬೇಡಿರಿ. ನಾವು ಯಾರ ವಿಷಯದಲ್ಲಿಯೂ –ವಿಶ್ವಾಸಿಯ ಬಗ್ಗೆಯಾಗಲಿ ಇಲ್ಲವೆ ಅವಿಶ್ವಾಸಿಯ ಬಗ್ಗೆಯೇ ಆಗಲಿ– ದೋಷಣೆ ಅಥವಾ ನಿಂದೆ ಮಾಡಬಾರದು. ಸೈತಾನನು ದೊಷಣೆ, ಗುಣಗುಟ್ಟುವಿಕೆ ಹಾಗೂ ಕೆಟ್ಟ ಮಾತುಗಳನ್ನು ಉಪಯೋಗಿಸಿ ಕ್ರೈಸ್ತರನ್ನು ಇಬ್ಭಾಗಿಸುತ್ತಾನೆ; ಇದು ಸಭೆಯನ್ನು ಹಾಳುಮಾಡುವದಕ್ಕೆ ಆತನ ಅತಿ ಪರಿಣಾಮಕಾರಿ ಹಾಗೂ ಅಪಾಯಕಾರಿ ಆಯುಧವಾಗಿದೆ. ನಾವು ಒಬ್ಬ ವ್ಯಕ್ತಿಯ ಬೆನ್ನ ಹಿಂದೆ ಆತನ ವಿರುದ್ಧವಾಗಿ – ನಾವು ಹೇಳುವದು ಸತ್ಯವಾಗಿದ್ದರೂ –ಎಂದಿಗೂ ಮಾತಾಡತಕ್ಕದ್ದಲ್ಲ, ಯಾಕೆಂದರೆ ಅದು ದೂಷಣೆಯಾಗಿದೆ (ಮತ್ತಾಯ 18:15-16 ಮತ್ತು ವ್ಯಾಖ್ಯಾನ ನೋಡಿರಿ).

3 ನಾವು ಅವಿಶ್ವಾಸಿಗಳೊಂದಿಗೆ ದೀರ್ಘಶಾಂತಿಯಿಂದಿದ್ದು ಅವರ ಹಿತವನ್ನು ಅಪೇಕ್ಷಿಸಬೇಕು. ಯಾಕೆಂದರೆ ನಾವು ಸಹ ಮೊದಲು ಅವಿಶ್ವಾಸಿಗಳಾಗಿದ್ದೇವೆಂಬದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ನಾವು ದೇವರ ಕರುಣೆಗೆ ಅಪಾತ್ರರಾಗಿದ್ದಾಗಲೂ ಆತನು ನಮಗೆ ಕರುಣೆ ತೋರಿದನು. ಆದದರಿಂದ, ನಾವು ಇತರರಿಗೆ ಕರುಣೆಯನ್ನು ತೋರಿಸಬೇಕು. ನಾವು ಸಹ ಮೊದಲು ಅವಿವೇಕಿಗಳಾಗಿದ್ದೆವು ; ಅಂದರೆ, ನಾವು ಆತ್ಮೀಕ ತಿಳುವಳಿಕೆಯಿಲ್ಲದವರಾಗಿದ್ದೇವು . ನಾವು ಪಾಪದ ದಾಸತ್ವದಲ್ಲಿದ್ದೆವು ; ನಾವು ನಾನಾ ವಿಧವಾದ ದುರಾಶೆಗಳಿಗೆ ಮತ್ತು ಭೋಗಗಳಿಗೆ ಅಧೀನರೂ ಆಗಿದ್ದೆವು . ಆದರೆ ಈಗ ನಾವು ಬಿಡುಗಡೆಗೊಂಡಿದ್ದೇವೆ. ಒಬ್ಬ ವ್ಯಕ್ತಿಯು ಸೆರೆಯಾಳು ಅಥವಾ ದಾಸನಾಗಿರುವದಾಗಿದ್ದರೆ ಮಾತ್ರವೆ ಬಿಡುಗಡೆಯ ಪೂರ್ಣ ಆಶೀರ್ವಾದವನ್ನು ತಿಳಿಯುವವನಾಗುತ್ತಾನೆ; ಆದದರಿಂದ, ನಾವು ಹಿಂದೊಮ್ಮೆ ಹೇಗಿದ್ದೆವೆಂಬದನ್ನು ಎಂದಿಗೂ ಮರೆಯದಿರೋಣ! (1 ಕೊರಿಂಥ 6:9-11 ಎಫೆಸ 2:1-3; 4:17-19 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

4-5 ಪೌಲನು 4-7 ನೇ ವಚನಗಳಲ್ಲಿ ಇಡೀ ಕ್ರಿಸ್ತನ ಸುವಾರ್ತೆಯ ಸಾರಾಂಶವನ್ನು ನೀಡುತ್ತಾನೆ. ನಾವು ಸೆರೆಯಾಳುಗಳಾಗಿದ್ದ ಈ ಕತ್ತಲೆಯ ಹಾಗೂ ಪಾಪಮಯ ಲೋಕದೊಳಗೆ ನಮ್ಮ ರಕ್ಷಕನಾದ ದೇವರು ಅಂದರೆ, ಯೇಸುಕ್ರಿಸ್ತನು ಬಂದನು. ನಾವು ಕೆಲವೊಂದು ಧಾರ್ಮಿಕ ನಿಯಮ ಪಾಲಿಸಿದ್ದರಿಂದಾಗಲಿ ಅಥವಾ ಯಾವದಾದರೂ ಧಾರ್ಮಿಕ ಕಾರ್ಯವನ್ನು ಮಾಡಿದ್ದರಿಂದಾಗಲಿ ಅಲ್ಲ, ಆದರೆ ಆತನು ನಮ್ಮನ್ನು ಪ್ರೀತಿಸಿ ನಮ್ಮ ಮೇಲೆ ಕರುಣೆ ಇಟ್ಟಿದ್ದರಿಂದಲೇ ಆತನು ನಮ್ಮನ್ನು ರಕ್ಷಿಸಿದನು (ಯೋಹಾನ 3:16; ಗಲಾತ್ಯ 2:15-16; ಎಫೆಸ 2:8-9; 2 ತಿಮೊಥೆ 1:9-10; 1 ಯೋಹಾನ 4:9-10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಕ್ರಿಸ್ತನು ನಮ್ಮನ್ನು ಹೊಸಜನ್ಮವನ್ನು ಸೂಚಿಸುವ ಸ್ನಾನದ ಮೂಲಕ ರಕ್ಷಿಸಿದನು (ವಚನ 5). ಇಲ್ಲಿ ಸ್ನಾನವು ದೀಕ್ಷಾಸ್ನಾನವನ್ನು ಸೂಚಿಸುತ್ತದೆ. ಒಂದು ಅರ್ಥದಲ್ಲಿ ಕ್ರಿಸ್ತನು ನಮ್ಮನ್ನು ದೀಕ್ಷಾಸ್ನಾನದ ಮೂಲಕ ರಕ್ಷಿಸಿರುತ್ತಾನೆ [3] (1 ಪೇತ್ರ 3:21 ಮತ್ತು ವ್ಯಾಖ್ಯಾನ ನೋಡಿರಿ). ಹೊಸಜನ್ಮವು ಪವಿತ್ರಾತ್ಮನ ಮೂಲಕ ಬರುವಂಥ ನೂತನ ಹುಟ್ಟು ಅಥವಾ ನೂತನ ಜೀವಿತವಾಗಿದೆ (ಮಾರ್ಕ 1:8, ಯೋಹಾನ 3:3-5; 1 ಕೊರಿಂಥ 6:11 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಕ್ರಿಸ್ತನು ನಮ್ಮನ್ನು ಪವಿತ್ರಾತ್ಮನು ನಮ್ಮಲ್ಲಿ ಉಂಟುಮಾಡುವ ನೂತನ ಸ್ವಭಾವದ ಮೂಲಕವೂ ರಕ್ಷಿಸಿದನು. ಈ ಮುಂಚೆ ಪ್ರಸ್ತಾಪಿಸಲ್ಪಟ್ಟಿರುವ ಹೊಸ ಜನ್ಮವು ನಮ್ಮ ಕ್ರೈಸ್ತೀಯ ಜೀವಿತಗಳ ಪ್ರಾರಂಭದಲ್ಲಿ ಒಂದೇ ಸಾರಿ ಮಾತ್ರವೇ ಸಂಭವಿಸುತ್ತದೆ; ಪವಿತ್ರಾತ್ಮನು ನೂತನ ಸ್ವಭಾವವನ್ನು ಉಂಟುಮಾಡುವ ಕಾರ್ಯವು ನಾವು ನಂಬುವ ಕ್ಷಣದಿಂದ

ಪ್ರಾರಂಭವಾಗಿ ನಮ್ಮ ಜೀವಿತಗಳ ಅಂತ್ಯದವರೆಗೂ ಸಾಗುತ್ತದೆ. (2 ಕೊರಿಂಥ 4:16; ಫಿಲಿಪ್ಪಿ 1:6 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**6-7** ದೇವರು ನಮ್ಮ ರಕ್ಷಕನಾದ ಯೇಸುಕ್ರಿಸ್ತನ [4] ಮೂಲಕ ಪವಿತ್ರಾತ್ಮನನ್ನು ನಮ್ಮ ಮೇಲೆ ಸಮೃದ್ಧಿಯಾಗಿ ಸುರಿಸಿದನು (ಯೋಹಾನ 7:37-39; ಅ.ಕೃತ್ಯ 2:1-4, 32-33, ರೋಮ 5:5 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ಆತನ ಕೃಪೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ (ರೋಮ 3:23-24; 5:1 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ನಾವು ಕ್ರಿಸ್ತನ ಜೊತೆ ಬಾಧ್ಯರಾಗಿ ನಿತ್ಯಜೀವವನ್ನು ಪಡೆದುಕೊಳ್ಳುವಂತಾಗಬೇಕೆಂದು ದೇವರು ನಮ್ಮನ್ನು ನೀತಿವಂತರೆಂದು ನಿರ್ಣಯಿಸಿದ್ದಾನೆ. ದೇವರಿಂದ ನೀತಿವಂತರೆಂದು ನಿರ್ಣಯಿಸಲ್ಪಡದೆ ಯಾರೂ ಪರಲೋಕ ರಾಜ್ಯವನ್ನು ಪ್ರವೇಶಿಸುವದಕ್ಕೆ ಯೋಗ್ಯರಾಗುವದಿಲ್ಲ (ಯೋಹಾನ 1:12; 6:40; ರೋಮ 6:23; 8:15-17; ಗಲಾತ್ಯ 3:26,29; 4:4-7, 1 ಯೋಹಾನ 5:11-13 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**8** ಪೌಲನು 4-7ನೇ ವಚನಗಳಲ್ಲಿ ನಮಗಾಗಿ ಕೈಗೊಳ್ಳಲ್ಪಟ್ಟ ದೇವರ ಕೃಪೆಯ– ನಮ್ಮ ರಕ್ಷಣೆಯ– ಮಹಾಕಾರ್ಯವನ್ನು ಬಣ್ಣಿಸಿರುತ್ತಾನೆ. ಈಗ ಈ ವಚನದಲ್ಲಿ ಪೌಲನು ವಿಶ್ವಾಸಿಗಳಿಗೆ ಸತ್ಕ್ರಿಯೆಗಳನ್ನು ಮಾಡುವದರಲ್ಲಿ ಜಾಗರೂಕರಾಗಿಬೇಕು ಎಂದು ಸಲಹೆ ನೀಡುತ್ತಾನೆ. ಬೈಬಲಿನಲ್ಲಿ ಸುವಾರ್ತೆಯ ಮಹಾ ಸಿಂದ್ಧಾತಗಳು ಯಾವಾಗಲೂ ದೈನಂದಿನ ಜೀವಿತಕ್ಕಾಗಿನ ಅಭ್ಯಾಸಗತ ಸಲಹಾ ಸೂಚನೆಗಳ ಜೊತೆ ಜೊತೆಯಲ್ಲಿ ಸಾಗುತ್ತವೆ. ಒಂದು ಕಡೆಯಲ್ಲಿ, ನಾವು ದೇವರ ಮಹಾಪ್ರೀತಿಯನ್ನೂ ಕೃಪೆಯನ್ನೂ ನೋಡುತ್ತೇವೆ; ಇನ್ನೊಂದು ಕಡೆಯಲ್ಲಿ, ನಾವು ನಮ್ಮ ಕರ್ತವ್ಯವನ್ನು ಕಾಣುತ್ತೇವೆ. ಈ ಎರಡು ಬದಿಗಳು ಎಂದಿಗೂ ಬೇರ್ಪಡಿಸಲ್ಪಡಬಾರದು.

ಈ ವಚನದಲ್ಲಿ, ಪೌಲನು ಈ ಎಲ್ಲಾ ಮಾತುಗಳು ಎಂಬ ಮಾತನ್ನು ಎರಡು ಸಾರಿ ಬರೆಯುತ್ತಾನೆ. "ಈ ಎಲ್ಲಾ ಮಾತುಗಳು" ಈ ಪತ್ರಿಕೆಯಲ್ಲಿ ಬರೆಯಲ್ಪಟ್ಟಿರುವ ಎಲ್ಲಾ ಬೋಧನೆಗಳಾಗಿವೆ.

**9** 1 ತಿಮೊಥೆ 1:3-4; 4:7; 6:20; 2 ತಿಮೊಥೆ 2:14, 23 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**10-11** ಪೌಲನು ತೀತನಿಗೆ ಸಭೆಯಲ್ಲಿ ಬೇಧಹುಟ್ಟಿಸುವ ಮನುಷ್ಯನನ್ನು, ಜಗಳಗಳು ಹಾಗೂ ವಾಗ್ವಾದಗಳಲ್ಲಿಯೂ ಮುಂದುವರೆಯುವವನನ್ನು ಎರಡು ಸಾರಿ ಎಚ್ಚರಿಸು ಎಂದು ಹೇಳುತ್ತಾನೆ. ಅವನು ಎರಡು ಎಚ್ಚರಿಕೆಗಳಿಗೆ ಕಿವಿಗೊಡದಿದ್ದರೆ ತೀತನು ಅವನನ್ನು ಬಿಟ್ಟು ಬಿಡಬೇಕು [5] ಆತನು ಅಂಥ ವ್ಯಕ್ತಿಯೊಂದಿಗೆ ವಿತರ್ಕಮಾಡಬಾರದು; ಅದರಿಂದ, ಯಾವ ಪ್ರಯೋಜನವಾಗದು. ಅಂಥ ಮನುಷ್ಯನು ಸನ್ಮಾರ್ಗತಪ್ಪಿದವನೂ ಪಾಪಮಾಡುವವನೂ ಆಗಿದ್ದಾನೆ (ವಚನ 11). ಆತನೊಂದಿಗೆ ತರ್ಕಮಾಡಲು ಸಾಧ್ಯವಿಲ್ಲ ಆತನು ಯಾವದೇ ಹೆಚ್ಚಿನ ಎಚ್ಚರಿಕೆಗಳಿಗೆ ಕಿವಿಗೊಡುವದಿಲ್ಲ. ಆತನ ಬೇಧ ಹುಟ್ಟಿಸುವಿಕೆ ಹಾಗೂ ಇತರರನ್ನು ವಿರೋಧಿಸುವಿಕೆಯ ಕಾರಣದಿಂದ ಅಂಥವನು ಸಭೆಯ ವಿರುದ್ಧವಾಗಿ ಪಾಪಮಾಡುವವನಾಗಿದ್ದಾನೆ. ಅವನು ತಾನೇ ತನ್ನನ್ನು ಶಿಕ್ಷಾಪಾತ್ರನನ್ನಾಗಿ ಮಾಡಿಕೊಂಡವನು; ಅಂದರೆ, ಅವನು ತನ್ನ ಸ್ವಂತ ಮಾತುಗಳು ಹಾಗೂ ಕೃತ್ಯ ಗಳಿಂದ ದಂಡನೆಗೆ ಪಾತ್ರನಾಗಿರುತ್ತಾನೆ.

ಮನುಷ್ಯರು ತಾವು ಸ್ವಂತ ಇಷ್ಟದಂತೆ ನಡೆಯಬೇಕು ಹಾಗೂ ಮಾಡಬೇಕು ಎಂದು ಬಯಸುವದರಿಂದ ಸತ್ಯ ಸಿದ್ಧಾಂತ ಹಾಗೂ ಉಪದೇಶವನ್ನು ತೊರೆಯುತ್ತಾರೆ. ಅಂಥ ಮನುಷ್ಯರು ಸ್ವಾರ್ಥಿಗಳೂ, ಗರ್ವಿಷ್ಠರೂ, ಅಜ್ಞಾನಿಗಳೂ ಆಗಿರುತ್ತಾರೆ. ಮತ್ತು ಅವರು ಸತ್ಯವನ್ನು ತೊರೆದ ಬಳಿಕ ಇನ್ನು ಹೆಚ್ಚಾಗಿ ಪಾಪಕ್ಕೆ ದಾಸರಾಗುತ್ತಾರೆ ಹಾಗು ಅವರ ಮನಸ್ಸುಗಳು ಇನ್ನೂ ಹೆಚ್ಚು ಕಾಠಿಣ್ಯ ಹಾಗೂ ಮಲಿನವಾಗುತ್ತವೆ (1 ತಿಮೊಥೆ 6:3-5; 2 ತಿಮೊಥೆ 2:16 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**12** ಪೌಲನು ಅರ್ತೆಮನನ್ನಾಗಲಿ [6] ಅಥವಾ ತುಖಿಕನನ್ನಾಗಲಿ [7] ಕ್ರೇತಿಗೆ ಕಳುಹಿಸಲಿಕ್ಕಿದ್ದನು, ಕಾರಣ ತೀತನು ಆಗ ಬಿಡುವು ಗೊಂಡು ನಿಕೊಪೊಲಿ [8] ಯಲ್ಲಿರುವ ಪೌಲನ ಬಳಿಗೆ ಬರುವಂತಾಗಬಹುದಿತ್ತು.

**13** ಪೌಲನು ತೀತನನ್ನು ಜೇನನ ಹಾಗು ಅಪೊಲ್ಲೊಸರ ಪ್ರಯಾಣಗಳಲ್ಲಿ ಸಹಾಯ ನೀಡಬೇಕೆಂದು ಕೇಳಿಕೊಳ್ಳುತ್ತಾನೆ. ಅಪೊಲ್ಲೊಸನು ಪ್ರಸಿದ್ಧ ಬೋಧಕನು ಪೌಲನ ಸಹಪಾಠಿಯೂ ಆಗಿದ್ದನು (ಅ.ಕೃತ್ಯ 18:24-28 1 ಕೊರಿಂಥ 3 :4-6). ಜೇನನ ವಿಷಯದಲ್ಲಿ ಇನ್ನಾವ ಸಂಗತಿಯೂ ತಿಳಿದುಬಂದಿರುವದಿಲ್ಲ.

**14-15** ನಮ್ಮ ಜನರು– ಅಂದರೆ, ಕ್ರೇತದಲ್ಲಿನ ವಿಶ್ವಾಸಿಗಳು– ಒಬ್ಬರಿಗೊಬ್ಬರು ಎಲ್ಲಾ ಆಚರಣಾಬದ್ಧ ವಿಧಗಳಲ್ಲಿ ಸಹಾಯ ಮಾಡುವದಕ್ಕೆ ಸಿದ್ಧರಾಗಿರಬೇಕು. ಅವರು ವಿಶೇಷವಾಗಿ ಜೇನನು, ಅಪೋಲ್ಲೋಸರಂತಹ ಅಥಿತಿಗಳಿಗೆ ಸಹಾಯ ಹಾಗೂ ಸತ್ಕಾರವನ್ನು ಮಾಡತಕ್ಕದ್ದು.

---

## ಟಿಪ್ಪಣಿ

1 ಕ್ರೇತವು ಗ್ರೀಸಿನ ದಕ್ಷಿಣಕ್ಕಿರುವ ಮೆಡಿಟರನಿಯನ್ ಸಮುದ್ರದಲ್ಲಿನ ಒಂದು ಬೃಹತ್ ದ್ವೀಪವಾಗಿದೆ (ಅ.ಕೃತ್ಯ 27:7-8; 12, 13 ನೋಡಿರಿ).

2 ಕೆಲವು ಬೈಬಲ್ ಪಂಡಿತರು 5ನೇ ವಚನದಲ್ಲಿ ಪ್ರಸ್ತಾಪಿಸಲಾಗಿರುವ ಹಿರಿಯ ಹಾಗೂ ೭ನೇ ವಚನದಲ್ಲಿ ಪ್ರಸ್ತಾಪಿಸಲಾಗಿರುವ ಸಭಾಧ್ಯಕ್ಷ ಎರಡು ಬೇರೆ ಬೇರೆ ವಿಧದ ಸಭಾನಾಯಕನನ್ನು ಸೂಚಿಸುತ್ತವೆ ಎಂದು ನಂಬುತ್ತಾರೆ. ಅವರು ಹೀಗೆ ನಂಬುವದಕ್ಕೆ ಕಾರಣವೇನೆಂದರೆ, ನಿಂದಾರಹೀತನು ಎಂಬ ಪದವು – ಪೌಲನ ಎರಡು ಬೇರೆ ಬೇರೆ ರೀತಿಯ ನಾಯಕನ ಬಗ್ಗೆ, ಅವರಿಬ್ಬರೂ ನಿಂದಾರಹಿತರಾಗಿರಬೇಕು ಎಂದು ಮಾತಾಡುತ್ತಿದ್ದಾನೇನೋ ಎಂಬಂತೆ– 6 ಮತ್ತು 7 ವಚನಗಳೆರಡರಲ್ಲೂ ಕಂಡುಬರುತ್ತದೆ. ಪೌಲನು ಒಂದೇ ಒಂದು ಮಾದರಿಯ ನಾಯಕನ ಬಗ್ಗೆ ಮಾತಾಡುತ್ತಿದ್ದಿದ್ದರೆ ಅವರು "ನಿಂದಾರಹಿತರಾಗಿರಬೇಕು" ಎಂದು ಆತನು ಎರಡು ಸಾರಿ ಪ್ರಸ್ತಾಪಿಸುತ್ತಿರಲಿಲ್ಲ ಎಂದು ಈ ಪಂಡಿತರು ಹೇಳುತ್ತಾರೆ ಹೆಚ್ಚಿನ ಚ ರ್ಚೆಗಾಗಿ, ಸಾಮಾನ್ಯ ಲೇಖನಃ ಸಭಾ ಆಡಳಿತ ನೋಡಿರಿ.

3 ಸ್ವತಃ ದೀಕ್ಷಾಸ್ನಾನದ ಸಂಸ್ಕಾರವೇ ನಮ್ಮನ್ನು ರಕ್ಷಿಸುವದಿಲ್ಲ. ಆದರೆ ನಿಜವಾದ ದೀಕ್ಷಾಸ್ನಾನವು ನಂಬಿಕೆಯಲ್ಲಿ ನಮ್ಮ ಪಾಪಗಳು ತೊಳೆಯಲ್ಪಡುವಿಕೆಯನ್ನು ಸೂಚಿಸುತ್ತದೆ. ಆ ಪಾಪಗಳಲ್ಲಿ ಒಮ್ಮೆ ನಾವು ಸತ್ತವರಾಗಿದ್ದೇವು (ಎಫೆಸ 2:1), ಮತ್ತು ನಿಜವಾದ ದೀಕ್ಷಾಸ್ನಾನವು ನಮಗೆ ಹೊಸಜನ್ಮವನ್ನು ಉಂಟುಮಾಡುತ್ತದೆ. ನಮ್ಮ ಪಾಪಗಳ ತೊಳೆಯಲ್ಪಡುವಿಕೆ ಹಾಗೂ ಆತ್ಮನಿಂದ ನಾವು ಹೊಸದಾಗಿ ಹುಟ್ಟುವಿಕೆ ಯಾವಾಗಲೂ ಜೊತೆ ಜೊತೆಯಾಗಿ ಸಾಗುತ್ತವೆ. ಹೆಚ್ಚಿನ ಚರ್ಚೆಗಾಗಿ, ಪದಪಟ್ಟಿಃ ದೀಕ್ಷಾಸ್ನಾನ ನೋಡಿರಿ.

4 ಇಲ್ಲಿ ನಾವು ತ್ರೈಯೇಕ ದೇವರ ಎಲ್ಲಾ ಮೂವರು ವ್ಯಕ್ತಿಗಳು ಒಟ್ಟಾರೆ ಕಾರ್ಯಮಾಡುವದರ ಮೂಲಕ– ತಂದೆ, ಮಗ ಮತ್ತು ಪವಿತ್ರಾತ್ಮನ ಮೂಲಕ– ರಕ್ಷಿಸಲ್ಪಟ್ಟಿದ್ದೇವೆ ಎಂಬದನ್ನು ಕಾಣುತ್ತೇವೆ. ಹೆಚ್ಚಿನ ಚರ್ಚೆಗಾಗಿ, ಸಾಮಾನ್ಯ ಲೇಖನಗಳುಃ ಯೇಸುಕ್ರಿಸ್ತನು, ಪವಿತ್ರಾತ್ಮನು ನೋಡಿರಿ.

5 ಪೌಲನು ಇಲ್ಲಿ ಅಂಥ ವ್ಯಕ್ತಿಯು ಎರಡು ಎಚ್ಚರಿಕೆಗಳ ನಂತರ ಸಭೆಯಿಂದ ಬಹಿಷ್ಕರಿಸಲ್ಪಡಬೇಕು ಎಂದು ಹೇಳುವದಿಲ್ಲ; ಆದರೆ ಖಂಡಿತವಾಗಿಯೂ ಆತನು ಬೇಧ ಹುಟ್ಟಿಸುವವನಾಗಿ ಮುಂದುವರೆಯುದಾದರೆ ಬಹಿಷ್ಕರಿಸಲ್ಪಡಬೇಕು (1 ಕೊರಿಂಥ 5:11,13 ಮತ್ತು ವ್ಯಾಖ್ಯಾನ ನೋಡಿರಿ).

6 ಅರ್ತೇಮನು ಹೊಸ ಒಡಂಬಡಿಕೆಯಲ್ಲಿ ಇನ್ನಾವ ಕಡೆಯಲ್ಲಿಯೂ ಪ್ರಸ್ತಾಪಿಸಲ್ಪಟ್ಟಿಲ್ಲ.

7 ತುಖಿಕನು ಎಫೆಸ 6:2; ಕೊಲೊಸ್ಸೆ 4:7; 2 ತಿಮೊಥೆ 4:12 ರಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾನೆ.

8 ನಿಕೊಪೋಲಿಯು ಪಶ್ಚಿಮ ಗ್ರೀಸಿನಲ್ಲಿನ ಪಟ್ಟಣವಾಗಿದೆ.

# ಪೌಲನು ಫಿಲೆಮೋನನಿಗೆ ಬರೆದ ಪತ್ರಿಕೆ

## ಪರಿಚಯ

ಪೌಲನು ರೋಮಾಪುರದಲ್ಲಿ ಸೆರೆಯಾಳಾಗಿರುವ ವೇಳೆ ಫಿಲೆಮೋನನಿಗೆ ಈ ಪತ್ರಿಕೆಯನ್ನು ಸುಮಾರು ಕ್ರಿ.ಶಕ 60-61 ರಲ್ಲಿ ಬರೆದನು. ಪೌಲನು ಕೊಲೊಸ್ಸೆದವರಿಗೆ ತಾನು ಬರೆದ ಪತ್ರಿಕೆಯನ್ನು ಕಳುಹಿಸಿದ ವೇಳೆಯಲ್ಲಿಯೇ ಈ ಪತ್ರಿಕೆಯನ್ನೂ ಕಳುಹಿಸಿದನು (ಕೊಲೊಸ್ಸೆಯವರಿಗೆಃ ಪರಿಚಯ ನೋಡಿರಿ).

ಫಿಲೆಮೋನನು ಕೊಲೊಸ್ಸೆ ಪಟ್ಟಣದಲ್ಲಿ ವಾಸಿಸುತ್ತಿದ್ದ ಒಬ್ಬ ಕ್ರೈಸ್ತನಾಗಿದ್ದನು. ಆತನ ಮನೆಯಲ್ಲಿ ಒಂದು "ಗೃಹ ಸಭೆ" ಕೂಡಿಬರುತ್ತಿತ್ತು (ವಚನ 2). ಕೆಲವು ದಿನಗಳ ಹಿಂದೆ ಫಿಲೆಮೋನನ ದಾಸನಾದ ಓನೇಸಿಮನೆಂಬವನು ತನ್ನ ಯಜಮಾನನ ಕೆಲವು ಸರಕುಗಳನ್ನು ಕದ್ದುಕೊಂಡು ಪಲಾಯನ ಗೈದಿದ್ದನು. ಕಾಲಕ್ರಮೇಣವಾಗಿ ಓನೇಸಿಮನು ರೋಮಾಪುರವನ್ನು ತಲುಪಿ ಅಲ್ಲಿ ಆತನು ಪೌಲನನ್ನು ಸಂಧಿಸಿದ್ದನು; ಅದರ ಪಲಿತವಾಗಿ ಓನೇಸಿಮನು ಒಬ್ಬ ವಿಶ್ವಾಸಿಯಾಗಿ ಮಾರ್ಪಟ್ಟಿದ್ದನು.

ಪೌಲನು ಓನೇಸಿಮನನ್ನು ಅವನ ಯಜಮಾನನಾದ ಫಿಲೆಮೋನನ ಬಳಿಗೆ ತಿರಿಗಿ ಕಳುಹಿಸಿಕೊಡಬೇಕೆಂಬದನ್ನು ತಿಳಿದವನಾಗಿದ್ದನು. ಪೌಲನ ದಿನಗಳಲ್ಲಿ, ದಾಸತ್ವದ ಪದ್ಧತಿಯು ರೋಮಾಯ ಸಾಮ್ರಾಜ್ಯದುದ್ದಕ್ಕೂ ಅಸ್ತಿತ್ವದಲ್ಲಿತ್ತು. ರೋಮಾಯ ಕಾನೂನಿಗೆ ಪ್ರಕಾರವಾಗಿ, ದಾಸನು ಅವನ ಯಜಮಾನನ ಸೊತ್ತಾಗಿದ್ದನು. ಆದರೆ ಓನೇಸಿಮನನ್ನು ಪುನಃ ಆತನ ಯಾಜಮಾನನ ಬಳಿಗೆ ಕಳುಹಿಸಿಕೊಡುವದು ಪೌಲನಿಗೆ ಒಂದು ದೊಡ್ಡ ಸಮಸ್ಯೆಯನ್ನು ಸೃಷ್ಟಿಸಿತ್ತು, ಯಾಕೆಂದರೆ, ಕಾನೂನಿನ ಪ್ರಕಾರವಾಗಿ ಪಲಾಯನ ಗೈದು ದಾಸರಿಗೆ ಕಠಿಣವಾದ ಶಿಕ್ಷೆ ನೀಡಲಾಗುತ್ತಿತ್ತು. ಪಲಾಯನ ಮಾಡಿದ ಕೆಲವು ದಾಸರನ್ನು ಮರಣದಂಡನೆಗೂ ಗುರಿಮಾಡಲಾಗಿತ್ತು. ಆದುದರಿಂದ ಪೌಲನು ಫಿಲೆಮೋನನಿಗೆ ಈ ಪತ್ರಿಕೆಯನ್ನು ಬರೆದು ಓನೇಸಿಮನ ಮೇಲೆ ಕರುಣೆಯನ್ನು ತೋರಿ ಅವನನ್ನು ಕ್ಷಮಿಸಬೇಕೆಂದು ಫಿಲೆಮೋನನಿಗೆ ಕೇಳಿಕೊಳ್ಳುತ್ತಾನೆ. ಒಂದು ಕಡೆಯಲ್ಲಿ ಓನೇಸಿಮನು ಪಶ್ಚಾತ್ತಾಪ ಪಟ್ಟು ಸೊತ್ತನ್ನು ಹಿಂತಿರುಗಿಸಬೇಕಾದ ಅಗತ್ಯವಿತ್ತು. ಇನ್ನೊಂದು ಕಡೆಯಲ್ಲಿ ಫಿಲೆಮೋನನು ಓನೇಸಿಮನನ್ನು ತನ್ನ ಹೃದಯ ಪೂರ್ವಕವಾಗಿ ಸಂಪೂರ್ಣ ಕ್ಷಮಿಸಬೇಕಾದ ಅಗತ್ಯವಿತ್ತು. ಅವರಿಬ್ಬರೂ ಈಗ ಕ್ರೈಸ್ತ ಸಹೋದರರಾಗಿದ್ದಾರೆ. ರೋಮಾಯ ಕಾನೂನಿನ ಪ್ರಕಾರವಾಗಿ ಅವರು ಇನ್ನೂ ಯಜಮಾನ ಹಾಗೂ ದಾಸರಾಗಿದ್ದಾಗಲೂ ವಾಸ್ತವದಲ್ಲಿ ಅವರು ಈಗ ಕ್ರಿಸ್ತನಲ್ಲಿ ಸರಿಸಮಾನರಾಗಿದ್ದರು.

ದಾಸತ್ವವು ನಿಜವಾಗಿಯೂ ಒಂದು ದುಷ್ಟ ಹಾಗೂ ಅನ್ಯಾಯಕರ ಪದ್ಧತಿಯಾಗಿತ್ತು. ಈ ಪತ್ರಿಕೆಯಲ್ಲಿ ನಾವು ಈ ಮಹಾದುಷ್ಟತನವನ್ನು ಜಯಿಸುವದರಲ್ಲಿ ಪೌಲನು ಉಪಯೋಗಿಸುವ ವಿಧಾನವನ್ನು ನೋಡುತ್ತೇವೆಃ ಯಜಮಾನ ಹಾಗೂ ದಾಸನ ನಡುವೆ ಪ್ರೀತಿ ಪಶ್ಚಾತ್ತಾಪ ಹಾಗೂ ಕ್ಷಮಾಪಣೆಯ ವಿಧಾನ.

ಪೌಲನು ಓನೇಸಿಮನನ್ನು ರೋಮಾಪುರದಲ್ಲಿ ತನ್ನೊಂದಿಗೆ ಇಟ್ಟುಕೊಂಡಿರಬಹುದಿತ್ತು. ಪೌಲನು ಇತರ ದಾಸರಿಗೆ ತಪ್ಪಿಸಿಕೊಂಡು ಹೋಗುವಂತೆ ಪ್ರೋತ್ಸಾಹ ಹಾಗೂ ಸಹಾಯ ನೀಡಿರಬಹುದಿತ್ತು. ಆತನು ರೋಮಾಯ ಕಾನೂನನ್ನು ಉಲ್ಲಂಘಿಸಿ ದಾಸತ್ವವನ್ನು ಮುಕ್ತವಾಗಿ ವಿರೋಧಿಸಿರಬಹುದಿತ್ತು. ಆದರೆ ಅದು ಅತನ ವಿಧಾನವಾಗಿರಲಿಲ್ಲ. ಪೌಲನ ವಿಧಾನವು ಪ್ರೀತಿಯ ನಿಯಮವನ್ನು ಪಾಲಿಸುವದಾಗಿತ್ತು. ಅತ್ತ್ಯುನ್ನತ ನಿಯಮವು ಮನುಷ್ಯನ ನಿಯಮ (ಕಾನೂನು) ವಲ್ಲ, ಆದರೆ ದೇವರ ನಿಯಮ– ಕ್ರಿಸ್ತನ ನಿಯಮ–, ವಿಶೇಷವಾಗಿ, ಪ್ರೀತಿಯ ನಿಯಮವಾಗಿದೆ (ಮಾರ್ಕ 12:30-31). ಪ್ರೀತಿಯು ಜಗತ್ತಿನಾ ಎಲ್ಲಾ ಕಾನೂನುಗಳಿಗಿಂತ ಬಲಿಷ್ಠವಾದ ಶಕ್ತಿಯಾಗಿದೆ. ಕ್ರಿಸ್ತನ ಪ್ರೀತಿಯಲ್ಲಿ ಯಜಮಾನ ಹಾಗೂ ದಾಸನು ಸರಿಸಮಾನರಾಗುತ್ತಾರೆ; ಅವರು ಒಂದಾಗುತ್ತಾರೆ (ಗಲಾತ್ಯ 3:28).

## ಹೊರರೇಖೆ

ಅ. ಪಿಠೀಕೆ (1:7).
   1. ನಮಸ್ಕಾರಗಳು (1:3).
   2. ಕೃತಜ್ಞತಾ ಸ್ತುತಿ ಹಾಗೂ ಪ್ರಾರ್ಥನೆ (4:7).

ಆ. ಪತ್ರಿಕೆಯ ಮುಖ್ಯ ಭಾಗ (8:25).
   1. ಒನೇಸಿಮನಿಗಾಗಿ ಪೌಲನ ಮನವಿ (8:22).
   2. ಅಂತಿಮ ವಂದನೆಗಳು (23: 25).

## ವಂದನೆಗಳು ಹಾಗೂ ಪ್ರಾರ್ಥನೆ (1:7)

**1-2** ಪೌಲನು ತನ್ನನ್ನು ಸೆರೆಯವನಾಗಿರುವವನು ಎಂದು ಕರೆದುಕೊಳ್ಳುತ್ತಾನೆ, ಯಾಕೆಂದರೆ ಫಿಲೆಮೋನನಿಗೆ ಈ ಪತ್ರಿಕೆಯನ್ನು ಬರೆಯುವ ವೇಳೆ ಆತನು ರೋಮಾಪುರದ ಸೆರೆಮನೆಯಲ್ಲಿ ಹಾಕಲ್ಪಟ್ಟಿದ್ದನು. ಪೌಲನು ಈ ಪತ್ರಿಕೆಯನ್ನು ಬರೆಯುತ್ತಿರುವಾಗ ತಿಮೊಥೆಯನು ಅವನ ಸಂಗಡವಿದ್ದನು (ಫಿಲಿಪ್ಪಿ 1:1 ಕೊಲೊಸ್ಸೆ, 1:1 ನೋಡಿರಿ). ಅಪ್ಫಿಯಳು ಫಿಲೆಮೋನನ ಹೆಂಡತಿಯಾಗಿದ್ದಳೆಂದು ಕೆಲವು ಪಂಡಿತರು ಅಭಿಪ್ರಾಯಪಡುತ್ತಾರೆ ಅರ್ಖಿಪ್ಪನು ಕೊಲೊಸ್ಸೆಯ ಸಭೆಯಲ್ಲಿ ಒಬ್ಬ ನಾಯಕನಾಗಿದ್ದನು (ಕೊಲೊಸ್ಸೆ 4:17).

ಫಿಲೆಮೋನನ ಮನೆಯಲ್ಲಿ ಒಂದು "ಗೃಹ ಸಭೆಯು" ಕೂಡಿಬರುತ್ತಿತ್ತು. ಈ "ಸಭೆ" ಮುಖ್ಯವಾಗಿ ಫಿಲೆಮೋನನ ಮನೆಯವರನ್ನು ಒಳಗೊಂಡಿದ್ದಿರಬಹುದಾಗಿದೆ, ಆದರೆ ಆತನ ಮನೆಯವರನ್ನು ಬಿಟ್ಟು ಹೊರಗಿನ ವಿಶ್ವಾಸಿಗಳು ಸಹ ಸಭೆಗೆ ಬರುತ್ತಿದ್ದ ಸಾಧ್ಯತೆಯಿರುತ್ತದೆ. ಹೊಸ ಒಡಂಬಡಿಕೆಯ ಕಾಲದಲ್ಲಿ ಎರಡು ವಿಧದ ಗೃಹಸಭೆಗಳಿದ್ದವು: ಒಂದೇ ಬೃಹತ್ ಕುಟುಂಬದವರಿಂದ ಕೂಡಿದ್ದ ಸಭೆ ಹಾಗೂ ಹಲವಾರು ಕುಟುಂಬದವರನ್ನು ಒಳಗೊಂಡ ಸಭೆ (ರೋಮ 16:5; 1 ಕೊರಿಂಥ 16:19; ಕೊಲೊಸ್ಸೆ 4:15 ನೋಡಿರಿ).

**3** ರೋಮ 1:7; ಎಫೆಸ 1:2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

**4-5** ರೋಮ 1:8; ಎಫೆಸ 1:15-16; ಕೊಲೊಸ್ಸೆ 1:3-4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

**6-7** ಪೌಲನು ನಿಶ್ಚಯವಾಗಿಯೂ ಈ ಹಿಂದೆ ಫಿಲೆಮೋನನಿಗಾಗಿ ಅನೇಕ ಸಂಗತಿಗಳಿಗೋಸ್ಕರ ಪ್ರಾರ್ಥಿಸಿರುತ್ತಾನೆ. ಆದರೆ ೬ನೇ ವಚನದಲ್ಲಿ, ಪೌಲನು ಒಂದು ಸಂಗತಿಗಾಗಿ ಮಾತ್ರವೇ ಪ್ರಾರ್ಥಿಸುತ್ತಾನೆ: ಅದೇನೆಂದರೆ, ಫಿಲೆಮೋನನು ತನ್ನ ಕ್ರಿಸ್ತನಂಬಿಕೆಯನ್ನು ಹಂಚಿಕೊಳ್ಳುವದರಲ್ಲಿ ಕ್ರಿಯಾಶೀಲನಾಗಿರಬೇಕು –ಅಂದರೆ, ಆತನು ಸಕ್ರಿಯವಾಗಿ ಇತರರಿಗೆ ಕ್ರಿಸ್ತನ ವಿಷಯದಲ್ಲಿ ಸಾಕ್ಷಿನೀಡುವಂತಾಗಬೇಕು.

ನಾವು ನಮ್ಮ ಕ್ರಿಸ್ತನಂಬಿಕೆಯನ್ನು ಹಂಚಿಕೊಳ್ಳುವದರಲ್ಲಿ ಕ್ರಿಯಾಶೀಲರಾಗಿರುವಂತಾಗಬೇಕು ಎಂಬುದು ನಮ್ಮೆಲ್ಲರಿಗೋಸ್ಕರವಾದ ವಿಜ್ಞಾಪನೆಯಾಗಿದೆ. ಕ್ರಿಸ್ತನನ್ನು ಸ್ವೀಕರಿಸಿಕೊಂಡಿರುವ ನಾವು ಆತನನ್ನೂ ನಮಗಾಗಿಯೇ ಇಟ್ಟುಕೊಳ್ಳಬೇಕೆಂದು ಅರ್ಥವಲ್ಲ; ಕ್ರಿಸ್ತನ ಶುಭ ವಾರ್ತೆಯು ಇತರರೊಂದಿಗೆ ಹಂಚಿಕೊಳ್ಳುವದಕ್ಕಾಗಿ ಇರುತ್ತದೆ. ಮತ್ತು ನಾವು ನಮ್ಮ ನಂಬಿಕೆಯನ್ನು– ಸುವಾರ್ತೆಯನ್ನು –ಕ್ರಿಯಾಶೀಲರಾಗಿಯೂ, ಪರಿಣಾಮಕಾರಿಯಾಗಿಯೂ, ನಿರಂತರವಾಗಿಯೂ ಹಂಚಿಕೊಳ್ಳುವವರಾಗಿಬೇಕು. ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕಾದದ್ದೇನೆಂದರೆ: ನಾವು ಕೊನೆಯ ಬಾರಿಗೆ ಯಾವಾಗ ಒಬ್ಬ ಅವಿಶ್ವಾಸಿಯೊಂದಿಗೆ ನಮ್ಮ ನಂಬಿಕೆಯನ್ನು ಹಂಚಿಕೊಂಡಿದ್ದೇವೆ? ನಾವು ನಮ್ಮ ನಂಬಿಕೆಯನ್ನು ಬಚ್ಚಿಟ್ಟುಕೊಳ್ಳುತ್ತೇವೋ? ನಾವು ಮೌನವಾಗಿ ಉಳಿಯುತ್ತೇವೋ? ಸಾಕ್ಷಿನೀಡುವ ಕಾರ್ಯವು ಕೇವಲ ಸಭಾಪಾಲಕರು ಬೋಧಕರಿಗಾಗಿ ಮಾತ್ರವಲ್ಲ ಅದು ಪ್ರತಿಯೊಬ್ಬ ಕ್ರೈಸ್ತನ ಕೆಲಸವಾಗಿದೆ.

## ಒನೇಸಿಮನಿಗಾಗಿ ಪೌಲನ ಮನವಿ (8:25)

**8-9** ಪೌಲನು ಒಬ್ಬ ಅಪೊಸ್ತನಾಗಿದ್ದದ್ದರಿಂದ ಆತನು ಫಿಲೆಮೋನನಿಗೆ ಒನೇಸಿಮನನ್ನು ಕ್ಷಮಿಸಬೇಕೆಂದು ಆಜ್ಞಾಪಿಸಲು ಅಧಿಕಾರ ಹೊಂದಿದ್ದನು. ಹೇಗಿದ್ದರೂ, ಈ ಪತ್ರಿಕೆಯಲ್ಲಿ ಪೌಲನು ಫಿಲೆಮೋನನಿಗೆ ತಾನು ಹೇಳುವದನ್ನು ಮಾಡುವಂತೆ ಒತ್ತಾಯಪಡಿಸುವದಕ್ಕಾಗಿ ತನ್ನ ಅಧಿಕಾರವನ್ನು ಉಪಯೋಗಿಸುವದಿಲ್ಲ; ಬದಲಾಗಿ, ಪೌಲನು ಪ್ರೀತಿಯಿಂದ ಫಿಲೆಮೋನನ ಮನವೊಲಿಸಲು ಪ್ರಯತ್ನಿಸುತ್ತಾನೆ. ಪ್ರೀತಿಗೆ ಪರಿಣಾಮ ಕಾರಿಯಾಗಿರುವದಕ್ಕೆ ಒತ್ತಾಯ (ಶಕ್ತಿಯ) ಅಗತ್ಯತೆಯಿರುವದಿಲ್ಲ. ಪ್ರೀತಿಗಿಂತಲೂ ಬಲಿಷ್ಠವಾದದ್ದು ಇನ್ನೊಂದಿಲ್ಲ (ಫಿಲೆಮೋನನಿಗೆ: ಪರಿಚಯ ನೋಡಿರಿ).

**10- 11** ಪೌಲನು ಬೇಡಿಗಳಲ್ಲಿದ್ದಾಗ ಒನೇಸಿಮನು ಆತನು ಮಗನಾದನು. ಅಂದರೆ, ಪೌಲನು ಸೆರೆಯಲ್ಲಿರುವ ವೇಳೆಯಲ್ಲಿ ಒನೇಸಮನು ಹೇಗೋ ಪೌಲನನ್ನು ಬೇಟಿಯಾದನು ಮತ್ತು ಪೌಲನ ಸಾಕ್ಷಿಯ ಮೂಲಕವಾಗಿ ಆತನು ಕ್ರಿಸ್ತನಲ್ಲಿ ನಂಬಿಕೆಯಿಟ್ಟನು. ಈಗ, ಆತನು ಕ್ರೈಸ್ತನಾಗಿದ್ದರಿಂದ ಒನೇಸಿಮನು ಪೌಲನಿಗೂ ಫಿಲೆಮೋನನಿಗೂ ಪ್ರಯೋಜಕನಾಗಿದ್ದನು[1] ಒನೇಸಿಮನು ಫಿಲೇಮೋನನ ಬಳಿಯಿಂದ ಓಡಿಹೋಗಿದ್ದರಿಂದಾಗಿ ಆತನು ಫಿಲೆಮೋನನಿಗೆ ಅಪ್ರಯೋಜಕನಾಗಿದ್ದನು, ಆದರೆ ಈಗ ಅವನು ಪುನಃ ಪ್ರಯೋಜಕನಾಗಿದ್ದಾನೆ.

**12-14** ಪೌಲನು ವಯಕ್ತಿಕವಾಗಿ ಒನೇಸಿಮನನ್ನು ತನ್ನ ಬಳಿಯಲ್ಲೇ ಇದ್ದು ತನಗೆ ಸಹಾಯಕನಾಗಿರಬೇಕೆಂದು ಬಯಸಿದ್ದನು. ಪೌಲನು ಇತರ ಕೈದಿಗಳಂತೆ ಸುಮ್ಮನೆ ಸೆರೆಯಲ್ಲಿ ಇರಲಿಲ್ಲ; ಆತನ ಸುವಾರ್ತೆಯ ನಿಮಿತ್ತ ಬೇಡಿಗಳಲ್ಲಿದ್ದನು (ವಚನ 13). ಪೌಲನು ಒನೇಸಿಮನ ಅನ್ಯೋನ್ಯತೆ ಹಾಗೂ ಸಹಾಯವನ್ನು ಆಶಿಸಿದನು, ಒನೇಸಿಮನ ಸಹ ಒಬ್ಬ ದಾಸನಾಗಿ ಬೇಡಿಗಳಲ್ಲಿ ಇದ್ದವನಾಗಿದ್ದನು. ಆದರೆ ಪೌಲನು ತನ್ನ ಸ್ವಂತ ಅಭಿಲಾಷೆಗಳನ್ನೂ ಕೊರತೆಗಳನ್ನು ಮರೆತು ಒನೇಸಿಮನನ್ನು ತಿರಿಗಿ ಫಿಲೆಮೋನನ ಬಳಿಗೆ ಕಳುಹಿಸುವದಕ್ಕೆ ಸಿದ್ಧಗೊಂಡಿದ್ದಾನೆ. ಒಂದು ವೇಳೆ ಪೌಲನು ಫಿಲೆಮೋನನ ಸಮ್ಮಿತಿಯಿಲ್ಲದೆ ಒನೇಸಿಮನನ್ನು ತನ್ನ

ಜೊತೆಯಲ್ಲಿ ಇಟ್ಟುಕೊಂಡಿದ್ದರೆ ಫಿಲೆಮೋನನು ಮಾಡಿರಬಹುದಾಗಿದ್ದ ಯಾವದೇ ಉಪಕಾರವು (ಓನೇಸಿಮನನ್ನು ಪೌಲನ ಸಂಗಡ ಉಳಿದುಕೊಳ್ಳಲು ಅನುಮತಿಸುವ ವಿಷಯದಲ್ಲಿ) ಬಲತ್ಕಾರದಿಂದಾಗಿರುತ್ತಿತ್ತೇ ಹೊರತು ಮನಃ ಪೂರ್ವಕವಾಗಿ ಅಲ್ಲ (ವಚನ 14).

**15- 16** ದೇವರು ಯಾವಾಗಲೂ ಕೆಟ್ಟದ್ದನ್ನು ಒಳ್ಳೇದರಿಂದ ಜಯಿಸುವದಕ್ಕೆ ಶಕ್ತನಾಗಿರುತ್ತಾನೆ. ಓನೇಸಿಮನು ಪಲಾಯನ ಮಾಡಿದ್ದನು. ಫಿಲೆಮೋನನು ನಷ್ಟವನ್ನು ಅನುಭವಿಸಿದ್ದನು. ಆದರೆ ಈಗ ಓನೇಸಿಮನು ರಕ್ಷಣೆಯನ್ನು ಪಡೆದುಕೊಂಡಿದ್ದನು, ಮತ್ತು ಫಿಲೆಮೋನನು ಕರ್ತನಲ್ಲಿ ಒಬ್ಬ ನೂತನ ಸಹೋದರನನ್ನು ಗಳಿಸಿಕೊಂಡಿದ್ದನು.

**17-18** ಪೌಲನು ಓನೇಸಿಮನ ಪರವಾಗಿ ಫಿಲೆಮೋನನನ್ನು ಎಷ್ಟು ಬಲವಾಗಿ ವಿಜ್ಞಾಪಿಸಿಕೊಳ್ಳುತ್ತಾನೆಂಬದನ್ನು ಗಮನಿಸಿರಿ. ಪೌಲನು ಈ ಪಲಾಯನ ಗೈದ ಬಡದಾಸನನ್ನು ಎಷ್ಟು ಪ್ರೀತಿಸುತ್ತಾನೆಂಬದನ್ನು ನೋಡಿರಿ! ಅಲ್ಲದೆ ಫಿಲೆಮೋನನು ಓನೇಸಿಮನ ದುರ್ನಡತೆಯ ಕಾರಣದಿಂದ ಏನೇನಷ್ಟವನ್ನು ಅನುಭವಿಸಿದ್ದರೂ ಪೌಲನು ಅದನ್ನೆಲ್ಲಾ ತೀರಿಸುವದಕ್ಕಾಗಿಯೂ ಸಿದ್ಧನಾಗಿದ್ದಾನೆ.

**19** ಫಿಲೆಮೋನನು ತಾನು ಸಹ ರಕ್ಷಣೆಯ ವಿಷಯದಲ್ಲಿ ಪೌಲನ ಸಾಕ್ಷಿಗೆ ಸಾಲದಲ್ಲಿರುತ್ತಾನೆಂಬದನ್ನು ಜ್ಞಾಪಿಸಿಕೊಳ್ಳಲಿ ಯಾಕೆಂದರೆ ಅವನು ಸಹ ಓನೇಸಿಮನಂತೆ ಸುವಾರ್ತೆಯನ್ನು ಪ್ರಥಮ ಬಾರಿಗೆ ಪೌಲನಿಂದ ಕೇಳಿದ್ದನು. ಫಿಲೆಮೋನನು ದೇವರಿಂದ ಅಂಥ ಕೃಪೆಯನ್ನು– ಅಂಥ ಮಹಾಕರುಣೆಯನ್ನು– ಸ್ವೀಕರಿಸಿರುವದರಿಂದ, ಈಗ ಅವನು ಓನೇಸಿಮನಿಗೆ ಕರುಣೆಯನ್ನು ತೋರಿಸಬೇಕು (ಮತ್ತಾಯ 18:23-25 ನೋಡಿರಿ).

**20** ಪೌಲನು ಫಿಲೆಮೋನನಿಂದ ಯಾವ ಪ್ರಯೋಜನವನ್ನು ಕೇಳಿಕೊಳ್ಳುತ್ತಾನೆ? ಪೌಲನು ಕೇಳಿಕೊಳ್ಳುವ ಪರಯೋಜನವೇನೆಂದರೆ, ಫಿಲೆಮೋನನು ಅವನ ಹೃದಯವನ್ನು ಸಂತೋಷ (ಉಪಶಮನ) ಪಡಿಸಬೇಕೆಂಬದೇ. ಹೇಗೆ? ಪೌಲನ ಆತ್ಮೀಕ ಮಗನಾದ ಓನೇಸಿಮನನ್ನು ಪ್ರೀತಿಸಿ ಕ್ಷಮೆ ನೀಡುವದರ ಮೂಲಕವೇ.

**21** ಫಿಲೆಮೋನನು ಈ ವಿಷಯದಲ್ಲಿ ಕ್ರಿಸ್ತನಿಗೆ ವಿಧೇಯನಾಗುವನು ಎಂಬ ಭರವಸೆಯು ಪೌಲನಿಗಿತ್ತು. ಅದನ್ನು ಹೇಳಿದ ಬಳಿಕ, ಫಿಲೆಮೋನನು ತಾನು ಹೇಳಿದ್ದಕ್ಕಿಂತಲೂ ಹೆಚ್ಚಾಗಿ ಮಾಡವನೆಂದು ಹೇಳುವದರ ಮೂಲಕ ಪೌಲನು ತನ್ನ ಭರವಸೆಯನ್ನು ವ್ಯಕ್ತಪಡಿಸುತ್ತಾನೆ. ಹೀಗೆ ಹೇಳುವದರಲ್ಲಿ ಪೌಲನು ನಿಜವಾಗಿಯೂ ಫಿಲೆಮೋನನನ್ನು ಪ್ರಶಂಸಿಸುತ್ತಿದ್ದಾನೆ. ಈ ವಿಷಯದಲ್ಲಿ ನಾವು ಪೌಲನಿಂದ ಒಂದು ಸಂಗತಿಯು ಅದನ್ನು ನೆರವೇರಿಸುವಂತೆ ಮಾಡುವದಕ್ಕೆ ಉತ್ತಮ ಮಾರ್ಗವೆಂದರೆ ಆತನನ್ನು ಪ್ರಶಂಸಿಸುವದೇ! ಆದರೆ, ಖಂಡಿತವಾಗಿಯೂ ಪ್ರಶಂಸೆಯು ಕೇವಲ ಸುಳ್ಳುಮುಖಸ್ತುತಿಯಿಂದ ಕೂಡಿರದೆ ಸತ್ಯವುಳ್ಳದ್ದಾಗಿರತಕ್ಕದ್ದು.

**22-24** ಈ ವಚನಗಳಲ್ಲಿ ಪ್ರಸ್ತಾಪಿಸಲಾಗಿರುವ ಜನರೆಲ್ಲರೂ ಪೌಲನು ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿಯೂ ಪ್ರಸ್ತಾಪಿಸಲ್ಪಟ್ಟಿದ್ದಾರೆ (ಕೊಲೊಸ್ಸೆ 4:10-12, 14).

**25** 1 ಕೊರಿಂಥ 16:23; ಫಿಲಿಪ್ಪಿ 4:23 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

---

## ಟಿಪ್ಪಣಿ

1 ಗ್ರೀಕ್ ಭಾಷೆಯಲ್ಲಿ ಓನೇಸಿಮನು ಎಂಬ ಹೆಸರಿನ ಅರ್ಥವು ಪ್ರಯೋಜಕನು.

# ಇಬ್ರಿಯರಿಗೆ ಬರೆದ ಪತ್ರಿಕೆ

**ಪರಿಚಯ**

ಇಬ್ರಿಯರಿಗೆ ಈ ಪತ್ರಿಕೆಯನ್ನೂ ಯಾರು ಬರೆದರೆಂಬದು ತಿಳಿದುಬಂದಿರುವದಿಲ್ಲ. ಪೌಲನು ತನ್ನ ಪತ್ರಿಕೆಗಳನ್ನೆಲ್ಲಾ ತನ್ನ ಸ್ವಂತ ಹೆಸರನ್ನು ನೀಡುತ್ತಾ ಪ್ರಾರಂಭಿಸುವಂತೆ ಇಬ್ರಿಯರಿಗೆ ಬರೆದ ಗ್ರಂಥಕರ್ತನು ಪತ್ರಿಕೆಯಲ್ಲಿ ಎಲ್ಲಿಯೂ ತನ್ನ ಹೆಸರನ್ನು ಬರೆದಿರುವದಿಲ್ಲ. ಇಬ್ರಿಯರಿಗೆ 2:3 ಕ್ಕನುಸಾರವಾಗಿ ಈ ಪತ್ರಿಕೆಯನ್ನು ಬರಹಗಾರನು ಸುವಾರ್ತೆಯನ್ನು (ಕ್ರಿಸ್ತನ ಮಾತುಗಳನ್ನು) ಕೇಳಿದವರ ಮೂಲಕ ತಿಳಿದುಕೊಂಡನು– ಅಂದರೆ, ಅಪೋಸ್ತಲರಿಂದ ಕಲಿತುಕೊಂಡನು. ಪೌಲನು ಈ ಪತ್ರಿಕೆಯ ಬರಹಗಾರನಾಗಿರಲಾರನು ಯಾಕೆಂದರೆ ಅತನು ಆವಚನವನ್ನು ಬರೆದಿರಲಿಕ್ಕೆ ಸಾಧ್ಯವೇ ಇಲ್ಲ! ಪೌಲನು ಸುವಾರ್ತೆಯನ್ನು ನೇರವಾಗಿ ಕ್ರಿಸ್ತನಿಂದಲೇ ಪಡೆದುಕೊಂಡಿದ್ದನು (ಅ.ಕೃತ್ಯ 9:4-6).

ಈ ಪತ್ರಿಕೆಯು ಸುಮಾರು ಕ್ರಿ.ಶಕ 60 ಮತ್ತು 70ರ ನಡುವೆ ಬರೆಯಲ್ಪಟ್ಟಿತ್ತು. ಈ ಪತ್ರಿಕೆಯು ಯಾರನ್ನುದ್ದೇಶಿಸಿ ಬರೆಯಲ್ಪಟ್ಟಿತೋ ಆ "ಇಬ್ರಿಯರು" ಯಾರೆಂಬದು ತಿಳಿದುಬಂದಿರುವದಿಲ್ಲ.[1] ಅವರು ಅರಾಮಿಕ ಭಾಷೆಯನ್ನಾಡುವ ಯೆಹೂದ್ಯಕ್ರೈಸ್ತರಾಗಿದ್ದರೆಂದು ಬಹುಪಾಲು ಬೈಬಲ್ ಪಂಡಿತರು ನಂಬುತ್ತಾರೆ. ಆದರೆ ಅವರು ಯಾವ ನಗರವಾದವರಾಗಿದ್ದರು ಎಂಬದು ಯಾರಿಗೂ ತಿಳಿಯದು. ಆದರೆ ನಾವು ಈ ಪತ್ರಿಕೆಯ ಬರಹಗಾರನು ಯಾರೆಂಬದನ್ನಾಗಲಿ ಅಥವಾ ಅದು ಯಾರಿಗೆ ಬರೆಯಲ್ಪಟ್ಟಿತ್ತೆಂಬದನ್ನಾಗಲಿ ಅರಿಯವೆಂಬದಕ್ಕಾಗಿ ಕಳವಳಪಡುವ ಅಗತ್ಯವಿಲ್ಲ. ಆದರೆ ನಮಗೆ ತಿಳಿದಿರುವ ಒಂದು ಸಂಗತಿಯುಂಟು– ಎಲ್ಲಕ್ಕಿಂತಲೂ ಅತಿ ಪ್ರಮುಖ್ಯವಾದ ಸಂಗತಿಃ ಈ ಪತ್ರಿಕೆಯ ನಿಜವಾದ ಗ್ರಂಥಕರ್ತನು ದೇವರೇ, ಮತ್ತು ಇದು ನಮಗೋಸ್ಕರ ಬರೆಯಲ್ಪಟ್ಟಿತು.

ಗ್ರಂಥ ಕರ್ತನು ಈ ಪತ್ರಿಕೆಯನ್ನು ಇಬ್ರಿಯರಿಗೆ– ಈ ಯೆಹೂದಿಕ್ರೈಸ್ತರಿಗೆ ಯಾಕೆ ಬರೆದನು? ಈ ಕ್ರೈಸ್ತರು– ಅವರು ಯಾರೇ ಆಗಿದ್ದರೂ ಸರಿಯೇ– ಇತ್ತೀಚೆಗೆ ವಿವಿಧ ರೀತಿಯ ಶೋಧನೆಗಳಲ್ಲಿ ಬೀಳಲಾರಂಭಿಸಿದ್ದರು, ಮತ್ತು ಗ್ರಂಥಕರ್ತನು ಈ ಶೋಧನೆಗಳಲ್ಲಿ ಬೀಳದಿರುವಂತೆ ಅವರನ್ನು ಪ್ರಭೋದಿಸಲು ಬರೆಯುತ್ತಿದ್ದಾನೆ. ಯಾವ ಶೋಧನೆಗಳು? ಈ ಇಬ್ರಿಯರು ಮಂದಮತಿಗಳು (ಸೋಮಾರಿಗಳು) ಆಗಲಾರಂಭಿಸಿದ್ದರು (ಇಬ್ರಿಯ 6:12) ಅವರು ಮನಗುಂದಿದವರಾಗಿ ಬೇಸರಗೊಳ್ಳಲು ಆರಂಭಿಸಿದ್ದರು (ಇಬ್ರಿಯ 12:3). ಅವರ ಪ್ರಾರಂಭಿಕ ಉತ್ಸಾಹ ಹಾಗೂ ವೈರಾಗ್ಯವು ತಣ್ಣಗಾಗಲಾರಂಭಿಸಿತ್ತು. (ಇಬ್ರಿಯ 3:14; 10:23, 35), ಅವರು ತಮ್ಮ ನಂಬಿಕೆಯಲ್ಲಿ ಪರಿಪೂರ್ಣರಾಗಿ ಬೆಳೆದಿರಲಿಲ್ಲ (ಇಬ್ರಿಯ 5:12-14), ಅವರಲ್ಲಿ ಕೆಲವರು ಸಭೆಯಾಗಿ ಕೂಡಿಬರುವದನ್ನು ನಿಲ್ಲಿಸಿದ್ದರು (ಇಬ್ರಿಯ 10:25). ಅವರು ತಮ್ಮ ಸ್ವಂತ ಕ್ರೈಸ್ತ ನಾಯಕರನ್ನು ವಿರೋಧಿಸುತ್ತಿದದರು (ಇಬ್ರಿಯ 13:7) ಅವರಲ್ಲಿ ಕೆಲವರು ತಮ್ಮ ನಂಬಿಕೆಯನ್ನು ಸಂಪೂರ್ಣವಾಗಿ ಬಿಟ್ಟುಬಿಡುವದರಲ್ಲಿಯೂ ಇದ್ದರು (ಇಬ್ರಿಯ 3:12; 10:26).

ನಾವು ಈ ಇಬ್ರಿಯರ ಅತ್ಮೀಕ ಸ್ಥಿತಿಯ ಕುರಿತು ಯೋಚಿಸುತ್ತಿರುವಾಗ ಹಾಗೆ ನಾವು ನಮ್ಮನ್ನು ಸಹ ಪರೀಕ್ಷಿಸಿಕೊಳ್ಳೋಣ. ನಾವು ಯಾವ ವಿಧದಲ್ಲಿಯಾದರೂ ಅವರಂತಾಗಿದ್ದೇವೋ? ಯಾಕೆಂದರೆ ನಾವು ಸ್ಥಿತಿಯಲ್ಲಿರುವದಾದರೆ ಖಂಡಿತವಾಗಿಯೂ ಈ ಪತ್ರಿಕೆ ನಮಗೋಸ್ಕರವಾಗಿ ಬರೆಯಲ್ಪಟ್ಟಿದೆ!

ಕ್ಲುಪ್ತವಾಗಿ ಹೇಳುವದಾದರೆ, ಇಬ್ರಿಯ ಕ್ರೈಸ್ತರು ಒಂದು ಅತಿ ದೊಡ್ಡದಾದ ಶೋಧನೆಯಲ್ಲಿ ಬೀಳಲಿಕ್ಕಿದ್ದರು. ಅವರು ಇನ್ನೇನು ತಮ್ಮ ನೂತನ ಕ್ರೈಸ್ತ ನಂಬಿಕೆಯನ್ನು ತೊರೆದು ತಮ್ಮ ಹಿಂದಿನ ಯೆಹೂದ್ಯ ಧರ್ಮದೆಡೆಗೆ ಹಿಂದಿರುಗುವದಕ್ಕಿದ್ದರು.

ಹೀಗಿರುವದರಿಂದ, ಈ ಪತ್ರಿಕೆಯು ಬರಹಗಾರನು ನಾಲ್ಕು ಉದ್ದೇಶಗಳನ್ನಿಟ್ಟುಕೊಂಡು ಬರೆಯುತ್ತಾನೆ. ಮೊದಲನೆಯದಾಗಿ, ಆತನು ಈ ಕ್ರೈಸ್ತರಿಗೆ ಕ್ರಿಸ್ತನ ಮೂಲಕ ಮಾತ್ರವೇ ದೊರೆಯುವ ರಕ್ಷಣೆ ಹಾಗೂ ನಿತ್ಯಜೀವದ

ಬಗ್ಗೆ ಜ್ಞಾಪಕಪಡಿಸುತ್ತಾನೆ. ಎರಡನೆಯದಾಗಿ, ಅತನು ಅವರಿಗೆ ನಂಬಿಕೆಯ ಮೂಲಕ ಕ್ರಿಸ್ತನಲ್ಲಿ ದೊರೆಯುವಂಥ ಅಸಂಖ್ಯವಾದ ಆಶೀರ್ವಾದಗಳ ಬಗ್ಗೆ ಜ್ಞಾಪಿಸುವದಕ್ಕಾಗಿ ಬರೆಯುತ್ತಾನೆ. ಮೂರನೆಯದಾಗಿ, ಆತನು ಪರಲೋಕವನ್ನು ಪ್ರವೇಶಿಸುವದಕ್ಕಾಗಿ ವಿಶ್ವಾಸಿಗಳು ಕ್ರಿಸ್ತನ ಹಾಗೆಯೇ ಶ್ರಮೆಯನ್ನನುಭವಿಸುವದನ್ನು ನಿರೀಕ್ಷಿಸಬೇಕು ಎಂದು ಅವರಿಗೆ ಹೇಳುವದಕ್ಕಾಗಿ ಬರೆಯುತ್ತಾನೆ. ಮತ್ತು ನಾಲ್ಕನೆಯದಾಗಿ, ಗ್ರಂಥಕರ್ತನು ಇಬ್ರಿಯ ಕ್ರೈಸ್ತರಿಗೆ ಅವರು ತಮ್ಮ ಕ್ರಿಸ್ತನಂಬಿಕೆಯನ್ನು ಬಿಟ್ಟು ತೊಲಗಿ ಹೋಗುವದಾದರೆ ದೇವರ ಭಯಂಕರ ನ್ಯಾಯತೀರ್ಪು ಅವರ ಮೇಲೆ ಬರುವದೆಂದು ಎಚ್ಚರಿಸುವದಕ್ಕಾಗಿ ಬರೆಯುತ್ತಾನೆ:

## ಹೊರ ರೇಖೆ

ಅ. ಕ್ರಿಸ್ತನ ಉತ್ಕೃಷ್ಟತೆ (1:1-7:28).
   1. ಪೀಠಿಕೆ (1:1-4).
   2. ಕ್ರಿಸ್ತನು ದೇವರಿಗಿಂತಲೂ ಶ್ರೇಷ್ಠನು (1:5-14).
   3. ಲಕ್ಷ್ಯ ಕೊಡಬೇಕಾಗಿರುವ ಒಂದು ಎಚ್ಚರಿಕೆ (2:1-4)
   4. ಕ್ರಿಸ್ತನು ಪರಿಪೂರ್ಣಮನುಷ್ಯನು (2:5-18).
   5. ಕ್ರಿಸ್ತನು ಮೋಶೆಗಿಂತ ಶ್ರೇಷ್ಠನು (3:1-6)
   6. ಕ್ರಿಸ್ತನು ವಾಗ್ದಾನಮಾಡುವ ವಿಶ್ರಾಂತಿ ( 3:7-4:11)
   7. ಕ್ರಿಸ್ತನು ಶ್ರೇಷ್ಠಮಹಾಯಾಜಕನು (4:12-5:10)
   8. ವಿಶ್ವಾಸಭ್ರಷ್ಟತೆಯ ವಿರುದ್ಧ ಒಂದು ಎಚ್ಚರಿಕೆ (5:11-6:20)
   9. ಕ್ರಿಸ್ತನ ಯಾಜಕತ್ವವು ಮೇಲ್ಕಿಜೆದೇಕನ ಯಾಜಕತ್ವಗಿಂತಲೂ ಶ್ರೇಷ್ಠ ವಾದದ್ದು (7:1-28)

ಆ. ಒಂದು ನೂತನ ಹಾಗೂ ಉತ್ತಮವಾದ ಒಡಂಬಡಿಕೆ (8: 1-10:18)
   1. ಹೊಸ ಒಡಂಬಡಿಕೆ (8:1-13)
   2. ನೂತನ ಪವಿತ್ರಸ್ಥಳ ಹಾಗೂ ಕ್ರಿಸ್ತನ ರಕ್ತ (9:1-28)
   3. ಒಂದೇ ಸಾರಿ ಎಲ್ಲರಿಗಾಗಿ ಕ್ರಿಸ್ತನ ಯಜ್ಞ (10:1-18)

ಇ. ನಂಬಿಕೆಯ ಜೀವಿತ (10:19-13:25)
   1. ನಂಬಿಕೆಯ ಜೀವಿತದ ಚಿತ್ರಣ (10:19-25)
   2. ಹಿಂಜರಿದು ಬಿದ್ದು ಹೋಗುವವರ ಅಂತ್ಯ ಸ್ಥಿತಿ (10:26-39)
   3. ನಂಬಿಕೆಯ ಮನುಷ್ಯರು (11:1-40)
   4. ಕ್ರಿಸ್ತನು ನಮಗೆ ಮಾದರಿ (12:1-3)
   5. ಶಿಕ್ಷೆ (12:4-13)
   6. ಹೊಸ ಒಡಂಬಡಿಕೆಯ ಅಡಿಯಲ್ಲಿ ಕ್ರೈಸ್ತೀಯ ಜೀವಿತ (12:14-29)
   7. ದೈನಂದಿನ ಕ್ರೈಸ್ತೀಯ ಜೀವಿತ (13:1-17)
   8. ಮುಕ್ತಾಯ (13:18-25)

# ಅಧ್ಯಾಯ - 1

## ದೇವಕುಮಾರನ ಉತ್ಕೃಷ್ಟತೆ (1:1-4)

1 ಪುರಾತನಕಾಲದಲ್ಲಿ– ಅಂದರೆ, ಕ್ರಿಸ್ತನು ಭೂಲೋಕಕ್ಕೆ ಬರುವ ಮುಂಚೆ –ದೇವರು ನಮ್ಮ ಪಿತೃಗಳ ಸಂಗಡ (ಯೆಹೂದ್ಯರು) ಹಳೆ ಒಡಂಬಡಿಕೆಯ ಪ್ರವಾದಿಗಳ ಬಾಯಿಂದ ಮಾತಾಡಿದನು.

2 .......ಆದರೆ ದೇವರು ಈ ಅಂತ್ಯದಿನಗಳಲ್ಲಿ ನಮ್ಮ ಸಂಗಡ ತನ್ನ ಮಗನ (ಕ್ರಿಸ್ತನ) ಮುಖಾಂತರ ಮಾತಾಡಿದ್ದಾನೆ. ಈ ಅಂತ್ಯ ದಿನಗಳು ಕ್ರಿಸ್ತನು ಭೂಲೋಕಕ್ಕೆ ಬಂದಂದಿನಿಂದ ಇರುವ ದಿನಗಳಾಗಿವೆ.

ಈ ಪತ್ರಿಕೆಯ ಬರಹಗಾರನು ಇಲ್ಲಿ ಪ್ರವಾದಿಗಳ ಮಾತುಗಳು ಮಗನ ಮಾತುಗಳಿಗಿಂತ ಕಡಿಮೆ ಸತ್ಯ ಅಥವಾ ಕಡಿಮೆಯೋಗ್ಯತೆ ಉಳ್ಳವುಗಳು ಎಂದು ಹೇಳುತ್ತಿಲ್ಲ. ಆದರೆ ಒಂದು ವ್ಯತ್ಯಾಸವಿರುತ್ತದೆ. ಏನೆಂದರೆ, ಹಳೆ ಒಡಂಬಡಿಕೆಯ ಪ್ರವಾದಿಗಳು ಕ್ರಿಸ್ತ ನೆಡೆಗೆ ಮಾರ್ಗ ತೋರಿಸಿದರು; ಅವರು ಕ್ರಿಸ್ತನ ರಾಜ್ಯದ ಬರೋಣವನ್ನು ಕುರಿತು ಪ್ರವಾದಿಸಿದರು. ಆದರೆ ಕ್ರಿಸ್ತನು ಸ್ವತಃ ಆ ಪ್ರವಾದನೆಗಳ ನೆರವೇರಿಕೆಯಾಗಿದ್ದನು. ಹೊಸ ಒಡಂಬಡಿಕೆಯು ಹಳೆ ಒಡಂಬಡಿಕೆಯ ವಾಗ್ದಾನಗಳ ಮತ್ತು ಪ್ರವಾದನೆಗಳ ನೆರವೇರಿಕೆಯಾಗಿದೆ (2 ಕೊರಿಂಥ 1:20 ನೋಡಿರಿ).

ದೇವಕುಮಾರನಾದ ಕ್ರಿಸ್ತನು ಯಾವ ರೀತಿಯ ವ್ಯಕ್ತಿಯಾಗಿದ್ದಾನೆ? ಮೊದಲನೆಯದಾಗಿ, ಆತನು ಎಲ್ಲಕ್ಕೂ ಬಾಧ್ಯನಾಗಿದ್ದಾನೆ. ಎಲ್ಲಾ ಬಲವೂ ಅಧಿಕಾರವು ಕ್ರಿಸ್ತನಿಗೆ ಸೇರಿರುತ್ತದೆ (ಮತ್ತಾಯ 28:18). ದೇವರು ಕ್ರಿಸ್ತನ ಮೂಲಕವೇ ಜಗತ್ತನ್ನುಂಟುಮಾಡಿದನು (ಯೋಹಾನ 1:3; ಕೊಲೊಸ್ಸೆ 1:16 ನೋಡಿರಿ). ಜಗದುತ್ಪತ್ತಿಗೆ ಮುಂಚಿನಿಂದಲೂ ಯೇಸು ಕ್ರಿಸ್ತನ ಮೂಲಕ ಉಂಟುಮಾಡಿದನು.

3 ಕ್ರಿಸ್ತನು ದೇವರ ಪ್ರಭಾವದ ಪ್ರಕಾಶವಾಗಿದ್ದಾನೆ. ಸೂರ್ಯನ ಪ್ರಕಾಶವು ಭೂಮಿಯ ಮೇಲೆ ಹೊಳೆಯುವ ಪ್ರಕಾರವೇ ಕ್ರಿಸ್ತನ ಪ್ರಕಾಶವು ಮನುಷ್ಯರ ಹೃದಯಗಳಲ್ಲಿ ಹೊಳೆಯುತ್ತದೆ.

ಕ್ರಿಸ್ತನು ದೇವರ ತತ್ವದ ಮೂರ್ತಿಯೂ ಆಗಿದ್ದಾನೆ. ಕ್ರಿಸ್ತನು ದೇವರ ಸ್ವರೂಪ ಆಗಿದ್ದಾನೆ (2 ಕೊರಿಂಥ 4:4; ಕೊಲೊಸ್ಸೆ 1:15). ಆತನು ದೇವರ ಸಾಕಾರ ಮೂರ್ತಿಯಾಗಿದ್ದಾನೆ. ನಾವು ಕ್ರಿಸ್ತನನ್ನು ನಂಬಿಕೆಯ ಮೂಲಕ ಆತ್ಮೀಕವಾಗಿ ತಿಳಿದವರೂ ಆಗುತ್ತೇವೆ (ಯೋಹಾನ 1:18; 14:7-9 ನೋಡಿರಿ). ಕ್ರಿಸ್ತನಲ್ಲಿಯೇ ದೇವರ ಸರ್ವಸಂಪೂರ್ಣತೆಯ ಅವತರಿಸಿ ವಾಸಮಾಡುತ್ತದೆ (ಕೊಲೊಸ್ಸೆ 2:9).

ಕ್ರಿಸ್ತನು ತನ್ನ ಶಕ್ತಿಯ ವಾಕ್ಯದಿಂದ ಎಲ್ಲವನ್ನೂ ಪರಿಪಾಲಿಸುತ್ತಾನೆ....... ಆತನಲ್ಲಿ ಸಮಸ್ತವೂ ಒಂದಾಗುವದು (ಕೊಲೊಸ್ಸೆ 1:17). ಕ್ರಿಸ್ತನು ಜಗತ್ತಿನ ಸೃಷ್ಟಿಕರ್ತನು ಮಾತ್ರವಲ್ಲ; ಆತನು ಜಗತ್ತನ್ನು ಪರಿಪಾಲಿಸುವವನೂ ಆಗಿದ್ದಾನೆ. ಆತನೇ ಜಗತ್ತನ್ನು ಒಂದು ಗೂಡಿಸುತ್ತಾನೆ; ನಕ್ಷತ್ರಗಳನ್ನೂ ಗ್ರಹಗಳನ್ನೂ ಅವುಗಳ ಗತಿಗಳಲ್ಲಿ ಹಿಡಿದಿರುವಾತನು ಆತನೇ. ಇದೆಲ್ಲವನ್ನೂ ಆತನು ತನ್ನ ಶಕ್ತಿಯ ವಾಕ್ಯದಿಂದ ಮಾಡುತ್ತಾನೆ. ಕ್ರಿಸ್ತನು ಮಾತಾಡುವ ವಾಕ್ಯವು ದೇವರ ವಾಕ್ಯವಾಗಿದೆ. ಬೈಬಲಿನಲ್ಲಿ ದೇವರ ವಾಕ್ಯ ಎಂದರೆ ಒಟ್ಟಾಗಿ ವಾಕ್ಯ ಮತ್ತು ಕ್ರಿಯೆಗಳೆಟಡೂ ಎಂದು ಅರ್ಥವಾಗುತ್ತದೆ. ದೇವರು ಸುಮ್ಮನೆ ಮಾತಾಡುವದಿಲ್ಲ; ಆತನು ಮಾತಾಡುವಾಗಲೆಲ್ಲಾ ಕ್ರಿಯೆಯನ್ನೂ ಮಾಡುತ್ತಾನೆ. ಆತನು ಹೇಳುವದೆಲ್ಲವನ್ನೂ ನೆರವೇರಿಸುತ್ತಾನೆ. ದೇವರು "ಬೆಳಕಾಗಲಿ" ಅಂದನು, ಆಗ ಬೆಳಕಾಯಿತು (ಆದಿಕಾಂಡ 1:3).

ಕ್ರಿಸ್ತನು ಪಾಪವಿಶುದ್ಧಿಮಾಡಿದನು. ನಾವು ನಮ್ಮ ಪಾಪಗಳಿಂದ ಕ್ಷಮಿಸಲ್ಪಟ್ಟು ಶುದ್ಧರಾಗುವದಕ್ಕಾಗಿ ಕ್ರಿಸ್ತನು ತನ್ನನ್ನು ನಮಗೋಸ್ಕರ ಯಜ್ಞವಾಗಿ ಅರ್ಪಿಸಿಕೊಂಡನು. ಆತನು ನಮ್ಮ ಪಾಪಗಳಿಗಾಗಿನ ದಂಡನೆಯನ್ನು ತಾನು ಹೊತ್ತುಕೊಂಡನು (ಮಾರ್ಕ 10:45 ಮತ್ತು ವ್ಯಾಖ್ಯಾನ ನೋಡಿರಿ). ಕ್ರಿಸ್ತನು ನಮಗೋಸ್ಕರ ಪ್ರಾಯಶ್ಚಿತ್ತ ಯಜ್ಞವಾದನು (ರೋಮ 3:25). ಕ್ರಿಸ್ತನ ಮೂಲಕ– ಆತನ ರಕ್ತ, ಆತನ ಯಜ್ಞದ ಮೂಲಕ– ಆತನಲ್ಲಿ ವಿಶ್ವಾಸಿಗಳು ದೇವರ ಸೃಷ್ಟಿಯಲ್ಲಿ ಶುದ್ಧರೂ ನೀತಿವಂತರೂ ಎಂದು ನಿರ್ಣಯಿಸಲ್ಪಡುತ್ತಾರೆ (ರೋಮ 3:24; 5:1, 9 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಕ್ರಿಸ್ತನು ಕೊಲ್ಲಲ್ಪಟ್ಟ ಮೂರು ದಿವಸಗಳ ಬಳಿಕ ಸತ್ತವರೊಳಗಿಂದ ಎದ್ದು ಬಂದನು ಮತ್ತು ಈಗ ಆತನು ಉನ್ನತ ಲೋಕದೊಳಗೆ (ಪರಲೋಕದಲ್ಲಿ). ದೇವರ ಬಲಗಡೆಯಲ್ಲಿ ಅಸನಾರೂಢನಾಗಿರುತ್ತಾನೆ. (ಕೀರ್ತನೆಗಳು 110:1; ಲೂಕ 22:69; ಎಫೆಸ 1:20-21 ನೋಡಿರಿ).

ಇಬ್ರಿಯರಿಗೆ ಪತ್ರಿಕೆಯ ಮೊದಲ ಮೂರು ವಚನಗಳಿಂದ, ಕ್ರಿಸ್ತನು ಎಲ್ಲಾ ಪ್ರವಾದಿಗಳಿಗಿಂತ ಅತಿಶ್ರೇಷ್ಠ "ಪ್ರವಾದಿ" ಯಾಗಿದ್ದು ಆತನ ಮೂಲಕ ದೇವರು ಲೋಕಕ್ಕೆ ತನ್ನ ಅಂತಿಮ ಮಾತನ್ನು ಆಡಿದ್ದಾನೆಂಬದನ್ನು ನಾವು ನೋಡಬಹುದು. ಅಷ್ಟು ಮಾತ್ರವಲ್ಲ ಕ್ರಿಸ್ತನು ಎಲ್ಲಾ ಯಾಜಕರಿಗಿಂತಲೂ ಅತಿ ಶ್ರೇಷ್ಠ "ಯಾಜಕ" ಆಗಿದ್ದು ಆತನು ಸ್ವತಃ ತನ್ನನ್ನು ಯಜ್ಞವಾಗಿ ಅರ್ಪಿಸಿದ್ದರ ಮೂಲಕ ದೇವ ಜನರು –ಅಂದರೆ, ವಿಶ್ವಾಸಿಗಳಾದ ನಾವು– ದೇವರ ದೃಷ್ಟಿಯಲ್ಲಿ ಶುದ್ಧರೂ ನೀತಿವಂತರೂ ಎಂದು ನಿರ್ಣಯಿಸಲ್ಪಟ್ಟಿದ್ದೇವೆ. ಮತ್ತು ಕ್ರಿಸ್ತನು ಒಬ್ಬ ಪ್ರವಾದಿ ಮತ್ತು ಯಾಜಕ ಮಾತ್ರವಲ್ಲ; ಆತನು ಪರಲೋಕದಲ್ಲಿ ದೇವರ ಬಲಗಡೆಯೊಳಗೆ ತನ್ನ ಸಿಂಹಾಸನದ ಮೇಲೆ ಕುಳಿತಿರುವ ರಾಜಾಧಿರಾಜನೂ ಆಗಿದ್ದಾನೆ. ಈ ಕ್ರಿಸ್ತನ ಕುರಿತಾಗಿಯೇ ಈ ಪತ್ರಿಕೆಯ ಬರಹಗಾರನು ಈ ಪ್ರಾರಂಭದ ವಚನಗಳಲ್ಲಿ ಬರೆಯುತ್ತಾನೆ. ಈ ಕ್ರಿಸ್ತನಲ್ಲಿಯೇ ಈ ಇಬ್ರಿಯ ಕ್ರೈಸ್ತರು ತಮ್ಮ ನಂಬಿಕೆಯನ್ನು ಇಟ್ಟಿರುತ್ತಾರೆ[2].

**4** ಕ್ರಿಸ್ತನು ದೇವದೂತರಿಗಿಂತಲೂ ಉತ್ತಮನಾದವನು ಸಹ ಆಗಿದ್ದಾನೆ. ಕ್ರಿಸ್ತನ ಹೆಸರು ಎಲ್ಲಾ ಹೆಸರುಗಳಿಗಿಂತ ಉನ್ನತವಾಗಿದೆ (ಫಿಲಿಪ್ಪಿ 2:9-11)..

## ಕ್ರಿಸ್ತನು ದೇವದೂತರಿಗಿಂತಲೂ ಶ್ರೇಷ್ಠನು (1:5-14)

**5** ಈ ಪತ್ರಿಕೆಯ ಬರಹಗಾರನು 5-13 ವಚನಗಳಲ್ಲಿ ಕ್ರಿಸ್ತನು ನಿಜವಾಗಿಯೂ ದೇವದೂತರಿಗಿಂತಲೂ ಶ್ರೇಷ್ಠನಾಗಿದ್ದಾನೆಂಬದನ್ನು ತನ್ನ ವಾಚಕರಿಗಾಗಿ ತೋರಿಸುವದಕ್ಕೆ ಹಳೆ ಒಡಂಬಡಿಕೆಯಿಂದ ಏಳು ವಾಕ್ಯಭಾಗಗಳನ್ನು ಉಲ್ಲೇಖಿಸುತ್ತಾನೆ. ಈ ಎಲ್ಲಾ ಹಳೆ ಒಡಂಬಡಿಕೆಯ ಉಲ್ಲೇಖಗಳಲ್ಲಿ ಮಾತಾಡುತ್ತಿರುವ ದೇವರೇ ಎಂಬದನ್ನು ಗಮನಿಸಿರಿ. ಇಡೀ ಹಳೆ ಒಡಂಬಡಿಕೆಯು (ಅಲ್ಲದೆ ಹೊಸ ಒಡಂಬಡಿಕೆಯೂ) ದೇವರ ಸ್ವಂತ ವಾಕ್ಯವಾಗಿದೆ ಎಂಬುದನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳೋಣ (ವಚನ 1) ಬೈಬಲಿನ ಮುಖಾಂತರವಾಗಿ ದೇವರು ಇಂದಿಗೂ ನಮ್ಮ ಸಂಗಡ ಮಾತಾಡುತ್ತಿರುತ್ತಾನೆ.

ದೇವರು ಯಾವದೇ ದೇವದೂತನಿಗಾದರೂ ಎಂದಿಗೂ "ನನಗೆ ನೀನು ಮಗನು" ಎಂದು ಹೇಳಲಿಲ್ಲ. ದೇವರಿಗೆ ಏಕೈಕ ಕುಮಾರ ನಿದ್ದಾನೆ ಆತನು ಯೇಸುಕ್ರಿಸ್ತನೇ ಯೇಸು ಯಾವಾಗಲೂ ದೇವರ ಮಗನಾಗಿರುತ್ತಾನೆ (ಯೋಹಾನ 1:1-2, 14 ನೋಡಿರಿ).

ಈ ವಚನದಲ್ಲಿ ಬರಹಗಾರನು ಕೀರ್ತನೆಗಳು 2:7 ಮತ್ತು 2 ಸಮುವೇಲ 7:14ರಿಂದ ಉಲ್ಲೇಖಿಸುತ್ತಾನೆ. ಈ ಹಳೆ ಒಡಂಬಡಿಕೆಯ ವಚನಗಳು ಕ್ರಿಸ್ತನ ವಿಷಯವಾಗಿ ಬರೆಯಲ್ಪಟ್ಟಿರುವ ಪ್ರವಾದನೆಗಳಾಗಿವೆ.

**6** ಕ್ರಿಸ್ತನು ದೇವರ ಚೊಚ್ಚಲಮಗನು ಕ್ರಿಸ್ತನು ಎರಡು ವಿಧಗಳಲ್ಲಿ ಚೊಚ್ಚಲಮಗನು. ಮೊದಲನೆಯದಾಗಿ, ಆತನು ದೇವರ ಒಬ್ಬನೇ ಮಗನು (ಯೋಹಾನ 1:14). ಎರಡನೆಯದಾಗಿ, ಆತನು ಸತ್ತವರೊಳಗಿಂದ ಎದ್ದು ಬಂದ ಪ್ರಥಮ ವ್ಯಕ್ತಿಯಾಗಿದ್ದಾನೆ; ಆದದರಿಂದ, ಆತನು ಪು ನರುತ್ಥಾನಗೊಳ್ಳುವವರಲ್ಲೆಲ್ಲಾ ಚೊಚ್ಚಲ ಮಗನು– ಪ್ರಥಮ ಫಲ ಆಗಿದ್ದಾನೆ (ರೋಮ 8:29; 1 ಕೊರಿಂಥ 1:20 ನೋಡಿರಿ).

ಈ ವಚನದಲ್ಲಿ ಗ್ರಂಥಕರ್ತನು ಧರ್ಮೋಪದೇಶಕಾಂಡ ೩೨:೪೩ ಮತ್ತು ಕೀರ್ತನೆಗಳು 97:7ರಿಂದ ಉಲ್ಲೇಖಿಸುತ್ತಾನೆ. ದೇವರ ದೂತರೆಲ್ಲರೂ ಆತನಿಗೆ (ಕ್ರಿಸ್ತನಿಗೆ) ಅಡ್ಡಬೀಳಲಿ. ದೇವದೂತರು ಕ್ರಿಸ್ತನನ್ನು ಆರಾಧಿಸುತ್ತಾರಾದ್ದರಿಂದ ಕ್ರಿಸ್ತನು ದೇವದೂತರಿಗಿಂತಲೂ ಶ್ರೇಷ್ಠನಾಗಿರಬೇಕೆಂದು ನಾವು ತಿಳಿಯುತ್ತೇವೆ.

**7** ಇಲ್ಲಿ ಗ್ರಂಥಕರ್ತನು ಕೀರ್ತನೆಗಳು 104:4ರಿಂದ ಉಲ್ಲೇಖಿಸುತ್ತಾನೆ. ದೇವದೂತರು ದೇವರಿಗೆ ಗಾಳಿಗಳಂತೆಯೂ ಅಗ್ನಿ ಜ್ವಾಲೆಗಳಂತೆಯೂ ಸೇವೆಮಾಡುತ್ತಾರೆ. ಅಂದರೆ, ದೇವರು ಅವರಿಗೆ ವಿಶೇಷವಾದ ಕೆಲಸವನ್ನು ಮಾಡುವದಕ್ಕೆ ನೀಡುವಾಗ ಅವರು ಪ್ರತ್ಯಕ್ಷರಾಗುತ್ತಾರೆ, ಮತ್ತು ಅದನ್ನು ನೆರವೇರಿಸುವ ಬಳಿಕ ಅವರು– ಗಾಳಿ ಮತ್ತು ಅಗ್ನಿಯು ಒಂದು ಕ್ಷಣ ಬಂದು ಮರುಕ್ಷಣ ಹೊರಟು ಹೋಗುವಂತೆಯೇ– ಅದೃಶ್ಯವಾಗುತ್ತಾರೆ. ದೇವದೂತರಿಗೆ ಯಾವ ಸ್ವಾತಂತ್ರತೆಯಿರುವದಿಲ್ಲ; ಅವರು ಸೇವಕರು ಮಾತ್ರವೇ ಆಗಿದ್ದಾರೆ.

**8-9** ಆದರೆ ಕ್ರಿಸ್ತನು ದೇವರ ಸೇವಕನು ಮಾತ್ರವಲ್ಲ; ಆತನು ದೇವಕುಮಾರನೂ ಆಗಿದ್ದಾನೆ. ಕ್ರಿಸ್ತನು ದೇವದೂತನೊಬ್ಬನಂತೆ ಬಂದು ಹೋಗುವವನಲ್ಲ. ಕ್ರಿಸ್ತನ ಸಿಂಹಾಸನವು –ಅಂದರೆ, ಆತನ ರಾಜ್ಯವು – ಯುಗಯುಗಾಂತರಗಳಲ್ಲಿಯೂ ಇರುವದು (ವಚನ 8). ಕ್ರಿಸ್ತನು ಇಲ್ಲಿ ದೇವರೇ ಎಂದು ಕರೆಯಲ್ಪಟ್ಟಿರುವದನ್ನು ಗಮನಿಸಿರಿ ಮತ್ತು ನೀತಿಯು ಆತನ ರಾಜ್ಯದ ರಾಜದಂಡ ಅಥವಾ ಆಳ್ವಿಕೆ ಆಗಿರುತ್ತ.ದೆ. ಅರಸರುಗಳೊಳಗೆ ಕ್ರಿಸ್ತನು ಮಾತ್ರವೇ ಸಂಪೂರ್ಣ ನೀತಿಯಿಂದ ಆಳುತ್ತಾನೆ. ಈ 8-9 ವಚನಗಳಲ್ಲಿ ಗ್ರಂಥಕರ್ತನು ಕೀರ್ತನೆಗಳು 45:6-7ರಿಂದ ಉಲ್ಲೇಖಿಸುತ್ತಾನೆ.

ದೇವರು ಕ್ರಿಸ್ತನನ್ನು ಆತನ ಜೊತೆಗಾರರಿಗಿಂತ –ಅಂದರೆ, ವಿಶ್ವಾಸಿಗಳಿಗಿಂತ– ಉನ್ನತ ಸ್ಥಾನಕ್ಕೆ ಏರಿಸಿ ಪರಮಾನಂದ ತೈಲದಿಂದ ಅಭಿಷೇಕಿಸಿದ್ದಾನೆ (ವಚನ 9). ಪರಮಾನಂದ ತೈಲವು ಪವಿತ್ರಾತ್ಮನ ಆನಂದವಾಗಿದೆ (ಇಬ್ರಿಯ 12:2 ನೋಡಿರಿ). ಆದದರಿಂದ, ದೇವರು ಕ್ರಿಸ್ತನಿಗೆ ಪವಿತ್ರಾತ್ಮನನ್ನು ಅಳತೆಯಿಲ್ಲದೆ ದಯಪಾಲಿಸಿದ್ದಾನೆ ಎಂದು ಈ ವಚನದ ಅರ್ಥವಾಗುತ್ತದೆ(ಯೋಹಾನ 3:34; ಅ.ಕೃತ್ಯ 10:38). ಹೇಗಿದ್ದರೂ, ವಿಶ್ವಾಸಿಗಳಾದ ನಾವು ಪವಿತ್ರಾತ್ಮನನ್ನು ಅಳತೆಗನುಗುಣವಾಗಿ ಹೊಂದಿರುತ್ತೇವೆ (ರೋಮ 12:3; ಎಫೆಸ 4:7).

**10-12** ಈ ವಚನಗಳಲ್ಲಿ ಗ್ರಂಥಕರ್ತನು ಕೀರ್ತನೆಗಳು 102:25-27 ವಚನಗಳಿಂದ ಉಲ್ಲೇಕಿಸುತ್ತಾನೆ. ದೇವರು ಇಲ್ಲಿ ಕ್ರಿಸ್ತನನ್ನು ಕರ್ತನೇ ಎಂದು ಕರೆಯುವದನ್ನು ಗಮನಿಸಿರಿ. ಕ್ರಿಸ್ತನು ಭೂಪರಲೋಕಗಳ ನಿರ್ಮಾಣಿಕನಾಗಿದ್ದಾನೆ. ಭೂಪರಲೋಕಗಳು ನಾಶವಾಗುವವು ಆದರೆ ಕ್ರಿಸ್ತನು ಶಾಶ್ವತವಾಗಿರುವನು (ವಚನ 11); ಆತನು ಏಕರೀತಿಯಾಗರುವನು (ವಚನ 12).

**13** ಈ ವಚನವು ಕೀರ್ತನೆಗಳು 110:1 ರಿಂದ ಉಲ್ಲೇಖಿಸಲ್ಪಟ್ಟಿದೆ (1 ಕೊರಿಂಥ 15:25; ಎಫೆಸ 1:20-22, ಇಬ್ರಿಯ 10:12-13 ನೋಡಿರಿ). ದೇವರು ಎಂದಿಗೂ ಒಬ್ಬ ದೂತನಿಗೆ, "ನನ್ನ ಬಲಗಡೆಯಲ್ಲಿ ಕೂತುಕೊಂಡಿರು" ಎಂದು ಹೇಳಲಿಲ್ಲ. ಆ ಸ್ಥಳವು ಕ್ರಿಸ್ತನಿಗಾಗಿ ಮೀಸಲಿರುತ್ತದೆ. ಕ್ರಿಸ್ತನುದೇವರ ಬಲಗಡೆಯಲ್ಲಿ ತನ್ನ ಸಿಂಹಾಸದ ಮೇಲೆ ಕೂತು ಕೊಂಡವನಾಗಿ ಈಗ ಪೂರ್ಣ ಅಧಿಕಾರ ಹಾಗೂ ಬಲದಿಂದ ದೊರೆತನ ಮಾಡುತ್ತಾನೆ.

14 ದೇವಕುಮಾರನಾದ ಕ್ರಿಸ್ತನು ಸಿಂಹಾಸನದ ಮೇಲೆ ಆಳುತ್ತಾನೆ. ದೇವದೂತರು ಊಳಿಗದ ಆತ್ಮಗಳು. ಈ ದೇವದೂತರು ರಕ್ಷಣೆಯನ್ನು ಬಾಧ್ಯವಾಗಿ ಹೊಂದಬೇಕಾಗಿರುವವರ –ಅಂದರೆ, ಕ್ರಿಸ್ತನ ವಿಶ್ವಾಸಿಗಳ –ಸೇವೆಗೋಸ್ಕರ ಕಳುಹಿಸಲ್ಪಟ್ಟಿರುತ್ತಾರೆ. ದೇವದೂತರು ದೇವರ ಸನ್ನಿಧಿಯಲ್ಲಿ ನಿಲ್ಲುತ್ತಾರೆ, ಆದರೆ ಅವರು ಕ್ರಿಸ್ತನ ದೂತರಷ್ಟೇ ಆಗಿದ್ದಾರೆ (ಲೂಕ 1:19ನೋಡಿರಿ). ಕ್ರಿಸ್ತನು ಶ್ರೇಷ್ಠನು.

ವಿಶ್ವಾಸಿಗಳು ರಕ್ಷಣೆಯನ್ನು ಬಾಧ್ಯವಾಗಿ ಹೊಂದಬೇಕಾಗಿರುವವರಾಗಿದ್ದಾರೆ. ಕ್ರಿಸ್ತನಲ್ಲಿ ನಂಬಿಕೆಯಿಟ್ಟಿರುವವರು ಈಗಾಗಲೇ ರಕ್ಷಣೆಯನ್ನು ಹೊಂದಿದವರಾಗಿದ್ದಾರೆ–ಆದರೆ, ಲೋಕಾಂತ್ಯದಲ್ಲಿ ಕ್ರಿಸ್ತನು ತಿರಿಗಿ ಬರುವಾಗ ಮಾತ್ರವೇ ನಾವು ನಮ್ಮ ಪೂರ್ಣ ರಕ್ಷಣೆಯ ಬಾಧ್ಯತೆಯನ್ನು ಪಡೆದುಕೊಳ್ಳುವೆವು (ಸಾಮಾನ್ಯ ಲೇಖನಃ ರಕ್ಷಣೆಯ ಮಾರ್ಗ ನೋಡಿರಿ).

---

## ಅಧ್ಯಾಯ - 2

### ಲಕ್ಷ್ಯ ಕೊಡಬೇಕಾದ ಒಂದು ಎಚ್ಚರಿಕೆ (2:1-4)

1 ನಾವು ಬೈಬಲ್ ಅಭ್ಯಾಸಿಸಬೇಕಾದ ಅಗತ್ಯವೇಕೆ? ನಾವು ಬೋಧಕರ ಹಾಗೂ ಸಭಾ ಪಾಲಕರ ಮಾತುಗಳಿಗೆ ಹೆಚ್ಚಾಗಿ ಲಕ್ಷ್ಯಕೊಡುವವರಾಗಿರಬೇಕಾದ ಅವಶ್ಯಕತೆ ಏಕೆ ಇರುತ್ತದೆ? ಯಾಕೆಂದರೆ ನಾವು ಕೇಳಿದ ಸಂಗತಿಗಳಿಗೆ –ಅಂದರೆ, ದೇವರ ವಾಕ್ಯಕ್ಕೆ– ಲಕ್ಷ್ಯಕೊಡದಿದ್ದರೆ ಸತ್ಯದಿಂದ ತಪ್ಪಿಹೋಗುವೆವು. ನಾವು ಕ್ರಿಸ್ತನಿಂದ ತಪ್ಪಿಹೋಗುವೆವು; ನಾವು ಆತನಲ್ಲಿಟ್ಟ ಸತಯ ನಂಬಿಕೆಯಿಂದ ವಿಮುಖರಾಗುವೆವು. ಮತ್ತು ನಾವು ಕ್ರಿಸ್ತನಿಂದ ವಿಮುಖರಾಗುವದಾದರೆ– ಈ ಅತ್ಯಂತ ವಿಶೇಷ ರಕ್ಷಣೆಯನ್ನು ಅಲಕ್ಷ್ಯಮಾಡಿದರೆ –ನಾವು ದೇವರ ಕೋಪಾಗ್ನಿ ಹಾಗೂ ನ್ಯಾಯ ತೀರ್ಪಿನಿಂದ ತಪ್ಪಿಸಿಕೊಳ್ಳಲಾರೆವು (ವಚನ 3). ಕ್ರಿಸ್ತನಲ್ಲಿರುವ ನಂಬಿಕೆಯ ಮೂಲಕ ರಕ್ಷಣೆಯನ್ನು ಹೊರತು, ಸುವಾರ್ತೆಯನ್ನು ಬಿಟ್ಟು ದೇವರು ಕ್ರಿಸ್ತನನ್ನು ನಂಬದವರಿಗೆ ನೀಡುವ ನ್ಯಾಯವಾದ ದಂಡನೆಯಿಂದ ತಪ್ಪಿಸಿಕೊಳ್ಳುವದಕ್ಕೆ ಇನ್ನಾವ ಮಾರ್ಗವೂ ಇರುವದಿಲ್ಲ (ವಚನ 2). ಆದದರಿಂದ, ನಾವು ಕೇಳಿದ ಸಂಗತಿಗಳಿಗೆ ಹೆಚ್ಚಾಗಿ ಲಕ್ಷ್ಯ ಕೊಡುವವರಾಗಿರಬೇಕು!.

2 ನಾವು ಕೇಳಿದ ಸಂಗತಿಯು ಕ್ರಿಸ್ತನ ಸುವಾರ್ತೆಯಾಗಿದೆ. ಒಂದು ವೇಳೆ ದೇವದೂತರ ಮೂಲಕ ಹೇಳಲ್ಪಟ್ಟವಾಕ್ಯವು –ಅಂದರೆ, ಹಳೆ ಒಡಂಬಡಿಕೆ ಅಥವಾ ಯೆಹೂದ್ಯ ಧರ್ಮಶಾಸ್ತ್ರ– ಸ್ಥಿರವಾಗಿ ಇರುವದಾದರೆ ಕ್ರಿಸ್ತನ ಸುವಾರ್ತೆಯು– ಹೊಸ ಒಡಂಬಡಿಕೆಯು– ಇನ್ನೂ ಹೆಚ್ಚು ಸ್ಥಿರವಾದದ್ದು. ಯಾಕೆಂದರೆ ಹಳೆ ಒಡಂಬಡಿಕೆಯು
ದೇವದೂತರ ಮೂಲಕ ಹೇಳಲ್ಪಟ್ಟಿತು (ಇಬ್ರಿಯ 1:2) ಮತ್ತು 1ನೇ ಅಧ್ಯಾಯದಲ್ಲಿ ಇಬ್ರಿಯರಿಗೆ ಗ್ರಂಥಕರ್ತನು ದೇವದೂತರಿಗಿಂತಲೂ ಕ್ರಿಸ್ತನು ಶ್ರೇಷ್ಠನಾಗಿದ್ದಾನೆಂಬದನ್ನು ನಮಗೆ ತೋರಿಸಿಕೊಟ್ಟಿದ್ದಾನೆ. ಹಾಗಾದರೆ ಈ ಕಾರಣದಿಂದ, ಹೊಸ ಒಡಂಬಡಿಕೆಯು ಹಳೆ ಒಡಂಬಡಿಕೆಗಿಂತಲೂ ಶ್ರೇಷ್ಠವಾಗಿದೆ. ಯೆಹೂದ್ಯರು ಯೆಹೂದ್ಯ ಧರ್ಮಶಾಸ್ತ್ರಕ್ಕೆ ಮೀರಿ ಮಾಡಿದ ಪ್ರತಿಯೊಂದು ಅವಿಧೇಯತ್ವಕ್ಕೂ ನ್ಯಾಯವಾದ ಪ್ರತಿಫಲ (ದಂಡನೆ) ಹೊಂದಿದರು. ಮನುಷ್ಯರು ಹಳೆ ಒಡಂಬಡಿಕೆಯ ಧರ್ಮಶಾಸ್ತ್ರದ ಅತಿ ಚಿಕ್ಕ ನಿಯಮ ಅಥವಾ ಆಜ್ಞೆಗೆ ಅವಿಧೇಯರಾಗಿದ್ದಕ್ಕಾಗಿ ದಂಡಿಸಲ್ಪಟ್ಟಿದ್ದಾದರೆ ಖಂಡಿತವಾಗಿಯೂ ಅವರು ಸ್ವತಃ ದೇವಕುಮಾರನಾದ ಕ್ರಿಸ್ತನು ನುಡಿದ ಸುವಾರ್ತೆಯನ್ನು ತಿರಸ್ಕರಿಸುವದಕ್ಕಾಗಿ ದಂಡಿಸಲ್ಪಡುವರು.

3 ಈ ವಿಶೇಷ ರಕ್ಷಣೆಯು .......ಕರ್ತನಿಂದ ಮೊದಲು ಹೇಳಲ್ಪಟ್ಟಿತು, ಅಂದರೆ, ಕ್ರಿಸ್ತನಿಂದ ತಿಳಿಸಲ್ಪಟ್ಟಿತು. ಹಳೆ ಒಡಂಬಡಿಕೆಯ ಪ್ರವಾದಿಗಳು ಕ್ರಿಸ್ತನ ಬರೋಣದ ಬಗ್ಗೆ ಪ್ರವಾದಿಸಿದರು. ಆದರೆ ಕ್ರಿಸ್ತನು ಸ್ವತಃ ಅವರ ಪ್ರವಾದನೆಗಳು ನೆರವೇರಿದವು ಎಂದು ಘೋಷಿಸಿದನು (ಮಾರ್ಕ 1:14-15; ಲೂಕ 4:17-21 ನೋಡಿರಿ). ಕ್ರಿಸ್ತನು ಹಳೆ ಒಡಂಬಡಿಕೆಯ ಪ್ರವಾದನೆಗಳ ನೇರವೇರಿಕೆಯನ್ನು ಪ್ರಕಟಿಸಿದ್ದು ಮಾತ್ರವಲ್ಲ; ಆತನು ಅವುಗಳ ನೆರವೇರಿಕೆಯಾಗಿದ್ದನು.

ಕ್ರಿಸ್ತನು ಪ್ರಕಟಿಸಿದ ಈ ರಕ್ಷಣೆಯು ಕ್ರಿಸ್ತನ ಮಾತುಗಳನ್ನು ಕೇಳಿದವರಾದ ಅಪೊಸ್ತಲರಿಂದ ಸ್ಥಿರಪಡಿಸಲ್ಪಟ್ಟಿತು. ಈ ರಕ್ಷಣೆಯ ಸುವಾರ್ತೆಯು ಒಂದು ವದಂತಿಯಾಗಲಿ ಅಥವಾ ಮನುಷ್ಯಕಲ್ಪಿತ ಕಥೆಯಾಗಲಿ ಅಲ್ಲ. ಈ ಪತ್ರಿಕೆಯ ಬರಹಗಾರನೂ ವಾಚಕರೂ ಕ್ರಿಸ್ತನನ್ನು ತಮ್ಮ ಸ್ವಂತ ಕಿವಿಯಾರೆ ಕೇಳಿ ಕಣ್ಣಾರೆ ಕಂಡ ಜನರಿಂದ (ಅಪೊಸ್ತಲರು) ಸುವಾರ್ತೆಯನ್ನು ಕೇಳಿದ್ದರು.

4 ಅಪೋಸ್ತಲರು ಮಾತ್ರವೇ ತಮ್ಮ ಬೋಧನೆಯ ಮೂಲಕ ಸುವಾರ್ತೆಯ ವಿಷಯದಲ್ಲಿ ಸಾಕ್ಷಿನೀಡಲಿಲ್ಲ; ದೇವರು ಸಹ ಸ್ವತಃ ಸೂಚಕ ಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ನಾನಾ ವಿಧವಾದ ಮಹಾತ್ಕಾರ್ಯಗಳನ್ನು ನಡಿಸಿ ಪವಿತ್ರಾತ್ಮ ವರಗಳನ್ನು ತನ್ನ ಚಿತ್ತಾನುಸಾರವಾಗಿ ಅನುಗ್ರಹಿಸಿ ಅದಕ್ಕೆ ಸಾಕ್ಷಿಕೊಟ್ಟನು ಅಥವಾ ನಿರೂಪಿಸಿದನು (ಅ.ಕೃತ್ಯ 2:22, 43; 1 ಕೊರಿಂಥ 12:7-11 ನೋಡಿರಿ). ಹಾಗಾದರೆ, ಯಾವನಾದರೂ ಇಂಥ ಮಹಾವಿಶೇಷ ರಕ್ಷಣೆಯನ್ನು ಅಲಕ್ಷ್ಯಿಸುವದಕ್ಕೆ ಹೇಗೆ ಸಾಧ್ಯ?

ಅಪೊಸ್ತಲರ ಕಾಲದಲ್ಲಿ ಈ ಸೂಚಕಕಾರ್ಯ ಹಾಗೂ ಅದ್ಭುತ ಕಾರ್ಯಗಳ ಬಗ್ಗೆ ಎಲ್ಲರಿಗೂ ಗೊತ್ತಿತ್ತು. ಅನೇಕ ಜನರು ಪ್ರತ್ಯಕ್ಷವಾಗಿ ದೇವರ ಬಲವಾದ ಕಾರ್ಯಗಳನ್ನು ನೋಡಿದ್ದರು. ಆದರೆ ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ.

ದೇವರು ಈಗಿನ ಕಾಲದಲ್ಲಿಯೂ ಈ ಬಲವಾದ ಕಾರ್ಯಗಳನ್ನು ಮಾಡುತ್ತಾ ಈ ಆತ್ಮನ ವರಗಳನ್ನು ವಿತರಿಸುತ್ತಿದ್ದಾನೋ? ಈ ಪ್ರಶ್ನೆಗೆ ಉತ್ತರವು ಹೌದು ಎಂದಾಗಿರುತ್ತದೆ. ಇಂದು ಜಗತ್ತಿನಲ್ಲೆಲ್ಲಾ ದೇವರು ವಿಶ್ವಾಸಿಗಳ ಪ್ರಾರ್ಥನೆಗಳಿಗೆ ಉತ್ತರವಾಗಿ ಅಧ್ಭುತಗಳನ್ನು ನಡಿಸುತ್ತಿದ್ದಾನೆ, ರೋಗಿಗಳನ್ನು ವಾಸಿಮಾಡುತ್ತಿದ್ದಾನೆ, ಮತ್ತು ತನ್ನ ಪವಿತ್ರಾತ್ಮನ ಬಲದ ಮೂಲಕ ಲಕ್ಷಾಂತರ ಜನರಿಗೆ ನೂತನ ಆತ್ಮೀಕ ಜೀವಿತವನ್ನು ಕೊಡುತ್ತಿದ್ದಾನೆ. ಈ ದಿನ ದೇವರ ಮಹಾಬಲವು ಕಾರ್ಯಮಾಡವದರ ಬಗ್ಗೆ ಸಂಶಯ ಪಡದಿರೋಣ, ಅದು ಯಾವಾಗಲೂ ಕಾರ್ಯಮಾಡುತ್ತಲೇ ಇದೆ. ಬದಲಾಗಿ, ನಂಬಿಕೆಯಲ್ಲಿ ಅಭಿವೃದ್ಧಿ ಹೊಂದುತ್ತಾ ಹೋಗೋಣ. ಈ ಇಬ್ರಿಯರಿಗೆ ಗ್ರಂಥಕರ್ತನು ಬರೆದಿರುವ ಪ್ರಕಾರವೇ ನಮಗೂ ಬರೆಯುವದೇನೆಂದರೆಃ ನಾವು ಕೇಳಿದ ಸಂಗತಿಗಳಿಗೆ ತಪ್ಪಿಹೋದೇವೆಂದು ಭಯಪಟ್ಟು ಹೆಚ್ಚಾಗಿ ಲಕ್ಷ್ಯಕೊಡುವವರಾಗಿರಬೇಕು (ವಚನ 1).

## ಕ್ರಿಸ್ತನು ತನ್ನ ಸಹೋದರರಂತೆ ಮಾಡಲ್ಪಟ್ಟನು (2:5-18)

5 ಈ ಪ್ರಸ್ತುತ ಜಗತ್ತು ದೇವದೂತರ ಆಡಳಿತ ಅಥವಾ ಹತೋಟಿಗೆ ಅಧೀನಮಾಡಲ್ಪಟ್ಟಿದೆ, ಅವರಲ್ಲಿ ಕೆಲವರು ಒಳ್ಳೇ ದೇವದೂತರು, ಹಾಗೂ ಇನ್ನು ಕೆಲವರು ಕೆಟ್ಟವರಾಗಿದ್ದಾರೆ (ದಾನಿಯೇಲ 10:20-21; 12:1; ಯೋಹಾನ 16:11; ಎಫೆಸ 6:12 ನೋಡಿರಿ).

ಆದರೆ ಮುಂದಣ ಜಗತ್ತು (ಸಾಮ್ರಾಜ್ಯ) ದೇವದೂತರಿಗೆ ಅಧೀನವಾಗುವದಿಲ್ಲ; ಅದು ದೇವಕುಮಾರನಾದ ಕ್ರಿಸ್ತನಿಗೆ ಅಧೀನಮಾಡಲ್ಪಡುತ್ತದೆ. ಈ ಮುಂದಣ ಸಾಮ್ರಾಜ್ಯವು ದೇವರ ರಾಜ್ಯವಾಗಿದ್ದು, ಅದನ್ನು ಕ್ರಿಸ್ತನು ದೇವರ ಬಲಗಡೆಯಲ್ಲಿನ ತನ್ನ ಸಿಂಹಾಸನದಿಂದ ಆಳುವನು. ಒಂದು ವಿಧದಲ್ಲಿ, ಕ್ರಿಸ್ತನು ಮೊದಲನೆಯ ಸಾರಿ ಭೂಲೋಕಕ್ಕೆ ಬಂದಾಗ ದೇವರ ರಾಜ್ಯವು ಪ್ರಾರಂಭವಾಯಿತು (ಮತ್ತಾಯ 12:28; ಲೂಕ 17:20-21 ನೋಡಿರಿ). ಆದರೆ ಯೇಸು ಈ ಪ್ರಸ್ತುತ ಲೋಕದ ಅಂತ್ಯದಲ್ಲಿ ತಿರಿಗಿ ಬರುವಾಗ ಮಾತ್ರವೇ ದೇವರ ರಾಜ್ಯವು ಪೂರ್ಣವಾಗಿ ಸ್ಥಾಪಿಸಲ್ಪಡುವದು.

6-8 ಯೇಸುಕ್ರಿಸ್ತನು ದೇವಕುಮಾರನಾಗಿ ಎಲ್ಲಾ ದೇವದೂತರಿಗಿಂತಲೂ ಶ್ರೇಷ್ಠನಾಗಿದ್ದಾಗ್ಯು ದೇವರು ಸ್ವಲ್ಪ ಕಾಲ ಆತನನ್ನು ದೇವದೂತರಿಗಿಂತ ಕಡಿಮೆಯಾಗಿ ಮಾಡಿದನು (ವಚನ 7). ಯೇಸು ಮೊದಲನೆಯ ಸಾರಿ ಭೂಲೋಕಕ್ಕೆ ಬಂದಾಗ ಆತನು ಮನುಷ್ಯನಾಗಿ– ಅಂದರೆ, ದೇವದೂತನಿಗಿಂತ ಕಡಿಮೆಯಾಗಿ– ಬಂದನು. ಅದರ ತರುವಾಯ, ದೇವರು ಪ್ರಭಾವವನ್ನೂ ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟನು; ಅಂದರೆ, ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು. ಮತ್ತು ದೇವರು ಎಲ್ಲವನ್ನೂ ಅವನ (ಕ್ರಿಸ್ತನ) ಪಾದಗಳ ಕೆಳಗೆ– ಅಂದರೆ, ಆತನ ಅಧಿಕಾರದ ಕೆಳಗೆ– ಹಾಕಿದನು (ಎಫೆಸ 1:20-22; ಇಬ್ರಿಯ 1:13 ನೋಡಿರಿ).

ಇಲ್ಲಿ ಇಬ್ರಿಯರಿಗೆ ಗ್ರಂಥಕರ್ತನು ಕೀರ್ತನೆಗಳು 8:4-6ರಿಂದ ಉಲ್ಲೇಖಿಸುತ್ತಾನೆ. ಕೀರ್ತನೆಗಳು ಪುಸ್ತಕದ ಈ ವಾಕ್ಯಭಾಗವು ಒಬ್ಬ ಸಾಧಾರಣ ಮನುಷ್ಯನಾಗಿ ಕುರಿತಾಗಿ, ಅಂದರೆ, ಮಾನವ ಜನಾಂಗದ ಬಗ್ಗೆ ಬರೆಯಲ್ಪಟ್ಟಿದೆ. ಆದರೆ ಇಬ್ರಿಯರಿಗೆ ಪತ್ರಿಕೆಯ ಬರಹಗಾರನು ಈ ಕೀರ್ತನೆಗಳು ಪುಸ್ತಕದ ವಾಕ್ಯಭಾಗವನ್ನು ಅನುವಾದ ಮಾಡಿ ಅದಕ್ಕೆ ಹೊಸ ಅರ್ಥವನ್ನು ಕೊಡುತ್ತಾನೆಃ ಆತನು ಈ ವಾಕ್ಯಭಾಗವನ್ನು ಸಾಮಾನ್ಯ ಮನುಷ್ಯನ ಕುರಿತಾಗಿ ಅಲ್ಲ, ಆದರೆ ಪರಿಪೂರ್ಣ ಮುನುಷ್ಯನಾದ ಯೇಸುಕ್ರಿಸ್ತನನ್ನು ಸೂಚಿಸುವಂತೆ ಅನುವಾದಿಸುತ್ತಾನೆ. ಮತ್ತು ವಾಕ್ಯಭಾಗವು ಕ್ರಿಸ್ತನಲ್ಲಿ ನಂಬಿಕೆಯಿಟ್ಟಿರುವ ನಮ್ಮೆಲ್ಲರನ್ನೂ ಸೂಚಿಸಬಹುದಾಗಿದೆ. ನಮ್ಮ ನಂಬಿಕೆಯ ನಿಮಿತ್ತ ನಾವು ಪ್ರಭಾವವನ್ನೂ ಮಾನವನ್ನೂ ಕಿರೀಟವಾ ಗಿ ಹೊಂದಿಕೊಳ್ಳುವೆವು .

8ನೇ ವಚನದಲ್ಲಿ ನಾವು ತಿಳಿದುಕೊಳ್ಳಬೇಕಾದ ಒಂದು ಪ್ರಾಮುಖ್ಯವಾದ ಸತ್ಯ ಇರುತ್ತದೆ. ಕ್ರಿಸ್ತನಿಗೆ ಈಗಾಗಲೇ ಎಲ್ಲಾ ಬಲ ಹಾಗೂ ಅಧಿಕಾರವು ಇರುತ್ತದೆ. ಕ್ರಿಸ್ತನು ಈಗಾಗಲೇ ದೇವರ ಬಲಗಡೆಯಲ್ಲಿ ಕುಳಿತುಕೊಂಡಿದ್ದಾನೆ. ಈಗ ಸಮಸ್ತವೂ ಆತನ ಅಧೀನದಲ್ಲಿರುತ್ತದೆ. ಹೇಗಿದ್ದರೂ, ನಾವು ಈಗಲೂ ಲೋಕದಲ್ಲಿ ಸೈತಾನ ಹಾಗೂ ಆತನ ದುರಾತ್ಮಗಳು ಕಾರ್ಯಮಾಡುವದನ್ನು ಕಾಣಬಹುದು. ನಾವು ನಮ್ಮ ಕಣ್ಣಾರೆ ಪಾಪವನ್ನು ನೋಡಬಹುದು. ಕ್ರಿಸ್ತನು ಸೈತಾನನ ಮೇಲೆ ಜಯಶಾಲಿಯಾಗಿದ್ದಾನಾದರೂ ಆತನು ಈಗಲೂ ಸೈತಾನನಿಗೆ ಲೋಕದಲ್ಲಿ ಕೆಟ್ಟದ್ದನ್ನು ಮಾಡುವದಕ್ಕೆ ಅನುಮತಿಸುತ್ತಾನೆ. ಕ್ರಿಸ್ತನು ತಿರಿಗಿ ಬಂದಾಗ ಮಾತ್ರವೇ ಸೈತಾನನು ಸಂಪೂರ್ಣವಾಗಿ ನಾಶಗೊಳ್ಳುವನು. ಆದಾಗ್ಯು ಈಗಲೂ ಸೈತಾನನ ಚಟುವಟಿಕೆಗಳ ಹೊರತಾಗಿಯೂ ಕ್ರಿಸ್ತನ ಲೋಕದಲ್ಲಿ ಆಳುತ್ತಿದ್ದಾನೆ. ಯಾಕೆಂದರೆ ತಾನು ಎಲ್ಲಾ ವಿರೋಧಿಗಳನ್ನು ತನ್ನ ಪಾದಗಳ ಕೆಳಗೆ ಹಾಕಿಕೊಳ್ಳುವ ತನಕ ರಾಜ್ಯವನ್ನಾಳುವದು ಅವಶ್ಯ (1 ಕೊರಿಂಥ 15:25). ಆಗ, ಮಾತ್ರವೇ– ಆತನ ವಿರೋಧಿಗಳು ಅವನ ಪಾದಗಳ ಕೆಳಗೆ ಇದ್ದಾಗ– ಕ್ರಿಸ್ತನು ಅಂತಿಮವಾಗಿ ತಂದೆಯಾದ ದೇವರಿಗೆ ರಾಜ್ಯವನ್ನು ಒಪ್ಪಿಸಿಕೊಡುವನು (1 ಕೊರಿಂಥ 15:24).

9 ಗ್ರಂಥಕರ್ತನು ಇಲ್ಲಿ 7ನೇ ವಚನದ ವಿಚಾರಕ್ಕೆ ಹೆಚ್ಚಿನದನ್ನು ಕೂಡಿಸುತ್ತಾನೆ. ಕ್ರಿಸ್ತನು ಮೃತಪಟ್ಟದ್ದರಿಂದಲೇ ಪ್ರಭಾವವನ್ನೂ ಮಾನವನ್ನೂ ಕಿರೀಟವಾಗಿ ಹೊಂದಿದನು (ಫಿಲಿಪ್ಪಿ 2:8-9ಮತ್ತು ವ್ಯಾಖ್ಯಾನ ನೋಡಿರಿ). ಕ್ರಿಸ್ತನು ಎಲ್ಲಾ ಮನುಷ್ಯರಿಗೋಸ್ಕರ ಮರಣವನ್ನು ಅನುಭವಿಸಿದನು ಬಂದನು; ಅಂದರೆ, ನಾವು ನಮ್ಮ ಪಾಪದ ನಿಮಿತ್ಯವಾಗಿ ನಾವೇ ಅನುಭವಿಸಬೇಕಾಗಿದ್ದ ಮರಣದಂಡನೆಯನ್ನು ಅನುಭವಿಸುವದಕ್ಕಾಗಿ ಬಂದನು. ಕ್ರಿಸ್ತನು ನಮ್ಮ ಸ್ಥಾನದಲ್ಲಿ ಸತ್ತನು; ನಮಗೋಸ್ಕರವಾಗಿ "ಮರಣವನ್ನು ಅನುಭವಿಸಿದನು" ಹೀಗೆ, ಯೇಸು ದೇವರಿಗೆ ವಿಧೇಯನಾಗಿ ತನ್ನ ಸ್ವಂತ ಪ್ರಾಣವನ್ನು

ಪಾಪಕೋಸ್ಕರ ಯಜ್ಞವಾಗಿ ಅರ್ಪಿಸಿದನಾದ್ದರಿಂದ ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿ ಪ್ರಭಾವವನ್ನೂ ಮಾನವನ್ನೂ ಕಿರೀಟವಾಗಿ ಇಟ್ಟನು (ವಚನ 7).

**10** ಯೇಸು ನಮ್ಮ ರಕ್ಷಣೆಯನ್ನು ಪ್ರಕಟಿಸಿದ್ದು ಮಾತ್ರವಲ್ಲ (ವಚನ 3); ಆತನು ನಮ್ಮ ರಕ್ಷಣಾಕರ್ತನು ಆಗಿದ್ದಾನೆ. ಯೇಸು ತನ್ನ ಶ್ರಮೆಗಳ ಮೂಲಕ ನಮಗೆ ರಕ್ಷಣೆಯನ್ನು ತಂದುಕೊಟ್ಟನು. ಆತನು ಬಹುಮಂದಿ ಪುತ್ರರನ್ನು (ವಿಶ್ವಾಸಿಗಳ) ಪ್ರಭಾವಕ್ಕೆ (ರಕ್ಷಣೆಗೆ) ಸೇರಿಸಿದನು. ಯೇಸು ನಮಗಾಗಿ ದಾರಿತೋರಿದನು; ಆತನು ನಮಗೆ ರಕ್ಷಣೆಯ ಮಾರ್ಗವನ್ನು ತೋರಿಸಿದನು. ಯೇಸು ನಮಗೋಸ್ಕರ ಬಾಧೆಯನ್ನನುಭಬಿಸಿದಾನಾದ್ದರಿಂದ ಈಗ ನಾವು ಆತನಲ್ಲಿ ನಂಬಿಕೆಯಿಡುವದರ ಮೂಲಕ ಆತನ ಪ್ರಭಾವದಲ್ಲಿ ಪಾಲುಗಾರರಾಗುತ್ತೇವೆ. ಆದರೆ ಕ್ರಿಸ್ತನು ಬಾಧೆಗಳ ಮೂಲಕ ಪ್ರಭಾವಕ್ಕೆ ಸೇರಿದ ಪ್ರಕಾರವೇ ನಾವೂ ಬಾಧೆಗಳ ಮೂಲಕ ಪ್ರಭಾವಕ್ಕೆ ಸೇರುವವರಾಗಿರಬೇಕು.

ದೇವರು ಯೇಸುವನ್ನು ಬಾಧೆಗಳ ಮೂಲಕ ಸಿದ್ದಿಗೆ ತರುವ ಅಗತ್ಯತೆವೇಕಿತ್ತು? ಯೇಸು ಆಗಲೇ "ಸಿದ್ದಿಗೆ ಬಂದವನಾಗಿದ್ದನು" (ಪರಿಪೂರ್ಣನಾಗಿದ್ದನು). ಆದರೆ, ಇಲ್ಲಿ ಅರ್ಥವು ಹೀಗಿರುತ್ತದೆಃ ದೇವರು ಯೇಸುವನ್ನು ಮಾನವ ಜನಾಂಗದ ರಕ್ಷಕನಾಗಿರುವದಕ್ಕಾಗಿ ಸಿದ್ಧಿಗೆ ತರುವ ಅಥವಾ ಸಿದ್ಧತೆಗೊಳಿಸುವದು ಅಗತ್ಯವಾಗಿತ್ತು. ಬಾಧೆಯನ್ನನುಭವಿಸದೆ ಯೇಸು ಮಾನವರನ್ನು ರಕ್ಷಿಸಿ ಪ್ರಭಾವಕ್ಕೆ ಸೇರಿಸುವದು ಸಾಧ್ಯವಾಗುತ್ತಿರಲಿಲ್ಲ. ಈ ರೀತಿಯಲ್ಲಿ ದೇವರು ಯೇಸುವನ್ನು ಬಾಧೆಗಳ ಮೂಲಕ ಸಿದ್ದಿಗೆ ತಂದನು.

**11** ಯೇಸು ಮನುಷ್ಯರನ್ನು ಪವಿತ್ರಮಾಡುವಾತನು. ಆತನು ತನ್ನ ಮರಣದ ಮೂಲಕ, ತನ್ನ ದೇಹದ ಯಜ್ಞದ ಮೂಲಕ ನಮ್ಮನ್ನು ಪವಿತ್ರರನ್ನಾಗಿ ಮಾಡುತ್ತಾನೆ (ಇಬ್ರಿಯ 10:10). ಅತನಲ್ಲಿ ನಂಬಿಕೆಯಿಡುವದರ ಮೂಲಕ ನಾವು ದೇವರ ಮಕ್ಕಳಾಗುತ್ತೇವೆ (ಯೋಹಾನ 1:12). ಈ ವಿಧದಲ್ಲಿ ನಾವು ಕ್ರಿಸ್ತನ ಸಹೋದರರು ಆಗುತ್ತೇವೆ. ಆತನ ಜೊತೆಯಲ್ಲಿ ನಾವು ಒಂದೇ ಕುಟುಂಬದವರು ಈ ಕಾರಣದಿಂದಲೇ ಯೇಸು (ನಮ್ಮನ್ನು) ಸಹೋದರರೆನ್ನುವದಕ್ಕೆ ನಾಚಿಕೆ ಪಡುವದಿಲ್ಲ (ರೋಮ 8:29 ನೋಡಿರಿ).

ನಾವು ಕ್ರಿಸ್ತನ ವಿಷಯದಲ್ಲಿ ನಾಚಿಕೆ ಪಡದಿದ್ದರೆ ಆತನೂ ನಮ್ಮ ವಿಷಯದಲ್ಲಿ ನಾಚಿಕೆಪಡುವದಿಲ್ಲ. ಆದರೆ ನಾವು ಆತನ ಕುರಿತು ನಾಚಿಕೆಪಡುವದಾದರೆ ಆತನು ಅದೇ ರೀತಿಯಾಗಿ ನಮ್ಮ ಕುರಿತು ನಾಚಿಕೆ ಪಡುವನು (ಮತ್ತಾಯ 10:32-33; ಮಾರ್ಕ 8:38 ನೋಡಿರಿ).

**12** ಈ ವಚನವು ಕೀರ್ತನೆಗಳು 22:22ರಲ್ಲಿನ ಒಂದು ಉಲ್ಲೇಖವಾಗಿದೆ. ಇಲ್ಲಿ ಕ್ರಿಸ್ತನು ಕೀರ್ತನೆಗಾರನ ಮಾತುಗಳ ಮೂಲಕ ಮಾತಾಡುತ್ತಿದ್ದಾನೆ. ಕ್ರಿಸ್ತನು ಹೇಳುವದೇನೆಂದರೆಃ ನಾನು ನಿನ್ನ (ದೇವರ) "ನಾಮ ಮಹಿಮೆಯನ್ನು ನನ್ನ ಸಹೋದರರಿಗೆ ತಿಳಿಸುವೆನು" ಹೀಗೆ, ಆತನು ನಮ್ಮನ್ನು ತನ್ನ ಸಹೋದರರು ಎಂದು ಕರೆಯುತ್ತಿದ್ದಾನೆ.

**13** ಇಲ್ಲಿ ಇಬ್ರಿಯರಿಗೆ ಪತ್ರಿಕೆಯ ಗ್ರಂಥಕರ್ತನು ಯೇಶಾಯ 8:17-18ರಿಂದ ಉಲ್ಲೇಖಿಸುತ್ತಾನೆ. ಇಲ್ಲಿ ಪುನಃ ಕ್ರಿಸ್ತನು ಪ್ರವಾದಿಯಾದ ಯೆಶಾಯನ ಮೂಲಕ ಮಾತಾಡುತ್ತಿದ್ದಾನೆಃ "ನಾನು ದೇವರ ಮೇಲೆ ಭರವಸೆವಿಟ್ಟವನಾಗಿರುವೆನು". ಯೇಸು ಶಿಲುಬೆಯ ಮೇಲೆ ಸಾಯುತ್ತಿದ್ದಾಗಲೂ ಆತನು ದೇವರಲ್ಲಿ ಭರವಸೆವಿಟ್ಟನು. ಮತ್ತು ಬಳಿಕ ದೇವರು ಆತನನ್ನು ಪರಲೋಕಕ್ಕೆ ಏರಿಸಿದನು. ಈಗ ಯೇಸು, "ಇಗೋ ನಾನೂ ದೇವರು ನನಗೆ ದಯಪಾಲಿಸಿರುವ ಮಕ್ಕಳೂ ಇದ್ದೇವೆ" ಎಂದು ಹೇಳಬಲ್ಲನು. ವಿಶ್ವಾಸಿಗಳಾದ ನಾವು ಕ್ರಿಸ್ತನಿಗೆ ದೇವರು ದಯಪಾಲಿಸಿರುವ ಮಕ್ಕಳು ಆಗಿದ್ದೇವೆ. ಯೇಸು ಪ್ರಭಾವಕ್ಕೆ ಸೇರಿಸುತ್ತಿರುವ ಪುತ್ರರು ನಾವಾಗಿದ್ದೇವೆ (ವಚನ 10).

**14-15** ಮಕ್ಕಳು –ವಿಶ್ವಾಸಿಗಳಾದ ನಾವು – ರಕ್ತಮಾಂಸಧಾರಿಗಳಾಗಿ ಮಾಡಲ್ಪಟ್ಟಿದ್ದೇವೆ. ಕ್ರಿಸ್ತನು ನಮ್ಮನ್ನು ರಕ್ಷಿಸುವದಕ್ಕಾಗಿ ನಮ್ಮ ಹಾಗೆ ಆಗುವದು ಅಗತ್ಯವಾಗಿತ್ತು. ಆತನು ನಮ್ಮ ಮಾನವತೆಯಲ್ಲಿ ಪಾಲುಗಾರನಾಗಬೇಕಾಯಿತು (ವಚನ 14). ಕ್ರಿಸ್ತನು ಒಬ್ಬ ಮನುಷ್ಯನಂತಾಗಿ ಸತ್ತು ತಿರಿಗಿಎದ್ದು ಬರುವದರ ಮೂಲಕ ಮಾತ್ರವೇ ಮರಣಾಧಿಕಾರಿಯಾದ ಸೈತಾನನನ್ನು ನಾಶಮಾಡುವದಕ್ಕೆ ಶಕ್ತನಾದನು (2 ತಿಮೊಥೆ 1:10; ಪ್ರಕಟಣೆ 1:18 ನೋಡಿರಿ). ಸೈತಾನನು ಮರಣಾಧಿಕಾರಿಯಾಗಿದ್ದಾನೆ, ಯಾಕೆಂದರೆ ಆತನು ಮನುಷ್ಯರನ್ನು ಪಾಪದೊಳಕ್ಕೆ ನಡಿಸುವವನಾಗಿದ್ದು ಅದರ ದಂಡನೆಯು ಮರಣವೇ ಆಗಿದೆ. (ರೋಮ 6:23).

ಆದದರಿಂದ, ಯೇಸು ಮನುಷ್ಯ ರೂಪದಲ್ಲಿ ನಮ್ಮ ಹಾಗೆ ಮರಣಿಸಿ ನಂತರ ತಿರಿಗಿ ಸತ್ತವರೊಳಗಿಂದ ಎದ್ದು ಬರುವದನ್ನು ನೋಡುವಾಗ ನಾವು ಸಹ ನಂಬಿಕೆಯ ಮೂಲಕ ಮರಣದ ನಂತರ ಪುನಃ ಎಬ್ಬಿಸ್ಪಡುವೆವೆಂಬದನ್ನು ನಾವು ಬಲ್ಲೆವು (2 ಕೊರಿಂಥ 4:14). ಇನ್ನೆಂದಿಗೂ ಮರಣಕ್ಕೆ ನಮ್ಮ ಮೇಲೆ ಯಾವ ಬಲವೂ ಇರುವದಿಲ್ಲ (1 ಕೊರಿಂಥ 15:55, 57). ಈಗ ನಾವು ಮರಣದ ಭಯದಿಂದ ಮುಕ್ತರಾಗಿದ್ದೇವೆ (ವಚನ 15).

ಯಾಕೆ ನಾವು ಇನ್ನೆಂದಿಗೂ ಮರಣಕ್ಕೆ ಭಯಪಡುವ ಅಗತ್ಯವಿಲ್ಲ? ಯಾಕೆಂದರೆ ಕ್ರಿಸ್ತನಲ್ಲಿ ವಿಶ್ವಾಸಿಸುವವರಿಗೆ ಮರಣವು ಬಿಡುಗಡೆಗೂ ಪ್ರಭಾವಕ್ಕೂ ಪರಲೋಕದಲ್ಲಿ ಕ್ರಿಸ್ತನ ಸಂಗಡ ನಿತ್ಯಜೀವಕ್ಕೂ ದಾರಿ ಮಾಡುತ್ತದೆ. ಆದರೆ ಅವಿಶ್ವಾಸಿಗಳಿಗಾದರೋ ಮರಣವು ನರಕದಲ್ಲಿ ನಿತ್ಯದಂಡನೆಗೆ ನಡಿಸುತ್ತದೆ.

**16** ಕ್ರಿಸ್ತನು ಮನುಷ್ಯನಾಗಿ ಭೂಲೋಕಕ್ಕೆ ಬಂದದ್ದು ದೇವದೂತರಿಗೆ ಸಹಾಯಮಾಡುವದಕ್ಕಲ್ಲ, ಆದರೆ ಮನುಷ್ಯರಿಗೆ ಸಹಾಯಮಾಡಲು– ರಕ್ಷಿಸಲು– ಬಂದನು. ಯಾವ ಮನುಷ್ಯರು? ಅಬ್ರಹಾಮನ[3] ಸಂತತಿ. ಇಲ್ಲಿ ಗ್ರಂಥ ಕರ್ತನು ಅಬ್ರಹಾಮನಿಗೆ ಶರೀರ ಸಂಬಂಧದಕ್ಕನುಸಾರ ಸ್ವಾಭಾವಿಕವಾಗಿ ಹುಟ್ಟಿದ ಸಂತತಿಯನ್ನು (ಯೆಹೂದ್ಯರನ್ನು) ಸೂಚಿಸುವದಿಲ್ಲ,

ಆದರೆ ಬದಲಾಗಿ ನಂಬಿಕೆಯ ಅನುಸಾರವಾಗಿ ಹುಟ್ಟಿದ ಆತನ ಆತ್ಮೀಕ "ಸಂತತಿ" ಯನ್ನು ಸೂಚಿಸುತ್ತಿದ್ದಾನೆ. ಕ್ರಿಸ್ತನಲ್ಲಿ ನಂಬಿಕೆಯಿಡುವವರೆಲ್ಲರೂ ಅಬ್ರಹಾಮನ ನಿಜವಾದ ಸಂತತಿ ಆಗಿದ್ದಾರೆ (ಗಲಾತ್ಯ 3:7,9,29. ಮತ್ತು ವ್ಯಾಖ್ಯಾನ ನೋಡಿರಿ).

17 ಯೇಸು ನಮ್ಮ ಪಾಪಗಳನ್ನು ನಿವಾರಣ (ಪ್ರಾಯಶ್ಚಿತ್ತ) ಮಾಡುವದಕ್ಕಾಗಿ ಎಲ್ಲಾ ವಿಧದಲ್ಲಿಯೂ– ಆತನು ಎಂದಿಗೂ ಪಾಪವನ್ನು ಮಾತ್ರಮಾಡದೆ– ನಮ್ಮಂತಾದನು (ಇಬ್ರಿಯ 4:15).

ಈ ವಚನವನ್ನು ಅರ್ಥಮಾಡಿಕೊಳ್ಳುವದಕ್ಕಾಗಿ ನಾವು ಹಳೆ ಒಡಂಬಡಿಕೆಯ ಕಾಲದಲ್ಲಿನ ಯೆಹೂದ್ಯ ಮಹಾಯಾಜಕನ ಕುರಿತಾಗಿ ತಿಳಿಯುವದು ಅಗತ್ಯವಾಗಿರುತ್ತದೆ. ಪ್ರತಿವರ್ಷವೂ ಯೆಹೂದ್ಯ ಮಹಾಯಾಜಕನು ತನ್ನ ಹಾಗೂ ಜನರ ಪಾಪಗಳಿಗೋಸ್ಕರ ದೇವರಿಗೆ ಒಂದು ಪ್ರಾಣಿಯಜ್ಞವನ್ನು ಅರ್ಪಿಸುತ್ತಿದ್ದನು. ಮಹಾಯಾಜಕನು ಜನರ ಪ್ರತಿನಿಧಿಯಾಗಿ ದೇವರ ಸನ್ನಿಧಿಗೆ ಹೋಗುತ್ತಿದ್ದನು. ಜನರ ಪ್ರತಿನಿಧಿಯಾಗಿರುವದಕ್ಕೋಸ್ಕರ ಮಹಾಯಾಜಕನು ಸ್ವತಃ ಒಬ್ಬ ಮನುಷ್ಯನಾಗಿರಬೇಕಾಗಿತ್ತು. ಅದೇ ಪ್ರಕಾರವಾಗಿ ನಮ್ಮ ಮಹಾಯಾಜಕನು ಹಾಗೂ ರಕ್ಷಕನಾಗಿರುವದಕ್ಕೋಸ್ಕರ ಯೇಸು ಸಹ ಒಬ್ಬ ಮನುಷ್ಯನಂತಾಗಬೇಕಾಯಿತು. ನಮ್ಮ ಪಾಪಗಳ ನಿವಾರಣ ಮಾಡುವದಕ್ಕಾಗಿ ಆತನು ನಮ್ಮ ಬಳಿಗೆ ಇಳಿದು ಬರಬೇಕಾಯಿತು. ಮನುಷ್ಯನು ಮಾತ್ರವೇ ಮನುಷ್ಯರ ಪಾಪಗಳ ನಿವಾರಣ ಮಾಡಬಲ್ಲನು.

ಯೇಸು ಪರಿಪೂರ್ಣವಾದ ಮಹಾಯಾಜಕ ಆಗಿದ್ದನು. ಯಾಕಂದರೆ, ಅವನು ಸ್ವತಃ ಪಾಪರಹಿತನಾಗಿದ್ದನು. ಆದ್ದರಿಂದ ಆತನು ನೇರವಾಗಿ ಪರಿಶುದ್ಧನಾದ ದೇವರ ಸನ್ನಿಧಿಯೊಳಗೆ ಬರಬಲ್ಲವನಾಗಿದ್ದನು. ಆತನು ಒಬ್ಬ ಮನುಷ್ಯನಾಗಿದ್ದರಿ ಆತನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪಪಡಬಲ್ಲವನಾದ ಕರುಣೆಯುಳ್ಳ ಮಹಾಯಾಜಕ ಆಗಿದ್ದನು (ಇಬ್ರಿಯ 4:15).

ಕ್ರಿಸ್ತನು ಅರ್ಪಿಸಿದ ಯಜ್ಞವು ಆಡು ಅಥವಾ ಒಂದು ದನದ ಯಜ್ಞವಾಗಿರಲಿಲ್ಲ; ಆದರೆ, ಆತನ ಸ್ವಂತ ದೇಹವೇ ಆಗಿತ್ತು. ಅದು ಕಳಂಕ ಅಥವಾ ದೋಷ ಇಲ್ಲವ ಪಾಪವಿಲ್ಲದ ಪರಿಪೂರ್ಣ ಯಜ್ಞವಾಗಿತ್ತು. ಅದು ದೇವರಿಗೆ ಪೂರ್ಣ ಸ್ವೀಕೃತವಾಗಿತ್ತು. ಈ ವಿಧದಲ್ಲಿ ಯೇಸು ತನ್ನ ದೋಷವಿಲ್ಲದ ಯಜ್ಞದ ಮೂಲಕ ನಮ್ಮ ಪಾಪಗಳಿಗೆ ಪೂರ್ಣ ಪ್ರಾಯಶ್ಚಿತ ಮಾಡಲು ಶಕ್ತನಾದನು (ರೋಮ 3:24-25 ಮತ್ತು ವ್ಯಾಖ್ಯಾನ ನೋಡಿರಿ).

18 ಸ್ವತಃ ಬಾಧೆಯನ್ನನುಭವಿಸಿರುವ ಜನರು ಭಾಧೆಯನ್ನು ಅನುಭವಿಸುತ್ತಿರುವ ಇತರರಿಗೆ ಸಹಾಯವನ್ನು ಆದರಣೆಯನ್ನು ನೀಡುವದಕ್ಕೆ ಹೆಚ್ಚು ಶಕ್ತರಾಗಿರುತ್ತಾರೆ. ಇಂದು ನಾವು ಕ್ರಿಸ್ತನಿಗಾಗಿ ಬಾಧೆಯನ್ನನುಭವಿಸುತ್ತಿದ್ದರೆ ಆತನು ಮೊದಲು ನಮಗೋಸ್ಕರ ಬಾಧೆಯನ್ನನುಭವಿಸಿದನೆಂಬದನ್ನು ನಾವು ಜ್ಞಾಪಿಸಿಕೊಳ್ಳೋಣ. ಮತ್ತು ಈಗ ಆತನು ನಮ್ಮೊಂದಿಗಿದ್ದಾನೆ ಧೃಢವಾಗಿ ನಿಲ್ಲುವದಕ್ಕೆ ಆತನು ನಮಗೆ ಸಹಾಯ ಮಾಡುವನು. ಆತನು ನಮ್ಮನ್ನು ಬಲಪಡಿಸುವನು. ಆತನು ನಮಗೆ ಅಂತರ್ಯದ ಸಂತೋಷ ಮತ್ತು ಸಮಾಧಾನವನ್ನು ನೀಡುವನು (2 ಕೊರಿಂಥ 1:3-5ನೋಡಿರಿ).

ಆದದರಿಂದ, ಯೇಸುಕ್ರಿಸ್ತನು ಎಲ್ಲಾ ವಿಧದಲ್ಲಿಯೂ ಪರಿಪೂರ್ಣ ಮಹಾಯಾಜಕನು ಪರಿಪೂರ್ಣ ರಕ್ಷಕನು ಆಗಿದ್ದಾನೆ. ಆತನು ನಮಗೂ ದೇವರಿಗೂ ನಡುವೆ ಸಮಾಧಾನ ತಂದನು (ರೋಮ 5:1). ಆತನು ನಮ್ಮ ಪಾಪಗಳಿಗಾಗಿಪ್ರಾಯಶ್ಚಿತಮಾಡಿದನು, ಮತ್ತು ಅದರ ಫಲಿತವಾಗಿ ಈಗ ನಾವು ದೇವರ ದೃಷ್ಟಿಯಲ್ಲಿ ನೀತಿವಂತರೆಂದು ನಿರ್ಣಯಿಸ್ಪಟ್ಟಿದ್ದೇವೆ (ರೋಮ 3:24). ಆದರೆ ಅಷ್ಟಕ್ಕೆ ಮುಗಿಯುವದಿಲ್ಲ. ಯೇಸು ಸ್ವತಃ ಬಾಧೆಯನ್ನೂ ಶೋಧನೆಯನ್ನೂ ಅನುಭವಿಸಿದ್ದರಿಂದ ಈಗ ಆತನು ಬಾಧೆಯನ್ನೂ ಶೋಧನೆಯನ್ನೂ ಅನುಭವಿಸುತ್ತಿರುವವರನ್ನು ಆದರಿಸಿ ಬಲಪಡಿಸಲು ಪೂರ್ಣ ಶಕ್ತನಾಗಿದ್ದಾನೆ. ಅಂಥ ರಕ್ಷಕನನ್ನು ನಾವು ಸ್ತುತಿಸಿ ಆರಾಧಿಸಿ ಪ್ರೀತಿಸದಿರಲು ಹೇಗೆ ಸಾಧ್ಯ?

---

## ಅಧ್ಯಾಯ - 3

### ಯೇಸು ಮೋಶೆಗಿಂತಲೂ ಶ್ರೇಷ್ಠನು (3:1-6)

1 ಆದದರಿಂದ....... ಯೇಸುವನ್ನು ಲಕ್ಷ್ಯವಿಟ್ಟು ಯೋಚಿಸಿರಿ. ನಾವು ಪ್ರತಿದಿನವೂ ಯೇಸುವನ್ನು ಕುರಿತು ಯೋಚಿಸಿ ಧ್ಯಾನಿಸಿಕೊಳ್ಳೋಣ (ಇಬ್ರಿಯ 12:2-3 ನೋಡಿರಿ).

ಯೇಸು ಇಲ್ಲಿ ಅಪೊಸ್ತಲನೂ ಮಹಾಯಾಜಕನೂ ಎಂದು ಕರೆಯಲ್ಪಟ್ಟಿದ್ದಾನೆ. ಒಬ್ಬ ಅಪೊಸ್ತಲನಾಗಿ ಆತನು ಮನುಷ್ಯರೊಳಗೆ ದೇವರ ಪ್ರತಿನಿಧಿಯಾಗಿದ್ದಾನೆ. ಒಬ್ಬ ಮಹಾಯಾಜಕನಾಗಿ ಆತನು ದೇವರ ಎದುರಿನಲ್ಲಿ ಮನುಷ್ಯರ ಪ್ರತಿನಿಧಿಯಾಗಿದ್ದಾನೆ. ಒಬ್ಬ ಅಪೋಸ್ತಲನಾಗಿ ಆತನು ಜನರಿಗೆ ದೇವರನ್ನು ಪ್ರಕಟಗೊಳಿಸುವದಕ್ಕಾಗಿ ಕಳುಹಿಸಲ್ಪಟ್ಟನು. ಒಬ್ಬ ಮಹಾ ಯಾಜಕನಾಗಿ ಆತನು ಮನುಷ್ಯರನ್ನು ದೇವರೊಂದಿಗೆ ಸಂಧಾನಗೊಳಿಸಿದ್ದಾನೆ.

2 ಯೇಸು ಅಪೊಸ್ತಲನನ್ನಾಗಿಯೂ ಮಹಾಯಾಜಕನನ್ನಾಗಿಯೂ ತನ್ನನ್ನು ನೇಮಿಸಿದಾತನಾದ ದೇವರಿಗೆ ನಂಬಿಗಸ್ಥನಾಗಿದ್ದಾನೆ. ಇಬ್ರಿಯರಿಗೆ ಪತ್ರಿಕೆಯ ಬರಹಗಾರನು ಇಲ್ಲಿ ಯೇಸುವನ್ನು ದೇವರ ಮನೆಯಲ್ಲೆಲ್ಲಾ ನಂಬಿಗಸ್ಥನಾಗಿದ್ದ ಮೋಶೆಯೊಂದಿಗೆ ಹೋಲಿಸುತ್ತಾನೆ (ಅರಣ್ಯಕಾಂಡ 12:7).

ಮೋಶೆಯು ಯೆಹೂದ್ಯರ ಶ್ರೇಷ್ಠ ನಾಯಕನಾಗಿದ್ದು ಯೆಹೂದ್ಯರನ್ನು ಐಗುಪ್ತ್ಯದ ದಾಸತ್ವದೊಳಗಿಂದ ಬಿಡಿಸಿ ನೂತನ ದೇಶವೊಂದಕ್ಕೆ ನಡಿಸಿದನು. ಮೋಶೆಯು ದೇವರಿಂದ ಹಳೆ ಒಡಂಬಡಿಕೆಯ ಧರ್ಮ ಶಾಸ್ತ್ರವನ್ನು ಪಡೆದುಕೊಂಡನು ಮತ್ತು ಅದನ್ನು ಯೆಹೂದ್ಯರಿಗೆ ಹಸ್ತಾಂತರಿಸಿದನು. ಹೊಸ ಒಡಂಬಡಿಕೆಯಲ್ಲಿ ಯೇಸು ದೇವರಿಗೂ ಮನುಷ್ಯರಿಗೂ ಮಧ್ಯಸ್ಥನಾಗಿರುವ ಪ್ರಕಾರವೇ ಹಳೆ ಒಡಂಬಡಿಕೆಯಲ್ಲಿ ಮೋಶೆಯು ದೇವರಿಗೂ ಯೆಹೂದ್ಯರಿಗೂ ಮಧ್ಯಸ್ಥನಾಗಿದ್ದನು.ಗ್ರಂಥ ಕರ್ತನು ಯೇಸುವನ್ನು ಮೋಶೆಯೊಂದಿಗೆ ಹೋಲಿಸಿದ್ದೇಕೆ? ಕಾರಣವೇನೆಂದರೆ ಅತನು ಬರೆಯುತ್ತಿರುವ ಈ ಇಬ್ರಿಯರು ಕ್ರಿಸ್ತನನ್ನು ಬಿಟ್ಟು ವಿಮುಖರಾಗುವ ಸಂಭವವಿತ್ತು ಅವರು ಮೂಲತ ಯೆಹೂದ್ಯರಾಗಿದ್ದ ಕಾರಣ ಈಗ ಅವರು ತಮ್ಮ ಹಳೆಯ ಯೆಹೂದ್ಯ ಧರ್ಮಕ್ಕೆ ಹಿಂದಿರುಗಲಿಕ್ಕಿದ್ದರು. ಆದದರಿಂದ, ಬರಹಗಾರನು ಅವರಿಗೆ ಯೇಸು ಅವರ ಹಳೆಯ ನಾಯಕನಾದ ಮೋಶೆಗಿಂತಲೂ ಎಷ್ಟೋ ದೊಡ್ಡವನಾಗಿದ್ದಾನೆಂದು ಜ್ಞಾಪಕಪಡಿಸುತ್ತಾನೆ. ಬರಹಗಾರನು ಅದರ ಮೂಲಕ ಇಬ್ರಿಯರಿಗೆ ಕೇಳುತ್ತಿರುವದೇನೆಂದರೆಃ ದೊಡ್ಡದಾಗಿರುವದನ್ನು ಬಿಟ್ಟು ಕಡಿಮೆಯಾದದ್ದರ ಕಡೆಗೆ ತಿರಿಗಿಕೊಳ್ಳುವದರಲ್ಲಿ ಏನು ಪ್ರಯೋಜನವಿದೆ?

**3-4** ಮೋಶೆಯು ದೇವರ ಮನೆಯಲ್ಲಿ; ಅಂದರೆ, ಯೆಹೂದ್ಯ ಜನಾಂಗದಲ್ಲಿ ಒಬ್ಬ ಪಾರುಪತ್ಯಗಾರನಾಗಿದ್ದನು ಆದರೆ ಯೇಸು ತಾನು ಸ್ವತಃ ದೇವರಾದ್ದರಿಂದ ಮನೆಯ ಯಜಮಾನನೂ ಕಟ್ಟಿರುವವನೂ ಆಗಿದ್ದಾನೆ. ಆದದರಿಂದ, ಮನೆಯ ಯಜಮಾನನೂ ಅದನ್ನು ಕಟ್ಟಿರುವವನೂ ಆಗಿರುವ ಯೇಸು ಮನೆಯಲ್ಲಿ ಕೇವಲ ಸೇವಕನಾಗಿದ್ದ ಮೋಶೆಗಿಂತಲೂ ಶ್ರೇಷ್ಠನು. ಸೇವಕರು ಮನೆಗಳನ್ನು ಕಟ್ಟುವದಿಲ್ಲ. ಸಮಸ್ತವನ್ನೂ ಕಟ್ಟಿದಾತನು ದೇವರೇ– ಅಂದರೆ, ಯೇಸು ಕ್ರಿಸ್ತನು (ವಚನ 4).

**5-6** ಮೋಶೆಯು ದೇವರ ಮನೆಯಲ್ಲಿ ನಂಬಿಗಸ್ಥ ಸೇವಕನಾಗಿದ್ದ ಪ್ರಕಾರವೇ ಯೇಸು ದೇವರ ಮನೆಯಲ್ಲಿ ನಂಬಿಗಸ್ಥ ಸೇವಕನಾಗಿದ್ದ ಪ್ರಕಾರವೇ ಯೇಸು ದೇವರ ಮನೆಯ ಮೇಲೆ –ಅಂದರೆ, ದೇವರ ರಾಜ್ಯದ ಮೇಲೆ– ನಂಬಿಗಸ್ಥಿಕೆ ಹಾಗೂ ಮಾದರಿಯ ಮುಖಾಂತರ ಕ್ರಿಸ್ತನಿಗೆ ಸಾಕ್ಷಿ ನೀಡಿದನು. ಆತನು ಮುಂದೆ ಪ್ರಕಟ ವಾಗಬೇಕಾಗಿದ್ದ ಸಂಗತಿಗಳಿಗೆ ಸಾಕ್ಷಿಯಾಗಿದ್ದನು.

ನಾವೇ ದೇವರ ಮನೆಯವರು (ವಚನ 6). ಕ್ರಿಸ್ತನಲ್ಲಿ ವಿಶ್ವಾಸಿಗಳಾದ ನಾವು ದೇವರ ಕುಟುಂಬದವರಾಗಿದ್ದೇವೆ (1 ಕೊರಿಂಥ 3:9; ಎಫೆಸ 2:19-22; 1 ಪೇತ್ರ 2:5 ನೋಡಿರಿ).

ನಾವು ನಮ್ಮ ಧೈರ್ಯವನ್ನು ನಮ್ಮ ನಿರೀಕ್ಷೆಯಿಂದುಟಾಗುವ ಉತ್ಸಾಹವನ್ನು ಕಡೇ ತನಕ ದೃಢವಾಗಿ ಹಿಡುಕೊಂಡವರಾದರೆ ನಾವೇ ದೇವರ ಮನೆಯವರು ಹೊಸ ಒಡಂಬಡಿಕೆಯ ಇತರ ವಚನಗಳಲ್ಲಿ ಇರುವ ಪ್ರಕಾರವೇ (ವಚನ 14 ನೋಡಿರಿ). ಇಲ್ಲಿಯೂ ಸಹ ನಾವು ನಂಬಿಕೆಯಲ್ಲಿ ದೃಢವಾಗಿ ನೆಲೆಗೊಳ್ಳುವದಾದರೆ ಮಾತ್ರವೇ ದೇವರ ಮನೆಯವರಾಗಿ ಉಳಿಯುವೆವು ಎಂಬುದಾಗಿ ಬರೆಯಲ್ಪಟ್ಟಿರುತ್ತದೆ. (ಸಾಮಾನ್ಯ ಲೇಖನಃ ನಾವು ನಮ್ಮ ರಕ್ಷಣೆಯನ್ನು ಕಳೆದುಕೊಳ್ಳಬಹುದೋ? ನೋಡಿರಿ) ನಂಬಿಕೆಯನ್ನು ತೊರೆಯುವವನು ಎಲ್ಲವನ್ನೂ ಕಳೆದುಕೊಳ್ಳುವನು (ಮಾರ್ಕ 4:5-6, 16-17 ನೋಡಿರಿ).

## ಅಪನಂಬಿಕೆಯ ವಿರುದ್ಧ ಎಚ್ಚರಿಕೆ ( 3:7-19)

**7-11** ಈ ವಚನಗಳು ಕೀರ್ತನೆಗಳು 95:7-11 ರಿಂದ ಉಲ್ಲೇಖಿಸಲ್ಪಟ್ಟಿವೆ. ಆದದರಿಂದ, ಪವಿತ್ರಾತ್ಮನು ಹೇಳುವ ಪ್ರಕಾರ ..........(ವಚನ 7). ಈ ಮಾತುಗಳು ಕೇವಲ ಒಂದು ಪುಸ್ತಕದಲ್ಲಿ ಬರೆಯಲ್ಪಟ್ಟ ಮಾತುಗಳಲ್ಲ; ಅವು ದೇವರ ಪವಿತ್ರಾತ್ಮನು ನುಡಿದ ಮಾತುಗಳಾಗಿವೆ.

ಮೋಶೆಯು ಯೆಹೂದ್ಯರನ್ನು ಐಗುಪ್ತ್ಯದ ದಾಸತ್ವದೊಳಗಿಂದ ಬಿಡಿಸಿ ಅವರನ್ನು ಐಗುಪ್ತ್ಯ ಹಾಗು ಇಸ್ರಾಯೇಲಿನ ನಡುವಿನ ಸಿನಾಯ್ ಅರಣ್ಯದೊಳಕ್ಕೆ ನಡಿಸಿದನು. ಮೋಶೆಯು ಕ್ರಮೇಣವಾಗಿ ಅವರನ್ನು ದೇವರು ಅಬ್ರಹಾಮನ ಸಂತತಿಗೆ (ಯೆಹೂದ್ಯರಿಗೆ) ಕೊಡುತ್ತೇನೆಂದು ವಾಗ್ದಾನ ಮಾಡಿದ್ದ ಇಸ್ರಾಯೇಲಿನ ಗಡಿಭಾಗದವರೆಗೂ ನಡಿಸಿಕೊಂಡು ಹೋದನು. ಹೇಗಿದ್ದರೂ, ಅವರು ಸಿನಾಯ್ ಅರಣ್ಯದೊಳಗಿದ್ದ ನಾಲ್ವತ್ತು ವರ್ಷಗಳ ವೇಳೆಯಲ್ಲಿ ಯೆಹೂದ್ಯರು ನಿರಂತರವಾಗಿ ದೇವರಿಗೂ ತಮ್ಮ ನಾಯಕನಾದ ಮೋಶೆಗೂ ವಿರೋಧವಾಗಿ ಗುಣಗುಟ್ಟಿದರು. ಈ ಕೃತ್ಯದ ಮೂಲಕ ಅವರು ದೇವರನ್ನು ಪರೀಕ್ಷಿಸಿದರು (ವಚನ 9). ಅಂದರೆ, ತಾವು ಎಲ್ಲಿಯ ತನಕ ಆತನ ವಿರುದ್ಧವಾಗಿ ಅವಿಧೇಯರಾಗಿ ನಡೆದುಕೊಂಡರೆ ಆತನಿಗೆ ನಮ್ಮ ಮೇಲೆ ಕೋಪವುಂಟಾಗುವದೋ ಎಂಬದನ್ನು ಕಂಡುಕೊಳ್ಳಲು ಪರೀಕ್ಷಿಸಿದರು (ವಿಮೋಚನ 17:1-4, 7). ಮತ್ತು ದೀರ್ಘಕಾಲದ ವರೆಗೆ ದೇವರನ್ನು ಪರೀಕ್ಷಿಸಿದ ಬಳಿಕ ಯೆಹೂದ್ಯರು ಕೊನೆಗೂ ದೇವರಿಗೆ ಕೋಪವನ್ನೆಬ್ಬಿಸಿದರು. ಆ ಗ ದೇವರು ಈ ಅವಿಧೇಯರೂ ಗುಣಗುಟ್ಟುವವರೂ ಆಗಿರುವ ಯೆಹೂದ್ಯರು ನನ್ನ ವಿಶ್ರಾಂತಿಯನ್ನು ಸೇರುವದೇ ಇಲ್ಲ ಎಂಬ ಒಂದು ಪ್ರಮಾಣವನ್ನು ಘೋಷಿಸಿದನು (ವಚನ 11). ಅಂದರೆ, ತಾನು ಅಬ್ರಹಾಮನ ಸಂತತಿಯರಿಗೆ ಕೊಡತ್ತೇನೆಂದು ವಾಗ್ದಾನಮಾಡಿದ್ದ ದೇಶಕ್ಕೆ (ಇಸ್ರಾಯೇಲಿಗೆ) ಅವರು ಸೇರುವದೇ ಇಲ್ಲ ಎಂಬದೇ (ಅರಣ್ಯಕಾಂಡ 14:21-23).

**12** ಈ ಪತ್ರಿಕೆಯು ಯಾರಿಗೆ ಬರೆಯಲ್ಪಟ್ಟಿದೆಯೋ ಆ ಇಬ್ರಿಯರು ಅವಿಧೇಯರಾದ ಆ ಯೆಹೂದ್ಯರು ಅರಣ್ಯದಲ್ಲಿ ಶೋಧನೆಯೊಳಗೆ ಬಿದ್ದ ಹಾಗೆಯೇ ತಾವೂ ಬೀಳಲಿಕ್ಕಿದ್ದರು. ಆದದರಿಂದ, ಬರಹಗಾರನು ಈ ಇಬ್ರೀಯರಿಗೆ ಒಂದು ಎಚ್ಚರಿಕೆಯನ್ನು ನೀಡುತ್ತಾನೆಃ ಅರಣ್ಯದಲ್ಲಿ ಪಾಪಕ್ಕೊಳಗಾದ, ದೇವರ ವಿರುದ್ಧವಾಗಿ ನಡೆದುಕೊಂಡವರೂ, ಆತನಲ್ಲಿ ಭರವಸೆವಿಡುವದನ್ನು ಬಿಟ್ಟು ಬಿಟ್ಟವರೂ ಆಗಿದ್ದ ಆ ಯೆಹೂದ್ಯರಂತೆ ನೀವು ಇರಬೇಡಿರಿ (1 ಕೊರಿಂಥ 10:1-5 ನೋಡಿರಿ).

ಮೋಶೆಯನ್ನು ವಿರೋಧಿಸಿ ದೇವರಲ್ಲಿ ನಂಬಿಕೆಯನ್ನು ಬಿಟ್ಟು ಬಿಟ್ಟ ಆ ಪೂರ್ವಕಾಲದ ಯೆಹೂದ್ಯರು ಅಬ್ರಹಾಮನ ಸಂತತಿಗೆ ದೇವರು ವಾಗ್ದಾನ ಮಾಡಿದ್ದ ದೇಶದಲ್ಲಿ – ವಿಶ್ರಾಂತಿಯಲ್ಲಿ– ಸೇರಲಿಲ್ಲ. ನಮಗೂ ಇದೇ ಸಂಗತಿಯು ಸಂಭವಿಸುವ ಸಾಧ್ಯತೆಯಿರುತ್ತದೆ. ಒಮ್ಮೆ "ನಂಬಿದವರಾದ" ನಾವು ಬಳಿಕ ನಮ್ಮ ನಂಬಿಕೆಯನ್ನು ತೊರೆದು ಕ್ರಿಸ್ತನನ್ನು ವಿರೋಧಿಸಲಾರಂಭಿಸುವದಾದರೆ ನಾವು ಸಹ ನಮ್ಮ ವಿಶ್ರಾಂತಿಯಲ್ಲಿ, ಅಂದರೆ, ಪರಲೋಕದಲ್ಲಿ ಸೇರುವದಿಲ್ಲ.

**13** ನಂಬಿಕೆಯಲ್ಲಿ ದೃಢವಾಗಿ ನಿಂತುಕೊಳ್ಳುವಂತೆ ನಾವು ಪ್ರತಿನಿತ್ಯವೂ ಒಬ್ಬರನ್ನೊಬ್ಬರು ಪ್ರೋತ್ಸಾಹಿಸುವ ಅಗತ್ಯವಿರುತ್ತೆ. ನಾವು ನಮ್ಮಷ್ಟಕ್ಕೆ ಕ್ರಿಸ್ತನನ್ನು ಹಿಂಬಾಲಿಸಲು ಪ್ರಯತ್ನಿಸುವದಾದರೆ ಅತಿಸುಲಭವಾಗಿ ಶೋಧನೆಗೊಳಗಾಗುತ್ತೇವೆ, ನಿರಾಶೆಗೊಳ್ಳುತ್ತೇವೆ, ವಿಮುಖರಾಗುತ್ತೇವೆ. ಆದರೆ ಒಟ್ಟಾಗಿ ಕೂಡಿ ಒಬ್ಬರನ್ನೊಬ್ಬರು ಪ್ರೋತ್ಸಾಹಿಸುವದರ ಮೂಲಕ ನಾವು ನಂಬಿಕೆಯಲ್ಲಿ ಒಟ್ಟಾಗಿ ಮುಂದೆ ಸಾಗಬಹುದು (ಇಬ್ರಿಯ 10:25 ನೋಡಿರಿ). ಆದದರಿಂದ, ಈ ಹೊತ್ತು ಎಂಬ ಕಾಲವು ಇರುವ ತನಕ ಒಬ್ಬರನ್ನೊಬ್ಬರು ಪ್ರೋತ್ಸಾಹಿಸೋಣ. ಈ ಹೊತ್ತು ಪವಿತ್ರಾತ್ಮನು ನಮ್ಮ ಸಂಗಡ ಮಾತಾಡುತ್ತಿದ್ದಾನೆ. ಆದದರಿಂದ, ಈ ಹೊತ್ತು ನಾವು ಕಿವಿಗೊಡೋಣ, ಯಾಕೆಂದರೆ ನಾಳೆ ಕೇಳುವಂಥ ಅವಕಾಶವು ಮತ್ತೊಮ್ಮೆ ಬರದಿರಬಹುದು. ಆದರೆ, ಈ ಹೊತ್ತು ಸಹ ಸೈತಾನನು ನಮ್ಮನ್ನು ಶೋಧನೆಯೊಳಗೆ ನಡಿಸಲು ಪ್ರಯತ್ನಿಸುತ್ತಿದ್ದಾನೆಂಬದನ್ನು ಜ್ಞಾಪಕದಲ್ಲಿಟ್ಟುಕೊಳ್ಳೋಣ. ಸೈತಾನನು ಪಾಪದ ಮೋಸತನದಿಂದ ನಮ್ಮ ಹೃದಯಗಳನ್ನು ಕಠಿಣಗೊಳಿಸಲು ಪ್ರಯತ್ನಿಸುತ್ತಿದ್ದಾನೆ. ಈ ಹೊತ್ತು ನಾವು ಆತ್ಮ ಮತ್ತು ಶರೀರಭಾವಗಳ ನಡುವಿನ ಹೋರಾಟದಲ್ಲಿದ್ದೇವೆ (ಗಲಾತ್ಯ 5:17). ಈ ಹೊತ್ತು ವಿಶ್ರಾಂತಿ ಇರುವದಿಲ್ಲ– "ನಾಳೆ" ಮಾತ್ರವೇ ನಮ್ಮ ವಿಶ್ರಾಂತಿ– ನಾವು ದೃಢವಾಗಿ ನಿಲ್ಲುವದಾದರೆ– ಬರುವದು.

ಪಾಪದ ಮೋಸತನ ಎಂದರೇನು? ಇದು ಮಾರುವೇಷದಲ್ಲಿರುವ ಪಾಪವಾಗಿದೆ. ಸೈತಾನನು ಒಂದು ನಿರ್ದಿಷ್ಟವಾದ ಪಾಪವನ್ನು ಮಾಡುವದಕ್ಕಾಗಿ ನಮ್ಮನ್ನು ಶೋಧಿಸುವಾಗ ಆತನು ಹೇಳುವದೇನೆಂದರೆ: ಅದು ನಿಜವಾಗಿಯೂ ಪಾಪವಲ್ಲ. ಆತನು ನಮ್ಮನ್ನು ಮೋಸಮಾಡುತ್ತಾನೆ ಮತ್ತು ನಾವು ಈ ಮಾರುವೇಷದಲ್ಲಿರುವ ಪಾಪವನ್ನು ಮಾಡಲಾರಂಭಿಸುವಾಗ ಹೆಚ್ಚು ಹೆಚ್ಚು ಮೋಸಕ್ಕೊಳಗಾಗಿ ಮತ್ತಷ್ಟು ಕುರುಡರಾಗುತ್ತೇವೆ. ಮತ್ತು ನಾವು ಪಾಪದಲ್ಲಿ ಮುಂದುವರೆಯುತ್ತಿರುವ ಹಾಗೆ ನಮ್ಮ ಹೃದಯಗಳು ಕಠಿಣವಾಗುತ್ತವೆ. ಆದದರಿಂದ, ನಾವು ಪಾಪದ ಮೋಸತನದಿಂದ ಕಠಿಣರಾಗದಂತೆ ಪ್ರತಿನಿತ್ಯವೂ ಒಬ್ಬರನ್ನೊಬ್ಬರು ಎಚ್ಚರಿಸುತ್ತಾ ಪ್ರಬೋಧಿಸಬೇಕು (2 ತಿಮೊಥೆ 4:2 ನೋಡಿರಿ).

**14** ಇಲ್ಲಿ ಬರಹಗಾರನು ಮೊದಲಿಂದಿರುವ ಭರವಸೆಯನ್ನು (ನಂಬಿಕೆಯನ್ನು) ದೃಢವಾಗಿ ಹಿಡುಕೊಳ್ಳಬೇಕೆಂದು ನಮ್ಮನ್ನು ಪುನಃ ಎಚ್ಚರಿಸುತ್ತಾನೆ. ಆತನು ಅಂತ್ಯದವರೆಗೂ ದೃಢವಾಗಿ ನಿಲ್ಲಬೇಕೆಂದು ಎಚ್ಚರಿಸುತ್ತಾನೆ (ಮಾರ್ಕ 13:13ಮತ್ತು ವ್ಯಾಖ್ಯಾನ ನೋಡಿರಿ). ನಾವು ನಮ್ಮ ನಂಬಿಕೆಯಲ್ಲಿ ದೃಢವಾಗಿ ನೆಲೆಗೊಂಡುವಿಮುಖರಾಗದಿದ್ದರೆ ಕ್ರಿಸ್ತನಲ್ಲಿ ಪಾಲುಗಾರರಾಗುವೆವು. ಅಂದರೆ, ನಮಗೆ ಆತನ ಪ್ರಭಾವ ಹಾಗೂ ಆತನ ಬಾಧ್ಯತೆಯಲ್ಲಿ ಪಾಲು ದೊರೆಯುವದು (ರೋಮ 8:17).

**15-16** ಬರಹಗಾರನು ಪುನಃ ಕೀರ್ತನೆಗಳು 95:7-8 ರಿಂದ ಉಲ್ಲೇಖಿಸುತ್ತಾನೆ. ಕೇಳಿ ಅವಿಧೇಯರಾದ (ಕೋಪವನ್ನೆಬ್ಬಿಸಿದ) ಆ ಪುರಾತನ ಯೆಹೂದ್ಯರು ದೇವರ ಮಹತ್ಕಾರ್ಯಗಳನ್ನೂ ಅದ್ಭುತಗಳನ್ನು ಕಣ್ಣಾರೆ ನೋಡಿದ್ದರು. ದೇವರು ಅದ್ಭುತವಾದ ವಿಧದಲ್ಲಿ ಯೆಹೂದ್ಯರನ್ನು ಮೋಶೆಯ ಮೂಲಕ ಐಗುಪ್ತದೊಳಗಿಂದ ಹೊರಟುಬರುವಂತೆ ನಡಿಸಿದ್ದನು. ಹಾಗಿದ್ದರೂ, ಅವರು ದೇವರ ವಿರುದ್ಧವಾಗಿ ನಡೆದು ಆತನಲ್ಲಿ ನಂಬಿಕೆಯಿಡುವದನ್ನು ಬಿಟ್ಟು ಬಿಟ್ಟರು

**17** ದೇವರು ಆ ಯೆಹೂದ್ಯರ ಮೇಲೆ ಕೋಪಗೊಂಡನು, ಯಾಕೆಂದರೆ ಅವರು ಆತನಿಗೆ ಅವಿಧೇಯರಾಗಿದ್ದರು. ಆತನನ್ನು ವಿರೋಧಿಸಿದವರೆಲ್ಲರ ಶವಗಳು ಅರಣ್ಯದಲ್ಲಿ ಬಿದ್ದವು (ಅರಣ್ಯ ಕಾಂಡ 14:27, 29:30).

**18-19** ಯೆಹೂದ್ಯರ ಅಪನಂಬಿಕೆಯ ಕಾರಣದಿಂದಲೇ (ವಚನ 19) ಅವರು ದೇವರ ವಿಶ್ರಾಂತಿಯಲ್ಲಿ ಅಂದರೆ, ದೇವರು ಅವರಿಗೆ ಕೊಡುತ್ತೇನೆಂದು ವಾಗ್ದಾನ ಮಾಡಿದ ದೇಶದೊಳಗೆ (ಇಸ್ರಾಯೇಲ) ಪ್ರವೇಶಿಸಲ್ಪಡಲಿಲ್ಲ (ಇಬ್ರಿಯ 4:6 ಮತ್ತು ವ್ಯಾಖ್ಯಾನ ನೋಡಿರಿ). ಇದರ ಮೂಲಕವಾಗಿ ಅಪನಂಬಿಕೆಯು ಮನುಷ್ಯನ ಪ್ರಾಥಮಿಕ ಅಥವಾ ಮೂಲ ಪಾಪವಾಗಿರುತ್ತದೆಂಬದನ್ನು[4] ನಾವು ತಿಳಿದುಕೊಳ್ಳಬಹುದು. ಕಾರಣವೇನೆಂದರೆ, ಅಪನಂಬಿಕೆಯು ನಮ್ಮನ್ನು ರಕ್ಷಿಸುವ ಹಾಗೂ ಪರಿಶುದ್ಧಗೊಳಿಸುವ ದೇವರ ಬಲದಿಂದ ಬೇರ್ಪಡಿಸುತ್ತದೆ. ನಂಬಿಕೆಯಿಲ್ಲದೆ ಪಾಪವನ್ನು ಜಯಿಸುವದಕ್ಕೆ ನಮಗೆ ಯಾವ ಬಲವೂ ಇರುವದಿಲ್ಲ.

ಹಾಗಾದರೆ, ಈ ಮೇಲಿನ ವಚನಗಳು ಇಂದು ನಮಗೆ ಒಂದು ಎಚ್ಚರಿಕೆಯಂತಿರಲಿ. ಪೂರ್ವಕಾಲದ ಯೆಹೂದ್ಯರು ದೇವರ ಬಲ ಹಾಗೂ ಪ್ರಭಾವವನ್ನು ನೋಡಿದ್ದ ಹಾಗೆಯೇ ನಾವು ಸಹ ಕರ್ತನಾದ ಯೇಸುಕ್ರಿಸ್ತನ ಮಹಿಮೆಯನ್ನು ಕಂಡಿರುತ್ತೇವೆ. ನಾವು ಆತನನ್ನು ಹಿಂಬಾಲಿಸಲು ಪ್ರಾರಂಭಿಸಿದ್ದೇವೆ. ಆ ಪುರಾತನ ಯೆಹೂದ್ಯರ ಮೇಲೆ ಬಂದಂಥ ಸಂಕಷ್ಟಗಳು ಅಥವಾ ಶೋಧನೆಗಳು ಈಗ ನಮ್ಮ ಮೇಲೆಯೂ ಬಂದಿರಬಹುದು. ಇದರ ಮೂಲಕ ನಮ್ಮ ನಂಬಿಕೆಯು ಪರೀಕ್ಷಿಸ್ವಡುತ್ತಿರುವದು. ಸಹೋದರ ಮತ್ತು ಸಹೋದರಿಯರೇ, ಹಿಂಜರಿದು ನಂಬಿಕೆಯನ್ನು ತೊರೆದುಬಿಟ್ಟ ಆ ಪುರಾತನ ಯೆಹೂದ್ಯರಂತೆ ನಾವು ಇರದಿರೋಣ!. ಒಂದು ಸಂಗತಿಯು ಮಾತ್ರವೇ ನಮ್ಮನ್ನು ವಿಶ್ರಾಂತಿಯಲ್ಲಿ ಪ್ರವೇಶಿಸದಂತೆ ತಡೆಯುತ್ತದೆ– ಆ ಒಂದು ಸಂಗತಿಯು ಅಪನಂಬಿಕೆಯೇ. ಸಹೋದರರೇ, ನೋಡಿಕೊಳ್ಳಿರಿ, ಜೀವಸ್ವರೂಪನಾದ ದೇವರನ್ನು ಬಿಟ್ಟು ಹೋಗುವ ಅಪನಂಬಿಕೆಯುಳ್ಳ ಕೆಟ್ಟ ಹೃದಯವು ನಿಮ್ಮೊಳಗೆ ಯಾವನಲ್ಲಿಯೂ ಇರಬಾರದು (ವಚನ 12).

# ಅಧ್ಯಾಯ - 4

## ನಮ್ಮ ವಿಶ್ರಾಂತಿ (4:1-11)

**1-2** ದೇವರು ನಮ್ಮನ್ನು ತನ್ನ ವಿಶ್ರಾಂತಿಯಲ್ಲಿ, ಅಂದರೆ, ಪರಲೋಕದಲ್ಲಿ ಸೇರಿಸುವದಕ್ಕಾಗಿ ಯೇಸು ಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಕ್ರಿಸ್ತನಲ್ಲಿ ನಂಬಿಕೆಯಿಡುವವರಿಗೆಲ್ಲಾ ಆತನ ವಿಶ್ರಾಂತಿಯಲ್ಲಿ ಸೇರಬಹುದೆಂಬ ವಾಗ್ದಾನವು ಇನ್ನೂ ಇರುತ್ತದೆ. ಆದರೂ ಅಪನಂಬಿಕೆಯ ಮೂಲಕ "ಅದನ್ನು ಕಳಕೊಳ್ಳುವ" ಸಾಧ್ಯತೆಯಿದೆ; ಅಂದರೆ ನಾವು ನಮ್ಮ ಅಪನಂಬಿಕೆಯ ಮೂಲಕ ವಾಗ್ದಾನದ ಫಲವನ್ನು ಹೊಂದದೆ ತಪ್ಪುವರಾಗಿ ದೇವರ ವಿಶ್ರಾಂತಿಯಲ್ಲಿ ಸೇರದೆ ಹೋಗಬಹುದು. ನಮಗೆ ಸಾರೋಣವಾದ ಶುಭವರ್ತಮಾನವನ್ನು ಕೇಳಿದರೆ ಮಾತ್ರವೇ ಸಾಕಾಗುವದಿಲ್ಲ ನಾವು ಅದರೊಂದಿಗೆ ನಂಬಿಕೆಯನ್ನು ಹೊಂದಿರಬೇಕು (ವಚನ 2). ಆ ಪುರಾತನ ಯೆಹೂದ್ಯರು ದೇವರ ಶುಭವಾರ್ತೆಯನ್ನು ಕೇಳಿದ್ದರು. ಆದರೆ, ಅವರು ಸಂದೇಶವನ್ನು ನಂಬಿಕೆಯೊಂದಿಗೆ ಸ್ವೀಕರಿಸಲಿಲ್ಲ. ಆದದರಿಂದ, ಅವರು ಕೇಳಿದ ವಾಕ್ಯದಿಂದ ಅವರಿಗೆ ಪ್ರಯೋಜನವಾಗಲಿಲ್ಲ.

ಇಬ್ರಿಯರಿಗೆ ಪತ್ರಿಕೆಯ ಬರಹಗಾರನು ಹೇಳುವದೇನೆಂದರೆಃ ಹೀಗಿರಲಾಗಿ...... ನಮ್ಮೊಳಗೆ ಯಾವನಾದರೂ..... ತಪ್ಪುವವನಾದನೋ ಎಂದು ನಾವು ಭಯಪಡೋಣ (ಜಾಗರೂಕರಾಗಿರೋಣ). ಅಂದರೆ, ನಮ್ಮೊಳಗೆ ಯಾವನೂ ದೇವರ ವಿಶ್ರಾಂತಿಯಲ್ಲಿ ಸೇರುವದಕ್ಕೆ ವಿಫಲನಾಗದಿಲಿ. ಕೆಲವು ಕ್ರೈಸ್ತರು ಅಥವಾ ನಮ್ಮ ರಕ್ಷಣೆಯನ್ನು ಕಳೆದುಕೊಳ್ಳುವದರ ಕುರಿತು ಎಂದಿಗೂ ಚಿಂತಿಸುವ ಅಗತ್ಯವೇ ಇಲ್ಲ ಎಂದು ನಂಬುತ್ತಾರೆ. ಆದರೆ ಈ ಪತ್ರಿಕೆಯ ಬರಹಗಾರನು ಅದು ಸಂಭವಿಸದಂತೆ ನಾವು ಜಾಗರೂಕರಾಗಿರಬೇಕು ಎಂದು ಹೇಳುತ್ತಾನೆ! ನಾವು ಚಿಂತಿಸಬೇಕಾಗಿರುವದು ಕ್ರಿಸ್ತನ ಕುರಿತಲ್ಲ; ಆತನು ನಮ್ಮನ್ನು ಎಂದಿಗೂ ಕೈ ಬಿಡುವದಿಲ್ಲ. ನಾವೇ ನಮ್ಮ ಅಪನಂಬಿಕೆಯ ಮೂಲಕ ಕ್ರಿಸ್ತನನ್ನು ಕೈಬಿಡುವವರಾಗಿದ್ದೇವೆ; ಅದರ ಬಗೆಯೇ ನಾವು ಜಾಗರೂಕರಾಗಿರಬೇಕು. ನಾವು ಅಪನಂಬಿಕೆಗಾಗಿ ಭಯಪಡಬೇಕು (1 ಕೊರಿಂಥ 10:12, ನೋಡಿರಿ).

**3** ಕಡೇವರೆಗೂ ನಂಬಿಕೆಯಲ್ಲಿ ಮುಂದುವರೆಯುವವರು ದೇವರ ವಿಶ್ರಾಂತಿಯಲ್ಲಿ ಸೇರುವರು. ಇದು ನಮ್ಮ ವಿಶ್ರಾಂತಿ ಅಲ್ಲ; ಅದು ದೇವರ ವಿಶ್ರಾಂತಿ. ದೇವರು ಅದನ್ನು "ನನ್ನ ವಿಶ್ರಾಂತಿ" ಎಂದು ಹೇಳುವದನ್ನು ತೋರಿಸಲು ಬರಹಗಾರನು ಇಲ್ಲಿ ಪುನಃ ಕೀರ್ತನೆಗಳು 95:11ರಿಂದ ಉಲ್ಲೇಖಿಸುತ್ತಾನೆ (ಇಬ್ರಿಯ 3:11). ಆದರೆ ಒಂದು ಪ್ರಶ್ನೆಯು ಉದ್ಭವಿಸುತ್ತದೆಃ ದೇವರ ವಿಶ್ರಾಂತಿ ಎಂದರೇನು? ಯಾಕೆಂದರೆ, ಒಂದು ಅರ್ಥದಲ್ಲಿ, ದೇವರು ಜಗತ್ತಿನ ಸೃಷ್ಟಿಯಂದಿನಿಂದ "ವಿಶ್ರಾಂತಿಯಲ್ಲಿ" ಇರುತ್ತಾನೆ.

**4-5** ದೇವರು ಜಗತ್ತನ್ನು ಆರುದಿನಗಳಲ್ಲಿ ಸೃಷ್ಟಿಸಿ ಏಳನೆಯ ದಿನದಲ್ಲಿ ವಿಶ್ರಾಂತಿ ತೆಗೆದುಕೊಂಡನು (ಆದಿಕಾಂಡ 2:2). ಆ "ವಿಶ್ರಾಂತಿ" ಆ ದಿನದಿಂದಲೂ ಮುಂದುವರೆದಿರುತ್ತದೆ. ನಾವು ಆ ವಿಶ್ರಾಂತಿಯಲ್ಲಿ ಪಾಲುಗಾರರಾಗಲು ಕರೆಯಲ್ಪಟ್ಟಿದ್ದೇವೆ. ಆದರೆ ನಾವು ಜಾಗರೂಕರಾಗಿಲ್ಲದಿದ್ದರೆ ಅಪನಂಬಿಕೆಯ ಮೂಲಕ ನಮ್ಮ ಸ್ಥಳವನ್ನು ಕಳೆದುಕೊಳ್ಳುತ್ತೇವೆ.

**6** ದೇವರ ವಿಶ್ರಾಂತಿಯು ಈಗಲೂ ಪುರುಷರು ಮತ್ತು ಸ್ತ್ರೀಯರಿಗೆ ತೆರೆದಿರುತ್ತದೆ. ನಿಜವಾದ ವಿಶ್ವಾಸಿಗಳು ಈಗಲೂ ಆತನ ವಿಶ್ರಾಂತಿಯಲ್ಲಿ ಪ್ರವೇಶಿಸುತ್ತಿದ್ದಾರೆ. ದೇವರನ್ನು ನಂಬದವರೂ ಆತನಿಗೆ ವಿಶ್ರಾಂತಿಯಲ್ಲಿ ಪ್ರವೇಶಿಸುತ್ತಿದ್ದಾರೆ. ದೇವರನ್ನು ನಂಬದವರೂ ಆತನಿಗೆ ಅವಿಧೇಯರಾಗುವವರೂ ಮಾತ್ರವೇ ಪ್ರವೇಶಿಸದಂತೆ ತಡೆಯಲ್ಪಟ್ಟಿರುತ್ತಾರೆ.

ಈ ಪತ್ರಿಕೆಯ ಬರಹಗಾರನು ಇಲ್ಲಿ ಹೇಳುವದೇನೆಂದರೆ; ಪುರಾತನ ಯೆಹೂದ್ಯರು ಅವಿಧೇಯರಾದ ಕಾರಣ (ದೇವರ ವಿಶ್ರಾಂತಿಯಲ್ಲಿ) ಸೇರದೆ ಹೋದರು ಎಂಬದೇ. ಆದರೆ ಇಬ್ರಿಯ 3:19 ರಲ್ಲಿ ಅವರು ಸೇರಲಾರದೇ ಹೋದದ್ದು ಅವರ ಅಪನಂಬಿಕೆಯಿಂದಲೇ ಎಂದು ಬರಹಗಾರನು ಹೇಳುತ್ತಾನೆ.

ಇಲ್ಲಿ ನಾವು ಸ್ವತಃ ಅಪನಂಬಿಕೆಯೇ ಒಂದು ನಿಜವಾದ ರೀತಿಯ ಅವಿಧೇಯತೆ ಆಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು (ರೋಮ 14:23 ಮತ್ತು ವ್ಯಾಖ್ಯಾನ ನೋಡಿರಿ). ಆದದರಿಂದ, ಈ ಎರಡು ವಚನಗಳಲ್ಲಿ ಬರಹಗಾರನು ಒಂದೇ ವಿಷಯವನ್ನು ಹೇಳುತ್ತಿದ್ದಾನೆ.

ವಾಸ್ತವದಲ್ಲಿ, ಅಪನಂಬಿಕೆಯು ಅವಿಧೇಯತೆಯ ಅತಿಮೂಲ ರೂಪವಾಗಿದೆ. ನಂಬುವದಕ್ಕೆ ನಿರಾಕರಿಸುವದೇ ಅವಿಧೇಯತೆಯಾಗಿದೆ. ಅಪನಂಬಿಕೆಯು ಸ್ವತಃ ಅವಿಧೇಯತೆ ಮಾತ್ರವಲ್ಲ, ಆದರೆ ಇದು ಇತರ ಎಲ್ಲಾ ವಿಧದ ಅವಿಧೇಯತೆಗೆ ಸಹ ನಡಿಸುತ್ತದೆ. ಅಪನಂಬಿಕೆಯ ಕಾರಣದಿಂದ ಮನುಷ್ಯನು ಪಾಪವನ್ನು ಜಯಿಸುವ ಬಲವನ್ನು ಕಳೆದುಕೊಳ್ಳುತ್ತಾನೆ. ಅಪನಂಬಿಕೆಯ ಕಾರಣದಿಂದ ಮನುಷ್ಯನು ದೇವರಿಂದ ಬೇರ್ಪಟ್ಟಿದ್ದಾನೆ. ಈ ಕಾರಣದಿಂದಲೇ ಅಪನಂಬಿಕೆಯು ಮನುಷ್ಯನನ್ನು ದೇವರ ವಿಶ್ರಾಂತಿಯಲ್ಲಿ ಪ್ರವೇಶಿಸುವಂತೆ ತಡೆಯುತ್ತದೆ. (ಇಬ್ರಿಯ 3:19 ಮತ್ತು ವ್ಯಾಖ್ಯಾನ ನೋಡಿರಿ).

**7** ಆದರೆ ದೇವರು ಎಲ್ಲಾ ಪುರುಷರು ಮತ್ತು ಸ್ತ್ರೀಯರಿಗೆ ಹೇಳುವದೇನೆಂದರೆಃ "ಪಶ್ಚಾತ್ತಾಪ ಪಡುವದಕ್ಕೆ ಕಾಲ ಮಿಂಚಿಲ್ಲ; ಇನ್ನೂ ಸಮಯವಿರುತ್ತದೆ" ಎಂಬುದೇ. ಈ ಹೊತ್ತು ದೇವರು ನಮಗೆ ತನ್ನ ವಿಶ್ರಾಂತಿಯಲ್ಲಿ ಪ್ರವೇಶಿಸುವದಕ್ಕೆ ಅವಕಾಶವನ್ನು ಕೊಡುತ್ತಿದ್ದಾನೆ. ಈ ಹೊತ್ತು ನಾವು ಆತನ ಸ್ವರವನ್ನು ಕೇಳಬಹುದು ಮತ್ತು ಅದನ್ನು ಕೇಳಲೇ ಬೇಕು. ಈಗಲೇ ಆ ಸುಪ್ರಸನ್ನತೆಯಕಾಲ; ಇದೇ ಆ ರಕ್ಷಣೆಯದಿನ (2 ಕೊರಿಂಥ 6:2). "ಈ ಹೊತ್ತು" ಎಂಬ ಕಾಲವು ಇರುವಾಗಲೇ ನಾವು ದೇವರ ವಿಶ್ರಾಂತಿಯಲ್ಲಿ ಪ್ರವೇಶಿಸುವ ರಕ್ಷಣೆಯನ್ನು ಪಡೆದುಕೊಳ್ಳುವ ಅವಕಾಶವನ್ನು ಕಳೆದುಕೋಳ್ಳದಿರೋಣ. ನಮ್ಮ ಹೃದಯಗಳನ್ನು ಕಠಿಣಮಾಡಿಕೊಳ್ಳದಿರೋಣ (ಕೀರ್ತನೆಗಳು 95:7-8, ಇಬ್ರಿಯ 3:13-15). .

**8** ಆ ಅವಿಧೇಯರಾದ ಯೆಹೂದ್ಯರು ಅರಣ್ಯದಲ್ಲಿ ಸತ್ತುಹೋದ ಬಳಿಕ ಯೆಹೋಶುವ ಎಂಬ ನಾಯಕನು ಯೆಹೂದ್ಯರ ಮುಂದಿನ ಪೀಳಿಗೆಯನ್ನು ದೇವರು ಅಬ್ರಹಾಮನ ಸಂತತಿಗೆ ಕೊಡುತ್ತೇನೆಂದು ವಾಗ್ದಾನ ಮಾಡಿದ್ದ ಇಸ್ರಾಯೇಲಿನೊಳಗೆ ನಡಿಸಿದನು (ಯೆಹೋಶುವ 1:1-2). ಅಥವಾ ಯೆಹೋಶುವನು ಅವರನ್ನು ದೇವರ "ವಿಶ್ರಾಂತಿಯಲ್ಲಿ" ನಡಿಸಿದನೆಂದು ಹೇಳಬಹುದು. ಮತ್ತು ಯೆಹೋಶುವನು ಯೆಹೂದ್ಯರ ಆ ಪೀಳಿಗೆಯನ್ನು ದೇವರ ವಿಶ್ರಾಂತಿಯಲ್ಲಿ ಸೇರಿಸಿದ ಹಾಗೆಯೇ ಯೇಸು ನಮ್ಮನ್ನು ದೇವರ ವಿಶ್ರಾಂತಿಯಲ್ಲಿ ಸೇರಿಸುತ್ತಾನೆ[5]. ಆದರೆ ಯೆಹೋಶುವನು ಆ ಪು ರಾತನ ಯೆಹೂದ್ಯರಿಗೆ ಒದಗಿಸಿದ ವಿಶ್ರಾಂತಿಯು ಇಂದು ಯೇಸು ನಮಗೆ ನೀಡುವ ವಿಶ್ರಾಂತಿಗಿಂತ ಸಂಪೂರ್ಣ ವ್ಯತ್ಯಾಸವಾಗಿತ್ತು. ಯೆಹೋಶುವನು ಒದಗಿಸಿದ ವಿಶ್ರಾಂತಿಯು ಶಾಶ್ವತವಾಗಿರಲಿಲ್ಲ; ಯಾಕೆಂದರೆ, ಈಲೋಕದಲ್ಲಿನ ಯಾವದೇ ವಿಶ್ರಾಂತಿಯು ಎಂದಿಗೂ ಶಾಶ್ವತವಾಗಿರಲಾರದು. ಅಷ್ಟು ಮಾತ್ರವಲ್ಲದೆ ಯೆಹೋಶುವನ ಕಾಲದ ತರುವಾಯ ಅನೇಕ ವರ್ಷಗಳ ಬಳಿಕ ಕೀರ್ತನೆಗಾರನಾದ ದಾವೀದನು ಮುಂದಣ ಕಾಲದಲ್ಲಿ ಬರಲಿದ್ದ ದೇವರ ಒಂದು "ವಿಶ್ರಾಂತಿಯ" ಬಗ್ಗೆ ಬರೆದನು. ಯೆಹೋಶುವನು ಒದಗಿಸಿದ್ದ ವಿಶ್ರಾಂತಿಯ ಜೊತೆಗೆ ಮುಂದೆ ಇನ್ನೂ ಬರಲಿಕ್ಕಿದ್ದ ಇನ್ನೊಂದು ರೀತಿಯ ವಿಶ್ರಾಂತಿಯಿರುತ್ತದೆ, ಅದನ್ನು ಯೇಸು ತನ್ನಲ್ಲಿ ನಂಬಿಕೆಯಿಡುವವರಿಗೆ ಕೊಡುವನು. ಮತ್ತು ಕ್ರಿಸ್ತನಿಂದ ಕೊಡಲ್ಪಡುವ ವಿಶ್ರಾಂತಿಯು ಶಾಶ್ವತವಾದದ್ದು; ಅದು ಎಂದಿಗೂ ಅಂತ್ಯವಾಗುವದಿಲ್ಲ.

**9-10** ದೇವರ ಜನರು ಅನುಭವಿಸುವದಕ್ಕಿರುವ ಸಬ್ಬತೆಂಬ ವಿಶ್ರಾಂತಿಯು ಇನ್ನೂ ಉಂಟು. ನಾವು ನಂಬಿಕೆಯ ಮೂಲಕ ದೇವರ ಜನರಾಗಿದ್ದೇವೆ. ಇಲ್ಲಿ ದೇವರ ವಿಶ್ರಾಂತಿಯು ಸಬ್ಬತೆಂಬ ವಿಶ್ರಾಂತಿ, ಎಂದು ಕರೆಯಲ್ಪಟ್ಟಿದೆ, ಯಾಕೆಂದರೆ, ದೇವರು ಆರು ದಿನಗಳಲ್ಲಿ ಜಗತ್ತನ್ನು ಸೃಷ್ಟಿಸಿದ ಬಳಿಕ ಏಳನೆಯ– ಅಥವಾ ಸಬ್ಬತ್[6]- ದಿನದಲ್ಲಿ ವಿಶ್ರಾಂತಿ ತೆಗೆದುಕೊಂಡನು. ದೇವರು ಜಗತ್ತನ್ನು ಸೃಷ್ಟಿಸಿದ ಬಳಿಕ ವಿಶ್ರಾಂತಿ ತೆಗೆದುಕೊಂಡ ಪ್ರಕಾರವೇ ನಾವು ಸಹ ಭೂಲೋಕದಲ್ಲಿನ ನಮ್ಮ ಕೆಲಸವು ಮುಗಿದ ಬಳಿಕ ವಿಶ್ರಾಂತಿ ತೆಗೆದುಕೊಳ್ಳಲು ಶಕ್ತರಾಗುವೆವು[7]. ನಾವು ದೇವರ ವಿಶ್ರಾಂತಿಯಲ್ಲಿ ಪಾಲುಗಾರರಾಗುವೆವು. ವಾಸ್ತವದಲ್ಲಿ, "ದೇವರ ವಿಶ್ರಾಂತಿ"ಯು ಸ್ವತಃ ಪರಲೋಕ ರಾಜ್ಯವೇ ಆಗಿದೆ ಎಂಬದನ್ನು ನಾವು ಅರ್ಥಮಾಡಿಕೊಳ್ಳಬಹುದು. ನಮ್ಮ ನಿಜವಾದ ವಿಶ್ರಾಂತಿಯು ನಮಗಾಗಿ ಪರಲೋಕದಲ್ಲಿ ಕಾದಿದೆ.

**11** ಬರಹಗಾರನು ಇಲ್ಲಿ ಇಬ್ರಿಯ 3:12ರ ವಿಚಾರವನ್ನು ಪು ನರಾವರ್ತಿಸುತ್ತಾನೆ.

## ಯೇಸು ಶ್ರೇಷ್ಠ ಮಹಾಯಾಜಕನು (4:12-16)

**12** ನಾವು ದೇವರ ವಾಕ್ಯಕ್ಕೆ ಕಿವಿಗೊಡಬೇಕೆಂದು ಬರಹಗಾರನು ಈಗಾಗಲೇ ನಮಗೆ ಜ್ಞಾಪಕಪಡಿಸಿರುತ್ತಾನೆ (ವಚನ 7). ಆದರೆ ದೇವರ ವಾಕ್ಯವನ್ನು ಕೇಳುವದಷ್ಟೇ ಸಾಲದು ನಾವು ಅದಕ್ಕೆ ವಿಧೇಯರಾಗಬೇಕು (ಮತ್ತಾಯ 7:24-27 ನೋಡಿರಿ). ಯಾಕೆಂದರೆ ದೇವರ ವಾಕ್ಯವು ಸಜೀವವಾದದ್ದು ಕಾರ್ಯಸಾಧಕವಾದದ್ದು. ಪ್ರವಾದಿಯಾದ ಯೇಶಾಯನ ಮುಖಾಂತರ ದೇವರು ತನ್ನ ವಾಕ್ಯದ ವಿಷಯವಾಗಿ ಹೇಳಿದ್ದೇನೆಂದರೆಃ ನನ್ನ ಬಾಯಿಂದ ಹೊರಟ ಮಾತು ನನ್ನ ಇಷ್ಟಾರ್ಥವನ್ನು ನೆರವೇರಿಸಿ ನಾನು ಉದ್ದೇಶಿಸಿದ್ದನ್ನು ಕೈಗೂಡಿಸದ ಹೊರತು ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವದಿಲ್ಲ (ಯೆಶಾಯ 55:11). ದೇವರ ವಾಕ್ಯವು ಇಬ್ಬಾಯಿ ಕತ್ತಿಯ ಹಾಗಿರುತ್ತದೆ. ವಿಶ್ವಾಸಿಗಳಿಗೆ ಅದು ರಕ್ಷಣೆಯನ್ನುಂಟು ಮಾಡುತ್ತದೆ (ರೋಮ 1:16) ಅವಿಶ್ವಾಸಿಗಳಿಗೆ ಅದು ನ್ಯಾಯ ತೀರ್ಪನ್ನುಂಟು ಮಾಡುತ್ತದೆ (ಯೋಹಾನ 3:18). ದೇವರ ವಾಕ್ಯವು ಹದವಾದದ್ದೂ ಆಗಿದೆ ಒಂದು ಕತ್ತಿಯಂತೆ ಅದು ಮನುಷ್ಯನ ಪ್ರಾಣ ಮತ್ತು ಮನಸ್ಸಾಕ್ಷಿಯನ್ನು[8] ತೂರಿಹೋಗುತ್ತದೆ. ಅದು ಹೃದಯದ ಆಲೋಚನೆಗಳನ್ನು ಉದ್ದೇಶಗಳನ್ನೂ (ಮನೋಭಾವಗಳನ್ನೂ) ವಿವೇಚಿಸುತ್ತದೆ. ದೇವರ ವಾಕ್ಯವು ಕ್ರಿಸ್ತನ ವಾಕ್ಯವಾಗಿದೆ; ಆದರೆ ಅದಕ್ಕಿಂತಲೂ ಹೆಚ್ಚಾಗಿ ದೇವರ ವಾಕ್ಯವು ಸ್ವತಃ ಕ್ರಿಸ್ತನೇ (ಯೋಹಾನ 1:14). ರಕ್ಷಣೆಯನ್ನೂ ನ್ಯಾಯತೀರ್ಪನ್ನೂ ಉಂಟುಮಾಡುವಂಥ ಹಾಗೂ ಹೃದಯದ ಆಲೋಚನೆಗಳನ್ನೂ ಮನೋಭಾವವಗಳನ್ನೂ ವಿವೇಚಿಸುವಂಥ ಆ ವಾಕ್ಯವು ಸ್ವತಃ ಕ್ರಿಸ್ತ ನೇ ಆಗಿದ್ದಾನೆ (1 ಕೊರಿಂಥ 4:5 ನೋಡಿರಿ).

**13** ಯೇಸು ನಮ್ಮ ಹೃದಯಗಳೊಳಗೆ ನೋಡುತ್ತಾನೆ. ಯೇಸು ಮತ್ತು ದೇವರಿಗೆ ಮರೆಯಾದದ್ದು ಯಾವದೂ ಇಲ್ಲ. ನಾವು ನಮ್ಮ ಆಲೋಚನೆಗಳನ್ನೂ ಅಭಿಲಾಷೆಗಳನ್ನೂ ನೆರೆಯವನಿಂದ ಅಥವಾ ನಮ್ಮ ಸಂಗಾತಿಯಿಂದ ಅಡಿಗಿಸಿಟ್ಟುಕೊಳ್ಳಬಹುದು; ಅಲ್ಲದೆ, ನಾವು ಅಂತರ್ಯದ ಆಲೋಚನೆಗಳು ಹಾಗೂ ಅಭಿಲಾಷೆಗಳನ್ನು ನಮ್ಮಿಂದಲೂ ಅಡಗಿಸಿಟ್ಟುಕೊಳ್ಳಬಹುದು; ಅಂದರೆ, ನಾವು ನಮ್ಮನ್ನೇ ಮೋಸಮಾಡಿಕೊಳ್ಳಬಹುದು. ಆದರೆ ನಾವು ದೇವರಿಂದ ಯಾವದನ್ನೂ ಬಚ್ಚಿಟ್ಟುಕೊಳ್ಳಲಾರೆವು ಇಲ್ಲವೆ ಆತನನ್ನು ಮೋಸಪಡಿಸಲಾರೆವು. ಪ್ರತಿಯೊಬ್ಬ ಮನುಷ್ಯನೂ ಒಂದು ದಿನ ತನ್ನ ಕುರಿತು ಸಂಪೂರ್ಣವಾದ ಲೆಕ್ಕವನ್ನು ದೇವರಿಗೆ ಒಪ್ಪಿಸಬೇಕು; ಆ ದಿನದಂದು ಸಮಸ್ತವೂ ಮುಚ್ಚುಮರೆಯಿಲ್ಲದ್ದಾಗಿಯೂ ಬೈಲಾದದ್ದಾಗಿಯೂ ಇರುವದು.

ಈ ಹೊತ್ತು ಯೇಸುವಿನ ವಾಕ್ಯವು ನಮ್ಮ ಸಂಗಡ ಮಾತಾಡುತ್ತದೆಃ "ನನ್ನ ಹಿಂದೆ ಬನ್ನಿರಿ" (ಮಾರ್ಕ 1:17). ನಾವು ಯಾವ ಉತ್ತರವನ್ನು ನೀಡುವೆವು?

**14** ಯೇಸು ನಮ್ಮ ಶ್ರೇಷ್ಠ ಮಹಾಯಾಜಕನು. ಇಬ್ರಿಯ 2:17ರಲ್ಲಿ ಬರಹಗಾರನು ಯೇಸುವನ್ನು ಕರುಣೆಯುಳ್ಳವನೂ ನಂಬಿಗಸ್ಥನೂ ಆದ ಮಹಾಯಾಜಕನು ಎಂದು ಕರೆದಿರುತ್ತಾನೆ. ಯೇಸು ಈಗಾಗಲೇ ಆಕಾಶಮಂಡಲಗಳನ್ನು ದಾಟಿ ಹೋದನು

–ಅಂದರೆ, ಆತನು ಪರಲೋಕದೊಳಗೆ ಆರೋಣಗೊಂಡಿದ್ದಾನೆ. ಮತ್ತು ಈಗ ಆತನು ದೇವರ ಬಲಗಡೆಯಲ್ಲಿ ಕುಳಿತುಕೊಂಡಿದ್ದಾನೆ. ಆತನು ನಮಗೋಸ್ಕರ ಸ್ಥಳವನ್ನು ಸಿದ್ಧಮಾಡುವದಕ್ಕಾಗಿ ಮುಂದಾಗಿ ಹೋಗಿದ್ದಾನೆ (ಯೋಹಾನ 14:2). ನಾವು ಆ ಸ್ಥಳವನ್ನು ಕಳೆದುಕೊಳ್ಳದೆ ಇರುವದಕ್ಕೋಸ್ಕರ ನಾವು ಮಾಡಿರುವ ನಂಬಿಕೆಯ ಪ್ರತಿಜ್ಞೆಯನ್ನೂ ಬಿಡದೆ ಹಿಡಿಯೋಣ.

15 ನಾವು ನಿರ್ಬಲರೆಂಬದನ್ನು ಯೇಸು ಬಲ್ಲವನಾಗಿದ್ದಾನೆ. ನಮ್ಮ ಶೋಧನೆಗಳು ಎಷ್ಟು ದೊಡ್ಡವು ಗಳೆಂದು ಆತನು ಬಲ್ಲನು, ಯಾಕೆಂದರೆ ಆತನು ಸರ್ವವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು. ಆದದರಿಂದ, ಆತನು ನಮ್ಮನ್ನು ಕುರಿತು ಅನುತಾಪಪಡುವನು ಹಾಗೂ ಸಹಾಯ ನೀಡುವನು (ಇಬ್ರಿಯ 2:18). ನಾವು ಆತನ ಸಂಗಡ ಸ್ನೇಹಿತನಂತೆ ಮಾತಾಡಬಹುದು. ಆತನು ನಮ್ಮ ಪರಿಸ್ಥಿತಿಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾನೆ. ಯೇಸು... ನಮ್ಮ ಹಾಗೆ ಶೋಧನೆಗೆ ಗುರಿಯಾದನು. ಯೇಸು ಸರ್ವವಿಧದಲ್ಲಿಯೂ ತನ್ನ ಸಹೋದರರಂತಾದನು (ಇಬ್ರಿಯ 2:17). ಹೇಗಿದ್ದರೂ, ಆತನು ಪಾಪವನ್ನು ಎಂದಿಗೂ ಮಾಡಲಿಲ್ಲ ಮತ್ತು ಆತನು ಪಾಪ ಮಾಡಲೇ ಇಲ್ಲವಾದ್ದರಿಂದ ನಮ್ಮ ಮಹಾಯಾಜಕನಾದನು, ಅತನ ಮೂಲಕ ನಾವು ರಕ್ಷಣೆಯನ್ನು ಹೊಂದಿಕೊಳ್ಳಬಹುದು (ಇಬ್ರಿಯ 5:8-9).

16 ನಮಗೆ ಅಂಥ ಕರುಣೆಯುಳ್ಳ ಪರಿಪೂರ್ಣವಾದ ಮಹಾಯಾಜಕನನ್ನು ಹೊಂದಿರುವದರಿಂದ ಈಗ ನಾವು ಕೃಪಾಸನದ ಮುಂದೆ ಬರಬಹುದು. ಅಂದರೆ, ನಾವು ನೇರವಾಗಿ ದೇವರ ಸನ್ನಿಧಿಗೆ ಬರಬಹುದು. ಮತ್ತು ನಾವು ಧೈರ್ಯದಿಂದ ಬರಬಹುದು. ನಾವು ಕರುಣೆ ಮತ್ತು ಕೃಪೆಯನ್ನು ಹೊಂದಿಕೊಳ್ಳುವೆವೆಂಬದನ್ನು ತಿಳಿದಿರುವದರಿಂದ ಧೈರ್ಯದಿಂದ ಬರಬಹುದು. ಈಗಲೂ, ಕ್ರಿಸ್ತನು ದೇವರ ಬಲಗಡೆಯಲ್ಲಿದ್ದು ನಮ್ಮ ಪರವಾಗಿ ಪ್ರಾರ್ಥಿಸುತ್ತಿದ್ದಾನೆ (ರೋಮ 8:34; ಇಬ್ರಿಯ 7:25-26 ). ಆದದರಿಂದ, ನಮಗೆ ಸಂಕಷ್ಟ ಶೋಧನೆಗಳು ಬರುವಾಗ ನಾವು ಓಡಿಹೋಗಿ ದೇವರಿಂದ ಬಚ್ಚಿಟ್ಟು ಕೊಳ್ಳದಿರೋಣ; ಬದಲಾಗಿ, ನಾವು ತಕ್ಷಣವೇ ಯೇಸುವಿನ ಬಳಿಗೆ ಹೋಗೋಣ, ಮತ್ತು ಆತನು ನಮ್ಮ ಕಷ್ಟದ ಸಮಯದಲ್ಲಿ ನಮಗೆ ಸಹಾಯ ಮಾಡುವನು.

---

## ಅಧ್ಯಾಯ - 5

### ನಮ್ಮ ಮಹಾಯಾಜಕನು (5:1-10)

1 ಯಾವನಾದರೂ ಯೆಹೂದ್ಯ ಮಹಾಯಾಜಕನಾಗುವದಕ್ಕೆ ಎರಡು ಸಂಗತಿಗಳು ಆವಶ್ಯಕವಾಗಿದ್ದವು. ಮೊದಲನೆಯದಾಗಿ, ಮಹಾಯಾಜಕನು ಮನುಷ್ಯರೊಳಗಿಂದ ಆರಿಸಲ್ಪಟ್ಟವನಾಗಿರುತ್ತಿದ್ದನು; ಅಂದರೆ, ಅವನು ಸ್ವತಃ ಮನುಷ್ಯನಾಗಿರಬೇಕಿತ್ತು. ಎರಡನೆಯದಾಗಿ, ಮಹಾಯಾಜಕನು ದೇವರಿಂದ ನೇಮಿಸಲ್ಪಡುತ್ತಿದ್ದನು. ದೇವರಿಗೆ ಕಾಣಿಕೆಗಳನ್ನೂ ಪಾಪನಿವಾರಣಕ್ಕಾಗಿ ಯಜ್ಞಗಳನ್ನೂ ಸಮರ್ಪಿಸುವದು ಮಹಾಯಾಜಕನ ಕೆಲಸವಾಗಿತ್ತು. ಈ ಕಾಣಿಕೆಗಳನ್ನು ಯಜ್ಞಗಳನ್ನೂ ಸಮರ್ಪಿಸುವದರ ಮೂಲಕ ಮಹಾಯಾಜಕನು ಜನರ ಪಾಪಗಳಿಗಾಗಿ ಪ್ರಾಯಶ್ಚಿತ ಮಾಡುತ್ತಿದ್ದನು.

2 ಯೆಹೂದ್ಯ ಮಹಾಯಾಜಕರು ಸ್ವತಃ ಮನುಷ್ಯರಾಗಿದ್ದರಾದ್ದರಿಂದ ಅವರು ತಾವೇ ಕಾಲಕಾಲಕ್ಕೆ ಪಾಪದಲ್ಲಿ ಬೀಳುತ್ತಿದ್ದರು. ಆದದರಿಂದ, ಅವರು ತಾವೇ ಬಲಹೀನರಾಗಿರುವದರಿಂದ ಅವರು ಜ್ಞಾನವಿಲ್ಲದವರನ್ನೂ ಮಾರ್ಗತಪ್ಪಿ ನಡೆಯುವ ವರನ್ನೂ ತಾಳ್ಮೆಯಿಂದ ಸಹಿಸಿಕೊಳ್ಳುವದಕ್ಕೆ ಶಕ್ತರಾಗಿದ್ದನು. ಹೇಗಿದ್ದರೂ, ಅವರು ಬೇಕೆಂದೇ ಪಾಪ ಮಾಡುವ ಹಾಗೂ ಪಶ್ಚಾತ್ತಾಪ ಪಡಲು ನಿರಾಕರಿಸಿದವರ ವಿಷಯದಲ್ಲಿ ತಾಳ್ಮೆಯಿಂದ ಸಹಿಸಿಕೊಳ್ಳಲಿಲ್ಲ. ಯಹೂದ್ಯ ಧರ್ಮಶಾಸ್ತ್ರದ ಪ್ರಕಾರವಾಗಿಗೊತ್ತಿದ್ದೂ ಪಾಪ ಮಾಡಿದವರಿಗೆ ಕ್ಷಮಾಪಣೆ ಇರಲಿಲ್ಲ (ಅರಣ್ಯಕಾಂಡ 15:27-31 ಇಬ್ರಿಯ 9:7 ನೋಡಿರಿ).

3 ಯೆಹೂದ್ಯ ಮಹಾಯಾಜಕರು ಸ್ವತಃ ಆಗಾಗ ಪಾಪವನ್ನು ಮಾಡುತ್ತಿದ್ದದರಿಂದ ಅವರು ಜನರ ಪಾಪಗಳಿಗಾಗಿ ಯಜ್ಞವನ್ನು ಸಮರ್ಪಿಸುವದಕ್ಕೆ ಮುಂಚೆ ತಮ್ಮ ಪಾಪಗಳಿಗಾಗಿ ಯಜ್ಞವನ್ನು ಅರ್ಪಿಸಬೇಕಾಗಿತ್ತು (ಯಾಜಕ ಕಾಂಡ 16:6). ಸ್ವತಃ ತನ್ನ ಪಾಪಗಳಿಂದ ಶುದ್ಧನಾದ ಮಹಾಯಾಜಕನು ಮಾತ್ರವೇ ಇತರರು ಪಾಪಗಳಿಗಾಗಿ ಯಜ್ಞಗಳನ್ನು ಸಮರ್ಪಿಸಬಲ್ಲವನಾಗಿದ್ದನು.

4 ಮಹಾ ಯಾಜಕರು ತಮ್ಮನ್ನು ತಾವೇ ಆ ಉದ್ಯೋಗಕ್ಕೆ ನೇಮಿಸಿಕೊಳ್ಳಲಿಲ್ಲ. ಅವರು ಯಾವಾಗಲೂ ದೇವರಿಂದ ನೇಮಿಸಲ್ಪಡುತ್ತಿದ್ದರು. ಮೋಶೆಯ ಅಣ್ಣನಾದ ಆರೋನನು ಪ್ರಥಮ ಯೆಹೂದ್ಯಮಹಾಯಾಜಕನಾಗಿದ್ದನು (ವಿಮೋಚನ ಕಾಂಡ 28:1-2).

5 ಅದೇ ವಿಧದಲ್ಲಿ, ಕ್ರಿಸ್ತನು ತನ್ನನ್ನು ತಾನೇ ಮಹಾಯಾಜಕನಾಗಿ ನೇಮಿಸಿಕೊಳ್ಳಲಿಲ್ಲ; ಆತನು ದೇವರಿಂದ ನೇಮಿಸಲ್ಪಟ್ಟಿದ್ದನು. ದೇವರು ಕ್ರಿಸ್ತನನ್ನು ಮಹಾಯಾಜಕನನ್ನಾಗಿ ಮಾತ್ರವೇ ಮಾಡಲಿಲ್ಲ ಆತನು ಅವನನ್ನು ತನ್ನ ಮಗ ನನ್ನಾಗಿಯೂ ಮಾಡಿದನು. ಬರಹಗಾರನು ಇಲ್ಲಿ ಕೀರ್ತನೆಗಳು 2:7 ರಿಂದ ಉಲ್ಲೇಖಿಸುತ್ತಾನೆ.

6 ದೇವರು ಕ್ರಿಸ್ತನನ್ನು ಸದಾಕಾಲವೂ ಯಾಜಕ ಆಗಿರುವಂತೆ ನೇಮಿಸಿದನು. ಆದರೆ ಇಲ್ಲಿ ಒಂದು ಸಮಸ್ಯೆ ಕಾಣಿಸುತ್ತದೆ. ಎಲ್ಲಾ ಯೆಹೂದ್ಯ ಮಹಾಯಾಜಕರೂ ಪ್ರಥಮ ಮಹಾಯಾಜಕನಾದ ಆರೋನನ ವಂಶಕ್ಕೆ ಸೇರಿದವರಾಗಿರಬೇಕಿತ್ತು.

ಆದರೆ ಕ್ರಿಸ್ತನು ಆರೋನ ವಂಶದಲ್ಲಿ ಅಲ್ಲ, ಆದರೆ ದಾವೀದನ ವಂಶದಲ್ಲಿ ಹುಟ್ಟಿ ಬಂದಿದ್ದನು, ದಾವೀದನು ಯೆಹೂದ್ಯರ ಪ್ರಸಿದ್ಧ ಅರಸನಾಗಿದ್ದನು. ಆದದರಿಂದ, ಕ್ರಿಸ್ತನು ಹೇಗೆ ನಿಜವಾದ ಮಹಾಯಾಜಕನಾಗಿರಲು ಸಾಧ್ಯ? ಇಲ್ಲಿ ಬರಹಗಾರನು ಕೀರ್ತನೆಗಳು 110:4ರಿಂದ ಉಲ್ಲೇಖಿಸುತ್ತಾ ನೀಡುವ ಉತ್ತರವೇನೆಂದರೆಃ ಕ್ರಿಸ್ತನು ಆರೋನ ಕ್ರಮದಲ್ಲಿ ಮಹಾಯಾಜಕನಾಗಿರಲಿಲ್ಲ, ಆದರೆ ಮೆಲ್ಕಿಜೆದೇಕನ ತರಹದ ಮಹಾಯಾಜಕನಾಗಿದ್ದನು.

ಮೆಲ್ಕಿಜೆದೇಕನು ಯಾರು? ಆತನು ಆರೋನಗಿಂತಲೂ ಬಹುಕಾಲದ ಮುಂಚೆ ದೇವರ ಯಾಜಕನಾಗಿದ್ದನು. ಆತನು ಸಾಲೇಮಿನ ಅಂದರೆ, ಯೆರೂಸಲೇಮಿನ– ಅರಸನಾಗಿದ್ದನು [9] (ಆದಿಕಾಂಡ 14:18). ಹೀಗೆ ಆತನು ಯಾಜಕನೂ ಅರಸನೂ ಆಗಿದ್ದನು. ಅರಸನಾದ ದಾವೀದನು ಅನಂತರ "ಯೆರೂಸಲೇಮಿನ ಅರಸನಾದದ್ದರಿಂದ" ಆತನು ಮೆಲ್ಕಿಜೆದೇಕನ ಕ್ರಮದಲ್ಲಿದ್ದನು. ಆದದರಿಂದ, ಯೇಸು ಅರಸನೂ ಮೆಲ್ಕಿಜೆದೇಕನ ಕ್ರಮದಲ್ಲಿದ್ದನು. ಆದದರಿಂದ ಯೇಸು ಅರಸನೂ ಮೆಲ್ಕಿಜೆದೇಕನ ತರಹದ ಮಹಾಯಾಜಕನೂ ಆಗಿದ್ದಾನೆ. (ವಚನ 10).

7 1ನೇ ವಚನದಲ್ಲಿ ಬರಹಗಾರನು ಮಹಾಯಾಜಕರು ಮನುಷ್ಯರಾಗಿದ್ದರೆಂದು ಹೇಳಿರುತ್ತಾನೆ. ಆದದರಿಂದ, ಯೇಸು ಮಹಾಯಾಜಕನಾಗಿ ಸೇವೆಮಾಡುವದಕ್ಕಾಗಿ ತಾನೂ ಮಾನವನಾಗಿರಬೇಕಾಗಿತ್ತು. ಈ ವಚನದಲ್ಲಿ, ಬರಹಗಾರನು ಮನುಷ್ಯನಾಗಿದ್ದಯೇಸುವಿನಜೀವಿತಒಂದುಕೋನವನ್ನುಬಣ್ಣಿಸುತ್ತಾನೆ(ಮಾರ್ಕ14:32-36ನೋಡಿರಿ). ಯೇಸು ನಮ್ಮ ಹಾಗೆಯೇ ಎಲ್ಲಾ ಶೋಧನೆಗಳು ಹಾಗೂ ಬಲಹೀನತೆಗಳನ್ನು ಹೊಂದಿರುವ ಒಬ್ಬ ಮನುಷ್ಯನಂತಿದ್ದನು. ಆತನು ದೇವರ ಮಗನಾಗಿದ್ದಾಗ್ಯು ಆತನು ನಮ್ಮ ಹಾಗೆಯೇ ಎಲ್ಲಾ ವಿಧವಾದ ಕಷ್ಟಗಳನ್ನು ಸಮಸ್ಯೆಗಳನ್ನು ಸಹಿಸಿಕೊಂಡನು. ಆತನು ಹಸಿವೆಗೊಂಡಾಗ ಕಲ್ಲುಗಳನ್ನು ರೊಟ್ಟಿಯಾಗಿ ಮಾರ್ಪಡಿಸಬಹುದಿತ್ತು; ಆದರೆ ಆತನು ಹಾಗೆ ಮಾಡಲಿಲ್ಲ (ಮತ್ತಾಯ 4:2-4). ಆತನು ಬಂಧಿಸಲ್ಪಟ್ಟಾಗ ತನ್ನ ಸಹಾಯಕ್ಕಾಗಿ ದೇವದೂತರ ಹನ್ನೆರಡು ದಂಡುಗಳನ್ನು ಕರೆಯಬಹುದಿತ್ತು ಆದರೆ ಆತನು ಹಾಗೆ ಮಾಡಲಿಲ್ಲ (ಮತ್ತಾಯ 26:53). ಸಾಮಾನ್ಯ ಮನುಷ್ಯರಾದ ನಾವು ಕಷ್ಟಗಳನ್ನು ನೋವು ಗಳನ್ನೂ ಅನುಭವಿಸಬೇಕಾಗಿರುವ ಪ್ರಕಾರವೇ ಆತನು ಸಹ ಕಷ್ಟ ನೋವು ಗಳನ್ನು ಅನುಭವಿಸಿದನು. ಹೀಗೆ ಯೇಸು ನಮ್ಮ ಪ್ರತಿಯೊಂದು ಪರಿಸ್ಥಿತಿಯಲ್ಲಿ ನಮ್ಮ ಸಂಗಡ ಅನುತಾಪಪಡಬಲ್ಲನು, ಯಾಕೆಂದರೆ ನಾವು ಅನುಭವಿಸಬೇಕಾಗಿರುವ ಪ್ರತಿಯೊಂದು ರೀತಿಯ ಕಷ್ಟಗಳನ್ನು ಆತನು ತಾನೇ ಅನುಭವಿಸಿದ್ದಾನೆ (ಇಬ್ರಿಯ 2:18; 4:15).

ಆದರೆ ಒಂದು ಕ್ಷಣ ಆಲೋಚಿಸಿರಿಃ ಯೇಸುವಿನ ಬಾಧೆಯು ನಮ್ಮದಕ್ಕಿಂತಲೂ ಎಷ್ಟೋ ಹೆಚ್ಚಾಗಿತ್ತು. ನಾವು ಬಾಧೆಯನನ್ನನುಭವಿಸುವಾಗ ಯೇಸು ನಮ್ಮೊಂದಿಗೆ ಇದ್ದಾನೆಂದು ನಾವು ತಿಳಿದಿರುತ್ತೇವೆ. ನಾವು ಎಂದಿಗೂ ಒಬ್ಬಂಟಿಗರಲ್ಲ. ಆದರೆ ಯೇಸು ಬಾಧೆಯನ್ನನುಭವಿಸುವಾಗ ವಿಶೇಷಾಗಿ ಆತನು ಶಿಲುಬೆಯ ಮೇಲೆ ಸಾಯುವಾಗ ಒಬ್ಬಂಟಿಗನಾಗಿ ಅನುಭವಿಸಿದನು. ಆ ವೇಳೆಯಲ್ಲಿ ದೇವರು ಸಹ ಅವನನ್ನು ಕೈ ಬಿಟ್ಟನು (ಮಾರ್ಕ 15:34).

ಯೇಸು ದೇವರ ಮೇಲಣ ಭಯಭಕ್ತಿಯ ನಿಮಿತ್ತ ಕೇಳಲ್ಪಟ್ಟನು ಎಂದು ಬರಹಗಾರನು ಹೇಳುತ್ತಾನೆ. ಯೇಸು ತಾನು ಶಿಲುಬೆಯ ಮೇಲಿನ ಮರಣದಿಂದ ರಕ್ಷಿಸಲ್ಪಡಬೇಕೆಂದು ಬೇಡಿಕೊಂಡನು (ಮಾರ್ಕ 13:35-36). ಆದರೆ ದೇವರು ಆ ಪ್ರಾರ್ಥನೆಯನ್ನು ಈಡೇರಿಸಲಿಲ್ಲ. ದೇವರು ಯೇಸುವನ್ನು ಮರಣಕ್ಕೆ ತಪ್ಪಿಸಿ ಕಾಪಾಡ ಶಕ್ತನಾಗಿದ್ದನು ಆದರೆ ಆತನು ಹಾಗೆ ಮಾಡದಿರಲು ತೀರ್ಮಾನಿಸಿದನು. ಹೇಗಿದ್ದರೂ, ರಕ್ಷಿಸಲ್ಪಡಬೇಕೆಂಬ ಯೇಸುವಿನ ಮರಣದ ಮೂರು ದಿವಸಗಳ ನಂತರ ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು.

8 ಯೇಸು ದೇವಕುಮಾರನಾಗಿದ್ದನಾದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು. ಅದರ ಅರ್ಥವೇನು? ಸಾಧಾರಣ ಮನುಷ್ಯರಾದ ನಾವು ನಮ್ಮ ಅವಿಧೇಯತೆಯ ಕಾರಣದಿಂದ ನಮ್ಮ ಮೇಲೆ ಬರುವಂಥ ಬಾಧೆಗಳ ಮೂಲಕ ವಿಧೇಯತೆಯನ್ನು ಕಲಿತುಕೊಳ್ಳುತ್ತೇವೆ. ಆದರೆ ಯೇಸು ಎಂದಿಗೂ ಅವಿಧೇಯನಾಗಲಿಲ್ಲ. ವಾಸ್ತವದಲ್ಲಿ, ಆತನ ವಿಧೇಯತೆಯ ನಿಮಿತ್ತವೇ ಅವನ ಮೇಲೆ ಬಾಧೆಗಳು ಬಂದಿದ್ದವು . ದೇವರಿಗೆ ಸಂಪೂರ್ಣವಾಗಿ ವಿಧೇಯವಾಗುವದು ಎಷ್ಟು ಕಷ್ಟಕರವಾದದ್ದೆಂಬದನ್ನು ಯೇಸು ಕಲಿತುಕೊಂಡನು. ಆತನು ದೇವರಿಗೆ ವಿಧೇಯರಾಗುವವರ ಮೇಲೆ ಬರುವಂಥ ಬಾಧೆಯನ್ನು ಅನುಭವಿಸಿದನು.

ಈ ಪತ್ರಿಕೆಯು ಯಾರಿಗೆ ಬರೆಯಲ್ಪಟ್ಟಿತೋ ಆ ಇಬ್ರಿಯ ಕ್ರೈಸ್ತರು ಈಗಾಗಲೇ ಅವರು ಕ್ರಿಸ್ತನಿಗೆ ವಿಧೇಯರಾಗಿದ್ದರ ಕಾರಣದಿಂದ ಯಾವದೋ ಬಾಧೆಯನ್ನನುಭಿಸಲಾರಂಬಿಸಿದ್ದರು. ಆದರೆ ಈಗ ಅದರ ಫಲಿತವಾಗಿ ಅವರು ಹಿಂಜರಿಯಲಿದ್ದರು; ಅವರು ಕ್ರಿಸ್ತನನ್ನು ನಿರಾಕರಿಸುವ ಸಾಧ್ಯತೆಯಿತ್ತು. ಆದದರಿಂದ, ಅವರು ಯೇಸುವನ್ನು ಜ್ಞಾಪಿಸಿಕೊಳ್ಳಲಿ, ಆತನು ವಿಧೇಯನಾಗಿ ಕೊನೆಯವರೆಗೂ ಬಾಧೆಯನ್ನು ಸಹಿಸಿಕೊಂಡನು.

9 ಯೇಸು ಬಾಧೆಗಳ ಮೂಲಕ ಸಿದ್ಧಿಗೆ ತರಲ್ಪಟ್ಟನು (ಇಬ್ರಿಯ 2:10). ಆತನು ಎಲ್ಲದರಲ್ಲಿಯೂ ವಿಧೇಯತೆಯುಳ್ಳವನಾಗಿದ್ದನು. ಆತನು ಪಾಪಮಾಡಲಿಲ್ಲ. ಆದದರಿಂದ, ಒಬ್ಬ ಪರಿಪೂರ್ಣನಾದ ಮಹಾಯಾಜಕನಾಗಿರುವ ಆತನು ತನಗೆ ವಿಧೇಯರಾಗುವವರೆಲ್ಲರಿಗೂ ನಿರಂತರವಾದ ರಕ್ಷಣೆಯನ್ನು ನೀಡುವದಕ್ಕೆ ಶಕ್ತನಾಗಿದ್ದಾನೆ. ಯೇಸು ತನ್ನ ವಿಧೇಯತೆಯ ಕಾರಣದಿಂದಲೇ ನಿರಂತರವಾದ ರಕ್ಷಣೆಗೆ ಕಾರಣನಾದನು. ಅದೇ ವಿಧದಲ್ಲಿ ನಾವು ಆತನಿಗೆ ವಿಧೇಯರಾಗುವದರ ಮೂಲಕವೇ ನಾವು ಆ ರಕ್ಷಣೆಯನ್ನು ಪಡೆದುಕೊಳ್ಳುವೆವು [10].

ಯೇಸು ತನಗೆ ವಿಧೇಯರಾಗುವವರೆಲ್ಲರಿಗೂ ರಕ್ಷಣೆಗೆ ಮೂಲಕಾರಣನಾಗಿದ್ದಾನೆ –ಅಂದರೆ, ಆತನನ್ನು ನಂಬುವವರೆಲ್ಲರಿಗೂ ಮೊದಲು ನಂಬಿಕೆ; ನಂಬಿಕೆಯಿಲ್ಲದ ನಿಜವಾದ ನಂಬಿಕೆಯು ಇರಲಾರದು (ಯಾಕೋಬ 2:14-17 ಮತ್ತು ವ್ಯಾಖ್ಯಾನ ನೋಡಿರಿ). ನಂಬಿಕೆ ಮತ್ತು ವಿಧೇಯತೆಗಳೆರಡೂ ನಮ್ಮ ರಕ್ಷಣೆಗೆ ಅವಶ್ಯಕವಾಗಿವೆ.

**10** ವಚನ 6 ಮತ್ತು ವ್ಯಾಖ್ಯಾನ ನೋಡಿರಿ.

## ಹಾಲು ಮತ್ತು ಗಟ್ಟಿಯಾದ ಆಹಾರ (5:11-14)

**11-12** ಈ ಪತ್ರಿಕೆಯ ವಾಚಕರಾದ ಇಬ್ರಿಯರು ನಂಬಿಕೆಯಲ್ಲಿ ಕುಂಠಿತ ಬೆಳವಣಿಗೆ ಹಾಗೂ ಪರಿಪಕ್ವತೆಯುಳ್ಳವರಾಗಿದ್ದರು. ಅವರು ಇನ್ನೂ ಆತ್ಮೀಕ ಕೂಸುಗಳಂತಿದ್ದರು (1 ಕೊರಿಂಥ 3:1-2ನೋಡಿರಿ). ಅವರು ದೇವರ ವಾಕ್ಯಗಳ ಮೂಲಪಾಠಗಳನ್ನು ಸಹ ಪೂರ್ಣವಾಗಿ ಕಲಿತಿರಲಿಲ್ಲ (ವಚನ 12). ದೇವರ ವಾಕ್ಯವು ಹಾಲು ಮತ್ತು ಗಟ್ಟಿಯಾದ ಆಹಾರ ಇವೆರಡನ್ನೂ ಒಳಗೊಂಡಿದೆ (ಮತ್ತಾಯ 4:4 ನೋಡಿರಿ). "ಹಾಲು" ಹೊಸ ವಿಶ್ವಾಸಿಗಳಿಗಾಗಿಯೂ (1 ಪೇತ್ರ 2:2); "ಗಟ್ಟಿಯಾದ ಆಹಾರವು" ಪರಿಪಕ್ವಗೊಂಡ ವಿಶ್ವಾಸಿಗಳಿಗಾಗಿಯೂ ಇರುತ್ತದೆ.

**13** ಈ ಇಬ್ರಿಯರು ಆತ್ಮೀಕ ಅರ್ಥದಲ್ಲಿ ಹಾಲು ಕುಡಿಯತಕ್ಕಾಗಿ ಮಾತ್ರವೇ ಜೀವಿಸುತ್ತಿದ್ದಾರೆ. ಪ್ರಾರಂಭದಲ್ಲಿ ತಮ್ಮ ನಂಬಿಕೆಯೊಳಗೆ ಸ್ವಲ್ಪ ಬೆಳೆದವರಾಗಿ ಅವರು ಈಗ ಬೆಳೆಯುವದನ್ನು ನಿಲ್ಲಿಸಿದ್ದರು. ಅವರು ಕೂಸಿನಂತೆ ಹಾಲನ್ನು ಮಾತ್ರವೇ ಕುಡಿಯುವದು ಸುಲಭವೆಂದು ಕಂಡುಕೊಂಡಿದ್ದರು.

ನಮಗೆ ಬೆಳೆಯುವದಕ್ಕಾಗಿ ಗಟ್ಟಿಯಾದ ಆಹಾರ ಅಗತ್ಯವಾಗಿರುತ್ತದೆ. ಆತ್ಮೀಕವಾಗಿ ಬೆಳೆಯುವದಕ್ಕಾಗಿ ನಮಗೆ ನೀತಿವಾಕ್ಯದ ಬೋಧನೆಗಳು ಅಗತ್ಯವಾಗಿರುತ್ತವೆ. ಇಲ್ಲಿ ಬರಹಗಾರನ ತಾತ್ಪರ್ಯವೇನೆಂದರೆ, ನಮ್ಮನ್ನು ನೀತಿಯ ನಿಮಿತ್ತವಾಗಿ ಬಾಧೆಯನ್ನನುಭವಿಸಲು ಸಿದ್ಧಗೊಳಿಸುವ ಉಪದೇಶದ ಅಗತ್ಯವಿರುತ್ತದೆ. (ಮತ್ತಾಯ 5:10; 2 ತಿಮೊಥೆ 3:12). ಈ ಇಬ್ರಿಯರು ಈ ವಿಧದಲ್ಲಿ ಬಾಧೆಯನ್ನನುಭವಿಸಲು ಸಿದ್ಧರಾಗಿರಲಿಲ್ಲ. ಅವರಿಗೆ ನಿಜವಾದ ನೀತಿಯ ಕುರಿತು ಹೆಚ್ಚಾಗಿ ತಿಳುವಳಿಕೆಯಿರಲಿಲ್ಲ.

**14** ಇಲ್ಲಿ ಗಟ್ಟಿಯಾದ ಆಹಾರ ಎಂದರೆ ಯೇಸುವಿನ ಕಠಿಣವಾದ ಹಾಗೂ ಆಳವಾದ ಉಪದೇಶವಾಗಿರುತ್ತದೆ. ನಾವು ಅಂಥ "ಆಹಾರ" ಸೇವಿಸುವಾಗ ಕ್ರಿಸ್ತನಲ್ಲಿ ಬೆಳೆಯುವೆವು. ಮತ್ತು ನಾವು ಕ್ರಿಸ್ತನಲ್ಲಿ ಬೆಳೆಯುತ್ತಿರುವ ಹಾಗೆ ಇದು ಒಳ್ಳೇದು ಅದು ಕೆಟ್ಟದ್ದು ಎಂಬ ಭೇದವನ್ನು ತಿಳಿಯುವದಕ್ಕೆ ಹೆಚ್ಚು ಶಕ್ತರಾಗುತ್ತೇವೆ. ನಾವು ನಮ್ಮ ಸ್ವಂತ ಜೀವಿತಗಳಲ್ಲಿನ ಪಾಪ ಹಾಗೂ ಕ್ರಿಸ್ತನ ಜೀವಿತದಲ್ಲಿನ ಒಳ್ಳೇದನ್ನು ಸ್ಪಷ್ಟವಾಗಿ ತಿಳಿಯುವದಕ್ಕೆ ಶಕ್ತರಾಗುವೆವು. ಆದರೆ ಈ ರೀತಿಯಾಗಿ ಬೆಳೆಯುವದಕ್ಕೆ ನಮಗೆ ಗಟ್ಟಿಯಾದ ಆಹಾರ ಅಗತ್ಯವಾಗಿರುತ್ತದೆ. ನಾವು ಹಾಲನ್ನಷ್ಟೇ ಕುಡಿಯುವದರಿಂದ ಎಂದಿಗೂ ಪರಿಪಕ್ವಗೊಳ್ಳುವದಿಲ್ಲ!

---

# ಅಧ್ಯಾಯ - 6

## ಹಿಂಜರಿದು ಬಿದ್ದು ಹೋಗುವದರ ವಿರುದ್ಧ ಎಚ್ಚರಿಕೆ (6:1-12)

**1** ಈ ಇಬ್ರಿಯರು ಕೇವಲ "ಹಾಲು" ಕುಡಿಯುತ್ತಲಿದ್ದಾಗ್ಯು, ಬರಹಗಾರನು ಈಗ ಅವರಿಗೆ ಸ್ವಲ್ಪ "ಗಟ್ಟಿಯಾದ ಆಹಾರ" –ಅಂದರೆ, ಹೆಚ್ಚು ಮುಂದುವರೆದ ಹಾಗೂ ಕಠಿಣವಾದ ಉಪದೇಶವನ್ನು ನೀಡುವದಕ್ಕೆ ತೀರ್ಮಾನಿಸುತ್ತಾನೆ. ಅವರು ಸ್ವಲ್ಪ ಗಟ್ಟಿಯಾದ ಆಹಾರವನ್ನು ಸ್ವೀಕರಿಸುವದಾದರೆ ಮಾತ್ರವೇ ತನ್ನ ನಂಬಿಕೆಯಲ್ಲಿ ಹೆಚ್ಚಾಗಿ ಬೆಳೆಯುವದಕ್ಕೆ ಶಕ್ತರಾಗುವರೆಂಬದನ್ನು ಬರಹಗಾರನು ಬಲ್ಲವನಾಗಿದ್ದಾನ (ಇಬ್ರಿಯ 5:14).

ಆದದರಿಂದ .....ಪರಿಪೂರ್ಣವಾದ ತಿಳುವಳಿಕೆಗೆ ಸಾಗುತ್ತಾ ಹೋಗೋಣ ಎಂದು ಬರಹಗಾರನು ಹೇಳುತ್ತಾನೆ. ಕ್ರೈಸ್ತೀಯ ಜೀವಿತದಲ್ಲಿ ನಾವು ಮುಂದೆ ಸಾಗುತ್ತೇವೆ ಇಲ್ಲವೆ ಹಿಂದಕ್ಕಾದರೂ ಸಾಗುತ್ತೇವೆ; ನಿಂತಲ್ಲೇ ನಿಲ್ಲುವದು ಇರುವದಿಲ್ಲ. ನಾವು ಏಕರೀತಿಯಾದ ಆತ್ಮೀಕ ಸ್ಥಿತಿಯಲ್ಲಿಯೇ ದೀರ್ಘಕಾಲ ಉಳಿಯುವದಕ್ಕೆ ಸಾಧ್ಯವಿಲ್ಲ. ಮರದ ಹಾಗೆ ನಾವು ಬೆಳೆಯುತ್ತೇವೆ ಇಲ್ಲವೆ ಒಣಗಿ ಹೋಗುತ್ತೇವೆ.

ಒಮ್ಮೆ ನಾವು ನಮ್ಮ ಕ್ರೈಸ್ತೀಯ ಜೀವಿತದ ಅಸ್ತಿವಾರ ಹಾಕಿದ ಮೇಲೆ ಪುನಃ ಪುನಃ ಅದನ್ನು ಹಾಕಬೇಕಾದ ಅಗತ್ಯವಿಲ್ಲ. ಬರಹಗಾರನು 1ನೇ ವಚನದಲ್ಲಿ ನಾವು ಪುನಃ ಹಾಕಬೇಕಾದ ಅಗತ್ಯವಿಲ್ಲದ ಈ ಅಸ್ತಿವಾರದ ಎರಡು ಭಾಗಗಳನ್ನೂ ಪ್ರಸ್ತಾಪಿಸುತ್ತಾನೆ. ಮೊದಲನೆಯದಾಗಿ, ನಿರ್ಜೀವ ಕರ್ಮಗಳ ಮೇಲಣ ನಂಬಿಕೆಯನ್ನು ಬಿಟ್ಟು ಬಿಡುವದು (ಪಶ್ಚಾತ್ತಾಪ). ಮತ್ತು ಎರಡನೆಯದಾಗಿ, ದೇವರಲ್ಲಿ ನಂಬಿಕೆಯಿಡುವದು ಈ ಎರಡು ಸಂಗತಿಗಳು ನಮ್ಮ ಕ್ರೈಸ್ತ ಜೀವಿತದಲ್ಲಿ ಮೊದಲ ಎರಡು ಹೆಜ್ಜೆಗಳಾಗಿವೆ (ಮಾರ್ಕ 1:15; ಅ.ಕೃತ್ಯ 20:21 ನೋಡಿರಿ).. ನಮಗೆ ಪದೇ ಪದೇ ಈ ಎರಡು ಸಂಗತಿಗಳು ಉಪದೇಶಿಸಲ್ಪಡಬೇಕಾದ ಅಗತ್ಯವಿರುವದಿಲ್ಲ.

ನಿರ್ಜೀವ ಕರ್ಮಗಳು ನಮ್ಮ ಪಾಪಗಳಾಗಿವೆ; ಪಾಪದ ಫಲಿತವು ಮರಣ, ಆತ್ಮೀಕ ಮರಣವಾಗಿದೆ(ರೋಮ 6:2 23). ಇಲ್ಲಿ ಪಶ್ಚಾತ್ತಾಪವು ಈ ಕರ್ಮಗಳಿಗಾಗಿ ಕ್ಷಮಾಪಣೆಯನ್ನು ಕೇಳಬೇಕೆಂಬ ಅರ್ಥವನ್ನು ಮಾತ್ರವೇ ನೀಡುವದಿಲ್ಲ ಈ ಕರ್ಮಗಳಿಂದ ವಿಮುಖರಾಗಬೇಕು ಅವು ಗಳನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕು ಎಂಬ ಅರ್ಥವನ್ನು ಸಹ ನೀಡುತ್ತದೆ.

ರಕ್ಷಣೆಯನ್ನು ಪಡೆಯಬೇಕಾದರೆ ದೇವರಲ್ಲಿ ನಂಬಿಕೆಯಿಡುವದು ಅವಶ್ಯಕವೆಂದು ಬರಹಗಾರನು ಮೇಲೆ ಈಗಾಗಲೇ ಬರೆದಿರುತ್ತಾನೆ. ಇಲ್ಲಿ ದೇವರಲ್ಲಿ ನಂಬಿಕೆಯಿಡುವದು ಎಂಬುದು ಕ್ರಿಸ್ತನಲ್ಲಿ ನಂಬಿಕೆಯಿಡುವದನ್ನು ಸೂಚಿಸುತ್ತದೆ ಆತನ ಮೂಲಕ ನಾವು ರಕ್ಷಣೆಯನ್ನು ಪಡದುಕೊಳ್ಳುತ್ತೇವೆ (ಇಬ್ರಿಯ 5:9).

2 ಬರಹಗಾರನು 1ನೇ ವಚನದಲ್ಲಿ ನಮ್ಮ ಕ್ರೈಸ್ತಿಯ ನಂಬಿಕೆಯ ಅಸ್ತಿರವಾರದ ಎರಡು ಭಾಗಗಳನ್ನು ಪ್ರಸ್ತಾಪಿಸಿದ್ದಾನೆಃ ಪಶ್ಚಾತಾಪ ಮತ್ತು ನಂಬಿಕೆ. ಈಗ ೨ನೇ ವಚನದಲ್ಲಿ, ಆತನು ಈ ಅಸ್ತಿರವಾದ ಇನ್ನೂ ನಾಲ್ಕು ಭಾಗಗಳನ್ನು ನೀಡುತ್ತಾನೆ. ಒಮ್ಮೆ ನಾವು ಈ ವಿಷಯಗಳಲ್ಲಿ ಪ್ರಥಮ ಬೋಧನೆಯನ್ನು ಪಡೆದ ಬಳಿಕ, ನಾವು ಅವು ಗಳ ಕುರಿತು ತಿರಿಗಿ ಪದೇ ಪದೇ ಬೋಧನೆಯನ್ನು ಹೊಂದಿಕೊಳ್ಳುವ ಅಗತ್ಯವಿರುವದಿಲ್ಲ ನಮ್ಮ ನಂಬಿಕೆಯ ಅಸ್ತಿರವಾದ ಹೆಚ್ಚಿನ ನಾಲ್ಕು ಭಾಗಗಳಾವವೆಂದರೆಃ ಮೊದಲನೆಯದಾಗಿ, ದೀಕ್ಷಾಸ್ನಾನ ಎರಡನೆಯದಾಗಿ, ಹಸ್ತಾರ್ಪಣೆ; ಮೂರನೆಯದಾಗಿ, ಸತ್ತವರ ಪು ನರುತ್ಥಾನ; ಮತ್ತು ನಾಲ್ಕನೆಯದಾಗಿ, ನಿತ್ಯವಾದ (ಅಥವಾ ಕಡೇ) ನ್ಯಾಯತೀರ್ಪು ಈ ನಾಲ್ಕು ಸಂಗತಿಗಳು; ಇವು ಗಳ ಜೊತೆಗೆ ೧ನೇ ವಚನದಲ್ಲಿ ಪ್ರಸ್ತಾಪಿಸಿರುವ ಎರಡು ಸಂಗತಿಗಳು ನಮ್ಮ ಕ್ರೈಸ್ತೀಯ ನಂಬಿಕೆಯ ಮುಖ್ಯ ಸಿದ್ಧಾಂತಗಳಾಗಿವೆ. ಈ ಸಂಗತಿಗಳು ನಮ್ಮ ಜೀವಿತಗಳಿಗಾಗಿ ಅಸ್ತಿವಾರ ರೂಪಿಸುತ್ತವೆ. ಒಮ್ಮೆ ಅಸ್ತಿವಾರವು ಹಾಕಲ್ಪಟ್ಟ ಮೇಲೆ ಅದು ಪು ನಃ ಹಾಕಲ್ಪಡುವ ಅಗತ್ಯವಿರುವದಿಲ್ಲ.

ಹಸ್ತಾರ್ಪಣೆಯು ಹೊಸ ಒಡಂಬಡಿಕೆಯ ಕಾಲದಿಂದ ಪ್ರಸ್ತುತ ಕಾಲದವರೆಗೂ ಸಭೆಯಲ್ಲಿನ ಒಂದು ಪದ್ಧತಿಯಾಗಿರುತ್ತದೆ. ಹಸ್ತಾರ್ಪಣೆಯು ಯಾರಿಗಾದರೂ ಪವಿತ್ರಾತ್ಮವರವನ್ನು ನೀಡುವದಕ್ಕಾಗಿ ಅಥವಾ ಯಾರನ್ನಾದರೂ ಸಭೆಯಲ್ಲಿ ಒಂದು ವಿಶೇಷ ಕೆಲಸಕ್ಕೆ ನೇಮಿಸುವದಕ್ಕಾಗಿ ಇಲ್ಲವೆ ರೋಗಿಯನ್ನು ಸ್ವಸ್ಥಪಡಿಸುವದಕ್ಕಾಗಿ ಮಾಡಲ್ಪಡುತ್ತದೆ. (ಅ.ಕೃತ್ಯ 6:6; 8:17; 9:12-17; 19:6 ನೋಡಿರಿ). ಹಸ್ತಾರ್ಪಣೆ ಮಾಡುವದು ಸ್ವತಃ ಮಾಂತ್ರಿಕವಾಗಿ ಈ ಸಂಗತಿಗಳನ್ನು ನೆರವೇರಿಸುವದಿಲ್ಲ; ಬದಲಾಗಿ, ಹಸ್ತಾರ್ಪಣೆ ಮಾಡುವದು ಪವಿತ್ರಾತ್ಮನು ಈ ಕಾರ್ಯಗಳನ್ನು ನೆರವೇರಿಸುತ್ತಿದ್ದಾನೆಂಬ ನಮ್ಮ ನಂಬಿಕೆಯನ್ನು ದೃಢೀಕರಿಸುವದಾಗಿದೆ.

3 ಬರಹಗಾರನು 1ನೇ ವಚನದಲ್ಲಿ ಕ್ರಿಸ್ತನ ವಿಷಯವಾದ ಪ್ರಥಮ ಬೋಧನೆಯನ್ನು (1-2 ವಚನಗಳಲ್ಲಿ ಪಟ್ಟಿಮಾಡಿರುವ ಆರು ಪ್ರಥಮ ಬೋಧನೆಗಳನ್ನು ಬಿಟ್ಟುಬಿಟ್ಟವರಾಗಿ ಪೂರ್ಣವಾದ ತಿಳುವಳಿಕೆಗೆ ಸಾಗುತ್ತಾ ಹೋಗಬೇಕು ಎಂದು ಹೇಳಿದ್ದಾನೆ. ನಮ್ಮ ನಂಬಿಕೆಯ ಅಸ್ತಿವಾರವನ್ನು ಹಾಕಿದ ಬಳಿಕ ನಾವು ಪು ನಃ ಅದನ್ನು ಹಾಕುವದಕ್ಕಾಗಿ ಸಮಯವನ್ನು ಕಳೆಯದಿರೋಣ; ಬದಲಾಗಿ, ಈಗ ನಾವು ಅದರ ಮೇಲೆ ಕಟ್ಟುವವರಾಗಿರೋಣ. ಆದದರಿಂದ, ಬರಹಗಾರನು, ಮತ್ತು ದೇವರ ಚಿತ್ತವಾದರೆ ಹೀಗೆ ಸಾಗುತ್ತಾ ಹೋಗುವೆವು ಎಂದು ಬರೆಯುತ್ತಿದ್ದಾನೆ ಯಾಕೆಂದರೆ ನಾವು ಏನೇ ಆಗಿದ್ದರೂ, ಏನೇ ಮಾಡಿದರೂ ಅದೆಲ್ಲವೂ ದೇವರ ಅಪ್ಪಣೆ ಹಾಗೂ ಕೃಪೆಯಿಂದ ಆಗುತ್ತದೆ.

4-6 ಇಲ್ಲಿ ಬರಹಗಾರನು ಪ್ರಥಮ ಬೋಧನೆಯ ಅಸ್ತಿವಾರವನ್ನು ಎರಡನೆಯ ಸಾರಿ ಹಾಕುವದು ಯಾಕೆ ಅರ್ಥಹೀನಾಗಿದೆಯೆಂಬದನ್ನು ವಿವರಿಸುತ್ತಾನೆ. ಕಾರಣವೇನೆಂದರೆಃ ಒಮ್ಮೆ ಒಬ್ಬ ವ್ಯಕ್ತಿಯು ಈ ಮೂಲ ಬೋಧನೆಗಳನ್ನು– ವಿಶೇಷವಾಗಿ, ಪಶ್ಚಾತಾಪ ಹಾಗು ನಂಬಿಕೆಯ ಕುರಿತ ಬೋಧನೆಗಳನ್ನು (ವಚನ 1)–ತಿಳಿದುಕೊಂಡ ಮೇಲೆ ಅವು ಗಳಿಂದ ವಿಮುಖನಾಗುವದಾದರೆ, ಆ ವ್ಯಕ್ತಿಯಲ್ಲಿ ತಿರಿಗಿ ಮಾನಸಾಂತರವನ್ನು ಹುಟ್ಟಿಸುವದು ಅಸಾಧ್ಯ (ವಚನ 6). ಅಸ್ತಿವಾರವನ್ನು ಎರಡನೆಯ ಬಾರಿಗೆ ಹಾಕುವದು ಅಸಾಧ್ಯ.

ಇಲ್ಲಿ 4-6ವಚನಗಳಲ್ಲಿ ನಾವು ಒಂದು ಅತಿ ಪ್ರಾಮುಖ್ಯವಾದ ಸೈದ್ಧಾಂತೀಕ ಬೋಧನೆಯನ್ನು ನೋಡುತ್ತೇವೆ. ಬರಹಗಾರನು ಇಲ್ಲಿ ಒಂದು ಸಾರಿ ಜ್ಞಾನ ಪ್ರಕಾಶದಲ್ಲಿ ಸೇರಿದ್ದ ಜನರು (ಸುವಾರ್ತೆಯ ಬೆಳಕನ್ನು ಕಂಡವರು), ಪರಲೋಕದಿಂದಾದ ದಾನ (ವರ)ದ ಅನುಭವವನ್ನು ಹೊಂದಿದವರು (ಕ್ರಿಸ್ತನ ಆಶೀರ್ವಾದಗಳು). ಪವಿತ್ರಾತ್ಮನಲ್ಲಿ ಪಾಲುಗಾರರಾಗಿರುವವರು (ವಚನ 4). ಮತ್ತು ದೇವರ ವಾಕ್ಯದ ಶ್ರೇಷ್ಠತೆಯನ್ನೂ ಮುಂದಣ ಯುಗದ ಮಹತ್ವವನ್ನೂ ಅನುಭವಿಸಿದವರು (ವಚನ 5). ಆಗಿರುವ ಕೆಲವೊಂದು ಜನರನ್ನು ಬಣ್ಣಿಸುತ್ತಾನೆ. ಈ ವಚನಗಳಲ್ಲಿ ಬರಹಗಾರನು ನಿಜವಾಗಿಯೂ ಕ್ರೈಸ್ತರಾಗಿರುವ ಜನರನ್ನೂ ಬಣ್ಣಿಸುವಂತೆಯೇ ತೋರುತ್ತದೆ. ಹಾಗಿದ್ದರೂ, ಅಂಥ ಜನರು ಬೇಕೆಂದೇ ಗೊತ್ತಿದ್ದೂ ತಮ್ಮ ನಂಬಿಕೆಯನ್ನು ಕೈಬಿಡುವವರಾಗಿರಬಲ್ಲರು ಎಂದು ಇಲ್ಲಿ ಬರಹಗಾರನು ಹೇಳುತ್ತಾನೆ. ಮತ್ತು ಅವರು ಹಾಗೆ ಮಾಡುವದಾದರೆ– ಭ್ರಷ್ಟರಾದರೆ– ಅವರಿಗೆ ಇನ್ನಾವ ನಿರೀಕ್ಷೆಯೂ ಇರುವದಿಲ್ಲ. ಅವರಲ್ಲಿ ತಿರಿಗಿ ಮಾನಸಾಂತರವನ್ನು ಹುಟ್ಟಿಸುವದು ಅಸಾಧ್ಯ.

ಇಲ್ಲಿ ಭ್ರಷ್ಟರಾಗುವದು ಎಂಬುದರ ಅರ್ಥವೇನು? ಬರಹಗಾರನು ಇಲ್ಲಿ ಚಿಕ್ಕ ಪಾಪಗಳನನು ಮಾಡುವದರ ಬಗ್ಗೆಯಾಗಲಿ ಅಥವಾ ಸ್ವಲ್ಪಕಾಲ ದೇವರ ಚಿತ್ತವನ್ನು ಬಿಟ್ಟು ಅಲೆದಾಡುವ ಬಗ್ಗೆಯಾಗಲಿ ಮಾತಾಡುತ್ತಿರುವಂತೆ ತೋರುವದಿಲ್ಲ– ಅದನ್ನು ನಾವೆಲ್ಲರೂ ಆಗಾಗ ಮಾಡುತ್ತೇವಷ್ಟೆ. ಬದಲಾಗಿ ಬರಹಗಾರನು ಇಲ್ಲಿ ಎಲ್ಲಕ್ಕಿಂತಲೂ ಅತಿ ದೊಡ್ಡದಾದ ಹಾಗೂ ಅತಿಭಯಂಕರವಾದ ಪಾಪದ ಕುರಿತು ಮಾತಾಡುತ್ತಿದ್ದಾನೆ. ಆ ಪಾಪವು ಏನೆಂದರೆಃ ದೇವರ ಬೆಳಕನ್ನು ಕಂಡ ಬಳಿಕವೂ ಅದನ್ನು ತಿರಸ್ಕರಿಸುವದು; ಕ್ರಿಸ್ತನ ಆಶೀರ್ವಾದಗಳನ್ನೂ ವರಗಳನ್ನು ಸ್ವೀಕರಿಸಿಕೊಂಡ ನಂತರವೂ ಕ್ರಿಸ್ತನನ್ನು ತಿರಸ್ಕರಿಸುವದು. ಹೀಗೆ ಮಾಡುವವರು ದೇವರ ಮಗನನ್ನು ಪು ನಃ ಶಿಲುಬೆಗೆ ಹಾಕುವವರಾಗಿದ್ದಾರೆ (ವಚನ 6).

ಅಂಥ ಜನರು ಇನ್ನು ಮೇಲೆ ಮಾನಸಾಂತರ ಪಡುವ ಮನಸ್ಸನ್ನು ಹೊಂದಿರುವದಿಲ್ಲ. ಅವರ ಹೃದಯಗಳು ಕಠಿಣಗೊಂಡಿರುತ್ತದೆ. ದೇವರ ಕೃಪೆಯೂ ಅವರನ್ನು ಸ್ಪರ್ಶಿಸಲಾರದು[11] ಅಂಥ ಜನರು ಕ್ಷಮಾಪಣೆಹೊಂದಲು ಸಾಧ್ಯವಾಗದ ಪಾಪವನ್ನು ಮಾಡಿದ್ದಾರೆ–ಅಂದರೆ, ಪವಿತ್ರಾತ್ಮನ ದೋಷಣೆ, ಅದು ಮಾರ್ಕ 3:28-29ರಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಅಪೊಸ್ತಲನಾದ ಯೋಹಾನನು ಆ ಪಾಪವನ್ನು ಮರಣಕರವಾದ ಪಾಪ ಎಂದು ಕರೆಯುತ್ತಾನೆ (ಯೋಹಾನ 5:16). ಕ್ರಿಸ್ತನು ದಯಪಾಲಿಸುವ ರಕ್ಷಣೆಯನ್ನು ತಿರಸ್ಕರಿಸುವವರಿಗೆ ಇನ್ನಾವ ಕಡೆಯಲ್ಲಿಯೂ ರಕ್ಷಣೆ ದೊರೆಯದು (ಇಬ್ರಿಯ 10:26-27; 2 ಪೇತ್ರ 2:20-21 ನೋಡಿರಿ). ಕ್ರಿಸ್ತನು ಬಿದ್ದು ಹೋಗಿರುವವರಿಗೆ ರಕ್ಷಣೆ ನೀಡುತ್ತಾನೆ ಆದರೆ ಆತನನ್ನು ಬಿಟ್ಟು ಬಿದ್ದುಹೋಗಿರುವವರಿಗೆ ಆತನು ಏನನ್ನೂ ಕೊಡಲಾರನು.

ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆಃ ಒಬ್ಬ ನಿಜವಾದ ಕ್ರೈಸ್ತನು ಭ್ರಷ್ಟನಾಗಿ ತನ್ನ ರಕ್ಷಣೆಯನ್ನು ಕಳೆದುಕೊಳ್ಳುವದು ಸಾಧ್ಯವೋ? ಕೆಲವು ಕ್ರೈಸ್ತರು ಇದು ಸಾಧ್ಯವಿದೆ ಎನ್ನುತ್ತಾರೆ; ಈ ವಾಕ್ಯಭಾಗದಲ್ಲಿ ಪ್ರಸ್ತಾಪಿಸಲಾಗಿರುವ ಭ್ರಷ್ಟರಾದ ಜನರು ಹಿಂದೊಮ್ಮೆ ಪವಿತ್ರಾತ್ಮನಲ್ಲಿ ಪಾಲುಗಾರರಾಗಿದ್ದರು (ವಚನ 4). ನಿಜವಾದ ಕ್ರೈಸ್ತರು ಮಾತ್ರವೇ ಪವಿತ್ರಾತ್ಮನಲ್ಲಿ ಪಾಲುಗಾರರಾಗಬಲ್ಲರಷ್ಟೆ ಎಂದು ಅವರು ತೋರಿಸಿಕೊಡುತ್ತಾರೆ.

ಆದರೆ ಇತರ ಕ್ರೈಸ್ತರು ನಿಜವಾದ ಕ್ರೈಸ್ತನೊಬ್ಬನು ತನ್ನ ರಕ್ಷಣೆಯನ್ನು ಕಳೆದುಕೊಳ್ಳಲು ಸಾಧ್ಯವಿಲ್ಲವೆಂದು ನಂಬುತ್ತಾರೆ. ಇದನ್ನು ನಂಬುವಂತವರು ಹೇಳುವದೇನೆಂದರೆ, 4-6 ವಚನಗಳಲ್ಲಿ ಬರಹಗಾರನು ಒಂದು ಎಚ್ಚರಿಕೆಯನ್ನು ಮಾತ್ರವೇ ನೀಡುತ್ತಿದ್ದಾನೆ; ನಿಜವಾದ ಕ್ರೈಸ್ತನು ವಾಸ್ತವದಲ್ಲಿ ಶಾಶ್ವತವಾಗಿ ಭ್ರಷ್ಟನಾಗಬಲ್ಲನು ಎಂದು ಆತನು ಹೇಳುತ್ತಿಲ್ಲ. ಇಬ್ರಿಯರಿಗೆ ಪತ್ರಿಕೆಯ ಬರಹಗಾರನು ಇಲ್ಲಿ ಸುಮ್ಮನೆ ಪಾಪಮಾಡುತ್ತಿರುವ ಹಾಗೂ ನಂಬಿಕೆಯಲ್ಲಿ ನಿರ್ಬಲರಾಗಿರುವವರು ಭ್ರಷ್ಟರಾಗಬಾರದೆಂದು ಪ್ರಬೋಧಿಸುತ್ತಿದ್ದಾನಷ್ಟೇ ಎಂದು ಅವರು ಹೇಳುತ್ತಾರೆ.

ಆದರೆ ಇನ್ನೂ ಒಂದು ಪ್ರಶ್ನೆಯು ಹಾಗೆಯೇ ಉಳಿಯುತ್ತದೆ. ಒಬ್ಬನು ನಿಜವಾದ ಕ್ರೈಸ್ತ ಹಾಗೂಸುಳ್ಳು ಕ್ರೈಸ್ತನ ನಡುವಿನ ಬೇಧವನ್ನು ಹೇಗೆ ತಿಳಿಯಬಲ್ಲನು? ಪ್ರಾರಂಭದಲ್ಲಿ ಅವರಲ್ಲಿ ಬೇಧವನ್ನು ಹೇಗೆ ತಿಳಿಯಬಲ್ಲನು? ಪ್ರಾರಂಭದಲ್ಲಿ ಅವರಲ್ಲಿ ಭೇದವನ್ನು ಗುರುತಿಸುವದು ಅಸಾಧ್ಯವಾಗಿರುತ್ತದೆ. ಉದಾಹರಣೆಗೆ, ತಾವು ಕ್ರೈಸ್ತರೆಂದು ಹೇಳಿಕೊಳ್ಳುವ ಇಬ್ಬರು ವ್ಯಕ್ತಿಗಳೂ ನಿಜವಾದ ಕ್ರೈಸ್ತರಾಗಿರುವಂತೆ ಕಾಣಿಸುತ್ತಾರೆ. ಆದರೆ ಅನಂತರ ಅವರಲ್ಲೊಬ್ಬರು ಭ್ರಷ್ಟರಾಗುತ್ತಾರೆ. ಹಾಗಾಗುವದೆಂದು ಯಾರೂ ತಿಳಿದಿರಲಾರರು. ಯೇಸು ಹೇಳಿದ ಬಿತ್ತುವವನ ಸಾಮ್ಯದಲ್ಲಿ ಕೆಲವು ಬೀಜಗಳು ಬಂಡೆಯ ನೆಲದಲ್ಲಿ ಬಿದ್ದವು ಮತ್ತು ಕೆಲವು ಬೀಜಗಳು ಮುಳ್ಳು ಗಿಡಗಳಲ್ಲಿ ಬಿದ್ದವು. ಪ್ರಾರಂಭದಲ್ಲಿ ಒಳ್ಳೇ ನೆಲದಲ್ಲಿ ಬಿದ್ದ ಬೀಜಗಳ ಹಾಗೆಯೇ ಈ ಬೀಜಗಳೂ ಶೀಘ್ರವಾಗಿ ಮೊಳಕೆಯೊಡೆದು ಬೆಳೆದವು (ಮಾರ್ಕ 4:5-7). ಸೂರ್ಯನು (ಹಿಂಸೆ) ಮತ್ತು ಮುಳ್ಳುಗಳು (ಶೋಧನೆಗಳು) ಬಂದ ನಂತರವಷ್ಟೆ ಕೆಟ್ಟ ನೆಲ ಹಾಗೂ ಒಳ್ಳೇ ನೆಲಗಳ ನಡುವಿನ ಭೇದವನ್ನು ವಿವೇಚಿಸಲು ಸಾಧ್ಯವಾಯಿತು. ಪ್ರಾರಂಭದಲ್ಲಿ ಬೀಜಗಳೆಲ್ಲವೂ ಅಷ್ಟೇ ಉತ್ತಮವಾಗಿ ಬೆಳೆದವು ಅನಂತರವಷ್ಟೆ ಬಂಡೆನೆಲ ಹಾಗೂ ಮುಳ್ಳುಗಿಡಗಳಲ್ಲಿ ಬಿದ್ದ ಬೀಜಗಳು ಒಣಗಿಹೋದವು.

ಅದೇ ವಿಧದಲ್ಲಿ, ಒಬ್ಬ ವ್ಯಕ್ತಿಯ ಮೇಲೆ ಸಂಕಟಗಳು ಹಾಗೂ ಶೋಧನೆಗಳು ಬಂದು ಅವನು ಸಂಪೂರ್ಣವಾಗಿ ಬಿದ್ದುಹೋಗುವಾಗ ಮಾತ್ರವೇ ನಾವು ಆತನ ವಿಷಯವಾಗಿ "ಅವನು ನಿಜವಾದ ಕ್ರೈಸ್ತನಲ್ಲ" ಎದು ಹೇಳಬಲ್ಲೆವು ಅದಕ್ಕಿಂತ ಮುಂಚೆ ನಾವು ಇನ್ನೊಬ್ಬ ವ್ಯಕ್ತಿಯ ನಂಬಿಕೆಯ ಬಗ್ಗೆ ಎಂದಿಗೂ ಸಂಶಯಪಡಬಾರದು. ಸಂಕಟ ಹಾಗೂ ಶೋಧನೆಯ ಸಮಯವು ಬರುವಾಗ ಸುಳ್ಳುಕ್ರೈಸ್ತನು ಬ್ರಷ್ಟನಾಗುವನು. ಆದರೆ ನಿಜವಾದ ಕ್ರೈಸ್ತನು ದೃಡವಾಗಿ ನಿಲ್ಲುವನು ಮತ್ತು ತಕ್ಕ ಕಾಲದಲ್ಲಿ (ಒಳ್ಳೇ ನೆಲದಲ್ಲಿ ಬಿತ್ತಿದ ಬೀಜದಂತೆ) ಅವನು ಪರಿಪಕ್ವಗೊಂಡು ಫಲನೀಡುವನು (ಮತ್ತಾಯ 7:24-27; 13:24-30 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಇಲ್ಲಿ ಇನ್ನೊಂದು ಸಂಗತಿಯನ್ನು ಕೂಡಿಸುವದು ಅವಶ್ಯಕವಾಗಿರುತ್ತದೆ. ಕೆಲವು ಕ್ರೈಸ್ತರು ಸ್ವಲ್ಪ ಕಾಲದವರೆಗೆ ಅವರು ಭ್ರಷ್ಟರಾಗಿದ್ದಾರೇನೋ ಎಂಬಂತೆ ವರ್ತಿಸುತ್ತಾರೆ. ಅವರು ಪಾಪದಲ್ಲಿ ಬೀಳುತ್ತಾರೆ. ಅವರ ನಂಬಿಕೆ ಬಾಡಿ ಹೋಗುತ್ತದೆ. ಆದರೆ ಅವರು ಸಂಪೂರ್ಣವಾಗಿ ಬಿದ್ದುಹೋಗುವದಿಲ್ಲ. ಅವರ ಅಂತರ್ಯದ ಬುದ್ಧಿಗಳು ಹಾಗೂ ಮನಸಾಕ್ಷಿಗಳು ಭಾರವಾಗುತ್ತವೆ; ಅವರು ಮಾನಸಾಂತರ ಪಡಲು ಆಶಿಸುತ್ತಾರೆ. ಅಂಥಜನರಿಗೆ ನಿರೀಕ್ಷೆಯಿರುತ್ತದೆ. ಅವರು ಕ್ರಿಸ್ತನನ್ನು ಪೂರ್ಣವಾಗಿ ತಿರಸ್ಕರಿಸಿರುವದಿಲ್ಲ. ಹೇಗಿದ್ದರೂ, ಅವರ ಪರಿಸ್ಥಿತಿಯು ಅತಿ ಅಪಾಯದಲ್ಲಿರುತ್ತದೆ; ಯಾಕೆಂದರೆ ಅವರು ದೀರ್ಘಕಾಲದವರೆಗೆ ಮಾನಸಾಂತರ ಪಡುವದಕ್ಕೆ ನಿರಾಕರಿಸುವದಾದರೆ ಕ್ರಿಸ್ತನೆಡೆಗೆ ತಿರಿಗಿ ಬರುವ ಅವಕಾಶವನ್ನು ಅವರು ಸದಕಾಲವೂ ಕಳೆದುಕೊಳ್ಳಬಹುದಾಗಿರುತ್ತದೆ.

ಆದದರಿಂದ, ನಾವು, "ನಾನು ಎಂದಿಗೂ ಭ್ರಷ್ಟನಾಗಲಾರೆ; ನಾನು ಎಂದಿಗೂ ಬಿದ್ದುಹೋಗುವದಿಲ್ಲ" ಎಂದು ಹೇಳದಿರೋಣ. ನಾವು ಪೌಲನ ಮಾತುಗಳನ್ನು ನೆನಪಿಸಿಕೊಳ್ಳೋಣಃ ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ (1 ಕೊರಿಂಥ 10:12). ನಾವು ದೇವರ ಕೃಪೆಯನ್ನು ತಿರಸ್ಕರಿಸಿ ಕ್ರಿಸ್ತನನ್ನು ನಿರಾಕರಿಸುವ ಸಾಧ್ಯತೆಯಿರುತ್ತದೆ. ಯಾವನು ಕಡೇವರೆಗೂ ಧೃಢವಾಗಿ ನಿಂತುಕೊಳ್ಳುವನೆಂಬದನ್ನು ದೇವರೊಬ್ಬನೇ ಬಲ್ಲನು[12].

7-8 ನಾವು ನಿಜವಾದ ಹಾಗೂ ಸುಳ್ಳು ಕ್ರೈಸ್ತರ ಫಲಗಳಿಂದಲೇ ಅವರನಡುವಿನ ಭೇದವನ್ನು ತಿಳಿಯಬಲ್ಲೆವು (ಮತ್ತಾಯ 7:17-20ನೋಡಿರಿ). ಈ ಫಲಗಳು ಸೂತ್ರಗತವಾಗಿ ಪವಿತ್ರಾತ್ಮನ ಫಲಗಳಾಗಿವೆ (ಗಲಾತ್ಯ 5:22- 23). ಕ್ರಿಸ್ತನು ನಮ್ಮನ್ನು

ಫಲಕೊಡಬೇಕೆಂತಲೂ ಆ ಫಲವು ನಿಲ್ಲುವಂಥದ್ದಾಗಬೇಕೆಂತಲೂ ಆರಿಸಿಕೊಂಡಿದ್ದಾನೆ (ಯೋಹಾನ 15:16). ಆತನು ನಮ್ಮನ್ನು ಮುಳ್ಳುಗಿಡಗಳನ್ನೂ ಕಳೆಗಳನ್ನೂ ಕೊಡಬೇಕೆಂದು ಆರಿಸಿಕೊಳ್ಳಲಿಲ್ಲ ಆದರ ಅಂತ್ಯವು ಸುಡಲ್ಪಡುವದೇ (ವಚನ 8).

ಕೆಲವು ಜನರು ಫಲವನ್ನು ಕೊಡುವದೆಂದರೆ ಬೋಧಿಸುವದು, ಪ್ರವಾದಿಸುವದು, ಹಾಗೂ ಅದ್ಭುತಗಳನ್ನು ಮಾಡುವದು ಆಗಿದ್ದು ನಾವು ಇವುಗಳನ್ನು ಮಾಡುವಾಗ ನಿಜವಾದ ಕ್ರೈಸ್ತರೆಂದು ಇದು ನಿರೂಪಿಸುವದೆಂಬದಾಗಿ ಊಹಿಸಿಕೊಳ್ಳುತ್ತಾರೆ ಆದರೆ ಅದು ನಿಜವಾದದ್ದಲ್ಲ; ಸೈತಾನ ಹಾಗೂ ಆತನ ದುರಾತ್ಮಗಳು ಸಹ ಈ ಸಂಗತಿಗಳನ್ನು ಮಾಡಬಲ್ಲವು (ಮಾರ್ಕ 13:22). ಒಂದೇ ಒಂದು ನಿಜವಾದ ರೀತಿಯ ಫಲವಿರುತ್ತದೆ. ಅದೇನೆಂದರೆ, ನಮ್ಮಲ್ಲಿ ವಾಸಿಸುವ ಪವಿತ್ರಾತ್ಮನಿಂದುಂಟಾಗುವ ಫಲವೇ (ಮತ್ತಾಯ 7:22-23 ಮತ್ತು ವ್ಯಾಖ್ಯಾನ ನೋಡಿರಿ).

**9** ಬರಹಗಾರನು ಈಗಷ್ಟೇ ಈ ಇಬ್ರಿಯರಿಗೆ ಒಂದು ಭಯಂಕರವಾದ ಎಚ್ಚರಿಕೆ ನೀಡುವದನ್ನು ಮುಗಿಸಿದ್ದಾನೆ. ಆದರೆ ಈಗ ಆತನು ಸಾತ್ವಿಕನಾಗುತ್ತಾನೆ. ಇಲ್ಲಿ ಆತನು ಅವರು ಬಿದ್ದು ಹೋಗುವದಿಲ್ಲವೆಂಬ ತನ್ನ ಭರವಸೆಯನ್ನು ವ್ಯಕ್ತಪಡಿಸುತ್ತಾನೆ.

**10** ದೇವರು ಆತನಿಗೆ ನಾವು ಅರ್ಪಿಸುವ "ಫಲ"ಕ್ಕಾಗಿ ವಿಶೇಷವಾಗಿ, ನಮ್ಮ ಪ್ರೀತಿ ಮತ್ತು ನಂಬಿಗಸ್ಥಿಕೆಯ ಫಲಕ್ಕಾಗಿ– ನಮಗೆ ಪ್ರತಿಫಲವನ್ನು ನೀಡುವದಕ್ಕೆ ಮರೆಯುವದಿಲ್ಲ.

ಈ ಇಬ್ರಿಯರು ಹೇಗೆ ತಮ್ಮ ಪ್ರೀತಿಯನ್ನು ದೇವರಿಗಾಗಿ ತೋರಿಸಿದರು? ಅವರು ಆತನಿಗೆ ತಮ್ಮ ಪ್ರೀತಿಯನ್ನು ತೋರಿಸಿದರು? ಅವರು ಆತನ ಜನರಿಗೆ –ಅಂದರೆ, ವಿಶ್ವಾಸಿಗಳಿಗೆ– ಉಪಚಾರ ಮಾಡುವದರ ಮೂಲಕ ಆತನಿಗೆ ತಮ್ಮ ಪ್ರೀತಿಯನ್ನು ತೋರಿಸಿದರು. ನಾವು ದೇವರ ಜನರಲ್ಲಿ ಯಾರಿಗಾದರೂ ಒಂದು ಪ್ರೀತಿಯ ಕೃತ್ಯವನ್ನು ಮಾಡುವಾಗ ಅದನ್ನು ನಾವು ದೇವರಿಗೆ ಸಹ ಮಾಡುವವರಾಗಿದ್ದೇವೆ (ಮತ್ತಾಯ 25:34-40 ನೋಡಿರಿ).

**11-12** ಈ ಇಬ್ರಿಯರು ಇದೇ ಆಸಕ್ತಿಯನ್ನು.........ಕಡೇ ತನಕ ತೋರಿಸಬೇಕೆಂದು ಬರಹಗಾರನು ಅಪೇಕ್ಷಿಸುತ್ತಾನೆ. ಅಂದರೆ ಬರಹಗಾರನು 10ನೇ ವಚನದಲ್ಲಿ ಪ್ರಸ್ತಾಪಿಸಿದಂಥ ಅವರು ದೇವರಿಗೆ ಪ್ರೀತಿಯನ್ನು ತೋರಿಸುವದರಲ್ಲಿನ ಆಸಕ್ತಿಯನ್ನು ಕಡೇ ತನಕ ತೋರಿಸಬೇಕೆಂಬದೇ. ಆತನು ಇಬ್ರಿಯರಿಗೆ ಅವರು ತಮ್ಮ ಆಸಕ್ತಿಯನ್ನು ಕಡೇ ತನಕ ತೋರಿಸಬೇಕೆಂದು ಯಾಕೆ ಬೇಡಿಕೊಳ್ಳುತ್ತಾನೆ? ಯಾಕೆಂದರೆ ಅವರು ತಮ್ಮ ನಿರೀಕ್ಷೆಯನ್ನು ದೃಢಮಾಡಿಕೊಳ್ಳಬೇಕು ಎಂಬದಕ್ಕಾಗಿಯೇ. ನಿರೀಕ್ಷೆಯೇನೆಂದರೆ ಅವರು ವಾಗ್ದಾನ ಮಾಡಲ್ಪಟ್ಟದ್ದನ್ನು ಬಾಧ್ಯವಾಗಿ ಹೊಂದುವರು ಎಂಬುದೇ (ವಚನ 12). ಅವರು ಕಡೇ ತನಕ ದೇವರನ್ನು ಪ್ರೀತಿಸುತ್ತಾ ಆತನಿಗೆ ನಂಬಿಗಸ್ಥರಾಗಿ ಮುಂದುವರೆಯುವದಾದರೆ ಅವರು ಪರಲೋಕದಲ್ಲಿನ ತಮ್ಮ ಬಾಧ್ಯತೆಯನ್ನು ಪಡೆದುಕೊಳ್ಳುವ ಅವರ ನಿರೀಕ್ಷೆಯು ದೃಢಪಡುವದು ಅದು ಖಚಿತಮಾಡಲ್ಪಡುವದು (ಮಾರ್ಕ 13:13; ಗಲಾತ್ಯ 6:9; 2 ಪೇತ್ರ 1:10-11 ನೋಡಿರಿ). ವಾಗ್ದಾನ ಮಾಡಲ್ಪಟ್ಟಿರುವದಕ್ಕಾಗಿ ನಂಬಿ ಬಹುದಿವಸಗಳವರೆಗೂ ಕಾದಿದ್ದು ಮಾತ್ರವೇ– ಆ ಫಲವನ್ನು– ಪರಲೋಕದಲ್ಲಿನ ನಿತ್ಯಜೀವವನ್ನು– ಅವರು ಹೊಂದಿಕೊಳ್ಳುವರು. ಪೌಲನ ಮಾತುಗಳಲ್ಲಿ ಹೇಳುವದಾದರೆ, ನಾವು ಬಹು ಹೆಚ್ಚಾಗಿ ಮನೋಭೀತಿಯಿಂದ ನಡುಗುವವರಾಗಿ (ನಮ್ಮ) ರಕ್ಷಣೆಯನ್ನು ಸಾಧಿಸಿ ಕೊಳ್ಳಬೇಕು (ಫಿಲಿಪ್ಪಿ 2:12).

## ದೇವರ ವಾಗ್ದಾನದ ಖಚಿತತೆ (6:13-20)

**13-15** ದೇವರು ಅಬ್ರಹಾಮನಿಗೆ ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡಿ ಆಶೀರ್ವಾದಿಸುವೆನು ಎಂದು ಹೇಳಿದನು (ಆದಿಕಾಂಡ 12:2). ಆದರೆ ಆ ಸಮಯದಲ್ಲಿ ಅಬ್ರಹಾಮನು ಎಪ್ಪತ್ತೈದು ವಯಸ್ಸಿನವನಾಗಿದ್ದು ಆತನಿಗೆ ಮಕ್ಕಳೇ ಇರಲಿಲ್ಲ. ಒಬ್ಬ ಮಗನೂ ಇಲ್ಲದೆ ಅಬ್ರಹಾಮನು ದೊಡ್ಡ ಜನಾಂಗದ ತಂದೆ ಹೇಗಾಗಬಲ್ಲನು? ಅಬ್ರಹಾಮನು ಒಬ್ಬ ಮಗನನ್ನು ಪಡೆಯುವದಕ್ಕೆ ಮುಂಚೆ ಇನ್ನೂ ಇಪ್ಪತ್ತೈದು ವರ್ಷಗಳವರೆಗೆ ಕಾಯಬೇಕಾಗಿತ್ತು. ಆತನು ನೂರು ವರ್ಷದವನಾಗಿದ್ದಾಗ ಆತನ ಹೆಂಡತಿಯು ಒಬ್ಬ ಮಗನಿಗೆ ಇಸಾಕನಿಗೆ ಜನ್ಮ ನೀಡಿದಳು ಹೀಗೆ ದೇವರು ಅಬ್ರಹಾಮನಿಗೆ ನೀಡಿದ್ದ ವಾಗ್ದಾನವು ಈಗ ಇಸಾಕನ ಮುಖಾಂತರ ನೆರವೇರುವದಕ್ಕೆ ಸಾಧ್ಯವಾಗಬಹುದು (ಆದಿಕಾಂಡ 17:15-17; 21:1-3). ಈ ವಿಧದಲ್ಲಿ ಆ ವಾಗ್ದಾನದ ಫಲಕ್ಕೋಸ್ಕರ ಅಬ್ರಹಾಮನು ಬಹುದಿವಸ ಕಾದುಕೊಂಡಿದ್ದು ಆ ಫಲವನ್ನು ಹೊಂದಿದನು (ವಚನ 15).

ಬಳಿಕ ದೇವರು ಪುನಃ ಅಬ್ರಹಾಮನ ನಂಬಿಕೆಯನ್ನು ಪರೀಕ್ಷಿಸಿದನು. ಆತನು ಅಬ್ರಹಾಮನಿಗೆ ಅವನ ಮಗನಾದ ಇಸಾಕನನ್ನು ಯಜ್ಞವಾಗಿ ಅರ್ಪಿಸಬೇಕೆಂದು ಹೇಳಿದನು. ಅಂದರೆ, ಅಬ್ರಹಾಮನು ಯಾವ ಮಗನಿಗಾಗಿ ಬಹು ದಿವಸಗಳ ವರೆಗೆ ತಾಳ್ಮೆಯಿಂದ ಕಾದುಕೊಂಡಿದ್ದನೋ ಆ ಮಗನನ್ನು ಕೊಲ್ಲುವಂತೆ ದೇವರು ಅವನಿಗೆ ಹೇಳಿದನು! ಆದ್ದರಿಂದ ಅಬ್ರಹಾಮನು ವಿಧೇಯನಾಗಿ ಯಜ್ಞಕ್ಕೋಸ್ಕರ ಸಿದ್ಧತೆಗಳನ್ನು ಮಾಡಿದನು. ತರುವಾಯ, ದೇವರು ಅಬ್ರಹಾಮನ ನಂಬಿಕೆಯನ್ನು ವಿಧೇಯತೆಯನ್ನು ನೋಡಿದ ಮೇಲೆ ಆತನು ಕಡೇ ಕ್ಷಣದಲ್ಲಿ ತನ್ನ ಮಗನನ್ನು ಕೊಲ್ಲದಂತೆ ಅಬ್ರಹಾಮನನ್ನು ತಡೆದನು (ಆದಿಕಾಂಡ 22:1-14 ನೋಡಿರಿ). ಮತ್ತು ಆ ಸಮಯದಲ್ಲಿ ದೇವರು ತಾನು ಅಬ್ರಹಾಮನಿಗೆ ಮುಂಚೆ ನೀಡಿದ್ದ ವಾಗ್ದಾನವನ್ನು ಮತ್ತೊಮ್ಮೆ ಅವನಿಗೆ ನೀಡಿದನು (ಆದಿಕಾಂಡ 22:15-18). ಆದರೆ ಈ ಸಾರಿ ದೇವರು ವಾಗ್ದಾನ ಮಾಡುವಾಗ ತನ್ನಾಣೆಯಿಟ್ಟು

ನಿಜವಾಗಿ ನಿನ್ನನ್ನು ಆಶೀರ್ವದಿಸೇ ಆಶೀರ್ವದಿಸುವೆನು ನಿನ್ನನ್ನು ಹೆಚ್ಚಿಸೇ ಹೆಚ್ಚಿಸುವೆನು ಎಂದು ಹೇಳಿದನು (ವಚನ 14 ). ಬರಹಗಾರನು ಇಲ್ಲಿ ಆದಿಕಾಂಡ 22:16-17ರಿಂದ ಉಲ್ಲೇಖಿಸುತ್ತಾನೆ.

**16-17** ದೇವರ ವಾಕ್ಯವು ನಿಶ್ಚಲವಾದದ್ದು ಆದರೆ ಇಲ್ಲಿ ದೇವರು ತನ್ನ ವಾಕ್ಯವನ್ನು ಅಥವಾ ವಾಗ್ದಾನವನ್ನು ಆಣೆಯಿಟ್ಟು ಸ್ಥಿರಪಡಿಸಿದನು (ವಚನ 17). ಆದದರಿಂದ, ದೇವರು ಅಬ್ರಹಾಮನಿಗೆ ಮಾಡಿದ ತನ್ನ ವಾಗ್ದಾನವನ್ನೂ ಮತ್ತಷ್ಟು ಖಚಿತಗೊಳಿಸಿದನು; ದೇವರು ಏಕೆ ತನ್ನ ವಾಗ್ದಾನವನ್ನು ಆಣೆಯಿಟ್ಟು ಸ್ಥಿರಪಡಿಸಿದನು? ಕಾರಣವೇನೆಂದರೆಃ ವಾಗ್ದಾನ ಫಲಕ್ಕೆ ಬಾಧ್ಯರಾಗುವವರಿಗೆ ಬಹು ಸ್ಪಷ್ಟವಾಗಿ ತೋರಿಸಬೇಕು ಎಂಬದಕ್ಕಾಗಿಯೇ. ಮತ್ತು ವಾಗ್ದಾನದ ಫಲಕ್ಕೆ ಬಾಧ್ಯರಾಗುವವರು ಯಾರು? ಕ್ರಿಸ್ತನಲ್ಲಿ ನಂಬಿಕೆಯಿಡುವವರಾದ ನಾವೇ ಆಗಿದ್ದೇವೆ. ನಾವು ನಂಬಿಕೆಯ ಮೂಲಕ ಅಬ್ರಾಹಾಮನ ನಿಜವಾದ ಆತ್ಮೀಕ ಬಾಧ್ಯಸ್ಥರಾಗಿದ್ದೇವೆ (ಗಲಾತ್ಯ 3:7-9). ದೇವರು ಅಬ್ರಹಾಮನಿಗೆ ನೀಡಿದ ವಾಗ್ದಾನವು ಈಗ ನಮಗೆ ಕೊಡಲ್ಪಟ್ಟಿದೆ. ಕ್ರಿಸ್ತನನ್ನು ನಂಬುವವರಾದ ನಾವು ದೇವರ ಜನರಾಗಿಯೂ ದೇವರ ಕುಟುಂಬವಾಗಿಯೂ ಮಾಡಲ್ಪಟ್ಟಿದ್ದೇವೆ ಮತ್ತು ನಾವು ನಮ್ಮ ಪೂರ್ಣ ಬಾಧ್ಯತೆಯನ್ನು ಪರಲೋಕದಲ್ಲಿ ಪಡೆದುಕೊಳ್ಳುವೆವು.

**18** ಕೆಟ್ಟತನದಿಂದಲೂ, ಸೈತಾನನಿಂದಲೂ ಓಡಿಬಂದವರಾದ ನಾವು ನಮ್ಮ ಮುಂದೆ ಇಟ್ಟಿರುವ ನಿರೀಕ್ಷೆಯನ್ನು ಹಿಡುಕೊಳ್ಳಬಹುದಾಗಿದೆ. ಆ ನಿರೀಕ್ಷೆಯು ನಾವು ಅಬ್ರಹಾಮನ ಆತ್ಮೀಕ ಬಾಧ್ಯಸ್ಥರಾಗಿ ಪರಲೋಲದಲ್ಲಿ ಸ್ವಾಸ್ಥ್ಯವನ್ನು ಪಡೆದುಕೊಳ್ಳುವೆವೆಂಬ ನಿರೀಕ್ಷೆಯಾಗಿದೆ. ನಾವು ಸಂಪೂರ್ಣ ನಂಬಿಕೆಯೊಂದಿಗೆ ಆ ನಿರೀಕ್ಷೆಯನ್ನು ಹಿಡುಕೊಳ್ಳಬಹದು. ಆ ನಿರೀಕ್ಷೆಯು ನಮ್ಮ ಪ್ರಾಣಕ್ಕೆ ಲಂಗರದ ಹಾಗಿದ್ದು ಭರವಸಕ್ಕೆ ಯೋಗ್ಯವಾದದ್ದಾಗಿದೆ. (ವಚನ 19). ಯಾಕೆಂದರೆ, ಅದು ಎರಡು ನಿಶ್ಚಲವಾದ ಆಧಾರಗಳ ಮೂಲಕ– ಏನೆಂದರೆ, ದೇವರ ವಾಕ್ಯ ಹಾಗೂ ದೇವರ ಆಣೆಗಳ ಮೂಲಕ– ದೃಢಪಡಿಸಲ್ಪಟ್ಟಿದೆ. ಆದದರಿಂದ, ನಾವು ಬಲವಾದ ಧೈರ್ಯವನ್ನು (ಪ್ರೋತ್ಸಾಹವನ್ನು) ಹೊಂದಬಹುದು.

**19** ಸಂಕಷ್ಟಗಳು ಹಾಗೂ ಸಮಸ್ಯೆಗಳ ಮಧ್ಯದಲ್ಲಿಯೂ– ಮರಣವು ಹತ್ತಿರವಾಗಿರುವಾಗಲೂ– ನಾವು ಈ ನಿರೀಕ್ಷೆಯನ್ನು ಹಿಡುಕೊಳ್ಳಬಲ್ಲೆವು. ನಮ್ಮ ನಿರೀಕ್ಷೆಯು ದೇವರಲ್ಲಿ ಭರವಸಕ್ಕೆ ಯೋಗ್ಯವಾದದ್ದೂ ಸ್ಥಿರವಾದದ್ದೂ ಆಗಿದೆ ಅದು ಲಂಗರದ ಹಾಗಿರುತ್ತದೆಬರಹಗಾರನು ಇಲ್ಲಿ ನಮ್ಮ ನಿರೀಕ್ಷೆಯು ತೆರೆಯೊಳಗಣ ದೇವಸಾನಿಧ್ಯವನ್ನು –ಅಂದರೆ, ದೇವರಿರುವ ಸ್ಥಳವನ್ನು– ಪ್ರವೇಶಿಸುವಂಥದು ಎಂದು ಹೇಳುತ್ತಾನೆ. ಒಳಗಣ ದೇವಸಾನಿಧ್ಯವು ಯೆಹೂಧ್ಯ ದೇವದರ್ಶನ ಗುಡಾರ ಅಥವಾ ದೇವಾಲಯದಲ್ಲಿನ ಒಳಕೋಣೆಯಾಗಿತ್ತು[13] (ಇಬ್ರಿಯ 9:1-3), ಅಲ್ಲಿ ದೇವರು ನೆಲೆಸುತ್ತಾನೆಂದು ಯೆಹೂದ್ಯರು ನಂಬುತ್ತಿದ್ದರು. ಪ್ರತಿವರ್ಷಕ್ಕೊಮ್ಮೆ ಮಹಾಯಾಜಕನು ಜನರ ಪಾಪಗಳ ನಿವಾರಣಕ್ಕಾಗಿ ದೇವರ ಸಾನಿಧ್ಯದಲ್ಲಿ ಯಜ್ಞವನ್ನು ಅರ್ಪಿಸಲು ಈ ಕೋಣೆಯನ್ನು ಪ್ರವೇಶಿಸುತ್ತಿದ್ದರು (ಇಬ್ರಿಯ 9:7). ಹೀಗೆ ಈ ಪತ್ರಿಕೆಯ ಬರಹಗಾರನು ನಮ್ಮ ನಿರೀಕ್ಷೆಯು ತೆರೆಯೊಳಗಣ ದೇವಸಾನಿಧ್ಯವನ್ನು ಪ್ರವೇಶಿಸುವದು ಎಂಬದಾಗಿ ಹೇಳುವಾಗ ನಮ್ಮ ನಿರೀಕ್ಷೆಯು ಸ್ವತಃ ದೇವರ ಮೇಲೆಯೇ ಕೇಂದ್ರಿಕೃತವಾಗಿದೆ ಎಂದು ಆತನ ತಾತ್ಪರ್ಯವಾಗಿರುತ್ತದೆ

**20** ಯೇಸು ನಮಗೋಸ್ಕರ ಮುಂದಾಗಿ ಹೋಗಿ ಈ ಒಳಗಣ ಸಾನಿಧ್ಯವನ್ನು ಪ್ರವೇಶಿಸಿದ್ದಾನೆ –ಅಂದರೆ, ಪರಲೋಕ ಪ್ರವೇಶಿಸಿದ್ದಾನೆ. ಆತನು ನಮ್ಮ ಪಾಪಗಳಿಗೆ ಪ್ರಾಯಶ್ಚಿತ ಮಾಡುವದಕ್ಕೆ ಪರಲೋಕದೊಳಗೆ ದೇವರ ಸಾನಿಧ್ಯದೊಳಕ್ಕೆ ಆರೋಹಣಗೊಂಡಿದ್ದಾನೆ. ಯೇಸು ನಮ್ಮ ನಿಜವಾದ ಹಾಗೂ ಶಾಶ್ವವಾಗಿ ಮೆಲ್ಕಿಜೆದೇಕನ ತರಹದ ಮಹಾಯಾಜಕನಾಗಿದ್ದಾನೆ. (ಇಬ್ರಿಯ 5:6-10). ಯೇಸು ಮಹಾಯಾಜಕನಾಗಿದ್ದು ಆತನ ಮೇಲೆಯೇ ನಮ್ಮ ನಿರೀಕ್ಷೆಯು ಕೇಂದ್ರಿಕೃತಗೊಂಡಿರುತ್ತದೆ. ಯೇಸು ಅರಸನೂ ದೇವಕುಮಾರನೂ ಆಗಿದ್ದು ಆತನ ಮೂಲಕ ದೇವರು ಅಬ್ರಹಾಮನಿಗೆ ನೀಡಿದ ವಾಗ್ದಾನವು ನೆರವೇರಿರುತ್ತದೆ. ಯೇಸು ನಮಗಿಂತ ಮುಂದಾಗಿ ಪರಲೋಕದೊಳಗೆ ಪ್ರವೇಶಿಸಿರುವ ನಮ್ಮ ಮುಂದೂತನೂ ನಾಯಕನೂ ಆಗಿದ್ದಾನೆ. ಆತನು ನಮಗೆ ದೇವರ ಸನ್ನಿಧಿಯೊಳಗೆ ಪ್ರವೇಶಿಸುವ ಮಾರ್ಗವನ್ನು ತೆರೆದಿದ್ದಾನೆ (ಇಬ್ರಿಯ 10:19-22ನೋಡಿರಿ).

---

## ಅಧ್ಯಾಯ - 7

### ಯಾಜಕನಾದ ಮೆಲ್ಕಿಜೆದೇಕ (7:1-10)

**1-2** ಈ ಇಬ್ರಿಯರಿಗೆ ಪತ್ರಿಕೆಯನ್ನು ಹೊರತು ಪಡಿಸಿ ಬೈಬಲಿನಲ್ಲಿ ಮೆಲ್ಕಿಜೆದೇಕನ ಬಗ್ಗೆ ಪ್ರಸ್ತಾಪಿಸಲ್ಪಟ್ಟಿರುವ ಇತರ ಸ್ಥಳಗಳೆಂದರೆ ಆದಿಕಾಂಡ 14:18-20ಮತ್ತು ಕೀರ್ತನೆಗಳು 110:4ರಲ್ಲಿ ಮಾತ್ರವೇ ಆಗಿದೆ ಇಲ್ಲಿ ಬರಹಗಾರನು ಮೆಲ್ಕಿಜೆದೇಕನ ಕುರಿತು ತಾನು ನೀಡುವ ಚಿತ್ರಣವನ್ನು ಆದಿಕಾಂಡದ ವಾಕ್ಯಭಾಗದ ಮೇಲೆ ಆಧಾರಮಾಡುತ್ತಾನೆ (ಇಬ್ರಿಯ 5:6 ಮತ್ತು ವ್ಯಾಖ್ಯಾನ ನೋಡಿರಿ).

**3** ಬೈಬಲಿನಲ್ಲಿ ಮೆಲ್ಕಿಜೆದೇಕನ ತಂದೆ ತಾಯಿ ಅಥವಾ ಆತನ ಜನನ ಇಲ್ಲವೆ ಮರಣದ ಕುರಿತಾಗಿ ಏನೂ ಬರೆಯಲ್ಪಟ್ಟಿಲ್ಲ. ಇಬ್ರಿಯರಿಗೆ ಬರೆದ ಪತ್ರಿಕೆಯ ಬರಹಗಾರನ ಪ್ರಕಾರವಾಗಿ ಮೆಲ್ಕಿಜೆದೇಕನು ಎಂದಿಗೂ ಹುಟ್ಟಲೂ ಇಲ್ಲ ಸಾಯಲೂ ಇಲ್ಲ....ದೇವರ ಮಗನ ಹಾಗೆ ಅವನು ನಿರಂತರವಾಗಿ ಯಾಜಕನಾಗಿರುವವನು. ಯೇಸುವು ಆದಿಯನ್ನಾಗಲಿ ಅಂತ್ಯವನ್ನಾಗಲಿ ಹೊಂದಿಲ್ಲದಿರುವ ಹಾಗೆಯೇ ಮೆಲ್ಕಿಜೆದೇಕನು ಆರಂಭವೂ ಅಂತ್ಯಯವೂ ಇಲ್ಲದವನಾಗಿದ್ದಾನೆ.

**4** ಮೆಲ್ಕಿಜೆದೇತನು ಅಬ್ರಹಾಮನಿಗಿಂತಲೂ ದೊಡ್ಡವನ್ನಾಗಿದ್ದನು; ಇಲ್ಲವಾದರೆ ಅಬ್ರಹಾಮನು ಅರಸರೊಂದಿಗಿನ ಯುದ್ಧದಲ್ಲಿ ಸುಲುಕೊಂಡು ಬಂದವಸ್ತುಗಳಲ್ಲಿ ಹತ್ತನೆಯ ಒಂದು ಭಾಗವನ್ನು ಅವನಿಗೆ ಕೊಟ್ಟಿರುತ್ತಿರಲಿಲ್ಲ (ವಚನಗಳು 1-2).

**5** ಲೇವಿಯನು ಅಬ್ರಹಾಮನ ಮೊಮ್ಮಗನಾದ ಯಾಕೋಬನ ಹನ್ನೆರಡು ಮಂದಿ ಪುತ್ರರಲ್ಲಿ ಒಬ್ಬನಾಗಿದ್ದನು. ಯಾಜಕರೆಲ್ಲರೂ –ಪ್ರಥಮ ಮಹಾಯಾಜಕನಾದ ಆರೋನನೂ ಸೇರಿದಂತೆ– ಲೇವಿಯನ ಕುಲದಿಂದ ಬಂದವರಾಗಿದ್ದರು. ಯೆಹೂದ್ಯ ಧರ್ಮಶಾಸ್ತ್ರದ ಪ್ರಕಾರವಾಗಿ ಇತರ ಯಹೂದ್ಯರೆಲ್ಲರೂ ಪ್ರತಿ ವರ್ಷ ತಮ್ಮ ಐಶ್ವರ್ಯ ಹಾಗೂ ಉತ್ಪಾದನೆಯಲ್ಲಿ ಹತ್ತನೆಯ ಒಂದು ಭಾಗವನ್ನು ಲೇವಿಕುಲದವರಾದ ಯಾಜಕರಿಗೆ ಕೊಡಬೇಕಾಗಿತ್ತು. ಈ ರೀತಿಯಲ್ಲಿ ಯಾಜಕರು ತಮ್ಮ ಜೀವನ ಮಾಡಿಕೊಳ್ಳುತ್ತಿದ್ದರು. ಆದದರಿಂದ, ಯಹೂದ್ಯರು ತಮ್ಮ ಆದಾಯದ ಹತ್ತನೆಯ ಒಂದು ಭಾಗವನ್ನು ಯಾಜಕರಿಗೆ ನೀಡುತ್ತಿದ್ದರು. ಯಾಜಕರು (ಲೇವಿಯ ಕುಲದವರು) ಹಾಗೂ ಇತರ ಎಲ್ಲಾ ಯಹೂದ್ಯರು ಒಟ್ಟಾಗಿ ಅಬ್ರಹಾಮನ ಸಂತತಿಯಾಗಿದ್ದರು; ಹೀಗೆ ಅವರೆಲ್ಲರೂ ಸಹೋದರರು ಆಗಿದ್ದರು.

**6-7** ಆದರೆ ಪರಾತ್ಪರನಾದ ದೇವರ ಯಾಜಕನಾಗಿದ್ದ ಮೆಲ್ಕಿಜೆದೇಕನು (ವಚನ1), ಲೇವಿಯ ಅಥವಾ ಅಬ್ರಹಾಮನ ಸಂತತಿಯವನಾಗಿರಲಿಲ್ಲ. ಹಾಗಿದ್ದರೂ, ಯೆಹೂದ್ಯರ ಪಿತೃವಾದ ಸ್ವತಃ ಅಬ್ರಹಾಮನು ತಾನುಗಳಿಸಿದ್ದರಲ್ಲಿ ಮೆಲ್ಕಿಜೆದೇಕನಿಗೆ ದಶಮಾಂಶವನ್ನು ನೀಡಿದನು. ಅದು ಮಾತ್ರವಲ್ಲದೆ ಅಬ್ರಹಾಮನು ಮೆಲ್ಕಿಜೆದೇಕನಿಂದ ಆಶೀರ್ವಾದವನ್ನು ಪಡೆದುಕೊಂಡನು. ಇದರ ಮೂಲಕ, ಮೆಲ್ಕಿಜೆದೇಕನು ಅಬ್ರಹಾಮನಿಗಿಂತ ದೊಡ್ಡವನಾಗಿದ್ದನೆಂಹದನ್ನು ನಾವು ತಿಳಿದುಕೊಳ್ಳಬಹುದು. ಆದದರಿಂದ, ಮೆಲ್ಕಿಜೆದೇಕನು ಅಬ್ರಹಾಮ ಹಾಗು ಲೇವಿಯನ ಮೂಲಕ ಹುಟ್ಟಿದ ಯೆಹೂದ್ಯ ಯಾಜಕರಿಗಿಂತಲೂ ದೊಡ್ಡವನಾಗಿದ್ದಾನೆ.

**8** ಅಷ್ಟು ಮಾತ್ರವಲ್ಲದೆ, ಯೆಹೂದ್ಯಯಾಜಕರೆಲ್ಲರೂ ಸತ್ತರು; ಅವರು ಸಾಧಾರಣ ಮನುಷ್ಯರಾಗಿದ್ದರು. ಆದರೆ ಮೆಲ್ಕಿಜೆದೇಕನು ಸಾಯಲೇ ಇಲ್ಲ ಆತನು ಯಾವಾಗಲೂ ಜೀವಿಸುತ್ತಿದ್ದಾನೆಂದು ಸಾಕ್ಷಿಹೊಂದಿರುವವನು.

**9-10** ಇತರ ಯೆಹೂದ್ಯರೆಲ್ಲರಿಂದ ದಶಮಾಂಶ ವನ್ನು ತಕ್ಕೊಳ್ಳುವ ಲೇವಿಯು ಹಾಗೂ ಆತನ ಸಂತಾನವದರಾದ ಯೆಹೂದ್ಯ ಯಾಜಕರು ಸ್ವತಃ ತಮ್ಮ ಆದಾಯದ ದಶಮಭಾಗವನ್ನು ಅಬ್ರಹಾಮನ ಮೂಲಕ ಮೆಲ್ಕಿಜೆದೇಕನಿಗೆ ನೀಡಿದ್ದರೆಂದು ಹೇಳಬಹುದು. ಯಾಕೆಂದರೆ, ಅಬ್ರಹಾಮನು ಮೆಲ್ಕಿಜೆದೇಕನನ್ನು ಬೇಟಿಯಾದಾಗ ಲೇವಿಯು ತನ್ನ ಮೂಲ ಪುರುಷನ (ದೇಹದೊಳಗೆ) ತತ್ವರೂಪವಾಗಿ ಇದ್ದನು. ಅಂದರೆ, ಅಬ್ರಹಾಮನೊಳಗೆ ಇದ್ದನು.

## ಮೆಲ್ಕಿಜೆದೇಕನ ತರಹದ ಯೇಸು (7:11-18)

**11** ಈ ಸಂದರ್ಭದಲ್ಲಿ ಯೆಹೂದ್ಯರ ಪ್ರಾರಂಭಿಕ ಚರಿತ್ರೆಯನ್ನು ಕ್ಲುಪ್ತವಾಗಿ ಪುನರಾವಲೋಕನ ಮಾಡುವದು ಅವಶ್ಯವಾಗಿರುತ್ತದೆ. ಅಬ್ರಹಾಮನು ಇಸಾಕನ ತಂದೆ ಮತ್ತು ಇಸಾಕನು ಯಾಕೋಬನ ತಂದೆಯಾಗಿದ್ದನು. ಯಾಕೋಬನಿಗೆ ಹನ್ನೆರಡು ಮಂದಿ ಪುತ್ರರಿದ್ದರು ಮತ್ತು ಅವರ ಮೂಲಕವೇ ಯೆಹೂದ್ಯರ ಹನ್ನೆರಡು ಕುಲಗಳು ಹುಟ್ಟಿರುತ್ತವೆ.

ಲೇವಿಯು ಯಾಕೋಬನ ಹನ್ನೆರಡು ಮಂದಿ ಮಕ್ಕಳಲ್ಲಿ ಮೂರನೆಯವನು. ಲೇವಿಯನ ಕಾಲದ ನಂತರ ಸುಮಾರು ನಾನ್ನೂರು ವರ್ಷಗಳಾದ ಮೇಲೆ ಮೋಶೆಯು ಯೆಹೂದ್ಯರ ನಾಯಕನಾಗಿ ಧರ್ಮಶಾಸ್ತ್ರವನ್ನು ಪಡೆದುಕೊಂಡನು. ಆ ಸಮಯದಲ್ಲಿ ದೇವರು ಲೇವಿಯನ ಕುಲದವರು ಯೆಹೂದ್ಯರ ಯಾಜಕರಾಗಿರತಕ್ಕದೆಂದು ಹೇಳಿದನು. ಆದದರಿಂದ, ಈ ಪತ್ರಿಕೆಯ ಬರಹಗಾರನು ಇದನ್ನು ಲೇವಿಕ ಯಾಜಕತ್ವ ಎಂದು ಕರೆಯುತ್ತಾನೆ. ಹಾಗಾದರೆ, ಯೆಹೂದ್ಯ ಧರ್ಮಶಾಸ್ತ್ರವು ಲೇವಿಯ ಕುಲದವರು ಯಾಜಕತ್ವದ ಮೇಲೆ ಆಧಾರವಾಗಿರುತ್ತದೆ. ಮೋಶೆಯ ತಮ್ಮನಾದ ಆರೋನನು (ಅವನು ಸಹ ಲೇವಿಯ ಕುಲದವನೇ) ಪ್ರಥಮ ಮಹಾಯಾಜಕನಾಗಿ ನೇಮಿಸಲ್ಪಟ್ಟನು.

ಹೇಗಿದ್ದರೂ, ಈ ಪತ್ರಿಕೆಯ ಬರಹಗಾರನು ಲೇವಿಕ ಯಾಜಕತ್ವವು ಯೆಹೂದ್ಯರಿಗೆ ಸಂಪೂರ್ಣ ಸಿದ್ಧಿ ಉಂಟುಮಾಡಲಾಗಲಿಲ್ಲ ಎಂದು ಹೇಳುತ್ತಾನೆ. ಅಂದರೆ, ಇದು ಜನರನ್ನು ನೀತಿವಂತರಾಗಿಸಲಾಗಲಿಲ್ಲ ಅದು ಅವರಿಗೆ ರಕ್ಷಣೆಯನ್ನುಂಟುಮಾಡಲಾಗಲಿಲ್ಲ. ಲೇವಿಕ ಯಾಜಕತ್ವದಿಂದ ಸಂಪೂರ್ಣ ಸಿದ್ಧಿ ಉಂಟಾಗಿದ್ದರೆ ಮೆಲ್ಕಿಜೆದೇಕನ ತರಹದ ಬೇರೊಬ್ಬ ಯಾಜಕನು (ಯೇಸುಕ್ರಿಸ್ತನು) ಬರಬೇಕಾದ ಅವಶ್ಯಕತೆಯು ಇರುತ್ತಿದ್ದಿಲ್ಲ.

**12** ಅದು ಮಾತ್ರವಲ್ಲ, ಲೇವಿಕ ಯಾಜಕತ್ವವು ಬದಲಾಗಬೇಕಾಗಿದ್ದರೆ ಯೆಹೂದ್ಯ ಧರ್ಮಶಾಸ್ತ್ರವು ಕೂಡ ಬದಲಾಗುವದು ಅಗತ್ಯ, ಯಾಕೆಂದರೆ ಧರ್ಮ ಶಾಸ್ತ್ರವು ಕೂಡ ಆ ಯಾಜಕತ್ವದ ಮೇಲೆ ಆಧಾರವಾಗಿತ್ತು.

**13-14** ಮೇಲ್ಕಂಡ ಮಾತು ಯಾವಾತನ –ಅಂದರೆ, ಕ್ರಿಸ್ತನ –ವಿಷಯದಲ್ಲಿ ಹೇಳಿದೆಯೋ ಆತನು ಬೇರೊಂದು ಕುಲದಲ್ಲಿ ಹುಟ್ಟಿದನು. ಕ್ರಿಸ್ತನು ಯೆಹೂದ ಕುಲದಲ್ಲಿ ಹುಟ್ಟಿದ್ದನು (ಮತ್ತಾಯ 1:2; ಲೂಕ 3:33). ಯೆಹೂದನು ಯಾಕೋಬನ ಹನ್ನೆರಡು ಮಂದಿ ಪುತ್ರರಲ್ಲಿ ನಾಲ್ಕನೆಯದವನಾಗಿದ್ದನು; ಹೀಗೆ ಆತನು ಲೇವಿಯನ ತಮ್ಮನಾಗಿದ್ದನು. ದೇವರು ಮೋಶೆಗೆ ಧರ್ಮಶಾಸ್ತ್ರವನ್ನು ಕೊಡುವಾಗ ಆತನು ಯೆಹೂದ ಕುಲದವರಿಂದ ಯಾಜಕರಾಗಿ ನೇಮಿಸಲ್ಪಡುವದರ ಕುರಿತು ಏನನ್ನೂ ಹೇಳಲಿಲ್ಲ. ಆದದರಿಂದ, ಈ ಸತ್ಯಾಂಶಗಳ ಮೂಲಕ ಕ್ರಿಸ್ತನ ಯಾಜಕತ್ವವು ಹಳೆ ಒಡಂಬಡಿಕೆಯ ಲೇವಿಕ ಯಾಜಕತ್ವಕ್ಕಿಂತ ಸಂಪೂರ್ಣ ವ್ಯತ್ಯಾಸವಾದದ್ದು ಎಂಬದನ್ನು ನಾವು ಅರ್ಥಮಾಡಿಕೊಳ್ಳಬಹುದು.

**15-16** ಕ್ರಿಸ್ತನ ಯಾಜಕತ್ವವು ಲೇವಿಕ ಯಾಜಕತ್ವದಂತೆ ತನ್ನ ಶರೀರಧರ್ಮದ (ಪೂರ್ವಜರ) ವಿಷಯವಾದ ನಿಯಮದ ಪ್ರಕಾರವಾಗಿರುವದಿಲ್ಲ (ವಚನ 16). ಕ್ರಿಸ್ತನ ಯಾಜಕತ್ವವು ಆತನ ನಿರ್ಲಯವಾದ ಜೀವದ ಶಕ್ತಿಯ ಮೇಲೆ ಆಧಾರವಾಗಿರುತ್ತದೆ. ಲೇವಿಕ ಯಾಜಕರು ಜೀವಿಸಿದರು ಮತ್ತು ಸತ್ತು ಹೋದರು. ಆದರೆ ಕ್ರಿಸ್ತನು ಸದಾಕಾಲವೂ ಜೀವಿಸುತ್ತಾನೆ ಲೇವಿಕ ಯಾಜಕತ್ವವು ಬಹಿರಂಗದ ನೇಮ ನಿಷ್ಠೆಗಳ ಮೇಲೆ ಆಧಾರವಾಗಿತ್ತು; ಆದರೆ ಕ್ರಿಸ್ತನ ಯಾಜಕತ್ವವು ಆತನ ಅಂತರ್ಯದ ಆತ್ಮೀಕ ಶಕ್ತಿಯ ಮೇಲೆ ಆಧಾರವಾಗಿದೆ.

**17** ಬರಹಗಾರನು ಪು ನಃ ಕೀರ್ತನೆಗಳು 110:4 ರಿಂದ ಉಲ್ಲೇಖಿಸಿ ಕ್ರಿಸ್ತನ ಯಾಜಕತ್ವವು ಎಂದಿಗೂ ಕೊನೆಗೊಳ್ಳುವದಿಲ್ಲ ಎಂಬದನ್ನು ತೋರಿಸುತ್ತಾನೆ.

**18** ಮೊದಲಿದ್ದ ನಿಯಮವು ನಿರ್ಬಲವಾಗಿಯೂ ನಿಷ್ಪ್ರಯೋಜಕವಾಗಿಯೂ ಇದ್ದ ಕಾರಣ ರದ್ದಾಗಿ ಹೋಯಿತು. ಮೊದಲಿದ್ದ ನಿಯಮವು ಯೆಹೂದ್ಯರ ಆಚಾರಬದ್ಧ ಧರ್ಮಶಾಸ್ತ್ರವಾಗಿದ್ದು ಅದು ಲೇವಿಕಯಾಜಕತ್ವ ವಿಷಯದಲ್ಲಿ ಹಾಗೂ ಕಾಣಿಕೆಗಳು, ಯಜ್ಞಗಳು, ಶುದ್ಧೀಕರಣದ ಆಚಾರಗಳು, ಹಾಗೂ ಧಾರ್ಮಿಕ ಹಬ್ಬಗಳಂತಹ ವಿಷಯದಲ್ಲಿ ಅನೇಕ ನಿಯಮಗಳನ್ನು ಒಳಗೊಂಡಿತ್ತು. ಕ್ರಿಸ್ತನು ಬಂದಾಗ ಈ ಎಲ್ಲಾ ನಿಯಮಗಳು –ಅಂದರೆ, ಯೆಹೂದ್ಯ ಧರ್ಮ ಶಾಸ್ತ್ರದ ಶಿಷ್ಟಾಚಾರಿಕ ಭಾಗವು –ರದ್ದಾದವು ಅಥವಾ ಪಕ್ಕಕ್ಕೆ ಇಡಲಾಯಿತು (ಮತ್ತಾಯ 5:17-18; ಕೊಲೊಸ್ಸೆ 2:13-14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**19** ಯೆಹೂದ್ಯ ಧರ್ಮಶಾಸ್ತ್ರವು – ವಿಶೇಷವಾಗಿ, ಶಿಷ್ಟಾಚಾರಕ ಭಾಗವು – ಯಾಕೆ ನಿರ್ಬಲವಾಗಿಯೂ ನಿಷ್ಪ್ರಯೋಜಕವಾಗಿಯೂ ಇತ್ತು? (ವಚನ 18). ಯಾಕೆಂದರೆ, ಧರ್ಮಸಾಸ್ತ್ರವು ಯಾವದನ್ನೂ ಸಿದ್ಧಿಗೆ ತರಲಿಲ್ಲ. ಧರ್ಮಶಾಸ್ತ್ರವು ದೇಹದ ಹೊರಭಾಗವನ್ನು ಶುದ್ಧಮಾಡಬಲ್ಲದ್ದಾಗಿತ್ತು ಆದರೆ ಅದು ದೇಹದ ಒಳಭಾಗವನ್ನು– ಅಂದರೆ, ಮನುಷ್ಯನ ಹೃದಯ ಮತ್ತು ಮನಸಾಕ್ಷಿಯನ್ನು –ಶುದ್ಧಮಾಡಲಾಗಲಿಲ್ಲ. ಧರ್ಮಶಾಸ್ತ್ರವು ಮನುಷ್ಯನನ್ನು ನೀತಿವಂತನನ್ನಾಗಿ ಮಾಡಲಾಗಲಿಲ್ಲ ಅದು ಆತನನ್ನು ದಂಡಿಸುವದಷ್ಟೇ ಆಗಿದೆ (ರೋಮ 1:3; ಮತ್ತು ವ್ಯಾಖ್ಯಾನ ನೋಡಿರಿ).

ಇಲ್ಲಿ ಪ್ರಸ್ತಾಪಿಸಲಾಗಿರುವ ಉತ್ತಮವಾಗಿರು ಒಂದು ನಿರೀಕ್ಷೆಯು ಯೇಸು ಕ್ರಿಸ್ತನೇ, ಆತನು ನಮ್ಮ ನಿಜವಾದ ಹಾಗೂ ಶಾಶ್ವತವಾದ ಮಹಾಯಾಜಕನಾಗಿದ್ದು ಆತನ ಮೂಲಕ ನಾವು ದೇವರ ಸನ್ನಿಧಿಗೆ ಸೇರಿಸಲ್ಪಡಬಹುದು.

ಅನೀತವಂತರು ದೇವರ ಸಮೀಪಕ್ಕೆ ಬರಲಾರರು. ಆದರೆ, ನಂಬಿಕೆಯ ಮೂಲಕ ನಾವು ಕ್ರಿಸ್ತನ ನೀತಿಯನ್ನು ಪಡೆದುಕೊಳ್ಳಬಹುದು ಮತ್ತು ಆತನ ನೀತಿಯನ್ನು ಪಡೆದವರಾಗಿ ನಾವು ಬಳಿಕ ದೇವರ ಸನ್ನಿಧಿಯೊಳಗೆ ಬರಬಹುದಾಗಿದೆ. ಆದದರಿಂದ, ಮನುಷ್ಯರು ತಾವು ಹಳೆಯ ಯೆಹೂದ್ಯ ಧರ್ಮಶಾಸ್ತ್ರ ಅಥವಾ ಲೇವಿಕ ಯಾಜಕತ್ವದಿಂದ ಪಡೆಯುವ ನಿರೀಕ್ಷೆಗಿಂತಲೂ ಉತ್ತಮವಾಗಿರುವ ಒಂದು ನಿರೀಕ್ಷೆಯನ್ನು ಕ್ರಿಸ್ತನಿಂದ ಪಡೆದುಕೊಳ್ಳುತ್ತಾರೆ.

**20-21** ದೇವರು ಕ್ರಿಸ್ತನನ್ನು ಮಹಾಯಾಜಕನಾಗಿ ನೇಮಿಸಿದಾಗ ಆತನು ಆಣೆಮಾಡಿ ಅದನ್ನು ದೃಢಪಡಿಸಿದನು. ಇದನ್ನು ತೋರಿಸುವದಕ್ಕಾಗಿ ಬರಹಗಾರನು ಪು ನಃ ಕೀರ್ತನೆಗಳು 110:4 ರಿಂದ ಉಲ್ಲೇಖಿಸುತ್ತಾನೆ.

**22** ಈ ಆಣೆಯ ಕಾರಣದಿಂದ ಕ್ರಿಸ್ತನ ಯಾಜಕತ್ವವು ಲೇವಿಕ ಯಾಜಕತ್ವಕ್ಕಿಂತಲೂ ಉತ್ತಮವಾಗಿರುತ್ತದೆ. ಆದದರಿಂದ, ಆತನು ಒಂದು ಎಷ್ಟೋ ಶ್ರೇಷ್ಠವಾದ ಒಡಂಬಡಕೆಗೆ ಹೊಣೆಗಾರನಾದನು (ಇಬ್ರಿಯ 8:6 ಮತ್ತು ವ್ಯಾಖ್ಯಾನ ನೋಡಿರಿ).

**23-24** ಪ್ರಥಮ ಮಹಾಯಾಜಕನಾದ ಆರೋನನ ಕಾಲದಿಂದ ಈ ಪತ್ರಿಕೆಯು ಬರೆಯಲ್ಪಡುವ ಕಾಲದವರೆಗೆ ಎಂಭತ್ತೂರು ಮಹಾಯಾಜಕರು ಬಂದು ಹೋಗಿದ್ದರು. ಇವರೆಲ್ಲರೂ ಕ್ರಮವಾಗಿ ಮರಣಿಸಿದರು. ಆದರೆ ಯೇಸು ಎಂದಿಗೂ ಸಾಯುವದಿಲ್ಲ; ಆದದರಿಂದ, ಆತನ ಯಾಜಕತ್ವವು ಸದಾಕಾಲವಿರುವದು.

**25** ಕ್ರಿಸ್ತನು ನಮಗೋಸ್ಕರ ವಿಜ್ಞಾಪನೆ ಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ (ರೋಮ 8:34 ನೋಡಿರಿ). ಯೇಸು ದೇವರ ಸಿಂಹಾಸನದ ಎದುರಿನಲ್ಲಿ ನಮ್ಮ ಸಹಾಯಕನೂ ವಕೀಲನೂ ಆಗಿದ್ದಾನೆ ಮತ್ತು ಪರಿಪೂರ್ಣ ಯಾಜಕನಾಗಿರುವದರಿಂದ ದೇವರು ಆತನ ಮಾತನ್ನು ಕೇಳುವನು. ಅದು ಮಾತ್ರವಲ್ಲ, ಯೇಸು ನಮ್ಮ ಪಾಪಗಳಿಗಾಗಿ ಪ್ರಾಯಶ್ಚಿತ ಮಾಡಿದನು (ಇಬ್ರಿಯ 2:7). ದೇವರು ಇನ್ನು ಮೇಲೆ ನಮ್ಮನ್ನು ಅಪರಾಧಿಗಳೆಂದು ನಿರ್ಣಯಿಸುವದಿಲ್ಲ. ಅಷ್ಟೇ ಅಲ್ಲದೆ ಯೇಸು ನಮಗೆ ಕರುಣೆಯನ್ನು ಹಾಗೂ ನಮ್ಮ ಕಷ್ಟಕಾಲದಲ್ಲಿ ಸಮಯೋಚಿತ ಸಹಾಯವನ್ನು ನೀಡುತ್ತಾನೆ (ಇಬ್ರಿಯ 4:16) ಮತ್ತು ಯೇಸು ನಮ್ಮೆಲ್ಲರಿಗಾಗಿ ಇದನ್ನು ಮಾಡುವದನ್ನು ನಿಲ್ಲಿಸುವದಿಲ್ಲ, ಯಾಕೆಂದರೆ ಆತನ ಯಾಜಕತ್ವವು ಎಂದಿಗೂ ಕೊನೆಗೊಳ್ಳದ್ದಾಗಿದೆ. ಆತನು ಸದಾಕಾಲವೂ ದೇವರ ಬಲಗಡೆಯಲ್ಲಿ ಕೂತುಕೊಂಡಿರುತ್ತಾನೆ. ಆತನು ನಮ್ಮನ್ನು ದೇವರ ಸನ್ನಿಧಿಯೊಳಗೆ ಕರೆದುತರುವದಕ್ಕೆ ಯಾವಾಗಲೂ ಸಿದ್ಧನಾಗಿದ್ದಾನೆ. ಈ ಎಲ್ಲಾ ಕಾರಣಗಳಿಗಾಗಿ ಯೇಸು ನಮ್ಮನ್ನು ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ. ನಾವು ಇಂಥ ರಕ್ಷಕ ಹಾಗೂ ಮಹಾಯಾಜಕನಿಗಾಗಿ ದೇವರನ್ನು ಎಡೆಬಿಡದೆ ಸ್ತುತಿಸಿ ಕೊಂಡಾಡುತ್ತಿರೋಣ!

**26** ಈ ಪತ್ರಿಕೆಯ ಬರಹಗಾರನು ಅದ್ಭುತಕರ ಮಹಾಯಾಜಕನಾದ ಈ ಯೇಸುವಿನ ಕುರಿತು ಹೊಸ ಸಂಗತಿಗಳನ್ನು ಹೇಳುವದಕ್ಕೆ ಯೋಚಿಸುತ್ತಲೇ ಇರುತ್ತಾನೆ. ಯೇಸು ಪರಿಶುದ್ಧನೂ, ನಿರ್ದೋಷಿಯೂ, ನಿಷ್ಕಳಂಕನೂ, ಆಕಾಶಮಂಡಲಗಳಿಗಿಂತ ಉನ್ನತದಲ್ಲಿರುವವನೂ ಆಗಿದ್ದಾನೆ. ಯೇಸುವಿನ ಯಾಜಕತ್ವವು ಪರಿಪೂರ್ಣವಾದದ್ದು ಯಾಕೆಂದರೆ, ಆತನು ಸ್ವತಃ ಪರಿಪೂರ್ಣನಾಗಿದ್ದಾನೆ (ಇಬ್ರಿಯ 1:3-4; 15:16 ನೋಡಿರಿ).

**27** ಯೇಸು ತನ್ನ ಸ್ವಂತ ಪಾಪಗಳಿಗಾಗಿ ಯೆಹೂದ್ಯ ಯಾಜಕನಂತೆ ಯಜ್ಞವೊಂದನ್ನು ಅರ್ಪಿಸಬೇಕಾದ ಅಗತ್ಯವೇ ಇದ್ದಿರಲಿಲ್ಲ (ಯಾಜಕಾಂಡ 4:3; 16:6, ಇಬ್ರಿಯ 5:1-3).

ಅದು ಮಾತ್ರವಲ್ಲದೆ, ಯೇಸು ಯೆಹೂದ್ಯ ಯಾಜಕರ ಹಾಗೆ ನಮ್ಮ ಪಾಪಗಳಿಗೋಸ್ಕರ ಪದೇ ಪದೇ ಯಜ್ಞಗಳನ್ನು ಸಮರ್ಪಿಸಬೇಕಾದ ಅಗತ್ಯವಿರುವದಿಲ್ಲ (ಯಾಜಕ ಕಾಂಡ 16:34). ಯೇಸುವಿನ ರಾಜ್ಯವು ಅಂದರೆ ಆತನ ಸ್ವಂತ ದೇಹದ ಯಜ್ಞವು ದೇವರಿಗೆ ಸಂಪೂರ್ಣ ಮೆಚ್ಚಿಕೆಯಾದದ್ದಾಗಿತ್ತು. ಯೇಸು ತನ್ನನ್ನೇ ಪಾಪಕ್ಕಾಗಿ ಯಜ್ಞವನ್ನಾಗಿ ಮಾಡಿದನು. ಆತನ ಯಜ್ಞವು ಪರಿಪೂರ್ಣವಾಗಿದ್ದದರಿಂದ ಅದು ಎಂದಿಗೂ ಪುನಃ ಸಮರ್ಪಿಸಲ್ಪಡುವ ಅಗತ್ಯವಿಲ್ಲ.

ಎಂಥ ಒಂದು ಯಜ್ಞ! ಯೇಸು ಎಲ್ಲಾ ಪುರುಷರಿಗೂ ಸ್ತ್ರೀಯರಿಗೂ ರಕ್ಷಣೆಯನ್ನು ನೀಡುವದಕ್ಕಾಗಿ ತನ್ನ ಸ್ವಪ್ರಾಣವನ್ನೇ ಯಜ್ಞವಾಗಿ ಅರ್ಪಿಸಿದನು. ಯೇಸು ಬಹುಜನರಿಗಾಗಿ ತನ್ನ ಪ್ರಾಣವನ್ನು ಈಡುಕೊಡುವದಕೋಸ್ಕರ ಈ ಲೋಕಕ್ಕೆ ಬಂದನು (ಮಾರ್ಕ 10:45), ಮತ್ತು ಆತನು ಸಾಯುವದಕ್ಕೆ ಮುಂಚಿನ ಕೊನೆಯ ರಾತ್ರಿಯಲ್ಲಿ ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆಃ ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ; ಇದು ಬಹುಜನರಿಗೋಸ್ಕರ ಸುರಿಸಲ್ಪಡುವ ರಕ್ತ (ಮಾರ್ಕ 14:24). ಈ ಕಾರಣದಿಂದಲೇ ನಾವು ಯೇಸುವಿನ ಮರಣದ ಮೂಲಕ ಆತನ ರಕ್ತದ ಮೂಲಕ ರಕ್ಷಣೆಯನ್ನು ಹೊಂದಿಕೊಂಡಿದ್ದೇವೆಂದು ಸಾಕ್ಷಿ ಹೇಳುತ್ತೇವೆ.

**28** ಬರಹಗಾರನು ಇಲ್ಲಿ ಯೇಸುವಿನ ಕುರಿತಾಗಿ ಇನ್ನೊಂದು ಕೊನೆಯ ಸಂಗತಿಯನ್ನು ಸೇರಿಸುತ್ತಾನೆ. ಯೇಸು ಮಗನು, ದೇವರ ಸ್ವಂತ ಮಗನು. ಧರ್ಮಶಾಸ್ತ್ರದ ಪ್ರಕಾರವಾಗಿ, ಯೆಹೂದ್ಯ ಯಾಜಕರು ಮನುಷ್ಯರಾಗಿರಬೇಕಾಗಿತ್ತು,

ಖಂಡಿತವಾಗಿಯೂ ಅವರು ಸ್ವತಃ ನಿರ್ಬಲ ಹಾಗೂ ಪಾಪಿಗಳಾದ ಮನುಷ್ಯರೇ. ಆದರೆ ದೇವರ ಆಣೆಯೊಡನೆ ನೇಮಿಸಲ್ಪಟ್ಟ ಶ್ರೇಷ್ಠ ಮಹಾಯಾಜಕನು (ವಚನ 21). ದೇವರ ಸ್ವಂತ ಮಗನು ಸದಾಕಾಲಕ್ಕೂ ಸರ್ವಸಂಪೂರ್ಣವಾಗಿ ಮಾಡಲ್ಪಟ್ಟವನಾಗಿದ್ದಾನೆ.

---

## ಅಧ್ಯಾಯ - 8

### ಹೊಸ ಒಡಂಬಡಿಕೆಯ ಮಹಾಯಾಜಕನು (8:1-13)

**1-2** ಯೆಹೂದ್ಯ ಯಾಜಕರು ಮನುಷ್ಯರಿಂದ ಮಾಡಲ್ಪಟ್ಟ ಪವಿತ್ರ ಸ್ಥಾನದಲ್ಲಿ ಸೇವೆ ಮಾಡಿದರು. ಆದರೆ ಯೇಸು ಕರ್ತನೆ ಹಾಕಿದ ನಿಜವಾದ ದೇವದರ್ಶನ ಗುಡಾರದಲ್ಲಿ –ಪರಲೋಕದಲ್ಲಿ ದೇವರ ಬಲಗಡೆಯಲ್ಲಿರುವ ದೇವದರ್ಶನ ಗುಡಾರದಲ್ಲಿ– ಸೇವೆಮಾಡುತ್ತಾನೆ. ಯೆಹೂದ್ಯ ಯಾಜಕತ್ವವು ಲೋಕಕ್ಕೆ ಸಂಬಂಧಿಸಿತ್ತು ಯೇಸುವಿನ ಯಾಜಕತ್ವವು ಪರಲೋಕದ್ದಾಗಿದೆ.

**3** ಲೋಕದ ಯಾಜಕರು ಕಾಣಿಕೆಗಳನ್ನೂ ಯಜ್ಞಗಳನ್ನೂ ಸಮರ್ಪಿಸುವದಕ್ಕೆ ನೇಮಿಸಲ್ಪಟ್ಟಿರುತ್ತಾರೆ. ದೇವರ ಸನ್ನಿಧಿಯೊಳಗೆ ಬರುವದಕ್ಕೋಸ್ಕರ ಯೆಹೂದ್ಯ ಮಹಾಯಾಜಕನು ದೇವರಿಗೆ ಕಾಣಿಕೆಯೊಂದನ್ನು ಅರ್ಪಿಸಬೇಕಾಗಿರುತ್ತಿತ್ತು. ಯೇಸುವು ಸಹ ದೇವರಿಗೆ ಏನನ್ನಾದರೂ ಅರ್ಪಿಸಬೇಕಾದ ಅಗತ್ಯವಿತ್ತು. ಆದದರಿಂದ, ಆತನು ತನ್ನ ಸ್ವಂತ ದೇಹವನ್ನೂ ಅರ್ಪಿಸಿದನು.

**4** ಯೇಸು ಯೆಹೂದ್ಯ ಧರ್ಮಶಾಸ್ತ್ರವು ಹಾಗೂ ತನ್ನ ಪೂರ್ವಜನರ ಸಂಬಂಧದ ಪ್ರಕಾರವಾಗಿ ಎಂದಿಗೂ ಯೆಹೂದ್ಯ ಯಾಜಕನಾಗಿರಲಾರನು. ಆತನು ಎಲ್ಲಾ ಯೆಹೂದ್ಯ ಯಾಜಕರು ಸೇರಿದ್ದ ಲೇವಿಯ ಕುಲದವನಲ್ಲ, ಆದರೆ ಯೇಸುವಿನ ಯಾಜಕತ್ವವು ಈ ಲೋಕದ್ದಲ್ಲ; ಅದು ಪರಲೋಕದ್ದಾಗಿದೆ.

**5** ಯೆಹೂದ್ಯ ಯಾಜಕರು ಮನುಷ್ಯರು ನಿರ್ಮಿಸಿದ ಆಲಯದಲ್ಲಿ [14]. (ಪವಿತ್ರ ಸ್ಥಾನದಲ್ಲಿ) ಯಾಜಕತ್ವವನ್ನು ನಡಿಸಿದರು. ಹೇಗಿದ್ದರೂ, ಭೂಲೋಕದ ಆಲಯವು ನಿಜವಾದ ಆಲಯವಾಗಿರಲಿಲ್ಲ ಇದು ಪರಲೋಕದಲ್ಲಿರುವ ನಿಜವಾದ ದೇವಾಲಯದ ಪ್ರತಿರೂಪವು ಛಾಯೆಯೂ ಮಾತ್ರವೇ ಆಗಿತ್ತು.

ಪುರಾತನ ಯೆಹೂದ್ಯರು ಸಿನಾಯ್ ಅರಣ್ಯದಲ್ಲಿ ಪ್ರಥಮ ದೇವಾಲಯವನ್ನು ನಿರ್ಮಿಸುತ್ತಿರುವ ವೇಳೆಯಲ್ಲಿ ದೇವರು ಅವರ ನಾಯಕನಾದ ಮೋಶೆಗೆ ಈ ಆಜ್ಞೆಯನ್ನು ಕೊಟ್ಟನುಃ...... "ಬೆಟ್ಟದಲ್ಲಿ ನಾನು ನಿನಗೆ ತೋರಿಸಿದ ಮಾದರಿಯ ಪ್ರಕಾರವೇ ಎಲ್ಲವನ್ನೂ ಮಾಡಬೇಕು"– ಅಂದರೆ, ಪರಲೋಕದ ದೇವಾಲಯದ ಮಾಎಂಬದೇ. ಬರಹಗಾರನು ಈ ಆಜ್ಞೆಯನ್ನು ವಿಮೋಚನಕಾಂಡ 25:40ರಿಂದ ಉಲ್ಲೇಖಿಸುತ್ತಾನೆ.

ಪ್ರಪಂಚದ ಜನರು ತಾವು ನೋಡಬಲ್ಲ ಅಥವಾ ಸ್ಪರ್ಶಿಸಬಲ್ಲ ಸಂಗತಿಗಳು ಮಾತ್ರವೇ ವಾಸ್ತವವಾದ ಹಾಗೂ ನಿಜವಾದ ಸಂಗತಿಗಳಾಗಿರುತ್ತವೆ ಎಂದು ಊಹಿಸಿಕೊಳ್ಳುತ್ತಾರೆ. ಅವರು ಪರಲೋಕದ ಸಂಗತಿಗಳು ಕೇವಲ ಕಾಲ್ಪನಿಕ ಹಾಗೂ ನಿಜವಾಗಿಯೂ ಅಸ್ತಿತ್ವದಲ್ಲಿರುವದಿಲ್ಲ ಎಂದು ಯೋಚಿಸುತ್ತಾರೆ. ಆದರೆ ಆತ್ಮೀಕವಾದ ಮನುಷ್ಯನು ಈ ಲೋಕವು ಅಳಿದುಹೋಗುತ್ತಲಿದೆ ಎಂದು ತಿಳಿದವನಾಗಿದ್ದಾನೆ. ಪರಲೋಕದ ಹಾಗೂ ಆತ್ಮೀಕ ಸಂಗತಿಗಳು ಮಾತ್ರವೇ ಅಂತಿಮವಾಗಿ

ನಿಜವಾದವುಗಳಾಗಿದ್ದು ಸ್ಥಿರವಾಗಿ ಇರುವವುಗಳಾಗಿವೆ ಎಂದು ಆತನು ಬಲ್ಲವನಾಗಿರುತ್ತಾನೆ. ಈ ಕಾರಣದಿಂದಲೇ ಬರಹಗಾರನು ಇಲ್ಲಿ ಯೆಹೂದ್ಯರಿಂದ ನಿರ್ಮಿಸಲ್ಪಟ್ಟ ಆಲಯವು ಪರಲೋಕದಲ್ಲಿ ಯೇಸುವಿನಿಂದ ನಿರ್ಮಿಸಲ್ಪಟ್ಟ ಆಲಯದ ಪ್ರತಿರೂಪವೂ ಛಾಯೆಯೂ ಮಾತ್ರವೇ ಆಗಿದೆ ಎಂದು ಬರೆಯುತ್ತಾನೆ.

6 ಬರಹಗಾರನು 7ನೇ ಅಧ್ಯಾಯ ಮತ್ತು ಈ ಅಧ್ಯಾಯದ ಮೊದಲಿನ ಐದು ವಚನಗಳಲ್ಲಿ ಯೇಸುವಿನ ಯಾಜಕತ್ವವು ಯಹೂದ್ಯ ಯಾಜಕತ್ವಕ್ಕಿಂತಲೂ ಶ್ರೇಷ್ಠವಾಗಿದೆ ಎಂಬದನ್ನು ತೋರಿಸಿದ್ದಾನೆ. ಈಗ ಬರಹಗಾರನು ಮೇಲ್ಕಂಡ ತನ್ನ ವಿಚಾರಗಳಿಗೆ ಹೊಸದಾದ್ದೊಂದನ್ನು ಕೂಡಿಸುತ್ತಾನೆ. ಯೇಸು ಒಂದು ಹೊಸ ಒಡಂಬಡಿಕೆಗೆ ಉತ್ತಮ ವಾಗ್ದಾನಗಳ ಮೇಲೆ ಸ್ಥಾಪಿತವಾದ ಒಂದು ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ ಎಂದು ಆತನು ಹೇಳುತ್ತಾನೆ. ಯೇಸುವಿನ ಸೇವೆಯು ಯೆಹೂದ್ಯ ಯಾಜಕರ ಸೇವೆಗಿಂತಲೂ ಶ್ರೇಷ್ಠವಾಗಿರುವ ಪ್ರಕಾರವೇ ಹೊಸ ಒಡಂಬಡಿಕೆಯು ಹಳೆ ಒಡಂಬಡಿಕೆಗಿಂತ ಶ್ರೇಷ್ಠವಾಗಿದೆ.

ಆ ಹಳೆ ಒಡಂಬಡಿಕೆ ಯಾವದು? ಒಂದು ಒಡಂಬಡಿಕೆಯು ಎರಡು ಪಕ್ಷಗಳ ನಡುವಿನ ಒಂದು ಅಧಿಕೃತ ಒಪ್ಪಂದವಾಗಿರುತ್ತದೆ. ಹಳೆ ಒಡಂಬಡಿಕೆಯ ಪ್ರಕಾರವಾಗಿ ದೇವರು ಅಬ್ರಹಾಮನ ಸಂತತಿಯವರನ್ನು (ಯೆಹೂದ್ಯರನ್ನು) ತನ್ನ ವಿಶೇಷವಾದ ಸ್ವಕೀಯ ಜನವನ್ನಾಗಿ ಮಾಡಿಕೊಂಡು ಆಶೀರ್ವದಿಸುತ್ತೇನೆಂದು

ಒಪ್ಪಿಕೊಂಡನು (ಆದಿಕಾಂಡ 12:1-3). ಒಪ್ಪಂದದಲ್ಲಿ ಅದು ದೇವರ ಭಾಗವಾಗಿತ್ತು. ದೇವರ ಧರ್ಮಶಾಸ್ತ್ರಕ್ಕೆ ವಿಧೇಯರಾಗುವದು ಯೆಹೂದ್ಯರ ಭಾಗವಾಗಿತ್ತು (ವಿಮೋಚನಕಾಂಡ 19:5; ಯೆರೆಮಿಯ 7:23). ಯೆಹೂದ್ಯರು ವಿಧೇಯರಾಗದಿದ್ದರೆ ಒಡಂಬಡಿಕೆಯು ರದ್ದಾಗುವದು.

ಹಳೆ ಒಡಂಬಡಿಕೆಯು ಯಶಸ್ವಿಕರವಾಗಿರಲಿಲ್ಲ, ಯಾಕೆಂದರೆ ಯೆಹೂದ್ಯರು ದೇವರಿಗೆ ವಿಧೇಯರಾಗುವದನ್ನು ನಿಲ್ಲಿಸಿದರು (ಯೆರೆಮಿಯ 7:24-26). ಯೆಹೂದ್ಯರು ತಮ್ಮ ಒಪ್ಪಂದಕ್ಕೆ ನಂಬಿಗಸ್ಥರಾಗಿ ಉಳಿಯಲಿಲ್ಲ. ಆದದರಿಂದ, ದೇವರು ಅವರ ಚಿಂತೆಯನ್ನು ಬಿಟ್ಟನು –ವಿಮುಖನಾದನು (ವಚನ 9). ಹಳೆ ಒಡಂಬಡಿಕೆಯ ಅಡಿಯಲ್ಲಿ ದೇವರಿಗೆ ವಿಧೇಯರಾಗುವದಕ್ಕೆ ಯೆಹೂದ್ಯರಲ್ಲಿ ಬಲವಾಗಲಿ ಇಲ್ಲವೆ ಚಿತ್ತವಾಗಲಿ ಇರಲಿಲ್ಲ. ಅವರು ಪಾಪದ ದಾಸತ್ವದೊಳಗಿಂದ ಬಿಡುಗಡೆಯನ್ನು ಕಂಡುಕೊಳ್ಳಲು ಅಶಕ್ತರಾಗಿದ್ದರು. ಯೆಹೂದ್ಯ ಯಾಜಕರು ಪ್ರತಿವರ್ಷವೂ ಜನರ ಪಾಪಗಳಿಗಾಗಿ ಯಜ್ಞಗಳನ್ನು ಸಮರ್ಪಿಸುತ್ತಿದ್ದರಾದರೂ ಜನರು ತಮ್ಮ ಹೃದಯಗಳಲ್ಲಿ ಶುದ್ಧರೂ ನೀತಿವಂತರೂ ಆಗುವದಕ್ಕೆ ಸಾಧ್ಯವಾಗಲಿಲ್ಲ. ಆದದರಿಂದ, ಅವರ ಕೆಟ್ಟತನ ಹಾಗೂ ಅಪವಿತ್ರತೆಯ ಫಲಿತವಾಗಿ ಅವರು ದೇವರ ಸನ್ನಿಧಿಯೊಳಗೆ ಪ್ರವೇಶಿಸುವದಕ್ಕೆ ಆಗಲಿಲ್ಲ.

ಮನುಷ್ಯನಿಗೂ ದೇವರಿಗೂ ನಡುವಿನ ಹೊಸ ಒಡಂಬಡಿಕೆಯು ಯೇಸುಕ್ರಿಸ್ತನ ಒಡಂಬಡಿಕೆಯಾಗಿದೆ. ಬರಹಗಾರನು ಯೇಸುವನ್ನು ಈ ಹೊಸ ಒಡಂಬಡಿಕೆಯ ಮಧ್ಯಸ್ಥನು ಎಂದು ಕರೆಯುತ್ತಾನೆ. ಯೇಸು ಮನುಷ್ಯನಿಗೂ ದೇವರಿಗೂ ಮಧ್ಯದಲ್ಲಿ ನಿಲ್ಲುವವನಾಗಿದ್ದಾನೆ. ಯೇಸುವಿನ ಮೂಲಕವೇ ನಾವು ದೇವರಿಂದ ಕೊಡಲ್ಪಟ್ಟ ಹೊಸ ಒಡಂಬಡಿಕೆಯ ವಾಗ್ದಾನಗಳನ್ನು ಪಡೆದುಕೊಳ್ಳುವವರಾಗಿದ್ದೇವೆಃ "ನೀವು ಯೆಸುವನ್ನು ನಂಬುವದಾದರೆ ನಾನು ನಿಮಗೆ ರಕ್ಷಣೆಯನ್ನೂ ನಿತ್ಯಜೀವವನ್ನೂ ಕೊಡುವೆನು" (ಯೋಹಾನ 3:16 ನೋಡಿರಿ). ದೇವರು ನಮಗೆ ರಕ್ಷಣೆ, ನಿತ್ಯಜೀವ, ಪವಿತ್ರಾತ್ಮನನ್ನು ಕೊಡುತ್ತಾನೆಂಬ ಮತ್ತು ತನ್ನ ಕುಟುಂಬದಲ್ಲಿ ಪುತ್ರರನ್ನಾಗಿ ಸ್ವೀಕರಿಸುತ್ತಾನೆಂಬ ವಾಗ್ದಾನ ಮಾಡಿರುತ್ತಾನೆ. ಅದು ಆತನ ಪಾತ್ರವಾಗಿದೆ. ನಮ್ಮ ಪಾತ್ರವು ಇಷ್ಟೇ ಆಗಿದೆ ಆತನ ಮಗನಾದ ಯೇಸುವನ್ನು ನಂಬುವದೇ ಬರಹಗಾರನು ಇಲ್ಲಿ ಹೊಸ ಒಡಂಬಡಿಕೆಯು ಉತ್ತಮ ವಾಗ್ದಾನಗಳ ಮೇಲೆ,– ಯೇಸುವಿನಲ್ಲಿ ನಂಬಿಕೆಯಿಡುವವರಿಗೆ ದೇವರು ನೀಡಿರುವ ವಾಗ್ದಾನಗಳ ಮೇಲೆ– ಸ್ಥಾಪಿತವಾಗಿದೆ ಎಂದು ಹೇಳುತ್ತಾನೆ. ಬರಹಗಾರನು ಕೆಳಗೆ ಈ ಉತ್ತಮ ವಾಗ್ದಾನಗಳಲ್ಲಿ ಮೂರನ್ನು ಪ್ರಸ್ತಾಪಿಸುತ್ತಾನೆ ಅವುಗಳನ್ನು ಪ್ರವಾದಿಯಾದ ಯೆರೆಮೀಯಾನ ಮಾತುಗಳಿಂದ ಉಲ್ಲೇಖಿಸುತ್ತಾನೆ. ದೇವರ ಈ ವಾಗ್ದಾನಗಳಲ್ಲಿ ಮೊದಲನೆಯದುಃ "ನಾನು ನನ್ನ ಆಜ್ಞೆಗಳನ್ನು ಅವರ ಮನಸ್ಸಿನಲ್ಲಿ ಇಡುವೆನು ಅವರ ಹೃದಯಗಳ ಮೇಲೆ ಅವುಗಳನ್ನು ಬರೆಯುವೆನು" (ವಚನ 10). ಎರಡನೆಯ

ವಾಗ್ದಾನವೇನೆಂದರೆಃ ........ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು (ವಚನ11). ಮೂರನೆಯ ವಾಗ್ದಾನವೇನೆಂದರೆಃ "ನಾನು ಅವರ ದುಷ್ಕೃತ್ಯಗಳ ವಿಷಯವಾಗಿ ಕ್ಷಮೆಯುಳ್ಳವನಾಗಿರುವೆನು ಅವರ ಪಾಪಗಳನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ" (ವಚನ 12). ಕ್ಲುಪ್ತವಾಗಿ, ಈ ಮೂರು ವಾಗ್ದಾನಗಳ ಒಟ್ಟಾರೆ ಅರ್ಥವೇನೆಂದರೆಃ ದೇವರು ಕ್ರಿಸ್ತನಲ್ಲಿನ ಪ್ರತಿಯೊಬ್ಬ ವಿಶ್ವಾಸಿಯನ್ನು ನೂತನ ಸೃಷ್ಟಿಯಾಗಿ ಮಾಡುವನು (2 ಕೊರಿಂಥ 5:17). ಆತನು ತನ್ನ ಪವಿತ್ರಾತ್ಮನನ್ನು ಪ್ರತಿಯೊಬ್ಬ ವಿಶ್ವಾಸಿಯ ಹೃದಯದೊಳಗೆ ನೆಲೆಸುವದಕ್ಕೆ ಕಳುಹಿಸುತ್ತಾನೆ. ದೇವರು ಹೇಳಿದ್ದೇನೆಂದರೆಃ "ಅವರು ನನ್ನ ನಿಯಮಗಳನ್ನು ಅನುಸರಿಸಿ ನನ್ನ ವಿಧಿಗಳನ್ನು ಕೈಕೊಂಡು ನೆರವೇರಿಸಲಿ ಎಂದು ನಾನು ಅವರಿಗೆ ಒಂದೇ ಮನಸ್ಸನ್ನು ದಯಪಾಲಿಸಿ ನೂತನ ಸ್ವಭಾವವನ್ನು ಅವರಲ್ಲಿ ಹುಟ್ಟಿಸುವೆನು; ಕಲ್ಲಾದ ಹೃದಯವನ್ನು ಅವರೊಳಗಿಂದ ತೆಗೆದು ಮೃದುವಾದ ಹೃದಯವನ್ನು ಅವರಿಗೆ ಅನುಗ್ರಹಿಸುವೆನು; ಅವರು ನನಗ ಪ್ರಜೆಯಾಗಿರುವರು ನಾನು ಅವರಿಗೆ ದೇವರಾಗಿರುವೆನು" (ಯೆಹೆಜ್ಕೇಲನು 11:19-20).

ಆದದರಿಂದ, ಮನುಷ್ಯನಿಗೂ ದೇವರು ನಡುವಿನ "ಹೊಸ ಒಡಂಬಡಿಕೆ"ಯು ಈ ಕೆಳಗಿನಂತಿರುತ್ತದೆ. ದೇವರು ನಮಗೆ ಪರಲೋಕದಲ್ಲಿನ ನಿತ್ಯಜೀವದ ವಾಗ್ದಾನ ಮಾಡುತ್ತಾನೆ. ಅದರ ಜೊತೆಯಲ್ಲಿ ಆತನು ನಮಗೆ ನೂತನ ಆತ್ಮವನ್ನು ನೀಡುತ್ತಾನೆ, ಅದರ ಮೂಲಕ ನಾವು ಪಾಪವನ್ನು ಜಯಿಸಿ ಆತನನ್ನು ಗುರುತಿಸುವದಕ್ಕೂ ಆತನನ್ನು ಪ್ರೀತಿಸಿ

ವಿಧೇಯರಾಗುವದಕ್ಕೂ ಶಕ್ತರಾಗುತ್ತೇವೆ. ಒಡಂಬಡಿಕೆಯು ನೆರವೇರಲ್ಪಡಬೇಕಾದರೆ ಒಂದೇ ಸಂಗತಿಯು ಅವಶ್ಯಕತೆಯಿರುತ್ತದೆಃ ಒಬ್ಬ ವ್ಯಕ್ತಿಯು ಕ್ರಿಸ್ತನಲ್ಲಿ ನಂಬಿಕೆಯಿಡಬೇಕು. ನಿಜವಾಗಿಯೂ, ಈ ಹೊಸ ಒಡಂಬಡಿಕೆಯು ಹಳೆ ಒಡಂಬಡಿಕೆಗಿಂತಲೂ ಎಷ್ಟೋ ಶ್ರೇಷ್ಠವಾದದ್ದು.

7 ಮೊದಲನೆಯ ಒಡಂಬಡಿಕೆಯು (ಹಳೆ ಒಡಂಬಡಿಕೆಯು) ದೋಷವಿಲ್ಲದ್ದಾಗಿದ್ದರೆ ಹೊಸ ಒಡಂಬಡಿಕೆಯೊಂದನ್ನು ಮಾಡಬೇಕಾದ ಅಗತ್ಯವಿರುತ್ತಿರಲಿಲ್ಲ.

8 ಆದರೆ ಆ ಮೊದಲನೆಯ ಒಡಂಬಡಿಕೆಯಲ್ಲಿ ಯಾವದೋ "ದೋಷ" ಇತ್ತು. ಯೆಹೂದ್ಯರು ನಂಬಿಗಸ್ಥರಾಗುಳಿಯಲಿಲ್ಲ; ಅವರು ಒಡಂಬಡಿಕೆಯ ತಮ್ಮ ಪಾತ್ರವನ್ನು ನೆರವೇರಿಸಲಿಲ್ಲ.

ಈ ಪತ್ರಿಕೆಯ ಬರಹಗಾರನು 8:12 ವಚನಗಳಲ್ಲಿ ಪ್ರವಾದಿಯಾದ ಯೆರೆಮಿಯನ ಪುಸ್ತಕ 31:31-34ರಲ್ಲಿ ಬರೆದಿರುವ ದೇವರ ಮಾತುಗಳನ್ನು ಉಲ್ಲೇಖಿಸುತ್ತಾನೆ. ದೇವರು ಹೇಳುವದೇನೆಂದರೆಃ "ಇಗೋ ನಾನು ಇಸ್ರಾಯೆಲ್ ವಂಶದವರೊಂದಿಗೂ ಯಹೂದ ವಂಶದವರೊಂದಿಗೂ ಹೊಸದಾಗಿರುವ ಒಂದು ಒಡಂಬಡಿಕೆಯನ್ನು[15] ಮಾಡಿಕೊಳ್ಳುವ ದಿನಗಳು ಬರುವವು ". ಯೆರೆಮಿಯನ ಕಾಲದಲ್ಲಿ ಇಸ್ರಾಯೇಲ್ ಜನಾಂಗವು (ಯೆಹೂದ್ಯ ರಾಷ್ಟ್ರವು) ಎರಡು ರಾಜ್ಯಗಳಾಗಿ ಇಬ್ಭಾಗಿಸಲ್ಪಟ್ಟಿತ್ತುಃ ಉತ್ತರದಲ್ಲಿ ಇಸ್ರಾಯೇಲ್, ಹಾಗೂ ದಕ್ಷಿಣದಲ್ಲಿ ಯೆಹೂದ. ಹೀಗೆ ಈ ವಚನದಿಂದ ದೇವರ ಹೊಸ ಒಡಂಬಡಿಕೆಯು "ಎರಡೂ ರಾಜ್ಯಗಳಿಗೆ"– ಅಂದರೆ, ನಂಬಿಕೆಯ ಮೂಲಕ ಅಬ್ರಹಾಮನ ಸಂತತಿಯಾದವರಿಗೆಲ್ಲಾ – ಸಂಬಂಧಿಸಿರುತ್ತದೆಂದು ನಾವು ತಿಳಿದುಕೊಳ್ಳಬಹುದು. ಯೇಸುಕ್ರಿಸ್ತನಲ್ಲಿ ನಂಬಿಕೆಯಿಟ್ಟವರೆಲ್ಲರೂ ಅಬ್ರಹಾಮನ ನಿಜವಾದ ಸಂತತಿಯಾಗಿದ್ದಾರೆ (ಗಲ್ಯಾತ 3:7-9 ಮತ್ತು ವ್ಯಾಖ್ಯಾನ ನೋಡಿರಿ).

9-10 ಹೊಸ ಒಡಂಬಡಿಕೆಯು ಹಳೆ ಒಡಂಬಡಿಕೆಯಂಥದಲ್ಲ. ಹಳೆ ಒಡಂಬಡಿಕೆಯು ಎರಡು ಕಲ್ಲಿನ ಹಲಿಗೆಗಳ ಮೇಲೆ ಬರೆಯಲ್ಪಟ್ಟಿತ್ತು (ವಿಮೋಚನಕಾಂಡ 31:18). ಹೊಸ ಒಡಂಬಡಿಕೆಯು ಮನುಷ್ಯರ ಹೃದಯಗಳ ಮೇಲೆ ಬರೆಯಲ್ಪಟ್ಟಿತ್ತು (ವಿಮೋಚನ ಕಾಂಡ 31:18). ಹೊಸ ಒಡಂಬಡಿಕೆಯು ಮನುಷ್ಯರ ಹೃದಯಗಳ ಮೇಲೆ ಬರೆಯಲ್ಪಟ್ಟಿದೆ. ಮನುಷ್ಯರಿಗೆ ಹಳೆ ಒಡಂಬಡಿಕೆಯನ್ನು ಕೈಗೊಂಡು ನಡೆಯುವದಕ್ಕೂ ಅದಕ್ಕೆ ನಂಬಿಗಸ್ಥರಾಗಿ ಉಳಿಯುವದಕ್ಕೂ ಬಲವಿರಲಿಲ್ಲ. ಆದರೆ ಹೊಸ ಒಡಂಬಡಿಕೆಯ ಅಡಿಯಲ್ಲಿ ಮನುಷ್ಯರು ಪವಿತ್ರಾತ್ಮನನ್ನು ಪಡೆದುಕೊಳ್ಳುವರು ಆತನು ದೇವರಿಗೆ ವಿಧೇಯರಾಗುವದಕ್ಕೆ ಬಲವನ್ನೂ ಅಭಿಲಾಷೆಯನ್ನೂ ಅವರಿಗೆ ಕೊಡುತ್ತಾನೆ. ಈಗ ನಾವು ಕೀರ್ತನೆಗಾರನೊಂದಿಗೆ "ನನ್ನ ದೇವರೇ ನಿನ್ನ ಚಿತ್ತವನ್ನು ಅನುಸರಿಸುವದೇ ನನ್ನ ಸಂತೋಷವು ನಿನ್ನ ಧರ್ಮೋಪದೇಶವು ನನ್ನ ಅಂತರಂಗದಲ್ಲಿದೆ" ಎಂದು ಹೇಳಬಲ್ಲವರಾಗಿದ್ದೇವೆ (ಕೀರ್ತನೆಗಳು 40:8).

11 ಯೆಹೂದ್ಯರು ಹಳೆ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟ ಪ್ರಕಾರವಾಗಿ ದೇವರನ್ನೂ ಆತನ ವಾಕ್ಯವನ್ನೂ ಕುರಿತು ಒಬ್ಬರಿಗೊಬ್ಬರು ಬೋಧಿಸುತ್ತಿದ್ದರು. ಆದರೆ ಹೊಸ ಒಡಂಬಡಿಕೆಯ ಅಡಿಯಲ್ಲಿ ಪ್ರತಿಯೊಬ್ಬ ವಿಶ್ವಾಸಿಯು ತನ್ನಲ್ಲಿ ವಾಸಿಸುವ ಪವಿತ್ರಾತ್ಮನ ಮೂಲಕ ದೇವರನ್ನು ವಯಕ್ತಿಕವಾಗಿ ತಿಳಿದಿರುತ್ತಾನೆ. ಮಕ್ಕಳು ತಮ್ಮ ಮಾನುಷ ತಂದೆಗಳನ್ನು ತಿಳಿದಿರುವ ಹಾಗೆಯೇ ವಿಶ್ವಾಸಿಗಳು ತಮ್ಮ ಪರಲೋಕದ ತಂದೆಯನ್ನು ತಿಳಿದಿರಬಹುದಾಗಿದೆ. ಯೇಸು ತಾನೇ ದೇವರನ್ನು ಈ ವಿಧದಲ್ಲಿ ತಿಳಿಯುವದೇ ನಿತ್ಯಜೀವವಾಗಿದೆ ಎಂಬುದಾಗಿ ಹೇಳಿದನು (ಯೋಹಾನ 17:3).

12 ಹೊಸ ಒಡಂಬಡಿಕೆಯ ಅಡಿಯಲ್ಲಿ ನಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ ಅವು ಗಳು ಸಂಪೂರ್ಣ ಅಳಿಸಿಹಾಕಲ್ಪಟ್ಟಿವೆ. ಕ್ರಿಸ್ತನು ತನ್ನ ಸ್ವಂತ ದೇಹದ ಪರಿಪೂರ್ಣ ಯಜ್ಞದ ಮೂಲಕ ನಾವು ಶುದ್ಧರಾಗಿ ಮಾಡಲ್ಪಟ್ಟಿದ್ದೇವೆ. ಶುದ್ಧರಾಗಿ ಮಾಡಲ್ಪಟ್ಟವರಾದ ನಾವು ಈಗ ದೇವರ ಸನ್ನಿಧಿಯನ್ನು ಪ್ರವೇಶಿಸಬಹುದು. ಕ್ರಿಸ್ತನ ಮೂಲಕ ಮಾತ್ರವೇ ಮನುಷ್ಯನು ದೇವರ ದೃಷ್ಟಿಯಲ್ಲಿ ಪರಿಶುದ್ಧನಾಗಿಯೂ ಸ್ವೀಕೃತನಾಗಿಯೂ ಮಾಡಲ್ಪಡಬಹುದು. ಈ ವಿಧವಾಗಿ ಕ್ರಿಸ್ತನು ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ (ಇಬ್ರಿಯ 9:5)

13 ಹೀಗೆ, 8-12 ವಚನಗಳಲ್ಲಿ ಬರೆಯಲ್ಪಟ್ಟಿರುವ ಸಂಗತಿಗಳಿಂದ ನಾವು ಈ ಹೊಸ ಒಡಂಬಡಿಕೆಯು ಯಾವ ವಿಧವಾದದ್ದೆಂಬುದನ್ನು ನಾವು ತಿಳಿಯಬಹುದು. ಇದು ಮನುಷ್ಯರ ಹೃದಯಗಳ ಮೇಲೆ ಬರೆಯಲ್ಪಟ್ಟಿರುವ ಪವಿತ್ರಾತ್ಮನ ಒಡಂಬಡಿಕೆಯಾಗಿದೆ. ಈ ಕಾರಣದಿಂದಲೇ ಪೌಲನು ತನ್ನನ್ನು ತನ್ನ ಜೊತೆ ಅಪೊಸ್ತಲರನ್ನೂ ಹೊಸ ಒಡಂಬಡಿಕೆಯ ಸೇವಕರು– ಅದು ಲಿಖಿತರೂಪವಾದದ್ದಾಗಿರದೆ ದೇವರಾತ್ಮ ಸಂಬಂಧವಾದದ್ದು ಎಂದು ಹೇಳಿಕೊಳ್ಳುತ್ತಾನೆ (2 ಕೊರಿಂಥ 3:6), ಮತ್ತು ಹೊಸ ಒಡಂಬಡಿಕೆಯು ಬಂದಿರುವದಾದರೆ ಹಳೆ ಒಡಂಬಡಿಕೆಯು ಈಗ ಹಳೇದಾಗುತ್ತಾಮುದಿಯಾಗುವಂಥದ್ದು ಮತ್ತು ಬೇಗನೆ ಇಲ್ಲದಾಗುತ್ತದೆ. ಹಳೆ ಒಡಂಬಡಿಕೆಯು ಮೇಣದ ಬತ್ತಿಯಂತಿದೆ; ಸೂರ್ಯನು ಉದಯವಾಗುವಾಗ ಇನ್ನು ಮೇಲೆ ಅದರ ಅಗತ್ಯವಿರುವದಿಲ್ಲ.

ಹಳೆ ಒಡಂಬಡಿಕೆಯು ರಕ್ತಧಾರೆಯಿಂದ ದೃಢಪಡಿಸಲ್ಪಟ್ಟಿತು (ವಿಮೋಚನ ಕಾಂಡ 24:8). ಅದೇ ವಿಧದಲ್ಲಿ ಹೊಸ ಒಡಂಬಡಿಕೆಯು ಸಹ ರಕ್ತ –ಯೇಸುವಿನ ರಕ್ತ– ಸುರಿಸಲ್ಪಡುವಿಕೆಯಿಂದ ದೃಢಪಡಿಸಲ್ಪಟ್ಟಿತು. ಈ ಕಾರಣದಿಂದಲೇ ಯೇಸು ತನ್ನ ಕಡೇ ರಾತ್ರಿ ಭೋಜನದ ವೇಳೆ ಪಾತ್ರೆಯನ್ನು ತೆಗೆದುಕೊಂಡು ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆಃ "ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ, ಇದು ಬಹು ಜನರಿಗೋಸ್ಕರ ಸುರಿಸಲ್ಪಡುವದು..... ಈ ಪಾತ್ರೆಯು ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ" (ಮಾರ್ಕ 14:24; ಲೂಕ 22:20).

# ಅಧ್ಯಾಯ - 9

## ಇಹಲೋಕ ಸಂಬಂಧವಾದ ದೇವದರ್ಶನ ಗುಡಾರದಲ್ಲಿನ ಆರಾಧನೆ (9:1-10)

**1-3** ದೇವರು ಯೆಹೂದ್ಯರನ್ನು ಐಗುಪ್ತ್ಯದ ದಾಸತ್ವದೊಳಗಿಂದ ಬಿಡುಗಡೆಗೊಳಿಸಿದ ಬಳಿಕ ಅವರೊಂದಿಗೆ ತನ್ನ ಒಡಂಬಡಿಕೆಯನ್ನು ಸ್ಥಾಪಿಸಿದನು (ವಿಮೋಚನಕಾಂಡ 24:7-8). ತರುವಾಯ ಆತನು ಅವರಿಗೆ ಆಲಯ ಅಥವಾ ದೇವದರ್ಶನ ಗುಡಾರವನ್ನು ಕಟ್ಟುವಂತೆ ಆಜ್ಞಾಪಿಸಿದನು (ವಿ.ಕಾಂಡ. 25:8-9). ಈ ದೇವದರ್ಶನ ಗುಡಾರವು ಒಂದು ಬೃಹತ್ ಗುಡಾರವಾಗಿತ್ತು; ಗುಡಾರದಲ್ಲಿ ಎರಡು ಕೋಣೆಗಳಿದ್ದು ಅವು ಗಳ ನಡುವೆ ಒಂದು ತೆರೆಯಿತ್ತು . ಒಂದು ಕೋಣೆಯು ಪವಿತ್ರ ಸ್ಥಾನ ಎಂದೂ ಇನ್ನೊಂದು ಕೋಣೆಯು ಅತಿ ಪವಿತ್ರಸ್ಥಾನ ಎಂದೂ ಕರೆಯಲ್ಪಡುತ್ತಿದ್ದವು. (ವಿಮೋಚನ ಕಾಂಡ 26:33) ಪವಿತ್ರ ಸ್ಥಾನದಲ್ಲಿ ದ್ವೀಪಸ್ತಂಭ (ವಿಮೋಚನಕಾಂಡ 25:31) ಮೇಜು (ವಿಮೋಚನ ಕಾಂಡ 25:23) ಸಮರ್ಪಿಸಿದ ರೊಟ್ಟಿ (ವಿಮೋಚನಕಾಂಡ 25:30) ಇವು ಗಳನ್ನು ಇಡಲಾಗಿತ್ತು.

**4-5** ಈ ವಚನಗಳಲ್ಲಿ ಬರಹಗಾರನು ಎರಡನೆಯ ಕೋಣೆಯಾದ ಅತಿ ಪ್ರವಿತ್ರಸ್ಥಾನವನ್ನು ಬಣ್ಣಿಸುತ್ತಾನೆ. ಈ ಕೋಣೆಯಲ್ಲಿ ಚಿನ್ನದ ಧೂಪಾರತಿ (ವಿಮೋಚನಾಕಾಂಡ 30:1) ಮತ್ತು ಒಡಂಬಡಿಕೆಯ ಮಂಜೂಷ (ವಿಮೋಚನಕಾಂಡ 25:10) ಇವು ಗಳಿದ್ದವು. ಮಂಜೂಷದ ಒಳಗೆ ಮನ್ನಾ ಇಟ್ಟಿದ ಚಿನ್ನದ ಪಾತ್ರೆ (ವಿಮೋಚನ ಕಾಂಡ 16:31-33), ಆರೋನನ ಚಿಗುರಿನ ಕೋಲು (ಅರಣ್ಯಕಾಂಡ 17:1-5, 8, 10:11), ಮತ್ತು ಒಡಂಬಡಿಕೆ ಬರೆದಿದ್ದ ಕಲ್ಲಿನ ಹಲಿಗೆಗಳೂ ಇದ್ದವು, ಅವು ಗಳ ಮೇಲೆ ದೇವರು ತನ್ನ ನಿಯಮ ಹಾಗೂ ಆಜ್ಞೆಗಳನ್ನು ಬರೆದಿದ್ದನು (ವಿಮೋಚನ ಕಾಂಡ 24:12; 25:16; 31:18). ಮಂಜೂಷದ ಮೇಲೆ ಪ್ರಭಾವವನ್ನು ಸೂಚಿಸಿವ ಕೆರೂಬಿಗಳು ಇದ್ದರು (ವಿಮೋಚನಕಾಂಡ 25:18). ಅವು ಗಳು ದೇವರ ಮಹಿಮೆಯ ಸಂಕೇತವಾಗಿದ್ದವು. ಕೃಪಾಸನವು ವಾಸ್ತವವಾಗಿ ಮಂಜೂಷದ ಮುಚ್ಚಳವಾಗಿತ್ತು, ಅದರ ಮೇಲೆ ಮಹಾಯಾಜಕನು ಜನರ ಪಾಪನಿವಾರಣಕ್ಕಾಗಿ ಮಾಡಿದ ಪ್ರಾಣಿಗಳ ಯಜ್ಞದ ರಕ್ತವನ್ನು ಪ್ರೋಕ್ಷಿಸುತ್ತಿದ್ದನು (ವಿಮೋಚನಕಾಂಡ 25:17-22).

**6-7** ದೇವರು ವರ್ಷಕ್ಕೆ ಒಂದಾವರ್ತಿ ಮಹಾಯಾಜಕನನ್ನು ಸಂಧಿಸಲು ಅತಿಪವಿತ್ರ ಸ್ಥಾನದಲ್ಲಿ ಪ್ರತ್ಯಕ್ಷನಾಗುತ್ತಿದ್ದನು. ಮಹಾಯಾಜಕನು ಮಾತ್ರವೇ ದೇವರ ಸನ್ನಿಧಿಯೊಳಗೆ ಪ್ರತಿವರ್ಷದ ಪಾಪನಿವಾರಣೆಯ ವಿಶೇಷ ದಿನವೊಂದರಲ್ಲಷ್ಟೇ ಪ್ರವೇಶಿಸಬಹುದಾಗಿತ್ತು (ಯಾಜಕಾಂಡ 16:2). ಆ ಸಮಯದಲ್ಲಿ ಮಹಾಯಾಜಕನು ತನ್ನ ಸ್ವಂತ ಪಾಪನಿವಾರಣಕ್ಕಾಗಿ ಮೊದಲು ಯಜ್ಞವನ್ನು ಸಮರ್ಪಿಸಬೇಕಾಗಿತ್ತು. (ಯಾಜಕಾಂಡ 16:6). ಅನಂತರವಷ್ಟೇ ಎರಡನೆಯದಾಗಿ, ಎಲ್ಲಾ ಜನರ ಪಾಪನಿವಾರಣಕ್ಕಾಗಿ ಯಜ್ಞವನ್ನು ಸಮರ್ಪಿಸುತ್ತಿದ್ದನು (ಯಾಜಕಕಾಂಡ 16:9). ಹೀಗೆ ಮಹಾಯಾಜಕನು ಪ್ರತಿಸಾರಿ ಅತಿ ಪವಿತ್ರ ಸ್ಥಾನವನ್ನು ಪ್ರವೇಶಿಸಿ ದೇವರನ್ನು ಬೇಟಿಯಾಗುವಾಗ ತನ್ನೊಂದಿಗೆ ಪ್ರಾಣಿ ಯಜ್ಞಗಳ ರಕ್ತವನ್ನು ತರುತ್ತಿದ್ದನು (ಯಾಜಕಕಾಂಡ 16:14-15). ಮಹಾ ಯಾಜಕನ ಯಜ್ಞಗಳ ಪರಿಣಾಮವು ಚಿರಕಾಲ ಇರುತ್ತಿರಲಿಲ್ಲ, ಯಾಕೆಂದರೆ ಅವು ಗಳನ್ನು ಪ್ರತಿವರ್ಷವೂ ಪು ನರಾವರ್ತಿಸಬೇಕಾಗಿತ್ತು.

ಮಹಾಯಾಜಕನು ಜನರ ತಿಳಿಯದೆ ಮಾಡಿದ ತಪ್ಪುಗಳಿಗೋಸ್ಕರ ಮಾತ್ರವೇ ಯಜ್ಞಗಳನ್ನು ಸಮರ್ಪಿಸುತ್ತಿದ್ದನು (ವಚನ 7). ಹಳೆಒಡಂಬಡಿಕೆಯ ಅನುಸಾರವಾಗಿ ಗೊತ್ತಿದ್ದೂ ಮಾಡಿದ ಪಾಪಗಳಿಗಾಗಿ ಯಾವ ಯಜ್ಞವಾಗಲಿ ಅಥವಾ ಕ್ಷಮಾಪಣೆಯಾಗಲಿ ಸಾಧ್ಯವಿರಲಿಲ್ಲ (ಇಬ್ರಿಯ 10:26 ಮತ್ತು ವ್ಯಾಖ್ಯಾನ ನೋಡಿರಿ).

**8** ಮೇಲ್ಗಡೆ ಬರೆಯಲ್ಪಟ್ಟಿರುವದರ ಮೂಲಕ ನಾವು ಮಹಾಯಾಜಕನನ್ನು ಹೊರತು ಪಡಿಸಿ ಅತಿ ಪವಿತ್ರ ಸ್ಥಳದ -ದೇವರ ಸಾನಿಧ್ಯದೊಳಗೆ ಹೋಗುವ- ದ್ವಾರವು ಯೆಹೂದ್ಯರಿಗೆ ಮುಚ್ಚಲ್ಪಟ್ಟಿತ್ತೆಂಬದನ್ನು ನೋಡಬಹುದು. ಮೊದಲ ಗುಡಾರವು ಇರುವ ತನಕ- ಅಂದರೆ, ಹಳೆ ಒಡಂಬಡಿಕೆಯು ಇನ್ನೂ ಜಾರಿಯಲ್ಲಿರುವ ತನಕ- ದೇವರ ಸನ್ನಿಧಿಯೊಳಗೆ ಹೋಗುವ ಮಾರ್ಗವು ಮುಚ್ಚಲ್ಪಟ್ಟದ್ದಾಗಿ ಉಳಿಯಿತು. ಆದರೆ, ಕ್ರಿಸ್ತನು ಲೋಕಕ್ಕೆ ಬಂದಾಗ ಆತನು ತನ್ನ ಸ್ವಂತ ದೇಹವನ್ನು ಯಜ್ಞ ಮಾಡಿ ತನ್ನ ಸ್ವರಕ್ತವನ್ನು ತೆಗೆದುಕೊಂಡು ದೇವರ ಸನ್ನಿಧಿಯೊಳಗೆ ಪ್ರವೇಶಿಸಿದನು (ವಚನ 12). ಹೀಗೆ ಮಾಡುವದರ ಮೂಲಕ, ಆತನು ಎಲ್ಲಾ ವಿಶ್ವಾಸಿಗಳ ಪಾಪಗಳಿಗಾಗಿ ಪ್ರಾಯಶ್ಚಿತ ಮಾಡಿದನು ಹಾಗೂ ದೇವರ ಸನ್ನಿಧಿಯೊಳಗೆ ನೇರವಾಗಿ ಪ್ರವೇಶಿಸಲು ಅವರಿಗೆ ಮಾರ್ಗವನ್ನು ತೆರೆದನು.

**9-10** ಹಳೆ ಒಡಂಬಡಿಕೆಯ ಯಜ್ಞಗಳು ಹಾಗೂ ಕಾಣಿಕೆಗಳು ಆರಾಧನೆ ಮಾಡುವವನ ಹೃದಯ ಅಥವಾ ಮನಸ್ಸಾಕ್ಷಿಯನ್ನು ಶುದ್ಧ ಮಾಡಲಾಗಲಿಲ್ಲ. ಶುದ್ಧ ಮನಸಾಕ್ಷಿಯಿಲ್ಲದೆ ಯಾವನೂ ದೇವರ ಸಮೀಪಕ್ಕೆ ಬರಲಾರನು. ಕ್ರಿಸ್ತನು ಮಾಡಿದ ಯಜ್ಞ ಹಾಗೂ ನಮ್ಮಲ್ಲಿ ವಾಸಿಸುವ ಪವಿತ್ರಾತ್ಮನ ಮೂಲಕ ಮಾತ್ರವೇ ನಮ್ಮ ಮನಸಾಕ್ಷಿಗಳು ಶುದ್ಧ ಮಾಡಲ್ಪಡಬಹುದಾಗಿದೆ.

ಆದದರಿಂದ, ಈ ಹಳೆ ಒಡಂಬಡಿಕೆಯ ಬಾಹ್ಯ ನಿಯಮಗಳು ತಿದ್ದುಪಾಟಿನ (ಹೊಸ ವ್ಯವಸ್ಥೆಯ) ಕಾಲದವರೆಗೆ ಮಾತ್ರ ಚಾಲನೆಯಲ್ಲಿದ್ದವು (ವಚನ 10). ಅಂದರೆ, ಯೇಸುಕ್ರಿಸ್ತನ ಮಧ್ಯಸ್ಥಿಕೆಯಿಂದಾದ ಹೊಸ ಒಡಂಬಡಿಕೆಯ ಕಾಲದವರೆಗೆ ಮಾತ್ರ ಚಾಲನೆಯಲ್ಲಿದ್ದವು. ಹೊಸ ಒಡಂಬಡಿಕೆಯು ಬಂದಾಗ ಹಳೆ ಒಡಂಬಡಿಕೆಯು ಇನ್ನೆಂದಿಗೂ ಅಗತ್ಯವಿರುವದಿಲ್ಲ (ಇಬ್ರಿಯ 8:13 ನೋಡಿರಿ).

## ಕ್ರಿಸ್ತನ ರಕ್ತ (9:11-22)

**11** ಕ್ರಿಸ್ತನು ಈ ಲೋಕಕ್ಕೆ ಈಗಾಗಲೇ ದೊರೆತಿರುವ ಮೇಲಾದ ಸಂಗತಿಗಳು ಕುರಿತು– ಅಂದರೆ, ಹೊಸ ಒಡಂಬಡಿಕೆಯ ಕುರಿತು– ಮಹಾಯಾಜಕನಾಗಿರಲು ಬಂದನು (ಇಬ್ರಿಯ 8:1-6 ಮತ್ತು ವ್ಯಾಖ್ಯಾನ ನೋಡಿರಿ). ದೇವರು ಮನುಷ್ಯರಿಂದ ಕಟ್ಟಲ್ಪಟ್ಟ ಆಲಯದಲ್ಲಿ ವಾಸಿಸುವದಿಲ್ಲ (ಅ.ಕೃತ್ಯ 7:48; 17:24). ಆತನು ಪರಲೋಕದೊಳಗೆ ಘನವಾಗಿಯೂ ಉತ್ಕೃಷ್ಟವಾಗಿಯೂ ಇರುವ ಗುಡಾರದಲ್ಲಿ ವಾಸಿಸುವನು. ಯೇಸು ಆ ಪರಲೋಕದಲ್ಲಿನ ಗುಡಾರದ ಮಹಾಯಾಜಕನಾಗಿದ್ದಾನೆ. ಯೇಸು ಲೋಕಕ್ಕೆ ಬಂದಾಗ, ಆತನು ಒಂದು ಅರ್ಥದಲ್ಲಿ ಮನುಷ್ಯ ನಿರ್ಮಿತ ಹಳೆ ಒಡಂಬಡಿಕೆಯ ಗುಡಾರವನ್ನು ಕೆಡಿಸಿ ಅದರ ಸ್ಥಳದಲ್ಲಿ ಒಂದು ನಿಜವಾದ ಪರಲೋಕದ ಗುಡಾರವನ್ನು ಸಿದ್ಧಮಾಡಿದನು, ಅಲ್ಲಿ ಮನುಷ್ಯರು ದೇವರನ್ನು ಆತ್ಮದಲ್ಲಿಯೂ ಸತ್ಯದಲ್ಲಿಯೂ ಆರಾಧಿಸುತ್ತಾರೆ (ಮಾರ್ಕ 14:58; ಯೋಹಾನ 4:21, 23-24 ನೋಡಿರಿ).

**12** ದೇವರ ಸನ್ನಿಧಿಯನ್ನು ಪ್ರವೇಶಿಸುವದಕ್ಕೆ ಪಾಪ ನಿವಾರಣಕ್ಕಾಗಿ ಯಜ್ಞಮಾಡಲ್ಪಟ್ಟ ಪ್ರಾಣಿಗಳ ರಕ್ತವನ್ನು ಪ್ರೋಕ್ಷಿಸುವದು ಅವಶ್ಯಕವಾಗಿರುತ್ತದೆ. ಆದದರಿಂದ, ಯೆಹೂದ್ಯ ಮಹಾಯಾಜಕನು ಅತಿಪವಿತ್ರ ಸ್ಥಳದೊಳಗೆ ಹೋತ ಹೋರಿಗಳ ರಕ್ತವನ್ನು ತೆಗೆದುಕೊಂಡು ಬರುತ್ತಿದ್ದನು (ವಚನ 7). ಆದರೆ ಯೇಸು ತನ್ನ ಸ್ವಂತ ರಕ್ತವನ್ನು ತೆಗೆದುಕೊಂಡು ದೇವರ ಸನ್ನಿಧಿಯನ್ನು ಪ್ರವೇಶಿಸಿದನು. ಯೇಸುವಿನ ಯಜ್ಞವು ಪರಿಪೂರ್ಣವಾಗಿತ್ತು. ಹೀಗಿರುವದರಿಂದ, ಅದನ್ನು ಪು ನರಾರ್ತಿಸುವ ಅಗತ್ಯವೇ ಇರುವದಿಲ್ಲ ಮತ್ತು ಆತನ ಯಜ್ಞದ ಮೂಲಕ ವಿಶ್ವಾಸಿಗಳಾದ ನಾವು ನಿತ್ಯ ವಿಮೋಚನೆಯನ್ನು ಅಥವಾ ರಕ್ಷಣೆಯನ್ನು ಸಂಪಾದಿಸಿಕೊಳ್ಳುತ್ತೇವೆ.

**13** ಪ್ರಾಣಿಗಳ ರಕ್ತವೂ ಬೂದಿಯೂ ಒಬ್ಬ ವ್ಯಕ್ತಿಯ ಶರೀರದ ಹೊಲೆಯನ್ನು ಮಾತ್ರವೇ, ಅಥವಾ ಶಿಷ್ಟಾಚಾರಬದ್ಧವಾಗಿಯಷ್ಟೇ ಶುದ್ಧಮಾಡುತ್ತವೆ. ಈ ವಚನದಲ್ಲಿ ಪ್ರಸ್ತಾಪಿಸಲಾಗಿರುವ ಕಡಸಿನ ಬೂದಿಯು ಅರಣ್ಯಕಾಂಡ 19:9ರಲ್ಲಿ ಸೂಚಿತವಾಗಿರುತ್ತದೆ.

ಯೆಹೂದ್ಯರು ಬಾಹ್ಯ ಶುದ್ಧತೆಗೆ ಶ್ರೇಷ್ಠ ಪ್ರಾಮುಖ್ಯತೆ ನೀಡುತ್ತಿದ್ದರು. ಆದರೆ ಯೇಸು ಅಂತರ್ಯದ ಶುದ್ಧಿಯು ಅತಿ ಹೆಚ್ಚು ಪ್ರಾಮುಖ್ಯವೆಂದು ಕಲಿಸಿದನು (ಮಾರ್ಕ 7:20-23 ನೋಡಿರಿ). ಪ್ರಾಣಿಗಳ ರಕ್ತ ಹಾಗೂ ಬೂದಿಯು ಒಬ್ಬ ವ್ಯಕ್ತಿಯನ್ನು ಅಂತರ್ಯದಲ್ಲಿ ಎಂದಿಗೂ ಶುದ್ಧನನ್ನಾಗಿ ಮಾಡಲಾರವು .

**14** ಹೇಗಿದ್ದರೂ, ಪ್ರಾಣಿಗಳ ರಕ್ತ ಮಾಡಲಾಗದಿದ್ದನ್ನು ಕ್ರಿಸ್ತನ ರಕ್ತವು ಮಾಡುತ್ತದೆ. ಅದು ನಮ್ಮ ಮನಸಾಕ್ಷಿಗಳನ್ನು ನಿರ್ಜೀವ ಕರ್ಮಗಳಿಂದ– ಅಂದರೆ, ಪಾಪಗಳಿಂದ– ಶುದ್ಧ ಮಾಡುತ್ತದೆ. ಕ್ರಿಸ್ತನು ನಮ್ಮನ್ನು ಶುದ್ಧೀಕರಿಸುವದರ ಕಾರಣವೇನೆಂದರೆ ನಾವು ಜೀವವುಳ್ಳ ದೇವರನ್ನು ಆರಾಧಿಸುವವರು ಆಗಬೇಕೆಂಬುದಕ್ಕಾಗಿಯೇ.

ಹಳೆ ಒಡಂಬಡಿಕೆಯ ಅಡಿಯಲ್ಲಿ ದೇವರು ತನಗೆ ಯಜ್ಞಮಾಡುವ ಪ್ರಾಣಿಗಳು ನಿರ್ದೋಷವಾಗಿರತಕ್ಕದ್ದು ಎಂದು ಹೇಳಿದನು. ಈಗ ಹೊಸ ಒಡಂಬಡಿಕೆಯ ಅಡಿಯಲ್ಲಿ ಯೇಸುಕ್ರಿಸ್ತನು ಸ್ವತಃ ಪಾಪರಹಿತ ನಿರ್ದೋಷಿಯಾದ ಯಜ್ಞವಾಗಿರುತ್ತಾನೆ.

**15** ಕ್ರಿಸ್ತನ ಮರಣದ ಮೂಲಕ ಅವಿಶ್ವಾಸಿಗಳು ತಮ್ಮ ಪೂರ್ವ ಪಾಪಗಳಿಂದ ಮುಕ್ತಗೊಳಿಸಲ್ಪಟ್ಟಿದ್ದಾರೆ ಅವರು ಕ್ಷಮಿಸಲ್ಪಟ್ಟಿರುತ್ತಾರೆ. ಕ್ರಿಸ್ತನು ಮರಣವನ್ನು ಅನುಭವಿಸಿದ್ದರಿಂದ ಆತನು ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ ಅದರ ಮೂಲಕ ಕರೆಯಿಸಿಕೊಂಡವರಾದ ನಾವು ವಾಗ್ದಾನವಾಗಿದ್ದ ನಿತ್ಯ ಬಾಧ್ಯತೆಯನ್ನು ಹೊಂದುವದಕ್ಕೆ ಮಾರ್ಗವಾಯಿತು. ಆ "ನಿತ್ಯ ಬಾಧ್ಯತೆ"ಯು ಪಾಪಗಳ ಕ್ಷಮಾಪಣೆ, ರಕ್ಷಣೆ, ನಿತ್ಯಜೀವ ಆಗಿದೆ (ಇಬ್ರಿಯ 7:27; 8:6; ಮತ್ತು ವ್ಯಾಖ್ಯಾನ ಗಳನ್ನು ನೋಡಿರಿ). ಹಳೆ ಒಡಂಬಡಿಕೆಯು ಮನುಷ್ಯರನ್ನು ಪಾಪದಿಂದ ಬಿಡುಗಡೆಗೊಳಿಸಲು ಆಗಲಿಲ್ಲ. ಈಗ ಯೇಸುವಿನ ಮರಣದ ಮೂಲಕ ನಾವು ಬಿಡುಗಡೆಗೊಂಡಿದ್ದೇವೆ (ರೋಮ 8:1-2 ನೋಡಿರಿ).

**16-17** ಮರಣ ಶಾಸನವು [16] (ಉಯಿಲು) ಜಾರಿಗೆ ಬರಬೇಕಾದರೆ ಉಯಿಲ್ಲನ್ನು ಬರೆಯಿಸಿದ ವ್ಯಕ್ತಿಯ ಸಾಯತಕ್ಕದ್ದು. ಅದೇ ವಿಧದಲ್ಲಿ ಕ್ರಿಸ್ತನು ಮರಣಿಸಿದ ಬಳಿಕ ಮಾತ್ರವೇ ಹೊಸ "ಉಯಿಲು" ಅಥವಾ ಒಡಂಬಡಿಕೆಯ ಜಾರಿಗೆ ಬರಬಹುದಾಗಿತ್ತು.

**18-20** ಹಳೇ "ಉಯಿಲು" ಅಥವಾ ಒಡಂಬಡಿಕೆಯು ಚಾಲನೆ ಬರುವದಕ್ಕಾಗಿ ಸಹ ಮರಣ ಇರುವದು ಅಗತ್ಯವಾಗಿತ್ತು –ಒಂದು ಪ್ರಾಣಿಯ ಮರಣವೇ (ವಿಮೋಚನ ಕಾಂಡ 24:8). 19ನೇ ವಚನದಲ್ಲಿ ಪ್ರಸ್ತಾಪಿಸಲಾಗಿರುವ ಕೆಂಪು ಉಣ್ಣೆ, ಹಿಸ್ಸೋಪಕಡ್ಡಿ [17] ಅರಣ್ಯಕಾಂಡ 19:6ರಲ್ಲಿ ಸಹ ಪ್ರಸ್ತಾಪಿಸಲ್ಪಟ್ಟಿವೆ.

**21-22** ರಕ್ತವನ್ನು ಸುರಿಸುವಿಕೆಯ ಮೂಲಕವಷ್ಟೇ ಯೆಹೂದ್ಯ ಮಹಾಯಾಜಕನು ತನ್ನ ಹಾಗೂ ಜನರ ಪಾಪಗಳಿಗಾಗಿ ಪ್ರಾಯಶ್ಚಿತ ಮಾಡಬಲ್ಲವನಾಗಿದ್ದನು. ಹೀಗೆ ದೇವರ ಗುಡಾರದೊಳಗಿರುವ ಎಲ್ಲದರ ಮೇಲೆಯೂ ರಕ್ತ ಪ್ರೋಕ್ಷಣೆಯಾಗಬೇಕು ಎಂದು ಸೂಚಿಸಿದ್ದನು (ಯಾಜಕಕಾಂಡ 16:14-16, 18-19 ನೋಡಿರಿ).

ಅದೇ ವಿಧದಲ್ಲಿ, ಹೊಸ ಒಡಂಬಡಿಕೆಯ ಅಡಿಯಲ್ಲಿಯೂ ಮನುಷ್ಯರು ರಕ್ತಧಾರೆಯ ಮೂಲಕ ಮಾತ್ರವೇ ಕ್ಷಮಾಪಣೆಯನ್ನು ಹೊಂದಿಕೊಳ್ಳಬಲ್ಲರು. ಈ ಕಾರಣದಿಂದಲೇ ಯೇಸು ನಮ್ಮನ್ನು ಪಾಪಗಳಿಂದ ಶುದ್ಧೀಕರಿಸುವದಕ್ಕಾಗಿ ತನ್ನ ಸ್ವರಕ್ತವನ್ನು ಸುರಿಸಿ ಸಾಯಬೇಕಾಗಿತ್ತು.

### ಕ್ರಿಸ್ತನ ಅದ್ವೀತಿಯ ಯಜ್ಞ (9:23-28)

**23** ಪರಲೋಕ ವಸ್ತುಗಳಿಗೆ ಪ್ರತಿರೂಪವಾಗಿರುವ ವಸ್ತುಗಳ –ಅಂದರೆ, ಲೋಕ ಸಂಬಂಧದ ಗುಡಾರ–ಶುದ್ಧೀಕರಣಕ್ಕಾಗಿ ಇಂಥಾ (ಪ್ರಾಣಿಗಳ) ಯಜ್ಞಗಳು ಅವಶ್ಯಕವಾಗಿದ್ದವು. ಆದರೆ ಪರಲೋಕದ ಗುಡಾರವು ಇವುಗಳಿಗಿಂತ ಉತ್ತಮವಾದ ಯಜ್ಞಗಳಿಂದ –ಅಂದರೆ, ಸ್ವತಃ ಕ್ರಿಸ್ತನ ಯಜ್ಞದಿಂದಲೇ– ಶುದ್ಧೀಕರಿಸಲ್ಪಟ್ಟಿದೆ. ಒಂದು ವಿಧದಲ್ಲಿ ವಿಶ್ವಾಸಿಗಳಾದ ನಾವು ಈ ಪರಲೋಕದ ಗುಡಾರವಾಗಿದ್ದೇವೆ (ಎಫೆಸ 2:22; 1 ಪೇತ್ರ 2:5 ನೋಡಿರಿ). ದೇವರ ವಾಸಸ್ಥಾನವಾಗಿರುವ ನಾವು ಸಹ ಉತ್ತಮವಾದ ಯಜ್ಞಗಳ ಮೂಲಕ ಶುದ್ಧೀಕರಿಸಲ್ಪಡಬೇಕು. ಮತ್ತು ನಿಜವಾಗಿಯೂ ನಾವು ಕ್ರಿಸ್ತನ ಪರಿಪೂರ್ಣ ಯಜ್ಞದ ಮೂಲಕ ಶುದ್ಧೀಕರಿಸಲ್ಪಟ್ಟಿದ್ದೇವೆ. ನಾವು ಪಾಪದಿಂದ ಬಿಡುಗಡೆಗೊಳಿಸಲ್ಪಟ್ಟಿದ್ದೇವೆ; ನಾವು ಕ್ರಿಸ್ತನ ಅಮೂಲ್ಯವಾದ ರಕ್ತದಿಂದ ವಿಮೋಚಿಸಲ್ಪಟ್ಟಿದ್ದೇವೆ (1 ಪೇತ್ರ 1:18-19).

**24** ಇಲ್ಲಿ ಬರಹಗಾರನು ಇಬ್ರಿಯ 8:1-2ರಲ್ಲಿನ ವಿಚಾರವನ್ನು ಪು ನರಾವರ್ತಿಸುತ್ತಾನೆ.

**25-26** ಕ್ರಿಸ್ತನ ಯಜ್ಞವು ಇನ್ನೆಂದಿಗೂ ಪು ನಃ ಮಾಡಲ್ಪಡುವ ಅಗತ್ಯವಿರುವದಿಲ್ಲ. ಕ್ರಿಸ್ತನು ತನ್ನ ಮರಣದ ಮೂಲಕ ಒಂದೇ ಸಾರಿ ನಮ್ಮ ಪಾಪಗಳ ನಿವಾರಣಾರ್ಥವಾಗಿ ಸಮರ್ಪಿತನಾದನು (ವಚನ26).

**27-28** ಒಬ್ಬ ಮನುಷ್ಯನು ಒಂದು ಸಾರಿ ಮಾತ್ರವೇ ಸಾಯುತ್ತಾನೆ. ಆದದರಿಂದ, ಕ್ರಿಸ್ತನು ಪದೇ ಪದೇ ಯಜ್ಞವಾಗುವದು ಅಸಾಧ್ಯವಾಗಿರುತ್ತದೆ ಆತನ ಏಕಕಾಲದ ಯಜ್ಞವು ಬಹುಜನರ ಪಾಪಗಳನ್ನು ನಿವಾರಣಮಾಡುವದಕ್ಕೆ ಸಮರ್ಥವಾಗಿದೆ–ಸಂತೃಪ್ತಕರವಾಗಿದೆ (ಯೋಹಾನ 1:29, ಮತ್ತು ವ್ಯಾಖ್ಯಾನ ನೋಡಿರಿ). ಮನುಷ್ಯನ ಮರಣದ ಬಳಿಕ ನ್ಯಾಯತೀರ್ಪು ಇರುತ್ತದೆ. ಯೇಸುವಿನ ಮರಣದ ನಂತರ ನ್ಯಾಯ ತೀರ್ಪು ಅಲ್ಲ, ಆದರೆ ಆತನನ್ನು ನಿರೀಕ್ಷಿಸಿಕೊಂಡಿರುವವರಿಗೆ –ಅಂದರೆ, ಎಲ್ಲಾ ವಿಶ್ವಾಸಿಗಳಿಗೆ– ನಿತ್ಯ ರಕ್ಷಣೆಯು ಉಂಟಾಯಿತು. ಯೇಸು ಪು ನಃ ಬರುವನು. ಆ ದಿನದಲ್ಲಿ ನಾವು ಪರಲೋಕದಲ್ಲಿ ಆತನು ನಮಗೆ ವಾಗ್ದಾನ ಮಾಡಿದ ನಮ್ಮ ಪೂರ್ಣ ಬಾಧ್ಯತೆಯನ್ನು ಸಂಪಾದಿಸಿಕೊಳ್ಳುವೆವು. ಆದದರಿಂದ, ನಾವು ಬೇಸರಗೊಳ್ಳದಿರೋಣ, ಆದರೆ ನಂಬಿಕೆ ಹಾಗೂ ತಾಳ್ಮೆಯೊಂದಿಗೆ ಕಾಯುವವರಾಗಿರೋಣ (ಇಬ್ರಿಯ 6:12 ನೋಡಿರಿ).

---

## ಅಧ್ಯಾಯ - 10

### ಕ್ರಿಸ್ತನ ಒಂದೇ ಯಜ್ಞವು (10:1-18)

**1** ಯೆಹೂದ್ಯ ಧರ್ಮಶಾಸ್ತ್ರವು ಹಳೆ ಒಡಂಬಡಿಕೆಯೂ ಸೇರಿದಂತೆ ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆಯೇ ಆಗಿದ್ದವು (ಇಬ್ರಿಯ 8:5 ನೋಡಿರಿ). ಈ ಮೇಲುಗಳು ಕ್ರಿಸ್ತನ ಯಜ್ಞ ಆತನ ಯಾಜಕತ್ವ ಮತ್ತು ಆತನು ನಮಗೆ ಒದಗಿಸಿರುವ ರಕ್ಷಣೆ ಹಾಗೂ ನಿತ್ಯಜೀವಗಳಾಗಿರುತ್ತವೆ.

ಯೆಹೂದ್ಯ ಧರ್ಮಶಾಸ್ತ್ರ ಹಾಗೂ ವರುಷ ವರುಷಕ್ಕೆ ಪದೇ ಪದೇ ಅರ್ಪಿತವಾಗುವ ಯಜ್ಞಗಳು ಹೊಸ ಒಡಂಬಡಿಕೆಯ "ಛಾಯೆಗಳು" ಆಗಿದ್ದು ದೇವರಾಧನೆಮಾಡುವವರನ್ನು ಸಿದ್ಧಿಗೆ ತರಲಾಗಲಿಲ್ಲ. ಅಥವಾ ಅಂತರಂಗದಲ್ಲಿ ಶುದ್ದಿಮಾಡಲಾಗಲಿಲ್ಲ– ಅಂದರೆ, ಆರಾಧಿಸುವದಕ್ಕಾಗಿ ದೇವರ ಸಮೀಪಕ್ಕೆ ಬರುವವರನ್ನು ಸಿದ್ದಿಗೆ ತರಲಾಗಲಿಲ್ಲ. (ಇಬ್ರಿಯ 9:9ನೋಡಿರಿ).

**2** ಧರ್ಮಶಾಸ್ತ್ರ ಮತ್ತು ಅದರ ಯಜ್ಞಗಳು ದೇವರಾಧನೆ ಮಾಡುವವರನ್ನು ಶುದ್ಧಮಾಡಲಾಗಲಿಲ್ಲ ಎಂಬುದಕ್ಕೆ ಸಾಕ್ಷಿಯೇನೆಂದರೆ: ಯಜ್ಞವೊಂದನ್ನು ಸಮರ್ಪಿಸಿದ ಬಳಿಕವೂ ಆರಾಧಕರಿಗೆ ಇನ್ನೂ ಪಾಪವುಂಟೆಂದು ಅವರ ಮನಸ್ಸು ಸಾಕ್ಷಿಕೊಡುತ್ತಿತ್ತು; ಅವರ ಮನಸ್ಸಾಕ್ಷಿಯು ಚುಚ್ಚುತ್ತಲೇ ಇರುತ್ತಿತ್ತು. ಅವರ ಮನಸಾಕ್ಷಿಗಳು ಶುದ್ಧಗೊಳ್ಳಲಾಗಲಿಲ್ಲ. ಆದದರಿಂದ, ಈ ಯಜ್ಞವು ಪದೇ ಪದೇ ಅರ್ಪಿಸಲ್ಪಡಬೇಕಾಗಿತ್ತು.

ಒಂದು ಅಶುದ್ಧ ಅಥವಾ ಅಪರಾಧಭಾವನೆಯ ಮನಸಾಕ್ಷಿಯು ವ್ಯಕ್ತಿಯನ್ನು ದೇವರ ಬಳಿಗೆ ಬರದಂತೆ ತಡೆಯುತ್ತದೆ. ಕೀರ್ತನೆಗಾರನು ಬರೆದಿರುವದೇನೆಂದರೆ: ನಾನು ಕೆಟ್ಟತನದ ಮೇಲೆ ಮನಸ್ಸಿಟ್ಟರೆ ಕರ್ತನು ನನ್ನ ವಿಜ್ಞಾಪನೆಯನ್ನು ಕೇಳುತ್ತಿದ್ದಿಲ್ಲ? (ಕೀರ್ತನೆಗಳು 66:18).

ಕ್ರಿಸ್ತನ ದೇಹದ ಯಜ್ಞದ ಮೂಲಕ ಆತನಲ್ಲಿ ನಂಬಿಕೆಯಿಡುವವರ ಮನಸಾಕ್ಷಿಗಳು ಸರ್ವಕಾಲಕ್ಕೂ ಶುದ್ಧಮಾಡಲ್ಪಟ್ಟಿರುತ್ತವೆ. ಯೇಸು ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆ: "ಸ್ನಾನ ಮಾಡಿಕೊಂಡವನ ಕಾಲುಗಳನ್ನು ತೊಳೆಯುವದಲ್ಲದೆ ಬೇರೇನೂ ತೊಳೆಯಬೇಕಾಗಿರುವದಿಲ್ಲ ಅವರ ಮೈಯೆಲ್ಲಾ ಶುದ್ಧವಾಗಿದೆ. ನೀವೂ ಶುದ್ಧರಾಗಿದ್ದೀರಿ" (ಯೋಹಾನ 13:10). ಪೌಲನು ಕೊರಿಂಥದವರಿಗೆ ಬರೆದದ್ದೇನೆಂದರೆ: ಆದರೂ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿಯೂ ನಮ್ಮ ದೇವರ ಆತ್ಮದಲ್ಲಿಯೂ ತೊಳೆದುಕೊಂಡಿರಿ ದೇವಜನರಾದಿರಿ, ನೀತಿವಂತರೆಂಬ ನಿರ್ಣಯವನ್ನು ಹೊಂದಿದಿರಿ (1 ಕೊರಿಂಥ 6:11). ಈ ಸ್ನಾನ ಅಥವಾ ತೊಳೆಯುವಿಕೆಯುನಮ್ಮ ಕ್ರೈಸ್ತ ಜೀವಿತಗಳ ಪ್ರಾರಂಭದಲ್ಲಿ ಸಂಭವಿಸುತ್ತದೆ.

**3-4** ಹಳೆ ಒಡಂಬಡಿಕೆಯ ಯಜ್ಞಗಳಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯವಾಗಿತ್ತು. (ವಚನ 4), ಅಂಥ ಯಜ್ಞಗಳು ಯೆಹೂದ್ಯರಿಗೆ ಅವರ ಪಾಪಗಳನ್ನು ಜ್ಞಾಪಿಸುವವು ಗಳಾಗಿದ್ದವಷ್ಟೇ. ಆದರೆ ಹೊಸ ಒಡಂಬಡಿಕೆಯ ಅಡಿಯಲ್ಲಿ ದೇವರು ಹೇಳುವದೇನೆಂದರೆಃ "ನಾನು........ ಅವರ ಪಾಪಗಳನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ" (ಯೆರೆಮೀಯ 31:34; ಇಬ್ರಿಯ 8:12). ನಮ್ಮ ಪಾಪಗಳು ಪರಿಹರಿಸಲ್ಪಟ್ಟು ಮರೆತು ಹೋಗಲ್ಪಡುವಾಗಲೆ ನಮ್ಮ ಮನಸಾಕ್ಷಿಗಳು ನಿಜವಾಗಿಯೂ ಶುದ್ಧವಾಗುವವು .

ಯಜ್ಞಗಳು ಹಾಗೂ ಕಾಣಿಕೆಗಳು ಮನಸಾಕ್ಷಿಯನ್ನು ಶುದ್ಧಮಾಡಲಾಗಲಿಲ್ಲ ಎಂಬದನ್ನು ಅರಸನಾದ ದಾವೀದನು ಬಲ್ಲವನಾಗಿದ್ದನು. ಆತನು ದೇವರನ್ನು ಕೂಗಿ ಹೇಳಿದ್ದೇನೆಂದರೆಃ "ಪ್ರೀತಿಸ್ವರೂಪನಾದ ದೇವರೇ, ನನ್ನನ್ನು ಕರುಣಿಸು; ನನ್ನ ದ್ರೋಹಗಳನ್ನೆಲ್ಲಾ ಅಳಿಸಿ ಬಿಡು, ನನ್ನ ಪಾಪವನ್ನು ಸಂಪೂರ್ಣವಾಗಿ ತೊಳೆದುಬಿಡು...... ದೇವರೇ, ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು....... ನಿನಗೆ ಯಜ್ಞಗಳಲ್ಲಿ ಅಪೇಕ್ಷೆಯಿಲ್ಲ........ ಸರ್ವಾಂಗ ಹೋಮಗಳಲ್ಲಿ ನಿನಗೆ ಸಂತೋಷವಿಲ್ಲ...... ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟಯಜ್ಞ; ದೇವರೇ, ಪಶ್ಚಾತ್ತಾಪದಿಂದ ಜಜ್ಜಿ ಹೋದ ಮನಸ್ಸನ್ನು ನೀನು ತಿರಸ್ಕರಿಸುವದಿಲ್ಲ" (ಕೀರ್ತನೆಗಳು 51:1-2, 10, 16-17).

**5-7** ಈ ಪತ್ರಿಕೆಯ ಬರಹಗಾರನು ಇಲ್ಲಿ ಕೀರ್ತನೆಗಳು 40:6-8 ರಿಂದ ಉಲ್ಲೇಖಿಸುತ್ತಾನೆ. ದೇವರು ಯಜ್ಞಗಳನ್ನು ಕಾಣಿಕೆಗಳನ್ನು ಅಪೇಕ್ಷಿಸಲಿಲ್ಲ ಎಂಬದನ್ನು ಇಲ್ಲಿ ನಾವು ಪುನಃ ನೋಡುತ್ತೇವೆ. ಆತನಿಗೆ ಇಷ್ಟವಾದದ್ದು ದೇಹವೇ ಮೂಕ ಪ್ರಾಣಿಯ ದೇಹವಲ್ಲ, ಆದರೆ ದೇವರಿಗೆ ಸಂಪೂರ್ಣ ವಿಧೇಯತೆಯಿಂದ ಅರ್ಪಿಸಲಾದ ಮನುಷ್ಯನ ದೇಹವೇ ಆಗಿದೆ. ಆದದರಿಂದ, ದೇವರು ಕ್ರಿಸ್ತನಿಗಾಗಿ ದೇಹವನ್ನು ಸಿದ್ಧಮಾಡಿಕೊಟ್ಟನು (ವಚನ 5). ಕ್ರಿಸ್ತನು ಸಂಪೂರ್ಣ ವಿಧೇಯತೆಯೊಂದಿಗೆ ತನ್ನ ದೇಹವನ್ನು ಸಜೀವಯಜ್ಞವಾಗಿ ಅರ್ಪಿಸಿದಾಗ ದೇವರು ಸಂತೋಷಗೊಂಡನು. ಕ್ರಿಸ್ತನು ಹೇಳಿದ್ದೇನೆಂದರೆಃ "ಇಗೋ, ದೇವರೇ, ನಿನ್ನ ಚಿತ್ತವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ" (ವಚನ 7).

ಕ್ರಿಸ್ತನ ವಿಧೇಯತೆಯನ್ನೆ ದೇವರು ಎಲ್ಲಕ್ಕಿಂತ ಹೆಚ್ಚಾಗಿ ಅಪೇಕ್ಷಿಸಿದನು. ಹಳೆ ಒಡಂಬಡಿಕೆಯ ಪ್ರವಾದಿಯಾದ ಸಮುವೇಲನು ಹೇಳಿದ್ದೇನೆಂದರೆಃ "ಕರ್ತನು ವಿಧೇಯತ್ವಕ್ಕೆ ಮೆಚ್ಚುವಷ್ಟು ಯಜ್ಞಹೋಮಗಳಿಗೆ ಮೆಚ್ಚುತ್ತಾನೋ? ಯಜ್ಞವನ್ನರ್ಪಿಸುವದಕ್ಕಿಂತಲೂ ಮಾತು ಕೇಳುವದು ಉತ್ತಮವಾಗಿದೆ ಟಗರುಗಳ ಕೊಬ್ಬಿಗಿಂತ ವಿಧೇಯತ್ವವು ವಿಶೇಷವಾಗಿದೆ" (1 ಸಮುವೇಲ 15:22).

7ನೇ ವಚನದಲ್ಲಿ ಪ್ರಸ್ತಾಪಿಸಲಾಗಿರುವ ಸುರುಳಿ ಕ್ರಿಸ್ತನ ವಿಷಯದಲ್ಲಿನ ಅನೇಕ ಪ್ರವಾಧನೆಗಳನ್ನೊಳಗೊಂಡ ಹಳೆ ಒಡಂಬಡಿಕೆಯಾಗಿದೆ. ಕ್ರಿಸ್ತನು ತಾನೇ ಈ ಎಲ್ಲಾ ಪ್ರವಾಧನೆಗಳ ನೆರವೇರಿಕೆಯಾಗಿದ್ದನು. ಹಳೆ ಒಡಂಬಡಿಕೆಯಲ್ಲಿ ದೇವರ ಚಿತ್ತವು ವಿವರಿಸಲ್ಪಟ್ಟಿದೆ. ಮತ್ತು ಕ್ರಿಸ್ತನ ಜೀವಿತದಲ್ಲಿ ದೇವರ ಚಿತ್ತವು ಪರಿಪೂರ್ಣವಾಗಿ ನೆರವೇರಿತ್ತು.

**8-9** ಯೇಸು ತನ್ನನ್ನು ಪರಿಪೂರ್ಣ ಹಾಗೂ ಅಂತಿಮ ಯಜ್ಞವಾಗಿ ಅರ್ಪಿಸುವದಕ್ಕೆ ಬಂದಾಗ ಎರಡನೆಯ ಒಡಂಬಡಿಕೆಯನ್ನು ಸ್ಥಾಪಿಸುವದಕ್ಕಾಗಿ ಮೊದಲನೆಯ ಒಡಂಬಡಿಕೆಯನ್ನು ಬದಿಗಿಡುತ್ತಾನೆ (ವಚನ 9).

**10** ಮತ್ತು ಆ ಚಿತ್ತವನ್ನು ನೆರವೇರಿಸಿದದರಿಂದಲೇ– ಅಂದರೆ, ದೇವರ ಚಿತ್ತವನ್ನು ನೆರವೇರಿಸಿ– ಕ್ರಿಸ್ತನು ತನ್ನ ಸ್ವದೇಹದ ಯಜ್ಞದ ಮುಖಾಂತರ ನಮ್ಮನ್ನು ಹೊರಗೂ ಒಳಗೂ ಶುದ್ಧಮಾಡಿದನು. ನಮ್ಮ ಪಾಪಗಳ ನಿವಾರಣಕ್ಕಾಗಿ ಕ್ರಿಸ್ತನು ತನ್ನ ದೇಹವನ್ನು ಅರ್ಪಿಸಬೇಕು ಮತ್ತು ಆತನ ಯಜ್ಞದ ಮೂಲಕ ನಮ್ಮನ್ನು ಪರಿಶುದ್ಧರನ್ನಾಗಿಯೂ ನಿರ್ದೋಷಿಗಳನ್ನಾಗಿಯೂ ನಿರಪರಾಧಿಗಳನ್ನಾಗಿಯೂ ದೇವರ ಸನ್ನಿಧಿಯಲ್ಲಿ ನಿಲ್ಲಿಸುವಂತಾಗಬೇಕೆಂದು ದೇವರ ಚಿತ್ತವಾಗಿತ್ತು (ಕೊಲೊಸ್ಸೆ 1:21-22).

**11-12** ಬರಹಗಾರನು ಇಲ್ಲಿ ಇಬ್ರಿಯ 1:3; 7:27; 9:25-26ರಲ್ಲಿನ ವಿಚಾರಗಳನ್ನು ಪುನರಾವರ್ತಿಸುತ್ತಾನೆ. ಹಳೆ ಒಡಂಬಡಿಕಯ ಯಾಜಕರು ಪದೇ ಪದೇ ಯಜ್ಞಗಳನ್ನು ಅರ್ಪಿಸಬೇಕಾಗಿತ್ತು. ಅವರು ಬಂದು ದೇವರ ಸನ್ನಿಧಿಯಲ್ಲಿ ಕೂತುಕೊಳ್ಳುವದಕ್ಕೆ ಎಂದಿಗೂ ಸಾಧ್ಯವಿರಲಿಲ್ಲ. ಅವರ ಕೆಲಸವು ಎಂದಿಗೂ ಪೂರ್ತಿಗೊಳ್ಳಲಿಲ್ಲ. ಆದರೆ ಕ್ರಿಸ್ತನು ದೇವರ ಸನ್ನಿಧಿಯಲ್ಲಿ ಕೂತುಕೊಂಡಿದ್ದು ಮಾತ್ರವಲ್ಲದೆ ಆತನು ದೇವರ ಬಲಗಡೆಯಲ್ಲಿ ಸಿಂಹಾಸನವೊಂದರ ಮೇಲೆಯೂ ಕೂತುಕೊಂಡನು. ದೇವರು ಕ್ರಿಸ್ತನನ್ನು ಶಿಲುಬೆಯ ಮೇಲಣ ಅವಮಾನಕರ ಮರಣದಿಂದ ಎಬ್ಬಿಸಿ ಆತನನ್ನು ಮಹಿಮೆಯುಳ್ಳ ಅತ್ಯುನ್ನತ ಸ್ಥಾನಕ್ಕೆ ಏರಿಸಿದ್ದಾನೆ. (ಫಿಲಿಪ್ಪಿ 2:8-9ನೋಡಿರಿ).

**13** ಇಬ್ರಿಯ 1:13 ಮತ್ತು ವ್ಯಾಖ್ಯಾನ ನೋಡಿರಿ.

**14** ಬರಹಗಾರನು 10ನೇ ವಚನದಲ್ಲಿ ಯೇಸುಕ್ರಿಸ್ತನು ಒಂದೇ ಸಾರಿ ದೇಹ ಸಮರ್ಪಣೆಮಾಡಿ ದೇವರ ಚಿತ್ತವನ್ನು ನೆರನೇರಿಸಿದದರಿಂದಲೇ ನಾವು ಶುದ್ಧರಾದೆವು ಎಂದು ಹೇಳುತ್ತಾನೆ. ಇಲ್ಲಿ 14ನೇ ವಚನದಲ್ಲಿ ಬರಹಗಾರನು ಪವಿತ್ರರಾಗುತ್ತಿರುವವರನ್ನು ಒಂದೇ ಯಜ್ಞದಿಂದ ನಿರಂತರವಾಗಿ ಸಿದ್ಧಿಗೆ ತಂದಿದ್ದಾನಷ್ಟೇ ಎಂದು ಹೇಳುತ್ತಾನೆ. ಬರಹಗಾರನ ತಾತ್ಪರ್ಯವೇನೆಂದರೆಃ ನಾವು ದೇವರ ದೃಷ್ಟಿಯಲ್ಲಿ ನೀತಿವಂತರಾಗಿದ್ದೇವೆ– ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ– (ರೋಮ 5:1). ಕ್ರಿಸ್ತನ ಕೆಲಸವು ಪೂರ್ತಿಗೊಂಡಿದೆ ಆತನಲ್ಲಿ ನಂಬಿಕೆಯಿಡುವವರೆಲ್ಲರೂ ನಿರಂತರವಾಗಿ ಪರಿಪೂರ್ಣ ಮಾಡಲ್ಪಟ್ಟಿದ್ದಾರೆ.

ಹಾಗಾದರೆ, ಬರಹಗಾರನು 14ನೇ ವಚನದಲ್ಲಿ ನಾವು 'ಇನ್ನೂ ಪವಿತ್ರರಾಗುತ್ತಿರುವವರು ಎಂದು ಹೇಳುವದೇಕೆ? ಕಾರಣವು ಹೀಗಿರುತ್ತದೆ. ಮೇಲ್ಗಡೆ ಬರೆದಿರುವದೆಲ್ಲವೂ ಸತ್ಯವಾಗಿರುವದಾದಾಗ್ಯು ನಾವು ಈಗಿನ ಜೀವನದಲ್ಲಿ ಪೂರ್ಣವಾಗಿ

ಪರಿಶುದ್ಧವು ಅಥವಾ ಸಿದ್ಧಿಗೆ ಬಂದವರಾಗಿರುವದಿಲ್ಲ. ನಾವು ಕಾಲಕಾಲಕ್ಕೆ ಪಾಪಮಾಡುವವರಾಗಿದ್ದೇವೆ. ನಾವು ಪರಿಶುದ್ಧತೆಯಲ್ಲಿ ಹೆಚ್ಚೆಚ್ಚಾಗಿ ಬೆಳೆಯಬೇಕೆಂದು ದೇವರು ಬಯಸುತ್ತಾನೆ. ಆತನು ಈ ಜೀವಿತದಲ್ಲಿ ನಮ್ಮನ್ನು ಪರಿಶುದ್ಧರನ್ನಾಗಿ ಮಾಡಲಿಚ್ಛಿಸುತ್ತಾನೆ. ಆದದರಿಂದ, ಒಂದು ವಿಧದಲ್ಲಿ ನಾವು ಈಗಾಗಲೇ ಎಲ್ಲಾ ನಿತ್ಯತ್ವಕ್ಕೂ ಪರಿಶುದ್ಧರಾಗಿಯೂ ಪರಿಪೂರ್ಣರಾಗಿಯೂ ಮಾಡಲ್ಪಟ್ಟಿದ್ದೇವೆ ಎಂದು ಅರ್ಥಮಾಡಿಕೊಳ್ಳಬಹುದು ಆದರೆ ಇನ್ನೊಂದು ವಿಧದಲ್ಲಿ ನಾವು ಈ ಲೋಕದಲ್ಲಿನ ನಮ್ಮ ದೈನಂದಿನ ನಡುವಳಿಕೆಯಲ್ಲಿ ಪರಿಶುದ್ಧರಾಗಿ ಬೆಳೆಯುತ್ತಲಿರಬೇಕು. (ಫಿಲಿಪ್ಪಿ 1:6; 2:12-13 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

15-18 ಬರಹಗಾರನು ಇಲ್ಲಿ ಪುನಃ ಯೆರೆಮೀಯ 31:33-34ರಿಂದ ಉಲ್ಲೇಖಿಸುತ್ತಾನೆ (ಇಬ್ರಿಯರಿಗೆ 8:10, 12-13 ಮತ್ತು ವ್ಯಾಖ್ಯಾನ ನೋಡಿರಿ). ಈಗ ಪವಿತ್ರಾತ್ಮನು ಯೆರೆಮೀಯನ ಮೂಲಕ ಮಾತಾಡುತ್ತಿದ್ದಾನೆಂಬದನ್ನು ಗಮನಿಸಿರಿ (ವಚನ 15). ಬೈಬಲಿನಲ್ಲಿರುವ ಪ್ರತಿಯೊಂದು ವಾಕ್ಯವು ಪವಿತ್ರಾತ್ಮನ ಮೂಲಕ ನುಡಿಯಲ್ಪಟ್ಟ ದೇವರ ವಾಕ್ಯ ಎಂಬದನ್ನು ನಾವು ತಿಳಿದುಕೊಳ್ಳಬೇಕು.

ಯೆರೆಮೀಯನ ಈ ಮಾತುಗಳನ್ನು ಪುನರಾವರ್ತಿಸುವದರಲ್ಲಿ ಈ ಪತ್ರಿಕೆಯ ಬರಹಗಾರನು ಹೊಸ ಒಡಂಬಡಿಕೆಯು ಅಂತಿಮ ಹಾಗೂ ಪರಿಪೂರ್ಣವಾದದ್ದೆಂದು ತೋರಿಸಲು ಬಯಸುತ್ತಾನೆ. ಧೇವರ ಧರ್ಮಶಾಸ್ತ್ರವು ಈಗ ಮನುಷ್ಯರ ಮನಸ್ಸುಗಳು ಹಾಗೂ ಹೃದಯಗಳ ಮೇಲೆ ಬರೆಯಲ್ಪಟ್ಟಿದೆ. ಅವರ ಪಾಪಗಳು ಇನ್ನು ಎಂದಿಗೂ ಜ್ಞಾಪಕಮಾಡಿಕೊಳ್ಳಲ್ಪಡುವದಿಲ್ಲ. ಮತ್ತು ಪಾಪಗಳು ಮರೆಯಲ್ಪಟ್ಟಿರುವಾಗ ಇನ್ನೆಂದಿಗೂ ಯಾವದೇ ಯಜ್ಞಗಳನ್ನು ಮಾಡುವ ಅಗತ್ಯವಿರುವದಿಲ್ಲ (ವಚನ 18).

## ಒಂದು ನೂತನವಾದ ಜೀವವುಳ್ಳ ಮಾರ್ಗ (10:19-25)

19 ಈಗ ಈ ಪತ್ರಿಕೆಯ ಒಂದು ಅತಿ ಪ್ರಾಮುಖ್ಯವಾದ ಭಾಗವು ಬಂದಿರುತ್ತದೆ. ಇಬ್ರಿಯ ಪತ್ರಿಕೆಯ ಬರಹಗಾರನು ಮೊದಲಿನ ಒಂಭತ್ತು ಅಧ್ಯಾಯಗಳಲ್ಲಿ ಹಳೆ ಹಾಗೂ ಹೊಸ ಒಡಂಬಡಿಕೆಗಳು, ಹಳೆ ಹಾಗೂ ಹೊಸ ಯಾಜಕತ್ವಗಳು, ಹಳೆ ಪ್ರಾಣಿ ಯಜ್ಞಗಳು ಹಾಗೂ ಯೇಸುವಿನ ದೇಹದ ಹೊಸ ಯಜ್ಞದ ಕುರಿತಾಗಿಯೂ ವಿವರಿಸಿರುತ್ತಾನೆ. ಈಗ ನಾವು ಇದೆಲ್ಲದರಿಂದ ಅರ್ಥಮಾಡಿಕೊಳ್ಳಕ್ಕದ್ದೇನು? ಹೀಗಿರುವಲ್ಲಿ– ಮೇಲ್ಗಡೆ ಬರೆಯಲ್ಪಟ್ಟಿರುವದೆಲ್ಲದರ ಕಾರಣದಿಂದ ನಾವು ದೇವರ ಸಮಕ್ಷಮದಲ್ಲಿ (ಅತಿ ಪವಿತ್ರ ಸ್ಥಳದಲ್ಲಿ) ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು[18]...... ನಾವು ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ ಯಥಾರ್ಥ ಹೃದಯವುಳ್ಳವರಾಗಿಯೂ ದೇವರ ಬಳಿಗೆ ಬರೋಣ (ವಚನ 22). ನಾವು ದೇವರ ಬಳಿಗೆ ಬರುವದಕ್ಕೆ ಸಾಯುವತನಕ ಕಾಯಬೇಕಾಗಿಲ್ಲ; ನಂಬಿಕೆಯ ಮೂಲಕ ನಾವು ಈಗಲೇ ದೇವರ ಸನ್ನಿಧಿಯೊಳಗೆ ಬರಬಹುದು.

ನಾವು ಒಂದು ಕ್ಷಣ ಈ ವಚನದಲ್ಲಿನ ಮೊದಲ ಪದವಾದ ಹೀಗಿರುವಲ್ಲಿ ಎಂಬುದರ ಕುರಿತು ಯೋಚಿಸಿಕೊಳ್ಳೋಣ. ಹೊಸ ಒಡಂಬಡಿಕೆಯಲ್ಲಿ ಅನೇಕ ಹೇಳಿಕೆಗಳು "ಹೀಗಿರುವಲ್ಲಿ" (ಆದದರಿಂದ) ಎಂಬದರಿಂದ ಪ್ರಾರಂಭಗೊಳ್ಳುತ್ತವೆ (ಇದರ ಉತ್ತಮ ಉದಾಹರಣೆಗಳು ರೋಮ 5:1 ಮತ್ತು 8:1ರಲ್ಲಿ ಕಂಡುಬರುತ್ತದೆ). ದೇವರು ಪರಿಶುದ್ಧನು; "ಆದದರಿಂದ" ಆತನು ಪಾಪದ ವಿರುದ್ಧ ನ್ಯಾಯತೀರ್ಪು ನೀಡುವನು. ದೇವರು ಕರುಣೆಯುಳ್ಳವನು; "ಆದದರಿಂದ" ಆತನು ನಮ್ಮ ಪಾಪಗಳನ್ನು ಕ್ಷಮಿಸಲು ಸಿದ್ಧನಾಗಿದ್ದಾನೆ. ಕ್ರಿಸ್ತನು ನಮ್ಮ ನೀತಿಯಾಗಿದ್ದಾನೆ; "ಆದದರಿಂದ" ನಾವು ನಂಬಿಕೆಯ ಮೂಲಕ ನೀತಿವಂತರಾಗಿ ನಿರ್ಣಯಿಸಲ್ಪಟ್ಟಿದ್ದೇವೆ. ಕ್ರಿಸ್ತನು ನಮ್ಮನ್ನು ಪಾಪ ಮರಣಗಳ ನಿಯಮದಿಂದ ಬಿಡುಗಡೆಗೊಳಿಸಿದ್ದಾನೆ; "ಆದದರಿಂದ" ನಾವು ಇನ್ನು ಮೇಲೆ ಅಪರಾದ ನಿರ್ಣಯಕ್ಕೊಳಗಾದವರಲ್ಲ (ರೋಮ 8:1). ಕ್ರಿಸ್ತನು ನಮ್ಮ ಶ್ರೇಷ್ಠ ಮಹಾಯಾಜಕನಾಗಿದ್ದು ಆತನು ತನ್ನನ್ನೇ ಯಜ್ಞವಾಗಿ ಅರ್ಪಿಸಿದ್ದರ ಮೂಲಕ ನಾವು ನಿರಂತರವಾಗಿ ಸಿದ್ಧಿಗೆ ತರಲ್ಪಟ್ಟವರಾಗಿದ್ದೇವೆ; "ಆದದರಿಂದ" ಈಗ ನಾವು ಆತನ ರಕ್ತದ ಮೂಲಕ ಅತಿಪವಿತ್ರ ಸ್ಥಳವನ್ನು ಪ್ರವೇಶಿಸಬಹುದು. ನಾವು ದೇವರ ಮಕ್ಕಳಾಗಿದ್ದೇವೆ; "ಆದದರಿಂದ" ಮಕ್ಕಳು ತಮ್ಮ ಲೋಕದ ತಂದೆಗಳ ಬಳಿಗೆ ಧೈರ್ಯದಿಂದ ಹೋಗುವ ಪ್ರಕಾರವೇ ವಿಶ್ವಾಸಿಗಳಾದ ನಾವು ನಮ್ಮ ಪರಲೋಕದ ತಂದೆಯ ಬಳಿಗೆ ಧೈರ್ಯದಿಂದ ಬರಬಹುದಾಗಿದೆ (ಇಬ್ರಿಯ 4:16, ನೋಡಿರಿ).

ಇತರ ಯಾವ ಧರ್ಮದಲ್ಲಿ, ಇತರ ಯಾವ ಯಾಜಕತ್ವದ ಮೂಲಕ, ಇತರ ಯಾವ ರಕ್ಷಕನ ಮುಖಾಂತರ ನಿರ್ಬಲರೂ ಪಾಪಿಗಳಾದ ಮನುಷ್ಯರು ನೀತಿವಂತರಾಗಿ ಮಾಡಲ್ಪಟ್ಟು ದೇವರ ಸನ್ನಿಧಿಯಲ್ಲಿ ಆತನ ಮಕ್ಕಳಂತೆ ಬರಬಲ್ಲರು? ಯೇಸುಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಹೊರತು ಇದು ಇನ್ನಾವ ಮಾರ್ಗದಲ್ಲಿಯೂ ಸಾಧ್ಯವಿರುವದಿಲ್ಲ.

ಬರಹಗಾರನು 10ನೇ ವಚನದಲ್ಲಿ ನಾವು ಯೇಸುಕ್ರಿಸ್ತನ ದೇಹ ಯಜ್ಞದ ಮೂಲಕ ಶುದ್ಧರಾದೆವು ಎಂದು ಹೇಳುತ್ತಾನೆ. ಆತನು ಇಲ್ಲಿ ಮತ್ತು 29ನೇ ವಚನದಲ್ಲಿ ನಾವು ಯೇಸುವಿನ ರಕ್ತದ ಮೂಲಕ ಪರಿಶುದ್ಧರಾಗಿ ಮಾಡಲ್ಪಟ್ಟಿದ್ದೇವೆಂದು ಹೇಳುತ್ತಾನೆ. ಎರಡೂ ಸಂದರ್ಭಗಳಲ್ಲಿಯೂ ಬರಹಗಾರನು ಒಂದೇ ಸಂಗತಿಯನ್ನು ಹೇಳುತ್ತಿದ್ದಾನೆ: ಅದೇನೆಂದರೆ, ಯೇಸುವಿನ ಮರಣ ಹಾಗೂ ಯಜ್ಞದ ಮೂಲಕ ನಾವು ಪರಿಶುದ್ಧರಾಗಿಯೂ ನೀತಿವಂತರಾಗಿಯೂ ಮಾಡಲ್ಪಟ್ಟಿದ್ದೇವೆ ಎಂಬುದೇ. ಯೇಸು ತನ್ನನ್ನು ಯಜ್ಞವಾಗಿ ಅರ್ಪಿಸಿದ ವೇಳೆಯಲ್ಲಿ ಆತನ ದೇಹವು ಜಜ್ಜಲ್ಪಟ್ಟಿತು ಮತ್ತು ಆತನ ರಕ್ತವು ಸುರಿಸಲ್ಪಟ್ಟಿತು.

ಯೇಸು ದೇಹ, ರಕ್ತಗಳೆರಡೂ ನಮಗೆ ಪ್ರಾಮುಖ್ಯವಾಗಿರುತ್ತವೆ. ಕಡೇ ರಾತ್ರಿ ಭೋಜನದ ವೇಳೆಯಲ್ಲಿ ಯೇಸು ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆಃ ಇದು ನಿಮಗೋಸ್ಕರ ಕೊಟ್ಟಿರುವ ನನ್ನ ದೇಹ...... ಈ ಪಾತ್ರೆಯು ನಿಮಗೋಸ್ಕರ ಸುರಿಸಲ್ಪಡುವ ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ. (ಲೂಕ 22:19-20). ಇನ್ನೊಂದು ಸಂದರ್ಭದಲ್ಲಿ, ಯೇಸು ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆಃ "........ನೀವು ಮನುಷ್ಯಕುಮಾರನ ಮಾಂಸವನ್ನು ತಿನ್ನದೆ ಅವನ ರಕ್ತವನ್ನು ಕುಡಿಯದೆ ಹೋದರೆ ನಿಮ್ಮೊಳಗೆ ಜೀವವಿಲ್ಲ. ನನ್ನ ಮಾಂಸವನ್ನು ತಿಂದು ನನ್ನ ರಕ್ತವನ್ನು ಕುಡಿಯುವವನು ನಿತ್ಯಜೀವವನ್ನು ಹೊಂದಿದ್ದಾನೆ (ಯೋಹಾನ 6:53-54). ಹಳೆ ಒಡಂಬಡಿಕೆಯ ಅಡಿಯಲ್ಲಿ ರಕ್ತಧಾರೆಯಿಲ್ಲದೆ ಹೇಗೆ ಪಾಪಪರಿಹಾರ–ವಿರಲಿಲ್ಲವೋ (ಇಬ್ರಿಯ 9:22), ಹಾಗೆಯೇ ಹೊಸ ಒಡಂಬಡಿಕೆಯಲ್ಲಿ ಯೇಸುವು ಸಾಯುವದು ಮಾತ್ರವಲ್ಲದೆ ಆತನು ನಮ್ಮನ್ನು ಪರಿಶುದ್ಧರನ್ನಾಗಿರಲು ತನ್ನ ರಕ್ತವನ್ನು ಸಹ ಸುರಿಸುವದು ಅವಶ್ಯಕವಾಗಿತ್ತು.

**20** ನಾವು ದೇವರ ಸಮಕ್ಷಮವನ್ನು ಹೇಗೆ ಪ್ರವೇಶಿಸಬಲ್ಲೆವು ? ಯೇಸು ನಮಗಾಗಿ ದೇವರ ಸನ್ನಿಧಿಯನ್ನು ಪ್ರವೇಶಿಸಲು ಒಂದು ಜೀವವುಳ್ಳ ಹೊಸದಾರಿ ತೆರೆದಿರುತ್ತಾನೆ. ಈ ದಾರಿಯು ಜೀವವುಳ್ಳದ್ದು, ಯಾಕೆಂದರೆ ಸ್ವತಃ ಯೇಸುವು ಜೀವವುಳ್ಳವನು. ಯೇಸು ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆಃ "ನಾನೇ ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ. ನನ್ನ ಮೂಲಕ ಹೊರತು ಯಾರು ತಂದೆಯ ಬಳಿಗೆ ಬರಲಾರನು" (ಯೋಹಾನ 14:6). ಯೇಸುವಿನ ದೇಹವು ಪವಿತ್ರ ಮತ್ತು ಅತಿಪವಿತ್ರ ಸ್ಥಳಗಳ ನಡುವೆ ನೇತಾಡುತ್ತಿದ್ದ ತೆರೆಯಂತಿತ್ತು (ಇಬ್ರಿಯ 9:3). ಯೇಸು ಮನುಷ್ಯನಿಗೂ– ದೇವರಿಗೂ– ಅಂದರೆ, ತೆರೆಯ ಹೊರಗಿನ ಮನುಷ್ಯರಿಗೂ ತೆರೆಯ ಒಳಗಿನ ದೇವರಿಗೂ ನಡುವೆ ನಿಂತನು. ಹೀಗೆ, ಯೇಸು ಸತ್ತಾಗ ದೇವಾಲಯದ ತೆರೆಯು ಮೇಲಿಂದ ಕೆಳಗಿನ ವರೆಗೂ ಹರಿದು ಎರಡು ಭಾಗವಾಯಿತು (ಮಾರ್ಕ 15:37-38). ದೇವರ ಸನ್ನಿಧಿಯೊಳಗೆ ಹೋಗುವ ಮಾರ್ಗವು ಈಗ ಪೂರ್ಣವಾಗಿ ತೆರೆಯಲ್ಪಟ್ಟಿರುತ್ತದೆ. ಯೇಸುವು ದೇವರ ಸನ್ನಿಧಿಯನ್ನು ಪ್ರವೇಶಿಸಿದ್ದು ಮಾತ್ರವಲ್ಲ (ಇಬ್ರಿಯ 6:19-20). ಆದರೆ ನಾವು ಸಹ ಆತನ ಯಜ್ಞದ ಮೂಲಕ ಶುದ್ಧಗೊಂಡವರಾಗಿಯೂ ನಂಬಿಕೆಯ ಮೂಲಕ ಆತನ ನೀತಿಯನ್ನು ಪಡೆದುಕೊಂಡವರಾಗಿಯೂ ಈಗ ದೇವರ ಸನ್ನಿಧಿಯೊಳಗೆ ಪ್ರವೇಶಿಸಬಲ್ಲೆವು.

**21-22** ಇಲ್ಲಿ ಪರಲೋಕದ ಆಲಯ ಅಥವಾ ಗುಡಾರವು ದೇವರ ಮನೆ ಎಂದು ಕರೆಯಲ್ಪಟ್ಟಿದೆ. ವಿಶ್ವಾಸಿಗಳಾದ ನಾವು ದೇವರ ಮನೆಯಾಗಿದ್ದೇವೆ (ಇಬ್ರಿಯ 3:6). ಕ್ರಿಸ್ತನು ದೇವರ ಮನೆಯಲ್ಲಿ ಮಗನೂ ಶ್ರೇಷ್ಠಯಾಜಕನೂ ಆಗಿದ್ದಾನೆ.

ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ನಾವು ದೇವರ ಮಕ್ಕಳಾಗಿ ಪೂರ್ಣಹಕ್ಕುಗಳನ್ನು ಹೊಂದಿಕೊಂಡಿದ್ದೇವೆ. ನಾವು ಸಹ ಪುತ್ರರೂ ಬಾಧ್ಯರೂ ಆಗಿದ್ದೇವೆ. (ಗಲಾತ್ಯ 4:4-5, 7). ಆದದರಿಂದ, ನಾವು ದೇವರ ಬಳಿಗೆ ಬರಬಹುದು. ಆದರೆ ನಾವು ದೇವರ ಮಕ್ಕಳಾಗಿದ್ದೇವಾದರೂ ದೇವರ ಬಳಿಗೆ ನಾವು ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ ಯಥಾರ್ಥ ಹೃದಯವುಳ್ಳವರಾಗಿಯೂ ಹೋಗಬೇಕು. ನಂಬಿಕೆಯಿಲ್ಲದೆ ದೇವರ ಮಕ್ಕಳು ಸಹ ತಮ್ಮ ತಂದೆಯನ್ನು ಮೆಚ್ಚಿಸಲಾರರು (ಇಬ್ರಿಯ 11:6 ನೋಡಿರಿ).

ಯಥಾರ್ಥ ಹೃದಯವು ತೊಳೆಯಲ್ಪಟ್ಟು ಶುದ್ಧವಾಗಿ ಮಾಡಲ್ಪಟ್ಟಿರುವ ಹೃದಯವಾಗಿರುತ್ತದೆ. ನಿರ್ಮಲ ಹೃದಯದವರು ಮಾತ್ರವೇ ದೇವರನ್ನು ಕಾಣುವದಕ್ಕೆ ಸಾಧ್ಯವಾಗುವದು (ಮತ್ತಾಯ 5:8). ನಮ್ಮ ಮಹಾಯಾಜಕನಾದ ಯೇಸು ನಮ್ಮನ್ನು ಅಪರಾಧಿ ಮನಸಾಕ್ಷಿಯಿಂದ ಶುದ್ಧ ಮಾಡಿರುತ್ತಾನೆ (ಇಬ್ರಿಯರಿಗೆ 9:14 ನೋಡಿರಿ). ನಮ್ಮ ಹೃದಯಗಳು ಪ್ರೋಕ್ಷಿಸಲ್ಪಟ್ಟಿರುತ್ತವೆ (ವಚನ 22). ಅಂದರೆ, ನಮ್ಮ ಹೃದಯಗಳು ಯೇಸುವಿನ ರಕ್ತದಿಂದ ತೊಳೆಯಲ್ಪಟ್ಟಿರುತ್ತವೆ.

ನಮ್ಮ ಹೃದಯಗಳು ತೊಳೆಯಲ್ಪಟ್ಟಿರುವದು ಮಾತ್ರವಲ್ಲ; ನಮ್ಮ ದೇಹಗಳು ತಿಳಿನೀರಿನಿಂದ ತೊಳೆಯಲ್ಪಟ್ಟಿರುತ್ತವೆ. (1 ಕೊರಿಂಥ 6:11, ನೋಡಿರಿ). ಈ ದೈಹೀಕ ಅಥವಾ ಹೊರಗಿನ "ತೊಳೆಯುವಿಕೆಯು" ನಮ್ಮ ದೀಕ್ಷಾಸ್ನಾನದ ವೇಳೆ ಸಂಭವಿಸುತ್ತದೆ[9]. ಹೀಗೆ, ಕ್ರಿಸ್ತನ ಮೂಲಕ ನಾವು ಬಹಿರಂಗವಾಗಿಯೂ (ಆಚಾರ ಬದ್ಧವಾಗಿಯೂ) ಅಂತರಂಗದಲ್ಲಿಯೂ (ಆತ್ಮೀಕವಾಗಿ) ಶುದ್ಧಮಾಡಲ್ಪಟ್ಟಿದ್ದೇವೆ.

**23** ಪುನಃ ಈ ಪತ್ರಿಕೆಯ ಬರಹಗಾರನು ನಮ್ಮ ನಿರೀಕ್ಷೆಯನ್ನು ಕುರಿತು ನಾವು ಮಾಡಿದ ಪ್ರತಿಜ್ಞೆಯನ್ನು ನಿಶ್ಚಂಚಲರಾಗಿ ಪರಿಗ್ರಹಿಸೋಣ –ಅಂದರೆ, ನಾವು ಅರಿಕೆ ಮಾಡುವ ನಂಬಿಕೆಯಲ್ಲಿ ದೃಢವಾಗಿ ನಿಲ್ಲಬೇಕು ಎಂದು ನಮ್ಮನ್ನು ಪ್ರಬೋಧಿಸುತ್ತಾನೆ (ಇಬ್ರಿಯ 3:14 ನೋಡಿರಿ). ನಾವು ಚಂಚಲರಾಗದಿರೋಣ ದೇವರು ಎಂದಿಗೂ ಚಂಚಲನಾಗುವದಿಲ್ಲ. ಮನುಷ್ಯನ ವಾಗ್ದಾನಗಳು ವಿಫಲವಾಗಬಹುದು ಆದರೆ ದೇವರ ವಾಗ್ದಾನಗಳು ನಿಶ್ಚಯವಾದವುಗಳು. ದೇವರು ತನ್ನ ಮಾತನ್ನು ನೆರವೇರಿಸುವದಕ್ಕೆ ನಂಬಿಗಸ್ಥನು. ಆದದರಿಂದ, ನಮ್ಮ ನಿರೀಕ್ಷೆಯು ನಂಬಿಗಸ್ಥನಾದ ದೇವರ ನಿಶ್ಚಯವಾದ ವಾಗ್ದಾನಗಳ ಮೇಲೆ ಇಡಲ್ಪಟ್ಟಿರುವದರಿಂದ ನಮಗೆ ಚಂಚಲರಾಗುವದಕ್ಕೆ ಯಾವ ಕಾರಣವೂ ಇರುವದಿಲ್ಲ.

**24** ಯಾವಾನಾದರೂ ಚಂಚಲನಾಗಲು ಪ್ರಾರಂಭಿಸಿದ್ದರೆ ನಾವು ತಕ್ಷಣವೇ ಆತನನ್ನು ಪ್ರೋತ್ಸಾಹಿಸಿ ಬಲಪಡಿಸೋಣ. ನಾವು ಪರಸ್ಪರ ಪ್ರೀತಿಸುತ್ತಿರಬೇಕೆಂತಲೂ ಸತ್ಕಾರ್ಯಮಾಡಬೇಕೆಂತಲೂ ಒಬ್ಬರನ್ನೊಬ್ಬರು ಪ್ರೇರೇಪಿಸೋಣ. ನಮ್ಮಲ್ಲಿ ಯಾವನೂ ಹಿಂಜರಿದು ಭ್ರಷ್ಟನಾಗುವದನ್ನು ನೋಡದಿರೋಣ. ಒಟ್ಟಾಗಿ ನಾವು ಬಲಿಷ್ಠರು, ಆದರೆ ಒಬ್ಬಂಟಿಗರಾಗಿ ನಿರ್ಬಲರು.

**25** ಈ ಇಬ್ರಿಯ ವಿಶ್ವಾಸಿಗಳಲ್ಲಿ ಕೆಲವರು ಸಭೆಯಾಗಿ ಕೂಡಿಕೊಳ್ಳುವದನ್ನು ನಿಲ್ಲಿಸಿಬಿಟ್ಟಿದ್ದರು. ಇದು ನಮ್ಮ ಮಧ್ಯದಲ್ಲಿ ಸಂಭವಿಸದಿರಲಿ. ನಾವು ಅನ್ಯೋನ್ಯತೆಯಲ್ಲಿ ಒಟ್ಟಾಗಿ ಸೇರಿ ಬರುವದರ ಮೂಲಕ ಮಾತ್ರವೇ ಒಬ್ಬರನ್ನೊಬ್ಬರು ಎಚ್ಚರಿಸಿ ಬಲಪಡಿಸಬಲ್ಲೆವು.

ಕ್ರೈಸ್ತರು ಸಭೆಯಾಗಿ ಕೂಡಿಬರುವದನ್ನು ನಿಲ್ಲಿಸುವದಕ್ಕೆ ಅನೇಕ ಕಾರಣಗಳಿರುತ್ತವೆ. ಕೆಲವು ರಾಷ್ಟ್ರಗಳಲ್ಲಿ ಇದು ಕ್ರೈಸ್ತರನ್ನು ಸಭೆಯಾಗಿ ಕೂಡಿಬರದಂತೆ ತಡೆಯುವ ಸರ್ಕಾರಿ ಅಧಿಕಾರಿಗಳ ಭಯವಾಗಿರಬಹುದು. ಇತರರು ಇನ್ನೊಬ್ಬರ ಕಡೆಗೆ ಹೊಂದಿರುವ ಅನಾರೋಗ್ಯಕರ ಭಾವನೆಗಳ ಕಾರಣದಿಂದ ಸಭೆಯಾಗಿ ಕೂಡಿಬರುವದನ್ನು ನಿಲ್ಲಿಸಬಹುದು. ಕೆಲವರು ಗರ್ವದ ಕಾರಣದಿಂದ ಒಟ್ಟಾಗಿ ಕೂಡಿಬರುವದಕ್ಕೆ ನಿರಾಕರಿಸಬಹುದು; ಅವರು ತಮಗೆ ಇತರರ ಅನ್ಯೋನ್ಯತೆ ಹಾಗೂ ಬೆಂಬಲದ ಅಗತ್ಯವಿಲ್ಲ ಎಂದು ಭಾವಿಸುತ್ತಾರೆ. ಕೆಲವು ವೇಳೆಗಳಲ್ಲಿ ನಾವು ನಮ್ಮ ಜೀವಿತಗಳಲ್ಲಿರುವ ಯಾವದಾದರೂ ಪಾಪದ ನಿಮಿತ್ತ ಸಭೆಗೆ ಹೋಗುವದನ್ನು ನಿಲ್ಲಿಸುತ್ತೇವೆ. ನಾವು ಏಕಕಾಲದಲ್ಲಿ ಪಾಪವನ್ನು ಮಾಡುವವರಾಗಿರುವದು ಹಾಗೂ ಇತರ ವಿಶ್ವಾಸಿಗಳೊಂದಿಗೆ ನಿಜವಾದ ಅನ್ಯೋನ್ಯತೆ ಹೊಂದುವದು ಸಾಧ್ಯವಿಲ್ಲವೆಂದು ನಮಗೆ ಗೊತ್ತಿರುತ್ತದೆ. ಆದ್ದರಿಂದ, ನಾವು ಪಾಪದ ಬದಲಿಗೆ ಅನ್ಯೋನ್ಯತೆಯನ್ನೇ ಬಿಟ್ಟುಬಿಡಲು ನಿರ್ಧರಿಸುತ್ತೇವೆ. ನಮ್ಮ ಮನಸಾಕ್ಷಿಯು ಅಶುದ್ಧವಾಗಿರುತ್ತದೆ; ನಮಗೆ ನಮ್ಮ ಸಹೋದರರ ಮುಖವನ್ನು ದೃಷ್ಟಿಸುವದಕ್ಕೆ ಕಷ್ಟಕರವಾಗಿ ತೋರುತ್ತದೆ. ಅನ್ಯೋನ್ಯತೆಯಿಂದ ದೂರವಿರುವದಕ್ಕಿರುವ ಈ ಎಲ್ಲಾ ಕಾರಣಗಳು ತಪ್ಪಾದ ಕಾರಣಗಳೂ ಪಾಪಮಯ ಕಾರಣಗಳೂ ಆಗಿವೆ. ಆದದರಿಂದ, ನಾವು ಈ ಯಾವದೇ ಕಾರಣಗಳಿಗೋಸ್ಕರ ಸಭೆಯಾಗಿ ಕೂಡಿಬರುವದನ್ನು ಎಂದಿಗೂ ಬಿಟ್ಟು ಬಿಡಬಾರದು.

........ಆದರೆ ಒಬ್ಬರನ್ನೊಬ್ಬರು ಎಚ್ಚರಿಸೋಣ. ಕರ್ತನ ಪ್ರತ್ಯಕ್ಷತೆಯ ದಿನವು ಸಮಿಪಿಸುತ್ತಾ ಬರುತ್ತದೆ ಎಂದು ನೀವು ನೋಡುವದರಿಂದ ಇದನ್ನು ಮತ್ತಷ್ಟು ಮಾಡಿರಿ. ದಿನವು ಕ್ರಿಸ್ತನ ಎರಡನೆಯ ಬರೋಣದ ದಿನವಾಗಿದೆ. ಇಬ್ರಿಯರು ಆ ದಿನವು ಶೀಘ್ರ್ರವೇ ಬರುವದೆಂದು ಎದುರು ನೋಡಿದ್ದರು. ಅವರು ಹಿಂಸೆಯನ್ನು ಅನುಭವಿಸುತ್ತಿದ್ದರು; ಆದರೆ ಅವರು ತಮ್ಮ ಹಿಂಸೆಯು ಹೆಚ್ಚುಕಾಲ ಇರುವದಿಲ್ಲ ಕ್ರಿಸ್ತನು ಶೀಘ್ರ್ರವೇ ಹಿಂದಿರುಗುವನು ಎಂದು ನಿರೀಕ್ಷಿಸಿದರು. ಆದದರಿಂದ, ಬರಹಗಾರನು ಅವರಿಗೆ ಹೇಳುವದೇನೆಂದರೆ: ನಿರಾಶರಾಗಬೇಡಿರಿ; ಸ್ವಲ್ಪ ಕಾಲದ ನಂತರ ನಿಮ್ಮ ಹಿಂಸೆಯು ಅಂತ್ಯಗೊಳ್ಳುವದು.

ನಾವು ಸಹ ಅದೇ ಮನಸ್ಸನ್ನೇ ಹೊಂದಿರೋಣ. ಕ್ರಿಸ್ತನು ಯಾವದಿನದಲ್ಲಿ ಬರಲಿರುವನೆಂದು ನಾವು ಅರಿಯೆವು; ಆದರೆ ಆತನು ಬರುವ ತನಕ ನಾವು ನಂಬಿಕೆಯಲ್ಲಿ ದೃಢವಾಗಿ ನಿಲ್ಲಬೇಕು. ಹಿಗಾದರೆ ನಾವು ಪರಲೋಕದಲ್ಲಿರುವ ನಮ್ಮ ಬಾಧ್ಯತೆಯನ್ನು ಕಳೆದುಕೊಳ್ಳುವದಿಲ್ಲ (ವಚನಗಳು 35:36 ನೋಡಿರಿ).

## ಗೊತ್ತಿದ್ದೂ ಮಾಡಿದ ಪಾಪ ( 10:26-31)

**26-27** ನಾವು ಬೇಕೆಂದು ಪಾಪ ಮಾಡಿದರೆ [20] ಕ್ರಿಸ್ತನ ಯಜ್ಞವು ಇನ್ನೆಂದಿಗೂ ನಮಗೆ ಯಾವ ಪ್ರಯೋಜನವನ್ನೂ ತರುವದಿಲ್ಲ; ಪಾಪಪರಿಹಾರಕ್ಕಾಗಿ ಇನ್ನಾವ ಯಜ್ಞವೂ ಇರುವದಿಲ್ಲ (ವಚನ 26). ಯಾಕೆಂದರೆ, 29ನೇ ವಚನದ ಪ್ರಕಾರವಾಗಿ ನಾವು ಈ ವಿಧದಲ್ಲಿ ಮಾನಸಾಂತರವಿಲ್ಲದೆ ಪಾಪ ಮಾಡುತ್ತಲೇ ಇದ್ದರೆ, ನಾವು ದೇವ ಕುಮಾರನನ್ನು ತುಳಿದು ಒಡಂಬಡಿಕೆಯ ರಕ್ತವನ್ನು ಅಶುದ್ಧವೆಂದೆಣಿಸುವವರು ಆಗಿರುತ್ತೇವೆ; ಅಂದರೆ, ಆತನು ನಮಗಾಗಿ ಮಾಡಿದ ಯಜ್ಞವನ್ನು ತಾತ್ಸಾರಮಾಡುತ್ತೇವೆ; ಕೃಪಾವರವಾಗಿರುವ (ಪವಿತ್ರ) ಆತ್ಮನನ್ನು ಅವಮಾನ ಪಡಿಸುತ್ತೇವೆ, ಆತನ ಮೂಲಕವೇ ನಾವು ಕ್ರಿಸ್ತನ ಆಶೀರ್ವಾದಗಳನ್ನೆಲ್ಲಾ ಪಡೆದಿರುತ್ತೇವೆ (ಮಾರ್ಕ 3:29 ಮತ್ತು ವ್ಯಾಖ್ಯಾನ ನೋಡಿರಿ). ನಾವು ಇದೆಲ್ಲವನ್ನು ಮಾಡುವದಾದರೆ, ವಾಸ್ತವದಲ್ಲಿ ನಾವು ಕ್ರಿಸ್ತ ನಂಬಿಕೆಯನ್ನು ಸಂಪೂರ್ಣವಾಗಿ ತೊರೆದವರಾಗಿರುತ್ತೇವೆ. ಮತ್ತು ನಾವು ಕ್ರಿಸ್ತನಲ್ಲಿನ ನಮ್ಮ ನಂಬಿಕೆಯನ್ನು ಬಿಟ್ಟುಬಿಡುವದಾದರೆ ನಮ್ಮ ರಕ್ಷಣೆಯು ಕಳೆದುಹೋದಂತೆಯೇ ಆದರೆ ಇದೆಲ್ಲವನ್ನೂ ಮಾಡುವ ಯಾವದೇ ವ್ಯಕ್ತಿಯು ಎಂದಿಗೂ ನಿಜವಾದ ನಂಬಿಕೆಯನ್ನು ಹೊಂದಿಯೇ ಇಲ್ಲದಿರುವ ಸಾಧ್ಯತೆಯಿದೆ (1 ಯೋಹಾನ 3:6 ನೋಡಿರಿ).

ಇಬ್ರಿಯ ಪತ್ರಿಕೆಯ ಬರಹಗಾರನು ಇಲ್ಲಿ ನಾವು ಕಾಲಕಾಲಕ್ಕೆ ಪಾಪಗಳನ್ನು ಮಾಡಿ ಅನಂತರದ ಪಶ್ಚಾತಾಪ ಪಟ್ಟಿರುವಂತಹ ಪಾಪಗಳ ಬಗ್ಗೆ ಮಾತಾಡುತ್ತಿಲ್ಲ. ಯಾಕೆಂದರೆ, ಈ ರೀತಿಯ ಪಾಪವನ್ನು ದೇವರು ಶೀಘ್ರ್ರವೇ ಕ್ಷಮಿಸಿ ತನ್ನ ನೆನಪಿನಿಂದ ಅಳಿಸಿಬಿಡುವದಕ್ಕೆ ಸಿದ್ಧನಾಗಿರುತ್ತಾನೆ (1 ಯೋಹಾನ 1:9 ಮತ್ತು ವ್ಯಾಖ್ಯಾನ ನೋಡಿರಿ).

ಬದಲಾಗಿ, ಇಲ್ಲಿ ಬರಹಗಾರನು,ನಾವು ಬೇಕೆಂದು ಮಾನಸಾಂತರವಿಲ್ಲದೆ ಮಾಡುವಂತಹ ಪಾಪಗಳ ಕುರಿತು ಮಾತಾಡುತ್ತಿದ್ದಾನೆ (ಇಬ್ರಿಯ 6:4-6 ಮತ್ತು ವ್ಯಾಖ್ಯಾನ ನೋಡಿರಿ). ಈ ರೀತಿಯಲ್ಲಿ ಪಾಪಮಾಡುವ ವ್ಯಕ್ತಿಯು ನಿಜವಾದ ನಂಬಿಕೆಯನ್ನು ಹೊಂದಿರುವದೇ ಇಲ್ಲ.

**28** ಹಳೆ ಒಡಂಬಡಿಕೆಯ ಪ್ರಕಾರವಾಗಿ ಮೋಶೆಯ ಧರ್ಮಶಾಸ್ತ್ರವನ್ನು (ಯೆಹೂದ್ಯ ಧರ್ಮಶಾಸ್ತ್ರ) ತಿರಸ್ಕರಿಸುವವರು ಮರಣದಂಡನೆಯನ್ನು ಹೊಂದುತ್ತಿದ್ದರು (ಧರ್ಮೋಪದೇಶಕಾಂಡ 17:2-7). ಅವರ ಭೌತೀಕ ದೇಹಗಳು ಕೊಲ್ಲಲ್ಪಟ್ಟವು .

**29** ಆದರೆ ಸತ್ಯದ ಪರಿಜ್ಞಾನವನ್ನು ಹೊಂದಿದ ಮೇಲೆಯೂ ಕ್ರಿಸ್ತನನ್ನು ತಿರಸ್ಕರಿಸುವವರ ದಂಡನೆಯು ಇನ್ನು ಎಷ್ಟೋ ಕಠಿಣವಾಗಿರಬೇಕಲ್ಲವೇ! (ವಚನ 26). ಒಂದು ವೇಳೆ ಕ್ರಿಸ್ತನನ್ನು ಅಂಗೀಕರಿಸಿಕೊಂಡು ಅನಂತರ ಆತನನ್ನು ತಿರಸ್ಕರಿಸುವದಾದರೆ ನಾವು ಶಾರೀರಿಕ ಮರಣವನ್ನು ಮಾತ್ರವಲ್ಲದೆ ನಿತ್ಯನಿತ್ಯಕ್ಕೂ ಆತ್ಮೀಕ ಮರಣವನ್ನು ಸಹ ಹೊಂದುತ್ತೇವೆ.

**30** ಬರಹಗಾರನು ಇಲ್ಲಿ ಧರ್ಮೋಪದೇಶಕಾಂಡ 32:25-26ರಿಂದ ಉಲ್ಲೇಖಿಸುತ್ತಾನೆ. ಬೇಕೆಂದು ಪಾಪ ಮಾಡುತ್ತಿರುವ ವೇಳೆಯಲ್ಲಿ ನಾವು ನಂಬಿಕೆಯನ್ನು ಬಿಟ್ಟು ಬಿಡುವದಾದರೆ ನಮ್ಮ "ನಂಬಿಕೆ"ಯು ಇನ್ನೆಂದಿಗೂ ನಮ್ಮನ್ನು ರಕ್ಷಿಸುವದಿಲ್ಲ. ದೇವರು ನಮಗೆ ಮುಯ್ಯಿ ತೀರಿಸುವನು. ಕರ್ತನು ತನ್ನ ಜನರ ನ್ಯಾಯವನ್ನು ವಿಚಾರಿಸುವನು. ಆತನು ನಿಜವಾದ ವಿಶ್ವಾಸಿಗಳನ್ನು ಸುಳ್ಳು ವಿಶ್ವಾಸಿಗಳಿಂದ ಬೇರ್ಪಡಿಸುವನು. ಒಮ್ಮೆ ನಾವು ಆತನ ಜನರಲ್ಲಿ ಎಣಿಸಲ್ಪಟ್ಟವರಾಗಿದ್ದು

ನಂರತ ಭ್ರಷ್ಟರಾಗುವದಾದರೆ ನಾವು ದೇವರ ತೀರ್ಪಿನಿಂದ ತಪ್ಪಿಸಿಕೊಳ್ಳುವದಕ್ಕೆ ಮಾರ್ಗವೇ ಇರುವದಿಲ್ಲ (ಇಬ್ರಿಯ 3:120.

31 ಜೀವ ಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿಬೀಳುವದು ಭಯಂಕರವಾದದ್ದು. ಈ ವಚನವು ಪ್ರಾಥಮಿಕವಾಗಿ ಅವಿಶ್ವಾಸಿಗಳಿಗೆ ಬರೆಯಲ್ಪಟ್ಟಿಲ್ಲಃ ಬದಲಾಗಿ, ಇದು ಮುಖ್ಯವಾಗಿ ಮೊದಲು "ನಂಬಿಕೆಯಿಟ್ಟು" ನಂತರ ಭ್ರಷ್ಟರಾಗುವವರಿಗೆ ಬರೆಯಲ್ಪಟ್ಟಿರುತ್ತದೆ. ನಾವು ಯಾವಾಗಲೂ ದೇವರ ಪ್ರೀತಿ ಹಾಗೂ ಕರುಣೆಯ ಕುರಿತಾಗಿ ಮಾತಾಡಲು ಇಷ್ಟಪಡುತ್ತೇವೆ ಆದರೆ ದೇವರು ತನ್ನ ವಿರುದ್ಧವಾಗಿ ಬೇಕೆಂದು ಪಾಪ ಮಾಡುತ್ತಾ ಆತನ ಕುಮಾರನಾದ ಯೇಸುಕ್ರಿಸ್ತನನ್ನು ತಿರಸ್ಕರಿಸುತ್ತಾ ಇರುವವರ ಮೇಲೆ ತನ್ನ ಪ್ರೀತಿ ಅಥವಾ ಕರುಣೆಯನ್ನು ತೋರಿಸುವದಿಲ್ಲ ಎಂಬುದನ್ನು ಸಹ ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

## ಸೈರಿಸಿಕೊಳ್ಳುವದಕ್ಕೆ ಕರೆ (10:32-39)

32 ನಾವು ಕ್ರೈಸ್ತರಾದ ಪ್ರಾರಂಭದಲ್ಲಿ ಸಾಮಾನ್ಯವಾಗಿ ಉತ್ಸಾಹ, ವೈರಾಗ್ಯ ಹಾಗೂ ಧೈರ್ಯಗಳಿಂದ ತುಂಬಿರುತ್ತೇವೆ. ನಮ್ಮ ನಂಬಿಕೆಯ ನಿಮಿತ್ತ ಕಷ್ಟವು ಬರುವದಾದರೆ ನಾವು ಸಂತೋಷದಿಂದ ಅದನ್ನು ಸಹಿಸಿಕೊಳ್ಳಲು ಸಿದ್ಧರಾಗಿರುತ್ತೇವೆ. ನಾವು ಸೈತಾನನೊಂದಿಗಿನ ಬಲುಹೋರಾಟದಲ್ಲಿ ಸಂತೋಷವಾಗಿ ಹೋರಾಡುತ್ತೇವೆ. ಈ ಇಬ್ರಿಯರು ಹಾಗಯೇ ಇದ್ದರು (ಮತ್ತಾಯ 5:11-12; ಅ.ಕೃತ್ಯ 5:41 ನೋಡಿರಿ).

33 ಈ ಇಬ್ರಿಯರು ಸಾರ್ವಜನಿಕವಾಗಿ ನಿಂದೆಗಳನ್ನೂ, ಸಂಕಟಗಳನ್ನೂ ಅನುಭವಿಸಿದ್ದರು. ಅವರಲ್ಲಿ ಕೆಲವರು ಹಿಂಸೆ ಅನುಭವಿಸುವಾಗ ಇತರರು ಅವರ ಸಂಗಡ ಬೆಂಬಲವಾಗಿ ನಿಂತರು, ಅವರು ಪಲಾಯನ ಗೈದು ಅಡಗಿಕೊಳ್ಳಲಿಲ್ಲ. ಒಬ್ಬ ಸಹೋದರನು ಹಿಂಸೆಗೆ ಗುರಿಯಾದರೆ ಅವರೆಲ್ಲರೂ ಹಿಂಸೆಗೊಳಗಾಗಲು ಸಿದ್ಧರಾಗಿದ್ದರು (1 ಕೊರಿಂಥ 12:26, ನೋಡಿರಿ).

34 ಹೊಸ ಒಡಂಬಡಿಕೆಯ ಕಾಲದಲ್ಲಿ, ಸೆರೆಮನೆಯಲ್ಲಿ ಕೈದಿಗಳು ಹಲವಾರು ವೇಳೆಗಳಲ್ಲಿ ಹಸಿವೆಯಿಂದ ಸಾಯುತ್ತಿದ್ದರು. ಅವರು ಬದುಕುವದಕ್ಕಾಗಿ ಸ್ನೇಹಿತರ ಹಾಗೂ ಬಂಧುಗಳ ಸಹಾಯದ ಮೇಲೆ ಅವಲಂಭಿತರಾಗಿರುತ್ತಿದ್ದರು. ಆದರೆ ವಿಶ್ವಾಸಿಯೊಬ್ಬನು ಸೆರೆಮನೆಯಲ್ಲಿರುವ ಇತರ ಕ್ರೈಸ್ತನನ್ನು ಬೇಟಿಯಾಗಲು ಹೋಗುವದು ಗಂಡಾಂತರಕಾರಿಯಾಗಿತ್ತು. ಹಾಗಿದ್ದರೂ, ಈ ಇಬ್ರಿಯರು ಸೆರೆಮನೆಯಲ್ಲಿದ್ದ ತಮ್ಮ ಸಹೋದರನನ್ನು ಕೈಬಿಟ್ಟಿರಲಿಲ್ಲ. ಅವರು ಯೇಸುವಿನ ಮಾತುಗಳನ್ನು ಜ್ಞಾಪಿಸಿಕೊಳ್ಳುವವರಾಗಿದ್ದರುಃ "ನಾನು...... ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ...... ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ ಅದನ್ನು ನನಗೂ ಮಾಡಿದ ಹಾಗಾಯಿತು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ಮತ್ತಾಯ 25:34-40).

ಇಬ್ರಿಯ ವೈರಿಗಳು ಅಧಿಕ ಸಂಖ್ಯೆಯಲ್ಲಿಯೂ ಬಲಿಷ್ಠರಾಗಿಯೂ ಇದ್ದದರಿಂದ ಈ ಇಬ್ರಿಯ ಕ್ರೈಸ್ತರಲ್ಲಿ ಕೆಲವರು ತಮ್ಮ ಭೂಮಿಯನ್ನು, ಸೊತ್ತುಗಳನ್ನೂ ತಮ್ಮ ಕುಟುಂಬ ಸಾಸ್ಥ್ಯವನ್ನೂ ಕಳೆದುಕೊಂಡಿದ್ದರು. ಆದಾಗ್ಯು ಅವರು ಈ ನಷ್ಟವನ್ನು ಸಂತೋಷದಿಂದ ಸ್ವೀಕರಿಸಿಕೊಂಡಿದ್ದರು. ಯಾಕೆಂದರೆ, ಅವರು ಪರಲೋಕದಲ್ಲಿ ತಮಗೆ ಉತ್ತಮ ವಾಗಿಯೂ ಸ್ಥಿರವಾಗಿಯೂ ಇರುವ ಆಸ್ತಿಯುಂಟೆಂದು ತಿಳಿದಿದ್ದರು (ರೋಮ 8:18; 2 ಕೊರಿಂಥ 4:17–18ನೋಡಿರಿ).

ಆದರೆ ಈಗ ಈ ಇಬ್ರಿಯರಿಗೆ ಏನು ಸಂಭವಿಸಿತ್ತು? ಅವರ ಪ್ರಾರಂಭದ ಅಭಿಮಾನವು ತಣ್ಣಗಾಗಲು ಪ್ರಾರಂಭಿಸಿತ್ತು. ಈಗ ಅವರು ಹಿಂಸೆಯ ಕಡೆಯಿಂದ ವಿಮುಖರಾಗಲು ಪ್ರಾರಂಭಿಸಿದ್ದರು ಅವರು ಪುನಃ ತಮ್ಮ ಸೊತ್ತುಗಳನ್ನು ಪ್ರೀತಿಸಲಾರಂಭಿಸಿದ್ದರು. ಅವರು ಇನ್ನೆಂದಿಗೂ ಕ್ರಿಸ್ತನ ನಿಮಿತ್ತವಾಗಿ ಅಷ್ಟೊಂದು ಹಿಂಸೆ ತಾಳುವವದಕ್ಕೆ ಮನಸ್ಸುಳ್ಳವರಾಗಿರಲಿಲ್ಲ.

ಇಂದು ನಮ್ಮ ಸಭೆಯಲ್ಲಿಯೂ ಈ ಸ್ಥಿತಿಯೂ ನಿಜವಾಗಿರುತ್ತದೋ? ನಾವು ಪ್ರಾರಂಭದಲ್ಲಿ ಕ್ರಿಸ್ತನಿಗಾಗಿ ಹೊಂದಿದ್ದ ಪ್ರೀತಿಯು ತಣ್ಣಗಾಗಿದೆಯೋ? ಸಹೋದರ ಹಾಗೂ ಸಹೋದರಿಯರೇ, ಇದು ಸಂಭವಿಸದಿರಲಿ! ಯೇಸುವಿನ ಮಾತುಗಳನ್ನು ಕೇಳಿರಿಃ "ನೀನು ತಾಳ್ಮೆಯುಳ್ಳವನಾಗಿ ನನ್ನ ಹೆಸರಿನ ನಿಮಿತ್ತ ಬಾಧೆಯನ್ನು ಸೈರಿಸಿಕೊಂಡು ಬೇಸರಗೊಳ್ಳಲಿಲ್ಲ; ಇದೆನೆಲ್ಲಾ ಬಲ್ಲೆನು. ಆದರೆ ಮೊದಲು ನಿನಗಿದ್ದ ಪ್ರೀತಿಯನ್ನು ನೀನು ಬಿಟ್ಟುಬಿಟ್ಟಿದ್ದೀಯೆಂದು ನಾನು ನಿನ್ನ ಮೇಲೆ ತಪ್ಪುಹೊರಿಸಬೇಕಾಗುತ್ತದೆ. ಆದದರಿಂದ, ನೀನು ಎಲ್ಲಿಂದ ಬಿದ್ದಿದ್ದೀಯೋ ಅದನ್ನು ನಿನ್ನ ನೆನಪಿಗೆ ತಂದುಕೊಂಡು ದೇವರ ಕಡೆಗೆ ತಿರುಗಿಕೋ. ನೀನು ಮೊದಲು ಮಾಡುತ್ತಿದ್ದ ಕೃತ್ಯಗಳನ್ನು ಮಾಡು. ನೀನು ದೇವರ ಕಡೆಗೆ ತಿರುಗಿಕೊಳ್ಳದೆ ಹೋದರೆ ನಾನು ಬಂದು ನಿನ್ನ ದೀಪ ಸ್ತಂಭವನ್ನು ಅದರ ಸ್ಥಳದಿಂದ ತಗೆದುಹಾಕುವೆನು" (ಪ್ರಕಟಣೆ 2:3-5).

35 ಆದದರಿಂದ, ಬರಹಗಾರನು ಹೇಳುವದನೆಂದರೆಃ ಹಿಂದಿನ ದಿನಗಳನ್ನು ನೆನಪಿಗೆ ತಂದು ಕೊಳ್ಳಿರಿ (ವಚನ 32). ಆ ದಿನಗಳಲ್ಲಿ ನೀವು ಧೈರ್ಯವನ್ನು ತೋರಿಸಿದಿರಿ! ಹಾಗಾದರೆ ನಿಮ್ಮ ಧೈರ್ಯವನ್ನು ಬಿಟ್ಟುಬಿಡಬೇಡಿರಿ.

36 ದೇವರು ನಮಗೆ ಪ್ರತಿಫಲ ನೀಡುತ್ತೇನೆಂದು ವಾಗ್ದಾನ ಮಾಡಿದ್ದಾನೆ. ಆದರೆ ನಾವು ತಾಳ್ಮೆಯಿಂದಿದ್ದು ಕಡೇವರೆಗೂ ದೇವರ ಚಿತ್ತವನ್ನು ಮಾಡುವದರಲ್ಲಿ ತಾಳ್ಮೆಯಿಂದ ಮುಂದುವರೆಯಬೇಕು; ಇಲ್ಲವಾದರೆ, ನಾವು ನಮ್ಮ ಪ್ರತಿಫಲವನ್ನು ಕಳೆದುಕೊಳ್ಳುವೆವು. ನಾವು ವಾಗ್ದಾನ ಫಲವನ್ನು ಕಳೆದುಕೊಳ್ಳುವೆವು.

37-38 ಬರಹಗಾರನು ಇಲ್ಲಿ ಹಬ್ಬಕ್ಕೂಕ 2:3-4ರಿಂದ ಉಲ್ಲೇಖಿಸುತ್ತಾನೆ. ಬರುವಾತನು– ಅಂದರೆ, ಕ್ರಿಸ್ತನು–ಇನ್ನು ಸ್ವಲ್ಪ ಕಾಲದಲ್ಲಿ ಬರುವನು, ತಡಮಾಡುವದಿಲ್ಲ (2 ಪೇತ್ರ 3:8-9 ನೋಡಿರಿ). ಇಲನೇ ವಚನದಲ್ಲಿ ನನ್ನವನಾಗಿರುವ

ನೀತಿವಂತನು ಹಿಂಸೆಯಲ್ಲಿ ದೃಢವಾಗಿ ನೆಲೆಗೊಳ್ಳುವ ಹಾಗೂ ನಂಬಿಕೆಯಿಂದಲೇ ಬದುಕುವ ಕ್ರಿಸ್ತನ ವಿಶ್ವಾಸಿಯಾಗಿದ್ದಾನೆ. ಆದರೆ ಅವನು ಹಿಂದೆಗೆದರೆ ದೇವರಿಗೆ ಅವನಲ್ಲಿ ಸಂತೋಷವಿರುವದಿಲ್ಲ.

**39** ಆದದರಿಂದ, ನಾವು ಹಿಂದೆಗೆಯದಿರೋಣ. ಯಾಕೆಂದರೆ ನಾವು ಹಾಗೆ ಮಾಡುವದಾದರೆ ನಮ್ಮ ರಕ್ಷಣೆಯನ್ನು ಕಳೆದುಕೊಳ್ಳುವದು ಮಾತ್ರವಲ್ಲ (ವಚನ 36); ಆದರೆ ನಾವು ಸಹ ನಾಶವಾಗುವೆವು (ಮಾರ್ಕ 8:35; 13:13; ಲೂಕ 21:19 ನೋಡಿರಿ).

---

## ಅಧ್ಯಾಯ - 11

### ನಂಬಿಕೆಯ ಮನುಷ್ಯರು–ಹೇಬೆಲನಿಂದ ಅಬ್ರಹಾಮನವರೆಗೆ (11:1-16)

**1-2** ಮನುಷ್ಯರು ಎರಡು ವಿಧವಾದ ಸಂಗತಿಗಳಲ್ಲಿ ನಂಬಿಕೆ ಹೊಂದಿರುತ್ತಾರೆಃ ನಾವು ನಿರೀಕ್ಷಿಸುವವುಗಳ ವಿಷಯವಾಗಿ– ಅಂದರೆ, ಮುಂದಿನ ಸಂಗತಿಗಳು; ಮತ್ತು ಕಣ್ಣಿಗೆ ಕಾಣದವುಗಳು. ಜನರು ನಂಬಿಕೆಯಿಡುವ ಮುಖ್ಯವಾದ ಅದೃಶ್ಯವಾದ ಸಂಗತಿಯೆಂದರೆ, ಖಂಡಿತವಾಗಿಯೂ, ದೇವರೇ. ಮತ್ತು ನಿರೀಕ್ಷಿಸುವ ಮುಖ್ಯ ಸಂಗತಿಯೆಂದರೆ ದೇವರ ವಾಗ್ದಾನಗಳ ನೆರವೇರಿಕೆಯೇ.

ನಾವು ಏನನ್ನಾದರೂ ನಮ್ಮ ಕಣ್ಣಾರೆ ಕಾಣುವದಾದರೆ ಆ ಸಂಗತಿಯು ಸತ್ಯವೆಂದು ನಿಶ್ಚಯ ಹೊಂದಿರುತ್ತೇವೆ. ಅದೇ ರೀತಿಯಲ್ಲಿ, ನಂಬಿಕೆಯ ಮೂಲಕವಾಗಿ ಕಾಣದಿರುವಂಥ ಒಂದು ಸಂಗತಿಯು ಸಹ ಸತ್ಯವೆಂದು ನಾವು ನಿಶ್ಚಯತೆ ಹೊಂದಬಹುದು. ವಾಗ್ದಾನಗಳಂತಹ ಭವಿಷ್ಯತ್ತಿನ ಸಂಗತಿಗಳ ವಿಷಯದಲ್ಲಿಯೂ ಇದು ಅಷ್ಟೇ ಸತ್ಯವಾದದ್ದು. ಇವುಗಳು ಸಹ ಅದೃಶ್ಯವಾದ ಸಂಗತಿಗಳೇ ಆದಾಗ್ಯು ನಂಬಿಕೆಯ ಮೂಲಕ ನಾವು ಒಂದು ನಿರ್ದಿಷ್ಟವಾದ ವಾಗ್ದಾನವು ನೆರವೇರುವದೆಂದು ತಿಳಿಯಬಲ್ಲೆವು.

ಆದದರಿಂದ, ನಂಬಿಕೆಯು ನಾವು ಕಾಣದಿರುವ ಸಂಗತಿಗಳು ನಿಜವೆಂದೂ ಭವಿಷ್ಯತ್ತಿನ ಸಂಗತ್ತಿಗಳು ನೆರವೇರುವವೆಂದೂ ಭರವಸೆ ಹಾಗೂ ಖಚಿತತೆಯನ್ನು ಹೊಂದಿರುವದೇ ಆಗಿದೆ.

ಆದರೆ ಅಷ್ಟಕ್ಕೆ ಮುಗಿಯುವದಿಲ್ಲ. ನಿಜವಾದ ನಂಬಿಕೆಗೆ ಆದರ ಫಲವು ಅಂದರೆ ಸತ್ಕ್ರಿಯೆಗಳು ಹಾಗೂ ವಿಧೇಯತೆಯು ಆಧಾರವಾಗಿರುತ್ತದೆ. ನಾವು ದೇವರಲ್ಲಿ ನಂಬಿಕೆ ಹೊಂದಿದ್ದೇವೆ ಎಂದು ಹೇಳುವದಾದರೆ ಆತನು ಹೇಳುವದನ್ನು ನಾವು ಮಾಡಬೇಕು. ಕೆಳಗಡೆಯಲ್ಲಿ ಪಟ್ಟಿ ಮಾಡಲ್ಪಟ್ಟಿರುವ ನಂಬಿಕೆಯ ಮನುಷ್ಯರು ತಮ್ಮ ಕ್ರಿಯೆಗಳ ಮೂಲಕ ತಮ್ಮ ನಂಬಿಕೆಗೆ ಸಾಕ್ಷಿ ನೀಡಿದರು. ಕ್ರಿಯೆಗಳಿಲ್ಲದ ನಂಬಿಕೆ ಸತ್ತನಂಬಿಕೆಯೂ ಸುಳ್ಳುನಂಬಿಕೆಯೂ ಆಗಿದೆ (ಯಾಕೋಬ 2:14-17, 20-24 ಮತ್ತು ವ್ಯಾಖ್ಯಾನ ನೋಡಿರಿ).

ಈ ಅಧ್ಯಾಯದಲ್ಲಿ ಪಟ್ಟಿಮಾಡಲ್ಪಟ್ಟಿರುವ ವ್ಯಕ್ತಿಗಳು ಇತಿಹಾಸದಲ್ಲಿ ಕಾಣಿಸಿಕೊಂಡ ಕ್ರಮದಲ್ಲಿ ಪ್ರಸ್ತಾಪಿಸಲ್ಪಟ್ಟಿರುತ್ತಾರೆ. ಪ್ರತಿಯೊಬ್ಬರ ವಿಷಯದಲ್ಲಿಯೂ ಈ ವ್ಯಕ್ತಿಗಳ ನಂಬಿಕೆಯು ದೇವರಲ್ಲಿಟ್ಟ ನಂಬಿಕೆಯಾಗಿತ್ತು. ದೇವರು ವಾಗ್ದಾನ ಮಾಡಿದನು ಹಾಗೂ ಅವರು ನಂಬಿದರು. ದೇವರು ಆಜ್ಞಾಪಿಸಿದನು, ಅವರು ವಿಧೇಯರಾದರು. ಈ ನಂಬಿಕೆಯ ವ್ಯಕ್ತಿಗಳ ಮೂಲಕ ದೇವರು ಯೆಹೂದ್ಯ ಜನಾಂಗವಾದ ಇಸ್ರಾಯೇಲಿಗಾಗಿ ಇದ್ದ ತನ್ನ ಉದ್ದೇಶಗಳನ್ನು ನೆರವೇರಿಸಿದನು. ಆದದರಿಂದ, ಈ ಅಧ್ಯಾಯದಲ್ಲಿ ಇಬ್ರಿಯ ಪತ್ರಿಕೆಯ ಬರಹಗಾರನು ಚರಿತ್ರೆಯನ್ನು ಕ್ಲುಪ್ತವಾಗಿ ವಿವರಿಸುತ್ತಾನೆ. ಈ ವಿಧದಲ್ಲಿ ಬರಹಗಾರನು ಹಳೆ ಒಡಂಬಡಿಕೆಯ ಹೊರರೇಖೆಯನ್ನು ನಮ್ಮ ಮುಂದಿಟ್ಟಿರುತ್ತಾನೆ. ಈ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿರುವ ನಂಬಿಗಸ್ಥವ್ಯಕ್ತಿಗಳ ಉದಾಹರಣೆಗಳ ಮೂಲಕ ಬರಹಗಾರನು ದೇವರ ವಾಗ್ದಾನಗಳನ್ನು ದೇವರ ಬಲವನ್ನು ಹೊಂದಿಕೊಳ್ಳಬೇಕಾದರೆ ದೇವರ ವಾಗ್ದಾನಗಳನ್ನು ದೇವರ ಬಲವನ್ನು ಹೊಂದಿಕೊಳ್ಳಬೇಕಾದರೆ ನಮಗೆ ಎಲ್ಲಕ್ಕಿಂತಲೂ ಮೇಲಾಗಿ ಒಂದು ಸಂಗತಿಯು ಅವಶ್ಯಕವೆಂದು– ಅದೇನೆಂದರೆ, ನಂಬಿಕೆ– ಎಂಬುದನ್ನು ತಿಳಿಯಪಡಿಸಲು ಇಚ್ಛಿಸುತ್ತಾನೆ.

**3** ಆದರೆ ಬರಹಗಾರನು ಈ ನಂಬಿಕೆಯ ಮನುಷ್ಯರ ಕುರಿತಾಗಿ ಮಾತಾಡಲಾರಭಿಸುವದಕ್ಕೆ ಮುನ್ನ ಆತನು ದೇವರ ಮತ್ತು ಆತನ ಸೃಷ್ಟಿಯನ್ನು ಕುರಿತು ಆಲೋಚಿಸುತ್ತಾ ನಾವು ಯಾವದನ್ನು ನಮ್ಮ ಕಣ್ಣುಗಳಿಂದ ನೋಡಲಾರೆವೋ ಅದನ್ನು ನಂಬಿಕೆಯ ಮೂಲಕ "ಕಾಣುವ" ಪ್ರಕಾರವೇ ದೇವರು ಜಗತ್ತನ್ನು (ಅಥವಾ ಪ್ರಪಂಚವನ್ನು) ಅದೃಶ್ಯವಸ್ತುಗಳಿಂದ ಉಂಟುಮಾಡಿದನು. ದೇವರು ಜಗತ್ತನ್ನು ಯಾವದೇ ಭೌತೀಕ ಪದಾರ್ಥದಿಂದ ಉಂಟುಮಾಡಲಿಲ್ಲ; ಆತನು ಸಮಸ್ತವನ್ನೂ ತನ್ನ ಮಾತಿನಿಂದ ಮಾತ್ರವೇ ಸೃಷ್ಟಿಸಿದನು. ದೇವರು ಮಾತಾಡುವ ಮುನ್ನ ಏನೊಂದು ಇರಲಿಲ್ಲಃ ಆತನು ನುಡಿದನು, ಸೃಷ್ಟಿಯು ಅಸ್ತಿತ್ವಕ್ಕೆ ಬಂದಿತು. (ಆದಿಕಾಂಡ 1:3,9,11,24). ನಾವು ಭೂಲೋಕ ಮತ್ತು ಪರಲೋಕಗಳನ್ನು ನೋಡುವಾಗ ಅವುಗಳ ಕುರಿತು ನಾವು ಎಲ್ಲವನ್ನೂ ಅರ್ಥಮಾಡಿಕೊಳ್ಳಲಾರೆವು. ಭೂಮಿ ಸೂರ್ಯ ನಕ್ಷತ್ರಗಳನ್ನು ಯಾರು ನಿರ್ಮಿಸಿದರೆಂಬದನ್ನು ನಮ್ಮ ಕಣ್ಣುಗಳು ಹೇಳಲಾರವು. ಆದರೆ ನಂಬಿಕೆ ಮೂಲಕ ನಾವು ಹೇಳಬಲ್ಲೆವು ಕಣ್ಣಿಗೆ ಕಾಣುವದೆಲ್ಲವು ಅದೃಶ್ಯನಾದ ದೇವರಿಂದ ಮಾಡಲ್ಪಟ್ಟಿತ್ತೆಂದು ನಾವು ನಂಬಿಕೆಯಿಂದ ಹೇಳಬಲ್ಲೆವು.

4 ಹೇಬೆಲ ಕಾಯಿನರು ಪ್ರಥಮ ಮನುಷ್ಯನಾದ ಆದಾಮನ ಮಕ್ಕಳಾಗಿದ್ದರು (ಆದಿಕಾಂಡ 4:3-7; 1ಯೋಹಾನ 3:12). ದುಷ್ಟರ ಯಜ್ಞ ಯೆಹೋವನಿಗೆ ಅಸಹ್ಯ; ಶಿಷ್ಟರ ಬಿನ್ನಪ ಆತನಿಗೆ ಒಪ್ಪಿತ (ಜ್ಞಾನೋಕ್ತೀಗಳು 15:8). ನಂಬಿಕೆಯಿಂದಲೇ ಹೇಬೆಲನು...... ನೀತಿವಂತನೆಂದು ಸಾಕ್ಷಿ ಹೊಂದಿದನು; ಅಂದರೆ, ಹೇಬೆಲನು ದೇವರಲ್ಲಿ ಹೊಂದಿದ ನಂಬಿಕೆಯ ಕಾರಣದಿಂದ ದೇವರು ಆತನನ್ನು ನೀತಿವಂತನೆಂದು ನಿರ್ಣಯಿಸಿದನು. ಬೈಬಲಿನಲ್ಲಿ, ನಂಬಿಕೆ ಮತ್ತು ನೀತಿಯು ಯಾವಾಗಲೂ ಜೊತೆಯಾಗಿ ಸಾಗುತ್ತವೆ; ಅವುಗಳನ್ನು ಎಂದಿಗೂ ಬೇರ್ಪಡಿಸಲಾಗದು. ನಂಬಿಕೆಯ ಮೂಲಕ ಹೇಬೆಲನು ನೀತಿವಂತನೆಂದು ನಿರ್ಣಯಿಸಲ್ಪಟ್ಟನು; ಆದದರಿಂದ, ಆತನ ಯಜ್ಞವು ದೇವರಿಗೆ ಸ್ವೀಕೃವೂ ಮೆಚ್ಚಿಕೆಯೂ ಆಗಿತ್ತು.

ತರುವಾಯ ಕಾಯಿನನು ಕೋಪ ಹಾಗೂ ಹೊಟ್ಟೆಕಿಚ್ಚಿನಿಂದ ತನ್ನ ತಮ್ಮನಾದ ಹೇಬೆಲನನ್ನು ಕೊಂದನು. ಆದರೆ ಹೇಬಲನು, ಒಂದು ವಿಧದಲ್ಲಿ, ಇಂದಿಗೂ ಮಾತಾಡುತ್ತಾನೆ. ಆತನ ರಕ್ತವು ಪ್ರತೀಕಾರಕ್ಕಾಗಿ ಭೂಮಿಯೊಳಗಿಂದ ಕೂಗುತ್ತದೆ. (ಆದಿಕಾಂಕ 4:10), ಮತ್ತು ಹೇಬೆಲನು ತನ್ನ ನೀತಿಯ ಮಾದರಿಯ ಮೂಲಕ ಇಂದಿಗೂ ನಮ್ಮ ಸಂಗಡ ಮಾತಾಡುತ್ತಿದ್ದಾನೆ.

5 ಹನೋಕನು ಆದಾಮನ ನಂತರದ ಆರನೆಯ ತಲೆಮಾರಿಗೆ ಸೇರಿದ್ದನು (ಆದಿಕಾಂಡ 5:21-24). ಆದಿಕಾಂಡ 5:24ರಪ್ರಕಾರವಾಗಿ ಹನೋಕನು ದೇವರ ಸಂಗಡ ನಡೆದನು; ಅಂದರೆ, ಆತನು ದೇವರ ಚಿತ್ತಕ್ಕೆ ವಿಧೇಯನಾದನು. ಆದದರಿಂದ, ಈ ಪತ್ರಿಕೆಯ ಬರಹಗಾರನು ಇಲ್ಲಿ ಹನೋಕನು ನಂಬಿಕೆಯಿಂದಲೇ..... ದೇವರಿಗೆ ಮೆಚ್ಚಿಕೆಯಾದವನಾಗಿದ್ದನೆಂದು ಸಾಕ್ಷಿ ಉಂಟು ಎಂದು ಹೇಳುತ್ತಾನೆ. ಯಾಕೆಂದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ (ವಚನ 6). ನಾವು ದೇವರನ್ನು ನಂಬದಿದ್ದರೆ ಆತನನ್ನು ಮೆಚ್ಚಿಸಲು ಹೇಗೆ ಸಾಧ್ಯ? ಹನೋಕನು ನಂಬಿಕೆಯಿಂದಲೇ (ಪರಲೋಕದೊಳಕ್ಕೆ) ಒಯ್ಯಲ್ಪಟ್ಟನು. ಹನೋಕನ ನಂಬಿಕೆಯ ನಿಮಿತ್ತ ದೇವರು ಅವನನ್ನು ಮರಣದಿಂದ ರಕ್ಷಿಸಿದನು.

6 ನಿಜವಾದ ನಂಬಿಕೆಯನ್ನು ಹೊಂದಬೇಕಾದರೆ ಮೊದಲು ನಾವು ದೇವರು ಇದ್ದಾನೆ ಎಂದು ನಂಬದೇಕು. ಅಲ್ಲದೆ, ನಾವು ಆತನ ವಾಕ್ಯ, ಆತನ ವಾಗ್ದಾನಗಳಲ್ಲಿ ಸಹ ನಂಬಿಕೆಯನ್ನು ಹೊಂದಿರಬೇಕು (ವಚನ 1 ಮತ್ತು ವ್ಯಾಖ್ಯಾನ ನೋಡಿರಿ). ನಾವು ಕಾತುರದಿಂದ ಆತನನ್ನು ಹುಡುಕುವದಾದರೆ ದೇವರು ನಮಗೆ ಪ್ರತಿಫಲ ಕೊಡುವನು. ಅಂದರೆ, ನಾವು ದೇವರನ್ನು ಹುಡುಕುವದಾದರೆ, ಆತನನ್ನು ಕಂಡುಕೊಳ್ಳುವೆವು, ಆತನು ನಮ್ಮನ್ನು ಆಶೀರ್ವದಿಸುವನು. ದೇವರು ಹೇಳಿದ್ದೇನೆಂದರೆ: "ನೀವು ನನ್ನನ್ನು ಹುಡುಕುವಿರಿ, ಮನಪೂರ್ವಕವಾಗಿ ಹುಡುಕಿದಾಗ ನನ್ನನ್ನು ಕಂಡುಕೊಳ್ಳುವಿರಿ" (ಯೆರೆಮೀಯ 29:13). ಯಾಕೋಬನು ಬರೆದದ್ದೇನೆಂದರೆ: ದೇವರ ಸಮೀಪಕ್ಕೆ ಬನ್ನಿರಿ ಆಗ ಆತನು ನಿಮ್ಮ ಸಮೀಪಕ್ಕೆ ಬರುವನು (ಯಾಕೋಬ 4:8). ಈ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿರುವ ಹನೋಕ ಮತ್ತು ಇತರ ನಂಬಿಕೆಯ ವ್ಯಕ್ತಿಗಳೆಲ್ಲರೂ ನಂಬಿಕೆಯಿಂದ ದೇವರನ್ನು ಹುಡುಕಿದರು ಮತ್ತು ಆತನು ತಮಗೆ ಪ್ರತಿಫಲ ನೀಡುವನು ಎಂದು ಖಚಿತ ಭರವಸೆಯನ್ನು ಹೊಂದಿದ್ದರು.

7 ನೋಹನು ಆದಾಮನ ನಂತರ ಒಂಭತ್ತನೆಯ ತಲೆಮಾರಿನವನಾಗಿದ್ದನು. ಆ ಕಾಲದಲ್ಲಿ ನೋಹನನ್ನು ಹೊರತು ಪಡಿಸಿ ಜಗತ್ತಿನಲ್ಲಿದ್ದ ಎಲ್ಲಾ ಮನುಷ್ಯರು ದುರ್ಮಾರ್ಗಗಳನ್ನು ಅನುಸರಿಸಲು ಪ್ರಾರಂಭಿಸಿದ್ದರು. ಆದದರಿಂದ, ದೇವರು ಎಲ್ಲಾ ಮನುಷ್ಯರನ್ನು (ನೋಹನು ಮತ್ತು ಆತನ ಕುಟುಂಬವನ್ನು ಹೊರತು ಪಡಿಸಿ) ಮತ್ತು ಇತರ ಸಮಸ್ತ ಜೀವರಾಶಿಗಳನ್ನು ಜಲಪ್ರಣಯದ ಮೂಲಕ ನಾಶಮಾಡಲು ನಿಷ್ಕರ್ಷೆ ಮಾಡಿಕೊಂಡನು. ನೋಹನು ನೀತಿವಂತನಾಗಿದ್ದನು (ಆದಿಕಾಂಡ 6:9). ಆದದರಿಂದ, ದೇವರು ನೋಹನಿಗೆ ಅವನು ಮತ್ತು ಅವನ ಕುಟುಂಬದವರು ಬದುಕುಳಿಯುವಂತೆ ಒಂದು ದೊಡ್ಡ ನಾವೆಯನ್ನು ಕಟ್ಟಬೇಕೆಂದು ಆಜ್ಞಾಪಿಸಿದನು.

ನೋಹನು ನಾವೆಯನ್ನು ಕಟ್ಟುತ್ತಿರುವಾಗ ಆತನು ನೆರೆಯವರು ನಿಸ್ಸಂಶಯವಾಗಿ ಆತನನ್ನು ಪರಿಹಾಸ್ಯಮಾಡಿದರು. ಅವರಿಗಾದರೋ ಯಾವದೇ ಸಮುದ್ರಕ್ಕೆ ಅತಿ ದೂರದಲ್ಲಿ ನಾವೆಯೊಂದನ್ನು ಕಟ್ಟುವದು ಶುದ್ಧ ಮೂರ್ಖತನದಂತೆ ಕಂಡಿತ್ತು. ಆದರೆ ನೋಹನು ದೇವರ ವಾಕ್ಯದಲ್ಲಿ ನಂಬಿಕೆಯನ್ನು ಹೊಂದಿದ್ದನು. ಆತನ ನಂಬಿಕೆಯಾದ ನೋಹನು ಲೋಕದವರನ್ನು ದಂಡನೆಗೆ ಪಾತ್ರರೆಂದು ನಿರ್ಣಯಿಸಿಕೊಂಡನು. ನೋಹನು ನಂಬಿಕೆಯ ಮೂಲಕ ರಕ್ಷಿಸಲ್ಪಟ್ಟನು. ಆದರೆ ಅಪನಂಬಿಕೆ ಹಾಗೂ ದುಷ್ಟತನದ ಕಾರಣದಿಂದ ಲೋಕವು ದಂಡನೆಗೆ [21] ಗುರಿಯಾಗಿ ನಾಶಗೊಂಡಿತು (ಆದಿಕಾಂಡ 6:13-22; 7:12-24).

8 ದೇವರು ಅಬ್ರಹಾಮನಿಗೆ ತನ್ನ ಸ್ವದೇಶವನ್ನು ಬಿಟ್ಟು ಅವನ ಅರಿಯದಿದ್ದ ದೇಶವೊಂದಕ್ಕೆ ಹೋಗುವಂತೆ ಆಜ್ಞಾಪಿಸಿದನು. ಮತ್ತು ದೇವರು ಅಬ್ರಹಾಮನಿಗೆ ತಾನು ಅವನನ್ನು ಆಶೀರ್ವದಿಸಿ ಒಂದು ದೊಡ್ಡ ಜನಾಂಗವಾಗಿ ಮಾಡುವನೆಂದು ವಾಗ್ದಾನ ಮಾಡಿದ್ದನು (ಆದಿಕಾಂಡ 12:1-2).

ನಂಬಿಕೆಯಿಂದಲೇ ಅಬ್ರಹಾಮನು.... ವಿಧೇಯನಾದನು. ವಿಧೇಯತೆಯು ಒಬ್ಬ ವ್ಯಕ್ತಿಯ ನಂಬಿಕೆಗೆ ಸಾಕ್ಷಿಯಾಗಿರುತ್ತದೆ. ಈ ಕಾರಣದಿಂದಲೇ ಅಬ್ರಹಾಮನ ನಂಬಿಕೆಯು ನಿಜವಾಗಿತ್ತು. ಅಬ್ರಹಾಮನು ಕರ್ತನನ್ನು ನಂಬಿದನು. ಕರ್ತನು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು (ಆದಿಕಾಂಡ 15:6).

9 ಅಬ್ರಹಾಮನು ಸ್ವತಃ ತನಗೆ ದೇವರು ಬಾಧ್ಯವಾಗಿ ಕೊಡುತ್ತೇನೆಂದು ವಾಗ್ದಾನ ಮಾಡಿದ ದೇಶವನ್ನು ಹೊಂದಲಿಲ್ಲ. ಆತನು ಆ ವಾಗ್ದಾತ್ತ ದೇಶದಲ್ಲಿ ಪರದೇಶಸ್ಥನಂತೆ ಪ್ರವಾಸಿಯಾಗಿ ಬದುಕಿದನು. ಆದರೆ ಅಬ್ರಹಾಮನ ನಂಬಿಕೆಯ ಮೂಲಕ ದೇವರು ಆ ದೇಶವನ್ನು ತನ್ನ ಸಂತತಿಗೆ ಕೊಡುವನೆಂದು ತಿಳಿದಿದ್ದನು. ಮತ್ತು ನಾನ್ನೂರು ವರ್ಷಗಳ ನಂತರ ಅಬ್ರಹಾಮನ ಸಂತತಿ (ಯೆಹೂದ್ಯರ) ಯೆಹೋಶುವನ ನಾಯಕತ್ವದಡಿಯಲ್ಲಿ ಅಂತಿಮವಾಗಿ ವಾಗ್ದಾತ್ತ ದೇಶವನ್ನು ಸ್ವಾಧೀನ ಮಾಡಿಕೊಂಡರು (ಯೆಹೋಶುವ 1:1-3).

**10** ಅಬ್ರಹಾಮನು ಹೇಗೆ ಅಷ್ಟೊಂದು ತಾಳ್ಮೆಯಿಂದ ಕಾಯುವದಕ್ಕೆ ಸಾಧ್ಯವಾಗಿತ್ತು? ಅವನು ತನ್ನ ಸ್ವಂತ ಮನೆಯನ್ನು ದೇಶವನ್ನು ತೊರೆದಿದ್ದನು. ಅವನು ಅಪರಿಚಿತ ಹಾಗೂ ಪರದೇಶಕ್ಕೆ ಬಂದಿದ್ದನು. ಆದರೆ ಆ ದೇಶವು ಆತನಿಗೆ ಕೊಡಲ್ಪಟ್ಟಿರಲಿಲ್ಲ. ಅಬ್ರಹಾಮನು ದೇವರ ವಿರುದ್ಧ ಗುಣಗುಟ್ಟಲಿಲ್ಲವೇಕೆ? ಉತ್ತರವೇನೆಂದರೆ ಅಬ್ರಹಾಮನು ಈ ಲೋಕದಲ್ಲಿ ಯಾವದೇ ದೇಶಕ್ಕಾಗಿ ಹುಡುಕುವವನಾಗಿರಲಿಲ್ಲ. ಆತನು ಅಸ್ತಿವಾರಗಳುಳ್ಳ– ಎಂದಿಗೂ ನಾಶವಾಗದ ಶಾಶ್ವತ ಪಟ್ಟಣವನ್ನು ಹುಡುಕುತ್ತಿದ್ದನು, ಅಂದರೆ, ಪರಲೋಕವೇ (ಇಬ್ರಿಯ 12:22; 13:14 ನೋಡಿರಿ).

**11** ದೇವರು ಅಬ್ರಹಾಮನ ಸಂತತಿಯೊಳಗಿನಿಂದ ಒಂದು ದೊಡ್ಡ ಜನಾಂಗವನ್ನು ಮಾಡುತ್ತೇನೆಂದು ವಾಗ್ದಾನ ಮಾಡಿದ್ದನು (ಆದಿಕಾಂಡ 12:2). ಆ ವಾಗ್ದನವು ನೆರವೇರಬೇಕಾಗಿದ್ದರೆ ಅಬ್ರಹಾಮನಿಗೆ ಒಬ್ಬ ಮಗನು ಹುಟ್ಟುವದು ಅವಶ್ಯಕವಾಗಿತ್ತು (ಆದಿಕಾಂಡ 15:2-4). ಆದರೆ ಅಬ್ರಹಾಮನು ಹಾಗೂ ಆತನು ಹೆಂಡತಿಯಾದ ಸಾರಳು ಈಗಾಗಲೇ ಬಹಳ ವೃದ್ಧರಾಗಿದ್ದರು, ಮತ್ತು ಅವರಿಗೆ ಮಕ್ಕಳೇ ಇರಲಿಲ್ಲ. ಅವರು ಆ ತಮ್ಮ ವಯಸ್ಸಿನಲ್ಲಿ ಮಕ್ಕಳನ್ನು ಪಡೆಯುವದು ಶಾರೀಕವಾಗಿ ಅಸಾಧ್ಯವಾಗಿತ್ತು. ಹಾಗಿದ್ದರೂ, ಅಬ್ರಹಾನು ಮತ್ತು ಆತನ ಹೆಂಡತಿಯು ದೇವರ ವಾಗ್ದಾನವನ್ನು ನಂಬಿದರು. ಅಬ್ರಹಾಮನು ನೂರು ವರ್ಷದವನೂ ಸಾರಳು ತೊಂಭತ್ತು ವರ್ಷದವಳೂ ಆಗಿದ್ದಾಗ ಇಸಾಕನೆಂಬ ಒಬ್ಬ ಮಗನನ್ನು ಪಡೆದರು (ಆದಿಕಾಂಡ 17:15-17, 19; 21:1-3).

**12** ಒಬ್ಬ ಮಗನಿಗೆ ತಂದೆಯಾಗಲು ಅಬ್ರಹಾಮನ ದೇಹವು ಮೃತಪ್ರಾಯವಾಗಿತ್ತು ಹಾಗಿದ್ದರೂ, ಅವನು ಒಬ್ಬ ಮಗನನ್ನು ಪಡೆದನು ಮತ್ತು ಆ ಮಗನ ಮೂಲಕ ಅಬ್ರಹಾಮನ ಸಂತತಿಯು ಅಸಂಖ್ಯವಾಗಿ ಬೆಳೆಯುವಾಗಿ ಬೆಳೆಯ ಲಾರಂಭಿಸಿತು (ಆದಿಕಾಂಡ 15:5; 22:17; ರೋಮ 4:18-22).

**13** ಇವರೆಲ್ಲರು–ಅಬ್ರಹಾಮ, ಸಾರಳು, ಇಸಾಕ ಮತ್ತು ಯಾಕೋಬರು (ವಚನ 12). ಸ್ವತಃ ವಾಗ್ದಾನದ ಫಲಗಳನ್ನು ಹೊಂದಿರಲಿಲ್ಲ. ಅವರು ವಾಗ್ದಾತ ದೇಶವನ್ನು ಪಡೆದುಕೊಳ್ಳಲಿಲ್ಲ, ಮತ್ತು ಅವರು ತಮ್ಮ ಸಂತತಿಯು ದೊಡ್ಡ ಜನಾಂಗವಾಗುವದನ್ನು ನೋಡಲಿಲ್ಲ. ಆದರೆ ಅವರು ಭವಿಷ್ಯತ್ತಿನಲ್ಲಿ ದೇವರು ತಾನು ವಾಗ್ದಾನ ಮಾಡಿದ್ದೆಲ್ಲವನ್ನೂ ನೆರವೇರಿಸುವನೆಂಬ ನಂಬಿಕೆಯನ್ನು ಹೊಂದಿದ್ದರು. ನಂಬಿಕೆಯ ಮೂಲಕ ಅವರು ಈ ಸಂಗತಿಗಳನ್ನು ದೂರದಿಂದ ಅಂದರೆ ಬಹ ದೂರದ ಭವಿಷ್ಯತ್ತಿನಲ್ಲಿ ನೋಡಿದರು ಮತ್ತು ಅವರು ಇನ್ನೂ ಆನಂಬಿಕೆಯಿಂದ ಜೀವಿಸುತ್ತಿರುವಾಗಲೇ ಮರಣಿಸಿದರು.

ಈ ಜೀವಿತದಲ್ಲಿ ದೊಡ್ಡ ನಂಬಿಕೆಯನ್ನೂ ಹೊಂದಿರುವವರೂ ತಾವು ನಿರೀಕ್ಷಿಸುವದನ್ನು ಯಾವಾಗಲೂ ಪಡೆಯುವದಿಲ್ಲ ಎಂಬದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳುವದು ಉತ್ತಮವಾಗಿರುತ್ತದೆ.

**14-16** ಅಬ್ರಹಾಮ, ಇಸಾಕ ಹಾಗೂ ಯಾಕೋಬರು ತಾವು ಭೂಮಿಯ ಮೇಲೆ ಪರದೇಶದವರೂ ಪ್ರವಾಸಿಗಳೂ ಆಗಿದ್ದೇವೆಂದು ಒಪ್ಪಿಕೊಂಡರು (ವಚನ 13). ಅವರ ನಿಜವಾದ ನಿವಾಸವೂ ನಿಜವಾದ ಸಂಸ್ಥಾನವು (ಪೌರತ್ವವು) ಪರಲೋಕದಲ್ಲಿತ್ತು (ಫಿಲಿಪ್ಪಿ 3:20 ನೋಡಿರಿ). ಅವರು ಹಾರೈಸಿದ ದೇಶವು ನಿತ್ಯನಿತ್ಯಕ್ಕೂ ಇರುವ ಪರಲೋಕದ ದೇಶವಾಗಿತ್ತು.

ಅವರು ದೇವರ ದೇಶವನ್ನೂ, ದೇವರ ಪರಲೋಕವೆಂಬ ಪಟ್ಟಣವನ್ನು ಹಾರೈಸಿದರಾದ್ದರಿಂದ ದೇವರು ಅವರ ದೇವರೆನಿಸಿಕೊಳ್ಳುವದಕ್ಕೆ ನಾಚಿಕೆಕೊಳ್ಳಲಿಲ್ಲ (ವಚನ 16). ದೇವರು ಹೇಳುವದೇನೆಂದರೆಃ "ನನ್ನನ್ನು ಸನ್ಮಾನಿಸುವವರನ್ನು ಸನ್ಮಾನಿಸುವೆನು. (1 ಸಮುವೇಲ 2;30). ದೇವರಲ್ಲಿ ನಂಬಿಕೆಯಿಡುವದರ ಮೂಲಕ ಅಬ್ರಹಾಮ, ಇಸಾಕ ಮತ್ತು ಯಾಕೋಬರು ದೇವರನ್ನು ಸನ್ಮಾನಿಸಿದರು. ಮತ್ತು ದೇವರು ತನ್ನನ್ನು ಅಬ್ರಹಾಮ ಇಸಾಕ ಯಾಕೋಬರ ದೇವರು ಎಂದು ಕರೆದುಕೊಳ್ಳವದರ ಮೂಲಕ ಅವರನ್ನು ಸನ್ಮಾನಿಸಿದನು (ವಿಮೋಚನಕಾಂಡ 3:6) ಯಾವದೇ ವ್ಯಕ್ತಿಗೆ ಅದಕ್ಕಿಂತಲೂ ಉನ್ನತವಾದ ಮಾನವು ಇನ್ನಾವದಿದೆ?

## ನಂಬಿಕೆಯ ಮನುಷ್ಯರು– ಅಬ್ರಹಾಮನಿಂದ ಕ್ರಿಸ್ತನ ತನಕ (11:17-40)

**17-19** ಅಬ್ರಹಾಮನು ಹೇಗೆ ದೇವರ ಆಜ್ಞೆಯ ಮೇರೆಗೆ ಇಸಾಕನನ್ನು ಯಜ್ಞವಾಗಿ ಅರ್ಪಿಸುವದಕ್ಕೆ ಬೆಟ್ಟದ ತುದಿಯಲ್ಲಿ ಕರೆದುಕೊಂಡು ಹೋದನೆಂಬ ಕಥೆಯು ಆದಿಕಾಂಡ 22:1-18 ರಲ್ಲಿ ಬರೆಯಲ್ಪಟ್ಟಿದೆ.

ದೇವರ ವಾಗ್ದಾನವನ್ನು ನಂಬುವದು ಒಂದು ದೊಡ್ಡ ಸಂಗತಿಯಾಗಿದೆ. ಆದರೆ ವಾಗ್ದಾನವೊಂದನ್ನು ಪಡೆದುಕೊಂಡ ಬಳಿಕ ಅದನ್ನು ಬಿಟ್ಟು ಬಿಡುವದು ಒಬ್ಬ ವ್ಯಕ್ತಿಯ ನಂಬಿಕೆಗೆ ಇನ್ನೂ ದೊಡ್ಡದಾದ ಒಂದು ಪರೀಕ್ಷೆಯಾಗಿರುತ್ತದೆ. ಮತ್ತು ದೇವರು ಅಬ್ರಹಾಮನಿಗೆ ಅದನ್ನೇ ಮಾಡುವಂತೆ–ದೇವರು ಅವನಿಗೆ ಕೊಟ್ಟ ಮಗನನ್ನು ಬಿಟ್ಟುಕೊಡುವದು– ಅಜ್ಞಾಪಿಸಿದನು. ಹೀಗೆ ಮಾಡುವದರಲ್ಲಿ ದೇವರು ಅಬ್ರಹಾಮನನ್ನು ಪರಿಶೋಧಿಸಿದನು (ವಚನ 17). ಆದಿಕಾಂಡ 21:12ರ ಪ್ರಕಾರವಾಗಿ ದೇವರು ಅಬ್ರಹಾಮನಿಗೆ "ಇಸಾಕನಿಂದ ಹುಟ್ಟುವವರೇ ನಿನ್ನ ಸಂತತಿಅನ್ನಿಸಿಕೊಳ್ಳುವರು" ಎಂದು ಹೇಳಿದ್ದನು (ವಚನ 18). ಹಾಗಿದ್ದರೂ, ದೇವರು ಈಗ ಅಬ್ರಹಾಮನಿಗೆ ಅವನ ಮಗನಾದ ಇಸಾಕನನ್ನು ಯಜ್ಞವಾಗಿ ಸಾಯಿಸಬೇಕೆಂದು ಆಜ್ಞಾಪಿಸಿದ್ದನು. ಅಬ್ರಹಾಮನು ಹಾಗೆ ಮಾಡಿದ್ದರೆ ದೇವರು ತಾನು ಅಬ್ರಹಾಮನಿಗೆ ಅವನ ಸಂತತಿಯನ್ನು ದೊಡ್ಡಜನಾಂಗವಾಗಿ ಮಾಡುತ್ತೇನೆಂಬ ವಾಗ್ದಾನವನ್ನು ಹೇಗೆ ನೆರವೇರಿಸಲು ಶಕ್ತನಾಗುತ್ತಿದ್ದನು? (ಆದಿಕಾಂಡ 12:2). ಅಬ್ರಹಾಮನು ದೇವರನ್ನು ಪ್ರಶ್ನಿಸಲಿಲ್ಲ. ದೇವರು ಸತ್ತವರನ್ನು ತಿರಿಗಿ ಬದುಕಿಸುವ ಬಲವನ್ನು ಹೊಂದಿದ್ದಾನೆಂದು ಅಬ್ರಹಾಮನು ಬಲ್ಲವನಾಗಿದ್ದನು. ತನ್ನ ವಾಗ್ದಾನಗಳನ್ನು ನೆರವೇರಿಸುವದು ದೇವರ ಜವಾಬ್ದಾರಿಯಾಗಿತ್ತು. ವಿಧೇಯನಾಗುವದು ಅಬ್ರಹಾಮನ ಜವಾಬ್ದಾರಿಯಾಗಿತ್ತು.

ಅತಿ ಕಡೇ ಕ್ಷಣದಲ್ಲಿಯೇ ಇಸಾಕನನ್ನು ಕೊಲ್ಲದಂತೆ ದೇವರು ಅಬ್ರಹಾಮನನ್ನು ತಡೆದನು. ಒಂದು ವಿಧದಲ್ಲಿ ಇಸಾಕನು ಸತ್ತಂತೆಯೇ ಆಗಿದ್ದನು. ಆದದರಿಂದ, ಬರಹಗಾರನು ಇಲ್ಲಿ ಅಬ್ರಹಾಮನು ಇಸಾಕನನ್ನು ಸಾಮ್ಯರೂಪವಾಗಿ ಸತ್ತವರೊಳಗಿಂದಲೇ ಜೀವಿತವಾಗಿ ಬಂದವನಂತೆ ಹೊಂದಿದನು ಎಂದು ಹೇಳುತ್ತಾನೆ (ವಚನ 19). .

ನಂತರ ಕರ್ತನ ದೂತನು ಅಬ್ರಹಾಮನಿಗೆ ಹೇಳಿದ್ದೇನೆಂದರೆಃ "ನೀನು ನಿನ್ನ ಒಬ್ಬನೇ ಮಗನನ್ನಾದರೂ ನನಗೆ ಸಮರ್ಪಿಸುವದಕ್ಕೆ ಹಿಂದೆಗೆಯಲಿಲ್ಲವಾದ್ದರಿಂದ ನೀನು ದೇವರಲ್ಲಿ ಭಯಭಕ್ತಿಯುಳ್ಳವನೆಂದು ಈಗ ತೋರಬಂತು" (ಆದಿಕಾಂಡ 22:12). ಆಗ ಕರ್ತನು ಹೇಳಿದ್ದೇನೆಂದರೆಃ " ನೀನು ನಿನ್ನ ಒಬ್ಬನೇ ಮಗನನ್ನು ಸಮರ್ಪಿಸುವದಕ್ಕೆ ಹಿಂದೆಗೆಯದೆ ಹೋದದ್ದರಿಂದ ನಾನು ನಿನ್ನನ್ನು ಆಶೀರ್ವದಿಸೇ ಆಶೀರ್ವದಿಸುವೆನುಃ ನಿನ್ನ ಸಂತತಿಯನ್ನು ಹೆಚ್ಚಿಸೇ ಹೆಚ್ಚಿಸುವೆನು; ಅದನ್ನು ಆಕಾಶದ ನಕ್ಷತ್ರವಾಗಿಯೂ ಸಮುದ್ರ ತೀರದಲ್ಲಿರುವ ಉಸುಬಿನಂತೆಯೂ ಅಸಂಖ್ಯವಾಗಿ ಮಾಡುವೆನು..... ನೀನು ನನ್ನ ಮಾತನ್ನು ಕೇಳಿದ್ದರಿಂದ ಭೂಮಿಯಲ್ಲಿ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದವುಂಟಾಗುವದು (ಆದಿಕಾಂಡ 22:16-18).

ಒಂದು ದಿನ ದೇವರು ಖಂಡಿತವಾಗಿಯೂ ನಮ್ಮಲ್ಲಿ ಪ್ರತಿಯೊಬ್ಬರನ್ನು ಇದೇ ರೀತಿಯಲ್ಲಿ ಪರಿಶೋಧಿಸುವನು. ಬಹುಶಃ ಆತನು ನಮ್ಮನ್ನು ಅನೇಕ ಸಾರಿ ಪರಿಶೋಧಿಸುವನು. ಆತನು ವಿವಿಧ ವಿಧಗಳಲ್ಲಿ ನಮ್ಮನ್ನು ಪರೀಕ್ಷಿಸುವನು. ಆದರೆ ಯಾವಾಗಲೂ ಆತನು ನಮ್ಮ ನಂಬಿಕೆಯು ಎಲ್ಲಿ ಹೆಚ್ಚು ಬಲಹೀನವಾಗಿರುತ್ತದೋ ನಮ್ಮ ವಿಧೇಯತೆ ಎಲ್ಲಿ ಹೆಚ್ಚು ಚಂಚಲವಾಗಿರುತ್ತದೋ ಅಲ್ಲಿಯೇ ಪರಿಶೋಧಿಸುವನು. ಆತನು ನಾವು ಎಲ್ಲಕ್ಕಿಂತಲೂ ಹೆಚ್ಚು ಪ್ರೀತಿಸುವ ಸಂಗತಿಯನ್ನೇ ತನಗೆ ಅರ್ಪಿಸುವಂತೆ ಹೇಳುತ್ತಾನೆ. ಆತನು ತನಗೆ ಅರ್ಪಿಸಬೇಕೆಂದು ಹೇಳುವ ಆ ಸಂಗತಿಯು ನಮ್ಮ ಆಸ್ತಿಗಳು, ನಮ್ಮ ತಲಾಂತುಗಳು, ನಮ್ಮ ಸಮಯ, ನಮ್ಮ ಘನತೆ, ನಮ್ಮ ಕುಟುಂಬ, ಅಥವಾ ನಮ್ಮ ಸ್ವಜೀವಿತವೇ ಆಗಿರಬಹುದಾಗಿದೆ. ದೇವರು ಅಬ್ರಹಾಮನನ್ನು ಕರೆದಂತೆ ನಮ್ಮನ್ನು ಕರೆಯುವಾಗ ನಾವು ಆತನು ಏನೇ ಹೇಳಿದರೂ ಅದಕ್ಕೆ ವಿಧೇಯರಾಗಲು ಸಿದ್ಧರಾಗಿರೋಣ (ಮಾರ್ಕ 10:17-21, 29-30 ನೋಡಿರಿ).

**20** ಇಸಾಕನು ಹೇಗೆ ತನ್ನ ಇಬ್ಬರು ಪು ತ್ರರಾದ ಯಾಕೋಬ ಮತ್ತು ಏಸಾವನನ್ನು ಆಶೀವಾದಿಸಿದನೆಂಬದರ ಕಥೆಯು ಆದಿಕಾಂಡ 27:1-40ರಲ್ಲಿ ಬರೆಯಲ್ಪಟ್ಟಿದೆ. ತಂದೆಯು ತನ್ನ ಮಕ್ಕಳಿಗೆ ಆಶೀರ್ವಾದ ನೀಡುವದು ಯೆಹೂದ್ಯರೊಳಗಿನ ಪದ್ಧತಿಯಾಗಿತ್ತು. ಹಿರಿಯ ಮಗನು ಯಾವಾಗಲೂ ಅತಿ ದೊಡ್ಡ ಆಶೀರ್ವಾದವನ್ನು ಪಡೆದುಕೊಳ್ಳುತ್ತಿದ್ದನು. ಆದರೆ ಇಸಾಕನು ತನ್ನ ವೃದ್ಧಾ ್ಯಪದಲ್ಲಿ ದೃಷ್ಟಿಕಳೆದುಕೊಂಡಿದ್ದನು. ಆತನ ಕಿರಿಯ ಮಗನಾದ ಯಾಕೋಬನು ಏಸಾವನೆಂಬಂತೆ ನಾಟಕವಾಡಿ ಇಸಾಕನನ್ನು ವಂಚಿಸಿ ತನ್ನ ಅಣ್ಣನಿಗೆ ಸಲ್ಲಬೇಕಾಗಿದ್ದ ಅತಿದೊಡ್ಡ ಆಶೀರ್ವಾದವನ್ನು ತಾನೇ ಪಡೆದುಕೊಂಡನು. ಆದರೆ ಇಸಾಕನಿಗೆ ತಾನು ಮೋಸಹೋಗಿರುವದು ತಿಳಿದುಬಂದಾಗ ಆತನು ಯಾಕೋಬನಿಗೆ ನೀಡಿದ್ದ ಆಶೀರ್ವಾದವನ್ನು ಹಿಂದಕ್ಕೆ ತೆಗೆದುಕೊಳ್ಳಲಾಗಲಿಲ್ಲ. ಬದಲಾಗಿ, ಅದು ದೇವರ ಚಿತ್ತವೆಂದು ಸ್ವೀಕರಿಸಿಕೊಂಡ (ಆದಿಕಾಂಡ 25:23). ಯಾಕೋಬ ಆಶಿರ್ವಾದವನ್ನು ದೃಢಪಡಿಸಿದನು (ಆದಿಕಾಂಡ 27:33). ದೇವರು ತಾನು ಅಬ್ರಹಾಮನನ್ನು ದೊಡ್ಡ ಜನಾಂಗವಾಗಿ ಮಾಡುತ್ತೇನೆಂದು ನುಡಿದ ವಾಗ್ದಾನವನ್ನು ಯಾಕೋಬನ ಮೂಲಕ ನೆರವೇರಿಸುವನೆಂಬ ನಂಬಿಕೆಯು ಇಸಾಕನಿಗಿತ್ತು.

**21** ಇಸಾಕನ ಮಗನಾದ ಯಾಕೋಬನಿಗೆ (ಹಳೆಒಡಂಬಡಿಕೆಯಲ್ಲಿ ಇಸ್ರಾಯೇಲನೆಂದು ಸಹ ಕರೆಯಲ್ಪಟ್ಟಿದ್ದಾನೆ). ಹನ್ನೆರಡು ಮಂದಿ ಪು ತ್ರರಿದ್ದರು. ಯಾಕೋಬನು ಅತ್ಯುನ್ನತ ಆಶೀರ್ವಾದವನ್ನು ತನ್ನ ಹನ್ನೊಂದನೆಯ ಮಗನಾದ ಯೋಸೇಫನಿಗೆ[22] ನೀಡಿದನು (ಆದಿಕಾಂಡ 49:26). ಮತ್ತು ಯಾಕೋಬನು ಅಥವಾ ಇಸ್ರಾಯೇಲನು ಯೋಸೇಫನಿಗೆ ಇಬ್ಬರು ಮಕ್ಕಳನ್ನೂ ಆಶೀರ್ವದಿಸಿದನು. ಯಾಕೋಬನು ತಾನು ತನ್ನ ತಂದೆಯಿಂದ ಅತ್ಯುನ್ನತ ಆಶೀರ್ವಾದವನ್ನು ಪಡೆದುಕೊಂಡಿದ್ದ ಪ್ರಕಾರವೇ ಆತನು ಬೇಕೆಂದು ಯೋಸೆಫನ ಕಿರಿಯ ಮಗನಿಗೆ ಅತ್ಯು ನ್ನತ ಆಶೀರ್ವಾದವನ್ನು ಕೊಟ್ಟನು. ಮತ್ತು ದೇವರು ಅಬ್ರಹಾಮನಿಗೆ ಮಾಡಿದ ತನ್ನ ವಾಗ್ದಾನಗಳನ್ನು ನೆರವೇರಿಸುವನೆಂದು ಯಾಕೋಬನು ನಂಬಿಕೆಯ ಮೂಲಕ ತನ್ನ ಆಶೀರ್ವಾದವನ್ನು ನೀಡಿದನು (ಆದಿಕಾಂಡ 48:11-20).

**22** ಯೋಸೇಫನು ತನ್ನ ಸ್ವಂತ ಅಣ್ಣಂದಿರಿಂದಲೇ ಐಗುಪ್ತ್ಯದಲ್ಲಿ ದಾಸನಾಗಿ ಮಾರಲ್ಪಟ್ಟಿದ್ದನು (ಆದಿಕಾಂಡ 37:12-36). ಅನಂತರ ಆತನಿಗೆ ಇಡೀ ಐಗುಪ್ತ್ಯ ದೇಶದ ಮೇಲೆಲ್ಲಾ ಅಧಿಕಾರ ಕೊಡಲ್ಪಟ್ಟಿತು (ಆದಿಕಾಂಡ 41:41-43). ಯೋಸೇಫನು ತನ್ನ ಉಳಿದ ಜೀವಿತವನ್ನೆಲ್ಲಾ ಐಗುಪ್ತ್ಯದಲ್ಲಿ ಕಳೆದನಾದರೂ ದೇವರು ಅಬ್ರಹಾಮ ಇಸಾಕ ಹಾಗೂ ಯಾಕೋಬನಿಗೆ ವಾಗ್ದಾನ ಮಾಡಿದ್ದದೇಶವನ್ನು ತನ್ನ ಸಂತತಿಗೆ ಕೊಡುವನೆಂಬ ಸಂಪೂರ್ಣ ನಂಬಿಕೆಯನ್ನು ಯೋಸೇಫನು ಹೊಂದಿದವನಾಗಿದ್ದನು. ಹಾಗೂ ಆ ನಂಬಿಕೆಗನುಸಾರವಾಗಿ ಯೋಸೇಫನು ತನ್ನ ಮೂಳೆಗಳನ್ನು ವಾಗ್ದಾತ್ತ ದೇಶಕ್ಕೆ ತಕ್ಕೊಂಡು ಹೋಗಿ ಅಲ್ಲಿಯೇ ಹೂಣಿಡಬೇಕೆಂದು ಅಪ್ಪಣೆ ಕೊಟ್ಟನು (ಆದಿಕಾಂಡ 50:24-26; ವಿಮೋಚನ ಕಾಂಡ 13:19).

**23** ಯೆಹೂದ್ಯರು ಐಗುಪ್ತ್ಯದಲ್ಲಿ 430 ವರ್ಷಗಳವರೆಗೆ ಇದ್ದರು (ವಿಮೋಚನ ಕಾಂಡ 12:40). ಅವರು ಸಂಖ್ಯೆಯಲ್ಲಿ ಹೆಚ್ಚುತ್ತಿರುವದನ್ನು ನೋಡಿ ಐಗುಪ್ತ್ಯರು ಅವರನ್ನು ಹಿಂಸಿಸಲಾರಂಭಿಸಿದರು. ಯೆಹೂದ್ಯರು ದಾಸತ್ವಕ್ಕೊಳಪಡಿಸಲ್ಪಟ್ಟರು (ವಿಮೋಚನ ಕಾಂಡ 1:6-14). ಬಳಿಕ ಪರೋಹನು [23]ಯೆಹೂದ್ಯರ ಎಲ್ಲಾ ಗಂಡು ಮಕ್ಕಳು ಹುಟ್ಟಿದ ಕೂಡಲೇ ಕೊಲ್ಲಲ್ಪಡಬೇಕೆಂದು ಆಜ್ಞೆ ನೀಡಿದನು (ವಿಮೋಚನಕಾಂಡ 1:22). ಆದರೆ ಮೋಶೆಯು ಹುಟ್ಟಿದಾಗ ಆತನ ತಂದೆ ತಾಯಿಗಳು ಅವನನ್ನು ಬಚ್ಚಿಟ್ಟರು (ವಿಮೋಚನ ಕಾಂಡ 2:1-3). ನಂಬಿಕೆಯ ಮೂಲಕ ತಂದೆತಾಯಿಗಳು ಹೇಗೋ ದೇವರು ಮೋಶೆಯನ್ನು ವಿಶೇಷವಾಗಿ ಆಶೀರ್ವಾದಿಸಿದ್ದನೆಂದು ಬಲ್ಲವರಾಗಿದ್ದರು.

**24-25** ಪರೋಹನ ಮಗಳು ಮೋಶೆಯನ್ನು ಕಂಡುಕೊಂಡು ಅವನನ್ನು ತನ್ನ ಮಗನನ್ನಾಗಿ ಬೆಳೆಸಿದಳು (ವಿಮೋಚನ ಕಾಂಡ 2:5-10). ಮೋಶೆಯು ದೊಡ್ಡವನಾದ ಮೇಲೆ ಐಗುಪ್ತ್ಯದ ದೊರೆಯಾದನು. ಹೇಗಿದ್ದರೂ, ಆತನು ತನ್ನ ಜೊತೆ ಯೆಹೂದ್ಯರೊಂದಿಗೆ ಬಾಧೆಯನ್ನನುಭವಿಸುವದಕ್ಕಾಗಿ ಐಗುಪ್ತದ ತನ್ನ ಎಲ್ಲಾ ಅಧಿಕಾರ ಹಾಗೂ ಐಶ್ವರ್ಯವನ್ನು ತೊರೆದು ಬಿಟ್ಟನು (ವಿಮೋಚನ ಕಾಂಡ 2:11-12).

**26** ಮೋಶೆಯು ಐಗುಪ್ತದೇಶದ ಸರ್ವೈಶ್ವರ್ಯವನ್ನು ತೊರೆದು ಬಿಟ್ಟನು. ಮೋಶೆಯು ಐಗುಪ್ತದ ಸರ್ವೈಶ್ವರ್ಯಕ್ಕಿಂತಲೂ ಕ್ರಿಸ್ತನ ನಿಮಿತ್ತವಾಗಿ ಉಂಟಾಗುವ ನಿಂದೆಯೇ ಶ್ರೇಷ್ಠವಾದದ್ದೆಂದು ಪರಿಗಣಿಸಿದನು (ಫಿಲಿಪ್ಪಿ 3:7ನೋಡಿರಿ). ಮೋಶೆಯು ಕ್ರಿಸ್ತನ ಕುರಿತು ತಿಳಿದಿರಲಿಲ್ಲ, ಆದರೆ ದೇವರಿಗಾಗಿಯೂ ಆತನ ಜನರಿಗೋಸ್ಕರವೂ (ಯೆಹೂದ್ಯರು) ಎಲ್ಲವನ್ನೂ ಬಿಟ್ಟುಕೊಡುವದರ ಮೂಲಕ ಆತನು ಅನಂತರದಲ್ಲಿ ಕ್ರಿಸ್ತನು ನಡೆದುಕೊಂಡ ರೀತಿಯಲ್ಲಿಯೇ ನಡೆದುಕೊಂಡನು. ಆದದರಿಂದ, ಕರ್ತನ ಹಾಗೂ ಆತನ ಹಿಂಬಾಲಕರ ಮೇಲೆಯೂ ನಿಂದನೆ ಉಂಟಾದಂತೆಯೇ ಮೋಶೆಗೂ ಅದೇ ರೀತಿಯ ನಿಂದನೆ ಉಂಟಾಯಿತು ಕೀರ್ತನೆಗಳು 69:9; 89:50-51 ರೋಮ 15:3; 1 ಪೇತ್ರ 4:12-14ನೋಡಿರಿ), ಆದರೆ ಅಂಥ ನಿಂದನೆಯ ಹೊರತಾಗಿಯೂ ದೇವರು ಒಂದು ದಿನ ನನಗೆ ಪ್ರತಿಫಲ ಕೊಡುವನೆಂಬ ಭರವಸೆಯೊಂದಿಗೆ ಮೋಶೆಯು ಕಡೇವರೆಗೂ ನಂಬಿಕೆಯಲ್ಲಿ ನೆಲೆಗೊಂಡನು.

ಆದುದರಿಂದ, ಈ ಪತ್ರಿಕೆಯು ಯಾರಿಗೆ ಬರೆಯಲ್ಪಟ್ಟಿದೆಯೋ ಈ ಇಬ್ರಿಯರು ಮೋಶೆಯ ಮಾದರಿಯನ್ನು ಅನುಸರಿಸಲಿ. ಮೋಶೆಯು ತಾನು ಎಂದಿಗೂ ತಿಳಿಯದೇಇದ್ದ ಕ್ರಿಸ್ತನ ನಿಮಿತ್ತವಾಗಿ ನಿಂದನೆಯನ್ನು ಅನುಭವಿಸಲು ಸಿದ್ಧನಾಗಿದ್ದನು. ಹೀಗಿರುವದರಿಂದ, ಕ್ರಿಸ್ತನನ್ನು ಬಲ್ಲವರಾಗಿ ಪವಿತ್ರಾತ್ಮನನ್ನು ಪಡೆದುಕೊಂಡವರಾಗಿದ್ದ ಈ ಇಬ್ರಿಯರು ಇನ್ನು ಹೆಚ್ಚಾಗಿ ಕ್ರಿಸ್ತನ ನಿಮಿತ್ತ ಬಾಧೆಯನ್ನನುಭವಿಸಲು ಸಿದ್ಧರಾಗಿರಬೇಕು.

**27** ಪರೋಹನು ಮೋಶೆಯನ್ನು ಕೊಲ್ಲುವದಕ್ಕೆ ಪ್ರಯತ್ನಿಸಿದನಾದರೂ ಮೋಶೆಯು ಅವನಿಗೆ ಹೆದರಲಿಲ್ಲ; ಬದಲಾಗಿ, ಆತನು ದೇವರಿಗೆ ಭಯಪಟ್ಟನು. ಆದದರಿಂದ, ಮೋಶೆಯು ನಂಬಿಕೆಯಿಂದಲೇ ಐಗುಪ್ತ್ಯವನ್ನು ಬಿಟ್ಟು ನಾಲ್ವತ್ತು ವರ್ಷಗಳ ವರೆಗೆ ಮಿದ್ಯಾನ್ ದೇಶದಲ್ಲಿ ಜೀವಿಸಿದನು (ವಿಮೋಚನಕಾಂಡ 2:15). ಮತ್ತು ಆತನು ನಂಬಿಕೆಯ ಮೂಲಕ ಅದೃಶ್ಯನಾದ ದೇವರನ್ನು ದೃಷ್ಟಿಸುವವನಾಗಿದ್ದರಿಂದ ಅಲ್ಲಿ ದೃಢಚಿತ್ತನಾಗಿದ್ದನು. ಈ ವಿಷಯದಲ್ಲಿ ಮೋಶೆಯು ಎಲ್ಲಾ ವಿಶ್ವಾಸಿಗಳಿಗೆ ಮಾದರಿಯೂ ಪ್ರೋತ್ಸಾಹವೂ ಆಗಿದ್ದಾನೆ; ಕಾರಣ ನಾವು ಸಹ ಮೋಶೆಯ ಹಾಗೆ ಅದೃಶ್ಯನಾದ ದೇವರನ್ನು ನಂಬಿಕೆಯ ಕಣ್ಣುಗಳಿಂದ ದೃಷ್ಟಿಸುವದಕ್ಕೆ ಶಕ್ತರಾಗುವೆವು .

ಅವನ ಮಿದ್ಯಾನ್ ವಾಸದ ಕೊನೆಯಲ್ಲಿ ಮೋಶೆಯು ಅದೃಶ್ಯನಾದ ದೇವರನ್ನು ತನ್ನ ದೈಹೀಕ ಕಣ್ಣುಗಳಿಂದ ನೋಡಿದನು! ದೇವರು ಉರಿಯುವ ಪೊದೆಯಲ್ಲಿ ಮೋಶೆಗೆ ಕಾಣಿಸಿಕೊಂಡನು ಮತ್ತು ಮೋಶೆಗೆ ಪರೋಹನ ಬಳಿಗೆ ಹೋಗಿ ಯೆಹೂದ್ಯರನ್ನು (ಇಸ್ರಾಯೇಲರನ್ನು) ಐಗುಪ್ತ್ಯದೊಳಗಿಂದ ಹೊರ ಕರೆತರಬೇಕೆಂದು ಹೇಳಿದನು (ವಿಮೋಚನ ಕಾಂಡ 3:1-10).

**28** ನಂಬಿಕೆಯಿಂದಲೇ ಮೋಶೆಯು ಯೆಹೂದ್ಯರನ್ನು ಐಗುಪ್ತ್ಯದ ದಾಸತ್ವದೊಳಗಿಂದ ಬಿಡಿಸಿದನು. ದೇವರು ಮೋಶೆಯ ಮೂಲಕ ಐಗುಪ್ತದ ಮೇಲೆ ಆನೇಕ ಉಪದ್ರವಗಳನ್ನು ಬರಮಾಡಿದನು, ಆದರೆ ಅವು ಗಳು ಹೊರಾತಾಗಿಯೂ ಪರೋಹನು ಪ್ರಾರಂಭದಲ್ಲಿ ಯೆಹೂದ್ಯರನ್ನು ಹೋಗ ಗೊಡುವದಿಲ್ಲ. ಅಂತಿಮವಾಗಿ ದೇವರು ಐಗುಪ್ತ್ಯದ ಚೊಚ್ಚಲ ಮಕ್ಕಳನ್ನೆಲ್ಲಾ ಕೊಲ್ಲವದಕ್ಕೆ ಒಬ್ಬ ದೇವದೂತನನ್ನು ಕಳುಹಿಸಿದನು (ವಿಮೋಚನ ಕಾಂಡ 11:1; 12:29-30). ಮೋಶೆಯ ನಂಬಿಕೆಯಿಂದಲೇ ಯೆಹೂದ್ಯರಿಗೆ ತಮ್ಮ ಮನೆಗಳ ಬಾಗಲಿನ ಮೇಲೆ ಒಂದು ಗುರುತಾಗಿ ಯಜ್ಞಮಾಡಿದ ಕುರಿಮರಿಯ ರಕ್ತವನ್ನು ಹಚ್ಚಬೇಕೆಂದು ಆಜ್ಞಾಪಿಸಿದನು; ಇದರ ಮೂಲಕ ಸಂಹಾರದೂತನು ರಕ್ತವನ್ನು ನೋಡುವಾಗ ಅವರ ಮನೆಗಳನ್ನು ದಾಟಿಕೊಂಡು ಹೋಗಿ ಅವರ ಚೊಚ್ಚಲ ಮಕ್ಕಳನ್ನು ಉಳಿಸುವನು. (ವಿ.ಕಾಂಡ 12:21-23). ಹೀಗೆ, ಪ್ರೋಕ್ಷಿಸಲ್ಪಟ್ಟ ರಕ್ತದ ಕಾರಣದಿಂದ ದೇವದೂತನು ಯೆಹೂದ್ಯ ಮನೆಗಳನ್ನು ದಾಟಿಕೊಂಡು ಹೋದನು; ಮತ್ತು ಈ ಘಟನೆಯಿಂದ ಯೆಹೂದ್ಯರ ಪಸ್ಕ ಹಬ್ಬವು ಉಗಮವಾಯಿತು (ವಿಮೋಚನ ಕಾಂಡ 12:24-27).

ಅದೇ ವಿಧದಲ್ಲಿ, ಕ್ರಿಸ್ತನ ರಕ್ತದ ಮೂಲಕ ನಾವು ಸಹ ದೇವರ ನ್ಯಾಯತೀರ್ಪು ಹಾಗೂ ದಂಡನೆಯಿಂದ ಬಿಡುಗಡೆ ಹೊಂದಬಲ್ಲೆವು . ಕ್ರಿಸ್ತನು ತಾನೇ ನಮ್ಮ ಪಸ್ಕದ ಯಜ್ಞ ನಮ್ಮ ಪಸ್ಕದ ಕುರಿ ಆಗಿದ್ದಾನೆ (1 ಕೊರಿಂಥ 5:70). ಆತನು ದೇವರ ಕುರಿಮರಿಯಾಗಿದ್ದು ಲೋಕದ ಪಾಪಗಳನ್ನು ನಿವಾರಣೆ ಮಾಡುತ್ತಾನೆ (ಯೋಹಾನ 1:29). ನಾವು ನಮ್ಮ ಸ್ವನೀತಿಯಿಂದಲ್ಲ; ಆದರೆ ರಕ್ತದ– ಯೇಸುವಿನ ರಕ್ತದ– ಪ್ರೋಕ್ಷಣೆಯ ಮೂಲಕ ರಕ್ಷಿಸಲ್ಪಟ್ಟಿದ್ದೇವೆ.

**29** ಪರೋಹನು ಐಗುಪ್ತ್ಯದ ಚೊಚ್ಚಲ ಮಕ್ಕಳನ್ನೆಲ್ಲಾ ಕೊಲ್ಲಲ್ಪಟ್ಟಿರುವದನ್ನು ನೋಡಿದಾಗ ಆತನು ಯೆಹೂದ್ಯರನ್ನು (ಇಸ್ರಾಯೇಲ್ಯರನ್ನು) ಹೊರಡುವದಕ್ಕೆ ಅನುಮತಿಸಲು ತೀರ್ಮಾನಿಸಿದನು. ಆದರೆ ಯೆಹೂದ್ಯರು ಐಗುಪ್ತ್ಯದಿಂದ ಸ್ವಲ್ಪ ದೂರಕ್ಕೆ ಮಾತ್ರವೇ ಹೋಗಿದ್ದಾಗ ಪರೋಹನು ತನ್ನ ಮನಸ್ಸನ್ನು ಬದಲಾಯಿಸಿಕೊಂಡು ಅವರನ್ನು ಸೆರೆಹಿಡಿಯುವದಕ್ಕೆ ಐಗುಪ್ತ್ಯದ ಸೈನ್ಯವನ್ನು ಕಳುಹಿಸಿದನು. (ವಿಮೋಚನ ಕಾಂಡ 14:5-9). ಯೆಹೂದ್ಯರು ಪರೋಹನ ಬೃಹತ್ ಸೈನ್ಯವನ್ನು ಕಂಡಾಗ ಹೆದರಿದವರಾಗಿ ಮೋಶೆಯನ್ನು ಖಂಡಿಸಲಾರಂಭಿಸಿದರು. ಅವರು ಎದುರಿನಲ್ಲಿ ಕೆಂಪು ಸಮುದ್ರ ಇತ್ತು; ಅವರ ಹಿಂದೆ ಐಗುಪ್ತ್ಯದ ಸೈನ್ಯವಿತ್ತು. ಅವರು ತಾವು ಖಂಡಿತವಾಗಿಯೂ ನಾಶವಾಗುವೆವು ಎಂದು ಭಾವಿಸಿದರು (ವಿಮೋಚನ ಕಾಂಡ 14:10-12).

ನಂಬಿಕೆಯ ಮೂಲಕ ಮೋಶೆಯು ಯೆಹೂದ್ಯರಿಗೆ ಹೇಳಿದ್ದೇನೆಂದರೆಃ "ನೀವು ಅಂಜಬೇಡಿರಿ; ಸುಮ್ಮನೆ ನಿಂತುಕೊಂಡಿದ್ದು ಕರ್ತನು ಈ ಹೊತ್ತು ನಿಮ್ಮನ್ನು ರಕ್ಷಿಸುವ ರೀತಿಯನ್ನು ನೋಡಿರಿ" (ವಿಮೋಚನ ಕಾಂಡ 14:13). ತರುವಾಯ, ಮೋಶೆಯ ಮೂಲಕ ದೇವರು ಸಮುದ್ರದ ನೀರನ್ನು ಇಬ್ಭಾಗಿಸಿದನು, ಮತ್ತು ನಂಬಿಕೆಯಿಂದಲೇ ಇಸ್ರಾಯೇಲ್ಯರು ಕೆಂಪು ಸಮುದ್ರವನ್ನು ಒಣಭೂಮಿಯನ್ನು ದಾಟುವಂತೆ ಮಾಡಿದನು. ಆದರೆ ಹಿಂದಟ್ಟಿದ್ದ ಐಗುಪ್ತ್ಯರು ಸಮುದ್ರವನ್ನು ದಾಟವದಕ್ಕೆ ಪ್ರಯತ್ನಿಸಿದಾಗ ಅವರು ಮುಳುಗಿಹೋದರು (ವಿಮೋಚನಕಾಂಡ 14:21-28).

**30** ಐಗುಪ್ತ್ಯದಿಂದ ಬಿಡುಗಡೆಗೊಂಡ ನಾಲ್ವತ್ತು ವರ್ಷಗಳ ಬಳಿಕ ಯೆಹೂದ್ಯರು ವಾಗ್ದಾತ್ತ ದೇಶವಾದ ಇಸ್ರಾಯೇಲನ್ನು ಪ್ರವೇಶಿಸಿದರು. ಆದರೆ ಮೊದಲು ಅಲ್ಲಿ ವಾಸವಾಗಿದ್ದ ಜನರನ್ನು ಜಯಿಸುವದು ಅವಶ್ಯಕವಾಗಿತ್ತು. ಯೆಹೂದ್ಯರು ಮಾಡಬೇಕಾಗಿದ್ದ ಮೊದಲ ಸಂಗತಿಯು ಯರಿಕೋ ಪಟ್ಟಣವನ್ನು ಪರಾಭವಗೊಳಿಸುವದಾಗಿತ್ತು. ದೇವರು ಆ ಪಟ್ಟಣವನ್ನು ಹೇಗೆ ಗೆದ್ದುಕೊಳ್ಳಬೇಕೆಂಬದನ್ನು ಯೆಹೂದ್ಯ ನಾಯಕನಾದ ಯೆಹೋಶುವನಿಗೆ ಹೇಳಿದ್ದನು. ಯೆರಿಕೋ ಪಟ್ಟಣದ ಸುತ್ತಲೂ ಬೃಹತ್ ಗೋಡೆಯಿತ್ತು. ಯೆಹೂದ್ಯರು ತುತ್ತೂರಿಗಳನ್ನು ಊದುತ್ತಾ ಏಳು ದಿನಗಳ ವರೆಗೆ ಪಟ್ಟಣವನ್ನು ಸುತ್ತಬೇಕಾಗಿತ್ತು. ಏಳನೆಯ ದಿನದಂದು ಯೆಹೂದ್ಯರು ಗಟ್ಟಿಯಾಗಿ ಆರ್ಭಟಿಸಬೇಕಾಗಿತ್ತು, ಆಗ ಗೋಡೆಯು ಬಿದ್ದ ಹೋಗುವದು. ಆಗ ಅವರು ಪಟ್ಟಣವನ್ನು ಪ್ರವೇಶಿಸಿ ಮುತ್ತಿಗೆ ಹಾಕುವದಕ್ಕೆ ಶಕ್ತರಾಗುತ್ತಿದ್ದರು ಮತ್ತು ಇದು ದೇವರು ಹೇಳಿದ್ದಂತೆಯೇ ನಡೆಯಿತು (ಯೆಹೋಶುವ 6:1-5, 12-16,20).

ಬೇರೆಯಾರು ಅಂಥ ಬೃಹತ್ ಪಟ್ಟಣವನ್ನು ಮುತ್ತಿಗೆ ಹಾಕಲು ಆಲೋಚಿಸಿದರು? ಯೆಹೋಶುವನು ದೇವರಲ್ಲಿಟ್ಟಿದ್ದ ನಂಬಿಕೆಯು ನಿಶ್ಚಯವಾಗಿಯೂ ದೊಡ್ಡದ್ದಾಗಿರಬೇಕು. ಆದರೆ, ಹಲವಾರು ವೇಳೆಗಳಲ್ಲಿ ದೇವರು ಅಂಥ ಅಸಹಜವಾದ ಮಾರ್ಗಗಳಲ್ಲಿ ಕಾರ್ಯಮಾಡುತ್ತಾನೆ. "ಪರಾಕ್ರಮದಿಂದಲ್ಲ, ಬಲದಿಂದಲ್ಲ, ನನ್ನ ಆತ್ಮದಿಂದಲೇ ಎಂಬುದು ಸೇನಾಧೀಶ್ವರನಾದ ಕರ್ತನು ನುಡಿ" (ಜೆಕರ್ಯ 4:6).

ನಾವು ಯೆಹೋಶುವನ ನಂಬಿಕೆಯನ್ನು ನಮಗಾಗಿ ಒಂದು ಮಾದರಿಯನ್ನಾಗಿ ತೆಗೆದುಕೊಳ್ಳಬಹುದು. ನಮ್ಮ ಜೀವಿತಗಳಲ್ಲಿ ಪರಾಭವಗೊಳಿಸಬೇಕಾದ ಅನೇಕ "ಯೆರಿಕೋಗಳು" ಇರುತ್ತವೆ. ಯೆಹೋಶುವನ ಹಾಗೆಯೇ ನಾವು ಸಹ ಅವುಗಳನ್ನು ನಂಬಿಕೆಯ ಮೂಲಕ ಪರಾಭವಗೊಳಿಸಬಹುದು. ಪೌಲನು ಹೇಳಿದ್ದೇನೆಂದರೆಃ ನಾವು ಉಪಯೋಗಿಸುವ ಆಯುಧಗಳು ಲೋಕ ಸಂಬಂಧವಾದ ಆಯುಧಗಳಲ್ಲ; ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿ ಹಾಕುವಂಥವುಗಳಾಗಿವೆ. (2 ಕೊರಿಂಥ 10:4).

**31** ಯೆಹೋಶುವನು ಮೊದಲು ಯೆರಿಕೋಗೆ ಗೂಢಾಚಾರರನ್ನು ಕಳುಹಿಸಿದ್ದನು, ಮತ್ತು ರಾಹಾಬಳೆಂಬ ಸೂಳೆಯು ಅವರನ್ನು ತನ್ನ ಮನೆಯಲ್ಲಿ ಬಚ್ಚಿಟ್ಟು ಕೊಂಡಿದ್ದಳು. ಅವಳು ಇಸ್ರಾಯೇಲಿನ ದೇವರಲ್ಲಿ, ಯೆಹೂದ್ಯರ ದೇವರಲ್ಲಿ ನಂಬಿಕೆಯಿಟ್ಟಿದ್ದಳು. ಯೆಹೂದ್ಯರು ಯೆರಿಕೋವನ್ನು ನಾಶಮಾಡುವರೆಂದು ಅವಳು ನಂಬಿಕೆಯಿಂದ ಬಲ್ಲವಳಾಗಿದ್ದಳು. ಆದದರಿಂದ, ಅವಳು ಯೆಹೋಶುವನು ಕಳುಹಿಸಿದ್ದ ಗೂಢಾಚಾರರಿಗೆ ಸಹಾಯವನ್ನು ನೀಡಿದವಳಾಗಿ ತನ್ನ ಪ್ರಾಣವನ್ನು ರಕ್ಷಿಸಿಕೊಂಡಳು (ಯೆಹೋಶುವ 2:1-3, 6, 8-14; 6:24-25).

ರಾಹಬಳು ಅನ್ಯಳೂ (ಯೆಹೂದ್ಯೇತರಳು) ಒಬ್ಬ ಪಾಪಿಯೂ ಆಗಿದ್ದಳೆಂಬದನ್ನು ಗಮನಿಸಿರಿ; ಆದಾಗ್ಯು, ಅವಳು ನಂಬಿಕೆಯ ಮೂಲಕ ರಕ್ಷಿಸಲ್ಪಟ್ಟಳು. ಅಷ್ಟು ಮಾತ್ರವಲ್ಲದೆ, ಅವಳು ತಿರಸ್ಕಾರ ಹೊಂದಿದ ಸೂಳೆಯಾಗಿದ್ದರೂ ದೇವರು ತನ್ನ ಉದ್ದೇಶಗಳನ್ನು ನೆರವೇರಿಸುವದಕ್ಕೆ ಅವಳನ್ನು ಉಪಯೋಗಿಸಿದನು.

**32-34** ಈ ವಚನಗಳಲ್ಲಿ ಬರಹಗಾರನು ದೇವರಿಗಾಗಿ ಮಹಾ ಕಾರ್ಯಗಳನ್ನು ನಂಬಿಕೆಯ ಮೂಲಕ ನೆರವೇರಿಸಿದ ಹಳೆ ಒಡಂಬಡಿಕೆಯ ಇತರ ಯೆಹೂದ್ಯನಾಯಕರ ಉದಾಹರಣೆಗಳನ್ನು ನೀಡುತ್ತಾನೆ (ನ್ಯಾಯ ಸ್ಥಾಪಕರು 7:19-21; 15:14-16, ದಾನಿಯೇಲ 3:16-28; 6:16-22).

**35** ಸತ್ತವರೊಳಗಿಂದ ಎದ್ದು ಬಂದ ಪುತ್ರರ ಆ ಇಬ್ಬರು ತಾಯಿಯರು 1 ಅರಸುಗಳು 17:17-24 ಮತ್ತು 2 ಅರಸುಗಳು 4:32-37ರಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾರೆ. ನಂಬಿಕೆಯ ವ್ಯಕ್ತಿಗಳಲ್ಲಿ ಇತರರು ಮರಣದಿಂದ ಬಿಡುಗಡೆ ಬೇಡವೆಂದು ಹೇಳಿದರು, ಯಾಕೆಂದರೆ ಈ ಲೋಕದಲ್ಲಿ "ಪುನರುತ್ಥಾನ" ಹೊಂದಲು ಅಪೇಕ್ಷಿಸದೆ ಪರಲೋಕದಲ್ಲಿನ ಶ್ರೇಷ್ಠ ಪುನರುತ್ಥಾನವನ್ನು ಹಾರೈಸಿದರು.

**36-38** ಇಲ್ಲಿ ನಾವು ತಮ್ಮ ನಂಬಿಕೆಯ ನಿಮಿತ್ತ ಕಠಿಣವಾಗಿ ಬಾಧೆಯನ್ನನುಭವಿಸಿದ ಹಳೆ ಒಡಂಬಡಿಕೆಯ ಧೀರರ ಬಗ್ಗೆ ಓದುತ್ತೇವೆ. ಆದರೆ ಅವರೆಲ್ಲರೂ ಕಡೇವರೆಗೂ ದೃಢವಾಗಿ ನಿಂತರು.

........ಇಂಥವರಿಗೆ ಈ ಲೋಕವು ಯೋಗ್ಯಸ್ಥಳವಲ್ಲ (ವಚನ 38). ಲೋಕದ ಜನರ ದೃಷ್ಟಿಯಲ್ಲಿ ಈ ನಂಬಿಕೆಯ ಧೀರರು ಅಯೋಗ್ಯವಾಗಿದ್ದರು; ಆದರೆ ದೇವರ ದೃಷ್ಟಿಯಲ್ಲಿ ಅವರು ಯೋಗ್ಯರಾಗಿದ್ದರು. ಅವರು ದೇವರ ಪರಲೋಕ ಪಟ್ಟಣಕ್ಕೆ ಬಾಧ್ಯರಾಗುವದಕ್ಕೆ ಸಂಪೂರ್ಣ ಯೋಗ್ಯರಾಗಿದ್ದರು (ವಚನಗಳು 10,16).

**39** ಈ ಹಳೆ ಒಡಂಬಡಿಕೆಯ ಧೀರರಲ್ಲಿ ಯಾರೊಬ್ಬರೂ ವಾಗ್ದಾನದ ಫಲವನ್ನು ಹೊಂದಲಿಲ್ಲ ಅವರಲ್ಲಿ ಅನೇಕರು ಕೆಲವು ವಾಗ್ದಾನಗಳನ್ನು ಹೊಂದಿಕೊಂಡಿದ್ದರು, ಆದರೆ ಅವರಲ್ಲಿ ಒಬ್ಬರೂ ಶ್ರೇಷ್ಠವಾದ ಒಂದು ವಾಗ್ದಾನವನ್ನು– ರಕ್ಷಕನೊಬ್ಬನ ವಾಗ್ದಾನ– ಹೊಂದಿಕೊಳ್ಳಲಿಲ್ಲ. ದೇವಕುಮಾರನಾದ ಯೇಸು ಭೂಲೋಕಕ್ಕೆ ಬರುವ ದಿನವನ್ನು ಅವರಲ್ಲಿ ಯಾರೊಬ್ಬರು

ನೋಡಲಿಲ್ಲ. ದೇವರು ಮಾನವ ಜನಾಂಗಕ್ಕೆ ನೀಡಿದ ಅತಿಶ್ರೇಷ್ಠ ವಾಗ್ದಾನವು ಯೇಸುಕ್ರಿಸ್ತನಲ್ಲಿ ದೊರಕುವ ರಕ್ಷಣೆಯ ವಾಗ್ದಾನವೇ ಆಗಿದೆ. ಆದರೆ ಈ ಲೋಕದಲ್ಲಿನ ಅವರ ಸ್ವಜೀವಿತಗಳಲ್ಲಿ ಹಳೆ ಒಡಂಬಡಿಕೆಯ ಧೀರರಲ್ಲಿ ಯಾರೊಬ್ಬರೂ ಆ ವಾಗ್ದಾನವನ್ನು ಹೊಂದಲಿಲ್ಲ.

**40** ಹೇಗಿದ್ದರೂ, ಈ ಹಳೆ ಒಡಂಬಡಿಕೆಯ ನಂಬಿಕೆಯ ವ್ಯಕ್ತಿಗಳ ನಂಬಿಕೆಯು ಸಿದ್ಧಿಗೆ ಬರುವದು; ಅಂದರೆ, ಅವರು ನಮ್ಮ ಹಾಗೆಯೇ ಪೂರ್ಣ ರಕ್ಷಣೆಯನ್ನು ಪಡೆಯುವರು. ಕ್ರಿಸ್ತನು ತಿರಿಗಿ ಬರುವಾಗ ಈ ಹಳೆ ಒಡಂಬಡಿಕೆಯ ಧೀರರು ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನಮ್ಮ ಜೊತೆ ಯಲ್ಲಿ ಪು ನರುತ್ಥಾನ ಗೊಂಡು ನಿತ್ಯಜೀವವನ್ನು ಪಡೆಯುವರು.

---

## ಅಧ್ಯಾಯ - 12

### ಯೇಸು ನಂಬಿಕೆಯ ಉತ್ಕೃಷ್ಟ ಮಾದರಿ (12:1-3)

**1** ಆದಕಾರಣ, 11ನೇ ಅಧ್ಯಾಯದ ಅನೇಕ ನಂಬಿಕೆಯ ಧೀರರ ಕುರಿತಾಗಿ ತಿಳಿದವರಾಗಿರುವ ನಾವು ಅವರ ಮಾದರಿಯನ್ನು ಅನುಸರಿಸುತ್ತಾ ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ. ಈ ಹಳೆ ಒಡಂಬಡಿಕೆಯ ಧೀರರು ಇಲ್ಲಿ ಸಾಕ್ಷಿಯವರು ಎಂದು ಕರೆಯಲ್ಪಟ್ಟಿದ್ದರು, ಯಾಕೆಂದರೆ ಅವರ ಜೀವಿತಗಳ ಮೂಲಕ ಅವರು ತಮ್ಮ ನಂಬಿಕೆಗೆ ಸಾಕ್ಷಿ ನೀಡಿದರು.

ಕ್ರಿಸ್ತನ ಹಿಂಬಾಲಕನೊಬ್ಬನ ಜೀವಿತವು ಒಂದು ಓಟದಂತೆ ಇರುತ್ತದೆ. ಓಟದಲ್ಲಿ ಎಲ್ಲಾ ಓಟಗಾರರು ತಮಗೆ ಸಾಧ್ಯವಾದಷ್ಟು ವೇಗವಾಗಿ ಓಡುತ್ತಾರೆ. ಓಟವು ಪ್ರಾರಂಭವಾಗುವ ಮುಂಚೆ ಅವರು ಅನಾವಶ್ಯಕವಾದ ಎಲ್ಲಾ ಬಟ್ಟೆಗಳನ್ನು ತೆಗೆದು ಬಿಡುತ್ತಾರೆ. ಯಾವನೂ ಸಹ ಒಳ್ಳೇ ಬಟ್ಟೆಗಳನ್ನೂ ಆಭರಣಗಳನ್ನೂ ತೊಟ್ಟು ಓಟವನ್ನು ಓಡುವದಿಲ್ಲ. ಸ್ವತಃ ಒಳ್ಳೇ ಬಟ್ಟೆಗಳಲ್ಲಿ ಯಾವ ತಪ್ಪಿರುವದಿಲ್ಲ, ಆದರೆ ಅವು ಗಳನ್ನು ಧರಿಸಿಕೊಂಡು ಓಟವನ್ನು ಓಡುವದು ತಪ್ಪಾಗಿರುತ್ತದೆ! ಅಂಥ ಬಟ್ಟೆಗಳು ಓಟಗಾರನಿಗೆ ಅಭ್ಯಂತರ ಮಾಡುತ್ತವೆ.

ಅದೇ ವಿಧದಲ್ಲಿ, ನಮ್ಮ ಕ್ರೈಸ್ತ ಜೀವಿತಗಳಲ್ಲಿ ಸ್ವತಃ ತಪ್ಪಲ್ಲದ ಅನೇಕ ಸಂಗತಿಗಳು ಇರುತ್ತವೆ, ಆದರೆ ಅವು ಗಳು ನಮ್ಮ ಕ್ರೈಸ್ತೀಯ ಓಟವನ್ನು ಅಭ್ಯಂತರ ಪಡಿಸುತ್ತವೆ. ನಾವು ಹೆಚ್ಚು ವೇಗವಾಗಿ ಓಡುವಂತಾಗಲು ಅಭ್ಯಂತರ ಮಾಡುವ ಎಲ್ಲವನ್ನೂ, ತೆಗೆದುಬಿಡಬೇಕು. ಈ ಅಭ್ಯಂತರಗಳು ಒಳ್ಳೇ ಸಂಗತಿಗಳಾಗಿರಬಹುದು, ಆದರೆ ಅವು ದೇವರಿಗಾಗಿನ ನಮ್ಮ ಸೇವೆಯಲ್ಲಿನ ಸಮಯವನ್ನು ತೆಗೆದುಕೊಳ್ಳುತ್ತೇವೆ. ಅಂಥ ಯಾವದೇ ಅಭ್ಯಂತರಗಳು ನಮ್ಮ ಜೀವಿತಗಳಲ್ಲಿ ಇರುವವೋ ಎಂದು ನಾವೆಲ್ಲರೂ ನಮ್ಮನ್ನು ಪರೀಕ್ಷಿಸಿಕೊಳ್ಳಬೇಕು. ಮತ್ತು ನಾವು ಹಾಗೆ ಮಾಡುತ್ತಿರುವಾಗ ಒಬ್ಬ ವ್ಯಕ್ತಿಯ ಜೀವಿತದಲ್ಲಿ ಯಾವದೂ ಅಭ್ಯಂತರವಾಗಿರುತ್ತದೋ ಅದು ಇನ್ನೊಬ್ಬನ ಜೀವಿತದಲ್ಲಿ ಅಭ್ಯಂತರವಾಗಿರುವದಿಲ್ಲ ಎಂಬದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಅಭ್ಯಂತರಗಳು ಪ್ರತಿಯೊಬ್ಬರಿಗೂ ಒಂದೇ ರೀತಿಯಾಗಿರುವದಿಲ್ಲ.

ಆದರೆ, ಇನ್ನೊಂದು ಬದಿಯಲ್ಲಿ, ಪಾಪವು ಯಾವಾಗಲೂ ಪ್ರತಿಯೊಬ್ಬರನ್ನು ನಿಧಾನಗೊಳಿಸುತ್ತದೆ. ನಾವು ಓಟವನ್ನು ಕಡೆಗಾಣಿಸಲು ಬಯಸುವದಾದರೆ ಸುಲಭವಾಗಿ ಹತ್ತಿಕೊಳ್ಳುವ ಪಾಪವನ್ನು ನಾವು ತೆಗೆದು ಹಾಕಬೇಕು. ನಾವು ಪ್ರತಿಯೊಂದು ಪಾಪವನ್ನು, ಅದು ಎಷ್ಟೇ ಚಿಕ್ಕದಾಗಿದ್ದರೂ ಸರಿಯೇ ತೆಗೆದು ಬಿಸಾಡಬೇಕು. ಚಿಕ್ಕ ಪಾಪಗಳನ್ನು ತಗೆದು ಬಿಸಾಡದಿದ್ದರೆ ಅವು ದೊಡ್ಡದಾಗಿ ಬೆಳೆದು ಶೀಘ್ರವೇ ನಮಗೆ ಉರ್ಲಾಗುವವು.

ಹೇಗಿದ್ದರೂ, ಒಂದು ವಿಧದಲ್ಲಿ, ನಮ್ಮ ಕ್ರೈಸ್ತೀಯ ಜೀವಿತವು ಒಂದು ಓಟಕ್ಕಿಂತ ವ್ಯತ್ಯಾಸವಾಗಿರುತ್ತದೆ. ಓಟದಲ್ಲಿ ಒಬ್ಬ ಓಟಗಾರನು ಮಾತ್ರವೇ ಗೆದ್ದು ಬಹುಮಾನವನ್ನು ಪಡೆದುಕೊಳ್ಳುತ್ತಾನೆ. ಆದರೆ ನಮ್ಮ ಕ್ರೈಸ್ತೀಯ ಜೀವಿತಗಳ "ಓಟದಲ್ಲಿ" ಓಟವನ್ನು ಕಡೆಗಾಣಿಸುವ ಪ್ರತಿಯೊಬ್ಬನು ಒಂದೇ ರೀತಿಯ ಬಹುಮಾನವನ್ನು– ನಿತ್ಯ ಜೀವವನ್ನು– ಪಡೆದುಕೊಳ್ಳುತ್ತಾರೆ. ಇದು ಸತ್ಯವಾಗಿದ್ದರೂ, ನಾವು ಒಬ್ಬನು ಮಾತ್ರವೇ ಗೆಲ್ಲಲಿರುವನೇನೋ ಎಂಬಂತೆ ಓಟವನ್ನು ಓಡಬೇಕು. ನಾವು ಹಾಗೆ ಓಡುವದಾದರೆ, ಆಗ ನಾವು ವೇಗವಾಗಿ ಓಡುವದಕ್ಕೆ ಜಾಗರೂಕರಾಗಿರುತ್ತೇವೆ! ನಾವು ಯೇಸುಕ್ರಿಸ್ತನಿಗಾಗಿ ಉತ್ತಮ ಓಟವನ್ನು ಓಡುವದಕ್ಕೆ ನಿಶ್ಚಯಮಾಡಿಕೊಳ್ಳುವೆವು (1 ಕೊರಿಂಥ 9:24-26 ನೋಡಿರಿ).

**2** ಯೇಸುವಿನ ಮೇಲೆ ದೃಷ್ಟಿಯಿಡೋಣ. ನಾವು ಚಂಚಲಕ್ಕೊಳಗಾಗದಿರೋಣ. ಲೋಕದ ಎಲ್ಲಾ ಪ್ರಿಯವಾದ ಸಂಗತಿಗಳನ್ನು ದೃಷ್ಟಿಸದಿರೋಣ. ನಾವು ಅವು ಗಳನ್ನು ದೃಷ್ಟಿಸುವದಾದರೆ ನೆಟ್ಟನೆಯ ರೇಖೆಯಲ್ಲಿ ಓಡಲು ಅಶಕ್ತರಾಗುತ್ತೇವೆ, ಆದರೆ ಬದಲಾಗಿ, ನಾವು ಆ ಬದಿಯಿಂದ ಇನ್ನೊಂದು ಬದಿಗೆ ಅಲೆದಾಡುತ್ತಿರುವೆವು ಮತ್ತು ಬಹುಶಃ ನಾವು ಮುಕ್ತಾಯ ರೇಖೆಯನ್ನು ತಲುಪದಿರಬಹುದು.

ಯೇಸು ನಮ್ಮ ನಂಬಿಕೆಯ ಹುಟ್ಟಿಸುವವನು (ಅಥವಾ ಮುಂದಾಳು)ಆಗಿದ್ದಾನೆ. ಆತನು ನಮಗಿಂತ ಮುಂಚಿತವಾಗಿ ಪರಲೋಕದೊಳಕ್ಕೆ ಹೋದನು. ಯೇಸು ಹಳೆ ಒಡಂಬಡಿಕೆಯ ಧೀರರ ನಂಬಿಕೆಗೂ ಮುಂದಾಳು (ಜನಕ)ಆಗಿದ್ದಾನೆ. ಯೇಸು ಆದಿಯಿಂದಲೂ ಅವರೊಂದಿಗಿದ್ದನು (1 ಕೊರಿಂಥ 10:3-4 ನೋಡಿರಿ.) ನಾವು ಯೇಸುವನ್ನು ತಿಳಿದಿರುವ ಹಾಗೆ

ಅವರು ತಿಳಿದಿರಲಿಲ್ಲ. ಹಾಗಿದ್ದರೂ, ಆತನು ಅವರ ನಾಯಕನಾಗಿದ್ದನು. ಹಳೆ ಒಡಂಬಡಿಕೆಯ ಪ್ರವಾದಿಗಳು ಸಹ ಯೇಸುವಿನ ಬಗ್ಗೆ ಮಾತಾಡಿದರು; ಆದದರಿಂದ, ಆತನು ಅವರ ನಂಬಿಕೆಯ ಜನಕನೂ ಸಹ ಆಗಿದ್ದನು. ಯೇಸು ನಮ್ಮ ನಂಬಿಕೆಯನ್ನು ಪೂರೈಸುವವನೂ(ಸಿದ್ಧಿಗೆ ತರುವವನು)ಆಗಿದ್ದಾನೆ. ಅಂದರೆ, ಅತನು ಸ್ವತಃ ನಂಬಿಕೆಯ ಉತ್ಕೃಷ್ಟ ಮಾದರಿಯಾಗಿದ್ದಾನೆ. ಯೇಸು ತನ್ನ ಭೂಲೋಕದ ಜೀವಿತ ಕೊನೆಯ ದಿನದಂದು ಗೇತ್ಸೆಮನೆ ತೋಟದಲ್ಲಿ ಸಂಪೂರ್ಣ ನಂಬಿಕೆಯಿಂದ ತನ್ನನ್ನು ದೇವರಿಗೆ ಸಮರ್ಪಿಸಿದನು. ಆತನು ದೇವರಿಗೆ, "ಈ ಪಾತ್ರೆಯನ್ನು ನನ್ನಿಂದ ತೊಲಗಿಸು. ಆದರೂ ನನ್ನ ಚಿತ್ತದಂತಾಗಿದೆ ನಿನ್ನ ಚಿತ್ತದಂತೆಯೇ ಆಗಲಿ" (ಮಾರ್ಕ 14:36) ಆ ದಿನದಲ್ಲಿ ದೇವರು ಯೇಸುವಿನೊಂದಿಗೆ ಇದ್ದನೆಂಬದಕ್ಕೆ ಯಾವ ಸಂಕೇತವೂ ಇರಲಿಲ್ಲ. ಆತನನ್ನು ಆದರಿಸುವದಕ್ಕೆ ಯಾರು ಇರಲಿಲ್ಲ. ಆತನು ಎಲ್ಲಾ ಜನರಿಂದಲೂ ತಿರಸ್ಕರಿಸಲ್ಪಟ್ಟಿದ್ದನು; ಆತನ ಸ್ವಂತ ಹಿಂಬಾಲಕರೂ ಆತನನ್ನು ಕಡೇ ಕ್ಷಣಗಳಲ್ಲಿ ಕೈಬಿಟ್ಟಿದ್ದರು. ಅಲ್ಲದೆ ದೇವರು ಸಹ ಆತನನ್ನು ತಿರಸ್ಕರಿರುವನೆಂಬಂತೆ ಕಂಡಿತು (ಮಾರ್ಕ 15:34). ಹಾಗಿದ್ದರೂ, ಆತನು ಅವಮಾನವನ್ನು ಅಲಕ್ಷ್ಯಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡನು. ರೋಮಾಯ ಸಾಮ್ರಾಜ್ಯದ ವೇಳೆಯಲ್ಲಿ ಅತಿ ಕೆಟ್ಟವರಾದ ಹಾಗು ಅತ್ಯಂತ ತಾತ್ಸಾರಕ್ಕೊಳಗಾದ ಅಪರಾಧಿಗಳನ್ನು ಮಾತ್ರವೇ ಶಿಲುಬೆಯ ಮೇಲಿನ ಮರಣಕ್ಕೆ ಒಳಪಡಿಸಲ್ಪಡುತ್ತಿದ್ದರು. ಶಿಲುಬೆಯ ಮೀಲೆ ಸಾಯುವದಕ್ಕಿಂತಲೂ ಹೆಚ್ಚು ಅವಮಾನಕರವಾದದ್ದು ಮತ್ತೊಂದಿರಲಿಲ್ಲ. ಆದದರಿಂದ, ಅಂಥ ಭಯಂಕರ ಅವಮಾನ ಹಾಗೂ ಬಾಧೆಯನ್ನು ಸಹಿಸಿಕೊಳ್ಳುವದರ ಮೂಲಕ ಯೇಸು ನಮಗೆ ಇತರ ಎಲ್ಲದಕ್ಕಿಂತಲೂ ಮೇಲಾಗಿರುವ ನಂಬಿಕೆಗೆ ಮಾದರಿಯನ್ನು ನೀಡಿದ್ದಾನೆ.

ಯೇಸು ಶಿಲುಬೆಯ ಮೇಲೆ ತೂಗಾಡುತ್ತಿದ್ದಾಗ ಅನೇಕರು ಅವನ ಸುತ್ತಲೂ ನಿಂತು ಪರಿಹಾಸ್ಯ ಮಾಡುತ್ತಿದ್ದರು. ಅವರು, "ಇಸ್ರಾಯೇಲ್ಯರ ಅರಸನಾದ ಈ ಕ್ರಿಸ್ತನು ಈಗ ಶಿಲುಬೆಯಿಂದ ಇಳಿದು ಬರಲಿ ಇಳಿದು ಬಂದರೆ ನಾವು ನೋಡಿನಂಬೇವು" ಎಂದು ಹೇಳಿದರು (ಮಾರ್ಕ 15:32). ಆದರೆ ಯೇಸು ಒಂದು ವೇಳೆ ಯಾವದಾದರೂ ಅಸ್ವಾಭಾವಿಕ ಮಾರ್ಗದ ಮೂಲಕ ಶಿಲುಬೆಯಿಂದ ಇಳಿದು ಬಂದಿದ್ದರೆ ಆತನು ನಮ್ಮ ನಂಬಿಕೆಯನ್ನು ಪೂರೈಸುವವನು ಆಗಿರುತ್ತಿದ್ದಿಲ್ಲ. ಅಲ್ಲದೆ ಆತನು ನಮಗೆ ಹಿಂಬಾಲಿಸುವದಕ್ಕೆ ಅಂಥ ಪರಿಪೂರ್ಣವಾದ ಮಾದರಿಯನ್ನೂ ನೀಡಲಾಗುತ್ತಿರಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಯೇಸು ತಾನು ಸಹಿಸಿಕೊಂಡ ಬಾಧೆಯ ಮೂಲಕ ಸ್ವತಃ ಪರಿಪೂರ್ಣವಾಗಿ ಮಾಡಲ್ಪಟ್ಟನು (ಇಬ್ರಿಯ 2:10). ಮತ್ತು ನಾವು ಸಹ, ಆತನ ಮಾದರಿಯನ್ನು ಅನುಸರಿಸುತ್ತಾ ಬಾಧೆಯ ಮೂಲಕ ಪರಿಪೂರ್ಣವಾಗಿ ಮಾಡಲ್ಪಡುವೆವು .

ನಾವು ಕಡೇವರೆಗೂ ನಂಬಿಕೆಯಲ್ಲಿ ತಾಳಿಕೊಳ್ಳುವದಾದರೆ ಯೇಸುವಿನ ಜೊತೆಯಲ್ಲಿ ನಾವು ಉನ್ನತಕ್ಕೇರಿಸಲ್ಪಡುವೆವು (ಇಬ್ರಿಯ 3:14). ನಾವು ಆತನ ಮುಂದೆ ಇಟ್ಟಿದ್ದ ಸಂತೋಷದಲ್ಲಿ ಪಾಲುಗಾರರಾಗುವೆವು (ಯೋಹಾನ 15:11; 16:22 ನೋಡಿರಿ). ಮತ್ತು ಆತನೊಂದಿಗೆ ನಾವು ಪರಲೋಕದಲ್ಲಿ ಆಳುವೆವು . "ನಾನು ಜಯಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕೂತುಕೊಂಡೆನು; ಹಾಗೆಯೇ ಜಯ ಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕೂತುಕೊಳ್ಳುವಂತೆ ಮಾಡುವೆನು" (ಪ್ರಕಟಣೆ 3:21). ಈ ವಿಧದಲ್ಲಿ, ಯೇಸು ತನ್ನ ನಂಬಿಕೆಯನ್ನು ಪರಿಪೂರ್ಣಗೊಳಿಸಿಕೊಂಡದ್ದು ಮಾತ್ರವಲ್ಲದೆ ಆತನು ನಮ್ಮ ನಂಬಿಕೆಯನ್ನು ಸಹ ಪರಿಪೂರ್ಣಗೊಳಿಸುವನು (ಪೂರೈಸುವನು). ಯೇಸು ನಮ್ಮ ನಂಬಿಕೆಯ ಜನಕನು, ಹುಟ್ಟಿಸುವವನು ಮಾತ್ರವಲ್ಲ; ಆತನು ನಮ್ಮ ನಂಬಿಕೆಯನ್ನು ಪೂರೈಸುವವನೂ (ಪರಿಪೂರ್ಣಗೊಳಿಸುವವನು) ಆಗಿದ್ದಾನೆ. ಯೇಸು ನಮ್ಮೊಳಗೆ ಪ್ರಾರಂಭಿಸಿದ ನಂಬಿಕೆಯ ಕೆಲಸವನ್ನು ಸಿದ್ಧಿಗೆ (ಪರಿಪೂರ್ಣತೆಗೆ) ಸಹ ತರುವನು (ಫಿಲಿಪ್ಪಿ 1:6).

3 ನಮ್ಮೊಳಗೆ ಯಾವನಾದರೂ ಮನಗುಂದಿ ಬೇಸರಗೊಳ್ಳುತ್ತಿರುವವನು ಇದ್ದಾನೋ? ಇರುವದಾದರೆ, ಆ ವ್ಯಕ್ತಿಯು ಯೇಸುವನ್ನು ಆಲೋಚಿಸಲಿ. ನಾವು ಯೇಸುವನ್ನು ಆಲೋಚಿಸುವಾಗ –ಅಂದರೆ, ನಾವು ಆತನನ್ನು ಧ್ಯಾನಿಸಿ ಪ್ರತಿಬಿಂಬಿಸುವಾಗ ನಾವು ನಮ್ಮ ಕಷ್ಟದ ಸಮಯದಲ್ಲಿ ಸಹಾಯಕ್ಕೋಸ್ಕರ ಆತನಿಂದ ಬಲವನ್ನೂ ಕೃಪೆಯನ್ನು ಪಡೆದುಕೊಳ್ಳುತ್ತೇವೆ (ಇಬ್ರಿಯ 4:16).

## ದೇವರು ತನ್ನ ಪುತ್ರರನ್ನು ಶಿಕ್ಷಿಸುತ್ತಾನೆ (12:4-13)

4 ಬರಹಗಾರನು ಇಲ್ಲಿ ಇಬ್ರಿಯರು ಕ್ರಿಸ್ತನ ನಿಮಿತ್ತ ಹಿಂಸೆಯನ್ನು ಅನುಭವಿಸಿದ್ದಾರೆ, ಆದರೆ ಅವರು ಕ್ರಿಸ್ತನ ನಿಮಿತ್ತ ತಮ್ಮ ರಕ್ತವನ್ನು ಸುರಿಸಿರುವದಿಲ್ಲ– ಸಾಯಲಿಲ್ಲ –ಎಂದು ಹೇಳುತ್ತಾನೆ. ಹಳೆ ಒಡಂಬಡಿಕೆಯ ನಂಬಿಕೆಯ ಧೀರರಲ್ಲಿ ಕೆಲವರು ಅನುಭವಿಸಿದ ಬಾಧೆಯನ್ನು ಅವರು ಇನ್ನೂ ಅನುಭವಿಸಿರಲಿಲ್ಲ. ಇಬ್ರಿಯರು ಅಷ್ಟು ಬೇಗನೆ ತಮ್ಮನ್ನು ನಿರಾಶರಾಗುವದಕ್ಕೆ ಬಿಡಬಾರದು; ಅವರ ಸಂಕಟಗಳು ಕೇವಲ ಪ್ರಾರಂಭವಷ್ಟೇ ಆಗಿವೆ! ಅವರು ಅಲ್ಪ ಸಂಕಷ್ಟಗಳಿಗಾಗಿ ಮನಗುಂದಿದರೆ ದೊಡ್ಡ ಕಷ್ಟಗಳು ಬರುವಾಗ ಅವರಿಗೆ ಏನು ಸಂಭವಿಸುವದು? ಆದರೆ ದೇವರು ಕರುಣೆಯುಳ್ಳವನಾಗಿದ್ದು ಅವರು ಸಹಿಸಿಕೊಳ್ಳಲಾರದ ಸಂಕಷ್ಟವನ್ನು ಅವರ ಮೇಲೆ ಬರಮಾಡುವದಿಲ್ಲ ಎಂಬದನ್ನು ಇಬ್ರಿಯರು ಜ್ಞಾಪಕಮಾಡಿಕೊಳ್ಳಬೇಕಾಗಿರುತ್ತದೆ (1 ಕೊರಿಂಥ 10:13). ಅಲ್ಲದೆ, ಅವರು ತಮ್ಮ ಯಾವದೇ ಸಂಕಟ ಬಂದರೂ ಸರಿಯೇ ಅದು ದೇವರಿಂದ ಒಂದು ಶಿಕ್ಷೆಯಾಗಿ ಬರುತ್ತದೆಂಬದನ್ನು ಸಹ ನೆನಪಿನಲ್ಲಿಟ್ಟುಕೊಳ್ಳುವ ಅಗತ್ಯವಿರುತ್ತದೆ. ದೇವರ ಶಿಕ್ಷೆಯು ಕೋಪದ ಒಂದು ಗುರುತಲ್ಲ, ಆದರೆ ನಮ್ಮ ಮೇಲಿರುವ ಆತನ ಪ್ರೀತಿಯ ಗುರುತಾಗಿರುತ್ತದೆ (ವಚನ 6).

**5-6** ಬರಹಗಾರನು ಇಲ್ಲಿ ಜ್ಞಾನೋಕ್ತಿಗಳು 3:11-12 ರಿಂದ ಉಲ್ಲೇಖಿಸುತ್ತಾನೆ. ನಮ್ಮ ಮೇಲೆ ಕಷ್ಟ ಸಂಕಟಗಳು ಬರುವಾಗ ನಾವು ದೇವರವಿರುದ್ಧ ಗುಣಗುಟ್ಟದಿರೋಣ. ನಮ್ಮ ಮೇಲೆ ಅಂಥ ಕಷ್ಟ ಹಾಗೂ ಸಂಕಟವನ್ನು ಬರಮಾಡುವದರ ಮೂಲಕ ದೇವರು ನಮ್ಮನ್ನು ಮಕ್ಕಳಂತೆ ನಮ್ಮ ಹಿತಕ್ಕಾಗಿ ಶಿಕ್ಷಿಸುತ್ತಿರುವನು. ನಮ್ಮ ಮೇಲೆ ಬರುವ ಯಾವದೇ ಕಷ್ಟ ಹಾಗೂ ಹಿಂಸೆಯಾಗಲಿ ದೇವರಿಂದ ಅನುಮತಿಸಲ್ಪಟ್ಟಿರುತ್ತದೆ. ಜನರು ನಮ್ಮನ್ನು ನಾವು ಕ್ರಿಸ್ತನಿಗೆ ವಿಧೇಯರಾಗುವದರ ಕಾರಣದಿಂದ ಹಿಂಸಿಸುತ್ತಾರೆ, ಆದರೆ ನಾವು ಕ್ರಿಸ್ತನಿಗೆ ಮತ್ತಷ್ಟು ವಿಧೇಯರಾಗಬೇಕೆಂದು ದೇವರು ಆ ಹಿಂಸೆಯನ್ನು ನಮ್ಮನ್ನು ಶಿಕ್ಷಿಸುವದಕ್ಕಾಗಿ ಉಪಯೋಗಿಸುತ್ತಾನೆ.

**7-8** ಪ್ರತಿಯೊಬ್ಬ ಮಗನಿಗೂ ಶಿಕ್ಷೆಯು ಅಗತ್ಯವಿರುತ್ತದೆ ಕ್ರಿಸ್ತನು ಸಹ ತಾನು ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು (ಇಬ್ರಿಯ 5:8).

ಹಾದರದಿಂದ ಹುಟ್ಟಿದ ಮಕ್ಕಳನ್ನು ಶಿಕ್ಷಿಸುವದರ ಕುರಿತು ಯಾರೂ ಚಿಂತಿಸುವದಿಲ್ಲ. ಅವರು ಯಾವದಕ್ಕೂ ಬಾಧ್ಯರಾಗುವದಲ್ಲ ಆದರೆ ಒಬ್ಬ ತಂದೆಯು ತನ್ನ ಸ್ವಂತ ಮಗನ ಕುರಿತು ಕಾಳಜಿವಹಿಸುತ್ತಾನೆ. ತಂದೆಯು ತನ್ನ ಮಗನನ್ನು ಉತ್ತಮವಾಗಿ ತರಬೇತಿಗೊಳಿಸಲು ಬಯಸುತ್ತಾನೆ, ಯಾಕೆಂದರೆ ಮಗನಿಗೆ ಒಂದು ದಿನ ದೊಡ್ಡ ಜವಾಬ್ದಾರಿಯು ಕೊಡಲ್ಪಡುವದೆಂದು ಆತನು ಬಲ್ಲವನಾಗಿರುತ್ತಾನೆ. ದೇವರ ವಿಷಯದಲ್ಲಿಯೂ ಇದು ಅಷ್ಟೇ ಸತ್ಯ. ನಾವು ದೇವರಿಂದ ಶಿಕ್ಷೆಗೊಳಗಾಗುತ್ತಿದ್ದರೆ ಸಂತೋಷಪಡೋಣ, ಯಾಕೆಂದರೆ ಆತನು ನಮ್ಮನ್ನು ಪುತ್ರರಂತೆ ತರಬೇತಿಗೊಳಿಸುತ್ತಾ ನಮಗಾಗಿ ಒಂದು ಜವಾಬ್ದಾರಿಯ ಸ್ಥಾನವನ್ನು ಸಿದ್ಧಗೊಳಿಸುತ್ತಿದ್ದಾನೆಂದು ನಾವು ಬಲ್ಲೆವು. ನಾವು ನಮ್ಮ ಜೀವಿತದಲ್ಲಿ ಯಾವ ವಿಧವಾದಕಷ್ಟವನ್ನು ಅನುಭವಿಸಿಲ್ಲವಾದರೆ ನಾವು ನಿಜವಾಗಿಯೂ ದೇವರ ಮಕ್ಕಳು ಹೌದೋ ಅಥವಾ ಅಲ್ಲವೋ ಎಂಬುದರ ಕುರಿತು ಯೋಚಿಸಬೇಕಾದ ಕಾರಣ ವಿರುತ್ತದೆ.

**9-10** ದೇವರು ನಮ್ಮನ್ನು ಶಿಕ್ಷಿಸುವಾಗ ಎಂದಿಗೂ ತಪ್ಪನ್ನು ಮಾಡುವದಿಲ್ಲ. ದೇವರ ಶಿಕ್ಷೆಯು ಯಾವಾಗಲೂ ನ್ಯಾಯವಾದದ್ದೇ; ಇದು ಯಾವಾಗಲೂ ಪ್ರಯೋಜನಾತ್ಮಕವಾಗಿರುತ್ತದೆ. ನಮ್ಮ ಮಾನವ ತಂದೆಗಳು ಸಹ ತಮಗೆ ಸಾಧ್ಯವಾದಷ್ಟು ನಮ್ಮನ್ನೂ ಶಿಕ್ಷಿಸುವದಕ್ಕೆ ಪ್ರಯತ್ನಿಸಬೇಕು, ಆದರೆ ಅವರು ತಪ್ಪುಗಳನ್ನು ಮಾಡಿದರು. ಹಾಗಿದ್ದರೂ, ನಾವು ಅವರನ್ನು ಗೌರವಿಸಿದೆವು. ನಾವು ನಮ್ಮ ಮಾನವ ತಂದೆಗಳನ್ನು ಗೌರವಿಸಿರುವದಾದರೆ ನಮ್ಮ ಆತ್ಮಗಳಿಗೆ ತಂದೆಯಾಗಿರುವಾತನನ್ನು, ನಮ್ಮ ಪರಲೋಕದ ತಂದೆಯನ್ನು ಇನ್ನು ಎಷ್ಟೋ ಹೆಚ್ಚಾಗಿ ಗೌರವಿಸಬೇಕಲ್ಲವೆ (ವಚನ 9). ದೇವರು ನಮ್ಮನ್ನು ಏಕೆ ಶಿಕ್ಷಿಸುತ್ತಾನೆ? ನಾವು ತನ್ನ ಪರಿಶುದ್ಧತೆಯಲ್ಲಿ ಪಾಲುಗಾರರಾಗಬೇಕೆಂದು ಆತನು ನಮ್ಮನ್ನು ಶಿಕ್ಷಿಸುತ್ತಾನೆ (ವಚನ 10). ಇದು ದೇವರ ಉದ್ದೇಶವಾಗಿದೆ. ಒಂದು ವಿಧದಲ್ಲಿ, ನಾವು ಕ್ರಿಸ್ತನ ಯಜ್ಞದಿಂದ ಈಗಾಗಲೇ ಪರಿಶುದ್ಧರಾಗಿ ಮಾಡಲ್ಪಟ್ಟಿದ್ದೇವೆ (ಇಬ್ರಿಯ 10:10). ಆದರೆ ಅದು ನಮ್ಮ ರಕ್ಷಣೆಯಲ್ಲಿ ಮೊದಲ ಹೆಜ್ಜೆ ಮಾತ್ರವೇ ಆಗಿದೆ. ಆ ಮೊದಲ ಕ್ರಿಸ್ತನನ್ನು ನಂಬುವಾಗ ಪಡೆಯುತ್ತೇವೆ ಮತ್ತು ಅದರ ಆಧಾರದ ಮೇಲೆ ನಾವು ಕ್ರಿಸ್ತನನ್ನು ನಂಬುವಾಗ ಪಡೆಯುತ್ತೇವೆ ಮತ್ತು ಅದರ ಆಧಾರದ ಮೇಲೆ ನಾವು ನೀತಿವಂತರೆಂದು ನಿರ್ಣಯಿಸಲ್ಪಟ್ಟಿರುತ್ತೇವೆ (ರೋಮ 5 :1). ಆದರೆ ಎರಡನೆಯ ವಿಧದ ಪರಿಶುದ್ಧತೆಯು–ದೇವರ ಪೂರ್ಣ ಪರಿಶುದ್ಧತೆ ಅಥವಾ ಪರಿಪೂರ್ಣತೆ –ಇರುತ್ತದೆ, ಅದು ನಮ್ಮ ಜೀವಿತಗಳ ಅಂತಿಮ ಗುರಿಯಾಗಿರುತ್ತದೆ. ಈ ಎರಡನೆಯ ವಿಧದ ಪರಿಸುದ್ಧತೆಯನ್ನು ಪಡೆದುಕೊಳ್ಳುವದಕ್ಕೆ ಸಮಯ ಹಿಡಿಯುತ್ತದೆ, ಮತ್ತು ನಾವು ಪರಲೋಕಕ್ಕೆ ಸೇರಿದ ನಂತರವಷ್ಟೇ ಅದನ್ನು ಪೂರ್ಣವಾಗಿ ಪಡೆಯುವೆವು. (ಇಬ್ರಿಯ 10:14 ಮತ್ತು ವ್ಯಾಖ್ಯಾನ ನೋಡಿರಿ). ಅದೇ ವೇಳೆಯಲ್ಲಿ, ದೇವರು ಈ ಭೂಮಿಯ ಮೇಲೆ ನಮಗೆ ಶಿಕ್ಷೆಯ ರೂಪದಲ್ಲಿ ನಾನಾ ವಿಧವಾದ ಕಷ್ಟ ಹಾಗೂ ಹಿಂಸೆಯನ್ನು ಬರಮಾಡುವದರ ಮೂಲಕ ನಮ್ಮನ್ನು ನಿರಂತರವಾಗಿ ಹೆಚ್ಚು ಹೆಚ್ಚು ಪರಿಶುದ್ಧಗೊಳಿಸುತ್ತಿದ್ದಾನೆ. ಪೌಲನು ಹೇಳಿದ್ದೇನೆಂದರೆಃ "ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯವನ್ನು ಸೇರಬೇಕು" (ಅ.ಕೃತ್ಯ 14:22).

**11** ನಾವು ದೇವರ ಶಿಕ್ಷೆಗೆ ಎರಡು ವಿಧಗಳಲ್ಲಿ ಪ್ರತಿಕ್ರಿಯಿಸಬಹುದು. ಮೊದಲನೆಯದಾಗಿ, ನಾವು ಆತನ ಶಿಕ್ಷೆಯನ್ನು ತಿರಸ್ಕಾರಮಾಡಬಹುದು; ನಾವು ಕೋಪಗೊಂಡು ದೇವರ ವಿರುದ್ಧವಾಗಿ ಗುಣಗುಟ್ಟುವದಕ್ಕೆ ಪ್ರಾರಂಭಿಸಬಹುದು. ಅಥವಾ ಎರಡನೆಯದಾಗಿ, ನಾವು ಕೃತಜ್ಞತೆಯೊಂದಿಗೆ ದೇವರ ಶಿಕ್ಷೆಯನ್ನು ಸ್ವೀಕರಿಸಿಕೊಂಡು ಅದರ ಮೂಲಕ ನಮ್ಮನ್ನು ಶಿಸ್ತುಗೊಳಿಸುವಂತೆ ಆತನನ್ನು ಅನುಮತಿಸಬಹುದು. ನಾವು ಆತನ ಶಿಕ್ಷೆಯನ್ನು ತಿರಸ್ಕರಿಸುವದಾದರೆ ಆದರಿಂದ ನಮಗೆ ಯಾವ ಹಿತವೂ ಆಗುವದಿಲ್ಲ. ನಾವು ಆತನ ಶಿಕ್ಷೆಯನ್ನು ಸ್ವೀಕರಿಸಿ ಕೊಳ್ಳುವದಾದರೆ ನಮ್ಮ ಜೀವಿತಗಚು ನೀತಿ (ಪರಿಶುದ್ಧತೆ), ಹಾಗೂ ಸಮಾಧಾನದಲ್ಲಿ ಅಭಿವೃದ್ಧಿಗೊಳ್ಳುವವು. ನಾವು ಪಾಪದಿಂದ ವಿಮುಖರಾಗಿ ನೀತಿ ಹಾಗೂ ವಿಧೇಯತೆಯ ಕಡೆಗೆ ತಿರಿಗಿಕೊಳ್ಳುವೆವು. ಮತ್ತು ನೀತಿಯ ಫಲವು ದೇವರೊಂದಿಗಿನ ಸಮಾಧಾನವೇ. ಕಷ್ಟಾನುಭವಕ್ಕಿಂತ ಮುಂಚೆ ತಪ್ಪಿಹೋಗುತ್ತಿದ್ದೇನು; ಈಗಲಾದರೋ ನಿನ್ನ ನುಡಿಗಳನ್ನು ಕೈಕೊಳ್ಳುತ್ತೇನೆ..... ಕಷ್ಟಾನುಭವವು ಹಿತಕರವಾಯಿತು; ಅದರಿಂದಲೇ ನಿನ್ನ ನಿಬಂಬಧನೆಗಳನ್ನು ಕಲಿತೆನು (ಕೀರ್ತನೆಗಳು 199:67, 71). .

**12** ನಾವು ದೇವರಿಂದ ಶಿಕ್ಷಿಸಲ್ಪಡುತ್ತಿರುವಾಗ ಮನಗುಂದಿ ಹೋಗದಿರೋಣ. ಆತನ ಶಿಕ್ಷೆಯು ನಮ್ಮನ್ನು ಕೆಳಕ್ಕೆ ದೊಬ್ಬುವದಕೋಸ್ಕರವಲ್ಲ; ಇದು ನಮ್ಮನ್ನು ದೇವರ ಸೇವೆಗಾಗಿ ಹೆಚ್ಚು ಪ್ರವೀಣ ಹಾಗೂ ಸನ್ನದ್ಧುಗೊಳಿಸುವದಕ್ಕಾಗಿಯೇ ಆಗಿದೆ. ಶಿಕ್ಷೆಯು ಬರುವಾಗ ನಾವು ಅದರಿಂದ ಓಡಿ ಹೋಗಬಾರದು, ಆದರೆ ಬದಲಾಗಿ, ನಾವು ಅದನ್ನು ಸಂತೋಷದಿಂದ ಸ್ವೀಕರಿಸಿ ನಮ್ಮನ್ನು ಅದರ ಮೂಲಕ ಶಿಸ್ತುಗೊಳಿಸಲ್ಪಡುವದಕ್ಕೆ ಒಪ್ಪಿಸಿಕೊಡಬೇಕು. ಆದದರಿಂದ, ಜೋಲು ಬಿದ್ದ ಕೈಗಳನ್ನು ನಡುವೆ ಮೊಣಕಾಲುಗಳನ್ನು ಬಲಪಡಿಸಿಕೊಳ್ಳಿರಿ ಎಂದು ಬರಹಗಾರನು ಹೇಳುತ್ತಾನೆ (ಯೆಶಾಯ 35:3).

13 ಸಭೆಯಲ್ಲಿರುವ ಯಾವನಾದರೂ ದೇವರಿಂದ ಶಿಕ್ಷಿಸಲ್ಪಡುತ್ತಿರುವದಾದರೆ– ಯಾವನಾದರೂ ಆತ್ಮೀಕವಾಗಿ ಕುಂಟಕಾಲು ಇರುವವನಾಗಿದ್ದರೆ– ನಾವು ಆ ವ್ಯಕ್ತಿಗೆ ಸಹಾಯ ಹಾಗೂ ಪ್ರೋತ್ಸಾಹವನ್ನು ನೀಡೋಣ (ಗಲಾತ್ಯ 6:1-2). ನಾವು ಆತನ ಕಾಲುಗಳಿಗೆ ದಾರಿಗಳನ್ನು ಸಮಮಾಡೋಣ (ಜ್ಞಾನೋಕ್ತಿಗಳು 4:26). ಆತನ ಮಾರ್ಗದಲ್ಲಿ ನಾವು ಯಾವದೇ ವಿಘ್ನವನ್ನು ಇಡದಿರೋಣ, ಹೀಗೆ ಆತನು ಎಡವಿ ಬಿದ್ದು ತನ್ನ ಓಟವನ್ನು ಕಡೆಗಾಣಿಸಲು ಅಶಕ್ತನಾಗದೆ ಇರುವನು.

## ಸಲಹೆಗಳು ಹಾಗೂ ಎಚ್ಚರಿಕೆಗಳು (12:14-17)

14 ಎಲ್ಲರ ಸಂಗಡ ಸಮಾಧಾನದಿಂದಿರುವದಕ್ಕೆ ಪ್ರಯತ್ನ ಮಾಡಿರಿ (ರೋಮ 12:18). ಎಲ್ಲರೊಂದಿಗೂ ಸಮಾಧಾನದಿಂದಿರುವದು ಅಸಾಧ್ಯವಾಗಿರುತ್ತದೆ, ಯಾಕೆಂದರೆ ಕೆಲವು ಜನರು ಕ್ರಿಸ್ತನಲ್ಲಿನ ನಮ್ಮ ನಂಬಿಕೆಯ ಕಾರಣದಿಂದಷ್ಟೇ ನಮ್ಮನ್ನು ವಿರೋಧಿಸುವರು. ಆದರೆ ನಾವು ಪ್ರತಿಯೊಬ್ಬರೊಂದಿಗೆ ಸಮಾಧಾನದಿಂದಿರುವದಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನಿಸಬೇಕು. ನಾವು ಅವಿಶ್ವಾಸಿಗಳ ಜೊತೆಯಲ್ಲಿ ಸಮಾಧಾನದಿಂದಿರುವದಕ್ಕೆ ಊಹಿಸಿಕೊಳ್ಳುವದಾದರೆ ನಮ್ಮ ಜೊತೆ ವಿಶ್ವಾಸಿಗಳೊಂದಿಗೆ ಸಮಾಧಾನದಿಂದ ಇರುವದಕ್ಕೆ ಮತ್ತಷ್ಟು ಹೆಚ್ಚಾಗಿ ನಾವು ಪ್ರಯಾಸ ಪಡಬೇಕಲ್ಲವೇ! (ಎಫೆಸ 4:3ನೋಡಿರಿ).

.........ಪರಿಶುದ್ಧತೆಯನ್ನು ಹೊಂದುವದಕ್ಕೆ ಪ್ರಯತ್ನ ಮಾಡಿರಿ. ಕ್ರಿಸ್ತನು ಹಾಗೂ ಪವಿತ್ರಾತ್ಮನ ಮೂಲಕ ನಮಗೆ ಕೊಡಲ್ಪಟ್ಟಿರುವ ಕೃಪೆಯಿಂದ ದೇವರು ಎಡಬಿಡದೆ ನಮ್ಮನ್ನು ಹೆಚ್ಚು ಹೆಚ್ಚು ಪರಿಶುದ್ಧರನ್ನಾಗಿ ಮಾಡುತ್ತಿದ್ದಾನೆ. ಆದರೆ, ಅದರ ಜೊತೆಯಲ್ಲಿ, ಸ್ವತಃ ನಾವೂ ಪರಿಶುದ್ಧರಾಗಿರುವದಕ್ಕೆ ಪ್ರಯಾಸಪಡಬೇಕು. ನಾವು ದೇವರಿಗೆ ವಿಧೇಯರಾಗಿರುವದರಿಂದ ಮಾತ್ರವೇ ಪರಿಶುದ್ಧರಾಗಬಹುದು (ಫಿಲಿಪ್ಪಿ 2:12-13 ಮತ್ತು ವ್ಯಾಖ್ಯಾನ ನೋಡಿರಿ). "ನಾನು ಪರಿಶುದ್ಧನಾಗಿರುವದರಿಂದ ನೀವೂ ಪರಿಶುದ್ಧರಾಗಿರಿ" ಎಂದು ದೇವರು ಹೇಳುತ್ತಾನೆ (ಯಾಜಕ ಕಾಂಡ 11:45; 1 ಪೇತ್ರ 1:15-16). ದೇವರ ಚಿತ್ತವೇನೆಂದರೆ ನೀವು ಪರಿಶುದ್ಧರಾಗಿರಬೇಕೆಂಬದೇ (1 ಥೆಸಲೋನಿಕ 4:3). ......ಪರಿಶುದ್ಧತೆಯಿಲ್ಲದೆ ಯಾವನೂ ಕರ್ತನನ್ನು ಕಾಣುವದಿಲ್ಲ (ಮತ್ತಾಯ 5:8 ಮತ್ತು ವ್ಯಾಖ್ಯಾನ ನೋಡಿರಿ).

ನಾವು ನಮ್ಮನ್ನೂ ನಮ್ಮ ಸಭೆಯನ್ನೂ ದೃಷ್ಟಿಸುವಾಗ ಏನನ್ನು ಕಾಣುತ್ತೇವೆ? ಪರಿಶುದ್ಧತೆಯೋ ಅಥವಾ ಅಪರಿಶುದ್ಧತೆಯೋ, ಸಮಾಧಾವನ್ನೋ ಅಥವಾ ಕಲಹವನ್ನೋ, ಪ್ರತಿಯೊಬ್ಬನು ತನ್ನನ್ನು ಪರೀಕ್ಷಿಸಿಕೊಳ್ಳಲಿ.

15 ನಿಮ್ಮಲ್ಲಿ ಯಾವನಾದರೂ ದೇವರ ಕೃಪೆಗೆ ತಪ್ಪಿ ಹಿಂಜರಿಯದಂತೆ ......ಜಾಗ್ರತೆಯಿಂದ ನೋಡಿಕೊಳ್ಳಿರಿ (ಇಬ್ರಿಯ4:1ನೋಡಿರಿ). ದೇವರ ಕೃಪೆಯು ಯಾವಾಗಲೂ ನಮಗೆ ದೊರೆಯುವದಾಗಿದೆ. (ಇಬ್ರಿಯ 4:16). ಆದರೆ ಕೆಲವು ವೇಳೆಗಳಲ್ಲಿ ನಾವು ಅದನ್ನು ಪಡೆದುಕೊಳ್ಳುವದಿಲ್ಲ ಅಥವಾ ನಮ್ಮದಾಗಿಸಿಕೊಳ್ಳುವದಿಲ್ಲ. ಬದಲಾಗಿ, ನಾವು ಅದನ್ನು ತಿರಸ್ಕರಿಸುತ್ತೇವೆ. ಮತ್ತು ನಾವು ಹೀಗೆ ಮಾಡುವಾಗ ಕೃಪೆಗೆ ತಪ್ಪಿ ಹಿಂಜರಿದವರಾಗಿರುತ್ತೇವೆ (ಗಲಾತ್ಯ 5 :4). ಯಾಕೆ ನಾವು ಅನೇಕ ವೇಳೆಯಲ್ಲಿ ದೇವರ ಕೃಪೆಯನ್ನು ಸ್ವೀಕರಿಸಿಕೊಳ್ಳುವದಕ್ಕೆ ನಿರಾಕರಿಸುತ್ತೇವೆ? ಪಾಪದ ಕಾರಣದಿಂದಲೇ. ನಾವು ಎಲ್ಲಿಯವರೆಗೆ ಪಾಪದಲ್ಲಿ ಮುಂದುವರೆಯುತ್ತೇವೋ ಅಲ್ಲಿಯ ತನಕ ನಾವು ದೇವರ ಕೃಪೆಯನ್ನು ಸ್ವೀಕರಿಸಲಾರೆವು; ಪಾಪವು ಒಂದು ವಿಷವುಳ್ಳ ಬೇರು ಆಗಿದ್ದು ಮರವನ್ನೆಲ್ಲಾ ವಿಷಕಾರಿಯಾಗಿ ಮಾಡುತ್ತದೆ ನಮ್ಮ ಜೀವಿತದಲ್ಲಿನ ಪಾಪವು ನಮ್ಮ ಇಡೀ ಜೀವಿತವನ್ನೆಲ್ಲಾ ಅಶುದ್ಧಮಾಡುತ್ತದೆ. ಸಭೆಯಲ್ಲಿನ ಪಾಪವು ಇಡೀ ಸಭೆಯನ್ನು ಅಶುದ್ಧ ಮಾಡುತ್ತದೆ; ಮತ್ತು ಹಾಗೆ ಮಾಡುವಲ್ಲಿ ಅದು ಸಭೆಯವರನ್ನು ಕೆಡಿಸುತ್ತದೆ. ಈ ರೀತಿಯ ಯಾವ "ವಿಷವುಳ್ಳ ಬೇರೂ" ನಮ್ಮೊಳಗೆ ಬೆಳೆಯದಂತೆ ನಾವು ಜಾಗರೂಕರಾಗಿಬೇಕು. ಅದು ಬೆಳೆಯುವದಾದರೆ, ನಾವು ಶೀಘ್ರವೇ ಅದನ್ನು ಕಿತ್ತುಹಾಕುವವರಾಗಿರೋಣ (1 ಕೊರಿಂಥ 5:9-11, 13ನೋಡಿರಿ).

16 ಬರಹಗಾರನು ಇಲ್ಲಿ ಪಾಪದ ಎರಡು ಉದಾಹರಣೆಗಳನ್ನು ನೀಡುತ್ತಾನೆಃ ಜಾರುತ್ವ ಹಾಗೂ ಪ್ರಾಪಂಚಿಕತೆ (ಭಕ್ತಿಹೀನತೆ). ಇಸಾಕನ ಮಗನಾದ ಏಸಾವನು ಪ್ರಾಪಂಚಿಕನಾಗಿದ್ದನು, ಯಾಕೆಂದರೆ ಆತನು ಒಂದು ಚಿಕ್ಕ ಲೌಕೀಕ ಲಾಭಕ್ಕಾಗಿ ದೇವರು ಕೊಟ್ಟ ತನ್ನ ಚೊಚ್ಚಲತನದ ಹಕ್ಕನ್ನು, ಬಾಧ್ಯತೆಯ ಹಕ್ಕುಗಳನ್ನು ಮಾರಿಬಿಟ್ಟನು. ಒಂದು ದಿನ ಏಸಾವನು ಬಹಳ ಹಸಿದಿದ್ದನು ಮತ್ತು ತನ್ನ ತಮ್ಮನಾದ ಯಾಕೋಬನಿಂದ ಏನನ್ನಾದರೂ ತಿನ್ನುವದಕ್ಕೆ ಕೇಳಿದನು. ಕುತಂತ್ರಿಯಾಗಿದ್ದ ಯಾಕೋಬನು ಏಸಾವನ ಬಾಧ್ಯತೆಯ ಹಕ್ಕುಗಳನ್ನು ಪಡೆದು ಏಸಾವನಿಗೆ ಊಟವನ್ನು ನೀಡುವದಕ್ಕೆ ಒಪ್ಪಿಕೊಂಡನು. ಏಸಾವನು ತನ್ನ ಅತಿಯಾದ ಹಸಿವೆಯ ಕಾರಣದಿಂದ ಅದಕ್ಕೆ ಒಪ್ಪಿಗೆ ನೀಡಿದನು (ಆದಿಕಾಂಡ 25:34). ಹೀಗೆ ಏಸಾವನು ತನ್ನ ಚೊಚ್ಚಲತನದ ಹಕ್ಕನ್ನು ತಾತ್ಸರ ಮಾಡಿದನು (ಆದಿಕಾಂಡ 25 34). ಈ ವಿಧದಲ್ಲಿ ಏಸಾವನು ದೇವರ ಕೃಪೆಯನ್ನು ಕಳೆದುಕೊಂಡನು (ವಚನ 15). ಆತನು ಮಾಡಿದ ಪಾಪವೇನೆಂದರೆಃ ಆತನು ದೇವರ ಆಶೀರ್ವಾದಕ್ಕಿಂತಲೂ ಹೆಚ್ಚಾಗಿ ಈ ಪ್ರಪಂಚದ ಸುಖವನ್ನು ಇಷ್ಟಪಟ್ಟನು.

ಏಸಾವನು ಸಾವಿರಾರು ರೂಪಾಯಿಗಳ ಬೆಲೆಯನ್ನು ನೀಡಿ ಒಂದು ಚಿಕ್ಕ ಚಾಕ ಲೇಟನ್ನು ಇಷ್ಟಪಡುವ ಚಿಕ್ಕ ಮಗುವಿನಂತಿದ್ದಾನೆ. ಮತ್ತು ದೇವರ ಸಂಗತಿಗಳಿಗಿಂತಲೂ ಪ್ರಾಪಂಚಿಕ ಸಂಗತಿಗಳನ್ನು ಮೌಲ್ಯಮಾಡುವಾಗ ನಾವು ಸಹ ಹಾಗೆಯೇ ಇರುತ್ತೇವೆ. ತಮ್ಮ ಪರಲೋಕದ ಬಾಧ್ಯತೆಯನ್ನು ಕಳೆದುಕೊಳ್ಳಲು ಲೌಕೀಕ ಐಶ್ವರ್ಯವನ್ನು ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನಿಸುವವರು ಎಷ್ಟು ಜನರಿದ್ದಾರೆ (ಮತ್ತಾಯ 6:19-20 ಮತ್ತು ವ್ಯಾಖ್ಯಾನ ನೋಡಿರಿ).

ಏಸಾವನು ತನ್ನ ಚೊಚ್ಚಲ ಹಕ್ಕನ್ನು ಕೊಟ್ಟು ಬಿಟ್ಟ ಬಳಿಕ ಅದನ್ನು ತಿರಿಗಿ ಪಡೆಯುವದಕ್ಕೆ ಪ್ರಯತ್ನಿಸಿ ವಿಫಲನಾದನು. ನಮ್ಮ ವಿಷಯದಲ್ಲಿಯೂ ಹಾಗೆಯೇ ಆಗುವದು. ನಾವು ಗೊತ್ತಿದ್ದೂ ದೇವರ ಕೃಪೆಯನ್ನು ತಿರಸ್ಕರಿಸುವದಾದರೆ ಏಸಾವನಂತೆ ನಾವು ಸಹ ಪರಲೋಕದಲ್ಲಿರುವ ನಮ್ಮ ಬಾಧ್ಯತೆಯನ್ನು ಕಳೆದುಕೊಳ್ಳುವೆವು (ಇಬ್ರಿಯ 10:35 ನೋಡಿರಿ).

**17** ಇಸಾಕನು ಏಸಾವನನ್ನು ಆಶೀವರ್ದಿಸುವ ಕಥೆಯು ಆದಿಕಾಂಡ 27:30-40ರಲ್ಲಿ ಹೇಳಲ್ಪಟ್ಟಿದೆ (ಇಬ್ರಿಯ 11:20 ಮತ್ತು ವ್ಯಾಖ್ಯಾನ ನೋಡಿರಿ). ಏಸಾವನು ದೇವರ ಕೃಪೆಯನ್ನು ತಿರಸ್ಕರಿಸಿದ ತನ್ನ ಪಾಪಕ್ಕಾಗಿ ಎಂದಿಗೂ ನಿಜವಾಗಿ ಮಾನಸಾಂತರ ಪಡಲಿಲ್ಲ. ಅವನು ನಂತರದಲ್ಲಿ ಅದಕ್ಕಾಗಿ ನೊಂದುಕೊಂಡದ್ದು ನಿಜವೇ ಆತನು ತಾನು ಕಳೆದುಕೊಂಡಿದ್ದ ಆಶೀರ್ವಾದಕ್ಕೋಸ್ಕರ ಕಣ್ಣೀರು ಸುರಿಸಿದನು; ಆದರೆ ಆತನು ತನ್ನ ಪಾಪಕ್ಕೋಸ್ಕರ ಎಂದಿಗೂ ಕಣ್ಣೀರು ಸುರಿಸಲಿಲ್ಲ. ಯಾಕೆಂದರೆ ಒಬ್ಬ ವ್ಯಕ್ತಿಯು ದೇವರ ಕೃಪೆಯನ್ನು ತಿರಸ್ಕರಿಸುವಾಗ ಆತನ ಹೃದಯವು ಕಠಿಣವಾಗುತ್ತದೆ ಮತ್ತು ಆತನು ಮಾನಸಾಂತರಕ್ಕೆ ಒಳಪಡುವ ಸಾಧ್ಯತೆಗಳನ್ನೆಲ್ಲಾ ಕಳೆದುಕೊಳ್ಳುತ್ತಾನೆ (ಇಬ್ರಿಯ 3:12-13).

## ಪರಲೋಕದ ಯೆರೂಸಲೇಮ (12:18-29)

**18-19** ಇಲ್ಲಿ ಈ ಪತ್ರಿಕೆಯ ಬರಹಗಾರನು ಯೆಹೂದ್ಯರಿಗೆ ದೇವರು ತನ್ನ ಧರ್ಮ ಶಾಸ್ತ್ರವನ್ನು ಹೇಗೆ ನೀಡಿದನೆಂಬದನ್ನು ಬಣ್ಣಿಸುತ್ತಾನೆ. ಆತನು ಮೋಶೆಯೊಂದಿಗೆ ಮಾತಾಡುವದಕ್ಕೆ ಬೆಂಕಿಯಲ್ಲಿ ಸಿನಾಯ್ ಬೆಟ್ಟಕ್ಕೆ ಇಳಿದು ಬಂದನು; ಅದು ಬೆಂಕಿ ಹತ್ತಿದಂಥ ಬೆಟ್ಟವಾಗಿತ್ತು:ಬೆಟ್ಟವನ್ನು ಒಂದು ಬೃಹತ್ ಮೋಡವು ಕವಿದಿತ್ತು; ಅಲ್ಲಿ ಮೊಬ್ಬೂ, ಕತ್ತಲೆಯೂ, ಬಿರುಗಾಳಿಯೂ ಇತ್ತು (ವಚನ 18). ಬೆಟ್ಟವೆಲ್ಲಾ ವ್ಯಾಗ್ರವಾಗಿ ನಡುಗಿತ್ತು. ದೇವರು ಬೆಟ್ಟದ ಮೇಲೆ ಇಳಿದು ಬರುವಾಗ ಒಂದು ತುತ್ತೂರಿಯ ಧ್ವನಿಯಾಯಿತು. ತರುವಾಯ ದೇವರು ಮೋಡದೊಳಗಿಂದ ಮಾತಾಡಿದನು. ಯೆಹೂದ್ಯರೆಲ್ಲರೂ ಭಯಹಿಡಿದವರಾದರು (ವಿಮೋಚನಕಾಂಡ 19:16-19; 20:18-21).

**20-21** ಯಾವದೇ ಮನುಷ್ಯನಾಗಲಿ ಅಥವಾ ಪ್ರಾಣಿಯಾಗಲಿ ಸಿನಾಯ್ ಬೆಟ್ಟದ ಮೇಲೆ ದೇವರು ಇರುವ ವೇಳೆಯಲ್ಲಿ ಆ ಬೆಟ್ಟವನ್ನು ಮುಟ್ಟಿದರೆ ಆ ಮನುಷ್ಯ ಅಥವಾ ಪ್ರಾಣಿಯನ್ನು ಕೊಲ್ಲಬೇಕಾಗಿತ್ತು; ಇದು ದೇವರ ಆಜ್ಞೆಯಾಗಿತ್ತು. ದೇವರ ಪ್ರಸನ್ನತೆಯ ದೆಸೆಯಿಂದ ಬೆಟ್ಟವೆಲ್ಲವೂ ಆತನ ಪರಿಶುದ್ಧತೆಯಿಂದ ತುಂಬಿತ್ತು. ದೇವರ ಪರಿಶುದ್ಧತೆ ಎಷ್ಟೊಂದು ಗಂಭೀರ ಹಾಗೂ ಭಯಾನಕವಾಗಿತ್ತೆಂದರೆ ಒಂದು ಪ್ರಾಣಿ (ಮೃಗ) ಸಹ ಆ ಬೆಟ್ಟದ ಹತ್ತಿದಲ್ಲಿದ್ದರೆ ಕೊಲ್ಲಲ್ಪಡಬೇಕಾಗಿತ್ತು. ಸ್ವತಃ ಮೃಗವು ಸಹ ಮುಟ್ಟಲ್ಪಡಬಾರದಾಗಿತ್ತು ಅದನ್ನು ದೂರದಿಂದಲೇ ಕಲ್ಲೆಸೆದು ಕೊಲ್ಲಬೇಕಾಗಿರುತಿತ್ತು (ವಚನ 20). ಯೆಹೂದ್ಯರು ಅಂಥ ಆಜ್ಞೆಗಳನ್ನು ಕೇಳಿ ದೇವರ ಪ್ರಸನ್ನತೆಯ ಭಯಾನಕತೆಯನ್ನು ಕಂಡಾಗ ಅದನ್ನು ತಾಳಲಾರದವರಾದರು. ದೇವರ ಪರಿಶುದ್ಧತೆಯ ಸಮೀಪಕ್ಕೆ ಬಂದ ಯಾರೊಬ್ಬರೂ ಬದುಕಲಾಗಲಿಲ್ಲ (ವಿಮೋಚನ ಕಾಂಡ 91:12-13). ಧರ್ಮೋಪದೇಶಕಾಂಡ 9:19ರ ಪ್ರಕಾರವಾಗಿ ಮೋಶೆಯು ಸಹ ಬಹು ಭಯದಿಂದ ನಡಗುತ್ತಿದ್ದನು (ವಚನ 21).

**22** ಹಳೆ ಒಡಂಬಡಿಕೆಯ ಅಡಿಯಲ್ಲಿ ಜನರು ದೇವರ ಪ್ರಸನ್ನತೆಯಲ್ಲಿ ಭಯದಿಂದ ಇರುತ್ತಿದ್ದರು. ಆದರೆ ಹೊಸ ಒಡಂಬಡಿಕೆಯ ಅಡಿಯಲ್ಲಿ ಪ್ರತಿಯೊಬ್ಬ ವಿಶ್ವಾಸಿಯು ಭಯವಿಲ್ಲದೆ ದೇವರ ಪ್ರಸನ್ನತೆಯೊಳಗೆ ಬರಬಹುದು. ನಾವು ಯೆಹೂದ್ಯರಂತೆ ಭಯಪಡುವವರಾಗಿ ಇರಬೇಕಾಗಿಲ್ಲ. ಯಾಕೆಂದರೆ, ನಾವು ನಮ್ಮ ಪ್ರೀತಿಸ್ವರೂಪನೂ ಕರುಣೆಯುಳ್ಳವನೂ ಆಗಿರುವ ಪರಲೋಕದ ತಂದೆಯ ಸನ್ನಿಧಿಯೊಳಗೆ ಬರುವವರಾಗಿದ್ದೇವೆ.

ಚೀಯೋನ್ ಪರ್ವತವು ಅರಸನಾದದಾವೀದನು ಯೆರೂಸಲೇಮ್ ಪಟ್ಟಣವನ್ನು ಸ್ಥಾಪಿಸಿದ ಸ್ಥಳವಾಗಿದೆ. ಈ ಭೂಲೋಕದ ಚೀಯೋನ್ ಪರ್ವತ –ಅಂದರೆ, ಯೆರೂಸಲೇಮ್ ಯೆಹೂದ್ಯಧರ್ಮದ ಪ್ರಮುಖ ಕೇಂದ್ರವಾಗಿತ್ತು. ದಾವೀದನ ಮಗನಾದ ಸೊಲೊಮೋನನು ಯೆಹೂದ್ಯ ಮಹಾದೇವಾಲಯವನ್ನು ಕಟ್ಟಿದ್ದು ಇಲ್ಲಿಯೇ.
ಹಳೆ ಒಡಂಬಡಿಕೆಯ ಭೂಲೋಕದ ಆಲಯವು ಕೇವಲ ಹೊಸ ಒಡಂಬಡಿಕೆಯ ಪರಲೋಕದ ಆಲಯದ ಛಾಯೆ ಮಾತ್ರವೇ ಆಗಿದ್ದ ಪ್ರಕಾರವೇ (ಇಬ್ರಿಯ 9:24), ಭೂಲೋಕದ ಯೆರೂಸಲೇಮ ಪರಲೋಕದ ಯೆರೂಸಲೇಮಿನ ಛಾಯೆ ಮಾತ್ರವೇ ಆಗಿದೆ. "ಪರಲೋಕದ ಯೆರೂಸಲೇಮ" ಜೀವ ಸ್ವರೂಪನಾದ ದೇವರ ಪಟ್ಟಣವಾಗಿದೆ. ಅದು ದೇವರ ಪರಲೌಕೀಕ ಆಲಯವಾಗಿದ್ದು, ಆತನು ಅಲ್ಲಿ ತನ್ನ ದೇವದೂತರೊಂದಿಗೆ ವಾಸಿಸುತ್ತಾನೆ. ಇದು ಅಬ್ರಹಾಮ, ಇಸಾಕ್ ಹಾಗೂ ಯಾಕೋಬರು ಹಾರೈಸುತ್ತಿದ್ದ ಉತ್ತಮ ದೇಶವಾಗಿದ (ಇಬ್ರಿಯ 11:16).

**23** ಇಲ್ಲಿ ಪರಲೋಕದ ಯೆರೂಸಲೇಮು ಚೊಚ್ಚಲ ಮಕ್ಕಳ ಸಭೆ ಎಂದು ಕರೆಯಲ್ಪಟ್ಟಿದೆ. ಯೇಸುಕ್ರಿಸ್ತನೇ ಜೇಷ್ಠಪು ತ್ರನಾಗಿದ್ದಾನೆ. ದೇವರ ರಾಜ್ಯದಲ್ಲಿ ಯೇಸು ಮೊದಲಿಗನೂ ಹಿರಿಯವನೂ ಆಗಿದ್ದಾನೆ (ರೋಮ 8 :29, ಕೊಲೊಸ್ಸೆ 1:15, ಇಬ್ರಿಯ 1:6). ಆದರೆ ಆತನಲ್ಲಿ ನಂಬಿಕೆಯಿಡುವದರ ಮೂಲಕ ನಾವು ಸಹ ಆತ್ಮೀಕ ಅರ್ಥದಲ್ಲಿ ಚೊಚ್ಚಲ ಮಕ್ಕಳು ಆಗಬಹುದು. ನಾವು ದೇವರರಾಜ್ಯಕ್ಕೆ ಬಾಧ್ಯರಾಗುವ "ಚೊಚ್ಚಲ ಮಕ್ಕಳು" ಆಗಿದ್ದೇವೆ. ನಾವು ಉತ್ಸವಸಂಘ –ಕ್ರಿಸ್ತನ ಸಭೆಯ– ಸದಸ್ಯರಾಗಿದ್ದೇವೆ. ನಮ್ಮ ಹೆಸರುಗಳು ಪರಲೋಕದಲ್ಲಿ ಬರೆಯಲ್ಪಟ್ಟಿವೆ (ಲೂಕ 10:20, ಪ್ರಕಟಣೆ 21:27 ನೋಡಿರಿ).

ಸಿದ್ಧಿಗೆ ಬಂದಿರುವ ನೀತಿವಂತರು ಹಳೆ ಒಡಂಬಡಿಕೆಯ ನಂಬಿಕೆಯ ಧೀರರಾಗಿದ್ದು ಅವರಲ್ಲಿ ಅನೇಕರು 11ನೇ ಅಧ್ಯಾಯದಲ್ಲಿ ಪ್ರಸ್ತಾಪಿಸಲ್ಪಟ್ಟದ್ದಾರೆ. ಅವರು ಸಹ ಚೊಚ್ಚಲ ಮಕ್ಕಳ ಸಭೆಯೊಳಗೆ ಸೇರಿಸಲ್ಪಡುವರು. ಈ ವಚನದಲ್ಲಿ

ಬರೆಯಲ್ಪಟ್ಟಿರುವದರ ಆಧಾರದ ಮೇಲೆ, ವಿಶ್ವಾಸಿಗಳು ಸತ್ತ ಕೂಡಲೇ ಅವರ ಆತ್ಮಗಳು ಸಿದ್ಧಿಗೆ ಬರುತ್ತವೆ ಮತ್ತು ಒಮ್ಮೆಲೆ ಪರಲೋಕವನ್ನು, "ಪರಲೋಕ ಯೆರೂಸಲೇಮ್" ಪ್ರವೇಶಿಸುವವರು ಎಂದು ಅನೇಕ ಜನರು ಆಲೋಚಿಸುತ್ತಾರೆ (ಲೂಕ 23:42-43 ನೋಡಿರಿ). ಅನಂತರ, ಕ್ರಿಸ್ತನು ತಿರಿಗಿ ಭೂಲೋಕಕ್ಕೆ ಬರುವಾಗ ಅವರ ದೇಹಗಳು ಪುನರುತ್ಥಾನ ಗೊಂಡು ಅವರು ನೂತನವಾದ, ವಿಮೋಚನೆಗೊಂಡ ಆತ್ಮೀಕ ದೇಹವನ್ನು ಪಡೆಯುವರು ಎಂದು ಹೇಳುತ್ತಾರೆ (ರೋಮ 8:23).

ದೇವರು ಎಲ್ಲರಿಗೆ ನ್ಯಾಯಾಧಿಪತಿಯಾಗಿದ್ದಾನೆ. ಆತನು ತನ್ನ ವೈರಿಗಳಿಗೆ ಮುಯ್ಯಿ ತೀರಿಸುವನು, ಮತ್ತು ಆತನು ತನ್ನ ಜನರನ್ನು ಪ್ರತಿಪಾದಿಸುವನು. ಆದರೆ ಆತನು ತನ್ನ ಜನರಿಗೂ ನ್ಯಾಯ ತೀರಿಸುವನು; ನಮ್ಮಲ್ಲಿ ಯಾರೂ ದೇವರ ನ್ಯಾಯ ತೀರ್ಪನ್ನು ತಪ್ಪಿಸಿಕೊಳ್ಳುವದಿಲ್ಲ. ನಾವು ಆತನಿಗೆ ವಿಧೇಯರಾಗುವದಾದರೆ ಯಾವ ಕಾರಣಕ್ಕೂ ಭಯಪಡಬೇಕಾಗಿರುವದಿಲ್ಲ. ಆದರೆ ನಾವು ಬೇಕೆಂದು ಆತನಿಗೆ ಅವಿಧೇಯರಾಗುವದಾದರೆ ಬಹಳಷ್ಟು ಭಯಪಡಬೇಕಾಗುವದು (ಮತ್ತಾಯ 7:21, ಇಬ್ರಿಯ 10:30-31 ನೋಡಿರಿ).

**24** ನಾವು ಪರಲೋಕದ ಯೆರೂಸಲೇಮನ್ನು ಪ್ರವೇಶಿಸುವಾಗ ಹೊಸ ಒಡಂಬಡಿಕೆ ಮಧ್ಯಸ್ಥನಾಗಿರುವ ಯೇಸುವನ್ನು ನೋಡುವೆವು (ಇಬ್ರಿಯ 8:6,9:15 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆತನ ಪ್ರೋಕ್ಷಣ ರಕ್ತದ –ಅಂದರೆ, ಆತನು ಸುರಿಸಿದ ರಕ್ತದ– ಮೂಲಕ ನಮ್ಮ ಮನಸಾಕ್ಷಿಗಳು ಶುದ್ಧ ಮಾಡಲ್ಪಟ್ಟಿರುತ್ತವೆ (ಇಬ್ರಿಯ 9:14). ಹೀಗೆ ನಾವು ಪರಲೋಕದ ಸನ್ನಿಧಿಯನ್ನು (ಆಲಯವನ್ನು) ಪ್ರವೇಶಿಸಿ ದೇವರ ಸಮೀಪಕ್ಕೆ ಬರುವದಕ್ಕೆ ಶಕ್ತರಾಗಿದ್ದೇವೆ (ಇಬ್ರಿಯ 10:19, 22). ಯೇಸುವಿನ ರಕ್ತವು ಹೇಬೆಲನ ರಕ್ತಕ್ಕಿಂತ ಹಿತಕರವಾಗಿ ಮಾತಾಡುತ್ತದೆ. ಹೇಬೆಲನ

ರಕ್ತವು ಪಾಪಿಯಾದ ಕಾಯಿನ ವಿರುದ್ಧ ಪ್ರತೀಕಾರಕ್ಕಾಗಿ ಕೂಗುತ್ತದೆ (ಆದಿಕಾಂಡ 4:8-10; ಇಬ್ರಿಯ 11:4 ನೋಡಿರಿ). ಆದರೆ ಯೇಸುವಿನ ರಕ್ತವು ಪಾಪಿಗಳಾದ ಮನುಷ್ಯರಿಗೆ ಕರುಣೆ ದೊರೆಯಬೇಕೆಂದು ಕೂಗುತ್ತದೆ. ಯೇಸುವಿನ ರಕ್ತವು ಕ್ಷಮಾಪೆ ಹಾಗೂ ದೇವರೊಂದಿಗಿನ ಸಮಾಧಾನದ ಕುರಿತಾಗಿ ಮಾತಾಡುತ್ತದೆ. ಆದದರಿಂದ, ಹೇಬೆಲನ ರಕ್ತಕ್ಕಿಂತ ಯೇಸುವಿನ ರಕ್ತವು ಹಿತಕರವಾಗಿ ಮಾತಾಡುತ್ತದೆ.

**25** ನೀವು ಮಾತಾಡುತ್ತಿರುವಾತನ –ಅಂದರೆ, ದೇವರ– ಮಾತನ್ನು ಕೇಳಲೊಲ್ಲೆವೆಂದು ಹೇಳಬಾರದು. ದೇವರು ಭೂಮಿಯ ಮೇಲೆ .....ಇದ್ದ ಯೆಹೂದ್ಯರನ್ನು ಎಚ್ಚರಿಸಿದನು. ಆತನು ಅವರೊಂದಿಗೆ ಮಾತಾಡಲು ಸಿನಾಯ್ ಬೆಟ್ಟಕ್ಕೆ ಇಳಿದುಬಂದನು (ವಚನಗಳು 18-19, ನೋಡಿರಿ). ಆದರೆ ಕೊನೆಯಲ್ಲಿ ಯೆಹೂದ್ಯರು ದೇವರ ಮಾತಿಗೆ ಕಿವಿಗೊಡಲಿಲ್ಲವಾದ್ದರಿಂದ ದಂಡಿಸಲ್ಪಟ್ಟರು.

ಇಂದಿಗೂ ದೇವರು ನಮ್ಮ ಜೊತೆಯಲ್ಲಿ ಮಾತಾಡುತ್ತಿರುತ್ತಾನೆ. ಈಗಲೂ ಆತನು ಪರಲೋಕದಿಂದ ನಮ್ಮನ್ನು ಎಚ್ಚರಿಸುತ್ತಿದ್ದಾನೆ. ಯೆಹೂದ್ಯ ಭೂಲೋಕದಲ್ಲಿ ದೇವರ ಎಚ್ಚರಿಕೆಯನ್ನು ತಿರಸ್ಕರಿಸಿದಾಗ ದಂಡನೆಯಿಂದ ತಪ್ಪಿಸಿಕೊಳ್ಳಲಿಲ್ಲವಾದರೆ ಇಂದು ನಮ್ಮಲ್ಲಿ ಪರಲೋಕದಿಂದ ಬರುವ ಆತನ ಎಚ್ಚರಿಕೆಯನ್ನು ತಿರಿಸ್ಕರಿಸುವವರು ಖಂಡಿತವಾಗಿಯೂ ದಂಡನೆಯಿಂದ ತಪ್ಪಿಸಿಕೊಳ್ಳರು (ಇಬ್ರಿಯ 3:7-12; 10:28-29 ನೋಡಿರಿ).

**26** ದೇವರು ಸಿನಾಯ್ ಪರ್ವತದಲ್ಲಿ ಯೆಹೂದ್ಯರೊಂದಿಗೆ ಮಾತಾಡಿದಾಗ ಬೆಟ್ಟವೆಲ್ಲಾ ಬಹಳವಾಗಿ ಕಂಪಿಸಿತು (ವಿಮೋಚನಕಾಂಡ 19:18). ತರುವಾಯ ದೇವರು ಹಳೆ ಒಡಂಬಡಿಕೆಯ ಪ್ರವಾದಿಗಳ ಮೂಲಕ ಮಾತಾಡುತ್ತಾ ಆತನು ಇನ್ನೊಂದು ಸಾರಿ ಭೂಮಿಯನ್ನು– ಭೂಮಿಯನ್ನು ಮಾತ್ರವಲ್ಲದೆ ಪರಲೋಕವನ್ನೂ ನಡುಗಿಸುವೆನೆಂದು ಹೇಳಿದನು (ಯೇಶಾಯ 13:13; ಹಗ್ಗಾಯ 2:6 ). ಆದರ ಅರ್ಥವೇನೆಂದರೆಃ ದೇವರು ಒಂದು ದಿನದಲ್ಲಿ ಭೂಮಿಯನ್ನು ಪರಲೋಕವನ್ನು ನಾಶಮಾಡಿ ಅವು ಗಳ ಸ್ಥಾನದಲ್ಲಿ ನೂತನಾಕಾಶ ಮಂಡಲವನ್ನೂ ನೂತನ ಭೂಮಂಡಲವನ್ನು ಸ್ಥಾಪಿಸುವನು (ಪ್ರಕ. 21:1).

**27** ದೇವರು ಕದಲಿಸಿರುವ ವಸ್ತುಗಳನ್ನು –ಅಂದರೆ, ನಿರ್ಮಿತವಾದವು ಗಳನ್ನು ತೆಗೆದು ಹಾಕುವನು. ಈ ನಿರ್ಮಿತವಾದ ವಸ್ತುಗಳು ಪರಲೋಕ ಹಾಗೂ ಭೂಲೋಕಗಳಾಗಿವೆ. ದೇವರು ಅವು ಗಳನ್ನು ತೆಗದುಹಾಕುವನು. ಅಂದರೆ, ಪರಲೋಕ ಭೂಲೋಕಗಳು ನಾಶವಾಗುವವು; ಅವು ಗಳು ಅಳಿದುಹೋಗುವವು (ಮಾರ್ಕ 13:31). ಆದರೆ ದೇವರ ರಾಜ್ಯವು – ಪರೋಕದ ಯೆರೂಸಲೇಮ್ (ವಚನ 22)– ಕದಲಿಸಲ್ಪಡದೆ ಸ್ಥಿರವಾಗಿ ನಿಲ್ಲುವದು.

**28-29** ವಿಶ್ವಾಸಿಗಳಾದ ನಾವು ಕದಲಿಸಲಾರದ ರಾಜ್ಯಕ್ಕೆ (ದೇವರ ರಾಜ್ಯಕ್ಕೆ) ಬಾಧ್ಯರೂ ಪ್ರಜೆಗಳೂ ಆಗಿದ್ದೇವೆ. ಆದದರಿಂದ, ದೇವರುನಮಗೆ ತೋರಿಸಿದ ಮಹಾಕೃಪೆಗಾಗಿ ಆತನಿಗೆ ಯಾವಾಗಲೂ ಕೃತಜ್ಞತೆಯುಳ್ಳವರಾಗಿರೋಣ. ಅದೇ ಸಮಯದಲ್ಲಿ, ನಾವು ದೇವರಿಗೆ ಸರ್ಮಕವಾದ ಆರಾಧನೆಯನ್ನು ಮಾಡಬೇಕು –ಅಂದರೆ, ನಾವು ಆತನನ್ನು ಭಕ್ತಿಯಿಂದಲೂ ಭಯದಿಂದಲೂ ಆರಾಧಿಸಬೇಕು. ದೇವರು ಪ್ರೀತಿಸ್ವರೂಪನೂ ಕರುಣೆಯುಳ್ಳವನೂ ಆಗಿರುವ ಪರಲೋಕದ ತಂದೆಯಾಗಿದ್ದಾನೆ, ಆದರೆ ಆತನು ದಹಿಸುವ ಅಗ್ನಿ ಸಹ ಆಗಿದ್ದಾನೆ (ಧರ್ಮೋಪದೇಶಕಾಂಕ 4:24, ಯೆಶಾಯ 33:14; 1 ಕೊರಿಂಥ 3:13-15, ಇಬ್ರಿಯ 10:26-27; 2 ಪೇತ್ರ 3:10-13). ಆತನನ್ನು ಬೇಕೆಂದೆ ತಿರಸ್ಕರಿಸುವವರು ಎಂದಿಗೂ ಆತನನ್ನು ಒಬ್ಬ ಪ್ರೀತಿಯುಳ್ಳ ತಂದೆಯಾಗಿ ತಿಳಿಯುವದಿಲ್ಲ; ಅವರು ಆತನನ್ನು ದಹಿಸುವ ಅಗ್ನಿ, ನ್ಯಾಯತೀರ್ಪು ಹಾಗೂ ದಂಡನೆಯ ಒಂದು "ಅಗ್ನಿ"ಯಾಗಿ ಮಾತ್ರವೇ ತಿಳಿಯುವರು. ಆದದರಿಂದ, ಎಲ್ಲಾ ಮನುಷ್ಯರು ದೇವರ ಬಳಿಗೆ ಭಕ್ತಿಯಿಂದಲೂ ಭಯದಿಂದಲೂ ಬರಬೇಕು; ಆತನು ರಕ್ಷಿಸುವದಕ್ಕೆ ಪರಾಕ್ರಮಿಯಾಗಿದ್ದಾನೆ, ಆದರೆ ದಂಡಿಸುವದಕ್ಕೂ ಆತನು ಪರಾಕ್ರಮಿಯಾಗಿರುವನು

## ಅಧ್ಯಾಯ - 13

### ಮುಕ್ತಾಯದ ಪ್ರಬೋಧನೆಗಳು (13:1-17)

1 ಯೇಸು ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆ; "ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ ಏನೆಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು" (ಯೋಹಾನ 13:34). ಅಂಥ ಪ್ರೀತಿಯು ಎಲ್ಲವೂ ಸುಗಮವಾಗಿ ಸಾಗುತ್ತಿರುವಾಗ ನಮ್ಮೊಳಗೆ ಬರುವಂಥ ಒಂದು ಆದರದ ಹಾಗೂ ಸಂತೋಷದಾಯಕ ಭಾವನೆ ಮಾತ್ರವೇ ಆಗಿರುವದಿಲ್ಲ. ಒಬ್ಬರನ್ನೊಬ್ಬರು ಸಹೋದರರಂತೆ ಪ್ರೀತಿಸುವದು ದುಬಾರಿಯಾಗಿರುತ್ತದೆ. ಯೇಸು ಮೇಲಿನ ತನ್ನ ಆಜ್ಞೆಗೆ ಈ ಮಾತುಗಳನ್ನು ಸೇರಿಸುತ್ತಾನೆಃ "ನಾನು ನಿಮ್ಮನ್ನು ಪ್ರೀತಿಸಿದ ಮೇರಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು" (ಯೋಹಾನ 13:34). ಯೇಸು ನಮ್ಮನ್ನು ಹೇಗೆ ಪ್ರೀತಿಸಿದನು? ಆತನು ತನ್ನ ಸ್ವಪ್ರಾಣವನ್ನೇ ನಮಗೋಸ್ಕರ ಕೊಟ್ಟು ಬಿಟ್ಟನು (1 ಯೋಹಾನ 3:16-17).

ಸಹೋದರ ಪ್ರೀತಿಯು ನೆಲೆಯಾಗಿರಲಿ. ಸಮಸ್ಯೆ ಹಾಗೂ ಹಿಂಸೆಯ ಸಮಯಗಳಲ್ಲಿಯೂ ನಾವು ಪರಸ್ಪರರೆಡೆಗೆ ಹೊಂದಿರುವ ಪ್ರೀತಿಯು ಬೆಳೆಯುತ್ತಿರಬೇಕು (ರೋಮ 12:10; 1 ಥೆಸಲೋನಿಕ 4:9-10 ನೋಡಿರಿ). ಈ ವಿಧದಲ್ಲಿ ನಾವು ಕಷ್ಟಗಳಲ್ಲಿ ದೃಢವಾಗಿ ನಿಲ್ಲುವದಕ್ಕೆ ಶಕ್ತರಾಗುವೆವು.

ಇಬ್ರಿಯರು ಹಿಂಸೆಯನ್ನು ಎದುರಿಸುತ್ತಿದ್ದರು. ಬರಹಗಾರನು ಅವರಿಗೆ ಹೇಳುವ ಮಾತೇನೆಂದರೆ ದೃಢವಾಗಿ ನಿಲ್ಲಬೇಕಾದರೆ ಅವರು ಒಬ್ಬರನ್ನೊಬ್ಬರು ಪ್ರೀತಿಸುತ್ತಲಿರಬೇಕು ಎಂಬದೇ.

2 ಇಲ್ಲಿ ಬರಹಗಾರನು ಹಳೆ ಒಡಂಬಡಿಕೆಯ ಕಥೆಯೊಂದನ್ನು ಜ್ಞಾಪಕ ಮಾಡಿಕೊಳ್ಳುತ್ತಾನೆ, ಅದರಲ್ಲಿ ಅಬ್ರಹಾಮನು ದೇವದೂತರನ್ನು ಸತ್ಕರಿಸಿದ್ದನು, ಹಾಗೂ ಅವರಲ್ಲಿ ಒಬ್ಬನು ಸ್ವತಃ ದೇವರೇ ಆಗಿರುತ್ತಾನೆ (ಆದಿಕಾಂಡ 18:1-10). ಇತರ ಇಬ್ಬರು ದೇವದೂತರು ಅಬ್ರಹಾಮನ ಸೋದರ ಸಂಬಂಧಿಯಾದ ಲೋಟನ ಬಳಿಗೆ ಹೋಗಿ ಅವನನ್ನು ನಾಶನದಿಂದ ರಕ್ಷಿಸುತ್ತಾರೆ (ಆದಿಕಾಂಡ 19:1-16). ಬಹುಶಃ ಒಬ್ಬ ವಾಸ್ತವಿಕ ದೇವದೂತನು ಎಂದಿಗೂ ನಮ್ಮ ಮನೆಗೆ ಬರದಿರನೇನೋ, ಆದರೆ ಅಪರಿಚಿತರು ಬರುವರು, ನಾವು ಅವರನ್ನು ಹಿಂದಕ್ಕೆ ಕಳುಹಿಸಿಬಿಡಬಾರದು. ಲೋಟನ ಬಳಿಗೆ ಹೋದ ದೇವದೂತನಂತೆ ಅಪರಿಚಿತರು ನಮಗೆ ಒಂದು ದಿನ ದೊಡ್ಡ ಆಶೀರ್ವಾದವನ್ನು ತರಬಹುದಾಗಿದೆ.

ಹೇಗಿದ್ದರೂ, ನಾವು ಅಪರಿಚಿತರನ್ನು ಅಥವಾ ಅಥಿತಿಗಳನ್ನು ಆಶೀರ್ವಾದ ಪಡೆದುಕೊಳ್ಳಬೇಕೆಂಬದಕ್ಕಾಗಿ ಅಲ್ಲ ಆದರೆ ಆಶೀರ್ವಾದವನ್ನು ನೀಡುವದಕ್ಕಾಗಿಯೇ ಸತ್ಕರಿಸಬೇಕು! ಅಥಿತಿಸತ್ಕಾರ ಮಾಡುವದು ಒಂದು ಪ್ರಾಮುಖ್ಯವಾದ ಕ್ರೈಸ್ತೀಯ ಕರ್ತವ್ಯವಾಗಿದೆ (ಮತ್ತಾಯ 25:34-40; ರೋಮ 12:13; 1 ಪೇತ್ರ 4:9).

3 ಈ ವಚನದಲ್ಲಿ ಬರಹಗಾರನುನಮಗೆ ಒಂದು ಪ್ರಾಮುಖ್ಯವಾದ ಸೂತ್ರವನ್ನು ನೀಡುತ್ತಾನೆಃ ಅದೇನೆಂದರೆ, ಕೊರತೆಯಲ್ಲಿರುವವರನ್ನು ಯಥೋಚಿತವಾಗಿ ಪ್ರೀತಿಸುವಂತಾಗಲು ನಾವು ನಮ್ಮ ಅವರ ಸ್ಥಾನದಲ್ಲಿ ಇಟ್ಟುಕೊಳ್ಳಬೇಕು ನಾವು ಅವರ ಪರಿಸ್ಥಿತಿಗಳಲ್ಲಿ ನಮ್ಮನ್ನು ಊಹಿಸಿಕೊಳ್ಳಲು ಪ್ರಯತ್ನಿಸಬೇಕು. ನಾವು ಇದನ್ನು ಮಾಡುವದಾದರೆ ಅವರನ್ನು ಇನ್ನು ಉತ್ತಮವಾಗಿ ಪ್ರೀತಿಸುವದಕ್ಕೂ ದಾಕ್ಷಿಣ್ಯ ತೋರುವದಕ್ಕೂ ಶಕ್ತರಾಗುವೆವು. ಸೆರೆಯಲ್ಲಿರುವವರನ್ನು ನೆನಪಿಸಿಕೊಳ್ಳುವಾಗ ನಾವು ಅದೇ ವೇಳೆಯಲ್ಲಿ ಅವರೊಂದಿಗೆ ಸೆರೆಯಲ್ಲಿದ್ದೇವೆಂದು ಊಹಿಸಿಕೊಳ್ಳೋಣ. ನಾವು ಶೋಷಣೆಗೊಳಗಾದವರನ್ನು ಅಥವಾ ಅವಮಾನಕ್ಕೊಳಗಾದವರನ್ನು ಅಥವಾ ಯಾವದೆ ವಿಧದಲ್ಲಿ ದಕ್ಕೆಗೊಳಗಾದವರನ್ನು ಕುರಿತು ಯೋಚಿಸುವಾಗ ಬಾಧೆಗಳನ್ನು ಅವರ ಬದಲಾಗಿ ನಾವು ಅನುಭವಿಸುತ್ತಿದ್ದೇವೇನೋ ಎಂದು ಊಹಿಸಿಕೊಳ್ಳೋಣ.

ನಿಮಗೂ ಅನ್ಯಾಯ ಸಂಭವಿಸಿತ್ತೆಂದು ತಿಳಿದು ಅನ್ಯಾಯ ಅನುಭವಿಸುವವರನ್ನು ನೆನಸಿರಿ [24]. ಎಂದು ಬರಹಗಾರನು ಹೇಳುತ್ತಾನೆ. ನಾವು ಅವರ ಹಾಗೆಯೇ ದೇಹಗಳನ್ನು ಹೊಂದಿದ್ದೇವೆ; ಅವರು ಅನುಭವಿಸುವ ಕಷ್ಟ ಸಂತೋಷಗಳನ್ನು ನಾವೂ ಅನುಭವಿಸುತ್ತೇವೆ. ಮತ್ತು ನಾಳೆ ನಾವು ಕಷ್ಟಗಳನ್ನನುಭವಿಸುವ ಸರದಿಯು ನಿಶ್ಚಯವಾಗಿಯೂ ಬರುತ್ತದೆ. ಆ ಸಮಯದಲ್ಲಿ, ನಮಗೆ ಅವರ ಪ್ರೀತಿ ದಯೆಗಳ ಅಗತ್ಯವಿರುತ್ತದೆ! (ಇಬ್ರಿಯ 10:33-34 ಮತ್ತು ವ್ಯಾಖ್ಯಾನ ನೋಡಿರಿ).

4 ದಾಂಪತ್ಯವನ್ನು ದೇವರೇ ಸ್ಥಾಪಿಸಿದ್ದಾನೆ (ಆದಿಕಾಂಡ 2:24). ಆದದರಿಂದ, ದಾಪಂತ್ಯದಲ್ಲಿ ಪುರುಷ ಮತ್ತು ಸ್ತ್ರೀಯು ಒಂದು ಗೂಡುವದು ದೇವರಿಗೆ ಮಾನ್ಯವಾದದ್ದೂ ಮೆಚ್ಚಿಕೆಯಾದದ್ದೂ ಆಗಿದೆ. ಮತ್ತು ದಾಂಪತ್ಯವು ದೇವರಿಗೆ ಮಾನ್ಯವೂ ಮೆಚ್ಚಿಕೆಯಾದದ್ದೂ ಆಗಿರುವದಾದರೆ ದಾಂಪತ್ಯದ ಹಾಸಿಗೆಯು (ದಾಂಪತ್ಯದಲ್ಲಿನ ಲೈಂಗಿಕ ಸಂಸರ್ಗವು) ಸಹ ದೇವರಿಗೆ ಮಾನ್ಯವಾದದ್ದೂ ಮೆಚ್ಚಿಕೆಯಾದದ್ದೂ ಆಗಿರುತ್ತದೆ. ಯಾಕೆಂದರೆ ಲೈಂಗಿಕ ಸಂಸರ್ಗವು ದಾಂಪತ್ಯದ ಒಂದು ಮಹತ್ವದ ಭಾಗವಾಗಿರುತ್ತದೆ.

ಒಬ್ಬ ಜಾರನು ಈಗಾಗಲೇ ವಿವಾಹವಾಗಿ ಮತ್ತೊಬ್ಬರೊಂದಿಗೆ ಸಂಸರ್ಗಮಾಡುವಂಥ ವ್ಯಕ್ತಿಯಾಗಿದ್ದಾನೆ. ಯಾವದೇ ವಿಧದ ಅನೈತೀಕ ಲೈಂಗಿಕ ಚಟುವಟಿಕೆಯಲ್ಲಿ ತೊಡಗಿರುವ ವಿವಾಹಿತರಾಗಲಿ ಅಥವಾ ಅವಿವಾಹಿತರಾಗಲಿ ಎಲ್ಲರೂ ವ್ಯಭಿಚಾರಿಗಳು ಆಗಿದ್ದಾರೆ.

ಮೊದಲ ಹೆಂಡತಿಯು ಇನ್ನೂ ಬದುಕಿರುವಾಗಲೇ ಎರಡನೆಯ ಹೆಂಡತಿಯನ್ನು ವಿವಾಹಮಾಡಿಕೊಳ್ಳುವದು ವ್ಯಭಿಚಾರ ಮಾಡಿದಂತಾಗುತ್ತದೆ –ಸ್ವತಃ ಮೊದಲನೆಯ ಹೆಂಡತಿಯು ವ್ಯಭಿಚಾರ ಮಾಡಿದವಳಾಗಿರದ ಹೊರತು ಅಷ್ಟೇ

(ಮತ್ತಾಯ 5:32; ಮಾರ್ಕ 10:11-12ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಒಂದು ವೇಳೆ ಒಬ್ಬ ವಿವಾಹಿತ ವ್ಯಕ್ತಿಯು ಸೂಳೆಯ ಬಳಿಗೆ ಹೋಗುವದಾದರೆ ಅವನು ಸಹ ಅದೇ ರೀತಿಯಲ್ಲಿ ವ್ಯಭಿಚಾರಮಾಡುವವನಾಗಿರುತ್ತಾನೆ. ದೇವರು ಎಲ್ಲಾ ವ್ಯಭಿಚಾರಿಗಳಿಗೂ ಎಲ್ಲಾ ಜಾರರಿಗೂ ನ್ಯಾಯತೀರಿಸುವನು; ಮಾನಸಾಂತರ ಪಡದವರು ಪರಲೋಕವನ್ನು ಪ್ರವೇಶಿಸುವವದಿಲ್ಲ (1 ಕೊರಿಂಥ 6:9-10;1 ಥೆಸಲೋನಿಕ 4:3-6).

5 ನಾವು ಯಾವದೇ ಪ್ರಾಮುಖ್ಯವಾದ ಸಂಗತಿಯಲ್ಲಿ ಕೊರತೆಯುಳ್ಳವರಾಗಿರವದನ್ನು ದೇವರು ಇಷ್ಟಪಡುವದಿಲ್ಲ. ದೇವರು ನಮಗೆ ಅಗತ್ಯವಾದವುಗಳನ್ನೆಲ್ಲಾ ಒದಗಿಸುವದಕ್ಕೆ ಸಿದ್ಧನಾಗಿದ್ದಾನೆ, ಆದರೆ ಸಾಮಾನ್ಯವಾಗಿ ಆತನು ನಮಗೆ ಅಗತ್ಯವಾದದ್ದಕ್ಕಿಂತಲೂ ಅಧಿಕವಾಗಿ ಒದಗಿಸುವದಿಲ್ಲ. ನಮಗೆ ಅಗತ್ಯವಾದದ್ದಕ್ಕಿಂತಲೂ ಹೆಚ್ಚಿನದನ್ನು ಆಶಿಸುವದು ದುರಾಶೆಯಾಗಿರುತ್ತದೆ. ಮತ್ತು ಒಬ್ಬ ದುರಾಶೆಯುಳ್ಳ ವ್ಯಕ್ತಿಯು ವಿಗ್ರಹಾರಾಧಕನಾಗಿದ್ದಾನೆ, ಯಾಕೆಂದರೆ ಆತನು ದೇವರ ಸ್ಥಾನದಲ್ಲಿ ಐಶ್ವರ್ಯವನ್ನೂ ಆಸ್ತಿಗಳನ್ನೂ ಇಡುತ್ತಾನೆ (ಎಫೆಸ 5:5; ಕೊಲೊಸ್ಸೆ 3:5 ,ನೋಡಿರಿ). ಅಂಥ ಮನುಷ್ಯನು ದೇವರಿಗೆ ಬದಲಾಗಿ ತನ್ನ ಐಶ್ವರ್ಯವನ್ನು ಆರಾಧಿಸುತ್ತಾನೆ.

ಪೌಲನು ತಿಮೊಥೆಯನಿಗೆ ಬರೆದದ್ದೇನೆಂದರೆಃ ಹಣದಾಶೆಯು ಸಕಲ ವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ. ಕೆಲವರು ಅದಕ್ಕಾಗಿ ಆತುರಪಟ್ಟು ಅದರಿಂದ ಕ್ರಿಸ್ತನಂಬಿಕೆಯನ್ನು ಬಿಟ್ಟು ಅಲೆದಾಡಿ ಅನೇಕ ವೇದನೆಗಳಿಂದ ತಮ್ಮನ್ನು ತಿವಿಸಿಕೊಳ್ಳುತ್ತಾರೆ (1 ತಿಮೊಥೆ 6:10). ಹಣದಾಶೆ ಉಳ್ಳವನಾದ ವ್ಯಕ್ತಿಯು ದೇವರನ್ನು ಕ್ರಮೇಣ ಕಡಿಮೆ ಕಡಿಮೆಯಾಗಿಯೂ ತನ್ನ ಪ್ರಾಪಂಚಿಕ ಸಂಪತ್ತನ್ನು ಹೆಚ್ಚು ಹೆಚ್ಚಾಗಿಯೂ ಪ್ರೀತಿಸುತ್ತಾನೆ. ಯಾವನೂ ಏಕಕಾಲದಲ್ಲಿ ದೇವರನ್ನೂ ಹಣವನ್ನೂ ಪ್ರೀತಿಸಲಾರನು (ಮತ್ತಾಯ 6:24 ಮತ್ತು ವ್ಯಾಖ್ಯಾನ ನೋಡಿರಿ). ಅದು ಮಾತ್ರವಲ್ಲ ಹಣವನ್ನು ಪ್ರೀತಿಸುವವರು ಕೊನೆಗೆ ತಮ್ಮನ್ನು ಅನೇಕ ವೇದನೆಗಳಿಂದ ತಿವಿಸಿಕೊಳ್ಳುತ್ತಾರೆ. ಈ ವೇದನೆಗಳು ಚಿಂತೆ ಹಾಗೂ ವ್ಯಾಕುಲತೆಗಳಾಗಿವೆ. ಹಣವನ್ನು ಪ್ರೀತಿಸುವವನು ಯಾವಾಗಲು ತನ್ನ ಹಣವನ್ನು ಕಳೆದುಕೊಳ್ಳುವ ಭಯದಲ್ಲಿರುತ್ತಾನೆ ಆತನಿಗೆ ಸಮಾಧಾನವೇ ಇರುವದಿಲ್ಲ; ಆತನು ಎಂದಿಗೂ ತೃಪ್ತಿಹೊಂದದೆ ಯಾವಾಗಲೂ ಹೆಚ್ಚು ಹೆಚ್ಚಾಗಿ ಹೊಂದಲು ಬಯಸುತ್ತಾನೆ.

ನಾವು ಹಾಗೆ ಇರದಿರೋಣ. ಬದಲಾಗಿ, ನಮಗಿರುವದರಲ್ಲಿ ತೃಪ್ತರಾಗಿರುವದಕ್ಕೆ ಕಲಿತುಕೊಳ್ಳೋಣ (ಫಿಲಿಪ್ಪಿ 4:11-12). ಪೌಲನು ಬರೆದದ್ದೇನೆಂದರೆಃ ಸಂತುಷ್ಟಿಸಹಿತವಾದ ಭಕ್ತಿಯು ದೊಡ್ಡ ಲಾಭವೇಸರಿ. ನಾವು ಲೋಕದೊಳಕ್ಕೆ ಏನೂ ತಕ್ಕೊಂಡು ಬರಲಿಲ್ಲವಷ್ಟೇ ಅದರೊಳಗಿಂದ ಏನೂ ತಕ್ಕೊಂಡು ಹೋಗಲಾರೆವು. ನಮಗೆ ಅನ್ನವಸ್ತ್ರಗಳಿದ್ದರೆ ಸಾಕು (1 ತಿಮೊಥೆ 6:31-33).

ಬರಹಗಾರನು ಇಲ್ಲಿ ಧರ್ಮೋಪದೇಶಕಾಂಡ 31:6ರಿಂದ ಉಲ್ಲೇಖಿಸುತ್ತಾನೆ. ದೇವರು ನಮ್ಮನ್ನು ಎಂದಿಗೂ ಕೈಬಿಡುವದಿಲ್ಲ ಎಂದಿಗೂ ತೊರೆಯುವದಿಲ್ಲ ನಾವು ಏಕೆಚಿಂತೆ ಮಾಡಬೇಕು.

6 ಇಲ್ಲಿ ಬರಹಗಾರನು ಕೀರ್ತನೆಗಳು 118:6ರಿಂದ ಉಲ್ಲೇಖಿಸುತ್ತಾನೆ. ವಿಶ್ವಾಸಿಗಳು ಸರ್ವಶಕ್ತದೇವರ ಸಂರಕ್ಷಣೆಯ ಅಡಿಯಲ್ಲಿರುತ್ತಾರೆ. ನಾವು ಭಯಪಡುವ ಅಗತ್ಯವಿಲ್ಲ.

7 ಈ ವಚನದಲ್ಲಿ ಬರಹಗಾರನು ಹಿಂದಿನ ನಾಯಕರ ಬಗ್ಗೆ ಮಾತಾಡುತ್ತಿದ್ದಾನೆ. ಅವರು ಬದುಕಿರುವಾಗ ನಾವು ಅವರನ್ನು ಗೌರವಿಸಿರುವದಾದರೆ ಅವರು ಹೊರಟು ಹೋದ ಬಳಿಕವೂ ಅವರನ್ನು ನಾವು ಗೌರವಿಸುತ್ತಿರಬೇಕು. ಅವರು ನಮಗೆ ದೇವರ ವಾಕ್ಯವನ್ನು ತಿಳಿಸಿದರು ಮತ್ತು ಅವರು ನಮಗೆ ಅನುಸರಿಸಲು ಒಂದು ಉತ್ತಮ ಮಾದರಿಯನ್ನು ತೋರಿಸಿದ್ದಾರೆ.

8 ನಮ್ಮ ಹಿಂದಿನ ನಾಯಕರು ಗತಿಸಿಹೋದರು, ಆದರೆ ಯೇಸು ಎಂದಿಗೂ ಗತಿಸಿ ಹೋಗುವದಿಲ್ಲ (ಕೀರ್ತನೆಗಳು 102:27; ಇಬ್ರಿಯ 1:12). ಮತ್ತು ಯೇಸು ಸದಾಕಾಲವೂ ಇರುತ್ತಾನಾದ್ದರಿಂದ ಆತನ ಯಾಜಕತ್ವವು ನಿತ್ಯವಾದದ್ದೂ ಮಾರ್ಪಡಲಾರದ್ದೂ ಆಗಿದೆ (ಇಬ್ರಿಯ 7:24). ಯೇಸು ನಮಗೋಸ್ಕರ ವಿಜ್ಞಾಪನೆಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ (ಇಬ್ರಿಯ 7:25).

ಯೇಸು ಹೇಳಿದ್ದೇನೆಂದರೆಃ "ನಾನು ಮೊದಲನೆಯವನೂ, ಕಡೆಯವನೂ, ಸದಾ ಜೀವಿಸುವವನೂ ಆಗಿದ್ದೇನೆ. ಸತ್ತವನಾದೆನು, ಮತ್ತು ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ! (ಪ್ರಕಟಣೆ 1:17-18).

9 ಕೆಲವು ಸುಳ್ಳು ಬೋಧಕರು ಇಬ್ರಿಯರಿಗೆ ಹೆಚ್ಚಿನ ಆತ್ಮೀಕ ಬಲವನ್ನು ಪಡೆದುಕೊಳ್ಳಬೇಕಾದರೆ ಕೆಲವೊಂದು ವಿಶೇಷ ಭೋಜನ ಪದಾರ್ಥಗಳನ್ನು ತಿನ್ನುವದು ಅವಶ್ಯಕವೆಂದು ಬೋಧಿಸಲು ಪ್ರಯತ್ನಿಸುತ್ತಿದ್ದರು. ಆದರೆ ಬರಹಗಾರನು ಇಲ್ಲಿ ಇಬ್ರಿಯರಿಗೆ ಸಂಸ್ಕಾರಿಕ ಬೋಜನ ಪದಾರ್ಥಗಳಿಂದಲ್ಲ, ಆದರೆ ದೇವರ ಕೃಪೆಯಿಂದಲೇ ಒಬ್ಬನ ಹೃದಯವು ದೃಢಗೊಳ್ಳುತ್ತದೆ ಎಂದು ಹೇಳುತ್ತಾನೆ (ರೋಮ 14:17; 1 ಕೊರಿಂಥ 8:8ನೋಡಿರಿ).

10 ಕೆಲವು ಯಹೂದ್ಯರು ಯಜ್ಞ ವೇದಿಗೆ ಅರ್ಪಿಸಲ್ಪಟ್ಟ ಮಾಂಸವನ್ನು ತಿನ್ನುವದು ಆತ್ಮೀಕವಾಗಿ ಪ್ರಯೋಜನಕರವಾಗಿತ್ತದೆಂದು ಬೋಧಿಸಿದರು. ಆದರೆ ಕ್ರೈಸ್ತರಾದ ನಮಗೆ ವ್ಯತ್ಯಾಸವಾದ ವೇದಿಯಿರುತ್ತದೆ, ಅದು ಪ್ರಾಣಿಗಳ ದೇಹಗಳು ಯಜ್ಞಮಾಡಲ್ಪಡುವ ವೇದಿಯಲ್ಲ ಆದರೆ ಕ್ರಿಸ್ತನ ದೇಹವು ಯಜ್ಞಮಾಡಲ್ಪಟ್ಟ ವೇದಿಯಾಗಿದೆ. ಅದು ಹೊಸ ಒಡಂಬಡಿಕೆಯ ಆತ್ಮೀಕ ವೇದಿಕೆಯಾಗಿದೆ, ಆ ವೇದಿಯ ಪದಾರ್ಥಗಳನ್ನು ತಿನ್ನುವದಕ್ಕೆ ಯೆಹೂದ್ಯರ (ಹಳೆ ಒಡಂಬಡಿಕೆಯ). ಗುಡಾರದಲ್ಲಿ ಸೇವೆಯನ್ನು ನಡಿಸುವವರಿಗೆ ಹಕ್ಕಿಲ್ಲ[25] ಕ್ರಿಸ್ತನ ವೇದಿಯ ಪದಾರ್ಥಗಳನ್ನು ತಿನ್ನುವದು ಮಾತ್ರವೇ ಆತ್ಮೀಕ ಪ್ರಯೋಜನವನ್ನು ನೀಡುತ್ತದೆ; ನಾವು ಕ್ರಿಸ್ತನ ವೇದಿಯಲ್ಲಿ ಊಟಮಾಡುವಾಗ ಸ್ವತಃ ಕ್ರಿಸ್ತನಲ್ಲಿ ಪಾಲುಗಾರರಾಗುತ್ತೇವೆ (ಯೋಹಾನ 6:53-56).

11 ಯೇಸುಕ್ರಿಸ್ತನು ನಮ್ಮ ದೋಷಪರಿಹಾರಕ ಯಜ್ಞ; ಆತನು ಪಾಪಗಳ ನಿವಾರಣದ ಯಜ್ಞವಾಗಿದ್ದಾನೆ (ರೋಮ 3:23-25). ಹಳೆ ಒಡಂಬಡಿಕೆಯಲ್ಲಿ ಯೆಹೂದ್ಯಮಹಾಯಾಜಕನು ಜನರ ಪಾಪಗಳಿಗಾಗಿ ದೋಷಪರಿಹಾರಕಯಜ್ಞ ಅಥವಾ ಪಾಪನಿವಾರಣ ಯಜ್ಞವನ್ನು ಪ್ರತಿವರುಷವೂ ಅರ್ಪಿಸುತ್ತಿದ್ದನು. ಯಾಜಕನು ಉಳಿದೆಲ್ಲಾ ಯಜ್ಞಗಳ ಮಾಂಸವನ್ನು ತಿನ್ನಬಹುದಾಗಿತ್ತು, ಆದರೆ ಅವರಿಗೆ ದೋಷಪರಿಹಾರಕಯಜ್ಞದ [26] ಮಾಂಸವನ್ನು ತಿನ್ನುವದಕ್ಕೆ ಅನುಮತಿ ಇರಲಿಲ್ಲ; ದೋಷಪರಿಹಾರಕ ಯಜ್ಞಗಳಾಗಿ ಅರ್ಪಿಸಲ್ಪಟ್ಟ ಪಶುಗಳ ದೇಹಗಳು ಪಾಳೆಯದ ಆಚೆ ಸುಡಲ್ಪಡುತ್ತಿದ್ದವು (ಯಾಜಕಕಾಂಡ 16:27).

12 ಯೇಸು ಸಹ ಪಾಳೆಯದ ಆಚೆ (ವಚನ 11) –ಅಂದರೆ, ಯೆರೂಸಲೇಮು ಪಟ್ಟಣದ ಹೊರಗೆ ಸತ್ತನು. ಯೇಸುವನ್ನು ಶಿಲುಬಗೆ ಹಾಕಿದ ಸ್ಥಳವು ಪಟ್ಟಣಕ್ಕೆ ಹತ್ತಿರವಾಗಿತ್ತು ಎಂದು ಯೋಹಾನನು ಹೇಳುತ್ತಾನೆ (ಯೋಹಾನ 19:20). ಯೇಸು ಶಿಲುಬೆಯ ಮೇಲಿನ ತನ್ನ ಸ್ವದೇಹದ ಯಜ್ಞದ ಮೂಲಕ– ಅಂದರೆ, ತನ್ನ ಸ್ವಂತ ರಕ್ತದಿಂದ – ವಿಶ್ವಾಸಿಗಳನ್ನು ಪವಿತ್ರ ಪಡಿಸಿದ್ದಾನೆ (ಇಬ್ರಿಯ 10:10-14 ನೋಡಿರಿ).

13 ಆದದರಿಂದ ನಾವು ....... ಪಾಳೆಯದ ಆಚೆ ಆತನ ಬಳಿಗೆ ಹೊರಟು ಹೋಗೋಣ. ಯೆಹೂದ್ಯ ಕ್ರೈಸ್ತರಿಗಾದರೋ "ಪಾಳೆಯದ ಆಚೆ ಹೋಗುವದು" ಎಂದರೆ ಯೆರೂಸಲೇಮನಿಂದ ಹೊರಡುವದು, ತಮ್ಮ ಹಳೆ ಧರ್ಮವನ್ನು ತಮ್ಮ ಸೊತ್ತುಗಳನ್ನು, ಸುರಕ್ಷತೆಯನ್ನು ಬಿಟ್ಟು ಬಿಡುವದು –ಸಮಸ್ತವನ್ನು ತೊರೆಯುವದು– ಎಂದು ಅರ್ಥನೀಡುತ್ತದೆ. ಅದೇ ವಿಧದಲ್ಲಿ, ಕ್ರಿಸ್ತನನ್ನು ಹಿಂಬಾಲಿಸುವದಕ್ಕೆ ಮನಸ್ಸು ಮಾಡುವವರೆಲ್ಲರೂ ಪಾಳೆಯದ ಆಚೆ ಆತನ ಬಳಿಗೆ ಹೊರಟು ಹೋಗಬೇಕು; ಅಂದರೆ, ಅವರು ತಮ್ಮ ಹಳೆಯ ಧರ್ಮ, ತಮ್ಮ ಹಳೆಯ ಪದ್ಧತಿಗಳು, ತಮ್ಮ ಹಳೆಯ ಜೀವಿತವನ್ನು ತೊರೆಯಬೇಕು. ಮೋಶೆಯು ತನ್ನ ದಿನಗಳಲ್ಲಿ ಐಗುಪ್ತ್ಯದ ಐಶ್ವರ್ಯವನ್ನು ತೊರೆದುಬಿಟ್ಟು ಕ್ರಿಸ್ತನ ನಿಮಿತ್ತ ಅವಮಾನವನ್ನು ಸಹಿಸಿಕೊಂಡನು (ಇಬ್ರಿಯ 11:26). ಯೇಸು ಹೇಳಿದ್ದೇನೆಂದರೆಃ ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ (ಮಾರ್ಕ 8:34). "........ ಮತ್ತು ಯಾವನಾದರೂ ತನ್ನ ಶಿಲುಬೆಯನ್ನು ತಗೆದುಕೊಂಡು ನನ್ನ ಹಿಂದೆ ಬರದ ಹೊರತು ನನಗೆ ಯೋಗ್ಯನಲ್ಲ (ಮತ್ತಾಯ 10:37-38). ಯೇಸುವಿನ ಕಾಲದಲ್ಲಿ ಶಿಲುಬೆಯು ಎಷ್ಟು ಅವಮಾನಕರವಾಗಿತ್ತೆಂಬದನ್ನು ಜ್ಞಾಪಿಸಿಕೊಳ್ಳೋಣ. ಆದರೆ ದೇವರ ಒಬ್ಬನೇ ಮಗನು ತನ್ನ ಶಿಲುಬೆಯನ್ನು ತೆಗೆದುಕೊಂಡು ಪಾಳೆಯದ ಆಚೆ ಹೊತ್ತೊಯ್ದನು (ಯೋಹಾನ 19:17). ಆದದರಿಂದ, ನಾವು ಸಹ ಅದೇ ವಿಧದಲ್ಲಿ ನಮ್ಮ ಶಿಲುಬೆಯನ್ನು ಹೊತ್ತುಕೊಂಡು ಆತನ ನಿಮಿತ್ತ ಉಂಟಾಗುವ ನಿಂದೆಯನ್ನು ತಾಳಿಕೊಳ್ಳುವವರಾಗಿ ಪಾಳೆಯದ ಆಚೆ ಆತನ ಬಳಿಗೆ ಹೊರಟು ಹೋಗೋಣ.

14 ನಮ್ಮಲ್ಲಿ ಯಾರೊಬ್ಬರೂ ತನ್ನ "ಪಾಳೆಯವನ್ನು" ತನ್ನ ಸ್ವಂತ ಪಟ್ಟಣವನ್ನು ತೊರೆಯುವದಕ್ಕೆ ತನ್ನ ಹಳೆಯ ಪದ್ಧತಿಗಳನ್ನು ತನ್ನ ಹಳೆ ಜೀವಿತವನ್ನು ತೊರೆಯುವದಕ್ಕೆ ಇಷ್ಟಪಡುವದಿಲ್ಲ. ಆದರೆ ಆ ಹಳೆಯ ಸಂಗತಿಗಳಲ್ಲಿ ನಾವು ಯಾವ ಭರವಸೆಯನ್ನು ಇಡಬಾರದು ಅವು ಗಳು ನಮಗೆ ಯಾವ ಪ್ರಯೋಜನವನ್ನೂ ಉಂಟುಮಾಡುವದಿಲ್ಲ.ಇವೆಲ್ಲವು ಗಳೂ ಗತಿಸಿಹೋಗುವವು . ಯಾಕೆಂದರೆ ಇಹದಲ್ಲಿ ಶಾಸ್ವತವಾದ ಪಟ್ಟಣವು ನಮಗಿಲ್ಲ. ವಾಸ್ತವದಲ್ಲಿ ಈ ಮಾತುಗಳು ಯೆಹೂದ್ಯರ ವಿಷಯದಲ್ಲಿ ಬೇಗನೆ ನೆರವೇರಲಿದ್ದವುಃ ಯೇಸುವಿನ ಮರಣದ ನಾಲ್ವತ್ತು ವರ್ಷಗಳ ಬಳಿಕ ಯೆರೂಸಲೇಮ್ ಪಟ್ಟಣವು ರೋಮಾಯರಿಂದ ಸಂಪೂರ್ಣ ನಾಶನಕ್ಕೊಳಗಾಯಿತು.

ಕ್ರಿಸ್ತನಲ್ಲಿ ಭರವಸೆವಿಡುವ ನಾವು ಇಹಲೋಕದ ಪಟ್ಟಣವನ್ನು ಹಾರೈಸುವದಿಲ್ಲ; ಬದಲಾಗಿ, ನಾವು ಪರಲೋಕ ಪಟ್ಟಣವನ್ನು, ಪರಲೋಕದ ಯೆರೂಸಲೇಮನ್ನು, ಯಾರೂ ಕದಲಿಸಲಾರದ ರಾಜ್ಯವನ್ನು ಹಾರೈಸುವವರಾಗಿದ್ದೇವೆ (ಇಬ್ರಿಯ 11:10-16; 12:22,28ನೋಡಿರಿ).

15 ಹಳೆ ಒಡಂಬಡಿಕೆಯ ಪ್ರಾಣಿ ಯಜ್ಞಗಳು ಮುಗಿದುಹೋಗಿರುತ್ತವೆ. ಕ್ರಿಸ್ತನ ಯಜ್ಞವು ಸಾಕಾಗಿರುತ್ತದೆ; ಅದು ಸದಾಕಾಲವೂ ಕ್ರಿಯಾಶೀಲವಾಗಿರುತ್ತದೆ. ಹೇಗಿದ್ದರೂ ಕ್ರೈಸ್ತರಾದ ನಾವು ದೇವರಿಗೆ ಅರ್ಪಿಸುವದಕ್ಕಾಗಿ ಒಂದು ನೂತನ ರೀತಿಯ ಯಜ್ಞವನ್ನು ಹೊಂದಿರುತ್ತೇವೆಃ ಏನೆಂದರೆ, ಒಂದು ಆತ್ಮೀಕ ಯಜ್ಞ. ಪೇತ್ರನು ಬರೆದದ್ದೇನೆಂದರೆ, ನಾವು ಯೇಸುಕ್ರಿಸ್ತನ ಮೂಲಕ ದೇವರಿಗೆ ಸಮರ್ಪಕವಾದ ಆತ್ಮೀಯ ಯಜ್ಞಗಳನ್ನು ಸಮರ್ಪಿಸುವದಕ್ಕೆ ಪವಿತ್ರಯಾಜಕ ವರ್ಗದವರಾಗಿದ್ದೇವೆ ಎಂಬುದೇ (1 ಪೇತ್ರ 2:5).

ಈ ಆತ್ಮೀಕ ಯಜ್ಞಗಳು ಯಾವವು? ಅವು ಗಳಲ್ಲೊಂದು ಈ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿದೆಃ ಸ್ತೋತ್ರಯಜ್ಞ. ಸ್ತೋತ್ರ ಹಾಗೂ ಕೃತಜ್ಞತಾಸ್ತುತಿಗಳು ದೇವರಿಗೆ ಯಾವಾಗಲೂ ಸಮರ್ಪಕವಾದ "ಯಜ್ಞಗಳು" ಆಗಿವೆ.

16 ಆದರೆ ಯಜ್ಞಗಳನ್ನು ನಮ್ಮ ತುಟಿಗಳಿಂದ ಮಾತ್ರವೇ ಅರ್ಪಿಸುವದು ಸಾಕಾಗುವದಿಲ್ಲ. ನಾವು ಪ್ರೀತಿಯ ಕಾರ್ಯಗಳನ್ನು ಮಾಡುತ್ತಾ ಸಹ ದೇವರಿಗೆ ಯಜ್ಞಗಳನ್ನು ಸಮರ್ಪಿಸಬೇಕು. ನಿಜವಾದ ಧರ್ಮವು ಪ್ರಾಣಿ ಯಜ್ಞಗಳನ್ನು ಮಾತ್ರವೇ ಒಳಗೊಂಡಿರುವದಿಲ್ಲ, ಆದರೆ ಬದಲಾಗಿ, ಒಳ್ಳೇದನ್ನು ಮಾಡುವದು ಹಾಗೂ ಇತರರಿಗೆ ಸಹಾಯ ಮಾಡುವದು ಸಹ ಅದರಲ್ಲಿ ಅಡಕವಾಗಿರುತ್ತದೆ (ಯಾಕೋಬ 1:27ನೋಡಿರಿ). ನಮ್ಮ ಯಜ್ಞಗಳು ಪ್ರೀತಿ ಕರುಣೆ ನಂಬಿಗಸ್ಥಿಕೆಗಳೇ. ಆದರೆ ಇದಕ್ಕಿಂತಲೂ ಹೆಚ್ಚಾಗಿ ನಾವು ನಮ್ಮ ದೇಹಗಳನ್ನು ಸಜೀವ ಯಜ್ಞಗಳಾಗಿ ಅರ್ಪಿಸಬೇಕು (ರೋಮ 12:1). ಇದು ದೇವರಿಗೆ ಅತ್ಯಂತ ಮೆಚ್ಚಿಕೆಯಾದ ಯಜ್ಞವಾಗಿದೆ. ಯಾಕೆಂದರೆ ನಾವು ದೇವರಿಗೆ ನಮ್ಮ ದೇಹಗಳನ್ನು ಅರ್ಪಿಸುವದಾದರೆ ಸಮಸ್ತವನ್ನೂ ಅರ್ಪಿಸಿದವರಾಗಿರುತ್ತೇವೆ.

17 ಈ ಪ್ರಸ್ತುತಕಾಲದಲ್ಲಿ ತಮ್ಮ ನಾಯಕರಿಗೆ ವಿಧೇಯರಾಗಲು ಇಷ್ಟಪಡದಿರುವ ಅನೇಕ ಜನರಿರುತ್ತಾರೆ. ಈ ಜನರು ತಮ್ಮ ನಾಯಕರಿಗೆ ಮಾನವನ್ನು ಸಲ್ಲಿಸುವದಿಲ್ಲ. ಯುವ ಜನರು ತಮ್ಮ ಹಿರಿಯರನ್ನು ಟೀಕಿಸುತ್ತಾರೆ. ಆದರೆ ಕ್ರೈಸ್ತರೊಳಗೆ ಈ ಪರಿಸ್ಥಿತಿಯು ಇರಬಾರದು. ನಮ್ಮ ನಾಯಕರು ದೋಷಗಳನ್ನು ನೂನ್ಯತೆಗಳನ್ನು ಹೊಂದಿದ್ದಾರೆ, ಆದರೆ ಅದು ನಮ್ಮ ಕೆಲಸವಲ್ಲ. ಅವರಿಗೆ ಗೌರವ ಸಲ್ಲಿಸಿ ವಿಧೇಯರಾಗುವದೆ ನಮ್ಮ ಜವಾಬ್ದಾರಿಯಾಗಿದೆ (1 ಥೆಸಲೋನಿಕ 5:12-13 ಮತ್ತು ವ್ಯಾಖ್ಯಾನ ನೋಡಿರಿ).

ದೇವರು ನಮ್ಮನ್ನು ನೋಡಿಕೊಳ್ಳುವದಕ್ಕಾಗಿ ನಾಯಕರನ್ನು ನಮ್ಮ ಮೇಲೆ ನೇಮಿಸಿದ್ದಾನೆ. ಅವರು ತಮ್ಮ ಮಂದೆಗಳ ಕುರುಬರಾಗಿ ಯಾವ ರೀತಿಯಾಗಿ ಸೇವೆಮಾಡಿದ್ದಾರೆಂಬದರಕುರಿತು ಅವರು ದೇವರಿಗೆ ಲೆಕ್ಕವನ್ನು ಒಪ್ಪಿಸಬೇಕಾಗುವದು. ನಾವು ಅವರಿಗೆ ಅವಿಧೇಯರಾಗಿರುವದಾದರೆ ಅಥವಾ ಅವರ ಅಧಿಕಾರಕ್ಕೆ ಒಳಪಡದವರಾಗಿರುವದಾದರೆ ನಮ್ಮ ವಿಷಯದಲ್ಲಿ ಅವರು ಕ್ರಿಸ್ತನಿಗೆ ಲೆಕ್ಕ ಒಪ್ಪಿಸುವ ವೇಳೆ ಬಹಳ ವ್ಯಸನ ಪಡುವರು. ಅವರು ನಮ್ಮ ಅವಿಧೇಯತೆಯ ಕಾರಣದಿದ ವ್ಯಸನ ಪಡುವದಾದರೆ ನಾವು ಸಹ ಕ್ರಿಸ್ತನ ಮುಂದೆ ನಿಂತುಕೊಳ್ಳುವ ಸರಿದಿಬಂದಾಗ ನಿಶ್ಚಯವಾಗಿಯೂ ವ್ಯಸನಪಡುವೆವು.

ತಮ್ಮ ನಾಯಕರಿಗೆ ವಿರೋಧ ಮಾಡುವವರು ತಮ್ಮ ಮೇಲೆ ಮಹಾ ಆತ್ಮೀಕ ಹಾನಿಯನ್ನು ಬರಮಾಡಿಕೊಳ್ಳುತ್ತಾರೆ [27].

## ಅಂತಿಮ ಪ್ರಾರ್ಥನೆ ಹಾಗೂವಂದನೆಗಳು (13:18-25)

**18-19** ನಮಗೋಸ್ಕರ ಪ್ರಾರ್ಥಿಸಿರಿ. ನಾವು ನಮ್ಮ ನಾಯಕರಿಗಾಗಿ ಹೆಚ್ಚು ಪ್ರಾರ್ಥನೆ ಮಾಡಿದಷ್ಟು ಅವರು ಹೆಚ್ಚು ನಮಗಾಗಿ ಆತ್ಮೀಕ ಪ್ರಯೋಜನವನ್ನು ಉಂಟುಮಾಡುವದಕ್ಕೆ ಶಕ್ತಿರಾಗುತ್ತಾರೆ (ರೋಮ 15:30-32; 2 ಕೊರಿಂಥ 1:12 ನೋಡಿರಿ.)

**20** ನಾವು ಹೊಸ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿರುವ ಪ್ರಾರ್ಥನೆಗಳನ್ನು ಅಭ್ಯಾಸಿಸುವದರ ಮೂಲಕ ನಮಗೋಸ್ಕರವಾಗಿಯೂ, ಇತರರಿಗೋಸ್ಕರವಾಗಿಯೂ ಹೇಗೆ ಪ್ರಾರ್ಥಿಸಬೇಕೆಂಬುದರ ಕುರಿತು ಬಹಳಷ್ಟು ತಿಳಿದುಕೊಳ್ಳಬಹುದು. ಇಲ್ಲಿ ಬರಹಗಾರನು ಶಾಂತಿದಾಯಕನಾದ ದೇವರನ್ನು ಯೇಸುಕ್ರಿಸ್ತನ ಮೂಲಕ ವಿಶ್ವಾಸಿಗಳೊಂದಿಗೆ ಸಮಾಧಾನ ಮಾಡಿಕೊಂಡ ದೇವರನ್ನು ಪ್ರಾರ್ಥಿಸುತ್ತಾನೆ. ಈ ದೇವರೇ ನಿತ್ಯವಾದ ಒಡಂಬಡಿಕೆಯನ್ನು ರಕ್ತದ ಮೂಲಕ ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ್ದಾನೆ. ಅಂದರೆ, ಯೇಸು ತನ್ನ ರಕ್ತವನ್ನು ಸುರಿಸುವದರ ಮೂಲಕ ದೇವರಿಗೆ ಸಂಪೂರ್ಣ ಸಮರ್ಪಕವಾದ ಹಾಗೂ ಮೆಚ್ಚಿಕೆಯಾದ ಯಜ್ಞವೊಂದನ್ನು ಅರ್ಪಿಸಿದನು; ಆದದರಿಂದ, ದೇವರು ಆತನನ್ನು ಸತ್ತಮರೊಳಗಿಂದ ತಿರಿಗಿ ಬರಮಾಡಿ ನಿತ್ಯವಾದ ಒಡಂಬಡಿಕೆಗೆ –ದೇವರು ಮತ್ತು ಮನುಷ್ಯನ ನಡುವಿನ ಹೊಸ ಒಡಂಬಡಿಕೆಗೆ ಮಹಾ ಯಾಜಕನನ್ನಾಗಿ ಮಾಡಿದನು (ಯೆಹೆಜ್ಕೇಲ 37:36).

ಆದರೆ ಕ್ರಿಸ್ತನು ನಮ್ಮ ಮಹಾಯಾಜಕರ ಮಾತ್ರವಲ್ಲ; ಆತನು ನಮ್ಮ ಮಹಾಕುರುಬನೂ ಆಗಿದ್ದಾನೆ. ನಾವು ಆತನ ಕುರಿಗಳಾಗಿದ್ದೇವೆ.

**21** ಇಲ್ಲಿ ಬರಹಗಾರನು ಇಬ್ರಿಯರಿಗಾಗಿ ದೇವರು ಅವರನ್ನು ತನ್ನ ಚಿತ್ತವನ್ನು ನೆರವೇರಿಸುವ ಹಾಗೆ ಸಕಲ ಸತ್ಕಾರ್ಯಗಳಿಗೆ ಬೇಕಾದ ಅನೂಕೂಲತೆಯನ್ನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತಾನೆ ನಮಗೆ ಬೇರೆ ಇನ್ನೇನು ಅಗತ್ಯವಿರುತ್ತದೆ? "ಸಕಲ ಸತ್ಕಾರ್ಯಗಳು" ದೇವರ ಕೃಪೆ, ದೇವರ ಬಲ, ದೇವರ ಪವಿತ್ರಾತ್ಮನನ್ನೂ ಒಳಗೊಂಡಿರುತ್ತವೆ. ಈ ಸಂಗತಿಗಳನ್ನು ಹೊರತು ಪಡಿಸಿ ನಮಗೆ ಹೆಚ್ಚಿನದ್ದೇನೂ ಅಗತ್ಯವಿಲ್ಲ.

ಆದರೆ ಇನ್ನೊಂದು ಸಂಗತಿಯ ಅಗತ್ಯ ವಿರುತ್ತದೆ. ನಾವು ಆತನ ಚಿತ್ತವನ್ನು ನೆರವೇರಿಸುವ ಹಾಗೆ ಸಕಲ ಸತ್ಕಾರ್ಯಗಳನ್ನು ಹೊಂದಿದ್ದೇವಾದರೂ ದೇವರು ತನ್ನ ಸುಚಿತ್ತವನ್ನು ನೆರವೇರಿಸಲು ನಮ್ಮಲ್ಲಿ ಕಾರ್ಯಮಾಡುವದು ಅಗತ್ಯವಾಗಿರುತ್ತದೆ (ಫಿಲಿಪ್ಪಿ 2:13ನೋಡಿರಿ). ನಾವು ನಮ್ಮಷ್ಟಕ್ಕೆ ಏನೂಮಾಡಲಾರೆವು (ಯೋಹಾನ 15:5). ದೇವರು ತನ್ನ ಪವಿತ್ರಾತ್ಮನ ಬಲದ ಮೂಲಕ ಕಾರ್ಯ ಮಾಡುತ್ತಾನೆ. ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾದ್ದದನ್ನು ತಲತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರ (ಎಫೆಸ 3:20-21).

**22-25** ತಿಮೊಥೆಯನು (ವಚನ 23) ಪೌಲನ ಸಹಪಾಠಿಯಾಗಿದ್ದು ಪೌಲನು ಆತನಿಗೆ ಹೊಸ ಒಡಂಬಡಿಕೆಯ ಎರಡು ಪತ್ರಿಕೆಗಳನ್ನು ಬರೆದನು. ಹೊಸ ಒಡಂಬಡಿಕೆಯ ಈ ಸ್ಥಳದಲ್ಲಿ ಮಾತ್ರವೇ ತಿಮೊಥೆಯನು ಸೆರೆಯಲ್ಲಿದ್ದನೆಂದು ಬರೆಯಲ್ಪಟ್ಟಿದೆ.

ಇತಾಲ್ಯ[28]. (ಇಟಲಿ) ದೇಶದಿಂದ ಬಂದವರು 24ನೇ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾರೆ. ಈ ಜನರು ಯಾರಾಗಿದ್ದರೆಂಬದಾಗಲಿ ಅಥವಾ ಅವರು ಈ ಪತ್ರಿಕೆಯು ಬರೆಯಲ್ಪಟ್ಟಾಗ ಇತಾಲ್ಯದಲ್ಲಿ ಇದ್ದರೋ ಇಲ್ಲವೆ ಹೊರಗೆ ಇದ್ದರೋ ಎಂಬದು ತಿಳಿದುಬರುವದಿಲ್ಲ. ಅವರು ಇಬ್ರಿಯರಿಗೆ ತಮ್ಮ ವಂದನೆಗಳನ್ನು ತಿಳಿಸಿದ ಆದೇ ಇತಾಲ್ಯದ ಸಹೋದರರೇ ಆಗಿದ್ದರೆಂದು ಮಾತ್ರವೇ ಹೇಳಬಹುದಾಗಿದೆ.

## ಟಿಪ್ಪಣಿ

1 ಇಬ್ರಿಯರು ಅರಾಮಿಕ (ಅಥವಾ ಇಬ್ರಿಯ) ಭಾಷೆಯನ್ನಾಡುವ ಯೆಹೂದ್ಯರಾಗಿದ್ದರು. (ಇಬ್ರಿಯ ಹಾಗೂ ಅರಾಮಿಕ ಭಾಷೆಗಳು ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿದ್ದವು ). ಹೊಸ ಒಡಂಬಡಿಕೆಯ ಕಾಲದಲ್ಲಿ ಅರಾಮಿಕ ಭಾಷೆಯು ಮಧ್ಯಪೂರ್ವದೇಶಗಳಲ್ಲಿ ಅತಿ ಸಾಮಾನ್ಯವಾಗಿ ಬಳಕೆಯಲ್ಲಿದ್ದ ಭಾಷೆಯಾಗಿತ್ತು.

2 ಹೆಚ್ಚಿನ ಚರ್ಚೆಗಾಗಿ, ಸಾಮಾನ್ಯ ಲೇಖನಃ ಯೇಸುಕ್ರಿಸ್ತನು ನೋಡಿರಿ

3 ಅಬ್ರಹಾಮನು ಪ್ರಥಮ ಯೆಹೂದ್ಯನಾಗಿದ್ದನು; ಆದ್ದರಿಂದ ಆತನು ಶರೀರ ಸಂಬಂಧದ ಪ್ರಕಾರವಾಗಿ ಎಲ್ಲಾ ಯೆಹೂದ್ಯರ ಮೂಲ ಪಿತೃವಾಗಿದ್ದಾನೆ. ಕ್ರಿಸ್ತನು ಸ್ವತಃ ಒಬ್ಬ ಯೆಹೂದ್ಯನಾಗಿ ಅಬ್ರಹಾಮನ ಸಂತತಿಯಲ್ಲಿ ಹುಟ್ಟಿದವನಾಗಿದ್ದನು (ಮತ್ತಾಯ 1:1).

4 ಪಾಪದ ಕುರಿತ ಹೆಚ್ಚಿನ ಚರ್ಚೆಗಾಗಿ ರೋಮ 3:10-12ರಮೇಲಿನ ವ್ಯಾಖ್ಯಾನ ಹಾಗೂ ವ್ಯಾಖ್ಯಾನದ ಅಡಿ ಟಿಪ್ಪಣಿಯನ್ನು ನೋಡಿರಿ.

5 ಗ್ರೀಕ್ ಭಾಷೆಯಲ್ಲಿ ಯೆಹೋಶುವ ಹಾಗೂ ಯೇಸು ಎಂಬ ಹೆಸರುಗಳು ಒಂದೇ ಆಗಿವೆ.

6 ಸಬ್ಬತ್ ದಿನವು ವಾರದ ಏಳನೆಯ ದಿನವಾಗಿದೆ, ಅದು ಯೆಹೂದ್ಯರ ಪದ್ಧತಿಯ ಪ್ರಕಾರವಾಗಿ ಶನಿವಾರದಂದು ಬರುವದಾಗಿತ್ತು. ದಶಾಜ್ಞೆಗಳಲ್ಲಿ ನಾಲ್ಕನೆಯ ಆಜ್ಞೆಗೆ ಅನುಸಾರವಾಗಿ ಯೆಹೂದ್ಯರು ಸಬ್ಬತ್ ದಿನದಲ್ಲಿ ಯಾವ ಕೆಲಸವನ್ನು ಮಾಡದೆ ವಿಶ್ರಾಂತಿ ತೆಗೆದುಕೊಳ್ಳಬೇಕಾದ ಕಡ್ಡಾಯವಿತ್ತು (ವಿಮೋಚನ ಕಾಂಡ 20:8-11).

7 ಒಂದು ಅರ್ಥದಲ್ಲಿ, ದೇವರು ಜಗತ್ತನ್ನು ಸೃಷ್ಟಿಸಿದ ಬಳಿಕ ನಿಜವಾಗಿಯೂ ವಿಶ್ರಾಂತಿ ತೆಗೆದುಕೊಂಡನು. ಹೇಗಿದ್ದರೂ, ಇನ್ನೊಂದು ಅರ್ಥದಲ್ಲಿ ದೇವರು ಎಂದಿಗೂ ಸಂಪೂರ್ಣವಾಗಿ "ವಿಶ್ರಾಂತಿ" ತೆಗೆದುಕೊಳ್ಳುವದಿಲ್ಲ. ಆತನು ನಿರಂತರವಾಗಿ ಜಗತ್ತನ್ನೂ ಅದರಲ್ಲಿರುವ ಸಮಸ್ತವನ್ನು ಪರಿಪಾಲಿಸುತ್ತಾನೆ. ದೇವರು ಪರಿಪಾಲಿಸುವಿಕೆಯ "ಕೆಲಸದ" ಹೊರತಾಗಿ ಸಮಸ್ತವೂ ಅಂತ್ಯಗೊಳ್ಳುವದು (ಯೋಹಾನ 5:17ನೋಡಿರಿ).

8 ಬರಹಗಾರನು ಹೇಳುವದೇನೆಂದರೆ ದೇವರ ವಾಕ್ಯವು ಪ್ರಾಣ ಆತ್ಮಗಳನ್ನೂ ಕೀಲುಮಜ್ಜೆಗಳನ್ನು ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದು. ಅಂದರೆ, ವಾಕ್ಯವು ನಮ್ಮ ಪ್ರಾಣದ ಅತಿ ಆಳವಾದ ಭಾಗಗಳನ್ನು ಬೈಲು ಪಡಿಸಿ ವಿವೇಚಿಸುತ್ತದೆ. ದೇವರ ವಾಕ್ಯವು ನಮ್ಮ ಜೀವಿತಗಳಲ್ಲಿ ಯಾವದು ಶರೀರ ಭಾವದ್ದೆಂಬದನ್ನೂ ಯಾವದೂ ಆತ್ಮ ಭಾವದ್ದೆಂಬದನ್ನೂ ನಮಗೆ ತೋರ್ಪಡಿಸುತ್ತದೆ. ದೇವರ ವಾಕ್ಯವು ನಮ್ಮ ಪ್ರಾಣವನ್ನು– ಅಂದರೆ, ನಮ್ಮ ಬುದ್ಧಿ, ನಮ್ಮ ಅಂತರ್ಯದ ಉದ್ದೇಶಗಳು ಹಾಗೂ ಅಭಿಲಾಷೆಗಳನ್ನು – ಪರೀಕ್ಷಿಸುತ್ತದೆ. ಕೆಲವು ವೇಳೆಗಳಲ್ಲಿ ನಾವು ದೇವರ ಚಿತ್ತವನ್ನು ಮಾಡುತ್ತಿದ್ದೇವೆಂದು ಭಾವಿಸುತ್ತೇವೆ. ಆದರೆ ನಾವು ಮಾಡುತ್ತಿರುವದು ನಮ್ಮ ಸ್ವಂತ ಸ್ವಾರ್ಥ ಚಿತ್ತವಾಗಿರುತ್ತದೆ. ನಮ್ಮ ಪ್ರಾಣವು ಸ್ವಾಭಾವಿಕವಾಗಿ ನಮ್ಮ ಸ್ವಾರ್ಥ ಚಿತ್ತವನ್ನು ಅನುಸರಿಸುತ್ತದೆ ನಮ್ಮ ಆತ್ಮವು ದೇವರ ಚಿತ್ತವನ್ನು ಅನುಸರಿಸುತ್ತದೆ. ಅನೇಕ ವೇಳೆ ನಾವು ಅವು ಗಳ ಬೇದವನ್ನು ತಿಳಿಯದವರಾಗಿರುತ್ತೇವೆ. ಆದರೆ ದೇವರ ವಾಕ್ಯವು ಈ ಎರಡು ಚಿತ್ತಗಳನ್ನು "ವಿಭಾಗಿಸಲು" ಅಥವಾ ವಿವೇಚಿಸಲು ಶಕ್ತವಾಗಿದೆ. ವಾಕ್ಯವು ಪ್ರಾಣ ಆತ್ಮಗಳನ್ನು ವಿಭಾಗಿಸುವಷ್ಟು ಮಟ್ಟಿಗೂ ತೂರಿ ಹೋಗುವಂಥದು ಎಂದು ಹೇಳುವಾಗ ಬರಹಗಾರನ ತಾತ್ಪರ್ಯವು ಅದೇ ಆಗಿರುತ್ತದೆ.

9 ಯೆರೂಸಲೇಮ್ ಯೆಹೂದ್ಯರ ಒಂದು ಅತಿಪ್ರಾಮುಖ್ಯವಾದ ಪಟ್ಟಣವಾಗಿದೆ. ಬೈಬಲಿನ ಬಹಳಷ್ಟು ಕಾಲದ ವೇಳೆ ಯೆರೂಸಲೇಮ್ ಯೆಹೂದ್ಯ ರಾಜ ಧಾನಿಯಾಗಿತ್ತು. ಅರಸನಾದ ದಾವೀದ ಹಾಗೂ ಇತರ ಅರಸರು ಯೆರೂಸಲೇಮಿನಿಂದ ಆಳ್ವಿಕೆ ಮಾಡಿದರು.

10 ವಿಧೇಯತೆಯ ಮೊದಲ ಹಾಗೂ ಅತಿ ಮೂಲ ರೂಪವು ನಂಬಿಕೆಯೇ ಎಂಬದನ್ನು ನಾವು ಅರ್ಥಮಾಡಿಕೊಳ್ಳಬೇಕು (ಇಬ್ರಿಯ 4:6 ಮತ್ತು ವ್ಯಾಖ್ಯಾನ ನೋಡಿರಿ). ತರುವಾಯ ಒಮ್ಮೆ ನಿಜವಾದ ನಂಬಿಕೆ ಇರುವದಾದರೆ ಆ ನಂಬಿಕೆಯು ಇತರ ಎಲ್ಲಾ ವಿಷಯಗಳಲ್ಲಿ ವಿಧೇಯತೆಯಿಂದ ತೋರಿಬರುವದು. ನಂಬಿಕೆ ಹಾಗೂ ವಿಧೇಯತೆಯನ್ನು ಬೇರ್ಪಡಿಸುವದು ಅಸಾಧ್ಯ; ಅವು ಗಳು ಒಂದೇ ಕತ್ತರಿಯ ಎರಡು ಬ್ಲೇಡುಗಳಿದ್ದಂತೆ. ಹೀಗೆ, ನಾವು ಕ್ರಿಸ್ತನಿಗೆ ವಿಧೇಯರಾಗುವದರ ಮೂಲಕ (ಅಂದರೆ, ನಂಬಿಕೆಯ ವಿಧೇಯತೆ). ರಕ್ಷಣೆ ಹೊಂದಿದ್ದೇವೆ ಎಂದು ಹೇಳುವದು ಹಾಗೂ ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವವರ ಮೂಲಕ ರಕ್ಷಣೆ ಹೊದಿದ್ದೇವೆಂದು ಹೇಳುವದು ಒಂದೇ ಆಗಿದೆ; ಅವೆರಡೂ ರಕ್ಷಣೆ ಹೊಂದಿದ್ದೇವೆಂದು ಹೇಳುವದು ಒಂದೇ ಆಗಿದೆ; ಅವೆರಡೂ ಸಮಾನವಾದ ಸತ್ಯ ಹೇಳಿಕೆಗಳಾಗಿವೆ. ಹೇಗಿದ್ದರೂ, ಇದು ನಾವು ವಿಧೇಯತೆಯ ಕೃತ್ಯಗಳ ಮೂಲಕ ಮಾತ್ರ ದಿಂದಲೇ ರಕ್ಷಣೆ ಹೊಂದಿದ್ದೇವೆಂದು ಹೇಳುವದಾಗಿರುವದಿಲ್ಲ. ಬದಲಾಗಿ, ನಾವು ತನ್ನನ್ನು ವಿಧೇಯತೆಯಲ್ಲಿ ತೋರ್ಪಡಿಸಿಕೊಳ್ಳುವ ನಂಬಿಕೆಯಿಂದ ರಕ್ಷಿಸಲ್ಪಟ್ಟಿದ್ದೇವೆ (ಗಲಾತ್ಯ 5 :16, ಎಫೆಸ 2:8 -10; ಯಾಕೋಬ 2 :14 -17, 20-24 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಅಷ್ಟು ಮಾತ್ರವಲ್ಲದೆ, ಸ್ವತಃ ನಂಬಿಕೆಯು ದೇವರ ವರವಾಗಿದೆ ಇದು ಕಡೆವರೆಗೂ ದೇವರ ಕೃಪಾಕಾರ್ಯವಾಗಿದೆ. ಹೆಚ್ಚಿನ ಚರ್ಚೆಗಾಗಿ, ಸಾಮಾನ್ಯ ಲೇಖನಃ ರಕ್ಷಣೆಯ ಮಾರ್ಗ ನೋಡಿರಿ.

11 ನಿಜ, ದೇವರು ಅವರನ್ನು ಮುಟ್ಟಲು ಶಕ್ತನಾಗಿದ್ದಾನೆ; ಆತನು ಅವರನ್ನು ಮಾನಸಾಂತರಕ್ಕೆ ತರಲು ಶಕ್ತನಾಗಿದ್ದಾನೆ. ದೇವರು ಯಾವದನ್ನಾದರೂ ಮಾಡುವದಕ್ಕೆ ಸಮರ್ಥನಾಗಿದ್ದಾನೆ; ದೇವರಿಗೆ ಸಮಸ್ತವೂ ಸಾಧ್ಯವಿರುತ್ತದೆ (ಮಾರ್ಕ 10:27). ಆದರೆ ದೇವರು ಅವರನ್ನು ಸ್ಪರ್ಶಿಸುವದಿಲ್ಲ; ದೇವರು ತನ್ನ ಆಶೀರ್ವಾದಗಳನ್ನು ಅನುಭವಿಸಿ ನಂತರ ಬೇಕೆಂದು ಹಾಗೂ ಗೊತ್ತಿದ್ದೂ ತನ್ನನ್ನು ತಿರಸ್ಕರಿಸುವವರಿಗೆ ಮಾನಸಾಂತರವನ್ನು ಉಂಟುಮಾಡುವದಿಲ್ಲ.

12 ಹೆಚ್ಚಿನ ಚರ್ಚೆಗಾಗಿ, ಸಾಮಾನ್ಯ ಲೇಖನಃ ನಾವು ನಮ್ಮ ರಕ್ಷಣೆಯನ್ನು ಕಳೆದುಕೊಳ್ಳಬಹುದೋ? ನೋಡಿರಿ.

13 ಯೆರೂಸಲೇಮಿನಲ್ಲಿ ಶಾಶ್ವತವಾಗಿ ಯೆಹೂದ್ಯ ದೇವಾಲಯವು ಕಟ್ಟಲ್ಪಡುವದಕ್ಕೆ ಮುನ್ನ ಯೆಹೂದ್ಯರು ಒಂದು ಗುಡಾರದಿಂದ ಮಾಡಲ್ಪಟ್ಟ ದೇವದರ್ಶನ ಗುಡಾರದಲ್ಲಿ ದೇವರನ್ನು ಆರಾಧಿಸುತ್ತಿದ್ದರು, ಅದನ್ನು ಅವರು ತಾವು ಪ್ರಯಾಣಿಸಿದ ಕಡೆಗಳಲ್ಲೆಲ್ಲಾ ತಮ್ಮೊಂದಿಗೆ ಒಯ್ಯುತ್ತಿದ್ದರು. ದೇವದರ್ಶನ ಗುಡಾರದಲ್ಲಿಯೂ ನಂತರ ದೇವಾಲಯದಲ್ಲಿಯೂ ಅತಿ ಪವಿತ್ರ ಸ್ಥಳ ಎಂದು ಕರೆಯಲ್ಪಡುವ

ತೆರೆಯೊಳಗಣ ದೇವಸಾನಿಧ್ಯ ಇತ್ತು (ಇಬ್ರಿಯ9:3). ಬರಹಗಾರನು ಈ ವಚನದಲ್ಲಿ ಸೂಚಿಸುತ್ತಿರುವ "ತೆರೆಯೊಳಗಣ ದೇವಸಾನಿಧ್ಯ" ವು ಇದೇ ಆಗಿದೆ.

14 ಯೆಹೂದ್ಯರ ಪ್ರಥಮ ಪವಿತ್ರಸ್ಥಾನ –ಅಥವಾ ದೇವದರ್ಶನ ಗುಡಾರ– ಒಂದು ಗುಡಾರವಾಗಿತ್ತು, ಅದನ್ನು ಪು ರಾತನ ಯೆಹೂದ್ಯರು ತಾವು ಹೋದಲೆಲ್ಲಾ ಸ್ಥಳದಿಂದ ಸ್ಥಳಕ್ಕೆ ಒಯ್ಯಲ್ಪಡುತ್ತಿತ್ತು. ಯೆಹೂದ್ಯರು ವಾಗ್ದಾತ್ತ ದೇಶವಾದ ಇಸ್ರಾಯೇಲನ್ನು ಪ್ರವೇಶಿಸಿದ ಬಳಿಕವಷ್ಟೇ– ಶಾಶ್ವತವಾದ ಗುಡಾರವನ್ನು– ಅಂದರೆ, ಯೆರೂಸಲೇಮಿನಲ್ಲಿನ ಮಹಾ ದೇವಾಲಯವನ್ನು– ಕಟ್ಟಿದ್ದರಷ್ಟೇ.

15 ವಾಸ್ತವದಲ್ಲಿ ಸ್ವತಃ ಒಡಂಬಡಿಕೆಯೇ "ತಪ್ಪಾದದ್ದು" ಆಗಿರಲಿಲ್ಲ; ಯೆಹೂದ್ಯರೇ ದೋಷವುಳ್ಳವರಾಗಿದ್ದರು. ಆನೇ ವಚನದಲ್ಲಿ ಬರಹಗಾರನು ಹೇಳುವದೇನೆಂದರೆಃ ದೇವರು ಒಡಂಬಡಿಕೆಗೆ ಸೇರಿದವರ ಮೇಲೆ ತಪ್ಪು ಹೊರಿಸಿದನು.

16 ಗ್ರೀಕ್ ಭಾಷೆಯಲ್ಲಿ ಚಿತ್ತ ಹಾಗೂ ಒಡಂಬಡಿಕೆ ಎಂಬುದಕ್ಕೆ ಒಂದೇ ಪದವು ಉಪಯೋಗಿಸಲ್ಪಟ್ಟಿದೆ.

17 ಹಿಸ್ಸೋಪವು ಒಂದು ಮಾದರಿಯ ಗಿಡವಾಗಿದೆ. ಇದು ರಕ್ತ ಅಥವಾ ನೀರನ್ನು ಪ್ರೋಕ್ಷಿಸುವದಕ್ಕೆ ಉಪಯೋಗಿಸಲ್ಪಡುತ್ತಿತ್ತು.

18 ಅತಿ ಪವಿತ್ರ ಸ್ಥಳ ಎಂಬ ಪದಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ದೇವಸಾನಿಧ್ಯ" ಎಂದು ಹೇಳುತ್ತವೆ. ಆದರೆ ಬರಹಗಾರನು ಅತಿ ಪವಿತ್ರಸ್ಥಳದ ಬಗ್ಗೆ ಮಾತಾಡುತ್ತಿದ್ದಾನೆಂಬದನ್ನು ನಾವು ಅರ್ಥಮಾಡಿಕೊಳ್ಳಬೇಕು, ಯಾಕೆಂದರೆ, ಆ ಕೋಣೆಯೊಳಗೆ ಹೋಗುವ ಮಾರ್ಗವು ತೆರೆಯ ಮುಖಾಂತರ ಸಾಗುತ್ತದೆ. (ಇಬ್ರಿಯ ೯:೩ ನೋಡಿರಿ).

19 ದೀಕ್ಷಾಸ್ನಾನವು ಕೇವಲ ಒಂದು ದೇಹದ "ಸ್ನಾನ" ಮಾತ್ರವೇ ಅಲ್ಲ; ಅದು ನಮ್ಮ ಅಂತರ್ಯದ ಆತ್ಮೀಯ ಸ್ನಾನದ ಸಂಕೇತ ಸಹ ಆಗಿದೆ. ಹೆಚ್ಚಿನ ಚರ್ಚೆಗಾಗಿ, ಸಾಮಾನ್ಯ ಲೇಖನಃ ನೀರಿನ ದೀಕ್ಷಾಸ್ನಾನ ನೋಡಿರಿ.

20 ಪಾಪ ಮಾಡುತ್ತಲೇ ಇರುವದು ಎಂಬ ಮಾತುಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಪಾಪ" ಎಂದು ಮಾತ್ರವೇ ಹೇಳುತ್ತವೆ. ಹೇಗಿದ್ದರೂ, ಗ್ರೀಕ್ ಪ್ರತಿಯ ಅರ್ಥವು ಪಾಪ ಮಾಡುತ್ತಲೇ ಇರುವದು ಎಂದಾಗಿರುತ್ತದೆ. ಇಬ್ರಿಯ ಪತ್ರಿಕೆಯ ಬರಹಗಾರನು ಇಲ್ಲಿ ಪಶ್ಚಾತಾಪ ಪಡದೇ ಬೇಕೆಂದು ಪಾಪದಲ್ಲಿ ಮುಂದುವರೆಯುವ ವ್ಯಕ್ತಿಯ ಕುರಿತು ಮಾತಾಡುತ್ತಿದ್ದಾನೆ.

21 ನೋಹನು ತಾನೇ ಲೋಕದವರನ್ನು ದಂಡನೆಗೆ ಪಾತ್ರರೆಂದು ನಿರ್ಣಯಿಸಲಿಲ್ಲ; ದೇವರು ಮಾತ್ರವೇ ಅದನ್ನು ಮಾಡಬಲ್ಲನು.ಆದರೆ ಒಂದು ಅರ್ಥದಲ್ಲಿ ನೋಹನು, ನೀತಿವಂತನಾಗಿ ಇರುವದರಿಂದಷ್ಟೆ ಲೋಕದ ಅನೀತಿಯನ್ನು ದಂಡನೆಗೆ ಪಾತ್ರವಾಗಿಸಿದನು. ಬೆಳಕು ಕತ್ತಲೆಯನ್ನು ದಂಡಿಸುವ ವಿಧದಲ್ಲಿಯೇ ನೋಹನು ಲೋಕವನ್ನು ದಂಡಿಸಿದನು. ಅನೀತಿವಂತರು ಯಾವಾಗಲೂ ನೀತಿವಂತನ ಎದುರಿನಲ್ಲಿ ಅತಿದುಷ್ಟರಾಗಿ ಕಾಣಿಸುತ್ತಾರೆ.

22 ದೇವರು ಮನುಷ್ಯರನ್ನು ಅವರ ಜನ್ಮಕ್ಕೆ ಅನುಸಾರವಾಗಿ ಆರಿಸಿಕೊಳ್ಳುವದಿಲ್ಲ. ಯಾಕೋಬ ಮತ್ತು ಏಸಾವರ ವಿಷಯದಂತೆಯೇ ದೇವರು ಅನೇಕ ವೇಳೆಗಳಲ್ಲಿ ಶಾರೀರಿಕವಾಗಿ ಕಡೆಯವನಾಗಿರುವವನನ್ನು ಆತ್ಮೀಕವಾಗಿ ಮೊದಲನೆಯನಾಗಿರುವಂತೆ ಆರಿಸಿಕೊಳ್ಳುತ್ತಾನೆ (ಮಾರ್ಕ 10:31 ನೋಡಿರಿ).

23 ಆ ಕಾಲದ ವೇಳೆಯಲ್ಲಿ ಐಗುಪ್ತ್ಯದ ಅರಸರೆಲ್ಲರು ಪರೋಹ ಎಂದು ಕರೆಯಲ್ಪಡುತ್ತಿದ್ದರು.

24 ನಿಮಗೂ ಅನ್ಯಾಯ ಸಂಭವಿಸಿತೆಂದು ತಿಳಿದು ಎಂಬ ಮಾತುಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ನೀವೂ ದೇಹದಲ್ಲಿರುವದರಿಂದ" ಎಂದು ಹೇಳುತ್ತವೆ, ಇದು ಗ್ರೀಕ್ ಪ್ರತಿಯ ಅಕ್ಷರಶಃ ಭಾಷಾಂತರವಾಗಿದೆ. ಅರ್ಥವು ಒಂದೇ ಆಗಿದೆ

25 11ನೇ ವಚನದ ಮೇಲಿನ ವ್ಯಾಖ್ಯಾನ ಹಾಗೂ ಆ ವ್ಯಾಖ್ಯಾನದ ಅಡಿ ಟಿಪ್ಪಣಿಯನ್ನು ನೋಡಿರಿ.

26 ಈ ಕಾರಣದಿಂದಲೇ ಹಳೆ ಒಡಂಬಡಿಕೆಯ ಅಡಿಯಲ್ಲಿ ಸೇವೆಮಾಡುತ್ತಿದ್ದವರಿಗೆ ಕ್ರಿಸ್ತನ ವೇದಿಯ ಪದಾರ್ಥವನ್ನು ತಿನ್ನುವದಕ್ಕೆ ಹಕ್ಕಿರಲಿಲ್ಲ (ವಚನ 10). ಕ್ರಿಸ್ತನು ಸ್ವತಃ ದೋಷಪರಿಹಾರಕ ಯಜ್ಞವಾಗಿದ್ದಾನೆ, ಮತ್ತು ದೋಷಪರಿಹಾರಕ ಯಜ್ಞದಮಾಂಸವನ್ನು ತಿನ್ನುವದು ನಿಷೇಧಿಸಲ್ಪಟ್ಟಿತ್ತು.

27 ಜನರು ತಮ್ಮ ನ್ಯಾಯ ಸಮ್ಮತ ನಾಯಕರನ್ನು ವಿರೋಧಿಸುವಾಗ ಏನು ಸಂಭವಿಸಬಲ್ಲದು ಎಂಬದರ ಒಂದು ಭಯಾನಕ ಉದಾಹರಣೆಯು ಅರಣ್ಯ ಕಾಂಡ 16ನೇ ಅಧ್ಯಾಯದಲ್ಲಿ ಕಂಡು ಬರುತ್ತದೆ.

28 ಇತಾಲ್ಯವು ಐರೋಪ್ಯದ ಒಂದು ಪ್ರಾಮುಖ್ಯ ರಾಷ್ಟ್ರವಾಗಿದ್ದು ರೋಮನಗರವು ಅದರ ರಾಜಧಾನಿಯಾಗಿರುತ್ತದೆ. ಹೊಸ ಒಡಂಬಡಿಕೆಯ ಕಾಲದಲ್ಲಿ, ರೋಮನಗರವು ರೋಮಾಯ ಸಾಮ್ರಾಜ್ಯದ ರಾಜಧಾನಿ ಹಾಗೂ ಕೇಂದ್ರವಾಗಿತ್ತು.

# ಯಾಕೋಬನು ಬರೆದ ಪತ್ರಿಕೆ

## ಪರಿಚಯ

ಈ ಪತ್ರಿಕೆಯು ಯೇಸುವಿನ ತಮ್ಮನಾದ ಯಾಕೋಬನಿಂದ ಬರೆಯಲ್ಪಟ್ಟಿತೆಂದು ಬಹುಪಾಲು ಬೈಬಲ್ ಪಂಡಿತರು ನಂಬುತ್ತಾರೆ (ಗಲಾತ್ಯ 1:19). ಯಾಕೋಬನು ಯೆರೂಸಲೇಮಿನಲ್ಲಿದ್ದ ಸಭೆಯಲ್ಲಿ ನಾಯಕನಾಗಿದ್ದನು (ಗಲಾತ್ಯ 2:9). ಅನೇಕ ಬೈಬಲ್ ಪಂಡಿತರು ಈ ಪತ್ರಿಕೆಯು ಕ್ರಿ.ಶಕ. 50ಕ್ಕೆ ಮುಂಚೆ ಬರೆಯಲ್ಪಟ್ಟಿತ್ತೆಂದು ಅಭಿಪ್ರಾಯ ಪಡುತ್ತಾರೆ. ಇದು ನಿಜವಾಗಿದ್ದರೆ, ಈ ಪತ್ರಿಕೆಯು ಹೊಸ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟ ಮೊದಲ ಪತ್ರಿಕೆಗಳಲ್ಲಿ ಒಂದಾಗಿರುತ್ತದೆ. ಈ ಪತ್ರಿಕೆಯು ಕ್ರಿ. ಶಕ 62ಕ್ಕಿಂತಲೂ ತಡವಾಗಿ ಬರೆಯಲ್ಪಟ್ಟಿರಲಾರದು ಯಾಕೆಂದರೆ ಆ ವರ್ಷದಲ್ಲಿ ಯಾಕೋಬನನ್ನು ಕೊಲ್ಲಲಾಯಿತು.

ಯಾಕೋಬನು ಈ ಪತ್ರಿಕೆಯನ್ನು ಯೇಸುಕ್ರಿಸ್ತನ ಶಿಷ್ಯನಾಗಿರುವವನ ಕರ್ತವ್ಯಗಳನ್ನು ಕ್ರೈಸ್ತರಿಗೆ ತಿಳಿಯಪಡಿಸುವದಕ್ಕಾಗಿ ಬರೆದನು. ಯಾಕೋಬನ ಕಾಲದಲ್ಲಿ ಅನೇಕ ಕ್ರೈಸ್ತರು ಸತ್ಕಾರ್ಯಗಳನ್ನು ಮಾಡುವದನ್ನು ನಿಲ್ಲಿಸಿದ್ದರು. ಅವರು ಹೇಳಿದ್ದೇನೆಂದರೆ: "ನಾವು ಸತ್ಕ್ರಿಯೆಗಳಿಂದ ರಕ್ಷಿಸಲ್ಪಟ್ಟಿಲ್ಲ, ಆದರೆ ನಂಬಿಕೆಯಿಂದಲೇ ರಕ್ಷಿಸಲ್ಪಟ್ಟಿದ್ದೇವೆ; ಆದದರಿಂದ, ಸತ್ಕಾರ್ಯಗಳನ್ನು ಮಾಡುವ ಅಗತ್ಯವಿಲ್ಲ". ಈ ಕ್ರೈಸ್ತರು ತಾವು ನಂಬಿಕೆಯಿಂದ ಮಾತ್ರವೇ ರಕ್ಷಿಸಲ್ಪಟ್ಟಿದ್ದಾರೆಂದು ಹೇಳಿದ್ದು ಸರಿಯಾದದ್ದೇ ಆಗಿತ್ತು. ಆದರ ಅವರು ಹೀಗೆ ಇನ್ನು ಮೇಲೆ ಸತ್ಕಾರ್ಯಗಳನ್ನು ಮಾಡಬೇಕಾಗಿರಲಿಲ್ಲ ಎಂದು ಹೇಳುವದರಲ್ಲಿ ದೊಡ್ಡ ತಪ್ಪನ್ನು ಮಾಡಿದ್ದರು. ಈ ತಪ್ಪಾದ ನಂಬಿಕೆಯನ್ನು ಸರಿಪಡಿಸುವದಕ್ಕಾಗಿಯೇ ಯಾಕೋಬನು ಮುಖ್ಯವಾಗಿ ಈ ಪತ್ರಿಕೆಯನ್ನು ಬರೆದನು.

## ಹೊರ ರೇಖೆ

ಅ. ಕಷ್ಟಗಳು ಹಾಗೂ ಶೋಧನೆಗಳು (1:1-18).
  1. ನಂಬಿಕೆಯ ಪರಿಶೋಧನೆ (1:1-11).
  2. ಶೋಧನೆಯ ಮೂಲ (1:12-18)

ಆ. ಸಾಮಾನ್ಯ ಬೋಧನೆಗಳು (1:19-3:18).
  1. ವಾಕ್ಯದ ಅನುಸರಣೆ ಮಾಡುವದು (1:19-27).
  2. ಪಕ್ಷಪಾತದ ಖಂಡನೆ (2:1-13).
  3. ನಂಬಿಕೆ ಹಾಗೂ ಕ್ರಿಯೆಗಳು (2:14-26).
  4. ನಾಲಿಗೆಯ ಸ್ವಾಧೀನ (3:1-12).
  5. ಎರಡು ವಿಧದ ಜ್ಞಾನ (3:13-18).

ಇ. ನಾನಾ ವಿಧವಾದ ಪ್ರಬೋಧನೆಗಳು (4:1-5:20).
  1. ಪ್ರಾಪಂಚಿಕ ಮನೋಭಾವ (4:1-17).
  2. ದುಷ್ಟರಾದ ಐಶ್ವರ್ಯವಂತರು (5:1-6).
  3. ದೀರ್ಘ ಶಾಂತಿ (5:7-12).
  4. ನಂಬಿಕೆಯ ಪ್ರಾರ್ಥನೆ (5:13-20).

## ಅಧ್ಯಾಯ - 1

### ನಂಬಿಕೆ ಹಾಗೂ ಜ್ಞಾನ (1:1-8)

1 ಯಾಕೋಬನು ತನ್ನನ್ನು ದೇವರಿಗೂ ಕರ್ತನಾದ ಯೇಸುಕ್ರಿಸ್ತನಿಗೂ ದಾಸನು ಎಂದು ಕರೆದುಕೊಳ್ಳುತ್ತಾನೆ. ಪ್ರತಿಯೊಬ್ಬ ಕ್ರೈಸ್ತನು ಮುಖ್ಯನಾಯಕರೂ ಸೇರಿದಂತೆ ದೇವರ ದಾಸರಾಗಿದ್ದಾರೆ (ರೋಮ 1:1 ಮತ್ತು ವ್ಯಾಖ್ಯಾನ ನೋಡಿರಿ). ಒಬ್ಬ ದಾಸನು ಸಂಪೂರ್ಣವಾಗಿ ತನ್ನ ಯಜಮಾನನನ್ನೇ ಆತುಕೊಂಡು ಅವನಿಗೆ ಎಲ್ಲದರಲ್ಲಿಯೂ ವಿಧೇಯನಾಗಿರುತ್ತಾನೆ. ನಾವು ಸಹ ದೇವರ ದಾಸರಂತೆ ಜೀವಿಸಬೇಕು. ಈ ಜೀವಿತದಲ್ಲಿ ನಮಗೆ ಎಷ್ಟೇ ಅಧಿಕಾರ ಕೊಡಲ್ಪಟ್ಟಿದ್ದರೂ ಸರಿಯೇ ನಾವು ಆಗಲೂ ದೇವರ ದಾಸರೇ. ಯಾಕೆಂದರೆ, ನಮಗೆ ಯಾವ ಅಧಿಕಾರವಿದ್ದರೂ ಅದು ನಮಗೆ ಸೇರಿದ್ದಲ್ಲ, ಆದರೆ ದೇವರಿಗೆ ಸೇರಿರುತ್ತದೆ.

ನಾವು ದೇವರ ದಾಸರು ಮಾತ್ರವಲ್ಲದೆ ಕರ್ತನಾದ ಯೇಸುಕ್ರಿಸ್ತನ ದಾಸರೂ ಆಗಿದ್ದೇವೆ. ಯಾಕೋಬರು ಇಲ್ಲಿ ಯೇಸುವಿನ ಪೂರ್ಣ ಬಿರುದನ್ನು ಉಪಯೋಗಿಸುತ್ತಾನೆಂಬದನ್ನು ಗಮನಿಸಿರಿ. ಯೇಸು ಎಂಬದು ಮನುಷ್ಯನ ಹೆಸರು ಈ ಭೂಮಿಯ ಮೇಲೆ ಜೀವಿಸಿದ, ಬೋಧಿಸಿ ಅದ್ಭುತಗಳನ್ನು ಮಾಡಿ ಮರಣ ಹೊಂದಿ ಸತ್ತವರೊಳಗಿಂದ ಪು ನರುತ್ಥಾನಗೊಂಡ ಮನುಷ್ಯನ ಹೆಸರಾಗಿದೆ. ಕ್ರಿಸ್ತನು ಎಂಬ ಹೆಸರಿಗೆ ಅರ್ಥವು "ಅಭಿಷೀಕ್ತನು" (ಕೀರ್ತನೆಗಳು 2:2 ಅ.ಕೃತ್ಯ 4:26). ಇಬ್ರಿಯ ಭಾಷೆಯಲ್ಲಿ[1] "ಅಭಿಷೀಕ್ತನು" ಎಂಬದಕ್ಕಿರುವ ಪದವು ಮೆಸ್ಸಿಯನು (ಯೋಹಾನ 4:25). ಕ್ರಿಸ್ತನು ನಮ್ಮ ರಕ್ಷಕನೂ ದೇವರೊಂದಿಗೆ ಸಮಾಧಾನಗೊಳಿಸಲು ಮಧ್ಯಸ್ಥನು ಆಗಿರುವದಕ್ಕಾಗಿ "ಅಭಿಷೇಕಿಸಲ್ಪಟ್ಟನು". ಕ್ರಿಸ್ತನ ಬಿರುದಿನ ಮೂರನೆಯ ಭಾಗವು ಕರ್ತನು, ಗ್ರೀಕ್ ಭಾಷೆಯಲ್ಲಿ[2] ಅದರ ಅರ್ಥವು ದೇವರು ಎಂದಾಗಿರುತ್ತದೆ. ಇದು ಹಳೆ ಒಡಂಬಡಿಕೆಯಲ್ಲೆಲ್ಲಾ ದೇವರಿಗೆ ನೀಡಲಾಗಿರುವ ಹೆಸರಾಗಿದೆ. ಆದುದರಿಂದ, ಇದರ ಮೂಲಕ ನಾವು ಅರ್ಥ ಮಾಡಿಕೊಳ್ಳಬೇಕಾದದ್ದೇನೆಂದರೆ ಯೇಸು ಮನುಷ್ಯನೂ ದೇವರೂ ಆಗಿದ್ದಾನೆ. ಈ ಕಾರಣದಿಂದಲೇ ಆತನು ಮನುಷ್ಯನಿಗೆ ದೇವರಿಗೂ ಏಕೈಕ ನಿಜವಾದ ಮಧ್ಯಸ್ಥನಾಗಿದ್ದಾನೆ.

ಯಾಕೋಬನು ಈ ಪತ್ರಿಕೆಯನ್ನು ಮುಖ್ಯವಾಗಿ ಯೆಹೂದ್ಯ ಕ್ರೈಸ್ತರಿಗೆ– ಅಂದರೆ, ಕ್ರಿಸ್ತನಲ್ಲಿ ನಂಬಿಕೆಯಿಟ್ಟಂಥ ಯೆಹೂದ್ಯರಿಗೆ[3] ಬರೆದನು. ಈ ವಿಶ್ವಾಸಿಗಳು ಕ್ರೈಸ್ತರ ವಿರುದ್ಧ ವಿಶ್ವಾಸಿಗಳಲ್ಲದ ಯೆಹೂದ್ಯರು ಹಾಗೂ ರೋಮಾಯರಿಂದಲೂ ನಡೆಯುತ್ತಿದ್ದ ಹಿಂಸೆಯ ಕಾರಣದಿಂದ ಅಲ್ಲಲ್ಲಿ ಚದುರಿಹೋಗಿದ್ದರು.

ಯಾಕೋಬನು ಈ ವಿಶ್ವಾಸಿಗಳನ್ನು ಹನ್ನೆರಡು ಕುಲದವರು –ಅಂದರೆ, ಯೆಹೂದ್ಯ ಜನಾಂಗದ, ಇಸ್ರಾಯೇಲಿನ ಹನ್ನೆರಡು ಕುಲದವರು ಎಂದು ಸಂಬೋಧಿಸುತ್ತಾನೆ. ಈ ಹನ್ನೆರಡು ಕುಲದವರು ಅಬ್ರಹಾಮನ ಮೊಮ್ಮಗನಾದ ಯಾಕೋಬನ ಹನ್ನೆರಡು ಮಂದಿ ಪು ತ್ರ ಸಂತತಿಯವರಾಗಿದ್ದರು. ಆದರೆ ಯಾಕೋಬನು ಈ ಪತ್ರಿಕೆಯನ್ನು ಯೆಹೂದ್ಯ ಕ್ರೈಸ್ತರಿಗೆ ಮಾತ್ರವೇ ಬರೆದಿರುವದಿಲ್ಲ; ಆತನು ಇದನ್ನು ಎಲ್ಲೆಡೆಯೂ ಇರುವ ವಿಶ್ವಾಸಿಗಳೆಲ್ಲರಿಗೋಸ್ಕರವಾಗಿಯೂ ಬರೆದಿದ್ದಾನೆ. ಆದದರಿಂದ, ನಾವು ಯೆಹೂದ್ಯ ವಿಶ್ವಾಸಿಗಳಾಗಿರಲಿ ಅಥವಾ ಅನ್ಯ ವಿಶ್ವಾಸಿಗಳಾಗಿರಲಿ ಈ ಪತ್ರಿಕೆಯು ನಮಗೋಸ್ಕರ ಬರೆಯಲ್ಪಟ್ಟಿದೆ.

2 ಈ ಭಾಗದಲ್ಲಿ ಪ್ರಸ್ತಾಪಿಸಲಾಗಿರುವ ಪರಿಶೋಧನೆಗಳು ಕ್ರಿಸ್ತನ ನಿಮಿತ್ತ ನಾವು ಅನುಭವಿಸುವ ಕಷ್ಟಗಳು ಹಾಗೂ ಹಿಂಸೆಯಾಗಿದೆ. ಯಾಕೋಬನು ಇಲ್ಲಿ ನಮ್ಮ ದೋಷಗಳು ಹಾಗೂ ಪಾಪಗಳ ಕಾರಣದಿಂದ ನಮಗೆ ಬರುವ ಕಷ್ಟಗಳ ಕುರಿತಾಗಿ ಮಾತಾಡುತ್ತಿಲ್ಲ.

ಯಾಕೋಬನು ಸ್ವತಃ ಕಷ್ಟ ಸಂಕಷ್ಟಗಳೇ ಆನಂದವೆಂದು ಹೇಳುವದಿಲ್ಲ. ಬದಲಾಗಿ, ನಾವು ಅವು ಗಳನ್ನು ಆನಂದಕರವೆಂದು "ಎಣಿಸಬೆಕು" ಎಂಬದಾಗಿ ಆತನು ಹೇಳುತ್ತಿದ್ದಾನೆ. ನಾವು ಏಕೆ ಕಷ್ಟಗಳನ್ನು ಆನಂದಕರವೆಂದು ಎಣಿಸಬೇಕು? ಯಾಕೆಂದರೆ ಈ ವಿಧದ ಕಷ್ಟದಿಂದ ನಾವು ಹೆಚ್ಚು ಆತ್ಮೀಕ ಪ್ರಯೋಜನವನ್ನು ಪಡೆದುಕೊಳ್ಳುತ್ತೇವೆ (ವಚನ 3-4ನೋಡಿರಿ). ಇತರ ಧರ್ಮಗಳ ಅನುಯಾಯಿಗಳು ಕಷ್ಟಗಳನ್ನು ಸಹಿಸಿಕೊಳ್ಳಲು ಶಕ್ತರಾಗಿರುತ್ತಾರೆ, ಆದರೆ ಕ್ರೈಸ್ತರು ಮಾತ್ರವೇ ಅವರ ಕಷ್ಟಗಳಲ್ಲಿ ಆನಂದಿಸುವದಕ್ಕೆ ಶಕ್ತರಾಗಿರುತ್ತಾರೆ.

3 ಇಲ್ಲಿ ಯಾಕೋಬನು ಈ ಕಷ್ಟಗಳನ್ನು ನಮ್ಮ ನಂಬಿಕೆಗೆ ಆಗುವ ಪರಿಶೋಧನೆ ಎಂದು ಹೇಳುತ್ತಾನೆ. ಈ ಕಷ್ಟಗಳು ನಮಗೆ ಯಾವ ಪ್ರಯೋಜನವನ್ನು ತರುತ್ತವೆ? ಅಂಥ ಕಷ್ಟಗಳು ನಮಗೆ ತಾಳ್ಮೆಯನ್ನು ಉಂಟುಮಾಡುತ್ತವೆ. ನಮ್ಮ ನಂಬಿಕೆಯನ್ನು ಪರಿಶೋಧಿಸಿ ಬಲಪಡಿಸುವದಕ್ಕಾಗಿ ದೇವರು ಕಷ್ಟಗಳನ್ನು ನಮ್ಮ ಮೇಲೆ ಬರುವಂತೆ ಅನುಮತಿಸುತ್ತಾನೆ (1 ಪೇತ್ರ 1:6-7 ನೋಡಿರಿ). ತಾಳ್ಮೆಯಿಂದಿರುವದು ಎಂದರೆ ನಂಬಿಕೆಯಲ್ಲಿ ದೃಢವಾಗಿಯೂ ಬಲವಾಗಿಯೂ ಇರುವದೇ. ನಾಯಿಯು ಹೊಡೆಯಲ್ಪಡುವಾಗ ಕೀರಗುಟ್ಟಿ ಅರಚುವಂತೆ ಇರದೆ ದಿಟ್ಟರಾಗಿಯೂ ಧೈರ್ಯವು ಳ್ಳವರಾಗಿಯೂ ಇರಬೇಕೆಂದು ಇದರ ಅರ್ಥವಾಗಿದೆ. ಒಬ್ಬ ವ್ಯಕ್ತಿಯು ಕಷ್ಟಗಳಲ್ಲಿ ತಾಳ್ಮೆಯುಳ್ಳವನಾಗಿದ್ದಂತೆ ಹೆಚ್ಚು ಬಲಗೊಳ್ಳುತ್ತಾ ಹೋಗುತ್ತಾನೆ. ಆದರೆ ಆತನ ಬಲವು ತನ್ನಲ್ಲಿರುವದಿಲ್ಲ; ಬದಲಾಗಿ, ಆತನು ತನ್ನ ಬಲವನ್ನು ಕ್ರಿಸ್ತನಿಂದ ನಂಬಿಕೆಯ ಮೂಲಕ ಹೊಂದಿಕೊಳ್ಳುತ್ತಾನೆ.

ತಾಳ್ಮೆಗೆ ಇನ್ನೊಂದು ಪದವೆಂದರೆ ದೀರ್ಘಶಾಂತಿ. ದೀರ್ಘಶಾಂತಿಯು ಪವಿತ್ರಾತ್ಮನ ಫಲಗಳಲ್ಲಿ ಒಂದಾಗಿದೆ (ಗಲಾತ್ಯ 5:22). ಅಂಥ ಆತ್ಮೀಕ ದೀರ್ಘಶಾಂತಿ ಅಥವಾ ತಾಳ್ಮೆಯು ನಮಗೆ ಅತ್ಯವಶ್ಯಕವಾಗಿರುತ್ತದೆ. ನಮ್ಮ ರಕ್ಷಣೆಯು

ಆದರ ಮೇಲೆ ಆಧಾರವಾಗಿರುತ್ತದೆ. ಯೇಸು ಹೇಳಿದ್ದೇನೆಂದರೆ; "ಕಡೇ ವರೆಗೆ ತಾಳಿಕೊಳ್ಳುವವನು ರಕ್ಷಣೆ ಹೊಂದುವನು" (ಮಾರ್ಕ 13:13, ಲೂಕ 31:19).

ದೇವರು ನಮಗೆ ಕಷ್ಟಗಳನ್ನು ಅನುಮತಿಸುವದಕ್ಕೆ ಎರಡನೆಯ ಕಾರಣವಿರುತ್ತದೆ, ಅದೇನೆಂದರೆ ನಮ್ಮನ್ನು ಶಿಕ್ಷಿಸುವದಕ್ಕಾಗಿಯೇ ಬಹುಶಃ ನಾವು ದೇವರ ಮಾರ್ಗವನ್ನು ಬಿಟ್ಟು ಅಲೆದಾಡಿರುತ್ತೇವೆ; ಅಥವಾ ನಾವು ಆತನ ಚಿತ್ತದಂತೆ ನಡೆಯುವದನ್ನು ಬಿಟ್ಟುಬಿಟ್ಟಿರಬಹುದು. ದೇವರು ನಾನಾ ವಿಧವಾದ ಕಷ್ಟಗಳ ಮೂಲಕ ನಮ್ಮನ್ನು ಪುನಃ ಸರಿಯಾದ ದಾರಿಗೆ ತರುವದಕ್ಕೆ ಪ್ರಯತ್ನಿಸುತ್ತಾನೆ. ಅಂಥ ಶಿಕ್ಷೆಯು ನಮ್ಮ ಮೇಲೆ ಬರುವ ವೇಳೆಯಲ್ಲಿ ನಾವು ಕಳವಳಗೊಳ್ಳಬಾರದು (ಇಬ್ರಿಯ 12:5-6). ಬದಲಾಗಿ, ನಾವು ಅಂಥ ಕಷ್ಟಗಳನ್ನು ನಮ್ಮ ಹಿತಕ್ಕಾಗಿಯೇ ದೇವರ ಚಿತ್ತಕ್ಕನುಸಾರವಾಗಿ ಬರುತ್ತವೆಂದು ತಿಳಿದು ಸಂತೋಷದಿಂದ ಸ್ವೀಕರಿಸಬೇಕು.

4 ತಾಳ್ಮೆಯ ಫಲವು ಸಿದ್ಧಿತರುವದಾಗಿದೆ. ನಾವು ಸರ್ವಗುಣವುಳ್ಳವರೂ ಏನು ಕಡಿಮೆಯಿಲ್ಲದವರೂ ಆಗಬೇಕೆಂದು ಕಷ್ಟಗಳು ಬರುತ್ತವೆ. ಸಿದ್ಧಿಗೆ ಬಂದಿರುವ ಕ್ರೈಸ್ತನು ದೀರ್ಘಶಾಂತಿಯುಳ್ಳವನೂ ತಾಳ್ಮೆಯಿಂದಿರುವವನೂ ಆಗಿರುತ್ತಾನೆ. ಸಿದ್ಧಿಗೆ ಬಂದಿರುವ ಕ್ರೈಸ್ತನ ಗುಣದಲ್ಲಿ ಯಾವ ಕೊರತೆಯೂ ಇರುವದಿಲ್ಲ; ಅದು ಏನೂ ಕಡಿಮೆಯಿಲ್ಲದ್ದಾಗಿರುತ್ತದೆ. ಪವಿತ್ರಾತ್ಮನ ಫಲಗಳೆಲ್ಲವೂ ಆತನ ಜೀವಿತದಲ್ಲಿ ತೋರಿಬರುತ್ತದೆ. ಅಂಥ ವ್ಯಕ್ತಿಯು ಪೂರ್ಣವಾಗಿ ಪರಿಪಕ್ವಗೊಂಡಿರುವ ಫಲದಂತಿರುತ್ತಾನೆ. ಫಲವು ಅಸಮಾನವಾಗಿ ಪರಿಪಕ್ವಗೊಳ್ಳುತ್ತದೆ; ಮೊದಲು ಒಂದು ಬದಿ ಮಾತ್ರವೇ ಹಣ್ಣಾಗುತ್ತದೆ. ಆದರೆ ಫಲದ ಮೇಲೆ ಸೂರ್ಯನು ಪ್ರಕಾಶಿ ಮಳೆಯು ಬಿದ್ದಂತೆ ಅದು ಎಲ್ಲಾ ಬದಿಗಳಲ್ಲಿಯೂ ಪರಿಪಕ್ವಗೊಳ್ಳಲು ಪ್ರಾರಂಭಿಸುತ್ತದೆ. ಕ್ರೈಸ್ತರು ಹಾಗೆಯೇ ಇದ್ದಾರೆ.

5 ಕ್ರೈಸ್ತರೆಲ್ಲರೂ ಎಡೆಬಿಡದೆ ಪರಿಪೂರ್ಣತೆಗೆ ಬೆಳೆಯುತ್ತಿರುತ್ತಾರೆ. ನಮ್ಮ ಪ್ರತಿಯೊಬ್ಬರಲ್ಲಿಯೂ ಇನ್ನೂ ಕೆಲವೊಂದು ಕೊರತೆಗಳಿರುತ್ತವೆ. ಅನೇಕ ವೇಳೆಗಳಲ್ಲಿ ನಮಗೆ ಜ್ಞಾನದ ಕೊರತೆಯಿರುತ್ತದೆಃ ಈ ವಚನದಲ್ಲಿ, ನಮಗೆ ಒಂದು ಅದ್ಭುತವಾದ ವಾಗ್ದಾನ ಕೊಡಲ್ಪಟ್ಟಿರುತ್ತದೆಃ ನಮ್ಮಲ್ಲಿ ಯಾರಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವರು ಕೇಳಿದರೆ ಸಾಕು ಅದು ಅವರಿಗೆ ದೊರಕುವದು. ನಾವು ನಮಗೆ ಅಗತ್ಯವಾದ ಜ್ಞಾನವನ್ನೆಲ್ಲಾ ಪಡೆಯುವೆವು ; ದೇವರು ತನ್ನ ವರಗಳನ್ನು ಉದಾರಮನಸ್ಸಿನಿಂದ ಕೊಡುವನು ನಾವು ಜ್ಞಾನದ ಕೊರತೆಯುಳ್ಳವರಾಗಿರುವದಕ್ಕಾಗಿ ದೇವರು ನಮ್ಮನ್ನು ಹಂಗಿಸುವದಿಲ್ಲ; ಆತನು ನಮ್ಮನ್ನು ಖಂಡಿಸುವದಿಲ್ಲ. ಆತನು ನಮ್ಮ ಪ್ರೀತಿಯುಳ್ಳ ಪರಲೋಕದ ತಂದೆಯಾಗಿದ್ದಾನೆ; ನಾವು ಯಾವ ಭಯವಿಲ್ಲದೆ-ಆತನ ಬಳಿಗೆ ಹೋಗಬಹುದು.

ಜ್ಞಾನವು ತಿಳುವಳಿಕೆಗಿಂತ ವ್ಯತ್ಯಾಸವಾದದ್ದು. ತಿಳುವಳಿಕೆಯನ್ನು ನಾವು ನಮ್ಮ ಸ್ವಂತ ಪರಿಶ್ರಮದಿಂದ ಸಂಪಾದಿಸಿಕೊಳ್ಳುತ್ತೇವೆ. ಆದರೆ ನಿಜವಾದ ಜ್ಞಾನವು ದೇವರ ಒಂದು ವರವಾಗಿದೆ [4] ಜ್ಞಾನವು ತಿಳುವಳಿಕೆಗಿಂತ ಶ್ರೇಷ್ಠವಾದದ್ದು, ಯಾಕೆಂದರೆ ಜ್ಞಾನವು ತಿಳುವಳಿಕೆಯನ್ನು ಉಪಯೋಗಿಸುವವರವನ್ನೂ ಒಳಗೊಂಡಿರುತ್ತದೆ. ತಿಳುವಳಿಕೆಯನ್ನು ಜ್ಞಾನದಿಂದ ಉಪಯೋಗಿಸಿಕೊಂಡ ಹೊರತು ಆದರಿಂದ ಯಾವ ಪ್ರಯೋಜನವೂ ಇರುವದಿಲ್ಲ.

6-8 ದೇವರಿಂದ ಏನನ್ನಾದರೂ ಹೊಂದಿಕೊಳ್ಳಬೇಕಾದರೆ ನಾವು ನಂಬಿಕೆಯಲ್ಲಿ ಬೇಡಿಕೊಳ್ಳಬೇಕು. ನಾವು ನಂಬಿಕೆಯಿಲ್ಲದೆ ಪ್ರಾರ್ಥಿಸುವದಾದರೆ ನಾವು ಕೇಳಿದ್ದನ್ನು ದೇವರು ಅನುಗ್ರಹಿಸುವದಿಲ್ಲ. ಈ ನಿಯಮವು ಜ್ಞಾನಕ್ಕೆ ಮಾತ್ರವಲ್ಲದೆ ನಾವು ಕೇಳಿಕೊಳ್ಳುವದೆಲ್ಲಕ್ಕೂ ಅನ್ವಯಿಸುತ್ತದೆ

ಸಂಶಯಪಡುವ ವ್ಯಕ್ತಿಯು ಎರಡು ಮನಸ್ಸುಳ್ಳವನು (ವಚನ 8). ಅವನು ತನ್ನ ಮನಸ್ಸಿನ ಒಂದು ಭಾಗದಿಂದ ತಾನು ಕೇಳಿಕೊಳ್ಳುವದನ್ನು ಹೊಂದುವದಾಗಿ ನಿರೀಕ್ಷಿಸುತ್ತಾನೆ ಆದರೆ ತನ್ನ ಮನಸ್ಸಿನ ಇನ್ನೊಂದು ಭಾಗದಿಂದ ಆತನು ಆದರ ವಿಷಯದಲ್ಲಿ ಸಂದೇಹ ಪಡುತ್ತಾನೆ. ಅಂಥ ಮನುಷ್ಯನ ನಂಬಿಕೆಯು ಸ್ಥಿರವಲ್ಲ; ಅದು ಚಂಚಲ ಆಗಿರುತ್ತದೆ. ಅಂಥ ವ್ಯಕ್ತಿಯು ಸಮುದ್ರದ ತೆರೆಗಳಂತೆ ಅತ್ತ ಇತ್ತ ತೂರಾಡಲ್ಪಡುವನು.

## ಬಡವ ಮತ್ತು ಐಶ್ವರ್ಯವಂತ (1:9-11)

9 ಹೀನ ಸ್ಥಿತಿಯಲ್ಲಿರುವ ಸಹೋದರನು, ಗುಲಾಮನಾಗಿ, ದಾಸನಾಗಿ, ಸೆರೆಯಾಳಾಗಿ, ಕೀಳುಜಾತಿಯ ವ್ಯಕ್ತಿಯಾಗಿ ಅಥವಾ ಯಾವದೋ ಒಂದು ರೀತಿಯ ಸಮಸ್ಯೆಯಲ್ಲಿ ಸಿಲುಕಿರುವ ಒಬ್ಬ ವಿಶ್ವಾಸಿಯಾಗಿದ್ದಾನೆ. ಅಂಥ ಮನುಷ್ಯನ ಲೋಕದ ಸ್ಥಾನಮಾನವು ನಿಜವಾಗಿಯೂ ದೀನ ಹಾಗೂ ಹೀನವಾಗಿರುತ್ತದೆ. ಆದರೆ ನಂಬಿಕೆಯ ಮೂಲಕ ಆತನ ಆತ್ಮೀಕ ಸ್ಥಿತಿಯು– ಅಂದರೆ, ಉತ್ತಮ ಸ್ಥಿತಿ– ಒಳ್ಳೇದಾಗಿರುತ್ತದೆ, ಮತ್ತು ಅವನು ಅದರಲ್ಲಿ ಉಲ್ಲಾಸಪಡಬಲ್ಲನು[5] ಆತನು ದೇವರ ಮಗುವೂ ಕ್ರಿಸ್ತನ ಜೊತೆ ಬಾಧ್ಯನೂ ಆಗಿದ್ದಾನೆ (ರೋಮ 8:14; 16-17). ಲೋಕವು ದೇವರ ರಾಜ್ಯಕ್ಕೆ ತದಿರುದ್ಧವಾಗಿರುತ್ತದೆ. ಲೋಕದಲ್ಲಿ ಹೀನಸ್ಥಿತಿಯಲ್ಲಿರುವವರು ದೇವರ ರಾಜ್ಯದಲ್ಲಿ ಉನ್ನತಕ್ಕೇರಿಸಲ್ಪಡುವರು (ಮತ್ತಾಯ 5:3-5; 23:11-12; ಮಾರ್ಕ 10:43-44 ನೋಡಿರಿ).

10-11 ಇಲ್ಲಿ ಸೂಚಿಸುವ ಐಶ್ವರ್ಯವಂತನಾದವನು ಒಬ್ಬ ಶ್ರೀಮತ ಕ್ರೈಸ್ತನು ಸಹೋದರನು. ಶ್ರೀಮಂತ ಸಹೋದರನು ತನ್ನ ಐಶ್ವರ್ಯ ದಲ್ಲಿ ಹೆಚ್ಚಳ ಪಡಬಾರದು; ಆತನ ಐಶ್ವರ್ಯವು ಬೇಗನೆ ಗತಿಸಿ ಹೋಗುವದು (ಮತ್ತಾಯ 6:19-21).

ಆತನ ವ್ಯಾಪಾರ ವಹಿವಾಟು ಸ್ಥಿರವಾಗಿ ಉಳಿಯುವದಿಲ್ಲ, ಆದರೆ ಕಾಲಕಳೆದಂತೆ ಅದು ಗತಿಸಿಹೋಗುವದು (ವಚನ 11). ಶ್ರೀಮಂತ ಸಹೋದರರನು ತನ್ನ ಐಶ್ವರ್ಯವನ್ನು ಕೂಡಿಟ್ಟುಕೊಳ್ಳಬಾರದು; ಬದಲಾಗಿ, ಆತನು ಅದನ್ನು ಬಡವರಿಗೆ ನೀಡಿ ಕ್ರಿಸ್ತನ ಕೆಲಸಕ್ಕಾಗಿ ಉಪಯೋಗಿಸಬೇಕು (ಮಾರ್ಕ 10:21-23 ನೋಡಿರಿ). ಅವನು ತನ್ನ ಐಶ್ವರ್ಯವನ್ನು ತನ್ನದೆಂದು ಎಣಿಸಿಕೊಳ್ಳಬಾರದು; ಅದು ದೇವರಿಗೆ ಸೇರಿದ್ದು; ಅವನು ತನ್ನನ್ನು ಹೀನ ಸ್ಥಿತಿಯಲ್ಲಿ ಇಟ್ಟುಕೊಳ್ಳಲಿ, (ವಚನ 10). ಆಗ ಅವನು ತನ್ನ ಐಶ್ವರ್ಯದಲ್ಲಿ ಅಲ್ಲ, ಆದರೆ ದೇವರಲ್ಲಿ ಉಲ್ಲಾಸಪಡುವನು (1 ತಿಮೊಥೆ 6:17-19).

ಯಾರು ಐಶ್ವರ್ಯವಂತರು? ಯಾವನೂ ಭೂಮಿಯನ್ನೂ ಸೊತ್ತುಗಳನ್ನೂ ಹೊಂದಿರುತ್ತಾನೋ ಅವನು ತನ್ನ ಐಶ್ವರ್ಯವಂತನೆಂದು ಪರಿಗಣಿಸಬೇಕು. ಯಾಕೋಬನು ಇಲ್ಲಿ ಕೇವಲ ಅತಿ ಶ್ರೀಮಂತರ ಬಗ್ಗೆ ಮಾತ್ರಲ್ಲದೆ ಚಿಕ್ಕ ಪ್ರಮಾಣದ ಐಶ್ವರ್ಯವನ್ನು ಹೊಂದಿರುವ ಕ್ರೈಸ್ತರ ಕುರಿತಾಗಿಯೂ ಮಾತಾಡುತ್ತಿದ್ದಾನೆ. ಅಂಥ ಜನರು ತಮ್ಮನ್ನು "ಐಶ್ವರ್ಯವಂತ"ರೆಂದು ಭಾವಿಸಿಕೊಳ್ಳಲು ಇಷ್ಟ ಪಡುವದಿಲ್ಲ; ಆದರೆ ಬಡವರೊಂದಿಗೆ ಹೋಲಿಸಿದರ ಅವರು ನಿಜವಾಗಿಯೂ ಐಶ್ವರ್ಯವಂತರೇ.

ಐಶ್ವರ್ಯವು ನಾಶವಾಗುವುದು; ದೇವರ ವಾಕ್ಯವು ಸದಾಕಾಲವೂ ಇರುವದು. ಯಾವ ವ್ಯಕ್ತಿಯು ದೇವರ ಬದಲಾಗಿ ತನ್ನ ಐಶ್ವರ್ಯದಲ್ಲಿ ಭರವಸೆವಿಡುತ್ತಾನೋ ಅವನು ತನ್ನ ಐಶ್ವರ್ಯದೊಂದಿಗೆ ನಾಶವಾಗುತ್ತಾನೆ. ಆತನು ಬಾಡಿ ಗತಿಸಿಹೋಗುವ ಹೂವಿನ ಹಾಗಿದ್ದಾನೆ(ಯೆಶಾಯ 40:6-8; 1 ಪೇತ್ರ 1:23-25 ನೋಡಿರಿ). ಯಾವನು ಸಹ ಏಕಕಾಲದಲ್ಲಿ ಐಶ್ವರ್ಯವನ್ನೂ ದೇವರನ್ನೂ ಭರವಸಿಸಲು ಸಾಧ್ಯವಿಲ್ಲ (ಮತ್ತಾಯ 6:24 ನೋಡಿರಿ).

## ಕಷ್ಟಗಳು ಹಾಗೂ ಶೋಧನೆಗಳು (1:12-18)

**12** ಸಹಿಸಿಕೊಳ್ಳುವ ವಿಶ್ವಾಸಿಯು ಜೀವವೆಂಬ ಜಯಮಾಲೆಯನ್ನು ಹೊಂದುವನು. "ಜೀವವೆಂಬ ಜಯಮಾಲೆ"ಯು ಪಾಪದ ಮೇಲೆ ಜಯ ಹೊಂದಿದ ಜಯಮಾಲೆ ಅಥವಾ ನಮ್ಮ ಜೀವನದ ಓಟದಲ್ಲಿ ಜಯಮಾಲೆ ಆಗಿರುತ್ತದೆ (1 ಕೊರಿಂಥ 9:25; 2 ತಿಮೊಥೆ 4:7-8 ನೋಡಿರಿ). ಹೇಗಿದ್ದರೂ, ಜೀವವೆಂಬ ಜಯಮಾಲೆಯ ಮುಖ್ಯ ಅರ್ಥವು ರಕ್ಷಣೆ, ಅಥವಾ ನಿತ್ಯಜೀವ ಆಗಿದೆ...... ಕಡೇ ವರೆಗೂ ತಾಳುವವನು ರಕ್ಷಣೆ ಹೊಂದುವನು (ಮಾರ್ಕ 13:13). ನಾವು ಸ್ವಲ್ಪ ಕಾಲದವರೆಗೆ ಮಾತ್ರವೇ ನಮ್ಮ ಶಿಲುಬೆಯನ್ನೂ ಹೊರಬೇಕಷ್ಟೆ, ಆದರೆ ನಾವು ನಮ್ಮ ಜಯಮಾಲೆಯನ್ನು ಸದಾಕಾಲವೂ ಧರಿಸಿಕೊಳ್ಳುವೆವು .

ದೇವರು ತನ್ನನ್ನು ಪ್ರೀತಿಸುವವರಿಗೆ ಜೀವವೆಂಬ ಜಯಮಾಲೆಯನ್ನು ವಾಗ್ದಾನ ಮಾಡಿದ್ದಾನೆ. ದೇವರಲ್ಲಿ ನಂಬಿಕೆಯಿಟ್ಟು ಆತನಿಗೆ ವಿಧೇಯರಾಗುವರೇ ಆತನನ್ನು ಪ್ರೀತಿಸುವವರಾಗಿದ್ದಾರೆ. ಪ್ರೀತಿ, ವಿಧೇಯತೆ ಹಾಗೂ ನಂಬಿಕೆಯನ್ನು ಎಂದಿಗೂ ಬೇರ್ಪಡಿಸಲಾಗದು.

ಈ ವಚನದಲ್ಲಿರುವ ಕಷ್ಟ ಎಂಬ ಪದವನ್ನು ಕುರಿತು ನಾವು ಆಲೋಚಿಸಬೇಕು. ಕಷ್ಟಗಳು ನಮ್ಮ ಜೀವಿತಗಳ ವಿವಿಧ ಸಮಯಗಳಲ್ಲಿ ಬರುವಸಂಕಷ್ಟ ಹಾಗೂ ಸಮಸ್ಯೆಗಳಾಗಿವೆ[6] ದೇವರು ನಮ್ಮ ನಂಬಿಕೆಯನ್ನು ಪರಿಶೋಧಿಸಿ ಬಲಪಡಿಸುವದಕ್ಕಾಗಿ ಅಂಥ ಪರಿಸ್ಥಿತಿಗಳನ್ನು ನಮ್ಮ ಜೀವಿತದಲ್ಲಿ ಅನುಮತಿಸುತ್ತಾನೆ (ವಚನ 2). ಆದರೆ ಕಷ್ಟಗಳು ಬಂದಾಗ ನಾವು ಪಾಪದಲ್ಲಿ ಬೀಳುವ ಸಾಧ್ಯತೆಯಿರುತ್ತದೆ. ಉದಾಹರಣೆಗೆ, ನಾವು ನಮ್ಮ ನಂಬಿಕೆಯ ನಿಮಿತ್ತವಾಗಿ ಹಿಂಸೆಯನ್ನು ಅನುಭವಿಸುತ್ತಿರುವದಾದರೆ ನಾವು ನಮ್ಮ ನಂಬಿಕೆಯನ್ನು ಬಿಟ್ಟು ಬಿಡುವ ಶೋಧನೆಗೆ ಒಳಗಾಗಬಹುದು. ನಮ್ಮ ನಂಬಿಕೆಯನ್ನು ತೊರೆದು ಬಿಡುವದು ಒಂದು ದೊಡ್ಡ ಪಾಪವಾಗಿದೆ. ಅಥವಾ ಉದಾಹರಣೆಗೆ ದೇವರ ಕೃಪೆಯಿಂದಾಗಿ ಸ್ವಲ್ಪ ಐಶ್ವರ್ಯವನ್ನು ಸಂಪಾದಿಸಿಕೊಳ್ಳುವ ಅವಕಾಶವು ನಮಗೆ ಕೊಡಲ್ಪಟ್ಟಿರುವದಾದರೆ ನಾವು ಆ ಐಶ್ವರ್ಯವನ್ನು ನಮಗೋಸ್ಕರ ಉಪಯೋಗಿಸುವ ಶೋಧನೆಗೊಳಗಾಗಬಹುದು ನಾವು ಈಗಾಗಲೇ ವಿವಾಹವಾಗಿದ್ದಾಗ್ಯು ಮತ್ತೊಬ್ಬ ಪುರುಷ ಅಥವಾ ಸ್ತ್ರೀಯ ಪ್ರೇಮ ಪಾಶಕ್ಕೆ ಒಳಗಾಗಬಹುದು. ಅಂಥ ಒಂದು ಪರಿಸ್ಥಿತಿಯಲ್ಲಿ ಪಾಪಮಾಡಬೇಕೆಂಬ ಶೋಧನೆಯು ಅತಿಯಾಗಿರುವದು; ನಮ್ಮ ನಂಬಿಕೆಯು ನಿಜವಾಗಿಯೂ ಪರಿಶೋಧನೆಗೆ ಒಳಗಾಗುತ್ತದೆ.

ಇವೆಲ್ಲವೂ ನಮ್ಮನ್ನು ಪಾಪದ ಶೋಧನೆಗೆ ನಡೆಸುವ ಕಷ್ಟಗಳ ಉದಾಹರಣೆಗಳಾಗಿವೆ. ನಾವು ಅಂಥ ಪರಿಸ್ಥಿತಿಗಳಲ್ಲಿ ದೃಢವಾಗಿ ನಿಲ್ಲದೆ ತಾಳ್ಮೆಯಿಂದ ಇರದಿದ್ದರೆ ಪಾಪದಲ್ಲಿ ಬೀಳುವೆವು ಸ್ವತಃ ಕಷ್ಟವೇ ನಾವು ಪಾಪಮಾಡುವಂತೆ ಮಾಡುವದಿಲ್ಲ; ಬದಲಾಗಿ, ನಾವು ಪಾಪಮಾಡುವದಕ್ಕೆ ನಮ್ಮ ಅಂತರ್ಯದ ಅಭಿಲಾಷೆಗಳು ಹಾಗೂ ಆಶಾಪಾಶಗಳೇ ಕಾರಣವಾಗಿರುತ್ತದೆ. (ವಚನ 14). ಪಾಪವು ನಮ್ಮ ಪಾಪಾಧೀನ ಸ್ವಭಾವದಲ್ಲಿ ಉದ್ಭವಿಸುತ್ತದೆ. ನಾವು ನಮ್ಮ ಪಾಪಕ್ಕಾಗಿ ನಮ್ಮ ಕಷ್ಟಗಳನ್ನು ದೂರಲು ಸಾಧ್ಯವಿಲ್ಲ; ನಾವು ನಮ್ಮನ್ನೇ ದೂರಿಕೊಳ್ಳಬೇಕು.

**13-14** ಈ ವಚನದಲ್ಲಿ ಯಾಕೋಬನು ಪ್ರೇರೆಪಿಸಲ್ಪಡುವಾಗ (ಶೋಧಿಸಲ್ಪಡುವಾಗ) ಎಂಬ ಪದವನ್ನು ಉಪಯೋಗಿಸುತ್ತಾನೆ. ಇಲ್ಲಿ ಆತನು 2 ಮತ್ತು 12ನೇ ವಚನಗಳಲ್ಲಿ ಪ್ರಸ್ತಾಪಿಸಿದಂತಹ ಕಷ್ಟಗಳ ಕುರಿತಾಗಿ ಮಾತಾಡುತ್ತಿಲ್ಲ. ಆತನು ಇಲ್ಲಿ ಪಾಪಮಾಡಬೇಕೆಂಬ ಶೋಧನೆ ಅಥವಾ ಅಭಿಲಾಷೆಯ ಕುರಿತು ಮಾತಾಡುತ್ತಿದ್ದಾನೆ. ದೇವರು ತನ್ನ ಚಿತ್ತಕ್ಕನುಸಾರವಾಗಿ ನಮ್ಮ ನಂಬಿಕೆಯನ್ನು ಪರಿಶೋಧಿಸಿ ಬಲಪಡಿಸುವದಕ್ಕಾಗಿ ಕಷ್ಟಗಳು ನಮ್ಮ ಮೇಲೆ ಬರುವಂತೆ ಅನುಮತಿಸಬಹುದು. ಆದರೆ ನಾವು ಪಾಪವನ್ನು ಮಾಡುವದಕ್ಕೆ ಶೋಧಿಸಲ್ಪಡಬೇಕೆಂಬದು ಎಂದಿಗೂ ದೇವರ ಚಿತ್ತವಲ್ಲ.

ಪಾಪಮಾಡುವದಕ್ಕೆ ಶೋಧನೆಯು ಎಂದಿಗೂ ದೇವರಿಂದ ಬರುವದಿಲ್ಲ; ಅದು ನಮ್ಮ ಸ್ವಂತ ಪಾಪಾಧೀನ ಅಭಿಲಾಷೆಗಳಿಂದಲೇ ಬರುತ್ತದೆ.

ಕೆಲವು ವೇಳೆಗಳಲ್ಲಿ ಕ್ರೈಸ್ತರು ಶೋಧನೆಗೆ ಸೋತು ಪಾಪದಲ್ಲಿ ಬೀಳುತ್ತಾರೆ. ಅನೇಕ ಸಾರಿ ಅವರು ತಮ್ಮ ಪಾಪಕ್ಕೆ ದೇವರನ್ನು ಹೊಣೆಮಾಡಲು ಪ್ರಯತ್ನಿಸುತ್ತಾರೆ; ಅವರು "ದೇವರು ನನ್ನನ್ನು ಶೋಧಿಸಿದನು, ನಾನು ಬಿದ್ದೆನು" ಎಂದು ಹೇಳುತ್ತಾರೆ. ಆದರೆ ನಾವು ಎಂದಿಗೂ ಅಂಥ ವಿಚಾರವನ್ನು ಮಾಡಬಾರದು. ದೇವರು ಯಾರನ್ನೂ ಎಂದಿಗೂ ಪಾಪಕ್ಕೆ ಪ್ರೇರೆಪಿಸುವದಿಲ್ಲ.

ಆದದರಿಂದ, ನಾವು ಈ ಅಧ್ಯಾಯವನ್ನು ಓದುತ್ತಿರುವಾಗ ಯಾಕೋಬನು ಇಲ್ಲಿ ಎರಡು ಬೇರೆ ಬೇರೆ ಸಂಗತಿಗಳನ್ನು ಕುರಿತು ಮಾತಾಡುತ್ತಿದ್ದಾನೆಂಬದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಮೊದಲನೆಯದಾಗಿ, ಆತನು ನಮ್ಮ ಹೊರಗಿನ ಪರಿಸ್ಥಿತಿಗಳಿಂದ ಉದ್ಭವಿಸುವ ಕಷ್ಟಗಳ ಕುರಿತು ಮಾತಾಡುತ್ತಾನೆ (ವಚನ 2-3, 12). ಎರಡನೆಯದಾಗಿ, 13-14 ವಚನಗಳಲ್ಲಿ ಆತನು ನಮ್ಮೊಳಗಿನ ಅಭಿಲಾಷೆಗಳಿಂದ ಉದ್ಭವಿಸುವ ಪಾಪ ಮಾಡುವದಕ್ಕೆ ನಡಿಸುವ ಶೋಧನೆಗಳನ್ನು ಕುರಿತು ಮಾತಾಡುತ್ತಾನೆ. ದೇವರು ನಮ್ಮ ನಂಬಿಕೆಯನ್ನು ಪರಿಶೋಧಿಸುವದಕ್ಕಾಗಿ ಹೊರಗಿನ ಕಷ್ಟಗಳನ್ನು ಅನುಮತಿಸುತ್ತಾನೆ. ಹೇಗಿದ್ದರೂ, ಅಂತರ್ಯದ ಶೋಧನೆಗಳು (ಪ್ರೇರಣೆಗಳು) ಎಂದಿಗೂ ದೇವರಿಂದ ಬರುವದಿಲ್ಲ. ದೇವರು ಕೆಟ್ಟದ್ದರಿಂದ ಪ್ರೇರೆಪಿಸಲ್ಪಡುವದೂ ಇಲ್ಲ; ಯಾರನ್ನೂ ಪಾಪಕ್ಕೆ ಪ್ರೇರೇಪಿಸುವದೂ ಇಲ್ಲ (ವಚನ 13). ಹೊರಗಿನ ಕಷ್ಟಗಳನ್ನು ನಾವು ಸಹಿಸಿಕೊಳ್ಳಬೇಕು; ಅಂತರ್ಯ ಶೋಧನೆಗಳನ್ನು ಸಹ ಜಯಿಸಬೇಕು.

**15** ಕ್ರೈಸ್ತರೆಲ್ಲರೂ ಆಗಾಗ ನಾನಾ ವಿಧವಾದ ಶೋಧನೆಗಳನ್ನು ಅನುಭವಿಸುತ್ತಾರೆ. ಅಂದರೆ, ದುಷ್ಟ ಆಲೋಚನೆ ಹಾಗೂ ಅಭಿಲಾಷೆಗಳನ್ನು ಅನುಭವಿಸುತ್ತಾರೆ (2 ಕೊರಿಂಥ 10:5 ಮತ್ತು ವ್ಯಾಖ್ಯಾನ ನೋಡಿರಿ). ನಾವು ಶೀಘ್ರ್ರವೇ ಅವುಗಳನ್ನು ತೊಲಗಿಸಿಕೊಳ್ಳುವದಾದರೆ ಪಾಪಕ್ಕೊಳಗಾಗುವದಿಲ್ಲ. ಆದರೆ ಈ ಯಾವದೇ ಕೆಟ್ಟ ಆಲೋಚನೆಗಳು ಹಾಗೂ ಅಭಿಲಾಷೆಗಳನ್ನು ನಮ್ಮಲ್ಲಿ ಬೇರೂರಿ ಬೆಳೆಯುವಂತೆ ಬಿಡುವದಾದರೆ ಅದು ಶೀಘ್ರ್ರವೇ ಪಾಪದಲ್ಲಿ ಫಲಿತಗೊಳ್ಳುತ್ತದೆ. ಅಂದರೆ, ಅದು ಪಾಪವನ್ನು ಹೆರುತ್ತದೆ. ಈ ವಿಚಾರಗಳು ಹಾಗೂ ಅಭಿಲಾಷೆಗಳು ನಮ್ಮನ್ನು ಪಾಪಕ್ಕೆ ನಡಿಸದಿದ್ದಾಗ್ಯು ಈ ವಿಚಾರಗಳು ಹಾಗೂ ಅಭಿಲಾಷೆಗಳು ನಮ್ಮ ಮನಸ್ಸು ಹಾಗೂ ಹೃದಯಗಳಲ್ಲಿ ಉಳಿಯುವದಾದರೆ ಅವುಗಳ ಸ್ವತಃ ಪಾಪಗಳಾಗುತ್ತವೆ. ಮತ್ತು ಪಾಪದ ಫಲಿತವು ಮರಣ. ಪಾಪವು ಮನುಷ್ಯರನ್ನು ನಿತ್ಯಮರಣಕ್ಕೆ ನಡಿಸುತ್ತದೆ. (ರೋಮ 6:23, ಗಲಾತ್ಯ 6:7-8ನೋಡಿರಿ).

**16-17** ಮೋಸ ಹೋಗಬೇಡಿರಿ. ದೇವರು ಮನುಷ್ಯರನ್ನು ಎಂದಿಗೂ ಪಾಪಮಾಡುವಂತೆ ಸೆಳೆಯುವದಿಲ್ಲ. ಆತನು ಮನುಷ್ಯರನ್ನು ಸತ್ಕಾರ್ಯಕ್ಕಾಗಿ ಸೆಳೆಯುತ್ತಾನೆ. ದೇವರನ್ನು ಪ್ರೀತಿಸುವವರಿಗೆ ಆತನು ಮಾಡುವದೆಲ್ಲವೂ ಅವರ ಪ್ರಯೋಜನಕ್ಕಾಗಿಯೇ (ರೋಮ 8:28). ದೇವರು ಕೊಡುವ ವರಗಳೆಲ್ಲವೂ ಒಳ್ಳೆಯವುಗಳು ಹಾಗೂ ಕುಂದಿಲ್ಲದವುಗಳು ಆಗಿವೆ. ಮತ್ತು ಎಲ್ಲಾ ಒಳ್ಳೇ ದಾನಗಳು ಕುಂದಿಲ್ಲದ ಎಲ್ಲಾ ವರಗಳು ದೇವರಿಂದ ಬರುತ್ತವೆ. ಯಾಕೋಬನು ದೇವರನ್ನು ಇಲ್ಲಿ ಪರಲೋಕದ ಸಕಲ ವಿಧವಾದ ಬೆಳಕಿಗೆ ತಂದೆ ಎಂದು ಕರೆಯುತ್ತಾನೆ. ಆತನ ತಾತ್ಪರ್ಯವೇನೆಂದರೆ, ದೇವರು ಸೂರ್ಯ, ಚಂದ್ರ, ನಕ್ಷತ್ರಗಳ ಸೃಷ್ಟಿಕರ್ತನು ಎಂಬುದೇ. ಆದರೆ ಸ್ವತಃ ದೇವರು ಹಗಲು ರಾತ್ರಿ ಬದಲಾಗುತ್ತಲೇ ಇರುವಂಥ ಈ "ಪರಲೋಕದ ಸಕಲ ವಿಧವಾದ ಬೆಳಕಿನ" ಹಾಗಿರುವದಿಲ್ಲ. ದೇವರ ಬೆಳಕು ಯಾವಾಗಲೂ ಪ್ರಕಾಶಿಸುತ್ತದೆ; ಆತನಲ್ಲಿ ಎಷ್ಟು ಮಾತ್ರಕ್ಕೂ ಕತ್ತಲೆಯಿಲ್ಲ (ಯೋಹಾನ 8:12; 1 ಯೋಹಾನ 1:5).

**18** ದೇವರು ನಮ್ಮನ್ನು ಸತ್ಯವಾಕ್ಯದಿಂದ ಸೃಷ್ಟಿಸಿದನು. ಸತ್ಯವಾಕ್ಯ ಎಂಬುದು ಸ್ವತಃ ಯೇಸುಕ್ರಿಸ್ತನೇ ಎಂಬ ಅರ್ಥಕೊಡಬಹುದು (ಯೋಹಾನ 1:1-3) ಅಥವಾ ಅದು ಕ್ರಿಸ್ತನ ಸುವಾರ್ತೆ ಎಂದು ಅರ್ಥನೀಡಬಹುದು. (ಪೇತ್ರ 1:23). ಎರಡೂ ಅರ್ಥಗಳು ಸತ್ಯವಾದವುಗಳು.

ದೇವರು ನಮ್ಮನ್ನು ತನ್ನ ಕುಟುಂಬದೊಳಗೆ ಏಕೆ ಹುಟ್ಟಿಸಿದನು? ನಾವು ಪ್ರಥಮ ಫಲದಂತಾಗಬೇಕೆಂದು ಆತನು ಇದನ್ನು ಮಾಡಿದನು. ಕ್ರಿಸ್ತನು ತಾನೇ ವಿಶ್ವಾಸಿಗಳೊಳಗೆ ಪ್ರಥಮ ಫಲವಾಗಿದ್ದು (1 ಕೊರಿಂಥ 15:20-23). ಅದೇ ಸಾದೃಶದ ಮೂಲಕ ವಿಶ್ವಾಸಿಗಳು ದೇವರ ಸೃಷ್ಟಿಗಳೆಲ್ಲೆಲ್ಲಾ ಪ್ರಥಮ ಫಲಗಳಾಗಿದ್ದಾರೆ. ಹಳೆ ಒಡಂಬಡಿಕೆಯ ಧರ್ಮಶಾಸ್ತ್ರದ ಪ್ರಕಾರವಾಗಿ ಯೆಹೂದ್ಯರು ಪ್ರತಿ ವರ್ಷವೂ ತಮ್ಮ ಬೆಳೆಯ ಪ್ರಥಮ ಫಲಗಳನ್ನು ದೇವರಿಗೆ ಅರ್ಪಿಸಬೇಕಾಗಿತ್ತು (ಅರಣ್ಯ ಕಾಂಡ 18:12). ಆ ಫಲವೂ ಎಲ್ಲದಕ್ಕಿಂತಲೂ ಅತಿ ಉತ್ತಮವೆಂದು ಪರಿಗಣಿಸಲ್ಪಡುತ್ತಿತ್ತು. ಆದದರಿಂದ, ಮನುಷ್ಯರೊಳಗೆ ಕ್ರೈಸ್ತರು ದೇವರಿಗೆ ಅರ್ಪಿಸಲ್ಪಟ್ಟಿರುವ ಪ್ರಥಮ ಫಲಗಳ– ಬೆಳೆಯ ಅತ್ಯುತ್ತಮ ಭಾಗದ– ಹಾಗೆ ಇರಬೇಕಾಗಿರುತ್ತದೆ. ಅಂಥ ಕಾಣಿಕೆಯ ದೇವರಿಗೆ ಮೆಚ್ಚಿಕೆಯಾದದ್ದು.

## ಕೇಳುವದು ಹಾಗೂ ಮಾಡುವದು (1:19-27)

**19** ನಾವು ಯಾವಾಗಲೂ ದೇವರಿಗೆ ಆತನ ವಾಕ್ಯಕ್ಕೆ, ಹಾಗೂ ಒಬ್ಬರಿಗೊಬ್ಬರು ಕಿವಿಗೊಡುವದರಲ್ಲಿ ತೀವ್ರವಾಗಿ – ಸಿದ್ಧರಾಗಿಯೂ ಉತ್ಸುಕರಾಗಿಯೂ– ಇರಬೇಕು. ಯಾವ ವ್ಯಕ್ತಿಯು ಯಾವಾಗಲೂ ಮಾತಾಡುವವನೂ ಕೆಲವೇಳೆ ಮಾತ್ರವೇ ಕಿವಿಗೊಡುವವನೂ ಆಗಿರುತ್ತಾನೋ ಅಂಥವನು ಗರ್ವಿಷ್ಠನು ಆತನು ಇತರರ ವಿಚಾರಗಳನ್ನು ಗಣನೆಗೆ ತಂದುಕೊಳ್ಳುವದಿಲ್ಲ.

ನಾವು ಮಾತಾಡುವದರಲ್ಲಿ ನಿಧಾನವಾಗಿ ಇರಬೇಕು; ಅಂದರೆ, ನಾವು ಮಾತಾಡುವದಕ್ಕೆ ಏನು ಮಾತಾಡಲಿಕ್ಕಿದ್ದೇವೆ ಎಂಬುದರ ಕುರಿತು ಆಲೋಚಿಸಬೇಕು. ನಾವು ಮಾತಾಡುವದಕ್ಕೆ ಮುಂಚೆ ನಮಗೆ ಮೂರು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕುಃ ನಾವು ಹೇಳುವದಕ್ಕಿರುವದು ಸತ್ಯವೋ? ಅದು ದಯೆಯಿಂದ ಕೂಡಿದ್ದೋ? ಅದು ಅವಶ್ಯಕವೋ? ಅದು ಸತ್ಯವೂ, ದಯೆಯೂ, ಅವಶ್ಯಕವೂ ಆಗಿರುವದಾದರೆ ನಾವು ಅದನ್ನು ಮಾತಾಡೋಣ. ಇಲ್ಲವಾದರೆ ಮೌನವಾಗಿರೋಣ.

ಮಾತಾಡುವದರಲ್ಲಿ ನಿಧಾನವಾಗಿರುವದರ ಜೊತೆಗೆ ನಾವು ಕೋಪಿಸುವದರಲ್ಲಿಯೂ ನಿಧಾನವಾಗಿರಬೇಕು. ಕೋಪಿಸಿಕೊಳ್ಳುವದು ಯಾವಾಗಲೂ ಪಾಪವಲ್ಲ (ಎಫೆಸ 4:26). ಉದಾಹರಣೆಗೆ ತಪ್ಪಿನ ವಿರುದ್ಧ ಕೋಪಿಸಿಕೊಳ್ಳುವದರಲ್ಲಿ ಪಾಪವಿಲ್ಲ (ಮಾರ್ಕ 11:15-17ನೋಡಿರಿ). ಹೇಗಿದ್ದರೂ, "ಸಿಡಿದು ಬಿಡುವದು" ತಾಳ್ಮೆಯನ್ನು ಕಳೆದುಕೊಳ್ಳುವದು ಪಾಪವಾಗಿರುತ್ತದೆ. ನಾವು ಶೀಘ್ರ್ರವೇ ಕೋಪಿಸಿಕೊಳ್ಳಬಾರದು. ನಮ್ಮ ಕೋಪವನ್ನು ಎದ್ದೇಳುವದಕ್ಕೆ ಬಿಡುವ ಮುಂಚೆ ನಾವು ಯಾವುದರ ಮೇಲೆ ಕೋಪಗೊಳ್ಳುತ್ತಿದ್ದೇವೋ ಅದು ನಿಜವಾಗಿಯೂ ಕೆಟ್ಟದ್ದೋ ಅಥವಾ ಅಲ್ಲವೋ ಎಂಬದನ್ನು ಖಚಿತಪಡಿಸಿಕೊಳ್ಳಬೇಕು. ನಮ್ಮ ಕೋಪವು ದೇವರ ಕೋಪವಾಗಿರಬೇಕು. ಹೊರತು ನಮ್ಮ ಸ್ವಂತ ಮಾನುಷ ಕೋಪವಲ್ಲ. ನಮ್ಮ ಕೋಪವು ಎಂದಿಗೂ ವಯಕ್ತಿಕವಾಗಿರ ಬಾರದು; ನಾವು ಎಂದಿಗೂ ಸೇಡು ತಿರಿಸಿಕೊಳ್ಳಲು ಆಶಿಸಬಾರದು. ನಾವು ಪಾಪದ ಮೇಲೆ ಕೋಪಿಸಿಕೊಳ್ಳಬೇಕು ಆದರೆ ಎಂದಿಗೂ ಪಾಪಿಯ ಮೇಲಲ್ಲ; ಇಲ್ಲವಾದರೆ, ಸ್ವತಃ ನಾವೇ ಪಾಪ ಮಾಡುವವರಾಗುತ್ತೇವೆ.

**20** ಮಾನುಷ ಕೋಪವು ಎಂದಿಗೂ ನೀತಿಯುಳ್ಳದ್ದಲ್ಲ. ಮಾನುಷ ಕೋಪವು ಜನರೆಡೆಗೆ ನಿರ್ದೇಶಿಸಲ್ಪಟ್ಟಿರುತ್ತದೆ. ಹೊರತು ಅವರ ಕೃತ್ಯಗಳೆಡೆಗಲ್ಲ. ಮಾನುಷ ಕೋಪವು ಸ್ವಾರ್ಥವುಳ್ಳದ್ದು. ಮಾನುಷ ಕೋಪವು ಮನುಷ್ಯನ ಇಷ್ಟ ಗಳಿಗೆ ದಕ್ಕೆಯುಂಟಾದ ಕಾರಣದಿಂದ ಉದ್ಭವಿಸುತ್ತದೇ ಹೊರತು ದೇವರ ಇಷ್ಟಾರ್ಥಗಳಿಗೆ ದಕ್ಕೆಯಾಗುವ ಕಾರಣದಿಂದಲ್ಲ. ಮಾನುಷ ಕೋಪವು ಮನುಷ್ಯನ ನಿಮಿತ್ತವಾಗಿಯೇ ಹೊರತು ದೇವರ ನಿಮಿತ್ತವಾಗಿಯಲ್ಲ. ಈ ಕಾರಣದಿಂದ ಮನುಷ್ಯನ ಕೋಪವು ದೇವರಿಗೆ ಮೆಚ್ಚಿಕೆಯಾಗಿರುವ ನೀತಿಗೆ ಅನುಕೂಲವಾಗುವದಿಲ್ಲ.

**21** ಆದಕಾರಣ ಎಲ್ಲಾ ನೀಚತನವನ್ನೂ ಎಲ್ಲಾ ದುಷ್ಟತನವನ್ನೂ ತೆಗೆದುಹಾಕಿರಿ. ಪೌಲ ಹಾಗೂ ಪೇತ್ರರು ತಮ್ಮ ಪತ್ರಿಕೆಗಳಲ್ಲಿ ಸತತವಾಗಿ ನೀಡಿದ ಪ್ರಬೋಧನೆಯನ್ನೇ ಯಾಕೋಬನು ಇಲ್ಲಿ ಪುನರಾವರ್ತಿಸುತ್ತಾನೆ. (ಎಫೆಸ 4:22, 31; 5:3; 1 ಪೇತ್ರ 2:1 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ದೇವರ ವಾಕ್ಯವು ನಮ್ಮಲ್ಲಿ ಬೇರೂರಿರುತ್ತದೆ. (1 ಪೇತ್ರ 1:23). ನಾವು ಅದನ್ನು ನಂಬಬೇಕಾದ, ಸ್ವೀಕರಿಸಿಕೊಳ್ಳಬೇಕಾದ ಅಗತ್ಯವಿರುತ್ತದೆ. ದೇವರ ವಾಕ್ಯವು ನಮ್ಮಲ್ಲಿ ಬೆಳೆಯುವದಾದರೆ ಅದು ನಮ್ಮನ್ನೂ ರಕ್ಷಿಸುವದು. ಹೇಗಿದ್ದರೂ, ನಾವು ನಮ್ಮೊಳಗಿನ ದೇವರ ವಾಕ್ಯವನ್ನು ಒಣಗಿ ಹೋಗುವಂತೆ ಬಿಡುವದಾದರೆ ಅದು ನಮ್ಮನ್ನು ರಕ್ಷಿಸುವದಿಲ್ಲ (ಮಾರ್ಕ 4:14-20 ನೋಡಿರಿ).

**22** ಯಾಕೋಬನು 19ನೇ ವಚನದಲ್ಲಿ ಬರೆದದ್ದೇನೆಂದರೆಃ ಪ್ರತಿಯೊಬ್ಬನು ಕಿವಿಗೊಡುವದರಲ್ಲಿ ತೀವ್ರವಾಗಿ ಇರಬೇಕು. ಆದರೆ ದೇವರ ವಾಕ್ಯಕ್ಕೆ ಕಿವಿಗೊಡುವದು (ಕೇಳುವದು) ಮಾತ್ರವೇ ಸಾಕಾಗುವದಿಲ್ಲ. ನಾವು ಅದಕ್ಕೆ ವಿಧೇಯರೂ ಆಗಬೇಕು. ನಾವು ಕೇಳುವದರಿಂದ ರಕ್ಷಿಸಲ್ಪಟ್ಟಿಲ್ಲ; ನಂಬುವದರಿಂದಲೇ ರಕ್ಷಿಸಲ್ಪಟ್ಟಿದ್ದೇವೆ. ಮತ್ತು ನಿಜವಾಗಿ ನಂಬುವದು ಯಾವಾಗಲೂ ವಿಧೇಯತೆಯನ್ನೂ ಒಳಗೊಂಡಿರುತ್ತದೆ (ಯಾಕೋಬ 2:14-17ನೋಡಿರಿ) ಅನೇಕ ಜನರು ದೇವರ ವಾಕ್ಯವನ್ನು ಕೇಳಿಸಿಕೊಂಡು "ಎಂತಹ ಸಂತೋಷದಾಯಕ ವಾಕ್ಯ!" ಎಂದು ಹೇಳುತ್ತಾರೆ. ಆದರೆ ಅವರು ದೇವರ ವಾಕ್ಯವನ್ನ ಓದಿ ಇಷ್ಟಪಟ್ಟಾಗ್ಯು ಅದಕ್ಕೆ ವಿಧೇಯರಾಗದಿದ್ದರೆ ಅದು ಅವರಿಗೆ ಯಾವ ಹಿತವನ್ನೂ ತರುವದಿಲ್ಲ. ವಾಸ್ತವದಲ್ಲಿ, ಅವರು ಅದರಿಂದ ಶೀರ್ಪಿಗೊಳಗಾಗುವರು. ದೇವರ ವಾಕ್ಯಕ್ಕೆ ವಿಧೇಯರಾಗದ ಜನರು ನಿಜವಾದ ನಂಬಿಕೆಯನ್ನು ಹೊಂದಿರುವದಿಲ್ಲ; ಅವರು ತಮ್ಮನ್ನು ತಾವೇ ಮೋಸ ಗೊಳಿಸುತ್ತಾರೆ ಅಷ್ಟೇ.

**23-24** ಇಲ್ಲಿ ದೇವರ ವಾಕ್ಯವು ಕನ್ನಡಿಗೆ ಹೋಲಿಸಲ್ಪಟ್ಟಿದೆ. ನಾವು ಕನ್ನಡಿಯೊಂದರಲ್ಲಿ ನೋಡಿಕೊಳ್ಳುವಾಗ ನಮ್ಮ ನಿಜವಾದ ಮುಖವನ್ನು ನಮ್ಮ ನಿಜ ರೂಪವನ್ನು ಕಾಣುತ್ತೇವೆ. ಅಂದರೆ, ನಾವು ನಮ್ಮ ಪಾಪಸ್ವಭಾವವನ್ನು ಕಾಣುತ್ತೇವೆ. ದೇವರ ವಾಕ್ಯವು ಕನ್ನಡಿಯಂತೆ ನಮ್ಮ ಪಾಪವನ್ನು ನಮಗೆ ತೋರಿಸುತ್ತದೆ. ಆದರೆ ನಾವು ದೇವರ ವಾಕ್ಯವನ್ನು ಕೇಳುವವರು. ಮಾತ್ರವೇ ಆಗಿದ್ದು ಅದನ್ನು ಕೈಕೊಂಡು ನಡೆಯದಿದ್ದರೆ, ನಾವು ಕನ್ನಡಿಯಲ್ಲಿ ದೃಷ್ಟಿಸಿ ತನ್ನ ಪಾಪವನ್ನು ಕಂಡ ಬಳಿಕ ತಿರಿಗಿ ತಕ್ಷಣವೇ ಅದನ್ನು ಮರೆತು ಬಿಡುವಂಥ ಮನುಷ್ಯನ ಹಾಗಿರುತ್ತೇವೆ. ನಾವು ಕನ್ನಡಿಯ ಕಡೆಯಿಂದ ಶೀಘ್ರ್ರ ವೇ ವಿಮುಖರಾಗದಿರೋಣ. ಬದಲಾಗಿ, ನಾವು ಕನ್ನಡಿಯು ನಮಗೆ ತೋರಿಸುವ ವಿಷಯಕ್ಕೆ ಗಮನಕೊಟ್ಟು ನಂತರ ಅದರ ಕುರಿತು ಏನಾದರೂ ಮಾಡುವವರಾಗಿರೋಣ. ನಾವು ನಮ್ಮ ಮುಖವನ್ನು ತೊಳೆದು ಕೊಳ್ಳಬೇಕಾಗುವದು! ನಾವು ಕನ್ನಡಿಯಲ್ಲಿ ಕಾಣುವ ಪಾಪವನ್ನು ತೆಗೆದುಹಾಕಬೇಕಾಗುವದು.

**25** ಇಲ್ಲಿ ಯಾಕೋಬನು ಕನ್ನಡಿಯಲ್ಲಿ ಲಕ್ಷ್ಯವಿಟ್ಟು ನೋಡುವ– ಅಂದರೆ, ಸರ್ವೋತ್ತಮ ಧರ್ಮಪ್ರಮಾಣವನ್ನು ಲಕ್ಷ್ಯ ಕೊಟ್ಟು ನೋಡುವ –ವ್ಯಕ್ತಿಯ ಕುರಿತು ಮಾತಾಡುತ್ತಾನೆ. ಸರ್ವೋತ್ತಮ ಧರ್ಮಪ್ರಮಾಣವು ಕ್ರಿಸ್ತನ ವಾಕ್ಯ, ಕ್ರಿಸ್ತನ ಸುವಾರ್ತೆ ಆಗಿದೆ ಸುವಾರ್ತೆಯು ಮನುಷ್ಯನಿಗೆ ರಕ್ಷಣೆಯನ್ನುಂಟು ಮಾಡುವ ದೇವರ ಶಕ್ತಿಯಾಗಿದೆ (ರೋಮ 1:16). ಆದದರಿಂದ, ಸರ್ವೋತ್ತಮ ಧರ್ಮಪ್ರಮಾಣವು, ಕ್ರಿಸ್ತನ ಸುವಾರ್ತೆಯು ಬಿಡುಗಡೆಯನ್ನು ನೀಡುತ್ತದೆ. ಯಾಕೆಂದರೆ ಅದು ಪಾಪ ಹಾಗೂ ಅದರ ದಂಡನೆಯಾದ ಮರಣದಿಂದ ನಮ್ಮನ್ನು ವಿಮೋಚಿಸುತ್ತದೆ.

ಸರ್ವೋತ್ತಮ ಧರ್ಮಪ್ರಮಾಣವನ್ನು –ದೇವರ ವಾಕ್ಯ, ಸುವಾರ್ತೆಯನ್ನು– ಲಕ್ಷ್ಯಕೊಟ್ಟು ನೋಡುವ ಮನುಷ್ಯನು ಅದನ್ನು ಮರೆಯುವದಿಲ್ಲ; ಬದಲಾಗಿ, ಆತನು ಅದಕ್ಕೆ ಕಿವಿಗೊಟ್ಟು ವಿಧೇಯನಾಗುತ್ತಾನೆ. ಅಂಥ ಮನುಷ್ಯನು ಈ ಜೀವಿತದಲ್ಲಿ ಮಾತ್ರವಲ್ಲದೆ ಮುಂದಿನ ಜೀವಿತದಲ್ಲಿಯೂ ಧನ್ಯನಾಗುವನು.

26 ಅನೇಕ ಜನರು ತಾವು ಧಾರ್ಮಿಕರು (ಸದ್ಭಕರು) ಎಂದು ಭಾವಿಸಿಕೊಳ್ಳುತ್ತಾರೆ, ಆದರೆ, ವಾಸ್ತವದಲ್ಲಿ, ಅವರು ಬಹಿರಂಗವಾಗಿ ಮಾತ್ರವೇ ಧಾರ್ಮಿಕರು ಅಂತರ್ಯವಾಗಿ ಅವರ ಹೃದಯಗಳಲ್ಲಿ ಬಹಳಷ್ಟು ಕೆಟ್ಟತನವಿರುತ್ತದೆ; ಆದದರಿಂದ, ಅವರು ಮಾತಾಡುವಾಗ ಅವರ ನುಡಿಗಳಲ್ಲಿ ಕೆಟ್ಟದ್ದು ಹೊರಡುತ್ತದೆ. ಅಂಥ ಜನರು ನಿಜವಾಗಿ ಧಾರ್ಮಿಕರಲ್ಲ.

ನಿಜವಾದ ಸದ್ಭಕ್ತನೊಬ್ಬನ ಒಂದು ಮುಖ್ಯ ಗುರುತೇನೆಂದರೆ ಆತನು ತನ್ನ ನಾಲಿಗೆಯನ್ನು ಸ್ವಾಧೀನ ಮಾಡಿಕೊಳ್ಳ ಬಲ್ಲನು ನಿಜವಾದ ಧರ್ಮವು ಒಬ್ಬನಿಗೆ ತನ್ನ ನಾಲಿಗೆಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ಬಲವನ್ನು ನೀಡುತ್ತದೆ. ಸುಳ್ಳು ಅಥವಾ ಹೊರಗಿನ ಧಾರ್ಮಿಕತೆಯು ಆ ಬಲವನ್ನು ನೀಡಲಾರದು. ಅಂಥ ಧಾರ್ಮಿಕತೆಯು (ಭಕ್ತಿಯು) ನಿಷ್ಪ್ರಯೋಜನವಾಗಿದೆ.

ಕ್ರೈಸ್ತರೊಳಗೆ ಅತಿ ಸಾಮಾನ್ಯವಾದ ಹಾಗೂ ಅತಿ ವಿನಾಶಕಾರಿಯಾದ ಪಾಪಗಳೆಂದರೆ ನಾಲಿಗೆ ಸಂಬಂಧಿಸಿದ ಪಾಪಗಳಾಗಿವೆ, ವಿಶೇಷವಾಗಿ, ನಾವು ಇತರರನ್ನು ಟೀಕಿಸುವದಕ್ಕೂ ಒಬ್ಬರಿಗೊಬ್ಬರು ತೀಪು ಮಾಡುವದಕ್ಕೂ ನಮ್ಮ ನಾಲಿಗೆಯನ್ನು ಉಪಯೋಗಿಸುವದೇ ಆಗಿದೆ. (ಯಾಕೋಬ 3:6-8ನೋಡಿರಿ). ಯೇಸು ತಾನೇ ದೇವರಿಗೆ ನಮ್ಮ ನುಡಿಗಳು ಎಷ್ಟು ಪ್ರಾಮುಖ್ಯವಾಗಿವೆ ಎಂಬದನ್ನು ಕಲಿಸಿದನು. ಯೇಸು ಹೇಳಿದ್ದೇನೆಂದರೆಃ "ಇದಲ್ಲದೆ ನಾನು ನಿಮಗೆ ಹೇಳುವದೇನೆಂದರೆ ಮನುಷ್ಯರು ಸುಮ್ಮನೆ ಆಡುವ ಪ್ರತಿಯೊಂದು ಮಾತಿನ ವಿಷಯವಾಗಿ ನ್ಯಾಯ ವಿಚಾರಣೆಯ ದಿನದಲ್ಲಿ ಉತ್ತರಕೊಡಬೇಕು. ನಿನ್ನ ಮಾತುಗಳಿಂದಲೇ ನೀತಿವಂತನೆಂದು ತೀರ್ಪು ಹೊಂದುವಿ; ನಿನ್ನ ಮಾತುಗಳಿಂದಲೇ ಅಪರಾಧಿಯೆಂದು ತೀರ್ಪು ಹೊಂದುವಿ" (ಮತ್ತಾಯ 12:36-37).

27 ಶುದ್ಧವೂ ನಿರ್ಮಲವೂ ಆಗಿರುವ ಭಕ್ತಿ –ಅಂದರೆ, ನಿಜವಾದ ಧಾರ್ಮಿಕತೆಯು– ಏನೆಂದರೆಃ ಮೊದಲನೆಯದಾಗಿ, ದಿಕ್ಕಿಲ್ಲದವರು ಹಾಗೂ ವಿಧವೆಯರ ಪರಾಮರಿಸುವಂತಹ ಕುರುಣಾ ಕಾರ್ಯಗಳನ್ನು ಮಾಡು ವದು; ಹಾಗೂ ಎರಡನೆಯದಾಗಿ, ಒಬ್ಬನು ತನ್ನನ್ನು ಶುದ್ಧನಾಗಿಟ್ಟುಕೊಳ್ಳುವದು, ತನ್ನನ್ನು ಪ್ರಪಂಚದ ದೋಷವು ಹತ್ತದಂತೆ ನೋಡಿಕೊಂಡಿರುವದೇ (ಯಾಕೋಬ 4:4 ನೋಡಿರಿ). ಕ್ಲುಪ್ತವಾಗಿ ಹೇಳುವದಾದರೆ, ನಿರ್ಮಲ ಜೀವಿತ ಹಾಗೂ ಪ್ರೀತಿಯ ಹೃದಯವು ನಮ್ಮ ಭಕ್ತಿಯ ನಿಜವಾದದ್ದೆಂಬದಕ್ಕೆ ಸಾಕ್ಷಿಯಾಗಿರುತ್ತದೆ.

---

# ಅಧ್ಯಾಯ - 2

## ಪಕ್ಷಪಾತವು ನಿಷೇದಿಸಲ್ಪಟ್ಟಿದೆ (2:1-13)

1 ನನ್ನ ಸಹೋದರರೇ........ ನೀವು ಪಕ್ಷ ಪಾತಿಗಳಾಗಿರಬಾರದು. ಅಂದರೆ, ಮನುಷ್ಯನ ಸ್ಥಾನಮಾನ ಹಾಗೂ ಐಶ್ವರ್ಯಗಳಲ್ಲಿನ ವ್ಯತ್ಯಾಸಗಳನ್ನು ಗಣನೆಗೆ ತಂದುಕೊಳ್ಳಬಾರದು. ಒಬ್ಬ ವ್ಯಕ್ತಿಯ ಹೊರಗಿನ ತೋರಿಕೆಯನ್ನು ನೋಡಬೇಡಿರಿ. ನಮ್ಮ ಮನಸ್ಸುಗಳಲ್ಲಿ ನಾವು ಜನರನ್ನು ಶ್ರೀಮಂತ, ಹಾಗೂ ಬಡವ, ಮೇಲ್ವರ್ಗ ಹಾಗೂ ಕೀಳು ವರ್ಗ, ಮೇಲ್ಜಾತಿ ಹಾಗೂ ಕೀಳು ಜಾತಿ ಎಂಬದಾಗಿ ಇಬ್ಭಾಗಿಸಕೂಡದು. ಕ್ರಿಸ್ತನ ಮಹಿಮೆಯ ಪ್ರಕಾಶವು ಈ ಲೋಕದ ಮಹಿಮೆಯನ್ನು ಗತಿಸಿ ಹೋಗಿ ಶೂನ್ಯವಾಗುವಂತೆ ಮಾಡುತ್ತದೆ. ಆದದರಿಂದ, ನಾವು ವ್ಯಕ್ತಿಯ ಲೌಕೀಕ ಸ್ಥಾನ ಅಥವಾ ಪರಿಸ್ಥಿತಿಯನ್ನು ನೋಡದಿರೋಣ. ಬದಲಾಗಿ, ಆತನ ಜೀವಿತದಲ್ಲಿ ಕ್ರಿಸ್ತನ ಬೆಳಕು ಎಷ್ಟಾಗಿ ಪ್ರಕಾಶಿಸುತ್ತದೆಂಬದನ್ನು ಮಾತ್ರವೇ ನೋಡಬೇಕು. ಮನುಷ್ಯನ ಹೊರಗಿನ ತೋರಿಕೆಯನ್ನು ನೋಡುವದಕ್ಕೆ ಬದಲಾಗಿ ಆತನ ಅಂತರ್ಯದ ಆತ್ಮೀಕ ಗುಣಗಳನ್ನು ನೋಡೋಣ.

2-4 ಯಾಕೋಬನು ಇಲ್ಲಿ ಒಬ್ಬ ಧನಿಕನು ಹಾಗೂ ಒಬ್ಬ ಬಡ ಮನುಷ್ಯನು ಕ್ರೈಸ್ತ ಕೂಟಕ್ಕೆ ಬರುವಂಥ ಉದಾಹರಣೆಯನ್ನು ನೀಡುತ್ತಾ ಪಕ್ಷಪಾತದ ಕುರಿತ ತನ್ನ ಬೋಧನೆಯನ್ನು ದೃಷ್ಟಾಂತಿಕರಿಸುತ್ತಾನೆ.

ಆದರೆ ನಾವು ಸಾರ್ವಜನಿಕ ಸ್ಥಳಗಳಲ್ಲಿ ಪಕ್ಷಪಾತ ತೋರಿಸದಿರುವದು ಮಾತ್ರವಲ್ಲ. ನಾವು ನಮ್ಮ ಮನೆಗೆ ಬರು ವವರನ್ನೆಲ್ಲಾ ಸಹ ಸರಿಸಮಾನವಾಗಿ ನೋಡಿಕೊಳ್ಳಬೇಕು. ನಾವು ಎಲ್ಲರಿಗೂ –ಅತ್ತ್ಯುನ್ನತ ಸರ್ಕಾರಿ ಅಧಿಕಾರಿಗಳಿಂದ ಅತಿ ಹೀನರಾದ ಕೂಲಿಕಾರರವರೆಗೂ, ಅತಿ ಮೇಲ್ಜಾತಿಯಿಂದ ಅತ್ಯಂತ ಕೀಳು ಜಾತಿಯವರೆಗೂ, ಅತಿ ಶ್ರೀಮಂತರಿಂದ ಕಡು ಬಡವರವರೆಗೂ– ಸಮಾನವಾದ ಪ್ರೀತಿ ಹಾಗೂ ಮರ್ಯಾದೆಯನ್ನು ತೋರಿಸಬೇಕು. ನಾವು ಹೀಗೆ ಮಾಡದಿದ್ದರೆ ಜನರ ನಡುವೆ ನಮ್ಮನ್ನು ನ್ಯಾಯಾಧಿಪತಿಯನ್ನಾಗಿ ಮಾಡಿಕೊಳ್ಳುವವರಾಗಿರುತ್ತೇವೆ (ವಚನ 9). ದೇವರು ಪಕ್ಷ ಪಾತ ತೋರಿಸುವದಿಲ್ಲ. ಆದದರಿಂದ, ನಾವೂ ಪಕ್ಷಪಾತವನ್ನು ತೋರಿಸಬಾರದಷ್ಟೆ (ರೋಮ 2:11, ಎಫೆಸ 6:9).

5 ಯಾಕೋಬನ ಕಾಲದಲ್ಲಿ, ಬಹುಪಾಲು ವಿಶ್ವಾಸಿಗಳು ಬಡವರಾಗಿದ್ದರು ಹಾಗೂ ಅವರಲ್ಲಿ ಅನೇಕರು ಗುಲಾಮರಾಗಿದ್ದರು. ಈ ಲೋಕದಲ್ಲಿನ ತಮ್ಮ ಬಡತನ ಹಾಗೂ ಶೋಷಿತರೂ ಆಗಿದ್ದರಿಂದ ಈ ವಿಶ್ವಾಸಿಗಳು ಕ್ರಿಸ್ತನ

ಸುವಾರ್ತೆಯನ್ನು ಒಂದು ಮಹಾ ನಿರೀಕ್ಷೆಯ ವಾಕ್ಯ, ಅವರ ಬಾಧೆಯಿಂದ ಬಿಡುಗಡೆಗೊಳಿಸುವ ಒಂದು ವಾಗ್ದಾನದಂತೆ ನೋಡಿದರು.

ಇದು ನಮ್ಮ ಕಾಲದಲ್ಲಿಯೂ ಅಷ್ಟೇ ಸತ್ಯವಾಗಿದೆ. ಶ್ರೀಮಂತರು ಸಾಮಾನ್ಯವಾಗಿ ಕ್ರಿಸ್ತನ ಬಳಿಗೆ ಬರುವದಿಲ್ಲ (ಮಾರ್ಕ 10:23-25). ಪ್ರತಿಯೊಂದು ತಲೆಮಾರಿನಲ್ಲಿಯೂ ದೇವರು ಮುಖ್ಯವಾಗಿ ಬಡವರನ್ನು, ಕೀಳುವರ್ಗದವರನ್ನು, ಸಾಮಾನ್ಯ ಜನರನ್ನು ರಾಜ್ಯಕ್ಕೆ –ದೇವರ ರಾಜ್ಯಕ್ಕೆ– ಬಾಧ್ಯರಾಗಿ ಇರಬೇಕೆಂದು ಆರಿಸಿಕೊಂಡಿದ್ದಾನೆ. ಪ್ರಪಂಚದಲ್ಲಿ ಅವರು ಬಡವರು, ಆದರೆ ಪರಲೋಕದಲ್ಲಿ ಅವರು ಧನಿಕರಾಗಿರುವರು. ಆದರೆ ಈ ಜೀವಿತದಲ್ಲಿ ಸಹ ಅವರು ಐಶ್ವರ್ಯವಂತರಾಗಿ– ಅಂದರೆ, ನಂಬಿಕೆಯಲ್ಲಿ ಐಶ್ವರ್ಯವಂತರಾಗಿ ಇರುವರು. ಅವರು ನಂಬಿಕೆಯಲ್ಲಿ ಐಶ್ವರ್ಯವಂತರಾಗಿರುವರು, ಯಾಕೆಂದರೆ ಅವರು ಲೌಕೀಕ ವಿಷಯಗಳಲ್ಲಿ ತಮ್ಮ ವಿಶ್ವಾಸವನ್ನಿಡದೆ ದೇವರಲ್ಲಿಯೇ ಇಟ್ಟಿರುತ್ತಾರೆ.

**6-7** ಬಹುಪಾಲು ಶ್ರೀಮಂತರು ಸುವಾರ್ತೆಯನ್ನು ಕೇಳುವದಕ್ಕೆ ಇಷ್ಟಪಡುವದಿಲ್ಲ, ಯಾಕೆಂದರೆ ಅದು ಅವರಿಗೆ ಅವರ ಹಣವನ್ನು ಬಡವರಿಗಾಗಿ ವ್ಯಯಮಾಡಬೇಕೆಂದು ಹೇಳುತ್ತದೆ. (ಮಾರ್ಕ 10:21-22). ಶ್ರೀಮಂತರಲ್ಲಿ ಬಹುಮಂದಿ ದೇವರಿಗೆ ಬದಲಾಗಿ ತಮ್ಮ ಐಶ್ವರ್ಯವನ್ನು ಪ್ರೀತಿಸುತ್ತಾರೆ (ಮತ್ತಾಯ 6:24). ಅಧಿಕಾರದಲ್ಲಿರುವವರೂ ಸುವಾರ್ತೆಯನ್ನು ಕೇಳುವದಕ್ಕೆ ಇಷ್ಟಪಡುವದಿಲ್ಲ, ಯಾಕೆಂದರೆ ಸಮಸ್ತ ಅಧಿಕಾರವು ಕ್ರಿಸ್ತನಿಗೆ ಸೇರಿದೆ ಎಂಬುದು ಸುವಾರ್ತೆಯು ಹೇಳುತ್ತದೆ. (ಮತ್ತಾಯ 28:18). ಈ ಕಾರಣಕ್ಕಾಗಿ ಅತಿ ಶ್ರೀಮಂತ ಹಾಗೂ ಬಲವುಳ್ಳ ಜನರು ಕ್ರಿಸ್ತನನ್ನೂ ಆತನ ಹಿಂಬಾಲಕರನ್ನೂ ವಿರೋಧಿಸುತ್ತಾರೆ. ಅವರು ಕ್ರಿಸ್ತನ ಶ್ರೇಷ್ಠವಾದ ನಾಮವನ್ನು ದೂಷಿಸುವರು ಮತ್ತು ಅವರು ಆತನ ಹಿಂಬಾಲಕರನ್ನು ಬಾಧಿಸಿ ನ್ಯಾಯಸ್ಥಾನಕ್ಕೆ ಎಳೆದುಕೊಂಡು ಹೋಗುವರು. ಆದಾಗ್ಯು ಯಾಕೋಬನು ಯಾರಿಗೆ ಬರೆಯುತ್ತಿದ್ದಾನೋ ಆ ವಿಶ್ವಾಸಿಗಳು ಬಡವರನ್ನು ಉದಾಶೀನ ಮಾಡಿ ತಮ್ಮನ್ನು ಹಿಂಸಿಸುತ್ತಿದ್ದ ಶ್ರೀ ಮಂತರಿಗೂ ಬಲಿಷ್ಠರಿಗೂ ಮಹಾಗೌರವವನ್ನು ತೋರಿಸುತ್ತಿದ್ದರು!

**8-9** ಎರಡನೆಯ ಅತಿಶ್ರೇಷ್ಠ ಆಜ್ಞೆಯು ಹೇಳುವದೇನೆಂದರೆ: ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸು (ಯಾಜಕಕಾಂಡ 19:18, ಮಾರ್ಕ 12:13). ಇದರ ಅರ್ಥವೇನೆಂದರೆ ನಾವು ಎಲ್ಲಾ ಜನರನ್ನು– ಶ್ರೀಮಂತರಾಗಲಿ ಅಥವಾ ಬಡವರಾಗಲಿ–ಸಮಾನವಾಗಿ ಪ್ರೀತಿಸಬೇಕು. ಆದರೆ ನಾವು ಪಕ್ಷಪಾತ ತೋರಿಸುವವರಾಗಿದ್ದರೆ ಧರ್ಮಶಾಸ್ತ್ರವನ್ನು ಉಲ್ಲಂಘಿಸಿದವರಾಗುವೆವು– ಅಂದರೆ, ಎರಡನೆಯ ಆಜ್ಞೆ. ಮತ್ತು ಶಾಸ್ತ್ರವನ್ನು ಮೀರಿನಡೆದು ಅಪರಾಧಿಯಾಗುತ್ತೇವೆ (ವಚನ 9).

ಇಲ್ಲಿ ಯಾಕೋಬನು ಎರಡನೆಯ ಆಜ್ಞೆಯನ್ನು ರಾಜಾಜ್ಞೆ ಎಂದು ಕರೆಯುತ್ತಾನೆ. ಯಾಕೆಂದರೆ, ಇದು ರಾಜಾಧಿರಾಜನ ಆಜ್ಞೆಯಾಗಿದೆ. ಭೂಲೋಕದಲ್ಲಿ ರಾಜನ ಧರ್ಮಪ್ರಮಾಣವು ಅತ್ತ್ಯುನ್ನತ ಧರ್ಮ ಪ್ರಮಾಣವಾಗಿರುತ್ತದೆ ಕ್ರಿಸ್ತನ ಎರಡು ಶ್ರೇಷ್ಠ ಆಜ್ಞೆಗಳು ಅದೇ ರೀತಿಯಾಗಿವೆ; ಇನ್ನಾವ ಧರ್ಮಶಾಸ್ತ್ರವೂ ಇದಕ್ಕಿಂತ ಉನ್ನತವಲ್ಲ (ಮಾರ್ಕ 12:29-31).

**10** ಯಾವದೇ ರಾಷ್ಟ್ರಗಳಲ್ಲಿಯೂ ಅನೇಕ ಕಾನೂನುಗಳಿದ್ದಾವೆ. ಒಬ್ಬ ವ್ಯಕ್ತಿಯು ಇವುಗಳಲ್ಲಿ ಒಂದು ಆಜ್ಞೆಯನ್ನು ಮೀರುವದಾದರೆ ಅವನು ಅಪರಾಧಿ ಎಂದು ಪರಿಗಣಿಸಲ್ಪಡುತ್ತಾನೆ. ದೇವರ ಧರ್ಮಶಾಸ್ತ್ರದ ವಿಷಯದಲ್ಲಿಯೂ ಇದು ಅಷ್ಟೇ ಸತ್ಯ. ಹಳೆ ಒಡಂಬಡಿಕೆಯ ಧರ್ಮಶಾಸ್ತ್ರದಲ್ಲಿ ಅನೇಕ ನೇಮ ನಿಷ್ಠೆಗಳು ಸೇರಿರುತ್ತವೆ. ಒಬ್ಬ ವ್ಯಕ್ತಿಯು ಎಲ್ಲಾ ನಿಯಮಗಳಿಗೂ ವಿಧೇಯನಾಗಿ ಒಂದೇ ಒಂದರಲ್ಲಿ ತಪ್ಪಿದರೆ ಅವನಿಗೆ ಯಾವ ಪ್ರಯೋಜನವಾಗುವದಿಲ್ಲ. ಒಂದೇ ಒಂದು ಆಜ್ಞೆಯನ್ನು ಉಲ್ಲಂಘಿಸಿದರೂ ಆ ವ್ಯಕ್ತಿಯು ಧರ್ಮಪ್ರಮಾಣವನ್ನು ಮೀರಿದವನಾಗುವನು ಅ. ಆತನು ಇಡೀ ಧರ್ಮಶಾಸ್ತ್ರವನ್ನು ಉಲ್ಲಂಘಿಸಿದ ಅಪರಾಧಕ್ಕೆ ಒಳಗಾಗುವನು (ಗಲಾತ್ಯ 3:10 ನೋಡಿರಿ) . ಆದದರಿಂದ, ನಾವು ಪಕ್ಷಪಾತ ತೋರಿಸಬಾರದು ಇಲ್ಲವಾದರೆ ನಾವು ಸಹ ಧರ್ಮಪ್ರಮಾಣ ಮೀರಿದವರು ಇಡೀ ಧರ್ಮಶಾಸ್ತ್ರವನ್ನು ಉಲ್ಲಂಘಿಸಿದ ಅಪರಾಧಿಗಳಾಗುತ್ತೇವೆ ಎಂದು ಯಾಕೋಬನು ಹೇಳುತ್ತಾನೆ.

**11** ದಶಾಜ್ಞೆಗಳಲ್ಲಿನ ಎರಡು ಆಜ್ಞೆಗಳ ಉದಾಹರಣೆಯನ್ನು ಉಪಯೋಗಿಸಿ (ವಿಮೋಚನ ಕಾಂಡ 20:13-14). ಯಾಕೋಬನುವು ನಃಒಬ್ಬನು ಧರ್ಮಶಾಸ್ತ್ರವನ್ನೆಲ್ಲಾಕೈಕೊಂಡುನಡೆಯದಿದ್ದರೆಅವನು ಅಪರಾಧಿಯಾಗುತ್ತಾನೆಂಬದನ್ನು ತೋರಿಸುತ್ತಾನೆ.ಆದರೆ ಇಲ್ಲಿ ಯಾಕೋಬನು ಮುಖ್ಯವಿಷಯವೇನೆಂದರೆ ಧರ್ಮ ಶಾಸ್ತ್ರವನ್ನೆಲ್ಲಾಕೈಕೊಂಡು ನಡೆಯುವದು ಯಾರಿಗೂ ಸಾಧ್ಯವಿಲ್ಲ. ಒಬ್ಬ ವ್ಯಕ್ತಿಯು ಎಲ್ಲಾ ಸಮಯದಲ್ಲಿ ಪ್ರತಿಯೊಂದು ನಿಯಮಕ್ಕೆ ವಿಧೇಯನಾಗುವದು ಅಸಾಧ್ಯವಾಗಿದೆ. ಈ ಕಾರಣದಿಂದಲೇ ಯಾವನೂ ಧರ್ಮಶಾಸ್ತ್ರದ ಮೂಲಕವಾಗಿ ದೇವರ ಎದುರಿನಲ್ಲಿ ನೀತಿವಂತನಾಗಲಾರನು (ಗಲಾತ್ಯ 2:15-16 ಮತ್ತು ವ್ಯಾಖ್ಯಾನ ನೋಡಿರಿ).

**12** ಕ್ರೈಸ್ತರಾದ ನಾವು ಬಿಡುಗಡೆಯನ್ನುಂಟು ಮಾಡುವ ಧರ್ಮಪ್ರಮಾಣದ ಪ್ರಕಾರ ಜೀವಿಸಬೇಕು, ಯಾಕೆಂದರೆ ನಾವು ಆ ಧರ್ಮಪ್ರಮಾಣಕ್ಕನುಸಾರವಾಗಿ ದೇವರಿಂದ ತೀರ್ಪು ಹೊಂದುವೆವು . ಬಿಡುಗಡೆಯನ್ನುಂಟು ಮಾಡುವ ಧರ್ಮಪ್ರಮಾಣವು ಯಾವದು? ಇದು ಕ್ರಿಸ್ತನ ಧರ್ಮಪ್ರಮಾಣ. ಎರಡು ಅತಿಶ್ರೇಷ್ಠ ಆಜ್ಞೆಗಳು ಹಾಗೂ ದಶಾಜ್ಞೆಗಳು ಕ್ರಿಸ್ತನ ಧರ್ಮಪ್ರಮಾಣದಲ್ಲಿ ಅಡಕವಾಗಿರುತ್ತವೆ. ಆದರೆ ಇದು ಏಕೆ " ಬಿಡುಗಡೆಯನ್ನುಂಟು ಮಾಡು ವ ಧರ್ಮಪ್ರಮಾಣ" ಎಂದು ಕರೆಯಲ್ಪಟ್ಟಿದೆ? ಕಾರಣವೇನೆಂದರೆ, ನಾವು ಇದನ್ನು ಗುಲಾಮರಂತೆ ಒತ್ತಾಯದಿಂದ ಅನುಸರಿಸುವದಿಲ್ಲ; ನಾವು ಈ ಧರ್ಮಪ್ರಮಾಣವನ್ನು ಮಕ್ಕಳಂತೆ ನಮ್ಮ ಸ್ವಂತ ಇಚ್ಛೆಯಿಂದ ಮುಕ್ತವಾಗಿ ಅನುಸರಿಸುತ್ತೇವೆ. ಕ್ರಿಸ್ತನು ನಮಗೆ ನೂತನ

ಅಭಿಲಾಷೆ, ನೂತನ ಮನಸ್ಸು, ನೂತನ ಜೀವಿತವನ್ನು ನೀಡುತ್ತಾನೆ. ಅಲ್ಲದೆ ಆತನು ನಮಗೆ ತನ್ನ ಧರ್ಮಪ್ರಮಾಣವನ್ನು ಕೈಕೊಂಡು ನಡೆಯಲು ಬಲವನ್ನೂ ಕೊಡುತ್ತಾನೆ. ಆದರೆ ಅಷ್ಟಕ್ಕೆ ಮುಗಿಯುವದಿಲ್ಲ. ನಾವು ಯಾವದೇ ರೀತಿಯಲ್ಲಾದರೂ ಆತನ ಧರ್ಮಪ್ರಮಾಣವನ್ನು ಉಲ್ಲಂಘಿಸುವದಾದರೆ ಆತನು ನಮ್ಮನ್ನು ಕ್ಷಮಿಸುವನು. ನಾವು ಇನ್ನೆಂದಿಗೂ ಪಾಪಕ್ಕೆ ದಾಸರಲ್ಲ. ಈಗ ನಾವು ಕ್ರಿಸ್ತನನ್ನು ಹಿಂಬಾಲಿಸುವಕ್ಕೂ ಆತನಿಗೆ ವಿಧೇಯರಾಗುವದಕ್ಕೂ ಸ್ವತಂತ್ರರಾಗಿದ್ದೇವೆ (ಯೋಹಾನನ 8-21:32-36 ನೋಡಿರಿ). ಈ ಕಾರಣದಿಂದಲೇ ಯಾಕೋಬನು ಕ್ರಿಸ್ತನ ಧರ್ಮಪ್ರಮಾಣವನ್ನು ಬಿಡುಗಡೆಯನ್ನುಂಟು ಮಾಡುವ ಧರ್ಮಪ್ರಮಾಣ ಎಂದು ಕರೆಯುತ್ತಾನೆ.

**13** ಯಾಕೋಬನು 12 ನೇ ವಚನದಲ್ಲಿ ನಾವು ಬಿಡುಗಡೆಯನ್ನುಂಟು ಮಾಡುವ ಧರ್ಮಪ್ರಮಾಣದ– ಅಂದರೆ, ಕ್ರಿಸ್ತನ ಧರ್ಮಪ್ರಮಾಣದ– ಪ್ರಕಾರವಾಗಿ ತೀರ್ಪು ಹೊಂದತಕ್ಕವರೆಂದು ಮಾತಾಡಬೇಕು, ನಡೆಯಬೇಕು ಎಂದು ಹೇಳಿದನು. ಯೆಹೂದ್ಯರ ಹಳೆ ಒಡಂಬಡಿಕೆಯು ಧರ್ಮಶಾಸ್ತ್ರವು ಕರುಣೆಯಿಂದ ತುಂಬಿದ ಧರ್ಮಶಾಸ್ತ್ರ ವಾಗಿದೆ. ನಾವು ಇತರರಿಗೆ ಕರುಣೆ ತೋರಿಸದಿದ್ದರೆ ನಮಗೂ ಕರುಣೆ ದೊರೆಯುವದಿಲ್ಲ (ಮತ್ತಾಯ 5:7; 6:12, 14-15). ನಾವು ಇತರರಿಗೆ ಕರುಣೆಯನ್ನು ತೋರಿಸದಿದ್ದರೆ ಹಳೆ ಒಡಂಬಡಿಕೆಯ ಧರ್ಮ ಶಾಸ್ತ್ರದ ಪ್ರಕಾರ ತೀರ್ಪು ಹೊಂದುವೆವು . ಹೇಗಿದ್ದರೂ, ನಾವು ಕರುಣೆಯನ್ನು ತೋರಿಸುವದಾದರೆ ಕ್ರಿಸ್ತನ ಕರುಣೆಯುಳ್ಳ ಧರ್ಮಶಾಸ್ತ್ರದ ಪ್ರಕಾರ ತೀರ್ಪು ಹೊಂದುವೆವು . ಆದದರಿಂದ, ನಾವು ಕರುಣೆಯುಳ್ಳವರಾಗಿ ಮಾತಾಡುವದಕ್ಕೂ ನಡೆಯುವದಕ್ಕೂ ಜಾಗರೂಕರಾಗಿರಬೇಕೆಂದು ಯಾಕೋಬನು ಹೇಳುತ್ತಾನೆ, ಹೀಗೆ ನಾವು ಕರುಣೆಯುಳ್ಳ ಧರ್ಮಶಾಸ್ತ್ರದಿಂದ ತೀರ್ಪು ಹೊಂದುವದಕ್ಕೆ ಸಾಧ್ಯವಾಗುವದು.

ಕರುಣೆಯು ನ್ಯಾಯತೀರ್ಪಿಗಿಂತ ದೊಡ್ಡದು. ನ್ಯಾಯತೀರ್ಪು ಕರುಣೆಗಿಂತ ದೊಡ್ಡದಾಗಿರುವದಾದರೆ ನಮ್ಮಲ್ಲಿ ಯಾರೊಬ್ಬರೂ ದಂಡನೆಯನ್ನು ತಪ್ಪಿಸಿಕೊಳ್ಳಲಾರೆವು . ನ್ಯಾಯತೀರ್ಪು ಕರುಣೆಗಿಂತ ದೊಡ್ಡದಾಗಿದ್ದರೆ ದೇವರು ಲೋಕವನ್ನು ರಕ್ಷಿಸುವದಕ್ಕಾಗಿ ಕ್ರಿಸ್ತನನ್ನು ಕಳುಹಿಸಿಯೇ ಇರುತ್ತಿದ್ದಿಲ್ಲ. ಆದರೆ ದೇವರು ಕರುಣೆಯನ್ನು ನ್ಯಾಯತೀರ್ಪಿಗಿಂತ ಉನ್ನತದಲ್ಲಿ ಇಟ್ಟನು. ಆದದರಿಂದ ನಾವು ಇತರರೊಂದಿಗಿನ ನಮ್ಮ ವ್ಯವಹಾರಗಳಲ್ಲಿ ಹಾಗೆಯೇ ಮಾಡಬೇಕು. ನಾವು ಎಲ್ಲಾ ಜನರಿಗೆ– ಮೇಲು ಮತ್ತು ಕೀಳು, ಶ್ರೀಮಂತ ಹಾಗೂ ಬಡವರಿಗೆ– ಪಕ್ಷಪಾತವಿಲ್ಲದೆ ಪ್ರೀತಿ ಹಾಗೂ ಕರುಣೆಯನ್ನು ತೋರಿಸಬೇಕು. ನಾವು ಇತರರಿಗೆ ಎಷ್ಟರ ಮಟ್ಟಿಗೆ ಕರುಣೆಯನ್ನು ತೋರಿಸುತ್ತೇವೋ ಅಷ್ಟರ ಮಟ್ಟಿಗೆ ದೇವರು ನಮಗೆ ಕರುಣೆಯನ್ನು ತೋರಿಸುವೆವು .

## ನಂಬಿಕೆ ಹಾಗೂ ಕ್ರಿಯೆಗಳು (2:14-26)

**14** "ನಾನು ನಂಬುತ್ತೇನೆ" ಎಂದು ಹೇಳುವದು ಸುಲಭ; ಆದರೆ ಕೇವಲ ಹೇಳುವದು ಮಾತ್ರವೇ ಯಾವ ಅರ್ಥವಿಲ್ಲದ್ದು. ನಾವು ನಮ್ಮನ್ನು ಕೇಳಿಕೊಳ್ಳಬೇಕಾದದ್ದೇನೆಂದರೆಃ "ನನ್ನ ನಂಬಿಕೆ ನಿಜವೋ ಅಥವಾ ಅಲ್ಲವೋ?" ಯಾಕೆಂದರೆ ನಾವು ರಕ್ಷಿಸಲ್ಪಟ್ಟದ್ದು ನಿಜವಾದ ನಂಬಿಕೆಯ ಮೂಲಕವೇ ಹೊರತು ಮಿಥ್ಯ ನಂಬಿಕೆಯ ಮೂಲಕವಲ್ಲ [7] ನಮ್ಮ ನಂಬಿಕೆಯು ನಿಜವೇ ಅಥವಾ ಅಲ್ಲವೋ ಎಂಬುದನ್ನು ನಾವು ಹೇಗೆ ಹೇಳಬಲ್ಲೆವು? ನಾವು ನಮ್ಮ ಕ್ರಿಯೆಗಳಿಂದ ಹೇಳಬಹುದು. ನಮ್ಮ ಕ್ರಿಯೆಗಳು– ಅಂದರೆ, ನಮ್ಮ ಪ್ರೀತಿಯ ಕ್ರಿಯೆಗಳು, ನಮ್ಮ ವಿಧೇಯತೆಯ ಕ್ರಿಯೆಗಳು– ನಮ್ಮ ನಂಬಿಕೆಗೆ ಸಾಕ್ಷಿಯಾಗಿರುತ್ತದೆ. ನಮ್ಮ ನಂಬಿಕೆಯ ಜೊತೆಯಲ್ಲಿ ಕ್ರಿಯೆಗಳು ಇಲ್ಲವಾದರೆ ಅಂಥ ನಂಬಿಕೆಯು ನಮ್ಮನ್ನು ರಕ್ಷಿಸುವದಿಲ್ಲ (ಮತ್ತಾಯ 7:21 ಮತ್ತು ವ್ಯಾಖ್ಯಾನ ನೋಡಿರಿ). ಅಂಥ ನಂಬಿಕೆಯು ನಿಜ ನಂಬಿಕೆಯಲ್ಲ; ಅದು ಜೀವವಿಲ್ಲದ ನಂಬಿಕೆಯಾಗಿದೆ (ವಚನ 17).

**15-16** ಇಲ್ಲಿ ಯಾಕೋಬನು ಸುಳ್ಳು ನಂಬಿಕೆಯು ಮಾತುಗಳಲ್ಲಿ ಹೇಳಲ್ಪಟ್ಟು ಕ್ರಿಯೆಯಲ್ಲಿ ತೋರಿಬರದ ಪ್ರೀತಿಯ ಹಾಗಿರುತ್ತದೆಂದು ಹೇಳುತ್ತಾನೆ. ನಾವು ನಮ್ಮ ಬಡ ಸಹೋದರ ಅಥವಾ ಸಹೋದರಿಗೆ ಅವರನ್ನು ಪ್ರೀತಿಸುತ್ತೇವೆಂದು ಸುಲಭವಾಗಿ ಹೇಳಬಹುದು, ಆದರೆ ಅವರಿಗೆ ಸಹಾಯಕ್ಕಾಗಿ ನಾವು ಏನನ್ನು ಮಾಡದಿದ್ದರೆ ನಮ್ಮ ಪ್ರೀತಿಯು ಸುಳ್ಳಾದದ್ದೂ ಪ್ರಯೋಜನವಿಲ್ಲದ್ದೂ ಆಗಿದೆ (1 ಯೋಹಾನ 3:17-18). ಈ ವಿಧದ ಪ್ರೀತಿ ಯಾರಿಗೂ ಹಿತವನ್ನುಂಟು ಮಾಡುವದಿಲ್ಲ. ಅದೇ ರೀತಿಯಲ್ಲಿ ನಮ್ಮ ನಂಬಿಕೆಯು ಕ್ರಿಯೆಗಳಿಂದ ತೋರಿಬರದಿದ್ದರೆ ನಿಷ್ಪ್ರಯೋಜನವಾಗಿರುತ್ತದೆ.

**17** ಇದು ಹೊಸ ಒಡಂಬಡಿಕೆಯಲ್ಲಿ ಅತಿ ಪ್ರಾಮುಖ್ಯವಾದ ವಚನಗಳಲ್ಲೊಂದಾಗಿದೆ, ಯಾಕೆಂದರೆ ಇದು ಪೌಲನ ಕೆಲವು ಬೋಧನೆಗಳನ್ನು ತಪ್ಪಾಗಿ ವ್ಯಾಖ್ಯಾನಿಸದಂತೆ ನಮ್ಮನ್ನು ದೂರವಿರಿಸುತ್ತದೆ. ಪೌಲನು ಎಫೆಸ 2:8-9ರಲ್ಲಿ ಮನುಷ್ಯನು ಕ್ರಿಯೆಗಳಿಂದಲ್ಲ; ಆದರೆ ನಂಬಿಕೆಯ ಮೂಲಕ ರಕ್ಷಿಸಲ್ಪಡುತ್ತಾನೆಂದು ಬರೆದನು.

ಅನೇಕ ಜನರು ಪೌಲನನ್ನು ಅಪಾರ್ಥಮಾಡಿಕೊಂಡು ಇನ್ನು ಮೇಲೆ ಸತ್ಕ್ರಿಯೆಗಳ ಅವಶ್ಯಕತೆಯಿಲ್ಲ ಎಂದು ಯೋಚಿಸಲಾರಂಭಿಸುತ್ತಾರೆ. ಮನುಷ್ಯನು ನಂಬಿಕೆಯ ಮೂಲಕ ರಕ್ಷಿಸಲ್ಪಡುತ್ತಾನಾದ್ದರಿಂದ ಇನ್ನು ಮೇಲೆ ಸತ್ಕ್ರಿಯೆಗಳ ಅವಶ್ಯಕತೆಯಿಲ್ಲ ಎಂದು ಊಹಿಸಿಕೊಳ್ಳುತ್ತಾರೆ. ಪೌಲನು ಇತರ ವಚನಗಳಲ್ಲಿ ಸತ್ಕ್ರೀಯೆಗಳು ನಿಜವಾಗಿಯೂ ಅವಶ್ಯಕ ಎಂದು ಬರೆದನೆಂಬದನ್ನು ಅವರು ಮರೆತು ಬಿಡುತ್ತಾರೆ. ಪೌಲನು ಎಫೆಸ 2:10ರಲ್ಲಿ ನಾವು ಸತ್ಕಾರ್ಯ ಗಳನ್ನು ಮಾಡುವದಕ್ಕಾಗಿಯೇ ಕ್ರಿಸ್ತಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು ಎಂದು ಬರೆದನು. ಅಲ್ಲದೆ ಆತನು ಇನ್ನೂ ಬರೆದ್ದದ್ದೇನೆಂದರೆಃ ಪ್ರೀತಿಯಿಂದ ಕೆಲಸ ನಡಿಸುವ ನಂಬಿಕೆಯಿಂದಲೇ ಪ್ರಯೋಜನವಾಗಿದೆ (ಗಲಾತ್ಯ 5:6). ಯಾಕೋಬನು ಇಲ್ಲಿ ಕ್ರೈಸ್ತರು

ಸತ್ಕಾರ್ಯಗಳನ್ನು ಮಾಡಬೇಕಾದ ಅಗತ್ಯವಿಲ್ಲ ಎಂಬ ವಿಚಾರವನ್ನು ಸರಿಪಡಿಸಲು ಪ್ರಯತ್ನಿಸುತ್ತಿರುವಂತೆ ಕಾಣುತ್ತದೆ. ನಿಜ, ನಾವು ನಂಬಿಕೆಯ ಮೂಲಕವೇ ರಕ್ಷಿಸಲ್ಪಟ್ಟಿದ್ದೇವೆ ಹೊರತು ಕ್ರಿಯೆಗಳಿಂದಲ್ಲ; ಯಾವನೂ ಕ್ರಿಯೆಗಳ ಮೂಲಕ–ಅವು ಎಷ್ಟೇ ಇದ್ದರೂ ಅಥವಾ ಎಷ್ಟು ಒಳ್ಳೇಯವು ಗಳಾಗಿದ್ದರೂ ಸರಿಯೇ–ರಕ್ಷಣೆಯನ್ನು ಸಂಪಾದಿಸಿಕೊಳ್ಳಲಾರನು. ಇದು ಸತ್ಯ. ಆದರೆ ನಾವು ಕೇಳಿಕೊಳ್ಳಬೇಕಾದದ್ದೇನೆಂದರೆಃ ನಂಬಿಕೆ ಎಂದರೇನು? ನಿಜವಾದ ನಂಬಿಕೆಯು ಕ್ರಿಯೆಗಳಿಂದ ವ್ಯಕ್ತಪಡಿಸಲ್ಪಟ್ಟ ನಂಬಿಕೆಯಾಗಿದೆ. ನಂಬಿಕೆಯ ಜೊತೆಯಲ್ಲಿ ಯಾವಾಗಲೂ ಕ್ರಿಯೆಗಳಿರಬೇಕು ನಿಜವಾದ ನಂಬಿಕೆಯಂತಹ ಸಂಗತಿಯು ಇರುವದೇ ಇಲ್ಲ; ನಿಜವಾದ ನಂಬಿಕೆಯು ಯಾವಾಗಲೂ ಸತ್ಕಾರ್ಯಗಳಿಗೆ ಪ್ರಚೋದನೆ ನೀಡುತ್ತದೆ.

ಸತ್ಕಾರ್ಯಗಳು ಎಂದರೇನು? ವಿಧೇಯತೆಯ ಕಾರ್ಯಗಳೇ. ದೇವರು ನಮ್ಮಿಂದ ಬಯಸುವ ಕಾರ್ಯವೆಂದರೆ ಯೇಸುವಿನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ (ಯೋಹಾನ 14:15) ಮತ್ತು ಯೇಸುವಿನ ಮುಖ್ಯ ಆಜ್ಞೆಯೇನೆಂದರೆಃ ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಒಬ್ಬರನ್ನೊಬ್ಬರು ಪ್ರೀತಿಸಿರಿ (ಯೋಹಾನ 15:12).

ಆದದರಿಂದ, ನಿಜವಾದ ನಂಬಿಕೆಯು ಯಾವಾಗಲೂ ತನ್ನನ್ನು ಪ್ರೀತಿಯಲ್ಲಿ ತೋರ್ಪಡಿಸಿಕೊಳ್ಳುತ್ತದೆ (ಗಲಾತ್ಯ 5:6). ಒಬ್ಬ ನು ತನಗೆ ಪ್ರೀತಿಯನ್ನು ತೋರಿಸಿಕೊಳ್ಳುವಷ್ಟೇ ತನ್ನ ನೆರೆಯವನಿಗೆ ತೋರಿಸುವದಾದರೆ ಅವನ ನಂಬಿಕೆಯು ನೈಜವಾದದ್ದು ಎಂದು ನಾವು ನಿಶ್ಚಯ ಹೊಂದಬಹುದು. ಮೊದಲು (ಕ್ರಿಯೆಗಳ ಮುಂಚೆ) ನಂಬಿಕೆ ಇರುತ್ತದೆ. ತರುವಾಯ, ನಾವು ನಂಬಿಕೆಯಿಟ್ಟ ಮೇಲೆ ನೂತನ ಜನರಾಗುತ್ತೇವೆ. ಬಳಿಕ ನಿಜವಾದ ನಂಬಿಕೆಯು ನಮ್ಮ ನಡುವಳಿಕೆಯಲ್ಲಿ ಬದಲಾವಣೆಯನ್ನು ಉಂಟುಮಾಡುತ್ತದೆ. ದೇವರು ತನ್ನ ಪವಿತ್ರಾತ್ಮನ ಮೂಲಕ ನಮ್ಮ ಜೀವಿತವನ್ನು ತನ್ನ ಪ್ರೀತಿಯಿಂದ ತುಂಬಿಸುತ್ತಾನೆ (ರೋಮ 5:5 ). ನಾವು ನಮ್ಮ ನೆರೆಯವನನ್ನು ಪ್ರೀತಿಸುವದಕ್ಕೂ ಕ್ರಿಸ್ತ ನ ಇತರ ಎಲ್ಲಾ ಆಜ್ಞೆಗಳಿಗೆ ವಿಧೇಯರಾಗುವದಕ್ಕೂ ಹೊಸ ಬಲವನ್ನು ಪಡೆದುಕೊಳ್ಳುತ್ತೇವೆ. ಮತ್ತು ನಂಬಿಕೆಯು ಸತ್ಯವೇ ಎಂಬುದಕ್ಕೆ ಈ ನೂತನ ಪ್ರೀತಿ ಹಾಗೂ ನೂತನ ವಿಧೇಯತೆಯು ಆಧಾರವಾಗಿರುತ್ತದೆ.

ಆದದರಿಂದ, ಕ್ಲುಪ್ತವಾಗಿ ಹೇಳುವದಾದರೆ, ಹೊಸ ಒಡಂಬಡಿಕೆಯು ರಕ್ಷಣೆಯನ್ನು ನಾವು ನಮ್ಮ ಕಾರ್ಯ ಹಾಗೂ ಪರಿಶ್ರಮದಿಂದ ಹೊಂದಿಕೊಳ್ಳುವದಿಲ್ಲ; ಬದಲಾಗಿ ನಾವು ನಿಜವಾದ ನಂಬಿಕೆಯ ಮೂಲಕ ರಕ್ಷಣೆಯನ್ನು ಹೊಂದಿಕೊಳ್ಳುತ್ತೇವೆ ಎಂದು ಬೋಧಿಸುತ್ತದೆ. ಆದರೆ ನಿಜವಾದ ನಂಬಿಕೆಯು ಯಾವಾಗಲೂ ನಮ್ಮ ಪ್ರೀತಿ ಹಾಗೂ ವಿಧೇಯತೆಯ ಮೂಲಕ ತೋರ್ಪಡುತ್ತದೆ; ಪ್ರೀತಿ ಹಾಗೂ ವಿಧೇಯತೆ ಇಲ್ಲವಾದರೆ ನಂಬಿಕೆಯು ಇಲ್ಲವೆಂದಾಗುತ್ತದೆ. ಕ್ರಿಯೆಗಳು–ಅಂದರೆ, ಪ್ರೀತಿ ಹಾಗು ವಿಧೆಯತೆ [8]–ನಮ್ಮ ನಂಬಿಕೆಗೆ ಸಾಕ್ಷಿಯಾಗಿದೆ. ಪ್ರೀತಿ ಹಾಗು ವಿಧೆಯತೆಯಿಲ್ಲದೆ ನಮ್ಮ ನಂಬಿಕೆಯು ನಮ್ಮನ್ನು ರಕ್ಷಿಸಲಾರದು; ಅದು ಜೀವವಿಲ್ಲದ್ದು. ಯೇಸುವಿನೊಂದಿಗೆ ಶಿಲುಬೆಗೆ ಹಾಕಲ್ಪಟ್ಟ ಇಬ್ಬರು ಅಪರಾಧಿಗಳಲ್ಲಿ ಒಬ್ಬನು ಸಾಯುವದಕ್ಕೆ ಸ್ವಲ್ಪ ಮುಂಚೆಯೇ ನಂಬಿಕೆಯಿಟ್ಟನು (ಲೂಕ 23:39-43). ಅವನು ನಂಬಿಕೆಯಿಟ್ಟ ಬಳಿಕ ಯಾವದೇ ಸತ್ಕಾರ್ಯಗಳನ್ನು ಮಾಡುವಕ್ಕೆ ಅವನಿಗೆ ಅವಕಾಶವೇ ಇರಲಿಲ್ಲ. ಇದರ ಮೂಲಕ, ಆತನು ನಂಬಿಕೆಯಿಂದ ರಕ್ಷಿಸಲ್ಪಟ್ಟನೇ ಹೊರತು ಯಾವದೇ ಕ್ರಿಯೆಗಳ ಮೂಲಕವಲ್ಲ ಎಂಬದನ್ನು ನಾವು ತಿಳಿಯಬಹುದು. ಆದರೆ ನಂಬಿದ ಬಳಿಕ ಶೀಘ್ರ್ರವೇ ಸಾಯದವರಿಗಾದರೋ, ಅವರು ಜೀವಿಸುವ ಕಾಲವೆಲ್ಲಾ ಅವರ ನಂಬಿಕೆಯ ಪ್ರೀತಿ ಹಾಗೂ ವಿಧೇಯತೆಯ ಕಾರ್ಯಗಳಲ್ಲಿ ತೋರಿಬರಬೇಕು.

**18** ಯಾಕೋಬನು ಇಲ್ಲಿ ಇಬ್ಬರು ಜನರ ನಡುವಿನ ಕಾಲ್ಪನಿಕ ಸಂಭಾಷಣೆಯೊಂದನ್ನು ಬಣ್ಣಿಸುತ್ತಾನೆ. ಮೊದಲನೆಯ ವ್ಯಕ್ತಿಯು ನಂಬಿಕೆ ಮಾತ್ರವೇ ಅವಶ್ಯಕವಾದದ್ದು ಕ್ರಿಯೆಗಳ ಅವಶ್ಯಕತೆಯಿಲ್ಲ ಎಂದು ಹೇಳುತ್ತಾನೆ. ಎರಡನೆಯ ವ್ಯಕ್ತಿಯು ನಂಬಿಕೆ, ಕ್ರಿಯೆಗಳು ಒಟ್ಟಿಗೆ ಎರಡೂ ಅವಶ್ಯಕವೆಂದು ಹೇಳುತ್ತಾನೆ. ಎರಡನೆಯ ವ್ಯಕ್ತಿಯು (ಯಾಕೋಬನು) ಮೊದಲನೆಯವನಿಗೆ ಹೇಳುವದೇನೆಂದರೆ; "ನಿನಗೆ ನಂಬಿಕೆಯಿದೆಯೆಂದು ಹೇಳುತ್ತಿಯಲ್ಲವೇ? ನಿನ್ನ ನಂಬಿಕೆಯನ್ನು ನನಗೆ ತೋರಿಸು ನೋಡೋಣ. ನೀನು ಅದನ್ನು ತೋರಿಸಲಾರಿ, ಯಾಕೆಂದರೆ ನಿನ್ನ ನಂಬಿಕೆಯು ಕ್ರೀಯೆಗಳಿಲ್ಲದ್ದಾಗಿದೆ. ಆದರೆ ನಾನು ನನ್ನ ಕ್ರಿಯೆಗಳ ಮುಂಖಾತರ ನನ್ನ ನಂಬಿಕೆಯನ್ನು ನಿನಗೆ ತೋರಿಸುತ್ತೇನೆ. ನನ್ನ ಕಾರ್ಯಗಳು ನನ್ನ ನಂಬಿಕೆಗೆ ಸಾಕ್ಷಿಯಾಗಿವೆ".

**19** ಇಲ್ಲಿ ಕಾಲ್ಪನಿಕ ಸಂಭಾಷಣೆಯ ಮುಂದುವರೆಯುತ್ತದೆ. ಎರಡನೆಯ ವ್ಯಕ್ತಿಯು (ಯಾಕೋಬನು) ಮೊದಲ ನೆಯ ವ್ಯಕ್ತಿಗೆ ಹೇಳುವದೇನೆಂದರೆ, "ದೇವರು ಒಬ್ಬನೇಯೆಂದು ನೀನು ನಂಬುವವನು, ಅಲ್ಲವೆ? ನಾನು ದೇವರ ಒಬ್ಬನೇ ಎಂದು ನಂಬುತ್ತೇನೆ; ಎಂದು ಹೇಳುವದರ ಮೂಲಕ ನೀನು ನಿಜವಾದ ನಂಬಿಕೆಯನ್ನು ಹೊಂದಿರುವಿಯೆಂದು ತೋರಿಸಬಲ್ಲೆನೆಂದು ಯೋಚಿಸುವಿ. ಆದರೆ ನಿನ್ನ ಯೋಚನೆ ತಪ್ಪಾದದ್ದು; ಅದು ಏನನ್ನು ತೋರಿಸುವದಿಲ್ಲ. ದೆವ್ವಗಳು ಸಹ ಹಾಗೆಯೇ ಹೇಳುತ್ತವೆ. ದೇವರು ಒಬ್ಬನೇ ಎಂದು ದೆವ್ವಗಳು ನಂಬುತ್ತವೆ; ಆದರೆ ಅವು ಗಳ ನಂಬಿಕೆ ಸುಳ್ಳಾದದ್ದು ಯಾಕೆಂದರೆ ಅವು ಗಳ ಕ್ರಿಯೆಗಳು ಕೆಟ್ಟವು ಗಳಾಗಿವೆ".

**20-21** ಕಾಲ್ಪನಿಕ ಸಂಭಾಷಣೆಯು ಮುಂದು ವರೆಯುತ್ತಿರುವಾಗ ಎರಡನೆಯ ವ್ಯಕ್ತಿಯು(ಯಾಕೋಬನು) ಮೊದಲನೆಯ ವ್ಯಕ್ತಿಗೆ ಅಬ್ರಹಾಮನ ಬಗ್ಗೆ ಜ್ಞಾಪಪಡಿಸುತ್ತಾನೆ. ದೇವರು ಅಬ್ರಹಾಮನಿಗೆ ಅವನ ಒಬ್ಬನೇ ಮಗನಾದ ಇಸಾಕನನ್ನು ಯಜ್ಞವೇದಿಯ ಮೇಲೆ ಯಜ್ಞಮಾಡುವಂತೆ ಹೇಳಿದನು (ಆದಿಕಾಂಡ 22:1-13; ಇಬ್ರಿಯ 11:17-19 ನೋಡಿರಿ).

ಅಬ್ರಹಾಮನು ದೇವರಲ್ಲಿ ನಿಜವಾದ ನಂಬಿಕೆಯನ್ನಿಟ್ಟಿದ್ದನು; ಅದದರಿಂದ, ಆತನು ದೇವರಿಗೆ ವಿಧೇಯನಾದನು. ಅಬ್ರಹಾಮನು ಏಕೆ ನೀತಿವಂತನೆಂಬ ನಿರ್ಣಯವನ್ನು ಹೊಂದಿದನು (ವಚನ 21)?. ಆತನು ನಂಬಿದ್ದರಿಂದಲೋ? ಅಥವಾ ಆತನು ವಿಧೇಯನಾದದ್ದರಿಂದಲೋ? ಉತ್ತರವು ಎರಡೂ ಆಗಿದೆ. ಅಬ್ರಹಾಮನು ನಂಬಿದ್ದರಿಂದಲೂ ವಿಧೇಯನಾದದ್ದರಿಂದಲೂ ನೀತಿವಂತನೆಂದು ಎಣಿಸಲ್ಪಟ್ಟನು.

22 ಅಬ್ರಹಾಮ ನಂಬಿಕೆಯು ಕ್ರಿಯೆಗಳೊಂದಿಗೆ (ವಿಧೇಯತೆ) ಪ್ರವರ್ತಿಸುತ್ತಿತ್ತು. ವಿಧೇಯತೆಯಿಲ್ಲದೆ ನಂ ಬಿಕೆಯು ನಿಷ್ಪ್ರಯೋಜಕವಾಗಿದೆ; ಅದು ಎಂದಿಗೂ ದೇವರನ್ನು ಮೆಚ್ಚಿಸಲಾರದು. ಯಾಕೆಂದರೆ, ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ(ಇಬ್ರಿಯ 11:6).

ಅಬ್ರಹಾಮನಿಗೆ ನಂಬಿಕೆಯು ಮೊದಲು ಬಂದಿತು. ಅದರೆ ವಿಧೇಯತೆಯ ಮೂಲಕವಷ್ಟೇ ಆತನ ನಂಬಿಕೆಯು ಸಿದ್ಧಿಗೆ ಬಂತು ಅಥವಾ ಪರಿಪೂರ್ಣಗೊಂಡಿತು. ವಿಧೇಯತೆಯಿಲ್ಲದ ನಂಬಿಕೆಯು ಫಲವಿಲ್ಲದ ಹಣ್ಣಿನ ಮರದ ಹಾಗಿರುತ್ತದೆ. ಅದು ನಿಷ್ಪ್ರಯೋಜನ, ಒಂದು ಮರವು ತನ್ನ ಫಲದಿಂದ "ಪರಿಪೂರ್ಣಗೊಳ್ಳುತ್ತದೆ". ಅದೇ ವಿಧದಲ್ಲಿ, ನಮ್ಮ ನಂಬಿಕೆಯು ನಮ್ಮ ಕ್ರಿಯೆಗಳ ಮೂಲಕ ಪರಿಪೂರ್ಣಗೊಳ್ಳುತ್ತದೆ. ಜನರು ನಮ್ಮ ಫಲದಿಂದ, ನಮ್ಮ ವಿಧೇಯತೆಯಿಂದ ನಮ್ಮನ್ನು ಗುರುತಿಸುವರು (ಮತ್ತಾಯ 7:20).

23 ಯಾಕೋಬನು ಇಲ್ಲಿ ಆದಿಕಾಂಡ 15:6ರಿಂದ ಉಲ್ಲೇಖಿಸುತ್ತಾ ನೆ. ಅಬ್ರಹಾಮನು ನಂಬಿದನು; ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತ್ತು (ರೋಮ 4:1-3ನೋಡಿರಿ). ಪು ನಃ ಇದರ ಮೂಲಕ ನಾವು ಮನುಷ್ಯನು ನಂಬಿಕೆಯಿಂದಲೇ ನೀತಿವಂತನೆಂದು ನಿರ್ಣಯಿಸಲ್ಪಡುತ್ತಾನೆ ಎಂಬದನ್ನು ಅರ್ಥ ಮಾಡಿಕೊಳ್ಳಬೇಕು. ಆದರೆ ಆ ನಂ ಬಿಕೆಯು ನಿಜವಾದ ನಂಬಿಕೆ– ಅಂದರೆ, ಪ್ರೀತಿ ಹಾಗೂ ವಿಧೇಯತೆಯಲ್ಲಿ ವ್ಯಕ್ತವಾಗುವ ನಂಬಿಕೆ– ಆಗಿರಬೇಕು.

ಇಲ್ಲಿ ಈ ಮುಂಚೆ ಹೇಳಿರುವದಕ್ಕೆ ಇನ್ನಷ್ಟು ಸೇರಿಸುವದು ಅವಶ್ಯಕವಾಗಿರುತ್ತದೆ. ನಾವು ಕ್ರಿಯೆಗಳಿಲ್ಲದ ನಂಬಿಕೆಯಿಂದ ರಕ್ಷಿಸಲ್ಪಡುವದು ಸಾಧ್ಯವಿಲ್ಲದಿರುವಂತೆಯೇ ನಾವು ನಂಬಿಕೆಯಿಲ್ಲದ ಕ್ರಿಯೆಗಳ ಮೂಲಕವೂ ರಕ್ಷಿಸಲ್ಪಡುವದಿಲ್ಲ. ಯಾವ ಮನುಷ್ಯನ ಕಾರ್ಯಗಳೂ– ಆತನ ಅತಿ ಶ್ರೇಷ್ಠವಾದ ಧಾರ್ಮಿಕ ಕಾರ್ಯಗಳು– ಸಹ ಪರಿಪೂರ್ಣವಾಗಿರಲಾರವು . ಪ್ರತಿಯೊಬ್ಬ ವ್ಯಕ್ತಿಯು ಕಾಲಕಾಲಕ್ಕೆ ತಪ್ಪುಗಳನ್ನು ಪಾಪಗಳನ್ನು ಮಾಡುತ್ತಾನೆ. ಆದರಿಂದ, ನಮ್ಮ ಕಾರ್ಯಗಳ ಆಧಾರದ ಮೇಲೆ ನಾವು ದೇವರ ದೃಷ್ಟಿಯಲ್ಲಿ ಎಂದಿಗೂ ನೀತಿ ವಂತರೆಂದು ಎಣಿಸಲ್ಪಡಲಾರೆವು , ಮತ್ತು ನಾವು ದೇ ವರಿಂದ ನೀತಿವಂತರೆಂದು ಪರಿಗಣಿಸಲ್ಪಡದಿದ್ದರೆ ರಕ್ಷಣೆಯನ್ನು ಹೊಂದು ವದಿಲ್ಲ. ನಾವು ಯೇಸುಕ್ರಿಸ್ತನ ಪರಿಪೂರ್ಣ ಕಾರ್ಯ ಹಾಗೂ ನೀತಿಯಲ್ಲಿ ನಂಬಿಕೆಯಿಡುವದರ ಮೂಲಕವಷ್ಟೇ ನೀತಿವಂತರೆಂದು ಎಣಿಸಲ್ಪಡಬಹುದು (ರೋಮ 3:22-24 ಮತ್ತು ವ್ಯಾಖ್ಯಾನ ನೋಡಿರಿ). ನಾವು ನಮ್ಮ ಸ್ವಂತ ಪರಿಶ್ರಮ ಅಥವಾ ಪ್ರಯತ್ನದಿಂದ ನಮ್ಮನ್ನು ಎಂದಿಗೂ ನೀತಿವಂತರನ್ನಾಗಿ ಮಾಡಿಕೊಳ್ಳಲಾರೆವು ಅಥವಾ ರಕ್ಷಣೆಯನ್ನು ಹೊಂದಿಕೊಳ್ಳಲಾರೆವು . ನಂಬಿಕೆಯ ಮೂಲಕ ಕ್ರಿಸ್ತನ ನೀತಿಯನ್ನು ಸ್ವೀಕರಿಸಿಕೊಳ್ಳುವದರಿಂದ ಮಾತ್ರವೇ ದೇವರ ದೃಷ್ಟಿಯಲ್ಲಿ ನೀತಿವಂತರೆಂದು ಎಣಿಸಲ್ಪಡಬಲ್ಲೆವು .

24 ಮನುಷ್ಯನು ನಂಬಿಕೆಯ ಮೂಲಕ ನೀತಿವಂತನೆಂದು ನಿರ್ಣಯಿಸಲ್ಪಡುತ್ತಾನೆ ಹಾಗೂ ರಕ್ಷಣೆ ಹೊಂದುತ್ತಾನೆ ಎಂದು ಪೌಲನು ಗಲಾತ್ಯ 2:15-16 ಮತ್ತು ಎಫೆಸ 2:8-9ರಲ್ಲಿ ಹೇಳಿದ್ದಾನೆ. ಇದು ಸತ್ಯ ಮತ್ತು ಯಾಕೋಬನು ಇದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತಾನೆ. ಯಾಕೋಬನು ತಿಳಿಸಲಿಚ್ಚಿಸುವ ಒಂದೇ ವಿಷಯವೇನೆಂದರೆ, ಈ ನಂಬಿಕೆಯು ನಿಜವಾದ ನಂಬಿಕೆ–ಅಂದರೆ, ಪ್ರೀತಿ ಹಾಗೂ ವಿಧೇಯತೆಯಿಂದ ತೋರಿಬರುವ ನಂಬಿಕೆ– ಆಗಿರಬೇಕು ಎಂಬದೆ. ಆದದರಿಂದ, ಯಾಕೋಬನು ಇಲ್ಲಿ ಮನುಷ್ಯನು ಕ್ರಿಯೆಗಳಿಂದ ನೀತಿವಂತನೆಂದು ನಿರ್ಣಯಿಸಲ್ಪಡುತ್ತಾನೆ ಹೊರತು ಬರೀ ನಂಬಿಕೆಯಿಂದಲ್ಲ ಎಂದು ಹೇಳುತ್ತಾನೆ. ಯಾಕೋಬನ ತಾತ್ಪರ್ಯವೇ ನೆಂದರೆ, ನಾವು "ಕ್ರಿಯೆ ಮಾಡುವ ನಂಬಿಕೆ"ಯ ಮೂಲಕ –ಕ್ರಿಯೆಗಳಿಂದ ತೋರಿ ಬರುವ ನಂಬಿಕೆಯಿಂದ ನೀತಿ ವಂತರೆಂದು ನಿರ್ಣಯಿಸಲ್ಪಡುತ್ತೇವೆ ಎಂಬುದೇ.

25 ಇಲ್ಲಿ ಯಾಕೋಬನು ಹಳೆ ಒಡಂಬಡಿಕೆಯಿಂದ ಎರಡನೆಯ ದೃಷ್ಟಾಂತವೊಂದನ್ನು ನೀಡುತ್ತಾ ನೆ. ಅದು ಸೂಳೆಯಾದ ರಹಾಬಳ ದೃಷ್ಟಾಂತ (ಯೆಹೋಶುವ 2:1-16, ಇಬ್ರಿಯ 11:31 ನೋಡಿರಿ). ರಹಾಬಳು ಯೆಹೋಶುವನಿಂದ ಕಳುಹಿಸಲ್ಪಟ್ಟ ಗೂಢಾಚಾರರಿಗೆ ಸಹಾಯ ನೀಡಿದಳು. ಅವಳ ನಂಬಿಕೆಯು ನಿಜವಾದದ್ದಾಗಿತ್ತೆಂಬದನ್ನು ನಾವು ಹೇಗೆ ತಿಳಿದಿರುತ್ತೇವೆ? ಅವು ಗಳು ಕ್ರಿಯೆ ಮಾಡಿದ್ದರಿಂದಲೇ ಬಲ್ಲೆವು . ರಹಾಬಳು ಯೆಹೂದ್ಯ ಗೂಢಾಚಾರರಿಗೆ ತಪ್ಪಿಸಿ ಕೊಳ್ಳಲು ಸಹಾಯ ಮಾಡಿದಳು ಅದು ಅವಳ ನಂಬಿಕೆಗೆ ಸಾಕ್ಷಿ ಆಗಿತ್ತು. ಮತ್ತು ಅದರ ಫಲಿತವಾಗಿ ಸ್ವತಃ ರಹಾಬಳು ಮರಣದಿಂದ ಪಾರಾದಳು ಯೆಹೋಶುವ ಹಾಗೂ ಆತನ ಸೈನ್ಯವು ಯೆರಿಕೋವನ್ನು ನಾಶಮಾಡಿದಾಗ ರಹಾಬಳನ್ನು ಉಳಿಸಬೇಕೆಂದು ಆತನು ಆಜ್ಞಾಪಿಸಿದನು (ಯೆಹೋಶುವ 6:24 25).

26 ಯಾಕೋಬನು ಪು ನಃ ಮುಖ್ಯ ವಿಷಯವನ್ನು ಪು ನರಾವರ್ತಿಸುತ್ತಾನೆ. ಕ್ರಿಯೆಗಳಿಲ್ಲದ ನಂಬಿಕೆಯು ಸತ್ತದ್ದೇ (ವಚನ 17 ಮತ್ತು ವ್ಯಾಖ್ಯಾನ ನೋಡಿರಿ). ಕ್ರಿಯೆಗಳಿಲ್ಲದ ನಂಬಿಕೆಯು ಆತ್ಮವಿಲ್ಲದ ದೇಹಗಳಂತಿರುತ್ತದೆ. ಅಂಥ ದೇಹವು ಆತ್ಮೀಕವಾಗಿ ಸ್ತತದ್ದು ಅದು ಶವಕ್ಕಿಂತಲೂ ಕಡೇಯಾದದ್ದು.

## ಅಧ್ಯಾಯ - 3

### ನಾಲಿಗೆಗೆ ಕಡಿವಾಣ ಹಾಕುವದು (3:1-12)

1 ಬಹು ಮಂದಿ ಬೋಧಕರಾಗಬೇಡಿರಿ. ಯಾಕೋಬನು ಯಾಕೆ ಹೀಗೆ ಹೇಳುತ್ತಾನೆ? ಯಾಕೆಂದರೆ ಯಾಕೋಬನ ಕಾಲದಲ್ಲಿ (ಮತ್ತು ನಮ್ಮ ಕಾಲದಲ್ಲಿ ಸಹ) ಅನೇಕ ಜನರು ಬೋಧಕರು ಹಾಗೂ ನಾಯಕರಾಗಲು ಪ್ರಯತ್ನಿಸುತ್ತಿದ್ದರು. ಅವರು ತಮಗಾಗಿ ಗೌರವವನ್ನೂ ಉನ್ನತ ಸ್ಥಾನಗಳನ್ನು ಅಪೇಕ್ಷಿಸುತ್ತಿದ್ದರು. ಯಾಕೋಬನು ಇಲ್ಲಿ ಹೇಳುವದೇನೆಂದರೆಃ "ಗೌರವ ಹಾಗೂ ಸ್ಥಾನವನ್ನು ಸಂಪಾದಿಸಿಕೊಳ್ಳಬೇಕೆಂದು ಉಪದೇಶಕರಾಗಲು ಪ್ರಯತ್ನಿಸಬೇಡಿರಿ. ಇಲ್ಲವಾದರೆ, ನೀವು ಅದಕ್ಕಾಗಿ ವೇದನೆ ಪಡಬೇಕಾಗಬಹುದು". ಬೋಧಕನಾಗಿರುವದರಿಂದ ಒಂದು ದೊಡ್ಡ ನಷ್ಟವಿರುತ್ತದೆ. ಬೋಧಕರು ಹಾಗೂ ನಾಯಕರಿಗೆ ಇತರರಿಗಿಂತಲೂ ಹೆಚ್ಚು ತಿಳುವಳಿಕೆ ಹಾಗೂ ಜವಾಬ್ದಾರಿ ಕೊಡಲ್ಪಡುವದರಿಂದ ನ್ಯಾಯ ತೀರ್ಪಿನ ದಿನದಲ್ಲಿ ಅವರಿಗೆ ಕಠಿಣವಾದ ತೀರ್ಪು ಆಗುವದು (ಲೂಕ 12:47-48 ನೋಡಿರಿ).

ಆದದರಿಂದ, ಬಹುಮಂದಿ ಬೋಧಕರಾಗಬೇಕೆಂದು ಅಪೇಕ್ಷಿಸಬಾರದು. ಆದರೆ ಕೆಲವರು ಬೋಧಕರಾಗಿರುವದು ಅವಶ್ಯಕವಾಗಿದೆ. ಬೋಧಕ ಅಥವಾ ನಾಯಕನಾಗಿರುವದು ಒಂದು ಒಳ್ಳೇಸಂಗತಿಯೇ (1 ತಿಮೊಥೆ 3:1) ಹೀಗಿರುವಾಗ, ಯಾವ ರೀತಿಯ ಜನರು ಬೋಧಕರಾಗಿರಬೇಕು? ಒಬ್ಬ ಬೋಧಕ ಅಥವಾ ನಾಯಕನಾಗಿರುವದಕ್ಕೆ ಎರಡು ಸಂಗತಿಗಳ ಅಗತ್ಯತೆಯಿರುತ್ತದೆ. ಮೊದಲನೆಯದಾಗಿ, ಒಬ್ಬ ವ್ಯಕ್ತಿಯು ಬೋಧಕನಾಗುವಕ್ಕೆ ಕರ್ತನಿಂದ ಒಂದು ವಿಶೇಷ ವರವನ್ನು ಹೊಂದಿರಬೇಕು, ಯಾಕೆಂದರೆ ಸ್ವತಃ ಬೋಧಕರು ಸಭೆಗೆ ದೇವರು ನೀಡಿದ ಒಂದು ವರವಾಗಿದ್ದಾರೆ (ಎಫೆಸ 4:7, 11-12). ಎರಡನೆಯದಾಗಿ, ಒಬ್ಬ ವ್ಯಕ್ತಿಯು ಬೋಧಕ ಅಥವಾ ಉಪದೇಶಕನಾಗಿರುವದಕ್ಕೆ ಆತನು ಕರ್ತನಿಂದ ಒಂದು ವಿಶೇಷ ಕರೆ ಅಥವಾ ನೇಮಕವನ್ನು ಹೊಂದಿರಬೇಕು (1 ಕೊರಿಂಥ 9:16 ನೋಡಿರಿ).

2 ನಾವೆಲ್ಲರೂ ಅನೇಕ ವಿಧಗಳಲ್ಲಿ ಎಡುವುತ್ತೇವೆ ಹಾಗೂ ಪಾಪ ಮಾಡುತ್ತೇವೆ, ಆದರೆ ನಾವು ನಮ್ಮ ಮಾತುಗಳಲ್ಲಿ ಪಾಪಮಾಡುವದು ಅತಿ ಸಾಮಾನ್ಯವಿಧವಾಗಿದೆ ಇದು ಬೋಧಕರಿಗೆ ವಿಶೇಷ ಅಪಾಯವಾಗಿದೆ. ಯಾಕೆಂದರೆ ಅವರ ಕೆಲಸವು ಬಹಳಷ್ಟು ಮಾತಾಡುವದನ್ನು ಒಳಗೊಂಡಿರುತ್ತದೆ. ಆದರೆ ಮಾತಾಡುವದು ಬೋಧಕರಿಗೆ ಮಾತ್ರವೇ ಅಪಾಯವಲ್ಲ ಎಲ್ಲಾ ಕ್ರೈಸ್ತರಿಗೂ ಒಂದು ಅಪಾಯವಾಗಿದೆ. ನಮಗೆ ಪಾಪ ಮಾಡುವ ಅಸಂಖ್ಯಾತ ಅವಕಾಶಗಳು ನಮ್ಮ ಮಾತಾಡುವಿಕೆಯಿಂದ ಬರುತ್ತವೆ.

ನಾವು ಮಾತಾಡುವದನ್ನು ಪರಿಪೂರ್ಣವಾಗಿ ಹತೋಟಿಮಾಡಿಕೊಳ್ಳುವದಾದರೆ– ನಮ್ಮ ನಾಲಿಗೆಗೆ ಕಡಿವಾಣ ಹಾಕಬಲ್ಲವರಾದರೆ– ನಾವು ಶಿಕ್ಷಿತರಾಗಿರುತ್ತೇವೆ. ನಾವು ಮಾತಿನಲ್ಲಿ ತಪ್ಪದಿದ್ದರೆ (ಹತೋಟಿಯಲ್ಲಿಟ್ಟು ಕೊಳ್ಳಬಲ್ಲವರಾದರೆ) ನಮ್ಮ ದೇಹವನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳುವದಕ್ಕೆ ಸಮರ್ಥರಾಗುತ್ತೇವೆ. ನಮ್ಮ ದೇಹದ ಉಳಿದೆಲ್ಲಾ ಅಂಗಗಳೊಳಗೆ ನಾಲಿಗೆಯನ್ನು ಸ್ವಾಧೀನದಲ್ಲಿಟ್ಟುಕೊಳ್ಳುವದು ಅತಿ ಕಠಿಣವಾದದ್ದಾಗಿದೆ. ಯಾವ ವ್ಯಕ್ತಿಯು ತನ್ನ ನಾಲಿಗೆಯನ್ನು ಹತೋಟಿಯಲ್ಲಿ ಇಟ್ಟು ಕೊಳ್ಳಬಲ್ಲನೋ ಅವನು ಖಂಡಿತವಾಗಿಯೂ ತನ್ನ ದೇಹದ ಇತರ ಇಲ್ಲಾ ಕೆಟ್ಟ ಅಭಿಲಾಷೆಗಳನ್ನು ಸಹ ಸ್ವಾಧೀನದಲ್ಲಿಟ್ಟುಕೊಳ್ಳಲು ಶಕ್ತನಾಗಿರುತ್ತಾನೆ.

ಆದರೆ ಯಾವನೂ ಪರಿಪೂರ್ಣನಲ್ಲ ಎಂದು ನಾವು ಬಲ್ಲೆವು; ಮತ್ತು ಅದಕ್ಕೆ ಒಂದು ಕಾರಣವೇನೆಂ ದರೆ ಯಾವ ನೊಬ್ಬನೂ ತನ್ನ ನಾಲಿಗೆಯನ್ನು ಪರಿಪೂರ್ಣವಾಗಿ ಸ್ವಾಧೀನ ಮಾಡಿಕೊಳ್ಳಲು ಶಕ್ತನಾಗಿರುವದಿಲ್ಲ ಎಂಬದೇ.

3 ಒಬ್ಬನು ಒಂದು ಚಿಕ್ಕ ಕಡಿವಾಣದಿಂದ ದೊಡ್ಡ ಕುದುರೆಯನ್ನು ಸ್ವಾಧೀನಮಾಡಿಕೊಳ್ಳಬಲ್ಲನು. ನಮ್ಮ ನಾಲಿಗೆ ಒಂದು ಕಡಿ ಇದ್ದಂತೆ ನಾವು ನಮ್ಮ ನಾಲಿಗೆಯನ್ನು ಸ್ವಾಧೀನ ಮಾಡಿಕೊಳ್ಳಲು ಸಮರ್ಥರಾದರೆ ನಮ್ಮ ಇಡೀ ದೇಹವನ್ನು ಸ್ವಾಧೀನಮಾಡಿಕೊಳ್ಳಬಲ್ಲೆವು .

4 ನಮ್ಮ ನಾಲಿಗೆಯು ಒಂದು ದೊಡ್ಡ ಹಡಗಿನ ಚುಕಾಣಿಯ ಹಾಗೆಯೂ ಇರುತ್ತದೆ. ಒಂದು ಚುಕಾಣಿಯು ಹಡಗಿನ ಹಿಂಭಾಗದಲ್ಲಿ ಜೋಡಿಸುವ ಚಿಕ್ಕ ವಸ್ತುವಾಗಿದೆ ಅದರ ಮೂಲಕ ಹಡಗು ತಿರುಗಿಸಲ್ಪಡುತ್ತದೆ. ಅದೇವಿಧದಲ್ಲಿ ನಮ್ಮ ನಾಲಿಗೆಯು ದೇಹದ ಒಂದು ಅತಿ ಚಿಕ್ಕದಾದ ಅಂಗವಾಗಿದೆ. ಆದರೆ ಅದು ದೊಡ್ಡ ಪರಿಣಾಮವನ್ನು ಉಂಟುಮಾಡುವದಾಗಿದೆ.

5 ನಮ್ಮ ನಾಲಿಗೆಯು ಬೆಂಕಿಯ ಕಿಡಿ (ಕಿಚ್ಚು) ಯಂತೆ ಸಹ ಇರುತ್ತದೆ, ಅಥವಾ ಬೆಂಕಿಯ ಕಡ್ಡಿಯಂತೆ ಇರುತ್ತದೆ. ಅಂಥ ಚಿಕ್ಕ ವಸ್ತುವು ಒಂದು ಬೃಹತ್ ಕಾಡಿಗೆ ಬೆಂಕಿ ಹಚ್ಚಬಲ್ಲದು!.

ಈ ಮೂರು ಉದಾಹರಣೆಗಳ– ಮೂಲಕ ಕಡಿ, ಚುಕಾಣಿ ಹಾಗೂ ಕಿಡಿ– ನಾಲಿಗೆಯು ನಮ್ಮ ದೇಹದ ಒಂದು ಅತಿ ಪ್ರಾಮುಖ್ಯವಾದ ಅಂಗವೆಂಬದನ್ನು ನಾವು ತಿಳಿದುಕೊಳ್ಳುತ್ತೇವೆ. ಒಂದು ಚಿಕ್ಕ ನಿಂದನೆ ಅಥವಾ ಚಾಡಿ ಮಾತು ಒಂದು ಸಭೆಯನ್ನು ಇಬ್ಭಾಗಿಸಿ ಅದರ ನಾಯಕರಿಗೆ ಅವಮಾನವನ್ನು ತರಬಲ್ಲದು. ಅಥವಾ ಒಂದು ಚಿಕ್ಕ ಸುಳ್ಳು ಬೋಧನೆಯು ಅನೇಕರನ್ನು ಮಾರ್ಗತಪ್ಪಿಸಬಲ್ಲದು.

6 ಸ್ವತಃ ನಾಲಿಗೆಯು ಕಿಚ್ಚು ಆಗಿದೆ. ಸೈತಾನನು ನಮ್ಮ ಇತರ ಯಾವದೇ ಅಂಗಗಳಿಗಿಂತಲೂ ಹೆಚ್ಚಾಗಿ ನಾಲಿಗೆಯನ್ನು ಉಪಯೋಗಿಸುತ್ತಾನೆ ನಮ್ಮ ನಾಲಿಗೆಯು ನರಕದಿಂದ ಬೆಂಕಿ ಹತ್ತಿಸಿಕೊಂಡದ್ದಾಗಿದೆ; ಅಂದರೆ, ಸೈತಾನನು ನಮ್ಮ ನಾಲಿಗೆಗೆ

ಬೆಂಕಿ ಹತ್ತಿಸುತ್ತಾನೆ. ನಾವು ನಮ್ಮನಾಲಿಗೆಯನ್ನು ಸ್ವಾಧೀನ ಮಾಡಿಕೊಳ್ಳದಿದ್ದರೆ ನಾಲಿಗೆಯು ನಮ್ಮ ಇಡೀ ವ್ಯಕ್ತಿತ್ವವನ್ನು ಹಾಳುಮಾಡಿ ನಮ್ಮ ಜೀವಿತದ (ಇಡೀ) ಚಕ್ರಕ್ಕೆ ಬೆಂಕಿ ಹಚ್ಚುತ್ತದೆ. ಅಂದರೆ, ಸ್ವಾಧೀನಮಾಡಿಕೊಳ್ಳದಿದ್ದರೆ ನಮ್ಮ ನಾಲಿಗೆಯು ನಮ್ಮನ್ನು ನಾಶನಕ್ಕೆ ನಡಿಸುತ್ತದೆ.

ಕ್ರೈಸ್ತರೊಳಗೆ ನಾಲಿಗೆಯು ಹೆಚ್ಚು ಕೆಟ್ಟದ್ದನ್ನು ಮಾಡುತ್ತದೆ. ಒಬ್ಬ ಕ್ರೈಸ್ತರು ಇತರ ಎಲ್ಲಾ ವಿಧಗಳಲ್ಲಿಯೂ ನಿಷ್ಠೆ ಹಾಗೂ ಭಕ್ತಿಯ ಜೀವಿತವನ್ನು ನಡೆಸಬಹುದು ಆದರೆ ಆತನ ನಾಲಿಗೆಯು ಕೆಟ್ಟದ್ದಾಗಿರುವದಾದರೆ ಅದು ಅವನ ಜೀವಿತವನ್ನು ಕೆಡಿಸುವದು ಕ್ರೈಸ್ತರೊಳಗೆ ಕಂಡುಬರುವ ಅತಿಸಾಮನ್ಯ ಪಾಪಗಳು ನಾಲಿಗೆಗೆ ಸಂಬಂಧಿಸಿರುತ್ತವೆ.

**7-8** ನಾಲಿಗೆಯನ್ನು ಯಾವ ಮಾನವನೂ ಹತೋಟಿಗೆ ತರಲಾರನು (ವಚನ 8). ಇದು ನಮ್ಮ ನಾಲಿಗೆಯನ್ನು ಹತೋಟಿಗೆ ತರಲು ದೇವರು ನಮಗೆ ಸಹಾಯಮಾಡುವನು. ಹೇಗಿದ್ದರೂ, ಜೀವನದಲ್ಲಿ ನಾವು ಎಲ್ಲಾ ಪರಿಸ್ಥಿತಿಗಳಲ್ಲಿ ನ ಎಲ್ಲಾ ವೇಳೆಗಳಲ್ಲಿ ನಮ್ಮ ನಾಲಿಗೆಯನ್ನು ಹತೋಟಿಗೆ ತರುವದನ್ನು ನಿರೀಕ್ಷಿಸಲು ಸಾಧ್ಯವಿಲ್ಲ ನಮ್ಮ ನಾಲಿಗೆಯು ಸುಮ್ಮನಿರಲಾರದ ಕೆಡುಕಾಗಿದೆ; ಅದು ಯಾವಾಗಲೂ ಕೆಟ್ಟದ್ದನ್ನು ಮಾತಾಡುವ ಸಂದರ್ಭಕ್ಕಾಗಿ ಎದುರು ನೋಡುವದಾಗಿದೆ. ನಾಲಿಗೆಯು ಮರಣಕರವಾದ ವಿಷದಿಂದ ತುಂಬಿದೆ. ಕೆಲವು ವಿಧವಾದ ವಿಷಗಳು ಪ್ರಥಮ ಬಾರಿಗೆ ರುಚಿನೋಡಿದಾಗ ವಿಷವೆಂದು ಗುರುತಿಸಲು ಕಷ್ಟಕರವಾಗಿರುತ್ತದೆ ಕೆಲವು ವಿಷಗಳು ಸಿಹಿಯಾಗಿಯೂ ತೋರಬಹುದು, ಅನಂತರವಷ್ಟೇ ವಿಷವು ತನ್ನ ಮರಣಾಂತಿಕ ಕಾರ್ಯವನ್ನು ಮಾಡುತ್ತದೆ. ನಮ್ಮ ನಾಲಿಗೆಯು ಅದೇ ವಿಧದಲ್ಲಿರುತ್ತದೆ (ಕೀರ್ತನೆಗಳು 140:3).

**9-10** ಅನೇಕ ಜನರು (ಕ್ರೈಸ್ತರು ಸೇರಿದಂತೆ) "ಎರಡು ನಾಲಿಗೆ' ಉಳ್ಳವರು ಪ್ರಾರ್ಥನಾ ಕೂಟಗಳಲ್ಲಿ ಅವರು ಇಂಪಾದ ಮಾತುಗಳಿಂದ ದೇವರನ್ನೂ ಕೊಂಡಾಡುತ್ತಾರೆ. ಆದರೆ ತರುವಾಯ ಅವರು ಹೊರ ಹೋಗಿ ತಮ್ಮ ಸಹೋದರ ಕುರಿತು ಕೆಟ್ಟದ್ದಾಗಿ ಮಾತಾಡುತ್ತಾರೆ. ಅದೇ ಬಾಯಿಂದ ಸ್ತುತಿ ಶಾಪ ಎರಡೂ ಬರುತ್ತವೆ. ನನ್ನ ಸಹೋದರರೇ ಹೀಗಿರುವದು ಯೋಗ್ಯವಲ್ಲ [9].

**11-12** ಯಾಕೋಬನು ಇಲ್ಲಿ ಎರಡು ನಾಲಿಗೆಯುಳ್ಳವರಾಗಿರುವದು, ವಾಸ್ತವದಲ್ಲಿ, ಅಸಾಧ್ಯವೆಂಬದನ್ನು ತೋರಿಸಲು ಪ್ರಕೃತಿಯಿಂದ ದೃಷ್ಟಾಂತಗಳನ್ನು ಉಪಯೋಗಿಸುತ್ತಾನೆ. ಯಾಕೆಂದರೆ ಎರಡು ನಾಲಿಗೆಯುಳ್ಳವನ ಇಂಪಾದ ಪ್ರಾರ್ಥನೆಗಳು ನಿಜವಾಗಿಯೂ ಇಂಪಾಗಿ ಇರುವದೇ ಇಲ್ಲ. ಅವು ಗಳ ಮೇಲೆ ಪ್ರಸ್ತಾಪಿಸಿದ ಸಿಹಿಯಾಗಿ ತೋರುವ ವಿಷದಂತಿರುತ್ತವೆ. ಅವು ಗಳು ದೇವರ ಕಿವಿಗಳಿಗೆ ಇಂಪಾಗಿರುವದಿಲ್ಲ; ಆತನು ಅವು ಗಳಿಗೆ
ಕಿವಿಗೊಡುವದಿಲ್ಲ (ಕೀರ್ತನೆಗಳು 66:18). ಹಾಗಾದರೆ ಎರಡು ನಾಲಿಗೆ ಉಳ್ಳವನು ಆಗಾಗ ಸಿಹಿಯಾಗಿ ತೋರುವ ವಿಷದ ನಾಲಿಗೆಯುಳ್ಳ ವ್ಯಕ್ತಿಯಾಗಿದ್ದಾನೆ.

ಪ್ರಕೃತಿಯಲ್ಲಿ ಯಾವದೇ ಒಂದು ಊಟೆಯಿಂದ ಒಂದು ವಿಧವಾದ ನೀರು ಮಾತ್ರವೇ ಬರುತ್ತದೆ. ಒಂದು ತಾಜಾನೀರಿನ ಊಟೆಯಿಂದ ತಾಜಾ ನೀರು ಬರುತ್ತದೆ; ಉಪ್ಪು ನೀರಿನ ಊಟೆಯಿಂದ ನೀರು ಬರುತ್ತದೆ. ಅದೇ ರೀತಿಯಾಗಿ ಯಾವದೇ ಒಂದು ಮರದಿಂದ ಒಂದು ವಿಧವಾದ ಫಲ ಮಾತ್ರವೇ ಬರುತ್ತದೆ. ಅಂಜೂರದ ಮರವು ಅಂಜೂರಗಳನ್ನು ಬಿಡುವದು; ದ್ರಾಕ್ಷೆ ಬಳ್ಳಿಯೊಂದರಿಂದ ದಾಕ್ಷೆಗಳು ಬರುತ್ತವೆ. ನಾವು ಊಟೆಯನ್ನು ಅದರ ನೀರಿನಿಂದಲೂ, ಮರವನ್ನು ಅದರ ಫಲದಿಂದಲೂ ಗುರುತಿಸಬಹುದು.

ಅದೇ ವಿಧದಲ್ಲಿ, ನಾವು ಜನರನ್ನು ಅವರ ಮಾತುಗಳಿಂದ ಗುರುತಿಸಬಲ್ಲೆವು. ಒಬ್ಬ ವ್ಯಕ್ತಿಯ ಮಾತುಗಳು ಕೆಟ್ಟದ್ದು ಹಾಗೂ ಕಹಿಯಾದದ್ದಾಗಿ ಇರುವದಾದರೆ ಆತನ ಹೃದಯವು ಸಹ ಕೆಟ್ಟದ್ದಾಗಿಯೂ ಕಹಿಯಾಗಿಯೂ ಇರುತ್ತದೆ. ಒಬ್ಬ ದುಷ್ಟ ವ್ಯಕ್ತಿಯು ಸ್ವಲ್ಪ ಕಾಲದವರೆಗೆ ತನ್ನ ಸಿಹಿಯಾದ ಮಾತುಗಳಿಂದ ನಮ್ಮನ್ನು ವಂಚಿಸಬಹುದು ಆದರೆ ನಾವು ದೀರ್ಘಕಾಲ ಅವನಿಂದ ಮೂರ್ಖತನಕ್ಕೊಳಗಾಗುವದಿಲ್ಲ; ಶೀಘ್ರವೇ ಅವನ ದುಷ್ಟ ಹೃದಯವು ಆತನ ಕೆಟ್ಟ ಮಾತುಗಳಿಂದ ತೋರಿಬರುವದು.

ಯಾವನೂ ಮೋಸಹೋಗದಿರಲಿಃ ತನ್ನ ಸಹೋದರ ಕುರಿತು ಕೆಟ್ಟದ್ದಾಗಿ ಮಾತಾಡುವವನ ಸಿಹಿಯಾದ ಪ್ರಾರ್ಥನೆಗಳನ್ನು ದೇವರು ಸ್ವೀಕರಿಸುವದಿಲ್ಲ. ಅಂಥ ಪ್ರಾರ್ಥನೆಗಳು ಸುಳ್ಳಾದವು ಎಂದು ದೇವರು ಬಲ್ಲನು.
ಒಬ್ಬನು ತಾನು ದೇವರನ್ನು ಪ್ರೀತಿಸುತ್ತೇನೆಂದು ಹೇಳಿ ತನ್ನ ಸಹೋದರನನ್ನು ದ್ವೇಷಿಸಿದರೆ ಅವನು ಸುಳ್ಳುಗಾರನಾಗಿದ್ದಾನೆ (1 ಯೋಹಾನ 4:20-21).

## ಎರಡು ವಿಧವಾದ ಜ್ಞಾನ (3:13-18)

**13** ನಾವು ಜ್ಞಾನಿಗಳೂ ಬುದ್ಧಿವಂತರೂ ಎಂದು ಹೇಳುವದಾದರೆ ಅದರ ಆಧಾರವನ್ನು ತೋರಿಸೋಣ ನಾವು ಪ್ರೀತಿಯುಳ್ಳವರು ಎಂದು ಹೇಳುವದಾದರೆ ಅದನ್ನು ತೋರಿಸೋಣ ನಾವು ನಂಬಿಕೆಯನ್ನು ಹೊಂದಿದ್ದೇವೆಂದು ಹೇಳುವದಾದರೆ ಅದನ್ನು ತೋರಿಸೋಣ. ನಾವು ಅದನ್ನು ಹೇಗೆ ತೋರಿಸಬಲ್ಲೆವು? ನಾವು ಅದನ್ನು ಒಳ್ಳೇ ಜೀವಿತದ ಮೂಲಕ ನಮ್ಮ ಕ್ರಿಯೆಗಳ ಮೂಲಕ ತೋರಿಸಬಹುದು.

ನಮ್ಮ ಉಪದೇಶ ನಮ್ಮ ಬೋಧನೆ ನಾವು ಏನೇ ಕೆಲಸವನ್ನು ಮಾಡಿದರೂ ಸರಿಯೇ ಜ್ಞಾನದ ಲಕ್ಷಣವಾಗಿರುವ ಶಾಂತಗುಣದಿಂದ (ದೀನತೆಯಿಂದ) ಮಾಡಬೇಕು. ಜ್ಞಾನಗಳಲ್ಲಿ ಎರಡು ವಿಧಗಳುಂಟು ದೇವರ ಜ್ಞಾನ, (ಪರಲೋಕದಿಂದ

ಬರುವ ಜ್ಞಾನ) ಮತ್ತು ಮಾನುಷ ಜ್ಞಾನ (ಪ್ರಾಪಂಚಿಕ ಜ್ಞಾನ). ದೇವರ ಜ್ಞಾನವು ಯಾವಾಗಲೂ ದೀನತೆಗೆ ನಡೆಸುತ್ತದೆ. ಮಾನುಷ ಜ್ಞಾನವು ಯಾವಾಗಲೂ ಗರ್ವಕ್ಕೆ ದಾರಿ ಮಾಡುತ್ತದೆ– ಅಂದರೆ, ತೀಕ್ಷ್ಣವಾದ ಮತ್ಸರ ಹಾಗೂ ಪಕ್ಷಭೇದಕ್ಕೆ (ಸ್ವಾರ್ಥ ಅಭಿಲಾಷೆಗೆ)ನಡಿಸುತ್ತದೆ (ವಚನ 14).

14 ಪ್ರಾಪಂಚಿಕ ಜ್ಞಾನವುಳ್ಳ ವ್ಯಕ್ತಿಯು ತಾನು ದೇವರ ಕೆಲಸಮಾಡುತ್ತಾನೆಂಬದಕ್ಕೆ ಹೊಗಳಿಕೊಳ್ಳಬಹುದು; ಆದರೆ, ವಾಸ್ತವದಲ್ಲಿ, ಆತನು ತನಗೆ ಲಾಭಕರವಾಗಿರುವದನ್ನು ಮಾತ್ರವೇ ಮಾಡುತ್ತಾನೆ. ಅಂಥ ವ್ಯಕ್ತಿಯು ತಾನು ದೇವರಿಗಾಗಿ ಮಾಡುವ ಸಂಗತಿಗಾಗಿ ಹೊಗಳಿಕೊಳ್ಳಬಾರದು. ಆತನು ಹಾಗೆ ಮಾಡುವದಾದರೆ, ಅದು ಒಂದು ಸುಳ್ಳು ಆಗಿರುತ್ತದೆ. ಆತನು ಸತ್ಯವನ್ನು ಅಲ್ಲಗಳೆಯುವವನಾಗಿದ್ದಾನೆ.

15 ನಾವು ಒಂದು ಊಟೆಯನ್ನು ಅದರ ನೀರಿನ ರುಚಿ ನೋಡುವದರ ಮೂಲಕ ಗುರುತಿಸುವ ಪ್ರಕಾರವೇ ಒಬ್ಬ ವ್ಯಕ್ತಿಯು ಯಾವ ವಿಧವಾದ ಜ್ಞಾನವನ್ನು ಹೊಂದಿದ್ದಾನೆಂದು ಆ ಜ್ಞಾನದ ಫಲದಿಂದ ತಿಳಿದುಕೊಳ್ಳಬಹುದು. ಪರಲೋಕ ಜ್ಞಾನದ ಫಲವು ದೀನತೆಯಾಗಿದೆ. ಪ್ರಾಪಂಚಿಕ ಜ್ಞಾನದ ಅಥವಾ ಪ್ರಾಕೃತ ಜ್ಞಾನದ ಫಲಿತವು ಮತ್ಸರ ಹಾಗೂ ಪಕ್ಷಭೇಧ ಆಗಿರುತ್ತದೆ. ಪ್ರಾಪಂಚಿಕ ಜ್ಞಾನವು ದೆವ್ವಗಳಿಗೆ ಸಂಬಂಧಪಟ್ಟದ್ದು– ಅಂದರೆ, ಇಹಲೋಕಾಧಿಪತಿಯಾದ ಸೈತಾನನಿಗೆ ಸಂಬಂಧಿಸಿದ್ದು (ಯೋಹಾನ 16:11).

16 ಸಭೆಯಲ್ಲಿನ ಬೇಧಗಳಿಗೂ ಸಹೋದರರೊಳಗಣ ಜಗಳಗಳಿಗೂ ಕಾರಣವೇನು? ಮುಖ್ಯ ಕಾರಣವು ಮತ್ಸರ ಹಾಗೂ ಸ್ವಾರ್ಥ ಉದ್ದೇಶ (ಪಕ್ಷ ಬೇಧ) ಆಗಿದೆ (ವಚನ 14). ಮತ್ತು ಇದು ಸಭೆಯಲ್ಲಿನ ಸಾಮಾನ್ಯ ಸಹೋದರರ ಮಧ್ಯದಲ್ಲಿ ಮಾತ್ರವಲ್ಲದೆ ನಾಯಕರ ಮಧ್ಯದಲ್ಲಿಯೂ ಕಂಡುಬರುತ್ತದೆ! ಪ್ರತಿಯೊಬ್ಬ ವಿಶ್ವಾಸಿಯು ತನ್ನನ್ನು ಪರೀಕ್ಷಿಸಿಕೊಳ್ಳಲಿ.

17 ಮೇಲಿನಿಂದ (ಪರಲೋಕದಿಂದ) ಬರುವ ಜ್ಞಾನವು ದೇವರ ಜ್ಞಾನವಾಗಿದೆ. ನಾವು ಜ್ಞಾನಕ್ಕೋಸ್ಕರ ದೇವರನ್ನು ಬೇಡಿಕೊಳ್ಳಬೇಕು (ಯಾಕೋಬ 1:5).

ದೇವರ ಜ್ಞಾನವು ಹೇಗಿರುತ್ತದೆ? ನಾವು ಅದನ್ನು ಹೇಗೆ ಗುರುತಿಸಬಲ್ಲೆವು? ಮೊದಲನೆಯದಾಗಿ, ಅದು ಪರಿಶುದ್ಧವಾದದ್ದು, ಯಾಕೆಂದರೆ ದೇವರು ಪರಿಶುದ್ಧನಾಗಿದ್ದಾನೆ. ನಮ್ಮ ಜ್ಞಾನವು ಶುದ್ಧವಾಗಿರಬೇಕು, ಇಲ್ಲವಾದರೆ ಅದು ನಮ್ಮನ್ನು ಸಮಾಧಾನ ಹಾಗೂ ಇತರ ಒಳ್ಳೇ ಫಲಗಳಿಗೆ ನಡಿಸಲಾರದು.

ಎರಡನೆಯದಾಗಿ, ದೇವರ ಜ್ಞಾನವು ಸಮಾಧಾನ ಪ್ರಿಯವಾದದ್ದು. ಒಬ್ಬ ಜ್ಞಾನವಂತನು (ದೇವರ ಜ್ಞಾನ ಹೊಂದಿರುವವನು) ಕಲಹವನ್ನು ಉಂಟುಮಾಡಲಾರನು. ಒಬ್ಬ ಜ್ಞಾನಿಯಾದ ವ್ಯಕ್ತಿಯು ಕಿವಿಗೊಡುವದರಲ್ಲಿ ತೀವ್ರವಾಗಿಯೂ ಮಾತಾಡುವದರಲ್ಲಿ ನಿಧಾನವಾಗಿಯೂ ಇರುತ್ತಾನೆ (ಯಾಕೋಬ 1:19). ಆತನು ಯಾವಾಗಲೂ ಸಮಾಧಾನಕ್ಕೆ ಕಾರಣವಾಗುವದನ್ನು ಮಾಡುವದಕ್ಕೆ ಪ್ರಯತ್ನಿಸುತ್ತಾನೆ (ರೋಮ 14:19). ಜ್ಞಾನವಂತ ವ್ಯಕ್ತಿಯು ವಿವೇಚನೆಯುಳ್ಳವನು (ವಿನಯವುಳ್ಳವನು). ಆತನು ಇತರರ ಬಗ್ಗೆ ಚಿಂತಿಸುತ್ತಾನೆ. ಆತನು ನೋವುಂಟುಮಾಡುವ ಮಾತುಗಳನ್ನಾಡುವದಿಲ್ಲ. ಅಜ್ಞಾನಿಗಳು ಕಠೋರವಾದ ವಿಧದಲ್ಲಿ ವಾಗ್ದಾನ ಮಾಡುತ್ತಾರೆ ಅವರು ಕೇವಲ ತರ್ಕವನ್ನು ಗೆಲ್ಲುವದರಲ್ಲಿ ಮಾತ್ರವೇ ಆಸಕ್ತರಾಗಿರುತ್ತಾರೆ. ಅಂಥ ಜನರು ತರ್ಕವನ್ನು ಗೆಲ್ಲಬಹುದು ಆದರೆ ಅವರು ತಮ್ಮ ಸ್ನೇಹಿತರನ್ನು ಕಳೆದುಕೊಳ್ಳುತ್ತಾರೆ. ಜ್ಞಾನಿಯಾದವನು ಈ ವಿಧದಲ್ಲಿ ವರ್ತಿಸುವದಿಲ್ಲ

ಜ್ಞಾನಿಯಾದ ವ್ಯಕ್ತಿಯು ಸಂತೋಷವಾಗಿ ಒಪ್ಪಿಕೊಳ್ಳುವಂತವನು; ಆತನು ಇತರರಿಗೆ ಅಧೀನನಾಗುಳಿಯಲು ಮನಸ್ಸುಳ್ಳವನಾಗಿರುತ್ತಾನೆ (ಎಫೆಸ 5:21). ಜ್ಞಾನವಂತನು ಇತರ ಜನರನ್ನು ಹತೋಟಿಯಲ್ಲಿಟ್ಟುಕೊಳ್ಳಲು ಪ್ರಯತ್ನಿಸುವದಿಲ್ಲ; ಬದಲಾಗಿ, ಆತನು ಅವರ ವಿಚಾರಗಳನ್ನು ಹಾಗೂ ಅಭಿಲಾಷೆಗಳನ್ನು ಗೌರವಿಸುತ್ತಾನೆ.

ಜ್ಞಾನವಂತನು ಕರುಣೆಯಿಂದ ತುಂಬಿರುವಂಥವನು. ಆತನು ಇತರರಿಗೆ ತೀರ್ಪುಮಾಡುವದಿಲ್ಲ. ಆತನು ಯಾವಾಗಲೂ ಇತರರನ್ನು ಕ್ಷಮಿಸಲು ಸಿದ್ಧನಾಗಿರುತ್ತಾನೆ. ಆತನು ಎಂದಿಗೂ ಸೇಡನ್ನು ತೀರಿಸಿಕೊಳ್ಳಲು ಪ್ರಯತ್ನಿಸುವದಿಲ್ಲ.

ಅಲ್ಲದೆ ಜ್ಞಾನವಂತನು ಒಳ್ಳೇ ಫಲಗಳಿಂದ –ಅಂದರೆ, ಪವಿತ್ರಾತ್ಮನ ಫಲಗಳಿಂದ– ಸಹ ತುಂಬಿರುವಂಥವನು (ಗಲಾತ್ಯ 5:22-23). ಆತನು ಭೇದ ಭಾವ(ಚಂಚಲ) ಇಲ್ಲದವನು; ಆತನು ಪಕ್ಷಗಳನ್ನು ವಹಿಸಿಕೊಳ್ಳುವದಿಲ್ಲ ಅಥವಾ ಪಕ್ಷಪಾತ ತೋರಿಸುವದಿಲ್ಲ.

ಮತ್ತು ಅಂತಿಮವಾಗಿ ಜ್ಞಾನವಂತನು ಕಪಟವಿಲ್ಲದವನು ಆತನು ವಿಶ್ವಾಸಕ್ಕೆ ಯೋಗ್ಯನು. ಆತನು ತನ್ನ ಲಾಭಕ್ಕಾಗಿ ಯಾರನ್ನಾದರೂ ವಂಚಿಸುವದಕ್ಕೆ ಪ್ರಯತ್ನಿಸುವದಿಲ್ಲ. ಆತನು ಯಾವಾಗಲೂ ಪ್ರೀತಿಯಿಂದ ಸತ್ಯವನ್ನು ಮಾತಾಡುತ್ತಾನೆ (ಎಫೆಸ 4:15).

ನಮ್ಮ ಜ್ಞಾನ ಹಾಗೂ ಮಾತು ಕಪಟವಿಲ್ಲದ್ದೋ? ಅದು ಒಂದು ಆಳವಾದ ಪ್ರಶ್ನೆ. ಕೆಲವು ವೇಳೆಗಳಲ್ಲಿ ನಾವು ಒಬ್ಬರೊಂದಿಗೊಬ್ಬರು ಮಾತಾಡುವಾಗ ನಮ್ಮ ಸಂಭಾಷಣೆ ಸಂಪೂರ್ಣ ಪ್ರಾಮಾಣಿಕ ಹಾಗೂ ಮುಕ್ತವಾಗಿರುವದಿಲ್ಲ. ನಾವು ವಿಷಯಗಳನ್ನು ಬಚ್ಚಿಟ್ಟುಕೊಳ್ಳುತ್ತೇವೆ. ನಮ್ಮ ಸಂಭಾಷಣೆಯು ಮೋಸಕರ, ಕುತಂತ್ರ, ಕಪಟವುಳ್ಳದ್ದಾಗಿರುತ್ತದೆ. ನಮ್ಮ ಮಾತುಗಳು ರಸವತ್ತಾಗಿರುತ್ತವೆ, ಆದರೆ ನಮ್ಮ ಆಲೋಚನೆಗಳು ರಸವತ್ತಾಗಿರುವದಿಲ್ಲ! ನಾವು ನೇರವಾದ ಸುಳ್ಳನ್ನಾಡುವದಿಲ್ಲ, ಅದು ಪಾಪವೆಂದು ನಮ್ಮೆಲ್ಲರಿಗೂ ತಿಳಿದದೆಯಷ್ಟೆ. ಆದರೆ ನಾವು ಅನೇಕ ವೇಳೆ ಸತ್ಯದ ಅರ್ಧಭಾಗವನ್ನು ಹೇಳದೆ ಸುಳ್ಳುಭಾವನೆಯನ್ನು ಸೃಷ್ಟಿಸುತ್ತೇವೆ– ಮತ್ತು ಅದು ಸಹ ಒಂದು ಪಾಪವೇ[10]. ಹೇಗಿದ್ದರೂ, ಜ್ಞಾನವಂತನು ಯಾವಾಗಲೂ ಕಪಟವಿಲ್ಲದವನು ಆಗಿರುತ್ತಾನೆ; ಆತನು ಯಾವಾಗಲೂ ಸಂಪೂರ್ಣ ಪ್ರಮಾಣಿಕತೆ ಹಾಗೂ ನಿಷ್ಕಪಟವಾಗಿ ಮಾತಾಡುತ್ತಾನೆ.

18 ಈ ವಚನಗಳಲ್ಲಿ ಪ್ರಸ್ತಾಪಿಸಿರುವ ಸಮಾಧಾನ ಪಡಿಸುವವರು ಜ್ಞಾನವಂತರಾಗದ ಜನರಾಗಿದ್ದಾರೆ. ಅವರು ದೇವರ ಜ್ಞಾನವು ಳ್ಳವರು ಅವರು ನೀತಿಯೆಂಬ ಬೀಜಗಳನ್ನು ಬಿತ್ತಿ ನೀತಿಯೆಂ ಬ ಫಲವನ್ನು ಕೊಯ್ಯುವರು (ಗಲಾತ್ಯ 6:7 ನೋಡಿರಿ). ಸಮಾಧಾನ ಪಡಿಸುವವರು ತಮ್ಮ ನಾಲಿಗೆಯನ್ನು ಸ್ವಾಧೀನಮಾಡಿಕೊಳ್ಳುವದನ್ನು ಕಲಿತವರಾಗಿದ್ದಾರೆ.

---

# ಅಧ್ಯಾಯ - 4

## ದೇವರಿಗೆ ಅಧೀನತೆ (4:1-10)

1 ಸಭೆಯಲ್ಲಿ ಕಲಹಗಳೂ ಕಾದಾಟಗಳೂ ಉಂಟಾಗಲು ಕಾರಣವೇನು? ಅವು ಗಳು ನಮ್ಮ ಭೋಗಾಶಗಳಿಂದ ಉಂಟಾಗುತ್ತವೆ. ಯಾವ ರೀತಿಯ ಭೋಗಾಶೆಗಳು? ಕೆಟ್ಟ ಹಾಗೂ ಸ್ವಾರ್ಥ ಆಶೆಗಳು ಪ್ರತಿಯೊಬ್ಬನು ಕೆಟ್ಟ ಆಶೆಗಳನ್ನು ಗುರುತಿಸಬಹುದು ಇವು ಗಳು ಪಾಪವನ್ನು ಮಾಡಬೇಕೆಂಬ ಆಶೆಗಳಾಗಿವೆ. ಆದರೆ ಯಾಕೋಬನು ಇಲ್ಲಿ ಕೆಟ್ಟ ಆಶೆಗಳ ಬಗ್ಗೆ ಮಾತ್ರ ಮಾತಾಡುತ್ತಿಲ್ಲ. ಆತನು ಸ್ವಾರ್ಥ ಅಭಿಲಾಷೆಗಳ ಕುರಿತಾಗಿಯೂ ಮಾತಾಡುತ್ತಿದ್ದಾನೆ. ಸ್ವಾರ್ಥ ಅಭಿಲಾಷೆಗಳು ಒಳ್ಳೇ ಸಂಗತಿಗಳಿಗಾಗಿನ ಅಭಿಲಾಷೆಗಳಾಗಿವೆ. ಆದರೆ ಅವು ಗಳು ಸ್ವಾರ್ಥ ಕಾರಣಗಳಿಗಾಗಿ ಆಶಿಸಲ್ಪಡುವವು ಗಳಾಗಿವೆ. ಉದಾಹರಣೆಗೆ, ವಿಧ್ಯಾಭ್ಯಾಸ, ವಿದ್ಯಾರ್ಥಿವೇತನ, ಅಥವಾ ಒಂದು ಉದ್ಯೋಗಗಳಂತಹ ಒಳ್ಳೇ ಸಂಗತಿಗಳನ್ನು ಆಶಿಸಬಹುದು; ಆದರೆ ಈ ಸಂಗತಿಗಳನ್ನು ಪೂರ್ಣವಾಗಿ ಸ್ವಾರ್ಥಕಾರಣಗಳಿಗಾಗಿ ಅಭಿಲಾಷಿಸುವ ಸಾಧ್ಯತೆಯಿರುತ್ತದೆ.

ಈ ಒಳ್ಳೇ ಸಂಗತಿಗಳಿಗಾಗಿನ ನಮ್ಮ ಅಭಿಲಾಷೆಯು ಅನೇಕ ವೇಳೆ ನಮ್ಮೊಳಗೆ ಕಲಹ ಹಾಗೂ ಹೊಟ್ಟೆಕಿಚ್ಚನ್ನು ಯಾಕೆ ಉಂಟುಮಾಡುತ್ತದೆ? ಯಾಕೆಂದರೆ, ನಾವು ಈ ಸಂಗತಿಗಳನ್ನು ಸ್ವಾರ್ಥ ಕಾರಣಗಳಿಗಾಗಿ ಅಭಿಲಾಷಿಸುತ್ತೇವೆ. ಹೊರತು ದೇವರಿಗೆ ಅಥವಾ ಇತರರಿಗೆ ಪ್ರಯೋಜನವಾಗಬೇಕೆಂದಲ್ಲ. ನಾವು ಕೇವಲ ನಮ್ಮ ಹಿತದಲ್ಲಿಯೇ ಆಸಕ್ತರಾಗಿರುತ್ತೇವೆ. ನಮ್ಮ ಸ್ವಪ್ರಯೋಜನವನ್ನೇ ನೋಡಿಕೊಳ್ಳುತ್ತೇವೆ. ಇದು ಸ್ವಾರ್ಥವಾಗಿದೆ. ಮತ್ತು ಸ್ವಾರ್ಥ ಅಭಿಲಾಷೆಗಳೆಲ್ಲವೂ ಪಾಪವಾಗಿದೆ. ಅವು ಗಳು ಒಳ್ಳೇ ಸಂಗತಿಗಾಗಿದ್ದರೂ ಸರಿಯೇ, ಕೆಟ್ಟ ಸಂಗತಿಗಾಗಿದ್ದರೂ ಸರಿಯೇ. ಮತ್ತು ಈ ಸ್ವಾರ್ಥ ಅಭಿಲಾಷೆಗಳು ಕ್ರೈಸ್ತರೊಳಗಿನ ಕಲಹಗಳಿಗೂ ಕಾದಾಟಗಳಿಗೂ ಮುಖ್ಯ ಕಾರಣ ವಾಗಿರುತ್ತವೆ. (1 ಪೇತ್ರ 2:11).

ತಮ್ಮೊಳಗೆ ಕಲಹಗಳನ್ನು ಕಾದಾಟಗಳನ್ನು ಮಾಡುವ ಕೆಲವು ಕ್ರೈಸ್ತರು ತಾವು ಅದನ್ನು ದೇವರಿಗೋಸ್ಕರ ಮಾಡುತ್ತಿದ್ದೇವೆಂದೂ ಹೇಳುತ್ತಾರೆ. ನಾವು ಮಾನವ ಇತಿಹಾಸವನ್ನು ನೋಡುವಾಗ ಅನೇಕ ದುಷ್ಕೃತ್ಯಗಳು ದೇವರ ಹೆಸರಿನಲ್ಲಿ ಮಾಡಲ್ಪಟ್ಟಿರುವದನ್ನು ಕಾಣುತ್ತೇವೆ. ಯೇಸು ತನ್ನ ಶಿಷ್ಯರಿಗೆ ಎಚ್ಚರಿಸಿ ಹೇಳಿದ್ದೇನೆಂದರೆ ಜನರು ಅವರನ್ನು ಹಿಂಸಿಸಿಕೊಂದು ತಾವು ದೇವರಿಗೆ ಸೇವೆ ಮಾಡುತ್ತಿದ್ದೇವೆ ಎಂದು ಭಾವಿಸಿಕೊಳ್ಳುವರು ಎಂಬುದೇ (ಯೋಹಾನ 16:2). ನಮ್ಮನ್ನು ನಾವು ಮೋಸಪಡಿಸಿಕೊಳ್ಳದಿರೋಣ. ನಾವು ಹೋರಾಡಬೇಕಾಗಿರುವದು ಸೈತಾನನ ವಿರುದ್ಧವೇ ಹೊರತು ಇತರ ವಿಶ್ವಾಸಿಗಳೊಂದಿಗಲ್ಲ, ಕ್ರೈಸ್ತರೊಳಗಿನ ಅಂಥ ಕಲಹಗಳೂ ಕಾದಾಟಗಳೂ ದೇವರಿಗೆ ಎಂದಿಗೂ ಮೆಚ್ಚಿಕೆಯಾಗಿಲಾರವು. ಅಂಥ ನಡವಳಿಕೆಯು ದೇವರ ನಿಮಿತ್ತವಾಗಿ ಅಲ್ಲ; ಅದು ಒಬ್ಬನು ತನ್ನ ನಿಮಿತ್ತವಾಗಿ ಮಾಡುವದಾಗಿದೆ.

2 ಈ ಜೀವಿತದಲ್ಲಿ ಯಾವ ಮನುಷ್ಯನೂ ಬಯಸಿದ್ದೆಲ್ಲವು ಗಳನ್ನು ಹೊಂದಲಾರನು. ಆದದರಿಂದ, ಜನರು ಯಾವಾಗಲೂ ಹೆಚ್ಚು ಹೆಚ್ಚು ಹೊಂದಿಕೊಳ್ಳ ಬೇಕೆಂದು ದುರಾಶೆಯುಳ್ಳವರಾಗಿರುತ್ತಾರೆ. ನಾವು ಯಾವದಾದರೂ ಉಡುಗೊರೆಯನ್ನು ಪಡೆದ ತಕ್ಷಣ ಅಥವಾ ಯಾವದಾದರೂ ಅಭಿಲಾಷೆಯು ನೆರವೇರಿದ ಕೂಡಲೇ ನಾವು ಪು ನಃ ಬೇರೆ ಇನ್ನೊಂದನ್ನು ಅಶಿಸಲು ಪ್ರಾರಂಭಿಸುತ್ತೇವೆ.

ನಾವು ಯಾವಾಗಲೂ ಆಶಿಸುತ್ತಲೇ ಇರುವದರ ಬದಲಾಗಿ ನಮಗೆ ಅಗತ್ಯ ವಾಗಿರುವ ಸಂಗತಿಗಳಿಗಾಗಿ ನಾವು ದೇವರನ್ನು ಬೇಡಿಕೊಳ್ಳಬೇಕು. ನಮಗೆ ಅಗತ್ಯವಾಗಿರುವದೆಲ್ಲವನ್ನೂ ಆತನು ಬಲ್ಲವನಾಗಿರುತ್ತಾನೆ. ನಮ್ಮ ಹಿತಕ್ಕಾಗಿ ಅವಶ್ಯಕ ವಾದದ್ದನ್ನು ದೇವರು ನಮಗೆ ಕೊಡುವನು. ನಾವು ಯಾವದಾದರು ಒಳ್ಳೇ ಸಂಗತಿಗಾಗಿ ಅಭಿಲಾಷಿಸುತ್ತಿರುವದಾದರೆ ಅದನ್ನು ನಮ್ಮಷ್ಟಕ್ಕೆ ನಾವೇ ಸಂಪಾದಿಸಿಕೊಳ್ಳುವದಕ್ಕಾಗಿ ಪ್ರಯಾಸ ಹೋರಾಟವನ್ನು ಮಾಡದಿರೋಣ, ಆದರೆ ನಂಬಿಕೆಯಿಂದ ಅದಕ್ಕಾಗಿ ದೇವರನ್ನು ಕೇಳಿಕೊಳ್ಳೋಣ.

3 ಆದರೆ ಕೆಲವು ಜನರು, "ನಾನು ದೇವರನ್ನು ಬೇಡಿಕೊಂಡಿದ್ದೇನೆ, ಆದರೆ ನಾನು ಬೇಡಿಕೊಂಡದ್ದನ್ನು ಹೊಂದಲಿಲ್ಲ" ಎಂದು ಹೇಳುತ್ತಾರೆ. ಅವರು ಯಾಕೆ ಹೊಂದಿಕೊಳ್ಳಲಿಲ್ಲ? ಯಾಕೆಂದರೆ, ಅವರು ದುರದ್ದೇಶಗಳಿಂದ ಬೇಡಿಕೊಂಡಿದ್ದಾರೆ. ಅಂದರೆ, ಅವರು ಸ್ವಾರ್ಥ ಕಾರಣಗಳಿಗಾಗಿ ಬೇಡಿಕೊಂಡಿದ್ದಾರೆ. ಅವರು ತಮ್ಮ ಭೋಗ ಹಾಗೂ ಕೆಲಸದಲ್ಲಿ ಸಹಾಯ ಹಾಗೂ ಯಶಸ್ಸ ನ್ನು ನೀಡಬೇಕೆಂದು ದೇವರನ್ನು ಬೇಡಿಕೊಂಡಿದ್ದಾರೆ– ದೇವರಿಗಾಗಿ ಅಥವಾ ಇತರರಿಗಾಗಿ ಅಲ್ಲ– ಆದರೆ ತಮ್ಮ ಸ್ವಂತಕ್ಕೋಸ್ಕರ; ತಮ್ಮ ಸ್ವಪ್ರಯೋಜನಕ್ಕೋಸ್ಕರವಾಗಿಯೇ.

ನಾವು ದೇವರಿಂದ ಏನಾನ್ನಾದರೂ ಕೇಳಿಕೊಳ್ಳುವಾಗ, ಯಾವಾಗಲೂ ನಾವು ಯೇಸು ವಿನಂತೆಯೇ ಹೇಳಬೇಕು; "ಆದರೂ ನನ್ನ ಚಿತ್ತವಲ್ಲ ನಿನ್ನ ಚಿತ್ತದಂತೆಯೇ ಆಗಲಿ" (ಮಾರ್ಕ 14:36). ನಾವು ನಮ್ಮನ್ನು ಪರೀಕ್ಷಿಸಿಕೊಳ್ಳಬೇಕು; ನಾವು ನಮ್ಮನ್ನು ಕೇಳಿಕೊಳ್ಳಬೇಕೆನೆಂದರೆ: " ನಾನು ಯಾರ ನಿಮಿತ್ತವಾಗಿ ದೇವರ ಮುಂದೆ ಈ ಬೇಡಿಕೆಯನ್ನು ಮಾಡುತ್ತಿದ್ದೇನೆ?

ನನ್ನ ನಿಮಿತ್ತವಾಗಿಯೋ ಅಥವಾ ಆತನ ನಿಮಿತ್ತವಾಗಿಯೋ?" ದೇವರು ನಮಗೆ ಏನೇ ನೀಡಿದರೂ ನಾವು ಆತನ ಸೇವೆಯಲ್ಲಿಯೂ ಇತರರ ಸೇವೆಯಲ್ಲಿಯೂ ಉಪಯೋಗಿಸುತ್ತೇವೆಂದು ಹೇಳಬೇಕು. ಇದು ಕಷ್ಟಕರವಾದ ಬೋಧ ನೆಯಾಗಿದೆ. ಆದರೆ ಇದು ಸ್ವತಃ ಯೇಸು ನಮಗಾಗಿ ತೋರಿದ ಉದಾಹರಣೆಯಾಗಿದೆ. ದೇವರಿಂದ ಏನನ್ನಾದರೂ ಹೊಂದಿಕೊಳ್ಳಲು ಬಯಸುವದಾದರೆ ನಾವು ಸ್ವಾರ್ಥರಹಿತವಾಗಿ ಬೇಡಿಕೊಳ್ಳಬೇಕು. ನಾವು ದೇವರನ್ನು ಎಂದಿಗೂ ಮೋಸಪಡಿಸಲಾರೆವೆಂಬದನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಆತನು ನಮ್ಮ ಹೃದಯಗಳನ್ನು ತಿಳಿದಿದ್ದಾನೆ. ನಾವು ಸ್ವಾರ್ಥದಿಂದ ಕೇಳುತ್ತಿದ್ದೇವೋ ಅಥವಾ ಸ್ವಾರ್ಥರಹಿತವಾಗಿ ಕೇಳುತ್ತಿದ್ದೇವೋ ಎಂದು ಆತನು ಬಲ್ಲವನಾಗಿದ್ದಾನೆ.

4 ವ್ಯಭಿಚಾರಿಗಳು ನೀವು . ಯಾಕೋಬನು ಇಲ್ಲಿ ವಿಶ್ವಾಸಿಗಳನ್ನು ಸಂಬೋಧಿಸಿಮಾತಾಡುತ್ತಿದ್ದಾನೆ. ಆತನು ಯಾಕೆ ಅವರನ್ನು ವ್ಯಭಿಚಾರಿಗಳು ಎಂದು ಕರೆದನು? ಯಾಕೆಂದರೆ, ಅವರು ತಮ್ಮ ಮದಲಿಂಗನಾದ ಕ್ರಿಸ್ತನನ್ನು ತೊರೆದು ಇಹಲೋಕದೊಂದಿಗೆ ಹೋಗಿರುತ್ತಾರೆ. ಅವರು ಕ್ರಿಸ್ತನಿಗಿಂತಲೂ ಹೆಚ್ಚಾಗಿ ಇಹಲೋಕದ ಬೋಗಗಳನ್ನು ಪ್ರೀತಿಸಿದ್ದಾರೆ (2 ಕೊರಿಂಥ 11:2-3, ಎಫೆಸ 5:23 ನೋಡಿರಿ). ಏಕಕಾಲದಲ್ಲಿ ದೇವರನ್ನೂ ಲೋಕವನ್ನೂ ಪ್ರೀತಿಸುವದು ಅಸಾಧ್ಯ (ಮತ್ತಾಯ 6:24; 1 ಯೋಹಾನ 2:15).

5 ದೇವರು ನಮ್ಮಲ್ಲಿ ಇರಿಸಿರುವ ಪವಿತ್ರಾತ್ಮನು ಅಭಿಮಾನ ತಾಪದಿಂದ ನಮಗೋಸ್ಕರ ಹಂಬಲಿಸುತ್ತಾನೆ'' ದೇವರು (ಅಥವಾ ಕ್ರಿಸ್ತನು). ಒಬ್ಬ ನಂಬಿಗಸ್ಥ ಹಾಗೂ ಹಂಬಲಿಸುವ ಗಂಡನಂತಿರುತ್ತಾನೆ ಮತ್ತು ವಿಶ್ವಾಸಿಗಳಾದ ನಾವು ಆತನ ಮದಲಗಿತ್ತಿಯ ಹಾಗಿದ್ದೇವೆ. ಆದರೆ ಹಲವಾರು ವೇಳೆ ನಾವು ಅಪನಂಬಿಗಸ್ಥರಾಗಿರುತ್ತೇವೆ. ನಾವು ನಮ್ಮ ನಿಜವಾದ ಗಂಡನನ್ನು ತೊರೆದು ಇತರ "ದೇವರುಗಳನ್ನು"– ಉದಾಹರಣೆಗೆ, ಸ್ವಾರ್ಥ, ಅಭಿಲಾಷೆ ಹಾಗೂ ಹಣವನ್ನು ಹಿಂಬಾಲಿಸಿದ್ದೇವೆ. ಮತ್ತು ಹಾಗೆಯೇ ದೇವರು ತನ್ನ ಗೌರವವನ್ನು ಇತರರಿಗೆ ಸಲ್ಲಗೊಡವನಾಗಿದ್ದಾನೆ (ವಿಮೋಚ ನಕಾಂಡ 20:4-5).

6 ನಾವು ದೇವರಿಂದ ದೂರವಾಗಿ ಮಾರ್ಗತಪ್ಪಿ ಹೋಗುವಾಗಲೂ ಆತನು ಎಡೆಬಿಡದೆ ತನ್ನ ಕೃಪೆ ಹಾಗೂ ಕರುಣೆಯಿಂದ ನಮ್ಮನ್ನು ಕರೆಯುತ್ತಿರುತ್ತಾನೆ. ನಮ್ಮ ಪಾಪವು ಎಷ್ಟೇ ದೊಡ್ಡದಾಗಿದ್ದರೂ ಸರಿಯೇ ಆತನ ಕೃಪೆಯು ಅದಕ್ಕಿಂತಲೂ ದೊಡ್ಡದಾಗಿರುತ್ತದೆ. ನಾವು ಆತನ ಬಳಿಗೆ ಹಿಂದಿರುಗಿ ಪುನಃ ಆತನನ್ನು ಪ್ರೀತಿಸಲಾರಂಭಿಸಬೇಕೆಂದು ಆತನು ನಮಗೆ ಅತಿಶಯವಾದ ಕೃಪೆಯನ್ನು ಹೆಚ್ಚಾಗಿ ನೀಡುತ್ತಾನೆ.

ಆದರೆ ದೇವರು ಎಲ್ಲರಿಗೂ ಕೃಪೆಯನ್ನು ನೀಡುವದಿಲ್ಲ ದೀನರಿಗೆ ಮಾತ್ರವೇ ನೀಡುತ್ತಾನೆ. ಯಾಕೋಬನು ಇಲ್ಲಿ ಜ್ಞಾನೋಕ್ತಿಗಳು ೩:೩೪ರಿಂದ ಉಲ್ಲೇಖಿಸುತ್ತಾನೆ (1 ಪೇತ್ರ 5:5 ನೋಡಿರಿ). ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ. ಅಹಂಕಾರಿಗಳು ಎಚ್ಚರಿಕೆಯಿಂದಿರಲಿ. ಸರ್ವಶಕ್ತನಾದ ದೇವರಿಗೆ ವೈರಿಯಾಗಿರುವದು ಒಂದು ಭಯಾನಕ ಸಂಗತಿಯಾಗಿದೆ.

7 ನಾವು ಲೋಕದಿಂದಲೂ ಅದರ ಸುಖಭೋಗಗಳಿಂದಲೂ ವಿಮುಖರಾಗಿ ದೇವರಿಗೆ ಅಧೀನರಾಗಬೇಕು. ಅದರ ಜೊತೆಯಲ್ಲಿ ನಾವು ಸೈತಾನನ್ನು ಎದುರಿಸಬೇಕು. ಸೈತಾನನು ಇಹಲೋಕದ ಸುಖಭೋಗಗಳು ಹಾಗೂ ಆಕರ್ಷಣೆಗಳ ಮೂಲಕ ನಮ್ಮನ್ನು ದೇವರಿಂದ ದೂರ ಎಳೆದುಕೊಳ್ಳಲು ಯಾವಾಗಲೂ ಪ್ರಯತ್ನಿಸುತ್ತಿದ್ದಾನೆ. ಆದದರಿಂದ, ನಾವು ಆತನನ್ನು ಎದುರಿಸಬೇಕು; ಆತನು ನಮ್ಮ ಮೇಲೆ ಬರಮಾಡುವಂಥ ಶೋಧನೆಗಳನ್ನು ಎದುರಿಸಬೇಕು (1 ಪೇತ್ರ 5:8-9). ಅನೇಕರು ಕೇಳುವದೇನೆಂದರೆಃ "ನಾನು ಹೇಗೆ ಸೈತಾನನನ್ನು ಎದುರಿಸಬಲ್ಲೆ? ನಾನು ಆತನನ್ನು ಹೇಗೆ ಜಯಿಸಬಲ್ಲೆನು? ಶೋಧನೆಯು ಬಂದಾಗ ನಾನು ಅದನ್ನು ಎದುರಿಸಲು ಎಷ್ಟೇ ಪ್ರಯತ್ನಿಸಿದರೂ ಶೀಘ್ರವೇ ಅದರೊಳಗೆ ಬೀಳುತ್ತೇನೆ" (ರೋಮ 7:15, 18-19 ನೋಡಿರಿ).

ನಾವು ಸೈತಾನನನ್ನು ಹೇಗೆ ಎದುರಿಸುತ್ತೇವೆ? ನಾವು ಆತನನ್ನು ಕ್ರಿಸ್ತನ ಬಲದಿಂದ ಎದುರಿಸುತ್ತೇವೆ. ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದ ಮೊದಲನೆಯ ಹೆಜ್ಜೆಯೇನೆಂದರೆ ನಾವು ಸೈತಾನನ ಬಯಕೆಗಳನ್ನು ಅನುಸರಿಸುವಾಗಲೆಲ್ಲಾ ನಮ್ಮ ಕರ್ತನಾದ ಯೇಸುವಿಗೆ ದ್ರೋಹ ಮಾಡುವವರಾಗಿರುತ್ತೇವೆ. ಎರಡನೆಯ ಹೆಜ್ಜೆಯೇನೆಂದರೆ ಕ್ರಿಸ್ತನ ಬಲದಲ್ಲಿ ನಿಂತುಕೊಳ್ಳುವದು (ಎಫೆಸ 6:10-11, 13). ಕ್ರಿಸ್ತನ ಬಲವು ಯಾವಾಗಲೂ ದೊರೆಯುವದಾಗಿದೆ. ಆದರೆ ನಾವು ಆತನ ಬಲವನ್ನು ಆತನ ಸರ್ವಾಯುಧವನ್ನು ಧರಿಸಿಕೊಳ್ಳಬೇಕು ಕ್ರಿಸ್ತನ ಬಲವು ವಿದ್ಯುತ್ತಿನಂತಿದೆ. ವಿದ್ಯುತ್ ಯಾವಾಗಲೂ ದೊರೆಯುದಾಗಿದೆ ಆದರೆ ನಾವು ಅದರ ಸ್ವಿಚ್ಚನ್ನು ಚಾಲನೆ ಮಾಡಬೇಕು. ಆದದರಿಂದ ಸೈತಾನನು ನಮ್ಮನ್ನು ಶೋಧಿಸುವಾಗ ನಾವು ಹೇಳಬೇಕಾದದ್ದು ಇಷ್ಟೇ ಸೈತಾನನೇ ನನ್ನಿಂದ ತೊಲಗಿಹೋಗು (ಮತ್ತಾಯ 4:10).

8 ದೇವರು ನಮ್ಮ ಸಮೀಪಕ್ಕೆ ಬರಬೇಕೆಂದು ಇಚ್ಛಿಸುತ್ತೇವೋ? ಅದು ನಿಜವಾಗಿದ್ದರೆ ನಾವು ಆತನ ಸಮೀಪಕ್ಕೆ ಬರಬೇಕು. ದೇವರು ನಮ್ಮಿಂದ ದೂರವಾಗಿರುವಂತೆ ತೋರುವದಾದರೆ ಅದಕ್ಕೆ ಯಾವಾಗಲೂ ಮೊದಲು ನಾವು ಆತನಿಂದ ದೂರಹೋಗಿರುವದೇ ಕಾರಣವಾಗಿರುತ್ತದೆ. ನಾವು ಏಕೆ ದೇವರಿಂದ ದೂರಹೋಗುತ್ತೇವೆ ? ಅದಕ್ಕೆ ಯಾವಾಗಲೂ ನಾವು ಬಿಟ್ಟು ಬಿಡಲು ಮನಸ್ಸು ಮಾಡದ ಕೆಲವು ಪಾಪಗಳು ನಮ್ಮ ಜೀವಿತಗಳಲ್ಲಿ ಇರುವದೇ ಕಾರಣವಾಗಿರುತ್ತದೆ.

ನಾವು ಹೇಗೆ ಪುನಃ ದೇವರ ಸಮೀಪಕ್ಕೆ ಬರಬಲ್ಲೆವು ? ಯಾಕೋಬನು ಉತ್ತರವನ್ನು ನೀಡುತ್ತಾನೆಃ ಪಾಪಿಗಳೇ ನಿಮ್ಮ ಕೈಗಳನ್ನು ಶುಚಿಮಾಡಿ ಕೊಳ್ಳಿರಿ. ಅಂದರೆ, ನಾವು ಎಲ್ಲಾ ಪಾಪಮಯ ಕಾರ್ಯಗಳು ಹಾಗೂ ನಡವಳಿಕೆಯಿಂದ ನಮ್ಮನ್ನು ಶುದ್ಧಮಾಡಿಕೊಳ್ಳಬೇಕು. ಅದು ಮಾತ್ರವಲ್ಲದೆ, ಯಾಕೋಬನು ಇನ್ನೂ ಹೇಳುವದೇನೆಂದರೆ ...... ಎರಡು ಮನಸ್ಸುಳ್ಳವರೇ, ನಿಮ್ಮ ಹೃದಯಗಳನ್ನು ನಿರ್ಮಲ ಮಾಡಿಕೊಳ್ಳಿರಿ. ನಾವು ನಮ್ಮ ಹೊರಗಿನ ಪಾಪಗಳಿಂದ ಮಾತ್ರವಲ್ಲದೆ ನಮ್ಮ ಹೃದಯಗಳಲ್ಲಿ ಅಡಗಿರುವ ಅಂತರ್ಯದ ಪಾಪಿಗಳಿಂದಲೂ ನಮ್ಮನ್ನು ಶುಚಿಮಾಡಿಕೊಳ್ಳಬೇಕು.

ದೇವರು ನಮ್ಮ ಒಳಗಿನ ಹೃದಯ ಹಾಗೂ ಮನಸ್ಸನ್ನು ದೃಷ್ಟಿಸುತ್ತಾನೆ (1 ಪೂ.ಕಾಲ ವೃತ್ತಾಂತ 28:9). ನಾವು ಎರಡು ಮನಸ್ಸುಳ್ಳವರೋ ಅಥವಾ ಅಲ್ಲವೋ ಎಂಬದನ್ನು ಆತನು ಬಲ್ಲವನಾಗಿದ್ದಾನೆ. ಎರಡು ಮನಸುಳ್ಳ ವ್ಯಕ್ತಿಯು ಏಕಕಾಲದಲ್ಲಿ ಲೋಕವನ್ನೂ ದೇವರನ್ನೂ ಪ್ರೀತಿಸಲು ಪ್ರಯತ್ನಿಸುತ್ತಾನೆ. ಆದದರಿಂದ, ಅಂಥ ಮನುಷ್ಯನು ದೇವರ ಮೇಲೆ ಹೊಂದಿರುವ ಪ್ರೀತಿಯು ಅಶುದ್ಧವಾದದ್ದು; ಆತನ ಹೃದಯವು ಹೊಲೆಯಾಗಿರುತ್ತದೆ. ಅಂಥ ವ್ಯಕ್ತಿಯು ದೇವರಿಂದ ಸ್ವೀಕರಿಸಲ್ಪಡುವದಿಲ್ಲ; ಯಾಕೆಂದರೆ ಶುದ್ಧ ಕೈಗಳು ಹಾಗೂ ನಿರ್ಮಲ ಹೃದಯದಿಂದ ಮಾತ್ರವೇ ನಾವು ದೇವರ ಸಮೀಪಕ್ಕೆ ಬರಬಲ್ಲೆವು (ಕೀರ್ತನೆಗಳು 24:3-4, ಮತ್ತಾಯ 5:8; ಇಬ್ರಿಯ 12:14).

ನಮ್ಮ ಹೃದಯಗಳು ಹೇಗೆ ನಿರ್ಮಲಗೊಳ್ಳಬಹುದು? ನಾವು ಮಾನಸಾಂತರಪಟ್ಟು ಯೇಸುವಿನ ಬಳಿಗೆ ಬರಬೇಕು; ಅಂದರೆ, ನಾವು ನಮ್ಮ ಪಾಪಗಳನ್ನು ಒಪ್ಪಿಕೊಂಡು ಅವು ಗಳಿಂದ ವಿಮುಖರಾಗಬೇಕು. ನಾವು ನಮ್ಮನ್ನು ತಗ್ಗಿಸಿಕೊಳ್ಳಬೇಕು. ಆಗ ಆತನು ನಮಗೆ ಕೃಪೆಯನ್ನು ಅನುಗ್ರಹಿಸುವನು (ವಚನ 6). ಮತ್ತು ನಮ್ಮ ಸಮೀಪಕ್ಕೆ ಬರುವನು. ನಮ್ಮಂತಹ ಪಾಪಗಳಿಗೆ ಅಂಥ ಕರುಣೆಯನ್ನು ತೋರಿಸುವದಕ್ಕಾಗಿ ಆತನನ್ನು ಸ್ತುತಿಸಿ ಕೊಂಡಾಡೋಣ!

9 ಪೌಲನು ಹೇಳುವದೇನೆಂದರೆಃ ಸಂತೋಷಪಡಿರಿ! (ಫಿಲಿಪ್ಪಿ 4:4). ಯಾವಾಗಲೂ ಸಂತೋಷಿಸಿರಿ (1 ಥೆಸಲೋನಿಕ 5:16). ಆದರೆ ಯಾಕೋಬನು ಇಲ್ಲಿ ಹೇಳುವದೇನೆಂದರೆಃ ದುಃಖಿಸಿರಿ, ಗೋಳಾಡಿರಿ, ಕಣ್ಣೀರಿಡಿರಿ. ನಾವು ಯಾಕೆ ದುಃಖಿಸಿ, ಗೋಳಾಡಿ, ಕಣ್ಣೀರಿಡಬೇಕು? ನಮ್ಮ ಪಾಪದ ಕಾರಣದಿಂದಲೇ ಇಲ್ಲಿ ಎರಡು ಸತ್ಯಗಳಿರುತ್ತದೆ. ದೇವರು ನಮ್ಮನ್ನು ಬಹಳವಾಗಿ ಪ್ರೀತಿಸುವದರಿಂದ "ಸಂತೋಷಪಡಿರಿ" ಎಂದು ಪೌಲನು ನಮಗೆ ಹೇಳುತ್ತಾನೆ. ನಾವು ದೇವರನ್ನು ಬಹಳ ಕಡಿಮೆಯಾಗಿ ಪ್ರೀತಿಸುವದರಿಂದ "ದುಃಖಿಸಿರಿ" ಎಂದು ಯಾಕೋಬನು ನಮಗೆ ಹೇಳುತ್ತಾನೆ. ನಾವು ದೇವರ ಒಳ್ಳೇತನ ಹಾಗೂ ಕೃಪೆಯಲ್ಲಿ ಸಂತೋಷಿಸಬೇಕು. ನಾವು ನಮ್ಮ ಪಾಪ ಹಾಗೂ ಅಶುದ್ಧತೆಗೋಸ್ಕರ ದುಃಖಿಸಬೇಕು. ಯೇಸು ಹೇಳಿದ್ದೇನೆಂದರೆ, "ದುಃಖಪಡುವವರು ಧನ್ಯರು"- ಅಂದರೆ ತಮ್ಮ ಪಾಪಗಳಿಗಾಗಿ ದುಃಖಪಡುವವರು ಧನ್ಯರು (ಮತ್ತಾಯ 5:4).

10 ಆದದರಿಂದ, ನಾವು ನಮ್ಮನ್ನು ದೇವರ ಮುಂದೆ ತಗ್ಗಿಸಿಕೊಳ್ಳೋಣ........ ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟಯಜ್ಞ; ದೇವರೇ, ಪಶ್ಚಾತ್ತಾಪದಿಂದ ಜಜ್ಜಿ ಹೋದ ಹೃದಯವನ್ನು ನೀನು ತಿರಸ್ಕರಿಸುವದಿಲ್ಲ (ಕೀರ್ತನೆಗಳು 51:17). ಮತ್ತು ನಾವು ನಮ್ಮನ್ನು ತಗ್ಗಿಸಿಕೊಳ್ಳುವಾಗ ದೇವರು ನಮ್ಮ ಸಮೀಪಕ್ಕೆ ಬರುವನು. ಆತನು ನಮಗೆ ಕೃಪೆಯನ್ನು ನೀಡುವನು (ವಚನ 6). ಮತ್ತು ಅತನು ನಮ್ಮನ್ನು ಮೇಲಕ್ಕೆ ತರುವನು (ಮತ್ತಾಯ 5:3; ಲೂಕ 18:9-14; 1 ಪೇತ್ರ 5:6ನೋಡಿರಿ).

## ನಿಂದಿಸುವದರ ವಿರುದ್ಧ ಎಚ್ಚರಿಕೆ (4:11-17)

11 ಯಾಕೋಬನು ನಮ್ಮ ಕೆಟ್ಟನಾಲಿಗೆಯ ಕುರಿತು (ಯಾಕೋಬ 3:8) ಮತ್ತು ಸಹೋದರರೊಳಗಿನ ಕಲಹಗಳ ಹಾಗೂ ಕಾದಾಟಗಳ ಬಗ್ಗೆ ಮಾತಾಡುತ್ತಿದ್ದಾನೆ (ವಚನ 1). ಈಗ ಆತನು ಹೇಳುವದೇನೆಂದರೆಃ ಸಹೋದರರೇ, ಒಬ್ಬರನ್ನೊಬ್ಬರು ನಿಂದಿಸಬೇಡಿರಿ. ನಿಂದಿಸುವದು ಎಂದರೇನು? ನಮ್ಮ ಸಹೋದರರ ತಪ್ಪುಗಳನ್ನು ಹಾಗೂ ಬಲಹೀನತೆಗಳನ್ನು ಇತರರಿಗೆ ತೋರಿಸುವದೇ ನಿಂದಿಸುವದಾಗಿದೆ. ಪ್ರತಿಯೊಬ್ಬನು ತಪ್ಪುಗಳನ್ನು ಹಾಗೂ ಬಲಹೀನತೆಗಳನ್ನು ಹೊಂದಿರುವದರಿಂದ ಅನೇಕ ವೇಳೆ ನಿಂದನೆಯು ಸತ್ಯ ಅಥವಾ ಅರ್ಧಸತ್ಯ ಆಗಿರುತ್ತದೆ. ನಿಂದನೆಯು ಸುಳ್ಳಾಗಿರು ವಾಗ ಅದು ಸುಳ್ಳು ಸಾಕ್ಷಿಯಾಗುತ್ತದೆ. ಆದರೆ ನಾವು ಹೇಳುವದು ಸತ್ಯವೋ ಅಥವಾ ಸುಳ್ಳೋ ನಮ್ಮ ಸಹೋದರನ ತಪ್ಪುಗಳ ಬಗ್ಗೆ ಇನ್ನೊಬ್ಬ ನೊಂದಿಗೆ ಮಾತಾಡುವದು ನಿಂದನೆಯಾಗಿರುತ್ತದೆ ಮತ್ತು ನಿಂದಿಸುವಿಕೆಯು ದೇವರ ದೃಷ್ಟಿಯಲ್ಲಿ ಒಂದು ದೊಡ್ಡ ಪಾಪವಾಗಿರುತ್ತದೆ.

ನಮ್ಮ ಸಹೋದರರನ್ನು ನಿಂದಿಸುವದು ಹಾಗೂ ತೀರ್ಪು ಮಾಡುವದು ಎರಡೂ ಬಹಳ ಮಟ್ಟಿಗೆ ಒಂದೇ ಆಗಿವೆ. ನಮ್ಮ ಹೃದಯ ಹಾಗೂ ಮನಸ್ಸುಗಳಿಂದ ನಮ್ಮ ಸಹೋದರನಿಗೆ ತೀರ್ಪು ಮಾಡುತ್ತೇವೆ; ನಮ್ಮ ನಾಲಿಗೆ ಹಾಗೂ ತುಟಿಗಳಿಂದ ಆತನನ್ನು ನಿಂದಿಸುತ್ತೇವೆ (ಮತ್ತಾಯ 7:1 ಮತ್ತು ವ್ಯಾಖ್ಯಾನ ನೋಡಿರಿ).

ನಾವು ನಮ್ಮ ಸಹೋದರ ನ ವಿಷಯವಾಗಿ ತೀರ್ಪು ಮಾಡಿದರೆ ಧರ್ಮಶಾಸ್ತ್ರದ ವಿಷಯದಲ್ಲಿ ತೀರ್ಪು ಮಾಡಿದ ಹಾಗಾಗುವದು, ಅಂದರೆ ಕ್ರಿಸ್ತನ ಧರ್ಮಶಾಸ್ತ್ರಕ್ಕೆ ತೀರ್ಪುಮಾಡುವವರಾಗಿರುತ್ತೇವೆ. ಧರ್ಮಶಾಸ್ತ್ರಕ್ಕೆ "ತೀರ್ಪು ಮಾಡುವದು" ಎಂದರೆ, ಅದಕ್ಕೆ ಅವಿಧೇಯರಾಗವದು ಎಂಬ ಅರ್ಥವಾಗಿದೆ. ನಾವು ಹಾಗೆ ಮಾಡುವಾಗ ನಮ್ಮನ್ನು ಧರ್ಮಶಾಸ್ತ್ರಕ್ಕಿಂತ ದೊಡ್ಡವರನ್ನಾಗಿ ಮಾಡಿಕೊಳ್ಳುತ್ತೇವೆ. ನಾವು ಧರ್ಮಶಾಸ್ತ್ರದ ವಿಷಯವಾಗಿ ತೀರ್ಪುಮಾಡುವಾಗ ಧರ್ಮಶಾಸ್ತ್ರದ ಕೆಲವು ಆಜ್ಞೆಗಳು ಒಳ್ಳೆಯವು ಗಳು ಹಾಗೂ ಇತರ ಕೆಲವು ಆಜ್ಞೆಗಳು ಕೆಟ್ಟವು ಗಳು ಎಂದು ಹೇಳುವವರಾಗಿರುತ್ತೇವೆ. ತತ್ಪರಿಣಾಮವಾಗಿ ನಾವು , "ನಾನು ಈ ಆಜ್ಞೆಗೆ ವಿಧೇಯನಾಗುತ್ತೇನೆ, ಆದರೆ ಆಜ್ಞೆಗೆ ವಿಧೇಯನಾಗುವದಿಲ್ಲ" ಎಂದು ಹೇಳುವವರಾಗಿರುತ್ತೇವೆ. "ನಾನು ನನ್ನ ಸಹೋದರನ ವಿಷಯವಾಗಿ ನಿಂದನೆ ಅಥವಾ ತೀರ್ಪುಮಾಡಲಿಚ್ಚಿಸುವದಾದರೆ ಹಾಗೆಯೇ ಮಾಡುತ್ತೇನೆ.ಎಂದು ನಾವು ಹೇಳುತ್ತೇವೆ. ಈ ರೀತಿಯಾಗಿ ನಾವು ನಮ್ಮನ್ನು ಧರ್ಮಶಾಸ್ತ್ರದ ನ್ಯಾಯಾಧಿಪತಿಗಳನ್ನಾಗಿ ಮಾಡಿಕೊಳ್ಳುತ್ತೇವೆ.

12 ಆದರೆ ಧರ್ಮಶಾಸ್ತ್ರವಿಧಿಸಿದವನೂ ನ್ಯಾಯಾಧಿಪತಿಯೂ ಒಬ್ಬನೇ. ನಾವು ತೀರ್ಪುಮಾಡುವಾಗ ನಮ್ಮನ್ನು ದೇವರ ಸ್ಥಾನದಲ್ಲಿ ಇಟ್ಟುಕೊಳ್ಳುತ್ತೇವೆ, ಮತ್ತು ಅದು ಎಲ್ಲಕ್ಕಿಂತಲೂ ದೊಡ್ಡಪಾಪವಾಗಿದೆ. ದೇವರಂತೆ ಇರುವದಕ್ಕೆ ಅಪೇಕ್ಷಿಸುವದು ಗರ್ವದ ವಿಧಗಳಲ್ಲಿ ದೊಡ್ಡದಾಗಿದೆ. ಆದಾಮ ಹವ್ವಳರು ಈ ಕಾರಣಕ್ಕಾಗಿಯೇ ಏದೇನ್ ತೋಟದೊಳಗಿಂದ ಹೊರಹಾಕಲ್ಪಟ್ಟು (ಆದಿಕಾಂಡ 3:5-6). ನಾವು ಮಾಡಬೇಕಾಗಿರುವಂತೆ ದೇವರು ಮುಂದೆ ನಮ್ಮನ್ನು ತಗ್ಗಿಸಿಕೊಳ್ಳುವದರ

ಬದಲಾಗಿ (ವಚನ 10). ನಮ್ಮನ್ನು ಕರ್ತನನ್ನಾಗಿಯೂ ನ್ಯಾಯಾಧಿಪತಿಯನ್ನಾಗಿಯೂ ಮಾಡಿಕೊಳ್ಳುವವರಾಗಿದ್ದೇವೆ. ಎಂತಹ ಒಂದು ತಪ್ಪು! ಎಂಥ ಒಂದು ಪಾಪ! ಯಾಕೆಂದರೆ ಕರ್ತನೂ ನ್ಯಾಯಾಧಿಪತಿಯೂ ಒಬ್ಬನೇ. ಒಬ್ಬನು ಮಾತ್ರವೇ ಉಳಿಸುವದಕ್ಕೂ ನಾಶ ಮಾಡುವದಕ್ಕೂ ಶಕ್ತನು. ಆತನು ಸ್ವತಃ ದೇವರೇ ಆತನು ಮಾತ್ರ ವೇ ಮನುಷ್ಯರಿಗೆ ರಕ್ಷಣೆಯನ್ನು ಕೊಡಬಲ್ಲನು ಅಥವಾ ನರಕಕ್ಕೆ ಪಾತ್ರರನ್ನಾಗಿ ಮಾಡಬಲ್ಲನು. ನಾವು ನಮ್ಮನ್ನು ಎಷ್ಟೇ ಹೆಚ್ಚಿಸಿಕೊಂಡರೂ ಸರಿಯೇ ನಾವು ನಮ್ಮನ್ನು ಉಳಿಸಿಕೊಳ್ಳಲಾರೆವು (ರಕ್ಷಿಸಿಕೊಳ್ಳಲಾರೆವು). ನಾವು ನಮ್ಮ ಸಹೋದರನ ವಿಷಯವಾಗಿ ಎಷ್ಟೇ ತೀರ್ಪು ಮಾಡಿದಾಗ್ಯು ಆತನನ್ನು ನಾಶ ಮಾಡುವದಕ್ಕೆ ಅಥವಾ ದಂಡಿಸುವದಕ್ಕೆ ಸಾಧ್ಯವಿಲ್ಲ. ದೇವರು ಮಾತ್ರವೇ ರಕ್ಷಿಸುವದಕ್ಕೂ ನಾಶಮಾಡುವದಕ್ಕೂ ಶಕ್ತನು. ಆದದರಿಂದ, ನಾವು ನಮ್ಮ ಕ್ರೈಸ್ತ ಸಹೋದರನಿಗೆ ತೀರ್ಪು ಮಾಡುವದಕ್ಕೆ ಧೈರ್ಯಗೊಳ್ಳದಿರೋಣ. ಅದು ಮಾತ್ರವಲ್ಲದೆ, ನಾವು ನಮ್ಮ ಕ್ರೈಸ್ತೇತರ ನೆರೆಯವನ ವಿಷಯದಲ್ಲಿಯೂ ತೀರ್ಪು ಮಾಡುವದಕ್ಕೆ ಧೈರ್ಯಗೊಳ್ಳದಿರೋಣ.

**13-15** ಈಗ ಇನ್ನೊಂದು ವಿಷಯದ ಕಡೆಗೆ ಗಮನಹರಿಸುತ್ತಾನೆಃ ಭವಿಷ್ಯತ್ತು ನಾವು ಮುಂದಾಗಿ ಯೋಜನೆಗಳನ್ನು ಎಂದಿಗೂ ಮಾಡಲೇಬಾರದೆಂದು ಯಾಕೋಬನು ಇಲ್ಲಿ ಹೇಳುತ್ತಿರುವನೋ? ಇಲ್ಲಿ ಖಂಡಿತ ವಾಗಿಯೂ ನಾವು ಯೋಜನೆಗಳನ್ನು ಮಾಡಬೇಕು; ನಾವು ಭವಿಷ್ಯತ್ತನ್ನು ನೋಡಬೇಕು. ವ್ಯವಸಾಯಗಾರನು ಬಿತ್ತುವಾಗ ಮುಂದಾಗಿ ಪೈರನ್ನು ನಿರೀಕ್ಷಿಸಬೇಕು. ಪೌಲನು ಹಾಗೂ ಇತರ ಅಪೊಸ್ತಲರು ತಾವು ಯಾವ ಸ್ಥಳಕ್ಕೆ ಹೋಗಬೇಕು ಮತ್ತು ಅಲ್ಲಿ ಎಷ್ಟು ಕಾಲ ತಂಗಬೇಕು ಎಂಬುದನ್ನು ಮುಂದಾಗಿಯೇ ಯೋಜಿಸಿದರು. ಆದರೆ ನಾವು ಯೋಜನೆಯನ್ನು ಹಾಕುವಾಗ ಯಾವಾಗಲೂ ನಮ್ಮ ಹೃದಯಗಳೊಳಗೆ "ಇದು ದೇವರ ಚಿತ್ತವಾದರೆ ಇಂಥಿಂಥ ಕಾರ್ಯವನ್ನು ಮಾಡುವೆನು" ಎಂದು ಹೇಳಿಕೊಳ್ಳುವವರಾಗಿರಬೇಕು (ಅ.ಕೃತ್ಯ 18:21; 1 ಕೊರಿಂಥ 4:19 ನೋಡಿರಿ).

ಯಾಕೆಂದರೆ ನಮ್ಮ ಜೀವಿತವೆಲ್ಲಾ ದೇವರ ಕೈಗಳಲ್ಲಿರುತ್ತದೆ. ನಾಳೆ ಏನು ಸಂಭವಿಸುವದೆಂದು ನಮಗೆ ತಿಳಿಯದು. ಎಲ್ಲವೂ ಅನಿಶ್ಚಿತವಾಗಿದೆ. ನಾವು ನೀರಿನ ಹಬೆಯಂತಿದ್ದೇವೆ ಇಂದು ನಾವು ಇಲ್ಲಿದ್ದೇವೆ ನಾಳೆ ನಾವು ಇಲ್ಲವಾಗುತ್ತೇವೆ. ಆದದರಿಂದ, ನಾವು ಎಂದಿಗೂ ಯೋಜನೆಗಳಲ್ಲಿ ಭರವಸೆವಿಡದೆ ದೇವರಲ್ಲೀಯೇ ಭರವಸೆವಿಡಬೇಕು. ಆತನು ಮಾತ್ರವೇ ನಿಶ್ಚಿತನೂ ಎಂದಿಗೂ ಮಾರ್ಪಡದವನೂ ಆಗಿದ್ದಾನೆ. ನಿಜ, ನಾವು ಯೋಜನೆ ಮಾಡಿ ಬೀಜವನ್ನು ಬಿತ್ತಬೇಕು ಆದರೆ ಪೈರನ್ನು ನೀಡುವವನು ದೇವರೇ (1 ಕೊರಿಂಥ 3:7). ನಾವು ಯೋಜನೆ ಹಾಕಿಕೊಂಡು ಕೆಲಸಮಾಡಬೇಕು ಆದರೆ ದೇವರು ಯಶಸ್ಸನ್ನು ತನ್ನ ಚಿತ್ತಕ್ಕನುಸಾರವಾಗಿ ಕೊಡುತ್ತಾನೆ. ಆತನಲ್ಲಿಯೇ. ನಾವು ನಮ್ಮ ಭರವಸನ್ನಿಡಬೇಕು.

**16** ಆದದರಿಂದ, ನಾವು ನಮ್ಮ ಕೆಲಸದಲ್ಲಿ ಯಶಸ್ಸಿನಲ್ಲಿ ಹೆಚ್ಚಳ ಪಡದಿರೋಣ. ನಮ್ಮ ಹೊಗಳಿಕೆಯೆಲ್ಲವೂ ದೇವರಲ್ಲಿಯೇ ಇರಬೇಕು. ದೇವರಿಗೆ ಸಲ್ಲತಕ್ಕ ಸ್ತುತಿಯನ್ನು ನಾವು ತೆಗೆದುಕೊಳ್ಳುವದಾದರೆ ದೇವರ ವಿರುದ್ಧವಾಗಿ ಪಾಪ ಮಾಡುವವರಾಗಿದ್ದೇವೆ. ದೇವರು ಮಾಡಿರುವಂಥ ಕಾರ್ಯಕ್ಕೆ ನಮಗೆ ಸ್ತುತಿಯನ್ನು ಮಾಡಿಕೊಳ್ಳುವದು ಒಂದು ಅತಿ ದೊಡ್ಡ ದುಷ್ಟತನವಾಗಿದೆ.

**17** ಈ ವಚನದಲ್ಲಿ ಎರಡು ಅತಿ ಪ್ರಾಮುಖ್ಯವಾದ ಬೋಧನೆಗಳಿವೆ. ಮೊದಲನೆಯದು, ಏನೆಂದರೆಃ ನಾವು ತಿಳಿದಿರುವದಕ್ಕೆ ಅನುಸಾರವಾಗಿ ದೇವರು ನಮಗೆ ತೀರ್ಪು ಮಾಡುತ್ತಾನೆ. ಚಿಕ್ಕ ಮಗುವೊಂದು ಅಜ್ಞಾನದಿಂದಾಗಿ ಒಂದು ಆಜ್ಞೆಯನ್ನು ಉಲ್ಲಂಘಿಸುವದಾದರೆ ಆತನು ಅದಕ್ಕಾಗಿ ದಂಡಿಸಲ್ಪಡುವದಿಲ್ಲ; ಆತನು ಪಾಪ ಮಾಡಿರುವದಿಲ್ಲ ಇನ್ನೊಂದೆಡೆಯಲ್ಲಿ ಪ್ರಾಯದ ವ್ಯಕ್ತಿಯೊಬ್ಬ ಗೊತ್ತಿದ್ದು ಒಂದು ಆಜ್ಞೆಯನ್ನು ಉಲ್ಲಂಘಿಸುವದಾದರೆ ಅದು ಆತನಿಗೆ ಒಂದು ದೊಡ್ಡ ಪಾಪವಾಗಿರುತ್ತದೆ. ಒಬ್ಬ ವ್ಯಕ್ತಿಯು ಹೆಚ್ಚಾಗಿ ತಿಳಿದಷ್ಟು ಆತನು ದೇವರಿಗೆ ಅವಿಧೇಯನಾದರೆ ಅವನ ಶಿಕ್ಷೆಯು ಅಷ್ಟೇ ಹೆಚ್ಚಾಗಿರುವದು (ಲೂಕ 12:47-48, ಯಾಕೋಬ 3:1 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಈ ವಚನದಲ್ಲಿನ ಎರಡನೆಯ ಬೋಧನೆಯು ಪಾಪದ ಕುರಿತಾದದ್ದು. ಅನೇಕ ಜನರು ಕೆಟ್ಟದ್ದನ್ನು ಮಾಡುವದು ಮಾತ್ರವೇ ಪಾಪವೆಂದು ಯೋಚಿಸುತ್ತಾರೆ. ಆದರೆ ಯಾಕೋಬನು ಇಲ್ಲಿ ನಾವು ಒಂದು ಸಂಗತಿಯನ್ನು ಮಾಡದಿರುವದು ನಾವು ಮಾಡಬಾರದೆಂದು ಗೊತ್ತಿದ್ದೂ ಮಾಡುವಂತೆಯೇ ಒಂದು ಪಾಪವಾಗಿದೆ. ನಾವು ಕೊರತೆಯಲ್ಲಿರುವ ಸಹೋದರನಿಗೆ ಸಹಾಯಮಾಡದಿದ್ದರೆ ನಾವು ಆತನ ವಿರುದ್ಧ ಪಾಪಮಾಡುವವರಾಗಿದ್ದೇವೆ. ಆದೇ ರೀತಿಯಾಗಿ ನಾವು ಯೇಸುವನ್ನು ನಂಬದಿದ್ದರೆ ಆತನ ವಿರುದ್ಧ ಪಾಪಮಾಡುವವರಾಗಿದ್ದೇವೆ.

---

## ಅಧ್ಯಾಯ - 5

### ಐಶ್ವರ್ಯವಂತರು ಮಾಡುವ ಬಲತ್ಕಾರದ ಖಂಡನೆ (5:1-6)

**1-3** ಈ ಭಾಗದಲ್ಲಿ ಯಾಕೋಬನು ಮುಖ್ಯವಾಗಿ ಬಡವರನ್ನು ಶೋಷಣೆ ಮಾಡುವ ಧನಿಕರನ್ನು ಸಂಬೋಧಿಸಿ ಮಾತಾಡುತ್ತಾನೆ. ಐಶ್ವರ್ಯವಂತರಾಗಿರುವ ಕ್ರೈಸ್ತರು ಈ ವಚನಗಳಿಗೆ ವಿಶೇಷ ಗಮನಕೊಡಬೇಕು.
ಇಲ್ಲಿ ಯಾಕೋಬನು ಒಬ್ಬ ಪ್ರವಾದಿಯಂತೆ ಮಾತಾಡುತ್ತಾನೆ ಬಡವರನ್ನು ಶೋಷಣೆ ಮಾಡುವ ಧನಿಕರ ಮೇಲೆ ದುರ್ದೆಶೆಯು ಬರಲಿದೆ ಎಂದು ಆತನು ಹೇಳುತ್ತಾನೆ. ತರುವಾಯ ಯಾಕೋಬನು ಧನಿಕರ ಐಶ್ವರ್ಯ ಹಾಗೂ ಬಟ್ಟೆಗಳು ಆಗಲೇ

ಹಾಳಾಗಿವೆ ಎಂದು ಹೇಳುತ್ತಾನೆ. ಧನಿಕರ ಮೇಲೆ ಬರಲಿದ್ದ ನಾಶನವು ಎಷ್ಟು ಖಚಿತವಾಗಿತ್ತೆಂದರೆ ಅದು ಈಗಾಗಲೇ ಸಂಭವಿಸಿದೆಯೇನೋ ಎಂಬಂತೆ ಯಾಕೋಬನು ಮಾತಾಡುತ್ತಾನೆ [12]. ಧನಿಕರ ಮಣ್ಣು ಹಿಡಿದಿರುವ ಐಶ್ವರ್ಯವು ಕಡೇ ನ್ಯಾಯತೀರ್ಪಿನ ದಿನದಲ್ಲಿ ಅವರ ವಿರುದ್ಧ ಸಾಕ್ಷಿಯಾಗಿರುತ್ತವೆ. ಧನಿಕರು ತಮ್ಮ ಐಶ್ವರ್ಯವನ್ನು ಕ್ರಿಸ್ತನ ಹಾಗೂ ಇತರರ ಸೇವೆಗಾಗಿ ಉಪಯೋಗಿಸುವದರ ಬದಲಾಗಿ ಇವರು ತಮ್ಮ ಐಶ್ವರ್ಯವನ್ನು ತಮಗೋಸ್ಕರವಾಗಿ ಕೂಡಿಸಿಟ್ಟುಕೊಂಡಿರುತ್ತಾರೆ. ಅವರು ಇದನ್ನು ಅಂತ್ಯದಿವಸಗಳಲ್ಲಿ ಮಾಡಿದ್ದಾರೆ ಎಂದು ಯಾಕೋಬನು ಹೇಳುತ್ತಾನೆ. ಅಂತ್ಯ ದಿವಸಗಳು ಯೇಸು ಕ್ರಿಸ್ತನ ದಿವಸಗಳಾಗಿವೆ, ಅಂದರೆ, ಕ್ರಿಸ್ತನ ಮೊದಲನೆಯ ಬರೋಣ (ಆತನ ಜನನ) ಹಾಗೂ ಆತನ ಎರಡನೆಯ ಬರೋಣದ ನಡುವಿನ ಅವಧಿಯಾಗಿದೆ. ಈ ಲೋಕವು ಗತಿಸಿ ಹೋಗುತ್ತದೆ, ಶೀಘ್ರವೇ ಧನಿಕರು ತಮ್ಮ ಮಣ್ಣು ಹಿಡಿದಿರುವ ಐಶ್ವರ್ಯವನ್ನು ಮಾತ್ರವಲ್ಲ, ಆದರೆ ತಮ್ಮ ಪ್ರಾಣಗಳನ್ನು (ಆತ್ಮಗಳನ್ನು) ಕಳೆದುಕೊಳ್ಳುವರು (ಮತ್ತಾಯ 6:19-21, ಮಾರ್ಕ 8:36-37; ಲೂಕ 6:24; 16:19-31 ನೋಡಿರಿ).

ಕ್ರಿ.ಶಕ 70ರಲ್ಲಿ, ಈ ಪತ್ರಿಕೆಯು ಬರೆಯಲ್ಪಟ್ಟ ಕೆಲವು ವರ್ಷಗಳ ನಂತರವಷ್ಟೇ ರೋಮಾಯ ಸೈನ್ಯವು ಯೆರೂಸಲೇಮ ನಗರವನ್ನು ಸಂಪೂರ್ಣವಾಗಿ ನಿರ್ನಾಮ ಮಾಡಿತು. ನಗರದಲ್ಲಿದ್ದ ಯೆಹೂದ್ಯರೆಲ್ಲರೂ ತಮ್ಮ ಐಶ್ವರ್ಯದೊಂದಿಗೆ ನಾಶವಾದರು. ಹೀಗೆ ಯಾಕೋಬನ "ಪ್ರವಾದನೆಯು" ನಿಜವಾಯಿತು ಅದು ಯಾವನೇ ಯೋಚಿಸಿದ್ದಕ್ಕಿಂತಲೂ ಶೀಘ್ರ ವೇ ಸಂಭವಿಸಿತ್ತು!

**4** ಯಾಕೋಬನು ಧನಿಕರ ಮೇಲೆ ಅವರು ತಮ್ಮ ಕೂಲಿಯವರನ್ನು ವಂಚಿಸಿದ ಆರೋಪ ವನ್ನು ಹೊರಿಸುತ್ತಾನೆ. ಅಂಥ ಅನ್ಯಾಯದ ಕೂಗು ಪರಲೋಕವನ್ನು ಮುಟ್ಟುವದಾಗಿದೆ. ಕೊಯಿದವರ ಕೂಗು ಸರ್ವಶಕ್ತನಾಗಿರುವ ಕರ್ತನ ಕಿವಿಗಳಲ್ಲಿ ಬಿದ್ದಿದೆ [13] ಮತ್ತು ದೇವರು ಅದನ್ನು ಕೇಳಿಸಿಕೊಳ್ಳುತ್ತಾನೆ. ದೇವರು ಎಲ್ಲಾ ಅನ್ಯಾಯಕ್ಕೂ ಮುಯ್ಯಿ ತೀರಿಸುವನು.

**5** ಧನಿಕರು ಅತಿ ಭೋಗಿಗಳಾಗಿ ಬದುಕಿ ಮನಸ್ಸು ಬಂದಂತೆ ನಡೆದುಕೊಂಡಿದ್ದಾರೆ. ಮನುಷ್ಯರು ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲುವದಕ್ಕೆ ಮುಂಚೆ ಅವು ಗಳನ್ನು ಕೊಬ್ಬಿಸುತ್ತಾರೆ. ಅದೇ ವಿಧದಲ್ಲಿ ಧನಿಕರು ವಧೆಯ ದಿವಸಕ್ಕಾಗಿ ತಮ್ಮನ್ನು ಕೊಬ್ಬಿಸಿಕೊಳ್ಳುತ್ತಿದ್ದಾರೆ. "ವಧೆಯ ದಿವಸವು" ನ್ಯಾಯ ತೀರ್ಪಿನ ದಿನವಾಗಿದ್ದು ಅದು ಶೀಘ್ರವೇ ಬರುವದಾಗಿರುತ್ತದೆ. (ಲೂಕ 12:15-21 ನೋಡಿರಿ).

**6** ಧನಿಕರು ಹಾಗೂ ಬಲಿಷ್ಠರು ತಮ್ಮ ದುರಾಶೆಯ ಕಾರಣದಿಂದ ನಿರಪರಾಧಿಜನರನ್ನು ಹತ್ತೆಗೈದಿದ್ದಾರೆ. ಅವರು ಪ್ರವಾದಿಗಳನ್ನು ಅಪೊಸ್ತಲರನ್ನೂ ಕೊಂದಿದ್ದಾರೆ. (ಮತ್ತಾಯ23:37). ಯಾಕೋಬನು ತಾನೇ ಕ್ರಿ. ಶಕ 62ರಲ್ಲಿ ಕೊಲ್ಲಲ್ಪಟ್ಟನು. ಆದರೆ ಧನಿಕರ ಅತಿ ದೊಡ್ಡ ಪಾಪವು ಯೇಸುಕ್ರಿಸ್ತನನ್ನು ಕೊಂದದ್ದಾಗಿತ್ತು (ಅ.ಕೃತ್ಯ 7:52) ಯಾಕೋಬನು ಇಲ್ಲಿ ಪ್ರಸ್ತಾಪಿಸುವ ನಿರಪರಾಧಿ ಜನರು ಎಂಬದು ಧನಿಕರನ್ನು ಎದುರಿಸುವವರಲ್ಲದ ಅನೇಕ ನಿರಪರಾಧಿಗಳನ್ನು (ಬಡವರು, ಪ್ರವಾದಿಗಳು, ಮುಂತಾದವರನ್ನು) ಸೂಚಿಸಬಹುದು, ಅಥವಾ ಇದು ಯೇಸುವನ್ನು ಮಾತ್ರವೇ ಸೂಚಿಸಬಹುದು ಯೇಸು ಧನಿಕರನ್ನು ವಿರೋಧಿಸಲಿಲ್ಲ. ಅವರು ಯೇಸುವನ್ನು ಕೊಲ್ಲುವದಕ್ಕೆ ಉಪಾಯ ಮಾಡಿದ್ದಾಗ್ಯು ಯೇಸು ಅವರನ್ನು ವಿರೋಧಿಸಲಿಲ್ಲ (1 ಪೇತ್ರ 2:23 ನೋಡಿರಿ). ನ್ಯಾಯತೀರ್ಪಿನ ದಿನದಲ್ಲಿ ಸ್ವತಃ ದೇವರು ಧನಿಕರೆಲ್ಲರನ್ನೂ ವಿರೋಧಿಸುವನು.

## ಬಾಧೆಯಲ್ಲಿ ದೀರ್ಘಶಾಂತಿ (5:7-12)

**7-8** ಈ ಭಾಗದಲ್ಲಿ ಯಾಕೋಬನು ಪು ನಃ ವಿಶ್ವಾಸಿಗಳನ್ನು ದ್ದೇಶಿಸಿ ಮಾತಾಡುತ್ತಾನೆ. ಆತನು ಬರೆಯುವದೇನೆಂದರೆ: ದೀರ್ಘಶಾಂತಿಯಿಂದಿರಿ..... ದೃಢವಾಗಿ ನಿಲ್ಲಿರಿ. ಮಹಾಸಂಕಟಕಾಲವು ಬರಲಿಕ್ಕಿತ್ತು ಧನಿಕರಾದ ಯೆಹೂದ್ಯರ ಮೇಲೆ ಮಾತ್ರವಲ್ಲ, ಆದರೆ ಯಾಕೋಬನ ಕಾಲದ ಕ್ರೈಸ್ತರ ಮೇಲೆಯೂ ಬರಲಿತ್ತು. ಯೆರೂಸಲೇಮು ಶೀಘ್ರವೇ ನಾಶವಾಗಲಿದ್ದದ್ದು ಮಾತ್ರವಲ್ಲ; ಆದರೆ ಅದಕ್ಕಿಂತ ಮುಂಚೆ ಯೆರೂಸಲೇಮಿನಲ್ಲಿದ್ದ ವಿಶ್ವಾಸಿಗಳು ಕಠಿಣವಾದ ಹಿಂಸೆಯನ್ನು ಎದುರಿಸಲಿದ್ದರು. ಅಷ್ಟು ಮಾತ್ರವಲ್ಲದೆ, ಕ್ರಿಸ್ತನ ಎರಡನೆಯ ಬರೋಣವು ದೂರವಾಗಿರಲಿಲ್ಲ. ಆದದರಿಂದ, ಅವರು ತಮ್ಮ ನಂಬಿಕೆಯನ್ನು ಬಿಡದಿರಲಿ ಅವರು ಹಿಂಜರಿದು ಬಿದ್ದು ಹೋಗದಿರಲಿ (ಮಾರ್ಕ 13:13; ಇಬ್ರಿಯ 3:6, 14; 10:36 ನೋಡಿರಿ).

ನಾವು ನಮ್ಮ ಸ್ವಬಲದ ಮೂಲಕ ದೀರ್ಘಶಾಂತಿಯಿಂದ ಇರಲಾರೆವು, ಹಾಗೂ ದೃಢವಾಗಿ ನಿಲ್ಲಲಾರೆವು. ಆದರೆ ದೇವರು ಪವಿತ್ರಾತ್ಮನ ಮುಖಾಂತರ ನಮಗೆ ಸಹಾಯಮಾಡುವದಕ್ಕೆ ಸಿದ್ಧನಾಗಿದ್ದಾನೆ. ದೀರ್ಘ ಶಾಂತಿಯು ಪವಿತ್ರಾತ್ಮನ ಫಲವಾಗಿದೆ (ಗಲಾತ್ಯ 5:22). ದೇವರು ತಾನೇ ನಮ್ಮ ನೆಲೆಗೊಳಿಸಿ ಬಲಪಡಿಸುವನು (1 ಪೇತ್ರ 5:10). ವ್ಯವಸಾಯಗಾರನು ಮಳೆಗೋಸ್ಕರ ದೀರ್ಘಶಾಂತಿಯಿಂದ ಕಾಯುತ್ತಾನೆ. ಇಸ್ರಾಯೇಲಿನಲ್ಲಿ ಮಳೆಯು ಮುಖ್ಯವಾಗಿ ಶರತ್ಕಾಲ ಹಾಗೂ ವಸಂತ ಋತುವಿನಲ್ಲಿ ಬರುತ್ತಿತ್ತು. ಶರತ್ಕಾಲದ ಮಳೆಯು "ಮುಂಗಾರು ಮಳೆ" ಎಂದೂ ವಸಂತಋತುವಿನ "ಹಿಂಗಾರು ಮಳೆ" ಎಂದು ಕರೆಯಲ್ಪಡುತ್ತದೆ. ಮುಂಗಾರು ಮಳೆ ಬಿದ್ದ ನಂತರ ವ್ಯವಸಾಯಗಾರನು ತನ್ನ ಹೊಲಗಳನ್ನು ಊಳುವದಕ್ಕೆ ಶಕ್ತನಾಗಿರುತ್ತಾನೆ. ಹಿಂಗಾರು ಮಳೆಯ ನಂತರ ಪೈರು ಕೊಯ್ಲಿಗೆ ಸಿದ್ಧವಾಗಿರುತ್ತದೆ. ವ್ಯವಸಾಯಗಾರನು ಮಳೆಗೋಸ್ಕರ ದೀರ್ಘ ಶಾಂತಿ ಕಾದುಕೊಳ್ಳುವ ಪ್ರಕಾರವೇ ವಿಶ್ವಾಸಿಗಳು ಕ್ರಿಸ್ತನ ಎರಡನೆಯ ಬರೋಣಕ್ಕಾಗಿ ದೀರ್ಘ ಶಾಂತಿಯಿಂದ ಕಾದುಕೊಳ್ಳಬೇಕು. ವ್ಯವಸಾಯಗಾರನು ಸಾಧಾರಣ ಪೈರಿಗಾಗಿ ಕಾದುಕೊಳ್ಳುವದಾದರೆ ನಾವು ಪರಲೋಕದಲ್ಲಿ ನಮಗಾಗಿ ಸಿದ್ಧಮಾಡಲ್ಪಟ್ಟಿರುವ ಬಾಧ್ಯತೆಗಾಗಿ ದೀರ್ಘಶಾಂತಿಯಿಂದ ಕಾದುಕೊಳ್ಳಲಾರೆವೋ?

**9** ಇಲ್ಲಿ ಯಾಕೋಬನು ಪುನಃ ವಿಶ್ವಾಸಿಗಳು ಒಬ್ಬರಿಗೊಬ್ಬರ ವಿರುದ್ಧ ಮಾತಾಡಬಾರದೆಂದು ಎಚ್ಚರಿಸುತ್ತಾನೆ. ನೀವು ಒಬ್ಬರ ಮೇಲೊಬ್ಬರು ಗುಣಗುಟ್ಟಬೇಡಿರಿ ಎಂದು ಆತನು ಹೇಳುತ್ತಾನೆ.

ನಮ್ಮ ಮೇಲೆ ಸಂಕಟಗಳೂ ಹಿಂಸೆಗಳೂ ಬರುವಾಗ ನಾವು ನಮ್ಮ ಸಮಸ್ಯೆಗಳಿಗಾಗಿ ಒಬ್ಬರನ್ನೊಬ್ಬರು ಆರೋಪಿಸಿಕೊಳ್ಳಲು ಎಷ್ಟು ತ್ವರೆಪಡುತ್ತೇವೆ! ಪುರಾತನ ಯೆಹೂದ್ಯರು ಅರಣ್ಯದಲ್ಲಿ ಮೋಶೆ ಹಾಗೂ ಆರೋನನ ವಿರುದ್ಧವಾಗಿ ಗುಣಗುಟ್ಟಿದ ಪ್ರಕಾರವೇ ನಾವು ಸಹ ಒಬ್ಬರ ಮೇಲೊಬ್ಬರು ವಿಶೇಷವಾಗಿ ನಮ್ಮ ನಾಯಕರ ವಿರುದ್ಧ ಗುಣಗುಟ್ಟುತ್ತೇವೆ. (ವಿಮೋಚನಕಾಂಡ 16:1-3; 17:1-4). ಇದು ಸಂಭವಿಸದಿರಲಿ!

ನಮ್ಮ ನಂಬಿಕೆಯು ಪರಿಶೋಧಿಸಲ್ಪಡಬೇಕೆಂದು ಬಾಧೆಗಳು ದೇವರ ಚಿತ್ತಾನುಸಾರವಾಗಿ ನಮ್ಮ ಮೇಲೆ ಬರುತ್ತವೆ (ಯಾಕೋಬ 1:2-3). ನಾವು ಈ ಸಂಕಟಗಳ ಮಧ್ಯದಲ್ಲಿ ಹೇಗೆ ಎದುರುನಿಂತುಕೊಳ್ಳುತ್ತೇವೆಂಬದನ್ನು ದೇವರು ನೋಡುವವನಾಗಿದ್ದಾನೆ. ಸಂಕಟಗಳ ವೇಳೆಯಲ್ಲಿ ನಾವು ಒಬ್ಬರ ಮೇಲೊಬ್ಬರು ಗುಣಗುಟ್ಟುವದಾದರೆ ದೇವರ ವಿರುದ್ಧವಾಗಿ ಗುಣಗುಟ್ಟುವವರಾಗಿದ್ದೇವೆ (ವಿಮೋಚನ ಕಾಂಡ 16:8). ಆತನು ನಮಗೆ ತೀರ್ಪು ಮಾಡುವನು. ಆತನು ಪುರಾತನ ಯೆಹೂದ್ಯರನ್ನು ಅರಣ್ಯದಲ್ಲಿ ಶಿಕ್ಷಿಸಿದ ಹಾಗೆ ನಮ್ಮನ್ನು ಶಿಕ್ಷಿಸದಂತೆ ನಾವು ಎಚ್ಚರಿಕೆಯಾಗಿರೋಣ (ಅರಣ್ಯ ಕಾಂಡ 11:1; 14:1-4, 26-29). ನ್ಯಾಯಾಧಿಪತಿಯು (ಕ್ರಿಸ್ತನು) ಬಾಗಲಿನ ಹತ್ತಿರದಲ್ಲೇ ನಿಂತಿದ್ದಾನೆ (ಪ್ರಕಟನೆ 3:20). ಆತನು ನಮ್ಮ ಗುಣಗುಟ್ಟುವಿಕೆಯನ್ನು ಕೇಳಿಸಿಕೊಳ್ಳುತ್ತಾನೆ. ಕ್ರಿಸ್ತನು ನ್ಯಾಯಾಧಿಪತಿಯಾಗಿ ಭೂಲೋಕಕ್ಕೆ ತಿರಿಗಿ ಬರಲು ಸಿದ್ಧನಾಗಿದ್ದಾನೆ; ಮತ್ತು ವಿಶ್ವಾಸಿಗಳಲ್ಲದವರನ್ನು ಮಾತ್ರವಲ್ಲದೆ ವಿಶ್ವಾಸಿಗಳನ್ನು ಸಹ ನ್ಯಾಯವಿಚಾರಣೆ ಮಾಡುವನು. (1 ಪೇತ್ರ 4:17).

**10-11** ಕಡೇವರೆಗೂ ತಾಳಿಕೊಳ್ಳುವವರು ಧನ್ಯರೆಂದು ಎಣಿಸಲ್ಪಡುವರು (ಯಾಕೋಬ 1:4 ನೋಡಿರಿ). ಯಾಕೋಬನು ಹಳೆ ಒಡಂಬಡಿಕೆಯ ಯೋಬನ ಉದಾಹರಣೆಯನ್ನು ಕೊಡುತ್ತಾನೆ, ಆತನು ತನ್ನ ಕಾಲದಲ್ಲಿ ಪ್ರಾಮುಖ್ಯ ವ್ಯಕ್ತಿಯಾಗಿದ್ದನು. ಯೋಬನ ಮೇಲೆ ಭಯಂಕರ ಬಾಧೆಗಳ ಸಂಭವಿಸುವಂತೆ ಮಾಡುವದರ ಮೂಲಕ ದೇವರು ಅವನನ್ನು ಪರೀಕ್ಷಿಸಿದನು. ಯೋಬನು ಸಮಸ್ತವನ್ನೂ ತನ್ನ ಭೂಮಿ, ತನ್ನ ಮನೆ, ತನ್ನ ಐಶ್ವರ್ಯ, ತನ್ನ ಮಕ್ಕಳು, ತನ್ನ ಗೌರವಗಳನ್ನೆಲ್ಲಾ–ಕಳೆದುಕೊಂಡನು. ತರುವಾಯ ಆತನು ತನ್ನ ಆರೋಗ್ಯವನ್ನು ಕಳೆದುಕೊಂಡನು. ಆದರೆ ಅಂಥಕಠಿಣವಾದ ಸಂಕಷ್ಟಗಳ ನಡುವೆಯೂ ಯೋಬನು ದೇವರ ವಿರುದ್ಧವಾಗಿ ಗುಣಗುಟ್ಟಲಿಲ್ಲ. ಮತ್ತು ಅಂತ್ಯದಲ್ಲಿ ದೇವರು ಯೋಬನನ್ನು ಬಹಳವಾಗಿ ಆಶೀರ್ವದಿಸಿದನು. ಅವನ ಅಂತ್ಯ ಸ್ಥಿತಿಯು ಮೊದಲಿನ ಸ್ಥಿತಿಗಿಂತಲೂ ಉತ್ತಮವಾಗಿತ್ತು. ಇದೆಲ್ಲವನ್ನೂ ಕರ್ತನು ಮಾಡಿದನು ಅದು ಪ್ರಾರಂಭದಿಂದಲೂ ಆತನ ಯೋಜನೆ ಹಾಗೂ ಉದ್ದೇಶವಾಗಿತ್ತು (ಯೋಬ 1:1-22;2:1-10;42:12-17).

ದೇವರು ನಮ್ಮ ಹಿತಕ್ಕಾಗಿಯೇ ನಮಗೆ ಬಾಧೆಯನ್ನು ಹಾಗೂ ಸಂಕಟವನ್ನು ಬರಮಾಡುತ್ತಾನೆ. ಅಂತ್ಯದಲ್ಲಿ ತನ್ನ ಮಹಾಕರುಣೆ ಹಾಗೂ ಪ್ರೀತಿಯ ನಿಮಿತ್ತವಾಗಿ ಆತನು ಯಾವಾಗಲೂ ನಮ್ಮ ದುಃಖ ಹಾಗೂ ನೋವನ್ನು ಸಂತೋಷ ಹಾಗೂ ಆಶೀರ್ವದಗಳನ್ನಾಗಿ ಪರಿವರ್ತಿಸುತ್ತಾನೆ (ಕೀರ್ತನೆಗಳು 103:8; ಯೆಶಾಯ 61:1-3, 7). ಕರ್ತನ ಕಡೆಗೆ ಹಿಂದಿರುಗಿ ಹೋಗೋಣ ಬನ್ನಿರಿ; ನಮ್ಮನ್ನು ಸೀಳಿಬಿಟ್ಟವನು ಆತನೇ, ಆತನೇ ಸ್ವಸ್ಥಮಾಡುವನು; ಹೊಡೆದವನು ಆತನೇ, ನಮ್ಮ ಗಾಯಗಳನ್ನು ಕಟ್ಟುವನು......... ಆತನು ನಮ್ಮನ್ನೆಬ್ಬಿಸಲು ಆತನ ಸಾನಿಧ್ಯದಲ್ಲಿ ಬಾಳುವೆವು (ಹೋಶೆಯ 6:1-3).

**12** ....... ಆಣೆ ಇಡಲೇಬೇಡಿರಿ. ಯಾಕೋಬನು ಇಲ್ಲಿ ಸಾಧಾರಣವಾದ ಸಂಭಾಷಣೆಗಳಲ್ಲಿ ಇಡುವದರ ಬಗ್ಗೆ ಮಾತಾಡುತ್ತಿದ್ದಾನೆ. ನಾವು ಸರಳವಾಗಿಯೂ ಯಥಾರ್ಥ ವಾಗಿಯೂ ಮಾತಾಡಬೇಕು. ಹೌದೆಂದು ಹೇಳಬೇಕಾದರೆ ಹೌದೆನ್ನಿರಿ, ಅಲ್ಲವೆನ್ನಬೇಕಾದರೆ ಅಲ್ಲವೆನ್ನಿ. ನಾವು ಏನೇ ಮಾತಾಡಿದರೂ ಅದು ಸತ್ಯವಾಗಿರಬೇಕು. ಒಬ್ಬ ಯಥಾರ್ಥ ಮನುಷ್ಯನು ತಾನು ಹೇಳುತ್ತಿರುವದು ಸತ್ಯವೆಂಬದನ್ನು ನಿರೂಪಿಸಲು ಆಣೆ ಇಡಬೇಕಾದ ಅಗತ್ಯವು ಎಂದಿಗೂ ಇರುವದಿಲ್ಲ. ಅಂಥ ಆಣೆ ಇಡುವಿಕೆಯು ನಿಷ್ಪ್ರಯೋಜನವಾಗಿದೆ. ಅದಕ್ಕಿಂತ ಕೆಟ್ಟದ್ದೇನೆಂದರೆ, ನಾವು ಅನಾವಶ್ಯಕವಾಗಿ ಆಣೆಇಡುವಾಗ ಕರ್ತನ ಹೆಸರನ್ನು ವ್ಯರ್ಥವಾಗಿ ಉಪಯೋಗಿಸುತ್ತೇವೆ (ಮತ್ತಾಯ 5:34-37 ನೋಡಿರಿ). ನಾವು ಎಚ್ಚರಿಕೆಯಿಂದಿರೋಣ; ನಾವು ಸುಮ್ಮನೆ ಹಾಗೂ ಅಲಕ್ಷ್ಯತನದಿಂದ ಆಡುವ ಪ್ರತಿಯೊಂದು ಮಾತಿಗಾಗಿಯೂ ನಮಗೆ ನ್ಯಾಯ ತೀರ್ಪು ಮಾಡುವನು (ಮತ್ತಾಯ 12:36).

ನಾವು ಯಾವ ಪರಿಸ್ಥಿತಿಯಲ್ಲಿಯೂ ಆಣೆಯನ್ನು ಇಡಲೇಬಾರದೆಂದು ಯಾಕೋಬನ ತಾತ್ಪರ್ಯವಲ್ಲ. ಎಲ್ಲಾ ರಾಷ್ಟ್ರಗಳಲ್ಲಿನ ನ್ಯಾಯಾಲಯಗಳಲ್ಲಿ ಸಾಕ್ಷಿ ಹೇಳುವ ಮುಂಚೆ ಆಣೆಯಿಡುವ ಪದ್ಧತಿಯಿರುತ್ತದೆ. ಇದು ಪಾಪವಲ್ಲ. ಪ್ರಾಮುಖ್ಯವಾದ ವಿಷಯಗಳಲ್ಲಿ ಆಣೆ ಇಡುವದು ತಕ್ಕದಾಗಿರುತ್ತದೆ (ಇಬ್ರಿಯ 6:16-17). ಅಪೊಸ್ತಲನಾದ ಪೌಲನು ಅನೇಕ ಸಾರಿ ತಾನು ಹೇಳುವ ವಿಷಯಕ್ಕೆ ಕರ್ತನು ಸಾಕ್ಷಿಯಾಗಿರುವನು ಎಂದು ಹೇಳಿದನು (2 ಕೊರಿಂಥ 1:23; ಗಲಾತ್ಯ 1:20, ಫಿಲಿಪ್ಪಿ 1:8). ಯಾಕೋಬನು ಇಲ್ಲಿ ಅಂಥ ಸನ್ನಿವೇಶಗಳ ಬಗ್ಗೆ ಮಾತಾಡುತ್ತಿರುವದಿಲ್ಲ. ಬದಲಾಗಿ ಆತನು ಸಾಧಾರಣ ಸಂಭಾಷಣೆಗಳಲ್ಲಿ ನಡೆಯುವ ಅನಾವಶ್ಯಕ ಹಾಗೂ ವ್ಯರ್ಥ ಆಣೆ ಇಡುವಿಕೆಯು ಕುರಿತು ಮಾತಾಡುತ್ತಿದ್ದಾನೆ.

## ನಂಬಿಕೆಯ ಪ್ರಾರ್ಥನೆ (5:13-20)

**13** ನಾವು ಎಲ್ಲಾ ಪರಿಸ್ಥಿತಿಗಳಲ್ಲಿ ಪ್ರಾರ್ಥಿಸಬೇಕು (ಫಿಲಿಪ್ಪಿ 4:6). ಈ ವಚನದಲ್ಲಿ ನಾವು ಸಂತೋಷವಾಗಿರುವಾಗ ಸ್ತುತಿಕೀರ್ತನೆಗಳನ್ನು ಹಾಡಬೇಕೆಂದು ಯಾಕೋಬನು ಹೇಳುತ್ತಾನೆ. ಅದು ನಿಜವಾದದ್ದೇ ಆದರೆ ನಾವು ಕಷ್ಟದಲ್ಲಿರುವಾಗಲೂ ಸ್ತುತಿ ಪದಗಳನ್ನು ಹಾಡಬೇಕು! (ಅ.ಕೃತ್ಯ 16:23-25 ನೋಡಿರಿ).

14 ಅಸ್ವಸ್ಥರಾಗಿರುವವರು ಸಭೆಯ ಹಿರಿಯರನ್ನು ಕರೆಕಳುಹಿಸಬೇಕು. ಸಭಾ ಹಿರಿಯರು ಯಾವದೇ ಸ್ಥಳೀಯ ಸಭೆಯಲ್ಲಿನ ನಾಯಕರಾಗಿರುತ್ತಾರೆ. (1 ತಿಮೊಥೆ 5:17; ತೀತನು 1:5-6 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಅವರು ಅಸ್ವಸ್ಥ ವ್ಯಕ್ತಿಯನ್ನು ಎಣ್ಣೆಯಿಂದ ಅಭಿಷೇಕಿಸಬೇಕು[14]. ಹೊಸ ಒಡಂಬಡಿಕೆಯ ಕಾಲದಲ್ಲಿ ಎಣ್ಣೆಯು ಔಷಧಿಯಾಗಿ ಉಪಯೋಗಿಸಲ್ಪಡುತ್ತಿತ್ತು (ಮಾರ್ಕ 6:13; ಲೂಕ 10:34 ನೋಡಿರಿ). ಈ ವಚನದಲ್ಲಿ ಯಾಕೋಬನು ಎಣ್ಣೆಯನ್ನು ಮುಖ್ಯವಾಗಿ ಔಷಧವನ್ನಾಗಿ ಸೂಚಿಸುತ್ತಿದ್ದಾನೆ [15] ಆದದರಿಂದ, ಸಾಧಾರಣವಾದ ಪರಿಸ್ಥಿತಿಗಳಲ್ಲಿ ಅಸ್ವಸ್ಥನಾದವನಿಗೆ ಔಷಧಿ, ಪ್ರಾರ್ಥನೆ ಎರಡೂ ಅಗತ್ಯವಾಗಿರುತ್ತದೆ ಎಂಬದನ್ನು ಇದರ ಮೂಲಕ ನಾವು ತಿಳಿದುಕೊಳ್ಳಬಹುದು. ವೈದ್ಯಕೀಯ ಚಿಕಿತ್ಸೆ ಹಾಗೂ ಪ್ರಾರ್ಥನೆ ಎರಡೂ ಕರ್ತನ ಹೆಸರಿನಿಂದ ಮಾಡಲ್ಪಡಬೇಕು. ಕರ್ತನ ಹೆಸರಿನಿಂದ ಎಂಬದು ಕೇವಲ ಒಂದು ಹೇಳಿಕೆ ಅಥವಾ ಮಂತ್ರ ಆಗಿರುವದಿಲ್ಲ. ನಾವು ಕ್ರಿಸ್ತನ ರಾಯಭಾರಿಗಳಾಗಿ ಆತನ ಚಿತ್ತಕ್ಕನುಸಾರವಾಗಿ ಆತನ ಮಹಿಮೆಗೋಸ್ಕರ ಆತನ ಸ್ವಸ್ಥತೆಯ ಶಕ್ತಿಯಲ್ಲಿ ಪೂರ್ಣ ನಂಬಿಕೆಯೊಂದಿಗೆ ನಾವು ಪ್ರಾರ್ಥಿಸುತ್ತಿದ್ದೇವೆ ಹಾಗೂ ಔಷಧಿ ನೀಡುತ್ತಿದ್ದೇವೆಂದು ಇದರ ಅರ್ಥವಾಗಿದೆ.

15 ನಂಬಿಕೆಯಿಂದ ಮಾಡಿದ ಪ್ರಾರ್ಥನೆಯು ರೋಗಿಯನ್ನು ಗುಣಮಾಡುವದು. ಅಂದರೆ, ನಂಬಿಕೆಯ ಪ್ರಾರ್ಥನೆಯು ರೋಗಿಯ ದೈಹೀಕ ರೋಗವನ್ನು ಸ್ವಸ್ಥಮಾಡುವದು. ಎಲ್ಲಾ ಸ್ವಸ್ಥತೆಯ ಶಕ್ತಿಯು ಕ್ರಿಸ್ತನಿಂದ ಬರುತ್ತದೆ[16] ಕ್ರಿಸ್ತನು ಜನರನ್ನು ಔಷಧಿಯಿಂದ ಮಾತ್ರವೇ ಗುಣಪಡಿಸಬಲ್ಲನು, ಪ್ರಾರ್ಥನೆಯ ಮೂಲಕ ಮಾತ್ರವೇ, ಅಥವಾ ಎರಡೂ ಕಾರ್ಯಗಳ ಮೂಲಕವೂ ಗುಣಪಡಿಸಬಲ್ಲನು. ವ್ಯವಸಾಯಗಾರನು ಸಸಿಗಳಿಗೆ ನೀರು ಹಾಕುತ್ತಾನೆ ಆದರೆ ದೇವರು ಅದನ್ನು ಬೆಳೆಸುತ್ತಾನೆ (1 ಕೊರಿಂಥ 3:7). ಅದೇ ವಿಧದಲ್ಲಿ ವೈದ್ಯ ಹಾಗೂ ದಾದಿ ಔಷಧಿಯನ್ನು ಕೊಡುತ್ತಾರೆ, ಆದರೆ ಕ್ರಿಸ್ತನು ಗುಣಪಡಿಸುತ್ತಾನೆ. ಯಾಕೋಬನು ಈ ವಚನದಲ್ಲಿ ಪವಿತ್ರಾತ್ಮನ ವಿಶೇಷ ಸ್ವಸ್ಥತೆಯ ವರದ ಕುರಿತಾಗಿ ಮಾತಾಡುತ್ತಿಲ್ಲ (1 ಕೊರಿಂಥ 12:9). ಆ ವರವು ಸಭೆಯ ಕೆಲವು ಸದಸ್ಯರಿಗಷ್ಟೇ ಕೊಡಲ್ಪಡುತ್ತದೆ. ಆದರೆ ಪ್ರತಿಯೊಬ್ಬ ಕ್ರೈಸ್ತನು ನಂಬಿಕೆಯ ಪ್ರಾರ್ಥನೆಯನ್ನು ಮಾಡಬಹುದು. ಹಿರಿಯರು ಮಾತ್ರವೇ ರೋಗಿಗಾಗಿ ಪ್ರಾರ್ಥಿಸಬೇಕಾಗಿರುವದು ಮಾತ್ರವಲ್ಲ; ರೋಗಿಯಾದ ವ್ಯಕ್ತಿಯು ತಾನೇ ತನ್ನ ಕುಟುಂಬದೊಳಗೆ ತನ್ನ ಸ್ವಸ್ಥತೆಗಾಗಿ ಪ್ರಾರ್ಥಿಸಬೇಕು (ವಚನ 13). ಹೇಗಿದ್ದರೂ, ಹಿರಿಯರು ಒಮ್ಮತದಿಂದ ನಂಬಿಕೆಯಲ್ಲಿ ಪ್ರಾರ್ಥಿಸುವದಾದರೆ ಯೇಸು ಅವರ ಪ್ರಾರ್ಥನೆಗೆ ಉತ್ತರಿಸುವನು (ಮತ್ತಾಯ 18:19-20; 21-22).

ರೋಗಿಯಾದ ವ್ಯಕ್ತಿಯು ಪಾಪ ಮಾಡಿದವನಾಗಿದ್ದರೆ ಅದು ಪರಿಹಾರವಾಗುವದು. ಅನೇಕ ಪಾಪಗಳು ನೇರವಾಗಿ ಪಾಪದ ಕಾರಣದಿಂದ ಬರುವದಿಲ್ಲ (ಯೋಹಾನ 9:1-3). ಆದರೆ ಕೆಲವು ರೋಗಗಳಂತೂ ಪಾಪದ ನೇರವಾದ ಫಲಿತವಾಗಿ ಉದ್ಭವಿಸುತ್ತವೆ; ಮತ್ತು ಯಾಕೋಬನು ಈ ವಚನದಲ್ಲಿ ತನ್ನ ಮನಸ್ಸೊಳಗೆ ಈ ವಿಧದ ರೋಗವನ್ನು ಇಟ್ಟುಕೊಂಡು ಮಾತಾಡುತ್ತಿದ್ದಾನೆ. ಅಂಥ ರೋಗವುಳ್ಳ ವ್ಯಕ್ತಿಯು ತನ್ನ ದೇಹಕ್ಕೆ ದೈಹೀಕವಾಗಿ ಸ್ವಸ್ಥತೆ ಮಾತ್ರವಲ್ಲದೆ ತನ್ನ ಆತ್ಮಕ್ಕೆ ಆತ್ಮೀಕವಾದ ಸ್ವಸ್ಥತೆಯನ್ನೂ ಹೊಂದಿಕೊಳ್ಳುವ ಅಗತ್ಯವಿರುತ್ತದೆ. ನಂಬಿಕೆಯಿಂದ ಮಾಡಿದ ಪ್ರಾರ್ಥನೆಯ ಮೂಲಕ ರೋಗಿಯಾದ ವ್ಯಕ್ತಿಯ ಪಾಪಗಳು ಕ್ಷಮಿಸಲ್ಪಟ್ಟು ಅವನ ಆತ್ಮವು ಸ್ವಸ್ಥಮಾಡುವದಕ್ಕೂ ಪಾಪಗಳನ್ನು ಕ್ಷಮಿಸುವದಕ್ಕೂ ಬಲವನ್ನು ಹೊಂದಿದ್ದನು (ಕೀರ್ತನೆಗಳು 103:2-3; ಮಾರ್ಕ 2:3-12). ಮತ್ತು ನಂಬಿಕೆಯ ಮೂಲಕ ಕ್ರಿಸ್ತನ ವಿಶ್ವಾಸಿಗಳೆಲ್ಲರೂ ಅದೇ ಬಲವನ್ನು ಪಡೆದುಕೊಳ್ಳಬಹುದು. ನಾವು ಪ್ರಾರ್ಥನೆಮಾಡುವ ಪ್ರತಿಯೊಬ್ಬ ರೋಗಿಯೂ ದೈಹೀಕವಾಗಿ ಸ್ವಸ್ಥತೆಯನ್ನು ಹೊಂದುವನೆಂಬದು ಯಾಕೋಬನ ತಾತ್ಪರ್ಯವಲ್ಲ. ಅದು ಅಸಾಧ್ಯವಾಗಿ ತೋರುತ್ತದೆ. ಯಾಕೆಂದರೆ, ಎಲ್ಲಾ ಮನುಷ್ಯರು ಒಂದು ದಿನದಲ್ಲಿ ಸಾಯಲೇಬೇಕು. ಆದರೆ ರೋಗಿಯ ದೇಹವು ಸ್ವಸ್ಥವಾಗದಿದ್ದಾಗ್ಯು ಆತನು. ಪಶ್ಚಾತ್ತಾಪ ಪಟ್ಟು ಯೇಸುವಿನಲ್ಲಿ ನಂಬಿಕೆಯಿಡುವದಾದರೆ ಆತನ ಪಾಪಗಳು ಕ್ಷಮಿಸಲ್ಪಟ್ಟು ಆತನ ಆತ್ಮವು ರಕ್ಷಣೆ ಹೊಂದುವದು. ರಕ್ಷಣೆಯು ಅತಿ ಪ್ರಾಮುಖ್ಯವಾದ ರೀತಿಯ "ಸ್ವಸ್ಥತೆ" ಆಗಿದೆ. ಇದು ಪರಿಪೂರ್ಣ ಸ್ವಸ್ಥತೆಯಾಗಿದ್ದು ಸದಾಕಾಲವೂ ಉಳಿಯುವಂಥದ್ದು.

16 ಅನೋನ್ಯತೆಯು ಪ್ರಾಮುಖ್ಯವಾದದ್ದೆಂದು ಕ್ರೈಸ್ತರೆಲ್ಲರೂ ಒಪ್ಪಿಕೊಳ್ಳುತ್ತಾರೆ. ನಾವು ಗೃಹ ಅನ್ಯೋನ್ಯತೆಗಳನ್ನು, ಪ್ರಾರ್ಥನಾಕೂಟಗಳನ್ನು, ಧ್ಯಾನಗಳನ್ನು, ಸಭಾ ಆರಾಧನೆಗಳನ್ನು ಹೊಂದಿದ್ದೇವೆ ಮತ್ತು ಇವೆಲ್ಲವೂ ಪ್ರಾಮುಖ್ಯವಾದವುಗಳು– ವಾಸ್ತವದಲ್ಲಿ, ಅತ್ಯವಶ್ಯಕವಾದವುಗಳು.

ಆದರೆ ನಿಜವಾದ ಅನ್ಯೋನ್ಯತೆಯು ಕೂಟಗಳಿಗೆ ಹಾಜರಾಗುವದಕ್ಕಿಂತಲೂ ಹೆಚ್ಚಿನದನ್ನು ಒಳಗೊಂಡಿರುತ್ತದೆ. ನಿಜವಾದ ಅನ್ಯೋನ್ಯತೆಯನ್ನು ಹೊಂದುವದೆಂದರೆ ನಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡುವದು ಎಂಬ ಅರ್ಥವಾಗಿರುತ್ತದೆ. ನಾವು ಒಬ್ಬರನ್ನೊಬ್ಬರು ತಿಳಿದಿದ್ದೇವೆ ಹಾಗೂ ಪ್ರೀತಿಸುತ್ತೇವೆ ಎಂಬುದು ಇದರ ಅರ್ಥವಾಗಿದೆ. ನಾವು ಒಬ್ಬರನ್ನೊಬ್ಬರು ವಿಶ್ವಾಸಿಸುತ್ತೇವೆ. ಹಾಗೂ ಒಬ್ಬರಿಗೊಬ್ಬರು ಪ್ರಾರ್ಥಿಸುತ್ತೇವೆಂಬುದು ಇದರ ಅರ್ಥ ವಾಗಿದೆ. ನಮ್ಮಲ್ಲಿ ಪ್ರತಿಯೊಬ್ಬರು ಪಾಪಗಳನ್ನು ಹೊಂದಿದ್ದಾರೆ; ನಮ್ಮಲ್ಲಿ ಪ್ರತಿಯೊಬ್ಬರು ಅರಿಕೆ ಮಾಡಬೇಕಾದ ಒಂದಲ್ಲಾ ಒಂದು ಸಂಗತಿಯನ್ನು ಹೊಂದಿದ್ದೇವೆ. ನಾವು ಒಬ್ಬರಿಂದೊಬ್ಬರು ವಿಷಯಗಳನ್ನು ಬಚ್ಚಿಟ್ಟುಕೊಳ್ಳಬಾರದು.

ಆದದರಿಂದ, ನಾವು ಒಬ್ಬರಿಗೊಬ್ಬರು ತಮ್ಮ ಪಾಪ ಗಳನ್ನು ಅರಿಕೆಮಾಡಿಕೊಳ್ಳೋಣ, ಮತ್ತು ಒಬ್ಬರಿಗೊಬ್ಬರು ಪ್ರಾರ್ಥಿಸೋಣ. ನಾವು ಹೀಗೆ ಮಾಡುವಾಗ ನಾವೆಲ್ಲರೂ ಆತ್ಮೀಕ ಸ್ವಸ್ಥತೆಯನ್ನು ಪಡೆದುಕೊಳ್ಳುವೆವು. ಮತ್ತು ಅದೇ ವೇಳೆಯಲ್ಲಿ ನಮ್ಮ ಅನ್ಯೋನ್ಯತೆಯು ಮತ್ತಷ್ಟು ಆಪ್ತವಾಗಿ ಬೆಳೆದು ಸಂತೋಷಭರಿತವಾಗುವದು.

ನೀತಿವಂತನ ಅತ್ಯಾಸಕ್ತಿಯುಳ್ಳ ಪ್ರಾರ್ಥ ನೆಯು ಬಹು ಬಲವಾದದ್ದು ಹಾಗೂ ಪ್ರಭಾವಕಾರಿಯಾದದ್ದು. ನೀತಿವಂತನು ಯಾರು? ನಾವು "ನೀತಿವಂತರು" ಆಗಿದ್ದೇವೆ. ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ನಾವು ದೇವರ

ದೃಷ್ಟಿಯಲ್ಲಿ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ. ಹಾಗಾದರೆ, ನಮ್ಮ ಪ್ರಾರ್ಥನೆಗಳು ಬಲವಾಗಿಯೂ ಪರಿಣಾಮಕಾರಿಯಾಗಿಯೂ ಇರುತ್ತವೆ. ಆದದರಿಂದ ನಾವು ಎಡೆಬಿಡದೆ ಪ್ರಾರ್ಥನೆ ಮಾಡೋಣ (1 ಥೆಸಲೋನಿಕ 5:17).

**17-18** ಹಳೆ ಒಡಂಬಡಿಕೆಯ ಪ್ರವಾದಿಯಾದ ಎಲೀಯನು ನಮ್ಮ ಹಾಗೆ ಒಬ್ಬ ಮನುಷ್ಯನಾಗಿದ್ದನು. ಆತನ ಪ್ರಾರ್ಥನೆಗಳು ಬಲವಾಗಿಯೂ ಪರಿಣಾಮಕಾರಿಯಾಗಿಯೂ ಇದ್ದವೆಂಬದರಲ್ಲಿ ಸಂಶಯವಿಲ್ಲ! ಆತನು ಪ್ರಾರ್ಥಿಸಲು ಇಸ್ರಾಯೇಲಿನ ಮೇಲೆ ಮೂರು ವರ್ಷ ಆರು ತಿಂಗಳವರೆಗೂ ಮಳೆ ಬೀಳಲಿಲ್ಲ. ಬಳಿಕ ಆತನು ತಿರಿಗಿ ಪ್ರಾರ್ಥನೆ ಮಾಡಲು ಮಳೆಯು ಬಂದಿತು. ಎಲೀಯನು ನಮಗೆ ಒಂದು ಮಾದರಿಯಾಗಿದ್ದಾನೆ (1 ಅರಸುಗಳು 17:1; 18:1, 41-45).

**19-20** ಯಾಕೋಬನು ಇಲ್ಲಿ ಕ್ರೈಸ್ತ ಸಹೋದರರನ್ನು ಸಂಭೋಧಿಸಿ ಮಾತಾಡುತ್ತಾನೆ. ಒಬ್ಬ ಸಹೋದರನು ಸತ್ಯಮಾರ್ಗವನ್ನು ತಪ್ಪಿಹೋಗಿದ್ದರೆ ಆತನು ಮರಣದ ಅಪಾಯದಲ್ಲಿರುತ್ತಾನೆ (ವಚನ 20). ಆದದರಿಂದ, ನಾವು ಯಾವಾಗಲೂ ಆತನನ್ನು ಹಿಂದಿರುಗಿಸುವದಕ್ಕೆ ಪ್ರಯತ್ನಿಸೋಣ. ದೇವರು ಮಾತ್ರವೇ ರಕ್ಷಿಸಬಲ್ಲನು ಆದರೆ ಪಾಪಮಾಡುವ ಸಹೋದರನನ್ನು ತಪ್ಪಾದ ಮಾರ್ಗದಿಂದ ತಿರುಗಿಸುವದಕ್ಕೆ ದೇವರು ನಮ್ಮನ್ನು ಉಪಯೋಗಿಸುತ್ತಾನೆ. ಪಾಪ ಮಾಡುತ್ತಿರುವ ಸಹೋದರನು ತನ್ನ ತಪ್ಪಾದ ಮಾರ್ಗದಿಂದ ತಿರಿಗಿಕೊಳ್ಳುವದಾದರೆ– ಅಂದರೆ, ಆತನು ಪಶ್ಚಾತಾಪಪಡುವದಾದರೆ– ಆತನ ಪಾಪಗಳೆಲ್ಲವು "ಮುಚ್ಚಲ್ಪಡುವವು" ಕ್ಷಮಿಸಲ್ಪಟ್ಟು ಅಳಿಸಿಹಾಕಲ್ಪಡುವವು . ಪಶ್ಚಾತ್ತಾಪ ಪಡುವದರ ಮೂಲಕ ಮಾತ್ರವೇ ನಮ್ಮ ಪಾಪಗಳು "ಮುಚ್ಚಲ್ಪಡುವವು" ಅಥವಾ ಕ್ಷಮಿಸಲ್ಪಡುವವು ; ಅನ್ಯಮಾರ್ಗವಿರುವದಿಲ್ಲ.

---

## ಟಿಪ್ಪಣಿ

1 ಇಬ್ರಿಯವು ಯೆಹೂದ್ಯರ ಮುಖ್ಯ ಭಾಷೆಯಾಗಿತ್ತು. ಅದು ಹೆಚ್ಚುಕಡಿಮೆ ಅರಾಮಿಕ್ ಭಾಷೆಯಂತಿತ್ತು ಅರಾಮಿಕವು ಮಧ್ಯಪೂರ್ವಾತ್ಯದ ಬಹುಪಾಲು ಜನರಿಂದ ಅತಿ ಸಾಮಾನ್ಯವಾಗಿ ಮಾತಾಡಲ್ಪಡುತ್ತಿದ್ದ ಭಾಷೆಯಾಗಿತ್ತು (ಯೇಸು ಸಹ ಅದೇ ಭಾಷೆಯನ್ನಾಡಿದರು).

2 ಗ್ರೀಕ್ ಭಾಷೆಯು ಐರೋಪ್ಯದ ಒಂದು ಪ್ರಮುಖ ರಾಷ್ಟ್ರವಾದ ಗ್ರೀಸಿನ ಭಾಷೆಯಾಗಿತ್ತು. ಹೊಸ ಒಡಂಬಡಿಕೆಯ ಕಾಲದಲ್ಲಿ ಮೆಡಿಟರನಿಯನ್ ಸಮುದ್ರದ ಸುತ್ತಲಿನ ರಾಷ್ಟ್ರಗಳಲ್ಲಿದ್ದ ಬಹುಪಾಲು ವಿದ್ಯಾವಂತ ಜನರು ಗ್ರೀಕ್ ಭಾಷೆಯನ್ನಾಡುತ್ತಿದ್ದರು. ಹೊಸ ಒಡಂಬಡಿಕೆಯು ಮೂಲತಃ ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟಿತ್ತು.

3 ಕ್ರೈಸ್ತನಾಗುವದಕ್ಕಾಗಿ ಯೆಹೂದ್ಯನಾಗಿರುವದನ್ನು ಬಿಟ್ಟುಬಿಡುವದು ಅವಶ್ಯಕವಾಗಿರುವದಿಲ್ಲ. ಕ್ರಿಸ್ತನು ತಾನೇ ಒಬ್ಬ ಯೆಹೂದ್ಯನಾಗಿದ್ದನು. ಯೆಹೂದ್ಯನೊಬ್ಬನು ಧರ್ಮಶಾಸ್ತ್ರ ಹಾಗೂ ತನ್ನ ಸ್ವಕಾರ್ಯಗಳಲ್ಲಿ ಭರವಸವಿಡುವದನ್ನು ನಿಲ್ಲಿಸಿ ಕ್ರಿಸ್ತನಲ್ಲಿ ಮಾತ್ರವೇ ವಿಶ್ವಾಸವಿಡುವದು ಅವಶ್ಯಕವಾಗಿರುತ್ತದೆ.

4 ಜ್ಞಾನ ಹಾಗೂ ವಿಧ್ಯಾವಾಕ್ಯದ (ತಿಳುವಳಿಕೆಯ) ಅಸ್ವಾಭಾವಿಕ ವರಗಳು ಸಹ ಇರುತ್ತವೆ. ಅವು ಪವಿತ್ರಾತ್ಮನ ವರಗಳಾಗಿವೆ (1 ಕೊರಿಂಥ 12:8 ಮತ್ತು ವಾಖ್ಯಾನ ನೋಡಿರಿ). ಹೇಗಿದ್ದರೂ, ಯಾಕೋಬನು ಈ ವಚನಗಳಲ್ಲಿ ಪವಿತ್ರಾತ್ಮನ ಈ ವಿಶೇಷ ವರಗಳ ಬಗ್ಗೆ ಮಾತಾಡುತ್ತಿರುವದಿಲ್ಲ. ಆತನು ಸಾಮಾನ್ಯ ಅರ್ಥದಲ್ಲಿ ಜ್ಞಾನದ ಕುರಿತಾಗಿ ಮಾತಾಡುತ್ತಿದ್ದಾನೆ.

5 ಆತನು ತನ್ನಲ್ಲಿ ಉಲ್ಲಾಸ (ಹೆಚ್ಚಳ) ಪಡದೆ ದೇವರಲ್ಲಿಯೇ ಪಡಬೇಕು. ಆತನು ತನ್ನ ಉತ್ತಮ (ಆತ್ಮೀಕ) ಸ್ಥಿತಿಯನ್ನು ಸ್ವಂತ ಯೋಗ್ಯತೆಯ ಕಾರಣದಿಂದ ಹೊಂದಲಿಲ್ಲ; ಆತನು ಅದನ್ನು ದೇವರ ಕೃಪೆಯಿಂದಲೇ ಹೊಂದಿರುತ್ತಾನೆ.

6 ಈ ಅರ್ಥದಲ್ಲಿ ಕಷ್ಟಗಳು ನಮಗೆ ಸಂಭವಿಸುವ ಕೆಟ್ಟ ಸಂಗತಿಗಳು ಮಾತ್ರವಲ್ಲ; ಅವು ಗಳು ಸಂತೋಷಕರ ಸಂಗತಿಗಳು ಸಹಆಗಿರ ಬಹುದು. ಅಂಥ ಸಂತೋಷಕರ ಸಂಗತಿಗಳನ್ನು "ಸಂಕಟಗಳು" ಎಂದು ಕರೆಯಬಹುದು ಯಾಕೆಂದರೆ ಅವು ಗಳು ನೋವು ದಾಯಕ ಸಂಕಟಗಳಂತೆಯೇ ನಮ್ಮ ನಂಬಿಕೆ ಹಾಗೂ ವಿಧೇಯತೆಯನ್ನು ಪರಿಶೋಧಿಸುತ್ತವೆ. ಹಾಗಾದರೆ ಈ ವಚನದಲ್ಲಿ ಸಂಕಟಗಳು (ಕಷ್ಟ) ಎಂಬ ಪದವು ನಂಬಿಕೆಯ ಪರಿಶೋಧನೆ ಎಂಬ ಅರ್ಥವನ್ನು ಕೊಡುತ್ತದೆ.

7 ಈ ನಂಬಿಕೆಯ ಚರ್ಚೆಯುದ್ದಕ್ಕೂ ಸ್ವತಃ ನಂಬಿಕೆಯೇ ನಮ್ಮನ್ನು ರಕ್ಷಿಸುವದಿಲ್ಲ ಎಂಬದನ್ನು ನೆನಪಿನಲ್ಲಿಟ್ಟುಕೊಳ್ಳುವದು ಪ್ರಾಮುಖ್ಯವಾದದ್ದು. ನಾವು ಕೃಪೆಯ ಮೂಲಕ ರಕ್ಷಿಸಲ್ಪಟ್ಟಿದ್ದೇವೆ; ದೇವರೇ ನಮ್ಮನ್ನು ರಕ್ಷಿಸುವಾತನು (ಎಫೆಸ 2:8-9 ಮತ್ತು ವ್ಯಾಖ್ಯಾನ ನೋಡಿರಿ).

8 ಪ್ರೀತಿ ಹಾಗೂ ವಿಧೇಯತೆ ಯಾವಾಗಲೂ ಜೊತೆಯಾಗಿ ಸಾಗುತ್ತವೆ; ವಿಧೇಯವಾಗುದೆಂದರೆ ಪ್ರೀತಿಸುವದು, ಹಾಗೂ ಪ್ರೀತಿಸುವದೆಂದರೆ ವಿಧೇಯವಾಗುವದು ಆಗಿದೆ (ಯೋಹಾನ 14:15 ನೋಡಿರಿ). ಅದೇ ವಿಧದಲ್ಲಿ ನಂಬಿಕೆ ಮತ್ತು ಕ್ರಿಯೆಗಳು ಯಾವಾಗಲೂ ಜೊತೆಯಾಗಿ ಸಾಗುತ್ತವೆ; ನೀವು ಒಂದನ್ನು ಬಿಟ್ಟು ಇನ್ನೊಂದನ್ನು ಹೊಂದಿರಲಾಗದು.

9 ಈ ವಚನಗಳಲ್ಲಿ ಶಪಿಸುವದು ಹಾಗೂ ಶಾಪ (ವಚನ 9) ಎಂಬ ಪದವು ಸ್ವತಃ ಶಪಿಸುವದನ್ನು ಮಾತ್ರವಲ್ಲದೆ ಸಾಮಾನ್ಯವಾದ ಟೀಕಾತ್ಮಕ ಮಾತನ್ನು ಸಹ ಸೂಚಿಸುತ್ತದೆ.

10 ಖಂಡಿತವಾಗಿಯೂ ನಾವು ಮಾತಾಡಬಾರದ ಸಂಗತಿಗಳು ಇರುತ್ತದೆ (ಉದಾಹರಣೆಗೆ ನಾವು ಇತರರ ತಪ್ಪುಗಳ ಬಗ್ಗೆ ಮಾತಾಡಬಾರದು) . ಆದರೆ ನಮ್ಮ ಮೌನವು ಎಂದಿಗೂ ಇತರರನ್ನು ವಂಚಿಸುವ ಉದ್ದೇಶಕ್ಕಾಗಿ ಇರಬಾರದು.

11 ಈ ಮಾತುಗಳ ನಿಖರವಾದ ಭಾಷಾಂತರವು ಏನಾಗಿರಬೇಕೆಂಬದು ಖಚಿತವಾಗಿರುವದಿಲ್ಲ; ಬೈಬಲಿನ ವಿವಿಧ ಆವೃತ್ತಿಗಳು ವಿವಿಧ ಭಾಷಾಂತರಗಳನ್ನು ನೀಡುತ್ತವೆ. ಇಲ್ಲಿ ಪ್ರಸ್ತಾಪಿಸಲಾಗಿರುವ ಆತ್ಮವು ಪವಿತ್ರಾತ್ಮನೋ ಅಥವಾ ಮನುಷ್ಯನ ಆತ್ಮವೋ ಎಂಬುದು ಖಚಿತವಾಗಿರುವದಿಲ್ಲ. ಯಾವ ಭಾಷಾಂತರವನ್ನು ಆರಿಸಿಕೊಂಡರೂ ಸರಿಯೇ ಈ ವಾಕ್ಯಭಾಗದ ಸಾಮಾನ್ಯ ಅರ್ಥವು ದೇವರು ಅಭಿಮಾನ ತಾಪದಿಂದ ನಮ್ಮನ್ನು ನೋಡುತ್ತಾನೆ ಮತ್ತು ನಾವು ಆತನಿಗಿಂತಲೂ ಹೆಚ್ಚಾಗಿ ಲೋಕವನ್ನು ಪ್ರೀತಿಸಲಾರಂಭಿಸುವಾಗ ಆತನು ನಮ್ಮ ವಿಷದಲ್ಲಿ ಬಹಳವಾಗಿ ಅಸಮಾಧಾನಗೊಳ್ಳುತ್ತಾನೆ ಎಂದು ತೋರುತ್ತದೆ.

12 ಪೌಲನು ಸಹ ಮುಂದಾಗುವ ಸಂಗತಿಗಳ ಕುರಿತು ಅವು ಈಗಾಗಲೇ ಸಂಭವಿಸಿವೆಯೇನೋ ಎಂಬಂತೆ ಬರೆದಿದ್ದಾನೆ (ರೋಮ 8:30 ಮತ್ತು ವ್ಯಾಖ್ಯಾನ ನೋಡಿರಿ).

13 ಸರ್ವಶಕ್ತನಾಗಿರುವ ಕರ್ತನು ಎಂಬ ಪದಗಳಿಗೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಸೇನಾಧಿಪತಿಯಾಗಿರುವ ಕರ್ತನು" ಎಂದು ಹೇಳುತ್ತವೆ. ಅರ್ಥವು ಒಂದೇ ಆಗಿದೆ. "ಸೇನೆಗಳು" ದೇವದೂತರ ಸೈನ್ಯಗಳಾಗಿವೆ.

14 ಈ ವಚನದ ಗ್ರೀಕ್ ಪ್ರತಿಯಲ್ಲಿ ಅಭಿಷೇಕಿಸು ಎಂದು ಯಾಕೋಬನು ಉಪಯೋಗಿಸುವ ಪದವು ಔಷಧಿಯ ಹಚ್ಚುವಿಕೆಯನ್ನು ಸೂಚಿಸುತ್ತದೆ. ಇದು ಸಂಸ್ಕಾರಿಕ ಅಭಿಷೇಕವನ್ನು ಸೂಚಿಸುವದಿಲ್ಲ; ಅದಕ್ಕೆ ಬೇರೆ ಗ್ರೀಕ್ ಪದವು ಉಪಯೋಗಿಸಲ್ಪಟ್ಟಿದೆ.

15 ಹೇಗಿದ್ದರೂ, ಎಣ್ಣೆಯು ಪವಿತ್ರಾತ್ಮನೆಂದು ಅರ್ಥವನ್ನು ಸಹಕೊಡಬಹುದು; ಎಣ್ಣೆಯು ಪವಿತ್ರತ್ಮಾನ ಒಂ ದು ಸಂಕೇತವಾಗಿದೆ. ಎಣ್ಣೆಯ ಎರಡು ಅರ್ಥಗಳು ಇಲ್ಲಿ ಇರಬಹುದಾದ ಸಾಧ್ಯತೆಯಿರುತ್ತದೆ, ಮತ್ತು ಎರಡೂ ಜೊತೆಯಾಗಿ ಹೊಂದುತ್ತವೆ. ಯಾಕೆಂದರೆ ಒಬ್ಬ ವ್ಯಕ್ತಿಯನ್ನು ಸ್ವಸ್ಥಮಾಡಲು ನಾವು ಔಷಧಿಯನ್ನು ಉಪಯೋಗಿಸಿದಾಗಲೂ ವಾಸ್ತವದಲ್ಲಿ ಸ್ವಸ್ಥತೆಯನ್ನು ಮಾಡುವವನು ಪವಿತ್ರಾತ್ಮನೇ.

16 ಕ್ರಿಸ್ತನು ಪವಿತ್ರಾತ್ಮನ ಮುಖಾಂತರ ಸ್ವಸ್ಥಮಾಡುತ್ತಾನೆ.

# ಪೇತ್ರನು ಬರೆದ ಮೊದಲನೆಯ ಪತ್ರಿಕೆ

## ಪರಿಚಯ

ಈ ಪತ್ರಿಕೆಯು ಅಪೊಸ್ತಲನಾದ ಪೇತ್ರನಿಂದ ಸುಮಾರು ಕ್ರಿ.ಶಕ 64ರಲ್ಲಿ ಬರೆಯಲ್ಪಟ್ಟಿತು. ಪೇತ್ರನು ಈ ಪತ್ರಿಕೆಯನ್ನು ಬರೆಯುವಾಗ ರೋಮಾಪುರದಲ್ಲಿದ್ದನು ಎಂದು ಬಹುಪಾಲು ಪಂಡಿತರು ನಂಬುತ್ತಾರೆ. ಪತ್ರಿಕೆಯು ಆಧುನಿಕ ತುರ್ಕಿ (ಟರ್ಕಿ)ಯಲ್ಲಿದ್ದ ರೋಮಾಯ ಸಾಮ್ರಜ್ಯದ ಪ್ರಾಂತ್ಯಗಳ ಹಲವಾರು ಸಭೆಗಳಿಗೆ ಬರೆಯಲ್ಪಟ್ಟಿತ್ತು; ಅಲ್ಲಿನ ವಿಶ್ವಾಸಿಗಳನ್ನು ಕ್ರಿಸ್ತನ ಹೆಜ್ಜೆಯ ಜಾಡಿನಲ್ಲಿ ನಡೆದು ಸಂಕಟಗಳ ವೇಳೆಯಲ್ಲಿ ತಮ್ಮ ನಂಬಿಕೆಯಲ್ಲಿ ದೃಢವಾಗಿ ನಿಲ್ಲಬೇಕೆಂದು ಧೈರ್ಯಪಡಿಸುವದಕ್ಕಾಗಿ ಈ ಪತ್ರಿಕೆಯು ಬರೆಯಲ್ಪಟ್ಟಿತು.

ಪೇತ್ರನು ಯೇಸುವಿನ ಹನ್ನೆರಡು ಮಂದಿ ಮೂಲ ಶಿಷ್ಯರಲ್ಲಿ ಪ್ರಮುಖನಾಗಿದ್ದನು. ಆತನ ಜೀವಿತವು ನಾಲ್ಕು ಸುವಾರ್ತೆಗಳು ಹಾಗೂ ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ವಿವರವಾಗಿ ಬಣ್ಣಿಸಲ್ಪಟ್ಟಿದೆ.

## ಹೊರ ರೇಖೆ

ಅ. ರಕ್ಷಣೆಯ ಶ್ಲಾಘ್ಯಗಳು ಹಾಗೂ ಜವಾಬ್ದಾರಿಗಳು (1:1-2:10).
 1. ದೇವರ ರಕ್ಷಣಾಯೋಜನೆ (1:1-12)
 2. ರಕ್ಷಣೆಯ ಜೀವನ ಶೈಲಿ (1:13-25)
 3. ರಕ್ಷಣೆಯಲ್ಲಿ ಬೆಳವಣಿಗೆ (2:1-10)

ಆ. ಕ್ರೈಸ್ತೀಯ ಅಧೀನತೆ ಹಾಗೂ ದೇವರ ಗೌರವ (2:11- 3:7)
 1. ಕ್ರೈಸ್ತೀಯ ಅಧೀನತೆಯ ಕರ್ತವ್ಯ (2: 11-2:25).
 2. ಗಂಡಂದಿರು ಹಾಗೂ ಹೆಂಡತಿಯರು (3:1-7)

ಇ. ಕ್ರೈಸ್ತರ ಬಾಧೆ ಹಾಗೂ ಹಿಂಸೆ (3:8-5 :14).
 1. ನೀತಿಗಾಗಿ ಬಾಧೆಪಡುವದರ ಧನ್ಯತೆ (3:8-22).
 2. ದೇವರಿಗಾಗಿ ಜೀವಿಸುವದು (4: 1-11)
 3. ಬಾಧೆಯಲ್ಲಿ ಸಂತಾಪಗಳು (4 :12-19)
 4. ಹಿರಿಯರು ಹಾಗೂ ಯೌವನಸ್ಥರಿಗೆ ಪ್ರಬೋಧನೆಗಳು (5 : 1-14).

## ಅಧ್ಯಾಯ - 1

### ಜೀವವುಳ್ಳ ನಿರೀಕ್ಷೆ (1:1-12)

1 ಪೇತ್ರನು ಈ ಪತ್ರಿಕೆಯನ್ನು ಆಧುನಿಕ ಟರ್ಕಿಯಲ್ಲಿದ್ದ ರೋಮಾಯ ಸಾಮ್ರಾಜ್ಯದ ಕೆಲವು ಪ್ರಾಂತ್ಯಗಳಲ್ಲಿ ನೆಲೆಸಿದ್ದ ದೇವಜನರಿಗೆ –ಅಂದರೆ, ಕ್ರೈಸ್ತರಿಗೆ– ಬರೆದನು. ರೋಮಾಯರಿಂದುಂಟಾದ[1] ಹಿಂಸೆಯ ಕಾರಣದಿಂದ ಈ ಕ್ರೈಸ್ತರು ತಮ್ಮ ಮೂಲ ನಿವಾಸಗಳಿಂದ ಚದುರಿದವರಾಗಿ ಈ ಪ್ರಾಂತ್ಯಗಳಿಗೆ ಓಡಿ ಹೋಗಿದ್ದರು. ಬಹುಶಃ ಅವರಲ್ಲಿ ಯೆಹೂದ್ಯ ವಿಶ್ವಾಸಿಗಳೂ ಅನ್ಯಜನಾಂಗ ವಿಶ್ವಾಸಿಗಳೂ ಸೇರಿದ್ದರು.

ಪೇತ್ರನು ತನ್ನನ್ನು ಅಪೊಸ್ತಲ ಎಂದು ಕರೆದುಕೊಳ್ಳುತ್ತಾನೆ. ಆತನು ಯೇಸುವಿನ ಹನ್ನೆರಡು ಮಂದಿ ಮೂಲ ಶಿಷ್ಯರಲ್ಲಿ ಪ್ರಮುಖನಾಗಿದ್ದನು. ಯೂದನನ್ನು ಹೊರತುಪಡಿಸಿ ಈ ಶಿಷ್ಯರೆಲ್ಲರೂ ಯೇಸುವಿನ ಮರಣದ ಬಳಿಕ ಅಪೊಸ್ತಲರೆಂದು ಪ್ರಸಿದ್ಧರಾದರು.

2 ಪೇತ್ರನು ತನ್ನ ವಾಚಕರನ್ನು ದೇವರ ಭವಿಷ್ಯದ್ ಜ್ಞಾನಾನುಸಾರವಾಗಿ ಆರಿಸಿಕೊಳ್ಳಲ್ಪಟ್ಟವರು– ಅಂದರೆ, ಕ್ರಿಸ್ತನ ವಿಶ್ವಾಸಿಗಳು– ಎಂದು ಸಂಬೋಧಿಸುತ್ತಾನೆ ವಿಶ್ವಾಸಿಗಳೆಲ್ಲರೂ ದೇವರ ಭವಿಷ್ಯದ್ ಜ್ಞಾನಾನುಸಾರವಾಗಿ ಜಗದುತ್ಪತ್ತಿಗೆ ಮುಂಚೆ ಆರಿಸಿಕೊಳ್ಳಲ್ಪಟ್ಟಿದ್ದಾರೆ (ರೋಮ 8:29-30; ಎಫೆಸ 1:4-5 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ಯೇಸುಕ್ರಿಸ್ತನಿಗೆ ವಿಧೇಯರಾಗುವದಕ್ಕೆ ಆರಿಸಿಕೊಳ್ಳಲ್ಪಟ್ಟವರು. ಅಂದರೆ, ದೇವರು ನಮ್ಮನ್ನು ತನ್ನ ಮಗನ ಸಾರೂಪ್ಯವುಳ್ಳವರಾಗಬೇಕೆಂದು ಆರಿಸಿಕೊಂಡಿದ್ದಾನೆ (ರೋಮ 8:29) ಮತ್ತು ಆತನ ಎದುರಿನಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ಆರಿಸಿಕೊಂಡಿದ್ದಾನೆ (ಎಫೆಸ 1:4). ಪರಿಶುದ್ಧರಾಗಿರುವದೆಂದರೆ ದೇವರಿಗೆ ವಿಧೇಯರಾಗುವದೇ; ಪರಿಶುದ್ಧತೆ ಮತ್ತು ವಿಧೇಯತೆ ಯಾವಾಗಲೂ ಜೊತೆಯಾಗಿ ಸಾಗುತ್ತವೆ (ವಚನ 20 ನೋಡಿರಿ).

ನಾವು ಪವಿತ್ರಾತ್ಮನ ಪ್ರತಿಷ್ಠಿಸಲ್ಪಡುವ ಕಾರ್ಯದ ಮೂಲಕ ಆರಿಸಿಕೊಳ್ಳಲ್ಪಟ್ಟಿದ್ದೇವೆ. ದೇವರು ನಮ್ಮನ್ನು ಆರಿಸಿಕೊಳ್ಳುತ್ತಾನೆ; ಪವಿತ್ರಾತ್ಮನು ನಮ್ಮನ್ನು ಪ್ರತಿಷ್ಠಿಸುತ್ತಾನೆ– ಅಂದರೆ, ಮೂಲಕ ಮಾತ್ರವೇ ನಾವು ದೇವರ ದೃಷ್ಟಿಯಲ್ಲಿ ಪರಿಶುದ್ಧರಾಗುತ್ತೇವೆ.

ಪರಿಶುದ್ಧರಾಗುವದಕ್ಕೆ ಮೊದಲು ನಾವು ನಮ್ಮ ಪಾಪಗಳಿಂದ ಶುಚಿಗೊಳ್ಳಬೇಕು. ನಾವು ಕ್ರಿಸ್ತನ ಯಜ್ಞದ ಮೂಲಕ– ಅಂದರೆ, ಆತನ ಮರಣದ ಮೂಲಕ, ಆತನ ರಕ್ತದಿಂದ ಪ್ರೋಕ್ಷಿತರಾಗುವದರ ಮೂಲಕ ಶುಚಿಗೊಳ್ಳುತ್ತೇವೆ (ಇಬ್ರಿಯ 9:13-14 ನೋಡಿರಿ). ದೇವರು ಪುರಾತನ ಯೆಹೂದ್ಯರೊಂದಿಗೆ ಮಾಡಿದ ಹಳೆ ಒಡಂಬಡಿಕೆಯು ರಕ್ತ ಪ್ರೋಕ್ಷಣೆಯಿಂದ ದೃಢಪಡಿಸಲ್ಪಟ್ಟಿತು (ವಿಮೋಚನ ಕಾಂಡ 24:8). ಅದೇ ವಿಧದಲ್ಲಿ, ಯೇಸುಕ್ರಿಸ್ತನ ಮಧ್ಯಸ್ಥಿಕೆಯಿಂದಾದ ಹೊಸ ಒಡಂಬಡಿಕೆಯು ರಕ್ತದ, ಯೇಸುವಿನ ರಕ್ತದ ಪ್ರೋಕ್ಷಣೆಯಿಂದ ಸ್ಥಿರಪಡಿಸಲ್ಪಟ್ಟಿತು (ಮಾರ್ಕ 14:24; ಇಬ್ರಿಯ 9:18-22). ಕ್ರಿಸ್ತನ ರಕ್ತದ ಪ್ರೋಕ್ಷಣೆಯಿಂದ ನಾವು ನಮ್ಮ ಪಾಪಗಳಿಂದ ಶುಚಿಗೊಳ್ಳುತ್ತೇವೆ. ಹಾಗೂ ನಾವು ನಮ್ಮ ಗತಕಾಲದ ಪಾಪಗಳಿಗೆ ಮಾತ್ರವಲ್ಲದೆ ದಿನ ನಿತ್ಯ ಮಾಡಿದ ಹೊಸ ಪಾಪಗಳಿಗೂ ಕ್ಷಮಾಪಣೆಯನು ಪಡೆದುಕೊಳ್ಳುತ್ತೇವೆ. ಯೇಸುವಿನ ರಕ್ತವು ನಮ್ಮನ್ನು ಸಕಲ ಪಾಪಗಳಿಂದ ಬಿಡಿಸಿ ಶುದ್ಧೀಕರಿಸುತ್ತದೆ. (1 ಯೋಹಾನ 1:7).

ಆದದರಿಂದ, ಈ ವಚನದಲ್ಲಿ ನಾವು ನಮ್ಮ ತ್ರೈಯೇಕ ದೇವರ ರಕ್ಷಣಾ ಕಾರ್ಯವನ್ನು ಕಾಣಬಹುದುಃ ದೇವರು ನಮ್ಮನ್ನು ಆರಿಸಿಕೊಳ್ಳುತ್ತಾನೆ. ಯೇಸುಕ್ರಿಸ್ತನು ತನ್ನ ರಕ್ತದಿಂದ ನಮ್ಮನ್ನು ವಿಮೋಚಿಸುತ್ತಾನೆ, ಮತ್ತು ಪವಿತ್ರಾತ್ಮನು ನಮ್ಮನ್ನು ಪರಿಶುದ್ಧಗೊಳಿಸುತ್ತಾನೆ.

ಇಲ್ಲಿ ಪೇತ್ರನು ಈ ಚದುರಿಹೋಗಿರುವ ಕ್ರೈಸ್ತರಿಗಾಗಿ ಪ್ರಾರ್ಥಿಸುತ್ತಾನೆಃ ನಿಮಗೆ ಕೃಪೆಯೂ ಶಾಂತಿಯೂ (ಸಮಾಧಾನವೂ) ಹೆಚ್ಚೆಚ್ಚಾಗಿ ದೊರೆಯಲಿ (ರೋಮ 1:7; ಎಫೆಸ 1:7ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಮೊದಲ ಕೃಪೆ ನಂತರ ಸಮಾಧಾನ. ಕೃಪೆಯ ಮೂಲಕ ನಾವು ದೇವರೊಂದಿಗೆ ಸಮಾಧಾನ ಹೊಂದಿದ್ದೇವೆ. ಇತರರೊಂದಿಗೆ ನಮ್ಮೊಂದಿಗೆ ಸಮಾಧಾನ ಹೊಂದಿದ್ದೇವೆ.

3-4 ಈ ವಚನಗಳಲ್ಲಿ ಪೇತ್ರನು ಪ್ರಾರಂಭದಿಂದ ಕಡೇವರೆಗಿನ ವಿಶ್ವಾಸಿಯ ರಕ್ಷಣೆಯನ್ನು ಬಣ್ಣಿಸುತ್ತಾನೆ. ನಮ್ಮ ರಕ್ಷಣೆಯು ದೇವರ ಮಹಾಕರುಣೆಯಲ್ಲಿ ಪ್ರಾರಂಭವಾಗುತ್ತದೆ. ಆತನ ಕೃಪೆಯು ಎಷ್ಟೋ ಮಹಾಕೃಪೆಯಾಗಿದ್ದು ನಮ್ಮಂತಹ ಅಯೋಗ್ಯ ಪಾಪಿಗಳನ್ನು ಸಹ ಆತನು ರಕ್ಷಿಸಿದನು (ರೋಮ 5:8). ದೇವರು ತನ್ನ ಮಹಾಕರುಣಾನುಸಾರವಾಗಿ ನಮಗೆ ಹೊಸಜನ್ಮ (ಹೊಸಜೀವನ) ಹಾಗೂ ಜೀವಕರವಾದ ನಿರೀಕ್ಷೆಯನ್ನು ಸಹ ನೀಡಿದನು (ಯೋಹಾನ 3:3-5, ರೋಮ 8:24; ತೀತನು 3:7ನೋಡಿರಿ).

ನಾವು ಈ ಜೀವಕರವಾದ ನಿರೀಕ್ಷೆಯನ್ನು ಸತ್ತವರೊಳಗಿಂದ ಎದ್ದು ಬಂದ ಯೇಸುಕ್ರಿಸ್ತನ ಪುನರುತ್ಥಾನದ ಮೂಲಕ ಪಡೆಯುತ್ತೇವೆ. ಯೇಸು ಸಾಯುವದನ್ನು ಪೇತ್ರನು ಸ್ವತಃ ಕಂಡಿದ್ದನು. ಅವನ ಸ್ವಂತ ನಿರೀಕ್ಷೆಯೇ ನಾಶವಾಗಿತ್ತು. ಆದರೆ ನಂತರ ಆತನು ಸತ್ತವರೊಳಗಿಂದ ಎದ್ದು ಬಂದ ಯೇಸುವನ್ನು ನೋಡಿದನು! ಯೇಸುವಿನ ಪುನರುತ್ಥಾನದ ಮೂಲಕ ಪೇತ್ರನ ನಿರೀಕ್ಷೆಯು ಪುನಃ ಜೀವಪಡೆಯಿತು.

ಯೇಸು ಸತ್ತವರೊಳಗಿಂದ ಎದ್ದು ಬಂದದ್ದರಿಂದ ಕ್ರೈಸ್ತರೆಲ್ಲರು ಸಹ ಸತ್ತವರೊಳಗಿಂದ ಎದ್ದು ಬರುವರು. ಅವರು ಮರಣದ ಮೇಲೆ ಜಯ ಪಡೆದುಕೊಳ್ಳುವರು ಮತ್ತು ಬಳಿಕ ಅವರು ಲಯ ಕಳಂಕ ಕ್ಷಯಗಳಿಲ್ಲದ ಬಾಧ್ಯತೆಯನ್ನು ಹೊಂದುವರು– ಅದೇನೆಂದರೆ, ನಿತ್ಯ ಜೀವವನ್ನು ಹೊಂದುವರು (ವಚನ 4). ಈ ಬಾಧ್ಯತೆಯು ನಮಗಾಗಿ ಪರಲೋಕದಲ್ಲಿ ಇಡಲ್ಪಟ್ಟಿದೆ. ದೇವರು ಎಲ್ಲಾ ಜನರಿಗೂ ಒಳ್ಳೇ ವರಗಳನ್ನು ನೀಡುತ್ತಾನೆ. ಆದರೆ ತನ್ನ ಮಕ್ಕಳಿಗೆ ಮಾತ್ರವೇ ಬಾಧ್ಯತೆಯನ್ನು ಕೊಡುತ್ತಾನೆ (ರೋಮ 8:16-17; ಗಲಾತ್ಯ 4:4-7).

**5** ನಾವು ನಂಬಿಕೆಯ ಮೊದಲನೆಯ ದಿನದಿಂದ ನಮ್ಮ ಪರಲೋಕದಲ್ಲಿನ ಪೂರ್ಣ ರಕ್ಷಣೆಯನ್ನು ಪಡೆದುಕೊಳ್ಳುವ ದಿನದವರೆಗೂ ನಾವು ದೇವರ ಬಲದಿಂದ ಕಾಯಲ್ಪಡುತ್ತೇವೆ. (1 ಕೊರಿಂಥ 1:8; ಫಿಲಿಪ್ಪಿ 1:6 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆದರೆ ರಕ್ಷಣೆಯನ್ನು ಪಡೆಯಬೇಕಾದರೆ ನಾವು ನಮ್ಮ ಪಾಲಿನ ಕಾರ್ಯವನ್ನು ಸಹ ಮಾಡಬೇಕುಃ ಏನೆಂದರೆ, ನಾವು ನಂಬಿಕೆಯಿಡಬೇಕು. ನಂಬಿಕೆಯಿಲ್ಲದೆ, ನಾವು ಯಾವ ರಕ್ಷಣೆಯನ್ನಾಗಲಿ, ಬಾಧ್ಯತೆಯನ್ನಾಗಲಿ ಹೊಂದುವದಿಲ್ಲ.

ನಮ್ಮ ರಕ್ಷಣೆಯು ಅಂತ್ಯಕಾಲದಲ್ಲಿ–ಅಂದರೆ, ಕ್ರಿಸ್ತನು ತಿರಿಗಿ ಬರುವಾಗ ಪ್ರತ್ಯಕ್ಷವಾಗುವದು. ಆ ಕಾಲದಲ್ಲಿ ಆತನು ತಾನು ಆದುಕೊಂಡವರನ್ನು ಭೂಮಿಯ ಕಟ್ಟಕಡೆಯವರೆಗೆ ನಾಲ್ಕು ದಿಕ್ಕುಗಳಿಂದ ಒಟ್ಟು ಗೂಡಿಸುವನು (ಮಾರ್ಕ 13:27). ನಮ್ಮ ರಕ್ಷಣೆಯು ಈಗ ಭೂಮಿಯ ಮೇಲೆ ಪ್ರಾರಂಭಗೊಳ್ಳುತ್ತದೆ (2 ಕೊರಿಂಥ 6:2); ಆದರೆ ಪರಲೋಕದಲ್ಲಿಯೇ ಅದು ಪರಿಪೂರ್ಣಗೊಳ್ಳುವದು.

**6-7** ನಮ್ಮ ನಂಬಿಕೆಯನ್ನು ಪರಿಶೋಧಿಸಿ ಬಲಪಡಿಸುವದಕ್ಕಾಗಿ ದೇವರು ನಮ್ಮ ಮೇಲೆ ನಾನಾ ವಿಧವಾದ ಕಷ್ಟಗಳನ್ನು ಬರಮಾಡುತ್ತಾನೆ. ಬಂಗಾರವು ಬೆಂಕಿಯಲ್ಲಿ ಪುಟಹಾಕಿ ಶೋಧಿಸಲ್ಪಡುವ ಹಾಗೆಯೇ ನಮ್ಮ ನಂಬಿಕೆಯು ಕಷ್ಟಗಳಲ್ಲಿ "ಪುಟಹಾಕಿ ಶೋಧಿಸಲ್ಪಡುವದು" ಅಥವಾ ಪವಿತ್ರಗೊಳಿಸಲ್ಪಡುವದು ದೇವರು ಕಷ್ಟಗಳ ಮೂಲಕ ನಮ್ಮ ನಂಬಿಕೆಯು ನೈಜವಾದ್ದೋ ಅಥವಾ ಅಲ್ಲವೋ ಎಂಬದನ್ನು ಹೇಳಬಲ್ಲನು. ನಮ್ಮ ನಿತ್ಯಜೀವದ ನಿರೀಕ್ಷೆಯ ಕಾರಣದಿಂದ ನಾವು ಈ ಅಲ್ಪಕಾಲದ ಕಷ್ಟಗಳಲ್ಲಿ ಸಂತೋಷಿಸಲು ಶಕ್ತರಾಗಿದ್ದೇವೆ. ಈ ಕಷ್ಟ ಗಳು ನಮಗೆ ಹಾನಿಯುಂಟು ಮಾಡುವದಕ್ಕಲ್ಲ, ಆದರೆ ನಮ್ಮ ಹಿತಕ್ಕಾಗಿಯೇ ಇರುತ್ತದೆ. (ಮತ್ತಾಯ 5:11-12; ರೋಮ 5:3-4, ಯಾಕೋಬ 1:2-4; 1 ಪೇತ್ರ 3:12-14 ಮತ್ತು ವಾಖ್ಯಾನಗಳನ್ನು ನೋಡಿರಿ). ನಾವು ಪರಿಶೋಧಿಸಲ್ಪಟ್ಟ ಬಳಿಕ ನಮ್ಮ ನಂಬಿಕೆಯು ನೈಜವಾದದ್ದೆಂದು ನಿರೂಪಿಸಲ್ಪಟ್ಟರೆ ನಾವು ಕೀರ್ತಿ, ಪ್ರಭಾವ, ಮತ್ತು ಮಾನಗಳನ್ನು ಹೊಂದುವೆವು. ನಾವು ಈ ಕೀರ್ತಿ, ಪ್ರಭಾವ ಮಾನಗಳನ್ನು ಕ್ರಿಸ್ತನು ಪ್ರತ್ಯಕ್ಷನಾಗುವಾಗ–ಅಂದರೆ, ಆತನು ತಿರಿಗಿ ಬರುವಾಗ–ಹೊಂದುವೆವು. ನಮ್ಮ ನಂಬಿಕೆಯು ಪರಿಶೋಧನೆಯ ವೇಳೆ ವಿಫಲವಾಗುವದಾದರೆ ನಾವು ಮಾಡುವದೆಲ್ಲವೂ ವ್ಯರ್ಥವಾಗುವದು. ಸೈತಾನನ ವಿಶೇಷವಾಗಿ ನಮ್ಮ ನಂಬಿಕೆಯ ಮೇಲೆ ದಾಳಿ ಮಾಡುವನು. ಯೇಸು ಪೇತ್ರನಿಗೆ ಹೇಳಿದ್ದೇನೆಂದರೆ: "ಸೀಮೋನನೇ, ಸಿಮೋನನೇ, ನೋಡು ಸೈತಾನನು ನಿನ್ನನ್ನು ಗೋದಿಯಂತೆ ಒನೆಯಬೇಕೆಂದು ಅಪ್ಪಣೆಕೇಳಿಕೊಂಡನು ಆದರೆ ನನ್ನ ನಂಬಿಕೆ ಕುಂದಿ ಹೋಗಬಾರದೆಂದು ನಾನು ನಿನ್ನ ವಿಷಯದಲ್ಲಿ ದೇವರಿಗೆ ವಿಜ್ಞಾಪನೆ ಮಾಡಿಕೊಂಡೆನು" (ಲೂಕ 22:31-32).

**8-9** ಈ ಪತ್ರಿಕೆಯು ಯಾರಿಗೆ ಕಳುಹಿಸಲ್ಪಟ್ಟಿತೋ ಅವರು ಎಂದಿಗೂ ಯೇಸುವನ್ನು ಕಣ್ಣಾರೆ ಕಂಡಿರಲಿಲ್ಲ. ಹಾಗಿದ್ದರೂ, ಅವರು ಆತನಲ್ಲಿ ಪೂರ್ಣವಾಗಿ ನಂಬಿಕೆಯಿಟ್ಟಿದ್ದರು ಮತ್ತು ಆತನಲ್ಲಿ ತಮ್ಮ ಭರವಸವನ್ನಿಟ್ಟು ಆತನನ್ನು ಪ್ರೀತಿಸಿದರು (ಯೋಹಾನ 20:29). ಅಲ್ಲದೆ ಅವರು ಪವಿತ್ರಾತ್ಮನ ಮೂಲಕ ಆತನೊಂದಿಗೆ ಸಂತೋಷಕರವಾದ ಅನ್ಯೋನ್ಯತೆಯನ್ನು ಅನುಭವಿಸಿದ್ದರು. ನಿಜವಾದ ನಂಬಿಕೆಯು ಯಾವಾಗಲೂ ಈ ವಿಧದಲ್ಲಿ ಪ್ರೀತಿ ಹಾಗೂ ಸಂತೋಷದ ಉದ್ಭವಕ್ಕೆ ಕಾರಣವಾಗುತ್ತದೆ. ಮತ್ತು ಪ್ರತಿದಿನವೂ ಅವರು ತಮ್ಮ ನಂಬಿಕೆಯ ಅಂತ್ಯಫಲಕ್ಕೆ (ಗುರಿಗೆ) ಹತ್ತಿರವಾಗುತ್ತಾ ಇದ್ದರುಃ ಏನೆಂದರೆ, ಅವರ ಆತ್ಮಗಳ ರಕ್ಷಣೆ ಅಥವಾ ನಿತ್ಯಜೀವಕ್ಕೆ ಹತ್ತಿರವಾಗುತ್ತಿದ್ದರು (ವಚನ9).

**10-11** ಹಳೆ ಒಡಂಬಡಿಕೆಯ ಪ್ರವಾದಿಗಳು ಕೃಪೆಯು –ಅಂದರೆ, ಕ್ರಿಸ್ತನ ಮೂಲಕ ರಕ್ಷಣೆಯು– ಯೆಹೂದ್ಯರಿಗೂ ಅನ್ಯಜನರಿಗೂ, ಅಂತೂ ಆತನಲ್ಲಿ ನಂಬಿಕೆಯಿಡುವ ಎಲ್ಲರಿಗೂ ಬರುವದು ಎಂದು ಪ್ರವಾದಿಸಿದ್ದರು (ಮಾರ್ಕ 13:10; ರೋಮ 9:25-26; 15:12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಕ್ರಿಸ್ತನ ಆತ್ಮನು (ವಚನ 11). ಅಂದರೆ, ಪವಿತ್ರಾತ್ಮನು ಈ ಹಳೆ ಒಡಂಬಡಿಕೆಯ ಪ್ರವಾಧಿಗಳ ಮೂಲಕ ಮಾತಾಡಿದನು (2 ಪೇತ್ರ 1-20-21 ನೋಡಿರಿ). ಯೇಸುವು ಮೊದಲು ಬಾಧೆಯನ್ನನುಭವಿಸಿ ನಂತರ ಪ್ರಭಾವವನ್ನು ಪ್ರಭಾವವನ್ನು ಹೊಂದುವನೆಂದು ಪವಿತ್ರಾತ್ಮನು ಪ್ರವಾದಿಗಳ ಮುಖಾಂತರ ಸೂಚಿಸಿದನು (ಯೇಶಾಯ 53:3-7; 10-12; ಲೂಕ 24:25-27, 45-47).

**12** ಹಳೆ ಒಡಂಬಡಿಕೆಯ ಪ್ರವಾದಿಗಳು ಕ್ರಿಸ್ತನ ವಿಷಯದಲ್ಲಿ ಮಾತಾಡಿದ ಸಂಗತಿಗಳು ಅವರ ಹಿತಕ್ಕಾಗಿ ಅಲ್ಲ, ಆದರೆ ನಮ್ಮ ಹಿತಕ್ಕಾಗಿಯೇ ಆಗಿದ್ದವು. ಅವರು ಕ್ರಿಸ್ತನ ಕುರಿತು ಹೆಚ್ಚಾಗಿ ತಿಳಿದುಕೊಳ್ಳಲು ಹಾರೈಸಿದರು ಆದರೆ ಅವರೆಲ್ಲರೂ ಕ್ರಿಸ್ತನ ಬರೋಣಕ್ಕೆ ಮುಂಚೆಯೇ ಮರಣಿಸಿದರು. ಅವರು ಸೂಚಿಸಿದ ಕೃಪೆ ಆಶೀರ್ವಾದಗಳು ಕ್ರಿಸ್ತನಲ್ಲಿ ನಂಬಿಕೆಯಿಡುವ ನಮಗೋಸ್ಕರವಾಗಿ ಇರುತ್ತವೆ. ಹಳೆ ಒಡಂಬಡಿಕೆಯ ಪ್ರವಾದಿಗಳನ್ನು ಪ್ರೇರೆಪಿಸಿದ ಕ್ರಿಸ್ತನ ಆತ್ಮನು ಕ್ರಸ್ತನ ಹನ್ನೆರಡು ಮಂದಿ ಶಿಷ್ಯರನ್ನು ಪ್ರೇರೆಪಿಸಿದ ಪವಿತ್ರಾತ್ಮನು ಒಂದೇ ಆಗಿದ್ದಾರೆ (ಯೋಹಾನ 20:22). ಆದರ ನಂತರ ಅವರು ಅಪೊಸ್ತಲರಾದರು– ಅದರ ಅರ್ಥವು "ಪ್ರೇರೆಪಿತರು ಅಥವಾ ಒತ್ತಾಯಿಸಲ್ಪಟ್ಟವರು" ಇದೇ ಆತ್ಮನೇ ಪಂಚಾಶತ್ತಮ ದಿನದಲ್ಲಿ ಶಿಷ್ಯರ ಮೇಲೆ ಇಳಿದುಬಂದನು ( ಅ.ಕೃತ್ಯ 2:1-4). ಈ ಕಾರಣದಿಂದಲೇ ಪೌಲನು ಸಭೆಯು ಅಪೊಸ್ತಲರು, ಪ್ರವಾದಿಗಳೂ ಎಂದು ಅಸ್ತಿವಾರದ ಮೇಲೆ ಕಟ್ಟಲ್ಪಟ್ಟಿದೆ ಎಂದು ಹೇಳುತ್ತಾನೆ (ಎಫೆಸ 2:20-21). ಅದೇ ಪವಿತ್ರಾತ್ಮನ

ಬಲದ ಮೂಲಕ ಕ್ರಿಸ್ತನ ಸುವಾರ್ತೆಯು ಭೂಮಿಯ ಕಟ್ಟಕಡೆಯ ವರೆಗೆ ಸಾರಲ್ಪಡುತ್ತಿದೆ (ಅ.ಕೃತ್ಯ 1:8). ಕ್ರಿಸ್ತನ ಸುವಾರ್ತೆಯು ಎಷ್ಟೋ ಅದ್ಭುತ ಹಾಗೂ ಪವಿತ್ರಾತ್ಮನ ಕಾರ್ಯವು ಎಷ್ಟೋ ಆಶ್ಚರ್ಯಕರವಾಗಿದ್ದು ದೇವ ದೂತರಿಗೂ ಈ ಸಂಗತಿಗಳನ್ನು ಲಕ್ಷ್ಯವಿಟ್ಟು ನೋಡಬೇಕೆಂಬ ಅಪೇಕ್ಷೆ ಉಂಟು.

## ಪರಿಶುದ್ಧರಾಗಿರಿ (1:13-25)

13 ಆದದರಿಂದ, ನೀವು ಮನಸ್ಸಿನ ನಡುವನ್ನು ಕಟ್ಟಿಕೊಂಡು ಸಿದ್ಧರಾಗಿರಿ. ದೇವರು ನಮಗಾಗಿ ಸಿದ್ಧಗೊಳಿಸಿದ ಮಹಿಮೆಯುಳ್ಳ ರಕ್ಷಣೆಯನ್ನು ದೃಷ್ಟಿಯಲ್ಲಿಟ್ಟು ಕೊಂಡು (ವಚನಗಳು 3:9) ನಾವು ಪ್ರತಿಕ್ರಿಯಿಸಬೇಕು. ನಾವು ನಮ್ಮ ಪಾತ್ರವನ್ನು ನಿರ್ವಹಿಸಬೇಕು. ದೇವರು ನಮಗೆ ಕೃಪೆಯನ್ನು ನೀಡಿದ್ದಾನೆ; ಆದದರಿಂದ, ನಾವು ಆತನ ಸೇವೆಯನ್ನು ಮಾಡುವದಕ್ಕೂ ವಿಧೇಯರಾಗುವದಕ್ಕೂ ನಮ್ಮ ಮನಸ್ಸುಗಳ ನಡುವನ್ನು ಕಟ್ಟಿಕೊಂಡು ಸಿದ್ಧರಾಗಿರಬೇಕು. ನಾವು ನಮ್ಮ ಮನಸ್ಸುಗಳ ಮನೋಭಾವಗಳಲ್ಲಿ ಹೊಸಬರಾಗಬೇಕು (ಎಫೆಸ 4:23). ಅಂದರೆ, ನಾವು ನೂತನ ಮನಸ್ಸನ್ನು "ಧರಿಸಿಕೊಳ್ಳಬೇಕು" (ರೋಮ 12:2; ಎಫೆಸ 4:22-24 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಅದರ ಜೊತೆಯಲ್ಲಿ, ನಾವು ..... ನಡುವನ್ನು ಕಟ್ಟಿಕೊಂಡು ಸಿದ್ಧರಾಗಿರಬೇಕು[2]. ಕ್ರಿಯೆಗಾಗಿ ಸಿದ್ಧವಾಗಿರುವ ಯಾವದೇ ವ್ಯ ಕ್ತಿಯು ತನ್ನನ್ನು ಸಂಪೂರ್ಣವಾಗಿ ಹತೋಟಿಯಲ್ಲಿಟ್ಟುಕೊಂಡಿರಬೇಕು; ಆತನ ಪ್ರತಿಯೊಂದು ಭಾಗವು ಕ್ರಿಯೆಯಾಗಿ ಸಿದ್ಧವಾಗಿರಬೇಕು. ಹೀಗೆ ಆತನು ಶಮೆದಮೆ (ಸ್ವಹತೋಟಿ)ಉಳ್ಳವನಾಗಿರಬೇಕು ಶಮೆದಮೆಯು ಪವಿತ್ರಾತ್ಮನ ವರಗಳಲ್ಲಿ ಒಂದಾಗಿದೆ (ಗಲಾತ್ಯ 5:23). ಪೌಲನು ತನ್ನ ಪತ್ರಿಕೆಗಳಲ್ಲಿ ನಾವು ಶಮೆದಮೆಯುಳ್ಳವರಾಗಿರಬೇಕೆಂದು ಪ್ರಬೋಧಿಸಿರುತ್ತಾನೆ (1 ಕೊರಿಂಥ 9:25; 1 ತಿಮೊಥೆ 3:2, ತೀತನು 2:2; 5-6).

ಕ್ರೈಸ್ತರು ತಮ್ಮ ನಿರೀಕ್ಷೆಯನ್ನು ಸಂಪೂರ್ಣವಾಗಿ ಯೇಸುಕ್ರಿಸ್ತನು ಪ್ರತ್ಯಕ್ಷನಾಗುವಾಗ (ಅವರಿಗೆ) ದೊರಕುವ ಕೃಪೆಯ ಮೇಲೆ ಇಡಬೇಕು. ಈ ಕೃಪೆಯು ಯೇಸುಕ್ರಿಸ್ತನು ಮೊದಲನೆಯ ಸಾರಿ ಭೂಲೋಕಕ್ಕೆ ಬಂದಾಗ ಆತನ ಮೂಲಕ ಈಗಾಗಲೇ ನಮಗೆ ತರಲ್ಪಟ್ಟಿದೆ (ತೀತನು 2:11 ನೋಡಿರಿ). ಅದು ಮಾತ್ರವಲ್ಲದೆ, ನಮ್ಮಲ್ಲಿ ವಾಸಿಸುವ ಪವಿತ್ರಾತ್ಮನ ಮೂಲಕ ಆ ಕೃಪೆಯು ಅನುದಿನವೂ ನಮಗೆ ದೊರೆಯುವದಾಗಿದೆ. ಮತ್ತು ಅಂತಿಮವಾಗಿ ಎರಡನೆಯ ಬರೋಣದ ವೇಳೆ ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವಾಗ ನಾವು ನಿತ್ಯನಿತ್ಯಕ್ಕೂ ಆತನ ಕೃಪೆಯನ್ನು ಪೂರ್ಣ ಪ್ರಮಾಣದಲ್ಲಿ ಪಡೆಯುತ್ತೇವೆ. ಆದದರಿಂದ, ನಾವು ಈ ಕೃಪೆಯ ಮೇಲೆ ನಮ್ಮ ನಿರೀಕ್ಷೆಯನ್ನು ಸಂಪೂರ್ಣವಾಗಿ ಇಡೋಣ.

14 ದೇವರು ನಮಗೆ ಮಹಾ ಆಶೀರ್ವಾದವನನು ನೀಡಿದ್ದಾನೆಃ ಆತನು ನಮ್ಮನ್ನು ತನ್ನ ಮಕ್ಕಳಾಗಿ ಮಾಡಿದ್ದಾನೆ. ಆದರೆ ಈ ಆಶೀರ್ವಾದದ ಜೊತೆಯಲ್ಲಿ ಆತನು ನಮಗೆ ಮಹಾ ಜವಾಬ್ದಾರಿಯೊಂದನ್ನು ಸಹ ನೀಡಿದ್ದಾನೆ. ನಾವು ಆತನಿಗೆ ವಿಧೇಯರಾಗಬೇಕು. ಮಗುವು ತನ್ನ ಮಾನವ ತಂದೆಯನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸುವ ಪ್ರಕಾರವೇ ನಾವು ವಿಧೇಯರಾಗಿರುವದರ ಮೂಲಕ ನಮ್ಮ ಪರಲೋಕದ ತಂದೆಯನ್ನು ಮೆಚ್ಚಿಸಲು ಪ್ರಯತ್ನಿಸಬೇಕು. ಆದದರಿಂದ, ನಾವು ಇನ್ನೂ ಮೇಲೆ ಎಂದಿಗೂ ಕ್ರೈಸ್ತರಾಗುವದಕ್ಕೆ ಮುಂಚೆ ನಮಗಿದ್ದ ದುರಾಶೆಗಳನ್ನು ಅನುಸರಿಸಿ ನಡೆಯುವವರಾಗಿರಬಾರದು (ರೋಮ 12:2; ಎಫೆಸ 2:1-3; 4:17-18; ತೀತನು 3:3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

15 ನಮ್ಮ ಪೂರ್ವದ ಪಾಪಮಯ ಅಭಿಲಾಷೆಗಳಿಂದ ವಿಮುಖರಾಗಿರುವ ನಾವು ಪರಿಶುದ್ಧರಾಗಿರೋಣ. ಪರಿಶುದ್ಧರಾಗಿರುವದಕ್ಕೆ ಎರಡು ಸಂಗತಿಗಳು ಅವಶ್ಯಕವಾಗಿರುತ್ತವೆಃ ಮೊದಲನೆಯದಾಗಿ, ನಾವು ಅಪರಿಶುದ್ಧತೆಯನ್ನು ತೆಗೆದು ಬಿಡಬೇಕು; ಎರಡನೆಯದಾಗಿ, ನಾವು ಪರಿಶುದ್ಧತೆಯನ್ನು ಧರಿಸಿಕೊಳ್ಳಬೇಕು (ಎಫೆಸ 4:22-24; 1 ಥೆಸಲೋನಿಕ 4:7, ತೀತನು 2:11-12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

16 ನಾನು ಪರಿಶುದ್ಧಾಗಿರುವದರಿಂದ ನೀವೂ ಪರಿಶುದ್ಧರಾಗಿರಬೇಕು. ಪೇತ್ರನು ಯಾಜಕ ಕಾಂಡ 11:45; 19:2 ರಿಂದ ಉಲ್ಲೇಖಿಸುತ್ತಾನೆ. ನಾವು ನಮ್ಮ ಪರಲೋಕದ ತಂದೆಯನ್ನು ಅನುಕರಿಸಬೇಕು (ಎಫೆಸ 5:1). ಯೇಸು ಹೇಳಿದ್ದೇನೆಂದರೆಃ "ಆದದರಿಂದ ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರಿ (ಮತ್ತಾಯ 5:48). ನಾವು ದೇವರ ಮಕ್ಕಗಳಾಗಿರುವದಕ್ಕೆ ಕರೆಯಲ್ಪಟ್ಟಿದ್ದೇವೆ (ಗಲಾತ್ಯ 3:26, ಎಫೆಸ 1:15). ಆದದರಿಂದ, ಆ ಕರೆಯುವಿಕೆಗೆ ಯೋಗ್ಯರಾಗಿ ಜೀವಿಸಬೇಕು (ಎಫೆಸ 4:1).ನಮ್ಮ ಅತ್ಯುನ್ನತ ಗುರಿಯು ನಮ್ಮ ಕರ್ತನಾದ ಯೇಸುವಿನಂತಾಗುವದಾಗಿರಬೇಕು (ರೋಮ 8:29; 2 ಕೊರಿಂಥ 3:18). ನಮ್ಮ ಪ್ರಮಾಣ ಸ್ವತಃ ದೇವರೇ. ಬೈಬಲಿನಲ್ಲಿರುವ ಎಲ್ಲಾ ಕ್ರೈಸ್ತೀಯ ನೈತೀಕ ಬೋಧನೆಗಳು ದೇವರ ಗುಣ ಲಕ್ಷಣ ಹಾಗೂ ಗುಣ ಧರ್ಮಗಳ ಮೇಲೆ ಆಧಾರವಾಗಿರುತ್ತವೆ.

17 ದೇವರು ಪ್ರೀತಿಯುಳ್ಳ ತಂದೆಯಾಗಿದ್ದಾನೆ. ಆದರೆ ದೇವರು ಒಬ್ಬ ನ್ಯಾಯಾಧಿಪತಿ ಸಹ ಆಗಿದ್ದಾನೆಂಬದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು, ಆತನು ಪ್ರತಿಯೊಬ್ಬನ ಕೆಲಸವನ್ನು ನೋಡಿ ಪಕ್ಷಪಾತವಿಲ್ಲದ ತೀರ್ಪು ಮಾಡುವಾತನು (ರೋಮ 14:12, 1 ಕೊರಿಂಥ 5:10; ಎಫೆಸ 6:8 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆದದರಿಂದ, ನಾವು ನಮ್ಮ ಜೀವಿತಗಳನ್ನು ಭಯ ಭಕ್ತಿಯುಳ್ಳವರಾಗಿ ಜೀವಿಸೋಣ (ಮತ್ತಾಯ 10:28; ಅ.ಕೃತ್ಯ 10:34-35 ನೋಡಿರಿ).

ನಾವು ಇಹದಲ್ಲಿ ನಮ್ಮ ಜೀವಿತಗಳನ್ನು ಪ್ರವಾಸಿಗಳಂತೆ ಕಳೆಯಬೇಕೆಂದು ಪೇತ್ರನು ಹೇಳುತ್ತಾನೆ. ನಮ್ಮ ನಿಜ ನಿವಾಸವು ಪರಲೋಕದಲ್ಲಿರುತ್ತದೆ. ಭೂಲೋಕದಲ್ಲಿ ನಾವು ಪ್ರವಾಸಿಗಳು ಮಾತ್ರವೇ ಆಗಿದ್ದೇವೆ. (ಯೋಹಾನ 15:18-19). ಆದದರಿಂದ, ನಾವು ಅಹಂಕಾರಿಗಳಾಗಿರದಿರೋಣ ನಮ್ಮ ಭರವಸವನ್ನು ಭೂಲೋಕದ ಸಂಗತಿಗಳಲ್ಲಿ

ಇಡದಿರೋಣ. ಭೂಲೋಕವು ಗತಿಸಿ ಹೋಗುವದು (1 ಯೋಹಾನ 2:17). ಬದಲಾಗಿ, ನಾವು ದೇವರಿಗೆ ಮಾತ್ರವೇ ಭಯಪಟ್ಟು ವಿಧೇಯರಾಗಿರೋಣ.

**18-19** ನಾವು ಒಮ್ಮೆ ಇಹಲೋಕದಲ್ಲಿ ಸೈತಾನನ ಬಂಧಿಗಳಾಗಿದ್ದೇವು. ಆದರೆ ಈಗ ಕ್ರಿಸ್ತನು ನಮ್ಮನ್ನು ಬಿಡುಗಡೆ ಮಾಡಿದ್ದಾನೆ; ಅಂದರೆ, ಆತನು ಸೈತಾನನಿಂದ ನಮ್ಮ ಸ್ವಾತಂತ್ರ್ಯ ವನ್ನು ಗೆದ್ದುಕೊಳ್ಳುವದಕ್ಕೆ ಈಡನ್ನು ಕೊಟ್ಟಿರುತ್ತಾನೆ (ಮಾರ್ಕ 10:45). ಆತನು ಕೊಟ್ಟ ಈಡು (ಬೆಲೆಯು) ಬೆಳ್ಳಿಬಂಗಾರಕ್ಕಿಂತಲೂ ಬೆಲೆಯುಳ್ಳದ್ದು; ಆ ಈಡು ಆತನ ಅಮೂಲ್ಯವಾದ ರಕ್ತವೇ – ಆತನ ಪ್ರಾಣವೇ! ಕ್ರಿಸ್ತನು ನಮ್ಮ ಪಾಪಗಳಿಗೋಸ್ಕರ ತನ್ನ ಪ್ರಾಣವನ್ನು ಯಜ್ಞವಾಗಿ ಅರ್ಪಿಸಿದನು. ಆತನು ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿಯಾಗಿದ್ದನು (ಯಾಜಕಕಾಂಡ 22:19-21). ಸ್ನಾನಿಕನಾದ ಯೋಹಾನನು ಆತನನ್ನು ಲೋಕದ ಪಾಪವನ್ನು ನಿವಾರಣೆ ಮಾಡುವ ದೇವರ ಕುರಿಮರಿ ಎಂದು ಕರೆದನು. (ಯೋಹಾನ 1:29). ಯೇಸು ಸ್ವತಃ ಪೂರ್ಣಾಂಗವಾದ ನಿಷ್ಕಳಂಕನಾಗಿದ್ದನು– ಅಂದರೆ, ಪಾಪರಹಿತನಾಗಿದ್ದನು (ಇಬ್ರಿಯ 4:15; 7:26). ಪಾಪರಹಿತನು ಮಾತ್ರವೇ ಇತರರ ಪಾಪಗಳ ನಿವಾರಣೆಯನ್ನು ಮಾಡಬಲ್ಲನು. ಕ್ರಿಸ್ತನು ಸ್ವಂತ ಪಾಪಗಳನ್ನು ಹೊಂದಿದ್ದರೆ ಆತನ ಮರಣವು ಆತನ ಪಾಪಗಳನ್ನು ನಿವಾರಣೆ ಮಾಡುತ್ತಿತ್ತೇ ಹೊರತು ಇತರರ ಪಾಪಗಳನ್ನಲ್ಲ.

**20** ಕ್ರಿಸ್ತನು ಜಗದುತ್ಪತ್ತಿಗೆ ಮುಂಚೆ ದೇವರೊಂದಿಗಿದ್ದನು (ಯೋಹಾನ 1:1-2). ಆ ಸಮಯದಲ್ಲಿ ದೇವರು ನಮ್ಮ ರಕ್ಷಣೆಗಾಗಿ ಸಂಕಲ್ಪ ಮಾಡಿದನು (ಎಫೆಸ 1:4). ಈಗ ಆ ಸಂಕಲ್ಪವು – ಕ್ರಿಸ್ತನ ಮುಖಾಂತರ ರಕ್ಷಣೆ– ಅಂತ್ಯಕಾಲದಲ್ಲಿ ಪ್ರತ್ಯಕ್ಷವಾಗಿದೆ. ಈ "ಅಂತ್ಯಕಾಲವು" ಕ್ರಿಸ್ತನ ಮೊದಲನೆಯ ಹಾಗೂ ಎರಡನೆಯ ಬರೋಣಗಳ ನಡುವಿನ ಅವಧಿಯಾಗಿದೆ (ಇಬ್ರಿಯ 1;2 ನೋಡಿರಿ).

**21** ದೇವರು ತನ್ನ ಮಗನಾದ ಯೇಸುವಿನ ಯಜ್ಞದ ಮೂಲಕ ನಮ್ಮನ್ನು ಪಾಪದ ದಂಡನೆಯಿಂದ ವಿಮೋಚಿಸಿದ್ದಾನೆ; ಆತನು ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿ ಪರಲೋಕದಲ್ಲಿ ಆತನಿಗೆ ಪ್ರಭಾವವನ್ನು ಕೊಟ್ಟಿದ್ದಾನೆ. ದೇವರ ಈ ಆಶ್ಚರ್ಯ ಕರವಾದ ಕಾರ್ಯದ ಕಾರಣದಿಂದ ನಾವು ನಮ್ಮ ನಂಬಿಕೆಯನ್ನು ನಿರೀಕ್ಷೆಯನ್ನು ಆತನಲ್ಲಿ ಸಂಪೂರ್ಣವಾಗಿ ಇಡಬಹುದು. ನಾವು ಕ್ರಿಸ್ತನ ಮರಣದ ಮೂಲಕ ಪಾಪದ ದಾಸತ್ವದೊಳಗಿಂದ ಬಿಡಿಸಲ್ಪಟ್ಟಿದ್ದೇವೆ. ಮತ್ತು ಯೇಸು ಸತ್ತವರೊಳಗಿಂದ ಪುನರುತ್ಥಾನಗೊಂಡದ್ದರಿಂದ ನಾವು ಸಹ ಪರಲೋಕದಲ್ಲಿ ಆತನೊಂದಿಗೆ ಪ್ರಭಾವವನ್ನು ನಿತ್ಯಜೀವವನ್ನೂ ಹೊಂದುವೆವು (ರೋಮ 6:5, 8; 8:23-24).

**22-23** ಕ್ರೈಸ್ತರು ಸತ್ಯಕ್ಕೆ ವಿಧೇಯರಾಗುವದರ ಮೂಲಕ –ಅಂದರೆ, ಕ್ರಿಸ್ತನ ವಾಕ್ಯಕ್ಕೆ ವಿಧೇಯರಾಗುವದರ ಮೂಲಕ– ಶುದ್ಧಗೊಳ್ಳುವರು (ಯೋಹಾನ 15:3; 17:17 ನೋಡಿರಿ). ನಾವು ಆತನ ವಾಕ್ಯಕ್ಕೆ ವಿಧೇಯರಾಗದಿದ್ದರೆ ಅದು ನಮ್ಮನ್ನು ಶುದ್ಧಗೊಳಿಸುವದಿಲ್ಲ. ಕ್ರಿಸ್ತನ ವಾಕ್ಯಕ್ಕೆ ವಿಧೇಯರಾಗುವದೆಂದರೆ ನಮ್ಮ ಸಹೋದರರನ್ನು ಪ್ರೀತಿಸುವದು (ಯೋಹಾನ 13:34). ನಾವು ನಮ್ಮ ಸಹೋದರರನ್ನು ನಿಷ್ಕಪಟವಾದ ಪ್ರೀತಿಯಿಂದ........ ಹೃದಯ ಪೂರ್ವಕವಾಗಿಯೂ ಆಳವಾಗಿಯೂ ಪ್ರೀತಿಸಬೇಕು. ನಾವು ನಮ್ಮನ್ನು ಸಹೋದರರನ್ನು, ಸ್ವಾರ್ಥವಿಲ್ಲದೇ ಪ್ರೀತಿಸಬೇಕು. ಕ್ರಿಸ್ತನು ನಮ್ಮನ್ನು ಹೀಗೆಯೇ ಪ್ರೀತಿಸಿದನು; ಮತ್ತು ನಾವು ನಮ್ಮ ಸಹೋದರನನ್ನೂ ಹೀಗೆಯೇ ಪ್ರೀತಿಸಬೇಕು. ವಿಶ್ವಾಸಿಗಳಾದ ನಾವೆಲ್ಲರೂ ಪರಲೋಕದ ತಂದೆಯ ಮಕ್ಕಳಾಗಿದ್ದೇವೆ. ನಾವು ನಮ್ಮ ಸ್ವಾಭಾವಿಕ ಸಹೋದರ ಸಹೋದರಿಯರನ್ನು ಪ್ರೀತಿಸುವದಾದರೆ ನಮ್ಮ ಆತ್ಮೀಕ ಸಹೋದರ ಹಾಗೂ ಸಹೋದರಿಯರನ್ನು ಇನ್ನೂ ಎಷ್ಟೋ ಹೆಚ್ಚಾಗಿ ಪ್ರೀತಿಸಬೇಕಲ್ಲವೇ! ನಾವು ಶುದ್ಧಮಾಡಿಕೊಂಡಿರುವದು ಮಾತ್ರವಲ್ಲದೆ ನಮಗೆ ನೂತನ ಜನ್ಮವು ಸಹ ಕೊಡಲ್ಪಟ್ಟಿದೆ. ನಾವು ಆತ್ಮೀಕವಾದ ರೀತಿಯಲ್ಲಿ ಹೊಸದಾಗಿ ಹುಟ್ಟಿದ್ದೇವೆ ನಾಶವಾಗುವ ಬೀಜದಿಂದಲ್ಲ (ಮಾನವ ಬೀಜ). ಆದರೆ ಆತ್ಮೀಕ ಬೀಜದಿಂದಲೇ– ಅಂದರೆ, ನಾಶವಾಗದ ಹಾಗೂ ಸದಾಜೀವವುಳ್ಳ ದೇವರ ವಾಕ್ಯದ ಮೂಲಕವೇ (ಲೂಕ 8:11; ಯೋಹಾನ 3:3, 1 ಯೋಹಾನ 3:9 ನೋಡಿರಿ).

ಇಲ್ಲಿ ನಾವು ಕ್ರೈಸ್ತನಾಗಿರುವದಕ್ಕೆ ಎರಡು ಸಂಗತಿಗಳು ಅವಶ್ಯಕವಾಗಿವೆ ಎಂಬುದನ್ನು ನೋಡುತ್ತೇವೆ. ಮೊದಲನೆಯದಾಗಿ ನಾವು ಶುದ್ಧಗೊಳಿಸಲ್ಪಡಬೇಕು (ವಚನ 22). ಅಂದರೆ, ನಮ್ಮ ಪಾಪಗಳು ತೊಳೆಯಲ್ಪಟ್ಟು ಕ್ಷಮಿಸಲ್ಪಡಬೇಕು. ನಾವು ನೀರಿನಲ್ಲಿ ಹೊಂದುವ ದೀಕ್ಷಸ್ನಾನವು ಇದು ಜರುಗಿದೆ ಎಂಬುದಕ್ಕೆ ಸಂಕೇತವಾಗಿರುತ್ತದೆ. ಎರಡನೆಯದಾಗಿ, ನಾವು ಹೊಸದಾಗಿ ಹುಟ್ಟಬೇಕು (ವಚನ 23). ಅಂದರೆ, ನಾವು ಪವಿತ್ರಾತ್ಮನನ್ನು ಪಡೆದುಕೊಳ್ಳಬೇಕು; ಆತನ ಮೂಲಕ ನಾವು ನೂತನ ಆತ್ಮೀಕ ಜೀವಿತವನ್ನು ಹೊಂದುತ್ತೇವೆ. ಯೇಸು ಹೇಳಿದ್ದೇನೆಂದರೆಃ "........... ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು" (ಯೋಹಾನ 3:5). ಅದೇ ವಿಧದಲ್ಲಿ ಪೇತ್ರನು ಪಂಚಾಶತ್ತಮ ದಿನದಂದು ನೀಡಿದ ತನ್ನ ಸಂದೇಶದಲ್ಲಿ ಈ ಎರಡು ಸಂಗತಿಗಳ ಬಗ್ಗೆಯೇ– ಪಾಪಗಳ ಕ್ಷಮಾಪಣೆ ಹಾಗೂ ಪವಿತ್ರಾತ್ಮನ ವರ– ಮಾತಾಡಿದನು. ಆತನು ಹೇಳಿದ್ದೇನೆಂದರೆಃ ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ಮಾನಸಾಂತರ ಪಟ್ಟು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ. ಆಗ ನೀವು ಪವಿತ್ರಾತ್ಮ ವರವನ್ನು ಹೊಂದುವಿರಿ (ಅ.ಕೃತ್ಯ 2:38).

**24-25** ಪೇತ್ರನು ಇಲ್ಲಿ ಯೇಶಾಯ 40:6-8ರಿಂದ ಉಲ್ಲೇಖಿಸುತ್ತಾನೆ... ಕರ್ತನ ಮಾತೋ ಸದಾಕಾಲವೂ ಇರುವದು (ವಚನ 25). ಯೇಸು ಹೇಳಿದ್ದೇನೆಂದರೆಃ "ಭೂಮ್ಯಾಕಾಶಗಳು ಅಳಿದುಹೋಗುವವು ಆದರೆ ನನ್ನ ಮಾತುಗಳು ಅಳಿದು ಹೋಗುವದೇ ಇಲ್ಲ "(ಮಾರ್ಕ 13:31). ಮನುಷ್ಯರು ಹುಲ್ಲಿನ ಹಾಗಿರುವರು, ಆದರೆ ಕ್ರಿಸ್ತನ ವಾಕ್ಯವು (ದೇವರ ವಾಕ್ಯವು) ನಾಶವಾಗದೆ ಸದಾಜೀವವುಳ್ಳದ್ದು (ವಚನ 23). ಪೇತ್ರನು ಬೋಧಿಸಿರುವ ವಾಕ್ಯವು ಇದೇ ಆಗಿದೆ. ಈ ವಾಕ್ಯವೇ ನಮ್ಮ

ಬೈಬಲಿನಲ್ಲಿ ಪೂರ್ಣವಾಗಿ ಬರೆಯಲ್ಪಟ್ಟಿದೆ. ಯಾವನಾದರೂ ಕ್ಷಮಾಪಣೆ, ನೂತನ ಜೀವಿತ, ಹಾಗೂ ದೇವರೊಂದಿಗಿನ ಅನ್ಯೋನ್ಯತೆಯನ್ನು ಹುಡುಕುತ್ತಿರುವದಾದರೆ– ಅಂದರೆ, ಯಾವನಾದರೂ ರಕ್ಷಣೆಯನ್ನು ಹುಡುಕುತ್ತಿರುವದಾದರೆ– ಇವುಗಳನ್ನು ಕಂಡುಕೊಳ್ಳುವ ಮಾರ್ಗವು ದೇವರ ವಾಕ್ಯವಾದ ಬೈಬಲಿನಲ್ಲಿ ಸ್ಪಷ್ಟವಾಗಿ ಬರೆಯಲ್ಪಟ್ಟಿದೆ.

---

## ಅಧ್ಯಾಯ - 2

### ಜೀವವುಳ್ಳ ಕಲ್ಲು ಹಾಗೂ ಆದುಕೊಂಡ ಜನಾಂಗ (2:1-10)

1 ಬಹುಮಂದಿ ಕ್ರೈಸ್ತರು ಕಳ್ಳತನ ಅಥವಾ ವ್ಯಭಿಚಾರ ಮಾಡುವದಿಲ್ಲ. ಕ್ರೈಸ್ತರಿಗೆ ಹೋಲಿಸುವದಾದರೆ ಈ ಪಾಪಗಳು ಅವರಲ್ಲಿ ವಿರಳವಾಗಿ ಕಂಡು ಬರುತ್ತದೆ. ಆದರೆ ದುಃಖಕರವೆಂದರೆ ಕ್ರೈಸ್ತರಲ್ಲಿ ಅತಿಸಾಮಾನ್ಯವಾಗಿ ಕಂಡು ಬರುವ ಇತರ ಪಾಪಗಳು ಅನೇಕವಾಗಿವೆ. ಉದಾಹರಣೆಗೆ, ಕೆಟ್ಟತನ..... ವಂಚನೆ, ಕಪಟ, ಹೊಟ್ಟೆಕಿಚ್ಚು....ನಿಂದನೆ. ವಾಸ್ತವದಲ್ಲಿ, ಕ್ರೈಸ್ತ ಕೆಲಸಗಾರರ ಮಧ್ಯದೊಳಗೆ ಅತಿ ಸಾಮಾನ್ಯ ಹಾಗೂ ವಿನಾಶಕಾರಿ ಪಾಪಗಳಾವವೆಂದರೆ, ಹೊಟ್ಟೆಕಿಚ್ಚು ಹಾಗೂ ನಿಂದನೆ (ಸಹೋದರನ ಬೆನ್ನ ಹಿಂದೆ ಟೀಕಿಸುವದು). ಒಬ್ಬ ಕ್ರೈಸ್ತನು ಉನ್ನತ ಸ್ಥಾನಕ್ಕೇರುವದಾದರೆ ಅಥವಾ ಯಾವನಾದರೂ ಕೆಲಸದಲ್ಲಿ ಯಶಸ್ಸನ್ನು ಹೊಂದುವದಾದರೆ ಸಭೆಯಲ್ಲಿನ ಇತರರು ಸತತವಾಗಿ ಹೊಟ್ಟೆಕಿಚ್ಚು ಪಡುತ್ತಾ ಆತನ ವಿರುದ್ಧವಾಗಿ ಮಾತಾಡುವದಕ್ಕೆ ಪ್ರಾರಂಭಿಸುತ್ತಾರೆ. ಸೈತಾನನು ಸಭೆಯನ್ನು ಇಬ್ಭಾಗಿಸುವದಕ್ಕೂ ನಮ್ಮ ಅನ್ಯೋನ್ಯತೆಯನ್ನು ಹಾಳುಮಾಡುವದಕ್ಕೂ ಇತರ ಯಾವದೇ ಪಾಪಗಳಿಗಿಂತಲೂ ಹೆಚ್ಚಾಗಿ ಈ ಎರಡು ಪಾಪಗಳನ್ನು ಉಪಯೋಗಿಸುತ್ತಾನೆ.

ಪೇತ್ರನು ತನ್ನ ವಾಚಕರನ್ನು ಈ ವಚನದಲ್ಲಿ ಪ್ರಸ್ತಾಪಿಸಿದ ಐದು ಪಾಪಗಳ ಬಗ್ಗೆ ಎಚ್ಚರಿಸುತ್ತಾನೆ. ಈ ಪಾಪಗಳು ನಮ್ಮ ಹೃದಯಗಳಲ್ಲಿ ಅಡಗಿಸಿಕೊಂಡಿರುತ್ತವೆ. ಹಲವಾರು ವೇಳೆಗಳಲ್ಲಿ ಕ್ರೈಸ್ತರು ತಾವು ಈ ಪಾಪಗಳನ್ನು ಮಾಡುತ್ತಿದ್ದಾರೆ ಎಂಬ ಅರಿವು ಸಹ ಅವರಿಗೆ ಇರುವದಿಲ್ಲ. ಅನೇಕರು ತಾವು ಅವುಗಳನ್ನು ಮಾಡಲಿಲ್ಲವೆಂದು ನಿರಾಕರಿಸುತ್ತಾರೆ. ಈ ಕಾರಣದಿಂದಲೇ ಈ ಗುಪ್ತವಾದ ಪಾಪಗಳನ್ನು ನಮಗೆ ಪ್ರಕಟಗೊಳಸಬೇಕೆಂದು ಯಾವಾಗಲೂ ಪವಿತ್ರಾತ್ಮನನ್ನು ಕೇಳಿಕೊಳ್ಳುವದು ಬಹಳ ಪ್ರಾಮುಖ್ಯವಾಗಿರುತ್ತದೆ. ನಮ್ಮ ಪ್ರತಿಯೊಬ್ಬರಲ್ಲಿಯೂ ಇಂಥ ಪಾಪಗಳು ಇರುತ್ತವೆ ಆದ್ದರಿಂದ ನಾವು ಪ್ರತಿದಿನವೂ ದೇವರ ಮುಂದೆ ಅವುಗಳನ್ನು ಅರಿಕೆಮಾಡುವದು ಅಗತ್ಯವಾಗಿರುತ್ತದೆ. (1 ಯೋಹಾನ 1:8-9). ಹೇಗಿದ್ದರೂ, ಎಲ್ಲವುಗಳಿಗಿಂತಲೂ ಎರಡು ಮೂಲ ಪಾಪಗಳೆಂದರೆ ಗರ್ವ ಹಾಗೂ ಸ್ವಾರ್ಥ (ಅಥವಾ ಸ್ವಪ್ರೀತಿ). ಈ ಎರಡು ಪಾಪಗಳು ಇತರ ಎಲ್ಲಾ ಪಾಪಗಳಿಗೆ ದಾರಿಮಾಡುತ್ತವೆ [3]. ಈ ಎರಡು ಪಾಪಗಳನ್ನು ಕಿತ್ತುಹಾಕುವದು ಬಹಳ ಕಷ್ಟಕರವಾಗಿರುತ್ತದೆ. ಯಾಕೆಂದರೆ ಅವುಗಳು ನಮ್ಮ ಹೃದಯಗಳಲ್ಲಿ ಬಹಳ ಆಳವಾಗಿ ಹೂಣಲ್ಪಟ್ಟಿವೆ. ಪ್ರವಾದಿಯಾದ ಯೆರೆಮಿಯನು ಬರೆದದ್ದೇನೆಂದರೆಃ ಹೃದಯವು ಎಲ್ಲಕ್ಕಿಂತಲೂ ವಂಚಕ; ಗುಣವಾಗದ ರೋಗಕ್ಕೆ ಒಳಗಾಗಿದೆ; ಅದನ್ನು ಯಾರು ತಿಳಿದಾರು. (ಯೆರೆಮಿಯ 17:9). ಆದರೆ ದೇವರು ನಮ್ಮ ಹೃದಯವನ್ನು ಸಂಪೂರ್ಣವಾಗಿ ತಿಳಿದುಕೊಳ್ಳುತ್ತಾನೆ ಆತನು ನಮ್ಮ ಎಲ್ಲಾ ಪಾಪಗಳನ್ನು ನೋಡುತ್ತಾನೆ. ಕೀರ್ತನೆಗಾರನು ಬರೆದದ್ದೇನೆಂದರೆಃ ನಮ್ಮ ದ್ರೋಹಗಳನ್ನು ನಿನ್ನ ಮುಂದೆಯೂ ನಮ್ಮ ಗುಪ್ತಪಾಪಗಳನ್ನು ನಿನ್ನ ತೇಜೋದೃಷ್ಟಿಯಲ್ಲಿಯೂ ಇಟ್ಟುಕೊಂಡಿದ್ದೀ (ಕೀರ್ತನೆಗಳು 90:8).

2 1ನೇ ವಚನದಲ್ಲಿ ಪ್ರಸ್ತಾಪಿಸಿದ ವಿಷಕಾರಿ ಪಾಪಗಳನ್ನು ತೊರೆದು ಬಿಟ್ಟವರಾಗಿ ನಾವು ಪಾರಮಾರ್ಥಿಕವಾದ (ಆತ್ಮೀಕ) ಶುದ್ಧ ಹಾಲನ್ನು ಬಯಸೋಣ– ಅಂದರೆ, ದೇವರ ವಾಕ್ಯಕ್ಕಾಗಿ ಹಾರೈಸೋಣ. ಹುಸುಕೂಸು ತನ್ನ ತಾಯಿಯ ಹಾಲಿಗಾಗಿ ಹಾತೋರೆಯುವಂತೆಯೇ ನಾವು ಸಹ ದೇವರ ವಾಕ್ಯವನ್ನು ಓದಿ ಅರ್ಥ ಮಾಡಿಕೊಳ್ಳುವದಕ್ಕೂ ಅದರಂತೆ ಜೀವಿಸುವದಕ್ಕೂ ಆಸಕ್ತಿಯಿಂದ ಅಭಿಲಾಷಿಸಬೇಕು. ಹೀಗೆ ಮಾಡುವದರ ಮೂಲಕವಷ್ಟೇ ನಾವು ನಮ್ಮ ರಕ್ಷಣೆಯಲ್ಲಿ ಬೆಳೆಯುವೆವು – ಅಂದರೆ, ಪರಿಪಕ್ವ ಕ್ರೈಸ್ತರಾಗಿ ನಮ್ಮ ರಕ್ಷಣೆಯ ಪೂರ್ಣ ಆಶೀರ್ವಾದವನ್ನು ಪಡೆದುಕೊಳ್ಳುವೆವು.

ಆದರೆ ಮೊದಲು ನಾವು 1ನೇ ವಚನದಲ್ಲಿ ಪ್ರಸ್ತಾಪಿಸಿರುವ ವಿಷಕಾರಿ ಪಾಪಗಳನ್ನು (ಹಾಗೂ ಇತರ ಪಾಪಗಳನ್ನು ಸಹ) ಬಿಟ್ಟು ಬಿಡುವದು ಅವಶ್ಯಕವಾಗಿರುತ್ತದೆ. ನಮ್ಮ ಹೊಟ್ಟೆಯು ಕೆಟ್ಟದ್ದರಿಂದ ತುಂಬಿರುವದಾದರೆ ನಾವು ಆತ್ಮೀಕ ಹಾಲಿಗಾಗಿ ಹಸಿವೆಯನ್ನೇ ಹೊಂದುವದಿಲ್ಲ.

3 ನಾವು ದೇವರ ವಾಕ್ಯವನ್ನು ಓದುವಾಗ ಆತನ ಕರುಣೆ ಹಾಗೂ ಇತರ ಆಶೀರ್ವಾದಗಳ ಒಳ್ಳೇತನವನ್ನು "ಸವಿಯಬಹುದು". ದೇವರ ವಾಕ್ಯವನ್ನು ಓದುವದರ ಮೂಲಕ ನಾವು ಸ್ವತಃ ದೇವರನ್ನು ತಿಳಿದುಕೊಂಡವರಾಗಿ-ಆತನ ಕೃಪೆಯನ್ನು ಪಡೆದುಕೊಳ್ಳುತ್ತೇವೆ. ಆದದರಿಂದ, ನಾವು ನಮ್ಮ ಬೈಬಲನ್ನು ತೆರೆದು ಓದುವಾಗ ಕೇವಲ ದೇವರ ವಾಕ್ಯವನ್ನು ಮಾತ್ರ ತಿಳಿಯುವದಕ್ಕೆ ಅಪೇಕ್ಷಿಸದೆ ಆತನ ವಾಕ್ಯದ ಮೂಲಕ ಸ್ವತಃ ದೇವರನ್ನೇ ತಿಳಿಯುವದಕ್ಕೂ ಅನುಭವಿಸುವದಕ್ಕೂ ಪ್ರೀತಿಸುವದಕ್ಕೂ ಅಪೇಕ್ಷಿಸೋಣ (ಕೀರ್ತನೆಗಳು 34:8).

4-5 ಪೇತ್ರನು ಇಲ್ಲಿ ಕ್ರಿಸ್ತನನ್ನು ಜೀವವುಳ್ಳ ಕಲ್ಲು ಎಂದು ಕರೆಯುತ್ತಾನೆ. ಕ್ರಿಸ್ತನು ಸಭೆಯ ಮೂಲೆಗಲ್ಲು (ವಚನ 6) ಅಥವಾ ಮುಖ್ಯವಾದ ಮೂಲೆಗಲ್ಲು[4] (ವಚನ 7). ಒಬ್ಬನು ಈ ಕಲ್ಲನ್ನು ಕಟ್ಟಡದಿಂದ ತೆಗೆದುಬಿಡುವದಾದರೆ ಕಟ್ಟಡವು ಬಿದ್ದು ಹೋಗುವದು. ಕ್ರಿಸ್ತನು ಜೀವವುಳ್ಳ ಕಲ್ಲು, ಯಾಕೆಂದರೆ ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು

(ರೋಮ 6:9). ಪೌಲನು ಕ್ರಿಸ್ತನನ್ನು ಬದುಕಿಸುವ ಆತ್ಮನು ಎಂದು ಕರೆದನು (1 ಕೊರಿಂಥ 15:45). ಆದರೆ ಕ್ರಿಸ್ತನು ತಾನೇ ಜೀವಿಸುವವನು ಮಾತ್ರವಲ್ಲ; ತನ್ನ ಬಳಿಗೆ ಬರುವವರನ್ನೆಲ್ಲಾ ಆತನು ಬದುಕಿಸುವವನಾಗಿದ್ದಾನೆ. ಹೀಗೆ ಯೇಸುವಿನಲ್ಲಿ ನಂಬಿಕೆಯಿಡುವ ನಾವು ಕೂಡಾ ಆತನಂತೆ ಜೀವವುಳ್ಳ ಕಲ್ಲುಗಳಾಗುತ್ತೇವೆ. (ವಚನ 4). ದೇವರು ನಮ್ಮನ್ನು ತೆಗೆದುಕೊಂಡು ಆತ್ಮ ಸಂಬಂಧವಾದ ಮಂದಿರವಾಗಿ ಅಥವಾ ದೇವಾಲಯವಾಗಿ ಕಟ್ಟುತ್ತಾನೆ (ವಚನ 5), ಅದರೊಳಗೆ ಸ್ವತಃ ದೇವರು ವಾಸಮಾಡಬಲ್ಲನು (ಎಫೆಸ 2:18-22 ಮತ್ತು ವಾಖ್ಯಾನ ನೋಡಿರಿ). ನಾವೇ ದೇವರ ಆಲಯವಾಗಿದ್ದೇವೆ!

ಅದು ಮಾತ್ರವಲ್ಲದೆ, ನಾವು ದೇವರ ಯಾಜಕರು ಸಹ ಆಗಿದ್ದೇವೆ; ನಾವು ಪವಿತ್ರ ಯಾಜಕವರ್ಗ. ಇಸ್ರಾಯೇಲಿನ ಹನ್ನೆರಡು ಕುಲಗಳಲ್ಲಿ ಲೇವಿಯರು ಮಾತ್ರವೇ ಯಾಜಕರಾಗಿ ನೇಮಿಸಲ್ಪಡಬಹುದಾಗಿತ್ತು. ಆದರೆ ಕ್ರೈಸ್ತರೊಳಗಾದರೋ ಪ್ರತಿಯೊಬ್ಬ ವಿಶ್ವಾಸಿಯು ಯಾಜಕನಾಗಿದ್ದಾನೆ. ಮತ್ತು ಕ್ರಿಸ್ತನ ಯಾಜಕರಾಗಿ, ನಾವು ದೇವರಿಗೆ ಸಮರ್ಪಕವಾದ ಆತ್ಮೀಯ ಯಜ್ಞಗಳನ್ನು ಸಮರ್ಪಿಸಬೇಕು. ಈ ಯಜ್ಞಗಳು ವಿಧೇಯತೆಯ ಯಜ್ಞವನ್ನು– ಅಂದರೆ, ನಮ್ಮ ಸ್ವಂತ ದೇಹಗಳ ಯಜ್ಞವನ್ನು (ರೋಮ 12:1), ಸ್ತುತಿಯಜ್ಞ (ಇಬ್ರಿಯ 13:15) ಮತ್ತು ಇತರರ ಸೇವೆಯ ಯಜ್ಞ (ಇಬ್ರಿಯ 13:16) ಮುಂತಾದವುಗಳನ್ನು ಒಳಗೊಂಡಿರುತ್ತವೆ. ನಾವು ಎರಡು ವಿಧವಾದ ಕ್ರೈಸ್ತರು– ಒಂದು ವಿಧದ ಯಾಜಕರು, ಹಾಗೂ ಸಭಾಪಾಲಕರು, ಮತ್ತು ಇನ್ನೊಂದು ವಿಧದ ಕೇವಲ ಸಾಧಾರಣ ವಿಶ್ವಾಸಿಗಳು– ಮಾತ್ರವೇ ಇದ್ದಾರೆಂದು ಎಂದಿಗೂ ಯೋಚಿಸಬಾರದು. ಕೆಲವು ಕ್ರೈಸ್ತರು ಪರಿಶುದ್ಧರಾಗಿರುವದಕ್ಕೆ ಕರೆಯಲ್ಪಟ್ಟಿದ್ದಾರೆ, ಮತ್ತು ಇತರರು ಕರೆಯಲ್ಪಟ್ಟಿರುವದಿಲ್ಲ ಎಂದು ನಾವು ಎಂದಿಗೂ ಯೋಚಿಸಬಾರದು. ಕ್ರೈಸ್ತರೆಲ್ಲರೂ ಸಮಾನವಾಗಿ ಪರಿಶುದ್ಧರಾಗಿರುವದಕ್ಕೆ ಕರೆಯಲ್ಪಟ್ಟಿದ್ದಾರೆ; ಎಲ್ಲಾ ಕ್ರೈಸ್ತರೂ ಸಮಾನವಾಗಿ ಯಾಜಕರಾಗಿರುವದಕ್ಕೆ ಕರೆಯಲ್ಪಟ್ಟಿರುತ್ತಾರೆ. ಹೀಗಿರುವದರಿಂದ, ಈ ಆತ್ಮೀಯ ಯಜ್ಞಗಳನ್ನು ಯಜ್ಞಗಳನ್ನು ಅರ್ಪಿಸುವದು ಪ್ರತಿಯೊಬ್ಬ ಕ್ರೈಸ್ತನ ಕರ್ತವ್ಯವಾಗಿದೆ.

ಪೇತ್ರನು ಇಲ್ಲಿ ಕ್ರಿಸ್ತನು ಮನುಷ್ಯರಿಂದ ತಿರಸ್ಕರಿಸಲ್ಪಟ್ಟ –ಅಂದರೆ, ಯೆಹೂದ್ಯ ನಾಯಕರು ಹಾಗೂ ಅವರ ಹಿಂಬಾಲಕರಿಂದ ತಿರಸಕರಿಸಲ್ಪಟ್ಟ– ಜೀವವುಳ್ಳ ಕಲ್ಲು ಎಂದು ಹೇಳುತ್ತಾನೆ (ಮಾರ್ಕ 8:31). ಆದರೆ ಕ್ರಿಸ್ತನು ದೇವರಿಂದ ಆಯಲ್ಪಟ್ಟವನು ಮತ್ತು ಆತನಿಗೆ ಮಾನ್ಯವಾದವನಾಗಿದ್ದನು. ದೇವರ ಆಲೋಚನೆಗಳು ಮನುಷ್ಯನ ಆಲೋಚನೆಗಳಿಗೆ ಎಷ್ಟು ತದ್ವಿರುದ್ಧ ಎಂಬದನ್ನು ಗಮನಿಸಿರಿ. ಮನುಷ್ಯನು ಮಾನ್ಯವೆಂದೆಣಿಸುವದು. ದೇವರಿಗೆ ಅಸಹ್ಯವಾಗಿರುತ್ತದೆ (ಲೂಕ 16:15). ಮನುಷ್ಯನು ಯಾವದನ್ನು ತಾತ್ಸಾರ ಮಾಡುತ್ತಾನೋ ದೇವರು ಅದನ್ನು ಮಾನ್ಯವೆಂದೆಣಿಸುತ್ತಾನೆ (1 ಕೊರಿಂಥ 1:27-30). ಮನುಷ್ಯರು ಕ್ರಿಸ್ತನನ್ನು ತಿರಸ್ಕರಿಸಿದರು. ಆದರೆ ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿ ತನ್ನೊಂದಿಗೆ ಪರಲೋಕದಲ್ಲಿ ಕೂತುಕೊಳ್ಳುವಂತೆ ಮಾಡುವದರ ಮೂಲಕ ಅವನಿಗೆ ಮಾನವನ್ನು ನೀಡಿದನು (ಎಫೆಸ 1:20-21). ಪೇತ್ರನು ಇದೇ ಸಂಗತಿಯನ್ನು ಮುಂಚೆ ಅನೇಕ ಸಾರಿ ಬೋಧಿಸಿದ್ದನು (ಅ.ಕೃತ್ಯ 2:23-24; 32-33; 5:30-31 ನೋಡಿರಿ).

**6** ಕ್ರಿಸ್ತನು ಮನುಷ್ಯರಿಂದ ತಿರಸ್ಕರಿಸಲ್ಪಟ್ಟದ್ದಕ್ಕೆ ದೃಷ್ಟಾಂತ ನೀಡಲು ಪೇತ್ರನು ಇಲ್ಲಿ 6-8 ವಚನಗಳಲ್ಲಿ ಹಳೆ ಒಡಂಬಡಿಕೆಯ ಭಾಗಗಳನ್ನು ಉಲ್ಲೇಖಿಸುತ್ತಾನೆಃ ಯೇಶಾಯ 28:16; ಕೀರ್ತನೆಗಳು 118:22; ಯೆಶಾಯ 8:14. ಕ್ರಿಸ್ತನನ್ನು 6ನೇ ವಚನದಲ್ಲಿ ಮಾನ್ಯವಾದ ಮೂಲೆಗಲ್ಲು ಎಂದು ಕರೆಯಲಾಗಿದೆ (ಎಫೆಸ 2:20-21 ನೋಡಿರಿ). ಕ್ರಿಸ್ತನಲ್ಲಿ ನಂಬುವವರೆಲ್ಲರೂ ದೇವರ ಎದುರಿನಲ್ಲಿ ಎಂದಿಗೂ ನಾಚಿಕೆಗೊಳಗಾಗುವದಿಲ್ಲ; ಅವರು ದೇವರಿಂದ ಸ್ವೀಕರಿಸಲ್ಪಡುವರು (ರೋಮ 10:11-13 ಮತ್ತು ವ್ಯಾಖ್ಯಾನ ನೋಡಿರಿ).

**7-8** ಮೂಲೆಗಲ್ಲಾದ ಕ್ರಿಸ್ತನು ಚೀಯೋನಿನಲ್ಲಿ –ಅಂದರೆ, ಪರಲೋಕದಲ್ಲಿ, ಪರಲೋಕದ ಯೆರೂಸಲೇಮಿನಲ್ಲಿ– ಇಡಲ್ಪಟ್ಟಿದ್ದಾನೆ (1 ಕೊರಿಂಥ 1:23-24). ವಿಶ್ವಾಸಿಗಳಿಗಾದರೋ ಕ್ರಿಸ್ತನು ರಕ್ಷಕನು; ಅವಿಶ್ವಾಸಿಗಳಿಗಾದರೋ ಆತನು ನ್ಯಾಯಾಧಿಪತಿ (ಯೋಹಾನ 5:22; ರೋಮ 14:10). ಯೆಹೂದ್ಯರು ಕ್ರಿಸ್ತನನ್ನು ತಿರಸ್ಕರಿಸಿದರು. ಅವರು ಆತನಲ್ಲಿ ನಂಬಿಕೆಯಿಡುವದಕ್ಕೆ ನಿರಾಕರಿಸಿದರು. ಅವರು "ಮೂಲೆಗಲ್ಲನ್ನು" ಹೊರಬಿಸಾಡಿದರು. ಆದರೆ ಬಳಿಕ ಅವರು ಅದಕ್ಕೆ ಎಡವಿದರು (ರೋಮ 9:30-32 ಮತ್ತು ವ್ಯಾಖ್ಯಾನ ನೋಡಿರಿ). ಅದೇ ವಿಧದಲ್ಲಿ ನಾವು ಕ್ರಿಸ್ತನನ್ನು ನಿರಾಕರಿಸುವದಾದರೆ ಮತ್ತು ಆತನ ವಾಕ್ಯಕ್ಕೆ ಅವಿಧೇಯರಾಗುವದಾದರೆ ನಾವು ಸಹ ಎಡವಿ ದಂಡನೆಗೊಳಗಾಗುತ್ತೇವೆ.

ಎಲ್ಲಾ ಮನುಷ್ಯರ ಪಾಪಗಳಿಗೂ ಅವರ ಅಪನಂಬಿಕೆಯೇ ಮೂಲವಾಗಿರುತ್ತದೆ. ಅದು ಪ್ರಾಥಮಿಕವಾಗಿ ದೇವರು ನಮಗಿಂತಲೂ ದೊಡ್ಡವನೆಂಬದನ್ನು ಒಪ್ಪಿಕೊಳ್ಳಲು ನಿರಾಕರಿಸುವದಾಗಿದೆ. ಅಪನಂಬಿಕೆಯ ಜೊತೆಯಲ್ಲಿ ಯಾವಾಗಲೂ ಅವಿಧೇತೆಯು ಇರುತ್ತದೆ. ದೇವರನ್ನು ನಂಬದಿರುವದು ಹಾಗೂ ದೇವರಿಗೆ ಅವಿಧೇಯರಾಗುವದು ಯಾವಾಗಲೂ ಜೊತೆ ಜೊತೆಯಾಗಿ ಸಾಗುತ್ತವೆ (ಇಬ್ರಿಯ 3:18-19; 11:16). ನಾವು ನಂಬುವದಕ್ಕೆ ನಿರಾಕರಿಸುವಾಗ, ತತ್ಪರಿಣಾಮವಾಗಿ ದೇವರಿಗೆ ಅವಿಧೇಯರಾಗುವವರಾಗಿದ್ದೇವೆ (ಯೋಹಾನ 6:29). ಪ್ರತಿಯೊಬ್ಬ ವ್ಯಕ್ತಿಯ ಅಂತ್ಯ ಸ್ಥಿತಿ ಅಥವಾ ಅಂತ್ಯವು ಅವನು ಅಥವಾ ಅವಳು ಯೇಸುಕ್ರಿಸ್ತನನ್ನು ನಂಬಿದ್ದಾರೋ ಅಥವಾ ಇಲ್ಲವೋ ಎಂಬುದರ ಮೇಲೆ ನಿರ್ಧರಿಸಲ್ಪಡುತ್ತದೆ (ಯೋಹಾನ 1:10-12; 3:18, 36; ರೋಮ 2:8; 10:9; 1 ಯೋಹಾನ 5:11-12 ನೋಡಿರಿ). ಕ್ರಿಸ್ತನನ್ನು ತಿರಸ್ಕರಿಸಿ ಅವಿಧೇಯರಾಗುವವರು ಎಡವಿಬೀಳುವದಕ್ಕೆ ನೇಮಕವಾದವರು; ಅಂದರೆ, ಅವರು ದಂಡನೆಗೊಳಗಾಗುವದಕ್ಕೆ ನೇಮಕವಾಗಿರುತ್ತಾರೆ.

**9** ಇಲ್ಲಿ ಪೇತ್ರನು ಯೆಹೂದ್ಯ ಜನಾಂಗದ ಇಸ್ರಾಯೇಲಿನ ಕುರಿತಾದ ಹಳೆ ಒಡಂಬಡಿಕೆಯ ಕೆಲವು ಹೇಳಿಕೆಗಳನ್ನು ಉಲ್ಲೇಖಿಸುತ್ತಾ ಕ್ರೈಸ್ತ ರನ್ನು ಬಣ್ಣಿಸುತ್ತಾನೆ. ವಾಸ್ತವದಲ್ಲಿ ನೂತನ ಹಾಗೂ ನಿಜವಾದ "ಇಸ್ರಾಯೇಲ" ಆಗಿದ್ದಾರೆ. ಅವರು

ರಾಜವಂಶಸ್ಥರಾದ ಯಾಜಕರು ಹಾಗೂ ಮೀಸಲಾದ (ಪವಿತ್ರರಾದ) ಜನವೂ (ವಿಮೋಚನ ಕಾಂಡ 19:5-6). ದೇವರ ಸ್ವಕೀಯ ಪ್ರಜೆಯೂ ಆಗಿದ್ದಾರೆ. (ತೀತನು 2:14 ನೋಡಿರಿ). ನಾವು ಆತನ ಗುಣಾತಿಶಯಗಳನ್ನು (ಸ್ತುತಿಗಳನ್ನು) ಪ್ರಚಾರಮಾಡುವವರಾಗುವಂತೆ ದೇವರು ನಮ್ಮನ್ನು ತನ್ನ ಜನರನ್ನಾಗಿ ಮಾಡಿಕೊಂಡಿದ್ದಾನೆ (ಯೇಶಾಯ 43:21). ದೇವರು ನಮ್ಮನ್ನು ಕತ್ತಲೆಯೊಳಗಿಂದ –ಪಾಪ ಹಾಗೂ ಅಪನಂಬಿಕೆಯ ಲೋಕದೊಳಗಿಂದ– ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ –ಅಂದರೆ, ಪರಲೋಕರಾಜ್ಯದೊಳಗೆ– ಸೇರಿಸಿದ್ದಾನೆ (ಅ.ಕೃತ್ಯ 26:17-18; ಎಫೆಸ 5:8, ಕೊಲೊಸ್ಸೆ 1:13-14 ನೋಡಿರಿ).

**10** ನಾವು ನಂಬವರಾದ ಅನ್ಯಜನರಂತೆ (ಯೆಹೂದ್ಯೇತರಂತೆ) ಇದ್ದೇವು ನಾವು ದೇವರ ಜನರಿಗೆ ಯೆಹೂದ್ಯರಿಗೆ ಸಂಬಂಧ ಪಟ್ಟಿರಲಿಲ್ಲ; ನಾವು ಯೆಹೂದ್ಯಜನಾಂಗವಾದ ಇಸ್ರಾಯೇಲಿನ ಭಾಗವಾಗಿರಲಿಲ್ಲ. ಆದರೆ ಈಗ ನಾವು ದೇವರ ಪ್ರಜೆಯಾಗಿದ್ದೇವೆ; ನಾವು ದೇವರ ಕರುಣೆ, ದೇವರ ರಕ್ಷಣೆಯನ್ನು ಕ್ರಿಸ್ತನ ಮೂಲಕ ಪಡೆದುಕೊಂಡಿದ್ದೇವೆ (ರೋಮ 9:23-25 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ಕೇವಲ ದೇವರ ಪ್ರಜೆ ಮಾತ್ರವಾಗಿರುವದಿಲ್ಲ; ನಾವು ಆತನ ಪುತ್ರರು– ಜೀವವುಳ್ಳ ದೇವರ ಪುತ್ರರಾಗಿದ್ದೇವೆ (ರೋಮ 9:26).

## ದೇವರ ಸೇವಕರು (2:11-17)

**11** ನಾವು ದೇವರ ಮಕ್ಕಳೂ, ಆತನ ಪರಿಶುದ್ಧ ಕುಟುಂಬದ ಸದಸ್ಯರೂ ಆಗಿರುವದರಿಂದ ಪಾಪಾಧೀನ ಅಭಿಲಾಷೆಗಳಿಗೆ ದೂರವಾಗಿರಬೇಕು (1 ಪೇತ್ರ 1:14 ನೋಡಿರಿ). ಅಂಥ ಪಾಪಾಧೀನ ಅಭಿಲಾಷೆಗಳು ನಮ್ಮ ಆತ್ಮದ ಮೇಲೆ ಯುದ್ಧಮಾಡುತ್ತವೆ. (ರೋಮ 7:21-23; ಗಲಾತ್ಯ 5:16-17, 19;21 ನೋಡಿರಿ). ನಾವು ಇಹಲೋಕದ ಪೌರರಲ್ಲ ನಾವು ಪ್ರವಾಸಿಗಳೂ ಪರದೇಶಸ್ಥರೂ ಮಾತ್ರವೇ ಆಗಿದ್ದು ಲೋಕವನ್ನು ಹಾದುಹೋಗುತ್ತಿದ್ದೇವಷ್ಟೇ. ಆದದರಿಂದ ನಾವು ಲೋಕದ ಪಾಪಧೀನ ಅಭಿಲಾಷೆಗಳ ಬಲೆಗೆ ಸಿಕ್ಕಿಕೊಳ್ಳದಿರೋಣ ಅದರ ಪಾಪಗಳಲ್ಲಿ ನಾವು ಪಾಲುಗಾರರಾಗದಿರೋಣ.

**12** ಬದಲಾಗಿ, ಲೋಕದಲ್ಲಿ ಜನರು ನಮ್ಮ ಸತ್ಕಾರ್ಯಗಳ ನಿಮಿತ್ತ ದೇವರನ್ನು ಗೌರವಿಸುವಂತೆ ನಾವು ದೇವರ ಪರಿಶುದ್ಧ ಮಕ್ಕಳ ಹಾಗೆ ಜೀವಿಸೋಣ (ಮತ್ತಾಯ 5:16). ಜನರು ಖಂಡಿತವಾಗಿಯೂ ನಮ್ಮನ್ನು ನಿಂದಿಸಿ ಬಾಧಿಸುವರು, ಅವರು ಕ್ರಿಸ್ತನಿಗೂ ಹಾಗೆಯೇ ನಿಂದನೆ ಮಾಡಿ ಬಾಧಿಸಿದರು (ಯೋಹಾನ 15:18-20ನೋಡಿರಿ). ಆದರೆ ನಾವು ಅವರಿಗೆ ಪ್ರತಿಯಾಗಿ ಉತ್ತರಿಸಬೇಕಾದ ಅಗತ್ಯವಿಲ್ಲ. ಬದಲಾಗಿ, ನಾವು ಒಳ್ಳೇದನ್ನು ಮಾಡುವದರಲ್ಲಿ ಮಾತ್ರವೇ ಮುಂದುವರೆಯಬೇಕಾಗಿರುತ್ತದೆ, ಆಗ ನಮ್ಮ ವಿರುದ್ಧವಾಗ ಮಾತಾಡೆವವರು ಕೊನೆಯಲ್ಲಿ ಮೌನವಾಗುವರು (ವಚನ 15). ದೇವರು ನಮಗೆ ದರ್ಶನ ಕೊಡುವ (ಬೇಟಿ ನೀಡುವ) ದಿನವು ದೇವರು ನಮ್ಮ ಸಮೀಪಕ್ಕೆ ಬಂದು ಪಶ್ಚಾತ್ತಾಪಕ್ಕೆ ಕರೆಯುವ ದಿನವಾಗಿದೆ. ನಮ್ಮ ಒಳ್ಳೇ ಕಾರ್ಯಗಳ ಕಾರಣದಿಂದ ಪುರುಷ ಮತ್ತು ಸ್ತ್ರೀಯರು ಅವರಿಗೆ ದೇವರು ದರ್ಶನ ಕೊಡುವ ದಿನದಲ್ಲಿ ಪಶ್ಚಾತಾಪ ಪಟ್ಟು ಆತನನ್ನು ಕೊಂಡಾಡುವಂತಾಗಲಿ.

**13-14** ಮನುಷ್ಯರೊಳಗಿನ ಎಲ್ಲಾ ಕಾನೂನು ಹಾಗೂ ಅಧಿಕಾರವು ದೇವರಿಂದ ಸ್ಥಾಪಿಸಲ್ಪಟ್ಟಿದೆ. ಅಧಿಕಾರಿಯು ಕೆಟ್ಟವನಾಗಿರಬಹುದು, ಆದರೆ ಆತನ ಅಧಿಕಾರವು ಆಗಲೂ ಆತನಿಗೆ ದೇವರಿಂದ ಕೊಡಲ್ಪಟ್ಟದ್ದಾಗಿದೆ. ಎಲ್ಲ ಅಧಿಕಾರವು ದೇವರಿಂದ ಬರುತ್ತದೆ; ಇನ್ನಾವ ಅಧಿಕಾರವೂ ಇರುವದಿಲ್ಲ (ಯೋಹಾನ 19:10-11; ರೋಮ 13:1).

ಕೆಟ್ಟ ಕಾರ್ಯಗಳನ್ನು ಮಾಡುವವರನ್ನು ದಂಡಿಸುವದಕ್ಕೂ ಒಳ್ಳೇಕಾರ್ಯಮಾಡುವರಿಗೆ ಪ್ರೋತ್ಸಾಹನೀಡುವದಕ್ಕೂ ದೇವರು ಅಧಿಕಾರಿಗಳನ್ನು ನೇಮಿಸಿದ್ದಾನೆ. ಈ ಅಧಿಕಾರಿಗಳಿಗೆ ನಾವು ಅಧೀನ ಮಾಡಿಕೊಂಡು ವಿಧೇಯರಾಗಬೇಕೆಂದು ಆತನ ಚಿತ್ತವಾಗಿದೆ. ನಾವು ಕರ್ತನ ನಿಮಿತ್ತ ಅವರಿಗೆ ಅವರಿಗೆ ಅಧೀನರಾಗಬೇಕು–ಅಂದರೆ, ನಾವು ದೇವರ ಅಧಿಕಾರಕ್ಕೆ ಅಧೀನರಾಗಿದ್ದೇವೆಂಬದನ್ನು ತೋರ್ಪಡಿಸುವದನ್ನು ಇತರರಿಗೆ ನೀತಿಯುಳ್ಳ ಜೀವಿತದ ಮಾದರಿಯನ್ನು ತೋರಿಸುವದಕ್ಕೂ ಅವರಿಗೆ ಅಧೀನರಾಗಬೇಕು. ಹೇಗಿದ್ದರೂ, ಲೋಕದ ಅಧಿಕಾರ ಅಥವಾ ಅಧಿಕಾರಿಯು ದೇವರ ವಾಕ್ಯಕ್ಕೆ ಸ್ಪಷ್ಟವಾಗಿ ವಿರುದ್ಧವಾದ ಯಾವದನ್ನಾಗಲಿ ಮಾಡಬೇಕೆಂದು ನಮಗೆ ಆಜ್ಞಾಪಿಸುವದಾದರೆ ನಾವು ಆ ಆಜ್ಞೆಗೆ ವಿಧೇಯರಾಗಬಾರದು; ಬದಲಾಗಿ, ನಾವು ದೇವರ ವಾಕ್ಯಕ್ಕೆ ವಿಧೇಯರಾಗಬೇಕು (ಅ.ಕೃತ್ಯ 4:18-20; 5:29; ರೋಮ 13:1-5; ತೀತನು 3:1 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**15** ಜನರು ನಮ್ಮನ್ನು ವಿರೋಧಿಸಿ ನಿಂದನೆಮಾಡುವಾಗ ನಾವು ಅವರೊಂದಿಗೆ ವಾಗ್ವಾದ ಮಾಡದಿರೋಣ, ನಮಗಾಗಿ ಪ್ರತಿಯೊಂದು ಮಾಡದಿರೋಣ. ನಾವು ಎಂದಿಗೂ ಸೇಡು ತಿರಿಸಿಕೊಳ್ಳಲು ಸಹ ಪ್ರಯತ್ನಿಸಬಾರದು. ಬದಲಾಗಿ, ನಾವು ಅವರಿಗೆ ಪ್ರೀತಿಯನ್ನು ತೋರಿಸುತ್ತಾ ಒಳ್ಳೇದನ್ನು ಮಾಡುವದರಲ್ಲಿ ನಿರತರಾಗಬೇಕು (ವಚನ 12). ಅಂತ್ಯದಲ್ಲಿ ಅವರ ಕೆಟ್ಟ ಹಾಗೂ ಮೂಢ ಮಾತುಗಳು ಮೌನವಾಗುವವು (ಮತ್ತಾಯ 5:44; ರೋಮ 12:14-17-21, ತೀತನು 1 ಪೇತ್ರ 3:9-16 ನೋಡಿರಿ).

ಪೇತ್ರನ ಕಾಲದಲ್ಲಿ ಕ್ರೈಸ್ತರನ್ನು ಕಾನೂನು ಉಲ್ಲಂಘಿಸುವವರು ಹಾಗೂ ಬಂಡಾಯಗಾರರು ಎಂದು ಪರಿಗಣಿಸಲಾಗುತ್ತಿತ್ತು ಯಾಕೆಂದರೆ ಅವರು ಕ್ರಿಸ್ತನನು ಮಾತ್ರವೇ ಆರಾಧಿಸುವವರಾಗಿದ್ದು ರೋಮಾಯ ಚಕ್ರವರ್ತಿಯನ್ನು ಆರಾಧಿಸಲು ನಿರಾಕರಿಸಿದರು. ಯೆಹೂದ್ಯರು ಸಹ ಕ್ರೈಸ್ತರನ್ನು ವಿರೋಧಿಸುತ್ತಿದ್ದರು. ಆದದರಿಂದ, ತಮ್ಮ ಮೇಲೆ ಅನಾವಶ್ಯಕವಾದ

ಅಪವಾದಗಳನ್ನು ಬರಮಾಡಿಕೊಳ್ಳದಿರುವಂತೆ ಕ್ರೈಸ್ತರು ಸಾಧ್ಯವಾದಷ್ಟು ಮಟ್ಟಿಗೆ ಲೋಕದ ಕಾನೂನುಗಳಿಗೆ ವಿಧೇಯರಾಗಿ ತಮ್ಮ ಅಧಿಕಾರಗಳಿಗೆ ಒಳಪಡುವದು ಪ್ರಾಮುಖ್ಯವಾಗಿತ್ತು.

**16** ಕ್ರೈಸ್ತರು ಸ್ವತಂತ್ರರು. ಅವರು ಪಾಪದಿಂದ, ಸ್ವಾರ್ಥ ಅಭಿಲಾಷೆಗಳಿಂದ, ಹಾಗೂ ಸೈತಾನನ ಬಲದಿಂದ ಸ್ವತಂತ್ರರಾಗಿರುತ್ತಾರೆ. ಅವರು ಯೆಹೂದ್ಯ ಧರ್ಮಶಾಸ್ತ್ರ ಹಾಗೂ ದಂಡನೆಯಿಂದ ಸ್ವತಂತ್ರಗೊಳಿಸಲ್ಪಟ್ಟಿದ್ದಾರೆ (ಯೋಹಾನ 8:31-33; 34-36, ರೋಮ 8:1-2; ಗಲಾತ್ಯ 5:1 ಮತ್ತು ವಾಖ್ಯಾನಗಳನ್ನು ನೋಡಿರಿ). ಹೇಗಿದ್ದರೂ, ಕ್ರೈಸ್ತರು ದೇವರಿಂದ ಸ್ವತಂತ್ರರಲ್ಲ! ಅವರು ದೇವರ ದಾಸರು (1 ಕೊರಿಂಥ 7:22-23 ಮತ್ತು ವ್ಯಾಖ್ಯಾನ ನೋಡಿರಿ). ಕ್ರೈಸ್ತರು ಪಾಪದಿಂದ ಸ್ವತಂತ್ರರು, ಆದರೆ ಅವರು ಪಾಪಮಾಡುವದಕ್ಕೆ ಸ್ವತಂತ್ರರಲ್ಲ. ಆದದರಿಂದ, ಕ್ರೈಸ್ತರು ಕೆಟ್ಟತನವನ್ನು ಮರೆಮಾಜುವದಕ್ಕೆ ತಮ್ಮ ಸ್ವಾತಂತ್ರ್ಯವನ್ನು ಉಪಯೋಗಿಸಬಾರದು. ಅವರು ಎಂದಿಗೂ, "ನಾನು ಧರ್ಮಶಾಸ್ತ್ರದಿಂದ ಸ್ವತಂತ್ರನು; ಆದುದರಿಂದ, ನಾನು ದೇವರಿಗೆ ವಿಧೇಯನಾಗಬೇಕಾಗಿಲ್ಲ" ಎಂದು ಹೇಳಬಾರದು (ಗಲಾತ್ಯ 5:13 ಮತ್ತು ವ್ಯಾಖ್ಯಾನ ನೋಡಿರಿ).

ವಿಶ್ವಾಸಿಗಳಾದ ನಾವು ಇತರ ಜನರಿಗೆ ಅಧೀನರಾಗುವದು ಅವರ ಸೇವಕರಾಗಿದ್ದೇವೆಂಬದಕ್ಕಲ್ಲ, ಆದರೆ ದೇವರ ಸೇವಕರಾಗಿದ್ದೇವೆ ಎಂಬದಕ್ಕಾಗಿಯೇ. ನಾವು ಇತರರಿಗೆ ಒತ್ತಾಯದಿಂದ ಅಧೀನರಾಗವದಿಲ್ಲ, ಆದರೆ ಅದರ ಮೂಲಕ ಅವರಿಗೂ ದೇವರಿಗೂ ಸೇವೆ ಮಾಡಬೇಕೆಂದು ಅಭಿಲಾಷಿಸಿ ಪ್ರೀತಿಯಿಂದ ಅಧೀನರಾಗುತ್ತೇವೆ. (1ಕೊರಿಂಥ 9:19 ಮೋಡಿರಿ). ಈ ಕಾರಣಕ್ಕಾಗಿಯೇ ಯೇಸು ನಮಗೆ ಬೋಧಿಸಿದ್ದೇನೆಂದರೆ, ಯಾವನಾದರೂ ನಮಗೆ ಒಂದು ಮೈಲು ದೂರ ಹೋಗಬೇಕೆಂದು ಒತ್ತಾಯಿಸಿದರೆ ನಾವು ಆತನೊಂದಿಗೆ ಎರಡು ಮೈಲು ದೂರ ಹೋಗಬೇಕು ಎಂಬುದೇ (ಮತ್ತಾಯ 5:41). ಸ್ವತಂತ್ರನಾಗಿರುವ ವ್ಯಕ್ತಿ ಮಾತ್ರವೇ–ಪಾಪ ಹಾಗೂ ಅಹಂಕಾರದಿಂದ ಮುಕ್ತನಾಗಿರುವವನು –ತನಗೆ ಕೇಳಲ್ಪಟ್ಟದ್ದಕ್ಕಿಂತಲೂ ಹೆಚ್ಚಿನದನ್ನು ಮಾಡುವದಕ್ಕೆ ಸಿದ್ಧನೂ ಮನಸ್ಸುಳ್ಳವನೂ ಆಗಿರುತ್ತಾನೆ (ಮತ್ತಾಯ 5:39-41 ಮತ್ತು ವ್ಯಾಖ್ಯಾನ ನೋಡಿರಿ).

**17** ನಾವು ಎಲ್ಲರಿಗೂ– ವಿಶ್ವಾಸಿಯಾಗಿರಲಿ ಅಥವಾ ಅವಿಶ್ವಾಸಿಯಾಗಿರಲಿ, ಒಳ್ಳೇಯವರಾಗಲಿ ಅಥವಾ ಕೆಟ್ಟವರಾಗಿದ್ದರೂ ಸರಿಯೇ– ಮಾನವನ್ನು ಸಲ್ಲಿಸಬೇಕು, ಯಾಕೆಂದರೆ ಎಲ್ಲಾ ಮನುಷ್ಯರು ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿದ್ದಾರೆ (ಆದಿಕಾಂಡ 1:27).

ನಾವು ವಿಶೇಷವಾಗಿ, ನಮ್ಮ ಕ್ರೈಸ್ತ ಸಹೋದರರು ಹಾಗೂ ಸಹೋದರಿಯರನ್ನು ಪ್ರೀತಿಸಬೇಕು. ಇಲ್ಲಿ ಪೇತ್ರನು ನಾವು ವಿಶ್ವಾಸಿಗಳ ಸಹೋದರತ್ವವನ್ನು –ಅಂದರೆ, ಸಭೆಯನ್ನು ಪ್ರೀತಿಸಬೇಕೆಂದು ಹೇಳುತ್ತಾನೆ. ಈ ವಚನವನ್ನು ತಪ್ಪಾಗಿ ವ್ಯಾಖ್ಯಾನಿಸುವ ಸಾಧ್ಯತೆಯಿದೆ. ಕೆಲವು ಮಂದಿ ಕ್ರೈಸ್ತರು ತಾವು ಸಭೆಯನ್ನು ಪ್ರೀತಿಸುತ್ತೇವೆಂದು ಹೇಳಿಕೊಳ್ಳುತ್ತಾರೆ ಆದರೆ ಅವರು ಸಭೆಯ ಸದಸ್ಯರಿಗೆ ಅತಿ ಕಡಿಮೆ ಪ್ರೀತಿಯನ್ನು ತೋರಿಸುತ್ತಾರೆ! ಅಂಥ ಜನರು ಸಭೆಯನ್ನು ಶುದ್ಧೀಕರಿಸಲು ಅಪೇಕ್ಷಿಸುತ್ತಾರೆ ಆದರೆ ಹಾಗೆ ಮಾಡುವದರಲ್ಲಿ ಅವರು ತಮ್ಮ ಸಹೋದರ ಹಾಗೂ ಸಹೋದರಿಯರನ್ನು ತಪ್ಪಾಗಿ ನಡಿಸಿಕೊಳ್ಳುತ್ತಾರೆ. ನಾವು ಏಕಕಾಲದಲ್ಲಿ ಸಭೆಯನ್ನು ಪ್ರೀತಿಸಬಹುದು ಹಾಗೂ ಇತರ ಕ್ರೈಸ್ತರನ್ನು ವಿರೋಧಿಸಬಹುದೆಂದು ಎಂದಿಗೂ ಯೋಚಿಸದಿರೋಣ ಸಭೆಯನ್ನು ಪ್ರೀತಿಸುವದೆಂದರೆ ಸಭೆಯಲ್ಲಿನ ಪ್ರತಿಯೊಬ್ಬ ಸಹೋದರ ಹಾಗೂ ಸಹೋದರಿಯನ್ನು ಪ್ರೀತಿಸುವದಾಗಿದೆ.

## ಕ್ರಿಸ್ತನು ಬಾಧೆಗೆ ಮಾದರಿಯಾಗಿದ್ದಾನೆ (2:18-25)

**18** ನಾವೆಲ್ಲರೂ ನಮ್ಮ ಅಧಿಕಾರಿಗಳಿಗೆ ಅಧೀನರಾಗಬೇಕಾಗಿರುವ ಪ್ರಕಾರವೇ (ವಚನ 13) ಸೇವಕರು (ಅಥವಾ ನೌಕರರು) ತಮ್ಮ ಯಜಮಾನರಿಗೆ (ಅಥವಾ ಧನಿಗಳಿಗೆ) ಅಧೀನರಾಗಿರಬೇಕು. ಯಜಮಾನನು ಕಠೋರನಾಗಿದ್ದರೂ (ವಕ್ರಬುದ್ಧಿಯವನು) ಸೇವಕರು ಮನಃ ಪೂರ್ವಕವಾಗಿ ಅಧೀನರಾಗಬೇಕು (ಎಫೆಸ 6:5-8; 1 ತಿಮೊಥೆ 6:1, ತೀತನು 2:9-10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**19-20** ಈ ವಚನಗಳಲ್ಲಿ ಪೇತ್ರನು ನಮಗೆ ಒಂದು ಕಷ್ಟಕರವಾದ ಆದರೂ ಅತಿ ಪ್ರಾಮುಖ್ಯವಾದ ಬೋಧನೆಯನ್ನು ನೀಡುತ್ತಾನೆಃ ನಾವು ಅನ್ಯಾಯವಾಗಿ ಬಾಧೆ ಪಡುತ್ತಾ ಸಹಿಸಿಕೊಂಡರೆ ಅದು ದೇವರ ದೃಷ್ಟಿಯಲ್ಲಿ ಶ್ಲಾಘ್ಯವಾಗಿದೆ. ಅಂದರೆ, ನಾವು ಒಳ್ಳೇದನ್ನು ಮಾಡಿದ್ದಕ್ಕಾಗಿ ಬಾಧೆಪಟ್ಟರೆ ಅದು ಶ್ಲಾಘ್ಯವಾಗಿದೆ (ಮತ್ತಾಯ 5:10-11; 44, 46-47; ಲೂಕ 6:32-35 ನೋಡಿರಿ). ಈ ಬೋಧನೆಯು ಲೋಕದ ಬೋಧನೆಗೆ ತದ್ವಿರುದ್ಧವಾದದ್ದು ಕ್ರೈಸ್ತರಿಗೂ ಸಹ ಈ ಬೋಧನೆಯನ್ನು ಒಪ್ಪಿಕೊಳ್ಳುವದು. ಕಷ್ಟಕರವಾಗಿರುತ್ತದೆ. ನಾವು ನಮ್ಮ ಧನಿಯಿಂದ ಯಾವದಾದರೂ ಒಂದು ಚಿಕ್ಕ ಅನ್ಯಾಯ ಅಥವಾ ನೋವನ್ನು ಅನುಭವಿಸುವ ಕ್ಷಣದಲ್ಲಿ ನಾವು ಕೂಗಿಕೊಳ್ಳುತ್ತೇವೆ. ತಕ್ಷಣವೇ ನಾವು ನಮ್ಮ ಧನಿಯನ್ನು ವಿರೋಧಿಸುವದಕ್ಕೆ ಆತನ ವಿರುದ್ಧವಾಗಿ ಮಾತಾಡುವದಕ್ಕೆ ಪ್ರಾರಂಭಿಸುತ್ತೇವೆ. ನಾವು ಹೀಗೆ ಮಾಡುವಾಗ ದೇವರಿಂದ ಶ್ಲಾಘ್ಯವನ್ನು ಕಳೆದುಕೊಳ್ಳುತ್ತೇವೆ.

**21** ಬದಲಾಗಿ, ನಾವು ಅನ್ಯಾಯವಾಗಿ ಬಾಧೆಪಡುವ ವೇಳೆ ಅದನ್ನು ತಾಳ್ಮೆಯಿಂದಲೂ ಮೌನವಾಗಿಯೂ ಸಹಿಸಿಕೊಳ್ಳೋಣ ಯಾಕೆಂದರೆ ಇದಕ್ಕೋಸಕರವೇ ನಾವು ಕರೆಯಲ್ಪಟ್ಟಿದ್ದೇವೆ. ಕ್ರಿಸ್ತನು ನಮಗಾಗಿ ಬಾಧೆಯನ್ನನುಭವಿಸುವದಕ್ಕೆ ಕರೆಯಲ್ಪಟ್ಟನು (ಮಾರ್ಕ 8:31; 10:45; 14:24; ಲೂಕ 24:25-27, 46). ಮತ್ತು ಕ್ರಿಸ್ತನನ್ನು ಹಿಂಬಾಲಿಸುವವರು ಸಹ ಬಾಧೆಯನ್ನನುಭವಿಸುವದಕ್ಕೆ ಕರೆಯಲ್ಪಟ್ಟಿದ್ದಾರೆ (ಮಾರ್ಕ 8:34-35; ಯೋಹಾನ 15:20; 2 ತಿಮೊಥೆ 3:12).

**22** ಇಲ್ಲಿ ಪೇತ್ರನು ಯೇಶಾಯ 53:9ರಿಂದ ಉಲ್ಲೇಖಿಸುತ್ತಾನೆ ಕ್ರಿಸ್ತನು ಮಾತಿನಲ್ಲಿ ಹಾಗೂ ಕೃತ್ಯದಲ್ಲಿ ಸಂಪೂರ್ಣ ನಿರಪರಾಧಿಯಾಗಿದ್ದನು. ಆತನು ಯಾವ ಪಾಪವನ್ನು ಮಾಡಲಿಲ್ಲ, ಹಾಗಿದ್ದರೂ, ಜನರು ಆತನನ್ನು ತಿರಸ್ಕಾರ ಮಾಡಿ ಪರಿಹಾಸ್ಯಗೈದರು, ಮತ್ತು ಕೊನೆಯಲ್ಲಿ ಅವರು ಆತನನ್ನು ಒಬ್ಬ ಅಪರಾಧಿಯಂತೆ ಮರಣಕ್ಕೆ ಒಪ್ಪಿಸಿದರು.

**23** ಕ್ರಿಸ್ತನು ಬೈಯುವವರನ್ನು ಪ್ರತಿಯಾಗಿ ಬೈಯಲಿಲ್ಲ. ಆತನು ಯಾವದೇ ವ್ಯಕ್ತಿಯೊಂದಿಗೆ ಕೆಟ್ಟದ್ದಾಗಿ ನಡೆದುಕೊಳ್ಳಲಿಲ್ಲ; ಆತನು ಮುಯ್ಯಿ ತೀರಿಸಲು ಅಪೇಕ್ಷಿಸಲಿಲ್ಲ. ಆತನು ಮೌನವಾಗಿ ಬಾಧೆಯನ್ನನುಭವಿಸಿದನು (ಯೆಶಾಯ 53:7; ಮಾರ್ಕ 14:61-65). ಆತನು ತನ್ನನ್ನು ದೇವರಿಗೆ ಒಪ್ಪಿಸಿಕೊಟ್ಟನು (1 ಪೇತ್ರ 4:19 ನೋಡಿರಿ). ಈ ಲೋಕದಲ್ಲಿ ಜನರು ನಮ್ಮನ್ನು ಕುರಿತು ತೀರ್ಪು ಮಾಡಬಹುದು, ಹಾಗೂ ಅಪರಾಧಿಗಳೆಂದು ನಿರ್ಣಯಿಸಬಹುದು. ಆದರೆ ಅಂತಿಮ ನ್ಯಾಯಾಧಿಪತಿಯು ದೇವರೇ. ಮತ್ತು ದೇವರು ಯಾವಾಗಲೂ ನ್ಯಾಯವಾಗಿ ತೀರ್ಪುಮಾಡುತ್ತಾನೆ; ನಾವು ನಮ್ಮನ್ನು ಆತನಿಗೆ ಒಪ್ಪಿಸಿಕೊಡಬಹುದು.

**24** ಕ್ರಿಸ್ತನು ನಮಗೋಸ್ಕರ ಬಾಧೆಯನ್ನನುಭವಿಸಿದನು (ವಚನ 21). ಆತನು ತನ್ನ ಸ್ವಪಾಪಗಳಿಗೋಸ್ಕರವಲ್ಲ ಆದರೆ ನಮ್ಮ ಪಾಪಗಳಿಗೋಸ್ಕರ ಬಾಧೆಯನ್ನನುಭವಿಸಿದನು. ಯಾಕೆಂದರೆ, ಕ್ರಿಸ್ತನು ಪಾಪರಹಿತನಾಗಿದ್ದು ತನ್ನ ಸ್ವಂತ ದಂಡನೆಯನ್ನು ಸಹಿಸಿಕೊಳ್ಳುವ ಅಗತ್ಯವಿರಲಿಲ್ಲ ಆತನು ನಮ್ಮ ದಂಡನೆಯನ್ನು ಹೊತ್ತುಕೊಳ್ಳಲು ಶಕ್ತನಾಗಿದ್ದನು. ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತು ಕೊಂಡನು. ಅಂದರೆ, ಆತನು ನಮ್ಮ ಪಾಪಗಳ ದಂಡನೆಯನ್ನು ಹೊತ್ತುಕೊಂಡನು (ಯೆಶಾಯ 53:12). ಆ ದಂಡನೆಯು ಮರಣವೇ (ರೋಮ 4:25). ಕ್ರಿಸ್ತನು ಮರದ ಕಂಬದ ಮೇಲೆ ಅಂದರೆ, ಶಿಲುಬೆಯ ಮೇಲೆ- ಕೊಲ್ಲಲ್ಪಟ್ಟನು. ನಾವು ಪಾಪದ ಪಾಲಿಗೆ ಸತ್ತು ನೀತಿವಂತರಾಗಿ ಜೀವಿಸುವಂತೆ ಕ್ರಿಸ್ತನು ಸತ್ತನು. ಕ್ರಿಸ್ತನು ನಮ್ಮ ಪಾಪಗಳನ್ನು ಅಳಿಸಿಹಾಕಿ ನಮ್ಮನ್ನು ಸೈತಾನನ ಬಲದಿಂದ ವಿಮೋಚಿಸಿದ್ದು ಮಾತ್ರವಲ್ಲದೆ, ನಮ್ಮ ಜೀವಿತಗಳನ್ನು ಸಂಪೂರ್ಣವಾಗಿ ದೇವರ ಕಡೆಗೆ ತಿರುಗಿಸಿ ನೀತಿಯ ಜವಿತಗಳನ್ನು ಜೀವಿಸುವದಕ್ಕಾಗಿ ನಮಗೆ ನೂತನ ಮನಸ್ಸನ್ನೂ ನೂತನ ಬಲವನ್ನು ನೀಡಿದನು (ರೋಮ 6:2, 6, 11-13; 18, 22-23 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

........ ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು (ಯೆಶಾಯ 53:5). ಕ್ರಿಸ್ತನು ರೋಮಾಯ ಸಿಪಾಯಿಗಳ ಕೈಗಳಲ್ಲಿ ಗಾಯಗೊಂಡನು (ಮಾರ್ಕ 15:15; ಯೋಹಾನ 19:1). ಇಲ್ಲಿ ನಾವು ಆಳವಾದ ಹಾಗೂ ಪ್ರಾಮುಖ್ಯವಾದ ಆತ್ಮೀಕ ಸೂತ್ರವನ್ನು ನೋಡುತ್ತೇವೆಃ ಬಾಧೆಯ ಮೂಲಕ ನಾವು ಗುಣವಾಗುತ್ತೇವೆ ಅದು ಮಾತ್ರವಲ್ಲದೆ, ನಮ್ಮ ಬಾಧೆಯ ಮೂಲಕ ಇತರರು ಸಹ ಗುಣವಾಗುತ್ತಾರೆ. ನಾವು ದೇವರ ಚಿತ್ತಾನುಸಾರವಾಗಿ ಆತನ ನಿಮಿತ್ತ ಬಾಧೆಯನ್ನನುಭವಿಸುವದಾದರೆ ನಮ್ಮ ಬಾಧೆಯ ಮೂಲಕ ಅದ್ಭುತವಾದ ಸ್ವಸ್ಥತೆಯ ಶಕ್ತಿಯು ಬಿಡುಗಡೆಗೊಳ್ಳುವದು (1 ಪೇತ್ರ 4:14-16 ನೋಡಿರಿ). ನಾವು ಕ್ರಿಸ್ತನ ನಿಮಿತ್ತ ಬಾಧೆಯನ್ನು ಅನುಭವಿಸುವಾಗ ನಮ್ಮ ನಂಬಿಕೆಯು ನಿಜವಾದದ್ದೆಂದು ಜನರು ನೋಡಿ ದೇವರ ಕಡೆಗೆ ತಿರಿಗಿಕೊಳ್ಳುವರು. ನಾವು ಕ್ರಿಸ್ತನಿಗೋಸ್ಕರ ಬಾಧೆಯನ್ನನುಭವಿಸುವಾಗ ನಮ್ಮ ನಡುವಿನ ಕಲಹ ಹಾಗೂ ಬೇಧಗಳು ಗುಣವಾಗುವವು . ನಮ್ಮ ಬಾಧೆಗಳ ಮುಖಾಂತರ ದೇವರು ಮಹಾಕಾರ್ಯಗಳನ್ನು ಸಾಧಿಸಬಲ್ಲನು

**25** ನಾವು ದಾರಿತಪ್ಪಿ ತೊಳಲುವ ಕುರಿಗಳಂತಿದ್ದೇವೆ (ಯೆಶಾಯ 53:6). ಆದರೆ ನಮ್ಮ ಕುರುಬನು ನಮ್ಮನ್ನು ಪುನಃ ತನ್ನ ಬಳಿಗೆ ಕರೆದಿರುತ್ತಾನೆ. ನಾವು ಒಂದೇ ಹಿಂಡು, ಯಾಕೆಂದರೆ ನಮಗೆ ಯೇಸು ಕ್ರಿಸ್ತನೆಂಬ ಒಬ್ಬನೇ ಕುರುಬನಿದ್ದಾನೆ (ಯೋಹಾನ 3:1-7).

---

## ಅಧ್ಯಾಯ - 3

### ಗಂಡಂದಿರು ಮತ್ತು ಹೆಂಡತಿಯರು (3:1-7)

**1-2** ಕ್ರೈಸ್ತರೆಲ್ಲರೂ ತಮ್ಮ ಅಧಿಕಾರಿಗಳಿಗೆ ಹಾಗು ನೌಕರರೆಲ್ಲರೂ ತಮ್ಮ ಧಣಿಗಳಿಗೆ ಅಧೀನರಾಗಿರಬೇಕಾಗಿರುವ ಪ್ರಕಾರವೇ ಹೆಂಡತಿಯರು ತಮ್ಮ ಗಂಡಂದಿರಿಗೆ ಅಧೀನರಾಗಿರಬೇಕು. ಒಂದು ಕುಟುಂಬದಲ್ಲಿ ಗಂಡನು ಹೆಂಡತಿಗೆ ಶಿರಸ್ಸಾಗಿದ್ದಾನೆ (1 ಕೊರಿಂಥ 11:3, 7-9; ಎಫೆಸ 5:22-24 ಮತ್ತು ವ್ಯಾಖ್ಯಾನಗಳನ್ನೂ; ಸಾಮಾನ್ಯ ಲೇಖನಃ ಕ್ರೈಸ್ತೀಯ ವಿವಾಹ ನೋಡಿರಿ).

ಗಂಡನೊಬ್ಬನು ಅವಿಶ್ವಾಸಿಯಾಗಿರುವದಾದರೆ -ವಾಕ್ಯವನ್ನು ನಂಬದವನು- ಅವನು ಸುವಾರ್ತೆಯನ್ನು ವಿರೋಧಿಸಬಹುದು. ಅವನು ತನ್ನ ಕ್ರೈಸ್ತ ಹೆಂಡತಿಯ ವಿಷಯದಲ್ಲಿ ಕಠೋರನಾಗಿರಬಹುದು. ಆದರೆ ಅಂಥ ಮನುಷ್ಯನ ವಿಶ್ವಾಸಿ ಹೆಂಡತಿಯು ತನ್ನ ಗಂಡನ ವಿರುದ್ಧ ಜಗಳವನ್ನಾಡದಿರಲಿ ಅಥವಾ ಗುಣಗುಟ್ಟದಿರಲಿ. ಬದಲಾಗಿ, ಅವಳು ನಿರ್ಮಲಳಾಗಿಯೂ, ಭಯ ಭರಿತಳಾಗಿಯೂ ಜೀವಿಸುತ್ತಾ ತನ್ನ ಗಂಡನಿಗೂ ದೇವರಿಗೂ ಗೌರವವನ್ನು ತೋರಿಸುವವಳಾಗಿರಲಿ. ಈ ವಿಧದಲ್ಲಿ ಆಕೆಯ ಕ್ರಿಸ್ತನಂಬಿಕೆಯಿಲ್ಲದ ಗಂಡನು ಅವಳ ಒಳ್ಳೇ ನಡತೆಯನ್ನು ನೋಡಿ ಒಂದು ಸಮಯ ಪಶ್ಚಾತಾಪಕ್ಕೆ ನಡಿಸಲ್ಪಟ್ಟವನಾಗಿ ಕರ್ತನಲ್ಲಿ ನಂಬಿಕೆಯಿಡಬಹುದು. ಜನರನ್ನು ನಮ್ಮ ಪರವಾಗಿ ಗೆದ್ದುಕೊಳ್ಳಲು ನಡವಳಿಕೆಯು ಯಾವಾಗಲೂ ಮಾತುಗಳಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ವಾಸ್ತವದಲ್ಲಿ ನಮ್ಮ ಒಳ್ಳೇ ನಡವಳಿಕೆಯ ಮೂಲಕ ಜನರನ್ನು ಕ್ರಿಸ್ತನ ಬಳಿಗೆ ತರುವದು ಉತ್ತಮ ಮಾರ್ಗವಾಗಿರುತ್ತದೆ.[5]

3-4 ಎರಡು ವಿಧವಾದ ಶೃಂಗಾರ (ಸೌಂದರ್ಯ) ಇರುತ್ತದೆಃ ಹೊರಗಣ ಅಥವಾ ದೈಹೀಕ ಸೌಂದರ್ಯ ಮತ್ತು ಒಳಗಣ ಅಥವಾ ಆತ್ಮೀಕ ಸೌಂದರ್ಯ. ಒಳಗಣ ಸೌಂದರ್ಯವೇ ನಿಜವಾದ ಸೌಂದರ್ಯ ಅದು ಅಂತರ್ಯದ ಸೌಂದರ್ಯ ದೇವರು ನೋಡುವಂಥ ಸೌಂದರ್ಯವು ಇದೇ ಆಗಿದೆ. ಒಳಗಣ ಸೌಂದರ್ಯವು ಸಾತ್ವಿಕವಾದ ಶಾಂತಮನಸ್ಸು ಎಂಬ ಸೌಂದರ್ಯವು ಶಾಶ್ವತವಾದದ್ದು (ವಚನ 4). ಈ ವಿಧವಾದ ಸೌಂದರ್ಯವು ದೇವರ ದೃಷ್ಟಿಗೆ ಬಹುಬೆಲೆಯುಳ್ಳದ್ದು ಆಗಿದೆ. ವಿಶ್ವಾಸಿಯಾದ ಹೆಂಡತಿಯ ಸೌಂದರ್ಯ ಅಥವಾ ಅಲಂಕಾರವು ಆ ರೀತಿಯದ್ದಾಗಿರಲಿ.

ಹೇಗಿದ್ದರೂ, ಆಕರ್ಷಣೆಯಾಗಿ ಉಡುಪು ತೊಟ್ಟುಕೊಳ್ಳುವದು ಪಾಪವಲ್ಲ. ಒಬ್ಬ ಕ್ರೈಸ್ತ ಸ್ತ್ರೀಯು ಮಾಸಿಹೋದ ತೊಟ್ಟು ಬಿಸಾಡಿದ ಉಡುಪು ಗಳನ್ನು ಧರಿಸಿಕೊಳ್ಳಬೇಕಾಗಿಲ್ಲ. ವಿಶ್ವಾಸಿಯಾದ ಹೆಂಡತಿಯು ತಕ್ಕದಾದ ಹಾಗೂ ಮರ್ಯಾದೆಗೆ ಯೋಗ್ಯವಾದ ಉಡುಪನ್ನುಟ್ಟುಕೊಳ್ಳಲಿ (1 ತಿಮೊಥೆ 2:9-10 ಮತ್ತು ವ್ಯಾಖ್ಯಾನ ನೋಡಿರಿ). ಹೊಸ ಒಡಂಬಡಿಕೆಯ ಕಾಲದಲ್ಲಿ ಭಕ್ತಿಹೀನ ಹಾಗೂ ಪ್ರಾಪಂಚಿಕವಾದ ಸ್ತ್ರೀಯರು ಪದ್ಧತಿ ಪ್ರಕಾರ ಜಡೆಹೆಣೆದುಕೊಂಡು ದುಬಾರಿಯಾದ ವಸ್ತ್ರಗಳನ್ನು ಹಾಗೂ ಒಡವೆಗಳನ್ನು ಧರಿಸಿಕೊಳ್ಳುತ್ತಿದ್ದರು. ಆದದರಿಂದ, ಪೇತ್ರನ ಕಾಲದಲ್ಲಿ ಕ್ರೈಸ್ತ ಸ್ತ್ರೀಯರು ಆ ರೀತಿಯಲ್ಲಿ ವಸ್ತ್ರಗಳನ್ನು ಧರಿಸಿಕೊಳ್ಳುವದು ಜಡೆಹೆಣೆದುಕೊಳ್ಳುವದು. ತಕ್ಕದ್ದಾಗಿರಲಿಲ್ಲ ಹಾಗೆ ಮಾಡುವುದರಿಂದ ಅವರು ಸಹ ಭಕ್ತಹೀನರೂ ಪ್ರಾಪಂಚಿಕರೂ ಎಂಬಂತೆ ತೋರುವದಕ್ಕೆ ಸಾಧ್ಯತೆಯಿತ್ತು ಮತ್ತು ಇದರಿಂದ ದೇವರಿಗೆ ಅವಮಾನವಾಗುತ್ತಿತ್ತು.

ಆದರೆ ಇತರ ರಾಷ್ಟ್ರಗಳಲ್ಲಿ, ಸಾಧಾರಣ ಭಕ್ತಿವಂತರು ತಮ್ಮ ಕೂದಲುಗಳ ಜಡೆ ಹಣೆದುಕೊಳ್ಳುವದು ಹಾಗೂ ಚಿನ್ನದ ಆಭರಣಗಳನ್ನು ಧರಿಸಿಕೊಳ್ಳುವದು ಪದ್ಧತಿಯಾಗಿರುತ್ತದೆ. ಹಾಗಾದರೆ, ಈ ರಾಷ್ಟ್ರಗಳಲ್ಲಿ ಕ್ರೈಸ್ತ ಹೆಂಡತಿಯರು ಹಾಗೆಯೇ ಮಾಡುವದು ತಕ್ಕದ್ದಾಗಿರುತ್ತದೆ. ಮುಖ್ಯ ನಿಯಮವು ಏನೆಂದರೆಃ ಸ್ತ್ರೀಯು ಏನೇ ಧರಿಸಿಕೊಂಡರೂ ಸರಿಯೇ ಅದು ದೇವರಿಗೆ ಮೆಚ್ಚಿಕೆಯಾದ್ದೂ ಗೌರವತರುವಂತದ್ದೂ ಆಗಿರಬೇಕು. ಕ್ರೈಸ್ತ ಹೆಂಡತಿಯ ಮುಖ್ಯ ಚಿಂತನೆಯು ತನ್ನನ್ನು ಆತ್ಮೀಕವಾಗಿ ಅಲಂಕಾರಮಾಡಿಕೊಳ್ಳುವದು ಅಂತರ್ಯವನ್ನು ಶೃಂಗರಿಸಿಕೊಳ್ಳುವದು ಆಗಿರಲಿ.

ದೇವರು ಸಮುವೇಲನಿಗೆ ನುಡಿದ ಮಾತುಗಳನ್ನು ಆಕೆಯು ನೆನಪಿನಲ್ಲಿಟ್ಟುಕೊಳ್ಳಲಿಃ "ಕರ್ತನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುವವನಾಗಿದ್ದಾರೆ (1 ಸಮುವೇಲ 16:7).

5-6 ಪೇತ್ರನು ತನ್ನ ಬೋಧನೆಗೆ ದೃಷ್ಟಾಂತ ನೀಡುವದಕ್ಕೆ ಹಳೆ ಒಡಂಬಡಿಕೆಯ ಭಕ್ತಿವಂತೆಯರಾದ ಹೆಂಡತಿಯರ ಉದಾಹರಣೆಗಳನ್ನು ಪ್ರಸ್ತಾಪಿಸುತ್ತಾನೆ, ಅವರ ಸೌಂದರ್ಯವು ಅಧೀನತೆ ಹಾಗೂ ವಿಧೇಯತೆಯ ಮನಸ್ಸುಗಳಲ್ಲಿ ಅಡಕವಾಗಿತ್ತು. ಪೇತ್ರನ ಮುಖ್ಯ ಉದಾಹರಣೆಯು ಅಬ್ರಹಾಮನ ಹೆಂಡತಿಯಾದ ಸಾರಳು ಅವಳು ತನ್ನ ಗಂಡನನ್ನು ಯಜಮಾನ ಎಂದು ಕರೆದಳು ಅಬ್ರಹಾಮನನ್ನು "ಯಜಮಾನ" ಎಂದು ಕರೆಯುವದರಲ್ಲಿ ಸಾರಳು ತಾನು ತನ್ನ ಗಂಡನಿಗೆ ಅಧೀನಳಾಗಿದ್ದಳೆಂಬದನ್ನು ತೋರಿಸಿದಳು. ಅಬ್ರಹಾಮನು ನಂಬುವವರಿಗೆಲ್ಲಾ ತಂದೆ ಎಂದು ಕರೆಯಲ್ಪಟ್ಟಿರುವ ಪ್ರಕಾರವೇ ಸಾರಳನ್ನು ವಿಧೇಯರಾಗುವವರಿಗೆಲ್ಲಾ "ತಾಯಿ" ಎಂದು ಕರೆಯಬಹುದು.

7 ಈ ಪೇತ್ರನು ಕ್ರೈಸ್ತಗಂಡಂದಿರಿಗೆ ಕೆಲವು ಸಲಹೆಗಳನ್ನು ನೀಡುತ್ತಾನೆ. ಗಂಡಂದಿರು ತಮ್ಮ ಹೆಂಡತಿಯರೊಂದಿಗೆ ವಿವೇಕದಿಂದ ಒಗತನ ಮಾಡಬೇಕು (ಎಫೆಸ 5:25-28 ಮತ್ತು ವ್ಯಾಖ್ಯಾನ ನೋಡಿರಿ). ಗಂಡಂದಿರು ತಮ್ಮ ಹೆಂಡತಿಯರಿಗೆ ಮಾನವನ್ನು ಸಲ್ಲಿಸಬೇಕು. ಸ್ತ್ರೀಯರು ಶಾರೀರಿಕವಾಗಿ ಪು ರುಷರಿಗಿಂತ ಬಲಹೀನಳು ಆಗಿರುವದರಿಂದ ಗಂಡಂದಿರು ತಮ್ಮ ಹೆಂಡತಿಯರನ್ನು ಸಂರಕ್ಷಿಸಬೇಕು ಹಾಗೂ ಅವರೊಂದಿಗೆ ದಯಾಪರರಾಗಿಯೂ ನಯವಾಗಿಯೂ ನಡೆದುಕೊಳ್ಳಬೇಕು.

ಹೇಗಿದ್ದರೂ, ಆತ್ಮೀಕ ವಿಷಯಗಳಲ್ಲಿ ಹೆಂಡತಿಯರು ತಮ್ಮ ಗಂಡಂದಿರಿಗಿಂತ ಹಿಂದಿರುವದಿಲ್ಲ. ಗಂಡನು ದೈಹೀಕವಾಗಿ ತನ್ನ ಹೆಂಡತಿಗಿಂತ ಬಲಿಷ್ಠನಾಗಿರಬಹುದು, ಆದರೆ ಆತ್ಮೀಕವಾಗಿ ಅವರು ಸರಿಸಮಾನರು. ಹೆಂಡತಿಯು ಆಕೆಯ ಗಂಡನು ಪಡೆಯುವ ಕೃಪೆಯನ್ನೇ ಪಡೆಯುತ್ತಾಳೆ; ಆಕೆಯು ತನ್ನ ಗಂಡನು ಪಡೆದುಕೊಳ್ಳುವ ರಕ್ಷಣೆಯನ್ನೇ ಪಡೆದುಕೊಳ್ಳುತ್ತಾಳೆ. ಗಂಡ ಮತ್ತು ಹೆಂಡತಿಯರು ಒಟ್ಟಾಗಿ ಜೀವವರಕ್ಕೆ ಬಾಧ್ಯರಾಗಿದ್ದಾರೆ.

ಗಂಡನು ತನ್ನ ಹೆಂಡತಿಯನ್ನು ಕಠೋರವಾಗಿ ನಡಿಸಿಕೊಳ್ಳುವದಾದರೆ, ಅಥವಾ ಹೆಂಡತಿಯು ತನ್ನ ಗಂಡನಿಗೆ ಅಧೀನಳಾಗಲು ನಿರಾಕರಿಸುವದಾದರೆ ಅವರ ನಡುವಿನ ಆತ್ಮೀಕ ಅನ್ಯೋನ್ಯತೆಯು ಮುರಿದುಹೋಗುವದು. ಇದು ಸಂಭವಿಸುವಾಗ ಅವರ ಪ್ರಾರ್ಥನೆಗಳಿಗೆ ಅಡ್ಡಿಯಾಗುತ್ತದೆ. ಇದು ಸಂಭವಿಸದಿರಲಿ. ಗಂಡ ಮತ್ತು ಹೆಂಡತಿಯು ಯೇಸುವಿನ ಮಾತುಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕುಃ..... ನಿಮ್ಮಲ್ಲಿ ಇಬ್ಬರು ತಾವು ಬೇಡಿಕೊಳ್ಳತಕ್ಕ ಯಾವದಾದರೂ ಒಂದು ಕಾರ್ಯದ ವಿಷಯವಾಗಿ ಭೂಲೋಕದಲ್ಲಿ ಒಂದೇ ಮನಸ್ಸುಳ್ಳವರಾಗಿದ್ದರೆ ಅದು ಪರಲೋಕದಲ್ಲಿರುವ ನನ್ನ ತಂದೆಯಿಂದ ಅವರಿಗೆ ಆಗುವದು (ಮತ್ತಾಯ 18:19). ಗಂಡ ಹೆಂಡತಿಯರು ಒಟ್ಟಾಗಿ ಹೊಂದಿರುವ ಪ್ರಾರ್ಥನಾ ಶಕ್ತಿಯ ಬಗ್ಗೆ ಯೋಚಿಸಿರಿ! ಅದಕ್ಕೆ ಯಾವದೂ ಅಡ್ಡಿಯಿರದಿರಲಿ!

ಗಂಡಹೆಂಡತಿಯರು (ಮತ್ತು ನಾವೆಲ್ಲರೂ) ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದ ಇನ್ನೊಂದು ಸಂಗತಿಯಿರುತ್ತದೆ. ಗಂಡ ಹೆಂಡತಿಯರು ಒಟ್ಟಾಗಿ ಪ್ರಾರ್ಥಿಸುವಾಗ ಯೇಸು ಅವರ ಮಧ್ಯದಲ್ಲಿ ಇದ್ದಾನೆಂದು ಅವರು ತಿಳಿಯಬಹುದು. ಯೇಸು ಹೇಳಿದ್ದೇನೆಂದರೆಃ "ಇಬ್ಬರು ಮೂವರು ನನ್ನ ಹೆಸರಿನಲ್ಲಿ ಎಲ್ಲಿ ಕೂಡಿ ಬರುತ್ತಾರೋ ಅಲ್ಲಿ ಅವರ ನಡುವೆ ನಾನು ಇದ್ದೇನೆ" (ಮತ್ತಾಯ 18:20). ಗಂಡ ಹೆಂಡತಿಯರ ನಡುವಿನ ಅನ್ಯೋನ್ಯತೆಯು ಮುರಿದುಹೋಗುವಾಗ ಅವರ ಯೇಸುವಿನೊಂದಿಗಿನ ಅನ್ಯೋನ್ಯತೆಯು ಸಹ ಮುರಿದು ಹೋಗುತ್ತದೆ. ಗಂಡ ಹೆಂಡತಿಯರೇ ಇದು ಸಂಭವಿಸದಂತೆ ಜಾಗರೂಕರಾಗಿರಿ.

## ಒಳ್ಳೆದನ್ನು ಮಾಡುವದಕ್ಕೆ ಬಾಧೆಯನ್ನನುಭವಿಸುವದು (3:8-22)

**8** ಕಡೆಗೆ ನೀವೆಲ್ಲರೂ ಏಕಮನಸ್ಸುಳ್ಳವರಾಗಿರಿ– ಸಾಮರಸ್ಯದಿಂದ ಜೀವಿಸಿರಿ (1 ಕೊರಿಂಥ 1:10 ನೋಡಿರಿ). ನಾವು ಒಬ್ಬರೊಂದಿಗೊಬ್ಬರು ವಾಗ್ವಾನ ಮಾಡದಿರಬೇಕೆಂದಷ್ಟೆ ಇದರ ಅರ್ಥವಾಗಿರುವದಿಲ್ಲ ನಾವು ಒಟ್ಟಾಗಿ ಒಂದೇ ಸಂಗತಿಗಳ ಕುರಿತು ಕ್ರಿಸ್ತನ ಸಂಗತಿಗಳ ಕುರಿತು ಆಳವಾಗಿ ಚಿಂತಿಸಬೇಕು ಹಾಗೂ ಯೋಚಿಸಬೇಕು ಎಂದು ಸಹ ಇದರ ಅರ್ಥವಾಗಿದೆ (ಕೊಲೊಸ್ಸೆ 3:1-12). ಕ್ರಿಸ್ತನಿಗಿದ್ದ ಮನಸ್ಸು ನಮಗೂ ಇರಬೇಕು (ಫಿಲಿಪ್ಪಿ 2:5ನೋಡಿರಿ). ಏಕಮನಸ್ಸುಳ್ಳವರಾಗಿ ಸಾಮರಸ್ಯದಿಂದ ಜೀವಿಸಬೇಕಾದರೆ ನಾವು ಪರಸ್ಪರ ಸುಖದುಃಖಗಳಲ್ಲಿ ಸೇರುವವರು ಹಾಗೂ ಅಣ್ಣ ತಮ್ಮಂದಿರಂತೆ ಒಬ್ಬರನ್ನೊಬ್ಬರು ಪ್ರೀತಿಸುವವರು ಆಗಿರಬೇಕಾದ ಅಗತ್ಯವಿರುತ್ತದೆ. ಒಬ್ಬರೊಂದಿಗೊಬ್ಬರು ಕರುಣೆಯುಳ್ಳವರಾಗಿ ಇರಬೇಕಾಗಿರುತ್ತದೆ. ನಾವು ಒಬ್ಬರೊಬ್ಬರ ಸುಖ ದುಃಖವನ್ನು ಹಂಚಿಕೊಳ್ಳಬೇಕೆಂದು ಇದರ ಅರ್ಥವಾಗಿದೆ. ನಾವು ಯಾವಾಗಲೂ ನಮ್ಮ ಸಹೋದರರನ್ನು ಸಂತೋಷಪಡಿಸಲು ಪ್ರಯತ್ನಿಸಬೇಕೆಂದು ಇದರ ಅರ್ಥವಾಗಿದೆ (ರೋಮ 12:15; 15:2).

ಅದರ ಜೊತೆಯಲ್ಲಿ, ನಾವು ದೀನಭಾವ ಉಳ್ಳವರಾಗಿರಬೇಕು. ಸಭೆಯಲ್ಲಿರುವ ಕೆಲವರು ತಾವು ಇತರರಿಗಿಂತಲೂ ಉತ್ತಮರು ಅಥವಾ ಹೆಚ್ಚು ಯೋಗ್ಯರು ಎಂದು ಭಾವಿಸಿಕೊಳ್ಳುವದಾದರೆ ಆ ಸಭೆಯಲ್ಲಿ ಏಕಮನಸ್ಸು ಅಥವಾ ಐಕಮತ್ಯದ ಮನಸ್ಸು ಇರಲಾರದು (ರೋಮ 12:3, 16; ಎಫೆಸ 4:2-3; ಫಿಲಿಪ್ಪಿ 21:4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**9** ಕ್ರೈಸ್ತರು ಎಂದಿಗೂ ಸೇಡು ತೀರಿಸಿಕೊಳ್ಳಬಾರದು[6] ಬದಲಾಗಿ, ನಾವು ಕೆಟ್ಟದಕ್ಕೆ ಪ್ರತಿಯಾಗಿ ಒಳ್ಳೇದನ್ನು ಮಾಡಬೇಕು (ಲೂಕ 6:27-31; ರೋಮ 12:14, 17-21; 1 ಕೊರಿಂಥ 4:12-13; 1 ಪೇತ್ರ 2:23 ನೋಡಿರಿ). ದೇವರು ಒಳ್ಳೆಯವರಿಗೂ ಕೆಟ್ಟವರಿಗೂ ಆಶೀರ್ವಾದ[7]. ನೀಡುತ್ತಾನೆ (ಮತ್ತಾಯ 5:44-45). ಆದದರಿಂದ, ನಾವು ಹಾಗೆಯೇ ಇರಬೇಕು. ನಾವು ಇತರರಿಗೆ ಎಷ್ಟು ಕರುಣೆಯನ್ನು ಹಾಗೂ ಕ್ಷಮಾಪಣೆಯನ್ನು ತೋರಿಸುತ್ತೇವೋ ಅಷ್ಟೇ ಕರುಣೆ ಹಾಗೂ ಕ್ಷಮಾಪಣೆಯನ್ನು ದೇವರು ನಮಗೆ ತೋರಿಸುತ್ತಾನೆ (ಮತ್ತಾಯ 5:44-45 ;6:12, 14-15; 18:32-35; ಮಾರ್ಕ 11:25, ಲೂಕ 6:35-38; ಎಫೆಸ 4:32 ನೋಡಿರಿ).

......ಇದಕ್ಕಾಗಿ ದೇವರು ನಿಮ್ಮನ್ನು ಕರೆದನಲ್ಲಾ. ನಾವು ಅನ್ಯಾಯವನ್ನು ಸಹಿಸಿಕೊಂಡು ನಮಗೆ ಕೆಟ್ಟದ್ದನ್ನು ಮಾಡುವವರಿಗೆ ಒಳ್ಳೇಯದನ್ನು ಮಾಡುವದಕ್ಕೆ ಕರೆಯಲ್ಪಟ್ಟಿದ್ದೇವೆ. ನಾವು ಹೀಗೆ ಮಾಡುವದಾದರೆ ಆಶಿರ್ವಾದವನ್ನು ಬಾಧ್ಯವಾಗಿ ಹೊಂದುವೆವು –ಏನೆಂದರೆ, ಪರಲೋಕದಲ್ಲಿರುವ ಬಾಧ್ಯತೆಯೇ (ರೋಮ 8:17-18; 1ಪೇತ್ರ 2:21 ನೋಡಿರಿ).

**10-12** ದೇವರು ಒಳ್ಳೇದನ್ನು ಮಾಡುವವರಿಗೆ ಆಶೀರ್ವಾದ ನೀಡುತ್ತಾನೆ ಹಾಗೂ ಕೆಟ್ಟತನ ನಡಿಸುವವರನ್ನು ವಿರೋಧಿಸುತ್ತಾನೆ ಎಂಬುದನ್ನು ತೋರಿಸಲು ಪೇತ್ರನು ಕೀರ್ತನೆಗಳು ೩೪:೧೨–16ರಿಂದ ಉಲ್ಲೇಖಿಸುತ್ತಾನೆ. ನಾವು ಕೆಟ್ಟದ್ದನ್ನು ಬಿಡುವದು ಮಾತ್ರವಲ್ಲದೆ ಒಳ್ಳೇದನ್ನು ಸಹ ಮಾಡಬೇಕು ಎಂಬುದನ್ನು 11ನೇ ವಚನದಲ್ಲಿ ಗಮನಿಸಿರಿ. ನಾವು ಸಮಾಧಾನವನ್ನು ಹಾರೈಸುವದು ಮಾತ್ರವಲ್ಲದೆ ಅದನ್ನು ಹೊಂದುವದಕ್ಕೆ ಪ್ರಯತ್ನಿಸಬೇಕು (ರೋಮ 12:18; 14:19; ಇಬ್ರಿಯ 12:14 ನೋಡಿರಿ).

**13** ನಾವು ಒಳ್ಳೇದನ್ನು ಮಾಡುವದಾದರೆ ನಿಜವಾಗಿಯೂ ಯಾವನೂ ನಮಗೆ ಕೇಡು ಮಾಡಲಾರನು ಯಾಕೆಂದರೆ ಕರ್ತನು ನೀತಿವಂತರನ್ನು ಕಟಾಕ್ಷಿಸುತ್ತಾನೆ (ವಚನ 12). ಹೌದು, ಜನರು ಈ ಜೀವನದಲ್ಲಿ ನಮಗೆ ತೊಂದರೆ ಮಾಡಬಹುದು– ಅವರು ನಮ್ಮ ದೇಹವನ್ನು ಕೊಲ್ಲಲೂಬಹುದು. ಆದರೆ ಕೊನೆಗೆ ಅವರು ನಮಗೆ ಯಾವ ಆತ್ಮೀಕ ಕೇಡನ್ನೂ ಮಾಡಲಾರರು. ನಮ್ಮ ದೇಹವನ್ನು ಮಾತ್ರಕೊಲ್ಲಬಲ್ಲವರಿಗೆ ನಾವು ಹೆದರಬೇಕಾಗಿಲ್ಲ (ಮತ್ತಾಯ 10:28; ರೋಮ 31:35-39).

**14** ಲೋಕದಲ್ಲಿ ವಿಶ್ವಾಸಿಗಳು ಬಾಧೆಯನ್ನು ಎದುರ್ಗೊಳ್ಳುವರು (2 ತಿಮೊಥೆ 3:12). ಆದರೆ ದೇವರನ್ನು ಪ್ರೀತಿಸಿ ಆತನ ಚಿತ್ತದಂತೆ ನಡೆಯುವವರಿಗೆ ಅಂಥ ಬಾಧೆಯು ಕೊನೆಗೆ ಅವರ ಹಿತಕೋಸ್ಕರವಾಗಿರುವದು (ರೋಮ 8:28; 1 ಪೇತ್ರ 1:6-7). ನಾವು ಕರ್ತನ ನಿಮಿತ್ತ ಬಾಧೆಯನ್ನನುಭವಿಸಿದರೆ ಧನ್ಯರಾಗುವೆವು (ಮತ್ತಾಯ 5:10-12). "ಅವರು ಯಾವದಕ್ಕೆ ಹೆದರುತ್ತಾರೋ ನೀವು ಅದಕ್ಕೆ ಹೆದರದಿರಿ" ಎಂಬದು ಯೇಶಾಯ ೮:೧೨ ರಲ್ಲಿನ ಉಲ್ಲೇಖವಾಗಿದೆ. ಇತರ ಜನರು ಹೆದರುವ ಸಂಗತಿಗಳಿಗೆ ವಿಶ್ವಾಸಿಗಳಾದ ನಾವು ಹೆದರಬಾರದೆಂಬದು ಪೇತ್ರನ ತಾತ್ಪರ್ಯವಾಗಿರುತ್ತದೆ. ಇತರ ಜನರು ತಮ್ಮ ಐಶ್ವರ್ಯ ನಷ್ಟದ ಬಗ್ಗೆ ಹೆದರುತ್ತಾರೆ. ಅಥವಾ ಅವರು ಆರೋಗ್ಯ ಕಳೆದುಕೊಳ್ಳುತ್ತೇವೆಂದು ಹೆದರುತ್ತಾರೆ– ಮರಣಕ್ಕೆ ಅಂಜುತ್ತಾರೆ. ಕ್ರಿಸ್ತನ ವಿಶ್ವಾಸಿಗಳು ಈ ಸಂಗತಿಗಳಿಗಾಗಿ ಹೆದರುವ ಅಗತ್ಯವಿಲ್ಲ.

**15** ಆದರೆ ಕ್ರಿಸ್ತನನ್ನು ಕರ್ತನೆಂದು ನಿಮ್ಮ ಹೃದಯಗಳಲ್ಲಿ ಪ್ರತಿಷ್ಠೆ ಪಡಿಸಿರಿ. ನಮ್ಮ ಹೃದಯಗಳಲ್ಲಿ ಕ್ರಿಸ್ತನು ಕರ್ತನಾಗಿರಬೇಕು. ನಮ್ಮ ಹೃದಯಗಳನ್ನು ನಾವಲ್ಲ, ಆದರೆ ಕ್ರಿಸ್ತನೇ ಆಳುವವನಾಗಿರಬೇಕು. ಕ್ರೈಸ್ತರಾದ ನಾವು ಇನ್ನು ಮೇಲೆ ನಾವು ಇಷ್ಟಪಡುವದನ್ನು ಮಾಡಲಾಗದು ಆತನು ಬಯಸುವದನ್ನು ಮಾತ್ರವೇ ನಾವು ಮಾಡಬೇಕು. ಇನ್ನೆಂದಿಗೂ ನಮ್ಮ ಜೀವಿತವನ್ನು ನಾವು ಆಳುವದಿಲ್ಲ; ಆತನೇ ಆಳುತ್ತಾನೆ.

ಕ್ರಿಸ್ತನು ಧೊರೆ, ಮತ್ತು ನಾವು ಆತನ ದೂತರು ಅಥವಾ ರಾಯಭಾರಿಗಳು. ಒಂದು ಅರ್ಥದಲ್ಲಿ, ನಾವು ಭೂಮಿಯ ಮೇಲೆ ಆತನ ತುಟಿಗಳು ಹಾಗೂ ನಾಲಿಗೆ ಆಗಿದ್ದೇವೆ. ಆದದರಿಂದ, ನಾವು ಕ್ರಿಸ್ತನ ಕುರಿತು ಸಾಕ್ಷಿ ನೀಡುವದಕ್ಕೆ ಯಾವಾಗಲೂ ಸಿದ್ಧರಾಗಿರಬೇಕು. ನಾವು ಜನರಿಗೆ ನಮಗಿರುವ ನಿರೀಕ್ಷೆಗೆ ಆಧಾರವೇನೆಂದು ಹೇಳಬೇಕು ಎಂದು ಪೇತ್ರನು ಬರೆಯುತ್ತಾನೆ.

ಕ್ರಿಸ್ತನು ನಮ್ಮ ನಿರೀಕ್ಷೆ (1 ತಿಮೊಥೆ 1:1). ಪೌಲನು ಬರೆಯುವದೇನೆಂದರೆಃ ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರ ಭೂತನು (ಕೊಲೊಸ್ಸೆ 1:27). ಯಾವನಾದರೂ ನಮ್ಮನ್ನು ನಮ್ಮ ನಿರೀಕ್ಷೆ, ನಮ್ಮ ಕರ್ತನ ಕುರಿತು ಕೇಳುವದಾದರೆ ಆ ವ್ಯಕ್ತಿಗೆ ತಕ್ಷಣವೇ ಉತ್ತರಹೇಳುವದಕ್ಕೆ ಸಿದ್ಧರಾಗಿರೋಣ. ಯಾವನಾದರೂ ಸ್ವಲ್ಪ ಆಸಕ್ತಿಯನ್ನು ತೋರಿಸಿದರೂ ನಾವು ಆತನೊಂದಿಗೆ ನಂಬಿಕೆಯನ್ನು ಹಂಚಿಕೊಳ್ಳುವದಕ್ಕೆ ಸಿದ್ಧರಾಗಿರೋಣ. ಬಹು ಮಂದಿ ಕ್ರೈಸ್ತರು ಮೌನವಾಗುಳಿಯುತ್ತಾರೆ. ಯಾಕೆ? ನಾವು ನಮ್ಮ ಕರ್ತನ ನಾಚಿಕೆಗೊಳ್ಳುತ್ತೇವೋ? ನಾವು ಮನುಷ್ಯನಿಗೆ ಹೆದರಿದ್ದೇವೋ?

ಆದರೆ ನಾವು ಇತರರಿಗೆ ಸಾಕ್ಷಿ ಹೇಳುವಾಗ, ಸಾತ್ವಿಕತ್ವದಿಂದಲೂ ಗೌರವದಿಂದಲೂ ಹೇಳೋಣ. ನಾವು ಒತ್ತಾಯ ಪೂರ್ವಕವಾಗಿ ಮಾತಾಡುವ ಅಗತ್ಯವಿಲ್ಲ. ನಾವು ಎಂದಿಗೂ ಇತರರನ್ನು ಅವಮಾನಿಸಬಾರದು. ಯಾಕೆಂದರೆ ಒಬ್ಬ ವ್ಯಕ್ತಿಯು ನಮ್ಮ ಮಾತಿನ ಶೈಲಿಯಿಂದ ಬೇಸರಪಟ್ಟುಕೊಳ್ಳುವದಾದರೆ ಆತನು ನಮ್ಮ ಮಾತುಗಳಿಗೆ ಕಿವಿಗೊಡುವದಿಲ್ಲ. ನಿಶ್ಚಯವಾಗಿಯೂ ಪೇತ್ರನು ಈ ವಚನವನ್ನು ಬರೆಯುವಾಗ ತನ್ನ ಸ್ವಂತ ಅನುಭವವನ್ನು ಜ್ಞಾಪಿಸಿಕೊಂಡನು. ಪೇತ್ರನು ಮೂರು ಸಾರಿ ತನ್ನ ಕರ್ತನನ್ನು ಅರಿಯೆನೆಂದು ಹೇಳಿದ್ದನು. ಆಗ ಆತನು ಹೆದರಿದವನಾಗಿದ್ದನು. ಖಂಡಿತವಾಗಿಯೂ, ಆತನು ಕ್ರಿಸ್ತನಿಗಾಗಿ ಸಾಕ್ಷಿ ನೀಡಲು ಸಿದ್ಧನಿರಲಿಲ್ಲ. ಆತನು ತನ್ನನ್ನು ಪ್ರಶ್ನಿಸಿದವರಿಗೆ ಸಾತ್ವಿಕತ್ವದಿಂದಾಗಲಿ ಇಲ್ಲವೆ ಗೌರವದಿಂದಾಗಲಿ–ಸತ್ಯದಿಂದಾಗಲಿ ಸಹ! ಉತ್ತರಿಸಲಿಲ್ಲ (ಮಾರ್ಕ 14:66-72 ನೋಡಿರಿ). ಆದದರಿಂದ, ನಾವು ಬಿದ್ದು ಹೋಗುವಾಗ ನಿರಾಶರಾಗದಿರೋಣ ಪೇತ್ರನು ತನ್ನ ಪೂರ್ವದ ಪಾಪಗಳನ್ನು ಹಾಗೂ ಬಲಹೀನತೆಗಳನ್ನು ಜಯಿಸುವದಕ್ಕೆ ಶಕ್ತನಾಗಿದ್ದರೆ ನಾವು ಶಕ್ತರಾಗಬಲ್ಲೆವು.

16 ನಾವು ಒಳ್ಳೇ ಮನಸಾಕ್ಷಿಯನ್ನು ಕಾಪಾಡಿಕೊಳ್ಳಬೇಕು. ನಮ್ಮ ಮನಸಾಕ್ಷಿಯು ಅಶುದ್ಧವಾಗಿರುವದಾದರೆ– ಅಂದರೆ, ನಮ್ಮ ಹೃದಯಗಳಲ್ಲಿ ಪಾಪವು ಅಡಗಿರುವದಾದರೆ– ನಾವು ಇತರರಿಗೆ ಸಾಕ್ಷಿ ಹೇಳಲು ಶಕ್ತರಾಗುವದಿಲ್ಲ. ಕ್ರೈಸ್ತರೆಲ್ಲರೂ ಈ ಅನುಭವವನ್ನು ಹೊಂದಿದ್ದವರಾಗಿರುತ್ತಾರೆ (ಅ.ಕೃತ್ಯ 24:16; 1 ತಿಮೊಥೆ 1; 5, 19 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ನಮ್ಮ ಮನಸಾಕ್ಷಿಗಳು ಶುದ್ಧವಾಗಿರುವದಾದರೆ– ನಾವು ನಮ್ಮ ಪಾಪಗಳಿಗಾಗಿ ಪಶ್ಚಾತಾಪಪಟ್ಟು ದೇವರ ಚಿತ್ತಕ್ಕೆ ವಿಧೇಯರಾಗುತ್ತಿರುವದಾದರೆ– ನಮ್ಮ ವಿರುದ್ಧವಾಗಿ ಮಾತಾಡುವವರು ಅಂತ್ಯದಲ್ಲಿ ನಾಚಿಕೆಪಡುವರು (ತೀತನು 2:7-8; 1 ಪೇತ್ರ 2:12-15 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

17 ಬಾಧೆಯು ನಮಗೆ ಬರುವದು; ಆದರೆ ಅದು ನಾವು ಒಳ್ಳೇದನ್ನು ಮಾಡಿದಕ್ಕಾಗಿ ಬರಲಿ ಹೊರತು ನಾವು ಕೆಟ್ಟದ್ದನು ಮಾಡಿದ್ದಕ್ಕಾಗಿ ಅಲ್ಲ ನಾವು ಕೆಟ್ಟದ್ದನ್ನು ಮಾಡಿದ್ದಕ್ಕಾಗಿ ದಂಡಿಲ್ಪಡುವದಾದರೆ ಅದರ ಬಗ್ಗೆ ಶ್ಲಾಘ್ಯವಾದದ್ದೇನೂ ಇರುವದಿಲ್ಲ. ನಾವು ಒಳ್ಳೇದನ್ನು ಮಾಡಿದಕ್ಕಾಗಿ ಬಾಧೆಪಡುವದಾದರೆ ಮಾತ್ರವೇ ನಮಗೆ ದೇವರಿಂದ ಶ್ಲಾಘ್ಯದೊರೆಯುವದು (1 ಪೇತ್ರ 2:19-20 ಮತ್ತು ವ್ಯಾಖ್ಯಾನ ನೋಡಿರಿ).

18 ನಾವು ಒಳ್ಳೇದನ್ನು ಮಾಡಿದ್ದಕ್ಕಾಗಿ ಬಾಧೆಪಡುವಾಗಲೆಲ್ಲಾ ಕ್ರಿಸ್ತನು ತಾನೇ ನಮಗಿಂತ ಮುಂಚೆ ಬಾಧೆಯ ಹಾದಿಯಲ್ಲಿ ನಡಿದನೆಂಬದನ್ನು ಜ್ಞಾಪಿಸಿಕೊಳ್ಳೋಣ. ಆತನು ನಮಗೊಂದು ಉದಾಹರಣೆಯಾಗಿದ್ದಾನೆ (1 ಪೇತ್ರ 2:21). ಕ್ರಿಸ್ತನು ಒಳ್ಳೇದನ್ನು ಮಾಡಿದ್ದಕ್ಕಾಗಿ ಬಾಧೆಯನ್ನನುಭವಿಸಿದನು. ಕ್ರಿಸ್ತನು ತಾನು ಹೊಂದಿದ ಬಾಧೆಗೆ ಅರ್ಹವಾದದ್ದೇನೂ ಮಾಡಿರಲಿಲ್ಲ. ಆದರೆ ದೇವರು ಆತನನ್ನು ಮೊದಲು ಬಾಧೆ ಪಡಬೇಕೆಂದು ಮತ್ತು ನಂತರವಷ್ಟೆ ಪ್ರಭಾವದಲ್ಲಿ ಸೇರಬೇಕೆಂದು ನೇಮಿಸಿದ್ದನು (ಲೂಕ 24:26). ಕ್ರಿಸ್ತನ ಬಾಧೆಯು ಸಂಪೂರ್ಣವಾಗಿ ದೇವರ ಚಿತ್ತಾನುಸಾರವಾಗಿತ್ತು; ಹಳೆ ಒಡಂಬಡಿಕೆಯ ಪ್ರವಾದಿಗಳು ಆದರ ಕುರಿತು ಬರೆದಿದ್ದರು (ಲೂಕ 24:45-46). ಹೀಗಿರುವದರಿಂದ, ನಾವು ಒಳ್ಳೇದನ್ನು ಮಾಡಿದವರಾಗಿ ಬಾಧೆಯನ್ನನುಭವಿಸುವಾಗ ಸಂತೋಷಿಸಬಹುದು ಯಾಕೆಂದರೆ ನಾವು ಕ್ರಿಸ್ತನ ಹೆಜ್ಜೆ ಜಾಡಿನಲ್ಲಿ ನಡೆಯುತ್ತಿದ್ದೇವೆ ಮತ್ತು ಆತನ ಪ್ರಭಾವದೊಳಗೆ ಪ್ರವೇಶಿಸುವೆವು ಎಂದು ನಾವು ಬಲ್ಲವರಾಗಿದ್ದೇವೆ (ರೋಮ 8:17-18; 2ಕೊರಿಂಥ 4:17; ಫಿಲಿಪ್ಪಿ 3:10-11). ಒಂದು ವಿಧದಲ್ಲಿ ಕ್ರಿಸ್ತನ ಬಾಧೆ ಮತ್ತು ನಮ್ಮ ಬಾಧೆ ಒಂದನ್ನೊಂದು ಹೋಲುತ್ತವೆ. ಆದರೆ ಇನ್ನೊಂದು ವಿಧದಲ್ಲಿ ಕ್ರಿಸ್ತನ ಬಾಧೆಯು ವಿಶೇಷ ಹಾಗೂ ವಿಭಿನ್ನವಾಗಿತ್ತು ಯಾಕೆಂದರೆ ಆತನು ದೇವರ ಪಾಪರಹಿತ ಮಗನಾಗಿದ್ದನು. ಕ್ರಿಸ್ತನು ತನ್ನ ಬಾಧೆಯ ಮುಖಾಂತರ ಮನುಷ್ಯರನ್ನು ದೇವರ ಬಳಿಗೆ ತಂದನು. ಅಂದರೆ ತನ್ನ ಬಾಧೆಯ ಮೂಲಕ ಆತನು ಅವರನ್ನು ರಕ್ಷಿಸಿದನು. ಕ್ರಿಸ್ತನು... ಒಂದೇ ಸಾರಿ ಪಾಪನಿವಾರಣೆಕೋಸ್ಕರ ಬಾಧೆಪಟ್ಟು ಸತ್ತನು. ನೀತಿವಂತನು ಅನೀತಿವಂತರ ಸ್ಥಾನದಲ್ಲಿ ಸತ್ತನು (1 ಪೇತ್ರ 2:24 ಮತ್ತು ವ್ಯಾಖ್ಯಾನ ನೋಡಿರಿ).

ನಿರಪರಾಧಿಯಾದ ಕ್ರಿಸ್ತನು ನಮ್ಮ ಪಾಪಗಳಿಗೋಸ್ಕರ ತನ್ನನ್ನು ಒಂದು ಪರಿಪೂರ್ಣ ಹಾಗೂ ನಿಷ್ಕಳಂಕ ಯಜ್ಞವಾಗಿ ಅರ್ಪಿಸಿದನು (ಇಬ್ರಿಯ 9:14; 1 ಯೋಹಾನ 2:2, 4:10). ಆತನ ಯಜ್ಞವು ಇನ್ನೆಂದಿಗೂ ಪುನರಾವರ್ತಿಸಲ್ಪಬೇಕಾಗಿರುವದಿಲ್ಲ (ಇಬ್ರಿಯ 9:26-28; 10:10-14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಕ್ರಿಸ್ತನು ಸತ್ತ ಕೂಡಲೆ ಪುನಃ ಆತ್ಮನಿಂದ ಬದುಕಿಸಲ್ಪಟ್ಟನು. ಆತನು ಮರಣವನ್ನು ಗೆದ್ದನು (ರೋಮ 6:9-10). ಆದರೆ ಅಷ್ಟು ಮಾತ್ರವಲ್ಲ, ಆತನು ನಮ್ಮನ್ನು ಸಹ ಮರಣದಿಂದ, ಪಾಪದ ಶಿಕ್ಷೆಯಿಂದ ಬಿಡಿಸುವವನಾಗಿದ್ದಾನೆ (ರೋಮ 6:23; ಇಬ್ರಿಯ 2:14-15).

19 ಈ ವಚನದಿಂದ (ಹಾಗೂ ಎಫೆಸ 4:9ರಿಂದ) ಅಪೊಸ್ತಲಿಕ ವಿಶ್ವಾಸ ಪ್ರಮಾಣದಲ್ಲಿ ಒಂದು ಭಾಗ ಬರುತ್ತದೆ. ಅದೇನೆಂದರೆಃ "ಆತನು ಪಾತಾಳಕ್ಕೆ ಇಳಿದುಹೋದನು". ಯೇಸು ಮರಣಿಸಿ ಪುನಃ ಆತ್ಮದಲ್ಲಿ ಬದುಕುವವನಾದ ಬಳಿಕ ಆತನ ದೇಹವು ಪುನರುತ್ಥಾನಗೊಳ್ಳುವದರೊಳಗೆ ಮೂರು ದಿನಗಳು ಕಳೆದವು. ಆ ವೇಳೆಯಲ್ಲಿ ಆತನು ಸೆರೆಯಲ್ಲಿದ್ದ ಆತ್ಮಗಳ

ಬಳಿಗೆ ....ಹೋಗಿ ಸುವಾರ್ತೆಯನ್ನು ಸಾರಿದನು.ಪೇತ್ರನು ಇಲ್ಲಿ ಯಾವ ಆತ್ಮಗಳ ಬಗ್ಗೆ ಮಾತಾಡುತ್ತಿದ್ದಾನೆ ಎಂಬದು ಖಚಿತವಾಗಿರುವದಿಲ್ಲ. ಆ ಆತ್ಮಗಳು ನೋಹನ ಕಾಲದಲ್ಲಿ ಜಲ ಪ್ರಳಯದ ವೇಳೆ ಯೇಸುವಿನ ಬಗ್ಗೆ ಎಂದಿಗೂ ಕೇಳದವರಾಗಿಯೇ ಮರಣಿಸಿದವರ ಆತ್ಮಗಳಾಗಿವೆ ಎಂದು ಕೆಲವು ಮಂದಿ ಬೈಬಲ್ ಪಂಡಿತರು ನಂಬುತ್ತಾರೆ. ಇತರ ಕೆಲವು ಮಂದಿ ಪಂಡಿತರು ಈ ಆತ್ಮಗಳು ಬಿದ್ದುಹೋದ ದೇವದೂತರು ಎಂದು ನಂಬುತ್ತಾರೆ (2 ಪೇತ್ರ 2:4-5; ಯೂದನು 6 ನೋಡಿರಿ).

20 ನೋಹನ ಕಾಲದ ಜಲಪ್ರಳಯವು ನ್ಯಾಯತೀರ್ಪು ಹಾಗೂ ರಕ್ಷಣೆ ಎರಡರ ಸಂಕೇತವೂ ಆಗಿತ್ತು. ನಾವೆಯು ಕಟ್ಟಲ್ಪಟ್ಟದುತ್ತಿರುವಾಗ ದೇವರು ದೀರ್ಘಶಾಂತಿಯಿಂದ ಕಾದಿದ್ದನು. ಅಂದರೆ, ಆತನು ನೋಹದ ಕಾಲದ ದುಷ್ಟಜನರಿಗೆ ಪಶ್ಚಾತ್ತಾಪ ಪಡುವದಕ್ಕೆ ಒಂದು ಅವಕಾಶವನ್ನು ನೀಡಿದನು. ಆದರೆ ಅವರು ಪಶ್ಚಾತಾಪಪಡದಿದ್ದಾಗ ದೇವರು ಭೂಮಿಯ ಮೇಲೆ ಜಲಪ್ರಳಯವನ್ನು ಮಾಡಿ ಅವರೆಲ್ಲರನ್ನೂ ನಾಶಗೊಳಿಸಿದನು (2 ಪೇತ್ರ 3:5-7, 9). ಆದರೆ ನೋಹನು ಹಾಗೂ ಆತನ ಕುಟುಂಬದವರು– ಎಂಟು ಜನರು– ಜಲಪ್ರಳಯದ ಮೂಲಕ ರಕ್ಷಣೆ ಹೊಂದಿದರು (ಆದಿಕಾಂಡ 7:11-12; 17-23). ಅವರು ನೀರಿನ ಮೂಲಕ ರಕ್ಷಣೆ ಹೊಂದಿದ್ದರು. ಅವರು ನೀರಿನಿಂದ ಮಾತ್ರವಲ್ಲದೆ ನೀರಿನ ಮೂಲಕ ಸಹ ರಕ್ಷಣೆ ಹೊಂದಿದ್ದರು, ಯಾಕೆಂದರೆ ನೀರು ನೋಹನು ಕಟ್ಟಿದ್ದ ನಾವೆಯನ್ನು ಮೇಲಕ್ಕೆತ್ತಿತ್ತು ಮತ್ತು ಹೀಗೆ ನೋಹ ಹಾಗೂ ಆತನ ಕುಟುಂಬದವರು ಮುಳುಗಿ ಹೋಗದಂತೆ ತಪ್ಪಿಸಿಕೊಳ್ಳುವ ಹಾಗೆ ಮಾಡಿತ್ತು.

ಈ ಎಂಟು ಜನರನ್ನು ಬಿಟ್ಟು ಭೂಮಿಯ ಮೇಲಿದ್ದ ಪ್ರತಿಯೊಬ್ಬ ಮನುಷ್ಯನು ಜಲಪ್ರಳಯದಿಂದ ನಾಶವಾದರು. ಇದನ್ನು ಆಲೋಚಿಸಿರಿಃ ಬಹು ಸಂಖ್ಯಾತ ಜನರನ್ನು ಅನುಸರಿಸುವದು ಒಳ್ಳೇದಾಗಲಿ ಇಲ್ಲವೆ ಬುದ್ಧಿವಂತಿಕೆಯಾಗಲಿ, ಇಲ್ಲವೆ ಸುರಕ್ಷಿತವಾಗಲಿ ಅಲ್ಲ, ನಾವೆಯಲ್ಲಿನ ಎಂಟು ಜನರನ್ನು ಅನುಸರಿಸುವದು ಉತ್ತಮವಾದದ್ದು (ಮತ್ತಾಯ 7:13-14 ಮತ್ತು ವ್ಯಾಖ್ಯಾನ ನೋಡಿರಿ).

21 ಪ್ರಳಯದ ನೀರು ನಾವು ಕ್ರಿಸ್ತನವರಾಗುವದಕ್ಕೆ ತೆಗೆದುಕೊಳ್ಳುವ ನಮ್ಮ ದೀಕ್ಷಾಸ್ನಾನ ದೃಷ್ಟಾಂತ ಅಥವಾ ಸಂಕೇತ ಆಗಿರುತ್ತದೆ. ನಾವೆಯನ್ನು ಪ್ರವೇಶಿಸಿ ಆ ಎಂಟು ಜನರು ನ್ಯಾಯ ತೀರ್ಪು ಹಾಗೂ ಮರಣದಿಂದ ರಕ್ಷಿಸಲ್ಪಟ್ಟ ಪ್ರಕಾರವೇ ನಂಬಿಕೆಯ ಮೂಲಕ ಕ್ರಿಸ್ತನನ್ನು ಸೇರುವವರು ಸಹ ನ್ಯಾಯತೀರ್ಪು ಹಾಗೂ ಮರಣದಿಂದ ರಕ್ಷಿಸಲ್ಪಡುವರು. ದೀಕ್ಷಾಸ್ನಾನದ ಸಂಸ್ಕಾರವು ತಾನೇ ನಮ್ಮನ್ನು ರಕ್ಷಿಸುವದಿಲ್ಲ ಕ್ರಿಸ್ತನೇ ನಮ್ಮನ್ನು ರಕ್ಷಿಸುವಾತನು. ಕ್ರಿಸ್ತನು ನಮ್ಮನ್ನು ಮರಣದಿಂದ ರಕ್ಷಿಸುತ್ತಾನೆ. ಯಾಕೆಂದರೆ ಆತನು ಸ್ವತಃ ತನ್ನ ಪುನರುತ್ಥಾನದ ಮೂಲಕ ಮರಣವನ್ನು ಜಯಿಸಿದನು. ಈ ರಕ್ಷಣೆಯನ್ನು ಪಡೆಯುವದಕ್ಕೆ ನಾವು ಮಾಡಬೇಕಾದ ಕಾರ್ಯವು ಕ್ರಿಸ್ತನಲ್ಲಿ ನಂಬಿಕೆಯಿಡುವದಷ್ಟೇ (ರೋಮ 10:90.)

ದೀಕ್ಷಾಸ್ನಾನದ ಅರ್ಥವು ಏನೆಂದರೆಃ ನಾವು ದೀಕ್ಷಾಸ್ನಾನ ಹೊಂದುವಾಗ ಕ್ರಿಸ್ತನ ಜೊತೆಯಲ್ಲಿ ಸಾಯುತ್ತೇವೆ....... "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ 'ಮಾಡಿಸಿಕೊಂಡೆವು" (ರೋಮ 6:3). ಕ್ರಿಸ್ತನೊಂದಿಗೆ ನಾವು ಪಾಪದ ಪಾಲಿಗೆ ಸಾಯುತ್ತೇವೆ (ರೋಮ 6:6, 10-11 ಮತ್ತು ವ್ಯಾಖ್ಯಾನ ನೋಡಿರಿ). ನಿಜವಾದ ದೀಕ್ಷಾಸ್ನಾನವು ಒಂದು ಬಹಿರಂಗದ ತೊಳೆದುಕೊಳ್ಳುವಿಕೆಯಲ್ಲ; ಇದು ಅಂತರ್ಯದ ಆತ್ಮೀಕ ತೊಳೆದುಕೊಳ್ಳುವಿಕೆಯಾಗಿದೆ. ದೀಕ್ಷಾಸ್ನಾನದಲ್ಲಿ ನಮ್ಮ ಪಾಪಗಳು ತೊಳೆಯಲ್ಪಟ್ಟು ನಮ್ಮ ಮನಸಾಕ್ಷಿಗಳು ಶುಚಿಗೊಳಿಸಲ್ಪಡುತ್ತವೆ. ಮತ್ತು ನಾವು ಕ್ರಿಸ್ತನ ಜೊತೆಯಲ್ಲಿ ಎದ್ದುಬರುತ್ತೇವೆ (ರೋಮ 6:5).

22 ದೀಕ್ಷಾಸ್ನಾನದ ಅರ್ಥವು ಎಷ್ಟು ದೊಡ್ಡದಾಗಿಯೂ ಆಳವಾಗಿಯೂ ಇರುತ್ತದಲ್ಲವೇ! ನಮ್ಮ ರಕ್ಷಕನಾದ ಕ್ರಿಸ್ತನು ಎಷ್ಟು ದೊಡ್ಡವನು! ಕ್ರಿಸ್ತನು ಪರಲೋಕಕ್ಕೆ ಹೋಗಿ ದೇವರ ಬಲಗಡೆಯಲ್ಲಿದ್ದಾನೆ. (ಸಮಸ್ತವೂ ಆತನ ಅಧಿಕಾರಕ್ಕೊಳಪಡಿಸಲ್ಪಟ್ಟಿದೆ (ರೋಮ 14:9; ಎಫೆಸ 1:20-22 ನೋಡಿರಿ).

---

## ಅಧ್ಯಾಯ - 4

### ದೇವರಿಗಾಗಿ ಜೀವಿಸುವದು (4:1-6)

1 ಕ್ರಿಸ್ತನು ಬಾಧೆಯನ್ನನುಭವಿಸಿ ನಮಗಾಗಿ ಮರಣಿಸಿದಾಗ, ಆತನು, ಒಂದೇ ಸಾರಿ ಪಾಪದ ಪಾಲಿಗೆ ಸತ್ತನು (ರೋಮ 6:10). ಅದೇ ವಿಧದಲ್ಲಿ, ನಾವು ಸಹ ಕ್ರಿಸ್ತನೊಂದಿಗೆ ಬಾಧೆಯನ್ನನುಭವಿಸಬೇಕು ನಮ್ಮ ಪೂರ್ವದ ಪಾಪಾಧೀನ ಸ್ವಭಾವವು ಅದರ ಪಾಪಧೀನ ಶರೀರಭಾವ ಸಮೇತ ಶಿಲುಬೆಗೆ ಹಾಕಲ್ಪಡಬೇಕು (ರೋಮ 6:6; 8:13 ಗಲಾತ್ಯ 5:24 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಅಲ್ಲದೆ, ನಾವು ನಮ್ಮನ್ನು ಸಹ ಪಾಪದ ಪಾಲಿಗೆ ಸತ್ತವರೆಂದು ಎಣಿಸಿಕೊಳ್ಳಬೇಕು (ರೋಮ 6:11 ಮತ್ತು ವ್ಯಾಖ್ಯಾನ ನೋಡಿರಿ). ಪೇತ್ರನು ಇಲ್ಲಿ ನೀಡುವ ಆಜ್ಞೆಯ ಅರ್ಥವು ಇದೇ ಆಗಿದೆಃ... ನೀವು ಸಹ ಆತನಿಗಿದ್ದ ಭಾವವನ್ನೇ– ಅಂದರೆ, ಕ್ರಿಸ್ತನಿಗಿದ್ದ ಮನೋಭಾವವನ್ನೇ– ಹಿಡಿದುಕೊಳ್ಳಿರಿ. ಬಾಧೆಯನ್ನನುಭವಿಸುವವನು–

ಪಾಪದ ಪಾಲಿಗೆ ಸತ್ತವನು– ಪಾಪವನ್ನು ತೊರೆದು ಬಿಟ್ಟುವನಾಗಿರುತ್ತಾನೆ. ಇನ್ನು ಮೇಲೆ ಪಾಪಕ್ಕೆ ಆತನ ಮೇಲೆ ಯಾವ ಅಧಿಕಾರವೂ ಇರುವದಿಲ್ಲ (ರೋಮ 6:7). ಅವನು ಪಾಪದ ವಶದಿಂದ ತಪ್ಪಿಸಿಕೊಂಡವನಾಗಿದ್ದಾನೆ.

2 ಆದದರಿಂದ, ಪಾಪದ ಪಾಲಿಗೆ ಸತ್ತವರಾದ ಬಳಿಕ ನಾವು ಇನ್ನೆಂದಿಗೂ ಮನುಷ್ಯರ ಅಭಿಲಾಷೆಗಳ ಪ್ರಕಾರ ಬದುಕದೆ ದೇವರ ಚಿತ್ತದ ಪ್ರಕಾರ ಬದುಕಬೇಕು. ಪೌಲನು ಬರೆಯು ವದೇನೆಂದರೆಃ ಹೀಗಿರುವದರಿಂದ, ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವನ್ನು ಆಳವಡಿಸಿ ನೀವು ದೇಹದ ದುರಾಶೆಗಳಿಗೆ ಒಳಪಡಬೇಡಿರಿ. ಇದು ಮಾತ್ರವಲ್ಲದೆ ನೀವು ಅಂಗಗಳನ್ನು (ದೇಹವನ್ನು) ಪಾಪಕ್ಕೆ ಒಪ್ಪಿಸುವವರಾಗಿದ್ದು ದುಷ್ಟತ್ವವನ್ನು ನಡಿಸುವ ಸಾಧನಗಳಾಗ ಮಾಡಬೇಡಿರಿ (ರೋಮ 6:12-13). ನಾವು ನಮ್ಮನ್ನು ದೇವರಿಗೆ ಅರ್ಪಿಸಬೇಕು ಎಂಬುದಕ್ಕಾಗಿಯೇ ಕ್ರಿಸ್ತನು ನಮಗೋಸ್ಕರ ಸತ್ತನು (ರೋಮ 6:13; 12:1). ನಾವು ಉಳಿದಿರುವ (ನಮ್ಮ) ಜೀವಮಾನಕಾಲದಲ್ಲಿ.... ದೇವರ ಚಿತ್ತದ ಪ್ರಕಾರ ಬದುಕಬೇಕು ಎಂಬದಕ್ಕಾಗಿಯೇ ಕ್ರಿಸ್ತನು ಸತ್ತನು.

3 ಆದದರಿಂದ, ನಾವು ಪೂರ್ವದಲ್ಲಿ ಮಾಡುತ್ತಿದದ್ದನ್ನು ಇನ್ನು ಮೇಲೆ ಮಾಡುವದನ್ನು ನಿಲ್ಲಿಸಬೇಕು–ಅಂದರೆ, ಅನ್ಯಜನರಿಗೆ [9].ಇಷ್ಟವಾದ ದುಷ್ಕೃತ್ಯಗಳನ್ನು ಮಾಡುವದನ್ನು ನಾವು ನಿಲ್ಲಿಸಬೇಕು (1 ಕೊರಿಂಥ 6:9-11; ಎಫೆಸ 4:17-19 ನೋಡಿರಿ). ಬದಲಾಗಿ, ನಾವು ನೂತನ ಮನಸ್ಸುಗಳನ್ನು, ನೂತನ ಗುರಿಗಳನ್ನೂ, ನೂತನ ಅಭಿಲಾಷೆಗಳನ್ನೂ ಮಾಡಿಕೊಳ್ಳಬೇಬ. ನಾವು ಕ್ರಿಸ್ತನ ಮನಸ್ಸನ್ನು ಧರಿಸಿಕೊಳ್ಳಬೇಕು (ರೋಮ 12:2; ಎಫೆ ಸ 4:22-24 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

4 ನಾವು ನಮ್ಮ ಪೂರ್ವದ ಸ್ನೇಹಿತರ ದುಷ್ಕೃತ್ಯಗಳಲ್ಲಿ ಪಾಲುಗಾರರಾಗುವದನ್ನು ನಿಲ್ಲಿಸುವಾಗ ಅವರು ಸಹಜವಾಗಿ ಬೇಸರಗೊಳ್ಳುವರು. ಅವರು ನಮ್ಮ ಮೇಲೆ ಕೋಪಗೊಂಡು ನಮ್ಮ ವಿರೋಧಿಗಳಾಗುವರು. ಯಾಕೆಂದರೆ, ನಮ್ಮ ಒಳ್ಳೇ ಜೀವಿತದ ಮೂಲಕ ಅವರ ದುಷ್ಟತನವು ಬೈಲಿಗೆ ಬಂದು ಖಂಡಿಸಲ್ಪಡುವದು (ಎಫೆಸ 5:11 ನೋಡಿರಿ).

5 ದುಷ್ಕೃತ್ಯ ನಡಿಸುವ ಪ್ರತಿಯೊಬ್ಬನು ಸತ್ತವರಿಗೂ ಬದುಕಿರುವವರಿಗೂ ಅಂತೂ ಎಲ್ಲಾ ಮನುಷ್ಯರ ನ್ಯಾಯಧಿಪತಿಯಾಗಿರುವ ಕ್ರಿಸ್ತನಿಗೆ ಲೆಕ್ಕವನ್ನು ಒಪ್ಪಿಸಬೇಕಾಗುವದು (ಯೋಹಾನ 5:22-27; ಅ.ಕೃತ್ಯ 10:42; ರೋಮ 2:16). ಯಾವನು ಕ್ರಿಸ್ತನನ್ನು ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವದಿಲ್ಲವೋ ಅವನು ಅಂತ್ಯದಲ್ಲಿ ಆತನನ್ನು ನ್ಯಾಯಾಧಿಪತಿಯಾಗಿ ಎದುರ್ಗೊಳ್ಳಬೇಕಾಗುವದು.

6 ಮನುಷ್ಯರ ಪಾಪವು ಈ ಜೀವನದಲ್ಲಿ ತೀರ್ಪು ಉಂಟಾಗಬೇಕೆಂದು ಹಾಗೂ ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಅವರ ಪಾಪದ ದಂಡನೆಯು ನಿವಾರಿಸಲ್ಪಡಬೇಕೆಂಬದಕ್ಕಾಗಿಯೂ– ಅಂದರೆ, ಅವರ ದಂಡನೆಯು ಕ್ರಿಸ್ತನ ಮೇಲೆ ಬೀಳುವಂತಾಗಬೇಕೆಂದು– ಮನುಷ್ಯರಿಗೆಲ್ಲಾ ಸುವಾರ್ತೆಯು ತಿಳಿಸಲ್ಪಟ್ಟಿತು. ಸತ್ತಿರುವವರು ಮನುಷ್ಯ ಜಾತಿಗೆ ಬರುವ ತೀರ್ಪನ್ನು ಶರೀರಗಳಾಗಿದ್ದಾಗ ಹೊಂದಬೇಕೆಂದು ಎಂಬದಾಗಿ ಪೇತ್ರನು ಹೇಳುವದರ ಅರ್ಥವು ಅದೇ ಆಗಿದೆ. ವಿಶ್ವಾಸಿಗಳ ದೇಹಗಳು ಇತರ ಮನುಷ್ಯರ ದೇಹಗಳಂತೆಯೇ ಮರಣಿಸುತ್ತವೆ (ಯಾಕೆಂದರೆ ಪಾಪಕ್ಕಾಗುವ ತೀರ್ಪು ಮರಣವೇ). ಆದರೆ ಅವರ ಆತ್ಮಗಳು ಸಾಯುವದಿಲ್ಲ. ಕ್ರಿಸ್ತನಲ್ಲಿನ ನಂಬಿಕೆಯ ಮುಂಖಾತರ ವಿಶ್ವಾಸಿಗಳು ನೂತನ ಆತ್ಮೀಕ ಜೀವವನ್ನು ಪಡೆಯುತ್ತಾರೆ ಅದು ಈ ಜೀವಿತದಲ್ಲಿ ಪ್ರಾರಂಭಗೊಂಡು ಸದಾಕಾಲವೂ ಇರುವದಾಗಿದೆ. ಅಂದರೆ, ಅವರು ಆತ್ಮ ಸಂಬಂಧವಾಗಿ ದೇವರಿಗನುಸಾರವಾಗಿ ಜೀವಿಸುತ್ತಾರೆ.

ಆದದರಿಂದ, ವಿಶ್ವಾಸಿಗಳ ದೇಹಗಳು ಮರಣಿಸಿದರೂ ಕ್ರಿಸ್ತನಲ್ಲಿ ಅವರು ನಿತ್ಯಜೀವವನ್ನು ಪಡೆಯುತ್ತಾರೆ (ಯೋಹಾನ 5:24; 11:25-26). ಆದರೆ ಕ್ರಿಸ್ತನನ್ನು ಅಂಗೀಕರಿಸಿಕೊಳ್ಳದವರು ಮರಣದ ಬಳಿಕ ದೇವರಿಂದ ನಿತ್ಯವಾದ ನ್ಯಾಯತೀರ್ಪನ್ನು ಹೊಂದುವರು ಅವರು ನಿತ್ಯ ಶಿಕ್ಷೆಯನ್ನು ಪಡೆಯುವರು.

## ದೇವರ ವರಗಳು (4:7-11)

7 ಎಲ್ಲವು ಗಳ ಅಂತ್ಯವು – ಅಂದರೆ, ಕ್ರಿಸ್ತನ ಎರಡನೆಯ ಬರೋಣವು – ಹತ್ತಿರವಾಗಿದೆ. ನಾವು ಪ್ರತಿಯೊಬ್ಬರು ನಮ್ಮ ಜೀವಿತಗಳನ್ನು ಕ್ರಿಸ್ತನು ನಾಳೆಯೇ ಬರುತ್ತಿದ್ದಾನೋ ಎಂಬಂತೆ ಜೀವಿಸಬೇಕು (ಮಾರ್ಕ 13:33-37; ಲೂಕ 12:35-36; 17:26-27 ನೋಡಿರಿ). ನಾವು ಹೆಚ್ಚು ಪರಿಣಾಮಕಾರಿಯಾಗಿ ಪ್ರಾರ್ಥಿಸುವಂತಾಗಲು ಜಿತೇಂದ್ರಿಯರಾಗಿಯೂ, ಸ್ವಸ್ಥಚಿತ್ತರಾಗಿಯೂ ಇರಬೇಕು. ಪೇತ್ರನು ಇದನ್ನು ಬರೆಯುತ್ತಿರುವಾಗ ಖಂಡಿತವಾಗಿಯೂ ಆತನು ತನ್ನ ಮನಸ್ಸಿನಲ್ಲಿ ಶಿಷ್ಯರು ಯೇಸುವಿನೊಂದಿಗೆ ಗೇತ್ಸೆಮನೆ ತೋಟದಲ್ಲಿ ನಿದ್ರೆಯ ಕಾರಣದಿಂದ ಎಚ್ಚರವಾಗಿದ್ದು ಪ್ರಾರ್ಥಿಸಲು ಸಾಧ್ಯವಾಗದ ಆ ಸಮಯವನ್ನು ನೆನಪಿಸಿಕೊಂಡಿದ್ದನು (ಮಾರ್ಕ 14:37-40). ಬಹುಶಃ ಪೇತ್ರನು ಗೇತ್ಸೆಮನೆ ತೋಟದಲ್ಲಿ ಪ್ರಾರ್ಥಿಸಲು ವಿಫಲನಾಗಿದ್ದರಿಂದಲೇ ಬಳಿಕ ಶೋಧನೆಯಲ್ಲಿ ಬಿದ್ದು ತನ್ನ ಕರ್ತನನ್ನು ಅಲ್ಲಗೆಳೆದಿದ್ದನು (ಮಾರ್ಕ 14:66-72).

8 ಮೊಟ್ಟ ಮೊದಲು ಒಬ್ಬನ್ನೊಬ್ಬರು ಆಳವಾಗಿ ಪ್ರೀತಿಸಿರಿ. ದೇವರನ್ನು ಪ್ರೀತಿಸಬೇಕು ಹಾಗೂ ಮನುಷ್ಯನನ್ನು ಪ್ರೀತಿಸಬೇಕೆಂಬ ಆಜ್ಞೆಗಳು ಪ್ರಥಮ ಹಾಗೂ ಅತಿ ಶ್ರೇಷ್ಠ ಆಜ್ಞೆಗಳಾಗಿವೆ (ಮಾರ್ಕ 12:30-31). ಇತರ ಎಲ್ಲಾ ಆಜ್ಞೆಗಳೂ ಪ್ರೀತಿಸಬೇಕೆಂಬ ಈ ಆಜ್ಞೆಗಳಲ್ಲಿ ಅಡಕವಾಗಿರುತ್ತವೆ (ರೋಮ 13:8-10; ಗಲಾತ್ಯ 5:14; ಕೊಲೊಸ್ಸೆ 3:4). ಒಬ್ಬರನ್ನೊಬ್ಬರು ಪ್ರೀತಿಸುವದರ ಮೂಲಕ ನಾವು ಕ್ರಿಸ್ತನ ಶಿಷ್ಯರು ಹಾಗೂ ದೇವರ ಮಕ್ಕಳೆಂಬದನ್ನು ಲೋಕಕ್ಕೆ ತೋರ್ಪಡಿಸುವವರಾಗಿದ್ದೇವೆ (ಯೋಹಾನ 13;34-35; 1 ಯೋಹಾನ 4:7).

......ಪ್ರೀತಿಯು ಬಹುಪಾಪಗಳನ್ನು ಮುಚ್ಚುತ್ತದೆ. ಇದರ ಅರ್ಥವೇನೆಂದರೆಃ ಪ್ರೀತಿಯು ಇತರ ಜನರ ತಪ್ಪುಗಳು ಹಾಗು ಬಲಹೀನತೆಗಳನ್ನು ನೋಡುವದಿಲ್ಲ; ಪ್ರೀತಿಯು ತಪ್ಪುಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದಿಲ್ಲ. (1 ಕೊರಿಂಥ 13:5). ಪ್ರೀತಿಯು ನಮ್ಮ ಸಹೋದರರ ಪಾಪವನ್ನು ಮಾತ್ರವಲ್ಲದೆ, ನಮ್ಮ ಸ್ವಂತ ಪಾಪವನ್ನು ಸಹ ಮುಚ್ಚುತ್ತದೆ.; ಯಾಕೆಂದರೆ, ನಾವು ಪ್ರೀತಿಯಿಂದ ಎಷ್ಟರಮಟ್ಟಿಗೆ ನಮ್ಮಸಹೋದರರ ಪಾಪಗಳನ್ನು ಕ್ಷಮಿಸುತ್ತೇವೋ ಅಷ್ಟರ ಮಟ್ಟಿಗೆ ದೇವರು ನಮ್ಮ ಪಾಪಗಳನ್ನು "ಮುಚ್ಚುತ್ತಾನೆ" ಅಥವಾ ಕ್ಷಮಿಸುತ್ತಾನೆ (ಮತ್ತಾಯ 6:12, 14-15; ಮಾರ್ಕ 11:25-26).

**9** ಕ್ರೈಸ್ತರು ಎಲ್ಲಾ ಜನರಿಗೂ ಆತಿಥಿಸತ್ಕಾರ ಮಾಡಬೇಕು, ಆದರೆ ವಿಶೇಷವಾಗಿ ವಿಶ್ವಾಸಿಗಳಿಗೆ ಮಾಡಬೇಕು, ಅದು ಮಾತ್ರವಲ್ಲದೆ, ಅವರು ಇದನ್ನು ಗುಣಗುಟ್ಟದೆ ಮಾಡಬೇಕು(ರೋಮ 12:13; ಇಬ್ರಿಯ 13:2; 3 ಯೋಹಾನ 5:8). ನಾವು ನಮ್ಮ ಸ್ವತ್ತುಗಳನ್ನು ಇತರರೊಂದಿಗೆ ಹೆಚ್ಚಾಗಿ ಹಂಚಿಕೊಂಡಷ್ಟು ದೇವರು ಅದಕ್ಕೆ ಪ್ರತಿಯಾಗಿ ನಮಗೆ ಹೆಚ್ಚೆಚ್ಚಾಗಿ ನೀಡುವನು (2 ಕೊರಿಂಥ 9:6-8). ಮತ್ತು ನಾವು ಇತರರಿಗೆ ಆತಿಥಿಸತ್ಕಾರ ಮಾಡುವ ಅದೇ ಸಮಯದಲ್ಲಿ ಸ್ವತಃ ಕ್ರಿಸ್ತನಿಗೆ ಆತಿಥಿಸತ್ಕಾರ ಮಾಡುವವರಾಗಿರುತ್ತೇವೆ ಎಂಬುದನ್ನು ಮರೆಯದಿರೋಣ (ಮತ್ತಾಯ 25:35, 37-40 ನೋಡಿರಿ)...... ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ ಅದನ್ನು ನನಗೂ ಮಾಡಿದ ಹಾಗಾಯಿತು (ಮತ್ತಾಯ 25:40).

**10** ಪ್ರತಿಯೊಬ್ಬನು ಕ್ರೈಸ್ತನು ದೇವರಿಂದ ಒಂದು ಅಥವಾ ಹೆಚ್ಚು ವರಗಳನ್ನು ಪಡೆದಿರುತ್ತಾನೆ. ಈ ವರಗಳು ಸ್ವಾಭಾವಿಕ ಹಾಗೂ ಆತ್ಮೀಕವಾದ ಎರಡೂ ರೀತಿಯ ವರಗಳಾಗಿರಬಹುದು (ರೋಮ 12:6-8; 1 ಕೊರಿಂಥ 12:7-11 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಪ್ರತಿಯೊಂದು ವರವು ಸಭೆಯ ಸದಸ್ಯರಲ್ಲಿ ಸರ್ವರ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟಿರುತ್ತದೆ. (1 ಕೊರಿಂಥ 12:7). ನಾವು ಯಾವ ವರವನ್ನು ಹೊಂದಿದ್ದರೂ ಸರಿಯೇ ಅದನ್ನು ಮನೆವಾರ್ತೆಯವರಾಗಿ ಪಡೆದಿದ್ದೇವೆ ನಾವು ಅದನ್ನು ಇತರರಿಗಾಗಿ ಉಪಯೋಗಿಸಬೇಕು ಹೊರತು ನಮಗೋಸ್ಕರವಲ್ಲ.

ಯಾವ ಕ್ರೈಸ್ತನೂ ಸಹ "ನನಗೆ ಯಾವ ವರವೂ ಇಲ್ಲ" ಎಂದು ಹೇಳಲು ಸಾಧ್ಯವಿಲ್ಲ. ಪ್ರತಿಯೊಬ್ಬ ಕ್ರೈಸ್ತನು ದೇವರಿಂದ ಒಂದು ವರವನ್ನಾದರೂ ಹೊಂದಿದ್ದಾನೆ ಮತ್ತು ಆದರ ಜೊತೆಯಲ್ಲಿ ಅದನ್ನು ಉಪಯೋಗಿಸುವಕ್ಕೆ ಕೃಪೆ ಹಾಗೂ ಬಲವನ್ನು ಪಡೆದಿರುತ್ತಾನೆ. ನಾವು ನಮಗೆ ಕೊಡಲ್ಪಟ್ಟಿರುವ ವರಗಳನ್ನು ದೇವರ ಸೇವೆಯಲ್ಲಿ ಉಪಯೋಗಿಸದಿದ್ದರೆ ಆತನು ಅದಕ್ಕಾಗಿ ನಮ್ಮನ್ನು ದಂಡಿಸುವನು (ಮತ್ತಾಯ 25:14-30 ನೋಡಿರಿ).

**11** ಇಲ್ಲಿ ಪೇತ್ರನು ಕ್ರೈಸ್ತ ಸೇವೆಯ ಎರಡು ಮುಖ್ಯ ವಿಧಗಳನ್ನು ಪ್ರಸ್ತಾಪಿಸುತ್ತಾನೆಃ ಮೊದಲನೆಯದಾಗಿ, ವಾಕ್ಯದ ಬೋಧನೆ– ದೈವೋಕ್ತಿಗಳನ್ನು ನುಡಿಯುವದು; ಮತ್ತು ಎರಡನೆಯದಾಗಿ, ಸಭೆಯ ಸೇವೆ (ಅ.ಕೃತ್ಯ 6:2-4 ನೋಡಿರಿ). ಮೊದಲನೆಯ ಸೇವೆಯು ಮುಖ್ಯವಾಗಿ ಸಭಾಪಾಲಕರು, ಹಿರಿಯರು ಹಾಗೂ ಸುವಾರ್ತಿಕರಿಂದ[10] ನಡಿಸಲ್ಪಡುತ್ತದೆ. ದೇವರ ವಾಕ್ಯವನ್ನು ಉಪದೇಶಿಸುವವರು ಹಾಗೂ ಬೋಧಿಸುವವರು ಸ್ವತಃ ದೇವರೇ ಮಾತಾಡುತ್ತಿದ್ದಾನೇನೋ ಎಂಬಂತೆ ಅದನ್ನು ಮಾಡಬೇಕು. ಅವರು ದೇವರ ವಕ್ತಾರರಂತೆ ನಡೆದುಕೊಳ್ಳಬೇಕು

ಎರಡನೆಯ ಸೇವೆಯಲ್ಲಿ, ಇತರರಿಗೆ ಸೇವೆ ಹಾಗೂ ಸಹಾಯಮಾಡುವದರಲ್ಲಿ ಎಲ್ಲಾ ಕ್ರೈಸ್ತರು ಭಾಗಿಗಳಾಗಬಹುದು. ಈ ಸೇವೆಯನ್ನು ನಿರ್ವಹಿಸುವದಕ್ಕೆ ದೇವರು ಮಾರ್ಗವನ್ನೂ ಬಲವನ್ನೂ– ಅಗತ್ಯವಿರುವ ಎಲ್ಲವನ್ನು– ಅನುಗ್ರಹಿಸುವನು. ಹಣವು ಅಗತ್ಯವಾಗಿದ್ದರೆ ದೇವರು ಅದನ್ನು ಒದಗಿಸುವನು ಆದರೆ ಸುಮ್ಮನೆ ಕಾದಿದ್ದು ಎಲ್ಲವನ್ನೂ ದೇವರೇ ಮಾಡುವಂತೆ ನಿರೀಕ್ಷಿಸಲಾರೆವು . ನಾವು ದೇವರ ಸೇವೆಯಲ್ಲಿ ನಮ್ಮ ಎಲ್ಲಾ ಸಾಮರ್ಥ್ಯಗಳನ್ನೂ ಬಲವನ್ನೂ ಸಮಯವನ್ನು ಉಪಯೋಗಿಸಬೇಕು. ನಾವು ಹೀಗೆ ಮಾಡುವಾಗ ದೇವರಿಗೆ ಮಹಿಮೆಯನ್ನು ತರುವವರಾಗಿದ್ದೇವೆ. ಈ ಲೋಕದಲ್ಲಿನ ನಮ್ಮ ಎಲ್ಲಾ ಪ್ರಯಾಸ ಹಾಗೂ ಪ್ರಯತ್ನಗಳು ಒಂದೇ ಒಂದು ಅಂತಿಮ ಉದ್ದೇಶವನ್ನು ಹೊಂದಿರುತ್ತವೆ ಆ ಉದ್ದೇಶವು ದೇವರನ್ನು ಮಹಿಮೆಪಡಿಸುವದೇ.

## ಕ್ರೈಸ್ತನಾಗಿರುವದಕ್ಕೆ ಬಾಧೆಯನ್ನನುಭವಿಸುವದು (4:12-19)

**12** ಪೇತ್ರ ನು ಈ ಪತ್ರಿಕೆಯನ್ನು ಯಾರಿಗೆ ಬರೆದನೋ ಆ ವಿಶ್ವಾಸಿಗಳಲ್ಲಿ ಕೆಲವರು ನಾನಾ ವಿಧವಾದ ಕಷ್ಟ ಹಾಗೂ ಹಿಂಸೆಯನ್ನು ಅನುಭವಿಸುತ್ತಿದ್ದರು. ಬಹುಶಃ ಅವರು ತಮ್ಮ ಮೇಲೆ ಬಂದಿದ್ದ ಕಷ್ಟಗಳಿಂದ ಆಶ್ಚರ್ಯಗೊಂಡು ಚಕಿತರಾಗಿದ್ದರು ಹಾಗೂ ಭ್ರಮೆ ಹಿಡಿದವರಾಗಿದ್ದರು. ಅವರು ತಾವು ಕ್ರಿಸ್ತನನ್ನು ನಂಬಿದ ಬಳಿಕ ಆಶೀರ್ವಾದ, ಸಂತೋಷ ಹಾಗೂ ಸಮೃದ್ಧಿಯನ್ನು ಪಡೆಯುವರೆಂದು ಭಾವಿಸಿದ್ದರು. ಆದರೆ ಈ ಒಳ್ಳೇ ಸಂಗತಿಗಳ ಬದಲಾಗಿ ಅವರು ತಮ್ಮ ಸ್ನೇಹಿತರಿಂದ ಕಷ್ಟವನ್ನೂ ರೋಮಾಯರಿಂದ ಹಿಂಸೆಯನ್ನೂ ಪಡೆದುಕೊಂಡಿದ್ದರು. ಅವರಲ್ಲಿ ಕೆಲವರು, "ನಮಗೆ ದ್ರೋಹವಾಗಿದೆ" ಎಂದು ಸಹ ಯೋಚಿಸಿದ್ದಿರಬಹುದು.

ಆದರೆ ಪೇತ್ರನು ಅವರಿಗೆ ಬಂಗಾರವು ಬೆಂಕಿಯಲ್ಲಿ ಪು ಟಕ್ಕೆ ಹಾಕಲ್ಪಡುವ ಪ್ರಕಾರವೇ ಅವರ ನಂಬಿಕೆಯು "ಬೆಂಕಿಯಂಥ" ಅಥವಾ ಅವರ ಮೇಲೆ ಬಂದಿರುವ ವಿಪರೀತವಾದ ಕಷ್ಟಗಳಿಂದ ಪು ಟಕ್ಕೆ ಹಾಕಲ್ಪಟ್ಟಿದೆ ಎಂದು ಜ್ಞಾಪಕಪಡಿಸುತ್ತಾನೆ (ಮಾರ್ಕ 4:5-6, 16-17; 1 ಪೇತ್ರ 1:6-7 ನೋಡಿರಿ).

13 ಆದರೆ ನೀವು ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರರಾಗುವದಕ್ಕಾಗಿ ಸಂತೋಷಪಡಿರಿ[11] ಕ್ರಿಸ್ತನಿಗಾದರೋ, ಬಾಧೆಯು ಮಹಿಮೆಗೆ ದಾರಿಯಾಗಿತ್ತು; ಮತ್ತು ಅದು ನಮ್ಮ ವಿಷಯದಲ್ಲಿಯೂ ಹಾಗೆಯೇ ಇರುತ್ತದೆ. ಈಗ ನಾವು ಕ್ರಿಸ್ತನಿಗಾಗಿ ಬಾಧೆಯನ್ನನುಭವಿಸಿದರೆ ಅನಂತರ ನಾವು ಆತನ ಮಹಿಮೆಯಲ್ಲಿ ಪಾಲುಗಾರರಾಗುವೆವು (ಮತ್ತಾಯ 5:10-12; ರೋಮ 8:17). ಕ್ರಿಸ್ತನು ತಿರಿಗಿ ಭೂಲೋಕಕ್ಕೆ ಬರುವಾಗ ನಾವು ಆತನೊಂದಿಗೆ ಮತ್ತಷ್ಟು ಹೆಚ್ಚಾಗಿ ಸಂತೋಷಿಸುವೆವು (ರೋಮ 8:18, 2 ಥೆಸಲೋನಿಕ 1:4-5). ಆದದರಿಂದ, ಬಾಧೆಯ ಸಮಯಗಳಲ್ಲಿ ನಾವೆಲ್ಲರೂ (ದೃಢವಾಗಿ ನಿಲ್ಲುವದಾದರೆ) ಒಂದು ದಿನ ಪಾಲ್ಗೊಳ್ಳಲಿರುವ ಕ್ರಿಸ್ತನ ಪ್ರಭಾವ ಹಾಗೂ ಸಂತೋಷದ ಕಡೆಗೆ ನಮ್ಮ ಆಲೋಚನೆಗಳನ್ನು ಹರಿಸೋಣ. ಪೌಲನು ಬರೆದದ್ದೇನೆಂದರೆಃ ....... ದೇವರ ಮಹಿಮೆಯನ್ನು ಹೊಂದುವೆವೆಂಬ ಭರವಸದಿಂದ ಉಲ್ಲಾಸವಾಗಿದ್ದೇವೆ. ಇದು ಮಾತ್ರವಲ್ಲದೆ, ನಮಗೆ ಉಂಟಾಗುವ ಉಪದ್ರವಗಳಲ್ಲಿಯೂ ಉಲ್ಲಾಸವಾಗಿದ್ದೇವೆ. ಯಾಕೆಂದರೆ ಉಪದ್ರವದಿಂದ ತಾಳ್ಮೆ ಹುಟ್ಟುತ್ತದೆ, ತಾಳ್ಮೆಯಿಂದ ಅನುಭವಸಿದ್ಧಿ ಹುಟ್ಟುತ್ತದೆ. ಅನುಭವದಿಂದ ನಿರೀಕ್ಷಣ ಹುಟ್ಟುತ್ತದೆಂದು ಬಲ್ಲೆವು . ಈ ನಿರೀಕ್ಷೆಯು ನಮ್ಮ ಆಶೆಯನ್ನು ಭಂಗಪಡಿಸುವದಿಲ್ಲ (ರೋಮ 5:2-5)...... ನಾವು ಸಹಿಸಿಕೊಳ್ಳುವವರಾಗಿದ್ದರೆ ಆತನೊಡನೆ ಆಳುವೆವು (2 ತಿಮೊಥೆ 2:12).

14 ಕ್ರಿಸ್ತನನ್ನು ನಂಬಿಗಸ್ಥನಾಗಿ ಹಿಂಬಾಲಿಸುವ ಯಾವನೇ ಆಗಲಿ ಕಾಲಕಾಲಕ್ಕೆ ಕ್ರಿಸ್ತನ ಹೆಸರಿನ ನಿಮಿತ್ತ ನಿಂದೆಗೆ (ಅವಮಾನಕ್ಕೆ) ಗುರಿಯಾಗುತ್ತಾನೆ (ಕೀರ್ತನೆಗಳು 69:7-9; 89:50-51; ಮತ್ತಾಯ 10:22; ಯೋಹಾನ 15:18-21). ಕ್ರಿಸ್ತನ ನಿಮಿತ್ತ ದೂಷಣೆ ಹಾಗೂ ನಿಂದೆಗೊಳಗಾಗುವದು ಒಂದು ಅವಮಾನವಲ್ಲ, ಆದರೆ ಘನತೆಯೂ ಶ್ಲಾಘ್ಯವೂ ಆಗಿದೆ (ಮತ್ತಾಯ 5:11; ಅ.ಕೃತ್ಯ 5:41; ಇಬ್ರಿಯ 11:26; 13:13; 1 ಪೇತ್ರ 4:16 ನೋಡಿರಿ). ನಾವು ಕ್ರಿಸ್ತನ ನಿಂದೆಯನ್ನು ಸಹಿಸಿಕೊಳ್ಳುವದಾದರೆ ಆತನ ಆತ್ಮನು– ತೇಜೋಮಯನಾದ ಆತ್ಮನು ಮತ್ತು ದೇವರು ತಾನೇ ನಮ್ಮ ಬಳಿಗೆ ಬಂದು ನೆಲೆಸುವನು (ಯೋಹಾನ 14:23 ನೋಡಿರಿ).

15 ಹೇಗಿದ್ದರೂ, ತಪ್ಪುಮಾಡಿದಕ್ಕಾಗಿ ಬಾಧೆ ಪಟ್ಟರೆ ನಾವು ಕ್ರಿಸ್ತನಿಗಾಗಲಿ ಅಥವಾ ನಮಗಾಗಲಿ ಯಾವ ಮಾನವನ್ನು ತರುವದಿಲ್ಲ. ನಾವು ಹೊಂದಬೇಕಾದ ಶಿಕ್ಷೆಯನ್ನು ಅನುಭವಿಸುವದರಲ್ಲಿ ಸಂತೋಷಕರವಾದದ್ದೇನೂ ಇರುವದಿಲ್ಲ. ಆದದರಿಂದ, ನಾವು ಅನುಭವಿಸುವ ಯಾವದೇ ಕಷ್ಟವು ಕ್ರಿಸ್ತನ ನಿಮಿತ್ತವೇ– ಅಂದರೆ, ಒಳ್ಳೇದನ್ನು ಮಾಡಿದ್ದಕ್ಕಾಗಿಯೇ ಎಂಬದನ್ನು ಖಚಿತಮಾಡಿಕೊಳೋಣ. ಈ ವಿಧದಲ್ಲಿ ಮಾತ್ರವೇ ನಾವು ದೇವರನ್ನು ಮಹಿಮೆಪಡಿಸುವೆವು (1 ಪೇತ್ರ 2:19-20; 3:17 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

16 ಪೇತ್ರನ ಕಾಲದಲ್ಲಿ ಕ್ರೈಸ್ತನು ಎಂಬ ಹೆಸರು ಹೆಚ್ಚು ಕಡಿಮೆ ಪ್ರತಿಯೊಬ್ಬರಿಂದಲೂ ತಾತ್ಸಾರಕ್ಕೊಳಗಾಗುತ್ತಿತ್ತು.

ಅನೇಕ ಕ್ರೈಸ್ತರು ಬಡವರಾಗಿದ್ದರು, ಇನ್ನು ಕೆಲವರು ಗುಲಾಮರು ಅಥವಾ ಸೇವಕರಾಗಿದ್ದರು. ಕೆಲವರು ಮುಂಚೆ ಯೆಹೂದ್ಯರಾಗಿದ್ದವರಿದ್ದರು. ಆದದರಿಂದ, ರೋಮಾಯರು ಕ್ರೈಸ್ತರನ್ನು ಉದಾಸೀನ ಮಾಡುತ್ತಿದ್ದರು. ಒಬ್ಬ "ಕ್ರೈಸ್ತನು" ಎಂದು ಕರೆಯಲ್ಪಡುವದು ಅವಮಾನಕರ ಸಂಗತಿಯಾಗಿತ್ತು. ಹೇಗಿದ್ದರೂ, ಪೇತ್ರನು ಇಲ್ಲಿ ಕ್ರೈಸ್ತನಾಗಿ ಬಾಧೆಪಟ್ಟರೆ ಅವನು ನಾಚಿಕೆಪಡದೆ ಇರಲಿ ಎಂದು ಹೇಳುತ್ತಾನೆ. ಬದಲಾಗಿ, ನೀವು ಆ ಹೆಸರನ್ನು ಹೊಂದಿದ್ದೀರೆಂದು ದೇವರನ್ನು ಸ್ತುತಿಸಿರಿ, ಯಾಕೆಂದರೆ ಅದು ರಾಜಾಧಿರಾಜನ ಹಾಗೂ ಕರ್ತರ ಕರ್ತನ ಹೆಸರಾಗಿದೆ (ವಚನ 14 ಮತ್ತು ವ್ಯಾಖ್ಯಾನ ನೋಡಿರಿ).

17 ದೇವರು ಪಾಪದ ವಿರುದ್ಧ ಮಾಡುವ ನ್ಯಾಯ ವಿಚಾರಣೆಯು ದೇವರ ಮನೆಯಿಂದ– ಅಂದರೆ, ವಿಶ್ವಾಸಿಗಳಿಂದ– ಪ್ರಾರಂಭವಾಗುತ್ತದೆ. ದೇವರು ಕ್ರೈಸ್ತರಿಗೆ ನ್ಯಾಯ ವಿಚಾರಣೆ ಮಾಡುವನು ಮತ್ತು ಅವರ ಪಾಪಗಳಿಗಾಗಿ ಆತನು ದಂಡನೆಯನ್ನು ನೀಡುವನು ದೇವರು ಪಾಪಕ್ಕಾಗಿ ನೀಡುವ ದಂಡನೆಯು ಆತ್ಮೀಕ ಮರಣವೇ; ಯೇಸು ನಮ್ಮ ಬದಲಾಗಿ ಹೊತ್ತುಕೊಂಡ ದಂಡನೆಯು ಇದೇ ಆಗಿತ್ತು (ವಚನ 6ಮತ್ತು ವ್ಯಾಖ್ಯಾನ ನೋಡಿರಿ). ಆದರೆ ಸ್ವಲ್ಪ ಆಲೋಚಿಸಿರಿಃ ದೇವರು ವಿಶ್ವಾಸಿಗಳ ಪಾಪಗಳಿಗಾಗಿ ಪ್ರಾಯಶ್ಚಿತ್ತಮಾಡುವದಕ್ಕೆ ತನ್ನ ಒಬ್ಬನೇ ಮಗನನ್ನೇ ಕೊಡುವಷ್ಟರ ಮಟ್ಟಿಗೆ ಅವರ ಪಾಪಗಳ ವಿರುದ್ಧ ದೇವರ ನ್ಯಾಯ ತೀರ್ಪು ಘೋರವಾಗಿರುವದಾದರೆ ದೇವರ ಸುವಾರ್ತೆಯನ್ನು ನಂಬಲೊಲ್ಲದವರ –ಕ್ರಿಸ್ತನನ್ನು ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳದವರ– ಪಾಪಗಳ ವಿರುದ್ಧ ದಂಡನೆಯು ಇನ್ನೂ ಎಷ್ಟೋ ಘೋರವಾಗಿರುತ್ತದಲ್ಲವೇ?[12] ಅವಿಶ್ವಾಸಿಗಳ ವಿರುದ್ಧ ದೇವರ ನ್ಯಾಯತೀರ್ಪು ಭಯಾನಕವೂ ಭಯಂಕರವೂ ಆಗಿರುತ್ತದೆ (2 ಥೆಸಲೋನಿಕ 1:6-10).

18 ಇಲ್ಲಿ ಪೇತ್ರನು ಜ್ಞಾನೋಕ್ತಿಗಳು 11:31 ರಿಂದ ಉಲ್ಲೇಖಿಸುತ್ತಾನೆ. ನೀತಿವಂತನು ನ್ಯಾಯತೀರ್ಪು ಹೊಂದುವದು ಮತ್ತು ಅವನ ನಂಬಿಕೆಯು ಬೆಂಕಿ ಹಾಗೂ ನೋವು ದಾಯಕ ಕಷ್ಟಗಳ ಮೂಲಕ ಪರಿಶೋಧಿಸಲ್ಪಡುವದು ಅಗತ್ಯವಾಗಿರುವಾದರೆ ಅನೀತಿವಂತರ ಅಂತ್ಯ ಸ್ಥಿತಿಯು ಯಾವ ರೀತಿಯಾಗಿತ್ತದೋ! ಮುಂದಿನ ಜೀವಿತದಲ್ಲಿ ದೇವರ ಅಂತಿಮ ಹಾಗೂ ಭಯಂಕರ ನ್ಯಾಯತೀರ್ಪಿಗಾಗಿ ಕಾಯ್ದುಕೊಂಡು ಎದುರಿಸುವದಕ್ಕಿಂತಲೂ ಈ ಜೀವಿತದಲ್ಲಿ ಕ್ರಿಸ್ತನ ಬಳಿಗೆ ಬಂದು ಪಾಪದ ವಿರುದ್ಧದ ಆತನ ನ್ಯಾಯ ತೀರ್ಪನ್ನು ಎದುರಿಸುವದು ಎಷ್ಟೋ ಉತ್ತಮವಾಗಿರುತ್ತದೆ.

19 ಆದದರಿಂದ, ನಮ್ಮ ಮೇಲೆ ಬಾಧೆಯು ಬರುವಾಗ ನಾವು ದೇವರೊಂದಿಗೆ ಅಥವಾ ಮನುಷ್ಯನೊಂದಿಗೆ ಕೋಪಗೊಂಡವರಾಗದಿರೋಣ. ಯಾಕೆಂದರೆ ಅಂಥ ಬಾಧೆಯ ಮೂಲಕ ನಾವು ಪರಿಶುದ್ಧರಾಗಿ ಮಾಡಲ್ಪಡುತ್ತೇವೆ. ಬಾಧೆಗಳ ಮುಖಾಂತರ ನಮ್ಮ ನಂಬಿಕೆಯು ಪರಿಶೋಧಿಸಲ್ಪಟ್ಟು ಬಲಗೊಳ್ಳುವದಾಗಿದೆ. ಮತ್ತು ಬಾಧೆಗಳ ಮೂಲಕ ನಾವು ದೇವರ ರಾಜದಲ್ಲಿ ಸ್ಥಳವನ್ನು ಹೊಂದುವದಕ್ಕೋಸ್ಕರ ಸಿದ್ಧಗೊಳಿಸಲ್ಪಡುವವರಾಗಿದ್ದೇವೆ (ರೋಮ 8:17; ಇಬ್ರಿಯ 12:5-7,10).

ಆದದರಿಂದ, ನಾವು ನಮ್ಮನ್ನು ದೇವರಿಗೆ ಒಪ್ಪಿಸಿಕೊಡಬೇಕು; ಆತನು ನಂಬಿಗಸ್ಥನು. ಪೌಲನು ಬರೆಯುವದೇನೆಂದರೆ:.....ಈ ಒಳ್ಳೇ ಕೆಲಸವನ್ನು ನಿಮ್ಮಲ್ಲಿ ಪ್ರಾರಂಭಿಸಿದಾತನು (ದೇವರು) ಅದನ್ನು ನಡಿಸಿಕೊಂಡು ಯೇಸುಕ್ರಿಸ್ತನು ಬರುವ ದಿನದೊಳಗಾಗಿ ಸಿದ್ಧಿಗೆ ತರುವನು (ಫಿಲಿಪ್ಪಿ 1:6). ಮತ್ತು ಆತನು ಇನ್ನೂ ಬರೆಯುವದೇನೆಂದರೆ: ನಮ್ಮ ಕರ್ತನಾದ ಯೇಸುಕ್ರಿಸ್ತನ ದಿನದಲ್ಲಿ ಯಾರೂ ನಿಮ್ಮ ಮೇಲೆ ತಪ್ಪು ಹೊರಿಸಲಾಗದಂತೆ ಆತನು ನಿಮ್ಮನ್ನು ಕಡೇವರೆಗೂ ದೃಢಪಡಿಸುವನು. ದೇವರು ನಂಬಿಗಸ್ಥನು; ನಮ್ಮ ಕರ್ತನಾದ ಯೇಸು ಕ್ರಿಸ್ತನನೆಂಬ ತನ್ನ ಮಗನ ಅನ್ಯೋನ್ಯತೆಗೆ ನಿಮ್ಮನ್ನು ಕರೆದವನು ಆತನೇ (1 ಕೊರಿಂಥ 1:8-9).

ಆದದರಿಂದ, ನಾವು ನಮ್ಮನ್ನು ನೀತಿಯುಳ್ಳ ನ್ಯಾಯಾಧಿ ಪತಿಯಾದ ದೇವರಿಗೆ ಒಪ್ಪಿಸಿಕೊಡೋಣ (1 ಪೇತ್ರ 2:23 ನೋಡಿರಿ). ಶಿಲುಬೆಯ ಮೇಲೆ ಯೇಸು ನುಡಿದ ಕಡೇ ಮಾತುಗಳೇನೆಂದರೆ: "ತಂದೆಯೇ ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿಕೊಡುತ್ತೇನೆ" (ಲೂಕ 23:46). ಯೇಸು ಆ ಮಾತುಗಳನ್ನು ಹೇಳುವಾಗ ಪೇತ್ರನು ಕೇಳಿಸಿಕೊಂಡನು. ಆತನು ಈ ವಚನವನ್ನು ಬರೆಯುತ್ತಿರುವಾಗ ಖಂಡಿತವಾಗಿಯೂ ಆ ಮಾತುಗಳನ್ನು ಜ್ಞಾಪಿಸಿಕೊಂಡನು.

---

## ಅಧ್ಯಾಯ - 5

### ಹಿರಿಯರಿಗೂ ಯೌವನಸ್ಥರಿಗೂ ಪ್ರಬೋಧನೆ (5:1-11)

1 ಪೇತ್ರನು ಯೇಸುವಿನ ಹನ್ನೆರಡು ಮಂದಿ ಮೂಲ ಶಿಷ್ಯರಲ್ಲಿ ಪ್ರಮುಖನಾಗಿದ್ದಾಗ್ಯು ಆತನು ಇಲ್ಲಿ ತನ್ನನ್ನು ಜೊತೆ ಹಿರಿಯನು ಎಂದು ಮಾತ್ರವೇ ಕರೆದುಕೊಳ್ಳುತ್ತಾನೆ. ಇದರ ಮೂಲಕ ನಾವು ಪೇತ್ರನ ದೀನತೆಯನ್ನು ಕಾಣಬಹುದು. ಆತನು ಇತರರ "ಮೇಲೆ ದೊರೆತನ" ಮಾಡಲಿಲ್ಲ (ವಚನ 3). ಆದರೆ ಬದಲಾಗಿ, ಆತನು ಅವರನ್ನು ಜೊತೆ ವಿಶ್ವಾಸಿಗಳಾಗಿ ಪ್ರಬೋಧಿಸಿನು. ಪೇತ್ರನು ಕ್ರಿಸ್ತನ ಬಾಧೆಗಳನ್ನು ಕಣ್ಣಾರೆ ಕಂಡವನಾಗಿ (ಸಾಕ್ಷಿಯಾಗಿ) ಈ ಪತ್ರಿಕೆಯನ್ನು ಬರೆಯುತ್ತಾನೆ (ಲೂಕ 24:45-48; ಅ.ಕೃತ್ಯ 1:8 ನೋಡಿರಿ). ಮತ್ತು ಇನ್ನು ಮುಂದೆ ಪ್ರತ್ಯಕ್ಷವಾಗುವ ಪ್ರಭಾವದಲ್ಲಿ ಪಾಲುಗಾರನಾಗಿಯೂ ಬರೆಯುತ್ತಾನೆ (ರೋಮ 8:17-18 ನೋಡಿರಿ).

2 ಹೊಸ ಒಡಂಬಡಿಕೆಯಲ್ಲಿ ಸಭೆಯ ನಾಯಕರು ಸಾಮಾನ್ಯವಾಗಿ ಹಿರಿಯರು (ಅ.ಕೃತ್ಯ 14:23; 20:17; ತೀತನು 1:5) ಅಥವಾ ಸಭಾಧ್ಯಕ್ಷರು[13] (1 ತಿಮೊಥೆ 3:1) ಎಂದು ಕರೆಯಲ್ಪಟ್ಟಿದ್ದಾರೆ. ಈ ದಿನಗಳಲ್ಲಿ ನಾವು ಅಂಥ ನಾಯಕರನ್ನು ಸೇವಕರು ಅಥವಾ ಸಭಾಪಾಲಕರು ಎಂದು ಸಹ ಕರೆಯುತ್ತೇವೆ. ಗ್ರೀಕ್ ಭಾಷೆಯಲ್ಲಿ "ಸಭಾಪಾಲಕ" ಎಂಬ ಪದದ ಅರ್ಥವು ಕುರುಬನು ಎಂದಾಗಿರುತ್ತದೆ; ಹೀಗೆ ಪೇತ್ರನು ಸಭೆಯ ಹಿರಿಯರಿಗೆ ಅವರು ಕುರುಬರು ಆಗಿರಬೇಕೆಂದು ಸಲಹೆ ಮಾಡುತ್ತಾನೆ. ಹಾಗಾದರೆ ಇದರ ಮೂಲಕ ನಾವು ಒಬ್ಬ ಸಭಾ ನಾಯಕನ ಎರಡು ಮುಖ್ಯ ಜವಾಬ್ದಾರಿಗಳನ್ನು ನೋಡುತ್ತೇವೆ: ಮೊದಲನೆಯದಾಗಿ, ಒಬ್ಬ "ಸಭಾಧ್ಯಕ್ಷ" ಅಥವಾ ಮೇಲ್ವಿಚಾರಕನಾಗಿ ಆತನು ಸಭೆಯ ಸದಸ್ಯರಿಗೆ ಬೋಧನೆ ಹಾಗೂ ಪ್ರಬೋಧನೆ ಮಾಡುತ್ತಾ ಶಿಸ್ತುಗೊಳಿಸಬೇಕು (2ತಿಮೊಥೆ 4:2 ನೋಡಿರಿ). ಎರಡನೆಯದಾಗಿ, ಒಬ್ಬ "ಸಭಾಪಾಲಕ" ಅಥವಾ "ಕುರುಬನಾಗಿ" ಆತನು ಮಂದೆಗೆ ಆಹಾರ ನೀಡಿ ಪೋಷಿಸಬೇಕು ಹಾಗೂ ಕುರಿಗಳನ್ನು " ತೋಳಗಳ" ಅಂದರೆ, ಸುಳ್ಳುಬೋಧಕರ ಕೈಯಿಂದ ಕಾಪಾಡಬೇಕು (ಮತ್ತಾಯ 7:15; ಅ.ಕೃತ್ಯ 20:28-29 ನೋಡಿರಿ).

ನಾಯಕರು ಕೇವಲ ಆಳುವವರು ಅಥವಾ ಸಭಾಧ್ಯಕ್ಷರು ಆಗಿರುವದಕ್ಕಿಂತಲೂ ಹೆಚ್ಚಾಗಿರಬೇಕೆಂದು ಪೇತ್ರನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿದ್ದನು; ಅವರು ಕುರುಬರಾಗಿ ಇರಬೇಕಾಗಿತ್ತು. ಯೇಸು ತನ್ನ ಪುನರುತ್ಥಾನದ ಬಳಿಕ ಮೂರು ಸಾರಿ ತನ್ನ ಕುರಿಗಳನ್ನು ಕಾಯಬೇಕೆಂದು ಪೇತ್ರನಿಗೆ ಆಜ್ಞಾಪಿಸಿದನು (ಯೋಹಾನ 21:15-17). ಕುರಿಗಳು ದೇವರ ಮುಂದೆ ಆಗಿವೆ ಮತ್ತು ಸ್ವತಃ ಯೇಸುಕ್ರಿಸ್ತನೇ ಹಿರೀಕುರುಬನು (ವಚನ 4). ಸಭೆಯ ನಾಯಕರು ದೇವರಿಗೂ ಆತನ ಮಂದೆಗೂ ಒತ್ತಾಯದಿಂದಲ್ಲ ಆದರೆ ಪ್ರೀತಿಯಿಂದಲೇ ಸೇವೆಮಾಡುವವರಾಗಿರಬೇಕು. ಅವರು ಹಣ ಅಥವಾ ಘನತೆಯನ್ನು ಸಂಪಾದಿಸಿಕೊಳ್ಳಬೇಕೆಂದಲ್ಲ ಆದರೆ ಕುರಿಗಳಿಗೆ ಸೇವೆ ಮಾಡುವದಕ್ಕಾಗಿಯೇ ತಮ್ಮ ನಾಯಕತ್ವವನ್ನು ಚಲಾಯಿಸಬೇಕು (ಮಾರ್ಕ 10:45; ಯೋಹಾನ 10:11).

3 ಒಬ್ಬ ಒಳ್ಳೇ ನಾಯಕನು ಮುಖ್ಯವಾಗಿ ಮಾದರಿಯಾಗಿರುವದರ ಮೂಲಕ ನಡಿಸುತ್ತಾನೆ. ನಾಯಕನಿಗೆ ಅಧಿಕಾರ ಇರುತ್ತದೆಂದು ನಿಜವಾದದ್ದೇ, ಆದರೆ ಆತನು ತನ್ನ ಅಧಿಕಾರವನ್ನು ಸರಿಯಾದ ವಿಧದಲ್ಲಿಯೂ– ಸರಿಯಾದ ಸಮಯಗಳಲ್ಲಿಯೂ– ವಿಶೇಷವಾಗಿ, ಸತ್ಯವನ್ನು ವಿರೋಧಿಸಿ ದೇವರಿಗೆ ಅವಿಧೇಯರಾಗುವವರನು ಶಿಕ್ಷಿಸಬೇಕಾದ– ಉಪಯೋಗಿಸಬೇಕು. ಆದರೆ ಸಾಧ್ಯವಾದಷ್ಟು ಮಟ್ಟಿಗೆ ನಾಯಕನು ತನ್ನ ಒಳ್ಳೇ ಮಾದರಿಯ ಮೂಲಕ ದಾರಿತೋರಿಸುವವನಾಗಿರಬೇಕು (1 ಕೊರಿಂಥ 11:1). ಕುರುಬನು ಒಳ್ಳೇಯವನಾಗಿರುವದಾದರೆ ಕುರಿಗಳು ಆತನನ್ನು ಹಿಂಬಾಲಿಸಲು ಆಸಕ್ತವಾಗಿರುತ್ತವೆ (ಯೋಹಾನ 10:14; 27). ನಾಯಕನು ಒತ್ತಾಯದಿಂದಾಗಲಿ ಅಥವಾ ಬೆದರಿಸುವಿಕೆಯಿಂದಾಗಲಿ ನಡಿಸಬಾರದು; ಆತನು ಇತರರನ್ನು ಕೆಳಕ್ಕೆ ದೊಬ್ಬಲು ತನ್ನ ಅಧಿಕಾರವನ್ನು ಉಪಯೋಗಿಸಬಾರದು. ಬದಲಾಗಿ, ಆತನು ತನ್ನನ್ನು ಇತರರ ಸೇವಕನನ್ನಾಗಿ ಮಾಡಿಕೊಳ್ಳಬೇಕು (ಮಾರ್ಕ 10:42-45).

4 ಸಭೆಯ ನಾಯಕನು ಉತ್ತಮ ಸೇವೆಯನ್ನು ಮಾಡುವದಾದರೆ ಪ್ರತಿಫಲವನ್ನು, ದೇವಪ್ರಭಾವವೆಂಬ ಎಂದಿಗೂ ಬಾಡದ ಜಯಮಾಲೆಯನ್ನು ಹೊಂದುವರು. ಪೇತ್ರನ ಕಾಲದಲ್ಲಿ, ಓಟದ ಸ್ಪರ್ಧೆಯನ್ನು ಜಯಿಸಿದವನು ಎಲೆಗಳಿಂದ ಮಾಡಿದ ಜಯಮಾಲೆಯನ್ನು ಪಡೆಯುತ್ತಿದ್ದನು ಖಂಡಿತವಾಗಿಯೂ ಎಲೆಗಳು ಶೀಘ್ರವೇ ಒಣಗಿಹೋಗುತ್ತವೆ. ಆದರೆ ಕ್ರೈಸ್ತೀಯ ಪ್ರಭಾವದ ಜಯಮಾಲೆಯು ಎಂದಿಗೂ ಒಣಗಿ ಹೋಗುವದಿಲ್ಲ ಅಥವಾ ಬಾಡುವದಿಲ್ಲ (1 ಕೊರಿಂಥ 9:25; 2 ತಿಮೊಥೆ 4:8; ಯಾಕೋಬ 1:12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

5 ಕ್ರೈಸ್ತರು ಇತರರಿಗೆ ಅಧೀನರಾಗಿರಬೇಕೆಂದು ಪೇತ್ರನು ಈಗಾಗಲೇ ಹೇಳಿರುತ್ತಾನೆ (1 ಪೇತ್ರ 2:13-18;3:1). ಪೌಲನು ತನ್ನ ಹಲವಾರು ಪತ್ರಿಕೆಗಳಲ್ಲಿ ಇದೇ ವಿಷಯವನ್ನು ಬರೆದನು (ರೋಮ 13:1; 1 ಕೊರಿಂಥ 16:16; ಎಫೆಸ 5:21-22; 6:1-5). ಈ ವಚನದಲ್ಲಿ ಪೇತ್ರನು ವಿಶೇಷವಾಗಿ ಸಭೆಯ ಯೌವನಸ್ಥರು ಹಿರಿಯರಿಗೆ ಅಧೀನರಾಗಿರಬೇಕೆಂದು ಪ್ರಬೋಧಿಸುತ್ತಾನೆ. ಬಹುಮಂದಿ ಯೌವನಸ್ಥರು ಯಾರಿಗೂ ಅಧೀನರಾಗಿರುವದಕ್ಕೆ ಇಷ್ಟಪಡುವದಿಲ್ಲ; ಅವರು ತಮ್ಮ ಸ್ವಂತ ಮಾರ್ಗದಲ್ಲಿ ನಡೆಯಲು ಸ್ವತಂತ್ರರಾಗಿರಬೇಕೆಂದು ಇಚ್ಛಿಸುತ್ತಾರೆ. ಆದರೆ ಬಹುಪಾಲು ಯೌವನಸ್ಥರಲ್ಲಿ ದೀನತೆ ಹಾಗೂ ಜ್ಞಾನದ ಕೊರತೆಯಿರುತ್ತದೆ. ಆದದರಿಂದ, ಅವರ ನಿಮಿತ್ತವಾಗಿ, ಹಾಗೂ ಸಭೆಯ ನಿಮಿತ್ತವಾಗಿ, ಯೌವನಸ್ಥರು ತಮ್ಮ ಹಿರಿಯರಿಗೆ ಅಧೀನರಾಗಿರಬೇಕಾದದ್ದು ಅತ್ಯವಶ್ಯಕವಾಗಿದೆ.

ಸಭೆಯ ಸದಸ್ಯರೆಲ್ಲರೂ ದೀನಮನಸ್ಸೆಂಬ ವಸ್ತ್ರವನ್ನು "ಧರಿಸಿಕೊಳ್ಳಬೇಕು". ಬಹಿರಂಗದಲ್ಲಿ ತಗ್ಗಿಸಿಕೊಳ್ಳುವಿಕೆಯ ನಡವಳಿಕೆಯು ದೀನತೆಯಲ್ಲಿ ನಿಜವಾದ ದೀನತೆಯು ನಮ್ಮ ಅಂತರ್ಯದ ಮನಸ್ಸುಗಳಲ್ಲಿ ಹುಟ್ಟುವದಾಗಿದೆ. ದೀನತೆಯುಳ್ಳ ವ್ಯಕ್ತಿಯು ತಾನುದೇವರ ದೃಷ್ಟಿಯಲ್ಲಿ ಅಯೋಗ್ಯನೆಂಬದನ್ನು ಬಲ್ಲವನಾಗಿರುತ್ತಾನೆ. ಆತನು ತನ್ನ ಯೆಲ್ಲಾ ನೀತಿಕಾರ್ಯಗಳು ಹೊಲಸು ಬಟ್ಟೆಯಂತೆ ಯೆಂಬದನ್ನು ತಿಳಿದಿರುತ್ತಾನೆ (ಯೇಶಾಯ 64:6). ದೀನತೆಯುಳ್ಳ ವ್ಯಕ್ತಿಯು ತಾನು ಏನೇ ಆಗಿದ್ದರೂ ಏನೇ ಮಾಡಿದರೂ ಅದೆಲ್ಲವು ದೇವರ ಕೃಪೆಯಿಂದಲೇ ಆಗಿರುತ್ತದೆಂದು ಬಲ್ಲವನಾಗಿದ್ದಾನೆ (1 ಕೊರಿಂಥ 4:6-7; 15:10).

ಬಹುಪಾಲು ಕ್ರೈಸ್ತರ ಅನುಭವದಲ್ಲಿ ದೀನತೆಯು ಕಾಪಾಡಿಕೊಳ್ಳುವದಕ್ಕೆ ಅತಿ ಕಠಿಣವಾದ ಗುಣವಾಗಿರುತ್ತದೆ. ಕಾರಣವೇನೆಂದರೆ ಗರ್ವವು (ದೀನತೆಗೆ ತದ್ವಿರುದ್ಧವಾದದ್ದು). ಮನುಷ್ಯನ ಅತಿ ಆಳವಾದ ಹಾಗೂ ತೆಗೆದುಹಾಕುವದಕ್ಕೆ ಅತಿ ಕಷ್ಟಕರವಾದ ಪಾಪವಾಗಿರುತ್ತದೆ [14] ಗರ್ವವು ಸೈತಾನನ ಮುಖ್ಯ ಪಾಪವಾಗಿತ್ತು ಆತನು ತನ್ನನ್ನು ದೇವರಿಗೆ ಸರಿಸಮಾನನನ್ನಾಗಿ ಮಾಡಿಕೊಳ್ಳಲು ಅಪೇಕ್ಷಿಸಿದನು. (ಯೆಶಾಯ 14:12-14). ಗರ್ವವು ಏದೇನ್ ತೋಟದಲ್ಲಿ ಆದಾಮ ಹವ್ವಳರ ಮುಖ್ಯ ಪಾಪವೂ ಆಗಿತ್ತು ಅವರು ಸಹ ದೇವರಂತಾಗಲು ಬಯಸಿದ್ದರು (ಆದಿಕಾಂಡ 3: 4-6). ಈ ಕಾರಣದಿಂದಲೇ ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ ಆದರೆ ದೀನರಿಗೆ ಕೃಪೆಯನ್ನು ನೀಡುತ್ತಾನೆ (ಜ್ಞಾನೋಕ್ತಿಗಳು 3:34; ಲೂಕ 1:51-52; ಯಾಕೋಬ 4:6 ನೋಡಿರಿ). ಈ ಕಾರಣದಿಂದಲೇ ಹೊಸ ಒಡಂಬಡಿಕೆಯು ಅನೇಕ ಸ್ಥಳಗಳಲ್ಲಿ ನಮಗೆ ದೀನತೆಯಿಂದಿರಬೇಕೆಂದು ಬೋಧಿಸುತ್ತದೆ (ರೋಮ 12:3; ಎಫೆಸ 4:2; ಫಿಲಿಪ್ಪಿ 2:3 ನೋಡಿರಿ).

6 ನಾವು ನಮ್ಮನ್ನು ತಗ್ಗಿಸಿಕೊಳ್ಳುವದಾದರೆ ದೇವರು ನಮ್ಮನ್ನು ಮೇಲಕ್ಕೆ ತರುವನು. ನಾವು ನಮ್ಮನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿದರೆ ದೇವರು ನಮ್ಮನ್ನು ತಗ್ಗಿಸುವನು (ಮತ್ತಾಯ 23:12; ಯಾಕೋಬ 4:10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಪೇತ್ರನು ಇಲ್ಲಿ ಹೇಳುವದೇನೆಂದರೆಃ ನಿಮ್ಮನ್ನು ತಗ್ಗಿಸಿಕೊಳ್ಳಿರಿ. ನಾವು ನಮ್ಮನ್ನು ತಗ್ಗಿಸಿಕೊಳ್ಳಬೇಕು; ನಾವು ನಮ್ಮನ್ನು ಕೆಳಕ್ಕೆ ತಂದುಕೊಳ್ಳಬೇಕು. ಯಾರೊಬ್ಬನೂ ಅದನ್ನು ಮಾಡಲು ಇಷ್ಟಪಡುವದಿಲ್ಲ. ಆದರೆ ಬೇರೊಬ್ಬನು ನಮ್ಮನ್ನು ತಗ್ಗಿಸುವಂತೆ ಮಾಡುವದಕ್ಕಿಂತಲೂ ನಮ್ಮನ್ನು ನಾವೇ ತಗ್ಗಿಸಿಕೊಳ್ಳುವದು ಉತ್ತಮವಾದದ್ದು! ನಾವು ನಮ್ಮನ್ನು ದೇವರ ಬಲವುಳ್ಳ ಹಸ್ತದ ಕೆಳಗೆ ತಗ್ಗಿಸಿಕೊಳ್ಳಬೇಕು. ಸಮಸ್ತವೂ ದೇವರ ಬಲವುಳ್ಳ ಹಸ್ತದ ಅಡಿಯಲ್ಲಿರುತ್ತವೆ. ದೇವರು ಎಲ್ಲವನ್ನೂ ಹತೋಟಿಯಲ್ಲಿ ಇಟ್ಟುಕೊಳ್ಳುವವನಾಗಿದ್ದಾನೆ. ಆತನ ಹಸ್ತವು ಅನೀತಿವಂತರನ್ನು ದಂಡಿಸುವದಕ್ಕೂ ನೀತಿವಂತರನ್ನು ಸಂರಕ್ಷಿಸುವದಕ್ಕೂ ಬಲವುಳ್ಳದ್ದಾಗಿದೆ. ನಾವು ನಮ್ಮನ್ನು ಆತನ ಬಲವುಳ್ಳ ಹಸ್ತದ ಕೆಳಗೆ ಇಡಬಹುದು; ಯಾಕೆಂದರೆ ಆತನು ನಮಗೋಸ್ಕರ ಚಿಂತಿಸುತ್ತಾನೆ (ವಚನ 7). ದೇವರು ನಮ್ಮ ಮೇಲೆ ಬರುವದಕ್ಕೆ ಅನುಮತಿಸುವ ಪ್ರತಿಯೊಂದು ಕಷ್ಟವು ಅಂತಿಮವಾಗಿ ನಮ್ಮ ಹಿತಕ್ಕಾಗಿಯೇ ಎಂದು ನಾವು ದೇವರನ್ನು ವಿಶ್ವಾಸಿಸಬಹುದು (ರೋಮ 8:28; ಇಬ್ರಿಯ 12:7-9 ಮತ್ತು ವ್ಯಾಖ್ಯಾನ ನೋಡಿರಿ). ಅಂಥ ಕಷ್ಟಗಳು ಈ ಜೀವಿತದಲ್ಲಿ ನಮ್ಮ ಮಹಿಮೆಗೋಸ್ಕರವಾಗಿಯೂ ಇರುತ್ತವೆ.

ದೇವರು ತಕ್ಕಕಾಲದಲ್ಲಿ ನಮ್ಮನ್ನು ಮೇಲಕ್ಕೆ ತರುವನು. ನಾವು ಮೇಲಕ್ಕೆ ತರಲ್ಪಡುವದಕ್ಕಾಗಿ ಕಾಯಲು ಇಷ್ಟಪಡುವದಿಲ್ಲ; ಬದಲಾಗಿ, ನಾವು ತಕ್ಷಣವೇ ಮೇಲಕ್ಕೆ ತರಲ್ಪಡಬೇಕೆಂದು ಬಯಸುತ್ತೇವೆ. ಆದರೆ ನಮ್ಮ ಆತ್ಮೀಕ ಹಿತಕ್ಕಾಗಿ ಏನು ಅಗತ್ಯವೆಂಬದನ್ನು ದೇವರು ಚೆನ್ನಾಗಿ ತಿಳಿದಿರುತ್ತಾನೆ. ನಮ್ಮ ಎಲ್ಲಿಯವರೆಗೆ ಶಿಕ್ಷೆಯು ಅಗತ್ಯವೋ ಅಲ್ಲಿಯವರೆಗೆ ದೇವರು ನಮ್ಮನ್ನು ಶಿಕ್ಷಿಸುತ್ತಲಿರುತ್ತಾನೆ. ನಾವು ದೀನರಾಗಿರುವದಕ್ಕೆ ಕಲಿತುಕೊಂಡ ಬಳಿಕ ಆತನು ನಮ್ಮನ್ನು ಮೇಲಕ್ಕೆ ತರುವನು.

7 ನಾವು ಕಷ್ಟಗಳ ಹಾಗೂ ಸಮಸ್ಯೆಗಳ ಕಾರಣದಿಂದ ಹತಾಶರಾದಾಗ ನಾವು ಚಿಂತೆಗೊಳ್ಳದಿರೋಣ. ನಾವು ನಮ್ಮ ಕಷ್ಟಗಳು ಹಾಗೂ ಸಮಸ್ಯೆಗಳಿಂದ ಮುಕ್ತರಾಗುವದಕ್ಕೆ ಅಶಕ್ತರಾಗಿರಬಹುದು, ಆದರೆ ನಾವು ನಮ್ಮ ಚಿಂತೆಯನ್ನು ತೊಲಗಿಸಿಕೊಳ್ಳಬಲ್ಲೆವು. ನಾವು ನಮ್ಮ ಚಿಂತೆಯನ್ನು ದೇವರಿಗೆ ನೀಡಬಹುದು (ಕೀರ್ತನೆಗಳು 55:22) ದೇವರು ನಮ್ಮನ್ನು ಪೋಷಿಸಿ ಸಂರಕ್ಷಿಸುವನೆಂಬ ಸಂಪೂರ್ಣ ಭರವಸವನ್ನು ಹೊಂದಬಹುದು (ಮತ್ತಾಯ 6:25-34) ಮತ್ತು ನಾವು ನಮ್ಮ

ಚಿಂತೆಯನ್ನು ದೇವರಿಗೆ ಒಪ್ಪಿಸುವಾಗ ಆತನು ನಮಗೆ ಎಲ್ಲಾ ಗ್ರಹಿಕೆಯನ್ನು ಮೀರುವ ಸಮಾಧಾನವನ್ನು ಕೊಡುವನು (ಫಿಲಿಪ್ಪಿ 4:6-7 ಮತ್ತು ವ್ಯಾಖ್ಯಾನ ನೋಡಿರಿ).

**8** ಸ್ವಸ್ಥ ಚಿತ್ತರಾಗಿರಿ, ಎಚ್ಚರವಾಗಿರಿ. ಕ್ರಿಸ್ತನ ಸೇವೆ ಮಾಡುವದಕ್ಕಾಗಿ ನಾವು ಸ್ವಸ್ಥಚಿತ್ತರಾಗಿಯೂ ಕಾರ್ಯಕ್ಕೆ ಸನ್ನದ್ಧರಾಗಿಯೂ ಇರಬೇಕು (1 ಪೇತ್ರ 1:13). ಪರಿಣಾಮಕಾರಿಯಾಗಿ ಪ್ರಾರ್ಥಿಸಬೇಕಾದರೆ ನಾವು ಜಿತೇಂದ್ರಿಯರೂ ಸ್ವಸ್ಥ ಚಿತ್ತವುಳ್ಳವರೂ ಆಗಿರಬೇಕು (1 ಪೇತ್ರ 4:7). ಮತ್ತು ಇಲ್ಲಿ ಪೇತ್ರನು ನಾವು ನಮ್ಮನ್ನು ಸೈತಾನನು ನುಂಗದಂತೆ ನೋಡಿಕೊಳ್ಳಲು ನಾವು ಸ್ವಸ್ಥಚಿತ್ತರಾಗಿಯೂ (ಜಿತೇಂದ್ರಿಯರಾಗಿಯೂ) ಎಚ್ಚರವಾಗಿಯೂ ಇರಬೇಕು ಎಂದು ಹೇಳುತ್ತಾನೆ.

ಸೈತಾನನು ನಮ್ಮನ್ನು ಪಾಪಕ್ಕೂ ಅವಿಧೇಯತ್ವಕ್ಕೂ ನಡಿಸುವದರ ಮೂಲಕ ನಮ್ಮನ್ನು ನುಂಗುವದಕ್ಕೆ ಅಥವಾ ನಾಶಮಾಡುವದಕ್ಕೆ ಪ್ರಯತ್ನಿಸುತ್ತಾನೆ. ಸೈತಾನನು ನಮ್ಮ ಮಧ್ಯದೊಳಗೆ ಕಲಹಗಳನ್ನು ಸೃಷ್ಟಿಸುವದರ ಮೂಲಕ ಮತ್ತು ವಿಶೇಷವಾಗಿ ನಮ್ಮನ್ನು ನಿಂದನೆ ಹಾಗೂ ಚಾಡಿ ಮಾತುಗಳನ್ನಾಡುವಂತೆ[15]. ಪ್ರಚೋದಿಸುವದರ ಮೂಲಕ ನಮ್ಮ ಅನ್ಯೋನ್ಯತೆಯನ್ನು ನಾಶಮಾಡಲು ಪ್ರಯತ್ನಿಸುತ್ತಾನೆ (ಗಲಾತ್ಯ 5:15 ನೋಡಿರಿ). ಎಲ್ಲಕ್ಕಿಂತ ಮೇಲಾಗಿ ಸೈತಾನನು ನಮ್ಮ ನಮ್ಮ ಮನಸ್ಸುಗಳಲ್ಲಿ ಸಂದೇಹ ಹಾಗೂ ಭಯವುಂಟುಮಾಡುವದರ ಮೂಲಕ ನಮ್ಮ ನಂಬಿಕೆಯನ್ನು ಹಾಳುಮಾಡುವದಕ್ಕೆ ಪ್ರಯತ್ನಿಸುತ್ತಾನೆ. ಆತನು ನಮ್ಮ ನಂಬಿಕೆಯನ್ನು ಹಾಳುಮಾಡಲು ಶಕ್ತನಾದರೆ ನಾವು ನಾಶವಾದಂತೆಯೇ. ಸೈತಾನನು ಬಲಿಷ್ಠ ವೈರಿಯಾಗಿದ್ದಾನೆ (ಎಫೆಸ 6:12). ನಾವು ಆತನನ್ನು ನಮ್ಮ ಸ್ವಬಲದಿಂದ ಸೋಲಿಸಬಲ್ಲೆವೆಂದು ನಾವು ಎಂದಿಗೂ ಯೋಚಿಸದಿರೋಣ.

ಆದರೆ ದೇವರು ಮತ್ತು ಕ್ರಿಸ್ತನು ಸೈತಾನನಿಗಿಂತಲೂ ಆತನ ಎಲ್ಲಾ ದುರಾತ್ಮ ಶಕ್ತಿಗಳಿಗಿಂತಲೂ ಬಲಿಷ್ಠರಾಗಿದ್ದಾರೆ (ಎಫೆಸ 6:10-11; 1 ಯೋಹಾನ 4:4). ಸೈತಾನನು ಗರ್ಜಿಸುವ ಸಿಂಹವಾಗಿರಬಹುದು, ಆದರೆ ದೇವರು ಅವನ ಕೊರಳಿಗೆ ಹಗ್ಗವನ್ನು ಕಟ್ಟಿರುತ್ತಾನೆ. ಈ "ಹಗ್ಗದ" ಕಾರಣದಿಂದ ಸೈತಾನನು ದೇವರ ಅಪ್ಪಣೆಯಿಲ್ಲದೆ ಏನನ್ನೂ ಮಾಡಲಾರನು ಅಥವಾ ಎಲ್ಲಿಗೂ ಹೋಗಲಾರನು, ಸೈತಾನನು ದೇವರ ಅನುಮತಿಯ ಮಟ್ಟಿಗೆ ಮಾತ್ರವೇ ಸಮಸ್ಯೆಯನ್ನು ಸೃಷ್ಟಿಸಬಲ್ಲನು, ದೇವರು ತನ್ನ ಸ್ವಂತ ಉದ್ದೇಶಗಳನ್ನು ನೆರವೇರಿಸುವದಕ್ಕಾಗಿ ಸೈತಾನನನ್ನು ಉಪಯೋಗಿಸುತ್ತಾನೆ. ದೇವರು ತನ್ನ ನಂಬಿಗಸ್ಥ ಮಕ್ಕಳನ್ನು ನುಂಗುವಂತೆ ಸೈತಾನನನ್ನು ಎಂದು ಅನುಮತಿಸುವದಿಲ್ಲ. ಆದರೆ ವಿಶ್ವಾಸಿಗಳಾದ ನಾವು ನಮ್ಮ ಪಾತ್ರವನ್ನು ನಿರ್ವಹಿಸಬೇಕು. ನಮ್ಮ ಸಹಕಾರವಿಲ್ಲದೆ ದೇವರು ನಮ್ಮನ್ನು ಕಾಪಾಡಲಾರನು. ಮೊದಲನೆಯದಾಗಿ, ನಾವು ಸ್ವಸ್ಥಚಿತ್ತರಾಗಿಯೂ ಎಚ್ಚರವಾಗಿಯೂ ಇರಬೇಕು. ಎರಡನೆಯದಾಗಿ, ನಾವು ದೇವರ ಚಿತ್ತಕ್ಕೆ ವಿಧೇಯರಾಗಿರಬೇಕು. ಮೂರನೆಯದಾಗಿ, ನಾವು ಶೋಧನೆಯಲ್ಲಿ ಬೀಳದಂತೆ ಎಡಬಿಡದೆ ಪ್ರಾರ್ಥಿಸಬೇಕು (ಮತ್ತಾಯ 6:13; ಮಾರ್ಕ 14:38). ನಾಲ್ಕನೆಯದಾಗಿ, ನಾವು ದೇವರ ಸರ್ವಾಯುಧವನ್ನು ಧರಿಸಿಕೊಳ್ಳಬೇಕು (ಎಫೆಸ 6:13-18. ಮತ್ತು ಅಂತಿಮವಾಗಿ ಮೇಲಿನ ಸಂಗತಿಗಳನ್ನೆಲ್ಲಾ ಮಾಡಿದವರಾಗಿ ನಾವು ನಂಬಿಕೆಯಲ್ಲಿ ದೃಢವಾಗಿ ನಿಂತು ಸೈತಾನನನ್ನು ಎದುರಿಸಬೇಕು (ವಚನ 9). ಮತ್ತು ನಾವು ಸೈತಾನನನ್ನು ಎದುರಿಸುವಾಗ ಆತನು ಓಡಿಹೋಗುವನು (ಯಾಕೋಬನು 4:7).

**9** ನಂಬಿಕೆಯಲ್ಲಿ ದೃಢವಾಗಿದ್ದು ಅವನನ್ನು ಎದುರಿಸಿರಿ. ಒಂದು ಸಂದರ್ಭದಲ್ಲಿ ಪೇತ್ರನು ಸೈತಾನನನ್ನು ಎದುರಿಸಲಿಲ್ಲ. ಅವನ ನಂಬಿಕೆಯು ವಿಫಲವಾಗಿತ್ತು. ಯೇಸು ಪೇತ್ರನಿಗೆ ಹೀಗೆ ಹೇಳಿದ್ದನುಃ "ಸೀಮೋನನೇ, ನಿನ್ನ ನಂಬಿಕೆ ಕುಂದಿಹೋಗಬಾರದೆಂದು ನಾನು ನಿನ್ನ ವಿಷಯದಲ್ಲಿ ದೇವರಿಗೆ ವಿಜ್ಞಾಪನೆಮಾಡಿಕೊಂಡೆನು. ನೀನು ತಿರುಗಿಕೊಂಡ ಮೇಲೆ ನಿನ್ನ ಸಹೋದರರನ್ನು ದೃಢಪಡಿಸು (ಲೂಕ 22:32). ಈಗ ಈ ವಚನದಲ್ಲಿ ಯೇಸು ಹೇಳಿದ್ದನ್ನೇ ಪೇತ್ರನು (ಸೀಮೋನನು) ಮಾಡುತ್ತಿದ್ದಾನೆಃ ಅವನು ತನ್ನ ಸಹೋದರರನ್ನು ಬಲಪಡಿಸುತ್ತಿದ್ದಾನೆ. ಸೈತಾನನ ತಂತ್ರೋಪಾಯಗಳ ಕಾರಣದಿಂದ ಜಗತ್ತಿನಲ್ಲೆಲ್ಲಾ ಕ್ರೈಸ್ತರೆಲ್ಲರೂ ಅದೇ ರೀತಿಯ ಬಾಧೆಗಳನ್ನು ಅನುಭವಿಸುತ್ತಿದ್ದಾರೆ. ನಾವು ಒಬ್ಬರೇ ಬಾಧೆಯನ್ನನುಭವಿಸುತ್ತಿಲ್ಲ. ನಾವು ಒಬ್ಬರನ್ನೊಬ್ಬರು ದೃಢಪಡಿಸಿಕೊಳ್ಳೋಣ.

ಅಂತ್ಯದಲ್ಲಿ, ವಿಶ್ವಾಸಿಗಳು ಯಜ್ಞದ ಕುರಿಯಾದಾತನ (ಕ್ರಿಸ್ತನ) ರಕ್ತದಿಂದಲೂ ತಮ್ಮ ಸಾಕ್ಷಿಯ ವಾಕ್ಯದಿಂದಲೂ ಸೈತಾನನನ್ನು ಜಯಿಸಬಲ್ಲರು; ವಿಶೇಷವಾಗಿ, ತಮ್ಮ ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು ಮರಣಕ್ಕೆ ಹಿಂತೆಗೆಯದವರೇ ಸೈತಾನನ್ನು ಜಯಿಸಿದವರಾಗಿರುತ್ತಾರೆ (ಪ್ರಕಟಣೆ 12:11). ಪೇತ್ರನು ಮರಣಕ್ಕೆ ಹಿಂತೆಗೆಯಲಿಲ್ಲ. ವಾಸ್ತವದಲ್ಲಿ, ಆತನು ಕ್ರಿಸ್ತನಿಗೆ ನಂಬಿಗಸ್ಥನಾ ಗಿ ಸಾಕ್ಷಿ ನೀಡಿದ್ದರ ಕಾರಣದಿಂದ ರೋಮಾಯರ ಮೂಲಕ ಕೊಲ್ಲಲ್ಪಟ್ಟನು. ಬಹುಶಃ ಪೇತ್ರನು ಯಾರಿಗೆ ಈ ಪತ್ರಿಕೆಯನ್ನು ಕಳುಹಿಸಿದನೋ ಅವರಲ್ಲಿ ಕೆಲವರು ಆ ಸಮಯದಲ್ಲಿ ಮರಣವನ್ನು ಎದುರಿಸುವವರಾಗಿದ್ದರು. ಅವರ ನಂಬಿಕೆಯು ಕುಂದಿ ಹೋಗದಿರಲಿ! ಅವರು ಕರ್ತನಲ್ಲಿಯೂ ಆತನ ಅತ್ಯಧಿಕ ಬಲದಲ್ಲಿಯೂ ದೃಢಗೊಳ್ಳಲಿ (ಎಫೆಸ 6:10). ಅವರು ಸಹ ಸೈತಾನನನ್ನು ಜಯಿಸಲಿ (1 ಯೋಹಾನ 4:4).

**10-11** ಈಗ, ಈ ಪತ್ರಿಕೆಯ ಕೊನೆಯಲ್ಲಿ ಪೇತ್ರನು ನಮಗೆ ಬೈಬಲಿನಲ್ಲಿರುವ ಅತಿ ಶ್ರೇಷ್ಠ ವಾಗ್ದಾನಗಳಲ್ಲೊಂದನ್ನು ನೀಡುತ್ತಾನೆಃ ಕ್ರಿಸ್ತನಲ್ಲಿ ನಿಮ್ಮನ್ನು ತನ್ನ ನಿತ್ಯ ಪ್ರಭಾವಕ್ಕೆ ಕರೆದ ಕೃಪಾಪೂರ್ಣನಾದ ದೇವರು ತಾನೇ ನೀವು ಸ್ವಲ್ಪ ಕಾಲ ಬಾಧೆಪಟ್ಟ ಮೇಲೆ ನಿಮ್ಮನ್ನು ಯೋಗ್ಯಸ್ಥಿತಿಗೆ ತಂದು ನೆಲೆಗೊಳಿಸಿ ಬಲಪಡಿಸುವನು. ನಮ್ಮ ದೇವರು ಕೃಪಾಪೂರ್ಣನಾದ ದೇವರು. ನಮ್ಮ ಪರಿಸ್ಥಿತಿಯು ಏನೇ ಆಗಿದ್ದರೂ ನಮ್ಮ ಅಗತ್ಯತೆಯು ಏನೇ ಆಗಿದ್ದರೂ ದೇವರ ಕೃಪೆಯು ನಮಗೆ ಸಾಕಾಗಿರುತ್ತದೆ. ನಮ್ಮ ಕಷ್ಟಗಳು ಕ್ಷಣಮಾತ್ರ ಹಾಗೂ ಹಗುರ ಆಗಿವೆ (2 ಕೊರಿಂಥ 4:17). ದೇವರು ಕ್ರಿಸ್ತನಲ್ಲಿ ನಮ್ಮನ್ನು ತನ್ನ ನಿತ್ಯ ಪ್ರಭಾವಕ್ಕೆ

ಕರೆದಿರುತ್ತಾನೆ. ಪೌಲನು ಬರೆದದ್ದೇನೆಂದರೆಃ ನಿಮ್ಮನ್ನು ಕರೆಯುವವನು ನಂಬಿಗಸ್ಥನು ಆತನು ತನ್ನ ಕಾರ್ಯವನ್ನು ಸಾಧಿಸುವನು (1 ಥೆಸಲೋನಿಕ 5:24).

## ಅಂತಿಮ ವಂದನೆಗಳು (5:12-14)

**12** ಸೀಲನು (ಸಿಲ್ವಾನ ಎಂದು ಸಹ ಕರೆಯಲ್ಪಡುತ್ತಾನೆ). 1 ಥೆಸಲೋನಿಕ 1:1 ಹಾಗೂ 2 ಥೆಸಲೋನಿಕ 1:1ರಲ್ಲಿ ಸಹ ಪ್ರಸ್ತಾಪಿಸಲ್ಪಟ್ಟಿದ್ದಾನೆ. ಈ ಸೀಲನೇ ಪೌಲನ ಎರಡನೆಯ ಸುವಾರ್ತಾಪ್ರಮಾಣದಲ್ಲಿ ಆತನ ಸಂಗಡಿಗನಾಗಿದ್ದನು (ಅ.ಕೃತ್ಯ 15:40; 16; 1-40; 17:1-5).

**13** ಬಾಬೆಲಿನಲ್ಲಿರುವವಳು ಎಂಬದು ರೋಮಾಪುರದಲ್ಲಿರುವ ಸಭೆಯನ್ನು ಸೂಚಿಸುತ್ತದೆ. ಹಳೆ ಒಡಂಬಡಿಕೆಯ ಕಾಲದಲ್ಲಿ ಬಾಬೆಲವು ಒಂದು ದೊಡ್ಡ ರಾಜ್ಯದ (ಆಧುನಿಕ ಇರಾಕಿನ) ರಾಜಾಧಾನಿಯಾಗಿತ್ತು; ಆ ಪಟ್ಟಣವು ತನ್ನ ಕೆಟ್ಟತನ ಹಾಗೂ ಭಕ್ತಿಹೀನತೆಗೆ ಪ್ರಸಿದ್ಧವಾಗಿತ್ತು. ಆದದರಿಂದ, ಹೊಸ ಒಡಂಬಡಿಕೆಯ ಕಾಲದಲ್ಲಿ ಕ್ರೈಸ್ತರು ರೋಮಾಪುರಕ್ಕೆ ಬಾಬೆಲ ಎಂಬ ಹೆಸರನ್ನು ಕೊಟ್ಟರು, ಯಾಕೆಂದರೆ ರೋಮಾಪುರವು ರೋಮಾಯ ಸಾಮ್ರಾಜ್ಯದ ಕೆಟ್ಟ ರಾಜಧಾನಿಯಾಗಿತ್ತು.

ತಿಮೊಥೆಯನು ಹೇಗೆ ಪೌಲನ ಆತ್ಮೀಕ ಮಗನಾಗಿದ್ದನೋ (1 ತಿಮೊಥೆ 1:2) ಹಾಗೆಯೇ ಮಾರ್ಕನು ಪೇತ್ರನ ಆತ್ಮೀಕ ಮಗನಾಗಿದ್ದನು. ಮಾರ್ಕನು ಹೊಸ ಒಡಂಬಡಿಕೆಯಲ್ಲಿನ ಮಾರ್ಕನ ಸುವಾರ್ತೆಯ ಬರಹಗಾರನಾಗಿದ್ದನು. ಮಾರ್ಕನು ಕ್ರಿಸ್ತನ ವಿಷಯವಾದ ಎಲ್ಲಾ ಸಂಗತಿಯನ್ನು ಪೇತ್ರನಿಂದ ತಿಳಿದುಕೊಂಡಿದ್ದನು ಮತ್ತು ಹೀಗೆ ಅತನು ತನ್ನ ಸುವಾರ್ತೆಯನ್ನು ಪೇತ್ರನು ತನಗೆ ಹೇಳಿದ ಸಂಗತಿಗಳಿಗೆ ಅನುಸಾರವಾಗಿ ಬರೆದನು. ಮಾರ್ಕನು ಅ.ಕೃತ್ಯ 12:12, 25 ,15:36-40; ಕೊಲೊಸ್ಸೆ 4:10; 2 ತಿಮೊಥೆ 4:11 ರಲ್ಲಿ ಸಹ ಪ್ರಸ್ತಾಪಿಸಲ್ಪಟ್ಟಿದ್ದಾನೆ.

**14** ಹೊಸ ಒಡಂಬಡಿಕೆಯಲ್ಲಿ ಕ್ರೈಸ್ತರೊಳಗೆ ಒಬ್ಬರನ್ನೊಬ್ಬರು ಮುದ್ದಿಟ್ಟು ವಂದಿಸುವದು ಪದ್ಧತಿಯಾಗಿತ್ತು (ರೋಮ 16:16; 1 ಕೊರಿಂಥ 16:20). ಕ್ರಿಸ್ತನಲ್ಲಿರುವ ನಿಮ್ಮೆಲ್ಲರಿಗೆ ಶಾಂತಿಯಿರಲಿ. ಈ ಲೋಕದಲ್ಲಿ ನಮಗೆ ಬಾಧೆಗಳು ಬರುವವು . ಆದರೆ ಕ್ರಿಸ್ತನಲ್ಲಿ ನಮಗೆ ಶಾಂತಿ (ಸಮಾಧಾನ) ದೊರೆಯುವದು. ಯೇಸು ಹೇಳಿದ್ದೇನೆಂದರೆಃ "ಶಾಂತಿಯನ್ನು ನಿಮಗೆ ಬಿಟ್ಟು ಹೋಗುತ್ತೇನೆ. ನನ್ನಲ್ಲಿರುವ ಶಾಂತಿಯನ್ನು ನಿಮಗೆ ಕೊಡುತ್ತೇನೆ; ಲೋಕವು ಕೊಡುವ ರೀತಿಯಲ್ಲಿ ನಾನು ನಿಮಗೆ ಕೊಡುವದಿಲ್ಲ. ನಿಮ್ಮ ಹೃದಯವು ಕಳವಳಗೊಳ್ಳದಿರಲಿ ಹೆದರದಿರಲಿ. (ಯೋಹಾನ 14:27).

---

## ಟಿಪ್ಪಣಿ

1 ಈ ಪತ್ರಿಕೆಯು ಬರೆಯಲ್ಪಡುವ ವೇಳೆಯೊಳಗೆ ರೋಮಾಯರು ಕ್ರೈಸ್ತರನ್ನು ಕಠಿಣವಾಗಿ ಹಿಂಸಿಸಲು ಪ್ರಾರಂಭಿಸಿದ್ದರು. ಆ ಸಮಯದಲ್ಲಿ ಮೆಡಿಟರಿನಿಯನ್ ಸಮುದ್ರದ ಸುತ್ತಲಿನ ರಾಷ್ಟ್ರಗಳೆಲ್ಲವೂ ರೋಮಾಯ ಸಾಮ್ರಾಜ್ಯದ ಅಧೀನದಲ್ಲಿದ್ದವು .

2 ನಡುವವನ್ನು ಕಟ್ಟಿಕೊಂಡು ಎಂಬ ಮಾತುಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಎಚ್ಚರವಾಗಿರಿ" ಅಥವಾ "ಸ್ವಸ್ಥ ಚಿತ್ತರಾಗಿರಿ" ಎಂದು ಹೇಳುತ್ತವೆ ಇದು ಗ್ರೀಕ್ ಪ್ರತಿಯ ಅಕ್ಷರಶಃ ಭಾಷಾಂತರವಾಗಿದೆ. ತಾತ್ಪರ್ಯದಲ್ಲಿ ಅರ್ಥವು ಒಂದೇ ಆಗಿದೆ.

3 ಗರ್ವ ಹಾಗೂ ಸ್ವಾರ್ಥಕ್ಕಿಂತಲೂ ಹೆಚ್ಚು ಮೂಲವಾದ ಪಾಪವೊಂದು ಇರುತ್ತದೆ, ಅದೇನೆಂದರೆ ಅಪನಂಬಿಕೆ. ಇದು ಎಷ್ಟೊಂದು ಮೂಲ ಪಾಪವೆಂದರೆ ಸಾಮಾನ್ಯವಾಗಿ ಅದು ಇತರ ಪಾಪಗಳೊಂದಿಗೆ ಪಟ್ಟಿ ಮಾಡಲ್ಪಟ್ಟಿರುವದಿಲ್ಲ. ಅಪನಂಬಿಕೆಯು ಮನುಷ್ಯನ ಎಲ್ಲಾ ಪಾಪಗಳಿಗೆ ನಿಜವಾದ ಮೂಲವಾಗಿದೆ. ಹೆಚ್ಚಿನ ಚರ್ಚೆಗಾಗಿ, ರೋಮ 3:10-12ರ ವ್ಯಾಖ್ಯಾನ ಹಾಗೂ ವ್ಯಾಖ್ಯಾನದ ಅಡಿಟಿಪ್ಪಣಿಯನ್ನು ನೋಡಿರಿ.

4 ಮುಖ್ಯವಾದ ಕಲ್ಲು ಎಂಬ ಪದದ ಬದಲಾಗಿ, ಬೈಬಲಿನ ಕೆಲವು ಭಾಷಾಂತರಗಳು "ಮೂಲೆಗಲ್ಲು" ಎಂದು ಹೇಳುತ್ತವೆ. ವಿಷಯವು ಒಂದೇ ಆಗಿದೆ, ಕ್ರಿಸ್ತನು ಸಭೆಯಲ್ಲಿ ಅತಿ ಪ್ರಾಮುಖ್ಯವಾದ "ಕಲ್ಲು" ಆಗಿದ್ದಾನೆ. ಆತನಿಲ್ಲದೆ ಸಭೆಯು ಬಿದ್ದು ಹೋಗುವದು.

5 ಹೇಗಿದ್ದರೂ, ಜನರನ್ನು ಕ್ರಿಸ್ತನ ಬಳಿಗೆ ನಡಿಸುವದಕ್ಕೆ ಸ್ವತಃ ನಮ್ಮ ಒಳ್ಳೇ ನಡವಳಿಕೆ ಮಾತ್ರವೇ ಎಂದಿಗೂ ಸಾಕಾಗುವದಿಲ್ಲ. ಒಂದು ಸಂದರ್ಭದಲ್ಲಿ, ಒಂದಿಲ್ಲಾ ಒಂದು ವಿಧಮಲ್ಲಿ ಒಬ್ಬ ವ್ಯಕ್ತಿಯು ರಕ್ಷಣೆ ಹೊಂದುವದಕ್ಕಾಗಿ ದೇವರ ವಾಕ್ಯವನ್ನು ಸುವಾರ್ತೆಯನ್ನು ಕೇಳಬೇಕು ಅಥವಾ ಓದಬೇಕು (ರೋಮ 10:13-14 ನೋಡಿರಿ).

6 ಇಲ್ಲಿ ಪೇತ್ರನು ವಯಕ್ತಿಕ ಸೇಡು ತಿರಿಸಿಕೊಳ್ಳುವಿಕೆಯ ಕುರಿತು ಮಾತ್ರವೇ ಮಾತಾಡುತ್ತಿದ್ದಾನೆ. ಅಧಿಕಾರಿಗಳು ಆಡಳಿತಗಾರರು, ಹಾಗೂ ಅಧಿಕಾರದಲ್ಲಿರುವ ಇತರರು ತಪ್ಪು ಮಾಡುವವರನ್ನು ಶಿಕ್ಷಿಸಬೇಕು.

7 ದೇವರು ಕೆಟ್ಟವರಿಗೆ ನೀಡುವ ಆಶೀರ್ವಾದಗಳು ಸ್ವಾಭಾವಿಕ ಆಶೀರ್ವಾದಗಳು ಉದಾಹರಣೆಗೆ ಸೂರ್ಯನ ಬೆಳಕು, ಮಳೆ, ಆಹಾರ, ಹಾಗೂ ಕುಟುಂಬ ಎಲ್ಲಾ ಮನುಷ್ಯರಿಗೆ ದೊರೆಯುವ ಈ ಸ್ವಾಭಾವಿಕ ಆಶೀರ್ವಾದಗಳನ್ನು ಹೊರತು ಪಡಿಸಿ ದೇವರು ದುರ್ಮಾರ್ಗಿಗಳನ್ನು ಆಶೀರ್ವಾದಿಸುವದಿಲ್ಲ; ಬದಲಾಗಿ, ಅವರನ್ನು ವಿರೋಧಿಸುತ್ತಾನೆ.

8 ಕ್ರಿಸ್ತನು ತಾನೇ ತನ್ನ ಮರಣವನ್ನು "ದೀಕ್ಷಾಸ್ನಾನ" ಎಂದು ಕರೆದನು (ಮಾರ್ಕ 10:38- 39; ಲೂಕ 12: 50).

9 ಅನ್ಯಜನರು ಕ್ರಿಸ್ತನಂಬಿಕೆಯಿಲ್ಲದೆ ಅನ್ಯರಾಗಿದ್ದಾರೆ.

10 ಹೇಗಿದ್ದರೂ, ಎಲ್ಲಾ ಕ್ರೈಸ್ತರೂ ತಮ್ಮ ನಂಬಿಕೆಯನ್ನು ಅವರ ಸ್ನೇಹಿತರೊಂದಿಗೂ ಸಂಪರ್ಕಕ್ಕೆ ಬರುವವರೆಲ್ಲರೊಂದಿಗೂ ಹಂಚಿಕೊಳ್ಳಲು ಕರೆಯಲ್ಪಟ್ಟಿದ್ದಾರೆ (1 ಪೇತ್ರ 3:15).

11 ಗ್ರೀಕ್ ಪ್ರತಿಯಲ್ಲಿ ಸಂತೋಷಪಡಿರಿ ಎಂಬ ಪದದ ಅರ್ಥವು "ಸಂತೋಷಿಸುತ್ತಾ ಇರ್ರಿ" ಎಂಬದೇ.

12 ದೇವರು ಅವಿಶ್ವಾಸಿಗಳಿಗೆ ಕೊಡುವ ದಂಡನೆಯು ಆತ್ಮೀಕ ನಿತ್ಯಮರಣವೇ. ಇದು ಕೆಲವು ವೇಳೆಗಳಲ್ಲಿ ಎರಡನೆಯ ಮರಣ ಎಂದು ಕರೆಯಲ್ಪಟ್ಟಿದೆ (ಪ್ರಕಟಣೆ 20:14-15 ನೋಡಿರಿ). ಕ್ರಿಸ್ತನ ಮೂಲಕ ವಿಶ್ವಾಸಿಗಳು ಮರಣದಿಂದ ರಕ್ಷಿಸಲ್ಪಟ್ಟಿದ್ದಾರೆ. ವಿಶ್ವಾಸಿಗಳು ಎದುರಿಸುವ ಒಂದೇ ಮರಣವು "ಮೊದಲನೆಯ ಮರಣ: ಆಗಿದೆ, ಅಂದರೆ, ಶಾರೀರಿಕ ಮರಣ.

13 ಗ್ರೀಕ್ ಭಾಷೆಯಲ್ಲಿ ಸಭಾಧ್ಯಕ್ಷರು ಎಂದು ಮೇಲ್ವಿಚಾರಣೆ ಮಾಡುವವನು ಎಂಬ ಅರ್ಥವಾಗಿರುತ್ತದೆ. ಅಂಥ ವ್ಯಕ್ತಿಯು "ಸಭಾಸೇವಕನು" (ಬಿಷೋಪ್) ಎಂದು ಸಹ ಕರೆಯಲ್ಪಟ್ಟಿರುತ್ತಾನೆ.

14 ಗರ್ವವು ಸ್ವಾರ್ಥತನ ಅಥವಾ ಸ್ವಪ್ರೀತಿಗಿಂತಲೂ ಹೆಚ್ಚು ಘೋರವಾದ ಪಾಪವೆಂದು ಹೇಳಲಾಗಿದೆ. ಯಾಕೆಂದರೆ, ನಾವು ನಮ್ಮ ಜೀವಿತಗಳಿಂದ ಎಲ್ಲಾ ಸ್ವಾರ್ಥತೆಯನ್ನು ತೆಗೆದು ಬಿಡುವದಾದರೂ ನಾವು ಆಗಲೂ ಹಾಗೆ ಮಾಡಿದ್ದಕ್ಕೆ ಗರ್ವ ಪಟ್ಟುಕೊಳ್ಳುವೆವು.

15 ಗ್ರೀಕ್ ಭಾಷೆಯಲ್ಲಿ, ಸೈತಾನ ಎಂಬ ಹೆಸರಿನ ಅರ್ಥವು "ನಿಂದನೆಗಾರ" ಅಥವಾ "ಸುಳ್ಳು ಅಪವಾದಿ" ಎಂಬುದೇ (ಸೈತಾನ ಎಂಬುದು ದುಷ್ಟನ ಇಬ್ರಿಯ ಹೆಸರಾಗಿದೆ) ಪ್ರಕಟಣೆ 12:10ರಲ್ಲಿ ಸೈತಾನನು ನಮ್ಮ ಸಹೋದರರ ಮೇಲೆ ತಪ್ಪು ಹೊರಿಸುವವನು ಎಂದು ಕರೆಯಲ್ಪಟ್ಟಿದ್ದಾನೆ.

# ಪೇತ್ರನು ಬರೆದ ಎರಡನೆಯ ಪತ್ರಿಕೆ

## ಪರಿಚಯ

ಯೇಸುವಿನ ಹನ್ನೆರಡು ಮಂದಿ ಮೂಲ ಶಿಷ್ಯರಲ್ಲಿ ಪ್ರಮುಖನು ಅಪೊಸ್ತಲನೂ ಆಗಿರುವ ಪೇತ್ರನು ಈ ಪತ್ರಿಕೆಯಲ್ಲಿ ಸುಮಾರು ಕ್ರಿ.ಶಕ ೬೫ರಲ್ಲಿ ತನ್ನ ಅವಸರ ಕಾಲದ ವೇಳೆ ಬರೆದನು. ಪೇತ್ರನು ಈ ಪತ್ರಿಕೆಯನ್ನು ಮಧ್ಯಪೂರ್ವತ್ಯದ ಕ್ರೈಸ್ತರೆಲ್ಲೆಲ್ಲಾ ಹರಡುತ್ತಿದ್ದ ಸುಳ್ಳು ಬೋಧನೆಯನ್ನು ಖಂಡಿಸುವದಕ್ಕೆ ಬರೆದನು. ರಕ್ಷಣೆಹೊಂದುವದಕ್ಕಾಗಿ ಕ್ರಿಸ್ತನ ವಿಷಯವಾದ ವಿಶೇಷ ಜ್ಞಾನವೊಂದನ್ನು ಹೊಂದಿಕೊಳ್ಳುವದು ಅವಶ್ಯವಾದದ್ದು, ಆದರೆ ಆತನಿಗೆ ವಿಧೇಯರಾಗುವದು ಅಥವಾ ಪರಿಶುದ್ಧ ಜೀವನ ನಡಿಸುವದು ಅಗತ್ಯವಾಗಿರುವದಿಲ್ಲ ಎಂದು ಬೋಧಿಸುತ್ತಿದ್ದ ಸುಳ್ಳು ಬೋಧಕರು ಅನೇಕರಿದ್ದರು. ಈ ಪತ್ರಿಕೆಯಲ್ಲಿ ಪೇತ್ರನ ಮುಖ್ಯ ಬೋಧನೆಯೇನೆಂದರೆ ಭಕ್ತಿಯ ಜೀವಿತವಿಲ್ಲದೆ ಕ್ರಿಸ್ತನ ವಿಷಯವಾದ ಅಂಥ "ಪರಿಜ್ಞಾನವು" ಸುಳ್ಳುಜ್ಞಾನವಾಗಿದೆ ಹೊರತು ನಿಜವಾದದ್ದಲ್ಲ ಎಂಬುದೇ.

## ಹೊರ ರೇಖೆ

ಅ. ಕ್ರೈಸ್ತೀಯ ಸದ್ಗುಣಗಳು (1:1-21)
   1. ಕೃಪೆಯಲ್ಲಿ ಮುಂದೆ ಸಾಗಬೇಕೆಂದು ಕರೆನೀಡಿದ್ದು (1:1-15)
   2. ಕ್ರಿಸ್ತನ ಪ್ರಭಾವ (1:16-21).

ಆ. ಸುಳ್ಳು ಬೋಧಕರು (2:1-22)
   1. ಸುಳ್ಳು ಬೋಧಕರ ವಿರುದ್ಧದ ನ್ಯಾಯತೀರ್ಪುಗಳು (2:1-9)
   2. ಸುಳ್ಳು ಬೋಧಕರ ಗುಣ ಸ್ವಭಾವಗಳು (2:10-22)

ಇ. ಕ್ರಿಸ್ತನ ಎರಡನೆಯ ಬರೋಣ (3:1-18)
   1. ಕ್ರಿಸ್ತನ ಬರೋಣದ ಖಚಿತತೆ (3:1-10).
   2. ಕ್ರಿಸ್ತನ ಬರೋಣದ ನೀತಿ ಪಾಠಗಳು (3:11-18).

## ಅಧ್ಯಾಯ - 1

### ದೇವರ ಕರೆಯುವಿಕೆ ಹಾಗೂ ಆಯ್ಕೆ (1:1-15).

1 ಪೇತ್ರನು ತನ್ನನ್ನು ಸೀಮೋನ ಪೇತ್ರ ಎಂದು ಕರೆದುಕೊಳ್ಳುತ್ತಾನೆ. ಸೀಮೋನ ಆತನ ಯೆಹೂದ್ಯ ಹೆಸರು ಹಾಗೂ ಪೇತ್ರ ಎಂಬದು ಯೇಸು ಸ್ವತಃ ಆತನಿಗೆ ನೀಡಿದ ಕ್ರೈಸ್ತ ಹೆಸರಾಗಿತ್ತು (ಮತ್ತಾಯ 16:17-18; ಮಾರ್ಕ 3:16). ಪೇತ್ರನು ಯೇಸುಕ್ರಿಸ್ತನ ದಾಸನೂ ಅಪೊಸ್ತಲನೂ ಆಗಿದ್ದನು (ರೋಮ 1:1 ನೋಡಿರಿ). ಆತನು ಜೊತೆವಿಶ್ವಾಸಿಗಳಿಗೆ ನಮ್ಮ ದೇವರು ಹಾಗೂ ರಕ್ಷಕನಾದ ಯೇಸುಕ್ರಿಸ್ತನ ನೀತಿಯ ಮೂಲಕ- ನಂಬಿಕೆಯನ್ನು ಹೊಂದಿದವರಿಗೆ ಬರೆಯುತ್ತಿದ್ದಾನೆ. ಇದರ ಮೂಲಕ ನಂಬಿಕೆಯು ದೇವರ ಒಂದು ವರ ಎಂದು ನಾವು ತಿಳಿಯಬಹುದು. ದೇವರು ತಾನು ಕರೆಯುವವರಿಗೆ ನಂಬಿಕೆಯನ್ನು ನೀಡುತ್ತಾನೆ (ಯೋಹಾನ 6:44; ಎಫೆಸ 2:8-9; 2 ಥೆಸಲೋನಿಕ 2:13 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆದರೆ ನಾವು ನಂಬಿಕೆಯನ್ನು ಪಡೆದುಕೊಂಡ ಮೇಲೆ ಅದನ್ನು ಉಪಯೋಗಿಸಬೇಕು-ಅಂದರೆ, ನಾವು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳಬೇಕು; ಇಲ್ಲವಾದರೆ ನಮಗೆ ಆದರಿಂದ ಯಾವ ಪ್ರಯೋಜನವನ್ನೂ ಹೊಂದುವದಿಲ್ಲ (ಯೋಹಾನ 3:16,18, 36).

ಪೇತ್ರನು...... "ನಮ್ಮ ದೇವರು ಹಾಗೂ ರಕ್ಷಕನಾದ ಯೇಸು ಕ್ರಿಸ್ತನು "ಎಂದು ಬರೆಯುತ್ತಾನೆ. ಪೇತ್ರನು ಇಲ್ಲಿ ಯೇಸುವನ್ನು ದೇವರು ಎಂದು ಕರೆಯುತ್ತಾನೆ. ಮತ್ತು ಯೇಸುವು ದೇವರೇ ಆಗಿದ್ದಾನೆ. ಯಾಕೆಂದರೆ ದೇವರು ಯೇಸು ಮತ್ತು ಪವಿತ್ರಾತ್ಮನು ಒಂದೇ ತ್ರೈಯೇಕ ದೇವರಾಗಿದ್ದಾರೆ (ಯೋಹಾನ 10:30 ಮತ್ತು ವ್ಯಾಖ್ಯಾನ ನೋಡಿರಿ).

2 ಪೇತ್ರನು ಇಲ್ಲಿ ತಾನು 1ಪೇತ್ರ 1:2ರಲ್ಲಿ ಬರೆದಿರುವದನ್ನೇ ಪು ನರಾವರ್ತಿಸುತ್ತಾನೆ (ರೋಮ 1:7; ಎಫೆಸ 1:2 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಈ ವಂದನೆಯಲ್ಲಿ ಪೇತ್ರನು ಈ ಮುಂದಿನ ಮಾತುಗಳನ್ನು ಸೇರಿಸುತ್ತಾನೆ: ದೇವರು ಮತ್ತು ನಮ್ಮ ಕರ್ತನಾದ ಯೇಸುವಿನ ವಿಷಯವಾದ ಪರಿಜ್ಞಾನದ ಮೂಲಕ. ಪೇತ್ರನು ಇಲ್ಲಿ ತಿಳಿಸುವ ಈ ಪರಿಜ್ಞಾನವು ದೇವರು ಮತ್ತು ಯೇಸುವಿನ ವಿಷಯವಾದ ನಿಜವಾದ ವೈಯಕ್ತಿಕ ತಿಳುವಳಿಕೆಯಾಗಿದೆ. ಅದರ ಮೂಲಕ ನಾವು ನೂತನ ಜೀವಿತ, ನೂತನ ಬಲ, ಮತ್ತು ನೂತನ ಮನಸ್ಸನ್ನು ಪಡೆಯುತ್ತೇವೆ (ಯೋಹಾನ 17:3; ಫಿಲಿಪ್ಪಿ 3:10 ನೋಡಿರಿ). ಈ ಪರಿಜ್ಞಾನವು ಸುಳ್ಳು ಬೋಧಕರ ಸುಳ್ಳುಪರಿಜ್ಞಾನದಂತೆ ಇರುವದಿಲ್ಲ; ಪೇತ್ರನು ಇವರನ್ನು ವಿರೋಧಿಸಿಯೇ ಈ ಪತ್ರಿಕೆಯನ್ನು ಬರೆಯುತ್ತಿದ್ದಾನೆ. ಕ್ರಿಸ್ತನ ವಿಷಯವಾದ ಪರಿಜ್ಞಾನವನ್ನು ಹೊಂದುವದೆಂದರೆ ಕ್ರಿಸ್ತನನ್ನು ಅರಿಯುವದಾಗಿದೆ ಮತ್ತು ಕ್ರಿಸ್ತನನ್ನು ಅರಿಯುವದೆಂದರೆ ಆತನಿಗೆ ವಿಧೇಯರಾಗುವದೇ (1 ಯೋಹಾನ 2:3). ಆತನನ್ನು ಬಲ್ಲೆನೆಂದು ಹೇಳಿ ಆತನ ಆಜ್ಞೆಗಳನ್ನು ಕೈಕೊಳ್ಳದೆ ನಡೆಯುವವನು ಸುಳ್ಳುಗಾರನಾಗಿದ್ದಾನೆ; ಸತ್ಯವೆಂಬುದು ಅವನಲ್ಲಿ ಇಲ್ಲ (1 ಯೋಹಾನ 2:4). ಕ್ರಿಸ್ತನನ್ನು ನಿಜವಾಗಿಯೂ ತಿಳಿಯುವದೆಂದರೆ ಕ್ರಿಸ್ತನನ್ನು ಸಂಪಾದಿಸಿಕೊಳ್ಳುವದು (ಫಿಲಿಪ್ಪಿ 3:8), ಮತ್ತು ಆತನ ಜೊತೆಯಲ್ಲಿ ಕೃಪೆ ಸಮಾಧಾನ ಹಾಗೂ ಇತರ ಎಲ್ಲಾ ಆಶೀರ್ವಾದಗಳನ್ನು ಪಡೆಯುವದಾಗಿದೆ (ರೋಮ 8:32; ಎಫೆಸ 1-3).

3 ಕ್ರಿಸ್ತನು ಪೇತ್ರನನ್ನೂ ಇತರ ಅಪೊಸ್ತಲರನ್ನು ಕರೆದ ಪ್ರಕಾರವೇ ಆತನು ನಮ್ಮನ್ನು ಕರೆಯುತ್ತಾನೆ. ನಾವು ಆತನ ಪ್ರಭಾವದಿಂದಲೂ, ಗುಣಾತಿಶಯದಿಂದಲೂ ಆತನ ಬಳಿಗೆ ಕರೆಯಲ್ಪಟ್ಟಿದ್ದೇವೆ; ಹಾಗೂ ಸೆಳೆಯಲ್ಪಟ್ಟಿದ್ದೇವೆ (ಯೋಹಾನ 1:14 ನೋಡಿರಿ). ಕ್ರಿಸ್ತನು ನಮ್ಮನ್ನು ಕರೆದ ಬಳಿಕ ನಾವು ಆತನ ಕರೆಯನುಸಾರವಾಗಿ ನಡೆಯುವದಕ್ಕೆ ನಮಗೆ ಅಗತ್ಯವಾದ ಎಲ್ಲವನ್ನೂ ತನ್ನ ದಿವ್ಯ ಶಕ್ತಿಯ ಮೂಲಕ ಕೊಡುವನು (ಎಫೆಸ 3:20-21; 4:1; ಫಿಲಿಪ್ಪಿ 2:13; 4:13 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಮಗೆ ಜೀವಕ್ಕೂ ಭಕ್ತಿಗೂ ಬೇಕಾದ್ದೆಲ್ಲವನ್ನೂ ಆತನು ಕೊಡುತ್ತಾನೆ (1 ಥೆಸಲೋನಿಕ 4:7 ನೋಡಿರಿ).

4 ಇವುಗಳ ಮೂಲಕ- ಅಂದರೆ, ಕ್ರಿಸ್ತನ ಪ್ರಭಾವ ಗುಣಾತಿಶಯಗಳ ಮೂಲಕ (ವಚನ 3)- ಕ್ರಿಸ್ತನು ನಮಗೆ ವಾಗ್ದಾನಗಳನ್ನು ಕೃಪೆ, ಪಾಪಕ್ಷಮಾಪಣೆ, ಪವಿತ್ರಾತ್ಮನ, ನೂತನ ಜೀವನದ, ಹಾಗೂ ದೇವರ ಮಕ್ಕಳಾಗಿ ಸ್ವೀಕರಿಸಲ್ಪಡುವದರ ವಾಗ್ದಾನಗಳನ್ನು ಅನುಗ್ರಹಿಸಿರುತ್ತಾನೆ. ನಾವು ದೈವ ಸ್ವಭಾವದಲ್ಲಿ ಪೌಲನನ್ನು ಹೊಂದುವವರಾಗಬೇಕೆಂದು ಈ ವರಗಳು ನಮಗೆ ಕೊಡಲ್ಪಟ್ಟಿವೆ (ಯೋಹಾನ 1:12; 1 ಯೋಹಾನ 3:2 ನೋಡಿರಿ). ನಾವು ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರರಾಗುತ್ತೇವೆ (1 ಪೇತ್ರ 4:13) ನಾವು ಕ್ರಿಸ್ತನ ಪ್ರಭಾವದಲ್ಲಿ ಪಾಲುಗಾರರಾಗುತ್ತೇವೆ (ಕೊಲೊಸ್ಸೆ 3:4; 1 ಪೇತ್ರ 5:1-10). ಮತ್ತು ಕ್ರಿಸ್ತನ ದೈವ ಸ್ವಭಾವದಲ್ಲಿ ಸಹ ಪಾಲುಗಾರರಾಗುತ್ತೇವೆ (ರೋಮ 8:9; ಗಲಾತ್ಯ 2:20; 1 ಯೋಹಾನ 3:9 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಈಗ ನಾವು ಕ್ರಿಸ್ತನ ದೈವಸ್ವಭಾವದಲ್ಲಿ ಪೌಲನ್ನು ಹೊಂದುವವರಾದ್ದರಿಂದ ಕ್ರಿಸ್ತನು ನಡೆದುಕೊಳ್ಳುವ ರೀತಿಯಲ್ಲಿ ನಾವು ನಡೆದುಕೊಳ್ಳಬೇಕು. ನಾವು ಲೋಕದ ಕೆಟ್ಟತನವನ್ನು ಅದರ ದುರಾಶೆಗಳ ಸಮೇತರಾಗಿ ಬಿಟ್ಟುವರಾಗಿದ್ದು ಕ್ರಿಸ್ತನ ಗುಣಧರ್ಮಗಳನ್ನು ಧರಿಸಿಕೊಳ್ಳಬೇಕು (ಎಫೆಸ 4:20-24 ಮತ್ತು ವ್ಯಾಖ್ಯಾನ ನೋಡಿರಿ).

5-7 ನಾವು ದೇವರ ಮಕ್ಕಳು ಹಾಗೂ ಕ್ರಿಸ್ತನ ಸ್ವಭಾವದಲ್ಲಿ ಪಾಲುಗಾರರು ಆಗಿರುವದಾದರೆ ದಿನದಿಂದ ದಿನಕ್ಕೆ ನಾವು ಕ್ರಿಸ್ತನಂತಾಗುತ್ತಾ ಬೆಳೆಯಬೇಕು. ನಾವು ನಮ್ಮ ಆತ್ಮೀಕ ಸ್ಥಿತಿಯ ವಿಷಯದಲ್ಲಿ ತೃಪ್ತರಾಗುಳಿಯದೆ ನಿರಂತರವಾಗಿ ಎದೆ

ಬೊಗ್ಗಿದವರಾಗಿ ಓಡುತ್ತಾ ಇರಬೇಕು (ಫಿಲಿಪ್ಪಿ 3:12-14). ನಾವು ಕ್ರಿಸ್ತನ ಪರಿಪೂರ್ಣತೆಯೆಂಬ ಪೂರ್ಣಪ್ರಮಾಣವನ್ನು ಮುಟ್ಟುವತನಕ ಓಡುತ್ತಾ ಇರಬೇಕು (ಎಫೆಸ 4:13).

ಪೇತ್ರನು 5-7 ವಚನಗಳಲ್ಲಿ ನಮ್ಮ ಜೀವಿತಗಳೊಳಗೆ ಹೆಚ್ಚಾಗುತ್ತಾ ಇರಬೇಕಾದ ಕ್ರಿಸ್ತನ ಕೆಲವೊಂದು ಗುಣ ಧರ್ಮಗಳನ್ನು ಬಣ್ಣಿಸುತ್ತಾನೆ. ಆತನು ಪ್ರಸ್ತಾಪಿಸುವ ಮೊದಲನೆಯ ಸಂಗತಿಯು ನಂಬಿಕೆ. ನಂಬಿಕೆಯು ಯಾವಾಗಲೂ ನಮ್ಮ ಕ್ರೈಸ್ತ ಜೀವಿತಗಳ ಮೊದಲ ಹೆಜ್ಜೆಯಾಗಿರುತ್ತದೆ. ನಂಬಿಕೆಯು ಇತರ ಎಲ್ಲಾ ಕ್ರೈಸ್ತೀಯ ಗುಣಧರ್ಮಗಳ ಅಸ್ತಿವಾರವಾಗಿದೆ. ಅದರ ನಂತರ ಒಳ್ಳೇತನ (ಸದ್ಗುಣ) ಇದನ್ನು ಪೇತ್ರನು ಈಗಾಗಲೇ 3ನೇ ವಚನದಲ್ಲಿ ಕ್ರಿಸ್ತನ ಗುಣಧರ್ಮಗಳಲ್ಲಿ ಒಂದನ್ನಾಗಿ ಪ್ರಸ್ತಾಪಿಸಿರುತ್ತಾನೆ. ನಂತರ ಜ್ಞಾನ ಇದರ ಮೂಲಕ ಒಳ್ಳೇದು ಮತ್ತು ಕೆಟ್ಟದನ್ನು ವಿವೇಚಿಸಬಲ್ಲೆವು (ಇಬ್ರಿಯ 5:11-14). ಕ್ರಿಸ್ತನ ಜ್ಞಾನದ ಮೂಲಕ ನಾವು ಕೃಪೆ ಹಾಗೂ ಸಮಾಧಾನವನ್ನು (ವಚನ 2), ಮತ್ತು ಜೀವಕ್ಕೂ ಭಕ್ತಿಗೂ ಅಗತ್ಯವಾದದ್ದೆಲ್ಲವನ್ನೂ ನಾವು ಪಡೆದುಕೊಳ್ಳುತ್ತೇವೆ (ವಚನ 3). ನಾವು ದೇವರ ಮತ್ತು ಕ್ರಿಸ್ತನ ವಿಷಯವಾದ ನಮ್ಮ ಜ್ಞಾನದಲ್ಲಿ ನಿರಂತರವಾಗಿ ಬೆಳೆಯಬೇಕು (ಕೊಲೊಸ್ಸೆ 1:10).

ತರುವಾಯ 6ನೇ ವಚನದಲ್ಲಿ ಪೇತ್ರನು ದಮೆಯನ್ನು ಪ್ರಸ್ತಾಪಿಸುತ್ತಾನೆ (ಗಲಾತ್ಯ 5:23; 1 ಪೇತ್ರ 1:13; 4:7; 5:8 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಅದರ ನಂತರ ತಾಳ್ಮೆ ಬರುತ್ತದೆ. ಇದು ನಮ್ಮ ನಂಬಿಕೆಗೆ ಹೊರಗಿನ ಸಾಕ್ಷಿಯಾಗಿದೆ (ಮಾರ್ಕ 13:13; ಗಲಾತ್ಯ 5:22; ರೋಮ 5:3, ಇಬ್ರಿಯ 12:2; ಯಾಕೋಬ 1:2-4; 1 ಪೇತ್ರ 1:6-7 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಂತರ ಪೇತ್ರನು ಭಕ್ತಿಯನ್ನು ಪ್ರಸ್ತಾಪಿಸುತ್ತಾನೆ.

ಭಕ್ತಿಯ ಜೊತೆಯಲ್ಲಿ ಸಹೋದರ ಸ್ನೇಹ (ವಚನ 7) ಇರಬೇಕು. ಯಾವನಾದರೂ ನಾನು ದೇವರನ್ನು ಪ್ರೀತಿಸುತ್ತೇನೆ ಎಂದು ಹೇಳಿ ತನ್ನ ಸಹೋದರನನ್ನು ತಪ್ಪಾಗಿ ನಡಿಸಿಕೊಳ್ಳುವದಾದರೆ ಅವನು ಸುಳ್ಳುಗಾರನು (1 ಯೋಹಾನ 4:20) ಸಹೋದರ ಸ್ನೇಹ ಅಥವಾ ಪ್ರೀತಿಯು ನಿಜವಾಗಿಯೂ ನಾವು ಕ್ರಿಸ್ತನ ಶಿಷ್ಯರು ಎಂಬದಕ್ಕಾಗಿ ಮುಖ್ಯ ಗುರುತು ಅಥವಾ ಮುಖ್ಯ ಸಾಕ್ಷಿಯಾಗಿರುತ್ತದೆ (ಯೋಹಾನ 13:35). ಸಹೋದರ ಪ್ರೀತಿಯೆಂದರೆ ನಾವು ಒಬ್ಬರೊಬ್ಬರ ಭಾರಗಳನ್ನು ಹೊತ್ತುಕೊಳ್ಳುವದಾಗಿದೆ (ಗಲಾತ್ಯ 6:2). ಮತ್ತು ನಾವು ಪ್ರೀತಿಯಲ್ಲಿ ಒಬ್ಬರನ್ನೊಬ್ಬರು ಸಹಿಸಿಕೊಳ್ಳುವದಾಗಿದೆ (ಎಫೆಸ 4:2). ನಾವು ಸಭೆಯ ಹೊರಗಿನವರನ್ನು ಪ್ರೀತಿಸುವದಕ್ಕಿಂತ ಮುಂಚೆ ಸಭೆಯೊಳಗಿನ ನಮ್ಮ ಜೊತೆ ವಿಶ್ವಾಸಿಗಳನ್ನು ಪ್ರೀತಿಸುವದು ಅವಶ್ಯಕವಾಗಿರುತ್ತದೆ (ಯೋಹಾನ 13:34; ರೋಮ 12:10; 1 ಥೆಸಲೋನಿಕ 4:9-10; ಇಬ್ರಿಯ 13; 1, 1 ಪೇತ್ರ 1:22). ಅಂತಿಮವಾಗಿ, ಎಲ್ಲಾ ಗುಣಧರ್ಮಗಳಿಗಿಂತಲೂ ಶ್ರೇಷ್ಠವಾದದ್ದು ಪ್ರೀತಿ– ದೇವರಿಗಾಗಿ ಮತ್ತು ಎಲ್ಲಾ ಜನರಿಗಾಗಿ ಪ್ರೀತಿ ಈ ಪ್ರೀತಿಯು ಜೊತೆ ವಿಶ್ವಾಸಿಗಳಾಗಿ ಮಾತ್ರವಲ್ಲ; ಅದು ಪ್ರತಿಯೊಬ್ಬರಿಗಾಗಿ, ಅಂತೂ ಕೆಟ್ಟವರಿಗೂ ನಮ್ಮ ವೈರಿಗಳಿಗಾಗಿಯೂ ಇರುತ್ತದೆ (ಮತ್ತಾಯ 5:44; ಮಾರ್ಕ 12:30-31; 1 ಕೊರಿಂಥ 13:13; ಕೊಲೊಸ್ಸೆ 3:14). ಈ ಪ್ರೀತಿಯು ಸಂಪೂರ್ಣ ಸ್ವಾರ್ಥರಹಿತವಾದದ್ದು ಇದು ಒಂದು ಆತ್ಮೀಕ ಪ್ರೀತಿಯಾಗಿದೆ. ಈ ಪ್ರೀತಿಯು ಇನ್ನೊಬ್ಬ ವ್ಯಕ್ತಿಗೆ ಅವನ ಯೋಗ್ಯತೆಗನುಸಾರವಾಗಿ ಅಥವಾ ಆ ವ್ಯಕ್ತಿಯು ನಮಗೋಸ್ಕರ ಏನು ಮಾಡಬಲ್ಲನು ಎಂಬುದರ ಅನುಸಾರವಾಗಿಯಾಗಲಿ ತೋರಿಸಲ್ಪಡುವದಿಲ್ಲ. ದೇವರು ಮೊದಲು ನಮ್ಮ ಮೇಲೆ ತೋರಿಸಿದ್ದು ಈ ವಿಧದ ಪ್ರೀತಿಯೇ (ಯೋಹಾನ 3:16), ಮತ್ತು ಆದದರಿಂದ ನಾವು ಸಹ ಈ ವಿಧದ ಪ್ರೀತಿಯನ್ನೇ ಇತರರಿಗೆ ತೋರಿಸಬೇಕು (1 ಯೋಹಾನ 3:16).

**8-9** ಪೇತ್ರನು 5-7 ವಚನಗಳಲ್ಲಿ ಪ್ರಸ್ತಾಪಿಸಿರುವ ಗುಣಧರ್ಮಗಳು ನಮ್ಮಲ್ಲಿ ನಿರಂತರವಾಗಿ ಬೆಳೆಯುತ್ತಿರಬೇಕು. ನಾವು ಆತ್ಮೀಕವಾಗಿ ಬೆಳೆಯುತ್ತಾ ಹೋಗದಿದ್ದರೆ ಆತ್ಮೀಕವಾಗಿ ಒಣಗಿಹೋಗುತ್ತೇವೆ. ಒಂದು ಗಿಡವು ಬೆಳೆಯುತ್ತದೆ ಇಲ್ಲವೆ ಒಣಗುತ್ತದೆ; ಅದು ಒಂದೇ ರೀತಿಯಾಗಿ ಉಳಿಯಲು ಸಾಧ್ಯವಿಲ್ಲ. ಕ್ರೈಸ್ತರ ವಿಷಯದಲ್ಲಿಯೂ ಹಾಗೆಯೇ ಒಂದು ಸಸಿಯು ಕಳೆಯಿಂದ (ಹಣಜಿ) ಬೆಳೆಯದಂತೆ ಅಡಗಿಸಲ್ಪಡಲೂಬಹುದುಃ ಅದೇ ರೀತಿಯಲ್ಲಿ ಕ್ರೈಸ್ತರು ಸಹ ಲೋಕದ ಚಿಂತೆಗಳು ಹಾಗೂ ಆಶೆಗಳ ನಿಮಿತ್ತ ಆತ್ಮೀಕವಾಗಿ ಬೆಳೆಯದಂತೆ ಅಡಗಿಸಲ್ಪಡಬಹುದು; ಮತ್ತು ಹೀಗೆ ನಿಷ್ಫಲರು ಆಗಬಹುದು (ಮಾರ್ಕ 4:7, 18-19).

ಆದದರಿಂದ, ನಾವು ದೇವರಿಗಾಗಿ ಹೆಚ್ಚು ಫಲಕೊಡುವವರಾಗುವಂತೆ ಈ ಗುಣಧರ್ಮಗಳನ್ನು ನಮ್ಮ ಜೀವಿತಗಳಲ್ಲಿ ಹೆಚ್ಚಿಸಿಕೊಳ್ಳುವದಕ್ಕೆ ಪ್ರಯಾಸಪಡೋಣ. ಯಾಕೆಂದರೆ, ನಾವು ದೇವರಿಗಾಗಿ ಫಲವನ್ನು ಕೊಡುವದರ ಮೂಲಕವೇ ಆತನಿಗೆ ಹೆಚ್ಚಾಗಿ ಮೆಹಿಮೆ ತರುತ್ತೇವೆ (ಯೋಹಾನ 15:8).

ಈ ಗುಣಧರ್ಮಗಳನ್ನು ಹೊಂದದಿರುವ ಕ್ರೈಸ್ತನು ಆತ್ಮೀಕವಾಗಿ ಕುರುಡನಾಗಿದ್ದಾನೆ. ಆತನು ದೂರದೃಷ್ಟಿಯಿಲ್ಲದವನು (ಸಮೀಪ ದೃಷ್ಟಿಯವನು). ಆತನು ಲೋಕದ ಸಮೀಪದ ಸಂಗತಿಗಳನ್ನು ಮಾತ್ರವೇ ನೋಡಬಲ್ಲನು, ಆದರೆ ಪರಲೋಕದ ಸಂಗತಿಗಳನ್ನಲ್ಲ. ಅಂಥ ಕ್ರೈಸ್ತನು ತಾನು ನೂತನ ಸೃಷ್ಟಿಯಾಗಿದ್ದಾನೆ (2 ಕೊರಿಂಥ 5:17), ಎಂಬದನ್ನು ಮರೆತುಬಿಟ್ಟಿದ್ದಾನೆ; ಆತನು ತನ್ನ ಹಿಂದಣ ಪಾಪಗಳು ಪರಿಹಾರವಾಗಿ ಶುದ್ಧನಾದದ್ದನ್ನು ಮರೆತು ಬಿಟ್ಟಿದ್ದಾನೆ (1 ಕೊರಿಂಥ 6:9-11 ನೋಡಿರಿ).

**10-11** ಆದದರಿಂದ ........... ದೇವರು ನಿಮ್ಮನ್ನು ಕರೆದದ್ದನ್ನೂ ಆದುಕೊಂಡದ್ದನ್ನೂ ದೃಢಪಡಿಸಿಕೊಳ್ಳುವದಕ್ಕೆ ಮತ್ತಷ್ಟು ಪ್ರಯಾಸಪಡಿರಿ. ನಮ್ಮ ರಕ್ಷಣೆಯ ಕಾರ್ಯದಲ್ಲಿ ದೇವರ ಪಾತ್ರವಿರುತ್ತದೆ ಹಾಗೂ ನಮಗೆ ಒಂದು ಪಾತ್ರವಿರುತ್ತದೆ. ದೇವರು ಮೊದಲು ನಮ್ಮನ್ನು ಕರೆಯಬೇಕು ಮತ್ತು ಆದುಕೊಳ್ಳಬೇಕು (ಯೋಹಾನ 6:44; ರೋಮ 8:29-30; 9:18; ಎಫೆಸ

1:4-5 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆದರೆ ಅದರ ನಂತರ ನಾವು ನಮ್ಮ ಕರೆಯುವಿಕೆ ಹಾಗೂ ಆದುಕೊಳ್ಳುವಿಕೆಯನ್ನು ದೃಢಪಡಿಸಿಕೊಳ್ಳಬೇಕು. ದೇವರು ನಮಗೆ ನಂಬಿಕೆಯನ್ನು ಕೊಡುತ್ತಾನೆ (ವಚನ 1), ಆದರೆ ನಾವು ಆ ನಂಬಿಕೆಯನ್ನು ತೆಗೆದುಕೊಂಡು ಯೇಸುವಿನ ಮೇಲೆ ಇಡಬೇಕು. ದೇವರು ನಮ್ಮನ್ನು ಕರೆಯುತ್ತಾನೆ ಆದರೆ ತರುವಾಯ ನಾವು ಆ ಕರೆಗೆ ಯೋಗ್ಯರಾಗಿ ನಡೆದುಕೊಳ್ಳಬೇಕು (ಎಫೆಸ 4:1). ನಾವು ಮನೋಭೀತಿಯಿಂದ ನಡುಗುವವರಾಗಿ (ನಮ್ಮ) ರಕ್ಷಣೆಯನ್ನು ಸಾಧಿಸಿಕೊಳ್ಳಬೇಕು. (ಫಿಲಿಪ್ಪಿ 2:12-13). ನಾವು ಈ ಸಂಗತಿಗಳನ್ನು ಮಾಡುವದಾದರೆ ಎಂದಿಗೂ ಎಡಹುವದಿಲ್ಲ; ಅಂದರೆ, ನಾವು ನಮ್ಮ ರಕ್ಷಣೆಯನ್ನು ಕಳೆದುಕೊಳ್ಳುವದಿಲ್ಲ. ನಾವು ಕಾಲಕಾಲಕ್ಕೆ ಎಡವಿ ಮಾರ್ಗ ತಪ್ಪಬಹುದು (ಯಾಕೋಬ 3:2) ಆದರೆ, ನಾವು ಸಂಪೂರ್ಣವಾಗಿ ಬಿದ್ದು ಹೋಗುವದಿಲ್ಲ, ಅದು ಮಾತ್ರವಲ್ಲದೆ, ನಾವು ಹೀಗೆ ಮಾಡುವದಾದರೆ ನಮ್ಮ ಕರ್ತನ ನಿತ್ಯ ರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದಾರಾಳವಾದ ಸ್ವಾಗತ ಪಡೆಯುವೆವು (ವಚನ 11). ನಾವು ದೇವರ ರಾಜ್ಯದಲ್ಲಿ –ಪೌಲನು 1 ಕೊರಿಂಥ 3:14-15ರಲ್ಲಿ ಪ್ರಸ್ತಾಪಿಸುವ ಮನುಷ್ಯನಂತೆ ಕೇವಲ ಕಷ್ಟಪಟ್ಟು ಪ್ರವೇಶಿಸುವದಿಲ್ಲ, ಆ ಮನುಷ್ಯನ ಕೆಲಸವು ಸುಟ್ಟು ಹೋಗಿ ಅವನು ಮಾತ್ರವೇ ಬೆಂಕಿಯೊಳಗಿಂದ ತಪ್ಪಿಸಿಕೊಂಡವನಾಗಿರುತ್ತಾನಷ್ಟೇ. ನಾವು ಆತನ ಹಾಗಲ್ಲ, ದೇವರ ರಾಜ್ಯದಲ್ಲಿ ನಮಗೆ ಅದ್ದೂರಿ ಸ್ವಾಗತ ದೊರೆಯುತ್ತದೆ. ನಾವು ಕೀರ್ತಿ, ಪ್ರಭಾವ, ಮಾನಗಳಿಂದ ಪ್ರವೇಶಿಸುವೆವು (1 ಪೇತ್ರ 1:7).

**12-14** ಕ್ರೈಸ್ತರಿಗೆ ಬೈಬಲ್ ಸತ್ಯಗಳ ಹಾಗೂ ಶ್ರೇಷ್ಠ ಸಿದ್ಧಾಂತಗಳ ಕುರಿತು ನಿರಂತರವಾಗಿ ಜ್ಞಾಪಕಪಡಿಸುವ ಅಗತ್ಯವಿರುತ್ತದೆ. ಆದದರಿಂದ, ಪೇತ್ರನು ತಾನು ಜೀವಿಸುವ ತನಕ ತನ್ನ ಸಹೋದರರನ್ನು ದೃಢಪಡಿಸುವದನ್ನು ಕ್ರಿಸ್ತನ ಸಂಗತಿಗಳನ್ನು ಅವರಿಗೆ ಜ್ಞಾಪಕಪಡಿಸುವದನ್ನೂ ಮುಂದುವರೆಸುತ್ತಾನೆ. ಆದರೆ ಪೇತ್ರನು ಈ ಪತ್ರಿಕೆಯನ್ನು ಬರೆಯುತ್ತಿರುವ ಹಾಗೆ ಆತನ ಮರಣವು ಹತ್ತಿರವಾಗಿದೆ. ಅವನು ತನ್ನ ದೇಹವನ್ನು ಗುಡಾರ ಎಂದು ಕರೆಯುತ್ತಾನೆ ಅದು ಕಿತ್ತು ಹಾಕಲ್ಪಡುವದರಲ್ಲಿತ್ತು (2 ಕೊರಿಂಥ 5:1 ನೋಡಿರಿ). ಯೇಸು ಪೇತ್ರನಿಗೆ ಅವನು ಸಹ ತನ್ನ ಹಾಗೆಯೇ ಶಿಲುಬೆಗೆ ಹಾಕಲ್ಪಡುವನೆಂದು ಹೇಳಿದಾಗ್ಯು (ಯೋಹಾನ 21:18-19). ಪೇತ್ರನು ಮರಣಕ್ಕೆ ಭಯವನ್ನು ತೋರಿಸುವದಿಲ್ಲ. ಯಾಕೆಂದರೆ ಪೇತ್ರನಿಗಾದರೋ ಮರಣವು ದೇವರ ನಿತ್ಯ ರಾಜ್ಯಕ್ಕೆ ಪ್ರವೇಶಿಸುವ ದ್ವಾರವಾಗಿತ್ತು.

**15** ಪೇತ್ರನು ತಾನು ಕ್ರಿಸ್ತನ ಕುರಿತು ತಿಳಿದಿದ್ದ ವಿಷಯಗಳನ್ನು ಮಾರ್ಕನಿಗೆ ಹೇಳಿದನು. ತರುವಾಯ ಮಾರ್ಕನು ತಾನು ಪೇತ್ರನಿಂದ ಕಲಿತಿದ್ದ ವಿಷಯಕ್ಕನುಸಾರವಾಗಿ ಹೊಸ ಒಡಂಬಡಿಕೆಯ ಮಾರ್ಕನ ಸುವಾರ್ತೆಯನ್ನು ಬರೆದನು.

ಹೀಗೆ ಮಾರ್ಕನು ಸುವಾರ್ತೆಯ (ಮತ್ತು ಪೇತ್ರನೇ ಬರೆದ ಎರಡು ಪತ್ರಿಕೆಗಳ) ಮೂಲಕ ಪೇತ್ರನು ಕ್ರೈಸ್ತರಿಗೆ ಇವು ಗಳನ್ನು ಯಾವಾಗಲೂ ಜ್ಞಾಪಕಮಾಡಿಕೊಳ್ಳಲು ಸಾಧ್ಯವಾಗುವಂತೆ ದಾರಿಮಾಡಿದನು.

## ಕ್ರಿಸ್ತನ ಪ್ರಭಾವ (1:16-21)

**16** ಪೇತ್ರನು ಈ ಪತ್ರಿಕೆಯನ್ನು ಬರೆಯುವಾಗ ಸುಳ್ಳು ಬೋಧಕರು ಎದ್ದು ತಮಗೆ ಕ್ರಿಸ್ತನ ವಿಷಯವಾದ ವಿಶೇಷ "ಜ್ಞಾನವು" ದೊರೆತಿದೆ ಎಂದು ಹೇಳಿಕೊಳ್ಳುತ್ತಿದ್ದರು. ಆದರೆ ಪೇತ್ರನ ಪ್ರಕಾರವಾಗಿ ಅವರ ಜ್ಞಾನವು ಚಮತ್ಕಾರದಿಂದ ಕಲ್ಪಿಸಿದ ಕಥೆಗಳನ್ನು ಒಳಗೊಂಡಿತ್ತು. ಆದರೆ ಪೇತ್ರನ ಜ್ಞಾನವು ಕಲ್ಪಿಸಿದ ಜ್ಞಾನವಾಗಿರಲಿಲ್ಲ; ಪೇತ್ರನು ಮಾತಾಡಿದ ಸಂಗತಿಗಳು ಅವನು ಸ್ವತಃ ಕಣ್ಣಾರೆ ಕಂಡ ಹಾಗೂ ತನ್ನ ಕಿವಿಯಾರೆ ಕೇಳಿದವು ಗಳಾಗಿದ್ದವು . ಯೇಸು ಪರ್ವತದ ಮೇಲೆ ರೂಪಾಂತರಗೊಂಡಾಗ ಆತನ ಮಹತ್ತನ್ನು (ಮಹಿಮೆಯನ್ನು) ಪೇತ್ರನು ಕಂಡಿದ್ದನು (ಮಾರ್ಕ 9:2-8). ಯೇಸು ತನ್ನ ಮಗನು ಎಂದು ದೇವರು ನುಡಿದದ್ದನ್ನು ಪೇತ್ರನು ಕೇಳಿದ್ದನು.

ಪೇತ್ರನು ಇಲ್ಲಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಕ್ತಿಯನ್ನೂ ಪ್ರತ್ಯಕ್ಷತೆಯನ್ನೂ ಎಂದು ಪ್ರಸ್ತಾಪಿಸುವಾಗ ಆತನು ಪರ್ವತದ ಮೇಲೆ ಯೇಸು ಹೊಂದಿದ ರೂಪಾಂತರವನ್ನು ಅಥವಾ ಲೋಕಾಂತ್ಯದಲ್ಲಿನ ಆತನ ಎರಡನೆಯ ಬರೋಣ ಅಥವಾ ಎರಡನ್ನೂ ಸೂಚಿಸುತ್ತಿರಬಹುದು. ಪೇತ್ರನ ಮನಸ್ಸಿನಲ್ಲಿ, ಯೇಸು ಪರ್ವತದಲ್ಲಿ ಪೇತ್ರ, ಯಾಕೋಬ ಹಾಗೂ ಯೋಹಾನರ ಎದುರಿನಲ್ಲಿ ಪ್ರತ್ಯಕ್ಷನಾದ ಪ್ರಕಾರವೇ ತನ್ನ ಎರಡನೆಯ ಬರೋಣದಲ್ಲಿ ಪ್ರತ್ಯಕ್ಷನಾಗುವ ಹಾಗಿತ್ತು.

ಮಾರ್ಕನ ಸುವಾರ್ತೆಯಲ್ಲಿ ಯೇಸುವಿನ ರೂಪಾಂತರದ ವಿಷಯದಲ್ಲಿನ ಮಾರ್ಕನ ದಾಖಲೆಗಿಂತ ಮುಂಚಿತವಾಗಿ ಯೇಸುವಿನ ಎರಡನೆಯ ಬರೋಣವು ಪ್ರಾಂಭದಲ್ಲಿಯೇ ಪ್ರಸ್ತಾಪಿಸಲ್ಪಟ್ಟಿದೆ (ಮಾರ್ಕ 9:1 ). ಹೀಗೆ ಪೇತ್ರ ಮತ್ತು ಯಾಕೋಬ ಇಬ್ಬರ ಮನಸ್ಸಿನಲ್ಲಿಯೂ ಈ ಎರಡು ಘಟನೆಗಳು ಒಂದಕ್ಕೊಂದು ಸಂಬಂಧಹೊಂದಿರುವಂತೆ ತೋರುತ್ತದೆ.

**17-18** ದೇವರು ಮೇಘದೊಂದಿಗೆ ಪರ್ವತದ ಮೇಲೆ ಇಳಿದು ಬಂದು ಕ್ರಿಸ್ತನಿಗೆ ಘನಮಾನಗಳನ್ನು ನೀಡಿದನು (ಮಾರ್ಕ 9:7 ನೋಡಿರಿ). ಪೇತ್ರನು ತಾನು ಆ ಸಮಯದಲ್ಲಿ ನೋಡಿದ ಹಾಗೂ ಕೇಳಿದ್ದ ವಿಷಯವನ್ನು ಎಂದಿಗೂ ಮರೆಯಲಿಲ್ಲ. ಆ ಸಮಯದಲ್ಲಿಯೇ ಪೇತ್ರನು ಯೇಸುವಿನ ವಿಷಯವಾಗಿ ಆತನು ದೇವಕುಮಾರನೂ ನಿತ್ಯಕ್ಕೂ ಇರುವ ರಾಜ್ಯದ ರಾಜನೂ, ಎಂಬ ಸ್ವಲ್ಪ ಜ್ಞಾನವನ್ನು ಹೊಂದಿಕೊಂಡನು (ಕೀರ್ತನೆಗಳು 2:7; ದಾನಿಯೇಲ 7:13-14).

**19** ಹಳೆ ಒಡಂಬಡಿಕೆಯ ಪ್ರವಾದಿಗಳು ಕ್ರಿಸ್ತನ ವಿಷಯವಾಗಿ ಅನೇಕ ಪ್ರವಾದನೆಗಳನ್ನು ನುಡಿದಿದ್ದರು. ಕ್ರಿಸ್ತನು ಭೂಲೋಕದಲ್ಲಿನ ತನ್ನ ಜೀವಿತದ ವೇಳೆ ಆ ಎಲ್ಲಾ ಪ್ರವಾದನೆಗಳನ್ನು ನೆರವೇರಿಸಿದನು. ಹೀಗೆ ಕ್ರಿಸ್ತನು ತನ್ನ ಜೀವಿತದ

ಮೂಲಕ ಪ್ರವಾದಿಗಳ ವಾಕ್ಯವನ್ನು ಮತ್ತೂ ದೃಢಪಡಿಸಿದನು; ಅಂದರೆ, ಪ್ರವಾದಿಗಳು ತನ್ನ ಕುರಿತು ಹೇಳಿದ್ದೇಲ್ಲವನ್ನೂ ಆತನು ಖಚಿತ ಪಡಿಸಿದನು. ಪ್ರವಾದಿಗಳು ಮೆಸ್ಸೀಯನ ರಕ್ಷಕನೊಬ್ಬನ ಬರೋಣದ ಕುರಿತು ಪ್ರವಾದಿಸಿದ್ದರು; ಮತ್ತು ಯೇಸುಕ್ರಿಸ್ತನೇ ಆ ಮೆಸ್ಸೀಯನು, [1]ರಕ್ಷಕನು ಆಗಿದ್ದನು. ಆದದರಿಂದ, ನಾವು ಬೈಬಲಿನ ಹಳೆ ಒಡಂಬಡಿಕೆಗೂ ಹೊಸ ಒಡಂಬಡಿಕೆಗೂ ಹೆಚ್ಚು ಲಕ್ಷ್ಯವನ್ನು ಕೊಡಬೇಕಾದ ಅಗತ್ಯವಿರುತ್ತದೆ. ನಾವು ಈ ಕತ್ತಲೆಯ ಲೋಕದಲ್ಲಿ ಪ್ರವಾಸಿಗಳೂ ಪರದೇಶಸ್ಥರೂ ಮಾತ್ರವೇ ಆಗಿದ್ದೇವೆ (1 ಪೇತ್ರ 1:1;2:11) ಮತ್ತು ಬೈಬಲ್ ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪದಂತೆ ಇರುತ್ತದೆ (ಕೀರ್ತನೆಗಳು 119:105). ಆದದರಿಂದ, ನಮ್ಮ ಹೃದಯದೊಳಗೆ ಬೆಳ್ಳಿಯ (ಉದಯ) ನಕ್ಷತ್ರವು ಮೂಡಿ ಅರುಣೋದಯವಾಗುವ ಪರ್ಯಂತರ –ಅಂದರೆ, ಕ್ರಿಸ್ತನು ತಿರಿಗಿ ಬರುವ ತನಕ– ನಾವು ಬೈಬಲಿನ ಬರೆದಿರುವ ವಿಷಯಗಳಿಗೆ ಆಸಕ್ತಿಯಿಂದ ವಿಧೇಯರಾಗಬೇಕು (ರೋಮ 13:12 ನೋಡಿರಿ). ಪ್ರಕಟಣೆ 2:28 ಮತ್ತು 22:16ರಲ್ಲಿ, ಕ್ರಿಸ್ತನು ಉದಯ ನಕ್ಷತ್ರ ಎಂದು ಕರೆಯಲ್ಪಟ್ಟಿದ್ದಾನೆ. ಕ್ರಿಸ್ತನು "ನಮ್ಮ ಹೃದಯಗಳಲ್ಲಿ ಉದಯವಾಗುವನು" ಮತ್ತು ಇದು ಸಂಭವಿಸುವಾಗ ನಾವು ಆತನ ಸಾರೂಪ್ಯದಲ್ಲಿ ರೂಪಾಂತರಗೊಳ್ಳುವೆವು (2ಕೊರಿಂಥ 3:18;1ಯೋಹಾನ 3:2 ನೋಡಿರಿ).

**20-21** ನಾವು ಹಳೆ ಒಡಂಬಡಿಕೆಯ ಪ್ರವಾದಿಗಳನ್ನು ವಿಶ್ವಾಸಿಸಬಹುದು, ಯಾಕೆಂದರೆ ಅವರು ಸುಳ್ಳುಪ್ರವಾದಿಗಳಂತೆ ತಮ್ಮ ಸ್ವಂತ ಆಲೋಚನೆಗಳು ಹಾಗೂ ತಿಳುವಳಿಕೆ ಅನುಸಾರವಾಗಿ ಬರೆಯಲಿಲ್ಲ. ಹಳೆ ಒಡಂಬಡಿಕೆಯ ಪ್ರವಾದನೆಗಳು ಪ್ರವಾದಿಗಳ ಸ್ವಂತ ವ್ಯಾಖ್ಯಾನದಿಂದ ಬರಲಿಲ್ಲ. ಬದಲಾಗಿ, ದೇವರು ನುಡಿದದ್ದನ್ನೇ ಪ್ರವಾದಿಗಳು ಬರೆದರು. ಪ್ರವಾದಿಗಳು ಪವಿತ್ರಾತ್ಮ ಪ್ರೇರಿತರಾಗಿ ಅಥವಾ ಪ್ರಚೋದಿಸಲ್ಪಟ್ಟವರಾಗಿ ಇದ್ದರು. ಅಥವಾ ಪವಿತ್ರಾತ್ಮನಿಂದ ನಡಿಸಲ್ಪಟ್ಟರು. ನಡಿಸಲ್ಪಟ್ಟರು ಎಂಬದರ ಗ್ರೀಕ್ ಪದವು ಸಾಮಾನ್ಯವಾಗಿ ಹಡುಗುಯಾನಕ್ಕೆ ಸಂಬಂಧಿಸಿದಂತೆ ಉಪಯೋಗಿಸಲ್ಪಡುತ್ತಿತ್ತು; ಅಂಥ ಹಡಗುಗಳು ಗಾಳಿಯೊಂದಿಗೆ "ನಡಿಸಲ್ಪಡುತ್ತಿದ್ದವು ". (ಅ.ಕೃತ್ಯ 27:17 ನೋಡಿರಿ). ನಾವೀಕರು ನೌಕಾಪಟಗಳನ್ನು ಮೇಲಕ್ಕೆತ್ತುತ್ತಿದ್ದರು, ಆಗ ಗಾಳಿಯು ಹಡಗನ್ನು ನಡಿಸಿಕೊಂಡು ಹೋಗುತ್ತಿತ್ತು. ಅದೇ ವಿಧದಲ್ಲಿ, ಹಳೆ ಒಡಂಬಡಿಕೆಯ ಪ್ರವಾದಿಗಳು ತಮ್ಮ "ನೌಕಾಪಟಗಳನ್ನು" ಮೇಲೆತ್ತಿದರು. ಮತ್ತು ಪವಿತ್ರಾತ್ಮನು ಅವರನ್ನು ನಡಿಸಿಕೊಂಡು ಹೋದನು. ಪ್ರವಾದಿಗಳು ತಮ್ಮ ಬಾಯಿಗಳನ್ನು ತೆರೆದರು, ಮತ್ತು ಪವಿತ್ರಾತ್ಮನು ಅವರ ಆಲೋಚನೆಗಳು ಹಾಗೂ ಅವರ ನಾಲಿಗೆಗಳಿಗೆ ಮಾರ್ಗದರ್ಶನ ನೀಡಿದನು. ಈ ಕಾರಣಕ್ಕಾಗಿ ನಾವು ಬೈಬಲಿನಲ್ಲಿರುವ ಪ್ರತಿಯೊಂದು ವಚನವೂ ದೇವರ ವಾಕ್ಯವೇ ಆಗಿದ್ದು ಪವಿತ್ರಾತ್ಮನ ಮಾರ್ಗದರ್ಶನದಲ್ಲಿ ಬರೆಯಲ್ಪಟ್ಟಿದೆಯೆಂದು ಪೂರ್ಣಭರವಸೆಯನ್ನು ಹೊಂದುಬಹುದು (2 ತಿಮೊಥೆ 3:16 ಮತ್ತು ವ್ಯಾಖ್ಯಾನ ಸಾಮಾನ್ಯ ಲೇಖನಃ ನಮಗೆ ಬೈಬಲ್ ಹೇಗೆ ದೊರಕಿತು? ನೋಡಿರಿ).

---

## ಅಧ್ಯಾಯ - 2

### ಸುಳ್ಳು ಬೋಧಕರು (2:1-22)

**1** ಹಳೆ ಒಡಂಬಡಿಕೆಯ ಕಾಲದಲ್ಲಿಯೂ ಸುಳ್ಳು ಪ್ರವಾದಿಗಳು ಇದ್ದರು (ಧರ್ಮೋಪದೇಶಕಾಂಡ 13:1-5; ಯೆರೆಮೀಯ 5:30-31). ಆ ಕಾಲದಿಂದ ಇಂದಿನ ಸಮಯವರೆಗೂ ಪ್ರತಿಯೊಂದು ಪೀಳಿಗೆಯಲ್ಲಿಯೂ ಸುಳ್ಳುಬೋಧಕರು ಹಾಗೂ ಸುಳ್ಳು ಪ್ರವಾದಿಗಳು ಇದ್ದೇ ಇದ್ದಾರೆ. ಅವರು ನಾಶಕರವಾದ ಮತಬೇಧಗಳನ್ನು ಕಳ್ಳತನದಿಂದ ಹುಟ್ಟಿಸುವವರು (ಪರಿಚಯಿಸುವರು)ಅವರು ಸಭೆಯೊಳಗೆ ಗುಪ್ತವಾಗಿ ಸುಳ್ಳು ಬೋಧನೆಗಳನ್ನು ತಂದು ಅನೇಕರನ್ನು ಮೋಸಗೊಳಿಸುತ್ತಾರೆ (1 ತಿಮೊಥೆ 4:1 ನೋಡಿರಿ). ಅವರ ಬೋಧನೆಯು ನಾಶಕರವಾದದ್ದು; ಯಾಕೆಂದರೆ, ಅದು ನಮ್ಮ ನಂಬಿಕೆಯನ್ನು ಮಾತ್ರವಲ್ಲದೆ, ಅದರಿಂದ ವಂಚನೆಗೊಳಗಾದವರ ನಂಬಿಕೆಯನ್ನು ನಾಶಮಾಡುವದಾಗಿದೆ. ಈ ಸುಳ್ಳು ಬೋಧಕರು ತಮ್ಮ ಸುಳ್ಳು ಬೋಧನೆಗಳಿಂದ ಕ್ರಿಸ್ತನು ಒಡೆಯನೆಂಬದನ್ನು ಅಲ್ಲಗಳೆಯುವವರಾಗಿದ್ದಾರೆ.

ಈ ಸುಳ್ಳು ಬೋಧಕರ ವಿಷಯವಾಗಿ ಕ್ರಿಸ್ತನು ಅವರನ್ನು ತನ್ನ ಸ್ವರಕ್ತದಿಂದ ಕೊಂಡುಕೊಂಡ ಎಂದು ಪೇತ್ರನು ಹೇಳುತ್ತಾನೆ. ಆದದರಿಂದ, ಅವರು ಆತನಿಗೆ ಸೇರಿದ್ದಾರೆ (1 ಕೊರಿಂಥ 6:19-20; 7:23). ಹಾಗಿದ್ದರೂ, ಅವರು ಆತನಿಗೆ ವಿರುದ್ಧವಾಗಿ ಬಂಡಾಯವೆದಿದ್ದಾರೆ. ಇದರ ಮೂಲಕ ಈ ಸುಳ್ಳುಬೋಧಕರು ಒಮ್ಮೆ ಕ್ರಿಸ್ತನನ್ನು ಹಿಂಬಾಲಿಸುವವರಾಗಿದ್ದರು, ಎಂದು ನಾವು ತಿಳಿದುಕೊಳ್ಳಬಹುದು. ಆದರೆ ಈಗ ಅವರು ಸತ್ಯವನ್ನು ಬಿಟ್ಟು ಅಲೆದಾಡಿದ್ದಾರೆ, ಅವರು ಸತ್ಯವನ್ನು ವಿರೋಧಿಸುತ್ತಾರೆ ಯಾಕೆಂದರೆ ಕ್ರಿಸ್ತನು ತಾನೇ ಸತ್ಯವಾಗಿದ್ದಾನೆ (ಯೋಹಾನ 14:6). ಮತ್ತು ಅವರು ಆತನನ್ನು ಅಲ್ಲಗಳೆಯುವಾಗ ತಮ್ಮ ಮೇಲೆ ನಾಶನವನ್ನು ಬರಮಾಡಿಕೊಳ್ಳುತ್ತಾರೆ (ಮತ್ತಾಯ 10:33).

**2** ಸತ್ಯ ಮಾರ್ಗಕ್ಕೆ– ಅಂದರೆ, ಕ್ರಿಸ್ತನ ಸುವಾರ್ತೆಗೆ– ದೂಷಣೆ ಉಂಟಾದದ್ದು ಅಷ್ಟಾಗಿ ಸಭೆಯ ಹೊರಗಿನವರಿಂದಲ್ಲ, ಆದರೆ ಕ್ರೈಸ್ತರೆಂದು ಹೇಳಿಕೊಳ್ಳುವ ಸಭೆಯ ಒಳಗಿನವರಿಂದಲೇ ಆಗಿದೆ. ವಿಶ್ವಾಸಿಗಳು ಸುಳ್ಳುಬೋಧಕರ ಹಾಗೂ ಸುಳ್ಳು ಪ್ರವಾದಿಗಳನ್ನು ಹಿಂಬಾಲಿಸಿ ಅವರ ನಾಚಿಕೆಕರ ನಡವಳಿಕೆಯನ್ನು ಅನುಕರಿಸುವಾಗ ಕ್ರಿಸ್ತನು ವಿಶೇಷವಾಗಿ ಅವಮಾನಕ್ಕೊಳಗಾಗುತ್ತಾನೆ. ಪೇತ್ರನ ಕಾಲದಲ್ಲಿ ಸುಳ್ಳುಬೋಧಕರ ಮುಖ್ಯ ಬೋಧನೆಯು ಏನಾಗಿತ್ತೆಂದರೆಃ ಒಬ್ಬ ವ್ಯಕ್ತಿಯು

ಹೇಗೆ ನಡೆದುಕೊಂಡರೂ ಸರಿಯೇ ಆತನು ಕ್ರಿಸ್ತನ ಕೃಪೆ ಹಾಗೂ ಆತನ ವಿಷಯವಾದ ಜ್ಞಾನದ ಮೂಲಕ ರಕ್ಷಿಸಲ್ಪಡುತ್ತಾನೆ; ಆದದರಿಂದ, ಯಾವನೂ ತನ್ನ ದೈನಂದಿನ ಜೀವಿತದೆಡೆಗೆ ಯಾವ ಲಕ್ಷ್ಯವನ್ನೂ ಕೊಡಬೇಕಾಗಿಲ್ಲ. ಈ ಸುಳ್ಳುಬೋಧನೆಯು ಹೊಸ ಒಡಂಬಡಿಕೆಯ ಅನೇಕ ವಾಕ್ಯಭಾಗಗಳಲ್ಲಿ ಖಂಡಿಸಲ್ಪಟ್ಟಿದೆ (ರೋಮ 6:1-2; 15; 1 ಥೆಸಲೋನಿಕ 4:7; 1 ಪೇತ್ರ 1:14-15 ನೋಡಿರಿ).

ಪ್ರತಿಯೊಂದು ತಲೆಮಾರಿನಲ್ಲಿಯೂ ಪ್ರತಿಯೊಂದು ಸಭೆಯಲ್ಲಿರುವ ವಿಶ್ವಾಸಿಗಳಲ್ಲಿ ಯಾವದಾದರೂ ನೂತನ ಮಾರ್ಗ ಅಥವಾ ಸುಳ್ಳು ಬೋಧನೆಯನ್ನು ಕೇಳುವದಕ್ಕೆ ಸಿದ್ಧರಾಗಿರುವ ಕೆಲವರು ಯಾವಾಗಲೂ ಇರುತ್ತಾರೆ (2 ತಿಮೊಥೆ 4:3-4). ಸುಳ್ಳು ಬೋಧನೆಯು ನಮ್ಮ ಸಭೆಯಲ್ಲಿ ಪ್ರವೇಶಿಸಲಿಕ್ಕೆ ಸಾಧ್ಯವೇ ಇಲ್ಲ ಎಂದು ನಾವು ಹೆಚ್ಚಿಸಿಕೊಳ್ಳದಿರೋಣ; ಬದಲಾಗಿ, ನಾವು ಎಚ್ಚರದಿಂದ ಕಾವಲಾಗಿರೋಣ. ಆದಕಾರಣ ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ (1 ಕೊರಿಂಥ 10:12).

3 ಸುಳ್ಳು ಬೋಧಕರು ಇತರರಿಗೆ ಸಹಾಯ ಮಾಡುವದರಲ್ಲಿ ಅಲ್ಲ; ಆದರೆ ತಮ್ಮ ವೇತನವನ್ನು ಸಂಪಾದಿಸಿಕೊಳ್ಳುವದರಲ್ಲಿ ಆಸಕ್ತರಾಗಿದ್ದಾರೆ. ಅವರು ಇತರರ ಪ್ರಯೋಜನವನ್ನು ಅಪೇಕ್ಷಿಸುವದಿಲ್ಲ. ಅವರು ತಮ್ಮ ಸ್ವಂತ ಲಾಭವನ್ನೂ ಗೌರವವನ್ನೂ ಹುಡುಕುತ್ತಾರೆ (1 ತಿಮೊಥೆ 6:3-5 ನೋಡಿರಿ). ಅಂಥ ಬೋಧಕರು ದಂಡನೆಯನ್ನು ತಪ್ಪಿಸಿಕೊಳ್ಳುವದಿಲ್ಲ; ಅವರ ನಾಶನವು ಹತ್ತಿರವಾಗಿದೆ. ಇತರರನ್ನು ಮಾರ್ಗತಪ್ಪಿಸುವವರಿಗಾಗಿ ದೇವರ ನ್ಯಾಯ ತೀರ್ಪು ಮತ್ತಷ್ಟು ಕಠಿಣವಾಗಿರುವದು (ಮಾರ್ಕ 9:42).

4 ಪೇತ್ರನು 4-8 ವಚನಗಳಲ್ಲಿ ದೇವರು ನೀತಿವಂತರನ್ನು ರಕ್ಷಿಸುತ್ತಾನೆ ಹಾಗೂ ಅ ನೀತಿವಂತರನ್ನು ದಂಡಿಸುತ್ತಾನೆಂಬದನ್ನು ತೋರಿಸಲು ಹಳೆ ಒಡಂಬಡಿಕೆಯಿಂದ ಮೂರು ಉದಾಹರಣೆಗಳನ್ನು ನೀಡುತ್ತಾನೆ.

ಮೊದಲನೆಯ ಉದಾಹರಣೆಯು ದೇವರ ವಿರುದ್ಧವಾಗಿ ನಡೆದು ಪಾಪಮಾಡಿದ ದೇವದೂತರ ವಿಷಯವಾಗಿರುತ್ತದೆ. ಈ ದೇವದೂತರು ಆದಿಕಾಂಡ 6:1-4ರಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾರೆ, ಅಲ್ಲಿ ಅವರನ್ನು ದೇವಪುತ್ರರು ಎಂದು ಕರೆಯಲಾಗಿದೆ. ದೇವರು ಅವರನ್ನು ನರಕಕ್ಕೆ ದೊಬ್ಬಿದನು, ಅಲ್ಲಿ ಅವರು ನ್ಯಾಯತೀರ್ಪನ್ನು ಹೊಂದುವದಕ್ಕೆ ಇಡಲ್ಪಟ್ಟಿದ್ದಾರೆ. ನ್ಯಾಯ ತೀರ್ಪಿನ ಮಹಾದಿನದಂದು ದೇವರು ಅವರಿಗೆ ಅಂತಿಮ ದಂಡನೆಯನ್ನು ನೀಡುವನು (ಯೂದನು 6ನೋಡಿರಿ).

5 ಪೇತ್ರನು ನೀಡುವ ಎರಡನೆಯ ಉದಾಹರಣೆಯು ಜಲಪ್ರಳಯದ ಕುರಿತಾಗಿರುತ್ತದೆ. ಅದು ಆದಿಕಾಂಡ 6:8 ಅಧ್ಯಾಯಗಳಲ್ಲಿ ಬಣ್ಣಿಸಲ್ಪಟ್ಟಿದೆ. ಆ ಸಮಯದಲ್ಲಿ ದೇವರು ಲೋಕದ ಎಲ್ಲಾ ಅನೀತಿವಂತರನ್ನು ನಾಶಮಾಡಿದನು, ಆದರೆ ಆತನು ನೋಹ ಹಾಗೂ ಆತನ ಹೆಂಡತಿ, ಜೊತೆಯಲ್ಲಿ ಅವರ ಮೂರು ಮಂದಿ ಪುತ್ರರನ್ನೂ ಅವರ ಹೆಂಡತಿಯರನ್ನು ರಕ್ಷಿಸಿದನು. ನೋಹನು ಸುನೀತಿಯನ್ನು ಸಾರುವವನಾಗಿದ್ದನು. ಆದಿಕಾಂಡ 6:9 ರ ಪ್ರಕಾರವಾಗಿ ನೋಹನ ನೀತಿವಂತನೂ ತನ್ನ ಕಾಲದ ಜನರಲ್ಲಿ ತಪ್ಪಿಲ್ಲದವನೂ ಆಗಿದ್ದನು; ಅವನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡನು (ಇಬ್ರಿಯ 11:7 ನೋಡಿರಿ).

6-8 ಪೇತ್ರನು ಮೂರನೆಯ ಉದಾಹರಣೆಯು ದುಷ್ಟಪಟ್ಟಣಗಳಾದ ಸೊದೋಮ, ಗೊಮೋರಗಳ ನಾಶನವಾಗಿರುತ್ತದೆ, ಅದು ಆದಿಕಾಂಡ 19:1-29 ರಲ್ಲಿ ಬಣ್ಣಿಸಲ್ಪಟ್ಟಿದೆ (ಮತ್ತಾಯ ೧೦:೧೫ ನೋಡಿರಿ). ದೇವರು ಆ ಪಟ್ಟಣಗಳನ್ನು ಅವುಗಳ ಎಲ್ಲಾ ದುಷ್ಟನಿವಾಸಿಗಳ ಸಮೇತ ಬೆಂಕಿಯಿಂದ ಸುಟ್ಟುಸಂಪೂರ್ಣವಾಗಿ ನಾಶಮಾಡಿದನು (ಆದಿಕಾಂಡ 19:24-25). ಆದರೆ ದೇವರು ಮೊದಲು ಅಲ್ಲಿಯ ನಿವಾಸಿಗಳಲ್ಲೊಬ್ಬನಾದ ಲೋಟನನ್ನು ರಕ್ಷಿಸಿದನು ಯಾಕೆಂದರೆ ಲೋಟನು ದೇವರ ದೃಷ್ಟಿಯಲ್ಲಿ ನೀತಿವಂತನಾಗಿದ್ದನು.

9 ದೇವರು ದುಷ್ಟರನ್ನೂ ಅನೀತಿವಂತರನ್ನೂ ಹೇಗೆ ದಂಡಿಸಬೇಕೆಂದು ಬಲ್ಲನೆಂಬದನ್ನು ಪೇತ್ರನು ಹಳೆ ಒಡಂಬಡಿಕೆಯ ಈ ಮೂರು ಉದಾಹರಣೆಗಳ ಮೂಲಕ ತೋರಿಸುತ್ತಾನೆ. ಅದೇ ವಿಧದಲ್ಲಿ ದೇವರು ನಿಶ್ಚಯವಾಗಿಯೂ ಆ ಸುಳ್ಳುಬೋಧಕರನ್ನು ಹಾಗೂ ಅವರನ್ನು ಹಿಂಬಾಲಿಸುವವನ್ನು ದಂಡಿಸುವನು ಎಂದು ಪೇತ್ರನು ಹೇಳುತ್ತಾನೆ.

ಅದೇ ಸಮಯದಲ್ಲಿ ದೇವರು ನೋಹ ಮತ್ತು ಲೋಟರಂತಹ ಭಕ್ತರನ್ನು ಕಷ್ಟಗಳೊಳಗಿಂದ ತಪ್ಪಿಸುವದಕ್ಕೂ ಬಲ್ಲವನಾಗಿದ್ದಾನೆ, ಮತ್ತು ಆತನು ಹಾಗೆ ಮಾಡುವದಕ್ಕೆ ಪೂರ್ಣಶಕ್ತನಾಗಿದ್ದಾನೆ. ಅದೇ ವಿಧದಲ್ಲಿ, ಒಬ್ಬ ವ್ಯಕ್ತಿಯು ದೇವರಿಗೆ ವಿಧೇಯನಾಗಿ ನಂಬಿಕೆಯಲ್ಲಿ ದೃಢವಾಗಿ ನಿಲ್ಲವದಾದರೆ, ದೇವರು ಅವನನ್ನು ಕಷ್ಟಗಳೊಳಗಿಂದ ತಪ್ಪಿಸುವನು. ಪೇತ್ರನ ಕಾಲದಲ್ಲಿ ಅಂಥ ಕಷ್ಟಗಳು ಆಗಲೇ ಕ್ರೈಸ್ತರ ಮೇಲೆ ಬರುವದಕ್ಕೆ ಪ್ರಾರಂಭಿಸಿದ್ದವು ಆದರೆ ಅವುಗಳು ವಿಶೇಷವಾಗಿ ಕ್ರಿಸ್ತನ ಎರಡನೆಯ ಬರೋಣಕ್ಕೆ ಸ್ವಲ್ಪ ಮುಂಚೆಯಷ್ಟೇ ಬರುವವು (ಪ್ರಕಟಣೆ 3:10).... ಕಡೇವರೆಗೂ ದೃಢವಾಗಿ ನಿಲ್ಲುವವನು ರಕ್ಷಣೆ ಹೊಂದುವನು (ಮಾರ್ಕ 13:13).

10 ಸುಳ್ಳು ಬೋಧಕರು ಶಿಕ್ಷಿಸಲ್ಪಡುವರೆಂದು ಪೇತ್ರನು ಇಲ್ಲಿ ಪುನಃ ಹೇಳುತ್ತಾನೆ. ಈ ಬೋಧಕರು ಬಂಡುತನ ಆಶಿಸಿ ಪಾಪಧೀನ ಸ್ವಭಾವನುಸಾರ ನಡೆಯುತ್ತಾರೆ; ಅಂದರೆ, ಮನುಷ್ಯರು ತಾವು ಇಷ್ಟಪಟ್ಟದ್ದನ್ನು ಮಾಡಬಹುದೆಂದು ಅವರು ಬೋಧಿಸುತ್ತಾರೆ. ಅವರು ಕ್ರಿಸ್ತನ ಹಾಗೂ ಆತನ ಅಪೊಸ್ತಲರ ಅಧಿಕಾರವನ್ನು ತಾತ್ಸಾರ ಮಾಡುತ್ತಾರೆ.

ಈ ಸುಳ್ಳು ಬೋಧಕರು ನಿರ್ಭಯವುಳ್ಳವರೂ ಸ್ವೇಚ್ಛಾಪರರೂ ಆಗಿರುತ್ತಾರೆ. ಅವರು ಮಹಾಪದವಿಯವರನ್ನು ನಿರ್ಭಯವಾಗಿ ದೂಷಿಸುತ್ತಾರೆ. ಪೇತ್ರನು "ಮಹಾ ಪದವಿಯವರು" ಎಂದು ಹೇಳುವಾಗ ದೇವದೂತರನ್ನು ಅಥವಾ ಸಭಾನಾಯಕರನ್ನು ಸೂಚಿಸುತ್ತಿರಬಹುದು ಗ್ರೀಕ್ ಪ್ರತಿಯು ಎರಡೂ ವಿಧದಲ್ಲಿ ಭಾಷಾಂತರಿಸಲ್ಪಡಬಲ್ಲದು. ಎರಡೂ ವಿಷಯದಲ್ಲಿಯೂ, ಸುಳ್ಳುಬೋಧಕರು ಯಾರೊಬ್ಬರ ಅಧಿಕಾರಕ್ಕೂ ಅಧೀನರಾಗಲು ನಿರಾಕರಿಸುತ್ತಾರೆ.

**11** ಹಾಗಿದ್ದರೂ, ದೇವದೂತರು ಸಹ (10ನೇ ವಚನದ "ಮಹಾಪದವಿಯವರು" ಎಂದು ಹೇಳಬಹುದು) ಸುಳ್ಳು ಬೋದಕರನ್ನು ಪ್ರತಿಯಾಗಿ ದೂಷಿಸುವದಿಲ್ಲ (ಯೂದನು 9). ಇದರಲ್ಲಿ ನಾವು ಒಂದು ಸಾಮಾನ್ಯ ಸತ್ಯವನ್ನು ಕಾಣಬಹುದುಃ ದುರ್ಮಾರ್ಗಿಗಳು ನೀತಿವಂತರನು ದೂಷಿಸುತ್ತಾರೆ ಆದರೆ ನೀತಿವಂತರು ಮೌನವಾಗಿರುತ್ತಾರೆ. ನೀತಿವಂತರು ಕೆಟ್ಟದ್ದಕ್ಕೆ ಪ್ರತಿಯಾಗಿ ಕೆಟ್ಟದ್ದನ್ನು ಮಾಡುವದಿಲ್ಲ. ಸುಳ್ಳು ಬೋಧಕರ ದೂಷಣೆಯ ಮಾತು ಅವಮಾನಕರವಾದದ್ದು; ಯಾವ ನೀತಿವಂತನೂ ಕರ್ತನ ಮುಂದೆ ಆ ವಿಧದಲ್ಲಿ ಮಾತಾಡುವದಕ್ಕೆ ಧೈರ್ಯಗೊಳ್ಳುವದಿಲ್ಲ.

ನಾವು ಯಾರ ವಿರುದ್ಧವಾಗಿಯಾದರೂ ದೂಷಣೆ ಮಾಡುವಾಗಲೆಲ್ಲಾ ಅದನ್ನು ಕರ್ತನ ಎದುರಿನಲ್ಲಿ ಮಾಡುವವರಾಗಿದ್ದೇವೆಂಬದನ್ನು ಜ್ಞಾಪಕದಲ್ಲಿಟ್ಟುಕೊಳ್ಳೋಣ. ಆದದರಿಂದ, ನಮ್ಮ ದೂಷಣಾಭಿಪ್ರಾಯವು ಸತ್ಯವಾದದ್ದೂ ದೇವರಿಗೆ ಸ್ವೀಕೃತವಾದದ್ದು ಆಗಿರುವಂತೆ ಖಚಿತಮಾಡಿಕೊಂಡಿದ್ದರೆ ಉತ್ತಮವಾಗಿರುತ್ತದೆ (ಮತ್ತಾಯ 7:1-5, 18:15-17; ರೋಮ 14:10 ನೋಡಿರಿ).

**12** ಈ ಸುಳ್ಳು ಬೋಧಕರು ತಾವು ದೂಷಣೆ ಮಾಡುವ ಸಂಗತಿಗಳನ್ನು ಅರ್ಥಮಾಡಿಕೊಳ್ಳಲು ಸಹ ಅಶಕ್ತರಾಗಿರುತ್ತಾರೆ; ತಾವು ದೂಷಣೆ ಮಾಡುವ ಜನರನ್ನು ಅವರು ಅರ್ಥಮಾಡಿಕೊಳ್ಳುವದಿಲ್ಲ. ಇವರಂತಹ ತಿಳುವಳಿಕೆಯಿಲ್ಲದ ಜನರೇ ಕ್ರಿಸ್ತನನ್ನೂ ಆತನ ಹಿಂಬಾಲಕರನ್ನೂ ವಿರೋಧಿಸುವವರಾಗಿರುತ್ತಾರೆ (1 ಪೇತ್ರ 2:15). ಅವರು ಆತ್ಮೀಯ ವಿಷಯಗಳ ಬಗ್ಗೆ ತಿಳುವಳಿಕೆಯಿಲ್ಲದವರು. ಅವರು ಬೇಟೆಗೂ ಕೊಲೆಗೂ ಹುಟ್ಟಿರುವ ವಿವೇಕ ಶೂನ್ಯ ಪಶುಗಳಂತಿದ್ದು ತಮ್ಮ ಸ್ವಂತ ಸ್ವಾರ್ಥ ಅಭಿಲಾಷೆಗಳನ್ನು ಮಾತ್ರವೇ ಅನುಸರಿಸುವವರಾಗಿದ್ದಾರೆ. ವಿವೇಕ ಶೂನ್ಯ ಪಶುಗಳು ಬೇಟೆಗೂ ಕೊಲೆಗೂ ಮಾತ್ರವೇ ಹುಟ್ಟಿರುತ್ತವೆ. ಅದೇ ವಿಧದಲ್ಲಿ, ಈ ಸುಳ್ಳು ಬೋಧಕರು ತಮ್ಮ ಅಭಿಲಾಷೆಗಳಿಂದಲೇ "ಬೇಟೆಯಾಡಲ್ಪಟ್ಟು" ಅವು ಗಳಿಂದ ಕೊಲ್ಲಲ್ಪಡುವರು (ಯೂದನು 10 ಮತ್ತು ವ್ಯಾಖ್ಯಾನ ನೋಡಿರಿ)....... ಪಾಪಮಾಡುವ ಪ್ರತಿಯೊಬ್ಬನು ಪಾಪಕ್ಕೆ ದಾಸನಾಗಿದ್ದಾನೆ (ಯೋಹಾನ 3:34). ಮತ್ತು ಪಾಪದ ಸಂಬಳ ಮರಣವೇ (ರೋಮ 6:23).

**13** ದೇವರು ಯಾವಾಗಲೂ ನ್ಯಾಯವಂತನಾಗಿರುತ್ತಾನೆ. ಕೆಟ್ಟದ್ದನ್ನು ಬಿತ್ತುವವನು ಕೆಟ್ಟದ್ದನ್ನೇ ಕೊಯ್ಯುವನು (ಗಲಾತ್ಯ 6:7). ಪಾಪಾಧೀನ ಸ್ವಭಾವವನ್ನು ಮೆಚ್ಚಿಸಲು ಬಿತ್ತುವವನು ಆ ಭಾವದಿಂದ ನಾಶನವನು ಕೊಯ್ಯುವನು (ಗಲಾತ್ಯ 6:8). ಈ ಸುಳ್ಳುಬೋಧಕರು ಕೆಟ್ಟದ್ದರಲ್ಲಿ ನಡೆಯುವದರಿಂದ ಕೆಟ್ಟದ್ದನ್ನೇ ಹೊಂದಿಕೊಳ್ಳುವರು.

ಈ ಬೋಧಕರು ರಾತ್ರಿಯಲ್ಲಿ ಮಧ್ಯಪಾನ ಮಾಡುವದರಲ್ಲಷ್ಟೇ ತೃಪ್ತರಾಗದೆ ಹಗಲಿನಲ್ಲಿ ಸಹ ಅಮಲೇರುತ್ತಾರೆ ರಾತ್ರಿಯಲ್ಲಿ ಮಧ್ಯಪಾನ ಮಾಡುವವನು ಹಗಲಿನಲ್ಲಿ ಸಹ ಮಧ್ಯಪಾನ ಮಾಡಲು ಪ್ರಾರಂಭಿಸುವನು, ಚಿಕ್ಕ ಪಾಪಗಳು ಯಾವಾಗಲೂ ದೊಡ್ಡ ಪಾಪಗಳಿಗೆ ದಾರಿಮಾಡುತ್ತವೆ. ಸಭೆಯ ಪ್ರೇಮ ಬೋಜನಗಳಲ್ಲಿ ಸಹ ಈ ಸುಳ್ಳು ಬೋಧಕರು ಕುಡಿದು ಮತ್ತರಾಗುತ್ತಿದ್ದರು. ಆಗ ಕರ್ತನ ಭೋಜನವು ಆಚರಿಸಲ್ಪಡುವ ಪದ್ಧತಿಯೂ ಪೇತ್ರನ ಕಾಲದಲ್ಲಿತ್ತು (1 ಕೊರಿಂಥ 11:20-21; ಯೂದನು 12 ನೋಡಿರಿ). ಅಂಥ ಜನರು ಸಭೆಯ ಕಳಂಕಕ್ಕೂ ಅವಮಾನಕ್ಕೂ ಕಾರಣರಾಗಿರುತ್ತಾರೆ. ಅವರಿಗೆ ಕ್ರಿಸ್ತನ ಸಭೆಯಲ್ಲಿ ಸ್ಥಳವಿರುವದಿಲ್ಲ! ಅದು ಕಳಂಕಸುಕ್ಕು ಮುಂತಾದ್ದೊಂದೂ ಇಲ್ಲದ ನಿರ್ದೋಷವಾಗಿರತಕ್ಕದ್ದಾಗಿದೆ (ಎಫೆಸ 5:17). ಯೇಸು ತಾನೇ ಪೂರ್ಣಾಂಗವಾದ ನಿಷ್ಕಳಂಕಯಜ್ಞದ ಕುರಿಯಾಗಿದ್ದಾನೆ (1 ಪೇತ್ರ 1:19). ಮತ್ತು ಆತನನ್ನು ಹಿಂಬಾಲಿಸುವವರೂ ಹಾಗೆಯೇ ಇರಬೇಕು (2 ಪೇತ್ರ 3:14).

**14** ಸುಳ್ಳು ಬೋಧಕರು ಜಾರತ್ವದಿಂದ ತುಂಬಿದ ಕಣ್ಣುಳ್ಳವರು. ಅವರು ಪ್ರತಿಯೊಬ್ಬ ಸ್ತ್ರೀಯರನ್ನು ಆಶೆಯಿಂದ ನೋಡಿ ತಮ್ಮ ದುಷ್ಟ ಕಾಮಾಭಿಲಾಷೆಗಳನ್ನು ನೆರವೇರಿಸಲು ಅಪೇಕ್ಷಿಸುತ್ತಾರೆ (ಮತ್ತಾಯ 5:28). ಅವರು ಪಾಪವ ನ್ನು ಬಿಡಲಾರರು (ಎಫೆಸ 4:19 ಮತ್ತು ವ್ಯಾಖ್ಯಾನ ನೋಡಿರಿ). ದುಷ್ಟ ಅಭಿಲಾಷೆಗಳು ಕೆರೆತಗಳಂತಿರುತ್ತವೆ; ನೀವು ಅವು ಗಳನ್ನು ಕೆರೆಯುವಾಗ ಕೆರೆತ ಇನ್ನೂ ಹೆಚ್ಚಾಗುತ್ತದೆ. ತಮ್ಮ ದುಷ್ಟ ಅಭಿಲಾಷೆಗಳನ್ನು ನೆರವೇರಿಸಲು ಅಪೇಕ್ಷಿಸುವ ಜನರು ಎಂದಿಗೂ ತೃಪ್ತಿಗೊಳ್ಳುವದಿಲ್ಲ.

ಈ ಸುಳ್ಳು ಬೋಧಕರು ಚಪಲ ಚಿತ್ತರನ್ನು ಮರುಳು ಗೊಳಿಸುವವರು (2 ತಿಮೊಥೆ 3:6-7 ನೋಡಿರಿ). ಅವರು ಲೋಭದಲ್ಲಿ ಪ್ರವೀಣರಾಗಿರುತ್ತಾರೆ; ಅಂದರೆ, ಅವರು ಹಣಗಳಿಸುವದರಲ್ಲಿ ಚತುರರೂ, ಕುಶಲರೂ ಆಗಿರುತ್ತಾರೆ (ವಚನ 3 ನೋಡಿರಿ). ಅಂಥ ಬೋಧಕರು ದೇವರ ದೃಷ್ಟಿಯಲ್ಲಿ ನಿಜವಾಗಿಯೂ ಶಾಪಕ್ಕೆ ಪಾತ್ರರು. ಪೌಲನು ಅವರನ್ನು ದೇವರ ಕೋಪಕ್ಕೆ ಗುರಿಯಾದವರು ಎಂದು ಕರೆಯುತ್ತಾನೆ (ಎಫೆಸ 2:3). ಅವರು ದಂಡನೆಯಿಂದ ತಪ್ಪಿಸಿಕೊಳ್ಳಬಹುದಾದ ಒಂದೇ ಮಾರ್ಗ ಇರುತ್ತದೆ. ಮತ್ತು ಅದೇನೆಂದರೆ, ಅವರು ತಮ್ಮ ಪಾಪದ ಪಾಲಿಗೆ ಸತ್ತು ಕ್ರಿಸ್ತನಲ್ಲಿ ದೊರೆಯುವ ನೂತನ ಜೀವವನ್ನು ಪಡೆಯುವದೇ (1 ಪೇತ್ರ 4:1-3 ಮತ್ತು ವ್ಯಾಖ್ಯಾನ ನೋಡಿರಿ).

**15** ಸುಳ್ಳು ಬೋಧಕರು ಹಳೆ ಒಡಂಬಡಿಕೆಯ ಪ್ರವಾದಿಯಾದ ಬೀಳಾಮನ ಹಾಗಿರುತ್ತಾರೆ, ಬೀಳಾಮನು ಹಣಕೋಸ್ಕರ ಪ್ರವಾದಿಸುವ ಶೋಧನೆಗೊಳಪಟ್ಟನು (ಅರಣ್ಯ ಕಾಂಡ 22:1-21). ಅದು ಮಾತ್ರವಲ್ಲದೆ, ಬೀಳಾಮನು ತನ್ನ ಸುಳ್ಳು ಪ್ರವಾದನೆಗಳ ಮೂಲಕ ಯೆಹೂದ್ಯರನ್ನು ಕರ್ತನಿಂದ ದೂರಮಾಡಿದನು (ಅರಣ್ಯಕಾಂಡ 31:16; ಪ್ರಕಟಣೆ 2:14).

16 ಬೀಳಾಮನ ಕತ್ತೆಯೇ ಅವನನ್ನು ಗದರಿಸಿತು (ಅರಣ್ಯ ಕಾಂಡ 22:22-34). ಮೂಕ ಪ್ರಾಣಿಯು ಬೀಳಾಮನಿಗಿಂತ ಹೆಚ್ಚು ತಿಳುವಳಿಕೆ ಹೊಂದಿತ್ತೆಂ ಬದನ್ನು ಗಮನಿಸಿರಿ ಅವನ ಮನಸ್ಸು ದುಷ್ಕೃತ್ಯಗಳಿಂದ ಕತ್ತಲಾಗಿತ್ತು (ಎಫೆಸ 4:18).

17 ಸುಳ್ಳು ಬೋಧಕರು ನೀರಿಲ್ಲದ ಬಾವಿಗಳ ಹಾಗಿರುತ್ತಾರೆ. ಜನರು ಅವರ ಬಳಿಗೆ ಬಾಯಾರಿಕೆಯಿಂದ ಬರುತ್ತಿದ್ದರು, ಆದರೆ ಅವರಿಗೆ ಕುಡಿಯುವದಕ್ಕೆ ಏನೂ ಸಿಕ್ಕಲಿಲ್ಲ. ಈ ಬೋಧಕರಿಗೆ ತದ್ವಿರುದ್ಧವಾಗಿ ಯೇಸು ಜೀವವು ಳ್ಳ ನೀರನ್ನು ಕೊಡುತ್ತಾನೆ ಒಬ್ಬ ವ್ಯಕ್ತಿಯು ಯೇಸುವಿನ ನೀರನ್ನು ಕುಡಿದರೆ ಎಂದಿಗೂ ಪು ನಃ ನೀರಡಿಕೆಗೊಳ್ಳುವದಿಲ್ಲ (ಯೋಹಾನ 4:13-14).

ಸುಳ್ಳು ಬೋಧಕರು ಬಿರುಗಾಳಿಯಿಂದ ಬಿಡಿಸಿಕೊಂಡು ಹಾರಿಹೋಗುವ ಮಂಜೂ ಆಗಿದ್ದಾನೆ. ಅವರು ಅತ್ತ ಇತ್ತ ಹಾರಿಸಲ್ಪಡುತ್ತಾರೆ (ಎಫೆಸ 4:14). ಅವರ ಬೋಧನೆಯು ಸ್ಥಿರವಾಗಿರದು; ಅದು ಮಂಜಿನಂತೆ ಹಾರಿಹೋಗುವದು.

18 ಸುಳ್ಳು ಬೋಧಕರು ನೀತಿವಂತರ ಹಾಗೆ ನಟಿಸುತ್ತಾರೆ. ಅವರು ಹೊಸ ವಿಶ್ವಾಸಿಗಳಿಗೆ ನೀವು ನಿಮ್ಮ ಬಂಡು ದುರಾಶೆಗಳನ್ನು ಅನುಸರಿಸುವದರಲ್ಲಿ ತಪ್ಪೇನಿಲ್ಲ. ಮನುಷ್ಯನ ಆತ್ಮಮಾತ್ರವೇ ಪವಿತ್ರವಾಗಿರತಕ್ಕದ್ದು. ನಾವು ನಮ್ಮ ದೇಹಗಳಿಂದ ಏನು ಮಾಡುತ್ತೇವೆ ಎಂಬದರ ಬಗ್ಗೆ ದೇವರು ಚಿಂತಿಸುವದಿಲ್ಲ ಎಂದು ಹೇಳುತ್ತಾರೆ. ಇದೇ ವಿಧವಾದ ಸುಳ್ಳು ಬೋಧನೆಯು ಕೊರಿಂಥ ಸಭೆಯಲ್ಲಿ ಹರಡಿತ್ತು. ಮನುಷ್ಯನ ದೇಹವು ಅತ್ಯಂತ ಪ್ರಾಮುಖ್ಯವಾದದ್ದೆಂದು ಪೌಲನು ಬೋಧಿಸಿದನು. ಆತನು ಬರೆದದ್ದೇನೆಂದರೆಃ ದೇಹವು ಹಾದರಕ್ಕೋಸ್ಕರ ಇರುವಂಥದಲ್ಲ. ಕರ್ತನಿಗೋಸ್ಕರವಾಗಿದೆ (1 ಕೊರಿಂಥ 6:13). ನಮ್ಮ ದೇಹಗಳು ಕ್ರಿಸ್ತನ ಅಂಗಗಳಾಗಿವೆ (1 ಕೊರಿಂಥ 6:15). ನಮ್ಮ ದೇಹವು ಪವಿತ್ರಾತ್ಮನಿಗೆ ಗರ್ಭಗುಡಿಯಾಗಿದೆ (1 ಕೊರಿಂಥ 6:18-20 ಮತ್ತು ವ್ಯಾಖ್ಯಾನ ನೋಡಿರಿ).

19 ಅಂಥ ಸುಳ್ಳು ಬೋಧಕರು ಹೊಸ ವಿಶ್ವಾಸಿಗಳಿಗೆ, "ನೀವು ಧರ್ಮಶಾಸ್ತ್ರದಿಂದ ಸ್ವತಂತ್ರರು" ಎಂದು ಹೇಳುತ್ತಾರೆ. ಆದರೆ ಈ ಸುಳ್ಳು ಬೋಧಕರು ತಾವೇ ಪಾಪಕ್ಕೆ ದಾಸರು (ರೋಮ 6:17 ನೋಡಿರಿ). ಪಾಪವು ಅವರ ಯಜಮಾನನು. ಕ್ರೈಸ್ತರು ನಿಜವಾಗಿಯೂ ಸ್ವತಂತ್ರರೇ, ಆದರೆ ಅವರು ಪಾಪ ಮಾಡುವದಕ್ಕೆ ಸ್ವತಂತ್ರರಲ್ಲ. ನಾವು ಕ್ರಿಸ್ತ ನ ದಾಸರು ಕ್ರಿಸ್ತನಲ್ಲಿ ಮಾತ್ರವೇ ನಾವು ಪಾಪದಿಂದ ಮತ್ತು ಅದರ ದಂಡನೆಯಿಂದ ನಿಜವಾದ ಸ್ವಾತಂತ್ರವನ್ನು ಹೊಂದ ಬಲ್ಲೆವು (ಗಲಾತ್ಯ 5:13 ಮತ್ತು ವ್ಯಾಖ್ಯಾನ ನೋಡಿರಿ).

20 ಈ ಸುಳ್ಳು ಬೋಧಕರ ಮುಖ್ಯ ಪಾಪವೇನೆಂದರೆ, ಅವರು ಹೊಸ ಕ್ರೈಸ್ತರನ್ನು ಮೋಸಗೊಳಿಸಿ ಮಾರ್ಗತಪ್ಪಿಸಿದ್ದಾರೆ (ವಚನ 3 ಮತ್ತು ವ್ಯಾಖ್ಯಾನ ನೋಡಿರಿ). ಈ ಹೊಸ ವಿಶ್ವಾಸಿಗಳು ಇತ್ತೀಚೈಗಷ್ಟೇ ಲೋಕದ ಮಲಿನತ್ವಗಳಿಗೆ ತಪ್ಪಿಸಿಕೊಂಡಿದ್ದರು. ಆದರೆ ಈಗ ಈ ಬೋಧಕರ ಸುಳ್ಳು ಬೋಧನೆಯ ಮೂಲಕ ಅವರು ಲೋಕದಲ್ಲಿ ಸಿಕ್ಕಿಕೊಂಡು ಸೋತು ಹೋಗಿದ್ದರು. ಹೀಗೆ ಅವರ ಎರಡನೆಯ ಸ್ಥಿತಿಯು ಮೊದಲಿನದಕ್ಕಿಂತ ಕೆಟ್ಟದ್ದಾಗಿತ್ತು (ಮತ್ತಾಯ 12:43-45 ನೋಡಿರಿ).

21 ಒಬ್ಬ ವ್ಯ ಕ್ತಿಯು ಗೊತ್ತಿದ್ದೂ ಪಾಪ ಮಾಡುವದಕ್ಕಿಂತ ಗೊತ್ತಿಲ್ಲದೆ ಪಾಪ ಮಾಡುವು ದು ಉತ್ತಮವಾಗಿರುತ್ತದೆ. (ಲೂಕ 12:47-48; ಯೋಹಾನ 15:2 ವ್ಯಾಖ್ಯಾನಗಳನ್ನು ನೋಡಿರಿ). ನೀತಿ ಮಾರ್ಗವನ್ನು ತಿಳಿದು ಪರಿಶುದ್ಧ ಆಜ್ಞೆಯಿಂದ– ಅಂದರೆ, ಕ್ರಿಸ್ತನ ಆಜ್ಞೆಗಳಿಂದ ತೊಲಗಿಹೋಗುವ ಜನರಿಗೆ ವಿಶೇಷವಾಗಿ ನ್ಯಾಯತೀರ್ಪು ಬಹಳ ಕಠಿಣವಾಗಿರುವದು (ಇಬ್ರಿಯ 3:12-14; 6:4-6; 10:26-29 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

22 ಯೆಹೂದ್ಯರು ನಾಯಿ ಹಾಗೂ ಹಂದಿಗಳನ್ನು ಅಶುದ್ಧವೆಂದು ಪರಿಗಣಿಸುತ್ತಿದ್ದರು (ಮತ್ತಾಯ 7:6 ನೋಡಿರಿ) ನಾಯಿಯು ಏನನ್ನಾದರೂ ಕಕ್ಕಿದರೆ ಅದನ್ನು ಪು ನಃ ತಿನ್ನುತ್ತದೆ. ಅದೇ ರೀತಿಯಾಗಿ ಲೋಕದ ಮಲಿನತ್ವದಲ್ಲಿ ಸಿಕ್ಕಿಕೊಂಡಿರುವ ವ್ಯಕ್ತಿಯು ಸ್ವಲ್ಪ ಕಾಲ ಮಲಿನತ್ವವನ್ನು "ಕಕ್ಕಬಹುದು" ಆದರೆ ಆತನು ಶೀಘ್ರವೇ ಪು ನಃ ಅದರಲ್ಲಿ ಪಾಲುಗಾರನಾಗುವನು. ಅದೇ ವಿಧದಲ್ಲಿ, ನೀವು ಒಂದು ಹಂದಿಯನ್ನು ತೊಳೆದು ತಾತ್ಕಾಲಿಕವಾಗಿ ಶುಚಿಮಾಡಬಹುದು, ಆದರೆ ಅದು ಶೀಘ್ರವೇ ಪು ನಃ ಕೆಸರಿನಲ್ಲಿ ಹೊರಳಾಡುವದಕ್ಕೆ ಹೋಗುವದು. ಅದೇರೀತಿಯಾಗಿ ಒಬ್ಬ ವ್ಯಕ್ತಿಯು ತಾತ್ಕಾಲಿಕವಾಗಿ ತನ್ನ ಪಾಪದಿಂದ ಶುಚಿಗೊಳ್ಳಬಹುದು, ಆದರೆ ಆತನು ನೂತನ ಆತ್ಮೀಕ ಸ್ವಭಾವವನ್ನು ಹೊಂದದಿದ್ದರೆ ಶೀಘ್ರವೇ ತಿರಿಗಿ ತನ್ನ ಪಾಪಕ್ಕೆ ಹಿಂದಿರುಗುವನು.

ದೇವರ ಕೃಪೆಯನ್ನು ಹಾಗೂ ಆತನ ಶುದ್ಧೀಕರಿಸುವಿಕೆಯನ್ನು ಅನುಭವಿಸಿದವರು ಪು ನಃ ದೇವರಿಂದ ವಿಮುಖರಾಗಿ ತಮ್ಮ ಪೂರ್ವಪಾಪಗಳಿಗೆ ಹಿಂದಿರುಗುವವರು ನಾಯಿಗಳ ಹಾಗೂ ಹಂದಿಗಳಂತಿದ್ದಾರೆ. ಅವರ ಅಂತರ್ಯಸ್ವಭಾವವು ರೂಪಾಂತಗೊಂಡಿಲ್ಲ ಅವರು ತಮ್ಮನ್ನು ಸಂಪೂರ್ಣವಾಗಿ ತಮ್ಮ ಪೂರ್ವ ಮಾರ್ಗಗಳಿಂದ ಸ್ವತಂತ್ರ ಗೊಳಿಸಿಕೊಳ್ಳಲಾರರು. ಪೇತ್ರನು ಈ ಸುಳ್ಳು ಬೋಧಕರ ವಿಷಯದಲ್ಲಿ ಎಂಥ ಭಯಂಕರ ಸಂಗತಿಗಳನ್ನು ಹೇಳ ಬೇಕಾಗಿತ್ತಲ್ಲವೇ! ಯೇಸು ಪೇತ್ರನಿಗೆ "ನನ್ನ ಕುರಿಗಳನ್ನು ಮೇಯಿಸು" ಎಂದು ಹೇಳಿದನು (ಯೋಹಾನ 21:17). ಆದರೆ ಪೇತ್ರನು ಈಗ ಈ ಸುಳ್ಳು ಬೋಧಕರು ಯೇಸುವಿನ ಕುರಿಗಳಿಗೆ ವಿಷ ಮೇಯಿಸುವದನ್ನು ನೋಡಿರುತ್ತಾನೆ– ಮತ್ತು ಕುರಿಗಳು ಅದನ್ನು ತಿಳಿದಿರುವದೇ ಇಲ್ಲ! ಅಂಥ ವಿಷಕಾರಿ ಹಾಗೂ ಸುಳ್ಳು ಬೋಧಕರು ನಮ್ಮ ಸಭೆಯಲ್ಲಿ ಎಂದಿಗೂ ಉದ್ಭವಿಸುವದಿಲ್ಲ ಎಂದು ಹೇಳದಿರೋಣ. ಅವರು ಖಂಡಿತವಾಗಿಯೂ ಎದ್ದೇಳಬಲ್ಲರು. ಯೇಸು ಹೇಳಿದ್ದೇನೆಂದರೆಃ "ನಾನು ನಿಮಗೆ ಹೇಳಿದ್ದನ್ನು ಎಲ್ಲರಿಗೂ ಹೇಳುತ್ತೇನೆ "ಎಚ್ಚರವಾಗಿರಿ" (ಮಾರ್ಕ 13:37).

# ಅಧ್ಯಾಯ - 3

## ಯೇಸುವಿನ ಎರಡನೆಯ ಬರೋಣ (3:1-18)

**1-2** ಪೇತ್ರನು ತನ್ನ ಎರಡೂ ಪತ್ರಿಕೆಗಳನ್ನು ಕ್ರೈಸ್ತರಿಗೆ ಹಳೆ ಒಡಂಬಡಿಕೆಯ ಪ್ರವಾದಿಗಳ ಹಾಗೂ ಹೊಸ ಒಡಂಬಡಿಕೆಯ ಅಪೊಸ್ತಲರ ಬೋಧನೆಗಳನ್ನು ಜ್ಞಾಪಕಪಡಿಸುವದಕ್ಕಾಗಿ ಬರೆದನು. ಪ್ರವಾದಿಗಳೂ ಅಪೊಸ್ತಲರೂ ಒಂದೇ ಪವಿತ್ರಾತ್ಮನಿಂದ ಪ್ರೇರಿಸಲ್ಪಟ್ಟು ನಡಿಸಲ್ಪಟ್ಟರು (2 ಪೇತ್ರ 1:21). ಕ್ರಿಸ್ತನ ಸಭೆಯು ಪ್ರವಾದಿಗಳ ಹಾಗೂ ಅಪೊಸ್ತಲರೆಂಬ ಅಸ್ತಿವಾರದ ಮೇಲೆ ಕಟ್ಟಲ್ಪಟ್ಟಿದೆ (ಎಫೆಸ 2:19-21). ಪೇತ್ರನು ೨ನೇ ವಚನದಲ್ಲಿ ಪ್ರಸ್ತಾಪಿಸಿರುವ ಕರ್ತನಾದ ರಕ್ಷಕನು ಕೊಟ್ಟ ಆಜ್ಞೆಯು[2] ಅಪೊಸ್ತಲರ[3] ಮೂಲಕ ತಿಳಿಸಲ್ಪಟ್ಟ ಯೇಸುವಿನ ಮುಖ್ಯ ಬೋಧನೆಗಳನ್ನು ಸೂಚಿಸುತ್ತದೆ.

**3-4** ಕಡೇ ದಿವಸಗಳಲ್ಲಿ[4]..... ಕುಚೋದ್ಯಗಾರನು ಬರುವರು. ಕುಚೋದ್ಯಗಾರರು ೨ನೇ ಅಧ್ಯಾಯದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಸುಳ್ಳು ಬೋಧಕರು. ಲೋಕವು ಉತ್ಪತ್ತಿಯಾದಂದಿನಿಂದ ಸಂಗತಿಗಳು ಮಾರ್ಪಡದೆ ಇರುತ್ತವೆ ಎಂದು ಅವರು ಹೇಳುವರು. ಅವರು ತಮ್ಮ ಪಿತೃಗಳಾದ ಅಬ್ರಹಾಮ, ಇಸಾಕ ಹಾಗೂ ಯಾಕೋಬರ ಕಾಲದಿಂದ ಸಮಸ್ತವೂ ಹಾಗೆಯೇ ಸಾಗುತ್ತಿದೆ ಎಂದು ಹೇಳುತ್ತಾರೆ. "ಲೋಕದ ಅಂತ್ಯ ಎಲ್ಲಿದೆ"? ಎಂದು ಅವರು ಅಪಹಾಸ್ಯ ಮಾಡುತ್ತಾ ಕೇಳುತ್ತಾರೆ. ಕ್ರಿಸ್ತನು ಎಲ್ಲಾ ಜನರಿಗೂ ನ್ಯಾಯ ತೀರಿಸಲು ತಿರಿಗಿ ಬರುತ್ತಾನೆಂಬವದನ್ನು ಅವರು ನಂಬುವದಿಲ್ಲ. ತಮ್ಮ ದುರಾಶೆಗಳ ಪ್ರಕಾರ ನಡೆಯುವ ಜನರು ಅಂತಿಮ ನ್ಯಾಯ ತೀರ್ಪಿನ ಕುರಿತು ಯೋಚಿಸುವದಕ್ಕೆ ಇಷ್ಟ ಪಡುವದಿಲ್ಲ!

**5** ಲೋಕದ ಅಂತ್ಯವು ಬರುವದೇ ಇಲ್ಲ ಎಂದು ಹೇಳುವ ಕುಚೋದ್ಯ ಗಾರರು ಭೂಮಿಯನ್ನು ದೇವರು ಒಂದು ಕಾಲದಲ್ಲಿ ತನ್ನ ವಾಕ್ಯದ ಮೂಲಕ ಸೃಷ್ಟಿದ್ದನೆಂಬದನ್ನು ಮರೆತು ಬಿಡುತ್ತಾರೆ (ಆದಿಕಾಂಡ 1:1-2, 6-10; ಯೋಹಾನ 1:13). ದೇವರು ಭೂಮಿಯನ್ನು ಈ ವಿಧದಲ್ಲಿ ಸೃಷ್ಟಿಸಿದ್ದದಾದರೆ ಖಂಡಿತವಾಗಿಯೂ ಆತನು ಭೂಮಿಯನ್ನು ನಾಶಮಾಡಬಲ್ಲವನೂ ಆಗಿದ್ದಾನೆ.

**6** ಅದು ಮಾತ್ರವಲ್ಲದೆ, ದೇವರು ಪೂರ್ವ ಕಾಲದಲ್ಲಿ ಭೂಮಿಯ ಮೇಲೆ ಜಲಪ್ರಳಯವನ್ನು ಬರಮಾಡಿ ನೋಹನ ಕಾಲದ ದುರ್ಮಾರ್ಗಿಗಳನ್ನೆಲ್ಲಾ ನಾಶಮಾಡಿನೆಂಬದನ್ನು ಕುಚೋದ್ಯಗಾರರು ಜ್ಞಾಪಕದಲ್ಲಿಟ್ಟುಕೊಳ್ಳಬೇಕು (ಆದಿಕಾಂಡ 7:17-24). ದೇವರು ಮನುಷ್ಯನ ಪಾಪವನ್ನು ಸಹಿಸಲಾರನು, ಆತನು ಜನರನ್ನು ಅದಕ್ಕಾಗಿ ಶಿಕ್ಷಿಸಲೇಬೇಕು ಮತ್ತು ದೇವರು ನೋಹನ ಕಾಲದ ಜನರನ್ನು ನಾಶಮಾಡಿದ ಪ್ರಕಾರವೇ ಕ್ರಿಸ್ತನು ಎರಡನೆಯ ಸಾರಿ ಬರುವಾಗ ಲೋಕಾಂತ್ಯದಲ್ಲಿ ದೇವರು ಜನರನ್ನು ಪು ನಃ ಶಿಕ್ಷಿಸುವನು (ಮತ್ತಾಯ 24:37-39 ನೋಡಿರಿ).

**7** ಅದೇ ವಾಕ್ಯದ– ಅಂದರೆ, ದೇವರ ವಾಕ್ಯದ– ಬಲದಿಂದ ಈಗಿರುವ ಭೂಮ್ಯಾಕಾಶಗಳು ಬೆಂಕಿಯ ಮೂಲಕ ನಾಶವಾಗುವವು (ವಚನ 10:12), ಮತ್ತು ಭಕ್ತಿಹೀನರೆಲ್ಲರಿಗೂ ನ್ಯಾಯತೀರ್ಪು ಉಂಟಾಗಿ ದಂಡನೆಯಾಗುವದು (ಯೆಶಾಯ 66:15-16; ಮಲಾಕಿ 4:1-2; 1 ಕೊರಿಂಥ 3:13; 2 ಥೆಸಲೋನಿಕ 1:7-8 ನೋಡಿರಿ).

**8** ಪೇತ್ರನು ಈ ಪತ್ರಿಕೆಯನ್ನು ಬರೆದ ಕಾಲದಲ್ಲಿ ವಿಶ್ವಾಸಿಗಳಲ್ಲಿ ಅನೇಕರು ಯೇಸು ಇನ್ನು ಬಂದಿಲ್ಲವೇಕೆ ಎಂದು ಚಿಂತಾಕ್ರಾಂತರಾಗಲು ಪ್ರಾರಂಭಿಸಿದ್ದರು. ಮತ್ತು ಕುಚೋದ್ಯ ಮಾಡುವ ಸುಳ್ಳುಬೋಧಕರು, "ನೋಡಿರಿ ಆತನು ಬರಲಿಕ್ಕಿರುವದಿಲ್ಲ" ಎಂದು ಹೇಳುತ್ತಿದ್ದರು. ಆದದರಿಂದ, ಪೇತ್ರನು ಈ ವಿಶ್ವಾಸಿಗಳಿಗೆ ಹೇಳುವದೇನೆಂದರೆಃ "ಸಂದೇಹ ಪಡದಿರಿ; ದೇವರು ಕ್ರಿಸ್ತನ ಬರೋಣವನ್ನು ತಡಗೊಳಿಸಿದ್ದಾನೆಂದು ಯೋಚಿಸಬೇಡಿರಿ. ದೇವರು ದೃಷ್ಟಿಯಲ್ಲಿ ಸಾವಿರ ವರ್ಷಗಳು ಒಂದು ದಿನದಂತೆ ಇದೆ" (ಕೀರ್ತನೆಗಳು 90:4). ನಿತ್ಯತ್ವಕ್ಕೆ ಹೋಲಿಸಿದರೆ ಸಾವಿರ ವರ್ಷಗಳು ಒಂದು ಕ್ಷಣವಷ್ಟೇ ಆಗಿದೆ. ಅದು ಮಾತ್ರವಲ್ಲದೆ, ದೇವರ ದೃಷ್ಟಿಯಲ್ಲಿ ಒಂದು ದಿನವು ಸಾವಿರ ವರ್ಷಗಳಂತಿದೆ. ದೇವರು ಸಾವಿರ ವರ್ಷಗಳ ಕೆಲಸವನ್ನು ಒಂದು ದಿನದಲ್ಲಿ ಮಾಡಬಲ್ಲನು. ಆದದರಿಂದ, ದೇವರು ಮಾಡುವದನ್ನು ತನ್ನ ಸ್ವಂತ ಸಮಯದಲ್ಲಿ ಮಾಡುತ್ತಾನೆ ಹೊರತು ನಮ್ಮ ಆಲೋಚನೆಗಳಿಗೆ ಅನುಗುಣವಾಗಿ ಮಾಡುವದಿಲ್ಲ ನಾವು ಚಿಂತಿಸುವ ಅಗತ್ಯವಿಲ್ಲ. ದೇವರು ತಾನು ವಾಗ್ದಾನ ಮಾಡಿದ್ದನ್ನು ನೆರವೇರಿಸುತ್ತಾನೆ. ನಮ್ಮ ಕೆಲಸವಷ್ಟೇಃ ಎಚ್ಚರ ವಾಗಿರುವದು ಪ್ರಾರ್ಥಿಸುವದು ಹಾಗೂ ವಿಧೇಯರಾಗುವದು.

**9** ಆದದರಿಂದ, ದೇವರು ಕ್ರಿಸನನ್ನು ಎರಡ ನೆಯ ಸಾರಿ ಲೋಕಕ್ಕೆ ಕಳುಹಿಸುವದನ್ನು ಅನಾವಶ್ಯಕವಾಗಿ ನಿಧಾನಮಾಡುತ್ತಿದ್ದಾನೆಂದು ನಾವು ಭಾವಿಸಿಕೊಳ್ಳದಿರೋಣ. ಬದಲಾಗಿ, ಆತನು ದೀರ್ಘಶಾಂತಿಯಿಂದಲೂ ಕರುಣೆ–ಯುಳ್ಳವನಾಗಿಯೂ ಇದ್ದಾನೆ. ಕ್ರಿಸ್ತನು ನ್ಯಾಯಾಧಿಪತಿಯಾಗಿ ಪು ನಃ ಬರುವದಕ್ಕೆ ಮುಂಚೆ ದೇವರು ಪು ರುಷ ಮತ್ತು ಸ್ತ್ರೀಯರಿಗೆ ಪಶ್ಚಾತಾಪ ಪಡುವದಕ್ಕೆ ಹೆಚ್ಚು ಸಮಯವನ್ನು ಕೊಡುತ್ತಿದ್ದಾನೆ. ಯಾವನಾದರೂ ನಾಶವಾಗುವದು ದೇವರ ಅಭಿಲಾಷೆಯಾಗಿರುವದಿಲ್ಲ. ಮನುಷ್ಯರು ನಾಶವಾದರೆ ಆದಕ್ಕೆ ದೇವರು ಕಾರಣನಲ್ಲ ಆದರೆ ಅವರ ಪಾಪವೇ ಕಾರಣವಾಗಿರುತ್ತದೆ. ಅವರು ನಮ್ಮ ರಕ್ಷಕನಾದ ದೇವರ ಮಗನನ್ನು ತಿರಸ್ಕರಿಸಿರುವದರಿಂದ ನಾಶವಾಗುತ್ತಾರೆ (ಯೆಹೆಜ್ಕೇಲ 18:23; 1 ತಿಮೊಥೆ 2:4 ಮತ್ತು ವ್ಯಾಖ್ಯಾನ ನೋಡಿರಿ). ಹೇಗಿದ್ದರೂ, ಯೇಸು ತಿರಿಗಿ ಬರುವಾಗ ಜನರಿಗೆ ಮಾನಸಾಂತರ ಪಡುವದಕ್ಕೆ ಇನ್ನೂ ಯಾವ ಅವಕಾಶವೂ ಇರುವದಿಲ್ಲ. ಮತ್ತು ಯೇಸು ಯಾವಾಗ ಬರುವನೆಂಬದು ಯಾರಿಗೂ ಗೊತ್ತಿರುವದಿಲ್ಲ (ಮಾರ್ಕ 13:32; ಅ.ಕೃತ್ಯ 1:7). ಈ ಕಾರಣದಿಂದಲೇ ಜನರು ತಡಮಾಡದೆ ಈಗಲೇ ಮಾನಸಾಂತರ

ಪಟ್ಟು ತಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿಡಬೇಕು. ಯಾಕೆಂದರೆ ನಾಳೆ ಯೇಸು ಬಂದು ಅವರು ಮಾನಸಾಂತರ ಪಟ್ಟಿಲ್ಲವಾದರೆ ಅವರು ನಾಶವಾಗುವರು (ಮಾರ್ಕ 13:33-37 ನೋಡಿರಿ)..... ಇದೇ ಆ ರಕ್ಷಣೆಯ ದಿನ (2 ಕೊರಿಂಥ 6:2).

**10** ಕರ್ತನ ದಿನವು (ಕ್ರಿಸ್ತನು ತಿರಿಗಿ ಬರುವ ದಿನವು), ಕಳ್ಳನು ಬರುವಂತೆ ಬರುವದು. ಕ್ರಿಸ್ತನು ಯಾರೂ ಆತನನ್ನು ನಿರೀಕ್ಷಿಸದಿರುವಾಗ ಪಕ್ಕನೇ ಬರುವನು (ಮತ್ತಾಯ 24:43-44; 1 ಥೆಸಲೋನಿಕ 5:2-3; ಪ್ರಕಟಣೆ 3:3; 16:15 ನೋಡಿರಿ). ಕ್ರಿಸ್ತನು ತಿರಿಗಿಬರುವಾಗ ಭೂಮ್ಯಾಕಾಶಗಳುಸಂಪೂರ್ಣವಾಗಿನಾಶವಾಗುವವು (ಯೆಶಾಯ 34:4; ಮಾರ್ಕ 13:24-25, 31; ಲೂಕ 21:25-26). ದೇವರು ಪೂರ್ವ ಕಾಲದಲ್ಲಿ ಲೋಕಕ್ಕೆ ನೀರಿನಿಂದ ನ್ಯಾಯ ತೀರಿಸಿದ ಪ್ರಕಾರವೇ (ವಚನ 6), ಆತನು ಪುನಃ ಲೋಕಕ್ಕೆ ಬೆಂಕಿಯಿಂದ ನ್ಯಾಯ ತೀರಿಸುವನು; ಮತ್ತು ಬೆಂಕಿಯಿಂದ ಭೂಲೋಕವು ಸಂಪೂರ್ಣವಾಗಿ ಸುಟ್ಟು ಹೋಗುವದು (1 ಕೊರಿಂಥ 3:13-15; 2 ಥೆಸಲೋನಿಕ 1:6-8; ಇಬ್ರಿಯ 10:26-27; 12:29 ನೋಡಿರಿ).

**11-12** ಯೇಸು ಲೋಕಕ್ಕೆ ನ್ಯಾಯ ತೀರಿಸಲು ಶೀಘ್ರವೇ ಬರುವನೆಂಬದನ್ನು ತಿಳಿದ ಬಳಿಕ ನಾವು ಪರಿಶುದ್ಧವಾದ ನಡವಳಿಕೆಯೂ ಭಕ್ತಿಯೂ ಉಳ್ಳವರಾಗಿ ಜೀವಿಸಬೇಕು (ವಚನ ೧೧). ಯಾಕೆಂದರೆ, ನಾವು ಸಹ ಲೋಕದೊಂದಿಗೆ ನ್ಯಾಯ ತೀರ್ಪಿಗೊಳಗಾಗಬಾರದು (ರೋಮ 13:11-12; 1 ಥೆಸಲೋನಿಕ 5:4-8 ನೋಡಿರಿ). ನಾವು ಪ್ರತಿಯೊಬ್ಬರು ನಮ್ಮ ಜೀವಿತಗಳಲ್ಲಿ ದೇವರ ಚಿತ್ತವನ್ನು ನೆರವೇರಿಸುವದಾದರೆ ದೇವರ ದಿನವು – ಕ್ರಿಸ್ತನು ತಿರಿಗಿ ಬರುವ ದಿನವು – ಬೇಗನೇ ಬರುವದು; ನಾವು ಅದು ಬೇಗ ಬರುವಂತೆ ಮಾಡುವೆವು (ಅ.ಕೃತ್ಯ 3:19-21 ನೋಡಿರಿ). ನಾವು ದೇವರ ಸುವಾರ್ತೆಯನ್ನು ಎಲ್ಲಾ ದೇಶಗಳಿಗೂ ಹರಡಿಸುವದನ್ನು ಆತನು ಕಾಯುತ್ತಿದ್ದಾನೆ ಆಗ ಅಂತ್ಯವು ಬರುವದು (ಮತ್ತಾಯ 24:14). ನಾವು ಮಾನಸಾಂತರ ಪಟ್ಟು ವಿಧೇಯರಾಗಿ ಸುವಾರ್ತೆಯನ್ನು ಸಾರುವದು ಮಾತ್ರವಲ್ಲ, ಆದರೆ ನಾವು ಈ ಪ್ರಾರ್ಥನೆಯನ್ನೂ ಮಾಡಬೇಕುಃ ಪರಲೋಕದಲ್ಲಿರುವ ನಮ್ಮ ತಂದೆಯೇ ನಿನ್ನ ನಾಮವು ಪರಿಶುದ್ಧವೆಂದೆನಿಸಲ್ಪಡಲಿ. ನಿನ್ನ ರಾಜ್ಯವು ಬರಲಿ... (ಮತ್ತಾಯ 6:9-10).

**13** ವಿಶ್ವಾಸಿಗಳು ಕ್ರಿಸ್ತನ ಎರಡನೆಯ ಬರೋಣಕ್ಕೆ ಭಯಪಡಬೇಕಾಗಿಲ್ಲ. ಈ ಹಳೆಯ ಭೂಮಿಯು ನಾಶವಾಗುವದು, ಆದರೆ ನೀತಿವಂತರು ನೂತನಾಕಾಶಮಂಡಲವನ್ನೂ ನೂತನ ಭೂಮಂಡಲವನ್ನು ಪ್ರವೇಶಿಸುವವರು (ಯೆಶಾಯ 60:19-22; 65:17; 66:22; ಮತ್ತಾಯ 13:40-43; ಪ್ರಕಟಣೆ 21:1-4 ನೋಡಿರಿ).

**14** ನೀತಿವಂತರು ಮಾತ್ರವೇ ನೂತನ ಭೂಮ್ಯಾಕಾಶಗಳನ್ನು ಪ್ರವೇಶಿಸುತ್ತಾರಾದ್ದರಿಂದ ನಾವು ನೀತಿವಂತರಾಗಿ ಕಾಣಿಸಿಕೊಳ್ಳುವದಕ್ಕೆ ಸಕಲ ಪ್ರಯಾಸಪಡಬೇಕು– ಅಂದರೆ, ಆತನೊಂದಿಗೆ ಸಮಾಧಾನದಿಂದಿರುವವರಾಗಿಯೂ ನಿರ್ಮಲರಾಗಿಯೂ ನಿರ್ದೋಷಿಗಳಾಗಿಯೂ ಕಾಣಿಸಿಕೊಳ್ಳುವದಕ್ಕೆ ಪ್ರಯಾಸಪಡಿರಿ (ಇಬ್ರಿಯ 12:28 ಮತ್ತು ವ್ಯಾಖ್ಯಾನ ನೋಡಿರಿ). ಯೋಹಾನನು ಬರೆಯುವದೇನೆಂದರೆಃ.....ಆತನು ಪ್ರತ್ಯಕ್ಷನಾಗುವಾಗ ನಾವು ಆತನ ಆಗ ಮನದಲ್ಲಿ ಆತನ ಮುಂದೆ ನಿಲ್ಲಲು ನಾಚಿಕೆಪಡದೆ ಧೈರ್ಯದಿಂದಿರುವಂತೆ ಆತನಲ್ಲಿ ನೆಲೆಗೊಂಡಿರ್ರಿ (1 ಯೋಹಾನ 2:28) ಕ್ರಿಸ್ತನ ಬರೋಣವನ್ನು ನಿರೀಕ್ಷಿಸುವವರು ಪರಿಶುದ್ದರಾಗಿ ಜೀವಿಸಲು ಸಹ ಅಭಿಲಾಷಿಸುವವರು (1 ಯೋಹಾನ 3:3).

ನಮ್ಮನ್ನು ನಾವು ಈ ಪ್ರಶ್ನೆಯನ್ನು ಕೇಳಿಕೊಳ್ಳೋಣಃ ತಕ್ಷಣವೇ ನಮಗೆ ಯೇಸು ಒಂದು ವರ್ಷದಲ್ಲಿ ಬರಲಿರುವನೆಂದು ತಿಳಿದುಬರುವದಾದರೆ ನಾವು ನಮ್ಮ ಜೀವಿತಗಳನ್ನು ಯಾವ ರೀತಿಯಲ್ಲಿ ವ್ಯತ್ಯಾಸವಾಗಿ ಜೀವಿಸುವೆವೋ? ನಮ್ಮ ಉತ್ತರವು ಇಲ್ಲ ಎಂದಾಗಿರಬೇಕು! ನಾವು ಪ್ರಸ್ತುತ ನಮ್ಮ ಜೀವಿತಗಳನ್ನು ದೇವರ ಚಿತ್ತಕ್ಕನುಸಾರವಾಗಿ ಜೀವಿಸುತ್ತಿರುವದಾದರೆ ಯೇಸು ಒಂದು ವರ್ಷದಲ್ಲಿ ಬರಲಿರುವನೆಂಬ ಮಾಹಿತಿಯು ನಮ್ಮ ನಡವಳಿಕೆಯಲ್ಲಿ ಯಾವ ವ್ಯತ್ಯಾಸವನ್ನು ಉಂಟು ಮಾಡಬಾರದು (ದೀರ್ಘಾವಧಿಯ ಯೋಜನೆಗಳನ್ನು ವಜಾ ಮಾಡುವದನ್ನು ಹೊರತು ಪಡಿಸಿ (ನಾವು ಪ್ರತಿದಿನವನ್ನೂ ಕರ್ತನ ಈಗಲೇ ಬರಲಿದ್ದಾನೇನೋ ಎಂಬಂತೆ ಜೀವಿಸುತ್ತಿರಬೇಕು).

**15** ದೇವರು ದೀರ್ಘಶಾಂತಿಯಿಂದ ಕಾಯ್ದುಕೊಳ್ಳವಷ್ಟುಕಾಲ ಹೆಚ್ಚು ಜನರಿಗೆ ಮಾನಸಾಂತರ ಪಟ್ಟು ರಕ್ಷಣೆ ಹೊಂದುವ ಅವಕಾಶವು ದೊರೆಯುವದು (ವಚನ 9 ಮತ್ತು ವ್ಯಾಖ್ಯಾನ ನೋಡಿರಿ).

ಪೌಲನು ಸಹ ತನ್ನ ಅನೇಕ ಪತ್ರಿಕೆಗಳಲ್ಲಿ ಕ್ರೈಸ್ತರು ಕರ್ತನ ಬರೋಣವನ್ನು ಎದುರು ನೋಡುವವರಾಗಿರಲಾಗಿ ಪರಿಶುದ್ಧರಾಗಿಯೂ, ದೀರ್ಘಶಾಂತಿಯುಳ್ಳವರಾಗಿಯೂ, ದೃಢವಾಗಿಯೂ, ಇರಬೇಕೆಂದು ಪೌಲನು ಅನೇಕ ಸಾರಿ ಬರೆದನು.

**16** ಪೌಲನ ಪತ್ರಿಕೆಗಳು ನಮಗೆ ಅರ್ಥ ಮಾಡಿಕೊಳ್ಳಲು ಕಠಿಣವಾಗಿ ತೋರುವದಾದರೆ ನಾವು ನಿರಾಶೆಗೊಳ್ಳದಿರೋಣಃ ಪೇತ್ರನಿಗೆ ಸಹ ಪೌಲನು ಬರೆದ ಕೆಲವು ವಿಷಯಗಳನ್ನು ಅರ್ಥಮಾಡಿಕೊಳ್ಳುವದು ಕಷ್ಟಕರವಾಗಿತ್ತು. ಆದರೆ ಅನೇಕರು ಪೌಲನ ಅರ್ಥವನ್ನು ತಪ್ಪಾದ ಅರ್ಥಮಾಡಿಕೊಳ್ಳುತ್ತಾರೆ. ವಿಶೇಷವಾಗಿ, ಅವರು ಮನುಷ್ಯನು ನಂಬಿಕೆಯಿಂದ ರಕ್ಷಣೆ ಹೊಂದುತ್ತಾನೆ ಹೊರತು ಕ್ರಿಯೆಗಳಿಂದಲ್ಲ ಎಂಬ ಪೌಲನ ಬೋಧನೆಗೆ ತಪ್ಪಾದ ಅರ್ಥನೀಡುತ್ತಾರೆ. ಈ ವಿಧ್ಯಾಹೀನರೂ ಚಪಲಚಿತ್ತರೂ ನಾವು ನಂಬಿಕೆಯಿಂದ ರಕ್ಷಣೆ ಹೊಂದಿರುವರಿಂದ ಇನ್ನು ಮೇಲೆ ಯಾವದೇ ಸತ್ಕಾರ್ಯಗಳನ್ನು ಮಾಡಬೇಕಾಗಿಲ್ಲ; ನಾವು ನಮಗೆ ಇಷ್ಟ ವಾಗುವದನ್ನು ಮಾಡಬಹುದು ಎಂದು ಹೇಳುತ್ತಾರೆ ಈ ವಿಧದಲ್ಲಿ ಅವರು ಎಲ್ಲಾ ವಿಧವಾದ ಪಾಪದಲ್ಲಿ ಬೀಳುತ್ತಾರೆ.

**17** ಆದಕಾರಣ..... ಎಚ್ಚರಿಕೆಯಾಗಿರಿ (ಮಾರ್ಕ 13:5, 22-23 ನೋಡಿರಿ). ಯಾವ ವಿಶ್ವಾಸಿಯೂ ತನ್ನ ಸ್ಥಿರ ಮನಸ್ಸನ್ನು (ನಿಲುವು) ಬಿಟ್ಟು ಭ್ರಷ್ಟನಾಗದಿರಲಿ (ಇಬ್ರಿಯ 3:12; 4:1; 10:36-38 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**18** ನೀವು ಕೃಪೆಯಲ್ಲಿಯೂ ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ವಿಷಯವಾದ ಜ್ಞಾನದಲ್ಲಿಯೂ ಅಭಿವೃದ್ಧಿ ಹೊಂದುತ್ತಾ ಇರಿ. ಕೃಪೆಯನ್ನು ಹೊಂದಿಕೊಳ್ಳಬೇಕಾದರೆ ನಾವು ಕ್ರಿಸ್ತನ ಜ್ಞಾನವನ್ನು ಹೊಂದಬೇಕಾದ ಅಗತ್ಯವಿರುತ್ತದೆ– ಅಂದರೆ, ನಾವು ಕ್ರಿಸ್ತನನ್ನು ತಿಳಿದುಕೊಳ್ಳಬೇಕಾಗಿರುತ್ತದೆ (2 ಪೇತ್ರ 1:2 ಮತ್ತು ವ್ಯಾಖ್ಯಾನ ನೋಡಿರಿ). ಕ್ರೈಸ್ತ ಧರ್ಮವು ಕೇವಲ ಸಂತೋಷವಾಗಿರುವದು ಅಥವಾ ಒಳ್ಳೇ ಅನಿಸಿಕೆಗಳನ್ನು ಹೊಂದಿರುವದನ್ನು ಮಾತ್ರವೇ ಒಳಗೊಂಡಿಲ್ಲ. ಕ್ರೈಸ್ತ ಧರ್ಮವು ಕ್ರಿಸ್ತನ ಹಿಂಬಾಲಿಸುವದನ್ನು ಒಳಗೊಂಡಿರುತ್ತದೆ. ಕ್ರೈಸ್ತರು ಧರ್ಮವೊಂದನ್ನು ಹಿಂಬಾಲಿಸುವದಿಲ್ಲ; ಅವರು ಕ್ರಿಸ್ತನನ್ನು ಹಿಂಬಾಲಿಸುತ್ತಾರೆ. ಕ್ರಿಸ್ತನು ತಾನೇ ನಮ್ಮ ಮಾರ್ಗವಾಗಿದ್ದಾನೆ. ಕ್ರೈಸ್ತನಾಗಿರುವದೆಂದರೆ ಕ್ರಿಸ್ತನನ್ನು ವಯಕ್ತಿಕವಾಗಿ ತಿಳಿದುಕೊಂಡು ಆತನ ಆಜ್ಞೆಗಳಿಗೆ ವಿಧೇಯರಾಗುವದೇ ಆಗಿದೆ. ಹೀಗೆ ಮಾಡುವದಾದರೆ ಖಂಡಿತವಾಗಿಯೂ ನಾವು ಕೃಪೆಯಲ್ಲಿ ಅಭಿವೃದ್ಧಿಗೊಳ್ಳುವೆವು (2 ಪೇತ್ರ 1:5-8; 10-11 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಆತನಿಗೆ (ಕ್ರಿಸ್ತನಿಗೆ) ಈಗಲೂ ಸದಾಕಾಲವೂ ಸ್ತೋತ್ರ! ನಾವು ದೇವರಿಗೆ ಮಾತ್ರವಲ್ಲದೆ ಕ್ರಿಸ್ತನಿಗೆ ಸಹ ಸ್ತೋತ್ರ ಮಾಡುವೆವು, ಯಾಕೆಂದರೆ ಎಲ್ಲರೂ ತಂದೆಗೆ ಮಾನ ಕೊಡುವ ಪ್ರಕಾರವೇ ಮಗನಿಗೂ ಮಾನಕೊಡುವಂತಾಗಬೇ ಕೆಂಬದೇ (ಯೋಹಾನ 5:23). ಕ್ರಿಸ್ತನು ನಮ್ಮ ಮಾದರಿ; ಕ್ರಿಸ್ತನು ನಮ್ಮ ಗುರಿಯೂ ಆಗಿದ್ದಾನೆ, ಆತನು ಬೇಗನೇ ಬರುತ್ತಾನೆ. ಆದದರಿಂದ, ಪೇತ್ರನು 17ನೇ ವಚನದಲ್ಲಿ ಎಚ್ಚರಿಕೆಯಾಗಿರಿ. ಎಂದು ಹೇಳುತ್ತಾನೆ.

---

## ಟಿಪ್ಪಣಿ

[1] ಇಬ್ರಿಯ ಭಾಷೆಯಲ್ಲಿ ಮೆಸ್ಸೀಯ ಎಂದರೆ "ಅಭಿಷೀಕ್ತನು" ಗ್ರೀಕ್ ಭಾಷೆಯಲ್ಲಿ ಇದಕ್ಕೆ ಸಮಾನಪದವು "ಕ್ರಿಸ್ತನು".

[2] 2 ಪೇತ್ರ 2:21 ರಲ್ಲಿ ಈ ಆಜ್ಞೆಯು "ಪರಿಶುದ್ಧ ಆಜ್ಞೆ" ಎಂದು ಕರೆಯಲ್ಪಟ್ಟಿದೆ.

[3] ಅಪೊಸ್ತಲರ ಬೋಧನೆಗಳು ಬರೆಯಲ್ಪಟ್ಟ ಬಳಿಕ ಅವು ಗಳು ಹೊಸ ಒಡಂಬಡಿಕೆಯ ರೂಪದಲ್ಲಿ ಮುಂದಿನ ಎಲ್ಲಾ ಪೀಳಿಗೆಗಳಿಗೆ ಹಸ್ತಾಂತರಿಸಲ್ಪಟ್ಟಿರುತ್ತವೆ.

[4] ಅಂತ್ಯ ದಿವಸಗಳು ಯೇಸುವಿನ ಮೊದಲ ಬರೋಣ ಹಾಗೂ ಎರಡನೆಯ ಬರೋಣದ ನಡುವಿನ ದಿನಗಳಾಗಿವೆ. ಹೀಗೆ ನಾವು ಈಗ "ಕಡೇ ದಿವಸಗಳಲ್ಲಿ" ಜೀವಿಸುತ್ತಿದ್ದೇವೆ (2 ತಿಮೊಥೆ 3:1; ಇಬ್ರಿಯ 1:2 ನೋಡಿರಿ).

# ಯೋಹಾನನು ಬರೆದ ಮೊದಲನೆಯ ಪತ್ರಿಕೆ

## ಪರಿಚಯ

ಈ ಪತ್ರಿಕೆಯು ಜೆಬದಾಯನ ಮಗನಾದ ಅಪೊಸ್ತಲನೂ ಆಗಿರುವ ಯೋಹಾನನಿಂದ ಬರೆಯಲ್ಪಟ್ಟಿತು ಯೋಹಾನನು ಯೇಸುವಿನ ಹನ್ನೆರಡು ಮಂದಿ ಮೂಲ ಶಿಷ್ಯರಲ್ಲಿ ಒಬ್ಬನಾಗಿದ್ದನು (ಮಾರ್ಕ 1:19-20). ಯೋಹಾನನು ಯೇಸುವಿಗೆ ಪ್ರಿಯನಾದ ಶಿಷ್ಯನು ಎಂದು ಕರೆಯಲ್ಪಟ್ಟಿದ್ದನು (ಯೋಹಾನ 13:23; 21:20), ಯಾಕೆಂದರೆ ಯೇಸು ಆತನನ್ನು ಇತರ ಶಿಷ್ಯರಿಗಿಂತಲೂ ಹೆಚ್ಚು ಆಳವಾಗಿ ಪ್ರೀತಿಸಿದನು. ಯೋಹಾನ ಸುವಾರ್ತೆ, ಯೋಹಾನನ ಮೂರು ಹೊಸ ಒಡಂಬಡಿಕೆಯ ಪತ್ರಿಕೆಗಳು ಹಾಗೂ ಪ್ರಕಟಣೆ ಪುಸ್ತಕವು ಎಲ್ಲವೂ ಈ ಅಪೊಸ್ತಲನಾದ ಯೋಹಾನನಿಂದಲೇ ಬರೆಯಲ್ಪಟ್ಟವು. ಯೋಹಾನನು ಯೇಸುವಿನ ಮರಣದ ಬಳಿಕ ಅನೇಕ ವರ್ಷಗಳವರೆಗೆ ಜೀವಿಸಿದನು. ಆತನು ಈ ಪತ್ರಿಕೆಯನ್ನು ಕ್ರಿ.ಶಕ ಮೊದಲನೆಯ ಶತಮಾನದ ಅಂತ್ಯದ ಸಮೀಪದಲ್ಲಿ ಬರೆದನು.

ಆದದರಿಂದ, ಯೋಹಾನನು ಬಹಳ ಅಧಿಕಾರದಿಂದ ಬರೆದನು. ಕ್ರೈಸ್ತರೆಲ್ಲರೂ ಯೋಹಾನನನ್ನು ತಿಳಿದಿದ್ದರು. ವಾಸ್ತವದಲ್ಲಿ, ಯೋಹಾನನು ಎಷ್ಟು ಪ್ರಸಿದ್ದನಾಗಿದ್ದನೆಂದರೆ ಆತನು ಈ ಪತ್ರಿಕೆಯಲ್ಲಿ ತನ್ನನ್ನು ಹೆಸರು ಹೇಳಿ ಪರಿಚಯಿಸಿಕೊಳ್ಳುವ ಅಗತ್ಯವೇ ಇರಲಿಲ್ಲ.

ವಾಚಕರು ತಾವು ನಿತ್ಯಜೀವವನ್ನು ಹೊಂದಿದ್ದರೆಂಬದನ್ನು ತಿಳಿದುಕೊಳ್ಳಬೇಕೆಂದು ಯೋಹಾನನು ಈ ಮೊದಲನೆಯ ಪತ್ರಿಕೆಯನ್ನು ಬರೆದನು (1 ಯೋಹಾನ 5:13). ಆತನು ಅವರ ನಂಬಿಕೆಯನ್ನು ಬಲಪಡಿಸಲು ಬಯಸಿದ್ದನು.

ಯೋಹಾನನು ಈ ಪತ್ರಿಕೆಯನ್ನು ಬರೆದಾಗ ಎಲ್ಲಿದ್ದನು ಅಥವಾ ಯಾವ ಸಭೆಗೆ ಅದನ್ನು ಕಳುಹಿಸಿನೆಂಬದು ತಿಳಿದುಬಂದಿರುವದಿಲ್ಲ. ಬಹುಶಃ ಪತ್ರಿಕೆಯು ಹಲವಾರು ಸಭೆಗಳಿಗೆ ಕಳುಹಿಸಲ್ಪಡಬೇಕೆಂದು ಆತನ ಇಂಗಿತವಾಗಿತ್ತು. ಯೋಹಾನನು ಮುಖ್ಯವಾಗಿ ತಾನು ಯಾರಿಗೆ ಈ ಪತ್ರಿಕೆಯನ್ನು ಬರೆಯುತ್ತಿದ್ದಾನೋ ಅವರೊಳಗೆ ಉದ್ಭವಿಸಿದ್ದ ಸುಳ್ಳು ಬೋಧನೆಯನ್ನು ಖಂಡಿಸುವದಕ್ಕಾಗಿ ಈ ಪತ್ರಿಕೆಯನ್ನು ಬರೆದನು. ಕೆಲವು ಮಂದಿ ಸುಳ್ಳು ಬೋಧಕರು ಯೇಸು ಮನುಷ್ಯನಾಗಿ ನಿಜವಾಗಿಯೂ ಈ ಲೋಕಕ್ಕೆ ಬರಲೇ ಇಲ್ಲ ಎಂಬದಾಗಿ ಬೋಧಿಸುತ್ತಿದ್ದರು. ಯೇಸು ಕೇವಲ ಒಂದು ಆತ್ಮ ಅಥವಾ ದರ್ಶನ ಮಾತ್ರವೇ ಆಗಿದ್ದನು. ಆದರೆ ಯೇಸು ಪೂರ್ಣ ಮನುಷ್ಯನೂ, ಪೂರ್ಣ ದೇವರೂ ಆಗಿದ್ದನೆಂದು ಯೋಹಾನನು ಈ ಪತ್ರಿಕೆಯಲ್ಲಿ ಖಡಾಖಂಡಿತವಾಗಿ ಬರೆಯುತ್ತಾನೆ. ಯೇಸು ಪೂರ್ಣ ಮನುಷ್ಯನಾಗಿಲ್ಲದಿದ್ದರೆ ಆತನ ಮರಣಕ್ಕೆ ಯಾವ ಅರ್ಥವೂ ಇರುತ್ತಿರಲಿಲ್ಲ. ಆತನು ನಮ್ಮ ಪಾಪಗಳಿಗಾಗಿ ತನ್ನನ್ನು ಯಜ್ಞವಾಗಿ ಅರ್ಪಿಸಲಾಗುತ್ತಿರಲಿಲ್ಲ.

## ಹೊರ ರೇಖೆ

ಅ. ಬೆಳಕಾಗಿರು ದೇವರೊಂದಿಗೆ ಅನ್ಯೋನ್ಯತೆ (1:1-2:29).

1. ಜೀವ ವಾಕ್ಯ (1:1-4)
2. ಬೆಳಕಿನಲ್ಲಿ ನಡೆಯುವದು (1:5-10)
3. ದೇವರ ಆಜ್ಞೆಗಳಿಗೆ ವಿಧೇಯರಾಗುವದು (2:1-6)
4. ಒಂದು ನೂತನ ಆಜ್ಞೆ (2:7-17)
5. ಕ್ರಿಸ್ತ ವಿರೋಧಿಗಳ ವಿರುದ್ಧ ಎಚ್ಚರಿಕೆಗಳು (2:18-29).

ಆ. ನೀತಿವಂತನಾದ ದೇವರೊಂದಿಗೆ ಅನ್ಯೋನ್ಯತೆ (3:1-4:6)
   1. ಸರಿಯಾದದ್ದನ್ನು ಮಾಡುವದು (3:1-10)
   2. ಒಬ್ಬರನ್ನೊಬ್ಬರು ಪ್ರೀತಿಸುವದು (3:11-24)
   3. ಸುಳ್ಳು ಆತ್ಮಗಳ ವಿರುದ್ಧ ಎಚ್ಚರಿಕೆ (4:1-6).
ಇ. ಪ್ರೀತಿ ಸ್ವರೂಪನಾದ ದೇವರೊಂದಿಗೆ ಅನ್ಯೋನ್ಯತೆ (4:7; 5:11).
   1. ಪ್ರೀತಿಯ ವಿಷಯದಲ್ಲಿ ಉಪದೇಶಗಳು (5:7-21).
   2. ಮಗನಲ್ಲಿ ನಂಬಿಕೆ (5:1-12).
   3. ಮುಕ್ತಾಯದ ಹೇಳಿಕೆಗಳು (5:13-21).

## ಅಧ್ಯಾಯ - 1

### ಜೀವ ವಾಕ್ಯ (1:1-4)

1 ಜೀವ ವಾಕ್ಯವು ಸ್ವತಃ ಕ್ರಿಸ್ತನೇ. ಯೋಹಾನ 1:1 ರಲ್ಲಿ ಕ್ರಿಸ್ತನು ವಾಕ್ಯ ಎಂದು ಸಹ ಕರೆಯಲ್ಪಟ್ಟಿದ್ದಾನೆ. ದೇವರ ವಾಕ್ಯವು –ಅಂದರೆ, ಕ್ರಿಸ್ತನು– ಆದಿಯಿಂದಲೂ ದೇವರೊಂದಿಗಿದ್ದಾನೆ. ವಾಸ್ತವದಲ್ಲಿ, ಕ್ರಿಸ್ತನು ದೇವರೊಂದಿಗೆ ಆದಿಯಿಂದ ಮಾತ್ರವಲ್ಲದೆ, ಆದಿಗಿಂತ ಮುಂಚೆಯೇ ಇದ್ದನು, ಯಾಕೆಂದರೆ ದೇವರಿಗೆ ಆದಿ ಎಂಬುದೇ ಇಲ್ಲ. ದೇವರು ಯಾವಾಗಲೂ ಇದ್ದಾನೆ. ಮತ್ತು ಕ್ರಿಸ್ತನು ಸಹ ಇದ್ದಾನೆ.

ವಾಕ್ಯವು (ದೇವರ ವಾಕ್ಯವು) ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿತು (ಯೋಹಾನ 1:14). ದೇವರ ವಾಕ್ಯವು– ಕ್ರಿಸ್ತನು– ಈ ಲೋಕದೊಳಗೆ ದೇವರ ಏಕೈಕ ನಿಜವಾದ ನರಾವತಾರವಾಗಿ ಬಂದನು[1]. ದೇವರ ವಾಕ್ಯವು "ನರಾವತಾರ" ಎತ್ತಿತು– ಅಂದರೆ, ಮನುಷ್ಯನಾಯಿತು. ಯೋಹಾನ ಹಾಗೂ ಇತರ ಅಪೊಸ್ತಲರು ಕ್ರಿಸ್ತನನ್ನು ತಮ್ಮ ಕಣ್ಣಾರೆ ನೋಡಿದರು. ಅವರು ಆತನನ್ನು ತಮ್ಮ ಕೈಯಾರೆ ಮುಟ್ಟಿದರು. ಕ್ರಿಸ್ತನು ದರ್ಶನವಾಗಲಿ ಅಥವಾ ಆತ್ಮವಾಗಲಿ ಆಗಿರಲಿಲ್ಲ. ಅಪೊಸ್ತಲರು ಆತನನ್ನು ಮರಣದ ಮುಂಚೆ ಮಾತ್ರವಲ್ಲದೆ ಆತನು ಸತ್ತವರೊಳಗಿಂದ ಎದ್ದ ಮೇಲೆಯೂ ಮುಟ್ಟಿದ್ದರು (ಲೂಕ 24:39). ಆದದರಿಂದ, ದೇವಕುಮಾರನಾದ ಯೇಸು ಪೂರ್ಣ ಮನುಷ್ಯನು ಸಹ ಆಗಿದ್ದನೆಂದು ಯೋಹಾನನಿಗೆ ನಿಸ್ಸಂದೇಹವಾಗಿ ತಿಳಿದಿತ್ತು.

2 ಜೀವವು (ಕ್ರಿಸ್ತನು) ಪ್ರತ್ಯಕ್ಷವಾಯಿತು. ಯೋಹಾನನು ಕ್ರಿಸ್ತನನ್ನು ಈ ವಚನದಲ್ಲಿ ನಿತ್ಯಜೀವ ಎಂದು ಕರೆಯುತ್ತಾನೆ. ಯೋಹಾನನು ತನ್ನ ಸುವಾರ್ತೆಯಲ್ಲಿ ಬರೆಯುವದೇನೆಂದರೆಃ ಆತನಲ್ಲಿ ಜೀವವಿತ್ತು ಆ ಜೀವವು ಮನುಷ್ಯರಿಗೆ ಬೆಳಕಾಗಿತ್ತು (ಯೋಹಾನ 1:4). ಯೇಸು ಹೇಳಿದ್ದೇನೆಂದರೆಃ "ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ" (ಯೋಹಾನ 14:6). ಯೇಸು ತನ್ನನ್ನು ನಂಬುವವರಿಗೆಲ್ಲಾ ನಿತ್ಯಜೀವವನ್ನು ಕೊಡುತ್ತಾನೆ (ಯೋಹಾನ 3:16). ಈ ಯೇಸುವೇ ತಂದೆಯ ಬಳಿಯಲ್ಲಿದ್ದನು ಮತ್ತು ಬಳಿಕ ಆತನು ಮನುಷ್ಯರಿಗೆ ಪ್ರತ್ಯಕ್ಷನಾದನು. ಯೋಹಾನನು ಇಲ್ಲಿ ಬರೆಯುವದೇನೆಂದರೆಃ......ಆ ನಿತ್ಯಜೀವವನ್ನು ಕುರಿತು ನಾವು ನಿಮಗೆ ಪ್ರಸಿದ್ಧಿಪಡಿಸುತ್ತೇವೆ. ಅದೇ ವಿಧದಲ್ಲಿ ನಾವು ಸಹ ನಿತ್ಯ ಜೀವವನ್ನು ನಮ್ಮ ಬಂಧುಗಳಿಗೂ, ಸ್ನೇಹಿತರಿಗೂ, ನೆರೆಯವರಿಗೂ ಪ್ರಸಿದ್ಧಿಪಡಿಸಬೇಕು. ನಾವು ಹಾಗೆ ಮಾಡುತ್ತಿರುವೆವೋ?

3 ಯೋಹಾನನು ತನ್ನ ಕಣ್ಣಾರೆ ಹಾಗೂ ಕಿವಿಯಾರೆ ಆ ಜೀವವನ್ನು– ಅಂದರೆ, ಕ್ರಿಸ್ತನನ್ನು– ನೋಡಿದ್ದನು ಮತ್ತು ಕೇಳಿದ್ದನು. ಆದರೆ ಯಾರಿಗೆ ಈ ಪತ್ರಿಕೆಯು ಕಳುಹಿಸಲ್ಪಟ್ಟಿತೋ ಅವರು ಯೇಸುವನ್ನು ಎಂದಿಗೂ ನೋಡಿರಲಿಲ್ಲ ಹಾಗೂ ಕೇಳಿರಲಿಲ್ಲ. ಆದದರಿಂದ, ಯೋಹಾನನು ತನ್ನ ವಾಚಕರಿಗೆ ಅವರು ನಮಗಿರುವ ಅನ್ಯೋನ್ಯತೆಯಲ್ಲಿ ಸೇರಬೇಕೆಂದು – ಅಂದರೆ, ಅವರು ಯೋಹಾನ ಹಾಗೂ ಇತರರೊಂದಿಗೂ ತಂದೆಯ ಸಂಗಡಲೂ ಆತನ ಮಗನಾದ ಯೇಸು ಕ್ರಿಸ್ತನ ಸಂಗಡಲೂ ಅನ್ಯೋನ್ಯತೆಯನ್ನು ಹೊಂದಬೇಕೆಂದು– ಯೇಸುವಿನ ಕುರಿತು ವಿವರಿಸುತ್ತಾನೆ. ತಂದೆ ಹಾಗೂ ಮಗನೊಂದಿಗೆ ಅನ್ಯೋನ್ಯತೆಯೆಂದರೆ ದೇವರು ಹಾಗೂ ಯೇಸು ನಮ್ಮ ಬಳಿಗೆ ಬಂದು ನಮ್ಮೊಂದಿಗೆ ನೆಲೆಸುವದಾಗಿದೆ (ಯೋಹಾನ 14:23). ನಾವು ದೇವರೊಂದಿಗೆ ಹಾಗೂ ಕ್ರಿಸ್ತನೊಂದಿಗೆ ಅನ್ಯೋನ್ಯತೆ ಹೊಂದಿರುವಾಗ ಇತರ ವಿಶ್ವಾಸಿಗಳೊಂದಿಗೆ ಸಹ ನಾವು ಅನ್ಯೋನ್ಯತೆಯನ್ನು ಹೊಂದುವೆವು.

4 ವಿಶ್ವಾಸಿಗಳು ದೇವರೊಂದಿಗೆ ಅನ್ಯೋನ್ಯತೆಯನ್ನು ಹೊಂದಿರುವಾಗ ಅವರು ಸಂತೋಷವನ್ನು ಸಹ ಹೊಂದಿರುವರು. ಈ ಪತ್ರಿಕೆಯ ವಾಚಕನು ದೇವರ ಅನ್ಯೋನ್ಯತೆಗೆ ಬರುವದಾದರೆ ಯೋಹಾನನಿಗೂ ಸಂತೋಷವಾಗುವದು ಹಾಗೂ ಆತನ ವಾಚಕರು ಸಹ ಸಂತೋಷವನ್ನು ಹೊಂದುವರು. ಆಗ ನಮ್ಮ ಸಂತೋಷವು [2]- ಅಂದರೆ, ಯೋಹಾನ ಹಾಗೂ ಆತನ ವಾಚಕರ ಸಂತೋಷವು ಪರಿಪೂರ್ಣವಾಗುವದು.

ಕ್ರಿಸ್ತನ ಸುವಾರ್ತೆಯು ಸಂತೋಷ ತರುವಂತಹದ್ದು– ಯೇಸು ಹೇಳಿದ್ದೇನೆಂದರೆಃ "ನನ್ನಲ್ಲಿರುವ ಆನಂದವು ನಿಮ್ಮಲ್ಲಿಯೂ ಇರಬೇಕೆಂತಲೂ ನಿಮ್ಮ ಆನಂದವು ಪರಿಪೂರ್ಣವಾಗಬೇಕೆಂತಲೂ ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ (ಯೋಹಾನ 15:11).

### ಬೆಳಕಿನಲ್ಲಿ ನಡೆಯುವುದು (1:5-10)

5 ದೇವರು ಬೆಳಕಾಗಿದ್ದಾನೆ. ಬೆಳಕು ಪರಿಶುದ್ಧತೆಯನ್ನೂ ನೀತಿಯನ್ನೂ ಸೂಚಿಸುತ್ತದೆ. ಕತ್ತಲು ಪಾಪ ಹಾಗೂ ಕೆಟ್ಟತನದ ಸಂಕೇತವಾಗಿದೆ. ದೇವಕುಮಾರನಾದ ಯೇಸುಕ್ರಿಸ್ತನು ಲೋಕಕ್ಕೆ ಬಂದನು, ಆತನು ಕತ್ತಲೆಯಲ್ಲಿ ಪ್ರಕಾಶಿಸುವ ಬೆಳಕಾಗಿದ್ದನು (ಯೋಹಾನ 1:5-9; 3:19; 8:12; 12:46).

6 ದೇವರೊಂದಿಗೆ ಅನ್ಯೋನ್ಯತೆಯುಳ್ಳವರಾಗಿ ಇರುವದೆಂದರೆ ಆತನನ್ನು ತಿಳಿಯುವದು, ಆತನನ್ನು ಪ್ರೀತಿಸುವದು ಹಾಗೂ ಆತನ ಮಕ್ಕಳಾಗಿರುವದೆಂಬ ಅರ್ಥವಾಗಿದೆ. ನಾವು ನಿಜವಾಗಿಯೂ ಆತನೊಂದಿಗೆ ಅನ್ಯೋನ್ಯತೆಯನ್ನು ಹೊಂದಿರುವದಾದರೆ ಬೆಳಕಿನಲ್ಲಿ ನಡೆಯುತ್ತೇವೆ. ಕತ್ತಲೆಯಲ್ಲಿ– ಪಾಪದಲ್ಲಿ– ನಡೆಯುವವರು ದೇವರೊಂದಿಗೆ ಅನ್ಯೋನ್ಯತೆ

ಹೊಂದಲಾರರು. ಒಂದು ವೇಳೆ ಅವರು, "ನಾವು ದೇವರೊಂದಿಗೆ ಅನ್ಯೋನ್ಯತೆಯುಳ್ಳವರಾಗಿದ್ದೇವೆಂದು" ಹೇಳಿದರೆ ಸುಳ್ಳಾಡುವವರಾಗಿದ್ದು ಸತ್ಯವನ್ನನುಸರಿಸುವವರಲ್ಲ.

ಸತ್ಯವು ಒಬ್ಬನು ಮಾತಾಡುವ ಯಾವದೋ ವಿಷಯವಲ್ಲ; ಸತ್ಯವು ಒಬ್ಬ ಮಾಡುವಂಥ ಅಥವಾ ಜೀವಿಸುವಂಥ ಸಂಗತಿಯಾಗಿದೆ. ನಾವು ಸತ್ಯವನ್ನನುಸರಿಸಬೇಕು (ಯೋಹಾನ 3:21 ನೋಡಿರಿ). ನಾವು ದೇವರನ್ನು ಆತ್ಮದಲ್ಲಿಯೂ ಸತ್ಯದಲ್ಲಿಯೂ ಆರಾಧಿಸಬೇಕು (ಯೋಹಾನ 4:23). ಸತ್ಯವು ಜೀವಿತದ ಮಾರ್ಗವಾಗಿದೆ. ಯೇಸು ಹೇಳಿದ್ದೇನೆಂದರೆ "ನಾನೇ ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ" (ಯೋಹಾನ 14:6).

7 ನಾವು ಬೆಳಕಿನಲ್ಲಿ ನಡೆದರೆ –ಅಂದರೆ, ದೇವರೊಂದಿಗೆ ಅನ್ಯೋನ್ಯತೆಯುಳ್ಳವರಾಗಿದ್ದರೆ– ಎರಡು ಸಂಗತಿಗಳು ಸಂಭವಿಸುತ್ತವೆಃ ಮೊದಲನೆಯದಾಗಿ, ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ. ಎರಡನೆಯದಾಗಿ, ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ [3]

ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿರುವದೆಂದರೆ ಒಬ್ಬರನ್ನೊಬ್ಬರು ಪ್ರೀತಿಸುವದಾಗಿದೆ (1 ಯೋಹಾನ 4:7-11). ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯನ್ನು ಹೊಂದಬೇಕಾದರೆ ನಾವು ಒಬ್ಬರನ್ನೊಬ್ಬರು "ಕಾಣುವದಕ್ಕೆ" ಶಕ್ತರಾಗಿರಬೇಕು; ಅಂದರೆ, ನಾವು ಬೆಳಕಿನಲ್ಲಿರಬೇಕು. ನಾವು ಪಾಪದ ಕತ್ತಲೆಯಲ್ಲಿ ಜೀವಿಸುತ್ತಿರುವದಾದರೆ ನಮ್ಮ ಸಹೋದರನನ್ನು ಕಾಣಲಾರೆವು . ನಾವು ಆತನೊಂದಿಗೆ ಅನ್ಯೋನ್ಯತೆ ಹೊಂದಲಾರೆವು . ಆದದರಿಂದ, ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿರಬೇಕಾದರೆ ನಾವು ಮೊದಲು ದೇವರ ಸಂಗಡ ಅನ್ಯೋನ್ಯತೆಯಲ್ಲಿರಬೇಕು. ದೇವರ ಸಂಗಡ ಅನ್ಯೋನ್ಯತೆಯಲ್ಲಿರಬೇಕಾದರೆ ನಾವು ಬೆಳಕಿನಲ್ಲಿ ನಡೆಯಬೇಕು (ವಚನ 6) ಯಾಕೆಂದರೆ ಸ್ವತಃ ದೇವರು ಬೆಳಕಾಗಿದ್ದಾನೆ (ವಚನ 5). ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆಯಬೇಕು. ಆತನು ದೋಷವಿಲ್ಲದವನಾಗಿರುವ ಪ್ರಕಾರವೇ ನಾವೂ ದೋಷವಿಲ್ಲದವರಾಗಿರಬೇಕು (ಮತ್ತಾಯ 5:48).

ನಾವು ಬೆಳಕಿನಲ್ಲಿ ನಡೆಯುವಾಗ ಯೇಸುವಿನ ರಕ್ತವು ನಿರಂತರವಾಗಿ ನಮ್ಮನ್ನು ಶುದ್ಧಿಮಾಡುತ್ತದೆ. ದೇವರ ಪರಿಶುದ್ಧತೆಯ ಬೆಳಕು ನಮ್ಮ ಹೃದಯಗಳಲ್ಲಿ ಇರುತ್ತದೆ. ಯೇಸುವಿನ ರಕ್ತದಿಂದ– ಅಂದರೆ, ಶಿಲುಬೆಯ ಮೇಲಿನ ಆತನ ಮರಣದಿಂದ– ನಾವು ನಂಬಿಕೆಯ ಮೂಲಕ ಪಾಪದಿಂದ ಶುದ್ಧೀಕರಿಸಲ್ಪಟ್ಟಿದ್ದೇವೆ. ಕ್ರಿಸ್ತನ ರಕ್ತವು ನಮ್ಮನ್ನು ಎಲ್ಲಾ ಪಾಪಗಳಿಂದ –ನಮ್ಮ ಪಾಪವು ಎಷ್ಟೇ ಭಯಂಕರ ವಾಗಿದ್ದರೂ ಸರಿಯೇ– ಶುದ್ಧೀಕರಿಸುತ್ತದೆ. ಕ್ರಿಸ್ತನು ನಮ್ಮ ಪಾಪಗಳೆಲ್ಲವನ್ನು ನಿವಾರಿಸುವದಕ್ಕಾಗಿ ಸತ್ತನು.

8 ನಾವು ಎಷ್ಟೇ ಕಠಿಣವಾಗಿ ಶ್ರಮಿಸಿದರೂ ಸಂಪೂರ್ಣ ಪವಿತ್ರ ಹಾಗೂ ಪಾಪರಹಿತರಾಗಿರುವದಕ್ಕೆ ಸಾಧ್ಯವಿಲ್ಲ. ನಮ್ಮ ಜೀವಿತಗಳಲ್ಲಿ ಯಾವಾಗಲೂ ಒಂದಿಲ್ಲಾ ಒಂದು ಪಾಪವು ಇರುತ್ತದೆ. ದೇವರು ಎಷ್ಟೋ ಪರಿಶುದ್ಧನಾಗಿದ್ದು ಮನುಷ್ಯನು ದೇವರ ಉಚ್ಛ ಮಟ್ಟಗಳನ್ನು ತಲುಪುವದು ಅಸಾಧ್ಯವಾಗಿರುತ್ತದೆ. ದೇವರು ಯಾವದೇ ಪಾಪ ಅಥವಾ ಅಶುದ್ಧತೆಯನ್ನು ಸಹಿಸಲಾರನು; ಆತನಲ್ಲಿ ಎಷ್ಟು ಮಾತ್ರವು ಕತ್ತಲೆಯಿಲ್ಲ (ವಚನ 5). ಆದದರಿಂದ, ನಾವು ಆತನನ್ನು ಎಂದಿಗೂ ಸಂಪೂರ್ಣವಾಗಿ ಮೆಚ್ಚಿಸಲಾರೆವು ಯಾಕೆಂದರೆ ನಮ್ಮಲ್ಲಿ ಯಾವಾಗಲೂ ಒಂದೆಲ್ಲಾ ಒಂದು ಕಳಂಕ ಪಾಪ ಉಳಿದಿರುತ್ತದೆ.

1 ಯೋಹಾನ 3:9ರಲ್ಲಿ, ಯೋಹಾನನು ಹೇಳುವದೇನೆಂದರೆಃ ದೇವರಿಂದ ಹುಟ್ಟಿದವನು ಪಾಪದಲ್ಲಿ ಮುಂದುವರೆಯುವದಿಲ್ಲ. ಗ್ರೀಕ್ ಭಾಷೆಯಲ್ಲಿ ಪಾಪದಲ್ಲಿ ಮುಂದುವರೆಯುವದು ಎಂಬ ಮಾತಿನ ಅರ್ಥವು ಪಶ್ಚಾತಾಪ ಪಡದೆ ನಿರಂತರವಾಗಿ ಪಾಪ ಮಾಡುವದು, ಎಡೆಬಿಡದೆ ಪಾಪದಲ್ಲಿ ಜೀವಿಸುವದು ಎಂಬದಾಗಿರುತ್ತದೆ. ಕ್ರೈಸ್ತನು– ದೇವರಿಂದ ಹುಟ್ಟಿದವನು–ಈ ವಿಧವಾಗಿ ಪಾಪದಲ್ಲಿ ಜೀವಿಸುವದಿಲ್ಲ ಎಂದು ಯೋಹಾನನು ಹೇಳುತ್ತಿದ್ದಾನೆ. ಕ್ರೈಸ್ತನು ಗೊತ್ತಿದ್ದೂ ಪಾಪದಲ್ಲಿ ಜೀವಿಸುವದಿಲ್ಲ.

ಆದರೆ 8ನೇ ವಚನದಲ್ಲಿ ಕ್ರೈಸ್ತರು ಕಾಲಕಾಲಕ್ಕೆ ಪಾಪದಲ್ಲಿ ಬೀಳುತ್ತಾರೆಂದು ಯೋಹಾನನು ಹೇಳುತ್ತಾನೆ. ಕ್ರೈಸ್ತನ ಪೂರ್ವ ಪಾಪಾಧೀನ ಸ್ವಭಾವವು ಆಗಾಗ ಆತನು ಎಡವಿ ಬೀಳುವಂತೆ ಮಾಡುತ್ತದೆ. ಹೇಗಿದ್ದರೂ, ಆತನು ಬಿದ್ದುಹೋದವನಾಗಿಯೇ ಉಳಿಯುವದಿಲ್ಲ.

ಈ ವಚನಗಳು, ವಚನ 8 ಹಾಗೂ 1 ಯೋಹಾನ 3:9 ಎರಡೂ ಸಂಪೂರ್ಣ ಸತ್ಯವಾಗಿವೆ. 1 ಯೋಹಾನ 3:9ರ ಪ್ರಕಾರವಾಗಿ ಕ್ರೈಸ್ತರಾದ ನಾವು ಪಾಪಕ್ಕೆ ದಾಸರಾಗಿ ಜೀವಿಸುವದಿಲ್ಲ. ಕ್ರಿಸ್ತನು ನಮ್ಮ ಯಜಮಾನನೇ ಹೊರತು ಸೈತಾನನಲ್ಲ. ಪೌಲನು ಹೇಳುವದೇನೆಂದರೆಃ....... ನಾವು ಇನ್ನೂ ಪಾಪದ ವಶದಲ್ಲಿರಬಾರದು (ರೋಮ 6:6). ಆತನು ಮತ್ತು ಹೇಳುವದೇನೆಂದರೆಃ ನೀವು ನಿಮ್ಮನ್ನು.... ಪಾಪದ ಪಾಲಿಗೆ ಸತ್ತವರು ಎಂದು ಎಣಿಸಿಕೊಳ್ಳಿರಿ. (ರೋಮ 6:11) ಪಾಪಕ್ಕೆ ಕ್ರೈಸ್ತರ ಮೇಲೆ ಯಾವ ಬಲವೂ ಇರುವದಿಲ್ಲ.

ಆದರೆ ಇದೆಲ್ಲವು ನಿಜವಾಗಿದ್ದಾಗ್ಯು, 8ನೇ ವಚನದ ಪ್ರಕಾರ ಕ್ರೈಸ್ತರಾದ ನಾವು ಪಾಪದಲ್ಲಿ ಬೀಳುವದಿಲ್ಲ. ನಮ್ಮ ಜೀವಿತಗಳಲ್ಲಿ ನೂತನ ಶೋಧನೆಗಳು ನೂತನ ಪಾಪಗಳು ಉದ್ಭವಿಸುತ್ತಲಿರುತ್ತವೆ. ಮತ್ತು ನಾವು ಈ ಪಾಪಗಳಿಗಾಗಿ ಕ್ಷಮಾಪಣೆಯನ್ನೂ ಕೇಳುತ್ತಲೇ ಇರಬೇಕು; ನಾವು ಅವು ಗಳಿಂದ ಶುಚಿಗೊಳ್ಳುತ್ತಲಿರಬೇಕು. ನಾವು ಕ್ರಿಸ್ತನ ಸಂಗಡ ಪರಲೋಕದಲ್ಲಿ ಇರುವಾಗ ಮಾತ್ರವೇ ಸಂಪೂರ್ಣವಾಗಿ ಪಾಪರಹಿತರಾಗಿರುವೆವು [4]. (1 ಯೋಹಾನ 3:6-9 ಮತ್ತು ವ್ಯಾಖ್ಯಾನ ನೋಡಿರಿ).

9 ಇದು ಅತ್ಯಂತ ಪ್ರಾಮುಖ್ಯವಾದ ವಚನವಾಗಿದೆ. ಕ್ರೈಸ್ತರು ಸೇರಿದಂತೆ ಎಲ್ಲಾ ಮನುಷ್ಯರು ಪಾಪಮಾಡುತ್ತಾರೆ. ಆದದರಿಂದ, ಎಲ್ಲಾ ಜನರೂ ಸತತವಾಗಿ ಸಕಲ ಅನೀತಿಯನ್ನು –ತಮ್ಮ ಎಲ್ಲಾ ಪಾಪಗಳನ್ನು– ಪರಿಹರಿಸಿಕೊಂಡು

ಶುದ್ಧಿಯಾಗುವದು ಅಗತ್ಯವಾಗಿರುತ್ತವೆ. ಯೇಸುವಿನ ರಕ್ತವು ನಮ್ಮನ್ನು ಶುದ್ಧಿಮಾಡುತ್ತದೆಂದು ಯೋಹಾನನು ಈಗಾಗಲೇ ಹೇಳಿದ್ದಾನೆ (ವಚನ 7). ಆದರೆ ಅದು ಹೇಗೆ ಸಂಭವಿಸುತ್ತದೆ? ನಾವು ಏನನ್ನಾದರು ಮಾಡಬೇಕಾಗಿರುತ್ತದೋ? ಹೌದು, ಇರುತ್ತದೆ. ನಾವು ನಮ್ಮ ಪಾಪ ಗಳನ್ನು ಒಪ್ಪಿಕೊಂಡು ಅರಿಕೆಮಾಡಬೇಕು ಮತ್ತು ಅವು ಗಳಿಂದ ವಿಮುಖರಾಗಬೇಕು. ಮತ್ತು ಬಳಿಕ ದೇವರು ನಮ್ಮ ಪಾಪಗಳನ್ನು ಅಳಸಿಹಾಕುವನು. ಆತನು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು ಎಂಥ ಅದ್ಭುತವಾದ ವಾಗ್ದಾನ!

ಆದದರಿಂದ, ಕ್ರೈಸ್ತರು ವಿಚಲಿತರಾಗಬೇಕಾಗಿಲ್ಲ. ಹೌದು ನಾವು ನಮ್ಮ ಪಾಪಗಳಿಗಾಗಿ ದುಃಖಿಸಬೇಕು (ಮತ್ತಾಯ 5:4) ಆದರೆ, ನಾವು ನಿರಾಶರಾಗಬಾರದು. ನಮಗೆ ಕ್ಷಮಾಪಣೆ ಹಾಗೂ ಶುದ್ಧತೆಗೊಳ್ಳುವ ದಾರಿಯು ಯಾವಾಗಲೂ ಇರುತ್ತದೆ.

ನಾವು ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಬೇಕು ಎಂದು ಇಲ್ಲಿ ಯೋಹಾನನು ಹೇಳುವ ತಾತ್ಪರ್ಯವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಆತನು ಇಲ್ಲಿ ಮಾನಸಾಂತರ ಕುರಿತು ಮಾತಾಡುತ್ತಿದ್ದಾನೆ. ನಮ್ಮ ಪಾಪ ಗಳನ್ನು ಸುಮ್ಮನೆ ತುಟಿಗಳಿಂದ ಅರಿಕೆಮಾಡಿದರೆ ಒಪ್ಪಿಕೊಂಡರೆ ಸಾಕಾಗುವದಿಲ್ಲ. ನಾವು ಕ್ರಿಯೆಗಳ ಮೂಲಕ ಸಹ "ಅರಿಕೆ" ಮಾಡಬೇಕು; ಅಂದರೆ, ನಾವು ನಮ್ಮ ಪಾಪಗಳನ್ನು ದ್ವೇಷಿಸಿ ಅವು ಗಳಿಂದ ವಿಮುಖರಾಗಬೇಕು. ಇದೇ ನಿಜವಾದ ಮಾನಸಾಂತರವಾಗಿದೆ.

ಇಲ್ಲಿ ಒಂದು ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಳ್ಳುವದು ಅವಶ್ಯಕವಾಗಿರುತ್ತದೆ. ನಾವು ನಮ್ಮ ಪಾಪಗಳನ್ನು ಅರಿಕೆ ಮಾಡುವಾಗ ನಿರ್ದಿಷ್ಟ ಪಾಪಗಳನ್ನು ಅರಿಕೆ ಮಾಡಬೇಕು. "ನಾನೊಬ್ಬ ಪಾಪಿ" ಎಂದಷ್ಟೆ ಹೇಳಿದರೆ ಸಾಕಾಗದು. ಹಾಗೆ ಹೇಳುವದು ಸುಲಭವಾದದ್ದು, ಯಾಕೆಂದರೆ ಪ್ರತಿಯೊಬ್ಬನು ಪಾಪಿಯಾಗಿದ್ದಾನೆ. ಬದಲಾಗಿ, ನಾವು ಮಾಡಿದ ಪ್ರತಿಯೊಂದು ಪ್ರತ್ಯೇಕ ಪಾಪವನ್ನು ನೋಡಿದವರಾಗಿ ಪ್ರತಿಯೊಂದಕ್ಕೋಸ್ಕರವಾಗಿಯೂ ದೇವರಲ್ಲಿ ಕ್ಷಮಾಪಣೆಯನ್ನು ಕೇಳಬೇಕು. ಈ ಕಾರಣಕ್ಕಾಗಿಯೇ ಯೋಹಾನನು ಇಲ್ಲಿ ನಾವು ನಮ್ಮ ಪಾಪಗಳನ್ನು ಅರಿಕೆ ಮಾಡಬೇಕೆಂದು ಹೇಳುತ್ತಾನೆ– ಹೊರತು ಸಾಮಾನ್ಯವಾದ ಪಾಪವನ್ನು ಮಾತ್ರವೇ ಅಲ್ಲ.

ದೇವರು ನಂಬಿಗಸ್ಥನೂ ನೀತಿವಂತನೂ. ಯೋಹಾನು ಹಾಗೆ ಹೇಳಿದ್ದೇಕೆ? ಯಾಕೆಂದರೆ, ದೇವರು ಈಗಾಗಲೇ ಮನುಷ್ಯನ ಪಾಪಕ್ಕಾಗಿ ಒಂದೇ ಸಾರಿ ದಂಡನೆಯನ್ನು ನೀಡಿರುತ್ತಾನೆ. ಆತನು ನಮ್ಮ ಪಾಪಗಳಿಗಾಗಿನ ದಂಡನೆಯನ್ನು ತನ್ನ ಮಗನಾದ ಯೇಸುಕ್ರಿಸ್ತನ ಮೇಲೆ ಹೊರಿಸಿದ್ದಾನೆ. ಆದದರಿಂದ, ಆತನು ಯೇಸುವಿನಲ್ಲಿ ನಂಬಿಕೆಯಿಡುವವರನ್ನು ಆತನು ಎರಡನೆಯ ಸಾರಿ ದಂಡಿಸುವದಿಲ್ಲ. ಎರಡನೆಯ ಸಾರಿ ದಂಡಿಸುವದು ನೀತಿವಂತಿಕೆ ಆಗಿರಲಾರದು. ಕ್ರಿಸ್ತನು ಈಗಾಗಲೇ ನಮ್ಮ ದಂಡನೆಯನ್ನು ಹೊತ್ತುಕೊಂಡನು. ಆದದರಿಂದ, ದೇವರು ನಮ್ಮನ್ನು ಪು ನಃ ದಂಡಿಸುವದಿಲ್ಲ ಬದಲಾಗಿ, ಆತನು ನಮ್ಮನ್ನು ಕ್ಷಮಿಸಿ ಶುದ್ಧಮಾಡುವನು. ಆತನು ನಮ್ಮನ್ನು ಪು ನಃ ದಂಡಿಸುವವನಾಗಿದ್ದರೆ ಆತನು ನಂಬಿಗಸ್ಥನೂ ನೀತಿವಂತನೂ ಆಗಿರುವದಿಲ್ಲವಷ್ಟೇ (ರೋಮ 3:22-26 ನೋಡಿರಿ).

10 ಕೆಲವು ಜನರು ತಮ್ಮಲ್ಲಿ ಪಾಪವಿಲ್ಲ ಎಂದು ಹೇಳುತ್ತಾರೆ. ಹೀಗೆ ಹೇಳುವದರಲ್ಲಿ, ಅವರು ದೇವರನ್ನೂ ಸುಳ್ಳುಗಾರನನ್ನಾಗಿ ಮಾಡುತ್ತಾರೆ, ಯಾಕೆಂದರೆ ದೇವರು ಎಲ್ಲಾ ಮನುಷ್ಯರೂ ಪಾಪಿಗಳೆಂದು ಹೇಳಿದ್ದಾನೆ (ರೋಮ 3:10-12). ಎಲ್ಲಾ ಮನುಷ್ಯರು ಪಾಪಮಾಡುವದರಿಂದ ಅವರನ್ನು ರಕ್ಷಿಸುವದಕ್ಕಾಗಿ ದೇವರು ಯೇಸುವನ್ನು ಕಳುಹಿಸಬೇಕಾಯಿತು. ಮನುಷ್ಯನಲ್ಲಿ ಯಾವ ಪಾಪವೂ ಇಲ್ಲದಿದ್ದರೆ ಕ್ರಿಸ್ತನನ್ನು ಕಳುಹಿಸಬೇಕಾದ ಅಗತ್ಯವಿರುತ್ತಿದ್ದಿರಲಿಲ್ಲ. ಆದದರಿಂದ, ತನ್ನಲ್ಲಿ ಪಾಪವಿಲ್ಲವೆಂದು ಹೇಳುವ ವ್ಯಕ್ತಿಯು ದೇವರ ವಾಕ್ಯವನ್ನು ಸುಳ್ಳೆಂದು ಹೇಳುವವನಾಗಿದ್ದಾನೆ; ಆತನು ಅವನನ್ನು ಪಾಪಗಳಿಂದ ರಕ್ಷಿಸುವದಕ್ಕೆ ಬಂದ ದೇವರ ವಾಕ್ಯವನ್ನು– ಕ್ರಿಸ್ತನನ್ನು –ನಿರಾಕರಿಸುತ್ತಿದ್ದಾನೆ. ಅಂಥ ಮನುಷ್ಯನ ಜೀವಿತದಲ್ಲಿ ದೇವರ ವಾಕ್ಯಕ್ಕೆ, ದೇವಕುಮಾರನಿಗೆ ಸ್ಥಳವಿರುವದಿಲ್ಲ.

ಪ್ರತಿಯೊಬ್ಬ ಮನುಷ್ಯನು ತಾನು ಪಾಪಮಾಡಿದ್ದಾನೆಂದು ತನ್ನ ಹೃದಯದಲ್ಲಿ ಬಲ್ಲವನಾಗಿದ್ದಾನೆ. ದೇವರು ನಮ್ಮ ಪಾಪಗಳ ಕುರಿತಾಗಿ ನಮ್ಮ ಮನಸ್ಸಾಕ್ಷಿಯ ಮೂಲಕ ನಮ್ಮೊಂದಿಗೆ ಮಾತಾಡುತ್ತಾನೆ. ದೇವರು ನಮ್ಮ ಸಂಗಡ ಮಾತಾಡುವಾಗ ನಾವು ಕಿವಿಗೊಡೋಣ; ನಾವು ದೇವರ ವಾಕ್ಯವನ್ನು ಹೊರ ಹಾಕದಿರೋಣ. ನಾವು ದೇವರ ವಾಕ್ಯವನ್ನು ನಮ್ಮ ಹೃದಯದ ಹೊರಗೆ ಹಾಕುವದಾದರೆ ದೇವರನ್ನು ಸಹ ನಮ್ಮ ಜೀವಿತದಿಂದ ಹೊರಹಾಕುವವರಾಗುತ್ತೇವೆ.

---

## ಅಧ್ಯಾಯ - 2

### ದೇವರ ಆಜ್ಞೆ ಗಳಿಗೆ ವಿಧೇಯರಾಗುವದು (2:1-6)

1 ನಾವು ನಮ್ಮ ಪಾಪಗಳನ್ನು ಅರಿಕೆ ಮಾಡುವದಾದರೆ ದೇವರು ನಮ್ಮನ್ನು ಕ್ಷಮಿಸಿ ಶುದ್ಧಮಾಡುವನು ಎಂದು ಯೋಹಾನನು ಈಗಷ್ಟೇ ಹೇಳಿದ್ದಾನೆ (1 ಯೋಹಾನ 1:9). ಆದರೆ ಇದನ್ನು ಓದುತ್ತಿರುವ ಕೆಲವು ಜನರು ಪಾಪ ಮಾಡುವದು ಅಂಥ ದೊಡ್ಡ ವಿಷಯವಲ್ಲವೆಂದು ಭಾವಿಸಿಬಹುದು. ಕೆಲವರು "ನಾವು ಈಗ ಪಾಪದ ಕುರಿತಾಗಿ ಚಿಂತೆ ಮಾಡದೆ ಅದನ್ನು

ನಡೆಸಬಹುದು. ಯಾಕೆಂದರೆ ನಾವು ಪಾಪ ಮಾಡಿದರೆ ದೇವರು ಶೀಘ್ರ್ರವೇ ನಮ್ಮನ್ನು ಕ್ಷಮಿಸುವನು" ಎಂದು ಹೇಳಬಹುದು. ಆದರೆ ಯೋಹಾನನು ತನ್ನ ವಾಚಕರು ತಪ್ಪಾದ ಆಲೋಚನೆಯನ್ನು ಮಾಡಬಾರದೆಂದು ಇಚ್ಛಿಸುತ್ತಾನೆ. ಆತನು ಅವರಿಗೆ ಬರೆಯುತ್ತಿರುವದು ಅವರನ್ನು ಪಾಪ ಮಾಡುವಂತೆ ಪ್ರೋತ್ಸಾಹಿಸುವದಕ್ಕಾಗಿಯಲ್ಲ; ಆದರೆ, ಪಾಪ ಮಾಡುವದರಿಂದ ದೂರವಿರಿಸುವದಕ್ಕಾಗಿಯೇ ಬರೆಯುತ್ತಿದ್ದಾನೆ! ಒಬ್ಬ ವಿಶ್ವಾಸಿಯು ಯಾವದೇ ಸಮಯದಲ್ಲಿ ಪಾಪಮಾಡಿದರೆ ಆತನಿಗೆ ವಿಶ್ವಾಸಿಯ ಪರವಾಗಿ ದೇವರ ಸಂಗಡ ವಾದಿಸುವ ಒಬ್ಬ ವಕ್ತಾರ, ವಕೀಲನಿದ್ದಾನೆ– ಆತನು ಯಾರೆಂದರೆ ಯೇಸುಕ್ರಿಸ್ತನೇ. ಯೇಸು ಪರಿಪೂರ್ಣ ವಕ್ತಾರನು ಯಾಕೆಂದರೆ ಆತನು ಸಹ ನಮ್ಮ ಹಾಗೆ ಒಬ್ಬ ಮನುಷ್ಯನಾಗಿದ್ದನು; ಆದದರಿಂದ, ಆತನು ನಮ್ಮ ಬಲಹೀನತೆಗಳನ್ನು ಅರ್ಥಮಾಡಿಕೊಂಡು ನಮ್ಮೊಂದಿಗೆ ಮರುಗುವವನಾಗಿದ್ದಾನೆ (ಇಬ್ರಿಯ 2:17-18; 4:15). ಅಲ್ಲದೆ, ಆತನು ನೀತಿವಂತನಾದ ಕಾರಣ ಪರಿಪೂರ್ಣ ವಕ್ತಾರನಾಗಿದ್ದಾನೆ. ಆತನು ಸ್ವತಃ ನೀತಿವಂತನಾಗಿರುವದರಿಂದ ನೀತಿವಂತನಾದ ನ್ಯಾಯಾಧಿಪತಿಯಾಗಿರುವ ದೇವರ ಮುಂದೆ ಆತನು ನಿಂತುಕೊಳ್ಳುವದಕ್ಕೆ ಶಕ್ತನಾಗಿದ್ದಾನೆ. ಯೇಸುಕ್ರಿಸ್ತನು ತನ್ನಲ್ಲಿ ವಿಶ್ವಾಸ ವಿಡುವವರೆಲ್ಲರಿಗಾಗಿ ಪ್ರಾರ್ಥಿಸುವವನಾಗಿ ಯಾವಾಗಲೂ ದೇವರ ಮುಂಭಾಗದಲ್ಲಿ ನಿಲ್ಲುವವನಾಗಿದ್ದಾನೆ (ರೋಮ 8:34; ಇಬ್ರಿಯ 7:25).

**2** ನ್ಯಾಯಾಲಯದಲ್ಲಿ ವಕ್ತಾರ ಅಥವಾ ನ್ಯಾಯವಾಧಿಯು ಕಕ್ಷಿಗಾರನ ಪಕ್ಷವನ್ನು ವಹಿಸಿಕೊಳ್ಳುತ್ತಾನೆ. ವಕ್ತಾರನು ನ್ಯಾಯಮೂರ್ತಿಗೆ ಕಕ್ಷಿಗಾರನು ನಿರಪರಾಧಿಯೆಂದು ಮನವಿಸಲ್ಲಿಸುತ್ತಾನೆ. ಆದರೆ ನಮ್ಮ ವಕ್ತಾರನಾದ ಕ್ರಿಸ್ತನು ಹಾಗೆ ಮಾಡುವದಿಲ್ಲ. ಬದಲಾಗಿ, ಕ್ರಿಸ್ತನು ದೇವರಿಗೆ ನಾವು ಅಪರಾಧಿಗಳು ಎಂದು ಹೇಳುತ್ತಾನೆ ನಾವು ಮರಣ ದಂಡನೆಗೆ ಅರ್ಹರು ಎಂದು ಆತನು ದೇವರಿಗೆ ಹೇಳುತ್ತಾನೆ ಆತನು ಎಂಥಾ ವಕ್ತಾರನು!.

ಆದರೆ ಬಳಿಕ ಕ್ರಿಸ್ತನು ದೇವರಿಗೆ ಹೇಳುವದೇನೆಂದರೆಃ "ಮನುಷ್ಯರು ಅಪರಾಧಿಗಳಾಗಿದ್ದರೂ ನಾನೇ ಅವರ ದಂಡನೆಯನ್ನು ಹೊತ್ತುಕೊಳ್ಳುತ್ತೇನೆ. ಅವರ ಬದಲಿಗೆ ನನ್ನನ್ನು ಮರಣದಂಡನೆಗೆ ಗುರಿಮಾಡು. ನಾವು ನನ್ನನ್ನು ಅವರ ಪಾಪಗಳನ್ನು ನಿವಾರಣಮಾಡುವ ಯಜ್ಞವಾಗಿ ಅಥವಾ ಪ್ರಾಯಶ್ಚಿತವಾಗಿ ಸಮರ್ಪಿಸುವೆನು" (ರೋಮ 3:23-25).

ಹೀಗೆ ಕ್ರಿಸ್ತನು ನಮ್ಮ ಪಾಪಗಳನ್ನು ನಿವಾರಣಮಾಡುವ ಯಜ್ಞವಾಗಿದ್ದಾನೆ ಎಂದು ಯೋಹಾನನು ಹೇಳುತ್ತಾನೆ. ಮತ್ತು ಕ್ರಿಸ್ತನು ನಮ್ಮ ಪಾಪಗಳನ್ನು ಮಾತ್ರವಲ್ಲದೆ, ಸಮಸ್ತಲೋಕದ ಪಾಪಗಳನ್ನು ಸಹ ನಿವಾರಣಮಾಡುವ ಯಜ್ಞವಾಗಿದ್ದಾನೆ. ಅಂದರೆ, ಆತನ ಯಜ್ಞವು ಸಮಸ್ತಲೋಕದಲ್ಲಿರುವ ಪ್ರತಿಯೊಬ್ಬ ವಿಶ್ವಾಸಿಯು ಪಾಪಗಳನ್ನು ನಿವಾರಣಮಾಡುವದಕ್ಕೆ ಸಮರ್ಥವಾಗಿರುತ್ತದೆ (ಯೋಹಾನ 1:29; 1 ಯೋಹಾನ 4:10).

ಲೋಕದಲ್ಲಿರುವ ಎಲ್ಲಾ ಪುರುಷರು ಹಾಗೂ ಸ್ತ್ರೀಯರು ತಮ್ಮ ಪಾಪಗಳಿಗಾಗಿ ಮರಣದಂಡನೆಯನ್ನು ಹೊಂದುವದಕ್ಕೆ ಅರ್ಹರಾಗಿದ್ದಾರೆ. ನಾವು ಈ ಸತ್ಯವನ್ನು ಎಲ್ಲೆಡೆಯೂ ಉಪದೇಶಿಸಬೇಕು ಹಾಗೂ ಸಾರಬೇಕು. ಆದರೆ ಆ ಸತ್ಯದೊಂದಿಗೆ ನಾವು ಇನ್ನೊಂದು ಸತ್ಯವನ್ನು ಬೋಧಿಸಬೇಕುಃ ಅದೇನೆಂದರೆ, ನಮ್ಮನ್ನು ಆ ಮರಣ ದಂಡನೆಯಿಂದ ರಕ್ಷಿಸುವದಕ್ಕೆ ಶಕ್ತನಾದ ವಕ್ತಾರನು, ಒಬ್ಬ ರಕ್ಷಕನೂ ಇದ್ದಾನೆ– ಮತ್ತು ಆತನು ರಕ್ಷಕನಾದ ಯೇಸುಕ್ರಿಸ್ತನೇ.

**3-4** ಕ್ರಿಸ್ತನಿಗೆ ವಿಧೇಯರಾಗುವದು ಹಾಗೂ ಬೆಳಕಿನಲ್ಲಿ ನಡೆಯುವದು ಒಂದೇ ಆಗಿದೆ (ಯೋಹಾನ 1:7). ನಾವು ಬೆಳಕಿನಲ್ಲಿದ್ದರೆ ಯೇಸುವನ್ನು ನೋಡುವೆವು ಹಾಗೂ ತಿಳಿಯುವೆವು. ಆದರೆ ನಾವು ಆತನಿಗೆ ವಿಧೇಯರಾಗದಿದ್ದರೆ ಕತ್ತಲೆಯಲ್ಲಿ ನಡೆಯುತ್ತೇವೆ ಹಾಗೂ ಆತನನ್ನು ತಿಳಿಯಲಾರೆವು. ಕೆಲವರು "ನಾನು ಯೇಸುವನ್ನು ನಂಬುತ್ತೇನೆ" ಎಂದು ಹೇಳಬಹುದು ಆದರೆ ಅವರು ಆತನಿಗೆ ವಿಧೇಯರಾಗುವದಿಲ್ಲ. ಅಂಥ ಜನರು ಸುಳ್ಳುಗಾರರಾಗಿದ್ದಾರೆ, ಅವರು ಪಾಪದಲ್ಲಿಯೇ ಉಳಿಯುತ್ತಾರೆ. ಅವರು ತಮ್ಮ ಪಾಪಗಳನ್ನು ಒಪ್ಪಿಕೊಳ್ಳದ ಕಾರಣ ಕ್ಷಮಾಪಣೆಯನ್ನು ಪಡೆದುಕೊಳ್ಳುವದಿಲ್ಲ.

**5-6** ನಾವು ದೇವರ ವಾಕ್ಯಕ್ಕೆ ವಿಧೇಯರಾಗುವದಾದರೆ ಆತನ ಪ್ರೀತಿಯು ನಮ್ಮಲ್ಲಿ ಪರಿಪೂರ್ಣವಾಗುವದು. ದೇವರ ವಾಕ್ಯವೇನೆಂದರೆಃ ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂಲೂ, ಪೂರ್ಣ ಪ್ರಾಣದಿಂದಲೂ, ಪೂರ್ಣ ಬುದ್ಧಿಯಿಂದಲೂ, ಪೂರ್ಣಶಕ್ತಿಯಿಂದಲೂ ಪ್ರೀತಿಸಬೇಕು ಎಂಬುದೇ (ಮಾರ್ಕ 12:30). ಹೀಗೆ ದೇವರ ವಾಕ್ಯಕ್ಕೆ ವಿಧೇಯರಾಗುವದೆಂದರೆ ಆತನನ್ನು ಪ್ರೀತಿಸುವದಾಗಿದೆ (ಯೋಹಾನ 14:15-21; 1 ಯೋಹಾನ 5:3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ನಾವು ದೇವರಿಗೆ ವಿಧೇಯರಾಗುವಾಗ ದೇವರು ನಮ್ಮ ಬಳಿಗೆ ಬಂದು ನೆಲೆಸುವನು (ಯೋಹಾನ 14:23). ದೇವರು ನಮ್ಮಲ್ಲಿಯೂ, ನಾವು ಆತನಲ್ಲಿಯೂ ಇರುವೆವು. ನಾವು ಕ್ರಿಸ್ತನು ನಡೆದಂತೆಯೇ ನಡೆಯುವದಾದರೆ ನಾವು ಆತನಲ್ಲಿದ್ದೇವೆಂದು ತಿಳಿಯುವೆವು ಮತ್ತು ನಾವು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವೆವು (ಯೋಹಾನ 15:10).

## ಒಂದು ಹೊಸ ಆಜ್ಞೆ (2:7-17)

**7** ಯೋಹಾನನು 6ನೇ ವಚನದಲ್ಲಿ ಕ್ರಿಸ್ತನು ನಡೆದಂತೆಯೇ ನಾವು ನಡೆಯಬೇಕೆಂದು ಹೇಳುತ್ತಾನೆ. ಯೇಸು ಹೇಗೆ ನಡೆದನು? ಪ್ರೀತಿಯಲ್ಲಿ ನಡೆದನು. ಯೋಹಾನನು ಇಲ್ಲಿ ಪ್ರಸ್ತಾಪಿಸುವ ಹಳೆಯ ಆಜ್ಞೆಯು ದೇವರನ್ನು ಪ್ರೀತಿಸಬೇಕು ಮತ್ತು ನೆರೆಯವನನ್ನು ಪ್ರೀತಿಸಬೇಕು ಎಂಬ ಎರಡು ವಿಧದ ಆಜ್ಞೆಯಾಗಿದೆ. ಆ ಆಜ್ಞೆಯನ್ನು ಈ ಪತ್ರಿಕೆಯ ವಾಚಕರು ತಮ್ಮ ಕ್ರೈಸ್ತೀಯ ಜೀವಿತಗಳ ಮೊದಲಿನಿಂದಲೂ ಹೊಂದಿದ್ದರು (ಮಾರ್ಕ 12:30-31). ಯೋಹಾನನು

ಹೇಳುವದೇನೆಂದರೆಃ ಈ ಹಳೆಯ ಅಪ್ಪಣೆಯು ನೀವು ಕೇಳಿದ ವಾಕ್ಯವೇ– ಸುವಾರ್ತೆಯೇ. ಉಳಿದೆಲ್ಲಾ ಆಜ್ಞೆಗಳೂ ದೇವರನ್ನೂ ಹಾಗೂ ನೆರೆಯವನನ್ನು ಪ್ರೀತಿಸಬೇಕು ಎಂಬ ಈ ಶ್ರೇಷ್ಠ ಎರಡು ವಿಧವಾದ ಆಜ್ಞೆಯ ಮೇಲೆ ಆಧಾರವಾಗಿರುತ್ತದೆ (ಮತ್ತಾಯ 22:400.)

**8** ಆದರೆ ಈಗ ಯೋಹಾನನು ಒಂದು ಹೊಸ ಆಜ್ಞೆಯನ್ನು, ಯೇಸು ತನ್ನ ಶಿಷ್ಯರಿಗೆ ನೀಡಿದ ಆಜ್ಞೆಯನ್ನು ಸೇರಿಸುತ್ತಾನೆಃ ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವೂ ಒಬ್ಬರನ್ನೊಬ್ಬರು ಪ್ರೀತಿಸಿರಿ (ಯೋಹಾನ 15:12). ಯೇಸು ತಾನೇ ಈ ಆಜ್ಞೆಯನ್ನು ಹೊಸ ಆಜ್ಞೆ ಎಂದು ಕರೆದನು (ಯೋಹಾನ 13:34). ಯೋಹಾನನು ತನ್ನ ಕಣ್ಣಾರೆ ಈ ಪ್ರೀತಿಯನ್ನು ಯೇಸುವಿನ ಜೀವಿತದಲ್ಲಿ ನೋಡಿದ್ದನು. ಯೇಸು ಇತರರಿಗೋಸ್ಕರ ತನ್ನ ಪ್ರಾಣ ಅರ್ಪಿಸಿದ್ದನ್ನು ಯೋಹಾನನು ನೋಡಿದ್ದನು. ಯೇಸುವಿನ ಪ್ರೀತಿಯು ಸತ್ಯವಾದದ್ದು. ಈ ಹೊಸ ಆಜ್ಞೆಯ ಸತ್ಯವು – ಅಂದರೆ, ಈ ನಿಜ ಪ್ರೀತಿಯು– ಆತನಲ್ಲಿಯೂ ನಿಮ್ಮಲ್ಲಿಯೂ ಕಂಡುಬರುತ್ತದೆ ಎಂದು ಯೋಹಾನನು ಹೇಳುತ್ತಾನೆ. ಅಂದರೆ, ಈ ನಿಜವಾದ ಪ್ರೀತಿಯು ಯೇಸುವಿನಲ್ಲಿ ಮಾತ್ರವಲ್ಲ, ಆದರೆ ನಂಬುವವರಲ್ಲಿ ಸಹ ಕಂಡುಬರುತ್ತದೆ. ಯೇಸುವಿನ ನಿಜವಾದ ಬೆಳಕು ನಮ್ಮ ಹೃದಯಗಳಲ್ಲಿ ಪ್ರಕಾಶಿಸುವದಾದರೆ ಆತನ ಪ್ರೀತಿಯು ನಮ್ಮಲ್ಲಿ ಇರುವದು. ಕತ್ತಲೆಯು ಹೊರಟು ಹೋಗುವದು (ಯೋಹಾನ 1:4-5, 9).

**9-11** ಒಬ್ಬನು ತನ್ನ ಸಹೋದರರನ್ನು ದ್ವೇಷಿಸುವದು ಕತ್ತಲೆಯಲ್ಲಿ ನಡೆಯುವಂತಿರುತ್ತದೆ. ಒಬ್ಬನು ತನ್ನ ಸಹೋದರರನ್ನು ಪ್ರೀತಿಸುವದು ಬೆಳಕಿನಲ್ಲಿ ನಡೆಯುವಂತಿರುತ್ತದೆ. ನಾವು ಬೆಳಕಿನಲ್ಲಿ ನಡೆಯುವದಾದರೆ ಮಾರ್ಗವನ್ನು ನೋಡಬಹುದು; ನಾವು ಎಡುವುವದಿಲ್ಲ. ನಾವು ಪಾಪ ಮಾಡುವ ಶೋಧನೆಯಿಂದ ದೂರವಿರುವೆವು.

ಯೋಹಾನನು ತನ್ನ ಸಹೋದರನನ್ನು ದ್ವೇಷಿಸುವ ಒಬ್ಬ ವ್ಯಕ್ತಿಯು ಬಗ್ಗೆ ಮಾತಾಡುತ್ತಾ ಕತ್ತಲೆಯು ಅವನ ಕಣ್ಣುಗಳನ್ನು ಕಾಣದ ಹಾಗೆ ಮಾಡಿದೆ ಎಂದು ಹೇಳುತ್ತಾನೆ (ವಚನ 11). ಪಾಪದ ಕತ್ತಲೆಯು ಮನುಷ್ಯನನ್ನು ಯಾವಾಗಲೂ ಕುರುಡನನ್ನಾಗಿ ಮಾಡುತ್ತದೆ. ಸೈತಾನನು ನಮ್ಮನ್ನು ಕುರುಡರನ್ನಾಗಿ ಮಾಡಲಿಚ್ಛಿಸುತ್ತಾನೆ. ಎಲ್ಲಕ್ಕಿಂತ ಮೇಲಾಗಿ ನಾವು ಯೇಸುವನ್ನು ನೋಡುವದು ಆತನಿಗೆ ಇಷ್ಟವಿರುವದಿಲ್ಲ; ಆದದರಿಂದ, ಆತನು ನಮ್ಮನ್ನು ಕುರುಡರನ್ನಾಗಿ ಮಾಡಲು ಪ್ರಯತ್ನಿಸುತ್ತಾನೆ.

**12** ಯೋಹಾನನು ತನ್ನ ವಾಚಕರನ್ನು ಪ್ರಿಯರಾದ ಮಕ್ಕಳೇ ಎಂದು ಕರೆಯುತ್ತಾನೆ. ಯೋಹಾನನು ಈ ಪತ್ರಿಕೆಯನ್ನು ಬರೆದಾಗ ಆತನು ಸುಮಾರು ತೊಂಭತ್ತು ವಯಸ್ಸಿನವನಾಗಿದ್ದನು. ಆದದರಿಂದ, ಆತನು ತನ್ನ ವಾಚಕರನ್ನು "ಮಕ್ಕಳು" ಎಂದು ಕರೆಯುವದು ತಕ್ಕದ್ದಾಗಿತ್ತು.

ಯೋಹಾನನು ತನ್ನ ವಾಚಕರಿಗೆ ಅವರ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದು ಜ್ಞಾಪಕಪಡಿಸುತ್ತಾನೆ (1 ಯೋಹಾನ 1:9). ಅವರ ಪಾಪಗಳು ಕ್ರಿಸ್ತನ ಹೆಸರಿನ ನಿಮಿತ್ತ ಕ್ಷಮಿಸಲ್ಪಟ್ಟಿವೆ. ಅಂದರೆ, ಅವರು ಕ್ರಿಸ್ತನಲ್ಲಿ ನಂಬಿಕೆಯಿಟ್ಟದ್ದರಿಂದ ಆತನ ಹೆಸರಿನಲ್ಲಿ ಕ್ಷಮಿಸಲ್ಪಟ್ಟಿದ್ದಾರೆ. ಪಾಪಗಳಿಂದ ಕ್ಷಮಾಪಣೆ ಹಾಗೂ ಶುದ್ಧಗೊಳ್ಳುವಿಕೆಯು ನಮ್ಮ ನಂಬಿಕೆಯ ಫಲಿತವಾಗಿ ಉಂಟಾಗುವ ಮೊದಲನೆಯ ಶ್ರೇಷ್ಠ ಆಶೀರ್ವಾದವಾಗಿದೆ. ಆ ಆಶೀರ್ವಾದವನ್ನು ಪಡೆದವರಾಗಿ ನಾವು ನಮ್ಮ ಕ್ರೈಸ್ತೀಯ ಜೀವಿತದಲ್ಲಿ ಮುನ್ನಡೆಯಬಹುದು.

**13** ಈ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ತಂದೆಗಳು ಪರಿಪಕ್ವ ವಿಶ್ವಾಸಿಗಳಾಗಿದ್ದಾರೆ. ಈ ತಂದೆಗಳು ನಂಬಿಕೆಯ ಮೂಲಕ ಆದಿಯಿಂದಿರುವಾತನನ್ನು (ಕ್ರಿಸ್ತನನ್ನು) ಬಲ್ಲವರಾಗಿದ್ದಾರೆ. ಅವರು ಸ್ವತಃ ಕ್ರಿಸ್ತನನ್ನು ನೋಡಿದ್ದಾರೆ ಹಾಗೂ ಕೇಳಿದ್ದಾರೆ ಎಂದು ಯೋಹಾನನು ಹೇಳುವದಿಲ್ಲ; ಬದಲಾಗಿ, ಅವರು ಕ್ರಿಸ್ತನನ್ನು ನಂಬಿಕೆಯ ಮೂಲಕ ತಿಳಿದವರಾಗಿದ್ದಾರೆ.ಯೌವನಸ್ಥರು ಯುವ ವಿಶ್ವಾಸಿಗಳಾಗಿದ್ದಾರೆ. ಅವರು ಕೆಡಕನನ್ನು– ಅಂದರೆ, ಸೈತಾನನನ್ನು– ಜಯಿಸಿದವರಾಗಿದ್ದಾರೆ. ಅವರು ಸೈತಾನನ ಕತ್ತಲೆಯ ರಾಜ್ಯದೊಳಗಿಂದ ತಪ್ಪಿಸಿಕೊಂಡಿದ್ದಾರೆ.

ಈ 12-14 ವಚನಗಳಲ್ಲಿ ಪ್ರಸ್ತಾಪಿಸಲಾಗಿರುವ ಮಕ್ಕಳು, ತಂದೆಗಳು ಹಾಗೂ ಯೌವನಸ್ಥರ ನಡುವೆ ದೊಡ್ಡ ವ್ಯತ್ಯಾಸವನ್ನು ಮಾಡುವ ಅಗತ್ಯವಿರುವದಿಲ್ಲ. ಈ ಪ್ರತಿಯೊಂದು ವಚನಗಳಲ್ಲಿ ಬರೆದಿರುವ ಸಂಗತಿಗಳು ಎಲ್ಲಾ ಕ್ರೈಸ್ತರಿಗೂ ಅನ್ವಯಿಸುತ್ತದೆ.

**14** ಯೋಹಾನನು ಇಲ್ಲಿ ತಾನು 13ನೇ ವಚನದಲ್ಲಿ ವಿಷಯಕ್ಕೆ ಎರಡು ಸಂಗತಿಗಳನ್ನು ಸೇರಿಸುತ್ತಾನೆ. ಮೊದಲನೆಯದಾಗಿ, ಇಲ್ಲಿ ಇರುವ ಯೌವನಸ್ಥರು ಶಕ್ತರಾಗಿರುತ್ತಾರೆ. ಅವರು ಕರ್ತನಲ್ಲಿ ಬಲಿಷ್ಠರಾಗಿರುತ್ತಾರೆ; ಅವರು ಕರ್ತನ ಸರ್ವಾಯುಧಗಳನ್ನು ಧರಿಸಿಕೊಂಡಿರುತ್ತಾರೆ (ಎಫೆಸ 6:10-11). ಎರಡನೆಯದಾಗಿ, ದೇವರ ವಾಕ್ಯವು (ಅವರಲ್ಲಿ) ನೆಲೆಗೊಂಡಿರುವದರಿಂದ ಅವರು ಬಲಿಷ್ಠರಾಗಿರುತ್ತಾರೆ. ದೇವರ ವಾಕ್ಯವು ಕ್ರಿಸ್ತನ ಸುವಾರ್ತೆಯಾಗಿದೆ ಅದು ಆತ್ಮನ ಕತ್ತಿಯೂ ಆಗಿದೆ, ಅದು ಸೈತಾನನನ್ನು ಜಯಿಸಲು ಉಪಯೋಗಿಸಲ್ಪಡುತ್ತದೆ (ಎಫೆಸ 6:17).

ದೇವರ ವಾಕ್ಯವು ಸ್ವತಃ ಕ್ರಿಸ್ತನು ಸಹ ಆಗಿದ್ದಾನೆ. ಜೀವವುಳ್ಳ ವಾಕ್ಯವಾದ ಕ್ರಿಸ್ತನು ನಮ್ಮಲ್ಲಿ ವಾಸಮಾಡುತ್ತಾನೆ. ಮತ್ತು ಆತನ ವಾಕ್ಯವು ನಮ್ಮಲ್ಲಿ ಇರುವದರಿಂದ ನಾವು ಏನು ಬೇಕಾದರೂ ಬೇಡಿಕೊಳ್ಳಬಹುದು, ಮತ್ತು ಅದು ನಮಗೆ ಅನುಗ್ರಹಿಸಲ್ಪಡುವದು (ಯೋಹಾನ 15:7). ಆದದರಿಂದ, ನಾವು ನಮ್ಮ ಪಾಪಗಳು ಕ್ಷಮಿಸಲ್ಪಡುವಂತೆ (ವಚನ 12 ) ನಾವು ಕೆಡುಕನನ್ನು ಜಯಿಸುವಂತೆ (ವಚನ 13) ನಾವು ನಂಬಿಕೆಯಲ್ಲಿ ದೃಢವಾಗಿರುವಂತೆ– ಶಕ್ತರಾಗಿರುವಂತೆ –ದಿನಾಲೂ

ಬೇಡಿಕೊಳ್ಳೋಣ (ವಚನ 14). ನಾವು ವಿಧೇಯರಾಗಿರುವಂತೆಯೂ ದೇವರ ಬೆಳಕು ಆತನ ಜ್ಞಾನ ಹಾಗೂ ಆತನ ಪ್ರೀತಿಗಳಿಂದ ತುಂಬಿಸಲ್ಪಡುವಂತೆಯೂ ಪ್ರತಿದಿನವೂ ಬೇಡಿಕೊಳ್ಳೋಣ ಮತ್ತು ಈ ಎಲ್ಲಾ ಸಂಗತಿಗಳು ನಮಗೆ ದೊರಕುವವು.

**15** ಲೋಕವನ್ನಾಗಲಿ ಲೋಕದಲ್ಲಿರುವವು ಗಳನ್ನಾಗಲಿ ಪ್ರೀತಿಸಬೇಡಿರಿ. ಇಲ್ಲಿ ಲೋಕ ಎಂಬುದು "ಕತ್ತಲೆಯ ರಾಜ್ಯ" ಎಂದು ಅರ್ಥ ನೀಡುತ್ತದೆ. ಮತ್ತು ಲೋಕದಲ್ಲಿರುವವು ಳು ಎಂದರೆ ಲೋಕದ ಜನರೊಳಗಿರುವ ಶರೀರ ದಾಶೆ ಕಣ್ಣಿನಾಶೆ ಹಾಗೂ ಡಂಬಗಳಾಗಿವೆ (ವಚನ 16). ಏಕಕಾಲದಲ್ಲಿ ದೇವರನ್ನೂ ಲೋಕ ಹಾಗೂ ಅದರಲ್ಲಿರುವವು ಗಳನ್ನೂ ಪ್ರೀತಿಸುವದು ಅಸಾಧ್ಯವಾಗಿರುತ್ತದೆ. ಯಾವನಾದರೂ ಲೋಕವನ್ನು ಪ್ರೀತಿಸಿದರೆ ತಂದೆಯ ಮೇಲಣ ಪ್ರೀತಿಯು ಆವನಲ್ಲಿಲ್ಲ.

ಆದರೆ ಈ ವಚನದಲ್ಲಿ ನಾವು ನೋಡಬೇಕಾದ ಇನ್ನೂ ಆಳವಾದ ಒಂದು ಅರ್ಥವಿರುತ್ತದೆ. ಲೋಕದಲ್ಲಿ ನಮಗೆ ದೇವರಿಂದ ಕೊಡಲ್ಪಟ್ಟ ಅನೇಕ ಒಳ್ಳೇ ಸಂಗತಿಗಳಿರುತ್ತವೆ. ಈ ಒಳ್ಳೇ ಸಂಗತಿಗಳನ್ನು ಸಹ ನಾವು ಪ್ರೀತಿಸಬಾರದು. ನಾವು ಈ ಸಂಗತಿಗಳನ್ನು ಕೃತಜ್ಞತಾಸ್ತುತಿಯೊಂದಿಗೆ ಉಪಯೋಗಿಸಬಹುದು; ಆದರೆ, ಹಣವನ್ನು ಪ್ರೀತಿಸುವದು ಕೆಟ್ಟದ್ದಾಗಿದೆ. ವಿಶ್ರಾಂತಿಯು ಒಳ್ಳೇದು ಹಾಗೂ ಅಗತ್ಯವಾದದ್ದು ಆದರೆ ವಿಶ್ರಾಂತಿಯನ್ನು ಪ್ರೀತಿಸುವದು ಸೋಮಾರಿತನಕ್ಕೆ ನಡಿಸುತ್ತದೆ. ಅಲ್ಲದೆ ಕೆಲಸವು ಒಳ್ಳೇದು ಹಾಗೂ ಅವಶ್ಯಕ ಸಂಗತಿಯಾಗಿದೆ ಆದರೆ ತಕ್ಕದ್ದಲ್ಲದ ವಿಧದಲ್ಲಿ ಕೆಲಸವನ್ನು ಪ್ರೀತಿಸುವದು ಗರ್ವ ಹಾಗೂ ಪ್ರಾಪಂಚಿಕ ಅಭಿಲಾಷೆಗೆ ದಾರಿ ಮಾಡುತ್ತದೆ. ನಾವು ಈ ಉದಾಹರಣೆಗಳಿಂದ ಅರ್ಥಮಾಡಿಕೊಳ್ಳಬೇಕಾದದ್ದೇನೆಂದರೆ ಈ ವರಗಳನ್ನು ಪ್ರೀತಿಸುವದಕ್ಕೆ ಬದಲಾಗಿ ನಾವು ಆ ವರಗಳನ್ನು ಕೊಡುವಾತನನ್ನು– ದೇವರನ್ನು– ಪ್ರೀತಿಸಬೇಕು ಎಂಬುದೇ. ನಮ್ಮ ಸಮಸ್ತ ಪ್ರೀತಿಯು ದೇವರಿಗೆ ಕೊಡಲ್ಪಡಬೇಕು[5]. (ಮತ್ತಾಯ 10:37; ಮಾರ್ಕ 12:30; ಲೂಕ 14:26 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಲೋಕವು ಸೈತಾನನ ರಾಜ್ಯವಾಗಿದೆ (ಯೋಹಾನ 12:31; 1 ಯೋಹಾನ 5:19). ಈ ಲೋಕವನ್ನೇ ಯೇಸು ರಕ್ಷಿಸುವದಕ್ಕೆ ಬಂದನು; ದೇವರು ಈ ಲೋಕವನ್ನೇ ಪ್ರೀತಿಸಿದನು (ಯೋಹಾನ 3:16). ಯೇಸುವನ್ನು ಗುರುತಿಸದೆಯೂ ಅಂಗೀಕರಿಸದೆಯೂ ಹೋದದ್ದು ಈ ಲೋಕವೇ (1 ಯೋಹಾನ 1:10). ಈ ಲೋಕವೇ ಕತ್ತಲೆಯಲ್ಲಿ ಉಳಿದಿರುತ್ತದೆ. ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರ ಕೃತ್ಯಗಳು ಕೆಟ್ಟವು ಗಳಾಗಿರುವದರಿಂದ ಅವರು ಬೆಳಕಿಗಿಂತ ಕತ್ತಲೆಯನ್ನೇ ಹೆಚ್ಚಾಗಿ ಪ್ರೀತಿಸಿದರು (ಯೋಹಾನ 3:19).

**16** ಇಲ್ಲಿ ಯೋಹಾನನು ಲೋಕದ ಸಂಗತಿಗಳ, ಕತ್ತಲೆಯ ಸಂಗತಿಗಳ ಮೂರು ಉದಾಹರಣೆಗಳನ್ನು ನೀಡುತ್ತಾ ನಾವು ಅವು ಗಳನ್ನು ಪ್ರೀತಿಸಬಾರದೆಂದು ಹೇಳುತ್ತಾನೆ. ಮೊದಲನೆಯದಾಗಿ, ಶರೀರದಾಶೆಗಳು. ಇವು ಗಳು ನಮ್ಮ ಎಲ್ಲಾ ಪಾಪಾಧೀನ ಶಾರೀರಿಕ ಅಭಿಲಾಷೆಗಳನ್ನು ಒಳಗೊಂಡಿರುತ್ತವೆ, ಉದಾಹರಣೆಗೆ ಅನೈತೀಕ ಕಾಮಾಭಿಲಾಷೆಗಳು ಹಾಗೂ ಸುಖ ಭೋಗಗಳಿಗಾಗಿನ ವಿಪರೀತ ಆಶೆಗಳು ಮತ್ತು ಉತ್ತಮ ಆಹಾರಕ್ಕಾಗಿನ ಆಶೆ ಮುಂತಾದವು ಗಳೇ. ಎರಡನೆಯದಾಗಿ, ಮನುಷ್ಯನ ಕಣ್ಣಿನಾಶೆ. ಇದು ಮನುಷ್ಯನ ಅತಿಯಾಶೆ ಹಾಗೂ ದುರಾಶೆ ಎಂದು ಅರ್ಥವಾಗಿದೆ. ಮೂರನೆಯದಾಗಿ, ಮನುಷ್ಯನ ಬದುಕು ಬಾಳಿನಡಂಬ. ಈ ಡಂಬ ಅಥವಾ ಗರ್ವ ಎಂದರೆ, ಒಬ್ಬನು ತನ್ನ ಸಾಧನೆಗಳಲ್ಲಿ ಗರ್ವ ಪಟ್ಟುಕೊಳ್ಳುವದು ಒಳ್ಳೇ ಹೆಸರು ಅಥವಾ ಉನ್ನತ ಪದವಿಯನ್ನು ಅಪೇಕ್ಷಿಸುವದು ಆಗಿದೆ; ಒಬ್ಬನು ದೇವರಿಗೆ ಬದಲಾಗಿ ತನ್ನಲ್ಲಿಯೇ ಭರವಸೆವಿಟ್ಟುಕೊಳ್ಳುವದು ಆಗಿದೆ.

**17** ಲೋಕವೂ ಅದರ ಆಶೆಗಳೂ ಗತಿಸಿಹೋಗುತ್ತವೆ. ಗತಿಸಿಹೋಗುವಂಥ ಸಂಗತಿಗಳಲ್ಲಿ ನಂಬಿಕೆ ಇಡುವದೇಕೆ?........ ಆದರೆ ದೇವರ ಚಿತ್ತವನ್ನು ನೆರವೇರಿಸುವವನು ಎಂದೆಂದಿಗೂ ಇರುವನು. ದೇವರ ಚಿತ್ತವೇನೆಂದರೆಃ ಮನುಷ್ಯರು ಕ್ರಿಸ್ತನಲ್ಲೀ ನಂಬಿಕೆಯಿಟ್ಟು ಆತನ ಆಜ್ಞೆಗಳಿಗೆ– ವಿಶೇಷವಾಗಿ, ದೇವರನ್ನು ಪ್ರೀತಿಸಬೇಕು ಹಾಗೂ ನೆರೆಯವನನ್ನು ಪ್ರೀತಿಸಬೇಕು ಎಂಬ ಎರಡು ಶ್ರೇಷ್ಠ ಆಜ್ಞೆಗಳಿಗೆ ವಿಧೇಯರಾಗಬೇಕು ಎಂಬುದೇ. ಕ್ರಿಸ್ತನಲ್ಲಿ ನಂಬಿಕೆಯಿಡುವ ಹಾಗೂ ಆತನ ಆಜ್ಞೆಗಳಿಗೆ ವಿಧೇಯರಾಗುವ ಪುರುಷ ಅಥವಾ ಸ್ತ್ರೀ ನಿತ್ಯ ಜೀವವನ್ನು ಪಡೆದು ಎಂದೆಂದಿಗೂ ಇರುವರು (ಮತ್ತಾಯ 7:21).

## ಕ್ರಿಸ್ತ ವಿರೋಧಿಗಳ ವಿರುದ್ಧ ಎಚ್ಚರಿಕೆಗಳು (2:18-29)

**18** .......ಇದು ಕಡೇ ಗಳಿಗೆಯಾಗಿದೆ, ಅಂದರೆ, "ಕಡೇಗಳಿಗೆ"ಯು ಈಗಲೇ ಆಗಿದೆ. ಕಡೇ ಗಳಿಗೆಯು ಯೇಸು ಈ ಲೋಕಕ್ಕೆ ಮೊದಲನೆಯ ಸಾರಿ ಬಂದಾಗ ಪ್ರಾರಂಭವಾಯಿತು ಮತ್ತು ಯೇಸು ಲೋಕಾಂತ್ಯದಲ್ಲಿ ತಿರಿಗಿ ಬಂದಾಗ ಅದು ಅಂತ್ಯಗೊಳ್ಳುವದು. ಲೋಕದ ಇತಿಹಾಸವೆಲ್ಲಾ ಎರಡು ಭಾಗಗಳಾಗಿ ಇಬ್ಬಾಗಿಸಲ್ಪಡಬಹುದುಃ ಕ್ರಿಸ್ತನ ಮುಂಚೆ ಸಂಭವಿಸಿದ ಭಾಗ ಹಾಗೂ ಕ್ರಿಸ್ತನ ಕಾಲದಿಂದ ಸಂಭವಿಸಿದ ಭಾಗ. ಅಲ್ಲದೆ ಜಗತ್ತಿನಾದ್ಯಂತ ಉಪಯೋಗಿಸಲ್ಪಡುವ ದಿನಚರಿಯು ಕ್ರಿಸ್ತಪೂರ್ವ ಹಾಗೂ ಕ್ರಿ. ಶಕ (ಕರ್ತನ ವರ್ಷ ಅಂದರೆ ಕ್ರಿಸ್ತನ ನಂತರ) ಎಂದು ಇಬ್ಬಾಗಿಸಲ್ಪಟ್ಟಿದೆ. ಈ ಕಡೇಗಳಿಗೆಯು ಹೆಚ್ಚು ಕಡಿಮೆ ಎರಡು ಸಾವಿರ ವರ್ಷಗಳಿಂದಲೂ ಇರುತ್ತದೆ.

ಕ್ರಿಸ್ತನು ತಿರಿಗಿ ಬರುವದಕ್ಕೆ ಮುಂಚೆ ಕ್ರಿಸ್ತ ವಿರೋಧಿಯು[6] ಮೊದಲು ಬರುವನು (2 ಥೆಸಲೋನಿಕ 2:1-4, 8; 1 ಯೋಹಾನ 4:3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಆದರೆ ಮುಖ್ಯ ಕ್ರಿಸ್ತ ವಿರೋಧಿಯು ಬರುವದಕ್ಕೆ ಮುಂಚೆ ಇತರ ಅನೇಕ ಕ್ರಿಸ್ತ ವಿರೋಧಿಗಳು ಎದ್ದೇಳುವರು– ವಾಸ್ತವದಲ್ಲಿ, ಅನೇಕರು ಈಗಾಗಲೇ ಎದ್ದಿದ್ದಾರೆ (ಮಾರ್ಕ 13:5-6; 21-23). ಇವರು ಸುಳ್ಳು ಬೋಧಕರಾಗಿದ್ದಾರೆ. ಅವರು ಅನೇಕರನ್ನು ತಮ್ಮ ಹಿಂದೆ ಬರುವಂತೆ ಬಲೆಯಲ್ಲಿ ಬೀಳಿಸಿಕೊಳ್ಳುತ್ತಾರೆ.

19 ಅಂಥ ಸುಳ್ಳು ಬೋಧಕರು, ಅಥವಾ ಕ್ರಿಸ್ತವಿರೋಧಿಗಳು ಸಭೆಯ ಒಳಗಿಂದಲೇ ಬರುವರು. ಅವರು ಸಭೆಯಿಂದ ಹೊರ ಹೋಗಿದ್ದಾರೆ. ಪ್ರಾರಂಭದಲ್ಲಿ ಅವರು ಇತರ ವಿಶ್ವಾಸಿಗಳಂತೆಯೇ ಕಂಡರು, ಆದರೆ ಅವರು ನಿಜವಾದ ನಂಬಿಕೆಯನ್ನು ಹೊಂದಿರುವಾಗಿರಲೇ ಇಲ್ಲ; ಅವರು ನಿಜವಾಗಿಯೂ ಸಭೆಗೆ ಸೇರಿದವರಾಗಿರಲಿಲ್ಲ ಎಂದು ಯೋಹಾನು ಇಲ್ಲಿ ಹೇಳುತ್ತಾನೆ. ಈ ಸುಳ್ಳು ಬೋಧಕರು ನಿಜವಾದ ಕ್ರೈಸ್ತರಾಗಿರಲೇ ಇಲ್ಲ.

ಅನೇಕ ಕ್ರೈಸ್ತರು ಈ ವಚನವನ್ನು ವ್ಯಾಖ್ಯಾನಿಸಿ ಯಾವನಾದರೂ ಭ್ರಷ್ಟನಾದರೆ ಅಥವಾ ನಂಬಿಕೆಯನ್ನು ಬಿಟ್ಟುಬಿಡುವದಾದರೆ ಅವನು ಹಿಂದೆಂದೂ ನಿಜವಾದ ನಂಬಿಕೆಯನ್ನು ಹೊಂದಿರಲೇ ಇಲ್ಲ ಎಂದು ಹೇಳುವವರಾಗಿದ್ದಾರೆ. ನಿಜವಾದ ವಿಶ್ವಾಸಿಯು ಎಂದಿಗೂ ಭ್ರಷ್ಟನಾಗಲು ಸಾಧ್ಯವಿಲ್ಲ; ನಿಜವಾದ ವಿಶ್ವಾಸಿಯೊಬ್ಬನು ತನ್ನ ರಕ್ಷಣೆಯನ್ನು ಕಳೆದುಕೊಳ್ಳಲಾರನು ಎಂದು ಅವರು ಹೇಳುತ್ತಾರೆ.[7]

20 ನಿಜವಾದ ವಿಶ್ವಾಸಿಗಳು ಪವಿತ್ರನಾಗಿರುವಾತನಿಂದ ಅಭಿಷೇಕವನ್ನು ಹೊಂದಿದವರಾಗಿದ್ದಾರೆ–ಅಂದರೆ, ಕ್ರಿಸ್ತನಿಂದ ಹೊಂದಿದ್ದಾರೆ. ಅವರು ಪವಿತ್ರಾತ್ಮನಿಂದ ಅಭಿಷೇಕಿಸಿದನು (ಅ.ಕೃ 10:38). ಮತ್ತು ಕ್ರಿಸ್ತನು ಅದೇ ರೀತಿಯಲ್ಲಿ ಎಲ್ಲಾ ವಿಶ್ವಾಸಿಗಳನ್ನು ಪವಿತ್ರಾತ್ಮನಿಂದ ಅಭಿಷೇಕಿಸುತ್ತಾನೆ. ಪವಿತ್ರಾತ್ಮನು ಸತ್ಯದ ಆತ್ಮನಾಗಿದ್ದಾನೆ (ಯೋಹಾನ 14:17). ಆದದರಿಂದ, ಪವಿತ್ರಾತ್ಮನ ಮೂಲಕ ನಾವು ಸತ್ಯವನ್ನು ತಿಳಿಯುವೆವು [8] (ಯೋಹಾನ 14:26 ನೋಡಿರಿ). ಆದದರಿಂದ, ಒಬ್ಬ ನಿಜವಾದ ವಿಶ್ವಾಸಿಯು ಮಿಥ್ಯವನ್ನು ಬೋಧಿಸುವದಿಲ್ಲ.

21 ಈ ಪತ್ರಿಕೆಯ ವಾಚಕರು ಈಗಾಗಲೇ ಸತ್ಯವನ್ನು ತಿಳಿದಿದ್ದಾರೆ. ಅವರು ಸತ್ಯವನ್ನು ತಿಳಿದಿರುವದಿಲ್ಲ ಎಂಬದಕ್ಕಾಗಿ ಅಲ್ಲ, ಆದರೆ ಅವರು ಅದನ್ನು ತಿಳಿದಿರುವದರಿಂದಲೇ ಯೋಹಾನನು ಅವರಿಗೆ ಬರೆಯುತ್ತಾನೆ. ಈ ಪತ್ರಿಕೆಯು ಕ್ರೈಸ್ತರಿಗಾಗಿ ಬರೆಯಲ್ಪಟ್ಟಿದೆ. ಆದರೆ ಕ್ರೈಸ್ತರು ಸುಳ್ಳು ಬೋಧಕರಿಂದ ಮೋಸ ಹೋಗಬಲ್ಲರು. ಆದದರಿಂದ ಅವರು ಮೋಸ ಹೋಗಬಾರದೆಂಬದಕ್ಕಾಗಿ ಯೋಹಾನನು ಬರೆಯುತ್ತಾನೆ. ಸುಳ್ಳುಬೋಧಕರು ಮಿಥ್ಯವನ್ನು ಬೋಧಿಸುತ್ತಾರೆ ಅಂಥ ಬೋಧನೆಯು ಎಂದಿಗೂ ಸತ್ಯದಿಂದ ಹುಟ್ಟಿ ಬರುವದಿಲ್ಲ.

22 ಅತಿ ದೊಡ್ಡ ಸುಳ್ಳು ಯಾವದು? ಯೇಸುವು ಕ್ರಿಸ್ತನಲ್ಲ, ಆತನು ರಕ್ಷಕನಲ್ಲ, ಆತನ ದೇವಕುಮಾರನಲ್ಲ ಎಂದು ಹೇಳುವದೇ ಅತಿದೊಡ್ಡಸುಳ್ಳಾಗಿದೆ. ಕ್ರಿಸ್ತನನ್ನು ನಿರಾಕರಿಸಿದರೆ ದೇವರನ್ನೇ ನಿರಾಕರಿಸಿದಂತೆ (ಮತ್ತಾಯ 11:27; ಯೋಹಾನ 14:9-10; 2 ಯೋಹಾನ 7).

23 ..........ತಾನು ಮಗನಿಗೆ ಸೇರಿದವನೆಂದು ಒಪ್ಪಿಕೊಳ್ಳುವವನು ತಂದೆಗೂ ಸೇರಿದವನಾಗಿದ್ದಾನೆ (1 ಯೋಹಾನ 4:15 ನೋಡಿರಿ). ಕ್ರಿಸ್ತನನ್ನು ತಿಳಿಯುವದರಿಂದ ಮಾತ್ರವೇ ನಾವು ದೇವರನ್ನು ನಿಜವಾಗಿಯೂ ತಿಳಿಯಬಲ್ಲೆವು (ಯೋಹಾನ 1:18). ಕ್ರಿಸ್ತನ ಮೂಲಕವೇ ಹೊರತು ನಾವು ದೇವರ ಬಳಿಗೆ ಬರಲಾಗದು (ಯೋಹಾನ 14:6). ಪರಲೋಕದೆಡೆಗೆ ಸಾಗುವ ದಾರಿಗಳು ಅನೇಕವಿದ್ದಾವೆ, ಆದರೆ ಒಂದು ದಾರಿ ಮಾತ್ರವೇ ಅಲ್ಲಿಗೆ ತಲುಪುತ್ತದೆ. ಆ ಒಂದೇ ದಾರಿಯು ಕ್ರಿಸ್ತನೇ. ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ (ಅ.ಕೃತ್ಯ 4:12).

24 ನೀವಂತೂ ಯಾವ ಬೋಧನೆಯನ್ನು– ಅಂದರೆ, ದೇವರ ವಾಕ್ಯವನ್ನು– ಮೊದಲಿನಿಂದ ಕೇಳಿದ್ದೀರೋ ಅದು ನಿಮ್ಮಲ್ಲಿ ನೆಲೆಗೊಂಡಿರಲಿ. ದೇವರ ವಾಕ್ಯವೂ ನಮ್ಮಲ್ಲಿ ನೆಲೆಗೊಳ್ಳದಿದ್ದರೆ ಕ್ರಿಸ್ತನು ನಮ್ಮಲ್ಲಿ ನೆಲೆಗೊಳ್ಳುವದಿಲ್ಲ, ಮತ್ತು ನಾವು ಆತನಲ್ಲಿ ನೆಲೆಗೊಳ್ಳುವದಿಲ್ಲ. ನಾವು 18-19 ವಚನಗಳಲ್ಲಿ ಪ್ರಸ್ತಾಪಿಸಲಾದ ಸುಳ್ಳು ಬೋಧಕರಂತೆ ಆಗುವೆವು ನಾವು ಕತ್ತರಿಸಿ ಬಿಸಾಡುವದಕ್ಕಷ್ಟೇ ಯೋಗ್ಯವಾದ ಒಣಗಿದ ಕೊಂಬೆಗಳಂತಾಗುವೆವು (ಯೋಹಾನ 15:4-7 ನೋಡಿರಿ).

ಆದರೆ ನಾವು ಕೇಳಿರುವಂಥದ್ದು (ದೇವರ ವಾಕ್ಯ) ನಮ್ಮಲ್ಲಿ ನೆಲೆಗೊಳ್ಳುವದಾದರೆ ನಾವು ಮಗನಲ್ಲಿಯೂ, ತಂದೆಯಲ್ಲಿಯೂ, ದೇವರಲ್ಲಿಯೂ ನೆಲೆಗೊಂಡಿರುತ್ತೇವೆ. ಮಗನಲ್ಲಿ (ಕ್ರಿಸ್ತನಲ್ಲಿ) ನೆಲೆಗೊಂಡಿರುವವನು ತಂದೆಯಾದ ದೇವರಲ್ಲಿಯೂ ನೆಲೆಗೊಂಡಿರುವನು. ನಾವು ಕೇಳಿದ ದೇವರ ವಾಕ್ಯದಿಂದ, ಸುವಾರ್ತೆಯಿಂದ ವಿಮುಖರಾಗದಂತೆ ಎಡೆಬಿಡದೆ ಒಬ್ಬರನ್ನೊಬ್ಬರು ಪ್ರಬೋಧಿಸೋಣ.

25 ಯಾರು ಕ್ರಿಸ್ತನಲ್ಲಿಯೂ ಅವರಲ್ಲಿ ಕ್ರಿಸ್ತನ ವಾಕ್ಯವೂ ನೆಲೆಗೊಂಡಿರುತ್ತದೋ ಅವರು ನಿತ್ಯಜೀವದ ವಾಗ್ದಾನ ಹೊಂದಿರುತ್ತಾರೆ (ಯೋಹಾನ 4:14; 6:40 ನೋಡಿರಿ).

26 ಯೋಹಾನನು ಈ ವಚನವನ್ನು ನಮಗೆ ಒಂದು ಎಚ್ಚರಿಕೆಯಂತೆ ಬರೆದಿರುತ್ತಾನೆ. ನಾವು ನಿತ್ಯಜೀವದ ವಾಗ್ದಾನವನ್ನು ಬಿಸಾಡದಿರೋಣ! ನಾವು ಸುಳ್ಳು ಬೋಧಕರಿಂದ ಮಾರ್ಗತಪ್ಪಿ ಹೋಗದಿರೋಣ.

27 ನೀವು ಹೊಂದಿದ ಅಭಿಷೇಕವು ವಿಶ್ವಾಸಿಗಳು ಆತನಿಂದ –ಕ್ರಿಸ್ತನಿಂದ– ಪಡೆದುಕೊಳ್ಳುವ ಪವಿತ್ರಾತ್ಮನ ಅಭಿಷೇಕವಾಗಿದೆ. ಯೋಹಾನನು ತನ್ನ ವಾಚಕರಿಗೆ ಹೇಳುವದೇನೆಂದರೆಃ ....ಯಾವನಾದರೂ ನಿಮಗೆ ಉಪದೇಶಮಾಡುವದು ಅವಶ್ಯವಿಲ್ಲ. ಯೋಹಾನನ ತಾತ್ಪರ್ಯವೇನು? ನಮ್ಮ ಮುಖ್ಯ ಉಪದೇಶಕನು ಪವಿತ್ರಾತ್ಮನೆಂದು ಆತನು ಹೇಳುತ್ತಾನೆ. ಖಂಡಿತವಾಗಿಯೂ ದೇವರು ಪವಿತ್ರಾತ್ಮಭರಿತರಾದ ಬೋಧಕರನ್ನು ನಮಗೆ ಉಪದೇಶಿಸಲು ಉಪಯೋಗಿಸುತ್ತಾನೆ, ಆದರೆ ಸ್ವತಃ ಈ ಬೋಧಕರಿಗೆ ಪವಿತ್ರಾತ್ಮನು ಉಪದೇಶಿಸಿರುತ್ತಾನೆ. ಹೀಗೆ ಎಲ್ಲಾ ನಿಜ ಬೋಧನೆಯು ಅಂತಿಮವಾಗಿ ಪವಿತ್ರಾತ್ಮನಿಂದಲೇ ಪ್ರೇರೆಪಿಸಲ್ಪಟ್ಟಿರುತ್ತದೆ ಅದು ನಮಗೆ ನೇರವಾಗಿ ಪವಿತ್ರಾತ್ಮನಿಂದ ಬಂದರೂ ಸರಿಯೇ ಅಥವಾ ಅದು ಬೈಬಲ್ ಓದುವದರಿಂದ ಬಂದರೂ ಸರಿಯೇ ಇಲ್ಲವೇ ಆತ್ಮಭರಿತ ಮಾನವ ಬೋಧಕರಿಂದ ಬಂದರೂ ಸರಿಯೇ. ಯೇಸು

ಹೇಳಿದ್ದೇನೆಂದರೆಃ "ಪವಿತ್ರಾತ್ಮನು ...ನಿಮಗೆ ಎಲ್ಲವನ್ನು ಉಪದೇಶಿಸುವನು" (ಯೋಹಾನ 14:26). ಆದದರಿಂದ, ಕ್ರೈಸ್ತರು ಮಾನುಷ ಜ್ಞಾನವನ್ನು ಅವಲಂಭಿಸಿರುವದಿಲ್ಲ. ಅನೇಕ ಕ್ರೈಸ್ತರು ,"ನಾನು ಅಜ್ಞಾನಿ; ನಾನು ವಿಧ್ಯಾವಂತನಲ್ಲ; ನನಗೆ ಏನೂ ಗೊತ್ತಿಲ್ಲ" ಎಂದು ಹೇಳುತ್ತಾರೆ. ಆದರೆ ಅವರು ಹಾಗೆ ಹೇಳುವ ಅಗತ್ಯವಿಲ್ಲ! ಅವರು ತಮ್ಮ ಶಕ್ತ್ಯಾನುಸಾರ ದೇವರ ವಾಕ್ಯವನ್ನು ಓದಲಿ ಹಾಗೂ ಕೇಳಲಿ ಮತ್ತು ತರುವಾಯ ಅವರು ತಮಗೆ ತಿಳಿಯಬೇಕಾದ ಉಳಿದೆಲ್ಲಾ ಸಂಗತಿಯನ್ನು ಪವಿತ್ರಾತ್ಮನು ಅವರಿಗೆ ಉಪದೇಶಿಸುವವನೆಂಬ ನಂಬಿಕೆಯನ್ನು ಹೊಂದಲಿ. ಕ್ರಿಸ್ತನಲ್ಲಿ ವಿಶ್ವಾಸಿಸುವ ಯಾವನೂ ದೇವರ ದೃಷ್ಟಿಯಲ್ಲಿ "ಅಜ್ಞಾನಿಯಲ್ಲ".

ಆದದರಿಂದ, ದೇವರ ವಾಕ್ಯವು ನಮ್ಮಲ್ಲಿ ನೆಲೆಗೊಳ್ಳಲಿ, ಪವಿತ್ರಾತ್ಮನ ಅಭಿಷೇಕವು ನಮ್ಮಲ್ಲಿ ನೆಲೆಗೊಳ್ಳಲಿ, ಮತ್ತು ನಾವು ಆತನಲ್ಲಿ ನೆಲೆಗೊಂಡಿರೋಣ ಎಂದು ಯೋಹಾನನು ಹೇಳುತ್ತಾನೆ.

28 ಪ್ರಿಯರಾದ ಮಕ್ಕಳೇ......... ಆತನಲ್ಲಿ ನೆಲೆಗೊಂಡಿರೋಣ. ಬೈಬಲಿನಲ್ಲಿ ಇದಕ್ಕಿಂತಲೂ ಪ್ರಾಮುಖ್ಯವಾದ ಇನ್ನೊಂದು ಬೋಧನೆಯಿರುತ್ತದೆಃ ಕ್ರಿಸ್ತನಲ್ಲಿ ಮುಂದುವರೆಯುವದು (ಅಥವಾ ನೆಲೆಗೊಂಡಿರುವದು). ನಾವು ಆತನಲ್ಲಿ ಮುಂದುವರೆಯದಿದ್ದರೆ ಆತನು ತನ್ನ ಎರಡನೆಯ ಬರೋಣದ ವೇಳೆ ಪ್ರತ್ಯಕ್ಷನಾಗುವಾಗ ನಾವು ನಾಚಿಕೆಪಡುತ್ತೇವೆ. ಯಾಕೆಂದರೆ ಆತನು ನಮಗೆ, "ನಾನೆಂದೂ ನಿಮ್ಮ ಗುರುತು ಕಾಣೆನು"ಎಂದು ಹೇಳುವನು (ಮತ್ತಾಯ 7:23).

ಆದರೆ ನಾವು ಆತನಲ್ಲಿ ಮುಂದುವರೆಯುವದಾದರೆ ಆತನು ತಿರಿಗಿ ಬಂದಾಗ ನಾವು ನಾಚಿಕೆಪಡದೆ ಧೈರ್ಯದಿಂದಿರುವೆವು . ಆತನಲ್ಲಿ ಮುಂದುವರೆಯುವದಾದರೆ ನಾವು ರಕ್ಷಣೆಹೊಂದಿದ್ದೇವೆಂದು ಖಚಿತವಾಗಿ ತಿಳಿಯುವೆವು . ನಾವು ಆತನ ನ್ಯಾಯತೀರ್ಪಿನ ಸಿಂಹಾಸನದ ಮುಂದೆ ನಿಂತುಕೊಳ್ಳುವೆವು , ಮತ್ತು ಆಗ ಆತನು ನಮಗೆ "ಭಲಾ ನಂಬಿಗಸ್ಥನಾದ ಒಳ್ಳೇ ಆಳು ನೀನು"ಎಂದು ಹೇಳುವನು (ಮತ್ತಾಯ 25:21).

ಕ್ರಿಸ್ತನು ಈ ದಿನ ಬರುವದಾದರೆ, ಆತನು ನಮಗೆ ಏನು ಹೇಳುವನು? ನಾವು ಆತನ ಮುಂದೆ ನಾಚಿಕೆಪಡದೆ ಧೈರ್ಯದಿಂದ ನಿಂತುಕೊಳ್ಳಲು ಶಕ್ತರಾಗುವೆವೋ?

29 ನಾವು ಒಬ್ಬ ನಿಜ ಕ್ರೈಸ್ತನನ್ನು–ಅಂದರೆ, ದೇವರಿಂದ ಹುಟ್ಟಿದವನನ್ನು–ಹೇಗೆ ಗುರುತಿಸಬಲ್ಲೆನು? ಈ ವಿಧದಲ್ಲಿಃ ನಿಜವಾದ ಕ್ರೈಸ್ತನು ನೀತಿಯನ್ನು ನಡಿಸುತ್ತಾನೆ. ದೇವರು ನೀತಿವಂತನು; ಆದದರಿಂದ, ಆತನಿಂದ ಹುಟ್ಟಿದವರೆಲ್ಲರೂ ಸಹ ನೀತಿವಂತರು. ನೀತಿಯನ್ನು ನಡಿಸುವ ಎಲ್ಲರೂ ಆತನಿಂದ ಹುಟ್ಟಿದವರೆಂದು ಹೇಳುವದು ಸಹ ಅಷ್ಟೇ ಸತ್ಯವಾದದ್ದು. ದೇವರಿಂದ ಹುಟ್ಟಿದವರಾಗಿರುವದು ಹಾಗೂ ನೀತಿಯನ್ನು ನಡಿಸುವದು ಬೇರ್ಪಡಲು ಸಾಧ್ಯವಿಲ್ಲ. ಆದರೆ ನಿಜವಾದ ಕ್ರೈಸ್ತರು ನೀತಿಯನ್ನು ನಡಿಸುತ್ತಾರೆ ಎಂದು ಯೋಹಾನನು ಹೇಳುವದರ ತಾತ್ಪರ್ಯವೇನು? "ನೀತಿ" (ಸರಿಯಾದದ್ದು) ಅಂದರೇನು? ನೀತಿಯನ್ನು (ಸರಿಯಾದದ್ದನ್ನು) ಮಾಡುವದೆಂದರೆ ಕ್ರಿಸ್ತನಲ್ಲಿ ನಂಬಿಕೆಯಿಟ್ಟು ಆತನ ಆಜ್ಞೆಗಳಿಗೆ ವಿಧೇಯರಾಗುವದೇ. ಯಾವನಾದರೂ ಇದನ್ನು ಮಾಡುವದಾದರೆ ದೇವರು ನೀತಿವಂತನಾಗಿರುವಂತೆಯೇ ಆತನೂ ನೀತಿವಂತನೆಂದು ನಿರ್ಣಯಿಸಲ್ಪಡುವನು (1 ಯೋಹಾನ 3:7 ನೋಡಿರಿ). ಹಾಗಾದರೆ ಕ್ರಿಸ್ತನಲ್ಲಿ ನಂಬಿಕೆಯಿಟ್ಟು ಆತನಿಗೆ ವಿಧೇಯರಾಗುವವರೆಲ್ಲರೂ ದೇವರಿಂದ ಹುಟ್ಟಿದವರು ಹಾಗೂ ನೀತಿವಂತರು.

ದೇವರಿಂದ ಹುಟ್ಟಿದವರಾಗುವದೆಂದರೆ ಪವಿತ್ರಾತ್ಮನಿಂದ ಆತ್ಮೀಕವಾಗಿ ಹೊಸದಾಗಿ ಹುಟ್ಟವದಾಗಿದೆ (ಯೋಹಾನ 3:3-5 ಮತ್ತು ವ್ಯಾಖ್ಯಾನ ನೋಡಿರಿ). ಒಬ್ಬ ವ್ಯಕ್ತಿಯು ಸ್ವಂತ ಒಳ್ಳೇ ಕಾರ್ಯಗಳ ಮೂಲಕ ಅಥವಾ ಕೆಲವು ಧಾರ್ಮಿಕ ನಿಯಮ ಅಥವಾ ಆಚಾರವನ್ನು ಅನುಸರಿಸುವದರ ಮೂಲಕ "ಆತ್ಮೀಕನಾಗಲು" ಪ್ರಯತ್ನಿಸುವದು ಇದರ ಅರ್ಥವಲ್ಲ. ಮನುಷ್ಯನ ಸ್ವಭಾವವು ಈ ವಿಧದಲ್ಲಿ ಆತ್ಮೀಕವಾಗಿ ಮಾಡಲ್ಪಡುವದಿಲ್ಲ. ನಮ್ಮ ಪೂರ್ವ ಪಾಪಾಧೀನ ಸ್ವಭಾವವು ದೇವರಿಂದ ಹುಟ್ಟಲ್ಪಟ್ಟಿರುವದಾಗಿರಲು ಸಾಧ್ಯವಿಲ್ಲ. ವಾಸ್ತವದಲ್ಲಿ, ನಮ್ಮ ಪೂರ್ವ ಪಾಪಾಧೀನ ಸ್ವಾಭಾವವು ಮಾಡಬಲ್ಲ ಹಾಗೂ ಮಾಡಲೇಬೇಕಾದ ಒಂದೇ ಸಂಗತಿಯಿರುತ್ತದೆಃ ಅದು ಸಾಯಬೇಕು. ಒಂದು ನೂತನ ಆತ್ಮೀಕ ಸ್ವಾಭಾವವು ಹುಟ್ಟಬೇಕಾದರೆ ಪೂರ್ವ ಪಾಪಧೀನ ಸ್ವಭಾವವು ಮೊದಲು ಸಾಯಬೇಕು (ರೋಮ 6:6 ನೋಡಿರಿ). ಹಾಗಾದರೆ, ದೇವರಿಂದ ಹುಟ್ಟುವದೆಂದರೆ ನಮ್ಮ ಪೂರ್ವ ಪಾಪಾಧೀನ ಜೀವಿತವನ್ನು ತೆಗೆದುಬಿಟ್ಟು ನೂತನ ಆತ್ಮೀಕ ಜೀವಿತವನ್ನು ಪಡೆಯುವದೇ. ನೂತನ ಸೃಷ್ಟಿಯಾಗುವದು ಇದರ ಅರ್ಥವಾಗಿದೆ (2 ಕೊರಿಂಥ 5:17 ನೋಡಿರಿ). ದೇವರಿಂದ ಹುಟ್ಟಿದವನು ಆತ್ಮನ ಭಾವವನ್ನನುಸರಿಸಿ ಬದುಕುತ್ತಾನೆ (ಗಲಾತ್ಯ 5:16,25)...... ದೇವರಾತ್ಮನಿಂದ ನಡಿಸಿಕೊಳ್ಳುವವರು ದೇವರ ಮಕ್ಕಳೂ (ರೋಮ 8:14).

---

## ಅಧ್ಯಾಯ - 3

### ದೇವರ ಮಕ್ಕಳು (3:1-10)

1 ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ!. ಇದು ಕ್ರಿಸ್ತನ ಸುವಾರ್ತೆಯ ಕೇಂದ್ರ ಸಂದೇಶವಾಗಿದೆಃ ದೇವರು ಮಾನವ ಜನಾಂಗವನ್ನು ಪ್ರೀತಿಸುತ್ತಾನೆ ಮತ್ತು ಪುರುಷ ಸ್ತ್ರೀಯರನ್ನು ರಕ್ಷಿಸಿ ತನ್ನ ಮಕ್ಕಳನ್ನಾಗಿ ಮಾಡಿಕೊಳ್ಳಲು ಅಭಿಲಾಷಿಸುತ್ತಾನೆ (ಯೋಹಾನ 3:16 ನೋಡಿರಿ). ಬೇರೆ ಇನ್ನಾವ ಧರ್ಮದಲ್ಲಿಯೂ ನಾವು ಈ

ಸಂದೇಶವನ್ನು ಕಾಣುವದಿಲ್ಲ. ಈ ಕಾರಣದಿಂದಲೇ ಜಗತ್ತಿಗೆ ಏಕೈಕ ನಿರೀಕ್ಷೆಯು ಕ್ರಿಸ್ತನ ಸುವಾರ್ತೆಯಲ್ಲಿ ಸಿಕ್ಕುತ್ತದೆ. ಮನುಷ್ಯನಿಗೆ ನಿತ್ಯಜೀವದ ಖಚಿತ ನಿರೀಕ್ಷೆಯನ್ನು ಬೇರೆ ಇನ್ನಾವ ಧರ್ಮ ಇನ್ನಾವ ದೇವರೂ ನೀಡುವದಿಲ್ಲ. ಸುವಾರ್ತೆಯು ಮಾತ್ರವೇ ಏಕೈಕ ಸತ್ಯಜೀವಸ್ವರೂಪನಾದ ದೇವರ ವಾಕ್ಯವಾಗಿದೆ. ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವದರಲ್ಲಿ ದೇವರ ಪ್ರೀತಿಯು ತೋರಿಬಂದಿರುತ್ತದೆ. ಆದರೆ ನಾವು ಆತನ ಮಕ್ಕಳೆಂಬ ಹೆಸರು ಮಾತ್ರವೇ ನಮಗಿರುವದಿಲ್ಲ– ನಾವು ಆತನ ಮಕ್ಕಳೇ ಆಗಿದ್ದೇವೆ! (ಯೋಹಾನ 1:12; ಗಲಾತ್ಯ 3:26; 4:7).

ನಾವು ಆತನ ಮಕ್ಕಳೆಂಬದಕ್ಕೆ ಸಂದೇಹ ಪಡದಿರೋಣ. ನಾವು ಅದನ್ನು ಸಂಶಯಪಡುವಂತೆ ಮಾಡುವದಕ್ಕೆ ಸೈತಾನನು ಕಠಿಣವಾಗಿ ಪ್ರಯತ್ನಿಸುತ್ತಾನೆ. ಸೈತಾನನು ನಮಗೆ ಹೇಳುವದೇನೆಂದರೆಃ ನೀನು ಅಂಥ ಕೆಟ್ಟ ಪಾಪಿಯಾಗಿದ್ದು ದೇವರ ಮಗನಾಗಿರುವದಕ್ಕೆ ಸಾಧ್ಯವಿಲ್ಲ. ಆದರೆ ಇದು ಒಂದು ಸುಳ್ಳು. ನಾವು ಕ್ರಿಸ್ತನ ರಕ್ತದ ಮೂಲಕ ಸಮಸ್ತಪಾಪಗಳಿಂದ ಶುದ್ಧಿಮಾಡಲ್ಪಟ್ಟಿರುತ್ತೇವೆ (1 ಯೋಹಾನ 1:17). ನಾವು ಸೈತಾನನ ಮಾತನ್ನು ಕೇಳಬಾರದು.

ನಮ್ಮಂತಹ ಅಲ್ಪರೂ ದೀನರೂ ಆಗಿರುವ ವಿಶ್ವಾಸಿಗಳು ದೇವರ ಮಕ್ಕಳಾಗುವದು ಹಾಗೂ ಪರಲೋಕದಲ್ಲಿನ ನಿತ್ಯವಾದ ಬಾಧ್ಯತೆಯನ್ನು ಹೊಂದುವದು ಹೇಗೆ ಸಾಧ್ಯವಿರುತ್ತದೆಂಬದನ್ನು ಲೋಕವು ತಿಳಿದುಕೊಳ್ಳುವದಿಲ್ಲ. ಲೋಕವು ಅದನ್ನು ಒಪ್ಪಿಕೊಳ್ಳಲಾರದು. ಲೋಕವು –ಅಂದರೆ, ಕ್ರಿಸ್ತನಂಬಿಕೆಯಿಲ್ಲದ ಮಾನವ ಜನಾಂಗವು– ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವದಿಲ್ಲ; (ಯೋಹಾನ 1:10; 15:18-21 ನೋಡಿರಿ).

2 ಆದರೆ ಆತನು ಪ್ರತ್ಯಕ್ಷನಾದರೆ –ಅಂದರೆ, ಯೇಸು ಲೋಕಾಂತ್ಯದಲ್ಲಿ ತಿರಿಗಿ ಬಂದಾಗ– ನಾವು ಆತನ ಹಾಗಿರುವೆವೆಂದು ಬಲ್ಲೆವು. ಈಗ ನಾವು ದೇವರ ಮಕ್ಕಳಾಗಿದ್ದರೂ ಇನ್ನೂ ಪೂರ್ಣವಾಗಿ ಕ್ರಿಸ್ತನಂತಾಗಿರುವದಿಲ್ಲ. ಆದರೆ ನಾವು ಮಹಿಮಾಸ್ವರೂಪನಾದ ಕ್ರಿಸ್ತನನ್ನು ನೋಡುವಾಗ ನಾವು ಆತನ ಸಂಗಡ ಇರುವಾಗ ರೂಪಾಂತರಗೊಳ್ಳುವೆವು. ಆತನ ಮಹಿಮೆಯು ನಮ್ಮಲ್ಲಿ ತೋರಿಬರುವದು (ಯೋಹಾನ 17:24; 2 ಕೊರಿಂಥ 3:18).

3 ಯೋಹಾನನ್ನು ಪ್ರಸ್ತಾಪಿಸುವ ಆತನ ಮೇಲಿನ ಈ ನಿರೀಕ್ಷೆ ಯಾವದು? ಈ ನಿರೀಕ್ಷೆ ಯೇಸುವಿನಲ್ಲಿಟ್ಟ ನಿರೀಕ್ಷೆಯಾಗಿದೆ. ಇದು ಯೇಸುವನ್ನು ಸಂಧಿಸುವ ಆತನ ಹಾಗಿರುವ ಆತನ ಮಹಿಮೆಯಲ್ಲಿ ಪಾಲುಹೊಂದುವ ನಿರೀಕ್ಷೆಯಾಗಿದೆ. ನಾವು ಯೇಸುವಿನಂತಾಗಲು ಹಾತೋರೆದು ನಿರೀಕ್ಷಿಸುವಾಗ ನಿಜವಾಗಿಯೂ ನಾವು ಆತನ ಹಾಗೆ ಆಗುವೆವು. ನಮ್ಮ ನಿರೀಕ್ಷೆಯು ನೆರವೇರುವದು; ಕ್ರಿಸ್ತನು ಶುದ್ಧನಾಗಿರುವಂತೆಯೇ ನಾವೂ ಶುದ್ಧರಾಗುವೆವು.

4 ಪಾಪ ಮಾಡುವ ಪ್ರತಿಯೊಬ್ಬನು ಅಧರ್ಮವನ್ನು ಮಾಡುವವನಾಗಿದ್ದಾನೆ, ದೇವರ ಧರ್ಮಶಾಸ್ತ್ರವನ್ನು ಉಲ್ಲಂಘಿಸುವವನಾಗಿದ್ದಾನೆ. ಪ್ರತಿಯೊಬ್ಬನು ಎಂಬುದು ಅರಸರು, ಪ್ರಧಾನಮಂತ್ರಿಗಳು, ಅಧ್ಯಕ್ಷರುಗಳು– ಎಲ್ಲರನ್ನೂ ಒಳಗೊಂಡಿರುತ್ತದೆ. ಯಾವನಾದರೂ ಪಾಪಮಾಡಿದರೆ ದೇವರ ನಿಯಮವನ್ನು ಉಲ್ಲಂಘಿಸುವವನಾಗಿದ್ದಾನೆ.

ಬಹು ಮಂದಿ ಜನರು "ಪಾಪ" ಎಂಬ ಪದವನ್ನು ಇಷ್ಟಪಡುವದಿಲ್ಲ. ಅವರು ಪಾಪ ಮಾಡುವಾಗಲೆಲ್ಲಾ "ನಾನು ತಪ್ಪು ಮಾಡಿದೆ" ಎಂದು ಹೇಳುತ್ತಾರೆ. ಆದರೆ ಹಾಗೆ ಹೇಳುವದರಲ್ಲಿ ಅವರು ತಮ್ಮನ್ನೇ ಮೋಸಪಡಿಸಿಕೊಳ್ಳುತ್ತಾರೆ. ದೇವರು ಅವರ ಪಾಪವನ್ನು ನೋಡುತ್ತಾನೆ; ಆತನು ಮೋಸಹೋಗುವದಿಲ್ಲ.

5 ಪಾಪಗಳನ್ನು ಹೊಗಲಾಡಿಸುವದಕ್ಕಾಗಿ ಕ್ರಿಸ್ತನು ಪ್ರತ್ಯಕ್ಷನಾದನು –ಅಂದರೆ, ಆತನು ಭೂಲೋಕಕ್ಕೆ ಬಂದನು (ಯೋಹಾನ 1:29). ಆತನು ಹೇಗೆ ನಮ್ಮ ಪಾಪಗಳನ್ನು ಹೋಗಲಾಡಿಸಿದನು? ಆತನು ನಮ್ಮ ಪಾಪಗಳ ದಂಡನೆಯನ್ನು ತನ್ನ ಮೇಲೆ ಹೊತ್ತುಕೊಳ್ಳುವದರ ಮೂಲಕ ಅದನ್ನು ನೆರವೇರಿಸಿದನು. ಆತನು ನಮ್ಮ ಸ್ಥಾನದಲ್ಲಿ ಮರಣದಂಡನೆಯನ್ನು ಹೊಂದಿದನು. ಈ ವಿಧದಲ್ಲಿ, ಆತನು ನಮ್ಮ ಪಾಪಗಳಿಗೆ ಪ್ರಾಯಶ್ಚಿತ ಮಾಡಿದನು (ರೋಮ 5:6-8; 1 ಕೊರಿಂಥ 15:3; 1 ಯೋಹಾನ 2:2 ನೋಡಿರಿ). ಆದರೆ ಸ್ವತಃ ಕ್ರಿಸ್ತನು ಮರಣಕ್ಕೆ ಯೋಗ್ಯನಾಗಿರಲಿಲ್ಲ; ಆತನು ಪಾಪವಿಲ್ಲದವನಾಗಿದ್ದನು (ಇಬ್ರಿಯ 4:15).

6 ಆತನಲ್ಲಿ ನೆಲೆಗೊಂಡಿರುವವನು ಪಾಪ ಮಾಡುತ್ತಾ ಇರುವದಿಲ್ಲ[10]. ಅಂದರೆ, ಕ್ರಿಸ್ತನಲ್ಲಿ ಜೀವಿಸುವ ವ್ಯಕ್ತಿಯು ಪಾಪದಲ್ಲಿ ಜೀವಿಸುವದಿಲ್ಲ (ವಚನ 9 ನೋಡಿರಿ). ಆತನು ಆಗಾಗ ಪಾಪ ಮಾಡಬಹುದು ಆದರೆ ಆತನು ಬೇಕೆಂದು ಪಾಪದಲ್ಲಿ ಮುಂದುವರೆಯುವದಿಲ್ಲ (1 ಯೋಹಾನ 1:8 ಮತ್ತು ವ್ಯಾಖ್ಯಾನ ನೋಡಿರಿ). ಮತ್ತು ಆತನು ಪಾಪಮಾಡಿದರೆ ಶೀಘ್ರವೇ ಅದಕ್ಕಾಗಿ ಪಶ್ಚಾತ್ತಾಪ ಪಟ್ಟು ಶುದ್ಧನಾಗುವನು (1ಯೋಹಾನ 1:9).

ನಾವು ಗೊತ್ತಿದ್ದೂ ಯಾವದಾದರೊಂದು ಪಾಪ ಮಾಡುತ್ತಾ ಮುಂದುವರೆಯುವದಾದರೆ ನಾವು ಕ್ರಿಸ್ತನಲ್ಲಿಲ್ಲ. ನಾವು ಆತನನ್ನು ತಿಳಿದವರಲ್ಲ ಮತ್ತು ಆತನು ನಮ್ಮನ್ನು ತಿಳಿದವನಲ್ಲ. ಪ್ರತಿಯೊಬ್ಬನು ತನ್ನನ್ನು ಕೇಳಿಕೊಳ್ಳ ಬೇಕಾದದ್ದೇನೆಂದರೆಃ "ನಾನು ಬಿಟ್ಟುಬಿಡುವದಕ್ಕೆ ಮನಸ್ಸಿಲ್ಲದ ಯಾವದಾದರೂ ಪಾಪ ನನ್ನ ಜೀವಿತದಲ್ಲಿರುತ್ತದೊ?" ಇರುವದಾದರೆ, ನಾವು ತಕ್ಷಣವೇ ಅದನ್ನು ಒಪ್ಪಿಕೊಂಡು ಬಿಟ್ಟು ಬಿಡಬೇಕು ನಾವು ಹಾಗೆ ಮಾಡದಿದ್ದರೆ ಕ್ರಿಸ್ತನಿಗೆ ಸೇರಿದವರಲ್ಲ. ಕ್ರಿಸ್ತನಿಗೆ ವಿಧೇಯರಾಗುವವರೂ ಹೃದಯದಲ್ಲಿ ನಿರ್ಮಲರೂ ಮಾತ್ರವೇ ಆತನನ್ನು ಕಾಣುವರು ಹಾಗೂ ತಿಳಿಯುವರು (ಮತ್ತಾಯ 5:8; 1 ಯೋಹಾನ 2:3-4).

7 ಅನೇಕ ಸುಳ್ಳುಬೋಧಕರು ನಮ್ಮನ್ನು ಮೋಸಪಡಿಸಲು ಪ್ರಯತ್ನಿಸುತ್ತಾರೆ. ಆದರೆ ನಾವು ಅವರನ್ನು ಅವರ ಕೆಲಸಗಳಿಂದ ಗುರುತಿಸುತ್ತೇವೆ. ಒಬ್ಬನು ನೀತಿಯನ್ನು ನಡಿಸುವದಾದರೆ (ನಡಿಸುತ್ತಾ ಇರುವದಾದರೆ) ಆತನು ನೀತಿವಂತನೆಂದು

ನಾವು ತಿಳಿಯುವೆವು. ಇನ್ನೊಂದೆಡೆಯಲ್ಲಿ, ಒಬ್ಬನು ಅನೀತಿಯನ್ನು ಮಾಡುತ್ತಿರುವದಾದರೆ ಆತನು ಸುಳ್ಳು ಬೋಧಕನೂ ಸುಳ್ಳು ಕ್ರೈಸ್ತನು ಎಂದು ನಾವು ತಿಳಿಯುವೆವು. ಯೇಸು ಹೇಳಿದ್ದೇನೆಂದರೆಃ " ಅವರ ಫಲಗಳಿಂದ ಅವರನ್ನು ತಿಳುಕೊಳ್ಳುವಿರಿ" (ಮತ್ತಾಯ 7:16).

8 ಪಾಪಮಾಡುವವನು[11]. ಸೈತಾನನಿಂದ ಹುಟ್ಟಿದವನಾಗಿದ್ದಾನೆ. ಸೈತಾನನ ಕೆಲಸವೇನೆಂದರೆ ಮನುಷ್ಯರನ್ನು ಮೋಸಗೊಳಿಸಿ ಪಾಪಕ್ಕೆ ನಡಿಸುವದೇ. ಸೈತಾನನು ಮನುಷ್ಯರನ್ನು ಪಾಪಕ್ಕೆ ದಾಸರನ್ನಾಗಿ ಮಾಡುತ್ತಾನೆ. ಆದರೆ ಯೇಸು ಸೈತಾನನ ಕೆಲಸಗಳನ್ನು ಲಯಮಾಡುವದಕ್ಕೋಸ್ಕರವೇ ಭೂಲೋಕಕ್ಕೆ ಬಂದನು. ಜನರನ್ನು ಪಾಪದ ದಾಸತ್ವದೊಳಗಿಂದ ಬಿಡುಗಡೆಗೊಳಿಸಿ ಕತ್ತಲೆಯ ರಾಜ್ಯದೊಳಗಿಂದ ಹೊರತರುವದರ ಮೂಲಕ ಸೈತಾನನ ಕೆಲಸಗಳನ್ನು ನಾಶಮಾಡಿದನು.

9 ದೇವರಿಂದ ಹುಟ್ಟಿದವನು ಪಾಪಮಾಡುತ್ತಾ ಮುಂದುವರೆಯುವದಿಲ್ಲ[12]. (1 ಯೋಹಾನ 1:8; 5:18 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಾವು ದೇವರಿಂದ ಹುಟ್ಟಿದವರು. ಆತನ ಜೀವವು – ಆತನ ಸ್ವಭಾವವು – ನಮ್ಮಲ್ಲಿ ಇದೆ. ಆತನ ಬಲ, ಪ್ರೀತಿ, ಹಾಗೂ ಇತರ ಗುಣಲಕ್ಷಣಗಳು ನಮ್ಮಲ್ಲಿ ಇರುತ್ತವೆ. ಆತನ ಸ್ವಭಾವವನ್ನು ಪಡೆದವರಾದ ನಾವು ಆತನ ಸ್ವಭಾವಕ್ಕೆ

ವಿರುದ್ಧವಾದದ್ದನ್ನು ಮಾಡುತ್ತಾ ಇರುವದಕ್ಕೆ ಸಾಧ್ಯವಿಲ್ಲ; ಈಗ ನಾವು ಆತನ ಸ್ವಭಾವಕ್ಕನುಸಾರವಾಗಿ ಜೀವಿಸಬೇಕು. ಕ್ರೈಸ್ತನಾಗಿರುವದೆಂದರೆ ಒಂದು ಧರ್ಮವನ್ನು ಹಿಂಬಾಲಿಸುವದಲ್ಲ ಅಥವಾ ಯಾವದಾದರೂ ನಿಯಮಕ್ಕೆ ವಿಧೇಯರಾಗುವದಲ್ಲ, ಕ್ರೈಸ್ತನಾಗಿರುವದೆಂದರೆ ದೇವರಾತ್ಮನಿಂದ ಹೊಸದಾಗಿ ಹುಟ್ಟಿ ನೂತನ ಆತ್ಮೀಕ ಸ್ವಭಾವವನ್ನು ಹೊಂದಿಕೊಳ್ಳುವದಾಗಿದೆ (ಯೋಹಾನ 3:5 ;ರೋಮ 8:11 ನೋಡಿರಿ).

ಉದಾಹರಣೆಗೆ ಕಿತ್ತಳೆ ಹಣ್ಣುಗಳು ಕಿತ್ತಳೆ ಮರದಿಂದ ಬರುತ್ತವೆ. ಕಿತ್ತಳೆ ಮರವು ಹುಳಿಯಾದ ನಿಂಬೆ ಹಣ್ಣುಗಳನ್ನು ಉತ್ಪಾದಿಸುವದಿಲ್ಲ. ಹಾಗೆಯೇ ದೇವರು ಸಹ ಪಾಪಿಗಳಿಗೆ ಜನ್ಮ ನೀಡುವದಿಲ್ಲ. ಆದರೆ ಕಿತ್ತಳೆ ಹಣ್ಣುಗಳು ಕೀಟಾಣುಗಳಿಂದ ರೋಗಗ್ರಸ್ಥ ಅಥವಾ ಒಣಗಿ ಮುದ್ದೆಯಾಗುವ ಸಂಭವವಿದೆ ಎಂದು ನೆನಪಿನಲ್ಲಿಟ್ಟುಕೊಳ್ಳೋಣ. ಆದರೆ ಕಿತ್ತಳೆ ಹಣ್ಣು ರೋಗಗ್ರಸ್ಥವಾಗಬಹುದಾದರೂ ಅದು ಆಗಲೂ ಕಿತ್ತಳೆ ಹಣ್ಣಾಗಿಯೇ ಇರುತ್ತದೆ. ನಾವು ದೇವರ ಮಕ್ಕಳು ಆದರೆ ಆಗಾಗ ನಾವು "ರೋಗಗ್ರಸ್ಥರು" ಅಥವಾ "ಕೀಟಾಣುಗಳಿಂದ" ದಾಳಿಗೂ ಒಳಗಾಗುತ್ತೇವೆ– ಅಂದರೆ, ನಾವು ಪಾಪದಲ್ಲಿ ಬೀಳುತ್ತೇವೆ. ಆದರೆ ನಾವು ಪಾಪದಲ್ಲಿ ಬಿದ್ದರೂ ದೇವರ ಮಕ್ಕಳಾಗಿಯೇ ಉಳಿಯುತ್ತೇವೆ. ಹೇಗಿದ್ದರೂ, ಪಾಪದಲ್ಲಿ ಬಿದ್ದವರಾಗಿ ನಾವು ನಮ್ಮ ಪರಲೋಕದ ತಂದೆಗೆ ಪಾಪಗಳನ್ನು ಒಪ್ಪಿಕೊಂಡು ಕ್ಷಮಾಪಣೆಯನ್ನು ಬೇಡಿಕೊಳ್ಳಬೇಕು. ನಾವು ದೇವರ ಮಕ್ಕಳಾದ್ದರಿಂದ ಪಾಪಮಾಡುವದಕ್ಕೆ ಇಷ್ಟಪಡುವದಿಲ್ಲ. ಬದಲಾಗಿ, ನಾವು ದೇವರ ಚಿತ್ತವನ್ನು ಮಾಡುವದಕ್ಕೂ ದೇವರನ್ನು ಮೆಚ್ಚುವದಕ್ಕೂ ಇಷ್ಟಪಡುತ್ತೇವೆ, ಯಾಕೆಂದರೆ ಅತನು ನಮ್ಮ ತಂದೆಯಾಗಿರುತ್ತಾನೆ. ಆದದರಿಂದ ನಾವು ಪಾಪ ಮಾಡುವಾಗ ಪಾಪಮಾಡುತ್ತಿರುವದು ನಮ್ಮ ನಿಜವಾದ ಸ್ವಭಾವವಲ್ಲ; ಬದಲಾಗಿ, ಅದು ನಮ್ಮಲ್ಲಿ ಜೀವಿಸುವ ಪಾಪ– ನಮ್ಮ ಪೂರ್ವ ಪಾಪಾಧೀನ ಸ್ವಭಾವವೇ ಪಾಪಮಾಡುತ್ತಿರುವದಾಗಿದೆ (ರೋಮ 7:18-20 ನೋಡಿರಿ).

10 ನಾವು ದೇವರ ಮಕ್ಕಳನ್ನು ಹಾಗೂ ಸೈತಾನನ ಮಕ್ಕಳನ್ನು ಅವರ ಕೆಲಸಗಳಿಂದ ಗುರುತಿಸುವೆವು. ನೀತಿಯನ್ನು ನಡಿಸುವ[13] ಯಾವನಾದರೂ ದೇವರ ಮಗುವಾಗಿದ್ದಾನೆ (1 ಯೋಹಾನ 2:29). ನೀತಿಯನ್ನು ನಡಿಸದವನು[14] ಸೈತಾನನ ಮಗುವಾಗಿದ್ದಾನೆ.

ನಮ್ಮ ಸಹೋದರನನ್ನು ಪ್ರೀತಿಸದಿರುವದು ಪಾಪವಾಗಿದೆ (1 ಯೋಹಾನ 2:9). "ನೀತಿಯನ್ನು ನಡಿಸುವವದು" ಎಂದರೆ ಎಲ್ಲಕ್ಕಿಂತ ಮೇಲಾಗಿ ಇತರರನ್ನು[15]– ವಿಶೇಷವಾಗಿ, ನಮ್ಮ ಸಹೋದರರನ್ನು[16]–ಪ್ರೀತಿಸುವದೇ ಎಂದು ಯೋಹಾನನು ಇಲ್ಲಿ ನಮಗೆ ಜ್ಞಾಪಕಪಡಿಸುತ್ತಾನೆ (ಯೋಹಾನ 13:34; ಗಲಾತ್ಯ 6:10). ಇಡೀ ಧರ್ಮಶಾಸ್ತ್ರವು ದೇವರ ಎಲ್ಲಾ ಆಜ್ಞೆಗಳು ಇತರರನ್ನು ಪ್ರೀತಿಸಬೇಕು, ನಮ್ಮ ನೆರೆಯವರನ್ನು ಪ್ರೀತಿಸಬೇಕು ಎಂಬ ಆಜ್ಞೆಯಲ್ಲಿ ಸಾರಾಂಶಗೊಂಡಿದೆ (ರೋಮ 13:9; ಗಲಾತ್ಯ 5:14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

## ಒಬ್ಬರನ್ನೊಬ್ಬರು ಪ್ರೀತಿಸಿರಿ (3:11-24)

**11-12** ಕಾಯಿನನು ದೇವರು ಸೃಷ್ಟಿಸಿದ ಪ್ರಥಮ ಮನುಷ್ಯನಾದ ಆದಾಮನ ಹಿರಿಯ ಮಗನು. ಕಾಯಿನನು ಕೆಟ್ಟವನೂ ಆತನ ತಮ್ಮನು ನೀತಿವಂತನೂ ಆಗಿದ್ದದರಿಂದ ಕಾಯಿನನು ಹೇಬೆಲನನ್ನು ಕೊಂದುಹಾಕಿದನು (ಆದಿಕಾಂಡ 4:1-8). ಕೆಟ್ಟದ್ದು ಯಾವಾಗಲೂ ನೀತಿಯನ್ನು ವಿರೋಧಿಸುತ್ತದೆ; ಅವುಗಳ ಮಧ್ಯದಲ್ಲಿ ಎಂದಿಗೂ ಸಮಾಧಾನವಿರದು. ಯೋಹಾನನು ಹೇಳುವದೇನೆಂದರೆಃ ಕಾಯಿನನಂತೆ ನಾವು ಇರಬಾರದು.

13 ಕ್ರಿಸ್ತನಲ್ಲಿ ನಂಬಿಕೆಯಿಡುವವರನ್ನು ಲೋಕವು[17] ಏಕೆ ದ್ವೇಷಿಸಿ ವಿರೋಧಿಸುತ್ತದೆ? ಏಕೆಂದರೆ, ವಿಶ್ವಾಸಿಗಳು ಈ ಲೋಕದವರಲ್ಲ, ಅವರು ಪರಲೋಕದವರು; ಅವರು ದೇವರಿಂದ ಹುಟ್ಟಿದವರು (ಯೋಹಾನ 1:12-13; 15:18-19). ಲೋಕವು ಕ್ರಿಸ್ತನನ್ನು ದ್ವೇಷಿಸಿದ್ದರೆ ಅದು ಆತನ ಹಿಂಬಾಲಕರನ್ನು ಸಹ ದ್ವೇಷಿಸುತ್ತದೆ.

14 1 ಯೋಹಾನ 2:29ರಲ್ಲಿ ಯೋಹಾನನು ಹೇಳುವದೇನೆಂದರೆಃ.....ನೀತಿಯನ್ನು ಅನುಸರಿಸುವ ಪ್ರತಿಯೊಬ್ಬನು ಆತನಿಂದ (ದೇವರಿಂದ) ಹುಟ್ಟಿದವನಾಗಿದ್ದಾನೆ. ಅಂದರೆ, ನೀತಿಯನ್ನು ನಡಿಸುವವನು ಆತ್ಮೀಕವಾಗಿ ಹೊಸದಾಗಿ

ಹುಟ್ಟಿದವನಾಗಿದ್ದಾನೆ; ಆತನು ನೂತನ ಆತ್ಮೀಕ ಜೀವಿತವನ್ನು ಪಡೆದವನಾಗಿದ್ದಾನೆ. ವಿಧೇಯನಾಗುವದೆಂದರೆ ಪ್ರೀತಿಸುವದೇ (ವಚನ 10 ಮತ್ತು ವ್ಯಾಖ್ಯಾನ ನೋಡಿರಿ). ಆದದರಿಂದ, ಪ್ರೀತಿಸುವದೆಂದರೆ ಆತ್ಮೀಕ ಜೀವಿತವನ್ನು ಹೊಂದಿಕೊಳ್ಳುವದಾಗಿದೆ. ಹೀಗೆ, ನಾವು ನಮ್ಮ ಸಹೋದರರನ್ನು ಪ್ರೀತಿಸುವದಾದರೆ ಮರಣದಿಂದ ಪಾರಾಗಿ ಜೀವದಲ್ಲಿ ಸೇರಿದ್ದೇವೆಂದು ನಾವು ತಿಳಿದುಕೊಳ್ಳಬಹುದು (1 ಯೋಹಾನ 5:24 ನೋಡಿರಿ). ದ್ವೇಷಿಸುವದರ ಫಲಿತವು ಮರಣವೇ. ಪ್ರೀತಿಯ ಫಲಿತವು ಜೀವ– ನಿತ್ಯಜೀವ ಆಗಿದೆ.

**15** ಒಬ್ಬನು ತನ್ನ ಸಹೋದರನನ್ನು ದ್ವೇಷಿಸುವದು ಆತನನ್ನು ಕೊಲೆಗೈದಂತೆಯೇ. ನಾವು ಆತನನ್ನು ನಮ್ಮ ಕೈಗಳಿಂದಲ್ಲ, ಆದರೆ ನಮ್ಮ ಆಲೋಚನೆಗಳಿಂದಲೇ ಕೊಲೆ ಮಾಡುತ್ತೇವೆ. ನಾವು ನಮ್ಮ ಸಹೋದರನ ಮೇಲೆ ಕೋಪಗೊಳ್ಳುವದಾದರೆ ಕೊಲೆಗಾರರಾಗಿ ನ್ಯಾಯತೀರ್ಪನ್ನು ಎದುರಿಸುವೆವು ಎಂದು ಯೇಸು ಬೋಧಿಸಿದನು (ಮತ್ತಾಯ 5:21-22). ದ್ವೇಷ ಹಾಗೂ ಕೊಲೆ ಆತ್ಮೀಕ ಮರಣಕ್ಕೆ ನಡಿಸುತ್ತದೆ ಅಂಥವುಗಳನ್ನು ಮಾಡುವವರಿಗೆ ನಿತ್ಯಜೀವವು ಇರುವದಿಲ್ಲ.

**16** ಯೇಸು ತನ್ನ ಸ್ವಂತ ಮಾದರಿಯ ಮೂಲಕ ಪ್ರೀತಿಯೇನೆಂಬದನ್ನು ನಮಗೆ ತೋರಿಸಿದನು. ನಾವು ಆತನ ಮಾದರಿಯನ್ನು ಅನುಸರಿಸಬೇಕು. ಆತನು ನಮ್ಮ ಸಹೋದರರನ್ನು ಎಷ್ಟೋ ಪ್ರೀತಿಸಿ ಅವರಿಗಾಗಿ ತನ್ನ ಪ್ರಾಣವನ್ನು ನೀಡಿರುವದಾದರೆ ಖಂಡಿತವಾಗಿಯೂ ನಾವು ಸಹ ಅವರನ್ನು ಯೇಸು ಪ್ರೀತಿಸಿದಂತೆಯೇ ಪ್ರೀತಿಸುವದಕ್ಕೆ ಮನಸ್ಸುಳ್ಳವರಾಗಿರಬೇಕು; ನಾವು ಸಹ ಅವರಿಗಾಗಿ ನಮ್ಮ ಪ್ರಾಣಗಳನ್ನು ಅರ್ಪಿಸುವದಕ್ಕೆ ಮನಸ್ಸುಳ್ಳವರಾಗಿರಬೇಕು. ನಾವು ನಮ್ಮ ಸ್ವಪ್ರಾಣವನ್ನು ಪ್ರೀತಿಸಬಾರದು; ಬದಲಾಗಿ, ನಾವು ಅದನ್ನು ಇತರರಿಗೋಸ್ಕರ ಅರ್ಪಿಸುವದಕ್ಕೆ ಸಿದ್ಧರಾಗಿರಬೇಕು (ಯೋಹಾನ 15:12-13; ರೋಮ 5:8; 1 ಯೋಹಾನ 4:9-11). ಸಹಜವಾಗಿ ಇತರರಿಗೋಸ್ಕರ ಸಾಯುವದು ಅವಶ್ಯಕವಾಗಿರುವದಿಲ್ಲ. ಯಾವಾಗಲೂ ಅವಶ್ಯಕವಾಗುವದೇನೆಂದರೆ ಇತರರಿಗೋಸ್ಕರ ಜೀವಿಸುವದೇ. ವಾಸ್ತವದಲ್ಲಿ, ಇತರರಿಗೋಸ್ಕರ ಜೀವಿಸುವದು ಅವರಿಗೋಸ್ಕರ ಸಾಯುವದಕ್ಕಿಂತಲೂ ಹೆಚ್ಚು ಕಷ್ಟಕರವಾಗಿರುತ್ತದೆ!.

**17-18** ನಿಜವಾದ ಪ್ರೀತಿಯು ನಮ್ಮ ಹೃದಯಗಳಿಂದ ಹುಟ್ಟುತ್ತದೆ; ಅದು ನಮ್ಮೊಳಗಿಂದ ಬರುತ್ತದೆ. ಆದರೆ ನಿಜವಾದ ಪ್ರೀತಿಯು ಯಾವಾಗಲೂ ಬಹಿರಂಗದಲ್ಲಿ ವ್ಯಕ್ತಪಡಿಸಲ್ಪಡುತ್ತದೆ; ಅದು ಪ್ರೀತಿಯ ಕೃತ್ಯಗಳಲ್ಲಿ ತೋರಿಬರುತ್ತದೆ. ಅದು ಹಾಗೆ ತೋರಿ ಬರದಿದ್ದರೆ ನಿಜವಾದ ಪ್ರೀತಿಯಲ್ಲ (ಯಾಕೋಬ 1:22; 2:14-17 ನೋಡಿರಿ).

**19** ನಾವು ಸತ್ಯಕ್ಕೆ ಸೇರಿದವರೆಂಬದು ಇದರಿಂದಲೇ ನಮಗೆ ತಿಳಿಯುತ್ತದೆ. ನಮ್ಮ ಪ್ರೀತಿಯು ಬಹಿರಂಗದಲ್ಲಿ ತೋರಿಬರುವದರಿಂದಲೇ ನಾವು ಸತ್ಯಕ್ಕೆ ಸೇರಿದವರೆಂದು ತಿಳಿಯುತ್ತೇವೆ. ಇದು 14ನೇ ವಚನವನ್ನು ಹೋಲುತ್ತದೆ. ಅಲ್ಲಿ ಯೋಹಾನನು ನಮ್ಮ ಪ್ರೀತಿಯ ಕಾರಣದಿಂದಲೇ ನಮ್ಮಲ್ಲಿ ಜೀವವಿದೆ ಎಂದು ತಿಳಿಯುತ್ತೇವೆ ಎಂದು ಹೇಳುತ್ತಾನೆ. "ಸತ್ಯಕ್ಕೆ ಸೇರಿರುವದು" ಹಾಗೂ "ಜೀವವನ್ನು ಹೊಂದುವದು" ಮುಖ್ಯವಾಗಿ ಒಂದೇ ಸಂಗತಿಯಾಗಿವೆ. ಯೇಸು ತಾನೇ ಸತ್ಯವೂ, ಜೀವವೂ ಆಗಿದ್ದನು (ಯೋಹಾನ 14:6). ನಾವು ಪ್ರೀತಿಯಲ್ಲಿ ಮುಂದುವರೆಯುವಾಗ ಸತ್ಯವೂ, ಜೀವವೂ, ಕ್ರಿಸ್ತನು ಹಾಗೂ ದೇವರೂ ನಮ್ಮಲ್ಲಿ ಇದ್ದಾರೆ. ಈ ರೀತಿಯಾಗಿರುವ ನಾವು ಯಾವದಕ್ಕೆ ಹೆದರಬಲ್ಲೆವು ? ಪ್ರೀತಿಸುವವರು ಯಾವದಕ್ಕೂ ಹೆದರುವದಿಲ್ಲ (1 ಯೋಹಾನ 4:18). ಆದದರಿಂದ, ನಾವು ನಮ್ಮ ಹೃದಯವನ್ನು ಸಮಾಧಾನ ಪಡಿಸಬಲ್ಲೆವು ; ಅಂದರೆ, ನಾವು ನಿಜವಾಗಿಯೂ ದೇವರ ಮಕ್ಕಳು ಎಂಬ ನಿಶ್ಚಯವನ್ನು ಪುನಃ ಮಾಡಿಕೊಂಡು ಆತನ ಸನ್ನಿಧಿಯಲ್ಲಿ ಹೆದರಿಕೆಯಿಲ್ಲದೆ ಬರಬಹುದು. ಆದದರಿಂದ, ನಾವು ನಮ್ಮ ಹೃದಯಗಳನ್ನು ಸಮಾಧಾನ ಪಡಿಸಿ ದೇವರ ಎದುರಿನಲ್ಲಿ ಧೈರ್ಯದಿಂದ ನಿಂತುಕೊಳ್ಳಲು ಶಕ್ತರಾಗುವದಕ್ಕೆ ಬಯಸುವದಾದರೆ ನಾವು ನಮ್ಮ ಸಹೋದರರನ್ನು ಪ್ರೀತಿಸಬೇಕಾಗಿರುತ್ತದೆ.

**20** ಕೆಲವು ವೇಳೆ ನಮ್ಮ ಹೃದಯಗಳೇ ನಮ್ಮನ್ನು ದೋಷಿಯೆಂದು ನಿರ್ಣಯಿಸುತ್ತವೆ. ನಮ್ಮ ಹೃದಯಗಳು ನಮಗೆ, "ನೀನೊಬ್ಬ ಪಾಪಿ; ನೀನು ದೇವರ ಮಗುವಾಗಿರುವದಕ್ಕೆ ಯೋಗ್ಯನಲ್ಲ" ಎಂದು ಹೇಳುತ್ತವೆ. ಆದರೆ ದೇವರು ನಮ್ಮ ಹೃದಯಗಳಿಗಿಂತಲೂ ಹೆಚ್ಚಾಗಿ ತಿಳಿದಿರುತ್ತಾನೆ. ನಮ್ಮ ಹೃದಯಗಳು ಈ ವಿಧದಲ್ಲಿ ನಮ್ಮನ್ನು ಖಂಡಿಸಿದಾಗ್ಯು ದೇವರು ನಮ್ಮನ್ನು ನಿರ್ದೋಷಿಗಳೆಂದು ನಿರ್ಣಯಿಸುತ್ತಾನೆ. ದೇವರು ನಮ್ಮ ಹೃದಯಕ್ಕಿಂತ ದೊಡ್ಡವನಾಗಿದ್ದಾನೆ; ಮತ್ತು ಆತನು ನಮ್ಮನ್ನು ದೋಷಿಗಳೆಂದು ನಿರ್ಣಯಿಸುವದಿಲ್ಲ (ರೋಮ 8:1).

**21** 20ನೇ ವಚನದ ಪ್ರಕಾರವಾಗಿ ನಮ್ಮ ಹೃದಯಗಳು ನಮ್ಮನ್ನು ದೋಷಿಗಳೆಂದು ನಿರ್ಣಯಿಸಿದರೂ ದೇವರು ಹಾಗೆ ಮಾಡುವದಿಲ್ಲ. ಆದದರಿಂದ, 21ನೇ ವಚನದ ಪ್ರಕಾರವಾಗಿ, ನಮ್ಮ ಹೃದಯಗಳು ನಮ್ಮನ್ನು ದೋಷಿಗಳೆಂದು ನಿರ್ಣಯಿಸದಿದ್ದರೆ ದೇವರೂ ನಮ್ಮನ್ನು ದೋಷಿಗಳೆಂದು ನಿರ್ಣಸುವದಿಲ್ಲ ಎಂದು ನಮಗೆ ಹೆಚ್ಚು ಧೈರ್ಯವುಂಟಾಗುವದು. ನಮ್ಮ ಮನಸ್ಸಾಕ್ಷಿಯು ಶುದ್ಧವಾಗಿದ್ದರೆ– ಅಂದರೆ, ನಮ್ಮ ಹೃದಯಗಳು ಯಾವ ವಿಷಯದಲ್ಲಿಯೂ ನಮ್ಮನ್ನು ದೋಷಿಗಳೆಂದು ನಿರ್ಣಯಿಸದಿದ್ದರೆ– ದೇವರ ವಿಷಯದಲ್ಲಿ ನಮಗೆ ಧೈರ್ಯವುಂಟಾಗುವುದು ಮತ್ತು ನಮ್ಮ ಹೃದಯಗಳು ಸಮಾಧಾನದಿಂದ ಇರುವವು (ರೋಮ 5:1; ಇಬ್ರಿಯ 4:16 ನೋಡಿರಿ).

**22** ನಾವು ದೇವರ ಆಜ್ಞೆಗಳಿಗೆ ವಿಧೇಯರಾಗುವದರಿಂದ ಏನು ಬೇಡಿಕೊಂಡರೂ ಅದನ್ನು ಪಡೆಯುವೆವು . ನಾವು ಕೇಳಿದ್ದನ್ನೇ ದೇವರು ನಮಗೆ ಕೊಡದಿದ್ದರೆ ನಾವು ಸರಿಯಾಗಿ ಕೇಳಿಕೊಳ್ಳದಿರುವದೇ ಅದಕ್ಕೆ ಕಾರಣವಾಗಿರುತ್ತದೆ (ಯಾಕೋಬ 4:3). ಆದರೆ ದೇವರು ಯಾವಾಗಲೂ ನಮ್ಮ ಪ್ರಾರ್ಥನೆಗಳಿಗೆ ಒಂದಿಲ್ಲಾ ಒಂದು ಉತ್ತರವನ್ನು ಕೊಡುತ್ತಾನೆ; ನಮ್ಮ ಆತ್ಮೀಕ ಹಿತಕ್ಕಾಗಿ ಅಗತ್ಯವಾಗಿರುವದನ್ನು ಆತನು ಯಾವಾಗಲೂ ನಮಗೆ ಕೊಡುತ್ತಾನೆ. ಇಲ್ಲಿ ನಾವು ಈ ಪ್ರಾರ್ಥನೆಯ

ವಿಷಯವನ್ನು ಬಹಳ ಸೂಕ್ಷ್ಮವಾಗಿ ನೋಡಬೇಕು. ಯೋಹಾನನು ಈ ವಚನದಲ್ಲಿ ನಾವು ಆತನ ಆಜ್ಞೆಗಳನ್ನು ಕೈಕೊಂಡು ಆತನ (ದೇವರ) ಎಣಿಕೆಯಲ್ಲಿ ಮೆಚ್ಚಿಕೆಯಾದ ಕಾರ್ಯಗಳನ್ನು ಮಾಡುವವರಾಗಿರುವದರಿಂದ ಏನು ಬೇಡಿಕೊಂಡರೂ ಆತನಿಂದ ಹೊಂದುತ್ತೇವೆ ಎಂದು ಹೇಳುತ್ತಾನೆ. ನಾವು ಆತನ ಆಜ್ಞೆಗಳಿಗೆ ವಿಧೇಯರಾಗದೆ ಆತನ ಚಿತ್ತದ ಪ್ರಕಾರ ಜೀವಿಸದಿದ್ದರೆ ನಮ್ಮ ಪ್ರಾರ್ಥನೆಗಳು ವ್ಯರ್ಥವಾಗುವವು. ಆದದರಿಂದ, ನಾವು ಬೇಡಿಕೊಳ್ಳುವ ಸಂಗತಿಗಳನ್ನು ದೇವರಿಂದ ಹೊಂದಬೇಕಾದರೆ ಮೊದಲ ಅಗತ್ಯತೆ ಅಥವಾ ನಿರ್ಬಂಧವೇನೆಂದರೆ ನಾವು ವಿಧೇಯರಾಗಿರಬೇಕು. ಎರಡನೆಯ ನಿರ್ಬಂಧವೇನೆಂದರೆ ನಾವು ನಂಬಿಕೆಯಿಂದ ಪ್ರಾರ್ಥಿಸಬೇಕು (ಮತ್ತಾಯ 21:22; ಮಾರ್ಕ 11:24). ಮೂರನೆಯ ಅಗತ್ಯತೆಯೇನೆಂದರೆ, ನಾವು ಯೇಸುವಿನ ಹೆಸರಿನಲ್ಲಿ, ಅಂದರೆ, ಆತನ ನಿಮಿತ್ತ, ಆತನ ಮಹಿಮೆಗೋಸ್ಕರ ಪ್ರಾರ್ಥಿಸಬೇಕು; ನಾವು ನಮಗೋಸ್ಕರ ಅಥವಾ ನಮ್ಮ ಮಹಿಮೆಗೋಸ್ಕರ ಪ್ರಾರ್ಥಿಸಬಾರದು (ಯೋಹಾನ 14:14). ನಾಲ್ಕನೆಯ ಅಗತ್ಯತೆಯೇನೆಂದರೆ, ನಾವು ದೇವರ ಚಿತ್ತಕ್ಕನುಸಾರವಾಗಿ ಪ್ರಾರ್ಥಿಸಬೇಕು (1 ಯೋಹಾನ 5:14-15). ಪ್ರಾರ್ಥನೆಗಾಗಿರುವ ಈ ನಾಲ್ಕು ಅಗತ್ಯತೆಗಳು ಅಥವಾ ನಿರ್ಬಂಧಗಳು ಯೇಸುವಿನ ಒಂದು ಹೇಳಿಕೆಯಲ್ಲಿ ಅಡಕವಾಗಿರುತ್ತದೆಃ "ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ ಅದು ನಿಮಗೆ ದೊರೆಯುವದು" (ಯೋಹಾನ 15:7).

23 ದೇವರನ್ನು ಮೆಚ್ಚಿಸಬೇಕಾದರೆ ನಾವು ಏನು ಮಾಡಬೇಕು? ಈ ಪ್ರಾಮುಖ್ಯವಾದ ವಚನದಲ್ಲಿ ಯೋಹಾನನು ಪುನಃ ಈ ಪ್ರಶ್ನೆಗೆ ಉತ್ತರಿಸುತ್ತಾನೆಃ ದೇವರನ್ನು ಮೆಚ್ಚಿಸಬೇಕಾದರೆ ನಾವು ಕ್ರಿಸ್ತನಲ್ಲಿ ನಂಬಿಕೆಯಿಟ್ಟು ಆತನಿಗೆ ವಿಧೇಯರಾಗಬೇಕು (ಪ್ರೀತಿಸಬೇಕು). ನಿಜವಾದ ನಂಬಿಕೆಯು ತನ್ನಷ್ಟಕ್ಕೆ ತಾನೇ ಇರುವದಿಲ್ಲ; ಅದು ಯಾವಾಗಲೂ ವಿಧೇಯತೆಯ ಮೂಲಕ ವ್ಯಕ್ತವಾಗುತ್ತದೆ, ಮತ್ತು ವಿಧೇಯತೆಯು ಯಾವಾಗಲೂ ಪ್ರೀತಿಯಲ್ಲಿ ವ್ಯಕ್ತವಾಗುತ್ತದೆ (ಗಲಾತ್ಯ 5:6; ಯಾಕೋಬ 2:17 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಂಬಿಕೆಯು ಮರವಾಗಿದೆ; ವಿಧೇಯತೆಯು (ಪ್ರೀತಿಯು) ಫಲವಾಗಿದೆ.

ಕ್ರಿಸ್ತನ ಹೆಸರನ್ನು ನಂಬುವದು ಕ್ರಿಸ್ತನನ್ನು ನಂಬುವಂತೆಯೇ ಆಗಿದೆ. ಯೇಸುವಿನ ಹೆಸರು ಆತನು ಯಾರೆಂಬದನ್ನು ನಮಗೆ ತಿಳಿಸುತ್ತದೆ. ಆತನು ಕ್ರಿಸ್ತನು, ರಕ್ಷಕನೂ, ದೇವರ ಮಗನೂ ಆಗಿದ್ದಾನೆ. ಆತನು ರಾಜಾಧಿರಾಜನೂ ಕರ್ತರ ಕರ್ತನೂ ಆಗಿದ್ದಾನೆ (1 ತಿಮೊಥೆ 6:15; ಪ್ರಕಟಣೆ 19:16). ಇವೆಲ್ಲವೂ ಯೇಸುವಿನ ಹೆಸರುಗಳಾಗಿವೆ.

24 ಯೇಸು ಹೇಳಿದ್ದೇನೆಂದರೆಃ "ನೀವು ನನ್ನ ಆಜ್ಞೆಗಳನ್ನು ಕೈಕೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ" (ಯೋಹಾನ 15:10). ಇಲ್ಲಿ ಯೋಹಾನನು ಹೇಳುವದೇನೆಂದರೆಃ ಆತನ ಆಜ್ಞೆಗಳನ್ನು ಕೈಗೊಂಡು ನಡೆಯುವವನು ಆತನಲ್ಲಿ ನೆಲೆಗೊಂಡಿರುತ್ತಾನೆ. ಕ್ರಿಸ್ತನಲ್ಲಿ ಜೀವಿಸುವದು ಹಾಗು ಕ್ರಿಸ್ತನ ಪ್ರೀತಿಯಲ್ಲಿ ನೆಲೆಗೊಂಡಿರುವದು ಒಂದೇ ವಿಷಯವಾಗಿದೆ. ಕ್ರಿಸ್ತನಲ್ಲಿ ಜೀವಿಸುವದು (ಅಥವಾ ನೆಲೆಗೊಳ್ಳುವದು) ನಮ್ಮ ಕ್ರೈಸ್ತೀಯ ಜೀವಿತದಲ್ಲಿ ಅತಿ ಪ್ರಾಮುಖ್ಯವಾದ ಸಂಗತಿಯಾಗಿದೆ (1 ಯೋಹಾನ 2:28), ಆದರೆ ಆತನಲ್ಲಿ ಜೀವಿಸಬೇಕಾದರೆ ನಾವು ಆತನ ಆಜ್ಞೆಗಳನ್ನು ಕೈಗೊಂಡು ನಡೆಯಬೇಕು.

ಕ್ರಿಸ್ತನು ನಮ್ಮಲ್ಲಿ ಜೀವಿಸುತ್ತಾನೆಂಬದು ನಮಗೆ ಹೇಗೆ ತಿಳಿಯುತ್ತದೆ? ನಾವು ಅದನ್ನು ಪವಿತ್ರ ಆತ್ಮನಿಂದಲೇ ಬಲ್ಲೆವು (ರೋಮ 8:16; 1 ಯೋಹಾನ 4:13). ಪವಿತ್ರಾತ್ಮನು ಕ್ರಿಸ್ತನ ಆತ್ಮನಾಗಿದ್ದಾನೆ. ನಮ್ಮಲ್ಲಿ ಪವಿತ್ರಾತ್ಮನು ಇರುವದಾದರೆ ಕ್ರಿಸ್ತನು ಸಹ ಇರುತ್ತಾನೆ.

---

## ಅಧ್ಯಾಯ - 4

### ಸತ್ಯ ಹಾಗೂ ಅಸತ್ಯದ ಆತ್ಮಗಳು (4:1-6)

1 ಯೋಹಾನನ ಕಾಲದಲ್ಲಿ ನಾನಾ ವಿಧವಾದ ಆತ್ಮಗಳ ಮೂಲಕ ಉಪದೇಶ ಬೋಧನೆ ಹಾಗೂ ಪ್ರವಾದನೆಗಳನ್ನು ಹೇಳುತ್ತಿದ್ದವರು ಅನೇಕರಿದ್ದರು. ಇಂದಿನ ದಿನಗಳಲ್ಲಿಯೂ ಅದು ಅಷ್ಟೇ ಸತ್ಯವಾಗಿದೆ. ನಾವು ಪ್ರತಿಯೊಬ್ಬ ಮನುಷ್ಯನ ಮಾತುಗಳನ್ನು ಪರೀಕ್ಷಿಸಬೇಕು. ನಾವು ಹೇಗೆ ಅವರನ್ನು ಪರೀಕ್ಷಿಸುತ್ತೇವೆ? ನಾವು ಅವರ ಮಾತುಗಳನ್ನು ಬೈಬಲಿನಲ್ಲಿ ಬರೆದಿರುವ ಮಾತುಗಳಿಗೆ ಹೋಲಿಸಿ ನೋಡುವದರ ಮೂಲಕ ಪರೀಕ್ಷಿಸುತ್ತೇವೆ. ಅವರು ಹೇಳುವಂಥದ್ದು ಬೈಬಲಿನಲ್ಲಿ ಬರೆದಿರುವದಕ್ಕೆ ಒಪ್ಪುವದಾದರೆ ಅವರು ಪವಿತ್ರಾತ್ಮನ ಮುಖಾಂತರ ಮಾತಾಡುತ್ತಿದ್ದಾರೆಂದು ತಿಳಿಯುವೆವು.

ಆಯಾ ಆತ್ಮಗಳು ದೇವರಿಂದ ಪ್ರೇರಿತವಾದವುಗಳೋ ಅಲ್ಲವೋ ಎಂದು ಅವುಗಳನ್ನು ಪರೀಕ್ಷಿಸಬೇಕು ಎಂದು ಯೋಹಾನನು ಹೇಳುತ್ತಾನೆ. ಯೋಹಾನನು ಆಯಾ ಆತ್ಮಗಳು ಎಂದು ಹೇಳುವದರ ಅರ್ಥವು ಆತ್ಮಗಳು ನುಡಿಯುವದನ್ನು ಪರೀಕ್ಷಿಸಬೇಕು ಎಂಬುದೇ. ಆತ್ಮನ ಮೂಲಕ ಮಾತಾಡುತ್ತಿದ್ದಾನೆ ಎಂದು ಹೇಳುವವನ ಮಾತುಗಳನ್ನು ನಾವು ಯಾವಾಗಲೂ ಪರೀಕ್ಷಿಸಬೇಕು ಯಾಕೆಂದರೆ ಲೋಕದಲ್ಲಿ ಅನೇಕ ಸುಳ್ಳುಬೋಧಕರು ಹಾಗೂ ಸುಳ್ಳು ಪ್ರವಾದಿಗಳು ಇದ್ದಾರೆ ಮತ್ತು ಅವರು ನಮ್ಮನ್ನು ಮೋಸಪಡಿಸಲು ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ (ಮಾರ್ಕ 13:22; ಅ.ಕೃತ್ಯ 20:29-31 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

2 ಯೋಹಾನನ ಕಾಲದಲ್ಲಿ ಹೊಸ ಒಡಂಬಡಿಕೆಯ ಬೇರೆ ಬೇರೆ ಪುಸ್ತಕಗಳು ಹಾಗೂ ಪತ್ರಿಕೆಗಳು ಆಗಷ್ಟೇ ಬರೆಯಲ್ಪಟ್ಟಿದ್ದವು; ಅವುಗಳೆಲ್ಲವೂ ಒಂದೇ ಗ್ರಂಥವಾಗಿ ಇನ್ನೂ ಕೂಡಿಸಲ್ಪಟ್ಟಿರಲಿಲ್ಲ. ಯೋಹಾನನು ಯಾವ ವಿಶ್ವಾಸಿಗಳಿಗೆ

ಈ ಪತ್ರಿಕೆಯನ್ನು ಬರೆದನೋ ಅವರು ಇಡೀ ಹೊಸ ಒಡಂಬಡಿಕೆಯನ್ನು ಓದುವ ಅವಕಾಶವನ್ನು ಹೊಂದಿರಲಿಲ್ಲ . ಆದದರಿಂದ, ಅವರು ಸತ್ಯ ಹಾಗೂ ಸುಳ್ಳು ಆತ್ಮಗಳನ್ನು ಅಥವಾ ಸತ್ಯ ಹಾಗೂ ಸುಳ್ಳು ಬೋಧಕರನ್ನು ಗುರುತಿಸುವದಕ್ಕೆ ಸಹಾಯಕವಾಗುವ ಒಂದು ಸರಳ ಸೂತ್ರವನ್ನು ಯೋಹಾನನು ಅವರಿಗೆ ಇಲ್ಲಿ ಕೊಡುತ್ತಾನೆಃ ಮನುಷ್ಯನಾಗಿ ಬಂದ ಯೇಸು ಕ್ರಿಸ್ತನನ್ನು ಒಪ್ಪಿಕೊಳ್ಳುವ ಆತ್ಮವು ದೇವರಿಂದ ಪ್ರೇರಿತವಾದದ್ದು (1 ಕೊರಿಂಥ 12:3; 2 ಯೋಹಾನ 7 ನೋಡಿರಿ). ಯಾವನು ದೇವರಿಂದ ಬಂದವನು ಹಾಗೂ ಯಾವನು ಬಂದವನಲ್ಲ ಎಂಬುವದನ್ನು ನಿರ್ಧರಿಸುವಲ್ಲಿ ಮನುಷ್ಯರು ಯೇಸುಕ್ರಿಸ್ತನ ಕುರಿತು ಏನು ಹೇಳುತ್ತಾರೆಂಬದು ಅತಿ ಪ್ರಾಮುಖ್ಯವಾದ ಸಂಗತಿಯಾಗಿದೆ. ಹಾಗಾದರೆ ಯೇಸು ಕ್ರಿಸ್ತನು ಯಾರು? ಜಗತ್ತಿನಲೆಲ್ಲಾ ಅದಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾದ ಹಾಗೂ ತುರ್ತು ಪ್ರಶ್ನೆ ಇನ್ನೊಂದಿಲ್ಲ ಮತ್ತು ಉತ್ತರವೇನೆಂದರೆಃ ಯೇಸು ಕ್ರಿಸ್ತನು ಸ್ವತಃ ದೇವರಾಗಿದ್ದು ಮನುಷ್ಯನಾಗಿ ಬಂದನು. ಆತನು ಮನುಷ್ಯನೂ ದೇವರು ಆಗಿದ್ದಾನೆ. ಆತನು ಯಾವದೋ ಒಬ್ಬ ವ್ಯಕ್ತಿಯಲ್ಲಿ ಪ್ರವೇಶಿಸಿ ನಂತರ ಪರಲೋಕಕ್ಕೆ ಹಿಂದಿರುಗಿದ ಒಂದು ಆತ್ಮ ಮಾತ್ರವಾಗಿರುವದಿಲ್ಲ. ಆತನು ಸ್ವತಃ ಸರ್ವಶಕ್ತನಾದ ದೇವರೂ ತನ್ನನ್ನು ಸಂಪೂರ್ಣ ಒಬ್ಬ ವ್ಯಕ್ತಿಯಲ್ಲಿ ಪ್ರವೇಶಿಸಿ ನಂತರ ಪರಲೋಕಕ್ಕೆ ಹಿಂದಿರುಗಿದ ಒಂದು ಆತ್ಮ ಮಾತ್ರವಾಗಿರುವದಿಲ್ಲ. ಆತನು ಸ್ವತಃ ಸರ್ವಶಕ್ತನಾದ ದೇವರೂ ತನ್ನನ್ನು ಸಂಪೂರ್ಣ ಒಬ್ಬ ಮನುಷ್ಯನನ್ನಾಗಿ ಮಾಡಿಕೊಂಡು ಎರಡು ಸಾವಿರ ವರ್ಷಗಳ ಹಿಂದೆ ಭೂಲೋಕಕ್ಕೆ ಬಂದವನೂ ಆಗಿದ್ದಾನೆ ಮತ್ತು ಒಬ್ಬ ಮನುಷ್ಯನಾಗಿ ಆತನು ಪುನಃ ಪರಲೋಕಕ್ಕೆ ಏರಿ ಹೋಗಿದ್ದಾನೆ ಮತ್ತು ಈ ಮಹಿಮಾ ಸ್ವರೂಪ ಮನುಷ್ಯನಾದ ಯೇಸುಕ್ರಿಸ್ತನು ಇಂದಿಗೂ ಬದುಕುವವನಾಗಿದ್ದು ಪರಲೋಕದಲ್ಲಿ ದೇವರ ಬಲಗಡೆಯಲ್ಲಿ ಕುಳಿತುಕೊಂಡಿದ್ದಾನೆ (ಇಬ್ರಿಯ 1:3). ಆದರೆ ಯೇಸು ಮನುಷ್ಯನಾದ ದೇವರಾಗಿರುವದನ್ನು ನಿಲ್ಲಿಸಲಿಲ್ಲ. ಆತನು ಮನುಷ್ಯನಾಗಿ ಬಂದ ದೇವರಾಗಿದ್ದನು–ಅಂದರೆ, ಶರೀರಧಾರಿಯಾಗಿ ಬಂದ ದೇವರು, ಮತ್ತು ಇಂದಿಗೂ ಹಾಗೆಯೇ ಇರುತ್ತಾನೆ (ಯೋಹಾನ 1:14; ಫಿಲಿಪ್ಪಿ 2:3-8 ನೋಡಿರಿ). ಆದದರಿಂದ, ಕ್ರಿಸ್ತನನ್ನು ಒಪ್ಪಿಕೊಳ್ಳುವವರೆಲ್ಲರೂ ದೇವರ ಸತ್ಯದ ಆತ್ಮನನ್ನು ಹೊಂದಿದ್ದಾರೆ. ಅವರಲ್ಲಿ ನಿಜವಾದ ನಂಬಿಕೆಯಿರುತ್ತದೆ. ಹೀಗೆ ಕ್ಲುಪ್ತವಾಗಿ, ಒಬ್ಬ ಮನುಷ್ಯನಲ್ಲಿ ಯಾವ ವಿಧವಾದ ಆತ್ಮವಿದೆ ಎಂದು ಹೇಳುವದಕ್ಕೆ ಒಂದು ಸುಲಭಮಾರ್ಗವಿರುತ್ತದೆಃ ಆತನು ಯೇಸುಕ್ರಿಸ್ತನ ಬಗ್ಗೆ ಏನು ಯೋಚಿಸುತ್ತಾನೆಂದು ಆ ವ್ಯಕ್ತಿಯನ್ನು ಕೇಳಿರಿ. ಆತನು ನೀಡುವ ಉತ್ತರಕ್ಕನುಸಾರವಾಗಿ ಆತನ ಆತ್ಮವು ದೇವರಿಂದ ಪ್ರೇರಿತವಾದದ್ದೋ ಅಲ್ಲವೋ ಎಂದು ನಾವು ತಿಳಿಯುವೆವು [18].

3 ....... ಯೇಸುವನ್ನು ಒಪ್ಪದೆ ಇರುವ ಆತ್ಮವು ದೇವರಿಂದ ಪ್ರೇರಿತವಾದದ್ದಲ್ಲ; ಅದು ಸೈತಾನನಿಂದ ಪ್ರೇರಿತವಾದದ್ದು. ಇದು ಕಠಿಣವಾದ ಮಾತು, ಆದರೆ ಇದು ಸತ್ಯ. ಜನರಲ್ಲಿ ಎರಡು ವಿಧವಾದ ಆತ್ಮಗಳಿರುತ್ತವೆಃ ಯೇಸುವನ್ನು ಒಪ್ಪಿಕೊಳ್ಳುವ ವಿಧದ ಆತ್ಮ ಹಾಗೂ ಒಪ್ಪದೆ ಇರುವ ವಿಧದ ಆತ್ಮ [19]. ಯೇಸುವನ್ನು ಒಪ್ಪಿಕೊಳ್ಳುವ ವ್ಯಕ್ತಿಯು ದೇವರಿಂದ ಹುಟ್ಟಿದವನು ಮತ್ತು ರಕ್ಷಣೆ ಹೊಂದುವನು; ಯೇಸುವನ್ನು ಒಪ್ಪಿಕೊಳ್ಳದವನು ಸೈತಾನನಿಂದ ಹುಟ್ಟಿದವನಾಗಿದ್ದು ನಾಶವಾಗುವನು. ಈ ಕಾರಣದಿಂದಲೇ ಸುವಾರ್ತೆಯನ್ನು ಸಾರುವದು ಎಷ್ಟೋ ತುರ್ತಾಗಿದೆ. ಸುವಾರ್ತೆಯನ್ನು ಸಾರುವದಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾದ ಕೆಲಸವು ಭೂಲೋಕದಲ್ಲಿ ಇಲ್ಲ. ಯೇಸು ಕ್ರಿಸ್ತನು ಅನೇಕ ಅವತಾರಗಳೊಳಗೆ ಇನ್ನೊಂದು ಅವತಾರ ಮಾತ್ರವಲ್ಲ. ಆತನು ಏಕೈಕ ಜೀವಸ್ವರೂಪನಾದ ಸತ್ಯ ದೇವರ ಏಕೈಕ ಸತ್ಯವಾದ ವರಾವತಾರವಾಗಿದ್ದಾನೆ. ಇತರ ಎಲ್ಲಾ ಅವತಾರಗಳು ಸುಳ್ಳು, ಅವುಗಳು ಸುಳ್ಳು ಆತ್ಮಗಳನ್ನು ಕ್ರಿಸ್ತ ವಿರೋಧಿಯ ಆತ್ಮಗಳನ್ನು ಪ್ರತಿನಿಧಿಸುತ್ತವೆ (1 ಯೋಹಾನ 2:18 ಮತ್ತು ವ್ಯಾಖ್ಯಾನ ನೋಡಿರಿ). ಎಲ್ಲಾ ಸುಳ್ಳು ಆತ್ಮಗಳು ಅಂತಿಮವಾಗಿ ಸೈತಾನನಿಂದ ಬರುತ್ತವೆ ಮತ್ತು ಆತನ ಸ್ವಾಧೀನದಲ್ಲಿರುತ್ತವೆ.

4 ದೇವರಿಂದ ಹುಟ್ಟಿದವರಾದ ನಾವು ಅವುಗಳನ್ನು –ಕ್ರಿಸ್ತವಿರೋಧಿಗಳ ಸುಳ್ಳು ಆತ್ಮಗಳನ್ನು– ಜಯಿಸಿದ್ದೇವೆ. ನಾವು ಈಗಾಗಲೇ ಅವುಗಳನ್ನು ಜಯಿಸಿದ್ದೇವೆ ಮತ್ತು ಜಯಿಸುತ್ತಲಿರುತ್ತೇವೆ. ನಮ್ಮಲ್ಲಿ ಇರುವಾತನು ಯೇಸುವೇ– ಅಥವಾ ಯೇಸುವಿನ ಆತ್ಮನಾದ ಪವಿತ್ರಾತ್ಮನು. ಯೇಸು ಪವಿತ್ರಾತ್ಮನ ಮೂಲಕ ನಮ್ಮಲ್ಲಿ ವಾಸಿಸುತ್ತಾನೆ. ಲೋಕದಲ್ಲಿರುವಾತನು ಸೈತಾನನೇ ಆತನು ಎಲ್ಲಾ ಸುಳ್ಳು (ದುಷ್ಟ) ಆತ್ಮಗಳ ಮುಖ್ಯಸ್ಥನು. ಯೇಸು ಸೈತಾನನ್ನು ಇಹಲೋಕಾಧಿಪತಿ ಎಂದು ಕರೆದನು (ಯೋಹಾನ 12:31). ಯೇಸು ಸೈತಾನನಿಗಿಂತ ಮತ್ತು ಆತನ ಎಲ್ಲಾ ದುರಾತ್ಮಗಳಿಗಿಂತ ದೊಡ್ಡವನು ನಾವು ಎಂದಿಗೂ, "ನಾವು ಎಷ್ಟು ಸ್ವಲ್ಪ ಜನರು; ನಾವು ಎಷ್ಟು ಬಲಹೀನರಲ್ಲವೇ" ಎಂದು ಹೇಳದಿರೋಣ. ನಿಜ, ನಾವು ಸಂಖ್ಯೆಯಲ್ಲಿ ಸಣ್ಣವರಾಗಿರಬಹುದು ಆದರೆ ನಾವು ಬಲದಲ್ಲಿ ಸಣ್ಣವರಲ್ಲ. ನಾವೆಲ್ಲರೂ ನಮ್ಮ ಪಕ್ಷದಲ್ಲಿ ದೇವರ ಬಲವನ್ನು ಹೊಂದಿದ್ದೇವೆ.

5 ಸುಳ್ಳು ಆತ್ಮಗಳು, ಕ್ರಿಸ್ತ ವಿರೋಧಿಗಳು, ಇತರ ಧರ್ಮಗಳ ಬೋಧಕರು ಹಾಗೂ ಪ್ರವಾದಿಗಳು– ಇವರೆಲ್ಲರೂ ಲೋಕದಿಂದ ಹುಟ್ಟಿದವರಾಗಿದ್ದಾರೆ. ಅವರು ಲೋಕವನ್ನು ಪ್ರೀತಿಸುತ್ತಾರೆ ಮತ್ತು ಲೋಕವು ಅವರನ್ನು ಪ್ರೀತಿಸುತ್ತದೆ (ಯೋಹಾನ 15:19). ಅವರು ಲೋಕದ ಸಂಗತಿಗಳನ್ನು ಮಾತಾಡುತ್ತಾರೆ; ಆದದರಿಂದ, ಲೋಕವು ಅವರ ಮಾತುಗಳನ್ನು ಕೇಳುತ್ತದೆ.

6 ಕ್ರಿಸ್ತನ ಆತ್ಮನನ್ನು ಹೊಂದಿರುವ ನಾವು ದೇವರಿಂದ ಹುಟ್ಟಿದವರು. ಒಬ್ಬನು ನಮ್ಮ ಮಾತುಗಳನ್ನು ಕೇಳಿ ಸ್ವೀಕರಿಸಿಕೊಳ್ಳುವದಾದರೆ ಅವನು ಸಹ ದೇವರಿಂದ ಹುಟ್ಟಿದವನು. ಹೇಗಿದ್ದರೂ, ಒಬ್ಬನು ನಮ್ಮ ಮಾತನ್ನು ತಿರಸ್ಕರಿಸುವದಾದರೆ ಆತನು ದೇವರಿಂದ ಹುಟ್ಟಿದವನಲ್ಲ (ಯೋಹಾನ 8:47). ಈ ವಿಧದಲ್ಲಿ ನಾವು ಇದು ಸತ್ಯವನ್ನು ಬೋಧಿಸುವ ಆತ್ಮ (ಪವಿತ್ರಾತ್ಮ), ಅದು ಸುಳ್ಳನ್ನು ಬೋಧಿಸುವ ಆತ್ಮ ಎಂದು ತಿಳಿಯುವೆವು.

ಸತ್ಯದ ಆತ್ಮ ಎಂಬುದು ಪವಿತ್ರಾತ್ಮನಿಗಿರುವ ಹೆಸರಾಗಿದೆ (ಯೋಹಾನ 14:17),. ಲೋಕವು (ಲೋಕದ ಜನರು), ಪವಿತ್ರಾತ್ಮನನ್ನು ಸ್ವೀಕರಿಸಲಾರರು ಯಾಕೆಂದರೆ ಲೋಕವು ಸತ್ಯವನ್ನು ಗುರುತಿಸಲು ಅಶಕ್ತವಾಗಿದೆ. ಲೋಕವು

ಸುಳ್ಳು ಆತ್ಮನನ್ನು ಸ್ವೀಕರಿಸಿಕೊಂಡಿದೆ ಅದು ಸುಳ್ಳನ್ನು ಬೋಧಿಸುವ ಆತ್ಮವೇ ಹಾಗೂ ಲೋಕದವರು ಮೋಸಕ್ಕೊಳಗಾಗಿದ್ದಾರೆ. ಅವರು ಕತ್ತಲೆಯಲ್ಲಿ ನಡೆಯುತ್ತಾರೆ. ಪೇತ್ರನು ಬರೆದಿರುವದೇನೆಂದರೆಃ ಆದಕಾರಣ..... ನೀವು ... ಅಧರ್ಮಿಗಳ ಭ್ರಾಂತಿಯ ಸೆಳವಿಗೆ ಸಿಕ್ಕಿಕೊಂಡು ನಿಮ್ಮ ಸ್ಥಿರಮನಸ್ಸನ್ನು ಬಿಟ್ಟು ಭ್ರಷ್ಟರಾಗದಂತೆ ಎಚ್ಚರಿಕೆಯಾಗಿರಿ. ನೀವು ಕೃಪೆಯಲ್ಲಿಯೂ ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ವಿಷಯವಾದ ಜ್ಞಾನದಲ್ಲಿಯೂ ಅಭಿವೃದ್ಧಿಯನ್ನು ಹೊಂದುತ್ತಾ ಇರ್ರಿ. (2 ಪೇತ್ರ 3:17-18). ನಾವು ಸಹ ದೇವರ ವಾಕ್ಯದ ಅಭ್ಯಾಸದ ಮೂಲಕ ಕೃಪೆಯಲ್ಲಿಯೂ ಯೇಸುಕ್ರಿಸ್ತನ ಜ್ಞಾನದಲ್ಲಿಯೂ ಅಭಿವೃದ್ಧಿಗೊಳ್ಳೋಣ.

## ದೇವರ ಪ್ರೀತಿ ಮತ್ತು ನಮ್ಮ ಪ್ರೀತಿ (4:7-21)

**7-8** ಯೋಹಾನನು ಬರೆದಿರುವದೇನೆಂದರೆಃ ದೇವರು ಬೆಳಕಾಗಿದ್ದಾನೆ (1 ಯೋಹಾನ 1:5). ತನ್ನ ಸಹೋದರನನ್ನು ಪ್ರೀತಿಸುವವನು ಬೆಳಕಿನಲ್ಲಿ ನೆಲೆಗೊಂಡಿದ್ದಾನೆ (1 ಯೋಹಾನ 2: 10). ಈಗ ಯೋಹಾನನು ಹೇಳುವದೇನೆಂದರೆಃ ದೇವರು ಪ್ರೀತಿಸ್ವರೂಪಿಯು (ವಚನ 8). ಪ್ರೀತಿಮಾಡುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನು (ವಚನ 7).

ದೇವರು ಬೆಳಕಾಗಿದ್ದಾನೆ; ಆದದರಿಂದ, ನಾವು ಬೆಳಕಿನಲ್ಲಿ ನಡೆಯುತ್ತೇವೆ. ದೇವರು ಪ್ರೀತಿಸ್ವರೂಪಿಯು ಆದದರಿಂದ, ನಾವು ಪ್ರೀತಿಯಲ್ಲಿ ನಡೆಯುತ್ತೇವೆ. ಬೆಳಕಿನಲ್ಲಿ (ನಂಬಿಕೆ) ಮತ್ತು ಪ್ರೀತಿಯಲ್ಲಿ ನಡೆಯುವವರು ಮಾತ್ರವೇ ದೇವರಿಂದ ಹುಟ್ಟಿದವರು (ಯೋಹಾನ 2:29; 3:10).

ದೇವರು ಪ್ರೀತಿಸ್ವರೂಪಿಯು. ಯೋಹಾನನು ಇಲ್ಲಿ ದೇವರು ಪ್ರೀತಿಸುತ್ತಾನೆಂದಷ್ಟೇ ಹೇಳುವದಿಲ್ಲ (ಅದು ಸಹ ಸತ್ಯವಾದದ್ದೆ). ಯೋಹಾನನು ಇಲ್ಲಿ ದೇವರು ಸ್ವತಃ ಪ್ರೀತಿಸ್ವರೂಪಿ ಎಂದು ಹೇಳುತ್ತಾನೆ. ಆತನ ಸ್ವಾಭಾವವು ಪ್ರೀತಿಯೇ. ನಾವು ಪ್ರೀತಿಸುವದಕ್ಕೆ ಯೋಗ್ಯರೆಂಬದಕ್ಕಾಗಿ ಆತನು ನಮ್ಮನ್ನು ಪ್ರೀತಿಸುವದಿಲ್ಲ. ಬದಲಾಗಿ, ಪ್ರೀತಿಸುವದು ಆತನ ಸ್ವಭಾವವಾದ್ದರಿಂದಲೇ ಆತನು ನಮ್ಮನ್ನು ಪ್ರೀತಿಸುತ್ತಾನೆ.

ದೇವರು ಪ್ರೀತಿಸ್ವರೂಪಿಯು. ಇದು ಕ್ರಿಸ್ತನ ಸುವಾರ್ತೆಯ ಮಹಾ ಸಂದೇಶವಾಗಿದೆ! ಇನ್ನಾವ ಧರ್ಮದಲ್ಲಿಯೂ ಈ ಮಹಾ ಸತ್ಯವು ಸ್ಪಷ್ಟವಾಗಿ ಕಲಿಸಲ್ಪಡುವದಿಲ್ಲ. ಇತರ ಧರ್ಮಗಳ ನುಯಾಯಿಗಳು ದೇವರ ಬಗ್ಗೆ ತಿಳಿದಿದ್ದಾರೆ. ದೇವರು ಸೃಷ್ಟಿಕರ್ತನು, ಆತನು ಆತ್ಮನಾಗಿದ್ದಾನೆ, ಆತನು ಶಕ್ತಿವಂತನು ಎಂದು ಅವರು ಬಲ್ಲರು. ಆದರೆ ದೇವರು ಪ್ರೀತಿಸ್ವರೂಪಿಯು ಎಂಬುದನ್ನು ಅವರು ತಿಳಿಯುವದಿಲ್ಲ. ಅದು ಅವರಿಗೆ ಗೊತ್ತಿಲ್ಲವೇಕೆ? ಯಾಕೆಂದರೆ ಪ್ರೀತಿಯನ್ನು ತಿಳಿಯಬೇಕಾದರೆ ಮೊದಲು ಒಬ್ಬನು ಪ್ರೀತಿಯನ್ನು ಅನುಭವಿಸಬೇಕು. ದೇವರನ್ನು ತಿಳಿಯಬೇಕಾದರೆ ಒಬ್ಬನು ಮೊದಲು ದೇವರನ್ನು ಅನುಭವಿಸಬೇಕು; ಅಂದರೆ, ಒಬ್ಬನು ಅವನನ್ನು ವಯಕ್ತಿಕವಾಗಿ ಸಂಧಿಸಬೇಕು. ಒಬ್ಬನು ಆತನ ಸಮೀಪಕ್ಕೆ ಬರಬೇಕು. ಒಬ್ಬನು ಆತನನ್ನು ತಂದೆಯೆಂದು ಕರೆಯುವದಕ್ಕೆ ಶಕ್ತನಾಗಿರಬೇಕು.

ನಾವು ಪ್ರೀತಿಯ ಕುರಿತು ಓದುವದರ ಮೂಲಕ ಮಾತ್ರವೇ ತಿಳಿದುಕೊಳ್ಳಬಲ್ಲೆವೋ? ಇಲ್ಲ, ತಿಳಿದುಕೊಳ್ಳಲಾರೆವು. ನಾವು ಸ್ವತಃ ಅದನ್ನು ಅನುಭವಿಸಬೇಕು. ನಾವು ನಮ್ಮ ಹೃದಯಗಳೊಳಗೆ ಪ್ರೀತಿಯನ್ನು ಸ್ವೀಕರಿಸಬೇಕು. ಇಲ್ಲವಾದರೆ ನಾವು ಪ್ರೀತಿಯನ್ನು ಅರಿತುಕೊಳ್ಳಲಾರೆವು. ಅದೇ ವಿಧದಲ್ಲಿ ನಾವು ದೇವರನ್ನು ನಮ್ಮ ಹೃದಯಗಳಲ್ಲಿ ಅನುಭವಿಸಬೇಕು ಇಲ್ಲವಾದರೆ ನಾವು ಆತನನ್ನು ತಿಳಿಯಲು ಸಾಧ್ಯವಿಲ್ಲ. ಆದರೆ ಅದು ಮಾತ್ರವಲ್ಲ ನಾವು ಸ್ವತಃ ಪ್ರೀತಿಸಬೇಕು. ನಾವು ದೇವರನ್ನು ನಮ್ಮ ಸಹೋದರನನ್ನು ಹಾಗೂ ನಮ್ಮ ನೆರೆಯವನನ್ನು ಪ್ರೀತಿಸಬೇಕು. ಕೇವಲ ಪ್ರೀತಿಯನ್ನು ಪಡೆದುಕೊಂಡರೆ ಸಾಕಾಗದು ನಾವು ಅದನ್ನು ಕೊಡಬೇಕು. ನಮ್ಮಿಂದ ಪ್ರೀತಿಯು ಎಷ್ಟರ ಮಟ್ಟಿಗೆ ಹೊರ ಹರಿಯುತ್ತದೋ ಅಷ್ಟರ ಮಟ್ಟಿಗೆ ದೇವರಿಂದ ಪ್ರೀತಿಯು ನಮ್ಮ ಒಳಗೆ ಹರಿಯುತ್ತದೆ ದೇವರ ಪ್ರೀತಿಯು ಕೊಳವೆಯ ಒಳಗಿನ ನೀರಿನ ಹಾಗಿರುತ್ತದೆ. ಕೊಳವೆಯ ಕೆಳಮಟ್ಟದ ತುದಿಯು ಮುಚ್ಚಲ್ಪಡುವದಾದರೆ ಕೊಳವೆಯ ಮೇಲ್ಭಾಗಕ್ಕೆ ನೀರು ಹರಿಯುವದಕ್ಕೆ ಸಾಧ್ಯವೇ ಇಲ್ಲ. ನಾವು ಕೊಳವೆಯ ಹಾಗಿದ್ದೇವೆ ಅದರ ಮುಖಾಂತರ ದೇವರ ಪ್ರೀತಿಯು ಹರಿಯುತ್ತದೆ.

ನಿಜವಾದ ಪ್ರೀತಿಯೆಲ್ಲವೂ ದೇವರಿಂದ ಬರುತ್ತದೆ ಎಂಬುದನ್ನು ಗಮನಿಸಿರಿ. ಮೊದಲನೆಯದಾಗಿ, ನಾವು ದೇವರ ಪ್ರೀತಿಯನ್ನು ಪಡೆಯುತ್ತೇವೆ; ನಂತರ ನಾವು ಅದನ್ನು ಇತರರಿಗೆ ತೋರಿಸುತ್ತೇವೆ. ನಾವು ಇತರರನ್ನು ನಮ್ಮ ಮಾನುಷ ಪ್ರೀತಿಯಿಂದಲ್ಲ, ಆದರೆ ದೇವರ ಪ್ರೀತಿಯಿಂದ ಪ್ರೀತಿಸುತ್ತೇವೆ. ನಿಜವಾದ ಪ್ರೀತಿಯು ಆತ್ಮೀಕವಾದದ್ದು; ಇದು ಮನುಷ್ಯನಿಂದಲ್ಲ ಆದರೆ ದೇವರಿಂದ ಬರುತ್ತದೆ.

**9** ದೇವರ ಪ್ರೀತಿಯು ಹೇಗೆ ತೋರಿಬಂದಿದೆ? ದೇವರು ಪುರುಷ ಮತ್ತು ಸ್ತ್ರೀಯರನ್ನು ರಕ್ಷಿಸುವದಕೋಸ್ಕರ ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಲೋಕಕ್ಕೆ ಕಳುಹಿಸಿಕೊಟ್ಟದ್ದರಲ್ಲಿ ದೇವರ ಪ್ರೀತಿಯು ವ್ಯಕ್ತಗೊಂಡಿತ್ತು (ಯೋಹಾನ 3:16 ಮತ್ತು ವ್ಯಾಖ್ಯಾನ ನೋಡಿರಿ). ನಮ್ಮ ರಕ್ಷಣೆಯ ಭಾಗವಾಗಿ ನಾವು ನಿತ್ಯಜೀವವನ್ನು ಪಡೆಯುತ್ತೇವೆ. ನಾವು ಕ್ರಿಸ್ತನಲ್ಲಿ ನಂಬಿಕೆಯಿಟ್ಟ ಮೊದಲ ದಿನದಿಂದ ನಾವು ಆತನ ಮೂಲಕ ಜೀವಿಸಲು ಪ್ರಾರಂಭಿಸುತ್ತೇವೆ, ಮತ್ತು ಆತನ ಮೂಲಕ ನಾವು ಸದಾಕಾಲವೂ ಜೀವಿಸುವೆವು. ದೇವರ ಪ್ರೀತಿಯು ಎಷ್ಟು ದೊಡ್ಡದು!

**10** ನಾವು ದೇವರನ್ನು ಮೊದಲು ಪ್ರೀತಿಸಲಿಲ್ಲ; ಆತನೇ ಮೊದಲು ನಮ್ಮನ್ನು ಪ್ರೀತಿಸಿದನು (ವಚನ 19 ನೋಡಿರಿ). ನಾವು ಮೊದಲು ದೇವರನ್ನು ಪ್ರೀತಿಸಿರುತ್ತಿದ್ದರೆ ಆತನ ಪ್ರೀತಿಯನ್ನು ಪಡೆಯುವದಕ್ಕೆ ನಾವು ಯೋಗ್ಯರಾಗಿರುತ್ತಿದ್ದೆವು.

ಆದರೆ ನಾವು ಯೋಗ್ಯರಲ್ಲ. ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತ ಪಡಿಸಿದ್ದಾನೆ (ರೋಮ 5:8). ಕ್ರಿಸ್ತನು ಏಕೆ ನಮಗೋಸ್ಕರ ಸತ್ತನು? ಆತನು ನಮ್ಮ ಪಾಪಗಳಿಗೋಸ್ಕರ ಸತ್ತನು. ಆತನು ನಮ್ಮ ಪಾಪಗಳ ನಿವಾರಣಾರ್ಥ ಯಜ್ಞವಾಗಿ ತನ್ನ ಸ್ವಪ್ರಾಣವನ್ನು ಸಮರ್ಪಿಸಿದನು (1 ಯೋಹಾನ 2:2 ಮತ್ತು ವ್ಯಾಖ್ಯಾನ ನೋಡಿರಿ).

11 ನಾವು ಏಕೆ ಪ್ರೀತಿಸಬೇಕು? ಯಾಕೆಂದರೆ ದೇವರು ನಮ್ಮನ್ನು ಪ್ರೀತಿಸಿದನು. ಕ್ರಿಸ್ತನು ನಮ್ಮನ್ನು ಪ್ರೀತಿಸಿದಂತೆಯೇ ನಾವು ಒಬ್ಬರನ್ನೊಬ್ಬರು ಪ್ರೀತಿಸಬೇಕು (ಯೋಹಾನ 15:12; 1 ಯೋಹಾನ 3:16). ಕ್ರಿಸ್ತನು ಬಹಳಷ್ಟು ಪ್ರೀತಿಸಿದ ಇತರರನ್ನು ನಾವು ಪ್ರೀತಿಸಲು ನಿರಾಕರಿಸುವದು ಹೇಗೆ ಸಾಧ್ಯ?

12 ನಾವು ದೇವರನ್ನು ನಮ್ಮ ಕಣ್ಣಾರೆ ನೋಡಲಿಲ್ಲ (ಯೋಹಾನ 1:18). ಆದರೆ ಇದು ಅವಶ್ಯಕವಲ್ಲ. ದೇವರು ನಮ್ಮ ಹೃದಯಗಳಲ್ಲಿದ್ದಾನೆ. ನಾವು ನಮ್ಮ ಕಣ್ಣಾರೆ ಆತನನ್ನು ನೋಡುವ ಅಗತ್ಯವಿಲ್ಲ.

ನಾವು ಒಬ್ಬರನ್ನೊಬ್ಬರು ಪ್ರೀತಿಸುವದಾದರೆ ಪ್ರೀತಿಸ್ವರೂಪಿಯಾದ ದೇವರು ನಮ್ಮಲ್ಲಿ ವಾಸಿಸುವನು (ಯೋಹಾನ 14:32 ನೋಡಿರಿ). ಅತನ ಪ್ರೀತಿಯು ನಮ್ಮನ್ನು ತುಂಬುವದು (ರೋಮ 5 :5). ನಾವು ಒಬ್ಬರನ್ನೊಬ್ಬರು ಪ್ರೀತಿಸುತ್ತಾ ಮುಂದುವರೆಯುವಾಗ– ಅಂದರೆ, ಆತನ ವಾಕ್ಯಕ್ಕೆ ವಿಧೇಯರಾಗುವಾಗ– ಆತನ ಪ್ರೀತಿಯು ನಮ್ಮಲ್ಲಿ ಸಿದ್ಧಿಗೆ ಬರುತ್ತ ದೆ (1 ಯೋಹಾನ 2:5 ನೋಡಿರಿ).

13 ಇಲ್ಲಿ ಯೋಹಾನನು ಮುಂಚೆ ಹೇಳಿದ ವಿಚಾರವೊಂದನ್ನು ಪು ನರಾವರ್ತಿಸುತ್ತಾನೆ (1 ಯೋಹಾನ 3:24 ಮತ್ತು ವ್ಯಾಖ್ಯಾನ ನೋಡಿರಿ). ಯೋಹಾನನು ಇಲ್ಲಿ ಹೇಳುವದೇನೆಂದರೆಃ...... ದೇವರು ನಮಗೆ ತನ್ನ ಆತ್ಮದಲ್ಲಿ ಪೌಲನ್ನು ಅನುಗ್ರಹಿಸಿದ್ದಾನೆ. ಹೊಸ ಒಡಂಬಡಿಕೆಯ ಇತರ ವಾಕ್ಯ ಭಾಗಗಳು ದೇವರು ನಮಗೆ ತನ್ನ ಆತ್ಮನನ್ನು ನೀಡಿದ್ದಾನೆಂದಷ್ಟೇ ಹೇಳುತ್ತದೆ (ಗಲಾತ್ಯ 3:2, 5:4-6). ಆದರೆ ಇಲ್ಲಿ ಯೋಹಾನನು ಹೇಳುವದೇನೆಂದರೆಃ ದೇವರು ತನ್ನ ಆತ್ಮದಲ್ಲಿ ಪೌಲನ್ನು ಅನುಗ್ರಹಿಸುತ್ತಾನೆ. ಹೇಗಿದ್ದರೂ, "ದೇವರು ತನ್ನ ಆತ್ಮದಲ್ಲಿ ಪಾಲನ್ನು ಅನುಗ್ರಹಿಸುತ್ತಾನೆ" ಮತ್ತು "ದೇವರು ಆತ್ಮನನ್ನು ಅನುಗ್ರಹಿಸುತ್ತಾನೆ" ಎಂಬದು ಒಂದೇ ಆಗಿದೆ; ಅರ್ಥವು ಒಂದೇ ಆಗಿರುತ್ತದೆ. ದೇವರು ಮನುಷ್ಯರಿಗೆ ತನ್ನ ಆತ್ಮದಲ್ಲಿ ಮಿತಿಯಿಲ್ಲದ ಪಾಲನ್ನು ನೀಡುವದಿಲ್ಲ; ಆತನು ಮನುಷ್ಯರಿಗೆ ತನ್ನ ಆತ್ಮದಲ್ಲಿ ಕೆಲವೊಂದು ಅಳತೆಯಲ್ಲಿ ಮಾತ್ರವೇ ಕೊಡುತ್ತಾನೆ. ಆದರೆ ದೇವರು ಕ್ರಿಸ್ತನಿಗೆ ತನ್ನ ಆತ್ಮದಲ್ಲಿ ಅಳತೆಯಿಲ್ಲದೆ ಪಾಲನ್ನು ಕೊಟ್ಟನು (ಯೋಹಾನ 3:34).

14 ದೇವರನ್ನು ಯಾರೂ ಎಂದು ನೋಡಿಲ್ಲ[2] (ವಚನ 12). ಆದರೆ ನಾವು ಕ್ರಿಸ್ತನನ್ನು ನೋಡಿದ್ದೇವೆ ಎಂದು ಯೋಹಾನನು ಹೇಳುತ್ತಾನೆ (ಯೋಹಾನ 1:14 ನೋಡಿರಿ). ಮತ್ತು ಆತನನ್ನು ನೋಡಿದವರಾಗಿ ನಾವು , ತಂದೆಯು ತನ್ನ ಮಗನನ್ನು ಲೋಕರಕ್ಷಕನನ್ನಾಗಿ ಕಳುಹಿಸಿಕೊಟ್ಟಿರುವದರ ........ ವಿಷಯದಲ್ಲಿ ಸಾಕ್ಷಿ ಹೇಳುತ್ತೇವೆ (ಯೋಹಾನ 3:16-18 ನೋಡಿರಿ).

ಕ್ರಿಸ್ತನು ಲೋಕರಕ್ಷಕನು. ಆದರೆ ಲೋಕದಲ್ಲಿರುವ ಪ್ರತಿಯೊಬ್ಬನು ರಕ್ಷಣೆ ಹೊಂದುವದಿಲ್ಲ. ರಕ್ಷಣೆ ಹೊಂದಬೇಕಾದರೆ ಒಬ್ಬ ವ್ಯಕ್ತಿಯು ಯೇಸು ದೇವರ ಮಗನಾಗಿದ್ದಾನೆಂದು ಒಪ್ಪಿಕೊಳ್ಳಬೇಕು; ಅಂದರೆ, ಒಬ್ಬ ವ್ಯಕ್ತಿಯು ಯೇಸುವಿನಲ್ಲಿ ನಂಬಿಕೆಯಿಡಬೇಕು (ವಚನ 15).

15 ಯೋಹಾನನು ಇಲ್ಲಿ ತಾನು 1 ಯೋಹಾನ 2:23-24 ಮತ್ತು 4:2ರಲ್ಲಿ ಬರೆದಿರುವ ವಿಚಾರಗಳನ್ನು ಪು ನರಾವರ್ತಿಸುತ್ತಾನೆ. ಯೇಸುವನ್ನು ದೇವರ ಮಗನೆಂದು ಒಪ್ಪಿಕೊಳ್ಳುವದು– ಅಂದರೆ, ಆತನಲ್ಲಿ ನಂಬಿಕೆಯಿಡುವದೆಂದರೆ ದೇವರಲ್ಲಿ ನೆಲೆಗೊಳ್ಳುವದೆಂದರೆ ಆತನನ್ನು ತಿಳಿಯುವದೇ (ವಚನ 16). ದೇವರನ್ನು ತಿಳಿಯುವದೆಂದರೆ ನಿತ್ಯ ಜೀವವನ್ನು ಹೊಂದುವದೇ (ಯೋಹಾನ 17:3).

ಈ ಎಲ್ಲಾ ಸಂಗತಿಗಳು– ಯೇಸುವನ್ನು ದೇವರ ಮಗನೆಂದು ಒಪ್ಪಿಕೊಳ್ಳುವದು, ಯೇಸುವಿನಲ್ಲಿ ನಂಬಿಕೆಯಿಡುವದು, ದೇವರನ್ನು ತಿಳಿಯುವದು, ದೇವರಲ್ಲಿ ನೆಲೆಗೊಳ್ಳುವದು, ನಿತ್ಯಜೀವವನ್ನು ಹೊಂದುವದು, ರಕ್ಷಣೆ ಹೊಂದುವದು –ಇವೆಲ್ಲವೂ ಒಂದಕ್ಕೊಂದು ಅಪತ ಸಂಬಂಧ ಹೊಂದಿರುತ್ತವೆ. ಅವು ಗಳು ಯಾವಾಗಲೂ ಜೊತೆಯಾಗಿ ಸಾಗುತ್ತವೆ; ಅವು ಗಳು ಬೇರ್ಪಡಲು ಸಾಧ್ಯವಿಲ್ಲ.

16 ದೇವರು ನಮ್ಮಲ್ಲಿ ನೆಲೆಗೊಂಡಿರುವದರಿಂದ (ವಚನ 15) ಆತನು ನಮ್ಮ ಮೇಲೆ ಇಟ್ಟಿರುವ ಪ್ರೀತಿಯನ್ನು ತಿಳಿದುಕೊಂಡಿದ್ದೇವೆ; ಅಂದರೆ. ನಾವು ಅದನ್ನು ಅನುಭವಿಸುತ್ತೇವೆ. ಮತ್ತು ದೇವರ ಪ್ರೀತಿಯನ್ನು ಅನುಭವಿಸಿದವರಾಗಿ ನಾವು ಅದನ್ನು ಅವಲಂಭಿಸಿದ್ದೇವೆ.

ಪ್ರೀತಿಯಲ್ಲಿ ನೆಲೆಗೊಂಡಿರುವವನು ದೇವರಲ್ಲಿ ನೆಲೆಗೊಂಡಿದ್ದಾನೆ, ದೇವರು ಅವನಲ್ಲಿ ನೆಲೆಗೊಂಡಿದ್ದಾನೆ (1 ಯೋಹಾನ 3:24; 4:12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

17 ದೇವರ ಪ್ರೀತಿಯು ನಮ್ಮಲ್ಲಿ ಸಿದ್ಧಿಗೆ ಬರುವ ಹಾಗೆ ನಾವು ಹೆಚ್ಚುಹೆಚ್ಚಾಗಿ ಕ್ರಿಸ್ತನಂತಾಗುವೆವು . ಕ್ರಿಸ್ತ ನಂತಾಗುವದು ಆತನ ಪ್ರೀತಿಯು ನಮ್ಮಲ್ಲಿ ಸಿದ್ಧಿಗೆ ಬರುವಂತೆ ಮಾಡುವದು ನಮ್ಮ ಕ್ರೈಸ್ತೀಯ ಜೀವಿತಗಳ ಮುಖ್ಯ ಗುರಿಯಾಗಿರುತ್ತದೆ. (ರೋಮ 8:29). ಆತನ ಪ್ರೀತಿಯು ನಮ್ಮೊಳಗೆ ಸಿದ್ಧಿಗೆ ಬಂದಾಗ ನಾವು ಅಂತಿಮ ನ್ಯಾಯ ತೀರ್ಪಿನ ದಿನದಲ್ಲಿ ಧೈರ್ಯದಿಂದ ಇರುವೆವು (1 ಯೋಹಾನ 2:28 ನೋಡಿರಿ). ನಾವು ದೇವರನ್ಯಾಯತೀರ್ಪಿಗಾಗಿ ಭಯಪಡಬೇಕಾಗಿಲ್ಲ; ನಮಗೆ ಅಪರಾಧ ನಿರ್ಣಯವಿರುವದಿಲ್ಲ; ಆ ದಿನದಲ್ಲಿ ಯಾವ ಶಿಕ್ಷೆಯು ಇರುವದಿಲ್ಲ.

ನಾವು ದಂಡನೆಯನ್ನು ತಪ್ಪಿಸಿಕೊಳ್ಳುವೆವು ಯಾಕೆಂದರೆ ಕ್ರಿಸ್ತನು ಎಂಥವನಾಗಿದ್ದಾನೋ ನಾವು ಅಂಥವರಾಗಿಯೇ ಈ ಲೋಕದಲ್ಲಿದ್ದೇವೆ; ಅಂದರೆ, ಒಂದು ಅರ್ಥದಲ್ಲಿ, ನಾವು ಸಹ ದೇವರಿಂದ ಹುಟ್ಟಿ ಇನ್ನೆಂದಿಗೂ ಲೋಕದವರಾಗಿ ಇರದೆ [21]. ಕ್ರಿಸ್ತನಂತೆ ಇರುವವರಾಗಿದ್ದೇವೆ. ಆತನ ಪ್ರೀತಿಯು ನಮ್ಮಲ್ಲಿರುತ್ತದೆಂಬ ಅರ್ಥದಲ್ಲಿ ನಾವು ಆತನ ಹಾಗಿದ್ದೇವೆ. ಆದರೆ ಪಾಪದ ಕಾರಣದಿಂದ ಈ ಜೀವಿತದಲ್ಲಿ ನಾವು ಸಂಪೂರ್ಣವಾಗಿ ಆತನಂತೆ ಇರಲಾರೆವು . ಲೋಕಾಂತ್ಯದಲ್ಲಿ ಕ್ರಿಸ್ತನು ತಿರಿಗಿ ಬರುವಾಗ ಮಾತ್ರವೇ ನಾವು ಸಂಪೂರ್ಣವಾಗಿ ಆತನಂತಾಗುವೆವು (2 ಕೊರಿಂಥ 3:18; 1 ಯೋಹಾನ 3:2).

**18** ಮನುಷ್ಯರು ಯಾವದಕ್ಕೆ ಹೆದರುತ್ತಾರೆ? ಅವರು ದಂಡನೆಗೆ ಹೆದರುತ್ತಾರೆ. ಆದರೆ ದೇವರು ನಮ್ಮ ಮೇಲೆ ಇಟ್ಟಿರುವ ಮಹಾ ಪ್ರೀತಿಯ ದೆಸೆಯಿಂದ ವಿಶ್ವಾಸಿಗಳಾದ ನಾವು ನಮ್ಮ ಪಾಪಗಳಿಗಾಗಿನ ದಂಡನೆಯಿಂದ ವಿಮೋಚಿಸಲ್ಪಟ್ಟಿದ್ದೇವೆ. ಕ್ರಿಸ್ತನಲ್ಲಿರುವವರಿಗಾದರೋ ಅಪರಾಧ ನಿರ್ಣಯವಾಗಲಿ ದಂಡನೆಯಾಗಲಿ ಇರುವದಿಲ್ಲ (ರೋಮ 8:1). ಆದದರಿಂದ, ದೇವರ ನ್ಯಾಯತೀರ್ಪಿಗೆ ಹೆದರುವದಾದರೆ ನಾವು ಪ್ರೀತಿಯಲ್ಲಿ ಸಿದ್ಧಿಗೆ ಬಂದವರಲ್ಲ ಎಂದು ಇದರ ಅರ್ಥವಾಗುತ್ತದೆ; ಕ್ರಿಸ್ತನ ಪ್ರೀತಿಯು ನಮ್ಮೊಳಗೆ ಸಿದ್ಧಿಗೆ ಬಂದಿಲ್ಲ ಎಂದು ಇದರ ಅರ್ಥವಾಗಿದೆ(ವಚನಗಳು 12:17). ದೇವರ ನ್ಯಾಯ ತೀರ್ಪಿಗೆ ಹೆದರುವದಾದರೆ ನಾವು ಇನ್ನೂ ಆತನ ಪ್ರೀತಿಯನ್ನು ಪೂರ್ಣವಾಗಿ ಅನುಭವಿಸಿಲ್ಲ ಎಂದು ಅರ್ಥವಾಗುತ್ತದೆ.

ದೇವರ ಮಕ್ಕಳಾಗುವದಕ್ಕೆ ನಾವು ನಾಲ್ಕು ಹಂತಗಳ ಮೂಲಕ ಸಾಗುತ್ತೇವೆ. ಮೊದಲನೆಯ ಹಂತದಲ್ಲಿ ನಾವು ದೇವರ ಭಯವನ್ನಾಗಲಿ ದೇವರಿಗಾಗಿ ಪ್ರೀತಿಯನ್ನಾಗಲಿ ಹೊಂದಿರುವದಿಲ್ಲ. ಎರಡನೆಯ ಹಂತದಲ್ಲಿ ನಾವು ದೇವರಿಗೆ ಭಯಪಡುವದಕ್ಕೆ ಪ್ರಾರಂಭಿಸುತ್ತೇವೆ ಆದರೆ ಇನ್ನೂ ನಾವು ಆತನಿಗಾಗಿ ಪ್ರೀತಿಯನ್ನು ಹೊಂದಿರುವದಿಲ್ಲ. ಮೂರನೆಯ ಹಂತದಲ್ಲಿ ನಾವು ದೇವರ ಪ್ರೀತಿಯನ್ನು ಅನುಭವಿಸುವದಕ್ಕೆ ಪ್ರಾರಂಭಿಸುತ್ತೇವೆ. ಆದರೆ ಭಯ ಇನ್ನೂ ಇರುತ್ತದೆ. ಅಂತಿಮವಾಗಿ ನಾಲ್ಕನೆಯ ಹಂತದಲ್ಲಿ ನಾವು ನಮ್ಮ ಭಯವನ್ನು ಕಳೆದುಕೊಳ್ಳುತ್ತೇವೆ, ಕ್ರಿಸ್ತನ ಪ್ರೀತಿಯು ಮಾತ್ರವೇ ಉಳಿಯುತ್ತದೆ. ನಾವು ನಾಲ್ಕನೆಯ ಹಂತವನ್ನು ತಲುಪುವಾಗ ದೇವರ ಎದುರಿನಲ್ಲಿ ನಮಗೆ ಧೈರ್ಯ ವುಂಟಾಗುತ್ತದೆ ಯಾಕೆಂದರೆ, ನಾವು ನಿಜವಾಗಿಯೂ ಆತನ ಮಕ್ಕಳೇ ಎಂಬದನ್ನು ಖಚಿತವಾಗಿ ತಿಳಿದುಕೊಳ್ಳುವೆವು .

ಜ್ಞಾನೋಕ್ತಿಗಳು 1:7ರಲ್ಲಿ ಹೀಗೆ ಬರೆದಿದೆಃ ಕರ್ತನ ಭಯವೇ ಜ್ಞಾನಕ್ಕೆ ಮೂಲ. ಜ್ಞಾನೋಕ್ತಿಗಳಲ್ಲಿ ಪ್ರಸ್ತಾಪಿಸುವ ಭಯವು ಯೋಹಾನನು ಇಲ್ಲಿ ಮಾತಾಡುತ್ತಿರುವ ಭಯಕ್ಕಿಂತ ವ್ಯಾತ್ಯಾಸವಾದ "ಭಯ" ಆಗಿರುತ್ತದೆ. ಯೋಹಾನನು ಇಲ್ಲಿ ಮಾತಾಡುತ್ತಿರುವ ಭಯವು ದೇವರ ನ್ಯಾಯತೀರ್ಪು ಹಾಗೂ ಕೋಪದ ಬಗ್ಗೆ ಹೆದರಿಕೆಯಾಗಿದೆ. ಆದರೆ ಜ್ಞಾನೋಕ್ತಿಗಳಲ್ಲಿ ಭಯವು ದೇವರು ನಮ್ಮ ಕುರಿತಾಗಿ ಎಲ್ಲವನ್ನೂ ಬಲ್ಲನು ಹಾಗೂ ತನಗೆ ಅವಿಧೇಯರಾಗುವರನ್ನು ದಂಡಿಸುವದಕ್ಕೆ ಆತನಿಗೆ ಬಲವುಂಟು ಎಂಬ ಪ್ರಜ್ಞೆಯಿಂದಾಗಿ ಬರುತ್ತದೆ. ಈ ವಿಧದಲ್ಲಿ ದೇವರಿಗೆ "ಭಯ"ಪಡುವದು ಸಮಂಜಸ ಹಾಗೂ ಅವಶ್ಯಕವಾಗಿದೆ. ಆದರೆ ಕ್ರಿಸ್ತನಲ್ಲಿ ನಂಬಿಕೆಯಿಡುವವರಾದ ನಾವು ಇನ್ನೊಂದು ರೀತಿಯ ಭಯವನ್ನು ಅಂದರೆ ದೇವರ ನ್ಯಾಯ ತೀರ್ಪು ಹಾಗೂ ಕೋಪದ ಕುರಿತ ಹೆದರಿಕೆ (ಅಥವಾ ಅಂಜಿಕೆ) ಹೊಂದುವ ಅಗತ್ಯವಿಲ್ಲ.

**19** ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ. ಪ್ರಾಕೃತ ಮನುಷ್ಯನಲ್ಲಿ ನಿರ್ಮಲವಾದ ಆತ್ಮೀಕ ಪ್ರೀತಿಯಿರುವದಿಲ್ಲ. ದೇವರು ತನ್ನ ಪ್ರೀತಿಯನ್ನು ನಮ್ಮ ಹೃದಯಗಳೊಳಗೆ ಸುರಿಸುವ ತನಕ ನಾವು ನಿಜವಾಗಿಯೂ ಪ್ರೀತಿಸಲಾರೆವು (ರೋಮ 5:5 ನೋಡಿರಿ). ದೇವರು ಮೊದಲು ನಮ್ಮನ್ನು ಪ್ರೀತಿಸಿ ತನ್ನ ಪವಿತ್ರಾತ್ಮನನ್ನು ನಮಗೆ ನೀಡಿದ್ದರಿಂದ ಮಾತ್ರವೇ ನಾವು ಆತನನ್ನು ಹಾಗೂ ಇತರರನ್ನು ಪ್ರೀತಿಸಬಲ್ಲೆವು[22]. (ರೋಮ 5:8; 1 ಯೋಹಾನ 4:10-11 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**20** ದೇವರಿಗಾಗಿ ಪ್ರೀತಿ ಮತ್ತು ಇತರರಿಗಾಗಿ ಪ್ರೀತಿ ಬೇರ್ಪಡಲು ಸಾಧ್ಯವಿಲ್ಲ. ನಾವು ನಿಜವಾಗಿಯೂ ದೇವರನ್ನು ಪ್ರೀತಿಸುವದಾದರೆ ಇತರ ಜನರನ್ನು ಸಹ ಪ್ರೀತಿಸುವೆವು . ನಾವು ಮನುಷ್ಯರನ್ನು ನಿಜವಾಗಿಯೂ ಪ್ರೀತಿಸುವದಾದರೆ ದೇವರನ್ನು ಸಹ ಪ್ರೀತಿಸುವೆವು .

ಒಂದು ವಿಧದಲ್ಲಿ, ದೇವರನ್ನು ಪ್ರೀತಿಸುವದು ಸುಲಭವಾದದ್ದು. ಆತನು ಆತ್ಮ ಸ್ವರೂಪನು. ನಾವು ಆತನನ್ನು ನೋಡುವದಕ್ಕೆ ಹಾಗೂ ಕೇಳುವದಕ್ಕೆ ಸಾಧ್ಯವಿಲ್ಲ, "ನಾನು ದೇವರನ್ನು ಪ್ರೀತಿಸುತ್ತೇನೆ" ಎಂದು ಹೇಳುವದು ಸುಲಭ.

ಆದರೆ ಮನುಷ್ಯರನ್ನು ಪ್ರೀತಿಸುವದು ವ್ಯತ್ಯಾಸವಾದದ್ದು. ಮನುಷ್ಯರು ನಮಗೆ ಕಷ್ಟವನ್ನು ನೀಡುತ್ತಾರೆ. ಅವರು ನಮ್ಮನ್ನು ವಿರೋಧಿಸುತ್ತಾರೆ. ಅವರು ನಮಗೆ ಕೋಪವನ್ನೆಬ್ಬಿಸುತ್ತಾರೆ. ಆದ್ದರಿಂದ, ನಾವು ನಾನು ದೇವರನ್ನು ಪ್ರೀತಿಸುತ್ತೇನೆ ಆದರೆ ಜನರನ್ನು ಪ್ರೀತಿಸುವದಿಲ್ಲ ಎಂದು ಹೇಳುತ್ತೇವೆ. ಆದರೆ "ನಾನು ದೇವರನ್ನು ಪ್ರೀತಿಸುತ್ತೇನೆ" ಎಂದು ಹೇಳಿ ಮನುಷ್ಯರನ್ನು ಪ್ರೀತಿಸದಿರುವದು ಸುಳ್ಳು ಹೇಳುವಂತಿರುತ್ತದೆ (1 ಯೋಹಾನ 2:4 ನೋಡಿರಿ). ಯಾಕೆಂದರೆ ಮನುಷ್ಯರೆಡೆಗಿನ ನಮ್ಮ ಪ್ರೀತಿಯು ದೇವರ ಮೇಲಿನ ನಮ್ಮ ಪ್ರೀತಿಗೆ ಸಾಕ್ಷಿಯಾಗಿರುತ್ತದೆ. ನಾವು ಮನುಷ್ಯರಿಗೆ ಪ್ರೀತಿಯನ್ನು ತೋರಿಸುವದರ ಮೂಲಕ ಮಾತ್ರವೇ ದೇವರ ಮೇಲಿನ ನಮ್ಮ ಪ್ರೀತಿಯನ್ನು ತೋರಿಸಲು ಸಾಧ್ಯ. ನಾವು ಮನುಷ್ಯರೆಡೆಗೆ ಪ್ರೀತಿಯನ್ನು ಹೊಂದಿಲ್ಲದಿದ್ದರೆ ದೇವರೆಡೆಗೂ ಪ್ರೀತಿಯನ್ನು ಹೊಂದಿರುವದಿಲ್ಲ. ಎಲ್ಲಾ ಮನುಷ್ಯರೂ ದೇವರ ಸ್ವರೂಪದಲ್ಲಿ ನಿರ್ಮಿಸಲ್ಪಟ್ಟಿದ್ದಾರೆ (ಆದಿಕಾಂಡ 1:2). ಆದದರಿಂದ, ಪ್ರತಿಯೊಬ್ಬ ಮನುಷ್ಯನಲ್ಲಿಯೂ ದೇವರ ಒಂದು ಸಂಗತಿಯು ಇರುತ್ತದೆ. ನಾವು ಕಾಣುವಂಥ ದೇವರ ಸ್ವರೂಪವನ್ನು (ಮನುಷ್ಯನನ್ನು), ಪ್ರೀತಿಸಲಾರದವರಾದರೆ ನಾವು ಕಾಣದಿರುವ ದೇವರನ್ನು ತಾನೇ ಹೇಗೆ ಪ್ರೀತಿಸಬಲ್ಲೆವು .

ಇದರ ಮೂಲಕ, ದೇವರನ್ನೂ ಪ್ರೀತಿಸುವದು ಸುಲಭವಲ್ಲ ಎಂಬದನ್ನು ನಾವು ತಿಳಿದುಕೊಳ್ಳಬಹುದು! ವಾಸ್ತವದಲ್ಲಿ, ದೇವರನ್ನು ಪ್ರೀತಿಸುವದು ಜಗತ್ತಿನಲ್ಲೆಲ್ಲಾ ಅತಿ ಉನ್ನತ ಹಾಗೂ ಅತಿ ಪ್ರಾಮುಖ್ಯವಾದ ಹಾಗೂ ಅತ್ಯಂತ ಕಷ್ಟಕರವಾದ ಕೆಲಸವಾಗಿದೆ.

ಹಾಗಾದರೆ, ನಾವು ಹೇಗೆ ದೇವರನ್ನು ಪ್ರೀತಿಸಬಲ್ಲೆವು ? ಆತನು ತನ್ನ ಸ್ವಂತ ಪ್ರೀತಿಯನ್ನು ನಮ್ಮ ಹೃದಯದೊಳಗೆ ಸುರಿಸಿರುವದರಿಂದ ನಾವು ಆತನನ್ನು ಪ್ರೀತಿಸಬಲ್ಲೆವು (ವಚನ 19). ನಾವು ದೇವರ ಪ್ರೀತಿಯನ್ನು ಸ್ವೀಕರಿಸುವಾಗ ಮಾತ್ರವೇ ಆತನನ್ನು ಹಾಗೂ ಇತರರನ್ನು ಪ್ರೀತಿಸುವದಕ್ಕೆ ಶಕ್ತರಾಗಿರುತ್ತೇವೆ. ನಾವು ನಮ್ಮ ಸ್ವಪ್ರೀತಿಯಿಂದಲ್ಲ ಆದರೆ ಆತನ ಪ್ರೀತಿಯಿಂದಲೇ ಪ್ರೀತಿಸುತ್ತೇವೆ.

**21** ಮಾರ್ಕ 12:30-31; ಯೋಹಾನ 13:34; 1 ಯೋಹಾನ 3:23 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

---

## ಅಧ್ಯಾಯ - 5

### ಲೋಕದ ಮೇಲೆ ಜಯ (5:1-5)

**1** ಇಲ್ಲಿ ಯೋಹಾನನು ತಾನು 1 ಯೋಹಾನ 4:2ರಲ್ಲಿ ಬರೆದಿರುವ ಸಂಗತಿಗೆ ಹೆಚ್ಚಿನದನ್ನು ಕೂಡಿಸುತ್ತಾನೆ. ಕ್ರಿಸ್ತನ ಪ್ರತಿಯೊಬ್ಬ ವಿಶ್ವಾಸಿಯು ದೇವರಿಂದ ಹುಟ್ಟಿದವನು; ಅಂದರೆ, ಪ್ರತಿಯೊಬ್ಬ ವಿಶ್ವಾಸಿಯು ದೇವರ ಮಗು ಆಗಿದ್ದಾನೆ. ನಾವು ತಂದೆಯನ್ನು ಪ್ರೀತಿಸುವದಾದರೆ ಆತನು ಮಕ್ಕಳನ್ನು ಸಹ ಪ್ರೀತಿಸಬೇಕು.

**2** 1 ಯೋಹಾನ 4:20ರಲ್ಲಿ ನಾವು ನಮ್ಮ ಸಹೋದರನನ್ನು ಪ್ರೀತಿಸದಿದ್ದರೆ, ದೇವರನ್ನು ಪ್ರೀತಿಸುವವರಲ್ಲ ಎಂದು ಯೋಹಾನನು ಹೇಳಿರುತ್ತಾನೆ. ಇಲ್ಲಿ ಯೋಹಾನನು ಹೇಳುವದೇನೆಂದರೆ, ನಾವು ದೇವರನ್ನು ಪ್ರೀತಿಸುವದಾದರೆ ನಮ್ಮ ಸಹೋದರರನ್ನೂ ಪ್ರೀತಿಸುವೆವು ಎಂಬದೇ. ನಾವು ನಮ್ಮ ಸಹೋದರನನ್ನು ಪ್ರೀತಿಸುವದರ ಮೂಲಕ ದೇವರನ್ನು ಪ್ರೀತಿಸುವೆಂದು ನಿರೂಪಿಸುತ್ತೇವೆ. ದೇವರನ್ನು ಪ್ರೀತಿಸುವದರ ಮೂಲಕ ನಾವು ನಮ್ಮ ಸಹೋದರನನ್ನು ಪ್ರೀತಿಸುತ್ತೇವೆಂದು ನಿರೂಪಿಸುತ್ತೇವೆ. ವಾಸ್ತವದಲ್ಲಿ, ದೇವರ ಮೇಲಣ ಪ್ರೀತಿ ಒಂದೇ ಸಂಗತಿಯಾಗಿದೆ ಒಂದು ಪ್ರೀತಿಯು ಇನ್ನೊಂದನ್ನು ಬಿಟ್ಟು ಇರಲಾರದು.

**3** ದೇವರ ಮೇಲಣ ಪ್ರೀತಿ ಎಂದರೇನು? ದೇವರ ಮೇಲಣ ಪ್ರೀತಿ ಏನೆಂದರೆ ಆತನ ಆಜ್ಞೆಗಳನ್ನು ಕೈಗೊಂಡು ನಡೆಯುವದೇ (ಯೋಹಾನ 14:15-21 ನೋಡಿರಿ). ಆತನ ಆಜ್ಞೆಗಳಾವವು ? ಒಬ್ಬನು ತನ್ನ ನೆರೆಯವನನ್ನು ಹಾಗೂ ತನ್ನ ಸಹೋದರನನ್ನು ಪ್ರೀತಿಸುವದೇ (2 ಯೋಹಾನ 6).

ದೇವರ ಆಜ್ಞೆಗಳು ಭಾರವಾದವು ಗಳಲ್ಲ, ಯಾಕೆಂದರೆ ಅವು ಗಳನ್ನು ಕೈಗೊಂಡು ನಡೆಯುವದಕ್ಕೆ ಆತನು ನಮಗೆ ಬಲವನ್ನು ನೀಡುತ್ತಾನೆ (ಮತ್ತಾಯ 11:28-30 ನೋಡಿರಿ).

**4** ದೇವರ ಆಜ್ಞೆಗಳು ಭಾರವಾದವು ಗಳಲ್ಲ, ಯಾಕೆಂದರೆ ನಮಗೆ ಲೋಕವನ್ನು ಜಯಿಸುವ –ಅಂದರೆ, ಸೈತಾನನನ್ನು ಜಯಿಸುವ– ಬಲವಿರುತ್ತದೆ. ನಾವು ಈ ಜಯವನ್ನು ಹೇಗೆ ಪಡೆಯುತ್ತೇವೆ? ಕ್ರಿಸ್ತನಲ್ಲಿಟ್ಟಿರುವ ನಮ್ಮ ನಂಬಿಕೆಯ ಮೂಲಕವೇ. ನಂಬಿಕೆಯ ಮುಖಾಂತರ ಕ್ರಿಸ್ತನು ನಮ್ಮಲ್ಲಿ ಜೀವಿಸುತ್ತಾನೆ. ಕ್ರಿಸ್ತನ ಮೂಲಕ ನಾವು ಸಹ ಸೈತಾನನನ್ನು ಜಯಿಸಬಲ್ಲೆವು (1 ಯೋಹಾನ 4:4 ನೋಡಿರಿ).

1 ಯೋಹಾನ 2:14ರಲ್ಲಿ ಯೋಹಾನನು ಬರೆದದ್ದೇನೆಂದರೆಃ ದೇವರ ವಾಕ್ಯವು ನಿಮ್ಮಲ್ಲಿ ನೆಲೆಗೊಂಡಿರುವದರಿಂದ ನೀವು ಕೆಡುಕನನ್ನು ಜಯಿಸಿರುವಿರಿ. ದೇವರ ವಾಕ್ಯವು ನಮ್ಮಲ್ಲಿ ನೆಲೆಗೊಳ್ಳುವದು ಹಾಗೂ ಕ್ರಿಸ್ತನು ನಮ್ಮಲ್ಲಿ ನೆಲೆಗೊಳ್ಳುವದು ಒಂದೇ ಆಗಿದೆ. ಕ್ರಿಸ್ತನು ತಾನೇ ದೇವರ ವಾಕ್ಯ (ಯೋಹಾನ 1:1).

**5** ಕ್ರಿಸ್ತನಲ್ಲಿ ನಂಬಿಕೆಯಿಡುವವರು ಮಾತ್ರವೇ ಲೋಕವನ್ನು ಜಯಿಸಬಲ್ಲರು (1 ಕೊರಿಂಥ 15:57 ನೋಡಿರಿ).

### ಕ್ರಿಸ್ತನ ಕುರಿತ ಸಾಕ್ಷಿ (5:6-12)

**6** ಯೇಸು ನೀರಿನಿಂದಲೂ ರಕ್ತದಿಂದಲೂ ಬಂದನು– ಅಂದರೆ, ಆತನು ನೀರಿನ ಮೂಲಕವೂ ರಕ್ತದ ಮೂಲಕವೂ ತೋರಿಬಂದನು. ಆತನು ನೀರಿನಿಂದ– ಅಂದರೆ, ಆತನ ದೀಕ್ಷಾಸ್ನಾನದಲ್ಲಿ– ದೇವರ ಮಗನಾಗಿ ತೋರ್ಪಡಿಸಲ್ಪಟ್ಟನು (ಮಾರ್ಕ 1:10-11). ಆತನು ರಕ್ತದ ಮೂಲಕ ಶಿಲುಬೆಯ ಮೇಲೆ ಸುರಿಸಲ್ಪಟ್ಟ ಸ್ವರಕ್ತದ ಮೂಲಕ ನಮ್ಮ ರಕ್ಷಕನಾಗಿಯೂ ಪಾಪನಿವಾರಣ ಯಜ್ಞವಾಗಿಯೂ ತೋರ್ಪಟ್ಟನು (ಯೋಹಾನ 19:34 ನೋಡಿರಿ).

**7** ಯೇಸುಕ್ರಿಸ್ತನು ದೇವಕುಮಾರನೂ ಲೋಕರಕ್ಷಕನೂ ಎಂಬದಕ್ಕೆ ಪವಿತ್ರಾತ್ಮನು ಸಾಕ್ಷಿಕೊಡುವವನಾಗಿದ್ದಾನೆ (ಯೋಹಾನ 15:26). ಸತ್ಯದ ವಿಷಯವಾಗಿ ಸಾಕ್ಷಿ ಕೊಡುವದು ಪವಿತ್ರಾತ್ಮನ ಕಾರ್ಯಗಳಲ್ಲಿ ಒಂದಾಗಿದೆ. ಪವಿತ್ರಾತ್ಮನ ಸಾಕ್ಷಿಯು ಸತ್ಯವಾದದ್ದುಃ ಆತನು ಸತ್ಯದ ಆತ್ಮನೇ (ಯೋಹಾನ 16:13). ಆದದರಿಂದ, ನಾವು ಆತನ ಸಾಕ್ಷಿಯಲ್ಲಿ ಸಂಪೂರ್ಣ ಭರವಸವಿಡಬಹುದು.

ಪವಿತ್ರಾತ್ಮನ ಮೂಲಕವೇ ಜನರು ಯೇಸುವನ್ನು ಹಿಂಬಾಲಿಸುತ್ತಾರೆ. ಪವಿತ್ರಾತ್ಮನ ಮೂಲಕನೇ ಸಭೆಯು ಸ್ಥಾಪಿಸಲ್ಪಟ್ಟು ಅಭಿವೃದ್ಧಿಗೆ ಹೊಂದುತ್ತದೆ. ವಿಶ್ವಾಸಿಗಳು ಲೋಕವನ್ನು ಜಯಿಸುವದು ಪವಿತ್ರಾತ್ಮನ ಮೂಲಕವೇ (ವಚನ 4). ಈ ಎಲ್ಲಾ ಮಹಾ ಕಾರ್ಯಗಳ ಮೂಲಕ ಯೇಸುಕ್ರಿಸ್ತನು ನಿಜವಾಗಿಯೂ ದೇವರ ಮಗನೆಂಬದಕ್ಕೆ ಪವಿತ್ರಾತ್ಮನು ಸಾಕ್ಷಿಕೊಡುತ್ತಾನೆ.

8 ಪವಿತ್ರಾತ್ಮನು ಮಾತ್ರವಲ್ಲದೆ ನೀರು (ಯೇಸುವಿನ ದೀಕ್ಷಾಸ್ನಾನ) ಹಾಗೂ ರಕ್ತ (ಯೇಸುವಿನ ಮರಣ) ಸಹ ಸಾಕ್ಷಿ ಕೊಡುತ್ತವೆ. ನೀರು ಈ ವಿಧದಲ್ಲಿ "ಸಾಕ್ಷಿಕೊಡುತ್ತದೆ" ಯೇಸು ನೀರಿನಲ್ಲಿ ದೀಕ್ಷಾಸ್ನಾನ ಹೊಂದಿದ ವೇಳೆಯಲ್ಲಿ ಪವಿತ್ರಾತ್ಮನು ಆತನ ಮೇಲೆ ಇಳಿದು ಬಂದನು ಮತ್ತು ದೇವರು, "ನೀನು ಪ್ರೀಯನಾಗಿರುವ ನನ್ನ ಮಗನು" ಎಂದು ಹೇಳಿದನು (ಮಾರ್ಕ 1:11). ಯೇಸು ಮನುಷ್ಯನಾಗಿ ಲೋಕಕ್ಕೆ ಬಂದು ನಮ್ಮ ಪಾಪಗಳಿಗೋಸ್ಕರ ಸತ್ತನು ಎಂದು ರಕ್ತವು "ಸಾಕ್ಷಿಕೊಡುತ್ತದೆ". ಮತ್ತು ಅಂತಿಮವಾಗಿ, ಪವಿತ್ರಾತ್ಮನು ತಾನೇ ನಮ್ಮ ಹೃದಯದೊಳಗಿದ್ದು ಯೇಸು ಸತ್ತವರೊಳಗಿಂದ ಎದ್ದನೆಂದೂ ನಮ್ಮೊಳಗೆ ನೆಲೆಸುವದಕ್ಕೆ ತನ್ನ ಆತ್ಮನನ್ನು (ಪವಿತ್ರಾತ್ಮನನ್ನು) ಕಳುಹಿಸಿಕೊಟ್ಟನೆಂದೂ ಸಾಕ್ಷಿ ಕೊಡುವವನಾಗಿದ್ದಾನೆ. ಈ ಮೂವರ ಸಾಕ್ಷಿಗಳು– ಆತ್ಮನು, ನೀರು, ಹಾಗೂ ರಕ್ತ ಸಂಪೂರ್ಣವಾಗಿ ಒಂದೇ ಅಭಿಪ್ರಾಯವುಳ್ಳವುಗಳು. ಯೇಸು ಕ್ರಿಸ್ತನು ದೇವರ ಮಗನೂ ಲೋಕರಕ್ಷಕನೂ ಎಂದು ಮೂರು ಸಾಕ್ಷಿಕೊಡುತ್ತವೆ.

9 ಮನುಷ್ಯನ ಸಾಕ್ಷಿಯು ಸಹ ಅತಿ ಪ್ರಾಮುಖ್ಯವಾದದ್ದು. ಯೇಸು ದೀಕ್ಷಾಸ್ನಾನ ಹೊಂದುವಾಗ ಸುತ್ತಲೂ ಇದ್ದ ಜನರು "ನೀನು ಪ್ರಿಯನಾಗಿರುವ ನನ್ನ ಮಗನು "ಎಂದು ದೇವರು ಆಕಾಶದೊಳಗಿಂದ ಹೇಳುವದನ್ನು ಕೇಳಿದರು (ಮಾರ್ಕ 1:11). ಯೇಸು ಶಿಲುಬೆಯ ಮೇಲೆ ಸಾಯುವದನ್ನು ಜನರು ಕಂಡರು ಮತ್ತು ಮೂರು ದಿನಗಳ ನಂತರ ಆತನು ತಿರಿಗಿ ಜೀವಿತನಾದ್ದನ್ನೂ ಅವರು ಕಣ್ಣಾರೆ ನೋಡಿದರು! ಅಪೊಸ್ತಲರು ತಮ್ಮ ಉಳಿದೆಲ್ಲಾ ಜೀವಿತಗಳನ್ನು ತಾವು ನೋಡಿ ಕೇಳಿದ ಈ ಸಂಗತಿಗಳ ಕುರಿತು ಸಾಕ್ಷಿನೀಡುವದರಲ್ಲಿ ಕಳೆದರು (1 ಯೋಹಾನ 1:1-3).

ಆದರೆ ದೇವರ ಸಾಕ್ಷಿಯು ಮನುಷ್ಯನ ಸಾಕ್ಷಿಗಿಂತ ದೊಡ್ಡದಾಗಿದೆ (ಯೋಹಾನ 5:32-36). ದೇವರ ಸಾಕ್ಷಿಯು ಪವಿತ್ರಾತ್ಮನೇ, ಆತನು ನಮ್ಮಲ್ಲಿ ಜೀವಿಸುತ್ತಾನೆ ಮತ್ತು ಆತನ ಮೂಲಕ ನಾವು ದೇವರ ಪ್ರಸನ್ನತೆ, ಬಲ ಹಾಗೂ ಪ್ರೀತಿಯನ್ನು ಅನುಭವಿಸುತ್ತೇವೆ. ಪವಿತ್ರಾತ್ಮನು ನಮ್ಮ ಹೃದಯದಲ್ಲಿ ಸಾಕ್ಷಿಕೊಡುವದರಿಂದ ನಮ್ಮ ನಂಬಿಕೆಯು ಅಪೊಸ್ತಲರ ನಂಬಿಕೆಯಷ್ಟೇ ಬಲಿಷ್ಠವಾಗಿರಬಲ್ಲದು.

10 ಮೊದಲು ನಾವು ಸುವಾರ್ತೆಯನ್ನು– ಮನುಷ್ಯರ ಸಾಕ್ಷಿಯನ್ನು –ಕೇಳುತ್ತೇವೆ ತರುವಾಯ ನಾವು ದೇವರ ಮಗನಲ್ಲಿ ನಂಬಿಕೆಯಿಡುತ್ತೇವೆ ಮತ್ತು ನಂತರ ನಾವು ನಮ್ಮ ಹೃದಯಗಳಲ್ಲಿ ಪವಿತ್ರಾತ್ಮನ ಸಾಕ್ಷಿಯನ್ನು ಹೊಂದುತ್ತೇವೆ. ಪವಿತ್ರಾತ್ಮನ ಮೂಲಕ ನಮ್ಮ ನಂಬಿಕೆಯು ಮತ್ತಷ್ಟು ಬಲಿಷ್ಠವಾಗುವದು. ಪವಿತ್ರಾತ್ಮನ ಮೂಲಕ ಕ್ರಿಸ್ತನು ನಮ್ಮಲ್ಲಿ ಕರ್ತನಾಗಿ ಜೀವಿಸುತ್ತಾನೆ. ನಾವು ಕ್ರಿಸ್ತನ ಸುವಾರ್ತೆಯನ್ನು ತಿರಸ್ಕರಿಸುವದಾದರೆ ದೇವರನ್ನು ಸುಳ್ಳುಗಾರನೆಂದು ಕರೆಯುವವರಾಗಿದ್ದೇವೆ. ನಾವು ಸತ್ಯದ ಆತ್ಮವನ್ನು ತಿರಸ್ಕರಿಸಿದವರಾಗಿದ್ದೇವೆ.

11 ಆ ಸಾಕ್ಷಿ– ಸುವಾರ್ತೆ– ಏನೆಂದರೆಃ ದೇವರು ನಮಗೆ ನಿತ್ಯಜೀವವನ್ನು ಅನುಗ್ರಹಿಸಿದನು [23]. ಆ ಜೀವವು ಆತನ ಮಗನಲ್ಲಿ ಅದೆ ಎಂಬದೇ (ಯೋಹಾನ 1:4 ನೋಡಿರಿ). ದೇವರು ತನ್ನ ಮಗನಾದ ಯೇಸುವನ್ನು ಕೊಟ್ಟ ಉದ್ದೇಶವು ಆತನಲ್ಲಿ ನಂಬಿಕೆಯಿಡುವವನು.... ನಿತ್ಯ ಜೀವವನ್ನು ಪಡೆಯಬೇಕು ಎಂಬದಕ್ಕಾಗಿಯೇ (ಯೋಹಾನ 3:16).

12 ಕ್ರಿಸ್ತನಲ್ಲಿ ನಂಬಿಕೆಯಿಡದೆ ನಿತ್ಯಜೀವ ದೊರೆಯಲಾರದು (ಯೋಹಾನ 3:16ಮತ್ತು ವ್ಯಾಖ್ಯಾನ ನೋಡಿರಿ).ನಂಬಿಕೆಯ ಮೂಲಕ ನಾವು ಮಗನನ್ನೂ ಆತನ ಜೊತೆಯಲ್ಲಿ ನಿತ್ಯಜೀವವನ್ನೂ ಹೊಂದಿದ್ದೇವೆ.

## ಮುಕ್ತಾಯದ ಹೇಳಿಕೆಗಳು (5:13-21)

13 ಇಲ್ಲಿ ಯೋಹಾನನು ತಾನು ಪತ್ರಿಕೆಯನ್ನು ಬರೆದ ಮುಖ್ಯ ಕಾರಣವನ್ನು ನೀಡುತ್ತಾನೆಃ ಅದೇನೆಂದರೆ ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಾಗಬೇಕೆಂಬದೇ. ಯೋಹಾನನು ತನ್ನ ಸುವಾರ್ತೆಯನ್ನು ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡೆಕೊಳ್ಳುವಂತೆಯೂ ಬರೆದನು (ಯೋಹಾನ 20:31). ಈಗ ಯೋಹಾನನು ಈ ಪತ್ರಿಕೆಯಲ್ಲಿ ವಿಶ್ವಾಸಿಗಳ ನಂಬಿಕೆಯು ಇನ್ನಷ್ಟು ಬಲಗೊಂಡು ಖಚಿತವಾಗುವಂತೆ– ಅವರಿಗೆ ತಮ್ಮಲ್ಲಿ ನಿತ್ಯ ಜೀವ ಉಂಟೆಂದು ಗೊತ್ತಾಗಬೇಕೆಂದೂ– ವಿಶ್ವಾಸಿಗಳಿಗೆ ಬರೆಯುತ್ತಿದ್ದಾನೆ.

14 ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬ ಧೈರ್ಯವು (ಭರವಸೆ) ನಮಗೆ ಇರಬಲ್ಲದು. ಮತ್ತು ಆತನು ನಮ್ಮ ವಿಜ್ಞಾಪನೆಯನ್ನು ಕೇಳಿದರೆ ನಾವು ಬೇಡಿಕೊಂಡದ್ದನ್ನು ಆತನು ನಮಗೆ ಕೊಡುವನು (1 ಯೋಹಾನ 3:22 ಮತ್ತು ವ್ಯಾಖ್ಯಾನ ನೋಡಿರಿ).

15 ದೇವರು ನಮ್ಮ ವಿಜ್ಞಾನೆಯನ್ನು ಕೇಳುವದಾದರೆ ನಾವು ಬೇಡಿದವುಗಳು ಆತನಿಂದ ನಮಗೆ ದೊರೆತವೆಂಬದು ನಮಗೆ ಗೊತ್ತಾಗಿದೆ. ನಾವು ಕೇಳಿದವುಗಳನ್ನು ದೇವರು ತಕ್ಷಣವೇ ಕೊಡದಿದ್ದಾಗ್ಯು ನಾವು ಅವುಗಳನ್ನು ಈಗಾಗಲೇ ಹೊಂದಿಕೊಂಡಿದ್ದೇವೇನೋ ಎಂದು ಪರಿಗಣಿಸುವಷ್ಟರ ಮಟ್ಟಿಗೆ ನಾವು ಅದನ್ನು ಪಡೆಯುತ್ತೇವೆಂಬ ನಿಶ್ಚಯತೆಯಿಂದ

ಇರಬಲ್ಲೆವು ! ಉದಾಹರಣೆಗೆ, ಪರಲೋಕದಲ್ಲಿ ದೊರೆಯುವ ನಿತ್ಯ ಜೀವದ ವಾಗ್ದಾನವು ಎಷ್ಟು ಖಚಿತವಾದದ್ದೆಂದರೆ ನಾವು ಅದನ್ನು ಭವಿಷ್ಯತ್ತಿನಲ್ಲಷ್ಟೇ ಪಡೆಯುವವರಾದಾಗ್ಯು ನಿಜವಾದ ಅರ್ಥದಲ್ಲಿ ಈಗಾಗಲೇ ಅದನ್ನು ಹೊಂದಿದವರಾಗಿದ್ದೇವೆ.

16 ಯಾವನಾದರೂ ತನ್ನ ಸಹೋದರನು....... ಪಾಪಮಾಡುವದನ್ನು ಕಂಡರೆ ಅವನು ದೇವರನ್ನು ಬೇಡಿಕೊಳ್ಳಲಿ ಆಗ ದೇವರು ಜೀವವನ್ನು ದಯಪಾಲಿಸುವನು. ಪಾಪ ಮಾಡುವ ಸಹೋದರನಿಗಾಗಿ ನಾವು ಮಾಡುವ ಪ್ರಾರ್ಥನೆಯ ಮೂಲಕ ಆ ಸಹೋದರನು ಆತ್ಮೀಕವಾಗಿ ಶುದ್ಧಗೊಂಡು ಸ್ವಸ್ಥನಾಗುವನು ಎಂದು ಯಾಕೋಬನು ಹೇಳುತ್ತಾನೆ (ಯಾಕೋಬ 5:16). ಆದರೆ ಅದು ಮಾತ್ರವಲ್ಲದೆ, ದೇವರು ಅವನಿಗೆ (ಪಾಪಮಾಡುವ ಸಹೋದರನಿಗೆ) ಜೀವವನ್ನು ದಯಪಾಲಿಸುವನು ಎಂದು ಯೋಹಾನನು ಹೇಳುತ್ತಾನೆ. ಇಲ್ಲಿ ಜೀವ ಎಂಬದು ಶಾರೀರಿಕ ಜೀವವನ್ನು ಸೂಚಿಸಬಹುದು– ಉದಾಹರಣೆಗೆ, ರೋಗಿಯಾದ ವ್ಯಕ್ತಿಯು ತನ್ನ ರೋಗದಿಂದ ಗುಣಮುಖನಾದ ಮೇಲೆ ಪಡೆಯುವ ಹೊಸತನದ ಜೀವಿತ. ಅಥವಾ ಜೀವವು ಆತ್ಮೀಕ ಜೀವವಾಗಿರಬಹುದು ಉದಾಹರಣೆಗೆ ಪಾಪಿಯು ತನ್ನ ಪಾಪಗಳಿಂದ ಕ್ಷಮಿಸಲ್ಪಟ್ಟು ಶುದ್ಧನಾದ ಮೇಲೆ ಪಡೆಯು ನೂತನ ಜೀವಿತ (ಯಾಕೋಬ 5:19-20; 1 ಯೋಹಾನ 1:9). ಆದದರಿಂದ, ನಾವು ಪಾಪದಿಂದಲೂ ಶಾರೀರಿಕ ವ್ಯಾಧಿಯಿಂದಲೂ ಬಿಡುಗಡೆಗೊಳ್ಳುವಂತೆ– ನಾವು ನೂತನಗೊಂಡ ಆತ್ಮೀಕ ಜೀವಿತವನ್ನೂ, ನೂತನಗೊಂಡ ಶಾರೀರಿಕ ಜೀವಿತವನ್ನೂ ಪಡೆದುಕೊಳ್ಳುವಂತೆ ಒಬ್ಬರಿಗೊಬ್ಬರು ನಿರಂತರವಾಗಿ ಪ್ರಾರ್ಥಿಸೋಣ.

ಈ ವಚನದ ಮೊದಲನೆಯ ಭಾಗದಲ್ಲಿ ಯೋಹಾನನು ಮರಣಕರವಲ್ಲದ ಪಾಪದ ಬಗ್ಗೆ ಮಾತಾಡುತ್ತಿದ್ದಾನೆ. ಈಗ ವಚನದ ಎರಡನೆಯ ಭಾಗದಲ್ಲಿ ಆತನು ಒಂದು ಮರಣಕರವಾದ ಪಾಪವನ್ನು ಪ್ರಸ್ತಾಪಿಸುತ್ತಾನೆ. ಅದು ಯಾವ ಪಾಪ? ಆ ಪಾಪವು ಪವಿತ್ರಾತ್ಮನ ವಿರುದ್ಧ ದೂಷಣೆ ಮಾಡುವದೇ (ಮಾರ್ಕ 3:28-29). ದೇವರು ಈ ಪಾಪವನ್ನು ಕ್ಷಮಿಸುವದಿಲ್ಲ.

ಪವಿತ್ರಾತ್ಮನ ವಿರುದ್ಧದ ದೂಷಣೆ ಎಂದರೇನು? ಇದು ದೇವರನ್ನು, ಕ್ರಿಸ್ತನನ್ನು, ಸುವಾರ್ತೆಯನ್ನು ಹಾಗೂ ನಮ್ಮ ಹೃದಯಗಳಲ್ಲಿನ ಪವಿತ್ರಾತ್ಮನ ಸಾಕ್ಷಿಯನ್ನು ನಿರಂತರವಾಗಿ ಬೇಕೆಂದೇ ತಿರಸ್ಕರಿಸುವದೇ ಆಗಿದೆ. ಅಥವಾ ಬೇರೆ ಮಾತುಗಳಲ್ಲಿ ಹೇಳುವದಾದರೆ ಪಶ್ಚಾತ್ತಾಪವಿಲ್ಲದೆ ಗೊತ್ತಿದ್ದೂ ಪಾಪದಲ್ಲಿ ಮುಂದುವರೆಯುವದು. ದೇವರು ಎಲ್ಲಾ ಮನುಷ್ಯರನ್ನೂ ಪಶ್ಚಾತಾಪ ಪಡುವಂತೆ ಅವರ ಪಾಪಗಳನ್ನು ತೊರೆದುಕ್ರಿಸ್ತನ ಕಡೆಗೆ ತಿರಿಗಿಕೊಳ್ಳುವಂತೆ ಕರೆಯುತ್ತಿದ್ದಾನೆ. ಆದರೆ ಮನುಷ್ಯರು ದೇವರ ಕರೆಯನ್ನು ತಾತ್ಸಾರ ಮಾಡುವದಾದರೆ– ಅವರು ಆತನ ಕೃಪೆಯನ್ನು ತಿರಸ್ಕರಿಸುವದಾದರೆ– ದೇವರು ಅವರಿಗಾಗಿ ಇನ್ನಾವ ಸಹಾಯವನ್ನೂ ಮಾಡಲಾರನು; ಅವರು ಆತನ ಪವಿತ್ರಾತ್ಮನನ್ನು ತಿರಸ್ಕರಿಸಿದ್ದಾರೆ. ಹಾಗಾದರೆ ಪವಿತ್ರಾತ್ಮನ ವಿರುದ್ಧ ದೂಷಣೆ ಎಂದರೆ ಇದೇ ಆಗಿರುತ್ತದೆ

ಎಲ್ಲಾ ವಿಶ್ವಾಸಿಗಳು ಆಗಾಗ ಪವಿತ್ರಾತ್ಮನನ್ನು ದುಃಖಪಡಿಸುತ್ತಾರೆ (ಎಫೆಸ 4:30). ನಾವೆಲ್ಲರೂ ಕಾಲಕಾಲಕ್ಕೆ ಪಾಪಮಾಡುತ್ತೇವೆ (1 ಯೋಹಾನ 1:10). ಹೀಗೆ ಕೆಲವು ಮಂದಿ ಕ್ರೈಸ್ತರು ಬಹುಶಃ ತಾವು ಈ ಕ್ಷಮಾಪಣೆಯಿಲ್ಲದ, ಮರಣಕರವಾದ ಪಾಪವನ್ನು ಮಾಡಿದ್ದಾರೇನೋ ಎಂದು ಚಿಂತೆಗೊಳಗಾಗುತ್ತಾರೆ. ಆದರೆ ಅವರು ಚಿಂತಿಸುವ ಅಗತ್ಯವಿರುವದಿಲ್ಲ! ಯಾವನಾದರೂ ತಾನು ಈ ಪಾಪವನ್ನು ಮಾಡಿದ್ದೇನೇನೋ ಎಂದು ಚಿಂತೆಗೊಳಗಾಗುವದಾದರೆ ಆತನು ಇದನ್ನು ಮಾಡಿಲ್ಲವೆಂಬುದಕ್ಕೆ ಇದೇ ಸಾಕ್ಷಿಯಾಗಿರುತ್ತದೆ. ಕಾರಣವೇನೆಂದರೆಃ ನಿಜವಾಗಿಯೂ ಈ ಪಾಪವನ್ನು ಮಾಡಿದ ಜನರು ಅದರ ಬಗ್ಗೆ ಚಿಂತಿಸುವದೇ ಇಲ್ಲ. ಅವರು ಪಾಪ ಮಾಡುವದಾದರೂ ಲಕ್ಷ್ಯಕ್ಕೆ ತಂದುಕೊಳ್ಳುವದಿಲ್ಲ; ಅವರು ದೇವರ ಆಲೋಚನೆಯನ್ನೇ ಮಾಡುವದಿಲ್ಲ. ಅವರ ಹೃದಯಗಳು ಕಠಿಣವಾಗಿರುತ್ತವೆ.

ಈ ಮರಣಕರವಾದ ಪಾಪವನ್ನು ಮಾಡುವ ವ್ಯಕ್ತಿಗೋಸ್ಕರ ನಾವು ಪ್ರಾರ್ಥಿಸಬೇಕೆಂದು ಯೋಹಾನನು ಹೇಳುವದಿಲ್ಲ.ಆದರೆ ಯಾವನು ಈ ಪಾಪವನ್ನು ಮಾಡಿದ್ದಾನೆಂದು ನಾವು ಖಚಿತವಾಗಿ ಹೇಗೆ ತಿಳಿದುಕೊಳ್ಳಬಲ್ಲೆವು? ಒಂದು ವಿಧದಲ್ಲಿ ನಾವು ಅಂಥ ವ್ಯಕ್ತಿಯನ್ನು ಅವನ ದುಷ್ಕೃತ್ಯದಿಂದ ತಿಳಿದುಕೊಳ್ಳಬಹುದು (ಮತ್ತಾಯ 7:16). ಆದರೆ ಆತನು ಕ್ಷಮಿಸಲ್ಪಡುವದೇ ಇಲ್ಲ ಎಂಬ ನಿಶ್ಚಯತೆಯನ್ನು ನಾವು ಹೇಗೆ ಹೊಂದಬಹುದು? ನಾವು ಎಂದಿಗೂ ನಿಶ್ಚಯತೆಯನ್ನು ಹೊಂದಲಾರೆವು. ಯಾರು ಕ್ಷಮಿಸಲ್ಪಡುವರು ಹಾಗೂ ಯಾರು ಕ್ಷಮಿಸಲ್ಪಡುವದಿಲ್ಲ ಎಂಬದನ್ನು ದೇವರು ಮಾತ್ರವೇ ಬಲ್ಲನು. ಯೇಸು – "ತೀರ್ಪುಮಾಡಬೇಡಿರಿ" ಎಂದು ಹೇಳಿದನು (ಮತ್ತಾಯ 7:1). ಆದದರಿಂದ, ನಾವು ಎಲ್ಲಾ ಮನುಷ್ಯರಿಗಾಗಿ ಅವರು ತಮ್ಮ ಪಾಪಗಳಿಗೆ ಪಶ್ಚಾತಾಪ ಪಟ್ಟು ಕ್ರಿಸ್ತನ ಕಡೆಗೆ ತಿರಿಗಿಕೊಳ್ಳುವಂತೆ ಪ್ರಾರ್ಥಿಸುವದನ್ನು ಮುಂದುವರೆಸಬೇಕು.

17 ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆಃ ಎಲ್ಲಾ ಪಾಪವೂ ಮರಣಕರವಲ್ಲವೋ? ಪಾಪದ ಸಂಬಳ ಮರಣ ಎಂದು ಪೌಲನು ಬರೆದನು (ರೋಮ 6:23). ಹೌದು ಕ್ರಿಸ್ತನಲ್ಲಿ ನಂಬಿಕೆಯಿಡದವರಿಗಾದರೋ ಎಲ್ಲಾ ಪಾಪವು ಮರಣಕ್ಕೆ ನಡಿಸುತ್ತದೆ, ನಿತ್ಯ ಮರಣಕ್ಕೆ ನಡಿಸುತ್ತದೆ. ಆದರೆ ವಿಶ್ವಾಸಿಗಳು ಪಾಪಮಾಡುವಾಗ ಅವರ ಪಾಪಗಳು ಮರಣಕ್ಕೆ ನಡಿಸುವದಿಲ್ಲ. ಯಾಕೆಂದರೆ ದೇವರು ಅವರನ್ನು ಕ್ಷಮಿಸಿ ಶುದ್ಧಮಾಡುತ್ತಾನೆ (1 ಯೋಹಾನ 1:9). ಆದದರಿಂದ, ನಿಜವಾದ ಕ್ರೈಸ್ತರಿಗಾದರೋ ಪಾಪವು ಮರಣಕ್ಕೆ ನಡಿಸುವದಿಲ್ಲ.

18 ಇಲ್ಲಿ ಯೋಹಾನನು ತಾನು 1 ಯೋಹಾನ 3:6ರಲ್ಲಿ ಹೇಳಿದ್ದನ್ನು ಪುನರಾವರ್ತಿಸುತ್ತಾನೆ..... ದೇವರಿಂದ ಹುಟ್ಟಿರುವವನು ಪಾಪಮಾಡುವವನಲ್ಲ. ಇಲ್ಲಿ ಪುನಃ ಯೋಹಾನನು ಸಾಂದರ್ಭಿಕವಾಗಿ (ಆಗಾಗ) ಪಾಪಮಾಡುವ ವ್ಯಕ್ತಿಯ ಕುರಿತು ಮಾತಾಡುತ್ತಿಲ್ಲ ಆತನು ಬೇಕೆಂದೆ ಪಾಪ ಮಾಡುವದನ್ನು ಮುಂದುವರೆಸುವ ವ್ಯಕ್ತಿಯ ಬಗ್ಗೆ ಮಾತಾಡುತ್ತಿದ್ದಾನೆ.

ದೇವರಿಂದ ಹುಟ್ಟಿದಾತನು (ಅಂದರೆ, ಕ್ರಿಸ್ತನು) ಅವನನ್ನು (ವಿಶ್ವಾಸಿಯನ್ನು) ಕಾಪಾಡುವನು; ಕೆಡುಕನು (ಸೈತಾನನು) ಅವನನ್ನು ಹಿಡಿಯುವದಿಲ್ಲ. ಕ್ರಿಸ್ತನು ವಿಶ್ವಾಸಿಗಳನ್ನು ಮರಣಕರವಾದ ಪಾಪದಲ್ಲಿ ಬೀಳದಂತೆ ಕಾಪಾಡುತ್ತಾನೆ (ಯೋಹಾನ 10:28-29 ಮತ್ತು ವ್ಯಾಖ್ಯಾನ ನೋಡಿರಿ).

**19** ವಿಶ್ವಾಸಿಗಳಾದ ನಾವು ದೇವರ ಮಕ್ಕಳು. ಆದದರಿಂದ, ನಾವು ಈ ಲೋಕದವರಲ್ಲ. ನಾವು ಕತ್ತಲೆಯ ರಾಜ್ಯದೊಳಗಿಂದ (ಲೋಕದೊಳಗಿಂದ) ಹೊರಗೆ ಬಂದು ಪರಲೋಕದ ರಾಜ್ಯವನ್ನು ಸೇರಿರುತ್ತೇವೆ. ಲೋಕವು ಕೆಡುಕನ (ಸೈತಾನನ) ಸ್ವಾಧೀನದಲ್ಲಿರುತ್ತದೆ (ಯೋಹಾನ 17:14-16 ನೋಡಿರಿ).

**20** ಯೋಹಾನನು ಈ ಪತ್ರಿಕೆಯಲ್ಲಿ ನಮಗೆ ಗೊತ್ತದೆ ಎಂಬ ಮಾತನ್ನು ಎಷ್ಟು ಸಾರಿ ಹೇಳುತ್ತಾನೆಂಬದನ್ನು ಗಮನಿಸಿರಿ (ವಚನಗಳು 2, 15, 18, 19 ನೋಡಿರಿ). ಕ್ರಿಸ್ತನಲ್ಲಿಡುವ ನಂಬಿಕೆ ಕುರುಡು ಅಥವಾ ಅಜ್ಞಾನದ ನಂಬಿಕೆ ಆಗಿರುವದಿಲ್ಲ. ಇದು ನಿಜವಾದ ನಂಬಿಕೆ ಇದು ಸತ್ಯದಲ್ಲಿಡುವ ನಂಬಿಕೆಯಾಗಿದೆ. ಕ್ರಿಸ್ತನು ಸತ್ಯವಾಗಿದ್ದಾನೆ (ಯೋಹಾನ 14:6), ಮತ್ತು ಸತ್ಯವೂ ದೇವರ ಜೀವವು ಳ್ಳ ಮಗನೂ ಆಗಿರುವ ಕ್ರಿಸ್ತನನ್ನು ನಾವು ಬಲ್ಲೆವು . ಆದದರಿಂದ ನಾವು ಏಕೆ ಮೃತ ವಿಗ್ರಹಗಳನ್ನು ಆರಾಧಿಸಬೇಕು? (ವಚನ 21).

**21** ನಾವು ವಿಗ್ರಹಗಳಿಗೆ ದೂರವಾಗಿರಬೇಕು (ವಿಮೋಚನ ಕಾಂಡ 20:3-6). ಜನರು ಆರಾಧಿಸುವಂತ ಕಲ್ಲು ಹಾಗೂ ಪ್ರತಿಮೆಗಳಷ್ಟೇ ವಿಗ್ರಹಗಳಾಗಿರುವದಿಲ್ಲ. ನಾವು ಯಾವದೇ ಸಂಗತಿಯನ್ನು– ಉದಾಹರಣೆಗೆ, ಸುಖಬೋಗ, ಕೆಲಸ, ಹಣ, ಆಸ್ತಿಗಳು, ಸ್ಥಾನ, ಪ್ರಸಿದ್ಧಿ, ಕುಟುಂಬ– ದೇವರಿಗಿಂತಲೂ ಹೆಚ್ಚಾಗಿ ಪ್ರೀತಿಸುವದಾದರೆ ಅದು ವಿಗ್ರಹವಾಗುತ್ತದೆ. ನಮ್ಮ ದೈನಂದಿನ ಜೀವಿತಗಳಲ್ಲಿ ಈ ಯಾವದೇ ಸಂಗತಿಗಳನ್ನು ದೇವರಿಗಿಂತ ಉನ್ನತ ಸ್ಥಾನದಲ್ಲಿಡುವದಾದರೆ ನಾವು ಅವು ಗಳನ್ನು ವಿಗ್ರಹಗಳನ್ನಾಗಿಯೂ ನಮ್ಮನ್ನು ವಿಗ್ರಹಾರಾಧಕರನ್ನಾಗಿಯೂ ಮಾಡುತ್ತೇವೆ. ಈ ಸಂಗತಿಗಳು ಸುಳ್ಳು ದೇವರುಗಳಾಗಿವೆ. ಇವು ಗಳು ಲೋಕದ ಸಂಗತಿಗಳಾಗಿವೆ ನಾವು ಏಕಕಾಲದಲ್ಲಿ ಲೋಕವನ್ನೂ ದೇವರನ್ನೂ ಪ್ರೀತಿಸಲಾರೆವು (ಮತ್ತಾಯ 6:24; 1 ಯೋಹಾನ 2:15-17 ನೋಡಿರಿ). ಆದದರಿಂದ, ಯೋಹಾನನು ಹೇಳುವದೇನೆಂದರೆಃ ಪ್ರಿಯರಾದ ಮಕ್ಕಳೇ, ವಿಗ್ರಹಗಳಿಗೆ– ಅಂದರೆ, ಲೋಕದ ಮೇಲಣ ಪ್ರೀತಿಗೆ–ದೂರವಾಗಿರುವಂತೆ ನಿಮ್ಮನ್ನು ಕಾಪಾಡಿಕೊಳ್ಳಿರಿ.

---

## ಟಿಪ್ಪಣಿ

[1] ಕ್ರಿಸ್ತನು ಇತರ ಅವತಾರಗಳಂತಲ್ಲ. ಆತನು ಒಬ್ಬನೇ ಜೀವಸ್ವರೂಪನಾದ ಸತ್ಯ ದೇವರ ಏಕೈಕ ಮಗನಾಗಿದ್ದಾನೆ. ಕ್ರಿಸ್ತನು ಸಂಪೂರ್ಣ ದೇವರಾಗಿದ್ದಾಗ್ಯು ಮನುಷ್ಯನಾಗಿ ಲೋಕಕ್ಕೆ ಬಂದನು. ಆತನು ಪೂರ್ಣ ಮನುಷ್ಯನೂ ಪೂರ್ಣ ದೇವರೂ ಆಗಿದ್ದನು (ಸಾಮಾನ್ಯ ಲೇಖನಃ ಯೇಸು ಕ್ರಿಸ್ತನು ನೋಡಿರಿ).

[2] ನಮ್ಮ ಎಂಬ ಪದಕ್ಕೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ನಿಮ್ಮ" ಎಂದು ಹೇಳುತ್ತವೆ. ಸಾಮಾನ್ಯ ಅರ್ಥವು ಒಂದೇ ಆಗಿದೆ.

[3] ಗ್ರೀಕ್ ಪ್ರತಿಯಲ್ಲಿ ಶುದ್ಧಮಾಡುತ್ತದೆ ಎಂಬ ಪದದ ಅಕ್ಷರಶಃ ಅರ್ಥವು "ಶುದ್ಧ ಮಾಡುತ್ತಾ ಇರುತ್ತದೆ". ಹೊಸ ಒಡಂಬಡಿಕೆಯ ಮೂಲತಃ ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟಿತು.

[4] ಕೆಲವು ಕ್ರೈಸ್ತರು ಈ ಜೀವಿತದಲ್ಲಿ ಸಹ ನಾವು ಪಾಪವಿಲ್ಲದವರಾಗಬಲ್ಲೆವು ಎಂದು ನಂಬುತ್ತಾರೆ ಆದರೆ ಇದು ಅಸಾಧ್ಯವೆಂದು ಬಹುಮಂದಿ ನಂಬುತ್ತಾರೆ, ಹೆಚ್ಚಿನ ಚರ್ಚೆಗಾಗಿ, ಸಾಮಾನ್ಯ ಲೇಖನಃ ಪವಿತ್ರಾತ್ಮನು ನೋಡಿರಿ.

[5] ಖಂಡಿತವಾಗಿಯೂ, ನಾವು ನಮ್ಮ ನೆರೆಯವರನ್ನು ಸಹ ಪ್ರೀತಿಸಬೇಕು. ಆದರೆ ಮೊಟ್ಟಮೊದಲು ನಾವು ದೇವರನ್ನು ಪ್ರೀತಿಸಬೇಕು. ಆಗ ಆತನ ಪ್ರೀತಿಯು ನಮ್ಮೊಳಗೆ ಹರಿಯುವದು ಮತ್ತು ನಮ್ಮ ನೆರೆಯವರನ್ನು ಪ್ರೀತಿಸುವಂತೆ ನಮ್ಮನ್ನು ಶಕ್ತರನ್ನಾಗಿಸುತ್ತದೆ. ನಾವು ಮೊದಲು ದೇವರನ್ನು ಪ್ರೀತಿಸದ ಹೊರತು, ನಮ್ಮ ನೆರೆಯವನನ್ನು ನಿಜವಾಗಿಯೂ ಪ್ರೀತಿಸಲಾರೆವು (ಮಾರ್ಕ 12:31 ಮತ್ತು ವ್ಯಾಖ್ಯಾನ ನೋಡಿರಿ).

[6] ಕ್ರಿಸ್ತ ವಿರೋಧಿಯು ಕ್ರಿಸ್ತನ ಬಲಿಷ್ಠ ವೈರಿಯಾಗಿದ್ದು, ಕ್ರಿಸ್ತನು ತಿರಿಗಿ ಬರುವದಕ್ಕೆ ಸ್ವಲ್ಪಕಾಲ ಮುಂಚೆ ಕಾಣಿಸಿಕೊಳ್ಳುವನು. ಕ್ರಿಸ್ತವಿರೋಧಿಯು 2 ಥೆಸಲೋನಿಕ 2:1-12ರಲ್ಲಿ ಪೌಲನು ಸೂಚಿಸುವ "ಅಧರ್ಮಸ್ವರೂಪ"ನೇ ಆಗಿದ್ದಾನೆಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ. ಕ್ರಿಸ್ತವಿರೋಧಿಯು ಸೈತಾನನ ಪ್ರತಿನಿಧಿಯಾಗಿದ್ದಾನೆ. ವಾಸ್ತವದಲ್ಲಿ, ಯೋಹಾನನ ಪ್ರಕಾರವಾಗಿ ಕ್ರಿಸ್ತವಿರೋಧಿಯು ತನ್ನವರೇ ಆಗಿರುವ ಪ್ರತಿನಿಧಿಗಳನ್ನು ಸುಳ್ಳುಬೋಧಕರನ್ನು ಹೊಂದಿದ್ದು, ಅವರು ಈಗಾಗಲೇ ಲೋಕದಲ್ಲಿರುತ್ತಾರೆ. ಯೋಹಾನನು ಇವರನ್ನು ಸಹ ಕ್ರಿಸ್ತವಿರೋಧಿಗಳು ಎಂದು ಕರೆಯುತ್ತಾನೆ.

[7] ಈ ವಿಷಯದ ಹೆಚ್ಚಿನ ಚರ್ಚೆಗಾಗಿ ಸಾಮಾನ್ಯ ಲೇಖನಃ ನಾವು ನಮ್ಮ ರಕ್ಷಣೆಯನ್ನು ಕಳೆದುಕೊಳ್ಳಬಹುದೋ? ನೋಡಿರಿ.

[8] ಸತ್ಯವನ್ನು ಎಂಬ ಮಾತಿನ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು " ಎಲ್ಲವನ್ನೂ" ಎಂದು ಹೇಳುತ್ತವೆ. ಈ ವಚನದ ಸನ್ನಿವೇಶದಲ್ಲಿ ಅರ್ಥವು ಮುಖ್ಯವಾಗಿ ಒಂದೇ ಆಗಿದೆ.

[9] ಗ್ರೀಕ್ ಪ್ರತಿಯಲ್ಲಿ "ನಡಿಸುವವನು" ಎಂಬದರ ಅರ್ಥವು "ನಡಿಸುತ್ತಾ ಇರುವವನು" ಎಂದಿರುತ್ತದೆ.

10 ಪಾಪಮಾಡುತ್ತಾ ಮುಂದುವರೆಯುವದಿಲ್ಲ ಎಂಬ ಮಾತುಗಳ ಬದಲಾಗಿ, ಬೈಬಲಿನ ಕೆಲವು ಭಾಷಾಂತರಗಳು "ಪಾಪ ಮಾಡುವದಿಲ್ಲ" ಎಂದು ಹೇಳುತ್ತವೆ. ಹೇಗಿದ್ದರೂ, ಗ್ರೀಕ್ ಪ್ರತಿಯ ಪ್ರಕಾರವಾಗಿ ಸರಿಯಾದ ಅರ್ಥವು "ಪಾಪಮಾಡುತ್ತಾ ಮುಂದುವವರೆಯುವದಿಲ್ಲ" ಎಂಬದೇ. ಇದು ಈ ವಚನವನ್ನು ಅರ್ಥಮಾಡಿಕೊಳ್ಳುವದಕ್ಕೆ ಪ್ರಾಮುಖ್ಯವಾಗಿರುತ್ತದೆ.

11 ಗ್ರೀಕ್ ಪ್ರತಿಯಲ್ಲಿ ಮಾಡುವವನು ಎಂಬ ಪದದ ಅರ್ಥವು "ಮಾಡುತ್ತಾ ಇರುವವನು" ಎಂದು ಇರುತ್ತದೆ.

12 ಪಾಪದಲ್ಲಿ ಮುಂದುವರೆಯುವದಿಲ್ಲ ಎಂಬ ಮಾತುಗಳ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಪಾಪಮಾಡುವದಿಲ್ಲ" ಎಂದು ಹೇಳುತ್ತವೆ. ಹೇಗಿದ್ದರೂ, "ಪಾಪದಲ್ಲಿ ಮುಂದುವರೆಯುವದಿಲ್ಲ" ಎಂಬದು ಗ್ರೀಕ್ ಪ್ರತಿಯ ಸರಿಯಾದ ಅರ್ಥವಾಗಿರುತ್ತದೆ (ವಚನ 6ರ ಮೇಲಿನ ವ್ಯಾಖ್ಯಾನ ಹಾಗೂ ಆ ವ್ಯಾಖ್ಯಾನದ ಅಡಿ ಟಿಪ್ಪಣಿಗಳನ್ನು ನೋಡಿರಿ).

13 ಗ್ರೀಕ್ ಭಾಷೆಯಲ್ಲಿಃ "ಮಾಡುತ್ತಾ ಇರುವವನು".

14 ಗ್ರೀಕ್ ಭಾಷೆಯಲ್ಲಿಃ "ಮಾಡುತ್ತಾ ಮುಂದುವರೆಯುವದಿಲ್ಲ".

15 ಯೋಹಾನನು ಇಲ್ಲಿ ಪ್ರಾಯೋಗಿಕ ಅರ್ಥದಲ್ಲಿ ಮಾತಾಡುತ್ತಿದ್ದಾನೆ. ಖಂಡಿತವಾಗಿಯೂ, ನಾವು ಇತರರನ್ನು ನಿಜವಾಗಿಯೂ ಪ್ರೀತಿಸುವದಕ್ಕೆ ಮೊದಲು ದೇವರನ್ನು ಪ್ರೀತಿಸಬೇಕು ಮತ್ತು ಆತನ ಚಿತ್ತವನ್ನು ಮಾಡುವದಕ್ಕೆ ಅಭಿಲಾಷಿಸಬೇಕು (ಮಾರ್ಕ 12:30). ಆತನ ಚಿತ್ತವೇನೆಂದರೆ ನಾವು ಇತರರನ್ನು ಪ್ರೀತಿಸಬೇಕೆಂಬದೇ.

16 ಇಲ್ಲಿ ಸಹೋದರನು ಅಂದರೆ ಜೊತೆ ವಿಶ್ವಾಸಿ ಎಂದು ಅರ್ಥ.

17 ಈ ಸನ್ನಿವೇಶದಲ್ಲಿ ಲೋಕ ಎಂದರೆ "ದುಷ್ಟ ಅಥವಾ ಅವಿಶ್ವಾಸಿ ಜನರು".

18 ಖಂಡಿತವಾಗಿಯೂ, ಒಬ್ಬನು ನಮ್ಮನ್ನು ಮೋಸಪಡಿಸುವದಕ್ಕೆ ಸುಳ್ಳು ಹೇಳಬಲ್ಲನು; ಆದರೆ ಒಂದಿಲ್ಲಾ ಒಂದು ಸಮಯದಲ್ಲಿ ಆ ಸುಳ್ಳುವ್ಯಕ್ತಿಯ ಕೆಲಸಗಳಿಂದ ಬೈಲಿಗೆ ಬರುವದು.

19 ಈ ಎರಡು ವಿಧವಾದ ಆತ್ಮಗಳು ಮನುಷ್ಯನ ಸ್ವಆತ್ಮದ ಮೇಲೆ ಪ್ರಭಾವ ಬೀರುತ್ತವೆ. ಕ್ರಿಸ್ತನನ್ನು ಒಪ್ಪಿಕೊಳ್ಳುವ ಆತ್ಮವು ಒಬ್ಬ ಮನುಷ್ಯನಲ್ಲಿರುವಾಗ ಆ ಮನುಷ್ಯನು ಕ್ರಿಸ್ತನನ್ನು ಒಪ್ಪಿಕೊಳ್ಳುವನಷ್ಟೇ. ಯೇಸುವನ್ನು ಒಪ್ಪಿಕೊಳ್ಳದ ಆತ್ಮವು ಒಬ್ಬ ಮನುಷ್ಯನಲ್ಲಿಲ್ಲದಿದ್ದರೆ ಆ ವ್ಯಕ್ತಿಯು ಯೇಸುವನ್ನು ಒಪ್ಪಿಕೊಳ್ಳುವದಿಲ್ಲ.

20 ಹಳೆ ಒಡಂಬಡಿಕೆಯಲ್ಲಿ ದೇವರು ದೇವದೂತನೊಬ್ಬನ ರೂಪದಲ್ಲಿ ಅಬ್ರಹಾಮ ಮತ್ತು ಮೋಶೆಯಂತಹ ಅನೇಕ ವ್ಯಕ್ತಿಗಳಿಗೆ ಕಾಣಿಸಿಕೊಂಡನು. ಯಾವ ಮನುಷ್ಯನಿಗೂ ದೇವರನ್ನು ಸ್ವತಃ ಪೂರ್ಣವಾಗಿ ನೋಡುವದಕ್ಕೆ ಅನುಮತಿಯಿರಲಿಲ್ಲ.

21 ನಾವು ಲೋಕದಲ್ಲಿದ್ದೇವೆ ಆದರೆ ಲೋಕದವರೆಲ್ಲ (ಯೋಹಾನ 15:19; 17:14-16, 18).

22 ಮನುಷ್ಯನು ಸ್ವಾಭಾವಿಕ ಮಾನುಷ್ಯ ಪ್ರೀತಿಯನ್ನು ಹೊಂದಿರುತ್ತಾನೆ, ಉದಾಹರಣೆಗೆ ಕುಟುಂಬ ಸದಸ್ಯರ ನಡುವಿನ ಪ್ರೀತಿ ಹಾಗೂ ಆಪ್ತ ಸ್ನೇಹಿತರ ನಡುವಿನ ಪ್ರೀತಿ. ಈ ಪ್ರೀತಿಯು ಸಹ ದೇವರಿಗೆ ಮೆಚ್ಚಿಕೆಯಾದದ್ದು. ಆದರೆ ಈ ಭಾಗದಲ್ಲಿ ಯೋಹಾನನು ಈ ವಿಧದ ಪ್ರೀತಿಯ ಬಗ್ಗೆ ಮಾತಾಡುತ್ತಿಲ್ಲ. ಯೋಹಾನನು ಸಂಪೂರ್ಣವಾಗಿ ಸ್ವಾರ್ಥರಹಿತ ಆತ್ಮೀಕ ಪ್ರೀತಿಯ ಬಗ್ಗೆ ಮಾತಾಡುತ್ತಿದ್ದಾನೆ; ಯಾರಲ್ಲಿ ಪವಿತ್ರಾತ್ಮನು ಇರುತ್ತಾನೋ ಅವರು ಮಾತ್ರವೇ ಈ ವಿಧದ ಪ್ರೀತಿಯನ್ನು ಹೊಂದಿರುತ್ತಾರೆ.

23 ನಿತ್ಯ ಜೀವವು ನಮ್ಮ ರಕ್ಷಣೆಯ ಅತಿಶ್ರೇಷ್ಠ ಹಾಗೂ ಅತಿ ಅದ್ಭುತವಾದ ಭಾಗವಾಗಿರುತ್ತದೆ.

# ಯೋಹಾನನು ಬರೆದ ಎರಡನೆಯ ಪತ್ರಿಕೆ

## ಪರಿಚಯ

ಈ ಪತ್ರಿಕೆಯನ್ನು ಸಭೆಯ ಹಿರಿಯನು ಬರೆದನು. ಅಪೊಸ್ತಲನಾದ ಯೋಹಾನನು ಈ ಪತ್ರಿಕೆಯನ್ನು ಬರೆದನೆಂದು ಬಹು ಮಂದಿ ಬೈಬಲ್ ಪಂಡಿತರು ನಂಬುತ್ತಾರೆ. ಈ ಪತ್ರಿಕೆಯು ಕ್ರಿ.ಶಕ ಮೊದಲನೆಯ ಶತಮಾನದ ಅಂತ್ಯದ ಸಮೀಪದಲ್ಲಿ ಸುಮಾರು ಯೋಹಾನನ ಮೊದಲನೆಯ ಪತ್ರಿಕೆಯು ಬರೆಯಲ್ಪಟ್ಟ ವೇಳೆಯಲ್ಲಿಯೇ ಬರೆಯಲ್ಪಟ್ಟಿತು. ಈ ಪತ್ರಿಕೆಯು ದೇವರಾದುಕೊಂಡ ಸ್ತ್ರೀ ಹಾಗೂ ಆಕೆಯ ಮಕ್ಕಳನ್ನು ಉದ್ದೇಶಿಸಿ ಬರೆಯಲ್ಪಟ್ಟಿತು (ವಚನ 1). ಈ ಸ್ತ್ರೀ ಯಾರೆಂಬುದು ತಿಳಿದುಬಂದಿಲ್ಲ. ಈ ಸ್ತ್ರೀ ಎಂದು ಪದವು ವಾಸ್ತವದಲ್ಲಿ ಸಭೆಯನ್ನು ಮತ್ತು ಮಕ್ಕಳು ಎಂಬ ಪದವು ಆ ಸಭೆಯ ವಿಶ್ವಾಸಿಗಳನ್ನು ಸೂಚಿಸುತ್ತದೆಂದು ಕೆಲವರು ಭಾವಿಸುತ್ತಾರೆ ಆದರೆ ಇದು ಯೋಹಾನನ ಅರ್ಥವಾಗಿತ್ತೋ ಅಲ್ಲವೋ ಎಂಬದು ಖಚಿತಪಟ್ಟಿರುವದಿಲ್ಲ.

## ಹೊರ ರೇಖೆ

ಅ. ಪರಿಚಯ (1:3)
ಆ. ಸಲಹೆಗಳು (4:11)
  1. ಪ್ರಬೋಧನೆ (4:6)
  2. ಎಚ್ಚರಿಕೆ (7:11)
ಇ. ಮುಕ್ತಾಯ (12:13)

## ದೇವರಾದುಕೊಂಡ ಅಮ್ಮನವರಿಗೆ–ಸ್ತ್ರೀಗೆ (1-13)

1 ಈ ಪತ್ರಿಕೆಯು ಯಾರಿಗೆ ಬರೆಯಲ್ಪಟ್ಟಿತೋ ಆ ದೇವರಾದುಕೊಂಡ ಸ್ತ್ರೀ ಯಾರೆಂಬದು ತಿಳಿದು ಬರುವದಿಲ್ಲ (2 ಯೋಹಾನಃ ಪರಿಚಯ ನೋಡಿರಿ).

ಸತ್ಯವನ್ನು ತಿಳಿದಿರುವವರೆಲ್ಲರೂ ಕ್ರಿಸ್ತನ ವಿಶ್ವಾಸಿಗಳಾಗಿದ್ದಾರೆ (ಯೋಹಾನ 8:31-32).

2 ಯೋಹಾನ ಹಾಗೂ ಇತರ ವಿಶ್ವಾಸಿಗಳೆಲ್ಲರೂ ಸತ್ಯದ ನಿಮಿತ್ತ ಈ "ದೇವರಾದುಕೊಂಡ ಸ್ತ್ರೀಯನ್ನು" ಪ್ರೀತಿಸುತ್ತಾರೆ. ಇಲ್ಲಿ ಸತ್ಯ ಎಂದರೆ ಸತ್ಯದ ಆತ್ಮನಾದ ಪವಿತ್ರಾತ್ಮನನ್ನು ಸೂಚಿಸಬಹುದು (ಯೋಹಾನ 15:26) ಅಥವಾ ಇದು ಯೇಸುಕ್ರಿಸ್ತನನ್ನು ಸಹ ಸೂಚಿಸಬಹುದು ಆತನು ತಾನೇ ಸತ್ಯವು (ಯೋಹಾನ 14:6).

3 ಹೊಸ ಒಡಂಬಡಿಕೆಯ ಬಹುಪಾಲು ಪತ್ರಿಕೆಗಳ ಪೀಠಿಕೆಗಳಲ್ಲಿ ಬರಹಗಾರರು ತಮ್ಮ ವಾಚಕರಿಗೆ ಕೃಪೆಯೂ ಶಾಂತಿಯೂ ಇರಲಿ ಎಂದು ಬೇಡಿಕೊಳ್ಳುತ್ತಾರೆ (ರೋಮ 1:7; ಎಫೆಸ 1:2). ಆದರೆ ಯೋಹಾನನು ಇಲ್ಲಿ ಕರುಣೆಯನ್ನು ಸೇರಿಸುತ್ತಾನೆ (1 ತಿಮೊಥೆ 1:2 ನೋಡಿರಿ). ಕರುಣೆಯು ದೇವರ ಕೃಪೆಯ ಒಂದು ಭಾಗವಾಗಿದೆ.

4 ದೇವರಾದುಕೊಂಡ ಈ ಸ್ತ್ರೀಯ ಮಕ್ಕಳಲ್ಲಿ ಕೆಲವರು ಸತ್ಯದಲ್ಲಿ ನಡೆಯುತ್ತಿದ್ದರು. ಅಂದರೆ, ಅವರು ಸುವಾರ್ತೆಗನುಸಾರವಾಗಿ ನಡೆಯುತ್ತಿದ್ದರು; ಅವರು ಕ್ರಿಸ್ತನಿಗೆ ವಿಧೇಯರಾಗಿ ನಡೆಯುತ್ತಿದ್ದರು.

5 ಯೋಹಾನ 15:7; 1 ಯೋಹಾನ 2:7 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

6 ಪ್ರೀತಿಸುವದೆಂದರೆ ಯೇಸುವಿಗೆ ವಿಧೇಯರಾಗುವದೇ. ಯೇಸು ವಿಧೇಯರಾಗುವದೆಂದರೆ ಪ್ರೀತಿಸುವದೇ. ವಿಧೇಯತೆಯು ಪ್ರೀತಿಯ ಫಲ ಹಾಗೂ ಸಾಕ್ಷಿಯಾಗಿರುತ್ತದೆ. ನಾವು ನಮ್ಮ ವಿಧೇಯತೆಯ ಮೂಲಕವೇ ನಮ್ಮ ಪ್ರೀತಿಯನ್ನು ತೋರಿಸುತ್ತೇವೆ (ಯೋಹಾನ 14:15; 1 ಯೋಹಾನ 5:3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**7-8** ಕ್ರೈಸ್ತರು ಸಹ ಈಗಾಗಲೇ ಲೋಕದಲ್ಲಿರುವ ಕ್ರಿಸ್ತ ವಿರೋಧಿಗಳಿಂದಲೂ ಮೋಸಗಾರರಿಂದಲೂ (ಸುಳ್ಳು ಬೋಧಕರು ಹಾಗೂ ಸುಳ್ಳು ಪ್ರವಾದಿಗಳಿಂದಲೂ) ವಂಚನೆಗೆ ಒಳಗಾಗಬಹುದು (ಮಾರ್ಕ 13:22-23; 1ಯೋಹಾನ 2:18-22; 4:1-3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಸೈತಾನನು ಕ್ರಿಸ್ತ ವಿರೋಧಿಯ, ಎಲ್ಲಾ ಮೋಸಗಾರರ ಹಾಗೂ ದುರ್ಮಾರ್ಗಿಗಳ ಯಜಮಾನನಾಗಿರುತ್ತಾನೆ. ಕ್ರೈಸ್ತರು ಕ್ರಿಸ್ತನಲ್ಲಿನ ತಮ್ಮ ನಂಬಿಕೆಯನ್ನು ಬಿಟ್ಟುಬಿಡುವಂತೆ ಮಾಡಲು ಆತನು ಪ್ರಯತ್ನಿಸುತ್ತಾನೆ. ಆತನು ಅವರ ಮನಸ್ಸುಗಳಲ್ಲಿ ಸಂಶಯ ಹಾಗೂ ಅಂಜಿಕೆಗಳನ್ನು ಸೃಷ್ಟಿಸುವದಕ್ಕೆ ಪ್ರಯತ್ನಿಸುತ್ತಾನೆ. ಕ್ರಿಸ್ತನು ನಿಜವಾಗಿಯೂ ದೇವರ ಮಗನಲ್ಲ ಎಂದು ಆತನು ಹೇಳುತ್ತಾನೆ. ಯೋಹಾನನು ನಿಮಗೆ ಈ ಎಚ್ಚರಿಕೆಯನ್ನು ಕೊಡುತ್ತಾನೆಃ ಕ್ರಿಸ್ತನಲ್ಲಿಟ್ಟಿರುವ ನಿಮ್ಮ ನಂಬಿಕೆಯನ್ನು ಬಿಟ್ಟುಬಿಡಬೇಡಿರಿ. ನೀವು ಪ್ರಯಾಸಪಟ್ಟು ಮಾಡಿದವು ಗಳನ್ನು ಕಳಕೊಳ್ಳದೆ ಪೂರ್ಣಫಲವನ್ನು– ಅಂದರೆ, ನಿಮ್ಮ ಪ್ರತಿಫಲ, ನಿಮ್ಮ ಪರಲೋಕದ ಬಾಧ್ಯತೆ, ನಿಮ್ಮ ರಕ್ಷಣೆಯನ್ನು –ಹೊಂದುವಂತೆ ಜಾಗರೂಕರಾಗಿರಿ (ಇಬ್ರಿಯ 10:35-36 ಸಾಮಾನ್ಯ ಲೇಖನಃ ನಾವು ನಮ್ಮ ರಕ್ಷಣೆಯನ್ನು ಕಳೆದುಕೊಳ್ಳಬಹುದೋ ನೋಡಿರಿ).

9 .......ಅತಿಕ್ರಮಿಸಿ ಮುಂದಕ್ಕೆ ಹೋಗುವವನು –ಆತನು ಯಾರು? "ಅತಿಕ್ರಮಿಸಿ ಮುಂದಕ್ಕೆ ಹೋಗುವ" ವ್ಯಕ್ತಿಯು ಕ್ರಿಸ್ತನ ಸುವಾರ್ತೆಯಿಂದ ತೃಪ್ತಿಹೊಂದದಿರುವ ಒಬ್ಬ ವ್ಯಕ್ತಿಯಾಗಿದ್ದಾನೆ. ಆತನು ಹೊಸ ಬೋಧನೆಗಳನ್ನು, ಹೊಸ ತತ್ವಜ್ಞಾನಗಳನ್ನು, ಹೊಸ ಪ್ರಾಪಂಚಿಕ ಜ್ಞಾನವನ್ನು ಹುಡುಕುತ್ತಾ ಅತಿಕ್ರಮಿಸಿ ಮುಂದಕ್ಕೆ ಹೋಗುತ್ತಾನೆ. ಅಂಥ ವ್ಯಕ್ತಿಯು ತಾನು ಇತರ ಕ್ರೈಸ್ತರಿಗಿಂತ ಜ್ಞಾನವಂತನೆಂದು ಭಾವಿಸಿಕೊಳ್ಳುತ್ತಾನೆ.

ಕ್ರಿಸ್ತನ ಬೋಧನೆಗಳಿಂದ ತೊಲಗುವ ಅಂಥ ವ್ಯಕ್ತಿಯು ದೇವರನ್ನು ಸಹ ಬಿಟ್ಟು ಬಿಡುತ್ತಾನೆ. ಆದರೆ ಕ್ರಿಸ್ತ ಬೋಧನೆಗಳಲ್ಲಿ ದೀನನಾಗಿ ನೆಲೆಗೊಳ್ಳುವ ವ್ಯಕ್ತಿಯು ತಂದೆಯೊಂದಿಗೂ ಕ್ರಿಸ್ತನೊಂದಿಗೂ ಅನ್ಯೋನ್ಯತೆ ಹೊಂದಿರುವವನಾಗಿದ್ದಾನೆ –ಮತ್ತು ನಿಜವಾದ ಜ್ಞಾನವನ್ನೂ ಹೊಂದಿರುತ್ತಾನೆ (ಯೋಹಾನ 14:21-23; 1 ಯೋಹಾನ 2:23 ನೋಡಿರಿ).

**10-11** ನಾವು ಅತಿಥಿಸತ್ಕಾರ ಮಾಡುವವರಾಗಿರಬೇಕೆಂದು ಬೈಬಲ್ ನಮಗೆ ಬೋಧಿಸುತ್ತದೆ (ರೋಮ 12:13; ಇಬ್ರಿಯ 13:2; 1 ಪೇತ್ರ 4:9). ಆದರೆ ನಾವು ಸುಳ್ಳುಬೋಧಕರಿಗೆ ಯಾವದೇ ಅತಿಥಿಸತ್ಕಾರ ಅಥವಾ ಸಹಾಯವನ್ನು ಮಾಡತಕ್ಕದ್ದಲ್ಲ. ಯೋಹಾನನ ಕಾಲದಲ್ಲಿ ಅಂಥ ಅನೇಕ ಬೋಧಕರು ಹಳ್ಳಿಯಿಂದ ಹಳ್ಳಿಗೆ ಪ್ರಯಾಣಿಸುತ್ತಾ ಜನರು ತಮ್ಮನ್ನು ಹಿಂಬಾಲಿಸುವಂತೆ ಮಾಡಲು ಪ್ರಯತ್ನಿಸುತ್ತಿದ್ದರು. ಅವರು ಜನರ ಅತಿಥಿಸತ್ಕಾರದಿಂದ ತಮ್ಮ "ಬದುಕು ಸಾಗಿಸುತ್ತಿದ್ದರು". ಈ ಕಾರಣದಿಂದಲೇ ಯಾವನಾದರೂ ಅಂಥ ಒಬ್ಬ ಸುಳ್ಳು ಬೋಧಕನನ್ನು ಮನೆಯೊಳಗೆ ಸೇರಿಸಿಕೊಳ್ಳುವದಾದರೆ ಅಂಥವನು ಅವನ ದುಷ್ಕೃತ್ಯಗಳಲ್ಲಿ ಪಾಲುಗಾರನಾಗಿರುತ್ತಾನೆ ಎಂದು ಯೋಹಾನನು ಹೇಳುತ್ತಾನೆ (ವಚನ 11).

**12** ಮುಖಾಮುಖಿಯಾಗಿ ಮಾಡುವದು ಬರೆಯುವದಕ್ಕಿಂತಲೂ ಉತ್ತಮವಾದದ್ದು. ಯೋಹಾನನು ಶೀಘ್ರವೇ "ದೇವರಾದುಕೊಂಡ ಸ್ತ್ರೀಯನ್ನು" ಸಂಧಿಸುವದಕ್ಕೆ ನಿರೀಕ್ಷೆಸುತ್ತಾನೆ ಹೀಗೆ ಅವರ ಸಂತೋಷವು ಪರಿಪೂರ್ಣವಾಗುವದು (1 ಯೋಹಾನ 1:4; 3 ಯೋಹಾನ 13:14). ಯೋಹಾನನ ಕಾಲದಲ್ಲಿ ಇಂದು ನಮಗಿರುವಂತೆ ಕಾಗದಗಳಿರಲಿಲ್ಲ. ಆ ವೇಳೆಯಲ್ಲಿ ಜನರು ದುಬಾರಿಯಾದ ಚರ್ಮದ ಸುರುಳಿ (ಕುರಿ ಅಥವಾ ಆಡಿನ ಚರ್ಮದಿಂದ ತಯಾರಿಸಿದ ಸುರುಳಿ) ಅಥವಾ ಐಗುಪ್ತ್ಯದ ಪಾಪಿರಸ್ ಎಂಬ ಗಿಡದಿಂದ ತಯಾರಿಸಿ ಒಂದು ರೀತಿಯ "ಕಾಗದ"ದ ಮೇಲೆ ಬರೆಯುತ್ತಿದ್ದನು.

**13** ದೇವರಾದುಕೊಂಡ ಸ್ತ್ರೀಯ ಸಹೋದರಿಯ ಕೆಲವು ಮಕ್ಕಳು ಯೋಹಾನನಿದ್ದ ಸ್ಥಳದಲ್ಲಿಯೇ ವಾಸಿಸುತ್ತಿದ್ದರು. ಆದದರಿಂದ, ಅವರು ಸಹ ತಮ್ಮ ಅತ್ತಿಗೆಗೆ ವಂದನೆಗಳನ್ನು ಹೇಳುತ್ತಾರೆ.

# ಯೋಹಾನನು ಬರೆದ ಮೂರನೆಯ ಪತ್ರಿಕೆ

### ಪರಿಚಯ

ಮೊದಲನೆ ಶತಮಾನದ ಕೊನೆಯ ಭಾಗದಲ್ಲಿ ಈ ಪತ್ರಿಕೆಯನ್ನು ಬರೆಯಲಾಗಿದೆ. ಅದೇ ಸಮಯದಲ್ಲಿ ಯೋಹಾನನ ಉಳಿದ ಎರಡು ಪತ್ರಿಕೆಗಳು ಬರೆಯಲ್ಪಟ್ಟಿವೆ. ಈ ಮೂರನೇ ಪತ್ರಿಕೆಯನ್ನು ಗಾಯನು ಎಂಬ ವ್ಯಕ್ತಿಗೆ ಬರೆಯಲಾಗಿದೆ ಆದರೆ ಗಾಯನು ಯಾರೆಂಬುದಾಗಿ ಗೊತ್ತಿಲ್ಲ.

### ಹೊರರೇಖೆ

ಅ. ವೈಯಕ್ತಿಕ ಶುಭಾಷಯಗಳು (1-4)

ಆ ಮುಖ್ಯವಾದ ಪತ್ರಿಕೆ

1. ಅತಿಥಿ ಸತ್ಕಾರದ ಬಗ್ಗೆ (5-8)
2. ಬೇರೆ ಅಭಿಪ್ರಾಯಗಳು (9-15)

**ಗಾಯನಿಗೆ (1:14)**

**1** ಯೋಹಾನನ ಕಾಲದಲ್ಲಿ ಗಾಯ ಎಂಬ ಹೆಸರು ಬಹಳ ಸಾಮಾನ್ಯವಾಗಿತ್ತು. ಗಾಯ ಎಂಬ ಹೆಸರುಳ್ಳ ಇತರ ಮೂವರು ವ್ಯಕ್ತಿಗಳು ಹೊಸ ಒಡಂಬಡಿಕೆಯಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾರೆ. ಒಬ್ಬನ ಬಗ್ಗೆ ಅ.ಕೃತ್ಯ 19:29ರಲ್ಲಿ ಇನ್ನೊಬ್ಬನ ಬಗ್ಗೆ ಅ.ಕೃತ್ಯ 20:4 ಮತ್ತು ಮೂರನೆಯವನ ಬಗ್ಗೆ ರೋಮ 16:23; 1 ಕೊರಿಂಥ 1:14ರಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾರೆ. ಈ ಪತ್ರಿಕೆಯು ಯಾರಿಗೆ ಬರೆಯಲ್ಪಟ್ಟಿತೋ ಆ ಗಾಯನು ಈ ಮೇಲಿನ ಮೂವರಲ್ಲಿ ಒಬ್ಬನಲ್ಲ; ಆದರೆ ನಾಲ್ಕನೆಯವನು ಎಂದು ಬಹುಪಾಲು ಬೈಬಲ್ ಪಂಡಿತರು ಯೋಚಿಸುತ್ತಾರೆ. ಈ ಪತ್ರಿಕೆಯಲ್ಲಿ ಬರೆದಿರುವ ವಿಷಯಗಳನ್ನು ಹೊರತು ಗಾಯನ ಕುರಿತಾಗಿ ಇನ್ನೇನೂ ತಿಳಿದುಬಂದಿಲ್ಲ.

**2-4** ಸಭಾ ಪಾಲಕರು ಹಾಗು ಬೋಧಕರು ತಮ್ಮ "ಮಕ್ಕಳು" ಸತ್ಯವನ್ನನುಸರಿಸಿ –ಅಂದರೆ, ಕ್ರಿಸ್ತನಿಗೆ ವಿಧೇಯರಾಗಿ ನಡೆಯುವದಕ್ಕೆ ನೋಡುವಾಗ ಬಹಳ ಸಂತೋಷಪಡುತ್ತಾರೆ. ಯೋಹಾನನಂತೆಯೇ ಎಲ್ಲಾ ಸಭಾನಾಯಕರು ಹಾಗೂ ಹಿರಿಯರು ಸಭೆಯ ಸದಸ್ಯರನ್ನು ಪ್ರೀತಿಸಿ ಅವರಿಗಾಗಿ ಕಾಳಜಿವಹಿಸಲಿ (2 ಯೋಹಾನ 4 ಮತ್ತು ವ್ಯಾಖ್ಯಾನ ನೋಡಿರಿ)

**5-6** ಗಾಯನು ಒಬ್ಬ ಅತಿಥಿಸತ್ಕಾರ ಮಾಡುವ ಮನುಷ್ಯನೆಂದು ಪ್ರಸಿದ್ಧನಾಗಿದ್ದನು. ಆತನು ಸುವಾರ್ತೆ ಸಾರುತ್ತಾ ಪ್ರಯಾಣಿಸುತ್ತಿದ್ದ ಬೋಧಕರನ್ನು ಸತತವಾಗಿ ಮನೆಯೊಳಗೆ ಸ್ವಾಗತಿಸಿ ಸಹಾಯಮಾಡುತ್ತಿದ್ದನು. ಅವರಲ್ಲಿ ಅನೇಕರನ್ನು ಆತನು ಮುಂಚೆ ಎಂದಿಗೂ ಬೇಟಿಯಾಗಿರಲಿಲ್ಲ ಆವರು ಆತನಿಗೆ ಪರಿಚಯವಿಲ್ಲದವರಂತಿದ್ದರು (ಇಬ್ರಿಯ 13:2 ನೋಡಿರಿ).

**7-8** ಸುವಾರ್ತೆ ಸಾರುತ್ತಾ ಪ್ರಯಾಣಿಸುತ್ತಿದ್ದ ಈ ಬೋಧಕರು ಕ್ರಿಸ್ತನ ಹೆಸರನ್ನು ಪ್ರಸಿದ್ಧಪಡಿಸುವದಕ್ಕೋಸ್ಕರ– ಕ್ರಿಸ್ತನ ನಿಮಿತ್ತ– ಹೊರಟು ಹೋಗಿದ್ದರು (ಅ.ಕೃತ್ಯ 5:41; ಯಾಕೋಬ 2:7 ನೋಡಿರಿ). ಈ ಹೆಸರು ಉಳಿದೆಲ್ಲ ಹೆಸರುಗಳಿಗಿಂತ ಮೇಲಾದದ್ದು (ಫಿಲಿಪ್ಪಿ 2:9).

ಯೋಹಾನ ಕಾಲದಲ್ಲಿ ಸಂಚಾರಿ ಬೋಧಕರು ಹೋಟೆಲುಗಳಲ್ಲಿ ಉಳಿಯುವದಕ್ಕೆ ಆರ್ಥಿಕವಾಗಿ ಸಮರ್ಥರಾಗಿರಲಿಲ್ಲ. ಆದದರಿಂದ, ಅವರು ತಾವು ಹೋದ ಸ್ಥಳಗಳಲ್ಲಿನ ವಿಶ್ವಾಸಿಗಳ ಅತಿಥಿಸತ್ಕಾರವನ್ನು ಅವಲಂಭಿಸಿದರು. ಅವರು ಅನ್ಯಜನಗಳ– ಅಂದರೆ, ಅವಿಶ್ವಾಸಿಗಳ ಬಳಿಯಲ್ಲಿ ಉಳಿದುಕೊಳ್ಳುತ್ತಿರಲಿಲ್ಲ, ಯಾಕೆಂದರೆ ಇವರು ಊಟ ವಸತಿಗೋಸ್ಕರವಷ್ಟೇ ಸುವಾರ್ತೆಯನ್ನು ಸಾರುತ್ತಾರೆಂದು ಅವಿಶ್ವಾಸಿಗಳು ಇವರ ಮೇಲೆ ಆರೋಪ ಹೊರಿಸಬಾರದೆಂಬದಕ್ಕಾಗಿಯೇ. ಹೀಗೆ ಈ ಸಂಚಾರಿ ಬೋಧಕರಿಗೆ ಅತಿಥಿ ಸತ್ಕಾರವನ್ನು ಒದಗಿಸುತ್ತಿದ್ದ ವಿಶ್ವಾಸಿಗಳು ಸುವಾರ್ತೆಯ ಹರಡುವಿಕೆಯಲ್ಲಿ ಮಹತ್ವದ ಸಹಾಯ ಮಾಡುತ್ತಿದ್ದರು. ಅವರು ಒಟ್ಟಾಗಿ ಸತ್ಯಕ್ಕೆ ಕೆಲಸಮಾಡುವ ಜೊತೆ ಕೆಲಸಗಾರರಾಗಿದ್ದರು.

ಅದೇ ವಿಧದಲ್ಲಿ, ನಾವು ಸಹ ಕ್ರಿಸ್ತ ಹೆಸರಿನಲ್ಲಿ ಆತನ ಸೇವೆಗಾಗಿಯೂ ಸುವಾರ್ತೆ ಸಾರುವದಕ್ಕಾಗಿಯೂ ಹೊರಟು ಹೋಗುವವರಿಗೆ ಸಹಾಯವನ್ನೂ ಬೆಂಬಲವನ್ನೂ ಒದಗಿಸುವದಕ್ಕೆ ಯಾವಾಗಲೂ ಸಿದ್ಧರಾಗಿರಬೇಕು (ಯೋಹಾನ 13:20).

ಕೆಲವು ಕ್ರೈಸ್ತರು ಕ್ರಿಸ್ತನ ಸೇವೆಗೋಸ್ಕರ ಲೋಕದೊಳಗೆ ಹೊರಟು ಹೋಗಲು ದೇವರಿಂದ ಕರೆಯಲ್ಪಟ್ಟಿದ್ದಾರೆ ಇತರ ಕ್ರೈಸ್ತರು ಮನೆಯಲ್ಲಿ ಇದ್ದು ಹೊರಟು ಹೋಗುವವರಿಗೆ ಸತ್ಕಾರ ಸಹಾಯ ಹಾಗೂ ಪ್ರಾರ್ಥನೆಯನ್ನು ಮಾಡುವದರ ಮೂಲಕ ಕ್ರಿಸ್ತನ ಸೇವೆ ಮಾಡುವದಕ್ಕೆ ಕರೆಯಲ್ಪಟ್ಟಿದ್ದಾರೆ. ಹೀಗೆ ನಾವೆಲ್ಲರೂ– ನಾವು ಹೋದರೂ ಸರಿಯೇ ಅಥವಾ ಉಳಿದರೂ ಸರಿಯೇ– ಸತ್ಯಕ್ಕೆ ಸಹಕಾರಿಗಳಾಗುವಂತೆ ಕರೆಯಲ್ಪಟ್ಟಿದ್ದೇವೆ.

**9** ಗಾಯನು ಹೋಗುತ್ತಿದ್ದ ಸಭೆಯಲ್ಲಿ ದಿಯೋತ್ರೇಫನು ಒಬ್ಬ ನಾಯಕನಾಗಿದ್ದನು. ದಿಯೋತ್ರೇಫನು ಯೋಹಾನನ ಅಧಿಕಾರವನ್ನು ತಿರಸ್ಕರಿಸಿದ್ದನು. ಆತನು ಎಲ್ಲಾ ಅಧಿಕಾರವನ್ನೂ ತನಗೇ ಇಟ್ಟುಕೊಳ್ಳಲು ಬಯಸಿದ್ದನು. ಆತನು ಪ್ರಮುಖನಾಗಬೇಕೆಂದು ಬಯಸಿದ್ದನು. ಯೇಸು ಹೇಳಿದ ಮಾತನ್ನು ಅವನು ಮರೆತಿದ್ದನುಃ "ಮೊದಲನೆಯವರು ಕಡೆಯವರಾಗುವರು ಕಡೆಯವರು ಮೊದಲನೆಯರಾಗುವರು" (ಮಾರ್ಕ 10:31). ಪ್ರತಿಯೊಂದು ತಲೆಮಾರಿನಲ್ಲಿಯೂ ಸಭೆಯ ನಾಯಕರೊಳಗೆ ತನ್ನನ್ನು ಹೆಚ್ಚಿಸಿಕೊಳ್ಳಬೇಕೆಂಬ ಈ ಅಭಿಲಾಷೆಯು ಸಾಮಾನ್ಯವಾಗಿರುತ್ತದೆ (ಮತ್ತಾಯ 23:12; ಮಾರ್ಕ 10: 43-44 ನೋಡಿರಿ).

**10** ಕೆಲವು ಸಹೋದರರು (ಸಂಚಾರಿ ಬೋಧಕರು) ದಿಯೊತ್ರೇಫನ ಸಭೆಗೆ ಹೋಗಿದ್ದರು, ಆದರೆ ದಿಯೊತ್ರೇಫನು ಅವರನ್ನು ಸೇರಿಸಿಕೊಂಡಿರಲಿಲ್ಲ. ಅದು ಮಾತ್ರವಲ್ಲದೆ, ಅವರನ್ನು ಸೇರಿಸಿಕೊಂಡ ವಿಶ್ವಾಸಿಗಳನ್ನು ಆತನು ಸಭೆಯಿಂದ ಬಹಿಷ್ಕರಿಸಿದನು. ಆದದರಿಂದ, ಯೋಹಾನನು ಬಂದರೆ ದಿಯೊತ್ರೇಫನ ಕೆಟ್ಟತನ ಹಾಗೂ ಉಗ್ರತನದ ಬಗ್ಗೆ ಎಲ್ಲರಿಗೂ ಬೈಲುಪಡಿಸುವನು.

**11** ಎಫೆಸ 5:1-2; 1 ಯೋಹಾನ 2:29; 3:6, 10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

**12** ಇಲ್ಲಿ ನಮೂದಿಸಲಾಗಿರುವ ದೇಮೇತ್ರಿಯನು ಹೊಸ ಒಡಂಬಡಿಕೆಯ ಇತರ ಕಡೆಯಲ್ಲಿಯೂ ಪ್ರಸ್ತಾಪಿಸಲ್ಪಟ್ಟಿದ್ದಾನೆ' ಬಹುಶಃ ಗಾಯನಿಗೆ ಈ ಪತ್ರಿಕೆಯನ್ನು ದೇಮೇತ್ರಿಯನೇ ಆಗಿರಬಹುದು, ಹಾಗಿರುವದಾದರೆ ಈ ವಚನವು ದೇಮೇತ್ರಿಯನನ್ನು ಗಾಯನಿಗೆ ಪರಿಚಯ ಪಡಿಸುವದಾಗಿದೆ.

ದೇಮೇತ್ರಿಯನು ಸಂಭಾವಿತನೆಂದು ಎಲ್ಲರಿಂದಲೂ– ಸಾಕ್ಷಾತ್– ಸತ್ಯದಿಂದಲೂ ಸಾಕ್ಷಿಹೊಂದಿದ್ದಾನೆ. ಇಲ್ಲಿ ಸತ್ಯ ಅಂದರೆ ಪವಿತ್ರಾತ್ಮನು; ದೇಮೇತ್ರಿಯನು ಸತ್ಯವನ್ನನುಸರಿಸಿ ನಡೆಯುವವನೆಂದು ಸ್ವತಃ ಪವಿತ್ರಾತ್ಮನೇ ಸಾಕ್ಷಿನೀಡುತ್ತಾನೆ

(ವಚನಗಳು 3:4). ಮತ್ತು ಯೋಹಾನನು ಸಹ ದೇಮೇತ್ರಿಯನ ವಿಷಯದಲ್ಲಿ ಸಾಕ್ಷಿ ನೀಡುತ್ತಾನೆ. ಯೋಹಾನನು ಒಬ್ಬ ಅಪೊಸ್ತಲನಾದ್ದರಿಂದ[2] ಆತನ ಸಾಕ್ಷಿಯು ವಿಶ್ವಾಸರ್ಹವೂ ಸತ್ಯವಾದದ್ದೂ ಎಂಬ ಭರವಸವನ್ನು ಗಾಯನ ಹೊಂದಬಹುದು (ಯೋಹಾನ 21:24).

**13-14** ಯೋಹಾನನು ತಾನು 2 ಯೋಹಾನ 12ರಲ್ಲಿ "ದೇವರಾದುಕೊಂಡ ಸ್ತ್ರೀಗೆ" ಬರೆದದ್ದನ್ನೇ ಇಲ್ಲಿ ಪುನರಾವರ್ತಿಸುತ್ತಾನೆ. ತರುವಾಯ ತನ್ನ ಅಂತಿಮ ವಂದನೆಗಳಲ್ಲಿ ಯೋಹಾನನು ಬರೆಯುವದೇನೆಂದರೆಃ ಇಲ್ಲಿನ ಸ್ನೇಹಿತರು ನಿನಗೆ ವಂದನೆ ಹೇಳುತ್ತಾರೆ (ವಚನ 14). ಹೊಸ ಒಡಂಬಡಿಕೆಯಲ್ಲಿ "ಸಹೋದರರು" ಎಂಬ ಪದವು ಸ್ನೇಹಿತರು ಎಂಬದಕ್ಕೆ ಬದಲಾಗಿ ಉಪಯೋಗಿಸಲ್ಪಟ್ಟಿದೆ. ಆದರೆ ಯೋಹಾನನು ತನಗೂ ತನ್ನ ಜೊತೆ ಶಿಷ್ಯರಿಗೂ ಯೇಸು ನುಡಿದ ಮಾತನ್ನು ಜ್ಞಾಪಿಸಿಕೊಳ್ಳುತ್ತಾನೆಃ "ನಾನು ನಿಮ್ಮನ್ನು ಸ್ನೇಹಿತರೆಂದು ಕರೆದಿದ್ದೇನೆ" (ಯೋಹಾನ 15:15).

ಯೇಸುವಿನ ಸ್ನೇಹಿತನಾಗಿರುವದು ಒಬ್ಬ ಪುರುಷ ಅಥವಾ ಸ್ತ್ರೀಗೆ ದೊರೆಯಬಹುದಾದ ಅತ್ಯುನ್ನತ ಶ್ಲಾಘ್ಯವಾಗಿದೆ. ಆದರೆ ಯೇಸುವಿನ ಸ್ನೇಹಿತರಾಗಿರಬೇಕಾದರೆ ನಾವು ಆತನಿಗೆ ವಿಧೇಯರಾಗಬೇಕು. "ನಾನು ನಿಮಗೆ ಕೊಟ್ಟ ಆಜ್ಞೆಗಳಿಗೆ ಸರಿಯಾಗಿ ನಡೆದರೆ ನೀವು ನನ್ನ ಸ್ನೇಹಿತರು" (ಯೋಹಾನ 15:14).

---

## ಟಿಪ್ಪಣಿ

1 ದೇಮೇತ್ರಿಯನೆಂಬ ವ್ಯಕ್ತಿಯು ಅ.ಕೃತ್ಯ 19:24ರಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾನೆ; ಆದರೆ ಇವನು ಬೇರೆ ವ್ಯಕ್ತಿ ಎಂದು ಬಹುಪಾಲು ಬೈಬಲ್ ಪಂಡಿತರು ನಂಬುತ್ತಾರೆ.

2 ಯೋಹಾನನು ಈ ಪತ್ರಿಕೆಯ ಬರೆದ ಕಾಲದಲ್ಲಿ, ಮೂಲ ಅಪೊಸ್ತಲರಲ್ಲಿ ಇನ್ನೂ ಜೀವಂತವಾಗಿದ್ದವನು ಯೋಹಾನನು ಒಬ್ಬನೇ ಆಗಿದ್ದನು.

# ಯೂದನು ಬರೆದ ಪತ್ರಿಕೆ

## ಪರಿಚಯ

ಯೂದನು ಯೇಸುವಿನ ಹಾಗೂ ಯಾಕೋಬನ ತಮ್ಮನಾಗಿದ್ದನು. ಆತನು ಕುರಿತು ಮತ್ತಾಯ 13 : 55 ಹಾಗೂ ಮಾರ್ಕ 6:3ರಲ್ಲಿ ಪ್ರಸ್ತಾಪಿಸಲಾಗಿದೆ. ಯೇಸುವಿನ ಮರಣಕ್ಕೆ ಮುಂಚೆ ಆತನು ದೇವರು ಮಗನೆಂದು ಆತನ ಸಹೋದರರು ನಂಬಿರಲಿಲ್ಲ. ವಾಸ್ತವದಲ್ಲಿ, ಅವರು ಅವನಿಗೆ ಹುಚ್ಚು ಹಿಡಿದಿದೆ ಎಂದು ಭಾವಿಸಿದ್ದರು (ಮಾರ್ಕ 3:20-21; ಯೋಹಾನ 7:5). ಯೇಸುವಿನ ಪುನರುತ್ಥಾನದ ನಂತರವಷ್ಟೇ ಅವರು ಆತನಲ್ಲಿ ನಂಬಿಕೆಯಿಡಲು ಪ್ರಾರಂಭಿಸಿರು. ಈ ಪತ್ರಿಕೆಯು ಕ್ರೈಸ್ತರಿಗೆ ಬರೆಯಲ್ಪಟ್ಟಿದೆ, ಆದರೆ ಈ ಕ್ರೈಸ್ತರು ಎಲ್ಲಿ ನೆಲೆಸಿದ್ದರೆಂಬದು ತಿಳಿದುಬಂದಿರುವದಿಲ್ಲ. ಯೂದನು ಮುಖ್ಯವಾಗಿ ಈ ಪತ್ರಿಕೆಯನ್ನು ಸಭೆಯೊಳಗೆ ಬರೆದನು.

## ಹೊರ ರೇಖೆ

ಅ. ಸುಳ್ಳು ಬೋಧಕರ ವಿಷಯದಲ್ಲಿ ಎಚ್ಚರಿಗೆ (1:16)
   1. ಪಿಠೀಕೆ (1:4)
   2. ಸುಳ್ಳು ಬೋಧಕರ ಚಿತ್ರಣ (5:13)
   3. ಬರಲಿರುವ ನ್ಯಾಯತೀರ್ಪು (14:16)

ಆ. ತಾಳ್ಮೆಯಿಂದಿರುವದಕ್ಕೆ ಕರೆ (17:25)

## ಸುಳ್ಳು ಬೋಧಕರು (1:16)

**1-2** ಯೂದನು ತನ್ನನ್ನು ಯೇಸುಕ್ರಿಸ್ತನ ದಾಸನು (ರೋಮ 1:1) ಮತ್ತು ಯಾಕೋಬನ ತಮ್ಮನ್ನು ಎಂದು ಕರೆದುಕೊಳ್ಳುತ್ತಾನೆ. ಯಾಕೋಬ ಹಾಗೂ ಯೂದನು ಯೇಸುವಿನ ತಮ್ಮಂದಿರಾಗಿದ್ದರು (ಮಾರ್ಕ 6;3). ಯಾಕೋಬನು ಹೊಸ ಒಡಂಬಡಿಕೆಯ "ಯಾಕೋಬನು" ಎಂಬ ಪತ್ರಿಕೆಯನ್ನು ಬರೆದನು ಮತ್ತು ಆತನು ಯೆರೂಸಲೇಮಿನಲ್ಲಿದ್ದ ಸಭೆಯ ಮುಖ್ಯ ನಾಯಕನು ಸಹ ಆಗಿದ್ದನು (ಯಾಕೋಬ: ಪರಿಚಯ ನೋಡಿರಿ).

ಯೂದನು ಈ ಪತ್ರಿಕೆಗೆ ನೀಡಿದ ಪೀಠಿಕೆಯಿಂದ ನಾವು ತಿಳಿದುಕೊಳ್ಳಬಹುದೇನೆಂದರೆ ಯೂದನು ತನ್ನನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಲಿಲ್ಲ. ಆತನು ತನ್ನನ್ನು ಯೇಸುವಿನ ತಮ್ಮನೆಂದು ಹೇಳಿಕೊಳ್ಳುವ ಹಕ್ಕನ್ನು ಹೊಂದಿದ್ದನು ಆದರೆ ಬದಲಾಗಿ, ಆತನು ತನ್ನನ್ನು ಯೇಸುವಿನ ದಾಸನು ಎಂದು ಕರೆದುಕೊಳ್ಳುತ್ತಾನೆ; ಅಲ್ಲದೆ, ಆತನು ತನ್ನನ್ನು ಯಾಕೋಬನಿಗೆ ದಾಸನು ಎಂದು ಕರೆದುಕೊಳ್ಳುತ್ತಾನೆ. ಅಲ್ಲದೆ ಆತನು ತನ್ನನ್ನು ಯಾಕೋಬನಿಗೆ ಸರಿಸಮಾನನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಲಿಲ್ಲ; ಆತನು ಎರಡನೆಯ ಸ್ಥಾನದಲ್ಲಿ ಉಳಿಯುವದಕ್ಕೆ ತೃಪ್ತನಾಗಿದ್ದನು.

**3** ಯೂದನು ಮೂಲತಃ ಈ ಕ್ರೈಸ್ತರಿಗೆ ಬೇರೆ ವಿಧದ ಪತ್ರಿಕೆಯನ್ನು ಬರೆಯುವದಕ್ಕೆ ಸಂಕಲ್ಪ ಮಾಡಿದ್ದನು. ಆದರೆ ಬಳಿಕ, ಸುಳ್ಳು ಬೋಧಕರು ಅವರ ಸಭೆಯೊಳಗೆ ಸೇರಿದ್ದಾರೆಂದು ಕೇಳಿದ ಮೇಲೆ ಆತನು ಅವರನ್ನು ನಂಬಿಕೆಗೋಸ್ಕರ ಹೋರಾಡಬೇಕೆಂದು[1]–ಅಂದರೆ, ಸುವಾರ್ತೆಯ ಸತ್ಯ ಬೋಧನೆಯನ್ನು ಕಾಪಾಡಿಕೊಂಡು ತಮ್ಮ ನಂಬಿಕೆಯಲ್ಲಿ ದೃಢವಾಗಿ ನಿಲ್ಲುವಂತೆ ಪ್ರಬೋಧಿಸುವದಕ್ಕಾಗಿ ತಕ್ಷಣವೇ ಈ ತುರ್ತು ಪತ್ರಿಕೆಯನ್ನು ಕಳುಹಿಸುತ್ತಾನೆ. ನಂಬಿಕೆಯು –ಸುವಾರ್ತೆಯು- ಅಪೊಸ್ತಲರಿಂದ ದೇವ ಜನರಿಗೆ, ಅಂದರೆ, ವಿಶ್ವಾಸಿಗಳಿಗೆ ಒಪ್ಪಿಸಲ್ಪಟ್ಟಿತ್ತು.

**4** ಈ ವಚನವು ಪೇತ್ರನು ತನ್ನ ಎರಡನೆಯ ಪತ್ರಿಕೆಯಲ್ಲಿ ಬರೆದ ವಾಕ್ಯಭಾಗಕ್ಕೆ ಬಹಳವಾಗಿ ಹೋಲುವದಾಗಿದೆ (2 ಪೇತ್ರ 2:1-3 ಮತ್ತು ವ್ಯಾಖ್ಯಾನ ನೋಡಿರಿ).

ಒಬ್ಬ ವ್ಯಕ್ತಿಯು ಪಾಪಮಾಡಿದರೂ ಸರಿಯೇ ಅಥವಾ ಮಾಡದಿದ್ದರೂ ಸರಿಯೇ ಅದು ಗಣನೆಗೆ ಬಾರದು, ಯಾಕೆಂದರೆ ಒಬ್ಬನು ಎಷ್ಟೇ ಪಾಪ ಮಾಡಿದರೂ ದೇವರ ಕೃಪೆಯು ಆತನನ್ನು ಶುದ್ಧಮಾಡುವದಕ್ಕೆ ಸಾಕಷ್ಟಿರುತ್ತದೆ; ಆದದರಿಂದ, ಒಬ್ಬ ಕ್ರೈಸ್ತನು ತನಗೆ ಇಷ್ಟಬಂದದ್ದನ್ನು ಮಾಡಬಹುದು ಎಂದು ಈ ಸುಳ್ಳು ಬೋಧಕರು ಬೋಧಿಸುತ್ತಿದ್ದರು (ರೋಮ 6:2; 2 ಪೇತ್ರ 3:16 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಈ ಸುಳ್ಳು ಬೋಧಕರು ತಮ್ಮ ಕೆಟ್ಟ ನಡವಳಿಕೆಯ ಮೂಲಕ ಕ್ರಿಸ್ತನನ್ನು ಅಲ್ಲಗೆಳೆಯುತ್ತಿದ್ದರು. ಮನುಷ್ಯರು ತಮ್ಮ ಮಾತಿನಿಂದ ಮಾತ್ರವಲ್ಲದೆ, ತಮ್ಮ ಕೃತ್ಯದಿಂದ ಸಹ ಕ್ರಿಸ್ತನನ್ನು ನಿರಾಕರಿಸುತ್ತಾರೆ (ತೀತನು 1:16 ನೋಡಿರಿ).

**5** ಯೆಹೂದ್ಯರು ದೇವರಾದುಕೊಂಡ ವಿಶೇಷ ಜನರಾಗಿದ್ದರು. ಆತನು ಅವರನ್ನು ಐಗುಪ್ತ್ಯದ ದಾಸತ್ವದೊಳಗಿಂದ ಬಿಡಿಸಿದನು. ಆದಾಗ್ಯು ಅವರಲ್ಲಿ ಕೆಲವರು ದೇವರ ಮೇಲಣ ನಂಬಿಕೆಯನ್ನು ಬಿಟ್ಟುಬಿಟ್ಟರು. ಆದದರಿಂದ, ದೇವರು ಅವರನ್ನು ನಾಶಮಾಡಿದನು (1 ಕೊರಿಂಥ 10:1-10 ಮತ್ತು ವ್ಯಾಖ್ಯಾನ ನೋಡಿರಿ). ಇದರ ಮೂಲಕ ನಾವು ತಿಳಿದುಕೊಳ್ಳುವದೇನೆಂದರೆ, ನಾವು ಕ್ರೈಸ್ತರೆಂದು ಕರೆಯಲ್ಪಟ್ಟವರೂ ಒಂದು ಸಭೆಗೆ ಸೇರಿದವರೂ ಆಗಿದ್ದಾಗ್ಯು ನಾವು ನಂಬಿಕೆಯನ್ನು ತೊರೆಯುವದಾದರೆ ದೇವರು ನಮ್ಮನ್ನೂ ನಾಶಮಾಡುತ್ತಾನೆ (1 ಕೊರಿಂಥ 10:11-12 ನೋಡಿರಿ).

**6** ಪುರಾತನ ಕಾಲದಲ್ಲಿ ಕೆಲವು ದೇವದೂತರು ತಮ್ಮ ದೊರೆತನವನ್ನು ಹಾಗೂ ಪರಲೋಕದ ತಮ್ಮ ಸ್ವವಾಸಸ್ಥಾನವನ್ನು ಬಿಟ್ಟು ಭ್ರಷ್ಟರಾದರು, ಯಾಕೆಂದರೆ ಅವರು ಮನುಷ್ಯ ಸ್ತ್ರೀಯರನ್ನು ಮೋಹಿಸಿದ್ದರು (ಆದಿಕಾಂಡ 6:1-4), ಮತ್ತು ಅವರು ತಮ್ಮನ್ನು ದೇವರಂತೆ ಮಾಡಿಕೊಳ್ಳಲು ಉಗ್ರವಾಗಿ ಪ್ರಯತ್ನಿಸಿದ್ದರು (ಯೆಶಾಯ 14:12-15; 24:21-22). ಅದೇ ವಿಧದಲ್ಲಿ, ಯೋಹಾನನ ಕಾಲದ ಭೋಗಾಭಿಲಾಷೆಯುಳ್ಳ ಹಾಗೂ ಮೊಂಡರಾದ ಸುಳ್ಳು ಬೋಧಕರು ಸಹ ಬಿದ್ದು ಹೋಗುವರು ಮತ್ತು ಬಿದ್ದು ಹೋದ ದೇವದೂತರೊಂದಿಗೆ ಒಟ್ಟಾಗಿ ಅವರೂ ಮಹಾದಿನದಲ್ಲಿ –ಅಂದರೆ, ಕಡೇ ನ್ಯಾಯ ತೀರ್ಪಿನ ದಿನದಲ್ಲಿ-ದಂಡನೆಗೆ ಗುರಿಯಾಗುವರು (2 ಪೇತ್ರ 2:4 ಮತ್ತು ವ್ಯಾಖ್ಯಾನ ನೋಡಿರಿ).

**7** 2 ಪೇತ್ರ 2: 6ಮತ್ತು ವ್ಯಾಖ್ಯಾನ ನೋಡಿರಿ.

**8** ಈ ಸುಳ್ಳುಬೋಧಕರು ಹೊಲಸು ಕನಸುಗಳನ್ನು ಕಂಡು ಅವು ದೇವರಿಂದಲೇ ಬಂದವೆಂದು ಹೇಳಿಕೊಳ್ಳುತ್ತಿದ್ದರು. ಅವರು ತಮ್ಮ ಹೊಲಸುತನ ಹಾಗೂ ಪಾಪವನ್ನು ಸರಿಯೆಂದು ವಾದಿಸಲು ಈ ಕನಸುಗಳನ್ನು ಉಪಯೋಗಿಸಿಕೊಂಡು ಹೆಚ್ಚು ದೊಡ್ಡದಾದ ಪಾಪಗಳನ್ನು ಮಾಡುತ್ತಲಿದ್ದರು

ಈ ಸುಳ್ಳು ಬೋಧಕರು ಕ್ರಿಸ್ತನ ಹಾಗೂ ಇತರ ಸಭಾನಾಯಕರ ಅಧಿಕಾರವನ್ನು ತಿರಸ್ಕರಿಸಿದರು. ಅವರು ಮಹಾಪದವಿಯವರನ್ನು –ಪರಲೌಕೀಕ ಜೀವಿಗಳನ್ನು-ಅಂದರೆ, ದೇವದೂತರನ್ನು ದೂಷಿಸುತ್ತಾರೆ (2 ಪೇತ್ರ 2 :10 ಮತ್ತು ವ್ಯಾಖ್ಯಾನ ನೋಡಿರಿ).

**9** ದುಷ್ಟರು ಇತರರನ್ನು ದೂಷಿಸುತ್ತಾರೆ ಆದರೆ ನೀತಿವಂತರು ಹಾಗೆ ಮಾಡುವದಿಲ್ಲ. ನೀತಿವಂತರು ಕೆಟ್ಟವರನ್ನು ಸಹ ದೂಷಿಸುವದಿಲ್ಲ. ಎಲ್ಲಾ ದೇವದೂತರಲ್ಲಿ ಪ್ರಮುಖನಾದ ಮೀಕಾಯೇಲನು ಸಹ (ದಾನಿಯೇಲ 12:1; ಪ್ರಕಟಣೆ 12:7), ಸೈತಾನನ ಮೇಲೆ ದೂಷಣಾಭಿಪ್ರಾಯವನ್ನು ಹೇಳಲಿಲ್ಲ (2 ಪೇತ್ರ 2:11 ಮತ್ತು ವ್ಯಾಖ್ಯಾನ ನೋಡಿರಿ).

ಮೋಶೆಯ ಶವದ ವಿಷಯದಲ್ಲಿನ ವ್ಯಾಜ್ಯದ ಕುರಿತು ಬೈಬಲಿನಲ್ಲಿ ಬೇರೆಕಡೆಯಲ್ಲಿಯೂ ಪ್ರಸ್ತಾಪಿಸಲ್ಪಟ್ಟಿರುವದಿಲ್ಲ; ಇದು ಪ್ರತ್ಯೇಕವಾದ ಯೆಹೂದ್ಯ ಪುಸ್ತಕವೊಂದರಲ್ಲಿ ಬಣ್ಣಿಸಲ್ಪಟ್ಟಿದೆ. ಈ ಪುಸ್ತಕದ ಪ್ರಕಾರವಾಗಿ ದೇವರು ಮೋಶೆಯ ಶವವನ್ನು ಹೂಣಿಡುವದಕ್ಕಾಗಿ ಮಿಕಾಯೇಲನನ್ನು ಭೂಮಿಗೆ ಕಳುಹಿಸಿಕೊಟ್ಟನು. ಆದರೆ ಮೋಶೆಯು ಒಬ್ಬ ಮನುಷ್ಯನನ್ನು ಕೊಂದಿದ್ದನಾದ್ದರಿಂದ[2]. ಆತನ ದೇಹವು ನನಗೆ ಸೇರಿದ್ದೆಂದು ಸೈತಾನನು ಹೇಳಿದನು. ಆದರೆ ಮೀಕಾಯೇಲನು ಸೈತಾನನನ್ನು ಖಂಡಿಸಲಿಲ್ಲ; ಬದಲಾಗಿ, ಆತನು ವಿಷಯವನ್ನು ದೇವರ ಕೈಗಳಲ್ಲಿ ಬಿಟ್ಟನು. ಆತನು ಸೈತಾನನಿಗೆ "ಕರ್ತನು ನಿನ್ನನ್ನು ಖಂಡಿಸಲಿ" ಎಂದು ಹೇಳಿದನು. ಅದೇ ರೀತಿಯಾಗಿ, ನಾವು ಸಹ ನಮ್ಮ ಸ್ವಂತ ಮಾತುಗಳಿಂದಲೂ ಬಲದಿಂದಲೂ, ಸೈತಾನನೊಂದಿಗೆ ಹೋರಾಡಲು ಪ್ರಯತ್ನಿಸಬಾರದು; ಬದಲಾಗಿ, ಆತನನ್ನು ಖಂಡಿಸುವಂತೆ ನಾವು ಕರ್ತನನ್ನು ಕೇಳಿಕೊಳ್ಳಬೇಕು.

**10** ಈ ವಚನದಲ್ಲಿನ ವಿಚಾರಗಳನ್ನು ಪೇತ್ರನು ಸಹ ಬರೆದಿರುತ್ತಾನೆ (2 ಪೇತ್ರ 2:12 ಮತ್ತು ವ್ಯಾಖ್ಯಾನ ನೋಡಿರಿ). ಸುಳ್ಳು ಬೋಧಕರು ಆತ್ಮೀಕ ಮನಸ್ಸುಗಳನ್ನು ಹೊಂದಿರುವದಿಲ್ಲ. ಆದದರಿಂದ, ಅವರು ಆತ್ಮೀಕ ಸಂಗತಿಗಳನ್ನು ಅರ್ಥಮಾಡಿಕೊಳ್ಳಲಾರರು (1 ಕೊರಿಂಥ 2:14). ಅವರು ವಿವೇಕ ಶೂನ್ಯಪಶುಗಳಂತೆ ಕೇವಲ ತಮ್ಮ ದೈಹೀಕ ಅಭಿಲಾಷೆಗಳನ್ನು ನೆರವೇರಿಸಿಕೊಳ್ಳುವದನ್ನು ಮಾತ್ರವೇ ತಿಳಿದುಕೊಳ್ಳುತ್ತಾರೆಮನುಷ್ಯರು ನಿರಂತರವಾಗಿ ಪವಿತ್ರಾತ್ಮನನ್ನು ವಿರೋಧಿಸುವದಾದರೆ ಅವರು ಶೀಘ್ರವೇ ಆತ್ಮೀಕವಾಗಿ ಕುರುಡರಾಗುವರು. ಹೀಗೆ ದೇವರು ಅವರನ್ನು ಕರೆಯುವಾಗ ಅವರು ಇನ್ನೆಂದಿಗೂ ಕೇಳಿಸಿಕೊಳ್ಳಲಾಗದು; ಆದದರಿಂದ, ದೇವರು ಅವರನ್ನು ಅವರ ಪಾಪಗಳಿಗೆ ಒಪ್ಪಿಸುತ್ತಾನೆ (ರೋಮ 1:28). ಕೊನೆಯಲ್ಲಿ ಅವರ ಪಾಪಗಳೇ ಅವರನ್ನು ನಾಶಮಾಡುತ್ತವೆ.

**11** ಸುಳ್ಳು ಬೋಧಕರು ತನ್ನ ತಮ್ಮನನ್ನು ಕೊಂದ ಪ್ರೀತಿರಹಿತ ಕಾಯಿನನ ಹಾಗಿದ್ದಾರೆ (ಆದಿಕಾಂಡ 4:1-10; 1 ಯೋಹಾನ 3:12). ಅವರು ಹಣ ಪ್ರೇಮಿಯಾದ ಬೀಳಾವನ ಹಾಗಿದ್ದಾರೆ (2 ಪೇತ್ರ 2:15-16; ಪ್ರಕಟಣೆ 2:14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಅವರು ಮೋಶೆಯ ವಿರುದ್ಧ ತಿರಿಗಿ ಬಿದ್ದ ಫಲಿತವಾಗಿ ದೇವರಿಂದ ನಾಶಗೊಂಡ ಕೋರಹನಂತೆ ಇದ್ದಾರೆ (ಅರಣ್ಯಕಾಂಡ 16:1-35).

**12** ಈ ವಚನದಲ್ಲಿನ ವಿಚಾರಗಳ ಕುರಿತಾಗಿ ಸಹ ಪೇತ್ರನೂ ಬರೆದಿರುತ್ತಾನೆ (2 ಪೇತ್ರ 2:13 ಮತ್ತು ವ್ಯಾಖ್ಯಾನ ನೋಡಿರಿ). ಸುಳ್ಳು ಬೋಧಕರು ಸ್ವಂತ ಹೊಟ್ಟೆಯನ್ನೇ ನೋಡಿಕೊಳ್ಳುವ ಸ್ವಾರ್ಥ ಕುರುಬರಂತಿದ್ದಾರೆ ಅವರು ಕುರಿಗಳ ಬಗ್ಗೆ ಚಿಂತೆಯನ್ನೇ ಮಾಡುವದಿಲ್ಲ (ಯೆಹೆಜ್ಕೇಲ 34:1-10). ಅವರು ಮಳೆಯನ್ನೇ ನೀಡದ ಮೇಘಗಳ ಹಾಗಿದ್ದಾರೆ, ಅವು ಕೇವಲ ಸೂರ್ಯನ ಬೆಳಕಿಗೆ ಅಡ್ಡಿಯಾಗುತ್ತವಷ್ಟೇ (2 ಪೇತ್ರ 2:17 ಮತ್ತು ವ್ಯಾಖ್ಯಾನ ನೋಡಿರಿ). ಅವರು ಫಲಬಿಡದೆ ಒಣಗಿ ಹೋಗುತ್ತಿರುವ ಮರಗಳಂತಿದ್ದಾರೆ ಅವರು ಬೆಳೆಯುವದನ್ನು ನಿಲ್ಲಿಸಿದ್ದಾರೆ (2 ಪೇತ್ರ 1:8 ಮತ್ತು ವ್ಯಾಖ್ಯಾನ ನೋಡಿರಿ).

ಅಲ್ಲದೆ, ಅವುಗಳು ಬೇರು ಸಹಿತ ಕಿತ್ತು ಬಿದ್ದವುಗಳು ಸಹ ಆಗಿವೆ, ಹೀಗೆ ಒಂದು ಅರ್ಥದಲ್ಲಿ ಅಂಥ ಮರಗಳು ಎರಡು ಸಾರಿ ಸತ್ತವುಗಳಾಗಿವೆ (ಕೀರ್ತನೆಗಳು 52:5 ;ಮತ್ತಾಯ 3:10).

**13** ಸುಳ್ಳು ಬೋಧಕರು ಸಮುದ್ರದ ಹುಚ್ಚು ತೆರೆಗಳು ಆಗಿದ್ದಾರೆ (ಯೆಶಾಯ 57:20-21). ಅವರು ಆಕಾಶದಿಂದ ಉದುರುವ ನಕ್ಷತ್ರಗಳಂತೆ ಇದ್ದಾರೆ. ಒಂದು ಕ್ಷಣ ಅವು ಪ್ರಕಾಶವಾಗಿರುತ್ತದೆ, ಮತ್ತು ಮರುಕ್ಷಣ ಕತ್ತಲೆಯಲ್ಲಿ ಕಾಣೆಯಾಗುತ್ತವೆ.

**14-15** ಹನೋಕನು ಪ್ರಥಮ ಮಾನವನಾದ ಆದಾಮನಿಗೆ ಏಳನೆಯ ತಲೆಯವನಾಗಿದ್ದನು (ಆದಿಕಾಂಡ 5:21-24; ಇಬ್ರಿಯ 11:5). ಸ್ವತಃ ಹನೋಕನು ಕ್ರಿಸ್ತನ ಎರಡನೆಯ ಬರೋಣದ ಕುರಿತಾಗಿಯೂ ಕ್ರಿಸ್ತನು ಹೇಗೆ ತನ್ನ ಲಕ್ಷಾಂತರ ಪರಿಶುದ್ಧರನ್ನು, ಅಂದರೆ, ದೇವದೂತರನ್ನು ಕೂಡಿಕೊಂಡು ಬರುವನೆಂಬದರ ಕುರಿತಾಗಿಯೂ ಪ್ರವಾದಿಸಿದನು (ಮತ್ತಾಯ 25:31-33, 41). ಈ ವಚನಗಳಲ್ಲಿ ಯೂದನು ಹನೋಕನ ಪುಸ್ತಕ ಎಂಬ ಯೆಹೂದ್ಯರ ಪುಸ್ತಕವೊಂದರಲ್ಲಿನ ಭಾಗವನ್ನು ಉಲ್ಲೇಖಿಸುತ್ತಾನೆ.

**16** ಇಲ್ಲಿ ಪುನಃ ನಾವು ಸುಳ್ಳು ಬೋಧಕರ ಹಾಗೂ ಸುಳ್ಳು ಕ್ರೈಸ್ತರ ನಡುವಳಿಕೆಯನ್ನು ಕಾಣಬಹುದು. ಅವರು ಗುಣಗುಟ್ಟುವವರೂ ತಪ್ಪು ಹುಡುಕುವವರೂ ಆಗಿದ್ದಾರೆ (ಅರಣ್ಯಕಾಂಡ 11:1; 1 ಕೊರಿಂಥ 10; 10; ಫಿಲಿಪ್ಪಿ 2:14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಗುಣಗುಟ್ಟುವವರು ಹಾಗೂ ತಪ್ಪು ಹುಡುಕುವವರು ನಿಜವಾಗಿಯೂ ದೇವರಲ್ಲಿ ತಪ್ಪು ಹುಡುಕುವವರಾಗಿದ್ದಾರೆ. ನಾವು ಯಾವ ವಿಷಯಲ್ಲಾದರೂ ಗುಣಗುಟ್ಟುವಾಗ ದೇವರನ್ನು ಅವಮಾನಿಸುತ್ತೇವೆ, ಯಾಕೆಂದರೆ ನಮ್ಮ ಜೀವಿತಗಳಲ್ಲಿನ ಸಮಸ್ತವನ್ನು ಅಂತಿಮವಾಗಿ ಏರ್ಪಾಡು ಮಾಡುವವನು ದೇವರೇ.

ಅಂಥ ಸುಳ್ಳುಬೋಧಕರು ತಮ್ಮ ದುರಾಶೆಗಳನ್ನನುಸರಿಸಿ ನಡೆಯುತ್ತಾರೆ (2 ಪೇತ್ರ 2:18 ನೋಡಿರಿ). ಅವರು ಗರ್ವದಿಂದ ಉಬ್ಬಿದವರು; ಅವರು ತಮ್ಮ ಬಗ್ಗೆ ದೊಡ್ಡ ದೊಡ್ಡ ಮಾತುಗಳನ್ನು ಆಡುತ್ತಾರೆ, ಮತ್ತು ಅವರು ತಮಗೆ ಲಾಭವನ್ನು ಪಡೆದುಕೊಳ್ಳುವದಕ್ಕಾಗಿ ಇತರರ ಮುಖಸ್ತುತಿಮಾಡುತ್ತಾರೆ (ಯಾಕೋಬ 2:1 ಮತ್ತು ವಾಖ್ಯಾನ ನೋಡಿರಿ). ನಮ್ಮ ಸಭೆಯಲ್ಲಿ ಯಾವದೇ ಸುಳ್ಳು ಬೋಧಕರು ಇದ್ದಾರೋ? ನಮ್ಮಲ್ಲಿ ಯಾರಾದರೂ ಈ ವಚನಗಳಲ್ಲಿ ಬಣ್ಣಿಸಲಾದ ಸುಳ್ಳು ಬೋಧಕನಂತೆ ಇದ್ದಾರೋ? ಪ್ರತಿಯೊಬ್ಬ ವ್ಯಕ್ತಿಯು ತನ್ನನ್ನು ಪರೀಕ್ಷಿಸಿಕೊಳ್ಳಲಿ.

## ತಾಳ್ಮೆಯಿಂದಿರುವದಕ್ಕೆ ಕರೆ (17:25)

**17-19** ಅಪೊಸ್ತಲರು ಸುಳ್ಳು ಬೋಧಕರ ಬಗ್ಗೆ ಅನೇಕ ಎಚ್ಚರಿಕೆಗಳನ್ನು ನೀಡಿರುತ್ತಾರೆ (ಅ.ಕೃತ್ಯ 20:29- 30; 1 ತಿಮೊಥೆ 4:1-2; 2 ಪೇತ್ರ 3:3 ಮತ್ತು ವ್ಯಾಖ್ಯಾನ ನೋಡಿರಿ).

ಸುಳ್ಳು ಬೋಧಕರು ತಮ್ಮನ್ನು ಇತರರಿಗಿಂತಲೂ ಶ್ರೇಷ್ಠರೆಂದು ಪರಿಗಣಿಸಿಕೊಳ್ಳುತ್ತಿದ್ದರು. ಅವರು ಮಿಕ್ಕ ವಿಶ್ವಾಸಿಗಳಿಂದ ಪ್ರತ್ಯೇಕವಾಗಿ ಇರುತ್ತಿದ್ದರು. ಅವರು ಸಭೆಯಿಂದ ಸಭೆಗೆ ಹೋಗಿ ಕೆಲವರ ಮೇಲೆ ಸುಳ್ಳು ಕ್ರೈಸ್ತರೆಂದು ಅಪವಾದ ಹೊರಿಸಿ ಬೇಧಗಳನ್ನುಂಟು ಮಾಡಿದರು. ಆದರೆ ವಾಸ್ತವದಲ್ಲಿ, ಅವರೇ ಸುಳ್ಳು ಕ್ರೈಸ್ತರಾಗಿದ್ದರು!.

**20-21** .......ನಿಮಗಿರುವ ಅತಿಪರಿಶುದ್ಧವಾದ ಕ್ರಿಸ್ತನಂಬಿಕೆಯಲ್ಲಿ ........ಅಭಿವೃದ್ಧಿ ಹೊಂದಿರಿ. ಅಂದರೆ, ಕ್ರಿಸ್ತನ ಬೋಧನೆಗಳು ಹಾಗೂ ಸಿದ್ಧಾಂತಗಳಲ್ಲಿ ಅಭಿವೃದ್ಧಿ ಹೊಂದಿರಿ. ನಮ್ಮನ್ನು ಅಭಿವೃದ್ಧಿಪಡಿಸಿಕೊಳ್ಳಬೇಕಾದರೆ-ನಂಬಿಕೆಯಲ್ಲಿ ಬೆಳೆಯಬೇಕಾದರೆ- ನಾವು ಬೈಬಲಿನ ಬೋಧನೆಗಳನ್ನು ಅಭ್ಯಾಸಿ ಧ್ಯಾನಿಸುವದು ಅತ್ಯವಶ್ಯಕವಾಗಿರುತ್ತದೆ (ಇಬ್ರಿಯ 5:12- 14; 1 ಪೇತ್ರ 2:2 ಮತ್ತು ವ್ಯಾಖ್ಯಾನ ಗಳನ್ನು ನೋಡಿರಿ).

ಪವಿತ್ರಾತ್ಮ ಪ್ರೇರಿತರಾಗಿ ಪ್ರಾರ್ಥನೆ ಮಾಡಿರಿ (ವಚನ 20). ಕ್ರಿಸ್ತನ ಪವಿತ್ರಾತ್ಮನು ನಮ್ಮಲ್ಲಿರುವಾಗ ನಾವು ಪವಿತ್ರಾತ್ಮ ಪ್ರೇರಿತರಾಗಿ ಪ್ರಾರ್ಥಿಸುವೆವು (ರೋಮ 8:9-26; ಎಫೆಸ 6: 18 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ನಿಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಿರಿ (ರೋಮ 11:22 ಮತ್ತು ವ್ಯಾಖ್ಯಾನ ನೋಡಿರಿ). ಯೇಸು ಹೇಳಿದ್ದೇನೆಂದರೆಃ "ತಂದೆಯ ನನ್ನನ್ನು ಪ್ರೀತಿಸಿದ ಹಾಗೆಯೇ ನಾನೂ ನಿಮ್ಮನ್ನು ಪ್ರೀತಿಸಿದ್ದೇನೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರ್ರಿ. ನೀವು ನನ್ನ ಅಜ್ಞೆಗಳನ್ನು ಕೈಕೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡುವಿರಿ" (ಯೋಹಾನ 15:9 -10)

**22-23** ಸಭೆಯಲ್ಲಿ ಒಬ್ಬ ಸಹೋದರನು ತನ್ನ ನಂಬಿಕೆಯ ಕುರಿತು ಅಥವಾ ಕ್ರೈಸ್ತೀಯ ಸಿದ್ಧಾಂತಗಳ ವಿಷಯದಲ್ಲಿ ಸಂದೇಹ ಪಡುವಾಗ ನಾವು ಮೊದಲು ಆತನನ್ನು ನಯವಾಗಿಯೂ ತಾಳ್ಮೆಯಿಂದಲೂ ಪ್ರಬೋಧಿಸಿ ಅವನಿಗೆ ಸರಿಯಾದ ದಾರಿಯನ್ನು ತೋರಿಸಬೇಕು. ಆದರೆ ಆತನು ಸುಳ್ಳು ಬೋಧನೆ ಹಿಂಬಾಲಿಸುವದನ್ನು ಪ್ರಾರಂಭಿಸಿರುವದಾದರೆ ನಾವು ಆತನನ್ನು ಸತ್ಯಕ್ಕೆ ತಿರಿಗಿಸಲು ಮತ್ತಷ್ಟು ಬಲವಾಗಿ ಪ್ರಯತ್ನಿಸಬೇಕು. ಚಿಕ್ಕ ಮಗುವು ಹತ್ತಿರ ಹೋಗುವದಾದರೆ ತಕ್ಷಣವೇ ಅವನನ್ನು ಹಿಡಿದುಕೊಂಡು ಬಲವಾಗಿ ಹಿಂದಕ್ಕೆ ಎಳೆಯುತ್ತೇವೆ. ಸುಳ್ಳು ಬೋಧನೆಯನ್ನು ಹಿಂಬಾಲಿಸಲಾರಂಭಿಸುವವನು ಬೆಂಕಿಯಲ್ಲಿ ಬೀಳಲಿರುವವನಾಗಿದ್ದಾನೆ! ಅಂಥ ವ್ಯಕ್ತಿಯನ್ನು ಬೆಂಕಿಯ ಬಾಯೊಳಗಿಂದ ಎಳಕೊಳ್ಳೋಣ.

ಪಾಪದಲ್ಲಿ ಬಿದ್ದಿರುವ ಇತರರಿಗೆ ನಾವು ಭಯಯುಕ್ತರಾಗಿ ಕರುಣಿಸಬೇಕು (ವಚನ 23). ನಾವು ಸಹ ಸುಲಭವಾಗಿ ಪಾಪದಲ್ಲಿ ಬೀಳಬಹುದೆಂಬ ಭಯವನ್ನೇ ನಾವು ಹೊಂದಿರಬೇಕಾಗಿರುತ್ತದೆ. ನಮಗೆ ದೇವರ ಕೃಪೆಯಿಲ್ಲದಿದ್ದರೆ ನಮ್ಮ ಸಹೋದರನು ಬಿದ್ದಿರುವ ಪಾಪದಲ್ಲಿ ನಾವೂ ಬಿದ್ದಿರಲು ಸಾಧ್ಯವಿರುತ್ತಿತ್ತೆಂಬದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ನಾನು ಪಾಪಿಗೆ ಪ್ರೀತಿ ಹಾಗೂ ಕರುಣೆಯನ್ನು ತೋರಿಸಬೇಕು ಆದರೆ ಪಾಪವನ್ನೂ ದ್ವೇಷಿಸಬೇಕು. ನಾವು ಆತನ ಪಾಪದಿಂದ ದೂರವಿರಬೇಕು (2 ಕೊರಿಂಥ 7:1). ಒಬ್ಬ ಮನುಷ್ಯನ ಬಟ್ಟೆಗಳು ಆತನ ಪಾಪದಿಂದ ಮೈಲಿಗೆಯಾಗುವದು (ಜೆಕರ್ಯ 3:3-4). ಆದದರಿಂದ, ನಾವು ನಮ್ಮ ಬಟ್ಟೆಗಳನ್ನು "ಮೈಲಿಗೆ" ಮಾಡಿಕೊಳ್ಳದಂತೆ ಜಾಗರೂಕರಾಗಿರೋಣ (ಪ್ರಕಟಣೆ 3:4 ನೋಡಿರಿ).

**24-25** ದೇವರು ನಿಮ್ಮ ಎಡವಿಬೀಳದಂತೆ ಕಾಪಾಡುವದಕ್ಕೆ ಶಕ್ತನಾಗಿರುವನು. ದೇವರು ಶಕ್ತನಾಗಿರುವನು (ರೋಮ 16:25; ಎಫೆಸ 3:20-21 ನೋಡಿರಿ). ಆತನು ನಮ್ಮನ್ನು ತನ್ನ ಪ್ರಭಾವದ ಸಮಕ್ಷಮದಲ್ಲಿ ನಿರ್ದೋಷಿಗಳನ್ನಾಗಿ ನಿಲ್ಲಿಸುವನು. ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ನಾವು ಪಾಪದಿಂದ ಶುದ್ಧಗೊಳಿಸಲ್ಪಡುವೆವು . ನಮ್ಮ ನಿರ್ದೋಷಿಯಾದ ರಕ್ಷಕನ ಮೂಲಕ ನಾವು ಸಹ ನಮ್ಮ ಕರ್ತನಾದ ಯೇಸುಕ್ರಿಸ್ತನ ದಿನದಲ್ಲಿ ದೋಷವಿಲ್ಲದವರಾಗಿರುವೆವು (1 ಕೊರಿಂಥ 1:8-9). ಮತ್ತು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ಆಗಿರುವ ಕ್ರಿಸ್ತನ ಮೂಲಕ (ಇಬ್ರಿಯ 1:3). ದೇವರು ತಾನೇ ಮಹಿಮೆಹೊಂದುವನು. ನಮ್ಮ ರಕ್ಷಕನಾದ ಒಬ್ಬನೇ ದೇವರಿಗೆ ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ಪ್ರಭಾವ, ಮಹತ್ವ, ಅಧಿಪತ್ಯ, ಅಧಿಕಾರಗಳು ಎಲ್ಲಾ ಕಾಲಕ್ಕಿಂತ ಮೊದಲು ಇದ್ದ ಹಾಗೆ ಈಗಲೂ ಯಾವಾಗಲೂ ಇರಲಿ. ಆಮೆನ್

---

## ಟಿಪ್ಪಣಿ

[1] ಈ ಸನ್ನಿವೇಶದಲ್ಲಿ ನಂಬಿಕೆ ಎಂಬ ಪದದ ಅರ್ಥವು ಸುವಾರ್ತೆ ಅಥವಾ ಯೇಸುವಿನಿಂದಲೂ ಅಪೊಸ್ತಲರಿಂದಲೂ ಕಲಿಸಲ್ಪಟ್ಟ ಸತ್ಯ ಬೋಧನೆಗಳು ಎಂದು ಇರುತ್ತದೆ.

[2] ವಿಮೋಚನ ಕಾಂಡ 2:12ರ ಪ್ರಕಾರವಾಗಿ ಮೋಶೆಯು ಹಿಂದೊಮ್ಮೆ ಯೆಹೂದ್ಯನೊಬ್ಬನೊಂದಿಗೆ ಕೆಟ್ಟದ್ದಾಗಿ ನಡೆದುಕೊಳ್ಳುತ್ತಿದ್ದ ಒಬ್ಬ ಐಗುಪ್ತ್ಯನನ್ನು ಕೊಂದನು.

# ಪ್ರಕಟಣೆ

## ಪರಿಚಯ

ಈ ಪ್ರಕಟಣೆಯ ಪುಸ್ತಕವು ಒಬ್ಬ ಪ್ರಸಿದ್ಧ ಹಾಗೂ ಪ್ರಭಾವಶಾಲಿ ಹಿರಿಯನಾದ ಯೋಹಾನನಿಂದ ಬರೆಯಲ್ಪಟ್ಟಿತು. ಈ ಯೋಹಾನು ಯೇಸುವಿನ ಪ್ರಿಯನಾದ ಶಿಷ್ಯನೂ (ಯೋಹಾನ 13:23). ಯೋಹಾನನ ಸುವಾರ್ತೆ ಹಾಗೂ ಹೊಸ ಒಡಂಬಡಿಕೆಯ ಯೋಹಾನನ ಮೂರುಪತ್ರಿಕೆಗಳ ಬರಹಗಾರನೂ ಆಗಿದ್ದಾನೆಂದು ಬಹುಪಾಲು ಬೈಬಲ್ ಪಂಡಿತರು ನಂಬುತ್ತಾರೆ. ಪ್ರಕಟಣೆ ಪುಸ್ತಕವು ಕ್ರಿ.ಶಕ ಮೊದಲನೆಯ ಶತಮಾನದ ಅಂತ್ಯದ ವೇಳೆ ಬರೆಯಲ್ಪಟ್ಟಿತು. ಈ ಇದೇ ಪುಸ್ತಕವು ಯೋಹಾನನು ದೇವರಿಂದ ಪಡೆದುಕೊಂಡ ಪ್ರಕಟಣೆ ಅಥವಾ ದರ್ಶನದ ಅಪ್ಪಟ ಬಣ್ಣನೆಯಾಗಿದೆ. ಪ್ರಕಟಣೆಯು ಮುಖ್ಯವಾಗಿ ಲೋಕಾಂತ್ಯಕ್ಕೆ ಮುಂಚಿನ ಕಡೇ ದಿವಸಗಳ[1] ಕುರಿತಾಗಿಯೂ ಇರುತ್ತದೆ.

ಒಂದು ಅರ್ಥದಲ್ಲಿ "ಕಡೇ ದಿವಸಗಳು" ಯೋಹಾನನ ಕಾಲದಲ್ಲಿ ಪ್ರಾರಂಭವಾಗಿತ್ತು. ರೋಮಾಯ ಸಾಮ್ರಾಜ್ಯದ ಅಧಿಕಾರಿಗಳಿಂದ ಎಲ್ಲಾ ಕ್ರೈಸ್ತರ ಮೇಲೆ ಭಯಂಕರವಾದ ಹಿಂಸೆಯು ಬೀಳಲಾರಂಭಿಸಿತ್ತು. ಆದದರಿಂದ ಯೋಹಾನನು ತನ್ನ ಕಾಲದ ವಿಶ್ವಾಸಿಗಳನ್ನು ಹಿಂಸೆಯ ಮಧ್ಯದಲ್ಲಿ ದೃಢವಾಗಿ ನಿಂತುಕೊಳ್ಳುವಂತೆ ಧೈರ್ಯಪಡಿಸುವದಕ್ಕೋಸ್ಕರ ಯೋಹಾನನಿಗೆ ಪ್ರಕಟಣೆಯು ಅನುಗ್ರಹಿಸಲ್ಪಟ್ಟಿತ್ತು. ಆದರೆ ಈ ಪ್ರಕಟಣೆಯು ಪ್ರತಿಯೊಂದು ತಲೆಮಾರಿನ ವಿಶ್ವಾಸಿಗಳು ಸಹ ಸಂಕಟಗಳು ಹಾಗೂ ಸಮಸ್ಯೆಗಳ ಮಧ್ಯದಲ್ಲಿ ದೃಢವಾಗಿ ನಿಲ್ಲುವದಕ್ಕೆ ಧೈರ್ಯವನ್ನು ಹೊಂದುವಂತೆ ಅವರಿಗಾಗಿಯೂ ಕೊಡಲ್ಪಟ್ಟಿತ್ತು. ಮತ್ತು ನಾವು ಸಹ ನಮ್ಮ ತಲೆಮಾರಿನಲ್ಲಿ ಈ ಪ್ರಕಟಣೆಯನ್ನು ಅಭ್ಯಾಸಿಸುವದರ ಮೂಲಕ ಪ್ರೋತ್ಸಾಹವನ್ನು ಪಡೆದುಕೊಳ್ಳಬಹುದು.

ಹೇಗಿದ್ದರೂ, ಯೋಹಾನನ ಪ್ರಕಟಣೆಯು ಅರ್ಥದಷ್ಟು ಆತನ ಕಾಲದ ಘಟನೆಗಳನ್ನು ಸೂಚಿಸುತ್ತಾದರೂ ನಿರ್ದಿಷ್ಟವಾಗಿ ಅದು ಲೋಕಾಂತ್ಯದಲ್ಲಿ ಸಂಭವಿಸುವ ಘಟನೆಗಳನ್ನು ಸೂಚಿಸುವದಾಗಿದೆ. ಯೋಹಾನನ ಕಾಲದಲ್ಲಿ ಸಭೆಯು ಮಹಾಹಿಂಸೆಯನ್ನು ಎದುರಿಸುತ್ತಿದ್ದಂತೆಯೇ ಲೋಕಾಂತ್ಯದಲ್ಲಿನ ಅಂತಿಮ ಹೋರಾಟದಲ್ಲಿ ಸಹ ಸಭೆಯು ಮತ್ತಷ್ಟು ಹೆಚ್ಚಾಗಿ ಹಿಂಸೆಯನ್ನು ಎದುರಿಸುವದು.

ಪ್ರಕಟಣೆಯ ಪುಸ್ತಕದ ವಿವಿಧ ಬಗೆಯ ವ್ಯಾಖ್ಯಾನಗಳು ಅನೇಕವಿರುತ್ತವೆ. ಈ ವ್ಯಾಖ್ಯಾನ ಗ್ರಂಥವು ವಾಕ್ಯಭಾಗವನ್ನು ಬರೆದಿರುವದನ್ನು ಮಾತ್ರವೇ ವಿವರಿಸುವದಕ್ಕೆ ಪ್ರಯತ್ನಿಸುತ್ತದೆ. ಈ ವ್ಯಾಖ್ಯಾನ ಗ್ರಂಥವು ವಿವಾದಗ್ರಸ್ಥ ಸೂತ್ರಗಳನ್ನು ಭವಿಷ್ಯತ್ತಿನ ಕುರಿತ ಭವಿಷ್ಯ ನುಡಿಗಳನ್ನು ಹೇಳುವದರಿಂದಲೂ ದೂರವಿರುತ್ತದೆ.

## ಹೊರ ರೇಖೆ

ಅ. ಮನುಷ್ಯಕುಮಾರ ದರ್ಶನ (1:1;3:22)
   1. ಪೀಠಿಕೆ (1:1-8)
   2. ದೀಪಸ್ತಂಭಗಳ ನಡುವೆ ಮನುಷ್ಯಕುಮಾರನು (1:9-20)
   3. ಏಳು ಸಭೆಗಳಿಗೆ ಪತ್ರಿಕೆಗಳು (2:1-3:22).

ಆ. ಸುರುಳಿಗಳ, ತುತೂರಿಗಳ, ಸೂಚನೆಗಳ ಹಾಗೂ ಉಪ ದ್ರವಗಳ ದರ್ಶನ (4:1-19:10).
   1. ಏಳು ಮುದ್ರೆಯ ಸುರುಳಿ (4:1-7:17).
   2. ಏಳು ತುತ್ತೂರಿಗಳು (8:1-11:19).
   3. ಏಳು ಸೂಚನೆಗಳು (12:1-14:20).
   4. ಏಳು ಉಪದ್ರವಗಳು (15:1-19:10).

ಇ. ಕ್ರಿಸ್ತನ ತಿರಿಗಿ ಬರೋಣದ ದರ್ಶನ (19:11-20:15)
   1. ಸವಾರನು ಮತ್ತು ಮೃಗ (19:11-21).
   2. ಸೈತಾನನ ಸೆರೆ ಹಾಗೂ ಸಾವಿರ ವರ್ಷಗಳು (20:1-6)
   3. ಸೈತಾನನ ಬಿಡುಗಡೆ ಹಾಗೂ ಅಂತ್ಯಾವಸ್ಥೆ (20:7-10)
   4. ಪು ನರುತ್ಥಾನ ಹಾಗೂ ಕಡೇ ನ್ಯಾಯತೀರ್ಪು (20:11-15)

ಈ. ನೂತನ ಭೂಮ್ಯಾಕಾಶಗಳ ದರ್ಶನ (21:1-22:21)
   1. ನೂತನ ಯೆರೂಸಲೇಮ (21:1-27)
   2. ಜೀವಜಲದ ನದಿ (22; 1-6)
   3. ಮುಕ್ತಾಯ (22; 7-21)

## ಅಧ್ಯಾಯ - 1

### ಮುನ್ನುಡಿ (1:1-8)

**1-3** ಈ ಪುಸ್ತಕದಲ್ಲಿ ಬಣ್ಣಿಸಲಾಗಿರುವ ಪ್ರಕಟಣೆಯು ಯೇಸುಕ್ರಿಸ್ತನ ಪ್ರಕಟಣೆ ಆಗಿದೆ. ಬೇಗನೆ ಸಂಭವಿಸಬೇಕಾಗಿರುವ ಸಂಗತಿಗಳನ್ನು ಕ್ರೈಸ್ತರಿಗೆ ತೋರಿಸುವದಕ್ಕಾಗಿ ಯೇಸು ಯೋಹಾನನಿಗೆ ಈ ಪ್ರಕಟಣೆಯನ್ನು ನೀಡುತ್ತಾನೆ (ವಚನ 1). ಇದುವರೆಗೂ ಈ ಪ್ರಕಟಣೆಯಲ್ಲಿ ತಿಳಿಸಲಾಗಿರುವ ಬಹುಪಾಲು ಘಟನೆಗಳು ಇನ್ನೂ ಸಂಭವಿಸಿರುವದಿಲ್ಲ; ಹೇಗಿದ್ದರೂ, ಸಮಯವು ಸಮೀಪವಾಗಿದೆ (ವಚನ 3). ಈಗ ಯೋಹಾನನು ಈ ಸಂಗತಿಗಳನ್ನು ಬರೆದದಂದಿನಿಂದ ಹೆಚ್ಚುಕಡಿಮೆ ಎರಡು ಸಾವಿರ ವರ್ಷಗಳು ಕಳೆದಿವೆಯಾದ್ದರಿಂದ ಸಮಯವು ಮತ್ತಷ್ಟು ಸಮೀಪವಾಗಿದೆ (2 ಪೇತ್ರ 3:8-9 ಮತ್ತು ವ್ಯಾಖ್ಯಾನ ನೋಡಿರಿ).

ಯೋಹಾನನು ಈ ಪ್ರ ಕಟಣೆಯನ್ನು ಪ್ರವಾದನೆ ಎಂದು ಕರೆಯುತ್ತಾನೆ (ವಚನ 3) ಮತ್ತು ಇದನ್ನು ಓದುವಂಥವರೂ ಕೇಳುವಂಥವರೂ ಹಾಗೂ ಅದನ್ನು ಕೈಕೊಂಡು ನಡೆಯುವಂಥವರೂ ಧನ್ಯರಾಗುವರು ಎಂದು ಹೇಳುತ್ತಾರೆ. ದೇವರ ಎಲ್ಲಾ ಲಿಖಿತ ವಾಕ್ಯವಾದ ಬೈಬಲ್ ವಿಷಯದಲ್ಲಿಯೂ ಹೀಗೆ ಹೇಳಬಹುದು.

**4-6** ಯೋಹಾನನು ಈ ಪ್ರಕಟಣೆಯ ಪುಸ್ತಕವನ್ನು ವಿಶೇಷವಾಗಿ ರೋಮಾಯದ ಅಸ್ಯಸೀಮೆಯಲ್ಲಿನ (ಆಧುನಿಕ ಟರ್ಕಿಯಲ್ಲಿನ) ಏಳು ಸಭೆಗಳಿಗೆ ಬರೆದನು (ವಚನ 11 ನೋಡಿರಿ). ಈ ಸಭೆಗಳು ಆ ಸೀಮೆಯ ಪ್ರಮುಖ ಪಟ್ಟಣಗಳಲ್ಲಿದ್ದವು. ಈ ವಿಧದಲ್ಲಿ, ಯೋಹಾನನ ಪುಸ್ತಕವು ಆ ಸೀಮೆಯಲ್ಲಿರುವ ಇತರ ಸಭೆಗಳಿಗೆ ಸುಲಭವಾಗಿ ಹಸ್ತಾಂತರಿಸಲ್ಪಡಬಹುದಾಗಿತ್ತು. ಆದರೆ ಈ ಪುಸ್ತಕವು ಕೇವಲ ಅಸ್ಯ ಸೀಮೆಯ ಸಭೆಗಳಿಗೆ ಬರೆಯಲ್ಪಟ್ಟಿರಲಿಲ್ಲ; ಇದು ಪ್ರತಿಯೊಂದು ತಲೆಮಾರಿನಲ್ಲಿರುವ ಪ್ರತಿಯೊಂದು–ಸಭೆಗೆ ನಮ್ಮ ಸಭೆಯು ಸೇರಿದಂತೆ– ಬರೆಯಲ್ಪಟ್ಟಿತ್ತೆಂಬದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ವರ್ತಮಾನ ಭೂತ ಭವಿಷ್ಯತ್ಕಾಲಗಳಲ್ಲಿರುವಾತನಿಂದ (ದೇವರಿಂದ) ನಿಮಗೆ ಕೃಪೆಯೂ ಶಾಂತಿಯೂ ಆಗಲಿ (ವಚನ 4). ದೇವರಿಗೆ ಆದಿಯಾಗಲಿ ಅಂತ್ಯವಾಗಲಿ ಇಲ್ಲ. ಮತ್ತು ವಾಸ್ತವದಲ್ಲಿ, ಆತನು ತಿರಿಗಿ ಬರುವಾತನಾಗಿದ್ದಾನೆ. ಆದದರಿಂದ, ಲೋಕಾಂತ್ಯದಲ್ಲಿ ಅಂತಿಮ ಸಂಕಟಕಾಲವು ಬರುವಾಗ ಎಲ್ಲಾ ಘಟನೆಗಳು ಅಂತಿಮವಾಗಿ ದೇವರ ಹತೋಟಿಯಲ್ಲಿರುತ್ತವೆಂದು ಕ್ರೈಸ್ತರೆಲ್ಲರೂ ಜ್ಞಾಪಕದಲ್ಲಿಟ್ಟುಕೊಳ್ಳಲಿ. ದೇವರು ಎಲ್ಲಾ ಪರಿಸ್ಥಿತಿಗಳ ಹಾಗೂ ಸನ್ನಿವೇಶಗಳ ಒಡೆಯನಾಗಿದ್ದಾನೆ.

ಕೃಪೆಯೂ ಶಾಂತಿಯೂ ಏಳು ಆತ್ಮಗಳಿಂದ ಸಹ ಬರುತ್ತವೆ. ಈ ಏಳು ಆತ್ಮಗಳು ಯಾರೆಂಬುದು ಖಚಿತವಾಗಿರುವದಿಲ್ಲ, ಆದರೆ ಅವುಗಳು ಪವಿತ್ರಾತ್ಮನ ಏಳು ಕೋನಗಳನ್ನು ಅಥವಾ ಗುಣಶೀಲತೆಗಳನ್ನು ಪ್ರತಿನಿಧಿಸುತ್ತವೆಂದು ಅನೇಕರು ನಂಬುತ್ತಾರೆ.

ಕೃಪೆಯೂ ಶಾಂತಿಯೂ ಯೇಸುಕ್ರಿಸ್ತನಿಂದ ಸಹ ಬರುತ್ತದೆ (ವಚನ 5), ಆತನು ನಂಬತಕ್ಕ ಸಾಕ್ಷಿಯು. ದೇವರಿಗೆ ಸಾಕ್ಷಿಯಾಗಿರುವದು ಯೇಸುವಿನ ಕೆಲಸಗಳಲ್ಲಿ ಒಂದಾಗಿದೆ (ಯೋಹಾನ 3:31-34; 18:37 ನೋಡಿರಿ). ಯೇಸು ಇಲ್ಲಿ ಸತ್ತವರೊಳಗಿಂದ ಮೊದಲು ಎದ್ದು ಬಂದವನು ಎಂದು ಸಹ ಕರೆಯಲ್ಪಟ್ಟಿದ್ದಾನೆ (ಕೀರ್ತನೆಗಳು 89:27; 1 ಕೊರಿಂಥ 15:20; ಕೊಲೊಸ್ಸೆ 1:18 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಪರಲೋಕದಲ್ಲಿ ಎಲ್ಲಾ ವಿಶ್ವಾಸಿಗಳ ದೇಹಗಳಿಗೆ ಪುನರುತ್ಥಾನವಾಗುವದು ಆದರೆ ಯೇಸುವಿನ ಪುನರುತ್ಥಾನವು ಮಿಕ್ಕವರೆಲ್ಲರಿಗಿಂತ ಮೊದಲು ಆಗಿರುತ್ತದೆ; ಆದದರಿಂದ, ಆತನು "ಪ್ರಥಮ ಫಲ" ಆಗಿದ್ದಾನೆ (1 ಕೊರಿಂಥ 15:23). ಯೇಸು ಭೂರಾಜರ ಒಡೆಯನೂ ಆಗಿದ್ದಾನೆ. ಆತನು ರಾಜಾಧಿರಾಜನು (ಪ್ರಕ. 17:14). ಆತನು ಜಗತ್ತಿನ ಅತ್ಯುನ್ನತ ಒಡೆಯನಾಗಿದ್ದಾನೆ (ಫಿಲಿಪ್ಪಿ 2:9-11). ಸೈತಾನು ಯೇಸುವಿಗೆ ಪ್ರಪಂಚದ ಎಲ್ಲಾ ರಾಜ್ಯಗಳನ್ನೂ ಅವುಗಳ ವೈಭವವನ್ನೂ ಕೊಡುವದಾಗಿ ಹೇಳಿದ್ದನು (ಮತ್ತಾಯ 4:8-10). ಆದರೆ ಈಗ ಯೇಸು ತನ್ನ ವಿಧೇಯತೆ ಹಾಗೂ ಮರಣದ ಮೂಲಕ ಈ ಎಲ್ಲಾ ರಾಜ್ಯಗಳನ್ನು ಮಾತ್ರವಲ್ಲದೆ ಸೈತಾನನ ಮೇಲೆ ಅಂತಿಮ ಜಯವನ್ನು ಸಹ ಪಡೆದುಕೊಂಡಿದ್ದಾನೆ.

ಕ್ರಿಸ್ತನು ನಮ್ಮ ರಕ್ಷಕನು. ಆತನು ತನ್ನ ರಕ್ತದ ಮೂಲಕ ನಮ್ಮನ್ನು ಪಾಪಗಳಿಂದ ಬಿಡಿಸಿದ್ದಾನೆ (ಇಬ್ರಿಯ 9:14; 10:10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆತನು ನಮ್ಮನ್ನು ರಾಜ್ಯವನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದ್ದಾನೆ (ವಚನ 6). ಯೆಹೂದ್ಯ ಜನಾಂಗವು ಯಾಜಕರ ರಾಜ್ಯ ಎಂದು ಕರೆಯಲ್ಪಟ್ಟಿತ್ತು (ವಿಮೋಚನಕಾಂಡ 19:6). ಈಗ ಕ್ರಿಸ್ತನ ಸಭೆಯು ಯಾಜಕರ ರಾಜ್ಯವಾಗಿರುವದಕ್ಕೆ ಕರೆಯಲ್ಪಟ್ಟಿದೆ (1 ಪೇತ್ರ 2:5-9 ಮತ್ತು ವ್ಯಾಖ್ಯಾನ ನೋಡಿರಿ).

**7** ಕ್ರಿಸ್ತನು ಮೇಘಗಳೊಂದಿಗೆ ಬರುತ್ತಾನೆ (ದಾನಿಯೇಲ 7:13; ಮಾರ್ಕ 13:26; 14:62). ಎಲ್ಲಾ ಮನುಷ್ಯರು, ವಿಶ್ವಾಸಿಗಳೂ ಅವಿಶ್ವಾಸಿಗಳೂ ಆತನನ್ನು ನೋಡಿ ದೇವಕುಮಾರನೆಂದು ತಿಳಿದುಕೊಳ್ಳುವರು. ಅಲ್ಲದೆ ಯೇಸು ಶಿಲುಬೆಯ ಮೇಲೆ ನೇತಾಡುತ್ತಿದ್ದಾಗ ಆತನನ್ನು ಇರಿದ ರೋಮಾಯ ಸಿಪಾಯಿಗಳೂ ಆತನನ್ನು ನೋಡುವರು (ಜೆಕರ್ಯ 12:10; ಯೋಹಾನ 19; 37). ಅದು ಮಾತ್ರವಲ್ಲದೆ ಇಂದು ತಮ್ಮ ನಂಬಿಕೆಯನ್ನು ತೊರೆದು ಬಿಟ್ಟಿರುವವರು ಯೇಸುವಿಗೆ ದ್ರೋಹಮಾಡಿ ಅದರ ಪರಿಣಾಮವಾಗಿ ಆತನನ್ನು ಪುನಃ ಶಿಲುಬೆಗೆ ಹಾಕಿದವರು ಸಹ ನ್ಯಾಯತೀರ್ಪನ್ನು ಹೊಂದುವದಕ್ಕೆ

ಯೇಸುವಿನ ಮುಂದೆ ಬರುವಾಗ ಆತನನ್ನು ನೋಡುವರು (ಇಬ್ರಿಯ 6:4-6). ಆ ದಿನದಲ್ಲಿ ಭೂಮಿಯಲ್ಲಿರುವ ಎಲ್ಲಾ (ಅವಿಶ್ವಾಸಿ) ಕುಲದವರು ಆತನನ್ನು ನೋಡಿ ಎದೆಬಡುಕೊಳ್ಳುವರು ಯಾಕೆಂದರೆ ಕ್ರಿಸ್ತನು ಅವರ ಮೇಲೆ ನ್ಯಾಯತೀರ್ಪನ್ನು ತರುವನು (ಮತ್ತಾಯ 24:30 ನೋಡಿರಿ).

8 ನಾನು ಆದಿಯೂ (ಅಲ್ಫಾ) ಅಂತ್ಯವೂ (ಓಮೆಗಾ). ಗ್ರೀಕ್ ಅಕ್ಷರಮಾಲೆಗಳಲ್ಲಿ "ಅಲ್ಪಾ" ಮೊದಲನೆಯ ಪದ ಹಾಗೂ "ಓಮೆಗಾ" ಕಡೆ ಪದವಾಗಿದೆ. ದೇವರು ಇಲ್ಲಿ ತಾನು ಆದಿಯೂ ಅಂತ್ಯವೂ ಆಗಿದ್ದಾನೆ. ತಾನು ಪ್ರಾರಂಭದಿಂದ ಕಡೇವರೆಗೂ ಇರುತ್ತಾನೆಂದು ಹೇಳುತ್ತಿದ್ದಾನೆ. ದೇವರು ಸಮಸ್ತಕ್ಕೂ ಆದಿಯೂ ಸಮಸ್ತಕ್ಕೂ ಅಂತ್ಯವೂ ಆಗಿದ್ದಾನೆ. ಆದರೆ ಆತನು ಸ್ವತಃ ಆದಿ ಹಾಗೂ ಅಂತ್ಯವನ್ನು ಹೊಂದಿರುವದಿಲ್ಲ; ಆತನು ಯಾವಾಗಲೂ ಇದ್ದನು, ಮತ್ತು ಯಾವಾಗಲೂ ಇರುವನು.

## ಮನುಷ್ಯ ಕುಮಾರನ ದರ್ಶನ (1:9-20)

**9** ಯೋಹಾನನು ಕ್ರಿಸ್ತನ ನಿಮಿತ್ತ ಕ್ರೈಸ್ತ ಜೀವಿತದ ಭಾಗವಾದ ಹಿಂಸೆಯಲ್ಲಿ ಪಾಲುಗಾರನಾಗಿದ್ದನು. ಆತನು ಯೇಸುವಿನ ರಾಜ್ಯದಲ್ಲಿ ಜೊತೆ ಬಾಧ್ಯಸ್ಥನೂ ಆಗಿದ್ದನು (ರೋಮ 8:17). ಯೇಸುವಿನ ರಾಜ್ಯಕ್ಕೆ ಸೇರಿದವರೆಲ್ಲರೂ ಈ ಲೋಕದಲ್ಲಿ ಸಂಕಟವನ್ನು ಎದುರಿಸುವರು (ಯೋಹಾನ 16:33; ಅ.ಕೃತ್ಯ. 14:22). ಯೋಹಾನನು ಯೇಸುವಿನ ನಂಬಿಗಸ್ಥ ಸಾಕ್ಷಿಯಾಗಿದ್ದದ್ದಕ್ಕಾಗಿ ಪತ್ಮೋಸ್ ದ್ವೀಪದಲ್ಲಿ[2] ಸೆರೆಯಾಳಾಗಿದ್ದನು.

**10-11** ಯೋಹಾನನು ಈ ಪ್ರಕಟಣೆಯನ್ನು ಕರ್ತನ ದಿನದಲ್ಲಿ –ಅಂದರೆ ಭಾನುವಾರ [3] ದಲ್ಲಿ– ಪಡೆದುಕೊಂಡನು. ಯೋಹಾನನು ದೇವರಾತ್ಮವಶಕನಾಗಿ ಈ ಪ್ರಕಟಣೆಯನ್ನು ಹೊಂದಿದನು (ವಚನ 10). ಅಂದರೆ, ಆತನು ವಿಶೇಷ ಆತ್ಮೀಕ ಪ್ರಜ್ಞೆಯಲ್ಲಿದ್ದನು, ಆತನು ಅಂಥ ಒಂದು ಪ್ರಕಟಣೆ ಪಡೆಯುವದನ್ನು ಅದು ಸಾಧ್ಯವಾಗಿಸಿತು (ಅ.ಕೃತ್ಯ 10:10;22:17; 2 ಕೊರಿಂಥ 12:1-4 ನೋಡಿರಿ).

**12-15** ಏಳು ಚಿನ್ನದ ದೀಪಸ್ತಂಭಗಳು (ವಚನ 12), ಏಳು ಸಭೆಗಳನ್ನು ಪ್ರತಿನಿಧಿಸುತ್ತವೆ; ಅವು ಗಳಿಗೆ ಈ ಪ್ರಕಟಣೆ ಪುಸ್ತಕವು ಕಳುಹಿಸಲ್ಪಟ್ಟಿತು (ವಚನ 20ನೋಡಿರಿ). ಮನುಷ್ಯಕುಮಾರನಂತೆ ಇರುವವನು (ವಚನ 13), ಸ್ವತಃ ಯೇಸು ಕ್ರಿಸ್ತನೇ (ದಾನಿಯೇಲ 7:13). ಹಳೆ ಒಡಂಬಡಿಕೆಯ ಪ್ರವಾದಿಯಾದ ದಾನಿಯೇಲನು ಮಹಿಮಾಸ್ವರೂಪನಾದ ಕ್ರಿಸ್ತನ ಕುರಿತಾಗಿ ಇದೇ ಹೋಲಿಕೆಯ ದರ್ಶನವನ್ನು ಕಂಡಿದ್ದನು (ದಾನಿಯೇಲ 7:9-10; 5:6).

**16** ದರ್ಶನದಲ್ಲಿ, ಕ್ರಿಸ್ತನು ತನ್ನ ಬಲಗೈಯಲ್ಲಿ ಏಳು ನಕ್ಷತ್ರಗಳನ್ನು ಹಿಡಿದಿದ್ದನು ಈ ನಕ್ಷತ್ರಗಳು ಏಳು ಸಭೆಗಳ ಆತ್ಮಗಳನ್ನು ಪ್ರತಿನಿಧಿಸುತ್ತವೆ (ವಚನ 20). ಆತನ ಬಾಯೊಳಗಿಂದ ಹದವಾದ ಇಬ್ಬಾಯಿ ಕತ್ತಿಯು ಹೊರಡುತ್ತಿತ್ತು, ಅದು ಆತನ ವಾಕ್ಯವನ್ನು (ಎಫೆಸ 6:17), ವಿಶೇಷವಾಗಿ, ಆತನ ನ್ಯಾಯತೀರ್ಪಿನ ವಾಕ್ಯವನ್ನು ಪ್ರತಿನಿಧಿಸುತ್ತದೆ (ಇಬ್ರಿಯ 4:12; ಪ್ರಕಟಣೆ 2:16; 19:15-21 ನೋಡಿರಿ).

ಕ್ರಿಸ್ತನ ಮುಖವು ಸೂರ್ಯನಂತಿತ್ತು. ಯೋಹಾನನು ಮುಂಚೆ ಒಮ್ಮೆ ಮಹಿಮಾಸಸ್ವರೂಪ ಕ್ರಿಸ್ತನನ್ನು ನೋಡಿದ್ದನು; ಆ ಸಮಯದಲ್ಲಿ ಸಹ ಕ್ರಿಸ್ತನ ಮುಖವು ಸೂರ್ಯನಂತೆ ಪ್ರಕಾಶಿಸಿತ್ತು (ಮತ್ತಾಯ 17:2).

**17-18** ಯೋಹಾನನು ಕ್ರಿಸ್ತನ ಈ ದರ್ಶನವನ್ನು ಕಂಡಾಗ ಆತನು ಕ್ರಿಸ್ತನ ಪಾದಗಳ ಮುಂದೆ ಬಿದ್ದನು. ಬಳಿಕ ಕ್ರಿಸ್ತನು ಅವನಿಗೆ "ಹೆದರಬೇಡ" ಎಂದು ಹೇಳಿದನು (ದಾನಿಯೇಲ 10:10-12; ಮತ್ತಾಯ 17:6-7 ನೋಡಿರಿ). ಕ್ರಿಸ್ತನು ತರುವಾಯ ತಾನು ಮೊದಲನೆಯವೂ ಕಡೆಯವನೂ (ಅಲ್ಪಾ ಮತ್ತು ಓಮೆಗಾ), ಆಗಿದ್ದಾನೆಂದು ಹೇಳಿದನು. ಅದು ದೇವರು 8ನೇ ವಚನದಲ್ಲಿ ತನಗೆ ನೀಡಿದ ಹೆಸರಾಗಿದೆ (ಯೆಶಾಯ 44:6). ಕ್ರಿಸ್ತನು ತನ್ನಲ್ಲಿ ಮರಣದ ಮತ್ತು ಪಾತಾಳದ [4]. ಬೀಗದ ಕೈಗಳು ಅವೆ ಎಂದು ಹೇಳಿದನು; ಅಂದರೆ, ಆತನಿಗೆ ಮರಣದ ಮೇಲೆ ಸಂಪೂರ್ಣ ಅಧಿಕಾರವಿತ್ತು.

**19-20** ಯೋಹಾನನು ತಾನು ಕಂಡವು ಗಳನ್ನೂ ಮುಂದೆ ಕಾಣಲಿರುವವು ಗಳನ್ನು ಬರೆದಿಡಬೇಕೆಂದು ಕ್ರಿಸ್ತನು ಅವನಿಗೆ ಆಜ್ಞಾಪಿಸಿದನು. ನಾವು ಈ ಪ್ರಕಟಣೆಯ ಪುಸ್ತಕವನ್ನು ಅಭ್ಯಾಸಿಸುತ್ತಿರುವ ಹಾಗೆ ಯೇಸು ತಾನೇ ಯೋಹಾನನಿಗೆ ನೀಡಿದ ಪ್ರಕಟಣೆಯ ಅಪ್ಪಟ ದಾಖಲೆಯನ್ನೇ ನಾವು ಓದುತ್ತಿರುವೆವೆಂಬದನ್ನು ಮರೆಯುಬಾರದು. ಈ ಪ್ರಕಟಣೆಯ ಕೆಲಭಾಗಗಳನ್ನು ಅರ್ಥಮಾಡಿಕೊಳ್ಳುವದಕ್ಕೆ ಕಷ್ಟವಾಗಬಹುದು; ಆದರೆ, ಅದನ್ನು ಗಣನೆಗೆ ತಂದುಕೊಳ್ಳದೆ ಈ ಪ್ರಕಟಣೆಯು ಸ್ವತಃ ಕ್ರಿಸ್ತನಿಂದ ಬಂದದ್ದು, ಹಾಗೂ ನಮ್ಮ ಪ್ರಯೋಜನಾರ್ಥವಾಗಿ ಬರೆಯಲ್ಪಟ್ಟಿದೆ ಎಂಬದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ಏಳು ನಕ್ಷತ್ರ ಗಳು ಅಂದರೆ ಆ ಏಳು ಸಭೆಗಳು ದೂತರು (ವಚನ 20). ಇಲ್ಲಿ ದೂತರು ಎಂಬ ಪದವು ಪ್ರತಿಯೊಂದು ಸಭೆಯ ದೂತ ಅಥವಾ ಪ್ರತಿ ಸಭೆಯ ವಿಶೇಷ ಆತ್ಮೀಕ ವಕ್ತಾರನೆಂಬ ಅರ್ಥಕೊಡುತ್ತದೆ, ಅಂಥ ಒಬ್ಬ ದೂತ ಅಥವಾ ವಕ್ತಾರನ ಮೂಲಕ ಕ್ರಿಸ್ತನು ತನ್ನ ಪ್ರತಿಯೊಂದು ಸಭೆಯ ಸಂಗಡ ಮಾತಾಡುತ್ತಾನೆ.

ಏಳು ಸಭೆಗಳು ಏಳು ದೀಪಸ್ತಂಭಗಳೆಂದು ಕರೆಯಲ್ಪಟ್ಟಿವೆ. ಪ್ರತಿಯೊಂದು ಸಭೆಯ ಮುಖ್ಯ ಕೆಲಸವು ಜಗತ್ತಿಗೆಲ್ಲಾ ಕ್ರಿಸ್ತನ ಬೆಳಕನ್ನು ತೋರ್ಪಡಿಸುವದೇ ಆಗಿರುವದರಿಂದ ಸಭೆಗಳು ದೀಪ ಸ್ತಂಭಗಳೆಂದು ಕರೆಯಲ್ಪಟ್ಟಿವೆ. ಕ್ರಿಸ್ತನು ಲೋಕಕ್ಕೆ ದೀಪ ಅಥವಾ ಬೆಳಕಾಗಿದ್ದಾನೆ (ಯೋಹಾನ 8:12), ಮತ್ತು ನಾವು ಆತನ ಬೆಳಕಿಗೆ "ದೀಪ ಸ್ತಂಭ" ಆಗಿರುತ್ತೇವೆ (ಮತ್ತಾಯ 5:14-16 ಮತ್ತು ವ್ಯಾಖ್ಯಾನ ನೋಡಿರಿ).

## ಅಧ್ಯಾಯ - 2

### ಎಫೆಸದಲ್ಲಿರುವ ಸಭೆಗೆ (2:1-7)

1 ಇದು ಏಳು ಸಭೆಗಳಿಗೆ ಬರೆದ ಏಳು ವಯಕ್ತಿಕ ಪತ್ರಿಕೆಗಳಲ್ಲಿ ಮೊದಲನೆಯ ಪತ್ರಿಕೆಯಾಗಿದೆ–ಎಫೆಸದಲ್ಲಿರುವ್ ಸಭೆಗೆ ಬರೆದ ಪತ್ರಿಕೆ. ಈ ಪ್ರತಿಯೊಂದು ಪತ್ರಿಕೆಯ ಪ್ರಾರಂಭದಲ್ಲಿ ಕ್ರಿಸ್ತನು ತನ್ನನ್ನು ವಿಭಿನ್ನ ರೀತಿಯಲ್ಲಿ ಪರಿಚಯಿಸಿಕೊಳ್ಳುತ್ತಾನೆ. ಮತ್ತು ಪ್ರತಿಯೊಂದು ಪತ್ರಿಕೆಯ ಕೊನೆಯಲ್ಲಿ ಆತನು ಕಡೇವರೆಗೂ ತಮ್ಮ ನಂಬಿಕೆಯಲ್ಲಿ ದೃಢವಾಗಿ ನಿಲ್ಲುವವರಿಗೆ ಒಂದು ವಾಗ್ದಾನವನ್ನು ಕೊಡುತ್ತಾನೆ. ನಾವು ಏಳು ಸಭೆಗೆ ಬರೆಯಲ್ಪಟ್ಟಿರುವ ಈ ಪತ್ರಿಕೆಗಳನ್ನು ಓದುವಾಗ ಅವು ಗಳು ಕ್ರಿಸ್ತನಿಂದ ಈ ಏಳು ಸಭೆಗಳಿಗೆ ಮಾತ್ರವಲ್ಲ, ಆದರೆ ಪ್ರತಿಯೊಂದು ತಲೆಮಾರುಗಳಲ್ಲಿನ ಪ್ರತಿಯೊಂದು ಸಭೆಗೆ ಸಹ ಬರೆಯಲ್ಪಟ್ಟಿವೆಂಬದನ್ನು ನಾವು ಅರ್ಥಮಾಡಿಕೊಳ್ಳಬೇಕು. 2-3 ಅಧ್ಯಾಯಗಳಲ್ಲಿ ಪ್ರಸ್ತಾಪಿಸಲಾಗಿರುವ ಏಳು ಸಭೆಗಳು ನಮಗೆ ಉದಾಹರಣೆಗಳಾಗಿವೆ, ಮತ್ತು ಅವು ಗಳಿಗೆ ಬರೆಯಲ್ಪಟ್ಟಿರುವ ಮಾತುಗಳು ಎಲ್ಲೆಡೆಯೂ ಇರುವ ಎಲ್ಲಾ ಸಭೆಗಳಿಗೂ –ನಮ್ಮ ಸಭೆಗೂ– ಅನ್ವಯಿಸುತ್ತವೆ. ಈ ಏಳು ಪತ್ರಿಕೆಗಳು ಎಲ್ಲಾ ವಿಶ್ವಾಸಿಗಳಿಗೆ ಎಚ್ಚರಿಕೆಯನ್ನೂ ಪ್ರೋತ್ಸಾಹವನ್ನೂ ನೀಡುತ್ತವೆ.

ಕ್ರಿಸ್ತನು ಈ ಪ್ರತಿಯೊಂದು ಪತ್ರಿಕೆಗಳನ್ನು ಸಭೆಯ ದೂತನಿಗೆ ಬರೆಯುತ್ತಾನೆ (ಪ್ರಕಟಣೆ 1:20 ಮತ್ತು ವ್ಯಾಖ್ಯಾನ ನೋಡಿರಿ). ಎಫೆಸದ ಸಭೆಗೆ ಬರೆಯಲ್ಪಟ್ಟ ಈ ಪತ್ರಿಕೆಯಲ್ಲಿ ಕ್ರಿಸ್ತನು ತನ್ನನ್ನು ಏಳು ನಕ್ಷತ್ರಗಳನ್ನು ಬಲಗೈಯಲ್ಲಿ ಹಿಡುಕೊಂಡು ಏಳು ಚಿನ್ನದ ದೀಪಸ್ತಂಭಗಳ ಮಧ್ಯದಲ್ಲಿ ತಿರುಗಾಡುವಾತನು ಎಂದು ಪರಿಚಯಿಸಿಕೊಳ್ಳುತ್ತಾನೆ (ಪ್ರಕಟಣೆ 1:12-13, 16 ನೋಡಿರಿ). ಕ್ರಿಸ್ತನು ಸ್ವತಃ ಪರಲೋಕದಲ್ಲಿದ್ದರೂ ಪವಿತ್ರಾತ್ಮನ ಮುಖಾಂತರ ಆತನು ತನ್ನ ಸಭೆಗಳ ಮಧ್ಯದಲ್ಲಿ "ತಿರುಗಾಡುತ್ತಾನೆ" ಮತ್ತು ಅವು ಗಳನ್ನು ತನ್ನ ಕೈಯಲ್ಲಿ ಸುರಕ್ಷಿತವಾಗಿ ಹಿಡಿದಿರುತ್ತಾನೆ.

2-3 ಪ್ರಾರಂಭದಲ್ಲಿ ಕ್ರಿಸ್ತನು ಎಫೆಸದಲ್ಲಿನ ಸಭೆಯನ್ನು ಪ್ರಶಂಸಿಸುತ್ತಾನೆ. ಸುಳ್ಳು ಬೋಧಕರು ಸಭೆಯೊಳಗೆ ಬರುವದಕ್ಕೆ ಪ್ರಯತ್ನಿಸಿದ್ದರು, ಆದರೆ ಎಫೆಸದ ಕ್ರೈಸ್ತರು ಅವರ ಬೋಧನೆಯನ್ನು ಪರೀಕ್ಷಿಸಿ ಅದನ್ನು ತಿರಸ್ಕರಿಸಿದ್ದರು (1ಯೋಹಾನ 4:1). ಹಿಂದೊಮ್ಮೆ ಪೌಲನು ಅಂಥ ಸುಳ್ಳು ಬೋಧಕರ ವಿಷಯದಲ್ಲಿ ಎಫೆಸದ ಹಿರಿಯರನ್ನು ಎಚ್ಚರಿಸಿದ್ದನು (ಅ.ಕೃತ್ಯ 20:28-31). ಕ್ರಿಸ್ತನು ಎಫೆಸದ ವಿಶ್ವಾಸಿಗಳ ಪ್ರಯಾಸವನ್ನೂ ತಾಳ್ಮೆಯನ್ನೂ ಕುರಿತು ಪ್ರಶಂಸಿಸುತ್ತಾನೆ (ವಚನ 2); ಅವರು ಬೇಸರಗೊಳ್ಳಲಿಲ್ಲ. ಒಂದು ವೇಳೆ ಕ್ರಿಸ್ತನು ಎಫೆಸದವರ ಕುರಿತು ಇಷ್ಟನ್ನೇ ಬರೆದಿದ್ದರೆ ಅವರು ತಮ್ಮ ಬಗ್ಗೆ ಬಹಳ ಹೆಮ್ಮೆ ಪಟ್ಟುಕೊಳ್ಳುತ್ತಿದ್ದರು!.

4 ಹೇಗಿದ್ದರೂ, ಎಫೆಸದವರು ಹೆಮ್ಮೆ ಪಟ್ಟುಕೊಳ್ಳಲು ಯಾವ ಕಾರಣವೂ ಇರಲಿಲ್ಲ. ಅವರು ತಮ್ಮ ಮೊದಲ ಪ್ರೀತಿಯನ್ನು ತೊರೆದಿದ್ದರು. ಅವರು ಸತ್ಕಾರ್ಯಗಳನ್ನು ಮಾಡುವದರಲ್ಲಿ ಬಹಳ ತಲ್ಲೀನರಾಗಿ ಕ್ರಿಸ್ತನನ್ನೇ ಮರೆಯುವದಕ್ಕೆ ಪ್ರಾರಂಭಿಸಿದ್ದರು! ಅವರು ತಮ್ಮ ಕ್ರೈಸ್ತ ಜೀವಿತಗಳ ಪ್ರಾರಂಭದಲ್ಲಿ ಹೊಂದಿರುತ್ತಿದ್ದ ಮಹಾ ಪ್ರೀತಿ ಹಾಗೂ ಸಂತೋಷಗಳು ಈಗ ಅಳಿದು ಹೋಗಲಾರಂಭಿಸಿದ್ದವು. ನಾವು ಯಾವಾಗಲೂ ಮೊದಲ ಹಾಗೂ ಅತಿಶ್ರೇಷ್ಠ ಆಜ್ಞೆಯು ಇದೇ ಎಂಬದನ್ನು ಜ್ಞಾಪಕದಲ್ಲಿಟ್ಟುಕೊಳ್ಳೋಣಃ ನಿನ್ನ ದೇವರಾದ ಕರ್ತನನ್ನು ಪೂರ್ಣಹೃದಯದಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಮನಸ್ಸಿನಿಂದಲೂ ನಿನ್ನ ಪೂರ್ಣ ಬಲದಿಂದಲೂ ಪ್ರೀತಿಸಬೇಕು (ಮಾರ್ಕ 12:30). ದೇವರೆಡೆಗಿನ ಹಾಗೂ ನೆರೆಯವನೆಡೆಗಿನ ನಮ್ಮ ಪ್ರೀತಿಯು (ಮಾರ್ಕ 12:31), ತಣ್ಣಗಾಗುವದಾದರೆ ನಮ್ಮ ಉಳಿದ್ದೆಲ್ಲಾ ಕೆಲಸಗಳು ವ್ಯರ್ಥವೇ (1 ಕೊರಿಂಥ 13:1-3 ಮತ್ತು ವ್ಯಾಖ್ಯಾನ ನೋಡಿರಿ). ನಾವು ಕ್ರಿಸ್ತನನ್ನು ಮೊದಲು ನಂಬಿದಾಗ ಹೊಂದಿದ್ದ ಪ್ರೀತಿಯನ್ನು ಎಂದಿಗೂ ಮರೆಯದಿರೋಣ. ಆಗ ನಾವು ಸಂತೋಷ ಪ್ರೀತಿ ಅಭಿಮಾನ ಹಾಗೂ ಕೃತಜ್ಞತಾಭಾವಗಳಿಂದ ತುಂಬಿದ್ದೆವು. ಸೈತಾನನಿಗೆ ಸೆರೆಯಾಳಾಗಿದ್ದ ತರುವಾಯ ನಾವು ಆಗಷ್ಟೇ ಬಿಡುಗಡೆಗೊಂಡಿದ್ದೆವು. ನಾವು ನಮ್ಮ ಜೀವಿತವನ್ನೆಲ್ಲಾ ಕ್ರಿಸ್ತನಿಗೆ ಸಮರ್ಪಿಸಿದೆವು. ಸಹೋದರ ಸಹೋದರಿಯರೇ, ನಮ್ಮನ್ನು ನಾವೇ ಕೇಳಿಕೊಳ್ಳೋಣಃ ನಾವು ಮೊದಲು ಕ್ರಿಸ್ತನೊಂದಿಗೆ ಹೊಂದಿದ್ದ ಆ ಸಂತೋಷಕರ ಅನ್ಯೋನ್ಯತೆಯು ತಣ್ಣಗಾಗಿದೆಯೋ? ಎಫೆಸದವರಂತೆ ನಾವು ಸಹ ಮೊದಲ ಪ್ರೀತಿಯನ್ನು ತೊರೆದಿದ್ದೇವೋ?

5 ನಮ್ಮ ಪ್ರೀತಿಯು ತಣ್ಣಗಾಗಿರುವದಾದರೆ ಯೇಸು ನಮಗೆ ಹೀಗೆ ಹೇಳುತ್ತಾನೆಃ "ನೀನು ಎಲ್ಲಿಂದ ಬಿದ್ದಿದ್ದೀಯೋ ಅದನ್ನು ನಿನ್ನ ನೆನಪಿಗೆ ತಂದುಕೋ!" ನಮ್ಮ ಅನ್ಯೋನ್ಯತೆಯು ಎಷ್ಟೋ ಸ್ವಾರಸ್ಯಕರ ಹಾಗೂ ಆಪ್ತಮಯವಾಗಿದ್ದ ಆ ಪ್ರಾರಂಭದ ದಿನಗಳನ್ನು, ನೀನು ನಿನ್ನ ಪೂರ್ಣ ಹೃದಯದಿಂದ ನನ್ನನ್ನು ಪ್ರೀತಿಸಿದ ನೀನು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟದಿನಗಳಲ್ಲಿ ನೆನಪಿಗೆ ತಂದುಕೋ. ಪಶ್ಚಾತಾಪ ಪಟ್ಟು[6] ನೀನು ಮೊದಲು ಮಾಡುತ್ತಿದ್ದ ಕೃತ್ಯಗಳನ್ನು –ಪ್ರೀತಿಯ ಕಾರ್ಯಗಳನ್ನು– ಮಾಡು.

ನಾವು ನಮ್ಮ ಮೊದಲ ಪ್ರೀತಿಯನ್ನು ಬಿಟ್ಟು ಬಿಟ್ಟಿದ್ದೇವೆಂದು ಒಪ್ಪಿಕೊಂಡರೆ ಸಾಲದು; ನಾವು ಪುನಃ ಪ್ರೀತಿ ಕೃತ್ಯಗಳ ಮಾಡುವದನ್ನು ಪ್ರಾರಂಭಿಸಬೇಕು. ಪ್ರೀತಿಯು ಪ್ರೀತಿಯುಳ್ಳ ಕೃತ್ಯಗಳಲ್ಲಿ ವ್ಯಕ್ತವಾಗಬೇಕು; ಪ್ರೀತಿಯ ಕೃತ್ಯಗಳಿಲ್ಲದೆ ಪ್ರೀತಿಯಿರುವದಿಲ್ಲ (1 ಯೋಹಾನ 3:16-18 ಮತ್ತು ವ್ಯಾಖ್ಯಾನ ನೋಡಿರಿ). ನಾವು ಪುನಃ ನಮ್ಮ ಮೊದಲ ಪ್ರೀತಿಯ ಕೃತ್ಯಗಳನ್ನು ಮಾಡುವದಕ್ಕೆ ಪ್ರಾರಂಭಿಸದಿದ್ದರೆ ಕ್ರಿಸ್ತನು ಬಂದು ನಮ್ಮ ದೀಪಸ್ತಂಭವನ್ನು ಅದರ ಸ್ಥಳದಿಂದ ತೆಗೆದು ಹಾಕುವನು;

ಅಂದರೆ, ಆತನು ನಮ್ಮ ಸೇವೆಗೆ ಒಂದು ಅಂತ್ಯವನ್ನು ತಂದು ಸಭೆಯನ್ನು ಚದುರಿಸಿ ಬಿಡುವನು. ಯಾವ ಸಭೆಯು ತನ್ನ ಮೊದಲ ಪ್ರೀತಿಯನ್ನು ತೊರೆದುಬಿಟ್ಟಿದೆಯೋ ಆ ಸಭೆಯು ಕ್ರಿಸ್ತನಿಗೆ ನಿಷ್ಪ್ರಯೋಜವಾಗಿರುತ್ತದೆ.

6 ನಿಕೊಲಾಯಿತರು ಕ್ರೈಸ್ತರೆಂದು ನಟಿಸುತ್ತಾ ಲೋಕದ ಅನೈತೀಕ ಆಚಾರಗಳನ್ನು ಅನುಸರಿಸುತ್ತಿದ್ದ ಜನರ ಒಂದು ಪಂತವಾಗಿದ್ದರು (ವಚನ 15).

7 ಕ್ರಿಸ್ತನ ಆತ್ಮವು ಸಭೆಗಳಿಗೆ ಕೇವಲ ಒಂದು ಸಭೆಗಲ್ಲ– ಮಾತಾಡುತ್ತಿದ್ದಾನೆಂದು ಗಮನಿಸಿರಿ. ಆತನು ಎಫೆಸದಲ್ಲಿನ ಸಭೆಯೊಂದಿಗೆ ಮಾತ್ರವಲ್ಲದೆ ಇಂದು ನಮ್ಮ ಸಭೆಯೊಂದಿಗೆ ಸಹ ಮಾತಾಡುತ್ತಿದ್ದಾನೆ. ನಾವು ಸೈತಾನನನ್ನೂ ಆತನ ಶೋಧನೆಗಳನ್ನೂ ಜಯಿಸುವದಾದರೆ ನಮಗೆ ದೇವರಪರದೈಸಿನಲ್ಲಿರುವ[7] (ಪರಲೋಕದ ಯೆರೂಸಲೇಮಿನಲ್ಲಿರುವ) ಜೀವದಾಯಕ ವೃಕ್ಷದ ಹಣ್ಣನ್ನು ತಿನ್ನುವದಕ್ಕೆ ಹಕ್ಕನ್ನು ಪಡೆಯುವೆವು , ಮತ್ತು ಅದನ್ನು ತಿಂದವರಾಗಿ ನಾವು ನಿತ್ಯಜೀವವನ್ನು ಪಡೆಯುವೆವು (ಆದಿಕಾಂಡ 2:9; ಪ್ರಕಟಣೆ 21:10;22:2 ನೋಡಿರಿ).

## ಸ್ಮುರ್ನದಲ್ಲಿರುವ ಸಭೆಗೆ (2:8-11)

8 2-3 ಅಧ್ಯಾಯಗಳಲ್ಲಿ ಪ್ರಸ್ತಾಪಿಸಲಾಗಿರುವ ಏಳು ಪಟ್ಟಣಗಳಲ್ಲಿ ಸ್ಮುರ್ನ ಮಾತ್ರವೇ ಇಂದಿಗೂ ಉಳಿದಿರುತ್ತದೆ. ಇದರ ಆಧುನಿಕ ಹೆಸರು ಈಜ್ಮಿರ, ಇದು ಪು ರಾತನ ಎಫೆಸಕ್ಕೆ ಸುಮಾರು ನಾಲ್ವತ್ತು ಮೈಲುಗಳಷ್ಟು ದೂರ ಉತ್ತರದಿಕ್ಕಿನಲ್ಲಿರುವ ಪಾಶ್ಚಾತ್ಯ ಟರ್ಕಿಯಲ್ಲಿರುತ್ತದೆ. ಇತರ ಆರು ಪಟ್ಟಣಗಳು ಅಸ್ತಿತ್ವದಲ್ಲಿರುವದಿಲ್ಲ; ಅವು ಗಳ ಪಳಿಯುಳಿಕೆಗಳಷ್ಟೇ ಉಳಿಯುತ್ತವೆ.

ಇಲ್ಲಿ ಕ್ರಿಸ್ತನು ತನ್ನನ್ನು ಸತ್ತವನಾಗಿದ್ದು ಜೀವಿತನಾಗಿ ಬಂದ ಆದ್ಯಂತನು ಎಂದು ಹೇಳಿಕೊಳ್ಳುತ್ತಾನೆ (ಪ್ರಕಟಣೆ 1:17-18 ನೋಡಿರಿ).

9 ಯೋಹಾನನ ಕಾಲದಲ್ಲಿ ಸ್ಮುರ್ನದಲ್ಲಿರುವ ಸಭೆಯು ಕಠಿಣವಾದ ಸಂಕಟಗಳನ್ನು ಅನುಭವಿಸಿತ್ತು. ಆ ಪಟ್ಟಣದ ಬಹುಪಾಲು ನಿವಾಸಿಗಳು ರೋಮಾಯ ಚಕ್ರವರ್ತಿಯನ್ನು ಒಬ್ಬ ದೇವರಂತೆ ಆರಾಧಿಸುತ್ತಿದ್ದರು. ಮತ್ತು ಪಟ್ಟಣದಲ್ಲಿ ಒಂದು ಮಹಾದೇವಾಲಯವು ಆತನ ಹೆಸರಿನಲ್ಲಿ ಕಟ್ಟಲ್ಪಟ್ಟಿತ್ತು. ಕ್ರೈಸ್ತರು ಚಕ್ರವರ್ತಿಯನ್ನು ಆರಾಧಿಸಲು ನಿರಾಕರಿಸಿದ್ದರಿಂದ ಅವರು ಪಟ್ಟಣದ ನಾಯಕರಿಂದಲೂ ರೋಮಾಯ ಸಿಪಾಯಿಗಳಿಂದಲೂ ಹಿಂಸಿಸಲ್ಪಟ್ಟರು. ಕ್ರೈಸ್ತರು ಜೀವನೋಪಾಯಕ್ಕಾಗಿ ಸಂಪಾದಿಸಿಕೊಳ್ಳುವದು ಕಷ್ಟಕರವಾಗಿತ್ತು. ಅವರಅಂಗಡಿಗಳು ಹಾಗೂ ಮನೆಗಳು ಕೊಳ್ಳೆ ಹೊಡೆಯಲ್ಪಟ್ಟಿದ್ದವು (ಇಬ್ರಿಯ 10:34). ಅದರ ಫಲಿತವಾಗಿ ಅವರು ಬಡತನದಲ್ಲಿ ಬಿದ್ದಿದ್ದರು. ಹಾಗಿದ್ದರೂ, ಅವರು ಆತ್ಮೀಕವಾಗಿ ಐಶ್ವರ್ಯವಂತರೇ ಆಗಿದ್ದರು (ಮತ್ತಾಯ 6:19-20; ಯಾಕೋಬ 2:5 ನೋಡಿರಿ).

ಸ್ಮುರ್ನದ ಯೆಹೂದ್ಯರು ಸಹ ಕ್ರೈಸ್ತರನ್ನು ವಿರೋಧಿಸಿ ದೂಷಿಸುತ್ತಿದ್ದರು. ಆದರೆ ಅವರು ಸುಳ್ಳು ಯೆಹೂದ್ಯರಾಗಿದ್ದು ಸೈತಾನನ ಸಭಾಮಂದಿರಕ್ಕೆ ಸೇರಿದವರಾಗಿದ್ದರು; ಅವರು ದೂಷಣೆಗಾರನಾದ[8] ಸೈತಾನನ ಸೇವಕರಾಗಿದ್ದರು.

10 ಎಲ್ಲಕ್ಕಿಂತ ಮೇಲಾಗಿ, ಹಿಂಸೆಯನ್ನು ಸೈರಿಸಿಕೊಳ್ಳುವದಕ್ಕೆ ಸ್ಮುರ್ನದಲ್ಲಿರುವ ಸಭೆಗೆ ಪ್ರೋತ್ಸಾಹ ಹಾಗೂ ಬಲದ ಅಗತ್ಯತೆಯಿತ್ತು. ಅವರು ಕಡೇವರೆಗೂ– ಸಾಯಬೇಕಾದರೂ – ನಂಬಿಗಸ್ತರಾಗುಳಿದರೆ ಜೀವವೆಂಬ ಜಯಮಾಲೆಯನ್ನು, ಅಂದರೆ, ನಿತ್ಯಜೀವವನ್ನು ಪಡೆಯುವರು (ಮಾರ್ಕ 13:13; 1ಕೊರಿಂಥ 9:25; 1 ಪೇತ್ರ 5:4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಇಲ್ಲಿ ಪ್ರಸ್ತಾಪಿಸಲಾಗಿರುವವ ಹತ್ತುದಿವಸಗಳ ಹಿಂಸೆಯು ಲೋಕಾಂತ್ಯದಲ್ಲಿ ಎಲ್ಲಾ ಮನುಷ್ಯರ ಮೇಲೆ ಬರುವ ಹಿಂಸೆಯಲ್ಲ (ಪ್ರಕ. 3:10); ಬದಲಾಗಿ, ಇದು ಸ್ಮುರ್ನದಲ್ಲಿರುವ ಸಭೆಗೆ ಬರಲಿದ್ದ ಒಂದು ಕ್ಲುಪ್ತ ಕಾಲದ ವಿಶೇಷವಾದ ಕಠಿಣ ಹಿಂಸೆಯನ್ನು ಸೂಚಿಸುತ್ತದೆ[9].

11 ಇಲ್ಲಿ ಪ್ರಸ್ತಾಪಿಸಿರುವ ಎರಡನೆಯ ಮರಣವು ನಿತ್ಯವಾದ ಮರಣವಾಗಿದೆ; ಎಲ್ಲಾ ದುರ್ಮಾರ್ಗಿಗಳಿಗೆ ಆಗುವ ಅಂತಿಮ ಶಿಕ್ಷೆ ಇದಾಗಿದೆ. ಪ್ರಕಟಣೆ 20:14ರಲ್ಲಿ ಇದು ಬೆಂಕಿ ಗಂಧಕಉರಿಯುವ ಕೆರೆ ಎಂದು ಕರೆಯಲ್ಪಟ್ಟಿದೆ.

## ಪೆರ್ಗಮದಲ್ಲಿರುವ ಸಭೆಗೆ (2:12-17)

12 ಪೆರ್ಗಮವು ರೋಮಾಯದ ಅಸ್ಯಸೀಮೆಯ ರಾಜಧಾನಿಯಾಗಿತ್ತು ಹೀಗೆ ಇದು ರೋಮಾಯ ದೇಶಾಧಿಪತಿಯ ನಿವಾಸಸ್ಥಾನವಾಗಿತ್ತು. ದೇಶಾಧಿಪತಿಗೆ ಜನರನ್ನು ಮರಣದಂಡನೆಗೆ ಗುರಿಮಾಡುವ ಅಧಿಕಾರವಿತ್ತು; ಅಂದರೆ, ಆತನು "ಕತ್ತಿಯ ಶಕ್ತಿಯನ್ನು" ಹೊಂದಿದ್ದನು. ಆದರೆ ಕ್ರಿಸ್ತನು ಇಲ್ಲಿ ತಾನು ದೇಶಾಧಿಪತಿಗಿರುವ ಕತ್ತಿಗಿಂತಲೂ ಶಕ್ತಿಯುತವಾದ ಕತ್ತಿಯನ್ನು ಹೊಂದಿದ್ದಾನೆಂದು ಪೆರ್ಗಮದಲ್ಲಿರುವ ಸಭೆಗೆ ಜ್ಞಾಪಕಪಡಿಸುತ್ತಾನೆಃ ಕ್ರಿಸ್ತನು ಹದವಾದ ಇಬ್ಬಾಯಿಕತ್ತಿಯನ್ನು ಹೊಂದಿದ್ದಾನೆ)ಪ್ರಕ. 1:16 ನೋಡಿರಿ). ಆತನಿಗೆ ಮರಣ ಜೀವಗಳ ಮೇಲೆ ಅಂತಿಮ ಅಧಿಕಾರವನ್ನು ಹೊಂದಿದ್ದಾನೆ. ಕ್ರಿಸ್ತನು ಜನರನ್ನು ನಿತ್ಯವಾದ ಮರಣಕ್ಕೆ ಗುರಿಮಾಡುವ ಅಧಿಕಾರವನ್ನು ಮಾತ್ರವೇ ಹೊಂದಿಲ್ಲ ಅವರಿಗೆ ನಿತ್ಯಜೀವವನ್ನು ಕೊಡವದಕ್ಕೂ ಆತನಿಗೆ ಅಧಿಕಾರವಿರುತ್ತದೆ.

13 ಆ ಸೀಮೆಯ ರಾಜಧಾನಿಯಾಗಿದ್ದ ಪೆರ್ಗಮವು ರೋಮಾಯ ಚಕ್ರವರ್ತಿಯ ಅಧಿಕಾರದ ಕೇಂದ್ರ ಸ್ಥಾನವಾಗಿತ್ತು. ಆದದರಿಂದ, ಕ್ರಿಸ್ತನು ಇಲ್ಲಿ ಪೆರ್ಗಮವು ಸೈತಾನನ ಸಿಂಹಾಸನವಿರುವ –ಚಕ್ರವರ್ತಿ(ಹಾಗೂ ಆತನ ದೇಶಾಧಿಪತಿ) ಅಧಿಕಾರದಲ್ಲಿ ಕುಳಿತ– ಸ್ಥಳವಾಗಿದೆ ಎಂದು ಹೇಳುತ್ತಾನೆ. ಯೋಹಾನನ ಕಾಲದಲ್ಲಿ, ಕ್ರೈಸ್ತರು ರೋಮಾಯ ಚಕ್ರವರ್ತಿಯನ್ನೂ ಆತನ

ದೇಶಾಧಿಪತಿಗಳನ್ನೂ ಸೈತಾನನ ಪ್ರತಿನಿಧಿಗಳೆಂದು ಪರಿಗಣಿಸುತ್ತಿದ್ದರು. ಅಂತಿಫನ ಬಗ್ಗೆ ಬೈಬಲಿನಲ್ಲಿ ಬೇರೆ ಇನ್ನಾವ ಕಡೆಯಲ್ಲಿಯೂ ಪ್ರಸ್ತಾಪಿಸಲ್ಪಟ್ಟಿರುವದಿಲ್ಲ. ಇತನು ಪೆರ್ಗಮದ ನಾಗರಿಕನಾಗಿದ್ದು ಕ್ರಿಸ್ತನಲ್ಲಿನ ತನ್ನ ನಂಬಿಕೆಯ ನಿಮಿತ್ತವಾಗಿ ಕೊಲ್ಲಲ್ಪಟ್ಟಿದ್ದನು. ಕ್ರಿಸ್ತನು ಇಲ್ಲಿ ಅಂತಿಪನಿಗೆ ತಾನು ಪ್ರಕಟಣೆ 1:5ರಲ್ಲಿ ತನಗೆ ನೀಡಿಕೊಂಡ ಹೆಸರನ್ನೇ ನೀಡುತ್ತಾನೆ– ಅದೇನೆಂದರೆ ನಂಬಿಗಸ್ಥ ಸಾಕ್ಷಿ.

**14** ಪೆರ್ಗಮದಲ್ಲಿರುವ ಸಭೆಯನ್ನು ಹೊಗಳಿದ ಬಳಿಕ ಕ್ರಿಸ್ತನು ಈಗ ಅವರ ದೋಷಗಳನ್ನು ಎತ್ತಿ ತೋರಿಸುತ್ತಾನೆ. ಅವರು ಬಿಳಾಮನ ಸುಳ್ಳು ಬೋಧನೆಯನ್ನು ಸಹಿಸಿಕೊಂಡಿದ್ದಾರೆ ಅವರು ಈ ಬೋಧನೆಯನ್ನು ತಮ್ಮ ಸಭೆಯೊಳಗೆ ಬರುವದಕ್ಕೆ ಅನುಮತಿಸಿದ್ದಾರೆ. ಬೀಳಾಮನು ಹಳೆ ಒಡಂಬಡಿಕೆಯ ಪ್ರವಾದಿಯಾಗಿದ್ದು ಇಸ್ರಾಯೇಲರನ್ನು (ಯೆಹೂದ್ಯರನ್ನು), ವಿರೋಧಿಸುವಕ್ಕೆ ಮೋವಾಬ್ಯ ಅರಸನಾದ ಬಾಲಾಕನಿಗೆ ಸಹಾಯ ಮಾಡಿದನು. ಬಿಳಾಮನು ಯೆಹೂದ್ಯರನ್ನು ಬಲಹೀನಗೊಳಿಸುವದಕ್ಕೆ ಅನುಸರಿಸಿದ ವಿಧಾನವು ಅವರನ್ನು ಪಾಪದಲ್ಲಿ ಮುಗ್ಗರಿಸಿಬೀಳುವಂತೆ ಮಾಡುವದಾಗಿತ್ತು. ಇಸ್ರಾಯೇಲರನ್ನು ವಿಗ್ರಹಕ್ಕೆ ನೈವೇದ್ಯಮಾಡಿದ ಪದಾರ್ಥವೆಂದು ಜಾರುತ್ವಮಾಡುವಂತೆ ಮಾಡುವದಕ್ಕಾಗಿ ತನ್ನ ರಾಜ್ಯದ ಹೆಂಗಸರನ್ನು ಉಪಯೋಗಿಸಬೇಕೆಂದು ಬಾಲಾಕನಿಗೆ ಬಿಳಾಮನು ಸಲಹೆ ನೀಡಿದನು (ಅರಣ್ಯ ಕಾಂಡ 25:1-3; 31:15-16). ಆದದರಿಂದ, ಜನರನ್ನು ದೇವರಿಗೆ ಅವಿಧೇಯರಾಗುವಂತೆಯೂ ಸುಳ್ಳು ದೇವರುಗಳನ್ನು ಹಾಗೂ ಲೋಕದ ಕಾಮಾಭಿಷೆಗಳನ್ನು ಅನುಸರಿಸುವಂತೆಯೂ ನಡಿಸುವ ಯಾವದೇ ಬೋಧನೆಯು ಬಿಳಾಮನ ಬೋಧನೆ ಆಗಿರುತ್ತದೆಂದು ನಾವು ಅರ್ಥಮಾಡಿಕೊಳ್ಳಬೇಕು.

**15** ನಿಕೊಲಾಯಿತರ ಬೋಧನೆಯು ಬಿಳಾಮನ ಬೋಧನೆಯನ್ನು ಹೋಲುವದಾಗಿತ್ತು (ವಚನ 7 ನೋಡಿರಿ).

**16** ಕ್ರಿಸ್ತನು ಅಂಥ ಸುಳ್ಳು ಬೋಧನೆಗಳನ್ನೆಲ್ಲಾ ನನ್ನ ಬಾಯಿ ಕತ್ತಿಯಿಂದ ವಿರೋದಿಸುವನೆಂದು ಹೇಳುತ್ತಾನೆ (ಪ್ರಕಟಣೆ 1:16 ಮತ್ತು ವ್ಯಾಖ್ಯಾನ ನೋಡಿರಿ). ಸುಳ್ಳು ಬೋಧಕರು ಅಂತಿಮ ನ್ಯಾಯತೀರ್ಪಿನ ದಿನದಲ್ಲಿ ಮಾತ್ರವಲ್ಲದೆ ಈ ಜೀವಿತದಲ್ಲಿ ಸಹ ದಂಡನೆಯನ್ನು ಹೊಂದುವರು.

ಪೆರ್ಗಮದಲ್ಲಿರುವ ಸಭೆಯ ಕೆಲವು ಸದಸ್ಯರಷ್ಟೇ ಅಂಥ ಸುಳ್ಳು ಬೋಧನೆಯನ್ನು ಹಿಂಬಾಲಿಸಿದಾಗ್ಯು ಅವರೆಲ್ಲರೂ ಅಪರಾಧಕ್ಕೊಳಗಾಗಿದ್ದರು, ಯಾಕೆಂದರೆ ಅವರು ಸುಳ್ಳು ಬೋಧಕರನ್ನು ತಮ್ಮ ಮಧ್ಯದೊಳಗಿಂದ ಬಹಿಷ್ಕರಿಸಿರಲಿಲ್ಲ; ಅವರು ಆ ಬೋಧಕರನ್ನು ಸಹಿಸಿಕೊಂಡಿದ್ದರು. ಹೀಗೆ ಅವರು ಅಶುದ್ಧತೆಯೂ ತಮ್ಮ ಸಭೆಯಲ್ಲಿ ಬೇರೂರುವಂತೆ ಅನುಮತಿಸಿದ್ದರು. ಅವರ ಪಾಪವು ಎಫೆಸದಲ್ಲಿರುವ ಸಭೆಯ ಪಾಪಕ್ಕೆ ತದ್ವಿರುದ್ಧವಾಗಿತ್ತು. ಒಂದು ಕಡೆಯಲ್ಲಿ ಎಫೆಸದ ಕ್ರೈಸ್ತರು ಸುಳ್ಳು ಬೋಧನೆಯನ್ನು ಸಹಿಸಿಕೊಂಡಿರಲಿಲ್ಲ ಅವರು ಬಹಳ ಕಟ್ಟುನಿಟ್ಟಿನವರೂ ಪವಿತ್ರರೂ ಆಗಿದ್ದರು. ಆದರೆ ಅವರು ತಮ್ಮ ಪ್ರೀತಿಯನ್ನು ಕಳೆದುಕೊಂಡಿರಲಿಲ್ಲ; ಅವರು ತಮ್ಮ ಪವಿತ್ರತೆಯನ್ನು ಕಳೆದುಕೊಂಡಿದ್ದರು. ಈ ಏಳು ಪತ್ರಿಕೆಗಳನ್ನು ಓದುವದರ ಮೂಲಕ ಪ್ರತಿಯೊಂದು ಸಭೆಯೂ ತನ್ನದೇ ಆದ ಬಲಗಳನ್ನು ಹಾಗೂ ಬಲಹೀನತೆಗಳನ್ನು ಹೊಂದಿವೆ ಎಂಬದನ್ನು ನಾವು ಕಾಣಬಹುದು. ನಮ್ಮ ಸ್ವಂತ ಸಭೆಯ ಬಗ್ಗೆ ಆಲೋಚಿಸೋಣಃ ಅದರ ವಿಶೇಷ ಬಲಗಳು ಹಾಗೂ ಬಲಹೀನತೆಗಳು ಯಾವು ವು? ಕ್ರಿಸ್ತನು ಇಂದು ನಮ್ಮ ಸಭೆಗೆ ಏನು ಬರೆಯುವನು?

**17** ಯಾವನು ಜಯಹೊಂದುತ್ತಾನೋ ಅವನಿಗೆ ಕ್ರಿಸ್ತನು ಬಚ್ಚಿಟ್ಟಿರುವ ಮನ್ನ[13]– ಅಂದರೆ, ಆತ್ಮೀಕ "ರೊಟ್ಟಿ" ಯನ್ನುಕೊಡುವನು (ಯೋಹಾನ 6:48-51 ಮತ್ತು ವ್ಯಾಖ್ಯಾನ ನೋಡಿರಿ). ನಾವು ಇಹಲೋಕದಲ್ಲಿ ವಿಗ್ರಹಗಳ ಆಹಾರ ಪದಾರ್ಥಗಳನ್ನು ಬಿಟ್ಟುಬಿಡುವದಾದರೆ ಪರಲೋಕದಲ್ಲಿ ಕ್ರಿಸ್ತನ ಆಹಾರವನ್ನು ತಿನ್ನುವದಕ್ಕೆ ಪಡೆಯುವೆವು.

ಇಲ್ಲಿ ಪ್ರಸ್ತಾಪಿಸಲಾಗಿರುವ ಬಿಳೀಕಲ್ಲು ಹಳೆ ಒಡಂಬಡಿಕೆಯ ಪದ್ಧತಿಯೊಂದನ್ನು ಸೂಚಿಸುತ್ತದೆ ಅದರ ಪ್ರಕಾರವಾಗಿ ಔತಣಕ್ಕೆ ಅಥವಾ ಆಚರಣೆಗೆ ಆಮಂತ್ರಿಸಲ್ಪಟ್ಟವರಿಗೆ ಒಂದು ಬಿಳೀ ಕಲ್ಲನ್ನು ಕೊಡಲಾಗುತ್ತಿತ್ತು; ಆ ಕಲ್ಲು ಅವರ ಆಮಂತ್ರಣಕ್ಕೆ ಒಂದು ಗುರುತು ಅಥವಾ ಸಾಕ್ಷಿ ಆಗಿರುತ್ತಿತ್ತು. ಆದದರಿಂದ, ಇಲ್ಲಿ ಕ್ರಿಸ್ತನ ತಾತ್ಪರ್ಯವೇನೆಂದರೆ ತಮ್ಮ ಹೆಸರು ಬರೆಯಲ್ಪಟ್ಟ ಬಿಳೀ ಕಲ್ಲನ್ನು ಪಡೆಯುವವರು ಪರಲೋಕದಲ್ಲಿನ ಬಚ್ಚಿಟ್ಟಿರುವ ಮನ್ನದ ಔತಣಕ್ಕೆ ಆಮಂತ್ರಿಸಲ್ಪಟ್ಟವರಾಗಿದ್ದಾರೆ ಎಂಬದೇ.

## ಥುವತ್ತೈರದಲ್ಲಿರುವ ಸಭೆಗೆ (2:18-29)

**18-19** ಥುವತ್ತೈರವು ಸಮೃದ್ಧಿಯುಳ್ಳ ವ್ಯಾಪಾರ ಕೇಂದ್ರವಾಗಿತ್ತು (ಅ.ಕೃತ್ಯ 16:14). ಥುವತ್ತೈರದಲ್ಲಿನ ಪರಿಸ್ಥಿತಿಯು ಈ ಕೆಳಗಿನಂತಿತ್ತುಃ ಪ್ರತಿಯೊಂದು ವಿಧದ ವ್ಯಾಪಾರಕ್ಕೆ ತನ್ನದೆ ಆಗಿರುವ ವಿಶೇಷವಾದ ದೇವರಿತ್ತು ಒಂದು ನಿರ್ದಿಷ್ಟವಾದ ವ್ಯಾಪಾರದಲ್ಲಿ ಯಶಸ್ಸನ್ನು ಪಡೆಯುವದಕ್ಕಾಗಿ ಒಬ್ಬನು ಆ ವ್ಯಾಪಾರದ ದೇವರನ್ನು ಆರಾಧಿಸಬೇಕಾಗಿತ್ತು. ಹೀಗೆ ಈ ದೇವರುಗಳನ್ನು ಆರಾಧಿಸಬೇಕೆಂಬ ಬಹಳ ಒತ್ತಡವು ಥುವತ್ತೈರದ ಕ್ರೈಸ್ತ ವ್ಯಾಪಾರಸ್ಥ ಮೇಲೆ ಇತ್ತು. ಅವರು ದೊಡ್ಡ ಶೋಧನೆಯನ್ನು ಎದುರಿಸುತ್ತಿದ್ದರು. ಅವರು ಈ ದೇವರುಗಳನ್ನು ಆರಾಧಿಸಲು ನಿರಾಕರಿಸುವದಾದರೆ ಪಟ್ಟಣದಲ್ಲಿರುವ ಇತರರು ಅವರನ್ನು ಶೋಷಣೆಗೆ ಗುರಿಮಾಡುವರು ಮತ್ತು ಇದರ ಫಲಿತವಾಗಿ ಅವರು ಹೆಚ್ಚು ವ್ಯಾಪರವನ್ನು ಕಳೆದುಕೊಳ್ಳಬೇಕಾಗುವದು.

ಯೇಸು ಇಲ್ಲಿ ತನ್ನನ್ನು ಪ್ರಕಟಣೆ 1:14-15ರಲ್ಲಿ ನೀಡಲಾದ ಚಿತ್ರಣಕ್ಕನುಸಾರವಾಗಿ ಪರಿಚಯಿಸಿಕೊಳ್ಳುತ್ತಾನೆ. ಮತ್ತು ಆತನು ಇತರ ಪತ್ರಿಕೆಗಳಲ್ಲಿರುವಂತೆಯೇ ಥುವತ್ತೈರದ ವಿಶ್ವಾಸಿಗಳನ್ನು ಪ್ರಶಂಸಿಸುತ್ತಾನೆ.

**20** ಆದರೆ ಯೇಸು ಅವರ ತಪ್ಪನ್ನು ಎತ್ತಿತೋರಿಸುತ್ತಾನೆಃ ಅವರು ಯೆಜೆಬೇಲೆಂಬ ಆ ಹೆಂಗಸನ್ನು ತಡೆಯದೆ ಬಿಟ್ಟಿದ್ದರು. ಬಹುಶಃ ಯೆಜೆಬೇಲಳು ಅವರ ಸಭೆಯ ಪ್ರಮುಖ ಸ್ತ್ರೀಯಾಗಿದ್ದಿರುವ ಸಾಧ್ಯತೆಯಿದೆ[11]. ಆ ಕಾಲದಲ್ಲಿ ರೋಮಾಯ ದೇವಾಲಯಗಳು ವೇಶ್ಯೆಯರಿಂದ ತುಂಬಿರುತ್ತಿದ್ದವು ; ಆದದರಿಂದ, ಥುವತ್ತೈರದ ಪು ರುಷರು ಆರಾಧನೆಗಾಗಿ ದೇವಾಲಯಕ್ಕೆ ಹೋಗುವಾಗಲೆಲ್ಲಾ ಅಲ್ಲಿರುವ ವೇಶ್ಯೆಯರೊಂದಿಗೆ ಜಾರುತ್ವಮಾಡಿ ಆ ದೇವಾಲಯದ ವಿಗ್ರಹದ ಘಟನೆತೆಗಾಗಿ ಏರ್ಪಡಿಸಲಾದ ಔತಣದಲ್ಲಿ ಪಾಲ್ಗೊಳ್ಳುತ್ತಿದ್ದರು. ವಿಗ್ರಹಗಳು ಏನೂ ಅಲ್ಲವಾದ್ದರಿಂದ ಅವರ ದೇವಾಲಯಗಳಲ್ಲಿ ಪೂಜೆಮಾಡುವದರಲ್ಲಿ ಯಾವ ತಪ್ಪಿಲ್ಲ; ಬೇರೆಮಾತುಗಳಲ್ಲಿ ಹೇಳುವದಾದರೆ, "ಏನೂಅಲ್ಲದ್ದನ್ನು" ಆರಾಧಿಸುವದರಲ್ಲಿ ಯಾವ ಪಾಪವೂ ಇರಲಾರದು ಎಂಬದಾಗಿ ಯೆಜೆಬೇಲಳು ಬೋಧಿಸಿರಬಹುದು (1 ಕೊರಿಂಥ 6:12-13; 15, 8:4-7).

**21-23** ಯೆಜೆಬೇಲಳು ಪಶ್ಚಾತಾಪ ಪಡಲು ನಿರಾಕರಿಸಿದ್ದರಿಂದ ಅವಳು ಸಂಕಟದ ಹಾಸಿಗೆಯಲ್ಲಿ ಬೀಳಿಸಲ್ಪಡುವಳು (ವಚನ 22). ಆದರೆ ಆಕೆಯ ಹಿಂಬಾಲಕರಿಗೆ ಪಶ್ಚಾತ್ತಾಪಪಡುವದಕ್ಕೆ ಇನ್ನೂ ಸಮಯವಿರುತ್ತದೆ. ಪಶ್ಚಾತ್ತಾಪಪಡದವರು ರೋಗ ಮತ್ತು ಮರಣಗಳಿಂದ ಬಾಧಿಸಲ್ಪಡುವರು. ದೇವರು ಹಲವಾರು ವೇಳೆಗಳಲ್ಲಿ ಪಾಪಕ್ಕೆ ಶಿಕ್ಷೆಯಾಗಿ ನಾನಾ ಬಗೆಯ ರೋಗಗಳನ್ನು ಅಥವಾ ಮರಣವನ್ನು ಜನರ ಮೇಲೆ ಬರಮಾಡುತ್ತಾನೆ (ಕೀರ್ತನೆಗಳು 62; 12; ಯೆರೆಮೀಯ 17:10; ಮತ್ತಾಯ 16:27; ರೋಮ 2:6 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**24-25** ಯೆಜೆಬೇಲಳನ್ನು ಹಾಗೂ ಅಗಾಧಬೋಧೆಯೆಂದು ಹೇಳಿಸಿಕೊಂಡಿರುವ ಸೈತಾನನ ಬೋಧನೆಯನ್ನು ಹಿಂಬಾಲಿಸಿದವರಿಗೆ (ವಚನ 24), ಕ್ರಿಸ್ತನು ಪ್ರೋತ್ಸಾಹವನ್ನೂ ಸವಾಲನ್ನು ನೀಡುತ್ತಾನೆಃ ನಿಮಗಿರುವದನ್ನು ನಾನು ಬರುವ ತನಕ ಬಿಗಿಯಾಗಿ ಹಿಡುಕೊಂಡಿರಬೇಕಷ್ಟೇ (1 ತಿಮೊಥೆ 6:13-14; 20; 2 ತಿಮೊಥೆ 1:13-14 ನೋಡಿರಿ). ಕ್ರಿಸ್ತನು ಥುವತ್ತೈರದ ಕ್ರೈಸ್ತರಿಗೆ ಒಂದನ್ನು ಹೊರತು ಮತ್ತೊಂದು ಭಾರವನ್ನು ಅಥವಾ ಆಜ್ಞೆಯನ್ನು ನೀಡುವದಿಲ್ಲಃ ಇದು ಮಾತ್ರವೇ, ಏನೆಂದರೆ, ಯೆಜೆಬೇಲಳ ಜಾರುತ್ವ ಹಾಗೂ ವಿಗ್ರಹಾರಾಧನೆಗಳಿಂದ ಪ್ರತ್ಯೇಕವಾಗಿ ಉಳಿದುಕೊಳ್ಳಿರಿ (ಅ.ಕೃತ್ಯ 15:28-29 ನೋಡಿರಿ).

**26-27** ಜಯಶಾಲಿಯು ಕ್ರಿಸ್ತನ ಚಿತ್ತವನ್ನು ಕಡೇವರೆಗೂ ನಡಿಸುವವನೇ. ಕ್ರಿಸ್ತನು ಅವನಿಗೆ ಜನಾಂಗಗಳ ಮೇಲೆ ಅಧಿಕಾರವನ್ನು ಕೊಡುವನು (ಕೀರ್ತನೆಗಳು 2:8-9; ಮತ್ತಾಯ 19:28 ನೋಡಿರಿ).

**28-29** ಇಲ್ಲಿ ಪ್ರಸ್ತಾಪಿಸಲಾಗಿರುವ ಉದಯ ಸೂಚಕ ನಕ್ಷತ್ರದ ಅರ್ಥವು ಅನಿಶ್ಚಿತವಾಗಿದೆ. ಪ್ರಕಟಣೆ 22:16 ರ ಪ್ರಕಾರವಾಗಿ ಉದಯ ನಕ್ಷತ್ರವು ಸ್ವತಃ ಕ್ರಿಸ್ತನೇ. ಇಲ್ಲಿರುವದು ಅದೇ ಅರ್ಥವಾಗಿದ್ದರೆ ಈ ವಚನವು ಹೀಗೆ ಹೇಳುತ್ತದೆಃ "ಉದಯನಕ್ಷತ್ರವನ್ನು" ಸ್ವೀಕರಿಸುವವರು ಕ್ರಿಸ್ತನನ್ನು ಸ್ವೀಕರಿಸುತ್ತಾರೆ; ಅಂದರೆ, ಅವರು ಪೂರ್ಣ ಪ್ರಮಾಣದಲ್ಲಿ ಆತನ ಅನ್ಯೋನ್ಯತೆ, ಆತನ ಪ್ರೀತಿ, ಹಾಗೂ ಆತನ ಆತ್ಮನನ್ನು ಪಡೆಯುತ್ತಾರೆ.

---

## ಅಧ್ಯಾಯ - 3

### ಸಾರ್ದಿಸಿನಲ್ಲಿರುವ ಸಭೆಗೆ (3:1-6)

**1** ಕ್ರಿಸ್ತನು ಇಲ್ಲಿ ತನ್ನನ್ನು ಏಳು ಆತ್ಮಗಳನ್ನೂ ಏಳು ನಕ್ಷತ್ರಗಳನ್ನೂ ಹಿಡಿದಾತನು ಎಂದು ಹೇಳಿಕೊಳ್ಳುತ್ತಾನೆ (ಪ್ರಕಟಣೆ 1:4, 16,20 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಈ ಏಳು ಸಭೆಯೊಳಗೆ ಕ್ರಿಸ್ತನು ಸಾರ್ದಿಸಿನ ಸಭೆಯ ವಿರುದ್ಧ ಮಾಡಿದ ಅಪವಾದನೆಯು ಅತಿ ಕಠಿಣವಾಗಿರುತ್ತದೆ; ಕ್ರಿಸ್ತನು ಹೇಳುವದೇನೆಂದರೆಃ ನೀನು ಸತ್ತವನಾಗಿದ್ದಿ.

ಸಾರ್ದಿಸಿನಲ್ಲಿರುವ ಕ್ರೈಸ್ತರಿಗೆ ಏನು ಸಂಭವಿಸಿತ್ತು? ಅವರು ಕಠಿಣವಾದ ಸಂಕಟಗಳನ್ನು ಹಿಂಸೆಯನ್ನು ಹೊಂದಿರಲಿಲ್ಲ. ಅವರು ಸುಳ್ಳುಬೋಧನೆಗಳನ್ನು ಹಿಂಬಾಲಿಸಿರಲಿಲ್ಲ. ಅವರು ಆತ್ಮೀಕವಾಗಿ ಜೀವಂತವಾಗಿರುವಂತೆ ಕಂಡರು– ಆದರೆ ವಾಸ್ತವದಲ್ಲಿ, ಅವರು ಆತ್ಮೀಕವಾಗಿ ಸತ್ತವರಾಗಿದ್ದರು. ಜರುಗಿದ್ದು ಏನೆಂದರೆಃ ಸಭೆಯು ಬಹಳಷ್ಟು ಮಟ್ಟಿಗೆ ಸುತ್ತಲಿನ ಸಮಾಜದಂತೆ ಆಗಿ ಹೋಗಿ ಕ್ರೈಸ್ತರು ಯಾರು ಹಾಗೂ ಯಾರು ಕ್ರೈಸ್ತ್ಯೇತರೆಂಬದನ್ನೇ ಗುರುತಿಸುವದು ಕಷ್ಟಕರವಾಗಿತ್ತು. ಕ್ರೈಸ್ತರು ಕ್ರಿಸ್ತನ ಕುರಿತು ಸಾಕ್ಷಿ ನೀಡುವದರಲ್ಲಿ ಮಂಕಾಗಿದ್ದರು. ಅವರು ತಮ್ಮ ಕ್ರೈಸ್ತ್ಯೇತರ ನೆರೆಯವರಿಗಿಂತ ವ್ಯತ್ಯಾಸವಾಗಿರುವದಕ್ಕೆ ಪ್ರಯತ್ನಿಸಲಿಲ್ಲ; ಅವರು ಜನರ ಪದ್ಧತಿಗಳನ್ನೂ ಸಂಪ್ರಾದಯಗಳನ್ನೂ ವಿರೋಧಿಸಲು ಇಷ್ಟಪಡುವದಿಲ್ಲ. ಆದದರಿಂದ ಅವರ ಸಭೆಯು ಸುತ್ತಲಿನ ಸಮುದಾಯದೊಂದಿಗೆ ಸಮಾಧಾನದಲ್ಲಿತ್ತು. ಹಿಂಸೆಯು ಇರಲಿಲ್ಲ– ಮತ್ತು ಜೀವವೂ ಇರಲಿಲ್ಲ! ಈ ಲೋಕದಲ್ಲಿ ಅವರು ಸಂತುಷ್ಟರಾಗಿದ್ದರು; ಅವರು ತಮಗೆ ಬೇಕಾದದ್ದೆಲ್ಲವನ್ನೂ ಹೊಂದಿದ್ದರು. ಆದರೆ ಅವರ ಆತ್ಮಗಳು ಬಲಹೀನಗೊಂಡಿದ್ದವು –ಸತ್ತವರಿಗೆ ಸಮವಾಗಿದ್ದವು (ಕೀರ್ತನೆಗಳು 106:15).

**2-3** ಆದರೆ ಸಾರ್ದಿಸಿನಲ್ಲಿದ್ದ ಕ್ರೈಸ್ತರು ಸಂಪೂರ್ಣವಾಗಿ ಸತ್ತಿರಲಿಲ್ಲ. ಅವರ ಜೀವಿತಗಳು ಬರಿದಾಗಿದ್ದವು, ಮತ್ತು ಅವರ ಕೃತ್ಯಗಳು ಸಂಪೂರ್ಣವಾಗಿ ಇರಲಿಲ್ಲ; ಕ್ರಿಸ್ತನು ಅಂಥ ಕ್ರೈಸ್ತರಲ್ಲಿ ಸಂತೋಷವು ಳ್ಳವನಾಗಿರಲಿಲ್ಲ. ಹಾಗಿದ್ದರೂ ಅವರಲ್ಲಿ ಇನ್ನೂ ಸ್ವಲ್ಪ ಆತ್ಮೀಕ ಜೀವ ಉಳಿದಿತ್ತು. ಆದದರಿಂದ, ಯೇಸು ಅವರಿಗೆ, "ಎಚ್ಚರವಾಗು" ಎಂದು ಹೇಳುತ್ತಾನೆ (ಎಫೆಸ 5:14 ನೋಡಿರಿ). ಅವರು ಎಚ್ಚೆತ್ತುಕೊಂಡು ಜಾಗರೂಕರಾಗದಿದ್ದರೆ ಸೈತಾನನು ಅವರನ್ನು ಸಂಪೂರ್ಣವಾಗಿ

ನುಂಗಿಬಿಡುವನು (1 ಪೇತ್ರ 5:8). ಆದದರಿಂದ, ಅವರು ಸಾಯುವ ಹಾಗಿದ್ದ ಉಳಿದವುಗಳನ್ನು ದೃಢಪಡಿಸಿಕೊಳ್ಳಲಿ– ಅಂದರೆ, ಅವರು ತಮ್ಮ ಆತ್ಮೀಕ ಜೀವಿತದ ಉಳಿದವುಗಳನ್ನು ದೃಡಪಡಿಸಿಕೊಳ್ಳಲಿ. ಇಲ್ಲವಾದರೆ ಯೇಸು ನಿರೀಕ್ಷಿಸದ ಸಮಯದಲ್ಲಿ ಕಳ್ಳನು ಬರುವಂತೆ ಬರುವನು, ಮತ್ತು ಅವರ ಮೇಲೆ ನ್ಯಾಯತೀರ್ಪನ್ನು ತರುವನು. ಯೇಸು ಇಲ್ಲಿ ಲೋಕಾಂತ್ಯದಲ್ಲಿ ಸಂಭವಿಸುವ ಅಂತಿಮ ನ್ಯಾಯತೀರ್ಪನ್ನು ಮಾತ್ರವೇ ಸೂಚಿಸುತ್ತಿಲ್ಲ (ಮತ್ತಾಯ 24:42-44; 1 ಥೆಸಲೋನಿಕ 5:2). ಆದರೆ ಆತನು ಈ ಜೀವಿತದಲ್ಲಿ ಜನರ ಮೇಲೆ ಬರಮಾಡುವ ನ್ಯಾಯತೀರ್ಪನ್ನು ಸಹ ಸೂಚಿಸುತ್ತಿದ್ದಾನೆ (ಪ್ರಕ. 2:16 ನೋಡಿರಿ).

**4** ಪ್ರತಿಯೊಂದು ಸಭೆಯಲ್ಲಿಯೂ ನಿಜಕ್ರೈಸ್ತರು ಹಾಗೂ ಸುಳ್ಳು ಕ್ರೈಸ್ತರು ಇದ್ದಾರೆ (ಮತ್ತಾಯ 13:24-30; 2 ತಿಮೊಥೆ 2:20-21 ನೋಡಿರಿ). ಸಾರ್ದಿಸಿನಲ್ಲಿರುವ ಸಭೆಯಲ್ಲಿ ಸ್ವಲ್ಪಜನ ನಿಜವಾದ ಕ್ರೈಸ್ತರಿದ್ದರು– ಅಂದರೆ, ಅತಿ ಸ್ವಲ್ಪ ಜನರು ತಮ್ಮನ್ನು ಲೋಕದ ಮಾರ್ಗಗಳಿಂದ ದೂರವಿಟ್ಟುಕೊಂಡಿದ್ದರು. ಲೋಕದ ಪದ್ಧತಿಗಳನ್ನೂ ಅಭಿಲಾಷೆಗಳನ್ನೂ ಹಿಂಬಾಲಿಸುವವರು ತಮ್ಮ ವಸ್ತ್ರಗಳನ್ನು ಮೈಲಿಗೆ ಮಾಡಿಕೊಂಡಿದ್ದಾರೆ (ಯೂದನು 23). ಆದರೆ ತಮ್ಮನ್ನು ಲೋಕದ ಮಲಿನತ್ವದಿಂದ ಕಾಪಾಡಿಕೊಳ್ಳುವ ನಿಜವಾದ ವಿಶ್ವಾಸಿಗಳಿಗೆ ಧರಿಸಿಕೊಳ್ಳುವದಕ್ಕೆ ಶುಭ್ರ ವಸ್ತ್ರಗಳನ್ನು ಕೊಡಲಾಗುವದು, ಮತ್ತು ಅವರು ಯೇಸುವಿನ ಜೊತೆಯಲ್ಲಿ ನಡೆಯುವರು ಶುಭ್ರ (ಬಿಳಿ) ಬಣ್ಣವು ನೀತಿ ಹಾಗೂ ಪವಿತ್ರತೆಗೆ ಸಂಕೇತವಾಗಿದೆ.

**5-6** ಈ ಪ್ರತಿಯೊಂದು ಏಳು ಪತ್ರಿಕೆಗಳಲ್ಲಿ ಯೇಸು ಜಯಶಾಲಿಗೆ ಒಂದು ವಾಗ್ದಾನವನ್ನು ಕೊಡುತ್ತಾನೆ. ಜಯಶಾಲಿಗಳಾಗುವವರು ಕಡೇವರಗೂ ನಂಬಿಕೆಯಲ್ಲಿ ದೃಢವಾಗಿ ನಿಲ್ಲುವವರೇ ಆಗಿದ್ದಾರೆ. ಈ ಪತ್ರಿಕೆಯ ಪ್ರಕಾರವಾಗಿ ಅವರು ಶುಭ್ರ ವಸ್ತ್ರಗಳನ್ನು ಧರಿಸಿಕೊಳ್ಳುವರು. ಅವರ ಹೆಸರು ಜೀವಬಾಧ್ಯರ ಪುಸ್ತದಿಂದ ಅಳಿಸಲ್ಪಡುವದೇ ಇಲ್ಲ (ವಚನ 5). ಜೀವ ಬಾಧ್ಯರ ಪುಸ್ತಕದಲ್ಲಿಯೇ ನಿತ್ಯಜೀವಕ್ಕೆ ಬಾಧ್ಯರಾಗುವವರೆಲ್ಲರ ಹೆಸರುಗಳು ಬರೆಯಲ್ಪಟ್ಟಿರುತ್ತವೆ (ಲೂಕ 10:20; ಪ್ರಕ. 20:12-15; 21:27 ನೋಡಿರಿ). ಇದರ ಮೂಲಕ ನಾವು ನಂಬಿಕೆಯಲ್ಲಿ ದೃಢವಾಗಿ ನೆಲೆಗೊಳ್ಳದವರ ಹೆಸರುಗಳು ಅಳಿಸಲ್ಪಡುವವೆಂದು ತಿಳಿದುಕೊಳ್ಳಬಹುದು. ಜಯಶಾಲಿಗಳಾಗುವವರ ಹೆಸರುಗಳನ್ನು ಕ್ರಿಸ್ತನು ತಂದೆಯ ಮುಂದೆ ಒಪ್ಪಿಕೊಳ್ಳುವನು (ಮತ್ತಾಯ 10:32-33 ನೋಡಿರಿ). ಕ್ರಿಸ್ತನು ದೇವರ ಮುಂಭಾಗದಲ್ಲಿ ನಮ್ಮ ವಕ್ತಾರನು, ನಮ್ಮ ವಕೀಲನು ಆಗಿರುತ್ತಾನೆ (ರೋಮ 8:34; ಇಬ್ರಿಯ 7:25). ಆದದರಿಂದ, ನಾವು ಚಂಚಲಗೊಳ್ಳದೆ ಆತನಲ್ಲಿ ನಂಬಿಕೆಯನ್ನು ಇಡೋಣ.

## ಫಿಲದೆಲ್ಫಿಯದಲ್ಲಿರುವ ಸಭೆಗೆ (3:7-13)

**7** ಕ್ರಿಸ್ತನು ದಾವೀದನ ಬೀಗದ ಕೈಯುಳ್ಳವನು; ಅಂದರೆ, ಜನರನ್ನು ದೇವರರಾಜ್ಯದೊಳಗೆ (ಅರಸನಾದ ದಾವೀದನ ಆತ್ಮೀಕ ರಾಜ್ಯದಲ್ಲಿ) ಸೇರಿಕೊಳ್ಳುವ ಅಧಿಕಾರ ಕ್ರಿಸ್ತನಿಗಿರುತ್ತದೆ; ಮತ್ತು ಜನರನ್ನು ಹೊರಗೆ ಇಡುವದಕ್ಕೆ ಆತನಿಗೆ ಅಧಿಕಾರವಿದೆ (ಯೆಶಾಯ 22:22).

**8** ಕ್ರಿಸ್ತನು ಫಿಲದೆಲ್ಫಿಯದಲ್ಲಿರುವ ಸಭೆಯ ಎದುರಿಗೆ ಒಂದು ಬಾಗಿಲನ್ನು ತೆರೆದಿಟ್ಟಿದ್ದಾನೆ. ಇಲ್ಲಿ "ಬಾಗಿಲು" ಎಂಬ ಪದಕ್ಕೆ ಎರಡು ಅರ್ಥಗಳಿರಬಲ್ಲದುಃ ಮೊದಲನೆಯದಾಗಿ, ಪರಲೋಕದ ಬಾಗಿಲು; ಅಥವಾ ಎರಡನೆಯದಾಗಿ, ಕ್ರಿಸ್ತನ ಸೇವೆಗಾಗಿ ಇರುವ ಅವಕಾಶದ ಬಾಗಿಲು; ನಾವು ಕ್ರಿಸ್ತನ ಸೇವೆಯನ್ನು ಮಾಡುವಾಗ ಆತನು ನಮಗೆ ಕೆಲವು ಬಾಗಿಲುಗಳನ್ನು ತೆರೆಯುವನು ಹಾಗೂ ಇತರ ಬಾಗಿಲಗಳನ್ನು ಮುಚ್ಚುವನು. ಕ್ರಿಸ್ತನು ಮುಚ್ಚಿದ ಬಾಗಿಲುಗಳ ಮೂಲಕ ನಾವು ಹಾದುಹೋಗಲು ಪ್ರಯತ್ನಿಸಬಾರದು, ಮತ್ತು ಅವುಗಳನ್ನು ನಮ್ಮ ವಿರುದ್ಧವಾಗಿ ಯಾವನೂ –ಸೈತಾನನು ಸಹ– ಮುಚ್ಚಲಾರನು. ನಾವು ಆ ತೆರೆದ ಬಾಗಿಲುಗಳನ್ನು ಪ್ರವೇಶಿಸುವದಕ್ಕೆ ಯಾವಾಗಲೂ ಸಿದ್ಧರಾಗಿರೋಣ (ಅ.ಕೃತ್ಯ 16:6-10; 1 ಕೊರಿಂಥ 16:8; 2 ಕೊರಿಂಥ 2:12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**9** ಯೆಹೂದ್ಯರು ಯಾವಾಗಲೂ ಕ್ರೈಸ್ತರಿಗಾಗಿ ಬಾಗಿಲುಗಳನ್ನು ಮುಚ್ಚುವದಕ್ಕೆ ಪ್ರಯತ್ನಿಸುತ್ತಿದ್ದರು. ಯೆಹೂದ್ಯರು ತಾವು ಮಾತ್ರವೇ ನಿಜವಾಗಿಯೂ ದೇವರ ಮಕ್ಕಳೆಂದು ಪರಿಗಣಿಸಿದ್ದರು. ಆದರೆ ಅವರು ದೇವರ ಮಗನಾದ ಯೇಸುವನ್ನು ತಿರಸ್ಕರಿಸಿ ಆತನಲ್ಲಿ ನಂಬಿಕೆಯಿಟ್ಟವರನ್ನೆಲ್ಲಾ ನಿಂದಿಸಿ ವಿರೋಧಿಸಿದ್ದರಿಂದ ಅವರು ದೇವರ ಮಕ್ಕಳಾಗಿರುವ ಹಕ್ಕನ್ನು ಕಳೆದುಕೊಂಡಿದ್ದರು. ಅಂಥ ಯೆಹೂದ್ಯರು ನಿಜವಾದ ಯೆಹೂದ್ಯರಾಗಿರಲಿಲ್ಲ. ಅವರು ಸುಳ್ಳುಗಾರರಾಗಿದ್ದರು (ರೋಮ 2:28-29). ಮತ್ತು ಸುಳ್ಳುಗಳ ತಂದೆಯಾದ ಸೈತಾನನು ಅವರ ತಂದೆಯಾಗಿದ್ದನು (ಯೋಹಾನ 8:44; ಪ್ರಕಟಣೆ 2:9). ಅಂತ್ಯದಲ್ಲಿ ಈ ಯೆಹೂದ್ಯರು ತಾವು ತಿರಸ್ಕಾರ ಮಾಡಿದ ಕ್ರೈಸ್ತರು ನಿಜವಾಗಿಯೂ ದೇವರ ಪ್ರಿಯವಾದ ಮಕ್ಕಳು ಎಂಬದನ್ನು ಒಪ್ಪಿಕೊಳ್ಳುವಂತೆ ಒತ್ತಾಯಿಸಲ್ಪಡುವರು.

**10** ಫಿಲದೆಲ್ಫಿಯದಲ್ಲಿನ ಕ್ರೈಸ್ತರು ಯೇಸುವಿನ ಸಹನಾ ವಾಕ್ಯವನ್ನು (ಆಜ್ಞೆಯನ್ನು) ಕಾಪಾಡಿದ್ದರಿಂದ ಆತನು ಅವರಿಗೆ ಈ ವಾಗ್ದಾನವನ್ನು ಕೊಡುತ್ತಾನೆಃ ನಾನು ಸಹ ಶೋಧನೆಯ ಸಮಯದಲ್ಲಿ ನಿನ್ನನ್ನು ತಪ್ಪಿಸಿಕಾಪಾಡುವೆನು. ಇಲ್ಲಿ ಯೇಸುವಿನ ತಾತ್ಪರ್ಯವನ್ನು ಅರ್ಥಮಾಡಿಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ. ಕ್ರೈಸ್ತರ ಮೇಲೆ ಕಷ್ಟಗಳು ಹಾಗೂ ಸಮಸ್ಯೆಗಳು ಬರುವದಿಲ್ಲ, ಎಂಬುದು ಆತನ ತಾತ್ಪರ್ಯವಲ್ಲ. ಬದಲಾಗಿ, ಆತನು ಕ್ರೈಸ್ತರ ಆತ್ಮಗಳನ್ನು ಕಾಪಾಡಿ ಸಂರಕ್ಷಿಸುವನು; ಅಂದರೆ, ಆತನು ಅವರನ್ನು ಸೈತಾನನಿಂದ ರಕ್ಷಿಸುವನೆಂಬುದು ಆತನ ತಾತ್ಪರ್ಯವಾಗಿರುತ್ತದೆ (ಯೋಹಾನ 17:15 ನೋಡಿರಿ).

ಇಲ್ಲಿ ಪ್ರಸ್ತಾಪಿಸಲಾಗಿರುವ ಶೋಧನೆಯ ಸಮಯವು ಕ್ರಿಸ್ತನು ತಿರಿಗಿ ಬರುವ ಸ್ವಲ್ಪ ಮುಂಚೆ ಲೋಕದ ಮೇಲೆಲ್ಲಾ ಬರುವಂತ ಘೋರ ಉಪದ್ರವದ ಅವಧಿಯಾಗಿರುತ್ತದೆ. ಈ ಅಂತಿಮ ಸಂಕಟಗಳು ಇನ್ನೂ ಪ್ರಾರಂಭವಾಗಿಲ್ಲ (ದಾನಿಯೇಲ 12:1; ಪ್ರಕ. 13:5-10). ಈ ಅಂತಿಮ ಸಂಕಟಗಳು ಈಗ ನಾವು ಅನುಭವಿಸುತ್ತಿರುವ ಸಂಕಟಗಳಿಗಿಂತ ವ್ಯತ್ಯಾಸವಾಗಿರುತ್ತವೆ. ನಮ್ಮ ಪ್ರಸ್ತುತ ಸಂಕಟಗಳು ನಮ್ಮ ನಂಬಿಕೆಯು ಪರಿಶೋಧಿಸಲ್ಪಟ್ಟು ಬಲಗೊಳ್ಳುವದಕ್ಕೋಸ್ಕರ ನಮಗೆ ಬಂದಿರುತ್ತವೆ (1 ಪೇತ್ರ 1:6-7; 4:12-13; ಪ್ರಕ. 2:10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆದರೆ ಲೋಕಾಂತ್ಯದಲ್ಲಿ ಅಂತಿಮ ಸಂಕಟಗಳು ಮನುಷ್ಯರ ಮೇಲೆ ನ್ಯಾಯತೀರ್ಪಾಗಿ ಬರುವವು. ಈ ಅಂತಿಮ ಸಂಕಟಗಳು ಸಹ ಎಷ್ಟೋ ಹೆಚ್ಚು ಭಯಂಕರವಾಗಿರುವವು (ಮಾರ್ಕ 13:19). ಕ್ರೈಸ್ತರ ಆತ್ಮಗಳು ಈ ಸಂಕಟಗಳಿಂದ ಸಂರಕ್ಷಿಸಲ್ಪಡುವವು [12]

**11** ಇಲ್ಲಿ ಯೇಸು ಫಿಲದೆಲ್ಫಿಯದಲ್ಲಿನ ಸಭೆಗೆ ತಾನು ಸ್ಮುರ್ನ ಹಾಗೂ ಥುವತ್ತೈರಗಳಲ್ಲಿನ ಸಭೆಗಳಿಗೆ ಹೇಳಿದ್ದನ್ನೇ ಹೇಳುತ್ತಾನೆ (ಪ್ರಕ. 2:10-25 ಮತ್ತು ವ್ಯಾಖ್ಯಾನ ನೋಡಿರಿ). ನಾವು ನಮ್ಮ ನಂಬಿಕೆಯನ್ನು ಹಿಡಿದುಕೊಂಡಿರಲು ಅಶಕ್ತರಾಗುವೆವು ಸೈತಾನನು ಅದನ್ನು ನಮ್ಮಿಂದ ಅಪಹರಿಸುವನು.

**12-13** ಸೈತಾನನನ್ನು ಜಯಿಸುವವನು ದೇವರ ಪರಲೋಕದ ಆಲಯದಲ್ಲಿ ಸ್ತಂಭ ಆಗುವನು ಅದು ಎಂದಿಗೂ ನಾಶಪಡಿಸಲಾಗದ ಆಲಯವಾಗಿದೆ. ಸ್ವತಃ ದೇವರು ಹಾಗೂ ಕ್ರಿಸ್ತನು ಈ ಆಲಯವಾಗಿರುತ್ತಾರೆ (ಪ್ರಕ. 21:22). ಆದದರಿಂದ, ಜಯಹೊಂದುವವರು ಸದಾಕಾಲವೂ ದೇವರೊಂದಿಗೆ ಹಾಗೂ ಕ್ರಿಸ್ತನೊಂದಿಗೆ ವಾಸಿಸುವರು. ದೇವರ ಹೆಸರು ಅವರ ಮೇಲೆ ಬರೆಯಲ್ಪಡುವದು ಅವರು ದೇವರ ಸ್ವಕೀಯ ಜನರಾಗುವರು (1 ಪೇತ್ರ 2:9 ನೋಡಿರಿ). ದೇವರ ಪಟ್ಟಣವಾದ ಹೊಸ ಯೆರೂಸಲೇಮು ಎಂಬ ಹೆಸರು ಸಹ ಅವರ ಮೇಲೆ ಬರೆಯಲ್ಪಡುವದು (ಪ್ರಕ. 21:2). ಅಂದರೆ, ಅವರು ದೇವರ ರಾಜ್ಯದ ಪ್ರಜೆಗಳಾಗಿರುವರು. ಮತ್ತು ಕ್ರಿಸ್ತನು ತನ್ನ ಹೊಸ ಹೆಸರನ್ನು ಅವರ ಮೇಲೆ ಬರೆಯುವನು, ಯಾಕೆಂದರೆ ಜಯಹೊಂದಿದ್ದವರು ಕ್ರಿಸ್ತನಿಗೆ ಸೇರಿದ್ದಾರೆ; ಅವರು ಆತನ ಸಹೋದರರು ಹಾಗೂ ಜೊತೆ ಬಾಧ್ಯರೂ ಆಗಿರುತ್ತಾರೆ (ರೋಮ 8:17-19). ಆದದರಿಂದ, ಅವರು ಆತನ ಹೆಸರನ್ನು ಪಡೆಯುವದಕ್ಕೆ ಯೋಗ್ಯರು.

## ಲವೊದಿಕೀಯದಲ್ಲಿರುವ ಸಭೆಗೆ (3:14-22)

**14** ಲವೋದಿಕೀಯದಲ್ಲಿರುವ ಸಭೆಯು ಪೌಲನು ಎಫೆಸದಲ್ಲಿ ವಾಸಿಸಿದ್ದ ಅವಧಿಯಲ್ಲಿ ಸ್ಥಾಪಿಸಲ್ಪಟ್ಟಿತ್ತು (ಅ.ಕೃತ್ಯ 19:10). ಎಪಫ್ರನೆಂಬ ಲವೊದಿಕೀಯದ ವ್ಯಕ್ತಿಯು ಎಫೆಸದಲ್ಲಿ ಪೌಲನಿಂದ ಸುವಾರ್ತೆಯನ್ನು ಕೇಳಿದ ಬಳಿಕ ಹಿಂದಿರುಗಿ ಹೋಗಿ ಲವೊದಿಕೀಯದಲ್ಲಿ ಸಭೆಯನ್ನು ಸ್ಥಾಪಿಸಿದನೆಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ (ಕೊಲೊಸ್ಸೆ 4:12). ಪೌಲನು ಲವೊದಿಕೀಯದ ಸಭೆಗೆ ಪತ್ರಿಕೆಯೊಂದನ್ನು ಬರೆದನು. ಆದರೆ ಆ ಪತ್ರಿಕೆಯು ಕಳೆದುಹೋಗಿರುತ್ತದೆ (ಕೊಲೊಸ್ಸೆ 4:16).

ಕ್ರಿಸ್ತನು ಇಲ್ಲಿ ತನ್ನನ್ನು ಆಮೆನ್ ಎಂದು ಕರೆದುಕೊಳ್ಳುತ್ತಾನೆ. ಹಳೆ ಒಡಂಬಡಿಕೆಯಲ್ಲಿ "ಆಮೆನ್" ಎಂಬ ಪದಕ್ಕೆ "ಹೌದು ಅದು ಸತ್ಯ" ಎಂಬ ಅರ್ಥವಿದೆ. ಇಲ್ಲಿ ಕ್ರಿಸ್ತನು "ಆಮೆನ್" ಎಂಬುದಕ್ಕೆ ತನ್ನದೆ ಆಗಿರುವ ಅರ್ಥವೊಂದನ್ನು ನೀಡುತ್ತಾನೆಃ ನಂಬತಕ್ಕ ಸತ್ಯಸಾಕ್ಷಿ.

**15-16** ಈ ಎರಡು ವಚನಗಳಲ್ಲಿ ಕ್ರಿಸ್ತನು ಎಲ್ಲಾ ಸಭೆಗಳಿಗೆ ಒಂದು ಭಯಾನಕ ಎಚ್ಚರಿಕೆಯನ್ನು ಕೊಡುತ್ತಾನೆಃ "ಉಗುರು ಬೆಚ್ಚಗೆ ಇರಬೇಡಿರಿ, ಇಲ್ಲವಾದರೆ ನಾನು ನಿನ್ನನ್ನು ನನ್ನ ಬಾಯೊಳಗಿಂದ ಕಾರುವೆನು".

ಈ ವಚನಗಳಿಗೆ ಎರಡು ಅರ್ಥಗಳಿರಬಲ್ಲವು ಮತ್ತು ಎರಡೂ ಅರ್ಥಗಳು ಸತ್ಯವಾಗಿದೆ. ಮೊದಲನೆಯ ಅರ್ಥವು ಈ ರೀತಿಯಾಗಿದೆ. ನಾವು ತಣ್ಣಗಾಗಿರುವಾಗ ಏನಾದರೂ ಬೆಚ್ಚಗೆ ಇರುವದನ್ನು ಕುಡಿಯಲಿಚ್ಚಿಸುತ್ತೇವೆ; ನಾವು ಬೆಚ್ಚಗಿರುವಾಗ ಏನಾದರೂ ತಣ್ಣಗೆ ಇರುವದನ್ನು ಕುಡಿಯಲು ಬಯಸುತ್ತೇವೆ. ಆದರೆ ಯಾವನೂ ಎಂದೂ ಉಗುರು ಬೆಚ್ಚಗಿರುವದನ್ನು ಕುಡಿಯಲು ಇಷ್ಟಪಡುವದಿಲ್ಲ. ಲವೊದಿಕೀಯದಲ್ಲಿರುವ ಸಭೆಯು ಉಗುರು ಬೆಚ್ಚಗಿನ ಪಾನೀಯವಾಗಿತ್ತುಃ ಸಭೆಯ ಸೇವೆಯು ಬೆಚ್ಚಗೂ ಇರಲಿಲ್ಲ ತಣ್ಣಗೂ ಇರಲಿಲ್ಲ–ಕೇವಲ ಉಗುರು ಬೆಚ್ಚಗೆಯಿತ್ತು. ಇದರ ಕಾರಣದಿಂದ ಒಬ್ಬ ವ್ಯಕ್ತಿಯ ಅಗತ್ಯತೆಯ ಏನೇ ಇದ್ದರೂ ಸರಿಯೇ ಸಭೆಯನ್ನು ಅದನ್ನು ತೃಪ್ತಿಪಡಿಸಲಾಗಲಿಲ್ಲ. ಹೀಗೆ ಸಭೆಯು ಒಬ್ಬನ ಬಾಯಿಂದ "ಕಾರುವದಕ್ಕೆ" ಮಾತ್ರವೇ ಯೋಗ್ಯವಾಗಿತ್ತು.

ಲವೊದಿಕೀಯ ಪಟ್ಟಣದ ಕುರಿತು ಒಂದು ಆಸಕ್ತಿಕರವಾದ ಐತಿಹಾಸಿಕ ಸತ್ಯಾಂಶ ಇರುತ್ತದೆ. ಪಟ್ಟಣದ ಸಮೀಪದಲ್ಲಿ ಕೆಲವೊಂದು ಪ್ರಸಿದ್ಧ ಬಿಸಿನೀರಿನ ಊಟೆಗಳಿದ್ದವು. ಅವು ಗಳಿಂದ ಬಹಳಷ್ಟು ಪ್ರಮಾಣದಲ್ಲಿ ನೀರು ಹರಿಯುತ್ತಿತ್ತು. ಆ ನೀರಿಗೆ ಸ್ವಸ್ಥರಾಗುವ ನಿರೀಕ್ಷೆಯಿಂದ ಆ ನೀರನ್ನು ಕುಡಿಯುವದಕ್ಕೆ ಬರುತ್ತಿದ್ದರು. ಆದರೆ ಊಟೆಯಿಂದ ಬಿಸಿನೀರು ಇಳಿಜಾರುಗಳ ಮೂಲಕ ಹರಿದು ಬರುತ್ತಿದ್ದಂತೆ ಅದು ಶೀಘ್ರವೇ ಉಗುರು ಬೆಚ್ಚಗಾಗಿ ತನ್ನ ಸ್ವಸ್ಥತೆಯ ಶಕ್ತಿಯನ್ನು ಕಳೆದುಕೊಳ್ಳುತ್ತಿತ್ತು (ಹೀಗೆಂದು ಭಾವಿಸಲಾಗಿತ್ತು). ಅದು ಇನ್ನೆಂದಿಗೂ ಯಾರನ್ನೂ ಸ್ವಸ್ಥಮಾಡಲು ಅಸಮರ್ಥವಾಗಿದ್ದದು ಮಾತ್ರವಲ್ಲ; ಅದು ಒಬ್ಬನ ಬಾಯಾರಿಕೆಯನ್ನು ನಂದಿಸಲು ಸಹ ಅಶಕ್ತವಾಗಿತ್ತು. ಅದು ಯಾವದಕ್ಕೂ ಪ್ರಯೋಜನವಿಲ್ಲದ್ದಾಗಿತ್ತು! ಹೀಗೆ ಲವೊದಿರೇಯದ ಕ್ರೈಸ್ತರು ಖಂಡಿತವಾಗಿಯೂ ಯೇಸು ಅವರನ್ನು ಉಗುರುಬೆಚ್ಚಗೆ ಎಂದು ಕರೆದದ್ದನ್ನು ಅರ್ಥಮಾಡಿ–ಕೊಂಡಿದ್ದರುಃ ಅವರು ತಮ್ಮ ಪ್ರಸಿದ್ಧ ಉಗುರು ಬೆಚ್ಚಗಿನ ಊಟೆಯಂತೆ ಯಾವದಕ್ಕೂ ಪ್ರಯೋಜನವಿಲ್ಲದವರಾಗಿದ್ದರು.

ಉಗುರು ಬೆಚ್ಚಗಿನ ಎರಡನೆಯ ಅರ್ಥವು ಇದಾಗಿದೆ. ಲವೊದಿಕೀಯದ ಸಭೆಯು ಆತ್ಮೀಕವಾಗಿ ಉಗುರು ಬೆಚ್ಚಗಿರುತ್ತದೆಂದು ಯೇಸು ಹೇಳುತ್ತಿದ್ದಾನೆ. ಲವೊದಿಕೀಯದ ಕ್ರೈಸ್ತರು ಸಾರ್ದಿಸಿನ ಕ್ರೈಸ್ತರಂತೆ ಸತ್ತವರಾಗಿ ಇರಲಿಲ್ಲ(ವಚನ1) ಅವರು ಶವದಂತೆ ತಣ್ಣಗಾಗಿರಲಿಲ್ಲ. ಆದರೆ ಅವರು ಆತ್ಮೀಕವಾಗಿ ಬೆಚ್ಚಗೂ ಇರಲಿಲ್ಲ; ಅವರಲ್ಲಿ ಪವಿತ್ರಾತ್ಮನ ಅಗ್ನಿಯು ಇರಲಿಲ್ಲ. ಅವರು ಆತ್ಮೀಕ ಶಕ್ತಿ ಅಥವಾ ಉತ್ಸಾಹವನ್ನು ಹೊಂದಿರಲಿಲ್ಲ. ಆತ್ಮೀಕವಾಗಿ ಅವರು ಕೇವಲ ಅರ್ಧಜೀವ ಮಾತ್ರವೇ ಉಳ್ಳವರಾಗಿದ್ದರು.

"ಉಗುರು ಬೆಚ್ಚಗಿನ" ಸಭೆಯು "ತಣ್ಣಗಿನ" ಸಭೆಗಿಂತಲೂ ಹೆಚ್ಚು ಅಪಾಯಕರವಾದ ಸ್ಥಿತಿಯಲ್ಲಿರುತ್ತದೆ. ಕಾರಣವೇನೆಂದರೆ ಆತ್ಮೀಕವಾಗಿ ತಣ್ಣಗಾಗಿರುವ ಕ್ರೈಸ್ತರು ತಾವು ತಣ್ಣಗಿರುವರೆಂಬ ಪ್ರಜ್ಞೆಯನ್ನು ಹೊಂದಿರುತ್ತಾರೆ, ಮತ್ತು ಅವರು ಮಾನಸಾಂತರ ಪಡಬಲ್ಲರು. ಆದರೆ ಆತ್ಮೀಕವಾಗಿ ಉಗುರು ಬೆಚ್ಚಗಿರುವ ಕ್ರೈಸ್ತರು ಸಾಮಾನ್ಯವಾಗಿ ತಾವು ಬೆಚ್ಚಗಿದ್ದೇವೆಂದು ಯೋಚಿಸುತ್ತಾರೆ, ಮತ್ತು ಹೀಗೆ ಅವರು ತಮಗೆ ಪಶ್ಚಾತಾಪಪಡುವ ಅಗತ್ಯವಿಲ್ಲ ಎಂದು ಭಾವಿಸುತ್ತಾರೆ. ಅವರು ತಮ್ಮ ಆತ್ಮೀಕ ಸ್ಥಿತಿಯ ಬಗ್ಗೆ ಚಿಂತಿಸುವದಿಲ್ಲ. ಊಟೆಗಳಿಂದ ಹರಿಯುವ ಬಿಸಿ ನೀರಿನಂತೆಯೇ ಲವೊದಿಕೀಯದ ಕ್ರೈಸ್ತರು ಕ್ರಮೇಣವಾಗಿ ಉಗುರು ಬೆಚ್ಚಗೆ ಆಗಿದ್ದರು. ಅವರು ಅದನ್ನು ಗಮನಿಸಿರಲೂ ಇಲ್ಲ; ಆದದರಿಂದ, ಈ ಎರಡರಲ್ಲಿ ನಾವು ಯಾವ ಅರ್ಥದ ಬಗ್ಗೆ ಯೋಚಿಸಿದರೂ ಉಗುರುಬೆಚ್ಚಗಿನ ಕ್ರೈಸ್ತರಾಗದಂತೆ ಜಾಗರೂಕರಾಗಿರಬೇಕಾದ ಅಗತ್ಯವಿರುತ್ತದೆ; ಇಲ್ಲವಾದರೆ ಯೇಸು ನಮ್ಮನ್ನು ತನ್ನ ಬಾಯೊಳಗಿಂದ ಕಾರುವನು (ಲೂಕ 13:24-28 ನೋಡಿರಿ).

**17** ಯೇಸು ಈ ಉಗುರುಬೆಚ್ಚಗಿನ ಲವೊದಿಕೀಯ ಕ್ರೈಸ್ತರಿಗೆ ಹೇಳುವದೇನೆಂದರೆಃ ನೀವು ಆತ್ಮೀಕವಾಗಿ ಐಶ್ವರ್ಯವರೆಂದು ಭಾವಿಸುತ್ತೀರಿ, ಆದರೆ ನಿಮ್ಮನ್ನು ಮೋಸಪಡಿಸಿಕೊಳ್ಳಬೇಡಿರಿ. ಯಾಕೆಂದರೆ ವಾಸ್ತವದಲ್ಲಿ, "ನೀವು ಆತ್ಮೀಕವಾಗಿ ದರಿದ್ರರು". ಈ ಲವೊದಿಕೀಯದ ಕ್ರೈಸ್ತರು ಕುರುಡರಾಗಿದ್ದರು; ಅವರು ತಮ್ಮ ಆತ್ಮೀಕ ಸ್ಥಿತಿಯನ್ನು ಕಾಣಿದವರಾಗಿದ್ದರು. ಅವರು ಬಟ್ಟೆಯಿಲ್ಲದವರಾಗಿದ್ದರು; ಅವರೂ ನೀತಿ ಹಾಗೂ ಪರಿಶುದ್ಧತೆಯೆಂಬ ವಸ್ತ್ರಗಳನ್ನು ಹೊಂದಿರಲಿಲ್ಲ.

ನಾವು ಈ ಲವೊದಿಕೀಯ ಕ್ರೈಸ್ತರ ಉದಾಹರಣೆಯಿಂದ ಎಚ್ಚರಿಕೆಯನ್ನು ಪಡೆದುಕೊಳ್ಳೋಣ. ಅವರು ತಮ್ಮ ವಿಷಯವಾಗಿ ಹೊಂದಿದ್ದ- ಆಲೋಚನೆಗಳು ಹಾಗೂ ಕ್ರಿಸ್ತನು ಅವರ ಕುರಿತು ಹೊಂದಿದ್ದ ಆಲೋಚನೆಗಳು ಎಷ್ಟು ವ್ಯತ್ಯಾಸವಾಗಿದ್ದವು ! ನಾವು ನಮ್ಮನ್ನು ಕ್ರಿಸ್ತನು ನೋಡುವಂತೆಯೇ ನೋಡುವವರಾಗಿರಬೇಕು. ಇಲ್ಲವಾದರೆ, ನಾವು ನಮ್ಮನ್ನೇ ಮೋಸಮಾಡಿಕೊಳ್ಳುತ್ತೇವೆ, ಈ ಲವೊದಿಕೀಯದ ಕ್ರೈಸ್ತರು ಹೀಗೆಯೇ ತಮ್ಮನ್ನು ಮೋಸಮಾಡಿಕೊಂಡರು . ತಾವು ಪರಲೋಕದ ಮಾರ್ಗದಲ್ಲಿ ಹೊರಟಿದ್ದೇವೆಂದು ಭಾವಿಸಿಕೊಂಡಿದ್ದ ಅನೇಕರು ಇಂದು ನರಕದಲ್ಲಿದ್ದಾರೆ!

**18** ಲವೊದಿಕೀಯದ ಕ್ರೈಸ್ತರು ಕ್ರಿಸ್ತನಿಂದ ನಿಜವಾದ ಐಶ್ವರ್ಯವನ್ನು-ಆತ್ಮಿಕ ಚಿನ್ನ, ಬೆಂಕಿಯಲ್ಲಿ ಪು ಟಹಾಕಿದ ಚಿನ್ನವನ್ನು ಕೊಂಡುಕೊಳ್ಳಲಿ. ಅವರು ಹೊದ್ದುಕೊಳ್ಳುವದಕ್ಕಾಗಿ ಬಿಳೀ ವಸ್ತ್ರಗಳನ್ನು ಕ್ರಿಸ್ತನಿಂದ ಕೊಂಡುಕೊಳ್ಳಲಿ (ವಚನ 4 ನೋಡಿರಿ). ಅವರು ಕ್ರಿಸ್ತನಿಂದ ದೃಷ್ಟಿಯನ್ನೂ ಪಡೆದುಕೊಂಡು ತಮ್ಮ ಆತ್ಮೀಕ ದರಿದ್ರತೆ ಹಾಗೂ ಬೆತ್ತಲೆ ತನವನ್ನು ಕಾಣುವವರಾಗಲಿ. ಒಬ್ಬ ಮನುಷ್ಯನು ತನ್ನ ಸ್ಥಿತಿಯನ್ನು ಕಾಣಲಾಗದಿದ್ದರೆ ಆತನು ಅದನ್ನು ಉತ್ತಮ ಪಡಿಸಲಾರನು.

ಲವೊದಿಕೀಯದ ಪಟ್ಟಣದ ಕುರಿತು ಒಂದು ರೋಮಾಂಚಕಾರಿಯಾದ ಐತಿಹಾಸಿಕ ಸತ್ಯಾಂಶವಿರುತ್ತದೆ. ಯೋಹಾನನ ಕಾಲದಲ್ಲಿ ಲವೊದಿಕೀಯವು ವಿಶೇಷವಾಗಿ ಮೂರುಸಂಗತಿಗಳಿಗೆ ಪ್ರಸಿದ್ಧವಾಗಿತ್ತುಃ ಅದರ ಆರ್ಥಿಕ ಸಮೃದ್ಧಿ, ಅದರ ಬಟ್ಟೆಯ ಉದ್ಯಮ, ಹಾಗೂ ಅಲ್ಲಿಯೇ ತಯಾರಿಸಲಾಗುತ್ತಿದ್ದ ಒಂದು ವಿಶೇಷವಾದ ಕಣ್ಣಿನ ಅಂಜನವು ಜಗತ್ತಿನಲ್ಲೆಲ್ಲಾ ಉಪಯೋಗಿಸಲ್ಪಡುತ್ತಿತ್ತು. ಹಾಗಿದ್ದರೂ, ಆತ್ಮೀಕ ವಿಷಯಗಳಲ್ಲಿ ಅವರು ದರಿದ್ರರು, ಬಟ್ಟೆಯಿಲ್ಲದವರು ಹಾಗೂ ಕುರುಡರಾಗಿದ್ದರು (ವಚನ 17).

**19** ಜ್ಞಾನೋಕ್ತಿಗಳಲ್ಲಿ 3:11-12; ಇಬ್ರಿಯ 12:5-11 ಮತ್ತು ವ್ಯಾಖ್ಯಾನ ನೋಡಿರಿ).

**20** ಈ ಅಹಂಕಾರಿಗಳೂ, ಕುರುಡರೂ, ಉಗುರುಬೆಚ್ಚಗಿನವರೂ ಆಗಿದ್ದ ಲವೊದಿಕೀಯ ಕ್ರೈಸ್ತರು ಕ್ರಿಸ್ತನನ್ನು ತಮ್ಮ ಸಭೆಯ ಹೊರಗೆ ಬಿಟ್ಟಿದ್ದರು. ಆದರೆ ಕ್ರಿಸ್ತನು ಈಗಲೂ ಅವರನ್ನು ಪ್ರೀತಿಸುತ್ತಾನೆ ಹಾಗೂ ಅವರು ಬಾಗಿಲನ್ನು ತೆರೆದು ತನ್ನ ಒಳಗೆ ಸೇರಿಸಿಕೊಳ್ಳುತ್ತಾರೆಂದು ನಿರೀಕ್ಷಿಸುತ್ತಾ ಆತನು ಅವರ ಸಭೆಯ ಬಾಗಿಲನ್ನು ತಟ್ಟುತ್ತಾ ನಿಂತಿರುತ್ತಾನೆ.

ಆದರೆ ಕ್ರಿಸ್ತನು ಸಭೆಯ ಬಾಗಿಲನ್ನು ಮಾತ್ರವೇ ತಟ್ಟುವದಿಲ್ಲ; ಆತನು ಪ್ರತಿಯೊಬ್ಬ ಕ್ರೈಸ್ತನ ಹೃದಯದ "ಬಾಗಿಲ"ನ್ನು ತಟ್ಟುತ್ತಾನೆ. ಮತ್ತು ಆತನು ಕ್ರೈಸ್ತರ ಹೃದಯಗಳನ್ನು ಮಾತ್ರವಲ್ಲದೆ, ಎಲ್ಲಾ ಜನರ ಹೃದಯಗಳನ್ನು ತಟ್ಟುತ್ತಾನೆ. ಇದು ಕ್ರಿಸ್ತನ ಸುವಾರ್ತೆಯ ಶ್ರೇಷ್ಠ ಹಾಗೂ ಅದ್ಭುತವಾದ ಸತ್ಯವಾಗಿದೆಃ ಜಗತ್ತಿನ ಅತಿಶ್ರೇಷ್ಠ ಹಾಗೂ ಸರ್ವಶಕ್ತ ದೇವರು ಪ್ರತಿಯೊಬ್ಬ ವ್ಯಕ್ತಿಯ ಬಳಿಗೆ ಬಂದು "ನಿನ್ನ ಹೃದಯದ ಬಾಗಿಲನ್ನು ತೆರೆ, ನಾನು ಒಳಗೆ ಬರುವೆನು" ಎಂದು ಹೇಳುತ್ತಾನೆ. ಬೇರೆ ಯಾವ ಧರ್ಮವೂ ಪು ರುಷ ಮತ್ತು ಸ್ತ್ರೀಯರ ಅನ್ಯೋನ್ಯತೆಯನ್ನು ಹಾರೈಸಿ ಅವರ ಬಳಿಗೆ ಬರುವ ದೇವರ ಬಗ್ಗೆ ತಿಳಿಸುವದಿಲ್ಲ.

ಆದದರಿಂದ, ಸ್ನೇಹಿತನೇ, ಯೇಸು ತಟ್ಟುತ್ತಿರುವದನ್ನು ಕೇಳು, ನಿನ್ನ ಹೃದಯದ ಬಾಗಿಲನ್ನು ತೆರೆ. ತಡಮಾಡಬೇಡ, ಇಲ್ಲವಾದರೆ ಯೇಸು ಹೊರಟು ಹೋಗುವನು. ಆತನು ದೀರ್ಘಶಾಂತಿಯುಳ್ಳವನು ಆದರೆ ಆತನು ಸದಾಕಾಲವೂ ಕಾಯುವದಿಲ್ಲ.

ಇಂದು ಲವೊದಿಕೀಯ ಸಭೆಯ ಯಾವ ಛಾಯೆಯು ಉಳಿದಿರುವದಿಲ್ಲ ಯಾಕೆ? ಯಾಕೆಂದರೆ ಆ ಲವೊದೀಕಿಯ ಕ್ರೈಸ್ತರು ಯೇಸುವಿಗಾಗಿ ಬಾಗಿಲನ್ನು ತೆರೆಯಲಿಲ್ಲ. ಅವರು ತಮ್ಮ ಪಾಪಗಳನ್ನು- ತಮ್ಮ ಗರ್ವ, ಕುರುಡುತನ, ತಮ್ಮ

ಬೆತ್ತಲೆತನ– ಒಪ್ಪಿಕೊಂಡು ಅರಿಕೆಮಾಡಲಿಲ್ಲ. ಯೇಸು ಅವರಿಗೆ "ಆದದರಿಂದ ನೀನು ಆಸಕ್ತನಾಗಿರು, ಪಶ್ಚಾತಾಪ ಪಡು" ಎಂದು ಹೇಳಿದ್ದನು (ವಚನ 19). ಆದರೆ ಅವರು ಆತನಿಗೆ ಕಿವಿಗೊಟ್ಟಿರಲಿಲ್ಲ. ಕಿವಿಯುಳ್ಳವನು ಕೇಳಲಿ (ವಚನ 220.

**21-22** ಜಯ ಹೊಂದುವವನು ಕ್ರಿಸ್ತನ ಬಾಧ್ಯತೆ ಹಾಗೂ ಮಹಿಮೆಯಲ್ಲಿ ಪಾಲುಗಾರನಾಗುವದು ಮಾತ್ರವಲ್ಲದೆ ಕ್ರಿಸ್ತನೊಂದಿಗೆ ಆಳುವವನೂ ಆಗಿರುತ್ತಾನೆ. ಆತನು ಕ್ರಿಸ್ತನ ಸಿಂಹಾಸನದಲ್ಲಿ ಆತನೊಂದಿಗೆ ಕುಳಿತುಕೊಳ್ಳುವನು (ಮತ್ತಾಯ 19:28). ಅಪೊಸ್ತಲನಾದ ಪೌಲನು ತಿಮೊಥೆಯನಿಗೆ ಬರೆದದ್ದೇನೆಂದರೆಃ ನಾವು ಆತನೊಡನೆ ಸತ್ತಿದ್ದರೆ ಆತನೊಡನೆ ಜೀವಿಸುವೆವು . ಸಹಿಸಿಕೊಳ್ಳುವವರಾಗಿದ್ದರೆ ಆತನೊಡನೆ ಆಳುವೆವು (ತಿಮೊಥೆ 2:11-12).

---

## ಅಧ್ಯಾಯ - 4

### ಪರಲೋಕದಲ್ಲಿ ಸಿಂಹಾಸನ (4:1-11)

**1** ಯೋಹಾನನು ಏಳು ಸಭೆಗಳಿಗೆ ಕ್ರಿಸ್ತನ ಮಾತುಗಳನ್ನು ಬರೆದು ಮುಗಿಸಿದ್ದಾಗ ತುತ್ತೂರಿಯಂತಹ ಸ್ವರವೊಂದು (ಪ್ರಕ. 1:10) ಪು ನಃ ಆತನೊಂದಿಗೆ ಮಾತಾಡಿಹೇಳಿದ್ದೇನೆಂದರೆಃ "ಮುಂದೆ ಆಗಬೇಕಾದವು ಗಳನ್ನು ನಿನಗೆ ತೋರಿಸುವೆನು". ಇಲ್ಲಿಂದ ಪ್ರಕಟಣೆ ಪು ಸ್ತಕದ ಅಂತ್ಯದವರೆಗೂ ಬರೆಯಲ್ಪಟ್ಟಿರುವದೆಲ್ಲವೂ ಮುಖ್ಯವಾಗಿ ಲೋಕಾಂತ್ಯದಲ್ಲಿ ಸಂಭವಿಸುವ ಸಂಗತಿಗಳ ಚಿತ್ರಣವಾಗಿದೆ ಎಂಬದನ್ನು ನಾವು ಅರ್ಥಮಾಡಿಕೊಳ್ಳಬೇಕು.

**2** ಯೋಹಾನನು ಏಳು ಸಭೆಗಳಿಗೆ ಪತ್ರಿಕೆಗಳನ್ನು ಬರೆಯುತ್ತಿದ್ದಾಗ ಮನಸ್ಸಾಕ್ಷಿಯ ಸಾಧಾರಣ ಪ್ರಜ್ಞೆಯಲ್ಲಿದ್ದನು. ಆದರೆ ಈಗ ಪು ನಃ ಆತ್ಮನು ದೇವರಾತ್ಮವಶನಾಗಿರುತ್ತಾನೆ (ಪ್ರಕಟಣೆ 1:10 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಈಗ ಅತನು ಪ್ರಕಟಣೆಯ ಉಳಿದ ಭಾಗವನ್ನು ಪಡೆಯುವದಕ್ಕೆ ಸಿದ್ಧನಾಗಿದ್ದಾನೆ.

ಯೋಹಾನನು ನೋಡಿದ ಮೊದಲನೆಯ ಸಂಗತಿಯು ಪರಲೋಕದಲ್ಲಿನ ಸಿಂಹಾಸನ. ಈ ಸಿಂಹಾಸನವು ಆಳುವದಕ್ಕೂ ನ್ಯಾಯ ತೀರಿಸುವದಕ್ಕೂ ದೇವರಿಗಿರುವ ಬಲ ಹಾಗೂ ಅಧಿಕಾರದ ಸಂಕೇತವಾಗಿದೆ.

**3** ಈ ವಚನದಲ್ಲಿ ಪ್ರಸ್ತಾಪಿಸಲಾಗಿರುವ ಸೂರ್ಯಕಾಂತ ಪದ್ಮರಾಗ ಮಣಿಗಳು ಸಿಂಹಾಸನದಲ್ಲಿ ಕುಳಿತಿರುವಾತನ ಮಹಿಮೆ ಹಾಗೂ ಬೆಳಕನ್ನು ಸೂಚಿಸುತ್ತವೆ. ಅತ್ಯದ್ಭುತ ಬೆಳಕನ್ನು ಹೊರತು ಪಡಿಸಿ ಸ್ವತಃ ದೇವರ ರೂಪವು ಕಾಣಿಸಲಾರದು. ದೇವರು ಅಗಮ್ಯವಾದ ಬೆಳಕಿನಲ್ಲಿ ವಾಸಮಾಡುವವನು; ಈ ದೇವರನ್ನು ಯಾರು ಕಾಣಲಿಲ್ಲ, ಯಾರು ಕಾಣಲಾರರು ಎಂದು ಪೌಲನು ಬರೆದನು (1 ತಿಮೊಥೆ 6:16).

ಮುಗಿಲು ಬಿಲ್ಲು ದೇವರು ಜಲಪ್ರಳಯದ ಬಳಿಕ ನೋಹ ಹಾಗೂ ಭೂಮಿಯ ಎಲ್ಲಾ ಜೀವಿಗಳೊಂದಿಗೆ ಮಾಡಿಕೊಂಡ ಒಡಂಬಡಿಕೆಯ ಗುರುತಾಗಿದೆ (ಆದಿಕಾಂಡ 9:12-17; ಯೆಹೆಜ್ಕೇಲ 1:26-28).

**4** ಸಿಂಹಾಸನಮ ಸುತ್ತಲೂ ಕುಳಿತಿರುವ ಇಪ್ಪತ್ತು ನಾಲ್ಕು ಮಂದಿ ಹಿರಿಯರು ಉನ್ನತಕ್ಕೇರಿಸಲ್ಪಟ್ಟ ದೇವದೂತರಾಗಿದ್ದು ಅವರು ನಿರಂತರವಾಗಿ ದೇವರನ್ನು ಆರಾಧಿಸುತ್ತಾರೆ. ಈ ಇಪ್ಪತ್ತು ನಾಲ್ಕು ಮಂದಿ ಹಿರಿಯರು ಇಸ್ರಾಯೇಲಿನ ಹನ್ನೆರಡು ಕುಲಗಳನ್ನೂ ಕ್ರಿಸ್ತನ ಹನ್ನೆರಡು ಮಂದಿ ಅಪೊಸ್ತಲರನ್ನೂ ಪ್ರತಿನಿಧಿಸುತ್ತಾರೆಂದು ಕೆಲವರು ಭಾವಿಸುತ್ತಾರೆ.

**5** ಬಳಿಕ ಸಿಂಹಾಸನದ ಎದುರಿನಲ್ಲಿ ಏಳು ದೀಪಗಳನ್ನು ಕಂಡನು, ಅವು ದೇವರ ಏಳು ಆತ್ಮಗಳು. ಈ ಏಳು ಆತ್ಮಗಳು ದೇವದೂತರು ಅಥವಾ ಅವು ಗಳು ಪವಿತ್ರಾತ್ಮನ" ಏಳು ಭಾಗಗಳನ್ನು" ಪ್ರತಿನಿದಿಸಬಹುದು (ಪ್ರಕಟಣೆ 1:4 ಮತ್ತು ವ್ಯಾಖ್ಯಾನ ನೋಡಿರಿ). ಸಿಂಹಾಸದಿಂದ ಬಂದ ಮಿಂಚುಗಳೂ ಗುಡುಗುಗಳೂ ದೇವರ ಭಯಾನಕ ಶಕ್ತಿಯನ್ನು ಸೂಚಿಸುತ್ತದೆ (ವಿಮೋಚನ ಕಾಂಡ 19:16-19).

**6** ನಾಲ್ಕು ಜೀವಿಗಳು ಸಿಂಹಾಸನವನು ಕಾಯುವ ವಿಶೇಷ ದೇವದೂತರಾಗಿದ್ದಾರೆ. ಅವು ಗಳ ಹಿಂದೆ ಮುಂದೆ ಇರುವ ಕಣ್ಣುಗಳಿಂದ ಅವು ಗಳು ಎಲ್ಲವನ್ನೂ ನೋಡಲು ಶಕ್ತವಾಗಿದ್ದವು . ಹಳೆ ಒಡಂಬಡಿಕೆಯ ಪ್ರವಾದಿಯಾದ ಯೆಹೆಜ್ಕೇಲನು ಸಹ ಒಂದು ದರ್ಶನ ಕಂಡಿದ್ದನು, ಅದರಲ್ಲಿ ಆತನು ಗಾಜಿನ ಸಮುದ್ರದ ರೀತಿಯ ಸಂಗತಿಯನ್ನು ನೋಡಿದನು (ಯೆಹೆಜ್ಕೇಲ 1:22).

**7** ಈ ನಾಲ್ಕು ಜೀವಿಗಳ ಬೇರೆ ಬೇರೆ ರೂಪಗಳು ದೇವರಿಗೆ ಪ್ರಯೋಜನಕರವಾದ ನಾಲ್ಕು ರೀತಿಯ ಸಾಮರ್ಥ್ಯ ಗಳನ್ನು ಸೂಚಿಸುತ್ತವೆ. ಸಿಂಹವು ಬಲಕ್ಕೆ ಗುರುತಾಗಿದೆ; ಹೋರಿಯು ಆಸಕ್ತಿಗೆ ಗುರುತಾಗಿದೆ; ಮನುಷ್ಯನು ಜ್ಞಾನಕ್ಕೆ ಗುರುತಾಗಿದ್ದಾನೆ; ಮತ್ತು ಗರುಡಪಕ್ಷಿಯು ವೇಗಕ್ಕೆ ಗುರುತಾಗಿದೆ. ಈ ನಾಲ್ಕು ಜೀವಿಗಳ ಮುಖ್ಯ ಕೆಲಸವು ದೇವರನ್ನು ನಿರಂತರವಾಗಿ ಸ್ತುತಿಸುವೇ (ಯೆಹೆಜ್ಕೇಲ 1:4-10).

ದೇವರು ಸ್ತುತಿ ಆರಾಧನೆಯನ್ನು ಹೊಂದಲು ಯೋಗ್ಯನಾಗಿದ್ದಾನೆ. ಆತನು ಸರ್ವಶಕ್ತ ಕರ್ತನಾದ ದೇವರೂ ಸಮಸ್ತವನ್ನು ಸೃಷ್ಟಿಸಿದಾತನೂ, ಇದ್ದವನು ಇರುವಾತನು, ಹಾಗೂ ಬರುವವನು –ವರ್ತಮಾನ ಭೂತ ಭವಿಷ್ಯತ್ಕಾಲಗಳಲ್ಲಿರುವಂಥವನು (ಪ್ರಕ. 1:4 ನೋಡಿರಿ). ಅಂದರೆ, ಮೋಶೆಗೆ ಹೇಳಿದ್ದೇನೆಂದರೆಃ "ನಾನು ಇರುವಾತನು"

(ವಿಮೋಚನ ಕಾಂಡ 3:14). ಅಂದರೆ, ದೇವರು ಯಾವಾಗಲೂ ಇರುವಾತನು ಆತನು ಆದಿಗಿಂತ ಮುಂದೆ ಇದ್ದನ್ನು ಮತ್ತು ಯುಗಯುಗಾಂತರಕ್ಕೂ ಇರುವವನು (ವಚನ 9).

**9-11** ಪರಲೋಕದಲ್ಲಿ ಅತ್ತ್ಯುನ್ನತಕ್ಕೇರಿಸಲ್ಪಟ್ಟಿರುವ ದೇವದೂತರು ಈ ರೀತಿಯಲ್ಲಿ ದೇವರನ್ನು ಸ್ತುತಿಸಿ ಆರಾಧಿಸುವದಾದರೆ ಖಂಡಿತವಾಗಿಯೂ ಅಲ್ಪರಾದ ಮಾನವರು ಸಹ ಆತನನ್ನು ಆರಾಧಿಸಿ ಸ್ತುತಿಸಬೇಕು.

---

## ಅಧ್ಯಾಯ - 5

### ಸುರುಳಿ ಮತ್ತು ಕುರಿಮರಿ (5:1-14)

**1** ಯೋಹಾನನು ದೇವರ ಕೈಯಲ್ಲಿ ಏಳು ಮುದ್ರೆಗಳಿಂದ ಮುದ್ರಿತವಾದ ಒಂದು ಪು ಸ್ತಕ ಅಥವಾ ಸುರುಳಿಯನ್ನು[13] ಕಂಡನು. ಲೋಕಾಂತ್ಯದಲ್ಲಿ ಸಂಭವಿಸುವ ಎಲ್ಲಾ ಘಟನೆಗಳು ಹಾಗೂ ನ್ಯಾಯತೀರ್ಪುಗಳು ಈ ಸುರುಳಿಯಲ್ಲಿ ಬರೆಯಲ್ಪಟ್ಟಿದ್ದವು. ಈ ಸಂಗತಿಗಳು ಸುರುಳಿಯ ಎರಡೂ ಬದಿಗಳಲ್ಲಿ ಬರೆಯಲ್ಪಟ್ಟಿತ್ತು.

**2-4** ಹೇಗಿದ್ದರೂ, ಪ್ರಾರಂಭದಲ್ಲಿ ಸುರುಳಿಯ ಮೇಲಿನ ಮುದ್ರೆಗಳನ್ನು ತೆರೆಯುವದಕ್ಕೆ ಯೋಗ್ಯನಾದ ಒಬ್ಬನೂ ಕಾಣಿಸಲಿಲ್ಲ; ಅಂದರೆ, ಪರಲೋಕ ಅಥವಾ ಭೂಲೋಕದಲ್ಲಾಗಲಿ ಅಥವಾ ಭೂಮಿಯ ಕೆಳಗಾಗಲಿ [14] ಸುರುಳಿಯಲ್ಲಿ ಬರೆಯಲಾಗಿದ್ದ ಘಟನೆಗಳನ್ನು ಹಾಗೂ ನ್ಯಾಯತೀರ್ಪುಗಳನ್ನು ಕಾರ್ಯರೂಪಕ್ಕೆ ತರಲು ಯೋಗ್ಯನಾದವನು ಒಬ್ಬನೂ ಸಿಕ್ಕಲಿಲ್ಲ. ದೇವರ ಅಂತಿಮ ಸಂಕಲ್ಪಗಳು ನೆರವೇರುವದಿಲ್ಲವೆಂದು ಯೋಹಾನನಿಗೆ ತೋರಿದ್ದರಿಂದ ಅವನು ಅಳುವದಕ್ಕೆ ಪ್ರಾರಂಭಿಸಿದನು.

**5** ಆದರೆ ಸುರುಳಿಯ ಏಳು ಮುದ್ರೆಗಳನ್ನು ಒಡೆಯುವದಕ್ಕೆ ಶಕ್ತನಾದವನೊಬ್ಬನು ಇದ್ದನು. ಆ ಒಬ್ಬನು ಯೆಹೂದಿ ಕುಲದಲ್ಲಿ ಜನಿಸಿದ ಸಿಂಹಪ್ರಾಯನೂ ದಾವೀದನ ಅಂಕುರದವನೂ ಆಗಿದ್ದಾನೆ– ಅಂದರೆ, ಸ್ವತಃ ಕ್ರಿಸ್ತನೇ. ಯೆಹೂದನು ಯಾಕೋಬನ ಹನ್ನೆರಡು ಮಂದಿ ಪು ತ್ರರಲ್ಲಿ ನಾಲ್ಕನೆಯವನಾಗಿದ್ದನು; ಯಾಕೋಬನು ಅವನನ್ನು ಪ್ರಾಯದ ಸಿಂಹ ಎಂದು ಕರೆದನು (ಆದಿಕಾಂಡ 49:9). ಯಾಕೋಬನು ತನ್ನ ಪು ತ್ರರಿಗೆ ಆಶೀರ್ವಾದವನ್ನು ನೀಡಿದ ವೇಳೆಯಲ್ಲಿ ಹೇಳಿದ್ದೇನೆಂದರೆ: "ರಾಜದಂಡವನ್ನು ಹಿಡಿಯತಕ್ಕವನು ಬರುವ ತನಕ ಆ ದಂಡವು ಯೆಹೂದ ನ ಕೈಯಿಂದ ತಪ್ಪುವದಿಲ್ಲ." ಅಂದರೆ, ಲೋಕಾಂತ್ಯದಲ್ಲಿ ಕ್ರಿಸ್ತನು ತಿರಿಗಿ ಬರುವ ತನಕ (ಆದಿಕಾಂಡ 49:10). ಕ್ರಿಸ್ತನು ಯೆಹೂದ ಕುಲದಲ್ಲಿ ಹುಟ್ಟಿದನು (ಮತ್ತಾಯ 1:2; ಲೂಕ 3:33). ಆದದರಿಂದ, ಕ್ರಿಸ್ತನು ಯೆಹೂದದ ರಾಜದಂಡವನ್ನು ಪಡೆಯುವನು; ಅವನ ರಾಜ್ಯಕ್ಕೆ ಅಂತ್ಯವೇ ಇರುವದಿಲ್ಲ.

ಕ್ರಿಸ್ತನು ಅರಸನಾದ ದಾವೀದನ ಸಂತತಿಗೂ ಸೇರಿದವನಾಗಿದ್ದನು (ಮತ್ತಾಯ 1:6; ಲೂಕ 3:31). ಆದದರಿಂದ, ಆತನು ದಾವೀದನ ಅಂಕುರ ಎಂದು ಕರೆಯಲ್ಪಟ್ಟಿದ್ದಾನೆ. ಪ್ರವಾದಿಯಾದ ಯೆಶಾಯನು ಯೇಸುವನ್ನು ಇಷಯನ ಅಂಕುರ ಎಂದು ಕರೆದನು (ಯೆಶಾಯ 11; 1-10; ರೋಮ 15:12). ಮೆಸ್ಸೀಯನಾದ ಈ ಕ್ರಿಸ್ತನೇ ಸುರುಳಿಯನ್ನು ತೆರೆದು ಲೋಕವನ್ನು ಅಂತ್ಯಕ್ಕೆ ತರಲು ಯೋಗ್ಯನಾಗಿದ್ದನು. ಆತನು ಲೋಕದ ಮೇಲೆ, ಸೈತಾನನ ಮೇಲೆ, ಮರಣದ ಮೇಲೆ ಜಯ ಹೊಂದಿದನು (ಯೋಹಾನ 16:33). ಕ್ರಿಸ್ತನು ಮಾತ್ರವೇ ಯೋಗ್ಯನು.

**6** ಬಳಿಕ ಯೋಹಾನನು ಕುರಿಮರಿಯನ್ನು ಕಂಡನು. ಬಹುಶಃ ಆತನು ಸಿಂಹವನ್ನು, ಯೆಹೂದ ಕುಲದ ಸಿಂಹವನ್ನು, ಎದುರು ನೋಡಿರಬಹುದು; ಆದರೆ ಬದಲಾಗಿ, ಆತನು ಒಂದು ಕುರಿಮರಿಯನ್ನು ಕಂಡನು! ಎಂಥ ಆಶ್ಚರ್ಯಕರವಾದ ಸಂಗತಿ! ಲೋಕ ರಕ್ಷಕನು, ಯಾವನ ರಾಜ್ಯವು ಎಂದಿಗೂ ಅಂತ್ಯವಾಗುವದಿಲ್ಲವೋ ಆ ಅರಸನು ಸಿಂಹವಾಗಿರಲಿಲ್ಲ, ಆದರೆ ಒಂದು ಕುರಿಮರಿಯಾಗಿದ್ದನು! ಅದು ಮಾತ್ರವಲ್ಲದೆ, ಆತನು ಕೊಯ್ಯಲ್ಪಟ್ಟದ್ದಾಗಿ ನಿಂತಿರುವ ಕುರಿಮರಿಯನ್ನು ಕಂಡನು. ಕ್ರಿಸ್ತನು ತನ್ನ ರಾಜ್ಯವನ್ನು ಬಲ ಹಾಗೂ ಯುದ್ಧದ ಮೂಲಕ ಪಡೆಯಲಿಲ್ಲ ಆದರೆ ಪಾಪಗಳನ್ನು ನಿವಾರಿಸುವ ಯಜ್ಞವಾಗಿ ಬಾಧೆಪಟ್ಟು ಸಾಯುವದರ ಮೂಲಕವೇ ಪಡೆದುಕೊಂಡಿದ್ದನು (ಯೆಶಾಯ 53:3;ಯೋಹಾನ 1:29; ಇಬ್ರಿಯ 9:14-15, 28; 1 ಪೇತ್ರ 1:18-19 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

ಯೋಹಾನನ ದರ್ಶನದ ಪ್ರಕಾರವಾಗಿ ಈ ಕುರಿಮರಿಗೆ ಏಳು ಕೊಂಬುಗಳೂ ಏಳು ಕಣ್ಣುಗಳೂ ಇದ್ದವು. "ಏಳು" ಅಂಕಿಯು ಬೈಬಲಿನಲ್ಲಿ ವಿಶೇಷ ಅರ್ಥವನ್ನು ಹೊಂದಿದೆ: ಇದರ ಅರ್ಥವು ಸಂಪೂರ್ಣತೆ ಅಥವಾ ಪರಿಪೂರ್ಣತೆ. ಬೈಬಲಿನಲ್ಲಿ "ಕೊಂಬು" ಎಂಬ ಪದವು ಬಲ ಹಾಗೂ ಅಧಿಕಾರಕ್ಕೆ ಗುರುತಾಗಿದೆ. ಅದೇ ವಿಧದಲ್ಲಿ ಏಳು ಕಣ್ಣುಗಳು ಸಂಪೂರ್ಣ ತಿಳುವಳಿಕೆ ಹಾಗೂ ಜ್ಞಾನವನ್ನು ಸೂಚಿಸುತ್ತವೆ. ಇದರ ಮೂಲಕ ಈ ಕುರಿಮರಿಯು ಸಕಲ ಬಲ ಹಾಗೂ ಅಧಿಕಾರ, ಸಕಲ ತಿಳುವಳಿಕೆ ಹಾಗೂ ಜ್ಞಾನವನ್ನು ಹೊಂದಿದೆಯೆಂದು ನಾವು ತಿಳಿದುಕೊಳ್ಳಬಹುದು. ಏಳು ಕಣ್ಣುಗಳು ಏಳು ಆತ್ಮಗಳು ಸಹ ಆಗಿವೆ; ಅಥವಾ ಅವು ಗಳು ಪವಿತ್ರಾತ್ಮನ ಏಳು ಭಾಗವನ್ನು ಪ್ರತಿನಿಧಿಸುತ್ತವೆ (ಪ್ರಕ. 1:4; 4:5 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). "ಏಳು ಆತ್ಮಗಳನ್ನು" ಹೊಂದಿರುವವನು ಪವಿತ್ರಾತ್ಮನನ್ನುಸಾಧ್ಯವಾದ ಪೂರ್ಣ ಪ್ರಮಾಣದಲ್ಲಿ

ಪಡೆದಿರುತ್ತಾನೆ. ಆದದರಿಂದ ಈ ಕುರಿಮರಿಯಾದ ಕ್ರಿಸ್ತನು ಪವಿತ್ರಾತ್ಮನನ್ನು ಅಳತೆಯಿಲ್ಲದೆ ಹೊಂದಿದ್ದಾನೆಂದು ನಾವು ಅರ್ಥ ಮಾಡಿಕೊಳ್ಳಬಹುದು (ಯೋಹಾನ 3:34 ನೋಡಿರಿ).

**7-8** ಕುರಿಮರಿಯು ಸುರುಳಿಯನ್ನು ತೆಗೆದುಕೊಂಡಾಗ ನಾಲ್ಕು ಜೀವಿಗಳು ಹಾಗೂ ಇಪ್ಪತ್ತು ನಾಲ್ಕು ಮಂದಿ ಹಿರಿಯರು ಆತನ ಪಾದಕ್ಕೆ ಬಿದ್ದು ಆರಾಧಿಸಿದರು. ಅವರೊಬ್ಬೊಬ್ಬರು ವೀಣೆಯನ್ನು ಹೊಂದಿದ್ದರು, ಅದು ವಿಶೇಷವಾಗಿ ದೇವರನ್ನು ಆರಾಧಿಸುವದರಲ್ಲಿ ಉಪಯೋಗಿಸುವ ಸಂಗೀತವಾದ್ಯವಾಗಿದೆ (ಕೀರ್ತನೆಗಳು 33:2). ಚಿನ್ನದ ಬಟ್ಟಲುಗಳಲ್ಲಿದ್ದ ಧೂಪವು ವಿಶ್ವಾಸಿಗಳ ಪ್ರಾರ್ಥನೆಗಳನ್ನು ಪ್ರತಿನಿಧಿಸುತ್ತದೆ (ಕೀರ್ತನೆಗಳು 141:2). ದೇವರು ನಮ್ಮ ಪ್ರಾರ್ಥನೆಗಳನ್ನು ಕೇಳುತ್ತಾನೆಂಬದನ್ನು ಸಂಶಯಿಸದಿರೋಣ. ನಮ್ಮ ಪ್ರಾರ್ಥನೆಗಳು ನಿರಂತರವಾಗಿ ಧೂಪದಂತೆ ಆತನ ಮುಂಭಾಗದಲ್ಲಿ ಏರಿಹೋಗುತ್ತವೆ.

**9-10** ನಾಲ್ಕು ಜೀವಿಗಳು ಹಾಗೂ ಇಪ್ಪತ್ತು ನಾಲ್ಕು ಮಂದಿ ಹಿರಿಯರು ಬಳಿಕ ಒಂದು ಹೊಸ ಹಾಡನ್ನು ಹಾಡಿದರು (ಕೀರ್ತನೆಗಳು 98:1). ಈ ಹಾಡು ತನ್ನ ರಕ್ತದಿಂದ ಸಕಲ ಕುಲ ಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡ ಕುರಿಮರಿಯ ಸ್ತುತಿಗಾಗಿ ಹಾಡಿದ ಹಾಡಾಗಿದೆ (ಮಾರ್ಕ 10:45; 14:24; 1 ಕೊರಿಂಥ 6:20; ಎಫೆಸ 1:7 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಕ್ರಿಸ್ತನು ತಾನು "ಕೊಂಡುಕೊಂಡವರನ್ನು" ರಾಜ್ಯವನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದನು (ಪ್ರಕ. 1:6 ಮತ್ತು ವ್ಯಾಖ್ಯಾನ ನೋಡಿರಿ), ಮತ್ತು ಅವರು ಭೂಮಿಯ ಮೇಲೆ ಆಳುವರು (ವಚನ 10). ಕೆಲವು ಮಂದಿ ಬೈಬಲ್ ಪಂಡಿತರು ಈ ಆಳುವಿಕೆಯು ಲೋಕಾಂತ್ಯದಲ್ಲಿ ಸಂಭವಿಸುವ ದೇವ ಜನರ ಸಾವಿರ ವರ್ಷಗಳ ಆಳ್ವಿಕೆಯನ್ನು ಸೂಚಿಸುತ್ತದೆಂದು ನಂಬುತ್ತಾರೆ (ಪ್ರಕ. 20:4-6 ಮತ್ತು ವ್ಯಾಖ್ಯಾನ ನೋಡಿರಿ).

**11-12** ತರುವಾಯ ಯೋಹಾನನು ಕೋಟ್ಯಾನುಕೋಟಿ ದೇವದೂತರು ಕುರಿಮರಿಯಾದ ಕ್ರಿಸ್ತನನ್ನು ಆರಾಧನೆ ಮಾಡುವದನ್ನು ಕಂಡನು (ದಾನಿಯೇಲ 7:10). ಕ್ರಿಸ್ತನು 12ನೇ ವಚನದಲ್ಲಿ ಪ್ರಸ್ತಾಪಿಸಲಾಗಿರುವ ಎಲ್ಲಾ ಸಂಗತಿಗಳನ್ನು ಹೊಂದುವದಕ್ಕೆ ಯೋಗ್ಯನು ಮಾತ್ರವಲ್ಲ; ಆತನು ಅವು ಗಳನ್ನು ಈಗಾಗಲೇ ಪಡೆದಿದ್ದಾನೆ. ಕ್ರಿಸ್ತನು ಬಲವನ್ನೂ ಜ್ಞಾನವನ್ನೂ ಪಡೆದಿದ್ದಾನೆ (1 ಕೊರಿಂಥ 1:24), ಐಶ್ವರ್ಯ (2ಕೊರಿಂಥ 8:9: ಎಫೆಸ 3; 8) ಸಾಮರ್ಥ್ಯ (ಲೂಕ 11;22), ಮಾನ (ಫಿಲಿಪ್ಪಿ 2:11) ಪ್ರಭಾವ (ಯೋಹಾನ 1:14) ಮತ್ತು ಸ್ತೋತ್ರಗಳನ್ನು[16] ಹೊಂದಿದ್ದಾನೆ (ರೋಮ 15 ;29) ಮತ್ತು ಈ ಎಲ್ಲಾ ಗುಣಧರ್ಮಗಳು ಹಾಗೂ ಶೀಲತೆಗಳು ಎಲ್ಲದರ ಕಡೆಯ ಸಂಗತಿಯಿಂದ– ಅಂದರೆ, ಸ್ತೋತ್ರಗಳಿಂದ ಪರಿಪೂರ್ಣಗೊಳಿಸಲ್ಪಟ್ಟಿವೆ. ಸ್ತುತಿಯು ಏನು ಇಲ್ಲದ ನಾವು ಎಲ್ಲವನ್ನು ಹೊಂದಿರುವಾತನಿಗೆ ಕೊಡಬಲ್ಲಂಥ ಸಂಗತಿಯಾಗಿದೆ. ಎಂಥ ರಕ್ಷಕನು ನಮಗಿದ್ದಾನೆ! ನಾವು ಆತನನ್ನು ಸ್ತುತಿಸುವದಕ್ಕೆ ಎಂದಿಗೂ ಮರೆಯದಿರೋಣ.

**13-14** ಯೋಹಾನನಿಗೆ ಕೊಡಲ್ಪಟ್ಟ ಈ ಆಶ್ಚರ್ಯಕರವಾದ ಪ್ರಕಟಣೆಯ ಬಗ್ಗೆ ಯೋಚಿಸಿರಿ. ಯೋಹಾನನು ಆಕಾಶದಲ್ಲಿಯೂ ಭೂಮಿಯ ಮೇಲೆಯೂ ಭೂಮಿಯ ಕೆಳಗೂ ಸಮುದ್ರದ ಮೇಲೆಯೂ ಇರುವ ಎಲ್ಲಾ ಸೃಷ್ಟಿಗಳು ದೇವರನ್ನು ಹಾಗೂ ಕುರಿಮರಿಯಾದ ಕ್ರಿಸ್ತನ ಸ್ತುತಿಸುವದನ್ನು ಕಂಡನು. ಈ ಭೂಮಿಯಲ್ಲಿ ಪ್ರತಿಯೊಬ್ಬರೂ ಕ್ರಿಸ್ತನನ್ನು ಸ್ತುತಿಸುವದಿಲ್ಲ. ಆದರೆ ಆತನು ಮಹಿಮೆಯಲ್ಲಿ ಬರುವಾಗ ಎಲ್ಲಾ ಸೃಷ್ಟಿಗಳು ಆತನಿಗೆ ಅಡ್ಡ ಬಿದ್ದು ಆರಾಧಿಸುವವು (ಫಿಲಿಪ್ಪಿ 2:9-11 ನೋಡಿರಿ).

---

## ಅಧ್ಯಾಯ - 6

### ಮುದ್ರೆಗಳು ಒಡೆಯಲ್ಪಟ್ಟವು (6:1-17)

**1-2** ಈ ಅಧ್ಯಾಯವು ಏಳು ಮುದ್ರೆಗಳೊಳಗೆ ಮೊದಲ ಆರು ಮುದ್ರೆಗಳು ಒಡೆಯಲ್ಪಡುತ್ತವೆ. ಈ ವಿಧದಲ್ಲಿ ದೇವರ ಲೋಕದ ಮೇಲೆ ಬರಮಾಡುವ ಅಂತಿಮ ನ್ಯಾಯತೀರ್ಪು ಪ್ರಾರಂಭಗೊಳ್ಳುತ್ತದೆ. ಇಲ್ಲಿ ಪ್ರಸ್ತಾಪಿಸಲಾಗಿರುವ ಎಲ್ಲಾ ಭಯಾನಕ ಘಟನೆಗಳು ಕ್ರಿಸ್ತನು ತಿರಿಗಿ ಬರುವದಕ್ಕೆ ಮುಂಚೆ ನೆರವೇರಬೇಕು. ಕುರಿಮರಿಯು ಮೊದಲನೆಯ ಮುದ್ರೆಯನ್ನು ಒಡೆದಾಗ, ನಾಲ್ಕು ಜೀವಿಗಳಲ್ಲಿ ಒಂದು ಜೀವಿಯು ಯೋಹಾನನಿಗೆ "ಬಾ" ಎಂದು ಹೇಳಿತು. ಬಳಿಕ ಯೋಹಾನನು ಒಂದು ಬಿಳಿ ಕುದುರೆಯ ಮೇಲೆ ಸವಾರನನ್ನು ಕಂಡನು. ಬಿಳಿ ಕುದುರೆ ಹಾಗೂ ಅದರ ಸವಾರನು ಭೂಮಿಯ ಮೇಲೆ ಬರಲಿದ್ದ ಮಹಾಭಯಂಕರವಾದ ಯುದ್ಧಗಳನ್ನು ಸೂಚಿಸುತ್ತಾನೆ. ಯೇಸು "ಇವೆಲ್ಲಾ ಪ್ರಸವವೇದನೆಯ ಪ್ರಾರಂಭ" ಎಂದು ಹೇಳಿದನು (ಮಾರ್ಕ 13:7-8). ಕುದುರೆಯ ಮೇಲಿನ ಸವಾರನು ಭೂಮಿಯ ಮೇಲೆ ಯುದ್ಧವನ್ನು ಬರಮಾಡಲು ನೇಮಿಸಲ್ಪಟ್ಟ ಒಬ್ಬ ದೇವದೂತನನ್ನು ಅಥವಾ ಆತ್ಮವನ್ನು ಪ್ರತಿನಿಧಿಸುತ್ತಾನೆ.

**3-4** ಎರಡನೆಯ ಮುದ್ರೆಯು ಒಡೆಯಲ್ಪಟ್ಟಾಗ ಎರಡನೆಯ ಜೀವಿಯು ಕೆಂಪು ಕುದುರೆಯ ಸವಾರನನ್ನು ಕರೆಯಿತು, ಆತನು ಕೊಲ್ಲುವ ಹಾಗೂ ರಕ್ತ ಪಾತದ ದೇವದೂತನನ್ನು ಅಥವಾ ಆತ್ಮವನ್ನು ಪ್ರತಿನಿಧಿಸುತ್ತಾನೆ.

**5-6** ಯೋಹಾನನಿಗೆ ಕಾಣಿಸಿಕೊಂಡ ಮೂರನೆಯ ಸವಾರನು ಕಪ್ಪು ಕುದುರೆಯ ಮೇಲೆ ಇದ್ದನು. ಆತನು ಕ್ಷಾಮದ ದೇವದೂತನು ಅಥವಾ ಆತ್ಮನು. ಆತನು ಭೂಮಿಯ ಮೇಲೆ ಕ್ಷಾಮವನ್ನು ಬರಮಾಡಲಿದ್ದನು. ಈ ಸವಾರನು ಧಾನ್ಯಗಳನ್ನು ಅಳೆಯುವದಕ್ಕೆ ತ್ರಾಸನ್ನು ಹಿಡಿದುಕೊಂಡಿದ್ದನು; ಧಾನ್ಯದ ಕೊರೆಯ ಕಾರಣದಿಂದ ತ್ರಾಸು ಅಳತೆಗನುಸಾರವಾಗಿ ಧಾನ್ಯವನ್ನು

ವಿತರಿಸುವದವಕ್ಕೆ ಅವಶ್ಯಕವಾಗಿತ್ತು (ಯಾಜಕ ಕಾಂಡ 26:26). ದಿನದ ಕೂಲಿಗೆ ಒಂದು ಸೇರು ಗೋಧಿ ಅಥವಾ ಮೂರು ಸೇರು ಜವೆಗೋಧಿ ಮಾತ್ರವೇ ಕೊಡಲ್ಪಡುವದು [17] ಈ ಬೆಲೆಯು ಈ ಧಾನ್ಯಗಳ ಸಾಮಾನ್ಯ ಬೆಲೆಗಿಂತ ಹತ್ತು ಪಟ್ಟಾಗಿರುತ್ತದೆ– ಕ್ಷಾಮದ ಪರಿಸ್ಥಿತಿಗಳಲ್ಲಿ ಇದು ಸಹಜ. ನಾಲ್ಕು ಜೀವಿಗಳಲ್ಲಿ ಒಂದು ಜೀವಿಯು ಕಪ್ಪು ಕುದುರೆಯ ಸವಾರನಿಗೆ "ಎಣ್ಣೆಯನ್ನೂ ದ್ರಾಕ್ಷಾರಸವನ್ನೂ ಕೆಡಿಸಬೇಡ" ಎಂದು ಹೇಳಿತು. ಇದರ ಅರ್ಥವೇನೆಂದರೆ ಸವಾರನು ಎಣ್ಣೆ ದ್ರಾಕ್ಷಾರಸಗಳು ಉತ್ಪಾದನೆಗೊಳ್ಳುವ ಎಣ್ಣೆ ಮರಗಳನ್ನು ಅಥವಾ ದ್ರಾಕ್ಷಾ ಬಳ್ಳಿಗಳನ್ನು ಕೆಡಿಸಬಾರದು. ಸವಾರನು ಸ್ವಲ್ಪ ಮಟ್ಟಿಗೆ ಕ್ಷಾಮವನ್ನು ಬರಮಾಡಲಿದ್ದನು, ಹೊರತು ಪೂರ್ಣ ಕ್ಷಾಮವನ್ನಲ್ಲ.

**7-8** ನಾಲ್ಕನೆಯದಾಗಿ ಬೂದಿಬಣ್ಣದ ಕುದುರೆಯ ಸವಾರನು ಮರಣದ ದೂತನು ಅಥವಾ ಆತ್ಮನಾಗಿದ್ದನು, ಮತ್ತು ಆತನೊಂದಿಗೆ ಪಾತಾಳ ಎಂಬ ಎರಡನೆಯ ಸವಾರನಿದ್ದನು (ಪ್ರಕ. 1:18 ಮತ್ತು ವ್ಯಾಖ್ಯಾನ ನೋಡಿರಿ).. ಆ ಸವಾರನಿಗೆ ಭೂಮಿಯ ಜನಸಂಖ್ಯೆಯಲ್ಲಿ ಕಾಲುಭಾಗವನ್ನು ಕೊಲ್ಲುವದಕ್ಕೆ ಅಧಿಕಾರ ಕೊಡಲ್ಪಟ್ಟಿತ್ತು. [18]

**9** ಐದನೆಯ ಮುದ್ರೆಯು ಒಡೆಯಲ್ಪಟ್ಟಾಗ, ಯೋಹಾನನು ಕ್ರಿಸ್ತನ ನಿಮಿತ್ತವಾಗಿ ಹತರಾದವರ ಆತ್ಮಗಳನ್ನು ಕಂಡನು. ಅವರು ಭೂಲೋಕದಲ್ಲಿ ತಮ್ಮ ಶಿಲುಬೆಗಳನ್ನು ಹೊತ್ತುಕೊಂಡು ಯೇಸುವನ್ನು ಹಿಂಬಾಲಿಸಿದ್ದರು (ಮಾರ್ಕ 8:34-35 ಮತ್ತು ವ್ಯಾಖ್ಯಾನ ನೋಡಿರಿ). ದೇವರ ಸೃಷ್ಟಿಯಲ್ಲಿ ಅವರ ಸಾವು ಗಳು ಪರಲೋಕದ ಯಜ್ಞವೇದಿಯ ಮುಂದೆ ಸಮರ್ಪಿಸಲಾದ ಯಜ್ಞಗಳಂತಿದ್ದವು (2 ತಿಮೊಥೆ 4:6).

**10** ಹತ ಸಾಕ್ಷಿಗಳು, "ಸರ್ವಶಕ್ತನಾದ ಒಡೆಯನೇ, ನಮ್ಮನ್ನು ಕೊಂದದ್ದಕ್ಕಾಗಿ ಎಷ್ಟು ಕಾಲದವರೆಗೂ ಪ್ರತಿದಂಡನೆ ಮಾಡದೆ ಇರುವಿ?" ಎಂದು ಕೂಗುತ್ತಿದ್ದರು (ಕೀರ್ತನೆಗಳು 94:3; ಹಬಕ್ಕೂಕ 1:2). ಅವರು ವಯಕ್ತಿಕ ಸೇಡನ್ನು ತೀರಿಸಿಕೊಳ್ಳಲು ಅಪೇಕ್ಷಿಸುತ್ತಿರಲಿಲ್ಲ; ಅವರು ನ್ಯಾಯವನ್ನು ಕೋರುತ್ತಿದ್ದರು.

**11** ಬಳಿಕ ಪ್ರತಿಯೊಬ್ಬ ಹತಸಾಕ್ಷಿಗೆ ಬಿಳಿ ನಿಲುವಂಗಿಯು ಕೊಡಲ್ಪಟ್ಟಿತು, ಅದು ನೀತಿ ಹಾಗೂ ಪರಿಶುದ್ಧತೆಯನ್ನು ಸೂಚಿಸುತ್ತದೆ. ಅವರು ಹತಸಾಕ್ಷಿಗಳಾಗಬೇಕಾಗಿರುವ ಮಿಕ್ಕವರೆಲ್ಲರೂ ಕೊಲ್ಲಲ್ಪಡುವ ತನಕ ಕಾಯ್ದುಕೊಳ್ಳಬೇಕಾಗಿತ್ತು. ಹತಸಾಕ್ಷಿಗಳ ಸಂಖ್ಯೆಯು ಪೂರ್ಣಕೊಂಡಾಗ ದೇವರು ಭೂಮಿಯಲ್ಲಿ ಉಳಿದವರೆಲ್ಲರ ವಿರುದ್ಧ ಅಂತಿಮ ನ್ಯಾಯತೀರ್ಪನ್ನು ಬರಮಾಡುವನು.

**12-14** ಆರನೆಯ ಮುದ್ರೆಯು ಒಡೆಯಲ್ಪಟ್ಟಾಗ ಭಯಂಕರವಾದ ಮಹಾಭೂಕಂಪವು ಉಂಟಾಯಿತು. ತರುವಾಯ ಸೂರ್ಯನು ಕರೀಕಂಬಳಿಯಂತೆ ಕಪ್ಪಾದನು[19] ಮತ್ತು ಚಂದ್ರನು ರಕ್ತದಂತೆ ಕೆಂಪಾದನು. ನಕ್ಷತ್ರಗಳು ಆಕಾಶದಿಂದ ಬಿದ್ದವು (ಮಾರ್ಕ 13:24-25; ಅ.ಕೃತ್ಯ 2:20).

**15-17** ಭೂಲೋಕದ ನಿವಾಸಿಗಳಲ್ಲಿ ಪಶ್ಚಾತಾಪ ಪಡದಿದ್ದ ಹಾಗೂ ಕ್ರಿಸ್ತನಲ್ಲಿ ನಂಬಿಕೆಯಿಡದಿದ್ದವರು ಭಯಹಿಡಿದವರಾದರು. ಅವರು ದೇವರ ಭಯಂಕರ ಕೋಪಾಗ್ನಿಯನ್ನು ಅನುಭವಿಸಿದ ಹಾಗೆ ಬೆಟ್ಟಗಳಿಗೆ ತಮ್ಮ ಮೇಲೆ ಬೀಳಬೇಕೆಂದು ಬೇಡಿಕೊಂಡರು (ಹೋಶೆಯ 10:8). "ಅವರ ಕೋಪವು ಕಾಣಿಸುವ ಮಹಾದಿನವು ಬಂದದೆ ಅದರ ಮುಂದೆ ನಿಲ್ಲುವದಕ್ಕೆ ಯಾರು ಶಕ್ತರು?" ಎಂದು ಅವರು ಹೇಳಿದರು (ವಚನ 17). ಪ್ರವಾದಿಯಾದ ಮಲಾಕಿಯನು ಸಹ ಹೇಳಿದ್ದೇನೆಂದರೆಃ "ಆತನು ಬರುವ ದಿನವನ್ನು ಯಾರು ತಾಳಾರು? ಆತನು ಕಾಣಿಸಿಕೊಳ್ಳುವಾಗ ಯಾರು ನಿಂತಾರು? (ಮಲಾಕಿಯ 3:2). ಆ ದಿನದಲ್ಲಿ ಪಶ್ಚಾತಾಪ ಪಡೆದ ಪಾಪಿಗೆ ದೇವರ ಪ್ರಸನ್ನತೆಯಲ್ಲಿ ನಿಂತುಕೊಳ್ಳುವದಕ್ಕಿಂತ ಸಾಯುವದು ಹೆಚ್ಚು ಸುಲಭವಾಗಿರುವದು.

ದೇವರು ಪ್ರೀತಿ ಸ್ವರೂಪನು ಮಾತ್ರವೇ ಅಲ್ಲ, ಆದರೆ ಆತನು ಪಾಪದ ವಿರುದ್ಧ ಕೋಪಾಗ್ನಿಯ ದೇವರು ಸಹ ಆಗಿದ್ದಾನೆಂಬದನ್ನು ನಾವು ಎಂದಿಗೂ ಮರೆಯದಿರೋಣ. ಕರ್ತನ ಅಂತಿಮ ದಿನವು, ನ್ಯಾಯತೀರ್ಪಿನ ದಿನವು ಒಂದು ಭಯಂಕರವಾದ ದಿನವಾಗಿರುವದು (ಯೊವೇಲ 2:11). ಆತನ ಸಿಟ್ಟಿಗೆ ಯಾರು ತಡೆದಾರು? ಆತನ ರೋಷಾಗ್ನಿಗೆ ಯಾರು ನಿಂತಾರು? (ನಹೂಮ 1:6). ಕ್ರಿಸ್ತನಿಗೆ ನಂಬಿಗಸ್ಥರಾಗಿ ಉಳಿದವರು ಮಾತ್ರವೇ ಆ ದಿನದಲ್ಲಿ ಸಹಿಸಿಕೊಳ್ಳಲು ಶಕ್ತರಾಗುವರು (ಮಾರ್ಕ 13:13). ಆದದರಿಂದ, ನಾವು ತಡೆಮಾಡದಿರೋಣ, ಆದರೆ ತಕ್ಷಣವೇ ಪಶ್ಚಾತಾಪ ಪಟ್ಟು ಕ್ರಿಸ್ತನಲ್ಲಿ ನಂಬಿಕೆಯಿಡೋಣ.

---

## ಅಧ್ಯಾಯ - 7

### 144000 ಜನರು ಮುದ್ರೆ ಹೊಂದಿದ್ದು (7:1-8)

**1** ಏಳನೆಯ ಮುದ್ರೆಯು ಒಡೆಯಲ್ಪಡುವದಕ್ಕೆ ಮುನ್ನ (8ನೇ ಅಧ್ಯಾಯ) ಯೋಹಾನನು ಈ ಅಧ್ಯಾಯದಲ್ಲಿ ಬಣ್ಣಿಸಲ್ಪಟ್ಟಿರುವ ಇತರ ಎರಡು ದರ್ಶನಗಳನ್ನು ಕಂಡನುಃ ಮೊದಲನೆಯದಾಗಿ, 144, 000 ಜನರು ಮುದ್ರೆ ಹೊಂದುವರು (ವಚನಗಳು 1-8); ಮತ್ತು ಎರಡನೆಯದಾಗಿ, ಮಹಾ ಸಮೂಹದ ದರ್ಶನ (ವಚನಗಳು 9-17). ಈ 1ನೇ ವಚನದಲ್ಲಿ ಪ್ರಸ್ತಾಪಿಸಲಾದ ಭೂಮಿಯ ಚತುರ್ದಿಕ್ಕುಗಳ ಗಾಳಿಗಳು ನಾಶನದ ಗಾಳಿಗಳಾಗಿವೆ. ದೇವರ 1440000 ಸೇವಕರೆಲ್ಲರೂ

ಮುದ್ರೆ ಹಾಕಿಸಲ್ಪಡುವ ತನಕ (ವಚನ 3). ಈ ಗಾಳಿಗಳನ್ನುಹಿಂದಕ್ಕೆಹಿಡಿದಿಟ್ಟುಕೊಳ್ಳಲು ನಾಲ್ಕು ಮಂದಿ ದೇವದೂತರಿಗೆ ನೇಮಿಸಲಾಯಿತು.

2-3 ತರುವಾಯ ಯೋಹಾನನು ಮೂಡಣ ದಿಕ್ಕಿನಿಂದ ಮುದ್ರೆಯನ್ನು ಹಿಡಿದುಕೊಂಡು ಬರುವ ದೇವದೂತನನ್ನು ಕಂಡನು. ಈ ಮುದ್ರೆಯ ಮೇಲೆ ದೇವರ ಹಾಗೂ ಕುರಿಮರಿಯಾದ ಕ್ರಿಸ್ತನ ಹೆಸರುಗಳು ಬರೆಯಲ್ಪಟ್ಟಿದ್ದವು (ಪ್ರಕ. 14:1ನೋಡಿರಿ). ಈ ಮುದ್ರೆಯನ್ನು ಒತ್ತಿಸಿಕೊಂಡವರೆಲ್ಲರೂ ಆಗಿನಿಂದ ದೇವರಿಗೂ ಕುರಿಮರಿಗೂ ಸೇರಿದವರು. ದೇವರ ದಾಸರನ್ನು ಸೈತಾನನ ಬಲದಿಂದ ಕಾಪಾಡುವದು ಮುದ್ರೆಯನ್ನು ಒತ್ತುವದರ ಉದ್ದೇಶವಾಗಿತ್ತು. ಮುದ್ರೆ ಒತ್ತಿಸಿಕೊಂಡವರ ಸಂಖ್ಯೆಯು 144 000 (ವಚನ 4).

ದೇವರ ಈ 144 000 ದಾಸರು ಲೋಕಾಂತ್ಯದಲ್ಲಿ ಜೀವಂತವಾಗಿರುವಂಥ ವಿಶ್ವಾಸಿಗಳನ್ನು ಪ್ರತಿನಿಧಿಸುತ್ತಾರೆ; ಅಂದರೆ, ಕೊನೆಯ ತಲೆಮಾರಿನ ಕ್ರೈಸ್ತರು ಈ ಮುದ್ರೆ ಹಾಕಲ್ಪಡುವದು ಅವರನ್ನು ಸಂಕಟ ಹಾಗೂ ಮರಣದಿಂದ ರಕ್ಷಿಸುವದಿಲ್ಲ; ವಾಸ್ತವದಲ್ಲಿ, ಆ ಕೊನೆಯ ತಲೆಮಾರಿನ ಕ್ರೈಸ್ತರೆಲ್ಲರೂ ಕೊಲ್ಲಲ್ಪಡುವರು (ಪ್ರಕಟಣೆ 13:15 ನೋಡಿರಿ).

4 ಬೈಬಲಿನಲ್ಲಿ 144, 000 ಸಂಖ್ಯೆಗೆ ಒಂದು ವಿಶೇಷ ಅರ್ಥವಿರುತ್ತದೆ ಅದು ಸಂಪೂರ್ಣತೆಯನ್ನು ಸೂಚಿಸುತ್ತದೆ.[20] ಬೇರೆ ಮಾತುಗಳಲ್ಲಿ ಹೇಳುವದಾದರೆ, ಯೋಹಾನನು ಇಲ್ಲಿ ಅವಶ್ಯಕವಾಗಿ 144000ಸಂಖ್ಯೆಯನ್ನೇ ಸೂಚಿಸದೆ ಕೊನೆಯ ತಲೆಮಾರಿನ ಕ್ರೈಸ್ತರನ್ನೆಲ್ಲಾ ಸೂಚಿಸುತ್ತಿದ್ದಾನೆಂದು ನಾವು ಅರ್ಥಮಾಡಿಕೊಳ್ಳಬಹುದು.

144 000ಜನರು ಇಸ್ರಾಯೇಲ್ಯರ ಪ್ರತಿಯೊಂದು ಕುಲಕ್ಕೆ ಸೇರಿದವರು ಎಂದು ಇಲ್ಲಿ ಬರೆಯಲ್ಪಟ್ಟಿದೆ. ಇಲ್ಲಿ ಇಸ್ರಾಯೇಲ ಎಂಬದರ ಅರ್ಥವು ಯೆಹೂದ್ಯ ಜನಾಂಗವಲ್ಲ (ಅದರ ಸಾಮಾನ್ಯ ಅರ್ಥ), ಆದರೆ ಬದಲಾಗಿ, ನಿಜವಾದ ಆತ್ಮೀಕ ಇಸ್ರಾಯೇಲ ಅಂದರೆ ಕ್ರಿಸ್ತನ ಸಭೆ ಆಗಿರುತ್ತದೆ (ಮತ್ತಾಯ 19:28; ರೋಮ 2:28-29; ಗಲಾತ್ಯ 3:29; 6:16; ಫಿಲಿಪ್ಪಿ 3:3, 1 ಪೇತ್ರ 2:9 ನೋಡಿರಿ).

5-8 ಯಾಕೋಬನ ಹನ್ನೆರಡು ಮಂದಿ ಮಕ್ಕಳ ಈ ಪಟ್ಟಿ ಹಾಗೂ ಅವರ ಕುಲಗಳಲ್ಲಿ ಅಸಹಜವಾದದ್ದೊಂದು ಇರುತ್ತದೆಃ ಯಾಕೋಬನ ಪು ತ್ರರಲ್ಲಿ ಒಬ್ಬನಾದ ದಾನನ ಹೆಸರು ಕೈಬಿಡಲ್ಪಟ್ಟಿದೆ (ಆದಿಕಾಂಡ 35:23-25). ಅದರ ಸ್ಥಳದಲ್ಲಿ ಯಾಕೋಬನ ಮೊಮ್ಮಗನಾದ ಮನಸ್ಸೆಯ (ಯೋಸೇಫನ ಮಗನ) ಹೆಸರು ಬರೆಯಲ್ಪಟ್ಟಿದೆ (ವಚನ 6). ದಾನ್ ಸಂತತಿಯವರು ಪ್ರಾರಂಭದಿಂದಲೂ ವಿಗ್ರಹಗಳನ್ನು ಆರಾಧಿಸಿದ್ದರಿಂದ ದಾನ್ ಕುಲವು ಕೈಬಿಡಲ್ಪಟ್ಟಿದೆ ಎಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ. ಹನ್ನೆರಡು ಕುಲಗಳನ್ನು ಪೂರ್ತಿಮಾಡಲು ಮನಸ್ಸೆಯ ಹೆಸರು ಸೇರಿಸಲ್ಪಟ್ಟಿದೆ.

## ಮಹಾಜನ ಸಮೂಹ (7:9-17)

9-10 ಈ ಅಧ್ಯಾಯದಲ್ಲಿ ಬಣ್ಣಿಸಲಾಗಿರುವ ಯೋಹಾನನು ಕಂಡ ಎರಡನೆಯ ದರ್ಶವು ಮೊದಲಿನದಕ್ಕಿಂತ ವ್ಯತ್ಯಾಸವಾಗಿದೆ. ಯೋಹಾನನು 144 000 ದೇವದಾಸರ ಬದಲಾಗಿ ಎಣಿಸಲಾ ಗದಂಥ ಮಹಾ ಸಮೂಹವನ್ನು ಕಂಡನು. ಅವರು ಮಹಾಹಿಂಸೆಯನ್ನು (ಸಂಕಟವನ್ನು) ಅನುಭವಿಸಿ ಬಂದವರು (ವಚನ 14). ಬೇರೆ ಮಾತುಗಳಲ್ಲಿ ಹೇಳುವದಾದರೆ, ಅವರು ಈಗ ಪರಲೋಕಕ್ಕೆ ಬಂದು ಸೇರಿದ್ದರು. ಭೂಮಿಯ ಮೇಲೆ ಬಂದಿದ್ದ ಭಯಂಕರ ನ್ಯಾಯತೀರ್ಪುಗಳು ಹಾಗೂ ವಿನಾಶಗಳು ಈಗ ಅಂತ್ಯಗೊಂಡಿದ್ದವು. ಹೀಗೆ ಯೋಹಾನನು ಈಗ ಲೋಕಾಂತ್ಯವು ಸಂಭವಿಸಿದ್ದ ಬಳಿಕ ಪರಲೋಕದ ದರ್ಶನವನ್ನು ಕಾಣುತ್ತಿದ್ದಾನೆ. ಎಲ್ಲಾ ತಲೆಮಾರುಗಳ ಕ್ರಿಸ್ತನ ವಿಶ್ವಾಸಿಗಳು ಕುರಿಮರಿಯ ಸಿಂಹಾಸನದ ಮುಂದೆ ನಿಂತಿದ್ದರು. ಅವರು ಕ್ರಿಸ್ತನ ನೀತಿಯೆಂಬ ಬಿಳಿ ನಿಲುವಂಗಿಗಳನ್ನು ಧರಿಸಿಕೊಂಡಿದ್ದರು. ಅವರು ಸಂತೋಷ ಹಾಗೂ ಜಯದ ಗುರುತಾಗಿ ಕರ್ಜೂರದ ಗರಿಗಳನ್ನು ಹಿಡಿದಿದ್ದರು (ಯೋಹಾನ 12:13).

11-12 ಎಲ್ಲಾ ದೇವದೂತರು ಸಹ ಸಿಂಹಾಸನ ಸುತ್ತಲೂ ನಿಂತಿದ್ದರು– ಅವರು ಕೋಟ್ಯಾನು ಕೋಟಿಯಾಗಿದ್ದರು (ಪ್ರಕ. 5:11). ಅವರು ಪ್ರಕ. 5:12ರಲ್ಲಿ ಕುರಿಯಾದಾತನನ್ನು ಆರಾಧಿಸಿದಂತೆಯೇ ಈ ದರ್ಶನದಲ್ಲಿ ಸಹ ಅವರು ಆತನನ್ನು ಹೆಚ್ಚು ಕಡಿಮೆ ಅದೇ ಮಾತುಗಳಲ್ಲಿ ಆರಾಧಿಸಿದರು.

13-14 ಹಿರಿಯರಲ್ಲಿ ಒಬ್ಬನು ಯೋಹಾನನಿಗೆ, ಬಿಳೀ ನಿಲುವಂಗಿಗಳನ್ನು ತೊಟ್ಟು ಕೊಂಡವರಾದ ಇವರು ಎಲ್ಲಿಂದ ಬಂದವರು ನಿನಗೆ ಗೊತ್ತಲ್ಲವೇ? ಎಂದು ಕೇಳಿದನು. ಯೋಹಾನನು ಅವನಿಗೆ, "ನೀನೇ ಬಲ್ಲೆ ದಯವಿಟ್ಟು ನನಗೆ ಹೇಳು" ಎಂದು ಉತ್ತರಿಸಿದನು. ಆದದರಿಂದ, ಹಿರಿಯನು ಯೋಹಾನನಿಗೆ ಅವರು ಮಹಾಹಿಂಸೆಯನ್ನು ಅನುಭವಿಸಿ ಬಂದವರು– ಅಂದರೆ, ಲೋಕಾಂತ್ಯಕ್ಕೆ ಸಂಬಂಧಪಟ್ಟ ಮಹಾ ವಿಕೋಪಗಳನ್ನು ಹಾಗೂ ಉಪದ್ರವಗಳನ್ನು ಅನುಭವಿಸಿ ಬಂದವರು ಎಂದು ಹೇಳಿದನು (ಮಾರ್ಕ 13:13; ಅ.ಕೃತ್ಯ 14:22). ಅವರ ನಿಲುವಂಗಿಗಳು ಕ್ರಿಸ್ತನ ರಕ್ತದಲ್ಲಿ ತೊಳೆಯಲ್ಪಟ್ಟವು ಳಾಗಿ ಈಗ ಕ್ರಿಸ್ತನ ನೀತಿಯಿಂದ ಶುಭ್ರ[21]. ಆಗಿದ್ದವು ; ಅಂದರೆ, ಕ್ರಿಸ್ತನ ರಕ್ತವು ಅವರ ಪಾಪಗಳನ್ನು ತೊಳೆದಿತ್ತು (ಇಬ್ರಿಯ 9:14; 1 ಯೋಹಾನ 1:7 ನೋಡಿರಿ).

15 ವಿಶ್ವಾಸಿಗಳ ಸಮೂಹದವರು ಕ್ರಿಸ್ತನ ನೀತಿಯ ಶುಭ್ರ ನಿಲುವಂಗಿಗಳನ್ನು ಧರಿಸಿಕೊಂಡಿದ್ದರಾದ್ದರಿಂದ ಅವರು ದೇವರ ಸಿಂಹಾಸನದ ಮುಂದೆ ನಿಲ್ಲುವದಕ್ಕೆ ಅನುಮತಿಸಲ್ಪಟ್ಟಿದ್ದರು. ಅವರು ಹಗಲಿರುಳು[22]- ಅಂದರೆ, ನಿರಂತರವಾಗಿ – ಆತನ ಸೇವೆ ಮಾಡುವರು. ಅವರು ಆತನ ಆಲಯದಲ್ಲಿ ಆತನ ಸೇವೆ ಮಾಡುವರು. ಇಲ್ಲಿ ದೇವರ ಆಲಯ ಅಂದರೆ

ಒಂದು ಕಟ್ಟಡವಲ್ಲ; ಬದಲಾ ಗಿ ಅದು ದೇವರ ಪ್ರಸನ್ನತೆ ಎಂದು ಅರ್ಥವಾಗಿದೆ. ಪರಲೋಕವು ದೇವರ "ಆಲಯ" ದೇವರು ವಿಶ್ವಾಸಿಗಳನ್ನು ಗುಡಾರದಂತೆ ಆವರಿಸುವನು; ಅಂದರೆ, ಆತನು ಅವರನ್ನು ಸಂರಕ್ಷಿಸಿ ಪೋಷಿಸುವನು. ಹೀಗೆ ಈ ದರ್ಶನದಲ್ಲಿ ದೇವರು ತನ್ನ ಜನರ ಮಧ್ಯ ವಾಸಿಸುವನೆಂದು ಹಳೆ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟ ವಾಗ್ದಾನವು ಈಗ ನೆರವೇರಿದೆ (ಯೆಹೆಜ್ಕೇಲ 37:27; ಜೆಕರ್ಯ 2:10).

**16-17** ಪರಲೋಕದಲ್ಲಿ, ವಿಶ್ವಾಸಿಗಳಿಗೆ ಹಸಿವೆಯಾಗಲಿ ಬಾಯಾರಿಕೆಯಾಗಲಿ ಇರುವದಿಲ್ಲ (ಯೆಶಾಯ 49:10). ಯೇಸು ಹೇಳಿದ್ದೇನೆಂದರೆಃ "ನೀತಿಗಾಗಿ ಹಸಿದು ಬಾಯಾರಿದವರು ಧನ್ಯರು; ಅವರಿಗೆ ತೃಪ್ತಿಯಾಗುವದು" (ಮತ್ತಾಯ 5:6). "ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ, ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆ ಯಾಗುವದಿಲ್ಲ" (ಯೋಹಾನ 6:35). ದೇವರ ಕುರಿಯಾದಾತನು ಕುರಿಗಳ ಕುರುಬನಾಗಿದ್ದಾನೆ! (ಯೋಹಾನ 10:11), ಕರ್ತನು ನನ್ನ ಕುರುಬನು ನಾನು ಕೊರತೆಪಡೆನು.......... ಆತನು ವಿಶ್ರಾಂತಿಕರವಾದ ನೀರುಗಳ ಬಳಿಗೆ ನನ್ನನ್ನು ನಡಿಸುತ್ತಾನೆ (ಕೀರ್ತನೆಗಳು 23:1-2). ಆತನು ಅವರನ್ನು ಜೀವಕರವಾದ ಒರತೆಗಳ ಬಳಿಗೆ ನಡಿಸುವನು (ಯೋಹಾನ 4:14; 7:37-38 ನೋಡಿರಿ). ಮತ್ತು ದೇವರು ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು.

ಇಲ್ಲಿ ಯೋಹಾನನು ನಮಗೆ ನಮ್ಮ ನಿತ್ಯನಿವಾಸವಾದ ಪರಲೋಕದ ದರ್ಶನವನ್ನು ತೋರಿಸುತ್ತಾನೆ. ಈ ರೀತಿಯಾಗಿ ಪರಲೋಕದಲ್ಲಿ ದೇವರೊಂದಿಗೂ ಕ್ರಿಸ್ತನೊಂದಿಗೂ ಜೀವಿಸುವದು ನಮ್ಮ ಪ್ರತಿಫಲವಾಗಿರುತ್ತದೆ. ನಮ್ಮಲ್ಲಿ ಯಾವನಾದರೂ ಕ್ರಿಸ್ತನ ನಿಮಿತ್ತ ನೋವು ಅಥವಾ ಕಷ್ಟವನ್ನು ಅನುಭವಿಸುತ್ತಿರುವವನು ಇದ್ದಾನೋ? ಯಾವಾನಾದರೂ ಕ್ರಿಸ್ತನಿಗೋಸ್ಕರ ಹಿಂಸಿಸಲ್ಪಡುತ್ತಿದ್ದಾನೋ? ಇರುವದಾದರೆ ಆ ವ್ಯಕ್ತಿಯು ಯೇಸುವಿನ ಮಾತುಗಳನ್ನು ಜ್ಞಾಪಿಸಿಕೊಳ್ಳಲಿಃ "ಸಂತೋಷಪಡಿರಿ, ಉಲ್ಲಾಸಪಡಿರಿ; ಪರಲೋಕದಲ್ಲಿ ನಿಮಗೆ ಬಹಳ ಫಲಸಿಕ್ಕುವದು" (ಮತ್ತಾಯ 5:12).

---

## ಅಧ್ಯಾಯ - 8

### ಏಳನೆಯ ಮುದ್ರೆ ಹಾಗೂ ಏಳು ತುತೂರಿಗಳು (8:1-13)

**1-2** 6ನೇ ಅಧ್ಯಾಯದಲ್ಲಿ ಕುರಿಯಾದಾತನು ಸುರುಳಿಗೆ ಹಾಕಲಾಗಿದ್ದ ಏಳು ಮುದ್ರೆಗಳಲ್ಲಿ ಆರು ಮುದ್ರೆಗಳನ್ನು ಒಡೆದನು, ಅವು ಗಳಲ್ಲಿ ಭೂಮಿಯ ಮೇಲೆ ಬರಲಿದ್ದ ಎಲ್ಲಾ ನ್ಯಾಯ ತೀರ್ಪು ಗಳ ಬಗ್ಗೆ ಬರೆಯಲಾಗಿತ್ತು (ಪ್ರಕ. 5:1) ಈಗ ಕುರಿಯಾದಾತನು ಏಳನೆಯ ಮುದ್ರೆಯನ್ನು ಒಡೆಯುವ ಸಮಯ ಬಂದಿದೆ.

ಏಳನೆಯ ಮುದ್ರೆಯು ಒಡೆಯಲ್ಪಟ್ಟಾಗ ಯೋಹಾನನು ಏಳು ಮಂದಿ ದೇವದೂತರನ್ನು ಕಂಡನು ಅವರಿಗೆ ಏಳು ತುತೂರಿಗಳು ಕೊಡಲ್ಪಟ್ಟಿದ್ದವು. ಈ ಏಳು ದೇವದೂತರು ಭೂಮಿಯಲ್ಲಿನ ಅವಿಶ್ವಾಸಿ ಜನರ ಮೇಲೆ ಬರಲಿದ್ದ ಉಪದ್ರವಗಳನ್ನು ಪ್ರಕಟಿಸಲು ನೇಮಿಸಲ್ಪಟ್ಟಿದ್ದರು.

**3-5** ಇನ್ನೊಬ್ಬ ದೇವದೂತನಿಗೆ ದೇವಜನರೆಲ್ಲರ ಪ್ರಾರ್ಥನೆಗಳೊಂದಿಗೆ ಸಮರ್ಪಿಸುವದಕ್ಕಾಗಿ ಧೂಪವು ಕೊಡಲ್ಪಟ್ಟಿತ್ತು (ವಚನ 3). ಪ್ರಕಟಣೆ 5:8ರ ಪ್ರಕಾರವಾಗಿ ದೇವ ಜನರ ಪ್ರಾರ್ಥನೆಗಳೇ ಧೂಪದಂತಿದ್ದವು. ಹತ ಸಾಕ್ಷಿಗಳ ಪ್ರಾರ್ಥನೆಗಳು ಸಹ ದೇವರ ಮುಂದೆ ಧೂಪದಂತೆ ಏರಿಹೋದವು (ಪ್ರಕ. 6:9-10). ಈಗ ಈ ಎಲ್ಲಾ ಪ್ರಾರ್ಥನೆಗಳು ನೆರವೇರಲಿದ್ದವು. ದೇವರ ದೂತನು ಧೂಪಾರತಿಯನ್ನು ತೆಗೆದುಕೊಂಡು ಯಜ್ಞವೇದಿಯ ಮೇಲಿದ್ದ ಕೆಂಡಗಳಿಂದ ತುಂಬಿಸಿ ಭೂಮಿಗೆ ಬಿಸಾಡಿದನು. ಆಗ ಏಳು ತುತೂರಿಗಳ ಉಪದ್ರವಗಳು ಪ್ರಾರಂಭಗೊಂಡವು.

**6** ಯೋಹಾನನ ಪ್ರಕಟಣೆಯ ಪ್ರಕಾರವಾಗಿ ಜನರನ್ನು ಪಶ್ಚಾತಾಪಕ್ಕೆ ನಡಿಸುವ ಉದ್ದೇಶದಿಂದ ದೇವರು ಈ ಉಪದ್ರವಗಳನ್ನು ಭೂಮಿಯ ಮೇಲೆ ಬರಮಾಡಿದನು. ಈ ಉಪದ್ರವಗಳು ಭೂಮಿಯನ್ನೆಲ್ಲಾ ನಾಶಮಾಡುವದಕ್ಕಾಗಿ ಅಲ್ಲ; ಆದರೆ, ಕೆಲಭಾಗವನ್ನು ಮಾತ್ರವೇ ನಾಶಮಾಡುವದಕ್ಕಾಗಿ ಆಗಿತ್ತು. ಹೇಗಿದ್ದರೂ, ಮನುಷ್ಯರು ಪಶ್ಚಾತಾಪ ಪಡಲಿಲ್ಲ; ಬದಲಾಗಿ, ಅವರ ಹೃದಯಗಳು ಮತ್ತಷ್ಟು ಕಠಿಣಗೊಂಡವು. ದೇವರು ಐಗುಪ್ತ್ಯರ ಮೇಲೆ ಉಪದ್ರವಗಳನ್ನು ಬರಮಾಡಿದಾಗ ಫರೋಹನ ಹೃದಯವು ಕಠಿಣಗೊಂಡ ಪ್ರಕಾರವೇ ಲೋಕಾಂತ್ಯದಲ್ಲಿಯೂ ಇರುವದು. ಆ ಸಮಯದಲ್ಲಿ ಅಂತಿಮ ಸಂಕಟ ಕಾಲವು ಬಂದಾಗ ಮನುಷ್ಯರ ಹೃದಯಗಳು ಮತ್ತಷ್ಟು ಹೆಚ್ಚಾಗಿ ಕಠಿಣವಾಗುವವು. ಮತ್ತು ದೇವರನ್ನು ವಿರೋಧಿಸುವದಕ್ಕೆ ಪ್ರಾರಂಭಿಸುವರು. ಮತ್ತು ದೇವರು ತನ್ನ ಜನರನ್ನು ಐಗುಪ್ತದಿಂದ ಬಿಡಿಸಿ ಅವರಿಗೆ ವಾಗ್ದಾನ ಮಾಡಿದ್ದ ದೇಶದೊಳಕ್ಕೆ ನಡಿಸಿದ ಹಾಗೆಯೇ ಲೋಕಾಂತ್ಯದಲ್ಲಿ ದೇವರು ಎಲ್ಲಾ ವಿಶ್ವಾಸಿಗಳನ್ನು ಕಡೇ ಸಂಕಟ ಕಾಲದೊಳಗಿಂದ ಬಿಡಿಸಿ ಪರಲೋಕದಲ್ಲಿ ತನ್ನ ಪ್ರಸನ್ನತೆಯೊಳಗೆ ನಡಿಸುವನು.

**7** ಮೊದಲನೆಯ ಉಪದ್ರವವು ರಕ್ತದಲ್ಲಿ ಕಲಿಸಿದ್ದ ಅನೇಕಲ್ಲಿನ ಮಳೆಯೂ ಬೆಂಕಿಯೂ ಆಗಿತ್ತು; ಫಲಿತವಾಗಿ ಭೂಮಿಯೊಳಗೆ ಮೂರರಲ್ಲಿ ಒಂದು ಭಾಗ ಸುಟ್ಟು ಹೋಯಿತು (ವಿಮೋಚನಕಾಂಡ 9:23-24).

**8-9** ಎರಡನೆಯ ಉಪದ್ರವವು ಭೂಮಿಯ ಸಮುದ್ರಗಳ ಮೂರರಲ್ಲಿ ಒಂದು ಭಾಗವನ್ನು ನಾಶಮಾಡಿತು (ವಿಮೋಚನ ಕಾಂಡ 7:20-21).

**10-11** ಮೂರನೆಯ ಉಪದ್ರವವು ಭೂಮಿಯಲ್ಲಿನ ನದಿಗಳ ಹಾಗೂ ಒರತೆಗಳ ಮೂರರಲ್ಲಿ ಒಂದು ಭಾಗದಷ್ಟು ನೀರನ್ನು ಕಹಿಗೊಳಿಸಿತು (ಯೆರೆಮಿಯ 9:15). ನೀರಲ್ಲಿ ಬಿದ್ದ ನಕ್ಷತ್ರಕ್ಕೆ ಮಾಚಿಪತ್ರೆ ಎಂದು ಹೆಸರು. ಮಾಚಿಪತ್ರೆಯು ಅತಿ ಕಹಿಯಾದ ಗಿಡದ ಹೆಸರಾಗಿದೆ.

**12-13** ನಾಲ್ಕನೆಯ ಉಪದ್ರವವು ಕತ್ತಲೆಯು (ವಿಮೋಚನಕಾಂಡ 10:21-23; ಮಾರ್ಕ 13:24). ಈ ಉಪದ್ರವವು ಬಂದ ಬಳಿಕ ಒಂದು ಗರುಡ ಪಕ್ಷಿಯು ಉಳಿದ ಮೂರು ಉಪದ್ರವಗಳು ಇನ್ನೂ ಹೆಚ್ಚು ಘೋರವಾಗಿರುವವು ಎಂದು ಎಚ್ಚರಿಕೆ ನೀಡಿತು.

---

# ಅಧ್ಯಾಯ - 9

## ಕೊನೆಯ ಮೂರು ಉಪದ್ರವಗಳು, ಅಥವಾ ವಿಪತ್ತುಗಳು. (9:1-25)

**1** ಐದನೆಯ ತುತೂರಿಯನ್ನೂದಿದಾಗ ಯೋಹಾನನು ಆಕಾಶದಿಂದ ಭೂಮಿಗೆ ಬಿದ್ದ ಒಂದು ನಕ್ಷತ್ರವನ್ನು ಕಂಡನು. ನಕ್ಷತ್ರವು ಒಂದು ರೀತಿಯ ದೇವದೂತನಾಗಿದ್ದು ಆತನು ಐದನೆಯ ಉಪದ್ರವವನ್ನು, ಮಿಡತೆಗಳ ಉಪದ್ರವವನ್ನು, ಬರಮಾಡುವದಕ್ಕೆ ನೇಮಕ ಮಾಡಲ್ಪಟ್ಟಿದ್ದನು (ವಚನ 3).

**2-3** ಈ ಮಿಡತೆಗಳು ಅಥವಾ ದೆವ್ವಗಳು ಅಧೋಲೋಕದ ಒಳಗಿಂದ ಬಂದವು (ಲೂಕ 8:31). ಹಳೆ ಒಡಂಬಡಿಕೆಯಲ್ಲಿ ಮಿಡತೆಗಳು ಜನರ ವಿರುದ್ಧದ ದೇವರ ನ್ಯಾಯತೀರ್ಪಿನ ಸಂಕೇತವಾಗಿದ್ದವು (ವಿಮೋಚನಕಾಂಡ 10: 13-15; ಯೋವೇಲ 1:2-7; 2:1-11). ಈಗಲೂ ಉತ್ತರ ಆಫ್ರಿಕಾದಲ್ಲಿ ಆಗಾಗ ಮಿಡತೆಗಳ ಬೃಹತ್ ಸೈನ್ಯಗಳು ಬಂದು ಕಣ್ಣಿಗೆ ಕಂಡದ್ದನ್ನೆಲ್ಲಾ ತಿಂದು ಭೂಮಿಯನ್ನು ಬರಿದಾಗಿ ಮಾಡಿದ್ದವು. ಕೆಲವು ಸಮಯ ಮಿಡತೆಗಳು ಎಷ್ಟೋ ಅಸಂಖ್ಯವಾಗಿದ್ದು ಅವುಗಳ ಸಾಲು ನಾಲ್ಕು ಮೈಲು ಅಗಲ ಹಾಗೂ ಮೂರು ಮೀಟರುಗಳಷ್ಟು ಆಳವಾಗಿರುತ್ತವೆ!.

**4** ಯೋಹಾನನು ತನ್ನ ದರ್ಶನದಲ್ಲಿ ಕಂಡ ಮಿಡತೆಗಳು ಚೇಳುಗಳಂತೆ ಇದ್ದವು. ಅವುಗಳಿಗೆ ಹಣೆಯ ಮೇಲೆ ದೇವರ ಮುದ್ರೆಯಿಲ್ಲದವರಾದ ಮನುಷ್ಯರನ್ನು ಹಿಂಸಿಸುವದಕ್ಕೆ ಶಕ್ತಿ ಕೊಡಲ್ಪಟ್ಟಿತ್ತು (ಪ್ರಕ. 7:2-3); ಅಂದರೆ, ಅವಿಶ್ವಾಸಿಗಳನ್ನು ಬಾಧೆಪಡಿಸುವ ಶಕ್ತಿಕೊಡಲಾಗಿತ್ತು. ಹೇಗಿದ್ದರೂ, ಅವುಗಳು ಬೇರೆ ಯಾವದಕ್ಕೂ ದಕ್ಕೆಯನ್ನುಂಟು ಮಾಡಬಾರದಾಗಿತ್ತು. ಸೈತಾನನ ಸೇನೆಗಳು ಸಹ ಅಂತಿಮವಾಗಿ ದೇವರ ಸ್ವಾಧೀನದಲ್ಲಿ ಇರುತ್ತವೆಂಬದನ್ನು ಗಮನಿಸಿರಿ.

**5-6** ಮಿಡತೆಗಳಿಗೆ ಜನರನ್ನು ಕೊಲ್ಲುವ ಶಕ್ತಿಕೊಡಲ್ಪಟ್ಟಿರಲಿಲ್ಲ, ಆದರೆ ಐದು ತಿಂಗಳುಗಳ ಕಾಲ[23] ಅವರನ್ನು ಬಾಧಿಸಬಹುದಾಗಿತ್ತಷ್ಟೇ. ಇದರ ಮೂಲಕ, ದೇವರು ಅವಿಶ್ವಾಸಿಗಳಿಗೆ ಪಶ್ಚಾತ್ತಾಪಪಟ್ಟು ಕ್ರಿಸ್ತನ ಕಡೆಗೆ ತಿರುಗಿ ಕೊಳ್ಳಲು ಇನ್ನೊಂದು ಅವಕಾಶ ನೀಡುತ್ತಿರುವನು.

**7-11** ಈ ವಚನಗಳಲ್ಲಿ ಯೋಹಾನನು ಈ ಮಿಡತೆಗಳ ಚಿತ್ರಣವನ್ನು ನೀಡುತ್ತಾನೆ. ಮಿಡತೆಗಳು ಕುದುರೆಗಳಷ್ಟು ದೊಡ್ಡವುಗಳಾಗಿದ್ದವು. ಅವುಗಳ ರಾಜನು ಅಬಿದ್ದೋನ ಎಂಬ ದುಷ್ಟ ದೂತನಾಗಿದ್ದನು, ಅಬಿದ್ದೋನ ಅಂದರೆ ನಾಶಕನು.

**12** ಇಲ್ಲಿ ಯೋಹಾನನು ಈ ಐದನೆಯ ಉಪದ್ರವವನ್ನು ಮೊದಲನೆಯ ವಿಪತ್ತು ಎಂದು ಕರೆಯುತ್ತಾನೆ. ಆರನೆಯ ಹಾಗೂ ಏಳನೆಯ ಉಪದ್ರವಗಳು ಸಹ ಎರಡನೆಯ ಹಾಗೂ ಮೂರನೆಯ ವಿಪತ್ತುಗಳು ಎಂದು ಕರೆಯಲ್ಪಟ್ಟಿವೆ.

**13-14** ನಂತರ, 13-19 ವಚನಗಳಲ್ಲಿ ಯೋಹಾನನು ಆರನೆಯ ಉಪದ್ರವವನ್ನೂ (ಅಥವಾ ಎರಡನೆಯ ವಿಪತ್ತನ್ನು) ಬಣ್ಣಿಸುತ್ತಾನೆ. ದೇವರು ಆರನೆಯ ದೇವದೂತನಿಗೆ ಆಜ್ಞಾಪಿಸಿದ್ದೇನೆಂದರೆ: "ಯೂಫ್ರೇಟಿಸ್ ಎಂಬ ಮಹಾನದಿಯ ಬಳಿಯಲ್ಲಿ ಕಟ್ಟಿರುವ ನಾಲ್ಕು ಮಂದಿ ದೇವದೂತರನ್ನು ಬಿಚ್ಚಿಬಿಡು[24]".

**15-16** ಈ ನಾಲ್ಕು ಮಂದಿ ದೇವದೂತರು ಇಪ್ಪತ್ತು ಕೋಟಿ ಕುದುರೆ ದಂಡಿನವರ ಸೇನಾಧಿಪತಿಗಳಾಗಿದ್ದರು. ಈ ಸೈನ್ಯಕ್ಕೆ ಅವಿಶ್ವಾಸಿಗಳೊಳಗೆ ಮೂರರಲ್ಲಿ ಒಂದು ಭಾಗವನ್ನು ಕೊಲ್ಲುವದಕ್ಕೆ ಅಪ್ಪಣೆ ಮಾಡಲಾಗಿತ್ತು. ಈ ಸೈನ್ಯವು ಲೋಕದ ಮೇಲೆ ದೇವರು ಬರಮಾಡುವ ಅಂತಿಮ ನ್ಯಾಯತೀರ್ಪಿನ ತಕ್ಕಕಾಲಕ್ಕಾಗಿ ಕಾಯುತ್ತಲಿತ್ತು.

**17-19** ಇಲ್ಲಿ ಯೋಹಾನನು ಕುದುರೆಗಳ ಹಾಗೂ ಅವುಗಳ ಸವಾರರ ಚಿತ್ರಣವನ್ನು ನೀಡುತ್ತಾನೆ. ಕೊಲ್ಲುವ ಕಾರ್ಯವನ್ನು ಸವಾರರದಲ್ಲ; ಆದರೆ ಕುದುರೆಗಳು ಮಾಡಿದವು; ಅವುಗಳು ಮನುಷ್ಯರನ್ನು ತಮ್ಮ ಬಾಯಿಗಳಿಂದಲೂ ಬಾಲಗಳಿಂದಲೂ ಕೊಂದವು.

**20-21** ಈ ಭಯಂಕರವಾದ ನಾಶನದ ಹೊರತಾಗಿಯೂ ಮನುಷ್ಯರು ಪಶ್ಚಾತಾಪ ಪಡಲಿಲ್ಲ. ಅವರ ಹೃದಯಗಳು ದೇವರ ವಿಷಯದಲ್ಲಿ ಕಠಿಣಗೊಂಡವು. ಅವರು ದೆವ್ವಗಳ ಹಾಗೂ ವಿಗ್ರಹಳ ಪೂಜೆಯನ್ನು ಬಿಡಲಿಲ್ಲ[25] ಅವುಗಳು ಈಗ ಅವರನ್ನು ನಾಶಮಾಡುತ್ತಿದ್ದವು. ಸೈತಾನನು ನಿಜವಾಗಿಯೂ ಅವರನ್ನು ವಂಚಿಸಿದ್ದನು! (ಕೀರ್ತನೆಗಳು 115:4-8; ದಾನಿಯೇಲ 5:22-33).

## ಅಧ್ಯಾಯ - 10

### ದೇವದೂತ ಹಾಗೂ ಚಿಕ್ಕ ಸುರುಳಿ (10:1-11)

**1-4** ಇಷ್ಟೊತ್ತಿಗೆ, ಆರು ತುತೂರಿಗಳು ಊದಲ್ಪಟ್ಟಿವೆ. ಆದರೆ ಏಳನೆಯ ತುತೂರಿಯು ಊದಲ್ಪಡುವದಕ್ಕೆ, ಮುಂಚೆ ಯೋಹಾನನು ಇನ್ನೂ ಎರಡು ದರ್ಶನಗಳನ್ನು ಪಡೆದನುಃ ಮೊದಲನೆಯದಾಗಿ, ಒಬ್ಬ ದೇವದೂತನ ಹಾಗೂ ಚಿಕ್ಕ ಸುರುಳಿ (ವಚನ 1:11) ಮತ್ತು ಎರಡನೆಯದಾಗಿ, ಇಬ್ಬರು ಸಾಕ್ಷಿಗಳ ದರ್ಶನ (ಪ್ರಕ. 11:1-13). ಮೊದಲನೆಯ ದರ್ಶನದಲ್ಲಿ, ಯೋಹಾನನು ಒಬ್ಬ ಬಲಿಷ್ಠನಾದ ದೇವದೂತನು ಪರಲೋಕದಿಂದ ಇಳಿದು ಬರುವದನ್ನು ಕಂಡನು; ಈ ದೇವದೂತನು ಯಾರೆಂಬದನ್ನು ಯೋಹಾನನು ನಮಗೆ ಹೇಳುವದಿಲ್ಲ. ದೇವದೂತನು ಕೂಗಿದಾಗ ಯೋಹಾನನು ಏಳು ಗುಡುಗುಗಳ ಧ್ವನಿಗಳನ್ನು ಕೇಳಿದನು (ವಚನ 3). ಆದರೆ ಏಳು ಗುಡುಗುಗಳು ನುಡಿದದ್ದನ್ನು ಬರೆಯಬಾರೆಂದು ಯೋಹಾನನಿಗೆ ಹೇಳಲಾಯಿತು.

**5-6** ಬಲಿಷ್ಠನಾದ ದೇವದೂತನು ಆಗ "ಇನ್ನು ಸಾವಕಾಶವಿರುವದಿಲ್ಲ" ಎಂದು ಹೇಳಿದನು (ವಚನ6). ಈಗ ದೇವರ ಅಂತಿಮ ನ್ಯಾಯತೀರ್ಪು ಬರಲಿತ್ತು. ನಂಬಿಗಸ್ಥ ಹತಸಾಕ್ಷಿಗಳು ದೇವರನ್ನು ಕೂಗಿಕೊಂಡಿದ್ದರುಃ "ಸರ್ವಶಕ್ತನಾದ ಒಡೆಯನೇ,.... ನೀನು ಎಷ್ಟುಕಾಲದ ವರೆಗೂ ಭೂನಿವಾಸಿಗಳನ್ನು ನ್ಯಾಯವಿಚಾರಿಸದೆ ಇರುವಿ?" (ಪ್ರಕ 6 10). ಈ ದೇವದೂತನು ಅವರಿಗೆ ಉತ್ತರವನ್ನು ನೀಡಿದ್ದನುಃ "ನೀವು ಇನ್ನು ಕಾಯಬೇಕಾಗಿರುವದಿಲ್ಲ; ಸೈತಾನನಿಗೆ ಸೋಲು ಹಾಗೂ ದುರ್ಮಾರ್ಗಿಗಳಿಗೆ ನ್ಯಾಯತೀರ್ಪು ಸಂಭವಿಸಲಿಕ್ಕಿತ್ತು" (ದಾನಿಯೇಲ 12:5-7).

**7** ಬಳಿಕ ದೇವದೂತನು ಪ್ರಕಟಿಸಿದ್ದೇನೆಂದರೆಃ "ಏಳನೆಯ ತುತೂರಿಯು ಊದಲ್ಪಡುವಾಗ ದೇವರ ಗುಪ್ತವಾದ ಸಂಕಲ್ಪವು ನೆರವೇರುವದು". ದೇವರು ಗುಪ್ತವಾದ ಸಂಕಲ್ಪವು ಕ್ರಿಸ್ತನ ರಾಜ್ಯದ ಸ್ಥಾಪನೆ ಹಾಗೂ ಎಲ್ಲಾ ದುಷ್ಟತನ ಸೋಲು ಆಗಿದೆ. ದೇವರ ಗುಪ್ತವಾದ ಸಂಕಲ್ಪವು ಏನೆಂದರೆಃ ಲೋಕದ ರಾಜ್ಯಾಧಿಕಾರವು ನಮ್ಮ ಕರ್ತನಿಗೂ ಆತನು ಅಭಿಷೇಕಿಸಿದವನಿಗೂ ಉಂಟಾಯಿತು ಆತನು ಯುಗಯುಗಾಂತರಗಳಲ್ಲಿಯೂ ರಾಜ್ಯವನ್ನಾಳುವನು (ಪ್ರಕ. 11:15). ಹೀಗೆ ದೇವರ ಅಂತಿಮ ಸಂಕಲ್ಪವು ಇನ್ನೆಂದಿಗೂ ಗುಪ್ತವಾಗಿರುವದಿಲ್ಲ. ಆದು ಪ್ರವಾದಿಗಳಿಗೆ ಪ್ರಕಟವಾಗಿರುತ್ತದೆ (ದಾನಿಯೇಲ 12:1-3), ಮತ್ತು ಈಗ ಅದು ಸ್ವತಃ ಯೋಹಾನನಿಗೆ ಪ್ರಕಟವಾಗಲಿತ್ತು.

**8-11** ತರುವಾಯ ಆ ಬಲಿಷ್ಠನಾದ ದೇವದೂತನ ಕೈಯಿಂದ ಸುರುಳಿಯನ್ನು ತೆಗೆದುಕೊ ಎಂದು ಯೋಹಾನನಿಗೆ ಹೇಳಲಾಯಿತು. ಯೋಹಾನನು ಸುರುಳಿಯನ್ನು ಕೊಡಬೇಕೆಂದು ದೇವದೂತನಿಗೆ ಕೇಳಿದಾಗ ದೂತನು ಅವನಿಗೆ ಅದನ್ನು ತಿನ್ನುವಂತೆ ಹೇಳಿದನು (ಯೆಹೆಜ್ಕೇಲ 2:9-10; 3:1-4). ಯೋಹಾನನು ಸುರುಳಿಯನ್ನು ತಿಂದ ಬಳಿಕ ಆತನಿಗೆ ಪುನಃ ಪ್ರವಾದಿಸಬೇಕು ಎಂದು ಹೇಳಲಾಯಿತು. ದರ್ಶನದ ಅರ್ಥವು ಏನೆಂದರೆಃ ದೇವರಿಗಾಗಿ ಪ್ರವಾದಿಸಬೇಕಾದರೆ ನಾವು ಆತನ ವಾಕ್ಯವನ್ನು ಸಂಪೂರ್ಣವಾಗಿ ನಮ್ಮೊಳಗೆ– ನಾವು ಆಹಾರವನ್ನು ತಿನ್ನುತ್ತಿದ್ದೇವೋ ಎಂಬಂತೆ– ತೆಗೆದುಕೊಳ್ಳುವದು ಅವಶ್ಯಕವಾಗಿರುತ್ತದೆ. ಇದರ ಮೂಲಕವಾಗಿ, ಯೋಹಾನನು ಈ ಪ್ರಕಟಣೆ ಪುಸ್ತಕದಲ್ಲಿ ದಾಖಲಿಸಿರುವ ಸಂಗತಿಗಳು ಸತ್ಯವೇ ಎಂಬದನ್ನು ನಾವು ತಿಳಿದುಕೊಳ್ಳಬಹುದು. ಆತನು ದೇವರ ವಾಕ್ಯವನ್ನು ತನ್ನೊಳಗೆ ತೆಗೆದುಕೊಂಡಿದ್ದಾನೆ; ಆದದರಿಂದ, ಆತನ ಬರೆಯುವದು ದೇವರ ಸತ್ಯವಾಕ್ಯವೇ.

ಚಿಕ್ಕ ಸುರಳಿಯಲ್ಲಿ ಏನು ಬರೆಯಲ್ಪಟ್ಟಿತ್ತೆಂಬದು ಖಚಿತವಾಗಿರುವದಿಲ್ಲ. ಕೆಲವು ಬೈಬಲ್ ಪಂಡಿತರು ಮುಂದಿನ ದರ್ಶನ ಇಬ್ಬರು ಸಾಕ್ಷಿಗಳ ದರ್ಶನವು (ಪ್ರಕ 11:1-13). ಆದರಲ್ಲಿ ಬರೆಯಲ್ಪಟ್ಟಿತ್ತೆಂದು ನಂಬುತ್ತಾರೆ. ಚಿಕ್ಕಸುರುಳಿಯು ಯೋಹಾನನ ಬಾಯಲ್ಲಿ ಜೇನಿನಂತೆ ಸಿಹಿಯಾಗಿತ್ತು, ಯಾಕೆಂದರೆ ಅದು ದೇವರ ವಾಕ್ಯವಾಗಿತ್ತಷ್ಟೇ (ಕೀರ್ತನೆಗಳು 119:103). ಅದು ಯೋಹಾನನು ಹೊಟ್ಟೆಯನ್ನು ಕಹಿಯಾಗಿಸಿತು, ಯಾಕೆಂದರೆ ಅದು ಲೋಕದ ಮೇಲೆ ಬರಲಿದ್ದ ಭಯಂಕರ ಸಂಕಟದ ಬಗ್ಗೆ ತಿಳಿಸಿತು.

## ಅಧ್ಯಾಯ - 11

### ಇಬ್ಬರು ಸಾಕ್ಷಿಗಳು (11:1-14)

**1** ಅನೇಕ ಬೈಬಲ್ ಪಂಡಿತರು ಈ ಭಾಗದಲ್ಲಿ (ವಚನಗಳು 1-14), ಬಣ್ಣಿಸಲಾಗಿರುವ ಪ್ರವಾದನೆಯು ಯೋಹಾನನು ತಿಂದಿದ್ದ ಆ ಚಿಕ್ಕ ಸುರುಳಿಯಲ್ಲಿ ಬರೆಯಲ್ಪಟ್ಟಿತ್ತೆಂದು ನಂಬುತ್ತಾರೆ (ಪ್ರಕ. 10:10). ಇಲ್ಲಿ ಪ್ರಸ್ತಾಪಿಸಲಾಗಿರುವ ದೇವರ ಆಲಯ ಹಾಗೂ ಆರಾಧನೆ ಮಾಡುವವರು ಎಂಬದು ಲೋಕದ ಮೇಲೆ ದೇವರು ಬರಮಾಡುವ ಅಂತಿಮ ನ್ಯಾಯತೀರ್ಪಿನ ಸಮಯದಲ್ಲಿ ಅಸ್ತಿತ್ವದಲ್ಲಿರುವ ಕ್ರೈಸ್ತ ಸಭೆಯನ್ನು ಸೂಚಿಸುತ್ತದೆ.

ಯೋಹಾನನಿಗೆ ದೇವಾಲಯವನ್ನು ಅಳತೆಮಾಡಲು ಹೇಳಲಾಯಿತು. ದೇವಾಲಯವನ್ನು ಅಳತೆ ಮಾಡುವದೆಂದರೆ ಅದನ್ನು "ಕಾಪಾಡುವದಾಗಿದೆ" ಹೀಗೆ ಯೋಹಾನನು ಅಲಯವನ್ನು (ಸಭೆಯನ್ನು) ಅಳತೆ ಮಾಡಿ ಅಲ್ಲಿರುವ ಅರಾಧಕರನ್ನು ಲೆಕ್ಕಿಸಿದಾಗ ಅವರು ದೇವರಿಂದ ಕಾಪಾಡಲ್ಪಡುವರು (ಯೆಹೆಜ್ಕೇಲ 40-42. ಅಧ್ಯಾಯಗಳು).

**2** ಯೋಹಾನನ ದರ್ಶನದ ಪ್ರಕಾರವಾಗಿ, ಅನ್ಯಜನರು –ಅಂದರೆ, ಅವಿಶ್ವಾಸಿಗಳು ನಾಲ್ವತ್ತೆರಡು ವರ್ಷಗಳ ಕಾಲ ಆಲಯವನ್ನು (ಸಭೆಯನ್ನು) ಹಿಂಸೆಪಡಿಸುವರು. ಆದರೆ ಅವರು ಹೊರಗಿರುವ ಅಂಗಳವನ್ನು, ಮಾತ್ರಗೆದ್ದುಕೊಳ್ಳುವರು ಅದು ದೇವರು ಯೋಹಾನನಿಗೆ ಅಳತೆಮಾಡಬಾರದೆಂದು ಹೇಳಿದ ಭಾಗವಾಗಿದೆ. ಆಲಯದ ಒಳಗಿರುವವರನ್ನೆಲ್ಲಾ– ನಿಜವಾದ ವಿಶ್ವಾಸಿಗಳನ್ನು–ದೇವರು ಅವಿಶ್ವಾಸಿಗಳ ದಾಳಿಗಳಿಂದ ಕಾಪಾಡುವನು.

ನಾಲ್ವತ್ತೆರಡು ತಿಂಗಳುಗಳ ಅಥವಾ 1,260 ದಿನಗಳ ಕಾಲವು (ವಚನ 3). ದೇವರು ಸಭೆಯನ್ನು ಹಿಂಸಿಸುವದಕ್ಕೆ ಅವಿಶ್ವಾಸಿಗಳಿಗೆ ನೀಡುವ ಕಾಲಾವಧಿಯಾಗಿದೆ. ಪ್ರವಾದಿಯಾದ ದಾನಿಯೇಲನು ದೇವಾಲಯವನ್ನು ದುಷ್ಟರಾಜನೊಬ್ಬನು ನಾಲ್ವತ್ತೆರಡು ತಿಂಗಳುಗಳವರೆಗೆ ಮುತ್ತಿಗೆ ಹಾಕುವನು ಎಂದು ಪ್ರವಾದಿಸಿದನು (ದಾನಿಯೇಲ 8:9-14). ಮತ್ತು ಕ್ರಿ.ಪೂರ್ವ 167ರಲ್ಲಿ ಸಿರಿಯದ ಅರಸನೊಬ್ಬನು ಯೆರೂಸಲೇಮನ್ನು ಮೂರುವರೆ ವರ್ಷಗಳವರೆಗೆ (ನಾಲ್ವತ್ತೆರಡು ತಿಂಗಳುಗಳ) ವಶಪಡಿಸಿಕೊಂಡಾಗ ಆ ಪ್ರವಾದನೆಯು ನೆರವೇರಿತು.

ಆದದರಿಂದ, ಲೋಕಾಂತ್ಯದಲ್ಲಿ ಅವಿಶ್ವಾಸಿಗಳಾದ ಅನ್ಯಜನರು ಸಭೆಯ ಮೇಲೆ ದಾಳಿಮಾಡುವಾಗ ಇದೇ ರೀತಿಯ ಕಾಲವಿರುತ್ತದೆ. ಆ ಕಾಲವು ಅನ್ಯಜನರ ಸಮಯಗಳು ಎಂದು ಕರೆಯಲ್ಪಟ್ಟಿವೆ (ಲೂಕ 21:24).

**3** ಯೋಹಾನನ ದರ್ಶನದ ಪ್ರಕಾರವಾಗಿ, ನಾಲ್ವತ್ತೆರಡು ತಿಂಗಳುಗಳ (ಅಥವಾ 1,260 ದಿನಗಳ), ಹಿಂಸೆಯ ಕಾಲದ ವೇಳೆಯಲ್ಲಿ ಇಬ್ಬರು ಸಾಕ್ಷಿಗಳು ಪ್ರವಾದಿಸುವರು. ಕೆಲವು ಬೈಬಲ್ ಪಂಡಿತರು ಈ ಇಬ್ಬರು ಸಾಕ್ಷಿಗಳು ಪ್ರವಾದಿಯಾದ ಎಲೀಯ (ಮಲಾಕಿಯ 4:5). ಹಾಗೂ ಮೋಶೆ ಎಂದು ನಂಬುತ್ತಾರೆ. (ಧರ್ಮೋಪದೇಶ ಕಾಂಡ 18:15). ಆದರೆ ಇತರ ಕೆಲವು ಮಂದಿ ಪಂಡಿತರು ಅಭಿಪ್ರಾಯ ಪಡುವದೇನೆಂದರೆ, ಈ ಇಬ್ಬರು ಸಾಕ್ಷಿಗಳು ವಾಸ್ತವ ಜನರಲ್ಲ; ಆದರೆ, ಬದಲಾಗಿ ಲೋಕಾಂತ್ಯದಲ್ಲಿನ ಸಭೆಯನ್ನೆಲ್ಲಾ ಪ್ರತಿನಿಧಿಸುತ್ತಾರೆ; ಬೇರೆ ಮಾತುಗಳಲ್ಲಿ ಹೇಳುವದಾದರೆ, ಈ ಇಬ್ಬರು ಸಾಕ್ಷಿಗಳು ಸಾಕ್ಷಿ ನೀಡುವಂಥ ಸಭೆಗೆ ಒಂದು ಸಂಕೇತವಾಗಿದ್ದಾರೆಂದು ಅವರು ಹೇಳುತ್ತಾರೆ. ಮನುಷ್ಯರು ಪಶ್ಚಾತಾಪ ಪಡಬೇಕೆಂಬದೇ ಅವರ ಸಾಕ್ಷಿಯ ನುಡಿಯಾಗಿದೆ; ಆದದರಿಂದ, ಅವರು ಪಶ್ಚಾತ್ತಾಪಕ್ಕೆ ಸಂಕೇತವಾದ ಗೋಣೀತಟ್ಟುಗಳನ್ನು ಹೊದ್ದುಕೊಳ್ಳುವರು.

**4-6** ಎಲೀಯ ಹಾಗೂ ಮೋಶೆಯ ಹಾಗೆ, ಈ ಇಬ್ಬರು ಸಾಕ್ಷಿಗಳು (ಅಥವಾ ಸಭೆ) ತಮ್ಮ ಶತ್ರುಗಳನ್ನು ಬೆಂಕಿಯಿಂದ ನಾಶಮಾಡುವ (2 ಅರಸುಗಳು 1:10), ಆಕಾಶವನ್ನು [26]ಮುಚ್ಚುವ ಅಧಿಕಾರ (1 ಅರಸುಗಳು 17:1), ನೀರು ರಕ್ತವಾಗುವಂತೆ ಮಾಡುವದಕ್ಕೂ (ವಿಮೋಚನ ಕಾಂಡ 7:14-18) ಮತ್ತು ಸಕಲ ವಿಧವಾದ ಉಪದ್ರವಗಳಿಂದ ಭೂಮಿಯನ್ನು ಪೀಡಿಸುವದಕ್ಕೂ ಅಧಿಕಾರವನ್ನು ಹೊಂದಿರುತ್ತಾರೆ (ವಿಮೋಚನಕಾಂಡ 8:12). ಈ ಇಬ್ಬರು ಸಾಕ್ಷಿಗಳು ಎರಡು ಎಣ್ಣೇಮರಗಳೂ ಎರಡು ದೀಪಸ್ತಂಭಗಳೂ ಎಂದು ಕರೆಯಲ್ಪಟ್ಟಿದ್ದಾರೆ (ವಚನ 4) ಅವು ಗಳು ಪವಿತ್ರಾತ್ಮನ ಸೂಚನೆಗಳಾಗಿವೆ (ಜೆಕರ್ಯ 4:1-6, 11-14). ದೀಪಗಳು ಎಣ್ಣೇಮರಗಳ ಎಣ್ಣೆಯಿಂದ ಉರಿಯುತ್ತವೆ. ಎಣ್ಣೆಯ ಸ್ವತಃ ಪವಿತ್ರಾತ್ಮನನ್ನೂ ಪ್ರತಿನಿಧಿಸುತ್ತವೆ. ಈ ವಿಧದಲ್ಲಿ ಈ ಇಬ್ಬರು ಸಾಕ್ಷಿಗಳ ಬಲ ಹಾಗೂ ಬೆಳಕು ಅವರೊಳಗಿನ ಪವಿತ್ರಾತ್ಮನಿಂದ ಬರುತ್ತವೆ.

**7-10** ಈ ಇಬ್ಬರು ಸಾಕ್ಷಿಗಳು (ಅಥವಾ ಸಭೆಯ ಸದಸ್ಯರು), ಸಾಕ್ಷಿ ನೀಡುವ ಹಾಗೂ ಪ್ರವಾದಿಸುವ ತಮ್ಮ ಕೆಲಸವನ್ನು ಪೂರ್ತಿಗೊಳಿಸಿದ ಬಳಿಕ ಅವರ ದೇಹಗಳು ಇನ್ನೆಂದಿಗೂ ಹಾನಿಯಿಂದ ಕಾಪಾಡಲ್ಪಡುವದಿಲ್ಲ. ಆಸಮಯದಲ್ಲಿ ಅಧೋಲೋಕದಿಂದ ಬರುವ ಮೃಗವು ಅವರ ಮೇಲೆ ದಾಳಿ ಮಾಡುವದು. ಈ ಮೃಗವು ಪ್ರಕಟಣೆ 13ನೇ ಅಧ್ಯಾಯದಲ್ಲಿ ಸಹ ಪ್ರಸ್ತಾಪಿಸಲ್ಪಟ್ಟಿದೆ. ಮೃಗವು ರೋಮಾಯ ಸಾಮ್ರಾಜ್ಯ ಹಾಗೂ ಲೋಕದ ಉಳಿದೆಲ್ಲಾ ದುಷ್ಟ ಶಕ್ತಿಗಳ ಗುರುತಾಗಿದೆ (ದಾನಿಯೇಲ 7:7, ಪ್ರಕ. 13:1).

ಇಬ್ಬರು ಸಾಕ್ಷಿಗಳ ಶವಗಳು ಮಹಾಪಟ್ಟಣದ ಬೀದಿಯಲ್ಲಿ ಬಿದ್ದಿರುವವು , ಪ್ರಕಟಣೆ ಪು ಸ್ತಕದಲ್ಲಿ "ಮಹಾ ಪಟ್ಟಣ" ಎಂಬ ಹೇಳಿಕೆಯು ಸಾಮಾನ್ಯವಾಗಿ ರೋಮನಗರವನ್ನು (ರೋಮಾಯ ಸಾಮ್ರಾಜ್ಯದ ರಾಜಧಾನಿ), ಅಥವಾ ರೋಮಾಯ ಸಾಮ್ರಾಜ್ಯವನ್ನೇ ಸೂಚಿಸುತ್ತದೆ. ಹೇಗಿದ್ದರೂ, ಈ ವಚನದಲ್ಲಿ, ಬಹುಶಃ ಮಹಾಪಟ್ಟಣವು ಯೆರೂಸಲೇಮನ್ನು ಸೂಚಿಸುತ್ತದೆ, ಯಾಕೆಂದರೆ ಯೋಹಾನನು ಅವರ ಒಡೆಯನು ಸಹ ಅಲ್ಲಿಯೇ ಶಿಲುಬೆಗೆ ಹಾಕಲ್ಪಟ್ಟನು ಎಂದು ಬರೆಯುತ್ತಾನೆ. ಯೋಹಾನನ ಮನಸ್ಸಿನಲ್ಲಿ ಯಾವ ಪಟ್ಟಣ ವಿದ್ದರೂ ಸರಿಯೇ, ರೋಮನಗರ ಅಥವಾ ಯೆರೂಸಲೇಮ್ –ಹಳೆ ಒಡಂಬಡಿಕೆಯಲ್ಲಿ ಸೊದೋಮ್ ಹಾಗೂ ಐಗುಪ್ತ ಗಳು ಲೌಕೀಕ ಅಧಿಕಾರ ಹಾಗೂ ದುಷ್ಟತನದ ಸಂಕೇತವಾಗಿದ್ದ ಪ್ರಕಾರವೇ ಈ ಮಹಾಪಟ್ಟಣವು ಸಹ ಲೌಕಿಕ ಅಧಿಕಾರ ಹಾಗು ದುಷ್ಟತನದ ಸಂಕೇತವಾಗಿದೆ.

**11** ಮೂರುವರೆ ದಿನಗಳ ಬಳಿಕ ದೇವರು ಈ ಇಬ್ಬರು ಸಾಕ್ಷಿಗಳನ್ನು (ಅಥವಾ ಸಭೆಯನ್ನು) ಸತ್ತವರೊಳಗಿಂದ ಎಬ್ಬಿಸುವನು. ಅವರನ್ನು ಕೊಂದ ದುಷ್ಟಜನರು ಭಯಹಿಡಿದವರಾಗುವರು, ಯಾಕೆಂದರೆ ಅವರಿಗೆ ಸತ್ತವರೊಳಗಿಂದ ಎದ್ದವರ ಮೇಲೆ ಯಾವ ಬಲವೂ ಇರುವದಿಲ್ಲ.

**12-13** ಅವರ ಶತ್ರುಗಳು ನೋಡುತ್ತಿರುವಾಗಲೇ ಈ ಇಬ್ಬರು ಸಾಕ್ಷಿಗಳು (ಅಥವಾ ಸಭೆ ವಿಶ್ವಾಸಿಗಳೆಲ್ಲರೂ) ಪರಲೋಕಕ್ಕೆ ಏರಿಹೋಗುವರು (2 ಅರಸುಗಳು 2:11; 1 ಥೆಸಲೋನಿಕ 4:16-17). ಮಹಾ ಭೂಕಂಪವೊಂದು ಆ ಮಹಾಪಟ್ಟಣದ ಹತ್ತರಲ್ಲೊಂಳಂಶವನ್ನು ನಾಶಮಾಡುವದು. ಭೂಕಂಪದಲ್ಲಿ ಬದುಕುಳಿಯುವವರು ದೇವರನ್ನು ಘನಪಡಿಸುವರು; ಅವರು

ನಿಜವಾಗಿಯೂ ಪಶ್ಚಾತಾಪ ಪಡುವರು ಅಥವಾ ಭಯದಿಂದ ಮಾತ್ರವೇ ದೇವರನ್ನು ಘನಪಡಿಸುವರು ಎಂಬದು ಯೋಹಾನನ ಅರ್ಥವೋ ಎಂದು ಖಚಿತವಾಗಿರುವದಿಲ್ಲ. ಈ ಭೂಕಂಪವು ಎರಡನೆಯ ವಿಪತ್ತು (ವಚನ 14).

**14** ಇಲ್ಲಿ ಯೋಹಾನನು ಎರಡನೆಯ ವಿಪತ್ತು (ಅಥವಾ ಆರನೆಯ ಉಪದ್ರವವು ) ಕಳೆದು ಹೋಯಿತು ಮೂರನೆಯ ವಿಪತ್ತು; (ಅಥವಾ ಏಳನೆಯ ಉಪದ್ರವವು ) ಬರಲಿದೆ ಎಂದು ಹೇಳುತ್ತಾನೆ.

## ಏಳನೆಯ ತುತೂರಿ (11:15-19)

**15** ಏಳನೆಯ ತುತೂರಿಯು ಲೋಕದ ವಿರುದ್ಧ ದೇವರ ಅಂತಿಮ ನ್ಯಾಯತೀರ್ಪನ್ನು ಹಾಗೂ ಕ್ರಿಸ್ತನ ರಾಜ್ಯದ ಸ್ಥಾಪನೆಯನ್ನು ಪ್ರಕಟಿಸುತ್ತದೆ. ಈ ಎರಡನೆಯ ಭಾಗದಲ್ಲಿ (ವಚನಗಳು 15-19). ಯೋಹಾನನು ಏಳನೆಯ ತುತೂರಿ ಊದಲ್ಪಡುವಾಗ ಸಂಭವಿಸುವದೆಲ್ಲದರ, ಸಾರಾಂಶವನ್ನು ನೀಡುತ್ತಾನೆ. ಅಂದರೆ, ಈ ಕ್ಲುಪ್ತ ಭಾಗವು ಪ್ರಕಟಣೆ ಪುಸ್ತಕದ ಉಳಿದ ಅಧ್ಯಾಯಗಳೆಲ್ಲದರ ಸಾರಾಂಶವಾಗಿದೆ. ಆದದರಿಂದ, ಯೋಹಾನನು ಇಲ್ಲಿ ಈ ಮುಂದಿನ ಸಂಗತಿಗಳೆಲ್ಲವೂ ಈಗಾಗಲೇ ಸಂಭವಿಸಿವೆಯೆಂಬಂತೆ ಬರೆಯುತ್ತಾನೆ. ಎಲ್ಲಾ ಘಟನೆಗಳಲ್ಲಿ ಅತಿ ಪ್ರಾಮಯಖ್ಯವಾದದ್ದು ಈ 15ನೇ ವಚನದಲ್ಲಿರುತ್ತದೆಃ ಲೋಕದ ರಾಜ್ಯಾಧಿಕಾರವು ನಮ್ಮ ಕರ್ತನಿಗೂ ಆತನ ಕ್ರಿಸತನಿಗೂ ಉಂಟಾಯಿತು (ದಾನಿಯೇಲ 2:44; 7:13-14, 27).

**16-18** ದುಷ್ಟ ಜನಾಂಗಗಳನ್ನು ಶಿಕ್ಷಿಸಿ ಎಲ್ಲಾ ಪ್ರವಾದಿಗಳಿಗೂ ದೇವಜನರಿಗೂ (ವಿಶ್ವಾಸಿಗಳಿಗೂ) ಪ್ರತಿಫಲವನ್ನು ಕೊಟ್ಟದಕ್ಕಾಗಿಟೂ ಇಪ್ಪತ್ತು ನಾಲ್ಕು ಮಂದಿ ಹಿರಿಯರು (ಪ್ರಕ. 4:4). ದೇವರಿಗೆ ಕೃತಜ್ಞತಾಸ್ತುತಿಗಳನ್ನು ಸಲ್ಲಿಸುತ್ತಾರೆ. ಪ್ರವಾದಿಗಳ ಹಾಗೂ ದೇವಜನರ ಪ್ರತಿಫಲವು ಕ್ರಿಸ್ತನ ರಾಜ್ಯದಲ್ಲಿ ಸದಾಕಾಲವೂ ಜೀವಿಸುವದೇ.

ಜನಾಂಗಗಳು ದೇವರ ವಿರುದ್ಧ ಕೋಪಿಸಿಕೊಂಡವು ; ಅವರು ಲೋಕನಾಶಕರಾಗಿದ್ದರು (ವಚನ 18), ಆದರೆ ಈಗ ದೇವರು ಅವರನ್ನು ನಾಶಮಾಡಿದ್ದಾನೆ (ಕೀರ್ತನೆಗಳು 2:2-5; ರೋಮ 2:5-6).

**19** ಯೋಹಾನನ ದರ್ಶನದ ಪ್ರಕಾರವಾಗಿ ಪರಲೋಕದಲ್ಲಿರುವ ದೇವರ ಆಲಯವು ತೆರೆಯಿತು, ಮತ್ತು ಆಲಯದ ಒಳಗೆ ಆತನ ಒಡಂಬಡಿಕೆಯ ಮಂಜೂಷವು ಕಾಣಿಸಿತು (ವಿಮೋಚನಕಾಂಡ 25:10-22). ಮಂಜೂಷವು ದೇವರ ಜನರೊಂದಿಗಿರುವ ಆತನ ಪ್ರಸನ್ನತೆಗೆ ಗುರುತಾಗಿದೆ. ಈ ವಿಧದಲ್ಲಿ ವಿಶ್ವಾಸಿಗಳು ಪರಲೋಕದಲ್ಲಿರುವ ದೇವರ ಸನ್ನಿಧಿಯಲ್ಲಿ ಪ್ರವೇಶಿಸುವರು, ಅದು ಅವರ ಪ್ರತಿಫಲವಾಗಿದೆ (ವಚನ 18). ಆದರೆ ಭೂಮಿಯ ಮೇಲೆ ದೇವರ ನ್ಯಾಯತೀರ್ಪು ಗುಡುಗುಗಳ ಭೂಕಂಪದ, ಹಾಗೂ ದೊಡ್ಡ ಆನೆ ಕಲ್ಲಿನ ಮಳೆಯ ರೂಪದಲ್ಲಿ ಸುರಿಸಲ್ಪಟ್ಟಿತು.

---

# ಅಧ್ಯಾಯ - 12

## ಸ್ತ್ರೀ ಹಾಗೂ ಘಟಸರ್ಪ (12:1-17)

**1-2** ಯೋಹಾನನ ದರ್ಶನದಲ್ಲಿ ಏಳನೆಯ ತುತೂರಿಯು ಈಗಷ್ಟೇ ಊದಲ್ಪಟ್ಟಿತ್ತು (ಪ್ರಕ. 11:15). ಏಳನೆಯ ತುತೂರಿಯು ಇಲ್ಲಿಂದ ಮೊದಲೊಂಡು ಪ್ರಕಟಣೆಯ ಪುಸ್ತಕದ ಅಂತ್ಯದವರೆಗೂ ಸಂಭವಿಸುವದೆಲ್ಲವನ್ನು ಪ್ರಕಟಿಸುತ್ತದೆ. ಈಗ ದೇವರ ಭಯಂಕರವಾದ ಅಂತಿಮ ನ್ಯಾಯತೀರ್ಪು ಲೋಕದ ಮೇಲೆಯೂ ಸೈತಾನನ ಮೇಲೆಯೂ ಬೀಳಲಿತ್ತು. ಮುಂದಿನ ಎರಡು ಅಧ್ಯಾಯಗಳಲ್ಲಿ (12-13 ಅಧ್ಯಾಯಗಳು). ಸೈತಾನ ಹಾಗೂ ಕ್ರಿಸ್ತನ ಸಭೆಯ ನಡುವಿನ ಮಹಾ ಹೋರಾಟವನ್ನು ಬಣ್ಣಿಸಲಾಗಿದೆ. ಈ ಹೋರಾಟದಲ್ಲಿ ವಿಶ್ವಾಸಿಗಳು ದೈಹೀಕ ನೋವು ಹಾಗೂ ಮರಣವನ್ನು ಅನುಭವಿಸುತ್ತಾರೆ. ಆದರೆ ಅವರು ಸೈತಾನನ ಅಂತಿಮ ಸೋಲು ನಿಶ್ಚಯ ಎಂಬದನ್ನು ತಿಳಿದವರಾಗಿ ಕಡೇ ವರೆಗೂ ದೃಢವಾಗಿ ನಿಲ್ಲಬೇಕು.

ಏಳನೆಯ ತುತೂರಿಯು ಊದಲ್ಪಟ್ಟ ಬಳಿಕ ಯೋಹಾನನು ಪರಲೋಕದಲ್ಲಿ ಮಹಿಮಾಭರಿತ ಸ್ತ್ರೀಯೊಬ್ಬಳನ್ನು ಕಾಣುತ್ತಾನೆ, ಆಕೆಯು ಒಂದು ಮಗುವಿಗೆ ಜನ್ಮ ನೀಡಲಿದ್ದಳು. ಸ್ತ್ರೀಯು ನಿಜವಾದ ಇಸ್ರಾಯೇಲನ್ನು– ಸಭೆಯನ್ನು– ಅಂದರೆ, ದೇವರ ಸ್ವಕೀಯ ಜನರನ್ನು ಪ್ರತಿನಿಧಿಸುತ್ತಾಳೆ (1 ಪೇತ್ರ 2:9). ಆಕೆಯು ಕಿರೀಟದ ಹನ್ನೆರಡು ನಕ್ಷತ್ರಗಳು ಇಸ್ರಾಯೇಲಿನ ಹನ್ನೆರಡು ಕುಲಗಳನ್ನು ಪ್ರತಿನಿಧಿಸುತ್ತವೆ; ಅವುಗಳು ಕ್ರಿಸ್ತನ ಹನ್ನೆರಡು ಮಂದಿ ಅಪೊಸ್ತಲರನ್ನೂ ಪ್ರತಿನಿಧಿಸಬಹುದು.

**3-4** ಬಳಿಕ ಯೋಹಾನನು ಕೆಂಪಾದ ಮಹಾಘಟ ಸರ್ಪವನ್ನು ಕಂಡನು. ಅದು ಸೈತಾನವಾಗಿತ್ತು (ವಚನ 9). ಆತನ ಏಳು ತಲೆಗಳ ಮೇಲೆ ಏಳು ಕಿರೀಟಗಳಿದ್ದವು ಕಿರೀಟಗಳು ಘಟಸರ್ಪದ ಅಧಿಕಾರಕ್ಕೆ ಗುರುತುಗಳಾಗಿದ್ದವು . ಆದರೆ ಘಟ ಸರ್ಪದ ಅಧಿಕಾರವು ಆತನ ಸ್ವಂತದ್ದಾಗಿರಲಿಲ್ಲ; ಅದು ದೇವರಿಂದ ಕದ್ದುಕೊಂಡದ್ದಾಗಿತ್ತು. ಅರಸನಾದ ಹೆರೋದನು ಶಿಶುವಾದ ಕ್ರಿಸ್ತನನ್ನು ಕೊಲ್ಲುವದಕ್ಕೆ ಪ್ರಯತ್ನಿಸಿದಂತೆಯೇ (ಮತ್ತಾಯ 2:13,16) ಈ ಘಟ ಸರ್ಪವು ಸಹ ಈ ಸ್ತ್ರೀಯು ಜನ್ಮ ನೀಡಿದ ಹಸುಕೂಸನ್ನು ನುಂಗುವದಕ್ಕೆ ಪ್ರಯತ್ನಿಸಿತ್ತು (1 ಪೇತ್ರ 5:8).

5 ಸ್ತ್ರೀಯ ಮಗುವು ಜನಾಂಗಗಳನ್ನು ಕಬ್ಬಿಣದ ಕೋಲಿನಿಂದ ಆಳುವ ಕ್ರಿಸ್ತನಾಗಿದ್ದಾನೆ (ಕೀರ್ತನೆಗಳು 2:6-8). ಈ ಮಗುವು ಎಲ್ಲಾ ಜನಾಂಗಗಳನ್ನು ಆಳುವದಕ್ಕೆ ನೇಮಿಸಲ್ಪಟ್ಟಿದೆಯೆಂಬದನ್ನು ತಿಳಿದಾಗ ಈ ಘಟಸರ್ಪನಾದ ಸೈತಾನನು ಕೋಪಗೊಂಡನು, ಯಾಕೆಂದರೆ ಭೂಮಿಯ ಜನಾಂಗಗಳೆಲ್ಲಾ ತನಗೆ ಸೇರಿವೆಂದು ಆತನು ಪರಿಗಣಿಸಿಕೊಂಡಿದ್ದನು (ಮತ್ತಾಯ 4:8-9). ಈ ಕಾರಣದಿಂದಲೇ ಘಟಸರ್ಪವು ಮಗುವನ್ನೇ ಕೊಲ್ಲುವದಕ್ಕೆ ಬಹಳವಾಗಿ ಪ್ರಯತ್ನಿಸಿತು ಆದರೆ ಘಟಸರ್ಪಕ್ಕೆ ನುಂಗಲು ಆಗಲಿಲ್ಲ ಮಗುವು (ಕ್ರಿಸ್ತನು) ಪಕ್ಕನೆ ದೇವರ ಬಳಿಗೂ ಆತನ ಸಿಂಹಾಸನದ ಬಳಿಗೂ ಎತ್ತಲ್ಪಟ್ಟಿತು; ಅಂದರೆ, ಕ್ರಿಸ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟು ಪರಲೋಕಕ್ಕೆ ಎತ್ತಲ್ಪಟ್ಟವನಾಗಿ ದೇವರ ಬಲಗಡೆಯಲ್ಲಿ ಕುಳಿತು ಕೊಂಡಿದ್ದನು.

6 ಸ್ತ್ರೀಯು (ಸಭೆಯು) ಆಕೆಗಾಗಿ ದೇವರು ಸಿದ್ಧಮಾಡಿದ್ದ ಸುರಕ್ಷಿತ ಸ್ಥಳಕ್ಕೆ ಓಡಿಹೋದಳು, ಅಲ್ಲಿ ಘಟಸರ್ಪನಾದ ಸೈತಾನನು ಆಕೆಯನ್ನು ನುಂಗಲಾಗಲಿಲ್ಲ ಆಸ್ತ್ರೀಯು ಹಿಂಸೆಯ 1,260 ದಿನಗಳೆಲ್ಲಾ ಸುರಕ್ಷಿತವಾಗಿ ಉಳಿಯಲು ಶಕ್ತಳಾದಳು (ಪ್ರಕ. 11:1-3 ಮತ್ತು ವ್ಯಾಖ್ಯಾನ ನೋಡಿರಿ).

7-9 ತರುವಾಯ ಯೋಹಾನನು ಘಟಸರ್ಪನಾದ ಸೈತಾನ ಹಾಗೂ ದೇವರ ಪ್ರಧಾನ ದೂತನಾದ ಮೀಕಾಯೇಲ ನಡುವೆ ಯುದ್ಧ ನೆಡೆಯುವದನ್ನು ಕಂಡನು (ದಾನಿಯೇಲ 12:1-3).

ಬಳಿಕ ಘಟಸರ್ಪವು – ಪಿಶಾಚನೆಂದು ಹೆಸರುಳ್ಳ ಪುರಾತನ ಸರ್ಪವು [27] (ಆದಿಕಾಂಡ 3:1,14-15)– ಹಾಗೂ ಆತನ ದೂತರೆಲ್ಲರೂ ಭೂಮಿಗೆ ದೊಬ್ಬಲ್ಪಟ್ಟರು (ಲೂಕ 10:18 ನೋಡಿರಿ).

10 ಸೈತಾನನಿಗೆ ಸೋಲುಂಟಾಗುತ್ತಿದ್ದಂತೆ ಪರಲೋಕದಲ್ಲಿ ಮಹಾ ಸಂಭ್ರಮವಾಯಿತು. ಸೈತಾನನು ಇಲ್ಲಿ ನಮ್ಮ ಸಹೋದರರ ದೂರುಗಾರನು ಎಂದು ಕರೆಯಲ್ಪಟ್ಟಿದ್ದಾನೆ. ದೇವರ ಎದುರಿಗೂ ಒಬ್ಬರೊಬ್ಬರ ಎದುರಿಗೂ ವಿಶ್ವಾಸಿಗಳ ಮೇಲೆ ದೂರು ಹೇಳುವದು ಸೈತಾನನ ದುಷ್ಕೃತ್ಯಗಳಲ್ಲಿ ಮುಖ್ಯವಾದದ್ದಾಗಿದೆ. (ಯೋಬನು 1:8 11). ಅಲ್ಲದೆ, ಸೈತಾನನು ಭೂಲೋಕವನ್ನೆಲ್ಲಾ ಮಾರ್ಗತಪ್ಪಿಸುವವನೂ ಆಗಿದ್ದಾನೆ (ವಚನ 9). ದೇವಜನರಿಗೆ ಹಾನಿಯನ್ನುಂಟು ಮಾಡಲು ಸೈತಾನನು ಉಪಯೋಗಿಸುವ ವಿಧಾನಗಳಲ್ಲಿ ವಂಚನೆಯು ಒಂದಾಗಿದೆ (ಮಾರ್ಕ 13:22; 2 ಕೊರಿಂಥ 11:13).

ಯೋಹಾನನ ದರ್ಶನದಲ್ಲಿ ಸೈತಾನನು ಭೂಮಿಗೆ ಬೀಳುವದು ಲೋಕಾಂತ್ಯದಲ್ಲಿ ಸಂಭವಿಸುತ್ತಾದರೂ, ಒಂದು ಅರ್ಥದಲ್ಲಿ ಸೈತಾನನು ಈಗಾಗಲೇ ಭೂಮಿಗೆ ಬಿದ್ದಿದ್ದಾನೆ (ವಚನ 9). ಆತನು ಈಗಾಗಲೇ ಪರಲೋಕದಲ್ಲಿ ತನ್ನ ಸ್ಥಾನವನ್ನು ಕಳೆದುಕೊಂಡಿದ್ದಾನೆ. ಆತನು ಕ್ರಿಸ್ತನಿಂದ ಸೋಲಿಸಲ್ಪಟ್ಟಿದ್ದಾನೆ. ಆತನು ಇನ್ನು ಮೇಲೆ ದೇವರ ಮುಂದೆ ವಿಶ್ವಾಸಿಗಳ ವಿಷಯವಾಗಿ ದೂರು ಹೇಳುವಲ್ಲಿ ಯಶಸ್ವಿಯಾಗಲಾರನು, ಯಾಕೆಂದರೆ ಕ್ರಿಸ್ತನ ಮುಖಾಂತರ ಅವರು ದೇವರ ಎದುರಿನಲ್ಲಿ ನಿರಪರಾಧಿಗಳೂ ನೀತಿವಂತರೆಂದೂ ನಿರ್ಣಯಿಸಲ್ಪಟ್ಟಿದ್ದಾರೆ (ರೋಮ 8:33-34 ಮತ್ತು ವ್ಯಾಖ್ಯಾನ ನೋಡಿರಿ).

11 ಪರಲೋಕದಲ್ಲಿನ ದೇವದೂತರು ಮಾತ್ರವಲ್ಲದೆ, ಭೂಮಿಯಲ್ಲಿನ ವಿಶ್ವಾಸಿಗಳು ಸಹ ಯಜ್ಞದ ಕುರಿಯಾದಾತನ ರಕ್ತದ ಬಲದಿಂದ, ಸೈತಾನನನ್ನು ಜಯಿಸಲು ಶಕ್ತರಾಗಿದ್ದಾರೆ, ಅಂದರೆ, ಕ್ರಿಸ್ತನು ವಿಶ್ವಾಸಿಗಳ ಪಾಪಗಳಿಗಾಗಿ ಮರಣಿಸಿದ್ದರಿಂದ ಅವರು ಇನ್ನು ಮೇಲೆ ಸೈತಾನನ ದಾಸತ್ವದಲ್ಲಿರುವದಿಲ್ಲ. ಕ್ರಿಸ್ತನ ಪವಿತ್ರಾತ್ಮನು ಅವರೊಳಗೆ ಇರುವದರಿಂದ ವಿಶ್ವಾಸಿಗಳು ಸೈತಾನನಿಗಿಂತಲೂ ಹೆಚ್ಚು ಬಲಿಷ್ಟರು (1 ಯೋಹಾನ 4:4 ಮತ್ತು ವ್ಯಾಖ್ಯಾನ ನೋಡಿರಿ). ವಿಶ್ವಾಸಿಗಳು ಯೇಸುಕ್ರಿಸ್ತನಿಗೋಸ್ಕರ ತಾವು ನಂಬಿಗಸ್ಥರಾಗಿ ನೀಡಿದ ಸಾಕ್ಷಿಯ ವಾಕ್ಯದ ಬಲದಿಂದಲೂ ಸಾಯುವವರೆಗಿನ ನಂಬಿಕೆಯಲ್ಲಿ ದೃಢವಾಗಿ ನಿಂತಿದ್ದರ ಮೂಲಕವೂ ಸೈತಾನನ ದುಷ್ಟ ಶಕ್ತಿಯನ್ನು ಜಯಿಸುವರು. ಯಾವನು ತನ್ನ ಸ್ವಪ್ರಾಣವನ್ನು ಪ್ರೀತಿಸದೇ ಅದನ್ನು ಕ್ರಿಸ್ತನಿಗೋಸ್ಕರ ಅರ್ಪಿಸುವನೋ ಅವನು ನಿಶ್ಚಯವಾಗಿಯೂ ಅಂತ್ಯದಲ್ಲಿ ಜಯಶಾಲಿಯಾಗಿರುವನು (ಮತ್ತಾಯ 10:32; ಮಾರ್ಕ 13:13).

12 ಸೈತಾನನು ತಾನು ಪರಲೋಕದಿಂದ ಹೊರದೊಬ್ಬಲ್ಪಟ್ಟದ್ದರಿಂದ ರೌದ್ರವುಳ್ಳವನಾದನು. ಆತನಿಗೆ ಉಳಿದ ಕಾಲವು ಸ್ವಲ್ಪವಾಗಿತ್ತು. ಆತನು ರೌದ್ರವುಳ್ಳವನಾಗಿ ಬೇಟೆಗಾರರಿಂದ ಸುತ್ತುವರೆಯಲ್ಪಟ್ಟ ಮೃಗದಂತೆ ಎಲ್ಲಾ ದಿಕ್ಕುಗಳನ್ನು ಓಡಾಡಲಾರಂಭಿಸಿದನು.

13 ಮಗುವನ್ನು ಕೊಲ್ಲುವದಕ್ಕೆ ವಿಫಲನಾಗಿದ್ದ ಘಟ ಸರ್ಪನಾದ ಸೈತಾನನು ಈಗ ಸ್ತ್ರೀಯನ್ನು (ಸಭೆಯನ್ನು ಬೆನ್ನಟ್ಟ ಲಾರಂಭಿಸಿದನು). ಸೈತಾನನು ಕ್ರಿಸ್ತನ ಮೇಲಿನ ಕೋಪದ ಕಾರಣದಿಂದ ಕ್ರಿಸ್ತನ ಸಭೆಯ ಮೇಲೆಯೂ ಕೋಪಗೊಂಡನು. ಯೇಸು ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆ: "ಲೋಕವು ನಿಮ್ಮ ಮೇಲೆ ದ್ವೇಷಮಾಡುವದಾದರೆ ಅದು ಮೊದಲು ನನ್ನ ಮೇಲೆ ದ್ವೇಷಮಾಡಿತೆಂದು ತಿಳಿದುಕೊಳ್ಳಿರಿ......ಅವರು ನನ್ನನ್ನು ಹಿಂಸೆಪಡಿಸಿದರೆ ನಿಮ್ಮನ್ನು ಸಹ ಹಿಂಸೆಪಡಿಸುವರು....... ಅವರು ಇದನ್ನೆಲ್ಲಾ ನನ್ನ ಹೆಸರಿನ ನಿಮಿತ್ತ ನಿಮಗೆ ಮಾಡುವರು (ಯೋಹಾನ 15:18,20-21). ಆದದರಿಂದ, ಕ್ರೈಸ್ತರು ತಾವು ಅನುಭವಿಸುವ ಯಾವದೇ ರೀತಿಯ ಹಿಂಸೆಯು ಕ್ರಿಸ್ತನ ಹಾಗೂ ಸೈತಾನನ ನಡುವಿನ ಮಹಾಯುದ್ಧದಿಂದಾಗಿ ಬರುತ್ತದೆಂಬದನ್ನು ನೆನಪಿನಲ್ಲಿಟ್ಟುಕೊಳ್ಳಲಿ. ನಾವು ಕ್ರಿಸ್ತನ ಶಿಷ್ಯರೂ ಸಹೋದರರೂ ಆಗಿರುವದರಿಂದ ಸೈತಾನನು ನಮ್ಮ ಮೇಲೆಯೂ ದಾಳಿಮಾಡುವನು

14 ಘಟ ಸರ್ಪನಾದ ಸೈತಾನನು ಸ್ತ್ರೀಯನ್ನು ಹಿಡಿದುಕೊಳ್ಳುವ ಮುನ್ನವೇ ಸ್ತ್ರೀಗೆ ದೊಡ್ಡ ಗರುಡ ಪಕ್ಷಿಯ ಎರಡು ರೆಕ್ಕೆಗಳು ಕೊಡಲ್ಪಟ್ಟವು, ಅದು ದೇವರ ವಿಮೋಚನೆಯ ಸಂಕೇತವಾಗಿತ್ತು (ಯೆಶಾಯ 40:31). ಆಗ ಸ್ತ್ರೀಯು ತನಗಾಗಿ ಸಿದ್ಧಮಾಡಲ್ಪಟ್ಟ ಸುರಕ್ಷಿತ ಸ್ಥಳಕ್ಕೆ ಹಾರಿಹೋದಳು (ವಚನ 6), ಅಲ್ಲಿ ಸ್ತ್ರೀಯು ಉಳಿದ ಒಂದು ಕಾಲ, ಎರಡು ಕಾಲ, ಅರ್ಧಕಾಲ– ಅಂದರೆ, ನಾಲ್ವತ್ತೆರಡು ತಿಂಗಳು, ಅಥವಾ 1,260 ದಿನಗಳವರೆಗೆ ಇದ್ದಳು (ವಚನ 6)[28]

**15-17** ಹೀಗೆ ಸೈತಾನನು ಸ್ತ್ರೀಗೆ ಹಾನಿಯನ್ನುಂಟು ಮಾಡಲಾಗಲಿಲ್ಲ. ಆದದರಿಂದ, ಆತನು ಆಕೆಯ ಸಂತಾನದವರಲ್ಲಿ ಉಳಿದವರ ಮೇಲೆ (ವಚನ 17). ಅಂದರೆ, ಇತರ ವಿಶ್ವಾಸಿಗಳ ಮೇಲೆ ಯುದ್ಧಮಾಡುವದಕ್ಕೆ ಹೊರಟನು. ಕ್ರಿಸ್ತನು ಈ ಸ್ತ್ರೀಯ ಹಿರೀ ಮಗನಾಗಿದ್ದನು; ಆದದರಿಂದ, ಸ್ತ್ರೀಯ ಇತರ ಮಕ್ಕಳೆಲ್ಲರೂ ಕ್ರಿಸ್ತನ ತಮ್ಮಂದಿರೂ ತಂಗಿಯರೂ –ಅಂದರೆ, ವಿಶ್ವಾಸಿಗಳು– ಆಗಿದ್ದರು (ರೋಮ 8:29). ಹೀಗೆ ಸೈತಾನನು ಅವರನ್ನು ಹಿಂಸಿಸಲಾರಂಭಿಸಿದನು.

ಯೋಹಾನನು 12ನೇ ಅಧ್ಯಾಯದಲ್ಲಿ ಹೋಲಿಸಿರುವ ಈ ಸ್ತ್ರೀ ಹಾಗೂ ಘಟಸರ್ಪದ ದರ್ಶನದಲ್ಲಿ ಬಣ್ಣಿಸಲಾಗಿರುವ ಘಟನೆಗಳು ಈಗಾಗಲೇ ಸಂಭವಿಸಿರುವ ಹಾಗು ಲೋಕಾಂತ್ಯದಲ್ಲಿ ಸಂಭವಿಸಲಿರುವ ಘಟನೆಗಳೆರಡನ್ನೂ ಸೂಚಿಸುತ್ತದೆಂಬದನ್ನು ಗಮನಿಸಿರಿ. ಮೊದಲನೆಯದಾಗಿ, ದರ್ಶನವು ಗತಿಸಿ ಹೋಗಿರುವದರ ಮೇಲಿನ ವ್ಯಾಖ್ಯಾನವಾಗಿ ವಿವರಿಸಲ್ಪಡಬಹುದುಃ ಕ್ರಿಸ್ತನು ಈಗಾಗಲೇ ಜನಿಸಿದವನಾಗಿ ಸೈತಾನನನ್ನು ಶಿಲುಬೆಯ ಮೇಲೆ ಸೋಲಿಸಿದ್ದಾನೆ; ಮತ್ತು ಅಂದಿನಿಂದ ಸೈತಾನನು ಕ್ರಿಸ್ತನ ಸಭೆಯನ್ನು ಹಿಂಸಿಸಿದ್ದಾನೆ. ಎರಡನೆಯಾಗಿ, ದರ್ಶನವು ಭವಿಷ್ಯತ್ಕಾಲದ ಮೇಲಿನ ವ್ಯಾಖ್ಯಾನವಾಗಿ ವಿವರಿಸಲ್ಪಡಬಹುದುಃ ಲೋಕಾಂತ್ಯ ಸೈತಾನನ ಹಾಗೂ ದೇವರ ನಡುವಿನ ಯುದ್ಧವು ಸಂಭವಿಸುವದು ಮತ್ತು ಆ ಸಮಯದಲ್ಲಿ ಸೈತಾನನು ಪುನಃ ಆಕಾಶದಿಂದ ಭೂಮಿಗೆ ದೊಬ್ಬಲ್ಪಡುವನು, ಅಲ್ಲಿ ಆತನು ಅಂತಿಮವಾಗಿ ಸದಾಕಾಲಕ್ಕೆ ನಾಶಗೊಳ್ಳುವ ಮುಂಚೆ ತನಗಿರುವ ಕ್ಲುಪ್ತ ಕಾಲದಲ್ಲಿ ಕ್ರಿಸ್ತನ ಸಭೆಯನ್ನು ಘೋರವಾಗಿ ಹಿಂಸಿಸುವನು.

---

# ಅಧ್ಯಾಯ - 13

## ಸಮುದ್ರದೊಳಗಿಂದ ಬಂದ ಮೃಗ (13:1-10)

**1-2** ಇಲ್ಲಿಂದ ಮೊದಲ್ಗೊಂಡು ಪ್ರಕಟಣೆ ಪುಸ್ತಕದ ಕಡೆಯವರೆಗೂ ಯೋಹಾನನು ಕಾಣುವ ದರ್ಶನಗಳು ಮುಖ್ಯವಾಗಿ ಈಗ ಮತ್ತು ಲೋಕಾಂತ್ಯದ ಮಧ್ಯದಲ್ಲಿ ಸಂಭವಿಸುವ ಘಟನೆಗಳನ್ನು ಸೂಚಿಸುತ್ತವೆ. ಹೇಗಿದ್ದರೂ, ಲೋಕಾಂತ್ಯವು ತನ್ನ ಕಾಲದಲ್ಲಿಯೇ ಬರುವದೆಂದು ಯೋಹಾನನು ನಂಬಿದ್ದನಾದ್ದರಿಂದ ಆತನು ಸಹಜವಾಗಿ ಘಟನೆಗಳು ತನ್ನ ಕಾಲದಲ್ಲಿಯೇ ವಿಶೇಷವಾಗಿ ರೋಮಾಯ ಸಾಮ್ರಾಜ್ಯದ ವಿಷಯದಲ್ಲಿ ಸಂಭವಿಸುವವೆಂದು ಸೂಚಿಸುವಂತೆ ಈ ದರ್ಶನಗಳನ್ನು ವಿವರಿಸುತ್ತಾನೆ. ಒಬ್ಬನು ಈ ಪುಸ್ತಕದ ಉಳಿದ ಭಾಗವನ್ನು ಅಭ್ಯಾಸಿಸುವ ಹಾಗೆ ಈ ವಿಷಯವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದು ಅವಶ್ಯಕವಾಗಿರುತ್ತದೆ.

ಈ ಅಧ್ಯಾಯದಲ್ಲಿ ಯೋಹಾನನು ಎರಡು ಮೃಗಗಳ ಬಗ್ಗೆ ಮಾತಾಡುತ್ತಾನೆ ಒಂದು ಸಮುದ್ರದೊಳಗಿಂದ ಬಂದ ಮೃಗ (ವಚನಗಳು 1-10), ಹಾಗೂ ಇನ್ನೊಂದು ಭೂಮಿಯೊಳಗಿಂದ ಬಂದ ಮೃಗ (ವಚನಗಳು 11–18), ಅವುಗಳ ಮೂಲಕ ಸೈತಾನನು ವಿಶ್ವಾಸಿಗಳ ಕಡೇ ತಲೆಮಾರಿನ ಮೇಲೆ ಯುದ್ಧ ಮಾಡುವನು. ಮುಂಚಿನ ದರ್ಶನದಲ್ಲಿನ ಘಟಸರ್ಪನಾದ ಸೈತಾನನಂತ (ಪ್ರಕ. 12:5). ಸಮುದ್ರದೊಳಗಿಂದ ಬಂದ ಮೃಗಕ್ಕೆ ಏಳು ಕೊಂಬುಗಳೂ ಏಳು ತಲೆಗಳೂ ಇದ್ದವು. ಯೋಹಾನನ ದೃಷ್ಟಿಯಲ್ಲಿ ಸಮುದ್ರದೊಳಗಿಂದ ಬಂದ ಮೃಗವು ರೋಮಾಯ ಸಾಮ್ರಾಜ್ಯವನ್ನು ಪ್ರತಿನಿಧಿಸುವದಾಗಿತ್ತು. ಏಳು ತಲೆಗಳಲ್ಲಿ ಪ್ರತಿಯೊಂದು ತಲೆಯು ಬೇರೆ ಬೇರೆ ಚಕ್ರವರ್ತಿಯನ್ನು ಪ್ರತಿನಿಧಿಸುವದಾಗಿತ್ತು. ಪ್ರತಿಯೊಂದು ತಲೆಯ ಮೇಲೆ ದೇವದೂಷಣ ನಾಮವು[29] ಬರೆಯಲ್ಪಟ್ಟಿತು (ಪ್ರಕ. 17:3 ಮತ್ತು ವ್ಯಾಖ್ಯಾನ ನೋಡಿರಿ). ಘಟ ಸರ್ಪನಾದ ಸೈತಾನನು ತನ್ನ ಎಲ್ಲಾ ಬಲ ಹಾಗೂ ಅಧಿಕಾರವನ್ನು ಈ ಮೊದಲನೆಯ ಮೃಗಕ್ಕೆ (ರೋಮಾಯ ಸಾಮ್ರಾಜ್ಯಕ್ಕೆ) ಕೊಟ್ಟಿತು. ಆದದರಿಂದ, ಸೈತಾನನ ಹೆಸರಿನಲ್ಲಿ ಮೃಗವು ತಕ್ಷಣವೇ ಕ್ರಿಸ್ತನ ಸಭೆಯನ್ನು ಹಿಂಸಿಸಲಾರಂಭಿಸಿತು.

ಯೋಹಾನನಿಗಾದರೂ ಈ ಮೃಗವು ರೋಮಾಯ ಸಾಮ್ರಾಜ್ಯದಂತಿತ್ತು. ಆದರೆ ಈ ಮೃಗದ ನಿಜ ಅರ್ಥವು ಅದಕ್ಕಿಂತ ವಿಶಾಲವಾದದ್ದೆಂದು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಮೃಗವು ಪ್ರತಿಯೊಂದು ಯುಗದಲ್ಲಿ ಕ್ರಿಸ್ತನನ್ನೂ ಆತನ ಸಭೆಯನ್ನೂ ವಿರೋಧಿಸುವ ಎಲ್ಲಾ ಲೌಕೀಕ ದುಷ್ಟ ಶಕ್ತಿಗೆ ಸಂಕೇತವಾಗಿದೆ.

ಪ್ರವಾದಿಯಾದ ದಾನಿಯೇಲನು ಸಮುದ್ರದೊಳಗಿಂದ ಬಂದ ನಾಲ್ಕು ಮೃಗಗಳ ದರ್ಶನವನ್ನು ಕಂಡನು (ದಾನಿಯೇಲ 7:3-7). ಇಲ್ಲಿ ಯೋಹಾನನ ದರ್ಶನದಲ್ಲಿರುವ ಮೃಗವು ದಾನಿಯೇಲನ ದರ್ಶನದ ನಾಲ್ಕು ಮೃಗಗಳ ಸಮ್ಮಿಲನವಾಗಿದೆ.

**3** ಮೃಗದ ಏಳು ತಲೆಗಳಲ್ಲಿ (ಚಕ್ರ ವರ್ತಿಗಳಲ್ಲಿ), ಒಂದು ತಲೆಯು ಬಹಳವಾಗಿ ಗಾಯಗೊಂಡಿತ್ತು. ಆದರೆ ನಂತರ ಅದು ಗುಣವಾಯಿತು[30]. ಇದರ ಮೂಲಕ ನಾವು ಮೃಗದ ಮಹಾ ಬಲವನ್ನು ಕಾಣಬಹುದು. ಈ ಮೃಗವನ್ನು ಕೊಲ್ಲುವದು ಬಹಳ ಕಷ್ಟಕರವಾಗಿತ್ತು; ಬೇರೆ ಯಾವನಿಗಾದರೂ ಮರಣಕರವಾಗಿರುತ್ತಿದ್ದಂಥ ಗಾಯಗಳಿಂದ ಅದು ಗುಣ ಹೊಂದಿತ್ತು.

**4** ಜಗತ್ತಿನಲ್ಲೆಲ್ಲಾ ಇರುವ ಅವಿಶ್ವಾಸಿಗಳು ಈ ಮೃಗವನ್ನು ಹಿಂಬಾಲಿಸಿದರು (ವಚನ 3). ಈ ಬಲಿಷ್ಠವಾದ ಹಾಗೂ ಭಯಂಕರವಾದ ಮೃಗವು ಸೈತಾನನಿಂದ ಬಲವನ್ನು ಹೊಂದಿತ್ತಾದ್ದರಿಂದ (ವಚನ 2), ಮನುಷ್ಯರು ಸಹಜವಾಗಿ ಸೈತಾನನ್ನು

ಆರಾಧಿಸಲಾರಂಭಿಸಿದರು. ಅವರು ಸ್ವತಃ ಮೃಗವನ್ನು ಸಹ ಆರಾಧಿಸಿದರು. ಯೋಹಾನನ ಕಾಲದಲ್ಲಿ ಜನರು ರೋಮಾಯ ಚಕ್ರವರ್ತಿಗಳನ್ನು ದೇವರಂತೆ ಆರಾಧಿಸಲು ಒತ್ತಾಯಿಸಲ್ಪಡುತ್ತಿದ್ದರು. ಆದದರಿಂದ, ಈ ವಚನದ ಮೂಲಕ ನಾವು ಒಂದು ಪ್ರಾಮುಖ್ಯಸತ್ಯವನ್ನು ಕಲಿಯುಬಹುದುಃ ನಾವು ಯಾವದೇ ಅರಸನನ್ನು ಅಥವಾ ನಾಯಕನನ್ನು ದೇವರಂತೆ ಆರಾಧಿಸುವಾಗಲೆಲ್ಲಾ ವಾಸ್ತವದಲ್ಲಿ, ನಾವು ಸೈತಾನನ್ನು ಆರಾಧಿಸುವವರಾಗಿದ್ದೇವೆ.

5 ದೇವರು ಈ ಮೃಗಕ್ಕೆ ತನ್ನ ಅಧಿಕಾರವನ್ನು ಉಪಯೋಗಿಸಲು ಮೂರುವರೆ ವರ್ಷಗಳನ್ನು ಮಾತ್ರವೇ ನೀಡಿದನು (ಪ್ರಕ. 11:2; 12:6 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

6-7 ಇಲ್ಲಿ ನೀಡಲಾಗಿರುವ ಚಿತ್ರಣದ ಪ್ರಕಾರವಾಗಿ ಮೃಗವು ಅನೇಕ ವಿಧಗಳಲ್ಲಿ ಯೋಹಾನನ ಕಾಲದ ರೋಮಾಯ ಚಕ್ರವರ್ತಿಯನ್ನು ಹೋಲುವದಾಗಿತ್ತು (2 ಥೆಸಲೋನಿಕ 2:4 ನೋಡಿರಿ). ರೋಮಾಯರು ಒಬ್ಬನೇ ಸತ್ಯದೇವರನ್ನು ನಂಬುತ್ತಿರಲಿಲ್ಲ. ಅವರು ತಮ್ಮ ಚಕ್ರವರ್ತಿಯನ್ನು ಆರಾಧಿಸುತ್ತಿದ್ದರು; ಅವರು ಕ್ರೈಸ್ತರನ್ನು ಹಿಂಸಿಸಿದರು. ಪಾಶ್ಚಾತ್ಯ ಯುರೋಪ, ಉತ್ತರ ಆಫ್ರಿಕಾದ ಹಾಗೂ ಮಧ್ಯಪೂರ್ವತ್ಯದ ರಾಷ್ಟ್ರಗಳೆಲ್ಲವೂ ರೋಮಾಯ ಸಾಮ್ರಾಜ್ಯದ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿದ್ದವು. ಈ ಕಾರಣದಿಂದಲೇ ಯೋಹಾನನ ಮನಸ್ಸಿನಲ್ಲಿ ಮೃಗವು ರೋಮಾಯ ಸಾಮ್ರಾಜ್ಯವನ್ನು ಪ್ರತಿನಿಧಿಸುವದಾಗಿತ್ತು.

ಸೈತಾನನು ಹಿಂದೊಮ್ಮೆ ಯೇಸುವಿಗೆ ಲೋಕದ ಜನಾಂಗಗಳ ಮೇಲೆಲ್ಲಾ ಅಧಿಕಾರ ಕೊಡುವದಕ್ಕೆ ಪ್ರಯತ್ನಿಸಿದ್ದನು. ಆದರೆ ಯೇಸು ಆತನ ಕೊಡುಗೆಯನ್ನು ನಿರಾಕರಿಸಿದ್ದನು (ಮತ್ತಾಯ 4:8-10). ಅದಕ್ಕೆ ಬದಲಾಗಿ, ಸೈತಾನನು ಈಗ ತನ್ನ ಅಧಿಕಾರವನ್ನು ಮೃಗಕ್ಕೆ ಕೊಟ್ಟಿರುವದನ್ನು ನೋಡುತ್ತೇವೆ.

8 ಕ್ರಿಸ್ತನ ವಿಶ್ವಾಸಿಗಳು ಮಾತ್ರವೇ ಈ ಮೃಗವನ್ನು ಆರಾಧಿಸಲು ನಿರಾಕರಿಸುತ್ತಾರೆ; ಅವರ ಹೆಸರುಗಳು ಕುರಿಯಾದಾತನ ಬಳಿಯಲ್ಲಿರುವ ಜೀವಬಾಧ್ಯರ ಪುಸ್ತಕದಲ್ಲಿ ಬರೆಯಲ್ಪಟ್ಟಿವೆ (ಫಿಲಿಪ್ಪಿ 4:3; ಪ್ರಕ. 3:5). ಈ ಕುರಿಯಾದಾತನು ಜಗದುತ್ಪತ್ತಿಗೆ ಮೊದಲೇ ಕೊಯ್ಯಲ್ಪಟ್ಟನೆಂದು ಯೋಹಾನನು ಇಲ್ಲಿ ಹೇಳುತ್ತಾನೆ. ಇದರ ಅರ್ಥವೇನೆಂದರೆ ದೇವರು ಕ್ರಿಸ್ತನ ದೇಹದ ಯಜ್ಞದ ಮೂಲಕವಾಗಿ ಮನುಷ್ಯರನ್ನು ರಕ್ಷಿಸಲು ಜಗದುತ್ಪತ್ತಿಗೆ ಮೊದಲೇ ಸಂಕಲ್ಪಮಾಡಿದ್ದನು. ಜಗದುತ್ಪತ್ತಿಗೆ ಮುಂಚಿನಿಂದಲೇ ನಮ್ಮ ಹೆಸರುಗಳು ಆ ಪುಸ್ತಕದಲ್ಲಿ ಬರೆಯಲ್ಪಟ್ಟಿವೆ (ಎಫೆಸ 1:4). ಪ್ರಕಟಣೆ 3:5ರ ಪ್ರಕಾರವಾಗಿ ಹೇಗಿದ್ದರೂ, ನಾವು ಅರ್ಥಮಾಡಿಕೊಳ್ಳಬಹುದೇನೆಂದರೆ; ಈ ಜೀವಿತದಲ್ಲಿ ನಾವು ನಮ್ಮ ನಂಬಿಕೆಯನ್ನು ತೊರೆಯುವದಾದರೆ ನಮ್ಮ ಹೆಸರುಗಳು ಆ ಪುಸ್ತಕದಿಂದ ಅಳಿಸಿಹಾಕಲ್ಪಡಬಹುದು.

9-10 ಇಲ್ಲಿ ಯೋಹಾನನು ಕಷ್ಟಗಳನ್ನೂ ಬಾಧೆಯನ್ನು ಅನುಭವಿಸುತ್ತಿರುವ ವಿಶ್ವಾಸಿಗಳಿಗೆ ಪ್ರಬೋಧನೆ ಹಾಗೂ ಪ್ರೋತ್ಸಾಹದ ಮಾತುಗಳನ್ನು ಬರೆಯುತ್ತಾನೆ. ಯಾವದೇ ಕ್ರೈಸ್ತರು ಸೆರೆಗೆ ಹಾಕಲ್ಪಡಬೇಕೆಂದು ದೇವರಿಂದ ನೇಮಿಸಲ್ಪಟ್ಟಿರುವದಾದರೆ ಅವರು ಅದನ್ನು ಸ್ವೀಕರಿಸಿಕೊಳ್ಳಲಿ. ಅವರು ಕತ್ತಿಯಿಂದ ಹೋರಾಡದಿರಲಿ; ಇಲ್ಲವಾದರೆ ಅವರು ಕತ್ತಿಯಿಂದಲೇ ಕೊಲ್ಲಲ್ಪಡುವರು (ಮತ್ತಾಯ 26:50-52 ನೋಡಿರಿ). ಬದಲಾಗಿ, ಅವರು ತಮ್ಮ ವೈರಿಗಳನ್ನು ಪ್ರೀತಿಸಿ ತಾಳ್ಮೆಯೂ ನಂಬಿಕೆಯೂ ಉಳ್ಳವರಾಗಿ ಎಲ್ಲವನ್ನೂ ಸಹಿಸಿಕೊಳ್ಳಲಿ (ವಚನ 10).

## ಭೂಮಿಯೊಳಗಿಂದ ಬಂದ ಮೃಗ (13:11-18)

11 ಈ ದರ್ಶನದಲ್ಲಿ ಬಣ್ಣಿಸಲಾಗಿರುವ ಎರಡನೆಯ ಮೃಗವು ಸೈತಾನನ ಇನ್ನೊಂದು ಸಹಾಯಕನಾಗಿದ್ದು ಅದರ ಮುಖ್ಯ ಕೆಲಸವು ಜನರನ್ನು ಮರುಳುಗೊಳಿಸಿ ಮಾರ್ಗತಪ್ಪಿಸುವದಾಗಿತ್ತು. ಆ ಮೃಗವು ಕುರಿಯಂತೆ ಕಾಣಿಸುತ್ತಿತ್ತು, ಆದರೆ ಘಟಸರ್ಪದಂತೆ ಮಾತಾಡಿತು (ಮತ್ತಾಯ 7:15 ನೋಡಿರಿ). ಪ್ರಕಟಣೆ 16:13ರಲ್ಲಿ ಈ ಎರಡನೆಯ ಮೃಗವು ಸುಳ್ಳು ಪ್ರವಾದಿ ಎಂದು ಕರೆಯಲ್ಪಟ್ಟಿದೆ.

12 ಜನರು ಮೊದಲನೆಯ ಮೃಗವನ್ನು ಆರಾಧಿಸುವಂತೆ ಮಾಡುವದು ಈ ಎರಡನೆಯ ಮೃಗದ ಮುಖ್ಯ ಕೆಲಸವಾಗಿತ್ತು. ಆದದರಿಂದ, ಈ ಎರಡನೆಯ ಮೃಗವು ಸುಳ್ಳು ಧರ್ಮ ಹಾಗೂ ಸುಳ್ಳು ಯಾಜಕತ್ವದ ಸಂಕೇತವಾಗಿದೆ ಎಂಬದನ್ನು ನಾವು ಅರ್ಥಮಾಡಿಕೊಳ್ಳಬಹುದು.

13-14 ಎರಡನೆಯ ಮೃಗವು (ಸುಳ್ಳು ಪ್ರವಾದಿ) ಸೂಚಕಕಾರ್ಯ ಹಾಗೂ ಮಹಾತ್ಕಾರ್ಯಗಳನ್ನು ಮಾಡುವದರ ಮೂಲಕ ಜನರನ್ನು ಮಾರ್ಗ ತಪ್ಪಿಸಿತು (ಧರ್ಮೋಪದೇಶಕಾಂಡ 13:1-4; ಮಾರ್ಕ 13:22; 2 ಥೆಸಲೋನಿಕ 2:9-10 ನೋಡಿರಿ). ಎರಡನೆಯ ಮೃಗವು ಮೊದಲನೆಯ ಮೃಗದ ಪ್ರತಿಮೆಯನ್ನು ಮಾಡಿಸಿಕೊಳ್ಳುವಂತೆ ಜನರಿಗೆ ಆಜ್ಞಾಪಿಸಿತು.[31]

15 ಯೋಹಾನನ ಕಾಲದಲ್ಲಿ ಪ್ರತಿಮೆಗಳು ಮಾತಾಡಬಲ್ಲವು ಎಂದು ಅನೇಕ ಜನರು ನಂಬುತ್ತಿದ್ದರು. ಯೋಹಾನನ ದರ್ಶನದ ಪ್ರಕಾರವಾಗಿ ಈ ಎರಡನೆಯ ಮೃಗವು ಮೊದಲನೆಯ ಮೃಗದ ವಿಗ್ರಹಕ್ಕೆ ಮಾತಾಡುವ ಸಾಮರ್ಥ್ಯ ನೀಡಿತು; ಆ ವಿಗ್ರಹವು ಮಾತಾಡಿದ್ದೇನೆಂದರೆ ತನ್ನನ್ನು ಆರಾಧಿಸಲು ನಿರಾಕರಿಸಿದವರಿಗೆಲ್ಲಾ ಮರಣದಂಡನೆಯಾಗಬೇಕು ಎಂಬದೇ.

16-17 ಅಲ್ಲದೆ ಎರಡನೆಯ ಮೃ ಗವು ಜನರೆಲ್ಲರೂ ಮೊದಲನೆಯ ಮೃಗದ ಗುರುತನ್ನು ತಮ್ಮ ಹಣೆಗಳ ಮೇಲೆ ಹಾಕಿಸಿಕೊಳ್ಳುವಂತೆ ಒತ್ತಾಯಿಸಿತು. ಈ ಗುರುತು ಮೊದಲನೆಯ ಮೃಗದ ಹೆಸರು ಅಥವಾ ಅದರ ಹೆಸರನ್ನುಸೂಚಿಸುವ ಅಂಕೆ[32] (ವಚನ 17). ದೇವರ ನಂಬಿಗಸ್ಥದಾಸರು ದೇವರ ಹೆಸರಿನಿಂದ ಮುದ್ರಿಸಲ್ಪಟ್ಟು ಪ್ರಕಾರವೇ (ಪ್ರಕ. 7:2-3). ಮೃಗದ ಹಿಂಬಾಲಕರು ಸಹ ಮೃಗದ ಹೆಸರು ಅಥವಾ ಅಂಕೆಯ ಮುದ್ರೆಯನ್ನು ಹೊಂದಿದರು. ಮೃಗದ ಗುರುತನ್ನು

ಹಾಕಿಸಿಕೊಳ್ಳದಿದ್ದವರು ಯಾವದೇ ಸರಕನ್ನು ಕೊಂಡುಕೊಳ್ಳಲು ಅಥವಾ ಮಾರುವದಕ್ಕೆ ಆಗಲಿಲ್ಲ; ಅವರು ಜೀವನೋಪಾಯ ನೋಡಿಕೊಳ್ಳುವದಕ್ಕೆ ಬಹಳ ಕಷ್ಟವಾಗಿತ್ತು. ಇದೇ ಪರಿಸ್ಥಿತಿಯು ರೋಮಾಯ ಸಾಮ್ರಾಜ್ಯದ ವೇಳೆಯಲ್ಲಿ ನಿಜವಾದ ಕ್ರೈಸ್ತರಿಗೆ ಬಂದಿತ್ತು.

18 ಮೃಗದ ಅಂಕೆಯು 666 ಆಗಿತ್ತು. ಇದು ಒಬ್ಬ ಮನುಷ್ಯನ ಅಂಕೆ ಎಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ, ಆದರೆ ಅತನು ಯಾರೆಂಬದು ಯಾರಿಗೂ ಖಚಿತವಾಗಿ ಗೊತ್ತಿಲ್ಲ. 666 ಅಂಕೆಯು ರೋಮಾಯ ಚಕ್ರ ವರ್ತಿಯಾದ ನಿರೋವಿನದು ಎಂದು ಕೆಲವರು ಭಾವಿಸುತ್ತಾರೆ ಆತನು ಕ್ರಿ.ಶಕ 54ರಿಂದ 68ವರೆಗೆ ಆಳ್ವಿಕೆ ಮಾಡಿದ್ದನು (ಅ.ಕೃತ್ಯ 18:14-16; 25:10-11 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

---

## ಅಧ್ಯಾಯ - 14

### ಕುರಿಯಾದಾತನು ಹಾಗೂ 144000 ಜನರು (14:1-5)

1 ಕುರಿಯಾದಾತನಾದ ಕ್ರಿಸ್ತನು ಚೀಯೋನ್ ಪರ್ವತದ ಮೇಲೆ ನಿಂತಿರುವದನ್ನು ಯೋಹಾನನು ನೋಡಿದನು. ಚೀಯೋನ್ ಪರ್ವತವು ಪರಲೌಕಿಕ ಚೀಯೋನ್– ಅಂದರೆ, ಪರಲೋಕದ ಯೆರುಸಲೇಮ್ (ಇಬ್ರಿಯ 12:22; ಪ್ರಕ. 22:2-10 ನೋಡಿರಿ). ತಮ್ಮ ಹಣೆಗಳ ಮೇಲೆ ದೇವರ ಹಾಗೂ ಕುರಿಯಾದಾತನ ಹೆಸರನ್ನು ಹೊಂದಿದ್ದ 144 000.[33], ಜನರು ಪ್ರತಿಯೊಂದು ಪೀಳಿಗೆಯ ಎಲ್ಲಾ ವಿಶ್ವಾಸಿಗಳನ್ನು ಪ್ರತಿನಿಧಿಸುತ್ತಾರೆ, ಅವರ ಸಂಖ್ಯೆಯು ಕೇವಲ 144000ಕ್ಕೆ ಮಾತ್ರವೇ ಸಿಮೀತವಾಗಿರುವದಿಲ್ಲ. ಅವರು ಜಯಶಾಲಿಗಳಾದವರಾಗಿದ್ದಾರೆ ಅವರ ಮೇಲೆ ಹೊಸ ಹೆಸರು ಬರೆಯಲ್ಪಟ್ಟಿರುತ್ತದೆ (ಪ್ರಕ. 3:12 ಮತ್ತು ವ್ಯಾಖ್ಯಾನ ನೋಡಿರಿ).

ಇಲ್ಲಿ ಪ್ರಸ್ತಾಪಿಸಲಾಗಿರುವ 144 000ಹಾಗೂ ಪ್ರಕ 7 3 4ರಲ್ಲಿ ಪ್ರಸ್ತಾಪಿಸಲ್ಪಟ್ಟ 144 000 ಜನರು ಒಂದೇ ಗುಂಪಿನ ಜನರನ್ನು ಸೂಚಿಸುವದಿಲ್ಲ ಎಂದು ಅನೇಕ ಬೈಬಲ್ ಪಂಡಿತರು ನಂಬುತ್ತಾರೆ.[34] ಇಲ್ಲಿ 144 000 ಸಂಖ್ಯೆಯು ಎಲ್ಲಾ ತಲೆಮಾರುಗಳ ಕ್ರೈಸ್ತರೆಲ್ಲರನ್ನೂ ಪ್ರತಿನಿಧಿಸುತ್ತದೆ. ದೇವರಿಂದ ಮುದ್ರೆ ಹಾಕಲ್ಪಟ್ಟ ಇವರಲ್ಲಿ ಒಬ್ಬರಾದರೂ ನಾಶವಾಗುವದಿಲ್ಲ. ಆದದರಿಂದ, ಇಲ್ಲಿ ಪ್ರಸ್ತಾಪಿಸಲಾದ 144 000 ಜನರು ಪ್ರಕ. 7:9ರಲ್ಲಿ ಪ್ರಸ್ತಾಪಿಸಲಾಗಿರುವ ಮಹಾ ಸಮೂಹಕ್ಕೆ ಸಂಬಂಧಿಸುತ್ತಾರೆ.

2-3 ಕ್ರಿಸ್ತನಿಂದ ವಿಮೋಚಿಸಲ್ಪಟ್ಟವರೂ, ಆತನಿಂದ ಮುದ್ರೆ ಹೊಂದಲ್ಪಟ್ಟವರೂ, ಮಾತ್ರವೇ ಪರಲೋಕದಲ್ಲಿ ಜಯದ ಹಾಗು ರಕ್ಷಣೆಯ ಹೊಸಹಾಡನ್ನು ಹಾಡುವವರಾಗುವರು.

4 ಈ ವಚನದಲ್ಲಿ ಯೋಹಾನನು ಈ 144 000 ಜನರ ಗುಂಪಿನ ಕುರಿತು ಮೂರು ಸಂಗತಿಗಳನ್ನು ಹೇಳುತ್ತಾನೆ. ಮೊದಲನೆಯದಾಗಿ, ಅವರು ಸ್ತ್ರೀ ಸಹವಾಸದಿಂದ ಮಲಿನರಾಗದವರು. ಅವರು ಇತರ ದೇವರುಗಳನ್ನು ಅಥವಾ ಯಾವದೇ ಅರಸ ಅಥವಾ ಚಕ್ರವರ್ತಿಯನ್ನು ಆರಾಧಿಸುವದರ ಮೂಲಕ ತಮ್ಮನ್ನು ಮಲಿನಮಾಡಿಕೊಳ್ಳಲಿಲ್ಲ. ಹಳೆ ಒಡಂಬಡಿಕೆಯ ಬೋಧನೆಗನುಸಾರವಾಗಿ ಏಕೈಕ ಸತ್ಯ ದೇವರನ್ನು ಬಿಟ್ಟು ಬೇರೆ ಯಾವದನ್ನಾದರೂ ಆರಾಧಿಸಿದರೆ ಅದು ವ್ಯಭಿಚಾರ ಮಾಡಿದ ಹಾಗಿರುತ್ತಿತ್ತು. ಯೆಹೂದ್ಯರು ವಿಗ್ರಹಗಳನ್ನು ಆರಾಧಿಸಿದಾಗಲೆಲ್ಲಾ ಯೆಹೂದ್ಯ ಪ್ರವಾದಿಗಳು ಅವರನ್ನು ವ್ಯಭಿಚಾರಿಗಳಾಗಿದ್ದಾರೆಂದು ಆರೋಪಿಸಿದರು (ಯೆರೆಮಿಯ 3:6-20). ಕಾರಣವೇನೆಂದರೆ, ಅವರು ತಮ್ಮ ನಿಜವಾದ "ಗಂಡ"ನನ್ನು ದೇವರನ್ನು ತೊರೆದಿದ್ದರು, ಮತ್ತು ವಿಗ್ರಹಗಳ ಬಳಿಗೆ ಹೋಗಿದ್ದರು. ಪ್ರಕಟಣೆ 17:1-2ರಲ್ಲಿ ರೋಮ ಪಟ್ಟಣವು "ಮಹಾ ಜಾರ ಸ್ತ್ರೀ" ಎಂದು ಕರೆಯಲ್ಪಟ್ಟಿದೆ ಅವಳೊಂದಿಗೆ ಭೂನಿವಾಸಿಗಳು ವ್ಯಭಿಚಾರ ಮಾಡಿದ್ದಾರೆ. ಆದರೆ ಈ 144 000 ಜನರು ತಮ್ಮನ್ನು ನಿರ್ದೋಷಿಗಳಾಗಿ ಕಾಪಾಡಿಕೊಂಡರು. ಅವರು ಕ್ರಿಸ್ತನ ನಿಷ್ಕಳಂಕ ಕನ್ನೆಯರಾದ ವಧುಗಳಾಗಿರಲು ಯೋಗ್ಯರಾಗಿದ್ದರು (2 ಕೊರಿಂಥ 11:2; ಪ್ರಕಟಣೆ 21:9 ನೋಡಿರಿ).

ಅವರು "ವಿಗ್ರಹಗಳೊಂದಿಗೆ" ಜಾರುತ್ವ ಮಾಡಿರಲಿಲ್ಲ ಯೋಹಾನನು ಈ 144 000 ಜನರ ಕುರಿತು ಹೇಳುವ ಎರಡನೆಯ ಸಂಗತಿಯೇನೆಂದರೆ, ಅವರು ಯಜ್ಞದ ಕುರಿಯದಾತನು ಎಲ್ಲಿ ಹೋದರೂ ಆತನ ಹಿಂದೆ ಹೋಗುವರು; ಅಂದರೆ, ಅವರು ಕ್ರಿಸ್ತನ ನಂಬಿಗಸ್ಥ ಹಾಗೂ ವಿಧೇಯತೆಯುಳ್ಳ ಶಿಷ್ಯರು.

ಮೂರನೆಯದಾಗಿ, ಅವರು ಕ್ರಿಸ್ತನಿಂದ ಕೊಂಡುಕೊಳ್ಳಲ್ಪಟ್ಟವರು (ಪ್ರಕ. 5:9ಮತ್ತು ವ್ಯಾಖ್ಯಾನ ನೋಡಿರಿ), ಮತ್ತು ಅವರು ದೇವರಿಗೆ ಪ್ರಥಮಫಲಗಳಾಗಿ –ಅಂದರೆ, ಯಜ್ಞಗಳಾಗಿ ಅರ್ಪಿಸಲ್ಪಟ್ಟರು (ರೋಮ 12:1).

5 144000 ಜನರು ನಿರ್ದೋಷಿಗಳಾಗಿದ್ದರು. ಅವರು ಕ್ರಿಸ್ತನಲ್ಲಿಟ್ಟ ನಂಬಿಕೆಯ ಮೂಲಕ ದೇವರ ದೃಷ್ಟಿಯಲ್ಲಿ ನೀತಿವಂತರಾಗಿ ನಿರ್ಣಯಿಸಲ್ಪಟ್ಟಿದ್ದರು (ರೋಮ 3:22; 5:2 ನೋಡಿರಿ). ಅವರ ನಿಲುವಂಗಿಗಳು ಕುರಿಯಾದಾತನ ರಕ್ತದಲ್ಲಿ ತೊಳೆಯಲ್ಪಟ್ಟು ಶುಭ್ರಮಾಡಲ್ಪಟ್ಟಿದ್ದವು (ಪ್ರಕ. 7:14 ಮತ್ತು ವ್ಯಾಖ್ಯಾನ ನೋಡಿರಿ).

## ಮೂರು ಮಂದಿ ದೇವದೂತರು (14:6-13)

**6-7** ಬಳಿಕ ಮೊದಲನೆಯ ದೇವದೂತನು ಲೋಕದ ಜನರಿಗೆ ಪಶ್ಚಾತಾಪಪಟ್ಟು ಜೀವವುಳ್ಳ ದೇವರ ಕಡೆಗೆ ತಿರಿಗಿಕೊಳ್ಳಲು ಕರೆ ನೀಡಿದನುಃ "ನೀವೆಲ್ಲರೂ ದೇವರಿಗೆ ಭಯಪಟ್ಟು ಆತನನ್ನು ಘನ ಪಡಿಸಿರಿ, ಯಾಕೆಂದರೆ ಆತನು ನ್ಯಾಯತೀರ್ಪು ಮಾಡುವಗಳಿಗೆಯು ಬಂದಿದೆ" (ವಚನ 7). ಇದು ಮಾನವ ಜನಾಂಗದ ಕಡೇ ಎಚ್ಚರಿಕೆಯಾಗಿತ್ತು; ಇದು ಮನುಷ್ಯನಿಗೆ ರಕ್ಷಣೆಯನ್ನು ಕಂಡುಕೊಳ್ಳಲು ಕೊನೆಯ ಅವಕಾಶವಾಗಿತ್ತು. ಮನುಷ್ಯನಿಗೆ ನೀಡಲಾದ ಈ ಅಂತಿಮ ಕರೆಯು ಯೇಸುವಿನ ಮಾತುಗಳ ನೆರವೇರಿಕೆಯಾಗಿತ್ತೆಂದು ಕೆಲವು ಬೈಬಲ್ ಪಂಡಿತರು ನಂಬುತ್ತಾರೆಃ "ಮೊದಲು ಎಲ್ಲಾ ಜನಾಂಗಗಳಿಗೆ ಸವಾರ್ತೆಯು ಸಾರಲ್ಪಡಬೇಕು" (ಮಾರ್ಕ 13:10).

**8** ತರುವಾಯ ಎರಡನೆಯ ದೇವದೂತನು ಹೇಳಿದ್ದೇನೆಂದರೆಃ "ಬಾಬೆಲೆಂಬ ಮಹಾನಗರಿಯು ಬಿದ್ದಳು" (ಯೆಶಾಯ 21:9). ಹಳೆ ಒಡಂಬಡಿಕೆಯ ಕಾಲದಲ್ಲಿ ಬಾಬೆಲವು ತನ್ನ ಐಶ್ವರ್ಯ ಹಾಗೂ ದುಷ್ಟತನಕ್ಕೆ ಪ್ರಸಿದ್ಧವಾದ ನಗರವಾಗಿತ್ತು (ದಾನಿಯೇಲ 4:28-30; 1ಪೇತ್ರ 5:13 ಮತ್ತು ವ್ಯಾಖ್ಯಾನ ನೋಡಿರಿ). ಆದದರಿಂದ, "ಬಾಬೆಲ" ಎಂಬ ಹೆಸರು ಯಾವದೇ ದುಷ್ಟ ಪಟ್ಟಣ ರಾಜ್ಯ ಅಥವಾ ಅಧಿಕಾರವನ್ನು ಸೂಚಿಸುತ್ತದೆಂಬದನ್ನು ನಾವು ತಿಳಿದುಕೊಳ್ಳಬಹುದು. ಯೋಹಾನನ ಕಾಲದಲ್ಲಿ ರೋಮನಗರವು "ಬಾಬೆಲ" ಎಂದು ಕರೆಯಲ್ಪಟ್ಟಿತ್ತು.

ಸಕಲ ಜನಾಂಗಗಳು ಆಕೆಯ (ಬಾಬೆಲಿನ) ಅತಿ ಜಾರುತ್ವವೆಂಬ ದ್ರಾಕ್ಷರಸವನ್ನು ಕುಡಿದದ್ದವು; ಅಂದರೆ, ಅವರೆಲ್ಲರೂ ಆಕೆಯ ಜಾರತ್ವ ಹಾಗೂ ವಿಗ್ರಹಾರಾಧನೆಯಲ್ಲಿ ಪಾಲುಗಾರರಾಗಿದ್ದರು, ಮತ್ತು ಹೀಗೆ ತಮ್ಮ ಮೇಲೆ ದೇವರ ಕೋಪಾಗ್ನಿಯನ್ನು ಬರಮಾಡಿಕೊಂಡಿದ್ದರು (ಯೆರೆ 51:7; ಪ್ರಕ. 17:1-2 ನೋಡಿರಿ).

**9-11** ಮೂರನೆಯ ದೇವದೂತನು ಮೃಗದ ಗುರುತನ್ನು ಹಾಕಿಸಿಕೊಂಡಿದ್ದರವರೆಲ್ಲರ ಮೇಲೆ– ಅಂದರೆ, ಪಶ್ಚಾತಾಪ ಪಟ್ಟು ಕ್ರಿಸ್ತನ ಕಡೆಗೆ ತಿರಿಗಿ ಕೊಳ್ಳದಿದ್ದವರೆಲ್ಲರ ಮೇಲೆ ಬರಲಿದ್ದ ನ್ಯಾಯತೀರ್ಪನ್ನು ಬಣ್ಣಿಸುತ್ತಾನೆ (ಪ್ರಕ. 13:16-17). ಮೃಗದ ಗುರುತನ್ನು ಹೊಂದಿದ್ದವರು ದೇವರ ರೌದ್ರವೆಂಬ ದ್ರಾಕ್ಷರಸವನ್ನು ಕುಡಿಯುವಂತೆ ಮಾಡಲ್ಪಟ್ಟರು (ಕೀರ್ತನೆಗಳು 75:8; ಯೆರೆ 25:15-17). ದೇವರ ರೌದ್ರವೆಂಬ ದ್ರಾಕ್ಷಾರಸವು ಆತನ ಕೋಪವೆಂಬ ಪಾತ್ರೆಯಲ್ಲಿ ಏನೂ ಬೆರಸದೆ ಸುರಿಸಲ್ಪಡುವದು; ಅಂದರೆ, ಅದು ನೀರಿನಿಂದ– ಕರುಣೆಯಿಂದ– ಬೆರಸಲ್ಪಡುವದಿಲ್ಲ.

ಮೃಗದ ಗುರುತನ್ನು ಹಾಕಿಸಿಕೊಂಡವರ ವಿರುದ್ಧದ ದೇವರ ಅಂತಿಮ ನ್ಯಾಯತೀರ್ಪನಲ್ಲಿ ಕರುಣೆಯು ಬೆರತಿರುವದಿಲ್ಲ. ಅವರು ಉರಿಯುವ ಗಂಧಕದಲ್ಲಿ ಸದಾಕಾಲವೂ ಯಾತನೆ ಪಡುವರು (ಆದಿಕಾಂಡ 19:24-28; ಮಾರ್ಕ 9:44; ಲೂಕ 17:29 ನೋಡಿರಿ).

**12** ಆದದರಿಂದ, ಕ್ರೈಸ್ತರಾಗಿರುವವರು ತಮ್ಮ ಮೇಲೆ ನ್ಯಾಯ ತೀರ್ಪು ಬರದಂತೆ ಕಡೇ ವರೆಗೂ ದೃಢ ವಾಗಿಯೂ ನಂಬಿಗಸ್ಥರಾಗಿಯೂ ಇರಲಿ.

**13** ಬಳಿಕ ಯೋಹಾನನ ದರ್ಶನದಲ್ಲಿ ಪರಲೋಕದಿಂದ ಒಂದು ಶಬ್ದವು ಹೇಳಿದ್ದೇನೆಂದರೆಃ "ಇಂದಿನಿಂದ ಕರ್ತನ ಭಕ್ತರಾಗಿ ಸಾಯುವವರು ಧನ್ಯರು". ಯೋಹಾನನ ಕಾಲದಲ್ಲಿ ತಮ್ಮ ನಂಬಿಕೆಯನ್ನು ತೊರೆಯದೆ ಚಕ್ರವರ್ತಿಗಳನ್ನು ಅಥವಾ ಇತರ ದೇವರುಗಳನ್ನು ಆರಾಧಿಸದ ಕ್ರೈಸ್ತರು ಕೊಲ್ಲಲ್ಪಡುತ್ತಿದ್ದರು. ಆದರೆ ಅವರು ನಿತ್ಯವಾದ ಪ್ರತಿಫಲವನ್ನು ನಿತ್ಯವಾದ ವಿಶ್ರಾಂತಿಯನ್ನು ಪಡೆಯುವರು (ಇಬ್ರಿಯ 4:1). ಯೋಹಾನನು ಅವರ ಸುಕೃತ್ಯಗಳು –ಅಂದರೆ, ಅವರ ನಂಬಿಕೆಯ ಹಾಗೂ ಪ್ರೀತಿಯ ಕಾರ್ಯಗಳು– ಅವರೊಡನೆ ಬರುವವು ಎಂದು ಬರೆಯುತ್ತಾನೆ. ಅದರ ಅರ್ಥವೇನೆಂದರೆ ಅವರ ಸುಕೃತ್ಯಗಳ ವಾರ್ತೆಯು ಪರಲೋಕವನ್ನು ತಲುಪು ವದು.

## ಸುಗ್ಗಿ ಕಾಲ ಹಾಗೂ ಭೂಮಿ (14:14-20)

**14-15** ತರುವಾಯ ಯೋಹಾನನು ಮನುಷ್ಯಕುಮಾರನಂತಿದ್ದವನೊಬ್ಬನನ್ನು ಕಂಡನು (ದಾನಿಯೇಲ 7:13-14) ಆತನ ಕೈಯಲ್ಲಿ ಹದವಾದ ಕುಡುಗೋಲು ಇತ್ತು (ವಚನ 14). ಈತನು ಖಂಡಿತವಾಗಿಯೂ ಕ್ರಿಸ್ತನೇ ಬೈಬಲಿನಲ್ಲಿ ಕುಡುಗೋಲು ನ್ಯಾಯತೀರ್ಪಿನ ಸಂಕೇತವಾಗಿದೆ. ನೀತಿವಂತರು ಬೆಂಕಿಯ ನರಕದಲ್ಲಿ ಬಿಸಾಡಲ್ಪಡುವರು (ಯೆರೆ 51:33:ಮತ್ತಾಯ 13:30, 36-43; ಮಾರ್ಕ 4:26-29).

**16** ತರುವಾಯ "ಮನುಷ್ಯಕುಮಾರನಂತೆ ಇದ್ದ" ಕ್ರಿಸ್ತನು ತನ್ನ ಕುಡುಗೋಲನ್ನು ಭೂಮಿಯ ಮೇಲೆ ಹಾಕಿದನು. ಆತನು ಹೀಗೆ ಮಾಡುವಾಗ ಏಳನೆಯ ತುತೂರಿಯು ಊದಲ್ಪಟ್ಟು ಅಂತಿಮ ನ್ಯಾಯ ತೀರ್ಪು ಪ್ರಾರಂಭಗೊಂಡಿತು (ಪ್ರಕ.11:15; 15:1 ಮತ್ತು ವ್ಯಾಖ್ಯಾನ ನೋಡಿರಿ).

**17-18** ಬಳಿಕ ಯೋಹಾನನು ಒಬ್ಬ ದೇವದೂತನನ್ನು ಕಂಡನು, ಮತ್ತು ಈ ದೇವದೂತನು ಸಹ ಒಂದು ಕುಡುಗೋಲನ್ನು ಹಿಡಿದಿದ್ದನು. ತರುವಾಯ ಬೆಂಕಿಗೆ ಅಧಿಕಾರಿಯಾದ ಇನ್ನೊಬ್ಬ ದೇವದೂತನು (ಪ್ರಕ. 8:3-5) ಕುಡುಗೋಲನ್ನು ಹಿಡಿದಿದ್ದ ದೇವದೂತನಿಗೆ ಭೂಮಿಯ ದ್ರಾಕ್ಷಿ ಗೊಂಚಲುಗಳನ್ನು ಕೊಯ್ಯಿ ಎಂದು ಹೇಳಿದನು. ದ್ರಾಕ್ಷಿಗೊಂಚಲುಗಳು ಮೃಗದ ಗುರುತು ಹೊಂದಿದವರನ್ನು– ಅಂದರೆ, ಪಶ್ಚಾತಾಪಪಟ್ಟು ದೇವರ ಕಡೆಗೆ ತಿರಿಗಿಕೊಳ್ಳದವರನ್ನು –ಪ್ರತಿನಿಧಿಸುತ್ತವೆ.

**19-20** ಈ ವಚನಗಳಲ್ಲಿ ನಾವು ದುಷ್ಟರಿಗೆ ಏನು ಸಂಭವಿಸಲಿದೆ ಎಂಬುದರ ಇನ್ನೊಂದು ಚಿತ್ರಣವನ್ನು ಕಾಣುತ್ತೇವೆ. ಅವರು ಕತ್ತರಿಸಲ್ಪಟ್ಟು ಬೆಂಕಿಯಲ್ಲಿ ಬಿಸಾಡಲ್ಪಡುವದು, ಮಾತ್ರವಲ್ಲದೆ, ಅವರು ದ್ರಾಕ್ಷೆಗಳಂತೆ ದೇವರ ಪಾದಗಳ ಕೆಳಗೆ ತುಳಿಯಲ್ಪಡುವರು [36] (ಯೆಶಾಯ 63:1-6; ಯೋವೇಲ 3:12-13; ಪ್ರಕ. 19; 15). ಅವರ ರಕ್ತವು ಹೊರಟು ಎರಡು ಮೀಟರುಗಳಷ್ಟು ಆಳವಾಗಿಯೂ ಇನ್ನೂರು ಮೈಲುಗಳಷ್ಟು ದೂರವೂ ಹರಿಯುವದು!

---

# ಅಧ್ಯಾಯ - 15

## ಏಳು ಉಪದ್ರವಗಳನ್ನು ಹಿಡಿದಿದ್ದ ಏಳು ಮಂದಿ ದೇವದೂತರು (15:1-8)

**1** ಈ ಭಾಗದಲ್ಲಿ ಬಣ್ಣಿಸಲಾಗಿರುವ ಕಡೆಯ ಏಳು ಉಪದ್ರವಗಳು ಮನುಷ್ಯರನ್ನು ಪಶ್ಚಾತಾಪಕ್ಕೆ ನಡಿಸಿ ತನ್ನ ಕಡೆಗೆ ತಿರಿಗಿಕೊಳ್ಳುವಂತೆ ದೇವರು ಮಾಡುವ ಕಡೇ ಪ್ರಯತ್ನವಾಗಿದೆ; ಅವು ಗಳು ಮನುಷ್ಯರಿಗೆ ದೇವರ ಕಡೆಯ ಎಚ್ಚರಿಕೆಗಳಾಗಿವೆ. ಈ ಉಪದ್ರವಗಳು ಪೂರ್ತಿಗೊಂಡಮೇಲೆ ದೇವರ ಕೊನೆಯ ನ್ಯಾಯತೀರ್ಪು ಬರುವದು. ಯೋಹಾನನ ಪ್ರಕಟಣೆಯಲ್ಲಿ ಈ ಏಳು ಉಪದ್ರವಗಳು ಏಳನೆಯ ತುತೂರಿ ಊದಲ್ಪಟ್ಟ ನಂತರ ಪ್ರಾರಂಭಗೊಂಡವು [37] (ಪ್ರಕ. 11:15; 14:16 ). ಈ ಕಡೆಯ ಏಳು ಉಪದ್ರವಗಳು ಈ ಮುಂಚೆ ಮೊದಲ ಏಳು ತುತೂರಿಗಳಿಂದ ಪ್ರಕಟಿಸಲ್ಪಟ್ಟ ಮೊದಲ ಆರು ಉಪದ್ರವಗಳಿಗಿಂತಲೂ ಹೆಚ್ಚು ಕಠಿಣವಾಗಿರುತ್ತವೆ (ಪ್ರಕಟಣೆ 8-9 ಅಧ್ಯಾಯಗಳು).

**2** ಬಳಿಕ ಯೋಹಾನನು ತನ್ನ ದರ್ಶನದಲ್ಲಿ ಮೃಗದ.... ಮೇಲೆ ಜಯಹೊಂದಿದವರನ್ನು– ಅಂದರೆ, ಮೃಗದ ವಿಗ್ರಹವನ್ನು ಆರಾಧಿಸದೆ (ಪ್ರಕ. 13:14-15). ಮೃಗದ ಗುರುತನ್ನು ಹಾಕಿಸಿಕೊಳ್ಳದವರೆಲ್ಲರನ್ನು ಕಂಡನು (ಪ್ರಕ. 13:16). ಮೃಗದ ಮೇಲೆ ಜಯಹೊಂದುವದೆಂದರೆ ಆತನನ್ನು ಆರಾಧಿಸಿ ಸೇವೆ ಮಾಡಲು ನಿರಾಕರಿಸುವದಾಗಿದೆ. ಯೋಹಾನನು ನೋಡಿದ ಜಯಶಾಲಿಗಳು ರಕ್ಷಣೆಯನ್ನು ಪಡೆದುಕೊಂಡು ದೇವರ ರಾಜ್ಯವನ್ನು ಪ್ರವೇಶಿಸಿದವರಾಗಿದ್ದರು (ಪ್ರಕ. 2:7; 11, 17, 26; 3:5, 12, 21 ನೋಡಿರಿ).

**3-4** ಜಯಹೊಂದಿದವರು ಮೋಶೆಯ ಹಾಡನ್ನೂ (ವಿಮೋಚನಕಾಂಡ 15:1-18). ಯಜ್ಞದ ಕುರಿಯಾದಾತನ ಹಾಡನ್ನೂ ಹಾಡುತ್ತಿದ್ದರು. ದೇವರು ಮೋಶೆಯ ಮೂಲಕ ಯೆಹೂದ್ಯರನ್ನು ಐಗುಪ್ತ್ಯದಾಸತ್ವದೊಳಗಿಂದ ಬಿಡಿಸಿದ ಪ್ರಕಾರವೇ ದೇವರು ಕುರಿಯಾದಾತನಾದ ಕ್ರಿಸ್ತನ ಮೂಲಕ ವಿಶ್ವಾಸಿಗಳನ್ನು ಸೈತಾನನ ದಾಸತ್ವದೊಳಗಿಂದ ಬಿಡಿಸಿ ರಕ್ಷಣೆಯನ್ನು ಕೊಡುವನು. ದೇವರ ವಿಮೋಚನೆಯ ಮಹಾ ನೀತಿಯುಳ್ಳ ಕೃತ್ಯಗಳ ಕಾರಣದಿಂದ ಎಲ್ಲಾ ಜನಾಂಗಗಳ ಜನರೆಲ್ಲರೂ ರಕ್ಷಣೆಯನ್ನು ಪಡೆಯುವರೆಂದು ಇದರ ಅರ್ಥವಲ್ಲ; ಬದಲಾಗಿ, ದೇವರ ಅಂತಿಮ ನ್ಯಾಯತೀರ್ಪು ಕೊಡಲ್ಪಟ್ಟ ಮೇಲೆ ನರಕಕ್ಕೆ ಹೋಗಿರುವವರೆಲ್ಲರಿಗೂ ಸಹ ಏಕೈಕ ಸತ್ಯದೇವರನ್ನು ಒಪ್ಪಿಕೊಳ್ಳುವರು ಎಂದು ಇದರ ಅರ್ಥವಾಗಿದೆ (ಕೀರ್ತನೆಗಳು 86; 8-10; ಫಿಲಿಪ್ಪಿ 2:9-11 ನೋಡಿರಿ.

**5-6** ತರುವಾಯ ಯೋಹಾನನು ದೇವರ ಆಲಯವು ತೆರೆಯುವದನ್ನು ಕಂಡನು, ಮತ್ತು ಆ ದೇವಾಲದೊಳಗಿಂದ ಕಡೆಯ ಏಳು ಉಪದ್ರವಗಳನ್ನು ಹಿಡಿದ ಏಳು ಮಂದಿ ದೇವದೂತರು ಬಂದರು. ಯೋಹಾನನು ಇಲ್ಲಿ ಪರಲೋಕದ ಆಲಯವನ್ನು ಸಾಕ್ಷಿಯ ದೇವದರ್ಶನ ಗುಡಾರ ಎಂದು ಕರೆಯುತ್ತಾನೆ (ವಚನ 5), ಇದು ಪುರಾತನ ಯೆಹೂದ್ಯರು ಐಗುಪ್ತ್ಯದಿಂದ ಪಾರಾಗಿ ಅರಣ್ಯದಲ್ಲಿರುವ ವೇಳೆಯಲ್ಲಿನ ಅವರ ಗುಡಾರದ ಹೆಸರಾಗಿತ್ತು. ಅದು ವಾಸ್ತವದಲ್ಲಿ, ಒಂದು ಗುಡಾರವಾಗಿತ್ತು ಮತ್ತು ಅದು ಸಾಕ್ಷಿಯ ಗುಡಾರ ಎಂದು ಸಹ ಕರೆಯಲ್ಪಟ್ಟಿದೆ (ಅರಣ್ಯಕಾಂಡ 9:15). ಸಾಕ್ಷಿ ಎಂಬದು ದೇವರು ಯೆಹೂದ್ಯ ಧರ್ಮಶಾಸ್ತ್ರದ ದಶಾಜ್ಞೆಗಳನ್ನು ಬರೆದಿದ್ದ ಎರಡು ಕಲ್ಲಿನ ಹಲಿಗೆಗಳಿಂದ ನೀಡಿದ ಹೆಸರಾಗಿತ್ತು (ವಿಮೋಚನ ಕಾಂಡ 32:15; ಧರ್ಮೋಪದೇಶಕಾಂಡ 10:4; ಅ.ಕೃತ್ಯ 7:44 ಮತ್ತು ವ್ಯಾಖ್ಯಾನ ನೋಡಿರಿ). ಮೃಗದ ಹಿಂಬಾಲಕರು ಈ ದಶಾಜ್ಞೆಗಳಿಗೆ ಅವಿಧೇಯರಾಗಿದ್ದರು; ಆದದರಿಂದ, ಈ ಆಜ್ಞೆಗಳಿಗೆ ಅವಿಧೇಯರಾಗಿದ್ದವರ ವಿರುದ್ಧ ದೇವರ ಕೋಪಾಗ್ನಿ ಹಾಗೂ ನೀತಿಯ ನ್ಯಾಯತೀರ್ಪು ಈ ದೇವದರ್ಶನ ಗುಡಾರದೊಳಗಿಂದ ಬರುವದು ತಕ್ಕದ್ದಾಗಿದೆಯಷ್ಟೇ.

**7-8** ನಾಲ್ಕು ಜೀವಿಗಳಲ್ಲಿ ಒಂದು ಜೀವಿಯು (ಪ್ರಕ. 4:6-8). ಏಳು ದೇವದೂತರಿಗೆ ದೇವರ ರೌದ್ರದಿಂದ ತುಂಬಿದ್ದ ಏಳು ಚಿನ್ನದ ಪಾತ್ರೆಗಳನ್ನು ಕೊಟ್ಟಿತು ಬಳಿಕ ದೇವದರ್ಶನ ಗುಡಾರವು ಹೊಗೆಯಿಂದ ತುಂಬಿತು, ಅದು ದೇವರ ಸಾನಿಧ್ಯ ಶಕ್ತ ಹಾಗೂ ಮಹಿಮೆಯ ಸಂಕೇತವಾಗಿತ್ತು (ವಿಮೋಚನ ಕಾಂಡ 19:18; 40: 34-35; 1 ಅರಸುಗಳು 8:10-11).

## ಅಧ್ಯಾಯ - 16

### ದೇವರ ರೌದ್ರದ ಏಳು ಪಾತ್ರೆಗಳು (16:1-21)

1 ಪ್ರಕಟಣೆ 15ನೇ ಅಧ್ಯಾಯದಲ್ಲಿ ಪ್ರಸ್ತಾಪಿಸಲಾದ ಕಡೆಯ ಏಳು ಉಪದ್ರವಗಳು 16ನೇ ಅಧ್ಯಾಯದಲ್ಲಿ ಪ್ರಸ್ತಾಪಿಸಲಾದ ದೇವರ ರೌದ್ರದ ಏಳು ಪಾತ್ರೆಗಳಲ್ಲಿ ಅಡಕವಾಗಿರುತ್ತವೆ. ಈ ಕಡೆಯ ಏಳು ಉಪದ್ರವಗಳು (ಅಥವಾ ಪಾತ್ರೆಗಳು), ಒಟ್ಟಾಗಿ ಸೇರಿ ಏಳನೆಯ ತುತೂರಿಯಿಂದ ಪ್ರಕಟಿಸಲ್ಪಟ್ಟ ಅಂತಿಮ ಉಪದ್ರವ ಆಗಿರುತ್ತದೆ (ಪ್ರಕ. 11:15). ಈ ಅಂತಿಮ ಏಳು ಪಾತ್ರೆಗಳ ಉಪದ್ರವಗಳು ಒಂದು ರೀತಿಯಲ್ಲಿ ಪ್ರಕಟಣೆಯ 8-9 ಅಧ್ಯಾಯಗಳಲ್ಲಿ ಪ್ರಸ್ತಾಪಿಸಲಾದ ಮೊದಲ ಆರು "ತುತೂರಿ ಉಪದ್ರವಗಳಿಗಿಂತ" ವ್ಯಾತ್ಯಾಸವಾಗಿರುತ್ತವೆ. ಆರು ತುತೂರಿ ಉಪದ್ರವಗಳು ಭೂಮಿಯಲ್ಲಿ ಅರ್ಧನಾಶನವನ್ನು ಮಾತ್ರವೇ ಉಂಟು ಮಾಡಿದವು, ಆದರೆ ಈ ಅಂತಿಮ ಏಳು ಪಾತ್ರೆಗಳ ಉಪದ್ರವಗಳು ಭೂಮಿಯ ಹಾಗೂ ಅದರ ನಿವಾಸಿಗಳ ಸಂಪೂರ್ಣ ನಾಶನವನ್ನುಂಟು ಮಾಡುವವು.

2 ಮೊದಲನೆಯ ಪಾತ್ರೆಯು ಉರಿಹುಣ್ಣಿನ ಉಪದ್ರವವನ್ನು ಒಳಗೊಂಡಿತ್ತು (ವಿಮೋಚನಕಾಂಡ 9:9-11; ಯೋಬ 2:7).

3 ಎರಡನೆಯ ಪಾತ್ರೆಯಲ್ಲಿನ ಉಪದ್ರವವು ಸಮುದ್ರವನ್ನು ರಕ್ತವನ್ನಾಗಿಸಿತು (ಪ್ರಕ. 8:8-9 ನೋಡಿರಿ).

4-7 ಮೂರನೆಯ ಪಾತ್ರೆಯಲ್ಲಿದ್ದ ಉಪದ್ರವವು ನದಿಗಳನ್ನೂ ಬುಗ್ಗೆಗಳನ್ನೂ ರಕ್ತವನ್ನಾಗಿಸಿತು (ವಿಮೋಚನಕಾಂಡ 7; 17-21; ಪ್ರಕ. 8; 10-11ನೋಡಿರಿ). ದೇವರು ನೀತಿವಂತನು ಮತ್ತು ಆತನ ನ್ಯಾಯ ತೀರ್ಪುಗಳು ನ್ಯಾಯವಾಗಿವೆ. ಸೈತಾನನ್ನೂ ಮೃಗವನ್ನೂ ಹಿಂಬಾಲಿಸಿದ ಈ ಜನರು ದೇವಜನರ ಮತ್ತು ಪ್ರವಾದಿಗಳ– ಅಂದರೆ, ವಿಶ್ವಾಸಿಗಳ ರಕ್ತವನ್ನು ಸುರಿಸಿದರು. ಆದದರಿಂದ ದೇವರು ಈ ಕೊಲೆಗಾರರಿಗೆ ರಕ್ತವನ್ನು ಕುಡಿಯುವದಕ್ಕೆ ಕೊಟ್ಟಿದ್ದು ಸಂಪೂರ್ಣವಾಗಿ ನ್ಯಾಯವಾದದ್ದು. ರಕ್ತವು ಎಂದಿಗೂ ಬಾಯಾರಿಕೆಯನ್ನು ನೀಗಿಸಲಾರದು.

8-9 ನಾಲ್ಕನೆಯ ಪಾತ್ರೆಯಲ್ಲಿದ್ದ ಉಪದ್ರವವು ಸೂರ್ಯನಿಗೆ ಕಡು ಬಿಸಿಲಿನಿಂದ ಮನುಷ್ಯರನ್ನು ಕಂದಿಸುವ ಶಕ್ತಿಯನ್ನು ನೀಡಿತು (ಪ್ರಕ. 8:12 ನೋಡಿರಿ) ಹೇಗಿದ್ದರೂ, ಪರಲೋಕದಲ್ಲಿ ಸೂರ್ಯನು ರಕ್ಷಣೆ ಹೊಂದಿದವರನ್ನು ಕಂದಿಸುವದಿಲ್ಲ (ಪ್ರಕ. 7:16).

10-11 ಐದನೆಯ ಪಾತ್ರೆಯಲ್ಲಿ ಕತ್ತಲೆಯ ಉಪದ್ರವವಿತ್ತು (ವಿಮೋಚನ ಕಾಂಡ 10:21-23). ಅದು ಮೃಗದ ಸಿಂಹಾಸನದ ಮೇಲೆ ಹೊಯ್ಯಲ್ಪಟ್ಟಿತು. ಯೋಹಾನನ ಭಾವನೆಯಲ್ಲಿ ಮೃಗದ ಸಿಂಹಾಸನವು ರೋಮನಗರವನ್ನು ಪ್ರತಿನಿಧಿಸುವದಾಗಿತ್ತು, ಯಾಕೆಂದರೆ ಯೋಹಾನನ ಕಾಲದಲ್ಲಿ ರೋಮನಗರವು ಸೈತಾನನ ರಾಜ್ಯದ ರಾಜ್ಯಧಾನಿಯಾಗಿತ್ತು ಯಾಕೆಂದರೆ ಯೋಹಾನನ ಕಾಲದಲ್ಲಿ ರೋಮನಗರವು ಸೈತಾನನ ರಾಜ್ಯದ ರಾಜಧಾನಿಯೋ ಎಂಬಂತೆ ತೋರುತ್ತಿತ್ತು. ಆದರೆ "ಮೃಗದ ಸಿಂಹಾಸನವು" ಯಾವದೇ ದುಷ್ಟ ರಾಜ್ಯನ ಅಥವಾ ಅಧಿಕಾರವನ್ನು ಸೂಚಿಸುತ್ತದೆಂದು ನಾವು ಅರ್ಥಮಾಡಿಕೊಳ್ಳಬೇಕು.

12 ಆರನೆಯ ಪಾತ್ರೆಯಲ್ಲಿದ್ದ ಉಪದ್ರವವು ಯೂಫ್ರೇಟೀಸ್ ಎಂಬ ಮಹಾನದಿಯ ಮೇಲೆ ಸುರಿಯಲ್ಪಟ್ಟಿತು (ಪ್ರಕ. 9:13-14 ಮತ್ತು ವ್ಯಾಖ್ಯಾನ ನೋಡಿರಿ). ಯೂಫ್ರೇಟೀಸ್ ನದಿಯು ರೋಮಾಯ ಸಾಮ್ರಾಜ್ಯದ ಪೂರ್ವಾತ್ಯ ಗಡಿಯನ್ನು ರೂಪಿಸಿತ್ತು. ಆದದರಿಂದ, ನದಿಯಲ್ಲಿನ ನೀರು ಒಣಗಿ ಹೋದಾಗ ಮೂಡಣ ದಿಕ್ಕಿನಿಂದ ಬರುವ ರಾಜರಿಗೆ ದಾಟುವದಕ್ಕೆ ಯಾವ ತಡೆಯೂ ಇರಲಿಲ್ಲ. ಯೋಹಾನನು ಇಲ್ಲಿ ಯಾವ ರಾಜರನ್ನು ಸೂಚಿಸುತ್ತಿರುವನೆಂಬದು ತಿಳಿದುಬಂದಿಲ್ಲ. ಅವರು ಪ್ರಕಟಣೆ 17:12ರಲ್ಲಿ ಪ್ರಸ್ತಾಪಿಸಿರುವ ರಾಜರೇ ಆಗಿರಬಹುದಾದ ಸಾಧ್ಯತೆಯಿದೆ.

13 ಬಳಿಕ ಯೋಹಾನನು ಕಪ್ಪೆಗಳಂತಿದ್ದ ಮೂರು ದುರಾತ್ಮಗಳನ್ನು ಕಂಡನು. ಒಂದು ಘಟ ಸರ್ಪನಾದ ಸೈತಾನನ ಬಾಯೊಳಗಿಂದ ಬಂದಿತು (ಪ್ರಕ. 12:3-9). ಎರಡನೆಯದು ಮೃಗದ ಬಾಯೊಳಗಿಂದ ಬಂದಿತು (ಪ್ರಕ 13:1) ಮತ್ತು ಮೂರನೆಯದು, ಸುಳ್ಳು ಪ್ರವಾದಿಯ[38] ಬಾಯೊಳಗಿಂದ ಬಂದಿತು.

14 ಯೋಹಾನನ ದರ್ಶನದ ಪ್ರಕಾರವಾಗಿ ಈ ಮೂರು ದುರಾತ್ಮಗಳು ಮಹತ್ಕಾರ್ಯಗಳ ಮೂಲಕವಾಗಿ ಲೋಕದ ಜನರನ್ನು ಮೋಸಪಡಿಸುವವು (ಮಾರ್ಕ 13:22; ಪ್ರಕ. 13:13-14). ಮೂರು ದುರಾತ್ಮಗಳು ದೇವರ ವಿರುದ್ಧ ಯುದ್ಧಕ್ಕಾಗಿ ಲೋಕದ ಎಲ್ಲಾ ದುಷ್ಟ ಅಧಿಕಾರಿಗಳನ್ನೂ ರಾಜರನ್ನೂ ಒಟ್ಟಾಗಿ ಕೂಡಿಸುವವು (ಪ್ರಕ. 19:19). ಆ ಯುದ್ಧವು ಸರ್ವಶಕ್ತನಾದ ದೇವರ ಮಹಾದಿನದಲ್ಲಿ ಸಂಭವಿಸುವದು, ಆಗ ಕ್ರಿಸ್ತನು ಅಂತಿಮವಾಗಿ ಮೃಗ ಹಾಗೂ ಸುಳ್ಳು ಪ್ರವಾದಿಯನ್ನೂ ಅವರ ಹಿಂಬಾಲಕರನ್ನೂ ನಾಶಮಾಡುವನು (ಪ್ರಕ. 19:11-21 ನೋಡಿರಿ), ಆ ದಿನದಲ್ಲಿ ಕ್ರಿಸ್ತನು ಭೂಮಿಯ ಮೇಲೆ ತನ್ನ ಆಳಿಕೆಯನ್ನು ಪ್ರಾರಂಭಿಸುವನು (ಪ್ರಕ. 11:17).

15 ಇಲ್ಲಿ ಕ್ರಿಸ್ತನು ತನ್ನ ಹಿಂಬಾಲಕರಿಗೆ ಸಿದ್ಧರಾಗಿರುವಂತೆ ಎಚ್ಚರಿಸುತ್ತಾನೆ. "ಇಗೋ ನಾನು ಕಳ್ಳನು ಬರುವಂತೆ ಬರುವೆನು" (ಮತ್ತಾಯ 24:42-44; 1 ಥೆಸಲೋನಿಕ 5:2 ನೋಡಿರಿ). "ಎಚ್ಚರವಾಗಿದ್ದು ತನ್ನ ವಸ್ತ್ರಗಳನ್ನು ಕಾಪಾಡಿಕೊಳ್ಳುವನು ಧನ್ಯನು" ಕ್ರೈಸ್ತರು ಕ್ರಿಸ್ತನ ನೀತಿಯನ್ನು ತೊಟ್ಟುಕೊಂಡು ದೇವರ ಸರ್ವಾಯುಧಗಳನ್ನು ಧರಿಸಿಕೊಂಡಿರಬೇಕು (ಎಫೆಸ 6:13-17).

**16** ಹರ್ಮಗೆದೋನ್ ಕ್ರಿಸ್ತನ ಹಾಗೂ ಸೈತಾನನ ಮತ್ತು ಆತನ ಎರಡು ಮೃಗಗಳ ನಡುವೆ ಅಂತಿಮ ಯುದ್ಧನಡೆಯುವ ಸ್ಥಳವಾಗಿದೆ. ಹರ್ಮಗೆದೋನ್ ಎಂಬ ಪದದ ಅರ್ಥವು ತಿಳಿದುಬಂದಿಲ್ಲ. ಹರ್ಮಗೆದೋನ್ ಎಲ್ಲಿದೆಯೆಂಬುದೂ ತಿಳಿದಿರುವದಿಲ್ಲ.

**17-18** ಏಳನೆಯ ಪಾತ್ರೆಯಲ್ಲಿದ್ದ ಉಪದ್ರವವು ಸುರಿಸಲ್ಪಟ್ಟಾಗ ದೇವರು "ಆಯಿತು" ಎಂದು ಹೇಳಿದನು. ಉಪದ್ರವಗಳು ಈಗ ಮುಗಿದಿದ್ದವು. ಈಗ ಸೈತಾನನ ಅಂತಿಮ ಸೋಲು ಹಾಗೂ ಲೋಕದ ಅಂತ್ಯವು ಸಂಭವಿಸಲಿಕ್ಕಿತ್ತು. ತರುವಾಯ ಯೋಹಾನನು ಭಯಂಕರವಾದ ಮಹಾ ಭೂಕಂಪವನ್ನು ಕಂಡನು (ಪ್ರಕ. 11:15-19 ನೋಡಿರಿ).

**19** ಬಳಿಕ ಯೋಹಾನನು ಮಹಾಪಟ್ಟಣವು – ಅಂದರೆ, ಬಾಬೆಲೆಂಬ ಮಹಾನಗರಿ (ಪ್ರಕ. 14:8). ಮೂರು ಭಾಗಗಳಾಗುವದನ್ನು ಕಂಡನು; ಬೇರೆ ಮಾತುಗಳಲ್ಲಿ ಹೇಳುವದಾದರೆ, ಅದು ಸಂಪೂರ್ಣವಾಗಿ ನಾಶವಾಯಿತುದ ಯೋಹಾನನು ಮಹಾಪಟ್ಟಣವನ್ನು ರೋಮನಗರವೆಂದು ಪರಿಗಣಿಸಿದ್ದನು. ಆದರೆ ರೋಮನಗರವು (ಅಂದರೆ, ಯೋಹಾನನ ಕಾಲದ ರೋಮನಗರವು), ನಾಶಗೊಂಡು ಈಗ 1500 ವರ್ಷಗಳಾಗಿವೆ, ಮತ್ತು ಲೋಕದ ಅಂತ್ಯವು ಇನ್ನೂ ಬಂದಿಲ್ಲ. ಆದದರಿಂದ, ಮಹಾಪಟ್ಟಣವು –ಬಾಬೆಲೆಂಬ ಮಹಾನಗರಿ –ದೇವರಿಗೆ ವಿಧೇಯರಾಗದಿರುವ ಎಲ್ಲಾ ಲೌಕೀಕ ಅಧಿಕಾರಗಳನ್ನೂ ರಾಜರನ್ನೂ ಹಾಗೂ ರಾಷ್ಟ್ರಗಳನ್ನು ಪ್ರತಿನಿಧಿಸುತ್ತದೆಂದು ನಾವು ಅರ್ಥಮಾಡಿಕೊಳ್ಳಬಹುದು. ದೇವರಿಗೆ ಅವಿಧೇಯರಾಗುವವರೆಲ್ಲರೂ ಅಂತ್ಯದಲ್ಲಿ ದೇವರ ರೌದ್ರವೆಂಬ ದ್ರಾಕ್ಷಾರಸವನ್ನು ಕುಡಿಯುವರು (ಪ್ರಕ. 14:9-10 ಮತ್ತು ವ್ಯಾಖ್ಯಾನ ನೋಡಿರಿ).

**20-21** ಆ ಭಯಂಕರವಾದ ಭೂಕಂಪ ಹಾಗೂ ನಾಲ್ಕು ಮಣ ತೂಕದ ಆನೆಕಲ್ಲಿನ ಮಳೆಯಿಂದ ಬಾಧಿಸಲ್ಪಟ್ಟ ಬಳಿಕವೂ ಮನುಷ್ಯರು ಪಶ್ಚಾತಾಪಪಡಲಿಲ್ಲ (ವಿಮೋಚನ ಕಾಂಡ 9:22-26; ಯೆಹೋಶುವ 10:11), ಬದಲಾಗಿ, ಅವರು ದೇವರನ್ನು ಶಪಿಸಿದರು. ಅವರ ಅಂತಿಮ ನ್ಯಾಯತೀರ್ಪು ಸಮೀಪವಾಗಿತ್ತು.

---

# ಅಧ್ಯಾಯ - 17

## ಮೃಗದ ಮೇಲೆ ಕೂತಿದ್ದ ಸ್ತ್ರೀ (17:1-18)

**1** ಯೋಹಾನನ ದರ್ಶನದಲ್ಲಿ ರೋಮನಗರವು ಮಹಾಜಾರಸ್ತ್ರೀ ಆಗಿದೆ. ಆಕೆಯು ಬಹಳ ನೀರುಗಳ ಮೇಲೆ ಕುಳಿತಿರುವಳು– ಅಂದರೆ, ಅವಳು ಪ್ರಜೆ ಸಮೂಹ ಜನ ಭಾಷೆಗಳ ಮೇಲೆ ಅಧಿಕಾರ ಉಪಯೋಗಿಸುತ್ತಾಳೆ (ವಚನ 15), ಆದರೆ ಜಾರಳು ರೋಮನಗರವನ್ನು ಮಾತ್ರವೇ ಸೂಚಿಸುವದಿಲ್ಲ; ಆಕೆಯು ಪ್ರತಿಯೊಂದು ಯುಗದ ಪ್ರತಿಯೊಂದು ತಲೆಮಾರಿನ ಎಲ್ಲಾ ಭ್ರಷ್ಟ ಹಾಗೂ ದುಷ್ಟ ಶಕ್ತಿಗಳನ್ನೂ ಅಧಿಕಾರಗಳನ್ನೂ ಸಹ ಪ್ರತಿನಿಧಿಸುತ್ತಾಳೆ (ಯೆಶಾಯ 23:17; ನಹೂಮ 3:1-7).

**2** ರೋಮಾಯ ಸಾಮ್ರಾಜ್ಯದಂಥ ಒಂದು ರಾಜ್ಯದ ದುಷ್ಟತನ ಹಾಗೂ ಜಾರುತ್ವದಲ್ಲಿ ಪಾಲುಗಾರರಾಗುವ ಜನರೆಲ್ಲರೂ ಜಾರಳೊಂದಿಗೆ ವ್ಯಭಿಚಾರ ಮಾಡುವ ಪುರುಷರಂತೆ ಇದ್ದಾರೆ.

**3** ಇಲ್ಲಿ ಯೋಹಾನನು ದೇವರಾತ್ಮವಶನಾದನು (ಪ್ರಕ. 1:10), ಮತ್ತು ಮಹಾಜಾರಸ್ತ್ರೀಯು ರಕ್ತವರ್ಣದ ಮೃಗದ ಮೇಲೆ ಕೂತಿದ್ದನ್ನು ಕಂಡನು. ರಕ್ತ ವರ್ಣದ ಮೃಗವು ಪ್ರಕಟಣೆ 13ನೇ ಅಧ್ಯಾಯದಲ್ಲಿ ಪ್ರಸ್ತಾಪಿಸಲಾದ ಮೊದಲನೆಯ ಮೃಗವೇ ಆಗಿರುತ್ತದೆ (ಪ್ರಕ. 13:1-2, 7 ಮತ್ತು ವ್ಯಾಖ್ಯಾನ ನೋಡಿರಿ).

**4-6** ಜಾರಸ್ತ್ರೀಯು ಬಾಬೆಲೆಂಬ ಮಹಾನಗರಿ, ಅಂದರೆ ರೋಮನಗರ ಎಂಬದನ್ನು ಇಲ್ಲಿ ನಾವು ಅರ್ಥಮಾಡಿ–ಕೊಳ್ಳಬಹುದು (ಪ್ರಕ. 16:19 ಮತ್ತು ವ್ಯಾಖ್ಯಾನ ನೋಡಿರಿ). ಆಕೆಯ ಹಣೆಯ ಮೇಲಿದ್ದ ಹೆಸರಿನ ಪ್ರಕಾರವಾಗಿ ಆಕೆಯು ಇತರ ಜಾರಸ್ತ್ರೀಯರಿಗೂ ಅಸಹ್ಯವಾದ ಕಾರ್ಯಗಳಿಗೂ ಜನ್ಮ ನೀಡಿದ್ದಳು, ಮತ್ತು ಆಕೆಯು ಈ ಎಲ್ಲಾ ಅಸಹ್ಯಕಾರ್ಯಗಳನ್ನು ಭೂಮಿಯಲ್ಲೆಲ್ಲಾ ಹರಡಿದ್ದಳು (ವಚನ 5), ಆಕೆಯು ದೇವಜನರ ರಕ್ತವನ್ನು ಕುಡಿದು ಮತ್ತಳಾಗಿದ್ದಳು –ಅಂದರೆ, ಆಕೆಯು ಯೇಸುವಿಗೋಸ್ಕರ ಸಾಕ್ಷಿ ಕೊಟ್ಟವರಾದ ಕ್ರೈಸ್ತರನ್ನು ಕೊಂದಿದ್ದಳು(ವಚನ 6).

**7-8** ನಂತರ ಒಬ್ಬ ದೇವದೂತನು ಯೋಹಾನನಿಗೆ ರಕ್ತವರ್ಣದ ಮೃಗವನ್ನು ಕುರಿತು ವಿವರಿಸಿದನು: "ನೀನು ಕಂಡ ಈ ಮೃಗವು ಮೊದಲು ಇತ್ತು ಈಗ ಇಲ್ಲ". ಅಂದರೆ, ಮೃಗದ ತಲೆಗಳಲ್ಲೊಂದು ಮರಣಕರವಾದ ಗಾಯವನ್ನು ಹೊಂದಿತ್ತು (ಪ್ರಕ. 13:3 ಮತ್ತು ವ್ಯಾಖ್ಯಾನ ನೋಡಿರಿ). ಆದರೆ ಮೃಗವು ಸಾಯಲಿಲ್ಲ; ಅದಕ್ಕೆ ಗುಣವಾಯಿತು. ಅದು ಅಧೋಲೋಕದಿಂದ ಏರಿಬರುವದು (ಪ್ರಕ. 9:1; 11:7 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಭೂನಿವಾಸಿಗಳೊಳಗೆ ಯಾರ ಹೆಸರುಗಳು ಜೀವಬಾಧ್ಯರ ಪುಸ್ತಕದಲ್ಲಿ ಬರೆಯಲ್ಪಟ್ಟಿಲ್ಲವೋ (ಪ್ರಕ. 3:5) ಅವರು ಮೃಗಕ್ಕೆ ಭಯಪಡುವರು, ಯಾಕೆಂದರೆ ಮೃಗವು ಮರಣಕರ ಗಾಯವನ್ನು ಹೊಂದಿದ್ದರೂ ಅದು ಪುನಃ ಬದುಕತ್ತಲೇ ಇರುತ್ತದೆ. ಆ ಮೃಗವು ಲೋಕದ ಎಲ್ಲಾ ದುಷ್ಟ ಸಾಮ್ರಾಜ್ಯಗಳ ಸಂಕೇತವಾಗಿದೆ– ಉದಾಹರಣೆಗೆ, ಬಾಬೆಲ, ರೋಮ, ಹಿಟ್ಲರನ ಜರ್ಮನಿ, ಮುಂತಾದವುಗಳು. ಈ ದುಷ್ಟ

ಸಾಮ್ರಾಜ್ಯಗಳು ಒಂದರ ನಂತರ ಒಂದು ಬಿದ್ದು ಹೋದಂತೆ ಇನ್ನೊಂದು ಸಾಮ್ರಾಜ್ಯವು ಅದರ ಸ್ಥಾನಕ್ಕೆ ಹುಟ್ಟಿಕೊಳ್ಳುತ್ತದೆ. ಮೃಗವು ಹಾಗೆಯೇ ಇರುತ್ತದೆ.

**9-11** ಜಾರಸ್ತ್ರೀಯು ರೋಮನಗರದ ಸಂಕೇತವಾಗಿದ್ದ ಹಾಗೆಯೇ ಯೋಹಾನನ ಮನಸ್ಸಿನಲ್ಲಿ ಮೃಗವು ರೋಮಾಯ ಸಾಮ್ರಾಜ್ಯದ ಸಂಕೇತವಾಗಿತ್ತು. ಮೃಗದ ಏಳು ತಲೆಗಳು ಆ ಸ್ತ್ರೀಯು ಕೂತುಕೊಂಡಿರುವ ಏಳು ಬೆಟ್ಟಗಳನ್ನು [39] ಪ್ರತಿನಿಧಿಸುತ್ತದೆ (ವಚನ 9). ಅದರ ತಲೆಗಳು ಏಳು ಮಂದಿ ಅರಸುಗಳನ್ನೂ ಪ್ರತಿನಿಧಿಸುತ್ತದೆ. ಈ ಏಳು ಮಂದಿ ಅರಸುಗಳು ಏಳು ಮಂದಿ ರೋಮಾಯ ಚಕ್ರವರ್ತಿಗಳನ್ನು ಅಥವಾ ಏಳು ರಾಜ್ಯಗಳನ್ನು ಸೂಚಿಸಬಹುದು. ಆ ಮೃಗವು ತಾನೇ ಎಂಟನೆಯ ಅರಸು (ವಚನ 11), ಅವನು ಒಂದು ವಿಧದಲ್ಲಿ ಆ ಏಳುಮಂದಿ ಇತರ ಅರಸುಗಳಿಗೆ ಸೇರಿದವನು ಅನೇಕ ಬೈಬಲ್ ಪಂಡಿತರು "ಈ ಎಂಟನೆಯ ಅರಸು" ಬೇರೆಕಡೆಯಲ್ಲಿ ಪೌಲ ಹಾಗೂ ಯೋಹಾನನಿಂದ ಪ್ರಸ್ತಾಪಿಸಲ್ಪಟ್ಟ ಅಧರ್ಮ ಸ್ವರೂಪನು ಅಥವಾ ಕ್ರಿಸ್ತ ವಿರೋಧಿ ಆಗಿದ್ದಾನೆಂದು ನಂಬುತ್ತಾರೆ (2 ಥೆಸಲೋನಿಕ 2:7-19; 1 ಯೋಹಾನ 2:18; 4:3 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಆದದರಿಂದ, ಈ ಮೃಗವು ಎರಡು ಬೇರೆ ಬೇರೆ ಸಂಗತಿಗಳನ್ನು ಪ್ರತಿನಿಧಿಸುತ್ತೆಂದು ನಾವು ತಿಳಿದುಕೊಳ್ಳಬಹುದು. ಮೊದಲನೆಯದಾಗಿ, ಅದು ಲೋಕದಲ್ಲಿನ ಎಲ್ಲಾ ದುಷ್ಟ ಸಾಮ್ರಾಜ್ಯಗಳನ್ನೂ ಅಧಿಕಾರಗಳನ್ನು ಪ್ರತಿನಿಧಿಸುತ್ತದೆ. ಮತ್ತು ಎರಡನೆಯದಾಗಿ, ಅದು "ಎಂಟನೆಯ ಅರಸ"ನನ್ನು ಅಥವಾ ಕ್ರಿಸ್ತ ವಿರೋಧಿಯನ್ನು ಪ್ರತಿ ನಿಧಿಸುತ್ತದೆ. ಈ ಎರಡು ಸಂಗತಿಗಳು ವಾಸ್ತವದಲ್ಲಿ, ಒಂದೇ ಆಗಿವೆ ಯಾಕೆಂದರೆ ಪ್ರತಿಯೊಂದು ದುಷ್ಟ ಸಾಮ್ರಾಜ್ಯ ಅಥವಾ ಅಧಿಕಾರ ಒಂದು ಅರ್ಥದಲ್ಲಿ ಒಬ್ಬ ಕ್ರಿಸ್ತ ವಿರೋಧಿಯಾಗಿದೆ. ಮುಖ್ಯವಾದ ಕ್ರಿಸ್ತ ವಿರೋಧಿ ಒಬ್ಬ ಬಲಿಷ್ಠನಾದ ದುಷ್ಟ ಆತ್ಮ, ಅದು ಸೈತಾನನ ಮುಖ್ಯ ಸಹಾಯಕನು. ಆದರೆ ಅನೇಕ ಕಡಿಮೆ ಕ್ರಿಸ್ತ ವಿರೋಧಿಗಳಿದ್ದು ಸೈತಾನನ ಸೇವೆಮಾಡುತ್ತಾರೆ [40] (1 ಯೋಹಾನ 2:18 ನೋಡಿರಿ).

**12-13** ಮೃಗದ ಹತ್ತು ಕೊಂಬುಗಳು ಹತ್ತುಮಂದಿ ಅರಸರನ್ನು ಪ್ರತಿನಿಧಿಸುತ್ತದೆ. ಈ ಹತ್ತುಮಂದಿ ಅರಸುಗಳು ಪ್ರಕ 16:12ರಲ್ಲಿ ಪ್ರಸ್ತಾಪಿಸಲಾದ ಮೂಡಣ ದಿಕ್ಕಿನಿಂದ ಬರುವ ಅರಸುಗಳು ಒಂದೇ ಆಗಿರುವ ಸಾಧ್ಯತೆಯಿದೆ. ಅಥವಾ ಅವರು ತಮ್ಮ ಶಕ್ತಿ ಹಾಗೂ ಅಧಿಕಾರವನ್ನು ಮೃಗಕ್ಕೆ ನೀಡುವ ಅರಸರಾಗಿರಬಹುದು– ಅಂದರೆ, ತಮ್ಮನ್ನು ಮೃಗದ ಸೇವಕರನ್ನಾಗಿ ಮಾಡಿಕೊಳ್ಳುವವರು (ವಚನ 13). ಈ ಅರಸುಗಳ ಆಳ್ವಿಕೆಯು ಅತಿ ಕ್ಲುಪ್ತವಾಗಿರುತ್ತದೆ– ಒಂದು ಗಳಿಗೆ ಮಾತ್ರವೇ!

**14** ತಮ್ಮ ಅಧಿಕಾರವನ್ನು ಮೃಗಕ್ಕೆ ನೀಡಿದ ಈ ಅರಸುಗಳು ಕುರಿಯಾದಾತನಾದ ಕ್ರಿಸ್ತನ ವಿರುದ್ಧ ಯುದ್ಧ ಮಾಡುವರು. ಆದರೆ ಕ್ರಿಸ್ತನು ಹಾಗೂ ಆತನ ಹಿಂಬಾಲಕರು ಅವರನ್ನು ಸೋಲಿಸುವರು (ಪ್ರಕ, 2:26-27).

**15-16** ಜಾರಸ್ತ್ರೀಯಾದ ರೋಮನಗರಿಯು ಅನೇಕ ನೀರುಗಳ ಮೇಲೆ ಕುಳಿತುಕೊಳ್ಳುವದು (ವಚನ 1), ಅಂದರೆ ಅನೇಕ ಜನರನ್ನೂ ಜನಾಂಗಗಳನ್ನೂ ಆಳುತ್ತಾಳೆ. ಆದರೆ ಹತ್ತು ಕೊಂಬುಗಳನ್ನು (ಅರಸುಗಳು), ಹೊಂದಿದ್ದ ಮೃಗವು ಜಾರಸ್ತ್ರೀಯನ್ನು ದ್ವೇಷಿಸಲಾರಂಭಿಸಿ ಕೊನೆಗೆ ಅವಳನ್ನು ನಾಶಮಾಡುತ್ತದೆ. ಇದು ಆಶ್ಚರ್ಯಕರವಾದದ್ದು ಯಾಕೆಂದರೆ ಪ್ರಾರಂಭದಲ್ಲಿ ಮೃಗ ಹಾಗೂ ಜಾರಸ್ತ್ರೀಯು ಪಾಲುದಾರರಾಗಿದ್ದರು. ಇದು ಜಗತ್ತಿನ ಇತಿಹಾಸದಲ್ಲಿ ಅನೇಕ ಸಾರಿ ಸಂಭವಿಸಿದೆ.

**17** ಹತ್ತು ಮಂದಿ ಅರಸುಗಳು ತಮ್ಮ ಶಕ್ತಿ ಹಾಗೂ ಅಧಿಕಾರವನ್ನು ಮೃಗಕ್ಕೆ ಕೊಡುವಂತೆ ದೇವರೇ ಮಾಡುತ್ತಾನೆ (ವಚನ 13). ಅಲ್ಲದೆ, ಮೃಗ ಮತ್ತು ಹತ್ತು ಮಂದಿ ಅರಸುಗಳನ್ನು ಜಾರಸ್ತ್ರೀಗೆ ವಿರೋಧವಾಗಿ ಆಕೆಯನ್ನು ಕೊಲ್ಲುವಂತೆಯೂ ದೇವರು ಪ್ರೇರಿಸಿದನು. ಎಲ್ಲಾ ಶಕ್ತ ಹಾಗೂ ಅಧಿಕಾರವು ಅಂತಿಮವಾಗಿ ದೇವರಿಗೆ ಸೇರಿವೆ. ದೇವರು ತನ್ನ ಉದ್ದೇಶಗಳನ್ನು ನೆರವೇರಿಸುವದಕ್ಕೆ ದುರಾತ್ಮಗಳನ್ನು ಹಾಗೂ ದುಷ್ಟಶಕ್ತಿಗಳನ್ನು ಸಹ ಉಪಯೋಗಿಸುತ್ತಾನೆ.

**18** ವಚನ 1 ಮತ್ತು ವ್ಯಾಖ್ಯಾನ ನೋಡಿರಿ.

---

## ಅಧ್ಯಾಯ - 18

### ಬಾಬೆಲ ಬಿದ್ದು ಹೋದದ್ದು (18:1-24)

**1-2** ಬಳಿಕ ಯೋಹಾನನು ಮಹಾನಗರಿಯ ಬೀಳುವಿಕೆಯ ದರ್ಶನವನ್ನು ಪಡೆದನು, ಆತನು ಇದನ್ನು ಈ ಅಧ್ಯಾಯದಲ್ಲಿ ಬಣ್ಣಿಸುತ್ತಾನೆ. ಯೋಹಾನನ ಮನಸ್ಸಿನಲ್ಲೀ ಮಹಾನಗರಿಯು ರೋಮಾಯ ಸಾಮ್ರಾಜ್ಯದ ರಾಜಧಾನಿ ರೋಮನಗರವಾಗಿತ್ತು, ಅದು ಈ ದರ್ಶನದಲ್ಲಿ ಬಾಬೆಲೆಂಬ ಮಹಾನಗರಿ ಎಂದು ಕರೆಯಲ್ಪಟ್ಟಿದೆ (ಪ್ರಕ. 14:8;17:5 ಮತ್ತು ವ್ಯಾಖ್ಯಾನ ನೋಡಿರಿ). ಹೇಗಿದ್ದರೂ, ಇಲ್ಲಿ ಪ್ರಸ್ತಾಪಿಸಲಾಗಿರುವ ಮಹಾನಗರಿಯು ರೋಮನಗರವನ್ನು ಮಾತ್ರವಲ್ಲದೆ ಇಂದಿನ ತನಕವೂ ಇರುವ ಪ್ರತಿಯೊಂದು ದುಷ್ಟನಾಗರಿಕತೆ, ಪ್ರಾಪಂಚಿಕ ಜನರನ್ನು ಪ್ರತಿನಿಧಿಸುತ್ತದೆ. ದೇವರು ಕ್ರಿ.ಶಕ ಐನೇ ಶತಮಾನದಲ್ಲಿ ಪು ರಾತನ ರೋಮನಗರವನ್ನು ನಾಶನಮಾಡಿದ ಹಾಗೆಯೇ ದೇವರು ತನ್ನ ನಿಯಮಿತ ಕಾಲದಲ್ಲಿ ಲೋಕಕ್ಕೆ ನಾಶನವನ್ನು ತರುವನು.

ಆದದರಿಂದ, ನಮಗಾದರೋ ಯೋಹಾನನು ಈ ಅಧ್ಯಾಯದಲ್ಲಿ ಎರಡು ಸಂಗತಿಗಳನ್ನು ಬಣ್ಣಿಸುತ್ತಿದ್ದಾನೆ. ಮೊದಲನೆಯದಾಗಿ, ಆತನು ಪು ರಾತನ ರೋಮವೆಂಬ ಐತಿಹಾಸಿಕ ನಗರದ ಬೀಳುವಿಕೆಯನ್ನು ಬಣ್ಣಿಸುತ್ತಿದ್ದಾನೆ.

ಎರಡನೆಯದಾಗೆ, ಆತನು ಲೋಕದಲ್ಲಿರುವ ಎಲ್ಲಾ ದುಷ್ಟ ನಗರಗಳು ಹಾಗೂ ರಾಜ್ಯಗಳು ಮತ್ತು ಶಕ್ತಿಗಳು[41] ಭವಿಷ್ಯತ್ತಿನಲ್ಲಿ ಬೀಳುವದನ್ನು ಬಣ್ಣಿಸುತ್ತಿದ್ದಾನೆ. ಒಂದು ದಿನ ದೇವರು ಅವು ಗಳನ್ನೆಲ್ಲಾ ನಾಶಮಾಡುವನು.

**3** ಸುತ್ತಲಿನ ಎಲ್ಲಾ ಜನಾಂಗಗಳ ಅರಸುಗಳು ನಗರಿಯೊಂದಿಗೆ (ಬಾಬೆಲ) ಸೇರಿಕೊಂಡು ಅದರ ದುಷ್ಟತನದಲ್ಲಿ ಪಾಲುಗಾರರಾದರು. ಜನಾಂಗಗಳು ಅವಳ ಅತಿಜಾರುತ್ವವೆಂಬ ದ್ರಾಕ್ಷಾರಸವನ್ನು ಕುಡಿದರು. ಅರಸುಗಳು ಅವಳೊಂದಿಗೆ ಜಾರುತ್ವ ಮಾಡಿದರು; ಅಂದರೆ, ಅವರು ಸತ್ಯದೇವರಿಂದ ವಿಮುಖರಾಗಿ ಮಹಾಜಾರಸ್ತ್ರೀಯಾದ ಬಾಬೆಲಿನ ಜೊತೆಯಲ್ಲಿ ಕೂಡಿಕೊಂಡಿದ್ದರು (ಪ್ರಕ. 17:1-2 ಮತ್ತು ವ್ಯಾಖ್ಯಾನ ನೋಡಿರಿ). ಭೂಲೋಕದ ವರ್ತಕರು ನಗರದೊಂದಿಗೆ ವ್ಯಾಪಾರ ಮಾಡಿದರು ಮತ್ತು ಈ ವ್ಯಾಪಾರದಿಂದ ಅವರು ಐಶ್ವರ್ಯವಂತರಾಗಿದ್ದರು.

**4-5** ನಂತರ ಪರಲೋಕದಿಂದ ಬಂದ ಒಂದು ಸ್ವರವು, "ನನ್ನ ಪ್ರಜೆಗಳೇ ಅವಳನ್ನು ಬಿಟ್ಟು ಬನ್ನಿರಿ" ಎಂದು ಹೇಳಿತು. ದೇವರಿಗೆ ಸೇರಿದವರೆಲ್ಲರೂ ಬಾಬೆಲಿನ ದುಷ್ಟತನದಲ್ಲಿ ಪಾಲುಗಾರರಾಗದಿರಲಿ; ಅವರು ಪಟ್ಟಣವನ್ನು ಬಿಟ್ಟು ಬರಲಿ (ಯೆಶಾಯ 52:11; ಯೆರೆ 51;45; 2 ಕೊರಿಂಥ 6:14-18 ಮತ್ತು ವ್ಯಾಖ್ಯಾನ ನೋಡಿರಿ). ಬಾಬೆಲಿನ ಪಾಪಗಳಲ್ಲಿ ಪಾಲುಗಾರರಾಗುವವರು ಅವಳಿಗಾಗುವ ಉಪದ್ರವಹಗಳಿಗೆ ಸಹ ಗುರಿಯಾಗುವರು.

**6-8** ನಂತರ ಪರಲೋಕದಿಂದ ಬಂದ ಸ್ವರವು, "ಅವಳ ಕೃತ್ಯಗಳಿಗೆ ಸರಿಯಾಗಿ ಅವಳಿಗೆ ಎರಡರಷ್ಟು ಕೊಡಿರಿ" ಎಂದು ಹೇಳಿತು (ವಚನ 6). ಈ ಸ್ವರವು ಮಹಾಜಾರಸ್ತ್ರೀಯನ್ನು ನಾಶಮಾಡುವದಕ್ಕೆ ನೇಮಿಸಲ್ಪಟ್ಟ ಮೃಗ ಹಾಗೂ ಹತ್ತು ಮಂದಿ ಅರಸುಗಳಿಗೆ ಮಾತಾಡುತ್ತಿರುವ ಸಾಧ್ಯತೆಯಿದೆ (ಪ್ರಕ. 17:12-16). ದೇವರು ದುಷ್ಟರ ಕೃತ್ಯಗಳಿಗೆ ತಕ್ಕ ಹಾಗೆ ಅವರಿಗೆ ಮಾಡುವನು (ಕೀರ್ತನೆಗಳು 62:12; ಯೆರೆ 50:29; ರೋಮ 2:5-6). ಬಾಬೆಲ ತನ್ನನ್ನು ಘನಪಡಿಸಿಕೊಂಡು ಗರ್ವದಿಂದ ಉಬ್ಬಿಕೊಂಡಿತ್ತು. ಅವಳು ತನ್ನ ಹೃದಯದಲ್ಲಿ "ನಾನು ರಾಣಿಯಾಗಿ ಕೂತುಕೊಂಡಿದ್ದೇನೆ" ಎಂದು ಉಬ್ಬಿಕೊಂಡಳು (ಯೆಶಾಯ 47:8-9). ಆದರೆ ಅವಳು ತಗ್ಗಿಸಲ್ಪಡುವಳು (ಜ್ಞಾನೋಕ್ತಿಗಳು 29:23; ಮತ್ತಾಯ 23:12). ಅವಳ ಉಪದ್ರವಗಳು– ಮರಣ, ದುಃಖ ಕ್ಷಾಮ– ಅವಳ ಮೇಲೆ ಬರುವವು (ವಚನ 8). ಅವಳು ಬೆಂಕಿಯಿಂದ ನಾಶವಾಗುವಳು (ಲೂಕ 17:28-30).

**9-10** ಬಾಬೆಲಿನ ಆಳ್ವಿಕೆಯಲ್ಲಿ ಪಾಲುಗಾರರಾದ ಭೂರಾಜರು ಅವಳ ನಾಶನಕ್ಕೆ ದುಃಖಿಸುವರು, ಯಾಕೆಂದರೆ ಅವರ ಆಳಿಕೆಗಳು ಅಂತ್ಯವಾಗುವವೆಂದು ಅವರು ಬಲ್ಲರು (ಯೆಹೆಜ್ಕೇಲ 26:15-18).

**11-13** ಭೂಲೋಕದ ವರ್ತಕರು ಅವಳ ನಾಶನಕ್ಕಾಗಿ ಗೋಳಾಡುವರು. ಬಾಬೆಲಿನೊಂದಿಗಿನ ಅವರ ವ್ಯಾಪಾರವು ದೊಡ್ಡದಾಗಿತ್ತು. ಬಾಬೆಲಿನ ಶ್ರೀಮಂತ ಹಾಗೂ ಬಲಿಷ್ಠ ಜನರು ಸಕಲ ವಿಧವಾದ ಸುಖಬೋಗಗಳನ್ನು [42] ಹಂಬಲಿಸುತ್ತಿದ್ದರು. ಹೀಗೆ ಈ ಸುಖಬೋಗಗನ್ನು ಒದಗಿಸಿದ ಬಾಬೆಲ ವರ್ತಕರಿಗೆ ಬಹಳ ಲಾಭದಾಯಕವಾಗಿತ್ತು ವರ್ತಕರು ಬಾಬೆಲಿಗೆ ತಂದ ಸರಕುಗಳಲ್ಲಿ ಮಾನುಷ ಪ್ರಾಣದೇಹಗಳು –ಅಂದರೆ, ಗುಲಾಮರ [43] (ವಚನ 13). ಗುಲಾಮತನದ ವ್ಯಾಪಾರವು ಮನುಷ್ಯರ ದೇಹಗಳ ಮಾರಾಟವನ್ನು ಮಾತ್ರವೇ ಒಳಂಗೊಂಡಿರುವದಿಲ್ಲ; ಅವರ ಪ್ರಾಣಗಳ ಮಾರಾಟವನ್ನು ಸಹ ಅದು ಒಳಗೊಂಡಿರುತ್ತದೆ.

**14-16** ವರ್ತಕರು ಗೋಳಾಡುವರು ಯಾಕೆಂದರೆ ಬಾಬೆಲಿನೊಂದಿಗೆ ವ್ಯಾಪಾರ ಮಾಡುವದರ ಮೂಲಕ ಐಶ್ವರ್ಯವಂತರಾಗುವ ಅವರ ಅವಕಾಶವು ಸದಾಕಾಲವೂ ಕಳೆದು ಹೋಗುವರು. ವಾಸ್ತವದಲ್ಲಿ ಬಾಬೆಲಿನ ಐಶ್ವರ್ಯದೊಂದಿಗೆ ಅವರ ಐಶ್ವರ್ಯವೂ ನಾಶವಾಗುವದು (ಯೆಹೆಜ್ಕೇಲ 27:25-26).

**17-19** ಸಮುದ್ರದಲ್ಲಿ ಸಂಪಾದಿನಿದವರೂ ಸಿಡ ಆಳುತ್ತಾರೆ ಯಾಕೆಂದರೆ ಬಾಬಿಲೋನಿಗೆ ಏಸ್ತುಗಳನ್ನು ರಫ್ತುಮಾಡು ಅವರು ಮೂಲಕ ಅವರು ಬೆಚ್ಚು ಸಂಪಾದಿಸಿದ್ದಾರೆ (ಯೆಹೆ 27-25-26).

**20** ಲೋಕದ ಅವಿಶ್ವಾಸಿಗಳೆಲ್ಲರು ಬಾಬೆಲಿನ ನಾಶನಕ್ಕೆ ಗೋಳಾಡುವರು, ಆದರೆ ಕ್ರಿಸ್ತನ ವಿಶ್ವಾಸಿಗಳು– ಅಪೊಸ್ತಲರೂ ಪ್ರವಾದಿಗಳೂ– ಆನಂದ ಪಡುವವರು. ಪ್ರಕಟಣೆ 9:9-10ರಲ್ಲಿ ಪ್ರಸ್ತಾಪಿಸಲಾದ ಹತಸಾಕ್ಷಿಗಳು ಸಹ ತಮ್ಮನ್ನು ಕೊಂದದ್ದಕ್ಕಾಗಿ ಪ್ರತಿದಂಡನೆಯಾದದ್ದರಿಂದ ಸಂತೋಷಪಡುವರು.

**21-24** ತರುವಾಯ ಯೋಹಾನನು ಬಲಿಷ್ಠನಾದ ದೇವದೂತನೊಬ್ಬನು ದೊಡ್ಡ ಬೀಸುವ ಕಲ್ಲಿನಂತಿರುವ ಒಂದು ಕಲ್ಲನ್ನು ಎತ್ತಿ ಸಮುದ್ರದೊಳಗೆ ಹಾಕುವದನ್ನು ಕಂಡನು (ವಚನ 21). ಆ ಕಲ್ಲು ಸಮುದ್ರದೊಳಗೆ ಮರೆಯಾಗಿ ಹೋದ ವಿಧದಲ್ಲಿಯೇ ಬಾಬೆಲಿನ ಐಶ್ವರ್ಯ, ಬಲ ಹಾಗು ವೈಭವವು ಸಹ ಕಾಣಿಸದೇ ಹೋಗುವದು (ಯೆರೆ 51:63-64).

ಬಾಬೆಲಿನ ಮಾಟದಿಂದ ಎಲ್ಲಾ ಜನಾಂಗದವರು ಮರುಳಾದರು (ವಚನ 23). ಈ ಜನಾಂಗಗಳು ಬಾಬೆಲಿನ ಮಹಾ ಐಶ್ವರ್ಯ ಹಾಗೂ ಬಲದಿಂದ ಮಾಟಕ್ಕೊಳಗಾದರು ಬಾಬೆಲ ಎಂದಿಗೂ ಬಿದ್ದು ಹೋಗುವದಿಲ್ಲವೆಂದು ಅವರು ನಂಬಿದ್ದರು. ಬಾಬೆಲ್ (ಅಥವಾ ರೋಮ) ಕ್ರಿಸ್ತನ ಪ್ರವಾದಿಗಳ ಹಾಗೂ ದೇವಜನರ ದೇಹಗಳನ್ನು ನಾಶಮಾಡಿದ್ದ ಪ್ರಕಾರವೇ ದೇವರು ಬಾಬೆಲನ್ನು ನಾಶಮಾಡುವನು (ಯೆಶಾಯ 13:1-22).

## ಅಧ್ಯಾಯ - 19

### ಕುರಿಯಾದಾತನ ವಿವಾಹ (19:1-10)

**1-5** ಬಳಿಕ ಯೋಹಾನನು ಪರಲೋಕದಲ್ಲಿ ದೊಡ್ಡ ಸಮೂಹವೊಂದು "ಹಲ್ಲೆಲೂಯ" ಎಂದು ಕೂಗುವದನ್ನು ಕೇಳಿದನು. ದೊಡ್ಡ ಸಮೂಹವು ಕಡೇವರೆಗೂ ತಮ್ಮ ನಂಬಿಕೆಯಲ್ಲಿ ದೃಢವಾಗಿ ನಿಂತು ರಕ್ಷಣೆಯನ್ನು ಹೊಂದಿ ಪರಲೋಕಕ್ಕೆ ಹೋಗಿರುವವರನ್ನೆಲ್ಲಾ ಒಳಗೊಂಡಿತ್ತು (ಪ್ರಕ. 7:9-10 ಮತ್ತು ವ್ಯಾಖ್ಯಾನ ನೋಡಿರಿ). ಅವರು ದೇವರ ನ್ಯಾಯವಾದ ಹಾಗೂ ನೀತಿಯುಳ್ಳ ನ್ಯಾಯ ತೀರ್ಪಿನ ನಿಮಿತ್ತ ಸಂತೋಷಪಡುತ್ತಿದ್ದರು (ಪ್ರಕ. 18:200.

**6-8** ಯೋಹಾನನ ದರ್ಶನದಲ್ಲಿ, ಸಮೂಹವು, "ಯಜ್ಞದ ಕುರಿಯಾದಾತನ ವಿವಾಹಕಾಲವು ಬಂತು" ಎಂದು ಕೂಗಿದರು (ವಚನ 7). ಅಂದರೆ, ವಿವಾಹವು ಸಂಭವಿಸಲಿಕ್ಕಿತ್ತು. ಕುರಿಯಾದಾತನು ಕ್ರಿಸ್ತನೇ. ಕುರಿಯಾದಾತನ ಮದಲಗಿತ್ತಿಯು ಸಭೆಯಾಗಿದೆ– ಅಂದರೆ, ಪರಲೋಕದಲ್ಲಿರುವ ವಿಶ್ವಾಸಿಗಳ ಮಹಾಸಮೂಹ (ವಚನ 1).

ಮದಲಗಿತ್ತಿಯು (ಸಭೆ) ತನ್ನನ್ನು ಸಿದ್ಧಮಾಡಿಕೊಂಡಿದ್ದಳು; ಅವಳು ತನ್ನನ್ನು ನಿರ್ಮಲಮಾಡಿಕೊಂಡಿದ್ದಳು. ಅವಳು ತನ್ನ ವಸ್ತ್ರಗಳನ್ನು ಕುರಿಯಾದಾತನ ರಕ್ತದಲ್ಲಿ ತೊಳೆದುಕೊಂಡಿದ್ದಳು (ಪ್ರಕ. 7:14 ಮತ್ತು ವ್ಯಾಖ್ಯಾನ ನೋಡಿರಿ), ಅವಳು ಕಳಂಕ ಸುಕ್ಕು ಮುಂತಾದ್ದೊಂದು ಇಲ್ಲದ ವಧುವಾಗಿದ್ದಳು (ಎಫೆಸ 5:25-27). ಅವಳು ಪ್ರಕಾಶಮಾನವೂ ನಿರ್ಮಲವೂ ಆದ ನಯವಾದ ನಾರುಮಡಿಯನ್ನು ಧರಿಸಿಕೊಂಡಿದ್ದಳು (ವಚನ 8). ಅಂದರೆ, ಅವಳು ದೇವಜನರ ಸತ್ಕಾರ್ಯಗಳು ಎಂಬ ವಸ್ತ್ರಗಳನ್ನು ಧರಿಸಿಕೊಂಡಿದ್ದಳು. ವಿಶ್ವಾಸಿಗಳೆಲ್ಲರೂ ಈ ಸತ್ಕಾರ್ಯಗಳೆಲ್ಲರೂ ಈ ಸತ್ಕಾರ್ಯಗಳನ್ನು ಮಾಡುವದಕ್ಕಾಗಿ ದೇವರಿಂದ ಸೃಷ್ಟಿಸಲ್ಪಟ್ಟಿದ್ದಾರೆ (ಎಫೆಸ 2:10).

**9** 6-8 ವಚನಗಳಲ್ಲಿ ಪ್ರಸ್ತಾಪಿಸಲಾಗಿರುವ ವಿಶ್ವಾಸಿಗಳು ಒಂದು ವಿಧದಲ್ಲಿ ಕ್ರಿಸ್ತನ ಮದಲಗಿತ್ತಿ ಆಗಿದ್ದಾರೆ. ಆದರೆ 9 ನೇ ವಚನದಲ್ಲಿ ಯೋಹಾನನು ಇನ್ನೊಂದು ವಿಧದಲ್ಲಿ ವಿಶ್ವಾಸಿಗಳು ಕ್ರಿಸ್ತನ ವಿವಾಹ ಔತಣಕ್ಕೆ ಆಮಂತ್ರಿಸಲ್ಪಟ್ಟ ಅತಿಥಿಗಳೂ ಆಗಿದ್ದಾರೆಂದು ಹೇಳುತ್ತಾನೆ. ಖಂಡಿತವಾಗಿಯೂ ಮದಲಗಿತ್ತಿಯಾಗಿರುವದು ಹಾಗೂ ವಿವಾಹಕ್ಕೆ ಬಂದ ಅತಿಥಿಯಾಗಿರುವದು ಒಂದಕ್ಕೊಂದು ಬಹಳ ವ್ಯತ್ಯಾಸವಾಗಿರುತ್ತವೆ; ಆದರೆ ಯಾವ ವಿಧದಲ್ಲಿಯಾದರೂ ಸರಿಯೇ ಎರಡು ಹೋಲಿಕೆಗಳ ಅರ್ಥವು ಒಂದೇ ಆಗಿದೆ. ಕ್ರಿಸ್ತನನ್ನು ವಿವಾಹವಾಗಬೇಕಾದರೆ ಮದಲಗಿತ್ತಿಯು ಸಿದ್ಧಳಾಗಿಯೂ ಯೋಗ್ಯಳಾಗಿಯೂ ಇರಬೇಕು. ವಿವಾಹ ಔತಣಕ್ಕೆ ಬರಬೇಕಾದರೆ ಅತಿಥಿಗಳೂ ಅದೇ ರೀತಿಯಲ್ಲಿ ಸಿದ್ಧರಾಗಿಯೂ ಯೋಗ್ಯರಾಗಿಯೂ ಇರತಕ್ಕದ್ದು (ಮತ್ತಾಯ 22:1-14 ಮತ್ತು ವ್ಯಾಖ್ಯಾನ ನೋಡಿರಿ). ಹೀಗೆ ಮದಲಗಿತ್ತಿಯಂತಾಗಲಿ ಅಥವಾ ಅತಿಥಿಯಂತಾಗಲಿ ವಿಶ್ವಾಸಿಗಳು ಕುರಿಯಾದಾತನ ವಿವಾಹದಲ್ಲಿ ಪಾಲು ಹೊಂದುವದಕ್ಕೆ ಸಿದ್ಧರಾಗಿಯೂ ಯೋಗ್ಯರಾಗಿಯೂ ಇರತಕ್ಕದ್ದು.

**10** ಬಳಿಕ ಯೋಹಾನನ ಬಲಿಷ್ಠನಾದ ದೇವದೂತನ ಮುಂದೆ ಬಿದ್ದ ದೇವದೂತನೇ ಕ್ರಿಸ್ತನೆಂದು ತಪ್ಪಾಗಿ ಯೋಚಿಸಿ ಆರಾಧಿಸಲಾರಂಭಿಸಿದನು (ಪ್ರಕ. 18:21). ದೇವದೂತನು ತಕ್ಷಣವೇ, "ನನಗೆ ನಮಸ್ಕಾರ ಮಾಡಬೇಡ. ದೇವರಿಗೇ ನಮಸ್ಕಾರಮಾಡು! ನಾನು ನಿನ್ನ ಹಾಗೆಯೇ ಒಬ್ಬ ಜೊತೆ ದಾಸನು" ಎಂದು ಹೇಳಿದನು (ಅ.ಕೃತ್ಯ 10:25-26; ಇಬ್ರಿಯ 1:14 ನೋಡಿರಿ). ಇದರ ಮೂಲಕ ನಾವು ಯಾವದೇ ಅರಸ ಯಾವದೇ ಯಾಜಕ ದೇವದೂತ ಅಥವಾ ಆತ್ಮವನ್ನು ಆರಾಧಿಸಬಾರದು; ನಾವು ಏಕೈಕ ಸತ್ಯ ತ್ರೈಯೇಕ ದೇವರನ್ನು ತಂದೆ ಮಗ ಮತ್ತು ಪವಿತ್ರಾತ್ಮ– ಮಾತ್ರವೇ ಆರಾಧಿಸಬೇಕೆಂದು ನಮಗೆ ನೆನಪಿಸಲ್ಪಡುತ್ತದೆ ಯೇಸುವಿನ ವಿಷಯವಾದ ಸಾಕ್ಷಿಯು ಪ್ರವಾದನೆಯ ಆತ್ಮವೇ. ಅಂದರೆ, ಪ್ರಕಟಣೆ ಹಾಗೂ ಸಾಕ್ಷಿಯ ನಿಜವಾದ ಮೂಲವು ದೇವದೂತರು ಹಾಗೂ ಪ್ರವಾದಿಗಳಲ್ಲ ಆದರೆ ಬದಲಾಗಿ ಸ್ವತಃ ಯೇಸುವೇ ಆಗಿದ್ದಾನೆ, ಆತನ ಬಗ್ಗೆ ದೇವದೂತರು ಹಾಗೂ ಪ್ರವಾದಿಗಳು ಸಾಕ್ಷಿನುಡಿದಿದ್ದಾರೆ. ದೇವರ ಏಕೈಕ ಸತ್ಯ ನರಾವತಾರವಾದ ಯೇಸುಕ್ರಿಸ್ತನು ಮಾತ್ರವೇ ಆರಾಧನೆಗೆ ಯೋಗ್ಯನು.

### ಜಯಶಾಲಿಯಾದ ಕ್ರಿಸ್ತನು (19:11-16)

**11** ತರುವಾಯ ಯೋಹಾನನು ಪರಲೋಕವು ತೆರೆದಿರುವದನ್ನು ಕಂಡನು, ಮತ್ತು ಬಿಳೀಕುದುರೆ ಸವಾರನು ಕಾಣಿಸಿಕೊಂಡನು, ಆತನು ಕ್ರಿಸ್ತನಾಗಿದ್ದನು (2 ಥೆಸಲೋನಿಕ 1:7-10). ಕ್ರಿಸ್ತನು ಇಲ್ಲಿ ನಂಬಿಗಸ್ತನೂ ಸತ್ಯವಂತನೂ ಎಂದು ಕರೆಯಲ್ಪಟ್ಟಿದ್ದಾನೆ (ಕೀರ್ತನೆಗಳು 96:13; ಪ್ರಕ. 3:14).

**12** ಕ್ರಿಸ್ತನ ದೇಹದಲ್ಲಿ ಒಂದು ಗುಪ್ತವಾದ ಹೆಸರು ಬರೆಯಲ್ಪಟ್ಟಿತ್ತು (ಪ್ರಕ. 3:12). ಆ ಹೆಸರು ಏನೆಂಬದು ಯಾರಿಗೂ ತಿಳಿಯದು.

**13** ಯೋಹಾನ ದರ್ಶನದಲ್ಲಿ, ಕ್ರಿಸ್ತನ ರಕ್ತ ಪ್ರೇಕ್ಷಿತವಾದ ವಸ್ತ್ರವನ್ನು ಧರಿಸಿಕೊಂಡಿದ್ದನು. ಆ ರಕ್ತವು ಆತನ ವೈರಿಗಳ ರಕ್ತವಾಗಿತ್ತು (ಯೆಶಾಯ 63:1-6). ಕ್ರಿಸ್ತನು ಇಲ್ಲಿ ದೇವರ ವಾಕ್ಯ ಸಾಧಾರಣ ಶಬ್ದವಲ್ಲ; ಅದು ಯಾವ ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದು, ಸಜೀವವಾದದ್ದು, ಕಾರ್ಯಸಾಧಕವಾದದ್ದು (ಇಬ್ರಿಯ 4:12). ಆ ವಾಕ್ಯವು ಆತ್ಮನ ಕತ್ತಿಯಾಗಿದೆ

(ಎಫೆಸ 6:17), ಮತ್ತು ಆ ವಾಕ್ಯವು ತನ್ನ ವೈರಿಗಳನ್ನು ನಾಶಮಾಡುವದಕ್ಕೆ ಕ್ರಿಸ್ತನು ಉಪಯೋಗಿಸುವ ಆಯುಧವಾಗಿದೆ (ವಚನ 15).

**14** ಪರಲೋಕದಲ್ಲಿರುವ ಸೈನ್ಯದವರು ಕ್ರಿಸ್ತನ ಹಿಂದೆ ಬರುತ್ತಿದ್ದರು. ಈ ಸೈನ್ಯಗಳು ದೇವದೂತರನ್ನೂ (ಮತ್ತಾಯ 26:53). ಮತ್ತು ಪುನರುತ್ಥಾನಗೊಂಡ ವಿಶ್ವಾಸಿಗಳನ್ನೂ (ಪ್ರಕ. 2:26-27; 17:14) ಒಳಗೊಂಡಿತ್ತು. ಈ ಸೈನ್ಯಗಳು ತಾವೇ ಯುದ್ಧವನ್ನೇನೂ ಮಾಡುತ್ತಿರುವಂತೆ ಕಾಣಿಸಲಿಲ್ಲಃ ಅವರ ವಸ್ತ್ರಗಳ ಮೇಲೆ ಯಾವ ರಕ್ತ ವೂ ಇರಲಿಲ್ಲ.

**15-16** ಕ್ರಿಸ್ತನು ಮಾತ್ರವೇ ಜನಾಂಗಗಳನ್ನು– ಆತನ ವೈರಿಗಳನ್ನು– ಹೊಡೆಯುತ್ತಾನೆ. ಆತನ ಬಾಯಿಂದ ಬರುವ ಕತ್ತಿಯು ನ್ಯಾಯ ತೀರ್ಪಿನ ಕತ್ತಿಯಾಗಿದೆ (ಯೆಶಾಯ 11:4; 2 ಥೆಸಲೋನಿಕ 2:8; ಪ್ರಕ. 1; 16 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಕ್ರಿಸ್ತನು ಅವರನ್ನು ಕಬ್ಬಿಣದ ಕೋಲಿನಿಂದ ಆಳುವನು; ಅಂದರೆ, ಆತನು ತನ್ನ ವೈರಿಗಳನ್ನು ಕಬ್ಬಿಣದ ಕೋಲಿನಿಂದ ಹೊಡೆದುನಾಶಮಾಡುವನು (ಕೀರ್ತನೆಗಳು 2:9). ಕ್ರಿಸ್ತನು ದೇವರ ಉಗ್ರಕೋಪವೆಂಬ ದ್ರಾಕ್ಷೆಯ ತೊಟ್ಟಿಯಲ್ಲಿರುವದನ್ನು ತುಳಿಯುತ್ತಾನೆ. (ಪ್ರಕ. 14:19-20 ಮತ್ತು ವ್ಯಾಖ್ಯಾನ ನೋಡಿರಿ). ಹಾಗಾದರೆ, ಈತನು ನಮ್ಮ ಜಯಶಾಲಿಯಾದ ರಕ್ಷಕ ಕ್ರಿಸ್ತನೂ ರಾಜಾಧಿರಾಜನೂ ಕರ್ತರ ಕರ್ತನೂ ಆಗಿದ್ದಾನೆ (ಧರ್ಮೋಪದೇಶ ಕಾಂಡ 10:17; 1 ತಿಮೊಥಿ 6:15; ಪ್ರಕ. 17:14).

## ಕ್ರಿಸ್ತನ ವಿರೋಧಿಗಳ ನಾಶನ (19:17-21)

**17-18** ಇಂದು ಕುರಿಯದಾತನಾದ ಕ್ರಿಸ್ತನನ್ನು ಅಂಗೀಕರಿಸಿಕೊಳ್ಳದವರು ಅಂತಿಮ ಯುದ್ಧದ ದಿನದಲ್ಲಿ ಕ್ರಿಸ್ತನನ್ನು ರಾಜನಾಗಿ ಎದುರ್ಗೊಳ್ಳಬೇಕಾಗುವದು. ಇಂದು ಕ್ರಿಸ್ತನನ್ನು ರಕ್ಷಕನನ್ನಾಗಿ ಸ್ವೀಕರಿಸದವರು ಆ ಕಡೇ ದಿನದಲ್ಲಿ ಆತನನ್ನು ನ್ಯಾಯಾಧಿಪತಿಯಾಗಿ ಎದುರ್ಗೊಳ್ಳಬೇಕಾಗುತ್ತದೆ. ಆತನು ಬಾಯಲ್ಲಿ ನ್ಯಾಯತೀರ್ಪಿನ ಕತ್ತಿಯನ್ನೂ ತನ್ನ ಕೈಯಲ್ಲಿ ಕಬ್ಬಿಣದ ಕೋಲನ್ನೂ ಹೊಂದಿರುವನು (ವಚನ 15). ಆದಿನದಲ್ಲಿ ಕ್ರಿಸ್ತನನ್ನು ನಂಬದವರು ಹದ್ದುಗಳಿಗೂ ಇತರ ಪಕ್ಷಿಗಳಿಗೂ ಆಹಾರವಾಗುವರು (ಯೆಹೆಜ್ಕೇಲ 39:17-21). ಅವರು ತಮ್ಮನ್ನು ತಾವೇ ದೂರಿಕೊಳ್ಳಬೇಕಾಗುವದಷ್ಟೇ. ದೇವರು ಅವರಿಗೆ ಕ್ಷಮಾಪಣೆ ಹಾಗೂ ರಕ್ಷಣೆಯನ್ನು ನೀಡಿದ್ದನು ಆದರೆ ಅವರು ಅದನ್ನು ತಿರಸ್ಕರಿಸಿದರು. ದೇವರ ಕರಣೆ ಹಾಗೂ ಕೃಪೆಯನ್ನು ತಿರಸ್ಕರಿಸುವವರು ಆತನ ನ್ಯಾಯ ತೀರ್ಪನ್ನು ಖಂಡಿತವಾಗಿಯೂ ಪಡೆಯುವರು.

**19** ನಂತರ ಯೋಹಾನನು ಕುದುರೆಯ ಮೇಲೆ ಕೂತಿದ್ದವನ (ಕ್ರಿಸ್ತನ) ವೈರಿಗಳು ಸರ್ವಶಕ್ತನಾದ ದೇವರ ಮಹಾದಿನದಲ್ಲಾಗುವ ಯುದ್ಧಕ್ಕಾಗಿ ಕೂಡಿಬರುವದನ್ನು ಕಂಡನು (ಪ್ರಕ. 16:14). ಯುದ್ಧದಲ್ಲಿ ಕ್ರಿಸ್ತನ ಪ್ರಮುಖ ವೈರಿಗಳು ಯಾರೆಂದರೆ ಮೃಗ ಹಾಗೂ ಆತನ ಹತ್ತು ಮಂದಿ ಅರಸುಗಳು (ಪ್ರಕ. 13:1-2; 17:7-8; 12:14 ಮತ್ತು ವ್ಯಾಖ್ಯಾನ ನೋಡಿರಿ). ಯೋಹಾನನು ಈ ದರ್ಶನದಲ್ಲಿ ಕಂಡ ಯುದ್ಧವು ಒಂದು ದಿನ ಹರ್ಮಗೆದೋನ್ ಎಂಬ ಸ್ಥಳದಲ್ಲಿ ನಡೆಯುವದಕ್ಕಿರುತ್ತದೆ (ಪ್ರಕ. 16:16).

**20** ಯುದ್ಧದಲ್ಲಿ ಕ್ರಿಸ್ತನು ತನ್ನ ವಿರೋಧಿಗಳ ಮೇಲೆ ಜಯಶಾಲಿಯಾದನು. ಸುಳ್ಳು ಪ್ರವಾದಿಗಳ ಜೊತೆಗೆ ಮೃಗವು (ಪ್ರಕ. 13:11;16:13). ಸೆರೆ ಹಿಡಿಯಲ್ಪಟ್ಟವು , ಮತ್ತು ಅವರಿಬ್ಬರೂ ಗಂಧಕದಿಂದ ಉರಿಯುವ ಬೆಂಕಿಯ ಕೆರೆಯಲ್ಲಿ ಹಾಕಲ್ಪಟ್ಟರು. ಕ್ರಿಸ್ತ ವಿರೋಧಿಯೆಂದು ಸಹ ಕರೆಯಲ್ಪಟ್ಟ ಮೃಗವು ಲೋಕದ ಎಲ್ಲಾ ಶಕ್ತಿ ಹಾಗೂ ಅಧಿಕಾರವನ್ನು ಪ್ರತಿನಿಧಿಸುತ್ತದೆ. ಮೃಗದ ಸಹಪಾಠಿಯಾದ ಸುಳ್ಳುಪ್ರವಾದಿಯು ಎಲ್ಲಾ ಸುಳ್ಳು ಧರ್ಮವನ್ನು ಪ್ರತಿನಿಧಿಸುತ್ತಾನೆ. ಸುಳ್ಳು ಪ್ರವಾದಿಯ ಕೆಲಸವು ಮನುಷ್ಯರನ್ನು ಮರುಳುಗೊಳಿಸಿ ಮೃಗವನ್ನು ಹಿಂಬಾಲಿಸಿ ಅದರ ಗುರುತನ್ನು ಹಾಕಿಸಿಕೊಳ್ಳುವಂತೆ ಪ್ರೇರೆಸುವದಾಗಿತ್ತು[44] (ಪ್ರಕ. 13:11-16 ಮತ್ತು ವ್ಯಾಖ್ಯಾನ ನೋಡಿರಿ).

ಗಂಧಕದಿಂದ ಉರಿಯುವ ಬೆಂಕಿಯ ಕೆರೆಯು ನರಕದ ಬೆಂಕಿಯನ್ನು ಪ್ರತಿ ನಿಧಿಸುತ್ತದೆ, ಅಲ್ಲಿ ದುಷ್ಟರ ಆತ್ಮಗಳು ಸದಾಕಾಲವೂ ಉಳಿಯುವವು (ಮತ್ತಾಯ 5:22; ಮಾರ್ಕ 9:43).

**21** ಯೋಹಾನನ ದರ್ಶನದಲ್ಲಿ ಮೃಗವನ್ನೂ ಸುಳ್ಳು ಪ್ರವಾದಿಯನ್ನೂ ಹಿಂಬಾಲಿಸಿದವರೆಲ್ಲರು ಕ್ರಿಸ್ತನ ಬಾಯಿಂದ ಬಂದ ಕತ್ತಿಯಿಂದ ಕೊಲ್ಲಲ್ಪಟ್ಟರು. ಹೀಗೆ ಕ್ರಿಸ್ತನು ಅವರ ಮೇಲೆ ಅಂತಿಮ ನ್ಯಾಯತೀರ್ಪನ್ನು ಬರಮಾಡಿದನು (ಪ್ರಕ. 14:14-16 ನೋಡಿರಿ). ಆತನ ಬಾಯಿಂದ ಹೊರಟ ಕತ್ತಿಯು ನ್ಯಾಯತೀರ್ಪಿನ ವಾಕ್ಯವನ್ನು ಪ್ರತಿನಿಧಿಸುತ್ತದೆ. ಮೃಗವನ್ನು ಹಿಂಬಾಲಿಸುವವರಿಗೆ ನೀಡಲಾದ ನ್ಯಾಯತೀರ್ಪು ಏನೆಂದರೆಃ ಅವರ ದೇಹಗಳು ಕೊಲ್ಲಲ್ಪಟ್ಟು ಅವರ ಆತ್ಮಗಳು ನರಕಕ್ಕೆ ಹಾಕಲ್ಪಡುವವು .

ಪ್ರಕಟಣೆ ಪುಸ್ತಕದ ಅತಿ ಪ್ರಾಮುಖ್ಯಬೋಧನೆಗಳಲ್ಲಿ ಒಂದಾವದೆಂದರೆ ಕ್ರಿಸ್ತನು ಸೈತಾನನ ಮೇಲೆಯೂ ಆತನ ಪ್ರಮುಖ ಸಹಾಯಕರಾದ ಮೃಗ ಹಾಗೂ ಸುಳ್ಳು ಪ್ರವಾದಿಗಳ ಮೇಲೆಯೂ ಅಂತಿಮ ಜಯವನ್ನು ಗಳಿಸಿದ್ದಾನೆ ಎಂಬದೇ ನಿಜವಾದ ಯುದ್ಧವು ಇನ್ನೂ ನಡೆದಿರುವದಿಲ್ಲ, ಆದರೆ ದೇವರು ಕ್ರಿಸ್ತನಿಗೆ ಈಗಾಗಲೇ ಜಯವನ್ನು ನೇಮಿಸಿದ್ದಾನೆ. ಕ್ರಿಸ್ತನು ಅಂತಿಮ ಯುದ್ಧದಲ್ಲಿ ಜಯಶಾಲಿಯಾಗುವನೆಂಬುದು ಸಂಪೂರ್ಣ ಖಚಿತವಾದದ್ದು. ಈ ಲೋಕದಲ್ಲಿ ವಿಶ್ವಾಸಿಗಳಾದ ನಾವು ಸೈತಾನನ ದಾಳಿಗಳಿಂದ ಬಾಧಿಸಲ್ಪಡುವವರೂ ಶೋಧಿಸಲ್ಪಡುವವರೂ ಆಗಿದ್ದೇವೆ. ದುಷ್ಟಜನರು ಅಧಿಕಾರಕ್ಕೆ ಬಂದು

ಸಭೆಯನ್ನು ಹಿಂಸಿಸುವದನ್ನು ನಾವು ಕಾಣುತ್ತೇವೆ. ಹೇಗಿದ್ದರೂ, ಸರ್ವಶಕ್ತನಾದ ದೇವರ ದಿನದಲ್ಲಾಗುವ ಯುದ್ಧದ ವಿಷಯವಾಗಿ ಯೋಹಾನನು ಕಂಡ ಈ ದರ್ಶನವನ್ನು ನಾವು ಎಂದಿಗೂ ಮರೆಯದಿರೋಣ. ಯೇಸು ಜಯಿಸಿದ್ದಾನೆ! ಯೇಸು ಹೇಳಿದ್ದೇನೆಂದರೆಃ "ಲೋಕದಲ್ಲಿ ನಿಮಗೆ ಸಂಕಟವು ಂಟು ಧೈರ್ಯವಾಗಿರಿ ನಾನು ಲೋಕವನ್ನು ಜಯಿಸಿದ್ದೇನೆ" (ಯೋಹಾನ 16:33).

---

## ಅಧ್ಯಾಯ - 20

### ಸಾವಿರ ವರ್ಷಗಳು (20:1-6)

**1** ಸೈತಾನನ ಇಬ್ಬರು ಸಹಾಯಕರು ಮೃಗ ಹಾಗೂ ಸುಳ್ಳು ಪ್ರವಾದಿ– ಬೆಂಕಿಯ ಕೆರೆಯಲ್ಲಿ ಹಾಕಲ್ಪಟ್ಟ ಮೇಲೆ (ಪ್ರಕ. 19:20), ಯೋಹಾನನು ಅಧೋಲೋಕದ ಬೀಗದ ಕೈಯನ್ನು ಹಿಡಿದಿದ್ದ ದೇವದೂತನೊಬ್ಬನನ್ನು ಕಂಡನು (ಪ್ರಕ. 9:1; 11:7). ಅದೋಲೋಕವು ಭೂಮಿಯ ಅತಿ ಆಳದಲ್ಲಿರುವ ಬೃಹತ್ ಗುಹೆಯಾಗಿದೆ ಅಲ್ಲಿ ಬಿದ್ದು ಹೋದ ದೇವದೂತರು ಹಾಗೂ ಅವಿಧೇಯರ ಆತ್ಮಗಳೂ ನ್ಯಾಯತೀರ್ಪಿನ ದಿನಕ್ಕಾಗಿ ಸೆರೆಯಲ್ಲಿಡಲ್ಪಟ್ಟಿವೆ (ಯೂದನು 6).

**2-3** ಬಳಿಕ ದೇವದೂತನು ಸೈತಾನನ್ನು ಹಿಡಿದು ಅದೋಲೋಕಕ್ಕೆ ದೊಬ್ಬಿದನು, ಅಲ್ಲಿ; ಆತನು ಸಾವಿರವರ್ಷಗಳವರೆಗೆ ಉಳಿಯಲಿದ್ದನು. ಸಾವಿರ ವರ್ಷಗಳು ತೀರಿದ ಬಳಿಕ ಆತನನ್ನು ಕ್ಲುಪ್ತಕಾಲದವರೆಗೆ ಬಿಡುಗಡೆ ಮಾಡಬೇಕಿತ್ತು (ವಚನಗಳು 7-10 ನೋಡಿರಿ).

**4** ತರುವಾಯ ಯೋಹಾನನು ಕೆಲವು ಸಿಂಹಾಸನಗಳನ್ನು ಕಂಡನು, ಅವು ಗಳ ಮೇಲೆ ನ್ಯಾಯ ತೀರಿಸುವ ಅಧಿಕಾರ ಕೊಡಲ್ಪಟ್ಟಿದ್ದ ಕೆಲವರು ಕುಳಿತಿದ್ದರು. ಯೋಹಾನನು ಇಲ್ಲಿ ಯಾರನ್ನು ಸೂಚಿಸುತ್ತಿದ್ದಾನೆಂದು ತಿಳಿದು ಬಂದಿರುವದಿಲ್ಲ. ಸಿಂಹಾಸನಗಳ ಮೇಲೆ ಕೂತಿದ್ದವರು ಹನ್ನೆರಡು ಮಂದಿ ಅಪೊಸ್ತಲರು ಎಂದು ಕೆಲವರು ಭಾವಿಸುತ್ತಾರೆ (ಮತ್ತಾಯ 19:28). ಇನ್ನು ಕೆಲವರು ದೃಢವಾಗಿ ನಿಂತು ಸೈತಾನನ ಶೋಧನೆಗಳನ್ನು ಜಯಿಸಿದ ದೇವಜನರು (ವಿಶ್ವಾಸಿಗಳು) ಅವರಾಗಿದ್ದಾರೆಂದು ಭಾವಿಸುತ್ತಾರೆ (1 ಕೊರಿಂಥ 6:2-3; ಪ್ರಕ. 3:21 ), ಅವರು ಯಾರೇ ಆಗಿದ್ದರೂ ಸರಿಯೇ ಅವರು ಒಂದು ವಿಧದಲ್ಲಿ ಕ್ರಿಸ್ತನಿಗೆ ನ್ಯಾಯತೀರ್ಪಿನ ಕಾರ್ಯದಲ್ಲಿ ಸಹಾಯನೀಡುವರು.

ಸಿಂಹಾಸನದಲ್ಲಿ ಕೂತಿದ್ದವರನ್ನಲ್ಲದೆ ಯೋಹಾನನು ತಲೆಹೊಯಿಸಿಕೊಂಡವರ, ಅಂದರೆ ಕೊಲ್ಲಲ್ಪಟ್ಟ ಹತ ಸಾಕ್ಷಿಗಳ ಆತ್ಮಗಳನ್ನೂ ಕಂಡನು. ಅವರು ಕ್ರಿಸ್ತನಲ್ಲಿಟ್ಟ ನಂಬಿಕೆಯ ನಿಮಿತ್ತವಾಗಿ ಕೊಲ್ಲಲ್ಪಟ್ಟಿದ್ದರು. ಅವರು ಮೃಗವನ್ನು ಆರಾಧಿಸಿರಲೂ ಇಲ್ಲ; ಅದರ ಗುರುತನ್ನು ಹಾಕಿಸಿಕೊಂಡಿರಲೂ ಇಲ್ಲ (ಪ್ರಕ. 13:15-17). ಇವರಲ್ಲಿ ಪ್ರಕಟಣೆ 6:9ರಲ್ಲಿ ಪ್ರಸ್ತಾಪಿಸಿದ ಹತಸಾಕ್ಷಿಗಳು ಮಾತ್ರವಲ್ಲದೆ, ಅವರ ತರುವಾಯ ಕ್ರಿಸ್ತನ ನಿಮಿತ್ತ ಸತ್ತವರೆಲ್ಲರೂ ಸೇರಿರುತ್ತಾರೆ (ಪ್ರಕ. 6:11). ಯೋಹಾನನ ದರ್ಶನದಲ್ಲಿ ಈ ಹತಸಾಕ್ಷಿಗಳು ಕೇವಲ ಆತ್ಮಗಳು ಮಾತ್ರವೇ ಆಗಿದ್ದರು, ಯಾಕೆಂದರೆ ಅವರ ದೇಹಗಳ ಪು ನರುತ್ಥಾನವು ಇನ್ನೂ ಸಂಭವಿಸಿರಲಿಲ್ಲ.

ನಂತರ ಯೋಹಾನನು ಈ ಆತ್ಮಗಳು ಜೀವಿತವಾಗುವದನ್ನು; ಅಂದರೆ, ಅವರ ದೇಹಗಳ ಪು ನರುತ್ಥಾನವು ಜರುಗುವದನ್ನು ಕಂಡನು. ತರುವಾಯ ಅವರು ಸಾವಿರ ವರ್ಷ ಕ್ರಿಸ್ತನೊಂದಿಗೆ ಆಳಿದರು. ಇದು ಕ್ರಿಸ್ತನ ಹಾಗೂ ಆತನ ಹತಸಾಕ್ಷಿಗಳಾದ ದೇವಜನರ ಸಾವಿರ ವರ್ಷದ ಆಳಿಕೆ ಎಂದು ಕರೆಯಲ್ಪಡುತ್ತದೆ.

ಈ ಆಳಿಕೆಯು– ಅದು ನಿಜವಾಗಿಯೂ ಜರುಗುವಾಗ– ಭೂಮಿಯ ಮೇಲೆ ನಡೆಯುವದೆಂದು ನಾವು ಬಲ್ಲೆವು ; ಯಾಕೆಂದರೆ 7-9ವಚನಗಳ ಪ್ರಕಾರ ವಾಗಿ ಸಾವಿರ ವರ್ಷದ ಅವಧಿ ಮುಗಿದ ಬಳಿಕ ಸೈತಾನನು ಪು ನಃ ಭೂಲೋಕದ ಜನಾಂಗಗಳನ್ನು ಒಟ್ಟುಗೂಡಿಸಿ ಕಡೆಯದಾಗಿ ಕ್ರಿಸ್ತನ ಹಾಗೂ ಆತನ ದೇವಜನರ ಮೇಲೆ ದಾಳಿ ಮಾಡುವನು. ಆದರೆ ಸಾವಿರ ವರ್ಷಗಳ ವೇಳೆಯಲ್ಲಿ ಸೈತಾನನು ಅಧೋಲೋಕದಲ್ಲಿ ಸೆರೆಯಾಗಿ ಇಡಲ್ಪಡುವನು.[45]

**5** ನಂತರ ಯೋಹಾನನ ಪ್ರಕಾರವಾಗಿ ಕ್ರಿಸ್ತನ ಹಾಗೂ ಆತನ ಹತಸಾಕ್ಷಿಗಳ ಸಾವಿರ ವರ್ಷದ ಆಳಿಕೆ ಮುಗಿದ ಬಳಿಕ ಮಿಕ್ಕ ಸತ್ತವರು –ಅಂದರೆ, ಕ್ರಿಸ್ತನ ನಿಮಿತ್ತ ಕೊಲ್ಲಲ್ಪಡದವರು– ಜೀವಿತರಾಗಿ ಏಳುವರು (ಪು ನರುತ್ಥಾನಗೊಳ್ಳುವರು). ಇಲ್ಲಿ ಮಿಕ್ಕ ಸತ್ತವರು ಎರಡು ಗುಂಪು ಗಳನ್ನು ಒಳಗೊಂಡಿರುತ್ತಾರೆಃ ಮೊದಲನೆಯದಾಗಿ, ವಾಸ್ತವದಲ್ಲಿ ಕ್ರಿಸ್ತನ ನಿಮಿತ್ತ ಕೊಲ್ಲಲ್ಪಡದ ಹಿಂದಿನ ತಲೆ ಮಾರುಗಳ ವಿಶ್ವಾಸಿಗಳು ಮತ್ತು ಎರಡನೆಯದಾಗಿ ಎಲ್ಲಾ ಅವಿಶ್ವಾಸಿಗಳು.
ಪ್ರಥಮ ಪು ನರುತ್ಥಾನವು ಸಾವಿರ ವರ್ಷದ ಆಳಿಕೆಯ ಪ್ರಾರಂಭದಲ್ಲಾಗುವ ಹತಸಾಕ್ಷಿಗಳ ಪು ನರುತ್ಥಾನವಾಗಿದೆ (ವಚನ 4), "ಎರಡನೆಯ ಪು ನರುತ್ಥಾನವು " 5ನೇ ವಚನದಲ್ಲಿ ಪ್ರಸ್ತಾಪಿಸಿರುವ ಮಿಕ್ಕ ಸತ್ತವರೆಲ್ಲರ ಪು ನರುತ್ಥಾನವಾಗಿದೆ.

**6** ಪ್ರಥಮ ಪು ನರುತ್ಥಾನದಲ್ಲಿ ಸೇರುವವರು –ಅಂದರೆ, ಹತ ಸಾಕ್ಷಿಗಳು– ಧನ್ಯರೂ ಪರಿಶುದ್ಧರೂ ಆಗಿದ್ದಾರೆ. ದೇವರ ಯಾಜಕರಾಗಿ ಅವರು ಸಾವಿರ ವರ್ಷಕ್ರಿಸ್ತನೊಂದಿಗೆ ಆಳುವರು. ಅವರನ್ನು ಎರಡನೆಯ ಮರಣವು [46] ಮುಟ್ಟುವದಿಲ್ಲ (ವಚನ 14 ಮತ್ತು ವ್ಯಾಖ್ಯಾನ ನೋಡಿರಿ).

## ಸೈತಾನನ ಬಿಡುಗಡೆ ಮತ್ತು ಅಂತಿಮ ನಾಶನ (20:7-10)

**7-8** ಆದೋಲೋಕದಲ್ಲಿ ಸಾವಿರ ವರ್ಷಗಳವರೆಗೆ ಬಂಧಿಸಲ್ಪಟ್ಟ ಮೇಲೆಯೂ ಸೈತಾನನ ಸ್ವಭಾವದಲ್ಲಿ ಯಾವ ಸುಧಾರಣೆಯೂ ಇರಲಿಲ್ಲ! ಕೊನೆಯ ಬಾರಿಗೆ ಸೈತಾನನು ಭೂಲೋಕದ ಜನಾಂಗಗಳನ್ನು ಒಟ್ಟು ಗೂಡಿಸುತ್ತಾನೆ. ಅವು ಗಳು ಈಗಾಗಲೇ ಕ್ರಿಸ್ತನಿಂದ ನಾಶಗೊಂಡಿದ್ದವು (ಪ್ರಕ. 19:19-21) ಗೋಗ್ ಹಾಗೂ ಮಾಗೋಗ್ ಎಂಬವು ಗಳು ಈ ಜನಾಂಗಗಳ ಸಾಂಕೇತಿಕ ಹೆಸರುಗಳಾಗಿವೆ (ಯೆಹೆಜ್ಕೇಲ 38:16).

**9** ಇಲ್ಲಿ ಸಾವಿರ ವರ್ಷ ಆಳಿಕೆ ಹತಸಾಕ್ಷಿಗಳ ಸಮುದಾಯವು ದೇವಜನರ ಪಾಳೆ ಎಂದು ಕರೆಲ್ಪಟ್ಟಿದೆ. ಇದು "ಪಾಳೆ" ಎಂದು ಕರೆಯಲ್ಪಟ್ಟಿದೆ ಯಾಕೆಂದರೆ ಅದು ಶಾಶ್ವತವಾದದ್ದಾಗಿರಲಿಲ್ಲ; ಅದು ಸಾವಿರ ವರ್ಷಗಳ ವರೆಗೆ ಮಾತ್ರವೇ ಇತ್ತು. ಪಾಳೆಯವು ದೇವರು ಪ್ರೀತಿಸುವ ಪಟ್ಟಣ ಎಂದು ಪ್ರಸಿದ್ಧವಾಗಿತ್ತು. ಯೋಹಾನನ ದರ್ಶನದಲ್ಲಿ ಜನಾಂಗಗಳ ಸೈನ್ಯಗಳು ಪಟ್ಟಣದ (ಅಥವಾ ಪಾಳೆಯದ) ವಿರುದ್ಧ ಹೊರಟವು ; ಆದರೆ ಅವು ಗಳು ಅದರ ಮೇಲೆ ದಾಳಿಮಾಡುವದಕ್ಕೆ ಮುಂಚೆಯೇ ಪರಲೋಕದಿಲಂದ ಬಂದ ಬೆಂಕಿಯು ಅವರನ್ನು ದಹಿಸಿಬಿಟ್ಟಿತು (2 ಅರಸುಗಳು 1:10; ಯೆಹೆಜ್ಕೇಲ 38:21-22; 39:6).

**10** ನಂತರ ಸೈತಾನನಿಗೆ ಅಂತಿಮ ಶಿಕ್ಷೆಯಾಯಿತುಃ ಆತನು ಗಂಧಕದಿಂದ ಉರಿಯುವ ಬೆಂಕಿಯ ಕೆರೆಯಲ್ಲಿ ದೊಬ್ಬಲ್ಪಟ್ಟನು ಅಲ್ಲಿ ಆತನು ಯುಗಯುಗಾಂತರಗಳಲ್ಲಿಯೂ ಯಾತನೆಪಡುವನು (ಪ್ರಕ. 19:20 ಮತ್ತು ವ್ಯಾಖ್ಯಾನ ನೋಡಿರಿ).

ಹೀಗೆ ನಾವು ಯೋಹಾನನ ಪ್ರಕಟಣೆಯ ಮಹಾ ಉತ್ತುಂಗಕ್ಕೆ ಬಂದಿರುತ್ತೇವೆಃ ಸೈತಾನನಸೋಲು ಹಾಗೂ ಲೋಕದಲ್ಲಿನ ಎಲ್ಲಾ ದುಷ್ಟತನದ ಮೇಲಿನ ಅಂತಿಮ ಜಯ. ಆದರೆ ಇನ್ನೂ ಎರಡು ಮಹಾ ಉತ್ತುಂಗಗಳು ಬರಲಿವೆಃ ಮೊದಲನೆಯದಾಗಿ, ಕಡೇ ನ್ಯಾಯತೀರ್ಪಿನ ವಿಷಯವಾದ ಯೋಹಾನನ ದರ್ಶನ (ವಚನಗಳು 11:15), ಮತ್ತು ಅಂತಿಮವಾಗಿ ಸ್ವತಃ ಪರಲೋಕದ ಕುರಿತ ಆತನ ದರ್ಶನ (ಪ್ರಕಟಣೆ 21-22 ಅಧ್ಯಾಯಗಳು)

## ಪುನರುತ್ಥಾನ ಹಾಗೂ ಕಡೇ ನ್ಯಾಯತೀರ್ಪು (20:11-15)

**11** ಯೋಹಾನನು ಇಲ್ಲಿ ಕಡೇ ನ್ಯಾಯತೀರ್ಪಿನ ವಿಷಯವಾದ ತನ್ನ ದರ್ಶನವನ್ನು ನಮಗೆ ಬಣ್ಣಿಸುತ್ತಾನೆ. ಯೋಹಾನನು ಬೆಳ್ಳಗಿರುವ ಮಹಾ ಸಿಂಹಾಸನವನ್ನು ಕಂಡನು. ಸಿಂಹಾಸನದ ಮೇಲೆ ಒಬ್ಬನು ಕೂತಿದ್ದನು, ಆತನು ದೇವರು ಅಥವಾ ಕ್ರಿಸ್ತನೋ ಎಂದು ಯೋಹಾನನು ಹೇಳುವದಿಲ್ಲ. ದೇವರು ನ್ಯಾಯತೀರ್ಪಿನ ಕೆಲಸವನ್ನೆಲ್ಲಾ ಕ್ರಿಸ್ತನಿಗೆ ನೀಡಿದ್ದಾನೆಂದು ಹೊಸ ಒಡಂಬಡಿಕೆಯು ಬೋಧಿಸುತ್ತದೆ (ಯೋಹಾನ 5:22; 2 ಕೊರಿಂಥ 5:10; 2 ತಿಮೊಥೆ 4:1 ನೋಡಿರಿ). ಅಲ್ಲದೆ ಪೌಲನು ನಾವೆಲ್ಲರೂ ದೇವರ ನ್ಯಾಯತೀರ್ಪಿನ ಸಿಂಹಾಸನದ ಮುಂದೆ ನಿಲ್ಲುವೆವು ಎಂದು ಸಹ ಹೇಳಿದನು (ರೋಮ 14:10). ಪ್ರಕಟಣೆ ಪುಸ್ತಕದಲ್ಲಿ ಸಾಮಾನ್ಯವಾಗಿ ಸಿಂಹಾಸನದಲ್ಲಿ ಕುಳಿತಿರುವಾತನು ದೇವರೇ ಆಗಿದ್ದಾನೆ (ಪ್ರಕ. 5:13; 7:10:19:4). ಸಿಂಹಾಸನದಲ್ಲಿ ಕುಳಿತಿರುವಾತನು ದೇವರಾಗಿರಲಿ ಅಥವಾ ಕ್ರಿಸ್ತನಾಗಿರಲಿ ಯಾವ ವ್ಯತ್ಯಾಸವನ್ನುಂಟು ಮಾಡುವದಿಲ್ಲ, ಯಾಕೆಂದರೆ ದೇವರೂ ಕ್ರಿಸ್ತನೂ ಒಂದಾಗಿದ್ದಾರೆ (ಯೋಹಾನ 10:30).

ಯೋಹಾನನು ನಂತರ ಭೂಮ್ಯಾಕಾಶಗಳು ದೇವರ ಸನ್ನಿಧಿಯಿಂದ ಓಡಿಹೋಗುವದನ್ನು ಕಂಡನು. ಬೆಳ್ಳಗಿರುವ ಮಹಾಸಿಂಹಾಸನ ಮತ್ತು ಅದರ ಮೇಲೆ ಕೂತಿದ್ದವನು ಮಾತ್ರವೇ ಇದ್ದರು: ಉಳಿದದ್ದೆಲ್ಲವೂ ಅಳಿದುಹೋಗಿತ್ತು. ನೂತನ ಭೂಮ್ಯಾಕಾಶಗಳು ಉಂಟಾಗಲಿದ್ದವು (ಪ್ರಕ. 21:1). ಆದರೆ ಹೊಸದು ಬರುವದಕ್ಕೆ ಮುಂಚೆ ಹಳೆಯದು ಗತಿಸಿ ಹೋಗಬೇಕಾಗಿತ್ತು (ಯೆಶಾಯ 51:6; ಮತ್ತಾಯ 24:35; 1 ಯೋಹಾನ 2:17).

**12-13** ಬಳಿಕ ಯೋಹಾನನು ಪ್ರತಿಯೊಂದು ತಲೆಮಾರುಗಳಲ್ಲಿ ಸತ್ತವರು ಸಿಂಹಾಸನದ ಮುಂದೆ ನಿಂತಿರುವದನ್ನು ಕಂಡನು. ಸಮುದ್ರದಲ್ಲಿ ಮುಳುಗಿದ್ದವರು ಸಹ ಅಲ್ಲಿದ್ದರು. ಕ್ರಿಸ್ತನಲ್ಲಿ ನಂಬಿಕೆಯಿಡದೇ ಅವರ ಆತ್ಮಗಳು ಪಾತಾಳಕ್ಕೆ ಹೋಗಿದ್ದವರೂ ಅಲ್ಲಿದ್ದರು (ಪ್ರಕ. 1:18 ಮತ್ತು ವ್ಯಾಖ್ಯಾನ ನೋಡಿರಿ). ಮತ್ತು ಕ್ರೈಸ್ತ ಹತಸಾಕ್ಷಿಗಳನ್ನು[47] ಹೊರತು ಪಡಿಸಿ (ವಚನ 4), ಉಳಿದ ವಿಶ್ವಾಸಿಗಳೆಲ್ಲರೂ ಅಲ್ಲಿದ್ದರು. ಆದದರಿಂದ, ಯೋಹಾನನು ನೋಡುತ್ತಿದ್ದದ್ದು "ಎರಡನೆಯ ಪುನರುತ್ಥಾನದ" ದರ್ಶನವಾಗಿದ್ದು ಆದರಲ್ಲಿ ಸತ್ತವರೆಲ್ಲರು– ಅವಿಶ್ವಾಸಿಗಳೂ, ವಿಶ್ವಾಸಿಗಳೂ (ಹತಸಾಕ್ಷಿಗಳನ್ನು ಬಿಟ್ಟು)– ಪಾಲು ಹೊಂದುವರು (ವಚನ 5 ನೋಡಿರಿ). ಎರಡನೆಯ ಪುನರುತ್ಥಾನವು ಜರುಗಿದ ಕೂಡಲೇ ದೇವರ ಕಡೇ ನ್ಯಾಯತೀರ್ಪು ಪ್ರಾರಂಭಗೊಂಡಿತು. ಭೂಲೋಕದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಜೀವಿತದ ದಾಖಲೆಗಳನ್ನು ಹೊಂದಿದ್ದ ಪುಸ್ತಕಗಳು ತೆರೆಯಲ್ಪಟ್ಟವು. ಸತ್ತವರಿಗೆ ಪುಸ್ತಕಗಳಲ್ಲಿ ಬರೆದಿದ್ದ ಅವರ ಕೃತ್ಯಗಳ ಪ್ರಕಾರವಾಗಿ ನ್ಯಾಯತೀರ್ಪಾಯಿತು (ಕೀರ್ತನೆಗಳು 62:12; ಯೆರೆ 17:10; ರೋಮ 2:6; 1 ಪೇತ್ರ 1:17 ನೋಡಿರಿ). ಜೀವಭಾದ್ಯರ ಪುಸ್ತಕ ಎಂಬ ಇನ್ನೊಂದು ಪುಸ್ತಕ ಸಹ ಇರುತ್ತದೆ. ಈ ಪುಸ್ತಕದಲ್ಲಿ ರಕ್ಷಣೆ ಹೊಂದುವವರೆಲ್ಲರ ಹೆಸರುಗಳು ಬರೆಯಲ್ಪಟ್ಟಿದ್ದವು (ದಾನಿಯೇಲ 12:1; ಪ್ರಕ. 3:5; 17:8). ನಿಜವಾದ ವಿಶ್ವಾಸಿಗಳ ಹೆಸರುಗಳೆಲ್ಲವೂ "ದಾಖಲೆ ಪುಸ್ತಕಗಳಲ್ಲಿ" ಬರೆದ ಹಾಗೆಯೇ "ಜೀವಬಾಧ್ಯರ ಪುಸ್ತಕದಲ್ಲಿ" ಬರೆಯಲ್ಪಟ್ಟಿದ್ದವು. ಹೀಗೆ ಜೀವಬಾಧ್ಯರ ಪುಸ್ತಕದಲ್ಲಿನ ಹೆಸರುಗಳು ದಾಖಲೆ ಪುಸ್ತಕಗಳಲ್ಲಿನ ಮಾಹಿತಿಗೆ ಸರಿಯಾಗಿ ಹೋಲುತ್ತಿದ್ದವು. ಪಶ್ಚಾತ್ತಾಪಪಟ್ಟು ಕ್ರಿಸ್ತನಲ್ಲಿ ನಂಬಿಕೆಯಿಡದಿದ್ದವರ ಹೆಸರುಗಳು ಜೀವಭಾದ್ಯರ ಪುಸ್ತಕದಲ್ಲಿ ಬರೆಯಲ್ಪಟ್ಟಿರಲಿಲ್ಲ. ಮನುಷ್ಯರು ತಮ್ಮ ಸತ್ಕ್ರಿಯೆಗಳಿಂದ ರಕ್ಷಿಸಲ್ಪಡುವದಿಲ್ಲ; ಅವರು ನಂಬಿಕೆಯ ಮೂಲಕ ಮಾತ್ರವೇ ರಕ್ಷಿಸಲ್ಪಡುತ್ತಾರೆ. ಆದರೆ ನಿಜವಾದ

ನಂಬಿಕೆಗೆ ಸತ್ಕಾರ್ಯಗಳು ಸಾಕ್ಷಿಯಾಗಿವೆ. ಸತ್ಕಾರ್ಯಗಳನ್ನು ಹೊಂದಿಲ್ಲದವರು ನಿಜವಾದ ನಂಬಿಕೆ ಇಲ್ಲದವರಾಗಿದ್ದಾರೆ. ಹೀಗೆ ಪ್ರತಿಯೊಬ್ಬ ವ್ಯಕ್ತಿಯ ನಿಜವಾದ ನಂಬಿಕೆಯು ಆತನು ಅಥವಾ ಅವಳು ಭೂಮಿಯ ಮೇಲೆ ಮಾಡಿದ ಕೃತ್ಯಗಳಿಂದ– ಪುಸ್ತಕಗಳಲ್ಲಿ ಬರೆದಿದ್ದ ಪ್ರಕಾರ– ನಿರ್ಧರಿಸಲ್ಪಡಬಹುದು (ಎಫೆಸ 2:8 –10; ಯಾಕೋಬ 2:17-20; 24, 26 ಮತ್ತು ವ್ಯಾಖ್ಯಾನ ನೋಡಿರಿ).

**14-15** ನಂತರ ಮೃತ್ಯುವೂ ಪಾತಾಳವೂ ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟವು [48](ಪ್ರಕ. 19:20). ಒಂದು ವಿಧದಲ್ಲಿ ಮೃತ್ಯು ಹಾಗೂ ಪಾತಾಳ ಪಾಲುದಾರರಾಗಿವೆ. ಮರಣವು ಸತ್ತವರನ್ನು ಕಳುಹಿಸುವ ಸ್ಥಳವೇ ಪಾತಾಳ. ಪಾತಾಳವು ಮೃತ್ಯುವಿನ "ಹೊಟ್ಟೆ" ಇದ್ದಂತೆ ಮರಣದಿಂದ ತಿನ್ನಲ್ಪಡುವವರು ಅಲ್ಲಿಗೆ ಬಂದು ಸೇರುತ್ತಾರೆ. ಆದರೆ ಕಡೇ ನ್ಯಾಯ ತೀರ್ಪಿನಲ್ಲಿ ಮೃತ್ಯುವು ಅದರ "ಹೊಟ್ಟೆಯೂ" ನಾಶಮಾಡಲ್ಪಡುವು (ಯೆಶಾಯ 25:8; 1 ಕೊರಿಂದ 15:54-55 ಮತ್ತು ವ್ಯಾಖ್ಯಾನ ನೋಡಿರಿ).

ಆದದರಿಂದ, ಯೋಹಾನನ ದರ್ಶನದಲ್ಲಿ ಮೃತ್ಯುವೂ ಪಾತಾಳವೂ ಈ ಮುಂಚೆ ಸೈತಾನ, ಮೃಗ ಹಾಗೂ ಸುಳ್ಳು ಪ್ರವಾದಿಗಳಂತಯೇ ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟವು (ಪ್ರಕ. 19:20; 20:10). ಅಷ್ಟು ಮಾತ್ರವಲ್ಲ, ಜೀವಬಾಧ್ಯರ ಪುಸ್ತಕದಲ್ಲಿ ಯಾರ ಹೆಸರುಗಳು ಬರೆಯಲ್ಪಟ್ಟಿರಲಿಲ್ಲವೋ ಅವರು ಸಹ ಬೆಂಕಿಯ ಕೆರೆಯಲ್ಲಿ ದೊಬ್ಬಲ್ಪಟ್ಟರು. ಬೆಂಕಿಯ ಕೆರೆಯು ಎರಡನೆಯ ಮರಣ ಎಂದು ಕರೆಯಲ್ಪಟ್ಟಿದೆ; ಅದು ಸದಾಕಾಲಕ್ಕೂ ಇರುವದು.

ಯೋಹಾನನ ದರ್ಶನದಲ್ಲಿದ್ದಂತೆಯೇ ಲೋಕಾಂತ್ಯದಲ್ಲಿ ಸಂಭವಿಸುವದು. ದೇವರ ಕಡೇ ನ್ಯಾಯತೀರ್ಪು ಹೇಗಿರುತ್ತದೆಂಬದರ ಮನ್ನೋಟವನ್ನು ಯೋಹಾನನು ನಮಗೆ ನೀಡುತ್ತಾನೆ. ಕಡೇ ನ್ಯಾಯತೀರ್ಪಿನ ನಂತರ ಮನವಿಗೆ ಅವಕಾಶವೇ ಇರುವದಿಲ್ಲ. ಜೀವಬಾಧ್ಯಾರ ಪುಸ್ತಕದಲ್ಲಿ ಹೆಸರುಗಳಿಲ್ಲದವರಿಗೆ ನಿತ್ಯವಾದ ಶಿಕ್ಷೆಯು ಕೊಡಲ್ಪಡುವದು. ಆದದರಿಂದ, ಒಬ್ಬ ವ್ಯಕ್ತಿಯು ಈ ಜೀವಿತದಲ್ಲಿ ಕೇಳಿಕೊಳ್ಳಬೇಕಾದ ಪ್ರಾಮುಖ್ಯವಾದ ಪ್ರಶ್ನೆಯು ಇದಕ್ಕಿಂತ ಇನ್ನೊಂದಿಲ್ಲಃ ನನ್ನ ಹೆಸರು ಜೀವಬಾಧ್ಯರ ಪುಸ್ತಕದಲ್ಲಿ ಬರೆಯಲ್ಪಟ್ಟಿದೆಯೋ ಅಥವಾ ಇಲ್ಲವೋ?

---

## ಅಧ್ಯಾಯ - 21

### ನೂತನ ಭೂಮ್ಯಾಕಾಶಗಳು (21:1-8)

**1** ದೇವರು ಪ್ರವಾದಿಯಾದ ಯೆಶಾಯನ ಮೂಲಕ ಯೆಹೂದ್ಯರಿಗೆ ತಾನು ಸದಾಕಾಲವೂ ಇರುವ ನೂತನಾಕಾಶಮಂಡಲವನ್ನೂ ನೂತನ ಭೂಮಂಡಲವನ್ನು ಸೃಷ್ಟಿಸುವೆನು ಎಂದು ವಾಗ್ದಾನ ಮಾಡಿದ್ದನು (ಯೆಶಾಯ 65:17; 66:22). ಈಗ ಯೋಹಾನನ ದರ್ಶನದಲ್ಲಿ ಆ ವಾಗ್ದಾವು ನೆರವೇರಿತು. ಪೇತ್ರನು ಈಗಿನ ಆಕಾಶಭೂಮಿಗಳು ಸುಟ್ಟು ಹೋಗುವವು ಎಂದು ಬರೆದನು. ಆದರೆ ಆತನು ನೂತನಾಕಾಶಮಂಡಲವನ್ನು ನೂತನ ಭೂಮಂಡಲವನ್ನೂ ಎದುರು ನೋಡುತ್ತಿದ್ದನು, ಅವುಗಳಲ್ಲಿ ನೀತಿಯು ವಾಸವಾಗಿರುವದು (2 ಪೇತ್ರ 3:12-13) ಪೌಲನು ಬರೆದದ್ದೇನೆಂದರೆಃ ಜಗತ್ತು ಕೂಡ ನಾಶದ ವಶದಿಂದ ಬಿಡುಗಡೆಯಾಗಿ ದೇವರ ಮಕ್ಕಳ ಹಿಮೆಯುಳ್ಳ ವಿಮೋಚನೆಯಲ್ಲಿ ಪಾಲುಹೊಂದುವದು (ರೋಮ 8:20-21). ಈಗ ಯೋಹಾನನ ದರ್ಶನದಲ್ಲಿ ಹಳೆಯ ಸೃಷ್ಟಿಯು ಗತಿಸಿಹೋಗಿತ್ತು (ಪ್ರಕ. 20:11), ಮತ್ತು ಅದರ ಸ್ಥಳದಲ್ಲಿ ಎಂದಿಗೂ ನಾಶವಾಗದ ಅಥವಾ ಗತಿಸಿಹೋಗದ ನೂತನ ಸೃಷ್ಟಿಯು ಉಂಟಾಯಿತು. ಹೊಸ ಸೃಷ್ಟಿಯಲ್ಲಿ ಸಮುದ್ರವೇ ಇಲ್ಲ ಎಂದು ಯೋಹಾನನು ಹೇಳುತ್ತಾನೆ.

**2** ಯೋಹಾನನು ತನ್ನ ದರ್ಶನದಲ್ಲಿ, ನೂತನಾಕಾಶಮಂಡಲವನ್ನೂ ನೂತನ ಭೂಮಂಡಲವನ್ನು ಮಾತ್ರವೇ ಕಾಣಲಿಲ್ಲ, ಆದರೆ ಪರಿಶುದ್ಧ ಪಟ್ಟಣ ಕಂಡನು ಅದು ಹೊಸಯೆರೂಸಲೇಮ (ಗಲಾತ್ಯ 4:26; ಇಬ್ರಿಯ 11:10-16; 13:14; ಪ್ರಕ. 3; 12). ಯೋಹಾನನು ತನ್ನ ದಶನದಲ್ಲಿ ಪರಿಶುದ್ಧ ಪಟ್ಟಣವು ಪರಲೋಕದಿಂದ ಇಳಿದು ಬರುವದನ್ನು ಕಂಡನು. ಆ ಪಟ್ಟಣವು ದೇವರಿಂದ ಸೃಷ್ಟಿಸಲ್ಪಟ್ಟಿತ್ತು, ಹೊರತು ಮನುಷ್ಯನಿಂದಲ್ಲ; ಅದು ಕ್ರಿಸ್ತನ ವಿಶ್ವಾಸಿಗಳಿಗೆಲ್ಲಾ ಉಡುಗೊರೆಯಾಗಿ ಸೃಷ್ಟಿಸಲ್ಪಟ್ಟಿತ್ತು.

ಲೋಕಾಂತ್ಯದಲ್ಲಿ ಯೋಹಾನನ ದರ್ಶನದ ಪರಿಶುದ್ಧ ಪಟ್ಟಣ ನಿಜವಾಗಿಯೂ ದೇವರಿಂದ ಸೃಷ್ಟಿಸಲ್ಪಡುವದು. ಪರಿಶುದ್ಧ ಪಟ್ಟಣವು ನಮ್ಮ ಪರಲೋಕ ನಿವಾಸವನ್ನು ಮಾತ್ರವೇ ಪ್ರತಿನಿಧಿಸುವದಿಲ್ಲ; ಅದು ಕ್ರಿಸ್ತನ ಸಭೆಯನ್ನು ಸಹ ಪ್ರತಿನಿಧಿಸುತ್ತದೆ. ಜೀವಬಾಧ್ಯರ ಪುಸ್ತಕದಲ್ಲಿ ಹೆಸರುಗಳು ಬರೆಯಲ್ಪಟ್ಟಿರುವವರೆಲ್ಲರೂ ಆ ಸಭೆಯಲ್ಲಿ ಇರುವರು (ಇಬ್ರಿಯ 12:22-23). ಆ ಸಭೆಯು ತನ್ನ ಗಂಡನಿಗಾಗಿ ಅಲಂಕೃತಳಾದ ಕ್ರಿಸ್ತನ ಮದಲಗಿತ್ತಿಯು ಸಹ ಆಗಿತ್ತು (2 ಕೊರಿಂಥ 11:2; ಎಫೆಸ 5:25-27; ಪ್ರಕ. 19:6-8 ಮತ್ತು ವ್ಯಾಖ್ಯಾನ ನೋಡಿರಿ). ಕ್ರಿಸ್ತನ ಪರಿಶುದ್ಧ ಮದಲಗಿತ್ತಿಗೂ ಮಹಾಜಾರಸ್ತ್ರೀಗೂ ನಡುವೆ ಎಷ್ಟು ದೊಡ್ಡ ವ್ಯತ್ಯಾಸವಿದೆ (ಪ್ರಕ. 17:1), ಪರಲೋಕದ ಯೆರೂಸಲೇಮಿಗೂ ಲೋಕದ ಬಾಬೆಲಿಗೂ ನಡುವೆ ಎಷ್ಟು ದೊಡ್ಡ ವ್ಯತ್ಯಾಸವಿದೆ (1 ಪ್ರಕ. 15:7).

3 ನಂತರ ಯೋಹಾನನಿಗೆ ಒಂದು ಶಬ್ದವು ಕೇಳಿಸಿತುಃ "ಇಗೋ ದೇವರ ನಿವಾಸವು ಮನುಷ್ಯರಲ್ಲಿ ಅದೆ; ಆತನು ಅವರೊಡನೆ ವಾಸಮಾಡುವವನು. ಅವರು ಆತನಿಗೆ ಪ್ರಜೆಗಳಾಗಿರುವರು". ಆ ಪರಿಶುದ್ಧ ಪಟ್ಟಣವು ವಿಶ್ವಾಸಿಗಳು ವಾಸಿಸುವ ಸ್ಥಳ ಮಾತ್ರವಲ್ಲ; ಅದು ದೇವರಿಗೆ ನಿವಾಸ ಸ್ಥಾನವೂ ಆಗುವದು! ದೇವರು ತಾನೇ ಅಲ್ಲಿ ವಾಸಿಸುವನು, ಮತ್ತು ಆತನು ನಮ್ಮನ್ನು ತನ್ನ ಪ್ರಜೆಗಳಾಗಿಯೂ ಸಭೆಯಾಗಿಯೂ ಮಾಡುವನು (ಯಾಜಕ ಕಾಂಡ 26:11-12; ಯೆಹೆಜ್ಕೇಲ 37:27; 1 ಪೇತ್ರ 2:9 ನೋಡಿರಿ).

4 ಆದರೆ ವಿಶ್ವಾಸಿಗಳು ಪರಿಶುದ್ಧ ಪಟ್ಟಣದಲ್ಲಿ ಸುಮ್ಮನೇ ದೇವರೊಂದಿಗೆ ಇರುವದಿಲ್ಲ; ಅವರು ಅಲ್ಲಿ ಮಹಾ ಸಂತೋಷದಿಂದ ಜೀವಿಸುವರು. ದೇವರು ತಾನೇ ಅವರ ಕಣ್ಣೀರನ್ನೆಲ್ಲಾ ಒರಸಿ ಬಿಡುವನು. ಪರಲೋಕದ ಯೆರೂಸಲೇಮಿನಲ್ಲಿ ದುಃಖವಾಗಲಿ, ಗೋಳಾಟವಾಗಲಿ, ಕಷ್ಟವಾಗಲಿ ಇರುವದಿಲ್ಲ (ಯೆಶಾಯ 25:8; 1 ಕೊರಿಂಥ 15 ;54; ಪ್ರಕ. 20:14). ಮರಣವು ಮೊದಲು ಲೋಕದೊಳಗೆ ಪಾಪದ ಕಾರಣದಿಂದ ಬಂದಿತು (ರೋಮ 5:12). ಆದರೆ ಪರಿಶುದ್ಧ ಪಟ್ಟಣದಲ್ಲಿ ಪಾಪವೇ ಇರುವದಿಲ್ಲ; ಆದದರಿಂದ, ಅಲ್ಲಿ ಮರಣವೂ ಇರುವದಿಲ್ಲ.

5 ನಂತರ ಯೋಹಾನನು ದೇವರ ಮಾತನ್ನು ಕೇಳಿದನುಃ "ಇಗೋ ಎಲ್ಲವನ್ನು ಹೊಸದು ಮಾಡುತ್ತೇನೆ!"– ನೂತನ ಆಕಾಶ ಮಂಡಲ, ನೂತನ ಭೂಮಂಡಲ, ನೂತನ ಜನರು, ನೂತನ ಜನರು ಮಾತ್ರವೇ ನೂತನ ಪಟ್ಟಣದಲ್ಲಿ ಜೀವಿಸಲು ಅರ್ಹರು. ವಿಶ್ವಾಸಿಗಳಾದ ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ಈಗಾಗಲೇ ನೂತನ ಮಾಡಲ್ಪಡಲು ಪ್ರಾರಂಭಿಸಿದ್ದೇವೆ (ಯೋಹಾನ 3:3; 2 ಕೊರಿಂಥ 3:18; 4:16-18; 5:17; ಕೊಲೊಸ್ಸೆ 1:13-14 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಮತ್ತು ನಮ್ಮ ದೇಹಗಳು ಪುನರುತ್ಥಾನಗೊಂಡಾಗ ನಾವು ಸಂಪೂರ್ಣ ನೂತನವಾಗಿರುವೆವು. ಆಗ ನಾವು ಪರಲೋಕದ ಪಟ್ಟಣವನ್ನು ಪ್ರವೇಶಿಸುವದಕ್ಕೆ ಸಿದ್ಧರಾಗುವೆವು.

6 ಆದಿಯೂ ಅಂತವೂ ಪ್ರಾರಂಭವೂ ಸಮಾಪ್ತಿಯೂ ಆಗಿರುವ ದೇವರು (ಪ್ರಕ. 1:8), ನಮಗೆ ಕುಡಿಯುವದಕ್ಕೆ ಜೀವಜಲದ ಬುಗ್ಗೆಯಲ್ಲಿನ ನೀರನ್ನು ಕೊಡುವನು. ಬುಗ್ಗೆಯು ಸ್ವತಃ ಕ್ರಿಸ್ತನೇ (ಕೀರ್ತನೆಗಳು 36:7-9; ಯೋಹಾನ 4:14).

7 ಜಯಹೊಂದುವವನು –ಅಂದರೆ, ಕಡೇವರೆಗೂ ನಂಬಿಗಸ್ಥನಾಗಿರುವವನು– ಇವುಗಳಿಗೆ ಬಾಧ್ಯನಾಗುವನು (ಪ್ರಕ. 2:7, 11, 17, 26; 3:5, 12, 21). ಜಯಹೊಂದುವವರು ದೇವರಿಗೆ ಪುತ್ರರಾಗಿರುವರು ಮತ್ತು ಅವರು ಪುತ್ರರಾದ್ದರಿಂದ ತಮಗೆ ಪರಲೋಕದಲ್ಲಿ ಸಿದ್ಧಮಾಡಲ್ಪಟ್ಟ ಬಾಧ್ಯತೆಯನ್ನು ಹೊಂದುವರು (ರೋಮ 8:16-17; 1 ಪೇತ್ರ 3:4 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

8 ಇಲ್ಲಿ ದೇವರು ಪರಲೋಕದಲ್ಲಿ ಬಾಧ್ಯತೆಯನ್ನು ಪಡೆಯುವದರ ಬಗ್ಗೆ ವಿವರಿಸುತ್ತಾನೆ (1 ಕೊರಿಂಥ 6:9-10; ಗಲಾತ್ಯ 5:19-21 ಮತ್ತು ವ್ಯಾಖ್ಯಾನಗಳನ್ನು ನೋಡಿರಿ). ಹೇಡಿಗಳು ಮೊದಲು ಪ್ರಸ್ತಾಪಿಸಲ್ಪಟ್ಟಿದ್ದಾರೆ. ಸಂಕಟಗಳು ಬಂದಾಗ ಹಿಂಜರಿದು ಬಿದ್ದು ಹೋಗುವವರು ಹೇಡಿಗಳು. ಅವರಿಗೆ ಕ್ರಿಸ್ತನ ಮೇಲಿನ ಪ್ರೀತಿಗಿಂತಲೂ ಮೃಗದ ಮೇಲಿನ ಭಯವು ಹೆಚ್ಚಾಗಿರುತ್ತದೆ (ಮಾರ್ಕ 4:5-6; 16-17 ನೋಡಿರಿ). ಅವರು ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು ಎಂಬದನ್ನು ಮರೆತು ಬಿಟ್ಟಿದ್ದಾರೆ (ಮಾರ್ಕ 8:35)

ನಂಬಿಕೆಯಿಲ್ಲದವರು ಕ್ರೈಸ್ತ್ಯೇತರರು ಮಾತ್ರವಲ್ಲದೆ, ಮೊದಲು ಕ್ರಿಸ್ತನ ಬಳಿಗೆ ಬಂದು ನಂತರ ವಿಮುಖರಾಗಿ ಆತನನ್ನು ತಿರಸ್ಕರಿಸಿದವರು ಸಹ ಆಗಿರುತ್ತಾರೆ. ಅವರು ಈ ವಚನದಲ್ಲಿ ಪ್ರಸ್ತಾಪಿಸಲಾಗಿರುವ ಇತರ ಪಾಪಿಗಳೊಂದಿಗೆ ಎರಡನೆಯ ಮರಣದ ಬೆಂಕಿಯ ಕೆರೆಗೆ ದೊಬ್ಬಲ್ಪಡುವರು (ಪ್ರಕ. 20:14).

## ಪರಲೋಕದ ಯೆರೂಸಲೇಮ್ (21:9-27)

9-14 ತರುವಾಯ ಯೋಹಾನನ ದರ್ಶನದಲ್ಲಿ, ಒಬ್ಬ ದೇವದೂತನು ಅವನಿಗೆ ಪರಿಶುದ್ಧ ಪಟ್ಟಣವಾದ ಪರಲೋಕದ ಯೆರುಸಲೇಮನ್ನು ತೋರಿಸಿದನು. ಮುಂದಿರುವಂಥದ್ದು ಆ ಪಟ್ಟಣದ ಚಿತ್ರಣವಾಗಿದೆ.

ಪಟ್ಟಣಕ್ಕೆ ಹನ್ನೆರಡು ಹೆಬ್ಬಾಗಿಲುಗಳಿದ್ದವು (ವಚನ 12), ಅವುಗಳ ಮೇಲೆ ಇಸ್ರಾಯೇಲಿನ ಹನ್ನೆರಡು ಕುಲಗಳ ಹೆಸರುಗಳು ಬರೆಯಲ್ಪಟ್ಟಿದ್ದವು (ಯೆಹೆಜ್ಕೇಲ 48:30-35; ಪ್ರಕಟಣೆ 7:4-8). ದೇವರು ಪುರಾತನ ಇಸ್ರಾಯೇಲ ಜನಾಂಗದ ಪಿತೃವೂ ಆಗಿರುವ ಅಬ್ರಹಾಮನಿಗೆ ವಾಗ್ದಾನವನ್ನು ನೀಡಿದ್ದನು. ಈಗ ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ ನಾವು ಸಹ ಈ ವಾಗ್ದಾನಗಳನ್ನೇ ಹೊಂದಿದ್ದೇವೆ. ಆದದರಿಂದ, ಅನ್ಯಜನರಾದ (ಯೆಹೂದ್ಯೇತರಾದ), ನಮಗೆ ಇಸ್ರಾಯೇಲಿನ ಹನ್ನೆರಡು ಕುಲಗಳು ಪರಲೋಕದೊಳಗೆ ಪ್ರವೇಶಿಸುವ ಬಾಗಿಲುಗಳಾಗಿದ್ದಾರೆ (ಗಲಾತ್ಯ 3:7-9; 14, 29 ಮತ್ತು ವ್ಯಾಖ್ಯಾನ ನೋಡಿರಿ). ನಂಬಿಕೆಯ ಮೂಲಕ ಈಗ ನಾವು ಪರಲೋಕ ಪಟ್ಟಣದ ಪ್ರಜೆಗಳಾಗಿ ಮಾಡಲ್ಪಟ್ಟಿದ್ದೇವೆ, ಅಂದರೆ, ನಾವು ನೂತನ ಇಸ್ರಾಯೇಲ್ ಆಗಿದ್ದೇವೆ.

ಯೋಹಾನನ ದರ್ಶನದಲ್ಲಿನ ಪಟ್ಟಣವು ಹನ್ನೆರಡು ಅಸ್ತಿವಾರಗಳನ್ನು ಸಹ ಹೊಂದಿತ್ತು (ವಚನ 14). ಅವುಗಳ ಮೇಲೆ ಕ್ರಿಸ್ತನ ಹನ್ನೆರಡು ಮಂದಿ ಅಪೊಸ್ತಲರ ಹೆಸರು ಬರೆಯಲ್ಪಟ್ಟಿದ್ದವು. ಪೌಲನು ಅನ್ಯಜನರಾದ ಎಫೆಸದವರಿಗೆ ಬರೆದದ್ದೇನೆಂದರೆಃ ಹೀಗಿರಲಾಗಿ, ನೀವು .. ದೇವಜನರೊಂದಿಗೆ (ಯೆಹೂದ್ಯರು) ಒಂದೇ ಸಂಸ್ಥಾನದವರೂ ದೇವರ ಮನೆಯವರೂ ಆಗಿದ್ದೀರಿ; ಆ ಮನೆಯು ಅಪೊಸ್ತಲರೂ ಪ್ರವಾದಿಗಳೂ ಎಂಬ ಅಸ್ತಿವಾರ ಮೇಲೆ ಕಟ್ಟಲ್ಪಟ್ಟಿದೆ (ಎಫೆಸ 2:19-20).

**15-21** ಯೋಹಾನನು ಇಲ್ಲಿ ತನ್ನ ದರ್ಶನದ ಪಟ್ಟಣದ ಬಗ್ಗೆ ಮತ್ತಷ್ಟು ವಿವರಿಸುತ್ತಾನೆ. ಅದರ ಉದ್ದವು 12 000 ಸ್ತಾದ್ಯಗಳಷ್ಟು (ಮೈಲುಗಳು) ಆಗಿತ್ತು, ಮತ್ತು ಅದರ ಅಗಲವೂ ಎತ್ತರವೂ ಸಮವಾಗಿದ್ದವು (ವಚನ 16). ಅಲ್ಲಿ ಎಲ್ಲಾ ವಿಶ್ವಾಸಿಗಳಿಗೂ ಸಾಕಾಗುವಷ್ಟು ಕೊನೆಗಳಿರುವವು ! (ಯೋಹಾನ 14:2). ಹೀಗೆ ಪಟ್ಟಣವು ಪ್ರತಿಯೊಂದು ಕೋನದಲ್ಲಿ 1400 ಮೈಲುಗಳಿಷ್ಟಿದ್ದು ಪರಿಪೂರ್ಣ ಆಕಾರದಲ್ಲಿತ್ತು. ಅದರ ಶೈಲಿಯು ಯೆರೂಸಲೇಮಿನಲ್ಲಿದ್ದ ಯೆಹೂದ್ಯರ ಹಳೆ ದೇವಾಲಯದ ಒಳ ಸಾನಿಧ್ಯದಂತೆಯೇ ಇತ್ತು (1 ಅರಸುಗಳು 6:20).

ಮನುಷ್ಯನ ಅಳತೆಯ ಪ್ರಕಾರ ಪಟ್ಟಣವು ನೂರನಾಲ್ವತ್ತು ನಾಲ್ಕು ಮೊಳವಾಗಿತ್ತು (ವಚನ 17). ಅದು 1400ಮೈಲು ಎತ್ತರದ ಪಟ್ಟಣಕ್ಕೆ ಚಿಕ್ಕ ಗೋಡೆಯಾಗಿದೆ!.[49]

ಈ ಪಟ್ಟಣ ಕುರಿತ ಯೋಹಾನನ ವಿವರಣೆಯನ್ನು ನಾವು ಅಭ್ಯಾಸಿಸಿದಂತೆ ಯೋಹಾನನು ಮಾನವ ಅನುಭವ ಅಥವಾ ಗ್ರಹಿಕೆಯನ್ನು ಮೀರುವಂತಹ ಒಂದು ಸಂಗತಿಯನ್ನು ಬಣ್ಣಿಸಲು ಪ್ರಯತ್ನಿಸುತ್ತಿದ್ದಾನೆಂಬದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಪಟ್ಟಣವು ಶುದ್ಧಗಾಜಿನಂತಿರುವ ಸೋಸಿದ ಭಂಗಾರದಿಂದ ಮಾಡಲ್ಪಟ್ಟಿತ್ತು (ವಚನ 18). ಅದರ ಹನ್ನೆರಡು ಹೆಬ್ಬಾಗಿಲುಗಳಲ್ಲಿ ಪ್ರತಿಯೊಂದು ಒಂದೊಂದು ಮುತ್ತಿನಿಂದ ಮಾಡಲ್ಪಟ್ಟಿತ್ತು (ವಚನ 21). ನಮ್ಮ ನಿತ್ಯನಿವಾಸವು ಅಂಥ ಆಶ್ಚರ್ಯಕರವಾದ ಪಟ್ಟಣ!

**22** ಯೋಹಾನನು ಪಟ್ಟಣದಲ್ಲಿ ದೇವಾಲಯವನ್ನು ಕಾಣಲಿಲ್ಲ, ಯಾಕೆಂದರೆ ಸರ್ವ ಶಕ್ತನಾದ ದೇವರಾಗಿರುವ ಕರ್ತನೂ ಯಜ್ಞದ ಕುರಿಯಾದಾತನೂ ಅದರ ದೇವಾಲಯವಾಗಿದ್ದಾರೆ. ದೇವರು ಇರುವಲ್ಲಿ ನಮ್ಮ ದೇವಾಲಯವಿರುವದು. ದೇವರು ಯಾವದೇ ಕೈಯಿಂದ ಕಟ್ಟಿದ ದೇವಾಲಯದಲ್ಲಿ ವಾಸಿಸುವದಿಲ್ಲ (ಅ.ಕೃತ್ಯ 7:48-49; 17:24). ಹೇಗಿದ್ದರೂ, ಇನ್ನೊಂದು ಅರ್ಥದಲ್ಲಿ ವಿಶ್ವಾಸಿಗಳಾದ ನಾವು ದೇವರ "ಆಲಯ" ಆಗಿದ್ದೇವೆ ಯಾಕೆಂದರೆ, ನಾವು ದೇವರ ಪವಿತ್ರಾತ್ಮನಿಗೆ ವಾಸಸ್ಥಾನವಾಗಿದ್ದೇವೆ (2 ಕೊರಿಂಥ 6:16; ಎಫೆಸ 2:21-22 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**23-27** ಪಟ್ಟಣವು ದೇವರಿಂದಲೂ ಕ್ರಿಸ್ತನಿಂದಲೂ ಬಂದ ಬೆಳಕಿನಿಂದ ತುಂಬಿತ್ತು (ಯೆಶಾಯ 60:19). ಪಟ್ಟಣದಲ್ಲಿ ರಾತ್ರಿಯಿರಲಿಲ್ಲವಾದ ಕಾರಣ ಪಟ್ಟಣದ ಬಾಗಿಲುಗಳನ್ನು ಮುಚ್ಚುವ ಅವಶ್ಯಕತೆಯೇ ಇರಲಿಲ್ಲ (ಯೇಶಾಯ 60:11). ಅದರ ಬೆಳಕಿನಿಂದ ಸರ್ವ ಜನಾಂಗದವರು ಸಂಚಾರಮಾಡುವರು (ವಚನ 24). ಯೋಹಾನನು ಯೇಸುವನ್ನು ಎಲ್ಲಾ ಮನುಷ್ಯರಿಗೂ ಬೆಳಕನ್ನು ನೀಡುವ ನಿಜವಾದ ಬೆಳಕು ಎಂದು ಕರೆದನು (ಯೋಹಾನ 1: 9). ಯೇಸು ತಾನೇ ಹೇಳಿದ್ದೇನೆಂದರೆಃ "ನಾನೇ ಲೋಕಕ್ಕೆ ಬೆಳಕು; ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು" (ಯೋಹಾನ 8:12).

ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆಃ 24 ಮತ್ತು ೨೬ನೇ ವಚನದಲ್ಲಿ ಪ್ರಸ್ತಾಪಿಸಲಾದ ಈ ಜನಾಂಗದವರು ಹಾಗೂ ಭೂರಾಜರು ಯಾರು? (ಮತ್ತು ಪ್ರಕ. 22:15ರಲ್ಲಿ ಪ್ರಸ್ತಾಪಿಸಲಾದ ನಾಯಿಗಳು ಯಾರು?) ಈ ಜನಾಂಗದವರೂ ಭೂರಾಜರೂ ಪಟ್ಟಣದ ಹೊರಗೆ ಏಕೆ ಇದ್ದಾರೆ? ಅವರು ವಿಶ್ವಾಸಿಗಳಾಗಿದ್ದರೆ ಏಕೆ ಅವರು ಒಳಗಿಲ್ಲ? ಅವರು ಅವಿಶ್ವಾಸಿಗಳಾಗಿದ್ದರೆ ಏಕೆ ಬೆಂಕಿಯ ಕೆರೆಯಲ್ಲಿ ದೊಬ್ಬಲ್ಪಟ್ಟಿಲ್ಲ? (ಪ್ರಕ. 20:15). ಬೈಬಲ್ ಪಂಡಿತರು ಈ ಪ್ರಶ್ನೆಗಳಿಗೆ ವಿವಿಧ ಉತ್ತರಗಳನ್ನು ನೀಡುತ್ತಾರೆ, ಆದರೆ ಇಲ್ಲಿ ಯೋಹಾನನ ಅರ್ಥವೇನೆಂಬದು ಯಾರಿಗೂ ಖಚಿತವಾಗಿರುವದಿಲ್ಲ. ಹೇಗಿದ್ದರೂ, ಒಂದು ಸಂಗತಿ ಖಚಿತವಾದದ್ದುಃ ದೇವರ ಪರಿಶುದ್ಧಪಟ್ಟಣದಲ್ಲಿ ಹೊಲೆಯಾದದ್ದೊಂದು ಸೇರುವದಿಲ್ಲ (ವಚನ 27). ಕ್ರಿಸ್ತನ ರಕ್ತದಲ್ಲಿ ತಮ್ಮ ನಿಲುವಂಗಿಗಳನ್ನು ತೊಳೆದುಕೊಂಡವರು (ಪ್ರಕ. 7:14). ಮತ್ತು ಯಜ್ಞದ ಕುರಿಯಾದಾತನ (ಕ್ರಿಸ್ತನ) ಜೀವಬಾಧ್ಯರ ಪು ಸ್ತಕದಲ್ಲಿ ಯಾರ್ಯಾರ ಹೆಸರುಗಳು ಬರೆದವೆಯೋ ಅವರು ಮಾತ್ರ ಪ್ರವೇಶಿಸಬಲ್ಲರು.

---

## ಅಧ್ಯಾಯ - 22

### ಜೀವಜಲದ ನದಿ (22:1-6)

**1** ತರುವಾಯ ಯೋಹಾನನಿಗೆ ಜೀವಜಲದ ನದಿಯನ್ನು ತೋರಿಸಲಾಯಿತು, ಅದು ದೇವರ ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನದಿಂದ ಹೊರಟು ಹರಿಯುತ್ತಿತ್ತು. ಪ್ರಕ 7:15 ಮತ್ತು 12:5ರಲ್ಲಿ ಪ್ರಸ್ತಾಪಿಸಲಾದ ಸಿಂಹಾಸನವು ದೇವರ ಸಿಂಹಾಸನ, ಆದರೆ ಇಲ್ಲಿ ಮತ್ತು ಈ ೩ನೇ ವಚನದಲ್ಲಿರುವ ಸಂಹಾಸನ ಕುರಿಯಾದಾತನಾದ ಕ್ರಿಸ್ತನಿಗೆ ಸೇರಿದ್ದು. ಕ್ರಿಸ್ತನು ದೇವರ ಸಿಂಹಾಸನದಲ್ಲಿ ಕೂತುಕೊಳ್ಳಲು ಸಂಪೂರ್ಣ ಯೋಗ್ಯನು. ಯೇಸು ಹೇಳಿದ್ದೇನೆಂದರೆಃ "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರ ನನಗೆ ಕೊಡಲ್ಪಟ್ಟಿದೆ" (ಮತ್ತಾಯ 28:18). ವಾಸ್ತವದಲ್ಲಿ, ದೇವರೂ ಕ್ರಿಸ್ತನೂ ಒಂದಾಗಿದ್ದಾರೆ (ಯೋಹಾನ 10:30).

ಜೀವದ ನದಿಯು ಜೀವಜಲದ ಬುಗ್ಗೆಯಿಂದ ಹರಿಯುತ್ತಿತ್ತು ಅದು ಕ್ರಿಸ್ತನೇ. ಏದೇನ್ ತೋಟದಲ್ಲಿ ಸಹ ಒಂದು ನದಿಯಿತ್ತು (ಆದಿಕಾಂಡ 2:10),.ಕೆಲವೊಂದು ವಿಧಗಳಲ್ಲಿ ಮೂಲ ಏದೇನ್ ತೋಟ ಹಾಗೂ ಪರಲೋಕದ ಪಟ್ಟಣ ಒಂದಕ್ಕೊಂದು ಹೋಲುತ್ತಿದ್ದವು . ಪ್ರಾರಂಭದಲ್ಲಿ ಏದೇನ್ ತೋಟದೊಳಗೆ ಯಾವ ಪಾಪವಾಗಲಿ ದುಃಖವಾಗಲಿ ಮತ್ತು

ಮರಣವಾಗಲಿ ಇರಲಿಲ್ಲ. ದೇವರು ತಾನೇ ತೋಟದಲ್ಲಿ ಸಂಚರಿಸುತ್ತಿದ್ದನು (ಆದಿಕಾಂಡ 3:8). . ಆದರೆ ನಂತರ ಆ ಪ್ರಥಮ ಮಾನವರಾದ ಆದಾಮ ಹವ್ವಳರು ದೇವರ ವಿರುದ್ಧ ಪಾಪಮಾಡಿದರು. ಮತ್ತು ಅನಂತರ ದೇವರು ಅವರನ್ನು ತೋಟದಿಂದ ಹೊರ ಹಾಕಿದನು (ಆದಿಕಾಂಡ 3:23-24).

2 ಪರಲೋಕದ ಪಟ್ಟಣದಲ್ಲಿ ಜೀವನದಿಯ ಜೊತೆಗೆ ಒಂದು ಜೀವವೃಕ್ಷವು ಇತ್ತು. ಏದೇನ್ ತೋಟದಲ್ಲಿ ಸಹ ಒಂದು ಜೀವವೃಕ್ಷವಿತ್ತು ಅದರ ಫಲಗಳನ್ನು ತಿಂದವರಿಗೆ ಅವು ನಿತ್ಯಜೀವವನ್ನು ಕೊಡುತ್ತಿದ್ದವು (ಆದಿಕಾಂಡ 2:9, 3:22). ದೇವರ ಪರಲೋಕದ ಪಟ್ಟಣದಲ್ಲಿರುವ ಜೀವವೃಕ್ಷವು ಸಮೃದ್ಧಿ ಹಾಗೂ ಆರೋಗ್ಯದ ಸಂಕೇತವಾಗಿತ್ತು. ಪಟ್ಟಣದಲ್ಲಿ ಇದ್ದವರೆಲ್ಲರೂ ವೃಕ್ಷದಿಂದ ಆತ್ಮೀಕ ಆಹಾರವನ್ನು ಪಡೆಯುತ್ತಿದ್ದರು, ಮತ್ತು ಅದನ್ನು ತಿಂದ ಮೇಲೆ ಅವರು ಆತ್ಮೀಕವಾಗಿ ಗುಣವಾದರು.

3-4 ಇನ್ನು ಶಾಪಗ್ರಸ್ತವಾದದ್ದು ಒಂದೂ ಇರುವದಿಲ್ಲ. ಆದಾಮ ಹವ್ವಳರ ಪಾಪದ ಕಾರಣದಿಂದ ದೇವರು ಮನುಷ್ಯರಿಗೂ ಭೂಮಿಗೂ ಶಾಪನೀಡಿದನು (ಆದಿಕಾಂಡ 3:14-19). ಆದರೆ ಪರಲೋಕದಲ್ಲಿ ಯಾವ ಪಾಪವಿಲ್ಲ ಆದದರಿಂದ ಅಲ್ಲಿ ಶಾಪವೂ ಇರುವದಿಲ್ಲ.

ಪರಲೋಕದ ಪಟ್ಟಣದಲ್ಲಿ ದೇವರ ದಾಸರು ಆತನ ಮುಖದರ್ಶನ ಮಾಡುವರು (ವಚನ 4). ಹಳೆ ಒಡಂಬಡಿಕೆಯಲ್ಲಿ ದೇವರ ಅತಿ ಶ್ರೇಷ್ಠ ದಾಸನಾದ ಮೋಶೆಗೆ ದೇವರ ಮುಖ ನೋಡುವಂತೆ ಅನುಮತಿಸಲ್ಪಡಲೇ ಇಲ್ಲ (ವಿಮೋಚನ ಕಾಂಡ 33:18-23). ಯೇಸು ನಿರ್ಮಲ ಹೃದಯದವರು ಮಾತ್ರವೇ ದೇವರನ್ನು ನೋಡಲು ಶಕ್ತರಾಗುವರೆಂದು ಹೇಳಿದನು (ಮತ್ತಾಯ 5:8). ಆದರೆ ಕುರಿಯಾದಾತನ ರಕ್ತದಿಂದ ನಿರ್ಮಲ ಮಾಡಲ್ಪಟ್ಟಿರುವ ನಾವು ದೇವರ ಮುಖವನ್ನು ನೋಡುವೆವು. ಮತ್ತು ನಾವು ಆತನ ಹಾಗಿರುವೆವು, ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು (1 ಯೋಹಾನ 3:2). ಈ ಪರಲೋಕದ ಎಲ್ಲಾ ಆಶೀರ್ವಾದಗಳಲ್ಲಿಯೂ ಅತಿ ಶ್ರೇಷ್ಠ ಆಶಿರ್ವಾದವು ದೇವರಮುಖವನ್ನು ನೋಡುವದು ಹಾಗೂ ಆತನ ಜೊತೆ ಸದಾಕಾಲವೂ ಇರುವದು ಆಗಿದೆ.

ಅವರ ಹಣೆಗಳಲ್ಲಿ ದೇವರ ಹೆಸರು ಬರೆಯಲ್ಪಡುವದು (ಪ್ರಕ. 3:12; 7:3). ನಮ್ಮ ಹಣೆಯ ಮೇಲಿರುವ ಆತನ ಹೆಸರು ನಮ್ಮನ್ನು ಆತನು ತನ್ನ ಸ್ವಂತ ಜನರನ್ನಾಗಿ ಮಾಡಿದ್ದಾನೆ. ಹಾಗೂ ತನ್ನ ಗುಣಧರ್ಮಗಳನ್ನೂ ಸ್ವಭಾವವನ್ನೂ ನಮಗೆ ಕೊಟ್ಟಿದ್ದಾನೆ ಎಂಬುದಕ್ಕೆ ಸಂಕೇತವಾಗಿರುವದು.

5 ಪ್ರಕ. 2:26; 3:21; 21:23 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

6 ಇಲ್ಲಿ ಯೋಹಾನನು ತಾನು ಪ್ರಕಟಣೆ ಪುಸ್ತಕದಲ್ಲಿ ಬರೆದದ್ದೆಲ್ಲವೂ ನಂಬ ತಕ್ಕವುಗಳೂ ಸತ್ಯವಾದವುಗಳೂ ಎಂದು ನಿಶ್ಚಯ ಪಡಿಸುತ್ತಾನೆ. ಈ ಪ್ರಕಟಣೆಯು ದೇವರಿಂದ ಬಂದದ್ದು ಮತ್ತು ಈ ಸಂಗತಿಗಳನ್ನು ಯೋಹಾನನಿಗೆ ಪ್ರಕಟಿಸಲು ದೇವರು ತನ್ನ ದೇವದೂತನನ್ನು ಕಳುಹಿಸಿದನು. ಆತನು ಪ್ರವಾದಿಗಳ ಆತ್ಮಗಳನ್ನು ಪ್ರೇರೇಪಿಸುವ ದೇವರು. ದೇವರು ತನ್ನ ಪವಿತ್ರಾತ್ಮನ ಮೂಲಕ ದೇವರ ನಿಜವಾದ ಪ್ರವಾದಿಗಳ ಆತ್ಮಗಳನ್ನೆಲ್ಲಾ ಪ್ರೇರೇಪಿಸಿ ನಡಿಸಿದ್ದಾನೆ. ಪ್ರವಾದಿಗಳು ಪವಿತ್ರಾತ್ಮನ ಪ್ರೇರಣೆಯಿಂದ ಮಾಡಿರುವಂತೆಯೇ (2 ಪೇತ್ರ 1:21), ಯೋಹಾನನು ಅದೇ ಪವಿತ್ರಾತ್ಮನ ಪ್ರೇರಣೆಯಿಂದಲೇ ಈ ಸಂಗತಿಗಳನ್ನೆಲ್ಲಾ ಬರೆದಿದ್ದಾನೆ. ಬೇಗನೆ ಸಂಭವಿಸಬೇಕಾಗಿರುವ ಸಂಗತಿಗಳಿಗಾಗಿ ನಮ್ಮನ್ನು ಸಿದ್ಧಮಾಡುವದಕ್ಕೆ ಆತನು ಈ ಪ್ರಕಟಣೆಯನ್ನು ಬರೆದಿದ್ದಾನೆ (1 ಕೊರಿಂಥ 7:29-31). ಪೌಲನು ಬರೆದಿದ್ದೇನೆಂದರೆಃ "ನಾವು ಕ್ರಿಸ್ತನನ್ನು ಮೊದಲು ನಂಬಿದ ಕಾಲದಲ್ಲಿ ಇದ್ದುದಕ್ಕಿಂತ ಈಗ ನಮ್ಮ ರಕ್ಷಣೆಯು (ವಿಮೋಚನೆಯು) ಹತ್ತಿರವಾಯಿತು. ಇರುಳು ಬಹಳ ಮಟ್ಟಿಗೆ ಕಳೆಯಿತು; ಹಗಲು ಸಮೀಪವಾಯಿತು (ರೋಮ 13:11-12). ಉದಯ ಸೂಚಕರವಾದ ಪ್ರಕಾಶವುಳ್ಳ ನಕ್ಷತ್ರವು ಬೇಗನೇ ಹೊಸದಿನದಲ್ಲಿ ಉದಯಿಸುವನು (ವಚನ 16).

## ಯೇಸು ಬರುತ್ತಾನೆ (22:7-21)

7 ಯೇಸು ಹೇಳುವದನೇಂದರೆಃ "ಇಗೋ ನಾನು ಬೇಗನೆ ಬರುತ್ತೇನೆ" (ಮತ್ತಾಯ 24:42-44; ಮಾರ್ಕ 13:32-37 ನೋಡಿರಿ). "ಈ ಪ್ರವಾಧನೆಯ ಮಾತುಗಳನ್ನು ಕೈಕೊಂಡು ನಡೆಯುವವನು ಧನ್ಯನು", ಅಂದರೆ, ಕಡೇವರೆಗೂ ನಂಬಿಕೆಯಲ್ಲಿ ದೃಢವಾಗಿ ನಿಂತು ಮೃಗದ ಗುರುತನ್ನು ಹಾಕಿಸಿಕೊಳ್ಳದವನು ಧನ್ಯನು.

8-9 ಪ್ರಕ. 19:10 ಮತ್ತು ವ್ಯಾಖ್ಯಾನ ನೋಡಿರಿ.

10 ಪ್ರವಾದಿಯಾದ ದಾನಿಯೇಲನಿಗೆ ತಾನು ಬರೆದ ಪ್ರವಾದನಾ ಪುಸ್ತಕಕ್ಕೆ ಮುದ್ರೆ ಹಾಕಬೇಕೆಂದು ಹೇಳಲಾಗಿತ್ತು ಯಾಕೆಂದರೆ ಆತನ ಪ್ರವಾಧನೆಯು ನೆರವೇರುವದಕ್ಕೆ ಸಿದ್ಧವಾಗಿರಲಿಲ್ಲ (ದಾನಿಯೇಲ 8:26; 12:4). ಆದರೆ ಯೋಹಾನನಿಗೆ ಈ ಪ್ರಕಟಣೆ ಪುಸ್ತಕಕ್ಕೆ ಮುದ್ರೆ ಹಾಕಬಾರದೆಂದು ಹೇಳಲಾಯಿತು. ಯಾಕೆಂದರೆ ಅದರಲ್ಲಿ ಬರೆದಿರುವ ಸಂಗತಿಗಳು ಬೇಗನೆ ನೆರವೇರಲಿದ್ದವು.

11 ಯೋಹಾನನು ಇಲ್ಲಿ ಲೋಕಾಂತ್ಯದ ವೇಳೆ ಕಡೇ ಸಂಕಟಗಳು ಬರುವಾಗ ಕೆಟ್ಟದ್ದನ್ನು ಮಾಡುವವರು; ಇನ್ನೂ ಕೆಟ್ಟದ್ದನ್ನೂ ಮಾಡುವರು ಅವರು ಪಶ್ಚಾತಾಪ ಪಡುವದಿಲ್ಲ ಎಂದು ಹೇಳುತ್ತಾನೆ. ಆ ಸಮಯದಲ್ಲಿ ಅವರ ಹೃದಯಗಳು

ಮತ್ತಷ್ಟು ಕಠಿಣವಾಗವವು ಲೋಕಾಂತ್ಯದಲ್ಲಿನ ಅಂತಿಮ ಸಂಕಟಗಳು ಅವರ ದುಷ್ಟತನವನ್ನು ಬೈಬಲಿಗೆ ತರುವವು . ಆದರೆ ಕ್ರಿಸ್ತನಲ್ಲೀ ನಂಬಿಕೆಯಿಟ್ಟವನು ನೀತಿಯನ್ನು ನಡಿಸುತ್ತಾ ಪವಿತ್ರಮಾಡಿಕೊಳ್ಳುವದನ್ನು ಮುಂದುವರೆಸಲಿ (ದಾನಿಯೇಲ 12:10).

**12** ಯೆರೆ 17:10; ರೋಮ 2:6; ಪ್ರಕ. 20:12 ಮತ್ತು ವ್ಯಾಖ್ಯಾನಗಳನ್ನು ನೋಡಿರಿ.

**13** ಯೋಹಾನನು ಇಲ್ಲಿ ಪ್ರಕ. 1:8-7 ಮತ್ತು 2:8ರಲ್ಲಿ ಬರೆದದ್ದನ್ನು ಪುನರಾವರ್ತಿಸುತ್ತಾನೆ. ಪ್ರಕಟಣೆ 1:8 ಮತ್ತು 21:6ರಲ್ಲಿ ದೇವರು ಅಲ್ಫಾ ಮತ್ತು ಓಮೇಗಾ (ಮೊದಲನೆಯವನೂ ಕಡೆಯವನೂ) ಎಂದು ಕರೆಯಲ್ಪಟ್ಟಿದ್ದಾನೆ. ಇಲ್ಲಿ ಯೇಸು ತನ್ನನ್ನು ಅದೇ ಹೆಸರಿನಿಂದ ಕರೆದುಕೊಳ್ಳುತ್ತಾನೆ.

**14** ತಮ್ಮ ನಿಲುವಂಗಿಗಳನ್ನು ತೊಳಕೊಂಡವರು ಕ್ರಿಸ್ತನ ರಕ್ತದ ಮೂಲಕ ಪಾಪದಿಂದ ತೊಳೆಯಲ್ಪಟ್ಟವರಾಗಿದ್ದಾರೆ. ಅವರು ಮಾತ್ರವೇ ಪರಲೋಕದ ಪಟ್ಟಣವನ್ನು ಪ್ರವೇಶಿಸಲು ಅನುಮತಿಸಲ್ಪವುವರು (ಪ್ರಕ. 7:14; 21:27).

**15** ಪ್ರಕ. 21:8; 24:26 ಮತ್ತು ವ್ಯಾಖ್ಯಾನ ನೋಡಿರಿ.

**16** ಇಲ್ಲಿ ಯೇಸು ತನ್ನನ್ನು ದಾವೀದನ ಬುಡದಿಂದ ಹುಟ್ಟಿದ ಚಿಗುರೂ ಅವನ ಸಂತತಿಯೂ ಎಂದು ಹೇಳಿಕೊಳ್ಳುತ್ತಾನೆ (ಪ್ರಕ. 5:5 ಮತ್ತು ವ್ಯಾಖ್ಯಾನ ನೋಡಿರಿ). ನಂತರ ಆತನು ತನ್ನನ್ನು ಉದಯಸೂಚಕವಾದ ಪ್ರಕಾಶವುಳ್ಳ ನಕ್ಷತ್ರ ಎಂದು ಕರೆದುಕೊಳ್ಳುತ್ತಾನೆ. ಈ ಉದಯ ನಕ್ಷತ್ರವು ಸಂಕಟದ ದೀರ್ಘ ರಾತ್ರಿಯ ನಂತರದ ನೂತನ ದಿನದ ಉದಯಕ್ಕೆ ಸಂಕೇತವಾಗಿದೆ– ಯೇಸು ಕ್ರಿಸ್ತನ ರಾಜ್ಯದ ಹೊಸ ದಿನಕ್ಕೆ ಸಂಕೇತವಾಗಿದೆ (ರೋಮ 13:12; ಪ್ರಕ. 2:28; 22:5 ಮತ್ತು ವ್ಯಾಖ್ಯಾನಗಳನ್ನು ನೋಡಿರಿ).

**17** ಆತ್ಮನೂ (ಪವಿತ್ರಾತ್ಮ) ಮದಲಗಿತ್ತಿಯೂ (ಸಭೆ) ಎಲ್ಲಾ ಮನುಷ್ಯರಿಗೆ "ಬಾ" ಅನ್ನುತ್ತಾರೆ. ಬಾಯಾರಿದವನು ಬರಲಿ (ಯೆಶಾಯ 55:1; ಯೋಹಾನ 7:37-38; ಪ್ರಕ. 21:6 ನೋಡಿರಿ).

**18-19** ಇಲ್ಲಿ ಯೇಸು ಈ ಪ್ರಕಟಣೆ ಪುಸ್ತಕದ ಪ್ರವಾದನಾ ವಾಕ್ಯಗಳನ್ನು ಕೇಳುವ ಪ್ರತಿಯೊಬ್ಬನಿಗೂ ಒಂದು ಎಚ್ಚರಿಕೆಯನ್ನು ನೀಡುತ್ತಾನೆಃ ಯಾವನೂ ಯಾವದೇ ವಿಧದಲ್ಲಿ ಈ ಪ್ರವಾದನಾ ವಾಕ್ಯಗಳಿಗೂ ಹೆಚ್ಚು ಮಾತು ಸೇರಿಸಬಾರದು ಅಥವಾ ತೆಗೆದುಹಾಕಬಾರದು. ಯಾವನಾದರೂ ಹಾಗೆ ಮಾಡಿದರೆ ಆತನ ಶಿಕ್ಷೆಯು ಕಠಿಣವಾಗಿರುವದು. ಅವನು ಪರಲೋಕದ ಪಟ್ಟಣದಲ್ಲಿನ ತನ್ನ ಸ್ಥಾನವನ್ನೂ ಕಳೆದುಕೊಳ್ಳಬಹುದು (ಧರ್ಮೋಪದೇಶ ಕಾಂಡ 4:2; ಗಲಾತ್ಯ 1:6-9 ನೋಡಿರಿ).

**20-21** ಯೋಹಾನನು ಇಲ್ಲಿ ಈ ಸಂಗತಿಗಳ ವಿಷಯದಲ್ಲಿ ಸಾಕ್ಷಿ ಹೇಳುವವನ, ಅಂದರೆ, ಯೇಸುವಿನ ಮಾತುಗಳನ್ನು ಪುನರುಚ್ಚರಿಸುತ್ತಾನೆಃ "ನಿಜವಾಗಿ ಬೇಗ ಬರುತ್ತೇನೆ".

ಕರ್ತನಾದ ಯೇಸುವೇ ಬಾ. ನಾವು ನಿನಗಾಗಿ ಕಾಯುತ್ತಿದ್ದೇವೆ. ಮನುಷ್ಯರು ಕಷ್ಟ ಪ್ರಯಾಸ ಪಡುತ್ತಾರೆ. ಅವರು ಪಟ್ಟಣಗಳನ್ನು ರಾಜ್ಯಗಳನ್ನೂ ಕಟ್ಟುತ್ತಾರೆ. ಆದರೆ ಅವರು ಮಾಡುವದೆಲ್ಲಾ ವ್ಯರ್ಥವಾದದ್ದು. ಮನುಷ್ಯರು ತಮ್ಮ ಸಾಮರ್ಥ್ಯದಿಂದ ಉತ್ತಮ ಪ್ರಪಂಚವನ್ನು ಕಟ್ಟಲಾರರು. ನಾವು ಮತ್ತೆ ಮತ್ತೆ ಅದರಲ್ಲಿ ವಿಫಲರಾಗಿದ್ದೇವೆ. ನಾವು ಒಂದೇ ನಿರೀಕ್ಷೆ ಹೊಂದಿದ್ದೇವೆ ಅದು ನಿನ್ನ ತಿರಿಗಿ ಬರೋಣದಲ್ಲಿಯೇ.

**ಕರ್ತನಾದ ಯೇಸುವೇ ಬಾ ಆಮೆನ್.**

---

## ಟಿಪ್ಪಣಿ

[1] "ಕಡೇ ದಿವಸಗಳು" ಎಂಬುದಕ್ಕೆ ಎರಡು ಅರ್ಥಗಳಿರಬಲ್ಲವು . ಇದು ಲೋಕಾಂತ್ಯದಲ್ಲಿ ಕ್ರಿಸ್ತನು ತಿರಿಗಿ ಬರುವದಕ್ಕೆ ಸ್ವಲ್ಪ ಮುಂಚಿನ ಸಮಯವನ್ನು ಸೂಚಿಸಬಹುದು. ಅಥವಾ ಅದು ಕ್ರಿಸ್ತನ ಮೊದಲನೆಯ ಬರೋಣ ಹಾಗೂ ಎರಡನೆಯ ಬರೋಣಗಳ ನಡುವಿನ ಸಂಪೂರ್ಣ ಕಾಲವನ್ನು ಸೂಚಿಸಬಹುದು. ಯೋಹಾನನ ಪ್ರಕಟಣೆಯ ಈ ಎರಡೂ ಅರ್ಥಗಳಿಗನುಸಾರವಾಗಿ ವ್ಯಾಖ್ಯಾನಿಸಲ್ಪಡಬಹುದು.

[2] ಪತ್ಮೋಸ್ ಇಂದಿನ ಟರ್ಕಿಯ ದಕ್ಷಿಣಕ್ಕಿರುವ ಮೆಡಿಟರಿನಿಯನ್ ಸಮುದ್ರದಲ್ಲಿದ್ದ ನಾಲ್ಕು ಮೈಲುಗಳಷ್ಟಿದ್ದ ಚಿಕ್ಕ ದ್ವೀಪವಾಗಿತ್ತು. ರೋಮಾಯ ಸಾಮ್ರಾಜ್ಯದ ವೇಳೆ ರೋಮಾಯರು ಅಪರಾಧಿಗಳನ್ನೂ ಇತರ ಸೆರೆಯಾಳುಗಳನು ಪತ್ಮೋಸಕ್ಕೆ ಕಳುಹಿಸುತ್ತಿದ್ದರು. ದ್ವೀಪವು ಒಂದು ಸೆರೆಮನೆಯಂತಾಗಿರುತ್ತಿತ್ತು ಅಲ್ಲಿಂದ ಯಾರೂ ತಪ್ಪಿಸಿಕೊಳ್ಳಲಾಗದು.

[3] ಯೋಹಾನನು ಈ ಪ್ರಕಟಣೆ ಪುಸ್ತಕವನ್ನು ಬರೆದ ವೇಳೆಯಲ್ಲಿ ಕ್ರೈಸ್ತರು ಸಬ್ಬತ್ತನ್ನು ಶನಿವಾರದ ಬದಲಿಗೆ (ಯೆಹೂದ್ಯ ಪದ್ಧತಿ) ಭಾನುವಾರದಂದು ಆಚರಿಸಲಾರಂಭಿಸಿದ್ದರು. ಅವರು ಈ ದಿನವನ್ನು ಕರ್ತನ ದಿನ ಎಂದು ಕರೆದರು ಯಾಕೆಂದರೆ ಯೇಸು ಭಾನುವಾರದಂದು ಸತ್ತವರೊಳಗಿಂದ ಎದ್ದು ಬಂದನು.

[4] ಪಾತಾಳವು ಸತ್ತ ಮನುಷ್ಯರ ಆತ್ಮಗಳು ಕ್ರಿಸ್ತನ ಅಂತಿಮ ನ್ಯಾಯತೀರ್ಪಿಗಾಗಿ ಕಾದುಕೊಳ್ಳುವ ಸ್ಥಳವಾಗಿದೆ (ದೇಹಗಳಿಲ್ಲದ ಆತ್ಮಗಳಿರುವ ಸ್ಥಳ).

[5] ಎಫೆಸವು ಅಸ್ಯಸೀಮೆಯಲ್ಲಿ ಅತಿಪ್ರಾಮುಖ್ಯವಾದ ಪಟ್ಟಣವಾಗಿತ್ತು (ಎಫೆಸ ಪರಿಚಯ ನೋಡಿರಿ). ಎಫೆಸದಲ್ಲಿ ವಾಸಿಸಿದ್ದ ಪ್ರಥಮ ಕ್ರೈಸ್ತರು ಅಕ್ವಿಲ ಮತ್ತು ಪ್ರಿಸ್ಕಳು (ಅ.ಕೃತ್ಯ 18:18-20 ). ಅದರ ನಂತರ ಪೌಲನು ತಾನೇ ಎಫೆಸದಲ್ಲಿ ಎರಡು ವರ್ಷಗಳವರೆಗೆ ಜೀವಿಸಿ ಅಲ್ಲಿ ಸಭೆಯನ್ನು ಸ್ಥಾಪಿಸಿದನು (ಅ.ಕೃತ್ಯ 19:1-10).

6 ಪಶ್ಚಾತಾಪವು ಕ್ರಿಸ್ತನ ಮೇಲಿನ ನಮ್ಮ ಪ್ರೀತಿಯನ್ನು ತಿರಿಗಿ ಪಡಕೊಳ್ಳಲು ಮೊದಲ ಹೆಜ್ಜೆಯಾಗಿದೆ. ಹೆಚ್ಚಿನ ಚರ್ಚೆಗಾಗಿ ಪದಪಟ್ಟಿಃ ಪಶ್ಚಾತಾಪ ಸಾಮಾನ್ಯ ಲೇಖನಃ ಉಜ್ಜೀವನ ನೋಡಿರಿ.

7 ಈ ವಚನದಲ್ಲಿ, ಪರದೈಸವು ಪರಲೋಕಕ್ಕೆ, ಪರಲೋಕದ ಯೆರೂಸಲೇಮಿಗಿರುವ ಒಂದು ಹೆಸರಾಗಿದೆ (2 ಕೊರಿಂಥ 12:4 ಮತ್ತು ವ್ಯಾಖ್ಯಾನ ನೋಡಿರಿ).

8 ಗ್ರೀಕ್ ಭಾಷೆಯಲ್ಲಿ ಸೈತಾನ ಎಂಬ ಹೆಸರಿಗೆ "ದೂಷಣೆಗಾರ" ಎಂದು ಅರ್ಥ.

9 ಲೋಕಾಂತ್ಯದಲ್ಲಿನ ಹಿಂಸೆಯನ್ನು ಆ ಕಾಲದಲ್ಲಿ ಜೀವಂತವಾಗಿರುವವರು ಮಾತ್ರವೇ ಅನುಭವಿಸುವರು.

10 ಈ ವಚನದಲ್ಲಿ ಪ್ರಸ್ತಾಪಿಸಲಾದ, ಮನ್ನಾ ಪುರಾತನ ಯೆಹೂದ್ಯರಿಗೆ ಅರಣ್ಯದಲ್ಲಿರುವಾಗ ದೇವರು ಪರಲೋಕದಿಂದ ಕಳುಹಿಸಿದ ಒಂದು ವಿಧವಾದ ರೊಟ್ಟಿಯನ್ನು ಸೂಚಿಸುತ್ತದೆ (ವಿಮೋಚನ ಕಾಂಡ 16:4, 31– 35).

11 ಕೆಲವು ಬೈಬಲ್ ಪಂಡಿತರು ಯೆಜೆಬೇಲ ಎಂಬ ಹೆಸರು ನಿರ್ದಿಷ್ಟವಾದ ವ್ಯಕ್ತಿಯನ್ನು ಸೂಚಿಸುವದಿಲ್ಲ, ಆದರೆ ಬದಲಾಗಿ, ಅದು ಕೆಟ್ಟತನ ಸಂಕೇತವಾಗಿ ಅರ್ಥಮಾಡಿಕೊಳ್ಳಲ್ಪಡತಕ್ಕದ್ದು ಎಂದು ನಂಬುತ್ತಾರೆ (1 ಅರಸುಗಳು 16:31; 21:25; 2 ಅರಸುಗಳು 9:22).

12 ಈ ವಚನವು ಕ್ರೈಸ್ತರ ಆತ್ಮಗಳು ಮಾತ್ರವಲ್ಲದೆ ಅವರ ದೇಹಗಳು ಸಹ ಈ ಸಂಕಟಗಳಿಂದ ಕಾಪಾಡಲ್ಪಡುವವೆಂದು ಬೋಧಿಸುತ್ತದೆ ಎಂಬದಾಗಿ ಅನೇಕ ಬೈಬಲ್ ಪಂಡಿತರು ನಂಬುತ್ತಾರೆ. ಆದರೆ ಇತರ ವಚನಗಳು ಆ ಸಮಯದಲ್ಲಿ ಅನೇಕ ಕ್ರೈಸ್ತರು ಹತಸಾಕ್ಷಿಗಳಾಗುವರು ಎಂಬದಾಗಿ ಬೋಧಿಸುವಂತೆ ತೋರುತ್ತದೆ (ಪ್ರಕ 6:9-11; 7:9-14; 13:15 ನೋಡಿರಿ). ಒಂದು ಸಂಗತಿ ಖಚಿತವಾದದ್ದುಃ ನಮ್ಮ ನಿತ್ಯ ಆತ್ಮಗಳು ಸಂರಕ್ಷಿಸಲ್ಪಡುವವು ; ದೇವರ ದಂಡನೆಯು ವಿಶ್ವಾಸಿಗಳ ಮೇಲೆ ಬರುವದಿಲ್ಲ.

13 ಹೊಸ ಒಡಂಬಡಿಕೆಯ ಕಾಲದಲ್ಲಿ ಪುಸ್ತಕಗಳು ಸುರುಳಿಗಳ ರೂಪದಲ್ಲಿ ಮಾಡಲ್ಪಡುತ್ತಿದ್ದವು .

14 ಭೂಮಿಯ ಕೆಳಗೆ ಎಂಬದು ಪಾತಾಳವನ್ನು ಸೂಚಿಸುತ್ತದೆ, ಅಲ್ಲಿ ಸತ್ತ ಮನುಷ್ಯರ ಆತ್ಮಗಳು ಹಾಗೂ ಬಿದ್ದ ದೇವದೂತರ ಕಡೇ ನ್ಯಾಯ ತೀರ್ಪಿಗಾಗಿ ಕಾದುಕೊಳ್ಳುತ್ತಾರೆ (ಫಿಲಿಪ್ಪಿ 2:10; ಯೂದನು 6; ಪ್ರಕ. 1:18; 5:13).

15 ಇಷಯನು ದಾವೀದನ ತಂದೆ.

16 ಸ್ತುತಿ ಎಂಬ ಪದಕ್ಕೆ ಬದಲಾಗಿ ಬೈಬಲಿನ ಕೆಲವು ಭಾಷಾಂತರಗಳು "ಆಶೀರ್ವಾದ" ಎಂದು ಹೇಳುತ್ತವೆ.

17 ಒಂದು ಸೇರು ಗೋಧಿಯು ಒಬ್ಬ ಮನುಷ್ಯನಿಗೆ ಒಂದು ದಿನದ ಆಹಾರಕ್ಕೆ ಸಾಕಾಗುತ್ತಿತ್ತು ಆದರೆ ಅದು ಆತನ ಕುಟುಂಬಕ್ಕೂ ಆಹಾರವಾಗಲು ಸಾಕಾಗುತ್ತಿರಲಿಲ್ಲ. ಜವೆ ಗೋಧಿಯು ಕಡಿಮೆ ಬೆಲೆಯದ್ದಾಗಿತ್ತು; ಒಂದು ದಿನಕ್ಕೆ ಮೂರು ಸೇರುಗಳಷ್ಟು ಜವೆಗೋಧಿಯು ಕುಟುಂಬವೊಂದಕ್ಕೆ ಸಾಕಾಗುತ್ತಿತ್ತು.

18 ಹಳೆ ಒಡಂಬಡಿಕೆಯ ಪ್ರವಾದಿಯಾದ ಜೆಕರ್ಯನು ಸಹ ಅದೇ ರೀತಿಯ ದರ್ಶನವನ್ನು ಕಂಡನು, ಆದರಲ್ಲಿ ಕೆಂಪು , ಕಪ್ಪು, ಬಿಳಿ ಹಾಗೂ ಬೂದಿ ಬಣ್ಣದ ಕುದುರೆಗಳು ನಾಲ್ಕು ರಥಗಳನ್ನು ಎಳೆಯುತ್ತಿದ್ದವು (ಜೆಕರ್ಯ 6:1-6).

19 ಗೋಣಿತಟ್ಟು ಕಪ್ಪು ಆಡುಗಳ ಕೂದಲಿನಿಂದ ಮಾಡಲ್ಪಡುತ್ತಿತ್ತು; ಅದು ಗೋಳಾಡುವ ಸಮಯದಲ್ಲಿ ಧರಿಸಿಕೊಳ್ಳಲ್ಪಡುತ್ತಿತ್ತು.

20 "ಏಳು" ಸಂಖ್ಯೆಯು ಅದೇ ವಿಶೇಷ ಅರ್ಥವನ್ನು ಹೊಂದಿದೆ (ಪ್ರಕ. 5:6 ನೋಡಿರಿ).

21 "ಬಿಳೀ" ಬಣ್ಣವು ಪವಿತ್ರತೆ ಹಾಗೂ ನೀತಿಯ ಸಂಕೇತವಾಗಿದೆ (ಪ್ರಕ. 3:4 ನೋಡಿರಿ).

22 ಪರಲೋಕದಲ್ಲಿ ಕತ್ತಲೆಯೇ ಇಲ್ಲ (ಪ್ರಕ. 22:5).

23 ಸಾಧಾರಣ ಮಿಡತೆಗಳು ಸುಮಾರು ಐದು ತಿಂಗಳು ಕಾಲ ಮಾತ್ರವೇ ಜೀವಿಸುತ್ತವೆ.

24 ಯೂಫ್ರೇಟಿಸ್ ನದಿಯು ಆಧುನಿಕ ಇರಾಕ್ ರಾಷ್ಟ್ರದ ಮೂಲಕ ಹರಿಯುತ್ತದೆ, ಮತ್ತು ಅದು 1600 ಮೈಲು ಉದ್ದವಿದೆ. ಹೊಸ ಒಡಂಬಡಿಕೆಯ ಕಾಲದಲ್ಲಿ, ರೋಮಾಯ ಸಾಮ್ರಾಜ್ಯದ ಪೂರ್ವಾತ್ಯ ಗಡಿರೇಖೆಯಂತಿತ್ತು. ಅಲ್ಲದೆ ಅದು ಅಬ್ರಹಾಮನ ಸಂತತಿಗೆ ದೇವರು ಕೊಡುತ್ತೇನೆಂದು ವಾಗ್ದಾನ ಮಾಡಿದ ದೇಶಕ್ಕೆ ಪೂರ್ವದ ಮೇರೆ ಆಗಿತ್ತು (ಆದಿಕಾಂಡ 15:18).

25 ವಿಗ್ರಹವನ್ನು ಆರಾಧಿಸುವದು ದೆವ್ವವೊಂದನ್ನು ಆರಾಧಿಸುವದಕ್ಕೆ ಸಮವಾಗಿತ್ತು. ಒಬ್ಬನು ವಿಗ್ರ ಹವನ್ನು ಪೂಜಿಸುವಾಗ ವಾಸ್ತವದಲ್ಲಿ ಆತನು ವಿಗ್ರಹದೊಂದಿಗೆ ಸಂಬಂಧ ಹೊಂದಿರುವ ದೆವ್ವವನ್ನು ಅಥವಾ ದೆವ್ವಗಳನ್ನು ಆರಾಧಿಸುವವನಾಗಿದ್ದಾನೆ (ಧರ್ಮೋಪದೇಶಕಾಂಡ 32:17; 1 ಕೊರಿಂಥ 10:14-19-20 ನೋಡಿರಿ).

26 ಎಲೀಯನು ಮೂರುವರೆ ವರ್ಷಗಳವರೆಗೆ (42 ತಿಂಗಳು) "ಆಕಾಶವನ್ನು ಮುಚ್ಚಿದನು" ಮತ್ತು ಆ ಕಾಲದಲ್ಲಿ ಮಳೆಯೇ ಆಗಲಿಲ್ಲ (ಲೂಕ 4:25; ಯಾಕೋಬ 5:17).

27 ಗ್ರೀಕ್ ಭಾಷೆಯಲ್ಲಿ, ಕೆಡುಕನು (ಸೈತಾನ) ಎಂದರೆ "ದೂರುಗಾರ" ಅಥವಾ "ದೂಷಣೆಗಾರ" ಎಂದು ಅರ್ಥ.

28 ಇಲ್ಲಿ ಒಂದು ಕಾಲ ಅಂದರೆ ಒಂದು ವರ್ಷ ಎರಡು ಕಾಲ ಅಂದರೆ, ಎರಡು ವರ್ಷಗಳು ಮತ್ತು ಅರ್ಧಕಾಲ ಅಂದರೆ ಅರ್ಧವರ್ಷ. ಇವು ಒಟ್ಟಾಗಿ ಮೂರುವರೆ ವರ್ಷಗಳಾಗುತ್ತವೆ; ಅದು 42 ತಿಂಗಳು ಅಥವಾ 1260 ದಿವಸಗಳಿಗೆ ಸಮವಾಗುತ್ತದೆ.

29 ಯೋಹಾನನ ಕಾಲದಲ್ಲಿ ರೋಮಾಯ ಚಕ್ರವರ್ತಿಗಳು ತಮಗೆ ದೇವರುಗಳ ಹೆಸರುಗಳನ್ನು ಕೊಡುತ್ತಿದ್ದರು, ವಾಸ್ತವದಲ್ಲಿ ಅವರು ತಮ್ಮನ್ನು ದೇವರುಗಳೆಂದು ಪರಿಗಣಿಸಿಕೊಂಡಿದ್ದರು. ತನ್ನನ್ನು ದೇವರೆಂದು ಕರೆದುಕೊಳ್ಳುವದು ಏಕೈಕ ಸತ್ಯದೇವರ ದೂಷಣೆ ಮಾಡಿದಂತೆ.

30 ಗಾಯಗೊಂಡು ಗುಣವಾದ ತಲೆಯ ಕುರಿತು ಪ್ರಸ್ತಾಪಿಸುವಾಗ ಯೋಹಾನನು ಯಾವದನ್ನು ಸೂಚಿಸುತ್ತಿದ್ದಾನೆಂಬದು ತಿಳಿದುಬಂದಿಲ್ಲ.

31 ರೋಮಯ ಸಾಮ್ರಾಜ್ಯದ ಕಾಲದಲ್ಲಿ ಜನರು ವಿವಿಧ ಚಕ್ರವರ್ತಿಗಳ ಅನೇಕ ವಿಗ್ರಹಗಳನ್ನು ಮಾಡಿದರು.

32 ಪುರಾತನ ಗ್ರೀಕ್ ಮತ್ತು ಇಬ್ರಿಯ ಭಾಷೆಗಳಲ್ಲಿ ಅಂಕೆಗಳಿಗೆ ಸಂಕೇತಗಳು (ಚಿಹ್ನೆಗಳು) ಇರಲಿಲ್ಲ. ಬದಲಾಗಿ ಬಳಕೆಯಲ್ಲಿದ್ದ ಅಕ್ಷರ ಮಾಲೆಗಳನ್ನು ಸಂಖ್ಯೆ ನೀಡುವದಕ್ಕೆ ಉಪಯೋಗಿಸಲಾಗುತ್ತಿತ್ತು. ಹೀಗೆ ಪ್ರತಿಯೊಬ್ಬ ವ್ಯಕ್ತಿಯ ಹೆಸರೂ ಅದರ ಶಬ್ದಗಳಿಂದಾದ "ಸಂಖ್ಯೆಯನ್ನು" ಹೊಂದಿತ್ತು.

33 ಇಲ್ಲಿ ಪ್ರಕ. 7:3-4ರಲ್ಲಿ 1,44,000 ಸಂಖ್ಯೆಯ ಪರಿಪೂರ್ಣತೆಯನ್ನು ಸೂಚಿಸುತ್ತದೆ. ಅದು ಅವಶ್ಯಕವಾಗಿ ಸರಿಯಾದ 144000ಸಂಖ್ಯೆಯನ್ನು ಸೂಚಿಸುವದಿಲ್ಲ.

34 ಬಹುಪಾಲು ಬೈಬಲ್ ಪಂಡಿತರು ಪ್ರಕ 7ನೇ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿರುವ 144000 ಜನರು ಲೋಕಾಂತ್ಯದಲ್ಲಿ ಜೀವಂತವಾಗಿರುವಂಥ ಕೊನೆಯ ತಲೆಮಾರಿನ ಕ್ರೈಸ್ತರನ್ನು ಮಾತ್ರವೇ ಪ್ರತಿನಿಧಿಸುತ್ತದೆಂದು ನಂಬುತ್ತಾರೆ (ಪ್ರಕ. 7:2-4 ಮತ್ತು ವ್ಯಾಖ್ಯಾನ ನೋಡಿರಿ). ಹೇಗಿದ್ದರೂ, ಇತರ ಬೈಬಲ್ ಪಂಡಿತರು ಬೇರೆ ಅಭಿಪ್ರಾಯವೊಂದನ್ನು ಹೊಂದಿದ್ದಾರೆಃ ಈ 144000 ಜನರ ಎರಡು ಗುಂಪು ಗಳು ಒಂದೇ ಆಗಿವೆ; ಅಂದರೆ, ಆ ಎರಡು ಗುಂಪು ಗಳು ಎಲ್ಲಾ ತಲೆ ಮಾರುಗಳ ಕ್ರೈಸ್ತರನ್ನು ಪ್ರತಿನಿಧಿಸುತ್ತವೆ ಎಂದು ಹೇಳುತ್ತಾರೆ.

35 ಈ ವಚನದಲ್ಲಿ ಪ್ರಥಮ ಫಲಗಳು ಅಂದರೆ ಯಜ್ಞಗಳು, ಇತರ ವಚನಗಳಲ್ಲಿ "ಪ್ರಥಮ ಫಲಗಳ" ಅರ್ಥವು ಬೇರೆಯಾಗಿರುತ್ತದೆ (ರೋಮ 8:23; ಯಾಕೋಬ 1:18 ನೋಡಿರಿ).

36 ಬೈಬಲ್ ಕಾಲದಲ್ಲಿ ಜನರು ದ್ರಾಕ್ಷಾರಸವನ್ನು ಮಾಡುವದಕ್ಕೆ ದ್ರಾಕ್ಷಿಗಳನ್ನು ಬೃಹತ್ ತೊಟ್ಟಿಗಳಲ್ಲಿ ಹಾಕಿ ತಮ್ಮ ಕಾಲುಗಳಿಂದ ತುಳಿಯುತ್ತಿದ್ದರು. ನಂತರ ದ್ರಾಕ್ಷಾರಸವು ಚಿಕ್ಕ ರಂಧ್ರದಲ್ಲಿ ಹಾಯ್ದು ದೊಡ್ಡ ಪಾತ್ರೆಯೊಂದರಲ್ಲಿ ಶೇಖರಣೆಯಾಗುತ್ತಿತು.

37 ಒಬ್ಬನು ಈ ಕಡೆಯ ಏಳು ಉಪದ್ರವಗಳನ್ನು ಏಳನೆಯ ತುತೂರಿಯಿದ ಪ್ರಕಟಿಸಲ್ಪಟ್ಟಒಂದೇ ಮಹಾ ಉಪದ್ರವದಂತೆ – ಏಳನೆಯ ಉಪದ್ರವದಂತೆ– ಪರಿಗಣಿಸಬಹುದು.

38 ಈ ಸುಳ್ಳು ಪ್ರವಾದಿಯು ಪ್ರಕ. 13:11-17ರಲ್ಲಿ ಪ್ರಸ್ತಾಪಿಸಲ್ಪಟ್ಟ ಎರಡನೆಯ ಮೃಗವೂ ಒಂದೇ ಆಗಿವೆ.

39 ರೋಮನಗರವು ಏಳು ಪರ್ವತಗಳ ಮೇಲೆ ಕಟ್ಟಲ್ಪಟ್ಟಿತ್ತು. ಆಧುನಿಕ ರೋಮವು ಆ ಏಳು ಪರ್ವತಗಳ ಮೇಲಿತ್ತು.

40 ಈ 7-11 ವಚನಗಳನ್ನು ವ್ಯಾಖ್ಯಾನಿಸುವದು ಬಹಳ ಕಷ್ಟಕರ. ಬೈಬಲ್ ಪಂಡಿತರು ಅವರ ತಾತ್ಪರ್ಯಗಳ ಬಗ್ಗೆ ವಿವಿಧ ಅಭಿಪ್ರಾಯಗಳನ್ನು ಹೊಂದಿರುತ್ತಾರೆ.

41 ಕೆಲವು ಕ್ರೈಸ್ತರು ಲೋಕಾಂತ್ಯದಲ್ಲಿ ಒಂದೇ ಮಹಾ ಹಾಗೂ ದುಷ್ಟ ಸಾಮ್ರಾಜ್ಯವು ಎದ್ದೇಳುವದು, ಅದು ರೋಮಾಯ ಸಾಮ್ರಾಜ್ಯದಂತಿರುವದು ಎಂದು ನಂಬುತ್ತಾರೆ. ಇದು ಸಾಧ್ಯ, ಆದರೆ ಇದನ್ನು ಯಾರು ಖಚಿತವಾಗಿ ತಿಳಿಯಲಾರರು. ಹೇಗಿದ್ದರೂ, ನಾವು ಒಂದು ಸಂಗತಿಯನ್ನು ತಿಳಿಯಬಲ್ಲೆವು, ಆ ಸಮಯದಲ್ಲಿ ಯಾವ ಸಾಮ್ರಾಜ್ಯ ಅಥವಾ ಸಾಮ್ರಾಜ್ಯಗಳು ಅಸ್ತಿತ್ವದಲ್ಲಿದ್ದರೂ ಸರಿಯೇ, ಅವೆಲ್ಲವೂ –ಪು ರಾತನ ರೋಮಿನಂತೆಯೇ– ಬಿದ್ದು ಹೋಗುವವು.

42 ಸುಖ ಭೋಗಕ್ಕಾಗಿ ಹಾತೊರೆಯುವಂಥದಕ್ಕೆ ಒಂದು ಉದಾಹರಣೆಯೆಂದರೆ, ರೋಮಾಯ ಚಕ್ರವರ್ತಿಗಳು ಒಮ್ಮೆ ಒಂದೇ ಔತಣಕ್ಕಾಗಿ 4,00000 ರೂಪಾಯಿ ಮೌಲ್ಯದ ಗುಲಾಬಿ ಹೂವು ಗಳನ್ನು ಐಗುಪ್ತ್ಯದಿಂದ ತರಿಸಿದ್ದರು. ಇನ್ನೊಬ್ಬ ಚಕ್ರವರ್ತಿಯು ತನ್ನ ಕುಟುಂಬಕ್ಕೆ ಒಂದು ವರ್ಷದ ಆಹಾರಕ್ಕಾಗಿ 80 ಕೋಟಿಯನ್ನು ಖರ್ಚುಮಾಡಿದನು.

43 ಯೋಹಾನನ ಕಾಲದಲ್ಲಿ, ಗುಲಾಮ ವ್ಯಾಪಾರವು ಬಹಳ ವ್ಯಾಪಕವಾಗಿತ್ತು. ರೋಮಾಯ ಸಾಮ್ರಾಜ್ಯದಲ್ಲಿ ಸುಮಾರು 60 ಮಿಲಿಯನ್ ಗುಲಾಮರಿದ್ದರೆಂದು ಅಂದಾಜಿಸಲಾಗಿದೆ.

44 ಇಲ್ಲಿ ನಾವು ಸಭೆಯ ನಾಯಕರು ರಾಜಕೀಯ ನಾಯಕರೊಂದಿಗೆ ಬಹಳ ಆಪ್ತವಾಗಿ ಸಹವಾಸವಿಟ್ಟುಕೊಳ್ಳುವಾಗ ಏನು ಸಂಭವಿಸುವದೆಂಬದನ್ನು ನೋಡುತ್ತೇವೆ. ಒಪ್ಪಂದ ಮಾಡಿಕೊಳ್ಳುವ ಸಭೆಯು ಸರ್ಕಾರದ ಗುಲಾಮವಾಗುತ್ತದೆ.

45 ಕೆಲವು ಬೈಬಲ್ ಪಂಡಿತರು ೪ನೇ ವಚನವನ್ನು ವ್ಯತ್ಯಾಸವಾಗಿ ವ್ಯಾಖ್ಯಾನಿಸುತ್ತಾರೆ. ಸಾವಿರ ವರ್ಷದ ವೇಳೆ ಕ್ರಿಸ್ತನೊಂದಿಗೆ ಆಳುವವರು ಹತಸಾಕ್ಷಿಗಳು ಮಾತ್ರವೇ ಅಲ್ಲ. ಮೃಗವನ್ನು ಆರಾಧಿಸುವ ಅಥವಾ ಗುರುತನ್ನು ಹಾಕಿಸಿಕೊಳ್ಳದ ವಿಶ್ವಾಸಿಗಳೆಲ್ಲರೂ ಸಹ ಆ ಸಮಯದಲ್ಲಿ ಕ್ರಿಸ್ತನೊಂದಿಗೆ ಆಳುವರು ಎಂದು ಅವರು ನಂಬುತ್ತಾರೆ. ಈ ಪಂಡಿತರು ೪ನೇ ವಚನದಲ್ಲಿ ಎರಡು ಗುಂಪು ಗಳು ಪ್ರಸ್ತಾಪಿಸಲ್ಪಟ್ಟಿವೆ ಎಂದು ಹೇಳುತ್ತಾರೆಃ ಮೊದಲನೆಯದಾಗಿ, ಹತಸಾಕ್ಷಿಗಳು ಅಥವಾ ತಲೆ ಹೊಯಿಸಿಕೊಂಡವರು; ಮತ್ತು ಎರಡನೆಯದಾಗಿ, ಕೊಲ್ಲಲ್ಪಡದ ಆದರೆ ನಂಬಿಕೆಯಲ್ಲಿ ದೃಢವಾಗಿ ನಿಂತ ಇತರ ವಿಶ್ವಾಸಿಗಳು. ಬೇರೆ ಮಾತುಗಳಲ್ಲಿ ಹೇಳುವದಾದರೆ ನಿಜವಾದ ಕ್ರೈಸ್ತರೆಲ್ಲರೂ ಸಾವಿರವರ್ಷದ ಆಳಿಕೆಯಲ್ಲಿ ಪಾಲುಗಾರರಾಗುವರೆಂದು ಈ ಪಂಡಿತರು ಹೇಳುತ್ತಾರೆ (ಪ್ರಕ. 2:26-27; 5:9-10 ನೋಡಿರಿ).

ಆದರೆ ಪ್ರಕ. 13:15ರ ಪ್ರಕಾರವಾಗಿ ಮೃಗವನ್ನು ಆರಾಧಿಸುವ ವಿಶ್ವಾಸಿಗಳೆಲ್ಲರೂ ಕೊಲ್ಲಲ್ಪಡುವರು. ಆದದರಿಂದ ಮೃಗದ ಕಾಲದಲ್ಲಿ ಬದುಕಿರುವ ವಿಶ್ವಾಸಿಗಳೆಲ್ಲರೂ ಹತಸಾಕ್ಷಿಗಳಾಗುವರು. ಹೀಗೆ, ನಾವು "ವಿಶ್ವಾಸಿಗಳು" ಎಂದರೂ ಸರಿಯೇ ಅಥವಾ "ಹತಸಾಕ್ಷಿಗಳು" ಎಂದರೂ ಸರಿಯೇ, ಈ ಯೋಹಾನನು ಒಂದು ಗುಂಪಿನ ಬಗ್ಗೆ ಮಾತಾಡುತ್ತಿರುವಂತೆ ತೋರುತ್ತದೆಃ ಕೊಲ್ಲಲ್ಪಟ್ಟ ವಿಶ್ವಾಸಿಗಳು– ಅಂದರೆ, ಹತಸಾಕ್ಷಿಗಳು ಹತಸಾಕ್ಷಿಗಳಾದರೋ ಆ ಸಾವಿರ ವರ್ಷದ ಆಳಿಕೆಯು ಮಹಾ ಹಾಗೂ ಆಶೀರ್ವಾದಕರ ಪ್ರತಿಫಲವಾಗಿರುವದು. ಹಾಗಾದರೆ ಮೃಗದ ಬರೋಣಕ್ಕೆ ಮುಂಚೆ ಸ್ವಾಭಾವಿಕಕಾರಣಗಳಿಂದಾಗಿ ಮರಣಿಸಿದ ಇತರ ವಿಶ್ವಾಸಿಗಳೆಲ್ಲರಿಗಾದರೋ ಪು ನರುತ್ಥಾನವು ಸಾವಿರ ವರ್ಷದ ಆಳಿಕೆಯು ಮುಗಿದ ಮೇಲೆ ಸಂಭವಿಸುವದೆಂದು ಖಚಿತವಾಗುತ್ತದೆ.

46 "ಎರಡನೆಯ ಪು ನರುತ್ಥಾನ"ದಲ್ಲಿ (ಸಾಮಾನ್ಯ ಪು ನರುತ್ಥಾನ) ಪಾಲ್ಗೊಳ್ಳುವ ವಿಶ್ವಾಸಿಗಳು ಸಹ ಎರಡನೆಯ ಮರಣದಿಂದ ಮುಟ್ಟಲ್ಪಡುವದಿಲ್ಲ. ಅವಿಶ್ವಾಸಿಗಳಿಗೆ ಮಾತ್ರವೇ ಎರಡನೆಯ ಮರಣದ ಶಿಕ್ಷೆಯಾಗುವದು.

47 ಕ್ರೈಸ್ತ ಹತಸಾಕ್ಷಿಗಳು ಮೊದಲನೆಯ ಪು ನರುತ್ಥಾನದಲ್ಲಿ ಆಗಲೇ ಪು ನರುತ್ಥಾನ ಹೊಂದಿದ್ದರು (ವಚನಗಳು 4-5 ಮತ್ತು ವ್ಯಾಖ್ಯಾನ ನೋಡಿರಿ). ಆದದರಿಂದ, ಅವರ ಕಡೇ ನ್ಯಾಯತೀರ್ಪಿನ ವೇಳೆ ಸತ್ತವರೊಳಗೆ ಇರಲಿಲ್ಲ.

48 ಬೆಂಕಿಯ ಕೆರೆ ಹಾಗೂ ಗಂಧಕದಿಂದ ಉರಿಯುವ ಕೆರೆ ಒಂದೇ ಆಗಿದೆ (ಪ್ರಕ 19:20;20:10).

49 ದಪ್ಪ ಎಂಬ ಪದದ ಅರ್ಥವು "ಎತ್ತರ" ಎಂದು ಸಹ ಭಾಷಾಂತರಿಸಲ್ಪಡಬಲ್ಲದು. ಯೋಹಾನನು ಇಲ್ಲಿ ದಪ್ಪದ ಕುರಿತು ಮಾತಾಡುತ್ತಿದ್ದಾನೋ ಅಥವಾ ಎತ್ತರದ ಕುರಿತು ಮಾತಾಡುತ್ತಿದ್ದಾನೋ ಎಂಬದು ಖಚಿತವಾಗಿರುವದಿಲ್ಲ.

# ವಿಷಯಸೂಚಿಕೆ

**ಪುತ್ರಸ್ವೀಕಾರ:** ಧರ್ಮೋಪದೇಶಕಾಂಡ 8:5; ಹೋಶೆಯ 2:23; ಜ್ಞಾನೋಕ್ತಿಗಳು 3:11-12; 14:26; ಮತ್ತಾಯ 5:9, 16,44-45,48; 6:25-34; 7:7-11; ಲೂಕ 6:35-36; ಯೋಹಾನ 1:12-13; 20:17; ರೋಮಾಯ 4:16-17; 8:14.19,23,29; 9:8,24-26; 2 ಕೊರಿಂಥ 6:17-18; 7:1; ಗಲಾತ್ಯ 3:7,26,29; 4:4-6; ಎಫೇಸದವರು 1:5-6,11; 3:6; 5:1; ಫಿಲಿಪ್ಪಿ 2:15; ಇಬ್ರಿಯ 2:10-13; 12:5-11; 1 ಯೋಹಾನ 3:1-2.

**ವ್ಯಭಿಚಾರ:** ವಿಮೋಚನಕಾಂಡ 20:14; ಜ್ಞಾನೋಕ್ತಿಗಳು 2:16-19; 5:3-4; 6:24-29, 32-33; 7:18-23; 9:16-18; 20:18-20; ಮತ್ತಾಯ 5:28,32; 19:9; ಮಾರ್ಕ 7:21; 10:11-12; ಯೋಹಾನ 8:10-11; ಅಪೊಸ್ತರಲ ಕೃತ್ಯಗಳು 15:20,29; ರೋಮಾಯ 13:13; 1 ಕೊರಿಂಥ 5:9-11; 6:9-10,15-18; 2 ಪೇತ್ರ 2:9-10,14.

**ಬಾಧೆಗಳು:** 2 ಸಮುವೇಲ 7:14; ಯೋಬ 5:17-18; 13:15; 23:10; ಕೀರ್ತನೆಗಳು 6:1-10; 31:1-4, 14-17; 50:15; 6:1:1-2; 85:5-7; 119:71; ಜ್ಞಾನೋಕ್ತಿಗಳು 3:11-12; 24:10; ಪ್ರಲಾಪಗಳು 3:22-23; ಮತ್ತಾಯ 5:4,10-12; 10:29-31; 11:28; 26:39,42,44; ಮಾರ್ಕ 14:36; ಲೂಕ 18:1; ಯೋಹಾನ 14:1,16,18,27; 15:1-2; 16:33; ಅಪೊಸ್ತಲರಕೃತ್ಯಗಳು 4:29; 7:59-60; ರೋಮಾಯ 5:3-5; 8:17-18,28,36-37; 1 ಕೊರಿಂಥ 11:32; 2 ಕೊರಿಂಥ 1:4-7; 4:7-12,16-17; 11:23-30; 12:7-9; ಫಿಲಿಪ್ಪಿ 1:12-14,29; 2:14; ಕೊಲೇಸ್ಸೆ 1:24; 1 ಥೆಸಲೋನಿಕ 3:3-4; 2 ತಿಮೋತಿ 2:3,12; 3:12; ಇಬ್ರಿಯ 4:15-16; 5:8-9; 12:1-11;12:1-11; ಯಾಕೋಬ 1:2-4,12; 4:7; 5:13-16; 1 ಪೇತ್ರ 1:6-7; 2:20-21; 4:1,12-14,19; 5:6-10.

**ಅಭಿಲಾಷೆ (ಗರ್ವನೋಡಿರಿ)**

**ಕೋಪ**

ಕೀರ್ತನೆಗಳು 103:8-9; 106:23; ಜ್ಞಾನೋಕ್ತಿಗಳು 14:17,29; 15:1,18; 19:11; 22:24-25; 25:28; ಯೆರೆಮೀಯಾ 10:10; ರೋಮಾಯ 1:18; ಎಫೇಸದವರು 4:26,31; ಕೊಲೋಸ್ಸೆ 3:8; 1 ತಿಮೋಥೆ 2:8; ಇಬ್ರಿಯ 3:11; 4:3; ಯಾಕೋಬ 1:19-20; ಪ್ರಕಟನೆಗಳು 14:10-11.

**ಪಾಪನಿವಾರಣೆ**

ವಿಮೋಚನಕಾಂಡ 29:36; ಯಾಜಕಕಾಂಡ 1:4; ಕೀರ್ತನೆಗಳು 40:6-8; ಯೇಶಾಯಾ 53:4-12; ಮತ್ತಾಯ 26:28; ಮಾರ್ಕ 10:45; 14:23-24; ಲೂಕ 2:30-31; 22:20; 24:46-47; ಯೋಹಾನ 1:19,36; 11:49-51; ಅಪೊಸ್ತಲಕೃತ್ಯಗಳು 20:28; ರೋಮಾಯ 3:24-26; 4:25; 8:22-23; 1 ಕೊರಿಂಥ 6:20; 2 ಕೊರಿಂಥ 5:18-19; ಗಲಾತ್ಯ 3:13; 4:4-5; ಎಫೇಸ 1:4-12,17-22; 2:4-10; 5:2; ಕೊಲೆಸ್ಸೆ 1:13-14, 19-22; 1 ತಿಮೋಥೆ 2:5-6; ತೀತ 2:14; ಇಬ್ರಿಯ 1:3; 2:9,17;7:27; 9-12-15,22-28; 10:5-10,12,14; 1 ಪೇತ್ರ 1:18-20; 2:24; 3:18; 1 ಯೋಹಾನ 1:7; ಪ್ರಕಟನೆಗಳು 5:9-10.

**ಚಾಡಿಮಾತು (ನಿಂದನೆ ನೋಡಿರಿ)**

**ಹಿಂಜಾರುವಿಕೆ:** ದರ್ಮೋಪದೇಶಕಾಂಡ 4:9; 8:11-14; 1 ಅರಸುಗಳು 8:33-34; 2 ಕೊರಿಂಥ 7:14; 30:9; ಕೀರ್ತನೆಗಳು 44:20-21; 56:13; ಯೆರೇಮಿಯಾ 17:13; ಹೋಶೆಯ 14:4; 6:1; ಮಲಾಕಿ 3:7; ಮತ್ತಾಯ 5:13; 24:12; 26:31; ಮಾರ್ಕ 8:38; 9:50; ಲೂಕ 9:61-62; 17:32; ಯೋಹಾನ 15:6; ಗಲಾತ್ಯ 1:6-7; 4:9-11; 5:7; 1 ತಿಮೊಥೆ 6:10; 2 ತಿಮೊಥೆ 2:12; 4:10; ಇಬ್ರಿಯ 3:12-13; 6:4-6; 10:26-29, 38-39; 12:15; 2 ಪೇತ್ರ 2:20-21; 2 ಯೋಹಾನ 9; ಪ್ರಕಟನೆ 2:4-5.

**ದೀಕ್ಷಾಸ್ನಾನ:** ಮತ್ತಾಯ 3:11; 28:19; ಮಾರ್ಕ 1:4-5; ಲೂಕ 7:29-30; ಪ್ರಕಟನೆ 1:5; 2:4, 38,41; 8:36-38; 10:46-48; 11:16; 16:33; 18:25; 19:3-5; ರೋಮಾ 6:3-4; 1 ಕೊರಿಂಥ 1:13-17; 12:13; ಎಪೇಸ 4:5; ಕೊಲೊಸ್ಸೆ 2:12; ತೀತ 3:5; ಇಬ್ರಿಯ 10:21-22; 1 ಪೇತ್ರ 3:20-21.

**ರಕ್ತ:** ಆದಿಕಾಂಡ 9:4; ವಿಮೋಚನಕಾಂಡ 24:5-8; ಪ್ರಲಾಪಗಳು 17:11, 14-19; 19:16 ಮತ್ತಾಯ 26:28;

ಮಾರ್ಕ 1:16-20; 2:4; ಯೋಹಾನ 15:16; 20:21; ಪ್ರಕಟನೆ 9:4-6, 15-16; 13:2-3, 48; ರೋಮಾಯ 1:1,6,20; 8:28,30; 9:11,23-24; 11:29; 1 ಕೊರಿಂಥ 1:1,9,24,26; 7:15; 2 ಕೊರಿಂಥ 5:20; ಗಲಾತ್ಯ 1:1,6; 5:13; ಎಪೇಸ 4:1; ಫಿಲಿಪ್ಪಿ 3:14; ಕೊಲೊಸ್ಸೆ 3:15; 1 ತಿಮೊಥೆ 6:12; 2 ತಿಮೊಥೆ 1:9; 1 ಥೆಸಲೋನಿಕ 2:11-12; 4:7; 2 ಥೆಸಲೋನಿಕ 2:13-14; ಇಬ್ರಿಯ 3:1-2,7-8; 5:4; 11:8; 1 ಪೇತ್ರ 2:9; 5:10.

**ಪರಿಶೋಧನೆ (ಶಿಕ್ಷೆ ನೋಡಿರಿ)**

**ಮಕ್ಕಳು:** ಆದಿಕಾಂಡ 4:1; 28:3; ವಿಮೋಚನಕಾಂಡ 20:12; ಧರ್ಮೋಪದೇಶಕಾಂಡ 6:6-7; ಕೀರ್ತನೆಗಳು 103:17-18; 119:9; 127:3-5; ಜ್ಞಾನೋಕ್ತಿಗಳು 1:8-9; 3:1-2; 10:1; 13:24; 17:6; 19:18; 20:20; 22:6, 15; 23:13-14; 29:15-17; ಪ್ರಲಾಪಗಳು 3:27; ಮತ್ತಾಯ 15:4; 18:4-5,10; 19:14-15,19; ಮಾರ್ಕ 9:37; 10:13-16,19; ಅಪೊಸ್ತಲರು 2:39; 1 ಕೊರಿಂಥ 7:14; ಎಪೆಸ 6:1-4; 1 ತಿಮೊಥೆ 4:12; 2 ತಿಮೊಥೆ 2:22; 1 ಯೋಹಾನ 2:12-13.

**ಸಭೆ:** ಕೀರ್ತನೆಗಳು 118:22; 133:1; ಮತ್ತಾಯ 16:18; 21:42-43; ಮಾರ್ಕ 12:10; ಯೋಹಾನ 10:16; 17:11, 21-23; ಅಪೊಸ್ತಲರು 6:2-6; 13:1-3; 14:23; 16:4-5; 20:28; ರೋಮಾಯ 16:17; 1 ಕೊರಿಂಥ 3:11; 12:12-13;27-28; ಗಲಾತ್ಯ 3:28; ಎಪೇಸ 1:22-23; 2:19-22; 4:11-12,25; 5:30; ಕೊಲೆಸ್ಸೆ 2:19; 3:11; 2 ಥೆಸಲೋನಿಕ 3:6,14-15; 1 ತಿಮೋಥೆ 3:1-13; 5:17; ತೀತ 1:5-9; ಇಬ್ರಿಯ 13:17; ಯಾಕೋಬ 5:14-15; 1 ಪೇತ್ರ 2:7.

**ಮನಸ್ಸಾಕ್ಷಿ (ಮನಸ್ಸು)**

ಕೀರ್ತನೆಗಳು 51:3; ಜ್ಞಾನೋಕ್ತಿಗಳು 28:1; ಮತ್ತಾಯ 6:22-23; ಯೋಹಾನ 8:9; ಅಪೊಸ್ತಲರು 23:1; 24:16; ರೋಮಾಯ 2:14-15; 7:15-23; 9:1; 14:22-23; 1 ಕೊರಿಂಥ 8:7; 10:27-29; 1 ತಿಮೊಥೆ 4:1-2, ತೀತ 1:15; ಇಬ್ರಿಯ 9:13-14; 10:22; 1 ಯೋಹಾನ 3:20-21.

**ಆಶಿಸುವದು:** ವಿಮೋಚನಕಾಂಡ 20:17; ಧರ್ಮೋಪದೇಶಕಾಂಡ 5:21; ಕೀರ್ತನೆಗಳು 119:36; ಜ್ಞಾನೋಕ್ತಿಗಳು 11:24,26; 22:16; ಪ್ರಸಂಗಿ 5:10-11; ಮತ್ತಾಯ 6:19-21; 16:26; ಮಾರ್ಕ 4:19; 7:21-23; 8:36; ಲೂಕ 12:15-21, 33-34 /auev 6:26-2, 1 ಕೊರಿಂಥ 6:10; ಎಪೆಸ 5:3,5; ಕೊಲೆಸ್ಸೆ 3:2,5-6; 1 ತಿಮೊಥೆ 3:2-3; 6:5-11,17; 2 ತಿಮೊಥೆ 3:2; ತೀತ 1:7; 1 ಪೇತ್ರ 5:2; 1 ಯೋಹಾನ 2:15-17.

**ಶಿಲುಬೆ:** ಮತ್ತಾಯ 10:38; 16:24; 23:4; 39:4; 14:15; 103:14-16; 116:15; ಮಾರ್ಕ 8:34; 10:21; 15:21; ಅಪೊಸ್ತಲರು 2:23,36; 4:10; ರೋಮಾಯ 6:6; 1 ಕೊರಿಂಥ 1:17-18,23; 2:2,8; ಗಲಾತ್ಯ 2:20; 3:13; 5:11,24; 6:14; ಎಪೆಸ 2:16; ಫಿಲಿಪ್ಪಿ 2:8; 3:18; ಕೊಲೊಸ್ಸೆ 1:20; 2:14; ಇಬ್ರಿಯ 12:2.

**ಮರಣ:** ಆದಿಕಾಂಡ 2:17; ಕೀರ್ತನೆಗಳು 23:4; 39:4; 14:15; 103:14-16; 116:15; ಜ್ಞಾನೋಕ್ತಿಗಳು 11:7; 14:12; ದಾನಿಯೇಲನು 12:2; ಮತ್ತಾಯ 7:13-14; ಲೂಕ 12:20; 16:19-31; 23:43; ಯೋಹಾನ 11:11, 25-26; ರೋಮಾಯ 5:12-15; 6:6-11; 8:10-13; 14:7-8; 1 ಕೊರಿಂಥ 15:21-22,26,51-57; 2 ಕೊರಿಂಥ 5:1,4,8, ಎಫೆಸ 2:1,5-6; ಫಿಲಿಪ್ಪಿ 1:21; 1 ಥೆಸಲೋನಿಕ 4:13-18; 1 ತಿಮೊಥೆ 5:6; ಇಬ್ರಿಯ 9:27; 1 ಯೋಹಾನ 5:12; ಪ್ರಕಟನೆ 14:13; 20:14; 21:4.

**ದವ್ವ:** ಮತ್ತಾಯ 4:24; 8:29; 10:1; 12:22-29, 43-45; ಮಾರ್ಕ 1:23-26, 32-34; 3:22-30; 5:1-20; 6:7; 7:25-30; 9:17-29,38; 16:9,17; ಪ್ರಕಟನೆ 5:16; 8:7; 16:16-18; 19:12-16; 1 ಕೊರಿಂಥ 10:20-21; 1 ತಿಮೊಥೆ 4:1; ಯಾಕೋಬ 2:19; 2 ಪೇತ್ರ 2:4; ಯೂದನು 6; ಪ್ರಕಟನೆ 12:7-9.

**ಮಾನವನ ಭ್ರಷ್ಟತೆ:** ಆದಿಕಾಂಡ 6:5-7; ಯೋಬನು 15:14-16; ಕೀರ್ತನೆಗಳು 14:1-3; 51:5; 53:1-3; 130:3; ಜ್ಞಾನೋಕ್ತಿಗಳು 20:9; ಯೆಶಾಯ 1:5-6; 53:6; ಯೆರೆಮೀಯ 17:9; ಮತ್ತಾಯ 12:34-35; ಮಾರ್ಕ 7:21-23; ಯೋಹಾನ 3:19; ರೋಮಾಯ 1:18,21-32; 2:1; 3:9-20; 5:6; 8:5-8,13; 11:32; 1 ಕೊರಿಂಥ 2:14; ಎಫೆಸ 2:1-5; 4:17-19; 1 ಯೋಹಾನ 1:8,10; 5:19.

**ಶಿಕ್ಷೆ:** 2 ಸಮುವೇಲನು 7:14; 2 ಕೊರಿಂಥ 7:13-14; ಯೋಬನು 5:17; ಕೀರ್ತನೆಗಳು 3:11-12; ಮತ್ತಾಯ 18:15-17; ಲೂಕ 12:47-48; 1 ಕೊರಿಂಥ 5:1-5,9-13; ಇಬ್ರಿಯ 12:5-11; ಪ್ರಕಟನೆ 3:19.

**ತ್ಯಾಗ ಪತ್ರ:** ಧರ್ಮೋಪದೇಶಕಾಂಡ 24:1-4; ಮಲಾಕಿ 2:14-16; ಮತ್ತಾಯ 5:31-32; 19:3-12; ಮಾರ್ಕ 10:2-12; ಲೂಕ 16:18; 1 ಕೊರಿಂಥ 7:10-17.

**ಆಯ್ಕೆ (ಪೂರ್ವನೇಮಕ ನೋಡಿರಿ)**

**ಅಸೂಯ:** ಯೋಬನು 5:2; ಕೀರ್ತನೆಗಳು 37:1,7; 73:3; ಜ್ಞಾನೋಕ್ತಿಳು 3:31; 14:1,19; ಪರಮಗೀತೆ 8:6; ಮಾರ್ಕ 15:10; ಯೋಹಾನ 11:47;ಅಪೊಸ್ತಲರು 13:45; 17:5; ರೋಮಾಯ 1:29; 13:13; 1 ಕೊರಿಂಥ 3:3; 13:4; 2 ಕೊರಿಂಥ 12:20; ಗಲಾತ್ಯ 5:19-21,26 1 ತಿಮೊಥೆ 6:4-5; ತೀತ 3:3; ಯಾಕೋಬ 3:14,16; 5:9; 1 ಪೇತ್ರ 2:1.

**ದುರಾತ್ಮ (ದೆವ್ವ ನೋಡಿರಿ)**

**ನಂಬಿಕೆ:** ವಿಮೋಚನಕಾಂಡ 14:13; 2 ಪೂರ್ವಕಾಲವೃತ್ತಾಂತ 14:11; 16:9; 32:7; ಯೋಬನು 13:15; ಕೀರ್ತನೆಗಳು 5:11; 7:1; 32:10; 36:7; 55:22; 57:1; 118:8-9; 121:2; ಜ್ಞಾನೋಕ್ತಿಗಳು 3:5; ಯೆಶಾಯ 26:3; ನಹೂಮನು 1:7; ಹಬಕ್ಕೂಕನು 3:17-19; ಮಾರ್ಕ 5:32-36; 9:23-29; 10:46-52; 11:22-24; ಲೂಕ 7:50; 12:32; ಯೋಹಾನ 1:12; 3:16; 7:38; 14:1; 20:27-29; ಅಪೊಸ್ತಲರು 16:31; ರೋಮಾಯ 4:20; 5:1; ಗಲಾತ್ಯ 2:15-16,20; ಎಪೆಸ 2:8-9; 2:16-17; 6:16; ಫಿಲಿಪ್ಪಿ 4:13; 1 ತಿಮೊಥೆ 4:10; 2 ತಿಮೊಥೆ 1:12; 4:7-8; ಇಬ್ರಿಯ 11:1-40; ಯಾಕೋಬ 1:3,12; 1 ಪೇತ್ರ 1:7

**ಸುಳ್ಳುತನ:** ವಿಮೋಚನಕಾಂಡ 20:10; 32:1; ಧರ್ಮೋಪದೇಶಕಾಂಡ 19:16-20; ಕೀರ್ತನೆಗಳು 12:2-3; 28:3; 34:13; 55:21,23; 63:11; 101:5,7; 120:2; ಜ್ಞಾನೋಕ್ತಿಗಳು 3:3; 11:9; 19:9,22,28; 20:17; ಮತ್ತಾಯ 2:8; 19:18; ಮಾರ್ಕ 2:7; 7:6; 14:64,66-72; ಯೋಹಾನ 8:44-45; ಎಫೆಸ 4:25,29; ಕೊಲೆಸ್ಸೆ 3:9; 1 ತಿಮೊಥೆ 4:2; 1 ಪೇತ್ರ 3:10,16; ಪ್ರಕಟನೆ 21:8,27; 22:15.

**ಸುಳ್ಳು ಸಾಕ್ಷಿ (ಸುಳ್ಳುತನ ನೋಡಿರಿ)**

**ಕುಟುಂಬ (ಮಕ್ಕಳು ದಾಂಪತ್ಯ ನೋಡಿರಿ)**

**ಅನ್ಯೋನ್ಯತ:** ಆದಿಕಾಂಡ 5:24; 6:9; ವಿಮೋಚನಕಾಂಡ 33:14; ಯಾಜಕಕಾಂಡ 26:12; ಕೀರ್ತನೆಗಳು 1:1; ಜ್ಞಾನೋಕ್ತಿಗಳು 4:14-15; ಆಮೋಸನು 3:3; ಮತ್ತಾಯ 18;20; ಯೋಹಾನ 13:34; 15:4-7; 7:21; ರೋಮಾಯ 8:9; 16:17; 1 ಕೊರಿಂಥ 1:9-10; 3:16; 5:11; 12:27; 1 ಥೆಸಲೋನಿಕ 5:11; ಹಿಬ್ರಿಯ 10:24; 13:1; ಯಾಕೋಬ 5:16; 1 ಪೇತ್ರ 2:17; 1 ಯೋಹಾನ 1:3.

**ಕ್ಷಮಾಪಣ:** ವಿಮೋಚನಕಾಂಡ 23:4-5; 34:6-7; 2 ಸಮುವೇಲನು 12:13; ಕೀರ್ತನೆಗಳು 18:25; 19:12; 32:1-2; 85:10; 103:12; ಜ್ಞಾನೋಕ್ತಿಗಳು 3:3-4; 19:11; 24:17, 29; 25:21-22; ಯೆಶಾಯ 1:18; ಮೀಕನು 6:8; ಮತ್ತಾಯ 1:21; 5:7,38-48; 6:12,14-15; 18:21-35; 23:23; ಮಾರ್ಕ 11:25; 14:23-24; ಲೂಕ 6:35-36; ರೋಮಾಯ 12:14,17,19,21; 1 ಕೊರಿಂಥ 4:12; ಎಫೆಸ 4:32;
ಕೊಲೊಸ್ಸೆ 3:12-13; ಹಿಬ್ರಿಯ 9:22; ಯಾಕೋಬ 2:13; 1 ಪೇತ್ರ 3:9; 1 ಯೋಹಾನ 1:9; 2:1-2,12.

**ಔದಾರ್ಯ (ಉದಾರತೆ ನೋಡಿರಿ)**

**ವರಗಳು:** ಕೀರ್ತನೆಗಳು 21:2, 34:10; 84:11; ಪ್ರಸಂಗಿ 2:26; ಮತ್ತಾಯ 7:7-11; 11:28; 25:14-30; ಯೋಹಾನ 6:27; 16:23-24; 17:22; ರೋಮಾಯ 5:16-18; 6:23; 8:32; 11:29; 12:6-8; 1 ಕೊರಿಂಥ 1:5-7; 7:7; 12:4-11; 13:2; ಎಫೆಸ 4:7; ಯಾಕೋಬ 1:17; 1 ಪೇತ್ರ 4:10; 2 ಪೇತ್ರ 1:3.

**ದೇವರು:** ಆದಿಕಾಂಡ 1:1, 26-27; 2:7; 18:14; ವಿಮೋಚನಕಾಂಡ 3:14; 13:21; 20:3-6; ಯಾಜಕಕಾಂಡ 19:2; 26:12; ಧರ್ಮೋಪದೇಶಕಾಂಡ 4:7; 6:4; 33:27; 1 ಪೂರ್ವಕಾಲವೃತ್ತಾಂತ 16:26,34; 28:9; 2 ಪೂರ್ವಕಾಲವೃತ್ತಾಂತ 16:9; ಯೆರೆಮೀಯ 9:6; ಕೀರ್ತನೆಗಳು 19:1-4; 23:1-6; 24:1-4; 27:1,4; 32:8; 34:7-10; 89:4; 100:5; 103:2-5,13,17; 107:8-9; 119:90; 121:1-8; 139:1-4, 7-10; 145:18; ಯೆಶಾಯ 40:31; 43:2; 44:6; 55:8-9; 59:1; ಯೆರೆಮೀಯ 31:3; ದಾನಿಯೇಲನು 3:17; 4:3; ಮತ್ತಾಯ 5:48; 6:6,8; 10:29-30; 19:26; ಮಾರ್ಕ 12:29; ಲೂಕ 1:50; ಯೋಹಾನ 1:18; 3:16; 4:24; 5:37; 14:9; ಅಪೊಸ್ತಲರು 17:31; ರೋಮಾಯ 1:32; 2:4,6,11; 8:15,38-39; 9:14; 11:33-36; 1 ಕೊರಿಂಥ 2:16; 10:13, 2 ಕೊರಿಂಥ 9:8; ಎಪೇಸ 2:4-5; 3:14-15, 20-21; 1 ತಿಮೋಥೆ 1:17; ತೀತ 3:5; ಇಬ್ರಿಯ 4:16; 11:6; ಯಾಕೋಬ 4:8; 5:11; 1 ಪೇತ್ರ 1:15-16; 1 ಯೋಹಾನ 3:1.

**ಸುವಾರ್ತ:** ಯೆಶಾಯ 9:2, 6-7; 52:7; 55:1; 61:1-2; ಯೆರೆಮೀಯ 31:31-34; ಮತ್ತಾಯ 4:23; 24:14; ಮಾರ್ಕ 1:14-15; ಲೂಕ 2:10-11; 4:18-19; ಅಪೊಸ್ತಲರು 13:32-33; ರೋಮಾಯ 1:16–17; 10:13-17; 1 ಕೊರಿಂಥ 1:18; 15:1-2; ಎಫೆಸ 6:15,17,19-20; ಕೊಲೆಸ್ಸೆ 1:5,27; ಇಬ್ರಿಯ 4:2; 8:7-13; 9:13-15.

**ಆಡಳಿತ:** ಕೀರ್ತನೆಗಳು 22:28; ಯೆಶಾಯ 9:6-7; ದಾನಿಯೇಲ 2:20-21, 37; ಮತ್ತಾಯ 22:17-21; ಲೂಕ 20:25; ಯೋಹಾನ 19:10-11; ರೋಮಾಯ 13:1-7; ತೀತ 3:1; 1 ಪೇತ್ರ 2:13-17.

**ಕೃಪೆ :** ಜ್ಞಾನೋಕ್ತಿಗಳು 4:18; ದಾನಿಯೇಲ 10:18-19; ಯೋಹಾನ 6:44-45; 17:111-12,15; ಅಪೊಸ್ತಲರು 26:22; ರೋಮಾಯ 1:7; 3:22-24; 4:4-5, 16; 5:2, 6-8, 15-21; 9:10-16; 11:5-6; 1 ಕೊರಿಂಥ 1:4-8; 15:10; 2 ಕೊರಿಂಥ 1:12; ಎಫೆಸ 1:5-12; 2:8-9; 3:16; 4:7,11-16; ಪಿಲಿಪ್ಪಿ 1:6,9-11; 2:13; 3:12-15; ಕೊಲೆಸ್ಸೆ 1:10-11; 1 ಥೆಸಲೋನಿಕ 3:12-13; 2 ಥೆಸಲೋನಿಕ 1:3; ತೀತ 3:7; ಇಬ್ರಿಯ 6:1-3; 1 ಪೇತ್ರ 2:1-3; 4:10; 5-10; 2 ಪೇತ್ರ 3:18; ಯೂದನು 24-25.

**ಸಂತೋಷ (ಆನಂದ ನೋಡಿರಿ)**

**ದ್ವೇಷ (ಮತ್ತರ ನೋಡಿರಿ)**

**ಹೃದಯ:** ಧರ್ಮೋಪದೇಶಕಾಂಡ 6:5-6; 1 ಸಮುವೇಲನು 16:7; 1 ಪೂರ್ವಕಾಲವೃತ್ತಾಂತ 28:9; ಕೀರ್ತನೆಗಳು 34;18; 44:21; 51:10,17; 139:1-12; ಜ್ಞಾನೋಕ್ತಿಗಳು 4:23; 21:2; ಯೆರೆಮೀಯ 17:9-10; ಯೆಹೆಜ್ಕೇಲನು 11:5, 19-21; ಮತ್ತಾಯ 5:8; 9:4; 12:33; 15:18-20; 23:26; ಮಾರ್ಕ 7:21; 12:30; ಲೂಕ 16:15; ಅಪೊಸ್ತಲರು 8:22; ರೋಮಾಯ 2:5, 14-16, 28-29; 8:27; ಇಬ್ರಿಯ 3:8; 4:12.

**ಪರಲೋಕ (ಆಕಾಶ) :** ಧರ್ಮೋಪದೇಶಕಾಂಡ 26:15; ಕೀರ್ತನೆಗಳು 16:11;p 23:6; ಯೆಶಾಯ 66:1; ಮತ್ತಾಯ 5:3,10,12; 6:9,20; 18:10; ಲೂಕ 12:32; 16:22; 23:43; ಯೋಹಾನ 14:2-3; ಅಪೊಸ್ತಲರು 7:49; 2 ಕೊರಿಂಥ 12:4; 1 ಥೆಸಲೋನಿಕ 4:17; 2 ಪೇತ್ರ 3:13; ಪ್ರಕಟನೆ 7:9; 21:1,25,27.

**ನರಕ:** ಕೀರ್ತನೆಗಳು 9:17; ಮತ್ತಾಯ 3:12; 5:29; 7:13-14; 8:12; 16:18; ಮಾರ್ಕ 9:43-48; ಲೂಕ 16:23-28; 2 ಥೆಸಲೋನಿಕ 1:9; ಪ್ರಕಟನೆ 19:20; 21:8.

**ಪರಿಶುದ್ಧತೆ:** ವಿಮೋಚನಕಾಂಡ 19:6; ಯಾಜಕಕಾಂಡ 11:44; 20:26; ಧರ್ಮೋಪದೇಶಕಾಂಡ 14:2; ಕೀರ್ತನೆಗಳು 32:2; 119:1-3; ಜ್ಞಾನೋಕ್ತಿಗಳು 22:1; ಮತ್ತಾಯ 5:6,8,29-30,48; ಅಪೊಸ್ತಲರು 24:16; ರೋಮಾಯ 6:13-14, 22-23; 11:16; 12:1-2; 13:12-14; 1 ಕೊರಿಂಥ 3:16-17; 5:7; 2 ಕೊರಿಂಥ 7:1; ಎಫೆಸ 2:21-22; 4:20-24; 5:3,8-11; ಫಿಲಿಪ್ಪಿ 2:15; 4:8; ಕೊಲೊಸ್ಸೆ 3:5-10, 12-15; 1 ಥೆಸಲೋನಿಕ 4:3-4,7; 5:22-23; 2 ತಿಮೋಥೆ 2;19,21-22 ತೀತ 1:15; ಇಬ್ರಿಯ 9:13-14; 12;1,14-15; ಯಾಕೋಬ 4:8; 1 ಪೇತ್ರ 1:14-16; 2:1,5,9,11-12; 2 ಪೇತ್ರ 1:5-8; 3;11-12,14; 1 ಯೋಹಾನ 3:3,6,9-10.

**ಪವಿತ್ರಾತ್ಮ:** ಆದಿಕಾಂಡ 1:2; 6:3; ಯೆಶಾಯ 42:1; 59:19; 61:1; 63:10; ಯೆಹೆಜ್ಕೇಲ 36:27; ಜೆಛನ್ಯ 4:6; ಮತ್ತಾಯ 1:18-20; 3:11; 4:1; ಮಾರ್ಕ 1:8-12; 13:11; ಲೂಕ 4:18; ಯೋಹಾನ 1:32-33; 7:38-39; 14:16-17, 26; 16:7-8; 20:22; ಅಪೊಸ್ತಲರು 1:5,8; 2:1-4; 4:8,31; 6:5; 7:51; 8:15-17; 9:31; 11:15-16; 13:2-4; 19:2-6; ರೋಮಾಯ 5:5; 8:1-27; 1 ಕೊರಿಂಥ 3:16; 6:19; ಗಲಾತ್ಯ 4:6; 6:8; ಎಫೆಸ 2:22; 4:20; 1 ಥೆಸಲೋನಿಕ 5:19; ಇಬ್ರಿಯ 10:29.

**ನಿರೀಕ್ಷೆ:** ಕೀರ್ತನೆಗಳು 31`:24; 33:18,22; 38:15; 71:5; 130:7; 146:5; ರೋಮಾಯ 4:18; 5:2-5; 8:24-25; 15:4,12; 1 ಕೊರಿಂಥ 13:13; 15:19; ಎಫೆಸ 1:18; 2:12; 4:4; ಕೊಲೆಸ್ಸೆ 1:23,27; 1 ತೀಮೋಥೆ1:1; ತೀತ 1:2; 2:13; ಇಬ್ರಿಯ 6:18-19; 11:1; 1 ಪೇತ್ರ 1:3; 3:15;1 ಯೋಹಾನ 3:3.

**ಸತ್ಕಾರ:** ವಿಮೋಚನಕಾಂಡ 22:21; ಯಾಜಕಕಾಂಡ 19:10; ಧರ್ಮೋಪದೇಶಕಾಂಡ 10:18; ಮತ್ತಾಯ 22:2-10; 25:34-46; ಲೂಕ 14:12-14; ರೋಮಾಯ 12:13; 16:1-2; 1 ತಾಮೋಥೆ 3:2; 5:10; ಇಬ್ರಿಯ 13:2; 1 ಪೇತ್ರ 4:9-11.

**ದಾನತ:** ಕಾರ್ತನೆಗಳು 8:3-4; 9:12; 37:11; 147:6; ಜ್ಞಾನೋಕ್ತಿಗಳು 11:2; 15:33; 16:32; 22:4; ಯೆಶಾಯ 53:7; 57:15; ಯೆರೆಮೀಯ 45:5; ಮೀಕ 6:8; ಮತ್ತಾಯ 5:3; 11:29; 18:2-4; 23:12; ಮಾರ್ಕ 9:33-35; 10:43-44; ಲೂಕ 1:52; 10:21; 18:13-14; 22:24-27; ರೋಮಾಯ 7:18; 12:3,10,16; 1 ಕೊರಿಂಥ 10:12; 13:4-5; 15:10; 2 ಕೊರಿಂಥ 12:7; ಗಲಾತ್ಯ 5:22-23,26; 6:1,14; ಎಫೆಸ 4:1-2; ಫಿಲಿಪ್ಪಿ 2:3-11; ಕೊಲೆಸ್ಸೆ 3:12-13; 1 ತಿಮೊಥೆ 1:15; 2 ತಿಮೊಥೆ 2:24-25; ತೀತ 3:2; ಯಾಕೋಬ 1:19,21; 3:17-18; 4:6-10; 1 ಪೇತ್ರ 2:18-23; 3:3-4; 5:5-6.

**ಕಪಟತನ:** ಕೀರ್ತನೆಗಳು 78:36; ಯೆಶಾಯ 29:13; ಯೆರೆಮೀಯ 17:9; ಮತ್ತಾಯ 6:1-5,16, 7:5,15; 23:2-33; 24:50-51; ಮಾರ್ಕ 7:6; 8:15; 12:38-40; ಲೂಕ 6:46; 12:1-2; 18:11-12; ರೋಮಾಯ 2:1,3,17-29; 16:18; 1 ಕೊರಿಂಥ 13:1 1 ತೀಮೋಥೆ 4:2; ಯಾಕೋಬ 2:14-26; 3:17;p 1 ಯೋಹಾನ 1:6,10; 4:20; ಪ್ರಕಟನೆ 3:1.

**ಸೋಮಾರಿತನ:** ಜ್ಞಾನೋಕ್ತಿಗಳು 10:4-5; 13:4,11; 14:23; 20:13; 21:25-26; 28:19; ಪ್ರಸಂಗಿ 9:10; ರೋಮಾಯ 12:11; 2 ಥೆಸಲೋನಿಕ 3:10-12; 1 ತಿಮೊಥೆ 5:8,13.

**ವಿಗ್ರಹಾರಾಧನೆ:** ವಿಮೋಚನಕಾಂಡ 20:3-6; ಕೀರ್ತನೆಗಳು 115:4-5,8; ಯೆಶಾಯ 40:12-26; 45:20; ರೋಮಾಯ 1:22-23,25 1 ಕೊರಿಂಥ 6:9-10; 8:4; 10:14,20; 1 ಯೋಹಾನ 5:21; ಪ್ರಕಟನೆ 21:8.

**ಅನೈತಿಕತೆ:** ಕೀರ್ತನೆಗಳು 121:8; ಮತ್ತಾಯ 25:46; ಮಾರ್ಕ 10:30; 12:26-27; ಯೋಹಾನ 3:14-16, 36; 5:39-40; 6:47-58; 10:28; 11:25-26; 17:2-3; ರೋಮಾಯ 6:22-23; 1 ಕೊರಿಂಥ 15:12-28,42-55; ಗಲಾತ್ಯ 6:8; 1 ಥೆಸಲೋನಿಕ 4:13-18; 2 ತಿಮೊಥೆ 1:9-10; 1 ಪೇತ್ರ 1:3-5; 1 ಯೋಹಾನ 2:17,25; 5:13; ಪ್ರಕಟನೆ 22:5.

**ಯೇಸು ಕ್ರಿಸ್ತನು:** ಧರ್ಮೋಪದೇಶಕಾಂಡ 18:15; ಯೆಶಾಯ 9:6; 40:11; 42:3; 53:4-6; ಮತ್ತಾಯ 1:21-23; 3:12; 8:17; 9:36; 11:29; 27:11; 28:18,20; ಮಾರ್ಕ 1:10-11; 8:31; 10:45; 13:26-27; 14:62; 16:6-7; ಲೂಕ 1:30-33; 2:11; 4;18-19, 43; 23:33-34; 24:25-27; ಯೋಹಾನ 1:1-3,14,29; 3:16-18; 5:23; 8:12; 9:35-37; 10:10-11,30; 11:25-26; 14:8-9,13; 15:5,9,18; 17:5,9; 18:36; ಅಪೊಸ್ತಲರು 1:3,9; 5:31; 17:31; ರೋಮಾಯ 5:6; 14:10; 1 ಕೊರಿಂಥ 8:6; 2 ಕೊರಿಂಥ 5:21; 8:9; ಗಲಾತ್ಯ 4:4; ಎಫೆಸ 5:2; ಫಿಲಿಪ್ಪಿ 2:7-11; ಕೊಲೆಸ್ಸೆ 1:16-19; 2:14-15; 1 ತಾಮೋಥೆ 2:5; ಇಬ್ರಿಯ 1:3; 2:9; 4:14-15; 5:8; 7:25; 10:14; 12:2, 13:8; 1 ಪೇತ್ರ 1;19; 2:4, 21-23; 3:22; ಪ್ರಕಟನೆ 1:8; 5:9-12; 17:14.

**ಆನಂದ:** ಯೋಬನು 5:17; ಕಾರ್ತನೆಗಳು 30:5; 33:21; 40:8; 104:34; 126:5; 144:15; ಜ್ಞಾನೋಕ್ತಿಗಳು 14:21; 16:20; ಮತ್ತಾಯ 5:11-12; ಲೂಕ 10:20; ಯೋಹಾನ 15:10-11; 16:20-24; ಅಪೊಸ್ತಲರು 13:52; ರೋಮಾಯ 5:1-2,11; 15:13; 2 ಕೊರಿಂಥ 7:4; ಗಲಾತ್ಯ 5:22; ಫಿಲಿಪ್ಪಿ 4:4; 1 ಥೆಸಲೋನಿಕ 5:16; ಯಾಕೋಬ 1:2; 1 ಪೇತ್ರ 1:8; 3:14; 4:12-13; ಯೂದನು 24.

**ನ್ಯಾಯತೀರ್ಪು:** ಕೀರ್ತನೆಗಳು 96:13; ಪ್ರಸಂಗಿ 12:14; ಯೆರೇಮಿಯ 17:10; ಯೆಹಜ್ಕೇಲನು 7:27; 18:20; ಮತ್ತಾಯ 3:12; 12:36-37; 13:30,40-43, 49-50; 16:27; 25:41; ಮಾರ್ಕ 8:38; ಲೂಕ 12:47-48; 13:24-29; ಯೋಹಾನ 5:22; 12:48; ಅಪೊಸ್ತಲರು 17:31; ರೋಮಾಯ 2:5-12,16; 14:10-12; 1 ಕೊರಿಂಥ 3:8; 2 ಕೊರಿಂಥ 5:10; ಗಲಾತ್ಯ 6:7-8; ಎಫೆಸ 6:7-8; ಕೊಲೊಸ್ಸೆ 3:25; ಇಬ್ರಿಯ 9:27; 10:26-30; 2 ಪೇತ್ರ 3:7,10-12; 1 ಯೋಹಾನ 4:17; ಪ್ರಕಟನೆ 6:15-17; 20:11-15; 22:12.

**ನೀತಿಕರಣ:** ಆದಿಕಾಂಡ 15:6; ಕೀರ್ತನೆಗಳು 32:2; ಯೆಶಾಯ 53:11; ಯೋಹಾನ 5:24; ಅಪೊಸ್ತಲರು 13:29; ರೋಮಾಯ 2:13; 3:21-30; 4:1-25; 5:1,9-11,16-19; 8:1,29-33; 1 ಕೊರಿಂಥ 6:11; 2 ಕೊರಿಂಥ 5:19-21; ಗಲಾತ್ಯ 2:15-16; 3:23-25; 5:4-6; ಫಿಲಿಪ್ಪಿ 3:8-9; ಯಾಕೋಬ 2:20-23,26.

**ಧರ್ಮಶಾಸ್ತ್ರ:** ವಿಮೋಚನಕಾಂಡ 20:3-17; ಧರ್ಮೋಪದೇಶಕಾಂಡ 5:6-21; ಕೀರ್ತನೆಗಳು 19:7-9; 119:1-8; ಯೆರೇಮಿಯ 31:31-34; ಮತ್ತಾಯ 5:17-48; 22:35-40; ಮಾರ್ಕ 12:29-31; ಯೋಹಾನ 1:17; ಅಪೊಸ್ತಲರು 13:39; 15:1-5,22-29; ರೋಮಾಯ 2:14-15; 7:1-7,12,14; 8:1-4; 10:40; 13:10; ಕೊಲೆಸ್ಸೆ 2;14-23; ಇಬ್ರಿಯ 8:8-10; 10:1-8; ಯಾಕೋಬ 1;25; 1 ಯೋಹಾನ 3:4; 5:3.

**ಜೀವ:** ಆದಿಕಾಂಡ 2:7; ಧರ್ಮೋಪದೇಶಕಾಂಡ 8:3; 1 ಸಮುವೇಲನು 20:3; 2 ಸಮುವೇಲನು 14:14; ಯೋಬನು 14:1-2; ಕಾರ್ತನೆಗಳು 39:4; 89:47-48; 90:9-10; 103:14-16; 121:8; ಪ್ರಸಂಗಿ 12:7; ಯೆಶಾಯ 25:8; ದಾನಿಯೇಲನು 12:2; ಮತ್ತಾಯ 4:4; 5:24-26,29; 6:27,32-40, 47-58; 7:38-39; 10:10,27-28; 11:25-26; 12:25; 14:6; 17:2-3; 20:31; ಅಪೊಸ್ತಲರು 13:46,48; 17:24-28; ರೋಮಾಯ 5:21; 6:4-5,8,11,22-23;1 ಕೊರಿಂಥ 15:53-54; 2 ಕೊರಿಂಥ 5:1; ಗಲಾತ್ಯ 6:8; 1 ತಿಮೋಥೆ 1:10; ಯಾಕೋಬ 4;14; 1 ಯೋಹಾನ 2:25; 5:11-13.

**ಕರ್ತನ ಭೋಜನ:** ಮತ್ತಾಯ 26:17-30; ಮಾರ್ಕ 14:12-26; ಲೂಕ 22:7-30; ಯೋಹಾನ 6:32-59; 13:1-30; ಅಪೊಸ್ತಲರು 2:42,46-47; 20:7; 1 ಕೊರಿಂಥ 10:3,16-17,21-22; 11:20-34.

**ಪ್ರೀತಿ:** ಯಾಜಕಕಾಂಡ 19:18,34; ಧರ್ಮೋಪದೇಶಕಾಂಡ 6:5; 10:19; ಕೀರ್ತನೆಗಳು 31:23; 73:25; ಜ್ಞಾನೋಕ್ತಿಗಳು 10:12; 15:17; 24:17-18; ಮತ್ತಾಯ 5:43-47; 10:37-38; 22:35-40; ಮಾರ್ಕ 12:29-31; ಲೂಕ 6:31-35; 10:36-37; ಯೋಹಾನ 3:16; 13:34-35; 14:15,21,23; 5:9,12-13; ರೂಮಾಯ 5:5,8; 8:28; 12:9-10; 13:8-10; 1 ಕೊರಿಂಥ 13:1-13; 16:22; ಗಲಾತ್ಯ 5:6,14,22; ಎಫೆಸ 3:17-19; 4:15,32; 5:2; ಕೊಲೊಸ್ಸೆ 3:12-14; 1 ಥೆಸಲೋನಿಕ 3:12; 4:9; 2 ತಿಮೋಥೆ 1:7; ಇಬ್ರಿಯ 6:10; 10:24; 13:1; ಯಾಕೋಬ 2:5,8; 1 ಪೇತ್ರ 1:8,22; 2:17; 3:8; 4:8; 2 ಪೇತ್ರ 1;7; 1 ಯೋಹಾನ 2:5,15-17; 3;16-18,23; 4:7,11-12,16-21;5:1-3.

**ಆಶ:** ಆದಿಕಾಂಡ 3:6; ವಿಮೋಚನಕಾಂಡ 20:17; ಜ್ಞಾನೋಕ್ತಿಗಳು 6:24-25; 7:6-27; ಮತ್ತಾಯ 5:28; ಮಾರ್ಕ 4:19; 7:21-23; ಯೋಹಾನ 8:44; ರೋಮಾಯ 1:22-29; 8:12-13; 13:13; 1 ಕೊರಿಂಥ 6:9-10, 15-20; 9:27; 10:6-7; ಗಲಾತ್ಯ 5:19-21; ಎಫೆಸ 4:17-19,22; 5:5; ಕೊಲೆಸ್ಸೆ 3:5; 1 ತಿಮೋಥೆ 6:9; 2 ತಿಮೋಥೆ 2:22; 4:3-4; ತೀತ 2:12; ಯಾಕೋಬ 1:14-15; 4:1-3; 1 ಪೇತ್ರ 2:11; 4:2-3; 2 ಪೇತ್ರ 3:3; 1 ಯೋಹಾನ 2:15-17.

**ಮತ್ಸರ:** ಯಾಜಕಕಾಂಡ 19:17-18; ಕೀರ್ತನೆಗಳು 25:19;35:19; ಜ್ಞಾನೋಕ್ತಿಗಳು 10:12,18; 15:17; 17:5; 20:22; 21:10; 24:8,17-18,29; 28:10; ಮತ್ತಾಯ 5:43-44; 6:12,14-15; 18:28-35; ಮಾರ್ಕ 13:13; 15:10; ಯೋಹಾನ 15:18-19; 23-25; 17:14; ರೋಮಾಯ 1;28-32; 12:19; 1 ಕೊರಿಂಥ 5:8; 14:20; ಗಲಾತ್ಯ 5:19-21; ಎಫೆಸ 4:31; ಫಿಲಿಪ್ಪಿ 1;15-16 ಕೊಲೊಸ್ಸೆ 3:8; 1 ಥೆಸಲೋನಿಕ 5:15; ತೀತ 3:3; 1 ಪೇತ್ರ 2:1; 3:9; 1 ಯೋಹಾನ 2:9,11;3:10,13-15; 4:20.

**ದಾಂಪತ್ಯ:** ಆದಿಕಾಂಡ 2:23-24; ಧರ್ಮೋಪದೇಶಕಾಂಡ 24:1-5; ಜ್ಞಾನೋಕ್ತಿಗಳು 18:22; 21:9,19; ಮತ್ತಾಯ 5:31-32; 19:2-9; ಮಾರ್ಕ 6:17-18; 10:2-12; ಲೂಕ 16:18; ರೋಮಾಯ 7:1-3; 1 ಕೊರಿಂಥ 7:1-40; 11:11-12; ಎಫೆಸ 5:21-33; 1 ತಿಮೋಥೆ 3:2,12;5:14; ಇಬ್ರಿಯ 13:4; 1ಪೇತ್ರ 3:1-7.

**ವಿನಯತೆ (ದೀನತೆ ನೋಡಿರಿ)**

**ಕರುಣೆ (ಕ್ಷಮಾಪಣೆ ನೋಡಿರಿ)**

**ಸೇವಕ:** ಕೀರ್ತನೆಗಳು 126:5-6; ಯೆರೆಮೀಯ ೨೩:೪; ಯೆಹೆಜ್ಕೇಲ 34:2; ಮತ್ತಾಯ 9:37-38; 16:19; 23:11; 24:45-51; 28:19-20; 2:14; 10:42-45; 13:32-37; ಲೂಕ 10:1-2; ಯೋಹಾನ 4:36-38; 10:2-5,11-15; 13:12-17; 15:20-21; 17:16-19,20; 20:23; ಅಪೋಸ್ತಲರು 1:8; 9:3-6, 15-16; 13:2-3; 20:24,28; 26:14-18;ರೋಮಾಯ 1:1; 10:14-15;1 ಕೊರಿಂಥ 2:2; 3:7-10; 4:1-2; 9:16-23,27; 15:10; 2 ಕೊರಿಂಥ 2:14; 4:1-10; 5:18-20; 6:3-7; ಗಲಾತ್ಯ 6:6; ಎಫೆಸ 3:7-8; 4:11-12; ಕೊಲೊಸ್ಸೆ 1:25-29; 4:17; 1 ಥೆಸಲೋನಿಕ 2:3-12; 5:12-13; 1 ತಿಮೋಥೆ 1:12-14; 3:1-13; 4:6; 5:17; 6:11; 2 ತಿಮೋಥೆ 1:6-8, 13-14; 2:1-7,14-16,20-26; 3:16-17; 4:1-2,5; ತೀತ 1:5-9; 2:1,6-9,15 ಇಬ್ರಿಯ 5:4; 13:17; ಯಾಕೋಬ 3:13, 16-18; 1 ಪೇತ್ರ 5:1-4.

**ಅದ್ಭುತಗಳು:** ಆದಿಕಾಂಡ 17:17; 18:12; 21:2; ವಿಮೋಚನಕಾಂಡ 3:2; 7:14-25; 8:1,15-20; 9:1-12, 18-34; 10:1-23; 11:4-7; 14:22-30; ಅರಣ್ಯಕಾಂಡ 16:31-35; ಯೆಹೋಶುವ 6:20; 1 ಅರಸು 17:17-24; 18:41-45; 2 ಅರಸು 4:18-27; ಮಾರ್ಕ 1:23-26,29-31,40-45; 2:1-12; 3:1-5; 4:35-41; 5:1-20,22-43; 6:35-52; 7:24-37; 8:1-9,22-26; 9:14-29,39; 10:46-52; 11:12-14, 20-24;ಲೂಕ 5:1-11; 7:11-16; 13:10-17; 14:1-6; 17:11-19; 22:49-51; ಯೋಹಾನ 2:1-11, 22-23; 4:46-54; 5:1-16; 7:31; 9:1-39; 11:1-44; 12:10–11; 20:30-31; 21:6; ಅಪೊಸ್ತಲರು 2:22; 3;2-11; 4:21-22; 5:15-16, 19-23; 8:6; 9:34-35,40; 12:6-11; 13:11; 14:10; 16:18; 19:11; 20:9-12; 28:5,8-9.

**ಗುಣಗುಟ್ಟುವಿಕೆ:** ವಿಮೋಚನಕಾಂಡ 5:21-24; ಅರಣ್ಯಕಾಂಡ 11:1-3; 14:1-4, 26-30; ಲೂಕ 10:40; ಯೋಹಾನ 6:41-43; ರೋಮಾಯ 9:19-20; 1 ಕೊರಿಂಥ 10:10; ಫಿಲಿಪ್ಪಿ 2:14; ಯಾಕೋಬ 5:9; ಯೂದನು 16.

**ವಿಧೇಯತೆ:** ಆದಿಕಾಂಡ 17:9; ವಿಮೋಚನಕಾಂಡ 19:5; 20:6; ಯಾಜಕಕಾಂಡ 19:36-37; ಧರ್ಮೋಪದೇಶಕಾಂಡ 5:1,32-33; ಯೆಹೋಶುವ 23:6; 1 ಸಮುವೇಲ 15:22; ಪ್ರಸಂಗಿ 12;13; ಕೀರ್ತನೆಗಳು 25:10; 103:17-18; 111:10; 119:2; ಮತ್ತಾಯ 5:19; 7:21,24-27; 12:50; ಮಾರ್ಕ 3:31-35; ಲೂಕ 6:46; ಯೋಹಾನ 10:27; 14:15,23; 15:10,14; ಅಪೊಸ್ತಲರು 5:29; ಎಫೆಸ 2:10; ಫಿಲಿಪ್ಪಿ 2:12; ಯಾಕೋಬ 1:22-25; 1 ಯೋಹಾನ 2:3-6,17;3:22,24;5:2-3.

**ಸಭಾಪಾಲಕ (ಸೇವಕ ನೋಡಿರಿ)**

**ದೀರ್ಘಶಾಂತಿ (ಶಾಂತಿ):** ಕೀರ್ತನೆಗಳು 34:14; 37:11,37; ಜ್ಞಾನೋಕ್ತಿಗಳು 16:7; 20:3; ಪ್ರಸಂಗಿ 4:6; ಯೆಶಾಯ 2:4; 9:6; 26:3; ಯೆರೆಮಿಯ 6:13-14; ಮತ್ತಾಯ 5:9; 10:21-22,34-36; ಮಾರ್ಕ 9:50; ಲೂಕ 2;14; ಯೋಹಾನ 14:27; 16:33; 20:19; ರೋಮಾಯ 1:7;5:1;8:6; 10:15; 12:18; 14:17,19; 15:13,33; 1 ಕೊರಿಂಥ 14:33; 2 ಕೊರಿಂಥ 13:11; ಗಲಾತ್ಯ 5:22; ಎಫೆಸ 1:2; 2:14-17; 4:3; ಫಿಲಿಪ್ಪಿ 4:7; ಕೊಲೊಸ್ಸೆ 3:15; 1 ಥೆಸಲೋನಿಕ 5:13; 2 ಥಸಲೋನಿಕ 3;16; 1 ತಿಮೋಥೆ 2:2; ಇಬ್ರಿಯ 12:14; ಯಾಕೋಬ 3:17-18.

**ಹಿಂಸೆ:** ವಿಮೋಚನಕಾಂಡ 22:21-24; ಕೀರ್ತನೆಗಳು 9:9; 10:17-18; 22:1-2,6-8,11-21; 69:7; 74:21; ಯೆಶಾಯ 53:2-5,7-10; ಮತ್ತಾಯ 5:10-12,44; 10:16-18,21-23,28; 23:2-4; ಮಾರ್ಕ 3:6; 8:35; 13:9-1`3; 15:1-39; ಯೋಹಾನ 15:18-21,24-25; 16:1-2; ಅಪೋಸ್ತಲರು 5:29,40-42; 14:21-22; ರೋಮಾಯ 5:3-4; 8:17,35-37; 1 ಕೊರಿಂಥ 4:9-13; 13:3; 2 ಕೊರಿಂಥ 4:8-12; 6:4-10; 11:23-27; 12:10; ಫಿಲಿಪ್ಪಿ 1:12-14, 28-29; ಕೊಲೊಸ್ಸೆ 1:24; 2 ತಿಮೊಥೆ 1:8,12; 3:14-17; 4:1, 12-16,19; ಪ್ರಕಟನೆ 7:13-17.

**ತಾಳ್ಮೆ:** ಕೀರ್ತನೆಗಳು 37:7-9,24,28; ಜ್ಞಾನೋಕ್ತಿಗಳು 4:18; 15:18; ಪ್ರಸಂಗಿ 7:8-9; ಮಾರ್ಕ 4:3-8; 13:13; ಲೂಕ 21:19; 22:31-32; ಯೋಹಾನ 8:31-32; 10:28-29; 15:4-5,7,9; ಅಪೊಸ್ತಲರು 14:21-22; ರೋಮಾಯ 5:3-4; 8:35-39; 12:12; 1 ಕೊರಿಂಥ 13:4-5; 16:13; 2 ಕೊರಿಂಥ 6:4-6; ಗಲಾತ್ಯ 5:1; 6:9; ಎಫೆಸ 4:14; 6:10,13,18; ಕೊಲೆಸ್ಸೆ 1:10-11,22-23; 1 ಥೆಸಲೋನಿಕ 3:8,13; 5:14,21;2 ತಿಮೋಥೆ 1:12-13; 2:1,3,12;3:2; 6:11; ತೀತ 1:9; ಇಬ್ರಿಯ 3:5-6,14; 4:14; 6:11-12,15; 10:23,35-36; 12;1-3; ಯಾಕೋಬ 1:2-4,12; 5:7-8,10-11; 1 ಪೇತ್ರ 1:4-7; 2:19-23; 2 ಪೇತ್ರ 1:10-11; ಪ್ರಕಟನ 2:7,10-11,17,25-28; 3:5,11-12,21.

**ಬಡವರು:** ಕೀರ್ತನೆಗಳು 9:18; 34;6; 37:16; 41:1; 74:21; 82:3-4; 107:9; 140:12; ಜ್ಞಾನೋಕ್ತಿಗಳು 13:7; 15:16; 19:17; 22:7,16; 28:27; ಮತ್ತಾಯ 5:3,42; ಮಾರ್ಕ 10:21; 12:43-44; 14:7; ಲೂಕ 4:18; 6:35; 14:12-14; ಅಪೊಸ್ತಲರು 20:35; 1 ಕೊರಿಂಥ 13:3; 2 ಕೊರಿಂಥ 6:10; 9:6-9; ಫಿಲಿಪ್ಪಿ 4:10-13; ಯಾಕೋಬ 1:9-10,27; 2:2-9, 15-16; 1 ಯೋಹಾನ 3:17-19.

**ಶಕ್ತಿ:** ಯೆಶಾಯ 40:29-31; ಲೂಕ 4:32; 24:49; ಯೋಹಾನ 7:38-39; ಅಪೊಸ್ತಲರು 1:8; 2:1-4; 6:8; ರೋಮಾಯ 1:16; 1 ಕೊರಿಂಥ 1:18,24-28; 4:19-20; 2 ಕೊರಿಂಥ 12:9; ಎಫೆಸ 1:19-20; 3:20; 3:20-21; 1 ಥೆಸಲೋನಿಕ 1:5; 2 ತಿಮೊಥೆ 1:7.

**ಸ್ತುತಿ:** 2 ಸಾಮುವೇಲ 22:4; ಕೀರ್ತನೆಗಳು 18:3; 28:7; 34;1-3; 43:3-4; 50:23; 51:15; 92:1-2; 95:1-2,6-7; 96:1-4,7-9; 100:1-5; 107:8-9; 148:2; ಲೂಕ 2:13-14; 19:37-38; 24:52-53; ಅಪೊಸ್ತಲರು 16:25; ಎಫೆಸ 1:3; 5:19; 1 ತಿಮೋಥೆ 1:17; ಇಬ್ರಿಯ 2:12; 13,15; 1 ಪೇತ್ರ 2:9; ಪ್ರಕಟನೆ 4:8-11; 5:9-14; 7:9-12.

**ಪ್ರಾರ್ಥನೆ:** 2 ಪೂರ್ವಕಾಲವೃತ್ತಾಂತ 7:14; ಕೀರ್ತನೆಗಳು 22:1-2,19; 28:6; 34:4-6, 15,17; 40:1; 142:1-2; 145;18; ಜ್ಞಾನೋಕ್ತಿಗಳು 3:6; ಯೆಶಾಯ 55:6; 65:24; ಯೆಹೆಜ್ಕೆಲ 22:30; ಮತ್ತಾಯ 5:44;

6:5-12; 7:7-11; 18:19-20; ಮಾರ್ಕ 11:20-25; 14:32-39; ಲೂಕ 11:5-8; 18:1-18; 22:44; ಯೋಹಾನ 14:13-14; 15:7; 16:23-27; ಅಪೊಸ್ತಲರು 6:4; 8:15; ರೋಮಾಯ 8:26-27; 10:12-13; ಎಫೆಸ 1:15-20; 3:14-21; 6:18-19; ಫಿಲಿಪ್ಪಿ 4:6; ಕೊಲೊಸ್ಸೆ 1:9; 4;2; 1 ಥೆಸಲೋನಿಕ 5:17-18; 1 ತಿಮೊಥೆ 2:1-2,8; ಇಬ್ರಿಯ 4:16; 7:25; 11:6; ಯಾಕೋಬ 1:5-7; 5:14-18; 1 ಯೋಹಾನ 1:9; 3:22; 5:14-15.

**ಪೂರ್ವನೇಮಕ:** ಕೀರ್ತನೆಗಳು 33:12; ಯೆರೆಮೀಯ 1:4-5; ಮತ್ತಾಯ 20:16-23; 24:22,40; 25:34; ಮಾರ್ಕ 13:20,22; 14:21; ಲೂಕ 10:20; 18:7; ಯೋಹಾನ 6:37,39,44; 15:16,19; ಅಪೊಸ್ತಲರು 2:39,47; 13:48; 17:26; ರೋಮಾಯ 8:28-30, 33:9:11-24; 11:5,7-8; 1 ಕೊರಿಂಥ 1:26-29; ಎಫೆಸ 1:4-5, 9-11; 2:10; 3:11; 1 ಥೆಸಲೋನಿಕ 2:12; 2 ಥೆಸಲೋನಿಕ ೨:೧೩.

**ಗರ್ವ:** ಕೀರ್ತನೆಗಳು 12:3-4; 18:27; ಜ್ಞಾನೋಕ್ತಿಗಳು 13:10; 16:5, 18-19; 27:2; ಯೆಶಾಯ 14:12-16; ಮತ್ತಾಯ 23:5,11-12; ಮಾರ್ಕ 8:36-37; 9:33-35; 10:35-45; 12:38-39; ಲೂಕ 1:51-52; 14:8-9; ರೋಮಾಯ 12:3,16; 1 ಕೊರಿಂಥ 1:29; 3:18; 8:1-2; 10:12; 13:4; 2 ಕೊರಿಂಥ 10:5,12,18; 12:7; ಗಲಾತ್ಯ 6:3; ಫಿಲಿಪ್ಪಿ 2:3; ಯಾಕೋಬ 4:6; 1 ಯೋಹಾನ 2:16-17; ಪ್ರಕಟಣ 3:17-18.

**ನಿರ್ಮಲತೆ (ಪರಿಶುದ್ಧತೆ ನೋಡಿರಿ)**

**ವಿಮೋಚನೆ (ಪಾಪನಿವಾರಣೆ ನೋಡಿರಿ)**

**ಹೊಸಜನ್ಮ:** ಯೆಶಾಯ 35:5-6; 55:1-3; ಯೆರೆಮೀಯ 13:23; 31:31-34; ಯೆಹೆಜ್ಕೇಲ 11:19-20; 36:26-27,29; 37:1-14; ಮಾರ್ಕ 4:26-29; 10:15; ಯೋಹಾನ 1:4,13,16; 3:3-8; 4:10,14; 5:24; 6:44-45,47,50-51; 10:9-10; 17:2-3; ಅಪೊಸ್ತಲರು 2:38; ರೋಮಾಯ 6:3-23; 7:6,24-25; 8:2-6,9,13-16; 1 ಕೊರಿಂಥ 1:9,24,30; 6:11; 2 ಕೊರಿಂಥ 5:17; ಗಲಾತ್ಯ 2:20; 6:15; ಎಫಸ 2:1, 5-6,8-೧೦; 4:22-24; ಫಿಲಿಪ್ಪಿ 1:6; ಕೊಲೊಸ್ಸೆ 2:11-13; ತೀತ 3:5-6; ಇಬ್ರಿಯ 8:8-12; 2 ಪೇತ್ರ 1:3-4; 1 ಯೋಹಾನ 3:9,14; 4:7; 5:1,4-5,11-12.

**ಪಶ್ಚಾತಾಪ:** 2 ಕೊರಿಂಥ 7:14; ಕೀರ್ತನೆಗಳು 32:5; 34:14,18;51:1-4,17; ಯೆಶಾಯ 55:6-7; 57:15; 61:1-2; ಮತ್ತಾಯ 3:2,7-8; 5:4; ಮಾರ್ಕ 1:4; 14-15; 2:17; 6:12; ಲೂಕ 15:3-7; 18:13-14; 24:47; ಅಪೊಸ್ತಲರು 2:38; 26:20; ರೋಮಾಯ 2:4-5; 2 ಕೊರಿಂಥ 7:8-10; ಇಬ್ರಿಯ 12:17; ಯಾಕೋಬ 4:8-10; 1 ಯೋಹಾನ 1:9; ಪ್ರಕಟನೆ 2:5,16; 3:2,19.

**ಪುನರುತ್ಥಾನ:** ಕೀರ್ತನೆಗಳು 49:15; ಯೆಶಾಯ 25:8; ಯೆಹೆಜ್ಕೇಲ 37:1-14; ದಾನಿಯೇಲ 12:2-3; ಮತ್ತಾಯ 27:52-53; ಮಾರ್ಕ 12:18-27; 13:26-27; ಲೂಕ 14:14; ಯೋಹಾನ 5:21,25,28-29; 6:39-40,44,54; 11:23-25; ಅಪೊಸ್ತಲರು 23:6,8; 24:14-15; ರೋಮಾಯ 8:10-11,19,21-23; 1 ಕೊರಿಂಥ 15:12-32,35-57; ಫಿಲಿಪ್ಪಿ 3:10-11,21; 1 ಥೆಸಲೋನಿಕ 4:14,16; ಪ್ರಕಟನೆ 20:4-6.

**ನೀತಿ:** ಆದಿಕಾಂಡ 15:6; 2 ಪೂರ್ವಕಾಲವೃತ್ತಾಂತ 16:9; ಕೀರ್ತನೆಗಳು 1:1-3; 24:2-5; 34:9-10,15,17; ಜ್ಞಾನೋಕ್ತಿಗಳು 4:18; 12:28; ಮತ್ತಾಯ 5:6,10,20; 7:16-17; ಯೋಹಾನ 15:14; ರೋಮಾಯ 4:1-6,20-25; 5:1; 8:4-6; 14:17-19; 2 ಕೊರಿಂಥ 10:5; ಗಲಾತ್ಯ 2:15-16; 5:22-23; ಎಫೆಸ 5:9; ಫಿಲಿಪ್ಪಿ 1:9-11; 3:8-9; 2 ತಿಮೋಥೆ 2:22; 4:6-8; ಯಾಕೋಬ 2:20-24.

**ರಕ್ಷಣ:** ಕೀರ್ತನೆಗಳು 98:2-3; 121:1-8; ಯೆಶಾಯ 61:1-3; ಮತ್ತಾಯ 1:21; 16:15; 28:19; ಮಾರ್ಕ 10:15; 13:13; ಲೂಕ 19;10; ಯೋಹಾನ 3:3-5,14-17; 6:35,37,44; 11:25-26; 20:31; ಅಪೊಸ್ತಲರು 2:38-39; 4:12; ರೋಮಾಯ 1:16; 3:22-24; 5:1-2; 10:8-13;; 1 ಕೊರಿಂಥ 1:18; 2 ಕೊರಿಂಥ 7:10; ಎಫೆಸ 2:8-9; ಫಿಲಿಪ್ಪಿ 2:12; 2 ಥೆಸಲೋನಿಕ 2:13-14; 1 ತಿಮೊಥೆ 2:3-6; 4:10; 2 ತಿಮೊಥೆ 1:9-10; 2:10; ತೀತ 3:3-7; ಇಬ್ರಿಯ 5:9; 7:25; 1 ಪೇತ್ರ 1:5,9-10; 2 ಪೇತ್ರ 3:9; 1 ಯೋಹಾನ 2:25; 5:11; ಪ್ರಕಟನೆ 3:20; 5:9; 7:9-10.

**ಶುದ್ಧೀಕರಣ:** ಯೆರೆಮೀಯ 1:5; ಯೋಹಾನ 17:17,19; 1 ಕೊರಿಂಥ 1:2,30; 6:11; ಎಫೆಸ 1:3-4; 4:7,13,15-16; 5:25-27; ಫಿಲಿಪ್ಪಿ 1:6; 2:12-13; 3:12-16; ಕೊಲೊಸ್ಸೆ 2;11; 1 ಥೆಸಲೋನಿಕ 4:3-4; 5:23; 2 ತಿಮೊಥೆ 2:20-21; ಇಬ್ರಿಯ 2:11; 9:14; 10:10,14; 12:10; 2 ಪೇತ್ರ 1:2-4; 1 ಯೋಹಾನ 1:9; ಪ್ರಕಟನೆ 7:14.

**ಸೈತಾನ:** ಆದಿಕಾಂಡ 3:1-6; ಯೋಬ 1:6-12; 2:1-7; ಜೆಫನ್ಯನು 3:1-2; ಮತ್ತಾಯ 4:1-11; ಮಾರ್ಕ 3:22-27; ಲೂಕ 10:17-18; 22:31-32; ಯೋಹಾನ 8:44; 12:31`; 13:2,27; 14:30; ಅಪೊಸ್ತಲರು 5:3; 1 ಕೊರಿಂಥ 5:4-5; ಎಫೆಸ 2:1-2; 4:26-27; 6:11-12; ಕೊಲೊಸ್ಸೆ 2:15; 1 ತಿಮೋಥೆ 1:19-20; 3:6-7; 1 ಯೋಹಾನ 3:4,6,8-10; ಪ್ರಕಟನೆ 12:9-17; 20:1-3,7-10.

**ಸ್ವನಿರಾಕರಣೆ:** ಜ್ಞಾನೋಕ್ತಿಗಳು 28:27; ಮತ್ತಾಯ 5:46-48; 8:19-22; 10:29,37-39; 13:44-46; ಮಾರ್ಕ 2:14; 8:34-35; 9:43-48; 10:21-22,28-31; 12:43-44; ಲೂಕ 9:59-62; ಯೋಹಾನ 12:25; ಅಪೊಸ್ತಲರು 21:13; ರೋಮಾಯ 6:6; 8:12-13; 13:14; 14:7-8,19-21; 15:1-5; 1 ಕೊರಿಂಥ 8:10-12; 9:19-27; 10:23-24; 2 ಕೊರಿಂಥ 5:15; ಗಲಾತ್ಯ 2:20; 5:16-17,24; 6:2,14; ಫಿಲಿಪ್ಪಿ 2:4; 3:7-9; ಕೊಲೊಸ್ಸೆ 3:5; 2 ತಿಮೋಥೆ 2:4; 3:2-4; ತೀತ 2:12; ಯಾಕೋಬ 2:15-16; 1 ಪೇತ್ರ 2:11-16; 4:1-2; 1 ಯೋಹಾನ 13:17; ಪ್ರಕಟನೆ 12:11.

**ಪಾಪ:** ಆದಿಕಾಂಡ 4:8-11; ವಿಮೋಚನಕಾಂಡ 32:33; 34:5-7; 2 ಪೂರ್ವಕಾಲವೃತ್ತಾಂತ 29:6; ಯೋಬ 13:23; 14:4; 40:4; ಕೀರ್ತನೆಗಳು 32:1-2; 38:3-4; 51:2-5; 69:5; 103:12; ಜ್ಞಾನೋಕ್ತಿಗಳು 26:11; ಯೆಶಾಯ 1:6,18; 6:5; 59:1; ಯೆರೆಮೀಯ 17:9; ಮತ್ತಾಯ 1:21; 6:12, 14-15; 26:27-28; ಮಾರ್ಕ 3:28-29; 7:20-23; 14:23-24; ಲೂಕ 15:17-21; ಯೋಹಾನ 20:23; ಅಪೊಸ್ತಲರು 2:38; ರೂಮಾಯ 3:10; 5:12,18-21; 7:7-8,13-25; 14:23; 1 ಕೊರಿಂಥ 5:6; ಗಲಾತ್ಯ 5:19-21; 6:7-8; ಎಫೆಸ 2:1-2; 4:32; ಇಬ್ರಿಯ 3:13; 9:22; ಯಾಕೋಬ 1:14-15; 2:10; 5:16; 1 ಯೋಹಾನ 1:8-10; 2:1-2, 12; 3:4,6,8-10.

**ನಿಂದನೆ:** ಧರ್ಮೋಪದೇಶಕಾಂಡ 19:16-19; ಕೀರ್ತನೆಗಳು 15:1-3; 41:5-9; 101:5; ಜ್ಞಾನೋಕ್ತಿಗಳು 6:16-19; 16:27-28; 17:4,9; 26:20; ಪ್ರಸಂಗಿ 7:22; ಮತ್ತಾಯ 12:34-37; ರೋಮಾಯ 1:29-30; 1 ಕೊರಿಂಥ 4:13; 2 ಕೊರಿಂಥ 12:20; 1 ತಿಮೊಥೆ 3:11; ತೀತ 2:3; ಯಾಕೋಬ 1:26; 3:5-6,8-10; 4:11; 1 ಪೇತ್ರ 2:1; 3:9-10; ಪ್ರಕಟನೆ 12:10.

**ಸಂಕಟ (ಬಾಧೆ ನೋಡಿರಿ)**

**ಶೋಧನೆ:** ಆದಿಕಾಂಡ 3:1-5; ಜ್ಞಾನೋಕ್ತಿಗಳು 6:27-28; ಮತ್ತಾಯ 4:1-11; 6:13; 18:6-9; ಮಾರ್ಕ 4:4-19; 9:42; 13:33-37; 14:37-38; ಲೂಕ 21:33-36; ರೋಮಾಯ 12:21; 14:13,15,21; 1 ಕೊರಿಂಥ

10:13; 2 ಕೊರಿಂಥ 11:3,14-15; ಗಲಾತ್ಯ 5:17; ಎಫೆಸ 4:27; 6:11,13-17; 1 ಥೆಸಲೋನಿಕ 3:5; 1 ತಿಮೊಥೆ 6:9-10; ಇಬ್ರಿಯ 2:18; 4:15; ಯಾಕೋಬ 1:2-4,12-16; 4:7; 1 ಪೇತ್ರ 1:6-7; 4:7; 5:8-9; 2 ಪೇತ್ರ 2:9; 1 ಯೋಹಾನ 4:4; ಪ್ರಕಟನೆ 3:2-3,10.

**ಐಕಮತ್ಯ:** ಕೀರ್ತನೆಗಳು 133:1; ಮತ್ತಾಯ 23:8; ಅಪೊಸ್ತಲರು 4:32; ರೋಮಾಯ 12:16; 14:19; 15:5-6; 16:17; 1ಕೊರಿಂಥ 1;10-13; 2 ಕೊರಿಂಥ 13:11; ಗಲಾತ್ಯ 3:28; 5:15; ಎಫೆಸ 4:1-6; ಫಿಲಿಪ್ಪಿ 1:27; 2:2; 3:16-17; ಕೊಲೊಸ್ಸೆ 3:11; 1 ಪೇತ್ರ 3:8.

**ಜ್ಞಾನ:** ಕೀರ್ತನೆಗಳು 32:8; 111:10; 119:130; ಜ್ಞಾನೋಕ್ತಿಗಳು 2:6-7; 3:5-7; 17-10; 28:11; ಯೆಶಾಯ 5:21; 30:21; 48:17; ದಾನಿಯೇಲ 12:3; ಮತ್ತಾಯ 7:24-25; ಲೂಕ 21;15; ಯೋಹಾನ 8:32; 16:13-14; 17:3; 1 ಕೊರಿಂಥ 2:1-16; 3:18-20; 8:1-2; 12:8; 13;11; 14:20; 2 ಕೊರಿಂಥ 4:6; ಎಫೆಸ 5:15; 2 ತಿಮೊಥೆ 1:7; 3:15; ಯಾಕೋಬ 1:5; 3:13,17.

**ದೇವರ ವಾಕ್ಯ:** ಧರ್ಮೋಪದೇಶಕಾಂಡ 30:11-14; ಯೆಹೋಶುವ 1:8; ಕೀರ್ತನೆಗಳು 1:1-2; 19:7-11; 3:4; 40:8; 107:20; 119:9-16; ಜ್ಞಾನೋಕ್ತಿಗಳು 13:13; ಯಶಾಯ 30:21; 40:8; 15:10-11; ಮಾರ್ಕ 4:14-20; 13:31; ಲೂಕ 11:28; 16:31; 24:25; ಯೋಹಾನ 1:1-5,14; 6:63; 8:31-32; 15:3; 17:8; 20:31; ರೋಮಾಯ 10:17; 1 ಕೊರಿಂಥ 1:18; ಎಫೆಸ 6:17; ಕೊಲೊಸ್ಸೆ 3:16; 1 ಥೆಸಲೋನಿಕ 2:13; 2 ತಿಮೊಥೆ 1:13; 3:15-17; 4:3-4; ಇಬ್ರಿಯ 4:12; 1 ಪೇತ್ರ 1:23-25; 2:2-3.

**ಪ್ರಾಪಂಚಿಕತೆ:** ಪ್ರಸಂಗಿ 2:1-11; ಮತ್ತಾಯ 5:24; 6:25-34; 24:38-39; ಮಾರ್ಕ 4:19; 8:35-37; 9:33-36; ಲೂಕ 12:16-21; ಯೋಹಾನ 5:44; 12:43; 15:19; ರೋಮಾಯ 12:2; 1 ಕೊರಿಂಥ 7:29-31; ಕೊಲೊಸ್ಸೆ 3:2,5; 2 ತಿಮೊಥೆ 2:4,22; ತೀತ 2:12; ಇಬ್ರಿಯ 11:24-26; ಯಾಕೋಬ 4:4; 1 ಯೋಹಾನ 2:15-17.

ಅನ್ವಯಿಸಲ್ಪಟ್ಟಂತಃ ಹೊಸ ಒಡಂಬಡಿಕೆಯ ವ್ಯಾಖ್ಯಾನ
ಮತ್ತು ಇತರ ಒ. ಎಂ. ಬುಕ್ಸ್ ಪುಸ್ತಕಗಳು ಕೆಳಗೆ ಕೊಟ್ಟಿರುವ ವಿಲಾಸದಲ್ಲಿ ಲಭಿಸುವುದು.

OM Books, No.2, Ess Aar Complex, Lingarajpuram, St.Thomas Town, Bangalore 560084, Ph. 080-5475327

*Head Office:*

OM Books, Logos Bhavan, Medchal Road, Jeedimetla Village, Secunderabad 500055, Andhra Pradesh, India
Phone: 040-7861282, 7861151, Fax: 040-7863956, 7861457
Email: sales@omb.ind.om.org website: http://www.ombooks.org

***Other retail shops:***

**OM Books Bangalore**
No.2, Ess Aar Complex
Lingarajpuram
St.Thomas Town
Bangalore 560084.
Ph. 080-5475327

**OM Books Chennai (Doweton)**
Hari's Arcade, 1st Floor
93, P. B. Road, Doveton,
Chennai 600007.
Ph. 044-26420816

**OM Books Aizawl**
First Floor, Presbyterian Church
Chanmari, Aizawl,
Mizoram 796 007.
Ph. 0389-2348688

**OM Books Coimbatore**
Door No. 398, 6th Street
Extention, 100 Feet Road,
Gandhipuram
Coimbatore 641012.
Ph.0422-2524644

**OM Books Chennai (Annanagar)**
W-102, Round Tana,
Annanagar, Chennai 600 040
Ph. 044-26204183

**OM Books Mumbai**
20 Cama Industrial Estate
Sun Mill Compound
Lower Parel (W),
Mumbai 400013.
Ph. 022-24920502

**OM Books Shillong**
Barik Main Road
Shillong 793001,
Meghalaya.
Ph. 0364-2228232

**OM Books New Delhi**
Cultural Centre Building
YMCA, Jai Singh Road
New Delhi 110001.
Ph. 011-23364670

**OM Books Mangalore**
Shop No. B 2, City Gate,
Capitol Apt,
Near Ballal Garage,
Kadri Toll Gate,
Mangalore - 2,
Ph. 0824-2221681

**OM Books Imphal**
New Checkon Road
Imphal East
Manipur

## ಅನ್ವಯಿಸಲ್ಪಟ್ಟಂತಃ

# ಹೊಸ ಒಡಂಬಡಿಕೆಯ ವ್ಯಾಖ್ಯಾನ

ಅನ್ವಯಿಸಲ್ಪಟ್ಟಂತಹ ಹೊಸ ಒಡಂಬಡಿಕೆಯ ವ್ಯಾಖ್ಯಾನವನು– ಓದಲು ಸುಲಭವಾದ, ಸುಲಭಸಾಧ್ಯವಾದ ಹೊಸ ಒಡಂಬಡಿಕೆಯ ಪುಸ್ತಕದ ವ್ಯಾಖ್ಯಾನ. ಇದು ಸತ್ಯವೇದದ ಯಾವುದೇ ಅವೃತ್ತಿಯೊಡನೆ ಉಪಯೋಗಿಸಲಾಗುತ್ತದೆ.

- ಕ್ರೈಸ್ತ ವಿಶ್ವಾಸದ ಅಂಶಗಳ ಮೇಲಿನ ಪ್ರಾಮುಖ್ಯವಾದ ಸಾಮಾನ್ಯ ಲೇಖನಗಳು.
- ಹೊಸ ಒಡಂಬಡಿಕೆಯ ಪ್ರತಿಯೊಂದು ಪುಸ್ತಕದ ಪರಿಚಯ
- ಪದ ವ್ಯಾಖ್ಯಾನಗಳು
- ಬೈಬಲ್ ಪುಸ್ತಕದ ಸ್ಪಷ್ಟ ವಿವರಣೆಗಳು
- ಸತ್ಯವೇದವನು– ದಿನನಿತ್ಯ ಜೀವನದಲ್ಲಿ ಹೇಗೆ ಪ್ರಯೋಗಿಸುವದು?

ಡಾ|| ಟಾಮ್ ಹೇಲ್ ನೇಪಾಳದಲ್ಲಿಯ ಒಬ್ಬ ಅನುಭವಸ್ಥ ವೈದ್ಯಕೀಯ ಸುವಾರ್ತ ಪ್ರಚಾರಕರಾಗಿದ್ದು, ಅವರ ವ್ಯಾಖ್ಯಾನವು ಆವಶ್ಯಕವಾಗಿ ಸುವಾರ್ತ ಪ್ರಚಾರಕರ ವ್ಯಾಖ್ಯಾನವಾಗಿದೆ. ಅವರು ಸತ್ಯವೇದಾತ್ಮಕ ಗೃಹಪಾಠ ಮಾಡಿದ್ದರೂ ಸಹ, ಅವರ ಚಿಂತನೆ ವೇದಾಂತಿಕವಾಗಿದ್ದು, ಪಾಂಡಿತ್ಯದ ದಂತಗೋಪುರದ ಬರಹವು ಅವರಾದಗಿಲ್ಲ. ಬದಲಾಗಿ ಅವರ ಆಸಕ್ತಿಯು ಹೊಸದಾಗಿ ಸ್ಥಾಪನೆಗೊಂಡ ಸಭೆಗಳ ಕುರಿತದ್ದಾಗಿದೆ. ಅವರು ಎದುರಿಸುವ ಸಮಸ್ಯೆಗಳು ಮತ್ತು ಅವರು ಕೇಳುವ ಪ್ರಶೆ–ಗಳ ಬಗ್ಗೆ ಅವರು ಪರಿಚಿತರಾಗಿರುವರು. ಮಿಶ್ರ ಸಾಂಸ್ಕೃತಿಕ ಅನ್ವಯದ ಅಗತ್ಯತೆಗೋಸ್ಕರ ಅವರು ಹೋರಾಡುತ್ತಾರೆ. ಸಭೆಗಳ ಐಕ್ಯಮತ್ಯಗೆ ಅವರು ಬದ್ಧರಾಗಿದ್ದಾರೆ. ಒಬ್ಬರಿಗೊಬ್ಬರು ನಾವು ಒಪ್ಪದೆ ಇರುವ ಮಾಧ್ಯಮಿಕ ಕ್ಷೇತ್ರದಲ್ಲಿ ಅರ್ಥವಿವರಣೆಯ ಸ್ವಾತಂತ್ರಕ್ಕೆ ಅವಕಾಶನೀಡಬೇಕೆಂದು ಅವರು ಒತ್ತಾಯಿಸಿದ್ದಾರೆ. ಅವರ ಮುಚ್ಚುಮರೆಯಿಲ್ಲದ ಓದಲು ಸುಲಭವಾದ ಶೈಲಿಯು ಲಘು ವಾಕ್ಯಗಳು ಮತ್ತು ಸರಳ ಶಬ್ಧಸಂಗ್ರಹಗಳೆರಡನು– ಒಳಗೊಂಡಿದೆ. ಸಾಮಾನ್ಯವಾಗಿ ಏಕ ವ್ಯಕ್ತಿಯ ವ್ಯಾಖ್ಯಾನವು ಎಲ್ಲರನೂ– ತೃಪ್ತಿಪಡಿಸುವುದಿಲ್ಲ. ಅವರು ಪಕ್ಷಪಾತವನು– ತಪ್ಪಿಸಲು ಶ್ರಮಿಸಿದ್ದಾರೆ, ಹೀಗಾಗಿ ವಿದ್ಯಾರ್ಥಿಗಳ ಸಾಂಸ್ಕೃತಿಕ ಮತ್ತು ವರ್ಗಿಯ ಹಿನ–ಲೆ ಏನೇ ಇರಲಿ, ಎಲ್ಲರಿಗೂ ಸತ್ಯವೇದವನು– ಕಲಿಯಲು ಸಮನಾದ ಅವಕಾಶವನು– ಕಲ್ಪಿಸಿದ್ದಾರೆ. ಅನ್ವಯಿಸಲ್ಪಟ್ಟ ಹೊಸ ಒಡಂಬಡಿಕೆಯ ವ್ಯಾಖ್ಯಾನವು ಕ್ರೈಸ್ತ ಜನರ ನಡುವೆ ಪರಸ್ಪರ ತಿಳುವಳಿಕೆ ಸಹನೆ ಹಾಗೂ ಗೌರವವನೂ– ಉತ್ತೇಜಿಸಲು ಸಹಾಯ ಮಾಡಬೇಕು.

**ಜಾನ್ ಸ್ಟಾಟ್**
ಆಲ್ ಸೋಲ್ಸ್, ಲಂಗಾಮ್ ಪ್ಲೇಸ್, ಲಂಡನ್

ಕ್ರೈಸ್ತ ವಿಶ್ವಾಸವನು– ತಿಳಿಸುವುದರಲ್ಲಿ ಬದ್ಧನಾಗಿರುವ ಯಾವುದೇ ವ್ಯಕ್ತಿಗಳಿಗೆ ಅನ್ವಯಿಸಲ್ಪಟ್ಟ ಹೊಸ ಒಡಂಬಡಿಕೆಯ ವ್ಯಾಖ್ಯಾನದ ಆಳ, ಸ್ಪಷ್ಟತೆ, ಸರಳ ಹಾಗೂ ಸಮಂಜಸತೆಯ ಬಗ್ಗೆ ನನ– ಪ್ರಶಂಸೆಯಿದೆ, ಇದರ ಸ್ಪಷ್ಟತೆ ಮತ್ತು ಸುಲಭ ಸಾಧ್ಯತೆಯು ಕ್ರೈಸ್ತ ವಿಶ್ವಾಸಿಗಳಿಗೆ ಬೆಲೆಕಟ್ಟಲಾಗದ ಸಂಪನ್ಮೂಲವನಾ–ಗಿ ಮಾಡಿದೆ –ಹಳೆ ಹಾಗೂ ಹೊಸದಕ್ಕೂ ಕೂಡ

**ಜಾನ್. ಜೆ,** ಸುವಾರ್ತಿಕರು

ಅನ್ವಯಿಸಲ್ಪಟ್ಟ ಹೊಸಒಡಂಬಡಿಕೆಯ ವ್ಯಾಖ್ಯಾನದ ಮೌಲ್ಯವು, ಇದರ ಸ್ಪಷ್ಟತೆಯೊಂದಿಗೆ ಜೊತೆಗೂಡಿದ ಸರಳತೆಯಲ್ಲಿದೆ. ಚರ್ಚೆ ಗುಂಪುಗಳ ನಾಯಕರ ಅಪರಿಮಿತ ಕೃತಜ್ಞತಾ ಭಾವನೆಯನು– ನಾನು ಗಮನಿಸುತ್ತೇನೆ. ಭೋದಕರು ಇದರ ಅಗೊಂದಲಮಯವಾದ ಪರಿಕಲ್ಪನೆಗಳ ಮತ್ತು ಭಾಷೆಯ ಪ್ರಯೋಜನವನು– ಪಡೆದುಕೊಳ್ಳುತ್ತಿದ್ದಾರೆ. ಈಗಾಗಲೇ ಉತ್ತಮಭೋದನ ವೇದಿಕೆ ಪ್ರಶಂಸಿಸಿರುವ ವ್ಯಕ್ತಿಗಳು ಇನೂ– ಆಳಕ್ಕೆ ಅಗಿಯಲು ಸಮರ್ಥರಾಗಿರುವರು.

**ಡೆರಿಕ್ ಕೋಪ್ಲೆ**
ಮೂರ್ ಲ್ಯಾಂಡ್ಸ್ ಬೈಬಲ್ ಕಾಲೇಜ್

ಡಾ 'ಟಾಮ್ ಹೇಲ್' ರವರು 'ಇಂಟರ್ ಸರ್ವ್'ಗೆ ಕೆಲಸಮಾಡುತ್ತಿರುವ ಸುವಾರ್ತ ಪ್ರಚಾರಕರಾಗಿದ್ದು ಅನೇಕ ಪುಸ್ತಕಗಳ ಲೇಖಕರು ಆಗಿದ್ದಾರೆ. ಅದರಲ್ಲಿ ಲೋಕಟ್ ಮರಗಳನು– ತಿನ–ಲು ಆಡುಗಳಿಗೆ ಬಿಡದಿರು ಹಾಗೂ ಹಿಮಾಲಯದ ಜೀವಂತ ಕಲ್ಲುಗಳು ಇವು ಸೇರಿವೆ.

ಡಾ ಸ್ಟೀಫನ್ ತಾರ್‌ಸನ್‌ರವರು ಶಿಶುವೈದ್ಯ ತಜ್ಞ ಸುವಾರ್ತಪ್ರಚಾರಕರಾಗಿದ್ದು ವೀಟನ್ ಕಾಲೇಜ್ ಗ್ರಾಜ್ಯೂವೆಟ್ ಸ್ಕೂಲ್‌ನಿಂದ ದೈವಶಾಸ್ತ್ರದಲ್ಲಿ ಪದವಿಯನು– ಪಡೆದಿದ್ದಾರೆ. ಅವರು ನೇಪಾಲ್ ಇವ್ಯಾಜಿಲಿಕಲ್ ಕಾಲೇಜಿನಲ್ಲಿ ದೈವಶಾಸ್ತ್ರವನು– ಭೋದಿಸುತ್ತಾರೆ.

OM Books
ISBN 81-7362-544-1
8 173625 442493